ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಕರ್ನಾಟಕ ರಾಜ್ಯ ಪತ್ರಾಗಾರ,
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು
ಕ್ರ.ಸಂಖ್ಯೆ ...53... ದಿನಾಂಕ .31..

ಅಧಿಕೃತ ವರದಿ

OFFICIAL REPORT

ಒಂಭತ್ತನೆಯ ವಿಧಾನಸಭೆಯ ಒಂಭತ್ತನೆಯ ಅಧಿವೇಶನ

NINTH SESSION OF THE NINTH LEGISLATIVE ASSEMBLY

ಸಂಪುಟ ೭ - (ಕ್ರಮಾಂಕ ೧ ರಿಂದ ೫)

VOLUME VII - (Nos. 1 to 5)

(೧೭ನೇ ಮಾರ್ಚ್ ೧೯೯೩ ರಿಂದ ೧೯ನೇ ಮಾರ್ಚ್ ೧೯೯೩ವರೆಗೆ,
೨೨ನೇ ಮಾರ್ಚ್ ೧೯೯೩ ಮತ್ತು ೨೩ನೇ ಮಾರ್ಚ್ ೧೯೯೩ರವರೆಗೆ)

*(17th March 1993 to 19th March 1993,
22nd March 1993 and 23rd March 1993)*

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು.

Karnataka Legislature Secretariat, Bangalore.

ವಿಷಯಾನುಕ್ರಮಣಿಕೆ

Contents to the Legislative Assembly Debates of Vol VII Sl. Nos. 1 to 5

(From 17th March 1993 to 19th March 1993 and 22nd March 1993 to 23rd March 1993)

ಬುಧವಾರ, 17ನೇ ಮಾರ್ಚ್ 1993

1. ವಿತ್ತೀಯ ಕಾರ್ಯಕಲಾಪಗಳು
(1993–94ನೇ ಸಾಲಿನ 46, 47, 48, 36, 50, 35ನೇ ಸಂಖ್ಯೆ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ) 1-122
2. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 122-146
3. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು 146-148
4. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 148-254
5. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ
ಕಲ್ಕತ್ತಾದಲ್ಲಿ ದಿನಾಂಕ 17.3.93ರ ಬೆಳಗಿನ ಜಾವ 4.00 ಗಂಟೆಗೆ ಬಾಂಬ್ ಆಸ್ಫೋಟವಾಗಿರುವ ಬಗ್ಗೆ. 254-268

ಗುರುವಾರ, 18ನೇ ಮಾರ್ಚ್ 1993

1. ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 269-297
2. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು. 297-327
3. ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 327-358
4. ಹಕ್ಕುಚ್ಯುತಿ ನಿರ್ಣಯ
ದಿನಾಂಕ 9.3.93 ರಂದು ಪ್ರಶ್ನೆ ಸಂಖ್ಯೆ 615 ರ ಚುಕ್ಕೆ ಗುರ್ತಿನ ಪ್ರಶ್ನೆಗೆ ಮುಖ್ಯ ಮಂತ್ರಿಗಳಿಂದ ಉತ್ತರ ಕೊಡುವಾಗ ಕ್ರಿಮಿನಲ್ ಕೇಸ್‌ಗಳ ಪೆಂಡಿಂಗ್ ಎಂಬುದರ ಬಗ್ಗೆ (ಗೋಪಿನಾಥ್ ಸಾಂಡ್ರಾರವರ ಬಗ್ಗೆ) 358-395
5. ಪ್ರಕಟಣೆ 395-396
6. ಗಮನ ಸೆಳೆಯುವ ಸೂಚನೆಗಳು
ವಿಷಯ: 1) ಬೆಂಗಳೂರು ವಸಂತನಗರದ ಶ್ರೀ ಮುನೇಶ್ವರ ಸ್ವಾಮಿ ದೇವಸ್ಥಾನದ ದುರಸ್ತಿ ಮತ್ತು ಅಭಿವೃದ್ಧಿ. 396-398
2. ಪರಿವಾರ ಜನಾಂಗದವರಿಗೆ ಪರಿಶಿಷ್ಟ ವರ್ಗದ ಸೌಲಭ್ಯ ನೀಡುವಲ್ಲಿ ಉಂಟಾಗಿರುವ ತೊಂದರೆ 398-400

7. ಉಪಾಧ್ಯಕ್ಷರ ಚುನಾವಣೆ 401-407
(ಶ್ರೀ ಅಂಜನಮೂರ್ತಿಯವರು ಉಪಾಧ್ಯಕ್ಷರಾದ್ದರಿಂದ ಅವರಿಗೆ ಅಭಿನಂದನೆ)

8. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲ್ಪಟ್ಟ ವಿಷಯ
ವಿಷಯ: ಕಾವೇರಿ ನದಿ ನೀರಿನ ವಿವಾದದ ಗಲಭೆಯಲ್ಲಿ ಬಂಧಿತರಾದವರ ಬಿಡುಗಡೆಗೆ ಒತ್ತಾಯ 407-409

9. ವಿತ್ತೀಯ ಕಾರ್ಯಕಲಾಪಗಳು
1993-94ನೇ ಸಾಲಿಗೆ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ.
(ಉಚ್ಛ ಶಿಕ್ಷಣ, ವಕ್ಫ್ ಮತ್ತು ಪ್ರಾಥಮಿಕ ಹಾಗೂ ಸೆಕೆಂಡರಿ ಶಿಕ್ಷಣ ವೈದ್ಯಕೀಯ ಶಿಕ್ಷಣ, ಕನ್ನಡ ಮತ್ತು ಸಂಸ್ಕೃತಿ, ವಯಸ್ಕರ ಶಿಕ್ಷಣ) 409-480

ಶುಕ್ರವಾರ, 19ನೇ ಮಾರ್ಚಿ 1993

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 481-532
1 ಎ. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು. 532-536

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 536-618

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು. 618

4. ವರದಿಯನ್ನೊಪ್ಪಿಸುವುದು. 618

5. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು.
ಅ. ಬಂಗಾರಪೇಟೆ ತಾಲ್ಲೂಕಿನಲ್ಲಿ ಚಿರತೆಯಿಂದ ಹತ್ತು ಜನ ಸತ್ತಿರುವುದರ ಬಗ್ಗೆ. 618-619
ಆ. ಗೋಕಾಕ್ ನಗರಸಭೆಯಲ್ಲಿ ದೊಡ್ಡ ಪ್ರಮಾಣದ ಭ್ರಷ್ಟಾಚಾರ. 619-626
ಇ. ಮಂಡ್ಯ ನಗರದಲ್ಲಿರತಕ್ಕ ಮೈಸೂರು ಸಕ್ಕರೆ ಕಾರ್ಖಾನೆಯ ಕಾರ್ಯನಿರ್ವಹಣೆ. 626-627
ಈ. ಬಾಂಬೆ ಮತ್ತು ಕಲ್ಕತ್ತದಲ್ಲಿ ನಡೆದಂಥ ಬಾಂಬ್ ಪ್ರಕರಣದ ಹಿನ್ನೆಲೆಯಲ್ಲಿ ನಗರದಲ್ಲಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವುದು. 627-629

6. ಗಮನ ಸೆಳೆಯುವ ಸೂಚನೆಗಳು.
ಅ. ಬೆಂಗಳೂರು ಜಯದೇವ ಹೃದಯ ರೋಗ ಆಸ್ಪತ್ರೆಯಲ್ಲಿ ಬಡರೋಗಿಗಳಿಗೆ ಆಗುತ್ತಿರುವ ತೊಂದರೆ. 630-634
ಆ. ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಬೀದಿ ದೀಪಗಳಿಗೆ ಬೆಂಗಳೂರಿನ ಮೈಸೂರು ಲ್ಯಾಂಪ್‌ನವರಿಂದ ಕಳಪೆ ಗುಣಮಟ್ಟದ ವಿದ್ಯುತ್ ಜೋಡಣೆಗಳ ಸರಬರಾಜು. 634-635

7. ವಿತ್ತೀಯ ಕಾರ್ಯಕಲಾಪಗಳು. 635-642

8. ಉಪಾಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ವಿಷಯ: ಬೊಂಬಾಯಿ ಮತ್ತು ಕಲ್ಕತ್ತದಲ್ಲಿ ನಡೆದಂತಹ ಬಾಂಬ್ ಪ್ರಕರಣದ ಹಿನ್ನೆಲೆಯಲ್ಲಿ ನಗರದಲ್ಲಿ ತೆಗೆದುಕೊಂಡ ಮುನ್ನೆಚ್ಚರಿಕೆ ಕ್ರಮ. 642-645

9. ವಿತ್ತೀಯ ಕಾರ್ಯಕಲಾಪಗಳು
1993-94ನೇ ಸಾಲಿನ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ. 645-694

10. ಪ್ರಕಟಣೆ 694

ಸೋಮವಾರ 22ನೇ ಮಾರ್ಚಿ 1993

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು 695-721

2. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ. 721-725

3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 725-764

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು. 764-767

5. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ.
(1) ಮೈಸೂರು ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಕಾಲರಾ ಹರಡಿರುವುದು 767-790
(2) ಬೆಂಗಳೂರನಲ್ಲಿ ಅನಾಥಾಶ್ರಮ ಭೂಮಿಯ ರಕ್ಷಣೆ 790-797
(3) ವರ್ತೂರು ಕ್ಷೇತ್ರದ ಹೂಡಿ ಗ್ರಾಮದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ನಡೆದಿರುವ ಅವ್ಯವಹಾರ. 797-805

6. ಗಮನ ಸೆಳೆಯುವ ಸೂಚನೆಗಳು.
(1) ಕೊಳ್ಳೇಗಾಲ ತಾಲ್ಲೂಕು ಹನೂರು ಕ್ಷೇತ್ರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳ ಕೊರತೆ 805-807
(2) ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕು ಬುರುಜಿನ ಕೊಪ್ಪ ಗ್ರಾಮದ ಶ್ರೀಮತಿ. ಬಿ.ಟಿ. ಶಾಂತರವರ ಕೊಲೆ 807-876

7. ವಿತ್ತೀಯ ಕಾರ್ಯಕಲಾಪಗಳು
1993-94ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಗೆ ಉತ್ತರ ಹಾಗೂ ಮತಕ್ಕೆ ಹಾಕುವುದು.
(ಉಚ್ಚ ಶಿಕ್ಷಣ, ವಕ್ಫ್ ಮತ್ತು ಪ್ರಾಥಮಿಕ ಮತ್ತು ಮಧ್ಯಮ ಶಿಕ್ಷಣ, ಯುವಜನ ಸೇವೆ, ಕಲೆ ಸಂಸ್ಕೃತಿ, ಕನ್ನಡಾಭಿವೃದ್ಧಿ, ವಾಚನಾಲಯ, ಮುದ್ರಣ, ವೈದ್ಯಕೀಯ ಶಿಕ್ಷಣ, ವಯಸ್ಕರ ಶಿಕ್ಷಣ) 876-878

8. 1992-93ನೇ ಸಾಲಿನ ಅನುಪೂರಕ ಅಂದಾಜುಗಳು. 878-898

ಮಂಗಳವಾರ 23ನೇ ಮಾರ್ಚ್ 1993

1. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ 899-919

2. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ.

   1) 8 ಮತ್ತು 9ನೇ ತರಗತಿಯ ಪ್ರಶ್ನೆ ಪತ್ರಿಕೆಗಳು ಬಹಿರಂಗಗೊಂಡಿರುವ ಬಗ್ಗೆ. 919-920

   2) ಅಧಿವೇಶನದ ದಿನಗಳನ್ನು ಹೆಚ್ಚಿಸುವ ಬಗ್ಗೆ 920-932

3. ವಿತ್ತೀಯ ಕಾರ್ಯಕಲಾಪಗಳು

   1993–94ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಗೆ ಉತ್ತರ ಹಾಗೂ ಮತಕ್ಕೆ ಹಾಕುವುದು.

   (ಉಚ್ಚ ಶಿಕ್ಷಣ, ವಕ್ಫ್ ಮತ್ತು ಪ್ರಾಥಮಿಕ ಮತ್ತು ಮಧ್ಯಮ ಶಿಕ್ಷಣ, ಯುವಜನ ಸೇವೆ, ಕಲೆ ಸಂಸ್ಕೃತಿ, ಕನ್ನಡಾಭಿವೃದ್ಧಿ, ವಾಚನಾಲಯ, ಮುದ್ರಣ, ವೈದ್ಯಕೀಯ ಶಿಕ್ಷಣ, ವಯಸ್ಕರ ಶಿಕ್ಷಣ) 932-1001

ಕರ್ನಾಟಕ ವಿಧಾನ ಸಭೆ

ಬುಧವಾರ 17ನೇ ಮಾರ್ಚ್ 1993 ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9-46 ಗಂಟೆಗೆ ಸಮಾವೇಶಗೊಂಡಿತು.

(ಅಧ್ಯಕ್ಷರು: ಶ್ರೀ ವಿ.ಎಸ್. ಕೌಜಲಗಿ ಅವರು ಪೀಠವನ್ನು ಅಲಂಕರಿಸಿದರು.)

1. ವಿತ್ತೀಯ ಕಾರ್ಯಕಲಾಪಗಳು

1993-94ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ:

ಅಧ್ಯಕ್ಷರು:- ಈಗ ಲೋಕೋಪಯೋಗಿ ಮಂತ್ರಿಗಳು ಉತ್ತರ ನೀಡುವುದು.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೆ, ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಸಂಖ್ಯೆ 46, 47, ಮತ್ತು 48ರ ಮೇಲೆ ಚರ್ಚೆ ಆಗಿ ಸುಮಾರು ಇಪ್ಪತ್ತಕ್ಕೂ ಮೇಲ್ಪಟ್ಟು ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಪಕ್ಷಾತೀತವಾಗಿ ರಸ್ತೆಗಳ ಬಗ್ಗೆ, ಸೇತುವೆಗಳ ಬಗ್ಗೆ ಬೇಸರಪಟ್ಟುಕೊಂಡಿದ್ದಾರೆ. ಶ್ರೀ ವಾಟಾಳ್ ನಾಗರಾಜು ಅವರು, ಅವರ ಭಾಗದ ರಸ್ತೆಯ ಬಗ್ಗೆ ಪ್ರಸ್ತಾಪ ಮಾಡುತ್ತಾ, ರಂಗನಾಥ್ ಅವರು ಎದೆ ಮೇಲೆ ಕೈಯಿಟ್ಟುಕೊಂಡು ಹೇಳಲಿ - ಆ ರಸ್ತೆ ಚೆನ್ನಾಗಿದೆಯೇ ಎಂದರು. ಅವರ ಮಾತಿನ ತೀವ್ರತೆಯನ್ನು ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಅದಕ್ಕೆ ನಾನು ಹೇಳಿದ್ದು, ಎಲ್ಲ ಸದಸ್ಯರುಗಳು ಪಕ್ಷಾತೀತವಾಗಿ ರಾಜ್ಯದಲ್ಲಿರತಕ್ಕ ರಸ್ತೆಗಳ ಗುಣವನ್ನೂ, ರಸ್ತೆಗಳ ಪರಿಸ್ಥಿತಿಯ ಪ್ರಸ್ತಾಪ ಮಾಡಿದ್ದಾರೆ ಎಂದು. ಹೆಚ್ಚು ಟೀಕೆ ಮಾಡಿಲ್ಲ. ಕಟುವಾದ ಪದಗಳನ್ನು ಬಳಸಿಲ್ಲ. ಹಾಗೆಂದಾಕ್ಷಣ ಎಲ್ಲಾ ಸರಿಯಾಗಿದೆ ಎಂದು ನಾನು ವಿಚಾರ ಮಾಡುತ್ತಿಲ್ಲ. ಸದನ ಏನು ತನ್ನ ಬೇಸರವನ್ನು ವ್ಯಕ್ತ ಮಾಡಿದೆ ಆ ಒಂದು ವಿಚಾರವನ್ನು ನಾನು ಮನಸ್ಸಿನಲ್ಲಿಟ್ಟುಕೊಂಡಿರುತ್ತೇನೆ; ಮತ್ತು ಎಲ್ಲಿ ಏನು ಲೋಪವಾಗಿದೆ, ದೋಷ ಎಲ್ಲಿದೆ ಅದನ್ನು ಗುರುತಿಸಿ ಸರಿ ಮಾಡುವುದಕ್ಕೆ ಹೊಣೆ ಅರಿತು ಕೆಲಸ ಮಾಡತಕ್ಕ ಅಧಿಕಾರಿಗಳನ್ನು ಆಯಕಟ್ಟಿನ ಜಾಗದಲ್ಲಿ ಇಟ್ಟು ಅವರು ಕೆಲಸದ ನಿರ್ವಹಣೆ ಮಾಡುವುದಕ್ಕೆ ಮತ್ತು ಸರ್ಕಾರದ ಹಣ ಪೋಲಾಗದೆ, ಒಳ್ಳೆಯ ಗುಣಮಟ್ಟದ ರಸ್ತೆಗಳನ್ನು ಸೇತುವೆಗಳನ್ನು, ಕಟ್ಟಡಗಳನ್ನು ಮಾಡುವುದಕ್ಕೆ ಸಹಾಯವಾಗುವ ರೀತಿಯಲ್ಲಿ ತನ್ಮೂಲಕ ರಾಜ್ಯಕ್ಕೆ, ರಾಷ್ಟ್ರಕ್ಕೆ ಸಹಾಯವಾಗುವ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂಬ ಆಶ್ವಾಸನೆಯನ್ನು ಸದನಕ್ಕೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ, ನಾನು ಈ ಖಾತೆಗೆ ತುಂಬ ಹೊಸಬ. ನವೆಂಬರ್ 20ರಿಂದ ಈ ಖಾತೆಯನ್ನು ನಿರ್ವಹಿಸಿದ್ದು ಈಗ 3 ತಿಂಗಳು ಕಳೆದಿದೆ. ಹತ್ತಾರು ವಿಚಾರಗಳನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ ಮತ್ತು ಸ್ವತಃ ನೋಡಬೇಕಾಗುತ್ತದೆ. ಅಧಿಕಾರಿಗಳ ಜೊತೆ ಪ್ರಸ್ತಾಪ ಮಾಡಿ ಅವರಿಂದ ವಿಚಾರಗಳನ್ನು ಪಡೆದುಕೊಂಡು ನಾನು ನನ್ನ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ರಸ್ತೆಗಳ ಒಂದು ಗುಣಮಟ್ಟ ಕೆಳಕ್ಕೆ ಹೋಗುತ್ತಿದೆ. ರಸ್ತೆಗಳು ಚೆನ್ನಾಗಿಲ್ಲ. ನಾನು ಒಪ್ಪುತ್ತೇನೆ. ನಾನು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಮಾಡಿದ್ದೇನೆ. ರಾಜ್ಯ ಹೆದ್ದಾರಿಯಲ್ಲಿ ಸಂಚಾರ ಮಾಡಿದ್ದೇನೆ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಸಂಚಾರ ಮಾಡಿದ್ದೇನೆ. ಹೀಗಾಗಿ ಅಲ್ಲಿರತಕ್ಕ ರಸ್ತೆಗಳ ಪರಿಚಯ ನನಗಿದೆ. ಎಂಜಿನಿಯರ್‌ಗಳು ನಮ್ಮ ಒಂದು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಬಹಳ ಪ್ರಾಮುಖ್ಯಕರವಾಗಿರತಕ್ಕ ಜನರು. ಒಂದು ರಸ್ತೆ ನಿರ್ಮಾಣದಿಂದ ಹಿಡಿದು ಎಲ್ಲದರಲ್ಲೂ ಕೂಡ ಅವರ ಆವಶ್ಯಕತೆ ಇದೆ. ಕಟ್ಟಡಗಳು ಎಂದು ಹೇಳಿದರೆ ಅದು ಆಸ್ಪತ್ರೆ ಕಟ್ಟಡ, ಶಾಲೆ ಕಟ್ಟಡ ಹೀಗೆ

ಪ್ರತಿಯೊಂದರಲ್ಲೂ ಅವರ ಅವಶ್ಯಕತೆ ಇದೆ. ನಮ್ಮ ರಾಷ್ಟ್ರ ಬಡತನವೇ ಹೆಚ್ಚು ಇರತಕ್ಕ ರಾಷ್ಟ್ರ. ಇರುವ ಸಂಪನ್ಮೂಲಗಳನ್ನು ಜಾಣ್ಮೆಯಿಂದ ಬಳಸಿ ಉಳಿಸಿಕೊಂಡು ಈ ರಾಷ್ಟ್ರ ನಿರ್ಮಾಣ ಮಾಡತಕ್ಕ ಕಾಲದಲ್ಲಿ ಇರುವ ನಾವು ಹೆಚ್ಚು ಜವಾಬ್ದಾರಿಯಿಂದ ಸಾರ್ವಜನಿಕರಿಗೆ, ಸಾರ್ವಜನಿಕರ ಅಭಿಪ್ರಾಯಕ್ಕೆ ಸ್ಪಂದನೆ ಆಗತಕ್ಕ ರೀತಿಯಲ್ಲಿ ನಡೆದುಕೊಂಡರೆ ಮಾತ್ರ ಒಳ್ಳೆಯ ಹೆಸರು ಬರುತ್ತದೆನ್ನುವ ಅಭಿಪ್ರಾಯ ಉಳ್ಳವನು ನಾನು. ಹಾಗೆ ಅಂದಾಕ್ಷಣ ಎಲ್ಲರೂ ಚೆನ್ನಾಗಿದ್ದಾರೆಂದು ಸರ್ಟಿಫಿಕೇಟ್ ಕೊಡುವುದಕ್ಕೆ ನಾನು ತಯಾರು ಇಲ್ಲ. ಆದ್ದರಿಂದ ಎಲ್ಲರನ್ನೂ ಸಾರಾ ಸಗಟಾಗಿ ಚೆನ್ನಾಗಿಲ್ಲ ಎಂದು ಹೇಳಿ ಹಳಿದು ನಾವು ಅವರನ್ನು ನಿರಾಕರಣೆ ಮಾಡುವುದರಿಂದ ಪ್ರಯೋಜನ ಆಗಲಾರದು ಎನ್ನುವುದು ನನ್ನ ಒಂದು ಅಭಿಪ್ರಾಯ. ಮತ್ತೆ ಸ್ವಾಮಿ, ನಾವು ಚೆನ್ನಾಗಿ ಕೆಲಸ ಮಾಡುವವರಿಗೆ ಬೆನ್ನು ತಟ್ಟಬೇಕು, ಸರಿ ಎಂದು ಹೇಳಬೇಕಾಗುತ್ತದೆ. ಚೆನ್ನಾಗಿ ಮಾಡದೇ ಇರುವವರ ಬಗ್ಗೆ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ರಾಷ್ಟ್ರ, ರಾಜ್ಯದ ಹಿತದೃಷ್ಟಿಯಿಂದ ಮುಲಾಜು ಇಲ್ಲದೇ ನಾವು ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ನಾವು ಬಹಳ ಮಟ್ಟಿಗೆ ಕೆಲಸ ಮಾಡಿದರೆ ನಮಗೆ ಫಲ ದೊರೆಯುತ್ತದೆ ಎನ್ನುವುದರಲ್ಲಿ ನಂಬಿಕೆ ಇರುವವನು ನಾನು. ಈ ಮೂಲ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ನಾನು ಈಗಾಗಲೇ ಹೇಳಿದ ಹಾಗೆ ಈ ಇಲಾಖೆ, ಈ ಇಲಾಖೆಯಲ್ಲಿ ಇರತಕ್ಕ ಅವರುಗಳು, ಅವರಿಂದ ಆಗತಕ್ಕ ಕೆಲಸವನ್ನು ನಿರ್ವಹಣೆ ಮಾಡತಕ್ಕದ್ದನ್ನು ನಾನು ಮಾಡಿಸುತ್ತೇನೆ. ಆ ಒಂದು ಆಶ್ವಾಸನೆಯನ್ನು ಸಭೆಗೆ ಕೊಡಲು ಇಷ್ಟಪಡುತ್ತೇನೆ. ಸ್ವಾಮಿ, ನನಗನ್ನಿಸುತ್ತದೆ. ಈ ಮೂರು ತಿಂಗಳುಗಳಲ್ಲಿ ನಾವು ಒಂದು ಯೋಜನೆಯನ್ನೂ ಹಾಕಿಕೊಂಡಿದ್ದೇವೆ. ಅದರಂತೆ ಪ್ಲಾನ್‌ನಲ್ಲಿ ಇಷ್ಟು, ನಾನ್ ಪ್ಲಾನ್‌ನಲ್ಲಿ ಇಷ್ಟು ಎಂದು ಹೇಳಿದ್ದೇವೆ. ಆದರೆ ಅವಶ್ಯಕತೆಗಳಿಗೆ ಅನುಗುಣವಾಗಿ, ಆದ್ಯತೆಗೆ ಅನುಗುಣವಾಗಿ ನಮ್ಮ ಪ್ಲಾನ್‌ಅನ್ನು ನಾವು ಮಾಡಿಕೊಂಡಿಲ್ಲ ಎಂದು ಹೇಳಿ ಏನಾದರೂ ಆ ಅಭಿಪ್ರಾಯವನ್ನು ಸದನದ ಮುಂದೆ ಇಟ್ಟರೆ ತಪ್ಪಾಗಲಾರದು ಎಂದು ನನ್ನ ಭಾವನೆ. ಇಲಾಖೆಗೆ ಸಂಬಂಧಪಟ್ಟ ವರದಿಯನ್ನು ಮತ್ತು ಪ್ರೋಗ್ರಾಮ್ ಆಫ್ ವರ್ಕ್‌ನ್ನು ಸದನಕ್ಕೆ ಕೊಟ್ಟಿದ್ದೇನೆ. ಬಹಳ ಮಟ್ಟಿಗೆ ಮಾನ್ಯ ಸದಸ್ಯರುಗಳು ಅದನ್ನು ಅಭ್ಯಾಸ ಮಾಡಿದ್ದಾರೆ ಎಂದು ನಾನು ಭಾವಿಸುತ್ತೇನೆ. ನಾವು ನಮ್ಮ ಯೋಜನೆಗಳನ್ನು ಮಾಡುವಾಗ ನಾವು ಗಮನಿಸಿಲ್ಲ ಎನ್ನುವ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ಬೇಡಿಕೆ ಸಂಖ್ಯೆ 48ರ ಬಗ್ಗೆ ಮೊದಲು ಪ್ರಸ್ತಾಪ ಮಾಡುತ್ತೇನೆ. ಇದು ರಸ್ತೆಗಳು ಮತ್ತು ಸೇತುವೆಗಳಿಗೆ ಸಂಬಂಧಪಟ್ಟದ್ದು ಆಗಿದೆ.

ನಮ್ಮ ರಾಜ್ಯದಲ್ಲಿ ರಸ್ತೆಗಳನ್ನು ಮೂರು ಭಾಗ ಮಾಡಿದ್ದೇವೆ. ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಹೆದ್ದಾರಿ. ರಾಷ್ಟ್ರೀಯ ಹೆದ್ದಾರಿ 1992ನೇ ಇಸವಿಗೆ ಸಂಬಂಧಪಟ್ಟಂತೆ ನಮ್ಮ ವರದಿಯಲ್ಲಿ ಇರುವ ಹಾಗೆ 1992 ಕಿಲೋಮೀಟರ್ ಉದ್ದ ಇದೆ. ರಾಜ್ಯ ಹೆದ್ದಾರಿ 11,282 ಕಿಲೋಮೀಟರ್ ಇದೆ. ಜಿಲ್ಲಾ ಹೆದ್ದಾರಿ 22,866 ಕಿಲೋಮೀಟರ್ ಇದೆ. ಇದರಲ್ಲಿ 10 ಸಾವಿರ ಕಿಲೋಮೀಟರ್ ಜಿಲ್ಲಾಪರಿಷತ್ ವ್ಯಾಪ್ತಿಗೆ ಬಂದದ್ದನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಗೆ ಕೊಟ್ಟಿರುವುದರಿಂದ ಅದು ಸ್ವಲ್ಪ ಜಾಸ್ತಿಯಾಗಿದೆ. ರಾಜ್ಯದ ಹೆದ್ದಾರಿ 11,282 ಕಿಲೋಮೀಟರ್. ಈ ರಾಜ್ಯ ಹೆದ್ದಾರಿ ಕಿಲೋಮೀಟರ್ ಏನಿದೆ ಅದರಲ್ಲಿ ನಮಗೆ ಟಾರ್ ಮಾಡಿರತಕ್ಕದ್ದು ಎಷ್ಟು ? ಟಾರ್ ರಸ್ತೆ ಅಂದಾಕ್ಷಣ ಬಹಳ ಚೆನ್ನಾಗಿದೆ ಎನ್ನುವ ಅರ್ಥದಲ್ಲಿ ನಾನು ಹೇಳುತ್ತಿಲ್ಲ. ಇರುವ ಅಂಕಿಅಂಶಗಳನ್ನು ನಾನು ಸಭೆಯ ಮುಂದೆ ಇಡುತ್ತಿದ್ದೇನೆ. ಬಹಳ ಚೆನ್ನಾಗಿದೆ, ಏನೂ ತೊಂದರೆಯಿಲ್ಲದೆ ಓಡಾಡುತ್ತೇವೆ ನಮ್ಮ ಮೋಟಾರ್ ಕಾರುಗಳು ಚೆನ್ನಾಗಿ ಹೋಗುತ್ತವೆ ಅಥವಾ ಗಾಡಿ ಬಂಡಿ ಎಲ್ಲಾ ಹಳ್ಳಿಗಳಿಗೂ ಹೋಗುತ್ತವೆ ಎಂದು ನಾನು ಹೇಳುತ್ತಿಲ್ಲ. ನಮ್ಮ ಅಂಕಿಅಂಶಗಳ ಪ್ರಕಾರ ಟಾರ್ ಆಗಿರತಕ್ಕ ರಸ್ತೆ ರಾಷ್ಟ್ರೀಯ ಹೆದ್ದಾರಿ 1992 ಕಿಲೋಮೀಟರ್ ರಾಜ್ಯ ಹೆದ್ದಾರಿ 11,282 ಮತ್ತು ಎಂಡಿಆರ್ ರಸ್ತೆ 22,866 ಕಿಲೋಮೀಟರ್ ಮತ್ತೆ ಬೇರೆ ಅದರ್ಸ್ ಡಿಸ್ಟ್ರಿಕ್ಟ್ ರೋಡ್ಸ್ 1541 ಕಿಲೋಮೀಟರ್‌ಗಳು.

ಇನ್ನು ವಿಲೇಜ್ ರಸ್ತೆ 30,920 ಕಿಲೋಮೀಟರ್, ತಾಲ್ಲೂಕು ಬೋರ್ಡ್ ಅಲ್ಲಿ ಏನೇನು ಲೆಕ್ಕ ಬಂದಿದೆ ಅದು 29,526 ಕಿಲೋಮೀಟರ್. ಆಯಕಟ್ಟಿನ ರಸ್ತೆಗಳು 8912 ಕಿಲೋಮೀಟರ್. ಮಾನ್ಯ ಬಾಬಾಗೌಡರು ಹೇಳುತ್ತಿದ್ದರು, ನಮ್ಮಲ್ಲಿ ಆಯಕಟ್ಟಿನ ರಸ್ತೆಗಳು ಇವೆ ಆದರಲ್ಲೂ ಷುಗರ್ ಫ್ಯಾಕ್ಟರಿ ಏರಿಯಾದಲ್ಲಿವೆ. ಅವುಗಳನ್ನು ಸರಿಯಾಗಿ ರಿಪೇರಿ ಮಾಡುತ್ತಿಲ್ಲ. ಅಲ್ಲಿ ಮೆಟಲ್ ಹಾಕುತ್ತೀರಿ ಮೆಟಲ್ ಹಾಕುವುದರಿಂದ ತೊಂದರೆಯಾಗುತ್ತದೆ, ಎತ್ತಿನ ಗೊರಸೆಯೊಳಗೆ ಕಲ್ಲು ಸೇರಿಕೊಂಡು ಎತ್ತಿಗೆ ತೊಂದರೆಯಾಗುತ್ತದೆನ್ನುವ ಮಾತನ್ನು ಕೂಡ ಅವರು ಆಡಿದರು. ಇನ್ನು ಒಂದು ಹೆಜ್ಜೆ ಮುಂದೆ ಕೂಡ ಹೋಗಿ ಹೇಳಿದರು, ನಾವು ಪರ್ಚೇಸ್ ಟ್ಯಾಕ್ಸ್ ಕೊಡುತ್ತೇವೆ ಎಲ್ಲಾ ಕೊಡುತ್ತೇವೆ, ರಸ್ತೆಗಳನ್ನು ಚೆನ್ನಾಗಿ ರಿಪೇರಿ ಮಾಡುವುದಿಲ್ಲವೆನ್ನುವ ಮಾತನ್ನು ಹೇಳಿದರು. ಅದು ವಾಸ್ತವಾಂಶ. ಈ ಸಮಯದಲ್ಲಿ ನಾನು ಒಂದು ಅಭಿಪ್ರಾಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ದಿವಂಗತ ಚೆನ್ನಬಸಪ್ಪನವರು ಇದನ್ನೆಲ್ಲಾ ಗಮನಿಸಿ ಸರಿ ಮಾಡಬೇಕೆಂದು ಹೇಳಿ ಅದಕ್ಕೊಂದು ಬೇರೆ ಟ್ಯಾಕ್ಸನ್ನು ಕೂಡ ಹಾಕಿದರು. ಅಗ್ರಿಕಲ್ಚರಲ್ ಕಮಾಡಿಟೀಸ್‌ನ್ನು ಬೇರೆ ಮಾಡಿ ಅದರ ಟ್ಯಾಕ್ಸ್‌ನಿಂದ ಬರುವ ಹಣವನ್ನು ರಸ್ತೆಗೆ ಬಳಸಬೇಕೆಂದು ಮಾಡಿದರು. ಮುಂದೆ ಅದು ಬರಬರುತ್ತಾ ಕನ್ಸಾಲಿಡೇಟೆಡ್ ಫಂಡ್‌ಗೆ ಸೇರಿ ಇವತ್ತು ನಮ್ಮ ಇಲಾಖೆಯವರು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಎಷ್ಟು ಕೊಡುತ್ತಾರೆ ಅಷ್ಟು ತೆಗೆದುಕೊಂಡು ಅದನ್ನು ನಾವು ಹಂಚಿ ಚೆನ್ನಾಗಿ ಮಾಡಿದ್ದೇವೆಂದು ಬೆನ್ನು ತಟ್ಟಿಕೊಳ್ಳುತ್ತಿದ್ದೇವೆ. ಆ ಪರಿಸ್ಥಿತಿಗೆ ಬಂದು ನಿಂತಿದ್ದೇವೆ. ಇನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನದ್ದು 2552 ಕಿಲೋಮೀಟರ್ ರಸ್ತೆ ಸೇರಿಸಿದರೆ ಒಟ್ಟು ರಾಜ್ಯದಲ್ಲಿ ಒಂದು ಲಕ್ಷದ 20 ಸಾವಿರದ 606 ಕಿಲೋಮೀಟರ್ ರಸ್ತೆ ಇದೆ. ಎಲ್ಲಾ ವರ್ಗದ ರಸ್ತೆಗಳು ಸೇರಿ. ಇನ್ನು ದೊಡ್ಡ ಸೇತುವೆಗಳು 410 ಇವೆ. ಮೈನರ್ ಬ್ರಿಡ್ಜಸ್ 10,015 ಇವೆ. ಕಲ್ವರ್ಟ್ಸ್ ಸಣ್ಣಪುಟ್ಟ ಮೋರಿಗಳು ಸಿ.ಡಿ.ವರ್ಕ್ಸ್ ಎಂದು ನಾವೇನು ಹೇಳುತ್ತೇವೆ ಅವು 81,257 ಇವೆ. ಇದೆಲ್ಲ ನಾವು ವ್ಯವಸ್ಥಿತವಾಗಿ ಮಾಡಿದ್ದೇವೆ, ಮಾಡುತ್ತಿದ್ದೇವೆಯೇ ಎಂದು ನೋಡಿದರೆ ಈ ದಿಸೆಯಲ್ಲಿ ನಮಗೆ ಅನುಕೂಲವಾದ ಅಂಕಿಅಂಶಗಳು ಸಿಗುವುದಿಲ್ಲ. ಒಂದು ಲಕ್ಷದ 20 ಸಾವಿರದ 606 ಕಿಲೋಮೀಟರ್ ರಸ್ತೆ ಲೋಕೋಪಯೋಗಿ ಮತ್ತು ಜಿಲ್ಲಾ ಪರಿಷತ್‌ನೊಳಗೆ ಬರತಕ್ಕದ್ದು. ಇದರಲ್ಲಿ ಆಸ್ಫಾಲ್ಟ್ ಆಗಿರತಕ್ಕ ರಸ್ತೆ ಟಾರ್ ಮಾಡಿರತಕ್ಕ ರಸ್ತೆ 36,811 ಕಿಲೋಮೀಟರ್. ಮೆಟಲ್ ಆಗಿರತಕ್ಕದ್ದು ದೊಡ್ಡ ಜಲ್ಲಿ ಹಾಕಿ ಮೆಟಲ್ ಮಾಡಿರತಕ್ಕ ರಸ್ತೆ 43,187 ಕಿಲೋಮೀಟರ್. ಅದನ್ನೆಲ್ಲ ಲೆಕ್ಕಕ್ಕೆ ತೆಗೆದುಕೊಂಡು ಚೆನ್ನಾಗಿದೆಯೆಂದು ಅಂದಿದ್ದೇವೆ. ಇನ್ನು ಕಚ್ಚಾರಸ್ತೆ 40,343 ಕಿಲೋಮೀಟರ್. 43,187 ಮತ್ತು 40,342 ಕಿಲೋಮೀಟರ್ಸ್ ರಸ್ತೆ ಏನಿದೆ ಅದನ್ನು ಸರಿಯಾಗಿ ವ್ಯವಸ್ಥೆ ಮಾಡಬೇಕಾಗುತ್ತದೆ.

ಮತ್ತೆ ಈ 36,811 ಕಿಲೋಮೀಟರ್ಸ್ ರಸ್ತೆ ಏನಿದೆ, ಇದರಲ್ಲಿ ಮೂರು ಮೀಟರ್ ಅಡಿ ಅಗಲ ಇರುತ್ತದೆ. ಅಂದರೆ ಸುಮಾರು ಎಂಟೂವರೆ – ಒಂಭತ್ತು ಅಡಿ ಅಗಲ ಬರತಕ್ಕಂಥ ರಸ್ತೆ. ನೀವು ಸ್ಟ್ಯಾಂಡರ್ಡ್ 7.5 ಮೀಟರ್ ಎಂದು ಹೇಳಿದಿರಿ. ಅಂದರೆ ಸುಮಾರು 22–23 ಅಡಿ ಅಗಲ ಇರತಕ್ಕಂಥ ರಸ್ತೆಯನ್ನು ಅಗಲ ಮಾಡಬೇಕು, ಅಂದರೆ ಒಂದು ಲಾರಿ ಹೋಗಿ, ಒಂದು ಗಾಡಿ ಕೂಡ ಹೋಗತಕ್ಕಂಥ ರಸ್ತೆಯಲ್ಲಿ ಎರಡು ವೆಹಿಕಲ್ಸ್ ಸಲೀಸಾಗಿ ಹೋಗಬೇಕು ಎನ್ನುವ ರೀತಿಯಲ್ಲಿ ಮಾಡಬೇಕೆಂದು ಅಂದಿದ್ದಾರೆ. ಆದರೆ ಈ ದಿಸೆಯಲ್ಲಿ ನಮ್ಮ ಕೆಲಸ ಸಾಗಿದೆಯೇ ಎಂದು ಹೇಳಿದರೆ ನಾವು ಏನೂ ಮಾಡಿಲ್ಲ. ಇವತ್ತು ಈ 11,282 ಕಿಲೋಮೀಟರ್ ರಾಜ್ಯದ ಹೆದ್ದಾರಿಗಳು ಏನಿವೆ, ಅದರಲ್ಲಿ 3.5 ಮೀಟರ್ ಇರತಕ್ಕಂಥಾದ್ದು. ಉದ್ದ ಎಷ್ಟು ಇದೆ ಎಂದರೆ, 8,227 ಕಿಲೋಮೀಟರ್ಸ್. ಇದನ್ನು ನಾವು 7.7 ಮೀಟರ್ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಕೂಡ 5.5 ಮೀಟರ್ ಅಥವಾ 15–16 ಅಡಿ ಅಗಲ ಮಾಡಬೇಕೆಂದು ಹೊರಟರೆ ಸುಮಾರು ಹಣ ಬೇಕಾಗುತ್ತದೆ. ಇಂತಹ ಒಂದು ಪರಿಸ್ಥಿತಿ ಇರುವಾಗ ನಮ್ಮ ಯೋಜನೆಯಲ್ಲಿ ನಾವು ಸರಿಯಾದಂಥ ರೀತಿಯಲ್ಲಿ ಯೋಜನೆ

ಹಾಕಿಕೊಂಡಿಲ್ಲ ಎಂದು ನಾನು ಮೊದಲೇ ಹೇಳಿದೆ; ಏಕೆ ಈ ಮಾತನ್ನು ಹೇಳಿದೆ ಎಂದರೆ ನಮ್ಮ ನೀತಿ ಬಗ್ಗೆ ಈ ಒಂದು ನಿರ್ವಹಣಾ ಮುಂಗಡಪತ್ರದಲ್ಲಿ 10ನೇ ಪುಟದಲ್ಲಿ ಹೇಳಿದೆ. ಅದು – ರಾಜ್ಯ ಹೆದ್ದಾರಿಗಳು, ಜಿಲ್ಲಾ ಮುಖ್ಯರಸ್ತೆಗಳು ಮತ್ತು ಕೇಂದ್ರ ಜಲಬಂಧಕ ರಸ್ತೆಗಳಿಗೆ ಈ ಕಾರ್ಯಕ್ರಮದಲ್ಲಿ ಡಾಂಬರು ಹಾಕಲಾಗುವುದು. ಈ ವರ್ಷದಲ್ಲಿ ಸುಮಾರು 400 ಕಿಲೋಮೀಟರ್ ರಸ್ತೆಗಳಿಗೆ ಡಾಂಬರ್ ಹಾಕಲಾಗುವುದು. ಒಂದು ವರ್ಷದಲ್ಲಿ 400 ಕಿಲೋಮೀಟರ್‌ನಂತೆ ಪ್ರೋಗ್ರಾಮ್ ಹಾಕಿಕೊಂಡರೆ ನಾವು 43,187 ಕಿಲೋಮೀಟರ್ ಯಾವಾಗ ಮಾಡುವುದು ? ಇದು ಮೆಟಲ್ ಆಗಿರುವಂಥಾದ್ದು ಬಾಕಿ ಎಲ್ಲ ಚೆನ್ನಾಗಿ ಇದೆಯೆಂದು ಭಾವನೆ ಮಾಡಿಕೊಂಡರೂ 36.811 ಕಿಲೋಮೀಟರ್ ಎಂದು ಭಾವಿಸಿದರೂ, ಅದು ಮೆಟಲ್ ಆಗಿರುವುದು. ಎಲ್ಲ ರೆಡಿ ಇದೆ. ಅದರ ಮೇಲೆ ಟಾರ್ ಹಾಕಿಬಿಡೋಣ ಎಂದು ಭಾವನೆ ಮಾಡಿಕೊಂಡು ಹಾಕಿದರೆ ಈ ಯೋಜನೆ ಪ್ರಕಾರ ಎಷ್ಟು ವರ್ಷ ಬೇಕಾಗುತ್ತದೆ ? ಇನ್ನು ಕಚ್ಚಾರೋಡ್‌ಗಳು, ಮೆಟಲಿಂಗ್ ಆಗಿಲ್ಲ. ಈ ಮಟ್ಟಕ್ಕೆ ಇವನ್ನು ತಂದು ಮಾಡಬೇಕಾದರೆ ಎಷ್ಟು ಸಮಯ ಬೇಕಾಗುತ್ತದೆ ? ನಮ್ಮ ಯೋಜನೆ ಸರಿಯಾದ ರೀತಿಯಲ್ಲಿ ಇಲ್ಲ. ರಸ್ತೆಗಳು ಬೇಕು ಎಂದು ನಾವೇನೋ ಹೇಳುತ್ತೇವೆ they are the arteries of development ಅಂತ ಶಬ್ದಕ್ಕೆ ಏನೂ ಕೊರತೆ ಇಲ್ಲ. ಆದರೆ ಮಾಡಿರತಕ್ಕಂಥ ಕ್ರಮ ಏನು ? ನಮ್ಮ ಯೋಜನೆಯಲ್ಲಿ ಸಾಮಾನ್ಯವಾಗಿ ಬಹಳ ಮಟ್ಟಗೆ ಇದೆಲ್ಲ ಬಂದಾಗ they get the last priority. ಹೀಗಾಗಿ ಇದು ಹೀಗೆಯೇ ಉಳಿದುಕೊಂಡು ಬಂದಿದೆ.

ಇನ್ನು ಸ್ವಾಮಿ, ಸೇತುವೆಗಳು. ಇದರಲ್ಲಿ ವರ್ಷಕ್ಕೆ ಸಾಮಾನ್ಯವಾಗಿ ಆರು ದೊಡ್ಡ ಸೇತುವೆಗಳನ್ನು ಮಾಡಲಾಗುವುದೆಂದು ಬರೆದುಕೊಂಡು ಬಿಟ್ಟಿದ್ದೇವೆ. ನಮ್ಮಲ್ಲಿ ಎಷ್ಟು ಸೇತುವೆಗಳಿವೆ ? ಮೇಜರ್ ಸೇತುವೆಗಳು 410 ಇವೆ. ಅವು ಯಾವ್ಯಾವ ಕಂಡೀಶನ್‌ನಲ್ಲಿವೆ ಎಂದು ನಾನು ಬರೆದುಕೊಂಡು ಬಂದಿಲ್ಲ. ಅದನ್ನು ಹೇಳುವುದಕ್ಕೆ ಕಾಲಾವಕಾಶ ಬೇಕಾಗುತ್ತದೆ. ಸಮಸ್ಯೆಯನ್ನು ಈ ಸದನದ ಮುಂದೆ ಇಡುವುದಕ್ಕೆ ಪ್ರಯತ್ನ ಪಡುತ್ತಿದ್ದೇನೆ. ಇನ್ನು, 10,015 ಮೀಡಿಯಂ ಬ್ರಿಡ್ಜಸ್ ಇವೆ. 81 ಸಾವಿರ ಕಲ್ವರ್ಟ್ಸ್ ಇವೆ. ದಿವಂಗತ ಚನ್ನಬಸಪ್ಪನವರು ಈ ಕಲ್ವರ್ಟ್ಸ್‌ಗೆ ಮೊದಲು ಆದ್ಯತೆ ಕೊಡಬೇಕೆಂದು ಮಾಡಿದ್ದರು. ಆದರೆ ಕಾರಣಾಂತರಗಳಿಂದ ಅಷ್ಟಕ್ಕೆ ನಾವು ನಿಲ್ಲಿಸಿ, ತಿರುಪತಿ ಕ್ಷೌರದ ತರಹ ಮಾಡಿದ್ದೇವೆ. ಒಂದು ಎಳೆಯುವುದು, ಇನ್ನೊಂದು ಕೂಡಿಸುವುದು ಈ ರೀತಿ ಮಾಡುತ್ತಿದ್ದೇವೆ. ಯಾವುದೂ ಕೂಡ ಸರಿಯಾದ ರೀತಿಯಲ್ಲಿ ಇಲ್ಲದೇ ಇರುವುದು ಇದೆ. ಈ ದೃಷ್ಟಿಯಿಂದ ನೋಡಿದಾಗ ನಮ್ಮ ವರದಿಯಲ್ಲಿ ನಾವು ಏನನ್ನೂ ಮುಚ್ಚಿಟ್ಟಿಲ್ಲ. 1981ರ ಗಣತಿಯ ಪ್ರಕಾರ ಸುಮಾರು 27 ಸಾವಿರ ಹಳ್ಳಿಗಳು ನಮ್ಮಲ್ಲಿವೆ. ಇದರಲ್ಲಿ ಶೇಕಡಾ 27 ಹಳ್ಳಿಗಳು ಇನ್ನೂ ಕಚ್ಚಾರಸ್ತೆ ಸಂಪರ್ಕವುಳ್ಳವು ಇರುತ್ತವೆ ಎನ್ನುವ ಮಾತನ್ನು ಅಂದಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿರುವಾಗ, ನಾವು ಈ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಇದಕ್ಕೆ ಆದ್ಯತೆಯನ್ನು ಕೊಡಬೇಕಾದರೆ, ನಾವೊಂದು ನೀತಿಯನ್ನು ಹಾಕಿಕೊಂಡಿದ್ದೇವೆ. ನಾವು ಏನೇನು ಮಾಡಬೇಕು, ಯಾವುದನ್ನು ಟ್ಯಾಕಲ್ ಮಾಡಬೇಕು, ರಾಷ್ಟ್ರೀಯ ಹೆದ್ದಾರಿಗೆ ಏನು ನೀತಿಯನ್ನು ಹಾಕಬೇಕು, ರಾಜ್ಯ ಹೆದ್ದಾರಿಗೆ ಏನು ನೀತಿಯನ್ನು ಹಾಕಬೇಕು ಎಂಬ ಬಗ್ಗೆ, ಎಲ್ಲವನ್ನೂ ಬರೆದುಕೊಂಡಿದ್ದೇವೆ. ಆದರೆ, ಪಾಲನೆ ಮಾಡುವಾಗ ಅದಕ್ಕೆ ಅನುಕೂಲವಾಗಿರತಕ್ಕ ಯೋಜನೆಯನ್ನು ಮಾಡುವಾಗ ನಾವು ವಿಫಲರಾಗಿದ್ದೇವೆ. ಹೀಗಾಗಿ, ನಾವು ನಿರೀಕ್ಷೆ ಮಾಡಿದುದನ್ನು ಮುಟ್ಟುವುದಕ್ಕೆ ಸಾಧ್ಯವಾಗದೇ, ಇವತ್ತು ಎಲ್ಲವೂ ಕೂಡ ನಮ್ಮ ಕುತ್ತಿಗೆಗೆ ಬಂದು ಕುಳಿತಿದೆ. ರಾಜ್ಯದ ಹೆದ್ದಾರಿ ಮುಟ್ಟುತ್ತೇವೆಂದರೆ, ಹಳ್ಳಿಯವರು ಏನು ಸ್ವಾಮಿ, ನಮಗೆ ಒಂದು ರಸ್ತೆಯನ್ನೂ ಮಾಡಿಕೊಡುವುದಕ್ಕಾಗಲಿಲ್ಲ, ನಿಮಗೆ ವೋಟು ಕೊಟ್ಟು ಕಳುಹಿಸಿದೆವು ಎಂದು ಹೇಳುತ್ತಾರೆ. ನಾವು

ನಮಗೆ ಗ್ರಾಂಟೇ ಬರಲಿಲ್ಲ, ದುಡ್ಡೇ ಬರಲಿಲ್ಲ, ಎಲ್‌ಓಸಿ ಬರಲಿಲ್ಲವೆಂದು ಹೇಳುತ್ತಾರೆ. ಈಗ ಎಲ್‌ಓಸಿ ಬೇರೆ ಬಂದಿದೆ. ಎಲ್‌ಓಸಿ ಏಕೆ ಬಂತು ಅಂದರೆ ಇದಕ್ಕೆಲ್ಲಾ ಬೇರೆ ಬೇರೆ ವಿಷಯ ಇದೆ. ಇದು ನಮಗೂ, ನಿಮಗೂ ಎಲ್ಲಾ ಗೊತ್ತು, ಅನುಭವ ಇರತಕ್ಕವರಿಗೆ ಗೊತ್ತಿದೆ. ಮೊದಲು ಎಕ್ಸಿಕ್ಯುಟಿವ್ ಇಂಜಿನಿಯರುಗಳಿಗೆ ದುಡ್ಡು ಕೊಟ್ಟು, ಇದು ಸ್ವಲ್ಪ ಸರಿಯಾಗಿ ಆಗಲಿಲ್ಲ, ಇದೆಲ್ಲಾ ಆಗಿದೆ. ಇವತ್ತಿನ ಸಮಸ್ಯೆಗೆ ಸರ್ಕಾರ ಕಾರಣವಾಗುತ್ತಿದೆ, ಈ ಸದನ ಕಾರಣವಾಗುತ್ತದೆ, ಅಧಿಕಾರಿಗಳು ಕಾರಣರಾಗುತ್ತಾರೆ. ಮತ್ತೆ ಅಧಿಕಾರಿಗಳು ದಾರಿ ತಪ್ಪಿದ್ದಾರೆಂದು ಹೇಳುವಾಗ, ನನಗನಿಸುತ್ತದೆ, ನಾವೂ ಸ್ವಲ್ಪ ದಾರಿ ತಪ್ಪಿದ್ದನ್ನು ನೋಡಿ, ಕುಳಿತುಕೊಂಡಿರುವುದೂ ಒಂದು ತಪ್ಪು. ಒಂದೊಂದು ಸಾರಿ, ಅವರನ್ನು ಮ್ಯಾಡುವುದಕ್ಕೆ ಹೆಚ್ಚಿಸಿದ್ದು ಮತ್ತೊಂದು ತಪ್ಪು. ಹೀಗಾಗಿ ಇವತ್ತು ಸಮಸ್ಯೆ ದೊಡ್ಡ ಪ್ರಮಾಣದಲ್ಲಿ, ನಾವು ಮುಟ್ಟದೇ ಇರತಕ್ಕ ಪರಿಸ್ಥಿತಿಗೆ ಬಂದಿದ್ದೇವೆ. ಮಾನ್ಯ ನಾರಾಯಣಸ್ವಾಮಿಯವರು ನಿನ್ನೆ ಹೇಳುತ್ತಿದ್ದರು. ಆಂಧ್ರಬಾರ್ಡರಿನಲ್ಲಿ ಬಳಿಗೆ ಬಂದು ರಸ್ತೆ ನಿಂತಿದೆ, ಬಹಳ ಚೆನ್ನಾಗಿದೆ, ನಮ್ಮ ಕಡೆ ಏನೂ ಆಗಲಿಲ್ಲ ಎಂದೂ ನಾಗರಾಜ್‌ರವರೂ ಕೂಡ ಮದ್ರಾಸಿನಲ್ಲಿ ಬಂದು ರಸ್ತೆ ನಿಂತಿದೆ, ನಮ್ಮ ಕಡೆ ಏನೂ ಆಗಲಿಲ್ಲವೆಂಧು ಹೇಳಿದರು. ಅವರು ಕೆಲವು ವಿಚಾರಗಳಿಗೆ ಆದ್ಯತೆಯನ್ನು ಕೊಟ್ಟು, ಹಣವನ್ನು ಉಳಿಸಿಕೊಂಡು, ಬಹಳ ಬುದ್ಧಿವಂತಿಕೆಯಿಂದ ಕೆಲಸ ಮಾಡುತ್ತಿದ್ದಾರೆ. ನಾವು ಅದನ್ನೂ ಮಾಡಲಿಲ್ಲ, ಇಲ್ಲೂ ಮಾಡಲಿಲ್ಲ. 1953ನೇ ಇಸವಿಯಲ್ಲಿ, ನನಗೆ ಜ್ಞಾಪಕವಿರುವಂತೆ, ಬಳ್ಳಾರಿ ನಮಗೆ ಬಂತು. ಹಿಂದಿನ ಮದ್ರಾಸ್ ರಾಜ್ಯ ಭಾಗವಾಗಿ, ಆಂಧ್ರಕ್ಕೆ ಮತ್ತು ನಮಗೆ ಹೋಗುವುದಕ್ಕೆ ಮುಂಚೆ, ಅವರಲ್ಲಿ ನೀರಾವರಿ ಶೇಕಡ 9–10ರಷ್ಟಿತ್ತು; Subject to correction. ನಾನು, ನನ್ನ ಜ್ಞಾಪಕದಿಂದ ಹೇಳುತ್ತಿದ್ದೇನೆ. ಇವತ್ತು ಅವರಿಗೆ ಎಷ್ಟಿದೆ, ಇದನ್ನು ಆದ್ಯತೆಯ ಮೇಲೆ ಅವರು ಮಾಡಿದ್ದಾರೆ. ನಾಗಾರ್ಜುನಸಾಗರ ಮಾಡುವಾಗ, ರಸ್ತೆ ಮುಟ್ಟಲಿಲ್ಲ. ಎಲ್ಲಾ ಹಣವನ್ನೂ ಇದಕ್ಕೆ ಹಾಕಿ, 4–5 ವರ್ಷಗಳಲ್ಲಿ ಮುಗಿಸಿದ್ದರಿಂದ, ಇವತ್ತಿನ ದಿವಸ, ಅದರಿಂದ, ಅವರಿಗೆ ಹಣ ಬರುತ್ತಿದೆ. ಅದನ್ನು ಬಳಸಿಕೊಂಡು, ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ನಾವೇನು ಮಾಡಿದೆವು, ನಾವು ಅದನ್ನೂ ಮಾಡಲಿಲ್ಲ, ಇದನ್ನೂ ಮಾಡಲಿಲ್ಲ. ಹೀಗಾಗಿ, ನಾವು ಗೊಂದಲಕ್ಕೆ ಒಳಗಾಗಿದ್ದೇವೆ. ಇದನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಇದಕ್ಕೆ ಬೇಕಾಗಿರತಕ್ಕ ಹಣವನ್ನು ನಾವು ಒದಗಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಕಾರ್ಯ ಮಾಡುವುದಕ್ಕೆ, ಪ್ರಯತ್ನ ಮಾಡುತ್ತೇವೆ ಎಂಬ ಮಾತನ್ನು ಹೇಳುವುದಕ್ಕೆ ಮುಂಚೆ, ಸಮಸ್ಯೆಯನ್ನೂ ತಮ್ಮ ಗಮನಕ್ಕೆ ತಂದಿರುತ್ತೇನೆ. 8,227 ಕಿಲೋಮೀಟರ್ ರಸ್ತೆಯನ್ನು ಏನು ಈಗ ಸಿಂಗಲ್ ಲೈನ್ ಇದೆ, ಅದನ್ನು ಡಬಲ್ ಲೈನ್ ಮಾಡಬೇಕಾದರೆ, ಸುಮಾರಾಗಿ ನಮ್ಮ ಅಧಿಕಾರಿಗಳು ಲೆಕ್ಕ ಹಾಕಿರುವಂತೆ, 780 ಕೋಟಿ ರೂಪಾಯಿ ಬೇಕಾಗುತ್ತದೆ. ಇನ್ನುಳಿದಿರುವುದು 11 ಸಾವಿರವೂ ಅಲ್ಲ, ರಾಜ್ಯ ಹೆದ್ದಾರಿ ಅಗಲವನ್ನು 5 ಮೀಟರ್ ಮಾಡುತ್ತೇವೆಂದು ಹೇಳಿ ಪ್ರಯತ್ನಪಟ್ಟರೂ ಕೂಡ 54 ಕೋಟಿ ರೂಪಾಯಿಗಳು ಬೇಕಾಗುತ್ತದೆ.

ನಾವು ಇಂತಹ ಪರಿಸ್ಥಿತಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದೇವೆ. ಹಾಗೆಂದು ಇದನ್ನು ತಕ್ಷಣ ಮಾಡಬೇಕೇ ಅಥವಾ ಬೇಡವೇ ಎನ್ನತಕ್ಕಂಥ ಪ್ರಶ್ನೆ ಅಲ್ಲ. ಅದನ್ನು ಮಾಡಬೇಕಾಗುತ್ತದೆ. ಸರ್ಕಾರ ಈ ಬಗ್ಗೆ ಗಮನಹರಿಸಿದೆ ಎನ್ನುವ ಮಾತನ್ನು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಮತ್ತೆ ಈ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಈ ವರ್ಷಕ್ಕೆ ಏನಾದರೂ ಮಾಡಬೇಕು ಮತ್ತೆ ನಮ್ಮ ನೀತಿಯಲ್ಲಿ ಕೂಡ ಏನಾದರೂ ಬದಲಾವಣೆ ಆಗಬೇಕು ಎನ್ನುವುದು ನನ್ನ ಒಂದು ಅಭಿಪ್ರಾಯ. ಈ ವರ್ಷ ರಸ್ತೆ ಕೆಲಸ ತೆಗೆದುಕೊಳ್ಳಬೇಕೆಂದು ಹೇಳಿ ನಾವು ಏನು ತೀರ್ಮಾನ ಮಾಡಿದ್ದೇವೆ, ಅದರಂತೆ ತೆಗೆದುಕೊಂಡಿರತಕ್ಕಂಥಾದ್ದು ಮೂರನೇ ಒಂದು ಭಾಗ. ಈ ವರ್ಷ ಎಷ್ಟು ಮಾಡಬೇಕೆಂದು, ನಾವು ವಿಚಾರ ಮಾಡಿಲ್ಲ. ಏಕೆಂದರೆ ದುಡ್ಡು ಇಲ್ಲ ಎಂದು ಹೇಳಿ ಒಂದು ತಿರುಪತಿ ಕ್ಷೌರದ ತರಹ

ಮಾಡಿದ್ದೇವೆ. ಈ ವರ್ಷ ಮೂರನೇ ಒಂದು ಭಾಗ ಮುಂದಿನ ವರ್ಷ ಮೂರನೇ ಒಂದು ಭಾಗ ಅಂತ ಮಾಡುತ್ತಿರುವುದರಿಂದ ಕಾಸ್ಟ್ ಎಸ್ಕಲೇಷನ್ ಆಗುತ್ತದೆ. ಮೂರನೇ ಒಂದು ಭಾಗಕ್ಕೆ ಆಗುವುದಿಲ್ಲ. ಏನು ಕೆಲಸವನ್ನು 3 ವರ್ಷಗಳಲ್ಲಿ ಮಾಡಬೇಕೆಂದು ನಾವು ತೀರ್ಮಾನ ಮಾಡಿಕೊಂಡಿರುತ್ತೇವೆ ಅದು ಒಂದು ಲಕ್ಷ ಇರಬಹುದು. ಅದು ಆಗ ಒಂದೂವರೆ ಲಕ್ಷ ರೂಪಾಯಿ ಎರಡು ಲಕ್ಷ ರೂಪಾಯಿಗೆ ಹೋಗುತ್ತದೆ. ನಾವು ಒಂದು ವರ್ಷದಲ್ಲಿ ಇಷ್ಟು ಮಾಡಬೇಕು ಅಂತ ಒಂದು ನೀತಿಯನ್ನು ಕಾರಣಾಂತರಗಳಿಂದ ಮುಂದುವರಿಸಿಕೊಂಡು ಬಂದಿದ್ದೇವೆ. ಅದನ್ನು ಬದಲಾವಣೆ ಮಾಡತಕ್ಕಂಥ ಅವಶ್ಯಕತೆ ಇದೆ. ಇದರ ಬಗ್ಗೆ ವಿಚಾರ ಮಾಡಿ ಮೊನ್ನೆ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು 20 ಲಕ್ಷ ರೂಪಾಯಿಗಳ ಕೆಲಸ ಒಂದು ಕ್ಷೇತ್ರಕ್ಕೆ ಹಾಗೆ ಅಂತ ಪ್ರಸ್ತಾಪ ಮಾಡಿದ್ದಾರೆ. ಅದನ್ನು ಅದೇ ವರ್ಷ ಮಾಡಿ ಮುಗಿಸತಕ್ಕಂಥ ಕೆಲಸ ಮಾಡಬೇಕು. ಈ ವರ್ಷ 20 ಲಕ್ಷ ಮುಂದಿನ ವರ್ಷ 20 ಲಕ್ಷ ಅಂತ ಹೇಳಿ ಎರಡು ವರ್ಷದಲ್ಲಿ ಮಾಡಬೇಕು. ಮತ್ತೆ ಸಧ್ಯದ ಒಂದು ನೀತಿ ನಾವು ಏನು ಹಾಕಿಕೊಂಡಿದ್ದೇವೆ ಮೂರನೇ ಒಂದು ಭಾಗ ಅಂತ ದುಡ್ಡು ಇಟ್ಟಿರುವುದರಿಂದ, ಆ ರೀತಿ ವಿಚಾರ ಮಾಡಿ 3 ವರ್ಷಗಳಲ್ಲಿ ಎಲ್ಲಾ ಕೆಲಸ ಮಾಡಿ, ಕನಿಷ್ಟ ಒಂದು ಸರಿಯಾದ ಸ್ಪೆಸಿಫಿಕೇಶನ್ ಪ್ರಕಾರ ಟಾರ್ ಮಾಡಿದರೆ ಒಳ್ಳೆಯದು. ನಮ್ಮ ಇಂಜನೀಯರ್ಸ್ ಏನು ಹೇಳುತ್ತಾರೆಂದರೆ, ಒಂದು ಸಾರಿ ಟಾರ್ ಮಾಡಿದರೆ 7ವರ್ಷಗಳ ಕಾಲ ಮತ್ತೆ ಮಾಡದೇ ಇರುವಂತಹ ರೀತಿಯಲ್ಲಿರುತ್ತದೆ. ಸ್ವಲ್ಪ ಏನಾದರೂ ಅಲ್ಲಿ ಇಲ್ಲಿ ದೋಷಗಳು ಬರಬಹುದು. ರೋಲ್ ಹೊಡೆಯುವಾಗ ಮತ್ತೆ ಅದನ್ನು ಮುಚ್ಚಬಹುದು. ಈ ರೀತಿ ಮಾಡಿದರೆ ಅದನ್ನು ಆಗಾಗ್ಗೆ ರಿಪೇರಿ ಮಾಡುವಂಥಾದ್ದು ಬರುವುದಿಲ್ಲ, ನಾವು ಆಗಾಗ್ಗೆ ಹಣ ಖರ್ಚು ಮಾಡಬೇಕಾಗಿಲ್ಲ, ಇನ್ನೂ ನಾವು ಒಂದು ವರ್ಷ ಮುಂದೆ ಹೋಗಬಹುದು ಅಂದರೆ 8–9 ವರ್ಷಗಳವರೆಗೂ ಹೋಗಬಹುದು ಹಾಗೆ ಎಂದು ಹೇಳುತ್ತಾರೆ.

ಈಗ ಏನು ಟಾರ್ ಮಾಡಿದ್ದೇವೆ. ಅದನ್ನು 10–20 ವರ್ಷಗಳಾದರೂ ಮತ್ತೆ ನಾವು ರೀ–ಕಾರ್ಪೆಟಿಂಗ್ ಮಾಡಲಿಲ್ಲ. ಇದರಿಂದಾಗಿ ರಸ್ತೆಗಳು ಇವತ್ತು ಸರಿಯಾದ ಸ್ಥಿತಿಯಲ್ಲಿ ಇಲ್ಲ. ಇದನ್ನೆಲ್ಲಾ ವಿಚಾರ ಮಾಡಿ 20ಲಕ್ಷದಲ್ಲಿ ಅರ್ಧ ಭಾಗ 12ಕಿಲೋಮೀಟರ್‌ಗಳನ್ನು ರೀ ಕಾರ್ಪೇಟಿಂಗ್ ಮಾಡಲಿಕ್ಕೆ ಬಿಲ್ಡಿಂಗ್ ಕೆಲಸಕ್ಕೆ ಆ ಕ್ಷೇತ್ರದಲ್ಲಿ ಕಾಲು ಭಾಗ ಇನ್ನೊಂದು ಕಾಲು ಭಾಗ ಬ್ರಿಡ್ಜ್‌ಸ್‌ಗೆ ಎಂದು ಹಂಚಿಕೆ ಮಾಡಬೇಕೆಂದು ಸರ್ಕಾರ ವಿಚಾರ ಮಾಡುತ್ತಿದೆ. ಹಾಗೆ ಮಾಡಿದರೆ 12 ಕಿಲೋಮೀಟರ್ ನಮಗೆ ಒಂದು ಕ್ಷೇತ್ರಕ್ಕೆ ಪಕ್ಕಾ ರಸ್ತೆ ಆಗುತ್ತದೆ. ಮುಂದೆ ಅವು ರೀ ಕಾರ್ಪೇಟಿಂಗ್ 7–8 ವರ್ಷಗಳು ಬಾರದೇ ಇರತಕ್ಕಂಥ ರೀತಿಯಲ್ಲಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆ ರೀತಿಯಲ್ಲಿ ಇಂತಹ ರಸ್ತೆಗಳನ್ನು ಮಾಡತಕ್ಕಂಥದ್ದು ಒಂದು, ಮತ್ತು ನಮ್ಮ ನಾರ್ಮಲ್ ಪ್ಲಾನ್ ಏನು ಇದೆ ಅದರಲ್ಲಿ 6 ಕಿಲೋಮೀಟರ್ ಬರುತ್ತದೆ. ಮತ್ತೆ 2 ಕಿಲೋಮೀಟರ್ ಹೀಗೆ ಒಟ್ಟು 20 ಕಿಲೋಮೀಟರ್ ರಸ್ತೆ ಒಂದು ಕ್ಷೇತ್ರಕ್ಕೆ ವ್ಯವಸ್ಥಿತವಾಗಿ ಮಾಡತಕ್ಕಂಥ ವಿಚಾರ ಮಾಡಿ ನಾವು ಒಂದು ವರ್ಷದಲ್ಲಿ ಸುಮಾರು 2800 ಕಿಲೋಮೀಟರ್ ರಸ್ತೆ ಒಂದು ವರ್ಷದಲ್ಲಿ ಆಗತಕ್ಕಂಥಾದ್ದು ನಾನೇನು ಈಗ 400 ಕಿ.ಮೀ.ಅಂತ ಪ್ರಸ್ತಾಪ ಮಾಡಿದ್ದೇವೆ. ಅದಕ್ಕಿಂತ ದೊಡ್ಡ ಪ್ರಮಾಣದಲ್ಲಿ ಮುಂದೆ ಒಂದು A big leap ಅಂತ ನಾವು ಏನು ಹೇಳುತ್ತೇವೆ ಆ ರೀತಿಯಲ್ಲಿ ಅಭಿವೃದ್ಧಿ ಮಾಡಲು ಅವಕಾಶ ಮಾಡಿಕೊಡಬೇಕೆಂದು ಒಂದು ಆಲೋಚನೆ ಇದೆ. ಇದನ್ನು ಮಾಡತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯ ದಿವಸ ನಾವು ಬೇರೆ ಸ್ವಲ್ಪ ಹಣ ಉಳಿಸಿ ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡಲು ಸಾಧ್ಯವಾಗುತ್ತದೆ, ತದನಂತರ ಇದನ್ನು ವಿಚಾರ ಮಾಡೋಣ ಎನ್ನತಕ್ಕಂಥ ಮಾತನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಇವತ್ತು ನಾವು ಈ

ಕಾರ್ಯವನ್ನು ಮಾಡಬೇಕಾಗುತ್ತದೆ, ಇದನ್ನು ಮಾಡುವುದಕ್ಕಾಗಿ ಸರ್ಕಾರ ಸದುದ್ದೇಶದಿಂದ ಪ್ರಯತ್ನ ಮಾಡುತ್ತದೆ ಎನ್ನತಕ್ಕಂಥ ಆಶ್ವಾಸನೆಯನ್ನು ಈ ಸದನದಲ್ಲಿ ಕೊಡಲಿಕ್ಕೆ ನಾನು ಇಷ್ಟಪಡುತ್ತೇನೆ.

ಸ್ವಾಮಿ, ಈ ಸೇತುವೆಗಳು ಬಹಳ ದುಸ್ಥಿತಿಯಲ್ಲಿದ್ದಾವೆ. ಇದರ ಬಗ್ಗೆ ವರದಿಗಳನ್ನು ತರಿಸಿಕೊಂಡಿದ್ದೇನೆ. ಸೌತ್ ಜೋನ್ ಬಗ್ಗೆ ವರದಿ ಇದೆ, ನಾರ್ಥ್ ಜೋನ್‌ದು ವರದಿ ಇಲ್ಲ. ತಕ್ಷಣವೇ ರಿಪೇರಿ ಮಾಡತಕ್ಕಂಥ ಬ್ರಿಡ್ಜಸ್‌ಗಳು ಸುಮಾರು 96 ಇವೆ. ಮಾನ್ಯ ಇದಿನಬ್ಬ ಅವರು ಪಾಣೆ – ಮಂಗಳೂರು ರಸ್ತೆ, ನೇತ್ರಾವತಿ – ಉಪ್ಪಿನ ಅಂಗಡಿ ಸೇತುವೆ ಬಿದ್ದುಹೋಗುವ ಪರಿಸ್ಥಿತಿಯಲ್ಲಿ ಇದೆ ಎಂದು ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಈ ಸಮಸ್ಯೆ ಇಲ್ಲ, ಬೇರೆ ಬೇರೆ ಜಿಲ್ಲೆಯಲ್ಲೂ ಇದೇ ಪರಿಸ್ಥಿತಿ ಇದೆ. ಮೊನ್ನೆ ನಮ್ಮ ಜಿಲ್ಲೆ ಚಿತ್ರದುರ್ಗದಿಂದ ಶಿವಮೊಗ್ಗಕ್ಕೆ ಹೊಳಲ್ಕೆರೆ ಮಾರ್ಗವಾಗಿ ಹೋಗುವಾಗ ಬರತಕ್ಕಂಥ ಸೇತುವೆಗಳು ಏನಿವೆ ಅವು ಸುಮಾರು 60–70–80–100 ವರ್ಷಗಳ ಹಿಂದೆ ಕಟ್ಟಿದವು ಆಗಿವೆ. ಅವು ಕೂಡ ಕೆಟ್ಟ ಪರಿಸ್ಥಿತಿಯಲ್ಲಿ ಇವೆ. ಮಲೆನಾಡು ಪ್ರದೇಶದಲ್ಲಂತೂ ಹೇಳಿಕೊಳ್ಳುವಂಥ ಪರಿಸ್ಥಿತಿಯಲ್ಲಿ ಇಲ್ಲ. ಮಲೆನಾಡಿನಲ್ಲಿ ಅವಶ್ಯಕವಾದ ಕೆಲಸವೆಂದರೆ ರಸ್ತೆಗಳ ಕೆಲಸ. ಒಂದು ಹಳ್ಳಿ ಎಲ್ಲೋ ಮೂಲೆಯಲ್ಲಿರುತ್ತದೆ. ಅದಕ್ಕೆ ಸಂಪರ್ಕ ಒದಗಿಸದಿದ್ದರೆ ಅವರಿಗೆ ಬೇರೆ ಪ್ರಪಂಚದ ಸಂಪರ್ಕ ಇಲ್ಲದೇ ಇರತಕ್ಕಂಥ ಪರಿಸ್ಥಿತಿಯುಂಟಾಗುತ್ತದೆ. ಕುಶಾಲನಗರಕ್ಕೆ ಹೋಗತಕ್ಕಂಥ ರಸ್ತೆ ಒಂದರಲ್ಲಿ ಸಣ್ಣ ಮತ್ತು ಇಕ್ಕಟ್ಟಾದ ಒಂದು ಸೇತುವೆ ಇದೆ. ಅದನ್ನು ಕಟ್ಟಿ 100 ವರ್ಷಕ್ಕೂ ಮೇಲ್ಪಟ್ಟು ಆಗಿರಬೇಕು. ಅಲ್ಲಿಂದ ಕೂರ್ಗ್‌ನಿಂದ ಮೈಸೂರು, ಮೈಸೂರಿನಿಂದ ಕೇರಳಕ್ಕೆ ಹೋಗತಕ್ಕಂಥ ರಸ್ತೆ ಬಹಳ ಕಿರಿದಾಗಿದೆ. ಅದೂ ದೊಡ್ಡದಾಗಬೇಕಾಗುತ್ತದೆ. ಅಲ್ಲಿರತಕ್ಕಂಥ ಒಂದು ಸೇತುವೆ ಬಗ್ಗೆ ನಮ್ಮ ಅಧಿಕಾರಿಗಳಿಗೆ ಅದು ಸ್ಟ್ರಾಂಗ್ ಆಗಿದೆಯೋ ಎಂದು ಕೇಳಿದೆ. ಅದು ಗಟ್ಟಿಯಾಗಿದೆ, ಕೆಳಗಡೆ ರಾಕ್ ಇದೆ ಎಂದು ನಮ್ಮ ಇಂಜಿನೀಯರ್ಸ್ ಹೇಳಿದ್ದಾರೆ. ಇಂಥಾ ಸೇತುವೆಗಳು ರಾಜ್ಯದಲ್ಲಿ ಬಹಳ ಇವೆ. ನಮ್ಮ ಬಜೆಟ್‌ನಲ್ಲಿ ಸೇತುವೆಗಳನ್ನು ಕಟ್ಟುವುದಕ್ಕಾಗಿ ಹೆಚ್ಚು ಹಣವನ್ನು ಯಾವ ರೀತಿ ಒದಗಿಸಬೇಕೆಂಬ ಬಗ್ಗೆ ಯೋಚನೆ ಮಾಡಿ ಆದಷ್ಟು ಹೆಚ್ಚು ಹಣವನ್ನು ಇದಕ್ಕಾಗಿ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಈ ಸದನಕ್ಕೆ ಆಶ್ವಾಸನೆ ಕೊಡುತ್ತೇನೆ. ಇನ್ನು ಜಿಲ್ಲಾಪರಿಷತ್ತಿಗೆ ಸಂಬಂಧಪಟ್ಟಂತೆ ಅವರ ಹೊಣೆಗಾರಿಕೆ ತುಂಬಾ ಇದೆ. ಇದರ ಬಗ್ಗೆ ಮಾನ್ಯ ಏಕಾಂತಯ್ಯನವರು ಪ್ರಸ್ತಾಪ ಮಾಡಿ ಒಂದು ಕಿಲೋಮೀಟರ್‌ಗೆ ಟಾರ್ ಮಾಡುವುದಕ್ಕೆ ಪಿಡಬ್ಲ್ಯೂಡಿ ಎಸ್ಟಿಮೇಟ್‌ಗಿಂತ 50 ಸಾವಿರ ಜಾಸ್ತಿ ಮಾಡುತ್ತಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಮಾನ್ಯ ಬೈರೇಗೌಡರು ಮಾತನಾಡುತ್ತಾ, ಹೇಗೆ ಎಸ್ಟಿಮೇಟ್ ಮಾಡುತ್ತಾರೆಂದು ಹೇಳಿದರು, ರಸ್ತೆ, ಸೇತುವೆ ಕೆರೆ ಮಾಡಬೇಕೆಂದರೆ ಒಂದು ಲೈನ್ ಎಸ್ಟಿಮೇಟ್ ಮಾಡುವುದು, ಆ ಲೈನ್ ಎಸ್ಟಿಮೇಟೇ ಪರ್ಮನೆಂಟ್ ಎಸ್ಟಿಮೇಟ್ ಆಗುವುದು, ಅದನ್ನೇ ಸ್ಯಾಂಕ್ಷನ್ ಮಾಡಿಸಿಕೊಳ್ಳತಕ್ಕಂಥಾದ್ದು, ಇದರ ಬಗ್ಗೆ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳಿರತಕ್ಕಂಥ ಎಲ್ಲ ವಿಷಯಗಳನ್ನು ನಾನು ಗಮನದಲ್ಲಿ ಇಟ್ಟುಕೊಂಡಿದ್ದೇನೆ. ಈ ರೀತಿ ಅಂದಾಜನ್ನು ಹೆಚ್ಚು ಮಾಡತಕ್ಕಂಥಾದ್ದು, ಅದನ್ನು ಸ್ವಹಿತಕ್ಕೆ ಬಳಸಿಕೊಳ್ಳುತ್ತಿದ್ದಾರೋ ಅಥವಾ ಯಾರಾದರೂ ಅದರಲ್ಲಿ ಭಾಗಿದಾರರಾಗಿದ್ದಾರೋ ಎನ್ನುವ ಮಾತು ಬೇರೆ. ಇದನ್ನೆಲ್ಲಾ ಸ್ವಲ್ಪ ಗುರುತಿಸಬೇಕಾಗುತ್ತದೆ. ಅದಕ್ಕಾಗೇ ನಾನು ಹೇಳಿದ್ದು, ಹೊಣೆಯನ್ನು ಅರಿತು ಕೆಲಸ ಮಾಡತಕ್ಕಂಥ, ಜವಾಬ್ದಾರಿಯುಳ್ಳಂಥ ಅಧಿಕಾರಿಗಳನ್ನು ಆಯಕಟ್ಟಿನ ಜಾಗದಲ್ಲಿ ಇಟ್ಟು ಕೆಲಸಗಳು ಸರಿಯಾಗಿ ಆಗುವ ರೀತಿಯಲ್ಲಿ ಮಾಡಬೇಕಾಗುತ್ತದೆ. ಇರುವ ಅವ್ಯವಸ್ಥೆಯನ್ನು ಸರಿ ಮಾಡಿಕೊಂಡು, ಗುಣಮಟ್ಟವನ್ನು ಇಂಪ್ರೂವ್ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆಂದು ಈ ಸದನದಲ್ಲಿ ಆಶ್ವಾಸನೆಯನ್ನು ಕೊಡುತ್ತೇನೆ. ಮಾನ್ಯ ಯಡಿಯೂರಪ್ಪನವರು, ನಿಮ್ಮ ಕ್ವಾಲಿಟಿ ಕಂಟ್ರೋಲ್ ಚೆನ್ನಾಗಿಲ್ಲ, ಹಾಗೂ ಸ್ಕ್ವಾಡ್ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಸ್ಕ್ವಾಡ್‌ನವರು ಒಂದು ವರ್ಷದಲ್ಲಿ 47 ಕೇಸ್‌ಗಳು ಹಿಡಿದು ಅದರಲ್ಲಿ 17 ಕೇಸ್‌ಗಳಲ್ಲಿ

ಅಕ್ರಮವಾಗಿದೆಯೆಂದು ಹೇಳಿದ್ದಾರೆ. ಅವರು ಏನು ಕಂಡುಹಿಡಿದಿದ್ದಾರೆ ಎಂದರೆ, ಇರೆಗ್ಯುಲಾರಟೀಸ್ ಎಂದು ತಿಳಿಸಿದ್ದಾರೆ. ಮಾನ್ಯ ಭೈರೇಗೌಡರು ಸಹ ಮಂತ್ರಿಯಾಗಿದ್ದಂಥವರು. ಇರೆಗ್ಯುಲಾರಟೀಸ್ ಎಂದರೆ ನಾವು ಏನು ಮಾಡುವುದಕ್ಕಾಗುತ್ತದೆ ? ಸಣ್ಣ ಇರೆಗ್ಯುಲಾರಿಟೀಸ್ ಆಗಿದ್ರೆ ಬಿಟ್ಟು ಬಿಡಪ್ಪ ಎಂದು ನಾವು ಹೇಳಬೇಕಾಗುತ್ತದೆ.

ಶ್ರೀ ಸಿ. ಭೈರೇಗೌಡ:– ನಮ್ಮ ಕಡೆ ಒಂದು ಗಾದೆ ಇದೆ. ಬೇವಿನ ಮರಕ್ಕೆ ಹೊಂಗೆ ಮರ ಸಾಕ್ಷಿ ಎಂದು; ಹಾಗೆಯೇ ಹೊಂಗೆ ಮರಕ್ಕೆ ಬೇವಿನ ಮರ ಸಾಕ್ಷಿ ಎಂಬಂತೆ ಪಿಡಬ್ಲ್ಯೂಡಿ ಇಲಾಖೆಯಲ್ಲಿ ಇರತಕ್ಕಂಥ ಇಂಜಿನೀಯರ್ ಮೇಲೆ ಅದೇ ಇಲಾಖೆಯ ಸ್ಕ್ವಾಡ್ ಇಂಜಿನೀಯರ್ ಹೋಗಿ ಚೆಕ್ ಮಾಡುವುದು ಏನು ? ಇರೆಗ್ಯುಲಾರಿಟೀಸ್ ಎಂದು ಹೇಳುತ್ತಾರೆ. ಆದರೆ ಅಲ್ಲಿ ಬ್ಲಂಡರ್ ಮಾಡಿರುತ್ತಾರೆ. ಅವರು ಅದಕ್ಕೆ ಉಪಯೋಗಿಸುವ ಪದವೇ ಇರೆಗ್ಯುಲಾರಟೀಸ್ ಎಂದು. ಅದಕ್ಕೆ ಬೇರೆ ವ್ಯವಸ್ಥೆಯನ್ನು ದಯವಿಟ್ಟು ಮಾಡಿ.

ಶ್ರೀ ಕೆ.ಹೆಚ್. ರಂಗನಾಥ್:– ಅದಕ್ಕೆ ಕಾರಣ ಏನು ? ತಮಗೆ ಗೊತ್ತಿಲ್ಲವೆಂದಲ್ಲ. ಕೆಲವರನ್ನು ಕೆಲಸಕ್ಕೆ ಹೋದ ಲಾಗಾಯಿತ್ತು ರಿಟೈರ್ಡ್ ಆಗುವವರೆಗೂ ಅವನ ಹಿಂದೆ ಯಾರೂ ಇಲ್ಲವೆಂದು ಹೇಳಿ ಅವನನ್ನು ತೆಗೆದುಕೊಂಡು ಹೋಗಿ ಎಲ್ಲೋ ಇಟ್ಟರೆ ಅವನು ಏನು ಮಾಡುತ್ತಾನೆ ? ಅವನು ಅದನ್ನೇ ಮಾಡುತ್ತಾನೆ. ಇದು ಏನು ಗೊತ್ತಾಗದೇ ಇರತಕ್ಕಂಥಾದ್ದಲ್ಲ. ಇದು ಕಷ್ಟದ ಪ್ರಶ್ನೆ ಅಲ್ಲ. ಏಕೆ ಅವನನ್ನು ಅಲ್ಲೇ ಇಟ್ಟಿದ್ದಾರೆ ?

ಶ್ರೀ ಹೆಚ್. ಏಕಾಂತಯ್ಯ:– ಯಾರಾದರೂ ಒಬ್ಬ ಪ್ರಾಮಾಣಿಕ ಅಧಿಕಾರಿ ಇಂಥವುಗಳನ್ನೆಲ್ಲಾ ಕಂಡುಹಿಡಿಯುವುದಕ್ಕೆ ಪ್ರಯತ್ನಪಟ್ಟರೆ, ಅವನು ಬಹಳ ಸ್ಟ್ರಿಕ್ಟ್ ಆಗಿದ್ದಾನೆ ಅವನು ಬೇಡ, ಬೇರೆ ಕಡೆ ಹಾಕಿ ಎಂದು ಮಂತ್ರಿಗಳ ಹತ್ತಿರ ಹೋಗಿ ಹೇಳುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್:– ಅವನು ಜನತಾದಳಕ್ಕೆ ಸಹಾಯಮಾಡುತ್ತಾನೆ, ಕಾಂಗ್ರೆಸ್‌ಗೆ ಸಹಾಯ ಮಾಡುತ್ತಾನೆ, ಕಮ್ಯುನಿಸ್ಟ್‌ಗೆ ಸಹಾಯ ಮಾಡುತ್ತಾನೆ, ಅವನು ಒಕ್ಕಲಿಗರವನು, ಲಿಂಗಾಯತರವನು, ಅವನು ಬ್ರಾಹ್ಮಣ, ಅವನು ಹರಿಜನ, ಹರಿಜನರಲ್ಲಿ ಅವರು ಬಲ ಕೈ ಅವನು, ಎಡಕೈ ಅವನು, ಅವನು ಲಮಾಣಿ, ಅವನು ಬೋವಿ ಹೀಗೆ ಯಾವುದಕ್ಕೆ ನಮ್ಮ ಹತ್ತಿರ ಆರ್ಗ್ಯುಮೆಂಟ್ ಇಲ್ಲ ? ಯಾವ ಆರ್ಗ್ಯುಮೆಂಟ್ ಬೇಕಾದರೂ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೆ, ತಾವು ಹೇಳಿದಂಥ ಮಾತು ಸರಿ ಇದೆ. ತಮ್ಮ ಕಾಲದಲ್ಲಾದರೂ ಸಹಾ ಶಾಸಕರೇ ಇರಬಹುದು ಅಥವಾ ಮತ್ತೊಬ್ಬರೇ ಇರಬಹುದು, ಯಾರದೂ ಹಸ್ತಕ್ಷೇಪ ಇಲ್ಲದೆ ಯೋಗ್ಯರಾದವರನ್ನು ನೇಮಕ ಮಾಡಿ. ಅವನ ಮೇಲೆ ಕಂಪ್ಲೇಂಟ್ ಇದ್ರೆ ಅವನ ಮೇಲೆ ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಮೇಲಿನ ಅಧಿಕಾರಿಗಳಿಗೆ ಜವಾಬ್ದಾರಿ ಕೊಡಿ.

ಶ್ರೀ ಕೆ.ಹೆಚ್. ರಂಗನಾಥ್:– ಈ ಇಲಾಖೆಯಲ್ಲಿ ಏನು ಲೋಪದೋಷ ಇದೆ ಅದನ್ನು ಗುರುತಿಸಿ ಕೆಲಸದ ಗುಣಮಟ್ಟವನ್ನು ಸರಿಯಾದ ರೀತಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಈಗಾಗಲೇ ನಾನು ಸದನಕ್ಕೆ ಆಶ್ವಾಸನೆ ಕೊಟ್ಟಿದ್ದೇನೆ. ಅದು ಎಷ್ಟು ಕಷ್ಟ ಎಂದು ನಮಗೂ ಗೊತ್ತು ನಿಮಗೂ ಗೊತ್ತು. ರಾಜ್ಯದ ಹಿತ ದೃಷ್ಟಿಯಿಂದ ಯೋಜನೆಯಲ್ಲಿ ನಾವು ತಪ್ಪು ಮಾಡುತ್ತಿದ್ದೇವೆ. ಯಾವ ವರ್ಷಕ್ಕೆ ಮಾಡಬೇಕು ? ಒಂದು ಲಕ್ಷದ 20 ಸಾವಿರ ಕಿಲೋಮೀಟರ್ ಇರತಕ್ಕಂಥ ರಸ್ತೆಯಲ್ಲಿ ಈ ಪ್ರಶ್ನೆ ಬರುತ್ತದೆ. ಹಳ್ಳಿಗಳಲ್ಲಿ ಮೆಟಲಿಂಗ್ ರೋಡ್ ಅಥವಾ ಕಚ್ಚಾ ರಸ್ತೆ ಎನ್ನತಕ್ಕಂಥ ರಸ್ತೆಗಳಿವೆ. ಇಂಥಾ ರಸ್ತೆಗಳಲ್ಲಿ 15 ದಿವಸಕ್ಕೆ ಒಂದು ಸಾರಿ 2 ತಿಂಗಳಿಗೆ ಒಂದು ಸಾರಿ ಬಂಡಿ ಹಳಿ ಕಿತ್ತುಕೊಂಡು

ಹೋಗಿ ಬಿಡಬಹುದು. ಹಳೇ ಕಾಲದಲ್ಲಿ ಒಂದು ಬಂಡಿ ಹಳಿ ಮಾಡಿಸುವುದಕ್ಕೆ 20 – 25 ರೂಪಾಯಿ ಆಗುತ್ತಿತ್ತು. ಅದು ಈಗ 300, 400 ಆಗುತ್ತದೋ ಏನೋ ಗೊತ್ತಿಲ್ಲ. 7 – 8 – 10 ಸಾವಿರಕ್ಕೆ ಕಡಿಮೆ ಇವತ್ತು ಬಂಡಿ ಸಿಗುವುದಿಲ್ಲ. ರೈತನ ಎತ್ತಿನ ಕಾಲಿನ ಗೊರಸಿನಲ್ಲಿ ಜಲ್ಲಿ ಹೊಕ್ಕು ಕುಂಟಾಗಿ ಹಾಳಾಗಿ ಹೋಯಿತೆಂದರೆ ಸಾಧಾರಣ ರೈತನಿಂದ ಅವನ ಒಂದು ಜೊತೆ ಎತ್ತುಗಳನ್ನು ಬದಲಾವಣೆ ಮಾಡಬೇಕಾದರೆ ಕಷ್ಟ ಇದೆ. ಸುಮಾರು ಶೇಕಡಾ 27 ಹಳ್ಳಿಗಳಲ್ಲಿ ಕಚ್ಚಾ ರಸ್ತೆ ಇದೆ ಎಂದರೆ ಈ ಸಮಸ್ಯೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಈ ಯೋಜನೆಯೇ ಸರಿಯಿಲ್ಲ. ಇಂಥಾ ಅನಾನುಕೂಲತೆಗಳನ್ನು ಸರಿ ಮಾಡುವುದಕ್ಕೆ ಕ್ವಾಲಿಟಿ ಕಂಟ್ರೋಲನ್ನು ಬಲಪಡಿಸಬೇಕಾಗುತ್ತದೆ. ಇದನ್ನು ಸೂಪರಿಂಟೆಂಡಿಂಗ್ ಇಂಜಿನೀಯರ್ ಮಟ್ಟದಲ್ಲೋ ಅಥವಾ ಇಂಜಿನೀಯರ್ ಮಟ್ಟದಲ್ಲೋ ಮಾಡಬೇಕಾಗುತ್ತದೆ. ಸ್ಕ್ವಾಡ್‌ನವರು ಇನ್ನು ಮುಂದೆ ಹೋದಾಗ ಎಲ್ಲಿ ತಪ್ಪಾಗಿದೆ ಎಂದು ನೋಡಿ ಅಲ್ಲಿ ತಪ್ಪಿದೆ ಎಂದು ಹೇಳಬೇಕು; ತಪ್ಪಿಲ್ಲದ ಕಡೆ ತಪ್ಪಿಲ್ಲವೆಂದು ಹೇಳಬೇಕು. ಆಮೇಲೆ ಯಾವ ಇಂಜಿನೀಯರ್ ಬೇಡ ಎಂದರೆ ಅವನ ಮೇಲೆ ನೂರಾರು ಅರ್ಜಿ ಹಾಕಿ ನಮ್ಮ ಹತ್ತಿರವೂ ಬಂದು ಹೇಳತಕ್ಕಂಥಾದ್ದನ್ನು ನಾವು ಮಾಡಿದ್ದೇವೆ. ಇದನ್ನೆಲ್ಲಾ ಗಮನದಲ್ಲಿ ಇಟ್ಟುಕೊಂಡು ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಪ್ರಸ್ತಾಪ ಮಾಡುತ್ತಾ, ಮಾನ್ಯ ಯಡಿಯೂರಪ್ಪನವರು ಚೀಫ್ ಇಂಜಿನೀಯರ್‌ಗಳ ಬಗ್ಗೆ ಕೇಳಿದ್ದರು. ನೀರಾವರಿ ಮತ್ತು ಪಿಡಬ್ಲ್ಯೂಡಿ ಎರಡೂ ಸೇರಿ ಚೀಫ್ ಇಂಜಿನೀಯರ್ ಇನ್ ಚೀಫ್ 13 ಜನ ಇದ್ದಾರೆ. ಚೀಫ್ ಇಂಜಿನೀಯರ್ಸ್ 24 ಜನ ಇದ್ದಾರೆ. ಅಂದರೆ 30 ಜನ ಚೀಫ್ ಇಂಜಿನೀಯರ್ಸ್ ನಮ್ಮ ಹತ್ತಿರ ಇದ್ದಾರೆ. ಮೂಗಿಗಿಂತ ಮೂಗುತಿ ಭಾರ. ಹಾಗೆಯೇ ನಮ್ಮ ಮೂಗುತಿ ಭಾರ ಜಾಸ್ತಿಯಾಗಿದೆ.

ಜೂನಿಯರ್ ಇಂಜಿನಿಯರುಗಳು ಸುಮಾರು ನಾಲ್ಕು ಸಾವಿರ ಜನ ಇದ್ದಾರೆ. ಅಸಿಸ್ಟೆಂಟ್ ಇಂಜಿನಿಯರ್ಸ್ ಸುಮಾರು ಐದು ಸಾವಿರ ಜನ ಇದ್ದಾರೆ. 1450 ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರುಗಳು ಇದ್ದಾರೆ. ಸೂಪರಿಂಟೆಂಡಿಂಗ್ ಇಂಜಿನಿಯರ್ಸ್ ಒಟ್ಟು 95 ಜನ ಇದ್ದಾರೆ. ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ 326 ಜನ ಇದ್ದಾರೆ. ಇವತ್ತು ಇಷ್ಟು ದೊಡ್ಡ ಪ್ರಮಾಣದಲ್ಲಿ ಅಧಿಕಾರಿಗಳಿದ್ದರೆ ನಾನು ಇನ್ನೊಂದನ್ನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುವುದೇನೆಂದರೆ ಇಂಜಿನಿಯರ್‌ಗಳು ಸಹ ಅವರು ಕೆಲಸಕ್ಕೆ ಸೇರಿದ ಮೇಲೆ, ಡಿಪ್ಲೊಮಾ ಮಾಡಿ ಜೂನಿಯರ್ ಇಂಜಿನಿಯರ್ ಆದರೂ ಸರಿ ಅಥವಾ ಗ್ರಾಜ್ಯುಯೇಟ್ ಆಗಿ ಅಸಿಸ್ಟೆಂಟ್ ಇಂಜಿನಿಯರ್ ಆಗಿ ಸೇರಿದರೂ ಸುಮಾರು 20 – 22 – 23 ವರ್ಷ ಸರ್ವೀಸ್ ಮಾಡಿ, ಕೆಲವರು ಹಾಗೆಯೇ ರಿಟೈರ್ಡ್ ಆಗಿದ್ದು ಉಂಟು. ಅವರಿಗೆ ಯಾವ ಪ್ರಮೋಷನ್ ಇರುವುದಿಲ್ಲ. ಬರತಕ್ಕಂಥ ವ್ಯವಸ್ಥೆಯೂ ಕೂಡ ಇಲ್ಲ. ಹೀಗಾಗಿ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿಯೂ ಬದಲಾವಣೆ ಮಾಡಬೇಕಾಗುತ್ತದೆ. ಈಗ ಐ.ಎ.ಎಸ್. ಆಫೀಸರ್‌ರವರಿಗೆ ಟೈಮ್ ಸ್ಕೇಲ್ ಅಂತ ಹೇಳಿ 4 ವರ್ಷಕ್ಕೆ, 10 ವರ್ಷಕ್ಕೆ, 15 ವರ್ಷಕ್ಕೆ ಎಂದು ಅವರು ಸಲೀಸಾಗಿ ಸೂಪರ್ ಟೈಂ ಸ್ಕೇಲ್ ಆಗುವವರೆಗೂ ಹೋಗಿಬಿಡುತ್ತಾರೆ. ಕೆಳಗಡೆ ಜನರಿಗೆ ಸ್ವಲ್ಪ ತೊಂದರೆಯಾಗುತ್ತದೆ. ಇದನ್ನು ಕೂಡ ಗಮನಿಸಿ ಸರ್ವೀಸಸ್ ಕಂಡೀಷನ್ಸ್ ಬದಲಾವಣೆ ಮಾಡಬೇಕೆನ್ನುವ ದೃಷ್ಟಿಯೂ ಕೂಡ ಸರ್ಕಾರದಲ್ಲಿ ಇದೆ. ಅದನ್ನು ಕನಿಷ್ಟ 10 ವರ್ಷ ಅಥವಾ 12 ವರ್ಷ ಸರ್ವೀಸ್ ಆದರೆ ಆತನಿಗೆ ಪ್ರಮೋಷನ್ ಬರುವ ರೀತಿಯಲ್ಲಿ ಮಾಡಬೇಕು. ತದನಂತರ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗತಕ್ಕಂಥದ್ದು ಹೀಗೆ ಮಾಡತಕ್ಕಂಥದ್ದು ಹಾಗೂ ಕಿರಿಯ ಇಂಜಿನಿಯರ್ಸ್‌ಗೂ ಮಾಡಬೇಕು ಅನ್ನತಕ್ಕದ್ದು ನನ್ನ ಅಭಿಪ್ರಾಯವಾಗಿದೆ. ಅದಕ್ಕೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮಾಡುತ್ತೇವೆ. ಇದರಿಂದ ಸರ್ಕಾರದ ಮೇಲೆ ಹಣದ ಭಾರ ಎಷ್ಟು ಬೀಳಬಹುದು ಇದನ್ನೆಲ್ಲ ಗಮನಿಸಿಕೊಂಡು ಮಾಡುತ್ತೇವೆ. ಅವರ ಮನಸ್ಸಿನಲ್ಲಿರತಕ್ಕ ನೋವು ಏನಿದೆ ಅದನ್ನು ಕೂಡ ಸರಿ ಮಾಡಿ, ಅವರು ಈ ಕೆಲಸದಲ್ಲಿ

ಮನಃಪೂರ್ವಕವಾಗಿ ಅವರನ್ನು ತೊಡಗಿಸಿಕೊಳ್ಳುವುದಕ್ಕೆ ಸಹಾಯಕವಾಗುವ ರೀತಿಯಲ್ಲಿ ನಾವು ಪ್ರಯತ್ನ ಮಾಡೋಣವೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇವೆ. ಮಾನ್ಯ ಸದಸ್ಯಣಿಯರಾದಂಥ ಮೋಟಮ್ಮನವರು ಪ್ರಸ್ತಾಪ ಮಾಡುತ್ತಾ ರಿಜರ್ವೇಷನ್ಸ್‌ನಲ್ಲಿ ತೊಂದರೆಯಾಗುತ್ತಿದೆ ಎನ್ನತಕ್ಕ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಎಕ್ಸಿಕ್ಯೂಟಿವ್ ಇಂಜಿನಿಯರ್ ಆ ಹಂತದಲ್ಲಿ ಮಾತ್ರ ರಿಜರ್ವೇಷನ್ಸ್ ಸ್ವಲ್ಪ ಪ್ರಮೋಷನ್‌ನಲ್ಲಿ ಅವರಿಗೆ ಸಾಕಷ್ಟು ಸಿಕ್ಕಿಲ್ಲ. ರಿಜರ್ವೇಷನ್ ಅನ್ನು ನಾವು ನೇಮಕಾತಿಯ ಹಂತದಲ್ಲಿಯೂ ಕೂಡ ಪಾಲನೆ ಮಾಡುತ್ತೇವೆ. ಮತ್ತೆ ಇತ್ತೀಚೆಗೆ ಅವರಿಗೆ ಪ್ರಮೋಷನ್ ಕೊಡುವಂಥ ವ್ಯವಸ್ಥೆ ಮಾಡಿದ್ದೇವೆ. ಕಾರಣಾಂತರದಿಂದ ಅದನ್ನು ಮಾಡುವಾಗ ರೋಸ್ಟರ್ ಸಿಸ್ಟಂ ಏನಿದೆ ಅದನ್ನು ಬದಲಾವಣೆ ಮಾಡಿದ್ದೇವೆ. ಏಕೆಂದರೆ ರಿಕ್ರೂಟ್ ಆಗುವಾಗ ರೋಗಪೀಡಿತವಾದಂಥ ಮನಸ್ಸು ನಮ್ಮಲ್ಲಿ ಕೆಲವರಿಗೆ ಇದ್ದುದರಿಂದ ಒಂದು ವರ್ಗದಿಂದ ಬರತಕ್ಕಂಥ ಜನ ಬಹಳ ಕಾಲದಿಂದ ಈ ನೌಕರಿಗೆ ಬಂದಿಲ್ಲ. ನೌಕರಿಗೆ ಬಂದಾಗಲೂ ಅವರನ್ನು ಈ ಸಮಾಜ ದೂರ ಇಟ್ಟಿದೆ. ನಮ್ಮನ್ನು ಬಳಸಿಕೊಳ್ಳುತ್ತಾರೆ ಎನ್ನುವಂತಹ ಭಾವನೆ ಬರುವ ರೀತಿಯಲ್ಲಿ ನಾವು ನಡೆದುಕೊಳ್ಳಬೇಕೆಂದು ವಿಚಾರ ಮಾಡಿ ಈ ರಿಜರ್ವೇಷನ್ ಅನ್ನು ಇಟ್ಟಾಗಲೂ ಕೂಡ ಅದನ್ನು ಪಾಲನೆ ಮಾಡುವ ಹಂತದಲ್ಲಿ ಸರಿಯಾಗಿ ಮಾಡದೆ, ನಾವು ಅವರಿಗೆ ಏನೋ ಗ್ರಾಟಿಸ್ ಕೊಡುತ್ತಿದ್ದೇವೋ, ಭಿಕ್ಷೆ ಹಾಕುತ್ತಿದ್ದೇವೋ ಎನ್ನುವ ಮನೋಭಾವನೆಯಿಂದ ಪ್ರತಿವರ್ಷ ಎಷ್ಟು ವೇಕೆನ್ಸಿ ಆಗುತ್ತದೆ ಆ ವೇಕೆನ್ಸಿ ಆಗುವಾಗ ಅವರಿಗೆ ಏನು ಕೊಡಬೇಕು, ಅದನ್ನು ಕೊಡದೆ ಅದನ್ನು ಹಾಗೆಯೇ ಉಳಿದುಕೊಂಡು ಬಂದು ಇವತ್ತು ಅವರು ಅಜಿಟೇಷನ್ ಮಾಡತಕ್ಕಂಥದ್ದು, ಅವರ ಬೇಡಿಕೆಯನ್ನೇ ರಾಜಕಾರಣವನ್ನಾಗಿ ಮಾಡಿ ಅದಕ್ಕೂ ಒಂದು ರಾಜಕಾರಣ ಮಾಡತಕ್ಕಂಥದ್ದು ಬಂದಾಗ, ಹಿಂದಿನ ಸರ್ಕಾರವಾದ ಜನತಾ ದಳದ ಸರ್ಕಾರವನ್ನು ನಾನು ಪ್ರಶಂಸೆಯನ್ನು ಮಾಡಲಿಕ್ಕೆ ಇಷ್ಟಪಡುತ್ತಿದ್ದೇನೆ. ಅವರು ಪ್ರಮೋಷನ್ ಕೊಡುವಾಗಲೂ ಬ್ಯಾಕ್‌ಲಾಗ್ ಏನಿತ್ತು ಅದನ್ನು ಕೊಡಬೇಕೆಂದು ಮಾಡಿದರು. ಅದು ಮೊನ್ನೆ ಡಿಸೆಂಬರ್ 2ಕ್ಕೆ ಮುಗಿಯುತ್ತಿತ್ತು. ಮತ್ತೆ ಅದನ್ನು ಮುಖ್ಯಮಂತ್ರಿಗಳು ಎರಡು ವರ್ಷಕ್ಕೆ ಮುಂದುವರಿಸಿದ್ದಾರೆ. ಹಾಗೆಯೇ ಪ್ರಮೋಷನ್ ಯಾವ ಹಂತದಲ್ಲಿ ಇಲ್ಲ ಆ ಬ್ಯಾಕ್‌ಲಾಗ್‌ನ್ನು ಆ ವರ್ಗಕ್ಕೆ ಏನು ಕೊಡಬೇಕೋ ಅದನ್ನು ಕೊಡತಕ್ಕದ್ದನ್ನು ಕೂಡ ಕೊಟ್ಟು ಮಾಡುತ್ತೇವೆ. ನಾನು ಕೆಲವು ಅಧಿಕಾರಿಗಳಿಗೆ ಹೇಳಿದೆ ಇದು ಆಗುತ್ತದೆ, ಕೆಲವು ವರ್ಗಕ್ಕೆ ನಾವು ಬಹಳ ದಿವಸಗಳಿಂದ ದೂರ ಇಟ್ಟಿದ್ದರಿಂದ ನಾವೇ ಅನ್ಯಾಯವನ್ನು ಮಾಡಿದ್ದೇವೆ, ಅದನ್ನು ಈ ಸಮಾಜವೇ ಸರಿ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಮಾಡತಕ್ಕ ಹೊಣೆ ನಮ್ಮ ಮೇಲೆ ಇರುವುದರಿಂದ ನಾವೇ ಮಾಡಬೇಕಾಗಿದೆ. 100ರಲ್ಲಿ 15 ಜನಕ್ಕೆ ಈ ಅವಕಾಶವನ್ನು ನೀವು ಕೊಡುತ್ತೀರಿ, 100ರಲ್ಲಿ 3 ಜನ ಗಿರಿಜನರಿಗೆ ಈ ಅವಕಾಶವನ್ನು ನೀವು ಕೊಡುತ್ತೀರಿ, ನೀವು ನೂರಕ್ಕೆ ನೂರನ್ನು ಕೊಡತಕ್ಕಂಥದ್ದು ಅಲ್ಲ. ಕೆಲವು ಸಮಯದಲ್ಲಿ 100ಕ್ಕೆ 100 ಅನ್ನು ಅನುಭವಿಸಿದ್ದವರು ಇದ್ದರು. ಅವತ್ತು ಸುಮ್ಮನೆ ಇದ್ದಿರಿ, ಅವತ್ತು ಇಂತಹ ಗಲಾಟೆ ಇರಲಿಲ್ಲ. ಇವತ್ತು ನಾವು ಇಂತಹದ್ದನ್ನು ವಿಚಾರ ಮಾಡುವಾಗ ರಾಜಕಾರಣಿಗಳು ಸಹಾಯ ಮಾಡಬೇಕಾಗುತ್ತದೆ. ಅಧಿಕಾರದಲ್ಲಿರತಕ್ಕಂಥ ಜನ ಕೂಡ ತಮ್ಮ ಮನೋಭಾವನೆಯಲ್ಲಿರುವ ವಿಚಾರವನ್ನು ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಅವರಿಗೆ ಏನು ಬ್ಯಾಕ್‌ಲಾಗ್ ಕೊಡಬೇಕೋ ಅದನ್ನು ಎರಡು ವರ್ಷ ಮುಂದುವರಿಸಿದ್ದೇವೆ. ಮೊನ್ನೆ ಡಿಸೆಂಬರ್ 2, 1992ರಿಂದ ಮತ್ತೆ ಎರಡು ವರ್ಷ ಮುಂದುವರಿಸಿದ್ದೇನೆ. ಅದೇನು ಬ್ಯಾಕ್‌ಲಾಗ್ ಬರುತ್ತದೆ ಅದನ್ನು ಕಾನೂನು ಪ್ರಕಾರ ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ.

ಮತ್ತೆ ಯಾವ್ಯಾವ ಹಂತದಲ್ಲಿ ಅವರಿಗೆ ಸಲ್ಲಬೇಕೋ ಅದನ್ನು ಕೊಟ್ಟು ಆ ಬ್ಯಾಕ್‌ಲಾಗ್ ಅನ್ನು ಭರ್ತಿ ಮಾಡಿ ನಂತರ ರೋಸ್ಟರ್ ಪ್ರಕಾರ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಒಂದೊಂದು ಸಾರಿ ಆ ಪರಿಸ್ಥಿತಿ ಬರುವಾಗ ಯಾವುದೋ ಒಂದು ಜಾತಿಗೆ ಸೇರಿದವರಿಗೆ ಜಾಸ್ತಿ ಬಂದು ಬಿಡಬಹುದು.

ಸೂಪರಿಂಟೆಂಡಿಂಗ್ ಇಂಜಿನಿಯರರೋ ಎಕ್ಸಿಕ್ಯುಟಿವ್ ಇಂಜಿನಿಯರರೋ ಅಥವಾ ಚೀಫ್ ಇಂಜಿನಿಯರರೋ ಆಗಿಬಿಡಬಹುದು. ಅದು ಅನಿವಾರ್ಯವಾಗುತ್ತದೆ. ಮತ್ತೊಂದು ವಿಷಯ ಏನು ಅಂದರೆ ನೌಕರರನ್ನು ರಿಕ್ರೂಟ್‌ಮೆಂಟ್ ಮಾಡುವಾಗ ಬುದ್ಧಿವಂತರನ್ನು ಮಾಡಬೇಕು. ಮಾನ್ಯ ಸಿಂಧ್ಯರವರು ಅದಕ್ಕೆ ವಿರೋಧವಾಗಿದ್ದಾರೆ. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳ ರಿಕ್ರೂಟ್‌ಮೆಂಟ್‌ನ್ನು ನಾವು ಒಂದು ಹಂತದಲ್ಲಿ ನೇರವಾಗಿ ಮಾಡಬೇಕು ಅಂತ ಹೇಳಿದರೆ ಅವರದೇ ಬೇರೆ ಒಂದು ವೈಯಕ್ತಿಕ ಅಭಿಪ್ರಾಯ ಇದೆ. ಈಗ ಐ.ಎ.ಎಸ್.ನವರನ್ನು ಹೇಗೆ ರಿಕ್ರೂಟ್ ಮಾಡಿ ಸರ್ವೀಸಸ್‌ನಲ್ಲಿ ಹೊಸ ರಕ್ತವನ್ನು ತೆಗೆದುಕೊಂಡು ಬಂದು ಬುದ್ಧಿವಂತರಿಗೆ ಅವಕಾಶವನ್ನು ಮಾಡಿಕೊಟ್ಟು ಮಾಡುತ್ತೇವೆ. ಡಿಸಿಷನ್ ಟೇಕಿಂಗ್ ಏನು ಇರುತ್ತದೆ ಅಲ್ಲಿ ಅವಕಾಶವನ್ನು ನಾವು ಮಾಡುತ್ತೇವೆ ಅದು ಇಲ್ಲಿಯೂ ಇರಬೇಕೆಂದು ಹೇಳಿ ಒಂದು ವಿಚಾರ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನೀವು ಯಾವ ವಿಚಾರವನ್ನು ಈಗ ಪ್ರಸ್ತಾಪ ಮಾಡಿದ್ದೀರಾ ಆ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಇದು ಅಂತ ಹೇಳಿ ನಾನು ಅಂದುಕೊಂಡಿದ್ದೇನೆ. ಈಗ ಪ್ರಮೋಷನಲ್ ರಿಜರ್ವೇಷನ್ ಬಗ್ಗೆ ನನ್ನ ವಿರೋಧ ಇಲ್ಲ. ಅದು ಆಗಬೇಕೆಂದು ಹೇಳತಕ್ಕಂಥವನು ನಾನು. ಡೈರೆಕ್ಟಾಗಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್‌ಗಳನ್ನ ರಿಕ್ರೂಟ್‌ಮೆಂಟ್ ಮಾಡುವುದರ ಬಗ್ಗೆ ನನ್ನ ವಿರೋಧ ಇದೆ ಎಂದು ನಾನು ಪ್ರಸ್ತಾಪ ಮಾಡಿದ್ದೆ.

ಶ್ರೀ ಕೆ.ಹೆಚ್. ರಂಗನಾಥ್:– ಹೋದ ಸಲ ಇದು ಚರ್ಚೆಗೆ ಬಂದಾಗ ನಾನು ಇಲ್ಲಿ ಇದ್ದೆ. ತಾವು ಹೇಳಿದ್ದನ್ನು ನಾನು ಅಲ್ಲಿ ಕುಳಿತುಕೊಂಡು ಕೇಳುತ್ತಿದ್ದೆ. ಡೈರೆಕ್ಟ್ ರಿಕ್ರೂಟ್‌ಮೆಂಟ್ ಮೂಲಕ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಆಗುವುದಕ್ಕೆ ಮಾನ್ಯ ಸದಸ್ಯರು ಅವರ ಅಭಿಪ್ರಾಯವನ್ನು ಹೇಳಿದರು. ಇವತ್ತು ಕೆ.ಎ.ಎಸ್.ನಲ್ಲಿ ತಹಶೀಲ್ದಾರ್‌ನನ್ನು ನೇಮಕ ಮಾಡುತ್ತೇವೆ. ಅಸಿಸ್ಟೆಂಟ್ ಕಮೀಷನರ್‌ರನ್ನು ನೇಮಕ ಮಾಡುತ್ತೇವೆ. ಐ.ಎ.ಎಸ್. ಅಧಿಕಾರಿಗಳನ್ನು ನೇರವಾಗಿ ಅಸಿಸ್ಟೆಂಟ್ ಕಮೀಷನರ್ ಎಂದು ನೇಮಕ ಮಾಡಿದಾಗ ಅವರು ಅಲ್ಲಿ 2 – 3 ವರ್ಷಗಳ ಕಾಲ ಕೆಲಸ ಮಾಡಿದ ತಕ್ಷಣವೇ 3 – 4 ವರ್ಷದೊಳಗೆ ಜಿಲ್ಲಾಧಿಕಾರಿ ಆಗಿಬಿಡುತ್ತಾರೆ. ಮುಂದೆ 10 – 12 ವರ್ಷದೊಳಗೆ ಅವರು ಟೈಂ ಸ್ಕೇಲಿಗೆ ಬಂದು ಡಿವಿಜನಲ್ ಕಮೀಷನರ್ ಆಗುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಅಸಿಸ್ಟೆಂಟ್ ಕಮೀಷನರ್ ಮತ್ತು ಐ.ಎ.ಎಸ್. ಆಫೀಸರ್ ಮತ್ತು ಐ.ಪಿ.ಎಸ್. ಆಫೀಸರ್ ಅನ್ನು ರಿಕ್ರೂಟ್‌ಮೆಂಟ್ ಮಾಡಿಕೊಳ್ಳತಕ್ಕಂಥ ಸಂದರ್ಭದಲ್ಲಿ ಎಂಟ್ರೆನ್ಸ್ ಎಕ್ಸಾಮಿನೇಷನ್ ಇರುತ್ತದೆ. ಎಂಟ್ರೆನ್ಸ್ ಎಕ್ಸಾಮಿನೇಷನ್‌ನಲ್ಲಿ ಪಾಸ್ ಮಾಡಿದ ನಂತರ ಓರಲ್ ಟೆಸ್ಟ್ ಅಂತ ಮಾಡುತ್ತಾರೆ. ಆ ಸಂದರ್ಭದಲ್ಲಿ ಇದರ ಹಿನ್ನೆಲೆ ಏನಿತ್ತು ಅಂದರೆ ಇವತ್ತಿಗೂ ಸಹಿತ ಡೈರೆಕ್ಟಾಗಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳನ್ನು ರಿಕ್ರೂಟ್ ಮಾಡಿದ ಮೇಲೆ ಅವರು 5 – 6 ವರ್ಷಗಳಲ್ಲಿ ಎಕ್ಸಿಕ್ಯೂಟಿವ್ ಇಂಜಿನೀಯರ್ ಆಗುತ್ತಾರೆ. ಆಗ ಯಾವುದೇ ರೀತಿಯ ಬ್ಯಾಕ್‌ಗ್ರೌಂಡ್ ಇಲ್ಲ. ರಾಜಕೀಯವಾಗಿ ಅಥವಾ ಬೇರೆ ರೀತಿಯಲ್ಲಿ ಶಿಫಾರಸ್ಸು ಯಾರಿಗೆ ಇತ್ತು ಅವರನ್ನು ಮಾತ್ರ ರಿಕ್ರೂಟ್ ಮಾಡಿಕೊಂಡಿರಿ ವಿನಃ ಅವರಿಗೆ ಯಾವುದೇ ರೀತಿಯ ಎಂಟ್ರೆನ್ಸ್ ಎಕ್ಸಾಮಿನೇಷನ್ ಮಾಡಲಿಲ್ಲ, ಏನೂ ಮಾಡಲಿಲ್ಲ ಎನ್ನುವುದು ತಮಗೂ ಗೊತ್ತಿರತಕ್ಕಂಥ ವಿಚಾರವಾಗಿದೆ.

ಶ್ರೀ ಕೆ.ಹೆಚ್. ರಂಗನಾಥ್:– ಯಾವುದೇ ಸಿಸ್ಟಂನಲ್ಲೂ ಕೆಲವು ಸಾಧಕಬಾಧಕಗಳು ಇರುತ್ತವೆ ಬಹಳ ಐಡಿಯಲ್ ಕಂಡಿಷನ್‌ನಲ್ಲಿ, ಐಡಿಯಲ್ ಆಗಿ ನಾವು ಮಾಡಲಿಕ್ಕೆ ಸಾಧ್ಯವಾಗದೇ ಇರತಕ್ಕಂಥದ್ದು. ಸ್ವಲ್ಪ ಇದರಲ್ಲಿ ದೋಷವಿದ್ದರೂ ಕೂಡ ಅನುಕೂಲ ಜಾಸ್ತಿ ಇದೆ. ಈ ದೃಷ್ಟಿಕೋನದಿಂದ ನಾವು ನೋಡಬೇಕಾಗುತ್ತದೆ. ಇವತ್ತು ನಾನು ಪ್ರಸ್ತಾಪ ಮಾಡುತ್ತಿದ್ದೆ. ಕನಿಷ್ಟ 30 ವರ್ಷಕ್ಕಿಂತ ಮುಂಚೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಶೆಡ್ಯೂಲ್ ಕಾಸ್ಟ್, ಶೆಡ್ಯೂಲ್

ಟ್ರೈಬ್ಸ್ ಅಲ್ಲದೆ ಇರತಕ್ಕಂಥ ಇಂಜಿನಿಯರ್‌ಗಳು ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಆಗಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಮಧ್ಯದಲ್ಲಿ ಪ್ರಮೋಷನ್‌ಗೆ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿದೆ. ಹೀಗಿರುವಾಗ ಅವನು 20 ವರ್ಷದ ನಂತರ ಎಕ್ಸಿಕ್ಯುಟಿವ್ ಇಂಜಿನಿಯರ್ ಆಗುತ್ತಾನೆ. We will place him at the helm of affairs. ಒಂದು ತೀರ್ಮಾನವನ್ನು ತೆಗೆದುಕೊಳ್ಳುವಾಗ ಅಥವಾ ಒಂದು ನಿರ್ದೇಶನವನ್ನು ಕೊಡತಕ್ಕಂಥ ಪರಿಸ್ಥಿತಿಯಲ್ಲಿ ಅಥವಾ ಹೊಸ ಕಾಮಗಾರಿಯನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಸ್ವಂತ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ನಾವು ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ರಸ್ತೆ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಮತ್ತು ಕಟ್ಟಡಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇದಕ್ಕೆಲ್ಲ ಅವರ ತಜ್ಞತೆ ಬೇಕಾಗುತ್ತದೆ. ಈ ದೃಷ್ಟಿಕೋನದಿಂದಲೂ ನೋಡಬೇಕಾಗುತ್ತದೆ. ಕಾರಣಾಂತರದಿಂದ ರಿಕ್ರೂಟ್‌ಮೆಂಟ್ ಆಗದೇ ಇರುವುದರಿಂದ ಹೊಸ ರಕ್ತ ನಮ್ಮಲ್ಲಿ ಬಂದಿಲ್ಲ. ಹೀಗಾಗಿ ನಮ್ಮಲ್ಲಿ ಅದಕ್ಕೆ ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ಅವಕಾಶಬೇಕು. ಮತ್ತೆ ಪರೀಕ್ಷೆ ಇಲ್ಲ ಅಂತ ಹೇಳಿದರು, ಚೆನ್ನಬಸಪ್ಪನವರ ಕಾಲದಲ್ಲಿ ಪರೀಕ್ಷೆಯನ್ನು ಮಾಡಬೇಕೆಂಬ ಅಭಿಪ್ರಾಯ ಬಂದಿತ್ತು. ನಮ್ಮ ಇಂಜನಿಯರಿಂಗ್ ಅಸೋಸಿಯೇಷನ್ ಕೂಡ ಇವತ್ತಿನ ದಿವಸ ಬಲವಾಗಿ ಬೆಳೆದಿದೆ. It is quite strong also. ನೀವು ಯಾವ ಆರ್ಡರನ್ನು ಮಾಡಿದರೂ ಅಲ್ಲೊಂದು ಆಗಲೇ ರಿಟ್‌ಪಿಟಿಷನ್ ಇರುತ್ತದೆ. ಇಂತಹ ಕಷ್ಟಗಳು ಇವೆ. ಇರುವ ತೊಂದರೆಗಳನ್ನು ಗುರ್ತಿಸಿ ನಿವಾರಣೆ ಮಾಡಿ ನಮ್ಮ ಕೆಲಸದ ದೃಷ್ಟಿಯಿಂದ, ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ವಿಚಾರ ಮಾಡತಕ್ಕಂಥದ್ದು ಅವಶ್ಯಕತೆ ಇದೆ ಎನ್ನುವ ಮಾತನ್ನು ನಾನು ಪ್ರಸ್ತಾಪ ಮಾಡುತ್ತಿದ್ದೆ.

ಇನ್ನು ಕಟ್ಟಡಗಳಿಗೆ ಸಂಬಂಧಪಟ್ಟಂತೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುವುದಕ್ಕೆ ಇಷ್ಟಪಡುತ್ತೇನೆ. ಕಟ್ಟಡಗಳಿಗೆ ನಮ್ಮಲ್ಲಿ ಸಾಕಷ್ಟು ಹಣವಿಲ್ಲ. ಮತ್ತೆ ಶ್ರೀ ಅನಂತಕೃಷ್ಣರವರು ಮಾತನಾಡುವಾಗ ಬೆಂಗಳೂರಿನಲ್ಲಿ ಇರತಕ್ಕಂತಹ ಕಟ್ಟಡಗಳ ಬಗ್ಗೆ ಪ್ರಸ್ತಾಪ ಮಾಡುತ್ತಿರುತ್ತಾರೆ. ಪ್ರಮುಖವಾಗಿ ವಿಧಾನಸೌಧ ಕೂಡ ಅವರ ಕ್ಷೇತ್ರಕ್ಕೆ ಬರುತ್ತದೆ. ಶ್ರೀ ಅನಂತಕೃಷ್ಣರವರ ಆಶ್ರಯದಲ್ಲಿ ಆಗ ನಾವು ಇರತಕ್ಕದ್ದು. ಅವರು ಬಹಳ ಪ್ರಸ್ತಾಪ ಮಾಡುತ್ತಿರುತ್ತಾರೆ.

ಡಾ. ಎನ್.ಬಿ. ನಂಜಪ್ಪ:– ಮಾನ್ಯ ಅಧ್ಯಕ್ಷರೇ, ಈಗ ಅಸಿಸ್ಟೆಂಟ್ ಇಂಜಿನಿಯರ್ಸ್‌ಗೆ ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡಬೇಕೆಂದು. ಪ್ರಪೋಜಲ್ ಇದೆಯಲ್ಲ ಹಾಗೆ ಮಾಡಿದರೆ ಅದು ಎಲ್ಲಾ ತರಹದ ಕ್ವಾಲಿಫಿಕೇಷನ್‌ಗೂ ಬರಬೇಕಾಗುತ್ತದೆ. ಮೆಡಿಕಲ್‌ನಲ್ಲೂ, ಎಂಜಿನಿಯರ್‌ನಲ್ಲೂ ಬರಬೇಕಾಗುತ್ತದೆ. ಹೀಗೆ ಬಂತು ಎಂದು ಇಟ್ಟುಕೊಳ್ಳಿ, ಬಂದರೆ, ನೇರವಾಗಿ ಆಗ ತಾನೆ ಬಂದಿರತಕ್ಕ ಒಬ್ಬ ಫ್ರೆಷ್ ಗ್ರಾಜುಯೇಟ್ becomes an Assistant Executive Engineer. ಆಗ ಆ ಡಿಪಾರ್ಟ್‌ಮೆಂಟ್‌ನಲ್ಲಿ ಸಾಮರಸ್ಯತೆ ಉಂಟಾಗುವುದಕ್ಕೆ ಸಾಧ್ಯವೇ? ಇದರಲ್ಲಿ Disparities ಬರುತ್ತದೆ. ಇದರಿಂದ ಸೀನಿಯರ್ಸ್‌ಗೆ ಎಷ್ಟು ತೊಂದರೆಯಾಗುತ್ತದೆ. ಇದರ ಬಗ್ಗೆ ಗಮನಹರಿಸಿದರೆ ಒಳ್ಳೆಯದು. ಇದರಿಂದ ಒಳ್ಳೆಯದು ಆಗುವುದಿಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಕೆ.ಹೆಚ್. ರಂಗನಾಥ್:– ಈಗ ಐ.ಎ.ಎಸ್. ಮಾಡಿಕೊಂಡು ಬಂದು 25ವರ್ಷಗಳಲ್ಲಿ super time scale ಆಗಿ ಅವರು ಸೆಕ್ರೆಟರಿಯಾಗಿ ಕುಳಿತಿರುತ್ತಾರೆ.

ಡಾ. ಎನ್.ಬಿ. ನಂಜಪ್ಪ:– ಫ್ರೆಷ್ ಗ್ರಾಜ್ಯುಯೇಟ್ಸ್‌ಅನ್ನು ನೀವು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ನೇಮಕ ಮಾಡಿದರೆ ಯಾರು Junior ಇಂಜಿನಿಯರ್ ಇರುತ್ತಾನೋ with same qualification if he has worked for 10 years he has to work under an Asst. Executive Engineer who has been appointed from direct recruitment.

ಈ ಸಾಮರಸ್ಯವನ್ನು ಅಲ್ಲಿ ಕಾಪಾಡುವುದಕ್ಕೆ ಸಾಧ್ಯವೇ? ಆದರಿಂದ ಎಷ್ಟು ಗೊಂದಲಮಯ ವಾತಾವರಣವನ್ನು ಸರ್ಕಾರ ಸೃಷ್ಟಿ ಮಾಡುತ್ತದೆ ಎನ್ನುವುದರ ಬಗ್ಗೆ ಕೂಲಂಕಷವಾಗಿ ಯೋಚನೆ ಮಾಡದೇ ಹೋದರೆ ಇದರಿಂದ ಬಹಳಷ್ಟು ತೊಂದರೆಯಾಗುತ್ತದೆ. ಈಗಾಗಲೇ ಈ ಬಗ್ಗೆ ಮನವಿಗಳು ಕೂಡ ಹೋದ ವರ್ಷ ಬಹಳಷ್ಟು ಬಂದಿವೆ. ಆದ್ದರಿಂದ ಇದರ ಬಗ್ಗೆ ದೀರ್ಘವಾಗಿ ಯೋಚನೆ ಮಾಡಬೇಕು. ಏಕೆಂದರೆ ಇದರ ಬಗ್ಗೆ ದೊಡ್ಡ ಹಗರಣವೇ ಇದೆ ಎಂದು ನನಗೆ ಗೊತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್:– ಮಾನ್ಯ ಅಧ್ಯಕ್ಷರೇ, ಇದು ಏನು ಹೊಸದಾಗಿ ಮಾಡುತ್ತಿರುವುದು. ಈ ಹಾಲಿ ಇರುವಂತಹ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಎಂದು ಏನು ಇದೆ. ಬಹಳ ಡಿಪಾರ್ಟ್‌ಮೆಂಟ್‌ಗಳಲ್ಲಿ ಹಾಲಿ ಇರತಕ್ಕಂಥ ನೇಮಕಾತಿ ಮಾಡುವಂತಹ ಆ ಇಲಾಖೆಗೆ ಸಂಬಂಧಪಟ್ಟ ಕಾನೂನು ಏನಿದೆ, ಅದರಲ್ಲಿ ಮೂರನೇ ಒಂದು ಭಾಗ ಡೈರೆಕ್ಟ್ ರಿಕ್ರೂಟ್‌ಮೆಂಟ್, ಮೂರನೆ ಎರಡು ಭಾಗ ಪ್ರಮೋಷನ್ ಅಂತ ಇದೆ. 1962ನೇ ಇಸವಿಯಿಂದ ಈಚೆಗೆ ನೇರ ನೇಮಕಾತಿ ಮಾಡುವುದನ್ನು ಸ್ಥಗಿತಗೊಳಿಸುತ್ತಾ ಬಂದಿದ್ದೇವೆ. ಹೀಗಾಗಿ ಮಾನ್ಯ ಸದಸ್ಯರಾದ ಡಾಕ್ಟರ್ ನಂಜಪ್ಪನವರಿಗೆ ಗೊತ್ತು, ಅವರಿಗೆ ಎಲ್ಲಾ ಗೊತ್ತಿದೆ. ಉದಾಹರಣೆಗೆ ನಾನು ಪರೀಕ್ಷೆ ಪಾಸು ಮಾಡುತ್ತೇನೆ. ಅದು ಇಂಜಿನಿಯರಿಂಗ್ ಆಗಲಿ ಬಿ.ಎ. ಆಗಲಿ, ಬಿ.ಎಸ್.ಸಿ. ಆಗಲಿ ಪಾಸು ಮಾಡುತ್ತೇನೆ. ಇಂಗ್ಲೀಷ್‌ನಲ್ಲಿ ನಾನು 40 ನಂಬರ್ ತೆಗೆದುಕೊಂಡು ಬಂದಿರುತ್ತೇನೆ. ಮತ್ತೊಬ್ಬನು 60 ನಂಬರ್ ತೆಗೆದುಕೊಂಡು ಬರುತ್ತಾನೆ. ನಾನು ಬಿ.ಎ. ಎಂದುಕೊಂಡು ಹೋಗುತ್ತೇನೆ. ಅವನು ಬಿ.ಎ. ಎಂದು ಹೇಳುತ್ತಾನೆ. ನಾನು ನನ್ನ ನಲವತ್ತು ನಂಬರ್ ತೆಗೆದುಕೊಂಡು ಉಳಿದ 60ನ್ನು ನನ್ನ ಮಾಸ್ಟರ್‌ಗೆ ಕೊಟ್ಟುಬಿಟ್ಟಿದ್ದೇನೆ. ಅದನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಶೇಕಡ 40ರಷ್ಟು ಬುದ್ಧಿವಂತಿಕೆ ನನಗೆ ಇರುವುದು, ನಾನು ಪದವೀಧರ ಅವನೂ ಪದವೀಧರ ಅಂದರೆ ಹೊಸ ಜನರು ಬರುವಾಗ ಅವರಲ್ಲಿ ಬುದ್ಧಿವಂತರು ಬರುತ್ತಾರೆ. ಅವರನ್ನು ಇನ್ನು ಹೆಚ್ಚು ಸ್ಪೆಷಲೈಜೇಷನ್‌ಗೆ ನಾವು ಕಳುಹಿಸಬೇಕು. ಇಲ್ಲಿ ಸ್ಪೆಷಲೈಜೇಷನ್ ಇರುವವರು ಬೇಕಾಗುತ್ತದೆ. ಭಾರಿ ಕಟ್ಟಡಗಳನ್ನು ಕಟ್ಟಲು ಸ್ಪೆಷಲೈಜೇಷನ್ ಬೇಕಾಗುತ್ತದೆ. ಇಲ್ಲದಿದ್ದರೆ ಆಸ್ಪತ್ರೆಯನ್ನು ಅದೇ ತರಹ ಕಟ್ಟುತ್ತಾರೆ. ಶಾಲೆನೂ ಅದೇ ತರಹ ಕಟ್ಟುತ್ತಾರೆ. ವಿಧಾನಸೌಧ ಕಟ್ಟಬೇಕು ಅಂದರೂ ಅದೇ ತರಹ ಕಟ್ಟುತ್ತಾರೆ. ತಜ್ಞತೆ ಬೇಕಾಗುತ್ತದೆ. ಆದ್ದರಿಂದ ಬೇರೆ ಬೇರೆ ದೃಷ್ಟಿಕೋನದಿಂದ ಇದನ್ನೆಲ್ಲಾ ನೋಡಬೇಕಾಗುತ್ತದೆ. This department is not for those friends who do not want to reconcile themselves. This department is there for the benefit of the State. ಇದನ್ನು ಸಹ ವಿಚಾರ ಮಾಡಬೇಕಾಗುತ್ತದೆ.

ಈಗಾಗಲೇ ಕಾನೂನಿನಲ್ಲಿ, ಇದಕ್ಕೆ ಅವಕಾಶ ಇದೆ. ನಾವು ಇದನ್ನು ಹೊಸದಾಗಿ ಏನು ಇಂಟ್ರಡ್ಯೂಸ್ ಮಾಡುತ್ತಿರುವುದು ಅಲ್ಲ. ಇದನ್ನು ನಾವು ಈಗ ಏನು ನಿಲ್ಲಿಸಿದ್ದೇವೆ ಇದರ ಬಗ್ಗೆ ವಿಚಾರ ಮಾಡಿ ತೀರ್ಮಾನ ತೆಗೆದುಕೊಳ್ಳತಕ್ಕಂಥ ಅವಶ್ಯಕತೆ ಇದೆ ಎನ್ನುವ ಮಾತನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇನ್ನು ಕಟ್ಟಡಗಳ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ಇವತ್ತು ನಮಗೆ ಸ್ವಂತ ಕಟ್ಟಡಗಳು ಇಲ್ಲ. ಸರ್ಕಾರಿ ಇಲಾಖೆಗಳನ್ನು ಇಟ್ಟುಕೊಳ್ಳುವುದಕ್ಕೆ ನಾವು ಸುಮಾರು 5 ಕೋಟಿ ರೂಪಾಯಿಗಳಷ್ಟು ಬಾಡಿಗೆಯನ್ನು ವರ್ಷಕ್ಕೆ ಕೊಡುತ್ತಿದ್ದೇವೆ ಮತ್ತು ಆ ಕಟ್ಟಡಗಳು ಅನುಕೂಲಕ್ಕೆ ಸರಿಯಾದಂತಹ ಕಟ್ಟಡಗಳು ಅಲ್ಲ. ಹೇಗೆ ಇರುತ್ತದೋ ಹಾಗೆಯೇ ಆ ಕಟ್ಟಡವನ್ನೇ ತೆಗೆದುಕೊಂಡು ನಡೆಸಬೇಕಾಗುತ್ತದೆ. ಆಡಳಿತ ಮಾಡುವುದಕ್ಕೆ ಅನಾನುಕೂಲತೆ ಇರುತ್ತದೆ. ಮತ್ತು ಹಣವೂ ಕೂಡ ಹೋಗುತ್ತಿದೆ. ಇನ್ನು ಈ ರಾಜ್ಯದಲ್ಲಿ ಇರತಕ್ಕಂತಹ ರೆಸಿಡೆನ್‌ಷಿಯಲ್ ಬಿಲ್ಡಿಂಗ್‌ಗಳು, ಕ್ವಾರ್ಟರ್ಸ್‌ಗಳು ಇತ್ಯಾದಿ ಬಿಲ್ಡಿಂಗ್‌ಗಳು 23,38,142 ಸ್ಕ್ವೆಯರ್ ಮೀಟರ್. ಇನ್ನು ನಾನ್‌ರೆಸಿಡೆನ್ಷಿಯಲ್ ಬಿಲ್ಡಿಂಗ್ಸ್ ಅಂದರೆ ಆಫೀಸ್‌ಗಳು, ಇತ್ಯಾದಿಗಳು ಇರತಕ್ಕಂಥಾದ್ದು 29 ಲಕ್ಷದ

ಮಾಡುತ್ತೇವೆಂದರೆ ಆ ಬಿಲ್ಡಿಂಗ್ 1940 ನೇ ಇಸವಿಗಿಂತ ಮೊದಲು ಕಟ್ಟಿದ್ದರೆ ಅದಕ್ಕೆ ಶೇಕಡ 6 ಪರ್ಸೆಂಟ್ ಎಂದು, ಈಗ ನಮ್ಮ ವಿಧಾನಸೌಧದ ವಿಚಾರವಾಗಿ ಹೇಳುವುದಾದರೆ, ಮಾನ್ಯ ಹನುಮಂತಯ್ಯನವರ ಕಾಲದಲ್ಲಿ ಫರ್ನಿಚರ್ ಎಲ್ಲಾ ಸೇರಿ 2 ಕೋಟಿ ರೂಪಾಯಿ ಕೂಡ ಆಗಿರಲಿಲ್ಲ. ಇನ್ನೂ ಸ್ವಲ್ಪ ಕಡಿಮೆಯೇ ಆಗಿತ್ತು. ಇವತ್ತು ನಮ್ಮ ಎಂ.ಎಸ್. ಬಿಲ್ಡಿಂಗ್ ಮತ್ತು ಟವರ್ ಬ್ಲಾಕ್‌ಗೆ ಎಷ್ಟು ಆಗಿದೆ. ಹೀಗೆ ಲೆಕ್ಕ ಹಾಕಿಕೊಂಡರೆ ಅದು 1940ನೇ ಇಸವಿಯ ಕಾಲದ್ದಾದರೆ ಅದಕ್ಕೆ 6 ಪರ್ಸೆಂಟ್, 1940 ರಿಂದ 75ನೇ ಇಸ್ವಿಯೊಳಗೆ ಆಗಿದ್ದರೆ 5% of the cost of construction ಎಂದಿದೆ. ಅದು ಹೀಗೆ ಆಗಿ ಸುಣ್ಣ ಬಣ್ಣ ಹೊಡೆಯುವುದಕ್ಕೆ ಆಗದೇ ಇರತಕ್ಕಂತಹ ರೀತಿಯಲ್ಲಿ ಆಗುತ್ತದೆ. ಹೀಗಾಗಿ ನಾವು ಆ ಕಟ್ಟಡಗಳನ್ನು ವ್ಯವಸ್ಥಿತವಾಗಿ ಉಳಿಸಿಕೊಳ್ಳುವುದಕ್ಕೆ ಮೇನ್‌ಟೇನ್ ಮಾಡುವುದಕ್ಕೆ ಸಾಧ್ಯವಾಗದೇ ಇರುವಂತಹ ಪರಿಸ್ಥಿತಿ ಇದೆ. ಇನ್ನು ಹೊಸ ಬಿಲ್ಡಿಂಗ್‌ಗಳು ಆದರೆ ಒಂದೂವರೆ ಪರ್ಸೆಂಟ್ ಅಂತ ಇದೆ. ಒಂದೂವರೆ ಪರ್ಸೆಂಟ್ ಆದರೆ ನಾವು ಏನು ಮಾಡುವುದಕ್ಕೆ ಆಗುತ್ತದೆ.

ದುಡ್ಡು ಇಲ್ಲದೆ ಇರುವುದರಿಂದ ಈ ರೀತಿ ಸ್ವಲ್ಪ ಹಣವನ್ನು ಬಡ್ಜೆಟ್‌ನಲ್ಲಿ ಪ್ರೊವೈಡ್ ಮಾಡಿಕೊಂಡು ಇರುವ ಕಟ್ಟಡಗಳು ಬಿದ್ದು ಹೋಗುವುದಕ್ಕೆ ನಾವೇ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಆದರೆ ಉಳಿಸಿಕೊಳ್ಳುವುದಕ್ಕೆ ನಾವು ವ್ಯವಸ್ಥೆ ಮಾಡಿಕೊಂಡಿಲ್ಲ. ಇದನ್ನೆಲ್ಲಾ ವಿಚಾರ ಮಾಡಿ ಬದಲಾವಣೆ ಮಾಡಬೇಕಾದ್ದು ಇದೆ ಮತ್ತು ಹಣ ಬಹಳ ಕಡಿಮೆ ಇರುವುದರಿಂದ ನಾನು ಇದರ ಬಗ್ಗೆ ತತ್‌ಕ್ಷಣವೇ ತೀರ್ಮಾನ ತೆಗೆದುಕೊಳ್ಳುತ್ತೇನೆ, ಹಣ ಒದಗಿಸುತ್ತೇನೆ ಎಂದು ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇವತ್ತು ನನ್ನ ಆದ್ಯತೆ ಬೇಡಿಕೆ 48ರ ಮೇಲೆಯೇ ಹೆಚ್ಚು ಇದೆ. ಈ ರಸ್ತೆ, ಸೇತುವೆಗಳು ಏನು ಇವೆ, ಇವುಗಳಿಗೆ ಮೊದಲು ಹೆಚ್ಚು ಆದ್ಯತೆ ಕೊಟ್ಟು ತದನಂತರ ಬಿಲ್ಡಿಂಗ್‌ಗಳಿಗೂ ನೋಡಬೇಕು ಎನ್ನುವಂಥ ವಿಚಾರ ನಮ್ಮಲ್ಲಿ ಇದೆ ಮತ್ತು ಆರ್ಕಿಟೆಕ್ಚರ್ ಡಿಪಾರ್ಟ್‌ಮೆಂಟ್ ಬಗ್ಗೆ ಈ ಸದನದಲ್ಲಿ ಟೀಕೆ ಬಂತು. ಮಾನ್ಯ ಯಡಿಯೂರಪ್ಪನವರೇ ಅದನ್ನು ಪ್ರಸ್ತಾಪ ಮಾಡಿದರು. ಅದು 1986ನೇ ಇಸವಿಯಲ್ಲಿ ಆಗಿರತಕ್ಕಂಥಾದ್ದು. ಅಲ್ಲಿ ಚೀಫ್ ಆರ್ಕಿಟೆಕ್ಟ್ ಒಬ್ಬರು ಏನು ಇದ್ದರು ಅವರನ್ನೇ ಮುಂದುವರೆಸಿಕೊಂಡು ಹೋಗಿದ್ದೇವೆ. ಆದರೆ ಪ್ರಮೋಷನ್ ಕೊಡುವುದಕ್ಕೆ ಅವರ ಕೆಳಗಡೆ ಇನ್ನು ಇಬ್ಬರೂ ಆರ್ಕಿಟೆಕ್ಟ್ ಇದ್ದಾರೆ. ಆ ಹುದ್ದೆ ಖಾಲಿ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಒಂದು ಸಲ ತಾವು ಹೋಗಿ ನೋಡಿಕೊಂಡು ಬನ್ನಿ. ಹಿಂದೆ ಯಾವಾಗಲಾದರೂ ಈ ಒಂದು ಪೋಸ್ಟ್‌ನಲ್ಲಿ ಖಾಲಿ ಆದತಕ್ಷಣ ಇನ್ನೊಬ್ಬರನ್ನು ಭರ್ತಿ ಮಾಡುವುದು ಇತ್ತು. ಇಂದೂ ಎರಡು ವರ್ಷ ಈ ತರಹ ರಿಟೈರ್ಡ್ ಆದವರನ್ನು ಮುಂದುವರೆಸಿಕೊಂಡು ಹೋಗುವಂಥಾದ್ದು ಇರಲಿಲ್ಲ. ಈಗಲಾದರೂ ನೀವು ಬದಲಾವಣೆ ಮಾಡಿ ಸರಿಯಾದಂತಹವರನ್ನು ತರಿಸುತ್ತೀರೋ ಅಥವಾ ಅಧಿಕಾರಿಗಳು ತಮ್ಮಲ್ಲಿ ಇಲ್ಲವೋ ? ಅದನ್ನು ಸ್ಪಷ್ಟವಾಗಿ ಹೇಳಿ.

ಶ್ರೀ ಕೆ.ಹೆಚ್. ರಂಗನಾಥ್:– ಈಗ ನಮ್ಮಲ್ಲಿ ಒಬ್ಬರು ಇದ್ದಾರೆ, ಪ್ರಸ್ತುತ ಇಲಾಖೆಯವರು ಒಬ್ಬರು ಮುಖ್ಯ ವಾಸ್ತು ಶಿಲ್ಪಿ, ಇಬ್ಬರೂ ಉಪಮುಖ್ಯ ವಾಸ್ತು ಶಿಲ್ಪಿಗಳೆಂದು ಇದ್ದಾರೆ. ಅವರಿಗೆ ಇನ್ನು ಪ್ರಮೋಷನ್ ಕೊಡಬೇಕು. ಆದ್ದರಿಂದ ಅದು ಅಲ್ಲಿ ಖಾಲಿ ಇದೆ. ಹೀಗಾಗಿ ಆ ಇಲಾಖೆಯಲ್ಲಿ ಬಹಳ ಹುದ್ದೆಗಳು ಖಾಲಿ ಇವೆ. ಇವತ್ತು ಪ್ರೈವೇಟ್ ಬಿಲ್ಡಿಂಗ್ ಆರ್ಕಿಟೆಕ್ಟ್ಸ್ ಎಲ್ಲಾ ಅಲ್ಲಿ ಹೆಚ್ಚು ಲಾಭದಾಯಕವಾಗಿ ಇರುವುದರಿಂದ ನಾವು ಕೊಡತಕ್ಕಂತಹ ಸಂಬಳಕ್ಕೆ ಬರುವವರು ಕಡಿಮೆಯಾಗಿದ್ದಾರೆ. ಅದರ ಬಗ್ಗೆ ನಾವು ಹೇಗೆ ಮಾಡಬೇಕು, ಹೇಗೆ ಬಲಪಡಿಸಬೇಕು ಎಂದು ವಿಚಾರ ಮಾಡುತ್ತೇನೆ, ಎನ್ನುವಂತಹ ಮಾತನ್ನು ಹೇಳುತ್ತಾ, ಈ ಸದನದ ಹೆಚ್ಚು ಸಮಯವನ್ನು ತೆಗೆದುಕೊಳ್ಳದೆ ಬಹಳ ಮಟ್ಟಿಗೆ ಸ್ಥೂಲವಾಗಿ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆಂದು ನಾನು

ಭಾವಿಸುತ್ತೇನೆ. ಮತ್ತು ಮಾನ್ಯ ಸದಸ್ಯರು ಏನು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಅದಕ್ಕೆ ಯಾವ ರೀತಿ ನಾವು ಗಮನ ಹರಿಸಿದ್ದೇವೆ, ಅಥವಾ ಹರಿಸಲಿಲ್ಲ ಎನ್ನುವುದರ ಬಗ್ಗೆ ಎಲ್ಲಾ ಮಾನ್ಯ ಸದಸ್ಯರುಗಳಿಗೂ ಕೂಡ ಪತ್ರ ಬರೆದು ತಿಳಿಸುತ್ತೇನೆ. ಯಾವುದನ್ನು ಮಾಡುವುದಕ್ಕೆ ಸಾಧ್ಯವಾಯಿತು, ಯಾವುದನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ ? ಸಾಧ್ಯವಾಗದಿದ್ದರೆ ಯಾವ ಕಾರಣಕ್ಕೋಸ್ಕರ ಸಾಧ್ಯವಾಗಲಿಲ್ಲ ಎನ್ನುವುದನ್ನು ತಿಳಿಸುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಒಂದು ಪ್ರಮುಖವಾದಂತಹ ಒಂದು ವಿಚಾರ ಬಂದಿತು. ಬಾಗಲಕೋಟೆಯ ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ನಾನು ತಮ್ಮಲ್ಲಿ ಏನೂ ಕೇಳುವುದಿಲ್ಲ, ಎಲ್ಲರಿಗೂ ಏನಾದರೂ ಮಾಡುತ್ತೀರಿ, ನನ್ನ ಕ್ಷೇತ್ರಕ್ಕೂ ಮಾಡಿ ಎಂದು ಹೇಳಿದರು.

ಅಂದರೇನು, ಈ ಒಂದು ವಿಚಾರದಲ್ಲಿ ಇದು ನೀರಾವರಿಯಾಗಬಹುದು, ರಸ್ತೆಗಳಾಗಬಹುದು, ಈ ಕಾಮಗಾರಿಗಳನ್ನು ಮಾಡುವಾಗ ಇದು ಪಕ್ಷದ ರಾಜಕೀಯ ದೃಷ್ಟಿಯಿಂದ ನಾವು ಸರ್ಕಾರದವರು ನೋಡುವುದಿಲ್ಲ. ಹಾಗೆ ನೋಡತಕ್ಕಂಥದ್ದು ಸಾಧ್ಯವಾಗುವುದಿಲ್ಲ. ಎಂಬತಕ್ಕಂಥ ಆಶ್ವಾಸನೆಯನ್ನು ಈ ಸದನಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಸುಂದರವಾಗಿರತಕ್ಕಂಥ ಕರ್ನಾಟಕ ಇಡೀ ರಾಷ್ಟ್ರದಲ್ಲಿ ಹೆಸರು ಪಡೆಯಬೇಕು ಎನ್ನತಕ್ಕಂಥ ವಿಚಾರ ಇಟ್ಟುಕೊಂಡಿರತಕ್ಕವರು ನಾವು. ಎಲ್ಲರಿಗೂ ವ್ಯವಸ್ಥಿತವಾದ ರಸ್ತೆಯಾಗಬೇಕಾಗುತ್ತದೆ. ಆ ರಸ್ತೆಯಲ್ಲಿ ಎಲ್ಲರೂ ಓಡಾಡುತ್ತೇವೆ. ಎಲ್ಲರೂ ಪಕ್ಷಾತೀತವಾಗಿ ಅದನ್ನು ಬಳಸುತ್ತೇವೆ. ಈ ದೃಷ್ಟಿಯಿಂದ ರಾಜಕೀಯವಾಗಿ ಮಾಡುವುದಕ್ಕೆ ನಾವು ಪ್ರಯತ್ನವನ್ನು ಮಾಡುವುದಿಲ್ಲ. ರಾಜ್ಯದ ಅಭಿವೃದ್ಧಿಯೇ ಮುಖ್ಯ ಎಂಬುದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಾ ಇನ್ನು ಯಾವುದಾದರೂ ವಿಚಾರಗಳನ್ನು ನಾನು ಬಿಟ್ಟಿದ್ದರೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಬಹುದು ಎನ್ನುವ ಮಾತನ್ನು ಹೇಳಿ ಮತ್ತೆ ಸದನ ನನ್ನ ಬೇಡಿಕೆಗಳಾದ 46, 47 ಮತ್ತು 48ಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ. ಇನ್ನು ಕೊನೆಯದಾಗಿ ಕಂಟ್ರಾಕ್ಟ್ ಬಗ್ಗೆ ಅದು ಬಹಳ ಪ್ರಮುಖವಾಗಿರತಕ್ಕಂಥ ವಿಚಾರ. ಟೆಂಡರ್ ಕರೆದು ಕೊಡಬೇಕು, ಪೀಸ್ ವರ್ಕ್‌ನ್ನು ಕೊಡಬಾರದು ಎಂದು ಹೇಳಿದರು. ಮಾನ್ಯ ಮೋಟಮ್ಮನವರು ಎನ್.ಎಂ.ಆರ್. ಬಗ್ಗೆ ಹೇಳಿದರು. ಆ ಎನ್.ಎಂ.ಆರ್. ಎಂದು ಹೇಳಿದರೆ ನಾಮಿನಲ್ ಮಾಸ್ಟರ್ ರೋಲ್ ಎಂದು; ಆ ಎನ್.ಎಂ.ಆರ್.ನ ಅನಾಹುತ ನಮಗೆಲ್ಲ ಗೊತ್ತಿದೆ. ಅದು ಯಾವ ಪ್ರಮಾಣದಲ್ಲಿ ಬೇಕಾದರೂ ಅನಾಹುತ ಮಾಡುವುದಕ್ಕೆ ಸಾಧ್ಯ ಇದೆ. ಟೆಂಡರ್ ಕರೆದು ಕೊಡತಕ್ಕಂಥ ಕೆಲಸ ನಾವು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನು ಅನಿವಾರ್ಯವಾದ ಪರಿಸ್ಥಿತಿಯಲ್ಲಿ ಏನಾದರೂ ಮಾಡಬಹುದು. ಮಾನ್ಯ ಯಡಿಯೂರಪ್ಪನವರು ಮತ್ತೆ ಇನ್ನು ಯಾರೋ ಸದಸ್ಯರು ಪ್ರಸ್ತಾಪ ಮಾಡುತ್ತಿದ್ದರು. ಏನೆಂದರೆ, ನಮ್ಮ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಕೆಲಸ ಮಾಡುತ್ತಿಲ್ಲವೆಂದು; ಸುಮಾರು 40 ಕೋಟಿ ರೂಪಾಯಿಗಳಷ್ಟು ಬಿಲ್ಸ್ ಕೊಡಬೇಕಾಗಿದೆ ಎಂದು ಹೇಳಿದರು. ಅದು ಹಾಗೆ ಅಲ್ಲ. ನಾನು ಆಗಲೇ ಹೇಳಿದ್ದೇನೆ. ಅದು ಲಾಭದಾಯಕವಾದ ಪರಿಸ್ಥಿತಿಯಲ್ಲಿದೆ, ಇವತ್ತಿನ ದಿವಸ ಹೆಚ್ಚು ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಸದಸ್ಯರ ಒಂದು ಅಭಿಪ್ರಾಯ ಏನಿದೆ, ಅದು ಸರಿಯಾದ ಅಭಿಪ್ರಾಯವಲ್ಲ ಎಂದು ಪ್ರಸ್ತಾಪ ಮಾಡಿ ಮಾನ್ಯ ವೀರೇಂದ್ರ ಪಾಟೀಲರು ಈ ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ಇದೇ ಒಂದು ಅಭಿಪ್ರಾಯವನ್ನು ವ್ಯಕ್ತಮಾಡಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಹೇಳಿದ್ದು ಅದಕ್ಕೆ ಕೆಲಸವನ್ನು ಕೊಡಿ. 3540 ಕೋಟಿ ರೂಪಾಯಿ, ಇಡೀ ರಾಜ್ಯದಲ್ಲಿ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ದು ಬಾಕಿ ಇದೆ. ಕೆಲಸ ಕೊಟ್ಟು ಆ ಇಲಾಖೆಯನ್ನು ಉಳಿಸಿ ಎಂದು ಹೇಳಿದೆ. ಯಾವ ಸದುದ್ದೇಶದಿಂದ ಅದು ಪ್ರಾರಂಭವಾಯಿತೋ ಅದನ್ನು ಮಾಡಲಿ ಎಂದು ನಾನು ಹೇಳಿದೆ.

ಶ್ರೀ ಕೆ.ಹೆಚ್. ರಂಗನಾಥ್:– ಮಾನ್ಯ ವೀರೇಂದ್ರಪಾಟೀಲರು ಇದನ್ನು ಲ್ಯಾಂಡ್ ಆರ್ಮಿ ಜೊತೆಗೆ ಮರ್ಜ್ ಮಾಡುತ್ತೀರಿ ಎನ್ನತಕ್ಕಂಥ ಸುದ್ದಿ ಬಂದಿದೆ, ಮರ್ಜ್ ಮಾಡಬೇಡಿ ಎನ್ನತಕ್ಕಂಥ ಮಾತನ್ನು ಹೇಳಿದರು. ಮರ್ಜ್ ಮಾಡಬಾರದು ಎನ್ನತಕ್ಕಂಥ ಅಭಿಪ್ರಾಯವುಳ್ಳವನು ನಾನು. ಕಾರಣವಿಷ್ಟೆ; ಲ್ಯಾಂಡ್‌ಆರ್ಮಿ ಅದರ ಅಭಿವೃದ್ಧಿ ಅದರ ವಿಚಾರ ಬೇರೆ. ಅದರ ಚರಿತ್ರೆ ನನಗೆ ಗೊತ್ತು. ನಮ್ಮ ಸೋಷಿಯಲಿಸ್ಟ್ ಪಾರ್ಟಿ ಎಲೆಕ್ಷನ್ ಮ್ಯಾನಿಫೆಸ್ಟೋನಲ್ಲಿ ಕೂಡ ಲ್ಯಾಂಡ್ ಆರ್ಮಿ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಕಾರಣಾಂತರಗಳಿಂದ ಅದು ಕೂಡ ಕಂಟ್ರಾಕ್ಟ್ ಮಾಡತಕ್ಕಂಥ ಪರಿಸ್ಥಿತಿಗೆ ಬಂದಿದೆ. ರಾಮಕೃಷ್ಣ ಹೆಗಡೆಯವರು ಫೈನಾನ್ಸ್‌ಮಿನಿಸ್ಟರ್ ಆಗಿ ಅವರ ಬಜೆಟ್ ಭಾಷಣದಲ್ಲಿ ಪ್ರಸ್ತಾಪ ಮಾಡಿ ಇದನ್ನು ತೆಗೆದುಕೊಂಡು ಬಂದರು.

ಅದೇನೆಂದರೆ ಅಲ್ಲಿ ಇರತಕ್ಕಂಥ ಕಟ್ಟಡಗಳು ಏನು ಬರುತ್ತದೆ, ಅಲ್ಲಿ ಇರತಕ್ಕಂಥ ಮಾನವ ಸಂಪತ್ತನ್ನು ಬಳಕೆ ಮಾಡಿಕೊಳ್ಳತಕ್ಕಂಥದ್ದು ಇಂಥ ದೃಷ್ಟಿಯಿಂದ ಮಾಡಬೇಕು ಎಂದು ಇತ್ತು. ಆ ಕಾರ್ಪೊರೇಷನ್ ಕೂಡಾ ಇವತ್ತು ದಾರಿ ತಪ್ಪಿದೆ. ನಮ್ಮ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಮೂಲಕ ಎಲ್ಲವನ್ನೂ ನಾವೇ ಮಾಡುತ್ತಿಲ್ಲ. ನಿನ್ನೆ ಮಾನ್ಯ ವೀರೇಂದ್ರಪಾಟೀಲರು ಹೇಳುತ್ತಿದ್ದರು, ಅದು ಕೂಡ ಒಂದು ಏಜೆನ್ಸಿಯಾಗುವುದಾದರೆ ಏತಕ್ಕೆ ಎನ್ನತಕ್ಕಂಥ ಮಾತನ್ನು ಹೇಳಿದರು. ಅದು ಇವತ್ತು ಏಜೆನ್ಸಿ ಅಲ್ಲ, ಅದು ಯಾವ ಒಂದು ಉದ್ದೇಶದಿಂದ ಅಸ್ತಿತ್ವಕ್ಕೆ ಬಂದಿದೆಯೋ ಆ ಉದ್ದೇಶದಿಂದ ಕೆಲಸ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನಾಗಿ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ. ವೈಯಕ್ತಿಕವಾಗಿ ನಾನು ಮರ್ಜರ್ ಬಗ್ಗೆ I have my own view also.

ಅದು ಸಾಧುವಾದುದಲ್ಲ, ಇವತ್ತು ಲ್ಯಾಂಡ್ ಆರ್ಮಿಯನ್ನು ಇದರ ಜೊತೆಗೆ ಸೇರಿಸಿದರೆ ಎರಡೂ ಮುಳುಗಿ ಹೋಗತಕ್ಕಂಥದ್ದು ಆಗಬಹುದು. ಆದ್ದರಿಂದ ನಾನು ಇಷ್ಟನ್ನು ಪ್ರಸ್ತಾಪ ಮಾಡಿ ಮಾನ್ಯ ಸದನ ನನ್ನ ಬೇಡಿಕೆಗಳಾದ 46, 47 ಮತ್ತು 48ಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ:– ಮಾನ್ಯ ಅಧ್ಯಕ್ಷರೇ, ನಾನು ಈ ಬೇಡಿಕೆಗಳ ಮೇಲೆ ಮಾತನಾಡುವುದಕ್ಕಾಗಲಿಲ್ಲ. ಕಾರಣ ಎಲ್ಲರೂ ಬೇಡಿಕೆ ಮೇಲೆ ಮಾತನಾಡುವುದಕ್ಕಾಗುವುದಿಲ್ಲ. ಇರುವುದು ನಾಲ್ಕೈದು ದಿವಸ ಮಾತ್ರ. ಎಲ್ಲಿ ಗಿಲೊಟಿನ್ ಮಾಡಿಬಿಡುತ್ತೀರೋ ಎಂದು ದಿಗಿಲು ಬಿದ್ದು ನಾವೆಲ್ಲ ಮಾತನಾಡುವುದಕ್ಕೆ ಹೋಗಿಲ್ಲ. ಡಿಪಾರ್ಟ್‌ಮೆಂಟಲ್ ವರ್ಕ್ಸ್ ಅಂತ ಕೊಡುತ್ತಿದ್ದೀರಿ ಎಂದು ನನ್ನ ಸ್ನೇಹಿತರು ಪ್ರಸ್ತಾಪ ಮಾಡಿ ಹೇಳಿದರು. ಈಗ ಏನಾಗಿದೆ ಎಂದರೆ ಪಕ್ಕದ ತಾಲ್ಲೂಕಿನ ಎಂ.ಎಲ್.ಎ. ಮಗ ಬಂದು ನನ್ನ ತಾಲ್ಲೂಕಿನಲ್ಲಿ ಕೆಲಸವನ್ನು ಮಾಡುತ್ತಿದ್ದಾನೆ. ನಾನು ಅಸಿಸ್ಟೆಂಟ್ ಎಂಜಿನಿಯರ್ ಅವರನ್ನು ಕರೆದು ಇದು ಹೇಗೆ ಸಾಧ್ಯ ಎಂದು ನಾನು ಕೇಳಿದೆ.

ಅಲ್ಲಿ ಡಿಪಾರ್ಟ್‌ಮೆಂಟಲ್ ವರ್ಕ್ಸ್ ಕಂಟ್ರಾಕ್ಟರ್ ಎಂದು ಬಂದು ಅವರು ಮಾಡುತ್ತಿದ್ದಾರೆ, ಬಿಲ್ ಏನೋ ಡಿಪಾರ್ಟ್‌ಮೆಂಟಿನಿಂದ ಗವರ್ನಮೆಂಟ್ ಬಿಲ್ ಮಾಡಿ ಲಾಭ ಬಂದಿದ್ದರಲ್ಲಿ ಅವನಿಗೆ ಕೊಟ್ಟು ಕಳಿಸುತ್ತಿದ್ದೇವೆ ಎಂದು ಹೇಳಿದರು. ಇದು ಬಹಳ ಅನ್ಯಾಯ. ಮೊದಲು ನಮ್ಮ ಹತ್ತಿರ ಕಾಸು ಇಲ್ಲ. ಏನೋ ನಿಮ್ಮ ಕೈಕಾಲು ಹಿಡಿದು ಕೈಮುಗಿದು ಅಲ್ಲಿ ರಸ್ತೆಗಳನ್ನು ಸ್ಯಾಂಕ್ಷನ್ ಮಾಡಿಸಿಕೊಂಡು ಹೋದರೆ ಅದರ ದುಡ್ಡು ಅರ್ಧಕ್ಕೆ ಅರ್ಧ ಆಫೀಸರ್ ತಿಂದು ಹಾಕಿದರು. ಇದನ್ನು ತಡೆಗಟ್ಟುವುದಕ್ಕೆ ಸಾಧ್ಯ. ಇದನ್ನು ದಯಮಾಡಿ ನಿಲ್ಲಿಸಿ. ಜೊತೆಗೆ ಇನ್ನೂ ಒಂದು ಏನು ಆಗಿದೆ ಅಂದರೆ, ಡಿಪಾರ್ಟ್‌ಮೆಂಟಲ್ ವರ್ಕ್ಸ್‌ಗೆ ಎಷ್ಟು ಬಿಲ್ ಆಯಿತು ಎಂದು ಗೊತ್ತಿಲ್ಲ. ಕಂಟ್ರ್ಯಾಕ್ಟರ್ ಕೈಯಲ್ಲಿ ಕೆಲಸ ಮಾಡಿಸುವುದು. ಎಷ್ಟು ಬಿಲ್ ಆಯಿತೆಂದು ಗೊತ್ತಿಲ್ಲ. ಕಂಟ್ರಾಕ್ಟರ್ ಅನ್ನು ಕರೆಯುವುದು, ನಿಮಗೆ ಎಷ್ಟು ಖರ್ಚು ಆಗಿದೆ ಎಂದು ಕೇಳುವುದು. ಸ್ವಾಮಿ ನನಗೆ ಏಳು ಸಾವಿರ ಖರ್ಚು ಆಗಿದೆ ಅಂದರೆ [illegible] 500

ರೂಪಾಯಿ ಹೆಚ್ಚು ತೆಗೆದುಕೋ ಎಂದು ಹೇಳಿ ಮಿಕ್ಕಿದ್ದು ಇವರು ಹಂಚಿಕೊಳ್ಳುವುದು. ಎರಡನೆಯದು ಈ ಟಾರ್ ವರ್ಕ್ಸ್ ಎಂದು ಮಾಡುತ್ತಾರೆ. ಆಸ್ಫಾಲ್ಟಿಂಗ್ ವರ್ಕ್. ಬಜೆಟ್ ಸ್ಯಾಂಕ್ಷನ್ ಆಗುತ್ತದೆ, 30ನೇ ತಾರೀಖು ಸ್ಯಾಂಕ್ಷನ್ ಆಗುತ್ತದೆ. ಏಪ್ರಿಲ್ ಮೇ ಜೂನ್ ಮೂರು ತಿಂಗಳು ಮಾಡಿ ನಂತರ ಡಿಸೆಂಬರ್, ಜನವರಿ ಫೆಬ್ರವರಿಯಲ್ಲಿ ಮಾಡಿದರೆ ಅರ್ಧಕ್ಕೆ ಅರ್ಧ ಕೆಲಸ ಆಗುವುದಿಲ್ಲ. ಕನ್ನಡದಲ್ಲಿ ಒಂದು ಗಾದೆ ಮಾತು ಇದೆ. ಅವಸರಕ್ಕೆ ಸಗಣಿ ಸ್ವಲ್ಪ ಮಂದವಾಗಿ ಬಗ್ಗಡ ಮಾಡಿ ಬಿಟ್ಟು ಚೆಲ್ಲಿ ಬಿಟ್ಟು ಒಂದು ದಿವಸ ಎರಡು ದಿವಸ ಆದ ಮೇಲೆ ಒಣಗಿಸಿಕೊಳ್ಳುತ್ತೇವಲ್ಲ ಹೀಗೆ ಮಾಡಿಬಿಟ್ಟು ದುಡ್ಡು ತಿಂದು ಹಾಕುತ್ತಾರೆ; ದಯಮಾಡಿ ಇದನ್ನು ಏನಾದರೂ ಮಾಡಿ ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಒಂದು ಸಲಹೆ. ಈಗ ಯಾವ್ಯಾವ ಹೆಡ್‌ನಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಕೆಲಸ ಮಂಜೂರು ಆಗಿರುತ್ತದೆ. ಬರಗಾಲ, ಅತಿವೃಷ್ಟಿ, ನೆರೆ ಹಾವಳಿಗಳಿಗೆ ನೀವು ಹಣ ಕೊಡಿಸಿರುತ್ತೀರಿ. ಅದಕ್ಕೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನು ಎಂದರೆ ಯಾವ್ಯಾವ ತಾಲ್ಲೂಕಿನಲ್ಲಿ ಏನೇನು ಕೆಲಸ ಮಾಡಿದ್ದೀರಿ ಮಂಜೂರಾತಿ ಕೊಡುತ್ತಿದ್ದೀರಿ. ಇದು ಯಾವಾಗ ಮಾಡಬೇಕು ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಇದರ ಬಗ್ಗೆ ಒಂದು ಗಣಕ ಯಂತ್ರೀಕರಣ ಮಾಡಿಸಿ ಆಯಾಯ ಶಾಸಕರಿಗೆ ಕೊಟ್ಟರೆ ನಾವು ಫಾಲೋ ಅಪ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಇದರ ಖರ್ಚು ಅದಕ್ಕೆ, ಅದರ ಖರ್ಚು ಇದಕ್ಕೆ ಎಂದು ಆಗುತ್ತದೆ. ಇಂತಹ ನೂರಾರು ಉದಾಹರಣೆಯನ್ನು ನಾನು ಕೊಡಬಲ್ಲೆ. ನಾನು ವಿವರಕ್ಕೆ ಹೋಗುವುದಿಲ್ಲ. ದಯಮಾಡಿ ಈ ಹೊಸ ಪದ್ಧತಿಯನ್ನು ತಮ್ಮ ಕಾಲದಲ್ಲಿ ಜಾರಿಗೆ ತಂದರೆ ನಾವು ಶಾಸಕರು ನಮ್ಮ ತಾಲ್ಲೂಕಿನಲ್ಲಿ ಏನು ಆಗಿದೆ, ಏನು ಆಗಿಲ್ಲ ಎಂದು ನೋಡಿಕೊಳ್ಳುವುದಕ್ಕೆ ಅನುಕೂಲವಾಗುವುದರಿಂದ ಇದನ್ನು ತಾವು ಮಾಡುವುದಕ್ಕೆ ಯೋಚನೆ ಮಾಡಬಹುದೇ ? ಎರಡನೆಯದಾಗಿ ತಾವು ಎಲ್‌ಓಸಿಯನ್ನು ಬಿಡುಗಡೆ ಮಾಡುತ್ತೀರಿ. ಬಹುತೇಕವಾಗಿ ತಾವು ಚೆಕ್ ಅಪ್ ಮಾಡಿ ನೋಡಿ. ಕೇವಲ ಮೆಟೀರಿಯಲ್ಸ್‌ಗೆ ಇದನ್ನು ಇಮ್ಮೀಡಿಯಟ್ ರಿಲೀಸ್ ಮಾಡುವಂಥಾದ್ದು ನಡೆದುಕೊಂಡು ಹೋಗುತ್ತಿದೆ. ಏಕೆಂದರೆ ದೊಡ್ಡ ಪ್ರಮಾಣದಲ್ಲಿ ಕಮೀಷನ್ ಸಿಗುತ್ತದೆ ಎಂದು ಹೇಳಿ ಎಲ್‌ಓಸಿಯನ್ನು ಬಿಡುಗಡೆ ಮಾಡಿದಾಗ ವಾಸ್ತವಿಕವಾಗಿ ಕೆಲಸ ಆಗಿರುತ್ತದೆ. ಆ ವರ್ಕ್‌ನ್ನು ಇಷ್ಟು ಪ್ರಮಾಣದಲ್ಲಿ ಕೊಡಬೇಕು. ಇಷ್ಟು ಮೆಟೀರಿಯಲ್ಸ್ ಕೊಡಬೇಕು, ವರ್ಕ್ ಇಷ್ಟು ಕೊಡಬೇಕು ಎಂದು ಈ ತರಹ ಏನಾದರೂ ಶರತ್ತನ್ನು ಹಾಕಿ ಎಲ್‌ಓಸಿಯನ್ನು ಬಿಡುಗಡೆ ಮಾಡಿದರೆ ಬಹುಶಃ ಪ್ರೋಗ್ರೆಸ್ ಆಗುತ್ತದೆ. ಇಲ್ಲದೇ ಇದ್ದರೆ ನೀವು ಮಾರ್ಚಿ ಕೊನೆಯಲ್ಲಿ ಹಣ ಬಿಡುಗಡೆ ಮಾಡಿದಾಗ ಬರೇ ಮೆಟೀರಿಯಲ್ಸ್ ಬಿಡುಗಡೆ ಮಾಡಿಕೊಂಡು ಅಲ್ಲಿ ಖರೀದಿ ಮಾಡುವಂಥ ವ್ಯವಹಾರ ನಡೆದುಕೊಂಡು ಹೋಗುತ್ತದೆ. ಇವೆರಡನ್ನು ತಾವು ಏನಾದರೂ ಜಾರಿಗೆ ತಂದರೆ ಒಳ್ಳೆಯ ಕೆಲಸ ಆಗಬಹುದು. ದಯವಿಟ್ಟು ತಾವು ಯೋಚನೆ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ನಾನು 3–4 ಸಮಸ್ಯೆಗಳನ್ನು ಮಾತ್ರ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಕಳೆದ ಆರು ತಿಂಗಳ ಹಿಂದೆ ಪ್ರತಿ ಜಿಲ್ಲಾಪರಿಷತ್ತಿಗೆ ಸೇರಿದ 50 ಕಿಲೋಮೀಟರ್ ರೋಡ್ಸ್ ಅನ್ನು ತಮ್ಮ ಇಲಾಖೆಗೆ ವರ್ಗಾವಣೆ ಮಾಡಿ ಆಗಿದ್ದರೂ ಸಹ ಆ ರೋಡ್ಸ್ ಮೇನ್‌ಟೆನೆನ್ಸ್ ಬಗ್ಗೆ ಇವತ್ತಿನವರೆಗೆ ನಿಮ್ಮ ಗ್ರಾಂಟ್ಸ್ ರಿಲೀಸ್ ಆಗಿಲ್ಲ. ಜಿಲ್ಲಾ ಪರಿಷತ್ ಹಣ ಕೊಟ್ಟ ನಂತರ ನಾವು ಬಿಡುಗಡೆ ಮಾಡುತ್ತೇವೆ ಎಂದು ನಿಮ್ಮ ಇಲಾಖೆಯವರು ಹೇಳುತ್ತಿದ್ದಾರೆ. ಇದು ನಿಮ್ಮ ಇಂಟರ್ನಲ್ ಮ್ಯಾಟರ್. ಇವತ್ತು ರೋಡ್ ತಮ್ಮ ಹತ್ತಿರ ಇದೆ, ಅದರ ಮೇನ್‌ಟೆನೆನ್ಸ್ ಮಾಡಬೇಕು. ಆ ಹಣ ಯಾವಾಗ ಬಿಡುಗಡೆ ಮಾಡುತ್ತೀರಿ, ಇದು ಒಂದನೆಯದು. ಎರಡನೆಯದು ಮಹಾರಾಷ್ಟ್ರದಲ್ಲಿ ಒಂದು ಪದ್ಧತಿ ಇದೆ. ಏನೆಂದರೆ ಇವತ್ತು ನಾವು

ಯಡಿಯೂರಪ್ಪನವರು ಎಲ್‌ಓಸಿ ಬಗ್ಗೆ ಪ್ರಸ್ತಾಪ ಮಾಡಿದರು. ಇವತ್ತು ಏನು ಆಗುತ್ತದೆ ? ಪವರ್ ಸೆಕ್ಷನ್‌ಗೆ 600 ಕೋಟಿ ಕೊಟ್ಟಿದ್ದೇವೆಂದು ಹೇಳಿದಿರಿ, ಇರಿಗೇಷನ್‌ಗೆ 900 ಕೋಟಿ ರೂಪಾಯಿ ಕೊಟ್ಟಿದ್ದೇವೆಂದು ಹೇಳಿದ್ದೀರಿ. But, again we are at the mercy of the Finance Department. ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ನಿಮಗೆ ಆ ಹಣ ಬಿಡುಗಡೆ ಮಾಡಿದರೆ ತಾವು ಹಣ ಖರ್ಚು ಮಾಡಬಹುದು. ನಿಮ್ಮ ಪರ್‌ಫಾರ್ಮೆನ್ಸ್ ಕೇಳಬಹುದು. ಇಲ್ಲ ಎಂದರೆ ಸಾಧ್ಯವಾಗುವುದಿಲ್ಲ. ಆದರೆ ಮಹಾರಾಷ್ಟ್ರದಲ್ಲಿ ಈ ತರಹ ಪದ್ಧತಿ ಇಲ್ಲ. ಒಮ್ಮೆ ಡಿಪಾರ್ಟ್‌ಮೆಂಟಿಗೆ ಗ್ರಾಂಟ್ ಕೊಟ್ಟ ನಂತರ the Department can go on spending to that extent. Nobody can stop it. ಹಾಗಾಗಿ ಮಹಾರಾಷ್ಟ್ರದಲ್ಲಿ ಅವರು ಯಾವ ಪ್ರಕಾರ ಮಾಡಿದ್ದಾರೆ ಆ ರೀತಿ ಇಲ್ಲಿಯೂ ಜಾರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಹಾಗಾದರೆ ಇಡೀ ಡಿಪಾರ್ಟ್‌ಮೆಂಟಿಗೆ ಬಜೆಟ್‌ನಲ್ಲಿ ನಿಜವಾಗಿ ಏನು ಅಲೋಕೇಶನ್ ಆಗಿದೆ ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯ ಆಗುತ್ತದೆ ಹಾಗೂ ಡಿಪಾರ್ಟ್‌ಮೆಂಟಿನಲ್ಲಿ ತಮಗೆ ಹಿಡಿತ ಬರುತ್ತದೆ. ಪ್ರಗತಿ ತರುವುದಕ್ಕೆ ಕೂಡ ಸಾಧ್ಯವಾಗುತ್ತದೆ, ಇದು ಎರಡನೆಯದು. ಮೂರನೆಯದಾಗಿ ಕಂಟ್ರಾಕ್ಟರ್ಸ್ ವಿಚಾರ. ಬಹಳಷ್ಟು ಕಡೆ ನಡೆಯುತ್ತಿದೆ. Most of them at the taluka level are useless. ಒಂದು ಕೆಲಸ ಆಗಿದೆ. ನಾನು ಮೊನ್ನೆ ಕನಗೋಡು ಸೇತುವೆ ಉದ್ಘಾಟನೆ ಮಾಡಿಕೊಂಡು ಬಂದೆ. ನಾನು ಶಾಸಕನಾಗಿದ್ದಾಗ ಸ್ಯಾಂಕ್ಷನ್ ಮಾಡಿದ ಸೇತುವೆ ಅದು. ಆರು ವರ್ಷದ ನಂತರ ಹೋಗಿ ಉದ್ಘಾಟನೆ ಮಾಡಿಕೊಂಡು ಬಂದೆ. ಅಲ್ಲಿ ಕಂಟ್ರಾಕ್ಟ್ ಟರ್ಮಿನೇಟ್ ಮಾಡಬೇಕು ಎಂದು ಒಂದು ಒಂದೂವರೆ ವರ್ಷದಿಂದ ಪ್ರಯತ್ನ ನಡೆಯುತ್ತಿದೆ. ಇದು ಏನು ಆಗಿದೆ. ಬ್ರಿಟೀಷರ ಕಾಲದಲ್ಲಿ ಏನು ಒಂದು ಪವರ್ಸ್ ಚೀಫ್ ಇಂಜಿನಿಯರ್ಸ್, ಸೆಕ್ರೆಟರಿಗೆ ಕೊಟ್ಟಿದ್ದರು. ಅದೇ ಪವರ್ಸ್ ಅನ್ನು ತಾವು ಈಗಲೂ ಇಟ್ಟುಕೊಂಡಿದ್ದೀರಿ. ಹಾಗಾಗಿ ಒಂದು ವೇಳೆ ಕಂಟ್ರಾಕ್ಟರ್ ಸರಿಯಿಲ್ಲ ಎಂದು ಬೇರೆ ಯಾವುದಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಬದಲು ತಮಗೆ ಈ ವಿಚಾರ ಗೊತ್ತಾದ ತಕ್ಷಣ ಅವರನ್ನು ಟರ್ಮಿನೇಟ್ ಮಾಡಿ ಪವರ್ಸ್‌ನ್ನು ಡೀಸೆಂಟ್ರಲೈಸ್ ಮಾಡುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ, ಎಂದು ಮತ್ತೊಂದು ತಮಗೆ ಕ್ಲಾರಿಫಿಕೇಶನ್ ಕೇಳುತ್ತಿದ್ದೇನೆ. ತಾವು ಬಜೆಟ್‌ನಲ್ಲಿ ಈ ವರ್ಷ ಕೆಲಸದ ಪಟ್ಟಿಯನ್ನು ಕೊಡಬೇಕು.

ಅದರಲ್ಲಿ ತಾವು ಎಷ್ಟು ವರ್ಷಗಳ ಕಾಲ ಒಂದು ಕೆಲಸ ತೆಗೆದುಕೊಳ್ಳಬಹುದು ? ಎಷ್ಟು ಹಣವನ್ನು ಇಲಾಖೆಗೆ ಹೊಸ ಅಭಿವೃದ್ಧಿ ಕೆಲಸಕ್ಕಾಗಿ ಕೊಡಲಾಗಿದೆ ? ಎಂಬುದರ ಬಗ್ಗೆಯೂ ಸ್ಪಷ್ಟೀಕರಣ ಕೊಡಬೇಕು.

ಶ್ರೀ ಜಿ. ರಾಜೂಗೌಡ:– ಸನ್ಮಾನ್ಯ ಅಧ್ಯಕ್ಷರೇ, ಟೆಂಡರ್ ಮೂಲಕ ಟೋಲ್ಗೇಟ್ ಆದ ರಸ್ತೆಗಳನ್ನು ದುರಸ್ತಿ ಪಡಿಸುವ ವಿಷಯದಲ್ಲಿ ಸರ್ಕಾರದ ನಿಲುವು ಏನೆಂದು ಗೊತ್ತಾಗಲಿಲ್ಲ. ಈಗ ತಾನೆ ತಾವು ಮಾತನಾಡುತ್ತಾ ಈಗ್ಗಾಗಲೇ ಹಮ್ಮಿಕೊಂಡಿರುವ ಯೋಜನಾ ರೀತ್ಯ ನಮ್ಮಲ್ಲಿರತಕ್ಕಂಥ ಕಚ್ಚಾ ರಸ್ತೆ, ಎಂಡಿಆರ್ ರಸ್ತೆ, ರಾಜ್ಯ ಹೆದ್ದಾರಿಗಳಿಗೆ ಪೂರ್ತಿ ಟಾರ್ ಮಾಡಬೇಕಾದರೆ ಒಂದು ಶತಮಾನ ಬೇಕಾಗುತ್ತದೆ, ಸಾವಿರಾರು ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಹಾಗೂ ಈ ಬಗ್ಗೆ ನಾವು ಹಿಂದಿನಿಂದಲೂ ತಪ್ಪು ಮಾಡಿಕೊಂಡು ಬಂದಿದ್ದೇವೆಂದು ಹೇಳಿದಿರಿ. ಆದುದರಿಂದ, ಈ ದಿಶೆಯಲ್ಲಿ ನನ್ನ ಸಲಹೆಯನ್ನು ಪರಾಮರ್ಶಿಸಿ, ಕಾರ್ಯಗತಗೊಳಿಸಿದರೆ ಸಂಪನ್ಮೂಲವನ್ನು ನಾವು ಸರಿಯಾಗಿ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅದು ಹೇಗೆಂದರೆ, ರಾಜ್ಯ ಹೆದ್ದಾರಿಗಳ ಇಕ್ಕೆಡೆಗಳಲ್ಲಿ ಸುಮಾರು 15 ಅಡಿ ಅಂತರದಲ್ಲಿ ಹುಣಸೆ ಸಸಿಗಳನ್ನು ನೆಟ್ಟು, ಅವುಗಳನ್ನು ಏಳು ವರ್ಷಗಳ ತನಕ ಕಾಪಾಡಿದಲ್ಲಿ ಒಂದು ಕಿಲೋಮೀಟರ್‌ಗೆ ನಾಲ್ಕು ಲಕ್ಷ ರೂಪಾಯಿಗಳ ಆದಾಯ ಸರ್ಕಾರಕ್ಕೆ ಬರುತ್ತದೆ. ದಯಮಾಡಿ ಸಸಿಗಳನ್ನು ವಿತರಿಸುವ ವ್ಯವಸ್ಥೆ ಮಾಡಿದರೆ ಸಾವಿರಾರು ಕೋಟಿ ರೂಪಾಯಿಗಳ

ಸಂಪನ್ಮೂಲವನ್ನು ಕ್ರೋಢೀಕರಿಸಬಹುದು ಎಂಬ ಸಲಹೆ ಕೊಡುತ್ತಿದ್ದೇನೆ. ಇದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನೆಂದು ತಿಳಿಸಬೇಕು.

ಶ್ರೀ ಪಾಟಾಳ್ ನಾಗರಾಜ್:– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರು ಬಹಳ ಪ್ರಾಮಾಣಿಕವಾಗಿ ತಮ್ಮ ಬಂಡವಾಳ ಎಷ್ಟಿದೆಯೆಂಬುದನ್ನು ಸ್ಪಷ್ಟವಾಗಿ ತಿಳಿಸಿದರು. ತಮ್ಮಲ್ಲಿ ಏನಿದೆ ? ಯಾವ ಪರಿಸ್ಥಿತಿಯಿದೆಯೆಂಬುದನ್ನು ನಿಮ್ಮ ಪ್ರಕಾರ ನಾವು ನೋಡಿದರೆ ಈ ಶತಮಾನದೊಳಗೆ ಇದೆಲ್ಲಾ ಮುಗಿಯುತ್ತದೆಂದು ನಮಗಂತೂ ಅನ್ನಿಸುವುದಿಲ್ಲ. ಈ ಕುರಿತು ಏನು ಮಾಡಬೇಕೆಂಬುದನ್ನು ಸಚಿವ ಸಂಪುಟ ಮತ್ತು ಈ ಸದನ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ಲೋಕೋಪಯೋಗಿ ಇಲಾಖೆಗೆ ನಾವೇನು ಮಾಡಬೇಕು ? ಎಷ್ಟೆಷ್ಟೋ ಸಾವಿರದ ಅಂಕಿ ಸಂಖ್ಯೆಗಳನ್ನು ತಾವು ಹೇಳಿದಿರಿ. ಸೇತುವೆಗಳು, ರಸ್ತೆಗಳು ಇತ್ಯಾದಿಗಳ ದುರಸ್ತಿ ಕಾರ್ಯಗಳನ್ನು ಕೇಳಿದರೆ ಬಹುಶಃ ಇಲ್ಲಿಗೆ ನಾವು ಹತ್ತು ಬಾರಿ ಚುನಾಯಿತರಾಗಿ ಬಂದರೂ ಆ ಕಾಲಕ್ಕೂ ಮುಗಿಯುವುದಿಲ್ಲವೇನೋ ಎನ್ನುವಷ್ಟು ಭಯ, ಭೀತಿ ಹುಟ್ಟಿಸಿದ್ದಾರೆ. ಅಂದರೆ, ತಾವು ಸತ್ಯವನ್ನು ಹೇಳಿದ್ದೀರಿ. ಈ ದುರಸ್ತಿ ಕಾರ್ಯವಾಗಬೇಕಾದರೆ ಏನಾದರೊಂದು ಯೋಜನೆ ಬೇಕಲ್ಲ. ನಿಮ್ಮಲ್ಲಿ ಹಣ ಯಾವ ರೀತಿ ಇದೆ ? ಸಂಪನ್ಮೂಲ ಯಾವ ರೀತಿ ಇದೆ ? ಸರ್ಕಾರ ನಿಮಗೆ ಯಾವ ರೀತಿ ಕೊಡಬೇಕು ? ಎನ್ನುವುದು ತೀರ್ಮಾನವಾಗಬೇಕಲ್ಲವೇ ? ಅದನ್ನು ತಾವು ಸದನದಲ್ಲಿ ಹೇಳಬೇಕು.

ಎರಡನೆಯದಾಗಿ ತಾವು ಎಲ್ಲಾ ಶಾಸಕರಿಗೂ ಒಂದು ಪತ್ರ ಬರೆದು, ಅದರಲ್ಲಿ 1, 2, 3 ಎಂದು ಹಾಕಿ ಎಂದು ತಿಳಿಸಿದ್ದೀರಿ. ನಮಗೆಲ್ಲಾ ಒಂದು ಹಾಗೂ ಎರಡನೆಯದನ್ನು ತೋರಿಸುವುದಿಕ್ಕಾಗುವುದಿಲ್ಲ. ನಾನು ಈ ಕುರಿತು ಸುಮಾರು 5 – 6 ದಿವಸಗಳಿಂದ ಎರಡನೆಯದಕ್ಕೆ ಯಾವುದನ್ನು ಸೇರಿಸಲಿ ಒಂದು ಯೋಚಿಸಿದೆ, ಎಲ್ಲಾ ಒಂದೇ ಆಯಿತು. ಅದರಲ್ಲಿ ಕಟ್ಟಡಗಳಿಗೆ ಯಾವುದು, ರಸ್ತೆಗಳಿಗೆ ಯಾವುದು 1, 2, 3 ಹಾಕಿ ಎಂದು ಕಳುಹಿಸಿದ್ದಾರೆ. ನಾನು ತಲೆ ಕೆಡಿಸಿಕೊಂಡು ಒಂದನೆಯದು ಬಿಟ್ಟು ಎರಡನೆಯದಕ್ಕೆ ಹೋಗುವುದಕ್ಕಾಗುತ್ತಿಲ್ಲ; ಈ ಪರಿಸ್ಥಿತಿಯಲ್ಲಿದೆ ನಮ್ಮ ರಸ್ತೆಗಳು. ತಮಗೆ ನಾನು ಆಗಲೇ ಹೇಳಿದಂತೆ ತಮಿಳುನಾಡಿಗೆ ಸೇರಿದ ಕೊಯಮತ್ತೂರು ರಸ್ತೆಯನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಅಂದರೆ, ನಾವೇಕೆ ಇಂತಹ ಪರಿಸ್ಥಿತಿಗೆ ಬಂದಿದ್ದೇವೆ ? ಕೊಯಮತ್ತೂರನ್ನು ದಾಟಿ ನಮ್ಮ ರಾಜ್ಯದ ಗಡಿಗೆ ಬಂದ ನಂತರ, ಅಲ್ಲಿಂದ ವಾಹನಗಳು ಅತ್ಯಂತ ಶೋಚನೀಯ ಸ್ಥಿತಿಯಲ್ಲಿ ಬರಬೇಕಾಗುತ್ತದೆ. ಈ ಬಗ್ಗೆ ವಿಶೇಷವಾಗಿ ಗಮನ ಹರಿಸಬೇಕು ಮತ್ತು ತಮ್ಮಲ್ಲಿ ಅನೇಕ ಒಳ್ಳೆಯ ಅಧಿಕಾರಿಗಳಿದ್ದಾರೆ. ಅದನ್ನು ನಾನು ತಳ್ಳಿ ಹಾಕುವುದಕ್ಕೆ ಸಾಧ್ಯವಿಲ್ಲ. ಇಂತಹ ಅಧಿಕಾರಿಗಳು ನಿವೃತ್ತರಾದ ನಂತರ ಅವರ ಸೇವೆಯನ್ನು ಪುನಃ ಉಪಯೋಗಿಸಿಕೊಳ್ಳಲು ನೀವು ಯಾವುದಾದರೊಂದು ವ್ಯವಸ್ಥೆ ಮಾಡಬೇಕು. ಉದಾಹರಣೆಗೆ ವೆಂಕಟೇಶ್ ಎಂಬ ಅಧಿಕಾರಿ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಅನೇಕ ಸಲ ಬಂದಿದ್ದಾರೆ. ಅವರನ್ನು ಸಮಿತಿಯ ವತಿಯಿಂದ ಅಭಿನಂದಿಸಿದ್ದೇವೆ. ಅವರು ಬರುವ ಏಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ನಿವೃತ್ತರಾಗುತ್ತಾರೋ ಏನೋ ಗೊತ್ತಿಲ್ಲ. ಆ ಪ್ರಶ್ನೆ ಬೇರೆ. ಅಂತಹ ಒಳ್ಳೆಯ ಅಧಿಕಾರಿಗಳು ಏನು ಅನೇಕ ಇಲಾಖೆಗಳಲ್ಲಿದ್ದಾರೆ, ಅವರನ್ನು ಉಳಿಸಿಕೊಳ್ಳತಕ್ಕಂಥ ವ್ಯವಸ್ಥೆಯನ್ನಾದರೂ ತಾವು ಮಾಡುತ್ತೀರಾ ? ಎನ್ನತಕ್ಕಂಥಾದ್ದನ್ನು ನಾನು ತಮಗೆ ಕೇಳುತ್ತಿದ್ದೇನೆ. ಅನಂತರ, ಭೂ ಸೇನೆ ಬಗ್ಗೆ ನಾನು ಹೇಳುತ್ತಿದ್ದೇನೆ. ಹಿಂದೆ ಸಮಾಜವಾದ ಸಿದ್ಧಾಂತದಲ್ಲಿ ಭೂ ಸೇನೆಗೆ ಇದ್ದಂಥ ಚಿಂತನೆ ಬೇರೆಯಾಗಿತ್ತು. ಭೂ ಸೇನೆ ಎಂದರೆ ಲೋಕೋಪಯೋಗಿ ಇಲಾಖೆಗೆ ಮಾಡಿದಂತೆ ಮಾಡುತ್ತಿದ್ದೀರಿ. ಅದಕ್ಕೂ ಇದಕ್ಕೂ ಇರುವ ಚಿಂತನೆ ದಾರಿ ತಪ್ಪುತ್ತಿದೆ. ಆ ಚಿಂತನೆಯ ದಾರಿಯನ್ನು ಸರಿಯಾಗಿ ಹಿಡಿದು ನಿಲ್ಲಿಸತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ತದನಂತರ, ತಾವು ಪತ್ರದಲ್ಲಿ 1, 2, 3 ಹಾಕಿ ಎಂದು ಏನು ತಿಳಿಸಿದ್ದೀರಿ, ಅದಕ್ಕೆ ನನ್ನ ಉತ್ತರ ಎಲ್ಲಾ ಒಂದೇ

ಎಂದು. ನಾವು ಗಡಿ ಪ್ರದೇಶದವರಾಗಿರುವುದರಿಂದ ತಾವು ಈ ದಿಶೆಯಲ್ಲಿ ನಮ್ಮನ್ನು ಕಡೆಗಣಿಸಬಾರದು. ದಯವಿಟ್ಟು, ಈ ತರಹದ ಚಿಂತನೆ ಮಾಡಬಾರದು. ಈ ರೀತಿಯಾದರೆ ನಾನು ನಿಮ್ಮ ಮನೆಗೆ ಬಂದು ಕುಳಿತು ಬಿಡುತ್ತೇನೆ. ಆದುದರಿಂದ, ತಾವು ಇದರ ಬಗ್ಗೆ ಸ್ಪಷ್ಟ ಚಿತ್ರ ಕೊಟ್ಟು ಭರವಸೆ ಕೊಡಬೇಕು.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಎಸ್ಟಿಮೇಟ್ ಮಾಡುವುದರ ಬಗ್ಗೆ ಹೇಳಿದ್ದೆ. ಲೈನ್ ಎಸ್ಟಿಮೇಟ್ ಆಗುತ್ತದೆ, ಇನ್‌ವೆಸ್ಟಿಗೇಷನ್ ಆಗಿರುವುದಿಲ್ಲ ಮತ್ತು ಟೆಂಡರಿನ ಷೆಡ್ಯೂಲ್ ಆಗಬೇಕು, ಅದನ್ನು ಕೂಡ ಮಾಡುವುದಿಲ್ಲ. ಅಲ್ಲದೆ, ಅನೇಕ ಕಡೆ ಡಿಸೈನ್ ಆಗಬೇಕಾಗುತ್ತದೆ. ಡಿಸೈನ್ ಆಗುವುದಿಲ್ಲ. ಅಲ್ಲಿರತಕ್ಕಂಥ ಚೀಫ್ ಇಂಜಿನೀಯರ್‌ರವರ ಕಛೇರಿಗೆ ಸಂಬಂಧಪಟ್ಟವರು ಬಂದು ಹಣ ಕೊಡುವವರೆಗೆ ಮತ್ತು ಅಲ್ಲಿರತಕ್ಕಂಥ ಇಂಜಿನಿಯರುಗಳು ಇಲ್ಲಿಗೆ ಬಂದು ನೋಡುವವರೆಗೂ ಡಿಸೈನ್ಸ್ ಬರುವುದಿಲ್ಲ. ಇದರಿಂದ ಟೆಂಡರ್ 2 – 3 ಸಾರಿ ಪೋಸ್ಟ್‌ಪೋನ್ ಆಗುತ್ತಾ ಹೋಗುತ್ತಿರುತ್ತದೆ.

ಇದರ ಬಗ್ಗೆ ಸ್ವಲ್ಪ ಸ್ಟ್ರೀಮ್‌ಲೈನ್ ಮಾಡಿ Design aspect ಅನ್ನು ಯಾವ ರೀತಿ ಮಾಡಬೇಕೆಂದು ನೋಡಿ. ಆಮೇಲೆ ತಾವು ಪ್ರತಿಯೊಂದು ಕ್ಷೇತ್ರಕ್ಕೆ 20 ಲಕ್ಷದ ಕೆಲಸವನ್ನು ಕೊಡುತ್ತೇವೆಂದು ಹೇಳಿದ್ದೀರಿ. ದಯಮಾಡಿ ಇದರ ಬಗ್ಗೆ ಬಹಳ ತೀವ್ರವಾಗಿ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಕೆಲವು ತಾಲ್ಲೂಕುಗಳು ಗಡಿ ಪ್ರದೇಶದ ಅಭಿವೃದ್ಧಿಯ ಅಡಿಯಲ್ಲಿ ಸೇರುತ್ತವೆ,ಕೆಲವು ತಾಲ್ಲೂಕುಗಳು ಮಲೆನಾಡು ಅಭಿವೃದ್ಧಿ ಮಂಡಳಿಯ ಅಡಿಯಲ್ಲಿ ಸೇರುತ್ತವೆ, ಇನ್ನು ಕೆಲವು ತಾಲ್ಲೂಕುಗಳು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಅಡಿಯಲ್ಲಿ ಸೇರುತ್ತವೆ. ಆದರೆ ಏನೂ ಇಲ್ಲದೆ ಇರತಕ್ಕ ತಾಲ್ಲೂಕುಗಳ ಪರಿಸ್ಥಿತಿಯಂತೂ ತ್ರಿಶಂಕು ಸ್ಥಿತಿಯಾಗುತ್ತದೆ. ತಾವು ಎಲ್ಲಾರಿಗೂ ಏನು 20 ಲಕ್ಷವನ್ನು ಕೊಟ್ಟುಕೊಂಡು ಹೋಗುತ್ತೀರೆಂದು ಹೇಳಿದ್ದೀರಿ ಅದರಿಂದ ಕೆಲವು ಕಡೆ ಹೆಚ್ಚಿನ ಅಭಿವೃದ್ಧಿ, ಆದರೆ ನಮ್ಮ ಕಡೆಗಳಲ್ಲಿ ಏನೂ ಆಗುವುದಿಲ್ಲ, ಇಂಥ ಪರಿಸ್ಥಿತಿಯಲ್ಲಿ ತಾವು 20 ಲಕ್ಷವನ್ನು ಇಡಲೇಬೇಕಾಗುತ್ತದೆ. ಆದರೆ ಕೆಲವು ಕಡೆ ಒಂದೂವರೆ ಎರಡು ಕೋಟಿ ಕೆಲಸವಾಗುತ್ತಿದೆ. ಆದುದರಿಂದ ಯಾವುದೇ ಯೋಜನೆಗೆ ಸಂಬಂಧಪಡದೇ ಇರತಕ್ಕ ಕ್ಷೇತ್ರಕ್ಕೆ ವಿಶೇಷವಾಗಿ 20 ಲಕ್ಷ ರೂಪಾಯಿಗಳ ಬದಲಾಗಿ ಇನ್ನೂ ಹೆಚ್ಚು ಹಣವನ್ನು ಕೊಡತಕ್ಕ ಅವಶ್ಯಕತೆ ಇದೆ. ದಯಮಾಡಿ ಇದರ ಬಗ್ಗೆ ಏನು ಹೇಳುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ:– ಸನ್ಮಾನ್ಯ ಅಧ್ಯಕ್ಷರೇ, ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಹಳ್ಳಿಯ ರೈತರು ಸಾಮಾನುಗಳನ್ನು ತಂದು ಮಾರಾಟ ಮಾಡುವಾಗ 2 ಪರ್ಸೆಂಟ್ ತೆರಿಗೆಯನ್ನು ಹಾಕುತ್ತಾರೆ. ಅದರಲ್ಲಿ ಒಂದು ಪರ್ಸೆಂಟ್‌ನ್ನು ರಸ್ತೆ ರಿಪೇರಿ ಮಾಡುವುದಕ್ಕೆ ಖರ್ಚು ಮಾಡುತ್ತೇವೆಂದು ಇಟ್ಟಿರುತ್ತಾರೆ. ಈ ರೀತಿಯಾಗಿ ಕೋಟಿಗಟ್ಟಲೆ ಹಣವಿದೆ. ಅನಂತರ 5 – 6 ವರ್ಷಗಳಾದ ಮೇಲೆ ಯಾರೋ ಪುಣ್ಯಾತ್ಮರು ಅದರ ಬಗ್ಗೆ ಲೆಕ್ಕ ಕೇಳಿ ಯಾವ ಯಾವ ರಸ್ತೆಗಳನ್ನು ಮಾಡಬೇಕು, ಇದರಲ್ಲಿ ಬೇಕಾದಷ್ಟು ಹಣವಿದೆ ಎಂದು ಹೇಳಿದರು. ಆದರೆ ಮುಂದೆ ಏನಾಯಿತೋ ಗೊತ್ತಾಗಲಿಲ್ಲ. ಈ ರೀತಿ ರೈತರ ಹತ್ತಿರ ಸೆಸ್‌ರೂಪದಲ್ಲಿ ಹಣವನ್ನು ವಸೂಲಿ ಮಾಡಿ ರೋಡ್ ಮಾಡುವುದಕ್ಕೆ ನಿಗದಿ ಮಾಡುತ್ತೇವೆಂದು ಹಿಂದೆ ಇಲ್ಲೇ ಒಂದು ಅಮೆಂಡ್‌ಮೆಂಟ್ ಆಯಿತು. ಅದು ಈಗ ಏನಾಗಿದೆ ? ಅದು ಯಾವ ಹಂತದಲ್ಲಿದೆ ? ಎಷ್ಟು ಹಣವನ್ನು ರಸ್ತೆಗಳಿಗೆ ಕೊಡುತ್ತಿದ್ದೀರಿ ? ಅದರಲ್ಲಿ ಎಷ್ಟು ಹಣವಿದೆ ? ಇದರ ಬಗ್ಗೆ ದಯಮಾಡಿ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕು.

ಡಾ: ಜೀವರಾಜ ಆಳ್ವ:– ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿರುವ ಟೌನ್‌ಹಾಲ್ ಕಟ್ಟಡವನ್ನು 1937ರಲ್ಲಿ ಸುಮಾರು 35 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿದರು. ಅದು ಅತ್ಯಂತ

ಸುಂದರವಾದಂಥ ಮತ್ತು ಆಕರ್ಷಕವಾದಂಥ ಕಟ್ಟಡ. ಅಲ್ಲಿರುವ ಸಭಾಗೃಹ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರತಕ್ಕ ಕಟ್ಟಡ. ಈ ಕಟ್ಟಡವನ್ನು ಸುಂದರೀಕರಣ ಮಾಡಬೇಕೆಂದು ಸ್ವಲ್ಪ ಹೆಚ್ಚಿನ ವ್ಯವಸ್ಥೆಯನ್ನು ಮಾಡಬೇಕೆಂದು ನಮ್ಮ ಸರ್ಕಾರವಿದ್ದಾಗ ಸೂಚನೆಯನ್ನು ಕೊಟ್ಟಿದ್ದೆವು, ತಾವು ಈಗ ಒಂದು ಕೋಟಿ ಖರ್ಚು ಮಾಡಿದ್ದೀರಂತೆ, ಆದರೆ ಆ ಖರ್ಚಿನ ಬಗ್ಗೆ ಏನಾಗಿದೆ ಎನ್ನುವುದನ್ನು ನಾನು ಪಿ.ಡಬ್ಲ್ಯು.ಡಿ. ಇಲಾಖೆಯವರಿಂದ ಬಯಸುವುದಿಲ್ಲ. ಒಂದು ಕೋಟಿಯಲ್ಲಿ ಎಷ್ಟು ನಿಜವಾಗಿ ಖರ್ಚಾಗಬೇಕಾಗಿತ್ತೋ ಅಷ್ಟನ್ನು ಖರ್ಚು ಮಾಡಿಲ್ಲ. ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಆ ಸಭಾಗೃಹ ಎಷ್ಟು ಕೆಟ್ಟದ್ದಾಗಿ ಆಗಿದೆ ಎಂದರೆ Most unaeasthetic work ಆಗಿದೆ. ಏಕೆಂದರೆ ಒಂದು ಸಾಂಸ್ಕೃತಿಕ ಭವನ, ಸಭಾಗೃಹವೆಂದು ಹೇಳುವಾಗ ಸ್ವಲ್ಪವಾದರೂ aesthetic ಇರಬೇಕಾಗುತ್ತದೆ. ನಾನು ನಿಮ್ಮ ಪಿ.ಡಬ್ಲ್ಯು.ಡಿ.ನಿಂದ ಎಲ್ಲವನ್ನೂ ಬಯಸುವುದಿಲ್ಲ. ತಮ್ಮ ಮೂಲಕ ಅವರಲ್ಲಿ ಕೋರಿಕೊಳ್ಳುವುದೇನೆಂದರೆ ಇದಕ್ಕೆ ಒಂದು ಸಲಹಾ ಸಮಿತಿಯನ್ನು ಮಾಡಿ ಇನ್ನೂ ಒಂದೆರಡು ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡಿದರೆ ಒಳ್ಳೆಯದಾಗುತ್ತದೆ, ಬೇಕಾದರೆ ನಮ್ಮನ್ನು ಕರೆಸಿದರೆ ನಾವು ಅದರ ಬಗ್ಗೆ ಹೇಳುತ್ತೇವೆ. ಇದು ಒಂದು ಸಾಂಸ್ಕೃತಿಕ ಚಟುವಟಿಕೆಗಳ ಸಭಾಗೃಹ, ಅದನ್ನು ಯಾವ ರೀತಿ ಮಾಡಿದ್ದಾರೆಂದರೆ ಬೇಕಾದರೆ ತಮಗೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಆ ceiling ಗೆ ಒಂದು ಕೋಟಿಯಲ್ಲಿ 10–15 ಲಕ್ಷ ರೂಪಾಯಿಗಳು ಸಹ ಖರ್ಚಾಗಿಲ್ಲ, ಬಹಳ ಅನ್ಯಾಯವಾಗಿದೆ, ಆ ಅನ್ಯಾಯದ ಬಗ್ಗೆ ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ. ಮುಂದೆ ಸಲಹಾ ಸಮಿತಿಯನ್ನು ಮಾಡಿ. ಮತ್ತು ಈಗ ತಾವು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಆದ್ದರಿಂದ ಅದಕ್ಕೆ 5 ಸಾವಿರ ರೂಪಾಯಿಗಳನ್ನು ಬಾಡಿಗೆಯನ್ನಾಗಿ ನಿಗದಿ ಮಾಡಬಹುದು. ಇವೆಲ್ಲ they are prestigeous institutions of the State. ನಗರಕ್ಕೆ ಸೌಂದರ್ಯವನ್ನು ಕೊಡತಕ್ಕ ಜಾಗ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ, ಅದಕ್ಕೆ ಒಂದು ಸಲಹಾ ಸಮಿತಿ ಮಾಡಿ ಇನ್ನೂ 2 – 3 ಲಕ್ಷ ರೂ.ಗಳನ್ನು ಖರ್ಚು ಮಾಡಬೇಕಾದ ಅವಶ್ಯಕತೆ ಇದೆ. ಮಾಡಿ. ತಾವು ಈಗೇನೋ ಎಲ್ಲಾ ಶಾಸನಾಸಭಾ ಸದಸ್ಯರಿಗೆ ರಸ್ತೆಗಳನ್ನು ಮಾಡಲು 20 ಲಕ್ಷನೋ 40 ಲಕ್ಷವೋ ಕೊಡುತ್ತೇವೆಂದು ಹೇಳಿದ್ದೀರಿ, ಅದೇ ರೀತಿಯಲ್ಲಿ ನಮಗೂ ಸಹ ಏನಾದರೂ ವಿಶೇಷವಾಗಿ ಅಲೋಕೇಷನ್ ಕೊಡುವುದಾದರೆ ಇಂಥ ಕಟ್ಟಡಕ್ಕೆ ಅದನ್ನು ಉಪಯೋಗಿಸಬೇಕೆಂದು ತಮ್ಮ ಮೂಲಕ ಕೇಳಿಕೊಂಡು ಈ ಒಂದು ಸಲಹಾ ಸಮಿತಿಯನ್ನು ದಯಮಾಡಿ ಮಾಡಬೇಕು ಅಥವಾ ಅದು ಆಗದಿದ್ದರೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು, ಇಲ್ಲೂ ಸಹ ಅದರ ಬಗ್ಗೆ ತಿಳಿದಿರುವ ಸದಸ್ಯರು ಇದ್ದಾರೆ, ಅವರನ್ನೂ ಕರೆದು ಮಾತನಾಡಿ ಚರ್ಚೆ ಮಾಡಿ ತೀರ್ಮಾನ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಮಾನ್ಯ ಅಧ್ಯಕ್ಷರೇ, ಮಳೆ ಹೆಚ್ಚು ಬೀಳತಕ್ಕ ಪ್ರದೇಶದಲ್ಲಿ ರಸ್ತೆಗಳು ಬಹಳ ಬೇಗ ಹಾಳಾಗುತ್ತವೆ. ಕಾರಣ ಚರಂಡಿಗಳ ವ್ಯವಸ್ಥೆ ಇಲ್ಲದ್ದು. ಚರಂಡಿಗಳಿಗೆ ಪ್ರತ್ಯೇಕವಾದ ಹಣವನ್ನೇನಾದರೂ ನೀವು ಕೊಡುತ್ತೀರಾ ? ಎರಡನೆಯದಾಗಿ ರಸ್ತೆಯ ಪಕ್ಕದಲ್ಲಿ ಮಡ್ ರಸ್ತೆ ಇದೆ. ಇದು ರಸ್ತೆಯಿಂದ ಅರ್ಧ ಅಡಿ ತಗ್ಗಿದೆ. ತಮಗೆ ಗೊತ್ತಿದೆ ಅನೇಕ ಸಂದರ್ಭಗಳಲ್ಲಿ ದ್ವಿಚಕ್ರವಾಹನಗಳು ಅಪಘಾತಕ್ಕೀಡಾಗಿ ಪ್ರಾಣಹಾನಿಯಾಗುತ್ತಿರುವುದರಿಂದ ಇದರ ಬಗ್ಗೆ ಕೂಡ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತು ನಮ್ಮ ತಾಲ್ಲೂಕಿನಲ್ಲಿ ರೋಡ್ ರೋಲರ್ಸ್ ವ್ಯವಸ್ಥೆ ಇಲ್ಲ. ಇರತಕ್ಕ ರೋಡ್ ರೋಲರ್ಸ್ ಬಹಳ ಹಳೆಯದು. ಅದನ್ನು ರಿಪೇರಿ ಮಾಡಿಸಬೇಕಾದರೆ 2–3 ತಿಂಗಳು ನಿಲ್ಲಿಸಬೇಕಾಗುತ್ತದೆ. ಆಗ ಕೆಲಸ ನಿಂತುಹೋಗುತ್ತದೆ. ಆದ್ದರಿಂದ ಹೊಸ ರೋಲರ್ ಒದಗಿಸಬೇಕು. ಮತ್ತೊಂದು ವಿಚಾರ ಎಂದರೆ ಕಟ್ಟಡ ಕಟ್ಟಿದ ಒಂದು ವರ್ಷದಲ್ಲೇ ಸೋರುತ್ತಿದೆ. ಇಂಥ ಸಂದರ್ಭದಲ್ಲಿ ಸಂಬಂಧಪಟ್ಟವರನ್ನು ಹೊಣೆಗಾರರನ್ನಾಗಿ ಮಾಡುತ್ತೀರಾ ? ಎನ್ನತಕ್ಕ ಮಾತನ್ನು ಕೇಳಬಯಸುತ್ತೇನೆ.

ಶ್ರೀ ಸಿ.ಎ. ಲಿಂಗಪ್ಪ:- ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಗಳ ಅಕ್ಕಪಕ್ಕಗಳಲ್ಲಿ ಇಂತಿಷ್ಟು ಅಂತರವನ್ನು ಬಿಟ್ಟು ಕಟ್ಟಡ ಅಥವಾ ಕಾಂಪೌಂಡ್ ಮಾಡಬೇಕೆಂದು ಒಂದು ನಿಯಮ ಇದೆ. ಇತ್ತೀಚಿನ ಒಂದು ದೊಡ್ಡ ದುರಂತ ಎಂದರೆ ಬೆಂಗಳೂರು – ಮೈಸೂರು ರಸ್ತೆಯಲ್ಲಿ ಅದರಲ್ಲೂ ರಾಮನಗರದವರೆಗೆ ಯಾವ ಅಂತರವನ್ನೂ ಅವರು ಕಾಪಾಡುತ್ತಿಲ್ಲ. ಇದನ್ನು ಕೇಳುವುದಕ್ಕೆ ಅಧಿಕಾರಿಗಳು ಹೋದಾಗ ಅವರನ್ನೇ ಬೆದರಿಸಿ ರಸ್ತೆಯ ಪಕ್ಕದಲ್ಲಿ ಸುಮಾರು 30 – 35 ಅಡಿಗಳನ್ನು ಮಾತ್ರ ಬಿಟ್ಟು ಅನೇಕ ಪ್ರಭಾವಿ ವ್ಯಕ್ತಿಗಳು ಕಾಂಪೌಂಡ್ ಮತ್ತು ಕಟ್ಟಡಗಳನ್ನು ಕಟ್ಟಿಕೊಂಡಿದ್ದಾರೆ. ಇದರ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದು ಅದು ದುರದೃಷ್ಟದಿಂದ ಅನ್‌ಸ್ಟಾರ್ಡ್ ಅಗಿ ಈ ಸಭೆಯ ಗಮನಕ್ಕೆ ಬರಲಿಲ್ಲ.

ಇನ್ನು ಎರಡನೆಯದಾಗಿ, ನನ್ನ ತಾಲ್ಲೂಕಿನಲ್ಲಿ ಒಂದು ದೊಡ್ಡ ಅವಾಂತರ ಎಂದರೆ ಗ್ರಾನೈಟ್ ಸಾಗಿಸುವ ಲಾರಿಗಳದ್ದು. ನಮ್ಮ ರಸ್ತೆಗಳು ಮತ್ತು ಬ್ರಿಡ್ಜ್‌ಗಳನ್ನು ಡಿಸೈನ್ ಮಾಡಿ ಕಟ್ಟಿರತಕ್ಕದ್ದು ಕೇವಲ 15–16 ಟನ್‌ವರೆಗೆ. ಆದರೆ ಈ ಬ್ರಿಡ್ಜ್‌ಗಳ ಮೇಲೆ ಸುಮಾರು 20 – 26 ಟನ್ ತೂಕವಿರುವ ಲಾರಿಗಳು ಓಡಾಡುತ್ತಿವೆ. ಇದರಿಂದಾಗಿ ಕನಕಪುರದಿಂದ ರಾಮನಗರ, ರಾಮನಗರದಿಂದ ಮಾಗಡಿ, ಅಲ್ಲಿಂದ ಕುಣಿಗಲ್‌ವರೆಗೆ ರಸ್ತೆ ಬಹಳ ಹದಗೆಟ್ಟಿದೆ. ಇದರ ಬಗ್ಗೆ ಗಮನಹರಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಖುದ್ದಾಗಿ ಭೇಟಿ ಮಾಡಿ ಪ್ರಾರ್ಥಿಸಿಕೊಂಡಿದ್ದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಇವತ್ತು ಇಲ್ಲಿ ಒಂದು ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಮಾನ್ಯ ಅಧ್ಯಕ್ಷರೆ, ನಮ್ಮ ಲೋಕೋಪಯೋಗಿ ಇಲಾಖೆಯವರು ಯಾವ ರಸ್ತೆ ಮಾಡುತ್ತಾರೆ ಯಾವ ಕಟ್ಟಡ ಕಟ್ಟುತ್ತಾರೆಂಬ ಬಗ್ಗೆ ನಾನು ಮಾತನಾಡುತ್ತಿಲ್ಲ, ಅಥವಾ ತಮ್ಮ ಇಲಾಖೆಗೆ ಸೀಮಿತವಾಗಿ ಏನೂ ನಾನು ಮಾತನಾಡುತ್ತಿಲ್ಲ. ಮಾನ್ಯ ಜಾಲಪ್ಪನವರು ಒಂದು ಪ್ರಮುಖವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಈ ನಟೋರಿಯಸ್ ಮಾರ್ಚಿ 31ನೇ ತಾರೀಖಿನ ಬಿಲ್ಸ್ ಎಂದು ಏನು ಹೇಳುತ್ತಾರೆ. ಇದು ಕೇವಲ ನಿಮ್ಮ ಇಲಾಖೆಗೆ ಮಾತ್ರವಲ್ಲ, ಎಲ್ಲಾ ಇಲಾಖೆಗಳ ಬಗ್ಗೆಯೂ ತಾವು ಗಮನಹರಿಸಬೇಕು. We should come to some kind of discipline now. ಈ ಬಜೆಟ್ ಅಧಿವೇಶನಕ್ಕೆ ಮೊದಲನೇ ದಿನಕ್ಕೆ ನಾನು ಬಹಿಷ್ಕಾರ ಹಾಕಿದ್ದೆ. ಅದಕ್ಕೆ ಕಾರಣ ಇಷ್ಟೇ, ಅದರ ಹಿಂದಿನ ದಿವಸ ನನಗೆ ವರದಿ ಬಂದಿತ್ತು. ಗುಲ್ಬರ್ಗಾ ಜಿಲ್ಲೆಯ ಶಹಪುರದಲ್ಲಿ 5 – 6 ಲಾಡ್ಜ್‌ಗಳಲ್ಲಿ 31ನೇ ತಾರೀಖಿನ ಬಿಲ್‌ಗಳನ್ನು ಬರೆಯುತ್ತಾ ಕೂತಿದ್ದಾರೆ. ಇದು ಎಲ್ಲ ಇಲಾಖೆಗಳಲ್ಲೂ ನಡೆಯುತ್ತಿದೆ. 31ನೇ ತಾರೀಖಿನ ಬಿಲ್ಸ್ ಎಂದು ಏನಿದೆ ಇದನ್ನು ಕೊನೆಗೊಳಿಸುವುದಕ್ಕೆ ನಾವು ಏನಾದರೂ ಕ್ರಮವನ್ನು ತೆಗೆದುಕೊಳ್ಳಲೇಬೇಕು. ಇದಕ್ಕೆ ನನ್ನ ಸಲಹೆ ಇಷ್ಟೆ, 3 ತಿಂಗಳಲ್ಲಿ ಇಷ್ಟು ಕೆಲಸ ಮಾಡಿ ಮುಗಿಸಿರಬೇಕು. 3 ತಿಂಗಳಿಗೆ ನಾವು ಇಷ್ಟೇ ಹಣವನ್ನು ಬಿಡುಗಡೆ ಮಾಡತಕ್ಕದ್ದು ಎಂದು ನಿಗದಿ ಮಾಡಿ ಪ್ರತಿ 3 ತಿಂಗಳಿಗೆ ರಿವ್ಯೂ ಮಾಡಿ ಏನು ಕೆಲಸವಾಗಿದೆ ಎಂಬುದನ್ನು ನೋಡಿ ನಂತರ ಹಣವನ್ನು ಬಿಡುಗಡೆ ಮಾಡುವಂಥ ವ್ಯವಸ್ಥೆಗೆ ನಾವು ಬರೋಣವೇ ? ಅಥವಾ ಈ ಅಧಿಕಾರಿಗಳಿಗೆ 31ನೇ ತಾರೀಖಿನ ಬಿಲ್ಸ್ ಎಂಬ ಸುಗ್ಗಿಯನ್ನೇ ಬಿಟ್ಟುಕೊಂಡು ಹೋಗೋಣವೇ ಎಂಬುದನ್ನು ಯೋಚನೆ ಮಾಡಬೇಕು.

ಶ್ರೀ ಎ.ಕೆ. ಅನಂತಕೃಷ್ಣ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನನ್ನ ಕೆಲವು ಸಲಹೆಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೊರಟಿದ್ದರು. ಆದರೆ ಅದನ್ನು ಮುಂದುವರಿಸಲಿಲ್ಲ. ಡಾ: ನಂಜಪ್ಪನವರು ಏನೋ ಒಂದು ವಿಷಯವನ್ನು ಹೇಳಿದ ಕಾರಣ. ಅದನ್ನು ನಾನು ಅವರ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ನಾನು ಬೆಂಗಳೂರು ನಗರದ ಬಗ್ಗೆ ಮಾತನಾಡುತ್ತೇನೆ. ಇಲ್ಲಿ ಲೋಕೋಪಯೋಗಿ ಇಲಾಖೆಯ ಹಳೇಕಾಲದ ಅಭಿಪ್ರಾಯಗಳು ಏನಿವೆ ಅವು ಆಧುನಿಕವಾಗಬೇಕು.

ಬದಲಾವಣೆಯಾಗುತ್ತಿರುವ ನಗರದಲ್ಲಿ ಸರ್ಕಾರದ ನೀತಿಯ ಬದಲಾವಣೆ ಆಗಬೇಕೆಂಬುದಕ್ಕೆ ಒಂದೇ ಒಂದು ಸಲಹೆ ಮಾಡಬಯಸುತ್ತೇನೆ. ಈಗಾಗಲೇ ಇದನ್ನು ಮಾನ್ಯ ಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ. ಈ ಬೆಂಗಳೂರು ನಗರದ ಅದರಲ್ಲೂ ನನ್ನ ಕ್ಷೇತ್ರದಲ್ಲಿ ಈ ವಿಧಾನಸೌಧವೂ ಸೇರಿದಂತೆ ಅನೇಕ ಸರ್ಕಾರೀ ಕಟ್ಟಡಗಳು ಇವೆ. ಇದರಲ್ಲಿ ಬಹಳ ಕಟ್ಟಡಗಳು ಪಾಳುಬಿದ್ದಿವೆ. ಅಂಥ ಕಟ್ಟಡಗಳು ನಗರದ ಕಮರ್ಷಿಯಲ್ ಸ್ಟ್ರೀಟ್ ಸೆಂಟರ್ಸ್‌ನಲ್ಲಿವೆ. ಖಾಲಿ ನಿವೇಶನಗಳು ಬಹಳ ಸವಿಸ್ತಾರವಾಗಿವೆ. ಸವಿಸ್ತಾರವಾದ ಜಾಗಗಳು ಇವೆ, ಖಾಲಿ ನಿವೇಶನಗಳೂ ಕೂಡ ಇವೆ. ಅಂಥ ನಿವೇಶನಗಳಲ್ಲಿ ನಾವು ಹಣವನ್ನು ಖರ್ಚು ಮಾಡಿ ಕಛೇರಿ ಕಟ್ಟಡ ಕಟ್ಟಬೇಕೆನ್ನುವ ಭಾವನೆ ಇದ್ದರೆ ಇನ್ನು 100 ವರ್ಷಗಳಿಗೆ ಎಷ್ಟು ಬೇಕೋ ಅಷ್ಟಕ್ಕೆ ಅವಕಾಶವನ್ನು ಮಾಡಿಕೊಂಡು ಅಲ್ಲಿ ಕಟ್ಟಡಗಳನ್ನು ಸರ್ಕಾರದ ಖರ್ಚಿನಲ್ಲಿ ಕಟ್ಟತಕ್ಕಂಥ ಸನ್ನಿವೇಶಗಳಿವೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತಿದ್ದೇವೆ. ಕೇವಲ ನಮ್ಮ ಅಭಿಪ್ರಾಯ ಬದಲಾವಣೆಯಾಗಬೇಕು. ಉದಾಹರಣೆಗೆ ಶಿವಾಜಿನಗರದ ಪೋಲೀಸ್ ಸ್ಟೇಷನ್ ಇದೆ, ಪಕ್ಕದಲ್ಲಿಯೇ ಶಾಲೆ ಇದೆ, ಬೌರಿಂಗ್ ಆಸ್ಪತ್ರೆ ಇದೆ. ಅದರ ಉಪಯೋಗಕ್ಕೆ ಯಾವ ರೀತಿಯಾದಂಥ ಅಡಚಣೆಯೂ ಇಲ್ಲದೆ ಇನ್ನು 100 ವರ್ಷಕ್ಕೆ ಅನುಕೂಲವಾಗುವಂಥ ರೀತಿಯಲ್ಲಿ ಕಟ್ಟಡಗಳನ್ನು ಪುನರ್ನಿರ್ಮಾಣ ಮಾಡಲಿಕ್ಕೆ ಅವಕಾಶವಿದೆ. ಅದಕ್ಕಾಗಿ ನಮ್ಮ ಆರ್ಕಿಟೆಕ್ಚರ್ ಕೆಲಸ ಮಾಡಬೇಕು, ಟೌನ್‌ಪ್ಲಾನಿಂಗ್ ಡೈರೆಕ್ಟರ್ ಕೆಲಸ ಮಾಡಬೇಕು, ಪಿ.ಡಬ್ಲ್ಯು.ಡಿ. ಯವರು ಕೂಡ ಮನಸ್ಸು ಮಾಡಬೇಕು, ಹಾಗೆಯೇ ನಮ್ಮ ರಾಜ್ಯ ಸರ್ಕಾರದವರೂ ಕೂಡ ಮನಸ್ಸು ಮಾಡಬೇಕು. ಆ ಕೆಲಸವನ್ನು ಮಾಡಿದರೆ On self financing scheme much can be achieved. ಇದರಿಂದ ಅಂಡರ್‌ಗ್ರೌಂಡ್ ಕಾರ್ ಪಾರ್ಕಿಂಗ್‌ಗೆ ಸಾಧ್ಯವಾಗುತ್ತದೆ, ಟ್ರಾಫಿಕ್ ಕನ್‌ಜಂಕ್ಷನ್ ಕಡಿಮೆ ಮಾಡಲು ಸಾಧ್ಯವಾಗುತ್ತದೆ. ಹೀಗೆ ಎಲ್ಲದಕ್ಕೂ ಉಪಯೋಗ ಆಗುತ್ತದೆಂದು ನಾನು ಹೇಳುತ್ತಿದ್ದೇನೆ. ಅದನ್ನು ತೀವ್ರವಾಗಿ ಗಮನಿಸಬೇಕು. ಮಾನ್ಯ ಆಳ್ವಾರವರು ಹೇಳುವುದನ್ನು ನಾನು ಪದೇಪದೇ ಹೇಳುತ್ತಿದ್ದೇನೆ; ಈ ವಿಭಾಗದಲ್ಲಿ ಈ ಸಿಟಿ ಸೆಂಟರ್ಸ್ ಎಂದು ಏನು ಹೇಳುತ್ತೇವೆ, ಕಲ್ಚರಲ್ ಸೆಂಟ್ರಲ್ಸ್ ಎಂದು ಏನು ಹೇಳುತ್ತೇವೆ ಅದರ ಆಕ್ಟಿವಿಟೀಸ್‌ಗೆ, ಕೂಡ ಉಪಯೋಗ ಮಾಡಲು ಸಾಧ್ಯವಿರುತ್ತದೆ. ಪುಟ್ಟಣ್ಣಶೆಟ್ಟಿ ಟೌನ್‌ಹಾಲನ್ನು ಬಿಟ್ಟು, ರವೀಂದ್ರ ಕಲಾಕ್ಷೇತ್ರವನ್ನು ಬಿಟ್ಟರೆ, ಸರ್ಕಾರದ ಕಡೆಯಿಂದ ಯಾವುದೇ ಒಂದು ಕಟ್ಟಡವಿಲ್ಲ. ಅಂಥ ಕಟ್ಟಡಗಳನ್ನು ಕಟ್ಟಲೂ ಅನುಕೂಲವಾಗುತ್ತದೆ. ಅದು ಸರ್ಕಾರದ ಖರ್ಚಿನಿಂದ ಕಟ್ಟಲು ಸಾಧ್ಯವಾಗುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಅತ್ತ ಕಡೆ ದಯವಿಟ್ಟು ಮಾನ್ಯ ಸಚಿವರು ಗಮನ ಕೊಡಬೇಕೆಂದು ನಾನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಿ.ಎಂ. ಲಿಂಗಪ್ಪನವರು ಏನು ಹೇಳಿದ್ದಾರೆ. ಅದಕ್ಕೆ ನಾನು ಎರಡು ವಿಚಾರಗಳನ್ನು ಧ್ವನಿಗೂಡಿಸುತ್ತೇನೆ. ಬಹಳಷ್ಟು ಕಲ್‌ವರ್ಟ್ಸ್ ಮತ್ತು ನಾವು ಕಟ್ಟಿರತಕ್ಕಂಥ ಸೇತುವೆಗಳಿಗೆ 20 – 30 – 50 ಟನ್‌ಗಳಷ್ಟು ಭಾರವನ್ನು ತೆಗೆದುಕೊಳ್ಳತಕ್ಕಂಥ ಶಕ್ತಿ ಇಲ್ಲ. ಈ ಆರ್‌ಟಿಓಗಳು ಸರಿಯಾಗಿ ಅದನ್ನು ಏನು ಇನ್‌ಸ್ಪೆಕ್ಟ್ ಮಾಡಬೇಕು, ಅದು ಕೂಡ ಸರಿಯಾಗಿ ನಡೆಯುತ್ತಿಲ್ಲ. ಅದರ ಕಡೆ ತಾವು ಗಮನ ಕೊಡಬೇಕು. ಮತ್ತೆ ಮಾರ್ಚ್‌ನಲ್ಲಿ ಪರ್ಚೇಸ್ ಮಾಡತಕ್ಕಂಥ ಸುಣ್ಣ ಬಣ್ಣ ಹೊಡೆಯತಕ್ಕಂಥದ್ದರ ಬಗ್ಗೆ ಪ್ರೊಫೆಸರ್ ನಂಜುಂಡಸ್ವಾಮಿಯವರು ಏನು ಹೇಳಿದ್ದಾರೆ ಇದು ಬಹಳ ಮಹತ್ವದ ವಿಚಾರ. ಆಕ್ಚುಯಲಿ ನಾನು ಎಕ್ಸ್‌ಪೆಕ್ಟ್ ಮಾಡಿದ್ದೆ; ತಾವು ಇದನ್ನು ಏನಾದರೂ ಮಾಡಿ ಕೊನೆಗಾಣಿಸಲಿಕ್ಕೆ ಆಕ್ಚುಯಲಿ ಫೈನಾನ್ಸ್ ಮತ್ತು ಕೋ ಆಪರೇಷನ್ ಡಿಪಾರ್ಟ್‌ಮೆಂಟ್ ಬಹಳ ಮುಖ್ಯ. ನಿಮಗೆ ಆಕ್ಚುಯಲಿ ಎಷ್ಟು ಖರ್ಚಾಗುತ್ತದೆ. ಯಾವ ತಿಂಗಳಲ್ಲಿ ಎಷ್ಟು ಖರ್ಚು ಬರುತ್ತದೆಂದು ತಿಳಿದಿದ್ದರೆ ಇದನ್ನು ಮಾಡಲಿಕ್ಕೆ ಸುಲಭವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ತಾವು ಅದರ ಬಗ್ಗೆ ವಿಚಾರ ಮಾಡಬೇಕು. ನಾನು ಎರಡು ಸಲಹೆಗಳನ್ನು

ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ. ಒಂದು ಈ ಆಕ್ಸಿಡೆಂಟ್ ಪ್ರಿವೆನ್‌ಷನ್ ಬಗ್ಗೆ; ಪಿ.ಡಬ್ಲ್ಯು.ಡಿ.ಯಿಂದ ಅಂಥ ಒಂದು ಕೆಲಸ ಸರಿಯಾಗಿ ಆಗುತ್ತಿಲ್ಲ. ಈಗ ತಮಗೆ ಗೊತ್ತಿರುವ ಹಾಗೆ ಎಲ್ಲ ಜಿಲ್ಲೆಗಳಲ್ಲೂ ಎಸ್.ಪಿ.ಯವರ ಅಧ್ಯಕ್ಷತೆಯಲ್ಲಿ ರೋಡ್ ಸೇಫ್ಟಿ ಕಮಿಟಿ ಎಂದು ಇದೆ. ಅದಕ್ಕೆ ಡಿ.ಸಿ., ನಮ್ಮ ಪಿ.ಡಬ್ಲ್ಯು.ಡಿ. ಎಕ್ಸಿಕ್ಯುಟೀವ್ ಇಂಜಿನೀಯರ್ ಮೆಂಬರ್ಸ್ ಇದ್ದಾರೆ. ನಾನು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಇದ್ದಾಗ ಆಕ್ಟುಯಲಿ ಇದು ಟ್ರಾನ್ಸ್‌ಪೋರ್ಟ್ ಮೋಟರ್ ವೆಹಿಕಲ್ ಆಕ್ಟ್ ಕೆಳಗಡೆ ಟ್ರಾನ್ಸ್‌ಪೋರ್ಟ್ ಕಮಿಟಿಯನ್ನು ನಾವು ಮಾಡಿರತಕ್ಕಂಥದ್ದು. ನಾನು ಎಲ್ಲ ಕಡೆಗಳಲ್ಲೂ ಹೋಗಿ ರೆವ್ಯೂ ಮಾಡುತ್ತಿದ್ದೆ. ಎಲ್ಲೂ ಸಹಿತ ರಸ್ತೆಗಳಲ್ಲಿ ಸಿಗ್ನಲ್ಸ್ ಕೂಡ ಹಾಕಿಲ್ಲ ಮತ್ತು ಅನೇಕ ಕಡೆಗಳಲ್ಲಿ ರೋಡ್ ಹಂಪ್ಸ್, ಏನೋ ಇದೆ. It is a horrible experience. ಇದು 40 ವರ್ಷ 50 ವರ್ಷ ವಯಸ್ಸಾಗಿರುವವರು ಪ್ರಯಾಣ ಮಾಡುವುದಕ್ಕೆ ಬಹಳ ದೊಡ್ಡ ಪ್ರಾಬ್ಲಮ್ ಆಗಿದೆ. ಮತ್ತೆ ನಿಮಗೆ ಒಂದು ಉದಾಹರಣೆಯನ್ನು ಸ್ಪೆಸಿಫಿಕ್ ಆಗಿ ಕೊಡಬೇಕಾದರೆ, ಮಡಿಕೇರಿಯಿಂದ ನಾವು ಮಂಗಳೂರಿಗೆ ಹೋಗತಕ್ಕಂಥ ರೋಡ್‌ನಲ್ಲಿ ಎಲ್ಲೂ ಸಹಿತ ಒಂದು ಸಿಗ್ನಲ್ ಸಹಿತ ಇಲ್ಲ. ನಾನು ಇತ್ತೀಚೆಗೆ ಪ್ರಯಾಣ ಮಾಡಿದಾಗ ನೋಡಿದೆ. ಅದಕ್ಕೆ ನಾನು ಸಲಹೆ ಮಾಡುವುದೇನೆಂದರೆ, ದಯವಿಟ್ಟು ತಾವು ಸೀನಿಯರ್ ಮಿನಿಸ್ಟರ್ ಆದ ಕಾರಣ ತಾವು ಪ್ರವಾಸ ಹೋದಾಗ ಎಲ್ಲ ಜಿಲ್ಲೆಗಳಲ್ಲೂ ಸಹಿತ ಈ ರೋಡ್ ಸೇಫ್ಟಿ ಕಮಿಟಿಯನ್ನು ಕರೆಯಿರಿ. ಎಸ್.ಪಿ. ಡಿ.ಸಿ. ಪಿಡಬ್ಲುಡಿ ಎಕ್ಸಿಕ್ಯುಟೀವ್ ಇಂಜಿನೀಯರ್ ಸಹ ಬರುತ್ತಾರೆ, ಅವರಿಗೂ 2 – 3 ಲಕ್ಷ ರೂಪಾಯಿಗಳನ್ನಾದರೂ ಕೊಡಿ. ಕೊನೆಪಕ್ಷ ಸಿಗ್ನಲ್ಸ್ ಹಾಕಲಿಕ್ಕೆ; ಈ ರೋಡ್ ರಾಮ್ಲಿಂಗ್ಸ್‌ನ್ನು ಹಾಕಲಿಕ್ಕೆ ಅನುಕೂಲವಾಗುತ್ತದೆನ್ನತಕ್ಕಂಥದ್ದು ನನ್ನದು ಒಂದು ಸಲಹೆ. ಎರಡನೆಯ ಸಲಹೆ ಏನೆಂದರೆ ಈಗ ನಮ್ಮ ಡಿಸೈನ್ಸ್ ಎಲ್ಲ ಏನಾಗಿದೆ ಎಂದರೆ ಯಾವುದಾದರೂ ಒಂದು ಊರಲ್ಲಿ ಮಿಡಲ್‌ಸ್ಕೂಲ್‌ನ್ನು ಕಟ್ಟಿ ಎಂದರೆ ನಮ್ಮ ತಾತನ ಕಾಲದ ಬಿಲ್ಡಿಂಗ್ ಚೆನ್ನಾಗಿದೆ ಸ್ವಾಮಿ; ನಿಮಗೆ ಹೇಳಬೇಕೆಂದರೆ ಆಂಧ್ರ ಪ್ರದೇಶದಲ್ಲಿ ಬಸ್‌ಸ್ಟಾಂಡ್‌ಗಳನ್ನು ಕಟ್ಟಿದ್ದಾರೆ, ಅವು ಎಷ್ಟು ಸುಂದರವಾಗಿವೆ ಹೋಗಿ ನೋಡಿ. ನಮ್ಮಲ್ಲಿ ಇಷ್ಟೊಂದು ಆರ್ಕಿಟೆಕ್ಟರ್ಸ್ ಇದ್ದಾರೆ, ಇಷ್ಟೊಂದು ಒಳ್ಳೆ ಒಳ್ಳೆಯ ಇಂಜಿನೀಯರ್ಸ್ ಇದ್ದಾರೆ ಅದು ಏತಕ್ಕೆ ಈ ಡಿಸೈನ್ಸ್‌ಗಳನ್ನು ಬದಲಾವಣೆ ಮಾಡಲಿಲ್ಲವೋ ನನಗಂತೂ ಅನೇಕ ಸಂದರ್ಭಗಳಲ್ಲಿ ಅರ್ಥವಾಗುವುದಿಲ್ಲ. ಅದೇ ತರಹ ಕಟ್ಟುತ್ತಾರೆ. ನಮ್ಮ ಗುಂಡುರಾಯರ ಕಾಲದಲ್ಲಿ ಮಿನಿ ವಿಧಾನಸೌಧ ಕಟ್ಟತಕ್ಕಂಥದ್ದನ್ನು ಪ್ರಾರಂಭ ಮಾಡಿದ್ದನ್ನು ಬಿಟ್ಟರೆ ಇನ್ನು ಎಲ್ಲಿಯೂ ಕೂಡ ನಮ್ಮ ಟೈಪ್ ಡಿಸೈನ್ ಚೇಂಜ್ ಆಗಲಿಲ್ಲ.

ಅದಕ್ಕಾಗಿ ನಾನು ತಮಗೆ ಸಲಹೆ ಮಾಡುತ್ತೇನೆ, ನಮ್ಮ ಇಂಜಿನಿಯರ್‌ಗಳಲ್ಲಿ ಬಹಳ ಕಾಂಪಿಟೆಂಟ್ ಪರ್ಸನ್ಸ್ ಇದ್ದಾರೆ. ದಯವಿಟ್ಟು ಆ ಡಿಸೈನ್, ಟೈಪ್ ಡಿಸೈನ್ ಮಾಡತಕ್ಕ ವಿಂಗ್ ಏನಿದೆ ಅದನ್ನು ಸ್ಟ್ರೆಂತನ್ ಮಾಡಬೇಕು; ಮತ್ತು ಅವರನ್ನು ಬೇರೆ ರಾಜ್ಯಗಳಿಗೆ, ವಿದೇಶಗಳಿಗೆ ಕಳುಹಿಸಿ ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಅವರು ತಿಳಿದುಕೊಳ್ಳುವಂತಾಗಬೇಕು. ಇದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ಮತ್ತೊಂದು ಮುಖ್ಯವಾದ ಅಂಶವೆಂದರೆ, ನಾವು ಕಟ್ಟತಕ್ಕ ಪ್ರತಿಯೊಂದು ಬಿಲ್ಡಿಂಗ್‌ನಲ್ಲೂ ಸಹ ಫೈರ್ ಮತ್ತು ಕಾರ್ ಪಾರ್ಕಿಂಗ್ ಕಡೆ ಗಮನ ಕೊಡಬೇಕು. ಬಾಂಬ್ ಸ್ಫೋಟದ ವಿಚಾರ ಕೇಳಿದಾಗ ನಮ್ಮ ಎದೆ ನಡುಗುತ್ತದೆ. ಮೊನ್ನೆ ಬಾಂಬೆಯಲ್ಲಿ ಆಯಿತು, ಇವತ್ತು ಕಲ್ಕತ್ತದಲ್ಲಿ ಆಗಿದೆ. ಆ ದೃಷ್ಟಿ ಇಟ್ಟುಕೊಂಡು ಹೈರೈಸ್ ಬಿಲ್ಡಿಂಗ್‌ಗಳನ್ನು ಏನು ರೈಸ್ ಮಾಡುತ್ತಿದ್ದಾರೆ ಇದರ ಬಗ್ಗೆ ಲೋಕೋಪಯೋಗಿ ಇಲಾಖೆಯವರು ವಿಶೇಷ ಗಮನ ಕೊಡಬೇಕು. ಇದಕ್ಕೆ ತಾವೇನಾದರೂ ಕಾನೂನು ಮಾಡಬೇಕಾಗುತ್ತದೆ. ಇದರ ಕಡೆ ತಾವು ಗಮನ ಕೊಡುತ್ತೀರೆಂದು ನಾನು ಭಾವಿಸುತ್ತೇನೆ.

ಶ್ರೀಮತಿ ಮೋಟಮ್ಮ:– ಮಾನ್ಯ ಅಧ್ಯಕ್ಷರೆ, ಮೊನ್ನೆ ನಾನು ಮಾತನಾಡುವಾಗ ಎರಡು

ಸಲಹೆಗಳನ್ನು ಕೊಟ್ಟಿದ್ದೆ. ಇಂಜಿನಿಯರಿಂಗ್ ಇಲಾಖೆ ಅಂದರೆ ಜನರಲ್ಲಿ ಏನು ಭಾವನೆ ಬಂದಿದೆ ಎಂದರೆ ಪರ್ಸೆಂಟೇಜ್ ಹೊಡೆಯುತ್ತಾರೆ, ಕಂಟ್ರಾಕ್ಟರ್ ಬೇಗ ಬೇಗ ಕಾಂಟ್ರಾಕ್ಟ್ ಕೆಲಸ ಮಾಡಿ ಹಣ ಸಂಪಾದನೆ ಮಾಡಿ ದೊಡ್ಡವರಾಗುತ್ತಾರೆ. ಶ್ರೀಮಂತರಾಗುತ್ತಾರೆ ಎಂದು. ಈ ಭಾವನೆಯನ್ನು ಜನರಿಂದ ದೂರ ಮಾಡಬೇಕೆಂದರೆ ಮೊದಲನೆಯದಾಗಿ ಇಂಜಿನಿಯರ್‌ಗಳಿಗೆ ಅವಾರ್ಡ್ ಕೊಡಿ. ಆ ರೀತಿ ಎನ್‌ಕರೇಜ್ ಮಾಡಿದರೆ ಪರ್ಸೆಂಟೇಜ್ ಹಾವಳಿ ತಪ್ಪಿಸುವುದಕ್ಕೆ ಸಾಧ್ಯವೆಂದು ಹೇಳಿದ್ದೆ. ಅದನ್ನು ಮಂತ್ರಿಗಳು ಗಮನಿಸಿದರೋ ಅಥವಾ ಇಲ್ಲವೋ ಗೊತ್ತಾಗಲಿಲ್ಲ. ಆ ಬಗ್ಗೆ ತಮ್ಮ ಉತ್ತರದಲ್ಲಿ ಏನೂ ಹೇಳಿಲ್ಲ. ಎರಡನೆಯದಾಗಿ, ವರ್ಕ್ ಗ್ಯಾರಂಟಿ ಫಿಕ್ಸ್ ಮಾಡಬೇಕಾಗುತ್ತದೆ. ಸ್ಕ್ವಾಡ್ ಬಗ್ಗೆ ಮಾತನಾಡಿ ಅದರಲ್ಲಿ ನಂಬಿಕೆ ಇಲ್ಲವೆಂಬ ಮಾತನ್ನು ಹೇಳಿದರು. ಏಕೆಂದರೆ ಅವರೂ ಸಹ ಇಂಜಿನಿಯರ್‌ಗಳಾಗಿರುತ್ತಾರೆ, ಅವರು ಎಷ್ಟರಮಟ್ಟಿಗೆ ವಿಶ್ವಾಸದಿಂದ ಕೆಲಸ ಮಾಡಬಹುದೆಂದು ಹೇಳಿದರು. ಅದಕ್ಕೆ ನಾನು ಏನು ಹೇಳಿದೆ ಎಂದರೆ ಯಾರೇ ಕಂಟ್ರಾಕ್ಟರಿಗೆ ಒಂದು ಕೆಲಸ ವಹಿಸಿದರೆ ಅವರಿಗೆ ಕೆಲಸದ ಬಗ್ಗೆ, ಇಷ್ಟು ವರ್ಷ ಬಾಳಿಕೆ ಬರಬೇಕೆಂದು ಗ್ಯಾರಂಟಿ ಪೀರಿಯಡ್ ಅನ್ನು ನಿಗದಿ ಮಾಡಬೇಕು. ಬಿಲ್ಡಿಂಗ್ ಕಟ್ಟಿದರೆ ಇಷ್ಟು ವರ್ಷ ಬಾಳಿಕೆ ಬರಬೇಕು, ಅಸ್ಫಾಲ್ಟ್ ಮಾಡಿದರೂ ಸಹ ಅದು ಇಷ್ಟು ವರ್ಷ ಬಾಳಿಕೆ ಬರಬೇಕು; ಮಲೆನಾಡಿನಲ್ಲಿ ಆಗಿರಬಹುದು, ಬಯಲುಸೀಮೆಯಲ್ಲಿ ಆಗಿರಬಹುದು. ಜಲ್ಲಿ ಹಾಕಿದ್ದು ಕೂಡ ಇಷ್ಟು ವರ್ಷ ಇರಬೇಕೆಂಬ ಗ್ಯಾರಂಟಿ ಪೀರಿಯಡ್‌ನ್ನು ಫಿಕ್ಸ್ ಮಾಡಬೇಕು. ಮಧ್ಯದಲ್ಲಿ ಕೊಲ್ಯಾಪ್ಸ್ ಆದರೆ ಆ ಜವಾಬ್ದಾರಿಯನ್ನು ಸಂಬಂಧಪಟ್ಟ ಕಂಟ್ರಾಕ್ಟರಿಗೆ ಫಿಕ್ಸ್ ಮಾಡುವುದರ ಜೊತೆಗೆ ಸೂಪರ್‌ವಿಷನ್ ಮಾಡಿದ ಇಂಜಿನಿಯರ್‌ಗಳಿಗೂ ಫಿಕ್ಸ್ ಮಾಡಿದರೆ ಇಷ್ಟು ಸಬ್–ಸ್ಟ್ಯಾಂಡರ್ಡ್ ವರ್ಕ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಧ್ಯತೆ ಇದೆ; ಮತ್ತು ಜನರಲ್ಲಿ ಕೂಡ ನಂಬಿಕೆ ಬರುತ್ತದೆಂದು ಹೇಳಿದ್ದೆ. ಅದನ್ನು ಮಂತ್ರಿಗಳು ಪ್ರಸ್ತಾಪ ಮಾಡಲಿಲ್ಲ. ನಾನು ಕಿರಿಯಳಾಗಿ ಸಲಹೆ ಕೊಟ್ಟೆ ಎಂದು ಆ ಬಗ್ಗೆ ಗಮನ ಹರಿಸಲಿಲ್ಲವೋ ಏನೋ ಎಂದು ನನಗನ್ನಿಸುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಅಧ್ಯಕ್ಷರೇ ಆನ್ಯುಯಲ್ ಗ್ರಾಂಟ್ಸ್‌ನ್ನು ಜಿಲ್ಲಾ ಪರಿಷತ್ತಿನಲ್ಲಿ ಮತ್ತು ಸರ್ಕಾರದಲ್ಲಿ ಕೊಡುತ್ತಾರೆ. ಅದನ್ನು ಲ್ಯಾಂಡ್ ಆರ್ಮಿಯವರಿಗೆ ಕೊಟ್ಟರೆ ಮಾರ್ಚ್ 31ಕ್ಕೆ ಕಡೇ ದಿವಸ ಆಗುವುದಿಲ್ಲ. ಅಲ್ಲಿ ಅವರಿಗೆ ಅಡ್ವಾನ್ಸ್ ಆಗಿ ಪೇಮೆಂಟ್ ಮಾಡುತ್ತಾರೆ. ಲ್ಯಾಂಡ್ ಆರ್ಮಿಗೆ ಏನಾದರೂ ವರ್ಕ್ ಎಂಟ್ರಸ್ಟ್ ಆದರೆ ಮೊದಲೇ ಹಣ ಕೊಡುತ್ತಿದ್ದಾರೆ ಮತ್ತು ಮಾರ್ಚಿ 31 ಕಳೆದು ಖರ್ಚು ಮಾಡಬಹುದೆಂದು ರಾಜ್ಯಸರ್ಕಾರದವರು ಸರ್ಕ್ಯುಲರ್ ಕೊಟ್ಟಿದ್ದಾರೆ. ಅದು ತಪ್ಪಲ್ಲವೆ ? ಅದೇ ಸರ್ಕ್ಯುಲರ್ ಜಿಲ್ಲಾ ಪರಿಷತ್ತು ಮತ್ತು ಲೋಕೋಪಯೋಗಿ ಇಲಾಖೆಯವರಿಗೆ ಕೊಟ್ಟು ಅವರಿಗೂ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಏನಾದರೂ ಗ್ರಾಂಟ್ ಕೇಳಿದರೆ ಲ್ಯಾಂಡ್ ಆರ್ಮಿಗೆ ಕೊಡುತ್ತಾರೆ. ಮಾರ್ಚ್ 31 ಕಳೆದೂ ಕೆಲಸ ಮಾಡಬಹುದೆಂದು ಅವರಿಗೆ ಅಡ್ವಾನ್ಸ್ ಪೇಮೆಂಟ್ ಆಗಿರುತ್ತದೆ. ಇದರಿಂದ ಲ್ಯಾಂಡ್ ಆರ್ಮಿಯವರಿಗೆ ಕೆಲಸ ಜಾಸ್ತಿ, ಮತ್ತು ಅವರು ಸಮರ್ಪಕವಾಗಿ ಕೆಲಸ ಮಾಡುವ ಸ್ಥಿತಿಯಲ್ಲಿ ಇಲ್ಲ. ಅವರು ಲೋಕಲ್ ಕಂಟ್ರಾಕ್ಟರನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ದಯವಿಟ್ಟು ಈ ಕಾರ್ಯಕ್ರಮವನ್ನು ತೆಗೆಯಬೇಕು. ಏಕೆಂದರೆ ಲೋಕೋಪಯೋಗಿ ಇಲಾಖೆಯವರು ಲ್ಯಾಂಡ್ ಆರ್ಮಿಗೆ ಸಮ ಅನ್ನುವಾಗ ಲೋಕೋಪಯೋಗಿ ಇಲಾಖೆಯಲ್ಲಿ ಆಮೇಲೆ ಬಿಲ್ ಕೊಡುವುದು, ಲ್ಯಾಂಡ ಆರ್ಮಿಗೆ ಅಡ್ವಾನ್ಸ್ ಕೊಟ್ಟು ಯಾವತ್ತಾದರೂ ಮಾಡಿ ಎಂದು ಅವರಿಗೆ ಹೇಳುವುದು ತಪ್ಪು ಎಂದು ಹೇಳುತ್ತೇನೆ. ಬಡ್ಜೆಟ್ಟಿನಲ್ಲಿ ಅಸ್ಫಾಲ್ಟ್ ವರ್ಕ್ ಮತ್ತು ಸೇತುವೆಗಳ ಕೆಲಸ ಸೇರಿದ್ದು ಅದು ತಮಗೆ ಹ್ಯಾಂಡ್ ಓವರ್ ಆಯಿತು. ಆದರೆ ಆ ಕೆಲಸವನ್ನು ಅವರೂ ಮಾಡುತ್ತಿಲ್ಲ, ನಿಮ್ಮ ಇಲಾಖೆಯವರು ತೆಗೆದುಕೊಳ್ಳುತ್ತಿಲ್ಲ. ನನ್ನ ಕ್ಷೇತ್ರದಲ್ಲಿ 5 – 6 ಕಿಲೋಮೀಟರ್ ಅಸ್ಫಾಲ್ಟೆಡ್ ವರ್ಕ್ ಇತ್ತು, ಅದನ್ನು ಅವರು ಮಾರ್ಚ್ ಕಳೆದರೂ ಮಾಡಲಿಲ್ಲ.

ಏಕೆಂದರೆ ನಮಗೆ ಗ್ರಾಂಟ್ ಹ್ಯಾಂಡ್ ಓವರ್ ಆಗಿಲ್ಲವೆಂದು ಲೋಕೋಪಯೋಗಿ ಇಲಾಖೆಯವರು ಹೇಳುತ್ತಾರೆ. ಜಿಲ್ಲಾ ಪರಿಷತ್ತಿಗೆ ಆ ಗ್ರಾಂಟ್ ಕೊಟ್ಟಿದ್ದಾರೆ, ಆದ್ದರಿಂದ ನಮಗೆ ಆ ಜವಾಬ್ದಾರಿ ಇಲ್ಲವೆಂದು ಹೇಳುತ್ತಾರೆ. ತಾವು ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಸಣ್ಣಪುಟ್ಟ ಕೆಲಸ ಆಗುತ್ತಿತ್ತು, ಅದನ್ನು ಆಗದಂತೆ ಹ್ಯಾಂಡಿಂಗ್ ಓವರ್ ಮತ್ತು ಟೇಕಿಂಗ್ ಓವರ್‌ನಲ್ಲಿ ನಿಂತುಹೋಗಿದೆ. ಮೂರನೆಯದಾಗಿ ಇಂಜಿನಿಯರ್‌ಗಳು ಪ್ರೋಗ್ರಾಂ ವರ್ಕ್ ಬಿಟ್ಟು ಬೇರೆ ವರ್ಕ್ಸ್ ಎಸ್ಟಿಮೇಟ್ ಅಪ್ರೂವ್ ಮಾಡುತ್ತಿದ್ದಾರೆ. ಎಕ್ಸಿಕ್ಯೂಟೀವ್ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು ಜಿಲ್ಲಾ ಪರಿಷತ್ತಿನ ಮಟ್ಟದಲ್ಲಿ ಅನ್ಯುಯಲ್ ಪ್ರೋಗ್ರಾಂನಲ್ಲಿರುವ ವರ್ಕ್ಸ್ ಬಿಟ್ಟು ಬೇರೆ ವರ್ಕ್ಸ್‌ಗೆ ಅಪ್ರೂವಲ್ ಕೊಟ್ಟು ಕೆಲಸ ಮಾಡಿ ಮುಗಿಸಿದ್ದಾರೆ. ಪ್ರೋಗ್ರಾಂ ವರ್ಕನ್ನು ಶಾಸಕರು ಬರೆದುಕೊಟ್ಟಿರುತ್ತಾರೆ, ಪ್ರೋಗ್ರಾಂನಲ್ಲಿ ಇಲ್ಲದವು ಅವರ ಡಿಸ್ಕ್ರಿಷನ್‌ನಲ್ಲಿ, ಕಂಟ್ರಾಕ್ಟರ್ ಡಿಸ್ಕ್ರಿಷನ್‌ನಲ್ಲಿ ಆಗಿರುತ್ತವೆ. ಅದನ್ನು ತಪ್ಪಿಸುತ್ತೀರಾ ?

ಶ್ರೀ ವಿನಯಕುಮಾರ್ ಸೊರಕೆ:– ಮಾನ್ಯ ಅಧ್ಯಕ್ಷರೇ, ಮೈಸೂರು – ಮಡಿಕೇರಿ – ಮಂಗಳೂರು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡಬೇಕೆಂದು ಹಲವಾರು ವರ್ಷಗಳಿಂದ ಬೇಡಿಕೆ ಇದೆ. ಇವತ್ತು ದಕ್ಷಿಣ ಕನ್ನಡದಲ್ಲಿ ಮಂಗಳೂರು ಹಲವಾರು ಉದ್ಯಮಗಳ ಕೇಂದ್ರವಾಗಿರುವುದು ತಮಗೆಲ್ಲಾ ಗೊತ್ತಿದೆ. ಮಂಗಳೂರಿನಿಂದ ನೇರವಾಗಿ ಬೆಂಗಳೂರಿಗೆ ಬರಬೇಕಾದರೆ ಹಾಸನ ಅಥವಾ ಮಡಿಕೇರಿ ಮೂಲಕ ಬರಬೇಕು. ಮಳೆಗಾಲದಲ್ಲಿ ಹಾಸನದ ಮೂಲಕ ಬರುವ ರಸ್ತೆ ಬ್ಲಾಕ್ ಆದರೆ ಬೆಂಗಳೂರಿಗೆ ಸಂಪರ್ಕವೇ ಇರುವುದಿಲ್ಲ. ಆದ್ದರಿಂದ ನಾನು ಹೇಳಿದ ಆ ದಾರಿಯನ್ನು ರಾಷ್ಟ್ರೀಯ ಹೆದ್ದಾರಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತೆ ಕೇಂದ್ರ ಸರ್ಕಾರದಿಂದ ಸಿಆರ್‌ಎಫ್ ಫಂಡ್ ಏನು ಬರುತ್ತದೆ, 2 – 3 ವರ್ಷಗಳಿಂದ ನಮ್ಮ ರಾಜ್ಯಕ್ಕೆ ಆ ಹಣ ಬಂದಿಲ್ಲ. ಇವತ್ತು ರಾಷ್ಟ್ರೀಯ ಹೆದ್ದಾರಿಗೆ ಸಂಪರ್ಕ ರಸ್ತೆ ಕೊಡುವುದಕ್ಕೆ ಅದನ್ನು ವಿನಿಯೋಗಿಸುವುದಕ್ಕೆ ಹೆಚ್ಚಿನ ಮುತುವರ್ಜಿ ವಹಿಸಬೇಕೆಂದು ಹೇಳುತ್ತೇನೆ. ಮತ್ತೆ ಜಿಲ್ಲಾಪರಿಷತ್ತಿನಿಂದ ಪ್ರತಿ ಎಂ.ಎಲ್.ಎ. ಕ್ಷೇತ್ರದಲ್ಲಿ 50 ಕಿ.ಮೀ. ರಸ್ತೆಗಳನ್ನು ತಾವು ಟೇಕ್ ಓವರ್ ಮಾಡಿದ್ದೀರಿ. ಇವತ್ತು ಜಿಲ್ಲಾ ಪರಿಷತ್ತಿನಲ್ಲಿ ಹಣ ಇದ್ದರೂ ಈ ರಸ್ತೆ ದುರಸ್ತಿ ಮಾಡುವುದಕ್ಕೆ ಆ ಹಣ ಲಭ್ಯ ಆಗುತ್ತಾ ಇಲ್ಲ. ಆದ್ದರಿಂದ ಈ ರಸ್ತೆಗಳ ಮುತುವರ್ಜಿಗೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು 15 ಲಕ್ಷಕ್ಕಿಂತಲೂ ಕಡಿಮೆ ಇರುವ ಕಟ್ಟಡಗಳಿಗೆ ತಾವು ಟೆಂಡರ್ ಕರೆಯುತ್ತಿದ್ದೀರಿ. ಇದರಲ್ಲಿ ಉದ್ದೇಶ ಒಳ್ಳೆಯದೇ ಇದೆ. ಇವೊತ್ತು 15 ಲಕ್ಷಕ್ಕಿಂತಲೂ ಕಡಿಮೆ ಇರುವುದಕ್ಕೆ ಯಾವುದೇ ಕಂಟ್ರಾಕ್ಟರ್ ಮುಂದೆ ಬರುವುದಿಲ್ಲ. ಕಾರಣ ಸ್ಟೀಲ್ ಆಗಲೀ, ಸಿಮೆಂಟ್ ಆಗಲೀ ಅವರಿಗೆ ಒದಗಿಸುವ ಅವಕಾಶ ಇಲ್ಲ. ಈ ಅವಕಾಶ 15 ಲಕ್ಷಕ್ಕಿಂತಾ ಜಾಸ್ತಿ ಇರುವವರಿಗೆ ಇದೆ. ಇದರಿಂದ ತೊಂದರೆ ಆಗಿದೆ. ಟೆಂಡರ್ ಕರೆದರೂ ಕೂಡಾ ಯಾರೂ ಬರದೇ ಇರುವ ಸ್ಥಿತಿಯಲ್ಲಿ ಇದೆ. ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಬೇಕು.

ಶ್ರೀ ಆರ್. ದಯಾನಂದರಾವ್:– ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಆನಂದರಾವ್ ವೃತ್ತದ ಬಳಿ ಪೋಲೀಸ್ ಕ್ವಾರ್ಟರ್ಸ್ ಇದೆ. ಅಲ್ಲಿ ಸುಮಾರು 3 ರಿಂದ 4 ಸಾವಿರ ಸಂಸಾರಗಳು ವಾಸ ಮಾಡುತ್ತಿವೆ. ಅಲ್ಲಿನ ಕಟ್ಟಡದ ಬಗ್ಗೆ ಸುಮಾರು 3 ವರ್ಷಗಳಿಂದ ಸರ್ಕಾರಕ್ಕೆ ಪತ್ರ ಬರೆಯುತ್ತಿದ್ದೇನೆ. ಆ ಬಿಲ್ಡಿಂಗ್ ದುಸ್ಥಿತಿಯಲ್ಲಿ ಇದ್ದು ಯಾವಾಗಲಾದರೂ ಬಿದ್ದು ಹೋಗಬಹುದು. ಮಕ್ಕಳು ಮರಿಗಳು ವಾಸ ಮಾಡುವ ಸ್ಥಳ ಅದು. ಮಳೆಗಾಲ ಬೇರೆ ಬರುತ್ತಾ ಇದೆ. ಕಟ್ಟಡ ಏನಾದರೂ ಕುಸಿದು ಬಿದ್ದರೆ ಅದರ ಹೊಣೆಯನ್ನು ಸರ್ಕಾರವೇ ಹೊರಬೇಕಾಗುತ್ತದೆ. ಈ ಬಗ್ಗೆ ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ. ಮತ್ತೊಂದು ವಿಚಾರ ಎಂದರೆ, ಹೋದ ಸಾರಿ ನಮ್ಮಲ್ಲಿಗೆ ಪಿಡಬ್ಲ್ಯುಡಿ ಅಧಿಕಾರಿಗಳು ಬಂದು 40 ಲಕ್ಷ ರೂಪಾಯಿವರೆಗೆ ಒಂದು ಎಂಎಲ್‌ಎ ಕ್ಷೇತ್ರದಲ್ಲಿ ಬಿಲ್ಡಿಂಗ್ ರಿಪೇರಿಗೆ ಎಂದು ಬಂದಿದ್ದು ನಮ್ಮನ್ನು ಕೂಡ ಬಿಲ್ಡಿಂಗ್ ಹತಿರ ಕರೆದುಕೊಂಡು ಹೋಗಿ ಎಸ್ಟಿಮೇಟ್ ತಗೊಂಡು

ಮಾಡಿದರು. ಆದರೆ ಇದುವರೆಗೂ 40 ಪೈಸೆ ಕೂಡಾ ಖರ್ಚು ಮಾಡಿಲ್ಲ. ಈಗ ನಾವು ನಮ್ಮ ಕ್ಷೇತ್ರದಲ್ಲಿ ಹೋಗಿ ಮುಖ ತೋರಿಸುವುದಕ್ಕೆ ನಾಚಿಕೆಯಾಗುತ್ತದೆ ಮತ್ತು ಪ್ರಾಥಮಿಕ ಮತ್ತು ಮಾಧ್ಯಮಿಕ ಸರ್ಕಾರಿ ಶಾಲೆಗಳು ಏನಿವೆ, ಅವು ಬಹಳ ದುಸ್ಥಿತಿಯಲ್ಲಿ ಇದ್ದು ಇವುಗಳ ರಿಪೇರಿ ಆಗಬೇಕಾಗಿದೆ. ಆದುದರಿಂದ ನಾನು ಕಳಕಳಿಯಿಂದ ಮಾನ್ಯ ಮಂತ್ರಿಗಳನ್ನು ಕೇಳುವುದು ಎಂದರೆ ಇವನ್ನೆಲ್ಲಾ ಆದಷ್ಟು ಬೇಗ ಸರಿಪಡಿಸಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳಿಂದ ನಿರ್ದಿಷ್ಟ ಉತ್ತರವನ್ನು ನಾನು ಬಯಸುತ್ತೇನೆ.

ಶ್ರೀ ಕೆ.ಎಸ್. ಕಾಳಮರಿಗೌಡ:– ಮಾನ್ಯ ಅಧ್ಯಕ್ಷರೇ, ಮಾನ್ಯ ಎ.ಟಿ. ರಾಮಸ್ವಾಮಿಯವರು ನೀರಾವರಿ ಇಲಾಖೆಯಲ್ಲಾಗಲೀ, ಪಿಡಬ್ಲ್ಯುಡಿಯಲ್ಲಾಗಲೀ ಅಥವಾ ಬೇರೆ ಯಾವುದೇ ಇಲಾಖೆಯಲ್ಲಿ ಆಗಲೇ 100 ರೂಪಾಯಿ ಕೆಲಸದಲ್ಲಿ 60 ಭಾಗ ಪರ್ಸೆಂಟೇಜ್ ರೂಪದಲ್ಲೇ ಹೋಗುತ್ತದೆಂದು ಹೇಳಿದರು. ಇದನ್ನು ನಾನೇ ಹೇಳಬೇಕೆಂದು ಇದ್ದೆ. ಅವರು ಮತ್ತು ಮೋಟಮ್ಮನವರು ಇದನ್ನು ಪ್ರಸ್ತಾಪ ಮಾಡಿದರು. ಇದರ ಬಗ್ಗೆ ಎಷ್ಟು ಸಾರಿ ಪ್ರಸ್ತಾಪ ಮಾಡಿದರೂ ಕೂಡಾ ಇದು ಒಂದು ಇದ್ದೇ ಇದೆ. 60 ಪರ್ಸೆಂಟ್ ಏನು ಅಧಿಕಾರಿಗಳಿಗೆ ಹೋಗುತ್ತದೆಯಲ್ಲಾ ಸ್ವಾಮಿ, ಆ ಪರ್ಸೆಂಟೇಜನ್ನು ಏನಾದರೂ ಮಾಡಿ ತಡೆ ಮಾಡುವುದಕ್ಕೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳುತ್ತದೆಯೇ ? ಮಾಧುಸ್ವಾಮಿಯವರು ಹೇಳಿದರು ಜಿಲ್ಲಾಪರಿಷತ್ ರಸ್ತೆಗಳನ್ನು ತಾವು ಪಿಡಬ್ಲ್ಯುಡಿಗೆ 50 ಕಿ.ಮೀ.ಗಳವರೆಗೆ ಒಂದು ಮತಕ್ಷೇತ್ರದಲ್ಲಿ ತೆಗೆದುಕೊಂಡಿದ್ದೀರಿ ಎಂದು. ಹೀಗೆ ಜಿಲ್ಲಾಪರಿಷತ್ತಿನಿಂದ ಪಿಡಬ್ಲ್ಯುಡಿಗೆ ವಹಿಸಿಕೊಂಡ ರಸ್ತೆಗಳು ಏನಿವೆಯೋ ಅವಕ್ಕೂ ಸೇರಿ ಜಿಲ್ಲಾ ಪರಿಷತ್ತಿಗೆ 2 ಲಕ್ಷ ರೂಪಾಯಿ ಕೊಟ್ಟರಿ. ಈಗ ಜಿಲ್ಲಾಪರಿಷತ್ತಿನವರನ್ನು ಆ ಬಗ್ಗೆ ಕೇಳಿದರೆ, ಪಿಡಬ್ಲ್ಯುಡಿ ಅವರು ವಹಿಸಿಕೊಂಡಿದ್ದಾರೆಂದು ಹೇಳುತ್ತಾರೆ. ಲೋಕೋಪಯೋಗಿ ಇಲಾಖೆಯವರು ಇದು ಜಿಲ್ಲಾಪರಿಷತ್ ರಸ್ತೆಯಾದ್ದರಿಂದ ಈ ರಸ್ತೆಗೆ ಗ್ರಾಂಟ್ ಇಲ್ಲವೆಂದು ಹೇಳುತ್ತಿದ್ದಾರೆ. ಇದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ತಮ್ಮ ಬೆಳಗಾಂ ಜಿಲ್ಲೆಯಲ್ಲಿ ನಮ್ಮ ಆಯವ್ಯಯ ಪತ್ರದಲ್ಲಿ ಎಷ್ಟು ಹಣವನ್ನು ಒದಗಿಸಲಾಗಿದೆ ರಸ್ತೆಯ ಸಲುವಾಗಿ, ಟೂರಿಸಂ ಡಿಪಾರ್ಟ್‌ಮೆಂಟ್ ಸಲುವಾಗಿ, ಜ್ಯುಡಿಶಿಯಲ್ ಸಲುವಾಗಿ ಯಾವ್ಯಾವ ಕೆಲಸಗಳಿಗೆ ಎಷ್ಟು ಹಣ ಒದಗಿಸಲಾಗಿದೆ. ಅಷ್ಟೂ ಹಣವನ್ನು ತಾವು ಈ ವರ್ಷದಲ್ಲಿ ಖರ್ಚು ಮಾಡುತ್ತೀರಾ ? ಎರಡನೆಯದು ಧಾರವಾಡ ಜಿಲ್ಲೆಯ ಚೀಫ್ ಇಂಜಿನಿಯರ್ ಆಫೀಸಿನಲ್ಲಿ ಆರ್ಕಿಟೆಕ್ಟ್ಸ್ ಡಿಪಾರ್ಟ್‌ಮೆಂಟ್‌ಗೆ ಸ್ಯಾಂಕ್ಷನ್ ತೆಗೆದುಕೊಂಡಿದ್ದೀರಿ ಮತ್ತು ಅಲ್ಲಿಗೆ ಪೋಸ್ಟ್‌ಗಳು ಸ್ಯಾಂಕ್ಷನ್ ಆಗಿವೆ. ಆದರೂ ಸಹ ಇಲ್ಲಿಯ ತನಕ ಅಲ್ಲಿ ಒಬ್ಬನೇ ಒಬ್ಬ ಡಿಸೈನ್ ಮಾಡುವವನು ಇದ್ದಾನೆ. ಆ ಕಾರಣ ಪೋಸ್ಟ್‌ಗಳನ್ನು ಯಾವಾಗ ಫಿಲಪ್ ಮಾಡುತ್ತೀರಿ ? ಮೂರನೆಯದು ತಮ್ಮ ಇಲಾಖೆಯಲ್ಲಿ ಹಳೆಯ ವೆಹಿಕಲ್‌ಗಳು ಬಹಳ ಇವೆ. ನಾವು ಅಭ್ಯಾಸ ಮಾಡುವ ಮುನ್ನ ನಾವು ಶಾಲೆ ಕಲಿಯುವಾಗ ಹೇಗಿದ್ದವೋ ಹಾಗೆಯೇ ಆ ಹಳೆಯ ವೆಹಿಕಲ್‌ಗಳು ಈಗಲೂ ಕೆಟ್ಟು ನಿಂತಿವೆ. ಆದಷ್ಟು ಬೇಗ ಅವುಗಳನ್ನು ಮಾರಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ? ನಾಲ್ಕನೆಯದು ನಮ್ಮ ಬೆಳಗಾಂ ಜಿಲ್ಲೆಯ ಎಲ್ಲ ರಸ್ತೆಗಳು ಶುಗರ್ ಫ್ಯಾಕ್ಟರಿ ಕಮಾಂಡ್ ಏರಿಯಾದೊಳಗೆ ಬರುತ್ತವೆ. ಹಾಗೆ ಬರುವುದರಿಂದ ಡಾಮರು ಹಾಕುವಾಗ ಅರ್ಧ ಇಂಚು ಥಿಕ್‌ನೆಸ್ ಹಾಕುವುದರಿಂದ ಆ ರಸ್ತೆ ಯಾವುದಕ್ಕೂ ತಡೆಯುವುದಿಲ್ಲ. ರಸ್ತೆ ಮಾಡುತ್ತೀರಿ, ರಸ್ತೆ ಮಾಡಿದ ಮೂರು ತಿಂಗಳು ಆರು ತಿಂಗಳಿನಲ್ಲಿ ಲೋಡ್ ಗಾಡಿಗಳು ಹೆಚ್ಚಾಗಿ ಓಡಾಡಿ ರಸ್ತೆಗಳು ಹಾಳಾಗಿ ಹೋಗಿವೆ. ಅದಕ್ಕೋಸ್ಕರ ಸ್ಪೆಷಲ್ ಗ್ರಾಂಟ್ ಕೊಟ್ಟು ರಸ್ತೆಗಳನ್ನು ಸುಧಾರಿಸುತ್ತೀರಾ, ಹೇಗೆ ಎಂದು ಕೇಳುತ್ತಿದ್ದೇನೆ. ಮತ್ತು ಕೊಟ್ಟಿರುವ ಹಣ ಲ್ಯಾಪ್ಸ್ ಆಗದ ಹಾಗೆ

ಶ್ರೀ ಬಿ. ಹಂಪನಗೌಡ:– ಮಾನ್ಯ ಅಧ್ಯಕ್ಷರೇ, ನಮ್ಮ ರಾಯಚೂರು ಜಿಲ್ಲೆಯಲ್ಲಿನ ರಾಯಚೂರು ಗಿಣಿಗೇರ ರಸ್ತೆ ಎರಡು ಇಲಾಖೆಗೆ ವಹಿಸಿಕೊಟ್ಟಿದ್ದಾರೆ. ಒಂದು ಲೋಕೋಪಯೋಗಿ ಮತ್ತು ಕರ್ನಾಟಕ ಸ್ಟೇಟ್ ಕನಸ್ಟ್ರಕ್ಷನ್ ಕಾರ್ಪೋರೇಷನ್. ಆ ರಸ್ತೆ ಏನಿದೆ, ಅದು ಸುಮಾರು 200 ಕಿಲೋಮೀಟರ್ ರಸ್ತೆ. ಕರ್ನಾಟಕ ಸ್ಟೇಟ್ ಕನಸ್ಟ್ರಕ್ಷನ್ ಕಾರ್ಪೋರೇಷನ್‌ಗೆ ಸುಮಾರು 2 ಕೋಟಿ ಚಿಲ್ಲರೆ ಹಣವನ್ನು ಕಾಮಗಾರಿಗಾಗಿ ಬಿಡುಗಡೆ ಮಾಡಿದ್ದಾರೆ. ಟೆಂಡರ್ ಕೂಡ ಆಗಿದೆ. ಲೋಕೋಪಯೋಗಿ ಇಲಾಖೆಯಲ್ಲಿರತಕ್ಕ ರಸ್ತೆ ಯಾವುದೇ ಬಜೆಟ್‌ನಲ್ಲಿ ಸೇರಿಲ್ಲ. ಕರ್ನಾಟಕ ಸ್ಟೇಟ್ ಕನಸ್ಟ್ರಕ್ಷನ್ ಕಾರ್ಪೋರೇಷನ್ ರಸ್ತೆ ಬಹಳ ಚೆನ್ನಾಗಿ ಇದೆ. ಇಲಾಖೆಯವರು ಮಾಡಿರುವ ರಸ್ತೆ ಚೆನ್ನಾಗಿಲ್ಲ. ಈ ಗೊಂದಲವಿರುವುದರಿಂದ ಯಾವುದಾದರೂ ಒಂದು ಇಲಾಖೆ ವಹಿಸಿಕೊಂಡು ಕೆಲಸ ಮಾಡಬೇಕು. ಲೋಕೋಪಯೋಗಿ ಇಲಾಖೆಯಾದರೂ ತೆಗೆದುಕೊಳ್ಳಲಿ ಅಥವಾ ಕನಸ್ಟ್ರಕ್ಷನ್ ಕಾರ್ಪೋರೇಷನ್ ಅವರಾದರೂ ತೆಗೆದುಕೊಳ್ಳಲಿ. ಎರಡೂ ಇಲಾಖೆಗಳಿಗೆ ಇಟ್ಟರೆ ಇರತಕ್ಕ ರಸ್ತೆ ಒಳ್ಳೆಯ ರಸ್ತೆ ಆಗುವುದಿಲ್ಲವೆಂದು ನನ್ನ ಅನಿಸಿಕೆ.

ಶ್ರೀ ಅಲ್ಲಂ ವೀರಭದ್ರಪ್ಪ:– ಮಾನ್ಯ ಅಧ್ಯಕ್ಷರೆ, ಮೊನ್ನೆ ನವೆಂಬರ್ ತಿಂಗಳಿನಲ್ಲಿ ನೆರೆಹಾವಳಿಗೆ ತುತ್ತಾದ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ರಸ್ತೆಗಳು ಹಾಳಾಗಿ ಹೋಗಿವೆ. ಹದಗೆಟ್ಟ ರಸ್ತೆಗಳನ್ನು ದುರಸ್ತಿ ಮಾಡುವುದಕ್ಕೆ ಸರ್ಕಾರ ಸ್ಪೆಷಲ್ ಗ್ರ್ಯಾಂಟ್ ಏನಾದರೂ ಕೊಟ್ಟು ಸ್ಕೀಮ್ ತಯಾರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ಎನ್.ಬಿ. ನಂಜಪ್ಪ:– ಮಾನ್ಯ ಅಧ್ಯಕ್ಷರೆ, ರಿಸೋರ್ಸ್ ಮೊಬಲೈಸೇಷನ್ ಮಾಡಬೇಕಾದರೆ ತಮಿಳುನಾಡಿನಲ್ಲಿ ಕೆಲವು ಮುಖ್ಯವಾದ ಪ್ಲೇಸ್‌ಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಹಾಕಿ ಅಲ್ಲಿ ಬರತಕ್ಕ ವೆಹಿಕಲ್ಸ್‌ಗಳಿಂದ 10 ರಿಂದ 20 – 30 ರೂಪಾಯಿ ಕಲೆಕ್ಟ್ ಮಾಡಿ ಆ ಏರಿಯಾದ ರಸ್ತೆಗಳನ್ನು ಇಂಪ್ರೂವ್ ಮಾಡುತ್ತಾರೆ. ಹಾಗೆ ಇಲ್ಲಿಯೂ ಮಾಡಿದರೆ ಬಹಳಷ್ಟು ಮುನಿಸಿಪಲ್ ಏರಿಯಾ ಮತ್ತು ಟೌನ್‌ಗಳಿಗೆ ಒಳ್ಳೆಯದಾಗುತ್ತದೆಂದು ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ರಸ್ತೆ ಬದಿಯಲ್ಲಿ ಬಹಳಷ್ಟು ಎನ್‌ಕ್ರೋಚ್‌ಮೆಂಟ್ ಆಗುತ್ತಿದೆ. ಎಲ್ಲೆಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳಿವೆ ಆ ರಸ್ತೆಗಳಲ್ಲಿ ರೋಡ್ ಮಾರ್ಜಿನವರೆಗೆ ಎನ್‌ಕ್ರೋಚ್ ಮಾಡಿ ಅಲ್ಲಿ ಬಿಲ್ಡಿಂಗ್ಸ್‌ಗಳನ್ನು ಕಟ್ಟುವುದರ ಜೊತೆಗೆ ಹಳ್ಳಗಳನ್ನು ತೋಡಿ ಮಣ್ಣನ್ನು ತೆಗೆದುಕೊಳ್ಳುತಕ್ಕದ್ದು ಮತ್ತು ಫೆನ್ಸ್ ಹಾಕಿ ತೋಟಗಳನ್ನು ಮಾಡಿ ಎಲ್ಲ ಲೋಕೋಪಯೋಗಿ ರಸ್ತೆಗಳನ್ನು ಎನ್‌ಕ್ರೋಚ್‌ಮೆಂಟ್ ಮಾಡಲಾಗಿದೆ. ಅದನ್ನು ಪ್ರಿವೆಂಟ್ ಮಾಡಬೇಕು. ರೋಡ್ ಹಂಪ್ಸ್‌ಗಳ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಇನ್–ಡಿಸ್ಕ್ರಿಮಿನೇಟ್ ಮಾರ್ಕ್‌ಗಳನ್ನು ಹಾಕಿ ಸೈನ್‌ಬೋರ್ಡ್ ಯಾವುದೂ ಇಲ್ಲದೆ ಇರುವುದರಿಂದ ಬಹಳಷ್ಟು ವೆಹಿಕಲ್ಸ್‌ಗಳಿಗೆ ತೊಂದರೆಯಾಗುತ್ತಿದೆ. ಅದನ್ನು ಕ್ವಾಲಿಟಿ ಕಂಟ್ರೋಲ್ ಚೀಫ್ ಇಂಜಿನಿಯರ್‌ರವರಿಗೆ ವಹಿಸಿ. ಬೇರೆ ಸಪರೇಟ್ ಡಿಪಾರ್ಟ್‌ಮೆಂಟ್ ಇರುವುದಕ್ಕಿಂತ ರೆಸ್ಪಾನ್ಸಿಬಿಲಿಟಿಯನ್ನು ಇಂಜಿನಿಯರ್ ಯಾರು ಮಾಡಿರುತ್ತಾರೆ ಅವರ ಮೇಲೆ ಫಿಕ್ಸ್ ಮಾಡಿದರೆ ಒಳ್ಳೆಯದಾಗುತ್ತದೆ. ಅದಕ್ಕೆ ಡುಯಲ್ ಸಿಸ್ಟಮ್ ಆಗಿದೆ. ಅದಕ್ಕೆ ಒಂದು ಆಫೀಸು ಇರುವುದರಿಂದ ಏನೂ ಪ್ರಯೋಜನವಾಗುತ್ತಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನನ್ನ ತಾಲ್ಲೂಕಿನಲ್ಲಿ ಒಂದು ತಾಲ್ಲೂಕು ಆಫೀಸು ಇದೆ. ಅದಕ್ಕೆ 108 ವರ್ಷಗಳ ಹಳೆಯ ಬಿಲ್ಡಿಂಗ್ ಇದೆ. ಅದಕ್ಕೆ ನಾನು ಮಿನಿ ವಿಧಾನಸೌಧ ಕೇಳಿದ್ದೇನೆ. ಅದನ್ನಾದರೂ ಮಾಡಿಕೊಡಬೇಕು. ಇಲ್ಲದಿದ್ದರೆ ಇರತಕ್ಕ ಬಿಲ್ಡಿಂಗ್ ಅದನ್ನಾದರೂ ರಿಪೇರಿ ಮಾಡಿಕೊಡಬೇಕು. ಅಲ್ಲಿ ಸಬ್ ರಿಜಿಸ್ಟ್ರಾರ್ ಆಫೀಸು ಇದೆ. ಮಳೆ ಬಂದಾಗ ರೆಕಾರ್ಡ್ಸ್‌ಗಳು ನೀರಿನಲ್ಲಿ ತೊಯ್ದು ಬಹಳಷ್ಟು ಹಾಳಾಗಿವೆ. ಆದ್ದರಿಂದ ದಯವಿಟ್ಟು ರಿಪೇರಿ ಮಾಡಿಸಿಕೊಡಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು:- ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.... ತಾವು ಸ್ವಲ್ಪ ಲಕ್ಷ್ಯ ಕೊಡಬೇಕು;

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ತಾವು ಹೇಳಿದ್ದೀರಿ, ನಾನು ಕೇಳಿ ಬಿಡುತ್ತೇನೆ. ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಲ್ಲಿ ಒಂದು ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಜಿಲ್ಲಾ ಪರಿಷತ್ತಿನ ಇಂಜಿನಿಯರಿಂಗ್ ವಿಭಾಗ ತಾಲ್ಲೂಕು ಮಟ್ಟದಲ್ಲಿ ಅಥವಾ ಡಿವಿಜನ್ ಮಟ್ಟದಲ್ಲಿ ಏನಿದೆ, ಅದೇ ರೀತಿ ಪಿ.ಡಬ್ಲ್ಯು.ಡಿ.ನಲ್ಲಿ ರೋಡ್ಸ್ ಮತ್ತು ಬಿಲ್ಡಿಂಗ್ ವರ್ಕ್ಸ್‌ಗೆ ಒಬ್ಬ ಇಂಜಿನಿಯರ್‌ಗೆ ಕೊಟ್ಟು ಮೈನರ್ ಇರಿಗೇಶನ್ ಮತ್ತು ಪಿ.ಎಚ್.ಇ. ಒಂದು ವಿಭಾಗಕ್ಕೆ ಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ನಾನು ತಮ್ಮ ಜೊತೆ ಮಾತನಾಡಿದ್ದೇನೆ. ಅದರ ಬಗ್ಗೆ ಏನು ನಿರ್ಣಯ ತೆಗೆದುಕೊಳ್ಳುತ್ತೀರಿ ಎಂದು ನಾನು ಕೇಳುತ್ತೇನೆ.

ಶ್ರೀ ಬಾಬುರಾವ್ ಚವಾಣ್:- ಸನ್ಮಾನ್ಯ ಅಧ್ಯಕ್ಷರೇ, ಬೀದರ್‌ನಿಂದ ಹಿರಿಯೂರಿಗೆ ನ್ಯಾಷನಲ್ ಹೈವೇ ಮಾಡಬೇಕೆಂದು ಹಿಂದೆ ಪ್ರಸ್ತಾವನೆ ಇತ್ತು. ಈಗಲಾದರೂ ಮಾನ್ಯ ಮಂತ್ರಿಗಳು ಇದನ್ನು ಮಾಡಬೇಕು. ಗುಲ್ಬರ್ಗಾ ರಾಯಚೂರು ರೋಡ್‌ನ್ನು ಹೆದ್ದಾರಿಯನ್ನಾಗಿ ಮಾಡುತ್ತೇವೆ, ಇದನ್ನು ಪರಿಶೀಲಿಸುತ್ತೇವೆ ಎಂದು ಹಿಂದಿನ ವರ್ಷ ಹೇಳಿದ್ದರು. ಈಗ ಇಲ್ಲವೆಂದು ಹೇಳುತ್ತಾರೆ. ಅದನ್ನು ಕೂಡ ಮಾಡಿಕೊಡಬೇಕು. ಗುಲ್ಬರ್ಗಾ ಜಿಲ್ಲೆಯಲ್ಲಿ ಸಿಮೆಂಟ್ ಕಾರ್ಖಾನೆಗಳು ಏನಿವೆ, ಅಲ್ಲಿ ಭಾರಿ ಟ್ರಾಫಿಕ್‌ನಿಂದಾಗಿ ಆ ಭಾಗದ ರಸ್ತೆಗಳೆಲ್ಲ ಕೆಟ್ಟು ಹೋಗಿವೆ. ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ಸಿಮೆಂಟ್ ಕಾರ್ಖಾನೆಗಳಾಗಲೀ, ಬೇರೆ ಯಾವುದೇ ಇರಲಿ, ಸುತ್ತಮುತ್ತಲಿನ ರಸ್ತೆಗಳು ಏನಿವೆ, ಅವುಗಳನ್ನು ಮಜಬೂತ್ ಆಗಿ ಮಾಡುವುದಕ್ಕೆ ವಿಶೇಷ ಲಕ್ಷ್ಯ ಕೊಡಬೇಕಾಗಿದೆ. ಇನ್ನು ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡಿನಿಂದ ಟೆಂಡರ್ ಆಗಿದ್ದರೂ ಕೆಲವು ಕಂಟ್ರಾಕ್ಟರ್ಸ್ ಒಂದು ವರ್ಷದಿಂದ ಬಿಟ್ಟು ಹೋಗಿದ್ದಾರೆ. ನನ್ನ ಮತಕ್ಷೇತ್ರದಲ್ಲಿ ಎರಡು ಕೋಟಿ ರೂಪಾಯಿಗಳ ರಸ್ತೆಗಳು ಇನೂ ಪ್ರಾರಂಭವಾಗಿಲ್ಲ. ನಾನು ಕೇಳಿದಾಗ ಟೆಂಡರ್ ಆಗಿದೆ. ಕಂಟ್ರಾಕ್ಟರ್ ಕೆಲಸ ಮಾಡುವುದಕ್ಕೆ ಸಿದ್ಧನಿಲ್ಲ, ಅವರ ಮೇಲೆ ನಾವು ಪೆನಾಲ್ಟಿ ಹಾಕುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆಯೋ ವಿನಹ ಟೆಂಡರ್ ಹಾಕಿದ ನಂತರ ಕೆಲಸ ತ್ವರಿತಗತಿಯಲ್ಲಿ ಮಾಡಿಕೊಡಬೇಕು. ಕೊನೆಯದಾಗಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಪ್ರತ್ಯೇಕವಾದ ವಿಭಾಗಗಳು ನಮ್ಮ ತಾಲ್ಲೂಕುಗಳಲ್ಲಿ ಆಗಿವೆ. ಆದರೆ ಪಿ.ಡಬ್ಲ್ಯು.ಡಿ. ಆಫೀಸ್ ಏನು ಇದೆಯೋ, ಅಲ್ಲಿಯೇ ಎಚ್.ಕೆ.ಡಿ.ಬಿ. ಆಫೀಸ್ ಕೂಡ ಮಾಡಿದ್ದಾರೆ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಒಂದೇ ಕಡೆ ಎರಡು ಆಫೀಸುಗಳು ಇರುವುದು ಬೇಡ. ಒಂದೇ ತಾಲ್ಲೂಕಿನಲ್ಲಿ ಹೀಗೆ ಎರಡೆರಡು ಆಫೀಸುಗಳನ್ನು ಮಾಡುವುದರಿಂದ ಪಿ.ಡಬ್ಲ್ಯು.ಡಿ.ಯವರು ಏನು ಮಾಡುತ್ತಾರೋ ಅದೇ ಕೆಲಸವನ್ನು ಇವರೂ ಮಾಡುತ್ತಾರೆ. ಆದ್ದರಿಂದ ಒಂದು ತಾಲ್ಲೂಕಿಗೆ ಒಂದೇ ಆಫೀಸನ್ನು ಫಿಕ್ಸ್ ಮಾಡಿ. ಕೊನೆಯದಾಗಿ ನನ್ನ ಸ್ವಂತ ಬೇಡಿಕೆ ಎಂದರೆ, ಇದನ್ನು ನಾನು ಕಷ್ಟದಿಂದ, ನೋವಿನಿಂದ ತಿಳಿಸಿ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಅದು ಏನೆಂದರೆ ಪಿಡಬ್ಲ್ಯೂ – ಪಿಡಬ್ಲ್ಯೂಡಿ ಆಫೀಸ್‌ಗಳನ್ನು ಕಾನ್ಸ್‌ಟಿಟ್ಯೂಯೆನ್ಸಿವೈಸ್ ಮಾಡಬೇಕು. ಈ ಬಗ್ಗೆ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ ನನ್ನ ಮತಕ್ಷೇತ್ರ ಶಹಾಬಾದ್‌ನಲ್ಲಿ ಎರಡು ತಾಲ್ಲೂಕುಗಳು ಬರುತ್ತವೆ. ನಾನು ಆ ತಾಲ್ಲೂಕಿಗೂ ಹೋಗಬೇಕಾಗುತ್ತದೆ, ಈ ತಾಲ್ಲೂಕಿಗೂ ಹೋಗಬೇಕಾಗುತ್ತದೆ. ಹೀಗೆ ಆಗುವುದರಿಂದ ಅಧಿಕಾರಿಗಳು ನಮ್ಮ ಕೈಗೆ ಸಿಗುವುದಿಲ್ಲ ಮತ್ತು ಕೆಲಸ ಕೂಡ ಆಗುವುದಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಕಚೇರಿಗಳನ್ನು ತಾಲ್ಲೂಕು ವೈಸ್ ತೆಗೆದು ಹಾಕಿ, ಕಾನ್ಸ್‌ಟಿಟ್ಯೂಯನ್ಸಿವೈಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಭೀಮಣ್ಣನವರ್:- ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯಲ್ಲಿ ಚಿಕ್ಕೋಡಿ

ತಾಲ್ಲೂಕಿನ ದಕ್ಷಿಣ ಭಾಗದಲ್ಲಿರುವ ದೊಡ್ಡ ನದಿ ಕೃಷ್ಣಾ ನದಿ. ಚಿಕ್ಕೋಡಿ ತಾಲ್ಲೂಕಿನಲ್ಲಿ ಅಂಕಲಿಗಿ – ಮಾದೇವಿ ನಡುವೆ ರಾಷ್ಟ್ರೀಯ ಹೆದ್ದಾರಿಯಲ್ಲಿ ದೊಡ್ಡ ಸೇತುವೆ ಕಟ್ಟುವ ಸಲುವಾಗಿ ಕೇಂದ್ರ ಸರ್ಕಾರದಿಂದ 2 ಕೋಟಿ ರೂಪಾಯಿಗಳು 1986ನೇ ಇಸವಿಯಲ್ಲಿ ಮಂಜೂರು ಆಗಿತ್ತು. ಆದರೂ ಸಹ ಅಪ್ಪರ್ ಕೃಷ್ಣಾದಲ್ಲಿ ಕಟ್ಟಿದ ಹಾಗೆ ಈ ಸೇತುವೆಯನ್ನು ಕಟ್ಟುತ್ತಿದ್ದಾರೆ. ಪ್ರತಿ ವರ್ಷ ಕಾಸ್ಟ್ ಆಫ್ ಕನ್‌ಸ್ಟ್ರಕ್ಷನ್ ಹೆಚ್ಚಾಗುತ್ತಾ ಇರುವಾಗ ಇಂಜಿನಿಯರುಗಳು ಏನು ಮಾಡುತ್ತಿದ್ದಾರೆ ? ಮೆಟೀರಿಯಲ್ಸ್ ಕಾಸ್ಟ್ ಹೆಚ್ಚಾದಾಗ ಇದನ್ನು ತೆಗೆದುಕೊಳ್ಳಬೇಕೆಂದು ಇದ್ದಾರೋ ಹೇಗೆ ? ಇದನ್ನು ಯಾವಾಗ ಮುಗಿಸುತ್ತೀರಿ ? ಹಿಂದೆ ಜಿ. ಪುಟ್ಟಸ್ವಾಮಿಗೌಡರು ಲೋಕೋಪಯೋಗಿ ಸಚಿವರಾಗಿದ್ದಾಗ, ಅವರನ್ನು ಭೇಟಿ ಮಾಡಿ ಕೇಳಿದಾಗ ಇದಕ್ಕೆ ಬೇರೆ ಹಣ ಒದಗಿಸಿಕೊಡುತ್ತೇವೆ ಎಂದು ಹೇಳಿದ್ದರು. ಆದರೆ ಏನೂ ಆಗಲಿಲ್ಲ. ಈಗ ಎರಡು ವರ್ಷಗಳಿಂದ ಕೆಲಸ ಸ್ಥಗಿತಗೊಂಡಿದೆ. ಈಗ ಮತ್ತೆ ಎಸ್ಟಿಮೇಟ್ ಮಾಡಿದರೆ ಅದು ನಾಲ್ಕು ಕೋಟಿಯಾಗುತ್ತದೆ. ಇದನ್ನು ನಮ್ಮ ಸರ್ಕಾರ ತುಂಬಬೇಕೋ ಅಥವಾ ಕೇಂದ್ರ ಸರ್ಕಾರ ತುಂಬಬೇಕೋ ? ಇದರ ಹೊರೆ ನಮ್ಮೆಲ್ಲರ ಮೇಲಿದೆ.

ಅಧ್ಯಕ್ಷರು:– ನೀವು ಕ್ಲಾರಿಫಿಕೇಶನ್ ಕೇಳಿ.

ಶ್ರೀ ಎಸ್.ಎಸ್. ಭೀಮಣ್ಣ ನವರ್:– ಆದ್ದರಿಂದ ಇದನ್ನು ಯಾವಾಗ ಮುಗಿಸುತ್ತಾರೆಂದು ಮಾನ್ಯ ಸಚಿವರಲ್ಲಿ ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀಮತಿ ದಮಯಂತಿ ಬೋರೇಗೌಡ:– ರಸ್ತೆ, ಸೇತುವೆ ಕಟ್ಟಡಗಳನ್ನು ಓಪನ್ ಮಾಡಬೇಕಾದರೆ, ವಿ ಐ ಪಿ ಹೆಸರನ್ನು ಹಾಕುತ್ತಾರೆ. ಅದಕ್ಕಿಂತ ಹೆಚ್ಚಾಗಿ, ಆ ಕೆಲಸಗಳನ್ನು ಮಾಡಿದಂಥ ಕಂಟ್ರಾಕ್ಟರುಗಳ ಹೆಸರುಗಳನ್ನು ಮತ್ತು ಇಂಜಿನಿಯರುಗಳ ಹೆಸರುಗಳನ್ನೂ ಹಾಕಿಸಬೇಕೆಂದು ನನ್ನ ಸೂಚನೆ.

ಶ್ರೀ ಬಿ.ಎಂ. ಇದಿನಬ್ಬ:– ಸನ್ಮಾನ್ಯ ಅಧ್ಯಕ್ಷರೇ, ನಾನು ಹೇಳುವಂತಾದ್ದು, ಇತ್ತೀಚೆಗೆ ಎಲ್ಲಾ ಕಡೆಗಳಲ್ಲೂ ಮಿನಿ ವಿಧಾನಸೌಧ ಕಟ್ಟಬೇಕೆಂಬ ಕೇಳಿಕೆಗಳಿವೆ. ಆದರೆ, ನಮ್ಮ ಜಿಲ್ಲೆಯ ಸನ್ನಿವೇಶ ನೋಡಿದಾಗ, ಮಕ್ಕಳು, ಶಾಲೆ ಇಲ್ಲದೆ ಮರದ ಬುಡದಲ್ಲಿ ಕಲಿಯುತ್ತಿದ್ದಾರೆ. ನಾವು ಸಾಕ್ಷರತೆ ಆಗಬೇಕೆಂದು ಹೇಳುತ್ತಿದ್ದೇವೆ. ಇಂದಿನ ಮಕ್ಕಳೇ ಮುಂದಿನ ಜನಾಂಗ ಎಂದೂ ಹೇಳುತ್ತೇವೆ. ಶಾಲಾ ಕಟ್ಟಡ ಇಲ್ಲದ ಕಷ್ಟ ನೋಡಿದರೆ ದುಃಖವಾಗುತ್ತದೆ. ಆದ್ದರಿಂದ ಮಿನಿ ವಿಧಾಸನೌಧವನ್ನು ಸ್ವಲ್ಪ ತಡೆಹಿಡಿದು, ಸದ್ಯಕ್ಕೆ ಶಾಲಾ ಕಟ್ಟಡಗಳನ್ನು ಕಟ್ಟುತಕ್ಕ ಏರ್ಪಾಡು ಮಾಡಿದರೆ ಒಳ್ಳೆಯದೆಂದು ಹೇಳುತ್ತಿದ್ದೇನೆ. ಮತ್ತೊಂದು ಬಹಳ ಪ್ರಾಮುಖ್ಯವಾದ ವಿಷಯ ಅಂದರೆ ಲೋಕೋಪಯೋಗಿ ರಸ್ತೆಗಳು. ಈ ರಸ್ತೆಗಳ ಎರಡು ಬದಿಯಲ್ಲಿಯೂ 150 ಅಡಿ ಬಿಟ್ಟು, ಸೊಗಸಾಗಿರಬೇಕೆಂದು ಹೇಳುತ್ತೇವೆ. ನಮ್ಮ ಜಿಲ್ಲೆಯಲ್ಲಿ ಮಂತ್ರಿಗಳು ಪ್ರವಾಸ ಮಾಡಿ ನೋಡಿದರೆ ಗೊತ್ತಾಗುತ್ತದೆ. ಮರದ ವ್ಯಾಪಾರಿಗಳು ಹಾಗೂ ಇನ್ನಿತರೆ ಜನಗಳು, ಮಾರ್ಗದ ಬದಿಯವರೆಗೂ, ಚರಂಡಿಯವರೆಗೂ ಮರಗಳನ್ನು ಹಾಕಿರುವುದರಿಂದ, ಮಾರ್ಗದಲ್ಲಿ ಹೋಗುವುದಕ್ಕೇ ಸಾಧ್ಯವಿಲ್ಲದಾಗಿದೆ. ಇದನ್ನು ಅಲ್ಲಿಯ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರು ನೋಡಲಿಲ್ಲವೇ ? ಇದನ್ನು ನೋಡಿದರೆ, ಬಹಳ ಹೇಸಿಗೆಯಾಗಿ ಕಾಣುತ್ತದೆ. ಪಿ.ಡಬ್ಲ್ಯು.ಡಿ. ರಸ್ತೆಯ ಎರಡು ಬದಿಯಲ್ಲಿ 150 ಅಡಿ ಜಾಗವನ್ನು ಸರಿಯಾಗಿ ಬಿಡುವ ಹಾಗೆ, ಯಾರೂ ಯಾವುದೇ ಸಾಮಾನುಗಳನ್ನು ತುಂಬಿಸದ ಹಾಗೆ, ಮರಗಳ ರಾಶಿ ಹಾಕದ ರೀತಿ ವ್ಯವಸ್ಥೆ ಮಾಡಬೇಕು. ಮತ್ತು ಉಪ್ಪಿನಂಗಡಿ ಸೇತುವೆ ಬಿರುಕು ಬಿಟ್ಟಿದೆ. ಇದು ಪೇಪರಿನಲ್ಲಿಯೂ ಕೂಡ ಬಂದಿದೆ. ಇದು ಪ್ರಾಮುಖ್ಯವಾದುದು, ಇದರ ಬಗ್ಗೆ ತಾವು ಗಮನಹರಿಸಬೇಕು. ಮತ್ತು ಪಾಣೆಮಂಗಳೂರಿನಲ್ಲಿಯೂ ಇದೇ ರೀತಿ ಆಚೆಗೂ ಹೋಗುವುದಕ್ಕೆ ಸಾಧ್ಯವಿಲ್ಲ. ಈಚೆಗೂ ಹೋಗುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಏನಾದರೂ ವಾಹನಗಳು ನಿಂತರೆ, ನಾವು ಒಂದು, ಒಂದೂವರೆ ಗಂಟೆಗಳ ಕಾಲ ನಿಲ್ಲಬೇಕು. ನಮ್ಮ ಜಿಲ್ಲೆಯ ಮಂತ್ರಿಗಳಿಗೂ ಇದು ಗೊತ್ತಿದೆ, ಆಗಾಗ ಹೋಗುವಾಗ

ನೋಡುತ್ತಿದ್ದಾರೆ. ಆಚೆ ಇರುವವರು ಆಚೆ, ಈಚೆ ಇರುವವರು ಈಚೆ, ಅರ್ಧ ಗಂಟೆ ಕಾಯಬೇಕಾಗುತ್ತದೆ. ಇದಕ್ಕೆ ಏನಾದರೊಂದು ವ್ಯವಸ್ಥೆ ಮಾಡಿ. ಕೆಂಪು ದೀಪವನ್ನು ಆಚೆಗೆ ಮತ್ತು ಈಚೆಗೆ ಹಾಕಿಸಬೇಕು. ಅಲ್ಲದೆ ಅಲ್ಲಿಯ ಸೇತುವೆ ಬಹಳ ಕಿರಿದಾಗಿದೆ. ಎರಡು ವಾಹನಗಳು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ಅದು ತುಂಬಾ ಹಳೆಯ ಸೇತುವೆ, ಅಲ್ಲಿ ಹೊಸ ಸೇತುವೆ ಆಗಬೇಕು. ಇದಕ್ಕೂ ಕೂಡ ಗಮನಹರಿಸಿ, ಕಾರ್ಯಕ್ರಮ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಶಿವಶೇಖರಪ್ಪ ಗೌಡ ಶಿರವಾಲ:– ಅಧ್ಯಕ್ಷರೇ ಬಹಳ ವರ್ಷ ಬೀದರ್‌ನಿಂದ ಹಿರಿಯೂರುವರೆಗೆ ಹೆದ್ದಾರಿ ಇದೆ. ಹಿಂದೆ ಮಾನ್ಯ ದೇವೇಗೌಡರೂ ಈ ರಸ್ತೆ ಪರಿವರ್ತನೆಯಾಗಬೇಕೆಂದು ಹೇಳಿದ್ದರು. ಇವತ್ತು ಈ ರಸ್ತೆ ಏನಾಗಿದೆ ಎಂದರೆ, ಆ ಭಾಗದ ಬಸ್ಸುಗಳಲ್ಲಿ ಓಡಾಡಿ ಬಂದವರಿಗೆ ಗೊತ್ತಾಗುತ್ತದೆ. ಬೆಂಗಳೂರಿನಿಂದ ಗುಲ್ಬರ್ಗಾಕ್ಕೆ ಹೋಗಬೇಕಾದರೆ, ನಮ್ಮ ಪರಿಸ್ಥಿತಿ ಹೇಳುವುದಕ್ಕಾಗುವುದಿಲ್ಲ. ಇದರ ಬಗ್ಗೆ ಸರ್ಕಾರದವರು ಗಮನಹರಿಸಬೇಕು. ನಮ್ಮ ಪಕ್ಕದ ಜಿಲ್ಲೆಗಳಲ್ಲಿ ರಸ್ತೆಗಳು ಸಾಕಷ್ಟು ಸುಧಾರಣೆಯಾಗಿವೆ. ಆದರೆ, ನಮ್ಮಲ್ಲಿರತಕ್ಕ ಬೀದರ್‌ನಿಂದ ಹಿರಿಯೂರು ರಸ್ತೆ ಬಹಳ ದಿವಸಗಳಿಂದ, ಹಾಗೆಯೇ ಇದೆ. ಇದರ ಬಗ್ಗೆ ಸರ್ಕಾರದವರು ಏನೂ ಕ್ರಮ ತೆಗೆದುಕೊಳ್ಳದೇ ಇರುವುದರಿಂದ, ಈಗಲಾದರೂ ತೀವ್ರ ಗಮನಹರಿಸಬೇಕೆಂದು ಹೇಳುತ್ತೇನೆ. ಎರಡನೆಯದಾಗಿ, ಇವತ್ತು ಸುರಪುರ, ಶಹಪುರ ತಾಲ್ಲೂಕುಗಳಿಗೆ ಕಾಮಗಾರಿ ಸಬ್ ಡಿವಿಜನ್ ಒಂದೇ ಇದೆ. ಅದಕ್ಕಾಗಿ ತಾಲ್ಲೂಕಿಗೆ ಒಂದು ಸಬ್ ಡಿವಿಜನ್ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

SRI K.C. MODGEKAR DESAI:– Sir, There is a great necessity for the construction of the following two bridges namely construction of a Bridge at Kangrali (BK) at Market Yard road, and another Bridge at Nilgi on Bellary Nala to approach Sambra Railway Station. The then P.W.D. Minister had visited the spot and assured that the bridges would be constructed. I would like to know the action taken by the Government in this behalf?

ಶ್ರೀ ಎಂ.ಬಿ. ದಿವಟರ್:– ಮಾನ್ಯ ಅಧ್ಯಕ್ಷರೇ, ಕೊಪ್ಪಳದಿಂದ ರಾಯಚೂರುವರೆಗೆ ಒಂದು ರಾಜ್ಯ ಹೆದ್ದಾರಿ ಇದೆ. ಇದರ ಬಗ್ಗೆ ಈಗಾಗಲೇ ಹಂಪನಗೌಡರು ಹೇಳಿದರು. ರಾಯಚೂರು ರಸ್ತೆಗೆ, ಹೆಚ್.ಕೆ.ಡಿ.ಬಿ.ಯಲ್ಲಿ ಎರಡೂವರೆ ಕೋಟಿ ರೂಪಾಯಿಗಳ ಎಸ್ಟಿಮೇಟ್ ಅಪ್ರೂವಲ್ ಆಗಿ, ಕೆಲಸ ಪ್ರಾರಂಭವಾಗಿದೆ.

ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಕೆಲಸವನ್ನು ವಹಿಸುತ್ತೀರಿ. ಆದರೆ ಆತ ಆ ಕೆಲಸವನ್ನು ಮತ್ತೆ ಇನ್ನೊಬ್ಬ ಕಂಟ್ರಾಕ್ಟರ್‌ಗೆ ವಹಿಸುತ್ತಾನೆ. ಈ ಕಂಟ್ರಾಕ್ಟರ್ ಇನ್ನೊಬ್ಬರಿಗೆ ವಹಿಸುತ್ತಾರೆ. ಹೀಗೆ 2–3 ಜನರಿಗೆ ಈ ಕೆಲಸ ವಹಿಸಿಕೊಡುವುದರಿಂದ ಮಧ್ಯವರ್ತಿಗಳಿಗೆ ಹೆಚ್ಚಿನ ಹಣ ಹೋಗುವುದರಿಂದ ಕೆಲಸದ ಕ್ವಾಲಿಟಿ ಮೇಲೆ ಪರಿಣಾಮವಾಗುತ್ತದೆ. ಅದಕ್ಕೆ ಇನ್ನು ಮೇಲೆ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಕೊಟ್ಟ ಮೇಲೆ ಅವರೇ ಆ ಕೆಲಸವನ್ನು ಮಾಡಬೇಕು. ಆವಾಗ ಮಾತ್ರ ಕೊಟ್ಟಂಥ ಹಣ ಮಾತ್ರ ಉಪಯೋಗವಾಗುತ್ತದೆ. ಆಮೇಲೆ ಎಸ್ಟಿಮೇಟ್ಸ್ ಮಾಡುವಲ್ಲಿ ಬಹಳ ತಪ್ಪು ಮಾಡುತ್ತಾರೆ. ರಸ್ತೆ ಅಗಲ ಮಾಡುತ್ತಾರೆ ಮತ್ತು ಸೈಡ್ ಮೆಟಲಿಂಗ್ ಮಾಡುತ್ತಾರೆ. ಅದು ಈಗಾಗಲೇ ಹಾಳಾಗಿ ಹೋಗಿದೆ. ಇಲಿಗಳು ಹೇಗೆ ಕದಡುತ್ತವೆ ಹಾಗೆ ಆಗಿದೆ. ಸೈಡ್ ಮೆಟಲಿಂಗ್ಸ್ ಹಾಗೆ ಮಾಡಿದ್ದಾರೆ ಮಳೆ ಬಂದರೆ ಎಲ್ಲಾ ಮೆಟಲಿಂಗ್ಸ್ ಹಾಳಾಗಿ ಹೋಗುತ್ತದೆ. ಆದನ್ನು ಬದಲಾವಣೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹೊಸದಾಗಿ ರೀಕಾರ್ಪೆಟಿಂಗ್ ಮಾಡುವಾಗ ರಸ್ತೆಗಳನ್ನು ಅಗಲ ಮಾಡುವುದಕ್ಕೆ ಪ್ರಾವಿಜನ್ ಮಾಡಬೇಕು. ಆಗ

ಎರಡು ವಾಹನಗಳು ಓಡಾಡುವುದಕ್ಕೆ ಅನುಕೂಲವಾಗುತ್ತದೆ. ಆಮೇಲೆ ಅಂಕೋಲ-ಜೋಳದ ರಾಶಿ ರಸ್ತೆಯನ್ನು ಬಳ್ಳಾರಿ ಜಿಲ್ಲೆಯವರು ಅಗಲ ಮಾಡಿದ್ದಾರೆ. ಆ ಕಡೆ ಧಾರವಾಡ ಜಿಲ್ಲೆಯವರು ಅಗಲ ಮಾಡಿದ್ದಾರೆ. ರಾಯಚೂರು ಜಿಲ್ಲೆಯಿಂದ ನಮ್ಮ ಭಾಗ ಏನು ಇದೆ ಅದು ಇನ್ನೂ ಬಹಳ ಕಿರಿದಾಗಿದೆ. ಅಲ್ಲಿ ಪುನಃ ಪುನಃ ಆಕ್ಸಿಡೆಂಟ್ಸ್ ಆಗುತ್ತಿರುತ್ತವೆ. ಅದಕ್ಕೆ ದಯಮಾಡಿ ಮಂತ್ರಿಗಳು ಆ ಭಾಗವನ್ನು ಅಗಲ ಮಾಡುವುದಕ್ಕೆ ಹಣ ಒದಗಿಸಬೇಕು. ಇನ್ನು ನನ್ನ ಕ್ಷೇತ್ರದಲ್ಲಿ ರೋಲರ್ ಇಲ್ಲ. ನಾವು ಕೆಲಸ ಮಾಡಬೇಕಾದರೆ ರೋಲರ್ ಬಾಡಿಗೆ ತಂದು ಕೆಲಸವನ್ನು ಪೂರೈಸುತ್ತೇವೆ. ಮತ್ತೆ ಲಾರಿಗಳು ಸಹ ಇಲ್ಲ. ಆದ್ದರಿಂದ ರೋಲರ್ ಮತ್ತು ಲಾರಿಯನ್ನು ಒದಗಿಸಿಕೊಡಬೇಕೆಂದು ನಾನು ಮಾನ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:– ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಸದಸ್ಯರಾದ ಬೈರೇಗೌಡರು ಹೇಳಿದರು. ಹೈದ್ರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಮತ್ತು ಮಲೆನಾಡು ಅಭಿವೃದ್ಧಿ ಮಂಡಲಿ ಆಗಿರುವುದರಿಂದ ಆ ಪ್ರದೇಶಕ್ಕೂ ಸಹ 20 ಲಕ್ಷ ರೂಪಾಯಿಗಳು ಮತ್ತು ನಮಗೂ ಸಹ ಅದೇ 20 ಲಕ್ಷ ರೂಪಾಯಿಗಳು ಕೊಟ್ಟರೆ ಆ ಭಾಗಗಳಿಗೆ ಹೆಚ್ಚಿನ ಅಭಿವೃದ್ಧಿಯಾಗುತ್ತದೆ. ಅವರಿಗೆ ಹೆಚ್ಚಿನ ಕೆಲಸ ಆಗುತ್ತದೆ ಅಂತ ಹೇಳಿದರು. ಆ ಭಾಗಗಳು ಮೊದಲಿನಿಂದ ಹಿಂದುಳಿದ ಭಾಗಗಳು. ಇನ್ನು 10 ವರ್ಷಗಳಾದರೂ ಸಹ ಇದೇ ಪ್ರಕಾರ ಮಂಡಲಿಗಳನ್ನು ಮುಂದುವರಿಸಿದರೂ ಸಹ ಆ ಭಾಗಗಳಿಗೆ ಏನೂ ಲಾಭ ಆಗುವುದಿಲ್ಲ.

ಅಧ್ಯಕ್ಷರು:– ತಾವು ಭಾಷಣ ಮಾಡುವುದಕ್ಕಿಂತ ಕ್ಲಾರಿಫಿಕೇಶನ್ ಕೇಳಿ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:– ನನ್ನ ಕ್ಷೇತ್ರದಲ್ಲಿ ಗುಲ್ಬರ್ಗ ಕೊಡಂಗಲ್ ರಸ್ತೆ ಸೇಡಂ ಮತ್ತು ಅಂಡರಕ್ಕಿ ರಸ್ತೆಗಳಲ್ಲಿ ದೊಡ್ಡ ದೊಡ್ಡ ತಗ್ಗುಗಳು ಬಿದ್ದು ವಾಹನ ಸಂಚಾರಕ್ಕೆ ತೊಂದರೆಯುಂಟಾಗಿದೆ. ಅಲ್ಲದೆ ಮೇಲ್ದರ್ಜೆಗೆ ಏರಿಸಿರುವ ರಸ್ತೆಗಳು ಬಟಗೇರಾ ಮೋತಕಪಲ್ಲಿ ರಸ್ತೆ ಮುಧೋಳ್ ಅಂಡರಕ್ಕಿ ರಸ್ತೆ ಹಾತನೂರು ಹಂದರಕ್ಕಿ ರಸ್ತೆ ಚಿಂಚೋಳಿ ಮತ್ತು ಸೇಡಂ ರಸ್ತೆ ಮಳ್ಖೇಡ್ ಚಿತಾಪುರ ರಸ್ತೆಗಳಲ್ಲಿ ದೊಡ್ಡ ದೊಡ್ಡ ತಗ್ಗುಗಳು ಬಿದ್ದು ಈಗಲೂ ಸಹ ಅಲ್ಲಿ ಯಾವ ಅಭಿವೃದ್ಧಿ ಕೆಲಸ ಆಗದೆ ವಾಹನ ಸಂಚಾರಕ್ಕೆ ತೊಂದರೆ ಆಗಿದೆ. ಆ ಭಾಗಕ್ಕೆ ಮಂಡಲಿ ಹಣ ಅಲ್ಲದೆ ಬಜೆಟ್ ಹಣ ಅಲ್ಲದೆ ಹೆಚ್ಚಿನ ಹಣ ಬಿಡುಗಡೆ ಮಾಡಬೇಕೆಂದು ನಾನು ಮಾನ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೇ, ಶಿವಮೊಗ್ಗದಲ್ಲಿ ಒಂದು ಕುವೆಂಪು ರಂಗಮಂದಿರಕ್ಕೆ ಸುಮಾರು 40 ಲಕ್ಷ ರೂಪಾಯಿಗಳನ್ನು ನಾವು ಈಗಾಗಲೇ ವಿನಿಯೋಗ ಮಾಡಿದ್ದು ಅದು ಅರ್ಧದಲ್ಲೇ ನಿಂತಿದೆ. ಅದು ಸುಮಾರು 1986ನೇ ಇಸವಿಯಲ್ಲಿ ಪ್ರಾರಂಭವಾಗಿದ್ದು ವರ್ಷಕ್ಕೆ ಸರ್ಕಾರ 10 ಲಕ್ಷ 20 ಲಕ್ಷ ಹಣ ಸಹ ಕೊಟ್ಟಿಲ್ಲ. ಈ 40 ಲಕ್ಷದಲ್ಲಿ 32 ಲಕ್ಷದಷ್ಟು ಹಣ ಶಿವಮೊಗ್ಗ ನಗರದ ಜನರ ಹಣ ಸೇರಿದೆ. ಅದಕ್ಕೆ ಸರಿಯಾಗಿ ಸರ್ಕಾರದಿಂದ ಗ್ರ್ಯಾಂಟ್ ಏನು ಬರಬೇಕಾಗಿತ್ತು ಅದು ಬಾರದೆ ಕೆಲಸ ನಿಂತು ಹೋಗಿದೆ. ಈಗ ಎಷ್ಟು ಹಣ ನಾವು ವಿನಿಯೋಗ ಮಾಡಿದ್ದೇವೆ ಅದಕ್ಕೆ ತಕ್ಕಷ್ಟು ಹಣ ಸರ್ಕಾರದಿಂದ ಮ್ಯಾಚಿಂಗ್ ಗ್ರ್ಯಾಂಟ್ ಕೊಡಲಿಲ್ಲ ಅಂತ ಹೇಳಿದರೆ ಈಗ ನಾವು ಖರ್ಚು ಮಾಡಿರುವ ಹಣ ವ್ಯರ್ಥವಾಗುತ್ತದೆ. ಮತ್ತೆ ಶಿವಮೊಗ್ಗ ನಗರದಲ್ಲಿ ಒಂದೇ ಒಂದು ರಂಗಮಂದಿರ ಮಾತ್ರ ಇರುವುದು. ಅದು ಕರ್ನಾಟಕ ಸಂಘದ ಭವನ ಅಂತ. ಅದನ್ನು ಸೀರೆ ಮಾರಾಟಕ್ಕೆ ಕೊಟ್ಟಿದ್ದಾರೆ. ಏಕೆಂದರೆ ಕುವೆಂಪು ರಂಗಮಂದಿರದ ಬಗ್ಗೆ ಅನೇಕ ಸಾಂಸ್ಕೃತಿಕ ಸಂಘಗಳ ಅಭಿಪ್ರಾಯ ಕೂಡ ಮತ್ತು ನಮ್ಮ ಶಿವಮೊಗ್ಗ ನಗರದ ಜನತೆಯ ಅಭಿಪ್ರಾಯ ಏನೆಂದರೆ ಮಾನ್ಯ ಕುವೆಂಪುರವರ ಅಮೃತಹಸ್ತದಿಂದ ಅದನ್ನು ಉದ್ಘಾಟನೆ ಮಾಡಿಸಬೇಕೆಂಬ ಆಸೆ ಇದೆ. ಅವರು ಜೀವಂತವಾಗಿ ಇರಬೇಕಾದರೆ ಅದನ್ನು ಮಾಡಬೇಕು ಅಂತ ನಮ್ಮ ಅನೇಕ ಜನರ ಕೂಗು ಇದೆ. ಅದಕ್ಕಾಗಿ ಆದಷ್ಟು

ಬೇಗ ಈ ವರ್ಷದಲ್ಲಿ ಕನಿಷ್ಟ 35 ಲಕ್ಷ ರೂಪಾಯಿಗಳ ಹಣ ಬಿಡುಗಡೆ ಮಾಡಿದರೆ ಉಳಿದ ಹಣ ಜಿಲ್ಲೆಯ ಜನ ಹಾಕಿಕೊಳ್ಳುವುದಕ್ಕೆ ತಯಾರಾಗಿದ್ದಾರೆ. ಸರ್ಕಾರ ಇದನ್ನು ಗಮನಿಸಿ ಹಣ ಬಿಡುಗಡೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಸಿ. ಸಿದ್ದನಗೌಡರ್:– ಲಿಫ್ಟ್ ಇರಿಗೇಷನ್, ಹಿರೇಹೊನ್ನಹಳ್ಳಿ ಕಲಘಟಗಿ ತಾಲ್ಲೂಕಿನದು ಹೋದ ಸಲ ಬಜೆಟ್‌ನಲ್ಲಿ ಬಂದಿದ್ದು ಈ ಸಲ ಬಜೆಟ್‌ನಲ್ಲಿ ಬರಲಿಲ್ಲ.

ಅಧ್ಯಕ್ಷರು:– ಇದು ಲಿಫ್ಟ್ ಇರಿಗೇಶನ್ ಅಲ್ಲ, ಪಿಡಬ್ಲ್ಯುಡಿ, ಕುಳಿತುಕೊಳ್ಳಿ. ಕ್ಲಾರಿಫಿಕೇಷನ್ ಕೇಳುವುದಕ್ಕೆ ಒಂದು ಗಂಟೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:– ಸುಮಾರು 35 ಸಾವಿರ ಕಿಲೋಮೀಟರ್ ರಸ್ತೆ ಇದೆ ಎಂದು ಹೇಳಿದ್ರಿ. ಅದರಲ್ಲಿ ಸುಮಾರು 15 ಸಾವಿರ ಕಿಲೋಮೀಟರ್‌ನಲ್ಲಿ ಗುಂಡಿ ಬಿದ್ದು ಹಾಳಾಗಿ ಹೋಗಿದೆ. ಈಗ ತಮ್ಮ ನಾಜೂಕು ಪರಿಸ್ಥಿತಿ ನಮಗೆ ಅರ್ಥ ಆಯಿತು. ಹಣ ಇಲ್ಲ. ಒಂದು ನೂರು ಕಿಲೋಮೀಟರ್ ರೀ–ಕಾರ್ಪೆಟಿಂಗ್ ಮಾಡುವ ಬದಲು ಇಡೀ ಕರ್ನಾಟಕ ರಾಜ್ಯದ ಎಲ್ಲಾ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ತುಂಬಿ ಗುಂಡಿ ರಹಿತ ರಸ್ತೆಗಳನ್ನು ಮಾಡಿದರೆ ತಮಗೆ ನೂರು ನಮಸ್ಕಾರ ಹೇಳಬೇಕೆಂದು ನಾನು ನಿಂತಿದ್ದೇನೆ. ಅದಕ್ಕೆ ಏನಾದರೂ ತಾವು ಹೇಳುತ್ತೀರಾ ?

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ರಾಮಕೃಷ್ಣ ಹೆಗಡೆಯವರು ಈ ರಾಜ್ಯದ ಮುಖ್ಯಮಂತ್ರಿ ಇದ್ದಾಗ, ಗೋವಾ ರಾಜ್ಯದ ಮುಖ್ಯಮಂತ್ರಿ ಜೊತೆ ಒಂದು ಮೀಟಿಂಗ್ ಮಾಡಿ ಬೆಳಗಾಂನಿಂದ ಗೋವಾಗೆ ನೇರ ರೋಡ್ ಆಗಬೇಕು, ಇದರಿಂದ 25 ಕಿಲೋಮೀಟರ್ ಕಡಿಮೆಯಾಗುತ್ತಿದೆ ಎಂದು ಆ ರಸ್ತೆಗೆ ಬಜೆಟ್‌ನಲ್ಲಿ ನಾವೂ ಹಣ ಮಂಜೂರು ಮಾಡಿದೆವು, ಅವರೂ ಮಾಡಿದ್ದರು. ಗೋವಾದವರು their portion is completed. Our portion of work is so slow, that for the last 5 years it is going on. If that is completed, 25–30 Kms. distance will be reduced. ಇದನ್ನು ತಮ್ಮ ಗಮನಕ್ಕೆ ಈಗಾಗಲೇ ನಾನು ತಂದಿದ್ದೇನೆ. ತಾವು ಏನು ಡೆವಲಪ್‌ಮೆಂಟ್‌ಗೆ ಸ್ಯಾಂಕ್ಷನ್ ಮಾಡುತ್ತೀರಲ್ಲಾ ಅದನ್ನು You sanction it on the constituency criteria. It is good. For example, Belgaum has got 10 taluk as but has got 18 constituencies. So they will get more money.

ಆದರೆ ಮಲೆನಾಡು ಜಿಲ್ಲೆಯಲ್ಲಿ ಅದರಲ್ಲೂ ಮುಖ್ಯವಾಗಿ ಚಿಕ್ಕಮಗಳೂರು ಜಿಲ್ಲೆಯಲ್ಲಿ, ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಏನಿದೆ ಅಲ್ಲಿ ತಾಲ್ಲೂಕುಗಳು ಹೆಚ್ಚು ಇವೆ, ಕಾನ್ಸ್‌ಟಿಟ್ಯೂಯೆನ್ಸಿಗಳು ಕಡಿಮೆ ಇವೆ. ಹಾಗಾಗಿ ತಾಲ್ಲೂಕು ಲೆವೆಲ್‌ನಲ್ಲಿ ಸ್ಯಾಂಕ್ಷನ್ ಮಾಡುತ್ತೇವೆಂದು ಹೇಳಿದ್ದೀರಿ. ನ್ಯಾಷನಲ್ ಹೈವೇಗಳನ್ನು ಏಷ್ಯನ್ ಬ್ಯಾಂಕ್ ಫಂಡ್‌ನಿಂದ ಹುಬ್ಬಳ್ಳಿ – ಅಂಕೋಲ ಏನು ಮಾಡುತ್ತಿದ್ದೀರಿ, it is a very important work. I request you to visit that once. It is about Rs. 18 crores work. ಏಷ್ಯನ್ ಬ್ಯಾಂಕ್ ಫಂಡ್‌ನಿಂದ ಕೆಲಸ ಚೆನ್ನಾಗಿ ನಡೆಯುತ್ತಿದೆ. ಪ್ರೊಗ್ರೆಸ್ ಚೆನ್ನಾಗಿದೆ. ಇಲ್ಲಿ ಏನಾಗಿದೆ ? I think I have told. I was in North Canara. On the pressure from the local contractors, you have transferred the Executive Engineer and the Assistant Engineer from Yellapur, who were very honest workers. ಅವರನ್ನೇ ಪುನಃ ಹಾಕಿ ಎಂದು ನಾನು ಒತ್ತಾಯ ಮಾಡುತ್ತಿಲ್ಲ. ಆದರೆ ಅಲ್ಲಿ ಆಫೀಸರ್ಸ್ ಇಲ್ಲ. ಅಲ್ಲಿಗೆ ಇಮ್ಮಿಡಿಯಟ್ ಆಗಿ ಆಫೀಸರ್ಸ್‌ನ್ನು ಪೋಸ್ಟ್ ಮಾಡಬೇಕು.

ಶ್ರೀ ಕೆ.ಹೆಚ್. ರಂಗನಾಥ್:– ನಾವು ಯಾರನ್ನೂ ಟ್ರಾನ್ಸ್‌ಫರ್ ಮಾಡಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ದಯವಿಟ್ಟು You check up. They were very honest officers who were transferred. Transfer is your job. I don't want to interfere but at least post Officers there.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):– ಮಾನ್ಯ ಅಧ್ಯಕ್ಷರೇ, ಕಾನ್ಸ್‌ಟಿಟ್ಯೂಯೆನ್ಸಿಗೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ನಾನು ಈಗಾಗಲೇ ಹೇಳಿದೆ, ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ. ಅದನ್ನೆಲ್ಲಾ ನಾನು ಗಮನದಲ್ಲಿಟ್ಟುಕೊಂಡು ಅವರು ಹೇಳಿರುವ ಕೆಲಸಗಳನ್ನು ಮಾಡುವುದಕ್ಕೆ ಆದರೆ ಮಾಡಿ, ಮಾಡುವುದಕ್ಕೆ ಆಗದೇ ಇದ್ರೆ ಏಕೆ ಮಾಡುವುದಕ್ಕಾಗಲಿಲ್ಲವೆಂದು ಪತ್ರ ಬರೆದು ಅವರಿಗೆ ತಿಳಿಸುತ್ತೇನೆ. ಮತ್ತೆ ಕೆಲವು ಮಾನ್ಯ ಸದಸ್ಯರು ಪಾಲಿಸಿ ಬಗ್ಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಹೈದರಾಬಾದ್ ಕರ್ನಾಟಕದ ಬಗ್ಗೆ ಮಾನ್ಯ ಸದಸ್ಯರಾದ ದೀವಿಟರ್‌ರವರು ಹೇಳುತ್ತಿದ್ದರು. 2ಕೋಟಿ ರೂಪಾಯಿ ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪನಿಯವರಿಗೆ ಆಯಿತು, ತದನಂತರ ಮತ್ತೊಬ್ಬರಿಗೆ ಸಬ್–ಲೀಸ್ ಕೊಟ್ಟು ಪುನಃ ಸಬ್ ಲೀಸ್ ಕೊಟ್ಟರು ಹಾಗೆ ಎಂದು ಹೇಳಿ; ಇದೆಲ್ಲಾ ಸರಿಯಲ್ಲ. ಇದರ ಬಗ್ಗೆ ನಾವು ಈಗಾಗಲೇ ಕ್ರಮವನ್ನು ತೀಕ್ಷ್ಣವಾಗಿ ತೆಗೆದುಕೊಂಡಿದ್ದೇವೆ. ಆಮೇಲೆ ಪ್ರೊಫೆಸರ್ ನಂಜುಂಡಸ್ವಾಮಿಯವರು, ಮಾರ್ಚ್ ತಿಂಗಳಲ್ಲಿ ಏನು ಬಿಲ್‌ಗಳನ್ನು ಮಾಡುತ್ತಾರೆ ಅದರ ಬಗ್ಗೆ ಗಮನ ಕೊಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಫೈನಾನ್ಸ್ ಡಿಪಾರ್ಟ್‌ಮೆಂಟ್ ಜೊತೆ ಮಾತನಾಡಬೇಕಾಗುತ್ತದೆ. ಇದರ ಬಗ್ಗೆ ಸೂಕ್ತವಾದ ಸಲಹೆ ಕೊಟ್ಟಿದ್ದಾರೆ. ಅದಕ್ಕೆ ನಾನು ಅವರಿಗೆ ಅಭಾರಿಯಾಗಿದ್ದೇನೆ. ಮೂರು ಮೂರು ತಿಂಗಳಿಗೆ ಹಣ ನಿರ್ವಹಿಸುವುದು ಮತ್ತು ರಿವ್ಯೂ ಮಾಡತಕ್ಕಂಥಾದ್ದನ್ನು ಹೇಳಿದ್ದಾರೆ. ಅದನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಹಾಗೂ ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಡನೆ ಹೇಗೆ ಇದಾಗುತ್ತದೆಂದು ಪ್ರಸ್ತಾಪ ಮಾಡುತ್ತೇನೆ.

ಇನ್ನು ಕಂಟ್ರಾಕ್ಟರುಗಳ ಬಗ್ಗೆ ಮಾನ್ಯ ಜಾಲಪ್ಪನವರು ಪ್ರಮುಖವಾದ ವಿಚಾರವನ್ನು ಹೇಳಿದರು. ಅದರ ಬಗ್ಗೆ ನಾನು ಪ್ರಸ್ತಾಪ ಮಾಡಿದೆ. ಆಗ ಮಾನ್ಯ ಸದಸ್ಯರು ಇರಲಿಲ್ಲ. ಟೆಂಡರ್ ಅಲ್ಲದೆ ಬೇರೆ ರೂಪದಲ್ಲಿ ಕಂಟ್ರಾಕ್ಟ್ ಕೊಡತಕ್ಕಂಥಾದ್ದನ್ನು ನಾವು ನಿಲ್ಲಿಸಿಬಿಡುತ್ತೇವೆಂದು ನಾನು ಆಗಲೇ ಸದನಕ್ಕೆ ಆಶ್ವಾಸನೆ ಕೊಟ್ಟಿದ್ದೇನೆ. ಅನಿವಾರ್ಯವಾಗಿ ಎಲ್ಲೋ ಒಂದೆರಡು ಕಡೆ ಆ ರೀತಿ ಮಾಡತಕ್ಕಂಥ ಪರಿಸ್ಥಿತಿ ಬರಬಹುದು: ಎನ್.ಎಂ.ಆರ್. ಹೆಸರಿನಲ್ಲಿ ಅಧಿಕಾರಿಗಳೇ ಕೆಲಸ ಮಾಡಿಸುತ್ತಾರೆ ಎನ್ನುವ ವಿಚಾರ ನಮಗೆ ಗೊತ್ತಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಸರ್ಕಾರದ ಹಣ ಪೋಲಾಗದ ರೀತಿಯಲ್ಲಿ ಯಾವ ಯಾವ ರೀತಿ ಕ್ರಮ ತೆಗೆದುಕೊಂಡು ಕೆಲಸದ ಗುಣಮಟ್ಟವನ್ನು ಕಾಪಾಡಬೇಕೋ ಆ ರೀತಿ ಮಾಡುವುದಕ್ಕೆ ನಾನು ಗಮನದಲ್ಲಿ ಇಟ್ಟುಕೊಂಡು ಮಾಡುತ್ತೇನೆ. ಇನ್ನು ರೋಡ್‌ಗಳ ಪಕ್ಕದಲ್ಲಿ ಒತ್ತುವಾರಿಯಾಗಿರುವ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ನಾನು ಇದರ ಬಗ್ಗೆ ನಮ್ಮ ಅಧಿಕಾರಿಗಳಿಗೆ ಈಗಾಗಲೇ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇನೆ. ರೋಡಿನ ಮಾರ್ಜಿನ್ ಎಲ್ಲಿಯವರೆಗೆ ಇದೆ ? ಆಯಾ ಸಬ್ ಡಿವಿಷನ್ ಆಫೀಸ್ ಇಂಜಿನಿಯರ್‌ಗಳು ಅದನ್ನು ಮೆಷರ್ ಮಾಡಿ ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳತಕ್ಕಂಥದ್ದು ಮತ್ತು ಅದರ ಕಛೇರಿಯಲ್ಲಿ ಅದಕ್ಕೆ ಸಂಬಂಧಪಟ್ಟಂಥ ದಾಖಲಾತಿಯನ್ನು ಪರ್ಮನೆಂಟ್ ಕಾರ್ಡ್ ಆಗಿ ಇಡತಕ್ಕದ್ದು ಆಗಬೇಕು. ರಸ್ತೆ ಪಕ್ಕದ ಜಾಗ ಬೆಲೆಯಾದ ಜಾಗವಾಗಿರುವುದರಿಂದ ಎಲ್ಲರೂ ಸುಲಭವಾಗಿ ಒತ್ತುವರಿ ಮಾಡುತ್ತಿರುತ್ತಾರೆ. ಇದರ ಬಗ್ಗೆ ಮಾನ್ಯ ಸಿ ಎಂ. ಲಿಂಗಪ್ಪನವರು ಮತ್ತು ಸಿಂಧ್ಯಾರವರು ಸಹ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಅವರ ಒಂದು ಪ್ರಶ್ನೆ ಇತ್ತು. ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಅದು ಅನ್‌ಸ್ಟಾರ್ಡ್ ಆಗಿದೆ. ಬರೀ ಸ್ಟೇಟ್ ಹೈವೇ ಅಲ್ಲ ನ್ಯಾಷನಲ್ ಹೈವೇಯಲ್ಲೂ ಕೂಡಾ ರಸ್ತೆಗಳ ಮಾರ್ಜಿನ್ ಕೆಲಸ ಮಾಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಮಾನ್ಯ ದೇಶಪಾಂಡೆಯವರು ಬೆಳಗಾಂ – ಗೋವಾ ರಸ್ತೆ ಬಗ್ಗೆ ಪ್ರಸ್ತಾಪ

ಮಾಡಿದ್ದಾರೆ. ನಾನು ಅದರ ಬಗ್ಗೆ ವಿಚಾರಿಸುತ್ತೇನೆ. ಮತ್ತೆ ಒಬ್ಬ ಅಧಿಕಾರಿಯನ್ನು ವರ್ಗಾವಣೆ ಮಾಡಿರುವ ಬಗ್ಗೆ ಹೇಳಿದ್ದಾರೆ, ಒಳ್ಳೆಯ ಕೆಲಸ ಮಾಡುವ ಅಧಿಕಾರಿಯನ್ನು ಏಕೆ ವರ್ಗಾವಣೆ ಮಾಡಿದ್ದಾರೆ ಎಂಬ ಬಗ್ಗೆ ವಿಚಾರ ಮಾಡುತ್ತೇನೆ. ಆಮೇಲೆ ಪ್ರತಿ ಕ್ಷೇತ್ರಕ್ಕೆ 50 ಕಿಲೋಮೀಟರ್ ರಸ್ತೆ ಮಾಡಿಸುತ್ತೇನೆಂದು ಹೇಳಿದ್ದೀರಿ, ನಮ್ಮಲ್ಲಿ ಮೂರ್ನಾಲ್ಕು ತಾಲ್ಲೂಕುಗಳು ಬರುತ್ತವೆ; ನಮ್ಮಲ್ಲಿ ತಾಲ್ಲೂಕುಗಳು ಜಾಸ್ತಿ ಇವೆ, ಕ್ಷೇತ್ರಗಳು ಕಡಿಮೆ ಇವೆ, ಇದರಿಂದ ಸ್ವಲ್ಪ ತೊಂದರೆಯಾಗುತ್ತದೆಂದು ನನ್ನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಯೋಚನೆ ಮಾಡುತ್ತಾ ಇದ್ದೇನೆ.

ಯಾವುದೋ ತಾಲ್ಲೂಕಿಗೆ 50 ಕಿಲೋಮೀಟರ್ ಬಂದು ಬಾಕಿ ತಾಲ್ಲೂಕಿಗೆ ಬರದೇ ಇರತಕ್ಕಂಥ ಪರಿಸ್ಥಿತಿ ಬರುತ್ತದೆ. ಅದರಲ್ಲೂ ಮಲೆನಾಡು ಭಾಗದಲ್ಲಿ ಈ ತರಹ ಆಗುತ್ತದೆಂದು ಹೇಳಿದ್ದಾರೆ. ಆಮೇಲೆ ಮಲೆನಾಡು ಪ್ರದೇಶಗಳಲ್ಲಿ ರಸ್ತೆಗಳನ್ನು ಮಾಡುವಾಗ ಪಕ್ಕದಲ್ಲಿ ನೀರು ಹರಿದು ಹೋಗುವುದಕ್ಕೆ ಡ್ರೈನಿಂಗ್ ಇಲ್ಲದೇ ಹೋದರೆ ರಸ್ತೆಗಳು ಹಾಳಾಗುತ್ತವೆಂದು ಮಾನ್ಯ ರುಕ್ಮಯ್ಯ ಪೂಜಾರಿಯವರು ಪ್ರಸ್ತಾಪ ಮಾಡಿದ್ದಾರೆ. ಇದನ್ನು ನಾನು ಗಮನದಲ್ಲಿಟ್ಟುಕೊಂಡು ಆ ಕೆಲಸ ಆಗುವುದಕ್ಕೆ ಅನುಕೂಲ ಮಾಡಿಕೊಡುತ್ತೇನೆಂದು ಹೇಳುತ್ತಾ, ಆಮೇಲೆ ರೋಡ್ ಹಂಪ್ಸ್ ಬಗ್ಗೆ ಮಾತನಾಡಿ ರೋಡ್ ಸೇಫ್ಟಿ ಕಮಿಟಿಗಳ ಸಭೆಯನ್ನು ಆಗಾಗ್ಗೆ ಕರೆದು ಅವರಿಗೆ ಜವಾಬ್ದಾರಿಯನ್ನು ವಹಿಸಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ನಾನು ವಿಚಾರ ಮಾಡುತ್ತೇನೆ. ಮಾನ್ಯ ಆಳ್ವಾ ಅವರು ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್ ರಿಪೇರಿಗಾಗಿ ಒಂದು ಕೋಟಿ ರೂಪಾಯಿ ಖರ್ಚಾಗಿದೆ ಎಂಬ ಮಾತನ್ನು ಹೇಳಿದರು. ನನಗೆ ಅದು ಗೊತ್ತಿರಲಿಲ್ಲ. ಅದಕ್ಕೆ ಸಂಬಂಧಪಟ್ಟಂತೆ ಒಂದು ಸಮಿತಿ ಮಾಡುವುದು ಒಳ್ಳೆಯದು, ಮತ್ತೆ ಇನ್ನೂ ಒಂದೆರಡು ಮೂರು ಲಕ್ಷ ರೂಪಾಯಿ ಕೆಲಸ ಉಳಿದಿದೆ, ಅದರಲ್ಲಿ ಎಸ್ತಿಟಿಕ್ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಅದರ ಬಗ್ಗೆ ವಿಚಾರ ಮಾಡುತ್ತೇನೆ. ಅದಕ್ಕೆ ರೆಂಟ್ ಫಿಕ್ಸ್ ಮಾಡುವ ಬಗ್ಗೆಯೂ ಕೂಡಾ ಕಮಿಟಿ ಮಾಡುವುದು ಒಳ್ಳೆಯದು ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನೆಲ್ಲಾ ನಾನು ಗಮನಲ್ಲಿಟ್ಟುಕೊಂಡು ಸಂಬಂಧಪಟ್ಟ ಅಧಿಕಾರಿಗಳೊಡನೆ ಪ್ರಸ್ತಾಪ ಮಾಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಮತ್ತೆ ಇನ್ನೊಂದು ಮಾನ್ಯ ಲಿಂಗಪ್ಪನವರು ಮತ್ತು ಬೇರೆ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ, ಕೆಲವು ರಸ್ತೆಗಳ ಮೇಲೆ ಲಾರಿಗಳು ದೊಡ್ಡ ಪ್ರಮಾಣದ ಟನೇಜ್ ಜಾಸ್ತಿ ಹಾಕಿಕೊಂಡು ಪ್ರಯಾಣ ಮಾಡುವುದರಿಂದ ರಸ್ತೆ ಹಾಳಾಗುತ್ತದೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಅದನ್ನು ತಕ್ಷಣವೇ ನಿಲ್ಲಿಸುವುದಕ್ಕೆ ಕಷ್ಟ ಆಗಬಹುದೇನೋ, ಗೊತ್ತಿಲ್ಲ. ಆದರೆ ವಿಷಯದ ಬಗ್ಗೆ ಗಮನಿಸುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಎಲ್.ಓ.ಸಿ. ಅದು ಕಾರಣಾಂತರದಿಂದ ಈ ವರ್ಷ ಅಲ್ಲದಿದ್ದರೂ ಮುಂದಿನ ವರ್ಷಕ್ಕಾದರೂ ತಾವು ಏನು ವಿಚಾರ ಪ್ರಸ್ತಾಪ ಮಾಡಿದ್ದೀರಿ ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಸಂಬಂಧಪಟ್ಟವರ ಜೊತೆ ಪ್ರಸ್ತಾಪ ಮಾಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ,

ಇನ್ನು ರಾಜೂಗೌಡರು ಮತ್ತು ಡಾ: ನಂಜಪ್ಪನವರು ಟೋನ್ ಟೆಂಡರ್ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ಆ ಅಭಿಪ್ರಾಯ ಸಾಧುವಾದುದು. ಆದರೆ ಅದನ್ನು ಜಾರಿಗೆ ಕೊಡುವುದಕ್ಕೆ ಕಷ್ಟವಾಗುತ್ತದೆ. ಇನ್ನು ಪ್ರೈವೇಟೈಜೇಷನ್ ಎನ್ನುವ ಮಾತಿನಲ್ಲಿ ಇಲ್ಲಿಗೂ ಬಂದುಬಿಟ್ಟಿದೆ. ಆದರೆ ಅದು ಎಷ್ಟರಮಟ್ಟಿಗೆ ಅನುಕೂಲವಾಗಿ ಆಗುತ್ತದೆ, ಅನುಕೂಲವಾಗುವುದಿಲ್ಲ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಸಮಸ್ಯೆ ದೊಡ್ಡದಾಗಿದೆ. ನಮಗೆ ಹಣ ಬರುತ್ತದೆ ಎನ್ನುವಂತಹ ಮಾತನ್ನು ಕೂಡ ಹೇಳಿದ್ದಾರೆ. ಅದಕ್ಕೆ ತಕ್ಷಣವೇ ಪರಿಹಾರವನ್ನು ನಾನು ಈ ಸಭೆಯಲ್ಲಿ ಹೇಳಲಿಕ್ಕೆ ಸಾಧ್ಯವಾಗುವುದಿಲ್ಲ. ಇನ್ನು ಅಂದಾಜುಗಳು ಇನ್‌ಫ್ಲೇಟೆಡ್ ಎಸ್ಟಿಮೇಟ್ ಆಗುತ್ತದೆ ಅನ್ನುವುದರ ಬಗ್ಗೆ ಮಾನ್ಯ ಬೈರೇಗೌಡರು ಪ್ರಸ್ತಾಪ ಮಾಡಿದ್ದಾರೆ ಮತ್ತು ಬೇರೆ ಸದಸ್ಯರು ಕೂಡ ಮಾಡಿದ್ದಾರೆ. ಡಿಸೈನ್ಸ್ ಆರ್ಕಿಟೆಕ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಇಲ್ಲ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅದನ್ನು ನಾನು

ಈಗಾಗಲೇ ಸಭೆಯ ಗಮನಕ್ಕೆ ತಂದಿದ್ದೇನೆ. ಆ ಇಲಾಖೆಯನ್ನು ಬಹಳ ಸ್ಟ್ರೆಂಥನ್ ಮಾಡಬೇಕಾಗುತ್ತದೆ. ಅಲ್ಲಿ ಬಹಳ ಖಾಲಿ ಹುದ್ದೆಗಳು ಇವೆ, ಮಾನ್ಯ ಕೌಜಲಗಿಯವರು ಕೂಡ ಪ್ರಸ್ತಾಪ ಮಾಡುತ್ತಾ ಧಾರವಾಡದಲ್ಲಿರುವ ಡೆಪ್ಯುಟಿ ಆರ್ಕಿಟೆಕ್ಟ್ ಆಫೀಸ್ ಇದೆ, ಅಲ್ಲಿ ಸಿಬ್ಬಂದಿ ಇಲ್ಲ ಎನ್ನುವಂಥದ್ದನ್ನು ಪ್ರಸ್ತಾಪ ಮಾಡಿದ್ದಾರೆ. ಆ ಎಲ್ಲಾ ಅನಾನುಕೂಲತೆಗಳು ನಮ್ಮ ಗಮನಕ್ಕೆ ಬಂದಿದೆ. ಅದನ್ನೆಲ್ಲಾ ನೋಡಿ ಸಾಧ್ಯವಾದಷ್ಟು ಪರಿಹಾರ ಮಾಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನು ನಾನು ಈಗಾಗಲೇ ಪ್ರಸ್ತಾಪ ಮಾಡಿದ ಹಾಗೆ ಮಾನ್ಯ ಸದಸ್ಯರುಗಳಿಗೆ ಯಾವ ವಿಚಾರಗಳ ಬಗ್ಗೆ ಅವರಿಗೆ ನೇರವಾದಂತಹ ಉತ್ತರವನ್ನು ಹೇಳಲಿಕ್ಕೆ ಸಾಧ್ಯವಾಗಿಲ್ಲ. ಆ ವಿಚಾರಗಳಿಗೆ ಸಂಬಂಧಪಟ್ಟಂತೆ ನಾನು ಪರಿಶೀಲನೆಯನ್ನು ಮಾಡಿ ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತೇನೆ ಎನ್ನುವಂತಹ ಮಾತನ್ನು ಹೇಳುತ್ತೇನೆ.ಇನ್ನು ಮಾನ್ಯ ಅನಂತಕೃಷ್ಣರವರು ಒಂದು ಹೊಸ ವಿಚಾರವನ್ನು ಹೇಳಿದ್ದಾರೆ. ಏನೆಂದರೆ ಬೆಂಗಳೂರಿನಲ್ಲಿರತಕ್ಕಂಥ ಸರ್ಕಾರಿ ಕಟ್ಟಡಗಳು ಏನಿವೆ ಅವುಗಳು ಶಿಥಿಲವಾಗಿವೆ, ಅಷ್ಟೆ ಅಲ್ಲ, ಇನ್ನು ಅಲ್ಲಿ ಬಹಳ ಜಾಗವಿದೆ. ಅದನ್ನು ನೀವು ಖಾಸಗಿಯವರಿಗೆ ಕೊಟ್ಟು ಅವರ ಮುಖಾಂತರ ಕಟ್ಟಡವನ್ನು ಕಟ್ಟಿಸತಕ್ಕಂಥ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು ಅಂತ ಹೇಳಿದ್ದಾರೆ.

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು:– ಅವರು ತಮ್ಮ ಕ್ಲಾರಿಫಿಕೇಷನ್‌ಗಳಿಗೆ ಸಾಕಷ್ಟು ಉತ್ತರ ಕೊಡುತ್ತಿದ್ದಾರೆ. ತಾವು ಮೊದಲು ಅದರ ಬಗ್ಗೆ ಗಮನಕೊಟ್ಟು ಕೇಳಿ.

ಶ್ರೀ ಕೆ.ಹೆಚ್. ರಂಗನಾಥ್:– ನನಗೆ ಒಂದು ಪತ್ರವನ್ನು ಕೂಡ ಬರೆದಿದ್ದಾರೆ. ಅದನ್ನು ಪರಿಶೀಲನೆ ಮಾಡಿಸುತ್ತಿದ್ದೇನೆ. It is a policy matter. ಅದನ್ನು ನಾವು ಪರಿಶೀಲನೆ ಮಾಡಿಸಿದ ನಂತರ ತೀರ್ಮಾನ ಮಾಡುತ್ತೇವೆ.

ಇನ್ನು ಮಾನ್ಯ ಮೋಟಮ್ಮನವರು ಪರ್ಸೆಂಟೇಜ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಇದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ಇವತ್ತು ಇದನ್ನು ನಾವು ಬಿಗಿ ಮಾಡಬೇಕಾದರೆ ಟೆಂಡರ್ ನಾವು ಏನು ಇನ್ಸಿಸ್ಟ್ ಮಾಡುತ್ತಿದ್ದೇವೆ, ಅದನ್ನು ಮಾಡಬೇಕಾದರೆ ಗುತ್ತಿಗೆದಾರರನ್ನು ಹೊಣೆಗಾರರನ್ನಾಗಿ ಮಾಡಬೇಕಾಗುತ್ತದೆ. ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕಾಗುತ್ತದೆ. ಅದನ್ನು ಮಾಡದೇ ಹೋದರೆ ಆಗುವುದಿಲ್ಲ. ಕೊನೆಯ ಬಿಲ್ಲು ಅಂತ ಹೇಳಿ 500–1000–2000–3000 ಇಟ್ಟುಕೊಂಡಿರುತ್ತಾರೆ. ಹಾಗಾದರೆ ಆಗುವುದಿಲ್ಲ. ಅದನ್ನು ಯಾವ ರೀತಿ ಇಬ್ಬರನ್ನೂ ಜವಾಬ್ದಾರರನ್ನಾಗಿ ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರ ವಿಚಾರ ಮಾಡುತ್ತದೆ ಎನ್ನುವಂತಹ ಆಶ್ವಾಸನೆಯನ್ನು ನಾನು ಕೊಡುತ್ತೇನೆ. ಇನ್ನು ಹಂಪ್ಸ್‌ಗಳು ಅದರಲ್ಲಿಯೂ ಮಡಿಕೇರಿ ಭಾಗಕ್ಕೆ ಹೋಗುವಾಗ ರಸ್ತೆ ಚೆನ್ನಾಗಿಲ್ಲ ಎನ್ನುವಂತಹ ಮಾತನ್ನು ಕೂಡ ಹೇಳುತ್ತಿದ್ದರು. ಅದನ್ನೆಲ್ಲ ನಾನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡಿ ಮಾನ್ಯ ಸದಸ್ಯರ ಸಲಹೆಗಳು ಏನಿವೆ ಅವುಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ನಾನು ಪ್ರಯತ್ನ ಮಾಡುತ್ತೇವೆ ಅನ್ನುವಂತಹ ಮಾತನ್ನು ಹೇಳುತ್ತಾ ಮತ್ತೊಮ್ಮೆ ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಬೇಡಿಕೆಗಳನ್ನು ಸದನ ಪಾಸ್ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ದಯಾನಂದರಾವ್:– ಮಾನ್ಯ ಅಧ್ಯಕ್ಷರೆ, ಪೋಲೀಸ್ ಕ್ವಾರ್ಟರ್ಸ್ ಬಗ್ಗೆ ಏನು ಹೇಳಲೇ ಇಲ್ಲ.

ಶ್ರೀ ಕೆ.ಹೆಚ್. ರಂಗನಾಥ್:– ನಾನು ಪತ್ರ ಬರೆಯುತ್ತೇನೆಂದು ಹೇಳಿದ್ದೇನೆ.

ಶ್ರೀ ಬಾಬುರಾವ್ ಚವಾಣ್:– ಹಿರಿಯೂರಿನಿಂದ ಬೀದರ್‌ವರೆಗಿನ ರಾಷ್ಟ್ರೀಯ ಹೆದ್ದಾರಿಯ ಬಗ್ಗೆ ಹೇಳಲಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಕೇಂದ್ರ ಸರ್ಕಾರದಿಂದ 70 ಕೋಟಿ ರೂಪಾಯಿ ಬರಬೇಕಾಗಿದೆ.

ಅಧ್ಯಕ್ಷರು:– ನಾನು ಸಣ್ಣ ನೀರಾವರಿ ಮಂತ್ರಿಯವರನ್ನು ಕರೆದಿದ್ದೇನೆ. ತಾವು ಶುರು ಮಾಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಸಾಲ ಕೇಳಿದ್ದೀರಿ. ಪೆಟ್ರೋಲ್ ಅನ್ನು ಮಾರಾಟ ಮಾಡಿದ್ದರಿಂದ 70 ಕೋಟಿ ರೂಪಾಯಿ ಕೇಂದ್ರದಿಂದ ರಾಜ್ಯಸರ್ಕಾರಕ್ಕೆ ಬರಬೇಕಾಗಿದೆ. ಇದರ ವಸೂಲಿ ಯಾವಾಗ ಮಾಡುತ್ತೀರಾ ? ರಸ್ತೆಗಳು ಹಾಳಾಗಿವೆ, 70 ಕೋಟಿ ರೂಪಾಯಿಯನ್ನು ಕೇಂದ್ರದಿಂದ ರಾಜ್ಯಕ್ಕೆ ತಂದರೆ ನಮ್ಮ ರಸ್ತೆಗಳು ಅಭಿವೃದ್ಧಿ ಆಗುತ್ತವೆ.

ಅಧ್ಯಕ್ಷರು:– ಅವರು ಬರೆದು ಕಳುಹಿಸುತ್ತೇನೆ ಎಂದು ಹೇಳಿದ್ದಾರೆ. ಅವರು ಹೇಳಿದ್ದನ್ನು ನೀವು ಯಾರೂ ಕೇಳಲಿಲ್ಲ ಅಂತ ಕಾಣುತ್ತದೆ. ಎಲ್ಲವನ್ನೂ ಸದನದಲ್ಲಿ ಹೇಳಬೇಕು ಅಂತ ಅಲ್ಲ, ಅವರು ಆಶ್ವಾಸನೆಯನ್ನು ಕೊಟ್ಟಿದ್ದಾರೆ.

† ಡಾ: ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ನಾನು ಬೇಡಿಕೆ ಸಂಖ್ಯೆ 35 ಅನ್ನು ಮಂಡಿಸಿರುತ್ತೇನೆ. ಇದಕ್ಕೆ ಅನುಮೋದನೆಯನ್ನು ಕೇಳಿದ್ದೇನೆ. 13,649.99 ಲಕ್ಷಕ್ಕೆ ಅನುಮೋದನೆಯನ್ನು ಕೇಳಿದ್ದೇನೆ. ಇದರಲ್ಲಿ ಬಂಡವಾಳ ಖಾತೆಯಿಂದ 7097 ಲಕ್ಷ ರೂಪಾಯಿಗಳು, ರಾಜಸ್ವ ಖಾತೆಯಿಂದ 5552.99 ಲಕ್ಷ ರೂಪಾಯಿಗಳು. ಇನ್ನು 1992–93ರಲ್ಲಿ ಬಂಡವಾಳ ಖಾತೆಯಿಂದ 3049.72 ಲಕ್ಷ ರೂಪಾಯಿ ರಾಜಸ್ವ ಖಾತೆಯಿಂದ 5549.85 ಲಕ್ಷ ರೂಪಾಯಿ, ಅಂತಿಮ ಹಂತದಲ್ಲಿ ಅನುದಾನ ನೀಡಿರುವ 500 ಲಕ್ಷ ಇದಕ್ಕೆ ಸೇರಿಸಿ, ಇನ್ನು 1993–94ರಲ್ಲಿ 7079 ಲಕ್ಷ ಬಂಡವಾಳ ಖಾತೆಯಿಂದ ರಾಜಸ್ವ ಖಾತೆಯಿಂದ 5552.99 ಲಕ್ಷ ರೂಪಾಯಿ ಒಟ್ಟು 1992–93ರಲ್ಲಿ 8699.57 ಲಕ್ಷ ರೂಪಾಯಿ. 1993-94 ರಲ್ಲಿ 13,649.99 ಲಕ್ಷ ರೂಪಾಯಿ ಅಂದರೆ ಶೇಕಡ 56.9% ಹೆಚ್ಚುವರಿ ಸಣ್ಣ ನೀರಾವರಿಗೆ ನಮ್ಮ ಸರ್ಕಾರ ಪ್ರಾಮುಖ್ಯತೆ ನೀಡಿದೆ. ಇದೊಂದು ನಿದರ್ಶನವಾಗಿದೆ. ಇನ್ನು ಯೋಜನಾ ಗಾತ್ರ ಕೆರೆ, ಪಿಕ್‌ಅಪ್, ಏತ ನೀರಾವರಿ ಇತ್ಯಾದಿ ಬಾಬ್ತುಗಳಿಗಾಗಿ ಅಂದರೆ 4702 ಹೆಡ್‌ನಲ್ಲಿ 1993–94ನೇ ಸಾಲಿನಲ್ಲಿ 61.17 ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ ಮತ್ತು 1992–93ರಲ್ಲಿ 25.99 ಕೋಟಿ ಅಂದರೆ ಶೇಕಡ 139 ರಷ್ಟು ಹೆಚ್ಚಳವಾಗಿದೆ. ಇನ್ನು ಯೋಜನಾ ಗಾತ್ರ 4711 ಹೆಡ್‌ನಲ್ಲಿ ಅಂದರೆ ಸಮುದ್ರ ಕೊರೆತ ಮತ್ತು ಪ್ರವಾಹ ನಿಯಂತ್ರಣಗಳಿಗಾಗಿ 1992–93ರಲ್ಲಿ 500 ಲಕ್ಷ, 1993–94ರಲ್ಲಿ 1000 ಲಕ್ಷ ಅಂದರೆ ಶೇಕಡ 100ರಷ್ಟು ಹೆಚ್ಚಳವಾಗಿದೆ. ಇನ್ನು 6117 ಲಕ್ಷ ರೂಪಾಯಿಯ ಯೋಜನಾ ಗಾತ್ರ ಯಾವ ಪ್ರಕಾರ ಹಂಚಿಕೆ ಆಗಿದೆ ಅಂದರೆ ಇದರಲ್ಲಿ ಹೊಸ ಕೆರೆಗಳಿಗಾಗಿ 1878.05 ಲಕ್ಷ ರೂಪಾಯಿ. 1993–94ರಲ್ಲಿ ಕೆರೆ ಕಲ್ಯಾಣ ಯೋಜನೆಗೆ 1677.07 ಲಕ್ಷ, ಅಣೆಕಟ್ಟು ಪಿಕಅಪ್ ಬ್ಯಾರೇಜ್‌ಗಳಿಗಾಗಿ 769.15 ಲಕ್ಷ ರೂಪಾಯಿ. ಏತ ನೀರಾವರಿಗಾಗಿ 1394.36 ಲಕ್ಷ, ಏತ ನೀರಾವರಿ ಪುನರುಜ್ಜೀವನಕ್ಕಾಗಿ 1009.57 ಲಕ್ಷ, ಒಣಭೂಮಿಗೆ 25.50 ಲಕ್ಷ ರೂಪಾಯಿ. ಇತರೆ ಸಿಬ್ಬಂದಿ ಸಹಿತ 953.60 ಲಕ್ಷ ಇದು ಒಟ್ಟು 6117, 93–94ರಲ್ಲಿ ಇನ್ನು 1992–93ರಲ್ಲಿ 2999 ಲಕ್ಷ ರೂಪಾಯಿ ಇದೆ. ಇದರಿಂದಾಗಿ ನಮ್ಮ ಸರ್ಕಾರ ಮುಖ್ಯವಾಗಿ ಹೊಸ ಕೆರೆ ನಿರ್ಮಾಣ ಮತ್ತು ಕೆರೆಕಲ್ಯಾಣ ಯೋಜನೆಗಾಗಿ ಮಹತ್ವ ಕೊಟ್ಟಿದೆ. ಕೆರೆಕಲ್ಯಾಣ ಯೋಜನೆ ಅಂದರೆ ಹೂಳೆತ್ತುವುದು ಮತ್ತು ಈ ಪೂರಕ ಕಾಲುವೆಗಳ ದುರಸ್ತಿ ಮತ್ತು ಏತ ನೀರಾವರಿಯ ಬಗ್ಗೆ ಪ್ರಾಮುಖ್ಯತೆಯನ್ನು ನೀಡಿದೆ. ಇದರ ಬಗ್ಗೆ ನಮ್ಮ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇದರ ಬಗ್ಗೆ ಈಗಾಗಲೇ ಹೇಳುವುದಿಲ್ಲ. ಮುಂದಿನ ಸಾರಿ ಡಿಟೈಲ್ ಆಗಿ

ಹೇಳುತ್ತೇನೆ. ಇನ್ನು ಸಣ್ಣ ನೀರಾವರಿಯ ಕಾರ್ಯವ್ಯಾಪ್ತಿಗೆ ಎರಡು ನೂರರಿಂದ ಎರಡು ಸಾವಿರ ಹೆಕ್ಟೇರ್‌ರವರೆಗೆ ಬರುತ್ತದೆ, 40 ರಿಂದ 200 ಹೆಕ್ಟೇರ್‌ರವರೆಗೆ ಜಿಲ್ಲಾಪರಿಷತ್ ಕಾಮಗಾರಿಗಳಿಗೆ ಕೊಟ್ಟಿದ್ದೇವೆ. 92ನೇ ಇಸವಿಯಲ್ಲಿ 40ರಿಂದ 200 ಹೆಕ್ಟೇರನ್ನು ನಮ್ಮ ಇಲಾಖೆಗೆ ವರ್ಗಾಯಿಸಲಾಗಿದೆ. ಈಗ ಕೇವಲ 40 ಹೆಕ್ಟೇರ್ ಮಾತ್ರ ಜಿಲ್ಲಾಪರಿಷತ್ ವ್ಯಾಪ್ತಿಗೆ ಒಳಪಡಿಸಲಾಗಿದೆ. ಇನ್ನು ಸಣ್ಣ ನೀರಾವರಿ ಪ್ರಾಮುಖ್ಯತೆ ಬಗ್ಗೆ ಕರ್ನಾಟಕದ ಭೌಗೋಳಿಕ ವಿಸ್ತರಣ 1.98 ಕೋಟಿ ಹೆಕ್ಟೇರ್‌ನಲ್ಲಿ ಸಾಗುವಳಿಗೆ ಯೋಗ್ಯವಾದ ಜಮೀನು 1.25 ಕೋಟಿ ಹೆಕ್ಟೇರ್. ಇದರಲ್ಲಿ 75 ಭಾಗ ಕಡಿಮೆ ಮಳೆ ಬೀಳುವ ಪ್ರದೇಶ ಅಂದರೆ ಮಲೆನಾಡು ಮತ್ತು ಕರಾವಳಿ ಪ್ರದೇಶ ಬಿಟ್ಟರೆ 75 ಭಾಗ ಕಡಿಮೆ ಮಳೆ ಬೀಳುವ ಪ್ರದೇಶ ಮತ್ತು ಬರಗಾಲಕ್ಕೆ ತುತ್ತಾದ ಪ್ರದೇಶ. ಆದ್ದರಿಂದ ಅವರ ಭೂಮಿಯಲ್ಲಿ ಹೆಚ್ಚು ಇಳುವರಿ ಬರಲು ಅಂದರೆ ಕಡಿಮೆ ಖರ್ಚಿನಿಂದ ಉತ್ತಮ ಫಲಿತಾಂಶ ಕೊಡುವ ಸಲುವಾಗಿ ಸಣ್ಣ ನೀರಾವರಿಗೆ ಆದ್ಯತೆ ಕೊಡಬೇಕೆಂಬುದು ನಮ್ಮ ಸರ್ಕಾರದ ಧ್ಯೇಯ. ಇನ್ನು ಕರ್ನಾಟಕ ರಾಜ್ಯದಲ್ಲಿ ಒಟ್ಟು 4068 ಸಣ್ಣ ನೀರಾವರಿ ಯೋಜನೆಗಳ ಕಾಮಗಾರಿ ಕೆಲಸಗಳು ಇವೆ. ಅಚ್ಚುಕಟ್ಟು ಆಗಿರುವುದು 899631 ಹೆಕ್ಟೇರ್ ಪ್ರದೇಶ. 36639 ಕೆರೆಗಳು ಇವೆ. 40768 ಸಣ್ಣ ನೀರಾವರಿ ಯೋಜನೆಯಲ್ಲಿದೆ. ಇದರಿಂದ ಅಚ್ಚುಕಟ್ಟು 673253 ಹೆಕ್ಟೇರ್ ಇದೆ. ಅಣೆಕಟ್ಟು ಪಿಕಪ್‌ಗಳ ಸಂಖ್ಯೆ 7484. ಇದರಿಂದ ಅಚ್ಚುಕಟ್ಟು 68714 ಹೆಕ್ಟೇರ್ ಮತ್ತು ಇತರೆ 1711 ಪಿಕಪ್‌ಗಳಿಂದ ಅಚ್ಚುಕಟ್ಟು ಆಗುವುದು 63784 ಹೆಕ್ಟೇರ್ಸ್ ಇದೆ. ಏತ ನೀರಾವರಿ 434. ಅದರಿಂದ 93800 ಹೆಕ್ಟೇರ್. ಇದು ನಮ್ಮ ನೀರಾವರಿ ಅಂಕಿ ಅಂಶಗಳು. ಇನ್ನು ಏತ ನೀರಾವರಿ ನಿಗಮದ ಬಗ್ಗೆ, ಕಾವೇರಿ ಮತ್ತು ಕೃಷ್ಣಾ ಈ ಎರಡು ಏತ ನೀರಾವರಿ ನಿಗಮಗಳು 1986ರಲ್ಲಿ ಸ್ಥಾಪನೆಯಾಯಿತು. ಇದರ ಉದ್ದೇಶ ಲಾಭ ನಷ್ಟ ಇಲ್ಲದೆ ಯೋಜನೆಗಳನ್ನು ಮುಗಿಸಿ ರೈತರ ಜಮೀನಿಗೆ ನೀರು ಉಣಿಸಿ ಅದರಲ್ಲಿ ಆರ್ಥಿಕ ಚೈತನ್ಯ ನೀಡುವ ಸಲುವಾಗಿ ಈ ಯೋಜನೆಯನ್ನು 1986ರಲ್ಲಿ ಕೈಗೊಳ್ಳಲಾಯಿತು. ಆದರೆ ಅದರ ಪರಿಣಾಮ ಮಾತ್ರ ಬೇರೆ ಆಯಿತು. ಒಂದು ಎಕರೆಗೆ ಸಹಾ ನೀರು ಕೊಡಲಾರದಂಥ ಪರಿಸ್ಥಿತಿ ಒದಗಿಬಂತು. ಸರ್ಕಾರ ಕೊಟ್ಟ 812.51 ಲಕ್ಷ ರೂಪಾಯಿ ಖರ್ಚಾಗಿದೆ. ಅದರಲ್ಲಿ 620 ಲಕ್ಷ ರೂಪಾಯಿಗಳು ಸಿಬ್ಬಂದಿಗೆ ಖರ್ಚು ಮಾಡಲಾಯಿತು. ಕೇವಲ ಕಾಮಗಾರಿಗಳಿಗೆ 218.31 ಲಕ್ಷ ರೂಪಾಯಿ ಮಾತ್ರ ಖರ್ಚಾಯಿತು. ಆದ್ದರಿಂದ ಸರ್ಕಾರ ಇದನ್ನು 1.4.93 ರಿಂದ ರದ್ದು ಮಾಡಬೇಕೆಂಬ ನಿರ್ಧಾರ ಮಾಡಿದೆ ಮತ್ತು ಈ ಏತ ನೀರಾವರಿಯನ್ನು ಸರ್ಕಾರ ಯಾವ ರೀತಿ ಕಾರ್ಯಗತ ಮಾಡಬೇಕೆಂದುಕೊಂಡಿದೆಯೆಂದರೆ ಮೊದಲು ಶೇ.10ರಂತೆ ಸೀಡ್ ಮನಿ ಎಂದು ಕೊಡಬೇಕು. ನಂತರ ಶೇ. 15 ಫಲಾನುಭವಿಗಳ ವಂತಿಕೆ ಎಂದು ಅವರಿಂದ ಸಂಗ್ರಹಿಸಬೇಕು ಮತ್ತು ಶೇ. 75 ನಬಾರ್ಡ್ ಮತ್ತು ವಾಣಿಜ್ಯ ಬ್ಯಾಂಕ್‌ಗಳಿಂದ ಸಹಾಯ ಪಡೆಯಬೇಕು. ಈ ಯೋಜನೆಯಂತೆ ಏತ ನೀರಾವರಿ ಯೋಜನೆಗಳನ್ನು ನಡೆಸಿಕೊಂಡು ಹೋಗಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ.

ಕೃಷ್ಣ ಮತ್ತು ಕಾವೇರಿ ಕಣಿವೆಗಳಲ್ಲಿ ಕಾಮಗಾರಿಗಳು ಎಷ್ಟಿವೆ ಎಂಬ ಅಂದಾಜನ್ನು ಕೂಡ ಮಾಡಿದ್ದೇವೆ. ಆ ಅಂದಾಜು ಪ್ರಕಾರ ಕೃಷ್ಣ ಕಣಿವೆಯಲ್ಲಿ ಬರತಕ್ಕಂಥ ಯೋಜನೆಗಳು 404 ಎಂದು ಅಂದಾಜು ಮಾಡಲಾಗಿದ್ದು. ಕಾವೇರಿ ಕಣಿವೆಯಲ್ಲಿ 300 ಯೋಜನೆಗಳು ಬರಬಹುದೆಂದು ಅಂದಾಜು ಮಾಡಲಾಗಿದೆ. ಅದರಲ್ಲಿ ಕೃಷ್ಣ ಕಣಿವೆಯಲ್ಲಿ ಸಮೀಕ್ಷೆ ಮಾಡಿರುವುದು ಕೇವಲ 98 ಮತ್ತು ಕಾವೇರಿ ಕಣಿವೆಯಲ್ಲಿ 157 ಎಂದು ಸಮೀಕ್ಷೆ ಮಾಡಲಾಗಿದೆ. ಇವೆರಡೂ ಕೂಡಿ 255; ಇದರಲ್ಲಿ ಕೈಗೆತ್ತಿಕೊಂಡಿರುವುದು ಕೃಷ್ಣ ಕಣಿವೆಯಲ್ಲಿ 8 ಮತ್ತು ಕಾವೇರಿ ಕಣಿವೆಯಲ್ಲಿ 17 ಕಾಮಗಾರಿಗಳು. ಕೃಷ್ಣಾ ಕಣಿವೆಯಲ್ಲಿ ಎಂಟು ಕಾಮಗಾರಿಗಳಿಗೆ ಹಾಗೂ ಕಾವೇರಿ 17 ಕಾಮಗಾರಿಗಳಿಗೆ ನಬಾರ್ಡ್‌ದಿಂದ ಮಂಜೂರಾತಿ ಬಂದಿದೆ. ಈಗ ಕಾವೇರಿ ಕಣಿವೆಯಲ್ಲಿ 3740 ಹೆಕ್ಟೇರ್‌ಗೆ ನೀರಾವರಿ ಒದಗಿಸಬೇಕೆಂದು

ಅಂದಾಜು ಮಾಡಲಾಗಿದೆ. ಹಾಗೇ ಕೃಷ್ಣಾ ಕಣಿವೆಯಲ್ಲಿ ಮೂರು ಯೋಜನೆಗಳಿಂದ 3930 ಹೆಕ್ಟೇರುಗಳಿಗೆ ನೀರಾವರಿ ಒದಗಿಸಬಹುದು ಎಂದು ಅಂದಾಜು ಮಾಡಲಾಗಿದೆ. 19 ಕೃಷ್ಣಾ ಕಣಿವೆ ಯೋಜನೆಗಳಿಗೆ ಹಾಗೂ ಕಾವೇರಿ ಅಡಿಯಲ್ಲಿ ಬರತಕ್ಕ 32 ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ಬಾಕಿ ಇದೆ.

ಇನ್ನೂ ನಿಗಮಗಳಿಗೆ ಸಿಬ್ಬಂದಿಯನ್ನು ನೇಮಕಾತಿ ಮಾಡಿದ್ದು ಕೃಷ್ಣಾ ಕಣಿವೆಯಲ್ಲಿ 166 ಹಾಗೂ ಕಾವೇರಿ ಕಣಿವೆಯಲ್ಲಿ 197 ಮತ್ತು ಎರವಲು ಸೇವೆಯ ಬಗ್ಗೆ ಹೇಳುವುದಾದರೆ ಕೃಷ್ಣ ಏತ ನೀರಾವರಿ ನಿಗಮದಲ್ಲಿ 30 ಹಾಗೂ ಕಾವೇರಿ ಏತ ನೀರಾವರಿ ನಿಗಮದಲ್ಲಿ 27 ಜನರನ್ನು ಪಡೆದುಕೊಳ್ಳಲಾಗಿದೆ. ಒಟ್ಟು ಕೃಷ್ಣಾ ಏತ ನೀರಾವರಿ ನಿಗಮದಲ್ಲಿ 196 ಹಾಗೂ ಕಾವೇರಿ ಏತ ನಿಗಮದಲ್ಲಿ 224 ಜನರು ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆ ಶ್ರೀಮತಿ ಮೋಟಮ್ಮನವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸೂಕ್ತ ಪ್ರಾತಿನಿಧ್ಯ ಈ ನಿಗಮಗಳಲ್ಲಿ ನೀಡಿಲ್ಲ ಎಂದು ಹೇಳಿದ್ದಾರೆ. ಅಲ್ಲಿ ರೋಸ್ಟರ್ ಪ್ರಕಾರ ನೇಮಕಾತಿಗಳನ್ನು ಮಾಡಿಲ್ಲ ಎಂಬುದು ನನ್ನ ಗಮನಕ್ಕೆ ಬಂದಿದೆ.

ಇನ್ನು ನೀರಾವರಿ ಇಲಾಖೆಯ ಗುರಿ ಮತ್ತು ಸಾಧನೆ ಬಗ್ಗೆ ಹೇಳಬೇಕಾದರೆ ಗುರಿ 1992-93 ರಲ್ಲಿ ಆರ್ಥಿಕ 4889 ಲಕ್ಷ, ಸಾಧನೆ 2997 ಲಕ್ಷ, ಭೌತಿಕ ಗುರಿ 9706 ಹೆಕ್ಟೇರು, ಸಾಧನೆ 1195 ಹೆಕ್ಟೇರು. 1993-94ರಲ್ಲಿ ಭೌತಿಕ ಗುರಿ 1400 ಹೆಕ್ಟೇರು ಎಂದು ಗುರಿಯನ್ನು ನಿಗದಿಪಡಿಸಿದ್ದು ಸಾಧನೆ 8014. ಈ ಸಾಧನೆ ತೃಪ್ತಿಕರ ಆಗಿಲ್ಲ ಎಂದು ನಮಗೂ ಕೂಡ ಅನಿಸುತ್ತದೆ. ಕೆಲವು ಕಡೆ ಅದಕ್ಷತೆ ಆಗಿದೆ ಎಂಬುದು ನಮಗೆ ಕಂಡುಬಂದಿದೆ. ಇನ್ನು ಮುಂದೆ ಇಂತಹ ಅದಕ್ಷತೆಯನ್ನು ಸಹಿಸುವುದಿಲ್ಲ ಎಂಬ ಎಚ್ಚರಿಕೆಯನ್ನು ನೀಡುತ್ತಿದ್ದೇನೆ. ಇನ್ನು ಹೂಳು ಎತ್ತುವ ಕಾರ್ಯಕ್ರಮದ ಬಗ್ಗೆ ಹೇಳಬೇಕಾದರೆ ಇದು ಕೆರೆ ಕಲ್ಯಾಣದಲ್ಲಿ ಬರತಕ್ಕ ಒಂದು ಕಾರ್ಯಕ್ರಮ. ಈ ಕಾರ್ಯಕ್ರಮಕ್ಕೆ ಸುಮಾರು 11 ಕೋಟಿ ರೂಪಾಯಿ ಅನುದಾನವನ್ನು ಸಹಿತ ನೀಡಲಾಗಿದೆ. ಈ 11 ಕೋಟಿ ರೂ.ಗಳಲ್ಲಿ ಈ ಕೆರೆ ಕಲ್ಯಾಣ ಯೋಜನೆಯಲ್ಲಿ ಹೂಳು ಎತ್ತುವುದು ಮುಖ್ಯವಾದ ಗುರಿ. ಆಮೇಲೆ ಪೂರಕ ಕಾಲುವೆ ದುರಸ್ತಿ ಈ ಎರಡೂ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ಈ ಹೂಳು ಎತ್ತುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಮೊದಲು ನಾವು ಒಂದು ಮಾತನ್ನು ವಿಚಾರ ಮಾಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಬಹಳಷ್ಟು ಕೆರೆಗಳು ಪುರಾತನವಾಗಿವೆ. ಏತಕ್ಕೆ ಹೂಳು ತುಂಬಿಕೊಳ್ಳುತ್ತವೆ ಎಂಬುದನ್ನು ನಾವು ವಿಚಾರ ಮಾಡಬೇಕು. ಹೂಳು ತುಂಬುವುದಕ್ಕೆ ಕಾರಣ ಮೊದಲು ಡಿ–ಫಾರೆಸ್ಟೇಷನ್, ಕ್ಯಾಚ್‌ಮೆಂಟ್ ಏರಿಯಾದಲ್ಲಿ ಅಕ್ರಮ ಸಾಗುವಳಿ ಮಾಡಿದ್ದಾರೆ. ದನಕರುಗಳಿಗೆ ಮೇಯಿಸುವುದು ಮತ್ತು ಕೆರೆ ಅಂಗಳಗಳನ್ನು ಒತ್ತುವರಿ ಮಾಡುವುದು ಈ ಎಲ್ಲ ಕಾರಣಗಳಿಂದ ಕೆರೆಗಳು ತುಂಬಿಕೊಂಡಿರುವ ಪರಿಸ್ಥಿತಿ ಒದಗಿಬಂದಿದೆ. ಮೊನ್ನೆ ವಾಟಾಳ್ ನಾಗರಾಜ್‌ರವರು ಕೆರೆಗಳು ಮೊದಲು ಯಾವ ರೀತಿ ತುಂಬಿರುತ್ತಿತ್ತು ಎಂಬುದನ್ನು ಹೇಳುತ್ತಾ ಹಿಂದೆ ತೆಪ್ಪೋತ್ಸವ ಮಾಡುತ್ತಿದ್ದರು ಎಂದು ಹೇಳಿದರು. ಈಗ ಅಂಥ ತೆಪ್ಪೋತ್ಸವ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಯಾವ ಕೆರೆಗಳಲ್ಲೂ ನೀರು ಇರುವುದಿಲ್ಲ. ಒತ್ತುವರಿ ಮಾಡಿರುವುದು ನಿಜ, ಆದುದರಿಂದ ಈ ಒಂದು ಕ್ರಮವನ್ನು ತೆಗೆದುಕೊಳ್ಳಬೇಕಾದರೆ ಇದು ಬಹಳ ದುಬಾರಿ ಕಾರ್ಯಕ್ರಮ ಆಗಿರುವುದರಿಂದ ನಾವು ಕೆಲವು ವಿಚಾರಗಳನ್ನು ಗಮನಿಸಬೇಕಾಗಿದೆ. ಮ್ಯಾನ್ಯುಯಲ್ ಮಾಡಬೇಕಾದರೆ 4 – 5 ವರ್ಷ ಹಿಡಿಯುತ್ತದೆ. ಮಾನ್ಯ ಬೈರೇಗೌಡರು ನೆನ್ನೆ ಮಾತನಾಡುತ್ತಾ ಮ್ಯಾನ್ಯುಲ್ ಲೇಬರ್‌ದಿಂದ ಮಾಡಲು ಸಾಧ್ಯವಿಲ್ಲ. ಯಂತ್ರದಿಂದ ಮಾಡಿದರೆ ಉತ್ತಮ ಎಂದು ಹೇಳಿದರು. ಯಂತ್ರಗಳಿಂದ ಮಾಡಿದರೂ 2 – 3 ತಿಂಗಳುಗಳು ಹಿಡಿಯುತ್ತದೆ. ಆದರೂ ಅದು ನಿಜವಾಗಿಯೂ ಅತ್ಯಂತ ಉತ್ತಮವಾದ ಕಾರ್ಯಕ್ರಮ. ಈಗಾಗಲೇ ನಮ್ಮ ಸರ್ಕಾರ ಎರಡು

ಎಕ್ಸ್‌ಕೆವಿಟರ್ಸ್ ಅಂತ ಹೇಳಿ ಯಂತ್ರಗಳನ್ನು ಖರೀದಿ ಮಾಡಿದೆ. ಇನ್ನು ನಾಲ್ಕು ಯಂತ್ರಗಳನ್ನು ಖರೀದಿ ಮಾಡುವ ಯೋಜನೆ ಸರ್ಕಾರಕ್ಕೆ ಇದೆ. ಈ ಒಂದು ಹೂಳೆತ್ತುವ ಕಾರ್ಯಕ್ರಮದ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಒಂದು ಪ್ರಾಧಿಕಾರವಾಗಬೇಕು ಎಂದು ಹೇಳಿದರು. ಕೋಲಾರ ಜಿಲ್ಲೆಯಲ್ಲಿ ಈಗಾಗಲೇ ಒಂದು ಕಾರ್ಯಾಗಾರ ಪ್ರಾರಂಭವಾಗಿದೆ. ಈ ಕೆರೆಗಳ ಬಗ್ಗೆ ಪ್ರಾಧಿಕಾರವಾಗಿ ಕೆರೆಕಲ್ಯಾಣ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು ಎನ್ನುವ ಒಂದು ಕಾರ್ಯಕ್ರಮ ಏನಿದೆ....

ಶ್ರೀ ಸಿ. ಬೈರೇಗೌಡ:- ಪ್ರಾಧಿಕಾರವನ್ನು ನಮ್ಮಲ್ಲಿ ಮಾಡುತ್ತೀರಾ ?

ಡಾ।। ಆರ್.ಬಿ. ಚೌಧುರಿ:- ಮಾಡಿದ್ದೇವೆ. ಈಗಾಗಲೇ ಒಂದು ಕಾರ್ಯಾಗಾರವನ್ನು ಮಾಡಿದ್ದಾರೆ.

ಶ್ರೀ ಸಿ. ಬೈರೇಗೌಡ:- ಬಿಲ್ ಬರಬೇಕಾಗುತ್ತದೆ. ಆ ಬಿಲ್ಲನ್ನು ತಂದು ತಾವು ಈ ಒಂದು ಪ್ರಾಧಿಕಾರವನ್ನು ತಾವು ಮಾಡುತ್ತೀರಾ ?

ಡಾ।। ಆರ್.ಬಿ. ಚೌಧುರಿ:- ಮಾಡುವ ವಿಚಾರ ಇದೆ. ಇದು ಒಂದು ಕೇವಲ ಕೋಲಾರ ಜಿಲ್ಲೆಗೆ ಮಾತ್ರವಲ್ಲ, ಎಲ್ಲಾ ಜಿಲ್ಲೆಗೂ ಅನುಕೂಲವಾಗುವಂಥ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎನ್ನುವ ವಿಚಾರ ಸರ್ಕಾರಕ್ಕೆ ಇದೆ ಎಂದು ಹೇಳುತ್ತೇನೆ ಮತ್ತು ಈ ಒಂದು ದಿಶೆಯಲ್ಲಿ ಕೋಲಾರ ಜಿಲ್ಲೆಯವರು ಬಹಳಷ್ಟು ಕೆರೆಕಲ್ಯಾಣ ಯೋಜನೆಯಲ್ಲಿ ಪ್ರಗತಿಯನ್ನು ಸಾಧಿಸಿದ್ದಾರೆ. ಈ ಹೂಳು ಕೂಡ ಅತ್ಯಂತ ಮಹತ್ವವಾದುದು ಆ ಸಿಲ್ಟ್‌ನಿಂದ ಮೆನ್ಯೂರ್ ಕೂಡ ರೈತರಿಗೆ ಆಗುತ್ತದೆ. ಗೊಬ್ಬರ ಆಗಿ ಅದನ್ನು ಉಪಯೋಗ ಮಾಡಬಹುದು. ಅದರಿಂದ ಒಳ್ಳೆಯ ಇಳುವರಿ ಕೂಡ ಬರುತ್ತದೆ ಮತ್ತು ಸಿಲ್ಟ್‌ನಿಂದ ಬಂಡೆಗಳನ್ನು ಕೂಡ ಹಾಕಬಹುದು. ತಮಗೆಲ್ಲಾ ಗೊತ್ತಿದೆ, ಕೆರೆಗಳಲ್ಲಿ ನೀರಿಲ್ಲ. ಸಿಲ್ಟ್‌ನಿಂದ ಇಟ್ಟಿಗೆಗಳನ್ನು ಸಹಿತ ಎಷ್ಟೋ ಕಡೆ ಮಾಡುತ್ತಿದ್ದಾರೆ. ಆದ್ದರಿಂದ ಈ ಒಂದು ಸಿಲ್ಟ್ ಬಗ್ಗೆ ಈ ರೈತರಿಗೆ ತಿಳಿವಳಿಕೆ ಕೊಟ್ಟು ಅದು ಯಾವ ರೀತಿ ಉಪಯೋಗವಾಗಬೇಕು ಎನ್ನುವುದನ್ನು ಕೂಡ ಕೋಲಾರ ಜಿಲ್ಲೆಯ ಈ ಕಾರ್ಯಗಾರದಲ್ಲಿ ಚರ್ಚೆಯಾಗಿದೆ ಎಂದು ನನಗೆ ತಿಳಿದು ಬಂದ ವಿಷಯ. ನಮ್ಮ ಸರ್ಕಾರ ಒಂದು ಮಾಸ್ಟರ್ ಪ್ಲಾನ್‌ನ್ನು ಹೂಳೆತ್ತುವ ಬಗ್ಗೆ ಮಾಡಿದೆ. 17 ಜಿಲ್ಲೆಗಳಲ್ಲಿ 151 ಕಾಮಗಾರಿಗಳ ಪೈಕಿ 120 ಕೋಟಿ ರೂಪಾಯಿಗಳ ಸಮಗ್ರವಾದ ಒಂದು ಕಾರ್ಯಕ್ರಮವೊಂದನ್ನು ತಯಾರಿಸಿ ಅಭಿವೃದ್ಧಿ ಯೋಜನೆಯಡಿ ವಿಶ್ವ ಬ್ಯಾಂಕ್‌ನ ನೆರವನ್ನು ಕೋರಿ ಕೇಂದ್ರಸರ್ಕಾರಕ್ಕೆ ಈ ಒಂದು ಹೂಳೆತ್ತುವ ಕಾರ್ಯಕ್ರಮದ ಸಲುವಾಗಿ ಕಳುಹಿಸಿಕೊಟ್ಟಿದೆ. ಇನ್ನು ಈ ವಿಶ್ವಬ್ಯಾಂಕಿನ ನೆರವಿನ ಕಾಮಗಾರಿಗಳನ್ನು 1981 – 82ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು. 4 ವರ್ಷದೊಳಗೆ ಈ ಕಾರ್ಯಕ್ರಮಗಳು ಮುಗಿಯಬೇಕಾಗಿತ್ತು. ಆದರೆ 1989ನೇ ಮಾರ್ಚ್‌ವರೆಗೆ ವಿಶ್ವಬ್ಯಾಂಕ್‌ನ ಕಾಲಾವಧಿ ವಿಸ್ತರಣೆಯಿಂದ 78 ಕಾಮಗಾರಿಗಳಿಗೆ ಮಂಜೂರಾತಿ ಸಿಕ್ಕಿದೆ. ಈ 78 ಕಾಮಗಾರಿಗಳಿಂದ 23,968 ಹೆಕ್ಟೇರ್‌ಗೆ ಫಲಪ್ರದವಾಗುತ್ತಿದೆ. ಅದರ ಅಂದಾಜು ಎಸ್ಟಿಮೇಟ್ 131.59 ಕೋಟಿ ರೂ.ಗಳಿವೆ. ಈ 78 ಕಾಮಗಾರಿಗಳಲ್ಲಿ 73 ಪೂರ್ಣವಾಗಿ 1992ನೇ ಡಿಸೆಂಬರ್ ಅಂತ್ಯದೊಳಗೆ 21.211 ಹೆಕ್ಟೇರ್‌ಗೆ ನೀರು ಕೊಡುವುದಕ್ಕೆ ತಯಾರಾಗಿದೆ. ಈ ಸಲ ಇನ್ನು ಅಪೂರ್ಣವಾದ ಕಾಮಗಾರಿಗಳಿಗೆ ಆದ್ಯತೆ ನೀಡಿ 563.30 ಲಕ್ಷ ರೂಪಾಯಿಗಳನ್ನು ನೀಡಿ ಉಳಿದ ಕಾಮಗಾರಿಗಳನ್ನು ಮುಗಿಸುವುದು ಇದೆ. ಇನ್ನು ಚಂಡಮಾರುತ ಮತ್ತು ನೆರೆ ಹಾವಳಿ. ಈ ನವೆಂಬರ್ 91ರಲ್ಲಿ ನಮ್ಮ ಈ ಸಣ್ಣ ನೀರಾವರಿ ಯೋಜನೆಗಳಲ್ಲಿ 485 ಯೋಜನೆಗಳಿಗೆ ಹಾನಿಯುಂಟಾಗಿದೆ. ಆಮೇಲೆ ನವೆಂಬರ್ 1992ರಲ್ಲಿ 380 ಯೋಜನೆಗಳಿಗೆ ಹಾನಿಯಾಯಿತು, ಇವುಗಳನ್ನು ಪ್ರವಾಹ ಪೂರ್ವ ಸ್ಥಿತಿಗೆ ತರುವುದಕ್ಕೆ 1991 ರಲ್ಲಿ 370 ಲಕ್ಷ ರೂಪಾಯಿಗಳು ಬೇಕಾಗಿತ್ತು. 1992 ರಲ್ಲಿ 741.35 ಲಕ್ಷ ರೂಪಾಯಿಗಳು ಬೇಕಾಗಿತ್ತು. ಈ ಒಂದು ತುರ್ತು ದುರಸ್ಥಿಗಾಗಿ 135 ಲಕ್ಷ ರೂಪಾಯಿಗಳು

ಖರ್ಚಾಗಿದೆ. ಈ ಒಂದು ಚಂಡಮಾರುತದಿಂದ ಏನು ಅನಾಹುತ ಆಗುತ್ತಿದೆ, ಇದನ್ನು ತಪ್ಪಿಸುವುದಕ್ಕೋಸ್ಕರ ನಮ್ಮ ಸರ್ಕಾರ ಸಮಗ್ರವಾಗಿ ಶಾಶ್ವತ ಪರಿಹಾರದ ಕಾರ್ಯಕ್ರಮಗಳನ್ನು ಈಗ ಒಂದನೇ ಹಂತದಲ್ಲಿ ಹಮ್ಮಿಕ್ಕೊಳ್ಳಲಾಗಿದೆ. ಇದರಲ್ಲಿ 250 ಸಣ್ಣ ನೀರಾವರಿ ಕೆಲಸಗಳು ಇವೆ. 2875 ಲಕ್ಷ ರೂಪಾಯಿಗಳ ಅಂದಾಜೊಂದನ್ನು ಮಾಡಲಾಗಿದೆ. ವಿಶ್ವಬ್ಯಾಂಕ್‌ನ ನೆರವಿಗಾಗಿ ಕೇಂದ್ರ ಸರ್ಕಾರಕ್ಕೆ ಈ ಯೋಜನೆಯನ್ನು ಕಳುಹಿಸಿಕೊಡಲಾಗಿದೆ.

ಇನ್ನು ಸಮುದ್ರ ಕೊರೆತದ ಸಲುವಾಗಿ ಹೇಳಬೇಕಾಗಿದೆ. ಸಮುದ್ರ ಕೊರೆತದ ಗುರಿ ಮತ್ತು ಸಾಧನೆಗಳ ಬಗ್ಗೆ ಹೇಳಬೇಕೆಂದರೆ, ಆರ್ಥಿಕ ಗುರಿ 1992–93ರಲ್ಲಿ 500ಲಕ್ಷ ಆದರೆ ಸಾಧನೆ ಡಿಸೆಂಬರ್ 1992ರವರೆಗೆ 390.76 ಲಕ್ಷ. ಭೌತಿಕ ಗುರಿ 1992–93ರಲ್ಲಿ ಎರಡು ಕಿಲೋಮೀಟರ್, ಸಾಧನೆ ಡಿಸೆಂಬರ್ 1992ರ ಅಂತ್ಯದವರೆಗೆ 1.61 ಕಿಲೋ ಮೀಟರ್, ಇನ್ನು 1993–94 ರಲ್ಲಿ ಆರ್ಥಿಕ ಗುರಿ ಒಂದು ಸಾವಿರ ಲಕ್ಷ ಹಾಕಿಕೊಂಡಿದ್ದು ಭೌತಿಕ ಗುರಿ 1.5 ಕಿಲೋಮೀಟರ್‌ಗಳಷ್ಟು ಇದೆ. ಈ ಸಮಗ್ರ ಕಾರ್ಯಕ್ರಮ ಏನು ಇದೆ ಇದು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಾತ್ರ ಹಮ್ಮಿಕ್ಕೊಳ್ಳಲಾಗಿದೆ. ಉತ್ತರ ಕನ್ನಡದಲ್ಲಿ 26 ಕಿಲೋಮೀಟರ್ ತಡೆಗೋಡೆ ನಿರ್ಮಿಸುವ ಒಂದು ಯೋಜನೆ ಇದ್ದು, ದಕ್ಷಿಣ ಕನ್ನಡದಲ್ಲಿ 55 ಕಿಲೋಮೀಟರ್ ತಡೆಗೋಡೆ ನಿರ್ಮಿಸುವ ಒಂದು ಯೋಜನೆ ಇದೆ. ಇದರ ಅಂದಾಜು 16,500 ಲಕ್ಷ ರೂಪಾಯಿಗಳು. ಈ ಯೋಜನೆ ಪೂರ್ತಿಗೊಂಡಾಗ ಇದರಿಂದ 1450 ಕುಟುಂಬಗಳಿಗೆ ಕಲ್ಯಾಣವಾಗುತ್ತದೆ. ಆಮೇಲೆ 7623 ಜನರಿಗೆ ಇದರಿಂದ ಆಶ್ರಯ ದೊರೆಯುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಕೆಲವೊಂದು ಕಾಮಗಾರಿಗಳು ಏನು ಇವೆ; ಡಿಪಿಎಪಿ ಅಡಿಯಲ್ಲಿ ತೆಗೆದುಕೊಂಡಿದ್ದು ಅವು ಜಿಲ್ಲಾ ಪರಿಷತ್ತಿನಿಂದ ಪೂರ್ತಿ ಆಗಬೇಕಾಗಿದೆ. ಆದರೆ ಆ ಕಾಮಗಾರಿಗಳು ಪೂರ್ತಿ ಆಗಿಲ್ಲ. ಇದರ ಸಲುವಾಗಿ ಜಿಲ್ಲಾ ಪರಿಷತ್ತಿಗೆ ಸ್ಪಷ್ಟ ಸೂಚನೆಗಳನ್ನು ನೀಡಲಾಗಿದೆ. ಈ ಡಿಪಿಎಪಿ ಅಡಿಯಲ್ಲಿರುವ ಕಾಮಗಾರಿಗಳೆಲ್ಲಾ 1988ರಿಂದ ಅರ್ಧಂಬರ್ಧ ಆಗಿ ಕೆಲಸಗಳು ನಿಂತುಹೋಗಿವೆ. ಇದಕ್ಕೆ ಒಂದು ಕಾರಣ ಕೂಡ ಇದೆ. ಕೇಂದ್ರ ಸರ್ಕಾರ 5 ಲಕ್ಷ ರೂ.ಗಳಿಗಿಂತ ಹೆಚ್ಚು ಇರುವ ಕಾಮಗಾರಿಗಳು ಇದ್ದಲ್ಲಿ ಅದನ್ನು ಸ್ಥಗಿತಗೊಳಿಸಬೇಕು ಎನ್ನುವ ಸೂಚನೆ ನೀಡಿದ್ದರಿಂದ ಈ ಒಂದು ಕನ್‌ಫ್ಯೂಷನ್‌ನಿಂದ ಈ ಒಂದು ಕಾಮಗಾರಿಗಳು ಅರ್ಧಕ್ಕೆ ನಿಂತು ಹೋಗಿವೆ. ಆದ್ದರಿಂದ ಜಿಲ್ಲಾ ಪರಿಷತ್ತುಗಳಿಗೆ ಇದರ ಸಲುವಾಗಿ ಈ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು ಎನ್ನುವ ಸೂಚನೆ ನೀಡಿದ್ದೇನೆ. ಒಂದು ವೇಳೆ ಅವರು ತೆಗೆದುಕೊಳ್ಳಲು ಆಗದಿದ್ದರೆ ಅವುಗಳನ್ನು ಪಟ್ಟಿ ಮಾಡಿ ಅವುಗಳನ್ನು ನಮ್ಮ ಇಲಾಖೆಗೆ ಕಳಿಸಿಕೊಡಬೇಕು. ನಾವಾದರೂ ಅವುಗಳನ್ನು ತೆಗೆದುಕೊಳ್ಳುತ್ತೇವೆಂದು ಈ ಸಮಯದಲ್ಲಿ ಭರವಸೆ ಕೊಡುತ್ತೇನೆ. ಇನ್ನು ಬಜೆಟ್‌ನ ಪ್ಯಾರಾ 43ರಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇರಿಗೇಷನ್ ಫಂಡ್ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ತಾವು ಎಲ್ಲರೂ ಓದಿದ್ದೀರಿ. ಸಣ್ಣ ಬ್ಯಾರೇಜುಗಳು, ಅಣೆಕಟ್ಟುಗಳು ಮುಂತಾದವುಗಳನ್ನು ನಿರ್ಮಿಸಿ ನಿರ್ವಹಿಸುವ ಸಲುವಾಗಿ ಸಹಕಾರ ಸಂಘಗಳನ್ನು ರಚಿಸಿಕೊಳ್ಳಲು ರೈತರಿಗೆ ಸಹ ಉತ್ತೇಜನ ನೀಡಲಾಗುವುದು ಹಾಗೂ ಈ ಸಂಘಗಳಿಗೆ ನೆರವಾಗುವ ಸಲುವಾಗಿ ಮೂಲಧನ ಠೇವಣಿ, ಬಡ್ಡಿ ಸಹಾಯಧನ ಮತ್ತು ನಿರ್ವಹಣಾ ಅನುದಾನಗಳನ್ನು ನೀಡಲಾಗುವುದು'' ಎಂಬ ಮಾತನ್ನು ಹೇಳಿದ್ದಾರೆ. ಇದರಿಂದ ಸ್ಥಳೀಯ ಕ್ರಿಯಾಶಕ್ತಿಗಳಿಗೆ ಪ್ರೋತ್ಸಾಹ ಏನು ಇದೆ ಅದನ್ನು ಕೊಡಲಾಗುತ್ತದೆ ಎಂದು ನಾನು ಹೇಳುತ್ತೇನೆ. ಇನ್ನು ಮಾನ್ಯ ಸದಸ್ಯರುಗಳು ಕೆಲವೊಂದು ಅತ್ಯುಪಯುಕ್ತವಾದ ಸೂಚನೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಮಾನ್ಯ ಏಕಾಂತಯ್ಯನವರು ಪ್ರಚಾರಪ್ರಿಯ ಕಾರ್ಯಕ್ರಮಗಳಿಗೆ ಕಡಿವಾಣ ಹಾಕಬೇಕು ಎಂದು ಹೇಳಿದ್ದಾರೆ. ಇದು ಬಹಳ ಒಳ್ಳೆಯ ವಿಚಾರ. ಇದು ನಮ್ಮ ಇಲಾಖೆಗೆ ಒಂದಕ್ಕೆ ಸಂಬಂಧಪಟ್ಟ ವಿಚಾರವಲ್ಲ ಇಡೀ ಎಲ್ಲ ಇಲಾಖೆಗೆ ಸಂಬಂಧಪಟ್ಟ

ವಿಚಾರವಾಗಿದೆ. ಆಮೇಲೆ ಹೂಳು ಎತ್ತುವುದರ ಬಗ್ಗೆ ಒಂದು ಸಮಗ್ರವಾದ ಯೋಜನೆ ಮಾಡಬೇಕು ಎಂದು ಮಾನ್ಯ ಏಕಾಂತಯ್ಯನವರು, ಮಾನ್ಯ ಬಾಬಾಗೌಡರು, ಮಾಧುಸ್ವಾಮಿ ಅವರು, ಶ್ರೀಮತಿ ಮೋಟಮ್ಮನವರು ಹೇಳಿದ್ದಾರೆ. ಅದರಲ್ಲೂ ಬಾಬಾಗೌಡರು ಬಹಳ ಅತ್ಯುಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಹೂಳು ತುಂಬಿರುವ ಕೆರೆಗಳು ಏನಿವೆ, ಇದನ್ನು ಜನರ ಒಂದು ಕಾರ್ಯಕ್ರಮವನ್ನಾಗಿ ಮಾಡಿ ಪುಕ್ಕಟೆಯಾಗಿ ಜನರಿಗೆ ಟ್ರಾಕ್ಟರ್‌ಗಳನ್ನು ಒದಗಿಸಿದರೆ ಜನರೇ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿ ಹೂಳು ತಮಗೆ ತಾವೇ ತೆಗೆದುಕೊಳ್ಳುತ್ತಾರೆ ಎಂದು ಹೇಳಿದ್ದಾರೆ. ಅದೂ ಅಲ್ಲದೆ ಗೋಕಾಕ್ ತಾಲ್ಲೂಕಿನಲ್ಲಿ ಯಾವುದೋ ಒಂದು ಡ್ಯಾಮ್ ಬಗ್ಗೆ ಹೇಳಿದರು. ಆ ಡ್ಯಾಮ್‌ನಲ್ಲಿ ಇದೇ ಪ್ರಕಾರವಾಗಿ ಡೀಸಿಲ್ಟಿಂಗ್ ಮಾಡಿದ್ದಾರೆ ಎಂಬ ಮಾತು ಕೂಡ ಅವರು ಹೇಳಿದ್ದಾರೆ. ಇದಲ್ಲದೆ ಇನ್ನೂ ಒಂದು ಮಾತನ್ನು ಕೂಡ ಅವರು ಹೇಳಿದರು. ಅಂತರ್ಜಲ ಸರ್ವೆ ಮಾಡಿಸಿ ಪುಕ್ಕಟೆಯಾಗಿ ಕೊಳವೆ ಬಾವಿಗಳನ್ನು ತೆಗೆಸಿದರೆ ರೈತರಿಗೆ ಅನುಕೂಲವಾಗುತ್ತದೆ ಎಂದು ಹೇಳಿದರು. ಗುಳೆ ಹೋಗುವುದು ಸಹಿತ ಇದರಿಂದ ತಪ್ಪುತ್ತದೆ ಎಂದು ಹೇಳಿದ್ದಾರೆ. ಈ ಸಲಹೆ ಅತ್ಯಂತ ಮಹತ್ವವಾದುದು. ಏಕೆಂದರೆ ನಮ್ಮ ಜಿಲ್ಲೆಯಲ್ಲಿ ಏನು ಇದೆ ನಾವು ಕೃಷ್ಣಾ ಯೋಜನೆ ಅಡಿಯಲ್ಲಿ ಬಹಳಷ್ಟು ನಮ್ಮ ಜಮೀನುಗಳನ್ನು ಕಳೆದುಕೊಂಡಿದ್ದೇವೆ. ಜನರು ಈಗಾಗಲೇ ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಿಗೆ ಪ್ರತಿ ವರ್ಷ ಗುಳೆ ಹೋಗುವುದು ಸರ್ವೇ ಸಾಮಾನ್ಯವಾಗಿದೆ. ಇದರಿಂದ ಇವತ್ತು ಈ ಒಂದು ಯೋಜನೆ ಏನು ಇದೆ ಇದನ್ನು ಪರಿಶೀಲಿಸಬೇಕಾದ ಯೋಜನೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆಮೇಲೆ ರೈತರನ್ನು ಸಂಘಟಿಸಿ ವಾಟರ್ ಮ್ಯಾನೇಜ್‌ಮೆಂಟನ್ನು ಕೂಡ ಅವರೇ ಮಾಡಬೇಕು ಅಂದರೆ ಟೇಲ್‌ಎಂಡ್‌ವರೆಗೆ ಇರತಕ್ಕವರಿಗೆ ನೀರನ್ನು ಕೊಡಬಹುದು ಎನ್ನತಕ್ಕ ಮಾತನ್ನು ಕೂಡ ತಾವು ಆಡಿದ್ದೀರಿ. ಅದನ್ನು ಕೂಡ ಪರಿಶೀಲಿಸಲಾಗುತ್ತದೆ.

ಕೆರೆ ಮತ್ತು ಕಾಲುವೆಗಳ ದುರಸ್ತಿಗಾಗಿ ಹೆಚ್ಚಿನ ಆದ್ಯತೆ ನೀಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ ಮತ್ತು ಬಾಬಾಗೌಡ ರುದ್ರಗೌಡ ಪಾಟೀಲರು ನೀರನ್ನು ತಡೆಹಿಡಿಯುವುದಕ್ಕೆ ಪ್ಲಾಸ್ಟಿಕ್ ಗೇಟ್ ಆಗಲಿ ಅಥವಾ ಅದಕ್ಕಿಂತ ಗಟ್ಟಿಯಾದ ಬೇರೆ ಬೇರೆ ವಸ್ತುಗಳಿಂದ ಮಾಡಿದ ಗೇಟುಗಳನ್ನು ಅಳವಡಿಸುವ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದಾರೆ ಅಲ್ಲದೆ, ಈಗ ಇರುವ ಕೆರೆಗಳಿಗೆ ಏತ ನೀರಾವರಿಯಿಂದ ನೀರನ್ನು ಪೂರೈಸಬೇಕೆಂದು ಹೇಳಿದ್ದೀರಿ. ನೀರನ್ನು ತಡೆಗಟ್ಟುವ ಬಗ್ಗೆ ಯಾವ ವ್ಯವಸ್ಥೆ ಮಾಡಬೇಕೆಂಬುದನ್ನು ಪರಿಶೀಲಿಸಲಾಗುತ್ತದೆ ಹಾಗೂ ಕೆರೆಗಳಿಗೆ ಏತ ನೀರಾವರಿಯಿಂದ ನೀರನ್ನು ಪೂರೈಸುವುದು ತಾಂತ್ರಿಕ ವಿಷಯವಾಗಿರುವುದರಿಂದ ಇದಕ್ಕೆ ಸಂಬಂಧಪಟ್ಟಂಥ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಬಗ್ಗೆ ನಿಗಾವಹಿಸಲಾಗುವುದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಶ್ರೀಮತಿ ಮೋಟಮ್ಮನವರು ಮಾತನಾಡುತ್ತಾ, ಏತ ನೀರಾವರಿ ನಿಗಮದಲ್ಲಿ ರೋಸ್ಟರ್ ಪದ್ಧತಿಯನ್ನು ಪಾಲಿಸದೆ ಹುದ್ದೆಗಳನ್ನು ಸೃಷ್ಟಿಸಲಾಗಿದೆಯೆಂದು ಹೇಳಿದರು. ಈ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದೆಂದು ಹೇಳುತ್ತೇನೆ. ಹಾಗೆಯೇ ಮೂಡಿಗೆರೆ ತಾಲ್ಲೂಕಿನಲ್ಲಿ ಕೆಲವೊಂದು ಏತ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿದ್ದು, ಕೆಲವನ್ನು ತೆಗೆದುಕೊಂಡಿಲ್ಲವೆಂದು ಹೇಳಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಆಡಳಿತಾತ್ಮಕ ಮಂಜೂರಾತಿ ಯಾವ ರೀತಿಯಾಗಿದೆ, ಆ ಪ್ರಕಾರ ಕೈಗೆತ್ತಿಕೊಳ್ಳಲಾಗುವುದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಜಿಲ್ಲಾ ಪರಿಷತ್ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಗೆ ವರ್ಗಾಯಿಸಿದ್ದರೂ ಗ್ರಾಂಟ್ ವರ್ಗಾಯಿಸಿಲ್ಲದಿರುವುದರ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಕೆರೆಗಳ ರಕ್ಷಣೆ ಬಗ್ಗೆ ಕೆರೆ ಅಭಿವೃದ್ಧಿ ಮಂಡಳಿ ರಚಿಸುವಂತೆ ಹೇಳಿದ್ದನ್ನು

ಗಮನದಲ್ಲಿಟ್ಟುಕೊಂಡಿದ್ದೇನೆ. ಮಾನ್ಯ ಬೈರೇಗೌಡರು ಹೂಳೆತ್ತುವ ಬಗ್ಗೆ ಹೇಳಿದ್ದಾರೆ. ಈ ಕುರಿತು ಕೋಲಾರ ಜಿಲ್ಲೆ ಬಗ್ಗೆ ನನಗೆ ಎಷ್ಟು ಮಾಹಿತಿ ಸಿಕ್ಕಿದೆಯೋ ಅಷ್ಟನ್ನೂ ಹೇಳಿದ್ದೇನೆ.

ಶ್ರೀ ಎಂ.ವಿ. ವೆಂಕಟಪ್ಪ:- ಕೋಲಾರ ಜಿಲ್ಲೆಯಲ್ಲಿ ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂಬುದರ ಬಗ್ಗೆ ತಾವು ದಯವಿಟ್ಟು ಒಂದು ಸಲ ಬಂದು ನೋಡಿದರೆ ತಮಗೆ ಹೆಚ್ಚಿನ ಪರಿಚಯವುಂಟಾಗುತ್ತದೆ. ಈಗಾಗಲೇ 2 – 3 ಕೆರೆಗಳ ಕಾಮಗಾರಿ ಕೆಲಸ ಮುಕ್ತಾಯಗೊಂಡಿದೆ. ಈ ಬಗ್ಗೆ ಒಂದು ಡಿಸ್ಟ್ರಿಕ್ಟ್ ಪ್ಲಾನ್ ಮಾಡಿ 'ಟ್ಯಾಂಕ್ ಡೆವಲಪ್‌ಮೆಂಟ್ ಅಥಾರಿಟಿ' ಎಂದು ಮಾಡಿ. ಇಲ್ಲಿಂದ ಕೇವಲ ಒಂದು ಗಂಟೆ ಪ್ರಯಾಣವಾಗುತ್ತದೆ. ತಾವು ಒಂದು ದಿವಸ ಬನ್ನಿ ನಾವು ತೋರಿಸುತ್ತೇವೆ.

ಡಾ।। ಆರ್.ಬಿ. ಚೌಧುರಿ:- ಖಂಡಿತವಾಗಿಯೂ ಭೇಟಿ ಕೊಟ್ಟು ಇದರ ಬಗ್ಗೆ ಗಮನ ಕೊಡುತ್ತೇನೆ. ಇನ್ನು ನಾರಾಯಣಸ್ವಾಮಿಯವರು "Tank Development Authority" ಬಗ್ಗೆ ಹೇಳಿದರು. ಕೋಲಾರ ಜಿಲ್ಲೆಯ ಸದಸ್ಯರುಗಳೆಲ್ಲರೂ ಸಹ ಅದೇ ವಿಷಯವನ್ನು ಪ್ರಸ್ತಾಪಿಸಿದ್ದೀರಿ. ಸನ್ಮಾನ್ಯ ಸದಸ್ಯರಾದ ಇದಿನಬ್ಬನವರು ಸಮುದ್ರ ಕೊರೆತದ ಬಗ್ಗೆ ಮಾತನಾಡಿ ಸಮುದ್ರದ ಕೊರೆತದಿಂದ ಉಳ್ಳಾಲದ ಶೇಕಡಾ 15ರಿಂದ 20ರಷ್ಟು ಭಾಗ ಮುಳುಗಡೆಯಾಗಿದೆ ಎಂದು ಹೇಳಿದರು. ಅದಕ್ಕೆ ಈಗಾಗಲೇ 450 ಮೀಟರ್ ತಡೆಗೋಡೆ ನಿರ್ಮಾಣವಾಗಿದ್ದು, ಅದನ್ನೂ ಕೂಡ ಸರಿಯಾಗಿ ನಿರ್ಮಿಸಿಲ್ಲ ಇದಕ್ಕಾಗಿ ಈಗಾಗಲೇ ಒಂದು ಕೋಟಿ 30 ಲಕ್ಷ ರೂಪಾಯಿಗಳು ಖರ್ಚಾಗಿದೆಯೆಂದು ಹೇಳಿದರು. ಆದರೆ, ಅಷ್ಟು ಹಣ ಸಹ ಖರ್ಚಾಗಿಲ್ಲ ಎಂದು ಹೇಳಿದ್ದಾರೆ. ನಾನು ಆ ಸ್ಥಳಕ್ಕೇ ಬಂದು ನೋಡಿ ಅಲ್ಲಿ ನಿಮಗೆ ಏನು ಸಹಾಯ ಸೌಕರ್ಯಗಳು ಬೇಕೋ ಅದನ್ನು ಒದಗಿಸಿಕೊಡುತ್ತೇನೆಂದು ಈಗಾಗಲೇ ಅವರಿಗೆ ನಾನು ಭರವಸೆ ಕೊಟ್ಟಿದ್ದೇನೆ. ಅಲ್ಲದೆ, ಅವರು ತಮ್ಮ ಭಾಷಣದ ಸಂದರ್ಭದಲ್ಲಿ "ಕರಾವಳಿ ಜನರಿಗೆ ವಿಪತ್ತು ಗಟ್ಟಿಮುಟ್ಟು" ಎಂಬ ಬಗ್ಗೆ ಒಂದು ಪದ್ಯವನ್ನು ಸಹ ಹಾಡಿದ್ದಾರೆ. ಇನ್ನು ಷೆಡ್‌ಶ್ಯಾಲರವರು "ತಲಕಳಲೆ" ಯೋಜನೆಯನ್ನು ಕರ್ನಾಟಕ ಮತ್ತು ಮಹಾರಾಷ್ಟ್ರ ಸರ್ಕಾರಗಳವರಿಬ್ಬರೂ ಜಂಟಿಯಾಗಿ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಇದರ ಬಗ್ಗೆ ಮಹಾರಾಷ್ಟ್ರದಿಂದ ಏನೂ ಪ್ರಸ್ತಾವನೆ ಬಂದಿಲ್ಲ.

ಶ್ರೀ ಈರಪ್ಪ ಮಾರೇಪ್ಪ ಷೆಡ್‌ಶ್ಯಾಲ:- ತಾವು ಅವರಿಗೆ ಪತ್ರವನ್ನು ಬರೆದು ಮಾಹಿತಿಯನ್ನು ಕೊಡಿ ಎಂದು ಕೇಳದೆ ಅವರು ಹೇಗೆ ನಿಮಗೆ ಉತ್ತರವನ್ನು ಕೊಡುತ್ತಾರೆ. ಇದರ ಬಗ್ಗೆ ನಾನು ಸರ್ಕಾರಕ್ಕೆ ಮೂರು ವರ್ಷದಿಂದ ಹೇಳುತ್ತಿದ್ದೇನೆ. ತಾವು ಇದರ ಬಗ್ಗೆ ಅವರಿಗೆ ಒಂದು ಪತ್ರವನ್ನು ಬರೆಯುವುದಿಲ್ಲವೆಂದರೆ ಏನು ಅರ್ಥ ? ಇಷ್ಟೊಂದು ಸೀರಿಯಸ್ ಆದ ವಿಷಯವನ್ನು ಇಷ್ಟೊಂದು ಸಿಂಪಲ್ ಆಗಿ ಪರಿಗಣಿಸಿದರೆ ಹೇಗಾಗುತ್ತದೆ ?

ಡಾ।। ಆರ್.ಬಿ. ಚೌಧುರಿ:- ನಾವು ಅವರಿಗೆ ಪತ್ರವನ್ನು ಬರೆದಿದ್ದೇವೆ, ಆದರೆ ಅವರಿಂದ ಏನಾದರೂ ಇದ್ದರೆ ಉತ್ತರ ಬರಬಹುದು ಎಂದು ತಿಳಿದಿದ್ದೇವೆ, ಅದು ಇನ್ನೂ ಕೂಡ ಬಂದಿಲ್ಲ. ಆ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಈರಪ್ಪ ಮಾರೇಪ್ಪ ಷೆಡ್‌ಶ್ಯಾಲ:- ಮುಖ್ಯಮಂತ್ರಿಗಳು ಮತ್ತು ಭಾರಿ ನೀರಾವರಿ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಇದನ್ನು ಸೀರಿಯಸ್ ಆಗಿ ತೆಗೆದುಕೊಂಡು ಮಹಾರಾಷ್ಟ್ರ ಸರ್ಕಾರದವರೊಂದಿಗೆ ವ್ಯವಹಾರ ಮಾಡಿ ಈ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂದು ಕೇಳಬಯಸುತ್ತೇನೆ.

ಡಾ।। ಆರ್.ಬಿ. ಚೌಧುರಿ:- ತಾವು ಹೇಳಿದಂತೆ ಮಹಾರಾಷ್ಟ್ರ ಸರ್ಕಾರದ ಜೊತೆ ಪತ್ರವ್ಯವಹಾರ ಮಾಡುತ್ತೇವೆಂದು ಈ ದಿಸೆಯಲ್ಲಿ ಹೇಳುತ್ತೇನೆ. ಇದರ ಜೊತೆಗೆ ಅಗರಾಣಿ ನದಿಗೆ ಬ್ರಿಡ್ಜ್ ಇದೆ.

ಅಲ್ಲಿಗೆ ಒಂದು ಲಾಂಚನ್ನು ಹಾಕಬೇಕೆಂದು ಹೇಳಿದ್ದೀರಿ, ಇದು ನಮ್ಮ ಬಿಜಾಪುರ ಜಿಲ್ಲೆಯ ನೆರೆ ತಾಲ್ಲೂಕಿನ ಜನರ ಬೇಡಿಕೆಯಾಗಿದೆ, ಇದು ನನಗೆ ಗೊತ್ತಿದೆ.

ಶ್ರೀ ಈರಪ್ಪ ಮಾರೇಪ್ಪ ಷೆಡ್‌ಶ್ಯಾಲ:- ದಯಮಾಡಿ ಇದರಲ್ಲಿ ಒಂದೆರಡು ಕೆಲಸಗಳನ್ನಾದರೂ ಈ ಯೋಜನೆಯಲ್ಲಿ ಸೇರಿಸಬೇಕು. 3 – 4 ವರ್ಷಗಳಿಂದ ನಮ್ಮ ಅಥಣಿ ತಾಲ್ಲೂಕಿನಲ್ಲಿ ಯಾವ ಕೆಲಸವೂ ಆಗಿಲ್ಲ. ಈ ವರ್ಷದ ಬಜೆಟಿನಲ್ಲಿ ಅದು ಬಂದಿಲ್ಲ, ಆದ್ದರಿಂದ ಮುಖ್ಯಮಂತ್ರಿಗಳು ಸಪ್ಲಿಮೆಂಟರಿ ಬಜೆಟನ್ನು ತಯಾರು ಮಾಡುವಾಗ, ಅಪ್ರೊಪ್ರಿಯೇಷನ್ ಬಿಲ್‌ನಲ್ಲಿ ಇಲ್ಲಿನ 2 – 3 ಕೆಲಸಗಳನ್ನು ಸೇರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಡಾ।। ಆರ್.ಬಿ. ಚೌಧುರಿ:- ಅದನ್ನು ಮಾಡುತ್ತೇನೆ. ಇನ್ನು ಮಾನ್ಯ ಮಂಜುನಾಥ್ ಕುನ್ನೂರ್ ಕುಣುಮೇನಳ್ಳಿ ಮತ್ತು ಕಳಸೂರು ಬ್ಯಾರೇಜ್ ನಿರ್ಮಾಣ ಮಾಡುವ ಸಲುವಾಗಿ ಹೇಳಿದ್ದಾರೆ. ಈ ಎರಡು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪ್ರಯತ್ನ ನಡೆದಿದೆ. ಈ ಕುಣುಮೇನಳ್ಳಿ ಬ್ಯಾರೇಜ್ ಕೆಲಸ ಏನಿದೆ ಅದು ಡಿಪಿಎಪಿಯ ಅಡಿಯಲ್ಲಿ ಇದ್ದುದರಿಂದ ಸ್ವಲ್ಪ ಸಮಸ್ಯೆ ಉದ್ಭವವಾಯಿತು. ಇದು ಜಿಲ್ಲಾ ಪರಿಷತ್‌ನವರಿಂದ ಆಗಬೇಕಾಗಿತ್ತು, ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ. ಇನ್ನು ಏತ ನೀರಾವರಿಯ ಬಗ್ಗೆ ಹೇಳಿದ್ದೀರಿ. ಈ ಏತ ನೀರಾವರಿಯ ಪದ್ಧತಿಯನ್ನು ರದ್ದುಪಡಿಸಬಾರದು ಎಂದು ಹೇಳಿದ್ದೀರಿ. ಹಾಗೆಯೇ ಕೆರೆಕಲ್ಯಾಣ ಯೋಜನೆಯ ಬಗ್ಗೆ ಮತ್ತು ಹೂಳು ತೆಗೆಯುವ ಬಗ್ಗೆ ಹೇಳಿದ್ದೀರಿ. ಮಾನ್ಯ ಯಡಿಯೂರಪ್ಪನವರು ಸಣ್ಣ ನೀರಾವರಿಗೆ ಮತ್ತು ಅದರ ಪ್ರಗತಿಗೆ ಖರ್ಚು ಮಾಡಿರುವುದು ಕಡಿಮೆ ಇದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಅಷ್ಟು ಗಮನಕ್ಕೆ ತರುವುದಾದರೆ ನಾವು ಈ ಸಲ ನಿರ್ದಿಷ್ಟವಾದ ಅವಧಿಯೊಳಗೆ ಈ ಕಾಮಗಾರಿಯನ್ನು ಮುಗಿಸಲು ಈ ಇಲಾಖೆಯನ್ನು ಚುರುಕುಗೊಳಿಸುತ್ತೇವೆಂದು ಇಷ್ಟು ಮಾತ್ರ ಹೇಳುತ್ತೇನೆ. ಇನ್ನು ಮಾನ್ಯ ವೀರೇಂದ್ರ ಪಾಟೀಲರು ಏತ ನೀರಾವರಿ ನಿಗಮಗಳನ್ನು ವೈಂಡ್‌ಅಪ್ ಮಾಡಬಾರದೆಂದು ಹೇಳಿದ್ದಾರೆ. ಆದರೆ ಈಗಾಗಲೆ ಈ ಏತ ನೀರಾವರಿ ನಿಗಮಗಳನ್ನು ಏಪ್ರಿಲ್ ಒಂದರಿಂದ ರದ್ದುಪಡಿಸಬೇಕೆಂಬ ತೀರ್ಮಾನವನ್ನು ತೆಗೆದುಕೊಂಡು ಆ ಕಾಮಗಾರಿಗಳನ್ನು ಇಲಾಖೆಯ ವತಿಯಿಂದ ಮಾಡಿಸಲು ಕ್ರಮ ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದಲ್ಲದೆ ನಮ್ಮ ಹುಲ್ಲಪ್ಪ ಯಮನಪ್ಪ ಮೇಟಿಯವರು 60 ಲಕ್ಷದಲ್ಲಿ 12 ಲಕ್ಷ ಮಾತ್ರ ಖರ್ಚಾಗಿದೆ ಎಂದು ಹೇಳಿದ್ದಾರೆ. ಮತ್ತು ಈ ಕೆಲಸ ಏಕೆ ಇದು ಇಷ್ಟು ಮಂದಗತಿಯಲ್ಲಿ ನಡೆಯುತ್ತಿವೆ ಎಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಮಾನ್ಯ ಯಡಿಯೂರಪ್ಪನವರಿಗೆ ಕೊಟ್ಟ ಉತ್ತರವನ್ನೇ ಕೊಡಬೇಕಾಗುತ್ತದೆ. ಮತ್ತೆ ಬಿಜಾಪುರ ಜಿಲ್ಲೆಯಲ್ಲಿ ಪ್ರತಿ 5 ಕಿ.ಮೀ.ಗೆ ಒಂದರಂತೆ ಬ್ಯಾರೇಜ್‌ನ್ನು ಕಟ್ಟಬೇಕೆಂದು ಸಲಹೆ ಮಾಡಿದ್ದಾರೆ. ಅವರು ಹೇಳಿದ್ದು ನಿಜ. ಈ ಜಿಲ್ಲೆಯಲ್ಲಿ 5 ನದಿಗಳಿದ್ದರೂ ಸಹ ಕುಡಿಯಲು ನೀರಿಲ್ಲ. ಪಂಜಾಬಿನಲ್ಲಿ 5 ನದಿಗಳು ಇರುವಂತೆ ಇಲ್ಲೂ 5 ನದಿಗಳಿದ್ದರೂ ಕೂಡ ಒಂದು ಪಂಜಾಬ್‌ನಂತಿದ್ದರೂ ಸಹ ಇಲ್ಲಿ ಕುಡಿಯಲು ನೀರಿಲ್ಲ. ಇದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. ಇನ್ನು ನಮ್ಮ ಮಾನ್ಯ ಮಹದೇವಪುರವರು ಬಹಳ ದಿನಗಳಿಂದ ಹೆಜ್ಜಾಲ ಮತ್ತು ಕೆಂಬಾಳೆ ಏತ ನೀರಾವರಿಯ ಕಾಮಗಾರಿಯನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಮಹದೇವ್:- ತಮಗೆ ನಾನು ಒಂದು ಸಲಹೆ ಕೊಟ್ಟಿದ್ದೆ. ಕಪಿಲಾ ನದಿಯ ಸಂಗಮದ ಹತ್ತಿರ ಒಂದು ಏತ ನೀರಾವರಿಯನ್ನು ಮಾಡಿಕೊಟ್ಟರೆ ಅದರಿಂದ ಸುಮಾರು 5000 ಎಕರೆಗೆ ಅನುಕೂಲವಾಗುತ್ತದೆಂದು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದರ ಜೊತೆಗೆ ಮನವಿಯನ್ನೂ ಕೂಡ ಕೊಟ್ಟಿದ್ದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಡಾ।। ಆರ್.ಬಿ. ಚೌಧುರಿ:– ತಮ್ಮ ಮನವಿ ಬಂದಿದೆ. ಅದನ್ನು ನೋಡಿ ಕಳುಹಿಸಿಕೊಟ್ಟಿದ್ದೇನೆ. ಇಷ್ಟನ್ನು ಹೇಳಿ ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸುತ್ತೇನೆಂದು ಹೇಳಿ ಈ ನನ್ನ ಇಲಾಖೆಯ ಬೇಡಿಕೆಗಳಿಗೆ ಅನುಮೋದನೆ ನೀಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಎಸ್. ನಾಡಗೌಡ:– ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪರಿಷತ್ತಿನ ವತಿಯಿಂದ ಗಂಗಾ ಕಲ್ಯಾಣ ಯೋಜನೆಯನ್ನು ರೂಪಿಸಿದ್ದೇವೆ. ಹಲವಾರು ಪ್ರಸ್ತಾವನೆಗಳನ್ನೂ ಕೂಡ ನಾವು ಜಿಲ್ಲಾಪರಿಷತ್ತಿಗೆ ಕೊಟ್ಟಿದ್ದೆವು. ಅವುಗಳನ್ನೆಲ್ಲಾ ಸಣ್ಣ ನೀರಾವರಿ ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ಇದುವರೆಗೂ ಒಂದೇ ಒಂದು ಯೋಜನೆಯನ್ನೂ ಕೂಡ ತೆಗೆದುಕೊಂಡಿಲ್ಲ. ಇದು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿದ್ದಾಗ ಕೊನೇ ಪಕ್ಷ 3 – 4 ಯೋಜನೆಗಳನ್ನಾದರೂ ತೆಗೆದುಕೊಳ್ಳುತ್ತಿದ್ದೆವು. ಆದರೆ ಈಗ ಒಂದೂ ಆಗಿಲ್ಲ.

ಇನ್ನು ಎರಡನೆಯದಾಗಿ, ಲಿಫ್ಟ್ ಇರಿಗೇಷನ್ ಮಾಡಬೇಕೆಂದು ಏನು ಯೋಚನೆ ಇದೆ, ಅದಕ್ಕೆ ಬದಲಾಗಿ ತಾವು ಟ್ಯಾಂಕ್‌ಗಳ ಮುಖಾಂತರ ಮಾಡುವಂಥ ಯೋಜನೆಗಳನ್ನು ಹಾಕಿಕೊಳ್ಳಬೇಕು. ತಮಗೆ ಗೊತ್ತಿರುವಂತೆ ಬೋರ್‌ವೆಲ್ಸ್ ಡ್ವಿಂಡಲ್ ಆಗುತ್ತಿವೆ. ಎಕಲಾಜಿಕಲ್ ಡಿಸಾಸ್ಟರ್ ಬೋರ್‌ವೆಲ್‌ನಿಂದ ಕ್ರಿಯೇಟ್ ಆಗುತ್ತದೆಂಬುದನ್ನು ಪ್ರತಿಯೊಬ್ಬರೂ ಮನಗಂಡಿದ್ದಾರೆ. ವಾಟರ್ ಪರ್ಕುಲೇಷನ್ ಇಲ್ಲ. ವಾಟರ್ ಟೇಬಲ್ ಸರಿಯಾಗಿ ಮೇನ್‌ಟೇನ್ ಆಗುತ್ತಿಲ್ಲವೆಂಬುದು ಗೊತ್ತಿದೆ. ನೀವು ಬೋರ್‌ವೆಲ್ಸ್‌ನ್ನು ಕೊರೆಸಿದರೂ 2–3ವರ್ಷದಲ್ಲೇ ಡ್ವಿಂಡಲ್ ಆಗುತ್ತಿವೆ. ತಮ್ಮ ಅಧಿಕಾರಿಗಳಿಗೆ ಒಂದು ಆದೇಶ ನೀಡಬೇಕು. ಅವರು ತಮ್ಮ ಕಛೇರಿಯಲ್ಲೇ ಕುಳಿತು ಟೋಪೋ ಶೀಟನ್ನು ತೆಗೆದು ಲ್ಯಾಂಡ್ ಪ್ರೊಫೈಲ್‌ನ್ನು ತೆಗೆದುಕೊಂಡು ಅಲ್ಲೇ ಕುಳಿತು ಎಲ್ಲೆಲ್ಲಿ ಟ್ಯಾಂಕ್‌ಗಳು ಬರುತ್ತವೆಂಬುದನ್ನು ಹೇಳಬಹುದು. ಅದನ್ನು ಇವರು ಮಾಡುವುದಕ್ಕೆ ತಯಾರಿಲ್ಲ. ಇಂಥ ಕಡೆ ಒಂದು ಕೆರೆಯನ್ನು ಕಟ್ಟಬೇಕೆಂದು ಹಳ್ಳಿಯ ಜನರು ಮನವಿ ಕೊಟ್ಟಿದ್ದಾರೆ. ಅದನ್ನು ಮಾಡಬೇಕೆಂದು ಶಾಸಕರು ಹೋಗಿ ಒತ್ತಾಯಪೂರ್ವಕವಾಗಿ ಕೇಳಿದಾಗ ಒಮ್ಮೊಮ್ಮೆ ಅವರು ಬಂದು ಸರ್ವೆ ಮಾಡುತ್ತಾರೆ. ನಂತರ ಆ ಪ್ರೊಪೋಸಲ್‌ನ್ನು ಎಲ್ಲಿ ಕೈಬಿಡುತ್ತಾರೋ ಗೊತ್ತಿಲ್ಲ. ನಮ್ಮ ಅವಧಿ ಇರತಕ್ಕದ್ದು 5 ವರ್ಷ.

ಅಷ್ಟರಲ್ಲಿ ಇನ್ನೊಬ್ಬ ಯಾರಾದರೂ ಆರಿಸಿ ಬಂದರೆ ಅದು ಅಲ್ಲೇ ಉಳಿಯುತ್ತದೆ. ಆಸಕ್ತಿ ಇರುವವರು ಮಾಡಿಕೊಂಡು ಹೋಗುತ್ತಾರೆ. ಆದ್ದರಿಂದ ಅಧಿಕಾರಿಗಳ ಮೇಲೆ ಹೆಚ್ಚಿನ ಒತ್ತಡವನ್ನು ತಾವು ಹೇರಬೇಕು. ಎಲ್ಲೆಲ್ಲಿ ಹೊಸ ಕೆರೆಗಳನ್ನು ಮಾಡುವುದಕ್ಕೆ ಸಾಧ್ಯವಿದೆ, ಎಲ್ಲೆಲ್ಲಿ ಫೀಸಿಬಿಲಿಟಿ ಇದೆ ಎಂಬುದನ್ನು ನೋಡಿಕೊಂಡು ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್‌ನ್ನು ವೈಂಡ್‌ಅಪ್ ಮಾಡಬೇಕೆಂದು ಸರ್ಕಾರ ಏನು ತೀರ್ಮಾನ ಮಾಡಿದೆ ಆ ವಿಚಾರವನ್ನು ಪುನರ್ ಪರಿಶೀಲನೆ ಮಾಡಬೇಕು. ಏಕೆಂದರೆ ಈಗಾಗಲೇ ಅದು ವೆಲ್ ಎಸ್ಟಾಬ್ಲಿಷ್ಡ್ ಕಾರ್ಪೋರೇಷನ್ ಆಗಿದೆ. ಆದರೆ ಅದಕ್ಕೆ ನೀವು ದುಡ್ಡು ಕೊಡುತ್ತಿಲ್ಲ. ನಿನ್ನೆ ನಾನು ಹೇಳಿದ್ದೇನೆ. ತಾವು ಇಲಾಖೆಯ ಮಂತ್ರಿಯಾದ ಮೇಲೆ ಇಲಾಖೆಗೆ ಸಾಕಷ್ಟು ಹಣವನ್ನು ಇಡದಿದ್ದರೆ ಏನು ಪ್ರಯೋಜನ ? ನಿಮ್ಮ ಸಾಧನೆಯನ್ನು ತೋರಿಸಬೇಕಾದರೆ ಅದಕ್ಕೆ ಸರಿಯಾಗಿ ಹಣವನ್ನೊದಗಿಸಬೇಕು. ಕಾರ್ಪೋರೇಷನ್‌ನ್ನು ವಜಾ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಬಿಜಾಪುರದಲ್ಲಿ ನಾವು ಹೊಸದಾಗಿ ಒಂದು ಕಛೇರಿಯನ್ನು ತೆಗೆದುಬಂದಿದ್ದೇವೆ. ಈ ರೀತಿ ಒಬ್ಬ ಮಂತ್ರಿ ಬಂದಾಗ ಮುಚ್ಚತಕ್ಕದ್ದು, ಇನ್ನೊಬ್ಬ ಮಂತ್ರಿ ಬಂದಾಗ ತೆರೆಯುವಂಥಾದ್ದು ಒಂದು ರೀತಿಯ ಹುಡುಗಾಟಿಕೆಯಾಗುತ್ತಿದೆ. ಈ ಕಾರ್ಪೋರೇಷನ್‌ಗೆ ಹೆಚ್ಚಿನ ಹಣವನ್ನೊದಗಿಸಬೇಕು. ಈಗಾಗಲೇ ಅಲ್ಲಿ

ನೇಮಕಾತಿಯನ್ನು ಮಾಡಿಕೊಂಡಿದ್ದೀರಿ. ನಾಳೆ ಕೃಷ್ಣಾ ಬೇಸಿನ್‌ಗೆ ರಿಕ್ರೂಟ್‌ಮೆಂಟ್ ಮಾಡಬೇಕೆಂದು ಹೇಳುತ್ತೀರಿ. ಆಗ ಬೇಕಾದರೆ ಬ್ಯಾಕ್‌ಲಾಗನ್ನು ತುಂಬಿಕೊಳ್ಳಿ. ಈ ಹಿಂದಿನ ಸರ್ಕಾರದವರು ತಮಗೆ ಬೇಕಾದ ಯಾರನ್ನೋ ತುಂಬಿಕೊಂಡಿದ್ದಾರೆಂಬ ಉದ್ದೇಶದಿಂದ ಅವರನ್ನು ಕಿತ್ತು ಹಾಕಬೇಕೆಂದು ತಾವು ಹೇಳುವುದಾದರೆ ಇದು ಎಲ್ಲಿಗೆ ಹೋಗುತ್ತದೆಂದು ಯೋಚನೆ ಮಾಡಿ. ರೋಸ್ಟರ್ ಸಿಸ್ಟಮ್ ಫಾಲೋ ಆಗಿಲ್ಲದಿದ್ದರೆ ಬ್ಯಾಕ್‌ಲಾಗ್‌ನಲ್ಲಿ ಫಿಲಪ್ ಮಾಡಿಕೊಳ್ಳಿ ಎಂದು ಒತ್ತಾಯ ಮಾಡುತ್ತೇನೆ.

ಡಾ।। ಆರ್.ಬಿ. ಚೌಧುರಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ನಾಡಗೌಡರು ಹೇಳಿದಂತೆ ಆಗಬಹುದು.

ಶ್ರೀ ವೈ.ಕೆ. ರಾಮಯ್ಯ:– ಕೆರೆಕಲ್ಯಾಣ ಎಂದು ಒಂದು ನೂತನ ಕಾರ್ಯಕ್ರಮ ಇದರಲ್ಲಿ ಸೇರಿದೆ. ನನ್ನ ಅಭಿಪ್ರಾಯದಲ್ಲಿ ಇದು ಹೊಸ ಕಾರ್ಯಕ್ರಮವೇನೂ ಅಲ್ಲ. ಹಳೇ ಕಾರ್ಯಕ್ರಮಕ್ಕೆ ಕೊಟ್ಟಿರತಕ್ಕ ಹೊಸ ಹೆಸರು ಅಷ್ಟೆ. ಬಹುಶಃ ಬೃಹತ್ ನೀರಾವರಿ ಸಮಸ್ಯೆಗೆ ತದ್ವಿರುದ್ಧವಾದ ಸಮಸ್ಯೆ ಇದು. ಅಲ್ಲಿ ಹಣದ ಕೊರತೆ ಇದೆ. ಆದರೆ ಇಲ್ಲಿ ಹಣದ ಕೊರತೆ ಇಲ್ಲ. ನಾನು ಮಾನ್ಯಮಂತ್ರಿಗಳಿಂದ ಒಂದು ಕ್ಲಾರಿಫಿಕೇಷನ್ ಕೇಳಬಯಸುತ್ತೇನೆ. ಅನೇಕ ವರ್ಷಗಳಿಂದ ಕೆರೆಗಳು ಮುಚ್ಚಿಹೋಗಿವೆ. ಇತ್ತೀಚೆಗೆ ಕೆರೆಗಳು ಹೆಚ್ಚಿನ ರೀತಿಯಲ್ಲಿ ಮುಚ್ಚಿ ಹೋಗಿರುವುದಕ್ಕೆ ಕಾರಣವೆಂದರೆ ನಾನು ಮೊನ್ನೆ ಒಬ್ಬ ನೀರಾವರಿ ತಜ್ಞರ ಜೊತೆ ಮಾತನಾಡುವಾಗ ಇದಕ್ಕೆ ಪ್ರಮುಖವಾದ ಕಾರಣವನ್ನು ಅವರ ಭಾಷೆಯಲ್ಲೇ ಹೇಳುವುದಾದರೆ because of the rape you have committed on the nature. ಅಂತ ಹೇಳಿದರು. ಹಿಂದಿನ ದಿನಗಳಲ್ಲಿ ಅತಿ ಹೆಚ್ಚಿನ ನೀರು ಹರಿದುಬರುತ್ತಿದ್ದ ಜಾಗಗಳಲ್ಲಿ ಕಾಡು ಇತ್ತು. ಆ ಜಾಗವನ್ನು ನಾವು ಉಳುಮೆ ಮಾಡುತ್ತಿರಲಿಲ್ಲ. ಇತ್ತೀಚೆಗೆ ಆ ಜಾಗಗಳನ್ನು ಹೆಚ್ಚಾಗಿ ಉಳುಮೆ ಮಾಡುತ್ತಿದ್ದೇವೆ. ಇದರಿಂದಾಗಿ ಕೆರೆಗಳಿಗೆ ನೀರು ಸರಾಗವಾಗಿ ಹರಿದುಬರುತ್ತಿದೆ. ಅದನ್ನು ಸಿಲ್ಟ್ ಎಂದು ತಾವು ಕರೆಯುತ್ತೀರಿ. ನಾವು ಇದನ್ನು ಉಸುಕು, ಮರಳು ಎಂದು ಕರೆಯುತ್ತೇವೆ. ಈ ಕೆರೆ ಕಲ್ಯಾಣದ ಕಾರ್ಯಕ್ರಮದಡಿಯಲ್ಲಿ ಈ ಕೆರೆಗೆ ತುಂಬಿಕೊಂಡಿರತಕ್ಕ ಹೂಳನ್ನು ಎತ್ತುವ ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಂಡಿದ್ದಾರೆ.

ನಾನು ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಈ ಮಣ್ಣನ್ನು ತೆಗೆದುಕೊಂಡು ಹೋಗಿ ಎಲ್ಲಿ ಹಾಕುತ್ತೀರಾ ಸ್ವಾಮಿ ? ಇದನ್ನು ಏನಾದರೂ ನಿಮ್ಮ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೀರಾ ? ಇದರ ಬಗ್ಗೆ ದಿನಗಟ್ಟಲೆ ಚರ್ಚೆಯಾಗಿದೆ. ಬಹುಶಃ ನನಗೆ ತಿಳಿದ ಮಟ್ಟಿಗೆ ಯಾವ ತಂತ್ರಜ್ಞರು ಸಹ ಒಂದು ಸರಿಯಾದ ಮಾರ್ಗವನ್ನು ಈ ದಿಸೆಯಲ್ಲಿ ತೋರಿಲ್ಲ. ನಿಮ್ಮ ಹತ್ತಿರ ದುಡ್ಡಿದೆ. ಹೋದ ವರ್ಷ ಕೂಡ 5 ಕೋಟಿ ರೂಪಾಯಿಗಳನ್ನು ಇದಕ್ಕೆ ಕೊಟ್ಟಿದ್ದಾರೆ. ಎಲ್ಲೂ ಖರ್ಚಾಗಿಲ್ಲ. ಹಾಗೆಯೇ ಇದೆ. ಆ ಕಾರಣದಿಂದ ಇದಕ್ಕೆ ಹಣದ ಕೊರತೆ ಇಲ್ಲ. ತಾಂತ್ರಿಕವಾದಂಥ ಕೊರತೆ ಇದೆ. ಆದ್ದರಿಂದ ಈ ಕೆರೆಯಲ್ಲಿರತಕ್ಕಂಥ ಹೂಳನ್ನು ಏನು ಮಾಡುತ್ತೀರಾ ? ಎಲ್ಲಿಗೆ ತೆಗೆದುಕೊಂಡು ಹೋಗುತ್ತೀರಾ ? ಅದರ ಪ್ರಮಾಣ ಇದೆಯಲ್ಲ, ಇದು ಬಹಳ ದೊಡ್ಡ ಪ್ರಮಾಣ. ಇದನ್ನು ಏರಿಗೆ ಹಾಕುವುದರಿಂದ ಪ್ರಯೋಜನವಾಗುವುದಿಲ್ಲ. ಸೋರಿಗೆ ಒತ್ತರಿಸುವಂಥ ಒಂದು ಕೆಲಸವನ್ನು ನಮ್ಮ ತಾಲ್ಲೂಕಿನ ಬೆಟ್ಟಳ್ಳಿ ಎಂಬ ಊರಲ್ಲಿ ಮಾಡಿದರು. ಈ ವರ್ಷ ಹಿಂದಕ್ಕೆ ಒತ್ತರಿಸುತ್ತಾರೆ. ಮುಂದಿನ ವರ್ಷ ಮಳೆ ಬಂದರೆ ಕೆರೆಗೆ ಬರುತ್ತದೆ. ಇದು ಎಲ್ಲಿಯವರೆಗೆ ಚಿಂತನೆ ನಡೆದಿದೆ ಎಂದರೆ, ಮಂತ್ರಿಗಳು ಗಮನಿಸಬೇಕು, ಇದನ್ನು ಕೆರೆಯ ಏರಿಯನ್ನೇ ಹೊಡೆದು ಹಾಕಿಬಿಡುವುದು, ಕೊಚ್ಚಿಕೊಂಡು ಹೋದ ಮೇಲೆ ತಿರುಗಿ ಏರಿ ಕಟ್ಟಿಕೊಡುವುದು ಎಂದು ಒಂದು ಯೋಚನೆ. ಆಮೇಲೆ ಅದನ್ನು ಕದಡಿಬಿಟ್ಟು ಬಿಟ್ಟು ಬಿಡುವುದು. ಒಳಗಡೆ ಮಣ್ಣು ಇದೆಯಲ್ಲ ಆ ಉಸುಕು ಆಚೆ ಹೋಗುವಂತೆ ಕದಡಿಬಿಟ್ಟು ಅದನ್ನು ಆಚೆಗೆ ಬಿಟ್ಟುಬಿಡುವುದು. ಅದು ಒಂದು ಯೋಚನೆ. ಅಲ್ಲಿ ಐಲ್ಯಾಂಡ್‌ಗಳನ್ನು ಕ್ರಿಯೇಟ್ ಮಾಡುವುದು ಕೆರೆಯ ಅಂಗಳದಲ್ಲಿ ಒತ್ತರಿಸಿ ಒತ್ತರಿಸಿ, ಇದು ಒಂದು ಯೋಚನೆ. ಹೀಗೆ ತಂತ್ರಜ್ಞರು

ಮುಚ್ಚುತ್ತಿರುವಂಥ ಕೆರೆಯಲ್ಲಿನ ಹೂಳನ್ನು ಎತ್ತಲಿಕ್ಕೆ ಅನೇಕ ಆಲೋಚನೆಗಳನ್ನು ಇಟ್ಟುಕೊಂಡಿರುತ್ತಾರೆ. ಈಗ ಕಾರ್ಯರೂಪಕ್ಕೆ ತರುವಂಥ ಆಲೋಚನೆ ತಮ್ಮದು ಏನೆಂಬುದನ್ನು ದಯವಿಟ್ಟು ತಿಳಿಸುತ್ತೀರಾ ? ಬಹುಶಃ ನಾನು ಈ ಯೋಜನೆಯಲ್ಲಿ ಕೆರೆ ಕಲ್ಯಾಣವಾಗುವುದಿಲ್ಲ. ನೀವು ದುಡ್ಡನ್ನು ಕೊಟ್ಟರೆ ಕಂಟ್ರಾಕ್ಟರುಗಳ ಕಲ್ಯಾಣವಾಗುತ್ತದೆಂದು ತಿಳಿದುಕೊಂಡಿರುತ್ತೇನೆ. ದಯವಿಟ್ಟು ತಾವು ಈ ಬಗ್ಗೆ ಏನು ಯೋಚನೆ ಇಟ್ಟುಕೊಂಡಿರುತ್ತೀರಾ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಟಿ.ಬಿ. ಜಯಚಂದ್ರ:– ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಡಿ.ಪಿ.ಎ.ಪಿ. ವ್ಯಾಪ್ತಿಯಲ್ಲಿ ಬರತಕ್ಕಂಥ ಅಪೂರ್ಣವಾಗಿರತಕ್ಕಂಥ ಎಲ್ಲ ಕೆಲಸಗಳನ್ನು ಕೂಡ ಜಿಲ್ಲಾ ಪರಿಷತ್ತಿನ ವತಿಯಿಂದ ಮಾಡಿಸುತ್ತೇವೆನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಮತ್ತೆ ಹೇಳಬೇಕಾದರೆ 5 ಲಕ್ಷ ರೂಪಾಯಿಗಳ ವ್ಯಾಪ್ತಿಗೆ ಮೀರಿದಂತಾದರೆ ಪಟ್ಟಿ ಮಾಡಿ ನಮಗೆ ಕಳುಹಿಸಿ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ. ಅಂದ ಹಾಗೆ ನನಗನಿಸುತ್ತದೆ, ನಿಮ್ಮಿಂದ ಬರತಕ್ಕಂಥ 5 ಲಕ್ಷ ರೂಪಾಯಿಗಳಲ್ಲಿ ಏನು ಕೆಲಸ ಕೂಡ ಆಗುವುದಿಲ್ಲ. ಈಗ ಅಪೂರ್ವವಾಗಿರತಕ್ಕಂಥ ಕೆಲಸವೆಂದರೆ 10 ಲಕ್ಷ 15 ಲಕ್ಷ 20 ಲಕ್ಷಕ್ಕೆ ಇರತಕ್ಕಂಥದ್ದೆ.

ನೀವು ಜಿಲ್ಲಾಪರಿಷತ್ತಿಗೆ ತೆಗೆದುಕೊಳ್ಳಿ ಎಂದರೆ ಅವರು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಏತಕ್ಕೆಂದರೆ ಅವರ ಹಣಕಾಸಿನ ಪರಿಸ್ಥಿತಿಯಲ್ಲಿ ಅವರಿಗೆ ಪರ್ಮಿಟ್ ಮಾಡುವುದಿಲ್ಲ. ಅಂಥ ಸಂದರ್ಭದಲ್ಲಿ 5 ಲಕ್ಷಕ್ಕೆ ಹೆಚ್ಚಾಗಿರತಕ್ಕಂಥ ಹಣ ಮತ್ತು ಅಪೂರ್ಣವಾಗಿರತಕ್ಕಂಥದ್ದು, ಅರ್ಧಂಬರ್ಧವಾಗಿ ಒಂದು ಲಕ್ಷ ಐದು ಲಕ್ಷ, ಹತ್ತು ಲಕ್ಷ ಬೇಕಾಗಿರತಕ್ಕಂಥ ಕೆಲಸಗಳು ಇವೆ. ಇದನ್ನೆಲ್ಲ ಪಟ್ಟಿ ಮಾಡಿ ಕಳುಹಿಸಿ ಎಂದರೆ ನೀವು ತೆಗೆದುಕೊಳ್ಳುವುದು ಯಾವಾಗ ? ಅದಕ್ಕೆ ಏನಾದರೂ ಬಜೆಟ್ ಪ್ರಾವಿಷನ್ ಮಾಡಿದ್ದರೆ, ಒಂದು ಲಕ್ಷ ರೂಪಾಯಿಗಳ ಮೇಲೆ ಇರತಕ್ಕಂಥದ್ದನ್ನು ತೆಗೆದುಕೊಳ್ಳಬೇಕಾದರೆ ನಿಮ್ಮ ಬಜೆಟ್‌ನಲ್ಲಿ ಬರಬೇಕಾಗುತ್ತದೆ. ಈ ಬಜೆಟ್‌ನಲ್ಲಿ ಈಗಾಗಲೇ ಅಫೆಂಡಿಕ್ಸನ್ನು ನಮಗೆ ಕಳುಹಿಸಿಕೊಟ್ಟಿದ್ದೀರಿ. ಇಂಥ ಸಂದರ್ಭದಲ್ಲಿ ಯಾವ ರೀತಿ ಆ ಕೆಲಸಗಳನ್ನು ಪ್ರಾರಂಭ ಮಾಡುತ್ತೀರಾ ಎನ್ನತಕ್ಕಂಥದ್ದನ್ನು ಕೂಡ ಸ್ಪಷ್ಟವಾಗಿ ನಮಗೆ ತಿಳಿಸಬೇಕು.

ಶ್ರೀ ಕೆ. ಸೋಮಪ್ಪ ಸುವರ್ಣ:– ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಧಾರಾಕಾರವಾಗಿ ಮಳೆ ಬಿದ್ದರೂ ಅದು ಸರಾಗವಾಗಿ ಸಮುದ್ರಕ್ಕೆ ಹೋಗಿ ಸೇರುತ್ತದೆ. ಆ ನೀರನ್ನು ಬಳಸಿ, ಉಳಿಸಿ, ಆ ಮಣ್ಣನ್ನು ಫಲವತ್ತಾಗಿ ಉಳಿಸಿ ಬೆಳೆಸುವಂಥ ಯಾವ ಕಾರ್ಯಕ್ರಮವೂ ಕೂಡ ಇನ್ನೂ ಆಗಿಲ್ಲ. ಹಲವಾರು ಯೋಜನೆಗಳನ್ನು ಪಶ್ಚಿಮ ಘಟ್ಟದ ಪಡುಬದಿಯಲ್ಲಿ ಕಾಲುವೆಗಳ ಮೂಲಕ ನೀರನ್ನು ಸುವರ್ಣಾವತಿ ನದಿಯಿಂದ ನೇತ್ರಾವತಿ ನದಿಗೆ ಜೋಡಿಸಬೇಕೆಂಬ ಆ ಒಂದು ದೊಡ್ಡ ಯೋಜನೆ ಕನಸಾಗಿಯೇ ಉಳಿದಿದೆ. ಪ್ರಾಯಶಃ ಸಣ್ಣ ನೀರಾವರಿ ಯೋಜನೆಯನ್ನಾದರೂ ಫಲಕಾರಿಯಾಗಿ ಮಾಡಬೇಕೆಂಬ ಆಶೆಯನ್ನು ಇಟ್ಟುಕೊಂಡಿದ್ದು, ಲಿಫ್ಟ್ ಇರಿಗೇಷನ್ ಆಗುತ್ತದೆಂಬ ಆಶೆಯನ್ನು ನಾವು ತೋರಿಸುತ್ತಿದ್ದೆವು. ಪ್ರಾಯಶಃ ಲಿಫ್ಟ್ ಇರಿಗೇಷನ್ ಸರ್ವೆ ಕಾರ್ಯ ಆಗಿದ್ದಲ್ಲಿ ನಾವು ನಮ್ಮ ಜನರನ್ನು ಸಂತೃಪ್ತಿ ಪಡಿಸುವಂಥ ಸಂದರ್ಭ ಬರುತ್ತಿತ್ತು. ಆದರೆ ಅದು ಇನ್ನೂ ಕಾರ್ಯಗತವಾಗದೆ ಇರುವಂಥದ್ದು ದಕ್ಷಿಣ ಕನ್ನಡ ಜಿಲ್ಲೆಯ ದೌರ್ಭಾಗ್ಯ. 100–140 ಇಂಚು ಮಳೆ ಬಿದ್ದರೂ ಬೇಸಿಗೆ ಕಾಲದಲ್ಲಿ ನೀರು ಇಲ್ಲದೆ ಬಹಳಷ್ಟು ಕಳವಳಪಡುತ್ತಿರುವಂಥ ಜಿಲ್ಲೆ ಅದಾಗಿದೆ. ಇನ್ನೊಂದು ಸಮುದ್ರ ಬದಿಯಲ್ಲಿ ತಡೆಗೋಡೆಯ ನಿರ್ಮಾಣದ ಕಾರ್ಯ. ಕೇರಳ ಸರ್ಕಾರದವರು ಒಳ್ಳೆಯ ಯೋಜನೆಯನ್ನು ತಯಾರಿಸಿ ಕೇಂದ್ರ ಸರ್ಕಾರದ ಸಹಾಯವನ್ನು ಪಡೆದು ತಮ್ಮ ಪಡುಕರಾವಳಿ ಉದ್ದಕ್ಕೂ ಕಲ್ಲಿನ ತಡೆಗೋಡೆಯನ್ನು ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಮನೆಗೆ ಬೆಂಕಿ ಬಿದ್ದಾಗ ಬಾವಿ ತೋಡುವಂಥ ಕೆಲಸ ಮಾತ್ರ ಆಗುತ್ತಿದೆ. ಈ ಸಮುದ್ರ ಕೊರೆತ ಉಂಟಾದಾಗ ಸರ್ಕಾರದವರಿಗೆ ಬೊಬ್ಬೆ ಇಡುವಾಗ

ಬಂದು ಅಲ್ಪಸ್ವಲ್ಪ ಕಲ್ಲನ್ನು ಹಾಕಿ ಕೇಂದ್ರ ಸರ್ಕಾರದ ಸಹಾಯ ಯಾವುದನ್ನು ಪಡೆಯದೆ, ನಮ್ಮ ಜಿಲ್ಲೆಯ ಕರಾವಳಿ ಉದ್ದಕ್ಕೂ ಅಪೂರ್ಣವಾದಂಥ ಸಮುದ್ರ ಕೊರೆತವನ್ನು ತಡೆಯುವಂಥ ಕಾರ್ಯವಾಗಿದೆ. ಅದಕ್ಕೆ ಯೋಜಿತ ಕಾರ್ಯಕ್ರಮವನ್ನು ರೂಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಡಾ. ಎ.ಬಿ. ಮಲಕರೆಡ್ಡಿ ಲಕ್ಷ್ಮಣರೆಡ್ಡಿ:- ಮಾನ್ಯ ಅಧ್ಯಕ್ಷರೆ, ಏತ ನೀರಾವರಿ ನಿಗಮದ ಬಗ್ಗೆ ಮಂತ್ರಿಗಳ ಉತ್ತರ ಕೇಳಿ ಸ್ವಲ್ಪ ನಿರಾಸೆಯಾಯಿತು. ನಮ್ಮಲ್ಲಿ ಒಂದು ನಾಣ್ನುಡಿ ಇದೆ – "ಬೆಳಗಾಗುವವರೆಗೆ ರಾಮಾಯಣ ಕೇಳಿ, ಮುಂಜಾನೆ ರಾಮನಿಗೂ ಸೀತೆಗೂ ಏನು ಸಂಬಂಧ" ಎಂದು ಕೇಳಿದ ಹಾಗೆ ಆಯಿತು. ನಾನು ತಿಳಿದುಕೊಂಡಿದ್ದೆ, ನಿನ್ನೆ ಅತ್ಯಂತ ಸಮರ್ಥವಾದ ಕಾರಣಗಳನ್ನು ಕೊಟ್ಟು ಅದನ್ನು ಉಳಿಸಿಕೊಳ್ಳಬೇಕೆಂದು ಪ್ರಯತ್ನ ಮಾಡಿದರೆ ಅವರು ಸರಿಯಾಗಿ ಆಲಿಸಿಲ್ಲವೆಂದು ಕಾಣುತ್ತದೆ. ಅದರ ತತ್ವವೇನು ? ಇದರಲ್ಲಿ ಎರಡು ತತ್ವಗಳಿವೆ. ಏತ ನೀರಾವರಿ ನಿಗಮ ಮಾಡಿದುದು ಈ ಶಾಸನಸಭೆಯಲ್ಲಿ ಅದನ್ನು ಪಾಸ್ ಮಾಡಿದ್ದು ಸುಮ್ಮನೆ ಹುಡುಗಾಟಿಕೆಗೆ ಅಲ್ಲ. ಒಂದನೇ ತತ್ವ, ಸರ್ಕಾರದ ಅಧಿಕಾರ ಕೇಂದ್ರೀಕೃತವಾಗಿದೆ, ಅದು ವಿಕೇಂದ್ರೀಕರಣವಾಗಬೇಕು ಮತ್ತು ನಮ್ಮ ಆ್ಯಕ್ಟಿವಿಟೀಸ್‌ನ್ನು ಡೈವರ್ಷನ್ ಮಾಡಬೇಕು ಎಂಬುದು. ಏಕೆಂದರೆ ಪ್ರತಿಯೊಂದು ವಿಧಾನಸೌಧದ ಮಟ್ಟದಲ್ಲಿ ನಿರ್ಧಾರ ತೆಗೆದುಕೊಂಡು ಕೆಲಸ ಮಾಡುವುದಕ್ಕಾಗುವುದಿಲ್ಲ. ಎರಡನೆಯದು ಸರ್ಕಾರದಲ್ಲಿ ಕೈತುಂಬ ಕೆಲಸ ಇದೆ. ಪ್ರತಿಯೊಂದಕ್ಕೂ ಹಣ ಒದಗಿಸಿಕೊಡುವುದಕ್ಕಾಗುವುದಿಲ್ಲ. ಫೀಲ್ಡ್‌ನಲ್ಲಿ ವರ್ಕ್ ಏನೇನಿದೆ ಎಂದು ಗೊತ್ತಾಗುವುದಿಲ್ಲ. ಅದಕ್ಕೆ ಬೇರೆ ಬೇರೆ ಮೂಲಗಳಿಂದ ಹಣ ಕೇಂದ್ರೀಕೃತ ಮಾಡಿ ಆಯಾಯ ಕೆಲಸಗಳನ್ನು ಅಲ್ಲೇ ವಹಿಸಿಕೊಡಬೇಕೆಂಬ ಉದ್ದೇಶದಿಂದ ಅದನ್ನು ಮಾಡಿದ್ದುದು. ಉದಾಹರಣೆಗೆ ನಬಾರ್ಡ್ ಎಂಬ ಸಂಸ್ಥೆ ಏನಿದೆ, ಅದು ಯಾವಾಗಲೂ ಕೃಷಿಕರಿಗೆ, ಸಣ್ಣ ಕೃಷಿಕರಿಗೆ ಸಹಾಯ ಆಗುವ ಕಾರ್ಯಕ್ರಮಕ್ಕೆ ಮುಂದೆ ಬರುತ್ತದೆ. ಅವರಿಗೆ ಹಣ ಸಹಾಯ ಕೊಡುತ್ತದೆ. ಅದಕ್ಕಾಗಿ ಈಗಾಗಲೇ ಹೇಳಿದೆ, ಈ ಕಾವೇರಿ ನಿಗಮ ಏನು ಮಾಡಿದೆ ಎಂದು ಗೊತ್ತಿಲ್ಲ. ಕೃಷ್ಣ ಜಲಾನಯನ ನಿಗಮ ಏನಿದೆ ಅದು ಏತ ನೀರಾವರಿಯಲ್ಲಿ ಏನು ಕೆಲಸ ಮಾಡಿದೆ ಎಂದರೆ 404 ಕೆಲಸಗಳನ್ನು ಅವರು ಐಡೆಂಟಿಫೈ ಮಾಡಿದ್ದಾರೆ. ಈಗಾಗಲೇ 24 ಕೆಲಸಗಳಿಗೆ ಮಂಜೂರಾತಿ ತೆಗೆದುಕೊಂಡಿದ್ದಾರೆ. ನಬಾರ್ಡ್ ಹಣ ಕೊಡಲು ಮುಂದೆ ಬಂದಿದೆ. "ಬರಗಾಲದಲ್ಲಿ ಅಧಿಕ ಮಾಸ ಬಂತು" ಅಂದ ಹಾಗೆ ಏತ ನೀರಾವರಿಯನ್ನು ಕಿತ್ತು ಹಾಕುತ್ತೇವೆಂದರೆ ನಬಾರ್ಡ್‌ನವರು ಏತಕ್ಕೆ ಹಣ ಕೊಡುತ್ತಾರೆ ? ಅವರು ಹಣ ಕೊಡುವುದಿಲ್ಲ. ಏನು ಹಣ ಮಂಜೂರಾಗಿದೆ ಅದನ್ನು ವಿತ್‌ಡ್ರಾ ಮಾಡಿಕೊಳ್ಳುತ್ತಾರೆ. ನಿಮಗೆ ಕೈ ತುಂಬ ಹಣಬೇಕಾಗಿದೆ ಕೆಲಸ ಮಾಡುವುದಕ್ಕೆ. ಎಂತಹ ಕೈಸುಟ್ಟು ಕೊಳ್ಳತಕ್ಕ ಕೆಲಸ ಮಾಡುತ್ತಲಿದ್ದೀರಿ. ಅದನ್ನು ಪುನರಾಲೋಚನೆ ಮಾಡಿ ಮಾನ್ಯ ಹಿರಿಯ ಸಚಿವರು ಅದರ ಬಗ್ಗ ವಿವೇಚನೆ ಮಾಡಿ ಈ ಬಗ್ಗೆ ಪುನಃ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ:- ಮಾನ್ಯ ಅಧ್ಯಕ್ಷರೆ, ನನ್ನ ಬಳ್ಳಾರಿ ತಾಲ್ಲೂಕಿನಲ್ಲಿ ಕಳೆದ 8 – 9 ವರ್ಷಗಳಿಂದ 15 ಯೋಜನೆಗಳನ್ನು ಏತ ನೀರಾವರಿ ಯೋಜನೆ ಅಡಿಯಲ್ಲಿ ಕೊಟ್ಟಿದ್ದಾರೆ. ಅದರಲ್ಲಿ ಯಾವುದೋ ಕಾರಣದಿಂದ ಒಂದೂ ಸಹ ಕಾರ್ಯರೂಪಕ್ಕೆ ಬಂದಿಲ್ಲ. ಅದು ಒಂದೇ ಅಲ್ಲ, ಬಹಳಷ್ಟು ತುಂಗಭದ್ರ ನೀರು ಆಂಧ್ರಕ್ಕೆ ವೇಸ್ಟ್ ಆಗಿ ಹೋಗುತ್ತಿದೆ. ಹಗರಿ ನದಿಯಿಂದಲೂ ಬಹಳಷ್ಟು ನೀರು ವೇಸ್ಟ್ ಆಗಿ ಹೋಗುತ್ತಿದೆ. ಸುಮಾರು 25 – 30 ಏತನೀರಾವರಿ ಸ್ಕೀಂ ಮಾಡಬೇಕೆಂದು ಸರ್ಕಾರಕ್ಕೆ ಬಹಳಷ್ಟು ಒತ್ತಾಯಿಸುತ್ತಿದ್ದೇನೆ. ಇದರಿಂದ 30 ಸಾವಿರ ಎಕರೆ ಲಾಭ ಪಡೆಯುತ್ತದೆಂದು ಹೇಳಿದ್ದರೂ ಸರ್ಕಾರ ಗಮನ ಕೊಟ್ಟಿಲ್ಲ. ನಾಡಗೌಡರು ನಿನ್ನೆ ಏನು ಹೇಳಿದರೆಂದರೆ ನೀವು ಏನು ಎಂ.ಡಿ ಮಾಡುತ್ತಿದ್ದೀರಿ ಅವರು ಇನ್ನು 3 – 6 ತಿಂಗಳಲ್ಲಿ ನಿವೃತ್ತರಾಗುತ್ತಾರೆ. ಅಂಥ ಎಂ.ಡಿ. ಮಾಡುತ್ತಿದ್ದೀರಿ. ಅವರಿಗೆ ಎಷ್ಟು ಪತ್ರ ಬರೆದರೂ ಇದುವರೆಗೆ ಬಳ್ಳಾರಿಗೆ ಬರುತ್ತಿಲ್ಲ, ಯಾವುದನ್ನೂ ವಿಚಾರಿಸುತ್ತಿಲ್ಲ.

ಯಾವ ಆಫೀಸು ಬಳ್ಳಾರಿಯಲ್ಲಿ ಇಲ್ಲ. ದಯವಿಟ್ಟು ಏನಾದರೂ ಮಾಡಿ ಕಾರ್ಯರೂಪಕ್ಕೆ ತಂದು ಹತ್ತು ಯೋಜನೆಗಳನ್ನಾದರೂ ಬಡ್ಜೆಟ್ಟಿನಲ್ಲಿ ಇನ್‌ಕ್ಲೂಡ್ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಈರಪ್ಪ ಮಾರೇಪ್ಪ ಷೆಡ್‌ಶ್ಯಾಲ:– ಮಾನ್ಯ ಅಧ್ಯಕ್ಷರೇ, ನಿನ್ನೆ ನಾನು ನೀರಾವರಿ ಮಂತ್ರಿಗಳಲ್ಲಿ ವಿನಂತಿಸಿಕೊಂಡಿದ್ದು ಏನೆಂದರೆ ಈಗ ಘಟಪ್ರಭಾದಿಂದ ನೀರು ತೆಗೆದುಕೊಳ್ಳುವವರಿಂದ ಸರ್ಕಾರದವರು 50 ರೂಪಾಯಿಗಳ ಟ್ಯಾಕ್ಸ್‌ಅನ್ನು ವಸೂಲ್ಮಾಡುತ್ತಿದ್ದಾರೆ. ಘಟಪ್ರಭಾ ನೀರಾವರಿ ನೀರು ಯಾರು ತೆಗೆದುಕೊಳ್ಳುತ್ತಾರೆ. ಅವರಿಗೆ 50 ರೂಪಾಯಿ ಟ್ಯಾಕ್ಸ್ ಆದರೆ ಕೃಷ್ಣ ನದಿಯಿಂದ ಅಲ್ಪಸ್ವಲ್ಪ ನೀರನ್ನು ಉಪಯೋಗಿಸಿಕೊಳ್ಳುವವರು ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಅವರು ಸ್ವಂತ ಪೈಪ್‌ಲೈನ್ ಮಾಡಿ ಕಷ್ಟಪಟ್ಟರೂ 700 ರೂಪಾಯಿ ಚಾರ್ಜ್ ಮಾಡಿ ವಸೂಲ್ಮಾಡುವುದಕ್ಕೆ ಹತ್ತಿದ್ದಾರೆ. ದಯವಿಟ್ಟು ಆಫೀಸರ್‌ಗೆ ಸೂಚನೆ ಕೊಟ್ಟು ಈ ಘಟಪ್ರಭಾ ನೀರಾವರಿಗೆ ಏನು 50 ರೂಪಾಯಿ ಚಾರ್ಜ್ ತೆಗೆದುಕೊಳ್ಳುತ್ತಾರೋ ಹಾಗೇ ಕೃಷ್ಣ ನದಿ ನೀರನ್ನು ಉಪಯೋಗಿಸುವವರಿಂದಲೂ 50 ರೂಪಾಯಿ ತೆಗೆದುಕೊಳ್ಳುವಂತೆ ಸೂಚನೆ ಕೊಡಬೇಕೆಂದು ನೀರಾವರಿ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. 700 ರೂಪಾಯಿಗಳನ್ನು ಜಪ್ತಿ ಮಾಡಿ ವಸೂಲ್ಮಾಡುವುದಕ್ಕೆ ಹತ್ತಿದ್ದಾರೆ. ಗವರ್ನ್‌ಮೆಂಟ್ ನೀರಾವರಿಗೆ 50 ರೂಪಾಯಿ, ಸ್ವಂತ ನೀರಾವರಿಗೆ 700 ರೂಪಾಯಿ ವಸೂಲ್ಮಾಡುತ್ತಿದ್ದಾರೆ. ಅಧಿವೇಶನ ಮುಗಿಯುವುದರೊಳಗೆ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅದನ್ನು ಸ್ಟಾಪ್ ಮಾಡಿಸಬೇಕೆಂದು ನೀರಾವರಿ ಮಂತ್ರಿಗಳಲ್ಲಿ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ನಮ್ಮ ಅಥಣಿಗೆ ಮೊದಲು ನೀರಾವರಿ ಸಬ್ – ಡಿವಿಜನ್ ಇತ್ತು. ಈಗ ಆ ನೀರಾವರಿ ಸಬ್‌ಡಿವಿಜನ್ ಅನ್ನು ತೆಗೆದು ಗೋಕಾಕ್‌ಗೆ ಹಾಕಿದ್ದಾರೆ. ಮೊದಲು ಹೇಗಿತ್ತು ಹಾಗೇ ಅಥಣಿಗೆ ನೀರಾವರಿ ಸಬ್‌ಡಿವಿಜನ್ ಇಡಬೇಕೆಂದು ನೀರಾವರಿ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಸನ್ಮಾನ್ಯ ಅಧ್ಯಕ್ಷರೆ 1978–79ರ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್‌ನಲ್ಲಿ ಏನು ಕೆರೆಗಳ ಕೆಲಸ ಆರಂಭವಾಯಿತು ಅದು ನೀರಾವರಿ ಇಲಾಖೆಯಿಂದ ಜಿಲ್ಲಾ ಪರಿಷತ್ತಿಗೆ ಹೋಯಿತು. ಜಿಲ್ಲಾ ಪರಿಷತ್ತಿನಿಂದ ಮತ್ತೆ ಸಣ್ಣ ನೀರಾವರಿ ಇಲಾಖೆಗೆ ಬಂದಿದೆ. ಒಂದೊಂದು ಕೆರೆಗೆ 6 – 8 ಲಕ್ಷ ರೂಪಾಯಿ ಮಂಜೂರಾಗಿದ್ದು 60–70 ಸಾವಿರ ಖರ್ಚು ಮಾಡಿದ್ದರೆ 10 ವರ್ಷಗಳಲ್ಲಿ ಬಹಳ ಹೆಚ್ಚು. ಆ ಕೆರೆಗಳನ್ನು ಏನಾದರೂ ಮಾಡಿ ಈಗಲಾದರೂ ಕೈಗೆತ್ತಿಕೊಂಡು ಕಂಪ್ಲೀಟ್ ಮಾಡಿಕೊಡುತ್ತೀರಾ ? ವಿಶ್ವ ಬ್ಯಾಂಕ್ ಕೊಟ್ಟಿರುವ ಹಣವನ್ನು ಬಳಸಿಕೊಳ್ಳುತ್ತೀರಾ ? ಎರಡನೆಯದಾಗಿ, 40–42ಕೋಟಿ ರೂಪಾಯಿಗಳನ್ನು ಒಂದೊಂದು ಸಣ್ಣ ನೀರಾವರಿ ಇಲಾಖೆಗೆ ಇಟ್ಟುಕೊಂಡಿರುವ ಕಡೆ ಸಬ್–ಡಿವಿಜನ್ ಆಫೀಸ್ ಓಪನ್ ಮಾಡಿಸಿಕೊಡುತ್ತೀರಾ ಎಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಡಾ।। ಡಿ.ಬಿ. ಗಂಗಪ್ಪ:– ಮಾನ್ಯ ಅಧ್ಯಕ್ಷರೆ, ಹೊನ್ನಾಳಿ ತಾಲ್ಲೂಕಿನಲ್ಲಿ ದೇವರ ಹೊನ್ನಾಳಿ ಹತ್ತಿರ ಆಗಲೇ ಸರ್ವೇ ಕೆಲಸವಾಗಿದೆ. 15–20 ಲಕ್ಷ ಎಸ್ಟಿಮೇಟ್ ಮಾಡಿ ಅದರಿಂದ ಎರಡು ಸಾವಿರ ಎಕರೆ ನೀರಾವರಿಯಾಗುವ ಏತ ನೀರಾವರಿ ಯೋಜನೆಯನ್ನು ಎರಡು ವರ್ಷಗಳ ಹಿಂದೆ ಪ್ರಶ್ನೆ ಹಾಕಿದಾಗ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಅದನ್ನು ಈ ವರ್ಷವಾದರೂ ತೆಗೆದುಕೊಳ್ಳಬೇಕೆಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಅದೇ ರೀತಿ ನಮ್ಮಲ್ಲಿ 8 – 10 ಲಿಫ್ಟ್ ಇರಿಗೇಷನ್‌ಗಳು ಇವೆ. ಅಲ್ಲಿ ಇವತ್ತು ಏನಾಗಿದೆ ಎಂದರೆ ಮೈನರ್ ಇರಿಗೇಷನ್‌ನವರು ಕೆಇಬಿಗೆ ಬಿಲ್ಲನ್ನು ಸರಿಯಾದ ಟೈಮ್‌ಗೆ ಕಟ್ಟದೇ ಇವತ್ತು ರೈತರ ಬೆಳೆ

ಬೆಳೆದು ನಿಂತಿದ್ದಾಗ ಆ ಕೆಇಬಿ ಇಲಾಖೆಯ ಜನರು ಬಂದು ಬಿಲ್ ಕಟ್ಟಿಲ್ಲ ಎಂದು ಹೇಳಿ ಫ್ಯೂಸ್ ತೆಗೆದುಕೊಂಡು ಹೋಗುತ್ತಾರೆ. ಆದ್ದರಿಂದ ಇದನ್ನು ಕೂಡಲೇ ತಪ್ಪಿಸಬೇಕು. ಇನ್ನು ರಾಜ್ಯದಲ್ಲಿ ದೊಡ್ಡ ದೊಡ್ಡ ಕೆರೆಗಳ ಕ್ಯಾಚ್‌ಮೆಂಟ್ ಏರಿಯಾ ಕಡಿಮೆ ಆಗುತ್ತಿದೆ. ಇದಕ್ಕೆ ಕಾರಣ ಅನ್‌ಆಥರೈಸ್ಡ್ ಕಲ್ಟಿವೇಷನ್. ಇದರಿಂದ ನೀರು ಬರುವುದು ಕಡಿಮೆ ಆಗಿದೆ. ಭಾರಿ ಮಳೆ ಬಂದಾಗ ಕೆರೆ ಮುಂದೆಯೇ ನೀರು ಹೋಗುತ್ತದೆ. ಆದ್ದರಿಂದ ಫೀಡರ್ ಛಾನಲ್ ಮಾಡಿ ಕೆರೆಗೆ ನೀರು ಬರುವ ಹಾಗೆ ಮಾಡಿದರೆ ಒಳ್ಳೆಯದಾಗುತ್ತದೆ. ಈ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ:- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಹೇಳಬೇಕೆಂದರೆ ಒಂದು ಕಡೆ ಕರಾವಳಿ ಹಾಗೂ ಒಂದು ಕಡೆ ಮಲೆನಾಡು. ಇವತ್ತು ಮೈನರ್ ಇರಿಗೇಷನ್ ಇಲಾಖೆಯ ವತಿಯಿಂದ ಸಮುದ್ರ ತಡಗೋಡೆ ಕಟ್ಟುವ ಕೆಲಸ ಬಿಟ್ಟರೆ ರೈತರಿಗೆ ಸಂಬಂಧಪಟ್ಟ ಲಿಫ್ಟ್ ಇರಿಗ್ರೇಷನ್ ಕೆಲಸ ನಮ್ಮ ಭಾಗದಲ್ಲಿ ಆಗುತ್ತಾ ಇಲ್ಲ. ಕಳೆದ ಕೆಲವಾರು ವರ್ಷಗಳಿಂದ ಹಲವಾರು ಲಿಫ್ಟ್ ಇರಿಗೇಷನ್ ಸರ್ವೇ ಕೆಲಸ ಆಗಿದ್ದು ಮುಂದಿನ ಕೆಲಸ ಆಗಿಲ್ಲ. ನಮ್ಮ ಕ್ಷೇತ್ರ ಬಂಟವಾಳದಲ್ಲಿ ಬೆಳಿಯೂರು ಯೋಜನೆ ಬಡ್ಜೆಟ್‌ನಲ್ಲಿ ಸೇರಿತ್ತು. ಅದು ಕೂಡಾ ಅನುಷ್ಠಾನಕ್ಕೆ ಬರಲಿಲ್ಲ. ದಯಮಾಡಿ ದಕ್ಷಿಣ ಕನ್ನಡ ಜಿಲ್ಲೆಯ ರೈತರ ಬಗ್ಗೆ ಗಮನ ಕೊಡಿ. 3 – 4 ಲಿಫ್ಟ್ ಇರಿಗೇಷನ್ ಬಗ್ಗೆ ಸರ್ವೇ ಆಗಿ ತಮ್ಮ ಇಲಾಖೆಯಲ್ಲಿ ಜೋಡಣೆ ಆಗಿದೆ. ಅಣೆಕಟ್ಟು ಆಗಬೇಕೆಂದು ಸರ್ವೆ ಗ್ರಾಮದಲ್ಲಿ ಮಾಡಬೇಕೆಂದು ಎಸ್ಟಿಮೇಟ್ ಮಾಡಿ, ತಯಾರು ಮಾಡಿ ತಮಗೆ ಪಟ್ಟಿ ಕಳುಹಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕೂಡಾ ಲಿಫ್ಟ್ ಇರಿಗೇಷನ್‌ಗೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:- ಮಾನ್ಯ ಅಧ್ಯಕ್ಷರೇ, ಅಂದಾಜು ಸಮಿತಿಯವರು ಬೆಳಗಾಂ ಜಿಲ್ಲೆಯ ಮಾಟೋಹಳ್ಳಿ, ಏಣಗಿ, ಒಕ್ಕುಂದ್, ಸಂಗೊಳ್ಳಿ ಹಾಗೂ ದೇವರಾಪುರ ಗ್ರಾಮಗಳಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮ್ ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಿದ್ದರು. ಆ ಶಿಫಾರಸ್ಸಿನ ಪ್ರಕಾರ ಸರ್ಕಾರ ಲಿಫ್ಟ್ ಇರಿಗೇಷನ್ ಸ್ಕೀಮನ್ನು ಕೂಡಲೇ ತೆಗೆದುಕೊಳ್ಳುತ್ತದೆಯೇ ? ಇನ್ನು ಎರಡನೆಯದಾಗಿ, ಕಳೆದ 3 ವರ್ಷಗಳಲ್ಲಿ ಬೆಳಗಾಂ, ಬಿಜಾಪುರ, ಧಾರವಾಡ ಮತ್ತು ಕಾರವಾರ ಈ ಜಿಲ್ಲೆಗಳಿಗೆ ಮೈನರ್ ಇರಿಗೇಷನ್‌ಗೆ ಸಂಬಂಧಪಟ್ಟ ಹಾಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ? ಇವತ್ತು ಹಣ ಕಡಿಮೆ ಕೊಟ್ಟಿದ್ದೀರಿ. ಈ ವರ್ಷ ಆ ಸಲುವಾಗಿ ಈ ಜಿಲ್ಲೆಗಳಿಗೆ ಕೆಲಸ ಪ್ರಾರಂಭ ಮಾಡಿ ಹಣ ಕೊಟ್ಟು ಕೆಲಸ ತೆಗೆದುಕೊಳ್ಳುತ್ತೀರಾ ? ಇನ್ನು ಅಕ್ವಿಸಿಷನ್ ಆದನಂತರ ತಾವು ಕೆಲಸ ಪ್ರಾರಂಭ ಮಾಡಬೇಕು. ಆದರೆ ತಾವು ಮೊದಲೇ ಕೆಲಸ ಪ್ರಾರಂಭ ಮಾಡುತ್ತೀರಿ. ಅಕ್ವಿಜೀಷನ್ ಮಾಡುವುದಿಲ್ಲ. ಮುಂದೆ ಕಾಂಪನ್‌ಸೇಷನ್ ಆ ಜನರಿಗೆ ಮುಟ್ಟುವುದಿಲ್ಲ. ಹೀಗಾಗಿ ಜಮೀನು ಕೊಡುವುದಕ್ಕೆ ಜನರು ಹಿಂದೆ ಮುಂದೆ ನೋಡುತ್ತಾರೆ. ಆದ್ದರಿಂದ ಅಕ್ವಿಸಿಷನ್ ಆದ ನಂತರ ಜಮೀನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಡಾ।। ಆರ್.ಬಿ. ಚೌಧುರಿ:- ಮಾನ್ಯ ಅಧ್ಯಕ್ಷರೇ, ಏತ ನೀರಾವರಿ ನಿಗಮದ ರದ್ದತಿ ಬಗ್ಗೆ ಬಹಳಷ್ಟು ಸದಸ್ಯರಲ್ಲಿ ಭಿನ್ನಾಭಿಪ್ರಾಯ ಇದೆ. ನಾನು ಭಾರಿ ನೀರಾವರಿ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಇದರ ಬಗ್ಗೆ ಏನು ಮಾಡಬೇಕೆಂಬುದರ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಗಂಗಾ – ಕಲ್ಯಾಣ ಯೋಜನೆ ಬಗ್ಗೆ ಮಾನ್ಯ ನಾಡಗೌಡರು ಹೇಳಿದರು. ನಿಜವಾಗಿ ಜಿಲ್ಲಾಪರಿಷತ್ತಿನಿಂದ ನಮಗೆ ಸರ್ಕ್ಯುಲರ್ ಮಾತ್ರ ಬಂದಿದೆ. ಅದರ ಬಗ್ಗೆ ಇನ್ನೂ ಕೆಲವು ನ್ಯೂನತೆಗಳು ಇರುವುದರಿಂದ ಆರ್‌ಡಿಪಿಆರ್ ಇಲಾಖೆ ಜೊತೆ ಚರ್ಚೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಕರ್ನಾಟಕ ರಾಜ್ಯ ಪತ್ರಾಗಾರ,
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,
ದಿನಾಂಕ.........

ಶ್ರೀ ಎ.ಎಸ್. ನಾಡಗೌಡ:- ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟ ಆ ಫೈಲೇ ಕಳೆದುಹೋಗಿದೆ.

ಡಾ|| ಆರ್.ಬಿ. ಚೌಧುರಿ:- ಇನ್ನು ಟ್ಯಾಂಕ್‌ಗಳ ಲಿಫ್ಟ್ ಇರಿಗೇಷನ್ ಕಾರ್ಯಕ್ರಮದ ಬಗ್ಗೆ ಹೇಳಿದರು. ಆ ಬಗ್ಗೆ ವಿಚಾರ ಮಾಡುತ್ತೇನೆ. ಬೋರ್‌ವೆಲ್‌ನಿಂದ ಮಾಡಿದರೆ ಅದು ಸರಿಯಾಗುವುದಿಲ್ಲ, ವಾಟರ್ ಟೇಬಲ್ ಕೆಳಕ್ಕೆ ಹೋಗುತ್ತದೆ ಎನ್ನುವ ಮಾತನ್ನು ಸಹ ಅವರೇ ಹೇಳಿದರು.

ಇನ್ನು ಮಾನ್ಯ ರಾಮಯ್ಯನವರು ಕಾಡು ನಾಶದಿಂದ ಈ ಹೂಳು ಕೆರೆಗಳಲ್ಲಿ ಜಾಸ್ತಿಯಾಗುತ್ತಿದೆ, ಅದಕ್ಕೆ ಏನು ಮಾಡುತ್ತೀರಿ ಎಂದು ಕೇಳಿದರು? ಹೂಳು ರೈತರಿಗೆ ಉಪಯೋಗವಾಗುತ್ತದೆ. ಇಟ್ಟಿಗೆ ತಯಾರು ಮಾಡುತ್ತಾರೆ. ಇದರ ಬಗ್ಗೆ ನಾನು ಡೀಟೈಲ್ ಆಗಿ ಚರ್ಚೆ ಮಾಡಿಲ್ಲ. ಚರ್ಚೆ ಮಾಡಿಕೊಂಡು ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುತ್ತೇನೆ. ಮಾನ್ಯ ಜಯಚಂದ್ರರವರು 5 ಲಕ್ಷ ರೂಪಾಯಿಗಳಿಗಿಂತ ಮೇಲ್ಪಟ್ಟ ಯೋಜನೆಗಳು ಇದ್ದರೆ, ಅದಕ್ಕೆ ಕೇಂದ್ರ ಸರ್ಕಾರದಿಂದ ಒಂದು ಆದೇಶ ಬಂದಿದೆ ಎಂದು ಹೇಳಿದರು. ಆ ಆದೇಶ ಪಾಲಿಸಿದರೆ ನಮ್ಮದು ಯಾವುದೂ ಕೆಲಸ ಆಗುವುದಿಲ್ಲ. ಯಾವುದು ಸಾಧ್ಯವಿದೆ ಅದು ಮಾಡಬೇಕು. ಜಿಲ್ಲಾಪರಿಷತ್‌ನವರ ವ್ಯಾಪ್ತಿಗೆ ಬರುವ 50 ಹೆಕ್ಟೇರ್‌ನೊಳಗೆ ಏನು ಅಚ್ಚುಕಟ್ಟು ಇರುತ್ತದೆ ಅಂತಹ ಕಾಮಗಾರಿಗಳನ್ನು ಅವರು ಮಾಡಲೇಬೇಕಾಗುತ್ತದೆ. ಒಂದು ವೇಳೆ ಮಾಡಲಿಲ್ಲವೆಂದರೆ ಅಂತಹ ಕಾಮಗಾರಿಗಳನ್ನು ನಮ್ಮ ಇಲಾಖೆಯಿಂದ ಮಾಡಿಕೊಡುತ್ತೇವೆನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಮಾನ್ಯ ಸೋಮಪ್ಪ ಸುವರ್ಣರವರು ತಡಗೋಡೆ ಸಲುವಾಗಿ ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆಯ ಮಾನ್ಯ ಸದಸ್ಯರೆಲ್ಲರೂ ಲಿಫ್ಟ್ ಇರಿಗೇಷನ್‌ಗೆ ಮಹತ್ವ ಕೊಡಬೇಕೆಂದು ಹೇಳಿದರು. ಮಾನ್ಯ ಸೊರಕೆಯವರು ಸಹಿತ ರೈತರಿಗೆ ಸಂಬಂಧಪಟ್ಟ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದರು. ಈ ದಿಸೆಯಲ್ಲಿ ನಾನು ವಿಚಾರ ಮಾಡುತ್ತೇನೆಂದು ಹೇಳುತ್ತೇನೆ. ಬಳ್ಳಾರಿ ಜಿಲ್ಲೆಯ ಬಗ್ಗೆ ಯಾವ ಅಧಿಕಾರಿಗಳು ಸಹ ಗಮನಹರಿಸಿಲ್ಲವೆಂದು ಹೇಳಿದರು. ಅದರ ಬಗ್ಗೆ ಕೂಡ ನಾನು ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ನಾನು ಮತ್ತು ಕೆಲವು ಸದಸ್ಯರುಗಳು ತಮ್ಮ ಗಮನಕ್ಕೆ ತರತಕ್ಕದ್ದು ಏನೆಂದರೆ ಒಂದು ಮಹತ್ತರವಾದ ವಿಚಾರವನ್ನು ತಮಗೆ ತಿಳಿಸಿದ್ದೇವೆ. ಕಲ್ಕತ್ತಾದಲ್ಲಿ ನಿನ್ನೆ ರಾತ್ರಿ ಬಾಂಬ್ ಸ್ಫೋಟವಾಗಿದೆ. ಕಲ್ಕತ್ತಾ ನಗರವೇ ಅಲ್ಲೋಲಕಲ್ಲೋಲವಾಗುವ ಪರಿಸ್ಥಿತಿ ಇದೆ.

ಅಧ್ಯಕ್ಷರು:- ಮಾನ್ಯ ಬೈರೇಗೌಡರೆ ಅದನ್ನು ಕೊಶ್ಚನ್ ಅವರ್ ಆದಮೇಲೆ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ:- ಹಾಗಿದ್ದರೆ, ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇರುವ ರೀತಿಯಲ್ಲಿ ತಾವು ಏರ್ಪಾಡು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಿನ್ನೆ ಮುಂಬಯಿಯಲ್ಲಿ ಆಗಿದೆ ಇಂದು ಕಲ್ಕತ್ತಾ ನಗರದಲ್ಲಿ ಆಗಿದೆ. ನಾಳೆ ಎಲ್ಲಾ ಕಡೆ ಆಗುವ ಪರಿಸ್ಥಿತಿ ಇದೆ. ಜನ ಭಯಭೀತರಾಗಿದ್ದಾರೆ. ಇಡೀ ದೇಶದಲ್ಲಿ ವಿಚಿತ್ರವಾದ ವಾತಾವರಣವಿದೆ.

ಶ್ರೀ ಸಿ. ಬೈರೇಗೌಡ:- ನಾಳೆ ಇನ್ನೆಲ್ಲಿ ಆಗುತ್ತದೋ ಗೊತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಬೆಂಗಳೂರಿನಲ್ಲಿ ವಿಶೇಷವಾದ ಬಂದೋಬಸ್ತು ಮಾಡುವ ಅಗತ್ಯವಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಬಿಗಿ ಕ್ರಮ ತೆಗೆದುಕೊಂಡು ಇದರ ಬಗ್ಗೆ ಗಮನ ಕೊಡುವುದು ಅಗತ್ಯವಿದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಮುಖ್ಯಮಂತ್ರಿಗಳ ಮುಖಾಂತರ ಕೇಳಿಕೊಳ್ಳುವುದೇನೆಂದರೆ ....

ಅಧ್ಯಕ್ಷರು:- ಮಂತ್ರಿಗಳು ಉತ್ತರ ಹೇಳಲಿ, ತಾವು ಏತಕ್ಕೆ ಇಷ್ಟು ಅವಸರ ಮಾಡುತ್ತೀರಿ? ಕಾರ್ಯಕಲಾಪಗಳೆಲ್ಲ ಇವೆ. ರಾತ್ರಿ 10 ಗಂಟೆಯವರೆಗೂ ಕೂಡಬೇಕೆನ್ನುವುದು ತಮಗೆ ಗೊತ್ತಿದೆ. ಈಗ ಉಪಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ, ತಾವೆಲ್ಲರೂ ಕೂಡಿ.

ನೀರಾವರಿ ಮತ್ತು ಇಂಧನ ಖಾತೆಯ ಚರ್ಚೆಗೆ ಉಪಮುಖ್ಯಮಂತ್ರಿಗಳವರಿಂದ ಉತ್ತರ

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿ):- ಮಾನ್ಯ ಸಭಾಧ್ಯಕ್ಷರೆ, ಕಳೆದ ಮೂರು ದಿವಸಗಳಿಂದ ಈ ಸದನದಲ್ಲಿ ಮಾನ್ಯ ಸದಸ್ಯರುಗಳು ನಮ್ಮ ನಾಡಿನ ಜ್ವಲಂತ ಸಮಸ್ಯೆಗಳಾದ ನೀರಾವರಿ ಮತ್ತು ವಿದ್ಯುತ್ ಉತ್ಪಾದನೆ ಮತ್ತು ವಿತರಣೆ ಬಗ್ಗೆ ತಮ್ಮ ಅನಿಸಿಕೆಗಳನ್ನು ಟೀಕೆಗಳನ್ನು ಮತ್ತು ಸಲಹೆಗಳನ್ನು ಕೊಟ್ಟಿದ್ದಾರೆ. ನನ್ನ ದೃಷ್ಟಿಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮಾನ್ಯ ಸದಸ್ಯರುಗಳು ಭಾಗವಹಿಸಿ ಏನು ಸಲಹೆಗಳನ್ನು ಕೊಟ್ಟಿದ್ದಾರೆ ಅದು ನಮ್ಮ ಕಾರ್ಯನಿರ್ವಹಣೆಯಲ್ಲಿ ಬಹಳ ಸಹಕಾರಿಯಾಗುತ್ತದೆನ್ನುವ ವಿಶ್ವಾಸವನ್ನು ನಾನು ವ್ಯಕ್ತಪಡಿಸಬೇಕಾಗಿದೆ.

ಐವತ್ನಾಲ್ಕು ದಿವಸಗಳ ಕೆಳಗೆ ಈ ಇಲಾಖೆಯ ಅಥವಾ ಈ ಇಲಾಖೆಗಳ ಅಧಿಕಾರವನ್ನು ನಾನು ವಹಿಸಿಕೊಂಡೆ. ಶತಮಾನದ ಪ್ರಾರಂಭದಲ್ಲಿ ಯಾವ ಸಮಸ್ಯೆ ನಮ್ಮ ದಕ್ಷಿಣ ಕರ್ನಾಟಕದ ಜನರನ್ನು ಕಾಡುತ್ತಿತ್ತೋ, ಹಾಗೂ ಇವತ್ತೂ ಕಾಡುತ್ತಿದೆಯೋ ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವ ಮತ್ತು ಈ ಸಮಸ್ಯೆಯನ್ನು ಸವಾಲಿನ ರೂಪದಲ್ಲಿ ಸ್ವೀಕರಿಸಿ ಆ ಜನಗಳ ಆಸೆ ಆಕಾಂಕ್ಷೆಗಳು ಏನಿವೆ ಅದಕ್ಕೆ ನಾವು ಸ್ಪಂದಿಸಬೇಕಾಗಿದೆ. ಒಕ್ಕಲುತನ ಮಾಡುವ ಕುಟುಂಬದಿಂದ ಬಂದಿರತಕ್ಕಂಥ ನಾನು ನಮ್ಮ ರಾಜ್ಯದ ಒಕ್ಕಲುತನ ಮಾಡತಕ್ಕಂಥ ಕೋಟ್ಯಾಂತರ ಜನಗಳ ಆಸೆ ಆಕಾಂಕ್ಷೆಗಳು ಏನಿವೆ, ಅವುಗಳನ್ನು ರಕ್ಷಣೆ ಮಾಡತಕ್ಕಂಥಾದ್ದು ಕೇವಲ ಸರ್ಕಾರದ ಮೇಲೆ ಬಿದ್ದಿರುವ ಹೊಣೆಗಾರಿಕೆ ಎನ್ನುವುದನ್ನು ನಾನು ಒಪ್ಪಲು ತಯಾರಾಗಿಲ್ಲ. ಇದು ಇಡೀ ಸದನದ ಹೊಣೆಗಾರಿಕೆಯಾಗಬೇಕು, ಇಡೀ ರಾಜ್ಯದ ಹೊಣೆಗಾರಿಕೆಯಾಗಬೇಕು. ಕುವೆಂಪು ಅವರ ಮಾತಲ್ಲಿ ಹೇಳಬೇಕಾದರೆ ಸರ್ಕಾರಗಳು ಬರುತ್ತವೆ, ಸರ್ಕಾರಗಳು ಹೋಗುತ್ತವೆ. ಇಂದು ಬಂದು ನಾಳೆ ಹೋಗುವ ಮಂತ್ರಿಮಂಡಲದಿಂದ ಅಲ್ಲ. ಆ ದೃಷ್ಟಿಕೋನದಿಂದ ಕಾವೇರಿ ಸಮಸ್ಯೆಯನ್ನಾಗಲೀ, ಕೃಷ್ಣಾ ಸಮಸ್ಯೆಯನ್ನಾಗಲೀ ನಾವು ವಿಶ್ಲೇಷಣೆ ಮಾಡಬೇಕಾಗುತ್ತದೆ. ಒಂದು ಸಂತೋಷದ ವಿಚಾರ ಏನೆಂದು ಹೇಳಿದರೆ ಚರ್ಚೆ ಸಮಯದಲ್ಲಿ ಯಾರು ಕೂಡ ಈ ಸಮಸ್ಯೆಗಳಿಗೆ ರಾಜಕೀಯ ಲೇಪವನ್ನು ಹಾಕದೇ ಇರತಕ್ಕಂಥಾದ್ದು ಕರ್ನಾಟಕದ ಸೌಭಾಗ್ಯವೆಂದು ನಾನು ಭಾವನೆ ಮಾಡುತ್ತೇನೆ. ಅದಕ್ಕಾಗಿ ಮಾನ್ಯ ಸದಸ್ಯರುಗಳನ್ನು ಅತೀವವಾಗಿ ವಂದಿಸುತ್ತೇನೆ. ವಿಧಾನಸೌಧದಲ್ಲಿ ಕೂತು ನಾವು ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಆಗುವುದಿಲ್ಲ. ವಿಧಾನಸೌಧದ ಮೂರನೇ ಮಹಡಿಯಿಂದ ನಾವು ಈ ಸಮಸ್ಯೆಗಳಿಗೆ ಸ್ಪಂದಿಸಬೇಕಾದರೆ ನಾವು ವಿಧಾನಸೌಧದ ಮೂರನೇ ಮಹಡಿಯಿಂದ ಇಳಿದು ಬಾಗೂರು ನವಿಲೆಯ ಅಲಾಯ್‌ಮೆಂಟಿನ ಪಾತಾಳಕ್ಕೆ ಹೋಗಬೇಕಾಗುತ್ತದೆ. ಹಾಗೆಯೇ ಕೆಂಬಾವಿಯ ಕೆಂದೂಳನ್ನು ಕುಡಿಯದೇ ಹೋದರೆ ಕೃಷ್ಣಾ ನದಿ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಂಬಾವಿಯ ಕೆಂದೂಳಿನ ಮಾತನ್ನು ಏಕೆ ಹೇಳಿದೆನೆಂದರೆ, ಇದುವರೆಗೂ ಕೂಡ ನಾವು ಈ ಎಲ್ಲ

ಯೋಜನೆಗಳನ್ನು ವಿಧಾನಸೌಧದಲ್ಲಿ ಕೇಂದ್ರೀಕರಿಸಿ ಅದನ್ನು ವಿಕೇಂದ್ರೀಕೃತ ಮಾಡಲಿಕ್ಕೆ ಹೆಚ್ಚಿನ ಗಮನವನ್ನು ನಾವು ಕೊಡಲಿಲ್ಲ. ಆ ದೃಷ್ಟಿಯಿಂದ ನಾವು ಈ ಯೋಜನೆಗಳಲ್ಲಿ ಯಾವ ಪ್ರಮಾಣದ ಪ್ರಗತಿಯನ್ನು ಕಾಣಬೇಕೆಂದು ಆಸೆ ಪಟ್ಟಿದ್ದೆವೋ ಆ ಪ್ರಮಾಣದ ಪ್ರಗತಿಯತ್ತ ನಾವು ದಾಪುಗಾಲು ಹಾಕುವುದಕ್ಕೆ ಸಾಧ್ಯವಾಗಲಿಲ್ಲ. ಕೃಷ್ಣಾ ನದಿ ಕರ್ನಾಟಕದ ಮಟ್ಟಿಗೆ ಬಂಜೆ ಆಗುವುದಕ್ಕೆ ನಾವು ಬಿಡುವುದಿಲ್ಲ ಎನ್ನುವುದು ನನ್ನ ನಿರ್ಧಾರ ಅಲ್ಲ.

ಇದು ಸರ್ಕಾರದ ನಿರ್ಧಾರ ಅಲ್ಲ. ಇದು ಸದನದ ನಿರ್ಧಾರ. ಹಿಂದೆ ಯಾರು, ಯಾರು ಈ ಸ್ಥಳದಲ್ಲಿ ಕುಳಿತಿದ್ದರೋ, ಅವರೆಲ್ಲರೂ ಈ ನಾಲಿಗೆ ಕೊಟ್ಟಿರತಕ್ಕ ಪವಿತ್ರವಾದ ವಚನ. ಈ ಪವಿತ್ರವಾದ ವಚನವನ್ನು ಯಾರು, ಯಾರು ಎಂಥೆಂಥಹ ಪರಿಸ್ಥಿತಿಯಲ್ಲಿ ಇಲ್ಲಿ ಕುಳಿತಿರುತ್ತಾರೆ, ಅವರು ತಮಗೆ ತಿಳಿದಮಟ್ಟಿಗೆ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಹಾಗೆಯೇ, ಕಾವೇರಿಯನ್ನು ತಬ್ಬಲಿ ಮಾಡುವುದಕ್ಕೋಸ್ಕರ ನಾವು ಇಲ್ಲಿ ಕುಳಿತಿಲ್ಲ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಆಡಬೇಕಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ತಾವು ಒಂದು ನಿಮಿಷ ಈಲ್ಡ್ ಆಗುವುದಾದರೆ ಒಂದು ವಿಚಾರ ಹೇಳುತ್ತೇನೆ. ಕಾವೇರಿ ವಿಚಾರದಲ್ಲಿ ತಾವು ಹೇಳುತ್ತಿದ್ದೀರಿ. "means and methods" ಏನು ? ಮೊದಲನೆಯದಾಗಿ, ನಮ್ಮ ಪ್ರಶ್ನೆ ಏನಿದೆ, ಕಾವೇರಿ ಜಲವಿವಾದದ ಪ್ರಶ್ನೆಯನ್ನು ನಾವು ಮಾತುಕತೆಗಳ ಮೂಲಕವಾಗಲೀ ಅಥವಾ ಸಂಧಾನದ ಮೂಲಕವಾಗಲೀ ಪ್ರಯತ್ನ ನಡೆಸಬೇಕೆನ್ನುವದು ಈ ಶಾಸನಸಭೆಯ ಒಕ್ಕೊರಲಿನ ತೀರ್ಮಾನ ಮತ್ತು ತಮ್ಮದೂ ಇದೇ ಅಭಿಪ್ರಾಯ ಇದೆ. ರಾಜ್ಯಪಾಲರ ಭಾಷಣದಲ್ಲಿ ಈ ಬೇಸಿಕ್ ಪ್ರಿನ್ಸಿಪಲ್ಸ್‌ಗೆ ಡಿವಿಯೇಟ್ ಮಾಡಿದ್ದೀರಿ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. "it will be our endeavour to bring to an end the century old handicap faced by our farmers in the Cauvery Basin by taking all necessary steps with due regard to the legal process". ಎಂದು ಹೇಳಿದ್ದಾರೆ. ಇದೇ ಸಮಯದಲ್ಲಿ ಅದನ್ನೂ ಹೇಳಿದರೆ, it is a total deviation ಅದಕ್ಕೆ ಈ ವಿಚಾರದಲ್ಲಿ ಏನಾದರೂ ಇದ್ದರೆ ಹೇಳಲಿ.

ಶ್ರೀ ಕೆ.ಹೆಚ್. ರಂಗನಾಥ್:- ಯಾವ ರಾಗ ಹಾಡುತ್ತಾರೆ ಎನ್ನುವುದನ್ನು ತಾವು ಕೇಳಲೇ ಇಲ್ಲ. ಆಗಲೇ ಹೇಳುತ್ತಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಸದಸ್ಯರಾದ ಚಂದ್ರೇಗೌಡರು ಕಾವೇರಿ ವಿಚಾರದಲ್ಲಿ ನನ್ನ ಗಮನವನ್ನು ಸೆಳೆದಿದ್ದಾರೆ. ಅದಕ್ಕೆ ನಾನು ಬರುತ್ತೇನೆ. ನನ್ನ ಉತ್ತರದ ಯಾವುದಾದರೊಂದು ಹಂತದಲ್ಲಿ ಅದಕ್ಕೆ ಬರುತ್ತೇನೆ. ಮೊದಲು ನಾವು ಕೃಷ್ಣಾ ಯೋಜನೆಯ ವಿಚಾರದಲ್ಲಿ ಈ ಸದನದಲ್ಲಿ ಬಂದಿರತಕ್ಕ ನಾನಾ ಭಾವನೆಗಳಿಗೆ, ಅನಿಸಿಕೆಗಳಿಗೆ ನಮ್ಮ ನಿಲುವನ್ನು ಪ್ರತಿಪಾದನೆ ಮಾಡಿ, ಅನಂತರ ಕಾವೇರಿ ಜಲಾಶಯಕ್ಕೆ ಬರುತ್ತೇನೆ.

ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತಾ ಇದ್ದೆ. ಇದು ಕನ್ನಡ ನಾಡಿನ ಜನತೆಯ ಒಟ್ಟಾರೆ ನಿರ್ಧಾರ. ಈ ನಿರ್ಧಾರದ ಬಗ್ಗೆ ಬಂದು ಬಂದ ಸರ್ಕಾರಗಳು ಪ್ರಜ್ಞಾಪೂರ್ವಕವಾಗಿ ತೆಗೆದುಕೊಂಡಿರತಕ್ಕ ನಿರ್ಧಾರ. ಈ ನಿರ್ಧಾರವನ್ನು ನಾವು ಒಟ್ಟಾಗಿ ಸೇರಿ, ನಾವೇನೊಂದು ಗುರಿಯನ್ನಿಟ್ಟುಕೊಂಡಿದ್ದೇವೆ ಅಥವಾ ನಮಗೆ ಯಾವ ಗಡುವು ಕೊಟ್ಟಿದೆ, ಅಥವಾ ಯಾವ ಗಡುವು ನಮ್ಮೆಲ್ಲರ ಮನಸ್ಸಿನಲ್ಲಿದೆ, ಆ ಗಡುವನ್ನು ಗಮನದಲ್ಲಿಟ್ಟುಕೊಂಡು, ನಾವು ಮುಂದಿನ ಹೆಜ್ಜೆಗಳನ್ನು ಹಾಕಬೇಕಾಗಿದೆ. ಕೃಷ್ಣಾ ಜಲಾನಯನ ಪ್ರದೇಶದ ಜನಗಳ ಆಸೆ, ಅವರ ದುಃಖದುಮ್ಮಾನಗಳನ್ನು ಕೇಳಿದ್ದೇನೆ. ಮಾನ್ಯ ಏಕಾಂತಯ್ಯನವರು ಈ ಚರ್ಚೆಯನ್ನು ಪ್ರಾರಂಭ ಮಾಡಿ, ತದನಂತರ, ಮಾನ್ಯ ಯಡಿಯೂರಪ್ಪನವರು, ಅನಂತರ ಮಾನ್ಯ ವಾಟಾಳ್ ನಾಗರಾಜರು, ಅನಂತರ ಮಾನ್ಯ ಬಾಬಾಗೌಡ

ಪಾಟೀಲರು, ಅನಂತರ ನಮ್ಮ ಹಿರಿಯರಾದ ವೀರೇಂದ್ರಪಾಟೀಲರು ಮತ್ತು ಆ ಭಾಗದ ಪ್ರತಿನಿಧಿಯಾದ ಡಾ. ಮಲಕರೆಡ್ಡಿಯವರು, ಕಾವೇರಿ ಜಲಾನಯನ ಪ್ರದೇಶದಲ್ಲಿ ಪರಿಶ್ರಮಪಟ್ಟಿರತಕ್ಕ ಮಾನ್ಯ ವೈ.ಕೆ. ರಾಮಯ್ಯನವರು ಹಾಗೂ ಮತ್ತಿತರ ಸದಸ್ಯರೆಲ್ಲರೂ ಕೂಡ ಇದರ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದಕ್ಕಾಗಿಯೇ, ಈ ವಿಚಾರಕ್ಕೆ ಇಷ್ಟೊಂದು ಹೆಚ್ಚಿನ ಮಹತ್ವ ಬಂದಿದೆ ಎಂದು ಹೇಳಿ, ನಾನು ಭಾವನೆ ಮಾಡುತ್ತೇನೆ.

ಈಗ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ನಮ್ಮ ಪಾಲಿಗೆ ಬಂದಿರತಕ್ಕಂಥ ನೀರನ್ನು ನಾವು ರಕ್ಷಣೆ ಮಾಡಿಕೊಳ್ಳಲೇಬೇಕು ಇದನ್ನು ಉಪಯೋಗ ಮಾಡಲಿಕ್ಕೆ ಏನೆಲ್ಲಾ ಮಾಡಬೇಕು ಅವೆಲ್ಲಾ ಮಾಡಬೇಕು ಎನ್ನತಕ್ಕಂಥಾದ್ದು ಈ ಸರ್ಕಾರದ ಧೃಡ ನಿಲುವು. ಈ ದೃಢ ನಿಲುವು ಹಾಗೂ ಸಾಧನೆಯನ್ನು ಹೇಗೆ ಜಾರಿ ಮಾಡುತ್ತೀರಿ ಎನ್ನತಕ್ಕಂಥ ಪ್ರಶ್ನೆ ಯಾರೇ ಈ ಸ್ಥಾನದಲ್ಲಿ ಕುಳಿತಿದ್ದರೂ ಅವರ ಮುಂದೆ ಅತ್ಯಂತ ಪ್ರಾಮುಖ್ಯವಾಗಿ ಇದು ಬರತಕ್ಕಂಥ ಪ್ರಶ್ನೆ. ಈ ಪ್ರಶ್ನೆ ಸಾಧಾರಣವಾದ ಪ್ರಶ್ನೆ ಅಲ್ಲ, ಇದು ಒಂದು ಬೃಹತ್ ಪ್ರಶ್ನೆ. ಈ ಬೃಹತ್ ಯೋಜನೆ ಸಂಬಂಧವಾಗಿ ಬೃಹತ್ ಪ್ರಶ್ನೆ, ಈ ಬೃಹತ್ ಪ್ರಶ್ನೆಗೆ ಈ ಸರ್ಕಾರ ಮಾತ್ರ ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಈ ಸದನದ ಎಲ್ಲಾ ಸದಸ್ಯರುಗಳು ಒಕ್ಕೊರಲಿನ ಬೆಂಬಲ ಕೂಡ ಬೇಕಾಗುತ್ತದೆಂದು ನಾನು ಪ್ರಾಸ್ತಾವಿಕವಾಗಿ ಹೇಳಲು ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಕಳೆದ 10 ವರ್ಷಗಳಲ್ಲಿ ಕೃಷ್ಣಾ ಜಲಾನಯನ ಪ್ರದೇಶಕ್ಕೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎನ್ನತಕ್ಕಂಥಾದ್ದು ನಮಗೆ ಪ್ರಾಮುಖ್ಯವಾಗಿ ಕಾಣುತ್ತದೆ. ಹಾಗಾಗಿ ಬಂದ ಬಂದ ಸರ್ಕಾರಗಳು ಈ ಕೃಷ್ಣಾ ಜಲಾನಯನ ಪ್ರದೇಶದಲ್ಲಿರತಕ್ಕಂಥ ಕೆಲಸಗಳಿಗೆ ಏನು ಮಹತ್ವವನ್ನು ಕೊಟ್ಟಿದ್ದರು, ಏನು ಪ್ರಾಮುಖ್ಯತೆಯನ್ನು ಕೊಟ್ಟಿದ್ದರು ಎನ್ನತಕ್ಕಂಥ ವಿಚಾರವನ್ನು ನಾವು ಕೊಂಚಮಟ್ಟಿಗೆ ಪರಾಂಬರಿಸಿ ಮಾತನಾಡುತ್ತಾ ಮುಂದಿನ ಏಳು ವರ್ಷಗಳಲ್ಲಿ ಅಥವಾ 10 ವರ್ಷಗಳಲ್ಲಿ ಏನು ಮಾಡಬೇಕಾದೀತು ಎನ್ನುವ ಒಂದು ಅಂದಾಜು ನಮಗೆ ಸಿಗಲಿಕ್ಕೆ ಸಾಧ್ಯವಾಗುತ್ತದೆ, ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. 1981–82ರಲ್ಲಿ ಕೃಷ್ಣಾ ಬೇಸಿನ್‌ಗೆ 67.17ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು ಅದರಲ್ಲಿ ಖರ್ಚು ಮಾಡಿರತಕ್ಕಂಥಾದ್ದು 82.30 ಕೋಟಿ ರೂಪಾಯಿಗಳು. 1982–83ರಲ್ಲಿ 75.10 ಕೋಟಿ ಕೊಟ್ಟಿದ್ದು ಖರ್ಚು ಮಾಡಿದಂಥದ್ದು 68.14 ಕೋಟಿ ರೂಪಾಯಿಗಳು. 1983–84ರಲ್ಲಿ 78.13ಕೋಟಿ ರೂಪಾಯಿಗಳು ಕೊಟ್ಟಿದ್ದು ಖರ್ಚು ಮಾಡಿರುವಂಥಾದ್ದು 74.25 ಕೋಟಿ ರೂಪಾಯಿಗಳು. 1984–85ರಲ್ಲಿ 85.53 ಕೋಟಿ ರೂಪಾಯಿಗಳು ಕೊಟ್ಟಿದ್ದು ಖರ್ಚು ಮಾಡಿರುವಂಥಾದ್ದು 74.11 ಕೋಟಿ ರೂಪಾಯಿಗಳು. 1985–86ರಲ್ಲಿ ನಾವು ಒದಗಿಸಿದ್ದು 77.52 ಕೋಟಿ ರೂಪಾಯಿಗಳು ಖರ್ಚು ಮಾಡಿದ್ದು 79 ಕೋಟಿ ರೂಪಾಯಿಗಳು. 1986–87ರಲ್ಲಿ 99.13 ಕೋಟಿ ರೂಪಾಯಿಗಳು ಕೊಟ್ಟಿದ್ದು; ಅದರಲ್ಲಿ ಖರ್ಚು ಮಾಡಿದ್ದು 87 ಕೋಟಿ ರೂಪಾಯಿಗಳು. 1988–89ರಲ್ಲಿ ಒದಗಿಸಿದ್ದು 122 ಕೋಟಿ ರೂಪಾಯಿಗಳು, ಖರ್ಚು ಮಾಡಿದ್ದು 100 ಕೋಟಿ ರೂಪಾಯಿಗಳು 1989–90ರಲ್ಲಿ 141 ಕೋಟಿ ರೂಪಾಯಿಗಳು ಕೊಟ್ಟಿದ್ದು. ಖರ್ಚು ಮಾಡಿದ್ದು 117 ಕೋಟಿ ರೂಪಾಯಿಗಳು. 1990–91ರಲ್ಲಿ 157 ಕೋಟಿ ರೂಪಾಯಿಗಳು ಕೊಟ್ಟಿದ್ದು 126.27 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. 1991–92ರಲ್ಲಿ 177 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು, ಖರ್ಚು ಮಾಡಿದ್ದು 187 ಕೋಟಿ ರೂಪಾಯಿಗಳು. 1992–93ರಲ್ಲಿ 249 ಕೋಟಿ ರೂಪಾಯಿಗಳು ಕೊಟ್ಟಿದ್ದು, ಖರ್ಚು ಮಾಡಿರುವುದು ಡಿಸೆಂಬರ್‌ವರೆಗೂ 170 ಕೋಟಿ ರೂಪಾಯಿಗಳು.

ಶ್ರೀ ಸಿ. ಬೈರೇಗೌಡ:– ಹಾಗೆ ಫಿಜಿಕಲ್ ಪ್ರೋಗ್ರೆಸ್ ಬಗ್ಗೆ ಹೇಳಿ.

ಶ್ರೀ ಎಸ್.ಎಂ. ಕೃಷ್ಣ:– ನಾನು ಹೇಳತಕ್ಕಂಥಾದ್ದು, ಇದನ್ನು ನೋಡಿದರೆ ಪ್ರೊಗ್ರೆಸಿವ್ ಇನ್‌ಕ್ರೀಜ್ both in terms of allotment of funds as well as in terms of expenditure incurred on the Krishna Basin Projects. ಡಾಕ್ಟರ್ ಮಲ್ಕರೆಡ್ಡಿಯವರು ನಾನು ಯಾವುದೋ ಒಂದು ಪ್ರಶ್ನೆಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಿದಂತಹ ಒಂದು ಫಿಗರ್ ಅನ್ನು ನಿನ್ನೆಯ ದಿವಸ ನನ್ನ ಗಮನಕ್ಕೆ ತಂದರು. ನಿನ್ನೆಯ ದಿವಸ ನಾನು ಪ್ರಶ್ನೆಗೆ ಉತ್ತರ ಕೊಡುತ್ತಾ What is the amount released by the Government out of the above so far? ಅಂತ ಕೇಳಿದ್ದರು. ಆದ್ದರಿಂದ An amount of Rs. 51.98 crores has been released as Letter of Credit for the works upto January 1993. ಹಾಗೆ ಅಂತ ಹೇಳಿದ್ದೇನೆ. ಆದ್ದರಿಂದ ಕೇವಲ 51 ಕೋಟಿ ರೂಪಾಯಿಗಳು ಮಾತ್ರ ನಾವು ಖರ್ಚು ಮಾಡಿದ್ದೇವೆ ಎನ್ನತಕ್ಕಂಥ ಅಭಿಪ್ರಾಯಕ್ಕೆ ಅವರು ಬರಬೇಕಾದರೆ ಆ ಅಭಿಪ್ರಾಯ ಸಾಧು ಅಲ್ಲ ಎನ್ನುವ ಮಾತನ್ನು ಸದನದಲ್ಲಿ ಹೇಳುವಾಗ 1992–93ರಲ್ಲಿ ಏನು 155 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಒದಗಿಸಿದ್ದರೋ ಅದರಲ್ಲಿ ಸುಮಾರು ಫೆಬ್ರವರಿ ಕೊನೆಯವರೆಗೆ 112 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಇನ್ನು ಮಾರ್ಚಿ ತಿಂಗಳ ಗಂಟೆ ಈಗಾಗಲೇ ಹೊಡೆಯುವುದಕ್ಕೆ ಪ್ರಾರಂಭವಾಗಿದೆ. warming up ಇದು ನಡೆಯುತ್ತಿದೆ. ಆದ್ದರಿಂದ ಇನ್ನೂ 15–20 ದಿವಸಗಳಲ್ಲಿ ಎಷ್ಟು ಖರ್ಚು ಮಾಡಬಹುದು ? ಮತ್ತೊಂದು ವಿಚಾರವನ್ನು ಈ ಸದನದ ಗಮನಕ್ಕೆ ತರತಕ್ಕಂಥಾದ್ದು ಸಾಧುವೆಂದು ನಾನು ಭಾವಿಸುತ್ತೇನೆ. Letter of Credit ಇದು ಹೇಗೆ ನಮ್ಮ ಆಯವ್ಯಯದ ಚೌಕಟ್ಟಿಗೆ ಬಂತು ಎಂದು ಇವತ್ತಿಗೂ ನನಗೆ ಅರ್ಥವಾಗಲಿಲ್ಲ. ಅದನ್ನು ಅರ್ಥಮಾಡಿಕೊಳ್ಳುವುದಕ್ಕೆ ನಾನು ಬಹಳ ಪ್ರಯತ್ನ ಮಾಡುತ್ತಿದ್ದೇನೆ. ನಾನು ಈ ಹಿಂದೆ ಸರ್ಕಾರದಲ್ಲಿ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ, ಕೇಂದ್ರದಲ್ಲೂ ಕೆಲಸ ಮಾಡಿದ್ದೇನೆ, ಒಂದು ಇಲಾಖೆಗೆ ಇಂತಿಷ್ಟು ಹಣವನ್ನು ಬಜೆಟ್‌ನಲ್ಲಿ ಇಡತಕ್ಕಂಥಾದ್ದು, Budget is a very sacred document as far as running of Governments are concerned. It has certain sanctity and also it has some sanction. What is that sanctity and what is that sanction? The Sanctity is, the budget is proposed with the seriousness that the Government summons in shaping that budget and what is the sanction? The sovereign House adopts that Budget. That is the reason, why I say, there has to be an element of sanctity and there has to be more than an element of sanction. ಈ ದಿವಸ ನಮ್ಮ ಪರಿಸ್ಥಿತಿ ಏನಾಗಿದೆ ? ಈ ಪರಿಸ್ಥಿತಿ ಈ ಸರ್ಕಾರದಿಂದ ಉದ್ಭವವಾಯಿತೆಂದು ಹೇಳಿದರೆ ಅದು ಸತ್ಯಕ್ಕೆ ಬಹಳ ದೂರ ಹೋದಂತೆ ಆಗುತ್ತದೆ. Somewhere in 1980's, 1970 ದಶಕಗಳಲ್ಲೂ ಇದು ಇರಲಿಲ್ಲ. 1980ರ ದಶಕಗಳಲ್ಲಿ ಇದು ಬಂದಿರತಕ್ಕ ಪಿಡುಗು ಹಾಗೆ ಎಂದು ನಾನು ಕರೆದರೆ ಅದು ಅತಿಶಯದ ಮಾತು ಆಗುವುದಿಲ್ಲವೆಂದು ಹೇಳುತ್ತೇನೆ. ಇವತ್ತು ಈ ಲೆಟರ್ ಆಫ್ ಕ್ರೆಡಿಟ್‌ನಿಂದ ಏನಾಗಿದೆ ಎಂದರೆ, the Budget has became absolutely a document which does not attract any seriousness and as my esteemed colleague Sri Ranganath puts it, the Budget has become to an extent, irrelevant as far as making an assessment of what we are going to spend, what we are going to get at a particular point of time in a year. It is in this context, that I welcomed and my esteemed colleague Sri K.H.Ranganath, has also welcomed the suggestion made by Professor Nanjundaswamy. Atleast let the Finance

Department, provide the grants within the framework of the budget with quarterly grants so that we can make quarterly assessment, and we can plan our works Schedule over a period of 12 months starting from the first April or so. ಇದು ಏತಕ್ಕೆ ಆಗುತ್ತಾ ಇಲ್ಲ ಎನ್ನುವುದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೊರಟರೆ ಅದು ಅಪ್ರಕೃತವಾಗುತ್ತದೆ ಅಥವಾ ಈ ಸಮಯದಲ್ಲಿ ಸಾಧು ಅಸಾಧು ಎನ್ನತಕ್ಕಂಥಾದ್ದರ ಬಗ್ಗೆ ನಾನು ಹೋಗುವುದಿಲ್ಲ. ಈ ಕೃಷ್ಣ ಜಲಾನಯನ ಪ್ರದೇಶದಲ್ಲಿ ಇನ್ನು ಮುಂದೆ ಇದನ್ನು ಸಾಧಿಸುತ್ತಿರೋ ನೀವು ? ಸಾಧಿಸತಕ್ಕಂಥ ಬಗೆ ಹೇಗೆ ? ಎಂದು ಬಾಬಾಗೌಡ ಪಾಟೀಲರು, ರಾಮಯ್ಯನವರು, ಏಕಾಂತಯ್ಯನವರು, ವೀರೇಂದ್ರಪಾಟೀಲರು, ಮಲಕಾರೆಡ್ಡಿಯವರು, ಮೇಟಿಯವರು ಎಲ್ಲರೂ ಯಾರು ಯಾರು ಮಾತನಾಡಿದ್ದಾರೋ ಅವರೆಲ್ಲರೂ ಈ ಪ್ರಶ್ನೆಯನ್ನು ನನಗೆ ಹಾಕಿದ್ದಾರೆ. ಈಗ ನಾನು ಅಪರಾಧಿ ಕಟಕಟೆಯಲ್ಲಿ ನಿಂತಿದ್ದೇನೋ ಎನ್ನತಕ್ಕಂಥ ಭಾವನೆ ನನಗೆ ಬಂದುಹೋಗಿದೆ. ನೀವು ಮಾಡುತ್ತೀರೋ ? ನೀವು ಮಾಡುವುದಕ್ಕೆ ಸಾಧ್ಯವೋ ? ಹೇಗೆ ಸಾಧ್ಯ ? ಎಲ್ಲಿ ಸಾಧ್ಯ ? ದುಡ್ಡು ಎಲ್ಲಿಂದ ತರುತ್ತೀರಿ ಎಂದು ಕೇಳುತ್ತಾರೆ. This Government is the creature of this August House and this August House is the creature of the totality of the people of the State of Karnataka ಅವರನ್ನು ನಾವು ಪ್ರತಿನಿಧಿಸಬೇಕಾಗಿದ್ದರೆ ಅವರ ಆಸೆಗಳು ಏನಿವೆ ? ಅದಕ್ಕೆ ನಾನು ಹೇಳುತ್ತೇನೆ, Krishna or Kaveri, this is the mandate given by the people to this House and to this Government.

ಕೃಷ್ಣಾನದಿ ನೀರನ್ನು ನೀವು 2 ಸಾವಿರ ಇಸವಿಯೊಳಗೆ ಉಪಯೋಗಿಸಲಿಕ್ಕೆ ಅಥವಾ ಹಕ್ಕನ್ನು ಉಳಿಸಲಿಕ್ಕೆ ಅವಶ್ಯ ಪ್ರಯತ್ನ ಮಾಡಬೇಕು, ಅದಕ್ಕೆ ದುಡ್ಡು ಒದಗಿಸಬೇಕು. ಅದಕ್ಕೆ ಬೇಕಾದಂಥ ಏರ್ಪಾಡು ಮಾಡಬೇಕೆಂದು ಜನ ನಮಗೆ ಆಡಳಿತವನ್ನು ಕೊಟ್ಟಿದ್ದಾರೆ. ಹಾಗೇನೇ ಕಾವೇರಿ ನದಿ ಪಾತ್ರದಲ್ಲಿ ನಮ್ಮ ರಾಜ್ಯದ ನೀರನ್ನು, ನಮ್ಮ ರಾಜ್ಯಕ್ಕೆ ಅಗತ್ಯವಾದ ನಮ್ಮ ಹಕ್ಕು ಏನಿದೆ ಆ ಹಕ್ಕನ್ನು ಉಳಿಸಲಿಕ್ಕೆ ನೀವು ಪ್ರಯತ್ನ ಮಾಡಬೇಕು ಎನ್ನತಕ್ಕಂಥ ಅಣತಿಯನ್ನೂ ನಮಗೆ ಕೊಟ್ಟಿದ್ದಾರೆ. ಹೀಗೆ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಹಾಗೂ ಈ ಕೆಲಸವನ್ನು ಮಾಡಬೇಕಾದರೆ ಕಳೆದ 10 ವರ್ಷಗಳಲ್ಲಿ ಯಾವ ಪ್ರಮಾಣದಲ್ಲಿ ಹಣವನ್ನು ಕೊಟ್ಟಿದ್ದಾರೆ ? ಇನ್ನು ಮುಂದಿನ ಏಳು ವರ್ಷಗಳಲ್ಲಿ ಯಾವ ಪ್ರಮಾಣದಲ್ಲಿ ಕೊಟ್ಟರೆ ಈ ಪ್ರದೇಶದ ನೀರನ್ನು ನಾವು ಉಪಯೋಗಿಸಬಹುದು ಎನ್ನುವುದಕ್ಕೆ ಒಂದು ಪ್ರೊಜೆಕ್ಷನ್ ಏನು ಕೇಳಿದ್ದೀರಿ ? ಇದನ್ನು ಬಾಬಾಗೌಡ ಪಾಟೀಲರು ಕೇಳಿದರು. ನನ್ನ ಪ್ರೊಜೆಕ್ಷನ್ ಈ ರೀತಿ ಇದೆ. ಈ ಪ್ರಮಾಣದಲ್ಲಿ ಹಣ ಕೊಡತಕ್ಕಂಥ ರಾಜಕೀಯ ಇಚ್ಛಾಶಕ್ತಿಯನ್ನು ನಾವು ಪ್ರತಿಬಿಂಬಿಸಿದರೆ, ರಾಜಕೀಯ ಇಚ್ಛಾಶಕ್ತಿಯನ್ನು ಹಣ ಕೊಡುವುದರ ಮೂಲಕ ನಾವು ಪ್ರತಿಬಿಂಬಿಸಿದರೆ ಆಗ 2 ಸಾವಿರ ಇಸವಿಯೊಳಗೆ ನಾವು ಈ ಕೆಲಸವನ್ನು ಮಾಡತಕ್ಕಂಥ ಯಾಂತ್ರಿಕ ಶಕ್ತಿ ಹಾಗೂ ಮಾನವ ಶಕ್ತಿ ನಮ್ಮಲ್ಲಿದೆ. ಇದಕ್ಕೆ ಬೇಕಾದ ಸಂಪನ್ಮೂಲಗಳನ್ನು ಕೊಡುವ ಬಗ್ಗೆ ಆಗಿಂದಾಗ್ಗೆ ನಾನು ಈ ಸಭೆಯಲ್ಲಿ ಪ್ರತಿಪಾದಿಸುತ್ತಲೇ ಇದ್ದೇನೆ. ಈಗಿರತಕ್ಕಂಥ ಎಲ್ಲಾ ಆನ್‌ಗೋಯಿಂಗ್ ಪ್ರಾಜೆಕ್ಟ್; ಮತ್ತು ಹೊಸ ಪ್ರಾಜೆಕ್ಟ್ ಇವುಗಳೆಲ್ಲದರ ಒಟ್ಟಾರೆ ವಿವರಗಳನ್ನು ತೆಗೆದುಕೊಂಡರೆ ನಮಗೆ ಈ ಪ್ರಮಾಣದಲ್ಲಿ ಮುಂದಿನ ವರ್ಷಗಳಲ್ಲಿ ನಮಗೆ ಹಣ ಬೇಕಾಗುತ್ತದೆ. ಈ ಹಣ ಬೇಕಾಗುವಾಗ ಪ್ರತಿ ವರ್ಷವೂ ಕೂಡ 10 ರಿಂದ 12 ಪರ್ಸೆಂಟ್ ಪ್ರಾಜೆಕ್ಟ್ ಎಸ್ಕಲೇಷನ್ ಕೂಡಾ ಸೇರಿಸಿಕೊಂಡು ನಾನು ಸದನಕ್ಕೆ ಈ ಪ್ರೊಜೆಕ್ಷನ್ ಕೊಡುತ್ತಿದ್ದೇನೆ. 1992–93ಕ್ಕೆ 248 ಕೋಟಿ ಆಗಲೇ ಕೊಟ್ಟಿದ್ದಾರೆ. 1993–94ಕ್ಕೆ 418 ಕೋಟಿ, 1994–95 ಕ್ಕೆ 734 ಕೋಟಿ, 1995–96ಕ್ಕೆ 846 ಕೋಟಿ, 1996–97ಕ್ಕೆ 662 ಕೋಟಿ, 1997–98ಕ್ಕೆ 734 ಕೋಟಿ, 1998–99ಕ್ಕೆ 815 ಕೋಟಿ,

1999–2000ಕ್ಕೆ 1032 ಕೋಟಿ ಹೀಗೆ ಇದರ ಒಟ್ಟಾರೆ ಹಣ 5489 ಕೋಟಿ ರೂಪಾಯಿಗಳನ್ನು ನಾವು ಇನ್ನು 7 ವರ್ಷಗಳಲ್ಲಿ ಖರ್ಚು ಮಾಡತಕ್ಕಂಥ ರಾಜಕೀಯ ಶಕ್ತಿ ಹಾಗೂ ಲೆಟರ್ ಆಫ್ ಕ್ರೆಡಿಟ್‌ಗಳನ್ನು ಬಿಡುಗಡೆ ಮಾಡುವುದರ ಮೂಲಕ ಪ್ರದರ್ಶನ ಮಾಡಿದರೆ ನಾವು ಕೃಷ್ಣ ಜಲಾನಯನ ಪ್ರದೇಶದ ಜನಗಳ ಆಶೋತ್ತರಗಳಿಗೆ ಸ್ಪಂದಿಸುವುದಕ್ಕೆ ಸಾಧ್ಯವಾಗುತ್ತದೆ. ಈ 5489 ಕೋಟಿ ರೂಪಾಯಿಗಳ ಗುರಿಯನ್ನು ಏನು ಅಂತಿಮವಾಗಿ ಹಾಕಿಕೊಂಡಿದ್ದೇವೆ, ಇದನ್ನು, ಮಾನ್ಯ ವೀರೇಂದ್ರಪಾಟೀಲರವರು ಇನ್ನು 1994ನೇ ಇಸವಿಯಲ್ಲಿ ಚುನಾವಣೆ ಬರುತ್ತದೆ, ಇವರೇ ಇರುತ್ತಾರೋ, ಇನ್ನು ಯಾರು ಬರುತ್ತಾರೋ, ಅಥವಾ ಬೇರೆ ಸರ್ಕಾರ ಬರುತ್ತದೋ ಎಂದು ಕೇಳಿರುವುದಕ್ಕೆ ನನ್ನ counter question ಮಾನ್ಯ ವೀರೇಂದ್ರ ಪಾಟೀಲರಿಗೆ ಏನೆಂದರೆ, ಯಾರದೇ ಸರ್ಕಾರ ಬರಲಿ, ಇದು ನಾವು ಕೊಟ್ಟಿರತಕ್ಕಂಥ ವಚನ ಕನ್ನಡ ನಾಡಿನ ಜನರಿಗೆ. ಇದರಿಂದ ಒಂದು ಹೆಜ್ಜೆ ಹಿಂದೆ ಹೋಗತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ಆ ಅನುಮಾನ ಯಾರಿಗೂ ಈ ಸದನದಲ್ಲಿ ಬೇಕಾಗಿಲ್ಲ. ಇದರಿಂದ ಹಿಂದೆ ಹೋಗತಕ್ಕಂಥ ಪ್ರಶ್ನೆಯೇ ಇಲ್ಲ. ಇನ್ನು ಮುಂದೆ ದಾಪುಗಾಲನ್ನು ಹಾಕತಕ್ಕಂಥ ಪ್ರಶ್ನೆ ಮಾತ್ರ ಮುಂದೆ ಬರತಕ್ಕಂಥ ಸರ್ಕಾರದಲ್ಲಿ ಉಳಿದಿರತಕ್ಕಂಥಾದ್ದು. ಆದ್ದರಿಂದ ಯಾರೇ ಸರ್ಕಾರವನ್ನು ಮಾಡಬೇಕೆಂದು ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದರೆ ಅವರಿಗೆ ಒಂದು ಕಿವಿ ಮಾತು ಹೇಳುತ್ತೇನೆ, ಇದಕ್ಕೆ ನೀವು ಸಿದ್ಧವಾಗಿರಬೇಕು ಹಾಗೆ ಅಂತ ಹೇಳುತ್ತೇನೆ. ಇಲ್ಲದಿದ್ದರೆ ನಮಗೆ ಬಿಡಿ, ನಾವು ಸಿದ್ಧ ಮಾಡಿಕೊಳ್ಳುತ್ತೇವೆ.

ಶ್ರೀ ಆರ್.ಎಲ್. ಜಾಲಪ್ಪ:– ಅವರು ಮಂಡ್ಯದವರು. ಆದ್ದರಿಂದ ನಾವೆಲ್ಲ ಯಾವಾಗಲೂ ನಗುತ್ತೇವೆ.

ಶ್ರೀ ಎಸ್.ಎಂ. ಕೃಷ್ಣ:– ನಾವು ಕಷ್ಟ ಬಂದರೂ ನಗುತ್ತೇವೆ, ಸುಖ ಬಂದರೂ ನಗುತ್ತೇವೆ.

ಶ್ರೀ ವಾಟಾಳ್ ನಾಗರಾಜ್:– ನಗುವ ಗಂಡಸನ್ನು, ಅಳುವ ಹೆಂಗಸರನ್ನು ನಂಬಬಾರದು ಅಂತ ಗಾದೆ ಇದೆ.

ಶ್ರೀ ಎಸ್.ಎಂ. ಕೃಷ್ಣ:– ಅದು ತಪ್ಪು, ಅಳುವ ಗಂಡಸನ್ನು, ನಗುವ ಹೆಂಗಸನ್ನು ನಂಬಬಾರದು ಅಂತ ಹೇಳತಕ್ಕಂಥದ್ದು.

ಶ್ರೀ ವಾಟಾಳ್ ನಾಗರಾಜ್:– ನಿಮ್ಮದು ಹೊಸ ವ್ಯಾಖ್ಯಾನ.

ಶ್ರೀ ಎಸ್.ಎಂ. ಕೃಷ್ಣ:– ಇಲ್ಲ ಇಲ್ಲ; ಅದು ಕರೆಕ್ಟ್ ವ್ಯಾಖ್ಯಾನ. ಯಾವತ್ತಾದರೂ ನಂಬಿಬಿಟ್ಟಿರಿ. ಅಳುವ ಗಂಡಸನ್ನು ಯಾವಾಗಲೂ ನಂಬಬೇಡಿ.

ಶ್ರೀಮತಿ ದಮಯಂತಿ ಬೋರೇಗೌಡ:– ಅವೆರಡನ್ನೂ ನಂಬಬೇಡಿ. ಅವೆರಡೂ ಸತ್ಯವಲ್ಲ.

ಶ್ರೀ ಎಸ್.ಎಂ. ಕೃಷ್ಣ:– ಅದಕ್ಕೇ ನನ್ನ ಕಣ್ಣಿನಲ್ಲಿ ಯಾವಾಗಲೂ ನೀರು ಬರುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನೀವು ಇನ್ನೊಂದು ಸಾರಿ ದಯವಿಟ್ಟು ಹೇಳಬೇಕು.

ಶ್ರೀ ಎಸ್.ಎಂ. ಕೃಷ್ಣ:– ಅಳುವ ಗಂಡಸನ್ನು ನಂಬಬಾರದು ಅಂತ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಯಾರಿಗೆ ಹೇಳುತ್ತಿದ್ದೀರಿ ಅಂತ.....

ಶ್ರೀ ಎಸ್.ಎಂ. ಕೃಷ್ಣ:– ಯಾರನ್ನೂ ಉದ್ದೇಶಿಸಿ ನಾನು ಹೇಳುತ್ತಿಲ್ಲ. ನಾನು ಈ ಪ್ರಶ್ನೆಯನ್ನೇ

ಎತ್ತಿದವನಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಎದ್ದು ನಿಂತು ನಮ್ಮ ಗಾದೆಗಳಿಗೆ ಅವರು ವಿಕೃತವಾದಂತಹ ಗಾದೆಯನ್ನು ಕೊಟ್ಟರು, ಆದ್ದರಿಂದ ಆ ಗಾದೆಯನ್ನಾದರೂ ಕರೆಕ್ಟ್ ಮಾಡಬೇಕಲ್ಲ.

ಶ್ರೀ ವಾಟಾಳ್ ನಾಗರಾಜ್:- ಇಲ್ಲ, ಇಲ್ಲ, ನಾನು ವಿಕೃತವಾಗಿ ಗಾದೆಗೆ ಏನು ಹೇಳುತ್ತಿಲ್ಲ. ನೀವೇ ಅದನ್ನು ತಿರುಗಿಸಿ ತಿರುಗಿಸಿ ಹೇಳುತ್ತಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ:- ಚೇ, ಚೇ, ಚೇ, ನಾನು ತಿರುಗಿಸಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ:- ಮಾತಿಗೆ ಮುಂಚೆ ಅಳುವ ಗಂಡಸನ್ನು, ಮಾತಿಗೆ ಮುಂಚೆ ನಗುವ ಹೆಂಗಸನ್ನು ನಂಬಬಾರದು ಅಂತ ಗಾದೆ ಇದೆ.

ಶ್ರೀ ವಾಟಾಳ್ ನಾಗರಾಜ್:- ಇದು ಅವರವರ ಅನುಭವದ ಮೇಲೆ ಹೇಳುವ ಮಾತು.

ಶ್ರೀ ಆರ್. ದಯಾನಂದರಾವ್:- ಆದರೆ ಮಾನ್ಯ ವಾಟಾಳ್ ನಾಗರಾಜ್‌ರವರು ನಗುತ್ತಲೇ ಇರುತ್ತಾರೆ.

ಶ್ರೀ ಎಸ್.ಎಂ. ಕೃಷ್ಣ:- ನಾನು ಅದನ್ನು ಯಾರನ್ನೂ ಉದ್ದೇಶಿಸಿ ಹೇಳಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಮಧ್ಯೆ ಪ್ರವೇಶ ಮಾಡಿದ್ದರಿಂದ ಉದ್ಭವವಾದಂತಹ ಒಂದು ಪ್ರಹಸನ ಅಷ್ಟೆ ಅದು; ಈಗ ಈ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಅತ್ಯಂತ ಪ್ರಾಮುಖ್ಯವಾದಂಥದ್ದು ಯು.ಕೆ.ಪಿ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್; ಅಂದರೆ ಕೃಷ್ಣ ಮೇಲ್ದಂಡೆ ಯೋಜನೆ. ಈಗಾಗಲೇ ಇದರ ಕೆಲಸ ತ್ವರಿತಗತಿಯಲ್ಲಿ ಸಾಗುತ್ತಿದೆ ಎನ್ನತಕ್ಕದ್ದನ್ನು ಅಲ್ಲಿ ಹೋಗಿ ನೋಡಿದ ಎಲ್ಲರಿಗೂ ಕೂಡ ಅನುಭವಕ್ಕೆ ಬರತಕ್ಕಂಥ ವಿಚಾರವಾಗಿದೆ. ನಾನು ಈ ಇಲಾಖೆಯ ಹೊರೆಯನ್ನು ಹೊತ್ತ ಮೇಲೆ ಪ್ರಪ್ರಥಮವಾಗಿ ನಾನು ಹೋಗಿದ್ದು ಕೃಷ್ಣ ಮೇಲ್ದಂಡೆಯನ್ನು ನೋಡಬೇಕು ಅಂತ. ಅಲ್ಲಿ ಹೇಗೆ ಕೆಲಸ ಕಾರ್ಯಗಳು ನಡೆಯುತ್ತಿದೆ ಎನ್ನತಕ್ಕದ್ದನ್ನು ನಾನು ಪರಿವೀಕ್ಷಣೆಯನ್ನು ಮಾಡುವುದಕ್ಕೋಸ್ಕರ ಅಲ್ಲಿಗೆ ಹೋಗಿದ್ದೆ. ಅಲ್ಲಿ ಹೋದಾಗ ನಾನು, ನಾನಾ ಕಾಮಗಾರಿಯನ್ನು ನೋಡಿದೆ, ನಾರಾಯಣಪುರ ಅಣೆಕಟ್ಟನ್ನು ನೋಡಿದೆ, ಆಲಮಟ್ಟಿ ಡ್ಯಾಮ್ ಅನ್ನು ನೋಡಿದೆ, ಹಾಗೆ ಅಲ್ಲಿ ತೋಡುತ್ತಿರತಕ್ಕಂಥ ಕಾಲುವೆಗಳನ್ನೆಲ್ಲ ನೋಡಿದೆ. ಇದುವರೆಗೂ ನಾವು ಯು.ಕೆ.ಪಿ. ಫಸ್ಟ್ ಸ್ಟೇಜ್‌ನಲ್ಲಿ 4.25 ಲಕ್ಷ ಹೆಕ್ಟೇರ್‌ಗಳ ಪೊಟೆನ್ಷಿಯಲ್ ಅನ್ನು ನಾವು ಮಾಡಬೇಕಾಗಿತ್ತು. ಆದರೆ ಫೆಬ್ರವರಿ 1993ರವರೆಗೆ 1.40 ಹೆಕ್ಟೇರ್ ಭೂಮಿಗೆ ....

ಶ್ರೀ ವೈ.ಕೆ. ರಾಮಯ್ಯ:- ನಿಮ್ಮ ಭಾಷಣಕ್ಕೆ ಅಡ್ಡಿಬರಲಿಕ್ಕೆ ನನಗೆ ಇಷ್ಟವಿಲ್ಲ. ಆದರೆ ನನ್ನ ಅನುಮಾನ ಒಂದಕ್ಕೆ ಕ್ಲಾರಿಫಿಕೇಶನ್ ಸಿಕ್ಕಲಿಲ್ಲ in spite of my best efforts in any of the papers creation of potentiality ಅಂತ ಅಂದರೆ ಏನು ಎಂಬುದನ್ನು ದಯವಿಟ್ಟು ತಿಳಿಸಬೇಕು. ಹೊಲಕ್ಕೆ ನೀರನ್ನು ಬಿಡುವುದೇ ? ಕೆರೆಯಲ್ಲಿ ನೀರನ್ನು ನಿಲ್ಲಿಸುವುದೇ ? ಅಥವಾ ತೂಬಿನವರೆಗೆ ನೀರು ಬರುವುದೇ ದಯಮಾಡಿ ಸ್ವಲ್ಪ ತಿಳಿಸಬೇಕು.

ಶ್ರೀ ಎಸ್.ಎಂ. ಕೃಷ್ಣ:- 1.40 ಹೆಕ್ಟೇರಿನ ಪೊಟೆನ್ಷಿಯಲ್ ಅಚೀವ್‌ಮೆಂಟ್ ಮಾಡಿದ್ದೇವೆ ಅಂದರೆ ಕೇವಲ ನೀರನ್ನು ಕೊಡಿಸಿರತಕ್ಕಂಥದ್ದು ಅಲ್ಲ. ಯಾವುದನ್ನು ಹೊಲಗಳಿಗೆ ಬಿಟ್ಟಿದ್ದೇವೋ, ಅದನ್ನೇ ನಾನು ನನ್ನ ಭಾಷಣದ ಉದ್ದಕ್ಕೂ ಉತ್ತರದಲ್ಲಿ ಪೊಟೆನ್ಷಿಯಲ್ ಏನಿದೆ ಅದನ್ನು ಅಚೀವ್ ಮಾಡಿದ್ದೇವೆ ಎಂದು ಹೇಳಿದ್ದೇನೆ. ಇನ್ನು ಉಳಿದಿರತಕ್ಕಂಥ 2.85 ಹೆಕ್ಟೇರ್ ಕೃಷ್ಣ ಮೊದಲನೆಯ ಸ್ಟೇಜ್‌ನಲ್ಲಿ 1996ನೇ ಇಸವಿಯಷ್ಟು ಹೊತ್ತಿಗೆ ಮಾಡಬೇಕು ಎನ್ನುವಂತಹ ಗುರಿಯನ್ನು ಇಟ್ಟುಕೊಂಡಿದ್ದೇವೆ.

ಕೃಷ್ಣ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕ್‌ನವರು ನಮ್ಮ ನೆರವಿಗೆ ಬಂದಿದ್ದಾರೆ. ಅವರು ಮೊದಲು 1986ನೇ ಇಸವಿಯಲ್ಲೂ ಹಣವನ್ನು ಕೊಟ್ಟಿದ್ದರು, ಅದನ್ನು ನಾವು ಉಪಯೋಗಿಸಿಕೊಂಡಿದ್ದೇವೆ. ಈಗ ಮತ್ತೆ ವಿಶ್ವಬ್ಯಾಂಕ್‌ನವರಿಂದ ಸುಮಾರು 245 ಮಿಲಿಯನ್ ಡಾಲರ್‌ಗಳು ಬರುತ್ತಿದೆ. ಅದರಲ್ಲಿ ಈಗಾಗಲೇ 30–35–40 ಮಿಲಿಯನ್ ಡಾಲರ್‌ಗಳನ್ನು ಕೊಟ್ಟಿದ್ದಾರೆ. 352 ಮಿಲಿಯನ್ಸ್ ಡಾಲರ್‌ಗಳು ಅಂತ ಹೇಳಿ ಒರಿಜನಲ್ ಪ್ರೋಗ್ರಾಂನಲ್ಲಿ ಇತ್ತು. ಆದರೆ ಇತ್ತೀಚೆಗೆ ನಾವು ರೂಪಾಯಿಗೆ ಕನ್‌ವರ್ಟ್ ಮಾಡಿರುವುದರಿಂದ ಅದರ ಹೊಂದಾಣಿಕೆಗೋಸ್ಕರ ಸುಮಾರು 80 ಮಿಲಿಯನ್ ಡಾಲರ್ ಅದಕ್ಕೆ ಹೋಗಿದೆ. ಅದನ್ನು ಕೂಡ ನಾವು ವಿಶ್ವಬ್ಯಾಂಕ್‌ನವರಲ್ಲಿ ಕೇಳುತ್ತಿದ್ದೇವೆ. ವಿಶ್ವಬ್ಯಾಂಕ್‌ನವರು 3 – 4 ತಿಂಗಳ ಕೆಳಗೆ ನಮಗೆ ಕೊಡುತ್ತಿದ್ದಂತಹ ಸಾಲವನ್ನು ಸಹ ಧಿಡೀರನೆ ನಿಲ್ಲಿಸಿಬಿಟ್ಟರು. ಶ್ರೀ ಬುಚ್ಚರ್ ಅಂತ ಹೇಳಿ ವಿಶ್ವಬ್ಯಾಂಕಿನ ಒಬ್ಬ ಪ್ರತಿನಿಧಿ ಬಂದಿದ್ದರು. ಹೆಸರು ಸ್ವಾರಸ್ಯವಾಗಿದೆ. ಅವರು ಬಂದು ರೀ ಸೆಟಲ್‌ಮೆಂಟ್ ಎಲ್ಲಿ ಮಾಡಿದ್ದೀರಿ ಅಂತ ಕೇಳಿದರು, ನಾವು ರೀ ಸೆಟಲ್‌ಮೆಂಟ್ ಮಾಡಿದ್ದೇವೆ, ಆದರೆ ಇದುವರೆಗೂ ನಮ್ಮ ಹಣೆಬರಹ ಏನಾಗಿದೆ ಅಂತ ಹೇಳಿದರೆ ನಾವು ಒಂದು ಯೋಜನೆಯನ್ನು ಕೈಗೆತ್ತಿಕೊಂಡಾಗ ರೀ ಸೆಟಲ್‌ಮೆಂಟ್ ರಿಹ್ಯಾಬಿಲಿಟೆಷನ್ ಇದಕ್ಕೆ ನಾವು ಲಾಸ್ಟ್ ಪ್ರೈಯಾರಿಟಿ ಕೊಡುತ್ತಿದ್ದೇವೆ. ಮೊದಲನೆಯದಾಗಿ ನಾವು ಕಾಲುವೆಯನ್ನು ಅಗೆಯುವುದು ಮತ್ತು ಕೆರೆ ಕಟ್ಟುವುದು ಗೆಸ್ಟ್‌ಹೌಸ್ ಇವುಗಳಿಗೆ ನಾವು ಆದ್ಯತೆಯನ್ನು ಕೊಟ್ಟು ಈ ಕೆಲಸಗಳನ್ನು ನಾವು ಮಾಡುತ್ತಿದ್ದೆವು. ಈಗ ನಾವು ಏನು ಹೇಳುತ್ತಿದ್ದೇವೆ ಅಂದರೆ ಮೊದಲು ರೀ–ಸೆಟಲ್‌ಮೆಂಟ್ ಮತ್ತು ರೀಹ್ಯಾಬಿಲಿಟೆಷನ್ ಅಲ್ಲಿಂದಲೇ ನಮ್ಮ ಯೋಜನೆಗಳೆಲ್ಲವೂ ಕೂಡ ಪ್ರಾರಂಭವಾಗಬೇಕು. ಇವತ್ತು ವಿಶ್ವಬ್ಯಾಂಕ್‌ನವರು ಹಾಕಿರತಕ್ಕಂಥ ನಾರ್ಮ್ಸ್ ಏನಿದೆ ಅದರಲ್ಲಿ ಅತ್ಯಂತ pride of place, goes to Rehabilitation and Resettlement. ಬುಚ್ಚರ್ ಬಂದರು, ನೋಡಿದರು ರೀ–ಸೆಟಲ್‌ಮೆಂಟ್ ಸರಿಯಾಗಿ ಆಗಿರಲಿಲ್ಲ, ರೀಹ್ಯಾಬಿಲಿಟೆಷನ್ ಸರಿಯಾಗಿ ಆಗಿರಲಿಲ್ಲ. ಬುಚ್ಚರ್ ಬಂದಾಗ ನಮ್ಮಲ್ಲಿ ಆಗಿರತಕ್ಕ ಕೆಲಸವನ್ನು ನೋಡಿ ಅವರು ನಿಮಗೆ ಇನ್ನು ಹಣ ಕೊಡುವುದಿಲ್ಲ ಅಂತ ಹೇಳಿ ಅವರು ವಾಪಸ್ಸು ಹೊರಟುಹೋದರು. ಅನಂತರ ನಾವು ವಿಶ್ವಪ್ರಯತ್ನವನ್ನೇ ಈಗಿನ ಮುಖ್ಯಮಂತ್ರಿಗಳು ಮಾಡಿದರು, ಹಿಂದಿನ ಮುಖ್ಯಮಂತ್ರಿಗಳು ಮಾಡಿದರು. ನಾವು ಮಾಡಿದೆವು; ನಮ್ಮ ಅಧಿಕಾರಿಗಳು ಮಾಡಿದರು, ಮತ್ತು ಆ ಜಲಾನಯನದ ಪ್ರದೇಶದ ಜನರು ಮಾಡಿದರು. ಅನಂತರ ಎರಡನೆಯ ಟೀಮು ಈಗ ಒಂದು ತಿಂಗಳ ಕೆಳಗಡೆ ಬಂತು. ಈ ಸಾರಿ ಬಂದವರ ಮ್ಯಾನೇಜಿಂಗ್ ಡೈರೆಕ್ಟರ್ ಹೆಸರು ಸ್ಪರ್ನ್! ಒಬ್ಬರು ಬುಚ್ಚರ್, ಇನ್ನೊಬ್ಬರು ಸ್ಪರ್ನ್! ಶ್ರೀ ಸ್ಪರ್ನರವರು ಇಲ್ಲಿಗೆ ಬರುವುದಕ್ಕೆ ಮೊದಲು ಕೃಷ್ಣ ಮೇಲ್ದಂಡೆ ಯೋಜನೆಗೆ ಹೋಗಿದ್ದರು; ಈ 3 – 4 ತಿಂಗಳು ನಮಗೆ ಸಿಕ್ಕಿದಂತಹ ಅವಕಾಶದಲ್ಲಿ ನಮ್ಮ ಅಧಿಕಾರಿಗಳು ಜಾಗ್ರತೆಯನ್ನು ವಹಿಸಿ ರೀಸೆಟಲ್‌ಮೆಂಟ್‌ಗೆ ಏನೇನು ಕಾರ್ಯಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ ಎನ್ನತಕ್ಕದ್ದನ್ನು ಅವರಿಗೆ ಮನಮುಟ್ಟತಕ್ಕಂಥ ರೀತಿಯಲ್ಲಿ ವಿವರಣೆಯನ್ನು ಕೊಟ್ಟಿದ್ದರಿಂದ ಮತ್ತು ತೋರಿಸಿದ್ದರಿಂದ ಅವರು ಸಂತೃಪ್ತರಾಗಿ ಒಂದು ಕ್ವಾಲಿಫೈಡ್ ಆಗಿ ಈಗ ಸದ್ಯಕ್ಕೆ ಕಾಲುವೆಗಳು ಮತ್ತು ಡಿಸ್ಟ್ರಿಬ್ಯೂಟರೀಸ್ ಇವೆರಡಕ್ಕೆ ನಾವು ಹಣವನ್ನು ಬಿಡುಗಡೆ ಮಾಡುತ್ತೇವೆ. ಆದರೆ ಆಲಮಟ್ಟಿ ರಿಜರ್‌ವಾಯರ್‌ಗೆ ನಮಗೆ ಇನ್ನೂ ಟೈಂ ಬೇಕೆಂದು ಹೇಳಿ ಅವರು ಟೈಮ್ ಅನ್ನು ಪಡೆದುಕೊಂಡು ಹೋಗಿದ್ದಾರೆ. ಈ ಕೆಲಸವನ್ನು ಮಾಡತಕ್ಕಂಥ ವಿಚಾರದಲ್ಲಿ ಅಲ್ಲಿಯ ಅಧಿಕಾರಿಗಳ ಬಗ್ಗೆ ಬಹಳ ಮಾನ್ಯ ಸದಸ್ಯರುಗಳು ಹೇಳಿದರು. ಲೋಕೋಪಯೋಗಿ ಇಲಾಖೆಯವರಿಗೆ ಸಂಬಂಧಪಟ್ಟಂತವರು ಹೇಳಿದರು. ನೀರಾವರಿ ಇಲಾಖೆಗೆ ಸಂಬಂಧಪಟ್ಟಾಗಲೂ ಕೂಡ ಹೇಳಿದರು. ಇಲ್ಲಿ ಹಣ ಸೋರಿಕೆಯಾಗುತ್ತಿದೆ, ಕಳಪೆ ಕೆಲಸ ನಡೆಯುತ್ತಿದೆ, ಆದ್ದರಿಂದ ನಾವು ಈ ಅಧಿಕಾರಿಗಳ ಮೇಲೆ ನಿಯಂತ್ರಣ ಇಡಬೇಕೆಂದು ಹೇಳಿದರು. ಇದು ನಿಜ, ಇದು ನಮ್ಮ ಪಬ್ಲಿಕ್ ವರ್ಕ್ಸ್

ಡಿಪಾರ್ಟ್‌ಮೆಂಟ್, ಇರಿಗೇಷನ್ ಡಿಪಾರ್ಟ್‌ಮೆಂಟ್, ಇವುಗಳೆಲ್ಲದರಲ್ಲೂ ಕೂಡ ಹಣ ಸೋರಿಕೆಯಾಗುತ್ತಿರತಕ್ಕಂಥದ್ದು ಎಷ್ಟು ಎನ್ನುವುದರ ಅಂದಾಜಿನ ಬಗ್ಗೆ ಕೆಲವರು 20 ಪರ್ಸೆಂಟ್ ಅಂತ ಹೇಳುತ್ತಾರೆ. ಕೆಲವರು 30 ಪರ್ಸೆಂಟ್ ಅನ್ನುತ್ತಾರೆ. ಕೆಲವರು 40 ಪರ್ಸೆಂಟ್ ಎನ್ನುತ್ತಾರೆ. ಇನ್ನೂ ಕೆಲವರು 60 ಪರ್ಸೆಂಟ್ ಅಂತ ಹೇಳುತ್ತಾರೆ. ಆದರೆ ಇದು ಕ್ವಾಂಟಿಫೈ ಮಾಡುವುದಕ್ಕೆ ಸಾಧ್ಯವಾಗದೇ ಇರತಕ್ಕಂಥ ವಿಚಾರ.

ಹಾಗೆಂದರೆ ಕ್ವಾಂಟಿಫೈ ಮಾಡಬಾರದು ಎಂದಲ್ಲ; ಮೂಲಭೂತವಾಗಿ ಇದು ಇರಲೇಬಾರದು. ಆದರೆ ಹತ್ತಾರು ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ಈ ವ್ಯವಸ್ಥೆಗೆ ನಾವು ಬಂದಿಗಳಾಗಿದ್ದೇವೆ. ಆದುದರಿಂದ ಈ ವ್ಯವಸ್ಥೆಯಿಂದ ಹೊರಬರಬೇಕಾದರೆ ಮಾನ್ಯ ಏಕಾಂತಯ್ಯನವರು ಹೇಳಿದಂತೆ ಕೋಡ್‌ಅನ್ನು ರಿವೈಜ್ ಮಾಡಬೇಕು. ರಿವೈಸ್ ಮಾಡತಕ್ಕದ್ದು ಒಂದೇ ಅಲ್ಲ. ಆ ಕೋಡ್‌ನ್ನು ವಯೊಲೆಟ್ ಮಾಡಿದ್ದಾರೆ ಎಂದು ಹೇಳಿದ್ದಾರೆ. ನಿಜ; ಕೆಲವು ಸಮಯಗಳಲ್ಲಿ ಅದನ್ನು ವಯಲೆಟ್ ಮಾಡಬೇಕಾಗುತ್ತದೆ. ಕಾರಣ ಏನೆಂದರೆ ಜರೂರಾಗಿ ಕೆಲಸ ಆಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ಮಾಡಬೇಕಾಗುತ್ತದೆ. ಒಂದು ವಿಚಾರ ಎಲ್ಲಾ ಕೆಲಸಗಳಿಗೂ ಟೆಂಡರ್ ಮೂಲಕವೇ ನಾವು ಕೆಲಸಗಳನ್ನು ಹಂಚಬೇಕು ಎಂದು ಹೇಳುತ್ತಾರೆ. ಈ ಸಮಯದಲ್ಲಿ ಶ್ರೀಮಾನ್ ಯಡಿಯೂರಪ್ಪನವರು ಒಂದು ವಿಷಯ ಪ್ರಸ್ತಾಪ ಮಾಡಿ ಎಲ್ಲಾ ಕಂಟ್ರಾಕ್ಟದಾರರು ಆಂಧ್ರಪ್ರದೇಶದವರೇ ಬಂದಿದ್ದಾರೆ ಎಂದು ಹೇಳಿದ್ದಾರೆ. ಈಗ ನಾವು ಓಪನ್ ಟೆಂಡರ್ ಕೊಟ್ಟಾಗ ಆಂಧ್ರದವರೇ ನೀವು ಬರಬೇಡಿ, ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆಂಧ್ರದವರು ಟೆಂಡರ್ ಹಾಕಿದರೆ ಅವರದೇ ಲೋಯೆಸ್ಟ್ ಆಗಿದ್ದರೆ, ನಾವು ಅವರಿಗೆ ಕೆಲಸ ಕೊಡದೆ ವಿಧಿ ಇಲ್ಲ. ಇದನ್ನು ಏಕೆಂದರೆ ವರ್ಲ್ಡ್ ಬ್ಯಾಂಕಿನವರು ಹಾಕಿದಂತಹ ನಾರ್ಮ್ಸ್ ಮತ್ತು ನಾನು ಮೊದಲೇ ಬಜೆಟ್‌ಗೆ ಹೇಗೆ ಸ್ಯಾಂಕ್ಟಿಟಿ ಇರಬೇಕೆಂದು ಹೇಳಿದೆ, ಹಾಗೆ ಟೆಂಡರ್‌ಗೂ ಕೂಡ ಒಂದು ಸ್ಯಾಂಕ್ಟಿಟಿ ಇರುತ್ತದೆ. ಇದಕ್ಕೆ ಬರುವಂತಹ ಆಫರ್ಸ್‌ಗೂ ಕೂಡ ಒಂದು ಅರ್ಥವಿರುತ್ತದೆ. ಈ ದೃಷ್ಟಿಯಿಂದ ಆಂಧ್ರದ ಕಂಟ್ರಾಕ್ಟರ್‌ಗಳು ಇದ್ದಾರೆ. ಕರ್ನಾಟಕದ ಕಂಟ್ರಾಕ್ಟ್‌ದಾರರೂ ಇದ್ದಾರೆ. ನನ್ನ ಗಮನಕ್ಕೆ ಬಂದಿರುವ ಪ್ರಕಾರ ಸುಮಾರು 16 ಜನ ಆಂಧ್ರ ಪ್ರದೇಶದ ಕಂಟ್ರಾಕ್ಟ್‌ದಾರರು ಇರಬಹುದು. ಸುಮಾರು 23 ಜನರು ಕರ್ನಾಟಕ ಅಥವಾ ಆಂಧ್ರದವರಲ್ಲದವರು ಇರಬಹುದು ಎಂದು ನನ್ನ ಅಂಕಿಅಂಶಗಳು ಹೇಳುತ್ತವೆ. ನಾನು ಈ ಸದನದ ಮಾರ್ಗದರ್ಶನವನ್ನು ಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ನಮ್ಮದು ಒಂದೇ ಒಂದು ಅಬ್ಜೆಕ್ಷನ್ ವರ್ಲ್ಡ್ ಬ್ಯಾಂಕ್‌ನವರ ನಾರ್ಮ್ಸ್ ಪ್ರಕಾರ ನಮ್ಮದಕ್ಕಿಂತ ಆಂಧ್ರದವರದು ಕಡಿಮೆ ಇದ್ದರೆ ನಮ್ಮದೇನು ಅಭ್ಯಂತರವಿಲ್ಲ. ಆದರೆ ಈ ಟೆಂಡರ್‌ಅನ್ನು ಕರೆದ ಮೇಲೆ 10 ದಿವಸಗಳ ಮುಂಚೆ ಬಂದು ರಿಜಿಸ್ಟ್ರೇಷನ್ ಮಾಡಿಸಿಕೊಂಡು ಅವತ್ತೇ ಟೆಂಡರ್ ಹಾಕಿಸಿರುವ ದಾಖಲೆಗಳು ಇವೆ. ಆ ದಾಖಲೆಗಳನ್ನು ಪರಿಶೀಲನೆ ಮಾಡಿದರೆ ಇದರ ಹಿನ್ನೆಲೆ ಏನೆಂದು ಸ್ಪಷ್ಟವಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ:– ಅವರು ಯಾವ ತಾರೀಖಿನಲ್ಲಿ ಹೆಸರನ್ನು ನೊಂದಾವಣೆ ಮಾಡಿಸಿಕೊಳ್ಳಬೇಕು. Going into the final details ಆದರೆ ನನಗೆ ದೊರೆತಿರತಕ್ಕಂಥ ಮಾಹಿತಿಯ ಪ್ರಕಾರ ಆಂಧ್ರಪ್ರದೇಶದ ಕಂಟ್ರಾಕ್ಟ್‌ದಾರರು 19 ಜನರು. ಅವರಿಗೆ ಕೊಟ್ಟಿರುವಂತಹ ಒಟ್ಟು ಕೆಲಸದ ಮೊತ್ತ 199 ಕೋಟಿ ರೂಪಾಯಿಗಳು. ಇತರ ಕಂಟ್ರಾಕ್ಟ್‌ದಾರರು 23 ಜನರು. ಅವರಿಗೆ ಕೊಟ್ಟಿರುವಂತಹ ಹಣದ ಮೊತ್ತ 251 ಕೋಟಿ ರೂಪಾಯಿಗಳು.

(ಶ್ರೀ ಇದಿನಬ್ಬನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಹೀಗೆ 442 ಕೋಟಿ ರೂಪಾಯಿಗಳ ಒಟ್ಟು ಮೊತ್ತದ ಕೆಲಸಗಳನ್ನು ಟೆಂಡರ್‌ಗಳ ಮೂಲಕ ಕರೆದು 19–23 ಜನಗಳಿಗೆ ನಾವು ಕೊಟ್ಟಿದ್ದೇವೆ. ಮಾನ್ಯ ವೀರೇಂದ್ರಪಾಟೀಲರು ಅವರ ಭಾಷಣದ ಪ್ರಾಸ್ತಾವಿಕ ಭಾಗದಲ್ಲೇ ಹೇಳಿದರು. ಅದು ನನಗೆ ಕೊಂಚ ಸೋಜಿಗವನ್ನುಂಟು ಮಾಡಿತು. ಈ ಬಚಾವತ್ ಅವಾರ್ಡ್‌ನಲ್ಲಿ ಏನೋ ನೀರು ಹಂಚಿದ್ದಾರೆ ಅಂತ. ಅದು ನೀರು ಹಂಚಿದ ಪ್ರಶ್ನೆ ಅಲ್ಲ. ಬಚಾವತ್ ಟ್ರಿಬ್ಯೂನಲ್‌ನವರು ಕೊಟ್ಟಿರತಕ್ಕ ಅವಾರ್ಡ್‌ನಲ್ಲಿ

"The Tribunal hereby orders that the waters of the river Krishna be allocated to the three States namely, Maharashtra, Karnataka and Andhra Pradesh for their beneficial use to the extent provided in Clause V and subject to such conditions and restrictions as are mentioned hereinafter."

ಅದರಿಂದ ಸುಲಭವಾಗಿ ಈ ಬಚಾವತ್ ಅವಾರ್ಡ್ ಪ್ರಕಾರ ನೀರು ಹಂಚಿದ್ದಾರೆ ಎಂದು ಅಲ್ಲ; It is an order which has to be taken into consideration.

ಇನ್ನು ಈ ರಿಹ್ಯಾಬಿಲಿಟೇಷನ್ ಮತ್ತು ರೀಸೆಟ್ಲಮೆಂಟ್ ವಿಚಾರದಲ್ಲಿ ಮಾನ್ಯ ವೀರೇಂದ್ರ ಪಾಟೀಲರು ಬಾಗಲಕೋಟೆಯಲ್ಲಿ ಏನೇನು ಆಗಿದೆ ಎಂದು ಕೇಳಿದರು. under stage I phase (2)ರಲ್ಲಿ 101 ಹಳ್ಳಿಗಳು ಆಲಮಟ್ಟಿ ರಿಸರ್ವಾಯರ್ ಕಟ್ಟಿದಾಗ ಮುಳುಗಿರತಕ್ಕಂತಹ ಹಳ್ಳಿಗಳು ಎಂದು ಗುರುತಿಸಲಾಗಿದೆ. ನಾರಾಯಣ್‌ಪುರ್ ರಿಸರ್ವಾಯರ್ ಕಟ್ಟಿದಾಗ ಮುಳುಗಿರತಕ್ಕಂತಹ ಹಳ್ಳಿಗಳು 41. ನಾರಾಯಣಪುರದಲ್ಲಿ ಈಗಾಗಲೇ ನಾವು 27 ರೀಸೆಟ್ಲ್‌ಮೆಂಟ್ ಸೆಂಟರನ್ನು ಮಾಡಿದ್ದೇವೆ ಆಲಮಟ್ಟಿ ರಿಸರ್ವಾಯರ್‌ನಲ್ಲಿ ಸುಮಾರು 27 ರೀಸೆಟ್ಲ್‌ಮೆಂಟ್ ಸೆಂಟರ್‌ನ್ನು ಈಗಾಗಲೇ ತೆಗೆದಿದ್ದೇವೆ. ಆದರೆ ಯಾವ ಹಳ್ಳಿಯನ್ನೂ ಕೂಡ ಇನ್ನೂ ಶಿಫ್ಟ್ ಮಾಡಿಲ್ಲ. ಆದರೆ 1ನೇ ಫೇಸ್‌ನ 2ನೇ ಹಂತದಲ್ಲಿ ಸುಮಾರು 36 ಸಾವಿರದ 500 ಫ್ಯಾಮಿಲಿಗಳು ಅಫೆಕ್ಟ್ ಆಗಿವೆ. These families have been divided into 5 broad categories. Those who last all their lands This is I Category. Those who have been left with less than economica holding after acquisition. This is II Category. These who are left with more than economical holding after acquisition. III Category. Fourth Category is those who have lost only houses and the fifth category is, landless agricultura labourers. ಈಗ ಕೆಟಗರಿ ಒಂದರಲ್ಲಿ ಯಾರದ್ದು ಲ್ಯಾಂಡ್ಸ್ ಎಲ್ಲಾ ಮುಳುಗಿಹೋಗಿದೆ ಅವರಿಗೆ ಎಕ್ಸ್‌ಗ್ರೇಷಿಯಾ ಪೇಮೆಂಟ್ ಎಂದು ನಾವು ಸೆಟ್ಲ್ ಮಾಡುತ್ತಿರತಕ್ಕಂಥಾದ್ದು 65 ಸಾವಿರ ರೂಪಾಯಿಗಳು for purchase of 3.75 acres of irrigated land or 7.5 acres of dr land. ಅವರನ್ನು ರೀಹ್ಯಾಬಿಲಿಟೇಟ್ ಮಾಡುವುದಕ್ಕೆ. ಹಾಗೆ ಕೆಟಗರಿ 2ಕ್ಕೆ ಅವರಿಗೆ ಎಕ್ಸ್‌ಗ್ರೇಷಿಯ ಪೇಮೆಂಟ್ ನಾವು 20 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ ಮತ್ತು ಕೆಟಗರಿ 3 ಅವರಿಗೆ ಸಾವಿರ ರೂಪಾಯಿಗಳು. And a loan of Rs.7500 for income generating schemes Category IV, a grant of Rs. 52,000 for construction of house and for categor V, the family will be paid an ex–gratia of Rs. 20,000 for income generatin schemes. The Ex–gratia payments are twice the amount which the famil were eligible as per the earlier policy. This increased ex–gratia payment is as insisted by the World Bank. ಈ Bagalkote relocation ಬಗ್ಗೆ ಹೇಳುವುದಾದ

The population affected in stage I and Stage II of the project is about 5,500. However, in Stage I Phase II,being implemented with the World Bank assistance, only 530 families will be affected. About 4,500 acre of land of relocating the new township have already been acquired near the existing township. A master plan for development of the new township has already been prepared by Mr. Charles Correa of Bombay.

SRI P.G.R. SCINDIA:– That is old.

ಶ್ರೀ ಎಸ್.ಎಂ. ಕೃಷ್ಣ:– ಅವರು ಮಾಡಿರುವುದೇ ಈಗಲೂ ಇದೆ. ಆದುದರಿಂದ Charles Correa ಅವರು ಏನು ಮಾಡಿದ್ದಾರೆ ಅದನ್ನೇ ನಾವು ಆಧಾರವಾಗಿ ಇಟ್ಟುಕೊಂಡು ಆ ಟೌನ್‌ಶಿಪ್ ಬೆಳೆಸುವುದಕ್ಕೆ ಅಥವಾ ಹುಟ್ಟು ಹಾಕುವುದಕ್ಕೆ ನಾವು ಉಪಯೋಗಿಸುತ್ತೇವೆ. "Necessary infrastructure like internal roads, electrification, water supply, are being provided to the new township for implementing the relocation." ಇನ್ನು ಈ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ ಅಧಿಕಾರಿಗಳು ಹೋಗುತ್ತಿಲ್ಲ ಎನ್ನುವಂತಹ ಒಂದು ಸರ್ವೇಸಾಮಾನ್ಯವಾದಂತಹ ಕಂಪ್ಲೇಂಟ್ ಇದೆ. ಆ ದೂರಿನಲ್ಲಿ ಬಹಳ ಸತ್ಯ ಇದೆ. ನಾವು ಹಾಕಿರತಕ್ಕಂತಹವರು ಅಲ್ಲಿ ಹೋಗುವುದಿಲ್ಲ, ಅಲ್ಲಿ ಹೋದಂತವರು ಜಾಸ್ತಿ ದಿವಸ ಇರುವುದಿಲ್ಲ. ಅಲ್ಲಿಗೆ ಬೇಕಾದಷ್ಟು ಇವತ್ತು ಮ್ಯಾನ್‌ಪವರ್ ಬೇಕಾಗಿದೆ, ಅದನ್ನು ನಾವು ತುಂಬಿಸತಕ್ಕಂತಹ ಬಗೆ ಹೇಗೆ ಎನ್ನುವುದನ್ನು ತೀವ್ರವಾಗಿ ಆಲೋಚನೆ ಮಾಡುತ್ತಿದ್ದೇವೆ. ಅದಕ್ಕೆ ನಾನು ಆ ಭಾಗದ ಮಾನ್ಯ ಸದಸ್ಯರುಗಳನ್ನು ಇದರ ಬಗ್ಗೆ ನಂಬಿಕೆಗೆ ತೆಗೆದುಕೊಂಡು ಅವರ ಸಲಹೆಗಳನ್ನು ಕೂಡ ಕೇಳಿದ್ದೇನೆ. ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ, ಆ ಸಲಹೆ ಆಧಾರದ ಮೇಲೆ ನಾವು ಇನ್ನು ಮುಂದೆ ರಿಕ್ರೂಟ್‌ಮೆಂಟ್ ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಇನ್ನು ಕೆಲವೇ ವರ್ಷಗಳಲ್ಲಿ ನಾವು ಒಂದು ನಿರ್ಧಾರವನ್ನು ತೆಗೆದುಕೊಳ್ಳುವಂಥ ಹೊಸ್ತಿಲಲ್ಲಿ ಇದ್ದೇವೆ. ಆದರೆ ಒಂದು ಮಾತನ್ನು ನಾನು ಸ್ಪಷ್ಟವಾಗಿ ಸದನದಲ್ಲಿ ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಇಚ್ಛೆ ಪಡುತ್ತೇನೆ. ದಯವಿಟ್ಟು ಯಾರು ಕೂಡ ಬಂದು ಅಪ್ಪರ್ ಕೃಷ್ಣದಲ್ಲಿ ಕೆಲಸ ಮಾಡುತ್ತಿರುವಂತಹ ಇಂಜಿನಿಯರ್‌ಗಳನ್ನು ಬಯಲು ಸೀಮೆಗೆ ವರ್ಗ ಮಾಡಿ ಎಂದು ಕೇಳಬೇಡಿ ಎಂದು ಅತ್ಯಂತ ವಿನೀತವಾಗಿ ನಾನು ಮನವಿಯನ್ನು ಮಾಡುತ್ತಿದ್ದೇನೆ. ಮತ್ತು ತಮಗೂ ಗೊತ್ತಿದೆ, ಈ ಸಮಸ್ಯೆಯ ಗಾಂಭೀರ್ಯತೆ ಮತ್ತು ತೀವ್ರತೆಯನ್ನು ನಾನು ಯಾವ ವಿಧದಲ್ಲಿ ಅರ್ಥ ಮಾಡಿಕೊಂಡಿದ್ದೇನೋ ಅದಕ್ಕಿಂತಲೂ ಹೆಚ್ಚಾಗಿ ಮಾನ್ಯ ಸದಸ್ಯರು ಅರ್ಥ ಮಾಡಿಕೊಂಡಿದ್ದಾರೆ. ಆದುದರಿಂದ ನನ್ನ ಮೇಲೆ ಪ್ರತ್ಯಕ್ಷವಾಗಿ ಇಲ್ಲವೇ ಅಪ್ರತ್ಯಕ್ಷವಾಗಿ ಯಾರು ಕೂಡ ಒತ್ತಾಯವನ್ನು ತರುವುದಿಲ್ಲ ಎಂದು ನಾನು ಭಾವನೆ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ತಾವೇನು ಈ ಸದನದ ಸದಸ್ಯರುಗಳಿಗೆ ಮನವಿಯನ್ನು ಮಾಡಿಕೊಂಡಿದ್ದೀರಾ ಈ ಬಗ್ಗೆ ನಾವು ಖಂಡಿತವಾಗಿಯೂ ಸಹಿತ ನಿಮಗೆ ಸಂಪೂರ್ಣ ಭರವಸೆ ಕೊಡುತ್ತೇವೆ. ಇದರಲ್ಲಿ ನಾವ್ಯಾರೂ ಸಹಿತ ಕೈಹಾಕುವುದಿಲ್ಲ. ಆಡಳಿತ ಪಕ್ಷದವರು ಅದೇ ಮಾಡುತ್ತಾರೆ ಎಂದು ಹೇಳಿ ನಾನು ವಿಶ್ವಾಸವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಆದರೆ ಈ ಅಧಿಕಾರಿಗಳೇ ಬೇರೆ ಬೇರೆ ಕಡೆಗಳಿಂದ ನಮ್ಮ ಮೇಲೆ ಒತ್ತಡಗಳನ್ನು ತೆಗೆದುಕೊಂಡು ಬರುತ್ತಾರಲ್ಲಾ, ಆಗ ತಾವು ನಿರ್ಧಾರ ಮಾಡಬೇಕಾಗುತ್ತದೆ. ತಮ್ಮ ನಿರ್ಧಾರ ಬಹಳ ದೃಢ ಮತ್ತು ಅಚಲವಾಗಿರಬೇಕು. ಏಕೆಂದರೆ ಹಿಂದಿನ ಮುಖ್ಯಮಂತ್ರಿಗಳು ಸಹಿತ ಇದೇ ಮಾತನ್ನು ಹೇಳಿದ್ದರು. ಅಪ್ಪರ್‌ಕೃಷ್ಣ ಪ್ರಾಜೆಕ್ಟ್‌ಗೆ ಹೋದಂಥ ಇಂಜಿನಿಯರ್‌ಗಳನ್ನು ಯಾವುದೇ ಕಾರಣದಿಂದಲೂ ಸಹಿತ ನಾನು ಟ್ರಾನ್ಸ್‌ಫರ್

ಮಾಡುವುದಿಲ್ಲ. ಮಾಡಿಷ್ಟೆ ಮಾಡುವುದಿಲ್ಲ ಎಂದು ಹೇಳಿದ್ದರು. ಆದರೆ ಕಳೆದ ಒಂದೂವರೆ ವರ್ಷಗಳಲ್ಲಿ ಏನಾಯಿತು ? ಆದ್ದರಿಂದ ದಯವಿಟ್ಟು ದೃಢ ನಿರ್ಧಾರ ಇದರಲ್ಲಿ ತಮಗೆ ಇರಬೇಕೇ ವಿನಹಾ ಇಲ್ಲಿ ನಮ್ಮನ್ನು ತಾವು ವಿನಂತಿ ಮಾಡಿಕೊಳ್ಳುವುದರಲ್ಲಿ ಅದಕ್ಕೆ ಹೆಚ್ಚಿಗೆ ತೂಕ ಇಲ್ಲವೇನೋ ಎಂದು ನನಗನಿಸುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಯಾವುದೇ ರಕ್ಷಣೆ ಇಲ್ಲದೇ ಇರುವಂಥ ಬಲಿಪಶುಗಳು ಹಿಂದೆ ಮುಂದೆ ಯಾರು ಇಲ್ಲದಿರುವಂಥವರು ಯಾರಿದ್ದಾರೋ ಅಂಥವರನ್ನು ಅಲ್ಲಿಗೆ ಹಾಕಬೇಡಿ. ಈಗ ಇರುವವರನ್ನು ಪುನಃ ಅಲ್ಲಿಗೆ ಹಾಕುವುದು ಬೇಡ. ರಕ್ಷಣೆ ಇಲ್ಲದೇ ಇದ್ದವರುಗಳನ್ನು ಹಾಕಿ, ಹೇಗೊ ಅವನಿಗೆ ರಕ್ಷಣೆ ಇಲ್ಲ ಎಂದು ಹೇಳಿ ಅವನನ್ನು ಅಲ್ಲಿ ಸಾಯಿಸುವುದು ಬೇಡ. ಈಗ ಯಾರಿದ್ದಾರೆ, ಅವರನ್ನು ವರ್ಗಾವಣೆ ಮಾಡಿ ಎಂದು ನಾವು ಕೇಳುವುದಿಲ್ಲ. ನೀವೂ ಮಾಡಬೇಡಿ.

ಶ್ರೀ ಬಿ. ಶಿವರಾಮು:- ಮಾನ್ಯ ಅಧ್ಯಕ್ಷರೇ, ಒಂದು ವಿಚಾರ ಇದರಲ್ಲಿ ಏನೆಂದರೆ ಐದು ವರ್ಷಗಳಿಂದ ಎಂಟು ವರ್ಷಗಳಿಂದ ಕೆಲಸ ಮಾಡುತ್ತಿರುವವರನ್ನು ತಾವು ಅಲ್ಲೇ ಇಡುವುದಕ್ಕಿಂತ ಅವರಿಗೆ ಬೇರೆ ಕಡೆ ವರ್ಗ ಮಾಡಿ ಅನಂತರ ಇಲ್ಲಿಂದ ಅಲ್ಲಿಗೆ ಹೋಗದೇ ಇರುತ್ತಾರಲ್ಲಾ, ಅಂಥವರನ್ನು ತಾವು ಅಲ್ಲಿಗೆ ಹಾಕತಕ್ಕಂಥದ್ದು ಸೂಕ್ತ. ಐದು ವರ್ಷ, ಆರು ವರ್ಷಗಳಿಂದ ಅಲ್ಲೇ ಕೆಲಸ ಮಾಡುತ್ತಿರುವವರ ಬಗ್ಗೆ ತಾವು ವರ್ಗ ಕೇಳಬೇಡಿ, ಅಲ್ಲೇ ಇರಲಿ ಎಂದರೆ ಪಾಪ ಕಷ್ಟ ಅನುಭವಿಸುವವರು ಕಷ್ಟ ಅನುಭವಿಸುತ್ತಾ ಇರಬೇಕು. ಚೆನ್ನಾಗಿರುವವರು ಚೆನ್ನಾಗೇ ಇರಬೇಕು ಎಂದು ಹೇಳುವುದು ಸೂಕ್ತವಲ್ಲ.

ಶ್ರೀ ಆರ್. ದಯಾನಂದರಾವ್:- ಬೆಂಗಳೂರಿನಲ್ಲಿ 20 ವರ್ಷಗಳಿಂದ ಇಲ್ಲೇ ಕೆಲಸ ಮಾಡುತ್ತಿರುವವರನ್ನು ಆ ಪ್ರಾಜೆಕ್ಟ್ ಕೆಲಸಕ್ಕೆ ಹಾಕಿ.

ಶ್ರೀ ಎಸ್.ಎಂ. ಕೃಷ್ಣ:- ನಾನೇನೊ ಅಪರಾಧ ಮಾಡಿದೆನೊ ಏನೋ ಎಂದು ಅನಿಸಿತು. ಈ ವರ್ಗದ ವಿಚಾರವನ್ನೇ ಎತ್ತಬಾರದಾಗಿತ್ತು ನಾನು. ಇದು ಗಾಳಿಗಂಟಿನ ಸಮಾಚಾರ ಎಂದು ಹೇಳಿ ನನಗೆ ಗೊತ್ತಿತ್ತು. ಇದರ ಬಗ್ಗೆ ಪ್ರಸ್ತಾಪ ಮಾಡದಿದ್ದರೆ ಚೆನ್ನಾಗಿತ್ತು. ಆದರೆ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ, ಅವರ ಪರವಾಗಿಯೂ ನಾನು ಈ ಸದನಕ್ಕೆ ಹೇಳುತ್ತೇನೆ. ಈಗ ನಾವು ಕೂಡ ಹಸ್ತಕ್ಷೇಪ ಮಾಡುವುದಿಲ್ಲ. ನೀವು ಕೂಡ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಹೇಳುತ್ತಿದ್ದೀರಿ. ಗಂಡಸಿಯ ಶಿವರಾಮುರವರು ಮಾತ್ರ ನಾನು ಹಸ್ತಕ್ಷೇಪ ಮಾಡುತ್ತೇನೆ ಎಂದು ಅವರು ಹೇಳುತ್ತಿದ್ದಾರೆ. ಆದರೆ ಒಂದು ಕಾರಣವನ್ನು ತರ್ಕಬದ್ಧವಾಗಿ ಅವರು ಹೇಳುತ್ತಿದ್ದಾರೆ. ಏನೆಂದರೆ ಎಂಟು ವರ್ಷಗಳಿಂದ ಕೆಲವರು ಅಲ್ಲಿಯೇ ಇದ್ದಾರೆಂದು. ಮಾನ್ಯ ಶಿವರಾಮುರವರಿಗೆ ಒಂದು ಸೂಚನೆ ಮಾಡುತ್ತೇನೆ. ನೀವು ಹೋಗಿ ನೋಡಬೇಕು ಅಪ್ಪರ್‌ಕೃಷ್ಣದಲ್ಲಿ. ನಾನು ಕಳುಹಿಸಿಕೊಡುತ್ತೇನೆ ನಿಮ್ಮನ್ನು. ನೀವು ಹೋಗಿ ನೋಡ್ರಿ. ಎಂಥ ವಾತಾವರಣವಿದೆ ಸ್ವಲ್ಪ ಬೇಸಿಗೆಯಲ್ಲಿ ಕಷ್ಟವಾಗುತ್ತದೆ. ಆದರೆ ಬಾಕಿ ಆರು ತಿಂಗಳು ಏಳು ತಿಂಗಳು ಎಷ್ಟು ಚೆನ್ನಾಗಿರಬಹುದು ಅಲ್ಲಿ. ಯಾರ ತಾಪತ್ರಯವೂ ಇಲ್ಲ ಅಲ್ಲಿ. ಯಾವ ರಾಜಕಾರಣಿಗಳ ತಾಪತ್ರಯವೂ ಇಲ್ಲ. ಮತ್ತೊಬ್ಬರ ತಾಪತ್ರಯವೂ ಇಲ್ಲ. ಹಾಯಾಗಿ ನಮ್ಮ ಅಧಿಕಾರಿಗಳು ಅಲ್ಲಿ ಕೆಲಸ ಮಾಡಿಕೊಂಡು ಹೋಗಬಹುದು ಎಂದು ಹೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ:- ಆಡಳಿತ ಪಕ್ಷದವರು ಹಸ್ತಕ್ಷೇಪ ಮಾಡುವುದಿಲ್ಲ, ಅವರು ಮಾಡದೇ ಇರಲಿ ಎಂದು ಸಿಂಧ್ಯರವರು ಹೇಳುತ್ತಿದ್ದರು. ಅವರು ಇರುವುದೇ ಅದಕ್ಕೆ. ಮಾಡದಿದ್ದರೆ ಹೇಗೆ ? ಪಾಪ, ಅವರು ಆಡಳಿತ ಪಕ್ಷದಲ್ಲಿ ಇರುವುದು ಏತಕ್ಕೆ ? ಮಾಡಲೇಬೇಕಾಗುತ್ತದೆ

(ಗೊಂದಲ)

ಶ್ರೀ ಆರ್. ದಯಾನಂದರಾವ್:– ನಿಮ್ಮ ಕಾಲದಲ್ಲೂ ಆಯಿತಲ್ಲಾ; ಬೆಳಿಗ್ಗೆ ಒಂದು ಟ್ರಾನ್ಸ್‌ಫರ್ ಸಾಯಂಕಾಲ ಮತ್ತೊಂದು ಟ್ರಾನ್ಸ್‌ಫರ್. ನಿಮ್ಮ ದರ್ಬಾರಿನಲ್ಲಿ ಆಯಿತಲ್ಲಾ;

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ:– ನಾವು ನೋಡಿದ್ದೇವೆ. ಒಂದು ತಿಂಗಳಿಂದ ಎರಡು ತಿಂಗಳಿಂದ ನೀವು ಏನೇನು ಮಾಡಿದ್ದೀರಿ ಎಂದು ಎಲ್ಲಾ ಗೊತ್ತಿದೆ. ಅವೆಲ್ಲಾ ಈಗ ಬೇಡ.

(ಗೊಂದಲ)

ಛೇರ್ಮನ್:– ಮಾನ್ಯ ಮಂತ್ರಿಗಳು ಈಗ ಮಾತನಾಡಲಿ.

ಶ್ರೀ ಎಸ್.ಎಂ. ಕೃಷ್ಣ:– ಈಗ ನಾನು ಒಂದು ವಿಚಾರವನ್ನು ಮಾತ್ರ ಪ್ರತಿಪಾದನೆ ಮಾಡುತ್ತಿದ್ದೇನೆ. ಆ ವಿಚಾರ ಪ್ರತಿಪಾದನೆ ಕೇವಲ ಒಂದು ಸೀಮಿತ ವರ್ಷಗಳಿಗೆ ಮಾತ್ರ. ಇನ್ನು ಏಳು ವರ್ಷಗಳಾದ ಮೇಲೆ ಮಾನ್ಯ ಶಿವರಾಮುರವರೇ, ಯಾರನ್ನು ಎಲ್ಲಿ ಬೇಕಾದರೂ ಆಗ ಇಲ್ಲಿ ಯಾರು ಕುಳಿತಿರುತ್ತಾರೋ ಅವರ ಕೈಯಲ್ಲಿ ವರ್ಗ ಮಾಡಿಸಿಕೊಳ್ಳಿ. ನೀವು ಅಲ್ಲಿರುತ್ತೀರಿ ಎನ್ನುವುದು ಗೊತ್ತು. ನಾನು ಇರುವುದಿಲ್ಲ. ಅದು ನನಗೆ ಗೊತ್ತು. ನೀವು ಅಲ್ಲಿರುತ್ತೀರಿ. ಮಾಡಿಸಿಕೊಳ್ಳಿ. ಈ ಕೃಷ್ಣ ಜಲಾನಯನ ಪ್ರದೇಶದ ವಿಚಾರದಲ್ಲಿ ಇಷ್ಟು ಹೇಳಿದ್ದೇನೆ. ಇನ್ನು ಕೆಲವು ಸ್ಥಳೀಯವಾಗಿ ಮಾತನಾಡಿದಂಥ ಮಾನ್ಯ ಸದಸ್ಯರುಗಳು ಕೆಲವು ಕಾಲುವೆಗಳ ಬಗ್ಗೆ ತಮ್ಮ ಗಮನವನ್ನು ಸೆಳೆದಿದ್ದಾರೆ. ಈಗ ಕಾಲುವೆಗಳ ಕೆಲಸವೆಲ್ಲವೂ ನಡೆಯುತ್ತಿದೆ. ಆ ಕಾಲುವೆಗಳ ಕೆಲಸವನ್ನು ಯಾವುದೋ ಒಂದು ಆಧಾರದ ಮೇಲೆ ಒಂದು ಬೇಸಿಸ್ ಮೇಲೆ ನಡೆಸುತ್ತಿದ್ದಾರೆ. ಆಲಮಟ್ಟಿ ಶಹಪುರ ಬ್ರಾಂಚ್ ಕೆನಾಲ್. ಕೆಲಸಕ್ಕೆ 1992–93ನೇ ವರ್ಷದಲ್ಲಿ 41 ಕೋಟಿ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿದ್ದಾರೆ. ಮುದುಬಾಲ್ ಬ್ರಾಂಚ್‌ಗೆ 47 ಕೋಟಿ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿದ್ದಾರೆ.

ಇಂಡಿ ಬ್ರಾಂಚ್ ಕೆನಾಲ್ 64ನೇ ಮೀಟರ್‌ವರೆಗೆ 44 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಹಾಗೇನೆ ಕನ್ಸ್‌ಸ್ಟ್ರಕ್ಷನ್ ಆಫ್ ಆಯಕಟ್ ಕೋಡ್ಸ್ ಅದಕ್ಕೆ 21 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ರೀಸೆಟಲ್‌ಮೆಂಟ್ ಅಂಡ್ ರೀಹ್ಯಾಬಿಲಿಟೇಷನ್ ಇದಕ್ಕೆ ಈಗಾಗಲೇ 48ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಹೀಗೆ ಈ ಕಾಲುವೆಗಳ ಕೆಲಸವೆಲ್ಲವೂ ನಡೆಯುತ್ತಿದೆ. ಮುಖ್ಯವಾಗಿ ನಾನು ಈ ಮುದ್‌ಬಾಳ್, ಇಂಡಿ ಬ್ರಾಂಚ್ ಮತ್ತು ಶಹಾಪುರ್ ಬ್ರಾಂಚ್ ಕೆನಾಲ್‌ಗಳಲ್ಲಿ ಯಾರು ಕಂಟ್ರಾಕ್ಟರ್‌ಗಳು ಕೆಲಸಗಳನ್ನು ಹಿಡಿದಿದ್ದಾರೆ; ಆ ಕಂಟ್ರಾಕ್ಟರ್‌ದಾರರೆಲ್ಲರೂ ಕೂಡ ಆಧುನಿಕ ಮೆಷಿನ್‌ಗಳನ್ನು ಆಧುನಿಕ ಎಕ್ವಿಪ್‌ಮೆಂಟ್‌ಗಳನ್ನು ತೆಗೆದುಕೊಂಡು ಬಂದು ಅಲ್ಲಿ ಈ self regulating mixing of cement, sand, water ಇವುಗಳೆಲ್ಲವೂ ಕೂಡ ಅಲ್ಲಿ ನಡೆಯುತ್ತಿದೆ. ಗುಣಮಟ್ಟದ ಬಗ್ಗೆ ಕೂಡ ನಾವು ಕೆಲಸ ಮಾಡುತ್ತಾ ಇರತಕ್ಕ ಅಧಿಕಾರಿಗಳಿಗೆ ಇದರ ಬಗ್ಗೆ ಗಮನ ಇಡಬೇಕು ಎಂದು ಹೇಳಿದ್ದೇವೆ ಮತ್ತು ನಾವುಗಳು ಕೂಡ ಆಗಿಂದಾಗ್ಗೆ ಅಲ್ಲಿಗೆ ಹೋಗಿ ಆ ಭಾಗದ ಎಲ್ಲರನ್ನೂ ಕರೆದುಕೊಂಡು ಹೋಗಿ ಇವುಗಳನ್ನು ಇನ್ಸ್‌ಪೆಕ್ಷನ್ ಮಾಡಿದರೆ ಅಧಿಕಾರಿಗಳು ಕೂಡ ಜಾಗೃತರಾಗುತ್ತಾರೆ. ಅವರು ಸರಿಯಾಗಿ ಕೆಲಸ ಮಾಡತಕ್ಕಂಥ ಒಂದು ವಿನ್ಯಾಸವನ್ನು ನಾವು ನಿರ್ಮಾಣ ಮಾಡಿ ಕೊಡಬೇಕಾಗುತ್ತದೆ. ನಾನು ಅಲ್ಲಿಗೆ ಹೋದಾಗ ಒಂದು ವಿಚಾರವನ್ನು ಗಮನಿಸಿದೆ. ಅದೇನೆಂದರೆ ವಾಟರ್ ಮ್ಯಾನೇಜ್‌ಮೆಂಟಿಗೋಸ್ಕರ ಕೆಲವು ಪ್ರೊಗ್ರೆಸೀವ್ ಫಾರ್ಮರ್ಸ್ ಈ Co–operative Society for water Management ..... ಹಾಗೆ ಎಂದು ಹೇಳಿ ಒಂದೆರಡು ಕಡೆ ಮಾಡಿದ್ದಾರೆ. ಇದನ್ನು ನಾನು ಕೃಷ್ಣಾ ಜಲಾನಯನ ಯೋಜನೆಯಲ್ಲಿ ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲಿ ಸಹ ಇಂತಹ ಕೋಆಪರೇಟೀವ್ ಸೊಸೈಟಿಗಳನ್ನು ರೈತಾಪಿ ಜನಗಳೇ ಮಾಡಿಕೊಳ್ಳುವುದಾದರೆ ಅದು

ಬಹಳ ಉತ್ತಮವಾದ ವ್ಯವಸ್ಥೆ ಆಗುತ್ತದೆ. ಈಗ ನಮ್ಮ ಕಾವೇರಿ ಜಲಾನಯನ ಪ್ರದೇಶದಲ್ಲಿ ಒಂದು ರೀತಿಯಾದ ಕನ್‌ಫ್ಯೂಷನ್ ಇದೆ. ಎಲ್ಲವೂ ಅಸ್ತವ್ಯಸ್ತ ಆಗಿಹೋಗಿದೆ. ಇವತ್ತು ಕೃಷ್ಣರಾಜ ಸಾಗರದ ವಿಶ್ವೇಶ್ವರಯ್ಯ ಕೆನಾಲ್. ಆ ಕೆನಾಲ್ ಬರತಕ್ಕ ಉದ್ದಕ್ಕೂ ಕೂಡ ಕಬ್ಬು ಬೆಳೆಯುತ್ತಾರೆ, ಇಲ್ಲ ಭತ್ತ ಬೆಳೆಯುತ್ತಾರೆ, ಇಲ್ಲ ಅದನ್ನು ಎಷ್ಟು ಯಾವ ಪ್ರಮಾಣದಲ್ಲಿ ನೀರಿನ ವಿತರಣೆ ಮಾಡಬೇಕು. ಯಾವ ಪ್ರಮಾಣದಲ್ಲಿ ಗೊಬ್ಬರವನ್ನು ಹಾಕಬೇಕು, ಇದ್ಯಾವುದರ ಬಗ್ಗೆ ಸಹ ನಿಸ್ಸೀಮ ನಿರ್ಲಕ್ಷ್ಯವನ್ನು ನಮ್ಮ ರೈತರುಗಳು ತೋರಿಸುತ್ತಿದ್ದಾರೆ. ಈ Co-operative Society for water management... ಇವುಗಳನ್ನು ಮಾಡುವುದರಿಂದ ಸ್ವಲ್ಪ ಸೈಂಟಿಫಿಕ್ ಟೆಂಪರ್ ಬರುತ್ತದೆ. ಈಗಲೇ ಈ ಯೋಜನೆ ಪ್ರಾರಂಭದ ಹಂತದಲ್ಲಿ ನಮ್ಮ ಜನಗಳಿಗೆ ಸೈಂಟಿಫಿಕ್ ಟೆಂಪರ್, ಅದರ ಟೆಂಪರ್, ಆ ಲೇಪ ಅವರಿಗೆ ಉಂಟಾದರೆ ಆದರಿಂದ ನಾವು ಈ ನೀರನ್ನು ಉಪಯೋಗಿಸುವ ವಿಧಾನದಲ್ಲಿಯೂ ಕೂಡ ಸುಧಾರಣೆಯನ್ನು ಮಾಡಬಹುದು ಹಾಗೆ ಎಂದು ತಿಳಿದಿದ್ದೇನೆ. ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಈಗ ನಾನೇನು ಹೇಳಿದೆ 5386 ಕೋಟಿ ರೂಪಾಯಿಗಳನ್ನು ಅದನ್ನು ಸಾಧನೆ ಮಾಡುವುದಕ್ಕೆ ಏನು ಮಾಡಬೇಕು. ಅದನ್ನು ಮಾಡುತ್ತೇವೆ. ಇವತ್ತು ಕಾವೇರಿ ಪ್ರದೇಶದಲ್ಲಿ ಒಂದು ಅಪೆಕ್ಸ್ ಬಾಡಿ ಮಾಡಿದ್ದೇವೆ. ಆ ಅಪೆಕ್ಸ್ ಬಾಡಿ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಮಾನಿಟರ್ ಮಾಡುತ್ತಾ ಇದೆ. ಹಾಗೇನೇ ಈ ನಮ್ಮ ಗಡುವು ಇರತಕ್ಕ ದೃಷ್ಟಿಯಿಂದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಕೂಡ ಅಂತಹುದೇ ಒಂದು ಅಪೆಕ್ಸ್ ಬಾಡಿಯನ್ನು ಮಾಡಬೇಕು ಎಂಬ ಒಂದು ತೀರ್ಮಾನವನ್ನು ಸರ್ಕಾರದವರು ಮಾಡಿದ್ದಾರೆ. ಆ ಅಪೆಕ್ಸ್ ಬಾಡಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಇರುತ್ತಾರೆ ಮತ್ತು ಈ ಸದನದಲ್ಲಿ ಯಾವ್ಯಾವ ರಾಜಕೀಯ ಪಕ್ಷದವರು ಪ್ರಾತಿನಿಧ್ಯ ಹೊಂದಿದ್ದಾರೆ ಅವರುಗಳೆಲ್ಲರೂ ಇರುತ್ತಾರೆ. ಮತ್ತು ಈ ಸದನದಲ್ಲಿ ಪ್ರಾತಿನಿಧ್ಯ ಇಲ್ಲದೇ ಇರುವವರನ್ನು ಕೂಡ ನಾವು ಅದರಲ್ಲಿ ಇನ್‌ವಾಲ್ವ್ ಮಾಡುವುದರ ಮೂಲಕ...

ಶ್ರೀ ಪಿ.ಜಿ.ಆರ್. ಸಿಂಧ್ಯ:– ಇದು ಕಾವೇರಿಗಾ ?

SRI S.M. KRISHNA:– No, This is for the Krishna. Apex Body ಈಗ ಕಾವೇರಿಗೆ ಇದೆ. ಹಾಗೆ ಕೃಷ್ಣಾಗೆ ಕೂಡ ಇನ್ನೊಂದು ಅಪೆಕ್ಸ್ ಬಾಡಿ ಮಾಡಿ ಅದು ಪ್ರತಿ ತಿಂಗಳೂ ಕೂಡ ಸಭೆ ಸೇರಿ ಈ ಕೃಷ್ಣಾ ಮೇಲ್ದಂಡೆ ಯೋಜನೆ ಮತ್ತು ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಏನೇನು ಕೆಲಸಗಳು ಆಗುತ್ತಿದೆ ಎನ್ನತಕ್ಕದ್ದನ್ನು monthly monitoring of what is happening so that people who sit in Vidhana Soudha will get connected to the ground realities what is happening in Krishna Valley.. ಅದನ್ನು ಮಾಡುವುದರಿಂದ ಸ್ವಲ್ಪ ಪ್ರಯೋಜನ ಆಗಬಹುದು. ಏನೆಂದು ಹೇಳಿದರೆ ಆಗ ನಿಮ್ಮ ಮಾರ್ಗದರ್ಶನ ಕೂಡ ನಮಗೆ ಸಿಗುತ್ತದೆ. ಇಲ್ಲಿ ಮಾಡತಕ್ಕ ಟೀಕೆಗಳು ಇಲ್ಲಿ ಮಾಡತಕ್ಕ ಸಲಹೆಗಳು, ನಮಗೆ ಏನನ್ನು ತಾವು ತಿಳಿಸುತ್ತೀರಿ, ಅದನ್ನು ತಿಂಗಳಿಗೆ ಒಂದು ಸಾರಿ ನಾವು ಸಭೆ ಸೇರಿದಾಗ ನೇರವಾಗಿ ಅದನ್ನು ತಿಳಿಸುವುದಕ್ಕೆ, ನಮ್ಮನ್ನು ತಿದ್ದುವುದಕ್ಕೆ ಅಗತ್ಯವಾದಂಥ ಭೂಮಿಕೆಯನ್ನು ಈ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಕೂಡ ನಿರ್ಮಾಣ ಮಾಡಬೇಕು ಎನ್ನತಕ್ಕ ತೀರ್ಮಾನವನ್ನು ಮಾಡಲಾಗಿದೆಯೆಂದು ಈ ಸಮಯದಲ್ಲಿ ತಮಗೆ ತಿಳಿಸುತ್ತಾ ಇದ್ದೇನೆ.

(ಸಭಾಧ್ಯಕ್ಷರಾದ ಶ್ರೀ ವಿ.ಎಸ್.. ಕೌಜಲಗಿಯವರು ಪೀಠವನ್ನಲಂಕರಿಸಿದರು)

ಇನ್ನೂ ಈ ಆರ್ಬಿಟ್ರೇಶನ್ ಅವಾಂತರವೇನಿದೆ, ಸನ್ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀ ಏಕಾಂತಯ್ಯನವರು, ಜಸ್ಟೀಸ್ ಸದಾನಂದಸ್ವಾಮಿಯವರ ಬಾಗೂರು – ನವಿಲೆ ಯೋಜನೆಯ ವರದಿ ಶಿಫಾರಸ್ಸುಗಳ ಬಗ್ಗೆ ಪ್ರಸ್ತಾಪ ಮಾಡಿ ಹೇಳಿದರು. ಈಗ ಬಾಗೂರು – ನವಿಲೆಯ ಯೋಜನಾ ವರದಿ

ಬಂದ ನಂತರ, ನಾನು ಬರುವುದಕ್ಕಿಂತ ಮುಂಚಿತವಾಗಿ ಚೀಫ್ ಇಂಜಿನಿಯರ್ ಮುಂತಾದವರು ಸೇರಿ ಒಂದು ಸಮಿತಿ ರಚಿಸಿ, ಜಸ್ಟೀಸ್ ಸದಾನಂದ ಸ್ವಾಮಿಯವರು ಮಾಡಿರತಕ್ಕಂಥ ಶಿಫಾರಸ್ಸುಗಳನ್ನು ಹೇಗೆ ಅನುಷ್ಠಾನಗೊಳಿಸಬೇಕೆನ್ನುವುದರ ಬಗ್ಗೆ ಪರಿಷ್ಕರಿಸಲು ಈಗಾಗಲೇ ಸಮಿತಿ ರಚಿಸಲಾಗಿದೆ. ಜೊತೆಗೆ ಲೋಕಾಯುಕ್ತಕ್ಕೆ ನಾವು ಬರೆದಿದ್ದೇವೆ. ಯಾವ ಅಧಿಕಾರಿಗಳು ಈ ಜಸ್ಟೀಸ್ ಸದಾನಂದ ಸ್ವಾಮಿಯವರ ಕಮೀಷನರ್ ಆಫ್ ಎನ್‌ಕ್ವೇರಿ on Bagaur Navele – Hemavathy Project .... ಯಾರು ಇದರಲ್ಲಿ ತಪ್ಪಿತಸ್ಥರಾಗಿದ್ದಾರೆ ಅಥವಾ ಯಾರ ಮೇಲೆ needless suspicion .... ಮಾಡಿದ್ದಾರೆ, ಅವರ ಬಗ್ಗೆ ಈಗಾಗಲೇ ನಾವು ಲೋಕಾಯುಕ್ತಕ್ಕೆ ಬರೆದು ಇದರ ಬಗ್ಗೆ ಎನ್‌ಕ್ವೈರಿ ಮಾಡಬೇಕೆಂದು ತಿಳಿಸಿದ್ದೇವೆ.

ಶ್ರೀ ಎಚ್. ಏಕಾಂತಯ್ಯ:– ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೆ ಈಗಲೇ ನಾನು ಒಂದು ವಿಷಯ ತರುತ್ತೇನೆ. ಮೊಟ್ಟ ಮೊದಲನೆಯದಾಗಿ, ಸರ್ಕಾರದಿಂದ ನಾನು ತಿಳಿಯ ಬಯಸುವುದೇನೆಂದರೆ, ಸದಾನಂದ ಸ್ವಾಮಿಯವರ ವಿಚಾರಣಾ ಆಯೋಗದ ವರದಿ ಶಿಫಾರಸ್ಸುಗಳು ಏನೇನಿದೆ, ಅವುಗಳನ್ನು ಸರ್ಕಾರ ತತ್ವಶಃ ಒಪ್ಪಿಕೊಂಡಿದೆಯೇ ? so far no decision is taken according to me....

ಶ್ರೀ ಎಸ್.ಎಂ. ಕೃಷ್ಣ:– ಮತ್ತೆ ಕಮೀಷನರ್ ಆಫ್ ಎನ್‌ಕ್ವೈರಿ ಮಾಡುವುದು ಏತಕ್ಕಾಗಿ ? I will tell you right away if they have not accepted it before I will certainly accept it, otherwise there is no point in having any Judicial Enquiry into the matter of such things. Judicial Enquiry cannot become a shame. There must be some Sanctity for Judicial Enquiry. I accept this. We will follow it up.

ಇನ್ನು ಮಾನ್ಯ ರಾಮಯ್ಯವರು ಬಹಳ ತೀವ್ರತರವಾದ ರೀತಿಯಲ್ಲಿ ಕಾವೇರಿ ಕಣಿವೆ ವಿಚಾರವಾಗಿ ಮಾತನಾಡಿದ್ದಾರೆ. ಈಗಾಗಲೇ ಇದಕ್ಕೆಂದೇ ಅಪೆಕ್ಸ್ ಬಾಡಿ ಇದೆ; ಯಾವ ಕೆಲಸವನ್ನೂ ಕೂಡ ನಾವು ನಿಲ್ಲಿಸುವುದಿಲ್ಲ. ಆ ಕಾಮಗಾರಿ ಕೆಲಸಗಳೆಲ್ಲವೂ ಕೂಡ ಮುಂದೆ ನಮಗೆ ಹಣ ಸಿಕ್ಕಿದಂಥ ರೀತಿಯಲ್ಲಿ ನಡೆಯುತ್ತವೆ. ಈ ಸಾಲಿನ ಆಯವ್ಯಯದಲ್ಲಿ ಇದಕ್ಕೆ 250 ಕೋಟಿ ರೂಪಾಯಿಗಳನ್ನು ಒದಗಿಸಿದ್ದು ಅಗತ್ಯವಿದ್ದರೆ ಇನ್ನೂ 50 ಕೋಟಿ, ಹೀಗೆ ಒಟ್ಟು 300 ಕೋಟಿ ರೂಪಾಯಿಗಳನ್ನು ಒದಗಿಸಿಕೊಟ್ಟಿರತಕ್ಕಂಥಾದ್ದನ್ನು ಇಡೀ ಸದನ ಸ್ವಾಗತಿಸಿದೆ. ಈಗ ನಮ್ಮ ಮುಂದಿರತಕ್ಕಂಥ ಪ್ರಶ್ನೆಯೇನೆಂದರೆ, ಈ 300 ಕೋಟಿ ರೂಪಾಯಿಗಳನ್ನು ಹೇಗೆ ಖರ್ಚು ಮಾಡಬೇಕೆಂಬುದಕ್ಕೆ ನೀವು ಕ್ವಾರ್ಟರ್ಲಿ ಪ್ರಿಪರೇಶನ್ಸ್‌ನ್ನು ಇವೊತ್ತಿನಿಂದಲೇ ನಡೆಸಬೇಕಾಗಿದೆ. ಈ 300 ಕೋಟಿ ರೂಪಾಯಿಗಳನ್ನು ವಿನಿಯೋಗಿಸಿ ನೀರಾವರಿ ಇಲಾಖೆ ಈ ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರುವುದಕ್ಕೆ ಇರುವ ಇನ್‌ಫ್ರಾಸ್ಟ್ರಕ್ಚರ್ ಏನಿದೆ, ಮೊನ್ನೆ ದಿವಸ 'Y' alignment .... ನೋಡುವುದಕ್ಕೆ ನನ್ನ ಜೊತೆಯಲ್ಲಿ ರಾಮಯ್ಯನವರು ಬಂದಿದ್ದರು. ನಾನು ಮತ್ತೆ ಅಲ್ಲಿಗೆ 17 – 18ನೇ ತಾರೀಖಿಗೆ ಬರುತ್ತೇನೆಂದು ಹೇಳಿದ್ದೆ, ಆದರೆ 17 – 18 ಈ ದಿವಸವಾಗಿದ್ದು ಇಂದು ಸದನದಲ್ಲಿ ಉತ್ತರ ಕೊಡುತ್ತಿದ್ದೇನೆ. ಏಕೆಂದರೆ, ಮುಂದಿನ ತಿಂಗಳ ಮಧ್ಯದಲ್ಲಿ ನಾನು ಪುನಃ ಅಲ್ಲಿಗೆ ಬರುವುದಾಗಿ ಅವರಿಗೆ ಗಡುವು ಕೊಟ್ಟು ಬಂದಿದ್ದೆ. ಅಲ್ಲಿ 'Y' alignment ..... ಎರಡು ಕಡೆ ಏನೂ ಕೆಲಸ ನಡೆದಿರಲಿಲ್ಲ, ಅದನ್ನು ಮುಗಿಸಬೇಕೆಂದು, ಈ ತಿಂಗಳ ಅಂತ್ಯದಲ್ಲಿ ನಾವು ನೋಡುವುದಕ್ಕೆ ಮತ್ತೆ ಅವಕಾಶ ಸಿಗುತ್ತದೆ. ಆಗ ಮತ್ತೊಮ್ಮೆ ಅದನ್ನು ಪರಿವೀಕ್ಷಣೆ ಮಾಡಬಹುದು. ಇನ್ನು ಕಾವೇರಿ ವಿಚಾರದಲ್ಲಿ ಹೆಚ್ಚು ಹೇಳದಿದ್ದರೆ ಮಾನ್ಯ ರಾಮಯ್ಯನವರಾಗಲಿ, ಆತ್ಮಾನಂದರವರಾಗಲಿ ಬೇಜಾರುಪಟ್ಟುಕೊಳ್ಳಬಾರದು. ನಿಮಗೆಲ್ಲರಿಗೂ ಗೊತ್ತಿರತಕ್ಕಂಥ ರೀತಿಯಲ್ಲಿ ಈ ಯೋಜನೆಯ ಕೆಲಸ – ಕಾರ್ಯಗಳು ನಡೆಯುತ್ತಿವೆ.

ಆದುದರಿಂದ, ಅದರ ಬಗ್ಗೆ ತಾವು ಹೆಚ್ಚು ಒತ್ತಾಯ ಮಾಡಬಾರದು. ಡಾ: ನಂಜಪ್ಪನವರ ರಿಹ್ಯಾಬಿಲಿಟೇಷನ್ ವಿಚಾರ ಮತ್ತು ಏತ ನೀರಾವರಿ ಯೋಜನೆಗಳ ಬಗ್ಗೆ ಹೇಳುತ್ತಿದ್ದೇನೆ. ಹೇಮಾವತಿ ಗೊರೂರು ಮತ್ತು ಹಾರಂಗಿಯಲ್ಲಿರತಕ್ಕ ಸಮಸ್ಯೆಯೇನೆಂದರೆ, ಅಲ್ಲಿ ತಮ್ಮ ಜಮೀನ ಕಳೆದುಕೊಂಡವರಿಗೆ ರಿಸೆಟ್ಲ್‌ಮೆಂಟ್ ಮತ್ತು ರಿಹ್ಯಾಬಿಲಿಟೇಶನ್‌ಗೆ ಪ್ರಾಧಾನ್ಯತೆ ಕೊಟ್ಟಿಲ್ಲ. ಅ ಕಾಲುವೆ ತೆಗೆಸುವುದು, ಜಲಾಶಯ ನಿರ್ಮಿಸುವುದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆಯೆ ಹೊರತು, ಅಲ್ಲಿ ಯಾರು ತಮ್ಮ ಜಮೀನುಗಳನ್ನು ಕಳೆದುಕೊಂಡಿದ್ದಾರೋ ಅವರಿಗೆ basi humanitarian considerations.... ಕೂಡ ತೋರಿಸಿಲ್ಲವೆನ್ನತಕ್ಕಂಥ ದುಃಖವಿದೆ. ಆದುದರಿಂದ ಯಾರು ತಂತಮ್ಮ ಜಮೀನುಗಳನ್ನು ಕಳೆದುಕೊಂಡಿದ್ದಾರೋ, ಅವರಿಗೆ ಸೂಕ್ತ ಪರಿಹಾರವೊದಗಿ ಸರಿಪಡಿಸತಕ್ಕಂಥ ಕಾಲ ಈಗ ಬಂದಿದೆ. ಅದನ್ನು ನಾವು ಸರಿಪಡಿಸುವ ಪ್ರಯತ್ನ ಮಾಡುತ್ತೇ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಇನ್ನು ಪೀಸ್ ವರ್ಕ್ ಕೊಡತಕ್ಕದ್ದರ ಬಗ್ಗೆ ಮತ್ತು ಟೆಂಡರ್‌ನ ಆಧಾರದ ಮೇಲೆ ಕೆಲಸವನ ಕೊಡುವುದರ ಬಗ್ಗೆ ನಾನು ಯಾವ ದಾರಿಯನ್ನು ಹಿಡಿಯಬೇಕು ಎಂಬುದರ ಬಗ್ಗೆ ಒಂದು ರೀತಿಯಾ ಕನ್‌ಫ್ಯೂಷನ್ ಆಗಿದೆ. ಅದೇನೆಂದರೆ ಕೆಲಸವನ್ನು ಇಷ್ಟು ಕಾಲದಲ್ಲಿ ಮಾಡಬೇಕೆಂದು ಗಡುವು ಇದ್ದಾಗ ಆ ಕಾಲದಲ್ಲಿ ನಾವು ಟೆಂಡರನ್ನು ಕರೆದು ಅದನ್ನು ಪ್ರೊಸೆಸ್ ಮಾಡಿ ಅದನ್ನು ಟೆಕ್ನಿಕಲ್ ಕಮಿಟಿಯ ಮುಂದಿಟ್ಟು ಆ ಕಮಿಟಿ ಕೊಡತಕ್ಕ ತೀರ್ಮಾನ ಇವೆಲ್ಲವುಗಳಿಗೆ ಸ್ವಲ್ಪ ಸಮಯ ತೆಗೆದುಕೊಳ್ಳುತ್ತ ಎನ್ನತಕ್ಕ ಒಂದು ಭಯವಾದರೆ ಮತ್ತೊಂದು ಭಯವೇನೆಂದರೆ ಟೆಂಡರ್‌ಗಳ ಮೂಲಕ ಕೆಲಸವನ ಮಾಡಿಸತಕ್ಕ ವ್ಯವಸ್ಥೆಯನ್ನು ಮಾಡದಿದ್ದರೆ ನಾವು ವಶೀಬಾಜಿಗೆ ಸಿಕ್ಕಿದ್ದೇವೋ ಏನೋ ಎನ್ನತಕ್ಕ ಶಂಕೆ ಅನುಮಾನ ನಮ್ಮ ಮೇಲೆ ಬೀಳುತ್ತದಲ್ಲ ಎಂದು ನನ್ನಲ್ಲಿ ಕಾಡುತ್ತಿದೆ. ಆದುದರಿಂದ ನಾನು ಈ ಎರಡು ವಿಚಾರಗಳಲ್ಲಿ ಪರವಾಗಿ ಮತ್ತು ವಿರೋಧವಾಗಿ ಇರತಕ್ಕ ವಿಚಾರವನ್ನು ಯೋಚನ ಮಾಡುತ್ತಿದ್ದೇನೆ. ಈ ಘಟ್ಟದಲ್ಲಿ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ನಮ್ಮ ಮುಂದೆ ಎದು ಕಾಣುತ್ತದೆ. ನಾವು ಇದಕ್ಕೆ ಕೆಲಸವನ್ನು ಕೊಟ್ಟರೆ, ದುರಾದೃಷ್ಟವಶಾತ್ ಅವರು ಇದುವರೆಗೆ ಏನು ಮಾಡುತ್ತಾರೆಂದರೆ ಅವರು ನಿಮ್ಮಿಂದ ಕೆಲಸವನ್ನು ಒಪ್ಪಿಕೊಳ್ಳುತ್ತಾರೆ, ನಂತರ ಪೀಸ್ ವರ್ಕ್ ಬೇಸಿಸ್ ಮೇಲೆ, ಯೂನಿಟ್ ಬೇಸಿಸ್ ಮೇಲೆ ಮಾಡಿಸುತ್ತಾರೆ. ಅವರನ್ನು ಕೇಳಿದರೆ ನಾವು ಟೆಂಡರನ್ನು ಕರೆದಿದ್ದೇವೆ, ಯುನಿಟ್ ಬೇಸಿಸ್ ಮೇಲೆ ಮಾಡುತ್ತೇವೆಂದು ಹೇಳುತ್ತಾರೆ. ಇತ್ತೀಚೆಗೆ ನಾನು ಒಂದು ಕೆಲಸವನ್ನು ಅವರಿಗೆ ಕೊಟ್ಟು ಅದರಲ್ಲಿ ಇದನ್ನು ನಮೂದು ಮಾಡಿದ್ದೇನೆ. ಅದೇನೆಂದರೆ subjec to the condition, that the Karnataka Construction Corporation shall not giv this work on unit basis. They should execute the work themselves ಅಂತ ಹೇಳಿ ಆ ರೀತಿ ಬರೆದು ಕಳಿಸಿದ್ದೆ. ಅದಕ್ಕಾಗಿ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನ್ನು ಇನ್ನೂ ಹೆಚ್ಚು ಶಕ್ತಿಯುತವಾದ ಸಂಸ್ಥೆಯನ್ನಾಗಿ ಮಾಡಬೇಕು ಎನ್ನತಕ್ಕದ್ದು ನನ್ನ ಅನಿಸಿಕೆ ಆಗಿದೆ. ನಮ್ಮ ಪಿ.ಡಬ್ಲ್ಯೂ.ಡಿ. ಇಲಾಖೆಯ ಮಂತ್ರಿಗಳಾದ ಮಾನ್ಯ ರಂಗನಾಥ್‌ರವರು ಇಲ್ಲೇ ಇದ್ದಾರೆ. ಅವರು ಮತ್ತೆ ನಾನು ಇಬ್ಬರೂ ಕುಳಿತು ಈ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಇನ್ನೂ ಹೆಚ್ಚು ಟೆಕ್ನಿಕಲ್ ಮ್ಯಾನ್ ಪವರ್‌ನ್ನು ಕೊಡಬೇಕಾಗುತ್ತದೆ, ಏಕೆಂದರೆ ಅವರು ನಾವುಗಳು ಕೊಡತಕ್ಕ ಕೆಲಸವನ್ನು ನಾವು ನಮೂದು ಮಾಡಿರತಕ್ಕ ಪ್ರಮಾಣದಲ್ಲಿ ನಡೆಸಬೇಕಾದರೆ. ಅವರಿಗೆ ಇನ್ನೂ ಕೊಟ್ಯಾಂತರ ರೂಪಾಯಿಗಳ ಕೆಲಸ ಬರುತ್ತದೆ; ಅವರು ಈ ಕೆಲಸವನ್ನು ಮಾಡತಕ್ಕ ಸ್ಥಿತಿಯಲ್ಲಿ ಇರಬೇಕು ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ಇನ್ನು ತೆಲುಗುಗಂಗಾ ವಿಚಾರದ ಬಗ್ಗೆ ನಾನು ಆಗಲೇ ಒಂದು ಪ್ರಶ್ನೆಗ ಉತ್ತರ ಕೊಡುವಾಗ ಇದಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಸರ್ಕಾರದ ಯಾವುದೇ ಕಮಿಟ್‌ಮೆಂಟ್ ಇಲ್ಲವೆಂದು ಹೇಳಿದ್ದೇನೆ. ಆದರೆ ಒಂದೇ ಒಂದು ಕಮಿಟ್‌ಮೆಂಟ್ ಇದೆ. ಅದೇನೆಂದರೆ 5 ಟಿ.ಎಂ.ಸಿ

ನೀರನ್ನು ಕುಡಿಯುವ ಉದ್ದೇಶಕ್ಕಾಗಿ ಮದ್ರಾಸ್‌ಗೆ ಕೊಡಬೇಕೆಂದು. ಇದೊಂದು ಕಮಿಟ್‌ಮೆಂಟ್ ಬಿಟ್ಟರೆ ಮತ್ತೆ ಬೇರೆ ಯಾವ ಕಮಿಟ್‌ಮೆಂಟ್ ಸಹ ತೆಲುಗುಗಂಗಾದ ಬಗ್ಗೆ ಇಲ್ಲ. ಆದರೆ ಆಂಧ್ರಪ್ರದೇಶ, ಮಹಾರಾಷ್ಟ್ರ, ಕರ್ನಾಟಕ ಈ ಮೂರು ರಾಜ್ಯಗಳು ಒಂದಾಗಿ ಬಾಳಬೇಕಾಗಿದೆ. ಆ ದೃಷ್ಟಿಯಿಂದ ಹಿಂದೆ/ಮೊದಲನೆಯ ಮತ್ತು ಎರಡನೆಯ ಮುಖ್ಯಮಂತ್ರಿಗಳ ಸಭೆ ನಡೆಯಿತು; ಆದರೆ ಮೂರನೆ ಮುಖ್ಯಮಂತ್ರಿಗಳ ಸಭೆಯು ನಡೆಯುವ ಹಂತದಲ್ಲಿ ಮಹಾರಾಷ್ಟ್ರದಲ್ಲಾದ ರಾಜಕೀಯ ಮತ್ತು ಇತರ ಬದಲಾವಣೆಗಳಿಂದ ಅದು ನಡೆಯುವುದಕ್ಕೆ ಸಾಧ್ಯವಾಗಲಿಲ್ಲ. ಆ ಕೃಷ್ಣಾ ನದಿಯ ನೀರಿನ ಹಂಚಿಕೆಯ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಒಟ್ಟಾರೆ ಈ ಸಮಸ್ಯೆಯನ್ನು ಬಗೆಹರಿಸುವ ವಿಧಾನಗಳ ಬಗ್ಗೆ ಮುಖ್ಯಮಂತ್ರಿಗಳ ಸಭೆಯಲ್ಲಿ ಪ್ರಯತ್ನ ಮಾಡುತ್ತೇವೆ. ಆ ಸಭೆ ಯಾವಾಗ ಸೇರುತ್ತದೋ ಆವಾಗ ಆ ಕೆಲಸವನ್ನು ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಆದರೆ ಮಾನ್ಯ ರಾಮಯ್ಯನವರು, ವಾಟಾಳ್ ನಾಗರಾಜ್‌ರವರು ನೀವು ಏನು ಮಾಡಿದ್ದೀರಿ ಎಂದು ಕೇಳುತ್ತಾರೆ, ನೀವೇ ಹೇಳಿ, ನಾವು ಏನು ಮಾಡಬೇಕೆಂದು ?

ಶ್ರೀ ವೈ.ಕೆ. ರಾಮಯ್ಯ:– ನಮ್ಮ ವಾದ ಏನೆಂದರೆ ಬಚಾವತ್ ಅವಾರ್ಡ್‌ನ ನಿಬಂಧನೆಗಳಿಗೆ ಎಲ್ಲಾ ಸಂಬಂಧಪಟ್ಟ ರಾಜ್ಯಗಳು ಬದ್ಧವಾಗಿದ್ದಾವೆಯೇ ? ನಾನು ತಮ್ಮಲ್ಲಿ ನೇರವಾಗಿ ಕೇಳುವುದೇನೆಂದರೆ, one of the parties has violated the agreement, one of the party has violated the understanding. When they have violated .... ಅಂಥ ಒಂದು ಸಂದರ್ಭದಲ್ಲಿ ನಾವು ಆ ಒಪ್ಪಂದಕ್ಕೆ ಮನ್ನಣೆ ಕೊಡಬೇಕಾಗುತ್ತದೋ ? ಅದರ ಬಗ್ಗೆ ನಾನು ಮೊನ್ನೆ ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ಕೃಷ್ಣಾ ಕಣಿವೆಯ 40 ಭಾಗದಷ್ಟು ನೀರನ್ನು ಅವರ ಪ್ರಮುಖವಾದ ಜಲಾಶಯಗಳಾದ ಶ್ರೀಶೈಲ ಮತ್ತು ನಾಗಾರ್ಜುನ ಸಾಗರದ ಹೊರಗೆ ತೆಗೆದುಕೊಂಡು ಹೋಗಿರುವ ಹಂತಕ್ಕೆ ಅವರು ಹೋಗಿದ್ದಾರೆಂದರೆ ಎಷ್ಟರಮಟ್ಟಿಗೆ ಆ ಒಪ್ಪಂದಕ್ಕೆ ಅವರು ಅಪಚಾರವನ್ನು ಎಸಗಿದ್ದಾರೆಂದು ಅರ್ಥವಾಗುತ್ತದೆ.

ಈಗಲಾದರೂ ಈ ಒಪ್ಪಂದವನ್ನು ಮುರಿದಿರತಕ್ಕ ಸಂದರ್ಭದಲ್ಲಿ ಈ ಒಪ್ಪಂದ ನಮಗೆ ಬೈಂಡಿಂಗ್ ಇಲ್ಲ, ನಾವು ಇದನ್ನು ಪರಿಪಾಲಿಸುವುದಿಲ್ಲ ಎನ್ನತಕ್ಕ ದೃಢ ನಿರ್ಧಾರವನ್ನು ನಮ್ಮ ಸರ್ಕಾರ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:– ಆಂಧ್ರಪ್ರದೇಶಕ್ಕೆ ನಿಗದಿಪಡಿಸಿರುವ ನೀರನ್ನು ಯಾವ ರೀತಿ ಉಪಯೋಗಿಸುತ್ತಾರೆಂಬುದು ಆಂಧ್ರಪ್ರದೇಶಕ್ಕೆ ಸೇರಿದ ವಿಚಾರ. ಇದರಲ್ಲಿ ನಾನು ಹಸ್ತಕ್ಷೇಪ ಮಾಡುವುದು ಸಾಧ್ಯವೂ ಇಲ್ಲ, ಅಂಥ ಪ್ರಯತ್ನಗಳನ್ನೂ ಕೂಡ ನಮ್ಮ ಸರ್ಕಾರ ಮಾಡುವುದಿಲ್ಲ. ಆದರೆ ನಮ್ಮ ನೀರಿನ ಮೇಲೆ, ಅಂದರೆ ನಮಗೆ ನಿಗದಿತವಾಗಿರುವ ನೀರಿನ ಪ್ರಮಾಣದ ಮೇಲೆ ಯಾರಾದರೂ ಟ್ರೆಸ್‌ಪಾಸ್ ಮಾಡಿದರೆ, ಅದನ್ನು ಕಡಿಮೆ ಮಾಡುವ ವ್ಯವಹಾರ ನಡೆದರೆ ಅದನ್ನು ನಾವು ಪ್ರತಿಭಟಿಸಬೇಕು. ನಿನ್ನೆ ನಾನು ಒಂದು ಪ್ರಶ್ನೆಗೆ ಉತ್ತರ ಕೊಡುವ ಸಂದರ್ಭದಲ್ಲಿ 1985–86–87ನೇ ಇಸವಿಗಳಲ್ಲಿ ನಾವು ಕೇಂದ್ರಸರ್ಕಾರಕ್ಕೆ ಪತ್ರ ಬರೆದು ತೆಲುಗು–ಗಂಗಾಕ್ಕೆ ಸಂಬಂಧಪಟ್ಟಂತೆ ಅವರು ದೊಡ್ಡ ಕಾಲುವೆಯನ್ನು ಏನು ತೋಡುತ್ತಿದ್ದಾರೆ ಅದರ ಬಗ್ಗೆ ಕೇಂದ್ರದ ಗಮನವನ್ನು ಸೆಳೆದಿದ್ದೇವೆ. ಮುಂದೆ ನಡೆಯುವಂಥ ಮುಖ್ಯಮಂತ್ರಿಗಳ ಸಭೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡುತ್ತೇವೆ. ನಮಗೆ ಒಂದು ಸಮಾಧಾನ ಎಂದರೆ, ಮಹಾರಾಷ್ಟ್ರ, ಸರ್ಕಾರವೂ ಕೂಡ ನಮ್ಮ ಕರ್ನಾಟಕ ಸರ್ಕಾರದ ಜೊತೆ ಸೇರಿಕೊಂಡು ತೆಲುಗು – ಗಂಗಾದ ಬೃಹತ್ ಕಾಲುವೆಯನ್ನು ಆಂಧ್ರದವರು ಏನು ತೆಗೆಯುತ್ತಿದ್ದಾರೆ ಅದನ್ನು ವಿರೋಧ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ಮತ್ತು ಮಹಾರಾಷ್ಟ್ರದವರೂ ಇಬ್ಬರೂ ಕೂಡ ಜಂಟಿಯಾಗಿ ಮುಂದೆ ನಡೆಯುವ ಮುಖ್ಯಮಂತ್ರಿಗಳ

ಸಭೆಯಲ್ಲಿ ಇದನ್ನು ಪ್ರತಿಪಾದನೆ ಮಾಡುತ್ತೇವೆಂದು ಹೇಳಿ ಇಷ್ಟಕ್ಕೆ ಈ ತೆಲುಗು – ಗಂಗ ವಿಚಾರವನ್ನು ಬಿಡುತ್ತೇನೆ.

ಇನ್ನು ಘಟಪ್ರಭಾ, ಮಲಪ್ರಭಾ, ಭದ್ರಾ ಯೋಜನೆಗಳ ಬಗ್ಗೆ ಮಾನ್ಯ ಸದಸ್ಯರುಗಳು ತಮ್ಮ ತವ ಕ್ಷೇತ್ರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಭದ್ರಾ ಯೋಜನೆ ಏತಕ್ಕೆ ನಿಧಾನವಾಗಿದೆ ಎಂದು ಮಾ ಯಡಿಯೂರಪ್ಪನವರು ನನ್ನನ್ನು ಕೇಳಿದರು. ಈ ನಿಧಾನಕ್ಕೆ ಕಾರಣ ಏನೆಂಬುದೂ ಅವರಿಗೆ ಗೊತ್ತು ನಾವು ಏನು ಎಕ್ಸ್‌ಪರ್ಟ್ಸ್ ಕಮಿಟಿಯನ್ನು ಮಾಡಿದ್ದೇವೆ ಅವರಿಗೆ ಏನು ಅನುಮಾನ ಬಂತು ಎಂದರ ಕೆನಾಲ್ ಫೌಂಡೇಷನ್‌ಗೆ ಏನಾದರೂ ಡ್ಯಾಮೇಜ್ ಆಗಿರಬಹುದೆಂದು ಭಾವಿಸಿದ್ದರು. ಆದ್ದರಿಂ ಅದನ್ನು ಎಕ್ಸಾಮಿನ್ ಮಾಡುವಂತೆ ನಾವು ಹೇಳಿದ್ದೇವೆ.

ಅದು ಡ್ಯಾಂಗೆ ಹತ್ತಿರ ಇರುವುದರಿಂದ ಹೆವಿ ಎಕ್ಸ್‌ಪ್ಲೋಸಿವ್ಸ್‌ನ್ನು ಉಪಯೋಗಿಸುವುದ ಸಾಧ್ಯವಾಗುವುದಿಲ್ಲ. ಏಕೆಂದರೆ ಆ ಡ್ಯಾಂನ ಸೆಕ್ಯುರಿಟಿ ಹಾಗೂ ಸೇಫ್ಟಿಯನ್ನು ನಾವು ಕಾಪಾಡಬೇಕಾಗಿದ ನಾವು ಲೇಬರರ್ಸ್‌ನ್ನು ಉಪಯೋಗಿಸಿದರೆ ಬಹಳ ದಿವಸ ಹಿಡಿಯುತ್ತದೆಂದು ಬೇರೆ ಎಲ್ಲಿಂದಲೋ ಒಂದು ಮೆಷಿನ್‌ನ್ನು ತರಿಸಿ ಅದನ್ನು ಉಪಯೋಗಿಸಿ ಕೆಲಸ ಮಾಡುತ್ತಿದ್ದೇವೆ. ನನ್ನ ಅಂದಾಜಿನಲ್ಲಿ ಇನ್ನು ಸುಮಾರು ಒಂದೂವರೆ ತಿಂಗಳಲ್ಲಿ ಈ ಫೌಂಡೇಷನನ್ನು ನೋಡುವುದಕ್ಕೆ ನಮ್ಮ ಎಕ್ಸ್‌ಪರ್ಟ್ಸ್ ಕಮಿಟಿಯವರು ಅಲ್ಲಿಗೆ ಹೋಗುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಭದ್ರಾ ಕಾಲು ರಿಪೇರಿಗೋಸ್ಕರ 1993–94ನೇ ಸಾಲಿಗೆ ಸುಮಾರು 10 ಕೋಟಿ ರೂ.ಗಳನ್ನು ಒದಗಿಸಿದ್ದಾರೆ. ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಹಣವೇನಾದರೂ ಬೇಕಾದಲ್ಲಿ ಅದನ್ನೂ ಕೂಡ ಬಿಡುಗಡೆ ಮಾಡುತ್ತಾರೆಂ ವಿಶ್ವಾಸದಿಂದ ನಾನು ಈ ಮಾತನ್ನು ಹೇಳುತ್ತೇನೆ. ಈ ಕಾಲುವೆ ಒಡೆದುಹೋದಾಗ ಮಾ ಮಲ್ಲಾರಿಗೌಡ ಪಾಟೀಲರು ಬಂದು ಇದಕ್ಕೆ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕೆಂದು ಬಹಳವಾಗಿ ಕಷ್ಟಪಟ್ಟರು. ಏಕೆಂದರೆ ಅಲ್ಲಿ ಸಹಸ್ರಾರು ಎಕರೆ ಫಸಲನ್ನು ಏನು ಇಟ್ಟಿದ್ದರು, ಅದನ ಉಳಿಸುವುದಕ್ಕೆ ಪರ್ಯಾಯ ವ್ಯವಸ್ಥೆ ಮಾಡಿಸಲು ಬಹಳ ಕಷ್ಟಪಟ್ಟರು. ಸುಮಾರು 6 – 7 ಸಾ ಇವರು ಅಲ್ಲಿಗೆ ಹೋಗಿದ್ದಾರೆ. ಅಲ್ಲಿದ್ದ ಇಂಜಿನಿಯರ್‌ಗಳೂ ಕೂಡ ಸುಮಾರು 3 – 4 ವಾರ ಕಾ ಅಲ್ಲೇ ವಾಸ್ತವ್ಯ ಹೂಡಿ ಪರ್ಯಾಯ ವ್ಯವಸ್ಥೆಯನ್ನು ಬಹಳ ಉತ್ತಮವಾಗಿ ಮಾಡಿದ್ದಾರೆ. ಆ ಎ ಇಂಜಿನಿಯರ್‌ಗಳಿಗೂ ಈ ಸದನದ ಮುಖಾಂತರ ಒಂದು ಒಳ್ಳೆಯ ಮಾತನ್ನು ಹೇಳಿದರೆ ಅವರ ಆತ್ಮವಿಶ್ವಾಸ ಮೂಡಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡಲು ಸ್ಫೂರ್ತಿಗೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಭದ್ರಾ ನಾಲಾ ರಿಪೇರಿ ಕೆಲಸವನ್ನು ನಾವು ಶೀಘ್ರವಾಗಿ ಮಾಡುತ್ತೇವೆ. ಇನ ಮಾನ್ಯ ಕೌಜಲಗಿಯವರು ಅವರ ಭಾಗದಲ್ಲಿರುವ ಲಿಫ್ಟ್ ಇರಿಗೇಷನ್ಸ್ ವಿಚಾರವನ್ನು ಏನು ಹೇಳಿದ್ದಾರ ಅದನ್ನೆಲ್ಲಾ ನಾನು ಗಮನಿಸಿದ್ದೇನೆ; ಮತ್ತು ಅದರ ಬಗ್ಗೆ ಏನು ಅಗತ್ಯ ಕ್ರಮಗಳನ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಹಾಗೇನೆ ಇನ್ನು ಮಾನ್ಯ ಸದಸ್ಯರುಗಳಾದ ಶಂಕರ ರೆಡ್ಡಿಯವರು, ನಮ್ಮ ಶಿವಶಂಕರಗೌ ಪಾಟೀಲರು, ನಾಡಗೌಡರು ಮತ್ತು ಮಲಕರೆಡ್ಡಿಯವರು ಎಲ್ಲರೂ ಮಾತನಾಡಿದ್ದಾರೆ. ಆದ್ದರಿಂ ಅವರೆಲ್ಲರೂ ಹೇಳಿದಂಥ ಮಾತುಗಳನ್ನು ನಾನು ಗಮನಿಸಿದ್ದೇನೆ, ಅವರ ಸಲಹೆಗಳಿಗೆ ನಾನ ಸ್ಪಂದಿಸುತ್ತೇನೆಂದು ಹೇಳಿ ಇನ್ನು ವಿದ್ಯುತ್ ಉತ್ಪಾದನೆ ಮತ್ತು ವಿದ್ಯುಚ್ಛಕ್ತಿ ಬಗ್ಗೆ ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:– ಇರಿಗೇಷನ್ ಮುಗಿಸುವುದರೊಳಗೆ ನಾನು ಎರಡೇ ಎರಡ ಪ್ರಶ್ನೆಗಳನ್ನು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಇದನ್ನು ಮುಗಿಸಲಿ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಎದ್ದ ಕೂಡಲೇ ಏತಕ್ಕೆ ನೀವು ಹೀಗೆ ಏಳುತ್ತೀರಿ ? ನನಗೆ ಸ್ವಲ್ಪ ಕ್ಲಾರಿಫಿಕೇಶನ್ ಮಾನ್ಯ ಸಚಿವರಿಂದ ಬೇಕಾದರೆ, ನಿಮ್ಮನ್ನು ಕೇಳಬೇಕಾ ? ನಾನು ಅಧ್ಯಕ್ಷರನ್ನು ಕೇಳುತ್ತಿದ್ದೇನೆ. ಅವಕಾಶವನ್ನು ಕೊಟ್ಟರೆ ಮಾತನಾಡುತ್ತೇನೆ. ಇಲ್ಲವಾದರೆ ಬೇಡವೇ ಬೇಡ. ಯಾವಾಗಲೂ ಇವರು ಇದೇ ರೀತಿ ಹೇಳುತ್ತಿರುತ್ತಾರೆ. ಇದು ಸರಿಯಲ್ಲ. ಮಾನ್ಯ ಅಧ್ಯಕ್ಷರೆ, ನೀರಾವರಿಯ ಬಗ್ಗೆ ಮಾನ್ಯಮಂತ್ರಿಗಳು ಉತ್ತರ ಮುಗಿಸಿದ್ದಾರೆ. ಈಗ ಮತ್ತೆ ಪವರ್‌ಗೆ ಹೋಗಿಬಿಟ್ಟರೆ ಅದು ಒಂದು ದೊಡ್ಡ ಸಾಗರ. ಅಲ್ಲಿ ಈಜುವುದಕ್ಕೆ ಹೋಗಿ ಬಿಟ್ಟು ಇಲ್ಲಿ ಕಿತ್ತು ಹೋಗಬಾರದೆಂದು ನಾನು ಮೂರು ಪ್ರಶ್ನೆಗಳನ್ನು ಕೇಳುತ್ತೇನೆ. ಒಂದು ಬಚಾವತ್ ತೀರ್ಪನ್ನು ಎರಡು ಸಾವಿರದ ಇಸವಿಯ ಒಳಗೆ ಜಾರಿಗೆ ತರಲು ಬೇಕಾದಂಥ ಪ್ರೊಜೆಕ್ಷನ್ ಎಲ್ಲವನ್ನೂ ಮಾನ್ಯಮಂತ್ರಿಗಳು ಕೊಟ್ಟಿದ್ದಾರೆ. ಒಂದು ವೇಳೆ ಆ ಸಮಯದ ಹೊತ್ತಿಗೆ ನಾವು ಬಳಕೆ ಮಾಡಿಕೊಳ್ಳಬೇಕಾದಂಥ ನೀರನ್ನು ಬಳಕೆ ಮಾಡಲು ಸಾಧ್ಯವಾಗದಿದ್ದಲ್ಲಿ, ಅದಕ್ಕೆ ಬೇಕಾದಂಥ ಸಿದ್ದತೆ ಏನು ಎನ್ನುವುದನ್ನು ಕೂಡ ಆಲೋಚನೆ ಮಾಡಬೇಕಾಗುತ್ತದೆ. ಮುಗಿಸುವುದಕ್ಕೆ ಸಾಧ್ಯವಾದರೆ ತಮ್ಮ ಪ್ರೊಜೆಕ್ಷನ್‌ನಂತೆ ಬಹಳ ಸಂತೋಷ. 5489 ಕೋಟಿ ರೂಪಾಯಿಗಳ ಪ್ರೊಜೆಕ್ಷನ್ ಆಗದಿದ್ದರೆ ಏನು ಮಾಡಬೇಕೆನ್ನುವುದು ಪ್ರಶ್ನೆ ಇದೆ. ಆ ದೃಷ್ಟಿಯಿಂದಲೆ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ಇದರ ತೀರ್ಪಿನ ಮರುಪರಿಶೀಲನೆಗೆ ಏನಾದರೂ ಅವಕಾಶವಿದೆಯೇ ? ಹಾಗಿಲ್ಲದಿದ್ದರೆ ಆ ತೀರ್ಪಿಗೆ ನಾವು ಬದ್ಧವಾಗಿಲ್ಲವೆಂದು ಹೇಳತಕ್ಕಂಥ ಧೈರ್ಯವನ್ನು ತಾವು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ, ಇದು ಒಂದು; ಎರಡನೆಯದು ಬಚಾವತ್ ತೀರ್ಪಿನ ವ್ಯಾಪ್ತಿಗೆ ಬರದೇ ಇರತಕ್ಕಂಥ ಹೆಚ್ಚುವರಿ ನೀರು ಏನಿದೆ, ಅದರ ಬಳಕೆ ಸ್ಕೀಮ್‌ಬೀಮ್ ಎಂದು ಏನು ಹೇಳುತ್ತಾರೆ ಎರಡು ಸಾವಿರ ವರ್ಷದಿಂದ ಆಚೆಗೆ ಸ್ಕೀಮ್ ಬೀಮ್, ಅದರ ಬಳಕೆಯನ್ನು ಈಗಲೇ ಪೂರ್ವಭಾವಿಯಾಗಿ ಮಾಡಲಿಕ್ಕೆ ಸಾಧ್ಯವಿದೆ. ಅದು ಈ ಒಂದು ನದಿಯ ದಂಡೆಗಳಲ್ಲಿ ಏತ ನೀರಾವರಿಗೆ ಪರಿಪೂರ್ಣವಾದಂಥ ಅವಕಾಶವನ್ನು ತಾವು ಕೊಡುವುದಾದರೆ ನೀರಿನ ಬಳಕೆಯು ಆಗುತ್ತದೆ, ಅದರಲ್ಲೂ ವಿಶೇಷವಾಗಿ ಮಲೆನಾಡಿನ ಸಮಸ್ಯೆಯೂ ಪರಿಹಾರವಾಗುತ್ತದೆ. ಈಗ ನೀವು ಏನು ಮಾಡಿದ್ದೀರಿ, ಏತ ನೀರಾವರಿಗಾಗಿ ಮಾಡಿದಂಥದ್ದನ್ನು ವಜಾ ಮಾಡಿದ್ದೀರಿ. ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ವಜಾ ಮಾಡಿದ್ದೀರೆಂದು ಹೇಳಿದ ಹೇಳಿಕೆಯನ್ನು ನಾನು ನೋಡಿದ್ದೇವೆ. ಈಗ ಏತ ನೀರಾವರಿಗಳನ್ನು ಮಾಡುವುದೇ ಇಲ್ಲವೆಂದು ಹೇಳುತ್ತೀರಾ ?

ಈ ಏತ ನೀರಾವರಿ ಮೂಲಕ ಹೆಚ್ಚು ನೀರನ್ನು ಬಳಕೆ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೋ ಅಥವಾ ಇಲ್ಲವೋ ? ಮೂರನೆಯ ಮೂಲಪ್ರಶ್ನೆ ಅಂದರೆ, ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಈ ಶಾಸನ ಸಭೆಯಲ್ಲಾಗಲೀ, ಹೊರಗಡೆಯಲ್ಲಾಗಲೀ, ನಾವು ರೈತರ ಸಮಾವೇಶಗಳಲ್ಲಿಯಾಗಲೀ ತಜ್ಞರ ಜೊತೆಯಲ್ಲಿ ಚರ್ಚೆ ಮಾಡಿದಾಗ ಈಗ ಈ ಸದನದಲ್ಲಿ ಮಾಡಿದಂಥ ಠರಾವು ಇನ್ನೂ ಅಸ್ತಿತ್ವದಲ್ಲಿದೆ. ಆ ಠರಾವು ಕೃಷ್ಣಾ ಕಾವೇರಿ ಜಲಾನಯನ ಪ್ರದೇಶಕ್ಕಾಗಿ ಪ್ರಾಧಿಕಾರ ಏನು ಕೆಲಸ ಮಾಡುತ್ತಿದೆ, ಅದನ್ನು ತಿರಸ್ಕರಿಸಿ ತಾವು ಹೊರಬರಬೇಕು. ಹಾಗಿದ್ದರೆ ಮುಂದಿನ ಮಾರ್ಗ ಏನು ? ಮಾರ್ಗ ಮಾತುಕತೆಯ ಮೂಲಕ ಸಂಧಾನದ ಮೂಲಕ ಆಗಬೇಕು. ಇದು ಇಲ್ಲಿಯ ತೀರ್ಮಾನ. ಮತ್ತು ಹೊರಗಡೆ ನಮ್ಮ ಪ್ರಮುಖ ರಾಜಕೀಯ ಪಕ್ಷಗಳು, ರೈತಸಂಘಗಳ ಇದರ ಮುಖಂಡರು ಮಾಡಿರತಕ್ಕಂಥದ್ದು. ನೀವು ರಾಜ್ಯಪಾಲರ ಭಾಷಣದಲ್ಲಿ 12ನೇ ತಾರೀಖು ಫೆಬ್ರವರಿ 1993ರಲ್ಲಿ ಕೊಟ್ಟಂಥ ರಾಜ್ಯಪಾಲರ ಭಾಷಣದ ಇಂಗ್ಲೀಷ್ ಕಾಪಿ ಇದೆ, ಕನ್ನಡದ್ದು ನಾನು ತರಲಿಲ್ಲ. ಅದರಲ್ಲಿ ಏನು ಹೇಳುತ್ತೀರಿ, ನಾವು ಯಾವ ಮಾರ್ಗವನ್ನು ಸೂಚಿಸಿದ್ದೇವೋ ಆ ಮಾರ್ಗವನ್ನು ಸಂಪೂರ್ಣವಾಗಿ ಕೈಬಿಟ್ಟು ಬಿಟ್ಟಿದ್ದೀರಿ. ನಿಮ್ಮ ರೆಫರೆನ್ಸ್ ಏನು ಹೇಳುತ್ತದೆಂದರೆ at page 11, it is said like this.

"It will be our endeavour to bring to an end the century old handicap

faced by our farmers in the Cauvery basin by taking all necessary steps with due regard to the legal process". 'Not negotiations". You have closed it. ನಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿ ಯಾವ ಸಂಧಾನದ ಮೂಲಕ ಪರಿಹಾರ ಮಾಡಬೇಕೆಂದು ಹೇಳಿ ನಾವು ಪದೇ ಪದೇ ಒತ್ತಾಯ ಮಾಡಿದ್ದೇವೆ ಅದಕ್ಕೆ ತಿಲಾಂಜಲಿಯನ್ನು ಕೊಟ್ಟಿದ್ದೀರಿ. ರಾಜ್ಯಪಾಲರ ಭಾಷಣದಲ್ಲಿ; ಈ ಬಗ್ಗೆ ತಾವು ನೀರಾವರಿಯ ಸಚಿವರಾಗಿ ಸರ್ಕಾರದ ನಿಲುವು ಏನು ಎಂದು ಹೇಳಬೇಕು; ಹಾಗಿದ್ದರೆ ಟ್ರಿಬ್ಯುನಲ್‌ನಲ್ಲಿ ಕೊಡತಕ್ಕಂಥ ತೀರ್ಮಾನವೇ ಅಂತಿಮವೆಂದು ತಾವು ಒಪ್ಪಿಕೊಳ್ಳುತ್ತೀರಾ ? ನಾಳೆ ಆ ತೀರ್ಮಾನ ನಮಗೆ ವಿರುದ್ಧವಾಗುವುದಾದರೆ ಸಂಬಂಧಪಟ್ಟ ಸರ್ಕಾರಗಳ ಜೊತೆಯಲ್ಲಿ ಮಾತುಕತೆ ಮಾಡತಕ್ಕಂಥ ಪ್ರಯತ್ನ ಸರ್ಕಾರದ್ದು ಇದೆಯೇ ? ಈ ವಿಚಾರದಲ್ಲಿ ತಾವು ಬೆಳಕು ಚೆಲ್ಲಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

SRI S.M. KRISHNA:– All necessary steps will be taken. Likewise, it is the endeavour of our Government. This will be done with due regard to legal process. That does not rule out the possiblility of negotiations. That certainly does not rule out the possibility of negotiations. We have not shut our doors. Our doors are always wide open. We are willing for negotiations and we insist. That has been the stand of our Government and that we would like the Prime Minister to bring about an agreement amongst southern states so that it will foster good neighbourly relations amongst southern states. That has been the stand of the Government we continue to abide by that stand. As far as lifting of waters in UKP is concerned the Project itself will provide certain lifting of waters. So, there, the lift Irrigation Corporation does not come into the picture at all. It is being done by our own agency, the Irrigation Department itself. So we have not given up because that is a very important component of the whole system in the Krishna Basin project. So, the question of giving up those lifts does not arise.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಚಂದ್ರೇಗೌಡರು ಏನು ಪ್ರಶ್ನೆ ಎತ್ತಿದರು ಅದಕ್ಕೆ ಸಂಬಂಧಪಟ್ಟ ಹಾಗೆ ಮತ್ತು ತೆಲುಗುಗಂಗಾಗೆ ಸಂಬಂಧಪಟ್ಟ ಹಾಗೆ ಶ್ರೀ ವೈ.ಕೆ.ರಾಮಯ್ಯನವರು ಏನು ಹೇಳುತ್ತಿದ್ದರು ಅಂದರೆ, ಒಂದು ಪಾರ್ಟಿ ವೈಯಲೇಟ್ ಮಾಡಿದೆ ಎಂದು, ಅದರ ಬಗ್ಗೆ ಹೇಳುವುದಾದರೆ ಬಚಾವತ್ ವರದಿಯನ್ನು ಓದಿದ್ರೆ ಆಂಧ್ರ ಪ್ರದೇಶ ಏನೂ ವೈಯಲೆಟ್ ಮಾಡುತ್ತಿಲ್ಲ. That is the mischief which you can discover if you read the Bachawat Award closely. ಬಚಾವತ್ ವರದಿ ಏನು ಹೇಳುತ್ತದೆ, ಎರಡು ಸಾವಿರ ಇಸವಿವರೆಗೆ ಇಂತಿಷ್ಟು ನೀರನ್ನು ಬಳಸಿಕೊಳ್ಳಬೇಕು. ಈ ನಡುವೆ ಆಂಧ್ರಪ್ರದೇಶ ಯಾವುದೇ ಹಕ್ಕನ್ನು ಗಳಿಸಿಕೊಳ್ಳದೆ ನೀರನ್ನು ಬಳಸಬಹುದು ಎಂದು ಇರುವುದರಿಂದಲೇ ತೆಲುಗುಗಂಗಾ ತಲೆನೋವು ಪ್ರಾರಂಭವಾಯಿತು. ಇದಕ್ಕೆ ಸಂಬಂಧಪಟ್ಟ ಹಾಗೆ ಚಂದ್ರೇಗೌಡರು ಎತ್ತಿದ ಪ್ರಶ್ನೆ, ನಿಮ್ಮ ಐದೂವರೆ ಸಾವಿರ ಕೋಟಿ ರೂಪಾಯಿ ಪ್ರೊಜೆಕ್ಷನ್‌ಗೆ ಸಾಧ್ಯವಾಗದೆ ಇದ್ದರೆ what will be the stand of the Andhra Pradesh as far as the water it has already utilised even earlier to 2000 A.D.

ಅಲ್ಲೇ ನಮಗೆ ಕಷ್ಟ ಬರುವುದು. ನಿಮ್ಮದು 3ನೇ ಮಾತುಕತೆ, ಮುಖ್ಯಮಂತ್ರಿಗಳ ಮಾತುಕತೆಯಾದರೂ even now according to the Bachawat Award the Andhra Pradesh can use all the water which we are not using. ಈ ಪ್ರಾವಿಷನ್ ಮಾಡಿಕೊಟ್ಟಿದೆ ಬಚಾವತ್ ಅವಾರ್ಡ್. ಆ ಕಾರಣ, ಅವರು ದೊಡ್ಡದಾಗಿ ನಾಲೆ ತೋಡುತ್ತಿರುವುದು. ಏಕೆಂದರೆ ನಾವು 2000 ಎ.ಡಿ. ಒಳಗೆ ಮುಗಿಸುವುದಿಲ್ಲವೆಂದು ಅವರಿಗೆ ಗೊತ್ತಿದೆ. 2000 ಎ.ಡಿ. ಆದ ಕೂಡಲೇ ಅವರು ಎಷ್ಟು ಬಳಸಿದ್ದಾರೆ; ಅದರ ಮೇಲೆ ಅವರ ನಿಲುವು ಏನೆಂಬುದು ನಮಗೆ ತಲೆನೋವಾಗಿ ಪರಿಣಮಿಸುತ್ತದೆ. As it is, Andhra Pradesh is not violating; In fact, because Bachawat Award provides for it.

ಇದು ಒಂದು, ಎರಡನೆಯದು, ನನಗೆ ಎರಡು ವಿಷಯದ ಬಗ್ಗೆ ನ್ಯಾಯ ಮಂಡಲಿಗಳಿಗೆ ಸಂಬಂಧಪಟ್ಟ ಹಾಗೆ ಸರ್ಕಾರದ ಸ್ಪಷ್ಟ ನಿಲುವು ಬೇಕು. ಒಂದು ಕಾವೇರಿ ಟ್ರಿಬ್ಯುನಲ್‌ಗೆ ಸಂಬಂಧಪಟ್ಟ ಹಾಗೆ, ಮತ್ತೊಂದು ಬಚಾವತ್ ಆಯೋಗಕ್ಕೆ ಸಂಬಂಧಪಟ್ಟ ಹಾಗೆ. ಒಂದೊಂದರಲ್ಲೂ ನಮ್ಮ ಮೇಲೆ ನಿರ್ಬಂಧ ಹಾಕಿದ್ದಾರೆ. ಕಾವೇರಿ ಟ್ರಿಬ್ಯುನಲ್ ಏನು ಮಾಡಿದೆ ? 11.2 ಲಕ್ಷ ಎಕರೆಗಿಂತ ಹೆಚ್ಚಿಗೆ ನಾವು ನೀರಾವರಿ ಮಾಡಬಾರದೆಂಬ ನಿರ್ಬಂಧ ಹಾಕಿದೆ. ಇದನ್ನು ತಾವು ಸಭಾಧ್ಯಕ್ಷರಾಗಿದ್ದಾಗ ಹೇಳಿದ್ದೀರಿ; ದಾಖಲೆಯಲ್ಲಿದೆ. They had no business to do this. As the Hon'ble Speaker of this House you said. ಈಗ ತಾವು ನೀರಾವರಿ ಮಂತ್ರಿಯಾಗಿ ನಿಮ್ಮ ನಿಲುವು ಏನು ಎಂದು ನಾನು ತಿಳಿಯುವುದಕ್ಕೆ ಇಷ್ಟಪಡುತ್ತೇನೆ. This is as far as Cauvery basin is concerned. Secondly, as far as this Tunga Bhadra Sub – basin is concerned. In Tunga Bhadra Sub basin the Bachwat Award itself says that our contribution is only to the extent of 450 TMCFT. ನಮ್ಮ ಪ್ರದೇಶದಲ್ಲಿ ನಮ್ಮ ಕಾಂಟ್ರಿಬ್ಯೂಷನ್ ಕರ್ನಾಟಕದ್ದು ಕೇವಲ 450 ಟಿ.ಎಂ.ಸಿ.

ತುಂಗಭದ್ರಾ ಸಬ್ ಬೇಸಿನ್‌ನಲ್ಲಿ According to the Bachawath Report itself, ಆದರೆ ಬಚಾವತ್ ಆಯೋಗಾನೇ ನಮಗೆ ನಿರ್ಬಂಧ ಹಾಕಿದೆ. ನಾವು 320 ಟಿಎಂಸಿಎಫ್‌ಟಿ ಅಡಿಗಿಂತ ಹೆಚ್ಚು ಬಳಸಬಾರದು ಎಂದು; I would like to know whether the Government would question the Batchawat in the same way as it would question the Cauvery Tribunal, that it has no business to say this. ಏಕೆಂದರೆ ಇದು ಮಾಡದೇ ಇದ್ದರೆ ನಮ್ಮ ಪಾಲು 130 ಟಿಎಂಸಿ ಎಫ್.ಟಿ. ಅಡಿ ಏನು ಬಳಸಬಾರದು ಎಂದು ಬಚಾವತ್ ಅವಾರ್ಡ್ ಹೇಳಿದೆ ಅದನ್ನು ಬಳಸದೇ ಇದ್ದರೆ ಅಪ್ಪರ್ ತುಂಗಾನೂ ಮಾಡುವುದಕ್ಕಾಗುವುದಿಲ್ಲ, ಅಪ್ಪರ್ ಭದ್ರಾನೂ ಮಾಡುವುದಕ್ಕಾಗುವುದಿಲ್ಲ. ಈ ಎರಡರ ಬಗ್ಗೆ ತಮ್ಮ ಸ್ಪಷ್ಟ ನಿಲುವು ಬೇಕು.

ಶ್ರೀ ಎಂ.ಕೆ. ಪಟ್ಟಣಶೆಟ್ಟಿ:– ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯ ಪ್ರಮುಖ ಯೋಜನೆಯಾದ ಮುಳವಾಡ ಏತ ನೀರಾವರಿ ಯೋಜನೆ ಬಗ್ಗೆ ಸಾಕಷ್ಟು ಧರಣಿ, ಸತ್ಯಾಗ್ರಹಗಳು ಆದರೂ ಕೂಡಾ ಸರ್ಕಾರ ಇನ್ನೂ ಸಾಕಷ್ಟು ಲಕ್ಷ್ಯವನ್ನು ಈ ಬಗ್ಗೆ ವಹಿಸಿಲ್ಲ. ಮಾನ್ಯ ನೀರಾವರಿ ಸಚಿವರು ಇದರ ಬಗ್ಗೆ ಲಕ್ಷ್ಯ ಕೊಡುತ್ತಾರೆಂದು ಆಸೆ ಮಾಡುತ್ತೇನೆ, ಮತ್ತು ಕೃಷ್ಣ ಎಡದಂಡೆ ಕಾಲುವೆ ಬಗ್ಗೆ ನೀರಾವರಿ ಸಚಿವರು ಏನೂ ಹೇಳಿಲ್ಲ. ಅದರ ಬಗ್ಗೆ ನೀರಾವರಿ ಸಚಿವರು ತಮ್ಮ ಅಭಿಪ್ರಾಯ ಏನು ಎಂಬುದನ್ನು ಹೇಳುತ್ತಾರೆಂದು ನಾನು ಆಸೆ ಪಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, 1993–94ನೇ ಸಾಲಿನಿಂದ 2000ನೇ ವರ್ಷದವರೆಗೆ ಕೃಷ್ಣ ಜಲಾನಯನ ಪ್ರದೇಶದ ಕೆಲಸ ಪೂರ್ತಿ ಮಾಡುವುದಕ್ಕೆ ಎಷ್ಟೆಷ್ಟು ಕೋಟಿ ಪ್ರತಿ

ವರ್ಷ ಬೇಕೆಂದು ಹೇಳಿದ್ದಾರೆ. ಲೆಕ್ಕ ಹಾಕುವುದು ಬಹಳ ಸುಲಭ. ತಾವೇ ಸಚಿವರಾದ ಮೇಲೆ 3 ತಿಂಗಳಲ್ಲಿ 1992-93ರ ಸಾಲಿನಲ್ಲಿ ಖರ್ಚು ಮಾಡಿರುವುದು 170 ಕೋಟಿ ರೂಪಾಯಿ ಮಾತ್ರ. ಕೊನೇ ಪಕ್ಷ ತಾವು 1993-94ನೇ ಸಾಲಿನಲ್ಲಿ. 418 ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ಯೋಚನೆ ಮಾಡಿದ್ದೀರಿ. ಆದರೆ ತಮ್ಮ ಬಡ್ಜೆಟ್‌ನಲ್ಲಿ ಅಷ್ಟು ಹಣವನ್ನು ಇಟ್ಟಿಲ್ಲ. ತಾವು 418 ಕೋಟಿ ರೂಪಾಯಿಗಳನ್ನು ನಿಮ್ಮ ಕಾಲದಲ್ಲಿ ಈ ಮುಂದೆ ಬರುವ ವರ್ಷದಲ್ಲಿ ಖರ್ಚು ಮಾಡುತ್ತೇನೆಂದು ಭರವಸೆ ಕೊಡುತ್ತೀರಾ ? ಅಪ್ಪರ್ ತುಂಗಾ ಬಗ್ಗೆ ಅಡಿಗಲ್ಲು ಸಮಾರಂಭ ಆಗಿದೆ. ಆದರೆ ಅದಕ್ಕೆ ಹಣವನ್ನು ಇಟ್ಟಿಲ್ಲ. ತಮ್ಮಲ್ಲಿ ವಿನಂತಿ ಮಾಡುತ್ತೇನೆ; ದಯಮಾಡಿ ಆ ಭಾಗದ ಜನರು ಅದು ಆಗೇ ಆಗುತ್ತದೆನ್ನುವ ನಂಬಿಕೆ ಇಟ್ಟುಕೊಂಡಿರುವ ಸಂದರ್ಭದಲ್ಲಿ ಬಡ್ಜೆಟ್‌ನಲ್ಲಿ ಅದಕ್ಕೆ ಹಣವನ್ನು ತೆಗೆದಿಡಬೇಕು.

ನಾನು ಶಿಕಾರಿಪುರಕ್ಕೆ ಸೇರಿದವನಾದ್ದರಿಂದ ನಾನೇ ಪ್ರಸ್ತಾಪ ಮಾಡಿದೆ. ಶ್ರೀ ರಂಗನಾಥ್ ಅವರೂ ಇದ್ದರು. ಹಿಂದೆ ಸರ್ವೇ ಆಗಿತ್ತು. ನನ್ನ ತಾಲ್ಲೂಕಿಗೂ ನೀರಿನ ಅನುಕೂಲ ಆಗುತ್ತದೆ. ನಾನು ಮಂಡ್ಯ ಜಿಲ್ಲೆಯವನೇ. ನಿಮ್ಮ ಜಿಲ್ಲೆಯವನೇ. ಆ ಕರುಣೆ ಇಟ್ಟು ಶಿಕಾರಿಪುರ ತಾಲ್ಲೂಕಿನ ಬಗ್ಗೆ ತಾವು ರೀಸರ್ವೇ ಮಾಡಿಸಿ ಅದನ್ನು ಬಜೆಟ್‌ನಲ್ಲಿ ಸೇರಿಸುತ್ತೀರಾ ? ನೀರು ಬರುತ್ತದೆನ್ನುವುದಾದರೆ ಸೇರಿಸಿಕೊಡುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಕೃಷ್ಣ ಕಣಿವೆ ವಿಚಾರದ ಬಗ್ಗೆ ಅಪೆಕ್ಸ್ ಬಾಡಿ ಮಾಡುತ್ತೇವೆಂದು ಹೇಳಿದಿರಿ. ಈಗ ಕಾವೇರಿಗೂ ಅಪೆಕ್ಸ್ ಬಾಡಿ ಇದೆ. ಕೇವಲ "ಸಂತೆ ಹೊತ್ತಿಗೆ ಮೂರು ಮೊಳ ನೇಯ್ದರು" ಎನ್ನುವ ಹಾಗೆ ಕೋರ್ಟ್‌ನಲ್ಲಿ ಕೇಸ್ ಬಂತು ಎಂದಾಗ ಸಭೆ ಕರೆಯುತ್ತಾರೆಯೇ ಹೊರತು ಇನ್ನೇನಿಲ್ಲ. ಕಾವೇರಿ ಅಪೆಕ್ಸ್ ಬಾಡಿಯಲ್ಲಿ ನಾನು ಸಹ ಇದ್ದೇನೆ. ಸುಪ್ರೀಮ್ ಕೋರ್ಟ್ ತೀರ್ಪು ಬಂದಾಗ ಹಾಗೂ ಕಾವೇರಿ ಟ್ರಿಬ್ಯುನಲ್ ಆರ್ಡರ್ ಬಂದಾಗ ಸಭೆ ಕರೆದಿದ್ದರೇ ಹೊರತು ಮಿಕ್ಕ ಸಮಯದಲ್ಲಿ ಸಭೆ ನಡೆಯುವುದೇ ಇಲ್ಲ. ಇವತ್ತು ರಿಸೋರ್ಸಸ್ ಬಗ್ಗೆ ಯಾವ ರೀತಿ ಮೊಬಲೈಸ್ ಮಾಡಬೇಕೆಂದು ಹೇಳುವ ಬಗ್ಗೆ ಪಕ್ಷಾತೀತವಾಗಿ ಚರ್ಚೆ ಮಾಡಿದ್ದೇವೆ. ಇವತ್ತು ಅಪೆಕ್ಸ್ ಬಾಡಿಗೆ ಅಜೆಂಡಾ ಇಲ್ಲ. ಇವತ್ತು ಕೃಷ್ಣಕ್ಕೆ ಅಪೆಕ್ಸ್ ಬಾಡಿ ಮಾಡಿದ್ದಕ್ಕೆ ಸ್ವಾಗತ ಮಾಡುತ್ತೇನೆ. ಈ ಎರಡೂ ಅಪೆಕ್ಸ್ ಬಾಡಿಗಳು ಪ್ರತಿ ತಿಂಗಳು ಅಥವಾ 2 ತಿಂಗಳಿಗೆ ಒಂದು ಸಾರಿ ರಿಸೋರ್ಸಸ್ ಯಾವ ರೀತಿ ಮೊಬಲೈಸ್ ಮಾಡಬೇಕು, ಹೇಗೆ ಖರ್ಚು ಮಾಡಬೇಕೆನ್ನುವ ಬಗ್ಗೆ ಈ ಸದನದ ಹೊರಗೆ ಚರ್ಚೆ ಮಾಡುವುದಕ್ಕೆ ಅಪೆಕ್ಸ್ ಬಾಡಿ ಮೀಟಿಂಗ್‌ನ್ನು ರೆಗ್ಯುಲರ್ ಆಗಿ ತಾವು ಕರೆಯುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, ಈ ಸದನದ ನಿಯಮಾವಳಿ 68ರಲ್ಲಿ ಈ ವಿಷಯವನ್ನು ಎತ್ತಿ ಸರ್ಕಾರದಿಂದ ಏನಾದರೂ ಬಾಯ್ಬಿಡಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಪ್ರಯತ್ನ ಮಾಡಿದೆ. ಆಗಲಿಲ್ಲ. ಸನ್ಮಾನ್ಯ ಮಂತ್ರಿಗಳು ಇವತ್ತು ಉತ್ತರವನ್ನು ಕೊಟ್ಟಿರುವುದು ಸಾಮಾನ್ಯ ಸ್ಥಿತಿಯಲ್ಲಿ ಅಂದರೆ ನಾರ್ಮಲ್ courseನಲ್ಲಿ ಏನು ಉತ್ತರ ಬರುತ್ತಾ ಇತ್ತೋ ಅದಕ್ಕಿಂತಲೂ ವಿಶೇಷವಾದ ಉತ್ತರವೇನೂ ನನಗೆ ಕಾಣಲಿಲ್ಲ.

ಕೃಷ್ಣ ಮತ್ತು ಕಾವೇರಿ ನೀರನ್ನು ಉಪಯೋಗಿಸಿಕೊಳ್ಳುವ ವಿಷಯದಲ್ಲಿ ವಿಶೇಷವಾದ ಪರಿಸ್ಥಿತಿ ಇದೆ. ಆತಂಕ ಉಂಟಾಗಿದೆ, ಗಂಭೀರವಾದ ಪರಿಸ್ಥಿತಿ ಇದೆ. ಈವೊಂದು ಆತಂಕದ ವಾತಾವರಣದಲ್ಲಿ ಅದನ್ನು ನಿವಾರಣೆ ಮಾಡಲಿಕ್ಕೆ ವಿಶೇಷವಾದ ಪರಿಸ್ಥಿತಿಯನ್ನು ನಿವಾರಣೆ ಮಾಡಲಿಕ್ಕೆ ಸರ್ಕಾರ ತೆಗೆದುಕೊಂಡಿರುವಂತಹ ವಿಶೇಷ ಕಾರ್ಯಕ್ರಮಗಳು ಏನೆಂದು ನಾನು ಅನನ್ಯದಿಂದ ಈ ಸರ್ಕಾರವನ್ನು ಕೇಳಿಕೊಳ್ಳುತ್ತಾ ಇದ್ದೇನೆ. I have been asking the Government repeatedly what are

the special arrangements made for providing funds and implementation of the works. ಇವತ್ತು ಕೂಡ ಸರ್ಕಾರದಿಂದ ಯಾವುದೇ ವಿಶೇಷವಾದ ಕಾರ್ಯಕ್ರಮ ಇದರಲ್ಲಿ ಬರಲಿಲ್ಲ. ಅದಕ್ಕಾಗಿ ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ನಾವು ವಿಶೇಷವಾಗಿ ಅವರ ಗಮನ ಸೆಳೆದಾಗ ಮಾತ್ರ ವಿಶೇಷವಾದ ಕಾರ್ಯಕ್ರಮ ಹೇಳುತ್ತಾರೋ ಏನೋ ಎಂದು ಕಾಣುತ್ತದೆ. Again I press ಈಗಾಗಲೇ ನನ್ನ ಸ್ನೇಹಿತರಾದ ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿದ್ದಾರೆ, ಅವರು ಹೇಳಿದ್ದಕ್ಕೆ ನಾನು ಸಹ ಧ್ವನಿಗೂಡಿಸುತ್ತೇನೆ. ಕಾವೇರಿ ನೀರಿನ ಹಕ್ಕನ್ನು ನಾವು ರಕ್ಷಣೆ ಮಾಡಿಕೊಳ್ಳುವ ಮತ್ತು ಉಪಯೋಗಿಸಿಕೊಳ್ಳುವ ವಿಷಯದಲ್ಲಿ ಕೃಷ್ಣಾ ಕೊಳ್ಳದ ನೀರನ್ನು ಉಪಯೋಗಿಸಿಕೊಳ್ಳುವ ಕಾರ್ಯಕ್ರಮಗಳ ಬಗ್ಗೆ ದಯಮಾಡಿ ತಾವು ತಿಳಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಂದು ವಿಷಯವನ್ನು ಮಾನ್ಯ ಚಂದ್ರೇಗೌಡರು ಪ್ರಸ್ತಾಪ ಮಾಡಿದ್ದಾರೆ. ನೀವು ರಾಜ್ಯಪಾಲರ ಭಾಷಣದ ಮುಖಾಂತರ ಮಾತುಕತೆಗೆ ಸಂಪೂರ್ಣವಾದ ತೆರೆಯನ್ನು ಎಳೆದಿದ್ದರೆ ಬಹುಶಃ ನೀವು ಸೆಪ್ಟೆಂಬರ್ 30, 1988ರಲ್ಲಿ ಈ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದ ಮುಂದೆ ಏನಾಗಿದೆ ಎಂದು ತೆಗೆಸಿ ನೋಡಿದರೆ ಗೊತ್ತಾಗುತ್ತದೆ. ಆವತ್ತಿನಿಂದ ಇವತ್ತಿನವರೆಗೆ ಸತತವಾಗಿ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ನೀವು ಈ ವಿಷಯವನ್ನು ಮಾತುಕತೆಗಳ ಮುಖಾಂತರ ತೀರ್ಮಾನ ಮಾಡಿ ಎಂದು ಹೇಳಿದಾಗ ಈ ಕೇಸು ನಾಲ್ಕಾರು ಸಲ ಮುಂದುವರಿಯಿತು.

There was a repeated request from the Supreme Court to the concerned party to have the negotiation settled. It seems on 30th September 1988, they gave an ultimatum to the Central Government whether you are going to settle the matter or not? If you are not going to settle the matter, we are not going to adjourn the case. ಆದ್ದರಿಂದ ನೆಗೋಸಿಯೇಷನ್ ಅಥವಾ ಮಾತುಕತೆಯ ಬಾಗಿಲನ್ನು ಈ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ಮುಚ್ಚಿಬಿಟ್ಟಿದೆ. ಸಾಕಷ್ಟು ಕಾಲಾವಕಾಶವನ್ನು ಕೊಟ್ಟಿದೆ. ನೀವು ಮಾತುಕತೆಯ ಮುಖಾಂತರ ಮುಗಿಸಿಕೊಳ್ಳಿಯೆಂದು ಅದು ಸಾಧ್ಯವಾಗದಿದ್ದರೆ ಅಂತಹ ಸಂದರ್ಭದಲ್ಲಿ ಸುಪ್ರೀಂಕೋರ್ಟ್‌ನವರು ಹೇಳಿದರು We have no other alternative except for the appointment of the Tribunal ಎನ್ನುವಂಥ ತೀರ್ಮಾನವನ್ನು ಇವತ್ತು ತೆಗೆದುಕೊಂಡಿದ್ದಾರೆ. ನನ್ನ ಪ್ರಕಾರ ಅದು ಸರಿಯೋ ಅಥವಾ ತಪ್ಪೋ ಗೊತ್ತಿಲ್ಲ. ಮಾತುಕತೆಯ ಸಂದರ್ಭ ಮುಗಿದಿದೆ. ಬಹುಶಃ ಕೊಳ್ಳದ ರೈತರ ಹಿತವನ್ನು ಕಾಪಾಡಲಿಕ್ಕೆ ನಿಮಗೆ ಉಳಿದಿರುವುದು ಒಂದೇ ದಾರಿ ಎಂದರೆ Legal as well as political battle. ರಾಜಕೀಯವಾಗಿ ಕೂಡ ಇದೆ. ರಾಜಕೀಯವಾಗಿ ಪರಿಹಾರವನ್ನು ಮಾಡಲಿಕ್ಕೆ ನಮ್ಮ ಪ್ರಧಾನಮಂತ್ರಿಗಳು ಮನಸ್ಸು ಮಾಡಿದರೆ ಸಾಧ್ಯವಿದೆ. ನನಗೆ ಪ್ರಾಮುಖ್ಯವಾಗಿ ಎರಡು ವಿಷಯಗಳಲ್ಲಿ ತಾವು ತೆಗೆದುಕೊಂಡಿರುವ ವಿಶೇಷವಾದ ಕಾರ್ಯಕ್ರಮಗಳು ಏನು ಎಂದು ತಿಳಿಸಬೇಕು. ಮತ್ತೊಂದು ಈ ಆಯವ್ಯಯಕ್ಕೆ ಅಪಚಾರ ಮಾಡುವಂತಹ ಮತ್ತು ಅಭಿವೃದ್ಧಿಗೊಳಿಸಲಿಕ್ಕೆ ಅಡ್ಡಿ ಬರುವಂತಹ ಎಲ್‌ಓಸಿ ಎನ್ನುವ ಕೆಟ್ಟ ಪದ್ಧತಿಯನ್ನು 1980ರ ದಶಕದಲ್ಲಿ ಮೊದಲು ಜಾರಿಗೆ ತಂದರು. ಅದನ್ನು 1990ರ ದಶಕದಲ್ಲಿ ದಯಮಾಡಿ ಕೈಬಿಡುತ್ತೀರಾ ? 1980ರ ದಶಕದಲ್ಲಿ ಏತಕ್ಕೆ ಶುರುವಾಯಿತು ಎನ್ನುವುದು ಗೊತ್ತಿದೆ. ಸ್ವಲ್ಪಮಟ್ಟಿಗೆ ಅದು ತಮಗೂ ಗೊತ್ತಾಗುತ್ತದೆ. ಸ್ವಲ್ಪ ದಿವಸಗಳಲ್ಲಿ ಅದನ್ನು ಏತಕ್ಕೆ ಇಟ್ಟುಕೊಂಡಿದ್ದಾರೆಂದು ತಮ್ಮ ಗಮನಕ್ಕೆ ಬರುತ್ತದೆ. 80ರ ದಶಕದಲ್ಲಿ ಏತಕ್ಕೆ ಶುರುವಾಯಿತೆಂದು ನನಗೆ ಸ್ವಲ್ಪ ಗೊತ್ತು. ಅದೊಂದು ಕೆಟ್ಟ ಪದ್ಧತಿ ಶುರುವಾಗಿದೆ, ದಯಮಾಡಿ ಅದನ್ನು 90ರ ದಶಕದಲ್ಲಿ ಕೈ ಬಿಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಲಿ ಬೃಹತ್ ನೀರಾವರಿ ಯೋಜನೆಯಲ್ಲಿ ಆಗಿರುವಂಥ ಕೆಲಸಗಳಿಗೆ ಕೊಡಬೇಕಾದ ಬಾಕಿ ಹಣ ಎಷ್ಟು ? ನಮಗೆ ಯಾವುದು

ಬೇಕೋ ಅದಕ್ಕೆ ಉತ್ತರ ಸಿಗದಿದ್ದರೆ ಪ್ರಯೋಜನವಾಗುವುದಿಲ್ಲ. ಈಗ ಬೃಹತ್ ನೀರಾವರಿ ಯೋಜನೆಯಲ್ಲಿ ಆಗಿರುವಂಥ ಕೆಲಸಗಳಿಗೆ ಕೊಡಬೇಕಾಗಿರುವ ಬಾಕಿ ಹಣ ಎಷ್ಟು ? ಬಾಕಿ ಹಣವನ್ನು ದಯಮಾಡಿ ಮಾರ್ಚಿ ಕೊನೆಯೊಳಗೆ ಸರ್ಕಾರ ಬಿಡುಗಡೆ ಮಾಡುತ್ತದೆಯೇ ? ಮತ್ತೊಂದು ವಿಚಾರ ಬಹಳ ಪ್ರಾಮುಖ್ಯವಾದುದು. ಮಾನ್ಯ ಬೈರೇಗೌಡರು ಕೇಳಿದರು; ನಾನು ಕೂಡ ಮಾತನಾಡುವಾಗ ಕೇಳಿದ್ದೇನೆ. ಏನೆಂದರೆ ನಮ್ಮ ಡ್ಯಾಂಗಳಲ್ಲಿ ಶೇಖರಣೆ ಆಗಿರುವ ನೀರನ್ನು ಉಪಯೋಗಿಸಲು ಏನೇನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎಂದು; ಈ ಬಗ್ಗೆ ನಾವೆಲ್ಲ ಒತ್ತಾಯಪೂರ್ವಕವಾಗಿ ಸರ್ಕಾರದಲ್ಲಿ ಕೇಳಿಕೊಂಡಿದ್ದೇವೆ. ಈಗ ಸೃಷ್ಟಿಯಾಗಿರುವಂತಹ ಸಾಮರ್ಥ್ಯದಲ್ಲಿ 12 ಲಕ್ಷದ 44 ಸಾವಿರದ 856ಎಕರೆಗೆ ಆಗುವಷ್ಟು ನೀರು ನಮ್ಮ ಡ್ಯಾಮ್‌ಗಳಲ್ಲಿದೆ. ನಾರಾಯಣಪುರ ಅಣೆಕಟ್ಟಿನಲ್ಲಿದೆ, ಹೇಮಾವತಿ ಅಣೆಕಟ್ಟಿನಲ್ಲಿದೆ, ಕಬಿನಿ ಅಣೆಕಟ್ಟಿನಲ್ಲಿದೆ, ಹಾರಂಗಿ ಅಣೆಕಟ್ಟಿನಲ್ಲಿದೆ, ಘಟಪ್ರಭ ಅಣೆಕಟ್ಟಿನಲ್ಲಿದೆ. ಆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲಿಕ್ಕೆ ನೀವು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರೆಂದು ನಾನು ಒತ್ತಿ ಕೇಳಿದ್ದೇನೆ ಸ್ವಾಮಿ, ಅಡಿಗೆ ಮಾಡಿ ಇಟ್ಟಿದ್ದೀರಿ, ಘಮಘಮ ಎಂದು ವಾಸನೆ ಬರುತ್ತಾ ಇದೆ.

ಅದನ್ನು ತಂದು ಬಡಿಸುವ ವ್ಯವಸ್ಥೆ ಮಾಡಿ ಎಂದು ನಾನು ಕೇಳಿದ್ದೇನೆ. ಅದರ ಬಗ್ಗೆ ಏನೂ ಉತ್ತರ ಬಂದಿಲ್ಲ. ಕೊನೆಯದಾಗಿ ನನ್ನ ಪ್ರಾರ್ಥನೆ ಏನೆಂದರೆ, ಈ ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಇಂಜಿನಿಯರುಗಳು ಭ್ರಷ್ಟರೋ, ಅದಕ್ಷರೋ, ಅಯೋಗ್ಯರೋ ಎಂಬ ಚರ್ಚೆಗೆ ನಾನು ಬರುವುದಿಲ್ಲ. ಆದರೆ ಕೆಲವು ಸಂದರ್ಭದಲ್ಲಿ ಅತ್ಯಂತ ಕಠಿಣವಾದ ಪರಿಸ್ಥಿತಿಯಲ್ಲಿ ಅವರು ಪ್ರಾಣವನ್ನು ಒತ್ತೆಯಿಟ್ಟು ಕೆಲಸ ಮಾಡುತ್ತಾರೆ. ಎಲ್ಲರೂ ಭ್ರಷ್ಟರು ಇಲ್ಲದೇ ಇರಬಹುದು, ಅಥವಾ ಇದ್ದರೂ ಇರಬಹುದು. ಬಾಗೂರು ನವಿಲೆಯಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ತಮ್ಮ ಪ್ರಾಣವನ್ನು ಒತ್ತೆ ಇಟ್ಟು ಕೆಲಸ ಮಾಡುತ್ತಾರೆ. ಸ್ವಾಮಿ,-ಯಾರ್‍ಯಾರಿಗೋ ಪ್ರಶಸ್ತಿ ಕೊಡುತ್ತೀರಿ. ಇಂತಹ ಇಂಜಿನಿಯರುಗಳಿಗೂ ಪ್ರಶಸ್ತಿ ಕೊಡುವ ಕಾರ್ಯಕ್ರಮವನ್ನು ಸರ್ಕಾರದಿಂದ ಹಾಕಿಕೊಳ್ಳುತ್ತೀರಾ ? ಜೊತೆಗೆ ಕೃಷ್ಣಾ ಮೇಲ್ದಂಡೆ ಯೋಜನೆಗೆ ಇಂಜಿನಿಯರುಗಳು ಯಾರೂ ಹೋಗುವುದಿಲ್ಲವಾದ ಕಾರಣ ಸರ್ಕಾರ ಸ್ವಲ್ಪ ಇವರಿಗೆ ಯಾವುದಾದರೂ ಇನ್‌ಸೆಂಟೀವ್ ಕೊಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಬಹುದು. ಈ ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳುತ್ತೀರಾ ? ಒಂದು, ಯಾರು ತಮ್ಮ ಪ್ರಾಣ ಒತ್ತೆಯಿಟ್ಟು ಈ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಕೆಲಸ ಮಾಡುತ್ತಾರೆ, ಅಂತಹವರಿಗೆ ಏನಾದರೂ ಪ್ರಶಸ್ತಿ ಕೊಡುವ ಕಾರ್ಯಕ್ರಮವನ್ನು ಮುಂದಿನ ವರ್ಷದಿಂದಾದರೂ ಇಟ್ಟುಕೊಳ್ಳುತ್ತೀರಾ ? ಎರಡನೇಯದು, ಈ ಯೋಜನೆಯಲ್ಲಿ ಕೆಲಸ ಮಾಡುವವರಿಗೆ ಇನ್ಸೆಂಟಿವ್ ಕೊಡುವಂಥ ದಯೆ ತೋರುತ್ತೀರಾ ? ಇಷ್ಟು ನಾನು ತಮ್ಮನ್ನು ಕೇಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ:— ಮಾನ್ಯ ಅಧ್ಯಕ್ಷರೇ, ನಾನು ಚರ್ಚೆಯನ್ನು ಆರಂಭ ಮಾಡಿದ ಕಾಲದಲ್ಲಿ ಅನೇಕ ಆಕ್ಷೇಪ ಅಥವಾ ಸೂಚನೆಗಳನ್ನು ಕೊಟ್ಟಿದ್ದೆ. ಅವೆಲ್ಲದಕ್ಕೂ ನಾನು ಉತ್ತರ ಬಯಸುವುದಿಲ್ಲ. ಬಹಳ ಪ್ರಾಮುಖ್ಯವಾಗಿ, ಮೊದಲಿನಿಂದಲೂ ಅಪಾಯಕಾರಿ ಪ್ರವೃತ್ತಿ ಬಂದಿದೆ. ಯಾವ ಪ್ರಾಧಿಕಾರಗಳಿಗೆ ಏನು ಅಧಿಕಾರ ಇದೆ, ಆ ಅಧಿಕಾರವನ್ನು ಹೊಣೆಗಾರಿಕೆಯಿಂದ ನಿರ್ವಹಿಸಬೇಕೆಂದು ಇದ್ದರೂ ಸಹ, ಆ ಹೊಣೆಗಾರಿಕೆಯಿಂದ ವಿಮುಕ್ತವಾಗುವುದಕ್ಕೆ ಒಂದು ಹೊಸ ದಾರಿಯನ್ನು ತಾವು ಕಂಡುಕೊಂಡಿದ್ದೀರಿ, ನಿಮ್ಮ ಇಲಾಖೆಯವರು ಕಂಡುಕೊಂಡಿದ್ದಾರೆ ಎಂಬ ಮಾತನ್ನು ಹೇಳಿದ್ದೆ. ಈ ಬೋರ್ಡನ್ನು ನೇಮಕ ಮಾಡುವುದರಿಂದ ಮತ್ತೆ ಟೆಕ್ನಿಕಲ್ ಕಮಿಟಿಗಳನ್ನು ನೇಮಕ ಮಾಡುವುದರಿಂದ ಮತ್ತು ನಮ್ಮಲ್ಲಿ ಇರುವ ಕಾನೂನನ್ನು ಚಲಾವಣೆ ಮಾಡದೆ ಕೋಟ್ಯಂತರ ರೂಪಾಯಿಗಳನ್ನು

ಕಂಟ್ರಾಕ್ಟರ್ಸ್‌ಗೆ ಕೊಟ್ಟಿದ್ದೀರಿ. ಇಂತಹ ಅಪಾಯಕಾರಿ ಪ್ರವೃತ್ತಿಯನ್ನು ನಿಲ್ಲಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ?

ಕೋಟ್ಯಂತರ ರೂಪಾಯಿಗಳನ್ನು ವಿವೇಚನಾರಹಿತವಾದ ರೀತಿಯಲ್ಲಿ, ತಾಂತ್ರಿಕ ಸಮಿತಿಗಳನ್ನು ನೇಮಕ ಮಾಡಿ, ಅವುಗಳ ಶಿಫಾರಸ್ಸುಗಳನ್ನು ತಮಗೆ ಬೇಕಾದ ಹಾಗೆ ಬರೆಸಿಕೊಂಡು ಕಾನೂನಿಗೆ ವಿರುದ್ಧವಾಗಿ ಪಾವತಿ ಮಾಡಿದ್ದೀರಿ. ಇದರ ಬಗ್ಗೆ ಸರ್ಕಾರದ ನಿಲುವು ಏನು ? ಇಂತಹ ಒಂದು ಅಪಾಯಕಾರಿ ಪ್ರವೃತ್ತಿಯನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ನಿಮ್ಮ ಅನುಮತಿ ಇದೆಯೇ ಅಥವಾ ಇದನ್ನು ನಿಲ್ಲಿಸುತ್ತೇವೆ ಮತ್ತು ಹಿಂದೆ ಏನಾಗಿದೆ, ಅದನ್ನು ನಾನು ಹೇಳುತ್ತೇನೆ, ಹತ್ತಾರು ಕೋಟಿ ಅಲ್ಲ, ನೂರಾರು ಕೋಟಿ ರೂಪಾಯಿಗಳನ್ನು ಪಾವತಿ ಮಾಡುವುದು ಮೊದಲಿನಿಂದಲೂ ಅಂದರೆ ಕಳೆದ ದಶಕದಿಂದ ನಡೆಯುತ್ತಿದೆ. ಇದರ ಬಗ್ಗೆ ತಾವು ನಿರ್ದಿಷ್ಟವಾಗಿ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಸಭೆಯ ಮುಂದಿಡಬೇಕು ಮತ್ತು ಇದರ ಬಗ್ಗೆ ಸರ್ಕಾರದ ಕ್ರಮ ಏನು ಎಂದು ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ.

ಡಾ. ಎ.ಬಿ. ಮಲಕರೆಡ್ಡಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಗಳು ನಾನು ಎತ್ತಿದ ಕೆಲವು ವಿಚಾರಗಳ ಬಗ್ಗೆ ಉತ್ತರಕೊಟ್ಟರು. ಆದರೆ ಸರ್ಕಾರ ಒದಗಿಸಿದ ಪುಸ್ತಕದ ಪುಟ 15ರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಹಣ ಇಟ್ಟಿದ್ದು 155 ಕೋಟಿ 10 ಲಕ್ಷ, ಖರ್ಚಾದದ್ದು 76 ಕೋಟಿ 25 ಲಕ್ಷ. ಇದು ಡಿಸೆಂಬರ್ ಅಂತ್ಯದವರೆಗೆ ಎನ್ನುವ ಮಾತನ್ನು ಹೇಳಿದ್ದಾರೆ. ಡಿಸೆಂಬರ್‌ನಿಂದ ಈವರೆಗೆ ತಾವು ಸುಮಾರು 35 ಕೋಟಿ ರೂಪಾಯಿಗಳನ್ನು ಹೇಗೆ ಖರ್ಚು ಮಾಡಿದಿರಿ ? ಇದರಿಂದ ಎರಡು ರೀತಿಯ ಅನಾಹುತಗಳು ಆಗುತ್ತವೆ. ಒಂದನೆಯದು ತಿಂಗಳು ತಿಂಗಳು ಎಲ್‌ಒಸಿ ಇಶ್ಯೂ ಮಾಡುವುದಿಲ್ಲ. ನವೆಂಬರ್, ಡಿಸೆಂಬರ್, ಜನವರಿ, ಫೆಬ್ರವರಿಯಲ್ಲಿ ಎಲ್.ಒ.ಸಿ. ಇಶ್ಯೂ ಆಗಿದ್ದಿಲ್ಲ. ತಿಂಗಳು ತಿಂಗಳು ಎಲ್‌ಒಸಿ ಕೊಡತಕ್ಕಂಥ ಪದ್ಧತಿ ಇಟ್ಟುಕೊಳ್ಳದಿರುವುದರಿಂದ ಏನಾಗುತ್ತದೆ ಎಂದರೆ ಅವರು ಕೆಲಸ ಬಂದ್ ಮಾಡುತ್ತಾರೆ. ಬಿಲ್ ಸಬ್‌ಮಿಟ್ ಮಾಡಿದ ಮೇಲೂ ಹಣ ಪಾವತಿಯಾಗದಿದ್ದರೆ ಅವನು ಮುಂದಿನ ಕೆಲಸ ಮಾಡುವುದಿಲ್ಲ. ನಾಲ್ಕು ತಿಂಗಳು ಕೆಲಸ ಸಫರ್ ಆಗುತ್ತದೆ. ನಾಲ್ಕು ತಿಂಗಳಾದ ಮೇಲೆ ನೀವು ರಿಲೀಸ್ ಮಾಡಿದ್ದೀರಿ. ನಿಮ್ಮ ಹಣ ಖರ್ಚಾಗುತ್ತದೆ ಆದರೆ ಫಿಸಿಕಲ್ ಪ್ರೋಗ್ರೆಸ್ ಹಿಂದಾಗುತ್ತದೆ. ಇದು ಒಂದನೆಯದು. ಎರಡನೆಯದು Irrigation Potential ಬಗ್ಗೆ ಇದು ಬೇರೆ ಮತ್ತು actual water given Irrigation Potential to the ryots, ಇದು ಎರಡೂ ಬೇರೆ. ಇದು ಏನಾಗಿದೆ ಎಂದರೆ ನಾವು ಡ್ಯಾಮ್ ಕಟ್ಟುತ್ತೇವೆ, ಕೆನಲ್ ಮಾಡುತ್ತೇವೆ. ಆಮೇಲೆ ಪ್ಯಾಟರ್ನ್ ತಯಾರಾಗುವುದಿಲ್ಲ, ಆಮೇಲೆ field channel ತಯಾರಾಗುವುದಿಲ್ಲ. ಈಗ ತಯಾರಾಯಿತು ಎಂಬ ಕಾರಣಕ್ಕೆ ನೀರು ಬಿಡುವುದಕ್ಕೆ ಆಗುವುದಿಲ್ಲ. ಅಲ್ಲಿ, contour bunding ಬೇಕಾಗುತ್ತದೆ. Soil conservation work ಆಗಬೇಕಾಗುತ್ತದೆ. ನಮ್ಮ ಕರ್ನಾಟಕದ ರೈತರಿಗೆ ಅದರ ಅನುಭವ ಇಲ್ಲ.

ಹೀಗಾಗಿ, Water actually released is hardly to the tune of 80,000 acres. ಅದಕ್ಕಿಂತ ಹೆಚ್ಚಿಗೆ ಇಲ್ಲ. ದಯಮಾಡಿ ರೈತರಿಗೆ ಕೊಡತಕ್ಕ ವ್ಯವಸ್ಥೆ ಮಟ್ಟಿಗೆ ನೀವು ಸರಿಯಾಗಿ ಕೆಲಸ ಮಾಡಬೇಕಾಗುತ್ತದೆ. ಇದು ಮಾಡಲಿಲ್ಲವೆಂದರೆ, ಬಹಳಷ್ಟು ವೇಸ್ಟೇಜ್ ಆಗುತ್ತದೆ. ಕೃಷಿ ಉತ್ಪಾದನೆ ಕಡಿಮೆಯಾಗುತ್ತದೆ, ನಾವು ಖರ್ಚು ಮಾಡಿದ್ದು ಸಾವಿರಾರು ಕೋಟಿ ಆಗುತ್ತದೆ, ಆದರೆ ಉತ್ಪಾದನೆ ಅದರ ಮಟ್ಟಿಗೆ ಆಗುವುದಿಲ್ಲ. ಮೂರನೆಯದು, ಅಂದರೆ ಕಂಟ್ರಾಕ್ಟರ್ಸ್ ಬಗ್ಗೆ ಹೇಳಿದರು. ವರ್ಲ್ಡ್ ಬ್ಯಾಂಕ್ ಷರತ್ತಿನ ಪ್ರಕಾರ, ಗ್ಲೋಬಲ್ ಟೆಂಡರ್ ಆಗಬೇಕು, ಇದನ್ನು ಯಾವ ರೀತಿ ತಡೆಯಬೇಕೋ ಆ ರೀತಿ ತಡೆಯುವುದಕ್ಕಾಗುವುದಿಲ್ಲ. ಇದರಿಂದ, ನಾವೂ ಕೂಡ ಕಳ್ಳರ ಜೊತೆ ಸಹವಾಸ ಮಾಡುತ್ತಿದ್ದೇವೆಂದು ಗೊತ್ತಾಯಿತು. ಇದರಿಂದ, ನಾವು ಎಷ್ಟು ಜಾಗ್ರತೆಯಿಂದ ಇರಬೇಕೋ ಅಷ್ಟು

ಜಾಗ್ರತೆಯಿಂದ ಇರಬೇಕು. 1978 ನೇ ಇಸವಿಯಿಂದ ಹಿಡಿದು 1993 ನೇ ಇಸವಿಯುವರೆಗೆ, ಈ ಜಾಗ್ರತೆ ಕಂಡುಬಂದಿಲ್ಲ. There is a definite irrefutable nexus between the local Engineers and Andhra Pradesh Contractors. ದಯಮಾಡಿ ನಾನು ಪ್ರಾರ್ಥನೆ ಮಾಡುತ್ತಿದ್ದೇನೆ, ತೆಲಗು ಮಾತನಾಡುವ, ತಮಿಳು ಮಾತನಾಡುವ ಇಂಜಿನಿಯರ್ಸ್‌ನ್ನು ಅಲ್ಲಿಗೆ ಪೋಸ್ಟ್ ಮಾಡಬೇಡಿ. This is my sincere request to you, to the Government. ಕಂಟ್ರಾಕ್ಟರ್ಸ್ ಮತ್ತು ಇಂಜಿನಿಯರ್ಸ್ ಶಾಮೀಲಾಗಿ, ಬಡರೈತರನ್ನು ಎತ್ತಿಕಟ್ಟಿ, ನಿಮ್ಮ ಲ್ಯಾಂಡ್ ಅಕ್ವಿಸಿಷನ್ ಏನು ಆಗುತ್ತಿದೆ, ಅದಕ್ಕೆ ಸರ್ಕಾರದಿಂದ ಕೊಡತಕ್ಕ ಹಣ ಕಡಿಮೆ ಇದೆ ಎಂದು ಹೇಳಿ, ತಮ್ಮ ಜೇಬಿನಿಂದಲೇ ಹಣ ಕೊಟ್ಟು, ಕೋರ್ಟಿನಲ್ಲಿ ಕೇಸುಗಳನ್ನು ಹಾಕಿಸಿ ನೂರಾರು ಕೋಟಿ ರೂಪಾಯಿಗಳನ್ನು ಸರ್ಕಾರದಿಂದಲೂ ಖರ್ಚು ಮಾಡಿಸಿದ್ದಾರೆ. ಇದರಿಂದ ನಮ್ಮ ಹಣವೂ ಹೋಯಿತು, ಮತ್ತು ಪ್ರಾಜೆಕ್ಟೂ ಡಿಲೇ ಆಯಿತು. ಈ ಪ್ರಾಜೆಕ್ಟ್ ಡಿಲೇ ಆಗುವುದರ ಜೊತೆಗೆ, ಇನ್ನೊಂದು ಅನಾಹುತವಾಗುತ್ತಿದೆ, ಏನೆಂದರೆ, ಎಸ್ಕಲೇಷನ್ ಕಾಸ್ಟ್ ಹೆಚ್ಚಾಗಿದೆ ಎಂದು, ಈ ಹಣವನ್ನು ಸೇರಿಸಿ ಕೊಡಿ ಎಂದು, ಮತ್ತೆ ಅವರು ಆರ್ಬಿಟ್ರೇಷನ್‌ಗೆ ಹಾಕಿದರು. ಇದರಿಂದ ಆರ್ಬಿಟ್ರೇಷನ್ ಹಣವೂ ಹಾಳು, ಮತ್ತು ಎಸ್ಕಲೇಷನ್ ಹಣವೂ ಹಾಳು.

ಮತ್ತು ಪ್ರೊಗ್ರೆಸ್ ಏನೂ ಆಗುತ್ತಾ ಇಲ್ಲ. ಆದ್ದರಿಂದ, ದಯಮಾಡಿ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು, ಈ ರೆವಿನ್ಯೂ ಡಿಪಾರ್ಟ್‌ಮೆಂಟ್ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ಸ್ ಏನಿದ್ದಾರೆ, ಇವರು ಮಹಾದ್ರೋಹಿಗಳು ಮತ್ತು Chief Engineers, cross check it, cross check it and then post the Chief Engineers. ಮೂರನೆಯದು ಏತ ನೀರಾವರಿ ಬಗ್ಗೆ, ಸಕಾರಣಗಳನ್ನು ಕೊಟ್ಟು ಸಮರ್ಥನೆ ಮಾಡಿದ್ದೇನೆ. ಮೈನರ್ ಇರಿಗೇಷನ್ ಮಂತ್ರಿಗಳು ಸೌಜನ್ಯದಿಂದ ಹೇಳಿದರು. ಇದರಲ್ಲಿ ಸ್ವಲ್ಪ ಕನ್‌ಫ್ಯೂಷನ್ ಇದೆ, ಇದು ಸುಧಾರಿಸುವ ಕೆಲಸವಲ್ಲ. ಮಾನ್ಯ ಉಪಮುಖ್ಯಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ, ಅವರ ಜೊತೆ ಸಮಾಲೋಚನೆ ಮಾಡಿ, ಉತ್ತರವನ್ನು ಕೊಡಿಸುತ್ತೇನೆ ಎಂದು ಹೇಳಿದರು. ಇದನ್ನು ದಯಮಾಡಿ ಮತ್ತೊಮ್ಮೆ ಪರಿಶೀಲನೆ ಮಾಡಿ. ಇದನ್ನು ವೈಂಡ್ ಅಪ್ ಮಾಡಬೇಡಿ. ಈ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನಲ್ಲಿ ಈಗಾಗಲೇ ನಬಾರ್ಡ್‌ನಿಂದ 8 ಕೋಟಿ ರೂಪಾಯಿಗಳವರೆಗೆ ಕಮಿಟ್‌ಮೆಂಟ್ ಮಾಡಿಕೊಂಡಿದ್ದಾರೆ. ಈ 8 ಕೋಟಿ ಎಂದರೆ ಸಾಮಾನ್ಯವಾದ ಮಾತಲ್ಲ. ಇದರ ಮುಖಾಂತರ ಅನೇಕ ಸಣ್ಣ ಸಣ್ಣ ಯೋಜನೆಗಳು ಸಿದ್ಧವಾಗುತ್ತವೆ. ಮತ್ತು ಸಿದ್ಧ ಮಾಡತಕ್ಕಂಥ ಹಂತದಲ್ಲಿದೆ. ಹಾಗೂ ಇವುಗಳನ್ನು ಕಟ್ಟಿಕೊಂಡ ಹಾಗೆಯೂ ಆಗುತ್ತದೆ. ಪ್ರತಿಯೊಂದನ್ನೂ ಸರ್ಕಾರದ ಕಡೆಯಿಂದ ಮಾಡುವುದಕ್ಕಾಗುವುದಿಲ್ಲ. ಮಾಡತಕ್ಕಂಥ ಕೆಲಸಗಳಲ್ಲಿ ನಮ್ಮ ಮಿತ್ರರು ಹೇಳಿದ ಹಾಗೆ, ಹೂಳು ತೆಗೆಯುವುದಕ್ಕೂ ಸಾವಿರಾರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ ಇನ್ನೂರು ಕೆರೆಗಳಿವೆ. ಅವುಗಳಿಗೆ 20 ಪರ್ಸೆಂಟ್ ಲೈಫ್ ಕೂಡ ಇಲ್ಲ. ಒಂದು ಸಾರಿ ಮಳೆ ಬಂದರೆ, ಹೂಳು ತುಂಬಿ ಹೋಗುತ್ತದೆ. ಉಳಿದ ನೀರು ವೇಸ್ಟ್ ಆಗುತ್ತದೆ. ಇದರ ಉದ್ದೇಶವೇನೆಂದರೆ, ಸ್ಥಳೀಯವಾಗಿ, ಸ್ವಯಂ ಅಧಿಕಾರ ಸಂಸ್ಥೆಗಳನ್ನು ನಿರ್ಮಾಣ ಮಾಡಿದರೆ ಈ ಸಂಸ್ಥೆಗಳ ಮುಖಾಂತರ ಜನಗಳಿಗೆ ಅನುಕೂಲವಾಗುತ್ತದೆ. ಏತ ನೀರಾವರಿಯನ್ನು ಸರ್ಕಾರ ಅಬಾಲಿಷ್ ಮಾಡಿದ ಮೇಲೆ, ಕೃಷಿಕರಿಗೆ ಪ್ರೋತ್ಸಾಹ ಕೊಟ್ಟು, ಕೋ ಆಪರೇಟಿವ್ ಸೊಸೈಟಿಗಳನ್ನು ಮಾಡಿ, ಈ ಕೋ ಆಪರೇಟಿವ್ ಸೊಸೈಟಿಗಳು ಎಲ್ಲಿಯವರೆಗೆ ಕೆಲಸ ಮಾಡುತ್ತವೆಯೋ ಗೊತ್ತಿಲ್ಲ; ಇಲ್ಲಿ ಮತ್ತೆ ಸರ್ಕಾರದ ಜಾಲ, ಇದಕ್ಕೆ ಅಸಿಸ್ಟೆಂಟ್ ರಿಜಿಸ್ಟ್ರಾರ್, ಅವರು, ಇವರೂ ಬರುತ್ತಾರೆ. ಇದರಿಂದ ಕೃಷಿಕರಿಗೆ ಅಷ್ಟು ಅನುಕೂಲತೆಗಳು ಇಲ್ಲ. ಯಾರೋ ಒಬ್ಬ ಧೂರ್ತ ಕೋ–ಆಪರೇಟಿವ್ ಸೊಸೈಟಿಗಳನ್ನು ಲೂಟಿ ಮಾಡಿ, ಬೋಗಸ್ ಹೆಸರುಗಳನ್ನು ನಿರ್ಮಾಣ ಮಾಡಿ, ಸರ್ಕಾರದಿಂದ ಬರತಕ್ಕ ಮತ್ತು

ನಬಾರ್ಡ್‌ನಿಂದ ಬರತಕ್ಕ ಹಣವನ್ನು ದೋಚಿ, ಹಣವನ್ನು ಲೂಟಿ ಮಾಡುತ್ತಾರೆಯೋ ಹೊರತು, ಈ ಏತ ನೀರಾವರಿ ಕೆಲಸಗಳು ಮಾತ್ರ ಆಗುವುದಿಲ್ಲ. ಇದು ಪ್ರಮುಖವಾದ ಸ್ಕೀಮು. ಅದಕ್ಕಾಗಿ, ದಯಮಾಡಿ ಇದನ್ನು ಕೈಬಿಡಬೇಡಿ ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಡಾ: ಎನ್.ಬಿ. ನಂಜಪ್ಪ:- ಮಾನ್ಯ ಅಧ್ಯಕ್ಷರೇ, ನಾನಾಗಲೇ ಹೇಳಿದಂತೆ, ಮಂತ್ರಿಗಳು ನಮ್ಮ ಬಾಗೂರು ನವಿಲೆ ಟನಲ್‌ಗೆ ವಿಸಿಟ್ ಮಾಡಿದ ಸಮಯದಲ್ಲಿ, ಖುದ್ದಾಗಿ ಎಲ್ಲವನ್ನೂ ನೋಡಿದ್ದಾರೆ. ಸುಮಾರು 10 ಕಿಲೋಮೀಟರ್ ದೂರ, 240 ಅಡಿ ಆಳದಲ್ಲಿ ಹಾಕಿರತಕ್ಕ ಟನಲ್‌ನಿಂದ,25 ಗ್ರಾಮಗಳಿಗೆ ಬಹಳಷ್ಟು ತೊಂದರೆಯಾಗಿದೆ. ಇತ್ತೀಚೆಗೆ ಅವರಿಗೆ ಕುಡಿಯುವ ನೀರೂ ಸಿಕ್ಕುತ್ತಾ ಇಲ್ಲ. ಮಳೆ ಬಹಳ ಚೆನ್ನಾಗಿ ಆಗಿದೆ, ಸುತ್ತಮುತ್ತಲ ಹಳ್ಳಿಗಳಲ್ಲಿ ಕೆರೆಕಟ್ಟೆಗಳು ತುಂಬಿತ್ತು. ಆದರೆ, ಇವತ್ತು ಆ ಕೆರೆಗಳಲ್ಲಿ ಒಂದು ಡ್ರಾಪ್ ನೀರಿಲ್ಲ, because of seapage. ಏಕೆಂದರೆ ಆದ್ಯತೆಯನ್ನು ಕೊಟ್ಟು ಈ 2 ಲಿಫ್ಟ್ ಇರಿಗೇಶನ್ ಜೊತೆಗೆ ಇನ್ನೂ ಎರಡು ಲಿಫ್ಟ್ ಇರಿಗೇಶನ್ ಕೇಳಿದ್ದೇವೆ. ಇದರಿಂದ 5 ಸಾವಿರ ಎಕರೆ ಜಮೀನಿಗೆ ನೀರನ್ನು ಒದಗಿಸಿದಂತಾಗುತ್ತದೆ. ಈ ನೀರನ್ನು ನಾವು ಟನಲ್‌ನಿಂದ ಕೇಳಿಲ್ಲ.ಈ ಎರಡು ಲಿಫ್ಟ್ ಇರಿಗೇಶನ್ ಅನ್ನು. ಏನು ನೀರು ಸೀಪೇಜ್ ಆಗಿ ಹಳ್ಳದಲ್ಲಿ ಬಿದ್ದು ಹರಿದು ಹೋಗುತ್ತದೆ, ಆ ನೀರಿಗೆ ಎರಡು ಲಿಫ್ಟ್ ಇರಿಗೇಶನ್ ಮಾಡಿಕೊಡಬೇಕೆಂದು ಕೇಳುತ್ತೇನೆ. ಇದರ ಬಗ್ಗೆ ಗಮನಹರಿಸಬೇಕು. ಮೊನ್ನೆ ನಾನು ಸಾಯಿಲ್ ಕನ್‌ಸರ್ವೇಟರ್ ಮತ್ತು ಜಿಯಾಲಿಜಿಸ್ಟ್ ಜೊತೆ ಮಾತನಾಡಿದೆ. ಆ ಸಂದರ್ಭದಲ್ಲಿ 240 ಅಡಿ ಆಳದಲ್ಲಿ ಟನಲ್ ಹೋಗಿರುವುದರಿಂದ ನೀರು ಸೋರಿಕೆಯಾಗಿ ಭೂಮಿ ಕೂಡ ಒಳಗೆ ಡ್ರೈ ಆಗಿ ಕ್ರಾಕ್ಸ್ ಡೆವಲಪ್ ಆಗಿ ಯಾವ ಕ್ರಾಪ್ಸ್ ಕೂಡ ಇನ್ನು ಮುಂದೆ ಬೆಳೆಯಲು ಆಗದೆ ತೊಂದರೆ ಆಗಿದೆ ಎಂದು ಅವರು ಹೇಳಿದರು. ಇಂತಹ ಸನ್ನಿವೇಶ ಇರುವಾಗ on the other side of the tunnel at least 3 to 4 kms ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಅದು ಇಂಜನೀಯರ್ಸ್‌ಗೆ ಗೊತ್ತಿದೆ. ನಾವು ಇದರ ಬಗ್ಗೆ ಎಷ್ಟೇ ಕ್ರಾಪ್ ಕಾಂಪೆನ್ಸೇಷನ್ ಕೇಳಿಕೊಂಡರೂ ಕೂಡ ಮಾನ್ಯ ಮಂತ್ರಿಗಳು ಇಲ್ಲಿಯವರೆಗೂ ಗಮನಹರಿಸಿಲ್ಲ. ಇದರ ಜೊತೆಗೆ ಈಗ ಪುನರ್ವಸತಿ ಮಾಡಬೇಕಾದಂಥ 12 ಹಳ್ಳಿಗಳು ಇವೆ. ಆ 12 ಹಳ್ಳಿಗಳಲ್ಲಿ ಕೇವಲ 60 ಮನೆಗಳು ಇರತಕ್ಕಂಥ ಒಂದನ್ನು ಮಾತ್ರ ಮಾಡಿದ್ದಾರೆ. ಇನ್ನುಳಿದ ಯಾವುದಕ್ಕೂ ಪುನರ್ವಸತಿ ಮೊದಲಿನಿಂದಲೂ ಕಲ್ಪಿಸಿಲ್ಲ. ಇದಕ್ಕಾಗಿ ಸಾಕಷ್ಟು ಹಣವನ್ನು ಕೊಟ್ಟಿದ್ದೇವೆ ಅದನ್ನು ಮಾಡಿದ್ದೇವೆ ಎನ್ನುವ ಮಾತನ್ನು ಈಗಾಗಲೇ ಅವರು ಹೇಳಿದ್ದಾರೆ. ಇದರ ಕಡೆಗೆ ಸ್ವಲ್ಪ ಗಮನಹರಿಸಬೇಕು ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇನ್ನು ಈ ವಾಟರ್ ಮ್ಯಾನೇಜ್‌ಮೆಂಟಿಗಾಗಿ ನಾಳೆ ಶನಿವಾರದ ದಿವಸ ಒಂದು ಕೋ‌ಆಪರೇಟಿವ್ ಸೊಸೈಟಿ ಮಾಡುತ್ತಿದ್ದಾರೆ. ಇದನ್ನು ಒಳ್ಳೆಯ ಉದ್ದೇಶದಿಂದ ಮಾಡುತ್ತಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ವಾಟರ್ ಮ್ಯಾನೇಜ್‌ಮೆಂಟ್ ಮಾಡಿದರೆ ಅಲ್ಲಿರತಕ್ಕಂಥ ಜನಗಳ ಕೈಗೆ ಬರುವುದರಿಂದ ಕನ್‌ಜರ್‌ವೇಶನ್ ಆಫ್ ವಾಟರ್ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದರ ಉದ್ಘಾಟನೆಯನ್ನು ಶನಿವಾರ ಪ್ರಪ್ರಥಮವಾಗಿ ನನ್ನ ತಾಲ್ಲೂಕಿನಲ್ಲಿ ಕೋ ಆಪರೇಟಿವ್ ಸೊಸೈಟಿ ಫಾರ್ ವಾಟರ್ ಮ್ಯಾನೇಜ್‌ಮೆಂಟ್‌ನ್ನು ನಾವು ಮಾಡುತ್ತಿದ್ದೇವೆ. ಸಾಕಷ್ಟು ಏರಿಯಾದಲ್ಲಿ ಕಾಡ ಮತ್ತು ಇರಿಗೇಶನ್ ಈ ಎರಡೂ ಡಿಪಾರ್ಟ್‌ಮೆಂಟ್‌ಗಳ ಸಹಾಯದಿಂದ ಆಗುತ್ತಿದೆ. ಈ ಕೆಲಸವನ್ನು ನನ್ನ ತಾಲ್ಲೂಕಿನಲ್ಲಿ ಮಾಡಿಕೊಡಬೇಕು. ಇನ್ನು ನೂರೆಂಟು ವರ್ಷಗಳಷ್ಟು ಹಳೆಯ ಶ್ರೀರಾಮದೇವರ ನಾಲೆ ಸುಮಾರು 68 ಕಿಲೋಮೀಟರ್ ದೂರದ ಕಾಲುವೆ ಇದು ಹೊಳೆನರಸೀಪುರ ಚನ್ನರಾಯಪಟ್ಟಣ ಮತ್ತು ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕುಗಳಿಗೆ ಪೆರೇನಿಯಲ್ ವಾಟರ್ ಸಪ್ಲೈ ಇರತಕ್ಕಂಥ ಕೆನಾಲ್, ನಾನು ಸರ್ಕಾರವನ್ನು ಅಪ್ರೋಚ್ ಮಾಡಿದ ಮೇಲೆ ಇದನ್ನು ಮೈನರ್ ಇರಿಗೇಶನ್‌ನಿಂದ ಹೇಚ್.ಎಲ್.ಬಿ.ಸಿ.ಗೆ

ಕಮ್ಯಾಂಡ್ ಏರಿಯಾಗೆ ಸೇರಿಸಿದ್ದಾರೆ. ಅಲ್ಲಿ ಸ್ವಲ್ಪ ನೀರನ್ನು ಬಿಟ್ಟರೂ ಸಾಕು ಕಾಲುವೆ ಒಡೆದು ರೈತರು ಬೆಳೆ ಬೆಳೆಯುವುದಕ್ಕಾಗುವುದಿಲ್ಲ. ಆದ್ದರಿಂದ ಈ ಕಾಲುವೆಯನ್ನು ಆದಷ್ಟು ಬೇಗ ಮಾಡ್ರನೈಜೇಶನ್ ಆಫ್ ವಿಶ್ವೇಶ್ವರಯ್ಯ ನಾಲೆ ಆ ರೀತಿಯಲ್ಲಿ ರಿಸರ್ವೇಶನ್ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಕಾವೇರಿ ನ್ಯಾಯಮಂಡಲಿಯನ್ನು ಬಹಿಷ್ಕರಿಸುವ ಬಗ್ಗೆ ಮಂಡ್ಯಾದಲ್ಲಿ ಪ್ರಮುಖವಾದ ಎರಡು ನಿರ್ಣಯಗಳು ಆದವು. ಆ ಎರಡು ನಿರ್ಣಯಗಳ ಜೊತೆಗೆ ಈ ಸದನದಲ್ಲಿ ಸರ್ವಾನುಮತದಿಂದ ಮಧ್ಯಂತರ ಆದೇಶವನ್ನು ತಿರಸ್ಕರಿಸಬೇಕು ಅದಕ್ಕೆ ನಾವು ಯಾವುದೇ ಬೆಲೆ ಕೊಡಬಾರದು ಮತ್ತು ಮುಂದೆ ನಾವು ನ್ಯಾಯಮಂಡಲಿ ಮಾಡಿರತಕ್ಕಂಥದ್ದರ ಬಗ್ಗೆ ಚಿಂತನೆ ಮಾಡಬೇಕು ಎನ್ನುವ ನಿರ್ಣಯವಾಗಿದೆ. ಈ ಮಂಡ್ಯ ಸಭೆಗೆ ಎರಡೂ ಸಭೆಗಳಿಗೆ ಈ ಸದನದ ಅಧ್ಯಕ್ಷರಾಗಿಯೇ ಕರ್ನಾಟಕ ರಾಜ್ಯದ ಹಿತವನ್ನು ಬಯಸತಕ್ಕಂಥ ದೃಷ್ಟಿಯಿಂದ ಈಗ ನೀರಾವರಿ ಸಚಿವರಾಗಿರತಕ್ಕಂಥ ಶ್ರೀಮಾನ್ ಕೃಷ್ಣಾರವರು ಭಾಗವಹಿಸಿದ್ದರು. ಆ ನಿರ್ಣಯಗಳು ಏನು ? ಸಂಪೂರ್ಣವಾಗಿ ನ್ಯಾಯ ಮಂಡಲಿಯನ್ನು ಬಹಿಷ್ಕರಿಸಬೇಕು, ಇದನ್ನು ಸ್ಪಷ್ಟವಾಗಿ ನೇರವಾಗಿ ಒಂದೇ ಮಾತಿನಲ್ಲಿ ಮಾನ್ಯ ಅಧ್ಯಕ್ಷರಾಗಿದ್ದವರು ಈಗ ನೀರಾವರಿ ಸಚಿವರಾದ ಕೃಷ್ಣಾರವರು ಆ ಎರಡು ಸಭೆಗಳಲ್ಲಿ ಭಾಗವಹಿಸಿದ್ದಾರೆ. ಆ ಎರಡು ಸಭೆಗಳ ನಿರ್ಣಯಕ್ಕೆ ತಾವು ಇವತ್ತೂ ಬದ್ಧರಾ ? ಇವತ್ತು ನೀವು ಆ ನಿರ್ಣಯಕ್ಕೆ ಬದ್ಧರಾಗಿ ನಾವು ನ್ಯಾಯ ಮಂಡಲಿಯನ್ನು ಬಹಿಷ್ಕರಿಸುತ್ತೇವೆ ಎನ್ನುವುದಕ್ಕೆ ತಾವು ಬದ್ಧರಾಗಿದ್ದೀರಾ; ಇದು ಒಂದು. ಎರಡನೆಯದು ಮೈಸೂರು ಜಿಲ್ಲೆಯಲ್ಲಿ ಕಬಿನಿ ಎರಡನೇ ಹಂತದ ಬಗ್ಗೆ ತಮಗೆ ಹೇಳಿದ್ದೆ. ಅದರ ಬಗ್ಗೆ ತಮ್ಮ ಉತ್ತರದಲ್ಲಿ ತಾವು ಏನೂ ತಿಳಿಸಲಿಲ್ಲ. ಏಕೋ ನಿಮಗೆ ನಮ್ಮ ಮೇಲೆ ಕೋಪವೋ, ಏನೋ ಗೊತ್ತಿಲ್ಲ. ಆದರೂ ಚಿಂತೆ ಇಲ್ಲ. ನಿಮ್ಮ ಇಷ್ಟ ಬಂದಂತೆ ಮಾಡಿಕೊಳ್ಳಿ ಅಥವಾ ಏನಾದರೂ ತಿಳಿಸುತ್ತೀರಾ ? ಕಾವೇರಿ ಬಗ್ಗೆ ತಮ್ಮ ಸ್ಪಷ್ಟವಾದ ನಿಲುವು ಹೇಳಿ. ನ್ಯಾಯ ಮಂಡಲಿಯನ್ನು ಬಹಿಷ್ಕರಿಸುತ್ತೀರಾ ? ಅಥವಾ ನ್ಯಾಯಮಂಡಲಿ ಮುಂದೆ ಕೈ ಮುಗಿದುಕೊಂಡು ಹೋಗುತ್ತೀರಾ ? ಮತ್ತು ನ್ಯಾಯ ಮಂಡಲಿ ತೀರ್ಪು ಮತ್ತು ನೇಮಕ ಅದು ಕೂಡ ಒಂದು ಇದೆ. ಇನ್ನೂ ನಮಗೆ ಅದರಿಂದ ನ್ಯಾಯ ದೊರಕುತ್ತದೆ ಎಂಬ ನಂಬಿಕೆ ತಮಗೆ ಇದೆಯೇ ? ಅದನ್ನು ತಾವು ತಿಳಿಸಬೇಕು.

ಶ್ರೀ ಬಿ. ಹಂಪನಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಯವರು ಕಾವೇರಿ ಮತ್ತು ಕೃಷ್ಣ ಜಲಾನಯನ ಪ್ರದೇಶದ ಬಗ್ಗೆ ಈ ಒಂದು ಸದನದಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು. ತುಂಗಭದ್ರ ಜಲಾಶಯದ ಎಡದಂಡೆ ಸಮಾನಾಂತರ ಕಾಲುವೆ ಬಗ್ಗೆ ಬಹಳಷ್ಟು ಸಮಸ್ಯೆಗಳಿವೆ. ಈ ವರ್ಷ ಬಜೆಟ್‌ನಲ್ಲಿ ಅದಕ್ಕೆ 4 ಕೋಟಿ ರೂ.ಗಳ ಅಂದಾಜು ತಯಾರು ಮಾಡಿ 542 ಚೈನ್ ಒಳಮೈ ದುರಸ್ತಿ ಕೆಲಸ ತೆಗೆದುಕೊಳ್ಳಬೇಕೆಂದು ನಿರ್ಣಯವನ್ನು ಕೂಡಾ ನಾವು ಮಾಡಿದ್ದೇವೆ. ಆದರೆ 6ನೇ ತಾರೀಖು ಒಂದು ಸಭೆ ಸೇರಿ ಹಿಂದಿನ ನಿರ್ಣಯವನ್ನು ಬದಲಿ ಮಾಡಿ ಈ ವರ್ಷ ಒಳಮೈ ದುರಸ್ತಿ ಕೆಲಸ ತೆಗೆದುಕೊಳ್ಳಬಾರದು ಎಂಬ ತೀರ್ಮಾನ ಮಾಡಿರುವುದರಿಂದ ಮುಂದೆ ಅನಾಹುತವಾಗುತ್ತದೆ. ಮುಂದಿನ ವರ್ಷ ಏನು ಬೆಳೆ ಹಾಕುತ್ತಾರೆ ಆ ಸಮಯದಲ್ಲಿ ಕಾಲುವೆ ಒಡೆಯುವ ಸಂಭವ ಹೆಚ್ಚಾಗಿರುವುದರಿಂದ ಅಧಿಕಾರಿಗಳು ಈಗಾಗಲೇ 10 ಕೋಟಿ ರೂಪಾಯಿ ಈ ಒಳಮೈ ದುರಸ್ತಿಗಾಗಿ ಖರ್ಚು ಬರಬಹುದು ಎಂದು ವರದಿಯನ್ನು ತಮಗೆ ಕೊಟ್ಟಿದ್ದಾರೆ. ಈ ಕೆಲಸವನ್ನು ಇದೇ ವರ್ಷ ಪ್ರಾರಂಭ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಹೆಚ್.ವೈ. ಮೇಟಿ:- ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ದಿವಸ ಆಲಮಟ್ಟಿ ಅಣೆಕಟ್ಟು ಕೆಲಸ

ಏಕೆ ವಿಳಂಬವಾಗುತ್ತಿದೆ ಎಂದು ಪ್ರಶ್ನೆ ಕೇಳಿದ್ದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ. ಎರಡನೆಯದಾಗಿ ಹಣದ ಬಗ್ಗೆ ಕೇಂದ್ರ ಸರ್ಕಾರದ ಒಪ್ಪಿಗೆ ಇಲ್ಲವೆಂದರೂ ಆಂಧ್ರದವರು ಕಟ್ಟಿದ ಹಾಗೆ ತಾವೂ ಕಟ್ಟುತ್ತೀರಾ ಎಂದು ಕೇಳಿದ್ದೆ. ಅದರ ಬಗ್ಗೆಯೂ ಅವರು ಹೇಳಲಿಲ್ಲ. ನಂತರ ಮುಳವಾಡ ಏತ ನೀರಾವರಿ ಬಗ್ಗೆ ಎಷ್ಟು ಹಣ ಒದಗಿಸಿದ್ದೀರಿ ಎಂದು ಹೇಳಬೇಕು. ಆಮೇಲೆ ಪುನರ್ ವಸತಿ ಕೇಂದ್ರದಲ್ಲಿ 1 – 2 – 3 – 4 ಅಂತ ಕ್ಯಾಟಗರಿ ಏನು ಮಾಡಿದ್ದೀರಿ ಅದರಲ್ಲಿ ವಿಶ್ವಬ್ಯಾಂಕ್ ಪ್ರಕಾರ ಎಷ್ಟು ಜನರಿಗೆ ಅದರ ಬೆನಿಫಿಟ್ ಸಿಗುತ್ತದೆಂದು ಹೇಳಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೃಷ್ಣಾ ಯೋಜನೆಯನ್ನು ಯಾವ ರೀತಿ ಕಾರ್ಯರೂಪದಲ್ಲಿ 2 ಸಾವಿರದ ಇಸವಿಯೊಳಗೆ ತರತಕ್ಕಂಥ ಯೋಜನೆಯನ್ನು ಈ ಸಭೆಯ ಮುಂದೆ ಇಟ್ಟರು. ಇದು ಬಹಳ ಉತ್ತಮವಾದಂಥ ಯೋಜನೆ ಇದೆ. ಸರ್ಕಾರ ಇದನ್ನು ಕಾರ್ಯರೂಪಕ್ಕೆ ತರಲಿಕ್ಕೆ ಯಾವುದೇ ಕಮಿಟ್‌ಮೆಂಟ್ ಇಲ್ಲವೆಂದು ಕಾಣುವುದರಿಂದ ದಯವಿಟ್ಟು ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ಇದು ಕಾರ್ಯರೂಪಕ್ಕೆ ಬರಬೇಕಾದರೆ ಸರ್ಕಾರ ಒಪ್ಪಬೇಕು, ಈ ಸದನ ಸಂಪೂರ್ಣವಾಗಿ ಬೆಂಬಲ ಕೊಡಬೇಕು. 2 ಸಾವಿರ ಇಸವಿಯೊಳಗೆ ಏನು ಹಣ ಖರ್ಚು ಮಾಡಬೇಕೆಂದು ನಿಗದಿ ಮಾಡಿದ್ದೀರಿ ಆ ಬಗ್ಗೆ ಸದನದ ಸಂಪೂರ್ಣ ಬೆಂಬಲವನ್ನು ಹಾಗೂ ನೆರವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸಚಿವರಿಗೆ ವಿನಯಪೂರ್ವಕವಾಗಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಒಂದು ಕಡೆ ಕೃಷ್ಣ ಬಚಾವತ್ ಅವಾರ್ಡ್, ಇನ್ನೊಂದು ಕಡೆ ಕಾವೇರಿ ಟ್ರಿಬ್ಯುನಲ್ ಇಂಥಾ ಪರಿಸ್ಥಿತಿಯಲ್ಲಿ ಹೆಚ್ಚಿನ ಹಣವನ್ನು ಒದಗಿಸಿ ಸಂಪೂರ್ಣ ನೀರನ್ನು ಬಳಕೆ ಮಾಡಿಕೊಳ್ಳುವುದು ಮಾತ್ರ ನಮ್ಮ ಕೆಲಸ ಆಗಬೇಕಾಗಿದೆಯೇ ವಿನಃ ಉಳಿದ ವಿಚಾರಗಳು ನಂತರ ಉದ್ಭವಿಸುತ್ತವೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಎರಡನೆಯದಾಗಿ, ತಾವು ಒಂದು ನಿರ್ಣಯವನ್ನು ತಂದು, ತಾವು ಏನು ಯೋಜನೆ ಹಾಕಿಕೊಂಡಿದ್ದೀರಿ ಅದಕ್ಕೆ ಹಣವನ್ನು ಒದಗಿಸಲಿಕ್ಕೆ ಈ ಸಭೆ ಬದ್ಧವಾಗಿದೆ, ಮತ್ತು ಸರ್ವಾನುಮತದ ಒಪ್ಪಿಗೆ ಇದೆಯೆಂದು ಒಪ್ಪಿಗೆ ಪಡೆದುಕೊಳ್ಳಿ. ಆಮೇಲೆ ಅಪ್ಪರ್ ತುಂಗಾ ಬಗ್ಗೆ ನಾನು ಅನೇಕ ಸಾರಿ ಪ್ರಸ್ತಾಪ ಮಾಡಿದ್ದೇನೆ. ಅದನ್ನು ಯಾವಾಗ ಕೇಂದ್ರದಿಂದ ಮಂಜೂರು ಮಾಡಿಸುತ್ತೀರಿ ? 50 ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿ 5 ಕೋಟಿ ಕೊಟ್ಟಿದ್ದೀರಿ. ಇದರ ಬಗ್ಗೆ ಆಶಾದಾಯಕವಾದ ವಿಚಾರ ಏನಾದರೂ ಸರ್ಕಾರದಲ್ಲಿ ಇದೆಯೇ ? ಇದನ್ನು ಯಾವ ರೀತಿ ಕಾರ್ಯರೂಪದಲ್ಲಿ ತರುತ್ತೀರಿ ಎಂದು ತಾವು ಹೇಳಬೇಕು. ಆದಷ್ಟು ಬೇಗ ಕೇಂದ್ರದಿಂದ ಇದಕ್ಕೆ ಮಂಜೂರಾತಿ ಮಾಡಿಸಿಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಆಮೇಲೆ ಕಾವೇರಿ ಬೇಸಿನ್‌ನಲ್ಲಿ ಇಂಜಿನೀಯರ್‌ಗಳನ್ನು ನೇಮಕ ಮಾಡಿಕೊಂಡು ಯಾವ ರೀತಿ ಖಾಯಂ ಮಾಡಿದ್ದೀರೋ ಅದೇ ರೀತಿ ಕೃಷ್ಣಾ ಬೇಸಿನ್‌ನಲ್ಲಿ ನೇಮಕ ಮಾಡಿಕೊಂಡಿರುವ ಇಂಜಿನೀಯರ್‌ಗಳನ್ನು ಖಾಯಂ ಮಾಡಿಲ್ಲ. ದಯವಿಟ್ಟು ಈ ತಾರತಮ್ಯವನ್ನು ಸರಿಪಡಿಸಬೇಕು. ಕೃಷ್ಣ ಬೇಸಿನ್‌ನಲ್ಲಿ ನೇಮಕ ಮಾಡಿಕೊಂಡಿರುವ ಇಂಜಿನೀಯರ್‌ಗಳನ್ನು ಸಹ ಖಾಯಂ ಮಾಡಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ:– ಮಾನ್ಯ ಅಧ್ಯಕ್ಷರೆ, ಹೇಮಾವತಿ ಡ್ಯಾಮ್ ಆಗಿ ಸುಮಾರು 25 ವರ್ಷಗಳ ಮೇಲಾಯಿತು. ಮುಳುಗಡೆಯಾಗಿರತಕ್ಕಂಥ ಪ್ರದೇಶದ ಹತ್ತಿರ ಇರುವ ಹಳ್ಳಿಗಳು ಮಳೆಗಾಲದಲ್ಲಿ ನೀರಿನಲ್ಲಿ ಆವರಿಸಿಕೊಳ್ಳುತ್ತವೆ. ಕೆಲವು ಮನೆಗಳು ನೀರಿನಲ್ಲಿ ಆವರಿಸಿಕೊಂಡಿರುತ್ತವೆ. ಸುಮಾರು ನಾಲ್ಕೈದು ಹಳ್ಳಿಗಳು ಈ ತರಹ ಆಗಿವೆ. ಈ ಹಳ್ಳಿಯ ಜನರು ಕಳೆದ ಹತ್ತಾರು ವರ್ಷಗಳಿಂದ ಪುನರ್ವಸತಿ ಕಲ್ಪಿಸಬೇಕೆಂದು ಚಳುವಳಿ ಮಾಡುತ್ತಿದ್ದಾರೆ. ಆದರೆ ಇನ್ನೂ ಕೂಡ ಆಗಿಲ್ಲ. ಆ ಹಳ್ಳಿಗಳು ಯಾವುವೆಂದರೆ, ಕಲ್ಲಹಳ್ಳಿ, ನಾಯಕರಹಳ್ಳಿ ಕೊಪ್ಪಲು, ಗೋರೂರಿನ ನಾಲೆಯ ಕೆಳ ಅರ್ಧ ಭಾಗ, ಮುಟ್ನಹಳ್ಳಿ ಕೊಪ್ಪಲು, ಈ ಹಳ್ಳಿಗಳನ್ನು ತಕ್ಷಣ ರಿಹ್ಯಾಬಿಲಿಟೇಷನ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇನ್ನೊಂದು ತ್ಯಾಟನೂರು ಎನ್ನುವ ಗ್ರಾಮದಲ್ಲಿ ಮಳೆಗಾಲ ಬಂತು ಎಂದರೆ ಆ

ಊರಿನಲ್ಲಿ 6 – 7 ತಿಂಗಳು ಒಂದೂ ಒಂದೂವರೆ ಅಡಿ ಕೆಸರು ಇರುತ್ತದೆ. ಅಲ್ಲಿ ಜನರು ವಾಸ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಊರನ್ನು ಶಿಫ್ಟ್ ಮಾಡಬೇಕೆಂದು 9 ವರ್ಷಗಳ ಹಿಂದೆ ಅವಾರ್ಡ್ ಆಗಿದೆ.

3 ವರ್ಷದಿಂದ ನಾನು ಸತತವಾಗಿ ಪ್ರಯತ್ನ ಮಾಡುತ್ತಿದ್ದೇನೆ, ಇನ್ನೂ ಆ ಅವಾರ್ಡ್‌ನಂತೆ ದುಡ್ಡು ಏಕೆ ಕೊಟ್ಟಿಲ್ಲ ? ಏಕೆ ಕೊಡಲಿಲ್ಲವೆಂದು ಕೇಳುತ್ತಿದ್ದೇನೆ. ಅದರ ಬಗ್ಗೆ ಈ ಸದನದಲ್ಲಿ ಕ್ವೆಶ್ಚನ್ ಕಳುಹಿಸಿದ್ದೆ, ಕಾಲ್ ಅಟೆನ್‌ಷನ್ ಕೊಟ್ಟಿದ್ದೆ, ಆದರೆ ಯಾವುದಕ್ಕೂ ಉತ್ತರ ಬರುವುದಿಲ್ಲ. ಪ್ರತಿ ಸಾರಿ ಹೋದಾಗಲೂ ಕೂಡ ಏನು ಹನುಮೇಗೌಡರೆ, ಇಷ್ಟೆಲ್ಲಾ ಹೇಳುತ್ತೀರಿ, ಬಡವರ ಪರ, ಅವರ ಪರ, ಇವರ ಪರ ಎಂದು ಹೇಳುತ್ತೀರಿ, ಯಾರಿಗೋಸ್ಕರವೋ ತ್ಯಾಗ ಮಾಡಿ ನಾವು ಸರ್ವಸ್ವವನ್ನೂ ಕಳೆದುಕೊಂಡೆವು. ಯಾರೋ ಬದುಕುತ್ತಾರೆ ಬದುಕಲಿ. ಆದರೆ ನಾವು ಸಹ ನೆಮ್ಮದಿಯಿಂದ ಬದುಕುವುದಕ್ಕೆ ಅವಕಾಶ ಕೊಡುತ್ತಿಲ್ಲವಲ್ಲ ಎಂದು ಕೇಳುತ್ತಿದ್ದಾರೆ. ಮೊನ್ನೆ ಮಾನ್ಯಮಂತ್ರಿಗಳು ಬಂದಾಗ ರಾತ್ರಿ 8 ಗಂಟೆ ಆಗಿತ್ತು. ಜನ ಅಡ್ಡ ಹಾಕಿ ಅವರನ್ನು ಕೇಳಿದರು. 8 ವರ್ಷದಿಂದ ನಾವು ಕಂಡ ಕಂಡ ದೇವರಿಗೆಲ್ಲಾ ಕೈ ಮುಗಿಯುತ್ತಿದ್ದೇವೆ. ನಮಗೆ ಇನ್ನೂ ಪರಿಹಾರ ದೊರೆಯಲಿಲ್ಲವೆಂದು ಹೇಳಿದರು. ಅವಾರ್ಡ್ ಪಾಸ್ ಆಗಿದ್ದರೂ ಕೂಡಾ ಏಕೆ ಕೊಟ್ಟಿಲ್ಲ ಎನ್ನುವುದರ ಬಗ್ಗೆ ತಿಳಿದುಕೊಂಡು ತಕ್ಷಣವೇ ಕೊಡಿಸಬೇಕು. ಅವಾರ್ಡ್ ಪಾಸ್ ಆಗಿದ್ದರೂ ಅದನ್ನು ಹಾಗೆ ಇಟ್ಟುಕೊಂಡಿರುವ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಇನ್ನು ಮುಂದೆ ಇಂಥ ಬಡಪಾಯಿ ಜನರನ್ನು ಅನಾದರಣೆಯಿಂದ ನೋಡದ ಹಾಗೆ ಒಂದು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ:– ಮಾನ್ಯ ಅಧ್ಯಕ್ಷರೆ, ವಾಲ್ಮಿ ಎನ್ನುವುದು ಬಹಳ ಮುಖ್ಯ.

ಅಧ್ಯಕ್ಷರು:– ಕ್ಲಾರಿಫಿಕೇಷನ್ ಎಂದರೆ ಏನು ? ಇಲ್ಲಿ ಆಯವ್ಯಯದ ಬಗ್ಗೆ ಚರ್ಚೆ ಏನಾದರೂ ನಡೆದಿದೆಯೋ, ಹೇಗೆ ? ಇಂಪಾರ್ಟೆಂಟ್ ಮ್ಯಾಟರ್ ಮೇಲೆ ಸ್ವಲ್ಪ ಕ್ಲಾರಿಫಿಕೇಷನ್ ಇರುತ್ತದೆ. ಕೇಳುವುದನ್ನು ಸ್ಪಷ್ಟವಾಗಿ ಕೇಳುವುದು ಬಿಟ್ಟು ಪ್ರತಿಯೊಬ್ಬರೂ ಭಾಷಣ ಮಾಡುವುದಕ್ಕೆ ಹೊರಟರೆ ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ಆಮೇಲೂ ಸಂಬಂಧಪಟ್ಟ ಮಂತ್ರಿಗಳು ತಮಗೆ ಸಿಗುತ್ತಾರೆ. ಇದೇ ಅಧಿವೇಶನದಲ್ಲೇ ಎಲ್ಲಾ ಒಂದೇ ದಿವಸ ಕೇಳಿ ಮುಗಿಸಬೇಕೆಂದು ಏನೂ ಇಲ್ಲ. ತಾವು ಹೋಗಿ ಮಂತ್ರಿಗಳನ್ನು ಭೇಟಿ ಆಗ್ರಿ. ತಮ್ಮ ಕೆಲಸದ ಬಗ್ಗೆ ಕೇಳಿಕೊಳ್ಳಿರಿ. ನಮಗೆ ಕೂಡಾ ಇರುವ ಕಾಲಾವಕಾಶದಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ತಾವು ಸಹಕರಿಸದಿದ್ದರೆ ನನಗೆ ಕಷ್ಟವಾಗುತ್ತದೆ.

ಶ್ರೀ ಸಿ.ಎಸ್. ನಾಡಗೌಡ:– ವಾಲ್ಮಿ ಎನ್ನುವಂಥ ಒಂದು ಆಫೀಸ್‌ನ್ನು ಪ್ರಾಜೆಕ್ಟ್ ಏರಿಯಾ ಬಿಟ್ಟು ಧಾರವಾಡದಲ್ಲಿ ಮಾಡಿದ್ದಾರೆ. ಅದರ ಬಗ್ಗೆ ಕೇಳುತ್ತಿದ್ದೇನೆ. ಇದು ನನ್ನ ಮತ ಕ್ಷೇತ್ರದ್ದಲ್ಲ. ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ವಾಲ್ಮಿ ಆಫೀಸನ್ನು ಧಾರವಾಡದಲ್ಲಿ ಮಾಡಿದ್ದಾರೆ. ಇದರ ಬಗ್ಗೆ ಅವರಿಗೂ ಗೊತ್ತಿದೆ. ಆದರೆ ಅವರು ಹೇಳಲೇ ಇಲ್ಲ.

ಅಧ್ಯಕ್ಷರು:– ತಾವು ಹೋಗಿ ಅದರ ಬಗ್ಗೆ ಮಂತ್ರಿ ಸಂಗಡ ಮಾತನಾಡಿ.

ಶ್ರೀ ಎಸ್.ಎಂ. ಕೃಷ್ಣ:– ವಾಲ್ಮೀದು ಸೆಟ್ಲ್ ಮಾಡೋಣ ಬನ್ನಿ ನಾಡಗೌಡರೆ. ಮಾನ್ಯ ಅಧ್ಯಕ್ಷರೆ, ಪ್ರೊಫೆಸರ್ ನಂಜುಂಡಸ್ವಾಮಿಯವರು ಈ ಬಚಾವತ್ ಅವಾರ್ಡ್ ವಿಚಾರದಲ್ಲಿ ಪ್ರಶ್ನೆಯನ್ನು ಎತ್ತಿದ್ದಾರೆ.

On a Plain reading of Bachawat Award, one can come to the conclusion

that it is very heavily loaded against Karnataka. It does not take extra efforts to come to that conclusion. He also mentioned about certain augmention from other tributories. For that the Bachawat Award itself provided: "At any time after 31st May 2000, this order may be reviewed and revised by a competent authority or Tribunal. But such review or revision shall not as far as possible disturb any utilisation that may have been undertaken by any State within the limits of allocation made to it under the foregoing clauses. In the event of augmentation of waters of River Krishna by the diversion of water of any other river, no State shall be debarred from claiming before any authority or tribunal, even before 31st May 2000, then it is entitled to a greater share in the waters of river Krishna on account of such augmentation nor shall any State be debarred from disputing such a claim.".

That is also provided in the Bachawat Award. I would take shelter under clause (b) of Bachawat Award and go before them.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಅಧ್ಯಕ್ಷರೆ, ತುಂಗಭದ್ರ ಸಬ್ ಬೇಸಿನ್ ಬಗ್ಗೆ ಕೇಳಿದ್ವೆ, In Tungabhadra Sub–basin, upto Mallapur, our contribution is 450 TMC. ft., But the same Bachawat Tribunal puts a restriction on us that we should use only 320 TMCt., ft., ಇದಕ್ಕೆ ನಾನು ಪಿನ್ ಪಾಯಿಂಟ್ ಆಗಿ ಕೇಳಿದೆ. ಕಾವೇರಿ ಟ್ರಿಬ್ಯುನಲ್ ನಮ್ಮ ಭೂಮಿಯ ಮೇಲೆ ನಿರ್ಬಂಧ ಹಾಕಿದೆ. ಬಚಾವತ್ ಟ್ರಿಬ್ಯುನಲ್ ನಮ್ಮ ನೀರಿನ ಮೇಲೆ ನಿರ್ಬಂಧ ಹಾಕಿದೆ. Our contribution is 450 TMC. ft., whereas we are supposed to use only 320 TMC., ft., with the result that we are not permitted to use 130 TMCft., which belongs to us rightfully, which we need actually for Upper Tunga and Upper Bhadra. ಈ ಮೋಸದಿಂದಾಗಿ ನಮಗೆ ಉಳಿದಿರುವುದು 16 TMC.Ft., with which we have to comple to these two projects. ಈ ನಿರ್ಬಂಧವನ್ನು ತಾವು ಒಪ್ಪುವುದಿಲ್ಲ ಅಂತ ಹೇಳಿದ್ದೀರಿ. ಈ ನಿರ್ಬಂಧವನ್ನು ಒಪ್ಪುತ್ತೀರೋ ಅಥವಾ ಇಲ್ಲವೋ ? ಆದರೆ ನಮ್ಮ ಸರ್ಕಾರದ ನಿಲುವು ಏನು ಅಂತ ನನಗೆ ಬೇಕಾಗಿದೆ.

SRI S.M. KRISHNA:– About the second point which professor Nanjundaswamy has raised, I certainly would come back to him. I cannot right now react to that.

PROF. M.D. NANJUNDASWAMY:– I will send you a booklet authored by Mr. Balekundargi. This might be of some help to you.

SRI S.M. KRISHNA:– I will come back to that and provide my considered response, I am grateful to you for having brought it to my notice.

ಇನ್ನು ಮಾನ್ಯ ವೈ.ಕೆ. ರಾಮಯ್ಯನವರು ವಿಶೇಷವಾದಂತಹ ಪರಿಸ್ಥಿತಿ ಎರಡೂ ಕಣಿವೆಗಳಲ್ಲಿದೆ

ಅಂತ ಹೇಳಿದರು; ನಿಜ, ವಿಶೇಷವಾದಂಥ ಪರಿಸ್ಥಿತಿ ಇದೆ. ಅಬ್‌ನಾರ್ಮಲ್ ಸ್ಯುಚಿಯೇಷನ್ ಇದೆ ಎನ್ನತಕ್ಕಂಥದ್ದರಲ್ಲಿ ಎರಡು ಅಭಿಪ್ರಾಯವಿಲ್ಲ. ಅಬ್‌ನಾರ್ಮಲ್ ಸ್ಯುಚಿಯೇಷನ್ ಇಲ್ಲದೇ ಹೋಗಿದ್ದರೆ ಈ ಪ್ರಮಾಣದಲ್ಲಿ ಹಣವನ್ನು ಬಜೆಟ್‌ಗಳಲ್ಲಿ ಬಿಡುಗಡೆ ಮಾಡುತ್ತಿರಲಿಲ್ಲ ಎನ್ನತಕ್ಕಂಥದ್ದು ಕೂಡ ಇವತ್ತು ನಾವು ಒಪ್ಪಬೇಕಾಗಿರತಕ್ಕಂಥ ವಿಚಾರ. ಎಷ್ಟು ಹಣ ಕೊಡುತ್ತಾರೋ ಬಿಡುತ್ತಾರೋ ಅನ್ನುವುದು ಮುಂದಿನ ವರ್ಷದ ಮಾರ್ಚಿ ತಿಂಗಳಲ್ಲಿ ನಾವು ಸೇರಿದಾಗ ನಾವು ನೀವು ನೋಟ್ಸ್ ಅನ್ನು ಕಂಪೇರ್ ಮಾಡಬಹುದು. ಇವತ್ತಿನ ಪರಿಸ್ಥಿತಿಯ ಮಟ್ಟಿಗೆ ನಾವು ಹೇಳತಕ್ಕಂಥದ್ದು ಏನು ಅಂದರೆ ಯಾವ ಪ್ರಮಾಣದಲ್ಲಿ ಹಣವನ್ನು ಬಿಡುಗಡೆ ಮಾಡುತ್ತಿದ್ದಾರೆ. ಅದು ಸರ್ಕಾರದ ಸದಿಚ್ಛೆಯನ್ನು ವ್ಯಕ್ತಪಡಿಸುತ್ತದೆ ಅನ್ನತಕ್ಕದ್ದನ್ನು ಮಾನ್ಯ ರಾಮಯ್ಯನವರು ಕೂಡ ಒಪ್ಪುತ್ತಾರೆ. ಮಾನ್ಯ ರಾಮಯ್ಯನವರು ಕಾವೇರಿಯ ವಿಚಾರದಲ್ಲಿ Yes. a political settlement is possible ಎಂದು ಹೇಳಿದರು. He has stated that nothing is static, everything is dynamic. I do not rule out a political settlement also. It all depends upon your strength. It depends upon so many other exigencies. It depends upon what will happen in Tamil Nadu, it depends upon what will happen in Karnataka. It depends upon what will happen in Delhi and various other things.

SRI Y.K. RAMAIAH:– In Tamil_Nadu, I honestly feel that the circumstances are conducive now.

SRI S.M. KRISHNA:_ Let us concede the point that we are caught up in one of the most difficult situations. There are no easy solutions and no soft options before the Government. The options which we have to take are going to be very hard and as and when we proceed and as and when we are faced with the ultimate inevitability, we have to react to the situation, Right now I would not like to react in a hypothetical manner to a hypothetical proposition which has been proposed by my esteemed friend Shri. Y.K. Ramaiah.

ಮಾನ್ಯ ಏಕಾಂತಯ್ಯನವರು, ಅಪಾಯಕಾರಿಯ ಪ್ರವೃತ್ತಿ ಈ ಸದಾನಂದ ಸ್ವಾಮಿಯವರ ಎನ್‌ಕ್ವೈರಿ ರಿಪೋರ್ಟ್ ಅಂತ ಹೇಳಿದರು. ನಿಜ, ಯೋಗ್ಯರಾದವರನ್ನು ತಾಂತ್ರಿಕ ಸಮಿತಿಗೆ ನೇಮಕ ಮಾಡಿದರೆ ಯೋಗ್ಯವಾದಂತಹ ತೀರ್ಮಾನಗಳು ಹೊರಗಡೆ ಬರುತ್ತದೆ. ನಾವು ಬೇರೆ ರೀತಿ ಮಾಡಿದರೆ ಬೇರೆ ರೀತಿಯ ತೀರ್ಮಾನಗಳು ಬರುತ್ತವೆ. ತಾವು ಏನನ್ನು ಹೇಳಿದ್ದೀರಿ, ಅದನ್ನು ಗಮನದಲ್ಲಿಟ್ಟುಕೊಂಡು while placing officers in sensitive slots, we will have to go into the track record of the particular Chief Engineer and if we are satisfied with the track record of the Chief Engineer is good, then he is placed in a sensitive slot. Then perhaps such a situation would not come up and I entirely agree with you.

ಶ್ರೀ ವಾಟಾಳ್ ನಾಗರಾಜ್:– ನನಗೆ ಉತ್ತರ ಕೊಡುವಾಗ ಕನ್ನಡದಲ್ಲಿ ಕೊಡಿ.

ಶ್ರೀ ಎಸ್.ಎಂ. ಕೃಷ್ಣ:– ಮಾನ್ಯ ಅಧ್ಯಕ್ಷರೆ, ಡಾ: ಮಲಕರೆಡ್ಡಿಯವರು 2 – 3 ತಿಂಗಳಲ್ಲಿ ಹೇಗೆ ಇಷ್ಟೊಂದು ಹಣವನ್ನು ಖರ್ಚು ಮಾಡಿದ್ದೀರಿ ಅಂತ ಕೇಳಿದರು, ಅದಕ್ಕೆ ಬೇಸಿಕ್ ಕಾರಣ ಏನು

ಅಂದರೆ ಮಾನ್ಯ ಡಾ: ಮಲಕರೆಡ್ಡಿಯವರಿಗೆ ಗೊತ್ತಿದೆ; ನಾವು ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನಲ್ಲಿ ಹೇಗೇಗೆ ಖರ್ಚು ಮಾಡುತ್ತೇವೆ, ಹಾಗಾಗೆ ವಿಶ್ವಬ್ಯಾಂಕ್‌ನವರು ನಮಗೆ ರೀಇಂಬರ್ಸ್, ಮಾಡುತ್ತಾರೆ. ಕಳೆದ ಮೂರು ನಾಲ್ಕು ತಿಂಗಳಲ್ಲಿ ಅವರು ರೀಇಂಬರ್ಸ್ ಮಾಡುವ ಪ್ರಶ್ನೆ ಇರಲಿಲ್ಲ. ಏಕೆಂದರೆ ಬುಚ್ಚರ್ ಅವರು ಬಂದು ಬುಚ್ಚರ್ ಮಾಡಿ ಹೋಗಿದ್ದರು. ಆದ್ದರಿಂದ ಈ ಬಿಲ್ಸ್ ಎಲ್ಲ ಒಟ್ಟಿಗೆ ಅಕ್ಯುಮಿಲೇಟ್ ಆಗಿತ್ತು, ಕೆಲಸ ಏನು ನಡೆದಿತ್ತು ಅದಕ್ಕೆ ನಾವು ದುಡ್ಡನ್ನು ಕೊಡುವುದಕ್ಕೆ ಸಾಧ್ಯವಾಗಿರಲಿಲ್ಲ. ಒಟ್ಟಿಗೆ ನಡೆದಂತಹ ಕೆಲಸಗಳ ಒಟ್ಟು ಬಿಲ್ ಅನ್ನು ಇವತ್ತು ಅವರಿಗೆ ಪಾವತಿ ಮಾಡಿದ್ದರಿಂದ ಆ ರೀತಿಯಾಯಿತು.

ಡಾ: ಎ.ಬಿ. ಮಲಕರೆಡ್ಡಿ:– ನಾವೇ ಖರ್ಚು ಮಾಡಬೇಕು. ಆಮೇಲೆ ಅವರು ರಿಲೀಸ್ ಮಾಡುತ್ತಾರೆ.

ಶ್ರೀ ಎಸ್.ಎಂ. ಕೃಷ್ಣ:– ಈಗ ನಾವು ಸರ್ಕಾರದವರು ನಮ್ಮ ಪ್ರೊಜೆಕ್ಷನ್ಸ್‌ನಲ್ಲಿ ಅವರು ಇಷ್ಟು ಹಣ ಕೊಡುತ್ತಾರೆಂದು ಹೇಳಿ ನಾವು ಇಂತಿಷ್ಟು ಕೆಲಸಕ್ಕೆ ಏರ್ಪಾಡು ಮಾಡಿ ನಾವು ಎಲ್.ಓ.ಸಿ.ಯನ್ನು ಕೊಟ್ಟಿರುತ್ತೇವೆ. ಯಾವಾಗ ವಿಶ್ವಬ್ಯಾಂಕ್‌ನವರು ಬ್ಯಾನ್ ಹಾಕಿದರೋ ಇಲ್ಲಿಯೂ ಬ್ಯಾನ್ ಬಂತು; ಆದ್ದರಿಂದ ನಾವು ಕಾಂಟ್ರಾಕ್ಟ್‌ದಾರರಿಗೆ ನೀವು ಕೆಲಸವನ್ನು ಮಾಡುತ್ತಲೇ ಇರಿ, ಕೆಲಸ ಮಾತ್ರ ನಿಲ್ಲಿಸಬಾರದು ಅಂತ ಹೇಳಿದೆವು. ಆದ್ದರಿಂದ ಆ ಅಕ್ಯುಮಿಲೇಟೆಡ್ ಬಿಲ್ ಪೇಮೆಂಟ್ ಆಗಿರುವುದರಿಂದ ಈ ರೀತಿ ಇದನ್ನು ಮಾಡುವುದಕ್ಕೆ ಸಾಧ್ಯವಾಯಿತು. ಇನ್ನು feed channals & contour bunding ಹಾಕಬೇಕೆಂದು ಹೇಳಿದ್ದೀರಿ. That is exactly what the Catchment Area Development Authority has to do. The CADA has come into existence even in the Krishna Basin. So we are going to impress upon them that they should do the contour bunding and various other follow up measures in a large irrigation project like this. Then the nexus between the Engineers and the contractors, particularly the Telugu speaking contractors. I would like Dr. Reddy to come out with a reasonable alternative to me, with a workable alternation and I am certainly willing to lend myself to any persuasion. I have absolutely no vested interests in perpetuating the contractors in either Upper Krishna or in Hemavathy or in Goruru. So I have an open mind. I certainly can be guided and if I am mis–guided and if I go on the wrong track, I can certanly depend upon Dr. Malakreddy to put me back on the right track.

ಇನ್ನು ಡಾ: ನಂಜಪ್ಪನವರು ಎರಡು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ನಿಮ್ಮ ಲಾಜಿಕ್ ಅನ್ನು ಅರ್ಥ ಮಾಡಿಕೊಳ್ಳಬಲ್ಲೆ ಮತ್ತು ಅದನ್ನು ಅಪ್ರಿಶಿಯೇಟ್ ಮಾಡಲೂ ಬಲ್ಲೆ. ಆದರೆ ನಮ್ಮ ಹನುಮೇಗೌಡರ ಸಮಿತಿಯವರು ಒಂದು ರಿಪೋರ್ಟ್ ಕೊಟ್ಟು ಈ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗಳು ಬಿಳಿ ಆನೆಗಳು ಇದ್ದಂತೆ. 6 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅದೆಷ್ಟೋ ಎಕರೆಗೆ ನೀರನ್ನು ಕೊಟ್ಟಿವೆ ಅಂತ ಹೇಳಿ ಅವರು ಮಾಡಿದ ರಿಪೋರ್ಟಿನ ಆಧಾರದ ಮೇಲೆ ಬಹುಶಃ ಸರ್ಕಾರದವರು ಆ ತೀರ್ಮಾನಕ್ಕೆ ಬಂದಂತೆ ನನಗೆ ಕಾಣುತ್ತದೆ.

ಡಾ. ಎ.ಬಿ. ಮಲಕರೆಡ್ಡಿ:– ಸರ್ಕಾರದವರು ಶೇರು ಅಮೌಂಟ್ ಅನ್ನು ಶೇಕಡ 10 ಏನು ಕೃಷ್ಣ ಏತ ನೀರಾವರಿ ನಿಗಮಕ್ಕೆ ಏನು ಕೊಡಬೇಕಾಗಿತ್ತೋ ಅದನು ಕೊಟ್ಟಿಲ. 15 ಪರ್ಸೆಂಟ್ ಸೀಡ್

ಲೋನ್ ಏನನ್ನು ಕೊಡಬೇಕಾಗಿತ್ತೋ ಅದನ್ನು ಸಹ ಇದುವರೆಗೂ ಕೊಟ್ಟಿಲ್ಲ. ಎಷ್ಟು ಹಣ ಕೊಟ್ಟಿದ್ದಾರೆ ಅಷ್ಟು ಹಣದಲ್ಲಿಯೇ ಅಷ್ಟು ಕೆಲಸವನ್ನು ಮಾಡಿದ್ದಾರೆ. ಬಿಳಿ ಆನೆಯ ಪ್ರಶ್ನೆ ಅದಕ್ಕೆ ಬರುವುದಿಲ್ಲ. Seed loan ಕೊಟ್ಟಿಲ್ಲ. ಪದೇಪದೇ ಮಾನ್ಯ ಸದಸ್ಯರುಗಳು ಆಕ್ಷೇಪಣೆಯನ್ನು ಮಾಡುತ್ತಿದ್ದಾರೆ. ರಿಜರ್‌ವೇಷನ್ ರೋಸ್ಟರ್ ಸಿಸ್ಟಂ ಅನ್ನು ಅಲ್ಲಿ ಅಡಾಪ್ಟ್ ಮಾಡುವುದಿಲ್ಲ. ಇಲ್ಲಿ ಇನ್ನೂ 70 ಪರ್ಸೆಂಟ್ ಸಿಬ್ಬಂದಿಯನ್ನು ಅಪಾಯಿಂಟ್‌ಮೆಂಟ್ ಮಾಡೇ ಇಲ್ಲ. ಸಣ್ಣ ಅಪರಾಧಕ್ಕಾಗಿ ನಿಗಮವನ್ನೇ ಅಬಾಲಿಶ್ ಮಾಡುವುದು ತಪ್ಪೆಂದು ನಾನು ಆ ದೃಷ್ಟಿಯಲ್ಲಿ ಹೇಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ:– ಡಾ: ಮಲಕರೆಡ್ಡಿಯವರು ಹೇಳಿದ್ದನ್ನು ನಾವು ಗಮನಿಸಿದ್ದೇವೆ. ನಬಾರ್ಡ್‌ನಿಂದ ರಾಜ್ಯಕ್ಕೆ ಹೆಚ್ಚು ಹಣ ತೆಗೆದುಕೊಂಡರೆ ಒಳ್ಳೆಯದಾಗುತ್ತಾ ಇತ್ತು ಎಂಬ ತಮ್ಮ ಅನಿಸಿಕೆಗೆ ನನ್ನ ಸಹಮತ ಇದೆ. ಡಾ: ನಂಜಪ್ಪನವರು ಎರಡು ಲಿಫ್ಟ್ ಇರಿಗೇಷನ್ ಆಗಿದೆ, ಇನ್ನೂ ಎರಡು ಕೊಡಿ ಎಂದು ಕೇಳಿದರು. ಮೊದಲು ಈ ಎರಡು ಲಿಫ್ಟ್ ಇರಿಗೇಷನ್ ಮುಗಿಸೋಣ, ನಂತರ ಇನ್ನೆರಡು ಲಿಫ್ಟ್ ಇರಿಗೇಷನ್ ಕೊಡಬೇಕು ಎನ್ನುವ ಪ್ರಸ್ತಾವನೆಗೆ ಪಾದಾರ್ಪಣೆ ಮಾಡೋಣ. ಮತ್ತು ಅವರು ಕೋ ಆಪರೇಟೀವ್ ಸೊಸೈಟಿ ವಾಟರ್ ಮ್ಯಾನೇಜ್‌ಮೆಂಟ್ ಮಾಡಬೇಕೆಂದು ಹೇಳಿದರು ಮತ್ತು ಅದನ್ನು ಶನಿವಾರ ಪ್ರಾರಂಭೋತ್ಸವ ಮಾಡುತ್ತಾರೆಂದು ಕೇಳಿದೆ. ಬಹಳ ಸಂತೋಷ. ಅದನ್ನು ಇನ್ನೂ ಹೆಚ್ಚು ಮಾಡಬೇಕೆಂಬುದು ನಮ್ಮ ಕಲ್ಪನೆ. ಮಾನ್ಯ ವಾಟಾಳ್ ನಾಗರಾಜ್ ಬಹಳ ಸೂಕ್ಷ್ಮವಾದಂಥ ವಿಚಾರದ ಬಗ್ಗೆ ನನ್ನ ಪಾಸಿಟಿವ್ ರಿಯಾಕ್ಷನ್ ಕೇಳಿದರು. ಅದನ್ನು ಪ್ರಯತ್ನ ಮಾಡುತ್ತೇವೆ. ನಾನು ಈಗಾಗಲೇ ಹೇಳಿದ್ದೇನೆ. ಕಾವೇರಿ ವಿಚಾರದಲ್ಲಿ ನಮ್ಮಲ್ಲಿ ಭಿನ್ನಾಭಿಪ್ರಾಯ ಇಲ್ಲ. ಆದರೆ ನಮ್ಮ ಉದ್ದೇಶ ಈಡೇರಿಸುವುದಕ್ಕೆ ಯಾವ ಮಾರ್ಗವನ್ನು ಯಾವ ಕಾಲದಲ್ಲಿ, ಯಾವ ಘಟ್ಟದಲ್ಲಿ ಅನುಸರಿಸಬೇಕು ಎನ್ನುವುದರ ಬಗ್ಗೆ ಮಾತ್ರ ಅಭಿಪ್ರಾಯ ವ್ಯತ್ಯಾಸಗಳು ಇದ್ದ ಮಾತ್ರಕ್ಕೆ ನಮ್ಮ ಮೂಲ ಗುರಿಗೆ ಗಂಡಾಂತರ ತರತಕ್ಕದ್ದಾಗಲಿ, ಆ ಗುರಿಯನ್ನು distort ಮಾಡುವುದರಲ್ಲಿ ನಾವು ಸಹಾಯಕರಾಗುವುದಿಲ್ಲ ಎನ್ನುವುದನ್ನು ಹೇಳುತ್ತೇನೆ. ಈ ಸದನವೇ 3ನೇ ತಾರೀಖು ಡಿಸೆಂಬರ್ 91ನೇ ಇಸವಿಯಲ್ಲಿ "This House further urges the Prime Minister to take initiative and to start deliberations for an early amicable settlement" ಎಂದು ಹೇಳಿ ನಿರ್ಣಯ ತೆಗೆದುಕೊಂಡಿದೆ. ಈ ಅಮಿಕಬಲ್ ಸೆಟಲ್‌ಮೆಂಟ್‌ನ್ನು ನಾವು ಎದುರು ನೋಡುತ್ತಿದ್ದೇವೆ. ಜೊತೆಗೆ ಈಗ ಟ್ರಿಬ್ಯುನಲ್‌ನಲ್ಲಿ ಮತ್ತು ಸುಪ್ರೀಮ್ ಕೋರ್ಟ್‌ನಲ್ಲಿ ನಾವು ಎತ್ತಿರತಕ್ಕಂಥ ವಿಚಾರಗಳು ನಾನಾ ಸ್ಟೇಜ್‌ಗಳಲ್ಲಿ ಇವೆ. ಟ್ರಿಬ್ಯುನಲ್ ಮುಂದೆ ಕೂಡ ನಮ್ಮ ನ್ಯಾಯವಾದಿಗಳು ಏನು ಆರ್ಗ್ಯೂ ಮಾಡುತ್ತಿದ್ದಾರೆ ಎಂದರೆ ನೀವು ಏನು ಸೀಲಿಂಗ್ ಹಾಕಿದ್ದೀರಿ ಅದು ಅವೈಜ್ಞಾನಿಕ ಅದು ಕರ್ನಾಟಕದ ಹಿತಕ್ಕೆ ಮಾರಕವಾಗುತ್ತದೆ ಮತ್ತು "1924 Agreement is no Agreement at all" ಎಂದು ಅಲ್ಲಿಂದ ಶುರು ಮಾಡಿದ್ದಾರೆ. ಯಾವ್ಯಾವ ಘಟ್ಟದಲ್ಲಿ ಇದು ಹೋಗುತ್ತದೆ ಎನ್ನುವುದರ ಮೇಲೆ ನಮ್ಮ ಪ್ರತಿಕ್ರಿಯೆ ಇರುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಮಂಡ್ಯಾದ ನಿರ್ಣಯಕ್ಕೆ ತಾವು ಬದ್ಧರೆ ಅಥವಾ ಇಲ್ಲವೆ ಎಂದು ನಾನು ನೇರವಾಗಿ ಕೇಳುತ್ತೇನೆ. ಸುತ್ತು ಬಳಸಿಕೊಂಡು ಬರುವುದು ಬೇಡ. ನಿಮ್ಮಿಂದ ಅಚಾತುರ್ಯವಾಗುತ್ತದೆಂದು ನಾನು ನಂಬಿಕೊಂಡಿಲ್ಲ. ನನಗೆ ನಿಮ್ಮ ಮೇಲೆ ನಂಬಿಕೆ ಇದೆ. ನೀವು ಎರಡು ಸಭೆಯಲ್ಲಿ ಭಾಗವಹಿಸಿದ್ದೀರಿ. ನಮ್ಮ ನಿರ್ಣಯ ಸಂಪೂರ್ಣವಾಗಿ ನ್ಯಾಯ ಮಂಡಲಿಯನ್ನು ಬಹಿಷ್ಕಾರ ಮಾಡಬೇಕೆಂದು ಇತ್ತು. ಇದಕ್ಕೆ ನಿಮ್ಮ ಸರ್ಕಾರ ಬದ್ಧವೇ ? ಅಥವಾ ಇಲ್ಲವೇ ?

ಡಾ: ಎನ್.ಬಿ. ನಂಜಪ್ಪ:– ಬಹಿಷ್ಕರಿಸಬೇಕು ಎನ್ನತಕ್ಕ ವಿಚಾರ ಈ ವರ್ಷದಲ್ಲಿ ಇಲ್ಲ. ಏತಕ್ಕೆಂದರೆ ತಮಿಳುನಾಡು ಮತ್ತು ಕರ್ನಾಟಕದವರಿಗೆ ದೇವರೇ ಇವೊತ್ತು ದಾರಿ ತೋರಿಸಿದ್ದಾನೆ. ಇವೊತ್ತು

ಚೆನ್ನಾಗಿ ಮಳೆಯಾದರೆ ಇಬ್ಬರಿಗೂ ನೀರು ಸಿಗುತ್ತದೆ. ಆಗದೇ ಇದ್ದರೆ ಇಬ್ಬರಿಗೂ ನೀರು ಸಿಗುವುದಿಲ್ಲ. ಆದ್ದರಿಂದ ಬಹಿಷ್ಕಾರ ಹಾಕುವ ಪ್ರಶ್ನೆ ಇಲ್ಲ. ನೀರು ಇದ್ದ ದಿವಸ ಅವರಿಗೆ ಬಿಡುತ್ತಾರೆ, ನೀರು ಕಮ್ಮಿ ಇದ್ದ ದಿವಸ ನೀರು ಬಿಡುವುದಿಲ್ಲ ಅದನ್ನು ನಾವೇ ಮಾಡಿಕೊಳ್ಳಬಹುದು.

ಶ್ರೀ ಸಿ. ಬೈರೇಗೌಡ:– ಡಾ: ನಂಜಪ್ಪನವರು ವಿಷಯಾಂತರ ಮಾಡುತ್ತಿದ್ದಾರೆ. ಅವರು ತಾತ್ಕಾಲಿಕ ವರದಿಯ ಬಗ್ಗೆ ಹೇಳುತ್ತಿದ್ದಾರೆ. ಆದರೆ ಮಂಡ್ಯ ಸಮ್ಮೇಳನದ ತೀರ್ಮಾನದ ಬಗ್ಗೆ ಈಗ ಇಲ್ಲಿ ನಾವು ಚರ್ಚೆ ಮಾಡುತ್ತಿದ್ದೇವೆ. ಆದ್ದರಿಂದ ಇಲ್ಲಿ ನಾವುಗಳು ಕನ್‌ಫ್ಯೂಷನ್ ಮಾಡಿಕೊಳ್ಳುವುದು ಬೇಡ.

ಶ್ರೀ ಎಸ್.ಎಂ. ಕೃಷ್ಣ:– ಮಂಡ್ಯ ಸಮಾವೇಶವಾಗಲೀ ಮೈಸೂರು ಸಮಾವೇಶವಾಗಲೀ ಎಲ್ಲವೂ ಕೂಡ ಕಾವೇರಿ ಜಲಾನಯನ ವಿಚಾರಗಳು. ನಮ್ಮ ಹಿತಾಸಕ್ತಿಯನ್ನು ಕಾಪಾಡತಕ್ಕ ದೃಷ್ಟಿಯಿಂದ ನಡೆದಂಥ ಸಮ್ಮೇಳನಗಳು ಮೈಸೂರಿನಲ್ಲಿ ನಡೆಯಿತು; ಮಂಡ್ಯದಲ್ಲಿ ನಡೆಯಿತು.

ಶ್ರೀ ವಾಟಾಳ್ ನಾಗರಾಜ್:–ಹೌದು ನಡೆಯಿತು. ತಾವು ಮನಸ್ಸಿಗೆ ಬೇಜಾರು ಮಾಡಿಕೊಳ್ಳಬೇಡಿ ನನ್ನ ಕಳಕಳಿ ಏನೆಂದರೆ ತಾವು ಬಹಿಷ್ಕಾರ ಹಾಕುತ್ತೀರೋ ಅಥವಾ ಇಲ್ಲವೋ ಎಂಬುದನ್ನು ಹೇಳಿ.

ಶ್ರೀ ಎಸ್.ಎಂ. ಕೃಷ್ಣ:– ಅಧ್ಯಕ್ಷರೇ, ಕಾವೇರಿ ನದಿ ನೀರಿನ ಬಗ್ಗೆ ನಮ್ಮ ನ್ಯಾಯಯುತವಾದ ಹಕ್ಕನ್ನು ಕಾಪಾಡುವ ದೃಷ್ಟಿಯಿಂದ ಏನು ಬೇಕಾದರೂ ಮಾಡುತ್ತೇವೆ. ಅದು ನಮ್ಮ ನಿಲುವು ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ನಮ್ಮಲ್ಲಿ ನಿಮ್ಮಲ್ಲಿ ಭಿನ್ನಾಭಿಪ್ರಾಯವಿರಬಹುದು. ಆದರೆ ಗುರಿ ಒಂದೇ. ಆ ಗುರಿಯನ್ನು ನಾವು ನೀವು ಒಟ್ಟಿಗೆ ಸೇರಿ ಮುಟ್ಟಲು ಪ್ರಯತ್ನ ಮಾಡೋಣ.

ಶ್ರೀ ವಾಟಾಳ್ ನಾಗರಾಜ್:– ಸರ್ಕಾರದವರು ಬಹಿಷ್ಕಾರ ಹಾಕುತ್ತೀರೋ ಅಥವಾ ಇಲ್ಲವೋ ಎಂಬುದನ್ನು ಹೇಳಬೇಕು.

(ಗೊಂದಲ)

ಶ್ರೀ ಆರ್. ದಯಾನಂದರಾವ್:– ಈಗಾಗಲೇ ಅವರು ಉತ್ತರ ಕೊಟ್ಟಿದ್ದಾರೆ. ಆದರೂ ಮತ್ತೆ ಮತ್ತೆ ಏತಕ್ಕೆ ಅದನ್ನು ತೆಗೆದುಕೊಂಡು ಬರುತ್ತೀರಿ ?

ಶ್ರೀ ವಾಟಾಳ್ ನಾಗರಾಜ್:– ಬಹಿಷ್ಕಾರ ಮಾಡುತ್ತೀರೋ ಇಲ್ಲವೋ ಎಂಬುದನ್ನು ಹೇಳಿ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜರವರು ಬಾವಿಯಲ್ಲಿ ಕುಳಿತುಕೊಂಡರು.)

ಶ್ರೀ ಎಸ್.ಎಂ. ಕೃಷ್ಣ:– ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತೊಂದು ಪ್ರಶ್ನೆಯನ್ನು ಕಬಿನಿ ಜಲಾಶಯದ ಬಗ್ಗೆ ಕೇಳಿದರು. ಈ ಕಬಿನಿ ಎರಡನೇ ಹಂತಕ್ಕೆ 3ನೇ ಡಿಸೆಂಬರ್ 1986ರಲ್ಲಿ ಆಗಿನ ಮುಖ್ಯಮಂತ್ರಿಗಳು ಅಡಿಗಲ್ಲನ್ನು ಹಾಕಿದ್ದರು. ಈ ಕಬಿನಿ ಪ್ರಾಜೆಕ್ಟ್‌ನಿಂದ ಸುಮಾರು 8,900 ಹೆಕ್ಟೇರ್ ಪ್ರದೇಶಕ್ಕೆ ನೀರನ್ನು ಕೊಡಬೇಕೆಂದು ಹೇಳಿ ಅಂದಾಜು ಮಾಡಲಾಗಿದೆ. ಇದರಲ್ಲಿ 45,730 hectares under Kabini canal against which potential of 40,895 hectares has been created up to the end of January 1993. ಇನ್ನು 42,170 ಹೆಕ್ಟೇರ್‌ಗಳಿಗೆ ಇನ್ನು ಮುಂದೆ ನಾವು ಸಾಗರ ದೊಡ್ಡ ಕೆರೆ ಮತ್ತು ಅಪ್ಪರ್ ನುಗು ಜಲಾಶಯದಿಂದ ಮಾಡಬೇಕಾಗಿದೆ. ಸರ್ವೆ ವರ್ಕ್‌ನ್ನು ಎರಡು ರಿಸರ್ವಾಯರ್‌ಗಳಲ್ಲಿ ಮಾಡುವುದಕ್ಕೆ ನಮಗೆ ಬಂದ ತೊಂದರೆ ಏನೆಂದರೆ ಒಂದು, ಅರಣ್ಯ ಮುಳುಗಡೆಯಾಗತಕ್ಕದ್ದು ಮತ್ತೊಂದು ಟೈಗರ್ ಏರಿಯಾ ಕೂಡ ಮುಳುಗಡೆ ಆಗಬಹುದು ಎನ್ನತಕ್ಕ ಭೀತಿ ಇರುವುದರಿಂದ ಈ ಸರ್ವೆ ಕೆಲಸ ಸ್ಥಗಿತಗೊಂಡಿದೆ ಎನ್ನುವುದನ್ನು ಮಾನ್ಯ ಶ್ರೀ ವಾಟಾಳ್‌ರವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಮಹದೇವ:– ಸಾಗರ ದೊಡ್ಡ ಕೆರೆ ಕೆಲಸ ಸ್ಥಗಿತಗೊಂಡಿದೆ. ಅದನ್ನು ಕೊಡಲಿಕ್ಕೆ ಆಗುವುದಿಲ್ಲ. ಈ ಕಬಿನಿ ಸೆಕೆಂಡ್ ಸ್ಟೇಜ್ ಆಗುವ ತನಕ ನಾನು ತಮ್ಮ ಹತ್ತಿರ ಏನು ಮನವಿ ಮಾಡಿಕೊಂಡಿದ್ದೇನೆಂದರೆ, ಅಂದರೆ 4 ಕಬಿನಿ ಡ್ಯಾಂನಿಂದ ನೂಗೂ ಡ್ಯಾಮ್‌ಗೆ ಲಿಫ್ಟ್ ಇರಿಗೇಶನ್ ಮಾಡಿಕೊಟ್ಟರೆ ಅಲ್ಲಿನ ಅಚ್ಚುಕಟ್ಟುದಾರರುಗಳಿಗೆ ಅನುಕೂಲವಾಗುತ್ತದೆ ಮತ್ತು ಕಬಿನಿ ಡ್ಯಾಮ್‌ನಿಂದ 20 ಮೆಗಾವ್ಯಾಟ್ ವಿದ್ಯುತ್‌ಚ್ಛಕ್ತಿಯನ್ನು ಉತ್ಪಾದನೆ ಮಾಡಿಕೊಳ್ಳಲು ಸಾಧ್ಯವೆಂಬುದನ್ನು ನಾನು ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ:– ಅಲ್ಲಿ 20 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕ ಶಕ್ತಿ ಇದ್ದರೆ ಅದನ್ನು ನಾನು ಪರಿಗಣಿಸಿ ಅದರ ಬಗ್ಗೆ ಯೋಚನೆ ಮಾಡಿ ಮತ್ತೆ ಮಹದೇವರಿಗೆ ತಿಳಿಸುತ್ತೇನೆ.

ಶ್ರೀ ಎಂ. ಮಹದೇವ:– ಕಬಿನಿ ಡ್ಯಾಮ್‌ನಿಂದ ನೂಗೂ ಡ್ಯಾಮ್‌ಗೆ ಲಿಫ್ಟ ಇರಿಗೇಶನ್ ಮಾಡುವುದು ಒಳ್ಳೆಯದು ಎಂದು ನಾನು ತಿಳಿಸಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ:– ಅದನ್ನು ಪರಿಶೀಲನೆ ಮಾಡುತ್ತೇನೆ. ಶ್ರೀ ಮೇಟಿಯವರು ಅಲಮಟ್ಟಿ ರಿಸರ್ವಾಯರ್ ಕೆಲಸ ನಿಧಾನವಾಗಿದೆ ಎಂದು ಹೇಳಿದರು ಮತ್ತು ಅಲ್ಲಿ ನಾವು ಯಾವ ಏಜೆನ್ಸಿ ಫಿಕ್ಸ್ ಮಾಡಿದ್ದೇವೆ, ಅವರು ಆ ಕೆಲಸವನ್ನು ನಿಧಾನ ಮಾಡುತ್ತಿದ್ದಾರೆಂದು ನಿನ್ನೆ ತಮ್ಮ ಭಾಷಣದಲ್ಲಿ ಹೇಳಿದರು.

ಇದು ವಿಶ್ವ ಬ್ಯಾಂಕ್‌ನವರು ನಾನು ಆಗಲೇ ಹೇಳಿದೆನಲ್ಲಾ, ಈ ರಿಹ್ಯಾಬಿಲಿಟೇಷನ್ ಮತ್ತು ಸೆಟ್ಲ್‌ಮೆಂಟ್ ಇದಕ್ಕೆ ನಾವು ಆದ್ಯತೆ ಕೊಡಬೇಕಾಗಿ ಬಂದಿದ್ದರಿಂದ ನಾವೇ ಉದ್ದಿಶ್ಯಪೂರ್ವಕವಾಗಿ ಈ ಆಲಮಟ್ಟಿ ರಿಸರ್ವಾಯರ್ ಕೆಲಸವನ್ನು ಒಂದು ಹಣಕಾಸಿನ ಕೊರತೆ ಒಂದು ಕಡೆ ಮತ್ತೊಂದು ಕಡೆ ರಿಹ್ಯಾಬಿಲಿಟೇಷನ್ ಮತ್ತು ರೀಸೆಟ್ಲ್‌ಮೆಂಟಿಗೆ ನಾವು ಆದ್ಯತೆಯನ್ನು ಕೊಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಸ್ವಲ್ಪ ನಿಧಾನವಾಗಿದೆ. ಆದರೆ ಅವರು ಯಾವ ಏಜೆನ್ಸಿ ಫಿಕ್ಸ್ ಮಾಡಿದ್ದೇವೆ, ಅವರು ಪೂರ್ಣ ಸನ್ನದ್ಧರಾಗಿದ್ದಾರೆ. ಒಂದು ಸಾರಿ ನಾವು ಗ್ರೀನ್ ಸಿಗ್ನಲ್ ಕೊಟ್ಟ ಮೇಲೆ ಅವರು ಕೆಲಸವನ್ನು ತರಾತುರಿಯಲ್ಲಿ ಮಾಡುತ್ತಾರೆ ಎನ್ನತಕ್ಕಂಥ ವಿಶ್ವಾಸವನ್ನು ಅವರು ಹಿಂದೆ ಎಲ್ಲೆಲ್ಲಿ ಕೆಲಸವನ್ನು ತೆಗೆದುಕೊಂಡಿದ್ದರೋ ಅಲ್ಲೆಲ್ಲಾ ಅದನ್ನು ಪ್ರೂವ್ ಮಾಡಿ ಈಗ ಅವರು ಕರ್ನಾಟಕದಲ್ಲಿ ಇನ್ನೂ ನಾಲ್ಕಾರು ಕೆಲಸಗಳನ್ನು ಮಾಡಿದ್ದಾರೆ. ಮಾನ್ಯ ಬನ್ನಿಕೋಡ್‌ರವರು ಅಪ್ಪರ್‌ತುಂಗಾ ವಿಚಾರವನ್ನು ಹೇಳಿದರು. ಈ ಅಪ್ಪರ್‌ತುಂಗಾ ಬಗ್ಗೆ ಈಗಾಗಲೇ ಪ್ರಶ್ನೆಗಳನ್ನು ಕೂಡ ತಾವು ಕೇಳಿದ್ದೀರಿ. ಅದಕ್ಕೆ ಉತ್ತರಗಳನ್ನು ನಾನು ಒದಗಿಸಿದ್ದೇನೆ. ಈಗ ಸೆಂಟ್ರಲ್ ವಾಟರ್ ಕಮೀಷನ್‌ಗೆ ಇದನ್ನು for clearanceಗಾಗಿ ಕಳುಹಿಸಿಕೊಟ್ಟಿದ್ದೇನೆ.

ಏಳೆಂಟು ದಿವಸ ಆಯಿತು. ಇನ್ನು ನಾನು ದೆಹಲಿಗೆ ಹೋಗುವುದಕ್ಕೂ ಸಾಧ್ಯವಾಗಿಲ್ಲ. ನಾನು ನಿಮಗೆ ಹೇಳಿದ್ದುದು ನಾನು ದೆಹಲಿಗೆ ಹೋದಾಗ ಅದನ್ನು ಸ್ವಲ್ಪ ತರ್‌ದೂದು ಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆ ಹಾಗೆ ಎಂದು ಹೇಳಿದ್ದೆ. ಹಣವನ್ನು ಎಷ್ಟು ಕೊಟ್ಟಿದ್ದಾರೋ ಅಷ್ಟು ಆಯವ್ಯಯ ಪತ್ರದಲ್ಲಿ ನಮೂದಾಗಿದೆ. ಅದಕ್ಕೆ ಈಗ ನಾನು ಸೇರಿಸುವುದಕ್ಕೆ ಬರುವುದಿಲ್ಲ. ಅದು ಸೇರಿಸುವುದಕ್ಕೆ ಬರತಕ್ಕಂಥದ್ದು ಫೈನಾನ್ಸ್ ಮಿನಿಸ್ಟರ್ ಅವರಿಗೆ ಮಾತ್ರ; incidentally who is the Chief Minister also ಅವರಿಗೆ ಸೇರತಕ್ಕಂಥದ್ದು. ನಿಮ್ಮ ಹಣ ಏನು ಬೇಕು ಅಂತ ಇದೆ, ಅದನ್ನು ನಾನು ರೂಟ್ ಮಾಡುತ್ತೇನೆ ಮಾನ್ಯ ಮುಖ್ಯಮಂತ್ರಿಗಳಿಗೆ. ಶಿಕಾರಿಪುರದ್ದು ಇದು ನಾನು ನಿನ್ನೆಯೇ ವಿಚಾರಿಸಿದೆ. ಈ ಅಪ್ಪರ್‌ತುಂಗಾದಲ್ಲಿ ಶಿಕಾರಿಪುರದ ಪಕ್ಕದಲ್ಲೇ ಹೋಗುತ್ತಿದೆ. ಆದರೆ ಶಿಕಾರಿಪುರದಲ್ಲೆ ಲೆವೆಲ್ಸ್ ಪರ್ಮಿಟ್ ಮಾಡುತ್ತದೋ ಇಲ್ಲವೋ ಎನ್ನತಕ್ಕಂಥದ್ದು. ಈಗ ನಾವು ಶಿಕಾರಿಪುರದವರು, ಸೊರಬ, ಸಾಗರ ಅಥವಾ ಮತ್ತೊಂದು ಕ್ಷೇತ್ರ ಎಂದು ಹೇಳಿ ನಾವು as far

as irrigation projects are concerned, no government worth its salt can take a decision either to deceive somebody or a set of people or a segment.

ಆದ್ದರಿಂದ ಮಾನ್ಯ ಯಡಿಯೂರಪ್ಪನವರ ಸೂಚನೆ ಏನು ಇದೆ. ಅದನ್ನು ನಾನು ಮತ್ತೆ ಆ ಲೆವೆಲ್ಸ್ ಪರ್ಮಿಟ್ಸ್ ಮಾಡುತ್ತದೋ ಏನು ಎನ್ನತಕ್ಕಂಥದ್ದನ್ನು ಪುನರ್ ವಿಮರ್ಶೆ ಮಾಡುವುದಕ್ಕೆ ನಾನು ಅವರಿಗೆ ಸೂಚನೆ ಮಾಡುತ್ತೇನೆ. ಮಾನ್ಯ ಸಿಂಧ್ಯರವರು 'monitor' ಮಾಡುವುದರಿಂದ ಏನು ಪ್ರಯೋಜನ ಹಾಗೆ ಎಂದು ಕೇಳಿದರು. ನಿಜ. ಕಾವೇರಿಯಲ್ಲಿ ಕಾರಣಾಂತರಗಳಿಂದ ಅದು ಉಪಯೋಗವಾಗಲಿಲ್ಲ ಎನ್ನತಕ್ಕಂಥ ತೀರ್ಮಾನಕ್ಕೆ ಬರುವುದಕ್ಕೆ ಇರತಕ್ಕಂಥ ಸಾಧ್ಯತೆ ಕೃಷ್ಣ ಜಲಾನಯನ ಪ್ರದೇಶದಲ್ಲಿ ಅಂಥಾದ್ದೂ ಇಲ್ಲ. ಕೃಷ್ಣ ಜಲಾನಯನ ಪ್ರದೇಶದಲ್ಲಿ ನಾವೆಲ್ಲ ಒಟ್ಟಿಗೆ ಸೇರಿ ಮಾನಿಟರ್ ಮಾಡತಕ್ಕಂಥದ್ದು. ಇದಕ್ಕೆ ರಾಜ್ಯದಲ್ಲೂ ಕೂಡ ಜನಗಳ confidence – building measures ಇದು ಒಂದು. ಮತ್ತೆ ಅಪೆಕ್ಸ್ ಬಾಡಿ ಬಗ್ಗೆ ನನ್ನನ್ನು ಕೇಳಿದರೆ ಪ್ರತಿ ತಿಂಗಳು ಮೀಟ್ ಮಾಡಬೇಕು ಇದು. so that there can be close monitoring of what is happening in the Krishna Basin Project. I entirely, ತಮ್ಮ ಸಲಹೆ ಸೂಚನೆ ಏನಿದೆ, ಅದನ್ನು ನಾನು ಒಪ್ಪುತ್ತೇನೆ. ಒಂದು ತಿಂಗಳಿಗೆ ಅಲ್ಲದಿದ್ದರೆ ಎರಡು ತಿಂಗಳಿಗಾದರೂ ಒಂದು ಸಾರಿ ನಾವು ರೆವ್ಯೂ ಮಾಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ನೀರಾವರಿ ಮಂತ್ರಿಗಳು ಕಾವೇರಿ ಕಣಿವೆ ವಿಚಾರವಾಗಿ ಮತ್ತು ಟ್ರಿಬ್ಯುನಲ್‌ನ ಹಿನ್ನೆಲೆಯಲ್ಲಿ ನಾವು ಯಾವ ರೀತಿ ತ್ಯಾಗಕ್ಕೂ ಸಿದ್ಧ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಮ್ಮ ವಾಟಾಳ್ ನಾಗರಾಜ್‌ರವರು ಈ ವಿಚಾರದಲ್ಲಿ ಸ್ಪಷ್ಟವಾಗಿ ಸರ್ಕಾರದ ನಿರ್ಧಾರ ನೀವು ಹೇಳಬೇಕೆಂದು ಕೇಳಿದ್ದಾರೆ. ನಾನು ಏನು ಹೇಳುತ್ತೇನೆ, ಈಗ ಈ ಸದನದಲ್ಲೇ ನಾವು ತೀರ್ಮಾನ ಮಾಡಿದ್ದೇವೆ. ಆ ತೀರ್ಮಾನವನ್ನು ನಾವು ಬಹಿಷ್ಕಾರ ಮಾಡಬೇಕು, ಯಾವುದಕ್ಕೂ ಸಿದ್ಧ ಎಂಬುದು ಸಹಿತ ಅಡಕವಾಗಿದೆ. ಅದನ್ನು ನೀವು ಖಚಿತವಾಗಿ ಹೇಳಿ. ಈಗ ಅವರು ಧರಣಿ ಮಾಡಿದ್ದಾರೆ. ಇದರ ಹಿನ್ನೆಲೆಯಲ್ಲಿ ತಾವು ಖಚಿತವಾಗಿ ಇದರ ಬಗ್ಗೆ ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾಗರಾಜ್‌ರವರು ತಮ್ಮ ಸ್ಥಾನಕ್ಕೆ ಬರಬೇಕು. ಏಕೆಂದರೆ ಬೆಳಿಗ್ಗೆಯಿಂದ ಊಟವೂ ಇಲ್ಲ. ಎಲ್ಲರೂ ಹಸಿದುಕೊಂಡಿದ್ದೇವೆ.

ಶ್ರೀ ಎಸ್.ಎಂ. ಕೃಷ್ಣ:– ಮಾನ್ಯ ವಾಟಾಳ್ ನಾಗರಾಜ್‌ರವರು ಅವರ ಸ್ಥಾನಕ್ಕೆ ಹೋದರೆ ನನ್ನ ಮನಸ್ಸಿಗೆ ಬಹಳ ನೆಮ್ಮದಿಯಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:– ಕಾವೇರಿ ವಿಚಾರದಲ್ಲಿ ಯಾವ ಸ್ಯಾಕ್ರಿಫೈಸ್‌ಗೂ ರೆಡಿ ಇದ್ದೇವೆ ಎಂದು ಬಹಳ ಕ್ಲಿಯರ್ ಆಗಿ ತಾವು ಹೇಳಿದಿರಿ. ಅದನ್ನು ಹೇಳುವಾಗ ಬಹಿಷ್ಕಾರ ಮಾಡಬೇಕು ಎಂದು ಒಂದು ಇದೆ. ಯಾವ ತ್ಯಾಗಕ್ಕೂ ಬಂದಾಗ ಬಹಿಷ್ಕಾರ ಮಾಡುವುದಕ್ಕೂ ತಾವು ಸಿದ್ಧ ಇದ್ದೀರೋ ಅಥವಾ ಇಲ್ಲವೋ ಎಂದು ಕೇಳುತ್ತಿದ್ದೇವೆ. ಅಷ್ಟೆ;

ಶ್ರೀ ಬಿ.ಎಸ್. ಯಡಿಯೂರಪ್ಪ:– ಕಾವೇರಿ ಬಗ್ಗೆ ಅನ್ಯಾಯ ಆಗದಂತೆ ನೋಡಿಕೊಳ್ಳುತ್ತೇವೆ ಎಂದು ಹಿಂದೆನೇ ನಾವು ತೀರ್ಮಾನವನ್ನು ಈ ಸದನದಲ್ಲಿ ಮಾಡಿದ್ದೇವೆ. ಅಂತಹ ಪರಿಸ್ಥಿತಿ ಬಂದರೆ ಎಲ್ಲದಕ್ಕೂ ನಾವು ಸಿದ್ಧ ಎಂದು ಹೇಳಿದರೆ ಸಾಕು.

ಶ್ರೀ ಎಸ್.ಎಂ. ಕೃಷ್ಣ:– ಹೌದು; ಈಗ ಬಚಾವತ್ ಅವಾರ್ಡ್‌ನ್ನು ನಾವು ಬಹಿಷ್ಕಾರ ಮಾಡಿದ್ದೇವೋ? ಮಾನ್ಯ ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಆ

ಅವಾರ್ಡ್ ಬರಲಿಲ್ಲವೇ ? ಇವತ್ತು ಅವಾರ್ಡ್‌ನ್ನು ಮೀರಿಸುವುದಕ್ಕೋಸ್ಕರ ನಾಗಾಲೋಟದಿಂದ ಓಡಬೇಕಾದಂತಹ ಪರಿಸ್ಥಿತಿ ಬಂದಿದೆ. ಆದರೆ ಇಷ್ಟು ನಮ್ಮಲ್ಲಿ ಬೇಸಿಕ್ ಟ್ರಸ್ಟ್ ಇರಬೇಕು. ಏನು ಅಂದರೆ ಉದ್ದೇಶಪೂರ್ವಕವಾಗಿ ಅಥವಾ ಕುರ್ಚಿಗೋಸ್ಕರ ಆಗಲೀ ಅಧಿಕಾರಕ್ಕೋಸ್ಕರವೇ ಆಗಲಿ ನಾವು ಈ ಜಲಾನಯನ ಪ್ರದೇಶದ ಜನಗಳ ಹಿತವನ್ನು ಕಡೆಗಾಣಿಸುತ್ತೇವೆ ಎನ್ನತಕ್ಕ ಭಾವನೆ ಈ ಸದನದಲ್ಲಿ ಯಾರಿಗೂ ಇಲ್ಲ, ಹಾಗೆ ಎಂದು ನಾನು ತಿಳಿದುಕೊಂಡಿದ್ದೇನೆ. ಏನೇ ತೀರ್ಮಾನ ತೆಗೆದುಕೊಂಡರೂ ಸಹ ಎಲ್ಲರೂ ಒಟ್ಟಿಗೆ ತೆಗೆದುಕೊಳ್ಳೋಣ. ಅಪೆಕ್ಸ್ ಬಾಡಿಯಲ್ಲಿ ನಾವು ನೀವು ಇದರ ಬಗ್ಗೆ ತೀರ್ಮಾನ ಮಾಡೋಣ. ಮಾನ್ಯ ವಾಟಾಳ್ ನಾಗರಾಜ್ ಅವರು ತಮ್ಮ ಸ್ಥಾನಕ್ಕೆ ದಯ ಮಾಡಿ ಹೋಗಿ ಕುಳಿತುಕೊಂಡರೆ ನನಗೆ ಸಂತೋಷ, ನೆಮ್ಮದಿ ತಂದುಕೊಡುತ್ತದೆ ಎಂದು ಹೇಳುತ್ತೇನೆ. ಈಗ ಮಾನ್ಯ ಹನುಮೇಗೌಡರು ಬಹಳ ಸಂಕಟದಿಂದ ಕಲ್ಲಹಳ್ಳಿ, ಕೊಪ್ಪಲು ಕುಂಟನಹಳ್ಳಿ ಇತ್ಯಾದಿಗಳ ಬಗ್ಗೆ ಬಂದು ಹೇಳಿದರು. 11 ಗಂಟೆಯ ಸಮಯದಲ್ಲಿ ಆ ಜನರ ಸಂಕಟವನ್ನು ಹೇಳಿದರು. ಆ ಸಮಯದಲ್ಲಿ ಕೂಡ ಆ ಜನರ ಚಿಂತಾಜನಕವಾದ ಪರಿಸ್ಥಿತಿಯನ್ನು ನೋಡಿ ನನಗೂ ಬಹಳ ಕನಿಕರ ಉಂಟಾಯಿತು. ಇದುವರೆಗೆ ಅಲ್ಲಿ ಏನಾಗಿದೆ ಎಂದು ಮಾನ್ಯ ಹನುಮೇಗೌಡರು ನನಗೆ ಬಂದು ತಿಳಿಸಿದರು. ಸಂಬಂಧಪಟ್ಟವರನ್ನು ನಾನು ಕರೆಸಿ ಏನು ಮಾಡಬೇಕೆಂದು ಯೋಚನೆ ಮಾಡಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಮಾನ್ಯ ಹಂಪನಗೌಡರು ತುಂಗಭದ್ರಾ ಲೆಫ್ಟ್ ಬ್ಯಾಂಕ್ ಕೆನಾಲ್ ಬಗ್ಗೆ ಹೇಳಿದರು. ತುಂಗಭದ್ರಾ ಲೆಫ್ಟ್ ಬ್ಯಾಂಕ್ ಕೆನಾಲ್‌ಗೆ ಆಕ್ಷನ್ ಅಡ್ವಾನ್ಸ್‌ಗೆ ಒಂದು ಕೋಟಿ 60 ಲಕ್ಷ ರೂಪಾಯಿ ಬೇಕಾಗಿತ್ತು. ಅಡ್ವಾನ್ಸ್ ಆಕ್ಷನ್ ತೆಗೆದುಕೊಳ್ಳುವ ಸಲುವಾಗಿ ಅಷ್ಟು ಹಣ ಬೇಕಾಗುತ್ತದೆ. ಅವರು ಎಷ್ಟು ಕೇಳಿದ್ದಾರೆ ಅದನ್ನು ಅವರು ಬಿಡುಗಡೆ ಮಾಡುವುದಕ್ಕೆ ಸಾಧ್ಯ ಆಗಲಿಲ್ಲ ಎನ್ನುವುದನ್ನು ಮಾನ್ಯ ಹಂಪನಗೌಡರು ಕೇಳಿದ್ದಾರೆ. ತಮಗೆ ಬೇಕಾದುದನ್ನು, ಗಮನದಲ್ಲಿಟ್ಟುಕೊಂಡು ಮತ್ತೆ ತಮ್ಮ ಕಡೆ ಬರುತ್ತೇನೆ.

ಶ್ರೀ ಬಿ. ಹಂಪನಗೌಡ:– ಸಮಸ್ಯೆ ಏನು ಆಗಿದೆ ಎಂದರೆ.

ಶ್ರೀ ಎಸ್.ಎಂ. ಕೃಷ್ಣ:– ನಾನು ಸಮಸ್ಯೆಯನ್ನು ಅರ್ಥ ಮಾಡಿಕೊಂಡಿದ್ದೇನೆ. ಆದರೂ ಕೂಡ ಉತ್ತರ ನನಗೆ ಸಮಾಧಾನ ಇಲ್ಲ. ಆದರೆ ತಮ್ಮನ್ನು ಕರೆಸಿ ಈ ವಿಷಯದ ಬಗ್ಗೆ ಮಾಡುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಈ ಸದನದಲ್ಲಿ ಒಂದು ನಿರ್ಣಯ ತರಬೇಕು. ತಾವು ಏನು ಒಂದು ಯೋಜನೆ ಹಾಕಿಕೊಳ್ಳುತ್ತೀರಿ ಆ ಬಗ್ಗೆ ಮಾನ್ಯ ಸಚಿವರಿಗೆ ಒಂದು ಸಲಹೆ ಮಾಡಿದ್ದೆ. ಎರಡು ಸಾವಿರ ಇಸವಿಯೊಳಗೆ ನೀರನ್ನು ಬಳಕೆ ಮಾಡುತ್ತೇವೆಂದು ತಾವು ಹೇಳುತ್ತೀರಿ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್:– ನಾನು ನನ್ನ ಸಲಹೆ ಹೇಳಿದೆ. ತಮ್ಮ ಯೋಜನೆ ಒಳ್ಳೆಯದು ಇದೆ. ಆ ಯೋಚನೆ ಯೋಜನೆಯಾಗಿ ಕೊಟ್ಟರೆ ಒಳ್ಳೆಯದು. ಸರ್ಕಾರಕ್ಕೆ ಈ ಸದನದಲ್ಲಿ ಸರ್ವಾನುಮತದ ಬೆಂಬಲ ಇದೆ. ಸರ್ವಾನುಮತದ ಒಂದು ನಿರ್ಣಯಕ್ಕೆ ಬೆಂಬಲ ಕೂಡ ಇದೆ. ಎರಡು ಸಾವಿರದ ಇಸವಿ ಹೊತ್ತಿಗೆ ಏನು ಹಣ ಬೇಕು ಎಂಬ ಬಗ್ಗೆ ಸರ್ವಾನುಮತದ ಒಂದು ಬೆಂಬಲ ಈ ಸದನದಲ್ಲಿ ತೆಗೆದುಕೊಳ್ಳಿ. ಸರ್ಕಾರ ಅದಕ್ಕೆ ಬದ್ಧವಾಗಿರಲಿ. ತಾವು ಈ ಒಂದು ನಿರ್ಣಯವನ್ನು ತರುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:– ಮುಳವಾಡ ಯೋಜನೆ ಬಗ್ಗೆ ಡೀಟೇಲ್ಸ್ ತರಿಸಿ ತಮಗೆ ಹೇಳುತ್ತೇನೆ.

ಅಧ್ಯಕ್ಷರು:– ಸದನವು ಈಗ ಮುಂದುವರಿದು ಮತ್ತೆ 4.30 ಕ್ಕೆ ಸೇರುತ್ತದೆ.

(ಸಭೆಯು 3.24ಕ್ಕೆ ಮುಕ್ತಾಯವಾಗಿ ಮತ್ತೆ 4.30ಕ್ಕೆ ಸೇರಲು ನಿಶ್ಚಯಿಸಿತು)

(ಸದನವು ಪುನಃ 4.37 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(ಪಕ್ಷೇತರ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಸದನದ ಬಾವಿಯಲ್ಲಿದ್ದರು)

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಉಪ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಕಾವೇರಿ ವಿಚಾರದಲ್ಲಿ ಸಾಧಾರಣವಾಗಿ ಎಲ್ಲಾ ರಾಜಕೀಯ ಪಕ್ಷದವರು, ವಿರೋಧ ಪಕ್ಷದವರು ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡಿದ್ದಾರೆ. ನಾವು ಈಗ ಕಾವೇರಿ ಟ್ರಿಬ್ಯುನಲ್ ಬಾಯ್‌ಕಾಟ್ ಮಾಡಬೇಕು. ಈಗಾಗಲೇ ನಮಗೆ ಅನ್ಯಾಯವಾಗಿದೆ. ಇದರ ಬಗ್ಗೆ ಸ್ಪಷ್ಟವಾಗಿ ನಮ್ಮ ಕಣ್ಣಿಗೂ ಕಾಣುತ್ತಿದೆ. ಇದರ ಬಗ್ಗೆ ಸಂದೇಹವಿಲ್ಲ; ಮಾನ್ಯ ಉಪ ಮುಖ್ಯಮಂತ್ರಿಗಳು ನಾವು ಯಾವ ತ್ಯಾಗಕ್ಕೂ ಸಿದ್ದ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ; ಆದರೆ ತಮಗೆ ಬಹಿಷ್ಕಾರ ಮಾಡುವ ಉದ್ದೇಶದ ಅರ್ಥ ಇದೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ಹಾಗಾಗಿ ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಹಾಗೆಯೇ ಶ್ರೀ ವಾಟಾಳ್ ನಾಗರಾಜ್‌ರವರಲ್ಲಿ ಅವರು ತಮ್ಮ ಸ್ಥಾನಕ್ಕೆ ಬಂದು ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:– ಮಾನ್ಯ ಅಧ್ಯಕ್ಷರೆ, ನಾನು ನನ್ನ ಪರವಾಗಿ ಕಾವೇರಿಯ ಬಗ್ಗೆ ಏನು ಹೇಳಬೇಕೋ ಅದನ್ನೆಲ್ಲಾ ಹೇಳಿಬಿಟ್ಟಿದ್ದೇನೆ.

ಅಧ್ಯಕ್ಷರು:– ಶ್ರೀ ವಾಟಾಳ್ ನಾಗರಾಜ್‌ರವರೇ, ಅವರು ಸಾಕಷ್ಟು ಪದಗಳನ್ನು ಉಪಯೋಗಿಸಿದ್ದಾರೆ. ಅವರು ಯಾವ ತ್ಯಾಗಕ್ಕೂ ಸಿದ್ಧವಾಗಿದ್ದೇವೆ ಎಂದು ಹೇಳಿದ್ದಾರೆ. ಬಹಳ ಅರ್ಥಗರ್ಭಿತವಾದಂಥ ಶಬ್ದಗಳನ್ನು ಅವರು ಹೇಳಿದ್ದಾರೆ. ಆದ್ದರಿಂದ ದಯವಿಟ್ಟು ತಾವು ತಮ್ಮ ಸ್ಥಾನಕ್ಕೆ ಬರಬೇಕು.

ಶ್ರೀ ವಾಟಾಳ್ ನಾಗರಾಜ್:– (ಬಾವಿಯಿಂದ) ಮಾನ್ಯ ಅಧ್ಯಕ್ಷರೇ, ಅವರ ಮೇಲೆ ನನಗೆ ವೈಯಕ್ತಿಕವಾಗಿ ಏನೂ ದ್ವೇಷವಿಲ್ಲ. ಅವರ ಬಗ್ಗೆ ನನಗೆ ಗೌರವವಿದೆ. ಆದರೆ ನಮ್ಮ ರಾಜ್ಯ ಸರ್ಕಾರದ ನಿಲುವಿನ ಬಗ್ಗೆ ನಮ್ಮ ಪ್ರತಿಭಟನೆ ಇದೆ. ನ್ಯಾಯ ಮಂಡಲಿಯ ತೀರ್ಪಿನ ಬಗ್ಗೆ ಪ್ರತಿಭಟನೆ ಇದೆ. ಸರ್ಕಾರದ ನಿಲುವು ಅದೇ ಇರಬೇಕು, ಸಾರ್ವಜನಿಕವಾಗಿ ನಾವು ಏನು ಹೇಳಿದ್ದೇವೆ. ಇದರ ಬಗ್ಗೆ ಸದನದಲ್ಲೂ ನಿರ್ಣಯವಾಗಿದೆ. ನನಗೆ ರಾಜ್ಯದ ಹಿತವನ್ನು ಕಾಪಾಡಬೇಕೆಂಬ ಭಾವನೆ ಇದೆ. ಇದರ ಬಗ್ಗೆ ತಾವು ಹಿಂದೆ ಹೋಗಿದ್ದೀರಾ ಎಂದೂ ನಾನು ಹೇಳುವವನಲ್ಲ. ನಿಮ್ಮ ಬಗ್ಗೆ ನನಗೆ ಬಹಳ ಗೌರವವಿದೆ. ಅವರು ಈ ಬಗ್ಗೆ ಚಾಚು ತಪ್ಪುವುದಿಲ್ಲವೆಂದು ನನಗೆ ಗೊತ್ತಿದೆ. ಈಗ ಆಗಿರುವ ಅನ್ಯಾಯಕ್ಕೆ ಬಹಿಷ್ಕಾರ ಹಾಕುತ್ತೇನೆ ಎಂಬ ಬಗ್ಗೆ ಅವರಿಂದ ನನಗೆ ಸ್ಪಷ್ಟವಾದ ನಿಲುವು ಬೇಕಷ್ಟೇ, ಬೇರೆ ಮಾತು ನನ್ನದು ಏನಿಲ್ಲ.

ಶ್ರೀ ಎಸ್.ಎಂ. ಕೃಷ್ಣ:– ಸನ್ಮಾನ್ಯ ಅಧ್ಯಕ್ಷರೇ, ವಿದ್ಯುತ್ ಬೇಡಿಕೆಗಳ ಬಗ್ಗೆ ಸದನದ ನಾನಾ ಭಾಗದಿಂದ ಹಲವಾರು ಟೀಕೆಗಳು ಬಂದಿವೆ ಮತ್ತು ಸಲಹೆಗಳು ಬಂದಿವೆ. ನಮ್ಮ ರಾಜ್ಯದ ವಿದ್ಯುತ್ ಉತ್ಪಾದನೆ ಮತ್ತು ವಿದ್ಯುತ್ ವಿತರಣೆ ಈ ಎರಡು ಕ್ಷೇತ್ರದಲ್ಲಿಯೂ ಕೂಡ ನಾವು ಬಹಳ ಹಿಂದೆ ಬಿದ್ದಿದ್ದೇವೆ ಎನ್ನುವುದರ ದ್ಯೋತಕ ಇತ್ತೀಚಿನ ವರ್ಷಗಳಲ್ಲಿ ನಮ್ಮ ಅಸಮರ್ಪಕ ವಿದ್ಯುತ್ ಸರಬರಾಜಿನ ಪರಿಸ್ಥಿತಿಯಿಂದ ಸ್ಪಷ್ಟವಾಗುತ್ತದೆ. ಈ ಸದನದಲ್ಲಿ ಮತ್ತು ಹೊರಗಡೆ ನಮ್ಮ ಕರ್ನಾಟಕ

ವಿದ್ಯುಚ್ಛಕ್ತಿ ಮಂಡಲಿಯ ಕಾರ್ಯ ವೈಖರಿಯ ಬಗ್ಗೆ ಟೀಕೆಗಳ ಸುರಿಮಳೆಯಾಗಿದೆ. ಇದಕ್ಕೆ ಅರ್ಥ ಇದೆ ಮತ್ತು ಆ ಟೀಕೆಗಳಿಗೆ ಆಧಾರ ಇಲ್ಲ ಎಂದು ಹೇಳಿದರೆ ನಾವು ಸತ್ಯವನ್ನು ಮರೆಮಾಚಿದ ಹಾಗೆ ಆಗುತ್ತದೆ. ಆ ದೃಷ್ಟಿಯಿಂದಲೇ ಮಾನ್ಯ ಸದಸ್ಯರ ಸಲಹೆಗೆ ಅನುಸಾರವಾಗಿ ಈಗಾಗಲೇ ಒಂದು ಸದನದ ಸಮಿತಿಯನ್ನು ಅಧ್ಯಕ್ಷರೇ, ತಾವು ರಚನೆ ಮಾಡಿದ್ದೀರಿ. ಆ ಸದನದ ಸಮಿತಿ ವಿದ್ಯುಚ್ಛಕ್ತಿ ಮಂಡಲಿಯ ನಾನಾ ಕಾರ್ಯ ವಿಧಾನದ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ ಸಭೆಗೆ ಆ ವರದಿಯನ್ನು ಕೊಡುತ್ತದೆ. ಆ ವರದಿಯ ಆಧಾರದ ಮೇಲೆ ನಾವು ನಮ್ಮ ಮುಂದಿನ ನೀತಿಯನ್ನು ರೂಪಿಸಿಕೊಳ್ಳುವುದಕ್ಕೆ ಈ ಸಮಿತಿ ನನಗೆ ಸಹಾಯ ಮಾಡುತ್ತದೆ ಎನ್ನುವ ವಿಶ್ವಾಸ ನನ್ನದು. ಆದರೆ ನಾನು ಈಗಾಗಲೇ ಈ ಸದನದಲ್ಲಿ ಹೇಳಿಕೊಂಡಿರುವಂತೆ ಈ ಅಸಾಮಾನ್ಯ ಪರಿಸ್ಥಿತಿ ಏಕೆ ಉದ್ಭವವಾಗಿದೆ ಎಂದು ಹೇಳಿದರೆ, ಕಳೆದ 8 – 10 ವರ್ಷಗಳಲ್ಲಿ ನಮ್ಮ ಉತ್ಪಾದನೆಯು ಕಡಿಮೆಯಾಯಿತು. ಜೊತೆಗೆ ನಮ್ಮ ವಿದ್ಯುಚ್ಛಕ್ತಿ ಮಂಡಲಿಯ ಸಿಸ್ಟಂ ಏನು ಇದೆ, ಆ ಸಿಸ್ಟಂಅನ್ನು ಆಧುನೀಕರಣ ಮಾಡಬೇಕಾಗಿರುವುದರಲ್ಲಿ ನಾವು ಯಾವ ಪ್ರಮಾಣದ ಆಸಕ್ತಿಯನ್ನು ತೋರಿಸಬೇಕೋ ಅದನ್ನು ತೋರಿಸದೇ ಇರುವುದರಿಂದ ಈ ಪ್ರಮಾದ ಈ ದಿವಸ ನಮ್ಮ ರಾಜ್ಯದಲ್ಲಿ ನಡೆದಿದೆ. ಕಳೆದ 10 – 12 ವರ್ಷಗಳಲ್ಲಿ ಹೊಸ ಲೈನ್‌ಗಳನ್ನು ಹಾಕತಕ್ಕದ್ದು ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು, ಹೊಸ ಕೆಪಾಸಿಟರ್‌ಗಳನ್ನು ಹೊಸ ಸರ್‌ಕ್ಯೂಟ್ ಬ್ರೇಕರ್ಸ್‌ನ್ನು ಹಾಕುವುದರ ಬಗ್ಗೆ ನಾವು ಮಾರ್ಜಿನಲ್ ಇಂಟರೆಸ್ಟ್‌ನ್ನು ತೋರಿಸಿಕೊಂಡು ಬಂದಿರುವುದು ಮತ್ತು ಸಿಸ್ಟಂ ಇಂಪ್ರೂವ್‌ಮೆಂಟ್‌ಗೆ ಮಾಡಿರತಕ್ಕಂಥ ಹಣದ ಖರ್ಚೇ ನಮಗೆ ಒಂದು ರೀತಿಯ ಸಾಕ್ಷಿಯಾಗುತ್ತದೆ. ಆದುದರಿಂದಲೇ, ಈ ವರ್ಷ ಸುಮಾರು 167 ಕೋಟಿ ರೂಪಾಯಿಗಳ ವೆಚ್ಚವನ್ನು ಈ ನಮ್ಮ ಸಿಸ್ಟಂನ್ನು ಸ್ಟ್ರೆಂಥನ್ ಮಾಡುವುದಕ್ಕೆ ಮತ್ತು ಹೊಸ ಸ್ಟೇಷನ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ, ಹೊಸ ಲೈನ್‌ಗಳನ್ನು ಹಾಕುವುದಕ್ಕೆ ನಾವು ಏರ್ಪಾಡು ಮಾಡುತ್ತಿದ್ದೇವೆ. ಇದರ ಜೊತೆಗೆ ಈ ವಿದ್ಯುಚ್ಛಕ್ತಿ ಮಂಡಲಿಯ ಕಾರ್ಯವನ್ನು ಇನ್ನೂ ಹೆಚ್ಚು ತೃಪ್ತಿಕರವಾಗಿ ಮಾಡಬೇಕು ಎನ್ನುವ ದೃಷ್ಟಿಯಿಂದ ನಾವು ಈ ದಿವಸ ಗ್ರಾಹಕರಿಗೆ ಒತ್ತನ್ನು ಕೊಡಬೇಕಾಗುತ್ತದೆ. ಇವತ್ತು ನಮ್ಮ ಈ ವಿದ್ಯುಚ್ಛಕ್ತಿ ಮಂಡಲಿ ಪಡೆದಿರತಕ್ಕಂಥ ಏಕಸ್ವಾಮಿತ್ವ ಅಡಿಯಿಂದಾಗಿ ಈ ದಿವಸ ಗ್ರಾಹಕರ ದೂರನ್ನು ಕೇಳುವವರೇ ಇಲ್ಲದಂಥ ಒಂದು ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ನಿರ್ಮಾಣವಾಗಿದೆ. ಆದುದರಿಂದ ಅದನ್ನು ಗಮನಿಸಿ ನಾನು ಯೋಚನೆ ಮಾಡುತ್ತಿದ್ದೇನೆ. ಪ್ರತಿಯೊಂದು ಅಸೆಂಬ್ಲಿ ಕ್ಷೇತ್ರದಲ್ಲಿಯೂ ಕೂಡ ಒಂದು ವಿದ್ಯುತ್ ಗ್ರಾಹಕರ ಸಮಿತಿಯೊಂದನ್ನು ಮಾಡಬೇಕು ಎನ್ನುವಂಥ ವಿಚಾರವನ್ನು ಈ ಸಭೆಯಲ್ಲಿ ನಾನು ಸೂಚಿಸಲು ಇಷ್ಟಪಡುತ್ತೇನೆ. ಇದರಿಂದ ಏನಾಗುತ್ತದೆಯೆಂದರೆ ನಮ್ಮ ಸ್ಥಳೀಯ ವಿದ್ಯುಚ್ಛಕ್ತಿ ಮಂಡಲಿಯವರಿಗೆ ತಾವು ಅಕೌಂಟಬಲ್ ಎನ್ನುವಂತಹ ಒಂದು ಪ್ರವೃತ್ತಿ ಅವರಿಗೆ ಬರುತ್ತದೆ. ಈ ದಿವಸ ಅವರ ಮೇಲೆ ಅಂಕುಶವೇ ಇಲ್ಲ.

ಅವರು ನಿರಂಕುಶವಾಗಿ ತಮ್ಮ ಕಾರ್ಯಭಾರವನ್ನು ಮಾಡಿಕೊಂಡು ಹೋಗತಕ್ಕಂಥ ಪರಿಸ್ಥಿತಿ ಇದೆ. ಈ ಪರಿಸ್ಥಿತಿಗೆ ನಾವು ಕಡಿವಾಣ ಹಾಕಬೇಕು. ಆದ್ದರಿಂದ ಇತ್ತೀಚಿನ ದಿವಸಗಳಲ್ಲಿ ನಮ್ಮ ರಾಷ್ಟ್ರದಲ್ಲೇ ಅಲ್ಲ, ಹೊರ ರಾಷ್ಟ್ರದಲ್ಲಿ ಕೂಡ ಈ ಗ್ರಾಹಕರ ರೈಟ್ಸ್ ಏನಿವೆ, ಆ ಹಕ್ಕನ್ನು ನ್ಯಾಯಾಲಯಗಳಲ್ಲೂ ಕೂಡ ಪ್ರತಿಪಾದನೆ ಮಾಡುವುದಕ್ಕೆ ಹೊರಟಿದ್ದೇವೆ ಮತ್ತು ಸ್ಟೇಟ್ಸ್, ನೇಷನ್ಸ್ ಅವರು ಈ ಕನ್‌ಸ್ಯೂಮರ್ಸ್‌ರವರ ರೈಟ್ಸ್‌ನ್ನು ಪ್ರೊಟೆಕ್ಟ್ ಮಾಡುವುದಕ್ಕೆ ಮುಂದಾಗುತ್ತಿದ್ದಾರೆ. ಆದ್ದರಿಂದ ಈ ಗ್ರಾಹಕರ ಸಮಿತಿಗಳನ್ನು ಪ್ರತಿ ಅಸೆಂಬ್ಲಿ ಕ್ಷೇತ್ರದಲ್ಲೂ ಕೂಡ ಅಸೆಂಬ್ಲಿ ಮೆಂಬರ್‌ರವರ ಅಧ್ಯಕ್ಷತೆಯಲ್ಲಿ ಅಥವಾ ಅವರು ಸೂಚನೆ ಮಾಡಿದವರ ಅಧ್ಯಕ್ಷತೆಯಲ್ಲಿ ಮಾಡುವುದರ ಮೂಲಕ ಸ್ಥಳೀಯವಾಗಿ ಈ ಸಮಸ್ಯೆಯನ್ನು ಬಗೆಹರಿಸಬಹುದಾಗಿದೆ. ಬಹಳ ಮುಖ್ಯವಾಗಿ ನಮ್ಮ ಮಾಧುಸ್ವಾಮಿಯವರು ಹಾಗೂ ಬೈರೇಗೌಡರು ಈ ವಿಚಾರದಲ್ಲಿ ವಿಶೇಷವಾದ ಅಧ್ಯಯನ ಮಾಡಿದ್ದಾರೆ. ತಾವು ಹೇಳಿರತಕ್ಕಂಥ

ಒಂದೊಂದು ಮಾತಿನಲ್ಲೂ ಕೂಡ ಬಹಳ ಮಟ್ಟಿಗೆ ನಮ್ಮ ನ್ಯೂನತೆಗಳು, ನಮ್ಮ ಲ್ಯಾಪ್ಸಸ್ ನಮ್ಮ ಷಾರ್ಟ್‌ಕಮಿಂಗ್ಸ್ ಅದಕ್ಕೆ ನಿಮ್ಮಿಬ್ಬರ ಭಾಷಣ ಮತ್ತು ಏಕಾಂತಯ್ಯನವರ ಭಾಷಣ ಇವೆರಡೂ ಅದಕ್ಕೆ ಹಿಡಿದಿರತಕ್ಕಂಥ ಕನ್ನಡಿ ಎಂದು ಹೇಳಿ ನಾನು ಭಾವನೆ ಮಾಡುತ್ತೇನೆ. ಈ ಹತ್ತಾರು ವರ್ಷಗಳಿಂದ ಬಂದಿರತಕ್ಕಂಥ ಅದೇ ಶರಾವತಿ ಕಂಬ, ಅದೇ ಕಾಳಿ ವಿದ್ಯುತ್ ಕಂಬ, ಆ ಕಂಬಗಳನ್ನು ಬದಲಾಯಿಸಲಿಲ್ಲ. ನಮ್ಮ ಇದಿನಬ್ಬನವರು ಇಲ್ಲ. ಅವರು ಕಂಬ ಇದ್ದರೆ ತಂತಿ ಇಲ್ಲ. ತಂತಿ ಇದ್ದರೆ ಕಂಬ ಇಲ್ಲ. ಅವೆರಡು ಇದ್ದರೆ ಜನರು ಇಲ್ಲ ಎಂದರು. ಇದನ್ನು ಕೇಳುವುದಕ್ಕಾದರೂ ಒಂದು ಸಮಿತಿ ಇರಬೇಕು. ಲೈನ್‌ಮೆನ್ ಅಲ್ಲಿರತಕ್ಕಂಥ ಇಂಜಿನಿಯರುಗಳ ಮೇಲೆ ಅಲ್ಲಿರತಕ್ಕಂಥ ಆಪರೇಟರ್‌ಗಳ ಮೇಲೆ, ಅಲ್ಲಿರತಕ್ಕಂಥ ಫೋರ್‌ಮೆನ್‌ಗಳ ಮೇಲೆ ಈ ದಿವಸ ಅಲ್ಲಿ ಒಂದು ಸಮಿತಿ ಇದೆ ಎಂದು ಹೇಳಿದರೆ ಆ ಸಮಿತಿ ಎರಡು ತಿಂಗಳಿಗೆ ಒಂದು ಸಾರಿ ಸಭೆ ಸೇರುತ್ತದೆ ಎಂದರೆ ಅದರ ರೆಸ್ಪಾನ್ಸ್ ಅವರು ಮಾಡತಕ್ಕಂಥ ಕೆಲಸ ಕಾರ್ಯಗಳ ಮೇಲೆ ಇದು ಸಾಕಾದಷ್ಟು ಪ್ರಭಾವವನ್ನು ಬೀರುತ್ತದೆ ಎನ್ನತಕ್ಕಂಥದ್ದನ್ನು ಹೇಳಿ. ಇದಕ್ಕೆ ತಾವುಗಳು ಒಪ್ಪುತ್ತೀರಿ ಎಂದು ಹೇಳಿ ಭಾವನೆ ಮಾಡಿ ಈ ಸಮಿತಿಗಳನ್ನು ಮಾಡುವ.....

ಶ್ರೀ ಸಿ. ಬೈರೇಗೌಡ:- ಅದಕ್ಕೆ ಏನಾದರೂ ಅಧಿಕಾರ ಕೊಡುತ್ತೀರಾ ? ಏಕೆಂದರೆ ನಮ್ಮ ತಾಲ್ಲೂಕು ಪಂಚಾಯಿತಿ ಸಮಿತಿ ಇದೆ. ಅಲ್ಲಿ ತಾಲ್ಲೂಕು ಪಂಚಾಯಿತಿ ಸಮಿತಿಗೆ ಏನಾಗಿದೆ ಎಂದರೆ ಒಂದೇ ಒಂದು ಪೇಜ್ ಇರತಕ್ಕಂಥ ಪಂಚಾಯತ್ ರಾಜ್ ಆ್ಯಕ್ಟ್‌ನಲ್ಲಿ ಏನೂ ಅಧಿಕಾರ ಇಲ್ಲ. ಆ ತರಹ ಒಂದು ಸಮಿತಿಯನ್ನು ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರ ಮಟ್ಟದಲ್ಲಿ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಅದಕ್ಕೆ ಅಧಿಕಾರ ಕೊಟ್ಟು ಇವರು ತಪ್ಪು ಮಾಡಿದರೆ ಕೇಳತಕ್ಕಂಥದ್ದು ಇರಬೇಕು. ಹಾಗೆ ಅಧಿಕಾರ ಕೊಟ್ಟು ಸಮಿತಿಯನ್ನು ಮಾಡಿದರೆ ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗುತ್ತದೆ. ದಯವಿಟ್ಟು ಅದನ್ನು ಆಲೋಚನೆ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ:- ಈಗ ತಾವು ಒಳ್ಳೆಯ ಸೂಚನೆ ಮಾಡಿದ್ದೀರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ಇದು ಬಹಳ ಅವಶ್ಯಕತೆ ಇದೆ. ಕನ್‌ಸ್ಯೂಮರ್ ಪ್ರೊಟೆಕ್ಷನ್ ರೈಟ್ ಬಗ್ಗೆ ಯಾರೂ ಸಹ ಚಿಂತನೆ ಮಾಡುವುದಿಲ್ಲ ಮತ್ತು ಕೆ.ಇ.ಬಿ.ಯ ಮಾನೊಪಲಿಯ ಮೂಲಕ ಇಂಥ ಸಮಿತಿಯ ಅವಶ್ಯಕತೆ ಇದೆ. ಅದು ಬೈರೇಗೌಡರು ಹೇಳಿದಂತೆ ಲೈನ್‌ಮನ್ ಮೇಲೆ ಕಂಟ್ರೋಲ್ ಇರಬೇಕು, ಕೆ.ಇ.ಬಿ.ಯಲ್ಲಿ ಸರಿಯಾದ ವ್ಯವಸ್ಥೆಯಿಲ್ಲ ಎಂದರೆ ವ್ಯವಸ್ಥೆಯನ್ನು ಈ ಪ್ರಕಾರ ಮಾಡ್ರಿ ಎಂದು ಹೇಳುವಂಥ ಒಂದು ಅಧಿಕಾರ ಇರಬೇಕು. ಈ ಅಧಿಕಾರ ಇರಬೇಕಾದರೆ ಅಡ್ವೈಸರಿ ಸಮಿತಿ ಇದ್ದರೆ ಇದಕ್ಕೆ ಹೆಚ್ಚಿನ ಮಹತ್ವ ಬರುವುದಿಲ್ಲ. ಹಾಗಾಗಿ ಕನಿಷ್ಠ ನಾನೇನು ಅವರನ್ನು ಬುಲ್ಡೋಜ್ ಮಾಡುವಷ್ಟು ಅಧಿಕಾರ ಕೊಡಿ ಎಂದು ನಾನು ಹೇಳುವುದಿಲ್ಲ. ಮಿನಿಮಮ್ ಅಟ್‌ಲೀಸ್ಟ್ ಆ ಸಮಿತಿ ಏನು ನಿರ್ಣಯ ತೆಗೆದುಕೊಳ್ಳುತ್ತದೆ ಅಥವಾ ಏನೊಂದು ಆದೇಶವನ್ನು ಕೊಡುತ್ತದೆ ಅದು ಜಾರಿಯಲ್ಲಿ ಬರುವಂಥ ವ್ಯವಸ್ಥೆ ತಮ್ಮ ಕಡೆಯಿಂದ ಆಗಬೇಕಾಗುತ್ತದೆ. ಅಂದರೆ ತಮ್ಮ ಉದ್ದೇಶ ಏನಿದೆ, ನಿಜವಾದ ಉದ್ದೇಶ ಏನಿದೆ, ಅದು ಎಫೆಕ್ಟೀವಾಗಿ ಇಂಪ್ಲಿಮೆಂಟ್ ಆಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ:- ಈಗ ವಿದ್ಯುತ್ ಮಂಡಲಿಯ ಈ ಆ್ಯಕ್ಟ್ ಏನಿದೆ, ಅದು ಇದಕ್ಕೆ ಈ ಸಮಿತಿಗಳನ್ನು ಮಾಡುವುದಕ್ಕೆ ಯಾವ ರೀತಿ ನಮಗೆ ಅವಕಾಶ ಒದಗಿಸಿಕೊಡುತ್ತದೆ ಎನ್ನತಕ್ಕಂಥದ್ದನ್ನು ನಾವು ಯೋಚನೆ ಮಾಡುತ್ತೇವೆ ಅದು ಬೇರೆ. ಆದರೆ ತಾವು ಏನು ಹೇಳುತ್ತೀರಿ, ಇದಕ್ಕೆ ಅಧಿಕಾರ ಕೊಡಬೇಕು ಹಾಗೆ ಎಂದು ಹೇಳಿ, ನನ್ನ ಸೀಮಿತವಾದಂಥ ಕಲ್ಪನೆ ಇವತ್ತು ಈ ಸಮಿತಿಗಳನ್ನು ಮಾಡತಕ್ಕಂಥದ್ದು ಏತಕ್ಕೆಂದರೆ, ಈ ಎಲೆಕ್ಟ್ರಿಸಿಟಿ ವಿತರಣೆಯಲ್ಲಿರತಕ್ಕಂಥ ನ್ಯೂನತೆಗಳನ್ನು ಐಡೆಂಟಿಫೈ ಮಾಡತಕ್ಕಂಥದ್ದು ಮತ್ತು ಅದನ್ನು ಮೇಲ್ಪಟ್ಟವರ ಗಮನಕ್ಕೆ ತರತಕ್ಕಂಥದ್ದು. ಇವೆರಡು ಆದರೆ ಕೊಂಚ

ಮಟ್ಟಿಗೆ ಸುಧಾರಣೆ ಬರುತ್ತದೆ ಎಂದು ಹೇಳಿ ನಾನು ಈ ದೃಷ್ಟಿಯಿಂದ ಸಮಿತಿಗಳನ್ನು ಮಾಡಬೇಕು ಎಂದು ಹೇಳಿದೆ. ಮೊದಲು ಇದನ್ನು ಅಡ್ವೈಸರಿ ಕಮಿಟಿ ಎಂತಲೇ ಪ್ರಾರಂಭ ಮಾಡೋಣ. ಅನಂತರ ಒಂದು ವರ್ಷ ಈ ಸಮಿತಿಗಳು ಕೆಲಸ ಮಾಡಿದ ಮೇಲೆ ಆ ಅನುಭವದ ಹಿನ್ನೆಲೆಯಲ್ಲಿ ನಾವು ಮುಂದೆ ಬೇಕಾದರೆ ಇದಕ್ಕೆ providing teeth to the committee ಅದನ್ನು ಬೇಕಾದರೆ ಮುಂದೆ ನಾವು ಕನ್‌ಸಿಡರ್ ಮಾಡಬಹುದು ಹಾಗೆ ಎಂದು ಹೇಳಿ ನಾನು ಅದನ್ನು ಸಧ್ಯಕ್ಕೆ ಅಲ್ಲಿಗೇ ಬಿಡುತ್ತೇನೆ. ಅದರಲ್ಲಿ ಎಷ್ಟು ಸದಸ್ಯರು ಇರಬೇಕು ಏನು ಎನ್ನುವುದರ ರೂಪುರೇಷೆಗಳನ್ನು ನಾನು ಸಿದ್ಧಮಾಡಿ ಎಷ್ಟು ಸದಸ್ಯರುಗಳು ಇರಬೇಕು, ಅದರಲ್ಲಿ ಯಾವ ಯಾವ ವರ್ಗಗಳನ್ನು, ಈಗ ಭಾಗ್ಯಜ್ಯೋತಿ ಯೋಜನೆಯನ್ನು ಕೇಳತಕ್ಕಂಥವರೇ ಇಲ್ಲ. ಆ ಭಾಗ್ಯಜ್ಯೋತಿಯಲ್ಲಿ ಯಾರು ಫಲಾನುಭವಿಗಳು ಇದ್ದಾರೆ, ಅವರ ರೆಪ್ರೆಸೆಂಟೆಟೀವ್ ಒಬ್ಬರು ಆ ಅಡ್ವೈಸರಿ ಕಮಿಟಿಯಲ್ಲಿದ್ದರೆ ಅವರು ಅವರ ಕುಂದುಕೊರತೆಗಳನ್ನು ನಿವೇದಿಸಿಕೊಳ್ಳಬಹುದು. ಹಾಗೆ ನಾನಾ ಇಂಟರೆಸ್ಟ್ ಏನಿದೆ, ಅವರನ್ನು ಅಲ್ಲಿ ಹಾಕತಕ್ಕಂಥ ಒಂದು ವ್ಯವಸ್ಥೆ. ಮತ್ತು ನಾನು ಈಗಾಗಲೇ ಆಗಿಂದಾಗ್ಗೆ ಹೇಳುತ್ತಾ ಇರತಕ್ಕ ರೀತಿಯಲ್ಲಿ ಅದು ನಾವು ವಿದ್ಯುತ್ ಉತ್ಪಾದನೆ ಬಗ್ಗೆ ಇನ್ನೂ ಹೆಚ್ಚು ಗಮನವನ್ನು ಹರಿಸಬೇಕು. ವಿದ್ಯುತ್ ಉತ್ಪಾದನೆ ವಿಚಾರದಲ್ಲಿ ಎರಡು ಅಭಿಪ್ರಾಯಗಳು ಈ ಮನೆಯಲ್ಲಿ ಬಂದಿದೆ. ಅದು ಏನೆಂದರೆ ಮಾನ್ಯ ಸದಸ್ಯರುಗಳು ಅವರ ಭಾಷಣಗಳ ಕಾಲದಲ್ಲಿ, ವಿದ್ಯುತ್‌ನ ದೊಡ್ಡ ಇನ್‌ವೆಂಟರಿಯನ್ನು ಈ ವಿದ್ಯುತ್ ಮಂಡಲಿಯಲ್ಲಿ ಮಾಡಿದ್ದಾರೆ ಹಾಗೆ ಎಂದು ಹೇಳಿ, 136 ಕೋಟಿಯಷ್ಟು ಎಂಬ ಅಭಿಪ್ರಾಯ ಬಂತು. ಇದರ ಬಗ್ಗೆ ನಮ್ಮ ಇಲಾಖೆಯವರ ಜೊತೆಯಲ್ಲಿ ಮಾತನಾಡಿದಂತಹ ಕಾಲದಲ್ಲಿ, ಚರ್ಚೆ ಮಾಡಿದಂತಹ ಕಾಲದಲ್ಲಿ ನಮಗೆ ಅನಿಸುವುದು ಏನು ಎಂದರೆ ಕೆಲವು ಭಾಗಗಳಲ್ಲಿ ಈ ಇನ್‌ವೆಂಟರಿ ಆವಶ್ಯಕವಾಗಿ ಬೇಕಾಗಿದ್ದಕ್ಕಿಂತಲೂ ಹೆಚ್ಚಿಗೆ ಇದೆ ಎಂದು ಒಪ್ಪಿಕೊಳ್ಳಬಹುದಾದರೂ ಕೂಡ ಬಹುತೇಕ ನಮ್ಮ ಯಲಹಂಕ ಡೀಸೆಲ್ ಜನರೇಟಿಂಗ್ ಸೆಟ್‌ಗೆ ಬೇಕಾಗುವಂತಹ ಸ್ಪೇರ್ಸ್‌ನ್ನು ಮತ್ತು ಆಗಿಂದಾಗ್ಗೆ....

ಶ್ರೀ ಸಿ. ಬೈರೇಗೌಡ:– ತಮಗೆ ವಿಷಯ ಗೊತ್ತಿದೆ, ಗೊತ್ತಿದ್ದರೂ ಕೂಡ ತಾವು ಇವತ್ತಿನ ದಿವಸ ಅದನ್ನು ಒಂದು ಸ್ವಲ್ಪ ಮಟ್ಟಿಗೆ ಮರೆ ಮಾಚತಕ್ಕ ಕೆಲಸ ಮಾಡುತ್ತಿದ್ದೀರಿ; ಅದು ತಮ್ಮ ಬಾಯಿಯಲ್ಲಿ ಬರಬಾರದು. ಇವತ್ತು ನಾವು ಇನ್‌ವೆಂಟರಿಯಲ್ಲಿರತಕ್ಕ ಎಲ್ಲ ಐಟಂಮ್ಸ್‌ಗಳ ಬಗ್ಗೆ ಪ್ರಶ್ನೆ ಮಾಡುತ್ತಾ ಇಲ್ಲ. ಎಲ್ಲಿ ಎಷ್ಟು ಅವಶ್ಯಕತೆ ಇತ್ತು ಅಷ್ಟು ತೆಗೆದುಕೊಂಡಿದ್ದರೆ ಅದಕ್ಕೆ ಸಂತೋಷ. ಇದು 130 ಕೋಟಿ, ಇಲ್ಲವೇ 136 ಕೋಟಿ ಆಗಿರಬಹುದು ಅಥವಾ 200 ಕೋಟಿ ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳಬೇಕಾಗಿದ್ದರೂ ಸಹ ಈ ರೀತಿ ಕೊಂಡುಕೊಂಡಿದ್ದರೆ ಸರಿಯಿತ್ತು. ಆದರೆ ಇದು ಹಾಗೆ ಆಗಿಲ್ಲ. ಒಂದು ಉದಾಹರಣೆ ತಮಗೆ ಹೇಳುತ್ತೇನೆ. ಸುಮಾರು 2 – 3 ತರಹದ ತಂತಿ ಇದೆಯಲ್ಲಾ, ಈ ತಂತಿ ಒಂದು ಲಕ್ಷ ಕಿಲೋ ಮೀಟರ್‌ನಷ್ಟು ತೆಗೆದುಕೊಂಡಿದ್ದಾರೆ. ಇದು ಏಕೆ ಬೇಕಾಗಿತ್ತು ? 2 – 3 ವರ್ಷಕ್ಕೆ ಸಾಕಾಗುವಷ್ಟು ತಂತಿ ಇವತ್ತಿನ ದಿವಸ ಏಕೆ ? ಅದಕ್ಕೆ ಬದಲಾಗಿ ಇವತ್ತು ಪವರ್ ಟ್ರಾನ್ಸ್‌ಫಾರ್ಮರ್‌ಗಳು ಇದ್ದಾವಲ್ಲ, ಎಲ್ಲಿ ಕೇಳಿದ್ದರೂ ಕೂಡ ಹೆಚ್ಚಿನ ಕೆಪಾಸಿಟಿ ಟ್ರಾನ್ಸ್‌ಫಾರ್ಮರ್ ಹಾಕತಕ್ಕಂಥಹ ಅವಶ್ಯಕತೆ ಇದೆ. ಆ ಟ್ರಾನ್ಸ್‌ಫಾರ್ಮರ್‌ಗಳಿಗೆ ಆರ್ಡರ್ ಕೊಡಲಿಲ್ಲ. ಎಲ್ಲಿ ಹೆಚ್ಚಿಗೆ ಕಮೀಷನ್ ಸಿಗುತ್ತಿತ್ತು. ಎಲ್ಲಿ ಇವರು ಹಚ್ಚಿಗೆ ಜೇಬಿಗೆ ಸೇರಿಸಿಕೊಳ್ಳಬೇಕೋ ಅಲ್ಲಿ ಹೆಚ್ಚಿಗೆ ಆರ್ಡರನ್ನು ಕೊಟ್ಟಿದ್ದಾರೆ. ಉದಾಹರಣೆಗೆ ತಂತಿ ಬಗ್ಗೆ ಕೊಟ್ಟೆ. ಅವರ ಬಗ್ಗೆ ಹೆಚ್ಚಿಗೆ ಹೇಳದಿರುವುದಕ್ಕೆ ಕಾರಣ ಅಂದರೆ ಅದಕ್ಕೆ ಸಮಿತಿ ಇದೆ. ಆ ಸಮಿತಿ ಇದ್ದ ಕಾರಣ ಹೇಳಲಿಲ್ಲ. ಒಂದೇ ಒಂದು ಉದಾಹರಣೆ ತಂತಿ ಬಗ್ಗೆ ಹೇಳಿದೆ. ಎರಡು ಮೂರು ತರಹದ ತಂತಿ ಇದೆ. 30 ಸಾವಿರ ಕಿಲೋಮೀಟರ್, 40 ಸಾವಿರ ಕಿಲೋ ಮೀಟರ್ ಒಟ್ಟಿಗೆ ಸೇರಿ ಒಂದು ಲಕ್ಷ ಕಿ.ಮೀ.ನಷ್ಟು ತಂತಿ ಕೊಂಡುಕೊಂಡಿದ್ದಾರೆ. ಅಷ್ಟು ಅವಶ್ಯಕತೆ ಇರಲಿಲ್ಲ.

ಶ್ರೀ ಎಸ್.ಎಂ. ಕೃಷ್ಣ:– ನಿಜ, ನಾನು ಈ ಇಲಾಖೆಯ ಅಧಿಕಾರ ವಹಿಸಿಕೊಂಡ ಮೇಲೆ ಒಂದು ಮೀಟಿಂಗ್ ಅವರು ಕರೆದಾಗ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಅದು ಪತ್ರಿಕೆಗಳಲ್ಲೂ ಕೂಡ ಬಂದಿದೆ, ಬಂದಿದ್ದನ್ನು ನಾನೇ ಓದಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ:– ನಾನು ಇದರ ಬಗ್ಗೆ ಮಾತನಾಡಿಲ್ಲ. ಆದ್ದರಿಂದ ಇದರ ಬಗ್ಗೆ ಅವರ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಅವರು ಈ ಖಾತೆಯನ್ನು ವಹಿಸಿಕೊಂಡ ತರುಣದಲ್ಲಿ ಸುಮಾರು 3 – 4 ದಿವಸಗಳಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಏನೆಂದರೆ ವಿದ್ಯುತ್ ಮಂಡಲಿಯಲ್ಲಿ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡಿ ಕೆಲಸಕ್ಕೆ ಬಾರದ ವಸ್ತುಗಳನ್ನು ಯಾರು ಖರೀದಿ ಮಾಡಿದ್ದಾರೆ. ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಪತ್ರಿಕಾ ವರದಿಯ ಕಟಿಂಗ್ ನನ್ನಲ್ಲಿ ಇಲ್ಲ. ಆದರೂ ಕೂಡ ಆ ಒಂದು ಮಾತನ್ನು ಅವರು ಹೇಳಿದ್ದಾರೆ. ಈಗಾಗಲೇ ಸಾಕಷ್ಟು ದಿವಸ ಕಳೆದು ಹೋಗಿದೆ. ಕೆಲಸಕ್ಕೆ ಬಾರದ ಕೋಟ್ಯಂತರ ರೂಪಾಯಿಗಳ ವಸ್ತುವನ್ನು ಕೊಂಡುಕೊಂಡಿರುವವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಹೇಳಿದರೆ ನಮಗೆ ಸಂತೋಷವಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ:– ಡಿಸೆಂಬರ್ 1992ನೇ ಇಸವಿಯ ಹೊತ್ತಿಗೆ ಸುಮಾರು 106 ಕೋಟಿ ರೂಪಾಯಿಗಳ ಇನ್‌ವೆಂಟರಿ ಈಗ ಇದೆ. ಮೊದಲು ಇದ್ದುದು 137 ಕೋಟಿ ರೂ.ಗಳಿಗೆ ಏನೋ ಇತ್ತು. ಆ ನವೆಂಬರ್ ಡಿಸೆಂಬರ್‌ನಲ್ಲಿ. ಅದರಲ್ಲಿ 106ಕೋಟಿ ರೂಪಾಯಿಗಳಿಗೆ ಲೆಕ್ಕ ಹೇಳುವುದಾದರೆ Materials for diesel generating station, Rs. 14.43 crores; spares Rs. 3.84 crores; O & M Materials Rs. 28.60 crores, major works Rs. 30.15 crores, UG Cables for use in Bangalore Rs. 10 cr. materials 11.60 crores. ಇನ್ನು ಸಾದಿಲ್ವಾರು 7 ಕೋಟಿ 97 ಲಕ್ಷ. ಯು.ಜಿ. ಕೇಬಲ್ಸ್ ಏನು 10 ಕೋಟಿ ಬೆಲೆಯಷ್ಟು ಇದೆ, ಇದಕ್ಕೆ ಟೆಂಡರ್ ಕರೆದಿದ್ದೇವೆ. ಟೆಂಡರ್ ಅನ್ನು ಫೈನಲೈಸ್ ಮಾಡಿದ ತಕ್ಷಣ ಯು.ಜಿ. (ಅಂಡರ್‌ಗ್ರೌಂಡ್)ಕೇಬಲ್ಸ್ ಅನ್ನು ರಿಲೀಸ್ ಮಾಡುತ್ತೇವೆ. ಮೇಜರ್ ವರ್ಕ್ಸ್‌ಗೆ ಬಹಳ ಅತ್ಯಲ್ಪ ಕಾಲದಲ್ಲಿ in a short span of time, 30 ಕೋಟಿ ಏನಿದೆ ನಾವು ದಾಸ್ತಾನು ಸಂಗ್ರಹಿಸುತ್ತಿರತಕ್ಕಂಥಾದ್ದು, ದಾಸ್ತಾನಲ್ಲ, ಮೆಟೀರಿಯಲ್ಸ್ ಅದನ್ನು ಮೇಜರ್ ವರ್ಕ್ಸ್‌ನಲ್ಲಿ ನಾವು ಉಪಯೋಗಿಸಿಕೊಳ್ಳುತ್ತಿದ್ದೇವೆ. 31.1.1993ನೇ ಇಸವಿ ಹೊತ್ತಿಗೆ stores inventory has been reduced to less than Rs. 100 crores by drawing and utlisation materials for various works.

ಶ್ರೀ ಜೆ.ಸಿ. ಮಾಧುಸ್ವಾಮಿ:– ನಮ್ಮ ವಾದ ಬಂದಿದ್ದೇ ಇಲ್ಲಿ. ಮೇಜರ್ ವರ್ಕ್ಸ್‌ಗೆ ಏನು ಕೊಡುತ್ತೀರಿ, ಅದಕ್ಕೆ ಕಂಡಕ್ಟರ್ಸ್ ಅಷ್ಟೊಂದು ಬೇಕಾಗಿರಲಿಲ್ಲ. ಡಿಸ್ಟ್ರಿಬ್ಯೂಟರ್ಸ್ ಮತ್ತು ಟ್ರಾನ್ಸ್‌ಮಿಷನ್ ಲೈನ್‌ನಲ್ಲಿ ಕೊಡಬೇಕಾಗಿದ್ದ ಕಂಡಕ್ಟರ್‌ಗಳು ಕೆಇಬಿಯಲ್ಲಿ ಸ್ಟಾಕ್ ಇಲ್ಲ. ಇಷ್ಟೊಂದು ಕಂಡಕ್ಟರ್‌ಗಳಿಗೆ ಮೇಜರ್ ವರ್ಕ್ಸ್ ಎಂದು ಛಾರ್ಜ್ ಮಾಡುತ್ತಾರೆ. ಆದರಲ್ಲಿ ಇನ್ನೊಂದು ಬ್ರೇಕ್ – ಅಪ್ ತೋರಿಸಿ; ಕಂಡಕ್ಟರ್ ಎಷ್ಟಿದೆಯೆಂಬುದು ಗೊತ್ತಾಗುತ್ತದೆ. ಅಂಡರ್‌ಗ್ರೌಂಡ್ ಕೇಬಲ್ ಕೂಡ ಅಷ್ಟೆ; ಬೆಂಗಳೂರಿನಲ್ಲಿ ಪ್ಲಾನ್ ಮಾಡಿ 25–30 ಕಿಲೋಮೀಟರ್‌ಗೆ 8 – 10 ಕೋಟಿ ರೂಪಾಯಿಗಳ ಕೇಬಲ್ ಕೊಳ್ಳುವಂಥ ಸ್ಥಿತಿ ಕೆಇಬಿಗೆ ಇರಲಿಲ್ಲ. ಅಷ್ಟು ದೂರದವರೆಗೆ ನಿಮ್ಮ ಪ್ಲಾನ್ ಸಹ ಇಲ್ಲ. ಈ ಸಮಸ್ಯೆಯನ್ನೇ ನಾವು ಎತ್ತಿರುವುದು. Whether it was necessary; ಅಲ್ಲಿ ಪರ್ಚೇಸ್ ಆಗಿಲ್ಲ, ಇನ್‌ವೆಂಟರಿ ಆಗಿಲ್ಲ.

ಶ್ರೀ ಹೆಚ್. ಏಕಾಂತಯ್ಯ:– ನೀವು ವಿವರವಾಗಿ ನೋಡಿದರೆ ಗೊತ್ತಾಗುತ್ತದೆ. ಡಿಸಿಸಿ ಬ್ಯಾಂಕಿನಲ್ಲಿ

ಚೆಕ್ ಪುಸ್ತಕಗಳನ್ನು ಏನು ಪ್ರಿಂಟ್ ಮಾಡಿಸಿದ್ದಾರೆ. ಖಂಡಿತವಾಗಿ ಹಾಗೆ ಆಗಿದೆ. ದಯವಿಟ್ಟು ತಾವು ಅದನ್ನು ತೆಗೆದು ನೋಡಿದರೆ, ನಾವು ಹೇಳುವುದರಲ್ಲಿ ಏನಾದರೂ ......

ಶ್ರೀ ಜೆ.ಸಿ. ಮಾಧುಸ್ವಾಮಿ:– ತಾವು ವಿಷಯವನ್ನು ಹಿಡಿದು ಹೇಳುತ್ತಿದ್ದೀರೆಂಬುದು ನಮ್ಮ ಭಾವನೆ.

ಶ್ರೀ ಎಸ್.ಎಂ. ಕೃಷ್ಣ:– ಅದಕ್ಕೆ ಕಾರಣವಿಲ್ಲ. ನಾನು ವಿಷಯವನ್ನು ಹಿಡಿದು ಹೇಳುವುದಕ್ಕೆ ನನಗೆ ಕಂಪಲ್‌ಶನ್ಸ್ ಇಲ್ಲ.

ಶ್ರೀ ಸಿ. ಭೈರೇಗೌಡ:– ಈಗ ನೋಡಿ Squirrel, whistel, rabbit ಈ ಮೂರು ತರಹದ ಕಂಡಕ್ಟರ್‌ಗಳನ್ನು ಎಷ್ಟು ಕೊಂಡುಕೊಂಡಿದ್ದಾರೆ ಎಂದರೆ 1 ಲಕ್ಷ 21 ಸಾವಿರ ಕಿಲೋಮೀಟರ್‌ಗಳಿಗೆ ಆಗುವಷ್ಟು ಕೊಂಡುಕೊಂಡಿದ್ದಾರೆ. ಒಂದೊಂದು ಕಿಲೋಮೀಟರ್‌ಗೂ 200–300ರೂಪಾಯಿಗಳಷ್ಟು ಎಕ್ಸೆಸ್ ಕೊಟ್ಟಿದ್ದಾರೆ. ಉಳಿದ ವಿಷಯಗಳಿಗೆ ನಾನು ಹೋಗುತ್ತಿಲ್ಲ.

ಶ್ರೀ ಎಸ್.ಎಂ. ಕೃಷ್ಣ:– ಈಗ ಸದನ ಸಮಿತಿಯನ್ನು ಹೇಗೂ ನೇಮಕ ಮಾಡಿದ್ದೇವೆ. ಅದರ ಮೊದಲನೆಯ ಸಭೆ ಕರೆದಾಗ ನೀವು ಪ್ರಥಮವಾಗಿ ಇನ್‌ವೆಂಟರಿಗೆ ಹೋಗಿ. ಸ್ಕ್ವಿರೆಲ್ ರ್‍ಯಾಬಿಟ್ ಮತ್ತು ವೀಸೆಲ್, ಈ ಮೂರನ್ನು ನೋಡಿಕೊಂಡು ಬಂದ ನಂತರ ನೀವು ಏನು ಶಿಫಾರಸ್ಸು ಮಾಡುತ್ತೀರಿ; ಆ ಶಿಫಾರಸ್ಸಿನ ಆಧಾರದ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಏಕೆಂದರೆ, ಸದನ ಸಮಿತಿಯಲ್ಲಿ ಒಂದು ಮಹತ್ತರವಾದಂಥ ಹೊಣೆಗಾರಿಕೆ ನಿಮ್ಮ ಮೇಲೆ ಹಾಕಿದ್ದೇವೆ. ಆದುದರಿಂದ, ಎಲ್ಲೆಲ್ಲಿ ತಪ್ಪುಗಳಾಗಿವೆಯೋ ಅದನ್ನು ಹುಡುಕತಕ್ಕಂಥ ಶಕ್ತಿ ತಮಗಿದೆಯೆಂಬ ವಿಶ್ವಾಸ ನನಗಿದೆ. ಆದ ಕಾರಣ ಆ ವಿಷಯವನ್ನು ಅಲ್ಲಿಗೆ ಬಿಟ್ಟು ಬಿಡುತ್ತೇನೆ. ಇನ್ನು ವಿದ್ಯುಚ್ಛಕ್ತಿ ಮಂಡಳಿ......

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಿಮ್ಮ ಸರ್ಕಾರ ಬರಿ ಸಮಿತಿಗಳ ಸರ್ಕಾರ ಎಂದು ಕಾಣುತ್ತದೆ. ಎಲ್ಲಾದಕ್ಕೂ ಸಮಿತಿ ಮಾಡುತ್ತೀರಿ. ನಮ್ಮ ಮಾತಿಗೆ ಬೆಲೆ ಇದೆಯೋ ಇಲ್ಲವೋ ? ನನಗಂತೂ ಅರ್ಥವಾಗುತ್ತಿಲ್ಲ. ಏಕೆಂದರೆ, ಚುನಾವಣೆಗೆ ಇನ್ನು ಒಂದೂವರೆ ವರ್ಷ ಉಳಿದಿದೆ. ನನಗೆ ಭಯ ಏನು ಬಂದಿದೆಯೆಂದರೆ, ಈ ಸಮಿತಿಗಳಿಗೆ ಕೆಲಸ ಮಾಡುವುದಕ್ಕೆ ಸಮಯವಿದೆಯೇ ? ಈ ಸಮಿತಿಗಳ ವರದಿಗಳು ಬಂದ ನಂತರ ನಿಮ್ಮ ಸರ್ಕಾರ ಇರುತ್ತದೆಯೋ ಏನೋ ಎಂಬ ಸಂಶಯ ಬರುತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್:– ಹಿಂದೆ ಕಮೀಷನ್‌ಗಳ ಸರ್ಕಾರ ಆಗಿತ್ತು. ಆಗ ಎಷ್ಟು ಕಮೀಷನ್‌ಗಳ ನೇಮಕವಾಗಿತ್ತು. ಎಷ್ಟು ಜ್ಯುಡಿಷಿಯಲ್ ಕಮೀಷನ್‌ಗಳ ನೇಮಕವಾಗಿತ್ತು; ಆದರೆ, ಸದನದ ಸಮಿತಿ ಇಲ್ಲೇ ಇರುತ್ತದೆ, ವರದಿ ಕೊಡುತ್ತದೆ. ಒಂದು ವೇಳೆ ವರದಿ ಕೊಡದೆ ಹೋದರೆ 'ಏನು ಸ್ವಾಮಿ, ಸದನದ ಸಮಿತಿ ವರದಿ ಕೊಟ್ಟಿದ್ರಲ್ಲಾ, ಏನಾಯಿತು ?' ಎಂದು ಕೇಳಬಹುದು. ಈಗ ಕಮೀಷನ್ ಬಗ್ಗೆ ಯಾರನ್ನು ಕೇಳುವುದು ?

ಶ್ರೀ ಎಸ್.ಎಂ. ಕೃಷ್ಣ:– ನನಗೆ ಸದನ ಸಮಿತಿ ರಚಿಸಲು ಪ್ರತ್ಯೇಕ ಉತ್ತೇಜನ ಸಿಕ್ಕಿದ್ದು 1989ರಲ್ಲಿ. "Special Committee on Power to suggest remedial measures to the power problems in the state." ನಾವು ಇನ್ನೊಂದು ಹೆಜ್ಜೆ ಮುಂದೆ ಹೋಗಿದ್ದೇವೆ. ನೀವು ಮಂತ್ರಿಗಳನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ, ಈಗ ನಾವು ಸದಸ್ಯರನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದೇವೆ. This is an improvement over this committee.

ಶ್ರೀ ಬಿ.ಹೆಚ್. ಬನ್ನಿಕೋಡ್:– ಇದು ಸರ್ಕಾರದ ಪ್ರಗತಿಯೇ ?

ಶ್ರೀ ಎಸ್.ಎಂ. ಕೃಷ್ಣ:– ಪ್ರಗತಿಯತ್ತ ನಮ್ಮ ಯೋಜನೆ ಇದು.

ಶ್ರೀ ಆರ್.ಎಲ್. ಜಾಲಪ್ಪ:- ಮಾನ್ಯಮಂತ್ರಿಗಳೇ ಅಧ್ಯಕ್ಷರಾಗಿದ್ದರೆ ಚೆನ್ನಾಗಿತ್ತು.

SRI S.M. KRISHNA:- That is one of way of looking at things. I am trying to look at other angle. ನಿಮ್ಮನ್ನು ಬಿಟ್ಟರೆ ನೀವು ಅದನ್ನು ಮಾಡಿ ಅನಂತರ ನಮಗೆ ಏನು ಮಾಡಬೇಕೆಂದು ತಿಳಿಸಿದರೆ ನಾವು ಅದನ್ನು ಮಾಡುತ್ತೇವೆ. ಮತ್ತು ತಮಗೆ ಇದರ ಜೊತೆಗೆ ಸಹಕಾರವನ್ನು ಕೊಡುತ್ತೇವೆ. ಆಮೇಲೆ ಮಾನ್ಯ ಏಕಾಂತಯ್ಯನವರು, ಬೈರೇಗೌಡರು, ಮಾಧುಸ್ವಾಮಿಯವರು ಕೆ.ಇ.ಬಿ.ಗೆ ಬರಬೇಕಾಗಿರತಕ್ಕ ಬಾಕಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದು ಕೇವಲ ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಆಂಧ್ರಪ್ರದೇಶದಲ್ಲೂ ಸಹ ಅಲ್ಲಿನ ವಿದ್ಯುತ್ ಮಂಡಳಿಗಳಿಗೆ 333 ಕೋಟಿ ರೂಪಾಯಿ ಬಾಕಿ ಬರಬೇಕಾಗಿದೆಯಂತೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಿಮ್ಮ ಒರಿಜಿನಾಲಿಟಿಯನ್ನು ಈಗ ಕಳೆದುಕೊಂಡು ಬಿಟ್ಟರಿ. ಇದು ಅಧಿಕಾರಿಗಳು ಕೊಟ್ಟಿರತಕ್ಕ ಮಾಹಿತಿ. ಅವರು ನಾವಿದ್ದಾಗ ನಮಗೂ ಸಹ ಇದೇ ರೀತಿ ಆಂಧ್ರಪ್ರದೇಶದಲ್ಲಿ, ಕೇರಳದಲ್ಲಿ ಇಷ್ಟಿದೆ ಎಂದು ವಿವರ ಕೊಡುತ್ತಿದ್ದರು. ಇದರಿಂದ ಏನೂ ಉಪಯೋಗವಾಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ತಾವು ಈ ರೀತಿ ಮಾಡಬಾರದು, ತಾವು ಇದರಲ್ಲಿ ಏನಾದರೂ ಅಭಿವೃದ್ಧಿ ಮಾಡುತ್ತೀರೆಂದು ನಮಗೆ ವಿಶ್ವಾಸವಿದೆ, ಮಹಾರಾಷ್ಟ್ರದಲ್ಲಿ, ಆಂಧ್ರದಲ್ಲಿ ತಮಿಳುನಾಡಿನಲ್ಲಿ ಇಷ್ಟು ಬಾಕಿ ಇದೆ ಎಂದು ಹೇಳಬೇಡಿ; You should not defend your arrears here. ಬಾಕಿ ವಸೂಲಿಯನ್ನು ಯಾವ ಪ್ರಕಾರವಾಗಿ ಮಾಡುತ್ತೀರೆಂದು ಸ್ಪಷ್ಟವಾಗಿ ಹೇಳಿ. ಇವತ್ತು ಕೆ.ಇ.ಬಿ. ಕಷ್ಟದಲ್ಲಿದೆ; ಅದಕ್ಕೆ ಹಣವಿಲ್ಲ, ಅದಕ್ಕೆ ಹಣ ವಸೂಲಿಯಾಗಬೇಕಾಗಿದೆ; ಆ ಹಣವನ್ನು ವಸೂಲಿ ಮಾಡುವ ಬಗ್ಗೆ ಸ್ಪಷ್ಟವಾಗಿ ಹೇಳಿ; ಬೇರೆ ರಾಜ್ಯದ ಅಂಕಿಅಂಶಗಳನ್ನು ನೋಡಿ ನಾವು ಏನು ಮಾಡಬೇಕಾಗಿದೆ ?

ಶ್ರೀ ಎಸ್.ಎಂ. ಕೃಷ್ಣ:- ವಿರೋಧ ಪಕ್ಷದ ನಾಯಕರು ಮತ್ತು ಉಪನಾಯಕರು ನನ್ನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ. ಬೇರೆ ರಾಜ್ಯದ ಅಂಕಿಅಂಶಗಳನ್ನು ನಾನೇ ಇಂದು ಬೆಳಿಗ್ಗೆ ಪೇಪರ್‌ನಲ್ಲಿ ಬಂದಿದ್ದನ್ನು ನನ್ನ ಕತ್ತರಿಯಿಂದಲೇ ಕಟ್ ಮಾಡಿ ಇಲ್ಲಿ ಅಂಟಿಸಿಕೊಂಡು ಬಂದಿದ್ದೇನೆ. ಅಧಿಕಾರಿಗಳಾರು ಈ ಕೆಲಸವನ್ನು ಮಾಡಲಿಲ್ಲ. ಏಕೆಂದರೆ ಅವರು ನನ್ನ ಕೈಯಲ್ಲಿ ಕೊಟ್ಟು ಇದನ್ನು ಹೇಳಿಸಿದ್ದಾರೆಂದು ಹೇಳುವುದು ಸರಿಯಾಗುವುದಿಲ್ಲ. ಏಕೆಂದರೆ ನಾವು ಅಪಚಾರ ಮಾಡಿದಂತಾಗುತ್ತದೆ ಮತ್ತು ನಾನು ಮಾಡಿರತಕ್ಕ ಕೆಲಸಕ್ಕೆ ಮರ್ಯಾದೆ ಸಿಗದೆ ಹೋಗುತ್ತದೆ. ಆದಕಾರಣ ಇದು ನಾನು ಮಾಡಿರತಕ್ಕ ಕೆಲಸ. ಅನಂತರ ಈ ಅರಿಯರ್ಸ್‌ನ ಬಗ್ಗೆ ಹೇಳುವುದಾದರೆ, ನಾವು ಇದನ್ನು ಇಷ್ಟು ದೊಡ್ಡ ಪ್ರಮಾಣಕ್ಕೆ ಬೆಳೆಯುವುದಕ್ಕೆ ಬಿಡಬಾರದಾಗಿತ್ತು, ಆದರೆ ನಮಗೆ ಇದರಲ್ಲಿ ಬೇಕಾದಷ್ಟು ಕಂಪಲ್‌ಷನ್ ಇದೆ. ಅವುಗಳೇನೆಂದರೆ ಕೆಲವು ಕೇಂದ್ರ ಸರ್ಕಾರದ ಸಂಸ್ಥೆಗಳಾದ ಕುದುರೆಮುಖ ಐರನ್ ಓರ್ ಕಾರ್ಖಾನೆ, ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಕಾರ್ಖಾನೆ. ಈಗ ಒಂದು ಸಮಾಧಾನದ ಅಂಶವೇನೆಂದರೆ ಮೊನ್ನೆ ತಾನೆ ಕುದುರೆಮುಖ ಕಾರ್ಖಾನೆಯ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಕೇಂದ್ರದ ಉಕ್ಕು ಖಾತೆಯ ಕಾರ್ಯದರ್ಶಿಯವರು ಹಾಗೂ ನಮ್ಮ ಮುಖ್ಯ ಕಾರ್ಯದರ್ಶಿಯವರು ಹಾಗೂ ನಮ್ಮ ವಿದ್ಯುತ್ ಮಂಡಳಿಯ ಅಧ್ಯಕ್ಷರು ಒಟ್ಟಿಗೆ ಸೇರಿ ಕುದುರೆಮುಖ ಕಾರ್ಖಾನೆಯವರು ನಮಗೆ ಕೊಡಬೇಕಾಗಿರತಕ್ಕ ಹಣದ ಬಗ್ಗೆ ಒಂದು ನಿರ್ಣಯಕ್ಕೆ ಬಂದಂತಿದೆ, ಮತ್ತು ಆ ನಿರ್ಣಯವನ್ನು ಸಚಿವಸಂಪುಟದ ಮುಂದಿಟ್ಟು ಅನಂತರ ಅದರ ಬಗ್ಗೆ ಒಂದು ಅಂತಿಮವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಇನ್ನೂ ಬೇರೆ ಕಡೆಗಳಿಂದ ಬರಬೇಕಾಗಿರತಕ್ಕ ಬಾಕಿಯನ್ನೂ ಕೂಡ ವಸೂಲಿ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಈ ವಸೂಲಾತಿ ಕಾರ್ಯಕ್ರಮದ ಬಗ್ಗೆ ನಾವು ಈಗಾಗಲೇ ತಿಳಿಸಿರುವಂತೆ ಕೆಲವು ಕಡೆ ಕೋರ್ಟ್‌ನಿಂದ ತಡೆಯಾಜ್ಞೆ ಬಂದಿದೆ, ತಡೆಯಾಜ್ಞೆ ಎಂದರೆ ಯಾವ ರೂಪದಲ್ಲಿದೆ ಎಂದರೆ ನೀವು ಬಾಕಿಯನ್ನು ವಸೂಲಿ ಮಾಡಬೇಡಿ ಮತ್ತು ಅವರಿಗೆ ವಿದ್ಯುತ್‌ನ್ನು ಸಹ ನಿಲ್ಲಿಸಬೇಡಿ ಎಂದು ಇದೆ. Directions have been issued to the Electricity Board. When this is so, what do you except the Electricity board to do? I do not think any of you will take contempt of court proceedings....

ಶ್ರೀ ಹೆಚ್. ಏಕಾಂತಯ್ಯ:- ಇದು ಎಲ್ಲಾ ಇಲಾಖೆಯಲ್ಲಿಯೂ ಸಹ ಇದೆ. ಅದಕ್ಕೆ ಮುಖ್ಯವಾದ ಕಾರಣವೇನೆಂದರೆ ನಿಮ್ಮ ಕೆ.ಇ.ಬಿ.ನವರಿಗೆ ಏನು ಇಂಥ ತಡೆಯಾಜ್ಞೆಯ ಆದೇಶ ಬರುತ್ತದೆ ಅದನ್ನು ಸಂಬಂಧಪಟ್ಟ ಅಧಿಕಾರಿಗಳಾಗಲಿ, ಮುಖ್ಯಸ್ಥರಾಗಲಿ ವಜಾ ಮಾಡಲು ಪ್ರಯತ್ನ ಮಾಡುವುದಿಲ್ಲ. ಬೇಕಾದರೆ ನೀವು ಇದನ್ನು ವೆರಿಫೈ ಮಾಡಿ. ಆಸ್ಟೇಯನ್ನು ವಜಾ ಮಾಡುವುದಕ್ಕೆ ಕೆ.ಇ.ಬಿ.ಯವರಾಗಲಿ, ನಮ್ಮ ಸರ್ಕಾರದ ಯಾವುದೇ ಇಲಾಖೆಯ ಮುಖ್ಯಸ್ಥರಾಗಲೀ ಯಾವುದೇ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಇದರಲ್ಲಿ ಶಾಮೀಲತ್ವ ಇದೆ. ಅನೇಕ ಸಂದರ್ಭಗಳಲ್ಲಿ ರಿಟ್ ಪಿಟಿಷನ್ ಕಾಪಿ ಕೊಟ್ಟಿಲ್ಲವೆಂದು ಸುಮ್ಮನಿದ್ದಾರೆ. ಈ ಸ್ಟೇಯನ್ನು ವೆಕೇಟ್ ಮಾಡುವುದಕ್ಕೆ ಕ್ರಮ ಏತಕ್ಕೆ ತೆಗೆದುಕೊಳ್ಳಲಿಲ್ಲವೆಂದು ನಿಮ್ಮ ಅಧಿಕಾರಿಗಳನ್ನು ಕೇಳಿದರೆ, ತಮ್ಮ ಅಧಿಕಾರಿಗಳ ಉತ್ತರ ಏನೆಂದರೆ, 3 ವರ್ಷವಾದರೂ ರಿಟ್ ಪಿಟಿಷನ್ ಕಾಪಿ ಬಂದಿಲ್ಲ ಎಂದು ಹೇಳಿರತಕ್ಕದ್ದು ರೆಕಾರ್ಡ್‌ನಲ್ಲಿದೆ. ಆದುದರಿಂದ ನಾನು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ತಮ್ಮ ಇಂಜಿನಿಯರ್‌ಗಳೇ ಕಕ್ಷಿದಾರರಿಗೆ ಹೇಳಿ ನೀವು ಕೋರ್ಟನ್ನು ಮೊರೆ ಹೋಗಿ ಎಂದು ಹೇಳಿ ಕಳುಹಿಸುತ್ತಿದ್ದಾರೆ. ನೀವೇ ಹೋಗಿ ಇಂಥ ಸೆಕ್ಷನ್ ಕೆಳಗೆ ಕೋರ್ಟನ್ನು ಅಪ್ರೋಚ್ ಮಾಡಿ ಎಂದು ಹೇಳಿ ಕಳುಹಿಸುತ್ತಾರೆ. ಇಂಥ ಪ್ರಕರಣಗಳನ್ನು ತಮಗೆ ತಂದುಕೊಟ್ಟರೆ ಅದರ ಮೇಲೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್.ಎಂ. ಕೃಷ್ಣ:- ನಮ್ಮ ಇಂಜಿನಿಯರ್‌ಗಳೇ ಈ ರೀತಿ ಹೇಳಿ ಕೊಟ್ಟು ಅವರನ್ನು ಕೋರ್ಟಿಗೆ ಕಳುಹಿಸಿರುವಂಥ ಪ್ರಕರಣಗಳು ನನ್ನ ಗಮನಕ್ಕೆ ಬಂದರೆ ಅದರ ಬಗ್ಗೆ ಬೇರೆ ರೀತಿಯಲ್ಲಿ ವಿಚಾರಣೆ ಮಾಡೋಣ. ಆದರೆ ಇಲ್ಲಿ ಕೋರ್ಟಿನಿಂದ ಬಂದಿರತಕ್ಕ ಸ್ಟೇ ಆರ್ಡರ್‌ಗಳಿಗೆ ಮಾನ್ಯತೆ ಕೊಡಬೇಕೇ ಅಥವಾ ಬೇಡವೇ ಎಂಬುದು ಪ್ರಶ್ನೆ. ಇದರ ಜೊತೆಗೆ ನಾನು ನಮ್ಮ ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರ ಜೊತೆಯಲ್ಲಿ ಮಾತನಾಡಿ ನಮಗೆ ಬಾಕಿ ಕೊಡಬೇಕಾದ ದೊಡ್ಡ ದೊಡ್ಡ ಬಾಕಿದಾರರು ಯಾರಿದ್ದಾರೆ, ಅವರು ಯಾವ ಯಾವ ಲಾಯರ್‌ಗಳನ್ನು ನೇಮಿಸಿಕೊಂಡಿದ್ದಾರೆಂಬುದನ್ನು ನಾವು ರಿವ್ಯೂ ಮಾಡಿ ಆದಷ್ಟು ಶೀಘ್ರದಲ್ಲಿ ನಮಗೆ ಬರಬೇಕಾದ ಸುಮಾರು 551 ಕೋಟಿ ರೂ. ಬಾಕಿ ಏನಿದೆ ಅದನ್ನು ಹಿಡಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆಂದು ತಮಗೆ ಭರವಸೆ ಕೊಡುತ್ತೇನೆ. Smeur. The dues from this company is 11.86 crores of which Rs. 589 crores is towards principal. The company claimed for non-payment of interest during the period of stay by the court, has been upheld by the court. KEB has however challenged through a writ appeal, which has been admitted. In respect of reduction of central energy and levy of penalty, the high court stayed the recovery. Mahadeva Textile Mills, Hubli – The court of Munsiff, Hubli granted injunction and the Board is taking necessary action to get the injunction vacated. Indian Aluminium Company – Rs. 8.44 crores, which had filed a

review petition in the Supreme Court. The Supreme Court has decided the case in favour of the Board. Based on this the High Court has to be moved for vacating its order of statusquo, after which necessary action will be taken to recover the money. Tungabhadra Fibres, Gangavathi, owe an amount of Rs. 2 crores. power supply has been disconnected as early as 31.12.1986. The case is pending in the Court. Brindavan Alloys Rs. 68 lakhs. It has been contested in the High Court. Karnataka Steels and wire Products Rs. 27 lakhs. The company is under liquidation. Kapila Cements. The High Court had stayed the order. Balarpur Industries Rs. 47 lakhs. Disconnection had been stayed by the Court. West Coast Paper Mills Rs 49 lakhs. Recovery had been stayed by the Court. ಹೀಗೆ ಪ್ರತಿಯೊಂದಕ್ಕೂ ಹೈಕೋರ್ಟ್‌ನವರು ಸ್ಟೇ ಕೊಡುತ್ತಿದ್ದಾರೆ. ಇದರಿಂದ ಏನು ಅರ್ಥವಾಗುತ್ತದೆಂದರೆ, our legal wing has to be strengthened, so that we could successfully contest all these cases, because we have a very strongcase and you know in these days, without meaning any disrespect tothe judiciary, courts, howthings happen and how stay orders are obtained. Therefore, we have to respect it and at the same time, we will have to strengthen our legal back up in the KEB. I can assure the hon. members that I will address myself to these problems. ಇನ್ನು ಮೆಮೋರಾಂಡಂ ಆಫ್ ಅಂಡರ್‌ಸ್ಟ್ಯಾಂಡಿಗ್ಸ್ ಬಗ್ಗೆ ಮಾನ್ಯ ಬೈರೇಗೌಡರು ಮತ್ತು ಮಾನ್ಯ ಏಕಾಂತಯ್ಯನವರೂ ಹೇಳಿದರು. ಈಗ ದೇಶಾದ್ಯಂತ ಒಂದು ಹೊಸ ವಿಚಾರ ಕೇಳಿ ಬಂದಿರುವುದು ಏನೆಂದರೆ, ಇದುವರೆಗೂ ವಿದ್ಯುತ್ ಉತ್ಪಾದನಾ ಕ್ಷೇತ್ರವನ್ನು ಕೇವಲ ಸರ್ಕಾರೀ ಕ್ಷೇತ್ರದಲ್ಲೇ ಇರಿಸಿಕೊಳ್ಳಲಾಗಿತ್ತು. ಆದರೆ ಕಳೆದ ಒಂದು ವರ್ಷದಿಂದ ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲೂ ಕೂಡ ಖಾಸಗೀ ಬಂಡವಾಳವನ್ನು ತರಬೇಕೆಂದು ಹೇಳಿ ಇದರ ಪಾಲಿಸಿ ಆಫ್ ಲಿಬರಲೈಸೇಷನ್ ಏನಿದೆ ಅದಕ್ಕೆ ಸಾಕಷ್ಟು ಚಾಲನೆ ಇತ್ತೀಚಿನ ದಿನಗಳಲ್ಲಿ ಸಿಕ್ಕಿದೆ.

ಬಹುಶಃ ಕರ್ನಾಟಕ ಈ ವಿಚಾರದಲ್ಲಿ ಮಿಕ್ಕ ರಾಜ್ಯಗಳಿಗಿಂತ ನಾಲ್ಕು ಹೆಜ್ಜೆ ಮುಂದೆ ಹಾಕಿತ್ತು ಎನ್ನತಕ್ಕಂಥದ್ದು ನಿರ್ವಿವಾದವಾಗಿ ನಾವು ಹೇಳಬೇಕಾಗಿರತಕ್ಕಂಥ ವಿಚಾರ. ಹಿಂದಿನ ಮುಖ್ಯಮಂತ್ರಿಗಳು ಅವರ ಕೆಲವು ಅಧಿಕಾರಿಗಳು ಈ ಖಾಸಗಿ ವಲಯದಿಂದ, ಹೊರದೇಶಗಳಿಂದ, ಎನ್‌ಆರ್‌ಐಗಳಿಂದ ಮತ್ತು ಮಲ್ಟಿನ್ಯಾಷನಲೈಸ್ ಅವರಿಂದ, ಈ ಪವರ್ ಉತ್ಪಾದನೆಗೆ ಹಣವನ್ನು ನಮ್ಮಲ್ಲಿಗೆ ತೆಗೆದುಕೊಂಡು ಬರಬೇಕೆಂದು ಹೇಳಿ ಪ್ರಯತ್ನ ಮಾಡಿದ್ದರು ಮತ್ತು ಕೆಲವು ಮೆಮೊರ್ಯಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಗ್ಸ್‌ಗೂ ಕೂಡ ಅವರು ಸೈನ್ ಮಾಡಿದ್ದರು. ಆದರೆ ಈ ಮೆಮೊರ್ಯಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಗ್ಸ್‌ಗೆ ಏಕೆ ಅಷ್ಟು ಕಿಮ್ಮತ್ತು ಬರಲಿಲ್ಲವೆಂದರೆ, ಇದಕ್ಕೆ ಕೇಂದ್ರ ಸರ್ಕಾರದ ಬೆಂಬಲ ಅಥವಾ ಅಥಾರಿಟಿ ಅಷ್ಟು ಇರಲಿಲ್ಲ; ಏತಕ್ಕೆಂದರೆ ಒಂದು ಸರ್ಕಾರ, ಅದರಲ್ಲೂ ರಾಜ್ಯ ಸರ್ಕಾರ ಹೊರಗಡೆ ಇರತಕ್ಕಂಥ ಯಾವುದಾದರೂ ಒಂದು ಕಂಪೆನಿ ಜೊತೆಯಲ್ಲಿ ಒಂದು ಮೆಮೊರಾಂಡಮ್ ಆಫ್ ಅಂಡರ್‌ಸ್ಟಾಂಡಿಗ್ಸ್‌ಗೆ ಸಹಿ ಮಾಡಬೇಕಾದಂಥ ಸಂದರ್ಭ ಬಂದರೆ ಅದಕ್ಕೆ ಪೂರ್ವಭಾವಿಯಾಗಿ ಹಲವಾರು ಕಾರ್ಯಕ್ರಮಗಳನ್ನು ಕೇಂದ್ರದ ಗೌವರ್ನಮೆಂಟ್ ಆಫ್ ಇಂಡಿಯಾ, ಮಿನಿಸ್ಟ್ರಿ ಆಫ್ ಎಕನಾಮಿಕ್ಸ್ ಅಫೇರ್ಸ್, ಮಿನಿಸ್ಟ್ರಿ ಆಫ್ ಎಕ್ಸಟರ್ನಲ್ ಅಫೇರ್ಸ್,

ಇವರ ಜೊತೆಯಲ್ಲಿ ಎಲ್ಲ ಕೋಆರ್ಡಿನೇಟ್ ಮಾಡಿ ಅವರ ಮೂಲಕ ಯಾವುದಾದರೂ ಒಂದು ಮೆಮೊರಾಂಡಮ್ ಆಫ್ ಅಂಡರ್‌ಸ್ಟಾಂಡಿಗ್ಸ್‌ಗೆ ಸೈನ್ ಆಗಿದ್ದಿದ್ದರೆ ಅದಕ್ಕೆ ಒಂದು ವಿಶೇಷವಾದಂಥ ಒಂದು ಮಹತ್ವವಿರುತ್ತಿತ್ತು. ಆದರೆ ಈ ಮೆಮೊರಾಂಡಮ್ ಆಫ್ ಅಂಡರ್‌ಸ್ಟಾಂಡಿಗ್ಸ್‌ಗೆ ಏನು ನಮ್ಮ ರಾಜ್ಯ ಸರ್ಕಾರದವರು ಅಲ್ಲಿ ಸೈನ್ ಮಾಡಿ ಬಂದಿದ್ದರು. ಅದರಲ್ಲಿ ಕೆಲವು ವಿಚಾರಗಳಲ್ಲಿ ನಾವು ಮುಂದಕ್ಕೆ ಹೋಗಲಿಕ್ಕೆ ಸಾಧ್ಯವಾಗಲಿಲ್ಲ. ಆದರೆ ಒಂದು Cogentrics ಅನ್ನತಕ್ಕಂಥ ಸಂಸ್ಥೆ ಇದೆ, ಅದು ಒಂದು ಥರ್ಮಲ್ ಪವರ್ ಪ್ಲಾಂಟ್‌ನ್ನು ಸ್ಥಾಪನೆ ಮಾಡಬೇಕೆಂದು ಹೇಳಿ, ಒಂದು ಮೆಮೊರಾಂಡಮ್ ಆಫ್ ಅಂಡರ್‌ಸ್ಟಾಂಡಿಂಗ್ಸ್‌ಗೆ ಹಿಂದೆ ಸೈನ್ ಮಾಡಿದ್ದರು. ಈಗ ಅದು ಬಹಳ ಮುಂದುವರಿದು ಮಂಗಳೂರಿನಲ್ಲಿ ಒಂದು ಸಾವಿರ ಮೆಗಾವ್ಯಾಟ್ ಉತ್ಪಾದನಾ ಸಾಮರ್ಥ್ಯವುಳ್ಳ ಒಂದು ಥರ್ಮಲ್ ಪ್ಲಾಂಟ್ ಹಾಕಬೇಕೆಂದು ಹೇಳಿ ತೀರ್ಮಾನ ಮಾಡಿದ್ದಾರೆ. ಅದಕ್ಕೆ ಯೂನಿಯನ್ ಗೌವರ್ನಮೆಂಟಿನಿಂದ ಬಹುಶಃ ಇನ್ನು ಕೆಲವೇ ದಿವಸಗಳಲ್ಲಿ ನಮಗೆ ಗ್ರೀನ್ ಸಿಗ್ನಲ್ ಸಿಗುತ್ತದೆ, ಇಲ್ಲಿ ಸೆಂಟ್ರಲ್ ಗೌವರ್ನಮೆಂಟ್‌ನವರ ಇನ್‌ವೆಸ್ಟ್‌ಮೆಂಟ್‌ಗೋಸ್ಕರನೇ ಒಂದು ವಿಶೇಷವಾದಂಥ ಬೋರ್ಡ್ ಮಾಡಿದ್ದಾರೆ; ಆ ಬೋರ್ಡ್ ಮುಂದೆ ಈಗಾಗಲೇ Cogentrics ರವರ ಅಪ್ಲಿಕೇಷನ್ ಹೋಗಿ ದಾಖಲಾಗಿದೆ ಮತ್ತು ಅದನ್ನು ಅವರು ತೀರ್ಮಾನ ಮಾಡತಕ್ಕ ಹಂತದಲ್ಲಿದ್ದಾರೆ. ಈ ಮಧ್ಯೆ ನಾವು ನ್ಯಾಷನಲ್ ಥರ್ಮಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನವರ ಜೊತೆಗೂಡಿ, ಈ ಮಂಗಳೂರಿನಲ್ಲಿ ರಷ್ಯನ್ ಸಹಭಾಗತ್ವದೊಡನೆ ಒಂದು ಸೂಪರ್ ಥರ್ಮಲ್ ಪವರ್ ಸ್ಟೇಷನ್ ಮಾಡಬೇಕು, ಅಂತಿಮವಾಗಿ ಸುಮಾರು 2500 ಮೆಗಾವ್ಯಾಟ್ ಪವರನ್ನು ಉತ್ಪಾದನೆ ಮಾಡಬೇಕೆನ್ನತಕ್ಕಂಥ ಒಂದು ದೊಡ್ಡ ಯೋಜನೆಯನ್ನು ಹಾಕಿಕೊಂಡಿದ್ದರೂ ಸಹ ಇತ್ತೀಚೆಗೆ ಆ ದೇಶದ ಅಧ್ಯಕ್ಷರಾದ ಎಲ್ಸನ್‌ರವರು ದೆಹಲಿಗೆ ಬಂದಿದ್ದಾಗ ಅವರ ಜೊತೆಯಲ್ಲಿ ಬಂದಿದ್ದವರು ತಿಳಿಸಿದ ಪ್ರಕಾರ ನಾವು ಈ ಮಂಗಳೂರಿನಲ್ಲಿ ಇಷ್ಟೊಂದು ದೊಡ್ಡ ಸಾಮರ್ಥ್ಯವನ್ನು ಪಡೆದಂಥ ಪವರ್ ಸ್ಟೇಷನ್‌ನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಎಂದು ಅವರು ತಮ್ಮ ನಿರಾಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಹೀಗೇನೆ ಕ್ಯಾಪ್‌ಕೋ ಎನ್ನತಕ್ಕಂಥ ಒಂದು ಸಂಸ್ಥೆಯವರು ಒಂದು ಮೆಮೊರ್ಯಾಂಡಮ್ ಆಫ್ ಅಂಡರ್‌ಸ್ಟಾಂಡಿಗ್ಸ್‌ಗೆ ಸೈನ್ ಹಾಕಿದ್ದಾರೆ. ಅದೇ ರೀತಿ Nordic Power Investment A.B. Sweden ಅವರು ಒಂದು ಮೆಮೊರ್ಯಾಂಡಮ್ ಆಫ್ ಅಂಡರ್‌ಸ್ಟಾಂಡಿಂಗ್ಸ್‌ಗೆ ಸೈನ್ ಮಾಡಿದ್ದಾರೆ. ಹಾಗೆಯೇ Public Power International ಅವರು ಒಂದು ಮೆಮೋರ್ಯಾಂಡಮ್‌ಗೆ ಸೈನ್ ಮಾಡಿದ್ದಾರೆ. ಆದರೆ ರಾಜ್ಯ ಸರ್ಕಾರದ ನೀತಿ ಇಷ್ಟೆ; ಯಾವುದೇ ಒಳ್ಳೆಯದಕ್ಕೆ ಈಗಾಗಲೇ ನಮ್ಮ ಸಚಿವ ಸಂಪುಟ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ; ಅದೇನೆಂದರೆ, ಈ ಡ್ಯಾಮ್‌ಬೇಸ್ಡ್ ಪ್ರಾಜೆಕ್ಟ್ ಹಾಗೂ ಹೈಡ್ರೋಪ್ರಾಜೆಕ್ಟ್ಸ್ ಇವುಗಳೆಲ್ಲವನ್ನೂ ಕೂಡ, ಕರ್ನಾಟಕ ಪವರ್ ಕಾರ್ಪೊರೇಷನ್ ಮಾಡಬೇಕು, ಅಥವಾ ಕರ್ನಾಟಕ ಪವರ್ ಕಾರ್ಪೊರೇಷನ್ ಸಹಭಾಗತ್ವದಲ್ಲಿ ಮಾಡಬೇಕೆನ್ನತಕ್ಕಂಥದ್ದು ಮತ್ತು ಈ ಥರ್ಮಲ್ ಪವರ್ ಪ್ಲಾಂಟ್ಸ್‌ನ್ನು ನಾವು ಖಾಸಗಿಯವರಿಗೆ ಕೊಡಬೇಕೆಂದು ಹೇಳಿ ಈಗ ಸಚಿವ ಸಂಪುಟದವರು ತೀರ್ಮಾನ ಮಾಡಿದ್ದಾರೆ. ಆದರೆ ಒಂದು ನನ್ನನ್ನು ಬಾಧಿಸುತ್ತಿರತಕ್ಕಂಥದ್ದು ಅಂದರೆ ಅದಕ್ಕೆ ಬೇಕಾಗಿರತಕ್ಕಂಥ ವೆಚ್ಚ ಏನಿದೆ, ಅದನ್ನು ತರತಕ್ಕಂಥ ಬಗೆ ಹೇಗೆ ಎಂದು ಹೇಳಿ;

ಈಗ ಒಂದು ಥರ್ಮಲ್ ಮೆಗಾವ್ಯಾಟ್ ಪವರ್ ಅನ್ನು ನಾವು ಉತ್ಪಾದನೆ ಮಾಡಬೇಕಾದರೆ ಮೂರುವರೆ ಕೋಟಿ ರೂಪಾಯಿ ಬೇಕಾಗುತ್ತದೆ. ಬಹುಶಃ ಹೈಡಲ್ ಪ್ರಾಜೆಕ್ಟ್ಸ್ ಕೊಂಚ ಮಟ್ಟಿಗೆ depending on logistics and depending on where it is located ಅದನ್ನು ನಾವು ಕಡಿಮೆ ವೆಚ್ಚದಲ್ಲಿ ಮಾಡಬಹುದು. ಈಗ ಥೌಸೆಂಡ್ ಮೆಗಾವ್ಯಾಟ್‌ನ ಒಂದು ಪ್ಲಾಂಟನ್ನು ಮಂಗಳೂರಿನಲ್ಲಿ ಹಾಕಬೇಕೆಂದರೆ 1000x31/2ಕ್ರೋರ್ಸ್ ಒಂದು ಸಾವಿರ ಮೆಗಾವ್ಯಾಟ್ ಉತ್ಪಾದನೆ ಮಾಡುವುದಕ್ಕೆ ಹಣ ಭರಿಸಬೇಕಾಗುತ್ತದೆ. ಈಗ ರಾಜ್ಯ ರಾಜ್ಯಗಳಲ್ಲಿ ಪೈಪೋಟಿ ಶುರುವಾಗಿದೆ. ಇದೇ

ಪ್ರಾಜೆಕ್ಟ್‌ನವರು ಒರಿಸ್ಸಾ ಸರ್ಕಾರದೊಡನೆ ಒಂದು ಒಪ್ಪಂದ ಮಾಡಿಕೊಂಡು ಅಲ್ಲಿ ಒಂದು ಪವರ್ ಪ್ಲಾಂಟನ್ನು ಹಾಕಬೇಕೆಂದು ಹೊರಟಿದ್ದಾರೆ. ತಮಿಳ್ನಾಡಿನವರು ಸಹ ಪ್ರಯತ್ನ ಮಾಡುತ್ತಿದ್ದಾರೆ. ಮಹಾರಾಷ್ಟ್ರದವರು, ಪ್ರಯತ್ನ ಮಾಡುತ್ತಿದ್ದಾರೆ. ಹರಿಯಾಣದವರು ಪ್ರಯತ್ನ ಮಾಡುತ್ತಿದ್ದಾರೆ. ಹೀಗೆ ಒಂದು ರೀತಿ ಪೈಪೋಟಿಯ ವಾತಾವರಣ to draw private investment from outside the country for power generation is going on. ಕರ್ನಾಟಕದವರು ಕೂಡ ಇದರಲ್ಲಿ we have made our presence felt and wherever it is possible we might perhaps pursue some of these projects so that we don't send wrong signals to the concerned people that Karnataka is not interested in attracting investment in this very vital and core sector of our economy. ಮಾನ್ಯ ಬೈರೇಗೌಡರು ನಮ್ಮ ರಾಯಚೂರು ಘಟಕದಲ್ಲಿ ಆ್ಯಷ್ ಡಿಸ್‌ಪೋಸಲ್‌ಗೆ ಸಂಬಂಧಪಟ್ಟ ಒಂದು ಟೆಂಡರ್ ವಿಚಾರದಲ್ಲಿ ಪ್ರಸ್ತಾಪ ಮಾಡಿದರು. ಅದರ ವಿವರಗಳು ಈ ರೀತಿ ಇವೆ. ಇಂಡೊರೆಯುವರದ್ದು 1311.304 ಲಕ್ಷ, ಲಾರ್ಸನ್ ಅಂಡ್ ಟೊಬ್ರೋ ಅವರದ್ದು 1509.799 ಲಕ್ಷ – ಇದು ಅವರ ಕ್ವೊಟೇಷನ್. ಪ್ರತಿಯೊಂದು ಟೆಂಡರ್ ಬಂದಾಗಲೂ ಎವಾಲ್ಯುಯೇಟೆಡ್ ಕಾಸ್ಟ್ ನೋಡಬೇಕಾಗುತ್ತದೆ. ಎವಾಲ್ಯುಯೇಟ್ ಮಾಡಿದಾಗ ಇಂಡೂರೆಯವರದ್ದು 1731.438 ಲಕ್ಷ, ಅವರದ್ದು 1722.160 ಲಕ್ಷ. ಲಾರ್ಸನ್ ಅಂಡ್ ಟೊಬ್ರೊ ಅವರದ್ದು ಕಡಿಮೆ. ಇಂಡೂರೆಯವರದ್ದು 7–8 ಲಕ್ಷ ರೂಪಾಯಿ ಜಾಸ್ತಿ ಇತ್ತು. ಆದರೂ ಇಂಡೂರೆಯವರಿಗೆ ಕೊಟ್ಟರು. ಇದಕ್ಕೆ ಕಾರಣವೇನೆಂದರೆ ಅವರು ಮೊದಲನೇ ಮತ್ತು 2ನೇ ಘಟಕಗಳಲ್ಲಿ ಆ್ಯಷ್ ಡಿಸ್‌ಪೋಸಲ್ ಪ್ಲಾಂಟ್ ಮಾಡಿದ್ದಾರೆ.

ಆ ಒಂದು ಆಧಾರದ ಮೇಲೆ ಅವರಿಗೆ ಈ ಕಾಂಟ್ರಾಕ್ಟ್ ಕೊಟ್ಟರು. ಈ ಇಂಡ್ಯೂರೆಯವರ ಸ್ಪೆಶಲ್ ಕ್ವಾಲಿಫಿಕೇಷನ್ ಏನೆಂದರೆ they are experts in ash handling and ಲಾರ್ಸನ್ ಅಂಡ್ ಟೊಬ್ರೋ are specialists in coal handling equipments. ಇನ್ನೊಂದು ಟೆಂಡರ್ ಇತ್ತು ಇದಕ್ಕೆ ಹಿಂದೆ. ಆ ಟೆಂಡರ್‌ನಲ್ಲಿ ಲಾರ್ಸನ್ ಅಂಡ್ ಟೊಬ್ರೋ ಅವರದ್ದು ಹೈಯರ್ ಆಗಿತ್ತು. ಆದರೆ ಕೇಂದ್ರ ಸರ್ಕಾರದ Machinery Manufacturing Company, Durgapur ಅವರದ್ದು ಬಹಳ ಲೋಯಸ್ಟ್ ಆಗಿತ್ತು. ಆದರೆ ಕೋಲ್ ಹ್ಯಾಂಡ್ಲಿಂಗ್ ಎಕ್ವಿಪ್‌ಮೆಂಟ್‌ನಲ್ಲಿ ಲಾರ್ಸನ್ ಅಂಡ್ ಟೊಬ್ರೋದವರಿಗೆ ಅಗಾಧವಾದ ಅನುಭವ ಮತ್ತು ಎಕ್ಸ್‌ಪರ್ಟೈಸ್ ಇದ್ದುದರಿಂದ ಅವರ ಟೆಂಡರ್ ಜಾಸ್ತಿ ಇದ್ದರೂ ಕೂಡ ಕರ್ನಾಟಕ ಪವರ್ ಕಾರ್ಪೋರೇಷನ್‌ನವರು ಈ ಕೋಲ್ ಹ್ಯಾಂಡ್ಲಿಂಗ್ ಎಕ್ವಿಪ್‌ಮೆಂಟನ್ನು ಈ ಲಾರ್ಸನ್ ಅಂಡ್ ಟೊಬ್ರೋದವರಿಗೆ ಕೊಟ್ಟರು. ಅದರ ಬಗ್ಗೆ ಪಾರ್ಲಿಮೆಂಟಿನಲ್ಲಿ ಕೂಡ ಪ್ರಶ್ನೆ ಬಂತು. ಕರ್ನಾಟಕ ಪವರ್ ಕಾರ್ಪೋರೇಷನ್‌ನವರು ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ ಕೊಟ್ಟಂಥ ಟೆಂಡರನ್ನು ತಿರಸ್ಕರಿಸಿ ಯಾವುದೋ ಪ್ರೈವೇಟ್ ಕಂಪನಿಗೆ ಕೊಟ್ಟರು ಎಂಬುದು ಅಲ್ಲಿ ಪ್ರಸ್ತಾಪಕ್ಕೆ ಬಂತು. ಒಟ್ಟಾರೆ ಇದರ ಅರ್ಥ ಇಷ್ಟೆ; ಯಾರಿಗೆ ಯಾವ ಫೀಲ್ಡ್‌ನಲ್ಲಿ ಸ್ಪೆಶಲೈಸೇಷನ್ ಇದೆ, ಒಬ್ಬರು ಆ್ಯಷ್ ಹ್ಯಾಂಡ್ಲಿಂಗ್‌ನಲ್ಲಿ ಎಕ್ಸ್‌ಪರ್ಟೈಸ್ ಇದ್ದು ಅವರ ಟೆಂಡರ್ ಅಮೌಂಟ್ ಜಾಸ್ತಿ ಇದ್ದರೂ ಅವರಿಗೆ ಕೊಟ್ಟೆವು; ಇನ್ನೊಬ್ಬರಿಗೆ ಕೋಲ್ ಹ್ಯಾಂಡ್ಲಿಂಗ್‌ನಲ್ಲಿ ಎಕ್ಸ್‌ಪರ್ಟೈಸ್ ಇದ್ದು ಅವರ ಟೆಂಡರ್ ಜಾಸ್ತಿ ಇದ್ದರೂ ಅವರಿಗೆ ಕೊಟ್ಟೆವು.

ಶ್ರೀ ಜೆ.ಸಿ. ಮಾಧುಸ್ವಾಮಿ:– ಇದು ತಾರೀಖು 22–8–92ರ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ರಿಪೋರ್ಟ್ ಆಗಿರುವುದು. ಇಲ್ಲಿ ಒಂದು ದೊಡ್ಡ ಸ್ಕ್ಯಾಂಡಲ್ ನಡೆದಿದೆ ಎಂದು ವರದಿ ಬಂದಿದೆ. ನಿಮ್ಮ ಟೆಕ್ನಿಕಲ್ ಕಮಿಟಿ ಏನಿತ್ತು, after touring Germany and other European Countries, ಅಲ್ಲಿಯವರೆಗೆ ಇವರಿಗೆ ಗೊತ್ತಿರಲಿಲ್ಲ ಲಾರ್ಸನ್ ಅಂಡ್ ಟೊಬ್ರೋದವರು ಆ್ಯಷ್ ಹ್ಯಾಂಡಲ್ ಮಾಡುತ್ತಾರೆ ಎಂದು;

ಗ್ರಂಥಾಲಯಂ,
ವಿಧಾನ ಸೌಧ, ಬೆಂಗಳೂರಂ,
ದಿನಾಂಕ..............

ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಅಲ್ಲಿಗೆ ಟೀಮ್ ಕಳುಹಿಸಿದ್ದರು. ಅಲ್ಲಿಗೆ ಹೋಗಿ ಬಂದ ಮೇಲೆ ನಿಮ್ಮ ಕಮಿಟಿಯವರು ತೀರ್ಮಾನಕ್ಕೆ ಬಂದರು. L & T can do the job ಎಂದು ಹೇಳಿ. ಎವ್ಯಾಲ್ಯುಯೇಷನ್‌ನಲ್ಲಿ ಎಲ್ ಅಂಡ್ ಟಿ ಅವರದ್ದು ಲೋಯರ್ ಬಿಡ್ ಆಯಿತು. ಸ್ಪೆಸಿಫಿಕೇಷನ್ ಛೇಂಜ್ ಮಾಡಿದಾಗ ಅವರು ನಾನು ಕಡಿಮೆ ಬಿಡ್ ಮಾಡಿದ್ದೇನೆಂದು ಪ್ರೂವ್ ಮಾಡಿ ಪಾರ್ಟ್ ಆಫ್ ದಿ ಟೆಂಡರ್ ತೆಗೆದುಕೊಂಡಿದ್ದೇನೆ ಎಂದಿದ್ದಾರೆ. ಅದು ಒಂದು ಸ್ಕ್ಯಾಂಡಲ್ ಅವರಿಗೆ ಕೋಲ್ ಒಂದೇ ಹ್ಯಾಂಡಲ್ ಮಾಡುತ್ತೇವೆ ಎಂದು. This coal ash is handled by both. ಎಲ್ ಅಂಡ್ ಟಿ ಅವರಿಗೂ ಸಾಮರ್ಥ್ಯ ಇತ್ತು. ಎಲ್ ಅಂಡ್ ಟಿ ಅವರು ನಿಮ್ಮ ಪ್ಲಾಂಟ್‌ಗೆ ಹಾಕಿಲ್ಲ. ಆರ್‌ಟಿಪಿಸಿ ಥರ್ಡ್ ಯೂನಿಟ್‌ಗೆ ಇವರು ಹಾಕಿದ್ದಾರೆ. ಇವರು ಮೇನೇಜ್ ಮಾಡಿದ್ದಾರೆ, ಫಸ್ಟ್ ಕನ್ಸಿಡರೇಷನ್ ಅವರಿಗೆ ಕೊಟ್ಟರಿ. After touring .... ಕಮಿಟಿ ತೀರ್ಮಾನ ಮಾಡಿತು. ಇಲ್ಲ ಇಲ್ಲ, L & T ಗೆ ಕೊಡಬೇಕಿತ್ತು ಎಂದು ಹೇಳಿ ರಿಪೋರ್ಟ್ ಬರೆದು ಇಟ್ಟುಬಿಟ್ಟಿತು. This should be awared to L & T ಎಂದು ಹೇಳಿ. ಇಲ್ಲದಿದ್ದರೆ ಇಂಡೂರೇ ಅವರು ಕೋರ್ಟಿಗೆ ಹೋಗಿ

(ಶ್ರೀ ಜಿ.ಎಸ್. ಆಚಾರ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಕೇವಿಯೆಟ್ ಹಾಕಿ ಎಲ್ ಅಂಡ್ ಟಿ ಅನ್ನು ಪಾರ್ಟಿ ಮಾಡುವ ಸ್ಥಿತಿ ಇರಲಿಲ್ಲ. After the decision of the technical committee ಟೆಂಡರ್ ಏಕೆ ಚೇಂಜ್ ಆಯಿತು ಎನ್ನುವುದು ಪ್ರಶ್ನೆ ನಿಮ್ಮವರು ಎಕ್ಸ್‌ಪರ್ಟ್ಸ್ ಹೇಳಿದ್ದು ಬೇಡ. They are not capable of handling ash ಎಂದಿದ್ದರೆ ಈ ಪ್ರಸ್ತಾಪವೇ ಬರುತ್ತಿರಲಿಲ್ಲ.

ಶ್ರೀ ಸಿ. ಬೈರೇಗೌಡ:– ಸ್ಪೆಸಿಫಿಕೇಷನ್‌ನ್ನು ಇಂದೂರೇ ಅವರಿಗೆ ಸೂಟ್ ಆಗುವ ಹಾಗೆ ಚೇಂಜ್ ಮಾಡಿದ್ದಾರೆ.

20,637

ಶ್ರೀ ಆರ್.ವಿ. ದೇಶಪಾಂಡೆ:– ಅಧ್ಯಕ್ಷರೇ, ಎವ್ಯಾಲ್ಯುಯೇಷನ್ ರಿಪೋರ್ಟ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. L & T was the lowest offer. Please bring the technical committee report, I would request you to place it before the House. ಟೆಕ್ನಿಕಲ್ ಕಮಿಟಿಯವರು ರಿಪೋರ್ಟ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಎಲ್ ಅಂಡ್ ಟಿ ಗೆ ಕೊಡಬೇಕೆಂದು ಹೇಳಿದ್ದಾರೆ. It is capable of handling this ash ಅಂತ ಹೇಳಿದ್ದಾರೆ.

ಆದರೆ Indurai were worried about this. So, they went to the High Court and filed a writ and a caveat notice was also issued. These are on records. If you go through in detail you will come to know. There has been a scandle here. It would be difficult for you to react immediately. I request you to please go through the technical committee report, and then you can inform the House.

ಶ್ರೀ ಜೆ.ಸಿ. ಮಾಧುಸ್ವಾಮಿ:– ಇಂದೂರೇ ಅವರ ಚರಿತ್ರೆ ಚೆನ್ನಾಗಿಲ್ಲ. ಒನ್ ಮ್ಯಾನ್ ಶೋ, ಡೆಲ್ಲಿ ಬೇಸ್ ಕಂಪೆನಿ ಎಂದು ಮಾಡಿ ಒಬ್ಬ ಮನುಷ್ಯನ ಆಟ ಅದು. ಎಲ್ ಎಂಡ್ ಟಿ ಅನ್ನು ಇದುವರೆವಿಗೂ ಯಾರೂ ಇಂಡಸ್ಟ್ರೀ ಲೈನ್‌ನಲ್ಲಿ ಅವರ ಇಂಟಿಗ್ರಿಟಿಯನ್ನು ಪ್ರಶ್ನೆ ಮಾಡಿಲ್ಲ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಎನ್‌ಕ್ವಯರಿ ಮಾಡಿಸಬೇಕು.

ಶ್ರೀ ವೈ.ಕೆ. ರಾಮಯ್ಯ:– ಇಲ್ಲಿಯ ವಾದ ಬಹಳ ಸ್ವಾರಸ್ಯವಾಗಿದೆ. ಯಾವುದಾದರೂ ಸರ್ಕಾರಿ ಕೆಲಸವನ್ನು ಟೆಂಡರ್ ಕರೆದು ಕೊಡುವಾಗ, ಯಾರು ಸಾಮಾನ್ಯವಾಗಿ ಕಡಿಮೆ ಕೋಟ್

ಮಾಡಿರುತ್ತಾರೋ ಅವರಿಗೆ ಕೊಡುವುದು ಸಾಮಾನ್ಯ ನಿಯಮ. ಆದರೆ ಕೆಲಸ ಮಾಡಿರುವವರ ಸಾಮರ್ಥ್ಯವನ್ನು ಅಳತೆಗೋಲು ಆಗಿ ಇಟ್ಟುಕೊಂಡು ಹೆಚ್ಚಿಗೆ ದರ ಕೋಟ್ ಮಾಡಿರುವವರಿಗೆ ಕರೆದು ಕೆಲಸ ಕೊಡುವುದು ಬಹುಶಃ ತಾತ್ವಿಕವಾಗಿ ಎಲ್ಲಾ ಕ್ಷೇತ್ರದಲ್ಲಿ ಇದನ್ನು ಅನ್ವಯು ಮಾಡುವುದಕ್ಕಾಗುತ್ತದೆಯೇ ? The rule of law is to award the tender to the person who has quoted less. This is the general rule. ಇಲ್ಲಿ ನಾವು ಅವರ ಸಾಮರ್ಥ್ಯವನ್ನು ಎವಾಲ್ಯುವೇಟ್ ಮಾಡುತ್ತೇವೆನ್ನುವ ನೆಪದಲ್ಲಿ ಮೂಲತತ್ವಕ್ಕೆ ನಾಮ ಹಚ್ಚುವ ತತ್ವವನ್ನು ನೀವು ಬೇರೆ ಕ್ಷೇತ್ರದಲ್ಲಿ ಅನ್ವಯ ಮಾಡುವುದಕ್ಕಾಗುತ್ತದೆಯೇ ? ನಾನು ಇದನ್ನೆಲ್ಲಾ ಅರ್ಥ ಮಾಡಿಕೊಳ್ಳಬಲ್ಲೆ. ಅವನಿಗೆ ಕೊಟ್ಟರೆ ಕೆಪಾಸಿಟಿ ಇಲ್ಲ, ಹಣ ಇಲ್ಲ, ಮೆಷಿನರಿ ಇಲ್ಲ ಎನ್ನುವ ವಾದ ಕೇಳುವುದಕ್ಕೆ ಸರಿಯಾಗಿದೆ. ಆದರೆ ಮೂಲ ತತ್ವಕ್ಕೆ ತಿಲಾಂಜಲಿ ಹಾಕಿದ ಹಾಗೆ ಆಗುವುದಿಲ್ಲವೇ ? ಬೇರೆ ಕ್ಷೇತ್ರಕ್ಕೂ ಇದನ್ನು ವಿಸ್ತರಿಸುತ್ತೀರಾ ?

ಶ್ರೀ ಎಸ್.ಎಂ. ಕೃಷ್ಣ:– ಕೆಲವು ವಿಚಾರಗಳಲ್ಲಿ especially in the field of industries and in the field of power sector sometimes, I know in many instances; ಲೋಯೆಸ್ಟ್ ಆಧಾರದ ಮೇಲೆ ಹೋಗದೇ ಇದ್ರೂ nobody can impute motives depending on the status, reputation and track record of the company, For example .... ಯಾವುದೇ ಒಂದು ಟೆಂಡರ್‌ಗೆ ಯಾವನು ಹೆಬಿಚ್ಯುಯಲ್ ಡಿಫಾಲ್ಟರ್ who has not fulfilled so many contracts ಅಂತಹವರಿಗೆ ಕೊಡುವುದಿಲ್ಲ. ಕೆಲವು ಸಮಯ ಏನು ಮಾಡುತ್ತೇವೆಂದರೆ, ಇಂತಹದ್ದು ಇಷ್ಟು ಮಾಡಿದ್ದಾರೆನ್ನುವ ಆಧಾರದ ಮೇಲೆ ಕೊಡುತ್ತಾರೆ. ಈ ಇರಿಗೇಷನ್ ಡ್ಯಾಮ್ ಕೆಲಸದಲ್ಲಿ ನಾನು ಅರ್ಥ ಮಾಡಿಕೊಳ್ಳಬಲ್ಲೆ. ಅಲ್ಲೂ ಕೂಡಾ ಅವನ ಪಾಸ್ಟ್ ಪರ್‌ಫಾರ್ಮೆನ್ಸ್ ನಾವು ನೋಡುತ್ತೇವೆ. ಇಲ್ಲದಿದ್ದರೆ ನಾವು ಬೇಸ್ತು ಬೀಳುತ್ತೇವೆ. ಆದುದರಿಂದ ಇಂತಹದ್ದು ಆಗುತ್ತದೆ.

Anyway, I am calling for that file. I will certainly go into that file particularly about the Technical Committee's recommendations and then, perhaps, I can respond little more positively on this.

ಶ್ರೀ ಸಿ. ಬೈರೇಗೌಡ:– ಶರಾವತಿಯಲ್ಲಿ 10 ಯೂನಿಟ್ಸ್‌ಗಳ ಪೈಕಿ ಅದೇನೋ ಮೂರು ಯೂನಿಟ್ ಮಾಡಿ 90 ಮೆಗಾವಾಟ್‌ನಿಂದ 103 ಮೆಗಾವಾಟ್ಸ್‌ಗೆ ಏರಿಸಿದ್ದೇವೆಂದು ಹೇಳುತ್ತಾರೆ. ಅದು ಸುಳ್ಳು. ಈಗ ಉತ್ಪಾದನೆಯಾಗುತ್ತಿರುವುದು 90 ಮೆಗಾವ್ಯಾಟ್ಸ್. ಏಕೆಂದರೆ ಅದು ಕೆಲಸ ಮಾಡುತ್ತಿಲ್ಲ. ಅದು ಏನೋ ಹೇಳುತ್ತಾರೆ. ಎಕ್ಸೈಟರ್ ಅಂತಲೋ ಏನೋ ಹೇಳುತ್ತಾರೆ. ಅದು ಅಷ್ಟು ಉತ್ಪಾದನೆ ಮಾಡುತ್ತಿಲ್ಲ.

ಶ್ರೀ ಎಸ್.ಎಂ. ಕೃಷ್ಣ:– ಈ ವರ್ಲ್ಡ್ ಬ್ಯಾಂಕ್ ಅಸಿಸ್ಟೆಂಟ್ ಮೇಲೆ renovation and modernisation of 7 units out of 8 units of I and II stages with regard to stature winding work with epoxy coil completed, and the work on the remaning one unit to be completed by end of March. The other works pertains to modernisation and excitor system and governing system are yet to be carried out. The equipments for the above works have been received at site and work on Unit No. 1 has been taken up for loading of the units continueously. For 103 MW it is necessary to do the above work. During

subsequent carrying out of modernisation work, we have experienced failure of three power transformers in the I and II stages. Two transformers in the second stage have already been replaced. One transformer in the first stage is being reconditioned. The operating capacity of the units will be utilised after carrying out the balance works on excitor and governing systems and after replacing the other five transformers in stages since these transformers have already become old. We have ordered one spare transformer each for first and second stages.

ಈಗ ಶರಾವತಿಯಲ್ಲಿ ಏನಾಗಿದೆ ಅಂದರೆ ನಾನು ತಿಳಿದಿರುವ ಮಟ್ಟಿಗೆ ಇದು ಬಹಳ ಹಳೆಯ ವಿದ್ಯುತ್ ಉತ್ಪಾದನಾ ಘಟಕಗಳು. ಒಂದು ಜರ್ಮನಿ ಕೊಲಾಬರೇಷನ್, ಒಂದು ಯೂನಿಟ್ ಇನ್ನಾವುದೋ, ವೆಸ್ಟಿಂಗ್ ಹೌಸ್, ಬಿಹೆಚ್ಇಎಲ್ ಹೀಗೆ ನಾನಾ ವಿಧವಾದ ಟ್ರಾನ್ಸ್‌ಫಾರ್ಮರ್‌ಗಳಿವೆ. ಇದರಿಂದಾಗಿ ಫೇಲ್ ಆಗಿವೆ. French technicians are working on that transformers now ಇಷ್ಟು ಹೇಳುತ್ತೇನೆ; ಕರ್ನಾಟಕ ಪವರ್ ಕಾರ್ಪೋರೇಷನ್ ಬಗ್ಗೆ ತೀವ್ರವಾದ ರೂಪದಲ್ಲಿ ನೋಡಬೇಕಾಗುತ್ತದೆ. ಇದರ ಕಾರ್ಯರೂಪದ ಬಗ್ಗೆ ಇದರ ಬಗ್ಗೆ ವಿಶೇಷವಾದ ಗಮನ ಕೊಡಬೇಕಾಗುತ್ತದೆ ಎನ್ನತಕ್ಕ ಮಾತನ್ನು ನಾನು ಒಪ್ಪುತ್ತೇನೆ. ವರಾಹಿಯಲ್ಲಿ, out of two units, one unit failed due to rotor fault on 19.2.93. Rotors – 6 nos have been replaced. It is expected back in service within a week. Out of 10 Units in Sharavathy, 8 units are in operation. No.1 transformer is being reconditioned and is expected back in service in about two months. French technicians are at work. No. 6 unit is expected back by the end of this month after stature rewinding work in connection with modernisation work and also replacement of failed power transformer. ಇನ್ನು ರಾಯಚೂರು ಥರ್ಮಲ್‌ಪ್ಲಾಂಟ್ ಇಲ್ಲಿ ನಮಗೆ ಬಂದಿರತಕ್ಕ ಒಂದು ತೊಂದರೆ ಏನೆಂದರೆ ಎರಡು ಯೂನಿಟ್‌ಗಳು 10 ಮೆಗಾವ್ಯಾಟ್ಸ್ ವಿದ್ಯುತ್ ಕೊಡುತ್ತಿದೆ. ಮೂರನೆಯ ಯೂನಿಟ್ 210 ಮೆಗಾವಾಟ್ಸ್ ಕೊಡುವುದಕ್ಕೆ ಸಿದ್ಧವಾಗಿದೆ. ನಾವು ಮೂರನೆಯ ಯೂನಿಟ್‌ಅನ್ನು ಫೈರ್ ಮಾಡಬೇಕಾದರೆ ನಮಗೆ ಕಲ್ಲಿದ್ದಲು ಅಗಾಧವಾದ ಪ್ರಮಾಣದಲ್ಲಿ ಬೇಕು.

ಈಗ ತಮಿಳುನಾಡಿನಲ್ಲಿ 50 ಸಾವಿರ ಟನ್ ಕಲ್ಲಿದ್ದಲನ್ನು ರೆಡಿ ಸ್ಟಾಕ್ ಇಟ್ಟುಕೊಂಡಿರುತ್ತಾರೆ. ಆದರೆ ನಮ್ಮಲ್ಲಿ ಇದೊಂದೇ ಘಟಕ ಇರುವುದರಿಂದ, ಈ ಥರ್ಮಲ್ ಪ್ಲಾಂಟ್‌ಗೆ ನಾವು ಕನಿಷ್ಟ ಪಕ್ಷ 25 ಸಾವಿರ 30 ಸಾವಿರ ಟನ್ ಕಲ್ಲಿದ್ದಲನ್ನು ಕೊಂಡುಕೊಳ್ಳಬೇಕಾದರೂ ಕೂಡ, ಕೋಲ್ ಇಂಡಿಯಾದವರು ಸಾಲ ಕೊಡುವುದಿಲ್ಲ. ಅವರಿಗೂ ಕೂಡ ಸಾಲ ಕೊಟ್ಟು ಕೊಟ್ಟು ಸಾಕಾಗಿ ಈಗ ಏನೆಂದರೂ ಹಣ ಕೊಟ್ಟು ನೀವು ತೆಗೆದುಕೊಂಡು ಹೋಗ್ಬೇಕು ಅಂತ ಹೇಳುತ್ತಾರೆ. ನಮಗೆ ಎರಡು ಅಡಚಣೆಗಳು ಬಂದುಬಿಟ್ಟಿವೆ. ಒಂದು ಕಾಲಕಾಲಕ್ಕೆ ಹಣದ ಬಿಡುಗಡೆ. ಎರಡನೆಯದು, ಕಲ್ಲಿದ್ದಲನ್ನು ಸಾಗಿಸಲಿಕ್ಕೆ ಬೇಕಾದ ರೈಲು ಸೌಲಭ್ಯ. ಆದ್ದರಿಂದ ಮೂರನೇ ಯೂನಿಟ್ ರೆಡಿಯಾಗಿದ್ದರೂ ಕೂಡ ನಾವು ಅದನ್ನು ಓಡಿಸತಕ್ಕಂಥ ವಿಚಾರದಲ್ಲಿ ಹಿಂದೆ ಬಿದ್ದಿದ್ದೇವೆ. ಈಗ ಕೋಲ್ ಸ್ಟಾಕ್‌ನ್ನು ರೆಡಿ ಮಾಡುತ್ತಿದ್ದೇವೆ. ಕೋಲ್‌ಸ್ಟಾಕ್ ರೆಸ್ಪೆಕ್ಟಬಲ್ ಲೆವೆಲ್‌ಗೆ ಬಂದ ಮೇಲೆ ಮೂರನೇ ಯೂನಿಟ್‌ನ್ನು ನಾವು

ಚಾಲುಗೊಳಿಸುತ್ತೇವೆ ಎಂದು ಈ ಸದನಕ್ಕೆ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ಇನ್ನು ಸ್ಟೇಷನ್‌ಗಳನ್ನು ....

ಶ್ರೀ ಸಿ. ಬೈರೇಗೌಡ:- ನಾಗ್ಜರಿಯಲ್ಲಿ ಏನಾಗುತ್ತಿದೆ ಎಂದರೆ ಅಲ್ಲಿ ಇರತಕ್ಕಂಥ ಯೂನಿಟ್‌ಗಳಲ್ಲಿ ವೈಬ್ರೇಶನ್ ಆಗುತ್ತಿದೆ. ನಾಗ್ಜರಿಯಲ್ಲಿ ಆರು ಯೂನಿಟ್‌ಗಳಿವೆ. ಅದರಲ್ಲಿ ನಾಲ್ಕು ಮಾತ್ರ ಕೆಲಸ ಮಾಡುತ್ತಿವೆ. ಇನ್ನು ಎರಡು ಯೂನಿಟ್ಸ್ ಕೆಲಸ ಮಾಡುತ್ತಿಲ್ಲ. ಏಕೆ ಕೆಲಸ ಮಾಡುತ್ತಿಲ್ಲ ಎಂದರೆ vibration is taking place. ಅಲ್ಲಿ ಮಾಡಿರತಕ್ಕಂಥ ಡಿಫೆಕ್ಟಿವ್ ಪ್ಲಾನಿಂಗ್ .... everything is defective. That unit cannot withstand the load. The vibration is heavy. ವರಾಹಿಯಲ್ಲಿ ಡ್ಯಾಮ್ ಕಟ್ಟಿದ್ದೀರಿ. The dam is leaking. ನಮ್ಮ ತಲೆಕಳಲೆ ಡ್ಯಾಮ್‌ನಲ್ಲಿ ಪೈಪ್‌ನಲ್ಲಿ ನೀರು ಬರುವ ದಿಕ್ಕಿನಲ್ಲಿ ಯಾವ ರೀತಿ ಹೋಗುತ್ತಿದೆಯೋ, ಅದೇ ರೀತಿ ವರಾಹಿಯಲ್ಲಿ ಆಗುತ್ತಿದೆ. They have taken the cement grouting, Instead of that, now they are thinking of having chemical grouting. I do not know what will happen? ಆದ್ದರಿಂದ ನಾನು ಸರ್ಕಾರದ ಮುಂದೆ ಇಡುವ ಮನವಿ ಏನೆಂದರೆ; ಕೆ.ಇ.ಬಿ.ಗೆ ಪ್ರತಿಯೊಂದು ತಾಲ್ಲೂಕಿನಲ್ಲಿ ಕಚೇರಿಗಳಿವೆ, ನಾವು ಹೋಗುತ್ತೇವೆ,ಅಟ್ಯಾಕ್ ಮಾಡುತ್ತೇವೆ. ಆದರೆ ಇವರಿಗೆ ಇರುವುದು ಮೂರು – ನಾಲ್ಕು ಕಚೇರಿಗಳು. ಇಲ್ಲಿ ರೇಸ್‌ಕೋರ್ಸ್ ರಸ್ತೆಯ ಕಚೇರಿಯಲ್ಲಿ ಕೂತಿರುತ್ತಾರೆ. ಅಲ್ಲಿ ಕಚೇರಿ ಇರುವುದು ಬಹಳ ಜನರಿಗೆ ಗೊತ್ತಿಲ್ಲ. ನಿಜವಾದ ಕಲ್ಪ್ರಿಟ್ಸ್ ಇವರೇ ಹೊರತು ಕೆ.ಇ.ಬಿ. ಅಲ್ಲ. ಇದು ಏನಾಗಿದೆ ಎಂದರೆ ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರು ಎನ್ನುವ ಹಾಗೆ ಇವತ್ತಿನ ದಿವಸ ಆಗುತ್ತಿದೆ.

ಆದ್ದರಿಂದ ಇವೆಲ್ಲವನ್ನೂ ಕೂಡ ತೀವ್ರವಾಗಿ ನೋಡಬೇಕು. ಈ ಕಾರಣದಿಂದ ಒಂದು ಸಮಿತಿಯನ್ನು ಮಾಡಿದ್ದೇವೆ. ಇದರ ವ್ಯವಹಾರಗಳನ್ನು ನೋಡುವುದಕ್ಕೆ ಈಗ ಯಾವ ರೀತಿ ಕೆ.ಇ.ಬಿ. ಅವ್ಯವಹಾರಗಳನ್ನು ನೋಡುವುದಕ್ಕೆ ಸಮಿತಿ ಇದೆಯೋ, ಆ ಸಮಿತಿಗೆ ಇದನ್ನೂ ಕೂಡ ಒಪ್ಪಿ ಅನೇಕ ವಿಚಾರಗಳನ್ನು ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಸದನದ ಸಮಯ ಹಾಳಾಗುತ್ತದೆ. ತಾವು ಇದನ್ನು ಮಾಡಲೇಬೇಕಾಗುತ್ತದೆ. With all force at my command I am appealing to the Government that the affairs of the KPC must also be probed into by a House Committee.

ಶ್ರೀ ಅಜೀಜ್‌ಸೇಠ್:- ಮೈಸೂರು ಸಿಟಿಗೆ ಸುಮಾರು ಏಳು ಸಬ್‌ಸ್ಟೇಷನ್‌ಗಳು ಬೇಕಾಗುತ್ತವೆ. ಇದುವರೆಗೂ ಮೈಸೂರಿನಲ್ಲಿ ಇದು ಆಗಿಲ್ಲ. ಆದ್ದರಿಂದ ಎಲೆಕ್ಟ್ರಿಸಿಟಿ ಬಗ್ಗೆ ಅಲ್ಲಿ ಬಹಳ ತಾಪತ್ರಯ ಇದೆ. ಲೋಡ್ ಶೆಡ್‌ಡೌನ್ ಆಗುತ್ತದೆ. ಹಾಗೆ ಆದಾಗ ಬೇಕಾದಷ್ಟು ಟಿ.ವಿ. ಫ್ರಿಜ್‌ಗಳು ಹಾಳಾಗಿವೆ. ಈ ನೆಪದಲ್ಲಿ ಕೆ.ಇ.ಬಿ.ಯವರು ಯಾವ ಡ್ಯಾಮೇಜೂ ಕೂಡ ಕೊಡುವುದಿಲ್ಲ. ತಾವು ಇದರ ಬಗ್ಗೆ ಗಮನ ಕೊಟ್ಟು ಮೈಸೂರು ಸಿಟಿಗೆ ಕಡೆಯ ಪಕ್ಷ ನಾಲ್ಕು ಸಬ್‌ಸ್ಟೇಷನ್‌ಗಳನ್ನಾದರೂ ಸ್ಥಾಪನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:- ಸೇಠ್ ಸಾಹೇಬರು ಹೇಳಿರತಕ್ಕಂಥ ವಿಚಾರಗಳನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ಹೇಗೂ ಅವರ ಅಧ್ಯಕ್ಷತೆಯಲ್ಲಿ ಮೈಸೂರಿನಲ್ಲಿ ಒಂದು ಸಮಿತಿ ಆಗುತ್ತಿದೆ. ಆ ಸಮಿತಿಯವರೇ ಅದನ್ನು ನೋಡಿಕೊಳ್ಳಬೇಕಾಗುತ್ತದೆ. ನಾಗ್ಜರಿಯಲ್ಲಿ ಆರು ಯೂನಿಟ್‌ಗಳಿವೆ. ನಾನು ನಿತ್ಯ....

Out of which 5 units are operated and one unit is not working. This is as on 17.3.1993. No.2 unit is not functioning due to earth fault. ಅದು ಒಂದು

ಯೂನಿಟ್ ಆಪರೇಟ್ ಆಗುತ್ತಿಲ್ಲ. ಅಲ್ಲಿ ವಿದ್ಯುಚ್ಛಕ್ತಿ ಫ್ರಿಕ್ವೆಂಟ್ ಆಗಿ ಫೈಲೂರ್ ಆಗುತ್ತಿದೆ. This is both in Nagjhari and Sharavathi as well as Varahi. ಆದ್ದರಿಂದ ಇದರ ಬಗ್ಗೆ ನನ್ನದೇನೂ ಅಭ್ಯಂತರ ಇಲ್ಲ. ಸದನದ ಸಮಿತಿಯವರು ಈ ಕೆಪಿಸಿಯವರನ್ನು ಅದಕ್ಕೆ ಕೆ.ಪಿ.ಸಿ.ಯನ್ನು ನೀವು 'ಮಳ್ಳಿ' ಅಂತ ಏನು ಕರೆದರಲ್ಲಾ ಈ ಹಿನ್ನೆಲೆಯಲ್ಲಿ ಸದನದ ಸಮಿತಿಯವರು ಈ ಕೆ.ಪಿ.ಸಿ. ವಿದ್ಯುತ್ ಉತ್ಪಾದನಾ ವಿಚಾರಗಳನ್ನು ಪಡೆದು they are interlinked. Unless they provide power what is it that KEB can do?

ಶ್ರೀ ಜೆ.ಸಿ. ಮಾಧುಸ್ವಾಮಿ:– ಮರ್ಜ್ ಮಾಡಿಬಿಡಿ. ಮರ್ಜ್ ಮಾಡಿದರೆ ಜವಾಬ್ದಾರಿ ಇರುತ್ತದೆ. ಈಗ ಅವರಿಗೆ ಯಾರದೂ ಜವಾಬ್ದಾರಿ ಇಲ್ಲ.

ಶ್ರೀ ಎಸ್.ಎಂ. ಕೃಷ್ಣ:– ನನ್ನ ತರಹ. ಈ ಸದನದ ಸಮಿತಿಯವರು ಕೆ.ಪಿ.ಸಿ.ಯವರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಕೂಡ ನೋಡಿ ಅತಿ ಶೀಘ್ರದಲ್ಲಿ ರಿಪೋರ್ಟ್ ಕೊಟ್ಟರೆ ಅದರಂತೆ ಮುಂದೆ ನಾವು ಬೇಕಾದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ. ಇನ್ನು ಹಲವಾರು ಸದಸ್ಯರು ನಮಗೆ ಸ್ಟೇಶನ್ಸ್ ಬೇಕು ಅಂತ ಹೇಳಿದರು. ದಯಮಾಡಿ ನನ್ನ ಮೇಲೆ ಅನುಕಂಪ ಇಡಬೇಕು. ಕರುಣೆ ಇಟ್ಟುಕೊಳ್ಳಬೇಕು. ನಮ್ಮಲ್ಲಿರತಕ್ಕಂಥ ಹಣ ಎಷ್ಟು. ಈ ವರ್ಷ 167 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಅಂದಾಜು ಮಾಡಿದ್ದೇವೆ. ಈ 167 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ನಮ್ಮಲ್ಲಿ ಶಕ್ತಿ ಇದೆ. ಅಷ್ಟರ ಮಟ್ಟಿಗೆ ನಾವು 1993–94ನೇ ಇಸವಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಅಂಥಾದ್ದರಲ್ಲಿ ಎಲ್ಲರಿಗೂ ಒಂದೊಂದು ಎಂ ಇ ಎಸ್ ಎಸ್ ಕೊಡಿ ಅಂತ ಕೇಳಿದರೆ ಬಹಳ ಕಠಿಣವಾಗುತ್ತದೆ. ನಾವು ಎಲ್ಲರಿಗೂ ಜಸ್ಟೀಸ್ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ಕೆ.ಇ.ಬಿ. ಯಲ್ಲಿ ಎಕ್ಸ್‌ಪರ್ಟ್ಸ್ ಇದ್ದಾರೆ. ಎಲ್ಲಿ ಯಾವ ಸ್ಟೇಷನ್ ಹಾಕಿದರೆ ಅದರಿಂದ ಆ ಭಾಗಕ್ಕೆ ಆ ಪ್ರದೇಶಕ್ಕೆ ಅನುಕೂಲವಾಗುತ್ತದೆ ಎನ್ನತಕ್ಕಂಥಾದ್ದನ್ನು ನಿಶ್ಚಯ ಮಾಡತಕ್ಕಂಥವರು ಅವರು. It is a highly technical and very technical. ಆದ್ದರಿಂದ ಇದರಲ್ಲಿ ನಾವು ಹಸ್ತಕ್ಷೇಪ ಮಾಡಿದರೆ ಮಾಧುಸ್ವಾಮಿಯವರಿಗೆ ಒಂದು ಸ್ಟೇಶನ್ ಅಂತ ಹೇಳತಕ್ಕಂಥಾದ್ದು, ನಾನು ನಿಮ್ಮ ಹೆಸರು ತೆಗೆದುಕೊಂಡೆ ಅಷ್ಟೆ;

Mr. Madhuswamy and Mr. Byregowda both are in the limelight as far as the power generation and the power distribution is concerned. ಮೈಸೂರು ತೆಗೆದುಕೊಂಡರೆ, as far as Urban Distribution system in Mysore is concerned a Scheme has been submitted to the Power Finance Corporation. There is plenty of money in power Finance Corporation and we have submitted a proposal for Rs.18 Crores and the sanction is awaited. As soon as we get the sanction we will go ahead. In the meanwhile we will try to locate the land in Mysore and if we fail we can always take shelter under Mr. Azeez Sait Sab. He will find us the land.

ಶ್ರೀ ಎಸ್. ಶಫಿ ಅಹ್ಮದ್:– ಮಾನ್ಯ ಅಧ್ಯಕ್ಷರೇ ಅಂತಸ್ಥನ ಹಳ್ಳಿ ಸ್ಟೇಶನ್ ಬಗ್ಗೆ ತಾವು ಟೆಂಡರ್ ಕಾಲ್ ಮಾಡಿದ್ದೀರಿ. ಟೆಂಡರ್ ಕಾಲ್ ಮಾಡಿ ತಿಂಗಳಾನುಗಟ್ಟಲೆ ಆಯಿತು. ಆ ಟೆಂಡರ್ಸ್ ಓಪನ್ ಮಾಡಿ ಫೈನಲೈಜ್ ಮಾಡಿಲ್ಲ. ಇದರಿಂದ ಈ ಕೆಲಸ ಕುಂಠಿತವಾಗಿದೆ ಮತ್ತು ನಮಗೆ ಸ್ವ್ಯಾಪ್ ಗ್ಯಾಪ್ ಅರೇಂಜ್‌ಮೆಂಟ್ ಮಾಡಿಕೊಡುತ್ತೇನೆಂದು ಆಶ್ವಾಸನೆ ಕೊಟ್ಟಿದ್ದೀರಿ. ನಮಗೆ ಸ್ವ್ಯಾಪ್ ಗ್ಯಾಪ್ ಅರೇಂಜ್‌ಮೆಂಟ್ ಮಾಡಿಕೊಟ್ಟರೆ ತುಮಕೂರು ಜಿಲ್ಲೆಗೆ ವಿದ್ಯುತ್ ಸರಬರಾಜು ಮಾಡಿಕೊಳ್ಳುವುದಕ್ಕೆ

ಸಾಧ್ಯವಾಗುತ್ತದೆ. ಇವತ್ತು ಸುಮಾರು ರಿಲೀಜ್ ಟ್ರಾನ್ಸ್‌ಫಾರ್ಮರ್ಸ್ ಏನಿದೆ, ಆ ರಿಲೀಜ್ ಟ್ರಾನ್ಸ್‌ಫಾರ್ಮರ್ಸ್‌ಗೆ ಫೈನಾನ್ಷಿಯಲ್ ಕಮಿಟ್‌ಮೆಂಟ್ ಏನೂ ಬರುವುದಿಲ್ಲ. ಆದ್ದರಿಂದ ಹಿರೇಹಳ್ಳಿಯಲ್ಲಿ ಆಗಲೀ ಅಥವಾ ಅಂತಸ್ಥನ ಹಳ್ಳಿಯಲ್ಲಿ ಆಗಲೀ ಮಾಡಿಕೊಟ್ಟರೆ ನಮ್ಮ ಪ್ರಾಬ್ಲಮ್ ಸಾಲ್ವ್ ಆಗುತ್ತದೆ. ನಿನ್ನೆ ಧರಣಿ ಮಾಡಿದ್ದಾರೆ. ಇಡೀ ತುಮಕೂರು ತಾಲ್ಲೂಕಿನಲ್ಲಿ ತುರ್ತು ಪರಿಸ್ಥಿತಿ ಉಂಟಾಗಿದೆ. ದಯಮಾಡಿ ಶೀಘ್ರದಲ್ಲಿ ಸ್ವಾಪ್ ಗ್ಯಾಪ್ ಅರೇಂಜ್‌ಮೆಂಟ್ ಮಾಡಿಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:– ಕಿಬ್ಬನಹಳ್ಳಿ ಸ್ಟೇಶನ್ ಆಗಿದೆ ಅಲ್ಲವೇ.......

ಶ್ರೀ ಆರ್. ನಾರಾಯಣ:– ಒಂದು ಕಡೆ ಅತಿವೃಷ್ಟಿ ಆದರೆ ನಮ್ಮ ಕಡೆ ಅನಾವೃಷ್ಟಿ ಆಗಿದೆ. ನಮಗೆ ತುಮಕೂರು ಜಿಲ್ಲೆಯ ಅರ್ಧಭಾಗ ಸೇರುತ್ತದೆ. ನಮ್ಮ ಷಫಿ ಅವರಿಗೆ ಅರ್ಧ ತಾಲ್ಲೂಕು ಬರುತ್ತದೆ. ನಿನ್ನೆ ನಡೆದ ಧರಣಿಯಲ್ಲಿ ನಾವ್ಯಾರು ತಿರುಗಾಡುವಂತೆ ಇಲ್ಲ. ನಮಗೆ ಊರಿಗೆ ಹೇಗೆ ಹೋಗುವುದು ಅಂತ ದಿಗಿಲು ಆಯಿತು. ರೋಡ್ ಬ್ಲಾಕ್ ಮಾಡಿ ರಸ್ತೆ ಅಡ್ಡಗಟ್ಟಿದ್ದರು. ದಯೆಮಾಡಿ ಏನಾದರೊಂದು ಭರವಸೆ ಕೊಟ್ಟು ಅಂತಸ್ಥನ ಹಳ್ಳಿಯಲ್ಲಿ ಮಾಡಿದರೆ ತುಮಕೂರು ತಾಲ್ಲೂಕು ಮತ್ತು ಇನ್ನೂ ಎರಡು ಮೂರು ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ಇದನ್ನು ಮಾಡಿದರೆ ನಮಗೂ ಮತ್ತು ನಮ್ಮ ತಾಲ್ಲೂಕಿನ ಜನಗಳಿಗೂ ಸಮಾಧಾನಕರವಾಗುವ ರೀತಿಯಲ್ಲಿ ಹಾಗೂ ಕಾರ್ಯಗತವಾಗುವ ರೀತಿಯಲ್ಲಿ ಒಂದು ಭರವಸೆಯನ್ನು ತಾವು ಕೊಡಬೇಕು.

ಶ್ರೀ ಎಸ್.ಎಂ. ಕೃಷ್ಣ:– ಮಾನ್ಯ ನಾರಾಯಣ್ ಅವರು ಮಾನ್ಯ ಶಫಿ ಅಹ್ಮದ್‌ರವರು ಈ ಅಂತಸ್ಥನ ಹಳ್ಳಿಯಲ್ಲಿ 220 ಕೆ.ವಿ ಸ್ಟೇಷನ್ ಹಾಕುವ ಬಗ್ಗೆ ಹೇಳಿದ್ದಾರೆ. ಅದು ಆಗುತ್ತಿದೆ. ಇನ್ನೊಂದು ವರ್ಷದಲ್ಲಿ ಅದನ್ನು ಮುಗಿಸುತ್ತೇವೆ.

ಶ್ರೀ ಆರ್. ನಾರಾಯಣ:– ಇದು ಆಗದೇ ಇರುವ ಕೆಲಸ. ನಾವೂ ಇಂಜಿನೀಯರ್ಸ್‌ನ್ನು ಕೇಳಿ ನೋಡಿದ್ದೇವೆ. ಆ ಟೈಮ್ ಪ್ರಕಾರ ಆಗುವುದಿಲ್ಲ. ಏಕೆಂದರೆ ಒಂದೂವರೆ ವರ್ಷದ ಹಿಂದೆ 6 ಮೆಗಾವ್ಯಾಟ್‌ಗೆ ಚೋಳೂರಿನಲ್ಲಿ ಫೌಂಡೇಷನ್ ಹಾಕಲಾಯಿತು. ಒಂದೂವರೆ ವರ್ಷದಿಂದ ಲೈನ್ ಡ್ರಾ ಮಾಡುವುದಕ್ಕಾಗಲಿಲ್ಲ. ಇದು ವರ್ಲ್ಡ್ ಬ್ಯಾಂಕ್ ಏಡ್‌ನಿಂದ ಮಾಡುವುದು, ಇದು ಒಂದು ವರ್ಷದಲ್ಲಿ ಆಗುವುದಿಲ್ಲ. ಅದು ಆಗುವವರೆಗೆ ನಮಗೆ ಸ್ವಾಪ್ ಗ್ಯಾಪ್ ಅರೇಂಜ್‌ಮೆಂಟ್ ಮಾಡದೇ ಹೋದರೆ ನಮಗೆ ಬಹಳ ತೊಂದರೆಯಾಗುತ್ತದೆ. ದಿನ ನಿತ್ಯ ನಾವು ಗ್ರಾಮಾಂತರ ಪ್ರದೇಶಗಳ ಕಡೆ ಹೋಗಬೇಕಾಗುತ್ತದೆ. ಆದ್ದರಿಂದ ಇದನ್ನು ತ್ವರಿತವಾಗಿ ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ:– ನಾರಾಯಣ್‌ರವರಿಗೆ ತಿಳಿಸುವುದೇನೆಂದರೆ, ಈ ಅಂತಸ್ಥನ ಹಳ್ಳಿ 220 ಕೆ.ವಿ.ಗೆ ಬೇಕಾದ ಎಲ್ಲಾ ಈಕ್ವಿಪ್‌ಮೆಂಟ್‌ಗೆ ಈಗಾಗಲೇ ನಾವು ಆರ್ಡರ್ ಮಾಡಿಯಾಗಿದೆ. ಆ ಆಧಾರದ ಮೇಲೆಯೇ ಅಂತಸ್ಥನ ಹಳ್ಳಿಯ ಹತ್ತಿರ 220 ಕೆ.ವಿ. ಸ್ಟೇಷನ್ ಅನ್ನು ಇನ್ನು ಒಂದು ವರ್ಷದಲ್ಲಿ ಮುಗಿಸುತ್ತೇವೆಂದು ಹೇಳುತ್ತೇನೆ. ಇಲ್ಲದಿದ್ದರೆ ಖಾಲಿ ಭರವಸೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಈ ಜಾಬ್ ಅಗ್ರಿಮೆಂಟ್‌ನ್ನು 3 ವರ್ಷಗಳಿಗೆ ಮಾಡಿಕೊಳ್ಳಲಾಗಿದೆ.

ಶ್ರೀ ಎಸ್.ಎಂ. ಕೃಷ್ಣ:– ಅದಕ್ಕೆ ಸ್ವಾಪ್ ಗ್ಯಾಪ್ ಅರೇಂಜ್‌ಮೆಂಟ್‌ಗೆ 66 ಕೆ.ವಿ. ಸ್ಟೇಷನ್ ಅಲ್ಲಿ ಮಾಡಬಹುದು. ಅದನ್ನು ಮಾಡಿಸಿಕೊಡುತ್ತೇವೆ.

ಶ್ರೀ ಸಿ. ಬೈರೇಗೌಡ:– ಹೋದ ವರ್ಷ ಬೆಂಗಳೂರು ಏರ್‌ಪೋರ್ಟ್‌ನ್ನು 2 ಗಂಟೆ ಕಾಲ ಕತ್ತಲಲ್ಲಿ ಇಟ್ಟಿದ್ದರು. ನಾನ ಅದರ ಬಗ್ಗೆ ಮಾತನಾಡಿದ್ದೆ. ಈಗ ಇದ್ದಾರಲ್ಲಾ ಅಧ್ಯಕ್ಷರು, ಅವರ ವಿಚಾರದಲ್ಲಿ

ಮಾತನಾಡಬೇಕಾದರೆ ನನಗೆ ಬಹಳ ಸಂತೋಷವಾಗುತ್ತದೆ. ಒಳ್ಳೆಯುವರನ್ನು ಅಲ್ಲಿ ಇಟ್ಟಿದ್ದೀರಿ. ಹಿಂದೆ ಇದ್ದವರು 2 ಗಂಟೆ ಕಾಲ ಏರ್‌ಪೋರ್ಟ್‌ನ್ನು ಕತ್ತಲಲ್ಲಿ ಇಟ್ಟು ತಪ್ಪು ವರದಿಯನ್ನು ಇಲ್ಲಿ ಕೊಟ್ಟ ಘಟನೆ ನಡೆದಿದೆ. ಅದರ ಬಗ್ಗೆ ಏನು ಮಾಡಿದ್ರಿ ಎಂದು ದಯವಿಟ್ಟು ತಿಳಿಸಿ.

ಚೇರ್ಮನ್:- ತಾವು ದಯವಿಟ್ಟು ಬ್ರೀಫ್ ಮಾಡಬೇಕು.

ಶ್ರೀ ಸಿ. ಬೈರೇಗೌಡ:- ಪವರ್ ಕಾರ್ಪೊರೇಷನ್‌ನಲ್ಲಿ ಏನಾಗಿದೆ ಎಂದರೆ, ಅಲ್ಲಿ ಹಣ್ಣು ಹಣ್ಣು ಮುದುಕರಿದ್ದಾರೆ. ಅವರನ್ನು ಸಾಯುವವರೆಗೂ ತೆಗೆಯುವ ಹಾಗಿಲ್ಲ. ಎಷ್ಟು ವರ್ಷ ಅವರನ್ನು ಡೈರೆಕ್ಟರುಗಳನ್ನಾಗಿ ಮಾಡುತ್ತೀರಿ ? ಕೆಲವರಿಗೆ ಕಣ್ಣು ಕಾಣಿಸುವುದಿಲ್ಲ. ಕಿವಿಯೂ ಕೇಳಿಸುವುದಿಲ್ಲ. ಅಂಥವರನ್ನು ಪವರ್ ಕಾರ್ಪೊರೇಷನ್‌ನಲ್ಲಿ ನೀವು ಡೈರೆಕ್ಟರ್‌ಗಳನ್ನಾಗಿ ಇಟ್ಟುಕೊಂಡಿದ್ದೀರಿ. ಅದರಲ್ಲಿ ಕೆಲವರನ್ನು ತೆಗೆಯಿರಿ. ಸಾಯುವವರೆಗೂ ಅಲ್ಲಿ ಒಬ್ಬರೇ ಇರಬೇಕಾ ? ಲೇಟೆಸ್ಟ್ ನಾಲೆಡ್ಜ್ ಇರತಕ್ಕಂಥವರನ್ನು ಪವರ್ ಕಾರ್ಪೊರೇಷನ್ ಡೈರೆಕ್ಟರುಗಳನ್ನಾಗಿ ಮಾಡಿ. ನೋಡಿ ಸ್ವಾಮಿ, ಅವರ ಫೋಟೋ ಎಲ್ಲಾ ಪ್ರಿಂಟ್ ಆಗಿದೆ. ಹೇಳಿಬಿಡುತ್ತೇನೆ ಬೇಕಾದರೆ ಒಬ್ಬೊಬ್ಬರ ಕತೇನೂ. ಹೇಳುವುದು ಬೇಡವಾ !

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಬೈರೇಗೌಡರು ಹೇಳುವುದನ್ನು ಎಕ್ಸಾಮಿನ್ ಮಾಡುವುದಕ್ಕೆ ಒಂದು ಕಮಿಟಿ ಮಾಡಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ:- ಇಲ್ಲಿರತಕ್ಕಂಥ ಕೆಲವರನ್ನು ತೆಗೆಯಿರಿ.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಬೈರೇಗೌಡರು, ಏರ್‌ಪೋರ್ಟ್‌ನಲ್ಲಿ ನಡೆದಂಥ ಘಟನೆ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇಂಥಾ ಘಟನೆಗಳು ಆಗಬಾರದು. ಏರ್‌ಪೋರ್ಟ್, ರೈಲ್ವೆ ಸ್ಟೇಷನ್, ಬಸ್ ಸ್ಟ್ಯಾಂಡ್, ಏರ್‌ಪೋರ್ಟ್ ಬಿಟ್ಟುಬಿಡಿ, ಏರ್‌ಪೋರ್ಟ್‌ಗೆ ಹೋಗುವವರು ನಮ್ಮಂಥವರು ನಿಮ್ಮಂಥವರು; ಸಾಧಾರಣ ಜನ ಏರ್‌ಪೋರ್ಟಿಗೆ ಹೋಗುವುದಿಲ್ಲ. ಆದರೂ ತಾತ್ವಿಕವಾಗಿ ಇಂಥ ಕಡೆಗಳಲ್ಲಿ ಒಬ್ಬರ whims and fancies of one individual, be the Minister or the Chairman of the Board ಹೀಗೆ ಮಾಡತಕ್ಕಂಥಾದ್ದು ತೀವ್ರ ಖಂಡನಾರ್ಹ. ಅದು ಯಾವ ಸಂದರ್ಭದಲ್ಲಿ ನಡೆಯಿತು, ಹೇಗೆ ನಡೆಯಿತು ಎನ್ನತಕ್ಕಂಥಾದ್ದನ್ನು ಈಗ ನೋಡುವುದಕ್ಕೆ ಹೋದರೆ ಅದು ಪೋಸ್ಟ್ ಮಾರ್ಟಮ್ ಮಾಡಿದ ಹಾಗೆ ಆಗುತ್ತದೆ. ಅದರಿಂದ ಏನಾದರೂ ಪ್ರಯೋಜನವಾಗುತ್ತದೆಯೇ ? ಆದ್ದರಿಂದ ಅದಕ್ಕೆ ಮಹತ್ವ ಕೊಡಬಾರದು. ಇಷ್ಟು ಹೇಳಿ ತಾವು ನನ್ನ ಸುದೀರ್ಘ ಉತ್ತರಕ್ಕೆ ಕಿವಿ ಕೊಟ್ಟಿದ್ದಕ್ಕಾಗಿ ಈ ಮನೆಯ ಎಲ್ಲಾ ಸದಸ್ಯರಿಗೆ, ಅಧ್ಯಕ್ಷರಿಗೆ ಆಭಾರಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ನಮ್ಮ ಸರ್ಕಾರ ಇರಲಿ ಅಥವಾ ತಮ್ಮ ಸರ್ಕಾರ ಇರಲಿ, you have drawn amibitious programme to energise pumpsets, to energise villages and hamlets. ಆದರೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಲಿಲ್ಲ. Now, lot of posts in KEB viz: Lineman and Engineers are vacant.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಅವರು ಸಾಕಷ್ಟು ಮಾತನಾಡಿದ್ದಾರೆ. ನಾವು ಕ್ಲಾರಿಫಿಕೇಷನ್ ಕೇಳುವುದಕ್ಕೂ ಅವಕಾಶ ಇಲ್ಲ.

MR. CHAIRMAN:- Please resume your seat. I have allowed Hon'ble Leader of Opposition

ಶ್ರೀ ಆರ್.ವಿ. ದೇಶಪಾಂಡೆ:– ಈಗ ನಾನು ಏನು ಹೇಳುತ್ತಿದ್ದೆ ಎಂದರೆ Ambitions target you have reached, energised the pumpsets, you have energised the villages and hamlets, but, ಆದರೆ ಸರಿಯಾದ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಿಲ್ಲ. ಲೈನ್‌ಮನ್ಸ್ ಇಲ್ಲ. ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನೀಯರ್ಸ್ ಇಲ್ಲ. ಅದರ ಬಗ್ಗೆ ಮಾನ್ಯ ಸಚಿವರು ಈ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಿ ಈ ಪ್ರಾಬ್ಲಮ್‌ನ್ನು ಯಾವ ಪ್ರಕಾರ ಸಾಲ್ವ್ ಮಾಡುತ್ತಾರೆಂದು ಹೇಳಲಿಲ್ಲ. ಎರಡನೆಯದು ಕರ್ನಾಟಕ ಪವರ್ ಕಾರ್ಪೊರೇಷನ್, ಇವತ್ತು ನಾನು ತಿಳಿದುಕೊಂಡ ಮಟ್ಟಿಗೆ its finance position is very bad. ಹಣ ರಿಲೀಸ್ ಆಗಿಲ್ಲ ಇದರಿಂದ ಏನಾಗಿದೆ ಎಂದರೆ Rehabilitation of Kali Project is in standstill; ಅದು ಹಾಗೇ ಇದೆ. ಅಂಕೋಲ ತಾಲ್ಲೂಕು ಡೋಂಗ್ರಿ, ಕಲ್ಲೇಶ್ವರದಲ್ಲಿ ಇವತ್ತು After lot of persuasion, Forest Department have permitted for cutting of trees for rehabilitation.

ಆದರೆ ಕೆ.ಪಿ.ಸಿ. ಇನ್ನೂ ಹಣ ತುಂಬಿಲ್ಲ as the compensation to the Forest Department for afforestation of forest is to be paid. ಹಾಗಾಗಿ ಎಂಟೈರ್ ರೀಹ್ಯಾಬಿಲಿಟೇಷನ್ ಸ್ಟೇ ಆಗಿದೆ. ಅದರ ಬಗ್ಗೆ ಕೆಪಿಸಿಗೆ ಇಮ್ಮಿಡಿಯಟ್ ಆದೇಶ ಕೊಟ್ಟು ಹಣ ತುಂಬಿಸಬೇಕೆಂದು ಎರಡನೇ ಸಲಹೆಯನ್ನು ತಮಗೆ ಕೊಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಬಗ್ಗೆ ನಾನು ತಮಗೆ ಹೇಳಿದ್ದೇನೆ. ತಾವು ಮಾಡಿಕೊಡುತ್ತೀರೆಂದು ನನಗಂತೂ ವಿಶ್ವಾಸ ಇದೆ. ನಾವು ಯಲಹಂಕದಲ್ಲಿ ಮಾಡಿರತಕ್ಕಂಥ ಜನರೇಟರ್ ಸ್ಟೇಷನ್ ಏನಿದೆ ? ನಾನು ಇತ್ತೀಚೆಗೆ ಪತ್ರಿಕೆಗಳಲ್ಲಿ ಓದಿದೆ. ಅದರ ಬಗ್ಗೆ ತಾವು ಪ್ರಸ್ತಾಪ ಮಾಡಲಿಲ್ಲ. ಅದು ಮಹತ್ವದ ವಿಚಾರವಾಗಿರುವುದರಿಂದ ಇದರಲ್ಲಿ ಏನಾದರೂ ಅಬ್ಸಟಕಲ್ಸ್ ಇದೆಯಾ ? ಇದರಿಂದ ಯಾವಾಗ ಪವರ್ ಜನರೇಷನ್ ಪ್ರಾರಂಭವಾಗುತ್ತದೆ ಎನ್ನುವುದನ್ನು ತಿಳಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಡಾ: ಎನ್.ಬಿ. ನಂಜಪ್ಪ:– ಚನ್ನರಾಯಪಟ್ಟಣಕ್ಕೆ ಎರಡು ಟ್ರಾನ್ಸ್‌ಫಾರ್ಮರ್ ಸ್ಯಾಂಕ್ಷನ್ ಆಗಿ ಒಂದು ಟ್ರಾನ್ಸ್‌ಫಾರ್ಮರ್ ಇನ್‌ಸ್ಟಾಲೇಷನ್ ಆಗಿದೆ. ಇನ್ನೊಂದು ಟ್ರಾನ್ಸ್‌ಫಾರ್ಮರ್ ಇನ್‌ಸ್ಟಾಲೇಷನ್ ಆಗಬೇಕಾಗಿದೆ. ಅದನ್ನು ಯಾವಾಗ ಮಾಡಿಕೊಡುತ್ತೀರೆಂದು ಹೇಳಬೇಕು. ಇವತ್ತು ಲೋ ವೋಲ್ಟೇಜ್ ಆಗಿ ದೊಡ್ಡ ಪ್ರಾಬ್ಲಮ್ ಆಗಿದೆ. ಹಳ್ಳಿಗಳಲ್ಲಿ ಕುಡಿಯುವುದಕ್ಕೂ ನೀರು ಸಿಗುತ್ತಿಲ್ಲ. ಟೌನ್‌ನಲ್ಲೂ ಸಹಾ ಕುಡಿಯುವ ನೀರಿಗೆ ತೊಂದರೆಯಾಗಿದೆ. ಇದರ ಬಗ್ಗೆ ಮಂತ್ರಿಗಳು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ದಯವಿಟ್ಟು ತಿಳಿಸಬೇಕು.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಸನ್ಮಾನ್ಯ ಸಭಾಧ್ಯಕ್ಷರೇ, ಈ ಮೆಮೊರಾಂಡಮ್ ಆಫ್ ಅಂಡರ್ ಸ್ಟ್ಯಾಂಡಿಂಗ್ ಎಂದು ಹೇಳಿದ್ರಲ್ಲಾ, ಅದರ ಬಗ್ಗೆ ಮಾತನಾಡುತ್ತೇನೆ. ನಮ್ಮ ಬಜೆಟ್ ಒಳಗಡೆ ಏನು ಆರ್ಥಿಕ ಚಟುವಟಿಕೆ ಇದೆ ಅದನ್ನು ಮಾಡುವುದಕ್ಕಷ್ಟೇ ನಾವು ಅಧಿಕಾರ ಕೊಡುತ್ತೇವೆ. ಈ ಫೈನಿಂಗ್ ಮೆಮೊರಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್ – It has to be looked as an extra Budgetary activity. ಅದನ್ನು ಈ ಸದನದ ಸದಸ್ಯರಿಗೆ ನೋಡುವ ಹಕ್ಕು ಉಂಟೋ ? ಅಥವಾ ಇಲ್ಲವೋ ಎಂಬುದನ್ನು ತಾವು ಸ್ಪಷ್ಟಪಡಿಸಬೇಕು. ಹಕ್ಕು ಇಲ್ಲವೆಂದರೆ, ನೋಡುವ ಸೌಭಾಗ್ಯವಾದರೂ ಇದೆಯಾ ಅಂತಾ ?

ಶ್ರೀ ಡಿ. ಹಲಗೇಗೌಡ:– ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಅನೇಕ ಜಿಲ್ಲೆಗಳಲ್ಲಿ, ಎರಡಕ್ಕಿಂತ ಹೆಚ್ಚು ಸಬ್ ಸ್ಟೇಷನ್‌ಗಳನ್ನು ಮಾಡಿದ್ದಾರೆ. ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕಂಥದ್ದರಲ್ಲಿ ಮಂಡ್ಯ ಜಿಲ್ಲೆಯಲ್ಲಿ ಕೇವಲ ಒಂದು ಸಬ್ ಸ್ಟೇಷನ್ ಬಿಟ್ಟರೆ ಬೇರೆ ಎಲ್ಲೂ ಸಬ್ ಸ್ಟೇಷನ್ ಇಲ್ಲ. ಪಾಂಡವಪುರ ಉಪ

ವಿಭಾಗ ಕೇಂದ್ರ ಸ್ಥಳವಾಗಿದ್ದು, ಈ ವಿದ್ಯುಚ್ಛಕ್ತಿ ಸರಬರಾಜು ಬಗ್ಗೆ ಅನೇಕ ದೂರುಗಳು ಇರುವುದರಿಂದ ಅಲ್ಲಿ ಒಂದು ಸಬ್ ಸ್ಟೇಷನ್ ಅನ್ನು ಈ ಕೂಡಲೇ ಆದ್ಯತೆ ಮೇಲೆ ಸ್ಥಾಪನೆ ಮಾಡುತ್ತೀರಾ ?

ಶ್ರೀ ವಿನಯಕುಮಾರ್ ಸೊರಕೆ:– ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನಲ್ಲಿ ಒಂದು ಡಿವಿಷನಲ್ ಆಫೀಸ್‌ನ್ನು ಹೊಸದಾಗಿ ತೆರೆದಿದ್ದಾರೆ. ಇನ್ನೂ ಕೂಡಾ ಸರಿಯಾದ ಸ್ಟ್ಯಾಫ್ ಅಲ್ಲಿಗೆ ಬಂದಿಲ್ಲ. ದಯವಿಟ್ಟು ಮಾನ್ಯ ಸಚಿವರು ಆ ಡಿವಿಷನಲ್ ಆಫೀಸ್‌ಗೆ ಸರಿಯಾದ ಸಿಬ್ಬಂದಿಯನ್ನು ಹಾಕಬೇಕೆಂದು ಮನವಿ ಮಾಡುತ್ತೇನೆ. ರೈತರಿಗೆ ಡಿಸಂಬರ್ ತಿಂಗಳಿನಿಂದ ಏಪ್ರಿಲ್ ತಿಂಗಳವರೆಗೆ ಮಾತ್ರ ಕರೆಂಟ್ ಉಪಯೋಗ ಮಾಡುವಂಥ ಅವಕಾಶ ಇರುತ್ತದೆ. ವರ್ಷದಲ್ಲಿ 6 ತಿಂಗಳು ಮಾತ್ರ ಅವರು ಕರೆಂಟ್ ಉಪಯೋಗ ಮಾಡುತ್ತಾರೆ. ಈ ತಿಂಗಳಲ್ಲೂ ಸಹಾ ಸರಿಯಾಗಿ ಕರೆಂಟ್ ವಿತರಣೆಯಾಗುವುದರಲ್ಲಿ ವಿಳಂಬವಾಗುತ್ತಿದೆ. ಎಷ್ಟೋ ಟ್ರಾನ್ಸ್‌ಫಾರ್ಮರ್‌ಗಳು ಅವುಗಳ ಕೆಪಾಸಿಟಿಗಿಂತ ಜಾಸ್ತಿ ಕೆಲಸ ಮಾಡುವಂಥ ನಿದರ್ಶನಗಳಿವೆ. ಸಬ್ ಸ್ಟೇಷನ್ ಆಗುವ ಬಗ್ಗೆ ಮನವಿ ಕೂಡಾ ತಮ್ಮಲ್ಲಿ ಪೆಂಡಿಂಗ್ ಇದೆ. ಅದೇ ರೀತಿ ಲೈನ್‌ಮನ್‌ಗಳ ಸಂಖ್ಯೆ ಕಡಿಮೆ ಇದೆ. ಬಳಕೆದಾರರು ಲೈನ್‌ಮೆನ್‌ಗಳನ್ನು ಸ್ವಂತ ದುಡ್ಡು ಕೊಟ್ಟು ಇಟ್ಟುಕೊಳ್ಳುವುದಕ್ಕೂ ಮುಂದೆ ಬಂದಿದ್ದಾರೆ. ಕಡೇ ಪಕ್ಷ ಮಂಡಲಕ್ಕೆ ಒಬ್ಬನನ್ನಾದರೂ ಲೈನ್‌ಮೆನ್ ಅನ್ನು ಬಳಕೆದಾರರೇ ಸಂಬಳ ಕೊಡುವ ವ್ಯವಸ್ಥೆ ಮೇಲೆ ನೇಮಕ ಮಾಡಿಕೊಳ್ಳಲು ಅನುಮತಿ ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಸನ್ಮಾನ್ಯ ಅಧ್ಯಕ್ಷರೇ, ಟ್ರಾನ್ಸ್‌ಫಾರ್ಮರ್‌ಗಳ ಕೊರತೆ ಎಲ್ಲಾ ತಾಲ್ಲೂಕುಗಳಲ್ಲೂ ಇದೆ. ಟ್ರಾನ್ಸ್‌ಫಾರ್ಮರ್‌ಗಳಿಗೆ ಏನು ಸಾಮರ್ಥ್ಯ ಇದೆಯೋ ಅದಕ್ಕಿಂತ ಜಾಸ್ತಿ ಕನೆಕ್ಷನ್ ಕೊಟ್ಟಿದ್ದೀರಿ. ನನ್ನ ಮತ ಕ್ಷೇತ್ರ ವಿಟ್ಲದಲ್ಲಿ ಸಬ್ ಸ್ಟೇಷನ್ ಮಾಡಬೇಕು.ನಮ್ಮ ಜಿಲ್ಲೆಯಲ್ಲಿ ಮುಖ್ಯವಾಗಿ ಬೈಂದೂರು, ಮೂಡಬಿದ್ರೆ ಮತ್ತು ವಿಟ್ಲದಲ್ಲಿ ಸಬ್ ಸ್ಟೇಷನ್‌ಗಳನ್ನು ಆದಷ್ಟು ಬೇಗ ಸ್ಥಾಪನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ:– ಸನ್ಮಾನ್ಯ ಕೃಷ್ಣರವರು ವಿದ್ಯುಚ್ಛಕ್ತಿ ಮಂತ್ರಿಯಾದ ಮೇಲೆ ಹಲವಾರು ಕಡೆ ಟ್ರಾನ್ಸ್‌ಫಾರ್ಮರ್‌ಗಳನ್ನು ಒದಗಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿಯೊಂದು ಟ್ರಾನ್ಸ್‌ಫಾರ್ಮರ್‌ಗಳಿಗೆ ಕಂಟ್ರಾಕ್ಟ್‌ದಾರರು 3 1/2ಸಾವಿರದಿಂದ 5–6ಸಾವಿರದವರೆಗೆ ಸ್ಥಳೀಯರಿಂದ ಕಲೆಕ್ಷನ್ ಮಾಡುತ್ತಿದ್ದಾರೆ. ಇವುಗಳನ್ನು ಸರ್ಕಾರವೇ ಕೊಡುವಂಥ ವ್ಯವಸ್ಥೆ ಮಾಡಬೇಕು. 5 ವರ್ಷದ ಮೊದಲು ಸುಮಾರು ಲೈನ್‌ಮನ್‌ಗಳಿಗೆ ಪ್ರಮೋಷನ್ ಕೊಟ್ಟಿದ್ದೀರಿ. ಇವತ್ತು ಲೈನ್‌ಮನ್ ವೇಕೆನ್ಸಿ ಬಹಳಷ್ಟು ಇದೆ. ಹಾಗಾಗಿ ನಮ್ಮಲ್ಲಿ ಭಾಗ್ಯಜ್ಯೋತಿ ಕಾರ್ಯಕ್ರಮಗಳು ಆಗುತ್ತಿಲ್ಲ. ಲೈನ್‌ಮೆನ್ ಪೋಸ್ಟಿಂಗ್‌ನ್ನು ಆದ್ಯತೆ ಮೇಲೆ ದಕ್ಷಿಣ ಕನ್ನಡ ಜಿಲ್ಲೆಗೆ ಮಾಡಿಕೊಡಬೇಕೆಂದು ಕೇಳುತ್ತೇನೆ. ಮತ್ತೆ ನಮ್ಮಲ್ಲಿ ಸರ್ಕಲ್ ಆಫೀಸ್ ಪ್ರಾರಂಭವಾಗಿತ್ತು. ಪ್ರಾರಂಭವಾಗುವ ಎರಡು ದಿವಸಗಳ ಮೊದಲು ಪ್ರಾರಂಭ ಮಾಡುವುದು ಬೇಡವೆಂದು ಸರ್ಕಾರದಿಂದ ಆದೇಶ ಹೋಗಿದೆಯಂತೆ. ಅಲ್ಲಿ ಕುದುರೆ ಮುಖ ಇದೆ; ಮಂಗಳೂರು ಇದೆ, ನ್ಯೂಮಂಗಳೂರು ಪೋರ್ಟ್ ಇದೆ; ಮಂಗಳೂರು ರೀಫೈನರೀಸ್ ಬರುತ್ತಿದೆ. ಸೆಂಟ್ರಲ್ ಗೌರ್ನಮೆಂಟ್ ಮತ್ತು ಸ್ಟೇಟ್ ಗೌರ್ನಮೆಂಟ್‌ನಿಂದ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳು ಬರುತ್ತಿವೆ. ಇಂಥಾ ಸಂದರ್ಭದಲ್ಲಿ ನಾವು ಶಿವಮೊಗ್ಗ ಅಥವಾ ಮೈಸೂರನ್ನು ಹೊಂದಿಕೊಂಡು ಇರಬೇಕಾಗುತ್ತದೆ. ಆದ್ದರಿಂದ ಮಂಗಳೂರಿನಲ್ಲಿ ಒಂದು ಸರ್ಕಲ್ ಆಫೀಸನ್ನು ಪ್ರಾರಂಭ ಮಾಡಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳಿಗೆ ಮೇಕೆದಾಟು ಹೈಡ್ರೊ ಎಲೆಕ್ಟ್ರಿಸಿಟಿ ಪ್ರಾಜೆಕ್ಟ್ ಮಾಡಲಿಕ್ಕೆ ಸರ್ಕಾರದ ಕಾರ್ಯಕ್ರಮ ಏನು ಅಂತ ಕೇಳುತ್ತಿದ್ದೇವೆ. ಅದೇ ರೀತಿ ಮಹದಾಯಿ ಯೋಜನೆ ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಏನು ಬರುತ್ತ

ಅದರ ಬಗ್ಗೆ ತಮ್ಮ ಕಾರ್ಯಕ್ರಮ ಏನು ಹುಕ್ಕೇರಿ ತಾಲ್ಲೂಕ್ ಎಲೆಕ್ಟ್ರಿಕಲ್ ಸೊಸೈಟಿಯವರು ಸರ್ಕಾರದವರಿಗೆ ಸುಮಾರು 8 ಕೋಟಿ ರೂಪಾಯಿಗಳನ್ನು ಬಾಕಿ ಕೊಡಬೇಕಾಗಿದೆ. ಅವರಿಗೆ ನೀವು ಏನು ವಿದ್ಯುತ್ ದರವನ್ನು ನಿಗದಿಪಡಿಸಿದ್ದೀರಿ ಅದರಲ್ಲಿ ಏನಾದರೂ ರಿಯಾಯಿತಿಯನ್ನು ತೋರಿಸಿ ಕಡಿಮೆ ಬೆಲೆಗೆ ವಿದ್ಯುತ್‌ನ್ನು ಒದಗಿಸಿಕೊಟ್ಟು ಸರಿಯಾಗಿ ಈ ಸಂಸ್ಥೆಯನ್ನು ನಡೆಸಲಿಕ್ಕೆ ಏನಾದರೂ ಅನುವು ಮಾಡಿಕೊಡುತ್ತೀರಾ ಅಂತ ಕೇಳುತ್ತಿದ್ದೇನೆ. ಮತ್ತೊಂದು ವಾರದಲ್ಲಿ ಒಂದು ದಿನ ಸಂಪೂರ್ಣವಾಗಿ ವಿದ್ಯುತ್ತನ್ನು ನಿಲ್ಲಿಸಿ ತಾಲ್ಲೂಕ್ ವೈಸ್ ಅಥವಾ ಜಿಲ್ಲಾ ವೈಸ್ ನಿಲ್ಲಿಸಿ, ಇವತ್ತಿನ ದಿವಸ ಏನು ಮೇಲಿಂದ ಮೇಲೆ ವಿದ್ಯುತ್ ಕಡಿತವಾಗುತ್ತದೆ ಅದನ್ನು ಏನಾದರೂ ಸರಿಮಾಡಲಿಕ್ಕೆ ತಮ್ಮ ಕಾರ್ಯಕ್ರಮ ಏನು ಅಂತ ಕೇಳುತ್ತಿದ್ದೇನೆ.

ಶ್ರೀ ಸಿ.ಎಸ್. ನಾಡಗೌಡ:– ಮಾನ್ಯ ಅಧ್ಯಕ್ಷರೆ, ಉಪ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿಯೇ ಹೇಳಿದರು; ಈಗ ಇರುವಂತಹ ತೊಂದರೆಯೊಳಗೆ ಸದಸ್ಯರು ಕೂಡ ಅದನ್ನು ತಮ್ಮ ಜ್ಞಾನದಲ್ಲಿಟ್ಟುಕೊಂಡು ಅನುಕಂಪವನ್ನು ತೋರಿಸಿ, ನಾವು ಮುಂದೆ ಮಾಡಿಕೊಡುತ್ತೇವೆ ಎನ್ನುವಂಥದ್ದನ್ನು ಹೇಳಿದರು. ನಾನು ಅವರಿಗೆ ಕೇಳುವುದು ವಿಶೇಷವಾಗಿ ತಾವು ದಯವಿಟ್ಟು ಆದ್ಯತೆಯಲ್ಲಿ ಎಲ್ಲಿ ಕಡಿಮೆ ಮಳೆ ಬೀಳುತ್ತಿದೆ ಮತ್ತು ಎಲ್ಲಿ ಟೇಲ್ ಎಂಡರ್ಸ್ ಇದ್ದಾರೆ. ಅಲ್ಲಿಗೆ ಸರಿಯಾದಂತಹ ವಿದ್ಯುತ್ ಸರಬರಾಜು ಆಗುತ್ತಿಲ್ಲ, ಅಲ್ಲಿ ಅದಕ್ಕೆ ಆದ್ಯತೆಯನ್ನು ಕೊಟ್ಟು ಮಾಡಿದರೆ ಅನುಕೂಲವಾಗುತ್ತದೆ ಎನ್ನುವಂತಹದ್ದು ಒಂದು. ಎರಡನೆಯದು, ಈಗ ನಮ್ಮಲ್ಲಿ ತಮ್ಮ ಸೋರಿಕೆ ಏನಿದೆಯಲ್ಲಾ, ತಮ್ಮ ಸೋರಿಕೆಯಲ್ಲಿ ಹಲವಾರು ಸದಸ್ಯರುಗಳು ಅದರ ಬಗ್ಗೆ ಮಾತನಾಡಿದ್ದಾರೆ. ನೇರವಾಗಿ ಅದರಲ್ಲಿ ತಮ್ಮ ಅಧಿಕಾರಿಗಳೇ ಶಾಮೀಲಾಗಿರುತ್ತಾರೆ. ಒಂದು ದಿವಸ ಎರಡು ದಿವಸ ಮೀಟರ್ ರೀಡಿಂಗ್‌ಗಿಂತ ಮುಂಚೆ ಬರುತ್ತಾರೆ, ಬಂದು ಪುನಃ ಆ ಮೀಟರ್ ಅನ್ನು ಸೆಟ್ ಮಾಡಿ ಮತ್ತೆ ಸೀಲ್ ಮಾಡಿ ಹೋಗುವಂತಹ ಉದ್ಯೋಗ ಕೆಲವೊಂದು ಜನರಿಗೆ ಆಗಿದೆ. ಇದನ್ನು ನಾನು ಹಲವಾರು ಸಲ ತಮ್ಮ ಗಮನಕ್ಕೆ ತಂದಿದ್ದೇನೆ. ಇನ್ನುವರೆಗೂ ಯಾವ ರೀತಿಯಾದಂಥ ಕ್ರಮ ತೆಗೆದುಕೊಂಡಿಲ್ಲ. ಇದನ್ನು ಏನು ಮಾಡುತ್ತಾರೆ ಅಂದರೆ, ರೈತರ ಮೇಲೆ ಹಾಕುತ್ತಾರೆ. ಮುಖ್ಯವಾಗಿ ತಮ್ಮ ಇಲಾಖೆಯಲ್ಲಿ ತಮ್ಮ ಪ್ರೊಡಕ್ಷನ್ ಮತ್ತು ನಮ್ಮ ಯುಟಿಲೈಜೇಷನ್ ಮ್ಯಾಚ್ ಆಗುತ್ತಿಲ್ಲ. ಪ್ರೊಡಕ್ಷನ್ ತಮ್ಮದು ಕಡಿಮೆ ಇದೆ. ಆದರೆ ನಮ್ಮ ಯುಟಿಲೈಸೇಷನ್ ಕೇವಲ ಒಂದು ಆ್ಯಂಬಿಷಿಯಸ್ ಸ್ಕೀಮ್ ಅಂತ ಏನು ಹೇಳುತ್ತೇವೆ, ನಾವು ಇಷ್ಟೊಂದು ವಿದ್ಯುತ್ತನ್ನು ಪಂಪ್‌ಸೆಟ್ಟಿಗೆ ಕೊಡಬೇಕು, ಇಷ್ಟೊಂದು ಇಂಡಸ್ಟ್ರೀಸ್‌ಗೆ ಕೊಡಬೇಕು, ಹೀಗೆ ಸರಿಯಾದಂತಹ ಪ್ಲಾನಿಂಗ್ ಇರಲಾರದೆ ಕೊಟ್ಟರೆ ಯಾವ ರೀತಿ ಆಗುತ್ತಾರೆ ಅಂದರೆ ಒಂದು ಸಣ್ಣ ಉದಾಹರಣೆಯನ್ನು ನಾನು ತಮಗೆ ಹೇಳುತ್ತೇನೆ. ಒಳ್ಳೆಯ ಪಾಯಸ ಆಗಬೇಕೆಂದು ಒಬ್ಬರು ಹೇಳಿದರು, ಒಳ್ಳೆಯ ಪಾಯಸ ಮಾಡುವುದಕ್ಕೆ ಹೊರಟಾಗ ಅದರೊಳಗೆ ಗೋಡಂಬಿ ಇರಬೇಕು, ದ್ರಾಕ್ಷಿ ಕಡಿಮೆ ಇರಬೇಕು, ಹಾಲು ಸಕ್ಕರೆ ಇರಲೇಬಾರದು ಅಂತ ಹೇಳಿದರು. ಆ ರೀತಿಯಾದಂತಹ ಪಾಯಸ ಕುಡಿದರೆ ಯಾರಿಗಾದರೂ ಹೊಟ್ಟೆ ತುಂಬುತ್ತದಾ ಎನ್ನುವುದನ್ನು ಕೇಳಬೇಕಾಗುತ್ತದೆ. ಹೀಗೆ ಇವತ್ತು ಅವರ ಪ್ರೊಡಕ್ಷನ್ನಿಗೆ ಮತ್ತು ಯುಟಿಲೈಜೇಷನ್‌ಗೆ ಯಾವ ರೀತಿಯಾದಂಥ ಸಂಬಂಧವಿಲ್ಲ. ಒಂದು ರೊಟ್ಟಿಯಲ್ಲಿ ನೂರು ಜನಕ್ಕೆ ಹಂಚಿ ತಿನ್ನಿಸುತ್ತಿದ್ದಾರೆ. ರೈತರು ಇದರಿಂದ ಬೊಬ್ಬೆಯನ್ನು ಹೊಡೆಯುತ್ತಿದ್ದಾರೆ. ಪಂಪ್‌ಸೆಟ್ಟುಗಳು ಫೇಲ್ ಆಗುತ್ತಿವೆ. ಒಂದು ವಾರದಲ್ಲಿ ಕೇವಲ 2 – 3 ಗಂಟೆ ಮಾತ್ರ ಅವರು ಪಂಪ್ ಸೆಟ್ಟನ್ನು ಉಪಯೋಗ ಮಾಡುವಂತಹ ಪರಿಸ್ಥಿತಿಯಾಗಿದೆ. ಇದನ್ನು ತಾವು ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ ಬಹಳ ತೀವ್ರಗತಿಯಿಂದ ವಿಚಾರ ಮಾಡಬೇಕು.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಮಾನ್ಯ ಅಧ್ಯಕ್ಷರೇ, ನಮ್ಮ ಬೈಲಹೊಂಗಲ ತಾಲ್ಲೂಕಿನಲ್ಲಿ ಬಹಳ ಕಡಿಮೆ ವೋಲ್ಟೇಜ್ ಬರುತ್ತದೆ. ಅದರ ಸಲುವಾಗಿ ಬೈಲಹೊಂಗಲ ತಾಲ್ಲೂಕು ನೇಸರಗಿ

ಗ್ರಾಮದಲ್ಲಿ ಒಂದು ಸಬ್ ಸ್ಟೇಷನ್ ಪ್ರಾರಂಭ ಮಾಡಬೇಕೆಂದು ಮೇಲಿಂದ ಮೇಲೆ ಪ್ರಸ್ತಾವನೆ ಇದೆ. ಆದಕಾರಣ ತಾವು ನೇಸರಗಿಯಲ್ಲಿ ಒಂದು ಸಬ್ ಸ್ಟೇಷನ್ ಪ್ರಾರಂಭ ಮಾಡಬೇಕು. ಲೋ ವೋಲ್ಟೇಜ್ ಬಂದು ಪಂಪ್‌ಸೆಟ್ಟುಗಳು ಬಹಳವಾಗಿ ಸುಟ್ಟು ಹೋಗುತ್ತಿವೆ. ಆದಕಾರಣ ನೇಸರಗಿಯಲ್ಲಿ ಒಂದು ಸಬ್ ಸ್ಟೇಷನ್ ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಮಾನ್ಯ ಅಧ್ಯಕ್ಷರೆ, ಬೇಲೂರು ತಾಲ್ಲೂಕಿನಲ್ಲಿ ನಮ್ಮ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್, 30 ಪರ್ಸೆಂಟ್ ನಮಗೆ ಕರೆಂಟ್ ಬರುತ್ತಿದೆ ನಾವು ಏನು ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಅಲ್ಲಿ ಯಾವ ಪಂಪ್‌ಸೆಟ್ಟುಗಳೂ ಓಡುವುದಿಲ್ಲ. ಮನೆಗಳಲ್ಲಿರುವ ದೀಪಗಳು ಸರಿಯಾಗಿ ಉರಿಯುವುದಿಲ್ಲ, ಸೀಮೆಎಣ್ಣೆ ದೀಪದಷ್ಟು ಬೆಳಕು ಬರುತ್ತದೆ. ಹಳೆಬೀಡಿನಲ್ಲಿ ಒಂದು ಮಸ್ ಸ್ಟೇಷನ್ ಮಾಡಬೇಕೆಂದು ಮಂಜೂರು ಮಾಡಿ ಎರಡು ವರ್ಷವಾಯಿತು. ಇವತ್ತಿನವರೆಗೂ ಹಾಕಲಿಲ್ಲ. ಆ ಮಸ್ ಸ್ಟೇಷನ್ ಆಗಿದ್ದರೆ ಸ್ವಲ್ಪ ಇಂಪ್ರೂವ್ ಆಗಬಹುದು ಅಂತ ಕಾಣುತ್ತದೆ. ಈಗ ಮೂರನೆಯದಾಗಿ ಭಾಗ್ಯಜ್ಯೋತಿ ಮನೆಗಳಿಗೆ ಕರೆಂಟ್ ಚಾರ್ಜಸ್ ಆಯಾ ತಿಂಗಳಿಗಾದರೂ ಕಟ್ಟಿ ಅಂತ ಹೇಳಿದ್ದರೆ ಅವರು ಕಟ್ಟುತ್ತಿದ್ದರು. ಈಗ ಒಂದೇ ಸಾರಿ 500 ರೂಪಾಯಿಗಳನ್ನು ಕಟ್ಟಬೇಕೆಂದು ನೋಟೀಸ್ ಕೊಟ್ಟಿದ್ದಾರೆ. ಹಣವನ್ನು ಕಟ್ಟದಿದ್ದರೆ ಕರೆಂಟ್ ಅನ್ನು ಕಿತ್ತು ಹಾಕುತ್ತಿದ್ದಾರೆ. ಈ ಜನರು 500ರೂಪಾಯಿಯನ್ನು ಎಲ್ಲಿಂದ ತಂದು ಕಟ್ಟುತ್ತಾರೆ. ಅವರು ತಿಂಗಳು ತಿಂಗಳಿಗೆ ಇಷ್ಟಿಷ್ಟು ಕಟ್ಟಿ ಅಂತ ಹೇಳಿದ್ದರೆ ಕಟ್ಟಿಕೊಂಡು ಹೋಗುವವರು, ಅಥವಾ ಇನ್‌ಸ್ಟಾಲ್‌ಮೆಂಟ್ ಬೇಸಿಸ್ ಮೇಲೆ ಅವಕಾಶ ಕೊಟ್ಟಿದ್ದರೂ ಕಟ್ಟಿಕೊಂಡು ಹೋಗುವವರು; ಆದರೆ ಒಂದೇ ಸಾರಿ 500 ರೂಪಾಯಿಯನ್ನು ಕಟ್ಟಿ ಅಂದರೆ ಅವರು ಎಲ್ಲಿಂದ್ಯ ತಂದು ಕಟ್ಟುತ್ತಾರೆ. ಆದಕ್ಕೆ ಮಾನ್ಯ ಮಂತ್ರಿಗಳು ಕೆ.ಇ.ಬಿ.ನವರಿಗೆ ಹೇಳಬೇಕು. ಮತ್ತೆ ಕರೆಂಟ್ ಪ್ರಾಬ್ಲಮ್ ಬೇಲೂರು ತಾಲ್ಲೂಕಿನಲ್ಲಿ ತುಂಬಾ ಇದೆ. ಅಲ್ಲಿ ಯಾವ ಪಂಪ್ ಸೆಟ್ಟುಗಳು ಓಡುವುದಿಲ್ಲ. ನಮ್ಮದು ಟೂರಿಸ್ಟ್ ಸೆಂಟರ್ ಆದರೂ ಅಲ್ಲಿ ಕರೆಂಟೇ ಇರುವುದಿಲ್ಲ. ಆದ್ದರಿಂದ ಈ ವ್ಯವಸ್ಥೆಯನ್ನು ಸ್ವಲ್ಪ ಉತ್ತಮ ಪಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಅಧ್ಯಕ್ಷರೆ, ಸರ್ಕಾರ 1992-93ರಲ್ಲಿ ಏನು 60 ಸಾವಿರ ಐ.ಪಿ. ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡಬೇಕೆಂದು ಒಂದು ಗುರಿಯನ್ನು ಇಟ್ಟುಕೊಂಡಿದೆ, ಆ ಗುರಿಯನ್ನು ಮುಟ್ಟಲಿಕ್ಕೆ ಸಾಧ್ಯವಿದೆಯಾ? ಅದರಲ್ಲಿಯೂ 2 - 3 ವರ್ಷಗಳಿಂದ ಹಾಕಿದಂತಹ ಅರ್ಜಿದಾರರು ಅನೇಕ ಜನರು ಇದ್ದಾರೆ. ಅದರಲ್ಲಿಯೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಎರಡು ವರ್ಷಗಳಿಗಿಂತ ಹೆಚ್ಚು ಕಾಯ್ದಿರುವಂತಹ ಜನ ಇದ್ದಾರೆ. ಕನಿಷ್ಠ ಪಕ್ಷ ಅವರಿಗಾದರೂ ಆದ್ಯತೆಯನ್ನು ಕೊಟ್ಟು 60 ಸಾವಿರ ನೀರಾವರಿ ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡಬೇಕೆನ್ನುವ ತಮ್ಮ ಗುರಿ ಏನಿದೆ ಆ ಗುರಿಯನ್ನು ಮುಟ್ಟಲಿಕ್ಕೆ ಸರ್ಕಾರ ಬದ್ಧವಾಗಿದೆಯಾ ?

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:- ಮಾನ್ಯ ಅಧ್ಯಕ್ಷರೆ, ನನ್ನ ಸೇಡಂ ಕ್ಷೇತ್ರ ಆಂಧ್ರ ಗಡಿ ಪ್ರಾಂತ್ಯದಲ್ಲಿದ್ದು, ಈ ಗಡಿ ಪ್ರಾಂತ್ಯದಲ್ಲಿ ಹೆಚ್ಚು ಲಂಬಾಣಿ ತಾಂಡಗಳು ಇವೆ. ಬಹುತೇಕ ತಾಂಡಗಳಿಗೆ ಇಲ್ಲಿಯವರೆಗೆ ವಿದ್ಯುಚ್ಛಕ್ತಿ ಸರಬರಾಜೇ ಅಲ್ಲ. ಈ ಅರಣ್ಯ ಪ್ರದೇಶದಲ್ಲಿರುವ ಬಂಜಾರು ಜನರಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿ ಅವರಿಗೆ ಬೆಳಕು ಹಾಗೂ ನೀರಾವರಿ ಪಂಪ್‌ಸೆಟ್ಟುಗಳಿಗಾಗಿ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಅಧ್ಯಕ್ಷರೆ, ಬೆಂಗಳೂರಿಗೆ ಬಹಳ ಹತ್ತಿರವಾದದ್ದು ನಮ್ಮ ತಾಲ್ಲೂಕ್ ತಮಿಳುನಾಡು ಬಾರ್ಡರ್. ಮಾನ್ಯ ಸಿಂಧ್ಯರವರು ತಮ್ಮ ಭಾಷಣದಲ್ಲಿ ಇದರ ಬಗ್ಗೆ

ಮಾತನಾಡಿದರು. 40 ಮಿನಿ ವಾಟರ್ ಸಪ್ಲೈ ಓವರ್ ಹೆಡ್ ಟ್ಯಾಂಕಿಗೆ ವಿದ್ಯುಚ್ಛಕ್ತಿ ಇಲ್ಲದೆ ಸುಮಾರು 2–3 ತಿಂಗಳಿಂದ ನಮ್ಮ ಜಿಲ್ಲಾ ಪರಿಷತ್ತಿನವರು ಅಲ್ಲಿಗೇ ನಿಲ್ಲಿಸಿದ್ದಾರೆ. ಸರಿಯಾಗಿ ಸಾಮಾನುಗಳು ಇಲ್ಲ. ವೈರು ಇಲ್ಲ, ಕಂಬಗಳು ಇಲ್ಲ, ಮತ್ತು ಕಂಡೆಕ್ಟರ್‌ಗಳು ಟ್ರಾನ್ಸ್‌ಫಾರ್ಮರ್‌ಗಳು ಇಲ್ಲ; ಹೀಗಾಗಿ ನಮ್ಮ ಕನಕಪುರ ತಾಲ್ಲೂಕ್ ಈ ವಿಚಾರದಲ್ಲಿ ಬಹಳ ತೊಂದರೆಯನ್ನು ಅನುಭವಿಸುತ್ತಿದೆ. ಒಂದು ಸ್ಟೇಷನ್ ಅನ್ನು ಈಗ ಅವರು ಪ್ರಾರಂಭ ಮಾಡುವ ಹಂತದಲ್ಲಿದ್ದಾರೆ. ಆದರೆ ಇದು ಇನ್ನು ಎಷ್ಟು ವರ್ಷಕ್ಕೆ ಮುಗಿಯುತ್ತದೋ ಅನ್ನುವುದು ಗೊತ್ತಿಲ್ಲ. ಇನ್ನೊಂದು ವಿಶೇಷವಾಗಿ ಅಡಿಷನಲ್ ಸ್ಟ್ರೀಟ್ ಲೈಟ್‌ಗಳನ್ನು ಹೊಸ ಬಡಾವಣೆಗಳಿಗೆ ಹಾಕಲು ವಿಶೇಷವಾದಂತಹ ಕಾರ್ಯಕ್ರಮವನ್ನೇ ಹಾಕಿಕೊಳ್ಳಬೇಕು. ಸುಮಾರು 10–15 ವರ್ಷಗಳಿಂದ ಏನು ಹೊಸ ಬಡಾವಣೆಗಳು ಆಗಿವೆ, ಅಲ್ಲಿರುವ ಜನರಿಗೆ ನಾವು ಇಲ್ಲಿಯವರೆಗೆ ಬೀದಿ ದೀಪವನ್ನು ಒದಗಿಸಿಕೊಡುವುದಕ್ಕೆ ಆಗಲಿಲ್ಲ. ತಾವು ವಿಶೇಷವಾದಂತಹ ಕಾರ್ಯಕ್ರಮ ಹಾಕಿಕೊಂಡು ಬೀದಿ ದೀಪವನ್ನು ತಾವು ಏನು ಒದಗಿಸಿಕೊಡುತ್ತೀರಾ ಅದರ ಜೊತೆಗೆ ಮೂರು ತಂತಿ ಅಲ್ಲಿಗೆ ಬರುವ ಹಾಗೆ ಮಾಡಬೇಕು. ಇಲ್ಲದಿದ್ದರೆ ಭಾಗ್ಯಜ್ಯೋತಿ ಯೋಜನೆಯಲ್ಲಿ ಈ ಸರ್ಕಾರ ಒಂದು ವರ್ಷಕ್ಕೆ ಒಂದು ಸಾವಿರ ಮನೆಗಳಿಗೆ ವಿದ್ಯುತ್ ಅನ್ನು ತಾವು ಏನು ಒದಗಿಸಿಕೊಡುತ್ತಿದ್ದೀರಿ ಅಂತಹ ಬಡವರ ಮನೆಗಳಿಗೆ ನಾವು ಭಾಗ್ಯಜ್ಯೋತಿಯನ್ನು ಒದಗಿಸಿಕೊಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಮೂರು ತಂತಿ ಇರುವಂತಹ ಅಡಿಷನಲ್ ಸ್ಟ್ರೀಟ್ ಲೈಟಿನ ವ್ಯವಸ್ಥೆ ಮಾಡಿ ಕೊಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ:– ಮಾನ್ಯ ಅಧ್ಯಕ್ಷರೇ, ಈ ತಿಂಗಳ ಮೊದಲನೆಯ ವಾರದಲ್ಲಿ ಮಾನ್ಯ ಮಂತ್ರಿಗಳು ಒಂದು ಸಭೆಯನ್ನು ಕರೆದು ಅದಕ್ಕೆ ಅವರು ನಮ್ಮನ್ನು ಬರಮಾಡಿಕೊಂಡು ಏನೇನು ತೊಂದರೆಗಳು ಇದೆ ಎಂದು ಕೇಳಿದ್ದಾರೆ. ಆದರ ಬಗ್ಗೆ ನಾವು ಒಂದು ಪಟ್ಟಿಯನ್ನು ಕೊಟ್ಟಿದ್ದೇವೆ. ಬಹಳ ಮುಖ್ಯವಾಗಿ ನನ್ನ ತಾಲ್ಲೂಕಿನ ದೊಡ್ಡ ಬೆಳವಂಗಲದಲ್ಲಿ ಸಬ್‌ಸ್ಟೇಷನ್ ಆಗಬೇಕೆಂದು ನಾನು ಅದರಲ್ಲಿ ಕೇಳಿಕೊಂಡಿದ್ದೇನೆ. ಈ ಸಭೆಯನ್ನು ಕರೆದು ತಾವೇನು ಮಾತನಾಡಿದ್ದೀರಿ ಅದರ ಬಗ್ಗೆ ಏನಾದರೂ ಕಾರ್ಯಕ್ರಮವನ್ನು ಮುಂದುವರೆಸಿದ್ದೀರಾ ಅಥವಾ ಏನಾದರೂ ಅಲ್ಲಿಗೆ ಬಿಟ್ಟಿರಾ ಅನ್ನುವುದು ಒಂದು; ಎರಡನೆಯದು ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಪಂಪ್‌ಸೆಟ್ಟುಗಳಿಗೆ ಉಚಿತವಾಗಿ ವಿದ್ಯುಚ್ಛಕ್ತಿ ಸಪ್ಲೈ ಮಾಡುತ್ತೇವೆಂದು ಹೇಳಿದ ಸಮಯದಲ್ಲಿ, ಇಲ್ಲಿ ಒಂದು ಭರವಸೆಯನ್ನು ಕೊಟ್ಟಿದ್ದರು, ಏನೆಂದರೆ, ಇಲ್ಲಿಯವರೆಗೆ ರೈತರು ಏನು ಬಾಕಿಯನ್ನು ಕೊಡಬೇಕು, ಆ ಬಾಕಿಯ ಹಣದ ಮೇಲೆ ನಾವು ಬಡ್ಡಿಯನ್ನು ಹಾಕುವುದಿಲ್ಲ, ಅಸಲು ಕೊಡಲಿ ಅಂತಹ ಹೇಳಿದ್ದರು. ಅದರ ಬಗ್ಗೆ ಏನೂ ಆರ್ಡರ್ ಮಾಡಲಿಲ್ಲ. ಅದನ್ನು ತಾವು ಪರಿಶೀಲನೆ ಮಾಡಿ ಅದರ ಬಗ್ಗೆ ತಾವು ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎಸ್.ಎಂ. ಕೃಷ್ಣ:– (ಉಪಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ದೇಶಪಾಂಡೆಯವರು ಕರ್ನಾಟಕ ಪವರ್ ಕಾರ್ಪೊರೇಷನ್‌ನವರು ಅಂಕೋಲದಲ್ಲಿ ರಿಹ್ಯಾಬಿಲಿಟೇಷನ್‌ಗೆ ಹಣ ಕೊಟ್ಟಿಲ್ಲ ಹಾಗೆ ಅಂತ ಹೇಳಿದ್ದಾರೆ. ಆ ಹಣವನ್ನು ನಾನು ಕೊಡಿಸಲಿಕ್ಕೆ ನಿರ್ದೇಶನವನ್ನು ಕೊಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ಇನ್‌ಫ್ರಾಸ್ಟ್ರಕ್ಚರ್ ಬಗ್ಗೆ ಹೇಳಿದ್ದೆ. ಅಲ್ಲಿಗೆ ಇನ್‌ಫ್ರಾಸ್ಟ್ರಕ್ಚರ್ ಕೊಟ್ಟಿಲ್ಲ.

SRI S.M. KRISHNA:– Yes. That is exactly when I said strengthening of the system I mean Infrastructure has to be further strengthened ಆ

ದೃಷ್ಟಿಯಿಂದಲೇ ನಮ್ಮ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡಿನ ಹೋದ ವರ್ಷದ ವಾರ್ಷಿಕ ಪ್ಲಾನ್ 171 ಕೋಟಿ ರೂಪಾಯಿ ಇತ್ತು. ಈ ವರ್ಷ ಅದು ಇಳಿದುಹೋಗಿದೆ.

Escaltion in rates also, it may not mean much. But none the less it is some improvement over what it was. ಈ ವೇಕೆನ್ಸಿಗಳ ಬಗ್ಗೆ ಹೇಳಬೇಕಾದರೆ ಎಲ್ಲೆಲ್ಲಿ ನಮಗೆ ಅಗತ್ಯ ಕಂಡು ಬರುತ್ತದೋ ಅಲ್ಲಿ ನೇಮಿಸಿಕೊಳ್ಳುವ ಏರ್ಪಾಡು ಮಾಡುತ್ತೇವೆ. ಮಾನ್ಯ ಸಿಂಧ್ಯಾರವರು ಯಲಹಂಕ ಡೀಸೆಲ್ ಜನರೇಟಿಂಗ್ ಸೆಟ್ ವಿಚಾರ ಕೇಳಿದರು. Yelahanka diesel project ಕೆಲಸ ನಡೆಯುತ್ತಿದೆ ಮತ್ತು ತಾವು ಎಷ್ಟು ವೇಕೆನ್ಸಿ ಇದೆ ಎಂದು ಕೇಳಿದಿರಿ; ಕೆ.ಇ.ಬಿ.ನಲ್ಲಿ 7000 vacancy ಇದೆ. Karnataka electricity Board, Six generating units are in position. The first 20 MWs generating unit has been started recently and it might be synchronised to the system very shortly. Trial runs have taken place. Remaining 6 units with generating capacity of 127 MWs will be commissioned by September, 1993. All the six, but the first one with 20 MWs is almost ready for synchronisation. Perhaps by 15th of April, the first 20 MS diesel generating set will be commissioned.

ಮಾನ್ಯ ಸಿಂಧ್ಯಾರವರು ಕನಕಪುರದ ಕೆವಿಎ ಸ್ಟೇಷನ್ ಬಗ್ಗೆ ಹೇಳಿದರು. ಮಾನ್ಯ ಶಿವಕುಮಾರ್ ಸಹ ತಮ್ಮ ಜೊತೆಗೆ ಧ್ವನಿಗೂಡಿಸುತ್ತಿದ್ದಾರೆ. ಅದನ್ನು ನಾವು 1993–94ನೇ ವರ್ಷದಲ್ಲಿ ಸೇರಿಸುತ್ತೇವೆ. ಡಾ: ನಂಜಪ್ಪನವರು ಟ್ರಾನ್ಸ್‌ಫಾರ್ಮರ್ ವಿಚಾರ ಹೇಳಿದ್ದಾರೆ. ಒಂದನ್ನು ಈಗಾಗಲೇ ಅಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ. ಚೆನ್ನರಾಯಪಟ್ಟಣದಲ್ಲಿ ಒಂದು ಟ್ರಾನ್ಸ್‌ಫಾರ್ಮರ್‌ನ್ನು ರೀಪ್ಲೇಸ್ ಮಾಡಿದ್ದೇವೆ. We have put 12.5 MW transformer, the other one which the hon'ble member is asking, that is also being replaced. ಪ್ರೊ: ನಂಜುಂಡಸ್ವಾಮಿಯುವರು Memorandum of Understanding ಬಗ್ಗೆ ಹೇಳಿದರು. I do not know, in the scheme of things that the State Government which has the blessings of the Central Government also make an effort to draw, to attract the foreign private investment into the core sector of power generation in the State. In this direction certain steps were initiated by the previous Chief Minister and I appreciate the steps which were initiated. Because listening to all the owes of the power generation and power distribution in the last three years I think the previous Chief Minister did well in trying, in making an effort to attract private investment.

PROF M.D. NANJUNDASWAMY:– I am only raising a constitutional issue. ಅವರು ಎಲ್ಲಾ ಒಳ್ಳೆಯ ಕೆಲಸ ಮಾಡಿದ್ದಾರೆ.

I am confining myself and I would like to go on record to the efforts made by the former Chief Minister in trying to get private investment into the core sector of power generation and I welcome that.

PROF M.D. NANJUNDASWAMY:– The question is whether the State Government does not have a duty to come before the House before signing

any Memorandum of understanding with any other foreign country. That is the question I am raising. It is a constitutional issue. That is why I called it 'extra budgetary activity'. Whether this Government and the Chief Minister are not under a duty to come before this House to get its approval before signing an M.O.U?

SRI S.M. KRISHNA:– If I have understood the effort, of the previous Chief Minister, the effort was to explore the possiblity of trying to get foreign investment into the State.

ಪ್ರೊ ಎಂ.ಡಿ. ನಂಜುಂಡಸ್ವಾಮಿ:– ಇಲ್ಲ ಇಲ್ಲ. ನಾನು ರುಜು ಹಾಕಿದ್ದೇನೆ ಎಂದು ಅವರು ಹೇಳಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ:– ಇಲ್ಲ. ಅದಕ್ಕೆ ಬರುತ್ತೇನೆ. They went ahead making certain preliminary preparations to get in touch with the various organisations and they did exchange letters which is being called as M.O.U.. Ultimately it was not any agreement. It has no legal basis. It was only, if I can freely draw from the English language, an exchange of letters, it was only an exchange of intent and what was that, well, they say, "alright we are going to provide you land. Would you be able to bring money to put up a 1000 MW Unit in Mangalore, Bangalore or Mysore or wherever it is possible?" and they say, Yes, we can do it." Alright we exchange letters. I will give a letter welcoming you and you give me letter saying I will come and explore the possibilities". And that has been called as Memorandum of Understanding. It is not an agreement.

ಶ್ರೀ ಹೆಚ್. ಏಕಾಂತಯ್ಯ:– ಈ ಸಂವಾದ ನನಗೆ ಅರ್ಥವಾಗುತ್ತಿಲ್ಲ.

SRI S.M. KRISHNA:– It is not an agreement. It has certainly no legal basis what so ever and I also concede to the point the professor was making that is an, 'extra – budgetary' because it is no where in the budget....

PROF M.D. NANJUNDASWAMY:– I said it is a constitutional issue because is extra–budgetary activity.

SRI S.M. KRISHNA:– Yes, I concede, it is extra-budgetary.

PROF M.D. NANJUNDASWAMY:– I concede, an M.O.U. is not an argument but shall we at least be rest assured that this Government will come before this House before signing an agreement?

SRI S.M. KRISHNA:– Yes. There is absolutely nothing wrong or which

will prevent the State Government to periodically come before the House and say as to how much progress we have made in the direction of bringing in foreign investment in power generation sector. I don't see any reason why we should not come before the House as and when it becomes ripe.

ಶ್ರೀ ಬಿ.ಎಸ್. ಯಡಿಯೂರಪ್ಪ:– ಶ್ರೀ ವಾಟಾಳ್ ನಾಗರಾಜ್‌ರವರಿಗೆ ಸೀಟಿಗೆ ಬಂದು ಕನ್ನಡದಲ್ಲಿ ಮಾತನಾಡಿ ಎಂದು ತಮಗೆ ಹೇಳಲಿ ಎಂದು ತಾವು ಇಂಗ್ಲೀಷ್‌ನಲ್ಲಿ ಮಾತನಾಡುತ್ತಿದ್ದೀರೋ ಏನೋ ಗೊತ್ತಿಲ್ಲ. Is there any purpose?

ಶ್ರೀ ಎಸ್.ಎಂ. ಕೃಷ್ಣ:– ಮಾನ್ಯ ಹಲಗೇಗೌಡರು ಮಂಡ್ಯದಲ್ಲಿ ಸಬ್‌ಸ್ಟೇಷನ್ ಇಲ್ಲ ಎಂದು ಹೇಳಿದ್ದಾರೆ. ಪರಿಶೀಲನೆ ಮಾಡುತ್ತೇನೆ. ವಿನಯಕುಮಾರ್ ಸೊರಕೆಯವರು ಪುತ್ತೂರಿನಲ್ಲಿ ಒಂದು ಡಿವಿಜನಲ್ ಆಫೀಸ್......

SRI S. BANGARAPPA:– If the Hon'ble Dy. Chief Minister were to yield for a minute and if the Chair were to permit me. ಪ್ರೊ. ನಂಜುಂಡಸ್ವಾಮಿಯವರ ಗಮನಕ್ಕೆ ತರತಕ್ಕ ಒಂದು ವಿಚಾರ. ಏನೆಂದರೆ, ಪವರ್ ವಿಚಾರದಲ್ಲಿ ಷಾರ್ಟೇಜ್ ಇದೆ. ಈ ಮಾತನ್ನು ವಿವರಿಸಬೇಕಾಗಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಸರ್ಕಾರದ ಪರವಾಗಿ ಶ್ರೀ ಕೃಷ್ಣಾಜೀಯವರು ಆ ವಿಚಾರವನ್ನು ಹೇಳಿದ್ದಾರೆ. M.O.U. has no legal force at all. ನಾನು ಇದನ್ನು ಸದನದಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಕೃಷ್ಣಾಜಿಯವರು ಹೇಳಿದ ಹಾಗೆ ಹೇಳಿದ್ದೇನೆ. It is only our exchange of views about certain matters over which we are going to sign an agreement in case we arrive at a decision mutually agreed to. ಹೀಗೆ ಮಾಡಿಕೊಂಡು ಬಂದರೆ ಸಾಧ್ಯ. ಇಲ್ಲದಿದ್ದರೆ ಮಾಡಲು ಆಗುವುದಿಲ್ಲ ಎಂಬ ಪ್ರಶ್ನೆ ಬರುತ್ತದೆ. ಆ ಮೇಲೆ ನಾವು ಯಾವ ರೀತಿ ಮಾಡಿಕೊಳ್ಳಬಹುದು ಎಂಬ ಪ್ರಶ್ನೆ ಎಲ್ಲಿ ಬರುತ್ತದೆ ? ಕರ್ನಾಟಕ ರಾಜ್ಯ ಸರ್ಕಾರದವರು ಟರ್ಮ್ಸ್ ಆ್ಯಂಡ್ ಕಂಡೀಷನ್ಸ್ ಬಗ್ಗೆ ಏನೂ ಮಾತನಾಡಿಲ್ಲ. ಕೇಂದ್ರ ಸರ್ಕಾರದವರು ಗೈಡ್‌ಲೈನ್ಸ್ ಕೊಟ್ಟಿದ್ದಾರೆ. ಅದು ಎಲ್ಲಾ ರಾಜ್ಯ ಸರ್ಕಾರಗಳಿಗೂ ಬಂದಿದೆ. ನಮಗೆ ಒಂದೇ ಅಲ್ಲ, ಇಡೀ ಭಾರತ ದೇಶದಲ್ಲಿರತಕ್ಕ ಎಲ್ಲಾ ರಾಜ್ಯ ಸರ್ಕಾರಗಳಿಗೂ ಅವರು ಗೈಡ್‌ಲೈನ್ಸ್ ಕೊಟ್ಟಿದ್ದಾರೆ.

ಆ ಗೈಡ್‌ಲೈನ್ಸ್ ಪರಿಮಿತಿ ಒಳಗಡೆ ನಾವು ಮಾಡತಕ್ಕಂಥ ವಿಚಾರ ಇದೆ. ಆದ್ದರಿಂದ ಯಾರೂ ಕೂಡ ಬೇರೆ ಬೇರೆ ರೀತಿಯಲ್ಲಿ M.O.U. ಗೆ ಸೈನ್ ಮಾಡುವುದಕ್ಕೆ ಬರುವುದಿಲ್ಲ. ಅಗ್ರಿಮೆಂಟ್ಸ್‌ಗೆ ಸೈನ್ ಮಾಡುವುದಕ್ಕೆ ಬರುವುದಿಲ್ಲ. ಅದರಲ್ಲಿ ಏನು ಮಾಡಿದ್ದಾರೆ, ಕೆಲವೆಲ್ಲಾ ಸೌಲಭ್ಯಗಳನ್ನು ರಾಜ್ಯ ಸರ್ಕಾರದ ಪರವಾಗಿ ಕೊಡಬೇಕು. ಅವರು ಇದಕ್ಕೆ ಒಪ್ಪಬೇಕು. ಅದು finding out of a site, ಅಲ್ಲಿ ಗ್ರಿಡ್ ಮಾಡತಕ್ಕಂಥದ್ದು, ಪ್ರಾಜೆಕ್ಟ್ ಮಾಡತಕ್ಕಂಥದ್ದು, ಇವೆಲ್ಲವಕ್ಕೂ ಕೂಡ ಅವರು ಪೂರ್ತಿ ಗೈಡ್‌ಲೈನ್ಸ್‌ಗಳನ್ನು ಹಾಕಿಬಿಟ್ಟಿದ್ದಾರೆ. ಅದನ್ನು ನಾವೇನು ಹೊಸದಾಗಿ ಮಾಡತಕ್ಕಂಥ ವಿಚಾರ ಇಲ್ಲ. ತಾವು ಏನು ಹೇಳಿದ್ದೀರಿ, ಅನೇಕ ವಿವರಗಳು ಬೇಕು, ಅದು ತಮ್ಮ ಗಮನದಲ್ಲಿ ಇದ್ದರೆ ಬಹಳ ಒಳ್ಳೆಯದು ಎಂದು ತಾವು ಹೇಳುತ್ತೀರಿ. ಅದನ್ನು ತಾವು ಕೇಳಬಹುದು. ಕೃಷ್ಣಾಜಿಯವರು ಕೂಡ ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರ ಬೇರೆ ಯಾವುದನ್ನೂ ಹೊಸದಾಗಿ ಮಾಡುತ್ತಿಲ್ಲ. ಕೇಂದ್ರ

ಸರ್ಕಾರದ ಆದೇಶದ ಸೂಚನೆಗೆ ಮಾತ್ರ ಮಾಡಿರತಕ್ಕಂಥದ್ದು I thought of adding only this point. Only to that extent I rose to say something. Thank you.

SRI S.M. KRISHNA:– I am grateful to the former Chief Minister for throwing more light on this, which would only be supportive of the point that I have been trying to make and he has helped me out. ಮಾನ್ಯ ವಿನಯಕುಮಾರ್ ಸೊರಕೆಯವರು ವಿಟ್ಲ ಸಬ್ ಸ್ಟೇಷನ್ ಬಗ್ಗೆ ಹೇಳಿದರು. It is under progress and it is likely to be completed by April 1993. ಎಂದು ಹೇಳುತ್ತೇನೆ. ಹಾಗೆ ಬೈಂದೂರು ಸ್ಟೇಷನ್ work has been started and the work is in progress. ಹಾಗೆ ಅಂತ ಹೇಳುತ್ತಾ ಮಾನ್ಯ ರುಕ್ಮಯ್ಯ ಪೂಜಾರಿಯವರು ಟ್ರಾನ್ಸ್‌ಫಾರ್ಮರ್ಸ್ ಬೇಕು ಎಂದು ಹೇಳಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಮಾನ್ಯ ವಿಜಯಕುಮಾರ್ ಶೆಟ್ಟಿಯವರು ಲೈನ್‌ಮೆನ್‌ಗಳು ಇಲ್ಲ, ಅವರನ್ನು ಅಪಾಯಿಂಟ್ ಮಾಡಬೇಕು ಎಂದು ಹೇಳಿದರು. ಏಳು ಸಾವಿರ ವೇಕೆನ್ಸಿಗಳಿವೆ ನಮ್ಮ ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಎಂದು ಈಗ ತಾನೇ ಹೇಳಿದೆ. ಮಾನ್ಯ ಮಲ್ಲಾರಿಗೌಡ ಪಾಟೀಲರು ಮೇಕೆದಾಟು ಮತ್ತು ಮಹದಾಯಿ ವಿಚಾರದ ಬಗ್ಗೆ ಹೇಳಿದ್ದಾರೆ. ಮೇಕೆದಾಟು ತಮಗೆ ತಿಳಿದಿರುವ ಹಾಗೆ ಈ ಕಾವೇರಿ ಟ್ರಿಬ್ಯುನಲ್ ದವಡೆಯಲ್ಲಿ ಸಿಕ್ಕಿಕೊಂಡಿರತಕ್ಕಂಥದ್ದು. ಆದ್ದರಿಂದ ಅದರ ಬಗ್ಗೆ ನಾವು ಯಾವ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗೆಯೇ ಮಹದಾಯಿ ಬಗ್ಗೆ ನಾವು ಗೋವಾ ಸರ್ಕಾರದವರ ಜೊತೆಯಲ್ಲಿ ಸಂಪರ್ಕವನ್ನು ಬೆಳೆಸಿದ್ದೇವೆ. ನಾವು ಅವರ ಜೊತೆಯಲ್ಲಿ ಮಾತನಾಡಿ ಅನಂತರ ಅದರ ಬಗ್ಗೆ ಕಾರ್ಯಕ್ರಮವನ್ನು ಮುಂದುವರೆಸಬಹುದು ಮತ್ತು....

ಶ್ರೀ ವಿಜಯಕುಮಾರ್ ಶೆಟ್ಟಿ:– ಟ್ರಾನ್ಸ್‌ಫಾರ್ಮರ್‌ಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರುವರೆ ಸಾವಿರದಿಂದ ಐದು ಸಾವಿರದವರೆಗೆ ಅಡಿಷನಲ್ ಆಗಿ ಸ್ಥಳೀಯರಿಂದ ಕಲೆಕ್ಷನ್ ಮಾಡುತ್ತಿದ್ದಾರೆ. ಅದನ್ನು ಸರ್ಕಾರವೇ ಕೊಡುವಂತೆ ಏರ್ಪಾಡು ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ:– ಮಾನ್ಯ ಮಲ್ಲಾರಿಗೌಡ ಪಾಟೀಲರು ಹುಕ್ಕೇರಿ ಕೋ–ಆಪರೇಟಿವ್ ಸೊಸೈಟಿ ವಿಚಾರವನ್ನು ಹೇಳಿದರು. ನಮ್ಮ ಬೋರ್ಡ್‌ನವರು ಅವರಿಗೆ bulk power ಮಾರುತ್ತಿದ್ದರು. ಮೊದಲು 18 ಪೈಸೆ ಯೂನಿಟ್‌ಗೆ ಎಂದು ನಿಗದಿ ಮಾಡಿದ್ದರು. ಅನಂತರ ಅದು 30 ಪೈಸೆಗೆ ಹೋಯಿತು. ಮತ್ತು 18–7–92ರಿಂದ ಅದು 40 ಪೈಸೆ ಇದೆ. ಮಿಲ್ಲುಗಳವರು ನಾವು ಅರ್ಲಿಯರ್ ರೇಟ್‌ನಲ್ಲಿ ಕೊಡುತ್ತೇವೆ ಹಾಗೆ ಎಂದು ಹೇಳಿ ಆ ಸೊಸೈಟಿಯವರು ಅರ್ಲಿಯರ್ ರೇಟ್‌ನಲ್ಲೇ ಅವರು ಹಣವನ್ನು ಕಟ್ಟುತ್ತಿದ್ದುದರಿಂದ ಅಲ್ಲಿ ಅರಿಯರ್ಸ್ ಜಾಸ್ತಿಯಾಗಿದೆ. ಈಗ ಸೊಸೈಟಿಯುವರು ಹೇಳುತ್ತಿದ್ದಾರೆ. ಈ ಟ್ಯಾರಿಫ್‌ನ್ನು ಮಾಥೂರ್ ಕಮಿಟಿ ರಿಪೋರ್ಟ್ ಆಧಾರದ ಮೇಲೆ ನೀವು ನಿರ್ಣಯಿಸಿ ಹಾಗೆ ಎಂದು ಹೇಳಿ ಅವರು ನಮಗೆ ತಿಳಿಸಿದ್ದಾರೆ. ಇನ್ನು ಮಾನ್ಯ ನಾಡಗೌಡರು ಲೈನ್ ಲಾಸಸ್ ವಿಚಾರದಲ್ಲಿ ನನ್ನ ಗಮನವನ್ನು ಸೆಳೆದಿದ್ದಾರೆ ಮತ್ತು ಕೆಲವು ಕಡೆ "officers are hand in glove" ಎಂದು ಹೇಳಿದ್ದಾರೆ. ಇದನ್ನು ನನಗೆ ಅವರು ಎಲ್ಲೆಲ್ಲಿ ಇಂಥ ವಿಚಾರಗಳು ತಮ್ಮ ಗಮನಕ್ಕೆ ಬರುತ್ತದೆಂದು ಬರೆದು ಕಳುಹಿಸಿದರೆ ಆಗ ನಾವು ಸೂಕ್ತವಾದಂಥ ವಿಚಾರಣೆಯನ್ನು ನಡೆಸಿ ಕಾರ್ಯಕ್ರಮ ರೂಪಿಸಿಕೊಳ್ಳಬಹುದು. ಮಾನ್ಯ ಕೌಜಲಗಿ ಸಾಹೇಬರು ನೇಸರ್ಗಿಯಲ್ಲಿ ಸಬ್–ಸ್ಟೇಷನ್ ಮಾಡಬೇಕು ಎಂದು ಹೇಳಿದ್ದಾರೆ.

ಈ ಬಗ್ಗೆ ಹೇಳಬೇಕೆಂದರೆ, The survey work will be taken up. ಸರ್ವೇ ಶುರು ಮಾಡೋಣ.

ಶ್ರೀ ಎಸ್.ಹೆಚ್. ಕೌಜಲಗಿ:– ಬಜೆಟ್‌ನಲ್ಲಿ ಸೇರಿಸುತ್ತೇವೆಂದು ಹೇಳಿದರೆ ಮುಗಿದು ಹೋಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ:– ಸೇರಿಸಿ ಏನು ಪ್ರಯೋಜನ ? ಸರ್ವೇ ಮಾಡದೇ ಹೋದರೆ ಸೇರಿಸಿ ತಾನೇ ಏನು ಪ್ರಯೋಜನ ? Survey is the basis for any work.

ಶ್ರೀ ಹೆಚ್. ಏಕಾಂತಯ್ಯ:– ಸೇರಿಸಿದ್ದೇವೆಂದು ಊರಿನಲ್ಲಿ ಹೇಳುತ್ತಾರೆ.

ಶ್ರೀ ಪಿ.ಸಿ. ಸಿದ್ಧನಗೌಡರ್:– ಊರಿನಲ್ಲಿ ಜನರಿಗೆ ಹೇಳುವುದಕ್ಕೆ.

ಶ್ರೀ ಎಸ್.ಎಂ. ಕೃಷ್ಣ:– ಮಾನ್ಯ ಸಿದ್ಧನಗೌಡರಿಂದ ಬುದ್ಧಿವಂತಿಕೆ ಮಾತುಗಳನ್ನು ತೆಗೆದುಕೊಳ್ಳಿ. ಮಾನ್ಯ ಲಕ್ಷ್ಮಣಯ್ಯನವರು ಹಳೇಬೀಡಿನ ಸಬ್‌ಸ್ಟೇಷನ್ ಬಗ್ಗೆ ಪ್ರಸ್ತಾಪ ಮಾಡಿದರು. 1993-94ನೇ ಇಸವಿಯಲ್ಲಿ ಹಳೇಬೀಡಿನಲ್ಲಿ ಸಬ್‌ಸ್ಟೇಷನ್ ಮಾಡತಕ್ಕ ಕೆಲಸವನ್ನು ಕೈಗೆ ತೆಗೆದುಕೊಳ್ಳುತ್ತೇನೆ. ಮತ್ತೆ ಭಾಗ್ಯಜ್ಯೋತಿ ಬಗ್ಗೆ ಒಟ್ಟಿಗೆ ಬಿಲ್ ಮಾಡಿದ್ದೇವೆ ಹಾಗೆಂದು ಹೇಳುತ್ತಿದ್ದಾರೆ. ಆದರೆ ಈ ಸದನ ಎಲೆಕ್ಟ್ರಿಸಿಟಿ ಮಂಡಲಿಯನ್ನು ಅಭಿನಂದಿಸಬೇಕು. ಏನೂ ಅಂದರೆ ಎಲ್ಲೂ ಕೂಡ ಭಾಗ್ಯಜ್ಯೋತಿಯಲ್ಲಿ ಹಣ ಕೊಡಲಿಲ್ಲ ಎಂದು ಅವರು ಎಲ್ಲೂ ಡಿಸ್‌ಕನೆಕ್ಷನ್ ಮಾಡಲಿಲ್ಲ. ಡಿಸ್–ಕನೆಕ್ಷನ್ ಮಾಡಕೂಡದು ಎಂದು ಹೇಳಿದ್ದೇವೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:– ನಮ್ಮಲ್ಲಿ ನಿಲ್ಲಿಸಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ:– ಅಲ್ಲಿ ಕನೆಕ್ಷನ್ ಕೊಡಿಸುತ್ತೇನೆ. ಇದು ಒಂದು ನೀತಿಯ ಪ್ರಶ್ನೆ. ಭಾಗ್ಯಜ್ಯೋತಿಯಲ್ಲಿ ನಾವು ಈ ರಾಜ್ಯದ ಉದ್ದಗಲದಲ್ಲಿಯೂ ಕೂಡ ಎಲ್ಲೆಲ್ಲಿ ಕೊಟ್ಟಿದ್ದೇವೆ ಅಲ್ಲಿ ಡಿಸ್‌ಕನೆಕ್ಟ್ ಮಾಡಬಾರದು ಎಂದು ಹೇಳಿದ್ದೇವೆ. ಏನೋ ಅಚಾತುರ್ಯ ಮಾನ್ಯ ಲಕ್ಷ್ಮಣಯ್ಯನವರ ಕ್ಷೇತ್ರದಲ್ಲಿ ನಡೆದಿದೆ. ಅದರ ಬಗ್ಗೆ ನಾನು ಗಮನಹರಿಸುತ್ತೇನೆ. ಇನ್ನು ಮಾನ್ಯ ಏಕಾಂತಯ್ಯನವರು ಪರಿಶಿಷ್ಟ ಜಾತಿ.....

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:– ನಮ್ಮ ಬೇಲೂರಿನಲ್ಲಿ 30 ಪರ್ಸೆಂಟ್ ಸಹ ಕರೆಂಟ್ ಬರುತ್ತಾ ಇಲ್ಲ. ಅಲ್ಲಿ ಲೈಟ್ ಇಲ್ಲ, ಸೀಮೆಎಣ್ಣೆ ದೀಪದ ಹಾಗೆ ಉರಿಯುತ್ತಿರುತ್ತದೆ.

ಶ್ರೀ ಎಸ್.ಎಂ. ಕೃಷ್ಣ:– ಯಾವುದಾದರೂ ಒಂದು ವಿಚಾರದಲ್ಲಿ ಯೂನಿಫಾರ್ಮಿಟಿ ಇದೆ ಎಂದು ಹೇಳಿದರೆ ಈ ಒಂದು ವಿಚಾರದಲ್ಲಿ ಮಾತ್ರ ಯೂನಿಫಾರ್ಮಿಟಿ ಇದೆ. ಅದು ಹೆಗಲು ತಟ್ಟಿಕೊಳ್ಳತಕ್ಕ ವಿಚಾರ ಅಲ್ಲ. ಬಹಳ ಸಂಕಟದಿಂದ ನಾನು ಈ ಮಾತನ್ನು ಹೇಳಬೇಕಾಗಿ ಬಂದಿದೆ. ಕಳೆದ 10 ವರ್ಷಗಳಿಂದ ನಾವು ವಿದ್ಯುತ್ ಬಗ್ಗೆ ನಿರ್ಲಕ್ಷ್ಯ ತೋರಿಸಿದ್ದೇವೆ. ಈ ಪ್ರತೀಕಾರವಾಗಿ ಇವತ್ತಿನ ದಿವಸ ವಿದ್ಯುತ್ ಉತ್ಪಾದನೆಯಲ್ಲಿ ಈ ರೀತಿ ಆಗಿದೆ. ಆದ್ದರಿಂದ ನಾವು ಇವತ್ತಿನ ದಿವಸ ವಿದ್ಯುತ್ ಉತ್ಪಾದನೆ ಮಾಡಬೇಕು. ನಮ್ಮ ದೇಶದಲ್ಲಿ ಇನ್ನೂ 75 ವರ್ಷಗಳ ಕಾಲ ನಾವು ಏನೇ ವಿದ್ಯುತ್ ಉತ್ಪಾದನೆ ಮಾಡಿದರೂ ಕೂಡ ಅದನ್ನು ಕೊಳ್ಳತಕ್ಕಂಥ ಜನ ಇದ್ದಾರೆ ಎನ್ನತಕ್ಕ ಒಂದು ಆರ್ಥಿಕ ಸರ್ವೆ ಕೂಡ ನಡೆದಿದೆ. ಆದ್ದರಿಂದ ಅದಕ್ಕೆ ನಾವು ವಿಶೇಷವಾದಂತಹ ಒತ್ತನ್ನು ಕೊಟ್ಟಿದ್ದೇವೆ. ಈ ಸದನ ನನಗೆ ಬೆಂಬಲ ಕೊಡಬೇಕು, ಸರ್ಕಾರಕ್ಕೆ ಬೆಂಬಲ ಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಏಕಾಂತಯ್ಯನವರು ಪರಿಶಿಷ್ಟ ಜಾತಿಯವರಿಗೆ ಐಪಿ ಸೆಟ್‌ಗಳನ್ನು ಪ್ರೈಯಾರಿಟಿಬೇಸಿಸ್ ಮೇಲೆ ಕೊಡಬೇಕೆಂದು ಹೇಳಿದ್ದಾರೆ. ಆ ತತ್ವವನ್ನು ನಾನು ಒಪ್ಪುತ್ತೇನೆ. ಜೊತೆಗೆ ಈಗಾಗಲೇ ನಾವು ಹೇಳಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ತಾವು ಹೇಳತಕ್ಕ ಮಾತು ವೈಯಕ್ತಿಕವಾಗಿ ಇದೆಯೋ ಅಥವಾ ಸರ್ಕಾರದ್ದೋ ? ಸರ್ಕಾರಕ್ಕೆ ಬೆಂಬಲ ಕೊಡಬೇಕು ಎಂದು ಹೇಳಿದಿರಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:– ಇದರಲ್ಲಿ ರಾಜಕೀಯ ಮಾಡಿದರೆ ನಿಮಗೆ ಏನೂ ಸಿಗುವುದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಇವರು ಸರ್ಕಾರದ ಪರವಾಗಿ ಉತ್ತರ ಹೇಳುತ್ತಾರೋ ಅಥವಾ ವೈಯಕ್ತಿಕವಾಗಿ ಉತ್ತರ ಹೇಳುತ್ತಾರೋ ಎಂಬ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ಎಸ್.ಎಂ. ಕೃಷ್ಣ:– ಮಾನ್ಯ ಏಕಾಂತಯ್ಯನವರು ಐಪಿ ಸೆಟ್‌ಗಳ ಎನರ್ಜೈಸೇಷನ್ ಬಗ್ಗೆ ಹೇಳಿದರು. ಈಗ 1993–94ನೇ ಇಸವಿಯಲ್ಲಿ ಈ ಬಗ್ಗೆ ನಿಮ್ಮ ಕಾರ್ಯಕ್ರಮ ಏನು ಎಂದು ಕೇಳಿದರು.

ಶ್ರೀ ಹೆಚ್. ಏಕಾಂತಯ್ಯ:– 1993–94ನೇ ಇಸವಿಯಲ್ಲಿ ಸಾಧನೆ ಮಾಡಬೇಕು ಎಂದು ಈಗ ತಾವು ಏನು ಕಾರ್ಯಕ್ರಮ ಹಾಕಿದ್ದೀರಿ, ಆ ಕಾರ್ಯಕ್ರಮದ ಪ್ರಕಾರ ಗುರಿಯನ್ನು ಮುಟ್ಟಲಿಕ್ಕೆ ಸಿದ್ಧತೆ ಆಗಿದೆಯೇ ? ಇದಕ್ಕೆ ಸರ್ಕಾರ ಬದ್ಧವಾಗಿದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ:– ಬದ್ಧವಾಗಿದೆ. 1993–94ನೇ ಇಸವಿಯಲ್ಲಿ ಕೂಡ 60 ಸಾವಿರ ಮಾಡಬೇಕು ಹಾಗೆ ಎಂದು ನಾವು ಟಾರ್ಗೆಟ್ ಅನ್ನು ಇಟ್ಟುಕೊಂಡಿದ್ದೇವೆ. ಆ ಟಾರ್ಗೆಟ್ ಪ್ರಕಾರ ಅದಕ್ಕೆ ಬೇಕಾಗುವಂತಹ ಸವಲತ್ತುಗಳನ್ನೆಲ್ಲಾ ನಾವು ಒದಗಿಸಿಕೊಡುತ್ತೇವೆ. ಶ್ರೀ ಮೋತಕಪಲ್ಲಿಯವರು ಲಂಬಾಣಿ ತಾಂಡಾಗಳ ಬಗ್ಗೆ ನನ್ನ ಗಮನವನ್ನು ಸೆಳೆದಿದ್ದಾರೆ. ವಾಸ್ತವವಾಗಿ ಈ ಲಂಬಾಣಿ ತಾಂಡಗಳು ಬಹಳ ನಿರ್ಲಕ್ಷ್ಯಕ್ಕೆ ಒಳಪಟ್ಟಿರತಕ್ಕಂತಹ ತಾಂಡಗಳು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:– ಅದೇ ರೀತಿ ಗೊಲ್ಲರ ಪಟ್ಟಿಗಳು ಕೂಡ.

ಶ್ರೀ ಎಸ್.ಎಂ. ಕೃಷ್ಣ:– ಲಂಬಾಣಿ ತಾಂಡಾಗಳ ಜನರು ವಿದ್ಯುತ್ ಸವಲತ್ತಿನಿಂದ ಏನು ವಂಚಿತರಾಗಿದ್ದಾರೆ ಅದರ ಬಗ್ಗೆ ನನಗೆ ವಿಶೇಷವಾದ ಕಳಕಳಿ ಇದೆ ಎನ್ನತಕ್ಕ ಮಾತನ್ನು ಮಾನ್ಯ ಮೋತಕಪಲ್ಲಿ ಅವರಿಗೆ ನಾನು ತಿಳಿಸುತ್ತೇನೆ. ಮಾನ್ಯ ಶಿವಕುಮಾರ್ ಅವರು 40 ಟ್ಯಾಂಕ್‌ಗಳು ಅವರ ಕ್ಷೇತ್ರದಲ್ಲಿ ರೆಡಿ ಆಗಿದ್ದರೂ ಕೂಡ ಇನ್ನೂ ಪವರ್ ಕನೆಕ್ಷನ್ ಕೊಟ್ಟಿಲ್ಲ ಎಂದು ಹೇಳುತ್ತಿದ್ದಾರೆ. ನನಗೆ ಆಶ್ಚರ್ಯ ಆಗುತ್ತಿದೆ.

ಶ್ರೀ ಡಿ.ಕೆ. ಶಿವಕುಮಾರ್:– ನನ್ನ ಕ್ಷೇತ್ರ ಮತ್ತು ಮಾನ್ಯ ಸಿಂಧ್ಯರವರ ಕ್ಷೇತ್ರ ಈ ಎರಡೂ ತಾಲ್ಲೂಕಿನಲ್ಲಿ ಹೀಗೆ ಆಗಿದೆ.

ಶ್ರೀ ಎಸ್.ಎಂ. ಕೃಷ್ಣ:– ನೀವು ಇಬ್ಬರೂ ಜೊತೆಗೆ ಸೇರಿದರೂ 40 ಟ್ಯಾಂಕ್‌ಗೆ ಪವರ್ ಕನೆಕ್ಷನ್ ಕೊಡಲಿಲ್ಲ ಎಂದು ಹೇಳಿದರೆ ಇದು ಒಂದು ವಿಶೇಷವಾದಂತಹ ಪರಿಸ್ಥಿತಿ. ಅದನ್ನು ನಾವು ತೀವ್ರ ಸ್ವರೂಪದಲ್ಲಿ ಗಮನಕ್ಕೆ ತೆಗೆದುಕೊಳ್ಳಬೇಕು.

ಶ್ರೀ ಆರ್.ಎಲ್. ಜಾಲಪ್ಪ:– ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಬಂಗಾರಪ್ಪನವರು ಆ ಸಂದರ್ಭದಲ್ಲಿ ಪಂಪ್‌ಸೆಟ್‌ಗಳಿಗೆ ಉಚಿತವಾಗಿ ಪವರನ್ನು ಒದಗಿಸುತ್ತೇವೆಂದು ಹೇಳಿದ್ದರು, ಮತ್ತು ಇದುವರೆಗೆ ರೈತರಿಂದ ಏನು ಬಾಕಿ ಇದೆ ಅದರ ಮೇಲೆ ಬಡ್ಡಿಯನ್ನು ಹಾಕುವುದಿಲ್ಲ ಬರೇ ಅಸಲನ್ನು ಕಟ್ಟಿಬಿಡಿ ಎಂದು ಹೇಳಿದ್ದರು. ಆದರೆ ಇದರ ಬಗ್ಗೆ ಇನ್ನೂ ಕೂಡ ಆದೇಶ ಹೋಗಿಲ್ಲ, ಈಗ ರೈತರಿಗೆ

ಬಡ್ಡಿಯನ್ನು ವಸೂಲಿ ಮಾಡಬೇಕೆಂದು ಆದೇಶ ಬಂದಿದೆ, ಆದ್ದರಿಂದ ತಾವು ಇದರ ಬಗ್ಗೆ ವಿಚಾ ಮಾಡಬೇಕು, ಮತ್ತು ಬಂಗಾರಪ್ಪನವರು ಈ ಸದನದಲ್ಲಿ ಏನು ಮಾತನ್ನು ಕೊಟ್ಟಿದ್ದರು ಆ ರೀತಿಯ ಆಜ್ಞೆಯನ್ನು ಕಳಿಸಿಕೊಡಬೇಕು. ಎರಡನೆಯದಾಗಿ ದೊಡ್ಡ ಬೆಳವಂಗಲದಲ್ಲಿ ಸಬ್‌ಸ್ಟೇಷನ್‌ನನು ಮಾಡುತ್ತೇವೆಂದು 1991-92ರಲ್ಲಿ ಹೇಳಿ ಅದು 1991-92ರ ಬಜೆಟಿನಲ್ಲಿ ಇದೆ ಎಂದು ಹೇಳಿದ್ದರು ಆದರೆ 1991-92ಮತ್ತು 1992-93 ಎರಡೂ ಆಗಿ ಹೋಗಿದೆ, ಆದರೆ ಆ ಕೆಲಸವಾಗಿಲ್ಲ. ತಾವು ಕರೆದಿದ್ದ ಸಭೆಯಲ್ಲೂ ಸಹ ಇದರ ಬಗ್ಗೆ ಹೇಳಿದ್ದೇನೆ ಮತ್ತು ಅಲ್ಲಿದ್ದ ಅಧಿಕಾರಿಗಳಿಗೂ ಹೇಳಿದ್ದೇನೆ ಆದ್ದರಿಂದ ದಯಮಾಡಿ ಇದರ ಬಗ್ಗೆ ಈಗಲಾದರೂ ಸೂಕ್ತಕ್ರಮ ತೆಗೆದುಕೊಳ್ಳಬೇಕು. ಸ್ವಾಮಿ, ನಮ ಕಡೆಯಲ್ಲಿ ರಾತ್ರಿ ಹೊತ್ತು ಊಟ ಮಾಡಬೇಕಾದರೆ ಊಟಕ್ಕೆ ಏನನ್ನು ಹಾಕಿದ್ದಾರೆಂದು ಗೊತ್ತಾಗುವುದಿಲ್ಲ, ನಾನು ಪ್ರಾಮಾಣಿಕವಾಗಿ ಮಾತನಾಡುತ್ತಿದ್ದೇನೆ, ಬೇಕಾದರೆ ಕರೆದುಕೊಂಡು ಹೋಗಿ ತೋರಿಸುತ್ತೇನೆ, ನಮ್ಮ ಕಡೆಯಲ್ಲಿ ಸಂಜೆಯ ಸಮಯದಲ್ಲಿ ವಿದ್ಯಾರ್ಥಿಗಳು ಓದುವುದಿಲ್ಲ ಹೊಂಗೆ ಎಣ್ಣೆ ಇದ್ದಾಗ ಎಷ್ಟೊ ಚೆನ್ನಾಗಿತ್ತು, ಇವತ್ತು ಹೊಂಗೆಯ ಮರವೂ ಹೋಯಿತು, ವಿದ್ಯುತ ಸಹ ಇಲ್ಲದಂತಾಗಿದೆ, ನಮ್ಮ ಗತಿ ಹೀಗಾಗಿದೆ ನೋಡಿ ಸ್ವಾಮಿ, ಆದ್ದರಿಂದ ಆ ಸಬ್‌ಸ್ಟೇಷನ್‌ನನ್ನು 2 – 3 ತಿಂಗಳಿನಲ್ಲಿ ಮಾಡಿಕೊಡಲು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್:– ಹೆಚ್ಚುವರಿ ಬೀದಿ ದೀಪಗಳನ್ನು ಹಾಕುವ ಬಗ್ಗೆ ತಾವು ಏನೂ ಹೇಳಲಿಲ್ಲ.

ಶ್ರೀ ಎಸ್.ಎಂ. ಕೃಷ್ಣ:– ವಿತರಣೆ ವ್ಯವಸ್ಥೆಯಲ್ಲಿ ಆಗಿಂದಾಗ್ಗೆ ಏಕೆ ತೊಂದರೆ ಬಂತು ಎನ್ನುವುದರ ಬಗ್ಗೆ ವಿವರಣೆಯನ್ನು ಕೊಟ್ಟಿದ್ದೇನೆ. ಮತ್ತು ಈ ಸದನ ಕೊಟ್ಟ ಮಾರ್ಗದರ್ಶನದ ಪ್ರಕಾರ high tension consumersಗೆ ಪ್ರೊಗ್ರೆಸೀವ್ ಪವರ್ cutಕೂಡ ಜಾರಿಗೆ ತಂದಿದ್ದೇವೆ, ಆದರೆ ಅದರಿಂದ ಪ್ರಯೋಜನವಾಗಲಿಲ್ಲವೆಂದು ಬೈರೇಗೌಡರು ಹೇಳುತ್ತಿದ್ದಾರೆ. ಆದುದರಿಂದ "ವ್ರತ ಕೆಟ್ಟರೂ ಸುಖಾನಾದರೂ ಸಿಗಲಿ" ಎಂದು ನಾವು ಹೇಳಿ ಪುನಃ ನಾವು ಹಿಂದಿನ ಕಾಲದ ಹೊಂಗೆ ಎಣ್ಣೆ ಕಾಲಕ್ಕೆ ಹೋಗಲಿಕ್ಕೆ ಆಗುತ್ತದೆಯೇ ?

(ಗೊಂದಲ)

ಶ್ರೀ ಸಿ. ಬೈರೇಗೌಡ:– ತಾವು ಪವರ್ ಕಟ್‌ನ್ನು ಏನು ಜಾಸ್ತಿ ಮಾಡಿದ್ದೀರಿ ಅದನ್ನು ಇನ್ನೂ ಹೆಚ್ಚು ಮಾಡಿ ರೈತರಿಗೆ ಉಳಿಸಬೇಕು. ಇವತ್ತು ರೈತರು ಮುಗಿದೇ ಹೋಗಿದ್ದಾರೆ. ನಾಳೆ ತಾವು ಬರುವುದಾದರೆ ಬನ್ನಿ ಕೆಲವು ಕಡೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಆದ್ದರಿಂದ ರೈತರಿಗೆ ವಿದ್ಯುತ್‌ನ ಏನು ಪರಿಸ್ಥಿತಿ ಇದೆ ಅದನ್ನು ಸರಿಮಾಡಲು ಇನ್ನೂ ಹೆಚ್ಚು ಪವರನ್ನು ತಾವು ಹೇಳಿದ ಕಡೆ ಮಾಡಿ ರೈತರನ್ನು ಉಳಿಸಬೇಕಾಗುತ್ತದೆ. ನಾನು ಕೊನೆಯದಾಗಿ ಇದರ ಬಗ್ಗೆ ಇನ್ನು ಮುಂದೆ ಮಾತನಾಡದೆ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ನಾವು ಇಲ್ಲಿ ಇಷ್ಟೊಂದು ತೀವ್ರವಾಗಿ ಏನು ಮಾತನಾಡುತ್ತೇವೋ ಅಲ್ಲಿ ಅಷ್ಟೇ ತೀವ್ರವಾಗಿ ರೈತರಿಗೆ ತೊಂದರೆಯಾಗುತ್ತಿದೆ. ಅನುಕೂಲ ಆಗುವುದರ ಬದಲಾಗಿ ಅನಾನುಕೂಲವಾಗುತ್ತಿದೆ, ದಿನಕಳೆದಂತೆ ಜಾಸ್ತಿಯಾಗುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಮ್ಮ ತಾಲ್ಲೂಕಾದ ಶಿಕಾರಿಪುರಕ್ಕೆ ಹೋಗಿ ನೋಡಿದಾಗ ಮೊದಲು ಇರುತ್ತಿದ್ದ ವಿದ್ಯುತ್ ಮತ್ತು ಓಲ್ಟೇಜ್ ಇಲ್ಲ, ಪಂಪ್‌ಗಳು ಪ್ರಾರಂಭವಾಗುತ್ತಿಲ್ಲ, ಎಲ್ಲಾವುಗಳು ಸಹ ವಿಚಿತ್ರವಾಗಿದೆ, ತಾವು ಇದರ ಬಗ್ಗೆ ಹೇಗೆ ರಕ್ಷಣೆ ಕೊಡುತ್ತಾರೋ ಗೊತ್ತಿಲ್ಲ, ಇದು ವಾಸ್ತವಿಕವಾಗಿ ಇರತಕ್ಕ ಸ್ಥಿತಿ, ನಾನು ನಿನ್ನೆ ಮೊನ್ನೆ ಶಿಕಾರಿಪುರ ತಾಲ್ಲೂಕಿಗೆ ಹೋಗಿ ಓಡಾಡಿಕೊಂಡು ಬಂದು ತಮಗೆ ಹೇಳುತ್ತಿದ್ದೇನೆ. ಅದಕ್ಕಾಗಿ ತಾವು ಕೈಗಾರಿಕೆಗಳಿಗೆ ವಿದ್ಯುತ್‌ನ್ನು

ತಿಳಿದುಕೊಂಡು ಅವರಿಗೆ ಇನ್ನೂ ಹೆಚ್ಚು ವಿದ್ಯುತ್‌ನ್ನು ಕೊಡಬೇಕೆಂದು ತಿಳಿದುಕೊಂಡಿದ್ದಾರೋ ಏನೋ ಎನ್ನತಕ್ಕ ಅನುಮಾನ ನನಗೆ ಇದೆ; ಅದಕ್ಕಾಗಿ ಇದನ್ನು ತಾವು ಪರಿಶೀಲನೆ ಮಾಡಿದರೆ ಒಳ್ಳೆಯದು.

ಶ್ರೀ ಎಸ್.ಎಂ. ಕೃಷ್ಣ:– ನಮ್ಮ ಮೇಲೆ ಅಪನಂಬಿಕೆ ಆ ಪ್ರಮಾಣಕ್ಕೆ ಹೋದರೆ ಅದು ಸಾಧ್ಯವಿಲ್ಲ. ಈಗ ಏನು ವಿದ್ಯುತ್ ಖೋತವನ್ನು ಮಾಡಿದ್ದೇನೆ, ಅದನ್ನು ಇನ್ನೂ ಸ್ವಲ್ಪ ದಿನ ಮುಂದುವರೆಸಿಕೊಂಡು ಹೋಗಿ ಪ್ರಯತ್ನ ಮಾಡೋಣ.

ಶ್ರೀ ಎಂ.ವಿ. ವೆಂಕಟಪ್ಪ:– ತಾವು ಅದರ ಬಗ್ಗೆ ವೀಕ್ಲಿ ರಿವ್ಯೂ ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ:– ಆಗಲಿ ಆ ರೀತಿ ವೀಕ್ಲಿ ರಿವ್ಯೂ ಮಾಡುತ್ತೇವೆ.

Free supply of power is given to those who have cleared their dues. A.G.O. has to be issued regarding waiver of interest. That is where we stand today.

ಶ್ರೀ ಸಿ. ಬೈರೇಗೌಡ:– ಅದರಿಂದ ಏನೂ ಪ್ರಯೋಜನವಾಗಿಲ್ಲ, ಅದರಿಂದ ಹಣ ವಾಪಸ್ ಬರುತ್ತಿಲ್ಲ, ಆದ್ದರಿಂದ ರೈತರ ಐ.ಪಿ. ಸೆಟ್ಟಿಗೆ ಮಾತ್ರ ಸರ್ಕಾರದ ಆಜ್ಞೆಯನ್ನು ಇಶ್ಯೂ ಮಾಡಿ.

ಶ್ರೀ ಎಸ್.ಎಂ. ಕೃಷ್ಣ:– ಆದ್ದರಿಂದ ಹಿಂದೆ ಏನು ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದರೋ ಅದರ ಬಗ್ಗೆ ಏನು ಇದೆ ಎಂಬುದನ್ನು ನೋಡಿ, ಅನಂತರ ಈ ವಿಚಾರದಲ್ಲಿ ನಿರ್ಧಾರ ಮಾಡುತ್ತೇನೆ. ಇನ್ನು ಜಾಲಪ್ಪನವರು ಹೇಳಿದ ದೊಡ್ಡ ಬೆಳಹೊಂಗಲ ಸಬ್‌ಸ್ಟೇಷನ್ ಬಗ್ಗೆ ಹೇಳುವುದಾದರೆ ಇದನ್ನು 1993–94 ರಲ್ಲಿ ಮಾಡಲು ಸೇರಿಸುತ್ತೇನೆ.

ತಾವು ನನಗೆ ಮಾತನಾಡಲು ಕೊಟ್ಟಂಥ ಕಾಲಾವಕಾಶಕ್ಕೆ ಮತ್ತು ಸಭೆಯು ನನಗೆ ಮಾತನಾಡಲು ಕೊಟ್ಟಂಥ ಕಾಲಾವಕಾಶಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ ಮತ್ತು ಈ ಬೇಡಿಕೆಗಳಿಗೆ ಸಭೆಯು ತನ್ನ ಒಪ್ಪಿಗೆಯನ್ನು ಸೂಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ಚಿಕ್ಕ ನೀರಾವರಿ, ನೀರಾವರಿ, ಲೋಕೋಪಯೋಗಿ ಮತ್ತು ವಿದ್ಯುತ್ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಉತ್ತರ ಇಲ್ಲಿಗೆ ಮುಕ್ತಾಯವಾಯಿತು.

(ಶ್ರೀ ವಾಟಾಳ್ ನಾಗರಾಜ್‌ರವರು ಕಾವೇರಿ ನ್ಯಾಯಮಂಡಳಿಯನ್ನು ಬಹಿಷ್ಕರಿಸಬೇಕೆಂದು ಕೂಗುತ್ತಿದ್ದರು)

ಅಧ್ಯಕ್ಷರು:– ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ:

"31–3–1994 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ 35, 36, 46, 47, 48, 50ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ವಿವರವಾಗಿ ನಮೂದಿಸಲಾಗಿದೆ.

ಅಭಿಯಾಚನೆ ಕ್ರಮಾಂಕ 35 – ಸಣ್ಣ ನೀರಾವರಿ ಇಲಾಖೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 55,52,99,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 70,97,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 36 – ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3. 1994 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 270,23,27,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8,26,12,40,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ 46 – ಲೋಕೋಪಯೋಗಿ, ಕಾಮಗಾರಿ ಇಲಾಖೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1994 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಕಾಮಗಾರಿಗೆ (ನಿರ್ಮಾಣ ರಹಿತ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 162,19,90,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ 47 – ಕಟ್ಟಡಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1994 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 11,18,65,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 104,85,89,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ – 48 – ರಸ್ತೆಗಳು ಮತ್ತು ಸೇತುವೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1994 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 154,88,82,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 47,18,25,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ 50 – ವಿದ್ಯುಚ್ಛಕ್ತಿ ಯೋಜನೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1994 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿದ್ಯುಚ್ಛಕ್ತಿ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 78,18,10,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 621,90,00.000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಶ್ರೀ ಸಿ. ಬೈರೇಗೌಡ:– ಅಧ್ಯಕ್ಷರೆ, ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುವುದಕ್ಕಿಂತ ಮೊದಲೇ,

ಕಲ್ಕತ್ತಾ ನಗರದಲ್ಲಿ ನಿನ್ನೆ ರಾತ್ರಿ ನಡೆದಂಥ ಘಟನೆ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಏಕೆಂದರೆ ಅಲ್ಲಿ ಸುಮಾರು ನೂರಕ್ಕೂ ಹೆಚ್ಚು ಜನರು ಸತ್ತಿದ್ದಾರೆ. ಸಾವಿರಾರು ಜನರಿಗೆ ಗಾಯವಾಗಿದೆ. ಇವತ್ತು ಇಂಥ ಭೀಕರವಾದ ಪರಿಸ್ಥಿತಿ ಇಡೀ ದೇಶದಲ್ಲೇ ಪ್ರಾರಂಭವಾಗುತ್ತಿದೆ. ಮೊದಲು ಬಾಂಬೆಯಲ್ಲಿ ಇಂಥ ಘಟನೆ ಆಯಿತು, ಅನಂತರ ಕಲ್ಕತ್ತಾದಲ್ಲಿ ಆಯಿತು ನಾಳೆ ಎಲ್ಲೆಲ್ಲಿ ಏನೇನು ಆಗುತ್ತದೋ ? ಬೆಂಗಳೂರಿನಲ್ಲಿ ಏನು ಆಗುತ್ತದೋ ? ಎಂಬ ಬಗ್ಗೆ ಗೊತ್ತಿಲ್ಲ. ಆದ್ದರಿಂದ ಅದರ ಬಗ್ಗೆ ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಗೆ ಬಂದರೆ ಆ ವಿಚಾರದ ಬಗ್ಗೆ ವಿವರವಾಗಿ ಚರ್ಚೆ ಮಾಡಬಹುದು. ಆದ್ದರಿಂದ ಮುಖ್ಯಮಂತ್ರಿಗಳನ್ನು ಇಲ್ಲಿಗೆ ಕರೆಸಿದರೆ ಇದರ ಬಗ್ಗೆ ಖರ್ಚು ಮಾಡಬಹುದು. ಮತ್ತು ಸರ್ಕಾರ ಕೂಡ ಈ ಬಗ್ಗೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೆ ಎಂಬ ಬಗ್ಗೆ ಹೇಳಬೇಕಾದ ಅವಶ್ಯಕತೆ ಇದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳನ್ನು ದಯವಿಟ್ಟು ಇಲ್ಲಿಗೆ ಕರೆಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ರಿಪ್ಲೈ ಮಾಡುವಂಥ ಸಂದರ್ಭದಲ್ಲಿ ತಮಗೆ ಒಂದು ಪತ್ರವನ್ನು ಬರೆದು ಕಳಿಸಿದ ಉದ್ದೇಶವೇನೆಂದರೆ; ಇವತ್ತು ಈ ರೀತಿಯಾದ ಘಟನೆ ಮುಂಬೈನಲ್ಲಿ ಆಗಿದೆ, ಕಲ್ಕತ್ತಾದಲ್ಲಿ ಆಗಿದೆ ನಾಳೆ ಬೆಂಗಳೂರಿನಲ್ಲಿಯೂ ಆಗಬಹುದು. ವಿಮಾನ ನಿಲ್ದಾಣ, ದೊಡ್ಡ ದೊಡ್ಡ ಕಟ್ಟಡಗಳನ್ನು ನಾಶ ಮಾಡುವಂಥ ಸಂದರ್ಭವಿದೆ. ಇದು ಇಡೀ ದೇಶಕ್ಕೇ ಹರಡತಕ್ಕಂಥ ಸಂದರ್ಭ ಇದೆ. ನಮ್ಮ ಸರ್ಕಾರದವರು ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ? ಅದರ ಪರಿಣಾಮ ಏನು ಆಗಬಹುದು ? ಬಾಂಬ್ ಸ್ಫೋಟ ಮಾಡುವಂಥ ಕುಯುಕ್ತಿ ಕೆಲಸವೇನು ಆಗುತ್ತಿದೆ, ಅದರಿಂದ ನೂರಾರು ಜನರು ನಿನ್ನೆ ರಾತ್ರಿ ಕಲ್ಕತ್ತಾದಲ್ಲಿ ಸತ್ತಿದ್ದಾರೆ ಮತ್ತು ಸಾವಿರಾರು ಜನ ಗಾಯಾಳುಗಳು ಆಸ್ಪತ್ರೆ ಸೇರಿದ್ದಾರೆ. ನಿನ್ನೆ ಮುಂಬೈ ಆಯಿತು, ಇಂದು ಕಲ್ಕತ್ತಾ ಆಯಿತು; ಇದರಿಂದಾಗಿ ದೇಶದ ಎಲ್ಲಾ ಕಡೆ ಭಯದ ವಾತಾವರಣ ಇದೆ, ಆ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಬಂದೋಬಸ್ತ್ ಮಾಡುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ಮುಖ್ಯಮಂತ್ರಿಗಳು ಬಂದರೆ ಉತ್ತರವನ್ನು ಕೊಡಲು ತಾವು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ:- ಈ ವಿಷಯವನ್ನು ನಾಳೆ ಬೆಳಿಗ್ಗೆ ತೆಗೆದುಕೊಂಡರೆ ಬಹಳ ಸವಿಸ್ತಾರವಾಗಿ ಮಾತನಾಡಬಹುದು. ಇದರ ಬಗ್ಗೆ ಅರ್ಧಗಂಟೆ ಮಾತನಾಡಿ ಪ್ರಯೋಜನವಾಗುವುದಿಲ್ಲ. ಈಗಾಗಲೇ ಸಮಯವಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಉಪ ಮುಖ್ಯಮಂತ್ರಿಗಳು ಇದ್ದಾರೆ. ಅವರೇ ಇದರ ಬಗ್ಗೆ ಏನಾದರೂ ಹೇಳುತ್ತಾರೆಯೇ ?

ಅಧ್ಯಕ್ಷರು:- ಹೇಳಿಕಳಿಸಿದ್ದೇನೆ ಬರುತ್ತಾರೆ.

ಈಗ ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಯು.ಕೆ. ಶಾಮಣ್ಣ (ಶೃಂಗೇರಿ):- ಸನ್ಮಾನ್ಯ ಅಧ್ಯಕ್ಷರೇ, ಈ ಮಂಡಳಿಯ ಪ್ರಸ್ತಾವನೆಗಳನ ಸರ್ಕಾರಕ್ಕೆ ಅನುಮೋದನೆಗಾಗಿ ಕಳಿಸಿದ್ದು, ಅದರಲ್ಲಿ ಎರಡು ಪ್ರಕರಣಗಳಿಗೆ ಮಾತ್ರ ಅನುದಾನರಹಿ ಅನುಮೋದನೆಯನ್ನು ಈಗಾಗಲೇ ಸರ್ಕಾರ ಕೊಟ್ಟಿದೆ, ಬಾಕಿ ಇರುವುದಕ್ಕೆ ಅನುಮೋದನೆಯನ ಕೊಡದೇ ಇರಲು ಕಾರಣವೇನು ? ಅಲ್ಲದೆ 1988ನೇ ಸಾಲಿನಿಂದ ಕೆಲಸವನ್ನು ಮಾಡಿಕೊಂಡಿರುವುದ ಕಾರ್ಮಿಕ ನೀತಿಗೆ ವಿರೋಧವಾಗಿರುವಂಥ ಆಡಳಿತದ ಮಂಜೂರಾತಿಯನ್ನು ಕೊಟ್ಟಿರುವುದ ಕಾರಣವೇನು ? ಸಂಬಳ ಇಲ್ಲದೆ ಎಷ್ಟು ವರ್ಷ ಕೆಲಸ ಮಾಡಬಹುದು ಎಂಬುದನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬಯಸುವೆ.

ಡಾ|| ಹೆಚ್.ಡಿ. ಲಮಾಣಿ:- ಜೋಸೆಫ್ ಕಾನ್ವೆಂಟ್ ಪ್ರೌಢಶಾಲೆಗೆ ಗುಮಾಸ್ತ ಸಹಿತ ಗ್ರಂಥಪಾಲಕ ಹುದ್ದೆಯನ್ನು ಅನುದಾನರಹಿತವಾಗಿ ಮಂಜೂರು ಮಾಡಲಾಗಿತ್ತು. ಆರ್ಥಿಕ ಮಿತವ್ಯಯ ದೃಷ್ಟಿಯಿಂದ ಇದುವರೆಗೂ ಅವರಿಗೆ ಗ್ರ್ಯಾಂಟ್ಸ್‌ನ್ನು ಕೊಟ್ಟಿಲ್ಲ. ಏಕೆಂದರೆ ಇದು ನಾನ್ ಟೀಚಿಂ ಪೋಸ್ಟ್. ಆರ್ಥಿಕ ಮಿತವ್ಯಯವನ್ನು ತೆಗೆದು ಹಾಕಿದ ಮೇಲೆ ನಾವು ಇದನ್ನು ಗ್ರ್ಯಾಂಟ್ ಸಹಿ ಮಂಜೂರು ಮಾಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಯು.ಕೆ. ಶಾಮಣ್ಣ:- ಎಲ್ಲಾ ಫೀಸಿಬಿಲಿಟಿಯನ್ನೂ ಹೊಂದಿರತಕ್ಕವುಗಳಲ್ಲಿ ಕೇವಲ ಎರಡ ಮಾತ್ರ ಕೊಡದೇ ಇರುವುದಕ್ಕೆ ಕಾರಣವೇನು ? ಈಗಾಗಲೇ 5 ವರ್ಷಗಳಿಂದ ಅವರು ಸತತವಾ ಕೆಲಸ ಮಾಡುತ್ತಿದ್ದಾರೆ. ಸಂಬಳವಿಲ್ಲದೆ ಕೆಲಸ ಮಾಡತಕ್ಕದ್ದು ಬಹಳ ಕಷ್ಟವಾದ್ದರಿಂದ ಇದನ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ|| ಹೆಚ್.ಡಿ. ಲಮಾಣಿ:- ಆದಷ್ಟು ಬೇಗ ಅನುದಾನ ಕೊಡುವಂಥ ವ್ಯವಸ್ಥೆಯನ್ನು ಮಾಡಲ ಪ್ರಯತ್ನಿಸುತ್ತೇನೆ.

ಚುಕ್ಕೆ.ಪ್ರಶ್ನೆ 404

ಪ್ರೊ|| ಎಂ.ಡಿ. ನಂಜುಂಡಸ್ವಾಮಿ:- ಮಾನ್ಯ ಸಭಾಧ್ಯಕ್ಷರೆ.....

ಶ್ರೀ ಎಂ.ಪಿ. ಕೇಶವಮೂರ್ತಿ:- ಈ ಪ್ರಶ್ನೆ ನಮಗೆ ಸಂಬಂಧಪಡದೇ ಇರುವುದರಿಂದ ಇದನ ಎಕ್ಸೈಜ್ ಇಲಾಖೆಗೆ ವರ್ಗಾವಣೆ ಮಾಡಿದ್ದೇವೆ. ಈಚಲು ವನದ ವಿಚಾರ ಫೈನಾನ್ಸ್ ಅಂಡ್ ಎಕ್ಸೈ ಡಿಪಾರ್ಟ್‌ಮೆಂಟ್‌ಗೆ ಸಂಬಂಧಿಸಿದ್ದರಿಂದ ಅದನ್ನು ಎಕ್ಸೈಸ್ ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ನವ ಅರಣ್ಯ ಇಲಾಖೆಗೆ ಬರುವುದಿಲ್ಲ.

ಅಧ್ಯಕ್ಷರು:- ಈ ವಿಚಾರವನ್ನು ನಮಗೆ ತಿಳಿಸಬೇಕಲ್ಲವೆ ?

ಶ್ರೀ ಎಂ.ಪಿ.ಕೇಶವಮೂರ್ತಿ:- ತಮಗೆ ತಿಳಿಸಿದ್ದಾರಂತೆ.

ಪ್ರೊ|| ಎಂ.ಡಿ. ನಂಜುಂಡಸ್ವಾಮಿ:- ಸ್ವಾಮಿ, ನಾನು ಕೇಳಿರತಕ್ಕದ್ದು ತುಮಕೂರು ಜಿಲ್ಲೆಯ ಸರ್ಕಾರದ ವತಿಯಿಂದ ಬೆಳೆಯಲಾಗುತ್ತಿರುವ ಈಚಲು ವನಗಳ ಸಂಖ್ಯೆ ಎಷ್ಟು ? ಬೇರೆ ಜಿಲ್ಲೆಗಳಲ ಈಚಲು ವನಗಳನ್ನು ಸರ್ಕಾರ ಬೆಳೆಸುತ್ತಿದೆಯೇ ? ಈಚಲು ವನವನ್ನು ಬೆಳೆಸುವವರು ತೋಟಗಾ ಇಲಾಖೆಯವರು ಇಲ್ಲವೇ ಅರಣ್ಯ ಇಲಾಖೆಯವರು. ಈಚಲು ಮತ್ತು ಎಕ್ಸೈಜ್‌ಗೆ ಸಂಬಂಧ ಇ ಎಂಬುದು ನನಗೆ ಗೊತ್ತಿದೆ. ತುಮಕೂರು ಜಿಲ್ಲೆಯಲ್ಲಿ 2-3 ವರ್ಷದ ಸಸಿಗಳನ್ನು ರಾಜ್ಯಸರ್ಕಾರದವ

ಹಾಕಿ ಬೆಳೆಸುತ್ತಿದ್ದಾರೆ. ಬೇರೆ ಜಿಲ್ಲೆಗಳಲ್ಲೂ ಎಷ್ಟು ಬೆಳೆಸುತ್ತಿದ್ದೀರಿ ಎಂದು ನಾನು ಪ್ರಶ್ನೆ ಕೇಳಿದ್ದೇನೆ ಅಷ್ಟೆ.

ಅಧ್ಯಕ್ಷರು:– ತಮ್ಮ ಪ್ರಶ್ನೆಯನ್ನು ನಾನು ತಡೆಹಿಡಿಯುತ್ತೇನೆ. ಏಕೆಂದರೆ ಅದನ್ನು ಬೇರೆ ಇಲಾಖೆಗೆ ವರ್ಗಾಯಿಸಿದ್ದಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ನಾವು ಬೃಂದಾವನ ಎಂದರೆ ಮಾನ್ಯ ಕೃಷ್ಣಾರವರಿಗೆ ಅರ್ಥವಾಗುತ್ತದೆ. ಮಧುವನ ಎಂದರೆ ಅರ್ಥವಾಗುತ್ತದೆ. ಆದರೆ ಈಚಲುವನ ಎಂದರೆ ಏನು ಎಂಬುದು ನನಗೆ ಗೊತ್ತಾಗುತ್ತಿಲ್ಲ. ಈ ಈಚಲುವನ ಯಾವಾಗ, ಯಾರ ಕಾಲದಲ್ಲಿ ಪ್ರಾರಂಭವಾಯಿತೆಂಬುದು ನನಗೆ ಗೊತ್ತಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಈಚಲುವನ ಪ್ರಾರಂಭವಾಯಿತು. ಈಗ ನಾವು ಅರ್ಧ ಕಿತ್ತುಹಾಕಿದ್ದೇವೆ. ಇನ್ನು ಅರ್ಧ ಕಿತ್ತು ಹಾಕೋಣವೇ ? ಮಾನ್ಯ ಮುಖ್ಯ ಮಂತ್ರಿಗಳು ನಮಗೆ ಪರವಾನಗಿಯನ್ನು ಕೊಟ್ಟರೆ ನಾವು ಆ ಕೆಲಸವನ್ನು ಮಾಡುತ್ತೇವೆ. ನಾವು ಗಾಂಧೀಜಿಯವರ ಫೋಟೋವನ್ನು ಇಲ್ಲಿ ಹಾಕಿಕೊಂಡಿದ್ದೇವೆ. ನನ್ನ ಪ್ರಶ್ನೆಗೆ ಉತ್ತರ ಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಈ ಪ್ರಶ್ನೆಯನ್ನು ಎಕ್ಸೈಸ್ ಇಲಾಖೆಗೆ ಕಳುಹಿಸಿದ್ದೇವೆಂದು ಹೇಳುತ್ತಿದ್ದಾರೆ. ನಾನಾದರೂ ಹೇಳುತ್ತೇನೆ; ಫೋಟೋವನ್ನು ತೆಗೆಯಿರಿ, ಇಲ್ಲದಿದ್ದರೆ ಈಚಲು ಗಿಡವನ್ನಾದರೂ ತೆಗೆಯಿರಿ. ಎರಡರಲ್ಲಿ ಒಂದನ್ನು ತೆಗೆಯಿರಿ.

ಅಧ್ಯಕ್ಷರು:– ಪಟ್ಟಣ ಶೆಟ್ಟಿಯವರೆ, ತಮ್ಮ ಚುಪ್ರ 2099ಕ್ಕೆ ಮಾನ್ಯ ಮಂತ್ರಿಗಳು 7 ದಿವಸ ಕಾಲಾವಕಾಶ ಕೇಳಿದ್ದಾರೆ.

ದಾವಣಗೆರೆಯ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯನ್ನು ಆಧುನೀಕರಣಗೊಳಿಸುವ ಬಗ್ಗೆ

1702: ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ):–

ವೈದ್ಯಕೀಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ನಗರದ ಚಿಗಟೇರಿ ಜನರಲ್ ಆಸ್ಪತ್ರೆಯ ಆಧುನೀಕರಣಕ್ಕೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆಯೇ;

ಆ) ಇದ್ದಲ್ಲಿ, ಆ ಕಾರ್ಯಕ್ರಮಗಳ ವಿವರ ನೀಡುವುದು ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಹೌದು.

ಆ) 1.ದಾವಣಗೆರೆ ಚಿಗಟೇರಿ ಜನರಲ್ ಆಸ್ಪತ್ರೆಯ ಆಧುನೀಕರಣಕ್ಕೆ ಈ ವರ್ಷದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

1. ಶೈತ್ಯೀಕರಣಗೊಳಿಸಿದ ಶವಾಗಾರದ ಉಪಕರಣವನ್ನು ರಿಪೇರಿ ಮಾಡಲು ರೂ. 18,500–00 ಗಳನ್ನು ವೆಚ್ಚ ಮಾಡಲಾಗುತ್ತಿದೆ.

2. ಐ.ವಿ. ದ್ರಾವಣ ತಯಾರಿಕಾ ಘಟಕಕ್ಕೆ ಅಭಿವೃದ್ಧಿಗೋಸ್ಕರ ರೂ. 1,65,000–00 ಗಳನ್ನು ವೆಚ್ಚ ಮಾಡಲಾಗುತ್ತಿದೆ.

3. ಹೆಂಗಸರ ಮತ್ತು ಮಕ್ಕಳ ವಿಭಾಗದ ಅಭಿವೃದ್ಧಿಗೋಸ್ಕರ ರೂ. 1.00 ಲಕ್ಷಗಳನ್ನು ವೆಚ್ಚ ಮಾಡಲಾಗುತ್ತಿದೆ.

ಈ. ಕೆಲವು ವಾರ್ಡ್‌ಗಳಲ್ಲಿ ವಿದ್ಯುತ್ ಉಪಕರಣಗಳನ್ನು ಅಭಿವೃದ್ಧಿಗೊಳಿಸಲು ರೂ. 18,500ಗಳನ್ನು ವೆಚ್ಚ ಮಾಡಲಾಗುತ್ತಿದೆ.
ಉ. ರಕ್ತ ನಿಧಿ ಕಟ್ಟಡದ ಅಭಿವೃದ್ಧಿಗೆ ರೂ. 32,000-00 ಗಳನ್ನು ಖರ್ಚು ಮಾಡಲಾಗುತ್ತಿದೆ.

2. ಮುಂದಿನ ವರ್ಷದಲ್ಲಿ ಕೈಗೊಳ್ಳುವ ಅಭಿವೃದ್ಧಿ ಕಾರ್ಯಗಳು ಈ ಕೆಳಕಂಡಂತಿವೆ:-

ಅ) ಆಸ್ಪತ್ರೆಗೆ ಎರಡು 50 ಕೆ.ವಿ.ಎ. ಸಾಮರ್ಥ್ಯದ ಡೀಸಲ್ ಜನರೇಟರ್‌ಗಳ ಅಳವಡಿಕೆ.
ಆ) ಶುಶ್ರೂಷಕಿಯರ ಹಾಸ್ಟಲ್ ಕಟ್ಟಡಕ್ಕೆ 2 ನೇ ಅಂತಸ್ತಿನ ನಿರ್ಮಾಣ.
ಇ) ಟಿ.ಬಿ. ಆಸ್ಪತ್ರೆಯ ನಿರ್ಮಾಣ.
ಈ) ನೌಕರರ ವಸತಿ ಗೃಹಗಳ ನಿರ್ಮಾಣ.
ಉ) ಮಕ್ಕಳ ಮತ್ತು ಹೆಂಗಸರ ವಿಭಾಗಕ್ಕೆ ಹೊರ ರೋಗಿ ಕಟ್ಟಡದ ನಿರ್ಮಾಣ.

ಶ್ರೀ ಯಜಮಾನ್ ಮೋತಿ ವೀರಣ್ಣ:- ಮಾನ್ಯ ಅಧ್ಯಕ್ಷರೆ, ದಾವಣಗೆರೆಯ ಸರ್ಕಾರೀ ಸಾರ್ವಜನಿಕ ಆಸ್ಪತ್ರೆಯಲ್ಲಿ ಅಭಿವೃದ್ಧಿ ಕೆಲಸ ಅಂದರೆ ಆಧುನೀಕರಣದ ಕೆಲಸವನ್ನು ಕೈಗೊಂಡಿದ್ದೀರಾ ಎಂದು ನಾನು ಕೇಳಿರುವುದಕ್ಕೆ ತಾವು ಕೊಟ್ಟಿರತಕ್ಕ ಉತ್ತರ ಸಮರ್ಪಕವಾಗಿಲ್ಲ. ಎಲ್ಲ ಪ್ರಶ್ನೆಗಳಿಗೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ, ಹಾಕಿಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ನನಗೆ ಸಮರ್ಪಕವಾದ ಉತ್ತರವನ್ನು ತಾವು ನೀಡಿಲ್ಲ. ಅಲ್ಲಿ ಸರ್ಕಾರೀ ಹೆರಿಗೆ ಆಸ್ಪತ್ರೆ ಕೂಡ ಇದೆ. ಅಲ್ಲಿ ವಿದ್ಯುಚ್ಛಕ್ತಿ ವಿಫಲವಾದರೆ ತಕ್ಷಣ ಅವಶ್ಯಕವಾಗಿ ಬೇಕಾದ ಒಂದು ಜನರೇಟರ್ ಕೂಡ ಇಲ್ಲ. ಹೆರಿಗೆಗೆ ಬಂದವರು ಶಸ್ತ್ರ ಚಿಕಿತ್ಸೆಗೆ ಒಳಗಾಗಬೇಕಾದ ಸಂದರ್ಭದಲ್ಲಿ ವಿದ್ಯುಚ್ಛಕ್ತಿ ಹೋದರೆ, ಜನರೇಟರ್ ಇಲ್ಲದೇ ಇದ್ದರೆ ರೋಗಿಗಳು ಎಷ್ಟು ತೊಂದರೆಗೆ ಒಳಗಾಗಬೇಕಾಗುತ್ತದೆಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಜನರೇಟರನ್ನು ಮುಂದಿನ ವರ್ಷ ಖರೀದಿಸಿ ವ್ಯವಸ್ಥೆ ಮಾಡಿಕೊಡುತ್ತೇವೆಂದು ಹೇಳಿದ್ದೀರಿ. ಮುಂದಿನ ವರ್ಷ ಎಂದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ತಕ್ಷಣವೇ ಅಲ್ಲಿಗೆ ಒಂದು ಜನರೇಟರ್ ಮತ್ತು ಒಂದು ಆಂಬುಲೆನ್ಸ್‌ನ್ನು ಕೊಡತಕ್ಕ ವ್ಯವಸ್ಥೆ ಮಾಡಲು ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂಬ ಬಗ್ಗೆ ಸ್ಪಷ್ಟವಾಗಿ ಉತ್ತರವನ್ನು ನಿರೀಕ್ಷಣೆ ಮಾಡುತ್ತಿದ್ದೇನೆ.

ಶ್ರೀ ಜಿ. ರಾಮಕೃಷ್ಣ:- ನಾವು ಈಗಾಗಲೇ ಸಾಕಷ್ಟು ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಕಟ್ಟಡ ಕಟ್ಟುವ ಸಲುವಾಗಿ 8.5 ಲಕ್ಷ ರೂ. ಫಾರ್ಮಸಿಯನ್ನು ಆಧುನೀಕರಣಗೊಳಿಸಲು 15 ಲಕ್ಷ ರೂ; ಖರ್ಚು ಮಾಡುತ್ತಿದ್ದೇವೆ. ಎಲೆಕ್ಟ್ರಿಕ್ ಲ್ಯಾಂಡ್ರಿಯನ್ನು ಸ್ಥಾಪಿಸಲಾಗಿದೆ. ಬೇರೆ ಬೇರೆ ಉಪಕರಣಗಳನ್ನು ಖರೀದಿ ಮಾಡಲು 18 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ.

ಈ ವರ್ಷದಲ್ಲಿ ಸುಮಾರು 50 ಕೆ.ವಿ. ಸಾಮರ್ಥ್ಯದ ಡೀಸಲ್ ಜನರೇಟರನ್ನು ಅಳವಡಿಸಲಾಗಿದೆ. ಮುಂದಿನ ವರ್ಷಕ್ಕೆ ತಾವು ಹೇಳಿದ ಪ್ರಕಾರ ಜನರೇಟರನ್ನು ಅಳವಡಿಸುತ್ತೇವೆ. ಶಿಶುಶಸ್ತ್ರ ಚಿಕಿತ್ಸೆಯ ಸಲುವಾಗಿ ಎರಡನೇ ಅಂತಸ್ತಿನ ಕಟ್ಟಡ ನಿರ್ಮಾಣವಾಗುತ್ತಿದೆ. ಟಿ.ಬಿ. ಆಸ್ಪತ್ರೆಯ ನಿರ್ಮಾಣ, ನೌಕರರ ವಸತಿ ಗೃಹ ನಿರ್ಮಾಣ, ಮಕ್ಕಳ ಮತ್ತು ಹೆಂಗಸರ ಹೊರ ರೋಗಿಗಳ ಕಟ್ಟಡದ ನಿರ್ಮಾಣ ಹೀಗೆ ಹೊಸ ಹೊಸ ಸ್ಕೀಮ್‌ಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಯಜಮಾನ್ ಮೋತಿ ವೀರಣ್ಣ:- ತಾವು ಪ್ರವಾಸ ಕಾರ್ಯಕ್ರಮದಲ್ಲಿ ಆ ಕಡೆ ಬಂದಾಗ ಸಾರ್ವಜನಿಕ ಆಸ್ಪತ್ರೆಗಳನ್ನು ವೀಕ್ಷಣೆ ಮಾಡಿದ್ದೀರಾ ? ಕೆಲಸ ಯಾವ ಹಂತದಲ್ಲಿ ಆಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತೆ ಜನರೇಟರ್ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದೀರಿ ಕಾಲವಿಳಂಬ ಮಾಡಿದರೆ ಹೆರಿಗೆಯಾಗತಕ್ಕಂಥವರಿಗೆ ಆ ಸಂದರ್ಭದಲ್ಲಿ ತೊಂದರೆಯಾದರೆ ಏನು

ಮಾಡುವುದು ? ಅಂಥ ಒಂದು ಅಮಾನವೀಯ ವ್ಯವಸ್ಥೆ ಇರುತ್ತದೆ. ಆ ದೃಷ್ಟಿಯಿಂದ ತಕ್ಷಣವೇ ಜನರೇಟರನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಅಂಬ್ಯುಲೆನ್ಸ್ ಕೂಡ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಕಾಲರ ಅಲ್ಲಿ ಹರಡುತ್ತಾ ಇದೆ. ಬೇರೆ ಕಡೆ ಹರಡುತ್ತಿರುವಂತೆ ನಮ್ಮ ಊರಿನಲ್ಲಿಯೂ ಕೂಡ ಕಾಲರಾ ಹರಡುತ್ತಿದೆ, ಒಂದು ಅಂಬುಲೆನ್ಸ್ ಕೂಡ ಇಲ್ಲ; ಇಂಥ ಪರಿಸ್ಥಿತಿ ಲ್ಲಿದೆ. ಆಂಬುಲೆನ್ಸ್ ರಿಪೇರಿಗೆ ಹೋಗಿದೆ ಎಂದು ಹೇಳುತ್ತಿರುತ್ತಾರೆ. ಯಾರನ್ನಾದರೂ ತುರ್ತು ಚಿಕಿತ್ಸೆಗೆ ಕಳುಹಿಸಬೇಕಾದರೆ ಏನು ಮಾಡಬೇಕು ? ಇಂಥ ಅವ್ಯವಸ್ಥೆಯನ್ನು ನಾವು ಅನುಭವಿಸುತ್ತಿದ್ದೇವೆ. ಆದ್ದರಿಂದ ತಾತ್ಕಾಲಿಕವಾಗಿ ಆ ಜನರೇಟರನ್ನು ಮತ್ತು ಅಂಬುಲೆನ್ಸ್‌ನ್ನು ತಕ್ಷಣ ಮಾಡಿಸುವಂಥ ವ್ಯವಸ್ಥೆಯನ್ನು ತಾವು ಕೈಗೊಳ್ಳುತ್ತೀರಾ ಎನ್ನುವುದಕ್ಕೆ ಸದನದ ಮೂಲಕ ನನಗೆ ಭರವಸೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ರಾಮಕೃಷ್ಣ:- ಮಾನ್ಯ ಸಭಾಪತಿಯವರೇ, ಅವರು ಕೇಳತಕ್ಕಂಥ ಪ್ರಶ್ನೆ ಬಹಳಷ್ಟು ಮಹತ್ವದ್ದು ಇದೆ. ಅದಕ್ಕಾಗಿ ಜನರೇಟರನ್ನು ತಕ್ಷಣವೇ ನಾವು ತರಿಸಲು ವ್ಯವಸ್ಥೆಯನ್ನು ಮಾಡುತ್ತೇವೆ ಮತ್ತು ಕಟ್ಟಡದ ಬದಲು ಈಗಾಗಲೇ ಬೇಕಾದಷ್ಟು ಖರ್ಚಾಗಿದೆ. ಈ ವರ್ಷವೂ ಅದಕ್ಕೆ ಬೇಕಾದಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಈಗ ಕೈಗೆ ಎಷ್ಟು ಕೆಲಸವನ್ನು ತೆಗೆದುಕೊಂಡಿದ್ದೇವೆ, ಅಷ್ಟನ್ನು ಪ್ರಗತಿಯಲ್ಲಿ ಪೂರ್ಣಗೊಳಿಸಲು ನಾವು ಆದೇಶವನ್ನು ಕೊಡುತ್ತೇವೆ.

ಅಧ್ಯಕ್ಷರು:- ಈಗ ಸಿ.ಎಂ. ಲಿಂಗಪ್ಪನವರ ಪ್ರಶ್ನೆಯನ್ನು ಅವರ ಪರವಾಗಿ ಡಾ॥ ನಂಜಪ್ಪನವರು ಕೇಳಬಹುದು.

ಸಹಾಯಕ ಶಿಕ್ಷಣಾಧಿಕಾರಿಗಳಿಗೆ ವಾಹನ

050: ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ):-

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾಲ್ಲೂಕಿಗೊಬ್ಬರಂತೆ ಇರುವ ಸಹಾಯಕ ಶಿಕ್ಷಣಾಧಿಕಾರಿಗಳ ವ್ಯಾಪ್ತಿಗೆ ಸುಮಾರು ಎಷ್ಟು ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಬೋಧಕ ಮತ್ತು ಬೋಧಕೇತರ ವರ್ಗದವರು ಒಳಪಡುತ್ತಾರೆ;

ಆ) ಇಷ್ಟು ಸಂಖ್ಯೆ ಶಾಲೆಗಳನ್ನು ಮತ್ತು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಉಸ್ತುವಾರಿ ಮಾಡಲು ಈ ಅಧಿಕಾರಿಗೆ ವಾಹನ ಸೌಕರ್ಯವನ್ನು ಕಲ್ಪಿಸಿಕೊಡಲಾಗಿದೆಯೇ;

ಇ) ಕೆಲಸವೇ ಇಲ್ಲದ ಕೆಲವು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಜೀಪುಗಳನ್ನು ಕೊಟ್ಟಿರುವಾಗ ಇಷ್ಟೊಂದು ಹೆಚ್ಚಿನ ಸಂಖ್ಯೆಯ ಶಾಲೆಗಳನ್ನು ಮತ್ತು ಸಿಬ್ಬಂದಿಯನ್ನು ಉಸ್ತುವಾರಿ ಮಾಡಿಕೊಳ್ಳಬೇಕಾಗಿರುವ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ಒಂದು ಜೀಪು ಕೊಡುವುದು ಉಚಿತವಲ್ಲವೆ ?

ಡಾ॥ ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-

ಅ) ಸುಮಾರು 125 ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು 90 ಹಿರಿಯ ಪ್ರಾಥಮಿಕ ಶಾಲೆಗಳು ಹಾಗೂ 750 ಶಿಕ್ಷಕ ಸಿಬ್ಬಂದಿ ವರ್ಗವೂ ಪ್ರತಿ ಸಹಾಯಕ ಶಿಕ್ಷಣಾಧಿಕಾರಿಯ ವ್ಯಾಪ್ತಿಗೆ ಒಳಪಡುತ್ತದೆ.

ಆ) ಇಲ್ಲ.

ಇ) ಈಗಾಗಲೇ ಇದರ ಬಗ್ಗೆ ಪರಿಶೀಲನೆ ನಡೆದಿದ್ದು ಆರ್ಥಿಕ ಕೊರತೆ ಇರುವ ಕಾರಣ ವಿಷಯವನ್ನು ಕೈಬಿಡಲಾಗಿದೆ.

ಡಾ॥ ಎನ್.ಬಿ. ನಂಜಪ್ಪ:– ಮಾನ್ಯ ಅಧ್ಯಕ್ಷರೇ, ತಾಲ್ಲೂಕಿಗೆ ಒಬ್ಬರಂತೆ ಸಹಾಯಕ ಶಿಕ್ಷಣಾಧಿಕಾರಿಗಳು ಇರುವುದು ನಿಜ. ಅವರು ಶಾಲೆಗಳಿಗೆ ಇನ್‌ಸ್ಪೆಕ್ಷನ್ ಮತ್ತೊಂದನ್ನೆಲ್ಲಾ ಮಾಡುವುದಕ್ಕೋಸ್ಕರ ವೆಹಿಕಲ್‌ನ್ನು ಕೊಟ್ಟರೆ ಮಾತ್ರ ಕೆಲಸ ಚೆನ್ನಾಗಿ ಆಗುತ್ತದೆಂದು ಹೇಳಿ ಪ್ರಶ್ನೆಯನ್ನು ಕೇಳಲಾಗಿದೆ. ತಾವು ಒಂದು ಜೀಪನ್ನು ಕೊಟ್ಟರೆ ವ್ಯವಸ್ಥಿತವಾಗಿ ಇನ್‌ಸ್ಪೆಕ್ಷನ್ ಎಲ್ಲ ನಡೆಸಿ ನೋಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ತಾವು ಏನೇನು ಕ್ರಮವನ್ನು ತೆಗೆದುಕೊಂಡಿರುತ್ತೀರಿ ಎನ್ನುವ ಬಗ್ಗೆ ನಾನು ಕೇಳುತ್ತಿದ್ದೇನೆ.

ಡಾ॥ ಹೆಚ್.ಡಿ. ಲಮಾಣಿ:– ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಸುಮಾರು 190 ಇಂಥ ತಾಲ್ಲೂಕ್ ಶಿಕ್ಷಣಾಧಿಕಾರಿಗಳು ಇದ್ದಾರೆ. ಒಬ್ಬ ಅಧಿಕಾರಿ ಸರ್ವೇಸಾಮಾನ್ಯವಾಗಿ ಸುಮಾರು 125 ಹಿರಿಯ ಪ್ರಾಥಮಿಕ ಶಾಲೆಗಳು, 90 ಪ್ರಾಥಮಿಕ ಶಾಲೆಗಳು, ಒಟ್ಟಿನಲ್ಲಿ ಬಹಳಷ್ಟು ಶಾಲೆಗಳನ್ನು ಇನ್‌ಸ್ಪೆಕ್ಷನ್ ಮಾಡುವಂಥ ಪರಿಸ್ಥಿತಿ ಇದೆ. ಅಷ್ಟೇ ಅಲ್ಲ, ಈ ನಾನ್‌ಟೀಚಿಂಗ್ ಸ್ಟಾಫ್ ಬಗ್ಗೆಯೂ ವೀಕ್ಷಣೆ ಮಾಡತಕ್ಕಂಥ ಒಂದು ಪರಿಸ್ಥಿತಿ ಇದೆ. ನಾನು ಸಹಿತ ಈ ಎ.ಇ.ಓ.ಗಳಿಗೆ ಒಂದು ವಾಹನವನ್ನು ಒದಗಿಸಬೇಕೆಂದು ಬಹಳಷ್ಟು ಕಾಳಜಿಯನ್ನು ವಹಿಸಿದ್ದೇನೆ. ಇಲ್ಲದಿದ್ದರೆ ಇನ್‌ಸ್ಪೆಕ್ಷನ್ ಮಾಡಲಿಕ್ಕೆ ಬಹಳ ಕಠಿಣವಾಗುತ್ತದೆ. ಇಷ್ಟೊಂದು ಶಾಲೆಗಳನ್ನು ಒಬ್ಬ ಎ.ಇ.ಓ. ಆಗಲೀ ಅಥವಾ ಇಬ್ಬರು ಇ.ಓ.ಗಳಾಗಲೀ ಅವರಿಗೆ ಇನ್‌ಸ್ಪೆಕ್ಟ್ ಮಾಡಲಿಕ್ಕೆ ಬಹಳ ತೊಂದರೆಯಾಗುತ್ತಿದೆ. ಅದಕ್ಕಾಗಿ ಒಂದು ಜೀಪನ್ನು ಕೊಡಿಸಬೇಕೆನ್ನುವಂಥ ಒಂದು ಪರಿಸ್ಥಿತಿಯಲ್ಲಿ ನಾವು ಈಗಾಗಲೇ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕೇಳಿದ್ದೆವು. ಆದರೆ ನಮಗೆ ಅದು ಸಾಧ್ಯವಾಗಲಿಲ್ಲ. ಈ ವಿಷಯವನ್ನು ಮತ್ತೊಮ್ಮೆ ಪರಿಶೀಲಿಸುತ್ತೇನೆ, ಮತ್ತು ಜೀಪ್‌ನ್ನು ಕೊಡಿಸುವಂಥ ಒಂದು ವ್ಯವಸ್ಥೆಯಲ್ಲಿ ನನ್ನ ಪ್ರಯತ್ನವೂ ಸಹಿತ ತಮ್ಮ ಜೊತೆಯಲ್ಲಿದೆ ಎಂದು ಅಧ್ಯಕ್ಷರ ಮೂಲಕ ಮಾನ್ಯಸದಸ್ಯರಿಗೆ ಹೇಳಬಯಸುತ್ತೇನೆ.

ಪಟ್ಟಣ ಪ್ರದೇಶಗಳಲ್ಲಿ ಹೆಚ್ಚುವರಿ ಶಾಲಾ ಕೊಠಡಿಗಳ ನಿರ್ಮಾಣ

409 (2116): ಹೆಚ್.ವೈ. ಮೇಟಿ (ಗುಳೇದಗುಡ್ಡ):–

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1990-91, 1991-92, ಮತ್ತು 1992-93ನೇ ಸಾಲಿನಲ್ಲಿ ರಾಜ್ಯದ ನಗರ ಮತ್ತು ಪಟ್ಟಣ ಪ್ರದೇಶದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಹೆಚ್ಚುವರಿ ಕೊಠಡಿಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಸರ್ಕಾರವು ಹಣ ಬಿಡುಗಡೆ ಮಾಡಲಾಗಿದೆಯೇ; ಹಾಗಿದ್ದಲ್ಲಿ ಸರ್ಕಾರದ ಆದೇಶ ಪತ್ರದ ಪ್ರತಿಗಳನ್ನು ಲಗತ್ತಿಸುವುದು;

ಆ) ಆಯಾ ಸಾಲಿನಲ್ಲಿ ಈ ಶಾಲಾ ಕೊಠಡಿಗಳಿಗಾಗಿ ಶಿಕ್ಷಣ ಸಚಿವರಿಗೆ ವಿನಂತಿ ಪತ್ರಗಳನ್ನು ಸಲ್ಲಿಸಿದ್ದ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸದಸ್ಯರು ಯಾರ್‍ಯಾರು, ಆ ವಿನಂತಿ ಪತ್ರದ ಪ್ರಕಾರ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಈ ಸಾಲಿನಲ್ಲಿ ಸರ್ಕಾರವು ಪ್ರಕಟಿಸಿರುವ ಆದೇಶ ಪತ್ರದಲ್ಲಿನ ಸ್ಥಳದ ಶಾಲೆಯ ಬದಲಿಗೆ ಬೇರೊಂದು ಶಾಲೆಯ ಕೊಠಡಿಗಳ ನಿರ್ಮಾಣಕ್ಕೆ ಹಣ ಹಸ್ತಾಂತರ ಮಾಡಬಹುದೆ, ಹಾಗಿದ್ದಲ್ಲಿ ಸರ್ಕಾರದ ಕ್ರಮವೇನು ?

ಡಾ॥ ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-

ಅ) 1990-91, 1991-92, 1992-93ನೇ ಸಾಲಿನಲ್ಲಿ ರಾಜ್ಯದ ನಗರ ಮತ್ತು ಪಟ್ಟಣ ಪ್ರದೇಶದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕಾಗಿ ಹಣ ಬಿಡುಗಡೆಯಾಗಿದೆ. (ಸರ್ಕಾರಿ ಆದೇಶದ ಪ್ರತಿಗಳನ್ನು ಸಂಬಂಧಿಸಿದ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು).

ಆ) ಆಯಾ ಕ್ಷೇತ್ರದ ಶಾಸಕರು, ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷರು, ನಾಗರೀಕರನ್ನೊಳಗೊಂಡಂತೆ ಶಾಲೆಗಳ ಕುಂದು ಕೊರತೆಗಳ ಸಮಿತಿಗಳಿಂದ ವಿನಂತಿಗಳು ಬಂದಿರುತ್ತವೆ. 1987ನೇ ಏಪ್ರಿಲ್ ಮಾಹೆಯಿಂದ ಜಿಲ್ಲಾ ಪರಿಷತ್ ಕಾರ್ಯಾಲಯಗಳ ಜವಾಬ್ದಾರಿಯಾಗಿರುವುದರಿಂದ ಸದರಿ ವಿನಂತಿ ಪತ್ರಗಳನ್ನು ಜಿಲ್ಲಾ ಪರಿಷತ್‌ಗಳಿಗೆ ಸಲ್ಲಿಸಿ ಆಯಾ ಜಿಲ್ಲೆಯ ಶಿಕ್ಷಣ ಉಪನಿರ್ದೇಶಕರು, ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಯವರೊಂದಿಗೆ ವ್ಯವಹರಿಸಿ ಅವಶ್ಯವಿದ್ದೆಡೆ ಶಾಲಾ ಹೆಚ್ಚುವರಿ ಕೊಠಡಿಗಳನ್ನು ಪಟ್ಟಣಪ್ರದೇಶದಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ವ್ಯವಹರಿಸಿ ಈ ಜವಾಬ್ದಾರಿಯನ್ನು ನೋಡಿಕೊಳ್ಳಲು ವಿನಂತಿಸಲಾಗಿದೆ.

ಇ) ಇಲ್ಲ, ಆದರೆ ವಿಶೇಷ ಸಂದರ್ಭಗಳಲ್ಲಿ ಮಾತ್ರ ಸರ್ಕಾರದ ಅನುಮತಿ ಪಡೆದು ಬದಲಾವಣೆ ಮಾರ್ಪಾಡು ಮಾಡಿಕೊಳ್ಳಲು ಅವಕಾಶವಿದೆ.

ಶ್ರೀ ಹೆಚ್.ವೈ. ಮೇಟಿ:- ನಾನು 1990-91, 1991-92, 1992-93ನೇ ಸಾಲಿನಲ್ಲಿ ರಾಜ್ಯದ ನಗರ ಮತ್ತು ಪಟ್ಟಣ ಪ್ರದೇಶದ ಸರ್ಕಾರಿ ಪ್ರಾಥಮಿಕ ಶಾಲೆಗಳ ಹೆಚ್ಚುವರಿ ಕೊಠಡಿಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಸರ್ಕಾರ ಹಣ ಬಿಡುಗಡೆ ಮಾಡಿದ ಬಗ್ಗೆ ಸರ್ಕಾರದ ಆದೇಶದ ಪ್ರತಿಗಳನ್ನು ಲಗತ್ತಿಸುವುದು ಎಂದು ಪ್ರಶ್ನೆ ಕೇಳಿದ್ದರೆ, ಪ್ರತಿಗಳನ್ನು ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು ಎಂದು ಹೇಳಿದ್ದಾರೆ. ಈಗಲೇ ಕೊಡಬಹುದಲ್ಲ. ಅದೇ ರೀತಿ (ಅ) ಪ್ರಶ್ನೆಗೆ ಉತ್ತರವಾಗಿ ಶಹರದಲ್ಲಿ ಶಾಲಾ ಕಟ್ಟಡಗಳ ಬಗ್ಗೆ ಜಿಲ್ಲಾ ಪರಿಷತ್ತು ವಿಚಾರಣೆ ಮಾಡುತ್ತದೆಂದು ಹೇಳಿದ್ದಾರೆ. ಆದರೆ ನೇರವಾಗಿ ಅದು ಜಿಲ್ಲಾ ಪರಿಷತ್ತಿಗೆ ಸಂಬಂಧಪಡದಿರುವುದರಿಂದ ಈ ರೀತಿ ಉತ್ತರ ಹೇಳಿದ್ದು ಅಷ್ಟು ಸಮಂಜಸವಾಗುವುದಿಲ್ಲ. 3ನೇ ಪ್ರಶ್ನೆಗೆ ಉತ್ತರವಾಗಿ ಯಾವುದೇ ಶಾಲಾ ಕಟ್ಟಡಗಳನ್ನು ಬೇರೆ ಕಡೆಗೆ ವರ್ಗಾಯಿಸಬೇಕಾದರೆ ಸರ್ಕಾರದ ಅನುಮತಿ ಪಡೆದು ಬದಲಾಯಿಸುತ್ತೇವೆಂದು ಹೇಳಿದ್ದಾರೆ. ಆದರೆ ಲಿಂಗಸಗೂರು ತಾಲ್ಲೂಕಿನ ಮುದಗಲ್‌ನಲ್ಲಿ ಸರ್ಕಾರದ ಆದೇಶ ಇಲ್ಲದೆ ಬದಲಿ ಮಾಡಿದ್ದಾರೆ. ಅದಕ್ಕೆ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೀರಾ ? ಅಲ್ಲಿ 5 ಕೋಣೆಗಳಿದ್ದು 4ನೇ ತರಗತಿಯವರೆಗೆ 147 ಮಕ್ಕಳಿದ್ದಾರೆ. ಅಲ್ಲಿ 5 ಕೋಣೆಗಳಿದ್ದರೂ 2 ಕೋಣೆಗಳನ್ನು ಬದಲಿ ಮಾಡಿ ಹೆಚ್ಚಿಗೆ ಕಟ್ಟಿದ್ದಾರೆ. ಆದರೆ ಮೇವಿನಪೇಟೆ ಎಂಬಲ್ಲಿ 3 ಕೊಠಡಿಗಳಿದ್ದು 5ನೇ ತರಗತಿಯವರೆಗೆ ಮಕ್ಕಳು ಓದುತ್ತಿದ್ದಾರೆ. ಅಲ್ಲಿದ್ದ 2 ಕೋಣೆಗಳನ್ನು ಬದಲಿ ಮಾಡಿ ಅಲ್ಲಿ ಹಾಕಿದ್ದಾರೆ. ಈ ಬಗ್ಗೆ ಯೋಗ್ಯಕ್ರಮ ತೆಗೆದುಕೊಳ್ಳಬೇಕೆಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಡಾ॥ ಹೆಚ್.ಡಿ. ಲಮಾಣಿ:- ಸಾಮಾನ್ಯವಾಗಿ ಈ ರೀತಿ ಕಟ್ಟಡಗಳನ್ನು ವರ್ಗಾಯಿಸುವುದಕ್ಕಾಗುವುದಿಲ್ಲ. ಒಂದು ವೇಳೆ ಅವರು ಹೇಳಿದ ಪ್ರಕಾರ ಲಿಂಗಸುಗೂರಿನಲ್ಲಿ ಅಂಥದ್ದು ಏನಾದರೂ ಆಗಿದ್ದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಇದರಲ್ಲಿ ತಾವು ಕೊಟ್ಟಿಲ್ಲ; ತಾವು ಪ್ರತ್ಯೇಕವಾಗಿ ಬರೆದುಕೊಡಿ, ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಬೆಂಗಳೂರು ನಗರದಲ್ಲಿ ಮಕ್ಕಳ ಗ್ರಂಥಾಲಯದ ಕಟ್ಟಡ ನಿರ್ಮಾಣ

1828: ಶ್ರೀ ಆರ್. ದಯಾನಂದರಾವ್ (ಗಾಂಧಿನಗರ):-

ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದಲ್ಲಿ ಮಕ್ಕಳ ಗ್ರಂಥಾಲಯ ಕಟ್ಟಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೆ;

ಆ) ಹಾಗಿದ್ದಲ್ಲಿ ಇದಕ್ಕೆ ನಿವೇಶನವನ್ನು ಗುರುತಿಸಲಾಗಿದೆಯೇ;

ಇ) ಇದಕ್ಕೆ ಮಂಜೂರಾದ ಹಣ;

ಈ) ಇದನ್ನು ಸಂಪೂರ್ಣ ಮಾಡಲು ಬೇಕಾದ ಮೊತ್ತ;

ಉ) ಇದು ಯಾವಾಗ ತೆರೆಯಲಾಗುತ್ತದೆ ?

ಶ್ರೀ ಪ್ರಭಾಕರ ಎಸ್. ರಾಣೆ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು):–

ಅ) ಹೌದು, 1993-94ನೇ ಸಾಲಿನಲ್ಲಿ ಕಟ್ಟಡ ನಿರ್ಮಿಸಲು ಯೋಚಿಸಲಾಗಿದೆ.

ಆ) ವಿಜಯನಗರ (ಮಾಗಡಿ ಕ್ರಾಸ್ ರೋಡ್)ದಲ್ಲಿ, 180 x 80 ಅಳತೆ ನಿವೇಶನದಲ್ಲಿ ಗುರುತಿಸಲಾಗಿದೆ.

ಇ) ಒಟ್ಟು 3 ಅಂತಸ್ತಿನ ಕಟ್ಟಡದಲ್ಲಿ 2 ಅಂತಸ್ತಿನಲ್ಲಿ ಮಕ್ಕಳ ಗ್ರಂಥಾಲಯಕ್ಕಾಗಿ ಕಾದಿರಿಸಲಾಗುವುದು. ಇದಕ್ಕೆ ತಗಲುವ ರೂ. 20.00ಲಕ್ಷ ವೆಚ್ಚವನ್ನು ನಗರ ಗ್ರಂಥಾಲಯ ಪ್ರಾಧಿಕಾರ ನಿಧಿಯಿಂದ ಭರಿಸಲಾಗುವುದು.

ಈ) 33.40 ಲಕ್ಷ.

ಉ) ಎರಡು ವರ್ಷದಲ್ಲಿ ಕಟ್ಟಣ ನಿರ್ಮಾಣ ಪೂರೈಸಿ ತೆರೆಯಲಾಗುವುದು.

ಶ್ರೀ ಆರ್. ದಯಾನಂದರಾವ್:– ಉತ್ತರದಲ್ಲಿ, 1993-94ನೇ ಸಾಲಿನಲ್ಲಿ ಕಟ್ಟಡ ನಿರ್ಮಿಸಲು ಯೋಚಿಸಲಾಗಿದೆ ಎಂದು ಹೇಳಿದ್ದಾರೆ, ಸಂತೋಷ. ವಿಜಯನಗರದ ಮಾಗಡಿ ಕ್ರಾಸ್ ರಸ್ತೆ ಹತ್ತಿರ ಎಂದು ಸ್ಥಳವನ್ನು ಕೂಡ ಹೇಳಿದ್ದಾರೆ. ಇದಕ್ಕೆ ಖರ್ಚು ಮಾಡುವ ಹಣ 33.40 ಲಕ್ಷ ಎಂದು ಹೇಳಿದ್ದಾರೆ. ಆದರೆ ವಿಜಯನಗರ ಬೆಂಗಳೂರಿನ ಕೊನೆಯಲ್ಲಿ ಇರತಕ್ಕದ್ದು. ಬೆಂಗಳೂರಿನಲ್ಲಿ ಮಕ್ಕಳು ಎಲ್ಲಾ ಮೂಲೆ ಮೂಲೆಗಳಿಂದ ಓದಲಿಕ್ಕೆ ಬರುತ್ತಾರೆ. ಅವರಿಗೆ ಒಂದು ಸೆಂಟರ್ ಪಾಯಿಂಟ್‌ನಲ್ಲಿ ಗ್ರಂಥಾಲಯವನ್ನು ಕಟ್ಟಿದರೆ ಚೆನ್ನಾಗಿರುತ್ತದೆ. ಇವತ್ತು ಕಬ್ಬನ್ ಪಾರ್ಕ್‌ನಲ್ಲಿ ಕೇಂದ್ರ ಗ್ರಂಥಾಲಯ ಇದೆ; ಅಲ್ಲಿ ಜನ ಹೋಗಿ ಓದುತ್ತಾರೆ. ಇಂಥ ಸ್ಥಳದಲ್ಲಿ ಕಟ್ಟಿದರೆ ಮಕ್ಕಳಿಗೆ ಆಟವಾಡಲು ಮತ್ತು ಓದಲು ಅನುಕೂಲವಾಗುತ್ತದೆ. ಎಲ್ಲೋ ಮೂಲೆಯಲ್ಲಿ ಗ್ರಂಥಾಲಯ ಕಟ್ಟಿದರೆ ಏನು ಪ್ರಯೋಜನ ? 33ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದೀರಿ. ಆದ್ದರಿಂದ ಸೆಂಟರ್ ಪಾಯಿಂಟ್‌ನಲ್ಲಿ ಗ್ರಂಥಾಲಯ ಕಟ್ಟಿಕೊಟ್ಟರೆ ಮಕ್ಕಳಿಗೆ ಓದಲಿಕ್ಕೆ ಅನುಕೂಲವಾಗುತ್ತದೆಂದು ತಮ್ಮ ಮೂಲಕ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪ್ರಭಾಕರ ಎಸ್. ರಾಣೆ:– ನಮ್ಮ ಉತ್ತರದಲ್ಲಿ ಈಗಾಗಲೇ ಹೇಳಿದ್ದೇವೆ. ವಿಜಯನಗರ, ಮಾಗಡಿ ಕ್ರಾಸ್ ರೋಡ್‌ನಲ್ಲಿ 180 x 80 ಅಳತೆಯ ನಿವೇಶನದಲ್ಲಿ ಮಕ್ಕಳ ಗ್ರಂಥಾಲಯ ಕಟ್ಟಡ ಕಟ್ಟುವುದಕ್ಕೆ ನಿರ್ಧರಿಸಲಾಗಿದೆ. ಯಾವುದೇ ಕಟ್ಟಡ ಕಟ್ಟುವುದಕ್ಕೆ ಅದರಲ್ಲೂ ಇಷ್ಟೊಂದು ದೊಡ್ಡ ಯೋಜನೆ ತಯಾರು ಮಾಡಿ ಕಟ್ಟುವುದಕ್ಕೆ ಪ್ರಮುಖವಾಗಿ ಬೇಕಾಗಿರುವುದು ಸ್ಥಳಾವಕಾಶ. ಮಾನ್ಯ ಸದಸ್ಯರ ಅಭಿಪ್ರಾಯದಂತೆ ನಗರದ ಮಧ್ಯದ ಸ್ಥಳದಲ್ಲಿ ಗ್ರಂಥಾಲಯ ಆಗಬೇಕೆಂದರೆ ನಗರದ ಮಧ್ಯದಲ್ಲಿ ಸೂಕ್ತವಾದ ಸ್ಥಳದಲ್ಲಿ ನಿವೇಶನ ಸಿಕ್ಕಿದರೆ ಅದರ ಬಗ್ಗೆ ಮರು ಪರಿಶೀಲನೆ ಮಾಡಬಹುದು.

ಆದರೆ ನಿವೇಶನ ಸಿಕ್ಕದೆ ಅಲ್ಲಿ ಮಾಡಬೇಕೆಂದರೆ ಅದು ಸಾಧ್ಯವಾಗುವುದಿಲ್ಲ. ಆ ದಿಸೆಯಲ್ಲಿ ಬೆಂಗಳೂರು ನಗರದ ಶಾಸಕರ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯ ಜೊತೆ ಚರ್ಚಿಸಿ ಸೂಕ್ತ ಸ್ಥಳ ಸಿಕ್ಕಿದರೆ ಅದರ ಬಗ್ಗೆ ಪರಿಶೀಲಿಸಬಹುದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಆರ್. ದಯಾನಂದರಾವ್:– ಎಂಎಲ್‌ಎಗಳನ್ನು ತಾವು ಎಷ್ಟು ದಿವಸಗಳಲ್ಲಿ ಕರೆಸುತ್ತೀರಾ? ಯಾವಾಗ ತಾವು ನಿರ್ಣಯವನ್ನು ತೆಗೆದುಕೊಳ್ಳುತ್ತೀರೆಂದು ನಿಖರವಾಗಿ ಸದನಕ್ಕೆ ತಿಳಿಸಿದರೆ ಒಳ್ಳೆಯದು.

ಶ್ರೀ ಪ್ರಭಾಕರ ಎಸ್. ರಾಣೆ:– ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ಸೂಕ್ತವಾದ ಸ್ಥಳ ಸಿಕ್ಕಿದರೆ ಆ ನಮ್ಮ ನಿರ್ಣಯವನ್ನು ಮರು ಪರಿಶೀಲನೆ ಮಾಡಬಹುದು. ವಿಚಾರವನ್ನೆಲ್ಲಾ ಶಾಸಕರಿಗೆ ತಿಳಿಸುತ್ತೇನೆ.

ಶ್ರೀ ಆರ್. ದಯಾನಂದರಾವ್:– ತಾವು ಮೇಯರ್ ಅವರನ್ನು ಕರೆಸಿ ಸ್ಥಳವನ್ನು ಕೇಳಿದರೆ ಅವರು ಕೊಡುವುದಕ್ಕೆ ಸಿದ್ಧರಿದ್ದಾರೆ.

ಶ್ರೀ ಪ್ರಭಾಕರ ಎಸ್. ರಾಣೆ:– ಎಲ್ಲಾ ಆಯಿತು ಎಂದು ಹೇಳಿದ್ದೇನೆ.

ಬೌರಿಂಗ್ ಹಾಗೂ ಲೇಡಿ ಕರ್ಜನ್ ಆಸ್ಪತ್ರೆಗೆ ವಿದ್ಯುತ್ ದೋಬಿಖಾನೆ

1160: ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):–

ವೈದ್ಯಕೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಎಲೆಕ್ಟ್ರಿಕ್ ಲಾಂಡ್ರಿ ಹಾಗೂ ಇನ್‌ಸಿನಿರೇಟರ್‌ಗಳನ್ನು ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ಸರಬರಾಜು ಮಾಡಲು ಸರ್ಕಾರದಿಂದ ಪ್ರಸ್ತಾವನೆ ಆಗಿದೆಯೇ;

ಆ) ಮೇಲಿನ ಉಪಕರಣಗಳಿಂದ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪರಿಸರವು ಮಾಲಿನ್ಯಗೊಂಡಿದ್ದು ಅದರಿಂದ ಕಾಯಿಲೆಗೆ ದಾರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮೇಲಿನ ಉಪಕರಣಗಳನ್ನು ಆಸ್ಪತ್ರೆಗೆ ಬರುವ ರೋಗಿಗಳ ಉತ್ತಮ ಸೌಲಭ್ಯಕ್ಕಾಗಿ ಒದಗಿಸುವುದು ಅಗತ್ಯ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಪರಿಶೀಲನೆಯಲ್ಲಿದೆ.

ಆ) ಇಲ್ಲ.

ಇ) ಮೇಲಿನ ಉಪಕರಣಗಳನ್ನು ಒದಗಿಸುವ ಬಗ್ಗೆ ಪರಿಶೀಲನೆಯಲ್ಲಿದೆ.

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೇ, ಈ ಉತ್ತರ ಸಮಂಜಸವಾಗಿಲ್ಲ ಎಂದು ಹೇಳಬಯಸುತ್ತೇನೆ. ಸುಮಾರು ಮೂರು ವರ್ಷಗಳಿಂದ ಈ ಪ್ರಶ್ನೆ ಹಾಕುತ್ತಿದ್ದೇನೆ. ಇಬ್ಬರು ಮುಖ್ಯಮಂತ್ರಿಗಳು ಆಸ್ಪತ್ರೆಗೆ ಬಂದು ಹೋಗಿದ್ದಾರೆ. ಇಬ್ಬರು ಆರೋಗ್ಯ ಮಂತ್ರಿಗಳು ಬಂದು ಹೋಗಿದ್ದಾರೆ. ಎಲ್ಲರೂ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಬೆಂಗಳೂರಿನ ಪ್ರಮುಖವಾದ ಬೌರಿಂಗ್ ಆಸ್ಪತ್ರೆಗೆ ಅವಶ್ಯಕವಾಗಿ ಎಲೆಕ್ಟ್ರಿಕ್ ಲಾಂಡ್ರಿ ಹಾಗೂ ಇನ್‌ಸಿನಿರೇಟರ್ ಬೇಕು ಎಂದರೆ ಇನ್ನೂ ಪರಿಶೀಲನೆಯಲ್ಲಿ ಇದೆ ಎಂದರೆ ಇನ್ನು ಯಾವ ಕಾಲಕ್ಕೆ ಸ್ವಾಮಿ ಕೊಡುವುದು? ಮಾನ್ಯ

ಮುಖ್ಯಮಂತ್ರಿಗಳೂ ಬಂದು ಹೋಗಿದ್ದಾರೆ. ಆರೋಗ್ಯ ಮಂತ್ರಿಗಳು ಬಂದು ಹೋಗಿದ್ದು ಈ ರೀತಿ ಪರಿಶೀಲನೆಯ ಉತ್ತರ ಕೊಡುತ್ತಾರೆಂದರೆ ಇನ್ನು ಮುಂದೆ ಪ್ರಶ್ನೆಯನ್ನು ಹಾಕಬೇಕೇ ಅಥವಾ ಬೇಡವೇ ಎನ್ನುವ ವಿಚಾರವನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಬಯಸುತ್ತೇನೆ.

ಶ್ರೀ ಜಿ. ರಾಮಕೃಷ್ಣ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಜೊತೆ ನಾನೂ ಆಸ್ಪತ್ರೆಗೆ ಹೋಗಿ ನೋಡಿದ್ದೇನೆ. ಅಲ್ಲಿಗೆ ಈ ಎಲೆಕ್ಟ್ರಿಕ್ ಹಾಗೂ ಇನ್‌ಸಿನಿರೇಟರ್‌ಗಳು ಬೇಕಾಗಿವೆ. ಇಲ್ಲಿಯವರೆಗೆ ಕಟ್ಟಿಗೆ ಮತ್ತು ಸೀಮೆಎಣ್ಣೆ ಹಾಕಿ ಅಲ್ಲಿರತಕ್ಕ ಅನುಪಯೋಗಿ ವಸ್ತುಗಳನ್ನು ಸುಡುತ್ತಿದ್ದಾರೆ. ಆದರೆ ಈ ವಿಚಾರವನ್ನು ಬಹಳ ವರ್ಷಗಳಿಂದ ಕೇಳುತ್ತಿದ್ದು ಇನ್ನೂ ಕೆಲಸ ಆಗಿಲ್ಲವೆಂದು ಮಾನ್ಯ ಸದಸ್ಯರು ಬೇಜಾರುಪಟ್ಟುಕೊಂಡಿದ್ದಾರೆ. ಇದನ್ನು ತೀವ್ರಗತಿಯಲ್ಲಿ ಎಂದರೆ ಬಹುತೇಕ ಮುಂದೆ ಈ ಮಾತು ಬಾರದ ಹಾಗೆ, ಕೆಲಸ ಆಗಲಿಲ್ಲ ಎನ್ನುವ ಮಾತು ಬಾರದ ಹಾಗೆ, ಬರಲಾರದ ಹಾಗೆ ನೋಡಿಕೊಂಡು ಹೋಗುತ್ತೇವೆ.

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೇ, ಇದು ಬಹಳ ಮುಖ್ಯವಾಗಿದ್ದು, ಇದರ ಕಳಕಳಿಯನ್ನು ಅರಿತು ತಾವು ನಮ್ಮ ರಕ್ಷಣೆಗೆ ಬರಬೇಕು. ನಾವು ಪ್ರಶ್ನೆ ಹಾಕಿದರೆ ಇಲ್ಲಿ ಪರಿಶೀಲನೆಯಲ್ಲಿದೆ ಎಂದು ಉತ್ತರ ಬರುತ್ತದೆ. ನನ್ನ ಇನ್ನೊಂದು ಪ್ರಶ್ನೆಯಲ್ಲಿ ಉಪಕರಣಗಳು ಇಲ್ಲದ ಕಾರಣ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪರಿಸರವು ಮಾಲಿನ್ಯಗೊಂಡಿದ್ದು, ಅದರಿಂದ ಕಾಯಿಲೆಗೆ ದಾರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ಈಗ ಸ್ವಲ್ಪ ಹೊತ್ತಿನ ಹಿಂದೆಯೇ ಮಾನ್ಯ ಮಂತ್ರಿಗಳು ಮಾತನಾಡಿ, ಕಟ್ಟಿಗೆ ಹಾಗೂ ಸೀಮೆಎಣ್ಣೆ ಹಾಕಿ ಸುಡುತ್ತೇವೆಂದರು. ಇದರಿಂದ ವಾತಾವರಣ ಕಲುಷಿತವಾಗುವುದಿಲ್ಲವೇ ? ಮತ್ತು ಗಲೀಜು ಎಲ್ಲಾ ಹೊರಗಡೆ ಹೋಗುತ್ತಾ ಇದ್ದರೆ ಅದರ ಮಾಲಿನ್ಯದಿಂದಾಗಿ ಕಾಯಿಲೆ ಬರುವುದಿಲ್ಲವೇ ? ಏನೂ ಆಗಿಲ್ಲ ಎಂದು ಹೇಳಿದರೆ ಇನ್ನು ಯಾರನ್ನು ನಂಬಿಕೊಂಡು ಜೀವನ ಮಾಡುವುದು ? ದಯೆಮಾಡಿ ಹೇಳಬೇಕು. ಈ ರೀತಿ ಉತ್ತರ ಕೊಡುವುದು ಸರಿಯಾದುದಲ್ಲ.

ಶ್ರೀ ಜಿ. ರಾಮಕೃಷ್ಣ:– ಮಾನ್ಯಸದಸ್ಯರು ಹೇಳಿದಂತೆ ಅಷ್ಟೊಂದು ಮಾಲಿನ್ಯಗೊಂಡು ವಾತಾವರಣ ಕೆಡುತ್ತಿದೆಯೆಂದಾಗುವುದಿಲ್ಲ. ಬಹಳಷ್ಟು ಸಣ್ಣ ಪ್ರಮಾಣದಲ್ಲಿ ಅದು ಆಗುತ್ತಿದೆ. ಸಂಪೂರ್ಣ ಹೊಗೆ ಕೂಡಿ ವಾತಾವರಣ ಹದಗೆಡುತ್ತಿದೆ ಎನ್ನುವುದು ಸರಿಯಲ್ಲ. ಮಾನ್ಯ ಸದಸ್ಯರು ಏನು ಕೇಳಿದ್ದಾರೆ ಅದು ಸರಿ ಇದೆ. ಈ ಮಾಲಿನ್ಯದಿಂದಲೇ ತೊಂದರೆ ಆಗಿ ಆಸ್ಪತ್ರೆ ಸೇರಿದ್ದಾರೆ ಎನ್ನುವುದು ಸರಿಯಲ್ಲ. ಇಷ್ಟು ಸಣ್ಣ ಪ್ರಮಾಣದಲ್ಲಿ ಸುಡುವುದರಿಂದ ತೊಂದರೆ ಆಗುತ್ತದೆಯೆಂದು ಹೇಳುವುದು ಸರಿಯಲ್ಲ. ಕೇಳತಕ್ಕ ಪ್ರಶ್ನೆಗೆ ಇಷ್ಟೇ ಉತ್ತರ ಹೇಳುತ್ತೇನೆ. ತಮ್ಮ ಬೇಡಿಕೆ ಏನಿದೆ ಅದನ್ನು ತ್ವರಿತಗತಿಯಲ್ಲಿ ಪೂರ್ಣ ಮಾಡುತ್ತೇವೆನ್ನುವ ಭರವಸೆ ಕೊಡುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ:– ನಾನು ಬೆಂಗಳೂರಿನಲ್ಲಿ 50 ವರ್ಷಗಳಿಂದ ವಾಸ ಮಾಡುತ್ತಿದ್ದೇನೆ. ಈ ವಿಭಾಗದಲ್ಲಿ ನಾನು 3 ಸಾರಿ ಗೆದ್ದು ಬಂದಿದ್ದೇನೆ. ಅಲ್ಲಿ ಸುತ್ತಮುತ್ತ ಏನೆಲ್ಲಾ ನಡೆಯುತ್ತದೆನ್ನುವ ವಿಚಾರ ನನಗೆ ತಿಳಿದಿದೆ. ಅಲ್ಲಿ ಎಲೆಕ್ಟ್ರಿಕ್ ಲಾಂಡ್ರಿ ಇಲ್ಲದೆ ಬಟ್ಟೆ ಒಗೆದ ಮೇಲೆ ಆ ಗಲೀಜೆಲ್ಲಾ ರಸ್ತೆಗೆ ಬಂದು ಸುತ್ತಮುತ್ತ ಬಹಳ ತೊಂದರೆ ಆಗಿದೆ. ನಾನೇ ಅಲ್ಲಿ ಚರಂಡಿಯನ್ನು ಕ್ಲೀನ್ ಮಾಡಿಸುತ್ತಿದ್ದೇನೆ. ಅಲ್ಲಿ ಒಳಗೆ ಇರುವವರಿಗೆ ತೊಂದರೆಯಾಗುತ್ತಿದೆ. ಏನೂ ತೊಂದರೆ ಆಗಿಲ್ಲ ಎಂದರೆ ಹೇಗೆ ? ತಾವು ಈ ರೀತಿ ಮಾತನಾಡುತ್ತೀರೆಂದರೆ ನನಗೆ ಬೇಜಾರು ಆಗುತ್ತದೆ. ನಾವು ಅಲ್ಲಿಯ ಜನರನ್ನು ನಿರ್ನಾಮ ಆಗುವುದಕ್ಕೆ ಬಿಡಬೇಕೇ ?

ಶ್ರೀ ಜಿ. ರಾಮಕೃಷ್ಣ:– ತೀವ್ರಗತಿಯಲ್ಲಿ ನಾವು ಇದನ್ನು ಈಡೇರಿಸುತ್ತೇವೆ.

ಶ್ರೀ ಎ.ಕೆ. ಅನಂತಕೃಷ್ಣ:- ನನಗಂತೂ ಈ ರೀತಿಯ ಉತ್ತರವನ್ನು ತಾವು ಕೊಡಬಾರದು ಎಂದು ನಾನಂತೂ ಹೇಳುತ್ತೇನೆ.

ಕರಾವಳಿ ಪ್ರದೇಶದಲ್ಲಿ ಹೂಳೆತ್ತುವುದರ ಬಗ್ಗೆ

413 (1112): ಶ್ರೀ ವಿಜಯ ಕುಮಾರ ಶೆಟ್ಟಿ (ಸುರತ್ಕಲ್):-

ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕರಾವಳಿಯಲ್ಲಿ ಹೂಳೆತ್ತದೆ ಇರುವ ಅಳಿವೆ ದ್ವಾರಗಳಲ್ಲಿ ಮೀನುಗಾರರು ಅಪಾಯಕ್ಕೀಡಾಗುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದಕ್ಕಾಗಿ ಡ್ರೆಡ್ಜಿಂಗ್ ಕೈಗೊಳ್ಳಲು ಸರ್ಕಾರವು 1992-93ರಲ್ಲಿ ಮೀಸಲಿಟ್ಟ ಹಾಗೂ ಖರ್ಚು ಮಾಡಿದ ಹಣವೆಷ್ಟು;

ಇ) ನವಮಂಗಳೂರು ನಿರ್ಮಾಣ ಸಂದರ್ಭದಲ್ಲಿ ಆಶ್ವಾಸನೆ ನೀಡಿದಂತೆ ಮೀನುಗಾರರಿಗೆ ಪ್ರತ್ಯೇಕ ಜೆಟ್ಟಿ ನಿರ್ಮಿಸುವ ಕಾರ್ಯದತ್ತ ಕೈಗೊಂಡ ಕ್ರಮಗಳೇನು ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):-

ಅ) ಹೌದು.

ಆ) ರೂ. 2.65 ಕೋಟಿ ಮೀನುಗಾರಿಕೆ ಇಲಾಖೆಯಲ್ಲಿ ಮೀಸಲಿಟ್ಟಿತ್ತು. ಆದರೆ ಅಲ್ಲಿ ತಡೆಗೋಡೆ ನಿರ್ಮಾಣದ ಕಾರ್ಯ ಸ್ಥಗಿತವಾಗಿರುವುದರಿಂದ ಅಳಿವೆಯಲ್ಲಿ ಹೂಳೆತ್ತುವಿಕೆ ಮಾಡಲಿಲ್ಲವಾದ್ದರಿಂದ ಹಣ ಖರ್ಚಾಗಲಿಲ್ಲ.

ಇ) ನವಮಂಗಳೂರು ಬಂದರು, ವಾಣಿಜ್ಯ ನೌಕಾ ಚಟುವಟಿಕೆ ತುಂಬಿರುವುದರಿಂದ ಮೀನುಗಾರಿಕೆಗೆ ಪ್ರತ್ಯೇಕ ಸ್ಥಳ ಕಾದಿರಿಸಲು ಸಾಧ್ಯವಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ:- ಮಾನ್ಯ ಅಧ್ಯಕ್ಷರೆ, ಸಾಧಾರಣ ಕಳೆದ ಮೂರು ವರ್ಷಗಳಿಂದ ಮೂರು ಜನ ಮೀನುಗಾರಿಕಾ ಸಚಿವರು ಬಂದಿದ್ದಾರೆ. 10-15 ವರ್ಷಗಳಿಂದ ಹೂಳೆತ್ತುವ ಕೆಲಸ ಮಾಡಲಿಲ್ಲ. ಪ್ರತಿ ವರ್ಷ ಪ್ರಾಮಿಸ್ ಕೊಡುತ್ತಾರೆ, ಹೋಗುತ್ತಾರೆ. ಮಳೆಗಾಲದಲ್ಲಿ ದೋಣಿಗಳ ಅಪಘಾತಗಳು ಆಗುತ್ತಿವೆ. ಮೀನುಗಾರರು ಬಹಳಷ್ಟು ಸಂಕಷ್ಟದಲ್ಲಿದ್ದಾರೆ. ಸೌತ್‌ಬ್ರೇಕ್ ವಾಟರ್‌ನಲ್ಲಿ ಕೆಲಸ ಶುರು ಮಾಡಿಲ್ಲ, ನಾರ್ತ್‌ಬ್ರೇಕ್ ವಾಟರ್‌ನಲ್ಲಿ ಕೆಲಸ ಶುರು ಮಾಡಲಿಲ್ಲ. ಒಂದು ಕಡೆ ಹೂಳು ತುಂಬಿ ಆಗಿ ದೋಣಿಗಳ ಅಪಘಾತಗಳು ಆಗುತ್ತಿವೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮೀನುಗಾರಿಕೆಯಿಂದ ಸುಮಾರು 58 ಕೋಟಿ ವಿದೇಶಿ ವಿನಿಮಯ ಆಗುತ್ತಿದೆ. ಆದರೆ ಮೀನುಗಾರರಿಗೆ ಬೇಕಾದಂಥ ಸವಲತ್ತುಗಳು ಸಾಧಾರಣ 15 ವರ್ಷಗಳಿಂದ ಪೂರ್ಣಗೊಳ್ಳದೆ ಮೂಗುದಿಗೆ ಬಿದ್ದಿದೆ. ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಯವರೇ ಇದ್ದಾರೆ. ಅವರಿಗೆ ಇದರ ಬಗ್ಗೆ ಪೂರ್ಣವಾದ ಅನುಭವವಿದೆ. ಮೊದ್ಲಲಿನವರು ಬರುತ್ತಾರೆ ಹೋಗುತ್ತಾರೆ ಹೊರತು ಕೆಲಸ ಮಾತ್ರ ಆಗಲಿಲ್ಲ. ಮಳೆಗಾಲದಲ್ಲಿ ಒಂದು ಸಲ ಮೀಟಿಂಗ್ ಕರೆಯುತ್ತಾರೆ, ಮೀಟಿಂಗ್‌ನಲ್ಲಿ ಆಶ್ವಾಸನೆಯನ್ನು ಕೊಡುತ್ತಾರೆ. ಆದರೆ ಅದು ಜಾರಿ ಆಗಿಲ್ಲ. ಇದಕ್ಕಿಂತ ಗಹನವಾದ ವಿಷಯ ಬೇರೆ ಇಲ್ಲ. ತಾವು ಇದರ ಬಗ್ಗೆ ದಯವಿಟ್ಟು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ:- ರಾಜ್ಯದ ಹೆಚ್ಚಿನ ಬಂದರುಗಳಲ್ಲಿ ಅಳಿವೆ ದ್ವಾರಗಳಲ್ಲಿ ಹೂಳು

ತುಂಬಿ ನೌಕಾಚಲನೆಗೆ ಧಕ್ಕೆಯುಂಟಾಗಿದೆ. ಈ ಮೂಲಕ ಅಪಘಾತಗಳು ಸಂಭವಿಸುತ್ತವೆ. ಇದನ್ನು ಗಮನಿಸಿ ಸರ್ಕಾರವು ಹಳೆಯ ಮಂಗಳೂರು ಬಂದರಿನಲ್ಲಿ ಅಳಿವೆ ದ್ವಾರದಲ್ಲಿ ಹಿಂದೆ ಹೂಳೆತ್ತುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಆದರೆ ಹೂಳೆತ್ತುವ ಯಂತ್ರಗಳು ಸಕಾಲದಲ್ಲಿ ಸಿಗದ ಕಾರಣ ಹೂಳೆತ್ತುವ ಕಾರ್ಯಕ್ರಮ ನಡೆಯಲಿಲ್ಲ. ಅಲ್ಲಿ ಅಡೆತಡೆ ಗೋಡೆ ಕೆಲಸ ಮಾಡಿಸುವುದು ಮತ್ತೆ ಹೂಳೆತ್ತುವ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗಿದೆ. ಶಾಸಕರು ಮತ್ತು ಅಧಿಕಾರಿಗಳು ಸಭೆ ಸೇರಿ ನಿರ್ಧರಿಸಲಾಗಿದೆ. ಅಡೆತಡೆ ಗೋಡೆ ರಚನೆ ಸ್ಥಗಿತಗೊಂಡಿದ್ದರಿಂದ ಹೂಳೆತ್ತುವ ಕೆಲಸ ಕೈಗೊಳ್ಳಲಿಕ್ಕೆ ಆಗಲಿಲ್ಲ. ದಕ್ಷಿಣ ಭಾಗದಲ್ಲಿ 40 ಪರ್ಸೆಂಟ್ ಅಡೆತಡೆ ಗೋಡೆ ಕೆಲಸ ಆಗಿದೆ. ಉತ್ತರ ಭಾಗದಲ್ಲಿ ಪ್ರಾರಂಭಿಸಲಾಗಿದೆ. ಈ ಯೋಜನೆ ನಮ್ಮ ರಾಜ್ಯದಲ್ಲಿ ಕಂಟ್ರಾಕ್ಟರುಗಳ ತೊಂದರೆಯಿಂದ ಸ್ಥಗಿತಗೊಂಡಿದೆ. ಇದರ ಬಗ್ಗೆ ನಿರ್ಧಾರ ತೆಗೆದುಕೊಂಡು ಉತ್ತರ ಭಾಗದಲ್ಲಿ ಕೆಲಸ ಮಾಡುವುದಕ್ಕೆ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಅದೇ ರೀತಿಯಲ್ಲಿ ಮಳೆಗಾಲದ ಸಂದರ್ಭದಲ್ಲಿ ಆಗುವ ಅವಘಡದ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ.

ಅದಕ್ಕೋಸ್ಕರ ನವಮಂಗಳೂರು ಬಂದರಿನಲ್ಲಿ ಮಳೆಗಾಲದ ಸಂದರ್ಭದಲ್ಲಿ ಮೀನುಗಾರಿಕೆ ಮಾಡಲಿಕ್ಕೆ ಅವಕಾಶ ಮಾಡಿಕೊಂಡಿದ್ದೇವೆ. ಅದೇ ರೀತಿ ನವಮಂಗಳೂರು ಬಂದರಿನಲ್ಲಿ ಒಂದು ಡ್ರೆಡ್ಜಿಂಗ್ ಜೆಟ್ಟನ್ನು ನಿರ್ಮಾಣ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡಿ ಒಂದು ಯೋಜನೆ ತರಿಸಿ ಆ ಯೋಜನೆಯನ್ನು ಪ್ರಾರಂಭಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ವಿಜಯಕುಮಾರ್ ಶೆಟ್ಟಿ:– ಕಳೆದ ಮೂರು ವರ್ಷಗಳಿಂದ ಆಶ್ವಾಸನೆ ಬರುತ್ತಿದೆಯೇ ಹೊರತು ಡ್ರೆಡ್ಜಿಂಗ್ ಕೆಲಸ ಆಗುತ್ತಿಲ್ಲ. ನಮ್ಮ ಪಕ್ಕದ ರಾಜ್ಯವಾದ ಕೇರಳ ರಾಜ್ಯದಲ್ಲಿ ಬೇಕಾದಷ್ಟು ಡ್ರೆಡ್ಜಿಂಗ್ ಕೆಲಸ ಆಗುತ್ತಿದೆ. ಅಲ್ಲಿ ಯಾವುದೇ ತೊಂದರೆಯಾಗುತ್ತಿಲ್ಲ. ಡ್ರೆಡ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಅವರ ಹತ್ತಿರ ಕಳೆದ ಸಲ ಒಂದು ಡ್ರೆಡ್ಜಿಂಗ್ ಜೆಟ್ಟನ್ನು ತರಿಸಿದ್ದೇವೆ. ಅದೇ ರೀತಿ ಡ್ರೆಡ್ಜಿಂಗ್ ಜೆಟ್‌ನ್ನು ಪರ್ಚೇಸ್ ಮಾಡುವ ವ್ಯವಸ್ಥೆ ಮಾಡಬೇಕು. ಸರ್ಕಾರದಲ್ಲಿ ಬೇಕಾದಷ್ಟು ಹಣ ಇದೆ. ಹೊಸದಾಗಿ ಡ್ರೆಡ್ಜಿಂಗ್ ಜೆಟ್ ಪರ್ಚೇಸ್ ಮಾಡುತ್ತೇವೆಂದು ಹೇಳುತ್ತಾರೆ. ಪ್ರತಿ ವರ್ಷ ಮುಂದಿನ ವರ್ಷ ಬರುತ್ತದೆ, ಅಂತ ಮೂರು ವರ್ಷಗಳಿಂದ ಮೂರು ಜನ ಮಂತ್ರಿಗಳು ಹೇಳಿದರು, ಆದರೆ ಇಷ್ಟರವರೆಗೆ ಡ್ರೆಡ್ಜಿಂಗ್ ಜೆಟ್ ಬಂದಿಲ್ಲ. ಮೀನುಗಾರರು ಬಹಳ ವ್ಯಥೆಯಲ್ಲಿದ್ದಾರೆ. ಈವೊಂದು ಸಮಸ್ಯೆಯನ್ನು ಖಂಡಿತವಾಗಿಯೂ ಸರಿ ಮಾಡಬೇಕು. ನವಮಂಗಳೂರು ಬಂದರಿನಲ್ಲಿ ಮತ್ತು ಪಣಂಬೂರಿನಲ್ಲಿ ನಿರ್ವಸಿತರಿಗೆ ಮೀನುಗಾರಿಕೆ ಜೆಟ್ಟಿಂಗ್ ಪ್ರಾರಂಭ ಮಾಡುತ್ತೇವೆಂದು 1972ರಲ್ಲಿ ಹೇಳಿದ್ದಾರೆ. ಇಷ್ಟರವರೆಗೆ ಮಾಡಲಿಲ್ಲ. ಪಣಂಬೂರು ಕಮರ್ಷಿಯಲ್ ಹಾರ್ಬರ್. ಮಳೆಗಾಲ ಮೂರು ತಿಂಗಳು ಬಿಟ್ಟು ಬಾಕಿ ತಿಂಗಳುಗಳಲ್ಲಿ ಜೆಟ್ಟಿಂಗ್ ಕಾರ್ಯವನ್ನು ಆದಷ್ಟು ಬೇಗ ಪ್ರಾರಂಭ ಮಾಡಬೇಕು.

ಶ್ರೀ ವಸಂತ ವಿ. ಸಾಲಿಯಾನ:– ಮಾನ್ಯ ಸದಸ್ಯರು ಹೇಳುವ ವಿಚಾರ ಬಹಳ ಗಂಭೀರವಾಗಿದೆ. ಅಲ್ಲಿ ಏನಾಗಿದೆ ಅಂದರೆ ಅಡೆತಡೆ ಗೋಡೆ ಸಂಪೂರ್ಣ ಮಾಡದಿದ್ದರೆ ಡ್ರೆಡ್ಜಿಂಗ್ ಮಾಡಲಿಕ್ಕೆ ಅವಕಾಶವಾಗುವುದಿಲ್ಲ. ಡ್ರೆಡ್ಜಿಂಗ್ ಮಾಡಲಿಕ್ಕೆ ಹೋದರೆ ನೇರವಾಗಿ ಮಣ್ಣು ಅಡೆತಡೆ ಗೋಡೆಯ ಮಧ್ಯದಲ್ಲಿ ಬಂದು ಪುನಃ ಮಣ್ಣು ತುಂಬುತ್ತದೆ. ಆದ್ದರಿಂದ ಅಡೆತಡೆ ಗೋಡೆ ಸಂಪೂರ್ಣ ಮಾಡಿ ಅದಕ್ಕೆ ಡ್ರೆಡ್ಜಿಂಗ್ ಮಾಡುವಂತಹ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅದೇ ರೀತಿಯಲ್ಲಿ ಮಾನ್ಯ ಸದಸ್ಯರು ಮಂಗಳೂರು ಬಂದರಿನಲ್ಲಿ ಒಂದು ಜೆಟ್ಟಿಂಗ್ ವಿಚಾರ ಹೇಳಿದ್ದಾರೆ. ಇದರ ಬಗ್ಗೆ ಕೇಂದ್ರ

ಸರ್ಕಾರದ ಜೊತೆ ಚರ್ಚೆ ಮಾಡಿ ಒಂದು ಯೋಜನೆ ತಯಾರಿಸಿ ನಾವು ಅದಕ್ಕೆ ಕಾರ್ಯಕ್ರಮ ರೂಪಿಸುತ್ತೇವೆ.

ಶ್ರೀ ಬಿ.ಎಂ. ಇದಿನಬ್ಬ:– ಈ ಹೂಳೆತ್ತುವ ವಿಚಾರವನ್ನು ನಾವು ಕಳೆದ ಏಳು ವರ್ಷಗಳಿಂದ ಕೇಳುತ್ತಲೇ ಬಂದಿದ್ದೇವೆ. ಈ ಬಗ್ಗೆ ಅಲ್ಲಿನ ಮೀನುಗಾರರು ಹತ್ತು ದಿವಸಗಳಿಂದ ಧರಣಿ ಮಾಡಿದ್ದಾರೆ, ಮುಷ್ಕರ ಮಾಡಿದ್ದಾರೆ. ಪ್ರತಿವರ್ಷ ಡ್ರೆಡ್ಜನ್ನು ಈ ವರ್ಷ ತರಿಸುತ್ತೇವೆ, ಈ ವರ್ಷ ತರಿಸುತ್ತೇವೆ ಎಂದು ಏಳು ವರ್ಷಗಳಿಂದ ಹೇಳುತ್ತಲೇ ಇದ್ದಾರೆ. ಆದರೆ ಇಷ್ಟರವರೆಗೆ ತರಿಸಿಲ್ಲ. ಈಗಲೂ ತರಿಸುತ್ತೇವೆ ಎಂದು ಹೇಳುತ್ತಾರೆ. ಎಷ್ಟು ಸಮಯದಲ್ಲಿ ಅಂತ ಮಾಡುತ್ತೀರಿ ? ಮತ್ತು ಹೂಳು ಎತ್ತದಿರುವುದರಿಂದ ಈ ಏಳು ವರ್ಷಗಳಲ್ಲಿ ಎಷ್ಟು ಜನ ಸತ್ತಿದ್ದಾರೆ ? ಎಷ್ಟು ನೌಕೆಗಳು ಮುಳುಗಿವೆ ? ಎಷ್ಟು ಜನರಿಗೆ ಹಾನಿಯಾಗಿದೆ ಎಂದು ತಿಳಿಸುತ್ತೀರಾ ?

ಶ್ರೀ ವಸಂತ ವಿ. ಸಾಲಿಯಾನ:– ಮಾನ್ಯ ಸದಸ್ಯರು ಹೇಳಿದ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಈಗ ಏನಾಗಿದೆ ಎಂದರೆ ಅಡೆತಡೆ ಗೋಡೆ ಬಗ್ಗೆ ಕಂಟ್ರಾಕ್ಟರ್ಸ್ ಪ್ರಾಬ್ಲಮ್ ಇರುವುದರಿಂದ; ಈಗ ಪುನಃ ಸರ್ಕಾರದ ವತಿಯಿಂದ ಮಂಜೂರಾತಿ ಆಗಬೇಕಾಗುತ್ತದೆ. ಅದು ಈಗ ಸರ್ಕಾರದಲ್ಲಿದೆ. ಅಡೆತಡೆ ಗೋಡೆಯ ಕೆಲಸ ಸಂಪೂರ್ಣವಾಗಿ ಆದ ಮೇಲೆ ಡ್ರೆಡ್ಜಿಂಗ್ ತರಿಸಿ ಮಾಡುವುದಕ್ಕೆ ಹೈಪವರ್ ಕಮಿಟಿಯವರು ನಿರ್ಧಾರಕ್ಕೆ ಬಂದಿದ್ದಾರೆ. ಈಗಾಗಲೇ ಅವರು ಡ್ರೆಡ್ಜಿಂಗ್ ಮಾಡುವ ಬಗ್ಗೆ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಅಡೆತಡೆ ಗೋಡೆಯನ್ನು ಸಂಪೂರ್ಣವಾಗಿ ಈ ಸಲ ಮುಗಿಸುವುದಕ್ಕೆ ನಾವು ಬಹಳಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಅದನ್ನು ಮುಗಿಸಿದ ನಂತರವೇ ಡ್ರೆಡ್ಜಿಂಗ್ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಬಳಘಟ್ಟ ಗ್ರಾಮಕ್ಕೆ ಪಶುವೈದ್ಯ ಶಾಲೆಯ ಮಂಜೂರಾತಿ

1728: ಡಾ॥ ಎನ್.ಬಿ. ನಂಜಪ್ಪ (ಶ್ರವಣಬೆಳಗೊಳ):–

ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶ್ರವಣಬೆಳಗೊಳ ತಾಲ್ಲೂಕು ಬಾಗೂರು ಹೋಬಳಿ ಬಳಘಟ್ಟ ಗ್ರಾಮದಲ್ಲಿರುವ ಪಶುವೈದ್ಯ ಶಾಲೆಗೆ ಸ್ವಂತ ಕಟ್ಟಡವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಅಲ್ಲಿಯ ಗ್ರಾಮಸ್ಥರು ಕಟ್ಟಡ ನೀಡಿ ಮಂಜೂರಾತಿಗಾಗಿ ಮನವಿಯನ್ನು ಆಗಿಂದಾಗ್ಗೆ ಸಲ್ಲಿಸುತ್ತಿದ್ದರೂ ಮಂಜೂರಾತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಸದರಿ ಪಶುವೈದ್ಯ ಶಾಲೆಗಾಗಿ ಮಂಜೂರಾತಿ ನೀಡಿ ಖಾಯಂ ವೈದ್ಯರನ್ನು ನೇಮಕ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):–

ಅ) ಇಲ್ಲ.

ಆ) ಹೌದು.

ಇ) 1992-93ನೇ ಸಾಲಿನಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಸ್ಥಳಗಳನ್ನು ಆಯ್ಕೆ ಮಾಡಲಾಗುತ್ತಿದೆ. ಆ ಸಮಯದಲ್ಲಿ ನಿಯಮಗಳನ್ನು ಅನುಸರಿಸಿ ಸದರಿ ಸ್ಥಳಕ್ಕೆ ಮಂಜೂರಾತಿ ನೀಡುವ ವಿಷಯವನ್ನು ಪರಿಶೀಲಿಸಲಾಗುವುದು.

ಡಾ।। ಎನ್.ಬಿ. ನಂಜಪ್ಪ:- ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಬಳಘಟ್ಟ ಗ್ರಾಮದಲ್ಲಿ ಒಂದು ಆಸ್ಪತ್ರೆ ಇದ್ದು ಅದು ಏಳು ವರ್ಷಗಳಿಂದ ನಡೆಯುತ್ತಿದೆ. ಅದಕ್ಕೆ ಗವರ್ನಮೆಂಟ್ ಆರ್ಡರ್ ಕೂಡ ಆಗಿದೆ. ಆ ಹಳ್ಳಿಯಲ್ಲಿ ಅದಕ್ಕೆ ಕಟ್ಟಡ ಕೂಡ ಕಟ್ಟಿಕೊಟ್ಟಿದ್ದಾರೆ. ಆದರೆ ಈಗ ಇರತಕ್ಕಂಥ ಉಪಕರಣಗಳನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಿ ನಿಮ್ಮ ಆಸ್ಪತ್ರೆಯನ್ನು ಮುಚ್ಚಿ ಹಾಕಿಬಿಡುತ್ತೇವೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ಉತ್ತರ ಕೊಡಬೇಕೆಂದು ಮಾನ್ಯ ಪಶುಸಂಗೋಪನಾ ಇಲಾಖೆಯ ರಾಜ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ:- 1992-93ಕ್ಕೆ ನಾವು 194 ಪಶು ಪ್ರಾಥಮಿಕ ಕೇಂದ್ರಗಳನ್ನು ಹಾಗೂ 100ನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ಇವತ್ತು ಆಜ್ಞೆ ಹೊರಡಿಸಲಾಗಿದೆ. ಅದರಲ್ಲಿ ಈ ಬಳಘಟ್ಟ ಗ್ರಾಮವೂ ಸೇರಿದೆ. ನಾಳೆಯಿಂದ ಇದು ಪ್ರಾರಂಭವಾಗುತ್ತದೆ ಎಂದು ತಮಗೆ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ.

ಡಾ।। ಎನ್.ಬಿ. ನಂಜಪ್ಪ:- ನಾನು ಹೊಸದರ ಬಗ್ಗೆ ಕೂಡ ಕೇಳಿದ್ದೇನೆ. ಇದರ ಬಗ್ಗೆ ಕೂಡ ನಾನು ಪತ್ರ ಬರೆದಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ:- ಅದನ್ನು ನೋಡುತ್ತೇನೆ.

ವನ್ಯ ಮೃಗ ಸಂರಕ್ಷಣಾ ವಿಭಾಗಗಳನ್ನು ಸ್ಥಾಪಿಸುವುದರ ಉದ್ದೇಶ ಕುರಿತು

1933: ಶ್ರೀ ಜಿ.ಎಸ್. ಆಚಾರ್ (ಬೈಂದೂರ್):-

ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವನ್ಯ ಮೃಗ ಸಂರಕ್ಷಣಾ ವಿಭಾಗಗಳನ್ನು ಸ್ಥಾಪಿಸುವುದರ ಮೂಲ ಉದ್ದೇಶವೇನು;

ಆ) ಅರಣ್ಯಗಳ ಸಾಮಾನ್ಯ ನಿರ್ವಹಣೆ ಮತ್ತು ಅಭಿವೃದ್ಧಿ ಹಾಗೂ ವನ್ಯ ಮೃಗ ಸಂರಕ್ಷಣೆ ಇವುಗಳಿಗೆ ಪ್ರತ್ಯೇಕ ಅರಣ್ಯ ವಿಭಾಗ ಏರ್ಪಡಿಸದೇ ಒಂದೇ ವಿಭಾಗ ರಚಿಸಿರುವುದರಿಂದ ಆಯಾ ವಿಭಾಗಗಳಲ್ಲಿ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ತೊಂದರೆಯನ್ನು ನಿವಾರಿಸಲು ಕೈಗೊಳ್ಳಲಾಗಿರುವ ಕ್ರಮಗಳೇನು ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):-

ಅ) 1. ರಕ್ಷಿತ ಅರಣ್ಯಗಳಲ್ಲಿ ವನ್ಯ ಜೀವಿಗಳ ಉಸ್ತುವಾರಿಗೆ ಪ್ರಾಶಸ್ತ್ಯ ಕೊಡಲು
2. ಅಭಯಾರಣ್ಯಗಳು ಮತ್ತು ರಾಷ್ಟ್ರೀಯ ಉದ್ಯಾನವನಗಳ ಮೇಲೆ ಪ್ರಾದೇಶಿಕ ಅರಣ್ಯ ವನ್ಯ ಜೀವಿ ಸಿಬ್ಬಂದಿ ಇಬ್ಬರ ದ್ವಿಮುಖ ನಿಯಂತ್ರಣವನ್ನು ತಪ್ಪಿಸುವುದಕ್ಕಾಗಿ
3. ಕೇಂದ್ರ ಸರ್ಕಾರದಿಂದ ಆರ್ಥಿಕ ಸಹಾಯವನ್ನು ಪಡೆಯುವುದಕ್ಕಾಗಿ.

ಆ) ಈ ಬಗ್ಗೆ ಮನವಿಗಳು ಬಂದಿರುತ್ತವೆ.

ಇ) ಈ ವಿಷಯವನ್ನು ಸಮೀಕ್ಷಿಸಲಾಗುತ್ತಿದೆ.

ಶ್ರೀ ಜಿ.ಎಸ್. ಆಚಾರ್:- ವನ್ಯಮೃಗ ಸಂರಕ್ಷಣಾ ವಿಭಾಗವನ್ನು ಸ್ಥಾಪಿಸುವ ಉದ್ದೇಶ ಗೊತ್ತಾಯಿತು. ಆದರೆ ಇದರಲ್ಲಿ ವ್ಯತ್ಯಾಸವಾಗಿದೆ. ನಾನು ಕೇಳಿದ್ದು ಏನೆಂದರೆ, ಅರಣ್ಯಗಳ ಸಾಮಾನ್ಯ ನಿರ್ವಹಣೆ, ಅಭಿವೃದ್ಧಿ ಹಾಗೂ ವನ್ಯಮೃಗಗಳ ಅಭಿವೃದ್ಧಿಗೆ ಬೇರೆ ಬೇರೆ ಡಿವಿಜನ್‌ಗಳನ್ನು ಮಾಡುತ್ತೀರಾ ಅಂತ. ಅದಕ್ಕೆ ಉತ್ತರ ಕೊಟ್ಟಿಲ್ಲ. ಈ ಬಗ್ಗೆ ಮನವಿಗಳು ಬಂದಿರುತ್ತವೆ, ಈ

ವಿಷಯುವನ್ನು ಸಮೀಕ್ಷಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಇವುಗಳು ಒಟ್ಟಿಗೆ ಇರುವುದರಿಂದ ಏನು ತೊಂದರೆಯಾಗಿದೆ ಎಂದರೆ, ಉದಾಹರಣೆಗೆ ಕುಂದಾಪುರ ಡಿವಿಜನ್ ತೆಗೆದುಕೊಂಡರೆ ಅಲ್ಲಿ ಎ.ಸಿ.ಎಫ್. ಇಲ್ಲ. ಕುಂದಾಪುರ – ಉಡುಪಿ ತಾಲ್ಲೂಕಿಗೆ ಹೋಗಬೇಕಾಗುತ್ತದೆ. ಅದೇ ರೀತಿ ಕೊಡಗು ಜಿಲ್ಲೆಯಲ್ಲಿ "ಕುಟ್ಟಾ" ಅಂತ ಒಂದು ಗೇಟ್ ಇದೆ. ಅಲ್ಲಿ ಏನಾದರೂ ತೊಂದರೆಯಾದರೆ ಸೀಜ್ ಮಾಡುವುದಕ್ಕೆ ಅಧಿಕಾರಿ ಇಲ್ಲ. ಮಡಿಕೇರಿಯಿಂದ ಆದೇಶ ಬರಬೇಕಾಗುತ್ತದೆ. ಕೋಟೆ ಬಾಗಿಲು ಮುಚ್ಚುವುದರೊಳಗೆ ರಾಜ್ಯ ಸೂರೆಯಾಗಿ ಹೋಯಿತಂತೆ. ಆ ರೀತಿಯಾಗಿ ಬರುತ್ತದೆ. ಆದ್ದರಿಂದ ವನ್ಯಮೃಗ ಸಂರಕ್ಷಣೆ ಹಾಗೂ ಅಭಯಾರಣ್ಯಗಳು ಒಳ್ಳೆಯ ಉದ್ದೇಶದಿಂದ ರಚಿತವಾದದ್ದು. ಅದಕ್ಕೆ ಪ್ರತ್ಯೇಕವಾದ ಹೈಲಿ ಕ್ವಾಲಿಫೈಡ್ ಅಧಿಕಾರಿಗಳು ಬೇಕು. ಇದನ್ನು ಮಾಡುತ್ತೀರಾ ಹೇಗೆ ? ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಅದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನು ?

ಶ್ರೀ ಎಂ.ಪಿ. ಕೇಶವಮೂರ್ತಿ:– ಮಾನ್ಯ ಅಧ್ಯಕ್ಷರೇ, ಇದುವರೆಗೂ ಕೂಡ ಕರ್ನಾಟಕ ಪ್ರದೇಶದಲ್ಲಿ ಟೆರಿಟೋರಿಯಲ್ ಫಾರೆಸ್ಟ್ ಅಂತ ಒಂದೇ ವಿಭಾಗ ಇತ್ತು. ಆದರೆ ಕೇಂದ್ರ ಸರ್ಕಾರದವರು 1970 ರಿಂದ ಕೂಡ ವನ್ಯಮೃಗ ಮತ್ತು ಸಂರಕ್ಷಣೆಗೆ ಅರಣ್ಯವನ್ನು ಪ್ರತ್ಯೇಕ ಮಾಡಬೇಕೆಂದು ಪದೇ ಪದೇ ಸರ್ಕಾರಕ್ಕೆ ಒತ್ತಾಯ ತರುತ್ತಿದ್ದರು. ಎಲ್ಲ ರಾಜ್ಯಗಳಲ್ಲೂ ಕೂಡ ಇದೇ ರೀತಿಯಾಗಿ ಟೆರಿಟೋರಿಯಲ್ ಫಾರೆಸ್ಟ್ ಮತ್ತು ವೈಲ್ಡ್ ಲೈಫ್ ಫಾರೆಸ್ಟ್ ಅಂತ ಎರಡು ಕಡೆ ಮಾಡಿದ್ದಾರೆ, ಕರ್ನಾಟಕ ಬಿಟ್ಟು, ಬೇರೆ ಕಡೆ ಮಾಡಿದ್ದಾರೆ. ಕರ್ನಾಟಕದಲ್ಲೂ ಕೂಡ ಮಾಡಬೇಕೆಂದು 1992ನೇ ಇಸವಿಯಲ್ಲಿ ನಿರ್ಧಾರ ತೆಗೆದುಕೊಂಡು ಕೆಲವು ಭಾಗಗಳಲ್ಲಿ ಅಂದರೆ ಶಿವಮೊಗ್ಗ ಸರ್ಕಲ್ ಮತ್ತು ಮೈಸೂರು ಸರ್ಕಲ್ ಅಂತ ಎರಡು ಭಾಗ ಮಾಡಿ ಅದಕ್ಕೆ ಸಿ.ಸಿ.ಎಫ್ ವೈಲ್ಡ್ ಲೈಫ್ ಹುದ್ದೆಯನ್ನೂ ಕೂಡ ನಿರ್ಮಾಣ ಮಾಡಿದ್ದೇವೆ. ಇದರ ಮೂಲ ಉದ್ದೇಶ ಏನೆಂದರೆ, ವನ್ಯಧಾಮಗಳ ಮತ್ತು ರಾಷ್ಟ್ರೀಯ ಉದ್ಯಾನಗಳ ಮೇಲೆ ಪ್ರಾದೇಶಿಕ ವನ್ಯಜೀವಿ ಸಿಬ್ಬಂದಿಗಳ ದ್ವಿಮುಖ ನೀತಿಯನ್ನು ತಪ್ಪಿಸುವುದು. ಮತ್ತು ರಚಿತವಾದ ಅರಣ್ಯಗಳಿಗೆ, ವನ್ಯ ಜೀವಿಗಳಿಗೆ ಉಸ್ತುವಾರಿ ಮಾಡತಕ್ಕಂಥಾದ್ದು ಇದರ ಉದ್ದೇಶ. ಕೇಂದ್ರ ಸರ್ಕಾರದಿಂದ ಕೊಡತಕ್ಕ ಆರ್ಥಿಕ ನೆರವನ್ನು ಸದುಪಯೋಗಪಡಿಸಿಕೊಂಡು, ವನ್ಯಜೀವಿಗಳನ್ನು ಹೆಚ್ಚಿಗೆ ಅಭಿವೃದ್ಧಿ ಮಾಡಬೇಕೆಂಬ ಸದುದ್ದೇಶದಿಂದ ಮಾಡಲಾಗಿದೆ. ಈ ಕಾರ್ಯಕ್ರಮದ ಉದ್ದೇಶ ಮುಖ್ಯವಾಗಿ ಆ ಭಾಗದ ಕೆಳಕಂಡ ಜಿಲ್ಲೆಗಳಾದ ಶಿವಮೊಗ್ಗ ನಾರ್ತ್, ಕೆನರಾ, ಕೂರ್ಗ್, ಚಿಕ್ಕಮಗಳೂರು ಜಿಲ್ಲೆಗಳ ಕೆಲವು ಶಾಸಕ ಮಿತ್ರರು ಬಂದು ಇದರಿಂದ ಸ್ವಲ್ಪ ತೊಂದರೆಯಾಗುತ್ತದೆಂದು ತಿಳಿಸಿದ ಪ್ರಕಾರ, ನಾನು ಇದೇ ತಿಂಗಳು 22ನೇ ತಾರೀಖು 4 ಗಂಟೆಗೆ, ಸಂಬಂಧಪಟ್ಟ ಶಾಸಕರ ಸಭೆಯನ್ನು ಕರೆದಿದ್ದೇನೆ. ಇದರ ಬಗ್ಗೆ ನಿರ್ಣಯ ಮಾಡಿದ ನಂತರ, ವನ್ಯ ವಿಭಾಗ ಜೀವಿಗಳ ಅರಣ್ಯ ಮಾಡುವುದರಿಂದ, ಯಾವ ರೈತರಿಗಾಗಲೀ, ಸಾಮಾನ್ಯ ಜನರಿಗಾಗಲೀ, ಯಾವುದೇ ತೊಂದರೆಯಾಗುವುದಿಲ್ಲ. ಈ ವಿಚಾರವನ್ನು ನಾನು ಈಗಾಗಲೇ ಹೇಳಿದ್ದೇನೆ. ಆದರೂ ಕೂಡ ಶಾಸಕರ ಮನಸ್ಸಿನಲ್ಲಿ ಏನೋ ಒಂದು ರೀತಿಯ ಅಭಿಪ್ರಾಯ ಇರುವುದರಿಂದ ಇದಕ್ಕೆ ಸರಿಯಾದ ರೀತಿಯಲ್ಲಿ ಮಾಹಿತಿ ಕೊಟ್ಟು, ತದನಂತರ ಅಂತಿಮ ತೀರ್ಮಾನ ತೆಗೆದುಕೊಂಡು, ಈ ವನ್ಯಜೀವಿಗಳ ಅರಣ್ಯ ಮತ್ತು ಪ್ರಾದೇಶಿಕ ಅರಣ್ಯ ಎಂದು ಎರಡು ಭಾಗಗಳನ್ನು ಮಾಡಿ, ಹೆಚ್ಚಿನ ರೀತಿಯಲ್ಲಿ ಕಾಡನ್ನು ಬೆಳೆಸತಕ್ಕಂಥ ಪ್ರಯತ್ನ ಮಾಡಬೇಕೆಂದು ಸರ್ಕಾರದ ಉದ್ದೇಶ ಇದೆ. ಇದರ ಬಗ್ಗೆ ಯಾರಿಗೂ ತೊಂದರೆಯಾಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ಅಧ್ಯಕ್ಷರೇ, ನಿಜವಾಗಿಯೂ ನನಗೆ ಬಹಳ ಸಂತೋಷವಾಗಿದೆ. ಏಕೆಂದರೆ ಮಾನ್ಯ ಸಚಿವರು ಈ ಸಮಸ್ಯೆಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ನಾನು ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನೂ ಬರೆದಿದ್ದೇನೆ ಮತ್ತು ಫಾರೆಸ್ಟ್ ಆಫೀಸರ್ ಅವರಿಗೂ ಈ ವಿಚಾರವಾಗಿ ಪತ್ರ ಬರೆದಿದ್ದೇನೆ. ಬೆಂಗಳೂರಿನಲ್ಲಿ ಅಧಿಕಾರಿಗಳು ಕುಳಿತು, ನಿಮ್ಮ ಇಲಾಖೆಯನ್ನು

ಹಂಚಿಕೊಳ್ಳುತ್ತಿದ್ದಾರೆ. ನನಗೆ ಇಷ್ಟು, ನಿಮಗೆ ಇಷ್ಟು ಅಂತ. ನಮ್ಮ ಕಡೆ ಇಷ್ಟು ಆರ್‌ಎಫ್ ಒ ಇರಬೇಕು, ನಿಮ್ಮ ಕಡೆ ಇಷ್ಟು ಆರ್ ಎಫ್ ಒ ಇರಬೇಕು ಎಂದು. ಇದು ಬೇರೆ ಬೇರೆ ಕಾರಣಕ್ಕಾಗಿ, ಅದನ್ನೆಲ್ಲಾ ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಅದು ಅನಾವಶ್ಯಕ. ಇವತ್ತು ಏನು ಮುಖ್ಯವಾಗಿ ಆಗಬೇಕು, ಎಲ್ಲಿ ವೈಲ್ಡ್ ಲೈಫ್ ಆಗಬೇಕು, ಅಲ್ಲಿ ಇದನ್ನು ಮಾಡಿ ಮತ್ತು ಇದಕ್ಕೆ ರಕ್ಷಣೆ ಬೇಕು.

ಆದರೆ, ಇದು ಅನಾವಶ್ಯಕ. ಟ್ರಜರಿ ಮೇಲೆ ಬರ್ಡನ್ ಆಗಿಯೇ ಆಗುತ್ತದೆ. ಇದು ಆಗಬಾರದು. ಶಾಸಕರ ಸಭೆ ಕರೆದಿದ್ದೀರಿ, ನಾನು ಅದನ್ನು ಸ್ವಾಗತ ಮಾಡುತ್ತೇನೆ. ಎರಡನೆಯದು, ಇಲ್ಲಿ ಸಾಮಾನ್ಯ ಜನರಿಗೆ ಅನಾನುಕೂಲವಾಗುತ್ತದೆ. ನಮ್ಮ ಜಿಲ್ಲೆಯ ಬಗ್ಗೆ ಇವತ್ತು ಪ್ರಭಾಕರ ರಾಣೆಯವರು ಹೇಳಬಹುದು. ಅವರ ಕ್ಷೇತ್ರದಲ್ಲಿ, ಸೂಪಾ ತಾಲ್ಲೂಕಿನಲ್ಲಿ, ಕೆಲವು ಚೀಫ್ ಇಂಜಿನಿಯರ್ಸ್ ಏರಿಯಾ ಇದೆ. ಈಗ ಅದೇನೂ ಉಳಿದಿಲ್ಲ. ಆದರೆ, ಅಲ್ಲಿಯ ಜನರು ಸುಮಾರು 25–30 ವರ್ಷಗಳಿಂದ ಅಲ್ಲಿನ ಲ್ಯಾಂಡನ್ನು ಉಳುಮೆ ಮಾಡುತ್ತಾ ಬಂದಿದ್ದಾರೆ. ಅಲ್ಲಿ, ವೈಲ್ಡ್ ಲೈಫ್ ಎಂದು ಹೇಳಿದರೆ, ಅವರು ಎಲ್ಲಿ ಹೋಗಬೇಕು. ಈ ಎಲ್ಲಾ ಸನ್ನಿವೇಶವನ್ನೂ ಗಂಭೀರವಾಗಿ ಪರಿಶೀಲಿಸಬೇಕು. ಏಕೆಂದರೆ ಅಧಿಕಾರಿಗಳು ಹೇಳುತ್ತಾರೆಂದು ಅದರ ಮೇಲೆ ಡಿಪೆಂಡ್ ಆಗುವುದಕ್ಕಾಗುವುದಿಲ್ಲ. ತಾವು ಸಭೆ ಕರೆಯುತ್ತಿದ್ದೀರಿ, ನಾವೂ ಆ ಸಭೆಗೆ ಬರುತ್ತೇವೆ; ನಮ್ಮ ಸಲಹೆಯನ್ನೂ ಕೊಡುತ್ತೇವೆ. ತಾವು ಬಹಳ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ, ಸಾಮಾನ್ಯ ಜನರಿಗೆ ಅನಾನುಕೂಲವಾಗುತ್ತದೆ, ಇದು ಆಗಬಾರದು. ಈ ದೃಷ್ಟಿಯಿಂದ ಕ್ರಮ ತೆಗೆದುಕೊಳ್ಳಬೇಕೆಂದು ತಮಗೆ ಒತ್ತಾಯ ಮಾಡುತ್ತಿದ್ದೇನೆ.

ಶಾಲೆಗಳಲ್ಲಿ ತರಗತಿ ಶುಲ್ಕದ ನಿಗದಿ

2053: ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):–

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ಸರ್ಕಾರಿ ಹಾಗೂ ಖಾಸಗಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿನ ತರಗತಿಗಳ ಶುಲ್ಕವನ್ನೇನಾದರೂ ನಿಗದಿಪಡಿಸಿರುವರೇ; ಹಾಗಿದ್ದಲ್ಲಿ, ವಿಧಿಸಲಾಗಿರುವ ಶುಲ್ಕದ ವಿವರಗಳನ್ನು ನೀಡುವುದು (ನರ್ಸರಿ ಹಂತದಿಂದ ಮೆಟ್ರಿಕ್ ಪರೀಕ್ಷೆವರೆಗೆ ತಿಳಿಸುವುದು);

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು;

ಇ) ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿ ಬಿಲ್ಡಿಂಗ್ ಫಂಡ್, ವೆಲ್ಫೇರ್ ಫಂಡ್ ಹಾಗೂ ಇತ್ಯಾದಿ ರೂಪದಲ್ಲಿ 5000 ರೂ.ಗಳಿಗಿಂತ ಹೆಚ್ಚಿಗೂ ಹಣವನ್ನು ಪ್ರವೇಶದ ಸಮಯದಲ್ಲಿ ವಿಧಿಸುತ್ತಿರುವುದು ಕಾನೂನಿನಲ್ಲಿ ಅವಕಾಶವಿದೆಯೆ;

ಈ) ಇಲ್ಲದಿದ್ದಲ್ಲಿ, ಸರ್ಕಾರವು ಅಂತಹ ಶಿಕ್ಷಣ ಸಂಸ್ಥೆಗಳ ವಿರುದ್ಧ ಯಾವ ಕ್ರಮವನ್ನು ಕೈಗೊಳ್ಳುವುದು ?

ಡಾ॥ ಹೆಚ್.ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):–

ಅ) ಸರ್ಕಾರದ ಮತ್ತು ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಉಚಿತ ಶಿಕ್ಷಣ ನೀಡಲಾಗುತ್ತಿದ್ದು ಯಾವುದೇ ಭೋದನಾ ಶುಲ್ಕ ವಿಧಿಸುತ್ತಿಲ್ಲ. ಆದರೆ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಕ್ರೀಡಾ ಶುಲ್ಕ ವರ್ಷಕ್ಕೆ 4 ರೂ.ನಂತೆ ಮತ್ತು ವಾಚನಾಲಯ ಶುಲ್ಕ ವರ್ಷಕ್ಕೆ 2 ರೂ.ನಂತೆ, 5 ರಿಂದ 7ನೇ ತರಗತಿಯುವರೆಗೆ ವಸೂಲಿ ಮಾಡಲಾಗುವುದು. ವೈದ್ಯಕೀಯ ವೆಚ್ಚವನ್ನು ಒಂದರಿಂದ ಏಳನೇ

ತರಗತಿಯವರೆಗೆ 1 ರೂ.ನಂತೆ ವೈದ್ಯಕೀಯ ಯೋಜನೆಯನ್ನು ಅಳವಡಿಸಿಕೊಂಡಿರುವ ಶಾಲೆಗಳಲ್ಲಿ ಮಾತ್ರ ವಸೂಲು ಮಾಡಲಾಗುವುದು. ಇದಲ್ಲದೆ ರೂ.1 ರಂತೆ 5 ರಿಂದ 7ನೇ ತರಗತಿಯಲ್ಲಿ ಶ್ರವಣ ವೀಕ್ಷಣಸಾಧನ ಶುಲ್ಕವನ್ನು ಸಹ ವಸೂಲು ಮಾಡಲಾಗುವುದು. ಅನುದಾನ ರಹಿತ ಶಾಲೆಗಳಲ್ಲಿ ಶುಲ್ಕ ದರ ನಿಗದಿಪಡಿಸಿಲ್ಲ.

ಆ) ಅನುದಾನರಹಿತ ಶಾಲೆಗಳಲ್ಲಿ ಶುಲ್ಕದರ ನಿಗದಿಪಡಿಸುವ ವಿಚಾರದ ಬಗ್ಗೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ) ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ.

ಈ) ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ವಸೂಲಿ ಮಾಡಬೇಕಾದ ಶುಲ್ಕ ನಿಗದಿ ಬಗ್ಗೆ ಶಿಕ್ಷಣ ತಜ್ಞ, ಅಧಿಕಾರಿ ಮತ್ತು ಆಡಳಿತ ಮಂಡಳಿಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ, ತಜ್ಞರ ಸಮಿತಿಯ ವರದಿ ಸರ್ಕಾರಕ್ಕೆ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಎಂ. ರೇವಣ್ಣ:- ಸನ್ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರವಾಗಿ ಪ್ರಾಥಮಿಕ ಹಂತದಲ್ಲಿ, ಶುಲ್ಕವನ್ನು ವಿಧಿಸುತ್ತಾ ಇಲ್ಲ, ಆದರೆ, ಬೋಧನಾ ಶುಲ್ಕ ಇಲ್ಲದಿದ್ದರೂ ಕ್ರೀಡೆ ಮತ್ತು ಇನ್ನಿತರ ಶುಲ್ಕವನ್ನು ಅನುದಾನದ ಮತ್ತು ಸರ್ಕಾರಿ ಶಾಲೆಗಳಲ್ಲಿ 8 ರೂಪಾಯಿ ವಿಧಿಸುತ್ತಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಆದರೆ, ಇವತ್ತು ಅನುದಾನರಹಿತ ಶಾಲೆಯ ಪರಿಸ್ಥಿತಿ ನೋಡಿದರೆ, ಅವರು ಏನೊಂದು ಮೊತ್ತವನ್ನು ಹಾಕುತ್ತಾರೆಂದು ಗೊತ್ತಾಗುತ್ತದೆ. ಅಲ್ಲಿ ಒಂದು ಮಗುವನ್ನು ಶಾಲೆಗೆ ಸೇರಿಸಬೇಕಾದರೆ, ಕನಿಷ್ಠ 10 ಸಾವಿರ ರೂಪಾಯಿಗಳ ನಿಗದಿತ ಶುಲ್ಕವನ್ನು ವಸೂಲ್ಮಾಡುತ್ತಿದ್ದಾರೆ. ಅಲ್ಲದೆ ಬಿಲ್ಡಿಂಗ್ ಫಂಡ್ ಎಂದು 5 ಸಾವಿರ ಕೊಟ್ಟರೆ ಮಾತ್ರ ಸೀಟು ಕೊಡುತ್ತಾರೆ. ಈ ಮಾತನ್ನು ಬೆಂಗಳೂರಿನ ಎಲ್ಲಾ ಅನುದಾನರಹಿತ ಶಾಲೆಗಳಲ್ಲಿ ಕೇಳುತ್ತಿದ್ದೇವೆ. ಈ ಶಾಲೆಗಳವರು ರಕ್ತ ಹೀರುತ್ತಿದ್ದಾರೆ. ಇವತ್ತು ಸುಪ್ರೀಂಕೋರ್ಟಿನ ತೀರ್ಪಿನ ಪ್ರಕಾರ ಉನ್ನತ ಶಿಕ್ಷಣಕ್ಕೆ ಅಂದರೆ, ವೈದ್ಯಕೀಯ, ಇಂಜಿನಿಯರಿಂಗ್ ಶಿಕ್ಷಣಕ್ಕೆ, ಕ್ಯಾಪಿಟೇಷನ್ ಫೀ ಕೊಡಬಾರದೆಂದು ತೀರ್ಮಾನವಾಗಿದೆ. ಅದೇ ರೀತಿ, ಇದಕ್ಕೂ ಕೂಡ ಒಂದು ಸಮಿತಿ ರಚಿಸಿ, ಇವರನ್ನೂ ಸುಪ್ರೀಂಕೋರ್ಟಿನ ತೀರ್ಪಿಗೂ ಒಳಪಡಿಸಿ, ಶಿಕ್ಷಣದಲ್ಲಿ ಮಾರ್ಪಾಡು ಮಾಡಬೇಕೆಂದು ಕೇಳಿದ್ದೇನೆ. ಇದನ್ನು ಪರಿಶೀಲಿಸುತ್ತೇವೆಂದು ಹೇಳುತ್ತಿದ್ದಾರೆ. ಇವತ್ತು ಇದಕ್ಕೆ ಒಂದು ಸಮಿತಿ ಮಾಡಲೇಬೇಕು. ಇವರು ರೋಸ್ಟರ್ ಸಿಸ್ಟಂನ್ನೂ ಸರಿಯಾಗಿ ಅನುಸರಿಸುತ್ತಾ ಇಲ್ಲ. ಇದರಿಂದ ತೊಂದರೆಯಾಗುತ್ತಿದೆ. ಇದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆಂದು ಕೇಳುತ್ತೇನೆ.

ಡಾ॥ ಹೆಚ್.ಡಿ. ಲಮಾಣಿ:- ಮಾನ್ಯ ಅಧ್ಯಕ್ಷರೇ, ಈ ಅನುದಾನ ರಹಿತ ಶಾಲೆಗಳಲ್ಲಿ ನಮ್ಮ ಮಾನ್ಯ ಸದಸ್ಯರು ಹೇಳಿದ ಹಾಗೆ ರಕ್ತ ಹೀರುತ್ತಿರುವುದು ನಿಜ. ಅವರು ಹೇಳಿದ ಹಾಗೆ ಇದು ಏನಾಗಿದೆ. ಅಂದರೆ, ವಿದ್ಯಾರ್ಥಿಗಳಿಂದ, ಪಾಲಕರಿಂದ ಇಂತಹ ಬಹಳಷ್ಟು ಶಾಲೆಗಳಲ್ಲಿ ಹಣ ಕೇಳುತ್ತಿರುವುದು ತಿಳಿದು ಬಂದಿದ್ದರಿಂದ ಇದನ್ನು ತಡೆಗಟ್ಟಲು ಸಾಧ್ಯವಾದ ಮಟ್ಟಿಗೆ ಬೇರೆ ರೀತಿಯಲ್ಲಿ ಅನುದಾನಿತ ಸಂಸ್ಥೆಗಳಲ್ಲಿ ಯಾವ ರೀತಿಯಾಗಿ ಶುಲ್ಕದ ಪ್ಯಾಟ್ರನ್ ಇದೆ, ಅದೇ ರೀತಿಯಲ್ಲಿ ಮಾಡಬೇಕು ಅಂತ ತಿಳಿದುಕೊಂಡು ದಿನಾಂಕ 15-5-85ರಲ್ಲಿ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಲಾಯಿತು. ಆ ಆಜ್ಞೆಯನ್ನು ಹೊರಡಿಸಿದ ನಂತರ ಈ ಸಂಸ್ಥೆಗಳವರು ಮತ್ತೆ ಶಿಕ್ಷಣ ತಜ್ಞರು ಮತ್ತು ಬೇರೆ ಬೇರೆ ಜನರು ಕೂಡಿಕೊಂಡು ಹೈಕೋರ್ಟಿಗೆ ಹೋದರು. ಹೈಕೋರ್ಟಿಗೆ ಹೋಗಿ ಅಲ್ಲಿಂದ ನಮ್ಮ ಆಜ್ಞೆಗೆ ತಡೆಯಾಜ್ಞೆ ತಂದರು. ತಡೆಯಾಜ್ಞೆ ತಂದ ನಂತರ ಆಗ ಸರ್ಕಾರಕ್ಕೆ ಬೇರೆ ಮಾರ್ಗ ಇಲ್ಲದೆ ಆ ಆಜ್ಞೆಯನ್ನು ಜಾರಿಗೊಳಿಸಲು ಆಗಲಿಲ್ಲ. ಆಗ ಹೈಕೋರ್ಟಿಗೆ ಸರ್ಕಾರದವರು ಮುಚ್ಚಳಿಕೆಯನ್ನು ಬರೆದು ಕೊಡಬೇಕಾಗಿ ಬಂತು. ನಮಗೆ ಅವರು ಒಂದು ಡೈರೆಕ್ಷನ್ ಕೊಟ್ಟರು. ಈ ರೀತಿಯಲ್ಲಿ ಶಿಕ್ಷಣ

ಸಂಸ್ಥೆಯವರು ಹಣ ಮಾಡುತ್ತಿದ್ದಾರೆ ಇದನ್ನು ತಡೆಗಟ್ಟುವುದಕ್ಕೆ ಬೇರೆ ಯಾವುದಾದರೊಂದು ಮಾರ್ಗ ನೋಡಬೇಕು, ಆ ದೃಷ್ಟಿಯಿಂದ ತಾವು ಒಂದು ಸಮಿತಿ ರಚನೆ ಮಾಡಿ ಆ ಸಮಿತಿ ನಿರ್ದೇಶನದ ಮೂಲಕ ಕಾರ್ಯಕ್ರಮವನ್ನು ಹಾಕಿಕೊಳ್ಳಬಹುದು ಅಂತ ನಮ್ಮ ಹೈಕೋರ್ಟಿನವರು ಡೈರೆಕ್ಷನ್ ಕೊಟ್ಟರು. ಅವರು ಕೊಟ್ಟ ಡೈರೆಕ್ಷನ್ ಪ್ರಕಾರ 16-3-92ರಲ್ಲಿ ಏನು ರಿಟ್ ಹಾಕಿದ್ದರ ಬಗ್ಗೆ ಸ್ಟೇ ಕೊಟ್ಟಿದ್ದರು ಅದನ್ನು ಕಿತ್ತು ಹಾಕಿದರು. ಅನಂತರ ನಾವು ಸಮಿತಿ ರಚಿಸಿದ್ದು. ಆ ಸಮಿತಿ ಕೊಟ್ಟ ವರದಿಯ ಪ್ರಕಾರ ನಾವು ಒಂದು ನಿರ್ಣಯ ತೆಗೆದುಕೊಂಡು ಆ ಆಜ್ಞೆಯನ್ನು ಜಾರಿ ಮಾಡುವುದಕ್ಕೆ ಮತ್ತೆ ಪ್ರಯತ್ನ ಮಾಡಿದೆವು. ಮತ್ತೆ ಅವರು ಕೋರ್ಟಿಗೆ ಹೋಗಿ ಸ್ಟೇ ತಂದರು. ಮತ್ತೆ ಸಮಿತಿ ರಚಿಸಬೇಕಾಗಿದೆ. ಆ ಸಮಿತಿ ನಿರ್ಣಯವನ್ನು ನಾವು ಹೈಕೋರ್ಟಿಗೂ ಕೊಡಬೇಕಾಗುತ್ತದೆ ಮತ್ತು ಹೈಕೋರ್ಟ್ ಒಪ್ಪಿದ ಮೇಲೆ ಜಾರಿಗೊಳಿಸತತಕ್ಕಂಥ ವ್ಯವಸ್ಥೆ ಮಾಡಬೇಕಾಗುತ್ತದೆ. ಆದ್ದರಿಂದ ಈ ಅನುದಾನ ರಹಿತ ಸಂಸ್ಥೆಗಳು ಬಹಳ ಜನರಿಂದ ಏನು ಹಣವನ್ನು ಕೀಳುತ್ತಿವೆ ಇದನ್ನು ತಡೆಗಟ್ಟುವುದಕ್ಕೆ ಸರ್ಕಾರದಿಂದ ಸಾಕಷ್ಟು ಪ್ರಯತ್ನ ನಡೆದಿದೆ. ಮುಂಬರುವ ದಿವಸಗಳಲ್ಲಿ ಸಮಿತಿ ರಚಿಸಿ ಅವರಿಂದ ಒಂದು ನಿರ್ಣಯ ಪಡೆದು ಆ ನಿರ್ಣಯದಂತೆ ನಾವು ಶುಲ್ಕವನ್ನು ವಿಧಿಸತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡು ಸರಿಯಾಗಿ ಇದನ್ನು ಕೊಂಡೊಯ್ಯುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್.ಎಂ. ರೇವಣ್ಣ:- ಮಾನ್ಯ ಅಧ್ಯಕ್ಷರೇ, ನನಗೆ ಸ್ಪಷ್ಟವಾದ ಉತ್ತರ ಬರಲಿಲ್ಲ. ಇವತ್ತು ಉನ್ನತ ಶಿಕ್ಷಣಕ್ಕೆ ಎಷ್ಟು ಆದ್ಯತೆ ಕೊಟ್ಟಿದ್ದೇವೆ ಅಷ್ಟೇ ಆದ್ಯತೆ ಪ್ರಾಥಮಿಕ ಹಂತದ ಶಿಕ್ಷಣಕ್ಕೆ ಮೊದಲು ನಾವು ಕೊಡಬೇಕಾಗುತ್ತದೆ. ತಾವು 1985ನೇ ಇಸವಿಯಲ್ಲಿ ಕೋರ್ಟಿನಿಂದ ತಡೆಯಾಜ್ಞೆ ತಂದಿದ್ದಾರೆ ಅಂತ ಹೇಳಿದಿರಿ. ನಾವು ಈಗ 1993ನೇ ಇಸವಿಯಲ್ಲಿದ್ದೇವೆ. ಇಷ್ಟು ವರ್ಷಗಳಾದರೂ ಇದರ ಬಗ್ಗೆ ಕಾಳಜಿ ವಹಿಸದೆ ಕೆಳ ಹಂತದ ಶಿಕ್ಷಣಕ್ಕೆ ತಾವು ಗುರುತರವಾದ ಹೊಣೆ ವಹಿಸದಿದ್ದರೆ ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ. ಇವತ್ತು ಕೂಡ ತಾವು ನೋಡುತ್ತಿದ್ದೇವೆ, ಮಾಡುತ್ತಿದ್ದೇವೆ ಎನ್ನತಕ್ಕಂಥ ಉತ್ತರ ಕೊಟ್ಟರೆ ಹೇಗೆ ? ಸಮಿತಿ ರಚನೆ ಮಾಡುವುದು ಕಷ್ಟವೇನೂ ಅಲ್ಲ. ಸುಪ್ರೀಂ ಕೋರ್ಟಿನಿಂದ ಆರ್ಡರ್ ಬಂದ ತಕ್ಷಣ ಉನ್ನತ ಶಿಕ್ಷಣಕ್ಕೆ ಅಂದರೆ ವೈದ್ಯಕೀಯ ಮತ್ತು ಇಂಜನೀಯರಿಂಗ್‌ಗೆ ಹೇಗೆ ಸಮಿತಿ ಮಾಡಿದ್ದೀರಿ. ಅದೇ ರೀತಿ ಇದಕ್ಕೂ ಒಂದು ಸಮಿತಿ ಮಾಡುವುದಕ್ಕೆ ತೊಂದರೆ ಏನು ? ಈಗ ಸಮಿತಿಯನ್ನು ಅನೌನ್ಸ್ ಮಾಡುವಂಥ ತಾರೀಖು ಕೊಡಬೇಕು, ಜೊತೆಗೆ ಬಿಲ್ಡಿಂಗ್ ಫಂಡ್ ಕೊಡದಿದ್ದರೆ ನಿಮಗೆ ಸೀಟು ಕೊಡುವುದಿಲ್ಲ ಎನ್ನತಕ್ಕಂಥ ನೋಟೀಸ್ ಅನ್ನು ಅವರು ವಿದ್ಯಾರ್ಥಿಗಳಿಗೆ ಕೊಡುತ್ತಿದ್ದಾರೆ. ಬಿಲ್ಡಿಂಗ್ ಫಂಡ್ ಕೊಟ್ಟರೆ ಮಾತ್ರ ಸೇರಿಸಿಕೊಳ್ಳುತ್ತೇವೆ ಅಂತ ಹೇಳುತ್ತಿದ್ದಾರೆ. ಇವರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡು ಇದನ್ನು ಅವರು ಕಡ್ಡಾಯ ಮಾಡಿದರೆ ನಿಜವಾಗಿಯೂ ಯಾವ ಮಕ್ಕಳೂ ಓದುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಸರಿಯಾದ ಉತ್ತರ ಕೊಡಬೇಕು.

ಡಾ॥ ಹೆಚ್.ಡಿ. ಲಮಾಣಿ:- ಕೋರ್ಟಿನಲ್ಲಿ ಕೇಸ್ ಇರುವುದರಿಂದ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ. ಸಮಿತಿ ರಚಿಸುವುದು ನಮ್ಮ ಕೈಯಲ್ಲಿದೆ, ಆದ್ದರಿಂದ ಇನ್ನು ಒಂದು ವಾರ ಅಥವಾ ಹದಿನೈದು ದಿವಸಗಳಲ್ಲಿ ಸಮಿತಿ ರಚಿಸುತ್ತೇವೆ. ಅವರಿಗೆ ಇಂತಿಷ್ಟು ಸಮಯ ಅಂತ ಕೊಟ್ಟು ಆ ಸಮಯದಲ್ಲಿ ರಿಪೋರ್ಟ್ ಕೊಡುವುದಕ್ಕೆ ಹೇಳಿ ಆ ರಿಪೋರ್ಟ್ ಪಡೆದು ಅದರಂತೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸೂಕ್ತ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ

418 (2123): ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):-

ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಇದರಿಂದ ವೈದ್ಯರು ರೋಗಿಗಳಿಗೆ ಚೀಟಿ ಕೊಟ್ಟು ಹೊರಗಿನಿಂದ ಔಷಧಿ ತರಿಸುವುದರಿಂದ ಬಡವರಿಗೆ ತೊಂದರೆಯಾಗುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ;

ಇ) ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ಬಂದಿದೆ.

ಆ) ಗೊತ್ತಿದೆ.

ಇ) ಕಳೆದ ವರ್ಷದ ಆಯವ್ಯಯ ಅವಕಾಶಕ್ಕಿಂತ ಶೇ. 50 ರಷ್ಟು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಆಸ್ಪತ್ರೆಗಳಿಗೆ ಅಗತ್ಯವಿರುವ ಔಷಧಿಗಳ ಪ್ರಮಾಣವನ್ನು ಗುರುತಿಸುವ ಬಗ್ಗೆ ಪರಿಶೀಲಿಸಲು ಸರ್ಕಾರವು ಸಮಿತಿಯನ್ನು ರಚಿಸಲಾಗಿದೆ. ಮತ್ತು ಆ ಸಮತಿಯ ವರದಿಯನ್ನು ನಿರೀಕ್ಷಿಸಲಾಗಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ, ಬಂದಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಇದರಿಂದ ಬಡವರಿಗೆ ತೊಂದರೆಯಾಗುತ್ತಿದೆ ಎಂದು ಸಹಾ ಹೇಳಿದ್ದಾರೆ. ಆದರೆ ಇಲ್ಲಿ ಪ್ರಶ್ನೆ ಇರುವಂಥಾದ್ದು ಸರ್ಕಾರಿ ಆಸ್ಪತ್ರೆಯ ಅಗತ್ಯ ಏನು ? ಗ್ರಾಮಾಂತರ ಪ್ರದೇಶದ ಬಡವರಿಗೆ ಅನುಕೂಲವಾಗದಿದ್ದ ಮೇಲೆ ಅದರ ಅಗತ್ಯ ಏನು ? ಅಲ್ಲಿ ಔಷಧಗಳು ಇಲ್ಲ. ಅಲ್ಲಿ ಔಷಧ ಇಲ್ಲವೆಂದು ಹೇಳಿ ಬೇರೆ ಮದ್ದನ್ನು ಕೊಡುತ್ತಾರೆ. ಇದರಿಂದ ರೋಗ ಗುಣವಾಗುವುದಿಲ್ಲ. ಅಲ್ಲಿಗೆ ಬೇಕಾಗುವಷ್ಟು ಔಷಧವನ್ನು ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಕಳೆದ ವರ್ಷಕ್ಕಿಂತ 50 ಪರ್ಸೆಂಟ್ ಜಾಸ್ತಿ ಮಾಡುತ್ತೇವೆಂದು ಹೇಳಿದ್ದೀರಾ. ಔಷಧ ಕೊಡದೆ ಬ್ಯಾಂಡೇಜ್ ಸಾಮಾನುಗಳು ಇಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಅಲ್ಲಿಗೆ ಎಷ್ಟು ಔಷಧಿ ಬೇಕೋ ಅಷ್ಟನ್ನು ಕೊಡಲಿಕ್ಕೆ ನೀವು ಕ್ರಮ ತೆಗೆದುಕೊಳ್ಳುತ್ತೀರಾ ? ಇದಕ್ಕೆ ನನಗೆ ಸರಿಯಾದ ಉತ್ತರ ಬೇಕಾಗಿದೆ.

ಶ್ರೀ ಬ್ಲೆಸಿಯಸ್ ಎಂ. ಡಿಸೋಜ (ಮುಖ್ಯಮಂತ್ರಿಗಳ ಪರವಾಗಿ):– ಸನ್ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದ್ದ ಹಾಗೆ ಈ ಔಷಧಿಗಳ ಬೆಲೆ ಬಹಳ ಜಾಸ್ತಿಯಾಗಿದೆ. ಹೋದ ವರ್ಷದ ಬಜೆಟ್‌ನಲ್ಲಿ 20 ಕೋಟಿ ರೂಪಾಯಿ ಔಷಧಿಯನ್ನು ಪರ್ಚೇಸ್ ಮಾಡಲಿಕ್ಕೆ ಅವಕಾಶ ಇತ್ತು. ಈ ವರ್ಷ 50ಪರ್ಸೆಂಟ್ ಜಾಸ್ತಿ ಮಾಡಿರುವುದರಿಂದ ಈ ವರ್ಷ 30 ಕೋಟಿ ರೂಪಾಯಿ ಔಷಧಿ ಪರ್ಚೇಸ್ ಮಾಡಲಿಕ್ಕೆ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿದ್ದಾರೆ. ಸನ್ಮಾನ್ಯ ರುಕ್ಮಯ್ಯ ಪೂಜಾರಿಯವರು ಹೇಳಿದ ಹಾಗೆ, ಎಲ್ಲಾ ಕಡೆ ಬೇಕಾದ ಔಷಧಗಳು ಸಿಗುವುದಿಲ್ಲ. ಎಲ್ಲಾ ಕಡೆ ಒಂದೇ ತರಹದ ರೋಗ ಇರುವುದಿಲ್ಲ. ಅದಕ್ಕೆ ಈ ಸಲ ಡೈರೆಕ್ಟರ್ ಆಫ್ ಹೆಲ್ತ್ ಸರ್ವೀಸಸ್ ಇವರ ಛೇರ್ಮನ್‌ಷಿಪ್‌ನಲ್ಲಿ ಒಂದು ಕಮಿಟಿ ಮಾಡಿ ಯಾವ ಆಸ್ಪತ್ರೆಗೆ ಯಾವ ತರಹದ ಔಷಧಿ ಬೇಕೆಂದು ಪರಿಶೀಲನೆ ಮಾಡುತ್ತಾರೆ. ಅಲ್ಲಿಂದ ರಿಪೋರ್ಟ್ ಬಂದ ಕೂಡಲೇ ಯಾವ ಆಸ್ಪತ್ರೆಗೆ ಯಾವ ಔಷಧಿ ಬೇಕೋ ಅದನ್ನು ನಮ್ಮ ಡಿಪಾರ್ಟ್‌ಮೆಂಟಿನವರು ಒದಗಿಸುತ್ತಾರೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಆಸ್ಪತ್ರೆಗಳಲ್ಲಿ ಔಷಧಿಗಳು ಇಲ್ಲವೆಂದು ರೋಗಿಗಳಿಗೆ ಚೀಟಿ ಕೊಡುತಾರೆ. ರೋಗಿಗಳು [illegible]

ಹಣವನ್ನು ನೀವು ಪಾವತಿ ಮಾಡುತ್ತೀರಾ ? ನಿಮ್ಮಲ್ಲಿ ಔಷಧ ಇಲ್ಲವೆಂದು ಅವರು ಅಂಗಡಿಯಿಂದ ತರುತ್ತಾರೆ. ಅಂಗಡಿಯಿಂದ ತರುವುದಕ್ಕೆ ಅವರ ಹತ್ತಿರ ಹಣ ಇರುವುದಿಲ್ಲ. ಈ ಬಿಲ್‌ಗೆ ಹಣ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬ್ಲೆಸಿಯಸ್ ಎಂ. ಡಿಸೋಜ:– ಸನ್ಮಾನ್ಯ ಅಧ್ಯಕ್ಷರೆ, ಬಹಳಷ್ಟು ಔಷಧಿಗಳು ನಮ್ಮ ಆಸ್ಪತ್ರೆಯಲ್ಲಿ ಇವೆ. ಕೆಲವು ಸಂದರ್ಭಗಳಲ್ಲಿ ಕೆಲವು ಔಷಧಿಗಳು ಬೇಗನೆ ಖಾಲಿಯಾಗಿ ಬಿಡುತ್ತವೆ. ಅಂಥ ಸಮಯದಲ್ಲಿ ಮಾತ್ರ ಡಾಕ್ಟರ್‌ರವರು ಆ ಚೀಟಿಯನ್ನು ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇಡೀ ರಾಜ್ಯದಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲ ಎನ್ನುವ ಪ್ರಶ್ನೆ ಇದೆ. ಈಗ ತಾವು ಮಾರ್ಚ್ ಒಳಗೆ ಔಷಧಿಗಳನ್ನು ಸರಬರಾಜು ಮಾಡಬೇಕಾಗಿತ್ತು ? ಕಳೆದ 3 ತಿಂಗಳಿನಿಂದ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಮತ್ತು ಪಿಹೆಚ್‌ಸಿ ಗಳಿಗೆ ಔಷಧಗಳನ್ನು ಸರಬರಾಜೇ ಮಾಡಿಲ್ಲ. ಇದರಿಂದ ಅಲ್ಲಿಗೆ ಬರುವಂಥ ರೋಗಿಗಳಿಗೆ ತುಂಬಾ ತೊಂದರೆಯಾಗಿದೆ. ರೋಗಿಗಳ ಸಂಖ್ಯೆಯೂ ಜಾಸ್ತಿಯಾಗಿದೆ. ಈ ಪರಿಸ್ಥಿತಿಯಲ್ಲಿ ನಾನು ನಿಮ್ಮನ್ನು ವಿನಂತಿ ಮಾಡುವುದು, ನೀವು ಔಷಧಿಗಳನ್ನು ಬಿಡುಗಡೆ ಮಾಡಿದ್ದೀರಾ ? ಎರಡನೆಯದು ತಾವು 30 ಕೋಟಿ ರೂಪಾಯಿ ಔಷಧಿಗಳನ್ನು ಖರೀದಿ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ ಪಿಹೆಚ್‌ಸಿಗೆ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗೆ ಎಷ್ಟು ಸಾವಿರ ಔಷಧಿಗಳನ್ನು ಕೊಡುತ್ತಿದ್ದೀರಿ ? ಈಗ ಎಷ್ಟು ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ ?

ಶ್ರೀ ಬ್ಲೆಸಿಯಸ್ ಎಂ. ಡಿಸೋಜ:– ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ 30 ಸಾವಿರದಷ್ಟು ಔಷಧಿಗಳನ್ನು ಕೊಡುತ್ತಿದ್ದೆವು ಇನ್ನು ಮುಂದೆ ಅವುಗಳಿಗೆ 50 ಪರ್ಸೆಂಟ್‌ನಷ್ಟು ಹೆಚ್ಚು ಔಷಧಿಗಳನ್ನು ಒದಗಿಸಲಾಗುವುದು.

ಅಧ್ಯಕ್ಷರು:– ಶ್ರೀಮತಿ ಮೋಟಮ್ಮನವರ ಪ್ರಶ್ನೆಯನ್ನು ಅವರ ಪರವಾಗಿ ಶ್ರೀ ರಾಜೂಗೌಡರು ಕೇಳಬಹುದು.

ಮೂಡಿಗೆರೆ ತಾಲ್ಲೂಕಿನ ಜಾವಳಿಗೆ ಆರೋಗ್ಯ ಕೇಂದ್ರ ಮಂಜೂರಾತಿ

2136: ಶ್ರೀಮತಿ ಮೋಟಮ್ಮ (ಮೂಡಿಗೆರೆ):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಿಗೆರೆ ತಾಲ್ಲೂಕಿನ ಜಾವಳಿಗೆ ಆರೋಗ್ಯ ಕೇಂದ್ರ ಮಂಜೂರಾಗಿದ್ದು ಯಾವಾಗ;

ಆ) ಇಲ್ಲಿಯ ತನಕ ಸರಿಯಾದ ಸಿಬ್ಬಂದಿ (ಡಾಕ್ಟರ್, ನರ್ಸ್) ವಾಹನ, ಕೋಲ್ಡ್ ಸ್ಟೋರೇಜ್ ಪೀಠೋಪಕರಣಗಳು, ಹಾಸಿಗೆ, ಸರಿಯಾದ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಬಗ್ಗೆ ಸರ್ಕಾರವು ಗಮನ ಹರಿಸದಿರಲು ಕಾರಣವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯು 158 ಸಿಜಿಎಂ 89, ದಿನಾಂಕ: 31-3-91ರಲ್ಲಿ ಪ್ರಾಥಮಿಕ ಆರೋಗ್ಯ ಘಟಕವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ಆ) ಬಂದಿದೆ. ವೈದ್ಯರ ಹುದ್ದೆ ಖಾಲಿ ಇದ್ದು, ಗುತ್ತಿಗೆ ಆಧಾರದ ಮೇಲೆ ನೇಮಿಸಿದ ವೈದ್ಯರು

ಹಾಜರಾಗದೇ ಇರುವುದರಿಂದ, ಈ ಹುದ್ದೆ ಈಗ ಖಾಲಿ ಇದೆ. ವೈದ್ಯರನ್ನು ನೇಮಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಈ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 2 ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಹುದ್ದೆ ಮಂಜೂರಾಗಿದ್ದು, ಇದರಲ್ಲಿ ಒಂದು ಹುದ್ದೆ ಖಾಲಿ ಇರುತ್ತದೆ. ಈ ಹುದ್ದೆಯನ್ನು ನೇಮಿಸಲು ನಿಯಮದ ಪ್ರಕಾರ, ಕ್ರಮ ಕೈಗೊಳ್ಳಲಾಗುವುದು. ಇದು ಪ್ರಾಥಮಿಕ ಆರೋಗ್ಯ ಕೇಂದ್ರವಾಗಿರುವುದರಿಂದ ವಾಹನ ಮಂಜೂರಾಗಿರುವುದಿಲ್ಲ. ಈ ಕೇಂದ್ರದಲ್ಲಿ ಒಂದು ಹಳೆಯ ಶೀತಲ ಯಂತ್ರ ಇರುತ್ತದೆ. ಹತ್ತು ಹಾಸಿಗೆಗಳನ್ನು ಹಾಗೂ ಪೀಠೋಪಕರಣಗಳನ್ನು ಇಷ್ಟರಲ್ಲೇ ಸರಬರಾಜು ಮಾಡಲಾಗುವುದು. ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡವನ್ನು ವಿಸ್ತರಿಸಲು 93–94ನೇ ಸಾಲಿನಲ್ಲಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜಿ. ರಾಜೂಗೌಡ:– ಸನ್ಮಾನ್ಯ ಅಧ್ಯಕ್ಷರೇ, ಇವರ ಆಸ್ಪತ್ರೆಯೇ ಅನಾರೋಗ್ಯದಿಂದ ನರಳುತ್ತಿರುವಾಗ ಜನರಿಗೆ ಎಲ್ಲಿ ಆರೋಗ್ಯವನ್ನು ಕೊಡಲಿಕ್ಕಾಗುತ್ತದೆ ? ಪ್ರಾಥಮಿಕ ಆರೋಗ್ಯ ಘಟಕ ಅಂತ ಅಲ್ಲಿ ಕಟ್ಟಡ ಇರುತ್ತದೆ ಅಷ್ಟೆ, ಆದರೆ ಅಲ್ಲಿ ಸೌಲಭ್ಯ ಏನೂ ಇರುವುದಿಲ್ಲ. ವೈದ್ಯರಿಲ್ಲ, ನರ್ಸ್ ಇಲ್ಲ, ಔಷಧಿ ಇಲ್ಲ. ಬರೀ ಕಟ್ಟಡ ಮಾತ್ರ ಮೇಲ್ದರ್ಜೆಗೆ ಏರಿಸಿದ್ದೀರಿ. ಸೌಲಭ್ಯ ಮಾತ್ರ. ಏನೂ ಇಲ್ಲ. ಆಸ್ಪತ್ರೆಗಳಲ್ಲಿ ಹಾಸಿಗೆ ಮತ್ತು ಪೀಠೋಪಕರಣಗಳನ್ನು ಇಷ್ಟರಲ್ಲೇ ಸರಬರಾಜು ಮಾಡುತ್ತೀರಿ ಎಂದು ಹೇಳಿದ್ದೀರಿ. ಇಷ್ಟರಲ್ಲೇ ಅಂದರೆ ಎಷ್ಟರಲ್ಲಿ ? ಕೊನೆಯದು ಈ ಬಗ್ಗೆ ಗಮನ ಹರಿಸದೇ ಇರುವುದಕ್ಕೆ ಕಾರಣ ಏನು ಅಂದರೆ, ಉದ್ಭವಿಸುವುದಿಲ್ಲವೆಂದು ಹೇಳುತ್ತಾರೆ. ನಮಗೆ ಸೌಲಭ್ಯ ಇಲ್ಲದೇ ಇರುವಾಗ ನಾವು ಸರ್ಕಾರದ ಗಮನ ಸೆಳೆಯತಕ್ಕಂಥಾದ್ದು ನಮ್ಮ ಕರ್ತವ್ಯ. ಆ ಕರ್ತವ್ಯಕ್ಕೆ ಚ್ಯುತಿ ಇಲ್ಲದಂತೆ ಕೆಲಸ ಮಾಡುವುದು ತಮ್ಮ ಕರ್ತವ್ಯ. ಪ್ರಶ್ನೆ ಉದ್ಭವಿಸುವುದಿಲ್ಲ ಅಂತ ಏಕೆ ಹೇಳುತ್ತೀರಿ ? ಇದು ಎಂಥಾ ಉತ್ತರ ದಯಮಾಡಿ ತಾವು ಹೇಳಿ.

ಶ್ರೀ ಬ್ಲೆಸಿಯುಸ್ ಎಂ. ಡಿಸೋಜ (ಮುಖ್ಯಮಂತ್ರಿಗಳ ಪರವಾಗಿ):– ಸನ್ಮಾನ್ಯ ಅಧ್ಯಕ್ಷರೆ, ಇದು ಮೊದಲು ಪಿಹೆಚ್‌ಯು ಇತ್ತು. ಈಗ ಸರ್ಕಾರದ ಆಜ್ಞೆ ಪ್ರಕಾರ ಹೆಚ್‌ಬಿಡಬ್ಲ್ಯೂ 158-79, ತಾರೀಖು 31-3-90ರಲ್ಲಿ ಇದನ್ನು ಪಿಹೆಚ್‌ಸಿ ಮಾಡಿದೆ. ಇದು 10 ಬೆಡ್ಡಿನ ಆಸ್ಪತ್ರೆ ಅಲ್ಲ. ಇದು ಸ್ವಲ್ಪ ಟೈಪಿಂಗ್ ಮಿಸ್ಟೇಕ್ ಆಗಿದೆ. 6 ಬೆಡ್ಡಿನ ಆಸ್ಪತ್ರೆ. 6 ತಿಂಗಳ ಹಿಂದೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಡಾಕ್ಟರ್‌ನ್ನು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. ಆದರೆ ಈ ಕಾಂಟ್ರಾಕ್ಟ್ ಡಾಕ್ಟರ್ ಅಲ್ಲಿ ಬರಲಿಲ್ಲ. ಬೇಗನೆ ಡಾಕ್ಟರ್‌ನ್ನು ನೇಮಕ ಮಾಡುತ್ತೇವೆ.

ಶ್ರೀ ಜಿ. ರಾಜೂಗೌಡ:– ನನ್ನ ಪ್ರಶ್ನೆ ಅದಲ್ಲ. ಮೇಲ್ದರ್ಜೆಗೆ ಏರಿಸಿರತಕ್ಕಂಥಾದ್ದು ಕಟ್ಟಡವನ್ನೋ ? ಅಥವಾ ಸೌಲಭ್ಯವನ್ನೋ ? ಆಮೇಲೆ ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಏಕೆ ಹೇಳುತ್ತೀರಿ ? ಬರೀ ಬೋರ್ಡ್ ಮಾತ್ರ ಮೇಲ್ದರ್ಜೆಗೆ ಏರಿಸಿದ್ರಿ. ಸೌಲಭ್ಯ ಮಾತ್ರ ತಾವು ಕೊಡಲಿಲ್ಲ.

ಶ್ರೀ ಬ್ಲೆಸಿಯಸ್ ಎಂ. ಡಿಸೋಜ:– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹಾಕಿದ ಪ್ರಶ್ನೆಗೆ ನಾವು ಸರಿಯಾಗಿ ಉತ್ತರ ಕೊಟ್ಟಿದ್ದೇವೆ. ಆ ರೆಫ್ರಿಜಿರೇಟರ್ ಇಲ್ಲವೆಂದು ಹೇಳಿದ್ದಾರೆ. ಅಲ್ಲಿ ರೆಫ್ರಿಜರೇಟರ್ ಇದೆ. ಬೇರೆ ಎಲ್ಲಾ ಸವಲತ್ತುಗಳು ಸಹ ಇವೆ.

ಶ್ರೀ ಜಿ. ರಾಜೂಗೌಡ:– ಹಾಸಿಗೆ ಇಲ್ಲ, ಪೀಠೋಪಕರಣ ಇಲ್ಲವೆಂದು ತಾವೇ ಒಪ್ಪಿಕೊಂಡಿದ್ದೀರಿ. ಯಾವ ಸೌಲಭ್ಯ ಇದೆ ಅಲ್ಲಿ ?

ಶ್ರೀ ಬ್ಲೆಸಿಯಸ್ ಎಂ. ಡಿಸೋಜ:– ಮುಂಚೆ ಅದು ಪಿಹೆಚ್‌ಯು ಇದ್ದ ಕಾರಣ. ಈಗ ಪಿಹೆಚ್‌ಸಿ ಮಾಡಿದ್ದೇವೆ. ಬೇಗನೆ ಎಲ್ಲಾ ಉಪಕರಣಗಳನ್ನು ಒದಗಿಸುತ್ತೇವೆ. ಎಲ್ಲಾ ಸ್ಯಾಂಕ್ಷನ್ ಆಗಿದೆ. ಈ

ಮಾರ್ಚ್ ಒಳಗೆ ಎಲ್ಲಾ ಉಪಕರಣಗಳನ್ನು ಒದಗಿಸುವುದು ಮಾತ್ರವಲ್ಲ ಡಾಕ್ಟರ್‌ನ್ನು ಸಹಾ ಅಲ್ಲಿಗೆ ನೇಮಕ ಮಾಡುತ್ತೇವೆ.

ಇಡಗೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ

1493: ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಿ.ಎಸ್.ಪುರ ಹೋಬಳಿ ಕೇಂದ್ರವನ್ನು (ಗುಬ್ಬಿ ತಾಲ್ಲೂಕು) ಇಡಗೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ತೆರೆಯಲು ಅಲ್ಲಿನ ಗ್ರಾಮಸ್ಥರು ಅಥವಾ ಅಕ್ಕಪಕ್ಕದ ಗ್ರಾಮದವರಿಂದ ಮನವಿಗಳೇನಾದರೂ ಬಂದಿದೆಯೇ ?

ಆ) ಇಡಗೂರು ಗ್ರಾಮದ ಸುತ್ತಲೂ ನೂರಾರು ಗ್ರಾಮಗಳಿದ್ದು ಸುಮಾರು 10-15 ಕಿ.ಮೀ. ವಿಸ್ತೀರ್ಣದಲ್ಲಿ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರ ಇಲ್ಲದೆ ನೂರಾರು ಗ್ರಾಮಸ್ಥರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು;

ಈ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು ? ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಇಡಗೂರು ಗ್ರಾಮದಲ್ಲಿ ಎಂದು ತೆರೆಯಲಾಗುವುದು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):-

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ:- ಮಾನ್ಯ ಅಧ್ಯಕ್ಷರೆ, "ಉದ್ಭವಿಸುವುದಿಲ್ಲ" ಎಂದು ಮಾಮೂಲಿಯಾಗಿ ಉತ್ತರ ಬರುತ್ತಲೇ ಇದೆ. ನಾನು ಪ್ರಶ್ನೆ ಕೇಳಿದ್ದು ಸಿ.ಎಸ್. ಪುರ ಹೋಬಳಿ, ಗುಬ್ಬಿ ತಾಲ್ಲೂಕು ಇಡಗೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ತೆರೆಯಲು ಅಲ್ಲಿನ ಗ್ರಾಮಸ್ಥರಿಂದ ಅಥವಾ ಅಕ್ಕಪಕ್ಕದ ಗ್ರಾಮಸ್ಥರಿಂದ ಮನವಿಗಳೇನಾದರೂ ಬಂದಿವೆಯೇ ಎಂದು. "ಇಲ್ಲ" ಎಂದು ಉತ್ತರದಲ್ಲಿ ಹೇಳುತ್ತಾರೆ. ಮತ್ತೆ ಎರಡನೇ ಪ್ರಶ್ನೆ ಇಡಗೂರು ಗ್ರಾಮ ಸುಮಾರು 10-15 ಕಿಲೋಮೀಟರ್ ಸುತ್ತಮುತ್ತ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರ ಇಲ್ಲದೆ ನೂರಾರು ಜನ ಗ್ರಾಮಸ್ಥರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ "ಇಲ್ಲ" ಎಂದಿದ್ದೀರಿ. ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ? ಅಂದರೆ "ಉದ್ಭವಿಸುವುದಿಲ್ಲ" ಎಂದಿದ್ದೀರಿ. ಹಾಗಿದ್ದಲ್ಲಿ ಕಾರಣಗಳೇನು ? ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಇಡಗೂರು ಗ್ರಾಮದಲ್ಲಿ ಎಂದು ತೆರೆಯಲಾಗುವುದು ? ಎಂದು ಕೇಳಿದ್ದಕ್ಕೂ "ಉದ್ಭವಿಸುವುದಿಲ್ಲ" ಎಂದು ಹೇಳಿದ್ದೀರಿ. 1990ನೇ ಇಸವಿಯಲ್ಲಿ ನಾನು ತಮ್ಮ ಮೂಲಕ ಸಿ.ಎಸ್. ಪುರ ಗ್ರಾಮಸ್ಥರು ಹಾಗೂ ಇಡಗೂರು ಗ್ರಾಮಸ್ಥರು ಮತ್ತು ಆಜುಬಾಜು ಗ್ರಾಮಸ್ಥರು ಕೊಟ್ಟಿದ್ದ ಒಂದು ಅರ್ಜಿಯನ್ನು ತಮ್ಮ ಮೂಲಕ ಸಲ್ಲಿಸಿದ್ದೇನೆ. ಇದು 9ನೇ ಜುಲೈ 1990ರಲ್ಲಿ. ಇದು ನನ್ನ 41ನೇ ಪ್ರಶ್ನೆಯಾಗಿದೆ. ಮತ್ತೆ

ಂದೇ ವರ್ಷ ನಾನು ಪ್ರಶ್ನೆಯನ್ನು ಕೂಡ ಕಳುಹಿಸಿದ್ದೆ ಇದೇ ವಿಷಯದಲ್ಲಿ. ಹೀಗೆ ಇದ್ದರೂ ಕೂಡಾ ಗಮನಕ್ಕೆ ಬಂದಿಲ್ಲ, ಉದ್ಭವಿಸುವುದಿಲ್ಲ ಎಂದರೆ ಏನು ಸ್ವಾಮಿ ಅರ್ಥ? ನಾವು ಹೇಗೆ ಕೆಲಸ ಮಾಡುವುದು ಸ್ವಾಮಿ? ಹಿಂದಿನ ನಡವಳಿಕೆ ಏನಾಗಿದೆ ಎಂಬುದನ್ನು ನೋಡದೆ ಉತ್ತರ ಹೀಗೆ ಕೊಟ್ಟರೆ ಬಹಳ ಕಷ್ಟವಾಗುತ್ತದೆ. ಮತ್ತು ಈ ಊರಿನ ಪರಿಸ್ಥಿತಿ ಏನಾಗಿದೆ ಎಂದರೆ, ಇದು ನನ್ನ ಕ್ಷೇತ್ರದ ಕೊನೆಯಲ್ಲಿದ್ದು ವೈ.ಕೆ. ರಾಮಯ್ಯನವರ ಕ್ಷೇತ್ರಕ್ಕೆ ಹತ್ತಿರದಲ್ಲಿ ಬರುತ್ತದೆ. ಕುಣಿಗಲ್‌ಗೆ ಹೋಗಬೇಕಾದರೆ 20 ಕಿಲೋಮೀಟರ್, ಸಿಎಸ್.ಪುರಕ್ಕೆ ಬರಬೇಕಾದರೆ 15 ಕಿಲೋಮೀಟರ್ ಆಗುತ್ತದೆ. ಹೀಗಿರುವುದರಿಂದ ಅಲ್ಲಿರತಕ್ಕ ಜನರಿಗೆ ತೊಂದರೆಯಾಗುತ್ತಿದೆ. ಇದಕ್ಕೆ ಏನಾದರೂ ಮಾಡಬೇಕು. ಈಗಲಾದರೂ ಮಂತ್ರಿಗಳು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಇಲ್ಲಿ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಿಕೊಡಲಿಕ್ಕೆ ಮನಸ್ಸು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮುಖ್ಯಮಂತ್ರಿಗಳ ಪರವಾಗಿ):- ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಸರಿಯಾಗಿ ಹೇಳಿದ್ದಾರೆ. ಅವರು ಕೊಟ್ಟಿದ್ದಂಥ ಪಿಟಿಷನ್ ಜಿಲ್ಲಾ ಪರಿಷತ್ತಿಗೆ ಹೋಗಿದೆ. ಜಿಲ್ಲಾಪರಿಷತ್ತಿನವರು ಇದುವರೆಗೆ ಶಿಫಾರಸ್ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿಲ್ಲ. ಈ ಸಾರಿ 1993-94 ನಲ್ಲಿ ಜಿಲ್ಲಾಪರಿಷತ್ತಿನವರು ಶಿಫಾರಸ್ ಮಾಡಿ ಕಳುಹಿಸಿದರೆ ಅದನ್ನು ಸ್ಥಾಪನೆ ಮಾಡಲಿಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ:- ಮೊದಲು ಅಲ್ಲಿಗೆ ಸಂಚಾರಿ ವೈದ್ಯ ಶಾಲೆಯನ್ನು ಕಳುಹಿಸುತ್ತಿದ್ದರು. ಎರಡು ವರ್ಷಗಳಿಂದ ಅದನ್ನೂ ನಿಲ್ಲಿಸಿಬಿಟ್ಟಿದ್ದಾರೆ. ಇವರು 90ನೇ ಇಸವಿಯಲ್ಲಿ ಜಿಲ್ಲಾಪರಿಷತ್ತಿಗೆ ಕಳುಹಿಸಿದ್ದಾರೆ, ಈಗ ನಾವು 93ನೇ ಇಸವಿಯಲ್ಲಿ ಇದ್ದೇವೆ. ಈಗ ಜಿಲ್ಲಾಪರಿಷತ್ತು ಆಡಳಿತ ಅಧಿಕಾರಿಗಳ ಕೈಯಲ್ಲೇ ಇದೆ. ದಯಮಾಡಿ ಈ ಸಾಲಿನಲ್ಲಿ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಿಕೊಡುತ್ತೇನೆಂದು ಆಶ್ವಾಸನೆ ಕೊಡಬೇಕು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ಮಾನ್ಯ ಅಧ್ಯಕ್ಷರೇ, ಮಾನ್ಯ ಶಿವನಂಜಪ್ಪನವರು ಬಹಳಷ್ಟು ಅನುಭಾವಿ ಶಾಸಕರಾಗಿದ್ದಾರೆ. ಅವರು ಅಲ್ಲಿನ ಜಿಲ್ಲಾಪರಿಷತ್ತಿನ ಸೂಚನೆಯನ್ನು ನಮ್ಮ ಸರ್ಕಾರಕ್ಕೆ ಕಳುಹಿಸಿದರೆ ನಾವು ಇದನ್ನು ನಾವು ಮಂಜೂರು ಮಾಡುತ್ತೇವೆ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೆ, ವೃತ್ತಿಪರ ಶಿಕ್ಷಣದ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಏನು ತೀರ್ಮಾನವಾಗಿದೆಯೋ ಅದರ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆಂದು ಹೇಳಿದ್ದೆ....

ಅಧ್ಯಕ್ಷರು:- ಪ್ರಶ್ನೋತ್ತರ ಕಾಲ ಇನ್ನೂ ಮುಗಿದಿಲ್ಲ.

ಮಂಗಳೂರು ತಾಲ್ಲೂಕು ಕೆಂಜಾರ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ತೊಂದರೆ

?0: ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್):-

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

) ಮಂಗಳೂರು ತಾಲ್ಲೂಕು ಕೆಂಜಾಶನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್‌ನ ವತಿಯಿಂದ ಶಾಲೆಯನ್ನು ಆರಂಭಿಸಿ ಎಷ್ಟು ವರ್ಷಗಳಾದವು;

) ಈ ಶಾಲೆಯಲ್ಲಿ ಪ್ರಸ್ತುತವಿರುವ ಅಧ್ಯಾಪಕರು, ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

) ಈ ಶಾಲೆಗೆ ಕಟ್ಟಡ ನಿರ್ಮಾಣಕ್ಕಾಗಿ ಜಿಲ್ಲಾ ಪರಿಷತ್ ಕೈಗೊಂಡ ಕ್ರಮವೇನು;

ಈ) ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ತೊಂದರೆಗಳನ್ನು ಪರಿಹರಿಸಲು ಜಿಲ್ಲಾ ಪರಿಷತ್ ಕೈಕೊಂಡ ಕ್ರಮಗಳೇನು ?

ಅ. 1988-89ನೇ ಸಾಲಿನಲ್ಲಿ ಪ್ರಾರಂಭಿಸಿದೆ (3 ವರ್ಷ)

ಆ. ನಿಯೋಜನೆ ಮೇರೆಗೆ ಒಬ್ಬ ಅಧ್ಯಾಪಕರು ಕೆಲಸ ನಿರ್ವಹಿಸುತ್ತಿದ್ದಾರೆ. ಅಲ್ಲದೆ ಕೆಲವು ಗೌರವ ಶಿಕ್ಷಕರು ಕೂಡ ಕೆಲಸ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳ ಸಂಖ್ಯೆ:೮೩.

ಇ. ಸದರಿ ಶಾಲೆಗೆ 1990-91 ಹಾಗೂ 91-92ನೇ ಸಾಲಿನ ಜಿಲ್ಲಾ ಕ್ರಿಯಾ ಯೋಜನೆಯಲ್ಲಿ ತಲಾ ಒಂದೊಂದು ಕೊಠಡಿ ಮಂಜೂರಾಗಿದ್ದು, 1993-94ನೇ ಸಾಲಿನಲ್ಲಿ 1 ಕೊಠಡಿ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗಿದೆ. 1991-92ರಲ್ಲಿ ಪಡೀಲು ಕಾಂಜಗೇಳಿ ಎಂಬಲ್ಲಿ ಸಂ.ನಂ. 176 ಗಬಿಯಲ್ಲಿ ಒಂದು ಕೊಠಡಿಯ ಕಟ್ಟಡ ಕಟ್ಟಿಸಲಾಗಿರುತ್ತದೆ. ಈ ಸ್ಥಳವು ಸರ್ಕಾರಿ ಸ್ಥಳವಾಗಿದ್ದು, ಸುಮಾರು 1 ಎಕರೆ ವಿಸ್ತೀರ್ಣವುಳ್ಳದ್ದಾಗಿದೆ. ಈ ಸ್ಥಳದಲ್ಲಿ ಕಟ್ಟಡವನ್ನು ವಿಸ್ತರಿಸುವ ಬಗ್ಗೆ ಒಬ್ಬ ಸೇವಾ ಸಮಿತಿಯವರ ವಿರೋಧವಿರುವುದರಿಂದ ಕಟ್ಟಡ ವಿಸ್ತರಿಸಿರುವುದಿಲ್ಲ.

ಈ. ಜಿಲ್ಲಾ ಪರಿಷತ್ ವತಿಯಿಂದ ಮಂಜೂರಾದ ಪ್ರೌಢ ಶಾಲೆಗಳಿಗೆ ಹುದ್ದೆಗಳನ್ನು ಸೃಜಿಸಿ ಮಂಜೂರು ಮಾಡುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದ್ದು ಸದ್ಯದಲ್ಲಿಯೇ ಹುದ್ದೆ ಮಂಜೂರಾತಿ ಆದೇಶ ಹೊರಡಿಸಲಾಗುತ್ತದೆ.

ಡಾ॥ ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):–

ಶ್ರೀ ವಿಜಯಕುಮಾರ್ ಶೆಟ್ಟಿ:– ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರವಾದ ಕೆಂಜಾರಿನಲ್ಲಿ ಜಿಲ್ಲಾ ಪರಿಷತ್ತಿನ ವತಿಯಿಂದ ಸುಮಾರು ನಾಲ್ಕು ವರ್ಷದ ಮೊದಲು ಈ ಶಾಲೆಯನ್ನು ಸ್ಥಾಪಿಸಲಾಗಿದೆ. ಆದರೆ ಇದುವರೆಗೂ ಒಂದೇ ಒಂದು ಕೊಠಡಿಯನ್ನು ಒದಗಿಸಲಿಲ್ಲ. ಇದರಲ್ಲಿ "ಒದಗಿಸಿದೆ" ಅಂತ ಹೇಳುತ್ತಾರೆ. ಮತ್ತು ಸಮೀಪದ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಈ ಶಾಲೆ ನಡೆಯುತ್ತಿದೆ. ಅಲ್ಲಿ ಏನಾದರೂ ಕಲ್ಯಾಣ ಕಾರ್ಯಕ್ರಮ ಇದ್ದರೆ ಈ ಶಾಲೆಯ ಮಕ್ಕಳಿಗೆ ರಜ ಕೊಡುತ್ತಾರೆ. ಮೂರು ವರ್ಷಗಳಿಂದ ಇದೇ ಪರಿಸ್ಥಿತಿಯಲ್ಲಿದೆ. ಮತ್ತೆ ಏನಾದರೂ ಉಪಕರಣದ ಬಗ್ಗೆ ಸ್ಪಷ್ಟೀಕರಣವನ್ನು ಕೊಡುವಾಗ ಸ್ಲೇಟ್ ಕಡ್ಡಿಯನ್ನು ತೋರಿಸುತ್ತಿದ್ದಾರೆಯೇ ಹೊರತು ಅಲ್ಲಿ ಯಾವುದೇ ರೀತಿಯ ಲೈಬ್ರರಿ ಇಲ್ಲ, ಉಪಕರಣ ಇಲ್ಲ; ಸರ್ಕಾರದ ವತಿಯಿಂದ ಒಬ್ಬರು ಟೀಚರ್ ಮೂರು ಕ್ಲಾಸ್‌ಗಳಿಗೆ ಇದ್ದಾರೆ. ನಾವು ಹಲವಾರು ಪ್ರೋಗ್ರಾಂಗಳನ್ನು ಹಾಕುತ್ತಿದ್ದೇವೆ. ಆದರೆ ಈ ಗ್ರಾಮಾಂತರ ಪ್ರದೇಶದ ಈ ಶಾಲೆಗೆ ಬರುವ ಶೈಕ್ಷಣಿಕ ವರ್ಷದಲ್ಲಿ ಒಂದು ಶಾಲೆಯ ಸ್ವಂತ ಕಟ್ಟಡವನ್ನು ಹಾಗೂ ಅದಕ್ಕೆ ಬೇಕಾದ ಅಧ್ಯಾಪಕರನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಹೆಚ್.ಡಿ. ಲಮಾಣಿ:– ಮಾನ್ಯ ಅಧ್ಯಕ್ಷರೆ, 1988-89ನೇ ಸಾಲಿನಲ್ಲಿ ಜಿಲ್ಲಾಪರಿಷತ್ತಿನಿಂದ ಆ ಊರಿಗೆ ಒಂದು ಹೈಸ್ಕೂಲ್ ಮಂಜೂರಾಯಿತು. ಅಲ್ಲಿ ಸುಮಾರು 83 ವಿದ್ಯಾರ್ಥಿಗಳು ಈಗ ಓದುತ್ತಿದ್ದಾರೆ. ಹೈಸ್ಕೂಲಿಗೆ ಒಬ್ಬ ಅಧ್ಯಾಪಕರನ್ನು ನಿಯೋಜಿಸಲಾಗಿದೆ ಹಾಗೂ ಈ ಗೌರವ ಶಿಕ್ಷಕರನ್ನು ಅಲ್ಲಿಗೆ ಈಗಾಗಲೇ ನೇಮಿಸಿಕೊಂಡಿದ್ದಾರೆ.

ಶ್ರೀ ವಿಜಯಕುಮಾರ್ ಶೆಟ್ಟಿ:– ಮಾನ್ಯ ಅಧ್ಯಕ್ಷರೆ, ಗೌರವ ಶಿಕ್ಷಕರು ಇದ್ದಾರೆಂದು ಹೇಳುತ್ತಾರೆ. ಆದರೆ ಅವರು ಮೊನ್ನೆ ಬಂದು ಬೇಕಾದಷ್ಟು ತಮ್ಮ ಬೇಡಿಕೆಗಳನ್ನು ಸಲ್ಲಿಸಿದರೂ ಅವರಿಗೆ ಏನೂ ಸಮಂಜಸವಾದ ಉತ್ತರ ಕೊಡಲಿಲ್ಲ. ಕೆಲವು ಜಿಲ್ಲಾಪರಿಷತ್ತುಗಳಲ್ಲಿ ಒಳ್ಳೆಯ ಸಂಬಳ ಕೊಡುತ್ತಾರೆ.

ಕೆಲವು ಕಡೆ ಕೊಡುವುದಿಲ್ಲ. ಅವರಿಗೆ ಮಿನಿಮಮ್ ಸ್ಯಾಲರಿಯನ್ನು ಫಿಕ್ಸ್ ಮಾಡಿ, ಮತ್ತೆ ಬೇಕಾದರೆ ಏನಾದರೂ ವ್ಯವಸ್ಥೆಯನ್ನು ಮಾಡುವುದು ಒಳ್ಳೆಯದು.

ಡಾ।। ಹೆಚ್.ಡಿ. ಲಮಾಣಿ:– ಈ ಸಮಸ್ಯೆ ಪ್ರತ್ಯೇಕವಾದಂತಹ ಸಮಸ್ಯೆಯಾಗಿದೆ. ಏಕೆಂದರೆ ಜಿಲ್ಲಾಪರಿಷತ್ತಿನವರು ಅಲ್ಲಿರುವಂತಹ ಸ್ಕೂಲ್ ಕಮಿಟಿಯವರಿಗೆ ಅಧಿಕಾರವನ್ನು ಕೊಟ್ಟಿದ್ದು. ನಾವು ಮಾಧ್ಯಮಿಕ ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆ. ಆಗ ಅಧ್ಯಾಪಕರನ್ನು ಕೊಡಲಿಕ್ಕೆ ಆಗಲಿಲ್ಲ. ಈ ಒಂದು ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳಿಗೆ ತೊಂದರೆ ಆಗಬಾರದು ಅಂತ ತಿಳಿದುಕೊಂಡು ಪ್ರಾಥಮಿಕ ಶಾಲೆ ಇರುವಂತಹ ಕಡೆ ಗ್ರಾಜ್ಯುಯೆಟ್ ಟ್ರೈನ್ಡ್ ಟೀಚರ್‌ಗಳನ್ನು ಹೇಗೆ ನಿಯೋಜಿಸುತ್ತಾರೆ; ಹಾಗೆ ಇಲ್ಲಿಯೂ ಸಹಿತ ನಿಯೋಜಿಸಲಾಗಿದೆ. ಗೌರವ ಶಿಕ್ಷಕರನ್ನು ನೇಮಿಸಿಕೊಳ್ಳಲಿಕ್ಕೆ ಅವರಿಗೆ ಒಂದು ಅಜ್ಞೆಯನ್ನು ಸಹಿತ ಕೊಡಲಾಗಿದೆ. ಗೌರವ ಶಿಕ್ಷಕರನ್ನು ನೇಮಿಸಿಕೊಂಡು ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಅಭ್ಯಾಸವನ್ನು ಮಾಡಿಸಲಾಗುತ್ತಿದೆ. ಇದು ನಿಜ, ಈಗ ಮುಂಬರುವ ದಿನಗಳಲ್ಲಿ ನಾವು ಅಧ್ಯಾಪಕರುಗಳನ್ನು ನೇಮಿಸಿಕೊಳ್ಳುತ್ತಿದ್ದೇವೆ. ಸ್ಪೆಷಲ್ ರಿಕ್ರೂಟ್‌ಮೆಂಟ್‌ನಲ್ಲಿಯೂ ತೆಗೆದುಕೊಳ್ಳುತ್ತಿದ್ದೇವೆ ಮತ್ತು ಜನರಲ್ ರಿಕ್ರೂಟ್‌ಮೆಂಟ್‌ನಲ್ಲಿಯೂ ಸಹಿತ ನಾವು ಅಧ್ಯಾಪಕರುಗಳನ್ನು ನೇಮಿಸಿಕೊಳ್ಳುತ್ತಿದ್ದೇವೆ. ಆ ಸಮಯದಲ್ಲಿ ಈ ಶಾಲೆಗೆ ಅಧ್ಯಾಪಕರನ್ನು ಒದಗಿಸುವಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇನ್ನು ಸ್ಕೂಲ್ ಬಿಲ್ಡಿಂಗ್ ಬಗ್ಗೆ ಹೇಳಿದರು; ಇದರ ಬಗ್ಗೆ ನನಗೆ ದೊರೆತ ಮಾಹಿತಿಯ ಪ್ರಕಾರ ಹೈಸ್ಕೂಲ್, ಪ್ರೈಮರಿ ಸ್ಕೂಲ್ ಇವೆಲ್ಲ ಜಿಲ್ಲಾಪರಿಷತ್ತಿಗೆ ಹೋಗಿದ್ದರಿಂದ ಆ ಕಟ್ಟಡ ವಗೈರೆ ಕಟ್ಟಿಸುವಂಥಹದ್ದು ಸಹಿತ ಅವರೇ ಮಾಡುವಂತಹ ಕೆಲಸವಾಗಿದೆ. ನಾವು ಸರ್ಕಾರದಿಂದ ಹಣವನ್ನು ಮಂಜೂರು ಮಾಡಬೇಕಾಗುತ್ತದೆ. ಈಗಾಗಲೇ ಹಣವನ್ನು ಮಂಜೂರು ಮಾಡಿ ಅಲ್ಲಿ ಒಂದು ಕೊಠಡಿಯನ್ನು ಕಟ್ಟಿಸಲಾಗಿದೆ. ಮತ್ತೊಂದು ಕೊಠಡಿಯನ್ನು ಕಟ್ಟಿಸಬೇಕಾಯಿತು. ಅಂದರೆ ಅಲ್ಲಿ ಸ್ವಲ್ಪ ಏನೋ ತೊಂದರೆ ಬಂದಿದ್ದರಿಂದ ಅದನ್ನು ಅಲ್ಲಿಯೇ ನಿಲ್ಲಿಸಲಾಗಿದೆ. ಆ ತೊಂದರೆಯನ್ನು ನಿವಾರಿಸಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಮುಂಬರುವ ದಿನಗಳಲ್ಲಿ ಆ ಕೊಠಡಿಗಳನ್ನು ಕಟ್ಟಿಸಿ ಒಂದು ಶಾಲೆಯನ್ನು ಸರಿಯಾದ ರೀತಿಯಲ್ಲಿ ನಡೆಯುವ ಹಾಗೆ ಎಲ್ಲ ವ್ಯವಸ್ಥೆಯನ್ನೂ ನಾವು ಮಾಡಿಕೊಡುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ:– ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರದ ಕಾನೂನು ಪ್ರಕಾರ ಐದು ಎಕರೆ ಜಾಗಬೇಕು. ಪ್ಲೇಗ್ರೌಂಡ್ ಮತ್ತು ಇತರ ಎಲ್ಲಾ ಚಟುವಟಿಕೆಗಳಿಗೆ ಜಾಗ ಬೇಕು. ನೀವೇ ಒಂದು ಎಕರೆ ಇದೆ ಅಂತ ಹೇಳುತ್ತಿದ್ದೀರಿ. ಅಲ್ಲಿ ಒಂದು ಎಕರೆಯೂ ಇಲ್ಲ. ಸಮೀಪದಲ್ಲಿಯೇ ಸರ್ಕಾರದ ಜಮೀನು ಇದೆ ಅದನ್ನು ತೆಗೆದು ಇನ್ನು ಬೇರೆ ಸ್ಯಾಂಕ್ಷನ್ ಆಗಿ ಬರುವ ಕಟ್ಟಡಗಳನ್ನು ಸಹ ಅಲ್ಲೆ ಕಟ್ಟಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ।। ಹೆಚ್.ಡಿ. ಲಮಾಣಿ:– ಸಾಮಾನ್ಯವಾಗಿ ಸರ್ಕಾರಿ ಜಮೀನು ಇತ್ತು ಅಂದರೆ ಅಲ್ಲಿಯೇ ಕಟ್ಟಡವನ್ನು ಕಟ್ಟಿಸಲಿಕ್ಕೆ ವ್ಯವಸ್ಥೆಯನ್ನು ಮಾಡಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆ

(1826): ಶ್ರೀ ಮನೋಹರ. ಯು. ಐನಾಪುರ (ಬಳ್ಳೊಳ್ಳಿ):–

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇಂಡಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು ಎಷ್ಟು;

ಆ) ಒಟ್ಟು ಮಂಜೂರಾದ ಹುದ್ದೆಗಳು ಎಷ್ಟು;

ಇ) ಈ ಹುದ್ದೆಗಳಲ್ಲಿ ಭರ್ತಿ ಮಾಡಿದ ಹುದ್ದೆಗಳು ಎಷ್ಟು ?

ಡಾ।। ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) 89 ಖಾಲಿ ಹುದ್ದೆಗಳು.

ಆ) 915 ಹುದ್ದೆಗಳು.

ಇ) 826 ಹುದ್ದೆಗಳು.

ರಾಯಚೂರು ಜಿಲ್ಲೆಯಲ್ಲಿ ಕಪ್ಪು ಹಲಗೆ ಯೋಜನೆ

(2117): ಶ್ರೀ ಎಂ.ಎಸ್. ಪಾಟೀಲ್ (ರಾಯಚೂರು):-

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಯಚೂರು ಜಿಲ್ಲೆಯಲ್ಲಿ ಕಪ್ಪು ಹಲಗೆ ಕಾರ್ಯಾಚರಣೆಯ 4ನೇ ಹಂತದ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಹೆಸರು, ಅವರ ಸ್ವಸ್ಥಳದ ವಿಳಾಸ, ಜಾತಿ, ಮತ್ತು ವಿದ್ಯಾರ್ಹತೆಗಳೇನು; ಅವರಲ್ಲಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಎಷ್ಟು; ಇವರಲ್ಲಿ ಎಷ್ಟು ಅಭ್ಯರ್ಥಿಗಳು ನೇಮಕಾತಿ ಆದೇಶ ಪಡೆದು ಕೆಲಸಕ್ಕೆ ಹಾಜರಾಗಿರುವರು; ನೇಮಕಾತಿ ಆದೇಶ ಇಂದಿನ ದಿನದವರೆಗೂ ಪಡೆಯದವರ ಸಂಖ್ಯೆ ಎಷ್ಟು; ಈ ವಿಳಂಬಕ್ಕೆ ಕಾರಣಗಳೇನು; (ವಿವರ ನೀಡುವುದು)

ಆ) ಕೊಪ್ಪಳ, ಯಲಬುರ್ಗಾ, ಕುಷ್ಟಗಿ ಮತ್ತು ರಾಯಚೂರು ತಾಲ್ಲೂಕಿನ ಆಯ್ಕೆಗೊಂಡಿರುವ ಶಿಕ್ಷಕರ ನೇಮಕಾತಿ ಆದೇಶ ನೀಡಲಾಗಿರುವ ಏಕೋಪಾಧ್ಯಾಯ ಶಾಲೆಗಳಾವುವು. ಅವರಲ್ಲಿ ಯಾವ ಯಾವ ಶಿಕ್ಷಕರನ್ನು ನಂತರ ಅದೇ ತಾಲ್ಲೂಕಿನ ಯಾವ ಯಾವ ಶಾಲೆಗಳಿಗೆ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ (ಪ್ರತಿ ತಾಲ್ಲೂಕಿನ ಈ ಶಿಕ್ಷಕರ ಸಂಬಂಧದ ಪಟ್ಟಿ ಲಗತ್ತಿಸುವುದು);

ಇ) ಕಪ್ಪು ಹಲಗೆ ಕಾರ್ಯಾಚರಣೆ ಯೋಜನೆಯ ಅಡಿಯಲ್ಲಿ ಆಯ್ಕೆಗೊಂಡಿರುವ ಶಿಕ್ಷಕರಿಗೆ ಏಕೋಪಾಧ್ಯಾಯ ಅಲ್ಲದ ಶಾಲೆಗೆ ನೇರವಾಗಿ ನೇಮಕಾತಿ ಆದೇಶ ನೀಡಬಹುದೆ; ಹಾಗಿದ್ದರೆ, ಇದು ನೇಮಕಾತಿ ನಿಯಮಾವಳಿ ಉಲ್ಲಂಘನೆ ಮಾಡಿದಂತಲ್ಲವೇ ಸರ್ಕಾರದವರ ಕ್ರಮವೇನು ?

ಡಾ।। ಹೆಚ್.ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):-

ಅ) ರಾಯಚೂರು ಜಿಲ್ಲೆಯಲ್ಲಿ ಕಪ್ಪುಹಲಗೆ ಕಾರ್ಯಾಚರಣೆಯ 4ನೇ ಹಂತದಡಿಯಲ್ಲಿ 290 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಇವರ ಪೈಕಿ 270 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದ್ದು, ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಇವರಲ್ಲಿ 64 ಮಹಿಳಾ ಅಭ್ಯರ್ಥಿಗಳಿದ್ದಾರೆ. ನೇಮಕಾತಿ ಆದೇಶ ಪಡೆಯದವರ ಸಂಖ್ಯೆ 20. ಈ 20 ಅಭ್ಯರ್ಥಿಗಳ ಪೈಕಿ 11 ಅಭ್ಯರ್ಥಿಗಳ ಆದಾಯ ಮತ್ತು ಜಾತಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳು ವ್ಯತಿರಿಕ್ತವಾಗಿರುವುದರಿಂದ ಇತ್ಯರ್ಥಕ್ಕಾಗಿ ಆ ಪ್ರಕರಣಕ್ಕಾಗಿ ಪತ್ರ ವ್ಯವಹಾರ ನಡೆದಿದೆ. 7 ಅಭ್ಯರ್ಥಿಗಳು ಗೈರು ಹಾಜರಾಗಿರುತ್ತಾರೆ. 1 ಅಭ್ಯರ್ಥಿಯ ಆದಾಯವು ಆ ಗುಂಪಿಗೆ ನಿಗದಿ ಪಡಿಸಿದ ಮಿತಿಗಿಂತ ಹೆಚ್ಚಾಗಿದ್ದುದನ್ನು ಪರಿಶೀಲಿಸಿ ತಹಶೀಲ್ದಾರರು ಪ್ರಮಾಣ ಪತ್ರ ನೀಡಿರುವುದರಿಂದ ಹಾಗೂ 1 ಅಭ್ಯರ್ಥಿಯು ಎರಡು ಜಿಲ್ಲೆಯಲ್ಲಿ ಹೆಸರು ನೊಂದಾಯಿಸಿ ಎರಡು ಜಿಲ್ಲೆಯಲ್ಲಿಯೂ ಆಯ್ಕೆಯಾಗಿದ್ದರಿಂದ ವಿಳಂಬವಾಗಿರುತ್ತದೆ.

ಅಭ್ಯರ್ಥಿಗಳ ಹೆಸರು, ವಿಳಾಸ, ಜಾತಿ ಮತ್ತು ವಿದ್ಯಾರ್ಹತೆಗಳ ವಿವರಗಳನ್ನು ನಂತರ ಒದಗಿಸಲಾಗುವುದು.

ಆ) ವಿವರ ಪಡೆದು ಒದಗಿಸಲಾಗುವುದು.

ಇ) ನೇಮಕಾತಿ ಪ್ರಕಟಿಸಿದ ಪಟ್ಟಿಯಲ್ಲಿ ಇದ್ದ ಏಕೋಪಾಧ್ಯಾಯ ಶಾಲೆಗಳನ್ನು ಹೊರತು ಪಡಿಸಿ ಬೇರೆ ಶಾಲೆಗಳಿಗೆ ನೇಮಕಾತಿ ಆದೇಶ ನೀಡಲು ಬಾರದ ಕಾರಣ ಅದರಲ್ಲಿ ತೋರಿಸಿದ ಏಕೋಪಾಧ್ಯಾಯ ಶಾಲೆಗಳಿಗೆ ಮಾತ್ರ ನೇಮಕಾತಿ ಆದೇಶ ನೀಡಿದೆ.

ಬೆಳಗಾಂ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ

(2036): ಶ್ರೀ ಎಸ್.ಎಸ್. ಭೀಮಣ್ಣನವರ್ (ಚಿಕ್ಕೋಡಿ):–

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆಯಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಶಿಕ್ಷಕರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕೊರತೆಯನ್ನು ತುಂಬಲು ಸರ್ಕಾರ ಕೈಕೊಳ್ಳಲುದ್ದೇಶಿಸಿರುವ ಕ್ರಮಗಳೇನು ?

ಡಾ॥ ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):–

ಅ) ಬಂದಿದೆ.

ಆ) ಬೆಳಗಾಂ ಜಿಲ್ಲೆಯಲ್ಲಿ ಖಾಲಿಯಿರುವ 859 ಹುದ್ದೆಗಳ ಪೈಕಿ, 582 ಹುದ್ದೆಗಳನ್ನು ಸಾಮಾನ್ಯ ನೇಮಕಾತಿ ಮತ್ತು ವಿಶೇಷ ನೇಮಕಾತಿ ನಿಯಮಗಳನ್ವಯ ತುಂಬಲು ಕ್ರಮ ಜರುಗಿಸಲಾಗುತ್ತಿದೆ.

ಅಧ್ಯಕ್ಷರು:– ಇಲ್ಲಿಗೆ ಪ್ರಶ್ನೋತ್ತರಗಳು ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸಬೇಕಾದ ಪ್ರಶ್ನೋತ್ತರಗಳ ಪಟ್ಟಿಯನ್ನು ಮಂಡಿಸುವುದು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ದಿನಾಂಕ: 17-3-1993ರ ಲಿಖಿತ ಮೂಲಕ ಉತ್ತರಿಸುವ 21ನೇ ಪಟ್ಟಿಯಲ್ಲಿರುವ 62 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ: 2135, 1704, 1584, 1941, 13, 824, 1937, 1942, 1981, 2119, ಮತ್ತು 2122 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ 51 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮೀನುಗಾರರಿಗೆ ಉಚಿತ ಮನೆ

(2063): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ):–

ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೀನುಗಾರರಿಗೆ ಉಚಿತವಾಗಿ ಮನೆ ಕಟ್ಟಿಸಿಕೊಡುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ;

ಆ) ಇದಕ್ಕೆ ಪ್ರತಿ ವರ್ಷ ಎಷ್ಟು ಹಣವನ್ನು ಒದಗಿಸಲಾಗುತ್ತಿದೆ. ಈ ವರ್ಷ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ;

ಇ) ಎಷ್ಟು ಮನೆ ಕಟ್ಟಲಾಗಿದೆ;

ಈ) ಈ ವರ್ಷ ಯಾವಾಗ ಮನೆಗಳನ್ನು ಕಟ್ಟಲು ಪ್ರಾರಂಭಿಸಲಾಗುವುದು ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):-

ಅ) ಹೌದು.

ಆ) ಇದಕ್ಕಾಗಿ 1991-92ರಲ್ಲಿ ರೂ. 20.00 ಲಕ್ಷಗಳನ್ನು, 1992-93ರ ಸಾಲಿನಲ್ಲಿ ರೂ. 50.00 ಲಕ್ಷಗಳನ್ನು ಒದಗಿಸಲಾಗಿದ್ದು, 1993-94ರ ಸಾಲಿಗೆ 100.00 ಲಕ್ಷ ರೂ.ಗಳನ್ನು ಒದಗಿಸಿದೆ. 1992-93 ರಲ್ಲಿ ಇದುವರೆಗೆ ರೂ. ೪.೦೦ ಲಕ್ಷ ಇದುವರೆಗೆ ಬಿಡುಗಡೆ ಮಾಡಲಾಗಿದೆ. ಉಳಿದ ಹಣ ಬಿಡುಗಡೆ ಹಂತದಲ್ಲಿದೆ.

ಇ) ಇದುವರೆಗೆ ಒಟ್ಟು 300 ಮನೆಗಳನ್ನು ಕಟ್ಟಲಾಗಿದ್ದು, 300 ಮನೆಗಳ ನಿರ್ಮಾಣ ಪ್ರಗತಿಯಲ್ಲಿದೆ.

ಈ) 1993ರ ಮಾರ್ಚ್ ತಿಂಗಳ ಅಂತ್ಯದಲ್ಲಿ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ಸರ್ಕಾರದಿಂದ ಹೂಳೆತ್ತುವ ಯಂತ್ರದ (ಡ್ರಡ್ಜಿಂಗ್) ಖರೀದಿ

(2064): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ):-

ಮೀನುಗಾರಿಕೆ ಮತ್ತು ಬಂದರು ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರವು ಹೂಳೆತ್ತುವ ಯಂತ್ರವನ್ನು (ಡ್ರೆಡ್ಜಿಂಗ್ ಮೆಷಿನ್) ಕೊಂಡಿರುವುದೇ;

ಆ) ಯಾವ ಕಂಪನಿಯಿಂದ ಹಾಗೂ ಒಟ್ಟು ಅದರ ಮೌಲ್ಯವೆಷ್ಟು;

ಇ) ಸರ್ಕಾರದಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ;

ಈ) ಈ ಯಂತ್ರವನ್ನು ಎಲ್ಲಿ ಅಳವಡಿಸಲಾಗಿದೆ ಹಾಗೂ ಯಾವಾಗ ಇದರ ಕೆಲಸವನ್ನು ಪ್ರಾರಂಭಿಸಲಾಗುವುದು ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) 1992-93ನೇ ಸಾಲಿಗೆ ಮೀನುಗಾರಿಕೆ ಇಲಾಖಾವತಿಯಿಂದ ಹೂಳೆತ್ತುವ ಯಂತ್ರ ಖರೀದಿಗಾಗಿ ರೂ.132.50 ಲಕ್ಷಗಳನ್ನು ಮೀಸಲಿಡಲಾಗಿದೆ.

ಈ) ಉದ್ಭವಿಸುವುದಿಲ್ಲ.

ಸೋಮವಾರಪೇಟೆಯ ಕುಶಾಲನಗರದ ನಿಸರ್ಗ ಧಾಮದ ಬಗ್ಗೆ

(2065): ಶ್ರೀ ಬೆಳ್ಳಿಯಪ್ಪ (ಸೋಮವಾರಪೇಟೆ):-

ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೋಮವಾರ ಪೇಟೆ ತಾಲ್ಲೂಕಿನ ಕುಶಾಲನಗರದಲ್ಲಿ ನಿಸರ್ಗ ಧಾಮಕ್ಕೆ ಇದುವರೆವಿಗೂ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ;

ಆ) ಮಂಜೂರಾಗಿರುವ ಪೂರ್ಣ ಹಣವು ಖರ್ಚಾಗಿದೆಯೇ ? ಹಾಗೂ ಸಮರ್ಪಕವಾಗಿ ಉಪಯೋಗಿಸಲಾಗಿದೆಯೇ;

ಇ) ಇನ್ನೂ ಇದರ ಅಭಿವೃದ್ಧಿಗೆ ಸರ್ಕಾರವು ಹಣ ಬಿಡುಗಡೆ ಮಾಡುವ ಉದ್ದೇಶವಿದೆಯೇ;

ಈ) ಹಾಗಿದ್ದಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗುವುದು ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯಸಚಿವರು):-

ಅ) ಸೋಮವಾರಪೇಟೆ ತಾಲ್ಲೂಕಿನ ಕುಶಾಲನಗರದಲ್ಲಿರುವ "ನಿಸರ್ಗ ಧಾಮ"ಕ್ಕೆ ಇದುವರೆವಿಗು ಖರ್ಚು ಮಾಡಿದ ಹಣದ ವಿವರ ಈ ರೀತಿ ಇದೆ.

ವರ್ಷ	ಖರ್ಚಾದ ಹಣದ ವಿವರ
1988–89	ರೂ. 1,61,241 - 20
1989–90	ರೂ. 9,79,640 - 00
1990–91	ರೂ. 1,04,054 - 75
1991–92	ರೂ. 1,70,014 - 00
1992–93 (ದಿ.10-3-93ರವರೆಗೆ)	ರೂ. 5,22,355-00

1988-89 ರಿಂದ 1992-93ರ ಮಾರ್ಚ್ 10ನೇ ತಾರೀಖಿನವರೆಗೆ ರೂ. 19,37,495-00ನ್ನು ಖರ್ಚು ಮಾಡಲಾಗಿದೆ.

ಆ) ಮಂಜೂರಾಗಿರುವ ಪೂರ್ಣ ಹಣವು ಖರ್ಚಾಗಿರುತ್ತದೆ. ಹಾಗೂ ಸಮರ್ಪಕವಾಗಿ ಉಪಯೋಗವಾಗಿರುತ್ತದೆ.

ಇ) ಇದರ ಅಭಿವೃದ್ಧಿಗಾಗಿ ಇನ್ನೂ ರೂ. 35 ಲಕ್ಷ ಮಂಜೂರು ಮಾಡಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಇವರು ತಮ್ಮ ಪತ್ರ ಸಂಖ್ಯೆ:ಡಿ 5 : ಬಿಯುಡಿ:ಸಿಆರ್:29:89-90, ದಿನಾಂಕ: 16-9-92ರಲ್ಲಿ ಸರ್ಕಾರವನ್ನು ಕೋರಿರುವರು.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ಗ್ರಂಥಾಲಯಂ,
ವಿಧಾನ ಸೌಧ, ಬೆಂಗಳೂರು,

ಬೈಲಹೊಂಗಲ ತಾಲ್ಲೂಕಿನ ಕೆಡೆಪ್ಪಿ ಪೂರ್ವ ಮಹಾವಿದ್ಯಾಲಯಕ್ಕೆ ವಿಜ್ಞಾನ ಉಪಕರಣಗಳ ಪೂರೈಕೆ

(1898): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಪೈಕಿ ದೊಡ್ಡವಾಡ ಗ್ರಾಮದಲ್ಲಿ ಸರ್ಕಾರಿ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯಕ್ಕೆ ಇದುವರೆವಿಗೂ ವಿಜ್ಞಾನ ಉಪಕರಣಗಳನ್ನು ಹಾಗೂ ಲೈಬ್ರರಿ ಪುಸ್ತಕಗಳನ್ನು ಪೂರೈಸದೆ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಆ ಮಹಾವಿದ್ಯಾಲಯಕ್ಕೆ ವಿಜ್ಞಾನ ಉಪಕರಣಗಳನ್ನು ಹಾಗೂ ಲೈಬ್ರರಿ ಪುಸ್ತಕಗಳನ್ನು ಪೂರೈಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು ? ಮತ್ತು ಇನ್ನು ಎಷ್ಟು ದಿವಸಗಳಲ್ಲಿ ವಿಜ್ಞಾನ ಉಪಕರಣಗಳನ್ನು ಪೂರೈಸಲಾಗುವುದು;

ಇ) ವಿಜ್ಞಾನ ಉಪಕರಣಗಳನ್ನು ಪೂರೈಸದೆ ಇರುವುದರಿಂದ ಅಲ್ಲಿಯ ಪ್ರಾಕ್ಟಿಕಲ್ ಕ್ಲಾಸ್‌ಗಳು ನಡೆಯದೆ ಇದ್ದ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಈ) ವಿಜ್ಞಾನದ ಉಪಕರಣಗಳನ್ನು ಪೂರೈಸದೆ ಇರುವುದರಿಂದ ಅಲ್ಲಿಯ ವಿದ್ಯಾರ್ಥಿಗಳಿಗೆ ಪ್ರಾಕ್ಟಿಕಲ್ ಮಾಡಲು ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ. ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-

ಅ) ಬಂದಿದೆ.

1991-92ರ ವರ್ಷದ ಅಂತ್ಯದಲ್ಲಿ ಈ ಕಾಲೇಜಿಗೆ ವಿಜ್ಞಾನ ವಿಭಾಗ ತೆರೆಯಲು ಅನುಮತಿ ನೀಡಿದೆ. 1992-93ರ ಸಾಲಿನಲ್ಲಿ ವಿಜ್ಞಾನ ಉಪಕರಣ; ಲೈಬ್ರರಿ ಪುಸ್ತಕ ಒದಗಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) ವಿಜ್ಞಾನ ಉಪಕರಣಗಳನ್ನು ಹಾಗೂ ಲೈಬ್ರರಿ ಪುಸ್ತಕಗಳನ್ನು ಸಧ್ಯದಲ್ಲಿಯೇ ಪೂರೈಕೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಬಂದಿದೆ.

ಈ) ಈ ಕೂಡಲೇ ಉಪಕರಣಗಳನ್ನು ಒದಗಿಸುವ ವ್ಯವಸ್ಥೆ ಮಾಡುತ್ತಿರುವುದರಿಂದ ಈ ತೊಂದರೆ ಇನ್ನು ಮುಂದೆ ಉದ್ಭವಿಸುವುದಿಲ್ಲ.

ದೊಡ್ಡವಾಡ ಗ್ರಾಮದ ಸರ್ಕಾರಿ ಸಂಯುಕ್ತ ಶಾಲೆಯಲ್ಲಿ ಖಾಲಿ ಇರುವ ಉಪನ್ಯಾಸಕರುಗಳ ಹುದ್ದೆ ಭರ್ತಿ

1313 (1898): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ದೊಡ್ಡವಾಡ ಗ್ರಾಮದಲ್ಲಿರುವ ಸರ್ಕಾರಿ ಸಂಯುಕ್ತ ಮಹಾವಿದ್ಯಾಲಯದಲ್ಲಿ ಇಂಗ್ಲೀಷ್ ಉಪನ್ಯಾಸಕರು ಇಲ್ಲದೆ ಇರುವ ಸಂಗತಿ ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇಲ್ಲಿ ಇಂಗ್ಲಿಷ್ ಉಪನ್ಯಾಸಕರನ್ನು ತುಂಬಲು ಸರಕಾರದವರು ಯಾವ ಕ್ರಮ ಕೈಗೊಂಡಿರುವರು;

ಇ) ಈ ಮಹಾವಿದ್ಯಾಲಯದಲ್ಲಿ ಕೇವಲ ಇಬ್ಬರೇ ವಿಜ್ಞಾನ ಶಿಕ್ಷಕರು ಇದ್ದ ಸಂಗತಿ ನಿಜವೆ;

ಈ) ಹಾಗಿದ್ದಲ್ಲಿ, ಉಳಿದ ಉಪನ್ಯಾಸಕರನ್ನು ತುಂಬಲು ಸರ್ಕಾರದವರು ಕ್ರಮ ಕೈಕೊಳ್ಳುವರೆ;

ಉ) ಉಪನ್ಯಾಸಕರು ಆಯ್ಕೆ ಆಗಿದ್ದರೂ ಮತ್ತು ವೆರಿಫಿಕೇಶನ್ ಆಗಿದ್ದರೂ ಸಹ ಇದುವರೆವಿಗೂ ಅವರಿಗೆ ಪೋಸ್ಟಿಂಗ್ ಕೊಡದೇ ಇದ್ದ ಕಾರಣಗಳೇನು; ಮತ್ತು ಇನ್ನು ಎಷ್ಟು ದಿನಗಳಲ್ಲಿ ಅವರಿಗೆ ಪೋಸ್ಟಿಂಗ್ ಕೊಡಲಾಗುವುದು ?

ಡಾ॥ ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಬಂದಿದೆ.

ಆ) ಅರ್ಹ ಪ್ರೌಢಶಾಲಾ ಶಿಕ್ಷಕರಿಗೆ ನಿಯಮ–32ರ ಮೇರೆಗೆ ಬಡ್ತಿ ನೀಡಿ ಭರ್ತಿ ಮಾಡಲಾಗಿದೆ. ಆದರೆ ಸದರಿ ಉಪನ್ಯಾಸಕರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಈಗ ವಿಶೇಷ ನೇಮಕಾತಿ ಮಾಡಲಾಗುತ್ತಿದ್ದು, ಸಧ್ಯದಲ್ಲಿಯೇ ಖಾಲಿ ಹುದ್ದೆಗಳನ್ನು ತುಂಬಲಾಗುವುದು.

ಇ) ನಿಜ.

ಈ) ರಾಜ್ಯದ ಎಲ್ಲ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿನ ಖಾಲಿ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಉ) ಸರ್ಕಾರಿ ಕಿರಿಯ ಕಾಲೇಜುಗಳಲ್ಲಿನ ಖಾಲಿ ಹುದ್ದೆಗಳನ್ನು ತುಂಬಲು ಅಂತಿಮ ಪಟ್ಟಿ ಪ್ರಕಟಿಸಿದೆ. ಪೊಲೀಸ್, ಜಾತಿ ಮತ್ತು ಆದಾಯ ಪ್ರಮಾಣಪತ್ರಗಳ ವೆರಿಫಿಕೇಶನ್ ನಡೆಯುತ್ತಿದ್ದು, ಪೂರ್ಣ ವರದಿ ಬಂದ ಕೂಡಲೆ ನೇಮಕಾತಿ ಆದೇಶ ನೀಡಲಾಗುವುದು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ನಿರುಪಯುಕ್ತವಾದ ವಾಹನಗಳನ್ನು ಮಾರಲು ಕ್ರಮ

(1899): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರತಿಯೊಂದೂ ಜಿಲ್ಲಾ ಸ್ಥಳದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಫೀಸಿನ ಮುಂದೆ ಆರೋಗ್ಯ ಇಲಾಖೆಯ ನಿರುಪಯುಕ್ತ ವಾಹನಗಳು ನಿಂತ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ನಿರುಪಯುಕ್ತವಾದ ವಾಹನಗಳನ್ನು ಮಾರಾಟ ಮಾಡಲು ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು;

ಇ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೇರಿದ ನಿರುಪಯುಕ್ತವಾದ ವಾಹನಗಳು

ಎಷ್ಟು ಇರುತ್ತವೆ; ಹಾಗೂ ಇವು ಎಷ್ಟು ದಿವಸಗಳಿಂದ ಹಾಗೇ ನಿಂತಿರುತ್ತವೆ; ವರ್ಷವಾರು ವಿವರ ನೀಡುವುದು.

ಈ) ನಿರುಪಯುಕ್ತವಾದ ವಾಹನಗಳು ಹಾಗೇ ನಿಂತಿರುವುದರಿಂದ ಆ ವಾಹನಗಳ ಕಿಮ್ಮತ್ತು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ;

ಉ) ಹಾಗಿದ್ದಲ್ಲಿ, ಈ ನಿರುಪಯುಕ್ತವಾದ ವಾಹನಗಳನ್ನು ಆದಷ್ಟು ಬೇಗನೆ ವಿಲೇವಾರಿ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):-

ಅ) ಗಮನಕ್ಕೆ ಬಂದಿದೆ.

ಆ) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿಯು ಆಯಾಯ ಜಿಲ್ಲೆಯ ಜಿಲ್ಲಾ ಪರಿಷತ್ ಆಡಳಿತ ವ್ಯಾಪ್ತಿಗೆ ಬರುತ್ತವೆ. ಸಂಬಂಧಿಸಿದ ನಿರುಪಯುಕ್ತ ವಾಹನಗಳನ್ನು ಆ ಜಿಲ್ಲೆಯ ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಗಳು ನಿಯಮಾವಳಿಯನ್ವಯ ನಿರುಪಯುಕ್ತಗೊಳಿಸಿ ಮಾರಾಟ ಮಾಡಲು ಕ್ರಮ ಕೈಗೊಳ್ಳುವರು.

ಇ) 207 ವಾಹನಗಳು 4- 5 ವರ್ಷಗಳಿಂದ ಇವೆ.

1987	–20 ವಾಹನಗಳು
1988	–36 ವಾಹನಗಳು
1989	– 25 ವಾಹನಗಳು
1990	– 45 ವಾಹನಗಳು
1991	– 45 ವಾಹನಗಳು
1992	– 34 ವಾಹನಗಳು

ಈ) ಗಮನಕ್ಕೆ ಬಂದಿದೆ.

ಉ) ಹೌದು.

ರಾಜ್ಯದಲ್ಲಿ ಪ್ರೌಢಶಾಲಾ ಶಿಕ್ಷಕರಿಗೆ ವಸತಿ ಸೌಕರ್ಯ

(2133): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಪ್ರೌಢಶಾಲಾ ಶಿಕ್ಷಕರಿಗೆ ವಸತಿ ಸೌಕರ್ಯವಿಲ್ಲದೇ ಇರುವುದರಿಂದ ಪ್ರೌಢಶಾಲಾ ಶಿಕ್ಷಕರು ಹಳ್ಳಿಗಳಿಗೆ ಹೋಗಿ ಕೆಲಸ ಮಾಡಲು ಹಿಂಜರಿಯುತ್ತಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಪ್ರೌಢಶಾಲಾ ಶಿಕ್ಷಕರಿಗೆ ವಸತಿ ಸೌಕರ್ಯ ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ;

ಇ) ಬೆಳಗಾವಿ ಜಿಲ್ಲೆಯಲ್ಲಿ ಬೆಳಗಾವಿ ಜಿಲ್ಲಾ ಪರಿಷತ್ತಿನವರು ವಸತಿ ಸೌಲಭ್ಯವನ್ನು ಕೊಟ್ಟಿರುವ ಪ್ರೌಢಶಾಲಾ ಶಿಕ್ಷಕರ ಸಂಖ್ಯೆ ಎಷ್ಟು;

ಈ) ಹಾಗಿದ್ದಲ್ಲಿ ಒಂದು ವೇಳೆ ಇನ್ನೂವರೆಗೂ ವಸತಿ ಸೌಲಭ್ಯವನ್ನು ಕೊಡದೇ ಇದ್ದಲ್ಲಿ ಇನ್ನು ಮುಂದೆಯಾದರೂ ಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ;

ಉ) ಬೆಳಗಾವಿ ಜಿಲ್ಲೆಯಲ್ಲಿ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನ ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾಗಿ ಪುನರ್ ವಸತಿ ಗ್ರಾಮಗಳಲ್ಲಿಯ ಪ್ರೌಢಶಾಲಾ ಶಿಕ್ಷಕರಿಗೆ ವಸತಿ ಸೌಲಭ್ಯ ಕಲ್ಪಿಸಿಕೊಂಡು ಕಾರ್ಯಕಾರಿ ಅಭಿಯಂತರರು, ನೀರಾವರಿ ಇಲಾಖೆ, ಮಲಪ್ರಭಾ ಪ್ರೊಜೆಕ್ಟ್ ನವಿಲು ತೀರ್ಥ ಇವರಿಗೆ ಸರ್ಕಾರದವರು ಆದೇಶ ನೀಡುವರೇ;

ಊ) ಮುಳುಗಡೆಯಾದ ಪುನರ್‌ವಸತಿ ಗ್ರಾಮಗಳಲ್ಲಿ ವಸತಿ ಸೌಕರ್ಯ ಕಲ್ಪಿಸುವುದು ಸರ್ಕಾರದ ಆದ್ಯ ಕರ್ತವ್ಯವಲ್ಲವೆ ?

ಡಾ॥ ಹೆಚ್.ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಇಲ್ಲ.

ಆ) ಇಲ್ಲ.

ಇ) ಯಾರಿಗೂ ನೀಡಿರುವುದಿಲ್ಲ.

ಈ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಉ) ಮುಳುಗಡೆ ಪ್ರದೇಶಗಳಲ್ಲಿನ ಜನರ ಪುನರ್ವಸತಿ ಬಗ್ಗೆ ಸರ್ಕಾರದ ನೀತಿಗನುಗುಣವಾಗಿ ಈ ವಿಷಯವನ್ನು ಪರಿಶೀಲಿಸಲಾಗುವುದು.

ಊ) ಮೇಲಿನಂತೆ.

ರಾಯಚೂರು ಜಿಲ್ಲೆಯ ಪ್ರಾಥಮಿಕ ಶಾಲಾ ಉಪಾಧ್ಯಾಯರ ವರ್ಗಾವಣೆ

(2115): ಶ್ರೀ ಎಂ.ಎಸ್. ಪಾಟೀಲ್ (ರಾಯಚೂರು):-

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1992ನೇ ಸಾಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗಾಗಿ ಸರ್ಕಾರವು ಮಾರ್ಗಸೂಚಿ ಆದೇಶವನ್ನು ಹೊರಡಿಸಲಾಗಿತ್ತಲ್ಲವೇ; ಆದರ ಪ್ರತಿಯನ್ನು ಲಗತ್ತಿಸಬೇಕು;

ಆ) ಈ ವರ್ಗಾವಣೆ ಮಾರ್ಗಸೂಚಿ ಸೂತ್ರಗಳನ್ವಯ ರಾಯಚೂರು ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲಿ ವರ್ಗಾಯಿಸಲಾಗಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ ಎಷ್ಟು; ಈ ತಾಲ್ಲೂಕುಗಳ ಶಿಕ್ಷಕರ ಸಂಖ್ಯೆ ಎಷ್ಟು; ವರ್ಗಾವಣೆ ಸಂಬಂಧ ಸರ್ಕಾರವು ನೀಡಿದ್ದ ಅಂತಿಮ ದಿನಾಂಕದ ನಂತರ ವರ್ಗಾವಣೆಯನ್ನು ಮಾಡಲಾಗಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ ಎಷ್ಟು ? ಅಥವಾ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸಲು ಆದೇಶ ನೀಡಲಾಗಿರುವುದೆಷ್ಟು; (ತಾಲ್ಲೂಕುವಾರು ಶಿಕ್ಷಕರ ಪಟ್ಟಿಯನ್ನು ನೀಡುವುದು)

ಇ) ರಾಯಚೂರು ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಕೊರತೆಗಳಿರುವ ಗ್ರಾಮಗಳು ಎಷ್ಟು ?

(ತಾಲ್ಲೂಕುವಾರು, ಗ್ರಾಮವಾರು, ಶಾಲಾವಾರು ವಿವರ ನೀಡುವುದು), ಈ ಕೊರತೆ ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮ ಏನು ?

ಈ) ಕಪ್ಪು ಹಲಗೆಯ ಕಾರ್ಯಾಚರಣೆ ಯೋಜನೆಯನ್ನು ಎಷ್ಟು ಹಂತದಲ್ಲಿ ಜಾರಿಗೊಳಿಸಲಾಗಿದೆ ಈಗಾಗಲೇ ಈ ಯೋಜನೆಗೆ ಒಳಪಡಿಸಲಾದ ಹಾಗೂ ಒಳಪಡಿಸಲಾಗದ ತಾಲ್ಲೂಕುಗಳು ಯಾವುವು ? ಕಾರಣಗಳೇನು ? ಪ್ರತಿಯೊಂದು ಹಂತದಲ್ಲಿ ಆಯ್ಕೆಗೊಂಡ ಶಿಕ್ಷಕರ ಸಂಖ್ಯೆ ಎಷ್ಟು ಅವರಲ್ಲಿ ಮಹಿಳಾ ಶಿಕ್ಷಕರ ಸಂಖ್ಯೆ ಎಷ್ಟು ?

ಡಾ॥ ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಹೌದು.

ಪ್ರತಿ ಲಗತ್ತಿಸಿದೆ.

ಆ) ತಾಲ್ಲೂಕು	ವರ್ಗಾವಣೆಯಾಗಿರುವ ಶಿಕ್ಷಕರ ಸಂಖ್ಯೆ	ತಾಲ್ಲೂಕುಗಳ ಶಿಕ್ಷಕರ ಸಂಖ್ಯೆ
ರಾಯಚೂರು	70	660
ಮಾನ್ವಿ	10	442
ಸಿಂಧನೂರು	50	376
ಗಂಗಾವತಿ	52	419
ಕೊಪ್ಪಳ	61	476
ಯಲಬುರ್ಗ	46	453
ಕುಷ್ಟಗಿ	64	459
ಲಿಂಗಸುಗೂರ	70	462
ದೇವದುರ್ಗ	40	368
	472	4115

ವರ್ಗಾವಣೆ ಅಂತಿಮ ದಿನಾಂಕದ ನಂತರ ವರ್ಗಾವಣೆ ಮಾಡಿದ ಪ್ರಾಥಮಿಕ ಶಾಲಾ ಶಿಕ್ಷಕರು – 32

ಸಹಾಯಕ ಶಿಕ್ಷಣಾಧಿಕಾರಿಗಳು ಒಂದು ತಿಂಗಳ ಮಟ್ಟಿಗೆ ಎರವಲು ಸೇವೆಯ ಮೇಲೆ ಈ ಕೆಳಗಿನಂ ಕಾರ್ಯನಿರ್ವಹಿಸಲು ಆದೇಶಿಸಿರುತ್ತಾರೆ.

ರಾಯಚೂರು	– 42	ಮಾನ್ವಿ	– 3
ಸಿಂಧನೂರು	– 00	ಗಂಗಾವತಿ	– 2
ಕೊಪ್ಪಳ	– 09	ಯಲಬುರ್ಗ	– 6
ಕುಷ್ಟಗಿ	– 14	ಲಿಂಗಸುಗೂರು	– 4
ದೇವದುರ್ಗ	– 28		

ಇ) 371 - ಪಟ್ಟಿ ಲಗತ್ತಿಸಿದೆ.

8ನೇ ಪಂಚವಾರ್ಷಿಕ ಯೋಜನೆ ಅಂತ್ಯದವರೆಗೆ ರಾಜ್ಯದ ಪ್ರತಿ ತರಗತಿಗೆ ಒಬ್ಬೊಬ್ಬ ಶಿಕ್ಷಕರನ

ಒದಗಿಸಲು ಸರ್ಕಾರ ಘೋಷಿಸಿದೆ. ಅದರಂತೆ ಪ್ರತಿ ವರ್ಷಕ್ಕೆ ಬೇಕಾಗುವ ಅಧಿಕ ಶಿಕ್ಷಕರ ಹಾಗೂ ಅದಕ್ಕೆ ಬೇಕಾಗುವ ಆಯವ್ಯಯದ ಬಗ್ಗೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಈ) 4 ಹಂತಗಳು

ಒಳಪಡಿಸಲಾದ ತಾಲ್ಲೂಕುಗಳು

1 ನೇ ಹಂತ	– ಮಾನ್ವಿ
2 ನೇ ಹಂತ	– ದೇವದುರ್ಗ, ಸಿಂಧನೂರು
3 ನೇ ಹಂತ	– ಲಿಂಗಸುಗೂರು, ಗಂಗಾವತಿ
4 ನೇ ಹಂತ	– ರಾಯಚೂರು, ಕೊಪ್ಪಳ, ಯಲಬುರ್ಗ, ಕುಷ್ಟಗಿ

ಒಳಪಡಿಸಲಾಗದ ತಾಲ್ಲೂಕುಗಳು ಯಾವುವು ಇಲ್ಲ.

ಆಯ್ಕೆಗೊಂಡ ಶಿಕ್ಷಕರ ಸಂಖ್ಯೆ		ಮಹಿಳಾ ಶಿಕ್ಷಕರ ಸಂಖ್ಯೆ
1 ನೇ ಹಂತ	91	44
2 ನೇ ಹಂತ	191	67
4 ನೇ ಹಂತ	290	64
	572	175

3ನೇ ಹಂತದಲ್ಲಿನ ಶಿಕ್ಷಕರ ಹುದ್ದೆಗಳನ್ನು ತುಂಬಲು ಪ್ರಕ್ರಿಯೆ ಪ್ರಾರಂಭವಾಗಿದೆ.

ಶಿಕ್ಷಕರ ಕೊರತೆ : ಖಾಲಿ ಇರುವ ಗ್ರಾಮಗಳ ಹೆಸರು

ಕ್ರ.ಸ.	ತಾಲ್ಲೂಕು:ಗ್ರಾಮ: ಶಾಲಾವಾರು ಶಿಕ್ಷಕರ ಕೊರತೆ ಇರುವ ಶಾಲೆಗಳು		ಬೇಕಾಗುವ ಶಿಕ್ಷಕರು
1.	ಹಿ. ಪ್ರಾ.ಶಾಲೆ.	ರಾಂಪೂರ	1
2.	ಕಿ.ಪ್ರಾ. ಶಾಲೆ	ಬಸವನದುರ್ಗ	1
3.	”	ಸಂಗಾಪುರು	1
4.	ಮಾ.ಹಿ. ಪ್ರಾ. ಶಾಲೆ	ಬಬೂದಗುಂಪಾ	2
5.	ಹಿಪ್ರಾ.ಶಾಲೆ	ನಂದಿಹಳ್ಳಿ	1
6.	”	ಕಾರಟಗಿ	2
7.	”	ಬಸವಣ್ಣ ಕ್ಯಾಂಪ್	1
8.	ಕಿ ಪ್ರಾ ಶಾಲೆ	ಪನ್ನಾಪುರ	1
9.	ಹಿ ಪ್ರಾ ಶಾಲೆ	ಮೈಲಾಪುರ	1
10.	ಕಿ ಪ್ರಾ ಶಾಲೆ	ಹಿರೇಡಂಕನಕಲ್	1
11.	ಹಿ ಪ್ರಾ ಶಾಲೆ	ಹಿರೇಬೆಣಕಲ್	1
12.	ಕಿ ”	ಚಿಕ್ಕಬೆಳಕಲ್	1
13.	ಹಿ ”	ಒಬಳಬಂಡಿ	1
14.	ಕಿ ”	ಮರಕುಂಬಿ	1
15.	ಮಾಹಿ ”	ಹೆರೂರ್	2
16.	ಕಿ ”	ಹೆಬ್ಬಾಳ ಮಂಗಯ್ಯ ಕ್ಯಾಂಪ್	1
17.	ಹಿ ”	ಮುಸ್ಟುರು	1
18.	ಕಿ ”	ಸತ್ಯರಾಜಕ್ಯಾಂಪ್	1
19.	ಹಿ ”	ಜೀರಾಳ	1
20.	ಕಿ ”	ಒಡ್ಡರಟ್ಟಿ (ತೆಲುಗು)	1
21.	ಹಿ ”	ಅರಳ	1
22.	ಹಿ ”	ಒಡ್ಡರಟ್ಟಿ ಕ್ಯಾಂಪ್.	1
23.	ಹಿ ”	ಬಸಾಪಟ್ಟಣ	2
24.	ಕಿ ”	ಹನುಮನಾಳು	1
25.	ಕಿ ”	ಹಿರೇಕೇಡ್	1
26.	ಕಿ ”	ಗೋಡಿಹಾಳ	1
27.	ಕಿ ”	ಈಳಿಗನೂರು	1
28.	ಕಿ ”	ಗುಂಡೂರು ಕ್ಯಾಂಪ್	1
29.	ಹಿ ”	ಆಚಾರ್ ನರಸಾಪುರ್	2
30.	ಹಿ ”	ಹೊಸಳ್ಳಿ	1
31.	ಹಿ ”	ಯರಡೋಣಕ್ಯಾಂಪ್	
32.	ಮಾಹಿ ”	ಹಿರೇಜಂತಕಲ್	2
33.	ಹಿ ”	(ಕೇಂದ್ರ) ಗಂಗಾವತಿ	3
34.	ಹಿ ”	ಕಿಲಾ ಗಂಗಾವತಿ	1

35.	ಬಾಲಕಿಯರ ಮಾಹಿ "	ಗಂಗಾವತಿ	1
36.	" "	ಕನಕಗಿರಿ	1
37.	" "	ನವಲಿ	1
38.	ಹಿ "	ಆಗೋಲಿ	1
39.	ಹಿ "	ಡಾಣಾಪುರ	1
40.	ಹಿ "	ಬೇವಿನಹಾಳ	1
41.	ಹಿ "	ಯರಡೋಣ	1
42.	ಹಿ "	ಚಿಕ್ಕಮಾದಿನಾಳ (ಶಾಲಾಶಾಯಿ)	1
43.	ಕಿ "	ನಾಗನಕಲ್ ಕ್ಯಾಂಪ್ (")	1
44.	ಹಿ "	ಬೀರಾಳ ಕಲ್ಗುಡಿ "	1
45.	ಹಿ "	ಗೌರಿಪುರ	1
46.	ಕಿ "	ಕರಡೇರ ಓಣಿ ಹುಲಿ ಹೈದರ	1
			54

ಮಾನ್ವಿ ತಾಲ್ಲೂಕು

47.	ಮಾಹಿ "	ಬಲ್ಲಟಗಿ	5
48.	ಹಿ "	ಅಡವಿ ಅಮರೇಶ್ವ	2
49.	ಹಿ "	ಚಿಕಲಪರವಿ	2
50.	ಹಿ "	ಹಳ್ಳಿಹೊಸೂರು	1
51.	ಹಿ "	ತೊರಣದಿನ್ನಿ	4
52.	ಹಿ "	ಕೊರವಿ	2
53.	ಕಿ "	ರಂಗದಾಳ	1
54.	ಕಿ "	ಉಮಳಿಹೊಸೂರ	2
55.	ಹಿ "	ಹರವಿ	4
56.	ಹಿ "	ಹಾಲಾಪುರ	4
57.	ಹಿ "	ನೀರಮಾನ್ವಿ	4
58.	ಹಿ ಪಾ ಶಾ	ಆರೋಲಿ	3
59.	"	ಹೊಕ್ರಾಣಿ	–
60.	"	ಅಮೀನಗಡಾ	4
61.	"	ಕೊಟ್ನೆಕಲ್	4
62.	"	ಮಲ್ಲಟ	4
63.	"	ಹಿರೇಹುಣಸಿ	–
64.	"	ದೇವಿಪುರ	–
65.	"	ಕಪ್ಪಗಲ್	2
66.	"	ಮುಷ್ಟೂರ್	–
			51

ಸಿಂಧನೂರ್ ತಾಃ

67.	"	ಉಪ್ಪಾರವಾಡಿ	5
68.	"	ಬಡೀಬೇಸ್	6
69.	"	ಸುಕಾಲಿಪೇಟ್	4
70.	"	ಕೊಟಸಿಂಧನೂರು	2
71.	"	ಉಮಲೂಟಿ	1
72.	"	ಪಗಡದಿನ್ನಿ	1
73.	ಕಿಪ್ರಾ.ಶಾ	ಮುಳ್ಳೂರ	1
74.	"	ಕಲ್ಲೂರು	1
75.	ಹಿಪ್ರಾ.ಶಾ	ವಿರುಪಾಪುರ	1
76.	ಕಿಪ್ರಾ.ಶಾ	ಆರಳನಳ್ಳಿ	1
77.	ಹಿಪ್ರಾ.ಶ	ಬೊಮ್ಮನಾಳ	1
78.	ಕಿಪ್ರಾ.ಶಾ	ಹನುಮಾನ್ ಕ್ಯಾಂಪ್	1
79.	"	ಜಲವಾಡಗಿ	1
80.	ಹಿಪ್ರಾ.ಶಾ	ಚಿನ್ನಹಳ್ಳಿ	
81.	"	ಮಲಕಾ ಪುರ	1
82.	"	ಸಿದ್ದರಾಮಪುರ	1
83.	"	ಹಂಚಿನಾಳ್	2
84.	"	ಗೋರೆಬಾಳ್	1
85.	"	ಜಾಲಿಹಾಳ	2
86.	"	ಜಾಲಿಹಾಳ ಕ್ಯಾಂಪ್	2
87.	"	ಹಂಚಿನಾಳ್ ಕ್ಯಾಂಪ್	1
88.	"	ಬಸಾಪುರ ಕೆ	1
89.	ಕಿ ಪ್ರಾ ಶಾಲೆ	ಕೊಟೆತುರವಿಹಾಳ	2
90.	ಹಿ "	ಹಿರೇಬೆರಗಿ	1
91.	"	ಚಿಕ್ಕಬೆರಗಿ	2
92.	"	ಕಣ್ಣೂರ	1
93.	"	ಹಂಚಿನಾಳ	1
94.	ಮಾಹಿಪ್ರಾ.ಶಾ	ತುರುವಿಹಾಳ	4
95.	ಹಿಪ್ರಾ.ಶಾ	ಕಲಮಂಗಿ	2
96.	ಹಿ ಪ್ರಾ ಶಾ	ಗುಡದೂರು	2
97.	"	"	1
98.	"	ಉದ್ವಾಳ	
99.	"	ಮಾಡಶಿರವಾರ	2
100.	"	ವಳಬಳ್ಳಾರಿ	2
101.	"	ಉಪ್ಪಾಳ	1
102.	"	ಸೋಮಲಾಪುರ	1

103.	ಮಾ "	ಸಾಲಕುಂದ	2
104.	ಹಿ ಪ್ರಾ ಶಾ	ಮುಕುಂದ	2
105.	"	ಹುಡಾ	2
106.	"	ರೌಡಕುಂದಾ	2
107.	"	ಸಿಂಗಾಪುರ	1
108.	"	ಬಂಗಾರಿ ಕ್ಯಾಂಪ್	2
109.	"	ಗುಂಡಾ	1
110.	"	ಹೊಗರನಾಳ	1
111.	"	ಉಪ್ಪಲದೊಡ್ಡಿ	2
112.	"	ತಿಡಿಗೋಳ	2
113.	"	ಕುರಕುಂದಿ	1
			77

ಲಿಂಗಸುಗೂರು ತಾ:

114.	ಕಿ ಪ್ರಾ ಶಾಲೆ	ಮಿಂಚೇರಿ	1
115.	"	ತೀರ್ಥಬಾವಿ	1
116.	"	ಯರದೊಡ್ಡಿ	1
117.	"	ಗೊರಬಾಳ	1
118.	"	ಬುದ್ದೀನಿ (ಸಾ)	1
119.	"	ತವಗಾ	1
120.	"	ಕಡ್ದೋಣ	1
121.	"	ಹಡಗಲಿ	1
122.	"	ವ್ಯಾಕರನಾಳ	1
123.	ಹಿ.ಪ್ರಾ.ಶಾ. (ಬಾಲಕಿಯರ)	ಮಸ್ಕಿ	2
124.	ಹಿ ಪ್ರಾ ಶಾಲೆ	ಅಂಸದೊಡ್ಡಿ	2
125.	"	ಗೋನವಾರ	1
126.	"	ಹೂವಿನಭಾವಿ	1
127.	"	ಹುನಕುಂಟ	1
128.	"	ಯಲಗಿಟ್ಟ	1
129.	"	ಚಿತಾಪೂರು	1
130.	"	ಮಟ್ಟೂರು	1
131.	"	ಗೆಜ್ಜಲಗಟ್ಟ	1
132.	"	ಹಟ್ಟಿಕ್ಯಾಂಪ್	2
133.	"	ಮಸ್ಕಿ	2
134.	ಪ್ರಾ.ಶಾ. ನಾಯಕವಾಡಿ	ಮಸ್ಕಿ	1
135.	ಹಿ ಪ್ರಾ ಶಾಲೆ	ಮೆದಕಿನಾಳ	2

136.	,,	ನಾಗಲಾಪುರ	2
			29

ದೇವದುರ್ಗ ತಾಲ್ಲೂಕು

137.	ಕಿ ಪ್ರಾ ಶಾಲೆ	ಕೋಳೂರು	1
138.	,,	ಗೋಪನದೇವರಹಳ್ಳಿ	1
139.	,,	ಶಾವಂಡಗೇರಿ	2
140.	ಹಿ ಪ್ರಾ ಶಾ	ಜಾಗಟಗಲ್	1
141.	,,	ಗಾಣದಾಳ	1
142.	,,	ಬಂಕದೊಡ್ಡಿ	1
143.	,,	ಮಂಡಿತಾಂಡಾ	1
144.	,,	ಕರಿಗುಡ್ಡ	1
145.	,,	ಹೇಮನೂರ	1
146.	,,	ಹೇಮನಾಳ	1
147.	,,	ಮರರಕಲ	1
148.	,,	ಸುಂಕೇಶ್ವರಹಾಳ	1
149.	,,	ಗಬ್ಬೂರ	1
150.	,,	ಕೊಪ್ಪಳ	1
151.	ಪ್ರಾ.ಶಾ. ಬಾಪೂಜಿ	ದೇವದುರ್ಗ	1
152.	ಹಿ ಪ್ರಾ ಶಾ	ಮುಂಡರಗಿ	1
153.	ಹಿ ಪ್ರಾ ಶಾ	ಕೊತ್ತದೊಡ್ಡಿ	1
154.		ಜೋಳದಹೆಡ್ಗಿ	1
155.		ರಾಮದುರ್ಗ	1
156.		ಕನ್ಯಾರಾಮದುರ್ಗ	1
157.		ಕನ್ಯಾಗಬ್ಬೂರು	1
158.		ಹೇರುಂಡಿ	1
159.		ಕ್ಯಾದಿಗೇರ	1
160.		ನಾಗೋಲಿ	1
			26 + 21 = 47

ಸ ಹಿ ಪ್ರಾ ಶಾ	ನಾಗಡದಿನ್ನಿ	2
,,	ಚಿಕ್ಕ ಬೂದೂರು	2
ಮಾಹಿಪ್ರಾಶಾ	ಮಲದಕಲ್	2
ಹಿಪ್ರಾಶಾ	ಜಾಲಹಳ್ಳಿ	2
,,	ಅಲಕೋಡ	3
,,	ಹಿರೇಬೂದೂರು	2
,,	ಬೊಮ್ಮನಾಳ	2
ಕಿಪ್ರಾಶಾ	ಹೊಸೂರು ಸಿದ್ದಾಪುರ	2
,,		

"		ಪಂಡ್ಯಾನ	2
"		ಗೋವಿಂದಪಲ್ಲಿ	2
			23

ದೊಬಾರ್ಗ್

161.	ಮಾಹಿಪ್ರಾಶಾ	ಯಲಬುರ್ಗಾ	5
162.	"	ಯಲಬುರ್ಗಾ	7
163.	"	ಮುದೋಳ	1
164.	ಹಿ ಪ್ರಾ ಶಾ	ಹಿರೇಮ್ಯಾಗೇರಿ	1
165.	"	ಸಂಕನೂರ	1
166.	"	ರಾಜೂರ	1
167.	"	ಕಲ್ಲೂರ	3
168.	"	ದ್ಯಾಂಪೂರ	1
169.	"	ಮಸಬಿಹಂಚಿನಾಳ	1
170.	"	ಬೆಳಕಲ್	1
171.	"	ಮೀರಾಪುರ	1
172.	"	ಭಾನಾಪುರ	1
173	"	ನಿಟ್ಟಾಲಿ	1
174.	"	ಬನ್ನಿಕೊಪ್ಪ	2
175.	"	ಲಕಮಾಪುರ	1
176.	"	ಮಾಳೆಕೊಪ್ಪ	1
177.	"	ಬಿನ್ನಾಳ	2
178.	"	ಎರೆಹಂಚಿನಾಳ	2
179.	"	ತೊಂಡಿಹಾಳ	1
180.	"	ಬಂಡಿಹಾಳ	1
181.	"	ಸಿದ್ನಿಕೊಪ್ಪ	1
182.	"	ವಕರಮುಡಿ	3
183.	"	ಬಳಕೇರಿ	3
184.	"	ಕುಡಗುಂಟಿ	1
185.	"	ಮಲಕಸಮುದ್ರ	1
186.	"	ಬೇವೂರ	4
187.	"	ವಣಗೇರಿ	2
188.	"	ಮುರುಡಿ	3
189	"	ನೆಲಬೇರಿ	2
190.	ಕಿ ಪ್ರಾ ಶಾ	ವಟಪರ್ವಿ	1
191.	"	ಕೋಳಿಹಾಳ	1
192.	ಮಾಹಿಪ್ರಾಶಾ	ಮಂಗಳೂರು	13
193.	ಹಿ ಪ್ರಾ ಶಾ	ರ್ಯಾವಣಕಿ	1

194.	ಕುಧ್ರಿಮೋತಿ	ಕುದುರೆ ಮೋತಿ	2
195.	ಹಿ ಪ್ರಾ ಶಾ	ವರಾಟಂದಿನ್ನಿ	2
196.	ಹುಣಿಸಿಹ್ಯಾಳ	ಹುಣಿಸಿಹ್ಯಾಳ	2
197.	ಹಿ ಪ್ರಾ ಶಾ	ನಿರೇಅರಳಿಹಳ್ಳಿ	2
198.	''	ವಜ್ರಬಂಡಿ	1
199.	''	ತರಲಕಟ್ಟಿ	2
200.	''	ಅರಗಲ ಬಂಡಿ	2
201.	''	ತಾಳಕೇರಿ	3
202.	''	ಹಿರೇವಡ್ಡರಕಲ್	1
203.	''	ಬಂಡಿ	2
204.	''	ಬೆಳೂಟಗಿ	2
205.	''	ಹೊಸಹಳ್ಳಿ	2
206.	''	ಎಡಿಯಾಪುರ	1
			95

ಕೊಪ್ಪಳ

207.	ಬಾಲಕಿಯರ ಮಾಹಿಪ್ರಾಶಾ	ಕವಲೂರು	3
208.	ಹಿ ಪ್ರಾ ಶಾ	ಗುಡಿಗೇರಿ	1
209.	ಕಿ ಪ್ರಾ ಶಾ	ಮುರ್ಲಾಪುರ	1
210.	''	ಬೆಳಗಟ್ಟಿ	1
211.	''	ಅಳವಂಡಿ	4
212.	''	ಹಟ್ಟಿ	3
213.	''	ಅಳವಂಡಿ	1
214.	''	ಕಂಪ್ಲಿ	1
215.	''	ನಿಲೋಗಿ	1
216.	''	ಕೇಸಲಾಪುರ	1
217.	''	ಹೈದರನಗರ	1
218.	''	ರಘುನಾಥಹಳ್ಳಿ	1
219.	ಹಿ ಪ್ರಾ ಶಾಲೆ	ತಿಗರ	2
220.	,,	ಬೋಚನಹಳ್ಳಿ	3
221.	ಕಿ ಪ್ರಾ ಶಾ	ನೀರಲಗಿ	2
222.	''	ಮುತ್ತೂರು	2
223.	''	ಹುನಕುಂಟಿ	1
224.	''	ಬೈಲಾಪುರ	1
225.	''	ಮಾರನಹಳ್ಳಿ	1
226.	ಮಾ ಹಿ ಪ್ರಾ ಶಾ	ಹಿರೇಸಿಂಧೋಗಿ	2
227.	''	ಹಂದ್ರಾಳ	1
228.	''	ಹೊರತಟ್ನಾಳ	1

229.	"	ಹೆಣವಾಳ	1
230.	"	ಕಾಟ್ರಳ್ಳಿ	1
231.	ಮಾ ಹಿ ಪ್ರಾ ಶಾ	ಗುನ್ನಳ್ಳಿ	1
232.	"	ಚಿಕ್ಕಸಿಂದೋಗಿ	1
233.	"	ವೆದಗನಾಳ	1
234.	"	ಬೂದಿಹಾಳ	1
235.	"	ಮಂಗಳಾಪುರ	1
236.	"	ಬೆಸರಳ್ಳಿ	2
237.	ಹಿ ಪ್ರಾ ಶಾ	ಗ್ಯೂಡ್ಲನೂರ	4
238.	"	ಮೈನಳ್ಳಿ	1
239.	"	ಡೊಂಬ್ರಹಳ್ಳಿ	1
240.	"	ಬೀಳೂರ	2
241.	"	ಬಿಕನಳ್ಳಿ	1
242.	ಮಾಹಿಪ್ರಾಶ	ಭಾಗ್ಯನಗರ	13
243.	"	ಹಲಗೇರಿ	3
244.	"	ಕೊಳೂರು	1
245.	"	ಎತ್ತಿನಹಟ್ಟಿ	1
246.	"	ದದೇಗಲ್	1
247.	"	ಗಿಣಿಗೇರಾ	2
248.	"	ಗುಡಹಳ್ಳಿ	–
249.	"	ಹಿರೇಬಗನಾಳ	1
250.	ಹಿ ಪ್ರಾ ಶಾಲೆ	ಕುಣಿಕೇರಿ	1
251.	ಕಿ ಪ್ರಾ ಶಾಲೆ	ಅಲ್ಲಾನಗರ	1
252.	"	ಕಳೀಕನಕಾಪುರ	1
253.	"	ಹೊಸಕನಕಪುರ	1
254.	"	ಚಿಕ್ಕಬಗನಾಳ	1
255.	"	ಹಾಲವರ್ತಿ	1
256.	"	ಕರ್ಕಿಹಳ್ಳಿ	1
257.	"	ಕುಣಿಕೇರಿ ತಾಂಡಾ	1
258.	"	ಬಸಾಪುರ	1
259.	"	ಕುಟಗನಹಳ್ಳಿ	1
260.	"	ಗಬ್ಬೂರ	1
261.	"	ಕಿಡದಾಳ	1
262.	"	ಮುದ್ದಬಳ್ಳಿ	1
263.	"	ಬಹದ್ದೂರಬಂಡಿ	1
264.	"	ಗೊಂಡಬಾಳ	1
265.	"	ಲಾಚನಕೇರಿ	1

266.	"	ಹ್ಯಾಟಿ	4
267.	ಕಿ ಪ್ರಾ ಶಾಲೆ	ಚುಕ್ಕನಕಲ್	1
268.	"	ಹೂವಿನನಾಳ	1
269.	"	ಹೊಸಹಳ್ಳಿ	1
270.	"	ಮುಂಡರಗಿ	1
271.	ಹಿ ಪ್ರಾ ಶಾಲೆ	ಚಿನ್ನಾಳ	1
272.	"	ಕಾಲಪೇಟೆ ಕಿನ್ನಾಳ	6
273.	"	ಮಾದಿನೂರು	1
274.	ಕಿ ಪ್ರಾ ಶಾಲೆ	ಬುದಶೆಟ್ಟಿನಾಳ	1
275.	ಹಿ ಪ್ರಾ ಶಾಲೆ	ಲೇಬಗೇರಿಂಚಿ	1
276.	ಕಿ ಪ್ರಾ ಶಾಲೆ	ಮುದ್ಲಾಪುರ	1
277.	ಹಿ ಪ್ರಾ ಶಾಲೆ	ಕಾಮನೂರ	1
278.	"	ಕಲ್‌ತಾವರಗೇರಾ	1
279.	"	ಹಾಲಹಳ್ಳಿ	2
280.	"	ಓಜನಹಳ್ಳಿ	1
281.	ಕಿ ಪ್ರಾ ಶಾಲೆ	ಹಟ್ಟಿ	1
282.	"	ಕಲಕೇರಿ	1
283.	"	ನರೇಗಲ್	1
284.	"	ಚಿಲವಾಡಗಿ	1
285.	"	ಟಣಕನಕಲ್	1
286.	"	ಹನುಮನಹಳ್ಳಿ	1
287.	"	ಭೀಮನೂರು	1
288.	ಹಿ ಪ್ರಾ ಶಾಲೆ	ಹಿರೇಕಲ್‌ಗಡ	2
289.	"	ಹಿರೇಬೊಮ್ಮನಾಳ	3
290.	"	ಚಿಕ್ಕಬೊಮ್ಮನಾಳ	1
291.	"	ಚಿಲಕಮುಕಿ	2
292.	ಕಿ ಪ್ರಾ ಶಾಲೆ	ಹನುಮನಹಟ್ಟಿ	1
293.	"	ಕೊಡದಾಳ	1
294.	"	ಚಳ್ಳಾರಿ	1
295.	"	ಚಾಮ್ಲಾಪುರ	1
296.	"	ಯಮಲಗೇರಿ	1
297.	"	ತಾಳಕನಕಾಪುರ	1
298.	ಕಿ ಪ್ರಾ ಶಾಲೆ	ಕೊಕನಪಳ್ಳಿ	2
299.	"	ಇದರಗಿ	4
300.	"	ಜಬ್ಬಲಗುಡ್ಡ	1
301.	"	ಮೆತ್ತಗಲ್	1
302.	"	ಹಾಸಗಲ್	1

303.	ಕಿ ಪ್ರಾ ಶಾಲೆ	ಒಣಬಳ್ಳಾರಿ	2
304.	"	ಚಿನ್ನಾಪುರ	1
305.	"	ಚಿಕ್ಕಸೂಳಿಕೇರಿ	1
306.	"	ಡಂಗನಾಳ	1
307.	"	ಉಪಲಾಪುರ	1
308.	"	ದನಗಳದೊಡ್ಡಿ	1
309.	ಮಾಹಿಪ್ರಾಶಾ	ಹಿಟ್ನಾಳ	1
310.	ಹಿ ಪ್ರಾ ಶಾಲೆ	ಬೂದಗುಂಪ	3
311.	ಕಿ ಪ್ರಾ ಶಾಲೆ	ಲಿಂಗದಹಳ್ಳಿ	1
312.	"	ಶಹಾಪುರ	2
313.	ಕಿ ಪ್ರಾ ಶಾಲೆ	ನಾಗೇಶನಹಳ್ಳಿ	1
314.	ಮಾ ಹಿ ಪ್ರಾ ಶಾಲೆ	ಹುಲಗಿ	9
315.	ಹಿ ಪ್ರಾ ಶಾಲೆ	ಮುನಿರಾಬಾದ್	2
316.	"	ಹೊಸಹಳ್ಳಿ	2
317.	ಕಿ ಪ್ರಾ ಶಾಲೆ	ಅಗಳಕೇರಾ	6
318.	ಹಿ ಪ್ರಾ ಶಾಲೆ	ಬಂಡಿಹರ್ಲಾಪೂರ	4
319.	"	ಶಿವಪೂರ	1
320.	ಕಿ ಪ್ರಾ ಶಾ	ಬಸಾಪೂರ	1
321.	"	ಮಹಮದ್‌ನಗರ	1
322.	ಬಿ.ಹೆಚ್.ಎಂ.ಎಸ್.	ಕೊಪ್ಪಳ	1
323.	ಮಾಹಿಪ್ರಾಶಾ	ಕೊಪ್ಪಳಸ್ಟೇಷನ್ ರೋಡ್	6
324.	ಕೇಂದ್ರ ಹಿಪ್ರಾಶಾ	ಕೊಪ್ಪಳ	1
325.	ಕಿ ಪ್ರಾ ಶಾಲೆ	ದಿಡ್ಡಿಕೇರಿ	1
326.	"	ಕೊಟಗಾರಗೇರಾ	1
327.	"	ಗಾಂಧಿನಗರ	1
328.	"	ಸರದಾರಗಲ್ಲಿ	3
329.	"ಉರ್ದು	ಕೊಪ್ಪಳ	1
330.	ಮಾಹಿಪ್ರಾಶಾ	ಟಿ.ಬಿ.ಪಿ. ಮುನಿರಾಬಾದ್	–
			204

ಕುಷ್ಟಗಿ ತಾಲ್ಲೂಕು

331.	ಕಿ ಪ್ರಾ ಶಾಲೆ	ಜೂಲಕುಂಟಿ	1
332.	"	ಮೇಗೂರ	2
333.	"	ಟೆಂಗುಂಟಿ	2
334.	"	ಕೆ. ಹೊಸೂರ	1
335.	"	ಗುಡದೂರ	1
336.	"	ಚಿಕ್ಕಳಕಿ	1

337.	”	ಕುಂದಾಪುರ	1
338.	”	ನೆರೆಬಂಚಿ	1
339.	”	ಗಮಗೇರಿ	1
340.	”	ಗಂಗನಾಳ	1
341.	”	ನಾಗರಾಳ	1
342.	”	ಕುರುಬನಾಳ	1
343.	”	ಕೊಡತರೇರಿ	1
345.	”	ಬಸಾಪೂರ	1
346.	”	ಬಾದಿಮನಾಳ	1
346.	”	ಗುಡದುರಕಲ್	1
347.	”	ಪರಮನಹಟ್ಟಿ	1
348.	”	ಮಾಸ್ತಿ ಕಟ್ಟಿ	2
349.	”	ಪರಸಾಪುರ	1
350.	”	ಕನಕೊಪ್ಪ	1
351.	”	ತೋಪಲಕಟ್ಟಿ	1
352.	”	ಹೊನಗಡ್ಡಿ	1
353.	”	ಹಿರೇಮುಕುತಿಶನಾಳ	1
354.	”	ಸಿದ್ದಾಪುರಾ	1
355.	”	ಬಚಾಳ	2
356.	”	ಕಾಲಬೂದೂರ	2
359.	”	ಮೆಣಸಗೇರಿ	1
360.	”	ಕಲಕೇರಿ	1
361.	”	ಹೆಸರೂರು	1
362.	”	ಹೊಸಳ್ಳಿ	1
363.	”	ಮರಿಕೇರಿ	2
364.	”	ಮಲಕಾಪುರ	1
365.	”	ಸೇಬಿನಕಟ್ಟೆ	2
366.	”	ಮರ್ತಗೇರಿ	1
366.	”	ಕಲ್ಲಗೋನಾಳ	1
367.	”	ಚಂದ್ರಗಿರಿ	1
368.	”	ಮಾನುಟಗಿ	1
369.	”	ಬೀಳಗಿ	1
370.	”	ಜಾಲಿಗಾಳ	1
371.	”	ಶಾಖಾಪೂರ	1
			47

1. Name of school and village having shortage of teachers

Sl.No.	Name of School	Shortage of teachers
1.	HPS, KEB Colony, Raichur	01
2.	HPS, Thimmapurpet	02
3.	HPS, Elebichali	03
4.	HPS, Gilkesurur	05
5.	HPS, Eganur	03
6.	HPS, Rampur	02
7.	HPS, Heggasanahalli	01
8.	HPS, Devasugur	05
9.	HPS, Chikkasugur	02
10.	HPS, Sulthanpur	01
11.	HPS, Manchalapur	02
12.	HPS, Talamari	02
13.	HPS, Arab Mohalla (Urdu) Raichur	02
		31

GOVERNMENT OF KARNATAKA

No. ED 162 DPI 92

Karnataka Government Secretariat
M.S. Building,
Bangalore, dated: 20th April 92.

OFFICIAL MEMORANDUM

Sub: Transfer of Government servants - guidelines for transfer of Primary and High School teachers in the Department of Public Instruction - Policy regarding.

Ref: 1. Govt. O.M. No. DPAR 2 STR 90, dt, 29.3.1990
2. Govt. letter No. ED 223 SCB 91 dt. 12.6.91.
3. Govt. O.M. No. ED 223 SLB 91, dt. 21.6.91.

The current General policy regarding transfer of Government servants was laid down by the Government in the DPAR in 1985. Further supplementary instructions have been also issued from time to time to regulate the transfers. Similarly guidelines were also issued by the Government in Education Department regarding transfers of Primary and High School Teachers in the Department of Public Instructions. The policy regarding transfers has been reviewed after careful examination of the above guidelines and the following directions are issued in supersession of all previous orders on this subject.

I. Period of stay at a place:

The minimum and maximum period of stay of Government servant (of all cadres) at a place shall be as follows:

Classification of Govt. servant	Minimum period of stay at a place (years)	Maximum period of stay at a place (years)
Group 'A'	3	4
Group 'B'	3	4
Group 'C'		
i) Secondary School Teachers	3	10
ii) Primary School Teachers	3	10
iii) Ministerial Staff	3	5
Group 'D'	3	10

Note: The minimum or maximum period of stay should be reckoned with reference to the period of stay in place, irrespective of the period for which the Government servant has worked in individual posts or offices at the same place.

Exceptions: The minimum/maximum period of stay shall not apply to transfer of the following cases:

i) Care takers or families of defence personnels

ii) Single Women employee

iii) Teachers/Officers working in experimental project schools and specialised fields with special training and qualifications.

iv) Office - bearers of Employees Association:

Where an office - bearer of the Karnataka State Government Employees' Association at the District or Taluk level is normally due for transfer in the middle of the term of office as an office - bearer of the Association, he may be continued till the term expires. If elections are not held within 3 months from the date of expiry of the term of office, he may be transferred. If he is re-elected, he may be continued in the same place till the second term of his office expires and thereafter, he may be transferred even if he is elected for the third time, Transferring authorities should satisfy themselves before transferring an office - bearer of Association that he has completed two years.

v) Physically handicapped employees.

vi) Government servants on return from leave for a period 'exceeding

120 days need not be posted to same place by disturbing the person already working.

vii) On Health grounds strictly for the diseases specified in the orders issued by the D.P.A.R.

II. Transferring Authority:

The officers competent to transfer shall do so without the interference of the Zilla Parishad (Independent of their powers)

Sl.No. Cadre	Jurisdiction	Authority	Premature Permission (Authority)
1. Primary School Teachers and Head Masters	within the Taluk	Asst. Educational Officers	D.D.P.I.
2. Primary School Teachers/Head Masters/ and Secondary School Teachers/ Inspectors of School	Within the District	D.D.P.Is.	J.D.P.I.
3. Primary School Teachers/Head Masters/Secondary School Teachers	Inter Dist. within the	J.D.P.Is.	C.P.I.
4. Primary School Teachers/ Head Masters	Inter Division	D.P.I. (P.E.)	C.P.I.
5. Secondary School Teachers	Inter Division	D.P.I. (S.E.)	C.P.I.
6. Ministerial Staff	District	D.D.P.I.	J.D.P.I.
7. -do-	Division	J.D.P.I.	C.P.I.
8.-do-	Inter Division	C.P.I.	C.P.I.
9.All Group 'B' (A.E.O/H.M/ADPI/GA/ SI/ Lecturers of G.C.E./ Lecturers of JCS	--	Commissioner	Government
10. All Group - A (E.O/ SADPI/Reder/Professor/		Commissioner	Government

GCE'S Principals of JCS/
Prof: of Sanskrit Colleges

Note: While effecting transfers required particulars are strictly to be incorporated in Annexure - I,II and III appended to this circular.

III. Deputations:

There shall be no deputation of teachers to schools and no officer shall entertain such deputation in future. However, if any situation is so warranted, in such cases, the following powers are delegated to officers.

1. A.E.O:- Deputation for a period of one month only, thereafter he shall obtain the permission of his immediate superior officer.
2. D.D.P.I.:- One month only, beyond the period of A.E.O.
3. J.D.P.I.:- One month only, beyond the period of D.D.P.I.

Continuation of teachers on deputation beyond the periods prescribed above, without prior permission of the competent authority shall be viewed seriously and disciplinary action will be initiated for any such irregularities.

IV. Premature transfer:-

There will be no premature transfers as a rule. Where such transfers need to be effected due to unavoidable circumstances, the power should be exercised as detailed at II above.

Note:

1. The minimum period of stay for premature transfers shall be one year.
2. Minimum period of stay for mutual transfer also shall be one year for both the applicants.

V. Superflous staff:

The superfluity of staff shall be calculated as detailed below:-

1. Lower Primary Schools:-

The teacher pupil ratio shall be 1:50. The excess teachers over and above of the ratio shall be shifted to needed schools. In O.B. Schools, a minimum of two teachers shall be maintained, irrespective of strength.

2. Higher Primary Schools:-

There shall be 4 teachers for each Higher Primary School having classes I to VII irrespective of the strength. Teachers beyond 4 shall be allowed on the basis of teacher pupil ratio 1:50, otherwise the excess teachers over and above shall be shifted to needy schools. While shifting these teachers, teachers who have put in maximum years of stay shall be shifted.

3. High Schools:

There shall be 12 teaching periods per week to the Head Master and 26 teaching periods per week to Assistant Masters. The teachers rendered excess according to these norms shall be shifted to near by needy schools.

While shifting the superflous teachers, care should be taken to post them to the needy schools and places. As far as possible to the nearest schools, regardless of the stay by such superflous teacher. However if the long standing incumbent/teachers are retiring within a period of 2 years they need not be shifted, and the next long standing teachers may be transferred in lieu thereof.

IV. Norms of transfers:

a) Superflous staff:- Superflous staff should be shifted before effecting other transfers (Calculation superfluity as detailed above).

b) Urban and rural Services:- Teachers requesting transfer to rural areas should accommodated on priority.

c) Period of stay: As already explained should form the basis for effecting the transfers.

d) Inspector of Schools: The Inspector of Schools who have completed 4 years of service as Inspectors, though not in the same office but in their length of services shall be invariably posted to the schools as Assistant Masters. The Assistant Masters who are granted Grade - I scales only shall be posted as Inspector of Schools.

e) Retiring Government servants:- The Government servants who are retiring within a period of two years shall not be disturbed unless there is written request for transfer from such Government servants.

f) Married couples:- When both husband and wife are State Government employees, arrangements should be made at the time of general transfers to enable both of them to work in the same place or atleast in nearby places, depending upon the availability of vacancies.

VII. Mode of Transfers:

The competent authorities who are empowered to effect transfers shall follow the instructions in this circular strictly and maintain the registers as indicated in the Annexure - I, II and III appended to this circular.

2. Teachers/Officials/officers request for transfer shall be entered in a register as indicated above, as for as possible three places of choice may be considered. However if the place of choice is not vacant the next choice may be agreed upon.

3. A list so prepared should be submitted to competent higher authorities on or before 15.5.1992 and shall be made available to higher officers whenever on inspection of the respective offices. No application for transfer should be entertained under any circumstances after 15.5.1992.

4. A list of vacancies as on 31.5.1992 (cadrewise/subjectwise) shall be prepared and submitted to the higher authorities alone with the transfer list on or before 15.5.1992.

5. The list of teachers as indicated in the Annexure shall be prepared and maintained in the office, indicating the transfer effected/not effected and reasons thereon. The statements shall be preserved and submitted for inspection to the authorities any time.

6. While effecting the transfers:

a) Directions issued by the higher authorities shall be implemented on priority basis. The last date for issue of such directions will be 30.4.1992.

Commissioner for Public Instructions:- All cadres

Director of Public Instructions (Primary Education): (for Pry. Teachers)

D.P.I (Sec. Education): (for Secondary teachers)

(b) Similarly inter division and inter districts transfer directions issued by the Joint Director of Public Instructions/Deputy Director of Public Instructions shall be effected on priority. Last date for issue of such directions will be 30.4.92.

(c) After accommodating the directions of all the higher authorities only, transfers should effected within the taluk as per the norms laid down in this circular.

(d) Similar procedure shall be followed by the Deputy Director of Public Instructions while effecting the transfer of Secondary School teachers.

(e) The last date for effecting the transfer by the Assistant Education Officer/Deputy Director of Public Instruction/Joint Director of public Instructions shall be 25.5.1992.

Note:-

General transfer shall be effected between 10th May 1992 to 25th May 1992. There shall be no transfer after 25th May 1992. The authorities competent to effect transfers would cease to have the powers of transfer after the due date i.e. 25.5.1992.

(f) Whenever an officer was transferred on a complaint, he shall not be posted back to the same place for any reason.

(g) While effecting general transfer care should be taken to ensure that as for as possible, substitutes are posted.

(h) In all cases where request for transfer have been received, the applicant shall be informed where the requests have not been considered.

VIII. Modifications/Reporting to duty:-

All the officers competent to transfer, shall exercise the powers carefully, without giving room for any complaints, and transfers once effected shall not be modified/changed at any cost. No authority is competent to modify the transfers, except the Government that too in the public interest.

All the teachers/officials once transferred shall report to the respective places of posting within the time limit prescribed in the K.C.S. Rs. Any request for modification or pressure for change of posting shall be viewed seriously and any official failing to report for duty in the places of postings shall be immediately kept under suspension as per CCA Rules. The order of suspension will be effective from the date the concerned Government servant is excepted to report for duty No Government Servant on orders of transfer shall avail any kind of leave.

Note:

Important:- As indicated above the last date for effecting transfers shall be 25th May 1992 and no transfer shall be issued after 25th May 1992 at any cost.

IX. The Commissioner for public Instructions shall send senior officials of his office to inspect the offices of Deputy Director of Public Instructions and similarly Deputy Director of Public Instructions to send senior officials to the offices of Assistant Education officers within fifteen days from the last date for effecting transfers so as to review the transfers effected by them and to ascertain if the guidelines issues by the Government are implemented in letter and spirit.

Finally, the authorities competent to transfer shall bear in mind that minimum possible number of transfer should be effected so as to cause minimum dislocation of officials. The transfer policy to the meaningful shall be implemented strictly in accordance with the guidelines of this circular.

(K.C. Basappa)
Under Secretary to Government.
Education Department.

To:

1. The Commissioner for Public Instruction, Bangalore.

2. All the Directors/Joint Directors/Deputy Directors of public Instruction.
3. All the Assistant Education Officers.
4. All the Section Offices/Superintendents of Ext. 1 to 8 Sections of CPI's Office.
5. S.G. File/Spare copies.

ANNEXURE-I

I Statement of Teachers/Officials/Officers requested for tranfer

Sl. No.	Name and Designation	Date of birth	Stay in the present place	Whether spouse employed and place of work	Places requested for transfer	Vacancy postion (if the post is not vacant details of the incumbent) Date of birth -stay	Remarks

ANNEXURE - II

II Statement of teachers eligible for transfer on account of superfluity

Sl. No.	Name and Address	Date of birth	Period of stay in the present place	Spouse details	students Strength	No. of Teachers with date of birth & stay	Remarks

ANNEXURE - III

III Statement of teachers eligible for transfer in public interest

Sl. No.	Name and Address	Date of birth	Stay	Spouse details	Proposed place of shifting	Remarks

ANNEXURE - IV

Vacancy list:

Sl. No.	Name of the school	Catagory of vacancy and date of occurance of vacancy	Students strength	Existing teachers strength	Remarks

ದಾವಣಗೆರೆ ನಗರದಲ್ಲಿರುವ ಸರ್ಕಾರಿ ಬಾಲಕರ ಪ್ರೌಢಶಾಲೆಗೆ ಹೊಸ ಕಟ್ಟಡ

1701: ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ):–

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ನಗರದಲ್ಲಿರುವ ಸರಕಾರಿ ಬಾಲಕರ ಪ್ರೌಢಶಾಲೆಯು ಹಳೆಯ ಕಟ್ಟಡವಾಗಿದ್ದು ಇದನ್ನು ನವೀಕರಿಸುವ ಯೋಜನೆ ಸರಕಾರಕ್ಕೆ ಇದೆಯೇ;

ಆ) ಇದ್ದಲ್ಲಿ ಶಾಲೆಯ ಕಟ್ಟಡವನ್ನು ನವೀಕರಿಸಲು ಕೈಗೊಳ್ಳಲಿರುವ ಕ್ರಮವೇನು ?

ಡಾ: ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಪೂರ್ಣವಾಗಿ ನವೀಕರಿಸುವ ಯೋಜನೆ ಇರುವುದಿಲ್ಲ. ಆದರೆ ಕಟ್ಟಡ ದುರಸ್ತಿ ಕಾರ್ಯ ನಡೆಯುತ್ತಿದೆ.

ಆ) ಜಿಲ್ಲಾ ಪರಿಷತ್‌ನೊಂದಿಗೆ ವ್ಯವಹರಿಸಿ ಶಾಲೆಯ ಕಟ್ಟಡವನ್ನು ನವೀಕರಿಸುವ ಅಗತ್ಯವಿದ್ದಲ್ಲಿ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗುವುದು.

ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜಿನವರಿಂದ ಕ್ಲಿನಿಕಲ್ ಫೀಸನ್ನು ವಸೂಲು ಮಾಡುವ ಬಗ್ಗೆ

2097: ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):–

ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜಿನವರು ಮಲ್ಲೇಶ್ವರಂ ಕೆ.ಸಿ. ಜನರಲ್ ಆಸ್ಪತ್ರೆಯನ್ನು ಕ್ಲಿನಿಕಲ್ ಉದ್ದೇಶಕ್ಕೆ ತೆಗೆದುಕೊಂಡಿರುವುದು ನಿಜವೇ; ತೆಗದುಕೊಂಡಿದ್ದರೆ ಎಷ್ಟು ವರ್ಷಗಳವರೆಗೆ ತೆಗೆದುಕೊಳ್ಳಲಾಗಿತ್ತು;

ಆ) ಪ್ರತಿ ಒಬ್ಬ ವಿದ್ಯಾರ್ಥಿಗೆ ನಿಗದಿಪಡಿಸಿದ ಕ್ಲಿನಿಕಲ್ ಫೀ ಎಷ್ಟು; ಈ ಪ್ರಯೋಜನ ಪಡೆದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಎಷ್ಟು;

ಇ) ಇದುವರೆಗೆ ಎಷ್ಟು ವಿದ್ಯಾರ್ಥಿಗಳ ಬಾಬ್ತು ಕ್ಲಿನಿಕಲ್ ಫೀ ಸರ್ಕಾರಕ್ಕೆ ಸಂದಾಯವಾಗಿದೆ;

ಈ) ಉಳಿದ ವಿದ್ಯಾರ್ಥಿಗಳ ಬಾಬ್ತು ಬಾಕಿ ನಿಂತಿರುವ ಕ್ಲಿನಿಕಲ್ ಫೀಯನ್ನು ವಸೂಲು ಮಾಡದೇ ಇರಲು ಕಾರಣವೇನು; ಈ ಹಣವನ್ನು ಎಷ್ಟು ದಿನದಲ್ಲಿ ವಸೂಲು ಮಾಡಲಾಗುತ್ತದೆ ಎಂದು ಸರ್ಕಾರದವರು ಖಚಿತವಾಗಿ ತಿಳಿಸುವಿರಾ ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಹೌದು. ದಿನಾಂಕ 31-10-79 ರಿಂದ ದಿನಾಂಕ 31-12-87ರವರೆಗೆ ತೆಗೆದುಕೊಂಡಿರುತ್ತಾರೆ.

ಆ) ಸರ್ಕಾರಿ ಆದೇಶ ಸಂಖ್ಯೆ:ಆಕುಕ 165 ಎಂಎಂಇ 83 ದಿನಾಂಕ 17-1-84ರ ಪ್ರಕಾರ ಒಬ್ಬ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ರೂ. 2500.00 ಎಂದು ನಿಗದಿಪಡಿಸಲಾಗಿದೆ. ಅದರಂತೆ:

1984ರಲ್ಲಿ	– 603 ವಿದ್ಯಾರ್ಥಿಗಳು
1985ರಲ್ಲಿ	– 677 ವಿದ್ಯಾರ್ಥಿಗಳು

1986ರಲ್ಲಿ – 723 ವಿದ್ಯಾರ್ಥಿಗಳು
1987ರಲ್ಲಿ – 727 ವಿದ್ಯಾರ್ಥಿಗಳು
ಇ) ಒಟ್ಟು ರೂ. 31.12 ಲಕ್ಷ ಬಾಕಿ ಇದ್ದು ಸಂದಾಯವಾಗಿರುವುದಿಲ್ಲ.

ಈ) ಬಾಕಿ ಇರುವ ಕ್ಲಿನಿಕಲ್ ಮೊತ್ತವನ್ನು ವಸೂಲು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಪರಿವರ್ತನೆ

2086: ಶ್ರೀ ಮಂಜುನಾಥ. ಸಿ. ಕುನ್ನೂರ (ಶಿಗ್ಗಾಂವ್):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿರುವುದೇ; (ಜಿಲ್ಲಾವಾರು ವಿವರ ನೀಡುವುದು)

ಆ) ಧಾರವಾಡ ಜಿಲ್ಲೆ ಶಿಗ್ಗಾಂವ್ ಸಿ.ಹೆಚ್.ಸಿ. ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡ ಎಂದು ಪೂರ್ಣಗೊಂಡಿತು;

ಇ) ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಿಯೋಜಿಸಬೇಕಾಗುವ ವೈದ್ಯರ ಹಾಗೂ ಸಿಬ್ಬಂದಿಯ ಸಂಖ್ಯೆ ಎಷ್ಟು;

ಈ) ಶಿಗ್ಗಾಂವ್ ಸಮುದಾಯ ಕೇಂದ್ರಕ್ಕೆ ಬೇಕಾಗುವ ಸಿಬ್ಬಂದಿಗಳನ್ನು ಕೂಡಲೇ ಒದಗಿಸಲಾಗುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಹೌದು.

(ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ)

ಆ) 1988-89ರಲ್ಲಿ ಪೂರ್ಣಗೊಂಡಿದೆ.

ಇ) ನಾರ್ಮ್ಸ್ ಪ್ರಕಾರ ಈ ಕೆಳಗೆ ನಮೂದಿಸಿರುವ ಸಿಬ್ಬಂದಿಯನ್ನು ಸಮುದಾಯ ಆರೋಗ್ಯ ಕೇಂದ್ರಕ್ಕೆ ನಿಯೋಜಿಸಬೇಕಾಗುವುದು.

1. ವೈದ್ಯಾಧಿಕಾರಿಗಳು	– 3
2. ಸಹಾಯಕ ದಂತ ಚಿಕಿತ್ಸಕರು	– 1
3. ಫಾರ್ಮಾಸಿಸ್ಟ್	– 2
4. ಗ್ರೂಪ್ – ಡಿ	– 4
5. ಸಹಾಯಕರು	– 10
6. ಸ್ಟಾಫ್ ನರ್ಸ್	– 3
7. ಧೋಬಿ	– 1
8. ಎ.ಎನ್.ಎಮ್ಸ್	– 2
9. ಕಛೇರಿ ಅಧೀಕ್ಷಕರು	– 1
10. ಪ್ರಥಮ ದರ್ಜೆ ಸಹಾಯಕರು	– 1

11. ದ್ವಿತೀಯ ದರ್ಜೆ ಸಹಾಯಕರು –3
12. ಕ್ಲರ್ಕ್–ಕಂ–ಟೈಪಿಸ್ಟ್ –1
13. ಕ್ಷ – ಕಿರಣ ತಂತ್ರಜ್ಞ – 1
14. ಕ್ಷ – ಕಿರಣ ಅಟೆಂಡರ್ – 1
15. ಕಿರಿಯ ಪ್ರಯೋಗ ಶಾಲಾ ತಂತ್ರಜ್ಞ –1
16. ಕಿರಿಯ ಪ್ರಯೋಗ ಶಾಲಾ ಅಟೆಂಡರ್ 1
17. ಅಡಿಗೆಯವರು 1

ಈ) 93-94ನೇ ಸಾಲಿನಲ್ಲಿ ಒದಗಿಸಲಾಗುವುದು.

ಒಟ್ಟು 37

ರಾಜ್ಯದಲ್ಲಿ ಮಂಜೂರಾಗಿರುವ ಪರಿವರ್ತನೆಯಾಗಿರುವ ಸಮುದಾಯ ಆರೋಗ್ಯ ಕೇಂದ್ರಗಳು (ಜಿಲ್ಲಾವಾರು ವಿವರ)

ಕ್ರಮ ಸಂಖ್ಯೆ ಜಿಲ್ಲೆಯ ಹೆಸರು	ಸಮುದಾಯ ಆರೋಗ್ಯ ಕೇಂದ್ರಗಳ ಸಂಖ್ಯೆ
1. ಬೆಂಗಳೂರು ಗ್ರಾಮಾಂತರ	8
2. ಬೆಂಗಳೂರು ನಗರ	1
3. ತುಮಕೂರು	9
4. ಚಿತ್ರದುರ್ಗ	8
5. ಶಿವಮೊಗ್ಗ	8
6. ಕೋಲಾರ	12
7. ಮೈಸೂರು	12
8. ಹಾಸನ	14
9. ಚಿಕ್ಕಮಗಳೂರು	8
10. ದಕ್ಷಿಣ ಕನ್ನಡ	9
11. ಕೊಡಗು	8
12. ಮಂಡ್ಯ	7
13. ಧಾರವಾಡ	17
14. ಬೆಳಗಾಂ	11
15. ಉತ್ತರಕನ್ನಡ	11
16. ಬಿಜಾಪುರ	15
17. ಬಳ್ಳಾರಿ	8
18. ಬೀದರ್	6
19. ರಾಯಚೂರು	10
20. ಗುಲ್ಬರ್ಗಾ	17

ಹುಬ್ಬಳ್ಳಿ ಕೆ.ಎಂ.ಸಿ. ಆಸ್ಪತ್ರೆಯಲ್ಲಿರುವ ತರಬೇತಿ ಪಡೆದಿರುವ ಮತ್ತು ಪಡೆಯದಿರುವ ಸಿಬ್ಬಂದಿ

2087: ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ):-

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಇರುವ ತರಬೇತಿ ಮತ್ತು ತರಬೇತಿ ರಹಿತ ಸಿಬ್ಬಂದಿ ಸಂಖ್ಯೆ ಎಷ್ಟು;

ಆ) ಅವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು;

ಇ) ಸದರಿ ಹುದ್ದೆಗಳು ಇಷ್ಟೊಂದು ಪ್ರಮಾಣದಲ್ಲಿ ಖಾಲಿ ಇರಲು ಕಾರಣಗಳೇನು;

ಈ) ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು;

ಉ) ಸದರಿ ಕೆ.ಎಂ.ಸಿ. ಆಸ್ಪತ್ರೆಯ ದುಸ್ಥಿತಿಯ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ ಸರ್ಕಾರವು ಒಟ್ಟಾರೆ ಸದರಿ ಆಸ್ಪತ್ರೆಯ ಸರ್ವತೋಮುಖ ಪ್ರಗತಿಗೆ ತೆಗೆದುಕೊಂಡ ಕಾರ್ಯಕ್ರಮಗಳೇನು ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):-

ಅ ಮತ್ತು ಆ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಇ) ನೇಮಕಾತಿಯ ಮೇಲೆ ಶ್ರೇಷ್ಠ ನ್ಯಾಯಾಲಯದ ತಡೆಯಾಜ್ಞೆ ನಿರ್ಬಂಧವಿರುವುದರಿಂದ ಹಾಗೂ ಮರಣ ಹೊಂದಿದ ಮತ್ತು ನಿವೃತ್ತಿ ಹೊಂದಿದ ಸಿಬ್ಬಂದಿಯಿಂದಾಗಿ ಹುದ್ದೆಗಳು ಖಾಲಿ ಇವೆ.

ಈ) ನೇಮಕಾತಿಗೆ ಶ್ರೇಷ್ಠ ನ್ಯಾಯಾಲಯದ ನಿರ್ಬಂಧವನ್ನು ತೆರವು ಮಾಡಿಸಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಉ) ಇಲ್ಲ.

ಊ) ಉದ್ಭವಿಸುವುದಿಲ್ಲ.

ANNEXURE

Statement showing the Staff of K.M.C. Hospital. Hubli, indicating the frained. Untrained posts and vacancy Position.

Sl. No.	CATEGORY	TRAINED POSTS			UNTRAINED POSTS		
		Sanc-tioned	working	vacant	Sanc-tioned	working	Vacant
1	2	3	4	5	6	7	8
1.	Resident Medical Officer	1	1	-	-	-	-
2.	Surgeon	1	1	-	-	-	-
3.	G.P.L. Surgeon	1	1	-	-	-	-
4.	Health Officer/Asst. Surgeon	25	24	1	-	-	-
		(It is vacant since 8.2.93 due to suspension of Dr. M.V. Gidnavar, Asst. Surgeon)					
5.	Deputy Dental Surgeon (One Asst. Dental Surgeon is working against this post)	1	1	-	-	-	-
6.	Asst. Radiologist (One Asst. Surgeon is working against this post)	1	1				
7.	Medical Officer (ULCC)	1	1				
8.	Medical Officer (20 Bedded Leprosy Ward)	1	1				

9.	Physist (The continuation order is not received)	1	-	1	-	-	-
	C.P.	1	1	-	-	-	-
	G.P.	2	2	-	-	-	-
10.	Nursing Superintendent Grade _ I	1	-	-	-		
11.	Nursing Suptd. Gr. II	12	11	1	-	-	-
12.	Senior Staff Nurse	23	21	2	-	-	-
13.	Staff Nurse	95	95	-	-	-	-
14.	Principal, School of Nurse	1	1	-	-	-	-
15.	Nursing Tutors	6	4	2	-	-	-
16.	Senior H.M.S.	1	-	1	-	-	-
17.	Senior Pharmacist	11	11	-	-	-	-
18.	Junior Pharmacists	6	6	-	-	-	-
19.	X-Ray Technician	4	4	-	-	-	-
20.	Senior Lab., Technician	1	1	-	-	-	-
21.	Jr. Lab Technician	7	7	-	-	-	-
22.	Radiographers	2	1	1	-	-	-
23.	Block Health Educator	1	1	-	-	-	-
24.	Dental Hyginist	1	1	-	-	-	-
25.	Physiotherapist	2	1	1	-	-	-
26.	Dietician	1	1	-	-	-	-
27.	Electrician	1	1	-	-	-	-
28.	Lift Mechanic	1	-	1	-	-	-
29.	Drivers	4	3	1	-	-	-

30.	Secretary	-	-	-	1	-	1
31.	Office Superintendent	-	-	-	5	5	-
32.	First Division Assistant	-	-	-	6	6	-
33.	Second Division Assistant	-	-	-	13	12	1
34.	Clerk-cum-Typist (one S.D.A. is working against this post)	-	-	-	1	1	-
35.	Dinen Clerk	-	-	-	1	1	-
36.	Stenographer (One F.D.A. is working against this post)	-	-	-	1	1	-
37.	Typist (One F.D.A. is working against this post)	-	-	-	3	3	-
38.	Receptionist	-	-	-	2	1	1
39.	Group 'D'	-	-	-	339	29	49

ಎಂಟನೆಯ ವರ್ಗದ ಕನ್ನಡ ಭಾಷೆಯ ಪಠ್ಯಪುಸ್ತಕಗಳು ಅಲಭ್ಯ.

1729: ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):-

ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ 8ನೇ ವರ್ಗದ ಕನ್ನಡ ಭಾಷೆಯ ಪಠ್ಯಪುಸ್ತಕಗಳು ಇಲ್ಲಿಯವರೆಗೆ ಲಭ್ಯವಿರುವುದು ನಿಜವೇ;

ಆ) ಈ ಪ್ರಕಾರ ಪಠ್ಯಪುಸ್ತಕಗಳು ಲಭ್ಯವಿಲ್ಲದಿದ್ದರೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ;

ಇ) ರಾಜ್ಯದಲ್ಲಿ ಕನ್ನಡ-ಭಾಷೆಯ ಪಠ್ಯಪುಸ್ತಕಗಳ ವ್ಯವಸ್ಥೆ ಸರ್ಕಾರ ಮಾಡಲು ಸಾಧ್ಯವಿಲ್ಲದಿದ್ದರೇ

ನಾವು ಕನ್ನಡಿಗರು ಕನ್ನಡಾಭಿಮಾನಿಗಳು, ಕನ್ನಡದಲ್ಲಿಯೇ ವ್ಯವಹಾರ ಎಂಬುದು ಕಾರ್ಯರೂಪಕ್ಕೆ ಬರಬಹುದೇ;

ಈ) ಮುಂದೆ ಈ ಅವ್ಯವಸ್ಥೆಯಾಗದಂತೆ ಮಾಡಿ ನಮ್ಮ ಹೈದ್ರಾಬಾದ್ ಕರ್ನಾಟಕ ಆಂಧ್ರಗಡೀ ಪ್ರಾಂತ್ಯದ ವಿದ್ಯಾರ್ಥಿಗಳಿಗೆ ಕನ್ನಡ ಸರಳವಾಗಿ ಕಲಿಯಲು ಸರ್ಕಾರ ಅವಕಾಶ ಕಲ್ಪಿಸುವುದೇ ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು):-

ಅ) ನಿಜ.

ಆ) ಶಿಕ್ಷಕರಿಗೆ ವಿದ್ಯಾರ್ಥಿಗಳಿಗೆ ಲಭ್ಯವಿರುವ ಪುಸ್ತಕಗಳಿಂದ ತೊಂದರೆಯಾಗದಂತೆ ಪಾಠ ಮಾಡಲು ಈಗಾಗಲೇ ಆದೇಶವನ್ನು ನೀಡಲಾಗಿದೆ.

ಇ) 1993-94ನೇ ಸಾಲಿನಲ್ಲಿ ಯಾವ ಪಠ್ಯಪುಸ್ತಕಗಳ ಸರಬರಾಜಿನಲ್ಲಿಯೂ ಕೊರತೆ ಉಂಟಾಗದಂತೆ ನೋಡಿಕೊಳ್ಳಲು ಕ್ರಮ ಕೈಗೊಂಡಿದೆ.

ಈ) ಕಲ್ಪಿಸಲಾಗುವುದು.

ರಾಜ್ಯದಲ್ಲಿ ಮಕ್ಕಳ ಅಭಿರುಚಿಗೆ ತಕ್ಕಂತೆ ವಿದ್ಯಾಭ್ಯಾಸದ ವ್ಯವಸ್ಥೆ

1825: ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):-

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಶಿಕ್ಷಣಕ್ಕಾಗಿ ಆ ಮಕ್ಕಳಿಗೆ ಆಸಕ್ತಿ ಇರುವ ವಿಷಯಗಳನ್ನು ಪರಿಗಣಿಸಿ ಅವರ ಅಭಿರುಚಿಗೆ ತಕ್ಕ ವಿದ್ಯಾಭ್ಯಾಸದ ವ್ಯವಸ್ಥೆ ಮಾಡಬಾರದೇಕೆ;

ಆ) ಇದರಿಂದ ವಿದ್ಯಾರ್ಥಿಗಳಿಗೆ ಶಿಕ್ಷಕರಿಗೆ ಪಾಲಕರಿಗೂ ಸಹ ಆಸಕ್ತಿ ಉಂಟಾಗಿ ವಿದ್ಯಾಭ್ಯಾಸಕ್ಕೆ ಬರುವುದಿಲ್ಲವೆ;

ಇ)ಇಂತಹ ವಿದ್ಯಾಭ್ಯಾಸದಿಂದ ಮಕ್ಕಳು ಯಾವ ಉದ್ಯೋಗದ ಅವಕಾಶಕ್ಕಾಗಿ ಆಶಿಸದೇ ತಮ್ಮ ಸ್ವಂತ ನೆಲಗಟ್ಟು ಮೇಲೆ ನಿಲ್ಲುವುದಿಲ್ಲವೆ;

ಈ) ಈಗ ಸರ್ಕಾರ ಅಕ್ಷಯ ಯೋಜನೆಯಲ್ಲಿ ಪ್ರತಿ ವಿದ್ಯಾರ್ಥಿಗಳಿಗೆ ಹಣವನ್ನು ನೀಡಿದರೆ ಕೆಲವು ಜನ ಪಾಲಕರು ಮಕ್ಕಳ ಹಾಜರಿಗಾಗಿ ಶಿಕ್ಷಕರೊಂದಿಗೆ ತಕರಾರು ಮಾಡುವುದಿಲ್ಲವೇ;

ಉ) ಇದರಿಂದ ಸರ್ಕಾರವೇ ಪಾಲಕರ ಹಾಗೂ ಶಿಕ್ಷಕರ ಮಧ್ಯೆ ತಕರಾರು ಹುಟ್ಟಿಸಿದಂತಾಗುವುದಿಲ್ಲವೇ;

ಊ) ಆದಕ್ಕಾಗಿ ವಿದೇಶಗಳಂತೆ ನಮ್ಮ ಭಾಗದಲ್ಲಿ ಸಹ ವಿದ್ಯಾರ್ಥಿಯ ಅಭಿರುಚಿಯಂತೆ ಶಿಕ್ಷಣ ವ್ಯವಸ್ಥೆ ಮಾಡಿದರೆ ಯಾವ ತಕರಾರು ಇಲ್ಲದೇ ವಿದ್ಯಾಭ್ಯಾಸವಾಗಿ ವಿದ್ಯಾರ್ಥಿ ಜೀವನೋಪಾಯಕ್ಕಾಗಿ ಸಹ ಅನುಕೂಲವಾಗುವುದಿಲ್ಲವೇ ?

ಡಾ. ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಶಿಕ್ಷಣವು ಎಲ್ಲರಿಗೂ ಸಮಾನವಾಗಿರಬೇಕು. ಪ್ರೌಢಶಿಕ್ಷಣವನ್ನು ಪೂರೈಸಿದ ನಂತರವೇ ವಿದ್ಯಾರ್ಥಿಗಳು ಅವರ ಅಭಿರುಚಿಗೆ ತಕ್ಕಂತೆ ವಿಷಯುವನ್ನು ಆಯ್ದುಕೊಳ್ಳಲು ಅವಕಾಶವಿದೆ.

ಆ) ಪ್ರೌಢಶಿಕ್ಷಣದ ನಂತರ ಈ ಅವಕಾಶ ನೀಡಿದಲ್ಲಿ ವಿದ್ಯಾರ್ಥಿಗಳಿಗೆ ಆಸಕ್ತಿ ಉಂಟಾಗುತ್ತದೆ.

ಇ) ಹೌದು.

ಈ) 1993–94ನೇ ಸಾಲಿನಿಂದ 3ಘಟಕಾಂಶಗಳಲ್ಲಿ ಅಕ್ಷಯ ಯೋಜನೆಯನ್ನು ಪರಿಷ್ಕರಿಸಲಾಗಿದ್ದು ಇದರನ್ವಯ ಹಣವನ್ನು ನೀಡಲಾಗುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಮಕ್ಕಳಲ್ಲಿ ಹುದುಗಿರುವ ಪ್ರತಿಭೆಗಳ ವಿಕಸನವೇ ಶಿಕ್ಷಣದ ಗುರಿ, ಮಕ್ಕಳ ಅಭಿರುಚಿಗೆ ತಕ್ಕಂತೆ ವಿದ್ಯಾಭ್ಯಾಸವನ್ನು ಅವರು ಸಾಮಾನ್ಯ ಶಿಕ್ಷಣ ಪೂರೈಸಿದ ನಂತರವೇ ನೀಡಬೇಕಾಗುತ್ತದೆ.

ವೃತ್ತಿ ಶಿಕ್ಷಣ ಕೋರ್ಸುಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಸೇವೆಯ ಸಕ್ರಮ

2013: ಶ್ರೀ ಬಿ.ಐ. ಪಾಟೀಲ್ (ಉಚ್ಚಂಗಾವ್):–

ವಯಸ್ಕರ ಮತ್ತು ವೃತ್ತಿ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ವೃತ್ತಿ ಶಿಕ್ಷಣ ಕೋರ್ಸುಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯನ್ನು ಸಕ್ರಮಗೊಳಿಸುವುದೇ;

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು;

ಇ) ಅವರುಗಳು 14 ವರ್ಷದಿಂದ ಕೆಲಸ ಮಾಡುತ್ತಿರುವುದರಿಂದ ಅವರುಗಳ ಸೇವೆಯನ್ನು ಸಕ್ರಮಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ?

ಶ್ರೀ ಪ್ರಭಾಕರ ಎಸ್. ರಾಣೆ (ವಯಸ್ಕರ ಮತ್ತು ವೃತ್ತಿ ಶಿಕ್ಷಣ ರಾಜ್ಯ ಸಚಿವರು):–

ಅ) ಸದ್ಯಕ್ಕೆ ಸಾಧ್ಯವಿಲ್ಲ.

ಆ) ವೃತ್ತಿ ಶಿಕ್ಷಣ ಕೋರ್ಸುಗಳು ಕೇಂದ್ರ ಸರ್ಕಾರದ ಯೋಜನೆ ಅಡಿ ಮಂಜೂರಾಗುವ ಅನುದಾನದಿಂದ ನಡೆಯುತ್ತಿದ್ದು, ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಸರ್ಕಾರದಿಂದ ಖಾಯಂ ಆಗಿ ಮಂಜೂರಾದ ಹುದ್ದೆಗಳಿಲ್ಲವಾದ್ದರಿಂದ ಮತ್ತು ಕೆಲವೊಂದು ಕೋರ್ಸುಗಳು ತಾತ್ಕಾಲಿಕವಾಗಿರುವುದರಿಂದ, ಸರ್ಕಾರದಿಂದ ಖಾಯಂ ಹುದ್ದೆಗಳ ಮಂಜೂರಾತಿ ಮಾಡಲು ಸಾಧ್ಯವಾಗಿಲ್ಲ.

ಇ) ಸರ್ವೋಚ್ಚ ನ್ಯಾಯಾಲಯದಲ್ಲಿ ಈ ಬಗ್ಗೆ ಮೊಕದ್ದಮೆಗಳಿದ್ದು, ಅದು ಇತ್ಯರ್ಥವಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಹಾಲು ಮಹಾಮಂಡಳಿಯಲ್ಲಿ ಡೈರಿ ಉದ್ಯಮದಲ್ಲಿ ವೃತ್ತಿ ತರಬೇತಿ ಹೊಂದಿದ ಅಭ್ಯರ್ಥಿಗಳ ನೇಮಕ

2014: ಶ್ರೀ ಬಿ.ಐ. ಪಾಟೀಲ (ಉಚ್ಚಗಾಂವ್):–

ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ಕರ್ನಾಟಕ ಹಾಲು ಮಹಾಮಂಡಳಿಯಲ್ಲಿ ಡೈರಿ ಉದ್ಯಮದಲ್ಲಿ ವೃತ್ತಿ ತರಬೇತಿ ಹೊಂದಿದ ಅಭ್ಯರ್ಥಿಗಳನ್ನು ನೇಮಕ ಮಾಡುವುದೇ;

ಆ) ಇಲ್ಲವಾದರೆ ಅದಕ್ಕೆ ಕಾರಣಗಳೇನು ?

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):–

ಅ ಮತ್ತು ಆ) ಪ್ರಸ್ತುತ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಇಂತಹ ಅಭ್ಯರ್ಥಿಗಳ ನೇಮಕಕ್ಕೆ ಅವಕಾಶವಿರುವುದಿಲ್ಲ. ಕೆ.ಎಂ.ಎಫ್.ಗೆ ಸರ್ಕಾರವು ಇಂತಹ ಅಭ್ಯರ್ಥಿಗಳನ್ನು ಕಳುಹಿಸಿರುವಂತ ಪರಿಣತೆಯ ಆಧಾರದ ಮೇಲೆ ಕೆ.ಎಂ.ಎಫ್.ನಲ್ಲಿ ಸೂಕ್ತ ಹುದ್ದೆಗಳನ್ನು ನೀಡಲು ಸಾಧ್ಯವಾಗುತ್ತದೆಯೇ ಎಂಬ ವಿಚಾರವನ್ನು ಪರಿಶೀಲಿಸಲು ಕೋರಲಾಗಿದೆ.

ಅರೆಕಾಲಿಕ ಶಿಕ್ಷಕರ ಸೇವೆಯನ್ನು ಸಕ್ರಮ

1585: ಜಿ. ಪುಟ್ಟಸ್ವಾಮಿಗೌಡ (ಹೊಳೇನರಸೀಪುರ):–

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯುವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವಿವಿಧ ಸರ್ಕಾರಿ ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅರೆಕಾಲಿಕ ಶಿಕ್ಷಕರ ಸಂಖ್ಯೆ ಎಷ್ಟು;

ಆ) ಇವರ ಸೇವೆಗಳನ್ನು ಸಕ್ರಮಗೊಳಿಸಲು ಅಥವಾ ಖಾಯಂ ಶಿಕ್ಷಕರನ್ನಾಗಿ ವಿಲೀನ ಮಾಡಿಕೊಳ್ಳುವ ಬಗ್ಗೆ ಏನಾದರೂ ಪ್ರಸ್ತಾವನೆ ಇದೆಯೇ ?

ಡಾ. ಹೆಗ್ಗಪ್ಪ ಡಿ.ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):–

ಅ) 16

ಆ) ಇಲ್ಲ.

ರಾಜ್ಯದಲ್ಲಿ ಮೀನು ಮರಿ ಉತ್ಪಾದನೆಯ ಗುರಿ

2072: ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ):–

ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ಮೀನುಮರಿ ಉತ್ಪಾದಿಸಲಾಗುತ್ತಿದೆಯೇ, ಹಾಗಾದರೆ ಕಳೆದ ವರ್ಷ ಎಷ್ಟು ಉತ್ಪಾದಿಸಲಾಗಿದೆ; ಈ ವರ್ಷದ ಉತ್ಪಾದನೆಯ ಗುರಿ ಎಷ್ಟು;

ಆ) ರಾಜ್ಯದಲ್ಲಿ ಮೀನುಮರಿ ಉತ್ಪಾದನೆಯು ಬೇಡಿಕೆಗೆ ತಕ್ಕಷ್ಟು ಆಗುತ್ತಿದೆಯೇ;

ಇ) ಹೊರ ರಾಜ್ಯಗಳಿಂದ ಮೀನುಮರಿಗಳನ್ನು ತರಿಸಿಕೊಳ್ಳಲಾಗುತ್ತಿದೆಯೇ, ಯಾವ ರಾಜ್ಯಗಳು ಎಷ್ಟು ಮೀನು ಮರಿಗಳನ್ನು ಒದಗಿಸುತ್ತಿದ್ದಾರೆ; ಅವು ಯಾವ ಜಾತಿಯವು ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಮಂತ್ರಿ):–

ಅ) ಹೌದು. ದೊಡ್ಡ ಗೆಂಡೆ ಜಾತಿ ಮೀನುಮರಿಗಳನ್ನು ಉತ್ಪಾಸಲಾಗುತ್ತಿದೆ. 1991–92ನೇ

ಸಾಲಿನಲ್ಲಿ 14 ಕೋಟಿ 50 ಲಕ್ಷ ಮೀನುಮರಿ ಫೈಗಳನ್ನು ಉತ್ಪಾದಿಸಲಾಗಿದೆ. 1992–93ರ ವಾರ್ಷಿಕ ಗುರಿ 15 ಕೋಟಿ ಫೈ ಮೀನು ಮರಿಗಳು.

ಆ) ರಾಜ್ಯದಲ್ಲಿ ಮೀನುಮರಿ ಉತ್ಪಾದನೆಯ ಬೇಡಿಕೆ ತಕ್ಕಷ್ಟು ಆಗುತ್ತಿಲ್ಲ.

ಇ) 1992–93ನೇ ಸಾಲಿನಲ್ಲಿ 7,75,470 ಕಟ್ಲಾ ಬಿತ್ತನೆ ಮೀನುಮರಿಗಳನ್ನು ಆಂಧ್ರ ಪ್ರದೇಶದಿಂದ ಕೊಂಡುಕೊಳ್ಳಲಾಗಿದೆ.

ರಾಜ್ಯದ ವಯಸ್ಕರ ಶಿಕ್ಷಣಕ್ಕೆ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆ

1261: ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ):–

ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೇಂದ್ರ ಸರ್ಕಾರದಿಂದ ಪ್ರತಿವರ್ಷ ರಾಜ್ಯ ವಯಸ್ಕರ ಶಿಕ್ಷಣಕ್ಕೆ ಬಿಡುಗಡೆ ಮಾಡುವ ಹಣವೆಷ್ಟು;

ಆ) ರಾಜ್ಯದಲ್ಲಿ ಎಷ್ಟು ವಯಸ್ಕರ ಶಿಕ್ಷಣ ಕೇಂದ್ರಗಳಿವೆ ?

ಶ್ರೀ ಪ್ರಭಾಕರ ಎಸ್. ರಾಣೆ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು):–

ಅ) ಕೇಂದ್ರ ಸರ್ಕಾರವು ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕಾಗಿ ಬಿಡುಗಡೆ ಮಾಡುವ ಹಣ ರಾಜ್ಯ ಸರ್ಕಾರ ಹಮ್ಮಿಕೊಳ್ಳುವ ಕಾರ್ಯಕ್ರಮಗಳನ್ನು ಅವಲಂಬಿಸಿರುತ್ತದೆ. ಅದರಂತೆ ಈಗ 1991–92 ಮತ್ತು 1992–93ರಲ್ಲಿ ಬಿಡುಗಡೆ ಆಗಿರುವ ಹಣದ ವಿವರ ಈ ಕೆಳಕಂಡಂತಿದೆ;

ವರ್ಷ	ಕಾರ್ಯಕ್ರಮ	ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ (ರೂ. ಲಕ್ಷಗಳಲ್ಲಿ)
1991–92	(1) ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆ	230.13
	2. ಜನಶಿಕ್ಷಣ ನಿಲಯಗಳು	82.25
1992–93	1. ಜನಶಿಕ್ಷಣ ನಿಲಯಗಳು	82.25

ಇದಲ್ಲದೆ ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ರಾಜ್ಯದ ಜಿಲ್ಲೆಗಳಲ್ಲಿ ಹಂತ ಹಂತವಾಗಿ ಹಮ್ಮಿಕೊಳ್ಳಲಾಗುತ್ತಿದ್ದು 1990–91 ರಿಂದ ಇಲ್ಲಿಯವರೆಗೆ ಒಟ್ಟು 1466.40 ರೂ. ಲಕ್ಷಗಳನ್ನು ಮತ್ತು ನಿರಂತರ ಶಿಕ್ಷಣಕ್ಕಾಗಿ ರೂ. 197.90 ಲಕ್ಷಗಳನ್ನು ಸಂಬಂಧಿಸಿದ ಜಿಲ್ಲಾ ಸಾಕ್ಷರತಾ ಸಮಿತಿಗಳಿಗೆ ಕೇಂದ್ರ ಸರ್ಕಾರವು ನೇರವಾಗಿ ಬಿಡುಗಡೆ ಮಾಡಿದೆ. ವಿವರ ಕೆಳಕಂಡಂತಿದೆ;

ಕ್ರ.ಸಂ. ಜಿಲ್ಲೆಗಳು	ಕೇಂದ್ರ ಸರ್ಕಾರದಿಂದ ನೇರವಾಗಿ ಬಿಡುಗಡೆಯಾಗಿರುವ ಹಣ (ರೂ. ಲಕ್ಷಗಳಲ್ಲಿ)	
	ಸಂಪೂರ್ಣ ಸಾಕ್ಷರತಾ ಆಂದೋಲನಕ್ಕಾಗಿ	ನಿರಂತರ ಶಿಕ್ಷಣಕ್ಕಾಗಿ
1. ದಕ್ಷಿಣ ಕನ್ನಡ	200.00	40.00
2. ಬಿಜಾಪುರ	300.40	80.00
3. ರಾಯಚೂರು	215.00	–
4. ಮಂಡ್ಯ	171.00	27.90
5. ತುಮಕೂರು	185.00	–
6. ಶಿವಮೊಗ್ಗ	130.00	50.00
7. ಬೀದರ್	115.00	–
8. ಮೈಸೂರು	75.00	–
9. ಧಾರವಾಡ	75.00	–
ಒಟ್ಟು	1,466.40	197.90

ಆ) ಈಗ ವಯಸ್ಕರ ಶಿಕ್ಷಣ ಕೇಂದ್ರಗಳು ಇರುವುದಿಲ್ಲ. ಆದರೆ ರಾಜ್ಯದಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ಜಾರಿಗೆ ತರಲಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಸಂಖ್ಯೆ

1943: ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ):–

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಲ್ಲಿ ಸಾರ್ವಜನಿಕ ಶಿಕ್ಷಣ ಆಯುಕ್ತರ ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು;

ಆ) ಅದರಲ್ಲಿ ಕಳೆದ ನಾಲ್ಕು ವರ್ಷಗಳಿಗೂ ಹೆಚ್ಚು ಒಂದೇ ಸ್ಥಳದಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; (ಬಿ ಮತ್ತು ಸಿ ವರ್ಗದ ಪಟ್ಟಿಯನ್ನು ವಿವರಗಳೊಂದಿಗೆ ಒದಗಿಸುವುದು)

ಇ) ಕಳೆದ ನಾಲ್ಕು ವರ್ಷಗಳಿಗೂ ಹೆಚ್ಚು ಒಂದೇ ಸ್ಥಳದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಸರ್ಕಾರದ ವರ್ಗಾವಣೆ ಮಾರ್ಗ ಸೂಚಿ ಅನ್ವಯವಾಗುವುದಿಲ್ಲವೆ;

ಈ) ಸರ್ಕಾರದ ವರ್ಗಾವಣೆ ಮಾರ್ಗಸೂಚಿ ಈ ನೌಕರರಿಗೆ ಅನ್ವಯವಾಗುವುದಿದ್ದರೆ ಸರ್ಕಾರದಿಂದ ತೆಗೆದುಕೊಂಡಿರುವ ಕ್ರಮವೇನು ?

ಡಾ. ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಒಟ್ಟು 377 ನೌಕರರು.

ಆ) 1) ಬಿ ದರ್ಜೆ – ಇಲ್ಲ
2. ಸಿ ದರ್ಜೆ – 147
(ವಿವರಗಳ ಪಟ್ಟಿ ಲಗತ್ತಿಸಿದೆ)

ಇ) ಅನ್ವಯವಾಗುತ್ತದೆ.

ಈ) ಸರ್ಕಾರದ ಮಾರ್ಗಸೂಚಿಯ ಪ್ರಕಾರ 'ಸಿ' ಗ್ರೂಪ್ ನೌಕರರು ಗರಿಷ್ಠ 5 ವರ್ಷದವರೆಗೆ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸಬಹುದಾಗಿದೆ. ಅದರಂತೆ ಪ್ರತಿ ವರ್ಷ ಹಂತಹಂತವಾಗಿ ವರ್ಗಾವಣೆಯನ್ನು ಮಾಡಲಾಗುತ್ತಿದೆ. ಈ ರೀತಿ ಮಾಡುವಾಗ ಸರ್ಕಾರದ ಆದೇಶದ ಪ್ರಕಾರ ಪತಿ – ಪತ್ನಿ ಪ್ರಕರಣ, ಅಂಗವಿಕಲರು, ನಿವೃತ್ತಿ ಅಂಚಿನಲ್ಲಿರುವವರು, ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಇವರುಗಳಿಗೆ ವರ್ಗಾವಣೆ ನಿಯಮಗಳ ವಿನಾಯ್ತಿ ನೀಡಲಾಗಿದೆ.

ಕ್ರ.ಸಂ.	ಹೆಸರು	ಈ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕ	ಪದನಾಮ
1	2	3	4
1.	ಬಿ. ನಾರಾಯಣಪ್ಪ	27–8–84	ಅಧೀಕ್ಷಕರು (ಎಸ್.ಸಿ)
2.	ಟಿ.ಸಿ. ಚಂದ್ರಶೇಖರ್	7–7–88	ಪ್ರ.ದ.ಸ
3.	ಟಿ.ಎನ್. ಶಾಮಣ್ಣ	28–2–85	"
4.	ಬಿ.ಆರ್. ಜಾಲೀಹಾಳ್	14–3–83	"
5.	ವಿಜಯಲಕ್ಷ್ಮಮ್ಮ	7–8–85	ಶೀಘ್ರಲಿಪಿಗಾರರು
6.	ಟಿ.ವಿ. ಸರಸ್ವತಮ್ಮ	19–5–86	"
7.	ಕೆ.ಎಸ್. ರವಿ	13–6–88	"
8.	ಜೆ. ಮಂಚೇಗೌಡ	20–7–87	ದ್ವಿ.ದ.ಸ'
9.	ಎನ್. ಸುರೇಶ್	5–7–85	"
10.	ಕೆ.ಜಿ. ಕೃಷ್ಣ	5–7–92	"
11.	ಹೆಚ್.ಆರ್. ಶಿವಗಂಗಯ್ಯ	2–11–88	ಅಧೀಕ್ಷಕರು
12.	ಚಿಕ್ಕರಾಮಯ್ಯ	1–3–84	ಪ್ರ.ದ.ಸ.
13.	ಎ. ಗೋಪಿನಾಥ್	6–7–88	"
14.	ಶ್ರೀಮತಿ ಎಸ್.	29–4–85	"
15.	ಎಂ. ಪದ್ಮಾವತಮ್ಮ	12–12–88	"
16.	ಹೆಚ್.ಎಸ್. ಸುಜಾತ	15–7–88	"
17.	ಎಸ್. ಪ್ರಭಾಕರ್	8–7–88	"
18.	ಎಂ. ಪುರುಷೋತ್ತಮ	22–6–88	"
19.	ಸಿ. ವಿಶ್ವೇಶ್ವರಯ್ಯ	6–3–84	"
20.	ಎಂ.ವಿ. ತಿಮ್ಮಯ್ಯ	11–7–88	"
21.	ಬಿ. ಚಂದ್ರಶೇಖರಯ್ಯ	4–6–88	"
22.	ಮುನಿಯಪ್ಪ	6–5–83	"
23.	ಬಿ.ಆರ್. ರಾಜು	01–8–87	ದ್ವಿ.ದ.ಸ
24.	ಬಿ.ಜೆ. ಬಸವರಾಜಪ್ಪ	12–5–86	"

25. ಜಿ. ಈಶ್ವರಪ್ಪ	29–4–85	ದ್ವಿ.ದ.ಸ
26. ಜಿ.ಎನ್. ನಾಯಕ್	14–7–88	ಅಧೀಕ್ಷಕರು
27. ಎಂ. ಮುನಿಕೃಷ್ಣಪ್ಪ	1–12–88	ಪ್ರ.ದ.ಸ.
28. ಗಂಗಾಧರೇಶ್	15–7–88	"
29. ಪಿ.ವಿ. ವಿಶ್ವನಾಥನ್	14–7–88	"
30. ಕಮಲಕುಮಾರಿ	12–5–86	ದ್ವಿ.ದ.ಸ
31. ಬಿ. ಸಾಲಮ್ಮ	07–7–88	ಅಧೀಕ್ಷಕರು
32. ಪ್ರಕಾಶ್ ಹೆಚ್.ಎಸ್.	19–5–86	ಪ್ರ.ದ.ಸ
33. ಕೆ. ಭವಾನಮ್ಮ	01–6–86	ದ್ವಿ.ದ.ಸ
34. ಎಂ.ಆರ್. ಸುನಂದಾ ಬಾಯಿ	14–5–84	"
35. ಮುಸ್ತಾಕ್ ಅಹಮದ್	05–7–88	"
36. ಟಿ.ಎಸ್. ಗೀತಾಬಾಲಿ	03–6–88	ಪ್ರ.ದ.ಸ.
37. ರಾಮಾನುಜಮ್ಮ	02–7–88	ಅಧೀಕ್ಷಕರು
38. ಎಂ. ರಾಜಣ್ಣ	30–4–85	ಪ್ರ.ದ.ಸ
39. ಕೆ.ವಿ. ಶ್ರೀಧರ	26–7–88	ಪ್ರ.ದ.ಸ
40. ಎಂ.ಪಿ. ಬೊಳ್ಳಮ್ಮ	18–7–88	ಅಧೀಕ್ಷಕರು
41. ಎಂ.ಪಿ. ಚಂದ್ರಶೇಖರಯ್ಯ	25–1–78	ಅಧೀಕ್ಷಕರು
42. ಕೆ. ಸರೋಜಮ್ಮ	02–6–88	ಪ್ರ.ದ.ಸ.
43. ಹೆಚ್. ಸಹದೇವಿ	6–8–88	"
44. ಪಿ.ಎಸ್. ನಾಗಮಣಿ	24–2–88	"
45. ಹೆಚ್.ಆರ್. ಗಾಯತ್ರಿ	17–6–85	ದ್ವಿ.ದ.ಸ.
46. ನಾರಾಯಣ	12–7–88	ಪ್ರ.ದ.ಸ.
47. ಸೈಯದ್ ಜೈನುಲ್ಲಾಬುದ್ದೀನ್	5–7–88	"
48. ಶ್ರೀರಂಗಪ್ಪ	2–8–85	ಅಧೀಕ್ಷಕರು
49. ಎನ್. ವೆಂಕಟೇಶಯ್ಯ	16–5–88	ಪ್ರ.ದ.ಸ.
50. ಎ.ವಿ. ಸತ್ಯನಾರಾಯಣಮೂರ್ತಿ	4–5–88	"
51. ಎಂ.ಎಂ. ಚಿನ್ನಸ್ವಾಮಿ	13–7–88	ಪ್ರ.ದ.ಸ. (ಎಸ್.ಪಿ)
52. ಶ್ರೀಪತಿರಾವ್	23–11–83	" ವೃತ್ತಿ ಶಿಕ್ಷಣ ಇಲಾಖೆಗೆ ನಿಯೋಜಿಸಿದೆ.
53. ಬಿ.ಎನ್. ರಾಜಲಿಂಗಪ್ಪ	15–6–88	"
54. ಎಂ.ವಿ. ಶ್ರೀನಿವಾಸಯ್ಯ	6–7–88	"
55. ವಿ. ಸೂರ್ಯಕಲಾ	20–12–88	ದ್ವಿ.ದ.ಸ.
56. ರಾಮಚಂದ್ರಯ್ಯ	14–9–83	ಪ್ರ.ದ.ಸ
57. ಕೆ.ಎನ್.ನರಸಿಂಹಮೂರ್ತಿ	12–7–88	"
58. ಡಿ. ದಯಾನಂದ	8–7–88	"
59. ಎನ್.ಕೆ. ಗುರುಪ್ರಸಾದ್	16–7–88	"
60. ಎನ್.ಕೆ. ನಂಜಪ್ಪ	5–11–88	"

61. ಎಂ.ಆರ್. ಮಂಜುನಾಥ್	1-6-88	ದ್ವಿ.ದ.ಸ
62. ಜಿ.ಬಿ. ನಾಯಕ್	9-6-82	ಪ್ರ.ದ.ಸ
63. ಸೋಮಶೇಖರ್	17-6-88	"
64. ಮಹಮದ್ ತಾಹೀರುಲ್ಲಾ ಷರೀಫ್	1-3-84	"
65. ಎಂ. ರಾಮಚಂದ್ರ	3-7-88	"
66. ಎನ್.ಆರ್. ಶ್ರೀಕಂಠ	14-7-88	" ವೃತ್ತಿ ಶಿಕ್ಷಣ ಇಲಾಖೆಗೆ ನಿಯೋಜಿಸಿದೆ.
67. ವಿಶ್ವನಾಥ	6-11-88	ಅಧೀಕ್ಷಕರು
68. ಬೋರಯ್ಯ ಎಸ್.ಬಿ.	8-7-84	ಪ್ರ.ದ.ಸ.
69. ವಿಮಲ ಜೆ.	1-10-88	"
70. ಶ್ರೀನಿವಾಸ ಮೂರ್ತಿ	25-2-88	"
71. ತಮ್ಮಣ್ಣ	18-5-86	ದ್ವಿ.ದ.ಸ.
72. ಕೌಸಲ್ಯ	6-6-88	ಪ್ರ.ದ.ಸ.
73. ಜೆ.ಎ. ಶೇಷಗಿರಿರಾವ್	15-6-88	"
74. ವಿ.ಎಸ್. ರವಿಕುಮಾರ್	15-7-88	"
75. ಕೆ.ಸಿ. ವನಜಾಕ್ಷಿ	9-12-88	ಪ್ರ.ದ.ಸ
76. ಎಸ್. ವಸುಂದರ	23-8-79	ಶೀಘ್ರಲಿಪಿಗಾರರು
77. ಜನಾರ್ದನರಾವ್	28-6-88	ದ್ವಿ.ದ.ಸ.
78. ಬಸವಣಪ್ಪ	24-10-83	ಪ್ರ.ದ.ಸ.
79. ಎಸ್. ಮಾದಯ್ಯ	2-5-85	"
80. ಎಸ್. ಶ್ರೀನಿವಾಸ	16-9-82	"
81. ವೆಂಕಟರಮಣ	6-8-88	"
82. ಡಿ.ಎಸ್. ರಾಮಚಂದ್ರಯ್ಯ	6-7-87	"
83. ಎಸ್.ಎನ್. ನಂಜುಂಡಪ್ಪ	16-7-88	ದ್ವಿ.ದ.ಸ. ವೃತ್ತಿ ಶಿಕ್ಷಣ ಇಲಾಖೆಗೆ ನಿಯೋಜಿಸಲಾಗಿದೆ.
84. ಜಿ. ಗಂಗರಾಜು	3-7-86	ದ್ವಿ.ದ.ಸ.
85. ಸಿ.ಕೆ. ರವಿಕುಮಾರ	11-7-88	"
86. ಎಂ. ಶಕುಂತಳ	13-6-88	ಪ್ರ.ದ.ಸ.
87. ಟಿ.ಹೆಚ್. ಆಂಜನೇಯ	26-5-82	ದ್ವಿ.ದ.ಸ.
88. ಎನ್. ಗೋವಿಂದಪ್ಪ	10-7-87	" ಎಸ್.ಸಿ.
89. ಫಿಸ್. ವಾಸುದೇವ	10-7-87	"
90. ಕೆ. ಆನಂದ	4-6-82	"
91. ಎಂ. ಚಂದ್ರಯ್ಯ	2-5-85	ಪ್ರ.ದ.ಸ.
92. ಹೆಚ್.ಜಿ. ಸರೋಜಮ್ಮ	3-6-88	"
93. ಎಸ್.ಡಿ. ಅನಂತರಾಜು	16-5-88	"
94. ಜಿ. ಪದ್ಮಾವತಿ	2-7-88	ಅಧೀಕ್ಷಕರು
95. ಕೆ. ಶಿವಣ್ಣ	3-5-85	ಪ್ರ.ದ.ಸ.

96. ವಿ. ಶ್ರೀನಿವಾಸ	11–8–88	"
97. ಎನ್. ಲಕ್ಷ್ಮಿನರಸಮ್ಮ	13–9–89	"
98. ವಿ. ಭದ್ರಾಚಾರ್	6–7–88	"
99. ಕೆ.ಎಂ. ಶಿವಶಂಕರಯ್ಯ	21–5–86	"
100. ಎಂ.ಆರ್. ಹೇಮಾವತಿ	2–6–86	ದ್ವಿ.ದ.ಸ
101. ಎಂ.ಎಸ್. ಕೃಷ್ಣಮೂರ್ತಿ	6–9–77	ಅಧೀಕ್ಷಕರು
102. ಹೆಚ್. ಹನುಮಂತಪ್ಪ	21–9–88	ಪ್ರ.ದ.ಸ.
103. ರಾಮಯ್ಯ	6–6–88	"
104. ಕೆ.ಎಸ್. ರಾಜಶೇಖರಯ್ಯ	6–7–88	"
105. ಜಿ.ಐ. ಬಿಜಾಪುರ	8–11–86	ಬೆರಳಚ್ಚುಗಾರರು (ಆಂಗ್ಲ)
106. ಬಿ.ವಿ. ರಾಡ್ರಿಕ್ಸ್	3–7–82	"
107. ಎ.ಎ. ಪೂವಯ್ಯ	12–5–86	" (ಕನ್ನಡ)
108. ಬಿ. ಅನಂತಶೇಷ	3–7–78	"
109. ಎಸ್.ಕೆ. ಮುಸ್ತಫ	27–7–84	"
110. ಟಿ.ಎಸ್. ವಸಂತ	10–8–81	"
111. ಎಂ. ರಾಮಮೂರ್ತಿ	19–4–78	"
112. ಹೆಚ್.ಸಿ. ಉಮಾ	7–8–81	" (ಆಂಗ್ಲ)
113. ಕೆ. ಜಯಲಕ್ಷ್ಮಿ	3–1–84	"
114. ಎಂ.ಎಸ್. ಲಾವಣ್ಯ	12–12–88	" (ಕನ್ನಡ)
115. ಎನ್. ಲೀಲಾವತಿ	6–10–88	"
116. ಕೆ.ಆರ್. ಸುಮಂಗಳಾ	23–1–89	"
117. ಹೆಚ್.ಕೆ. ಸುಜಾತ	12–12–88	"
118. ತ್ಯಾಗರಾಜ್	11–10–88	"
119. ವಿ. ಶಾರದಮ್ಮ	8–3–89	"
120. ಎಸ್. ಲೀಲಾವತಿ	18–7–87	"
121. ರೇಖಾ ಆರ್.	12–10–88	"
122. ಮಹದೇವಯ್ಯ	25–6–62	" (ಆಂಗ್ಲ)
123. ಆರ್. ಗೌರಣ್ಣ	31–12–77	" (ಕನ್ನಡ)
124. ಎಸ್. ನಾರಾಯಣರಾವ್	22–1–87	"
125. ಹೆಚ್. ಗೋಪಾಲಕೃಷ್ಣಸ್ವಾಮಿ	28–9–81	ಅಧೀಕ್ಷಕರು
126. ಹೆಚ್.ವಿ. ರಾಮಾಚಾರ್	9–12–70	ಪ್ರ.ದ.ಸ.
127. ಎಂ.ಎನ್. ಶ್ರೀಮತಿ	27–7–87	"
128. ಡಿ.ಎನ್. ವೇಣುಗೋಪಾಲ್	3–12–88	ದ್ವಿ.ದ.ಸ.
129. ಎನ್.ಎಸ್. ಸುಂದರವಲ್ಲಿ	2–9–70	ಬೆರಳಚ್ಚುಗಾರರು
130. ಕೆ.ಯು. ಗಣೇಶ್	23–5–88	ಅಧೀಕ್ಷಕರು
131. ಬಿ.ಎಸ್. ರಾಮರಾವ್	29–10–86	"
132. ಶ್ರೀ ಕೆ. ಆಂಜನಪ್ಪ	18–5–87	ಪ್ರ.ದ.ಸ. (ಎಸ್.ಸಿ)

133. ಚೆಲುವಯ್ಯ	13–6–88	
134. ಬಿ. ಮರಿಸ್ವಾಮಿ	23–1–85	
135. ಎ.ಆರ್. ಶ್ರೀನಿವಾಸರಾವ್	27–4–84	
136. ವೆಂಕೋಬರಾವ್	2–5–85	
137. ಹೆಚ್.ಆರ್. ನಂದೀಶ್ವರಯ್ಯ	2–3–88	
138. ವಿ. ಹನುಮಂತರಾವ್	26–4–85	
139. ಪಿ.ಎಸ್. ಗೊಲ್ಲಗೇರಿ	15–7–88	ಎಸ್.ಸಿ
140. ಎಸ್. ಜಯರಾಂ	2–12–66	
141. ನಿಂಗೇಗೌಡ	17–11–83	
142. ಸಿದ್ದಮಲ್ಲನಗೌಡ	25–11–83	
143. ಎನ್.ಬಿ. ಬನ್ನೂರ್	30–11–83	
144. ಶ್ರೀಮತಿ ಪ್ಲಾಸಿಸಾಗರ್	2–7–88	
145. ಎಸ್.ಎಸ್.ಸುಂದರರಾಜ್	1–3–84	
146. ಎಸ್. ಪಟ್ಟಾಭಿರಾಮಾಚಾರ್	12–12–88	
147. ವೆಂಕಟರಾಮಯ್ಯ	12–1–68	

ತೋಟಗಾರಿಕೆ ವಿಭಾಗಕ್ಕೆ ಕೃಷಿ ಪದವೀಧರ ಆಯ್ಕೆ ಅನುಮೋದನೆಯ ಬಗ್ಗೆ

1111: ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):–

ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿರಾ ತಾಲ್ಲೂಕಿನಲ್ಲಿ ವೃತ್ತಿ ಶಿಕ್ಷಣ ತೋಟಗಾರಿಕೆ ವಿಭಾಗವನ್ನು ಬ್ರಹ್ಮಸಂದ್ರ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಕೊಟ್ಟಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ) ಈ ವಿಭಾಗದಲ್ಲಿ ಕೃಷಿ ಪದವೀಧರರನ್ನು (ಬಿ.ಎಸ್ಸಿ. ಎ.ಜಿ.) ತೋಟಗಾರಿಕೆ ವಿಭಾಗಕ್ಕೆ ಆಯ್ಕೆ ಮಾಡಿಕೊಂಡಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಇ) ಈ ವಿಭಾಗದ ಅವಧಿ ಮಾರ್ಚ್ 31ಕ್ಕೆ ಮುಗಿಯಲಿದ್ದು ಅಭ್ಯರ್ಥಿಯ ನೇಮಕಾತಿ ಅನುಮೋದನೆ ಮಾಡದಿರುವುದರಿಂದ ಅಭ್ಯರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಈ) ಆದುದರಿಂದ, ಈ ಕೂಡಲೇ ನೇಮಕಾತಿ ಅನುಮೋದನೆ ಮಾಡಲಾಗುವುದೇ ?

ಶ್ರೀ ಪ್ರಭಾಕರ ಎಸ್. ರಾಣೆ (ವಯಸ್ಕರ ಮತ್ತು ವೃತ್ತಿ ಶಿಕ್ಷಣ ರಾಜ್ಯ ಸಚಿವರು):–

ಅ) ಹೌದು.

ಆ) ಹೌದು.

ಇ) ಅನುಮೋದನೆ ನೀಡಲಾಗಿದೆ.

ಈ) ಉದ್ಭವಿಸುವುದಿಲ್ಲ.

ಗ್ರಾಮೀಣ ಪಶುವೈದ್ಯ ಚಿಕಿತ್ಸಾ ಕೇಂದ್ರಗಳ ವಿವರ

1705: ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೇರೂರು):–

ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪಶುವೈದ್ಯ ಶಾಲೆಗಳು ಮತ್ತು ಗ್ರಾಮೀಣ ಪಶು ಚಿಕಿತ್ಸಾ ಕೇಂದ್ರಗಳು ಎಷ್ಟು; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು);

ಆ) ಸುವ್ಯವಸ್ಥಿತ ಪಶು ಚಿಕಿತ್ಸೆಗೆ ಈಗಿನ ಗ್ರಾಮೀಣ ಪಶು ಚಿಕಿತ್ಸಾ ಕೇಂದ್ರಗಳ ಸಂಖ್ಯೆ ಅತಿ ಕಡಿಮೆ ಎನ್ನುವುದು ಸರ್ಕಾರದ ಗಮನಿಸಿದೆಯೇ;

ಇ) ಪ್ರತಿ ತಾಲ್ಲೂಕಿಗೆ ಪ್ರತಿ ವರ್ಷ ಕನಿಷ್ಟ 5 ಗ್ರಾಮೀಣ ಪಶು ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸುವುದು ಅವಶ್ಯ ಎಂದು ಸರ್ಕಾರ ಗಮನಿಸಿದೆಯೇ;

ಈ) 1992–93ರಲ್ಲಿ ಮತ್ತು 93–94ರಲ್ಲಿ ಪಶು ಚಿಕಿತ್ಸೆಗಾಗಿ ಯಾವ್ಯಾವ ರೀತಿಯ ಕೇಂದ್ರ ಹಾಗೂ ಆಸ್ಪತ್ರೆಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆ; ಈ ಬಗ್ಗೆ ಅವಶ್ಯವಿರುವ ಸಿಬ್ಬಂದಿ ನೇಮಕದ ಬಗ್ಗೆ ಸರ್ಕಾರದ ಕ್ರಮವೇನು;

ಉ) ರಾಜ್ಯ ಪಶು ಚಿಕಿತ್ಸೆಗಾಗಿ 92–93 ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು; ಈ ಮೊತ್ತ ಅತ್ಯಂತ ಕಡಿಮೆ ಎನ್ನುವ ಬಗ್ಗೆ ಗಮನಹರಿಸಿ 1993–94ರ ಆಯವ್ಯಯದಲ್ಲಿ ಹೆಚ್ಚು ಹಣ ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):–

ಅ) ಪಶು ಆಸ್ಪತ್ರೆ	189
ಪಶು ವೈದ್ಯ ಶಾಲೆಗಳು	521
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	1125

(ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಲಗತ್ತಿಸಿದೆ)

ಆ) ಹೌದು.

ಇ) ಇಲ್ಲ.

ಈ) 1993–94ನೇ ಸಾಲಿನಲ್ಲಿ 200 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಲು ಹಾಗೂ 100 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಉನ್ನತೀಕರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. 1993–94ರಲ್ಲಿ 200 ಹೊಸ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಹಾಗೂ 80 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಉನ್ನತೀಕರಿಸಲು ಉದ್ದೇಶಿಸಿದೆ. ಮಂಜೂರಾತಿ ನೀಡುವ ಸಮಯದಲ್ಲಿ ಹುದ್ದೆಗಳನ್ನು ಸಹ ಸೃಷ್ಟಿಸಲಾಗುತ್ತದೆ.

ಉ) 1. 1992–93ರ ಆಯವ್ಯಯದಲ್ಲಿ ಒದಗಿಸಲಾದ ವಂಟನ ರೂ. 606.41 ಲಕ್ಷಗಳು.
2. 1993–94ರ ಆಯವ್ಯಯದಲ್ಲಿ ಒದಗಿಸಲಾಗಿರುವ ವಂಟನ ರೂ. 805.00 ಲಕ್ಷಗಳು.

1992–93ರಲ್ಲಿ ರಾಜ್ಯದಲ್ಲಿ ಇರುವ ಪಶುವೈದ್ಯಕೀಯ ಆಸ್ಪತ್ರೆ, ಪಶುಚಿಕಿತ್ಸಾಲಯ, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳ ಜಿಲ್ಲಾವಾರು ವಿವರಗಳ ಪಟ್ಟಿ:

ಕ್ರಮ ಸಂಖ್ಯೆ	ಜಿಲ್ಲೆಗಳು	ಪಶುವೈದ್ಯಕೀಯ ಆಸ್ಪತ್ರೆ	ಪಶುಚಿಕಿತ್ಸಾಲಯ	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ	ಒಟ್ಟು
1	2	3	4	5	6
1.	ಬೆಂಗಳೂರು ನಗರ	6	28	22	56
2.	ಬೆಂಗಳೂರು ಗ್ರಾಮಾಂತರ	8	27	45	80
3.	ಚಿತ್ರದುರ್ಗ	9	27	78	114
4.	ಕೋಲಾರ	13	24	46	83
5.	ತುಮಕೂರು	10	39	70	119
6.	ಶಿವಮೊಗ್ಗ	10	32	81	123
7.	ಮೈಸೂರು	13	31	76	120
8.	ಹಾಸನ	8	27	58	93
9.	ಚಿಕ್ಕಮಗಳೂರು	7	26	41	74
10.	ದಕ್ಷಿಣ ಕನ್ನಡ	9	16	72	97
11.	ಕೊಡಗು	5	15	20	40
12.	ಮಂಡ್ಯ	7	39	27	73
13.	ಗುಲ್ಬರ್ಗಾ	10	28	91	129
14.	ಬಳ್ಳಾರಿ	8	21	35	64
15.	ಬೀದರ್	5	17	33	55
16.	ರಾಯಚೂರು	9	19	46	74
17.	ಬೆಳಗಾಂ	11	31	89	131
18.	ಬಿಜಾಪುರ	11	25	75	111
19.	ಧಾರವಾಡ	19	38	77	134
20.	ಉತ್ತರ ಕನ್ನಡ	11	11	43	65
	ಒಟ್ಟು	189	521	1125	1835

1992-93ರಲ್ಲಿ ರಾಜ್ಯದಲ್ಲಿ ಇರುವ ಪಶು ಆಸ್ಪತ್ರೆ, ಪಶು ಚಿಕಿತ್ಸಾಲಯ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳ ತಾಲ್ಲೂಕುವಾರು ವಿವರಗಳ ಪಟ್ಟಿ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ತಾಲ್ಲೂಕು ಹೆಸರು	ಪಶು ಆಸ್ಪತ್ರೆ	ಪಶು ಚಿಕಿತ್ಸಾಲಯ	ಪ್ರಾಥಮಿಕ ಪಶು ಚಿಕಿತ್ಸಾಲಯ	ಒಟ್ಟು
1	2	3	4	5	6	7
1. ಬೆಂಗಳೂರು ನಗರ						
		1. ಬೆಂಗಳೂರು ಉತ್ತರ	4	9	12	25

2. ಬೆಂಗಳೂರು ದಕ್ಷಿಣ	1	14	8	23
3. ಆನೇಕಲ್	1	5	2	8
ಒಟ್ಟು	6	28	22	56

2. ಬೆಂಗಳೂರು ಗ್ರಾಮಾಂತರ

1. ದೊಡ್ಡಬಳ್ಳಾಪುರ	1	3	8	12
2. ಹೊಸಕೋಟೆ	1	4	8	13
3. ಚನ್ನಪಟ್ಟಣ	1	1	6	8
4. ರಾಮನಗರ	1	2	3	6
5. ದೇವನಹಳ್ಳಿ	1	4	4	9
6. ನೆಲಮಂಗಲ	1	3	5	9
7. ಕನಕಪುರ	1	4	5	10
8. ಮಾಗಡಿ	1	6	6	13
ಒಟ್ಟು	8	27	45	80

3. ಕೋಲಾರ:–

1. ಕೋಲಾರ	1	2	5	8
2. ಮಾಲೂರು	1	4	4	9
3. ಬಂಗಾರು ಪೇಟೆ	2	–	5	7
4. ಮುಳಬಾಗಲು	1	2	4	7
5. ಶ್ರೀನಿವಾಸಪುರ	1	3	5	9
6. ಚಿಂತಾಮಣಿ	1	1	7	9
7. ಶಿಡ್ಲಘಟ್ಟ	2	1	5	8
8. ಚಿಕ್ಕಬಳ್ಳಾಪುರ	1	2	2	5
9. ಗೌರಿಬಿದನೂರು	1	3	6	10
10. ಗುಡಿಬಂಡೆ	1	2	2	5
11. ಬಾಗೆಪಲ್ಲಿ	1	4	1	6
ಒಟ್ಟು	13	24	46	83

4. ತುಮಕೂರು:–

1. ತುಮಕೂರು	1	6	7	14
2. ಕೊರಟಗೆರೆ	1	3	8	12
3. ಮಧುಗಿರಿ	1	4	7	12
4. ಪಾವಗಡ	1	2	8	11
5. ಶಿರಾ	1	5	8	14
6. ತಿಪಟೂರು	1	3	4	8
7. ಚಿಕ್ಕನಾಯಕನಹಳ್ಳಿ	1	3	7	11
8. ತುರುವೇಕೆರೆ	1	4	5	10
9. ಕುಣಿಗಲ್	1	6	5	12

10. ಗುಬ್ಬಿ	1	3	11	15
ಒಟ್ಟು	10	39	70	119
5. ಚಿತ್ರದುರ್ಗ:-				
1. ಚಿತ್ರದುರ್ಗ	1	6	13	20
2. ಜಗಳೂರು	1	1	7	9
3. ಮೊಳಕಾಲ್ಮೂರು	1	1	5	7
4. ಚಳ್ಳಕೆರೆ	1	1	10	12
5. ಹೊಸದುರ್ಗ	1	–	9	10
6. ಹಿರಿಯೂರು	1	4	8	13
7. ಹೊಳಲ್ಕೆರೆ	1	3	6	10
8. ಹರಿಹರ	1	4	5	10
9. ದಾವಣಗೆರೆ	1	7	15	23
ಒಟ್ಟು	9	27	78	114
6. ಶಿವಮೊಗ್ಗ:-				
1. ಶಿವಮೊಗ್ಗ	1	4	6	11
2. ಭದ್ರಾವತಿ	1	2	9	12
3. ಸಾಗರ	1	3	9	13
4. ಚನ್ನಗಿರಿ	1	4	12	17
5. ಹೊನ್ನಾಳಿ	1	5	7	13
6. ಸೊರಬ	2	1	12	15
7. ಶಿಕಾರಿಪುರ	1	3	9	13
8. ಹೊಸನಗರ	1	3	7	11
9. ತೀರ್ಥಹಳ್ಳಿ	1	7	10	18
ಒಟ್ಟು	10	32	81	123
7. ಮೈಸೂರು:-				
1. ಮೈಸೂರು	3	2	10	15
2. ನಂಜನಗೂಡು	1	4	10	15
3. ಚಾಮರಾಜನಗರ	1	4	4	9
4. ಕೊಳ್ಳೆಗಾಲ	1	2	6	9
5. ತಿ. ನರಸಿಪುರ	1	3	5	9
6. ಹುಣಸೂರು	1	3	7	11
7. ಕೆ.ಆರ್. ನಗರ	1	4	7	12
8. ಪಿರಿಯಪಟ್ಟಣ	1	4	8	13
9. ಯಳಂದೂರು	1	–	2	3
10. ಹೆಚ್.ಡಿ. ಕೋಟೆ	1	3	7	11

11. ಗುಂಡ್ಲುಪೇಟೆ	1	2	10	13
ಒಟ್ಟು	13	31	76	120
8. ಮಂಡ್ಯ				
1. ಮಂಡ್ಯ	1	8	8	17
2. ಮದ್ದೂರು	1	8	7	16
3. ಮಳವಳ್ಳಿ	1	4	8	13
4. ಶ್ರೀರಂಗಪಟ್ಟಣ	1	4	–	5
5. ಪಾಂಡವಪುರ	1	5	1	7
6. ಕೆ.ಆರ್. ಪೇಟೆ	1	6	2	9
7. ನಾಗಮಂಗಲ	1	4	1	6
ಒಟ್ಟು	7	39	27	73
9. ಹಾಸನ				
1. ಹಾಸನ	1	5	5	11
2. ಸಕಲೇಶಪುರ	1	1	5	7
3. ಆಲೂರು	1	1	5	7
4. ಬೇಲೂರು	1	2	6	9
5. ಹೊಳೆನರಸಿಪುರ	1	2	9	12
6. ಚನ್ನರಾಯಪಟ್ಟಣ	1	7	11	19
7. ಅರಕಲಗೂಡು	1	4	5	10
8. ಅರಸಿಕೆರೆ	1	5	12	18
ಒಟ್ಟು	8	27	58	93
10. ಚಿಕ್ಕಮಗಳೂರು:-				
1. ಚಿಕ್ಕಮಗಳೂರು	1	4	8	13
2. ಕಡೂರು	1	9	12	22
3. ತರಿಕೆರೆ	1	5	7	13
4. ಮೂಡಿಗೆರೆ	1	3	8	12
5. ಕೊಪ್ಪ	1	2	3	6
6. ನರಸಿಂಹರಾಜಪುರ	1	2	2	5
7. ಶೃಂಗೇರಿ	1	1	1	3
ಒಟ್ಟು	7	26	41	74

11. ದಕ್ಷಿಣ ಕನ್ನಡ:–				
1. ಮಂಗಳೂರು	1	4	5	10
2. ಬಂಟ್ವಾಳ	1	1	10	12
3. ಬೆಳ್ತಂಗಡಿ	1	–	7	8
4. ಕುಂದಾಪುರ	1	2	10	13
5. ಕಾರ್ಕಳ	2	1	11	14
6. ಪುತ್ತೂರು	1	2	7	10
7. ಸುಳ್ಯ	1	1	5	7
8. ಉಡುಪಿ	1	5	17	23
ಒಟ್ಟು	9	16	72	97
12. ಕೊಡಗು:–				
1. ಮಡಿಕೇರಿ	1	4	6	11
2. ಸೋಮವಾರ ಪೇಟೆ	2	7	5	14
3. ವಿರಾಜಪೇಟೆ	2	4	9	15
ಒಟ್ಟು	5	15	20	40
13. ಗುಲ್ಬರ್ಗಾ:–				
1. ಗುಲ್ಬರ್ಗಾ	1	2	8	11
2. ಜಿವರ್ಗಿ	1	4	8	13
3. ಚಿತ್ತಾಪುರ	1	1	14	16
4. ಅಳಂದ	1	3	11	15
5. ಷಹಾಪುರ	1	2	5	8
6. ಶೋರಾಪುರ	1	2	8	11
7. ಅಫಜಲ್‌ಪುರ	1	2	10	13
8. ಸೇಡಂ	1	2	6	9
9. ಚಿಂಚೋಳಿ	1	3	11	15
10. ಯಾದಗೀರ್	1	7	10	18
ಒಟ್ಟು	10	28	91	129
14. ಬಳ್ಳಾರಿ:–				
1. ಬಳ್ಳಾರಿ	1	5	5	11
2. ಹಡಗಲಿ	1	4	4	9
3. ಹಗರಿಬೊಮ್ಮನಹಳ್ಳಿ	1	1	6	8
4. ಹರಪನಹಳ್ಳಿ	1	3	6	10
5. ಹೊಸಪೇಟೆ	1	2	1	4
6. ಕೂಡ್ಲಗಿ	1	3	8	12
7. ಸಂಡೂರು	1	2	4	7

8. ಶಿರಗುಪ್ಪ	1	1	1	3
ಒಟ್ಟು	8	21	35	64
15. ಬೀದರ್:–				
1. ಬೀದರ್	1	–	8	9
2. ಭಾಲ್ಕಿ	1	2	9	12
3. ಹುಮ್ನಾಬಾದ್	1	8	6	15
4. ಬಸವಕಲ್ಯಾಣ	1	4	3	8
5. ಔರಾದ್	1	3	7	11
ಒಟ್ಟು	5	17	33	55
16. ರಾಯಚೂರು:–				
1. ರಾಯಚೂರು	1	1	5	7
2. ಮಾನ್ವಿ	1	3	6	10
3. ಸಿಂಧನೂರು	1	3	4	8
4. ಗಂಗಾವತಿ	1	3	4	8
5. ಕೊಪ್ಪಳ	1	2	5	8
6. ಯಲಬುರ್ಗಿ	1	3	5	9
7. ಕುಷ್ಟಗಿ	1	1	6	8
8. ಲಿಂಗಸುಗೂರು	1	1	10	12
9. ದೇವದುರ್ಗ	1	2	1	4
ಒಟ್ಟು	9	19	46	74
17.				
1. ಬೆಳಗಾಂ	1	2	7	10
2. ಹುಕ್ಕೇರಿ	1	2	6	9
3. ಚಿಕ್ಕೋಡಿ	2	5	10	17
4. ಅಥಣಿ	1	3	13	17
5. ರಾಯಬಾಗ್	1	1	6	8
6. ಗೋಕಾಕ್	1	6	13	20
7. ರಾಮದುರ್ಗ	1	1	8	10
8. ಸೌಂದತ್ತಿ	1	5	9	15
9. ಬೈಲಹೊಂಗಲ	1	3	9	13
10. ಖಾನಾಪುರ	1	1	4	6
11. ಸಡಲಗ ವಿ.ಸ. ಕ್ಷೇತ್ರ	–	–	1	1
12. ಅರಭಾವಿ ವಿ.ಸ. ಕ್ಷೇತ್ರ	–	2	2	4
13. ಕಾಗವಾಡ ವಿ.ಸ. ಕ್ಷೇತ್ರ	–	–	1	1
ಒಟ್ಟು	11	31	89	131

ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,
ಕ್ರ.ಸಂ.............ದಿನಾಂಕ..........

18. ಬಿಜಾಪುರ:–

1. ಬಿಜಾಪುರ	1	2	11	14
2. ಇಂಡಿ	1	2	11	14
3. ಸಿಂಧಗಿ	1	1	9	11
4. ಬಸವನ ಬಾಗೇವಾಡಿ	1	2	7	10
5. ಮುದ್ದೆಬಿಹಾಳ	1	3	4	8
6. ಜಮಖಂಡಿ	1	3	3	7
7. ಮುಧೋಳ	1	1	4	6
8. ಹುನಗುಂದ	1	5	9	15
9. ಬೀಳಗಿ	1	2	4	7
10. ಬಾಗಲಕೋಟೆ	1	–	6	7
11. ಬಾದಾಮಿ	1	4	7	12
ಒಟ್ಟು	11	25	75	111

19. ಧಾರವಾಡ:–

1. ಧಾರವಾಡ	1	2	4	7
2. ಹುಬ್ಬಳ್ಳಿ	1	1	3	5
3. ಗದಗ್	1	3	2	6
4. ಹಾವೇರಿ	1	7	3	11
5. ಕಲ್ಘಟಗಿ	1	1	5	7
6. ಶಿಗ್ಗಾಂವ್	2	–	4	6
7. ಹಾನಗಲ್	1	2	5	8
8. ಬ್ಯಾಡಗಿ	1	3	6	10
9. ಹಿರೆಕೆರೂರು	1	7	6	14
10. ರಾಣಿಬೆನ್ನೂರು	1	4	7	12
11. ಶಿರಹಟ್ಟಿ	2	–	5	7
12. ಮುಂಡರಗಿ	1	1	6	8
13. ನರಗುಂದ	1	–	4	5
14. ಸವಣೂರು	1	–	3	4
15. ನವಲಗುಂದ	1	2	4	7
16. ರೋಣಾ	1	3	6	10
17. ಕುಂದಗೋಳ	1	2	4	7
ಒಟ್ಟು	19	38	77	134

20. ಉತ್ತರ ಕನ್ನಡ:–

1. ಕಾರವಾರ	1	–	2	3
2. ಅಂಕೋಲಾ	1	–	4	5

3. ಕುಮಟಾ	1	1	2	4
4. ಹೊನ್ನಾವರ	1	1	4	6
5. ಸಿದ್ದಾಪುರ	1	1	6	8
6. ಭಟ್ಕಲ್	1	1	1	3
7. ಸಿರಸಿ	1	4	6	11
8. ಮುಂಡಗೋಳು	1	–	6	7
9. ಯಲ್ಲಾಪುರ	1	2	7	10
10. ಹಳಿಯಾಳ	1	1	3	5
11. ಸೂಪ	1	–	2	3
ಒಟ್ಟು	11	11	43	65

ಭಾರತೀಯ ಆಗ್ರೋ ಇಂಡಸ್ಟ್ರೀಸ್ ಫೌಂಡೇಶನ್ ಬಗ್ಗೆ

2024: ಶ್ರೀ ಬಿ. ಶಿವರಾಮು (ಗಂಡಸಿ):–

ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭಾರತೀಯ ಆಗ್ರೋ ಇಂಡಸ್ಟ್ರೀಸ್ ಫೌಂಡೇಶನ್ ತಿಪಟೂರಿನವರಿಗೆ ಮಂಜೂರಾಗಿರುವ ಲಕ್ಕೇಹಳ್ಳಿ, ಅಮೃತಮಹಲ್ ಕಾವಲು ಭೂಮಿ ಇಲಾಖೆಯ ನಿಬಂಧನೆಯ ಅನುಸಾರ ಉಪಯೋಗವಾಗಿದೆಯೆ;

ಆ) ಇಲಾಖೆಯವರು ಇದರ ಬಗ್ಗೆ ಗಮನ ಹರಿಸಿದ್ದಾರೆಯೆ;

ಇ) ಜನ ಸಾಮಾನ್ಯರಿಗೆ ಮತ್ತು ರೈತರಿಗೆ ಇದರಿಂದ ಏನಾದರೂ ಉಪಯೋಗವಾಗಿದೆಯೆ;

ಈ) ಅಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳೇನು ?

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):–

ಅ) ಹೌದು.

ಆ) ಹೌದು.

ಇ) ಹೌದು.

ಈ) 1. ಕೃತಕ ಗರ್ಭದಾರಣೆ
2. ಮೇವು ಅಭಿವೃದ್ಧಿ
3. ಭೂಸಾರ ಸಂರಕ್ಷಣೆ
4. ರೈತರಿಗೆ ತರಬೇತಿ

ಸೊಸನಹಳ್ಳಿ ಹತ್ತಿರ ಸಫಾರಿ ಪಾರ್ಕ್ ನಿರ್ಮಾಣ

1583: ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ):–

ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಬಿ ತಾಲ್ಲೂಕು ಸೊಸನಹಳ್ಳಿಯ ಹತ್ತಿರ ಅರಣ್ಯ ಇಲಾಖಾ ವತಿಯಿಂದ ಸಫಾರಿ ಪಾರ್ಕ್

ಅಥವಾ ನೇಚರ್ ಪಾರ್ಕ್ ಮಾಡಿಕೊಡಬೇಕೆಂದು ಸ್ಥಳೀಯ ಶಾಸಕರು, ಹಾಗೂ ಸಾರ್ವಜನಿಕರು ಸರ್ಕಾರವನ್ನು ಒತ್ತಾಯ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಇದರ ಬಗ್ಗೆ ತೆಗೆದುಕೊಂಡ ಕ್ರಮವೇನು;

ಇ) ಹಾಗಾದರೆ ಯಾವಾಗ ಕೆಲಸ ಪ್ರಾರಂಭಿಸಲಾಗುವುದು ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):–

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಈ ದಿಸೆಯಲ್ಲಿ ಇನ್ನೂ ಯಾವ ಕಾರ್ಯವನ್ನು ತೆಗೆದುಕೊಂಡಿರುವುದಿಲ್ಲ.

ಇ) 1993–94ನೇ ಸಾಲಿನಲ್ಲಿ ಹಣ ಬಿಡುಗಡೆ ಮೇರೆಗೆ ಕೆಲಸ ಪ್ರಾರಂಭಿಸಲಾಗುವುದು.

ಕೊಡಗು ಜಿಲ್ಲೆಯ ಪದವಿಪೂರ್ವ ತರಗತಿಗೆ ದೈಹಿಕ ಶಿಕ್ಷಕರ ನೇಮಕ

703: ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ):–

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿ ಪದವಿ ಪೂರ್ವ ತರಗತಿಗಳಿಗೆ ದೈಹಿಕ ಶಿಕ್ಷಣ ಬೋಧಿಸಲು ನಿರ್ದೇಶಕರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? (ವ್ಯಾಯಾಮ ಶಿಕ್ಷಕರು)

ಆ) ಬಂದಿದ್ದಲ್ಲಿ ನೇಮಕ ಮಾಡದಿರಲು ಕಾರಣವೇನು;

ಇ) ದೈಹಿಕ ಶಿಕ್ಷಣಕ್ಕೆ ಹೆಸರುವಾಸಿಯಾದ ಕೊಡಗು ಜಿಲ್ಲೆಯಲ್ಲಿ ಒಂದೊಂದೇ ಆಟಗಳನ್ನು ಕಡಿತಗೊಳಿಸಲು ಕಾರಣವೇನು;

ಈ) ದೈಹಿಕ ಶಿಕ್ಷಣ ನಿರ್ದೇಶಕರುಗಳನ್ನು ಯಾವಾಗ ನೇಮಕ ಮಾಡಲಾಗುವುದು ?

ಡಾ. ಹೆಚ್.ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):–

ಅ) ಬಂದಿದೆ.

ಆ) ದೈಹಿಕ ಶಿಕ್ಷಕರ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದ್ದು ಈ ನಿಯಮ ರಚನೆಯಾದ ನಂತರ ದೈಹಿಕ ಶಿಕ್ಷಕರ ನೇಮಕ ಮಾಡುವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಈ ವಿಷಯ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಪ್ರಶ್ನೆ (ಅ)ಗೆ ಕೊಟ್ಟಿರುವ ಉತ್ತರವೇ ಇದಕ್ಕೂ ಅನ್ವಯಿಸುತ್ತದೆ.

ಕೆಲವು ಸಚಿವರು ಮತ್ತು ಶಾಸಕರು ಶಾಲಾ ಕಾಲೇಜುಗಳನ್ನು ನಡೆಸುತ್ತಿರುವ ಬಗ್ಗೆ

132: ಶ್ರೀ ರವೀಂದ್ರನಾಥ್ ಬಾಬು (ಕೊಟ್ಟೂರು):–

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೆಲವು ಸಚಿವರು ಮತ್ತು ಶಾಸಕರು ಶಾಲಾ ಕಾಲೇಜುಗಳನ್ನು ನಡೆಸುತ್ತಿದ್ದು, ಅವರೇ ಮುಖ್ಯಸ್ಥರಾಗಿರುವುದು ನಿಜವೆ; (ಅವರ ಹೆಸರು, ಹುದ್ದೆ ಮತ್ತು ಸಂಸ್ಥೆಯ ಹೆಸರನ್ನು ನೀಡುವುದು)

ಆ) ಇಂತಹ ವ್ಯಕ್ತಿಗಳಿಗೆ ನೀಡಲಾಗುವ ಸಿಟ್ಟಿಂಗ್ ಫೀ ಅಥವಾ ಇತರೆ ಶೀರ್ಷಿಕೆಯಲ್ಲಿ ನೀಡುವ ಮೊತ್ತದ ವಿವರ;

ಇ) ಈ ಶಿಕ್ಷಣ ಸಂಸ್ಥೆಗಳು ಡೊನೇಷನ್ ಮತ್ತು ಕ್ಯಾಪಿಟೇಷನ್ ಫೀ ವಸೂಲಿ ಮಾಡುತ್ತಿವೆಯೇ;

ಈ) ಸಂಬಳ ಹಾಗೂ ಇತರೆ ಸೌಲಭ್ಯಗಳನ್ನು ನೀಡುವುದರಲ್ಲಿ ಈ ಶಿಕ್ಷಣ ಸಂಸ್ಥೆಗಳು ಗ್ರ್ಯಾಂಟ್–ಇನ್–ಎಡ್ ನಿಯಮಗಳನ್ನು ಪಾಲಿಸುತ್ತಿವೆಯೆ;

ಉ) ಅನುದಾನಿತ ಹಾಗೂ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಸಂಖ್ಯೆ ?

ಡಾ. ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):–

ಅ) ಹೌದು.

(ಪಟ್ಟಿ ಲಗತ್ತಿಸಿದೆ)

ಆ) ಯಾವುದೇ ಶೀರ್ಷಿಕೆಯಲ್ಲಿ ಸಿಟ್ಟಿಂಗ್ ಫೀ ಯನ್ನು ಕೊಡುತ್ತಿಲ್ಲ.

ಇ) ಡೊನೇಷನ್ ಮತ್ತು ಕ್ಯಾಪಿಟೇಷನ್ ಫೀಯನ್ನು ವಸೂಲಿ ಮಾಡುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿಲ್ಲ.

ಈ) ಹೌದು.

ಉ)

ಅನುದಾನಿತ	ಅನುದಾನರಹಿತ
64	221

ANNEXURE

Name	Schools
Kolar	
1. Sri Chowdareddy Minister for Urban Development (President of the School)	1. Kishore English High School 2. Kishore English Hr. Pry. School
2. Sri C.V. Venkatarayappa, M.L.A. (President of the Schools)	1. Venkatapatheppa Teachers Training Inst. Chickaballapur 2. Panchagiri High School, Chickaballapur 3. Bharathi Kannada Higher Primary School, Chickaballapur 4. K.V. English Higher Primary School, Chikkaballapur
Tumkur	
1. Sri. Shaffi Ahmed, M.L.A. (Acting President of the School)	1. H.M.S. High School 2. H.M.S. Primary School
Shimoga	
1. Sri. Kariyanna, M.L.A. (Secretary of the School)	1. Thunga High School, Bapujinagar, Shimoga Dist. 2. Thunga High School, Vidyanagar, Shimoga.
2. Sri. Kagodu Thimmappa, M.L.A., (President of the Management)	1. Janatha High School, Sagar, Shimoga
Dharwad	
1. Sri. H.K. Patil, Minister of State for Texttile (Chairman of the Institutions).	1. HCES Girls High School, Gadag, 2. H.C.E.S. Boys High School, Gadag, 3. H.C.E.S. High School, Chincholi, Gadag Taluk. 4. H.C.E.S. High School, Harti, Gadag Taluk. 5. H.C. E.S. High School, Kurthakoti GadagTaluk.

	6. H.C. E.S. High School, Gadag Huilgol, Gadag Taluk.
2. Sri. Gopinath R. Sandra, Minister for Housing, (Chairman of the Institution).	1. Swami Vivekananda Primary School, Hubli.
Gulbarga	
1. Sri. Mallikarjuna Kharge, Hon'ble Minister for Co - operation(Chairman, Karnataka people Education Society Gulbarga).	1. Milling School Gulbarga, 2. Priyadarshi High School, Gulbarga. 3. Praguya High School, Gulbarga 4. Praguya Nursery and Primary English Medium School, Gulbarga 5. Motasri Ramabai Ambedkhar H.P.S. Gulbarga 6. Panchasheela H.P.S. Vidyanagar, Gulbarga
2. Sri. Janab Syed Shah, Mohamed Md. UL - Hissaini Sahab M.L.C. (President Khaja Education Society)	1. Khaja High School, Gulbarga. 2. Bi, Bi, Girls High School, Gulbarga. 3. Nasheman Urdu L.P.S. Mahaboobnagar, Gulbarga
3. Sri. Babu Rao Chavan, M.L.A. (President Banjara Education Society)	1. Jumka High School, Gulbarga 2. Subash High School, Gulbarga 3. Tejusingh Rathod H.P.S. Adarshanagar, Gulbarga 4. Kannu Naik, L.P.S. Bungar, Chikkodi Taluk. 5. V.N.M. H.P.S. Wadi (JN) Chittapur Taluk. 6. Somala Naik, H.P.S. Malkhed, Sedam Taluk.

4. Sri. B.R. Patil, Deputy Chairman, Karnataka Legilsative Counsil, (President Sadguru Revana Siddeshwara Shivasharane V.V. Sangh, Sharananagar, (ALAND).	
5. Basavaraj Patil, M L C. (President Kottal Basavaswara Bharathiya Shikkashana Samithi, Sedam).	1. Matruchaya High School, Sedam. 2. Mathru Mandir High School, Chincholi. 3. Balabharathi H.P.S. Sedam. 4. Sharanabasaveshwara H.P.S. Chincholi. 5. Saraswathi H.P.S., Mudhol. 6. Veerabhadreshwara H.P.S. Kolkunde, Sedam Taluk.
6. Sri Dharma Singh, Hon'ble Minister for social Welfare, (Chairman Vyaktitwa Vikas Education Soiety, Gulbarga.	1. Kannada Convent H.P.S. M B. Nagar, Gulbarga
7. Sri D.B. Kalmankar, Chairman, Legislature Council (President Adarsha Educational Trust, Gulbarga.	1. Adharsha Kannada H.P.S. Gunj Colony, Gulbarga 2. Adarsha English Medium, Primary School, Gulbarga
8. Sri. G. Ramakrishna, Hon'ble Minister for Medical Education. (President, Keerthi Education Society, Gulbarga)	1. Keerthi Kannada Lower Primary School, Basavanagar. 2. Keerthi Kannada L.P.S. M.B. Nagar. 3. Keerthi Kannada L.P.S. Waddarahalli, Brahampur. 4. Keerthi Kannada L.P.S. Aryanagar, Gulbarga
9. Sri Qumurul Islam M.L.A. (President Hazaa Shaik Minhajohuddin Kolleravan Charitable Trust M S K Mills Road, Gulbarga).	1. Islamia Girls High School, Gulbarga 2. Urdu L.P.S. Qumural Islam Colony, Gulbarga

10. Dr. B.G. Jawali, M.P, (President, Gurushanthappa Jawali Memorial Trust, Gulbarga)	1 Gurushanthappa Jawali Memorial High School, Pattan, Gulbarga Taluk. 2. Gurushanhappa Jawali Memorial Residential English Medium High School, Pattan, Gulbarga Tq.
Uttar Kannada (Karwar)	
1. P. S. Rane, Minister for Adult Education.	1. Mallikarjuna Junior College, Siddar. 2. Mallikarjuna Senior College, Siddar. 3. Mallikarjuna High School Siddar.
A. President, Mallikarjuna Education Society, Siddar Karwar).	
B. President Bapuji Grameen Vikas Samithi, Karwar.	1. Bapuji Arts and Commerce College, Sadashiugad, Karwar. 2. Bapuji Junior College, Ramanagar 3. Bapuji Junior college, Joida. 4. Bapuji Junior college, Kerwadi. 5. Adarsh High School, Antewadi, Dandeli. 6. Adarsh High School, Gund-Joide. 7. Adarsh High School, Anmod - Joida. 8. Adarsh High School, Pradani - Joida. 9. Adarsh High School, Mallapur, Karwar 10. Adarsh High School, Hotegali, Karwar 11. Adarsh High School, Develamkki Karwar

2. S.M. Yahya, Minister for Higher Education, (Chairman Anjuman Hanir E Mushimeeva).	1. Anjuman Arts and Science College, Bhatkal. 2. Islamia Anglo Urdu High School, Bhatkal. 3. Anjuman Girls High School, Bhatkal. 4. Shamsh Primary and Nursery School, Bhatkal.
Bijapur	
1. Sir S.S. Patil, Minister for Sugar (President, Karnataka Grameena Vidya thivriddi Samsthe, Thalikote).	1. Sri Bhogeshwara High School, Hirur, Muddebihal Taluk. 2. K R V V S High School, Sadar Narasalagi, Bagewadi Taluk. 3. K R V V S High School, Konnur, Muddebihala Taluk
2. Sri B.R. Thimmapa M L A, (President Pragathi Samudaya, Mudhol)	1. High School, Ward No. 5, Mudhol. 2. High School, Hemaraddi Mallam Nagar, Mudhol.
3. Sri Manohar Inapur, M L A (President Jilla Banjara Vidya Vardhaka Sangha)	1. B A D V High School, Jamkhandi, 2. Navachathara High School, Ameenagada, Hungund Taluk. 3. Karnatka High School, Bijapur. 4. D B E High School, Atharga. 5. D B E High School, Nimbal (R S) Indi Taluk. 6. D B E High School, Gabasavalagi, Sindhagi Taluk. 7. Rajivgandhi Smaaraka High School, Hungund. 8. D B E High School, Devara Hippargi, Sindhagi Taluk. 9. Sri Murudi Malleshwara High School, Muganur, Hungund Taluk.

Bangalore South

1. Sri A Krishnappa, Minister of State for Horticulture. (Secretary of the school)	1. Sri Bharathi Vidya Nikethana High School, Devasandra, Bangalore, Southern.

Mandya

1. Sri M. S. Athmananda M L A (President of the School)	1. Kalegowda High School, Mandya 2. Dr. Rajendra Prasada Memorial Vidyasamsthe, Mandya.
2. Sri G. Madegowda, M.P. (Member of the School)	1. Sri Adichunchanagiri Shikshana Samsthe (R), Adichunchanagiri, Nagamangala.
3. Sri. H.D.Devegowda, M.P. (Member of the school)	1. Ramachandraswamy High school, Bramhadevahalli, Nagamangala. 2. Vishwamanasa High School, Kommerchalli, Mandya.
4. Sri D. Halagegowda, M L A (Member of the School)	1. Yedushyla High School, Melukote. 2. Sri Yedushyla Vidyasamasthe, Thirunarayanapura, Melukote, Pandavapura.

Bidar.

1. Sri Basavaraj Patil Attur M L A, (President of the School)	1. Yeshoda Unaided Primary School, Nittur.
2. Sri Bhimanna Khandre, Minister for transport (President of the School)	1. Akkamahadevi High School Bhalki. 2. Akkamahadevi Women's College, Aurad. 3. S.V. Composite Junior College, Kamalanagar..

Bangalore North

1. Sri C. Veerabhadrappa M L C (Member of the School)	1. S J R High School, Rajaji Nagar, Bangalore-10.
2. Sri N. Muniswamy M L A. (President of the School)	1. Siddartha P U Composite Junior College, Indira nagara, Bangalore.
3. Dr. G. Parameshwara (Minister of State for Sericulture) (Joint Secretary of the School	1. Siddhartha High School, Kothanur, Bangalore North.

ENGINEERING COLLEGE

1. Sri Chowdaiah, MLA, Chariman.	PES Engineering College, Mandya (people's Education Society, Mandya).
2. Sri S.M. Yahya, MLA, Chairman. (Hon'ble Minister for Higher Education).	1. Anjuman Engineering College Bhatkal. (Anjuman Engg. College Board).
3. Sri Harnahalli Ramaswamy, Chairman. (Hon'ble Minister for Law)	MCE, Hassan, (Malnad Education Society).
4. Dr. Jawali, MP. Chairman.	PDA Engineering College, Gulbarga.
5. Sri P.B. Kore, MP.	BVB Engineering college, Hubli.

POLYTECHNICS

1. Sri P.B. Kore, MP (as Chairman)	KLE Society Polytechnic, Belgaum, (KLE Society, Belgaum)
2. Sri Bheemanna Khandre, MLC (Hon'ble Minister for Transport) Chairman.	Haralaiah Polytechnic, Bhalki, Shanthi Vardhaka Education Society, Bhalki).
3. Sri Aziz Sait, MLA as president.	Faroquia Polytechnic for Women, Mysore. (Rifah - ul - Muslimeen Education Trust)
4. Sri Basavaraj Patil Attur M.L.A. as president.	Nittur Polytechnic, Nittur, (Nittur Education Society)
5. Sri Gopinath R. Sandra, Hon'ble Minister for Housing - President.	Nalanda Foundation Polytechnic Hubli (Nalanda Foundation, Hubli)

6. Sri D.B. Chandre Gowda, MLA Chairman.	Sahyadri Polytechnic, Thirthahalli (Sahyadri Trust).
7. Sri C.V. Venkatarayappa. MLA - Chairman.	K. Venkatapathiappa Trust, Chickballapur (KVT Polytechnic, Chickballapur)
8. Sri Kagodu Thimmappa MLA (as Chairman).	Sanjay Memorial Polytechnic, Sagar (Sanjay Vidya Kendra Sagar).
9. Sri G. Made Gowda, MP, (as President).	Bharathi Education Trust, Polytechnic, Bharathi Nagar (K.M. Doddi).
10. Dr. B.G. Jawali, MP (as Chair man)	HKE Society's Polytechnics:- 1. HKE Society's Womens, Polytechnic, Gulbarga. 2. HKE Society's Boys Polytechnic, Gulbarga. 3. HKE Society's Boys Polytechnic, Raichur. (HKE Society).
11. Sri A. Krishnappa, Minister for Horticulture (as chairman)	Rajiv Gandhi Polytechnic Bangalore - 36.
12. Sri S. Shafi Ahmed, MLA, (as Chirman).	HMS Education Society, HMS Polytechnic, Tumkur.

ಸಂಜಯಗಾಂಧಿ ಅಪಘಾತ ಪುನರ್ ನಿವೇಶನ ಕೇಂದ್ರದಲ್ಲಿ ರಸ್ತೆ ಅಪಘಾತ ಗಾಯಾಳುಗಳಿಗೆ ಚಿಕಿತ್ಸೆ

133: ಶ್ರೀ ಕೆ.ವಿ. ರವೀಂದ್ರನಾಥ್ ಬಾಬು (ಕೊಟ್ಟೂರ್):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಜಯಗಾಂಧಿ ಅಪಘಾತ ಪುನರ್ ನಿವೇಶನ ಕೇಂದ್ರದಲ್ಲಿ ರಸ್ತೆ ಅಪಘಾತ ಗಾಯಾಳುಗಳಿಗೆ ಮೂಳೆತಜ್ಞರು ಪ್ಲಾಸ್ಟಿಕ್ ಸರ್ಜನ್ ನರತಜ್ಞ ನ್ಯೂರೋ ಮತ್ತು ಜನರಲ್ ಸರ್ಜನ್‌ಗಳಿಂದ ಚಿಕಿತ್ಸೆ ಮಾಡಲಾಗುತ್ತಿದೆಯೇ;

ಆ) ಮೇಲ್ಕಂಡ ಯಾವುದಾದರೊಂದು ವಿಷಯಗಳಲ್ಲಿ ಪರಿಣತರಾಗಿರುವ ವೈದ್ಯಾಧಿಕಾರಿಯ ಬದಲು, ಪ್ಲಾಸ್ಟಿಕ್ ಸರ್ಜನ್ ವಿಷಯದ ಒಬ್ಬರನ್ನು ಸಂಸ್ಥೆಯು ಮೇಲಾಧಿಕಾರಿಯಾಗಿ ಹೊಂದಿರುತ್ತದೆಯೇ;

ಇ) 1986 ರಿಂದ ಅಡ್ಮಿಷನ್ ಮಾಡಿರುವ ಸಂಖ್ಯೆ ಎಷ್ಟು;

ಈ) ವಿವಿಧ ತಜ್ಞರಿಂದ ದೊಡ್ಡ ಶಸ್ತ್ರ ಚಿಕಿತ್ಸೆಗಳನ್ನು ಮಾಡಲಾಗಿದೆಯೇ;

ಉ) ವಿವಿಧ ತಜ್ಞರ ಇಲಾಖೆಯನ್ನು ಬೇರೆಯಾಗಿ ತೆರೆದಿಧೆಯೇ;

ಊ) ಯಾಕೆ ಇಂತಹ ಕೋರ್ಸುಗಳನ್ನು ತೆರೆಯಲು ಪ್ರಯತ್ನಿಸಿಲ್ಲ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಸಂಜಯಗಾಂಧಿ ಅಪಘಾತ ಪುನರ್‌ನಿವೇಶನ ಕೇಂದ್ರದಲ್ಲಿ ರಸ್ತೆ ಅಪಘಾತ ಗಾಯಾಳುಗಳಲ್ಲ ಇತರೆ ಅಪಘಾತದಲ್ಲಿ ನೊಂದವರಿಗೂ ಚಿಕಿತ್ಸೆ ನೀಡಲಾಗುತ್ತಿದೆ.

ಹೀಗೆ ಬಂದವರನ್ನು ಮೂಳೆ ತಜ್ಞರು, ಪ್ಲಾಸ್ಟಿಕ್ ಸರ್ಜನ್ ನರತಜ್ಞ(ನ್ಯೂರೋ) ಮತ್ತು ಜನರಲ ಸರ್ಜನ್‌ರು ಚಿಕಿತ್ಸೆ ನೀಡುತ್ತಾರೆ. ಹಾಗೂ ಇವರಿಗೆ ಮೊದಲು ಪ್ಲಾಸ್ಟಿಕ್ ಸರ್ಜನ್‌ರು ಚರ್ಮ ಹೊದಿಕೆಯನ್ನು ನೀಡುತ್ತಾರೆ. ಗಾಯವು ಮಾಗಿದ ಮೇಲೆ ಮೂಳೆ ತಜ್ಞರು ಮೂಳೆಗಳನ್ನು ಹೊಂದಿ ಜೋಡಿಸುತ್ತಾರೆ.

ಆ) ಈ ಸಂಸ್ಥೆಯಲ್ಲಿ ಪ್ಲಾಸ್ಟಿಕ್ ಸರ್ಜನ್‌ರು ನಿರ್ದೇಶಕರಾಗಿ ಸರ್ಕಾರಿ ಆದೇ ಸಂಖ್ಯೆ:ಆಕುಕ:73:ಪಿಟಿಡಿ:92 ದಿನಾಂಕ 20–6–92ರಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರವ ನುರಿತ ಪ್ರಾಧ್ಯಾಪಕ ಮತ್ತು ಇಲಾಖಾ ಮುಖ್ಯಸ್ಥರನ್ನು ಅರ್ಹತೆಯ ಮೇರೆಗೆ ನಿಯಮಾನುಸಾರವಾ ನಿರ್ದೇಶಕರಾಗಿ ನೇಮಿಸಲಾಗಿದೆ.

ಇ)	1986	1987	1988	1989	1990	1991	1992
ಒಳರೋಗಿಗಳು	988	1049	1409	2386	1483	1523	1527
ಹೊರರೋಗಿಗಳು	3948	3845	4191	4253	4113	3740	3942

ಈ) ವಿವಿಧ ರೀತಿಯ ಶಸ್ತ್ರ ಚಿಕಿತ್ಸೆಗಳನ್ನು ಅಂದರೆ ಮೂಳೆ ತಜ್ಞ, ನರತಜ್ಞತೆ, ಸಾಮಾನ್ಯ ಶ ಚಿಕಿತ್ಸೆ, ಪ್ಲಾಸ್ಟಿಕ್ ಹಾಗೂ ಫೇಸಿಯಾ ಮಾಕ್ಸಿಲರಿ ಶಸ್ತ್ರ ಚಿಕಿತ್ಸೆ 1991 ರಿಂದ ಅಕ್ಟೋಬರ್ 199 ರವರೆಗೆ ಮಾಡಿರುವ ಬಗ್ಗೆ ಪ್ರತ್ಯೇಕ ವಿವರಣಾ ಪಟ್ಟಿಯನ್ನು ಲಗತ್ತಿಸಿದೆ.

ಉ) ಮಾಡಿರುವುದಿಲ್ಲ.

ಊ) ಹಣದ ಕೊರತೆ ಮತ್ತು ಸ್ಥಳಾಭಾವದಿಂದ ಕೋರ್ಸ್‌ಗಳನ್ನು ಪ್ರಾರಂಭಿಸಲು ಸಾಧ್ಯವಾಗಲಿಲ್ಲ ನಮ್ಮದೇ ಆದ ಹೊಸ ಕಟ್ಟಡವು ಪ್ರಾರಂಭವಾದಾಗ ಇದರ ಬಗ್ಗೆ ಪರಿಶೀಲಿಸಲಾಗುವುದು.

STATEMENT OF NUMBER OF MAJOR OPERATIONS CONDUCTED IN DIFFERENT SPECIALITIES SINCE NOVEMBER 1992

	Debridement and minor porcedures done by all doctors	closed Reduction	Orthopaedic Operations	Plastic & Facio Maxillary Operations	General Surgery Operations
Nov. 1992	30	20	21	15	02
Dec. 1992	55	16	18	17	02
Jan. 1993	23	14	13	13	05
Feb. 1993	15	18	10	13	02

ಮೈಸೂರು ಮೃಗಾಲಯದಲ್ಲಿ ಪ್ರಾಣಿಗಳ ಸಾವಿನ ಬಗ್ಗೆ

24: ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):–

ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದೆರಡು ವರ್ಷಗಳಿಂದ ಮೈಸೂರಿನ ಮೃಗಾಲಯದಲ್ಲಿ ಸತ್ತಿರುವ ಪ್ರಾಣಿಗಳ ಸಂಖ್ಯೆ ಎಷ್ಟು ಹಾಗೂ ಅವುಗಳ ಸಾವಿಗೆ ಕಾರಣಗಳೇನು;

ಆ) ಪ್ರಾಣಿಗಳಿಗೆ ಕಾಯಿಲೆ ಬಂದಾಗ ಇವುಗಳ ಉಪಚಾರದಲ್ಲಿ ಬೇಜವಾಬ್ದಾರಿತನ ಹಾಗೂ ನಿರ್ಲಕ್ಷ್ಯತನವನ್ನು ತೋರುತ್ತಿರುವ ಕಾರಣದಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಣಿಗಳು ಸಾಯುತ್ತಿರುವುದು ನಿಜವೇ;

ಇ) ಹಾಗಿದ್ದಲ್ಲಿ ಇನ್ನು ಮುಂದೆ ಈ ಪ್ರಾಣಿಗಳಿಗೆ ಸಾವು ಸಂಭವಿಸಿದಾಗ ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):–

ಅ) ಕಳೆದೆರಡು ವರ್ಷಗಳಿಂದ ಮೈಸೂರು ಮೃಗಾಲಯದಲ್ಲಿ ಸತ್ತಿರುವ ಪ್ರಾಣಿಗಳ ವಿವರ ಈ ಕೆಳಗಿನಂತಿದೆ:

1990–91	ಏಪ್ರಿಲ್‌ನಿಂದ ಮಾರ್ಚ್‌ವರೆಗೆ 48
1991–92	ಏಪ್ರಿಲ್‌ನಿಂದ ಮಾರ್ಚ್‌ವರೆಗೆ 44
1992–93	ಏಪ್ರಿಲ್‌ನಿಂದ ಜನವರಿ 1993ರವರೆಗೆ 41

ಅವುಗಳ ಸಾವಿಗೆ ಕಾರಣವನ್ನು ಲಗತ್ತಿಸಿರುವ ತಃಖ್ತೆಯಲ್ಲಿ ಒದಗಿಸಲಾಗಿದೆ.

ಆ) ಇದು ಸತ್ಯಕ್ಕೆ ದೂರವಾಗಿದೆ. ಮೃಗಾಲಯದ ಪ್ರಾಣಿಗಳನ್ನು ಪಶುವೈದ್ಯಾಧಿಕಾರಿಗಳು ನಿತ್ಯವೂ ಪರೀಕ್ಷಿಸಿ ಚಿಕಿತ್ಸೆ ನೀಡುತ್ತಿದ್ದಾರೆ. ಅಗತ್ಯವಿದ್ದಲ್ಲಿ ಇತರ ಪಶುವೈದ್ಯ ತಜ್ಞರ ಸಹಾಯವನ್ನು ಪಡೆದುಕೊಳ್ಳಲಾಗುತ್ತಿದೆ. ಪ್ರಾಣಿಗಳು ಅಸ್ವಸ್ಥಗೊಂಡಾಗ ಅವುಗಳಿಗೆ ನೀಡಿದ ಚಿಕಿತ್ಸೆಯ ವಿವರಗಳನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ. ಪ್ರಾಣಿಗಳು ಮೃತಪಟ್ಟರೆ ಶವ ಪರೀಕ್ಷೆ ನಡೆಸಿ ಸಾವಿಗೆ ಕಾರಣವನ್ನು ಪತ್ತೆ ಮಾಡಿ ಸಂಬಂಧಪಟ್ಟವರಿಗೆ ವರದಿ ಮಾಡಲಾಗುತ್ತಿದೆ. ಪ್ರತಿಯೊಂದು ಪ್ರಾಣಿಯ

ವಿವರಗಳನ್ನೊಳಗೊಂಡ ಪ್ರಕರಣ ಪತ್ರವನ್ನು ಪ್ರಾರಂಭ ಮಾಡಿದ್ದು ಅದು ಯಾವುದೇ ತನಿಖಾಧಿಕಾರಿಗಳ ಪರಿಶೀಲನೆಗೆ ಸದಾ ಲಭ್ಯವಿರುತ್ತದೆ.

ಪ್ರಾಣಿಗಳ ಶುಶ್ರೂಷೆಗಾಗಿ ಇತ್ತೀಚಿನ ಮೈಸೂರು ಮೃಗಾಲಯವು ಸಾಕಷ್ಟು ಸಲಕರಣೆಗಳನ್ನು ಹೊಂದಿದ ನವೀನ ಮಾದರಿಯ ಪಶುವೈದ್ಯ ಚಿಕಿತ್ಸಾಲಯವನ್ನು ಸ್ಥಾಪಿಸಿದೆ. ಪ್ರಾಣಿಗಳ ಯೋಗಕ್ಷೇಮ ಮತ್ತು ಶುಶ್ರೂಷೆಗಾಗಿ ಸಹಾಯ ನಿರ್ದೇಶಕ ಮಟ್ಟದ ವೈದ್ಯಾಧಿಕಾರಿಯನ್ನು ಮೈಸೂರು ಮೃಗಾಲಯಕ್ಕೆ ನಿಯೋಜಿಸಲಾಗಿದೆ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

1990-91 (APRIL 1990 - MARCH 1991)

Sl. No.	Date	Sex	Name of the Animals	Age	Cause of death
1.	2.4.90	1:0	Indian Gazelle	One month	Internal haemorrhage and shock.
2.	5.4.90	1	Black Swan Chick	One month	Drowning
3.	16.4.90	0:1	Red Kangaroo	1 1/2 years	Head injuries - haemorrhage in brain.
4.	17.4.90	1:0	Puma	23 years	Old age and senility
5.	2.5.90	1:0	Indian Gazelle	2 years	Severe injuries to vital organs infighting.
6.	31.5.90	0:1	Black Buck	4 months	Severe injuries to vital organs infighting.
7.	5.6.90	0:1	Niligiri Langur	1 1\2 years	Acute brancho penumonia
8.	6.6.90	1:0	Red Kangaroo	1 1/2 years	Acute Gastro enterites
9.	8.6.90	1:0	Niligiri Langur	10 years	Head injuries and haemorrhage
10.	16.6.90	0:1	Tiger	23 years	Old age and senility
11.	19.6.90	1:0	Crowned Pigeon	5 years	Head & Neck injuries and shock.
12.	29.6.90	1:0	Red Kangaroo	6 years	Severe gastrities and Liver tumor
13.	5.7.90	0:1	Common Crane	6 years	Severe injuries to head, neck, caused by other mate.
14.	11.7.90	0:1	Common Langur	15 years	Old age and senility
15.	24.7.90	1	Python	4 years	Killed by other python
16.	27.7.90	0:1	Gadwal Duck	3 years	Eaten away by the Cat
17.	1.8.90	0:1	Grey parrot	10 years	Old age and stress
18.	6.8.90	1:0	Sloth Bear	18 years	Multiple abcesses liver and ascitis.
19.	10.8.90	0:1	Demoiselle Crane	7 years	killed by the Sarus Crane
20.	20.8.90	1:0	Indian Gazelle	12 years	Septicaemia.

21.	25.8.90	0:1	Crowned Pigeon	5 years	Enteritis
22.	14.9.90	0:1	Blacked Necked Stork	3 years	Severe injuries to neck, abdomen, Caused by another stork.
23.	23.9.90	0:1	Fallow Deer	6 years	Septicaemia
24.	24.9.90	0:1	Rhea	1 year	New arrival sudden death
25.	27.9.90	1:0	Spotted Deer	6 years	Severe injuries to head, neck, chest and abdomen
26.	3.10.90	1	Python	6 years	Inanition
27.	4.10.90	0:1	Malayan Giant Squirrel	5 years	Old age and debility
28.	10.10.90	0:1	Crocodile	8 years	Severe injuries to the chest and internal haemorrhage
29.	12.10.90	1:0	Common Pochard Buck	2 years	Abscess liver
30.	17.10.90	1:0	Small Indian Fox	9 years	Old age and senility
31.	12.11.90	0:1	Black Buck	5 months	Pneumonia
32.	16.11.90	0:1	Gelada Baboon	28 years	Multiple abscess in liver
33.	16.11.90	0:1	Common Langur	5 years	Paresis with coma
34.	17.11.90	0:1	Pig Tailed Macaque	26 years	Old age and senility
35.	17.11.90	1	Touraco	4 years	Rainy stress
36.	9.12.90	1:0	Himalayan Black Bear	15 years	Acute Gastritis
37.	9.12.90	1:0	Small Indian Fox	4 years	Septicaemia
38.	10.12.90	1:0	Thamin Deer	5 years	Nephritis
39.	10.12.90.	1	White Crested Duck	3 years	Killed by other big duck
40.	26.12.90	1:0	Niligiri Langur	6 months	Pneumonia
41.	5.1.90	0:1	Red Kangaroo	7 years	Septicaemia (Fracture)
42.	13.1.91	1:0	Sarus Crane	7 years	Severe injuries, internal bleeding and shock.

43.	21.1.91	0:1	Mouse Deer	6 years	Ascitis
44.	25.1.91	1:0	Umbrella Cockatoo	4 years	Coryza
45.	9.2.91	0:1	tiger	3 1/2 years	Cardiac failure
46.	11.2.91	1:0	Neelgai	4 years	Severe injury
47.	6.3.91	0:1	Indian Gazelle	3 years	Severe injuries with internal haemorrhage
48.	29.3.91	1:0	Four Horned Antelope	5 years	Head injury internal haemorrhage and shock

1991-92 (APRIL 1991-MARCH 1992)

Sl. No.	Date	Sex	Name of the Animals	Age	Cause of death
1.	8.5.91	0:1	Indian Gazelle	3 years	Multiple injuries - chest and abdomen
2.	19.5.91	1:0	Neelgai	1 1/2 years	Septioaemia
3.	25.5.91	1:0	Spotted Deer	3 years	Exhausted
4.	31.5.91	0:1	Spotted Deer	4 years	Multiple injuries
5.	10.6.91	1	Turkey Fowl	12 years	Old age
6.	18.6.91	1:0	Neelgai	5 years	Fatal injuries with haemorrhage
7.	22.6.91	0:1	Malayan Giant Squirrel	8 years	Old age
8.	5.7.91	1:0	Thamin Deer	4 years	Severe injuries - chest, abdomen and internal haemorrhage.
9.	14.8.91	1:0	Wild Pig	14 Years	Severe injuries with haemorrhage
10.	18.8.91	1	Python	8 years	Inanition
11.	19.8.91	1	Python	6 years	Inanition
12.	21.8.91	0:1	Brahminy Duck	7 years	Old age

13.	6.9.91	1:0	Black Buck	17 years	Old age and senility
14.	7.9.91	1	Python	5 years	Inaniton
15.	8.9.91	1:0	Fallow Deer	6 years	Septicaemia
16.	8.9.91	1:0	Fallow Deer	16 years	Old age
17.	18.9.91	1:0	Common Langur	8 years	Acute Diarrhoea
18.	19.9.91	0:1	Flamingo	22 years	Old age
19.	16.10.91	0:1	Pinturong	6 years	Acute Pneumonia
20.	30.10.91	1	White Crested Duck	8 years	Old age
21.	2.11.91	1:0	Leopard	20 years	Old age
22.	10.11.91	1:0	Fallow Deer	8 years	Septicaemia
23.	11.11.91	0:1	Corcodile	20 years	Inanition
24.	22.11.91	1:0	Zebra	18 years	Old age
25.	28.11.91	0:1	Indian Rhinecetors	35 Years	Old age
26.	1.1.92	1:0	Civet Cat	8 years	Old age
27.	5.1.92	0:1	Python	5 years	Inanition
28.	8.1.92	0:1	Indian Gazelle	2 years	Multiple injuries and internal haemorrhage
29.	9.1.92	1:0	Black Swan Chick	8 months	Asphyxia
30.	18.1.92	1:0	Black Buck	6 years	Severe injuries and shock
31.	4.2.92	1:0	Lemur	5 years	Septicaemia
32.	6.2.92	1:0	Leopard Cat	7 years	Ascitis
33.	10.2.92	1:0	Black Swan Chick	3 months	Toxaemia and Enterites
34.	10.2.92	0:1	Black Swan Chick	3 months	Toxaemia and Enterites
35.	11.2.92	0:1	Brown Lemur	7 years	Internal Multiple bite injuries, heamorrhage & shock

36.	11.2.92	1:0	Black Buck	5 years	Internal haemorrhage
37.	18.2.92	1:0	Indian Gazelle	2 years	Severe injuries and internal haemorrhage
38.	22.2.92	0:1	Indian Gazelle	2 years	Fracture of limbs maggot wound with septicaemia
39.	23.2.92	0:1	Indian Gazelle	2 years	Severe injuries, fracture of fore limbs and septicaemia
40.	10.3.92	0:1	Chimpanzee	45-50 years	Septicaemia
41.	11.3.92	0:1	Indian Gazelle	1 1/2 years	Septicaemia
42.	20.3.92	1:0	Neelgai	6 years	Severe injuries and wounds with Septicaemia
43.	29.3.92	1	Mollucan Cockatoo	10 years	Snake bite
44.	30.3.92	1:0	Peacock	8 years	Severe injuries and haemorrhage

1992-93 (April 92 to January 93)

Sl. No.	Date	Sex	Name of the Animal	Age	Cause of Death
1.	9.4.92	0:1	Four horned Antelope	4 years	Severe injuries leads to pneumonia with nodules
2.	12.4.92	1:0	Four horned Antelope	4 years	Anorexia, Emaciation and debility
3.	16.4.92	0:1	Brown Lemur	2 years	Severe injuries and Haemorrhage
4.	7.5.92	0:1	Indian Rhinoceros	44 years	Awaiting result from AAH & VB, B'lore) Old age and Senility
5.	27.5.92	1:0	Fallow Deer	7 years	Septicaemia (Horn and frontal bone fractured)
6.	27.5.92	1:0	Hyena	12 years	Septicaemia (Open fracture of left fore limb)
7.	1.6.92	1:0	Giraffe calf	1 week	Aspiratory Penumonia
8.	18.6.92	0:1	Brown Lemur	8 months	Branchio Pneumonia

9.	22.6.92	0:1	Common Langur	12 years	Toxaemia
10.	25.6.92	1:0	Brown Lemur	3 months	Internal Haemorrhage
11.	2.7.92	1:0	Slow loris	4 years	Septicaemia
12.	2.7.92	0:1	Indian Pied Hornbill	4 years	Enteritis
13.	3.7.92	1:0	Brown Lemur	10 years	Cardiac arrest due to adiposity
14.	4.7.92	1:0	Black buck	3 years	Haemorrhage and shock
15.	10.7.92	1:0	Chimpanzee	42 years	Awaiting result from IAH & VB, B'lore
16.	14.7.92	0:1	Common Langur	2 years	Cirrosis or liver
17.	14.7.92	0:1	Spotted Deer	2 years	Traumatic injury (haemorrhage & shock)
18.	16.7.92	0:1	Tiger	12 years	Awaiting results from IAH & VB, B'lore
19.	23.7.92	0:1	Sikka Deer	10 years	Pneumonia
20.	31.7.92	0:1	Burmese Pea Fowl	4 years	Head injury due to infighting (cerebral haemorrhage and shock)
21.	17.8.92	0:1	Indian Gazelle	2 years	Cerebral injury (Head injury caused by infighting)
22.	18.8.92	0:1	Indian Gazelle	3 years	Awaiting result from IAH & VB, B'lore
23.	19.8.92	1:0	Indian Gazelle	2 1/2 years	do
24.	7.9.92	1	Black Swan Chick	1 month	Enteritis
25.	11.9.92	0:1	African Black Rhinoceros	13 years	Pulmonary Tuberculosis
26.	12.9.92	0:1	Hyena	15 years	Septicaemia
27.	21.9.92	0:1	Hyena	15 years	Old age and Senility
28.	7.10.92	1	Phthon	8 years	Helminthiases
29.	9.10.92	1:0	Lion	18 years	Old age
30.	11.10.92	1:0	Indian Peacock	4 years	Enteritis

31.	27.10.92	1:0	Jungle Cat	12 years	Old age
32.	4.11.92	0:1	Indian Gazelle	3 years	Severe injuries to vital organs
33.	29.11.92	0:1	Fimingo	25 years	Internal Haemorrhage
34.	30.11.92	0:1	Pea Fowl	6 years	Severe Enteritis
35.	2.12.92	0:1	Common Langur	8 years	Multiple Abscesses of Liver
36.	9.12.92	0:1	Penguin	3 1/2 years	Mchanical injury
37.	16.12.92	0:1	Tiger	5 years 2 months	Awaiting result from IAH & VB, B'lore
38.	16.12.92	1:0	Leopard Cat	12 years	Septicaemia
39.	21.12.92	1:0	Common Langur	12 years	Acute pneumonice with peticarditis
40.	25.12.92	0:1	Sika Deer	2 1/2 years	Blackage in stomach by plastic materials
41.	9.1.93	0:1	Crocodile	5 years	Severe injuries & Septicaemia

ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಅಕ್ಷಯ ಯೋಜನೆಯ ಪ್ರಯೋಜನವನ್ನು ವಿಸ್ತರಿಸುವ ಬಗ್ಗೆ

1152: ಶ್ರೀ ಗುರುಪಾದಪ್ಪ ನಾಗ್ಮಾರ್‌ಪಲ್ಲಿ (ಔರಾದ್):-

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ಅಕ್ಷಯ ಯೋಜನೆಯನ್ನು ಪ್ರಾರಂಭಿಸಿರುವ ಉದ್ದೇಶವೇನು;

ಆ) ಈ ಯೋಜನೆಯ ಸೌಲಭ್ಯವನ್ನು ಖಾಸಗಿ ಪ್ರಾಥಮಿಕ ಶಾಲೆಗಳಿಗೆ ನೀಡಲಾಗುತ್ತಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಈ ಯೋಜನೆಯ ಉದ್ದೇಶ ಬರೀ ಸರ್ಕಾರಿ ಶಾಲೆಗಳಿಗೆ ಮಾತ್ರ ಅನುಕೂಲವಾಗುವ ಸಲುವಾಗಿ ಮಾಡಲಾಗಿದೆಯೇ;

ಈ) ಯೋಜನೆಯ ಉದ್ದೇಶ ಸಫಲವಾಗಲು ಹಾಗೂ ಸರ್ಕಾರಿ ಮತ್ತು ಖಾಸಗೀ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಸಲುವಾಗಿ ಈ ಯೋಜನೆಯನ್ನು ಖಾಸಗಿ ಪ್ರಾಥಮಿಕ ಶಾಲೆಗಳಿಗೂ ವಿಸ್ತರಿಸುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತದೆಯೇ ?

ಡಾ. ಹೆಚ್.ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):-

ಅ) ಸರ್ಕಾರಿ, ನಗರಪಾಲಿಕೆ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ 1ರಿಂದ 4 ನೇ ತರಗತಿಯ ವಿದ್ಯಾರ್ಥಿಗಳ ಹಾಜರಾತಿಯನ್ನು ಹೆಚ್ಚಿಸಲು ಶಾಲೆಗಳಲ್ಲಿ ಮಧ್ಯೆ ಬಿಟ್ಟು ಹೋಗುವವರ ಸಂಖ್ಯೆಯನ್ನು ಕಡಿಮೆ ಮಾಡುವ ಮುಖ್ಯ ಉದ್ದೇಶದಿಂದ ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ.

ಆ) ನೀಡಲಾಗುತ್ತಿಲ್ಲ.

ಇ) ಈ ಯೋಜನೆ ಸರ್ಕಾರಿ, ನಗರಪಾಲಿಕೆ ಮತ್ತು ಸ್ಥಳೀಯ ಸಂಸ್ಥೆಗಳ ಶಾಲೆಗಳಿಗೆ ಮಾತ್ರ ಅನ್ವಯಿಸುತ್ತದೆ.

ಈ) ಈ ದಿಶೆಯಲ್ಲಿ ಸರ್ಕಾರ ಯೋಚಿಸುತ್ತಿಲ್ಲ.

ಬೀದರ್ ಜಿಲ್ಲೆಯಲ್ಲಿರುವ ಖಾಸಗೀ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡದೆ ಇರುವುದು

1342 (1153): ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್):-

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಯಲ್ಲಿರುವ ಖಾಸಗಿ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಯಾವುವು; (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಇವುಗಳ ಪೈಕಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ಶಿಕ್ಷಣ ಸಂಸ್ಥೆಗಳು ಯಾವುವು; (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಇ) ಜಿಲ್ಲೆಯಲ್ಲಿ ಖಾಸಗಿ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಅನುದಾನವನ್ನು ಬಿಡುಗಡೆ ಮಾಡುತ್ತಿರುವುದರಲ್ಲಿ ತೀವ್ರ ವಿಳಂಬ ಮಾಡುತ್ತಿರುವುದು ನಿಜವೇ;

ಈ) ಅನುದಾನ ಬಿಡುಗಡೆಯಲ್ಲಿ ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಸರ್ಕಾರವು ಕೈಗೊಳ್ಳುವ ಕ್ರಮಗಳೇನು;

ಉ) ಜಿಲ್ಲೆಯಲ್ಲಿ ಅನುದಾನಕ್ಕೆ ಒಳಪಡಬೇಕಾದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ ಎಷ್ಟು ;

ಊ) ಇವುಗಳನ್ನು ಆದಷ್ಟು ಬೇಗ ಅನುದಾನಕ್ಕೆ ಒಳಪಡಿಸಿ ಇಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರುಗಳಿಗೆ ಸಂಬಳವನ್ನು ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುವುದೇ ?

ಡಾ. ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಬೀದರ್ ಜಿಲ್ಲೆಯಲ್ಲಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಪಟ್ಟಿಯನ್ನು ತಾಲ್ಲೂಕುವಾರು ಲಗತ್ತಿಸಿದೆ. ಪ್ರೌಢಶಾಲೆಗಳು – 133
ಅನುಬಂಧ – 1
ಪ್ರಾಥಮಿಕ ಶಾಲೆಗಳು – 90 ಅನುಬಂಧ – 1 ಎ

ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ಶಿಕ್ಷಣ ಸಂಸ್ಥೆಗಳ ಪಟ್ಟಿಯನ್ನು ತಾಲ್ಲೂಕುವಾರು ಲಗತ್ತಿಸಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಜಿಲ್ಲೆಯಲ್ಲಿ ಅನುದಾನಕ್ಕೆ ಒಳಪಡಬೇಕಾದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಕೆಳಕಂಡಂತೆ ಇದೆ.

ಪ್ರಾಥಮಿಕ ಶಾಲೆಗಳು – 57
ಪ್ರೌಢಶಾಲೆಗಳು – 15

ಊ) ಖಾಸಗಿ ಶಾಲೆಗಳು ಪ್ರಾರಂಭದ ಸಮಯದಲ್ಲಿ ವಿಧಿಸಲಾಗಿರುವ ಷರತ್ತುಗಳನ್ನು ಹಾಗೂ ಅನುದಾನ ಸಂಹಿತೆ ಷರತ್ತುಗಳನ್ನು ಪೂರೈಸಿದಲ್ಲಿ ಅವುಗಳಿಗೆ ಅನುದಾನ ಬಿಡುಗಡೆ ಮಾಡಲು ಶೀಘ್ರವೇ ಕ್ರಮ ಕೈಗೊಳ್ಳಲಾಗುತ್ತದೆ.

ಅನುಬಂಧ – 1

ಬೀದರ್ ತಾಲ್ಲೂಕು **: ಪ್ರೌಢಶಾಲೆಗಳು**

1. ಎನ್.ಎಫ್. ಪ್ರೌಢಶಾಲೆ, ಬೀದರ್ 1928–29
2. ಮಾಣಿಕ ಪ್ರಭು ಪ್ರೌಢಶಾಲೆ, ಮಾಣಿಕನಗರ (ಹಿಂದಿ) 1940–41
3. ಹಾಜಿ ಸುಲ್ತಾನ ಮೆಮೋರಿಯಲ್ ಉರ್ದು ಪ್ರೌಢಶಾಲೆ, ಬೀದರ್ 1966–67
4. ಕರ್ನಾಟಕ ಪ್ರೌಢಶಾಲೆ, ಬೀದರ್ 1967–68
5. ಪನ್ನಾಲಾಲ್ ಹೀರಾಲಾಲ್ (ಹಿಂದಿ)ಪ್ರೌಢಶಾಲೆ, ಬೀದರ್ 1971–72
6. ಸಿದ್ದಾರ್ಥ ಪ್ರೌಢಶಾಲೆ, ಬೀದರ್ 1978–79
7. ಅಲ್ ಅಮೀನ್ ಉರ್ದು ಪ್ರೌಢಶಾಲೆ, (ಬಾಲಕರು) ಬೀದರ್ 1980–81
8. ರಮಾಬಾಯಿ ಅಂಬೇಡ್ಕರ್ ಪ್ರೌಢಶಾಲೆ (ಕನ್ಯಾ) ಬೀದರ್ 1981–82
9. ಸಿದ್ದಾರೂಢ ಸ್ವಾಮಿ ಪ್ರೌಢಶಾಲೆ, ಚಳಕಾಪುರ 1981–82
10. ಚಿಕ್ಕಮ್ಮಣ್ಣಿ ಡಿ. ದೇವರಾಜ ಅರಸ್ ಪ್ರೌಢಶಾಲೆ, ಬೀದರ್ 1983–84
11. ನೆಹರೂ ಪ್ರೌಢಶಾಲೆ, ಬೀದರ್ 1984–85
12. ಜನತಾ ಪ್ರವೀಣ ಪ್ರೌಢಶಾಲೆ, ಬೀದರ್ 1984–85
13. ರಾಮಜಿಸಕಪಾಲ ಪ್ರೌಢಶಾಲೆ, ಮೈಲೂರು 1987–88
14. ಮಹಾತ್ಮ ಗಾಂಧಿ ಪ್ರೌಢಶಾಲೆ, ಲಾಡಗೇರಿ ಬೀದರ್ 1987–88
15. ಅಲ್–ಸಿರಾಜ ಪ್ರೌಢಶಾಲೆ, ಮನಳ್ಳಿ, ಬೀದರ್ ತಾ. 1982–83
16. ಸಂಗೊಳ್ಳಿ ರಾಯಣ್ಣ ಪ್ರೌಢಶಾಲೆ ಅಣದೂರ 1984–85
17. ಶ್ರೀಮತಿ ಲಕ್ಷ್ಮೀಬಾಯಿ ಕಮಠಾಣೆ ಕನ್ಯಾ ಪ್ರೌಢಶಾಲೆ ಬೀದರ್ 1984–85
18. ಪರಿಮಳ ಪ್ರೌಢಶಾಲೆ, ಬೀದರ್ 1984–85
19. ಸ್ವಾಮಿ ವಿವೇಕಾನಂದ ಪ್ರೌಢಶಾಲೆ, ಬೀದರ್ 1984–85
20. ಯಲ್ಲಾಲಿಂಗೇಶ್ವರ ಪ್ರೌಢಶಾಲೆ, ಚಿಮಕೋಡ ಬೀದರ್ ತಾ. 1985–86
21. ಜನತಾ ಕೋ ಶಿಕ್ಷಣ ಪ್ರೌಢಶಾಲೆ, ಚಿದ್ರಿ, ತಾ: ಬೀದರ್ 1985–86
22. ನ್ಯಾಷನಲ್ ಆಂಗ್ಲ ಪ್ರೌಢಶಾಲೆ, ಬೀದರ್ 1980–81
23. ಶರಣ ಬಸವೇಶ್ವರ ಪ್ರೌಢಶಾಲೆ, ಬೀದರ್ 1984–85
24. ಎಸ್.ಟಿ.ಸಿ. ಅಲ್ ಮಹಬೂಬ್ ಪ್ರೌಢಶಾಲೆ, ಬೀದರ್ 1984–85
25. ನೀಲಾಂಬಿಕ ಕನ್ಯಾ ಪ್ರೌಢಶಾಲೆ, ಬೀದರ್ 1985–86
26. ಅಲ್ ಅಮೀನ್ ಕನ್ಯಾ ಪ್ರೌಢಶಾಲೆ, ಬೀದರ್ 1985–86
27. ಅಕ್ಕಮಹಾದೇವಿ ಕನ್ಯಾ ಪ್ರೌಢಶಾಲೆ, ಬೀದರ್ 1985–86
28. ಡಾ: ರಾಜಕುಮಾರ ಪ್ರೌಢಶಾಲೆ, ನೌಬಾದ, ತಾ: ಬೀದರ್ 1984–85

ಶಾಶ್ವತ ಅನುದಾನ ರಹಿತ ಶಾಲೆಗಳು

29. ಬಕುಳಾಬಾಯಿ ಕಳಮಟಕರ್ ಸ್ಮಾರಕ ಪ್ರೌ.ಶಾಲೆ,ಸಿಂದಬಂದಗಿ 1988–89 (ಜಿ.ಪ) ಪ.ಜಾ
30. ಖಾಜಾ ಶಿಕ್ಷಣ ಪ್ರೌಢಶಾಲೆ, ಮೈಲೂರ 1988–89 (ಜಿ.ಪ)
31. ಕನ್ನಡ ಭಾಷೆ ಪ್ರೌಢಶಾಲೆ, ಗಾರಗಿ 1988–89 (ಜಿ.ಪ)
32. ಸಾಯಿ ಆದರ್ಶ ಶಿಕ್ಷಣ ಸಮಿತಿ, ಬಿದರ್ 1991–92
33. ಸಾಯಿ ಆದರ್ಶ ಶಿಕ್ಷಣ ಸಮಿತಿ, ಕೋಳಾರ (ಕ) 1991-92

34. ಮಹಾತ್ಮ ಗೊಂಡೇಶ್ವರ ಪ್ರೌಢಶಾಲೆ, ಬೀದರ್ 1991–92
35. ಶ್ರೀ ಗಾಂಧಿ ಶಿಕ್ಷಣ ಸಂಸ್ಥೆ ಬೀದರ್ 1991–92
36. ಶ್ರೀ ಛತ್ರಪತಿ ಸ್ಮಾರಕ ಸಮಿತಿ ಬೀದರ್ 1991–92
37. ಬಸವಶಿಕ್ಷಣ ಸಂಸ್ಥೆ, ಮನ್ನಹಳ್ಳಿ 1991–92
38. ಕೆಥೊಲಿಕ್ ಬೋರ್ಡ್ ಆಫ್ ಶಿಕ್ಷಣ ಸಂಸ್ಥೆ ಮಂಗಳೂರು, ಬ್ರಾಂಚ್ ಬೀದರ್ 1991–92
39. ಅಂಬೇಡ್ಕರ್ ಶಿಕ್ಷಣ ಸಂಸ್ಥೆ ಬೀದರ್ 1991–92 ಪ.ಜಾ
40. ರಾಷ್ಟ್ರೀಯ ಸಂತೋಷ ಶಿಕ್ಷಣ ಸಂಸ್ಥೆ, ಬೀದರ್ 1991–92 ಪ.ಜಾ.
41. ಅಂಬೇಡ್ಕರ್ ತತ್ವ ಶಿಕ್ಷಣ ಸಂಸ್ಥೆ ಯಕತಪೂರ 1991–92 ಪ.ಜಾ.
42. ರಾಷ್ಟ್ರೀಯ ಸಂತೋಷ ಶಿಕ್ಷಣ ಸಂಸ್ಥೆ, ಮಂಗಳವೇಡ 1991–92 ಪ.ಜಾ
43. ದೀಪಕ ಶಿಕ್ಷಣ ಸಂಸ್ಥೆ ಬೀದರ್ 1991–92
44. ಜನತ ಪ್ರವೀಣ ಸಂಸ್ಥೆ ಹೌಸಿಂಗ್ ಬೋರ್ಡ್ ಕಾಲೋನಿ ಬೀದರ್ 1991–92
45. ಚಿದಂಬರ್ ಶಿಕ್ಷಣ ಸಂಸ್ಥೆ ಬೀದರ್ 1991–92
46. ಶ್ರೀ ರುದ್ರಮಣಿ ಪುಟ್ಟದೇವರು ಪ್ರೌ.ಶಾ. ಜಾಂಬಳ, ಬೀದರ್ 1992–93
47. ಸಂಯುಕ್ತ ಶಿಕ್ಷಣ ಸಂಸ್ಥೆ ಪ್ರೌ.ಶಾ. ಗೋಲಿಖಾನ, ಬೀದರ್ 1992–93
48. ಈಡಿಗ ಸಮಾಜ ವಿದ್ಯಾಸಂಸ್ಥೆ ಪ್ರೌ.ಶಾ. ಬೀದರ್ 1992–93
49. ಜೈವನ ಆಯುರ್ವೇದಿಕ್ ಪ್ರೌಢಶಾಲೆ, ಕೋಳಾ (ಕ). 1991–92

ತಾಲೂಕು ಔರಾದ್, ಬೀದರ್ ಜಿಲ್ಲೆ ಪ್ರೌಢಶಾಲೆಗಳು:–

1. ಎಸ್.ವಿ. ಪ್ರೌಢಶಾಲೆ, ಕಮಲಾನಗರ 1939–40
2. ಅಮರೇಶ್ವರ ಕರ್ನಾ ಪ್ರೌಢಶಾಲೆ, ಔರಾದ್ 1979–80
3. ನಲಂದ ಪ್ರೌಢಶಾಲೆ, ಔರಾದ್ 1980–81
4. ಹರಳಯ್ಯ ಪ್ರೌಢಶಾಲೆ, ಕೌರಾ (ಬಿ) 1982–83
5. ನಲಂದಾ ಪೀಪಲ್ಸ್ ಪ್ರೌಢಶಾಲೆ, ಸುಂದಾಳ 1983–84
6. ದಿ: ದೇವರಾಜ ಅರಸ್ ಪ್ರೌಢಶಾಲೆ, ಸಂಗಮ 1984–85
7. ಪ್ರಜ್ಞಾ ಭವನ ಪ್ರೌಢಶಾಲೆ, ಕಮಲನಗರ 1984–85
8. ಜಯಪ್ರಕಾಶ ನಾರಾಯಣ ಪ್ರೌಢಶಾಲೆ, ಅಳವಾಯಿ 1983–84
9. ಲತಾ ಮಂಗೇಶ್ಕರ್ ಪ್ರೌಢಶಾಲೆ, ಕಮಲನಗರ 1985–86
10. ಸುಭಾಷ್ ಚಂದ್ರ ಬೋಸ್ ಪ್ರೌಢಶಾಲೆ, ಸಂತಪೂರ 1985–86
11. ಆನಂದ ಪ್ರೌಢಶಾಲೆ, ಸಂತಪೂರ, ಔರಾದ ತಾಲೂಕು 1985–86
12. ಇಂದಿರಾಗಾಂಧಿ ಪ್ರೌಢಶಾಲೆ, ಔರಾದ್ 1985–86
13. ಗುರುಪಾದಪ್ಪ ನಾಗಮಾರಪಳ್ಳಿ ಪ್ರೌಢಶಾಲೆ, ಚಿಂತಾಕಿ 1984–85
14. ಹಾವಗಿಸ್ವಾಮಿ ಪ್ರೌಢಶಾಲೆ, ಗೋಣಗಾಂವ್ 1972–73

ಶಾಶ್ವತ ಅನುದಾನ ರಹಿತ

15. ನವಕಿರಣ ಪ್ರೌಢಶಾಲೆ, ಅಂಬೇಸಾಂಗವಿ 1988–89 (ಜಿ.ಪ). ಪ.ಜಾ.
16. ಮಹಾತ್ಮ ಫುಲೆ ಪ್ರೌಢಶಾಲೆ, ದೂಪತ್ ಮಹಾಗಾಂವ್ 1988–89 (ಜಿ.ಪ). ಪ.ಜಾ.
17. ಶಿವಲಿಂಗೇಶ್ವರ ಪ್ರೌಢಶಾಲೆ, ಖೇರ್ಡಾ (ಬಿ) 1988–89 (ಜಿ.ಪ). ಪ.ಜಾ.
18. ಛತ್ರಪತಿ ಶಿವಾಜಿ ಪ್ರೌಢಶಾಲೆ, ಹೊಳಸಮುದ್ರ 1988–89 (ಜಿ.ಪ). ಪ.ಜಾ.
19. ಭಾರತಭೂಷಣ ಪ್ರೌಢಶಾಲೆ, ಭೂಪಾಲಗಡ 1988–89 (ಜಿ.ಪ). ಪ.ಜಾ.

20. ಭಾರತೀಯ ಶಿಕ್ಷಣ ಸಂಸ್ಥೆ, ನಿಕುಶನೂರ	1991-92
21. ಅರುಣೋದಯ ಶಿಕ್ಷಣ ಸಂಸ್ಥೆ, ಔರಾದ್	1991–92
22. ಪ್ರಕಾಶಾಲಯ ಮೆಥೊಡಿಸ್ಟ್ ಪ್ರೌಢಶಾಲೆ, ಕಮಲನಗರ	1991–92

ಹುಮ್ನಾಬಾದ್ ತಾಲೂಕು ಪ್ರೌಢಶಾಲೆಗಳು

1. ಪ್ರಕಾಶಾಲಯ ಪ್ರೌಢಶಾಲೆ, ಘೂಟಬೊರೋಳ	1953–54
2. ಗೌರಿಬಾಯಿ ಅಗ್ರವಲ ಕನ್ಯಾ ಪ್ರೌಢಶಾಲೆ, ಚಿಟಗುಪ್ಪ	1977–78
3. ಡಾ: ಬಿ.ಆರ್. ಅಂಬೇಡ್ಕರ್ ಪ್ರೌಢಶಾಲೆ, ಹುಮ್ನಾಬಾದ್	1980–81
4. ಎಂ.ಜಿ.ಪಿ. ಪ್ರೌಢಶಾಲೆ, ಘೊಟಬೊರೋಳ, ಹುಮ್ನಾಬಾದ್	1983–84
5. ಅನ್ನಾಹಾರೋಡ ಪ್ರೌಢಶಾಲೆ, ಚಿಟಗುಪ್ಪ	1981–82
6. ಕನಕದಾಸ ಪ್ರೌಢಶಾಲೆ, ಶಿಡೋಳ, ತಾ: ಹುಮ್ನಾಬಾದ	1984–85
7. ಅಲ್ ಅಮಿನ್ ಪ್ರೌಢಶಾಲೆ, ಹುಮ್ನಾಬಾದ್	1984–85
8. ಎಲ್.ವಿ.ಜಿ. ಕನ್ಯಾ ಪ್ರೌಢಶಾಲೆ, ಹುಮ್ನಾಬಾದ್	1980–81
9. ನ್ಯಾಷನಲ್ ಪ್ರೌಢಶಾಲೆ, ಮೀನಕೇರ	1984–85 ಪ.ಜಾ
10. ಎಸ್.ಪಿ.ಕೆ. ಕನ್ಯಾ ಪ್ರೌಢಶಾಲೆ, ಹಳ್ಳಿಖೇಡ (ಬಿ)	1984–85
11. ರಾಮರಾಜ ಆಂಗ್ಲ ಪ್ರೌಢಶಾಲೆ, ಹುಮ್ನಾಬಾದ್	1981–82

ಶಾಶ್ವತ ಅನುದಾನ ರಹಿತ

12. ರಾಷ್ಟ್ರಮಾತಾ ಇಂದಿರಾಗಾಂಧಿ ಪ್ರೌಢಶಾಲೆ, ಮರಕುಂದಾ	1988–89 (ಜಿ.ಪ) ಪ.ಜಾ
13. ಭಾರತ ಶಿಕ್ಷಣ ಪ್ರೌಢಶಾಲೆ, ಮೊಡವಾಡಿ	1988–89 (ಜಿ.ಪ)
14. ಭಾರತ ಶಿಕ್ಷಣ ಪ್ರೌಢಶಾಲೆ, ಲಾಡವಂತಿ	1988–89 (ಜಿ.ಪ)
15. ಭಾರತ ಶಿಕ್ಷಣ ಪ್ರೌಢಶಾಲೆ, ಹಳ್ಳಿಖೇಡ (ಬಿ)	1988–89 (ಜಿ.ಪ)
16. ಶರಣ ಬಸವೇಶ್ವರ ವಿದ್ಯಾವರ್ಧಕ ಕನ್ಯಾ ಪ್ರೌಢಶಾಲೆ, ಹುಡಗಿ	1990–91
17. ಬಸವತೀರ್ಥ ಪ್ರೌಢಶಾಲೆ, ಹುಡಗಿ	1990–91
18. ಬಸವತೀರ್ಥ ದುಬಲಗುಂಡಿ	1990–91
19. ಬಸವತೀರ್ಥ ಹಳ್ಳಿಖೇಡ	1990–91
20. ಸದ್ಭೂಷಣ ಶಿಕ್ಷಣ ಸಂಸ್ಥೆ, ಚಿಟಗುಪ್ಪ	1991–92
21. ಸಂಗಮೇಶ್ವರ ಶಿಕ್ಷಣ ಸಂಸ್ಥೆ, ದುಬಲಗುಂಡಿ	1991–92
22. ಜ್ಞಾನೋದಯ ಶಿಕ್ಷಣ ಸಂಸ್ಥೆ, ನಿರ್ಣಾ	1991–92 ಪ.ಜಾ
23. ಭಾರತ ಶಿಕ್ಷಣ ಸಂಸ್ಥೆ ಪ್ರೌಢಶಾಲೆ, ಕನಕಟ್ಟು	1992–93 ಪ.ಜಾ
24. ಪ್ರಿಯಾಂಕ ಶಿಕ್ಷಣ ಸಂಸ್ಥೆ, ಪ್ರೌಢಶಾಲೆ	1992–93 ಪ.ಜಾ
25. ಸರ್ವೋದಯ ವಿದ್ಯಾಸಂಸ್ಥೆ ಪ್ರೌಢಶಾಲೆ ಹುಮ್ನಾಬಾದ್	1992–93 ಪ.ಜಾ.

ಬಸವಕಲ್ಯಾಣ ತಾಲ್ಲೂಕು

1. ಸತ್ಯಶ್ರೇಣಿಯ ಪ್ರೌಢಶಾಲೆ, ರಾಜೇಶ್ವರ	1963–64
2. ಬಿ.ಬಿ. ಪ್ರೌಢಶಾಲೆ, ಹುಲಸೂರ	1963–64
3. ಆರ್.ಎಂ. ಪ್ರೌಢಶಾಲೆ, ಹುಲಸೂರ	1963–64
4. ಜಗದ್ಗುರು ಬಸವೇಶ್ವರ ಪ್ರೌಢಶಾಲೆ, ಬಸವಕಲ್ಯಾಣ	1970–71
5. ಜಿ.ಎಸ್. ಪ್ರೌಢಶಾಲೆ, ಗೊರ್ಟಾ (ಬಿ) ಬಸವಕಲ್ಯಾಣ ತಾಲ್ಲೂಕು	1972–73

6. ಗೌಸಿಯ ಕನ್ಯಾ ಪ್ರೌಢಶಾಲೆ, ಬಸವಕಲ್ಯಾಣ	1974–75
7. ಅಕ್ಕಮಹಾದೇವಿ ಕನ್ಯಾ ಪ್ರೌಢಶಾಲೆ, ಬಸವಕಲ್ಯಾಣ	1985–86 ಪ.ಜಾ
8. ಎಂ.ಬಿ. ಪ್ರೌಢಶಾಲೆ, (ಆಂಗ್ಲ) ಬಸವಕಲ್ಯಾಣ	1985–86

ಶಾಶ್ವತ ಅನುದಾನ ರಹಿತ

9. ಪ್ರಕಾಶ ಅಂಬೇಡ್ಕರ್ ಪ್ರೌಢಶಾಲೆ, ರಾಜೇಶ್ವರ	1988–89 (ಜಿ.ಪ) ಪ.ಜಾ
10. ಭಾವಸಾರ ಪ್ರೌಢಶಾಲೆ, ರಾಜೇಶ್ವರ	1988–89 (ಜಿ.ಪ)
11. ಬಸವೇಶ್ವರ ದೇವಸ್ಥಾನ ಪಂಚಸಮಿತಿ ಪ್ರೌಢ.ಶಾ. ಬಸವಕಲ್ಯಾಣ	1990–91
12. ವಿವೇಕಾನಂದ ಪ್ರೌಢಶಾಲೆ, ಶ್ರೀಪರಾಂತ ತಾ: ಬಸವಕಲ್ಯಾಣ	1990–91(ಪ.ಜಾ)
13. ಶಿವಾಜಿ ಛತ್ರಪತಿ ಸ್ಮಾರಕ ಸಮಿತಿ, ಬಸವಕಲ್ಯಾಣ	1991–92
14. ಹೊನ್ನನಾಯಕ ಜನತಾ ಶಿಕ್ಷಣ ಸಂಸ್ಥೆ, ಬಸವಕಲ್ಯಾಣ	1991–92 ಪ.ಜಾ.
15. ರೇಣುಕಾ ವಿದ್ಯಾವರ್ಧಕ ಪ್ರೌಢಶಾಲೆ, ಮಠಾಳ	1992–93 ಪ.ಜಾ
16. ಛತ್ರಪತಿ ಸ್ಮಾರಕ ಸಮಿತಿ, ಪ್ರೌಢಶಾಲೆ, ಬಸವಕಲ್ಯಾಣ	1992–93 ಪ.ಜಾ
17. ಭಾರತ ಶಿಕ್ಷಣ ಸಂಸ್ಥೆ ಪ್ರೌಢಶಾಲೆ, ಬಸವಕಲ್ಯಾಣ	1992–93 ಪ.ಜಾ

ಭಾಲ್ಕಿ ತಾಲ್ಲೂಕು (ಪ್ರೌಢಶಾಲೆಗಳು)

1. ಸತ್ಯನಿಕೇತನ ಪ್ರೌಢಶಾಲೆ, ಭಾಲ್ಕಿ	1964–65
2. ಅಕ್ಕಮಹಾದೇವಿ ಕನ್ಯಾ ಪ್ರೌಢಶಾಲೆ, ಭಾಲ್ಕಿ	1969–70
3. ಶಿವಾಜಿ ಪ್ರೌಢಶಾಲೆ, ಭಾಲ್ಕಿ	1974–75
4. ಸಂಗಮೇಶ್ವರ ಪ್ರೌಢಶಾಲೆ, ಕೇಸರಜವಳಗಾ	1982–83
5. ಅಶೋಕ ಪ್ರೌಢಶಾಲೆ, ಕುರುಬಖೇಳಗಿ	1982–83
6. ಮಹಾತ್ಮಗಾಂಧಿ ಪ್ರೌಢಶಾಲೆ, ಕಲವಾಡಿ	1985–86
7. ಮಹಾತ್ಮ ನಿರ್ಮಲಾ ಪ್ರೌಢಶಾಲೆ, ಭಾಲ್ಕಿ	1984–85
8. ಪಂಚಶೀಲ ಪ್ರೌಢಶಾಲೆ, ತಲವಾಡಿ, ತಾ: ಭಾಲ್ಕಿ	1985–86 ಪ.ಜಾ.

ಶಾಶ್ವತ ಅನುದಾನ ರಹಿತ

9. ಸಿದ್ದೇಶ್ವರ ಪ್ರೌಢಶಾಲೆ, ಹಾವರಗಾಂವ	1988–89 (ಜಿ.ಪ)
10. ಸಿದ್ದಲಿಂಗ ಪ್ರೌಢಶಾಲೆ, ಅವನಿಜ ಸಿದ್ದೇಶ್ವರ	1988–89 (ಜಿ.ಪ:ಪ.ಜಾ)
11. ಜನಪ್ರಿಯ ಶಿಕ್ಷಣ ಸಂಸ್ಥೆ (ರಿ) ಭಾಲ್ಕಿ	1991–92
12. ಕನ್ನಡ ಭಾಷೆ ಶಿಕ್ಷಣ ಸಂಸ್ಥೆ, ಭಾಲ್ಕಿ	1991–92
13. ಶ್ರೀ ಚನ್ನಬಸವೇಶ್ವರ ವಿದ್ಯಾಸಂಸ್ಥೆ, ಭಾಲ್ಕಿ	1991–92
14. ಸತ್ಯನಿಕೇತನ ಶಿಕ್ಷಣ ಸಂಸ್ಥೆ, ಭಾಲ್ಕಿ	1991–92
15. ಕನ್ನಡ ಭಾಗ್ಯ ಶಿಕ್ಷಣ ಸಂಸ್ಥೆ, ಪ್ರೌ.ಶಾ. ಮದಕಟ್ಟಿ	1992–93
16. – ಡಿಟೋ – ಮೊರಾಂಬಿ	1992–93
17. ಮಂಜುನಾಥ ಶಿಕ್ಷಣ ಸಂಸ್ಥೆ ಪ್ರೌಢಶಾಲೆ, ಎಣಕೂರು	1992–93
18. ರಾಹುಲ ಶಿಕ್ಷಣ ಸಂಸ್ಥೆ ಪ್ರೌಢಶಾಲೆ, ಮದಕಟ್ಟಿ, ಭಾಲ್ಕಿ	1992–93
19. ಅಂತರ ಭಾರತ ಶಿಕ್ಷಣ ಸಂಸ್ಥೆ ಭಾಲ್ಕಿ	1992–93
20. ಜೀವನಜ್ಯೋತಿ ಶಿಕ್ಷಣ ಸಂಸ್ಥೆ ಪ್ರೌಢಶಾಲೆ, ಘೋರಚಿಂಚೋಳಿ	1992–93

ಅನುಬಂಧ - 1ಎ

ಬೀದರ್ ತಾಲ್ಲೂಕು

ಕ್ರಮ ಸಂಖ್ಯೆ	ಶಾಲೆಗಳ ಹೆಸರು	
1.	ಎನ್.ಎಫ್ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
2.	ನಗ್ರೇಶ್ವರ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಸಾಮಾನ್ಯ
3.	ರಾಘವೇಂದ್ರ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಸಾಮಾನ್ಯ
4.	ಗಾಂಧಿ ಹೈಯರ್ ಪ್ರೈಮರಿ ಸ್ಕೂ, ಬೀದರ್	ಸಾಮಾನ್ಯ
5.	ಸಂಜಯ್ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಎಸ್.ಸಿ.
6.	ಗವಾನ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
7.	ಕನ್ನಿಕಾಪರಮೇಶ್ವರಿ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಸಾಮಾನ್ಯ
8.	ರಾಣಿ ಜಾನ್ಸಿ ಬಲ್ಲೂರ್ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಎಸ್.ಸಿ.
9.	ಜೇಜೆ ಮಠ್ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಸಾಮಾನ್ಯ
10.	ಲಾಲ್ ಬಹದ್ದೂರ್ ಶಾಸ್ತ್ರಿ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಸಾಮಾನ್ಯ
11.	ಪ್ರಶಾಂತ್ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಎಸ್.ಸಿ.
12.	ಪ್ರಶಾಂತ್ ಹೈಯರ್ ಪ್ರೈಮರಿ ಸ್ಕೂಲ್, ನಬಾರ್ಡ್	ಎಸ್.ಸಿ.
13.	ಅಲ್-ಅಮೀನ್ ಹೈಯರ್ ಪ್ರೈಮರಿ ಸ್ಕೂಲ್ ರವಾಲ್ ಗಲ್ಲಿ, ಬೀದರ್.	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
14.	ಫೈಜಾ ಉರ್ದು ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
15.	ಸಿದ್ಧಾರ್ಥ ಪ್ರೈಮರಿ ಸ್ಕೂಲ್, ಬೀದರ್	ಎಸ್.ಸಿ.
16.	ರಾಣಿ ಕಿತ್ತೂರು ಚೆನ್ನಮ್ಮ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಸಾಮಾನ್ಯ
17.	ಕಮಲ ಜ್ಞಾನಜ್ಯೋತಿ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಎಸ್.ಸಿ
18.	ಡಾ: ಬಿ.ಆರ್. ಅಂಬೇಡ್ಕರ್ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಎಸ್.ಸಿ.
19.	ಅಲ್‌ಮನ್ ಹೈಯರ್ ಪ್ರೈಮರಿ ಸ್ಕೂಲ್ ಬೀದರ್	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
20.	ಹಜರತ್ ಪಿರಾನಿ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
21.	ವಿದ್ಯಾವರ್ಧಕ ಹೈಯರ್ ಪ್ರೈಮರಿ ಸ್ಕೂಲ್ ಬೀದರ್	ಸಾಮಾನ್ಯ
22.	ಕಾಂತ್ರೊ ಹೈಯರ್ ಪ್ರೈಮರಿ ಸ್ಕೂಲ್, ಬೀದರ್.	ಎಸ್.ಸಿ
23.	ನ್ಯೂ ಆಸೋತ್ತಕ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
24.	ಪಂಚಶೀಲ ಹೈಯರ್ ಪ್ರೈಮರಿ ಸ್ಕೂಲ್, ಬೀದರ್	ಎಸ್.ಸಿ.
25.	ಐ.ಆರ್. ಬಲ್ಲೂರು ಪಿ.ಎಸ್. ಬೀದರ್	ಎಸ್.ಸಿ.
26.	ಗುಲಶನ್ ಇ. ಅಲ್‌ಫಾಲ್, ಬೀದರ್	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ

27.	ಸರಸ್ವತಿ ಪ್ರೈಮರಿ ಸ್ಕೂಲ್, ಬೀದರ್	ಸಾಮಾನ್ಯ
28.	ಶಾಂತಿನಿಕೇತನ – ಬಾಗ್ದಾಲ್ ತಾ: ಬೀದರ್	–"–
29.	ಸೈ ಆದರ್ಶ ಬೀದರ್	–"–
30.	ಶ್ರೀ ಶಿವಕುಮಾರೇಶ್ವರ ಗುರುಕುಲ ಪ್ರೈಮರಿ ಸ್ಕೂಲ್, ಬೀದರ್	–"–
31.	ಬಸವ ಪ್ರೈಮರಿ ಸ್ಕೂಲ್, ಮೋನಹಳ್ಳಿ, ಬೀದರ್	–"–
32.	ಸೆಂಟ್ ಜೋಸೆಫ್ ಪ್ರೈಮರಿ ಸ್ಕೂಲ್, ಬೀದರ್	ಭಾಷಾ ಅಲ್ಪಸಂಖ್ಯಾತರ ಸಂಸ್ಥೆ
33.	ಬಿಲಾಲ್ ಪ್ರೈಮರಿ ಸ್ಕೂಲ್, ಕಮತಾನ ತಾ: ಬೀದರ್	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
34.	ಬಹಮನಿ ಪ್ರೈಮರಿ ಸ್ಕೂಲ್, ಬೀದರ್	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
35.	ಮಾತೂಶ್ರೀ ನಾಗರತ್ನಮ್ಮ ಪ್ರೈಮರಿ ಸ್ಕೂಲ್, ಬೀದರ್	ಸಾಮಾನ್ಯ
36.	ಅಲ್‌ಹುದ ಪ್ರೈಮರಿ ಸ್ಕೂಲ್, ಬೀದರ್	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
37.	ಮಿಲ್ಲತ್ ಪ್ರೈಮರಿ ಸ್ಕೂಲ್, ಬೀದರ್	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ

ಹುಮನಾಬಾದ್ ತಾಲ್ಲೂಕ್

1.	ಪಿ.ವಿ.ಪಿ.ಎಸ್. ಪಟ್‌ಬೋಸಲ, ಹುಮ್‌ನಾಬಾದ್	ಸಾಮಾನ್ಯ
2.	ಆಲ್ ಅಮೀನ್ ಪ್ರಾ.ಶಾ. ಹುಮ್‌ನಾಬಾದ್	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
3.	ಡಾ: ಬಿ.ಆರ್. ಅಂಬೇಡ್ಕರ್ ಪ್ರಾ.ಶಾ. ಹುಮ್‌ನಾಬಾದ್	ಎಸ್.ಸಿ.
4.	ಜೈ ಪ್ರಕಾಶ್ ನಾರಾಯಣ್ ಪ್ರಾ.ಶಾ. ಹುಮ್‌ನಾಬಾದ್	ಸಾಮಾನ್ಯ
5.	ಮೋನಿಷ್ವರಿ ಪ್ರಾ.ಶಾ. ಹುಮ್‌ನಾಬಾದ್	ಬಿ.ಸಿ.
6.	ಆಲ್–ಅಮೀನ್ ಪ್ರಾ.ಶಾ. ಹುಮ್‌ನಾಬಾದ್	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
7.	ಶಾಂತಿನಿಕೇತನ ಪ್ರಾ.ಶಾ. ಹುಮ್‌ನಾಬಾದ್	ಎಸ್.ಸಿ.
8.	ಸದ್‌ಬೋಧಿನಿ ಪ್ರಾ.ಶಾ. ಚಿಟಗುಪ್ಪ	ಸಾಮಾನ್ಯ
9.	ಲಕ್ಷ್ಮೀ ವೆಂಕಟೇಶ್ವರ ಪ್ರಾ.ಶಾ. ಹುಮ್‌ನಾಬಾದ್	ಸಾಮಾನ್ಯ
10.	ಬಸವತೀಶ್ ಉದಯಪತಿ ಪ್ರಾ.ಶಾ. ಹುಮ್‌ನಾಬಾದ್	ಸಾಮಾನ್ಯ
11.	ಪಿ.ವಿ.ಆರ್.ಎಸ್. ಚಟ್‌ಬೋಸಲ	ಸಾಮಾನ್ಯ
12.	ಮಿಲ್ಲತ್ ಪ್ರಾ.ಶಾ. ಹಲ್‌ಕೆಡ್, ಹುಮ್‌ನಾಬಾದ್	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
13.	ಆಲ್ ಅಮೀನ್ ಪ್ರಾ.ಶಾ. ಚಿತ್‌ಗುಪ್ಪಾ	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
14.	ಬಸ್‌ವೀಶ್ ವಿದ್ಯಾಪೀಠ, ಪ್ರಾ.ಶಾ. ಬೂಮಕೇಡ್	ಸಾಮಾನ್ಯ
15.	ಬಸ್‌ವೀಶ್ ವಿದ್ಯಾಪೀಠ, ಹಲ್‌ಕೆಡ್ (ಬಿ)	ಸಾಮಾನ್ಯ
16.	ಬಸ್‌ವೀಶ್ ವಿದ್ಯಾಪೀಠ, ಡೈಬಲ್‌ಗುಂ	ಸಾಮಾನ್ಯ

ಔರಾದ್ ತಾಲ್ಲೂಕ್

17.	ಆಲ್ ಅಮೀನ್ ಪ್ರಾ.ಶಾ. ಹುಮ್‌ನಾಬಾದ್	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
18.	ಆನಂದ್ ಪ್ರಾ.ಶಾ.ಸಂತ್‌ಪುರ್	ಎಸ್.ಸಿ.
19.	ಆನಂದ್ ಪ್ರಾ.ಶಾ. ಟೋರ್‌ನಾ	ಎಸ್.ಸಿ.
20.	ಸಂಜೀವಿನಿ ಪ್ರಾ.ಶಾ. ಕೊಸಾಲ್ ಗಾರ್	ಎಸ್.ಸಿ.

21. ಮಾತೋಶ್ರಿ ಭಾಗೀರಥಿಬಾಯಿ, ಪ್ರಾ.ಶಾ. ಚಿಕ್ಕಲ ತಂಡ	ಎಸ್.ಸಿ
22. ಅಸ್‌ಮಲ್ ಪ್ರಾ.ಶಾ. ಔರಾದ್	ಎಸ್.ಸಿ
23. ನಳಂದ ಪ್ರಾ.ಶಾ. ಔರಾದ್	ಎಸ್.ಸಿ
24. ಮಹಾತ್ಮಾ ಗಾಂಧಿ ಪ್ರಾ.ಶಾ. ಔರಾದ್	ಎಸ್.ಸಿ.
25. ನಾರ್‌ತನ್ ಪ್ರಾ.ಶಾ. ತೋಣಕುಷ್ಪೂರು	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
26. ಬಾಲ್‌ಬೋಸಲ್ ಪ್ರಾ.ಶಾ. ಔರಾದ್	–

ಭಾಲ್ಕಿ ತಾಲ್ಲೂಕ್

1. ಶಾಂತಿನಿಕೇತನ ಪ್ರಾ.ಶಾ. ಭಾಲ್ಕಿ	ಸಾಮಾನ್ಯ
2. ಶಿವಾಜಿ ಪ್ರಾ.ಶಾ. ಭಾಲ್ಕಿ	ಸಾಮಾನ್ಯ
3. ಪಂಚಶೀಲ್ ಪ್ರಾ.ಶಾ. ಭಾಲ್ಕಿ	ಎಸ್.ಸಿ.
4. ಹನುಮಾನ್ ಪ್ರಾ.ಶಾ. ಭಾಲ್ಕಿ	ಬಿ.ಸಿ
5. ಕರ್ನಾಟಕ ಲೇಬರ್ ಹೈ. ಶಾಲೆ ಭಾಲ್ಕಿ	ಎಸ್.ಸಿ
6. ಸಾಂಬಾಜಿ ಪಾಟೀಲ್ ಪ್ರಾ.ಶಾ. ಮಹೀಕೆಲ್	ಎಸ್.ಸಿ
7. ಪ್ರಬುದ್ಧ ಭಾರತ್ ಪ್ರಾ.ಶಾ. ಭಾಲ್ಕಿ	ಎಸ್.ಸಿ
8. ವೈಶಾಲಿ ಪ್ರಾ.ಶಾ. ಲಕ್‌ಗೇನ್	ಎಸ್.ಸಿ
9. ಕಲಾವತಿ ಪ್ರಾ.ಶಾ. ಕಕ್ಕೂ ಕುರ್ನಾಡ್	ಎಸ್.ಸಿ
10. ಡಿ. ದೇವರಾಜ್ ಅರಸ್ ಪ್ರಾ.ಶಾ. ಮಲ್‌ಕೆರ್ ತಾಲ್ಲೂಕ್, ಭಾಲ್ಕಿ	ಎಸ್.ಸಿ
11. ವಿ.ಜಿ.ಕುಂಗ್ ಪ್ರಾ.ಶಾ. ನೈಟೇರ್	ಎಸ್.ಸಿ
12. ಪಾಪುಲ್‌ವಾಡಿ ಪ್ರಾ.ಶಾ. ಹುಲ್‌ಪಡ್	ಎಸ್.ಸಿ
13. ಇಂದಿರಾ ಪ್ರಾ.ಶಾ. ಭಾಲ್ಕಿ	ಎಸ್.ಸಿ
14. ಶಾಂತಿನಿಕೇತನ್ ಪ್ರಾ.ಶಾ. ಅಲ್‌ತನ್	ಎಸ್.ಸಿ.
15. ಮಿಲ್ಲಾಂಡ್ ಪ್ರಾ.ಶಾ. ಬೋಳಗಾಂವ್	ಎಸ್.ಸಿ.
16. ನ್ಯಾಷನಲ್ ಪ್ರಾ.ಶಾ. ಭಾಲ್ಕಿ	ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆ
17. ಕಾದೇಶ್ವರ ಪ್ರಾ.ಶಾ. ಭಾಲ್ಕಿ	ಸಾಮಾನ್ಯ
18. ಸಂಗಮೇಶ್ವರ ಪ್ರಾ.ಶಾ. ಭಾಲ್ಕಿ	ಸಾಮಾನ್ಯ
19. ಬಿ.ಆರ್. ಅಂಬೇಡ್ಕರ್ ಪ್ರಾ.ಶಾ. ಭಾಲ್ಕಿ	ಎಸ್.ಸಿ.

ಬಸವಕಲ್ಯಾಣ ತಾಲ್ಲೂಕ್

1. ಜೀಜಾಮಾತಾ ಪ್ರಾ.ಶಾ. ಬಸವಕಲ್ಯಾಣ	ಸಾಮಾನ್ಯ
2. ಡಾ: ಬಿ.ಆರ್. ಅಂಬೇಡ್ಕರ್ ಪ್ರಾ.ಶಾ. ಬಸವಕಲ್ಯಾಣ	ಎಸ್.ಸಿ.
3. ಸದ್ಗುರು ಸದಾನಂದ ಪ್ರಾ.ಶಾ. ಬಸವಕಲ್ಯಾಣ	ಸಾಮಾನ್ಯ
4. ಪ್ರಭುದೇವರು ಪ್ರಾ.ಶಾ. ಬಸವಕಲ್ಯಾಣ	ಸಾಮಾನ್ಯ
5. ಜೀಜಾಮಾತಾ ಪ್ರಾ.ಶಾ. ರಾಜೇಶ್ವರಿ	ಸಾಮಾನ್ಯ
6. ಧರಮ್‌ಪ್ರಕಾಶ ಪ್ರಾ.ಶಾ. ಬಸವಕಲ್ಯಾಣ	ಸಾಮಾನ್ಯ
7. ಪಾರ್ವತಿ ಪ್ರಾ.ಶಾ. ರಾಜೇಶ್ವರಿ, ಬಸವಕಲ್ಯಾಣ	ಸಾಮಾನ್ಯ

8. ಶಾಂತಿನಿಕೇತನ್ ಪ್ರಾ.ಶಾ. ಬಸವಕಲ್ಯಾಣ	ಸಾಮಾನ್ಯ
9. ಜಗದ್ಗುರು ಬಸವೇಶ್ವರ ಪ್ರಾ.ಶಾ. ಹುಲ್‌ಸೂರ್, ತಾಲ್ಲೂಕ್ ಬಸವಕಲ್ಯಾಣ	ಸಾಮಾನ್ಯ
10. ಬಸವೇಶ್ವರ ಪ್ರಾ.ಶಾ. ಮಹ್‌ಲಾನ್	ಸಾಮಾನ್ಯ
11. ಕರ್ನಾಟಕ ಪ್ರಾ.ಶಾ. ರಾಜೇಶ್ವರಿ, ಬಸವಕಲ್ಯಾಣ	ಸಾಮಾನ್ಯ
12. ಶುಷಾಂಕ್ಷಿ ಪ್ರಾ.ಶಾ. ನೆರ್‌ಗುಡಿ	ಸಾಮಾನ್ಯ
13. ವಿದ್ಯಾಸಾಗರ್ ಪ್ರಾ.ಶಾ. ರಾಜೇಶ್ವರಿ ಬಸವಕಲ್ಯಾಣ	ಸಾಮಾನ್ಯ
14. ಬಸವೇಶ್ವರ ಪ್ರಾ.ಶಾ. ಬಸವಕಲ್ಯಾಣ	ಸಾಮಾನ್ಯ

ಅನುಬಂಧ - 2

ಬೀದರ್ ಜಿಲ್ಲೆಯ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ಪ್ರೌಢಶಾಲೆಗಳು

ಕ್ರ. ಸಂ.	ಪ್ರೌಢಶಾಲೆಯ ಹೆಸರು	ಶಾಲೆಯು ಪ್ರಾರಂಭವಾದ ವರ್ಷ	ಅನುದಾನಕ್ಕೆ ಒಳ ಪಡಿಸಿದ ವರ್ಷ	ಶಿಕ್ಷಕರ ವರ್ಗದ ಸಂಖ್ಯೆ
1.	ಸಿದ್ದಾರ್ಥ ಪ್ರೌಢಶಾಲೆ, ಬೀದರ್	1978–79	1979–80	9
2.	ಡಾ: ಬಿ.ಆರ್. ಅಂಬೇಡ್ಕರ್ ಪ್ರೌಢಶಾಲೆ, ಹುಮನಾಬಾದ್	1980–81	1981–82	11
3.	ನಳಂದ ಪ್ರೌಢಶಾಲೆ, ಔರಾದ್	80–81	82–83	13
4.	ರಮಾಬಾಯಿ ಅಂಬೇಡ್ಕರ್ ಕನ್ಯಾ ಪ್ರೌಢಶಾಲೆ, ಬೀದರ್	81–82	83–84	3
5.	ಸಂಗಮೇಶ್ವರ ಪ್ರೌಢಶಾಲೆ, ಕೆಸರ ಜವಳಗ	82–83	86–87	14
6.	ಅಶೋಕ ಪ್ರೌಢಶಾಲೆ, ಕುರುಬಜೇಳಗಿ ತಾಲ್ಲೂಕು, ಭಾಲ್ಕಿ	82–83	85–86	8
7.	ಚಿಕ್ಕಮ್ಮಣಿ ದೇವರಾಜ ಅರಸು ಪ್ರೌಢಶಾಲೆ, ಬೀದರ್	83–84	86–87	10
8.	ನಲಂದ ಪ್ರೌಢಶಾಲೆ, ಸುರಾಳ, ತಾ: ಔರಾದ್	83–84	84–85	6
9.	ಎಮ್.ಜಿ. ಪ್ರೌಢಶಾಲೆ, ಸೂಬಬೊರಳ	83–84	84–85	8
10.	ಡಾ: ದೇವರಾಜ ಅರಸ್ ಪ್ರೌಢಶಾಲೆ, ಸಂಗಮ	84–85	85–86	14
11.	ಪ್ರಜ್ಞಾಭವನ ಪ್ರೌಢಶಾಲೆ, ಕಮಲನಗರ	84–85	88–89	8
12.	ನೆಹರು ಪ್ರೌಢಶಾಲೆ, ಬೀದರ್	84–85	88–89	8
13.	ಜನತ ಪ್ರವೀಣ ಪ್ರೌಢಶಾಲೆ, ಬೀದರ್	84–85	88–89	8
14.	ಡಾ: ರಾಜಕುಮಾರ್ ಪ್ರೌಢಶಾಲೆ, ನಾಬಾದ್	84–85	85–86	9
15.	ಮಹಾತ್ಮ ಗಾಂಧಿ ಪ್ರೌಢಶಾಲೆ, ಕಲವಾಡಿ	85–86	86–87	14
16.	ರಾವಜಿ ಸಕಪಾಲ್ ಪ್ರೌಢಶಾಲೆ, ಮೈಲೂರು	84–85	87–88	8
17.	ಮಹಾತ್ಮಗಾಂಧಿ ಪ್ರೌಢಶಾಲೆ, ಲಾಡಗೇರಿ	84–85	87–88	8
18.	ಸ್ವಾಮಿ ವಿವೇಕಾನಂದ ಪ್ರೌಢಶಾಲೆ, ಬೀದರ್	84–85	90–91	8
19.	ಮಹಾತ್ಮ ನಿರ್ಮಲಾ ಪ್ರೌಢಶಾಲೆ, ಭಾಲ್ಕಿ	84–85	90–91	8
20.	ಲತಾಮಂಗೇಶ್ಕರ್ ಪ್ರೌಢಶಾಲೆ, ಕಮಲನಗರ	85–86	90–91	12
21.	ಸುಭಾಷ್ ಚಂದ್ರಬೋಸ್ ಪ್ರೌಢಶಾಲೆ, ಸಂತಪೂರ್	85–86	90–91	8

22.	ಆನಂದ ಪ್ರೌಢಶಾಲೆ, ಸಂತಪೂರ್	85–86	90–91	8
23.	ಎಲ್ಲಾ ಲಿಂಗೇಶ್ವರ ಪ್ರೌಢಶಾಲೆ, ಚಿಮಕೋಡ್	85–86	90–91	8
24.	ಜನತಾ ಕೊ ಶಿಕ್ಷಣ ಪ್ರೌಢಶಾಲೆ, ಚಿದ್ರಿ	85–86	90–91	8
25.	ನ್ಯಾಷನಲ್ ಶಿಕ್ಷಣ ಸಂಸ್ಥೆಯ ಪ್ರೌಢಶಾಲೆ, ಮೀನಕೇರ, ತಾ: ಹುಮ್ನಾಬಾದ್	84–85	–	7
26.	ಪಂಪಶೀಲ ಪ್ರೌಢಶಾಲೆ, ತಳವಾಡಿ, ತಾ: ಭಾಲ್ಕಿ (ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ)	85–86	–	6
27.	ಅಕ್ಕಮಹಾದೇವಿ ಕನ್ಯಾ ಪ್ರೌಢಶಾಲೆ, ಬಸವಕಲ್ಯಾಣ, ಬೀದರ್ ಜಿಲ್ಲೆ (ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ)	85–86		7
28.	ಗುರುಪಾದಪ್ಪ ನಾಗಮಾರಪಳ್ಳಿ ಪ್ರೌಢಶಾಲೆ, ಚಿಂತಾಕಿ, ತಾ: ಔರಾದ್ (ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ)	85–86		2
				221

ಪ್ರಾರಂಭ ವರ್ಷದಿಂದ ಅನುದಾನಕ್ಕೊಳಪಡಿಸಿರುವ ಶಾಲೆಗಳ ಪಟ್ಟಿ

ಕ್ರ. ಸಂ.	ಬೀದರ್ ಜಿಲ್ಲೆಯಲ್ಲಿ ಪ.ಜಾತಿ:ಪ.ಪಂಗಡ ಆಡಳಿತ ಮಂಡಳಿಯವರು ನಡೆಸುತ್ತಿರುವ ಸಂಸ್ಥೆಗಳ ಹೆಸರು ವಿಳಾಸ	ಬೀದರ್ ಜಿಲ್ಲೆಯಲ್ಲಿ ಸದರಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಒಟ್ಟು ಶಿಕ್ಷಕರ ಸಂಖ್ಯೆ
1.	ಪಂಚಶೀಲ ಹಿರಿಯ ಪ್ರೌಢಶಾಲೆ, ಭಾಲ್ಕಿ (ಪಂಚಶೀಲ ಶಿಕ್ಷಣ ಸಂಸ್ಥೆ ಭಾಲ್ಕಿ)	15
2.	ಕೆ.ಎಲ್.ಇ. ಪ್ರಾ.ಶಾಲೆ ಭಾಲ್ಕಿ ಕರ್ನಾಟಕ ಲೇಖಕರ ಶಿಕ್ಷಣ ಸಂಸ್ಥೆ ನೌಬಾದ ಬೀದರ್	19
3.	ಸಂಬಾಜಿ ಪಾಟೀಲ ಪ್ರಾ.ಶಾಲೆ ಮೇಹಕರ್ ಸಂಜಯ ಶಿಕ್ಷಣ ಸಂಸ್ಥೆ ಭಾಲ್ಕಿ, ಬೀದರ್	15
4.	ಪ್ರಬುದ್ಧ ಭಾರತಿ ಪ್ರಾ.ಶಾಲ್ರೆ ಭಾಲ್ಕಿ ಸಮತಾ ದರ್ಶನ್ ಶಿಕ್ಷಣ ಸಂಸ್ಥೆ ಭಾಲ್ಕಿ	15
5.	ವೈಶಾಲಿ ಪ್ರಾ.ಶಾಲೆ ಲಮಾಣಿ ತಾಂಡಾ ಭಾಲ್ಕಿ ಸಮಾದರ್ಶನ ಶಿಕ್ಷಣ ಸಂಸ್ಥೆ	6
6.	ಕಲಾವತಿ ಪ್ರಾ.ಶಾಲೆ ಭಾಲ್ಕಿ, ಎಲ್ಲಾರಲಿಂಗ ಮಹಾರಾಜ ಶಿಕ್ಷಣ ಸಂಸ್ಥೆ ಬೀದರ	14

7.	ಡಿ. ದೇವರಾಜ ಅರಸ್ ಪ್ರಾ.ಶಾಲೆ, ಮೇಹಕರ್ ಬಂಜಾರ ಶಿಕ್ಷಣ ಸಂಸ್ಥೆ ಭಾಲ್ಕಿ	14
8.	ವಿ.ಜಿ.ಕಣಜಿ ಪ್ರಾ.ಶಾಲೆ ನಿಟ್ಟೂರು ಕರ್ನಾಟಕ ಲೇಬರ ಶಿಕ್ಷಣ ಸಂಸ್ಥೆ ಬೀದರ್	22
9.	ಪಾಪಾದೇವಿ ಪ್ರಾ.ಶಾಲೆ, ಹೂವಳಾ, ಪಾಪಾದೇವಿ ಶಿಕ್ಷಣ ಸಂಸ್ಥೆ ಭಾಲ್ಕಿ	14
10.	ಇಂದಿರಾಗಾಂಧಿ ಪ್ರಾ.ಶಾಲೆ, ಭಾಲ್ಕಿ, ಕನ್ನಡ ನಾಡು ಶಿಕ್ಷಣ ಸಂಸ್ಥೆ ಭಾಲ್ಕಿ	14
11.	ಶಾಂತಿನಿಕೇತನ ಪ್ರಾ.ಶಾಲೆ, ಅಳವಾಯಿ, ಉತ್ತರಕರ್ನಾಟಕ ಶಿಕ್ಷಣ ಸಂಸ್ಥೆ	14
12.	ಮಿಲಿಂದ ಪ್ರಾ.ಶಾಲೆ ಬೋಳೆಗಾಂವ ಗೌತಮಬುದ್ಧ ಶಿಕ್ಷಣ ಸಂಸ್ಥೆ ಬಾಳುರ ಭಾಲ್ಕಿ	14
13.	ಡಾ. ಬಿ.ಆರ್. ಅಂಬೇಡ್ಕರ್ ಪ್ರಾ.ಶಾಲೆ, ಬಸವಕಲ್ಯಾಣ ಬಳವಂತರಾವ್ ಕರಾಳ್ ಶಿಕ್ಷಣ ಸಂಸ್ಥೆ ಗುಲ್ಬರ್ಗ	7
14.	ಶಾಂತಿನಿಕೇತನ ಹಿರಿಯ ಪ್ರಾ.ಶಾಲೆ. ಬಸವಕಲ್ಯಾಣ ಪೀಪುಲ್ಸ್ ಶಿಕ್ಷಣ ಸಂಸ್ಥೆ ಗುಲ್ಬರ್ಗ	7
15.	ಡಾ. ಬಿ.ಆರ್. ಅಂಬೇಡ್ಕರ್ ಪ್ರಾ.ಶಾಲೆ, ಹುಮನಾಬಾದ್ ಬಳವಂತರಾವ್ ವರಾಳ್ ಶಿಕ್ಷಣ ಸಂಸ್ಥೆ ಬೀದರ್	11
16.	ಜಯಪ್ರಕಾಶ ನಾರಾಯಣ ಪ್ರಾ.ಶಾಲೆ, ಹಳ್ಳಿಖೇಡ (ಬಿ) ಕೆ.ಎಲ್.ಇ. ಶಿಕ್ಷಣ ಸಂಸ್ಥೆ ಬೀದರ್	5
17.	ಶಾಂತಿನಿಕೇತನ ಪ್ರಾ.ಶಾಲೆ., ಹುಮಾನಾಬಾದ್ ಪೀಪಲ್ಸ್ ಶಿಕ್ಷಣ ಸಂಸ್ಥೆ ಗುಲ್ಬರ್ಗ	7
18.	ಆನಂದ ಪ್ರಾ.ಶಾಲೆ, ಸಂತಪೂರ, ಚವನ್ ಆಯುರ್ವೇದಿಕ್ ಶಿಕ್ಷಣ ಸಂಸ್ಥೆ ಸಂತಪೂರ	8
19.	ಆನಂದ ಪ್ರಾ.ಶಾಲೆ ತೋರ್ಣ, ಶ್ರಮಿಕ ಶಿಕ್ಷಣ ಸಂಸ್ಥೆ ತೋರ್ಣ ತಾ: ಔರಾದ್	12
20.	ಸಂಜೀವಿನಿ ಹಿ.ಪ್ರಾ.ಶಾಲೆ, ಕಮಲನಗರ ಮಹಾತ್ಮ ಫುಲೆ ಶಿಕ್ಷಣ ಸಂಸ್ಥೆ ಕಮಲನಗರ	17
21.	ಮಾತೋಶ್ರೀ ಭಾಗೀರಥಿಬಾಯಿ ಹಿ.ಪ್ರಾ.ಶಾ. ಚಿಕಲಿತಾಂಡ ಕೆಎಲ್ಇ ಶಿಕ್ಷಣ ಸಂಸ್ಥೆ ಚಿಕರೆತಾಂಡ ತಾ: ಔರಾದ್	7
22.	ನಲಂದಾ ಹಿ.ಪ್ರಾ.ಶಾಲೆ. ಔರಾದ್ ಸೇವಾ ಶಿಕ್ಷಣ ಸಂಸ್ಥೆ ಔರಾದ್	18
23.	ತಿರುಮಲಾ ಪ್ರಾ.ಶಾಲೆ, ಔರಾದ್ ಸಮತಿ ಶಿಕ್ಷಣ ಸಂಸ್ಥೆ ಔರಾದ	14
24.	ಮಹಾತ್ಮ ಗಾಂಧಿ ಪ್ರಾ.ಶಾಲೆ, ಔರಾದ್ ಅರುಣೋದಯ ಶಿಕ್ಷಣ ಸಂಸ್ಥೆ ಔರಾದ್	7
25.	ಸಂಜಯ ಪ್ರಾ.ಶಾಲೆ, ಬೀದರ ಸಂಜಯ ಶಿಕ್ಷಣ ಸಂಸ್ಥೆ, ಬೀದರ	7
26.	ರವಿಜ್ಞಾನಿ ಬಲ್ಲೂರ ಪ್ರಾ.ಶಾಲೆ, ಬೀದರ ರಾಷ್ಟ್ರೀಯ ಸರೋಕ್ಷಶಿಕ್ಷಣ ಸಂಸ್ಥೆ	7
27.	ಪ್ರಶಾಂತ ಪ್ರಾ.ಶಾಲೆ, ಬೀದರ ಪ್ರಶಾಂತ ಶಿಕ್ಷಣ ಸಂಸ್ಥೆ, ಬೀದರ್	10
28.	ಪ್ರಶಾಂತ ಪ್ರಾ.ಶಾಲೆ, ನೌಬಾದ್ ಪ್ರಶಾಂತ ಶಿಕ್ಷಣ ಸಂಸ್ಥೆ ಬೀದರ್,	
29.	ಸಿದ್ಧಾರ್ಥ ಹಿ.ಪ್ರಾ. ಶಾಲೆ ಬೀದರ್ ಸಿದ್ಧಾರ್ಥ ಶಿಕ್ಷಣ ಸಂಸ್ಥೆ ಬೀದರ್	7

30. ಡಾ.ಬಿ.ಆರ್ ಅಂಬೇಡ್ಕರ್ ಪ್ರಾ.ಶಾಲೆ ಬೀದರ್ ಮಾಡರ್ನ್ ಇಂಡಿಯನ್ ಶಿಕ್ಷಣ ಸಂಸ್ಥೆ ಬೀದರ್ 9
31. ಕಮಲಜ್ಞಾನ ಜ್ಯೋತಿ ಪ್ರಾ.ಶಾಲೆ, ಬೀದರ ಕರ್ನಾಟಕ ಬುದ್ದಿಷ್ಟ ಶಿಕ್ಷಣ ಸಂಸ್ಥೆ ಬೀದರ 4
32. ಕವಿತಾ ಪ್ರಾ.ಶಾಲೆ ಬೀದರ ಜೈಜವಾನ ಶಿಕ್ಷಣ ಸಂಸ್ಥೆ ಬೀದರ 7
33. ಅಯ್ ಆರ್ ಬಲ್ಲೂರ್ ಪ್ರಾ.ಶಾಲೆ, ಕುಂಬಾರವಾಡ ರಾಷ್ಟ್ರೀಯ ಸಂತೋಷ ಶಿಕ್ಷಣ ಸಂಸ್ಥೆ ಬೀದರ್ 6
34. ವಿದ್ಯಾಸಾಗರ ಪ್ರಾ.ಶಾಲೆ, ರಾಜೇಶ್ವರ
35. ಬುದ್ದಪ್ರಿಯ ಪ್ರಾ.ಶಾಲೆ, ಮರಕಟ್ಟೆ ರಾಹುಲ ಶಿಕ್ಷಣ ಸಂಸ್ಥೆ ಕರಡಿಯ್ಯಾಳ
36. ವಿವೇಕಾನಂದ ಪ್ರಾ.ಶಾಲೆ, ಕರಬರವಾಡಿ ಆದಿವಾನಿ ಶಿಕ್ಷಣ ಪ್ರಸಾರಕ ಮಂಡಳಿ ಔರಾದ (ಬಿ)
37. ದ್ರೌಪದಿ ಪ್ರಾ.ಶಾಲೆ ಮದನೂರು ತಾ: ಔರಾದ ಸಂತ ಕಬೀರದಾಸ ಸ್ಮಾರಕ ಸಮಿತಿ ಬೀದರ
38. ಕೋಟಲಿಂಗನಗೌಡ ಪ್ರಾ.ಶಾಲೆ. ಬೀದರ ಕರ್ನಾಟಕ ಬುದ್ಧಿಷ್ಟ ಶಿಕ್ಷಣ ಸಂಸ್ಥೆ ಬೀದರ್
39. ಜೈಕಿಸಾನ್ ಪ್ರಾಥಮಿಕ ಶಾಲೆ ಬಳಕುಣಿ (ಚೌದ್ರಿ)
40. ಪ್ರಿಯಾ ಪ್ರಾಥಮಿಕ ಶಾಲೆ, ಹೊಕರಾಣ
41. ಕೋಟಲಿಂಗನ ಕನ್ನಡ ಪ್ರಾ.ಶಾಲೆ, ಕೋಟಲಿಂಗನ ಕಾಲೋನಿ
42. ಗೌತಮ ಶಿಕ್ಷಣ ಸಂಸ್ಥೆ, ಸಿದ್ದಾರ್ಥ ಹಿರಿಯ ಪ್ರಾಥಮಿಕ ಶಾಲೆ, ಚನ್ನೋರಾ ಎಸ್
43. ನವಕಿರಣ ಹಿರಿಯ ಪ್ರಾಥಮಿಕ ಶಾಲೆ, ಭಾಲ್ಕಿ
44. ಮಹಾತ್ಮಗಾಂಧಿ ಜೋತಿಬಾ ಫುಲೆ, ಪ್ರಾ.ಶಾಲೆ, ಹೊಳಸಮುದ್ರ
45. ಮಹಾತ್ಮಾಗಾಂಧಿ ಜೋತಿಬಾ ಫುಲೆ ಪ್ರಾ.ಶಾಲೆ ಕಮಲಾನಗರ
46. ರಾಧಾಕೃಷ್ಣ ಪ್ರಾಥಮಿಕ ಶಾಲೆ ದುಮ್ಮನಸೂರು
47. ಪಬ್ಲಿಕ್ ಪ್ರಾ.ಶಾಲೆ. ಔರಾದ್
48. ಡಾ. ರಾಧಾಕೃಷ್ಣ ಪ್ರಾ.ಶಾಲೆ. ಜನತಾ ನಗರ
49. ಡಾ. ರಾಧಾಕೃಷ್ಣ ಪ್ರಾ.ಶಾಲೆ. ದುಬಲಗುಂಡಿ
50. ಮಹಾತ್ಮಾಗ್ರಾಂಧಿ ಗೌತಮ ಬುದ್ಧ ಪ್ರಾ.ಶಾಲೆ, ನಿಪ್ಪಲಗೇರಿ
51. ಡಾ: ಬಿ.ಆರ್. ಅಂಬೇಡ್ಕರ್ ಪ್ರಾಥಮಿಕ ಶಾಲೆ, ಮನ್ನಳ್ಳಿ
52. ಲಾಲ್ ಬಹದ್ದೂರ್ ಶಾಸ್ತ್ರಿ ಕನ್ನಡ ಪ್ರಾಥಮಿಕ ಶಾಲೆ ಮುಧೋಳ
53. ಪ್ರಕಾಶ್ ಹಿರಿಯ ಪ್ರಾಥಮಿಕ ಶಾಲೆ, ಯಂಕೂರ್, ಭಾಲ್ಕಿ ತಾಲ್ಲೂಕು
54. ಮಹಾರಾಣ ಪ್ರತಾಪ ಹಿರಿಯ ಪ್ರಾಥಮಿಕ ಶಾಲೆ, ದುಮ್ಮನವರ ಹುಮ್ನಾಬಾದ್ ತಾಲ್ಲೂಕು
55. ವಿವೇಕಾನಂದ ಪ್ರಾಥಮಿಕ ಶಾಲೆ, ಕುರುಬರವಾಡಿ.
56. ಲಾಲ್ ಬಹಾದ್ದೂರು ಶಾಸ್ತ್ರಿ ಹಿರಿಯ ಪ್ರಾಥಮಿಕ ಶಾಲೆ, ಹುಮ್ನಾಬಾದ್
57. ಜ್ಯೋತಿ ಹಿರಿಯಪ್ರಾಥಮಿಕ ಶಾಲೆ, ನಿರ್ಣಾ
58. ಆಕಾಶ್ ಹಿರಿಯ ಪ್ರಾಥಮಿಕ ಶಾಲೆ, ಜನವಾಡ

59. ಸಂತ ಕಬೀರ್‌ದಾಸ್ ಮಧುರಾಬಾಯಿ ಮೆಮೋರಿಯಲ್ ಹಿರಿಯ ಪ್ರಾಥಮಿಕ ಶಾಲೆ, ಹಲಸಿ
60. ಶಾಂತಿನಿಕೇತನ ಪ್ರಾಥಮಿಕ ಶಾಲೆ, ಬಾಂತಬ್ರಾ
61. ಇಂದಿರಾ ಪ್ರಾಥಮಿಕ ಶಾಲೆ, ನಿಹುದಗಿ
62. ವಿಷ್ಣುವರ್ಧನ್ ಪ್ರಾಥಮಿಕ ಶಾಲೆ, ನಜರತ್ ಕಾಲೋನಿ
63. ಕನ್ನಡ ಮಾತಾ ಪ್ರಾಥಮಿಕ ಶಾಲೆ, ಪಾವನಗೇರಿ
64. ರಮಾಬಾಯಿ ಅಂಬೇಡ್ಕರ್ ಪ್ರಾಥಮಿಕ ಶಾಲೆ, ಬೆದ್ರಿ
65. ವಿದ್ಯಾಭಾರತ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಕುಂಟೆ ಸಿರ್ಸಿ

ಕ್ರಮಸಂಖ್ಯೆ:
1 ರಿಂದ 33ರವರೆಗಿನ (ಪ್ರಾಥಮಿಕ) ಪ್ರಾರಂಭದ ದಿನಾಂಕದಿಂದ ಅನುದಾನಕ್ಕೆ ಒಳಪಟ್ಟಿದೆ.

ಕ್ರಮಸಂಖ್ಯೆ:
34ರಿಂದ 38ರವರೆಗಿನ ಪ್ರಾಥಮಿಕ ಶಾಲೆಗಳು ಆದೇಶದ ದಿನಾಂಕದಿಂದ ಅನುದಾನಕ್ಕೆ ಒಳಪಟ್ಟಿ

ಕ್ರಮಸಂಖ್ಯೆ:
39 ರಿಂದ 65ರವರೆಗಿನ ಪ್ರಾಥಮಿಕ ಶಾಲೆಗಳು ಅನುದಾನಕ್ಕೆ ಒಳಪಡಬೇಕಾಗಿದೆ.

ರಾಜ್ಯದಲ್ಲಿ ಕೋಳಿ ಮೊಟ್ಟೆ ಮಂಡಳಿಯ ರಚನೆ

(873): ಶ್ರೀ. ಕೆ.ಹೆಚ್. ಹನುಮೇಗೌಡ (ಹಾಸನ):-

ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕೋಳಿ ಸಾಗಾಣಿಕೆದಾರರ ಹಿತದೃಷ್ಟಿಯಿಂದ ಮೊಟ್ಟೆ ಮಂಡಳಿ ರಚಿಸಬೇಕೆಂ ವಿಚಾರ ಎರಡು ವರ್ಷಗಳ ಹಿಂದೆ ಸರ್ಕಾರದ ಮುಂದಿದ್ದುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ, ಸದರಿ ಮಂಡಳಿಯ ರಚನೆಗೆ ಸರ್ಕಾರವು ಹೂಡಲಿರುವ ಬಂಡವಾಳ ಮೊತ್ತವೆಷ್ಟು;

ಇ) ಈ ಮೊಟ್ಟೆ ಮಂಡಳಿ ರಚನೆಯಿಂದ ಸಾರ್ವಜನಿಕರಿಗೆ ಮತ್ತು ಕೋಳಿ ಫಾರಂ ನಡೆಸು ರೈತರುಗಳಿಗೆ ದೊರೆಯಲಿರುವ ಅನುಕೂಲಗಳಾವುವು ? (ವಿವರ ನೀಡುವುದು.)

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):-

ಅ) ನಿಜ.

ಆ) ಅಂದಿನ ಅಂದಾಜು – 287.33 ರೂ.ಲಕ್ಷಗಳಲ್ಲಿ.

ಇ) ಮೊಟ್ಟೆ ಮಂಡಳಿ ರಚಿಸಿದಲ್ಲಿ ಸಾರ್ವಜನಿಕರಿಗೆ ಉತ್ತಮ ಕೋಳಿ ಮತ್ತು ಮೊ ದೊರಕುವುದು ಹಾಗೂ ಕೋಳಿ ಫಾರಂ ನಡೆಸುವವರಿಗೆ ಲಾಭಕರ ದರದಲ್ಲಿ ಮಾರಾಟ ಸೌ ದೊರಕುವುದು.

ಕರ್ನಾಟಕ ಹಾಲು ಒಕ್ಕೂಟದಲ್ಲಿ ಮೀಸಲಾತಿಯನ್ನು ಅನುಸರಿಸದೇ ಇರುವ ಬಗ್ಗೆ

973: ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು):–

ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಹಾಲು ಒಕ್ಕೂಟದಲ್ಲಿ ಸೇವಾ ಹಿರಿತನ ಇದ್ದ ನಾಲ್ಕು ಜನ ಪರಿಶಿಷ್ಟ ಜಾತಿಗೆ ಸೇರಿದವರನ್ನು ಕಡೆಗಣಿಸಿ ಅವರುಗಳಿಗಿಂತ ಸೇವಾ ಕಿರಿತನದಲ್ಲಿದ್ದವರಿಗೆ ಉಪ ನಿರ್ದೇಶಕರುಗಳ ಹುದ್ದೆಗಳಿಗೆ ಬಡ್ತಿ ಕೊಟ್ಟಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಕಿರಿತನದಲ್ಲಿ ಬಡ್ತಿ ಹೊಂದಿದವರ ಗುಪ್ತ ವರದಿಗಳು ಸರಿಯಾಗಿಲ್ಲದಿದ್ದರೂ ಅದರ ವಿಚಾರಣೆಯನ್ನು ಸಹ ಬದಿಗಿಟ್ಟು ಬಡ್ತಿ ಕೊಟ್ಟಿರುವುದು ನಿಜವಲ್ಲವೇ;

ಇ) ಕೊರತೆಯಿರುವ ಮೀಸಲಾತಿಯನ್ನು ತುಂಬಲು 16 ಜನ ಪರಿಶಿಷ್ಟ ಜಾತಿ ನೌಕರರಿಗೆ ಹಿಂದಿನ ನಿರ್ದೇಶಕರು ಬಡ್ತಿಗಳನ್ನು ನೀಡಿದ್ದರೂ ಸಹ ಅದನ್ನು ತಡೆಗಟ್ಟಿ ಆದೇಶ ನೀಡಿರುವುದು ನಿಜವಲ್ಲವೇ ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ) ಕರ್ನಾಟಕ ಹಾಲು ಒಕ್ಕೂಟ ಎಂಬುದು ಇಲ್ಲ. ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಮೇಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) ಈ ವಿಚಾರವು ಬೆಂಗಳೂರು ಹಾಲು ಒಕ್ಕೂಟಕ್ಕೆ ಸಂಬಂಧಿಸಿದ್ದು ಈ ಒಕ್ಕೂಟದಲ್ಲಿ ಕಾರ್ಮಿಕರಿಗೆ 5 ವರ್ಷಕ್ಕೊಮ್ಮೆ ಕಾಲಮಿತಿ ಬಡ್ತಿ ನೀಡುತ್ತಿರುವುದು ರೂಢಿಯಲ್ಲಿರುತ್ತೆ. 16 ಜನ ಪರಿಶಿಷ್ಟ ಜಾತಿ: ಪಂಗಡ ನೌಕರರಿಗೆ ಅಂದಿನ ಕಾರ್ಯ ನಿರ್ವಾಹಕ ನಿರ್ದೇಶಕರು 3 ವರ್ಷಕ್ಕೊಮ್ಮೆ ಬಡ್ತಿಗಳನ್ನು ನೀಡಬೇಕೆಂದು ಉದ್ದೇಶಿಸಿದ್ದು ಇದು ಕಾರ್ಮಿಕರಲ್ಲಿ ಅಶಾಂತಿಯನ್ನುಂಟು ಮಾಡಬಹುದೆಂದು ಮತ್ತು ಇದಕ್ಕೆ ತಜ್ಞರ ಕೂಟದ ಒಪ್ಪಿಗೆ ಇಲ್ಲದೇ ಇದ್ದುದರಿಂದ ಒಕ್ಕೂಟದ ಮಂಡಳಿ ಸಭೆಯು ಇದನ್ನು ರದ್ದುಗೊಳಿಸಿರುತ್ತೆ. ಆದರೂ ಸಹ ಅಂದು ನೀಡಬೇಕೆಂದಿದ್ದ ವೇತನ ಶ್ರೇಣಿ ರೂ. 1040–1900 ರದ್ದಾದ ಕಾರಣ ಸದರಿ 16 ಜನಕ್ಕೂ ಇನ್ನೂ ಹೆಚ್ಚಿನ ವೇತನ ಶ್ರೇಣಿಯಾದ ರೂ. 1190 – 2200ಕ್ಕೆ ಕಾಲಮಿತಿ ಬಡ್ತಿ ನೀಡಲಾಗಿದೆ.

ವಿಶ್ವವಿದ್ಯಾನಿಲಯಗಳಲ್ಲಿನ ನೇಮಕಾತಿಗಳಲ್ಲಿ ಪರಿಶಿಷ್ಟರಿಗೆ ಅನ್ಯಾಯ

974: ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು):–

ಮಾನ್ಯ ಉನ್ನತ ಶಿಕ್ಷಣ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಎಲ್ಲ ವಿಶ್ವವಿದ್ಯಾನಿಲಯಗಳ ನೇಮಕಾತಿಯಲ್ಲಿ ಪ್ರತ್ಯೇಕ ವಿಷಯಗಳಿಗೆ ಸಂಬಂಧಿಸಿದಂತೆ ಮೀಸಲಾತಿ ಅನುಸರಿಸುತ್ತಿರುವುದರಿಂದ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ನೌಕರರು ಸಿಗುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ ಈ ರೀತಿ ಮೀಸಲಾತಿಯಿಂದ ಅನ್ಯಾಯವಾಗುವುದನ್ನು ತಡೆಗಟ್ಟಲು ಸರ್ಕಾರವು ಕೈಗೊಂಡ ಕ್ರಮವೇನು ?

ಆ) ಈ ವಿಷಯಗಳಲ್ಲಿ ಮೀಸಲಾತಿ ಅನುಸರಿಸುವ ಬದಲು ಹುದ್ದೆವಾರು ಮೀಸಲಿಡುವುದರಿಂದ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದವರಿಗೆ ಹೆಚ್ಚು ಅನುಕೂಲವಾಗುವುದಿಲ್ಲವೆ ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು):-

ಅ) ಹೌದು.

ನೇಮಾಕಾತಿಗಳಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿರುವ ಸ್ಥಾನಗಳನ್ನು ಭರ್ತಿ ಮಾಡಲು ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಎಲ್ಲ ವಿಶ್ವವಿದ್ಯಾನಿಲಯಗಳು ಪಾಲಿಸಬೇಕು.

ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಪಶು ವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ

146: ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ್):-

ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ 1992ನೇ ಡಿಸೆಂಬರ್ ಅಂತ್ಯದವರೆಗೆ ಇರುವ ಪಶು ಚಿಕಿತ್ಸಾಲಯಗಳೆಷ್ಟು;

ಆ) ಇನ್ನೂ ಹೆಚ್ಚಿಗೆ ಪಶು ಚಿಕಿತ್ಸಾಲಯಗಳನ್ನು ತೆರೆಯುವ ಉದ್ದೇಶ ಸರಕಾರಕ್ಕಿದೆಯೇ; (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ದಕ್ಷಿಣ ಕನ್ನಡ ಜಿಲ್ಲೆಯ ಆಸ್ಪತ್ರೆಗಳಲ್ಲಿ ಸಿಬ್ಬಂದಿ ವರ್ಗದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ ತಾಲ್ಲೂಕುವಾರು ಕೊರತೆ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ? ತಾಲ್ಲೂಕುವಾರು ವಿವರ ಬೇಕು;

ಉ) ಕೊರತೆ ಇರುವಲ್ಲಿಗೆ ಸಿಬ್ಬಂದಿಗಳನ್ನು ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):-

ಅ) 1835.

ಆ) ಹೌದು. ಸ್ಥಳಗಳ ಆಯ್ಕೆ ಮಾಡುವ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಇ) ಬಂದಿದೆ.

ಈ) 130 (ತಾಲ್ಲೂಕುವಾರು ವಿವರಗಳ ಪಟ್ಟಿ ಲಗತ್ತಿಸಿದೆ)

ಉ) 1. ಪಶು ವೈದ್ಯಾಧಿಕಾರಿಗಳ 146 ಹುದ್ದೆಗಳ ಪೈಕಿ 133 ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕ ಸೇವಾ ಆಯೋಗದಲ್ಲಿ ಅಭ್ಯರ್ಥಿಗಳ ಸಂದರ್ಶನ ಮುಗಿದಿರುತ್ತದೆ.

2. ಪಶು ವೈದ್ಯಕೀಯ ಮೇಲ್ವಿಚಾರಕರು ಹಾಗೂ ಹಿರಿಯ ಪಶು ವೈದ್ಯಕೀಯ ಪರೀಕ್ಷಕರ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮುಖೇನ ಭರ್ತಿ ಮಾಡಲಾಗುವುದು.

3. ಪಶು ವೈದ್ಯಕೀಯ ಪರೀಕ್ಷಕರು ಹಾಗೂ ಪಶು ವೈದ್ಯ ಸಹಾಯಕರ ಹುದ್ದೆಗಳನ್ನು ತರಬೇತಿ ಪಡೆದ

119 ಪಶು ವೈದ್ಯಕೀಯ ಪರೀಕ್ಷಕರು ಹಾಗೂ 236 ಪಶು ವೈದ್ಯಕೀಯ ಸಹಾಯಕರುಗಳಿಂದ ಭರ್ತಿ ಮಾಡಲಾಗುವುದು.

4. 400 'ಡಿ' ದರ್ಜೆ ನೌಕರರ ಹುದ್ದೆಗಳನ್ನು ತುಂಬಲು ಜಿಲ್ಲಾ ಉಪ ನಿರ್ದೇಶಕರುಗಳಿಗೆ ನೇಮಕಾತಿ ಮಾಡಲು ಸೂಚಿಸಲಾಗಿದೆ.

TALUKWISE VACANCY POSITION IN DAKSHINA KANNADA DISTRICT

Sl. No. Place	Asst. Director	Vety. Officer	Vety. Surgeon	Sr. VI	Vety. Inspector	Vety. Asst.	Group "D"
1. Udipi	–	–	–	2	3	17	3
2. Karkala	–	1	–	3	3	9	2
3. Kundapura	–	–	–	1	1	10	3
4. Puttur	–	–	–	4	1	11	1
5. Sullia	–	1	–	3	2	5	1
6. Mangalore	–	–	2	4	6	8	1
7. Belthangadi	–	–	–	4	–	7	–
8. Buntwal	–	–	–	3	–	8	–
Total:	–	2	2	24	16	75	11

ದಕ್ಷಿಣ ಕನ್ನಡದ ಮೀನು ಮಾರ್ಕೆಟಿಂಗ್ ಫೆಡರೇಶನ್‌ಅನ್ನು ಪುನಶ್ಚೇತನಗೊಳಿಸುವ ಬಗ್ಗೆ

(685): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ್):–

ಮಾನ್ಯ ಮಿನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡದ ಮೀನು ಮಾರ್ಕೆಟಿಂಗ್ ಫೆಡರೇಷನ್ ಕಳೆದ 5 ವರ್ಷಗಳಿಂದ ಲಾಭದಲ್ಲಿದೆಯೇ ಅಥವಾ ನಷ್ಟದಲ್ಲಿದೆಯೇ (ಪ್ರತಿ ವರ್ಷಗಳ ಲಾಭ ನಷ್ಟದ ವಿವರಣೆ ತಿಳಿಸುವುದು);

ಆ) ನಷ್ಟದಲ್ಲಿರುವುದಾದರೆ ಅದನ್ನು ಪುನಶ್ಚೇತನಗೊಳಿಸಲು ವ್ಯವಸ್ಥೆ ಮಾಡಲಾಗಿದೆಯೇ;

ಇ) ಅಲ್ಲಿ ಸಿಬ್ಬಂದಿ ವರ್ಗ ಹೆಚ್ಚಾಗಿದೆಯೇ ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):–

ಅ) ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಮಾರಾಟ ಮಹಾಮಂಡಳಿಯು 4 ವರ್ಷಗಳು ನಷ್ಟದಲ್ಲಿರುತ್ತದೆ. ಆದರೆ 1990–91ರಲ್ಲಿ ಮಾತ್ರ ಲಾಭ ಸಂಪಾದಿಸಿರುತ್ತದೆ. ವಿವರಗಳು ಈ ರೀತಿ ಇದೆ.

ವರ್ಷ		ರೂ.
1987–88	ನಷ್ಟ	11,45,853–30
1988–89	ನಷ್ಟ	16,10,624–94
1989–90	ನಷ್ಟ	13,75,943–73
1990–91	ಲಾಭ	13,26,263–65
1991–92	ನಷ್ಟ	23,84,929–09

ಆ) ಮಹಾಮಂಡಳಿಯು ನಷ್ಟದಲ್ಲಿರುವುದರಿಂದ ಅದರ ಪುನಶ್ಚೇತನಕ್ಕಾಗಿ ಒಂದು ತಾಂತ್ರಿಕ ವರದಿಯನ್ನು ತಯಾರಿಸಿದ್ದು ಸದರಿ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಇಲ್ಲ.

ರಾಜ್ಯದ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಗಳ ಸಂಖ್ಯೆ

(1939): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ್):–

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಗಳ ಒಟ್ಟು ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು).

ಆ) ಈ ಶಾಲೆಗಳಿಗೆ ಮಂಜೂರಾದ ಕನ್ನಡ ಅಧ್ಯಾಪಕರ ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು).

ಇ) ಇದರಲ್ಲಿ ನೇಮಕ ಮಾಡಿ ಭರ್ತಿ ಮಾಡಿರುವ ಕನ್ನಡ ಅಧ್ಯಾಪಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಈ) ಒಂದೂ ಭರ್ತಿ ಮಾಡದೇ ಇದ್ದರೆ ಅಲ್ಲಿನ ಮಕ್ಕಳು ಕನ್ನಡ ಕಲಿಯುವುದು ಹೇಗೆ;

ಉ) ಶೀಘ್ರ ಭರ್ತಿ ಮಾಡಲಾಗುವುದೇ ?

ಡಾ. ಹೆಚ್.ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):–

ಅ) 2511 (ವಿವರ ಲಗತ್ತಿಸಿದೆ)

ಆ) 2565 (ವಿವರ ಲಗತ್ತಿಸಿದೆ)

ಇ. 1-3-90 ರಿಂದ 31-5-91ರವರೆಗೆ ರಾಜ್ಯದಲ್ಲಿ ಉರ್ದುಶಾಲೆಗಳಲ್ಲಿನ ಕನ್ನಡ ಶಿಕ್ಷಕರೂ ಸೇರಿದಂತೆ 4845 ಕನ್ನಡ ಶಿಕ್ಷಕರ ಹುದ್ದೆ ಖಾಲಿಯಿದ್ದು 646 ಹುದ್ದೆ ಭರ್ತಿಮಾಡಿದೆ. ಉಳಿದ 4199 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಂಡಿದೆ.

ಈ. ಹುದ್ದೆ ಭರ್ತಿ ಮಾಡಲು ಕ್ರಮ ಜರುಗಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ. (ಇ)ನಲ್ಲಿ ಉತ್ತರಿಸಿದಂತೆ.

ರಾಜ್ಯದಲ್ಲಿರುವ ಉರ್ದು ಶಾಲೆಗಳು ಹಾಗೂ ಮಂಜೂರಾಗಿರುವ ಕನ್ನಡ ಶಿಕ್ಷಕರ ಸಂಖ್ಯೆ

ಕ್ರಮಸಂಖ್ಯೆ ಜಿಲ್ಲೆ	ರಾಜ್ಯದಲ್ಲಿನ ಉರ್ದು ಶಾಲೆಗೆ ಸಂಖ್ಯೆ	ಸದರಿ ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಮಂಜೂರಾಗಿರುವ ಕನ್ನಡ ಶಿಕ್ಷಕರ ಹುದ್ದೆ
1. ಬೆಂಗಳೂರು ಉತ್ತರ ಜಿಲ್ಲೆ	63	50
2. ಬೆಂಗಳೂರು ದಕ್ಷಿಣ ಜಿಲ್ಲೆ	92	103
3. ಬೆಂಗಳೂರು ಗ್ರಾಮಾಂತರ	183	164
4. ಕೋಲಾರ ಜಿಲ್ಲೆ	191	179
5. ಚಿತ್ರದುರ್ಗ	145	143
6. ಶಿವಮೊಗ್ಗ	191	176
7. ತುಮಕೂರು	144	112
8. ಮೈಸೂರು	177	182
9. ಮಂಡ್ಯ	91	98
10. ಹಾಸನ	81	88
11. ದಕ್ಷಿಣ ಕನ್ನಡ ಜಿಲ್ಲೆ	42	74
12. ಚಿಕ್ಕಮಗಳೂರು ಜಿಲ್ಲೆ	84	85
13. ಕೊಡಗು	06	10
14. ಬೆಳಗಾವಿ	241	241
15. ಧಾರವಾಡ	301	266
16. ಬಿಜಾಪುರ	219	268
17. ಉತ್ತರ ಕನ್ನಡ	76	68
18. ಗುಲ್ಬರ್ಗಾ	77	92
19. ರಾಯಚೂರು	20	26
20. ಬಳ್ಳಾರಿ	59	66
21. ಬೀದರ್	28	74
ಒಟ್ಟು	2511	2565

ವೈದ್ಯರ ಹಾಗೂ ಸಿಬ್ಬಂದಿಯ ವಸತಿ ಗೃಹಗಳ ಸಂಖ್ಯೆ

2137: ಶ್ರೀ ಹು.ಯ. ಮೇಟಿ (ಗುಳೇದಗುಡ್ಡ):-

ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಲ್ಲಿರುವ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರ ಹಾಗೂ ಹಿರಿಯ ಶುಶ್ರೂಷಕಿ ಹಾಗೂ ಶುಶ್ರೂಷಕಿಯರ ಹಾಗೂ ದಾದಿಯರ ಸಂಖ್ಯೆ ಎಷ್ಟು;

ಆ) ಹಿರಿಯ ಶುಶ್ರೂಷಕಿ ಹಾಗೂ ಶುಶ್ರೂಷಕಿಯರಿಗೆ ಹಂಚಿಕೆ ಮಾಡಿದ ವಸತಿ ಗೃಹಗಳ ಸಂಖ್ಯೆ ಎಷ್ಟು;

ಇ) ಸದರಿ ವಸತಿ ಗೃಹಗಳಲ್ಲಿ ಶುಶ್ರೂಷಕಿಯರಿಗೆ ಹಂಚಿಕೆ ಮಾಡದೆ ಕಣ್ಣಿನ ವೈದ್ಯರೊಬ್ಬರಿಗೆ ಹಂಚಿಕೆ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಈ ರೀತಿಯಾಗಿ ಶುಶ್ರೂಷಕಿಯರಿಗೆ ಹಂಚಿಕೆ ಮಾಡದೆ ಕಣ್ಣಿನ ವೈದ್ಯರಿಗೆ ಹಂಚಿಕೆ ಮಾಡಿರುವ ಸಂಬಂಧಪಟ್ಟ ಮೇಲಾಧಿಕಾರಿಯವರ ಮೇಲೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ) ವೈದ್ಯರು	30
ಹಿರಿಯ ಶುಶ್ರೂಷಕಿಯರು	11
ಶುಶ್ರೂಷಕಿಯರು (ದಾದಿಯರು)	59

ಆ) 15

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಸ್ಥಳದ ಅಭಾವ

(2138): ಶ್ರೀ ಹು.ಯ. ಮೇಟಿ (ಗುಳೇದಗುಡ್ಡ):-

ಉನ್ನತ ಶಿಕ್ಷಣ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಂಪಿಯಲ್ಲಿರುವ ಕನ್ನಡ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಆ) ಅವರುಗಳಿಗೆ ಸರಿಯಾದ ಸೌಲಭ್ಯಗಳನ್ನು ಒದಗಿಸಲಾಗಿದೆಯೆ ? (ಪಠ್ಯಪುಸ್ತಕ ಇತ್ಯಾದಿಗಳನ್ನು ವಿವರ ನೀಡುವುದು).

ಇ) ಸದರಿ ವಿಶ್ವವಿದ್ಯಾಲಯವನ್ನು ನಡೆಸುತ್ತಿರುವ ಸ್ಥಳದ ಅಭಾವದಿಂದಾಗಿ ತೊಂದರೆ ಅನುಭವಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ಹೆಚ್ಚಿನ ಸ್ಥಳ ಹಾಗೂ ಸೌಲಭ್ಯ ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು):-

ಅ) ಎಂ.ಫಿಲ್. ಪದವಿಗಾಗಿ	– 7
ಪಿ.ಹೆಚ್.ಡಿ. ಪದವಿಗಾಗಿ	– 7
ಪಿ.ಹಚ್.ಡಿ.ಪದವಿಗಾಗಿ (ಬಾಹ್ಯ ಅಭ್ಯರ್ಥಿಗಳು)	– 21

ಆ) ಎಂ.ಫಿಲ್ ಮತ್ತು ಪಿ ಹೆಚ್ ಡಿ ಪದವಿಗಳಿಗೆ ಪ್ರತ್ಯೇಕ ಪಠ್ಯಪುಸ್ತಕ ಇರುವುದಿಲ್ಲ. ಆದರೂ ಅವರುಗಳ ಅಧ್ಯಯನಕ್ಕೆ ಬೇಡಿದ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗಿದೆ.

ಇ) ಹೌದು.

ಈ) ಹೌದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಷಯ ಯೋಜನೆ

1442: ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ):–

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಷಯ ಯೋಜನೆಯ ಪ್ರಯೋಜನ ಪಡೆಯುವ ಮಕ್ಕಳ ಸಂಖ್ಯೆ ಎಷ್ಟು;

ಆ) ಈ ಮಕ್ಕಳಿಗೆ ಪ್ರತಿ ತಿಂಗಳು ವಿತರಿಸಬೇಕಾದ ಹಣದ ಮೊತ್ತವೆಷ್ಟು;

ಇ) ಚಾಲ್ತಿ ವರ್ಷದಲ್ಲಿ ಹಣ ಪಾವತಿಯಾಗಿರುವ ತಿಂಗಳುಗಳೆಷ್ಟು;

ಈ) ಬಾಕಿ ಉಳಿದ ಹಣ ಪಾವತಿ ಮಾಡಲಾಗುವುದು ಯಾವಾಗ;

ಉ) ಈ ಯೋಜನೆಯ ಅನುಷ್ಠಾನದ ಬಳಿಕ ವಿದ್ಯಾರ್ಥಿಗಳ ಹಾಜರಿ ಹೆಚ್ಚಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ. ಹೆಚ್.ಡಿ. ಲಮಾಣಿ (ಪ್ರಾಥಮಿಕ ಹಾಗು ಪ್ರೌಢ ಶಿಕ್ಷಣ ಸಚಿವರು):–

ಅ) ಪ್ರತಿ ತಿಂಗಳು 60,748.

ಆ) ಪ್ರತಿ ತಿಂಗಳಿಗೆ 16,99,534–00

ಇ) ಜೂನ್ – 92, ಜುಲೈ – 92, ಆಗಸ್ಟ್ – 92, 3 ತಿಂಗಳುಗಳಲ್ಲಿ ಪಾವತಿ ಆಗಿದೆ.

ಈ) ಬಾಕಿ ತಿಂಗಳುಗಳಿಗೆ ಹಣ ಪಾವತಿ ಮಾಡುವ ಬಗ್ಗೆ ಕ್ರಮ ಪ್ರಾರಂಭಿಸಲಾಗಿದೆ.

ಉ) ಬಂದಿದೆ.

ರಾಜ್ಯದಲ್ಲಿ ಗೋಹತ್ಯೆಯಾಗುತ್ತಿರುವ ಬಗ್ಗೆ

(2051): ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):–

ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ದಿನ ನಿತ್ಯ ಬಹು ಸಂಖ್ಯೆಯಲ್ಲಿ ಗೋಹತ್ಯೆಯಾಗುತ್ತಿರುವುದು ಸರ್ಕಾರಕ್ಕೆ ತಿಳಿದಿರುತ್ತದೆಯೇ;

ಆ) ತಿಳಿದಿದ್ದರೆ, ಪಶು ಸಂಪತ್ತಿನ ನಾಶವನ್ನು ತಡೆಯಲು ಸರ್ಕಾರದವರು ಯಾವ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿರುತ್ತದೆ ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ) ತಿಳಿದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಇಲಾಖೆಯ ಸಿಬ್ಬಂದಿ

(1582) ಶ್ರೀ. ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ):-

ಮಾನ್ಯ ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ವಯಸ್ಕರ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದ ಜಿಲ್ಲಾವಾರು ಸಂಖ್ಯೆ ಎಷ್ಟು;

ಆ) ವಯಸ್ಕರ ಶಿಕ್ಷಣದಲ್ಲಿ ಪ್ರತಿಶತ ಎಷ್ಟು ಜನ ಇನ್ನು ಶಿಕ್ಷಣ ಪಡೆಯಬೇಕಾಗಿದೆ ?

ಶ್ರೀ ಪ್ರಭಾಕರ್ ಎಸ್.ರಾಣೆ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು):-

ಅ) ರಾಜ್ಯದ ವಯಸ್ಕರ ಶಿಕ್ಷಣ ಇಲಾಖೆಯಲ್ಲಿ ಒಟ್ಟು 150 ಜನ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರುಗಳ ಜಿಲ್ಲಾವಾರು ವಿವರ ಕೆಳಕಂಡಂತಿದೆ:-

ಜಿಲ್ಲೆ	ಸಿಬ್ಬಂದಿ
ಬೆಂಗಳೂರು	08
ಬಳ್ಳಾರಿ	05
ಬೀದರ್	07
ಬಿಜಾಪುರ	05
ಬೆಳಗಾವಿ	08
ಚಿತ್ರದುರ್ಗ	05
ಚಿಕ್ಕಮಗಳೂರು	05
ದಕ್ಷಿಣ ಕನ್ನಡ	05
ಧಾರವಾಡ	05
ಗುಲ್ಬರ್ಗಾ	05
ಹಾಸನ	05
ಕೋಲಾರ	05
ಕೊಡಗು	05
ಮಂಡ್ಯ	07
ಮೈಸೂರು	08
ಉತ್ತರ ಕನ್ನಡ	05
ರಾಯಚೂರು	05
ಶಿವಮೊಗ್ಗ	08
ತುಮಕೂರು	08
ನಿರ್ದೇಶನಾಲಯ, ಬೆಂಗಳೂರು	36

ಆ) ರಾಜ್ಯದಲ್ಲಿ 7 ವರ್ಷಕ್ಕೆ ಮೇಲ್ಪಟ್ಟು ಒಟ್ಟು 16,534 ಕೋಟಿ ಜನ ಅನಕ್ಷರಸ್ಥರಿದ್ದು ಅವರಲ್ಲಿ 9 ರಿಂದ 35 ವಯೋಮಿತಿಯಲ್ಲಿ ಒಟ್ಟು 81.01 ಲಕ್ಷ ಜನ ಅನಕ್ಷರಸ್ಥರಾಗಿದ್ದು ಅವರಿಗಾಗಿ ಮಾತ್ರ ರಾಷ್ಟ್ರೀಯ ಸಾಕ್ಷರತಾ ಮಿಷನ್ ಯೋಜನೆಯಂತೆ ರಾಜ್ಯದಲ್ಲಿ ಸಾಕ್ಷರತಾ ಕಾರ್ಯಕ್ರಮ ಜಾರಿಯಲ್ಲಿದೆ.

ಈವರೆವಿಗೆ ಸಾಕ್ಷರರಾದ 20.12 ಲಕ್ಷ ಜನರನ್ನು ಬಿಟ್ಟರೆ ಇನ್ನೂ 60.00 ಲಕ್ಷ ಜನ ಅಂದರೆ ಶೇಕಡ 75ರಷ್ಟು ಜನರನ್ನು ಅಕ್ಷರಸ್ಥರನ್ನಾಗಿ ಮಾಡಬೇಕಿದೆ.

ಕುಂದಾಪುರ ತಾಲ್ಲೂಕಿನಲ್ಲಿ ವೈದ್ಯರ ಕೊರತೆ

1934: ಶ್ರೀ ಜಿ.ಎಸ್. ಆಚಾರ್ (ಬೈಂದೂರು):–

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಯಾವ ಯಾವ ಆಸ್ಪತ್ರೆ ಪ್ರಾ.ಆ. ಕೇಂದ್ರ: ಘಟಕ: ಗ್ರಾಮೀಣ ಆಸ್ಪತ್ರೆ, ಆಯುರ್ವೇದ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇದೆ; ಅವುಗಳು ಯಾವಾಗಿನಿಂದ ಖಾಲಿ ಇವೆ;

ಆ) ಖಾಲಿ ಇರುವ ಹುದ್ದೆಗಳನ್ನು ತುಂಬಿಸಲು ಸರ್ಕಾರದವರ ಕಾರ್ಯಕ್ರಮವೇನು;

ಇ) ಹೆಚ್ಚು ವೈದ್ಯರಿರುವಲ್ಲಿಂದ ವೈದ್ಯರೇ ಇಲ್ಲದ ಕಡೆಗೆ ವರ್ಗಾವಣೆ, ಗುತ್ತಿಗೆ ಆಧಾರದ ನೇಮಕಕ್ಕೆ ಸ್ಥಳೀಯ ಆಯ್ಕೆ ಇವುಗಳನ್ನು ಅನುಸರಿಸದಿರಲು ಕಾರಣವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ)	ಖಾಲಿ ಇರುವ ಹುದ್ದೆಗಳು	ಎಂದಿನಿಂದ ಖಾಲಿ ಇವೆ
1. ಸಾರ್ವಜನಿಕ ಆಸ್ಪತ್ರೆ, ಕುಂದಾಪುರ	ಉಪಶಸ್ತ್ರ ಚಿಕಿತ್ಸಕರು – 2 ಸಹಾಯಕ ಶಸ್ತ್ರ ಚಿಕಿತ್ಸಕರು – 1	ನವೆಂಬರ್ 91 ರಿಂದ
2. ಪ್ರಾ.ಆ. ಕೇಂದ್ರ ನಾಡ.	ಸಹಾಯಕ ಶಸ್ತ್ರ ಚಿಕಿತ್ಸಕರು – 1	ಏಪ್ರಿಲ್ 92 ರಿಂದ
3. ಪ್ರಾ.ಆ. ಘಟಕ ಹಕ್ಕಲಡಿ	" – 1	

ಆಯುರ್ವೇದ ಔಷಧಾಲಯಗಳು

1. ಜಿ.ಎ.ಡಿ.ನಾವುಂದ ದಿನಾಂಕ: 11–5–92ರಿಂದ
2. ಜಿ.ಎ.ಡಿ. ಕಳವರ (ಆರ್.ಎಂ.ಪಿ. ಕೇಂದ್ರ)
3. ಜಿಎಡಿ, ಅಮಾವಸ್ಯೆ ಬೈಲು (ಹೊಸದಾಗಿ ಮಂಜೂರಾದ ಔಷಧಾಲಯ) ದಿನಾಂಕ 8–5–92 ರಿಂದ

ಆ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಗುತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿಗಳನ್ನು ನೇಮಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಈ ಬಗ್ಗೆ ತೀರ್ಮಾನ ಕೈಗೊಂಡ ನಂತರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಅಲ್ಲದೇ ಸ್ನಾತಕೋತ್ತರ ವ್ಯಾಸಂಗಕ್ಕೆ ತೆರಳಿರುವ ಸಹಾಯಕ ಶಸ್ತ್ರ ಚಿಕಿತ್ಸಕರುಗಳು ಈ ತಿಂಗಳ ಅಂತ್ಯದಲ್ಲಿ ವ್ಯಾಸಂಗ ಪೂರೈಸಿ ವಾಪಸ್ ಬರುವವರಿದ್ದು ಇವರುಗಳಿಗೆ

ನೇಮಕಾತಿ ಆದೇಶವನ್ನು ನೀಡುವಾಗ ಖಾಲಿ ಇರುವ ಹುದ್ದೆಗಳನ್ನು ಆದ್ಯತೆಯ ಮೇರೆಗೆ ಭರ್ತಿ ಮಾಡಲಾಗುವುದು.

ಇ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವಾಗ ಆಯಾ ಜಿಲ್ಲೆಯವರಿಗೆ (ಸ್ಥಳೀಯರಿಗೆ) ಆದ್ಯತೆ ಮೇಲೆ ಮೆರಿಟ್ ಮತ್ತು ಮೀಸಲಾತಿ ಪದ್ಧತಿ ಅನುಸರಿಸಿ ನೇಮಕ ಮಾಡಲಾಗುವುದು.

ವೈದ್ಯಕೀಯ ಶಿಕ್ಷಣಕ್ಕಾಗಿ ಸರ್ಕಾರಿ ಆಸ್ಪತ್ರೆ ಸೌಲಭ್ಯ ನೀಡಿದ್ದಕ್ಕೆ ಬರಬೇಕಾದ ಬಾಕಿಯ ಬಗ್ಗೆ

1935: ಶ್ರೀ ಜಿ.ಎಸ್. ಆಚಾರ್ (ಬೈಂದೂರ್):-

ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಧಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಯಾವ ಯಾವ ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಎಲ್ಲೆಲ್ಲಿ ವೈದ್ಯಕೀಯ ಶಿಕ್ಷಣ ಸೌಲಭ್ಯಗಳನ್ನು ಒದಗಿಸಲಾಗಿದೆ;

ಆ) ಈ ಸಲುವಾಗಿ ಸದರಿ ಸಂಸ್ಥೆಗಳಿಂದ ಸರ್ಕಾರಕ್ಕೆ ಎಷ್ಟು ಹಣ ಬರಲು ಬಾಕಿ ಇದೆ;

ಇ) ಸದರಿ ಸವಲತ್ತು ಅನಿರ್ದಿಷ್ಟವಾಗಿ ಮುಂದುವರಿಯುವುದೆ;

ಈ) ಖಾಸಗಿಯವರ ಸೂತ್ರಗಳ ಆಧಾರದ ಮೇಲೆ ಸರ್ಕಾರವೇ ಲಾಭದಾಯಕವಾಗಿ ಮೆಡಿಕಲ್ ಕಾಲೇಜುಗಳನ್ನು ಆರಂಭಿಸುವ ಯೋಜನೆ ಇದೆಯೇ ?

ಶ್ರೀ ಜಿ.ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):-

ಅ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಆ) ದಿನಾಂಕ 10-4-1992ರಂದು ಅನ್ವಯವಾಗುವಂತೆ ರೂ. 30.59 ಲಕ್ಷಗಳ ಬಾಕಿ ಇರುತ್ತದೆ.

ಇ) ವಿದ್ಯಾರ್ಥಿಗಳ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಮುಂದುವರಿಸಲಾಗಿದೆ.

ಈ) ಇಲ್ಲ.

ಅನುಬಂಧ – 'ಎ'

ಕ್ರ. ಸಂ.	ಖಾಸಗಿ ಮೆಡಿಕಲ್ ಕಾಲೇಜುಗಳ ಹೆಸರು	ಸರ್ಕಾರಿ ಆಸ್ಪತ್ರೆಗಳ ವಿವರ – ಇಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳವರು ಕ್ಲಿನಿಕಲ್ ಸೌಲಭ್ಯ ಪಡೆಯುತ್ತಿರುವ ವಿವರ
1.	ಕಸ್ತೂರ್ಬಾ ಮೆಡಿಕಲ್ ಕಾಲೇಜು, ಮಂಗಳೂರು	– 1. ಜಿಲ್ಲಾ ಆಸ್ಪತ್ರೆ, ಮಂಗಳೂರು 2. ಲೇಡಿ ಗೋಪನ್ ಆಸ್ಪತ್ರೆ, ಮಂಗಳೂರು – 3 ಟಿ.ಬಿ. ಆಸ್ಪತ್ರೆ ಮೂಡಶೆಡ್ಡೆ
2.	ಎಂ.ಆರ್. ಮೆಡಿಕಲ್ ಕಾಲೇಜು, ಗುಲ್ಬರ್ಗಾ	ಜಿಲ್ಲಾ ಆಸ್ಪತ್ರೆಗಳು ಗುಲ್ಬರ್ಗಾ
3.	ಜೆ.ಎನ್. ಮೆಡಿಕಲ್ ಕಾಲೇಜು, ಬೆಳಗಾಂ	– 1. ಜಿಲ್ಲಾ ಆಸ್ಪತ್ರೆ, ಬೆಳಗಾಂ
4.	ಜೆ.ಜೆ.ಎಂ. ಮೆಡಿಕಲ್ ಕಾಲೇಜು, ದಾವಣಗೆರೆ	– 1. ಜಿಲ್ಲಾ ಆಸ್ಪತ್ರೆ, ದಾವಣಗೆರೆ 2. ಹೆಂಗಸರು ಮತ್ತು ಮಕ್ಕಳ ಆಸ್ಪತ್ರೆ, ದಾವಣಗೆರೆ, 3. ಟಿ.ಬಿ. ಆಸ್ಪತ್ರೆ, ದಾವಣಗೆರೆ
5.	ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಂಗಳೂರು	– 1. ಜಯನಗರ ಜನರಲ್ ಆಸ್ಪತ್ರೆ, ಬೆಂಗಳೂರು
6.	ಅಲ್‌ಅಮೀನ್ ಮೆಡಿಕಲ್ ಕಾಲೇಜು, ಬಿಜಾಪುರ	– 1. ಜನರಲ್ ಆಸ್ಪತ್ರೆ, ಬಿಜಾಪುರ.
7.	ಜೆ.ಎಸ್.ಎಸ್. ಮೆಡಿಕಲ್ ಕಾಲೇಜು, ಮೈಸೂರು	– 1. ಪಿ.ಕೆ.ಟಿ.ಬಿ. ಆಸ್ಪತ್ರೆ, ಮೈಸೂರು.
8.	ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜು, ತುಮಕೂರು	– 1. ಜಿಲ್ಲಾ ಆಸ್ಪತ್ರೆ, ತುಮಕೂರು
9.	ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳ್ಳೂರು	– 1. ಜಿಲ್ಲಾ ಆಸ್ಪತ್ರೆ, ಮಂಡ್ಯ
10.	ಶ್ರೀ ದೇವರಾಜ ಅರಸ್ ವೈದ್ಯಕೀಯ ಕಾಲೇಜು, ಕೋಲಾರ	– 1. ಎಸ್.ಎನ್.ಆರ್. ಆಸ್ಪತ್ರೆ, ಕೋಲಾರ 2. ಸಿವಿಲ್ ಆಸ್ಪತ್ರೆ, ಕೋಲಾರ, 3. ಕೆ.ಎನ್.ಟಿ.ಬಿ. ಆಸ್ಪತ್ರೆ, ಕೋಲಾರ.
11.	ಡಾ: ಅಂಬೇಡ್ಕರ್ ಮೆಡಿಕಲ್ ಕಾಲೇಜು, ಬೆಂಗಳೂರು	– 1. ಕೆ.ಸಿ.ಜಿ. ಆಸ್ಪತ್ರೆ, ಬೆಂಗಳೂರು.

ರಾಜ್ಯದಲ್ಲಿರುವ ಪಶು ಚಿಕಿತ್ಸಾಲಯಗಳ ವಿವರ

2098: ಶ್ರೀ. ಎಂ.ಕೆ. ಪಟ್ಟಣ ಶೆಟ್ಟಿ (ಬಾದಾಮಿ):–

ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಿನಾಂಕ 1–4–89 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಜಿಲ್ಲಾ ಪರಿಷತ್‌ಗಳಿಂದ ಮಂಜೂರಾದ ಪಶು ಚಿಕಿತ್ಸಾಲಯಗಳು ಎಷ್ಟು;

ಆ) ಅವುಗಳಲ್ಲಿ ಸರ್ಕಾರದಿಂದ ಮಾನ್ಯತೆ ಪಡೆದ ಪಶು ಚಿಕಿತ್ಸಾಲಯಗಳು ಎಷ್ಟು;

ಇ) ಮಾನ್ಯತೆ ಪಡೆಯದೆ ಇರುವ ಪಶು ಚಿಕಿತ್ಸಾಲಯಗಳ ಬಗೆಗೆ ಸರಕಾರವು ಕೈಕೊಂಡ ಕ್ರಮವೇನು ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ) 378

ಆ) 45

ಇ) ಸಕ್ರಮಗೊಳಿಸಲು ಆಲೋಚಿಸಲಾಗುವುದು.

ವಲಯ ಅರಣ್ಯ ಅಧಿಕಾರಿಗಳಿಂದ ಸರಕಾರಕ್ಕೆ ಬರತಕ್ಕ ಅನಂಗೀಕೃತ ಹಣದ ವಿವರ

2100: ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ):–

ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1980 ರಿಂದ ವಲಯ ಅರಣ್ಯ ಅಧಿಕಾರಿಗಳಿಂದ ಸರ್ಕಾರಕ್ಕೆ ಬರತಕ್ಕ ಅನಂಗೀಕೃತ ಹಣ ಎಷ್ಟು;

ಆ) ವಸೂಲಿಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು;

ಇ) ತೆಗದುಕೊಂಡಿರದಿದ್ದ ಪಕ್ಷದಲ್ಲಿ ತೆಗೆದುಕೊಳ್ಳುವ ಕ್ರಮವೇನು ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯಸಚಿವರು):–

ಅ) ರೂ. 82.84 ಲಕ್ಷಗಳು.

ಆ) ಕರ್ನಾಟಕ ಅರಣ್ಯ ಲೆಕ್ಕ ಸಂಹಿತೆ ನಿಯಮಾವಳಿಗಳ ಮೇರೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅನಂಗೀಕೃತ ಹಣವನ್ನು ವಸೂಲಿ ಮಾಡಲು ಹಾಗೂ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಪ್ರಾಧಿಕಾರ ಹೊಂದಿರುತ್ತಾರೆ. ಈ ಅಧಿಕಾರಿಗಳು ವಸೂಲು ಮಾಡುವ ಆದೇಶವನ್ನು ಹೊರಡಿಸಿದಾಗ ಅನೇಕ ಪ್ರಕರಣಗಳಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಈ ಆದೇಶಕ್ಕೆ ತಡೆಯಾಜ್ಞೆ ನೀಡಿ, ಇಲಾಖೆಯ ವಿಚಾರಣೆಯನ್ನು ನಡೆಸಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲು ಸೂಚಿಸಿರುತ್ತದೆ.

ಅದರಂತೆ 47 ಜನ ವಲಯ ಅರಣ್ಯ ಅಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ವಿರುದ್ಧ ದೋಷಾರೋಪಣಾ ಪಟ್ಟಿಗಳನ್ನು ಕೆಲವು ಘಟಕಾಧಿಕಾರಿಗಳು ಸಲ್ಲಿಸಿದ್ದು ಅವುಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ. ಅದರ ಪ್ರಗತಿಯು ವಿವಿಧ ಹಂತಗಳಲ್ಲಿರುತ್ತದೆ. ಇನ್ನುಳಿದ ವಲಯ ಅರಣ್ಯಾಧಿಕಾರಿಗಳ: ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ವಿರುದ್ಧ ಕೂಡಲೇ ದೋಷಾರೋಪಣಾ ಪಟ್ಟಿಗಳನ್ನು ತಯಾರಿಸಲು ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮತ್ತು ಇತರೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಇದಲ್ಲದೆ ಅನಂಗೀಕೃತ ಹಣವನ್ನು ವಸೂಲ್ಮಾಡಲು ಇಲಾಖೆಯ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಆಗಿಂದಾಗ್ಗೆ ಸುತ್ತೋಲೆ ಸೂಚನೆಗಳನ್ನು ಹೊರಡಿಸಲಾಗಿದೆ.

2. ಘಟಕ ಮತ್ತು ನಿಯಂತ್ರಣಾಧಿಕಾರಿಗಳಿಗೆ ಆಗಿಂದಾಗ್ಗೆ ಅರೆ ಸರ್ಕಾರಿ ಪತ್ರಗಳ ಮೂಲಕ ಸೂಚನೆಗಳನ್ನು ನೀಡಲಾಗಿದೆ.

3. ನಿಯಂತ್ರಣಾಧಿಕಾರಿಗಳ ಸಭೆಗಳನ್ನು ಕರೆದು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿ, ಅವುಗಳ ನಡವಳಿಕೆಗಳಲ್ಲಿ ಮಾರ್ಗದರ್ಶನ ನೀಡಲಾಗಿದೆ.

4) ಪುನರ್ ವಿಮರ್ಶೆಗಳನ್ನು ವಿಭಾಗ ಮಟ್ಟದಲ್ಲಿ, ವೃತ್ತ ಮಟ್ಟದಲ್ಲಿ ಮುಖ್ಯ ಲೆಕ್ಕಾಧಿಕಾರಿಯವರು ಮತ್ತು ಅವರ ಸಿಬ್ಬಂದಿಯವರು (1991-92ರಲ್ಲಿ) ಒಂದು ಬಾರಿ ನಡೆಸಿರುತ್ತಾರೆ. ನಂತರ ರಾಜ್ಯಮಟ್ಟದಲ್ಲಿ ಆಗಿನ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ನಿ) ರವರು ಒಂದು ಸಾರಿ ವೃತ್ತವಾರು ಪುನರ್ ವಿಮರ್ಶೆಗಳನ್ನು ನಡೆಸಿರುತ್ತಾರೆ. (ಅಕ್ಟೋಬರ್ 1992ರಿಂದ ನವೆಂಬರ್ 1992 ರವರೆಗೆ). ಮತ್ತೊಂದು ಬಾರಿ ಮುಖ್ಯ ಲೆಕ್ಕಾಧಿಕಾರಿಯವರು ಮತ್ತು ಸಿಬ್ಬಂದಿಯವರು ವೃತ್ತಗಳ ಪತ್ರಾಂಕಿತ ವ್ಯವಸ್ಥಾಪಕರೊಡನೆ ಪುನರ್ ವಿಮರ್ಶೆ (ಮಾರ್ಚ್ 1993ರಲ್ಲಿ) ನಡೆಸಿರುತ್ತಾರೆ. ಇವುಗಳ ನಡವಳಿಕೆಗಳಲ್ಲಿ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ.

ಇ) ಮೇಲೆ ತಿಳಿಸಿದಂತೆ ಕ್ರಮ ತೆಗೆದುಕೊಳ್ಳಲಾಗಿದೆ. ಇದನ್ನೇ ಮುಂದುವರಿಸಲಾಗುವುದು.

ರಾಜ್ಯದ ವಾಸ್ತವಿಕ ಜಾನುವಾರುಗಳ ಸ್ಥಿತಿ ಮತ್ತು ಅವುಗಳ ಆರೋಗ್ಯದ ನಿರ್ವಹಣೆಗೆ ಒದಗಿಸಿರುವ ಸೌಕರ್ಯ

(2120): ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ):-

ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ವಾಸ್ತವಿಕ ಜಾನುವಾರುಗಳ ಸ್ಥಿತಿ ಮತ್ತು ಅವುಗಳ ಆರೋಗ್ಯದ ನಿರ್ವಹಣೆಗೆ ಒದಗಿಸಿರುವ ಸೌಕರ್ಯಗಳಾವುವು;

ಆ) ರಾಜ್ಯದಲ್ಲಿ ಸಾಕು ಪ್ರಾಣಿಗಳ ಅಭಿವೃದ್ಧಿಗಾಗಿ ಯಾವುದಾದರೂ ಸಂಶೋಧನಾ ಮತ್ತು ತರಬೇತಿಯ ವಿಭಾಗ ಇದೆಯೇ;

ಇ) ರಾಜ್ಯ ಸರ್ಕಾರವು ಪಶು ಸಂಗೋಪನಾ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಆಲೋಚನೆ ಇದೆಯೇ ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):-

ಅ) ಎ) ಒಟ್ಟು ಜಾನುವಾರುಗಳ ಸಂಖ್ಯೆ 249.84 ಲಕ್ಷ ಕೋಳಿಗಳ ಸಂಖ್ಯೆ. 156.94 ಲಕ್ಷ.
ಬಿ) ರಾಜ್ಯದಲ್ಲಿರುವ ಪಶು ವೈದ್ಯಕೀಯ ಸಂಸ್ಥೆಗಳಿಂದ.

ಆ) ಇದೆ.

ಇ) ಇಲ್ಲ.

ರಾಜ್ಯದ ಅನೇಕ ಸರ್ಕಾರಿ ಪ್ರೌಢಶಾಲೆಗಳಲ್ಲಿ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಕಡೆ ಶಿಕ್ಷಕರ ಮತ್ತು ಉಪನ್ಯಾಸಕರ ಭರ್ತಿ

(2119): ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ):-

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಅನೇಕ ಸರ್ಕಾರಿ ಪ್ರೌಢಶಾಲೆಗಳಲ್ಲಿ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕನ್ನಡ, ಭೌತಶಾಸ್ತ್ರ, ಜೀವಶಾಸ್ತ್ರ, ಮತ್ತು ಇತರೆ ವಿಷಯಗಳನ್ನು ಬೋಧಿಸಲು ಉಪಾಧ್ಯಾಯರು ಹಾಗೂ ಉಪನ್ಯಾಸಕರುಗಳು ಇಲ್ಲದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ. (ಸರ್ಕಾರಿ ಪದವಿ ಪೂರ್ವ ಕಾಲೇಜು ಬಾಲಕರ: ಬಾಲಕಿಯರ) ಚನ್ನಪಟ್ಟಣ ಈ ಕಾಲೇಜುಗಳಿಗೆ ಸಂಬಂಧಿಸಿದಂತೆ.

ಆ) ಈ ತೊಂದರೆಯಿಂದ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಒಳ್ಳೆಯ ವಿದ್ಯಾಭ್ಯಾಸ ಪಡೆಯಲು ಸಾಧ್ಯವಾಗದೇ ಇರುವುದು ಸಾಧ್ಯವೇ;

ಇ) ಹಾಗಿದ್ದಲ್ಲಿ ಈ ವರ್ಷವಾದರೂ ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಶಿಕ್ಷಕರು ಮತ್ತು ಉಪನ್ಯಾಸಕರನ್ನು ಭರ್ತಿ ಮಾಡುವರೇ ?

ಡಾ॥ ಹೆಚ್.ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು)):-

ಅ) ಬಂದಿದೆ.

ಆ) ಹೌದು.

ಇ) ರಾಜ್ಯದಲ್ಲಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರವೇ ಕ್ರಮ ಕೈಗೊಳ್ಳಲಾಗುವುದು.

ಹಾಗೂ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ವಿಶೇಷ ನೇರ ನೇಮಕಾತಿ ಸಮಿತಿ ರಚಿಸಿದ್ದು, ಸದರಿ ಸಮಿತಿಯು ದಿನಾಂಕ 13-1-93ರ ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದೆ. ಸದರಿ ಅಭ್ಯರ್ಥಿಗಳ ಜಾತಿ, ಆದಾಯ ಹಾಗೂ ಪೋಲೀಸ್ ವರದಿಗಳಿಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಲಾಗಿದೆ. ಸದರಿ ವರದಿಗಳು ಬಂದ ಕೂಡಲೇ ಸರ್ಕಾರವು ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವುದು.

ವಕ್ಫ್ ಸಮಿತಿ ಕಛೇರಿಗಳಿಗೆ ಪ್ರತ್ಯೇಕ ಕಟ್ಟಡ

(2121): ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ):-

ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ಜಿಲ್ಲಾ ವಕ್ಫ್ ಸಮಿತಿಯ ಕಚೇರಿಗೆ ಪ್ರತ್ಯೇಕ ಕಟ್ಟಡವನ್ನು ಕಟ್ಟಲು ಸರ್ಕಾರವು ತೀರ್ಮಾನ ಕೈಗೊಂಡಿದೆಯೆ;

ಆ) ಹಾಗಿದ್ದಲ್ಲಿ ಈ ಕಟ್ಟಡ ನಿರ್ಮಾಣಕ್ಕಾಗಿ ತಗಲುವ ಖರ್ಚು ಮತ್ತು ಅವಧಿ ಎಷ್ಟು ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು):–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಜಿಲ್ಲಾ ಪರಿಷತ್ ವತಿಯಿಂದ ಆರಂಭಿಸಿರುವ ಪಶು ವೈದ್ಯಕೀಯ ಚಿಕಿತ್ಸಾ ಕೇಂದ್ರಗಳ ಬಗ್ಗೆ

(2096): ಶ್ರೀ. ಎಂ.ಎಸ್. ಆತ್ಮಾನಂದ (ಮಂಡ್ಯ):–

ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಾದ್ಯಂತ ಅನೇಕ ಪಶು ವೈದ್ಯಕೀಯ ಚಿಕಿತ್ಸಾ ಕೇಂದ್ರಗಳನ್ನು ಹಾಗೂ ಆಸ್ಪತ್ರೆಗಳನ್ನು ಸರ್ಕಾರದವರ ಅನುಮತಿಯಿಲ್ಲದೆ, ಜಿಲ್ಲಾ ಪರಿಷತ್‌ಗಳ ವತಿಯಿಂದ ಪ್ರಾರಂಭಿಸಿರುವುದನ್ನು ಸರ್ಕಾರವು ಗಮನಿಸಿದೆಯೆ;

ಆ) ಹಾಗಿದ್ದಲ್ಲಿ, ಈ ಪಶು ವೈದ್ಯಕೀಯ ಚಿಕಿತ್ಸಾ ಕೇಂದ್ರಗಳನ್ನು ಹಾಗೂ ಆಸ್ಪತ್ರೆಗಳನ್ನು ಸಕ್ರಮಗೊಳಿಸಲು ಸರಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ) ಹೌದು.

ಆ) ಸಕ್ರಮಗೊಳಿಸಲು ಆಲೋಚಿಸಲಾಗುವುದು.

ರಾಜ್ಯದಲ್ಲಿ ಶಿಥಿಲವಾದ ಶಾಲಾ ಕಟ್ಟಡಗಳ ಸಂಖ್ಯೆ

(2145): ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):–

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹಳೆಯದಾಗಿ ಶಿಥಿಲವಾಗಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) 1993–94ನೇ ಸಾಲಿನಲ್ಲಿ ಈ ಶಾಲಾ ಕಟ್ಟಡಗಳ ದುರಸ್ತಿಯ ಬಗ್ಗೆ ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳೇನು;

ಇ) ಮಂಡ್ಯ ತಾಲ್ಲೂಕು, ಬಸರಾಳು ಗ್ರಾಮದಲ್ಲಿರುವ ಪ್ರಾಥಮಿಕ ಶಾಲೆಯ ಕಟ್ಟಡ ಶಿಥಿಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಈ) ಶಾಲಾ ಮಕ್ಕಳ ಅನುಕೂಲಕ್ಕಾಗಿ ಸದರಿ ಕಟ್ಟಡವನ್ನು ದುರಸ್ತಿಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳಲಾಗಿದೆಯೇ, ಹಾಗಿದ್ದಲ್ಲಿ ಎಂದಿನಿಂದ ?

ಡಾ.|| ಹೆಚ್.ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):–

ಅ) 1. ಪ್ರಾಥಮಿಕ ಶಾಲೆಗಳು: 2384
2. ಪ್ರೌಢಶಾಲೆಗಳು: 0174
(ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಆ) ಶಾಲಾ ಕಟ್ಟಡಗಳ ದುರಸ್ತಿಗಾಗಿ 1993–94ನೇ ಸಾಲಿನ ಆಯವ್ಯಯದಲ್ಲಿ ರೂ. 210–00 ಲಕ್ಷಗಳನ್ನು ಒದಗಿಸಲಾಗಿದೆ.

ಇ) ಬಸರಾಳು ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡವು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದರೂ ಕಟ್ಟಡಕ್ಕೆ ಸಣ್ಣಪುಟ್ಟ ದುರಸ್ತಿ ಮಾಡಲು ಜಿಲ್ಲಾ ಪರಿಷತ್ತಿನಿಂದ ಕ್ರಮ ಕೈಗೊಳ್ಳಲು ತಿಳಿಸಿದೆ.

ಈ) ಸದರಿ ಶಾಲಾ ಕಟ್ಟಡದ ಎರಡು ಕೊಠಡಿಗಳನ್ನು ದುರಸ್ತಿ ಪಡಿಸಬೇಕಾಗಿದ್ದು, ಪ್ರಸ್ತುತ 1992–93ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ ವತಿಯಿಂದ ದುರಸ್ತಿ ಪಡಿಸಲಾಗುತ್ತಿದೆ.

ರಾಜ್ಯದಲ್ಲಿ ಹಳೆಯದಾಗಿ ಶಿಥಿಲವಾಗಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಪಟ್ಟಿ

ಕ್ರ.ಸಂ. ಜಿಲ್ಲೆಯ ಹೆಸರು	ಶಿಥಿಲವಾಗಿರುವ ಕಟ್ಟಡ		ದುರಸ್ತಿಗಾಗಿ ಅಂದಾಜು	
	ಪ್ರಾಥಮಿಕ ಶಾಲೆ	ಪ್ರೌಢಶಾಲೆ	ಪ್ರಾಥಮಿಕ ಶಾಲೆ	ಪ್ರೌಢಶಾಲೆ
1. ಬೆಂಗಳೂರು ಉತ್ತರ				
2. ಬೆಂಗಳೂರು ದಕ್ಷಿಣ				
3. ಬೆಂಗಳೂರು (ಗ್ರಾಮಾಂತರ)				
4. ಕೋಲಾರ	1			
5. ತುಮಕೂರು	530	51	–	–
6. ಶಿವಮೊಗ್ಗ	147	08	18.95	29.58
7. ಚಿತ್ರದುರ್ಗ	375	08	14.00	12.50
8. ಮೈಸೂರು	103	37	–	–
9. ಹಾಸನ	168	28	–	–
10. ಮಂಡ್ಯ	3	–	5.00	–
11. ದಕ್ಷಿಣ ಕನ್ನಡ				
12. ಕೊಡಗು				
13. ಚಿಕ್ಕಮಗಳೂರು				
14. ಬೆಳಗಾವಿ	393	5	32.80	4.50
15. ಬಿಜಾಪುರ	408			
16. ಧಾರವಾಡ	111	5		
17. ಉತ್ತರ ಕನ್ನಡ				
18. ಗುಲ್ಬರ್ಗಾ				
19. ರಾಯಚೂರು	86	27	8.00	–
20. ಬಳ್ಳಾರಿ				
21. ಬೀದರ್	59	05		
ಒಟ್ಟು	2384	174	78.75	46.58

ಅಧ್ಯಕ್ಷರು:- ಪಟ್ಟಿಯನ್ನು ಮಂಡಿಸಲಾಯಿತು.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರ ಕಾಲ ಮುಗಿದ ನಂತರ ಪ್ರಿವಿಲೇಜ್ ನೋಟೀಸ್ ತೆಗೆದುಕೊಳ್ಳಬೇಕಾಗುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಯವರ ವಿರುದ್ಧ ಒಂದು ಪ್ರಿವಿಲೇಜ್ ನೋಟೀಸ್ ಅನ್ನು ಕಳುಹಿಸಿದ್ದೇನೆ. ಮಾನ್ಯ ರಾಯರೆಡ್ಡಿಯವರ ಪ್ರಶ್ನೆಗೆ ಉತ್ತರ ಕೊಡುವಾಗ ಈ ಸದನದಲ್ಲಿ ಮಂತ್ರಿ ಮತ್ತು ಶಾಸಕರ ಮೇಲೆ ಮೊಕದ್ದಮೆಗಳು ಏನಿವೆ ಅವುಗಳ ವಿವರವನ್ನು ಕೊಟ್ಟಿದ್ದರು, ಆದರೆ ಅದರಲ್ಲಿ ಮಾನ್ಯ ಗೋಪಿನಾಥ ಸಾಂಡ್ರರವರ ವಿರುದ್ಧ ಏನು ಮೊಕದ್ದಮೆ ಇತ್ತು, ಅದರ ಬಗ್ಗೆ ವರದಿಯನ್ನು ಕಳುಹಿಸಲಿಲ್ಲ. ಹಾಗಾಗಿ ಇವತ್ತು ಮುಖ್ಯಮಂತ್ರಿಗಳು ಇಲ್ಲ. ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈಗಾಗಲೇ ನಾನು ಮತ್ತು ಸಿಂಧ್ಯಾರವರು, ಮಾನ್ಯ ಏಕಾಂತಯ್ಯನವರು, ಕೌಜಲಗಿಯವರು ನಿಯಮ 311ರ ಕೆಳಗಡೆ ವರದಕ್ಷಿಣೆ ವಿರುದ್ಧವಿರುವ ಕೇಸ್ ಬಗ್ಗೆ ನೋಟೀಸ್ ಕೊಟ್ಟಿದ್ದೇವೆ. ಇವೆರಡರ ಬಗ್ಗೆ ನಾಳೆ ಶೂನ್ಯ ವೇಳೆಯಲ್ಲಿ ಚರ್ಚೆ ಮಾಡಲು ಅವಕಾಶವನ್ನು ಮಾಡಿಕೊಟ್ಟರೆ ಒಳ್ಳೆಯದು. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಈಗ ಇಲ್ಲ. ಈಗ ನಾನು ಪ್ರಸ್ತಾಪ ಮಾಡಿದರೂ ಸಹ ಅದರಿಂದ ಏನೂ ಉಪಯೋಗವಾಗುವುದಿಲ್ಲ. ಹಾಗಾಗಿ ನಾಳೆ ಎರಡನ್ನು ಪರಿಶೀಲನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:- ಅದನ್ನು ಪರಿಶೀಲಿಸುತ್ತೇನೆ.

<u>ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ.</u>

ಕಲ್ಕತ್ತದಲ್ಲಿ 17.3.93ರ ಬೆಳಗಿನ ಜಾವ 4 ಗಂಟೆಗೆ ಬಾಂಬ್ ಆಸ್ಫೋಟ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):- ಮಾನ್ಯ ಅಧ್ಯಕ್ಷರೆ, ಕಲ್ಕತ್ತಾದಲ್ಲಿ ಇವತ್ತು ಬೆಳಗಿನ ಜಾವ 4 ಗಂಟೆಗೆ ಬಾಂಬ್ ಆಸ್ಫೋಟವಾಗಿದೆ. ಇಡೀ ದೇಶದಲ್ಲಿ ಇದೊಂದು ದೊಡ್ಡ ಜಾಲವಿರುವ ಹಾಗೆ ಕಾಣುತ್ತಿದೆ. ನಾವು ಇತ್ತೀಚೆಗೆ ಮುಂಬೈನಲ್ಲಿ ನಡೆದಿರತಕ್ಕಂಥ ಘಟನೆಯ ಬಗ್ಗೆ ಈ ಸದನದಲ್ಲಿ ನಮ್ಮೆಲ್ಲ ಸದಸ್ಯರ ಮತ್ತು ತಮ್ಮ ಮೂಲಕವಾಗಿ ಮಾನ್ಯ ಮುಖ್ಯಮಂತ್ರಿಗಳು 25 ಲಕ್ಷ ರೂಪಾಯಿಗಳನ್ನು ಕಳುಹಿಸಿ ನಮ್ಮ ವೇದನೆಯನ್ನು ವ್ಯಕ್ತಮಾಡಿದ್ದಾರೆ. ನಾವು ಒಂದು ತೀರ್ಮಾನವನ್ನು ಈ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಇದು ನಿಜವಾಗಿಯೂ ನಮ್ಮ ದೇಶವನ್ನೇ ನಾಶ ಮಾಡತಕ್ಕಂಥ ಒಂದು ವಿಧ್ವಂಸಕ ಕೃತ್ಯ ಹಾಗೂ ಬಹಳ ಹೇಯವಾದಂಥ ಕೃತ್ಯವಾಗಿದೆ. ಇದನ್ನು ಅತ್ಯಂತ ಕಠಿಣವಾದ ಶಬ್ದಗಳಲ್ಲಿ ನಾವೆಲ್ಲರೂ ಖಂಡಿಸುವುದರ ಜೊತೆಗೆ ಪ್ರಧಾನಿಗಳು ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಬೇಕಾಗುತ್ತದೆ. ಇದು ಮುಂಬೈನಲ್ಲಿ ಆಗಿದೆ, ಕಲ್ಕತ್ತಾದಲ್ಲಿ ಆಗಿದೆ, ನಾಳೆ ಇಲ್ಲಿಯೂ ಆಗಬಹುದು. ಇದನ್ನು ನೋಡಿದರೆ ಇದೊಂದು ದೊಡ್ಡ ಭಾರಿ ಸಂಚು, ಪಿತೂರಿ ಇದ್ದ ಹಾಗೆ ಕಾಣುತ್ತಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತಿದೆ ಎನ್ನುವುದರ ಬಗ್ಗೆ, ರಾಜ್ಯದ ಜನತೆಗೆ ಮುಖ್ಯಮಂತ್ರಿಗಳು ತಿಳಿಸಬೇಕಾಗುತ್ತದೆ. ಮತ್ತೆ ಸರ್ಕಾರದವರು ಈ ಸದನದ ಸದಸ್ಯರುಗಳ ಸಹಕಾರವನ್ನು ಹಾಗೂ ಜನಗಳ ಸಹಕಾರ ಯಾವ ರೀತಿ ಬೇಕಾಗುತ್ತದೆ ಎನ್ನುವುದರ ಬಗ್ಗೆ ನಮಗೆ ತಿಳಿಸಿ ನಮ್ಮಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಿಳಿಸಬೇಕಾಗುತ್ತದೆ. ಇದಕ್ಕೆ ಮುಂಜಾಗ್ರತೆ ಕ್ರಮಗಳನ್ನು ಏನು ತೆಗೆದುಕೊಳ್ಳುತ್ತೀರಿ ? ನಮ್ಮ ಕರ್ನಾಟಕ ರಾಜ್ಯದಲ್ಲಿ ಇಂತಹ ಕೃತ್ಯ ಯಾವತ್ತೂ ನಡೆದಿಲ್ಲ. ಇದರಿಂದಾಗಿ ನಮ್ಮ ಪೋಲೀಸರಿಗೆ ವಿಶೇಷವಾದ ತರಬೇತಿಯು ಬೇಕಾಗುತ್ತದೆ. ಬಾಂಬ್‌ಗಳನ್ನು ಸ್ಫೋಟಗಳನ್ನು ಬಹುಮಹಡಿ ಕಟ್ಟಡಗಳಲ್ಲಿ ಅಥವಾ ಇನ್ನಿತರ ಕಡೆಗಳಲ್ಲಿ ಇಡತಕ್ಕಂಥ ಒಂದು ವಿಧ್ವಂಸಕ ಕೃತ್ಯಗಳು ಏನು ನಡೆಯುತ್ತದೆ ಅದರ ಬಗ್ಗೆ ನಮ್ಮ ಪೋಲೀಸರಿಗೆ ತರಬೇತಿಯು

ಸಹಿತ ಬೇಕಾಗುತ್ತದೆ. ಇದರ ಹಿಂದೆ ಯಾವ ರಾಷ್ಟ್ರದ್ರೋಹಿ ಶಕ್ತಿಗಳ ಕೈವಾಡವಿದೆ. ಅವುಗಳನ್ನು ನಾವು ತಪಾಸಣೆಯನ್ನು ಮಾಡದೇ ಹೋದರೆ ಇಡೀ ದೇಶದಲ್ಲಿ ಇಂತಹ ಕೃತ್ಯಗಳು ನಡೆಯುತ್ತದೆ. ಈ ಕೃತ್ಯಗಳು ಏನಿವೆ ಇದು ಬಹಳ ಅತ್ಯಂತ ದುಃಖಕರವಾದಂಥದ್ದು, ಮತ್ತು ನಾವೆಲ್ಲ ಅತ್ಯಂತ ಕಳವಳವನ್ನು ವ್ಯಕ್ತಪಡಿಸತಕ್ಕಂಥ ವಿಚಾರವಾಗಿದೆ. ಇದೊಂದು ಸರಣಿಯೋಪಾದಿಯಲ್ಲಿ ನಡೆಯುತ್ತಿದೆ. ಮುಂಬೈಯಲ್ಲಿ ಆಯಿತು ಕಲ್ಕತ್ತಾದಲ್ಲಿ ಆಯಿತು. ಇದರ ಬಗ್ಗೆ ನಿನ್ನೆಯ ದಿನ ಅಮೇರಿಕಾದ ಸರ್ಕಾರದವರು ಒಂದು ಹೇಳಿಕೆ ನೀಡಿ ಯಾರು ಅಮೇರಿಕಾದ ಪ್ರಜೆಗಳು ಇಂಡಿಯಾ ದೇಶದಲ್ಲಿದ್ದಾರೆ, ಬೆಂಗಳೂರಿನಲ್ಲಿದ್ದಾರೆ, ಮದರಾಸಿನಲ್ಲಿದ್ದಾರೆ, ದೆಹಲಿಯಲ್ಲಿದ್ದಾರೆ, ಇವರು ಇದರ ಬಗ್ಗೆ ಮುನ್ನೆಚ್ಚರಿಕೆಯ ಕ್ರಮ ತೆಗೆದುಕೊಳ್ಳಬೇಕು ಮತ್ತು ಅಮೆರಿಕನ್ ಎಂಬೆಸಿ ಜೊತೆಯಲ್ಲಿ ಸಂಪರ್ಕ ಇಟ್ಟುಕೊಳ್ಳಬೇಕು ಎನ್ನತಕ್ಕಂಥ ವಿಚಾರವನ್ನೆಲ್ಲ ಅಮೆರಿಕಾ ಅಂಥ ಒಂದು ರಾಷ್ಟ್ರದಲ್ಲಿ ಹೇಳಬೇಕಾದರೆ ಏನೋ ಒಂದು ಅತ್ಯಂತ ಭಯದ ವಾತಾವರಣವನ್ನು ಈ ದೇಶದಲ್ಲಿ ಉಂಟು ಮಾಡಬೇಕು ಎನ್ನತಕ್ಕದ್ದು ನಡೆಯುತ್ತಿದೆ. ಇದರ ಬಗ್ಗೆ ಪಕ್ಷ ಅಥವಾ ಪ್ರಾಂತ್ಯ ಎನ್ನತಕ್ಕ ಭೇದಭಾವ ಇಲ್ಲವೇ ಇಲ್ಲ. ನಾವೆಲ್ಲರೂ ಸಹಿತ ಇದರ ಬಗ್ಗೆ ಒಟ್ಟಿಗೆ ವಿಚಾರವನ್ನು ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯವರ ಜೊತೆಯಲ್ಲಿ ಸಂಪರ್ಕ ಮಾಡಿ ನಮ್ಮೆಲ್ಲರ ವೇದನೆಯನ್ನು ವ್ಯಕ್ತಮಾಡಬೇಕು. ಅಲ್ಲಿ ಯಾರು ನೊಂದಿದ್ದಾರೆ, ಯಾರು ಸತ್ತಿದ್ದಾರೆ ಅವರ ಕುಟುಂಬ ವರ್ಗದವರಿಗೆ ನಮ್ಮ ಸಂತಾಪ ಸೂಚನೆಯನ್ನು ತಿಳಿಸುವುದರ ಜೊತೆಗೆ ಮಾನ್ಯ ಪ್ರಧಾನಿ ಮಂತ್ರಿಗಳ ಜೊತೆಯಲ್ಲಿಯೂ ಸಹಿತ ಇದರ ಬಗ್ಗೆ ಮಾತನಾಡಿ ಇಡೀ ದೇಶದಲ್ಲಿ ಯಾವ ರೀತಿ ಇವರು ಉಸ್ತುವಾರಿಯನ್ನು ಮಾಡುತ್ತಿದ್ದಾರೆ, ರಾಜ್ಯ ಸರ್ಕಾರದವರು ಏನು ಮಾಡಬೇಕು, ಮತ್ತು ರಾಜ್ಯಸರ್ಕಾರದವರು ಇದುವರೆಗೂ ತೆಗೆದುಕೊಂಡಿರತಕ್ಕಂಥ ಕ್ರಮಗಳೇನು ಎನ್ನುವುದರ ಬಗ್ಗೆ ನಮಗೆ ತಿಳಿಸಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):- ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ನಮ್ಮೆಲ್ಲರಿಗೂ ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಕಳಕಳಿ ಇದೆ. ಈ ಸದನದಲ್ಲಿ ಎಲ್ಲ ಸದಸ್ಯರಿಗೂ ಆ ಕಳಕಳಿ ಇದೆ. ಇದರ ಬಗ್ಗೆ ಚರ್ಚೆ ಮಾಡಲು ತಾವು ಅವಕಾಶವನ್ನು ಕೊಡುವುದಾದರೆ, ನಾವು ಮುಖ್ಯಮಂತ್ರಿಗಳು ಇರುವ ಕಾಲದಲ್ಲಿ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಿಂಧ್ಯರವರು ಹೇಳಿದಂತೆ ಅಂತರಾಷ್ಟ್ರೀಯ ಮಟ್ಟದಲ್ಲಿ ವ್ಯವಸ್ಥಿತವಾದ ಒಂದು ಷಡ್ಯಂತ್ರ ನಡೆಯುತ್ತಿರುವುದರ ಬಗ್ಗೆ ಎಲ್ಲಾ ಸೂಚನೆಗಳು ಇವತ್ತು ನಮಗೆ ಕಾಣುತ್ತಿದೆ. ಮುಂಬೈ ಆಯಿತು, ನಿನ್ನೆ ರಾತ್ರಿ ಕಲ್ಕತ್ತದಲ್ಲಿ ನಡೆದಿರುವಂಥ ಘಟನೆ, ಈಗ ಬಂದಿರುವಂಥ ಸುದ್ದಿ ಪ್ರಕಾರ 60 ಜನರು ಸಾವನ್ನು ಅಪ್ಪಿದ್ದಾರೆ, ನೂರಾರು ಜನರು ಆಸ್ಪತ್ರೆಗೆ ಸೇರಿದ್ದಾರೆ. ಇಂಥ ಒಂದು ವಿಚಿತ್ರವಾದಂಥ ಪರಿಸ್ಥಿತಿ ಇರಬೇಕಾದರೆ ಇವತ್ತು ಮುಂಬೈ, ಕಲ್ಕತ್ತವನ್ನು ತಲುಪಿದ್ದು ಬೆಂಗಳೂರು ತಲುಪಲಿಕ್ಕಿಲ್ಲ ಎಂತಲ್ಲ. ಇವತ್ತು ನಮ್ಮ ಕಳಕಳಿ ಏನೆಂದರೆ ನಮ್ಮ ಒಂದು ಸಹಾನುಭೂತಿಯನ್ನು ಕಲ್ಕತ್ತದ ಅಲ್ಲಿಯ ಮುಖ್ಯಮಂತ್ರಿಗಳಿಗೆ ತಿಳಿಸಿ ಅಲ್ಲಿರುವಂಥ ಪರಿಸ್ಥಿತಿ ಏನು ಎಂದು ತಿಳಿದುಕೊಳ್ಳುವಂಥ ಪ್ರಯತ್ನ ಮಾಡುವಂಥದ್ದು. ಮತ್ತೆ ಅಮೇರಿಕಾದ ಬೇಹುಗಾರಿಕೆ ಸಂಸ್ಥೆಯವರು ಈಗಾಗಲೇ ಇಲ್ಲೂ ಕೆಲವು ಷಡ್ಯಂತ್ರಗಳನ್ನು ನಡೆಸುತ್ತಿದ್ದಾರೆ ಎಂದು ಒಂದು ಮುನ್ಸೂಚನೆಯನ್ನು ಕೊಟ್ಟಿರುವಂಥ ಈ ಸಂದರ್ಭದಲ್ಲಿ ನಾಳೆ ಈ ವಿಧಾನಸೌಧ ದೊಡ್ಡ ದೊಡ್ಡ ಜಲಾಶಯಗಳು, ಹೈಕೋರ್ಟ್ ಬಿಲ್ಡಿಂಗ್, ನಮ್ಮ ಏರೊಡ್ರಂ ಏನಿದೆ ಇಂಥ ಕಡೆಗಳಲ್ಲಿ ಮುಂಜಾಗರೂಕತೆ ಕ್ರಮವಾಗಿ ಸರಿಯಾದ ಬಂದೋಬಸ್ತ್ ಮಾಡುವಂಥದ್ದು ಮತ್ತೆ ಈ ರೀತಿ ದುಷ್ಕೃತ್ಯವನ್ನು ನಡೆಸುವುದರಲ್ಲಿ ಈಗಾಗಲೇ ಹೆಸರು ಪಡೆದಿರುವಂಥ ಖದೀಮರು ಯಾರಿದ್ದಾರೆ, ಅಂಥವರ ಮೇಲೆ ನಿಗಾ ಇಟ್ಟು ಅವರನ್ನು ಒಳಗಡೆ ಇಡುವಂಥ ಸೂಕ್ತ ಬಂದೋಬಸ್ತ್

ಮಾಡದಿದ್ದರೆ ನಾಳೆ ಕೈ ಮೀರಿದ ಮೇಲೆ ನಾವೇ ಮುಂಜಾಗರೂಕತೆ ಮಾಡಲಿಲ್ಲ ಎನ್ನುವಂಥ ಒಂದು ಅಕ್ಷಮ್ಯ ಅಪರಾಧವನ್ನು ಮಾಡಿದಂತಾಗುತ್ತದೆ. ಇಡೀ ದೇಶದಲ್ಲಿ ಜನರಿಗೆ ತಮಗೆ ರಕ್ಷಣೆ ಇಲ್ಲ ಎನ್ನುವ ಒಂದು ಭಾವನೆ ಬರುತ್ತಿದೆ. ನಮ್ಮ ರಾಜ್ಯದಲ್ಲಿ ಅದು ಇದ್ದರೆ ಅದೇನು ಆಶ್ಚರ್ಯ ಪಡುವಂಥ ವಿಷಯವಲ್ಲ. ಪ್ರತಿಕ್ಷಣಕ್ಕೂ ಸಹಾ ಯಾವ ನಿಮಿಷಕ್ಕೆ ಏನಾಗುತ್ತದೊ ಎನ್ನುವಂಥ ಪರಿಸ್ಥಿತಿ ನಮ್ಮಲ್ಲೂ ಇದ್ದು ಅದಕ್ಕಾಗಿ ತಾವು ಈಗಾಗಲೇ ಮುಂಜಾಗರೂಕತಾ ಕ್ರಮವನ್ನು ತೆಗೆದುಕೊಂಡಿದ್ದೀರಿ, ನಾನು ಇಲ್ಲ ಎಂದು ಹೇಳುವುದಿಲ್ಲ. ಇಲ್ಲಿ ಮಂತ್ರಿಗಳ ಕಾರನ್ನು ಸಹ ವಿಧಾನಸೌಧದ ಮುಂದೆ ಬಿಡದೆ ಅದನ್ನು ದೂರ ಇಟ್ಟು ಎಲ್ಲಾ ಬಂದೋಬಸ್ತ್ ಮಾಡುತ್ತಿರುವಂಥದ್ದು ಈಗಾಗಲೇ ನಮಗೆ ತಿಳಿದುಬಂದಿದೆ. ಇದಲ್ಲದೆ ಕಲ್ಕತ್ತದಲ್ಲಿ ಈಗೇನು ನಡೆದಿರುವಂಥ ಘಟನೆ ಇದೆ. ಇದರ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಪ್ರಮುಖವಾದಂಥ ಜಲಾಶಯಗಳು ಏನಿವೆ ಹಾಗೂ ದೊಡ್ಡ ದೊಡ್ಡ ಕಟ್ಟಡಗಳು ಇರುವಂಥ ಕಡೆ ಹೆಚ್ಚಿನ ರಕ್ಷಣೆಯನ್ನು ನೀಡಿ ಯಾವುದೇ ಗೊಂದಲ ಆಗದ ಹಾಗೆ ನೋಡಿಕೊಳ್ಳುವ ದೃಷ್ಟಿಯಿಂದ ಮುಂಜಾಗರೂಕತೆಯಾಗಿ ಕೆಲವರನ್ನು ಬಂಧನ ಮಾಡುವಂಥ ಅಗತ್ಯ ಇದೆ. ಆ ರೀತಿ ನಿಮಗೆ ಸುಳಿವು ಇದ್ದರೆ ಅಂಥದ್ದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಕೇಳಬಯಸುತ್ತೇನೆ. ಮತ್ತೆ ಕಲ್ಕತ್ತದಲ್ಲಿ ನಡೆದಿರುವ ಸತ್ಯಸಂಗತಿಯನ್ನು ತಿಳಿದುಕೊಳ್ಳಲು ನಿಮ್ಮ ಮುಖ್ಯಮಂತ್ರಿಗಳು ಪ್ರಯತ್ನ ಮಾಡಿದ್ದಾರಾ ? ಆ ಜನರು ತಪ್ಪಿಸಿಕೊಂಡು ಅಲ್ಲಿಂದ ಈ ಕಡೆ ಬರುವಂಥ ಪ್ರಯತ್ನ ಮಾಡುತ್ತಾರೆ. ಏಕೆಂದರೆ ಹಿಂದೆ ಇಲ್ಲಿ ಆ ರೀತಿಯಾಗಿ ನಡೆದಿದೆ. ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಹತ್ಯೆ ಮಾಡಿದಂಥ ಎಲ್.ಟಿ.ಟಿ.ಗೆ ಸೇರಿದ ಕೆಲವು ವ್ಯಕ್ತಿಗಳು ಇಲ್ಲಿಗೆ ಬಂದು ಸೇರಿಕೊಂಡಿದ್ದರು, ಅಂದಾಗ ಬಹುಶಃ ನಾವು ಮುಂದಾಗಿ ಮುಂಜಾಗರೂಕತೆ ವಹಿಸದಿದ್ದರೆ ದೊಡ್ಡ ಅಪರಾಧ ನಮ್ಮ ಕಡೆಯಿಂದ ಆಗಬಹುದು ಎನ್ನುವ ದೃಷ್ಟಿಯಿಂದ ಮಾತ್ರ ಇದನ್ನು ನಾವು ಬೆಳಿಗ್ಗೆಯೇ ಪ್ರಸ್ತಾಪ ಮಾಡಬೇಕು ಎಂದು ಇದ್ದೆವು. ಸನ್ಮಾನ್ಯ ಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ಮಧ್ಯೆ ಪ್ರವೇಶ ಮಾಡುವುದು ತಪ್ಪಾಗಬಹುದು ಎನ್ನುವ ದೃಷ್ಟಿಯಿಂದ ನಾವು ಇದುವರೆಗೆ ಕಾದಿದ್ದೇವೆ. ಅದಕ್ಕೋಸ್ಕರ ನಮ್ಮ ರಾಜ್ಯದ ಜನರಲ್ಲಿ ಈ ಒಂದು ರಕ್ಷಣೆ ಭರವಸೆ ಮೂಡಿಸುವ ದೃಷ್ಟಿಯಿಂದ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ದಯಮಾಡಿ ತಿಳಿಸಬೇಕು ಎಂದು ನಾನು ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು:– ಮಾನ್ಯ ಶ್ರೀ ವೈ.ಕೆ. ರಾಮಯ್ಯ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ,

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್:– ಮಾನ್ಯ ಅಧ್ಯಕ್ಷರೇ, ಈ ವಿಷಯ ಎಲ್ಲ ಪಕ್ಷಗಳಿಗೆ ಸಂಬಂಧಪಟ್ಟಂಥ ವಿಷಯವಾಗಿದೆ. ನೀವು ಆ ಕಡೆಗೆ, ಅವಕಾಶ ಕೊಟ್ಟರೆ ನಾವು ಈ ಕಡೆ ಕೂಡುವುದು ಏತಕ್ಕೋಸ್ಕರ ? ನಮಗೂ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:– ದಯಮಾಡಿ ವಿಷಯ ಏನೆಂದು ಅರ್ಥ ಮಾಡಿಕೊಳ್ಳಬೇಕು. ಅವರು ಬೆಳಿಗ್ಗೆಯೇ ಬರೆದುಕೊಟ್ಟಿದ್ದಾರೆ. ತಾವು ಯಾರೂ ಬರೆದುಕೊಟ್ಟಿಲ್ಲ. ಅವರದು ಆದ ನಂತರ ನಿಮಗೆ ಅವಕಾಶ ಕೊಡುತ್ತೇನೆ. ನೀವು ಸಹ ವಿಷಯದ ಬಗ್ಗೆ ಗಂಭೀರವಾಗಿರಬೇಕು. ಅವರು ಪ್ರಸ್ತಾಪ ಮಾಡಿದನಂತರ ನಾವು ಕೇಳುತ್ತೇವೆ, ನಮಗೆ ಅವಕಾಶ ಕೊಡಿ ಎಂದರೆ ಹೇಗೆ ? ಬೆಳಿಗ್ಗೆಯಿಂದಲೂ ಅವರುಗಳು ಕೊಟ್ಟ ಕಾಗದಗಳನ್ನು ಕೈಯಲ್ಲಿ ಹಿಡಿದೇ ಕುಳಿತಿದ್ದೇನೆ. ಯಾವುದೇ ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದ್ದರೆ ಅಧಿವೇಶನ ಶುರುವಾಗುವುದಕ್ಕಿಂತ ಮುಂಚೆ ಒಂದು ಗಂಟೆ ಮೊದಲು ಬಂದು ನನ್ನಲ್ಲಿ ಲೆಟರ್ ಕೊಡಬೇಕು ಎಂದು ನಿಯಮಾವಳಿಗಳನ್ನು ಹಾಕಿಕೊಂಡಿದ್ದೀರಿ. ತಾವು ಯಾರು ಹಾಗೆ ಬಂದಿಲ್ಲ. ಆದರೂ ಸಹ ಅವರು ಮಾತನಾಡಿದ ನಂತರ ನಾನು ನಿಮಗೆ ಅವಕಾಶ ಕೊಡುತ್ತೇನೆ.

ನಾನು ನಿರ್ಧಾಕರಣೆ ಏನೂ ಮಾಡಿಲ್ಲ. ಆದರೆ ತಾವು ಕೇಳುವುದು ಏನಿದೆ, ನಮಗೆ ಅವಕಾಶವನ್ನು ಈಗ ಸಧ್ಯಕ್ಕೇ ಕೊಡಬೇಕು ಎನ್ನುವುದು, ಅದು ನನಗೆ ಅಷ್ಟು ಸಮಂಜಸ ಎನಿಸುವುದಿಲ್ಲ. ಅವರದು ಮುಗಿಯಲಿ, ನಂತರ ನಾನು ನಿಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಗೌಡರನ್ನು ನಾನು ತುಂಬಾ ಮೆಚ್ಚಿಕೊಳ್ಳುವಂಥವರು. ಅವರಿಗೆ ಮಾತನಾಡುವುದಕ್ಕೆ ಜಾಸ್ತಿ ಅವಕಾಶ ಬೇಕು ಎಂದು ಒತ್ತಾಯ ಮಾಡುತ್ತಿದ್ದಾರೆ. ಅವರು ಒಪ್ಪಿಕೊಳ್ಳುವುದಾದರೆ ಒಂದು ಸಜೆಷನ್ ಮಾಡುತ್ತೇನೆ; ಈ ಕಡೆಗೆ ಅವರು ಬಂದುಬಿಟ್ಟರೆ ಅವರಿಗೆ ಮಾತನಾಡುವುದಕ್ಕೆ ಅವಕಾಶ ಜಾಸ್ತಿ ಸಿಗುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಸ್ವಾಮಿ, ನಾವು ಅಲ್ಲಿ ಕೂತು ಕೂತು ನಾವು ಕೆಲಸ ಮಾಡೇ ನಮ್ಮನ್ನು ಇಲ್ಲಿಗೆ ಕಳುಹಿಸಿದ್ದೀರಿ. ರಾಮಯ್ಯನವರೇ ಮುಂದೆ ಏನಾದರೂ ತಮಗೆ ಛಾನ್ಸ್ ಬರುತ್ತದೋ ಏನೋ ನೋಡೋಣ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, ನಿನ್ನೆ ಕಲ್ಕತ್ತೆಯಲ್ಲಿ ಮಧ್ಯರಾತ್ರಿಯಲ್ಲಿ ನಡೆದಿರುವಂಥ ಕೃತ್ಯದಲ್ಲಿ ಎರಡು ವಿಷಯಗಳು ಪ್ರಾಮುಖ್ಯತೆ ಹೊಂದಿದೆ. ಒಂದು ಕಲ್ಕತ್ತದ ಪೋಲೀಸ್ ಹೆಡ್ ಕ್ವಾರ್ಟರ್ಸ್ ಏನಿದೆ ಅದರ ಮೂರು ನೂರು ಅಡಿ ಅಂತರದಲ್ಲಿ ಈ ಕೃತ್ಯ ನಡೆದಿದೆ. ಬಾಂಬ್ ಬ್ಲಾಸ್ಟಿಂಗ್ ಎರಡನೆಯದು ಬಹಳ ಪ್ರಾಮುಖ್ಯವಾಗಿ ಬಂದಿರುವಂಥ ಸುದ್ದಿಯಲ್ಲಿ ಒಂದು ಇದೆ. "Poilce said, the nature of explosion was similar to the one that rocked the Bombay Stock Exchange last Friday". This is very alarming. ಏಕೆಂದರೆ ಬಾಂಬೆಯಲ್ಲಿ ಯಾವ ವಿಧವಾದಂಥ ಒಂದು ಕೃತ್ಯ ನಡೆಯಿತೋ ಅದೇ ವಿಧವಾದಂಥ ಕೃತ್ಯ ಇಲ್ಲಿ ನಡೆದಿದೆ. ಅಂದರೆ ಬಹುಶಃ ಈ ರಾಷ್ಟ್ರದ ಪ್ರತಿಯೊಬ್ಬ ಪ್ರಜೆ ಕೂಡ ಇವತ್ತು ತಲ್ಲಣಗೊಂಡಿದ್ದಾನೆ. ಶುಕ್ರವಾರ ಬಾಂಬೆಯಲ್ಲಿ ಆಗಿದೆ. ನಿನ್ನೆ ಕಲ್ಕತ್ತದಲ್ಲಿ ಆಗಿದೆ. ದೆಹಲಿಯಲ್ಲಿ ಈಗಲೊ ಆಗಲೊ ಆಗಬಹುದು ಎನ್ನುವುದನ್ನು ಈ ದೇಶದವರು ಅಲ್ಲ, ಹೊರದೇಶದವರು ಈಗ ಆ ಸುದ್ದಿಯನ್ನು ಕಳುಹಿಸಿದ್ದಾರೆ.

ಅಂದರೆ ಈ ರಾಷ್ಟ್ರದ ಪ್ರಜೆ ನೆಮ್ಮದಿಯಿಂದ ಬದುಕುವಂತಹ ಪರಿಸ್ಥಿತಿ ಇಲ್ಲವೇನೋ ಎನ್ನುವಂತಹ ಒಂದು ಸಂದರ್ಭ ಒದಗಿ ಬಂದಿದೆ. ಇದ್ದು ಅತಿ ಆಯಿತೇನೋ ಗೊತ್ತಿಲ್ಲ. ಅಯೋಧ್ಯೆ ಘಟನೆಯಿಂದ ಹಿಡಿದು ನೆನ್ನೆಯ ಘಟನೆವರೆಗೆ ನೋಡಿದರೆ ಬಹುಶಃ ಈ ರಾಷ್ಟ್ರದ ಪ್ರಧಾನಿಗೆ ದೇಶವನ್ನು ಆಳುವುದಕ್ಕೆ ಶಕ್ತಿ ಇಲ್ಲವೇನೋ ಎಂದು ಅನ್ನಿಸುತ್ತದೆ. ಇಷ್ಟೊಂದು ಘಟನೆಗಳು ಆಗುತ್ತ ಇದ್ದರೂ ಇದರ ಬಗ್ಗೆ ಮಾನ್ಯ ಪ್ರಧಾನಿಯವರು ಒಂದೇ ಒಂದು ಚಕಾರ ಶಬ್ದವನ್ನು ಎತ್ತುತ್ತಾ ಇಲ್ಲ. ಯಾವ ಕೈ ಕೆಲಸ ಮಾಡುತ್ತಿದೆ ? ಯಾವ ವ್ಯಾಪ್ತಗಳು ಕೆಲಸ ಮಾಡುತ್ತಿವೆ ?

ಶ್ರೀ ಬಿ.ಎಸ್. ಯಡಿಯೂರಪ್ಪ:- ದಯಮಾಡಿ ಈ ಮಾತನ್ನು ಅವರು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ವೈ.ಕೆ. ರಾಮಯ್ಯ:- ಇಲ್ಲ..

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾವು ಏನೋ ಅಪರಾಧ ಮಾಡಿದ್ದೇವೆ ಎನ್ನುವ ಭಾವನೆ ಬರುತ್ತಿದೆ.

(ಗೊಂದಲ)

ಶ್ರೀ ಕೈ.ಎಸ್. ಈಶ್ವರಪ್ಪ:- ಇವರು ಹೇಗೆ ?

5182-17

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:– ಇವರು * * * * ಎಂದು ಅನಿಸುತ್ತದೆ, ಇದು ಒಳ್ಳೆಯದಲ್ಲ.

(ಗೊಂದಲ)

* ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಈ ಸದನದಲ್ಲಿ ಯಾವುದೇ ಅಭಿಪ್ರಾಯವನ್ನು ಕೊಡುವುದಕ್ಕೆ ನಮ್ಮೆಲ್ಲರಿಗೂ ಸ್ವಾತಂತ್ರ್ಯ ಇದೆ. ಅದರಲ್ಲಿ ಯಾವುದೇ ರೀತಿಯ ಸಂಶಯವೂ ಇಲ್ಲ. ಆದರೆ ಒಂದು ಏನಾಗುತ್ತದೆ ಎಂದು ಹೇಳಿದರೆ ಈಗ ಈ ವಿಚಾರದ ಬಗ್ಗೆ ಇಂಟರ್‌ಪೋಲ್ ಅವರ ವರದಿ ತೆಗೆದುಕೊಂಡು ನಾವು ಇನ್‌ವೆಸ್ಟಿಗೇಟ್ ಮಾಡಬೇಕು ಎಂದು ಮಾನ್ಯ ಪ್ರಧಾನಿ ಆಗಿರತಕ್ಕ ಶ್ರೀಮಾನ್ ಪಿ.ವಿ. ನರಸಿಂಹರಾವ್ ಅವರು ಈಗಾಗಲೇ ಸೂಚನೆ ಕೊಟ್ಟು ಅವರು ಇದರ ಬಗ್ಗೆ ಕ್ರಮವನ್ನು ಸಹ ತೆಗೆದುಕೊಂಡಿರುತ್ತಾರೆ. ಅವರೇ ಈಗ ಮಹಾರಾಷ್ಟ್ರದ ಮುಖ್ಯಮಂತ್ರಿಗಳಾಗಲೀ ಅಥವಾ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳೇ ಆಗಲೀ ಅಥವಾ ಮಾನ್ಯ ನರಸಿಂಹ ರಾಯರೇ ಆಗಲೀ ಯಾರೂ ಸಹ ಇದರಲ್ಲಿ ಪಕ್ಷದ ಪ್ರಶ್ನೆ ಇಲ್ಲ ಎಂದು ಹೇಳಿದ್ದಾರೆ. ಕೆಲವರು ನಮ್ಮ ರಾಷ್ಟ್ರವನ್ನು ಧ್ವಂಸ ಮಾಡಬೇಕು ಎಂದು ವಿದೇಶಿ ಶಕ್ತಿಗಳು ಹೊಂಚು ಹಾಕುತ್ತಿರುವ ಈ ಸಂದರ್ಭದಲ್ಲಿ ನಾವು ಇದನ್ನು ರಾಜಕೀಯ ದೃಷ್ಟಿಯಿಂದ ನೋಡುವುದು ನನಗೆ ಅಷ್ಟೊಂದು ಸೂಕ್ತ ಅಂತ ಅನ್ನಿಸುವುದಿಲ್ಲ.

ಶ್ರೀ ವೈ.ಕೆ. ರಾಮಯ್ಯ:– ಯಾರು ಮಾಡಿದ್ದಾರೆ ಎನ್ನುವುದನ್ನು ನೋಡಬೇಕು. ಕಾಂಗ್ರೆಸ್‌ನವರು ಮಾಡಿದ್ದಾರಾ ? ಜನತಾ ಪಾರ್ಟಿಯವರು ಮಾಡಿದ್ದಾರಾ ? ಯಾಕೆ ಇಷ್ಟೊಂದು ಆತುರ ಬೀಳುತ್ತೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಏನೂ ತೊಂದರೆ ಇಲ್ಲ ಹೇಳಿ.

ಶ್ರೀ ವೈ.ಕೆ. ರಾಮಯ್ಯ:– ನಿಮ್ಮ ಮೇಲೆ ಅಲಿಗೇಷನ್ ಮಾಡುತ್ತಾ ಇಲ್ಲ. ಸುಮ್ಮನೇ ನಾನು ಉದಾಹರಣೆಗೆ ಕೊಡುತ್ತಾ ಇದ್ದೆ. ಸನ್ಮಾನ್ಯ ಅಧ್ಯಕ್ಷರೇ ಈಗ ವ್ಯಾಫ್ರುಗಳು ಮಾಡಿದ್ದಾರೋ, ಎಲ್‌ಟಿಟಿಇನವರು ಮಾಡಿದ್ದಾರೋ ಎನ್ನುವಂತಹ ಒಂದು ಸಂಶಯ ಇದೆ. ಇವರೇ ಮಾಡಿದ್ದಾರೆಂದು ನಾನು ಹೇಳುತ್ತಾ ಇಲ್ಲ. ನಾನು ಅಷ್ಟು ದಡ್ಡ ಪ್ರವೃತ್ತಿಗೆ ಹೋಗುವುದಿಲ್ಲ. ಯಾರು ಮಾಡಿರಬಹುದು ? ಪಾಕೀಸ್ತಾನದವರು ಮಾಡಿದ್ದಾರಾ ? ಅಮೇರಿಕಾದವರು ಮಾಡಿದ್ದಾರಾ ಅಥವಾ ಹೊರ ದೇಶದವರು ಯಾರು ಮಾಡಿದ್ದಾರೆ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಅದನ್ನು ದಯಮಾಡಿ ಕಡತದಿಂದ ತೆಗೆಸಿ ನಾವು ಈಗ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ನಾವು ಹೊರಗಡೆ ಹೋಗುತ್ತೇವೆ, ಇದು ಕ್ರಮ ಅಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಅದು ರೆಕಾರ್ಡ್‌ನಲ್ಲಿದ್ದರೆ ತೆಗೆಸಿ. ಇದರ ಇಂಪಾರ್ಟೆನ್ಸ್ ಹೋಗುತ್ತದೆ.

ಶ್ರೀ ವೈ.ಕೆ. ರಾಮಯ್ಯ:– ನಾನು ಆಪಾದನೆ ಮಾಡಿಲ್ಲ. ಅನೇಕ ವ್ಯಾಫ್ರುಗಳು, ಯಾರು ಮಾಡಿದ್ದಾರೆ ಎನ್ನುವುದನ್ನು ಕಂಡು ಹಿಡಿಯಬೇಕೆಂದು ಅಷ್ಟೆ ನಾನು ಹೇಳುತ್ತಾ ಇರುವುದು.

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ವಿಷಯದ ಗಾಂಭೀರ್ಯತೆ ಇದೆ, ಪ್ರಾಮುಖ್ಯತೆ ಇದೆ. ಈ ಸಮಯದಲ್ಲಿ ಇಡೀ ರಾಷ್ಟ್ರ ಒಂದಾಗಿ ಇರಬೇಕು ಎನ್ನುವ ಒಂದು ಪ್ರವೃತ್ತಿಗೆ ಇದು ಆಘಾತವಾಗಿರತಕ್ಕ ಮಾತಾಗಿದೆ. ಪ್ರಧಾನ ಮಂತ್ರಿಯವರ

ಬಗ್ಗೆ ಮಾತನಾಡತಕ್ಕದ್ದು ಸಲ್ಲ. ನಾವು ಏನು ಬೇಕಾದರೂ ಮಾತನಾಡಬಹುದು. ಬಾಯಿ ಇದೆ, ನಾಲಿಗೆ ಇದೆ, ಆದರೆ ಆದರೆ ಈ ಸಂದರ್ಭದಲ್ಲಿ ಅಲ್ಲ. ಈ ಸಂದರ್ಭದಲ್ಲಿ ನಾವು ನೀವು ಎಲ್ಲ ಒಂದೇ. ಇಡೀ ದೇಶಕ್ಕೆ ಗಂಡಾಂತರ ಬಂದಿರುವಾಗ ಅದನ್ನು ಎದುರಿಸುವುದಕ್ಕೆ ನಾವೆಲ್ಲರೂ ಒಂದಾಗಿ ಹೊರಟಿರುವಾಗ ಇಂತಹ ಸಣ್ಣ ಪುಟ್ಟ ವಿಚಾರಗಳನ್ನು ಮಾತನಾಡಿದರೆ ಅದು ವಿಷಯ ಬೇರೆ ಕಡೆಗೆ ಹೋಗಿ ಬಿಡುತ್ತದೆ.

ಶ್ರೀ ವೈ.ಕೆ. ರಾಮಯ್ಯ:– ಯಾರು ಮಾಡಿದ್ದಾರೆಂದು ಕಂಡು ಹಿಡಿಯಬೇಕು. ಬಿಜೆಪಿಯವರು ಮಾಡಿದ್ದಾರೆ ಎಂದು ನಾನು ಆಪಾದನೆ ಮಾಡಲಿಲ್ಲ ಅಥವಾ ಎಲ್‌ಟಿಟಿಇನವರ ಮೇಲೆ ಅಪಾದನೆ ಮಾಡಲಿಲ್ಲ. ಹೊರದೇಶದವರು ಮಾಡಿದ್ದಾರೆಂದು ನಾನು ಆಪಾದನೆ ಮಾಡಲಿಲ್ಲ. ಕಾಂಗ್ರೆಸ್ ಪಾರ್ಟಿಯವರು ಮಾಡಿದ್ದಾರೆ ಎಂದು ಆಪಾದನೆ ಮಾಡಲಿಲ್ಲ. ಇಂತಹ ಒಂದು ಕೃತ್ಯವನ್ನು ಮಾಡಿದಂತಹವರು ಯಾರು ಎನ್ನುವುದನ್ನು ಬಗೆಹರಿಸಬೇಕು. ಅದನ್ನು ಕಂಡು ಹಿಡಿಯಬೇಕು. ಅದನ್ನು ಕಂಡು ಹಿಡಿಯುವಂತಹ ಅದನ್ನು ನಿಲ್ಲಿಸುವಂಥ ಸಮರ್ಥವಾದಂತಹ ಕಾರ್ಯಕ್ರಮವನ್ನು ಸರ್ಕಾರ ಮಾಡುತ್ತಾ ಇಲ್ಲ. ನಾನು ಯಾರ ಮೇಲೂ ಅಪಾದನೆ ಮಾಡುತ್ತಾ ಇಲ್ಲ. ಬಿಜೆಪಿಯವರು ಮಾಡಿದ್ದಾರೆ ಎಂದು ಎಲ್ಲಿ ಆಪಾದನೆ ಮಾಡಿದ್ದೇನೆ. ಉದಾಹರಣೆಗೆ ಹೇಳಿದೆ. ಯಾರು ಮಾಡಿರಬಹುದು ? ಏಕೆಂದರೆ ಇಡೀ ರಾಷ್ಟ್ರವನ್ನು ಧ್ವಂಸ ಮಾಡಬೇಕು ಎನ್ನುವಂತಹ ಯಾವುದೋ ಒಂದು ಶಕ್ತಿ ಇವತ್ತು ಕೆಲಸ ಮಾಡುತ್ತಾ ಇದೆ. ಅದನ್ನು ಮಾನ್ಯ ಮಂತ್ರಿಯವರು ಒಪ್ಪಿಕೊಳ್ಳುತ್ತಾರೆ, ನನ್ನ ಸ್ನೇಹಿತರಾದ ಯಡಿಯೂರಪ್ಪನವರೂ ಒಪ್ಪಿಕೊಳ್ಳುತ್ತಾರೆ, ನಾನೂ ಸಹ ಒಪ್ಪಿಕೊಳ್ಳುತ್ತೇನೆ. ನನ್ನ ಕೋರಿಕೆ ಇಷ್ಟೇನೆ; ಈ ಒಂದು ಧ್ವಂಸ ಕೃತ್ಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇರತಕ್ಕಂಥಹ ಶಕ್ತಿ ಯಾವುದು ಇದೆ ಎನ್ನುವುದನ್ನು ಕಂಡುಹಿಡಿಯಬೇಕು ಎಂದಷ್ಟೇ ನಾನು ಪ್ರಾರ್ಥನೆ ಮಾಡುತ್ತಾ ಇರುವುದು. ಮುಂಬೈನಲ್ಲಿ ನಡೆದಂತಹ ಕೃತ್ಯ ಏನು ಇದೆ; ಅದೇ ಸಿಮಿಲರ್ ಆದಂತಹ ಘಟನೆ ಕಲ್ಕತ್ತಾದಲ್ಲಿ ಆಗಿದೆ. ಆದ್ದರಿಂದ ನಾನು ಏನು ಹೇಳುತ್ತಿದ್ದೇನೆ ಎಂದರೆ ಇದನ್ನು ಯಾರು ಮಾಡಿದ್ದಾರೆ ? ಯಡಿಯೂರಪ್ಪನವರಿಗೂ ನನಗೂ ವೈಯಕ್ತಿಕವಾಗಿ ಏನೂ ಇಲ್ಲ. ಇವತ್ತು ಲಂಚ್‌ನಲ್ಲಿ ಕುಳಿತು ನಾನು ಮಾತನಾಡುತ್ತಿರುವಂತಹ ಸಮಯದಲ್ಲಿ ನನಗೆ ಬಂದು ಹೇಳಿದರು. ಅದಕ್ಕೆ ನಾನು ಪ್ರಾರ್ಥನೆ ಮಾಡುತ್ತಿರುವುದು, ಇವರು ಮಾಡುತ್ತಾರೆಂದು ಹೇಳುವಷ್ಟು ದಡ್ಡ ಪ್ರವೃತ್ತಿಗೆ, ದಡ್ಡ ಕೆಲಸಕ್ಕೆ ನಾನು ಹೋಗುವುದಿಲ್ಲ. ಯಾರು ಮಾಡಿದ್ದಾರೆ ಎನ್ನುವುದನ್ನು ಕಂಡು ಹಿಡಿಯಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನೀವು ದಯಮಾಡಿ ಕಡತ ತೆಗೆದು ನೋಡಬೇಕು. ಇಂತಹವರು ಮಾಡಿದ್ದಾರೆಂದು ನಾನು ಆಪಾದನೆ ಮಾಡಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಸದಸ್ಯರಾದ ಶ್ರೀ ರಾಮಯ್ಯನವರ ಬಗ್ಗೆ ನಾನು ತುಂಬ ಗೌರವ ಇಟ್ಟುಕೊಂಡಿರುವಂಥವನು. ನನ್ನದೇನೂ ಪ್ರಶ್ನೆ ಇಲ್ಲ. ತಾವು ಏನೇ ಮಾತನಾಡುವುದಕ್ಕೂ ಸ್ವಾತಂತ್ರ್ಯವಿದೆ, ಮಾತನಾಡಿ. ಸನ್ಮಾನ್ಯ ಹಿರಿಯ ಸಚಿವರಾದಂಥ ಹಾರ್‍ನಳ್ಳಿ ರಾಮಸ್ವಾಮಿಯವರು ಹೇಳಿದಂತೆ, ಇಡೀ ದೇಶದ ಜನ ಕಂಗಾಲಾಗಿರುವಂಥ ಸಂದರ್ಭದಲ್ಲಿ ಇದಕ್ಕೆ ಹೊರದೇಶದ ಕೈವಾಡವಿದೆಯೆಂದು ಪ್ರಧಾನಿಯವರು ಹೇಳುತ್ತಿದ್ದಾರೆ. ಮುಂದೆ ಇದನ್ನು ಹೇಗೆ ಸರಿಪಡಿಸಬೇಕೆನ್ನುವುದರ ಬಗ್ಗೆ, ನಮ್ಮಲ್ಲಿ ಏನೇ ಭಿನ್ನಾಭಿಪ್ರಾಯಗಳಿದ್ದರೂ ಅದನ್ನು ಬದಿಗೊತ್ತಿ ಇವೊತ್ತು ದೇಶವನ್ನು ಉಳಿಸಬೇಕಾಗಿದೆ. ಇಂತಹ ವಿಧ್ವಂಸಕ ಕೃತ್ಯವನ್ನು ತಡೆಯುವಂಥ ಸಂದರ್ಭದಲ್ಲಿ, ಈ ದೇಶದಲ್ಲಿ ವಾಸಿಸುವಂಥ ಜನರು ಇಂತಹ ದೇಶದ್ರೋಹದ ಕೆಲಸ ಮಾಡುತ್ತಾರೆ ಎನ್ನುವುದಾದರೆ ಅವರು ಒಂದು ಕ್ಷಣ ಕೂಡ ಈ ದೇಶದಲ್ಲಿ ಬದುಕುವುದಕ್ಕೆ ಸಾಧ್ಯವಿಲ್ಲ. ಈ ಒಂದು ಪರಿಸ್ಥಿತಿ ಇರಬೇಕಾದರೆ ಇವೊತ್ತು ವಿಷಯದ ಮಹತ್ವ ಏನು ? ಇಂತಹ ಪರಿಸ್ಥಿತಿ ಮತ್ತೆ ಮರುಕಳಿಸದಿರುವ ಬಗ್ಗೆ ಏನೇನು ಬಂದೋಬಸ್ತು ಮಾಡಬೇಕೋ, ಅದನ್ನು ಮಾಡಿ ಮತ್ತು ಕೇಂದ್ರ

ಸರ್ಕಾರ, ಈ ವಿಧ್ವಂಸಕ ಕೃತ್ಯಕ್ಕೆ ಯಾರು ಕಾರಣರಾಗಿದ್ದಾರೋ ಅವರನ್ನು ಕಂಡುಹಿಡಿಯುವಂಥ ಕೆಲಸ ಮಾಡಿಯೇ ಮಾಡುತ್ತದೆ. ಈ ಕುರಿತು ಶ್ರೀ ರಾಮಯ್ಯನವರು ಸಲಹೆ ಮಾಡುವಂತಹ ಅಧಿಕಾರವಿದೆ. ಅವರ ಬಗ್ಗೆ ನಾವೇನು ಹೇಳಿದ್ದೇವೆನ್ನುವುದನ್ನು ದಾಖಲೆ ತೆಗೆಸಿ ನೋಡಿದರೆ ಅನುಕೂಲವಾಗಬಹುದು. ಒಂದು ವೇಳೆ ಅವರು ಬಳಸಿರುವ ಪದ ಸೂಕ್ತವಲ್ಲವೆಂದರೆ ಕೈ ಬಿಡಿ.

ಶ್ರೀ ವೈ.ಕೆ. ರಾಮಯ್ಯ:- ನಾನು ಅದಕ್ಕೆ ಸಂಪೂರ್ಣವಾಗಿ ಬದ್ಧನಾಗಿರುತ್ತೇನೆ. ಇಂತಹುದೇ ಪಕ್ಷದವರು ಇದನ್ನು ಮಾಡಿದ್ದಾರೆ, ಇಂತಹ ಒಬ್ಬ ವ್ಯಕ್ತಿ ಮಾಡಿದ್ದಾನೆಂದು ನಾನೇನಾದರೂ ಅಪಾದನೆ ಮಾಡಿದ್ದರೆ ದಯಮಾಡಿ ಅದನ್ನು ಒಪ್ಪಿಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ನಾನು ಆ ತರಹದ ಆಪಾದನೆ ಮಾಡಿಲ್ಲ. ಆಪಾದನೆ ಮಾಡದಿದ್ದಾಗ ಸನ್ಮಾನ್ಯ ಸದಸ್ಯರಾದ ಶ್ರೀ ಈಶ್ವರಪ್ಪನವರು ಮತ್ತು ನಾವು ದಿನದ 24 ಗಂಟೆಗಳ ಕಾಲ ಪಕ್ಕದಲ್ಲಿಯೇ ಕುಳಿತಿರುವಾಗ, ಕುಡಿದು ಬಂದು ಸದನದಲ್ಲಿ ಮಾತನಾಡುತ್ತಿದ್ದಾರೆ' ಎಂಬ ಮಾತನ್ನು ನನ್ನ ಬಗ್ಗೆ ಏನು ಆಡಿದ್ದಾರೆ, ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ:- *** ಎಂದು ನಾನು ಹೇಳಿದೆ ಅಷ್ಟೆ.

ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ವೈ.ಕೆ. ರಾಮಯ್ಯ:- ಆ ಮಾತನ್ನು ನಾನು ಒಪ್ಪಿಕೊಳ್ಳುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಸದಸ್ಯರಾದ ಶ್ರೀ ಈಶ್ವರಪ್ಪನವರು ಆ ರೀತಿ ಹೇಳಿದ್ದರೆ ನಾನು ಕ್ಷಮಾಪಣೆ ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಇಂತಹ ಗಂಭೀರವಾದಂಥ ಒಂದು ವಿಷಯದ ಕುರಿತು ಚರ್ಚಿಸುವಾಗ ಈ ಪ್ರಕಾರ ಆಪಾದನೆ ಮಾಡಿದರೆ ಏನು ಉಳಿಯುತ್ತದೆ ?

This is an anti – National act. There are international agencies involved here. ಇಡೀ ಸದನ ಇದನ್ನು ಖಂಡಿಸಬೇಕಾಗಿದೆ. We have to condemn it. ಆದುದರಿಂದ, ಇವೊತ್ತು ನಮ್ಮ ಮೇಲೆ ಏನು ಆಪಾದನೆ ಬರುತ್ತದೆ, ನಾನು ಆಪಾದನೆ ಮಾಡಿಲ್ಲ' ಎಂದು ಶ್ರೀ ರಾಮಯ್ಯನವರು ಹೇಳಿದ್ದಾರೆ. ಒಂದು ವೇಳೆ ಇಂತಹ ಆಪಾದನೆ ಮಾಡಿದ್ದರೆ ಅದನ್ನು ತಾವು ದಾಖಲೆಯಿಂದ ಹೊರಗೆ ತೆಗೆಸಿರಿ. ಅದೇ ಪ್ರಕಾರ ಮಾನ್ಯ ಈಶ್ವರಪ್ಪನವರು ಆ ರೀತಿ ಹೇಳಿಲ್ಲವೆಂದರೆ ಅದನ್ನೂ ಸಹ ಹೊರಗೆ ತೆಗೆಸಬೇಕು. ಏಕೆಂದರೆ, ಅವರಿಗೆ ಆ ಅಧಿಕಾರವಿಲ್ಲ. ಆ ದೃಷ್ಟಿಯಿಂದ ಸದನದ ಸಮಯವನ್ನು ವ್ಯರ್ಥ ಮಾಡುವುದು ಸರಿಯಲ್ಲ. We have to strengthen their hands. We have to support them. This act has to be condemned by everybody. This act has to be condemned by all sections. We have to be non – political in this. ಪಕ್ಷಾತೀತವಾಗಿ ಇರಬೇಕಾಗುತ್ತದೆ. ಪಕ್ಷಗಳ ಮೇಲೆ ನಾವೇನಾದರೂ ಆಪಾದನೆ ಮಾಡುವುದಕ್ಕೆ ಹೋದರೆ wrong signals will go to the country ನಾವು ಇವೊತ್ತು ದೇಶದ ಐಕ್ಯತೆ, ಭದ್ರತೆ ಮುಂತಾದ ಎಲ್ಲಾ ದೃಷ್ಟಿಯಿಂದ ಪ್ರಯತ್ನ ಮಾಡಬೇಕು. ಇವೊತ್ತು ಭಾರತ ದೇಶ ಪ್ರಗತಿಯಾಗಿರುವುದನ್ನು ನೋಡಲು ಎಷ್ಟೋ ಜನರಿಗೆ ಶಕ್ತಿ ಇಲ್ಲ, ದೇಶದ ಐಕ್ಯತೆ ಬಗ್ಗೆ ನೋಡುವ ಶಕ್ತಿಯಿಲ್ಲ. ಈ ದಿಶೆಯಲ್ಲಿ ಒಂದು ಇಂಟರ್‌ನ್ಯಾಷನಲ್ ಏಜೆನ್ಸಿ ಕೆಲಸ ಮಾಡುವಾಗ ನಮ್ಮಲ್ಲಿರುವ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಮರೆತು ಒಂದಾಗಿ ಹೋರಾಟ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆ ವಿನಹ ನಮ್ಮ ನಮ್ಮಲ್ಲಿ ಆಪಾದನೆ ಮಾಡುತ್ತಾ ಹೋದರೆ, ಅದು ಎಲ್ಲಿಗೆ ಹೋಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ, ನಾನು ಇದನ್ನು ಖಂಡಿಸುತ್ತೇನೆ. ಈ ಒಂದು ಬಾಂಬ್

ಸ್ಫೋಟದಲ್ಲಿ ಯಾರು ಸುಮಾರು 50–60 ಜನರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ I express my condolences to them. ಅದೇ ಪ್ರಕಾರ ಮುಖ್ಯಮಂತ್ರಿಗಳು ಸಹ ಇವೊತ್ತು ರಾಜ್ಯದಲ್ಲಿ ಇಂತಹ ಘಟನೆಗಳಾಗದಂತೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಹೇಳುವುದಕ್ಕೆ ಕೆಲವು ಸಲ ಕಷ್ಟವಾಗಬಹುದು. ಆದುದರಿಂದ, ಮಾನ್ಯ ಮುಖ್ಯಮಂತ್ರಿಗಳು ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಏನೇನು ನಡೆಯುತ್ತಿದೆ ? ಸರ್ಕಾರ ಏನೇನು ಕ್ರಮ ತೆಗೆದುಕೊಂಡಿದೆ ? ಎಂಬುದರ ಬಗ್ಗೆ ಆದಷ್ಟು ಬೇಗ ಸದನಕ್ಕೆ ತಿಳಿಸಬೇಕೆಂದು ತಮ್ಮ ಮೂಲಕ ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಸನ್ಮಾನ್ಯ ಅಧ್ಯಕ್ಷರೆ, ಬೇರೆ ಯಾರೇ ಸದಸ್ಯರು ಮಾತನಾಡುವಾಗ ನಾನು ಎದ್ದು ನಿಂತು ತೊಂದರೆ ಮಾಡುವುದಿಲ್ಲ. ನಿಮ್ಮಲ್ಲಿ ನನ್ನ ಪ್ರಾರ್ಥನೆ ಇಷ್ಟೆ, ಬಿಜೆಪಿಯವರು ಈ ಕೃತ್ಯ ಮಾಡಿದ್ದಾರೆಂದು ಹೇಳುವಷ್ಟು ದಡ್ಡ ನಾನಲ್ಲ, ಅವಿವೇಕಿಯೂ ಅಲ್ಲ. ಯಾರು ಈ ಕೃತ್ಯ ಮಾಡಿರಬಹುದೆನ್ನುವುದನ್ನು ಸರ್ಕಾರ ಕಂಡುಹಿಡಿಯಬೇಕೆಂದು ಹೇಳುವಾಗ, ಬಿಜೆಪಿಯವರು ಈ ಕೃತ್ಯ ಮಾಡಿದ್ದಾರೆಯೇ ? ಎಲ್‌ಟಿಟಿಇನವರು ಮಾಡಿದ್ದಾರೆಯೇ ? ಕಾಂಗ್ರೆಸ್ ಪಕ್ಷದವರು ಇದನ್ನು ಮಾಡಿದ್ದಾರೆಯೆ ? ಹೊರ ದೇಶದವರು ಮಾಡಿದ್ದಾರೆಯೇ ? ಎನ್ನುವುದನ್ನು ಕಂಡುಹಿಡಿಯಬೇಕೆಂದು ನಾನು ರೆಫರೆನ್ಸ್ ಮಾಡಿದ್ದೇನೆ. ಅಷ್ಟು ಹೇಳಿದೆನೇ ಹೊರತು ಅವರು ಮಾಡಿದ್ದಾರೆ' ಎಂದು ನಾನು ಹೇಳಿದ್ದರೆ ಅವರು ಹೇಳುವಂಥ ಯಾವುದೇ ಒಂದು ಶಿಕ್ಷೆಗೊಳಗಾಗಲು ನಾನು ಸಿದ್ಧನಿದ್ದೇನೆ. ಬೇಕಾದರೆ ದಾಖಲೆ ತೆಗಿಸಿ ನೋಡಲಿ. ನಾನು ಆ ರೀತಿ ರೆಫರೆನ್ಸ್ ಕೊಟ್ಟಂಥ ಸಂದರ್ಭದಲ್ಲಿ ನನ್ನ ಪಕ್ಕದಲ್ಲಿ ಕುಳಿತಿರುವಂಥ ಸ್ನೇಹಿತರು ''ಕುಡಿದು ಬಂದು ಮಾತನಾಡಿದ್ದಾರೆ' ಎನ್ನುವ ಮಾತನ್ನಾಡಿದರೆ ಬಹುಶಃ ನಾನು ಯಾವೊತ್ತು ಕೂಡ ಅಂತಹ ನಡವಳಿಕೆಯಿಂದ ನಡೆದುಕೊಂಡಿಲ್ಲ. ನೀವೂ ನೋಡುತ್ತಿದ್ದೀರಿ. ಯಾರೇ ಸದಸ್ಯರು ಮಾತನಾಡುವಾಗ ಒಂದೇ ಒಂದು ದಿವಸವಾದರೂ 'ಏಕೆ ಹೀಗೆ ಮಾತನಾಡುತ್ತಿದ್ದೀರಿ ?' ಎಂದು ಕೇಳಿ ತೊಂದರೆ ಮಾಡಿಲ್ಲ. ನಾನು ಹಾಗೆ ಆ ರೀತಿಯ ಮಾತನ್ನು ಆಡಿದ್ದರೆ ಅದು ನನ್ನ ಬುದ್ಧಿಗೆ ನನ್ನ ಶಕ್ತಿಗೆ, ನನ್ನ ಯೋಗ್ಯತೆಗೆ ಅಥವಾ ನನ್ನ ಮಟ್ಟಕ್ಕೆ ನೋವು ತರುವಂಥ ಏನಾದರೂ ಶಿಕ್ಷೆ ಕೊಡಿ. ನಾನು ಮಾತನಾಡುವಾಗ ಯಾವ ಕಂಟೆಕ್ಸ್‌ನಲ್ಲಿ ಉಪಯೋಗಿಸಿದ್ದೇನೆ ಎನ್ನುವುದನ್ನು ತಾವು ದಾಖಲೆ ತೆಗಿಸಿ ನೋಡಬೇಕು. ಆದರೆ, * * * * ಯಾವ ಮಾತನ್ನು ಅವರು ಹೇಳಿದ್ದಾರೆ, ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಆ ಮಾತನ್ನು ವಾಪಸ್ಸು ತೆಗೆದುಕೊಳ್ಳುವವರೆಗೆ ನಾನು ಮುಷ್ಕರ ಮಾಡಬೇಕಾಗುತ್ತದೆ.

ಅಧ್ಯಕ್ಷರು:– ನಾನು ದಾಖಲೆ ತರಿಸಿ ನೋಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮುಷ್ಕರ ಮಾಡಬೇಕಾದವರು ನಾವು ....

(ಗೊಂದಲ)

ಅಧ್ಯಕ್ಷರು:– ಅವೆಲ್ಲವನ್ನೂ ತರಿಸಿ ಯಾವ ಪದವನ್ನು ಇಟ್ಟುಕೊಳ್ಳಬೇಕು ಯಾವುದನ್ನು ತೆಗೆದು ಹಾಕಬೇಕು ಎಂಬುದನ್ನು ನೋಡಿ ನಿರ್ಣಯ ತೆಗೆದುಕೊಳ್ಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಅಧ್ಯಕ್ಷರೇ, ತಮ್ಮ ಎದುರಿಗೇ ಇವರು 'ಕುಡಿದು ಬಂದು ಮಾತನಾಡುತ್ತಾರೆಂದು ಹೇಳಿದ್ದಾರೆ.

ಶ್ರೀ ಸಿ.ಎಸ್. ಕಾಳಮರಿಗೌಡ:– ಹೌದು, ಅವರು ಆ ರೀತಿ ಹೇಳಿದ್ದನ್ನು ನಾವೂ ಸಹ ಕೇಳಿಸಿಕೊಂಡಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ:- ನಾನೇನಾದರೂ ಆ ರೀತಿ ಹೇಳಿದ್ದರೆ ಅದನ್ನು ವಾಪಸ್ ತೆಗೆದುಕೊಳ್ಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:- ಅಧ್ಯಕ್ಷರೆ, ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುವುದಿಷ್ಟೆ; ಏನು ಒಂದು ಅಕೃತ್ಯ ಇಂದು ದೇಶದಲ್ಲಿ ನಡೆದಿದೆ, ಯಾರು ಆ ಅಕೃತ್ಯವನ್ನು ಮಾಡಿದ್ದಾರೆ ಎನ್ನತಕ್ಕದ್ದು ಯಾರಿಗೂ ನಿರ್ದಿಷ್ಟವಾಗಿ ಗೊತ್ತಿಲ್ಲ, ಅದನ್ನು ಕಂಡುಹಿಡಿಯುವುದರಲ್ಲಿ ಆ ರೀತಿ ಕೃತ್ಯಗಳು ನಡೆಯದಂತೆ ಕ್ರಮಗಳನ್ನು ತೆಗೆದುಕೊಳ್ಳುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳುತ್ತೇನೆ. ಇದರಲ್ಲಿ ಸಫಲತೆಯನ್ನು ಪಡೆಯಬೇಕಾದರೆ, ನಾವು ಸಹ ಕೈಜೋಡಿಸುತ್ತೇವೆ. ನಾವೇನು ಇದನ್ನು ವಿರೋಧ ಮಾಡುತ್ತಿಲ್ಲ extra – loyalty to the Pakistan or extra loyalty to the Punjab or America or Britain ಇಲ್ಲ. ಈ ದೇಶದ ಸಂಸ್ಕೃತಿ, ಐಕ್ಯತೆ ಮತ್ತು ಶಾಂತಿಯನ್ನು ಕಾಪಾಡತಕ್ಕ ಸಂದರ್ಭದಲ್ಲಿ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಳ್ಳುತ್ತದೋ ಆ ಎಲ್ಲಾ ಕಾರ್ಯಕ್ರಮಗಳಲ್ಲಿ ನಾವೂ ಕೂಡ ಧ್ವನಿಗೂಡಿಸುತ್ತೇವೆ, ನಾವೂ ಕೂಡ ಅದಕ್ಕೆ ಬೆಂಬಲವನ್ನು ಕೊಡುತ್ತೇವೆ. ಆದರೆ ಸರ್ಕಾರ ಆ ಕೆಲಸವನ್ನು ಮಾಡುವುದರಲ್ಲಿ ವಿಫಲವಾಗಿದೆ ಎಂದು ಖಡಾಖಂಡಿತವಾಗಿ ಹೇಳಲು ನಾನು ಸಿದ್ಧನಾಗಿದ್ದೇನೆ. ಇವತ್ತು ಕೊನೆಯದಾಗಿ ನನ್ನ ಬಿಜೆಪಿ ಮಿತ್ರರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ನನ್ನದೇ ಆದಂಥ ಅನಿಸಿಕೆಗಳನ್ನು ಹೇಳತಕ್ಕ ಸಂದರ್ಭದಲ್ಲಿ ನನ್ನ ಮಿತ್ರರನ್ನು ಗಮನದಲ್ಲಿಟ್ಟುಕೊಂಡು ನಾನು ಹೇಳುವುದಿಲ್ಲ. ಇದು ಮತ್ತೆ ಮತ್ತೆ ರಿಪೀಟ್ ಆಗಬಾರದು, ಆದ್ದರಿಂದ ಫೈನಲ್ ಆಗಿ ಹೇಳಿದ್ದೇನೆ. ಆದುದರಿಂದ ದಯಮಾಡಿ ಅವರು ಇದನ್ನು ಅಷ್ಟೊಂದು ರೋಷದಿಂದ ತೆಗೆದುಕೊಳ್ಳತಕ್ಕ ಆವಶ್ಯಕತೆ ಇಲ್ಲ; ಅವರು ಅಷ್ಟೊಂದು ಕೆಟ್ಟ ಭಾಷೆಯನ್ನು ನನ್ನ ಬಗ್ಗೆ ಉಪಯೋಗಿಸುವುದು ಉಚಿತವಲ್ಲ; ಏಕೆಂದರೆ ತಾವು ನೋಡಿರುವಂತೆ ನಾನು ಯಾರ ಬಗ್ಗೆ ಕೂಡ ಲಘುವಾಗಿ ಮಾತನಾಡುವುದಿಲ್ಲ, ಆದ್ದರಿಂದ ಅವರು ಲಘುವಾಗಿ ಮಾತನಾಡುವ ಪ್ರವೃತ್ತಿಯನ್ನು ನಿಲ್ಲಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು):- ಅಧ್ಯಕ್ಷರೆ, ಬಾಂಬೆ ಮತ್ತು ಕಲ್ಕತ್ತಾದಲ್ಲಿ ಏನು ಒಂದು ಘೋರ ಕೃತ್ಯ ನಡೆದಿದೆ ಅದು ವಿಷಾದನೀಯ. ಮಧ್ಯಪ್ರದೇಶದ ಅಹ್ಮದ್‌ಪುರದಲ್ಲಿ ಸ್ಫೋಟಿಸಲು ಉಪಯೋಗಿಸಿರತಕ್ಕ ವಸ್ತುಗಳು ಸಿಕ್ಕಿವೆ ಎಂದು ಪತ್ರಿಕೆಯಲ್ಲಿ ಬಂದಿದೆ. ಅಷ್ಟೇ ಅಲ್ಲದೆ ಅಮೇರಿಕ ದೇಶದವರು ದೆಹಲಿಯಲ್ಲಿಯೂ ಕೂಡ ಇಂಥ ಘಟನೆ ನಡೆಯಬಹುದು ಎನ್ನತಕ್ಕ ಸುಳಿವನ್ನು ಕೊಟ್ಟು ತನ್ನ ದೇಶದ ಪ್ರವಾಸಿಗರಿಗೆ ಭಾರತ ದೇಶಕ್ಕೆ ಪ್ರವಾಸ ಹೋಗಬೇಡಿ ಎಂದು ಸೂಚನೆಯನ್ನು ಹಾಗೂ ಎಚ್ಚರಿಕೆಯನ್ನು ಕೊಟ್ಟಿದೆ. ಇವೆಲ್ಲವನ್ನು ನೋಡಿದರೆ ಯಾರೋ ಗುಪ್ತವಾಗಿ ವಿದೇಶಿಯ ಜನರು ಇದನ್ನು ನಡೆಸುತ್ತಿರಬಹುದು ಎನ್ನತಕ್ಕ ಸಂಶಯ ಬರುತ್ತದೆ; ಬಹುತೇಕ ಎಲ್ಲಾ ಪತ್ರಿಕೆಗಳ ಮುಖಾಂತರ ಇದು ವರದಿಯಾಗಿದೆ. ಮತ್ತು ಪತ್ರಿಕೆಯಲ್ಲಿ ವರದಿಯಾಗಿರುವಂತೆ ಕಾನೂನು ಬದ್ಧವಾಗಿ ಬಂಗಾರವನ್ನು ಬ್ಲಾಕ್‌ಗಳಲ್ಲಿ ತರುವಾಗ ಅದರಲ್ಲಿ ಇಂಥ ಸ್ಫೋಟಕ ವಸ್ತುಗಳಾದ ಮದ್ದು ಗುಂಡು, ಬಾಂಬುಗಳನ್ನು ತರುತ್ತಾರೆ. ಆ ಕಾರಣ ಬೆಂಗಳೂರು ನಗರದಲ್ಲಿಯೂ ಸಹ ಕಾನೂನುಬದ್ಧವಾಗಿ ಬಂಗಾರವನ್ನು ಬ್ಲಾಕ್‌ಗಳಲ್ಲಿ ತರತಕ್ಕ ಜನರನ್ನು ಪತ್ತೆ ಹಚ್ಚಿ ನಿಗಾ ವಹಿಸಬೇಕೆಂಬ ಸೂಚನೆಯನ್ನು ಕೊಡುತ್ತೇನೆ. ಜೊತೆಗೆ ಈ ಘಟನೆಯಲ್ಲಿ ನೊಂದ ಜನರಿಗೆ ನಮ್ಮ ರಾಜ್ಯದ ಪರವಾಗಿ ಸಾಂತ್ವನವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ):- ಸನ್ಮಾನ್ಯ ಅಧ್ಯಕ್ಷರೇ, ದೇಶದಲ್ಲಿ ಇತ್ತೀಚೆಗೆ ನಡೆದಂಥ ಘಟನೆಗಳನ್ನು ನೋಡಿದಾಗ ನಾವೆಲ್ಲರೂ ಸಹ ನಿಜವಾಗಿ ಎಲ್ಲಿಗೆ ಹೋಗಿ ಮುಟ್ಟುತ್ತಿದ್ದೇವೆ ಎನ್ನತಕ್ಕ ಸಂಶಯ ಬರುತ್ತಿದೆ. ಹೊರದೇಶದ ಕೈವಾಡದಿಂದ ಆದಂಥ ಘಟನೆಗಳನ್ನು ನಾವೆಲ್ಲರೂ ಸಹ

ಒಗ್ಗಟ್ಟಿನಿಂದ ಧೈರ್ಯದಿಂದ ಎದುರಿಸಬೇಕಾಗಿದೆ. ಅದರ ಬಗ್ಗೆ ಈ ಸದನದಲ್ಲಿ ಚರ್ಚೆ ನಡೆಯುತ್ತಿರತಕ್ಕ ಕಾಲದಲ್ಲಿ ನಮ್ಮಲ್ಲಿ ಒಬ್ಬರ ಮೇಲೆ ಮತ್ತೊಬ್ಬರು ಆರೋಪ ಮಾಡುತ್ತಿರುವುದು ಸರಿಯಾದ ವಾತಾವರಣವಲ್ಲ ಎನ್ನತಕ್ಕ ಭಾವನೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಸನ್ಮಾನ್ಯ ವೈ.ಕೆ. ರಾಮಯ್ಯನವರು ಮಾತನಾಡತಕ್ಕ ಕಾಲದಲ್ಲಿ ಒಂದು ಶಬ್ದವನ್ನು ಮಾನ್ಯ ಈಶ್ವರಪ್ಪನವರು ಹೇಳಿದರು ಎಂದು ಒಬ್ಬರ ಮೇಲೆ ಮತ್ತೊಬ್ಬರು ಆರೋಪ ಮಾಡುವುದು ಇಂಥ ವಿಶೇಷವಾದಂಥ ಪರಿಸ್ಥಿತಿ ಇದ್ದಾಗ ಸರಿಯಲ್ಲ. ಇದರ ಆಳತನ, ಘನತೆ, ಗೌರವ, ದೇಶದ ಹಿತದೃಷ್ಟಿಯಿಂದ ದೇಶದ ಮಟ್ಟವನ್ನು ಯಾವ ದೃಷ್ಟಿಯಿಂದ ನೋಡಬೇಕಾಗಿದೆ ಅದನ್ನು ನೋಡುವುದನ್ನು ಬಿಟ್ಟು ನಮ್ಮಲ್ಲಿ ನಾವೇ ಒಬ್ಬರ ಮೇಲೆ ಮತ್ತೊಬ್ಬರು ಆಕ್ರೋಶ ಮಾಡುವುದಕ್ಕೆ ಪ್ರಾರಂಭ ಮಾಡಿದರೆ ನಾಳೆ ದಿನ ಪತ್ರಿಕೆಗಳಲ್ಲಿ ಇದು ಬಂದರೆ ಜನರು ನಮ್ಮ ಬಗ್ಗೆ ಏನು ಅಭಿಪ್ರಾಯ ಮಾಡಿಕೊಳ್ಳುತ್ತಾರೆ ಎನ್ನತಕ್ಕ ಹಿನ್ನೆಲೆಯಲ್ಲಿ ನಾನು ಮಾತನಾಡುತ್ತಿದ್ದೇನೆ.

ರಾಷ್ಟ್ರದ ಪ್ರಧಾನಮಂತ್ರಿಗಳು ಯಾವುದೇ ಪಕ್ಷದವರು ಇರಬಹುದು. ಆದರೆ ಇವತ್ತಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಎಲ್ಲ ಮಾನ್ಯ ಸದಸ್ಯರೂ ಒಂದೇ ಮನಸ್ಸಿನಿಂದ ರಾಷ್ಟ್ರಕ್ಕೆ ಬಂದಿರುವ ಗಂಡಾಂತರವನ್ನು ಎದುರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನಾವೆಲ್ಲಾ ಯೋಚಿಸಬೇಕಾಗಿದೆ. ನಿನ್ನೆ ಬೊಂಬಾಯಿಯಲ್ಲಿ ನಡೆದಿರಬಹುದು, ಇಂದು ಕಲ್ಕತ್ತಾದಲ್ಲಿ ಆಗಿರಬಹುದು; ನಾಳೆ ದೆಹಲಿಯಲ್ಲಿ ಆಗಬಹುದು. ಇವತ್ತು ರಾತ್ರಿ ಈ ಬೆಂಗಳೂರಿನಲ್ಲಿ ನಡೆದರೂ ನಡೆಯಬಹುದೆಂಬ ಸಂಶಯವನ್ನು ಸದನದ ಹೊರಗೆ ಮತ್ತು ಒಳಗೆ ವ್ಯಕ್ತ ಮಾಡುತ್ತಿದ್ದೇವೆ. ಮಾನ್ಯ ಯಡಿಯೂರಪ್ಪನವರು ಹೇಳಿದರು. ವಿಧಾನ ಸಭೆಗೆ ಬರುತ್ತಾರೆ, ಕೋರ್ಟಿಗೆ ಬರುತ್ತಾರೆ ಅಂತ ನಾವು ಮಾತನಾಡುತ್ತಾ ಹೋದರೆ ಎಲ್ಲರಿಗಿಂತ ಮೊದಲು ನಮಗೇ ಗೊತ್ತಾಗಿದೆ ಎನಿಸುತ್ತದೆ. ಈ ಭಾವನೆಯನ್ನು ನಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡುತ್ತಾ ಹೋದರೆ ಸಮಾಜದಲ್ಲಿ ಒಂದು ರೀತಿಯ ವಿಶೇಷ ಪರಿಸ್ಥಿತಿ ಉದ್ಭವವಾಗಿ ಅವರು ಗಾಬರಿಗೊಳ್ಳುತ್ತಾರೆ. ಮಾನ್ಯ ಕಾನೂನು ಮಂತ್ರಿಗಳು ಹೇಳಿದ ಹಾಗೆ ನಮ್ಮ ಪ್ರಧಾನ ಮಂತ್ರಿಗಳಿಗೆ ವಿಶೇಷವಾದ ಧೈರ್ಯ ಬೆಂಬಲಗಳನ್ನು ವ್ಯಕ್ತಪಡಿಸಿ ಯಾರ ಮನಸ್ಸಿಗೆ ನೋವಾಗದ ರೀತಿಯಲ್ಲಿ ನಡೆದುಕೊಂಡು ಈ ದೇಶದ ರಕ್ಷಣೆಗಾಗಿ ಈ ದೇಶದ ಹಿತಕ್ಕಾಗಿ ಕೆಲಸ ಮಾಡಬೇಕಾಗಿದೆ. ನಮ್ಮ ದೇಶದ ಪ್ರಗತಿಯನ್ನು ನೋಡಿ ಸಹಿಸುವ ಮನೋಭಾವನೆ ಬೇರೆ ರಾಷ್ಟ್ರಗಳಿಗೆ ಇಲ್ಲ. ನಾವು ಎಷ್ಟರ ಮಟ್ಟಿಗೆ ಪ್ರಗತಿಯನ್ನು ಸಾಧಿಸಿದ್ದೇವೆ ಎಂಬುದನ್ನು ಅವರು ಹೊಟ್ಟೆಕಿಚ್ಚಿನಿಂದ ನೋಡುತ್ತಿರುವಾಗ ನಾವು ಒಗ್ಗಟ್ಟಾಗಿ ಈ ದೇಶದ ರಕ್ಷಣೆ ಮಾಡಲು ಕಟಿಬದ್ಧರಾಗಿರಬೇಕೆಂದು ಹೇಳುತ್ತಾ ಅವರು ಲಿಖಿತವಾಗಿ ವಿಷಯವನ್ನು ಮಂಡನೆ ಮಾಡಿದ್ದಾರೆ; ಆದರೆ ನಾವು ಮಾಡಿಲ್ಲ. ಆದರೂ ಕೂಡ ತಾವು ನಮಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ರಾಷ್ಟ್ರವ್ಯಾಪಿಯಾಗಿ ಘೋರ ಕೃತ್ಯದಲ್ಲಿ ಕೆಲವು ಜನರು ಏನು ತೊಡಗಿದ್ದಾರೆ. ಅವರನ್ನು ಗುರುತು ಹಚ್ಚಿ ಶಿಕ್ಷಿಸಲಿಕ್ಕೆ ನಾವೆಲ್ಲರೂ ಪಕ್ಷಾತೀತವಾಗಿ ಕೆಲಸ ಮಾಡುವ ಸಮಯ ಬಂದಿದೆ. ಕೆಲವು ಸಂದರ್ಭಗಳಲ್ಲಿ ನಮಗೂ ತೊಂದರೆ ಆಗಬಹುದು. ನಮ್ಮ ವಾಹನಗಳನ್ನು ದೂರ ನಿಲ್ಲಿಸಿ ಎಂದು ಹೇಳಬಹುದು, ನಮ್ಮ ವಾಹನಗಳನ್ನು ಪೋಲೀಸರು ತಪಾಸಣೆ ಮಾಡಬಹುದು. ನಮ್ಮ ವಿಶಿಷ್ಟವಾದ ಹಕ್ಕುಗಳಿಗೆ ಕೆಲವು ಸಾರಿ ಧಕ್ಕೆ ಕೂಡ ಬರಬಹುದು. ಈ ಹಿನ್ನೆಲೆಯಲ್ಲಿ ಸಹನೆಯಿಂದ ಪೋಲಿಸ್ ಇಲಾಖೆಯ ಮತ್ತು ರಕ್ಷಣಾ ಇಲಾಖೆಯ ಜೊತೆ ಸಹಕರಿಸಬೇಕಾಗುತ್ತದೆ. ಈ ರಾಷ್ಟ್ರದ ಎಲ್ಲ ಸಮಾಜ ಬಾಂಧವರಿಗೂ ಭಗವಂತನು ಸದ್ಬುದ್ಧಿಯನ್ನು ಕೊಟ್ಟು ರಾಷ್ಟ್ರರಕ್ಷಣೆಗೆ ಅನುಕೂಲ ಮಾಡಿಕೊಡಲೆಂದು ಭಗವಂತನಲ್ಲಿ ಮತ್ತೊಮ್ಮೆ ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):- ಮಾನ್ಯ ಅಧ್ಯಕ್ಷರೆ, ಇವತ್ತು ಬಹಳ ಗಂಭೀರವಾದ

ಒಂದು ವಿಷಯವನ್ನು ಮಾನ್ಯ ಸ್ನೇಹಿತರು ಸಭೆಯ ಮುಂದೆ ತಂದಿದ್ದಾರೆ. ಅದರ ಬಗ್ಗೆ ಚರ್ಚೆಗೂ ಕೂಡ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಇದಕ್ಕಾಗಿ ತಮಗೆ ನಮ್ಮ ವಂದನೆಗಳು. ಇಂದಿನ ಪರಿಸ್ಥಿತಿಯನ್ನು ಈಗ ಏನು ಎದುರಿಸುತ್ತಿದ್ದೇವೆ ಮತ್ತು ಮುಂದೆ ಎದುರಿಸಬೇಕಾಗಿದೆ, ಇಂಥ ಸಂದಿಗ್ಧ ವಾತಾವರಣದ ಸಂದರ್ಭದಲ್ಲಿ ನಾವು ಯಾರೂ ಕೂಡ ಲಘುವಾಗಿ ಮಾತನಾಡತಕ್ಕದ್ದು ಸೂಕ್ತವಲ್ಲ. ಅದು ಸದನದ ಹೊರಗಾಗಲಿ, ಒಳಗಾಗಲಿ ಸೂಕ್ತವಲ್ಲ. ಈ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಅವತ್ತು ಹೋರಾಟ ಮಾಡಿದವರು ಇವತ್ತು ಈ ಪರಿಸ್ಥಿತಿ ಹೀಗೆ ಬಂದು ಒದಗುತ್ತದೆಂದು ಯೋಚನೆ ಮಾಡಿದವರಲ್ಲ. ಆದರೆ ಸ್ವಾತಂತ್ರ್ಯವನ್ನು ತೆಗೆದುಕೊಂಡ ಮೇಲೆ ಇದನ್ನು ಯಾವ ರೀತಿ ಉಳಿಸಿಕೊಳ್ಳಬೇಕೆಂಬುದೇ ಒಂದು ತೀವ್ರವಾದ ದೃಷ್ಟಿ ಎಂದು ನಾನು ಭಾವಿಸುತ್ತೇನೆ. ಅದೇ ರೀತಿ ಈ ರಾಷ್ಟ್ರಕ್ಕೆ ರಾಜಕೀಯ ಸ್ವಾತಂತ್ರ್ಯ ಸಿಕ್ಕಬೇಕಾದರೆ, ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯಕ್ಕೂ ಹೋರಾಟ ಮಾಡಬೇಕು, ಅದಕ್ಕಾಗಿ ನಾವು ಸಾಕಷ್ಟು ಕೆಲಸವನ್ನು ಮಾಡಬೇಕಾಗಿದೆ. ಇವತ್ತು ನಮ್ಮ ಭಾವನೆಯಲ್ಲಿ ಕೇವಲ ರಾಜಕೀಯ ಸ್ವಾತಂತ್ರ್ಯ ಮಾತ್ರವಲ್ಲ, ಆರ್ಥಿಕ ಸ್ವಾತಂತ್ರ್ಯವನ್ನೂ ಕೂಡ ಕಬಳಿಸುವ ರೀತಿಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂಚು ನಡೆಯುತ್ತಿದೆ. ಅದು ನಾನಾ ವಿಧದಲ್ಲಿ ಬರುತ್ತಿದೆ. ಹೊರರಾಜ್ಯಗಳು ನಮ್ಮ ಮೇಲೆ ಎಲ್ಲೆಲ್ಲಿ ಹಲ್ಲೆ ಮಾಡುವುದಕ್ಕೆ ಸಾಧ್ಯವಿದೆ ಅಲ್ಲೆಲ್ಲಾ ನಾನಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿವೆ. ಅದು ಡಂಕಲ್ ಪ್ರೊಪೋಸಲ್ ಇರಬಹುದು, ಗ್ಯಾಟ್ ಇರಬಹುದು, ಅಥವಾ ಬೇರೆ ಯಾವುದೇ ಇರಬಹುದು; ನನ್ನ ಭಾವನೆಯಲ್ಲಿ ಹೇಳುವುದಾದರೆ, ಅಮೇರಿಕಾದವರು ನಮಗೆ ಏನು ಎಚ್ಚರಿಕೆಯನ್ನು ಕೊಟ್ಟಿದ್ದಾರೆ ಎಂಬುದನ್ನು ಯೋಚನೆ ಮಾಡುವುದಕ್ಕೂ ನಾವು ತಯಾರಿಲ್ಲ. ಅಮೇರಿಕಾದವರು ಇರಬಹುದು, ಅಥವಾ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಇರಬಹುದು, ಅಥವಾ ಮಲ್ಟಿ ನ್ಯಾಷನಲ್ ಆರ್ಗನೈಸೇಷನ್ಸ್ ಯಾವುದೇ ಇರಬಹುದು, ಅವೆಲ್ಲವುಗಳ ಕೈವಾಡ ಇದರಲ್ಲಿದೆ ಎಂದು ಹೇಳುತ್ತಿದ್ದೇನೆ. ಅದು ಇಲ್ಲದೇ ಹೋಗಿದ್ದಿದ್ದರೆ ಪಾಕಿಸ್ತಾನ ಇವತ್ತು ಭಾರತದ ವಿರುದ್ಧ ನಿಲ್ಲುವುದಕ್ಕೆ ಸಾಧ್ಯವೇ ಇರುತ್ತಿರಲಿಲ್ಲ. ಅಷ್ಟು ಧೈರ್ಯ ಇರುತ್ತಿರಲಿಲ್ಲ. ಮಗುವನ್ನು ಚಿಗುಟಿ ತೊಟ್ಟಿಲನ್ನು ತೂಗುವ ರೀತಿಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೆಲವು ಆಟಗಳು ಆಗುತ್ತಿವೆ. ಈ ವಿಷಯದಲ್ಲಿ ಕೂಡ ....

ಶ್ರೀ ಜೆ.ಸಿ. ಮಾಧುಸ್ವಾಮಿ:- ಅವರು ಮಾತನಾಡಿದ್ದಕ್ಕಿಂತ ಕೆಟ್ಟದ್ದು ತಾವು ಮಾತನಾಡುತ್ತಿರುವುದು. ತಾವು ಅಮೇರಿಕಾ ದೇಶವನ್ನೇ ಕುರಿತು ಈ ಸಭೆಯಲ್ಲಿ ತಾವು ಮಾತನಾಡಬಹುದೇ ?

ಶ್ರೀ ಎ.ಕೆ. ಅನಂತಕೃಷ್ಣ:- ನಾನು ತಮ್ಮ ವಿಷಯದಲ್ಲಿ ಮಾತನಾಡುತ್ತಿಲ್ಲ. ಅಂತರಾಷ್ಟ್ರೀಯ ಮಟ್ಟದಲ್ಲಿ ಎಂಥ ಭಯೋತ್ಪಾದನೆಯ ವಾತಾವರಣ ಇದೆ ಎಂಬುದನ್ನು ಅರಿತು ರಾಷ್ಟ್ರೀಯ ಭಾವನೆಯನ್ನು ಇಟ್ಟುಕೊಂಡೇ ನಾನು ಹೇಳುತ್ತಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ:- ಇಲ್ಲಿ ಅಮೇರಿಕಾದವರು ಯಾರೂ ಇಲ್ಲ. ರಾಮಯ್ಯನವರ ಮೇಲೆ ಬೇರೆಯವರ ಮೇಲೆ, ಸಿಂಧ್ಯರವರ ಮೇಲೆ, ದೇಶಪಾಂಡೆಯವರ ಮೇಲೆ ಹೇಳಿದರೆ ನಾವು ಪ್ರೊಟೆಸ್ಟ್ ಮಾಡುತ್ತೇವೆ. ಆದರೆ ಇಲ್ಲಿ ಅಮೇರಿಕಾದವರು ಯಾರೂ ಇಲ್ಲದೇ ಇರುವುದರಿಂದ ತಾವು ....

ಶ್ರೀ ಎ.ಕೆ. ಅನಂತಕೃಷ್ಣ:- ಇವತ್ತು ನಮ್ಮ ಮನೆ ಉರಿಯುತ್ತಿದೆ ಎಂದರೆ, ಉರಿಯುತ್ತಿರುವ ಕೆಂಡವನ್ನು ಆರಿಸಬೇಕಾದುದು ನಮ್ಮ ಮೊದಲನೇ ಕರ್ತವ್ಯ. ಈ ಪ್ರಯತ್ನವನ್ನು ಕೇಂದ್ರ ಸರ್ಕಾರದವರು ರಾಜ್ಯಮಟ್ಟದಲ್ಲಿ ಮಾಡುತ್ತಿದ್ದಾರೆ.

ಆದ್ದರಿಂದ ನಮ್ಮ ಸರ್ಕಾರ ವಿಫಲವಾಗಿದೆ ಎನ್ನುವ ಭಾವನೆ ಯಾರಿಗೂ ಬರಬೇಕಾದ್ದು ಸೂಕ್ತವಲ್ಲ. ಮಾನ್ಯ ಪ್ರಧಾನಿಯವರು ಈ ದಿಸೆಯಲ್ಲಿ ಏನೂ ಮಾತನಾಡಿಲ್ಲವೆನ್ನುವ ಮಾತನ್ನು ನಾನು

ಒಪ್ಪುವುದಿಲ್ಲ. ಮಾನ್ಯ ಪ್ರಧಾನಿಯವರು ಡೆಲ್ಲಿಯಿಂದ ಬೊಂಬಾಯಿಗೆ ಬಂದು ಘಟನೆಗಳು ನಡೆದಾಗ ಅದನ್ನು ನೇರವಾಗಿ ವೀಕ್ಷಿಸಿ ಅದಕ್ಕೆ ಏನು ಕ್ರಮವನ್ನು ವಹಿಸಬೇಕೋ ಆ ಎಲ್ಲ ಕ್ರಮವನ್ನೂ ವಹಿಸುವುದಕ್ಕೆ ಆದೇಶವನ್ನು ಕೊಟ್ಟಿದ್ದಾರೆ. ಇಡೀ ರಾಷ್ಟ್ರಾದ್ಯಂತ ಯಾವ ರೀತಿ ನಾವು ನಮ್ಮ ಒಂದು ಸೆಕ್ಯೂರಿಟಿ ಕಾಪಾಡಿಕೊಳ್ಳಬೇಕು. ಆ ದಿಸೆಯಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಅದನ್ನು ನಾವು ವಿಧಾನಸೌಧದ ಸುತ್ತಮುತ್ತಲೂ ನೋಡುತ್ತಿದ್ದೇವೆ. ನಮ್ಮ ರಾಜ್ಯ ಸರ್ಕಾರದವರು ಕೂಡ ಅಷ್ಟು ಲಘುವಾಗಿ ನೋಡುತ್ತಿಲ್ಲ. ಮಾನ್ಯ ಮಲ್ಲಾರಿಗೌಡ ಪಾಟೀಲರು ಹೇಳಿದ ಹಾಗೆ ವಾಹನಗಳನ್ನು ನಿಲ್ಲಿಸುವುದಕ್ಕಾಗಲಿಲ್ಲ, ಹೋಗಿ ಬರುವುದಕ್ಕೂ ಮತ್ತು ಬೇರೆ ಕಟ್ಟಡಗಳಲ್ಲಿ ಪಾರ್ಕಿಂಗ್ ಮಾಡಲಿಕ್ಕೂ ತೊಂದರೆಯಾಗುತ್ತಿದೆ. ಆದರೂ ಅದರ ಅವಶ್ಯಕತೆ ಇದೆ ಎನ್ನುವುದನ್ನು ನಮ್ಮ ಸೆಕ್ಯೂರಿಟಿ ಫೋರ್ಸಸ್‌ನವರು ಯೋಚನೆ ಮಾಡಿಯೇ ಮಾಡುತ್ತಿದ್ದಾರೆ. ಆದ್ದರಿಂದ ಇವತ್ತು ಯಾವ ಕ್ರಮವನ್ನೂ ವಹಿಸುತ್ತಿಲ್ಲವೆಂದು ಹೇಳುವುದು ಸೂಕ್ತವಲ್ಲ. ಕ್ರಮವನ್ನು ವಹಿಸುತ್ತಿದ್ದೇವೆ; ವಹಿಸಬೇಕಾಗಿದೆ, ಮತ್ತೆ ಇನ್ನೂ ವಹಿಸಬೇಕಾಗಿಲ್ಲವೆಂದು ಹೇಳುವುದಿಲ್ಲ. ಅಂದರೆ ನಾವು ಪ್ರತಿಯೊಬ್ಬರೂ ಶಾಸಕರಿರಬಹುದು, ನಾಗರೀಕರಿರಬಹುದು, ಸಾಕಷ್ಟು ಪ್ರಮಾಣದಲ್ಲಿ ನಿಜವಾಗಿಯೂ ಹುಶಾರಾಗಿರಬೇಕಾದ್ದು ಅವಶ್ಯಕವಿದೆ. ನಮಗೆ ಪ್ರಮುಖವಾಗಿ ಬೇಕಾಗಿರುವುದು ನೊಂದವರಿಗೆ ಯಾವ ರೀತಿ ಪರಿಹಾರವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಅವರಿಗೆ ನೋವು ಆಗದ ರೀತಿಯಲ್ಲಿ ಯಾವ ರೀತಿ ನೋಡಿಕೊಳ್ಳುವುದಕ್ಕೆ ಆಗುತ್ತದೆ ಅಷ್ಟಕ್ಕೆ ಮಾತ್ರ ನಾವು ಎಚ್ಚರಿಕೆಯನ್ನು ಕೊಡುವಂಥ ಕೆಲಸ ಮಾಡಬೇಕಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:— ಈಗ ಮಾನ್ಯ ರಾಮಯ್ಯನವರು ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಬಿ.ಜೆ.ಪಿ.ಯವರನ್ನಾಗಲಿ, ಕಾಂಗ್ರೆಸ್ ಪಕ್ಷದವರನ್ನಾಗಲಿ ಯಾರನ್ನೂ ಉದ್ದೇಶಿಸಿ ಆಪಾದನೆ ಮಾಡಿಲ್ಲ ಎಂದು. ಹಾಗಾಗಿ ಮಾನ್ಯ ಅಧ್ಯಕ್ಷರೇ ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಎಲ್ಲೆಲ್ಲಿ ಬಿ.ಜೆ.ಪಿ. ಅಥವಾ ಕಾಂಗ್ರೆಸ್ ಎನ್ನುವ ಶಬ್ದಗಳು ಬಂದಿದೆ ಅದನ್ನು ಕಡತದಿಂದ ತೆಗೆಯಲಿಕ್ಕೆ ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:— ಮಾನ್ಯ ಅಧ್ಯಕ್ಷರೇ, ಅಷ್ಟೊಂದು ಸುಲಭವಾಗಿ ಅದು ಆಗತಕ್ಕಂಥ ಕೆಲಸವಲ್ಲ. ನಾನು ಆಪಾದನೆಯನ್ನು ಮಾಡಿದ್ದರೆ ಆವಾಗ ತೆಗೆದುಹಾಕಿ.

ಅಧ್ಯಕ್ಷರು:— ಅದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದೆನಲ್ಲ.

ಶ್ರೀ ವೈ.ಕೆ. ರಾಮಯ್ಯ:— ಅಪವಾದವಿದ್ದರೆ ನಾನು ಬರೇ ಕೇವಲ ಉದಾಹರಣೆ ಕೊಟ್ಟಿರಬಹುದು ಅಥವಾ ಕಾಂಟೆಸ್ಟ್‌ಮೇಲೆ ಹೇಳಿರಬಹುದು.

ಅಧ್ಯಕ್ಷರು:— ಮಾನ್ಯ ರಾಮಯ್ಯನವರೇ, ನಾನು ಈಗ ತಾನೇ ಹೇಳಿದೆ, ನಾನು ಅದನ್ನು ಪರಿಶೀಲನೆ ಮಾಡಿ ತೆಗೆಸಿಹಾಕುತ್ತೇನೆಂದು, ತಾವು ಪದೇ ಪದೇ ಪ್ರಸ್ತಾಪ ಮಾಡುವುದು ಸರಿಯಲ್ಲ. ತಾವು ಹೇಳಿದ್ದನ್ನೇ ಮತ್ತೆ ಏತಕ್ಕೆ ಹೇಳುವುದು ?

ಶ್ರೀ ವೈ.ಕೆ. ರಾಮಯ್ಯ:— ಹೆಸರನ್ನೆಲ್ಲ ತೆಗೆಯಬೇಕೆಂದರೆ ಅದು ಆಗುವುದಿಲ್ಲ. ನಮ್ಮ ಪಕ್ಷದ ಹೆಸರನ್ನು ಉಪಯೋಗಿಸಿದ್ದಾರೆ. ನಿಮ್ಮ ಪಕ್ಷದ ಹೆಸರನ್ನು ಉಪಯೋಗಿಸಿದ್ದಾರೆ. ಮತ್ತೊಂದು ಪಕ್ಷದ ಹೆಸರನ್ನು ಉಪಯೋಗಿಸಿದ್ದಾರೆ. ಆ ಹೆಸರನ್ನು ಉಪಯೋಗಿಸಿ ಆಪಾದನೆ ಮಾಡಿದ್ದರೆ, ಹೆಸರನ್ನು ಉಪಯೋಗಿಸುವ ಮೂಲಕ ಆಪಾದನೆ ಮಾಡಿದ್ದರೆ ಇಂಥ ಪಕ್ಷದವರು ಮಾಡಿದ್ದಾರೆನ್ನುವ ಆಪಾದನೇ ಮಾಡಿದ್ದರೆ ನೀವು, ನನ್ನನ್ನು ಶಿಕ್ಷಿಸಿ; ಅಭ್ಯಂತರವಿಲ್ಲ. ಆದರೆ ಬರೆ ಹೆಸರನ್ನು ಉಪಯೋಗಿಸಿದ್ದಾರೆಂದು ಹೇಳಿ ಅದನ್ನು ತೆಗೆಯಬೇಕೆಂದರೆ ಹೇಗೆ ಆಗುತ್ತದೆ ? ಆಪಾದನೆ ಮಾಡಿ ಹೆಸರನ್ನು ಉಪಯೋಗಿಸಿ

ಯಾರೊಬ್ಬರ ಮೇಲೆ ಆಗಲೀ ಅಥವಾ ಒಂದು ಪಕ್ಷದ ಮೇಲೆ ಆಗಲೀ ಅಥವಾ ಒಬ್ಬ ವ್ಯಕ್ತಿ ಮೇಲೆ ಆಗಲೀ ಮಾಡಿದ್ದಾರೆಂದು ನಾನು ಆಪಾದನೆ ಮಾಡಿದ್ದರೆ ಅದನ್ನು ತೆಗೆದುಹಾಕಿ, ನನ್ನದೇನು ಅಭ್ಯಂತರವಿಲ್ಲ; ಆದರೆ ಆಪಾದನೆ ಮಾಡದಿದ್ದರೆ ಅದನ್ನು ತೆಗೆಯಲಿಕ್ಕೆ ಸಾಧ್ಯವಿಲ್ಲ. ನಾನು ಆಪಾದನೆ ಮಾಡಿದ್ದರೆ ತೆಗೆಯಲಿ.

ಅಧ್ಯಕ್ಷರು:– ಇಲ್ಲಿ ತಾವು ಉಪಯೋಗಿಸಿದ ಪದಗಳಿಂದ ಯಾವುದೇ ಪಕ್ಷಕ್ಕೆ ಧಕ್ಕೆಯಾಗುವಂತಿದ್ದರೆ ನಾನು ಅದನ್ನು ತೆಗೆಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಆಪಾದನೆ ಮಾಡಿದ್ದರೆ, ಮಾತ್ರ.

ಅಧ್ಯಕ್ಷರು:– ಅದನ್ನೇ ಪರಿಶೀಲನೆ ಮಾಡುತ್ತೇನೆಂದು ಹೇಳಿದೆನಲ್ಲ. ನೋಡಿ ಸ್ವಾಮಿ, ಇದೇ ರೀತಿ ತಾವು ಆರ್ಗ್ಯುಮೆಂಟ್ ಮಾಡಿದರೆ ನಾನು ಒಪ್ಪುವುದಿಲ್ಲ. ನಾನು ಹೇಳಿದ್ದೇನೆ, ಪರಿಶೀಲನೆ ಮಾಡುತ್ತೇನೆಂದು, ಪುನಃ ಪುನಃ ಅದನ್ನೇ ಹೇಳುತ್ತಿದ್ದೇನೆ, ಪರಿಶೀಲನೆ ಮಾಡಿ ಯಾವುದೇ ಪಕ್ಷಕ್ಕೆ ಧಕ್ಕೆಯಾಗುವಂಥ ಸಂದರ್ಭವಿದ್ದರೆ ಅದನ್ನು ತೆಗೆದುಹಾಕತಕ್ಕಂಥ ಹಕ್ಕು ನನಗಿದೆ.

ಶ್ರೀ ವೈ.ಕೆ. ರಾಮಯ್ಯ:– ಅಷ್ಟೇ ಅಲ್ಲ, ನಮ್ಮ ಹಿರಿಯ ಸದಸ್ಯರು ಹೇಳಿದ ಹಾಗೆ ಶಂಕೆ ಬರುವಂತಿದ್ದರೆ ತೆಗೆದುಹಾಕಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ರೂರಲ್):– ಮಾನ್ಯ ಅಧ್ಯಕ್ಷರೇ, ಇದು ಬಹಳ ಮುಖ್ಯವಾದ ವಿಚಾರವಿದೆ. ಏತಕ್ಕೆಂದರೆ ಕಾನೂನು ಮಂತ್ರಿಗಳು ಇದಕ್ಕೆ ಉತ್ತರ ಕೊಟ್ಟು ಇದನ್ನೂ ಅಲ್ಲಿಗೆ ಮುಗಿಸುವಂಥ ವಿಚಾರವಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ, ನನ್ನ ಕೈಯಲ್ಲಿರುವ ಮಾರ್ಚ್ 8ನೇ ತಾರೀಖು ಟೈಮ್ಸ್ ಮ್ಯಾಗಜೈನ್‌ನಲ್ಲಿ ಕಳೆದ ವಾರ ಮೂರನೇ ತಾರೀಖು ನ್ಯೂಯಾರ್ಕ್ ಸಿಟಿಯಲ್ಲಿ ಇಂಥದ್ದೇ ಒಂದು ಎಕ್ಸ್‌ಪ್ಲೋಷನ್ ಆಗಿದೆ.

ನ್ಯೂಯಾರ್ಕ್‌ನಲ್ಲಿ World Trade Centre ಅಂತ ಕಟ್ಟಡ ಇದೆ. ಪ್ರಪಂಚದಲ್ಲೇ ಅತ್ಯಂತ ಎತ್ತರವಿರುವಂಥ ಆರು ಕಟ್ಟಡಗಳಲ್ಲಿ ಇದು ಒಂದು. ಇದರ ವಿವರಗಳನ್ನು ತಾವು ತರಿಸಿ ನೋಡಿದರೆ, ಇದು ಎಂತಹ ಗಂಭೀರವಾದ ಸಮಸ್ಯೆಗೆ ನಾವು ಪ್ರವೇಶ ಮಾಡುತ್ತಿದ್ದೇವೆ. ಅಂತರರಾಷ್ಟ್ರೀಯ ರಾಜಕಾರಣದಲ್ಲಿ ಮತ್ತು ರಾಷ್ಟ್ರಮಟ್ಟದ ರಾಜಕಾರಣದಲ್ಲಿ ಕೂಡ ನಮ್ಮ ರಾಷ್ಟ್ರ ಮಟ್ಟದಲ್ಲಿ ಇಂತಹ ಒಂದು ಬೆಳವಣಿಗೆ ಬಗ್ಗೆ ನಾವು ಏನು ಸಿದ್ಧತೆ ಮಾಡಿಕೊಂಡಿದ್ದೇವೆ ಎನ್ನುವುದರ ಬಗ್ಗೆ ನನಗೆ ಏನು ತಿಳುವಳಿಕೆ ಇದೆ. I can tell you we are actually caught unawares. ನಮ್ಮ ರಾಷ್ಟ್ರಮಟ್ಟದ ಇಂಟಲಿಜೆನ್ಸ್ ಬಗ್ಗೆ ಕೂಡ. ಅಮೇರಿಕಾದಲ್ಲಿ ಅವರು they are groping in the dark. ಇಲ್ಲಿ ಕೆಲವು explosives ನ್ನು ಉಪಯೋಗಿಸಿದ್ದಾರೆ. ಇದು ನಮ್ಮ ಇಂಟಲಿಜೆನ್ಸ್‌ಗೆ ಗೊತ್ತಿದೆ ಎಂದು ನನಗೆ ಅನ್ನಿಸುವುದಿಲ್ಲ. I will give you one simple explosive device now. ಅಮೋನಿಯಂ ನೈಟ್ರೇಟ್ ಬಗ್ಗೆ ಎಲ್ಲ ರೈತರಿಗೂ ಗೊತ್ತಿದೆ. Ammonium Nitrate, when used for benign purposes is known simply as a fertiliser. But when mixed with diesel fuel and set off, it has a detonation velocity of 1100 miles per second. I am sure Indian intelligence do not know this. The State Intelligence also do not know this. ಆ ಕಾರಣದಿಂದ ನಾನು ಕಾನೂನು ಮಂತ್ರಿಗಳಲ್ಲಿ ವಿನಂತಿ ಮಾಡಿದ್ದು, ದಯವಿಟ್ಟು ಇದಕ್ಕೆ ಹೆಚ್ಚಿನ ಅವಕಾಶ ಕೊಡಿ. ಏಕೆಂದರೆ ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡಬೇಕು. ಆ ಸಮಯದಲ್ಲಿ ಗೃಹಮಂತ್ರಿಗಳು ಇರಬೇಕು, ಗೃಹಖಾತೆ ಸಿಬ್ಬಂದಿ ಇರಬೇಕು. ಮತ್ತೊಂದು ವಿಷಯ ನಾನು ಹೇಳಬಯಸುವುದೇನೆಂದರೆ, ಇದನ್ನು ನಿಯಂತ್ರಣ ಮಾಡುವುದಕ್ಕೆ ನಾವು ಕೇಂದ್ರ ಸರ್ಕಾರದ ಮೇಲೆ

ಅವಲಂಬಿತರಾಗುವುದು ಬಹಳ ತಪ್ಪಾಗುತ್ತದೆ. centralised effort even to discover who is responsible for this, even the Centre is incapable of it.

ಅವರು ಇವತ್ತು ಬಹಳ ಸುಲಭದ targetsನ ಹೆಸರು ಹೇಳುತ್ತಾರೆ. ISI ಇರಬಹುದು, LTTE ಇರಬಹುದು. ನಾನು ಸ್ವಲ್ಪ ಅಂತರರಾಷ್ಟ್ರೀಯ ಸಂಬಂಧಗಳ ವಿದ್ಯಾರ್ಥಿಯಾಗಿರುವುದರಿಂದ ನಾನು ಶ್ರೀ ಅನಂತಕೃಷ್ಣರವರ ಅಭಿಪ್ರಾಯವನ್ನು ಸಮರ್ಥನೆ ಮಾಡುತ್ತೇನೆ. I am looking beyond that. This is not just the hand of ISI. It is not just the hand of LTTE. There are many more foreign hands in this. ಎಷ್ಟರಮಟ್ಟಿಗೆ ರಾಜಕಾರಣ ಸಂಕೀರ್ಣವಾಗಿದೆಯೆಂದರೆ, even the New York Blastt ಆದಮೇಲೆ ಅಮೆರಿಕಾದವರು ಯಾರ್ಯಾರ ಬಗ್ಗೆ ಸಂಶಯ ಪಡುತ್ತಿದ್ದಾರೆ ಅಂತ. the Balcon factions, Palestinian factions, Iran, Iraq, Libya, Russian nationalists. ಹೀಗೆ ಅವರಲ್ಲೇ ಹುಡುಕಾಡುತ್ತಿದ್ದಾರೆ, ಇದಕ್ಕೆ ಕಾರಣ ಏನು ಅಂತ. ಇವತ್ತಿನ ರಾಜಕಾರಣದಲ್ಲಿ ಅಂತರರಾಷ್ಟ್ರೀಯವಾಗಿ – India happens to be a strategically very important centre both politically and economically. ಆ ಕಾರಣ ನಾವು ಇದನ್ನು ಇನ್ನೂ ವಿವರವಾಗಿ, ಗಂಭೀರವಾಗಿ ಚರ್ಚೆ ಮಾಡಬೇಕು. ಇಲ್ಲಿ ಯಾವುದೋ ಮೂರು ಕಾಸಿನ ರಾಜಕಾರಣ ಮಾಡಿ ನಾವು ನಮ್ಮ ತೀಟೆ ತೀರಿಸಿಕೊಳ್ಳುವ ವಿಚಾರ ಇದಲ್ಲ. ಆದ ಕಾರಣ ತಾವು ವಿವರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ನಾನು ಎದ್ದು ನಿಂತಿದ್ದು ಉತ್ತರ ಕೊಡುವುದಕ್ಕೆ ಅಲ್ಲ ಅಥವಾ ಚರ್ಚೆಯನ್ನು ಮುಕ್ತಾಯ ಮಾಡುವುದಕ್ಕೆ ಅಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸ್ನೇಹಿತರು ಎತ್ತಿರತಕ್ಕಂಥ ವಿಷಯ ಅತ್ಯಂತ ಗಂಭೀರವಾದಂಥ ವಿಷಯ. ದೇಶದ ಇರುವಿಕೆಗೆ ಅಡ್ಡಿ ಬಂದಂಥ ವಿಷಯ. ದೇಶದಲ್ಲಿ ಅಭದ್ರತೆಯನ್ನು ಉಂಟು ಮಾಡತಕ್ಕಂಥ ವಿಷಯ. ಇದನ್ನು ಕಂಡುಹಿಡಿಯುವುದಕ್ಕೆ ನಾವು ಚರ್ಚೆ ಮಾಡಬೇಕಾಗುತ್ತದೆ ಏನು ಮಾಡಬೇಕು ಎನ್ನುವುದರ ಬಗ್ಗೆ ಕೇಂದ್ರ ಸರ್ಕಾರದವರು ಸಕಲ ತನಿಖಾ ಸಂಸ್ಥೆಗಳನ್ನು ಇದಕ್ಕೆ ಬಿಟ್ಟು, ಅಂತರರಾಷ್ಟ್ರೀಯ ತನಿಖಾ ಸಂಸ್ಥೆಗಳಿಂದಲೂ ಸಹ ವಿಷಯಗಳನ್ನು ಪರಿಶೀಲನೆ ಮಾಡುತ್ತಿದ್ದಾರೆ.

ಇಷ್ಟಾದರೂ ಜಗತ್ತಿನಲ್ಲಿ ಎಲ್ಲಾ ದೇಶಗಳಿಗೂ ಮುಂದುವರಿದ ದೇಶ ಅಮೇರಿಕಾ ದೇಶದಲ್ಲಿ ಕೂಡಾ, ಇಸ್ರೇಲ್‌ನಲ್ಲೂ ಕೂಡಾ ಇಂತಹ ಅಕೃತ್ಯಗಳು ಆಗುತ್ತಿವೆ. ಬ್ರಿಟನ್‌ನಲ್ಲಿ ಪದೇ ಪದೇ ನಡೆಯುತ್ತಿದೆ. ಲಂಡನ್‌ನಲ್ಲಿ ನಡೆಯುತ್ತಿದೆ. ನಮ್ಮಲ್ಲೂ ನಡೆಯುತ್ತಿದೆ ಎಂದ ಮೇಲೆ ನಾವು ಒಬ್ಬರ ಮೇಲೆ ಒಬ್ಬರು ಆಕ್ಷೇಪಣೆ ಮಾಡಿಕೊಂಡು ಹೋಗುವ ಸುದ್ದಿ ಇದಲ್ಲ. ಯಾವ ಪರಿಸ್ಥಿತಿ ಯಾವಾಗ ಬರುತ್ತದೋ ಹೇಳುವುದಕ್ಕಾಗುವುದಿಲ್ಲ. ಈ ಘಟನೆಗಳು ಮುಂದುವರಿದರೆ ಇಂಡಿಯಾ ದೇಶ ಮತ್ತೊಮ್ಮೆ ಯುದ್ಧ ಸಾರತಕ್ಕ ಪರಿಸ್ಥಿತಿ ಬರುತ್ತದೆ. ನಾವೂ ನೀವೂ ಎಲ್ಲಾ ಸೇರಿ ಈ ದೇಶವನ್ನು ಭದ್ರವಾಗಿ ಉಳಿಸಬೇಕಾದ ಪರಿಸ್ಥಿತಿ ಬರುತ್ತದೆ. ಎಲ್ಲಿದೆ ಈ ದೋಷ ? ಈ ರಾಜಕಾರಣ ಎಲ್ಲಿ ಹುಟ್ಟಿದೆ ? ಯಾರಿಗೆ ಮೋಟಿವೇಷನ್ ಇದೆ ನಮ್ಮ ದೇಶವನ್ನು ಅಭದ್ರ ಮಾಡುವುದಕ್ಕೆ ? ಇದು ಸರ್ವೇ ಸಾಮಾನ್ಯ ಮುಕ್ಕಾಲು ವಾಸಿ ಜನರಿಗೆ ಗೊತ್ತಿದೆ. ಆದರೆ ಅನೇಕ ಜನ ಮಾತನಾಡುವುದಿಲ್ಲ. ಇದನ್ನು ನಾವು ವಿಸ್ತಾರವಾಗಿ ಚರ್ಚೆ ಮಾಡತಕ್ಕದ್ದಲ್ಲ. ಮಾನ್ಯ ಪ್ರೊಫೆಸರ್ ಅವರು ಹೇಳಿರತಕ್ಕದ್ದು ಬಹಳ ಗಂಭೀರ ವಿಚಾರ. ಆದರೆ ಚರ್ಚೆ ಮಾಡತಕ್ಕದ್ದು ಅಲ್ಲ. 4 ಗೋಡೆಯೊಳಗೆ ಕುಳಿತು ಯೋಚನೆ ಮಾಡತಕ್ಕದ್ದು. ಈ ಸಭೆಗೆ ಸಂಬಂಧಪಟ್ಟ ಹಾಗೆ ತಾವು ಕೇಳಿದ್ದೀರಿ. ಈ ಬಗ್ಗೆ ಏನು ಕೆಲಸ

ಮಾಡಿದ್ದಾರೆಂದು ಕೇಳಿದ್ದಾರೆ. ರಕ್ಷಣೆಗೋಸ್ಕರ ಏನು ಮಾಡಿದ್ದೀರಿ ಎನ್ನುವುದು ಮೋಸ್ಟ್ ರಿಲವೆಂಟ್ ಕ್ವಶ್ಚನ್. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬಂದು ಇವತ್ತಲ್ಲ ನಾಳೆ ಹೇಳುತ್ತಾರೆ. ವಿವರಗಳನ್ನು ಹೇಳೋದಲ್ಲ. ನನಗೆ ತಿಳಿದ ಹಾಗೆ ಸಮಸ್ತ ಭದ್ರತಾ ಕ್ರಮಗಳನ್ನು ಮಾಡಿದ್ದಾರೆ. ಎಕ್ಸ್‌ಪರ್ಟ್ಸ್‌ಗೆ ಮುಂಬೈಗೆ ಮತ್ತು ಬೇರೆ ಕಡೆಗೆ ಕಳುಹಿಸಿದ್ದಾರೆ. ಆದುದರಿಂದ ಮಾನ್ಯ ಸದಸ್ಯರಿಗೆ ಅತ್ಯಂತ ವಿನಯಪೂರ್ವಕವಾಗಿ....

ಶ್ರೀ ಆರ್.ಎಲ್. ಜಾಲಪ್ಪ:– ಯಾರನ್ನು ಕಳುಹಿಸಿದ್ದೀರಿ, ಅವರ ಹೆಸರನ್ನು ಪ್ರೆಸ್‌ಗೆ ರಿಲೀಸ್ ಮಾಡಬಾರದು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಎಂಥದ್ದೇ ಸಂದರ್ಭ ಬಂದರೂ ಕೂಡಾ ನಾವೆಲ್ಲರೂ ಒಂದಾಗಿ ಹೋಗೋಣ. ಯುದ್ಧ ಆದರೆ ರಾಷ್ಟ್ರ ಮಟ್ಟದಲ್ಲಿ ಆಗಬಹುದು. ಆದುದರಿಂದ ನಮ್ಮ ಸಣ್ಣಪುಟ್ಟ ವಿಚಾರಗಳನ್ನು ಮರೆತು ಈ ವಿಷಯದಲ್ಲಿ ಇಡೀ ಭಾರತ ದೇಶ ಒಂದು, ಇಡೀ ಕರ್ನಾಟಕ ಒಂದು ಎಂದು ವಿಚಾರ ಮಾಡೋಣ. ನಮ್ಮ ಪ್ರಧಾನಮಂತ್ರಿಗಳ ನೇತೃತ್ವದಲ್ಲಿ ನಾವು ಈ ದೇಶದ ರಕ್ಷಣೆ ಮಾಡೋಣ. ಅದಕ್ಕೆ ನಾವೆಲ್ಲರೂ ಬೆಂಬಲ ಕೊಡೋಣ ಎಂದು ಹೇಳಿ ಅರಿಕೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಈಗ ಸಭೆಯು ಮೇಲೆದ್ದು ಮತ್ತೆ ನಾಳೆ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ರಾತ್ರಿ 8ಗಂಟೆ 12ನಿಮಿಷಕ್ಕೆ ಮುಗಿದು ಪುನಃ 18.2.93ರ ಬೆಳಿಗ್ಗೆ 10ಗಂಟೆಗೆ ಸೇರಲು ನಿಶ್ಚಯಿಸಿತು)

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನ ಸಭೆ

ಗುರುವಾರ 18ನೇ ಮಾರ್ಚ್ 1993 ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯು ಸಭಾಂಗಣದಲ್ಲಿ ಬೆಳಿಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಮಂಡ್ಯ ಜಿಲ್ಲಾ ಪರಿಷತ್ತಿಗೆ ಹಣ ಬಿಡುಗಡೆ

(2152): ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಂಡ್ಯ ಜಿಲ್ಲಾಪರಿಷತ್ತಿಗೆ ಸರ್ಕಾರದಿಂದ ಬಿಡುಗಡೆಯಾಗಬೇಕಾದ ಅನುದಾನ ಇನ್ನೂ ಕೂಡ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ. ಹಾಗಿದ್ದಲ್ಲಿ ಹಣ ಬಿಡುಗಡೆಗಾಗಿ ಸರ್ಕಾರ ಕೈಗೊಂಡ ಕ್ರಮವೇನು;

ಇ) ನೀರಾವರಿ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿನ ಐ.ಟಿ. ರಸ್ತೆಗಳು ಹಾಗೂ ನಾಲಾ ಸರ್ವಿಸ್ ರಸ್ತೆಗಳನ್ನು ನಿರ್ವಹಣೆ ಮಾಡಲು ಮತ್ತು ಅಭಿವೃದ್ಧಿಪಡಿಸಲು ಜಿಲ್ಲಾಪರಿಷತ್ ಗಮನಹರಿಸದಿರುವುದು ಸರ್ಕಾರ ಗಮನಿಸಿದೆಯೆ;

ಈ) ಹಾಗಿದ್ದಲ್ಲಿ ಈ ರಸ್ತೆಗಳನ್ನು ಸೂಕ್ತ ರೀತಿಯಲ್ಲಿ ನಿರ್ಮಾಣ ಹಾಗೂ ಅಭಿವೃದ್ಧಿಪಡಿಸಲು ಜಿಲ್ಲಾಪರಿಷತ್ ಗಮನಹರಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):–

ಅ. ಇನ್ನೂ ಸ್ವಲ್ಪ ಹಣವನ್ನು ಬಿಡುಗಡೆ ಮಾಡಬೇಕಾಗಿದೆ.

ಆ. ಬಾಕಿ ಇರುವ ಹಣವನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯು ಕ್ರಮ ತೆಗೆದುಕೊಳ್ಳುತ್ತಿದೆ.

ಇ. ಇಲ್ಲ.

ಈ. ಮಂಡ್ಯ ಜಿಲ್ಲಾಪರಿಷತ್ತಿನ ಎಲ್ಲಾ ತಾಲ್ಲೂಕುಗಳಲ್ಲೂ ನೀರಾವರಿ ಅಚ್ಚುಕಟ್ಟು ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವ ಐ.ಟಿ. ರಸ್ತೆ ಮತ್ತು ನಾಲಾ ಸರ್ವಿಸ್ ರಸ್ತೆಯ ನಿರ್ಮಾಣ ಮತ್ತು ಅಭಿವೃದ್ಧಿ ದುರಸ್ತಿ ಕೆಲಸಗಳನ್ನು ಅವಶ್ಯಕ ಮಾಹಿತಿ ಸಂಗ್ರಹಿಸಿದ ನಂತರ, ಅನುದಾನವು ಲಭ್ಯವಿದ್ದಲ್ಲಿ, ಆದ್ಯತೆ ಮೇರೆಗೆ ತೆಗೆದುಕೊಳ್ಳಲಾಗುವುದು.

ಶ್ರೀ ಎಂ.ಎಸ್. ಆತ್ಮಾನಂದ:– ಮಂಡ್ಯ ಜಿಲ್ಲಾ ಪರಿಷತ್ತಿಗೆ ಇನ್ನೂ ಹಣ ಬಿಡುಗಡೆ ಮಾಡಬೇಕೆಂದು ಉತ್ತರ ಕೊಟ್ಟಿದ್ದಾರೆ. ಮಂಡ್ಯ ಜಿಲ್ಲಾ ಪರಿಷತ್ತಿಗೆ ವಾರ್ಷಿಕವಾಗಿ ಎಷ್ಟು ಅನುದಾನ ಕೊಡಬೇಕಾಗಿತ್ತು, ಇನ್ನೂ ಎಷ್ಟು ಬಾಕಿ ಹಣ ಮಂಡ್ಯ ಜಿಲ್ಲಾ ಪರಿಷತ್ತಿಗೆ ಬಿಡುಗಡೆ ಮಾಡಬೇಕೆಂದು ಕೇಳುತ್ತೇನೆ ಜೊತೆಗೆ, ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿ ಬರತಕ್ಕ ನಾಲಾ ಸರ್ವಿಸ್ ರಸ್ತೆ, ಇರಿಗೇಷನ್ ಟ್ರಾಕ್ ರೋಡ್ಸ್ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿವೆ. ಜಿಲ್ಲಾ ಪರಿಷತ್ತಿನವರು ಇದರ ಮೇಲೆ ಸರಿಯಾಗಿ ನಿಗಾ

ವಹಿಸುವುದಿಲ್ಲ; ಅವರಿಗೆ ಆಸಕ್ತಿ ಇರುವುದಿಲ್ಲ. ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಆದಕಾರಣ ಈ ರಸ್ತೆಗಳನ್ನು ಅನುದಾನ ಸಹಿತವಾಗಿ ನೀರಾವರಿ ಇಲಾಖೆಗೆ ವಾಪಸ್ಸು ಕೊಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೆ ?

ಶ್ರೀ ಎಂ.ವೈ. ಘೋರ್ಪಡೆ:- ತಮ್ಮ ಎರಡನೆಯ ಪ್ರಶ್ನೆಗೆ ನಾನು ಪ್ರಾರಂಭದಲ್ಲೇ ಉತ್ತರ ಹೇಳುತ್ತೇನೆ. ಇರಿಗೇಷನ್ ಅಚ್ಚುಕಟ್ಟನಲ್ಲಿ ಏನು ರಸ್ತೆಗಳನ್ನು ಮಾಡಬೇಕು ಅದಕ್ಕೆ ಎಷ್ಟು ಹಣ ನಾವು ಕೊಟ್ಟಿರುತ್ತೇವೆ ಅದನ್ನು ಉಪಯೋಗಿಸಲೇಬೇಕು. ಈಗ ಆ ಕೆಲಸವನ್ನು ಪ್ರೈಯಾರಿಟಿ ಮೇಲೆ ಯಾವ ಅಚ್ಚುಕಟ್ಟಿನಲ್ಲಿ ಯಾವ ರಸ್ತೆ ತೆಗೆದುಕೊಳ್ಳಬೇಕೆಂದು ಒಂದು ಪಟ್ಟಿ ಮಾಡಿದ್ದೇವೆ. ಮತ್ತೆ ಅಲ್ಲಿ ಶಾಸಕರನ್ನು ಕೇಳಿ ಪ್ರೈಯಾರಿಟಿಯನ್ನು ಗೊತ್ತು ಮಾಡಿದ್ದು ಆಗಿದೆ. ಅದು ತಮಗೂ ಗೊತ್ತಿರಬೇಕು. ಪ್ರೈಯಾರಿಟಿ ಪ್ರಕಾರ ಆಯಕಟ್ಟು ರಸ್ತೆಗಳನ್ನು ಮಾಡುವುದರಲ್ಲಿ ಏನೂ ತೊಂದರೆ ಇಲ್ಲ. ಏನಾದರೂ ಅದರಲ್ಲಿ ತೊಂದರೆ ಅಥವಾ ವಿಳಂಬ ಇದ್ದರೆ ಅದನ್ನು ಅಲ್ಲಿ ಸರಿಪಡಿಸಬೇಕು. ನಾವು ಅದನ್ನು ಸರ್ಕಾರಕ್ಕೆ ವಾಪಸ್ಸು ತೆಗೆದುಕೊಂಡರೆ ಅವರಿಗೆ, ಹಿತವಾಗುವುದಿಲ್ಲ. ಏತಕ್ಕೆಂದರೆ ಆ ಕೆಲಸವನ್ನು ಅವರೇ ಮಾಡಬೇಕಾಗುತ್ತದೆ.

ಶ್ರೀ ಎಂ.ಎಸ್. ಆತ್ಮಾನಂದ:- ನೀರಾವರಿ ಇಲಾಖೆಗೆ ಕೊಟ್ಟರೆ ನೀರು ನಿರ್ವಹಣೆ ಮಾಡುವುದರ ಜೊತೆಗೆ ಇರಿಗೇಷನ್ ಟ್ರಾಕ್ ರೋಡ್ ಆಗಲಿ, ನಾಲಾ ರಸ್ತೆ ಆಗಲಿ ನೀರಾವರಿ ಇಲಾಖೆಯವರು ಉಪಯೋಗಿಸುವುದರಿಂದ ಅವರು ಉಸ್ತುವಾರಿ ಮಾಡಿದರೆ ಸಮಂಜಸವಾಗಿರುತ್ತದೆ. ಇಲ್ಲದಿದ್ದರೆ ರೈತ ರಸ್ತೆ ಬೇಕೆಂದರೆ ಜಿಲ್ಲಾ ಪರಿಷತ್ತಿನಲ್ಲಿ ಕೇಳುವುದು, ಸೇತುವೆ ಬೇಕೆಂದರೆ ನೀರಾವರಿ ಇಲಾಖೆಯಲ್ಲಿ ಕೇಳುವುದು, ಈ ಪರಿಸ್ಥಿತಿ ಇದೆ. ಆದ್ದರಿಂದ ಆ ರಸ್ತೆಗಳನ್ನು ಅನುದಾನ ಸಹಿತವಾಗಿ ನೀರಾವರಿ ಇಲಾಖೆಗೆ ವಾಪಸ್ಸು ಕೊಡುತ್ತೀರಾ ?

ಶ್ರೀ ಎಂ.ವೈ. ಘೋರ್ಪಡೆ:- ಇಂತಹ ವಿಚಾರಗಳನ್ನು ವಾಪಸ್ಸು ತೆಗೆದುಕೊಳ್ಳುವುದರ ಪರವಾಗಿ ನಾನು ಇಲ್ಲ. ಏಕೆಂದರೆ, ಜಿಲ್ಲಾ ಪರಿಷತ್ತಿನ ಪಟ್ಟಿಯಲ್ಲಿ ಏಕೆ ತೋರಿಸುತ್ತೇವೆ ಎಂದರೆ ಅಲ್ಲಿರತಕ್ಕ ಸ್ಥಳೀಯ ಜನರೇ ಅದರ ಬಗ್ಗೆ ಗಮನಕೊಡಬೇಕೆಂದು. ವಾಪಸ್ಸು ತೆಗೆದುಕೊಂಡರೆ ತಪ್ಪು ಆಗುತ್ತದೆ. ಅಲ್ಲಿರತಕ್ಕ ಜನ ಅದಕ್ಕಿಂತಲೂ ದಕ್ಷತೆಯಿಂದ ಮಾಡುತ್ತಾರೆಂದು ಆ ವ್ಯವಸ್ಥೆ ತಂದಿರತಕ್ಕದ್ದು. ಅಲ್ಲಿ ಈಗ ಪ್ರೈಯಾರಿಟಿ ಮೇಲೆ ರಸ್ತೆಗಳನ್ನು ಮಾಡುತ್ತಿದ್ದು ಇನ್ನೂ ಯಾವುದಾದರೂ ರಸ್ತೆ ಸೇರಿಸುವುದಿದ್ದರೆ ಸೇರಿಸೋಣ. ಆದರೆ ವಾಪಸ್ಸು ತೆಗೆದುಕೊಳ್ಳುವ ಪ್ರಶ್ನೆ ಇದರಲ್ಲಿ ಇಲ್ಲ. ಸಪ್ಲಿಮೆಂಟರಿಯಲ್ಲೂ ಕೂಡ ಇದನ್ನು ಎತ್ತಕೂಡದು ಎಂದು ಹೇಳುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ:- ಅನುದಾನದ ಬಗ್ಗೆ ತಾವು ಹೇಳಿಲ್ಲ. ಮಂಡ್ಯ ಜಿಲ್ಲಾಪರಿಷತ್ತಿಗೆ ಅನುದಾನ ಬಿಡುಗಡೆ ಆಗಿಲ್ಲ.

ಶ್ರೀ ಎಂ.ವೈ. ಘೋರ್ಪಡೆ:- ಈ ಪ್ರಶ್ನೆ ಬಂದಾಗ, ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಯಾವ ಯಾವ ಜಿಲ್ಲೆಗಳಿಗೆ ಕೊನೆಯ ಕ್ವಾರ್ಟರ್‌ನಲ್ಲಿ ಎಷ್ಟು ಹಣ ಕೊಡಬೇಕೆಂದು ಹೇಳಿ ಪಟ್ಟಿ ಮಾಡಿ ಮುಖ್ಯಮಂತ್ರಿಗಳಿಗೆ ಕಳುಹಿಸಿದ್ದೇನೆ. ಮುಖ್ಯಮಂತ್ರಿಗಳು ಹಣಕಾಸಿನ ಮಂತ್ರಿಗಳೂ ಆಗಿದ್ದಾರೆ. ಅದನ್ನು ಮಾರ್ಚಿ ಒಳಗೆ ರಿಲೀಸ್ ಮಾಡುತ್ತೇನೆಂದು ಸ್ಪಷ್ಟವಾಗಿ ಹೇಳಿದ್ದಾರೆ. ನನ್ನ ಕಡೆ ಇರತಕ್ಕ ಅಂಕಿಸಂಖ್ಯೆ ಜನವರಿ ಕೊನೆ ಹಾಗೂ ಫೆಬ್ರವರಿ ಪ್ರಾರಂಭದಲ್ಲಿ ಏನು ಇತ್ತು ಅಷ್ಟು ಮಾತ್ರ ಇದೆ. ಇದರ ಪ್ರಕಾರ ಮಂಡ್ಯ ಜಿಲ್ಲೆಗೆ 67 ಕೋಟಿ ರೂಪಾಯಿ ಅಲೋಕೇಟ್ ಆಗಿದ್ದು, ಅದರಲ್ಲಿ 52 ಕೋಟಿ ರಿಲೀಸ್ ಆಗಿದೆ. ಇನ್ನೂ 15 ಕೋಟಿ ರೂಪಾಯಿ ರಿಲೀಸ್ ಆಗಬೇಕಾಗಿದೆ. ಇದು ಜನವರಿ ಆಖೈರು, ಫೆಬ್ರವರಿ ಮೊದಲಿಗೆ ಇದ್ದ ಸ್ಥಿತಿ. ಇದು ಆಮೇಲೆ ಮತ್ತೆ ರಿಲೀಸ್ ಮಾಡಿರಬೇಕು. ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ನದು ಹಾಗೂ ಬೇರೆ ಬೇರೆ ಡಿಪಾರ್ಟ್‌ಮೆಂಟಿನದು ಇದೆ.

ಎಫ್.ಡಿ.ದೂ ಇದೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ರಿಲೀಸ್ ಆಗುವ ಹಣ ಪ್ಲಾನ್‌ನಲ್ಲಿ 2 ಕೋಟಿ ರೂಪಾಯಿ ರಿಲೀಸ್ ಆಗಬೇಕಾಗುತ್ತದೆ. ನಾನ್ ಪ್ಲಾನ್‌ನಲ್ಲಿ 3 ಕೋಟಿ 50 ಲಕ್ಷ ರಿಲೀಸ್ ಆಗಬೇಕಾಗಿತ್ತು. ಈ ಎರಡೂ ಹಣವನ್ನು ಮಾರ್ಚಿ 25 ನೇ ತಾರೀಖು ಒಳಗೆ ನಾವು ರಿಲೀಸ್ ಮಾಡುತ್ತೇವೆಂದು ವಿತ್ತ ಇಲಾಖೆಯವರು ಹೇಳಿದ್ದಾರೆ. ಆ ಕಾರಣದಿಂದ ಮಂಡ್ಯ ಜಿಲ್ಲೆಯಲ್ಲಿ ಹಣದ ಅಭಾವ ಇರುವುದರಿಂದ ಯಾವ ಕೆಲಸಕ್ಕೂ ಅನಾನುಕೂಲವಾಗುವುದಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಮಂತ್ರಿಗಳು ಮಂಡ್ಯ ಜಿಲ್ಲಾಪರಿಷತ್ತಿಗೆ ಹಣದ ಬಿಡುಗಡೆ ಮಾಡುವ ಬಗ್ಗೆ ವಿತ್ತ ಮಂತ್ರಿಗಳ ಜೊತೆ ಚರ್ಚೆ ಮಾಡಿದ್ದೇವೆಂದು ಹೇಳಿದ್ದಾರೆ. ಜನವರಿ ನಂತರ ಕೆಲವು ಜಿಲ್ಲೆಗಳಿಗೆ 2 ಕೋಟಿ ಕೊಟ್ಟಿದ್ದಾರೆಯೇ ಹೊರತು ಇನ್ನೂ ಹೆಚ್ಚು ಜಿಲ್ಲೆಗಳಿಗೆ 8 ಕೋಟಿ 10 ಕೋಟಿ ರೂಪಾಯಿವರೆಗೆ ಬಿಡುಗಡೆ ಆಗಬೇಕಾಗಿದೆ. ಹೀಗೆ ಸುಮಾರು 18 ರಿಂದ 200 ಕೋಟಿ ರೂಪಾಯಿ ಬಿಡುಗಡೆ ಆಗಬೇಕಾಗಿದೆ. ಗ್ರಾಮೀಣ ಅಭಿವೃದ್ಧಿ ಎಂದರೆ ಬರೀ ನಿಮ್ಮ ಒಂದೇ ಇಲಾಖೆ ಬರುವುದಿಲ್ಲ. ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಜಿಲ್ಲಾ ಪರಿಷತ್ತಿನಿಂದ ಬಿಡುಗಡೆ ಆಗತಕ್ಕ ಹಣದ ಬಗ್ಗೆ, ಯೋಜನೆಗಳ ಬಗ್ಗೆ ತೊಂದರೆ ಆಗುವುದಿಲ್ಲ ಎಂದರೆ ಹೇಗೆ ? ಇವತ್ತು ಎಲ್ಲಾ ಕೆಲಸಗಳು ಸ್ಥಗಿತವಾಗಿವೆ.

(4-5 ಸದಸ್ಯರು ಎದ್ದು ನಿಂತು ಸದಸ್ಯರ ಅಭಿಪ್ರಾಯಕ್ಕೆ ಧ್ವನಿಗೂಡಿಸುತ್ತಿದ್ದರು.)

ಇದೇ ಅಭಿಪ್ರಾಯ ಎಲ್ಲಾ ಸದಸ್ಯರಲ್ಲಿ ಇದೆ. ಹಣಕಾಸಿನ ಮಂತ್ರಿಗಳಾದ ಮುಖ್ಯಮಂತ್ರಿಗಳಿಗೆ ತಾವು ಪತ್ರವನ್ನು ಬರೆದಿದ್ದೀರಿ. ಬಿಡುಗಡೆ ಮಾಡುವುದಕ್ಕೆ ತಿಳಿಸಿದ್ದೇನೆ ಎಂದು ಹೇಳಿದ್ದೀರಿ. ಅದು ಸರಿ, ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಾಗಿ ತಮ್ಮ ಕೆಲಸ ತಾವು ಮಾಡಿದ್ದೀರಿ. ನಮಗೆ ಹಣ ಬೇಕಾಗುತ್ತದೆ. ಆದ್ದರಿಂದ ಸರ್ಕಾರಕ್ಕೆ ನನ್ನ ಮನವಿ ಒಂದೇ. ಇವತ್ತು ಎಲ್ಲಾ ಕೆಲಸಗಳು ಸ್ಥಗಿತವಾಗಿವೆ. ಎಲ್ಲಾ ಸದಸ್ಯರದ್ದೂ ಇದೇ ಅಭಿಪ್ರಾಯ ಇದೆ. ದಯವಿಟ್ಟು ಕೊನೆಯ ಪಕ್ಷ 'ಈ ತಿಂಗಳ 30ನೇ ತಾರೀಖು ಒಳಗೆ ಹಣಕಾಸನ್ನು ಬಿಡುಗಡೆ ಮಾಡುತ್ತೇನೆಂದು ಹೇಳಬೇಕು.

ಶ್ರೀ ಎಂ.ವೈ. ಘೋರ್ಪಡೆ:– ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಬಡ್ಜೆಟಿನಲ್ಲಿ ಎಷ್ಟು ಹಣ ಇದೆ ಆ ಹಣವನ್ನು ಸಂಪೂರ್ಣವಾಗಿ ಮಾರ್ಚಿ ಒಳಗೆ ಬಿಡುಗಡೆ ಮಾಡುತ್ತೇವೆಂದು ಇದರ ಬಗ್ಗೆ ಸ್ಪಷ್ಟವಾದ ಹೇಳಿಕೆ ಕೊಟ್ಟಿದ್ದಾರೆ. ಅದರ ಬಗ್ಗೆ ಅನುಮಾನ ಬೇಕಾಗಿಲ್ಲ. ಆದರೂ ಕೂಡ ಟೋಟಲ್ ಅಲೋಕೇಷನ್ ಎಷ್ಟು ಇದೆ ಅದರಲ್ಲಿ ಕಾಲು ಭಾಗ ಕೊನೆಯ 3 ತಿಂಗಳಲ್ಲಿ ಬಿಡುಗಡೆ ಆಗಬೇಕು.

ಜನವರಿ ಫೆಬ್ರುವರಿ ಮತ್ತು ಮಾರ್ಚಿಯಲ್ಲಿ ವಿಳಂಬವಾಗಿದೆ ಎಂದು ನನಗೆ ಅನ್ನಿಸಿರುವುದರಿಂದ ನಾನು ಪತ್ರ ಬರೆದಿದ್ದೇನೆ. ನೀವು ಪ್ರಶ್ನೆ ಎತ್ತಿದ್ದೀರಿ, ಸಂಪೂರ್ಣವಾಗಿ ಇದರಲ್ಲಿ ಮೂರು ಅಂಶ ಇದೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ರಿಲೀಸ್ ಆದಂತಹ ಹಣ, ಆರ್‌ಡಿಪಿಆರ್‌ನಿಂದ ರಿಲೀಸ್ ಆಗುವ ಹಣ, ಬೇರೆ ಇಲಾಖೆಗಳಿಂದ ರಿಲೀಸ್ ಆಗುವಂತಹ ಹಣ ನನ್ನ ಕಡೆ ಜನವರಿ ಆಖೈರಿಗೆ ಏನು ಪರಿಸ್ಥಿತಿ ಇತ್ತು ಅದು ಇದೆ. ಅದು ಆದನಂತರ ಸಾಕಷ್ಟು ಪ್ರಶ್ನೆಗಳನ್ನು ಕೇಳಿದ್ದಾರೆ. ನಾನು ಮಂತ್ರಿಯಾಗಿ ಈ ಬಗ್ಗೆ ಏನು ಮಾಡಬೇಕು ನಾನು ಮಾಡಿದ್ದೇನೆ. ಫೆಬ್ರುವರಿ ತಿಂಗಳಿನಲ್ಲಿ ಹಣ ಬಿಡುಗಡೆಯಾಗಿದೆ. ಆದರೆ ಪೂರ್ತಿ ಬಿಡುಗಡೆಯಾಗಿದೆಯೆಂದು ನಾನು ಹೇಳುತ್ತಿಲ್ಲ. ಮಂಡ್ಯಕ್ಕೆ ಸಂಬಂಧಪಟ್ಟ ಹಾಗೆ ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ 2 ಕೋಟಿ ಮಾತ್ರ ಪ್ಲಾನ್‌ಗೋಸ್ಕರ ಬಿಡುಗಡೆಯಾಗಿದೆ. ನಾನ್ ಪ್ಲಾನ್ ಅಂದರೆ ಅದು ಸಂಬಳಕ್ಕೆ ಸಂಬಂಧಪಟ್ಟಿದ್ದು. ಅದರಿಂದ ಕಾಮಗಾರಿಗಳು ನಿಲ್ಲುವುದಿಲ್ಲ ಅದನ್ನು ದಯವಿಟ್ಟು ನೀವು ಅರ್ಥ ಮಾಡಿಕೊಳ್ಳಬೇಕು. ಉದಾಹರಣೆಗೆ ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಮಂಡ್ಯ ಜಿಲ್ಲೆಗೆ ಪ್ಲಾನ್‌ನಲ್ಲಿ 2 ಕೋಟಿ ರಿಲೀಸ್ ಆಗಬೇಕಾಗಿತ್ತು. ಅದು 25 ನೇ ತಾರೀಖಿನೊಳಗಾಗಿ

ಮಾಡುತ್ತೇವೆಂದು ಹೇಳಿದ್ದಾರೆ. ಹೆಚ್ಚು ಕಡಿಮೆ ಇದೇ ಪರಿಸ್ಥಿತಿ ಬೇರೆ ಬೇರೆ ಜಿಲ್ಲೆಗಳಲ್ಲಿರುತ್ತದೆ. ನಾನ್‌ಪ್ಲಾನ್‌ನಲ್ಲಿ ರಿಲೀಸ್ ಆಗದಿದ್ದರೆ ಯಾವ ಕಾಮಗಾರಿಗೆ ಧಕ್ಕೆ ಬರುತ್ತದೆ, ಅಪಾಯ ಬರುತ್ತದೆ ಎನ್ನುವುದನ್ನು ನಾನು ಒಪ್ಪಲಿಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್.ಹೆಚ್. ಕೌಜಲಗಿ:– ಹಣ ಖರ್ಚು ಮಾಡಲಿಕ್ಕೆ ಸಮಯವನ್ನು ಮೂರು ತಿಂಗಳು ಕೊಡುತ್ತೀರಾ ? ಹೋದವರ್ಷ ಏಪ್ರಿಲ್, ಮೇ, ಜೂನ್ ತಿಂಗಳವರೆಗೆ ಎಕ್ಸ್‌ಟೆಂಡ್ ಮಾಡಿದ್ದರು. ಅದರ ಪ್ರಕಾರ ಈ ವರ್ಷ ಸಹ ಎಕ್ಸ್‌ಟೆಂಡ್ ಮಾಡುತ್ತೀರಾ ಎಂದು ಕೇಳುತ್ತೇನೆ.

ಅಧ್ಯಕ್ಷರು:– ಮಂತ್ರಿಗಳಿಗೆ ಉತ್ತರ ಹೇಳಲು ಈಗಾಗಲೇ 8 ನಿಮಿಷ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ:– 15–20 ಪರ್ಸೆಂಟ್ ಹಣ ಪಿಲ್‌ಓವರ್ ಆಗುತ್ತಿದೆ, ವರ್ಷೇ ವರ್ಷೇ ಆಗುತ್ತಿರುವುದು ತಮಗೆ ಗೊತ್ತಿದೆ. ಬಜೆಟ್‌ನಲ್ಲಿ ಏನು ಹಣ ಇದೆ ಅದನ್ನು ಸರ್ಕಾರ ಬಿಡುಗಡೆ ಮಾಡಿಯೇ ಮಾಡುತ್ತದೆ. ಅದರಲ್ಲಿ ಏನೂ ಅನುಮಾನವಿಲ್ಲ.

ಅಧ್ಯಕ್ಷರು:– ಮಾನ್ಯ ಶಿವಮೂರ್ತಿಯವರೇ ತಮ್ಮ ಪ್ರಶ್ನೆಗೆ ಮೂರು ವಾರ ಕಾಲಾವಕಾಶ ಕೇಳಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಮಾಹಿತಿ ಪಡೆಯಬೇಕಾಗಿರುವುದರಿಂದ ಅದಕ್ಕೆ ಉತ್ತರ ಕೊಡಲು ಮೂರು ವಾರ ಕಾಲಾವಕಾಶ ಕೇಳಿ ಮಂತ್ರಿಗಳು ಪತ್ರ ಬರೆದಿದ್ದಾರೆ. ಆದ್ದರಿಂದ ತಮ್ಮ ಪ್ರಶ್ನೆಯನ್ನು ಮುಂದೂಡಲಾಗಿದೆ.

ಶ್ರೀ ಕೆ. ಶಿವಮೂರ್ತಿ:– ಅಷ್ಟರಲ್ಲಿ ಈ ಸದನ ಮುಗಿದಿರುತ್ತದೆ.

ಶ್ರೀಮತಿ ಮಲ್ಲಾಜಮ್ಮ:– ಮೂರು ವಾರಗಳವರೆಗೆ ಈ ಸದನ ನಡೆಯುತ್ತದೆಯೆ ?

ಅಧ್ಯಕ್ಷರು:– ನಡೆಯುತ್ತದೆ.

ಶ್ರೀ ಕೆ. ಶಿವಮೂರ್ತಿ:– ಈ ಸದನ ಮುಗಿಯುವುದರೊಳಗೆ ಉತ್ತರ ತರಿಸಿಕೊಡುವ ಭರವಸೆ ಕೊಟ್ಟರೆ ಸಾಕು.

ಅಧ್ಯಕ್ಷರು:– ನಾನು ಆದಷ್ಟು ಪ್ರಯತ್ನ ಮಾಡುತ್ತೇನೆ.

ತೀರ್ಥಹಳ್ಳಿ ತಾಲ್ಲೂಕು ಶಂಕರಹಳ್ಳಿ ಗ್ರಾಮದಲ್ಲಿ ಜವಹರ್ ರೋಜಗಾರ್ ಯೋಜನೆ

(2027): ಶ್ರೀ ಬಿ. ಸ್ವಾಮಿರಾವ್ (ಹೊಸನಗರ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ತೀರ್ಥಹಳ್ಳಿ ತಾಲ್ಲೂಕು ಅಗ್ರಹಾರ ಹೋಬಳಿ ಶಂಕರಹಳ್ಳಿ ಗ್ರಾಮದ ಸರ್ವೆ ನಂಬರು 17ರಲ್ಲಿರುವ ಮುಳ್ಳುಕೆರೆ ರಿಪೇರಿ ಬಾಬ್ತು ಜಿಲ್ಲಾಪರಿಷತ್‌ನವರು 1991-92 ರ ಜವಾಹರ್ ರೋಜಗಾರ್ ಕ್ರಿಯಾ ಯೋಜನೆಯಡಿಯಲ್ಲಿ ಮಂಜೂರಾತಿ ನೀಡಿರುವುದು ನಿಜವೇ;

ಆ. 1991–92 ರಲ್ಲಿ ಸದರಿ ಕಾಮಗಾರಿ ಬಗ್ಗೆ ಕೆಲಸ ನಿರ್ವಹಿಸದೆ ಹಣ ಖರ್ಚು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಸದರಿ ಗ್ರಾಮಸ್ಥರು ತಾಲ್ಲೂಕು ಸಮಿತಿಗೆ ದೂರು ಕೊಟ್ಟಿದ್ದು ತನಿಖೆ ನಡೆಸಿದ್ದು ನಿಜವೇ ? ತಪ್ಪಿತಸ್ಥ ಅಧಿಕಾರಿಗಳ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ. ಹೌದು.

ಆ. ಮುಳ್ಳುಕೆರೆ ರಿಪೇರಿ ಕಾಮಗಾರಿಗೆ ಬದಲಾಗಿ ಶ್ರೀ ಗೋಪಾಲಕೃಷ್ಣ ಎಂಬುವರ ಜಮೀನಿನಲ್ಲಿ ಬೇರೆ ಕಡೆಯಿಂದ, ಅವರ ಜಮೀನಿಗೆ ಹರಿದು ಬರುವ ಮಳೆ ನೀರನ್ನು ತಪ್ಪಿಸಲು ಜಮೀನಿಗೆ ಕಾಲುವೆ ಕಾಮಗಾರಿಯನ್ನು ತೆಗೆದುಕೊಂಡು 3424 ರೂ.ಗಳನ್ನು ಖರ್ಚು ಮಾಡಿರುತ್ತಾರೆ.

ಇ. ದಿನಾಂಕ 25-11-92ರಂದು ಶಂಕರಹಳ್ಳಿ ಗ್ರಾಮಸ್ಥರು ತಾಲ್ಲೂಕು ಪಂಚಾಯ್ತಿ ಸಮಿತಿ ತೀರ್ಥಹಳ್ಳಿ, ಇವರಿಗೆ ದೂರು ಕೊಟ್ಟಿರುವುದು ನಿಜ. ಶಿವಮೊಗ್ಗ ಜಿಲ್ಲಾಪರಿಷತ್‌ನ ಮುಖ್ಯ ಕಾರ್ಯದರ್ಶಿಗಳು ಸಂಬಂಧಿಸಿದ ಮಂಡಲ್ ಪಂಚಾಯತ್ ಕಾರ್ಯದರ್ಶಿ ಹಾಗೂ ಕಿರಿಯ ಅಭಿಯಂತರರು ಇವರುಗಳ ಮೇಲೆ ಕಾನೂನು ರೀತ್ಯ ಶಿಸ್ತಿನ ಕ್ರಮವನ್ನು ತೆಗೆದುಕೊಂಡಿರುತ್ತಾರೆ.

ಶ್ರೀ ಬಿ. ಸ್ವಾಮಿರಾವ್:– ಮಾನ್ಯ ಅಧ್ಯಕ್ಷರೇ, ತೀರ್ಥಹಳ್ಳಿ ತಾಲ್ಲೂಕು, ಅಗ್ರಹಾರ ಹೋಬಳಿ, ಸಂಕ್ರಳ್ಳಿ ಗ್ರಾಮದ ಸರ್ವೆ ನಂ. 17ರಲ್ಲಿ ಮುಳ್ಳುಕೆರೆ ರಿಪೇರಿಗಾಗಿ ಜಿಲ್ಲಾಪರಿಷತ್‌ನಿಂದ ಜವಹರ ರೋಜ್‌ಗಾರ್ ಯೋಜನೆಯಲ್ಲಿ ಹಣ ಮಂಜೂರು ಆಗಿದೆಯೆಂದು ಕೇಳಿದ್ದೇನೆ. ಅದನ್ನು ಒಪ್ಪಿಕೊಂಡಿದ್ದಾರೆ. ಆದರೆ ಕಾಮಗಾರಿ ಆಗಿದೆಯೆಂದು ಹೇಳಲಿಲ್ಲ. ಆ ಕಾಮಗಾರಿ ಆಗಿಲ್ಲ ಬೇರೆ ಕಾಮಗಾರಿಯಾಗಿದೆಯೆಂದು ಉತ್ತರ ಕೊಟ್ಟಿರುವುದು ಬಹಳ ವಿಚಿತ್ರವಾಗಿದೆ. ಜಮೀನಿಗೆ ನೀರು ಕೊಡಲಾಗಿದೆ. ಕೆರೆ ರಿಪೇರಿ ಮಾಡಬೇಕೆಂದು ಅಧಿಕಾರಿಗಳಿಗೆ ಅರ್ಜಿ ಕೊಟ್ಟು ಮಂಜೂರಿ ಆಗಿದ್ದರೆ ನೀರು ಜಾಸ್ತಿಯಿದೆಯೆಂದು ಹೇಳಿ ಗೋಪಾಲಕೃಷ್ಣ ಎಂಬುವರ ಜಮೀನಿಗೆ ಹೋಗುವುದನ್ನು ತಪ್ಪಿಸುವುದಕ್ಕೋಸ್ಕರ ರಿಪೇರಿ ಮಾಡಿದ್ದೇವೆಂದು ಹೇಳುತ್ತಾರೆ. ಈ ತರಹ ಕ್ರಮ ತೆಗೆದುಕೊಂಡಿರುವುದು ನಮಗೇನೂ ಗೊತ್ತಿಲ್ಲ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಅದನ್ನು ತಿಳಿಯಬಯಸುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ:– ಮಾನ್ಯ ಅಧ್ಯಕ್ಷರೆ, ಮುಳ್ಳುಕೆರೆ ರಿಪೇರಿಗೆ ಹಣ ಕೊಟ್ಟಿದ್ದು 3,424 ರೂಪಾಯಿ. ಇದು ಗೋಪಾಲಕೃಷ್ಣರವರ ಹೊಲದಲ್ಲಿ ಖರ್ಚಾಗಿದೆ ಎನ್ನುವ ಮಾತನ್ನು ನಾನೇ ಹೇಳಿದ್ದೇನೆ. ಇದು ಸರಿಯಲ್ಲವೆಂದು ಗೊತ್ತಾಗಿದೆ. ಇದರ ಬಗ್ಗೆ ಕಂಪ್ಲೈಂಟ್ ಬಂತು. ತೀರ್ಥಹಳ್ಳಿ ತಾಲ್ಲೂಕು ಸಮಿತಿಗೆ ದಿನಾಂಕ 25–11–92ರಲ್ಲಿ ಕಂಪ್ಲೈಂಟ್ ಬಂದಾಗ ಅದನ್ನು ವಿಚಾರಣೆ ನಡೆಸಿ ಮಂಡಲ ಪಂಚಾಯಿತಿ ಸೆಕ್ರೆಟರಿ ಮತ್ತು ಜೂನಿಯರ್ ಇಂಜಿನಿಯರ್ ಏನಿದ್ದಾರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವಂತಹ ಕೆಲಸವನ್ನು ಮುಖ್ಯ ಕಾರ್ಯದರ್ಶಿಯವರು ಮಾಡಿದ್ದಾರೆ. ಏನು ಕ್ರಮ ತೆಗೆದುಕೊಂಡಿದ್ದಾರೆ, ಏನಾಗಿದೆ ಎಂಬ ಮಾಹಿತಿ ನನ್ನಲ್ಲಿ ಇಲ್ಲ. ಕ್ರಮ ಅಂತೂ ತೆಗೆದುಕೊಂಡಿದ್ದಾರೆ. ಇದು ಸಣ್ಣ ವಿಷಯ ಇದ್ದರೂ ಕೂಡ ಅಲ್ಲಿ ಅಕ್ರಮ ನಡೆದಿರುವುದರಿಂದ ಈ ರೀತಿ ಚೀಫ್ ಸೆಕ್ರೆಟರಿಯವರಿಗೆ ಅನಿಸಿರುವುದರಿಂದ, ಅವರು ಮಂಡಲ ಪಂಚಾಯತ್ ಸೆಕ್ರೆಟರಿ ಮತ್ತು ಜೂನಿಯರ್ ಇಂಜಿಯನಿಯರ್ ಮೇಲ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ಸ್ವಾಮಿರಾವ್:– ಇದು ಸಣ್ಣ ಮೊತ್ತದ ಹಣ ಆಗಿದ್ದರೂ ಕೂಡ ರೋಜಗಾರ್‌ನಲ್ಲಿ ಬರತಕ್ಕಂಥ ಹಣ ಗ್ರಾಮಾಂತರ ಪ್ರದೇಶಗಳಿಗೆ ಸರಿಯಾಗಿ ವಿನಿಯೋಗವಾಗುತ್ತಿಲ್ಲ. ಸಾಮಾನ್ಯವಾಗಿ ಇಂತಹ ಹಣದೊಳಗೆ ಇಂಜಿನಿಯರುಗಳು, ಜೂನಿಯರ್ ಇಂಜಿನಿಯರುಗಳು ಎಲ್ಲ ಸೇರಿ ಕಾಮಗಾರಿಯನ್ನು ಟೇಬಲ್ ಮೇಲೆ ಮಾಡಿರುತ್ತಾರೆ. ನೀರಾವರಿ ಕಾಮಗಾರಿ ಇರಬಹುದು, ಬೇರೆ ಯಾವುದೇ ಕಾಮಗಾರಿ ಇರಬಹುದು, ಭೂಮಿ ಮೇಲೆ ಮಾಡುವುದನ್ನು ಅವರು ಟೇಬಲ್ ಮೇಲೆ ಮಾಡಿರುತ್ತಾರೆ. ಅದಕ್ಕೋಸ್ಕರ ಇಂತಹ ಒಂದೆರಡು ಪ್ರಕರಣಗಳಲ್ಲಿ ನೇರವಾಗಿ ಸಿಕ್ಕಿದುದಾಗಿ ಕ್ರಮ

ತೆಗೆದುಕೊಂಡರೆ ಮುಂದೆ ಕೊಡತಕ್ಕಂಥ ದುಡ್ಡು ಸದುಪಯೋಗವಾಗುತ್ತದೆ. ಅವರ ಮೇಲೆ ಶೀಘ್ರ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ಈ ಸದನದ ಮೂಲಕ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ:– ಅದಕ್ಕೋಸ್ಕರ ಈಗ ಇರತಕ್ಕಂಥ ಕಾನೂನಿನಲ್ಲಿ ಸ್ವಲ್ಪ ಬಿಗಿ ಮಾಡಬೇಕಾಗಿದೆ ಮತ್ತು ಇಂತಹ ಅಕ್ರಮ ನಡೆದರೆ ಇದಕ್ಕೆ ಸಾಕಷ್ಟು ಅಧಿಕಾರ ಸರ್ಕಾರಕ್ಕೂ ಕೂಡ ಇರಬೇಕಾಗುತ್ತದೆ. ಈ ರೀತಿ ಅಕ್ರಮಗಳನ್ನು ತಪ್ಪಿಸುವುದಕ್ಕೆ ಕೂಡ ವ್ಯವಸ್ಥೆ ಸರಿಯಾಗಿ ಮಾಡಬೇಕಾಗುತ್ತದೆ. ಪಂಚಾಯತ್ ರಾಜ್ ಬಿಲ್ ಏನಿದೆ, ಅದರಲ್ಲಿ ಇರುವ ಕಾನೂನಿನ ದೋಷಗಳನ್ನು ನಾವು ನಮ್ಮ ಹೊಸ ಬಿಲ್ಲಿನಲ್ಲಿ ಸರಿಪಡಿಸಲಿಕ್ಕೆ ಪ್ರಯತ್ನ ಮಾಡಿದ್ದೇವೆ.

ರಾಜ್ಯದಲ್ಲಿನ ಗ್ರಾಮ ಸಹಾಯಕರು

(2101): ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಗ್ರಾಮ ಸಹಾಯಕರು ಸೇವೆಯಲ್ಲಿರುವವರ ಸಂಖ್ಯೆ ಎಷ್ಟು;

ಆ. ಅವರಿಗೆ ತಿಂಗಳೊಂದಕ್ಕೆ ನೀಡುವ ಸಂಬಳದ ಮೊತ್ತವೆಷ್ಟು;

ಇ. ಅವರನ್ನು 'ಡಿ' ದರ್ಜೆ ನೌಕರರೆಂದು ಪರಿಗಣಿಸಲು ಸರ್ಕಾರವು ನಿರ್ಧರಿಸಿದೆಯೆ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಮಂತ್ರಿಗಳು):–

ಅ. 10450 ಮಿತ ವೇತನದ ಹುದ್ದೆಗಳು

ಆ. ನಿಗದಿತ ಸಂಭಾವನೆ ಮಾಸಿಕ ರೂ. 600.00

ಇ. ಇಲ್ಲ

ಶ್ರೀ ಎಂ. ಕೆ. ಪಟ್ಟಣಶೆಟ್ಟಿ:– ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಗ್ರಾಮ ಸಹಾಯಕರುಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ 10,450 ಎಂದು ಹೇಳಿದ್ದಾರೆ. ಅವರ ಸಂಬಳ ಎಷ್ಟು ಎಂದು ಕೇಳಿದರೆ, ಮಾಸಿಕವಾಗಿ 600 ರೂ.ಗಳೆಂದು ಹೇಳಿದ್ದಾರೆ. ಅವರನ್ನು 'ಡಿ' ದರ್ಜೆಯ ನೌಕರರೆಂದು ಸರ್ಕಾರವು ಪರಿಗಣಿಸುವುದೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಗ್ರಾಮ ಸಹಾಯಕರು ಕಂದಾಯ ಇಲಾಖೆಯಲ್ಲಿ ಒಂದು ಪ್ರಮುಖವಾದ ಅಂಗ. ಅಂತಹವರಿಗೆ ಕೊಡುವ ಸಂಬಳ ಬಹಳ ಕಡಿಮೆಯಾಗಿದೆ. ಬೆಲೆಯೇರಿಕೆಯ ತುಟ್ಟಿ ದಿವಸಗಳಲ್ಲಿ ಅವರಿಗೆ ಆರುನೂರು ರೂಪಾಯಿ ಸಂಬಳ ಎಂದರೆ ಬಹಳ ಕಡಿಮೆಯಾಗುತ್ತದೆ. ಕನಿಷ್ಠಪಕ್ಷ ಅವರಿಗೆ ಒಂದು ಸಾವಿರವಾದರೂ ಸಂಬಳ ಕೊಡಬೇಕೆಂದು ಕೇಳುತ್ತೇನೆ. ಹಾಗೆಯೇ ಅವರಿಗೆ ನೌಕರಿ ಭದ್ರತೆ ಇಲ್ಲದಿದ್ದರೆ ಅವರ ಜೀವನಕ್ಕೆ ಬಹಳಷ್ಟು ತೊಂದರೆಯಾಗುತ್ತದೆ. ಅವರನ್ನು ಕನಿಷ್ಠ 'ಡಿ' ದರ್ಜೆ ನೌಕರರೆಂದು ಪರಿಗಣಿಸಬೇಕು ಮತ್ತು ಈ ದಿಸೆಯಲ್ಲಿ ತಾವು ಯೋಚನೆ ಮಾಡಬೇಕೆಂದು ಕೇಳಿಕೊಂಡು, ಇದರ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರೆಂದು ಆಶಯ ಮಾಡುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ:– ಅವರನ್ನು 'ಡಿ' ದರ್ಜೆಯಾಗಿ ಮಾಡಿದರೆ 18 ಕೋಟಿ ರೂಪಾಯಿ ನಷ್ಟವಾಗುತ್ತದೆ. ತಿಂಗಳಿಗೆ ಆರುನೂರು ರೂಪಾಯಿ ಸಂಬಳ ಕೊಡುವುದರಿಂದ 7 ಕೋಟಿ ಖರ್ಚಾಗುತ್ತದೆ. 11 ಕೋಟಿ ಫೈನಾನ್ಸಿಯಲ್ ಇಂಪ್ಲಿಕೇಶನ್ ಆಗುತ್ತದೆ. ಇದು ಮೂರನೆಯ ವೇತನಾ ಆಯೋಗದ ಮುಂದೆ ಹೋಗಿ ಅವರು ಶಿಫಾರಸ್ಸು ಮಾಡಿ ಕಳುಹಿಸಿದ್ದರು. ಕ್ಯಾಬಿನೆಟ್ ಸಬ್

ಕಮಿಟಿಯವರ ಮುಂದೆಯೂ ಕೂಡ ಹೋಗಿತ್ತು. ಆದರೆ ಅವರು ಕ್ರಮ ತೆಗೆದುಕೊಂಡಿಲ್ಲ. ಈಗ ನಾಲ್ಕನೇ ವೇತನಾ ಆಯೋಗಕ್ಕೆ ಮುಂದೆ ರೆಫರ್ ಮಾಡಿದ್ದೇವೆ. ಅದನ್ನು ಕಾದು ನೋಡೋಣ.

ಶ್ರೀ ಎಂ.ಕೆ. ಪಟ್ಟಣಶೆಟ್ಟಿ:– ಸಂಬಳವಾದರೂ ಜಾಸ್ತಿ ಮಾಡಿ.

ಶ್ರೀ ಎಂ.ವೈ. ಘೋರ್ಪಡೆ:– ನಾಲ್ಕನೇ ವೇತನಾ ಆಯೋಗದ ಅಭಿಪ್ರಾಯ ಬರುವವರೆಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಸಿದ್ದಯ್ಯ:– ಇವರು 10 ಸಾವಿರ ಜನ ಇದ್ದಾರೆಂದು ಹೇಳಿದ್ದೀರಿ. ಇವರಲ್ಲಿ ಎಸ್.ಸಿ. ಎಸ್.ಟಿ. ಜನ ಎಷ್ಟು ಇದ್ದಾರೆ ಮತ್ತು ಇದಕ್ಕೆ ಅಪಾಯಿಂಟಿಂಗ್ ಅಥಾರಿಟಿ ಯಾರು ?

ಶ್ರೀ ಎಂ.ವೈ. ಘೋರ್ಪಡೆ:– ಈ ಬ್ರೇಕ್‌ಅಪ್ ಫಿಗರ್ಸ್ ನನ್ನ ಹತ್ತಿರ ಇಲ್ಲ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಹಿಂದೆ ಹಣಕಾಸಿನ ಮಂತ್ರಿಯಾಗಿದ್ದವರು ಈಗ ಕಂದಾಯ ಮಂತ್ರಿಗಳಾಗಿದ್ದಾರೆ. ಈಗ 18 ಕೋಟಿ ಬೇಕಾಗುತ್ತದೆ ಎಂದು ಹೇಳಿದರು. ಈಗ ಕೊಡುತ್ತಿರುವುದು 7 1/2 ಕೋಟಿ ಎಂದು ಹೇಳಿದ್ದಾರೆ. ನಾನು ಗುಣಾಕಾರ ಮಾಡಿದೆ. 10450 x 12 x 600 ಮಾಡಿದರೆ ಅದು 7.524 ಕೋಟಿ ಬರುತ್ತದೆ. 7 ಕೋಟಿ ರೂಪಾಯಿ ಸಂಬಳ ಕೊಟ್ಟು, ಈಗ ನಮಗೆ 75 ಕೋಟಿ ಕಿರುಕುಳ ಕೊಡುತ್ತಿದ್ದೀರಿ. ಆ ಕಾರಣ ನನ್ನ ಸಲಹೆ, ಈಗ ಕಂಪ್ಯೂಟರೈಸ್ ಮಾಡುತ್ತೇವೆ, ಪಟ್ಟಾ ಪುಸ್ತಕ ಕೊಡುತ್ತೇವೆ ಎಂದು ಹೇಳುತ್ತಾರೆ. ನಮ್ಮಲ್ಲಿ ಕಂದಾಯ ವಸೂಲಾತಿಯಲ್ಲಿ ನಿಮ್ಮ ಅಪೇಕ್ಷೆ ಎಷ್ಟು ಇದೆ ಅದರಲ್ಲಿ ಅರ್ಧಭಾಗ ಕೂಡ ವಸೂಲಾತಿ ಆಗುತ್ತಿಲ್ಲ. ಕಂದಾಯ ವಸೂಲಿಗಿಂತ ಈ ಗ್ರಾಮ ಸಹಾಯಕರ ಸಂಬಳ ಜಾಸ್ತಿಯಾಗುತ್ತದೆ. ಗ್ರಾಮಲೆಕ್ಕಿಗಳು ಶನಿಗಳಾದರೆ ಇವರು ಉಪಶನಿಗಳು. ನನ್ನ ಸಲಹೆ ಎಂದರೆ ಶನಿಯೂ ಬೇಡ, ಉಪಶನಿಯೂ ಬೇಡ.

ಇದರಿಂದ ನಿಮಗೆ ಏಳೂವರೆ ಕೋಟಿ ಉಳಿತಾಯವಾಗುತ್ತದೆ. ಆದಷ್ಟು ಬೇಗ ನೀವು ಪಟ್ಟಾಪುಸ್ತಕ ಕೊಟ್ಟರೆ, ಇದರಿಂದಲೂ ಉಳಿತಾಯ ಮಾಡಬಹುದೆಂದು ನನ್ನ ಸಲಹೆ.

ಶ್ರೀ ಎಂ. ರಾಜಶೇಖರಮೂರ್ತಿ:– ಅವರ ಸಲಹೆ ಬೇರೆ ರೂಪದಲ್ಲಿರಬೇಕಾಗಿತ್ತು. ಅಂದರೆ, ಕಂದಾಯ ಬೇಡ, ಗ್ರಾಮ ಸಹಾಯಕರು ಬೇಡವೆಂದು, that would have been a better suggestion.

ಪೀಣ್ಯ ದಾಸರಹಳ್ಳಿ ಗ್ರಾಮಗಳಿಗೆ ಕುಡಿಯುವ ನೀರಿನ ಅಭಾವ

(2148): ಶ್ರೀ ಎಸ್. ರಮೇಶ್ (ಉತ್ತರಹಳ್ಳಿ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಪೀಣ್ಯ ದಾಸರಹಳ್ಳಿ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

2. ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

1. ಬಂದಿದೆ.

2. ಅ) <u>ಪೀಣ್ಯ:</u>

ತ್ವರಿತ ಗ್ರಾಮೀಣ ನೀರು ಸರಬರಾಜು ಯೋಜನೆ ಪೂರ್ಣಗೊಳ್ಳುವ ಹಂತದಲ್ಲಿದೆ.

ಆ. ದಾಸರಹಳ್ಳಿ:

ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ 1992–93ರ ಅನುಬಂಧ 'ಇ' ನಲ್ಲಿ ಸೇರಿದೆ.

ಶ್ರೀ ಎಸ್. ರಮೇಶ್:– ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಪೀಣ್ಯ, ದಾಸರಹಳ್ಳಿಯಲ್ಲಿ ಕುಡಿಯುವ ನೀರಿನ ತೊಂದರೆ ಇದೆ, ಅದಕ್ಕೋಸ್ಕರ ಕೆಲವು ಖಾಯಂ ಯೋಜನೆಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಈ ಕೆಲಸ ಸುಮಾರು ವರ್ಷಗಳಿಂದ ನಡೆಯುತ್ತಿದೆ. ನಾನು, ಸಂಬಂಧಪಟ್ಟ ಇಂಜಿನಿಯರ್‌ರವರಿಗೆ ಫೋನ್ ಮಾಡಿ, ಒಂದು ವಾರದಿಂದ ಪ್ರಯತ್ನ ಮಾಡುತ್ತಿದ್ದೇನೆ. ಆ ಎಕ್ಸಿಕ್ಯುಟಿವ್ ಇಂಜಿನಿಯರ್ ಆಫೀಸಿನಲ್ಲಿಯೇ ಇರುವುದಿಲ್ಲ. ಅವರು ಆಫೀಸಿನಲ್ಲಿದ್ದು, ಏನಾದರೂ ಮೆಸೇಜ್ ತೆಗೆದುಕೊಳ್ಳುತ್ತಾರೆಯೋ ಇಲ್ಲವೋ, ಗೊತ್ತಿಲ್ಲ. ಇವತ್ತು, ನಾವು ಯಾರನ್ನು ಕೇಳಬೇಕೆನ್ನುವುದೇ ದೊಡ್ಡ ಸಮಸ್ಯೆಯಾಗಿದೆ. ಇವು ಸುಮಾರು ಒಂದೂವರೆ, ಎರಡು ಲಕ್ಷ ಜನಸಂಖ್ಯೆ ಇರತಕ್ಕ ದೊಡ್ಡ ಗ್ರಾಮಗಳು. ಈ ಗ್ರಾಮಗಳು ತಮಗೂ ಗೊತ್ತಿದೆ. ತಾವು ಹೋಗತಕ್ಕ ದಾರಿಯಲ್ಲಿಯೇ, ಪೀಣ್ಯ ಮತ್ತು ದಾಸರಹಳ್ಳಿ ಎಂಬ ಎರಡು ಊರುಗಳು ಬರುತ್ತವೆ. ಈ ಗ್ರಾಮಗಳು ಬೆಂಗಳೂರಿಗೆ ಹತ್ತಿರದಲ್ಲಿಯೇ ಇವೆ. ಆದರೂ, ಪ್ರತಿ ವರ್ಷ ಕುಡಿಯುವ ನೀರಿಗೆ ತೊಂದರೆ ಇದೆ. ನಾನು, ಈಗಾಗಲೇ ಎರಡು ಮೂರು ಸಾರಿ ಕೇಳಿಕೊಂಡು ಬಂದಿದ್ದೇನೆ. ಒಂದುಸಾರಿ ಕೆಲಸ ಶುರು ಮಾಡುತ್ತಾರೆ, 6 ತಿಂಗಳು ಗುದ್ದಲಿಪೂಜೆ ಮಾಡುತ್ತಾರೆ, ಇದಾದ ತಕ್ಷಣ ಇನ್ನೇನೋ ಮಾಡುತ್ತಾರೆ. ಇದನ್ನು ಯಾವಾಗ ಮುಗಿಸುತ್ತಾರೆ, ಎಷ್ಟು ಹಣ ಕೊಟ್ಟಿದ್ದಾರೆ, ಅಥವಾ ಕೊಡುತ್ತಾರೆಂದು ಹೇಳುತ್ತಾರೆಯೇ ? ಇದನ್ನಾದರೂ ಸಂಬಂಧಪಟ್ಟ ಸಚಿವರನ್ನು ಕೇಳಿ ಎಂದು ಹೇಳೋಣವೆಂದರೆ, ಆ ಅಧಿಕಾರಿಗಳು ಪತ್ತೆ ಇರುವುದಿಲ್ಲ, ಒಂದು ವಾರದಿಂದ ಪ್ರಯತ್ನ ಮಾಡುತ್ತಿದ್ದೇನೆ. ಆ ಊರಿನ ಜನಕ್ಕೆ ಕುಡಿಯುವ ನೀರು ಇಲ್ಲ, ಕೂಡಲೇ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಬೇಕೆಂದು ಸನ್ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳು ಯಾರೇ ಇರಲಿ, ಇದಕ್ಕೆ ಎಷ್ಟು ಹಣ ಕೊಟ್ಟಿದ್ದೀರಿ, ಯಾವಾಗ ಪ್ರಾರಂಭವಾಗಿದೆ, ಯಾವಾಗ ಮುಗಿಯುತ್ತದೆ ಎಂದು ಒಬ್ಬ ಶಾಸಕರು ಫೋನ್ ಮಾಡಿ ಕೇಳಿದಾಗ, ಸೌಜನ್ಯದಿಂದ ಉತ್ತರವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡುತ್ತಾರೆಂದು ನಂಬಿದ್ದೇನೆ. ಅಲ್ಲಿ ಕುಡಿಯುವ ನೀರಿನ ಅಭಾವ ಇದೆ, ಇದನ್ನು ಯಾವ ರೀತಿ ಪರಿಹಾರ ಮಾಡುತ್ತೀರಿ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಂ.ವೈ. ಘೋರ್ಪಡೆ:– ಸನ್ಮಾನ್ಯ ಅಧ್ಯಕ್ಷರೇ, ಇದು ಯಶವಂತಪುರ ಹೋಬಳಿಯಲ್ಲಿ ಎರಡು ಹಳ್ಳಿಗಳಿಗೆ ಸಂಬಂಧಪಟ್ಟ ಪ್ರಶ್ನೆ. ಒಂದು ಹಳ್ಳಿ ಪೀಣ್ಯ, ಇಲ್ಲಿ ಸುಮಾರು 8,973 ಜನಸಂಖ್ಯೆ ಇದೆ. ಮತ್ತೆ ನನಗೆ ಇರುವ ಮಾಹಿತಿ ಪ್ರಕಾರ, ತಲಾ ನೀರಿನ ಪ್ರಮಾಣ 23 ಲೀಟರ್ ಪರ್ ಹೆಡ್, ಪರ್ ಡೇ ಸಿಗುತ್ತಾ ಇದೆ. ಅಲ್ಲಿ 9 ಬೋರ್‌ವೆಲ್ಸ್ ಇವೆ. ಹಾಗೆಂದತಕ್ಷಣ ಮಾನ್ಯ ಸದಸ್ಯರು ಹೇಳಿದ ಪ್ರಶ್ನೆಗೆ ನಿರ್ಲಕ್ಷ್ಯ ಮಾಡಬೇಕೆಂದಿಲ್ಲ. ಮತ್ತು ನಿರ್ಲಕ್ಷ್ಯ ಮಾಡತಕ್ಕ ಉದ್ದೇಶವೂ ಕೂಡ ಇಲ್ಲ. ಈಗ ಅವರ ಮನಸ್ಸಿನಲ್ಲಿರತಕ್ಕ ಸ್ಕೀಮ್ ಏನಿದೆ, ಅದಕ್ಕೆ 2 ಲಕ್ಷದ 90 ಸಾವಿರ ಈಗಾಗಲೇ ಬುಕ್ ಆಗಿದೆ. ಪೀಣ್ಯ ಹಳ್ಳಿಯಲ್ಲಿ, ಮಾರ್ಚಿ ತಿಂಗಳಲ್ಲಿ ಇದನ್ನು ಪೂರೈಸುತ್ತೇವೆ. ಇನ್ನು ದಾಸರಹಳ್ಳಿಯಲ್ಲಿಯೂ ಕೂಡ 10 ಸಾವಿರ ಜನಸಂಖ್ಯೆ ಇದೆ. ಮತ್ತೆ 21.55 ಲೀಟರ್ ಪರ್ ಡೇ ತಲಾ ಪ್ರಮಾಣ ನೀರು ಸಿಕ್ಕುತ್ತಾ ಇದೆ. ಆದರೂ ಕೂಡ ಅಲ್ಲಿ ಪೈಪ್ ವಾಟರ್ ಸ್ಕೀಮ್ ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕೆ 10 ಲಕ್ಷ 50 ಸಾವಿರ ಎಸ್ಟಿಮೇಟ್ ಆಗಿದೆ. ಹೋದ ವರ್ಷದ ಬಜೆಟ್‌ನಲ್ಲಿ 75 ಸಾವಿರ ಮಾತ್ರ ಸೇರಿಸಲಾಗಿದೆ. ಇದಕ್ಕೆ

ಸಾಕಷ್ಟು ನೀರಿನ ಸೋರ್ಸ್ ಇದೆ. ಆದಕಾರಣ, ಪೈಪ್ ವಾಟರ್ ಸ್ಕೀಮ್ ಆದಷ್ಟು ಬೇಗ ಪೂರ್ತಿ ಮಾಡಿಕೊಡುತ್ತೇವೆ.

ಶ್ರೀ ಎಸ್. ರಮೇಶ್:– ಪೀಣ್ಯ ಗ್ರಾಮದಲ್ಲಿ 8 ಸಾವಿರ ಜನಸಂಖ್ಯೆ ಎಂದು ಮಾನ್ಯ ಸಚಿವರು ಹೇಳಿದ್ದನ್ನು ಒಪ್ಪುತ್ತೇನೆ. ಆದರೆ, ಇದು ಓಬೀರಾಯನ ಕಾಲದಲ್ಲಿ ಮಾಡಿರತಕ್ಕ ಸರ್ವೆ. ಇವತ್ತು ಪೀಣ್ಯ, ದಾಸರಹಳ್ಳಿ ಸುತ್ತಮುತ್ತ, ಬಿ.ಇ.ಎಲ್. ಹೆಚ್.ಎಂ.ಟಿ. ಇತ್ಯಾದಿ ಕೈಗಾರಿಕೆಗಳು ಬಂದಿದ್ದು ಈ ಗ್ರಾಮಗಳು ಮಧ್ಯೆ ಸೇರಿವೆ. ಇವತ್ತಿನ ಜನಸಂಖ್ಯೆ ಸುಮಾರು ಎರಡೂವರೆ ಲಕ್ಷದಿಂದ ಮೂರು ಲಕ್ಷ ಇದೆ. ತಾವೇ ಹೇಳುತ್ತಿದ್ದೀರಿ, 10 ಲಕ್ಷ ಎಸ್ಟಿಮೇಟ್ ಆಗಿದ್ದು, 75 ಸಾವಿರ ಮಾತ್ರ ಬಿಡುಗಡೆ ಮಾಡಿದ್ದೇವೆಂದು. ಈ ಹಣದಲ್ಲಿ ಆ ಕೆಲಸವಾಗುತ್ತದೆಯೇ ? 10 ಲಕ್ಷ ಎಸ್ಟಿಮೇಟಿಗೆ 75 ಸಾವಿರ ಬಿಡುಗಡೆ ಮಾಡಿದರೆ, ಈ ಕೆಲಸ ಯಾವಾಗ ಪೂರ್ಣವಾಗುತ್ತದೆ. ಆದ್ಯತೆ ಮೇಲೆ ಇಂತಹ ಕೆಲಸಗಳನ್ನು ಮಾಡುವುದಕ್ಕೆ ಹಣಕಾಸನ್ನು ಬಿಡುಗಡೆ ಮಾಡಬೇಕು.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು):– ಮಾನ್ಯ ಅಧ್ಯಕ್ಷರೇ ಈ ಅಂಕಿ ಅಂಶಗಳನ್ನು ಅಧಿಕಾರಿಗಳು ಕೊಟ್ಟಿದ್ದಾರೆ. ಜನಸಂಖ್ಯೆ ಎಷ್ಟು, ತಲಾ ಪ್ರಮಾಣ ಎಷ್ಟು, ಹೊಸ ಬೋರ್‌ವೆಲ್ಸ್ ಎಷ್ಟು ಬೇಕು, ಏನು ಕೆಲಸ ಮಾಡಿದ್ದಾರೆ ಇನ್ನು ಹೊಸದಾಗಿ ಮಿನಿ ಪೈಪ್ಡ್ ವಾಟರ್ ಸಪ್ಲೈಗೆ ಏನು ಮಾಡಬೇಕು ಈ ಬಗ್ಗೆ ಮಾನ್ಯ ಸದಸ್ಯರು ಪುನಃ ಈ ಹಳ್ಳಿಗಳಿಗೆ ಹೋಗಿ ಏನಾದರೂ ಜನಸಂಖ್ಯೆಯಲ್ಲಿ ಬದಲಾವಣೆ ಆಗಿದೆಯೇ ಪರಿಸ್ಥಿತಿಯಲ್ಲಿ ಬದಲಾವಣೆ ಆಗಿದೆಯೇ ಇದನ್ನು ಗಮನದಲ್ಲಿಟ್ಟುಕೊಂಡು ಬಂದು ಏನಾದರೂ ಮಾಡಬೇಕೆಂದರೆ ಮಾಡೋಣ. I will send our engineers to visit these two villages and reexamine the adequacy of water.

ಶ್ರೀ ಎಸ್. ರಮೇಶ್:– ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಏನು ಮಾಡುತ್ತೀರಿ ?

ಶ್ರೀ ಎಂ.ವೈ. ಘೋರ್ಪಡೆ:– ತೊಂದರೆ ಇದೆ. 23 ಲೀಟರ್ 20 ಲೀಟರ್ ತಲಾ ಪ್ರಮಾಣ ಸಿಗುತ್ತಿದೆ ಎಂದು ನನಗೆ ವರದಿ ಬಂದಿದೆ. ಕರ್ನಾಟಕ ರಾಜ್ಯದಲ್ಲಿ ಎಷ್ಟೋ ಕಡೆ 5 ಲೀಟರ್ ನೀರು ಸಹ ಸಿಗುತ್ತಿಲ್ಲ. ತಲಾ ಪ್ರಮಾಣ ಇಲ್ಲ. ತೀವ್ರವಾದ ಅಭಾವ ಕುಡಿಯುವ ನೀರಿಗೆ ಇದ್ದರೆ ಈ ಅಂಕಿ ಅಂಶಗಳ ಆಧಾರದ ಮೇಲೆ ಒಪ್ಪುವುದು ಬಹಳ ಕಷ್ಟವಾಗುತ್ತದೆ. ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್ ಮಾಡಿ ಏನು ಪೂರೈಸುತ್ತಿದ್ದೇವೆ ಅದು ಬಿಟ್ಟು ಇನ್ನೂ ಏನಾದರೂ ಮಾಡಬೇಕೆ ? ಈಗ ನಾವು ಅಲ್ಲಿ ಎರಡು ಸ್ಕೀಮ್ ಪೂರೈಸಿದ್ದೇವೆ. ಅದು ಬಿಟ್ಟು ಇನ್ನೂ ಏನಾದರೂ ಮಾಡಬೇಕೋ ಬೋರ್‌ವೆಲ್ಸ್ ಹಾಕಿಸಬೇಕೋ ತಮ್ಮ ಅಭಿಪ್ರಾಯ ಏನಿದೆ ನಾನು ಇಂಜಿನೀಯರ್ಸ್ ಕಳುಹಿಸುತ್ತೇನೆ ಮತ್ತು ಏನು ಪುನರಾಲೋಚನೆ ಮಾಡಬೇಕು ಎಂದು ಮಾನ್ಯ ಸದಸ್ಯರು ಸಲಹೆಯನ್ನು ಕೊಟ್ಟರೆ ಅದನ್ನು ನಾನು ಮಾಡುವುದಕ್ಕಾಗುತ್ತದೆ. It is not a matter of acute drinking water scarcity, Suitable augmentation maybe wanting. I will have it examined.

ಶ್ರೀ ಎಸ್. ರಮೇಶ್:– ಕುಡಿಯುವ ನೀರು ಇಲ್ಲದೆ ನಾನು ಕ್ಷೇತ್ರಕ್ಕೆ ಹೋದಾಗ ಜನ ಕಾರು ಅಡ್ಡಗಟ್ಟಿ ಕೇಳುತ್ತಾರೆ ನಮಗೆ ಬಹಳ ಕಷ್ಟವಾಗಿದೆ.

ಅಧ್ಯಕ್ಷರು:– ತಾವು ಕುಳಿತುಕೊಳ್ಳಿ.

ಪ್ರಶ್ನೆ ಸಂಖ್ಯೆ:– 428ನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾಗಿದೆ.

ಶ್ರೀ ಇಳ್ಕಲ್ ವಿಜಯಕುಮಾರ್:– ಮಾನ್ಯ ಅಧ್ಯಕ್ಷರೇ ಇದನ್ನು ಜಿಲ್ಲಾ ಪರಿಷತ್ತಿನವರೇ ಅಭಿವೃದ್ಧಿ ಮಾಡುವುದು. ಅದಕ್ಕೆ ನಾನು ಅವರಿಗೆ ಪ್ರಶ್ನೆ ಕೇಳಿದೆ.

ಅಧ್ಯಕ್ಷರು:– ನಾನು ತರಿಸಿ ನೋಡುತ್ತೇನೆ. ನನಗೆ ಉತ್ತರ ಕಳುಹಿಸಿಕೊಟ್ಟಿಲ್ಲ.

ಬೆಂಗಳೂರು ಡೈರಿಯಲ್ಲಿ ಸಾರ್ವಜನಿಕ ಕುಂದುಕೊರತೆ ವಿಭಾಗ

(1839): ಶ್ರೀ ಆರ್. ದಯಾನಂದರಾವ್ (ಗಾಂಧಿನಗರ):– ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸರ್ಕಾರವು ಬೆಂಗಳೂರು ಡೇರಿಯಲ್ಲಿ ಸಾರ್ವಜನಿಕರ ಕುಂದುಕೊರತೆಗಳ ಸೆಲ್ ಸೃಷ್ಟಿಸಿದೆಯೆ;

ಆ. ಹಾಗಾದರೆ, ಸಾರ್ವಜನಿಕರಿಗೆ ಇದನ್ನು ತಿಳಿಸಲಾಗಿದೆಯೇ;

ಇ. ಸಾರ್ವಜನಿಕರ ಕುಂದುಕೊರತೆ ಸೆಲ್ ಸೃಷ್ಟಿಸಿಲ್ಲವಾದರೆ ಸರ್ಕಾರವು ಸೆಲ್ ತೆರೆಯಲು ತುರ್ತು ಕ್ರಮ ಕೈಗೊಳ್ಳುವುದೇ ?

ಶ್ರೀ ಕೆ. ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ. ಹೌದು

ಆ. ಹೌದು

ಇ. ಉದ್ಭವಿಸುವುದಿಲ್ಲ.

ಶ್ರೀ ಆರ್. ದಯಾನಂದರಾವ್:– ಮಾನ್ಯ ಅಧ್ಯಕ್ಷರೇ, ಉತ್ತರ ಕೊಟ್ಟಿದೆ. ನಾನು ಪ್ರಶ್ನೆ ಕೇಳಿದ್ದುದು ಬೆಂಗಳೂರು ಡೈರಿಯಲ್ಲಿ ಸಾರ್ವಜನಿಕ ಕುಂದುಕೊರತೆಗಳ ವಿಭಾಗವನ್ನು ಸರ್ಕಾರ ಸ್ಥಾಪಿಸಿದ್ದಾರೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ಇದು ಯಾವಾಗ ಜಾರಿಗೆ ಬಂತು ? ಇದನ್ನು ಹೊಸದಾಗಿ ಮಾಡಿದ್ದೀರಾ ? ಇದು ಹಿಂದಿನ ಮಂತ್ರಿಗಳ ಕಾಲದಲ್ಲಿ ಆಗಿತ್ತೋ ಅಥವಾ ತಾವು ಬಂದ ಮೇಲೆ ಮಾಡಿದ್ದೋ ಎಂದು ನಾನು ಕೇಳುತ್ತೇನೆ. ಮತ್ತೆ ನನ್ನ ಎರಡನೇ ಪ್ರಶ್ನೆ ಅದರ ಬಗ್ಗೆ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರ ಸ್ಟೇಟ್‌ಮೆಂಟ್ ನಾವು ಪತ್ರಿಕೆಗಳಲ್ಲಿ ಓದಿಲ್ಲ. ಮತ್ತು ಇದರ ಬಗ್ಗೆ ಏನಾದರೂ ಎಂ.ಎಲ್.ಎ.ಗಳನ್ನು ಕರೆಯಿಸಿ ಪೂರ್ಣವಾಗಿ ಚರ್ಚೆ ಮಾಡಿ ಏನು ಭ್ರಷ್ಟಾಚಾರ ಡೈರಿಯಲ್ಲಿ ನಡೆಯುತ್ತಿದೆ ಅದನ್ನು ತಡೆಗಟ್ಟಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ.ಎನ್. ನಾಗೇಗೌಡ:– ಮಾನ್ಯ ಅಧ್ಯಕ್ಷರೇ, ಬೆಂಗಳೂರು ಡೈರಿಯಲ್ಲಿ ಈ ಸಾರ್ವಜನಿಕರ ಕುಂದುಕೊರತೆಗಳ ವಿಭಾಗ ದಿನಾಂಕ 3–2–93ರಲ್ಲಿ ಬಂತು. ದಿನಾಂಕ 3–2–93ರಲ್ಲಿ ಬರೀ ಬೆಂಗಳೂರು ಡೈರಿ ಅಲ್ಲದೆ ರಾಜ್ಯದಲ್ಲಿರತಕ್ಕಂಥಾ ಎಲ್ಲಾ ಡೈರಿಗಳಲ್ಲಿ ಕುಂದುಕೊರತೆಗಳ ವಿಭಾಗ ನಾವು ಪ್ರಾರಂಭ ಮಾಡಿದ್ದೇವೆ. ಎರಡನೆಯದಾಗಿ ಪತ್ರಿಕೆಗಳಲ್ಲಿ ಬಂದಿದೆಯೇ ಎಂದು ಕೇಳಿದರು. ದಿನಾಂಕ 6–2–93 ರಂದು ಪ್ರಜಾವಾಣಿ ಪತ್ರಿಕೆಯಲ್ಲಿ, ದಿನಾಂಕ 5–2–93ರಂದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಮತ್ತು ದಿನಾಂಕ 7–2–93ರಂದು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಬಂದಿದೆ. ಮತ್ತು ಕಳೆದ ತಿಂಗಳಲ್ಲಿ ಶಾಸಕರನ್ನು ಮತ್ತು ಬೆಂಗಳೂರು ಡೈರಿಯಲ್ಲಿರತಕ್ಕಂಥ ಮತ್ತು ಇತರೆ ಕಡೆಗಳಲ್ಲಿ ಇರತಕ್ಕಂಥ ಕುಂದುಕೊರತೆಗಳ ಅಧಿಕಾರಿಗಳನ್ನು ಕರೆದು ವಿಧಾನ ಸೌಧದಲ್ಲಿ ಸಭೆಯನ್ನು ಮಾಡಲಾಗಿದೆ. ಮತ್ತೊಂದು ಪ್ರಶ್ನೆಗೆ ಅವರು ಭ್ರಷ್ಟಾಚಾರದ ಬಗ್ಗೆ ಶಾಸಕರನ್ನು ಕರೆದು ಮಾತನಾಡಿ

ಬಗ್ಗೆ ಹಾಗೂ ಹೆಚ್ಚು ಧಾರಣೆ ಬಗ್ಗೆ, ಟೈಮ್ ಬಗ್ಗೆ ಸರಿಯಾಗಿ ಸಪ್ಲೈ ಮಾಡದೆ ಇರುವ ಬಗ್ಗೆ, ಕಲಬೆರಕೆ ಯಾರು ಮಾಡುತ್ತಾರೊ ಅದರ ಬಗ್ಗೆ ಕೊಡಬಹುದು. ಇನ್ನು ಡೈರಿ ಅವ್ಯವಹಾರಗಳ ಬಗ್ಗೆ ಶಾಸಕರನ್ನು ಕರೆಯಬೇಕೆಂದು ಹೇಳಿದ್ದಾರೆ. ನಾನು ಖಂಡಿತವಾಗಿ ಒಂದು ಸಭೆ ಕರೆದು ಅವ್ಯವಹಾರಗಳನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ದಯಾನಂದರಾವ್:– ಕೆ.ಎಂ.ಎಫ್.ನಿಂದ ಬರುವಂತಹ ಹಾಲಿಗೆ ನೀರು ಬೆರೆಸುವುದು ವಾಡಿಕೆ ಆಗಿದೆ. ಇದು ಆಕಸ್ಮಾತ್ ಆಗಿ ಡೈರಿಯಲ್ಲಿ ನೀರು ಬೆರೆಸುತ್ತಾರೋ ಅಥವಾ ಕೆ.ಎಂ.ಎಫ್. ಬೂತ್‌ಗಳಲ್ಲಿ ನೀರು ಬೆರೆಸುತ್ತಾರೋ ಗೊತ್ತಿಲ್ಲ. ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಇವೆ. ಇದರಲ್ಲಿ ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

10.40 ಎ.ಎಂ.

ಶ್ರೀ ಕೆ.ಎನ್. ನಾಗೇಗೌಡ:– ಮಾನ್ಯ ಸಭಾಧ್ಯಕ್ಷರೇ, ಎಲ್ಲೆಲ್ಲಿ ಮಿಲ್ಕ್ ವೆಂಡಿಂಗ್ ಬೂತ್‌ಗಳಿವೆಯೋ ಅದರಲ್ಲಿಯೂ ಮದರ್ ಡೈರಿ ಬಗ್ಗೆ ಹೇಳಿದ್ದಾರೆ ಅಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅಂಥ ದೂರುಗಳು ಇದ್ದರೆ, ಅವುಗಳನ್ನು ಕುಂದುಕೊರತೆ ಸಮಿತಿಗೆ ಸಲ್ಲಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ರಾಜ್ಯದಲ್ಲಿರುವ ಸಹಕಾರ ಸಂಘಗಳು ಮತ್ತು ಬ್ಯಾಂಕುಗಳು

(1712): ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಇರುವ ಒಟ್ಟು ಸಹಕಾರ ಸಂಘಗಳು ಮತ್ತು ಬ್ಯಾಂಕುಗಳು ಎಷ್ಟು;

ಆ. ಸದರೀ ಸಂಘ ಹಾಗೂ ಬ್ಯಾಂಕುಗಳಿಂದ ಸಾರ್ವಜನಿಕರಿಗೆ ಆಗುವ ಉಪಯೋಗಗಳಾವುವು ? (ಜಿಲ್ಲಾವಾರು ವಿವರ ನೀಡುವುದು).

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ರಾಜ್ಯದಲ್ಲಿ 31-03-1992ರ ಅಂತ್ಯಕ್ಕೆ 25,249 ಸಹಕಾರ ಸಂಘಗಳು ಮತ್ತು 424 ಬ್ಯಾಂಕುಗಳು ಇರುತ್ತವೆ.

ಆ. ರೈತರ ಹಾಗೂ ಸಾರ್ವಜನಿಕರ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಸಂಘಗಳು ಮಹತ್ವದ ಪಾತ್ರ ವಹಿಸುತ್ತಿವೆ. ಆಯಾ ಸಂಘಗಳು ಉಪ ನಿಯಮಗಳಲ್ಲಿ ನಮೂದಿಸಿರುವ ಉದ್ದೇಶಗಳನುಸಾರ ವಿವಿಧ ಧ್ಯೇಯಗಳನ್ನು ಸದಸ್ಯರ ಉಪಯೋಗಕ್ಕಾಗಿ ನಿರ್ವಹಿಸುತ್ತಿವೆ. ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ.

ಅನುಬಂಧ

ಕರ್ನಾಟಕ ರಾಜ್ಯದಲ್ಲಿ ಜಿಲ್ಲಾವಾರು ವಿವಿದೋದ್ದೇಶಗಳ ಸಹಕಾರ ಸಂಘಗಳ ವಿವರಗಳು

ಕ್ರ. ಸಂ.	ಜಿಲ್ಲೆಗಳು	ಒಟ್ಟು ಸಹಕಾರ ಬ್ಯಾಂಕುಗಳು	ಇದರಲ್ಲಿ				
			ಪ್ರಾ. ಕೃಷಿ ಪತ್ತಿನ ಸಂಘಗಳು	ತಾಲ್ಲೂಕು ಮಾರಾಟ ಸಂಘಗಳು	ಜಿಲ್ಲಾ ಸಹಕಾರ ಬ್ಯಾಂಕ್	ಪ್ರಾ. ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್	ಪಟ್ಟಣ ಬ್ಯಾಂಕುಗಳು
1	ಬೆಂಗಳೂರು ನಗರ	1,975	49	4	1	3	43
2	ಬೆಂಗಳೂರು (ಗ್ರಾ)	1,212	157	8	–	8	3
3	ಚಿತ್ರದುರ್ಗ	1,132	216	9	1	9	12
4	ಕೋಲಾರ	1,452	219	11	1	11	2
5	ಶಿವಮೊಗ್ಗ	932	233	9	1	10	6
6	ತುಮಕೂರು	1,239	249	10	1	10	9
7	ಬೆಳಗಾಂ	2,550	475	11	1	10	40
8	ಬಿಜಾಪುರ	2,152	409	11	1	11	22
9	ಧಾರವಾಡ	2,580	393	20	1	17	39
10	ಕಾರವಾರ	803	159	9	1	11	9
11	ಚಿಕ್ಕಮಗಳೂರು	407	113	7	1	8	–
12	ಮಡಿಕೇರಿ	411	73	13	1	3	3
13	ಹಾಸನ	903	167	8	1	8	4
14	ಮಂಡ್ಯ	1,201	221	7	1	7	1
15	ಮಂಗಳೂರು	1,181	167	8	1	8	11
16	ಮೈಸೂರು	1,575	279	11	1	11	9
17	ಬಳ್ಳಾರಿ	865	163	8	1	8	2
18	ಗುಲ್ಬರ್ಗಾ	1,248	232	10	1	10	1
19	ಬೀದರ್	754	171	5	1	5	3
20	ರಾಯಚೂರು	1,101	205	8	1	9	6
	ಒಟ್ಟು	25,673	4,350	187	19	177	225

ಶ್ರೀ ವೈ. ಮೋತಿ ವೀರಣ್ಣ:– ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಹಕಾರ ಸಚಿವರು ರಾಜ್ಯದಲ್ಲಿ

ಮತ್ತು ಜಿಲ್ಲೆಯಲ್ಲಿರತಕ್ಕಂಥ ಸಹಕಾರಿ ಸಂಸ್ಥೆಗಳ ಮತ್ತು ಬ್ಯಾಂಕ್‌ಗಳ ಅಂಕಿಅಂಶಗಳನ್ನು ಒದಗಿಸಿದ್ದಾರೆ. ರೈತರ ಹಾಗೂ ಸಾರ್ವಜನಿಕರ ಆರ್ಥಿಕ ಅಭಿವೃದ್ಧಿಗೆ ಸಹಕಾರಿ ಸಂಸ್ಥೆಗಳು ಬಹಳ ತೃಪ್ತಿಕರವಾಗಿ ಕೆಲಸ ಮಾಡುತ್ತಿದೆ ಎಂದು ಅವರು ಉತ್ತರದಲ್ಲಿ ಕಾಣಿಸಿದ್ದಾರೆ. ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ನಾನು ಹೇಳುವುದಿದ್ದರೆ ರೈತರ ಸಹಕಾರ ಸೇವಾ ಸಂಘಗಳು ಮತ್ತು ಜನತಾ ಬಜಾರ್‌ಗಳು, ಸಹಕಾರ ತತ್ವಗಳ ಆಧಾರದ ಮೇಲೆ ತಮ್ಮ ಉದ್ದೇಶಗಳನ್ನು ಜಾರಿಗೊಳಿಸತಕ್ಕಂಥಾದ್ದರಲ್ಲಿ ಕಾಂಪ್ಲೆಕ್ಸ್ ಕಟ್ಟಡಗಳನ್ನು ಕಟ್ಟಿ, ಹೆಚ್ಚಿನ ದರದಲ್ಲಿ ಬಾಡಿಗೆಯನ್ನು ಕೊಡುವುದರ ಮೂಲಕ ಆ ಒಂದು ತತ್ವದ ಕಾರ್ಯಾಚರಣೆಗೆ ವಿಮುಖವಾಗಿ ನಡೆದುಕೊಳ್ಳುತ್ತಾ ಇದ್ದಾರೆ. ಇಂಥ ವಿಚಾರ ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ ? ಬಂದಿದ್ದಲ್ಲಿ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬ ಪ್ರಶ್ನೆಯನ್ನು ಕೇಳುತ್ತಾ ಅದಕ್ಕೆ ಸೂಕ್ತ ಉತ್ತರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಂಥಾದ್ದು ಏನೂ ನನ್ನ ಗಮನಕ್ಕೆ ಬಂದಿಲ್ಲ. ಒಂದು ವೇಳೆ ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತಂದರೆ, ಆ ಕುರಿತು ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಕಾನೂನು ಪ್ರಕಾರವಾಗಿ ತೆಗೆದುಕೊಳ್ಳುತ್ತೇನೆ.

ಶ್ರೀ ವೈ. ಮೋತಿ ವೀರಣ್ಣ:- ಮಾನ್ಯ ಸಚಿವರ ಗಮನಕ್ಕೆ ಆ ವಿಚಾರವನ್ನು ತರುತ್ತೇನೆ. ಅದೇ ರೀತಿಯಲ್ಲಿ ಕನ್ಸೂಮರ್ಸ್ ಕೋ - ಆಪರೇಟಿವ್ ಸೊಸೈಟಿಗಳು ಮತ್ತು ಪ್ರೈಮರಿ ಸೊಸೈಟೀಸ್‌ಗಳಿಗೆ ಆಹಾರ ವಿತರಣೆ ಮಾಡುವುದಕ್ಕೋಸ್ಕರವಾಗಿ ಕಳುಹಿಸಿ ಕೊಟ್ಟಿದ್ದನ್ನು ಹೋಲ್‌ಸೇಲ್ ಪಾಯಿಂಟ್‌ನಿಂದ ವಿತರಣೆ ಮಾಡಿದ್ದು ಗ್ರಾಮಾಂತರಗಳಿಗೆ ಮುಟ್ಟುತ್ತಾ ಇಲ್ಲ, ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ ? ಹಸಿರು ಕಾರ್ಡ್‌ಗಳ ಮೂಲಕ ಎಣ್ಣೆ ಮತ್ತಿತರ ಪದಾರ್ಥಗಳು ಕೊಡುತ್ತಿದ್ದೀರಿ ಅದು ಜನರಿಗೆ ಮುಟ್ಟುತ್ತಾ ಇಲ್ಲ. ಎಲ್ಲಿ ಅದು ಹೋಲ್‌ಸೇಲ್ ಪಾಯಿಂಟ್‌ನಲ್ಲಿ ವಿತರಣೆಯಾಗುತ್ತದೆ ಅಲ್ಲಿಯೇ ಅರ್ಧಕ್ಕಿಂತ ಹೆಚ್ಚು ಪ್ರಮಾಣದ ಗೂಡ್ಸ್‌ಗಳು ಪಾಯಿಂಟ್‌ನಲ್ಲಿ ವಿತರಣೆಯಾಗುತ್ತದೆ. ಅಲ್ಲಿಯೇ ಅರ್ಧಕ್ಕಿಂತ ಹೆಚ್ಚು ಪ್ರಮಾಣದ ಗೂಡ್ಸ್‌ಗಳು ಮಾರಾಟವಾಗಿ, ಯಾವ ಸಹಕಾರ ತತ್ವಗಳ ಮೂಲಕ ಜನರಿಗೆ ಮುಟ್ಟಿಸಬೇಕೆಂಬ ಉದ್ದೇಶವಿದೆ. ಅದು ಸಫಲವಾಗುತ್ತಾ ಇಲ್ಲ. ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆಯೇ ಎಂಬ ಬಗ್ಗೆ ದಯಮಾಡಿ ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸದಸ್ಯರು ಕೂಡ ಕೋ-ಆಪರೇಟಿವ್ ಫೀಲ್ಡ್‌ನಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ನಮ್ಮಲ್ಲಿ 25 ಸಾವಿರಕ್ಕಿಂತಲೂ ಹೆಚ್ಚಿನ ಕೋ-ಆಪರೇಟಿವ್ ಸೊಸೈಟಿಗಳು ಇವೆ. ಅದರಲ್ಲಿ 7-8 ಸಾವಿರಗಳಷ್ಟು ಡಿಫಾಲ್ಟ್ ಇವೆ. ಉಳಿದಂಥ 17-18 ಸಾವಿರ ಸೊಸೈಟಿಗಳು ವಿವಿಧ ಉದ್ದೇಶಗಳನ್ವಯ ಕೆಲಸ ಮಾಡುತ್ತಾ ಇವೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಕನ್ಸೂಮರ್ಸ್ ಕೋ - ಆಪರೇಟಿವ್ ಸೊಸೈಟೀಸ್ ಮತ್ತು ಹಳ್ಳಿಗಳಲ್ಲಿರತಕ್ಕಂಥ ವ್ಯವಸಾಯ ಸಹಕಾರಿ ಸಂಘಗಳು ಅನೇಕ ಸಾರಿ ಈ ತಾಲ್ಲೂಕುಮಟ್ಟದಿಂದ ತೆಗೆದುಕೊಂಡು ಹೋಗಿ, ಹಳ್ಳಿಗಳಿಗೆ ಮುಟ್ಟಿಸುವುದೇ ಇಲ್ಲ. ಆದ್ದರಿಂದ ಅಲ್ಲಿಯ ಮಾನ್ಯ ಶಾಸಕರು ಇಂಥ ಸೊಸೈಟಿಯವರು ವಸ್ತುಗಳನ್ನು ಸರಿಯಾಗಿ ಮುಟ್ಟಿಸುತ್ತಾ ಇಲ್ಲ ಎಂದು ಕಂಡು ಬಂದು, ಅದನ್ನು ಹೇಳಿದರೆ, ಖಂಡಿತವಾಗಿ ಅಂಥ ಸೊಸೈಟಿಗಳ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇವೆ.

ರಾಜ್ಯದಲ್ಲಿ ಸಹಕಾರ ಸಂಘಗಳಿಗೆ ಚುನಾವಣೆ

(1762): ಶ್ರೀ ಡಿ. ಹಲಗೇಗೌಡ (ಪಾಂಡವಪುರ):- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಪ್ರಾಥಮಿಕ ಹಂತದಿಂದ ಹಿಡಿದು ರಾಜ್ಯಮಟ್ಟದವರೆಗೆ ಸಹಕಾರ ಸಂಘ ಮತ್ತು ಮಂಡಳಿಗಳ ಅವಧಿ ಮುಗಿದಿದ್ದರೂ ವರ್ಷಾನುಗಟ್ಟಲೆಯಿಂದ ಚುನಾವಣೆ ಮಾಡದೆ ಮುಂದುವರೆಯುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಾದರೆ ವರ್ಷಾನುಗಟ್ಟಲೆ ಮುಂದುವರೆದಿರುವ ಆಡಳಿತ ಮಂಡಳಿಗಳ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ರಾಜ್ಯದಲ್ಲಿ ಕೆಲವು ಸಹಕಾರ ಸಂಘಗಳು ಚುನಾವಣೆಗಳನ್ನು ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ. ವಾರ್ಷಿಕ ಮಹಾಸಭೆ ಹಾಗೂ ಚುನಾವಣೆಗಳನ್ನು ನಡೆಸದೇ ಇದ್ದ ಸಹಕಾರ ಸಂಘಗಳು ದಿನಾಂಕ: 16-1-1993 ರಿಂದ 31-1-1993ರ ಒಳಗೆ ಚುನಾವಣೆಗಳನ್ನು ನಡೆಸಲು ಸರ್ಕಾರವು ನಿರ್ದೇಶನ ನೀಡಿ ಆದೇಶ ಹೊರಡಿಸಿದೆ. ದಿನಾಂಕ: 31-1-93 ಕ್ಕೆ ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಸಹಕಾರ ಸಂಘಗಳಲ್ಲಿ ಶೇಕಡ 82ರಷ್ಟು ಸಂಘಗಳು ಚುನಾವಣೆ ನಡೆಸಿವೆ. ಇನ್ನೂ ಚುನಾವಣೆ ನಡೆಸದೇ ಇರುವ ಸಹಕಾರ ಸಂಘಗಳಲ್ಲಿ ಸಂಬಂಧಪಟ್ಟವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಸಹಕಾರಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ.

ಶ್ರೀ ಡಿ. ಹಲಗೇಗೌಡ:– ಮಾನ್ಯ ಸಭಾಧ್ಯಕ್ಷರೇ, ರಾಜ್ಯದಲ್ಲಿ ರಾಜ್ಯಮಟ್ಟದ ಮತ್ತು ಜಿಲ್ಲಾ ಮಟ್ಟದ ಸಹಕಾರಿ ಸಂಘಗಳು ಇನ್ನೂ ಕೂಡ ಚುನಾವಣೆ ಮಾಡದಿರತಕ್ಕಂಥ ವಿಚಾರಗಳು ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಕೆಲವು ರಾಜ್ಯಮಟ್ಟದ ಸಹಕಾರಿ ಸಂಘಗಳು, ಸರ್ವಸದಸ್ಯರ ಸಭೆಯನ್ನು ಇಟ್ಟುಕೊಂಡ ಹಿಂದಿನ ದಿವಸ ಸರಕಾರವೇ ಅದನ್ನು ಮುಂದೂಡಿದೆ, ಅಥವಾ ಕೆಲವರು ಇದನ್ನು ಒಂದು ಹವ್ಯಾಸವನ್ನಾಗಿ ಮಾಡಿಕೊಂಡಿದ್ದಾರೆ. ಯಾವುದಾದರೂ ಒಂದು ಲೋಪವನ್ನು ತೆಗೆದುಕೊಂಡು ಕೋರ್ಟ್‌ಗೆ ಹಾಕುವುದು, ಸ್ಟೇ ತರುವುದು, ಎರಡು ವರ್ಷ, ನಾಲ್ಕು ವರ್ಷ ಹೀಗೆ ಮುಂದುವರಿಯುತಕ್ಕಂಥಾದ್ದು ಇದೆ. ರಾಜ್ಯಮಟ್ಟದ ಅನೇಕ ಮಂಡಳಿಗಳು ಮತ್ತು ಸಹಕಾರಿ ಸಂಸ್ಥೆಗಳು 5–6 ವರ್ಷಗಳಿಂದ ಮುಂದುವರಿಯುತ್ತಾ ಇವೆ. ಸರಕಾರವೇ ಈ ರೀತಿಯಾಗಿ ಅಂಥವರ ಜೊತೆಗೆ ಶಾಮೀಲಾಗುತ್ತಿದ್ದಾರೆಯೇ ಅಥವಾ ನಿಜವಾದ ಕ್ರಮಗಳನ್ನು ಅಂಥವರ ಮೇಲೆ ಕೈಗೊಳ್ಳುತ್ತಿದೆಯೇ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೇ, ಸಹಕಾರಿ ರಂಗದಲ್ಲಿ ಇನ್ನೂ ಚುನಾವಣೆಗಳು ಆಗಿಲ್ಲ ಎಂಬುದನ್ನು ನಾನು ಒಪ್ಪುವುದಿಲ್ಲ. ರಾಜ್ಯದಲ್ಲಿ ಒಟ್ಟು 22,419ಸೊಸೈಟಿಗಳು ಇದ್ದು, ಇವೊತ್ತು ಕೆಲಸ ಮಾಡುತ್ತಿರುವಂಥವುಗಳು 18,441 ಮಾತ್ರ. ಅದರಲ್ಲಿ ಎಲೆಕ್ಷನ್ ಆಗಿರುವುದು 15,188.ಆಗದೇ ಇರತಕ್ಕಂಥವುಗಳು 3,253.ಅಂದರೆ ಸುಮಾರು 82ಪರ್‌ಸೆಂಟಿನಷ್ಟು ಸೊಸೈಟಿಗಳು ಇವೊತ್ತು ಚುನಾವಣೆಗಳಿಗೆ ಹೋಗಿವೆ. ಇದರಲ್ಲಿ ಅತ್ಯಂತ ಕಡಿಮೆ ಚುನಾವಣೆಗೆ ಹೋದವು ಅಂದರೆ, ತುಂಬಾ ಅನ್‌ಡೆಮಾಕ್ರಟಿಕ್ ಡಿಸ್ಟ್ರಿಕ್ಟ್ಸ್ ಎಂದು ನಾವು ಹೇಳಬಹುದು, ಅವುಗಳು ಯಾವುವು ಅಂದರೆ, ಚಿಕ್ಕಮಗಳೂರು, ಹಾಸನ, ಸ್ವಲ್ಪಮಟ್ಟಿಗೆ ಮೈಸೂರು, ಬೆಂಗಳೂರು ಸಿಟಿ ಇಲ್ಲಿ ಬಿಟ್ಟರೆ 48 ಪರ್ಸೆಂಟ್, ಮೈಸೂರಿನಲ್ಲಿ 37, ಹಾಸನದಲ್ಲಿ 45, ಚಿಕ್ಕಮಗಳೂರಿನಲ್ಲಿ 36 ಪರ್ಸೆಂಟ್ ಬಿಟ್ಟರೆ ಉಳಿದವುಗಳೆಲ್ಲವೂ ಕೂಡ 60, 80, 90 ಪರ್ಸೆಂಟ್‌ನ ತನಕ ಚುನಾವಣೆಗಳು ಆಗಿವೆ. ಆದ್ದರಿಂದ ಎಲ್ಲಿಯೂ ಚುನಾವಣೆಗಳು ನಡೆದಿಲ್ಲ ಎಂಬುದನ್ನು ಒಪ್ಪುವುದಿಲ್ಲ. ಆದರೆ ರಾಜ್ಯಮಟ್ಟದಲ್ಲಿ ಕೆಲವೊಂದು ಸಂಸ್ಥೆಗಳಲ್ಲಿ ಚುನಾವಣೆಗಳನ್ನು ಮುಂದೂಡುತ್ತಾ ಇದ್ದಾರೆ ಎಂಬ ಮಾತನ್ನು ಹೇಳಿದ್ದಾರೆ,

ಅಂಥ ಯಾವ ಸೊಸೈಟಿಗಳಾಗಲೀ, ಅಪೆಕ್ಸ್ ಸಂಸ್ಥೆಗಳಾಗಲೀ ಇದ್ದರೆ ಅದರ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ. ನಿರ್ದಿಷ್ಟವಾಗಿ ಅದು ಮಾರ್ಕೆಟಿಂಗ್ ಫೆಡರೇಶನ್, ಅಪೆಕ್ಸ್ ಬ್ಯಾಂಕ್, ಇತ್ಯಾದಿಯಾಗಿ ಖಚಿತವಾಗಿ ಹೇಳಬೇಕು. ಅದರ ಬಗ್ಗೆ ನಾನು ಗಮನ ಹರಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ. ಹಲಗೇಗೌಡ:– ಮಾನ್ಯ ಅಧ್ಯಕ್ಷರೇ, ನಾನು ಎಲ್ಲಿಯೂ ಚುನಾವಣೆಗಳು ನಡೆದಿಲ್ಲ ಎಂದು ಹೇಳುವುದಿಲ್ಲ. ಸಣ್ಣ ಸಹಕಾರ ಸಂಘಗಳು ಇರಲಿ, ಆದರೆ ಕೆಲವು ದೊಡ್ಡ ದೊಡ್ಡ ಸಹಕಾರಿ ಸಂಘಗಳು, ವಿನಾಕಾರಣ ಯಾವುದಾದರೂ ನೆಪವನ್ನು ಒಡ್ಡಿ ಮುಂದಕ್ಕೆ ಹಾಕುವುದು, ಸ್ಟೇ ಇತ್ಯಾದಿಗಳ ಮೂಲಕ ಇನ್ನೂ 3–4 ವರ್ಷಗಳ ಕಾಲ ಮುಂದುವರಿಯತಕ್ಕಂಥಾದ್ದು ಇದೆ. ಜನರಲ್ ಬಾಡಿ ನಾಳೆ ಅಂದರೆ, ಅದರ ಮುಂಚಿನ ದಿವಸ ಮುಂದೂಡಿದ್ದಾರೆ. ರಾಜ್ಯ ಗ್ರಾಮೀಣ ಅಭಿವೃದ್ಧಿ ಬ್ಯಾಂಕನ್ನು, ಮಾರ್ಕೆಟಿಂಗ್ ಫೆಡರೇಶನನ್ನು ಹೀಗೆ ಮಾಡಿದ್ದಾರೆ. ಹೀಗೆ ಮಾಡಿದರೆ ಸಹಕಾರಿ ಚಳುವಳಿಯು ಉಳಿಯುತ್ತದೆಯೇ ? ಅವರು ಒತ್ತಾಯ ಮಾಡದಿದ್ದರೂ ಇವರೇ ಮುಂದೆ ಹಾಕಿಕೊಂಡು ಬರುವ ಅರ್ಥ ಏನು ? ಹೀಗೆ ನೆಪ ಒಡ್ಡಿ ಕೋರ್ಟ್ ಕಚೇರಿಗಳಿಗೆ ಹೋಗುತ್ತಾ ಇದ್ದರೆ, ಆಡಳಿತಾಧಿಕಾರಿಗಳನ್ನು ಹಾಕುವುದಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಅಂಥ ಯಾವುದಾದರೂ ಸೊಸೈಟಿಗಳು ಮುಂದೆ ಹೋಗಿದ್ದರೆ, ಅದು ಯಾವ ಕಾರಣಕ್ಕಾಗಿ ಮುಂದಕ್ಕೆ ಹೋಗಿದೆ ಎಂಬುದನ್ನು ನೋಡಿ, ಕ್ರಮ ತೆಗೆದುಕೊಳ್ಳುತ್ತೇನೆ.

ನೆರೆ ಹಾವಳಿಯಿಂದ ಹಾನಿಯಾಗಿರುವ ಮನೆಗಳಿಗೆ ಪರಿಹಾರ

(392): ಶ್ರೀ ಬಾದರಹಳ್ಳಿ ಹಂಪನಗೌಡ (ಸಿಂಧನೂರು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ನೆರೆ ಹಾವಳಿಯಲ್ಲಿ ಸರ್ವೆ ಮಾಡುವ ಸಮಯದಲ್ಲಿ ಮನೆಗಳು ಬಿದ್ದಿದ್ದು, ಅಂತಹವರಿಗೆ ಇನ್ನೂ ಪರಿಹಾರ ಧನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಅಂತಹವರಿಗೆ ಸರಕಾರ ಪರಿಹಾರ ಧನ ನೀಡುವುದೇ;

ಇ. ನೆರೆ ಹಾವಳಿಯಲ್ಲಿ ರೈತರು ಬೆಳೆದ ಬೆಳೆಗಳು ನಾಶವಾಗಿದ್ದು ಅವರಿಗೆ ಸರಕಾರ ಪರಿಹಾರ ಧನ ನೀಡುವುದೇ;

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ. ಇಲ್ಲ

ಆ. ಉದ್ಭವಿಸುವುದಿಲ್ಲ.

ಇ. ನಾಶವಾದ ಪ್ರತಿ ಹೆಕ್ಟೇರ್ ಬೆಳೆಗೆ 500.00 ರೂಪಾಯಿಗಳಂತೆ ಕೃಷಿ ಸಾಮಗ್ರಿಗಳ ರೂಪದಲ್ಲಿ ಪರಿಹಾರ ನೀಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಬಾದರಹಳ್ಳಿ ಹಂಪನಗೌಡ:– ಮಾನ್ಯ ಅಧ್ಯಕ್ಷರೇ, ನೆರೆಹಾವಳಿಯಲ್ಲಿ ಸರ್ವೆ ಮಾಡುವ ಸಮಯದಲ್ಲಿ ಮನೆಗಳು ಬಿದ್ದಿದ್ದು ಅಂಥವರಿಗೆ ಇನ್ನೂ ಪರಿಹಾರವನ್ನು ನೀಡದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಉತ್ತರದಲ್ಲಿ 'ಇಲ್ಲ' ಎಂಬು ಹೇಳುತ್ತಾರೆ. ಹಾಗಿದ್ದಲ್ಲಿ ಅಂಥವರಿಗೆ ಸರಕಾರ ಪರಿಹಾರಧನ ನೀಡುವುದೇ ಎಂದು ಕೇಳಿದ್ದೇನೆ, ಅದಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ನೆರೆ ಹಾವಳಿಯಲ್ಲಿ ರೈತರು ಬೆಳೆದ ಬೆಳೆಗಳು ನಾಶವಾಗಿದ್ದು, ಅದಕ್ಕೆ ಸರ್ಕಾರದವರು

ಪರಿಹಾರ ಧನವನ್ನು ನೀಡುವರೆ ಎಂದು ಕೇಳಿದ್ದೆ, ಅದಕ್ಕೆ ಉತ್ತರವಾಗಿ ನಾಶವಾದ ಪ್ರತಿ ಹೆಕ್ಟೇರ್‌ಗೆ 500ರೂ.ಗಳಂತೆ ಪರಿಹಾರವನ್ನು ಸಾಮಗ್ರಿಗಳ ಮೂಲಕ ನೀಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ. ಮಾನ್ಯ ಕಂದಾಯ ಸಚಿವರು ಕೂಡ ನಮ್ಮ ಕ್ಷೇತ್ರಕ್ಕೆ ಬಂದು ಪರಿಸ್ಥಿತಿಯನ್ನು ಕಣ್ಣಾರೆ ನೋಡಿದ್ದಾರೆ. ಸರ್ವೆ ಮಾಡುವ ಸಮಯದಲ್ಲಿ ಪ್ರತಿ ಹಳ್ಳಿಗಳಲ್ಲಿ 30–40 ಮನೆಗಳು ಬಿದ್ದಿರುವುದನ್ನು ಅವರು ನೋಡಿದ್ದಾರೆ. ಪರಿಹಾರವನ್ನು ನೀಡುವಲ್ಲಿ ಕೂಡ ಸಾಕಷ್ಟು ಅವ್ಯವಹಾರವಾಗಿ ಯಾರಿಗೆ ಮನೆ ಬಿದ್ದು ಹೋಗಿ ಪರಿಹಾರ ಸಿಗಬೇಕಾಗಿತ್ತು ಅವರಿಗೆ ಸಿಕ್ಕಿಲ್ಲ. ಮನೆ ಬೀಳಲಾರದವರಿಗೆ ಪರಿಹಾರ ಸಿಕ್ಕಿದೆ. ಹಾಗೆಯೇ ನಾಶವಾದ ಬೆಳೆಗಳ ಬಗ್ಗೆ ಇನ್ನೂ ಪರಿಹಾರ ಕೊಟ್ಟಿಲ್ಲ. ಮತ್ತೆ ಸರಕಾರದವರು ಬೇಸಿಗೆ ಬೆಳೆ ಬೆಳೆದವರಿಗೆ ಮಾತ್ರ ಪರಿಹಾರವನ್ನು ಕೊಡಬೇಕೆಂದು ಆದೇಶ ಹೊರಡಿಸಿದ್ದಾರೆ ಎಂದು ತಿಳಿದು ಬಂದಿದೆ. ಇದು ಹೌದೋ ಅಲ್ಲವೋ ಎಂಬ ಬಗ್ಗೆ ತಿಳಿಸಬೇಕು. ಹಾಗೆಯೇ ಈ 9 ಗ್ರಾಮಗಳು ನೆಲಸಮವಾಗಿದ್ದು ಅಲ್ಲಿ ಇದುವರೆಗೂ ಏನೂ ಪರಿಹಾರ ಕ್ರಮ ತೆಗೆದುಕೊಳ್ಳುವ ದಿಶೆಯಲ್ಲಿ ಪುನರ್ ವಸತಿ ಕಾರ್ಯಕ್ರಮ ಮಾಡುವುದು, ಭೂಮಿ ತೆಗೆದುಕೊಳ್ಳುವುದು, ಅಥವಾ ತಾವುಗಳು ಕೊಟ್ಟ ಸಾಮಗ್ರಿಗಳನ್ನು ಬಳಸಿಕೊಳ್ಳಲು ಅವರಿಗೆ ಒಂದು ಜಾಗವಾದರೂ ಬೇಕಲ್ಲ ? ಈ ಎಲ್ಲಾ ವಿಚಾರಗಳ ಬಗ್ಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ದಯಮಾಡಿ ತಿಳಿಸಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮೂರು ಪ್ರಶ್ನೆಗಳನ್ನು ಕೇಳಿದ್ದಾರೆ. ಮೊದಲನೆದಾಗಿ ಪರಿಹಾರ ಧನ ಕೊಟ್ಟಿರುವುದರಲ್ಲಿ ಅವ್ಯವಹಾರವಾಗಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಎಲ್ಲೆಲ್ಲಿ ಅವ್ಯವಹಾರವಾಗಿದೆ ಅದನ್ನು ವಿಚಾರಣೆ ಮಾಡಬೇಕೆಂದು ಆದೇಶಿಸಿದ್ದೇನೆ. ಫಸಲು ನಷ್ಟವಾಗಿರತಕ್ಕಂಥಾದ್ದರ ಬಗ್ಗೆ ಇನ್ನೂ ಕೆಲವು ಕಡೆಗಳಲ್ಲಿ ಪರಿಹಾರ ಕೊಟ್ಟಿಲ್ಲ ಎಂದು ಹೇಳಿದ್ದೀರಿ. ಇಂಥ ಸ್ಥಳಗಳಲ್ಲಿ ಪರಿಹಾರ ಸಿಕ್ಕಿಲ್ಲ ಎಂಬ ಮಾಹಿತಿಗಳನ್ನು ಕಳುಹಿಸಿಕೊಟ್ಟರೆ, ಅಂಥವುಗಳು ಜಿನ್ಯೂವನ್ ಆಗಿದೆಯೇ ಎಂಬುದನ್ನು ಪರೀಕ್ಷೆ ಮಾಡಿ, ಅವುಗಳಿಗೆ ಪರಿಹಾರವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗಾಗಲೇ ಪಂಪ್‌ಸೆಟ್‌ಗಳಿಗೆ ಅಮೌಂಟನ್ನು ರಿಲೀಸ್ ಮಾಡಿದ್ದೇವೆ. ಬಹುಶಃ ಇನ್ನೂ ಮೂರು ನಾಲ್ಕು ದಿವಸಗಳೊಳಗಾಗಿ ಅಮೌಂಟನ್ನು ಪೇ ಮಾಡುತ್ತೇವೆ.

ಶ್ರೀ ಬಾದರಹಳ್ಳಿ ಹಂಪನಗೌಡ:– ಮಾನ್ಯ ಅಧ್ಯಕ್ಷರೇ, ನೆರೆಹಾವಳಿಯಲ್ಲಿ ರೈತರ ಜಮೀನು ಸುಮಾರು ಒಂದು ಲಕ್ಷಕ್ಕೂ ಮೇಲ್ಪಟ್ಟು ಬೆಳೆ ನಾಶವಾಗಿದೆ. ಅವರಿಗೆ ಪರಿಹಾರವನ್ನು ಕೊಟ್ಟಿಲ್ಲ. ತಾವು ಆದೇಶ ಏನು ಕೊಟ್ಟಿದ್ದೀರಿ ಅಂದರೆ ಬೇಸಿಗೆ ಬೆಳೆಯನ್ನು ಯಾರು ಹಾಕುತ್ತಾರೋ ಅವರಿಗೆ ಮಾತ್ರ ಪರಿಹಾರ ನೀಡಬೇಕು. ನವೆಂಬರ್ ತಿಂಗಳಲ್ಲಿ ಯಾರದ್ದು ನಾಶವಾಗಿದೆ ಅವರಿಗೆ ಪರಿಹಾರವನ್ನು ನೀಡುವುದು ಬಿಟ್ಟು ಬೇಸಿಗೆ ಬೆಳೆಯಲ್ಲಿ ಆದವರಿಗೆ ಪರಿಹಾರ ನೀಡುವಂತಹ ಆದೇಶ ಕಳುಹಿಸಿದರೆ ಇದು ಯಾವ ನ್ಯಾಯ ? ತಾವು ಆದೇಶವನ್ನು ತರಿಸಿ ನೋಡಿ. ಅದು ಆಗಿದೆಯೋ ಇಲ್ಲವೋ ?

SRI M. RAJASHEKARA MURTHY:– If any such Circular has gone to the Deputy Commissioner I will see it is withdrawn.

ಮುಜರಾಯಿ ಇಲಾಖೆಗಳಿಗೆ ಕಟ್ಟಡಗಳ ನಿರ್ಮಾಣ

(1949): ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ):– ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಮುಜರಾಯಿ ಇಲಾಖೆಗೆ ಸಂಬಂಧಿಸಿದ ಜಮೀನನ್ನು 22 ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದ್ದು, ಕೇವಲ 3 ಸಂಸ್ಥೆಗಳು ಮಾತ್ರ ಕಟ್ಟಡ ಪೂರ್ತಿಯಾಗಿಲ್ಲವೆಂದು ತಿಳಿಸಿರುತ್ತೀರಿ, ಅವು ಯಾವುವು;

2. ಕಟ್ಟಡ ಕಟ್ಟಲು ಇನ್ನು ಎಷ್ಟು ಕಾಲಾವಕಾಶ ಇದೆ;

3. ಸಮಯಕ್ಕೆ ಸರಿಯಾಗಿ ಕಟ್ಟಡ ಕಟ್ಟದಿದ್ದಲ್ಲಿ ಸರ್ಕಾರ ತೆಗೆದುಕೊಳ್ಳುವ ಕ್ರಮವೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

1. ಶ್ರೀ ವಿದ್ಯಾಮಂದಿರ ಶಿಕ್ಷಣ ಸಂಸ್ಥೆ, ಮಲ್ಲೇಶ್ವರಂ ಬೆಂಗಳೂರು.
2. ಶ್ರೀ ಬಿ.ಎಂ. ಶ್ರೀನಿವಾಸಯ್ಯ ಶಿಕ್ಷಣ ಸಂಸ್ಥೆ, ಬಸವನಗುಡಿ, ಬೆಂಗಳೂರು.
3. ಶ್ರೀ ಕೆ.ಎಂ. ನಾಗೇಂದ್ರಪ್ಪ, ಯಶವಂತಪುರ, ಬೆಂಗಳೂರು.

1. ಶ್ರೀ ವಿದ್ಯಾಮಂದಿರ ಶಿಕ್ಷಣ ಸಂಸ್ಥೆ ಅವರಿಗೆ ದಿನಾಂಕ: 19.9.1991ರಂದು ನಿವೇಶನದ ಸ್ವಾಧೀನತೆ ನೀಡಿರುವುದರಿಂದ, 2 ವರ್ಷಗಳ ಕಾಲಾವಕಾಶ ಇದೆ.
2. ಶ್ರೀ ಬಿ.ಎಂ. ಶ್ರೀನಿವಾಸಯ್ಯ ಶಿಕ್ಷಣ ಸಂಸ್ಥೆಗೆ ದಿನಾಂಕ: 6.9.91ರಂದು ನಿವೇಶನದ ಸ್ವಾಧೀನತೆ ನೀಡಿರುವುದರಿಂದ 5 ವರ್ಷಗಳ ಕಾಲಾವಕಾಶ ಇದೆ.
3. ಶ್ರೀ ಕೆ.ಎಂ. ನಾಗೇಂದ್ರಪ್ಪ ಅವರಿಗೆ ಗುತ್ತಿಗೆ ಕರಾರಿನಲ್ಲಿ ಇಂತಿಷ್ಟೇ ಸಮಯದಲ್ಲಿ ಕಟ್ಟಡ ನಿರ್ಮಿಸಬೇಕೆಂದು ಷರತ್ತು ಇರುವುದಿಲ್ಲ, ಗುತ್ತಿಗೆ ಅವಧಿ 24.2.99 ರ ತನಕ ಕಾಲಾವಕಾಶ ಇದೆ.

3. ನಿಗದಿತ ಅವಧಿಯಲ್ಲಿ ಕಟ್ಟಡ ನಿರ್ಮಿಸದಿದ್ದಲ್ಲಿ ಕರಾರಿನ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀಮತಿ ಸುಮಾ ವಸಂತ:- ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಶ್ರೀ ವಿದ್ಯಾಮಂದಿರ ಶಿಕ್ಷಣ ಸಂಸ್ಥೆ ಅವರಿಗೆ ದಿನಾಂಕ: 19.9.1991ರಂದು ನಿವೇಶನದ ಸ್ವಾಧೀನತೆ ನೀಡಿರುವುದರಿಂದ, 2 ವರ್ಷಗಳ ಕಾಲಾವಕಾಶ ಇದೆ ಎಂದು ಹೇಳಿದ್ದಾರೆ. ಇವರು ಈ ನಿವೇಶನಗಳ 22 ಸಂಸ್ಥೆಗಳಿಗೆ ಗುತ್ತಿಗೆಯನ್ನು ಯಾವಾಗ ನೀಡಲಾಗಿದೆ, ಮತ್ತು ಇದರ ಮಧ್ಯೆ ಸರ್ಕಾರ ಏನು ಮಾಡುತ್ತಿತ್ತು ಎಂದು ಕೇಳುತ್ತಿದ್ದೇನೆ, ಇವರು ಕಂಡೀಷನ್ ಅನ್ನು ಸರಿಯಾಗಿ ಪಾಲನೆ ಮಾಡಬೇಕು ಎಂದು ನಿಯಮಗಳು ಇಲ್ಲವೇ, ಇದರಿಂದ ಸರ್ಕಾರಕ್ಕೆ ನಷ್ಟವಾಗುವುದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ:- ಮಾನ್ಯ ಅಧ್ಯಕ್ಷರೆ, ಕಂಡೀಷನ್ ಪಾಲನೆ ಮಾಡಬೇಕೆಂದು ನಿಯಮ ಇದೆ. ಅವರು ಇಷ್ಟೆ ದಿವಸದಲ್ಲಿ ಕಟ್ಟಡವನ್ನು ಕಟ್ಟಬೇಕೆಂದು ಅಗ್ರಿಮೆಂಟ್‌ನಲ್ಲಿ ಹೇಳಿಲ್ಲ. ಇನ್ನು ಉಳಿದ ಕಡೆ ಇಷ್ಟು ವರ್ಷದಲ್ಲಿ ಅಗ್ರಿಮೆಂಟ್ ಪ್ರಕಾರ ಕಟ್ಟಡವನ್ನು ಕಟ್ಟಬೇಕೆಂದು ಹೇಳಿದ್ದಾರೆ. ಆ ಕಟ್ಟಡವನ್ನು ಅವರು ಕಟ್ಟದೇ ಹೋದರೆ ಅವರಿಗೆ ನೋಟೀಸ್ ಕೊಟ್ಟುಬಿಟ್ಟು ವಾಪಸ್ಸು ಲೀಸ್ ಏನು ಕೊಟ್ಟಿದೆ ಅದನ್ನು ರದ್ದು ಮಾಡುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ರಮ ಭೂಮಿ ಸಕ್ರಮಕ್ಕೆ ಅರ್ಜಿಗಳು

(2009): ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಕ್ಷಿಣ ಕನ್ನಡ ಜಿಲ್ಲೆಯ ಅಕ್ರಮಿತ ಭೂಮಿ ಸಕ್ರಮಿಸುವ ಬಗ್ಗೆ ಎಷ್ಟು ಅರ್ಜಿಗಳು ಬಂದಿವೆ;

ಆ. ಎಷ್ಟು ಅರ್ಜಿಗಳು ತೀರ್ಮಾನವಾಗಿವೆ;

ಇ. ಒಟ್ಟು ಎಷ್ಟು ಎಕರೆ ಭೂಮಿಯನ್ನು ಎಷ್ಟು ಜನರಿಗೆ ಸಕ್ರಮಿಸಲಾಗಿದೆ;

ಈ. ಈ ಸಮಿತಿಯ ಸದಸ್ಯರಿಗೆ ಸಂಭಾವನೆ ಕೊಡುವ ಆಲೋಚನೆ ಇದೆಯೋ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಅ. 1,64,088

ಆ. 17,569

ಇ. 5733–69 ಎಕರೆ ಜಮೀನನ್ನು ದಿನಾಂಕ 31–1–93ರ ವರೆಗೆ 5,029 ಜನರಿಗೆ ಮಂಜೂರು ಮಾಡಲಾಗಿದೆ.

ಈ. ಹೌದು.

ಶ್ರೀ ಕೆ. ಸೋಮಪ್ಪ ಸುವರ್ಣ:– ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ 1,64,088 ಅರ್ಜಿಗಳು ಬಂದಿದ್ದು ಕಳೆದ ವರ್ಷದಿಂದ ಇದುವರೆಗೂ ಕೇವಲ 17,569 ಅರ್ಜಿಗಳು ಮಾತ್ರ ಇತ್ಯರ್ಥವಾಗಿದ್ದು, ಒಟ್ಟು ಅರ್ಜಿಗಳ ಹತ್ತನೆಯ ಒಂದು ಭಾಗ ಮಾತ್ರ ಒಂದು ವರ್ಷದಲ್ಲಿ ಆಗಿದೆ. ಈ ಎಲ್ಲಾ ಅರ್ಜಿಗಳನ್ನು ತೀರ್ಮಾನ ಮಾಡಲಿಕ್ಕೆ ಇನ್ನು 10–20 ವರ್ಷಗಳು ಬೇಕಾಗುತ್ತದೆ. ಅಲ್ಲಿಯವರೆಗೂ ಯಾರು ಬದುಕುತ್ತಾರೆ, ಯಾರು ಸಾಯುತ್ತಾರೆಂದು ಹೇಳಲಿಕ್ಕೆ ಆಗುವುದಿಲ್ಲ. ಕಾರಣ ಇಷ್ಟೆ, ಈ ಅರ್ಜಿಗಳನ್ನು ವಿಲೇವಾರಿ ಮಾಡಲಿಕ್ಕೆ ಬೇಕಾದಂತಹ ಅಧಿಕಾರ ವರ್ಗ ಅಲ್ಲಿ ಉಂಟು, ಹೀಗಿರುವಂಥ ನೌಕರ ವರ್ಗದವರಿಗೆ ಅಧಿಕಾರವನ್ನು ಕೊಟ್ಟುಬಿಟ್ಟಿದ್ದಾರೆ. ಅವರಿಗೆ ಸುಧಾರಣೆಯನ್ನು ಮಾಡಲಿಕ್ಕೆ ಸಮಯವೇ ಇಲ್ಲ. ಅವರಿಗೆ ಈ ಕೆಲಸವನ್ನು ಮಾಡಬೇಕೆಂದು ತಾವು ಆದೇಶಿಸಿರುವ ಕಾರಣ ಇದು ಯಾವ ರೀತಿಯಲ್ಲಿಯೂ ವೇಗದಲ್ಲಿ ಖಂಡಿತ ನಡೆಯಲಿಕ್ಕೆ ಸಾಧ್ಯವಿಲ್ಲ. ಆಕ್ರಮಿಸಿಕೊಂಡಿರುವ ಭೂಮಿಯನ್ನು ಸಕ್ರಮಿಕರಿಸುವಂತಹ ಕೆಲಸಕ್ಕೆ ನಿಗದಿತ ನೌಕರರನ್ನು ನೇಮಿಸುವಂಥದ್ದು, ಅದಕ್ಕಾಗಿಯೇ ಪ್ರತ್ಯೇಕ ನೌಕರರನ್ನು ನೇಮಿಸುವಂಥ ಕೆಲಸವನ್ನು ತಾವು ಮಾಡುತ್ತೀರಾ ? ಇಲ್ಲದಿದ್ದರೆ ಇದರ ಪ್ರಯೋಜನ ಖಂಡಿತ ಸಿಗಲಾರದು. ಇದು ಇನ್ನು ಹತ್ತು ವರ್ಷ ನಿಮ್ಮ ಲೆಕ್ಕದ ಪ್ರಕಾರ ಆಗುವುದಿಲ್ಲ. ಹತ್ತನೆಯ ಒಂದು ಭಾಗ ಮಾತ್ರ ಒಂದು ವರ್ಷದಲ್ಲಿ ಆಗಿದೆ. ಇನ್ನು ಉಳಿದದ್ದು ಆಗಬೇಕಾದರೆ 10 ವರ್ಷ ಬೇಕಾಗುತ್ತದೆ. ಬೇರೆ ನೇಮಕ ಮಾಡುತ್ತೀರಾ ಅಥವಾ ಯಾವ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ನಾನು ನಿಮ್ಮನ್ನು ಕೇಳಬಯಸುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ:– ಮಾನ್ಯ ಅಧ್ಯಕ್ಷರೆ, ಇದು ಇತ್ಯರ್ಥ ಆಗತಕ್ಕಂಥದ್ದರಲ್ಲಿ ಬಹಳ ನಿಧಾನವಾಗಿದೆ ಎಂದು ಅಂತ ಹೇಳುತ್ತಾರೆ. ನಿಧಾನ ಆಗಿಲ್ಲ ಎಂದು ಸರ್ಕಾರ ಹೇಳುವುದಿಲ್ಲ. ನಿಧಾನ ಆಗಿದೆ. ಕಾರಣ ಸಿಬ್ಬಂದಿ ವರ್ಗ ಹೆಚ್ಚಿಗೆ ಇಲ್ಲದೇ ಇರುವುದರಿಂದ ಅವರು ಏನು ಹೇಳುತ್ತಾರೆ ಅದು ಸರಿಯಲ್ಲ. ಕೆಲಸ ಮಾಡಲು ಸಾಕಷ್ಟು ಜನ ಸಿಬ್ಬಂದಿವರ್ಗ ಇದೆ. ಆದರೆ ಕೆಲವು ನಿಯಮಗಳು ಇವೆ. ಯಾವ್ಯಾವ ತರಹದ ಜಮೀನನ್ನು ಅಕ್ರಮವಾಗಿ ವ್ಯವಸಾಯ ಮಾಡುತ್ತಿರುವುದನ್ನು ಸಕ್ರಮ ಮಾಡಬೇಕೆನ್ನುವುದರ ಬಗ್ಗೆ ಕೆಲವು ಕಂಡೀಷನ್ಸ್ ಇವೆ. ಅನೇಕ ಅರ್ಜಿಗಳು ಆ ಕಂಡೀಷನ್ಸ್‌ಗೆ ಒಳಪಟ್ಟಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ ಲ್ಯಾಂಡ್ ಎಂದು ಇದೆ. ಇನ್ನು ಕೆಲವು ನಗರದ ಪಕ್ಕದಲ್ಲಿಯೇ ಇವೆ. ಫಾರೆಸ್ಟ್ ಲ್ಯಾಂಡ್ ಇವೆ. ಕೆಲವು ಲ್ಯಾಂಡ್‌ಗಳು ಏನಿವೆ, ಆ ಲ್ಯಾಂಡ್‌ಗಳನ್ನು ಕನ್‌ಫರ್ಮ್ ಮಾಡುವುದಕ್ಕಾಗುವುದಿಲ್ಲ. ತಂಟೆ ತಕರಾರು ಇಲ್ಲದೇ ಇರತಕ್ಕ ಜಮೀನುಗಳನ್ನೆಲ್ಲಾ ಕನ್‌ಫರ್ಮ್ ಮಾಡಿದ್ದಾರೆ. ಉಳಿದವನ್ನೆಲ್ಲ ಬೇರೆ ಬೇರೆ ಕಾರಣಗಳಿಂದ ಮಾಡುವುದಕ್ಕೆ ಆಗಿಲ್ಲವೇ ಹೊರತು ಸಿಬ್ಬಂದಿ ಇಲ್ಲದೇ ಇರುವುದರಿಂದ ಆ ಕೆಲಸ ನಿಧಾನವಾಗಿಲ್ಲ. ಅದಕ್ಕೆ ಬೇರೆ ಸಿಬ್ಬಂದಿಯನ್ನು ಮಾಡತಕ್ಕಂಥ ಅವಶ್ಯಕತೆ ಬರುವುದಿಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ:– ಮಾನ್ಯ ಅಧ್ಯಕ್ಷರೆ, ಕುಂಕಿ ಸ್ಥಳವನ್ನು ನಾವು ಇಷ್ಟರವರೆಗೆ ಮುಟ್ಟಲಿಕ್ಕೆ ಹೋಗಲಿಲ್ಲ. ಏಕೆಂದರೆ ಯಾವುದು ಬಹಳ ವೇಗವಾಗಿ ಕೊಡಲಿಕ್ಕೆ ಆಗುತ್ತದೆಯೋ ಅಂತಹ ಅರ್ಜಿಗಳನ್ನು ತೆಗೆಯಬೇಕೆಂದು ಕಂದಾಯ ಇಲಾಖೆಯವರಿಗೆ ಹೇಳುತ್ತೇನೆ. ಇಷ್ಟರವರೆಗೆ

ಸುಲಭಧಲ್ಲಿ ಆದರಲ್ಲಿ ಯಾವುದಾದರೂ ಸಮಸ್ಯೆ ಇರುವಂತಹವರು ಭೂಮಿ ಇನ್ನು ತೀರ್ಮಾನಿಸಲು ಬೇಕಾಗಿದೆ. ಬೇರೆ ಕೆಲಸಗಳ ಒತ್ತಡದಿಂದ ನಿಧಾನವಾಗಿ ಕೆಲಸ ಆಗುತ್ತದೆಂದು ನಾನು ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಆದ್ದರಿಂದ ನೌಕರರಿಗೆ ಇದಕ್ಕೆ ಪ್ರತ್ಯೇಕವಾದಂತಹ ವಿಭಾಗವನ್ನು ಮಾಡಿದರೆ ಒಳ್ಳೆಯದು. ಎರಡನೆಯದು, ಈ ಸಮಿತಿಯ ಸದಸ್ಯರಿಗೆ ಸಂಭಾವನೆಯನ್ನು ಕೊಡುತ್ತೀರಾ ? ಕಳೆದ ಒಂದು ವರ್ಷದಿಂದ ಇದೇ ಶಬ್ದವನ್ನು ಕೇಳುತ್ತಿದ್ದೇನೆ. ಅವರಿಗೆ ಎಷ್ಟು ಸಂಭಾವನೆಯನ್ನು ಕೊಡುತ್ತೀರಿ, ಯಾವಾಗ ಕೊಡುತ್ತೀರಿ ಎನ್ನುವುದನ್ನು ಹೇಳಬೇಕು. ಪಾಪ, ಅವರು ಇಷ್ಟರವರೆಗೆ ಬಿಟ್ಟಿ ಕೆಲಸ ಮಾಡಿದ ಹಾಗೆ ಪುಕ್ಕಟೆಯಾಗಿ ಕುಡಿಯುತ್ತಿದ್ದಾರೆ. ಆದ್ದರಿಂದ ಎಷ್ಟು ಸಂಭಾವನೆಯನ್ನು ಕೊಡುತ್ತೀರಿ ಯಾವಾಗ ಕೊಡತ್ತೀರಿ ಅದನ್ನು ಕೊಟ್ಟ ಕೂಡಲೆ ಇನ್ನೂ ಸ್ವಲ್ಪ ಸ್ಫೂರ್ತಿಯಾಗಿ ಕೆಲಸ ಮಾಡುತ್ತಾರೆ.

ಶ್ರೀ ಎಂ. ರಾಜಶೇಖರಮೂರ್ತಿ:— ಮೊದಲನೆಯ ಪ್ರಶ್ನೆಗೆ ಆಗಲೇ ಉತ್ತರ ಹೇಳಿದ್ದೇನೆ. ಇದಕ್ಕೆ ಪ್ರತ್ಯೇಕವಾಗಿ ಸಿಬ್ಬಂದಿಯನ್ನು ಏರ್ಪಾಡು ಮಾಡುವ ಅವಶ್ಯಕತೆ ಇಲ್ಲ. ಎರಡನೆಯ ಪ್ರಶ್ನೆ ಸಂಭಾವನೆಯ ಬಗ್ಗೆ ಹೇಳಿದರು. ಸದಸ್ಯರು ಕಮಿಟಿಯೊಳಗೆ ಏನೇನು ಕೆಲಸ ಮಾಡುತ್ತಿದ್ದಾರೆ ಅವರಿಗೆ ಸಂಭಾವನೆಯನ್ನು ಕೊಡಬೇಕೆಂದು ಹೇಳಿದರು, ಇದನ್ನು ನನ್ನ ಗಮನಕ್ಕೆ ಈಗ ತಾನೆ ತಂದಿದ್ದಾರೆ.

ಅಧ್ಯಕ್ಷರು:— ತಮ್ಮ ಪ್ರಶ್ನೆಗೆ ಒಂದು ವಾರ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್:— ಮಾನ್ಯ ಅಧ್ಯಕ್ಷರೆ, ಇದು ರೈತರು ಬೆಳೆದಂತಹ ಬೆಳೆಗಳಿಗೆ ಬೆಲೆ ಇವತ್ತು ಬಜಾರ್‌ನಲ್ಲಿ ಇಲ್ಲ. ಬೆಲೆ ಬಿದ್ದು ಹೋಗಿದೆ. ಸರ್ಕಾರ ಏನಾದರೂ ವ್ಯವಸ್ಥೆ ಮಾಡಬೇಕು ಎಂದು ಕೇಳಿದ್ದೇನೆ. ಇದಕ್ಕೆ ಸಮಯ ಕೇಳಲಿಕ್ಕೆ ಏನು ಕಾರಣ ? ಸರ್ಕಾರ ಯಾವಾಗ ಮಾಡುತ್ತದೆ. ರೈತ ಈಗಾಗಲೇ ದಿವಾಳಿ ಎದ್ದು ರೋಸಿ ಹೋಗಿದ್ದಾನೆ. ನಾನು ಹಿಂದಿನ ವಾರದಲ್ಲಿ ಕೇಳಿದೆ, ಜಿಲ್ಲಾಪರಿಷತ್ತಿಗೆ ಹಣ ಬಿಡುಗಡೆ ಮಾಡಬೇಕಾಗಿತ್ತು, ಎಷ್ಟು ಮಾಡಿದ್ದೀರಿ ಇನ್ನು ಎಷ್ಟು ಮಾಡುವುದು ಇದೆ, ಮಾರ್ಚ್ 31 ಬಂತು ಅಂದರೆ ಅದಕ್ಕೆ 15 ದಿವಸ ಸಮಯವನ್ನು ಕೇಳಿದರು. ನಾವು ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಏನು ಕೆಲಸವನ್ನು ಮಾಡುವುದು. ಸರ್ಕಾರದವರು ಮಾಹಿತಿಯನ್ನು ಕೊಡದೇ ಹೋದರೆ ನಾವು ಇಲ್ಲಿ ನಮ್ಮ ಕೆಲಸ ಮಾಡಲಿಕ್ಕೆ ಆಗುವುದಿಲ್ಲ. ತಾವು ನಮ್ಮ ರಕ್ಷಣೆಗೆ ಬರಬೇಕು. 31ರೊಳಗೆ ಅದನ್ನು ಕೊಡದೆ ಇದ್ದರೆ ಏನು ಪ್ರಯೋಜನ ? ರೈತ ತಾನು ಬೆಳೆದ ಬೆಳೆಯನ್ನು ಅತಿ ಕಡಿಮೆ ಬೆಲೆಗೆ ಮಾರುತ್ತಿದ್ದಾನೆ. ಸರ್ಕಾರದವರು ವ್ಯವಸ್ಥೆಯನ್ನು ಮಾಡದೆ ಇದ್ದರೆ ಏನು ಪ್ರಯೋಜನ ?

ಅಧ್ಯಕ್ಷರು:— ತಮ್ಮ ಪ್ರಶ್ನೆಯನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲ್ಪಟ್ಟಿದೆ.

ಶ್ರೀ ಮನೋಹರ ಐನಾಪುರ:— ಸರ್ಕಾರಕ್ಕೆ ತಾವು ಆದೇಶವನ್ನು ಕೊಡಬೇಕು.

ಅಧ್ಯಕ್ಷರು:— ನಿಮ್ಮ ಪ್ರಶ್ನೆ ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲ್ಪಟ್ಟಿದೆ.

ಶ್ರೀ ಮನೋಹರ ಐನಾಪುರ್:— ಇದನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳೇ ಉತ್ತರಿಸಬೇಕು. ಏಕೆಂದರೆ ಇದು ಜಿಲ್ಲಾ ಪರಿಷತ್ತು ವರ್ಕ್. ಬ್ಯಾರೇಜ್ ಕಟ್ಟುವ ಬಗ್ಗೆ ಈಗಾಗಲೇ ಎಲ್ಲಾ ರೆಡಿ ಆಗಿದೆ ಎಂದು ನನಗೆ ಇಂಜಿನಿಯರ್ಸ್ ಹೇಳಿದ್ದಾರೆ. ಆದರೆ ಲೋಕೋಪಯೋಗಿ ಇಲಾಖೆಗೆ ಹೇಗೆ ಬರುತ್ತದೆ ನನಗೆ ಆಶ್ಚರ್ಯವಾಗುತ್ತದೆ.

ಅಧ್ಯಕ್ಷರು:— ನಾನು ತರಿಸಿ ನೋಡುತ್ತೇನೆ.

ಶ್ರೀ ಮನೋಹರ ಐನಾಪುರ್:– ಲೋಕೋಪಯೋಗಿ ಇಲಾಖೆಗೆ ಹೇಗೆ ಹೋಗುತ್ತದೆ. ಸಚಿವರು ಇಲ್ಲಿಯೇ ಇದ್ದಾರೆ. ಸಚಿವರಿಂದ ಸ್ಪಷ್ಟ ಉತ್ತರ ಬಂದರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು:– ಅವರು ನನಗೆ ಕೇಳಿಕೊಂಡಿದ್ದಾರೆ. ಅದನ್ನು ತರಿಸಿ ನೋಡಬೇಕಾಗುತ್ತದೆ.

ಶ್ರೀ ಮನೋಹರ ಐನಾಪುರ್:– ಸದನ 26ಕ್ಕೆ ಮುಗಿದುಹೋಗುತ್ತದೆ.

ಚನ್ನಪಟ್ಟಣ ಉಪ–ನೋಂದಾಣಾಧಿಕಾರಿಗಳ ಕಛೇರಿಯ ಸ್ಥಳಾಂತರ

(2049): ಶ್ರೀ ಸಾದತ್ ಅಲೀಖಾನ್ (ಚನ್ನಪಟ್ಟಣ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಚನ್ನಪಟ್ಟಣ, ಉಪ–ನೋಂದಣಿ ಕಛೇರಿಯನ್ನು ಖಾಸಗೀ ಕಟ್ಟಡಕ್ಕೆ ವರ್ಗಾಯಿಸಲು ಉದ್ದೇಶಿಸಿರುವುದು ನಿಜವೇ;

ಆ. ಹಾಗಿದ್ದಲ್ಲಿ, ಉಪ–ನೋಂದಣಿ ಕಛೇರಿಯನ್ನು ಸರ್ಕಾರಿ ಕಟ್ಟಡದಿಂದ ಖಾಸಗಿ ಕಟ್ಟಡಕ್ಕೆ ವರ್ಗಾಯಿಸಲು ಕಾರಣವೇನು;

ಇ. ವರ್ಗಾಯಿಸಲು ಉದ್ದೇಶಿಸಿರುವ ಖಾಸಗೀ ಕಟ್ಟಡವು ಎಲ್ಲಾ ವಿಧದಲ್ಲಿಯೂ ಸೂಕ್ತವಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಹಾಗಿದ್ದಲ್ಲಿ, ದಾಖಲೆ ಕೊಠಡಿಯನ್ನು ದುರಸ್ತಿ ಮಾಡಿದ ನಂತರ ಹಾಲಿ ಸರ್ಕಾರದ ಕಟ್ಟಡದಲ್ಲಿಯೇ ಮುಂದುವರಿಯುವುದೇ (ಸರ್ಕಾರಿ ಕಟ್ಟಡ) ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಇಲ್ಲ

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ದಾಖಲೆ ಕೊಠಡಿಯನ್ನು ದುರಸ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಸಾದತ್ ಅಲಿಖಾನ್:– ಮಾನ್ಯ ಅಧ್ಯಕ್ಷರೆ, ಚನ್ನಪಟ್ಟಣ ಉಪನೋಂದಣಿ ಕಛೇರಿಯನ್ನು ಖಾಸಗಿ ಕಟ್ಟಡಕ್ಕೆ ವರ್ಗಾಯಿಸುವುದಿಲ್ಲ ಎಂದು ಉತ್ತರ ಬಂದಿದೆ. ಆದರೆ ಈ ಡಿಪಾರ್ಟ್‌ಮೆಂಟ್‌ನವರು ಇನ್ಸ್‌ಪೆಕ್ಷನ್ ಮಾಡಿ ರೆಕ್‌ಮೆಂಡ್ ಮಾಡಿದ್ದಾರೆ. ಪ್ರೈವೇಟ್ ಬಿಲ್ಡಿಂಗ್‌ಗೆ ಹೋಗಬೇಕು, ಈ ಬಿಲ್ಡಿಂಗ್ ಸರಿಯಾಗಿಲ್ಲ, ಲೀಕ್ ಆಗುತ್ತಿದೆ, ಈ ಬಿಲ್ಡಿಂಗ್‌ನ ರೆಕಾರ್ಡ್ಸ್ ರೂಮ್ ಸರಿಯಾಗಿಲ್ಲ ಎಂದು ಹೇಳುತ್ತಿದ್ದಾರೆ. ಅದಕ್ಕೆ ತಾವು ಶಿಫ್ಟ್ ಮಾಡುವುದಿಲ್ಲ ಅಂತ ಉತ್ತರವನ್ನು ಕೊಟ್ಟಿದ್ದೀರಿ. ಈಗ ಇರುವ ಬಿಲ್ಡಿಂಗ್ located in city, ತಾಲ್ಲೂಕ್ ಆಫೀಸ್ ಅಲ್ಲೇ ಇದೆ, ಬಿ.ಡಿ.ಓ. ಆಫೀಸ್ ಅಲ್ಲೇ ಇದೆ. ಅಗ್ರಿಕಲ್ಚರಲ್ ಆಫೀಸ್ ಅಲ್ಲೇ ಇದೆ. ಆ ಕಾಂಪೌಂಡ್‌ನಲ್ಲೇ ಇರಬೇಕು. ಇದನ್ನು ಶಿಫ್ಟ್ ಮಾಡಬಾರದು. ರೆಕಾರ್ಡ್ಸ್ ರೂಮ್ ಲೀಕ್ ಆಗುತ್ತಿದೆ, ಆಫೀಸ್ ಫರ್ನಿಚರ್ ಇಲ್ಲ, ಅದಕ್ಕೆ ಶಿಫ್ಟ್ ಮಾಡಬೇಕೆಂದು ಏನು ಮಾಡಿದ್ದಾರೆ ಅದನ್ನು ಮಾಡಬಾರದೆಂದು ತಮಗೆ ಹೇಳುತ್ತೇನೆ.

SRI M. RAJASHEKARA MURTHY:– The recommendations made are not

going to be a decision. We are going to repair the old building and continue the office there itself.

ನೆರೆ ಹಾವಳಿಯಿಂದ ಬೆಳೆ ನಾಶ ಆದವರಿಗೆ ಹೆಕ್ಟೇರಿಗೆ 500.00 ರೂ.ನಂತೆ ಪರಿಹಾರ ಒದಗಿಸಿರುವ ಜಿಲ್ಲಾವಾರು ಮಾಹಿತಿ

(116): ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ನೆರೆ ಹಾವಳಿಯಿಂದ ಬೆಳೆ ನಾಶವಾದ ಬಗ್ಗೆ ಜಿಲ್ಲಾವಾರು ವಿವರ ನೀಡಲಾಗುವುದೇ;

ಆ. ಹೆಕ್ಟೇರಿಗೆ 500.00 ರೂಪಾಯಿಯಂತೆ ಪ್ರತಿ ಜಿಲ್ಲೆಯಲ್ಲಿ ಈವರೆಗೆ ಬೆಳೆ ನಾಶ ಆದವರಿಗೆ ಎಷ್ಟು ಪರಿಹಾರ ಒದಗಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ನೆರೆಹಾವಳಿಯಿಂದ ರಾಜ್ಯದ 14 ಜಿಲ್ಲೆಗಳಲ್ಲಿ ಕೃಷಿ ಬೆಳೆ ನಾಶವಾಗಿದ್ದು ವಿವರ ಈ ಕೆಳಕಂಡಂತಿದೆ:–

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಬೆಳೆ ನಾಶ	
		ವಿಸ್ತೀರ್ಣ (ಲಕ್ಷ ಹೆಕ್ಟೇರ್‌ಗಳಲ್ಲಿ)	ಅಂದಾಜು ನಷ್ಟ (ಲಕ್ಷರೂ.ಗಳಲ್ಲಿ)
1.	ರಾಯಚೂರು	1.15	8383.76
2.	ಬಳ್ಳಾರಿ	0.47	2082.09
3.	ಧಾರವಾಡ	0.57	1603.17
4.	ಚಿತ್ರದುರ್ಗ	0.26	872.90
5.	ಶಿವಮೊಗ್ಗ	0.18	484.00
6.	ಚಿಕ್ಕಮಗಳೂರು	0.05	87.95
7.	ಮೈಸೂರು	0.02	33.55
8.	ಉತ್ತರ ಕನ್ನಡ	0.06	200.00
9.	ದಕ್ಷಿಣ ಕನ್ನಡ	0.05	45.82
10.	ಹಾಸನ	0.01	27.81
11.	ಕೊಡಗು	0.02	20.75
12.	ಬೆಳಗಾಂ	0.26	100.40
13.	ಬಿಜಾಪುರ	0.02	98.12
14.	ತುಮಕೂರು	0.03	6.30
	ಒಟ್ಟು	3.132	14046.62

ಆ. ಪರಿಹಾರ ನೀಡಿರುವ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ –

ಕ್ರಮ.ಸಂ.	ಜಿಲ್ಲೆಯ ಹೆಸರು	ನೀಡಿರುವ ಪರಿಹಾರ (ಲಕ್ಷ ರೂ.ನಲ್ಲಿ)
1.	ರಾಯಚೂರು	25.00
2.	ಧಾರವಾಡ	25.00
3.	ಚಿತ್ರದುರ್ಗ	25.00
4.	ಶಿವಮೊಗ್ಗ	40.59
5.	ಚಿಕ್ಕಮಗಳೂರು	0.30
6.	ಮೈಸೂರು	0.54
7.	ಉತ್ತರ ಕನ್ನಡ	18.04
8.	ದಕ್ಷಿಣ ಕನ್ನಡ	6.84
9.	ಹಾಸನ	14.20
10.	ಕೊಡಗು	1.03
11.	ಬೆಳಗಾಂ	0.23
12.	ಬಿಜಾಪುರ	23.10
	ಒಟ್ಟು	279.87

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಅತ್ಯಂತ ಪ್ರಮುಖವಾದಂತಹ ಪ್ರಶ್ನೆ ಇಲ್ಲಿದೆ. ನಿಮ್ಮ ಉತ್ತರವನ್ನು ನೋಡಿದಾಗ ರೈತರಿಗೆ ಇವರು ಪರಿಹಾರವನ್ನು ಕೊಟ್ಟಿಲ್ಲ ಒಂದು ತರಹ ಭಿಕ್ಷೆ ಕೊಟ್ಟಂತಹ ರೀತಿಯಲ್ಲಿ ಉತ್ತರ ಇದೆ. 14 ಜಿಲ್ಲೆಗಳಲ್ಲಿ 3.132 ಹೆಕ್ಟೇರ್ ಬೆಳೆ ನಾಶವಾಗಿದೆ. ನಿಮ್ಮ ಪ್ರಕಾರ ಅಂದಾಜು ನಷ್ಟ 14046.62 ಲಕ್ಷ ರೂಪಾಯಿ ನಷ್ಟವಾಗಿದೆ. ನೀವು ಕೊಟ್ಟಿರುವಂತಹ ಅಂಕಿ ಅಂಶದ ಪ್ರಕಾರ ನೀವು ಕೊಟ್ಟಿರುವ ಪರಿಹಾರ 279.87 ಲಕ್ಷ ರೂಪಾಯಿಯನ್ನು ಕೊಟ್ಟಿದ್ದೀರಿ. ಅಂದರೆ ಒಂದು ಪರ್ಸೆಂಟ್ ಸಹ ನೀವು ಪರಿಹಾರವನ್ನು ಕೊಡಲಿಲ್ಲ. 3,132 ಹೆಕ್ಟೇರ್ ಪ್ರದೇಶದ ಬೆಳೆ ನಾಶವಾಗಿದೆ. 500 ರೂಪಾಯಿಯಂತೆ ನೀವೇ ಘೋಷಣೆಯನ್ನು ಮಾಡಿದ ಪ್ರಕಾರ ಎಷ್ಟು ಹೆಕ್ಟೇರಿಗೆ ಪರಿಹಾರವನ್ನು ಕೊಡುತ್ತೀರಿ. ನಿಮ್ಮ ಹತ್ತಿರ ಏನು ಲೆಕ್ಕಾಚಾರ ಇದೆ ?

ಶ್ರೀ ಎಂ. ರಾಜಶೇಖರಮೂರ್ತಿ:– ಎಷ್ಟು ಎಕರೆ ನಷ್ಟವಾಗಿದೆ. ಅದಕ್ಕೆ ಎಕರೆಗೆ 200 ರೂಪಾಯಿಯಂತೆ, ಒಂದು ಹೆಕ್ಟೇರಿಗೆ 500 ರೂಪಾಯಿ ಪರಿಹಾರವನ್ನು ಕೊಡಬೇಕೆಂದು ಮಾಡಿ, 3 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದೇವೆ. 3 ಕೋಟಿ ಬಿಡುಗಡೆ ಮಾಡಿರುವುದು ಸಾಲದು ಅಂತ ನನಗೂ ಗೊತ್ತಿದೆ. ಹಣಕಾಸಿನ ಪರಿಸ್ಥಿತಿ ಉತ್ತಮವಾದ ಹಾಗೆ ಈ ಅಮೌಂಟ್ ಅನ್ನು ನಾವು ಬಿಡುಗಡೆ ಮಾಡಿಕೊಂಡು ಹೋಗುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸ್ವಾಮಿ ನನ್ನ ರಕ್ಷಣೆಗೆ ಬರಬೇಕು, ನಾನು ಹೊಸದಾಗಿ ಏನೂ ಕೇಳುತ್ತಿಲ್ಲ. ನೀವು ಹೆಕ್ಟೇರ್‌ಗೆ ಐದು ನೂರು ರೂಪಾಯಿ ಕೊಡುತ್ತೇವೆಂದು ಘೋಷಣೆ ಮಾಡಿದ್ದೀರ. 3.132 ಲಕ್ಷ ಹೆಕ್ಟೇರ್ ಬೆಳೆ ನಾಶ ಆಗಿರಬೇಕಾದರೆ ನೀವು ಡಿಕ್ಲೇರ್ ಮಾಡಿದಂತೆ ಹೆಕ್ಟೇರ್‌ಗೆ ಐನೂರು ರೂಪಾಯಿನಂತೆ ಪರಿಹಾರ ಕೊಡಬೇಕಾಗಿತ್ತಲ್ಲ ಅದರಲ್ಲಿ ಒಂದು ಪರ್ಸೆಂಟ್ ಪರಿಹಾರವನ್ನೂ ಕೊಟ್ಟಿಲ್ಲ. ಮೊದಲು ನಿಮ್ಮ ಅಧಿಕಾರಿಗಳಿಗೆ ಕೂಡುವುದು ಕಳೆಯುವುದು ಕಲಿಸಿಕೊಡಿ. ಸ್ವಾಮಿ 12 ಜಿಲ್ಲೆಗಳಲ್ಲಿ ಎರಡು ಕೋಟಿ ಎಪ್ಪತ್ತೊಂಬತ್ತು ಲಕ್ಷದ ಎಂಬತ್ತೇಳು ಸಾವಿರ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರ. ಸರಿಯಾಗಿ ಕೂಡಿದರೆ ಒಂದು ಕೋಟಿ ಎಪ್ಪತ್ತೊಂಬತ್ತು ಸಾವಿರ ಬರುತ್ತದೆ. ಅಂದರೆ 200 ಕೋಟಿ ರೂಪಾಯಿಗಳನ್ನು ರೈತ ಸಂಕಟದಲ್ಲಿ ಸಿಕ್ಕಿದಾಗ ಕೊಡೋಣವೆಂದು ಅಧಿಕಾರಿಗಳ

ಮನೆಯಲ್ಲಿ ಇಟ್ಟಿದ್ದೀರ ? ನಿಮ್ಮಿಂದ ಉತ್ತರ ಬೇಕಾಗಿರುವುದು ಇಷ್ಟೇ. ನೀವು ಹೇಳಿದ ಪ್ರಕಾರ ಹೆಕ್ಟೇರ್‌ಗೆ 500 ರೂ. ಪರಿಹಾರವಾದರೂ ರೈತನಿಗೆ ಬೇಕಾದಾಗ ಕೊಡುತ್ತಿಲ್ಲ. ಅವನು ಅನ್ನದಾತ ಎನ್ನುವುದು ಈ ಜಗತ್ತಿಗೆ ಗೊತ್ತಿದೆ. ಈಗಾಗಲೇ ಮೂರು ತಿಂಗಳು ಕಳೆದು ಹೋಯಿತು. ಅದನ್ನು ನೀವು ಯಾವಾಗ ಕೊಡುತ್ತೀರಾ, ನೇರವಾಗಿ ಉತ್ತರ ಹೇಳಿ.

ಶ್ರೀ ಎಂ. ರಾಜಶೇಖರಮೂರ್ತಿ:– ಯಾವಾಗ ಕೊಡುತ್ತೀರ ಎಂದು ಕೇಳುತ್ತಿದ್ದೀರ ನಾನು ಈಗಾಗಲೇ ಉತ್ತರ ಹೇಳಿದೆ ಹಣಕಾಸಿನ ಪರಿಸ್ಥಿತಿ ಉತ್ತಮವಾದಾಗಲೆಲ್ಲಾ ಅಮೌಂಟನ್ನು ಬಿಡುಗಡೆ ಮಾಡಿಕೊಂಡು ಹೋಗುತ್ತೇವೆ. ತಾವು ಹೇಳಿದಂತೆ ಒಂದು ಪರ್ಸೆಂಟ್ ಅಲ್ಲ, 500ರಂತೆ ಕ್ಯಾಲುಕಲೇಟ್ ಮಾಡಿದರೆ ಕಾಂಪನ್‌ಸೇಷನ್ ಸುಮಾರು 15 ಕೋಟಿಯಷ್ಟಾಗಬಹುದು. ಈಗ ಮೂರುಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಒಂದು ಕಡೆಯಿಂದ ಕೊಡುತ್ತಾ ಬರುತ್ತೇವೆ. ಇನ್ನು ಸ್ವಲ್ಪ ಅಮೌಂಟ್ ಡೆಪ್ಯುಟಿ ಕಮಿಷನರ್ ಹತ್ತಿರ ಉಳಿದಿರಬಹುದು ಅದನ್ನೂ ಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಟೋಟಲ್ ತಪ್ಪಾಗಿದೆ ಎರಡು ಕೋಟಿ ಎಪ್ಪತ್ತೊಂಬತ್ತು ಲಕ್ಷ ಅಲ್ಲ ಒಂದು ಕೋಟಿ ಎಪ್ಪತ್ತೊಂಬತ್ತು ಲಕ್ಷ.

ಶ್ರೀ ಎಂ. ರಾಜಶೇಖರಮೂರ್ತಿ:– ಆ ಮಿಸ್ಟೇಕ್ ರೆಕ್ಟಿಫೈ ಮಾಡಿಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– 500 ರೂ.ನಂತೆ ಆದರೂ 3.132 ಲಕ್ಷ ಹೆಕ್ಟೇರ್‌ಗೆ ಕೊಡಬೇಕಾಗಿತ್ತಲ್ಲ. ದಯಮಾಡಿ ನನ್ನ ಪ್ರಶ್ನೆ ಅರ್ಥ ಮಾಡಿಕೊಳ್ಳಿ, ನಿಮ್ಮ ಲೆಕ್ಕದ ಪ್ರಕಾರ 15 ಕೋಟಿ ರೂಪಾಯಿಯಾಗುತ್ತದೆ. ಈಗ ಕೊಟ್ಟಿರುವುದು ಒಂದುಕೋಟಿ ಎಪ್ಪತ್ತೊಂಬತ್ತು ಲಕ್ಷ ಮಾತ್ರ. ಉಳಿದ ದುಡ್ಡನ್ನು ಯಾವಾಗ ಬಿಡುಗಡೆ ಮಾಡುತ್ತೀರ ? ಹಣ ಬಂದಾಗ ಬಿಡುಗಡೆ ಮಾಡುತ್ತೇವೆಂದರೆ ರೈತ ಅಲ್ಲಿಯವರೆಗೆ ಬದುಕಿರಬೇಕಲ್ಲ.

ಶ್ರೀ ಎಂ. ರಾಜಶೇಖರಮೂರ್ತಿ:– ಇಷ್ಟೇ ದಿವಸದಲ್ಲಿ ಬಿಡುಗಡೆ ಮಾಡುತ್ತೇವೆಂದು ನಿರ್ದಿಷ್ಟವಾಗಿ ಹೇಳುವುದಕ್ಕೆ ಆಗುವುದಿಲ್ಲ. I am also anxious to release the money as early as possible, because of the financial constraints, my hands are tight.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇದನ್ನು ಹರಿದು ಎಸೆದು ನಾನು ವಾಪಸ್ಸು ಹೋಗುತ್ತೇನೆ. ಈ ಸದನದಲ್ಲಿ ಹೇಗೆ ಕೆಲಸ ಮಾಡಲಿ. ಇಡೀ ರಾಜ್ಯದಲ್ಲಿ ನೆರೆ ಹಾವಳಿಗೆ ಸಿಕ್ಕಿರುವಂಥ ರೈತನಿಗೆ 3.132 ಲಕ್ಷ ಹೆಕ್ಟೇರ್ ಬೆಳೆ ನಾಶವಾಗಿರುವಾಗ 15 ಕೋಟಿ ರೂಪಾಯಿ ಪರಿಹಾರ ಹಣದಲ್ಲಿ ನೀವು ಕೊಟ್ಟಿರುವುದು ಒಂದು ಕೋಟಿ ಎಪ್ಪತ್ತೊಂಬತ್ತು ಲಕ್ಷ ಮಾತ್ರ, ಉಳಿದ ಹಣ ನೀವು ಹೇಳಿರುವಂತೆ 500 ರೂಪಾಯಿನಂತೆ ಕೊಡಿ. ಈಗಾಗಲೇ 3 ತಿಂಗಳು ಕಳೆದುಹೋಗಿದೆ ಎಂದರೆ ದುಡ್ಡು ಬಂದಾಗ ಕೊಡುತ್ತೇವೆ ಎಂದರೆ ಇದು ಜವಾಬ್ದಾರಿ ಇರತಕ್ಕಂಥ ಸರ್ಕಾರ ಮಾತನಾಡುವ ರೀತಿಯೇನು ಸ್ವಾಮಿ, ನೀವು ಕೊಡುವುದಿಲ್ಲವೆಂದು ಹೇಳಿ, ನಾನು ಒಪ್ಪಿಕೊಳ್ಳುತ್ತೇನೆ. ನಾನು ಧರಣಿ ಮಾಡುವುದಕ್ಕೆ, ವಾಕ್ ಔಟ್ ಮಾಡುವುದಕ್ಕೆ ರೆಡಿ ಇಲ್ಲ. ನೀವು ನಿಮ್ಮ ತಲೆ ಮೇಲೆ ಕಲ್ಲು ಹಾಕಿಕೊಳ್ಳಲು ಸಿದ್ದರಿಲ್ಲದೆ ಇದ್ದರೆ ನಾವು ಏಕೆ ಬಾಯಿ ಬಡಿದುಕೊಳ್ಳಬೇಕು. ನಮಗೆ ನೇರವಾಗಿ ಉತ್ತರ ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ:– ಅಧ್ಯಕ್ಷರೆ, ಯಡಿಯೂರಪ್ಪನವರು ರೈಸ್ ಮಾಡಿರುವುದರಲ್ಲಿ ನಿಜವಾಗಲೂ ಗಂಭೀರವಾದ ಸಮಸ್ಯೆ ಇದೆ. ಹಣಕಾಸಿನ ಸಮಸ್ಯೆ ಏನೂ ಇಲ್ಲವೆಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ತಾವು ಹೇಳುತ್ತೀರ ಯಾವಾಗ ರೆವಿನ್ಯೂ ಅಮೌಂಟ್ ಬರುತ್ತದೆ ಆಗ ಪರಿಹಾರ ಕೊಡುತ್ತೇವೆಂದು. ಪ್ರಾಮಾಣಿಕವಾಗಿ ತಾವು ಹೇಳುತ್ತಿರಬಹುದು ಅದಕ್ಕೆ ನಾನು ಅಭಿನಂದಿಸುತ್ತೇನೆ. ಈ ಸಮಯದಲ್ಲಿ ರೈತನಿಗೆ ಪರಿಹಾರ ಕೊಟ್ಟಿಲ್ಲ ಎಂದರೆ ಏನು ಉಪಯೋಗ.

ನೀವು ಕೊಡುವ ಹೆಕ್ಟೇರ್‌ಗೆ 200 ರೂ. ಯಾವುದಕ್ಕೂ ಸಾಕಾಗುವುದಿಲ್ಲ. ಅದು ಗೊಬ್ಬರಕ್ಕೂ ಸಾಕಾಗುವುದಿಲ್ಲ. ನಿಮ್ಮ ಅಧಿಕಾರಿಗಳು ಏನು ಜೀಪ್‌ನಲ್ಲಿ ಸರ್ವೆ ಮಾಡುವುದಕ್ಕೆ ಹೋಗುತ್ತಾರಲ್ಲ ಅದಕ್ಕೆ ಸಾಕಾಗುವುದಿಲ್ಲ ತಾವು ಅವರಿಗೆ ಕೊಡುವ ಟಿ.ಎ. ಡಿ.ಎ.ಗೆ ಖರ್ಚು ಮಾಡುವಷ್ಟು ಹಣ ರೈತನಿಗೆ ಸಿಗುತ್ತಿಲ್ಲ. ರೈತ ಕಂಗಾಲಾಗಿದ್ದಾನೆ ಎನ್ನುವುದು ತಮಗೂ ಗೊತ್ತು. ಅದಕ್ಕಾಗಿ ನಾವು ಅಡ್ಜರ್ನ್‌ಮೆಂಟ್ ಮೋಶನ್ ಹಾಕಿದ್ದೇವೆ: ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ತಮ್ಮ ತೊಂದರೆ ಹೇಳಿಬಿಡಿ. ನಮ್ಮ ಫೈನಾನ್ಸ್‌ನಿಂದ ಹಣ ಕೊಡುತ್ತಿಲ್ಲವೆಂದು, ನಾವು ಅವರ ಹತ್ತಿರ ಜಗಳ ಮಾಡುತ್ತೇವೆ. ಇಲ್ಲವೆ ನೀವು ಅವರ ಮೇಲೆ ಪ್ರೆಷರ್ ಹಾಕಿ ಪ್ರೆಯಾರಿಟಿ ಹಣ ತೆಗೆದುಕೊಂಡು ರೈತರಿಗೆ ಬಿಡುಗಡೆ ಮಾಡಬೇಕಾಗುತ್ತದೆ. ನೀವು ಈ ಹಣವನ್ನು 6–7 ತಿಂಗಳು ಆದ ಮೇಲೆ ಬಿಡುಗಡೆ ಮಾಡಿದರೆ ಏನು ಉಪಯೋಗ, ಇವತ್ತು ರೈತನಿಗೆ ಅದರ ಅವಶ್ಯಕತೆ ಇದೆ. ಈ ವರ್ಷ ಕಂಗಾಲಾದಷ್ಟು ಆತನ ಜೀವನದಲ್ಲಿ ಯಾವಾಗಲೂ ಆಗಿರಲಿಲ್ಲ. ಹೆಕ್ಟೇರ್‌ಗೆ 200 ರೂಪಾಯಿ ಕೊಡಲಿಕ್ಕೆ ನಿಮ್ಮಿಂದ ಆಗಲಿಲ್ಲ. ನಮ್ಮ ಹಂಪನಗೌಡ ಹೇಳುತ್ತಿದ್ದರು. ರಾಯಚೂರಿನಲ್ಲಿ ಯಾರು ಸಮ್ಮರ್ ಕ್ರಾಪ್ ತೆಗೆಯುತ್ತಾರೆ ಅವರಿಗೆ ಮಾತ್ರ ಪರಿಹಾರ ಕೊಡುವುದು, ಯಾರು ಸಮ್ಮರ್ ಕ್ರಾಪ್ ತೆಗೆಯುವುದಿಲ್ಲ ಆ ರೈತನಿಗೆ ಪರಿಹಾರ ಕೊಡುವುದಿಲ್ಲವೆಂದು ಹೇಳುತ್ತಾರೆಂದು ಹೇಳಿದರು. ಅದು ಆಗಬಾರದು, ಅದು ಬಹಳ ದೊಡ್ಡ ಗಂಡಾಂತರವಾಗುತ್ತದೆ ಎಲ್ಲಾ ರೈತರಿಗೂ ಪರಿಹಾರ ಸಿಗಬೇಕಾಗುತ್ತದೆ. ಯಡಿಯೂರಪ್ಪನವರು ಹೇಳುವುದರಲ್ಲಿ ಸತ್ಯಾಂಶ ಇದೆ.

ತಾವು ಸಮರ್ಥ ಮಂತ್ರಿಗಳೂ ಇದ್ದೀರಿ. ತಮ್ಮ ಕಡೆಯಿಂದ ರೈತರಿಗೆ ಅನುಕೂಲವಾಗಬೇಕು. ಸಹಾಯವಾಗಬೇಕು., ಕಷ್ಟ ಆಗಬಾರದು. ಅಕ್ಟೋಬರ್‌ನಲ್ಲಿ ನೆರೆಹಾವಳಿ ಬಂತು. ಈಗಾಗಲೇ ಐದು ತಿಂಗಳಾಗಿದೆ, ಇನ್ನೂ ಹಣ ಬಿಡುಗಡೆಯಾಗಲಿಲ್ಲ ಎಂದರೆ ನಿಮಗೆ. ಛೀಮಾರಿ ಹಾಕಬೇಕಾಗುತ್ತದೆ. ಸರ್ಕಾರ ತಕ್ಷಣ ಹಣ ಬಿಡುಗಡೆ ಮಾಡಬೇಕು. ಹಾಗೂ ಪಂಪು ಸೆಟ್ಟುಗಳಿಗೂ ಕೂಡ ಹಣ ಬಿಡುಗಡೆ ಮಾಡಿಲ್ಲ. ಅದಕ್ಕೂ ಕೂಡ ಹಣ ಬಿಡುಗಡೆ ಮಾಡಬೇಕು.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಈ ನೆರೆಹಾವಳಿ ಬಗ್ಗೆ ಪರಿಹಾರ ಕೊಡುವುದರಲ್ಲಿ ನಿಮ್ಮ ಅಧಿಕಾರಿಗಳು ನಿಮ್ಮ ಮಾತನ್ನು ಕೇಳುತ್ತಿಲ್ಲ. ನೀವು ಅಂದಾಜು ನಷ್ಟ ಹಾಕಿರುವುದೇ ಬಹಳ ಕನಿಷ್ಟ ಅಳತೆಗೋಲನ್ನು ಇಟ್ಟುಕೊಂಡು ಮಾಡಿದ್ದೀರಿ, ಅದರಲ್ಲೂ ನಷ್ಟವಾಗಿದೆ. It is less than 1.5% ತಾವು ಕಳುಹಿಸಿರುವ ಹಣದ ಬಗ್ಗೆ ಜಿಲ್ಲಾವಾರು ವಿವರಗಳನ್ನು ಕೊಟ್ಟಿದ್ದೀರಿ. ರಾಯಚೂರಿಗೆ 25 ಲಕ್ಷ ಒದಗಿಸಲಾಗಿದೆ. ಧಾರವಾಡಕ್ಕೆ 25 ಲಕ್ಷ ರೂ. ಒದಗಿಸಲಾಗಿದೆ ಎಂದು ಹೇಳಿದ್ದೀರಿ, ಆದರೆ ತಮ್ಮ ಜಿಲ್ಲಾಧಿಕಾರಿಗಳು ಯಾವ ರೀತಿ ಖರ್ಚು ಮಾಡಿದ್ದಾರೆ ಎಂಬುದನ್ನು ತಾವು ಸ್ವಲ್ಪ ಪರೀಕ್ಷೆ ಮಾಡಿ ನೋಡಬೇಕು. ಧಾರವಾಡ ಜಿಲ್ಲೆಗೆ ಈ ನೆರೆ ಹಾವಳಿ ಪರಿಹಾರ ನಿಧಿ ಏನು ಕಳುಹಿಸಿದ್ದೀರಿ ಅದರಲ್ಲಿ ನಮ್ಮ ಜಿಲ್ಲಾಧಿಕಾರಿಗಳು ಹೆಡ್‌ಕ್ವಾರ್ಟರ್ಸ್ ಅಸಿಸ್ಟಂಟ್‌ಗೆ ಒಂದು ಅಟ್ಯಾಚ್ಡ್ ಬಾತ್‌ರೂಮ್ ಕಟ್ಟಿಸಿಕೊಟ್ಟಿದ್ದಾರೆ. ಪರ್ಸನಲ್ ಅಸಿಸ್ಟಂಟ್ ಒಬ್ಬರಿಗೆ....

(ಅಧ್ಯಕ್ಷರು ಬೆಲ್ಲನ್ನು ಬಾರಿಸಿದರು)

ಪ್ರೊ:– ಎಂ.ಡಿ. ನಂಜುಂಡಸ್ವಾಮಿ:– ತಾವು ಬೆಲ್ ಹೊಡೆದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು:– ತಮಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಪರ್ಸನಲ್ ಅಸಿಸ್ಟಂಟ್‌ಗೆ ಕೊಠಡಿಗೆ ಒಂದು ಅಟ್ಯಾಚ್ಡ್ ಬಾತ್‌ರೂಮ್ ಕಟ್ಟಿಸಿದ್ದಾರೆ. ಸ್ಕೂಟರ್ ಸ್ಟಾಂಡನ್ನು ಜಿಲ್ಲಾಧಿಕಾರಿಗಳ ಕಾಂಪೌಂಡ್‌ನಲ್ಲಿ ಕಟ್ಟಿಸಿದ್ದಾರೆ. ಅವರಿಗೆ ನಿಮ್ಮ ಬಗ್ಗೆ ಭಯ ಏನೂ ಇಲ್ಲ. ನೀವು ವರದಿ ಕಳುಹಿಸಿ ಎಂದರೆ ಈ ಹಣದಿಂದಲೇ

ಕಟ್ಟಿಸಿದ್ದೇವೆ ಎಂದು ವರದಿ ಕೊಡುತ್ತಾರೆ. ರೈತರಿಗೆ ಮಾತ್ರ ಹಣ ತಲುಪಿಲ್ಲ. 500 ರೂ. ಎಂದು ಕನಿಷ್ಟ ಏನು ನಿಗದಿ ಮಾಡಿದ್ದೀರಿ ಆ ಹಣ ತಲುಪಿಲ್ಲ. ನಾನು ಧಾರವಾಡದ ಉದಾಹರಣೆಯನ್ನು ಕೊಟ್ಟಿದ್ದೇನೆ. ನಮ್ಮ ಸ್ನೇಹಿತರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಎಲ್ಲಾ ಜಿಲ್ಲಾಧಿಕಾರಿಗಳು ಇದೇ ಕಸುಬು ಮಾಡಿದ್ದಾರೆ. ಇವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಿ.

ಶ್ರೀ ಎಂ. ರಾಜಶೇಖರಮೂರ್ತಿ:– ಕೆಲವು ಮಾಹಿತಿಗಳನ್ನು ಅವರು ಕೊಟ್ಟಿದ್ದಾರೆ. I will get the matter enquired into. I will take suitable action against them.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸರ್ಕಾರ ರೈತರಿಗೆ ಹೆಕ್ಟೇರಿಗೆ ಐದುನೂರು ರೂಪಾಯಿಗಳನ್ನು ನಿಗದಿ ಮಾಡಿದೆ. ಈ ರೀತಿ ನಿಗದಿ ಮಾಡಿದ ಹಣವನ್ನು ಇನ್ನೂ ಸಹ ಬಿಡುಗಡೆ ಮಾಡಿಲ್ಲ. ಯಾವಾಗ ಮಾಡುತ್ತಾರೆ ಎಂಬುದರ ಬಗ್ಗೆ ಸರಿಯಾಗಿ ಉತ್ತರ ಕೊಡುತ್ತಿಲ್ಲ. ನಾನು ಧರಣಿ ಕುಳಿತುಕೊಳ್ಳುವುದಿಲ್ಲ. ಧರಣಿ ಕುಳಿತು ಅನಾವಶ್ಯಕವಾಗಿ ಕಾರ್ಯಕಲಾಪಗಳನ್ನು ಅಡ್ಡಿಮಾಡಲು ತಯಾರಿಲ್ಲ. ಧರಣಿ ಕುಳಿತುಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ. ರೂ. 500 ಒಂದು ಹೆಕ್ಟೇರ್‌ಗೆ ಎಂದು ಏನು ನಿಗದಿ ಮಾಡಿದ್ದೀರಿ ಅದನ್ನು ಹದಿನೈದು ದಿವಸಗಳೊಳಗೆ ಅಥವಾ ಒಂದು ತಿಂಗಳೊಳಗೆ ಬಿಡುಗಡೆ ಮಾಡುತ್ತೀರೋ ಇಲ್ಲವೋ ಎಂಬುದನ್ನು ಹೇಳಬೇಕು. ನೇರವಾಗಿ ಉತ್ತರವನ್ನು ಕೊಡಬೇಕು. ಆಗದಿದ್ದರೆ ಇಲ್ಲ ಆಗುವುದಿಲ್ಲ ಎಂದು ಹೇಳಿ ನಮಗೇನೂ ಚಿಂತೆ ಇಲ್ಲ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಇನ್ನೂ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದು ಬಹಳ ಮುಖ್ಯವಾದುದು. ಮನೆ ಬಿದ್ದಿಲ್ಲದೇ ಇರತಕ್ಕವರಿಗೆ ಚೆಕ್ ಕೊಟ್ಟಿದ್ದಾರೆ ಸಿಂಧನೂರ್ ತಾಲ್ಲೂಕಿನಲ್ಲಿ.

ಅಧ್ಯಕ್ಷರು:– ಬರೆದು ಕಳುಹಿಸಿಕೊಡಿ, ಎಲ್ಲವನ್ನೂ ಪ್ರಸ್ತಾಪ ಮಾಡಲು ಇಲ್ಲಿ ಸಾಧ್ಯವಿಲ್ಲ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಆ ಚೆಕ್ಕನ್ನು ಈಗ ಕಳುಹಿಸಿಕೊಡುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ:– ಈ ರೀತಿಯಾಗಿ ಸರಿಯಾಗಿ ಕೆಲವು ಕಡೆ ಹಣ ಹಂಚಿಕೆಯಾಗಿಲ್ಲ ಎಂಬ ಕಂಪ್ಲೇಂಟ್ಸ್ ಬಂದಮೇಲೆ ಈಗಾಗಲೇ ಅದನ್ನು ಎನ್‌ಕ್ವೈರಿಗೆ ಹಾಕಿದ್ದೇವೆ. ಎನ್‌ಕ್ವೈರಿಗೆ ಒಳ್ಳೆಯ ಆಫೀಸರ್ಸ್‌ಅನ್ನು ಹಾಕಿದ್ದೇವೆ. He will conduct an enquiry. I will take necessary action based on that report.

ಎಷ್ಟು ದಿವಸದಲ್ಲಿ ಕೊಡುತ್ತೀರಿ ಎಂಬುದನ್ನು ಹೇಳಿ ಎಂದು ಕೇಳುತ್ತಿದ್ದಾರೆ, ನಾನು ಫೈನಾನ್ಸ್ ಮಿನಿಸ್ಟರ್ ಆಗಿದ್ದರೆ ಈಗಲೇ ಹೇಳುತ್ತಿದ್ದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಏನು ಸ್ವಾಮಿ ಇದು, ನೀವು ಫೈನಾನ್ಸ್ ಮಿನಿಸ್ಟರ್ ಇಲ್ಲದೇ ಇದ್ದರೆ ನಮಗೇನು, ನಿಮಗೆ ದುಡ್ಡು ತರಲು ಆಗದೇ ಹೋದರೆ ಅಲ್ಲಿ ಇರಬೇಡಿ, ಬೇಕಾದರೆ ಆಗುವುದಿಲ್ಲ ಎಂದು ಹೇಳಿ, ನಿಮ್ಮ ಮುಖ್ಯಮಂತ್ರಿಗಳನ್ನು ಕೇಳುವುದು ಯಾರ ಕೆಲಸ ನೀವು ಹಿರಿಯ ಸಚಿವರು ಇದ್ದೀರಿ.

ಶ್ರೀ ಎಂ. ರಾಜಶೇಖರಮೂರ್ತಿ:– ವಿವರ ಕೊಡುವುದರಲ್ಲಿ ನಾನು ಹಣಕಾಸಿನ ಮಂತ್ರಿಗಳಿಗೆ ಹೇಳಿದ್ದೇನೆ, ಕಮೀಷನ್‌ರವರಿಗೂ ಹೇಳಿದ್ದೇನೆ. ದಯವಿಟ್ಟು ಅಲ್ಲಿತನಕ ಸ್ವಲ್ಪ ಸಮಾಧಾನದಿಂದ ಇರಿ.

(ಮಾನ್ಯ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಉತ್ತರದ ಪ್ರತಿಯನ್ನು ಹರಿದು ಹಾಕಿ ಸಭಾತ್ಯಾಗ ಮಾಡಿದರು)

11.10 ಎ.ಎಂ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಈಗ ಉತ್ತರಗಳನ್ನು ನನಗೆ ಮಾನ್ಯ ಕೃಷಿ ಸಚಿವರು ಏನು ಕೊಟ್ಟಿದ್ದಾರೆ, ಇದರಿಂದ ಉದ್ಭವವಾಗತಕ್ಕಂಥ ಎರಡು ಉಪಪ್ರಶ್ನೆಗಳನ್ನು ಅವರಿಗೆ ಕೇಳುತ್ತೇನೆ. ಮೊದಲನೆಯದಾಗಿ ನೀವು ಟೆಲಿಗ್ರಾಂ ಕೊಡುವುದರ ಜೊತೆ ನೀವು ಕೇಂದ್ರ ಸಚಿವರ ಜೊತೆಯಲ್ಲಿ ಮಾತನಾಡಿದ್ದರ ಬಗ್ಗೆ ಏನು ಪ್ರತಿಫಲ ನಿಮಗೆ ಸಿಕ್ಕಿದೆ ಮತ್ತೆ ಯಾವತ್ತಿನಿಂದ ಈ ಖರೀದಿ ಪ್ರಾರಂಭ ಮಾಡುತ್ತಿದ್ದೀರಿ ಇದು ಎರಡನೆಯದು. ಅಲ್ಲಿಯವರೆಗೆ ಈ ಹತ್ತಿ, ಜೋಳವನ್ನು ಬೆಳೆದ ರೈತರಿಗೆ ನಾನು ಏನು ಹೇಳಬೇಕು. ಈ ಮೂರು ಪ್ರಶ್ನೆಗಳಿಗೆ ತಾವು ದಯವಿಟ್ಟು ಉತ್ತರವನ್ನು ಕೊಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಮಾನ್ಯ ಅಧ್ಯಕ್ಷರೇ, ಈ ಹತ್ತಿ ವ್ಯಾಪಾರದಲ್ಲಿ ಕೇಂದ್ರದ ಕಾಟನ್ ಕಾರ್ಪೋರೇಷನ್ ಆಫ್ ಇಂಡಿಯಾ ಅವರು ಪ್ರವೇಶ ಮಾಡಿ ಈಗಾಗಲೇ ಒಂದು ಲಕ್ಷ ಚಿಲ್ಲರೆ ಹತ್ತಿಯನ್ನು ವ್ಯಾಪಾರ ಮಾಡಿದ್ದಾರೆ. ಈಗ ವ್ಯಾಪಾರ ಮಾಡುವುದರ ಜೊತೆಗೆ ಇರತಕ್ಕಂಥ ಎಲ್ಲಾ ಹತ್ತಿಯನ್ನು ನಾವು ಕೊಂಡುಕೊಳ್ಳುತ್ತೇವೆ ಎಂದು ಹೇಳಿ ಮೊನ್ನೆ ತಾನೇ ಕೇಂದ್ರದ ಮಂತ್ರಿಗಳು ಸ್ಪಷ್ಟವಾಗಿ ನಮಗೆ ತಿಳಿಸಿದ್ದಾರೆ, ನಮ್ಮ ಪಾರ್ಲಿಮೆಂಟ್ ಸದಸ್ಯರು ಪ್ರಶ್ನೆ ಕೇಳಿದಾಗ ಪಾರ್ಲಿಮೆಂಟ್‌ನಲ್ಲಿ ಈ ರೀತಿ ಉತ್ತರ ಹೇಳಿದ್ದಾರೆ. ಆದರಿಂದ ಹತ್ತಿಯ ವಿಷಯದಲ್ಲಿ ನಮಗೆ ಯಾವ ತೊಂದರೆಯೂ ಆಗುವುದಿಲ್ಲ. ಇರತಕ್ಕಂಥ ಹತ್ತಿಯನ್ನು ಸಾಮಾನ್ಯವಾಗಿ ಎಷ್ಟು ಸಿಗಬಹುದೋ ಆ ಬೆಲೆಗೆ ಕೊಂಡುಕೊಳ್ಳುತ್ತಾರೆ. ನಮಗೆ ಆ ವಿಷಯದಲ್ಲಿ ಅನುಮಾನ ಇಲ್ಲ. ಇನ್ನು ಜೋಳದ ವಿಷಯದಲ್ಲಿ ಏನಾಗಿದೆ ಎಂದರೆ, ಈಗ ಬೆಂಬಲ ಬೆಲೆ ಏನಿದೆ, ಆ ಬೆಂಬಲ ಬೆಲೆಗಿಂತ ಕಡಿಮೆ ಹೋಗಿದೆ. ಅದಕ್ಕೋಸ್ಕರ ರಾಜ್ಯ ಸರ್ಕಾರ ಮಾರುಕಟ್ಟೆಗೆ ಪ್ರವೇಶ ಮಾಡಿ ಇದನ್ನು ಎಷ್ಟು ಕೊಂಡುಕೊಂಡರೆ ಈ ಬೆಲೆಯನ್ನು ಸ್ವಲ್ಪ ಹೆಚ್ಚಿಸುವುದಕ್ಕೆ ಸಾಧ್ಯ, ಮತ್ತು ರೈತರಿಗೆ ಆ ಬೆಂಬಲ ಬೆಲೆಗಿಂತ ಕಡಿಮೆ ಹೋಗುವುದಕ್ಕೆ ಅವಕಾಶ ಇಲ್ಲದ ಹಾಗೆ ನೋಡಿಕೊಳ್ಳಬೇಕು ಎಂದು ಹೇಳಿ ನಾವು ತೀರ್ಮಾನ ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು:– ನಾನು ಅವಕಾಶ ಕೊಡುತ್ತೇನೆ. ಒಬ್ಬೊಬ್ಬರೇ ಕೇಳಿ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ:– ಮಾನ್ಯ ಅಧ್ಯಕ್ಷರೇ, ಕೃಷಿ ಮಂತ್ರಿಗಳು ಬಹಳ ಅನುಭವಸ್ಥರು. ಸ್ವಾಮಿ, ನೀವು ವ್ಯವಸಾಯಗಾರರು. ಜೋಳದ ಬೆಲೆ ಮತ್ತು ಹತ್ತಿ ಬೆಲೆ ನಿನ್ನೆ ಬಿದ್ದಿಲ್ಲ. ಈಗಾಗಲೇ ಬಿದ್ದುಹೋಗಿ ಎರಡು ಮೂರು ತಿಂಗಳಾಯಿತು. ಮೂರು ತಿಂಗಳಿಂದ ಏನು ಮಾಡುತ್ತಿದ್ದೀರಿ ನೀವು. ನಿಮಗೆ ಏನಾದರೂ ಕಾಳಜಿ ಇದೆಯೇ ? ರೈತನ ಮನೆ ಹಾಳಾಗುತ್ತಿದೆ, ಇಲ್ಲಿ ನೀವು ಕುಳಿತುಕೊಂಡು ನೋಡುತ್ತಾ, ಅವರಿಗೆ ಹೇಳುತ್ತೇವೆ ಇವರಿಗೆ ಹೇಳುತ್ತೇವೆ, ನಮ್ಮ ಎಂ.ಪಿ.ಗಳು ಮಾತನಾಡುತ್ತಿದ್ದಾರೆ ಎಂದು ಹೇಳುತ್ತೀರಿ. It is your job and not your M.P.'s job. 170–180–160 ರೂಪಾಯಿಗೆ ಜೋಳದ ಬೆಲೆ ಬಂದಿದೆ. ಅದನ್ನು ಬೆಳೆಯುವ ಖರ್ಚು ಕೂಡ ನಮಗೆ ಸಿಗುತ್ತಿಲ್ಲ. ಇಲ್ಲಿ ಕುಳಿತುಕೊಂಡು ನೀವು ಕಣಿ ಹೇಳುತ್ತಿದ್ದೀರಲ್ಲಾ ! ಕಾಸು ಬಂದ ಹಾಗೆ ಕೊಡುತ್ತೇವೆ ಎಂದು ಒಬ್ಬ ಮಂತ್ರಿ ಹೇಳುತ್ತಾರೆ. ನಿಮ್ಮ ಹತ್ತಿರ ಕಾಸು ಇಲ್ಲ ಎಂದು ಹೇಳಿ. ಒಂದು ಕೆಲಸ ಮಾಡೋಣ. ಬೇಕಾದರೆ ಗಿಲೆಟಿನ್ ಮಾಡಿಬಿಟ್ಟು ಎಲ್ಲಾ ಇವತ್ತೇ ಒಪ್ಪಿಕೊಂಡು ಹೋಗಿಬಿಡೋಣ. ಉಳಿಯುವುದನ್ನಾದರೂ ಪಾಪ ರೈತರಿಗೆ ಕೊಡಿ. ಇಲ್ಲಿ ಕುಳಿತುಕೊಂಡು ವೇಸ್ಟ್ ಮಾಡುವುದು ಏತಕ್ಕೆ ? ಏತಕ್ಕೋಸ್ಕರ ಬಂದು ನಾವು ಇಲ್ಲಿ ಕುಳಿತುಕೊಳ್ಳಬೇಕು ಸ್ವಾಮಿ ? ಏನಾದರೂ ಇದರಲ್ಲಿ ಅರ್ಥವಿದೆಯೇ ? ಮಾರ್ಕೆಟಿಂಗ್ ಫೆಡರೇಷನ್ ಇದೆ, ಅಥವಾ ಮಾರ್ಕೆಟಿಂಗ್ ಸೊಸೈಟಿಗಳು ಇವೆ,

ಸಹಕಾರ ಸಂಘಗಳು ಇವೆ, ಅಥವಾ ನೀವೇ ಪರ್ಚೇಸ್ ಮಾಡಿ ಡೈರೆಕ್ಟ್ ಆಗಿ. ನಿಮ್ಮಲ್ಲಿ ಫುಡ್ ಕಾರ್ಪೊರೇಶನ್ ಆಫ್ ಕರ್ನಾಟಕ ಇದೆ. ಏತಕ್ಕೆ ಮಾಡುವುಕ್ಕಾಗುವುದಿಲ್ಲ, ನೀವು, ಏನಾದರೂ ಮಾಡಿ. ಸುಮ್ಮನೆ ಆಕಾಶ ತೋರಿಸಿಕೊಂಡು, ಈ ಬಡವರನ್ನು ಹಾಳು ಮಾಡುವುದು ಬೇಡ ಸ್ವಾಮಿ. ಕೆಲಸ ಮಾಡಿ. ಇಲ್ಲದಿದ್ದರೆ ನಮ್ಮ ಕೈಯಲ್ಲಿ ಆಗುವುದಿಲ್ಲ ಎಂದು ಹೇಳಿ. ಸುಮ್ಮನೆ ಮನೆಗಾದರೂ ಹೋಗೋಣ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:- ಮಾನ್ಯ ಅಧ್ಯಕ್ಷರೇ, ಒಂದು ವಿಚಿತ್ರ ಹೇಳಿಕೆ ಸರ್ಕಾರದ್ದು. ಇವತ್ತೇ ಮಾನ್ಯ ಬನ್ನಿಕೋಡರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಉತ್ತರ ಕೊಟ್ಟಿಲ್ಲ. ಇದಕ್ಕೆ ಈ ರೀತಿ ಕೊಡುತ್ತಿದ್ದಾರೆ.

ಸರ್ಕಾರ ಪೂರ್ತಿ ಮಿಲ್ ಮಾಲೀಕರ ಜೊತೆಗೆ ಶಾಮೀಲಾಗಿ ಮಾಡುವಂಥ ಕೆಲಸ ಇದು. ಸಿಸಿಐನವರು ಹೋದವರ್ಷ ಎಷ್ಟು ಖರೀದಿ ಮಾಡಿದ್ದಾರೆ ಎಂದು ತೆಗೆಸಿ ನೋಡಿರಿ. ಈ ವರ್ಷ ಎಷ್ಟು ಖರೀದಿ ಮಾಡಿದ್ದೀರಿ ಅದನ್ನೂ ನೋಡಿರಿ. ಆ ಸಿಸಿಐನವರ ಜೊತೆ ಮಿಲ್ ಮಾಲೀಕರು ಶಾಮೀಲಾಗಿ ನೀವು ಈ ವರ್ಷ ಖರೀದಿ ಮಾಡಬೇಡಿ ಅನಂತರ ನಾವೆಲ್ಲ ಖರೀದಿ ಮಾಡುತ್ತೇವೆ ಎಂದು ಮಾಡಿರತಕ್ಕಂಥ ತಂತ್ರ ಇದು. ನಾವು ಬಹಳ ಸಾರಿ ಸರ್ಕಾರದ ಗಮನಕ್ಕೆ ಈ ವಿಷಯ ತಂದರೂ ಇವರೇನೂ ಪ್ರಯತ್ನ ಮಾಡಿಲ್ಲ. ಹೋದವರ್ಷ 2400, 2500 ರೂಪಾಯಿಗೆ ಮಾರಿದಂಥ ಹತ್ತಿ ಈ ವರ್ಷ 700 ರೂಪಾಯಿಗಳಿಗೆ ತೆಗೆದುಕೊಳ್ಳುವುದಕ್ಕೆ ಯಾರೂ ತಯಾರಿಲ್ಲ. ಕೆಲವು ರೈತರು 700 ರೂಪಾಯಿಗೂ ಮಾರಿಕೊಳ್ಳುತ್ತಿದ್ದಾರೆ. ನಾನೂ ಒಬ್ಬ ವಿಕ್ಟಿಂ ಅದಕ್ಕೆ. ನನ್ನದು ಇನ್ನುತನಕ ಮಾರಾಟ ಆಗಿಲ್ಲ. ಇದಕ್ಕೆ ಕಾರಣವೆಂದರೆ ಪೂರ್ತಿ ನೀವೇನೆ. ಅದರ ಜೊತೆಯಲ್ಲಿ ಜೋಳದ ಬಗ್ಗೆ ಹೇಳುತ್ತೇನೆ. ಒಂದು ಕೆಲಸ ಮಾಡಿರಿ. ಖರೀದಿ ಮಾಡುವುದಕ್ಕೆ ಹೋಗಬೇಡಿ. ಖರೀದಿ ಮಾಡುವಷ್ಟು ತಾಕತ್ತು ನಿಮ್ಮ ಸರ್ಕಾರಕ್ಕೆ ಇಲ್ಲ ಎಂದು ನಮಗೆ ಗೊತ್ತಿದೆ.

ಈ ಮಾರ್ಕೆಟ್‌ನಲ್ಲಿ ಸಪೋರ್ಟಿಂಗ್ ಪ್ರೈಸ್‌ಗೆ ನಾವು ಖರೀದಿ ಮಾಡುತ್ತೇವೆಂದು ಹೇಳಿ ಒಂದು ಬೂತ್ ಓಪನ್ ಮಾಡಿ ಪ್ರೊಕ್ಯೂರ್‌ಮೆಂಟ್ ಬೂತ್ ಬಿಡಿರಿ. ಅದರ ಧಾರಣೆ ಯಾವ ರೀತಿ ಇರುತ್ತದೆ ಎಂದು ತಮಗೆ ಗೊತ್ತಾಗುತ್ತದೆ ಎಂದರೆ, ಅಷ್ಟು ಮಾಡುವುದಕ್ಕೆ ನೀವು ತಯಾರು ಇಲ್ಲ. ಅಷ್ಟು ಮಾಡುವುದಕ್ಕೆ ತಯಾರು ಇಲ್ಲದವರು, ರೈತರು ಪೂರ್ತಿಯಾಗಿ ಹೀನಸ್ಥಿತಿಗೆ ಬಂದಿರುವಾಗ ನಾವು ಜೋಳ ಖರೀದಿ ಮಾಡುತ್ತೇವೆ ಎಂದು ಹೇಳುತ್ತೀರಿ. ಅಷ್ಟೇ ಅಲ್ಲ ರೈತರು ಎಲ್ಲಾ ಸತ್ತು ಹೋದ ಮೇಲೆ ಆ ಬಾಕಿ ವಸೂಲು ಮಾಡುವುದಕ್ಕೆ ಈಗ ಯುದ್ಧ ಮಾಡಿದ ರೀತಿಯೊಳಗೆ ಮಾಡುತ್ತಿದ್ದೀರಿ. ನಿನ್ನೆ ಧಾರವಾಡ ತಾಲ್ಲೂಕಿನ ಲೋಕೂರ್ ಗ್ರಾಮದಲ್ಲಿ ಡೆಪ್ಯೂಟಿ ಕಮೀಷನರ್ ಯುದ್ಧ ಮಾಡುತ್ತೇನೆ ಎಂದು ಹೇಳುತ್ತಾರಂತೆ, ಅಲ್ಲಿ ಯುದ್ಧ ಮಾಡುವುದಕ್ಕೆ ಬನ್ನಿ ನೋಡೋಣ ? ಈ ರೀತಿ ತಂತ್ರ ಮಾಡಿ ರೈತರನ್ನು ಸರ್ವನಾಶ ಮಾಡಿ, ಮತ್ತೆ ಈಗ ಕಣ್ಣು ಒರೆಸುವ ತಂತ್ರ, ಅದನ್ನು ಮಾಡುತ್ತೇವೆ ಇದನ್ನು ಮಾಡುತ್ತೇವೆ ಎಂದು ಹೇಳುತ್ತೀರಿ. ಏನು ಮಾಡುತ್ತೀರಿ ಎಂದು ಕೇಳುತ್ತೇನೆ. ಸಿಸಿಐನವರಿಗೆ ಯಾವ ರೀತಿ ಕಟ್ಟು ನಿಟ್ಟಾಗಿ ಖರೀದಿ ಮಾಡತಲೇಬೇಕು ಎಂದು ಹೇಳಿದಿರಿ ? ನಾವು ಎಷ್ಟು ಸಾರಿ ನಿಮಗೆ ರಿಕ್ವೆಸ್ಟ್ ಮಾಡಿಕೊಳ್ಳುವುದು ? ಯಾವುದೋ ಮಿನಿಸ್ಟರ್ ಎಲ್ಲಾ ಸೇರಿ ಹೊಸಪೇಟೆಯಲ್ಲಿ ಒಂದು ಠರಾವು ಮಾಡಿದ್ದೀರಿ ಎಂದು ಕೇಳಿದೆ. ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಒತ್ತಾಯ ಮಾಡಬೇಕು, ಹತ್ತಿ ಉತ್ಪಾದನೆ ಈ ವರ್ಷ ಹೆಚ್ಚು ಆಗಿದೆ. ಹತ್ತಿಧಾರಣೆ ಬಿದ್ದಿದೆ ಎನ್ನುವಂಥಾದ್ದನ್ನು ಒತ್ತಾಯ ಮಾಡಿ ಸರ್ಕಾರಕ್ಕೆ ತಿಳಿಸಿ ಆಯಿತು. ಅದಕ್ಕೆ ಏನೂ ಲಕ್ಷ್ಯ ತೆಗೆದುಕೊಂಡಿಲ್ಲ. ಸುಮ್ಮನೆ ಇವತ್ತು ಏನೋ ಯಾವುದೋ ತರಹ ಉತ್ತರ ಹೇಳಿಬಿಡುತ್ತಿದ್ದೀರಿ. ಇದಕ್ಕೆ ಏನು ಮಾಡುತ್ತೀರಿ ಹೇಳಿ.

ಶ್ರೀ ಬಿ.ಹೆಚ್. ಬನ್ನಿಕೋಡ್:- ನಮ್ಮ ಕ್ವಶ್ಚನ್‌ಗೆ ಉತ್ತರ ಬರಲಿಲ್ಲ.

ಶ್ರೀ ಶಿವಾನಂದ ಹೆಚ್. ಕೌಜಲಗಿ:-. ಇದೇ ಸಭೆಯಲ್ಲಿ ಹತ್ತಿ ಬೆಲೆ ಕಡಿಮೆ ಆಗುತ್ತಿದೆ ಅದನ್ನು ಸರ್ಕಾರದವರು ಕೂಡಲೇ ಸಿಸಿಐನವರಿಂದಾಗಲಿ ಅಥವಾ ಕರ್ನಾಟಕ ಫೆಡರೇಷನ್‌ನವರಿಂದಾಗಲೀ ಪರ್ಚೇಸ್ ಮಾಡಬೇಕು ಎಂದು ನಿಮ್ಮನ್ನು ಮೂರು ಸಾರಿ ಕೇಳಿಕೊಂಡೆ. ಈಗ ಉತ್ತರ ಒಂದೇ ಒಂದು ಬಂದಿದೆ. ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ. ಕೇಂದ್ರ ಸರ್ಕಾರ ಪರ್ಚೇಸ್ ಮಾಡುತ್ತಿದೆ ಎಂದು ಹೇಳಿದ್ದೀರಿ. ಅವರು ಇವತ್ತಿನವರೆಗೆ 12000 ಕ್ವಿಂಟಾಲ್ ಹತ್ತಿ ಪರ್ಚೇಸ್ ಮಾಡಿಲ್ಲ. ನಿಮಗೆ ಇವತ್ತಿನ ದಿವಸ ಈ ರೀತಿ ಹೇಳುವುದಕ್ಕೆ ನಾಚಿಕೆ ಬರಬೇಕು. ಅಲ್ಲದೆ ಹೈಬ್ರಿಡ್ ವಿಷಯ ಕೇಳಿದ್ದೆ. ಇವತ್ತು ಶ್ರೀ ನಾಗಮಾರಪಲ್ಲಿ ಅವರು ಒಂದು ಕ್ವೆಶ್ಚನ್ ಕೇಳಿದ್ದರು. ಆ ಪ್ರಶ್ನೆಗೆ, ಜೋಳದ ಬೆಲೆ ಸಲುವಾಗಿ ಉತ್ತರ ಕೊಟ್ಟಿದ್ದಾರೆ. ಏನು ಉತ್ತರ ಕೊಟ್ಟಿದ್ದಾರೆ ಎಂದರೆ ಹೈಬ್ರಿಡ್ ಜೋಳದ ಮಾರುಕಟ್ಟೆ ಧಾರಣೆ ಕೆಲವೊಂದು ಪ್ರದೇಶದಲ್ಲಿ ಬೆಂಬಲ ಬೆಲೆಗಿಂತ ಕಡಿಮೆ ಆಗಿರುತ್ತದೆ. ಆದರೆ ಹೈಬ್ರಿಡ್ ಜೋಳ ಇವತ್ತಿನವರೆಗೆ ಹೆಚ್ಚು ಸಂಗ್ರಹಿಸಲು ಸಾಧ್ಯ ಇರುವುದಿಲ್ಲ. ಬೆಂಬಲ ಬೆಲೆ ಸಿಕ್ಕಿಲ್ಲ. ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ವಿತರಿಸಲು ಇದನ್ನು ಖರೀದಿ ಮಾಡಲಾಗುವುದು ಎಂದು ಹೇಳಿದ್ದಾರೆ.

ಅಧ್ಯಕ್ಷರು: ಕೌಜಲಗಿಯವರೇ ಕುಳಿತುಕೊಳ್ಳಿ....

ಶ್ರೀ ಶಿವಾನಂದ ಎಚ್. ಕೌಜಲಗಿ:- ಇದು ತಮ್ಮ ಉತ್ತರವೇ ? ತಾವು ವಿಚಾರ ಮಾಡಬೇಕು ಇವತ್ತಿನ ದಿವಸ ಹತ್ತಿಯ ಧಾರಣೆ 700, ಜೋಳದ ಬೆಲೆ.

(ಗೊಂದಲ)

ಅಧ್ಯಕ್ಷರು:- ಪ್ರಶ್ನೆಯ ಗಂಭೀರತೆಯನ್ನು ಅರಿತು ನಾನು ಇದನ್ನು...

ಶ್ರೀ ಆರ್.ವಿ. ದೇಶಪಾಂಡೆ:- ಇದರ ಗಂಭೀರತೆಯನ್ನು ತೆಗೆದುಕೊಂಡು ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ವಿನಂತಿಸುತ್ತೇನೆ. ನನಗೆ ಆಶ್ಚರ್ಯ ಆಗುತ್ತದೆ ಮಾನ್ಯ ಸಚಿವರ ಉತ್ತರ ನೋಡಿ.

If the Hybrid quality jawar falls lower than the support price, action may be taken to pursue it with Govt. of India.

ನಿಮ್ಮ ಅಧಿಕಾರಿಗಳು ಏನು ಹೇಳುತ್ತಿದ್ದಾರೆ ? ಫಾಲ್ ಆಗಿ 5 ತಿಂಗಳು ಆಯಿತು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಸಪೋರ್ಟ್ ಪ್ರೈಸ್ ಕೊಡುತ್ತೇವೆ ಎಂದು ಹೇಳಿದ್ದೀರಿ. ಮಾರ್ಕೆಟ್ ಫೆಡರೇಷನ್‌ನವರೂ ಕೊಟ್ಟಿಲ್ಲ, ಮಾನ್ಯ ಮುಖ್ಯಮಂತ್ರಿಗಳು.

(ಗೊಂದಲ)

ರೈತರಿಗೆ ಮಾತು ಕೊಟ್ಟಿದ್ದೀರಿ. ಆ ಮಾತು ಇವತ್ತು ಇಲ್ಲ. ತಮ್ಮದು ರೈತ ವಿರೋಧಿ ಸರ್ಕಾರ ಇದೆ. ನಾವು ಇದನ್ನು ಪ್ರೊಟೆಸ್ಟ್ ಮಾಡಿ ವಾಕ್ ಔಟ್ ಮಾಡುತ್ತೇವೆ.

(ಮಾನ್ಯ ವಿರೋಧ ಪಕ್ಷದ ನಾಯಕರು, ಜನತಾ ದಳದ ಸದಸ್ಯರೊಂದಿಗೆ ಸಭಾತ್ಯಾಗ ಮಾಡಿದರು)

ಶ್ರೀ ಎಸ್.ಹೆಚ್. ಕೌಜಲಗಿ:- ತಾವು ದಯವಿಟ್ಟು ವಿಚಾರ ಮಾಡಬೇಕು.

(ಗೊಂದಲ)

ಶ್ರೀ ಬಾಬಾಗೌಡರು ರುದ್ರಗೌಡ ಪಾಟೀಲ್:– ನಾವೂ ಸಹ ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:– ತಾವು ದೊಡ್ಡ ಮನಸ್ಸು ಮಾಡಿ. ರೈತರ ಪ್ರತಿನಿಧಿ ತಾವೂ ಸಹ ಆಗಿರುವುದರಿಂದ ಈ ವಿಷಯದ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ನಾನು ಸ್ವಾಗತ ಮಾಡುತ್ತೇನೆ. ತಾವು ದೊಡ್ಡ ಮನಸ್ಸು ಮಾಡಿದ್ದೀರಿ. ಆದರೆ ನಿಮ್ಮ ಬಗ್ಗೆ ನಮ್ಮದು ಏನೂ ತಕರಾರು ಇಲ್ಲ. ನಮ್ಮ ವಿಷಯ ದಯಮಾಡಿ ತಾವು ಅರ್ಥ ಮಾಡಿಕೊಳ್ಳಿ. ನಮ್ಮ ಮನೆಗಳಲ್ಲಿ ಬೆಂಕಿ ಹಾಕುವ ಸಂದರ್ಭ ಬಂದಿದೆ. 60 ರೂಪಾಯಿಗಳಿಗೆ ಒಂದು ಕೆ.ಜಿ. ರೇಷ್ಮೆ ಮಾರಬೇಕು ಎಂದರೆ ಏನು ಮಾಡುವುದು ? ಕೇಂದ್ರ ಸರ್ಕಾರದವರು ಏನು ಮಾಡುತ್ತಿದ್ದಾರೆ. ಒಂದೂವರೆ ತಿಂಗಳು ಆಯಿತು ಅಸೆಂಬ್ಲಿ ಪ್ರಾರಂಭ ಆಗಿದೆ, ನಾವು ಇಲ್ಲಿ ಅರಚಿಕೊಳ್ಳುತ್ತಿದ್ದೇವೆ ಕೇಂದ್ರ ಸರ್ಕಾರಕ್ಕೆ ಕೇಳಿಸುವುದೇ ಇಲ್ಲ. ಇವತ್ತು ಶಿವಾನಂದ ಕೌಜಲಗಿ ಅವರೂ ಸಹ ಹೇಳಿದರು. ನಾವು ಒಂದೂವರೆ ತಿಂಗಳ ಹಿಂದೆ ಇದನ್ನು ಪ್ರಸ್ತಾಪ ಮಾಡಿದ್ದೇವೆ. ಅಧಿವೇಶನ ಪ್ರಾರಂಭ ಆದ ತಕ್ಷಣ ಈ ವಿಷಯ ಶುರು ಮಾಡಿದ್ದೇವೆ. ಏಕೆ ಇನ್ನೂ ಓಪನ್ ಮಾಡಲಿಕ್ಕೆ ಆಗಿಲ್ಲ ನಿಮ್ಮ ಸರ್ಕಾರಕ್ಕೆ ? ನಾವು ಹೇಳುತ್ತಿದ್ದೇವೆ. ನಿಮ್ಮ ವಿರುದ್ಧ ಅಲ್ಲ. ಇವತ್ತು ರಾಜ್ಯ ಸರ್ಕಾರದವರು ಹಾಗೂ ಕೇಂದ್ರ ಸರ್ಕಾರದವರು ತಾಳಿರತಕ್ಕ ಧೋರಣೆ ಏನು ಇದೆ, ಇದು ಸರಿಯಲ್ಲ. ನಾವು ಮನನೊಂದು ಈ ಮಾತನ್ನು ಹೇಳಬೇಕಾಗಿದೆ. ಅದಕ್ಕೋಸ್ಕರವಾಗಿ ನಾವು ಪ್ರತಿಭಟನೆ ಮಾಡಿ ಹೋಗುತ್ತಿದ್ದೇವೆ.

ಪ್ರಶ್ನೋತ್ತರ ಮುಗಿಯಿತು

(ಗೊಂದಲ)

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕೊಡಿಗೆಹಳ್ಳಿ ಮಂಡಲ ಪಂಚಾಯತಿಯಿಂದ ನಿವೇಶನಗಳ ಹಂಚಿಕೆ

(2151): ಶ್ರೀ ಪಿ. ಬಸವರಾಜು (ಬ್ರಹ್ಮಾವರ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದೊಡ್ಡಬಳ್ಳಾಪುರ ತಾಲ್ಲೂಕು ಕೊಡಿಗೆಹಳ್ಳಿ ಮಂಡಲ ಪಂಚಾಯಿತಿಯಿಂದ ಪಾಲನ ಜೋಗಿಹಳ್ಳಿ ಹತ್ತಿರ ನಿವೇಶನಗಳನ್ನು ವಿಂಗಡಿಸಲು ವಶಪಡಿಸಿಕೊಳ್ಳಲಾಗಿದ್ದ ಪ್ರದೇಶದ ವಿಸ್ತೀರ್ಣವೆಷ್ಟು ? ಹಾಗೂ ಈ ಪ್ರದೇಶದಲ್ಲಿ ವಿಂಗಡಿಸಲಾಗಿರುವ ನಿವೇಶನಗಳೆಷ್ಟು;

ಆ. ಈ ಪ್ರದೇಶದಲ್ಲಿ ನಿವೇಶನಗಳನ್ನು ಹಂಚಲಾಗಿರುವ ಜನರ ಸಂಖ್ಯೆ ಎಷ್ಟು ? (ಫಲಾನುಭವಿಗಳ ಹೆಸರು ವಿಳಾಸ ಮತ್ತು ನಿವೇಶನದ ಸಂಖ್ಯೆಯು ವಿವರಗಳನ್ನು ಒದಗಿಸುವುದು);

ಇ. ಈ ನಿವೇಶನಗಳನ್ನು ಹಂಚುವುದರಲ್ಲಿ ಏನಾದರೂ ಅವ್ಯವಹಾರಗಳು ನಡೆದಿರುವ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಅದರ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ. ಸರ್ವೆ ನಂ. 27ರಲ್ಲಿ 25 ಎಕರೆ ಜಮೀನನ್ನು ವಶಪಡಿಸಿಕೊಂಡು 881 ನಿವೇಶನಗಳನ್ನು ನಿರ್ಮಿಸಲಾಗಿದೆ.

ಆ. 881 ಜನರಿಗೆ ಹಂಚಲಾಗಿದೆ. (ಪಟ್ಟಿ ಲಗತ್ತಿಸಿದೆ)

ಇ. ಹೌದು.

ದಿನಾಂಕ 20–4–1991ರಂದು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರು ಎಲ್ಲಾ ನಿವೇಶನಗಳ ಹಂಚಿಕೆಯನ್ನು ರದ್ದುಪಡಿಸಿರುವರು. ಆದರೆ ಶ್ರೀ ಎಂ. ಸಿದ್ದಲಿಂಗಯ್ಯ, ಎಂಬುವರು ರದ್ಧತಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದು, ನ್ಯಾಯಾಲಯದ ತೀರ್ಪು ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಕೊಡಿಗೆಹಳ್ಳಿ ಮಂಡಲ ಪಂಚಾಯಿತಿಯಿಂದ ನಿವೇಶನಗಳನ್ನು ಹಂಚಲಾಗಿರುವ ವಿವರಗಳು
ತಾಲ್ಲೂಕು: ದೊಡ್ಡಬಳ್ಳಾಪುರ

ಕ್ರ. ಸಂ.	ನಿವೇಶನದ ಸಂಖ್ಯೆ	ಫಲಾನುಭವಿಯ ಹೆಸರು	ತಂದೆಯ ಹೆಸರು	ಊರು
1	2	3	4	5
1.	1	ಆರ್. ಕೆಂಪೇಗೌಡ	ರಾಮಕೃಷ್ಣಪ್ಪ	ಮಾದಗೊಂಡನಹಳ್ಳಿ
2.	2	ಎ. ವೇದಾವತಿ	ಲಕ್ಷ್ಮೀನಾರಾಯಣಪ್ಪ	– ” –
3.	3	ಶಾರದಮ್ಮ	ಗೋಪಾಲಯ್ಯ	– ” –
4.	4	ಡಿ. ನಾಗರತ್ನಮ್ಮ	ಭಾಸ್ಕರಮೂರ್ತಿ	ತಳಗವಾರ
5.	5	ಸಾಕಮ್ಮ	ಕೃಷ್ಣಮೂರ್ತಿ	ಕೊಡಿಗೆಹಳ್ಳಿ
6.	6	ರಾಮಕ್ಕ	ರಂಗಪ್ಪ	ಕೋಳೂರು
7.	7	ಶಿವರುದ್ರಮ್ಮ	ಡಿ.ಎಲ್. ವೀರಣ್ಣ	ಅಂತರಹಳ್ಳಿ
8.	8	ಫಿಲೋಮಿನಾ	ಆರ್. ಮರಿಯಪ್ಪ	ಪಾಲನ ಜೋಗಿಹಳ್ಳಿ
9.	9	ದಿಲ್‌ಶಾದಿ ಬೇಗಂ	ಮೆಹಬೂಬ್‌ಖಾನ್	ದೊಡ್ಡಬಳ್ಳಾಪುರ
10.	10	ಆರ್. ಕೃಷ್ಣ	ಆರ್. ಮಂಜುನಾಥ್	ಪಾಲನ ಜೋಗಿಹಳ್ಳಿ
11.	11	ಶಾಂತಮ್ಮ	ನಾರಾಯಣಪ್ಪ	ದೊಡ್ಡಬಳ್ಳಾಪುರ
12.	12	ಮುನಿಯಮ್ಮ	ನಂಜಪ್ಪ	ಹೊನ್ನಾಘಟ್ಟ
13.	13	ಗಜೇಂದ್ರ	ಶಿವಲಿಂಗಯ್ಯ	ತಳಗವಾರ
14.	14	ಪಿಳ್ಳ ವೆಂಕಟಪ್ಪ	ದಾಸಪ್ಪ	ದೊಡ್ಡಬಳ್ಳಾಪುರ
15.	15	ರಾಜಣ್ಣ	ವೀರಭದ್ರಯ್ಯ	ತಳಗವಾರ
16.	16	ಲಕ್ಷ್ಮಮ್ಮ	ಬೊಮ್ಮಯ್ಯ	
17.	17	ಹೆಚ್. ಪ್ರಶಾಂತ್	ಕೆ. ಹನುಮಂತಯ್ಯ	ಪಾ।। ಜೋಗಿಹಳ್ಳಿ
18.	18	ಕೆ. ಹನುಮಂತಯ್ಯ	ಕಾಳಪ್ಪ,	
19.	19	ಆರ್. ಶೇಷಗಿರಿ ಪಂಡಿತ್	ರಾಮಪಂಡಿತ್	
20.	20	ಎಸ್. ಶಂಕರ	ಡಿ. ಆರ್. ಸೂರಪ್ಪ	ದೊಡ್ಡಬಳ್ಳಾಪುರ
21.	21	ಎಸ್. ನಾಗೇಶ್	ಬಿ. ಕಮಲಮ್ಮ	– ” –
22.	22	ಡಿ. ರವಿಕುಮಾರ್	ಎಸ್.ಎನ್. ದ್ವಾರಕಾನಾಥ್	– ” –
23.	23	ಅರವಿಂದಮ್ಮ	ಶ್ರೀನಿವಾಸಮೂರ್ತಿ	ತಳಗವಾರ
24.	24	ನಂಜುಂಡಪ್ಪ	ನಾರಾಯಣಪ್ಪ	ದೊಡ್ಡಬಳ್ಳಾಪುರ
25.	25	ನಾಗರತ್ನಮ್ಮ	ಸಂಪತ್‌ಕುಮಾರ್	– ” –
26.	26	ಸರೋಜಮ್ಮ	ಆದಿನಾರಾಯಣ	– ” –
27.	27	ನಾಗಭೂಷಣರಾವ್	ಲಕ್ಷ್ಮೀನಾರಾಯಣರಾವ್	– ” –
28.	28	ಲಲಿತ	ರಾಮರಾವ್	ಪಾ।। ಜೋಗಿಹಳ್ಳಿ

29.	29	ಅಲುಮೇಲು	ಸೂರ್ಯನಾರಾಯಣ ರಾವ್	
30.	30	ಸತ್ಯಮ್ಮ	ಲಕ್ಷ್ಮೀನಾರಾಯಣ	– ” –
31.	31	ಭಾರತಿ	ಶ್ರೀಕಂಠಪ್ಪ	ಕೊಡಿಗೆಹಳ್ಳಿ
32.	32	ಮರಿಸ್ವಾಮಿ	ಸಿದ್ದಲಿಂಗಯ್ಯ	– ” –
33.	33	ದಾಕ್ಷಾಯಿಣಿ	ನಾಗರಾಜು	– ” –
34.	34	ಪ್ರಕಾಶ್	ಗಂಗಾಧರಯ್ಯ	ಕೋಳೂರು
35.	35	ಮೋಹನ್‌ಕುಮಾರ್	ಸರೋಜಮ್ಮ	ದೊಡ್ಡಬಳ್ಳಾಪುರ
36.	36	ಹೇಮಾವತಿ	ನರಸಿಂಹಯ್ಯ	– ” –
37.	37	ಶಿವಮ್ಮ	ಶಿವಣ್ಣ	ಕೊಡಿಗೆಹಳ್ಳಿ
38.	38	ರಾಜಣ್ಣ	ನರಸಪ್ಪ	ಕೋಳೂರು
39.	39	ಸಿದ್ಧಲಿಂಗಮ್ಮ	ಶಿವರುದ್ರಪ್ಪ	– ” –
40.	40	ಸಿದ್ದಲಿಂಗಯ್ಯ	ನರಸಪ್ಪ	– ” –
41.	41	ಸರ್ವಮಂಗಳ	ನಂಜುಂಡಪ್ಪ	– ” –
42.	42	ಸುಬ್ಬರಾಯಪ್ಪ	ನರಸಿಂಹಯ್ಯ	– ” –
43.	43	ಮಂಜುನಾಥ	ಸುಬ್ಬರಾಯಪ್ಪ	–
44.	44	ಮುನಿಯಮ್ಮ	ಮುತ್ತರಾಯಪ್ಪ	ಇತರೆ
45.	45	ಈರಣ್ಣ	ಓಬಳಪ್ಪ	–
46.	46	ಲಕ್ಷ್ಮಮ್ಮ	ಕೃಷ್ಣನಂದಭಾರತಿ	–
47.	47	ಅಂಬುಜ	ಸೊಣ್ಣೇಗೌಡ	ಕೊಡಿಗೆಹಳ್ಳಿ
48.	48	ಕೃಷ್ಣಮೂರ್ತಿ	ಮುನಿಯಪ್ಪ	ದೊಡ್ಡಬಳ್ಳಾಪುರ
49.	49	ಮಮತಾ	ಶ್ರೀನಿವಾಸ	–
50.	50	ಶಕುಂತಲಮ್ಮ	ನಾರಾಯಣಸ್ವಾಮಿ	–
51.	51	ಪುಷ್ಪಾವತಿ	ಕೃಷ್ಣಪ್ಪ	ದೊಡ್ಡಬಳ್ಳಾಪುರ
52.	52	ಅಮಲದಾಸ್	ದೇವಸಗಾಯಲ್	– ” –
53.	53	ಲೂಸನ್‌ಮೇರಿ	ಅಮಲದಾಸ್	–
54.	54	ರಾಣಿ	ಜೋಸೆಫ್	–
55.	55	ಪ್ರಕಾಶ್	ಜೋಸೆಫ್	–
56.	56	ಕಮಲ	ಶ್ರೀಧರ	–
57.	57	ಕಾಂತರಾಜ್	ಸುನಂದರೆಡ್ಡಿ	–
58.	58	ಮಂಜುಕುಮಾರ್	ಗೋವಿಂದರಾಜ್	–
59.	59	ಕಮರುನ್ನಿಸಾ	ಬಾಬಾಸಾಬ್	–
60.	60	ಹಕ್ಕುಪತ್ರ ನೀಡಿದೆ.		
61.	61	ಸೋಮಶೇಖರ್	ಲಕ್ಷ್ಮೀನಾರಾಯಣ	–
62.	62	ಮುನಿಅಂಜಿನಪ್ಪ	ಬೈಲಪ್ಪ	ಪಾ।। ಜೋಗಿಹಳ್ಳಿ
63.	63	ನಾರಾಯಣಪ್ಪ	ವೆಂಕಟಪತಪ್ಪ	– ” –

64.	64	ಸರೋಜಮ್ಮ	ಕೃಷ್ಣಮೂರ್ತಿ	– ” –
65.	65	ವಿಮಾಲಾಕ್ಷಮ್ಮ	ಮುನಿಶಾಮಯ್ಯ	– ” –
66.	66	ತಿಪ್ಪಮ್ಮ	ರಾಮಸ್ವಾಮಿ	– ” –
67.	67	ನಾರಾಯಣಪ್ಪ	ಪಾಪೇಗೌಡ	ಕೊಡಿಗೆಹಳ್ಳಿ
68.	68	– ” –	ವೆಂಕಟಪ್ಪ	– ” –
69.	69	ಸುಗ್ಗರಂಗಯ್ಯ	ರಂಗಪ್ಪ	–
70.	70	ಅಮಿರ್‌ಜಾನ್	ಅಬ್ದುಲ್‌ರಷೀದ್	–
71.	71	ರಾಜಾಮಣಿ	ನಾರಾಯಣರಾವ್	–
72.	72	ಡಿ.ಎಸ್. ಸಾವಿತ್ರಮ್ಮ	ಸುಬ್ರಮಣ್ಯ	–
73.	73	ಪ್ರೇಮ	ಗುಪ್ತ	–
74.	74	ಉಮಾ	ಸತ್ಯಪ್ರಕಾಶ್	–
75.	75	ಮುನಿಯಮ್ಮ	ರಾಮಯ್ಯ	–
76.	76	ನಾಗಮ್ಮ	ಸುಬ್ಬರಾಯಪ್ಪ	–
77.	77	ಪುಟ್ಟಲಕ್ಷ್ಮಮ್ಮ	ಮುನಿಯಪ್ಪ	–
78.	78	ಶಾರದಮ್ಮ	ಗೋವಿಂದಪ್ಪ	ಪಾ।। ಜೋಗಿಹಳ್ಳಿ
79.	79	ಸುಬ್ಬಮ್ಮ	ರಾಮಾಚಾರಿ	–
80.	80	ಪಾರ್ವತಮ್ಮ	ಮುನಿಆಂಜಿನಪ್ಪ	–
81.	81	ಮಾಲೂರಪ್ಪ	ಈರಪ್ಪ	–
82.	82	ಮರಿಯಮ್ಮ	ಮುನೇಗೌಡ	–
83.	83	ಗೋವಿಂದರಾಜು	ಚಿಕ್ಕಮುತ್ತರಾಯಪ್ಪ	ಕೊಡಿಗೆಹಳ್ಳಿ
84.	84	ಜಯಮ್ಮ	ನಂಜಪ್ಪ	–
85.	85	ಪ್ಯಾರಿಜಾನ್	ಮುಹಮ್ಮದ್ ಖಲೀಲ್	–
86.	86	ಅಕ್ತರ್‌ಉನ್ನೀಸಾ	ಖಾದರ್	–
87.	87	ಗಂಗಾಧರಯ್ಯ	ಚಿಕ್ಕಮುನಿಯಪ್ಪ	–
88.	88	ಹಕ್ಕುಪತ್ರ ನೀಡಿದೆ	–	–
89.	89	ನಾಗರಾಜು	ವೆಂಕಟಸ್ವಾಮಿ	–
90.	90	ಶ್ರೀನಿವಾಸಮೂರ್ತಿ	ರಾಮಕೃಷ್ಣರಾವ್	ಪಾ।। ಜೋಗಿಹಳ್ಳಿ
91.	91	ಸುಮಿತ್ರಮ್ಮ	ವೆಂಕಟಚಲಪ್ಪ	–
92.	92	ಲಲಿತಮ್ಮ	ರಾಜಶೇಖರಯ್ಯ	ಮೆಣಸ
93.	93	ಶಾರದಮ್ಮ	ನಾರಾಯಣಪ್ಪ	–
94.	94	ವೆಂಕಟಮ್ಮ	ಬುಡ್ಡಪ್ಪ	ಮಾದಗೊಂಡನಹಳ್ಳಿ
95.	95	ಕೆ. ಇಂದಿರಾಣಿ	ಕೆ. ಕಾಳಪ್ಪ	–
96.	96	ಅಬೀದಾಜಾನಿ	ಸತ್ತಾರ್‌ಸಾಬ್	–
97.	97	ರುದ್ರಮ್ಮ	ಮುನಿಚೆನ್ನಪ್ಪ	ದೊಡ್ಡಬಳ್ಳಾಪುರ
98.	98	ರಹಮತ್‌ಬಿಲು ಬೀಜು	ಹಸನ್	–
99.	99	ನಾಗರಾಜು	ಸೀನಪ್ಪ	–

100.	100	ಅಶ್ವತ್ಥಮ್ಮ	ಚಿಕ್ಕವೆಂಕಟಪ್ಪ	–
101.	101	ರಾಮಕೃಷ್ಣ	ನೀಲಕಂಠಯ್ಯ	–
102.	102	ಗಂಗಮ್ಮ	ನಂಜುಂಡಯ್ಯ	–
103.	103	ಹಕ್ಕುಪತ್ರ ನೀಡಿದೆ	–	–
104.	104	ಲಕ್ಷ್ಮೀನಾರಾಯಣ	ವೀರಣ್ಣ	ಹಣಬೆ
105.	105	ನಾಗಪ್ಪ	–	–
106.	106	ರಾಜಣ್ಣ	ಬಸಣ್ಣ	ನಾಗಸಂದ್ರ
107.	107	ಲಿಂಗಮ್ಮ	ಪಾಪಣ್ಣ	ಕೊಡಿಗೆಹಳ್ಳಿ
108.	108	ಪುಟ್ಟನಂಜಮ್ಮ	ವೀರಬಸಪ್ಪ	–
109.	109	ಸುಭಾಷ್‌ಕುಮಾರ್	ಮುನಿಶಾಮಯ್ಯ	ಪಾ।। ಜೋಗಿಹಳ್ಳಿ
110.	110	ವಿಶ್ವನಾಥ್	ಶಿವಮ್ಮ	ಕೊಡಿಗೆಹಳ್ಳಿ
111.	111	ಶೋಭಾ	ಶಿವಣ್ಣ	– " –
112.	112	ರಾಜಮ್ಮ	ಚಿಕ್ಕಣ್ಣ	– " –
113.	113	ಮರಿಯಪ್ಪ	ನಂಜುಂಡಪ್ಪ	– " –
114.	114	ನಟರಾಜು	ಭದ್ರಯ್ಯ	– " –
115.	115	ಪ್ರೇಮ	ಭದ್ರಯ್ಯ	– " –
116.	116	ಚಂದ್ರಕಲಾ	ಕೆಂಪರಾಜು	ಪಾ।। ಜೋಗಿಹಳ್ಳಿ
117.	117	ಹೊನ್ನೂರಪ್ಪ	ಚೆನ್ನಮಾರಪ್ಪ	–
118.	118	ನಾರಾಯಣರಾವ್	ನರಸಿಂಗರಾವ್	–
119.	119	ಸಾದಕ್ ಉನ್ನಿಸಾ	ದಸ್ತಗೀರ್‌ಸಾಬ್	–
120. (1)	120 (1)	ಬೀಬೀಸಾಬ್	ನ್ಯಾರಿಸ್‌ಸಾಬ್	–
120. (2)	120 (2)	ವರಲಕ್ಷ್ಮಿ	ಮುನಿಯಪ್ಪ	–
121.	121	ಮುನಿಯಪ್ಪ	ಗಂಗಪ್ಪ	–
122.	122	ರೆಹಮಾನ್	ಬಾಷಾ	–
123.	123	ಸುಬ್ಬರಾಯಪ್ಪ	ನಾರಾಯಣಪ್ಪ	–
124.	124	ದೊಡ್ಡಯ್ಯ	ಹನುಮಂತರಾಯಪ್ಪ	–
125.	125	ಹನುಮಯ್ಯ	ಈರಪ್ಪ	ಕೋಳೂರು
126.	126	ಲಕ್ಷ್ಮಮ್ಮ	ಚಿಕ್ಕರಂಗಪ್ಪ	–
127.	127	ನೀಲ	ಜಯಶಂಕರ್	ಕೊಡಿಗೆಹಳ್ಳಿ
128.	128	ಸರಸ್ವತಮ್ಮ	ಶಂಕರಾಚಾರ್	ದೊಡ್ಡಬಳ್ಳಾಪುರ
129.	129	ಪಾರ್ವತಮ್ಮ	ಹೊನ್ನಪ್ಪ	ಕೊಡಿಗೆಹಳ್ಳಿ
130.	130	ಶಿವಣ್ಣ	ನಂಜಪ್ಪ	– " –
131.	131	ಹೊನ್ನಪ್ಪ	ಚಿಕ್ಕಣ್ಣ	– " –
132.	132	ಹನುಮಂತರಾಯಪ್ಪ	ಅಂಜಿನಪ್ಪ	– " –

133.	133	ಗೌರಣ್ಣ	ನಂಜುಂಡಪ್ಪ	– " –
134.	134 (1)	ರಾಜಣ್ಣ	ಮಾರಪ್ಪ	ಕೊಡಿಗೆಹಳ್ಳಿ
135.	134 (2)	ದೇವಿರಮ್ಮ	ರಾಮಣ್ಣ	ಮೆಣಸಿ
136.	135 (1)	ಸುಶೀಲಮ್ಮ	ಬಸವರಾಜು	ಕೊಡಿಗೆಹಳ್ಳಿ
137.	135 (2)	ಪುಟ್ಟರುದ್ರಪ್ಪ	ನಂಜಪ್ಪ	– " –
138.	136	ಚನ್ನಪ್ಪ	ಕಾವಲಪ್ಪ	– " –
139.	137	ಪುಟ್ಟಮ್ಮ	ಚಿಕ್ಕಣ್ಣ	– " –
140.	138	ಜೈಮುನ್ನಿಸಾ	ಸೈಯದ್‌ಹುಸೇನ್	ಪಾ।। ಜೋಗಿಹಳ್ಳಿ
141.	139	ಮುನಿಯಪ್ಪ	ನರಸಿಂಹಯ್ಯ	– " –
142.	140	ಸೋಮಶೇಖರ	ಜಯರಾಮಾಚಾರ್	ಮಾದಗೊಂಡನಹಳ್ಳಿ
143.	141	ಜಯಮ್ಮ	ರಾಮಚಂದ್ರನಾಯ್ಕ	ಗೊಲ್ಲಹಳ್ಳಿ
144.	142	ಮುತ್ತಹನುಮಕ್ಕ	ಅಂಜಿನಪ್ಪ	ಕುರುಬರಹಳ್ಳಿ
145.	143	ತಿಮ್ಮಯ್ಯ	ನಂಜಪ್ಪ	– " –
146.	144	ಮುನಿಯಪ್ಪ	ಮುನಿಶಾಮಪ್ಪ	ಕೊಡಿಗೆಹಳ್ಳಿ
147.	145	ಕೃಷ್ಣಪ್ಪ	ಮುನಿಹನುಮಕ್ಕ	– " –
148.	146	ಮುನಿಯಪ್ಪ	ಪಾಪಯ್ಯ	ಕೋಳೂರು
149.	147	ಅನಂತ	ಪಾಪಣ್ಣ	ಕುರುಬರಹಳ್ಳಿ
150.	148	ಮೀನಾಕ್ಷಿ	ವೆಂಕಟರಮಣ	– " –
151.	149	ಬಸಪ್ಪ	ಸಿದ್ದಪ್ಪ	ಕೋಳೂರು
152.	150	ವೆಂಕಟೇಶ್	ಮರಿಯಪ್ಪ	ಕುರುಬರಹಳ್ಳಿ
153.	151	ಮಹದೇವಪ್ಪ	ಲಿಂಗಪ್ಪ	– " –
154.	152	ರಹಮತ್‌ಉನ್ನಿಸಾ	ಖಾದರ್‌ಹುಸೇನ್	– " –
155.	153	ರಾಧ	ಹರಿಜರನ್	ದೊಡ್ಡಬಳ್ಳಾಪುರ
156.	154	ಸರೋಜಮ್ಮ	ಗುಂಡಪ್ಪ	– " –
157.	155	ಅಲ್ಲಾಭಕಷ	ಮಸ್ತಾನ್‌ಖಾನ್	–
158.	156	ಚಿಕ್ಕಪುಟ್ಟಪ್ಪ	ದೊಡ್ಡವೀರಭದ್ರಪ್ಪ	–
159.	157	ಅ: ಖುದ್ದೂಸ್	ಖಾಸಿಂ ಸಾಬ್	–
160.	158	ಶುಕ್ಕೂರ್ ಖಾಸಿ	ಜಹಂಗೀರ್‌ಸಾಬ್	–
161.	159	ಪಜ್. ಉನ್ನಿಸಾ	ರೆಹಮಾನ್‌ಬೇಗ್	–
162.	160	ನಾಗರತ್ನಮ್ಮ	ಕೆ.ವಿ. ಪ್ರಕಾಶ್	–
163.	161	ರೇಣುಕಾ	ವೆಂಕಟರಮಣಪ್ಪ	ದೊಡ್ಡಬಳ್ಳಾಪುರ
164.	162	ಹೇಮಾವತಮ್ಮ	– " –	– " –
165.	163	ರತ್ನಮ್ಮ	ನಾರಾಯಣಪ್ಪ	ಪಾ।। ಜೋಗಿಹಳ್ಳಿ
166.	164	ಗುರುಲಿಂಗಯ್ಯ	ಚನ್ನಾಚಾರ್	– " –
167.	165	ಸುರೇಶ್‌ಮೂರ್ತಿ	ಗುರುಲಿಂಗಯ್ಯ	– " –
168.	166	ಅ: ರಹಿಂ ನವಾಬ್	ಅಬ್ದುಲ್ ಹಕಿಲ	ದೊಡ್ಡಬಳ್ಳಾಪುರ

169.	167	ನಾಗಭೂಷಣಪ್ಪ	ವೆಂಕಟರಮಣಪ್ಪ	– " –
170.	168	ಮುನಿಯಮ್ಮ	ವೆಂಕಟಸ್ವಾಮಿ	– " –
171.	169	ಮೂರ್ತಿ	ನಂಜುಂಡೇಶ್ವರ	– " –
172.	170	ಪುಷ್ಪ	ತಿಮ್ಮಯ್ಯ	– " –
173.	171	ನಂಜಮ್ಮ	ಚೌಡಯ್ಯ	– " –
174.	172	ಗಂಗರತ್ನಮ್ಮ	ಕೃಷ್ಣಪ್ಪ	ಪಾ॥ ಜೋಗಿಹಳ್ಳಿ
175.	173	ಪ್ರಭಾಕರ್	ವೆಂಕಟಚಾರಿ	ಹಸನ್‌ಘಟ್ಟ
176.	174	ನಾಗಮಣಿ	–	ಕುರುಬರಹಳ್ಳಿ
177.	175	ಶಿವರುದ್ರಯ್ಯ	ಶರಬಯ್ಯ	– " –
178.	176	ಸೈಯದ್ ಅಜಿಮ್	ಗಫಾರ್‌ಸಾಬ್	– " –
179.	177	ಪಾಪಮ್ಮ	ರಾಮಯ್ಯ	– " –
180.	178	ಕೃಷ್ಣಮೂರ್ತಿ	ನಂಜಪ್ಪ	ಮಾದಗೊಂಡನಹಳ್ಳಿ
181.	179	ಸಿದ್ದಲಿಂಗಪ್ಪ	ವೆಂಕಟಶಾಮಯ್ಯ	– " –
182.	180	ಶಿವಶಂಕರ	ವೆಂಕಟರಮಣಪ್ಪ	ಕುರುಬರಹಳ್ಳಿ
183.	181	ಜೀನತ್ ಉನ್ನಿಸಾ	ನೂನ್‌ಆರಮದ್	–
184.	182	ಲಿಂಗರಾಜು	ಶಂಕರಪ್ಪ	– " –
185.	183	ನಾಗರಾಜು	ಮುನಿಯಪ್ಪ	– " –
186.	184	ವೆಂಕಟಪ್ಪ	ವೆಂಕಟರಾಯಪ್ಪ	– " –
187.	185	ವಿಜಯಕುಮಾರ್	– " –	ಇತರೆ
188.	186	ಗಂಗಾಧರಯ್ಯ	ಮುನಿಶಾಮಯ್ಯ	ತಳಗವಾರ
189.	187	ಹನುಮಂತರಾಯಪ್ಪ	ಚಿಕ್ಕಆಂಜಿನಪ್ಪ	– " –
190.	188	ನಾಗರಾಜು	ನಾರಾಯಣಪ್ಪ	– " –
191.	189	ಮೈಲಾರಪ್ಪ	ನಂಜುಂಡಯ್ಯ	– " –
192.	190	ಹೊನ್ನಪ್ಪ	– " –	– " –
193.	191	ಕೃಷ್ಣಪ್ಪ	ರಾಮಯ್ಯ	ಗಾಳಿಪೂಜೆ
194.	192	ಶಾರದಮ್ಮ	ಕೆಂಪಣ್ಣ	ಕೋಳೂರು
195.	193	ನಟರಾಜು	ರಾಮಯ್ಯ	ಹೊನ್ನಾಘಟ್ಟ
196.	194	ರುದ್ರಮುನಿ	ಸಿದ್ದಲಿಂಗಪ್ಪ	ಮೆಣಸಿ
197.	195 (1)	ನರಸಪ್ಪ	ಲಿಂಗಪ್ಪ	ಮಾದಗೊಂಡನಹಳ್ಳಿ
198.	195 (2)	ಚಿಕ್ಕಮುನಿಸ್ವಾಮಯ್ಯ	ದೊಡ್ಡಮುನಿಶಾಮಯ್ಯ	– " –
199.	196	ವಿಶಾಲಾಕ್ಷಿ	ಜಯಶಂಕರ	– " –
200.	197 (1)	ಸಿದ್ದಲಿಂಗಯ್ಯ	ಪಿಳ್ಳಪ್ಪ	ಕುರುಬರಹಳ್ಳಿ
201.	197 (2)	ಚಂದ್ರಶೇಖರಯ್ಯ	ಮುತ್ತಪ್ಪ	– " –
202.	198 (1)	ಗೌರಮ್ಮ	ವೆಂಕಟಪ್ಪ	ಕುರುಬರಹಳ್ಳಿ
203.	198 (2)	ಬಸವರಾಜು	ಯಲ್ಲಪ್ಪ	– " –
204.	199	ಲಕ್ಷ್ಮಮ್ಮ	ಮಲ್ಲಪ್ಪ	– " –

205.	200	ಹನುಮಂತರಾಯಪ್ಪ	ತಿರುಮಲಯ್ಯ	ಕೊಡಿಗೆಹಳ್ಳಿ
206.	201	ಪೂಜಪ್ಪ	ಕೆಂಚಪ್ಪ	– " –
207.	202	ರತ್ನಮ್ಮ	ಚೌಡಪ್ಪ	– " –
208.	203 (1)	ವಿಠಲಸಾ	ಕುಬೇರಸಾ	ಪಾ।। ಜೋಗಿಹಳ್ಳಿ
209.	203 (2)	ಲಕ್ಷ್ಮೀನಾರಾಯಣ	ಕೃಷ್ಣಪ್ಪ	ಇತರೆ
210.	204	ವೆಂಕಟಲಕ್ಷ್ಮಮ್ಮ	ನಾರಾಯಣಪ್ಪ	–
211.	205	ಹೊನ್ನಗಂಗಪ್ಪ	ಚನ್ನಪ್ಪ	ಕೊಡಿಗೆಹಳ್ಳಿ
212.	206	ಅಕ್ಕಯಮ್ಮ	ನರಸಿಂಹಯ್ಯ	ಇತರೆ
213.	207	ಲಕ್ಷ್ಮೀನಾರಾಯಣಗೌಡ	ರಾಮಣ್ಣ	ತಳಗವಾರ
214.	208	ಅನುಸೂಯಮ್ಮ	ರಾಜೇಂದ್ರ	ಹೊನ್ನಾಘಟ್ಟ
215.	209	ವಿಜೇಯೇಂದ್ರ	ಹನುಮಂತಪ್ಪ	ಪಾ।। ಜೋಗಿಹಳ್ಳಿ
216.	210	ರವಿಕುಮಾರ್	– " –	– " –
217.	211	ಪಂಚಾಕ್ಷರಯ್ಯ	ರೇವಣ್ಣ	ಕೊಡಿಗೆಹಳ್ಳಿ
218.	212	ಗಂಗಾಧರಪ್ಪ	ಬಸಪ್ಪ	ತವಸಿಹಳ್ಳಿ
219.	213	ಶ್ರೀನಿವಾಸ್	ಶಾರದಮ್ಮ	ಪಾ।। ಜೋಗಿಹಳ್ಳಿ
220.	214	ಮೂರ್ತಿ	ಪಾಪಯ್ಯ	– " –
221.	215	ಮುನಿರಾಜಪ್ಪ	ಗೋಪಾಲಪ್ಪ	– " –
222.	216	ಮುನಿಶಾಮಯ್ಯ	ಪಾಪಯ್ಯ	– " –
223.	217	ಅನ್ವರ್‌ಸಾಬ್	ಅಬ್ದುಲ್ ಅಜಿದ್‌ಸಾಬ್	– " –
224.	218 (1)	ಅಸಿಪುಲ್ಲಾಖಾನ್	ಅಬ್ದುಲ್‌ಬಾಷಾ	ಇತರೆ
225.	218 (2)	ರಿಯಾಜ್ ಪಾಷಾ	ಮಾ. ಸನಾಉಲ್ಲಾ	ಕೊಡಿಗೆಹಳ್ಳಿ
226.	219	ಅರಿಪ್ ಅಹಮದ್	ಬಾಷಾಸಾಬ್	ಪಾ।। ಜೋಗಿಹಳ್ಳಿ
227.	220	ಸನಾವುಲ್ಲಾ	ಹುಸನ್‌ಷರೀಪ್	– " –
228.	221 (1)	ಪಾರ್ವತಮ್ಮ	ಸೀನಪ್ಪ	ಇತರೆ
229.	221 (2)	ನಿರ್ಮಲಾಬಾಯಿ	ಹನುಮಂತರಾವ್	– " –
230.	222	ಸಾಬ್ ಜಾನ್ ಸಾಬ್	ಮಸ್ತಾನ್ ಸಾಬ್	ಪಾ।। ಜೋಗಿಹಳ್ಳಿ
231.	223	ಸುಬ್ಬಣ್ಣ	ಬಿಡ್ಡಪ್ಪ	– " –
232.	224	ರಾಜಣ್ಣ	ಹನುಮಂತಪ್ಪ	– " –
233.	225	ಹೆಚ್. ನೈಸರ್	ಮನಾಸೆ	– " –
234.	226	ರಾಜಣ್ಣ	ಮುನಿಯಪ್ಪ	– " –
235.	227	ರತ್ನಮ್ಮ	ಶ್ಯಾಮಮೂರ್ತಿ	– " –
236.	228	ಚಂದ್ರಾಬಾಯಿ	ಕುಬೇಂದ್ರಪ್ಪ	– " –
237.	229	ಅನುಸೂಯಮ್ಮ	ರಾಮಕೃಷ್ಣಯ್ಯ	– " –
238.	230	ಸರೋಜಾಬಾಯಿ	ಆನಂದರಾವ್	– " –
239.	231	ಗೌರಮ್ಮ	ನಾರಾಯಣಸ್ವಾಮಿ	– " –

240.	232	ಮೆಹಮದ್‌ಗೌಸ್	ಸೈಯದ್ ಮಯಾಜ್	ಇತರೆ
241.	233	ಎಂ.ಡಿ. ಶಿಪಿಸೆಟ್		– " –
242.	234	ನಜೀಮುನ್ನಿಸಾ	ಗಫಾರ್	– " –
243.	235	ಹುಸೇನ್ ಷರೀಫ್	ಅಬ್ದುಲ್ ಖಾಲಿಕ್	– " –
244.	236	ಪಾರ್ವತಮ್ಮ	ಹೊನ್ನರಾಜು	ಇತರೆ
245.	237	ಹುಸೇನ್ ಅಹಮದ್		–
246.	238 (1)	ಸಿದ್ದಪ್ಪ	ಗಂಗಪ್ಪ	ಕೊಡಿಗೆಹಳ್ಳಿ
247.	238 (2)	ಸಿದ್ದಲಿಂಗಪ್ಪ	ಹನುಮಂತರಾಯಪ್ಪ	– " –
249.	239	ಚೌಡಪ್ಪ	ಮುನಿಶಾಮಪ್ಪ	ಕೊಡಿಗೆಹಳ್ಳಿ
250.	240	ನಾರಾಯಣಸ್ವಾಮಿ	ನಂಜುಂಡಪ್ಪ	– " –
251.	241	ಮೆಹ್ಬೂಬುನ್ನಿಸಾ	ಅಬ್ದುಲ್ ಖಾಲಿಕ್	–
252.	242	ಜಯಮ್ಮ	ಹನುಮಂತಯ್ಯ	–
253.	243	ಶಿವಕುಮಾರ್	ಗೌರಮ್ಮ	ಮೆಣಸಿ
254.	244	ಲಕ್ಷ್ಮಮ್ಮ	ಮುನಿಯಪ್ಪ	ಇತರೆ
255.	245	ರಾಧಮ್ಮ	ದೇವರಾಜ್	– " –
256.	246	ಸಂಜೀವಪ್ಪ	ಸಂಜೀವಪ್ಪ	– " –
257.	247	ವೇಣುಗೋಪಾಲ	ನಾಗಪ್ಪ	ತಳಗವಾರ
258.	248	ಚನ್ನಕೃಷ್ಣಪ್ಪ	ಚನ್ನಕೃಷ್ಣಪ್ಪ	ಮಾದಗೊಂಡನಹಳ್ಳಿ
259.	249	ಅಶ್ವತ್ಥಮ್ಮ	ಜಯರಾಮಯ್ಯ	– " –
260.	250	ಮುನಿಶಾಮಯ್ಯ	ಮುನಿಯಪ್ಪ	– " –
261.	251	ಮಲ್ಲೇಶ್	ನಂದಗಿರಿಯಪ್ಪ	– " –
262.	252	ಮುನಿಯಮ್ಮ	ವೆಂಕಟರಾಜು	–
263.	253	ನರಸಮ್ಮ	ಮುನಿ ಆಂಜನಪ್ಪ	ಪಾ।। ಜೋಗಿಹಳ್ಳಿ
264.	254	ರಾಧಮ್ಮ	ಚನ್ನಗಿರಿಗೌಡ	ಹೊನ್ನಾಘಟ್ಟ
265.	255	ಶಾಂಪ್ರಸಾದ್	ಸೂರ್ಯನಾರಾಯಣ	– " –
266.	256	ಇಂದಿರಾ	ರಾಮಚಂದ್ರ	– " –
267.	257	ರುದ್ರೇಶ್	ಸೊಣ್ಣೆಗೌಡ	– " –
268.	258	ಸಾವಿತ್ರಮ್ಮ	ವಿಶ್ವನಾಥಪ್ಪ	– " –
269.	259	ನಿಕೋಜಾ ಸುಲ್ತಾನ್	ಷರೀಫ್	ಇತರೆ
270.	260	ರಾಮಲಕ್ಷ್ಮಿ	ಶಿವಣ್ಣ	–
271.	261	ನಿರ್ಮಲ	ದೇವರಾಜು	ಕೊಡಿಗೆಹಳ್ಳಿ
272.	262	ಚಂದ್ರಮ್ಮ	ಚಿಕ್ಕಣ್ಣ	– " –
273.	263	ವಿಜಯಕುಮಾರಿ	ಪುಟ್ಟಮ್ಮ	ಗೊಲ್ಲಹಳ್ಳಿ
274.	264	ರಾಮನಾಯ್ಕ	ಗೋವಿಂದನಾಯ್ಕ	– " –
275.	265	ಬಾಲಪ್ಪ	ಶಿವನಾನಾಯ್ಕ	– " –
276.	266	ಜಯಭಾರತಿ	ರಾಮನಾನಾಯ್ಕ	– " –

277.	267	ಕೆ. ಅಬ್ದುಲ್ ಖಾದರ್	ಸೈಯದ್ ಇಬ್ರಾಹಿಂ	– " –
278.	268	ಸುಶೀಲಮ್ಮ	ಗೌಡಪ್ಪ	– " –
279.	269	ಸಲ್ಮಾ	ಸೈಯದ್ ಹಯ್ಯಾರ್	– " –
280.	270	ನಂಜಮ್ಮ	ಮುನಿಶಾಮಯ್ಯ	ಹೊನ್ನಾಘಟ್ಟ
281.	271	ಕೃಷ್ಣಪ್ಪ	ಹನುಮಯ್ಯ	– " –
282.	272	ವೆಂಕಟಲಕ್ಷ್ಮಮ್ಮ	ಚಿಕ್ಕಪಾಪಣ್ಣ	ಹಸನ್‌ಘಟ್ಟ
283.	273	ಮುಂಗಮ್ಮ	ಮುನಿಯಪ್ಪ	–
284.	274	ಸಂಗಮೇಶ್ವರಸ್ವಾಮಿ	ನಂಜುಂಡಪ್ಪ	ಪಾ।। ಜೋಗಿಹಳ್ಳಿ
285.	275	ಗಂಗಪ್ಪ	ಬುಡ್ಡಪ್ಪ	ತಳಗವಾರ
286.	276 (1)	ನಾಗರಾಜು	ವೆಂಕಟಪ್ಪ	ಅಣಗಲಪುರ
287.	276 (2)	ಪ್ರಕಾಶ್	ತಿಮ್ಮಣ್ಣ	ಇತರೆ
288.	277	ರಾಮಕ್ಕ	ಬೆಟ್ಟಯ್ಯ	–
289.	278	ರವಿಕಾಂತ	ಗಂಗರಾಜ	ಪಾ।। ಜೋಗಿಹಳ್ಳಿ
290.	279	ಲಕ್ಷ್ಮೀದೇವಮ್ಮ	ಕೃಷ್ಣಪ್ಪ	– " –
291.	280	ಸುಶೀಲಮ್ಮ	ರಾಮಕೃಷ್ಣ	– " –
292.	281	ಜಾನಕಮ್ಮ	ರಾಮಸ್ವಾಮಿ	– " –
293.	282	ಉದಯಕುಮಾರ್	ಜಾರ್ಜ್‌ಡೇವಿಡ್	– " –
294.	283	ಜಬೀನ್ ತಾಜ್	ಅ:ಹಸಿಪ್	– " –
295.	284	ಭಹೀರ್	ಅ:ಸತ್ತಾರ್	ಪಾ।। ಜೋಗಿಹಳ್ಳಿ
296.	285	ಕುಸುಮಾ ಕುಮಾರಿ	ಜೆವೆಲ್‌ಶಾಪ್	– " –
297.	286	ಸೋಮಸುಂದರ	ಮಂಜುಳ	– " –
298.	287	ಶಾಂತಮ್ಮ	ಕೃಷ್ಣಪ್ಪ	– " –
299.	288	ಪದ್ಮಾವತಮ್ಮ	ದೊಡ್ಡಣ್ಣಿಯಪ್ಪ	– " –
300.	289	ಸುನಂದಮ್ಮ	ಶೆಟ್ಟಪ್ಪ	– " –
301.	290	ಗೋಪಾಲಪ್ಪ	ಗೋವಿಂದಪ್ಪ	– " –
302.	291	ನಾಗರಾಜು	ನ್ಯಾತಪ್ಪ	– " –
303.	292	ನಾರಾಯಣಪ್ಪ	ತಿಮ್ಮಯ್ಯ	– " –
304.	293	ರಾಬಿಯಾಬಿ	ನಿಜಾಂಶರಿಪ್	– " –
305.	294	ನಾರಾಯಣಪ್ಪ	ಸಂಪಂಗಪ್ಪ	ಹಸನ್‌ಘಟ್ಟ
306.	295	ಸನಾವುಲ್ಲಾ	ವಜಿರ್‌ಸಾಬ್	– " –
307.	296	ಶೇಕ್ ಅಲಿಬೇಗ್	ಹುಸೇನ್‌ಬೇಗ್	ಪಾ।। ಜೋಗಿಹಳ್ಳಿ
308.	297	ಸಿದ್ದಮ್ಮ	ಕೆಂಪಯ್ಯ	ಇತರೆ
309.	298	ಅಮಿನಾಬಿ	ಸೈಯದ್ ಭಷೀರ್	–
310.	299	ಸೋಮಶೇಖರಯ್ಯ	ಗಂಗಾಧರಪ್ಪ	ಕುರುಬರಹಳ್ಳಿ
311.	300	ನಂದಕುಮಾರ್	ಬಸವರಾಜು	ಇತರೆ
312.	301	ಪುಟ್ಟಮ್ಮ	ರಾಮಕೃಷ್ಣ	ಹಸನ್‌ಘಟ್ಟ

313.	302	ಪದ್ಮಮ್ಮ	ಚಿಕ್ಕವೀರಪ್ಪ	ಕೊಡಿಗೆಹಳ್ಳಿ
314.	303	ಕಾಂತಮ್ಮ	ಶ್ರೀನಿವಾಸ್	– " –
315.	304	ಗೋಪಮ್ಮ	ಸೀನಪ್ಪ	–
316.	305	ರಾಜೇಶ್	ಹನುಮಂತರಾಯಪ್ಪ	– " –
317.	306	ವಿಜಯಕುಮಾರ್	ಶಿವರುದ್ರಪ್ಪ	– " –
318.	307	ಅಂತೋಣಿ ಪ್ರಕಾಶ್ ರೆಡ್ಡಿ	ಜೋಸೆಫ್ ರೆಡ್ಡಿ	ಇತರೆ
319.	308	ವರಲಕ್ಷ್ಮೀ	ವೆಂಕಟೇಶಯ್ಯ	– " –
320.	309	ವೆಂಕಟಲಕ್ಷ್ಮಮ್ಮ	ವೆಂಕಟರಮಣಪ್ಪ	– " –
321.	310	ಗಾಯಿತ್ರಮ್ಮ	ರಘುರಾಮ	– " –
322.	311	ನರಸಮ್ಮ	ನರಸಿಂಹಯ್ಯ	– " –
323.	312	ಲಕ್ಷ್ಮೀದೇವಮ್ಮ	– " –	– " –
324.	313	ಶಕುಂತಲಮ್ಮ	ಕೃಷ್ಣಪ್ಪ	–
325.	314	ಸರಸ್ವತಮ್ಮ	ಮರಿಯಪ್ಪ	–
326.	315	ಮುನಿಯಮ್ಮ	ಮುನಿಯಪ್ಪ	ಇತರೆ
327.	316	ಪದ್ಮಾವತಮ್ಮ	ವಿಠಲರಾವ್	ಇತರೆ
328.	317	ಭಾಗ್ಯಮ್ಮ	– " –	– " –
329.	318	ಲಕ್ಷ್ಮೀನಾರಾಯಣ	ನರಸಿಂಹಯ್ಯ	– " –
330.	319 (1)	ಸುಬ್ಬಲಕ್ಷ್ಮಮ್ಮ	ನಂಜೇಗೌಡ	ಗಾಳಿಪೂಜೆ
331.	319 (2)	ಶಾಂತಮ್ಮ	ತಿಮ್ಮೇಗೌಡ	– " –
332.	320	ಚಿನ್ನತಾಯಮ್ಮ	ಮುನಿಯಪ್ಪ	– " –
333.	321	ಭಾಗ್ಯಮ್ಮ	ನಾರಾಯಣಪ್ಪ	– " –
334.	322	ರಾಜಣ್ಣ	ಲಕ್ಷ್ಮೀಪತಯ್ಯ	
335.	323	ಜಯಮ್ಮ	ರಾಮಕೃಷ್ಣಯ್ಯ	– " –
336.	324	ಕಮಲಮ್ಮ	ಗೋಪಾಲಪ್ಪ	– " –
337.	325	ಪಾಪಮ್ಮ	ಮಣಿ	– " –
338.	326	ಬಸಮ್ಮ	ಶಿವರುದ್ರ	– " –
339.	327	ಪದ್ಮಮ್ಮ	ಮುನಿಯಪ್ಪ	– " –
340.	328	ಮುನಿಸ್ವಾಮಿ	ಬೈಲಪ್ಪ	ಪಾ।। ಜೋಗಿಹಳ್ಳಿ
341.	329	ತಿಮ್ಮರಾಜು	ಹನುಮಂತಪ್ಪ	– " –
342.	330	ಎಲ್. ಶಾದನಿಸಾ	ಅನ್ವರ್	– " –
343.	331	ನಜೀರ್	ಅಹಮದ್‌ಸಾಬ್	– " –
344.	332	ಮುತ್ಯಾಲಮ್ಮ	ಪೆರುಮಳಪ್ಪ	– " –
345.	333	ಪ್ರೇಮದಾಸ್	ವಿಕ್ಟರ್	– " –
346.	334	ರತ್ನಮ್ಮ	ಸಂಪಂಗಿರಾಮಯ್ಯ	– " –
347.	335	ಮುನಿಲಕ್ಷ್ಮಮ್ಮ	ನಾರಾಯಣಚಾರ್	– " –

348.	336	ನಾರಾಯಣಮ್ಮ	ನಾರಾಯಣಪ್ಪ	– " –
349.	337	ಪದ್ಮನಾಭಚಾರಿ	ವೆಂಕಟಾಚಾರಿ	
350.	338	ಕೆ.ವಿ. ರಾಜಣ್ಣ	ವೆಂಕಟಪ್ಪ	–
351.	339	ಗಂಗಮ್ಮ	– " –	– " –
352.	340	ರಾಜಶೇಖರಯ್ಯ	ನಂಜಪ್ಪ	ಮೆಣಸಿ
353.	341	ಸಿದ್ದಲಿಂಗಯ್ಯ	ಅಶ್ವತ್ಥಯ್ಯ	– " –
354.	342	ರಮೇಶ	– " –	– " –
355.	343			– " –
356.	344	ವೆಂಕಟರಾಯಪ್ಪ	ಬಚ್ಚಪ್ಪ	– " –
357.	345	ಲಕ್ಷ್ಮಯ್ಯ	ವೆಂಕಟಪ್ಪ	– " –
358.	346	ಕೊಂಡಪ್ಪ	ಅಂಜನಪ್ಪ	– " –
359.	347	ಈರಮ್ಮ	ಗಿರಿಯಪ್ಪ	ಕೊಡಿಗೆಹಳ್ಳಿ
360.	348	ನಂಜಮ್ಮ	ಕಾಳಪ್ಪ	– " –
361.	349	ಎಸ್. ಪೆರುಮಾಳ್	–	– " –
362.	350	ಭಾಗ್ಯಮ್ಮ	ಶಾಮಣ್ಣ	– " –
363.	351	–	–	– " –
364.	352	ತ್ರಿವೇಣಿ	ಹರೀಶ	– " –
365.	353	ಪುಷ್ಪತಿ	ರಂಗಪ್ಪ	–
366.	354	ಎಸ್.ಎ. ಭಾಸ್ಕರ್	ವೆಂಕಟರಾಮಪ್ಪ	–
367.	355	ಅಮಿರ್	ಖಲೀಲ್ ಸಾಬ್	–
368.	356	ಲಕ್ಷ್ಮಯ್ಯ	ಚಂದ್ರಶೇಖರ್	–
369.	357	ಜೈವುನ್ನಿಸಾ	–	–
370.	358	ಮುನಿರಾಜ	–	ಕೊಳೂರು
371.	359	ಹೆಚ್. ಜಿ. ಸುಬ್ಬಯ್ಯ	ಗಂಗಾಧರಯ್ಯ	–
372.	360	ಡಿ.ಎಸ್. ನಾಗರಾಜ	ಸೂರಪ್ಪ	–
373.	361	ಪದ್ಮಾವತಿ	ನಾರಾಯಣಪ್ಪ	–
374.	362	ವೆಂಕಟಾಚಾರ್	ರಂಗಾಚಾರ್	–
375.	363	ಅಚ್ಚಮ್ಮ	ಹನುಮಂತಪ್ಪ	ಪಾ।। ಜೋಗಿಹಳ್ಳಿ
376.	364	ಅಬ್ರಮಯಿ	–	– " –
377.	365	ಶಾಂತಕುಮಾರಿ	ಪಾಲ್ ರಾಜ್	ಪಾ।। ಜೋಗಿಹಳ್ಳಿ
378.	366	ಹಕ್ಕುಪತ್ರ ನೀಡಿದೆ	–	–
379.	367	ಜಯಮ್ಮ	ನಾರಾಯಣರೆಡ್ಡಿ	–
380.	368	ಪಾತಿಮಾ, ಸ: ಅಹಮದ್ ಜಾನ್	–	
381.	369	ವಿಜಯಮ್ಮ	ಮಂಜುನಾಥ್	ಹಸನ್ ಘಟ್ಟ
382.	370	ಲಕ್ಷ್ಮಮ್ಮ	ಸಂಜೀವಪ್ಪ	–

383.	371	ತಿಮ್ಮಯ್ಯ	ಗಂಗಪ್ಪ	–
384.	372	ನಾರಾಯಣಪ್ಪ	ಪಾಪಣ್ಣ	–
385.	373	ವೀರಪ್ಪ	ಲಿಂಗಣ್ಣ	ಕೊಡಿಗೇಹಳ್ಳಿ
386.	374	ರಾಮಯ್ಯ	ವೆಂಕಟಪ್ಪ	–
387.	375	ಚಿಕ್ಕನಂಜಪ್ಪ	ನರಸಿಂಹಯ್ಯ	ಹಸನ್‌ಘಟ್ಟ
388.	376 (1)	ಮುನಿಯಮ್ಮ	ಮುನಿಯಪ್ಪ	ತಳಗವಾರ
389.	376 (2)	ಸರೋಜಮ್ಮ	ಮಲ್ಲಯ್ಯ	ಇತರೆ
390.	377	ಹುಚ್ಚೇಗೌಡ	ಮುನಿಶಾಮಪ್ಪ	ಅಣಗಲಪುರ
391.	378	ನರೇಶ್‌ಕುಮಾರ್	ಬಸವರಾಜು	ಮೆಣಸಿ
392.	379	ರೆಹಮಾನ್‌ಖಾನ್ ಅಮನಲ್ಲು	ಅಬ್ದುಲ್ ಖಲೀಲ್‌ಖಾನ್	–
393.	380	ಸೈಯದ್ ಮಹಮದ್	ಅ: ಆದಮ್	–
394.	381	ಅಮಿರ್‌ಸಾಬ್	ಬಾಬಾಸಾಬ್	–
395.	382	ಜಯರಾಮಯ್ಯ	ಮುನಿಯಪ್ಪ	ಹಸನ್‌ಘಟ್ಟ
396.	383	ಚಂದ್ರಶೇಖರ	ಮಲ್ಲಯ್ಯ	–
397.	384	ಶಿವಶಂಕರಯ್ಯ	ಚಿಕ್ಕಮೈಲಾರಪ್ಪ	ತಳಗವಾರ
398.	385 (1)	ಸುಬ್ರಮಣ್ಯ	ನಂಜುಂಡಯ್ಯ	–
399.	385 (2)	ತಿಮ್ಮಪ್ಪ	ಮಾರಪ್ಪ	–
400.	386	ಗಂಗಾಧರ	ಪಾಪಣ್ಣ	–
401.	387	ರಾಜಶೇಖರ	ಭೀಮಕ್ಕ	ಇತರೆ
402.	388	ವಸಂತಮ್ಮ	ಹನುಮಪ್ಪ	ಕೊಡಿಗೆಹಳ್ಳಿ
403.	389	ಕಮಲಾನಾಥನ್	ಅಶ್ವತ್ತಯ್ಯ	ಪಾ।। ಜೋಗಿಹಳ್ಳಿ
404.	390	ರಾಜಮ್ಮ	ರಾಮಚಂದ್ರಯ್ಯ	–
405.	391	ಗೋಪಾಲಯ್ಯ	ಮುನಿಶಾಮಯ್ಯ	ತಳಗವಾರ
406.	392	ಚೆನ್ನೇಗೌಡ	ಚೆನ್ನೇಗೌಡ	ಗಾಳಿಪೂಜೆ
407.	393	ರಾಜಣ್ಣ	ವೆಂಕಟೇಶಪ್ಪ	ತಳಗವಾರ
408.	394	ರಾಮಯ್ಯ	ಮುನಿಶಾಮಯ್ಯ	– ” –
409.	395	ಲಕ್ಷ್ಮಮ್ಮ	ನಾರಾಯಣನಾಯ್ಕ	– ” –
410.	396	ದೊಡ್ಡತಿಮ್ಮಯ್ಯ	ತಿಮ್ಮಯ್ಯ	– ” –
411.	397	ವೀರಣ್ಣ	ಭೈರೇಗೌಡ	ಗಾಳೀಪೂಜೆ
412.	398	ಹನುಮಪ್ಪ	ಚಿಕ್ಕಮುನಿಶಾಮಯ್ಯ	ತಳಗವಾರ
413.	399	ಹನುಮಂತಪ್ಪ	ಸತ್ಯಪ್ಪ	– ” –
414.	400	ಪಿಳ್ಳಮ್ಮ	ವೆಂಕಟೇಶಯ್ಯ	–
415.	401	ವೆಂಕಟರಮಣಪ್ಪ	ದೊಡ್ಡರಾಯಪ್ಪ	–
416.	402	ಪಾಪಣ್ಣ	ರಂಗಪ್ಪ	–
417.	403	ಸಿದ್ದರಾಮಯ್ಯ	ರಾಮಯ್ಯ	–

418.	404	ರಾಮಚಂದ್ರಸಾ	ತೇಜರಸಾ	–
419.	405	ಚೂಡಾಮಣಿ	ಸುಬ್ಬಯ್ಯ	–
420.	406	ಅಶ್ವತ್ಥಯ್ಯ	ಅಪ್ಪಣ್ಣಯ್ಯ	ತಳಗವಾರ
421.	407	ಆನಂದನ್	ನಟೇಶನ್‌ಕಿ	–
422.	408 (1)	ಸತ್ಯನಾರಾಯಣ	ನೆಟೋಬರಾವ್	ಇತರೆ
423.	408 (2)	ಸಹನ	ನಾಗಮ್ಮ	–
424.	409	ಮಲ್ಲಿಕಾರ್ಜುನಯ್ಯ	ಶಿವಣ್ಣ	ನಾಗಸಂದ್ರ
425.	410	ಶಶಿಕಲಾ	ಗಂಗಾಧರಯ್ಯ	– ” –
426.	411	ಗಂಗಾಧರಯ್ಯ	ರುದ್ರಯ್ಯ	– ” –
427.	412	ಸೈಯದ್ ಸಲೀಂ	ಮಹಮದ್‌ಸಾಬ್	– ” –
428.	413	ಪ್ಯಾರೇಜಾನ್	ಸಮಸುನ್ನಿಸಾ	– ” –
429.	414	ಆನಂದಮ್ಮ	ತ್ರಿಲೋಕ್‌ಸಂದ್	– ” –
430.	415	ಮರಿಯಪ್ಪ	ಶಿವಣ್ಣ	ಕೊಡಿಗೆಹಳ್ಳಿ
431.	416	ನಾಗರತ್ನಮ್ಮ	ಚಿಕ್ಕಣ್ಣ	– ” –
432.	417	ನರಸಿಂಹಮೂರ್ತಿ	ದೇವೇಂದ್ರರಾವ್	– ” –
433.	418	ಮಧುಮಾಲತಿ	ಸಿದ್ದಮ್ಮ	ಪಾ।। ಜೋಗಿಹಳ್ಳಿ
434.	419	ಪದ್ಮಾವತಮ್ಮ	ವಜ್ರನಾಭಯ್ಯ	– ” –
435.	420	ಲಕ್ಷ್ಮೀನಾರಾಯಣ	ವೆಂಕಟರಮಣಪ್ಪ	ಇತರೆ
436.	421	ಗೋವಿಂದಪ್ಪ	ಕೃಷ್ಣಪ್ಪ	– ” –
437.	422	ಗೋಪಾಲಪ್ಪ	ಹನುಮಂತರಾಯಪ್ಪ	– ” –
438.	423	ಗಂಗರಾಜು	ಮುನಿಶಾಮಯ್ಯ	– ” –
439.	424	ದೇವಭೂಷಣಂ	ದೇವಸಾಕಿಯಾ	– ” –
440.	425	ಲಲಿತ	ಮುನಿಯಪ್ಪ	ಪಾ।। ಜೋಗಿಹಳ್ಳಿ
441.	426	ಸರೋಜಮ್ಮ	ಇಷಾಕ್	– ” –
442.	427	ಪಾತೀಮಾ	ರಸ್ಮುಲ್ ಖಾನ್	– ” –
443.	428	ನಾಗರಾಜು	ರಾಜಶೇಖರ್	– ” –
444.	429	ನಯಜ್	ಅಬ್ದುಲ್‌ರಸೀದ್	– ” –
445.	430	ಮೆಮಾವತಿ	ಶಾಮ್‌ವೆಲ್	– ” –
446.	431	ಜಯರಾಮ	ಕೃಷ್ಣಪ್ಪ	– ” –
447.	432	ವೀರಪ್ಪ	ದೊಡ್ಡಮುನಿಶಾಮಪ್ಪ	– ” –
448.	433	ನೈಜರ್	ವಿಕ್ಟರ್	– ” –
449.	434	ನಾಗರಾಜು	ಬಸಣ್ಣ	ಕೊಳೂರು
450.	435	ಶಂಕರಪ್ಪ	ಚಿಕ್ಕಹನುಮಪ್ಪ	–
451.	436	ಆನಂದಮ್ಮ	ಮುತ್ತರಾಯಪ್ಪ	–
452.	437	ಮೋಹನ್‌ರಾಜ್	ಚಿಕ್ಕಮುನಿಯಪ್ಪ	–
453.	438	ಇಂದಿರಮ್ಮ	ನಂಜುಂಡಪ್ಪ	–

454.	439	ಗೋಪಾಲಪ್ಪ	ಪಿಳ್ಳಪ್ಪ	–
455.	440	ಶಿವಮ್ಮ	ಸದಾಶಿವಯ್ಯ	–
456.	441	ಬಸವರಾಜು	ದೊಡ್ಡಮುನಿಯಪ್ಪ	–
457.	442	ದೇವರಾಜು	ಲಕ್ಷ್ಮೀಪತಯ್ಯ	–
458.	443	ರಂಗಸ್ವಾಮಿ	ಚಿಕ್ಕದಾಸಪ್ಪ	–
459.	444	ಅಶ್ವತ್ಥಪ್ಪ	ಮರಿಯಪ್ಪ	–
460.	445	ವಿಲಿಯಂ ಮೊಸೆಸ್	ಜೊಸೆಫ್	–
461.	446	ರಾಮಚಂದ್ರಪ್ಪ	ರಾಮಕೃಷ್ಣಪ್ಪ	–
462.	446U	ಹನುಮಂತಪ್ಪ	ಬೈಲಪ್ಪ	ಪಾ॥ ಜೋಗಿಹಳ್ಳಿ
463.	447	ಮ:ರಫಿ	ಬಾಷಾ	– ” –
464.	448	ಸುಪಿಯಾಬಿ	ಅಮಿರ್‌ಜಾನ್	– ” –
465.	449	ವೆಂಕಟೇಶ್	ಪಾಪಯ್ಯ	ಕೊಡಿಗೆಹಳ್ಳಿ
466.	450	ಕೃಷ್ಣಪ್ಪ	ನಂಜೇಗೌಡ	ಹೊನ್ನಾಘಟ್ಟ
467.	451	ಪುಷ್ಪಾವತಿ	ಗಿರಿಯಪ್ಪ	ಕೊಡಿಗೆಹಳ್ಳಿ
468.	452	ವೆಂಕಟಪ್ಪ	ಮುನಿಯಪ್ಪ	ಅಣಗಲಪುರ
469.	453	ಮಲ್ಲೇಶಯ್ಯ	ನಾಗೇಶಪ್ಪ	–
470.	454	ಆದಿಲಕ್ಷ್ಮಮ್ಮ	ಮಂಜಣ್ಣ	ಇತರೆ
471.	455	ಮುದ್ದಮ್ಮ	ಈರಪ್ಪ	–
472.	456	ರುದ್ರಪ್ಪ	ವೀರಭದ್ರಯ್ಯ	ಕೊಡಿಗೆಹಳ್ಳಿ
473.	457	ಗಂಗಮ್ಮ	ರಾಮಾನಾಯ್ಕ	ಗೊಲ್ಲಹಳ್ಳಿ
474.	458	ಸಿದ್ದಗಂಗಾ	ಭೀಮಾನಾಯ್ಕ	– ” –
475.	459	ಗಂಗಾನಾಯ್ಕ	ಶೇಷಾನಾಯ್ಕ	– ” –
476.	460	ನಾಗರಾಜನಾಯ್ಕ	ಲಕ್ಷ್ಮಿನಾಯ್ಕ	– ” –
477.	461	ಶ್ರೀಧರ್	ಸಿದ್ದಲಿಂಗಯ್ಯ	– ” –
478.	462 (1)	ಚಿಕ್ಕಹನುಮಂತಗೌಡ	ಚಿಕ್ಕವೆಂಕಟಪ್ಪ	ತಳಗವಾರ
479.	462 (2)	ರಾಮಮೂರ್ತಿ	ಬೈರಣ್ಣ	– ” –
480.	463 (1)	ಹನುಮಂತರಾಯಪ್ಪ	ಬುಡ್ಡಪ್ಪ	– ” –
481.	463 (2)	ಹನುಮಂತರಾಯಪ್ಪ	ಮುನಿರಾಮಯ್ಯ	– ” –
482.	464 (1)	ಸಿದ್ದಪ್ಪ	ಮದ್ದೂರಪ್ಪ	– ” –
483.	464 (2)	ಮಾರಪ್ಪ	ಮುನಿಯಪ್ಪ	– ” –
484.	465 (1)	ಮಾರೇಗೌಡ	ಮಾರಪ್ಪ	– ” –
485.	465 (2)	ಮುದ್ದಹನುಮಯ್ಯ	ಅಣ್ಣಯ್ಯಪ್ಪ	– ” –
486.	466 (1)	ಗಂಗರಾಮ	ಪಾಪಯ್ಯ	ಪಾ॥ ಜೋಗಿಹಳ್ಳಿ
487.	466 (2)	ನಿರ್ಮಲ	ಸತ್ಯಪ್ಪ	– ” –
488.	467 (1)	ಇಸ್ಮಾಯಿಲ್	ಯೂಸಪ್	ಇತರೆ
489.	467 (2)	ಪ್ರಕಾಶ್	ಕನಕರಾಜು	ಪಾ॥ ಜೋಗಿಹಳ್ಳಿ

490.	468 (1)	ಲಕ್ಷ್ಮೀ	ಈಷಾನಾಯ್ಕ	– ” –
491.	468 (2)	ಅಂಬುಅಲಿ	ನಾನಿಯಲ್ ರತ್ನಾಕರ್	– ” –
492.	469 (1)	ಪ್ರಕಾಶ್	ವೀರಣ್ಣ	– ” –
493.	469 (2)	ಸುಭದ್ರಮ್ಮ	ಮುನಿತಾಯಮ್ಮ	ಇತರೆ
494.	470 (1)	ಸಂಜೀವಪ್ಪ		ಬಚ್ಚಹಳ್ಳಿ
495.	470 (2)	ಸರಸ್ವತಮ್ಮ	ಕೃಷ್ಣಪ್ಪ	ಇತರೆ
496.	471 (1)	ಪರಿಮಳ	ಮದ್ದೂರಾವ್	– ” –
497.	471 (2)	ಸುಶೀಲಮ್ಮ	ಸುಬ್ಬಣ್ಣ	– ” –
498.	472	ನರಸಿಂಹಮೂರ್ತಿ	ಜಯಸಿಂಹ	– ” –
499.		–	–	–
500.	473 (1)	ತಿಪ್ಪಯ್ಯ	ದುರ್ಗಪ್ಪ	ತಪಸಿಹಳ್ಳಿ
501.	473 (2)	ಕಾಂತರಾಜು	ಸುಬ್ಬರಾಯಪ್ಪ	ಇತರೆ
502.	474 (1)	ಸುದರ್ಶನ ಪುಷ್ಪ	ಥಾಮಸ್	ಪಾ॥ ಜೋಗಿಹಳ್ಳಿ
503.	474 (2)	ಪ್ರೇಮಸುಂದರ	– ” –	– ” –
504.	475 (1)	ಗುರುದೇವ	ಮಹದೇವಯ್ಯ	ಮೆಣಸಿ
505.	475 (2)	ಅಕ್ಕಯಮ್ಮ	ರಾಮಯ್ಯ	– ” –
506.	476 (1)	ಕೃಷ್ಣಯ್ಯ	ಚಿಕ್ಕಪೂಜಪ್ಪ	– ” –
507.	476 (2)	ಬೈರೇಗೌಡ	ಚಿಕ್ಕನಂಜಪ್ಪ	– ” –
508.	477 (1)	ರೇವಣ್ಣ	ನಂಜಪ್ಪ	– ” –
509.	477 (2)	ಅನಂತಸಂಜೀವಚಾರಿ	ಆಂಜನೇಯಮೂರ್ತಿ	ಅಣಗಲಪುರ
510.	478 (1)	ಅಪ್ಪಾಜೀ ಗೌಡ	ಹನುಮಂತರಾಯಪ್ಪ	ಗಾಳಿಪೂಜೆ
511.	478 (2)	ನಂಜಪ್ಪ	ನಂಜಪ್ಪ	ಅಣಗಲಪುರ
512.	479 (1)	ಮುನಿಯಪ್ಪ	ರಾಮಯ್ಯ	– ” –
513.	479 (2)	ಶ್ರೀನಿವಾಸ	ವೆಂಕಟರಮಣಪ್ಪ	– ” –
514.	480 (1)	ಶೈಲಜ	ಪುಟ್ಟಗಂಗಪ್ಪ	ಇತರೆ
515.	480 (2)	ನಾಗರಾಜು	ಸುಬ್ಬಣ್ಣ	– ” –
516.	481 (1)	ಚಿಕ್ಕಹನುಮಕ್ಕ	ವೆಂಕಟರಮಣಪ್ಪ	ಕೊಡಿಗೆಹಳ್ಳಿ
517.	481 (2)	ದೊಡ್ಡಹನುಮಕ್ಕ	ಮುನಿಯಪ್ಪ	– ” –
518.	482	ಎನ್. ಪರಮೇಶ್ವರಯ್ಯ	ಸುನಂದಮ್ಮ	– ” –
519.	483	ಎನ್. ರೇವಣ್ಣ	ನಂಜುಂಡಯ್ಯ	– ” –
520.	484	ಮುನೇಗೌಡ	ಚಿಕ್ಕರಸಪ್ಪ	– ” –
521.	485 (1)	ರಾಜಣ್ಣ	ವೀರಭದ್ರಯ್ಯ	ತಳಗವಾರ
522.	485 (2)	ನರಸಪ್ಪ	ಬಸಣ್ಣ	ಕೊಡಿಗೆಹಳ್ಳಿ
523.	486	ಶಿವರುದ್ರಯ್ಯ	ಗಂಗಾಧರಯ್ಯ	– ” –
524.	487	ಬಸವರಾಜು	ಸಿದ್ದಲಿಂಗಪ್ಪ	– ” –
525.	488 (1)	ಲಕ್ಷ್ಮೀಕಾಂತ	ಪಿಳ್ಳಶೆಟ್ಟಪ್ಪ	ಇತರೆ

526.	488 (2)	ಸಂಪಂಗಮ್ಮ	ಚಿಕ್ಕಣ್ಣ	–
527.	489	ವಸಂತಮ್ಮ	ನಾಗಭೂಷಣ	–
528.	490	ಸಿದ್ದಲಿಂಗಸ್ವಾಮಿ	ಶಿವಣ್ಣ	ಕೊಡಿಗೆಹಳ್ಳಿ
529.	491	ಅಶ್ವತ್‌ಕುಮಾರ್	ನಾಗಪ್ಪ	– " –
530.	492	ಅಶ್ವತ್ಥಮ್ಮ	ಹನುಮಯ್ಯ	– " –
531.	493	ಅಮರನಾರಾಯಣ	ಮುಗುವಾಳಪ್ಪ	– " –
532.	494	ಸಿದ್ದಲಿಂಗಮ್ಮ	ಪ್ರಕಾಶ್‌ಕುಮಾರ್	– " –
533.	495	ಜನಾರ್ದನ	ನರಸಿಂಹಚಾರ್	ಪಾ।। ಜೋಗಿಹಳ್ಳಿ
534.	496	ಜೋಜಾರ್ಜ್	ಜೋಪಾಷ	– " –
535.	497	ರಾಮಾಂಜಿನಪ್ಪ	ಆಂಜಿನಪ್ಪ	ಪಾ।। ಜೋಗಿಹಳ್ಳಿ
536.	498	ಮಮತಾಜ್ ಬೇಗ್	ಮಹಮದ್ ಬೇಗ್	– " –
537.	499	ಅಂಬಿಕ	ನಾಗರಾಜಯ್ಯ	– " –
538.	500	ಸುವರ್ಣಮ್ಮ	ರಾಮಚಂದ್ರಯ್ಯ	ಹಸನ್‌ಘಟ್ಟ
539.	501	ಗಂಗಮ್ಮ	ವೆಂಕಟಶಾಮಯ್ಯ	ಪಾ।। ಜೋಗಿಹಳ್ಳಿ
540.	502	ರಾಮಕ್ಕ	ಪಾಪಯ್ಯ	ಹಸನ್‌ಘಟ್ಟ
541.	503	ನಾಗರತ್ನಮ್ಮ	ರುದ್ರಯ್ಯ	– " –
542.	504	ಪುಷ್ಪಾವತಿ	ಸಿದ್ದಲಿಂಗಯ್ಯ	ಕೊಡಿಗೆಹಳ್ಳಿ
543.	505	ರಾಜಶೇಖರಯ್ಯ	ಮರಿಸ್ವಾಮಪ್ಪ	– " –
544.	506	ಉಮಾ	ಶಿವರುದ್ರಪ್ಪ	– " –
545.	507	ಶಿವಕುಮಾರಸ್ವಾಮಿ	ಶಂಕರಪ್ಪ	– " –
546.	508	ಮುಬಾರಕ್‌ಖಾನ್	ಪ್ಯಾರೆಜಾನ್	– " –
547.	509	ಶಿವರುದ್ರಯ್ಯ	ಶಿವನಂಜಪ್ಪ	– " –
548.	510	ನಾಗರಾಜು	ಮುಗುವಾಳಪ್ಪ	– " –
549.	511	ಚೆನ್ನಕೃಷ್ಣಯ್ಯ	ಚಿಕ್ಕವೆಂಕಟಪ್ಪ	– " –
550.	512	ಕೃಷ್ಣಪ್ಪ	ಪಾಪಯ್ಯ	– " –
551.	513	ರವಿಕುಮಾರ್	ಹನುಮಂತಗೌಡ	– " –
552.	514	ಗಂಗಾಧರಯ್ಯ	ವೀರಭದ್ರಯ್ಯ	– " –
553.	515 (1)	ಕೃಷ್ಣಮೂರ್ತಿ	ವೆಂಕಟಪ್ಪ	ತಳಗವಾರ
554.	515 (2)	ಲೋಕೇಶ್	ವೇದಾಂತಚಾರ್	ಕುರುಬರಹಳ್ಳಿ
555.	516 (1)	ಮರಿಯಪ್ಪ	ಅಪ್ಪಾಜಪ್ಪ	– " –
556.	516 (2)	ಸುನಂದಮ್ಮ	ಬಸವರಾಜು	ಇತರೆ
557.	517 (1)	ಅರಸಮ್ಮ	ಹನುಮೇಗೌಡ	ಗಾಳಿಪೂಜೆ
558.	517 (2)	ವೆಂಕಟೇಶ್	ರಂಗಪ್ಪ	ಹೊನ್ನಾಘಟ್ಟ
559.	518 (1)	ಪದ್ಮಮ್ಮ	ಮುನಿರಂಗಪ್ಪ	ಇತರೆ
560.	518 (2)	ಅಶ್ವಥ್ ನಾರಾಯಣ	ದೊಡ್ಡಮುನಿಯಪ್ಪ	– " –
561.	519 (1)	ಗುರುಮೂರ್ತಿಚಾರ್	ಸುಬ್ಬರಾಯಚಾರ್	– " –

562.	519 (2)	ಈಶ್ವರಪ್ಪ	ಸುಬ್ಬಯ್ಯ	– ” –
563.	520 (1)	ಕೃಷ್ಣಮ್ಮ	ತಾಯಮ್ಮ	– ” –
564.	520 (2)	ಮಂಜುನಾಥ್	ಹನುಮಂತರಾಯಪ್ಪ	– ” –
565.	521 (1)	ಮಂಜುಳಾಬಾಯಿ	ರಂಗೋಜಿರಾವ್	– ” –
566.	521 (2)	ಕೃಷ್ಣಪ್ಪ	ರಾಮಯ್ಯ	– ” –
567.	522	ಡೇವಿಡ್	ಜ್ಞಾನಪ್ರಕಾಶಂ	ಪಾ।। ಜೋಗಿಹಳ್ಳಿ
568.	523	ಪಿಲಿಪ್ ಸಂಪತ್‌ಕುಮಾರಿ	ಸದಾನಂದಪ್ಪ	– ” –
569.	523 (ಎ)	ಸುರೇಶ್	ಜಾರ್ಜ್‌ಡೇವಿಡ್	– ” –
570.	524	ಚನ್ನಮ್ಮ	ಅಕ್ಕೆಲಪ್ಪ	ಕಂಟನಕುಂಟೆ
571.	525	ವಸಂತಮ್ಮ	ನಾಗಭೂಷಣರಾವ್	– ” –
572.	526	ಶಿವಶಂಕರಯ್ಯ	ಚಿಕ್ಕಪಾಪಣ್ಣ	ಮೆಣಸಿ
573.	527	ಭೀಮಕ್ಕ	ಮಲ್ಲೇಶಪ್ಪ	ಇತರೆ
574.	528	ಗೌರಮ್ಮ	ರಂಗಪ್ಪ	–
575.	529	ನಾಗರತ್ನ	ಚಿಕ್ಕಪಾಪಣ್ಣ	ಮೆಣಸಿ
576.	530	ಷಾಮೀದಾ	ಅಬ್ದುಲ್‌ರೆಹಮಾನ್	– ” –
577.	532	ಅಲ್ಲಾಭಕ್ಷು	ಮೊಹಬೂಬ್‌ಖಾನ್	–
578.	533	ನಜೀರ್ ಅಹಮದ್	ರಮಾನುಜ	–
579.	534	ನಜೀಮುನ್ನಿಸಾ	ಮೂರೆಫ್	–
580.	534			
581.	535	ಅಬ್ದುಲ್‌ರಜಾರ್	ಸೈಯದ್ ದಾವದ್	
582.	536	ಪಾತಿಮಾಬಿ	ಸೈಯದ್ ಅಮಿರ್	ಇತರೆ
583.	537	ಅಕ್ತರ್ ಉನ್ನಿಸಾ	ಸೈಯದ್ ಖಾದರ್	– ” –
584.	538	ಒಬಳಮ್ಮ	ಸುಂಕಣ್ಣ	–
585.	539	ರಹಮತುನ್ನಿಸಾ	ಪಜಲುಲ್ಲಾಖಾನ್	ಪಾ।। ಜೋಗಿಹಳ್ಳಿ
586.	540	ಖಾಬರ್ ಸಾಬಿ		– ” –
587.	541	ಜ್ಞಾನಿಕನ್ನಯ್ಯ	ಪಾಪಯ್ಯ	– ” –
588.	541(ಎ)	ಬಾಲರಾಜು	ಮುನಿಶಾಮಪ್ಪ	– ” –
589.	542	ಗೌರಮ್ಮ	ರಾಜಣ್ಣ	– ” –
590.	543	ಲಕ್ಷ್ಮಮ್ಮ	ವೆಂಕಟೇಶಪ್ಪ	– ” –
591.	544	ಜಯಮ್ಮ	ವೆಂಕಟೇಶಪ್ಪ	– ” –
592.	545	ಜಯಲಕ್ಷ್ಮಮ್ಮ	ನಾಗರಾಜು	– ” –
593.	546	ಮರಿಯಮ್ಮ	ಬಂಗಾರಪ್ಪ	– ” –
594.	547	ಪಾರ್ವತಮ್ಮ	ವೆಂಕಟೇಶಪ್ಪ	– ” –
595.	548	ಕೃಷ್ಣಪ್ಪ	ಮುನಿನಂಜಪ್ಪ	– ” –
596.	549	ಬಾಲರಾಜು	ರಾಮಚಂದ್ರಪ್ಪ	– ” –

597.	550	ಗೋಪಾಲಚಾರಿ	ಯಲ್ಲಪ್ಪಚಾರಿ	ಕೊಡಿಗೆಹಳ್ಳಿ
598.	551	ನಾಗರಾಜು	ನಂಜಪ್ಪ	– ” –
599.	552	ವೆಂಕಟಸ್ವಾಮಯ್ಯ	ಮರಿಯಪ್ಪ	– ” –
600.	553	ಹನುಮಂತಪ್ಪ	ಪಿಳ್ಳಪ್ಪ	– ” –
601.	554	ತಮ್ಮಯ್ಯ	ಮುನಿಶಾಮಯ್ಯ	– ” –
602.	555	ಆಂಜಿನಪ್ಪ	ಚಿನ್ನಪ್ಪ	– ” –
603.	556	ಲಕ್ಷ್ಮಮ್ಮ	ತಮ್ಮಣ್ಣ	– ” –
604.	557	ಶ್ರೀನಿವಾಸ್	ಚಿನ್ನಪ್ಪ	– ” –
605.	558	ರಾಮಯ್ಯ	–	– ” –
606.	559	ವೆಂಕಟೇಶ್	ವೆಂಕಟರಮಣಪ್ಪ	– ” –
607.	560	ಕೃಷ್ಣಪ್ಪ	ವೆಂಕಟರಮಣಪ್ಪ	– ” –
608.	561	ಒಬಳರಾಜು	ಚಿನ್ನಪ್ಪ	ಪಾ॥ ಜೋಗಿಹಳ್ಳಿ
609.	562	ಶೇಕ್ ಪಕೃದಿನ್	ಅಲ್ಲಾಭಕ್ಷು	– ” –
610.	563	ಗಂಗಮ್ಮ	ಗಂಗಯ್ಯ	– ” –
611.	564	ನಾರಾಯಣಸ್ವಾಮಿ	ಹೊನ್ನೂರಪ್ಪ	ಮಾದಗೊಂಡನಹಳ್ಳಿ
612.	565	ಲಕ್ಷ್ಮೀದೇವಿ	ನಾರಾಯಣಸ್ವಾಮಿ	– ” –
613.	566	ಪ್ರೇಮ	ಆನಂದಚಂದರ್	– ” –
614.	567		–	– ” –
615.	568	ಆಮಿರ್ ಮಾಲ್ಯಾಭಕಾಷ್	ಮಿರ್‌ಅಬ್ಬಾಸ್‌ಹುಸೇನ್	– ” –
616.	569	ಪ್ಯಾರಿಜಾನ್	ಪಕೃದಿನ್‌ಸಾಬ್	– ” –
617.	570	ಗಪಾರ್‌ಷರಿಪ್	ಮಹಮದ್ ಖಲಿಲ್	– ” –
618.	571	ಸಯದ್ ಯೂಸಪ್	ಸ: ಇಬ್ರಾಹಿಂ	– ” –
619.	572	ಸರ್ವಮಂಗಳ	ರುದ್ರಪ್ಪ	ಪಾ॥ ಜೋಗಿಹಳ್ಳಿ
620.	573	ದಶರಥರಾಜ್	ರಂಗಸ್ವಾಮಯ್ಯ	ಇತರೆ
621.	574	ರಾಮಮೂರ್ತಿ	ಕೃಷ್ಣಮೂರ್ತಿ	–
622.	575	ಮಂಜುನಾಥ್	ಸೂರಣ್ಣ	– ” –
623.	576	ಭಾಸ್ಕರಾಚಾರಿ	ಬಸವಚಾರಿ	– ” –
624.	577	ಮಹದೇವಯ್ಯ	ಸಿದ್ದಲಿಂಗಯ್ಯ	– ” –
625.	578	ಗೋಪಾಲ	ವೆಂಕಟಪ್ಪ	– ” –
626.	579	ತಿಮ್ಮಕ್ಕ	ಮೂಡ್ಲಯ್ಯ	ಪಾ॥ ಜೋಗಿಹಳ್ಳಿ
627.	580	ನರಸಪ್ಪ	ಮುನಿಆಂಜಿನಪ್ಪ	– ” –
628.	581	ರೇಣುಕಾದೇವಿ	ರಾಮಮೂರ್ತಿ	ಇತರೆ
629.	582	ನಾರಾಯಣಪ್ಪ	ವೆಂಕಟರಮಣಪ್ಪ	–
630.	583	ಶಾಯಿದ್	ಅಹಮದ್‌ಬೇಗ್	– ” –
631.	584	ದಿಲ್‌ಶಾದ್	ಇಮಾಂಸಾಬ್	– ” –

632.	585	ರಾಜಣ್ಣ	ನರಸಪ್ಪ	– " –
633.	586	ವಿಜಯ	ಮುದ್ದಪ್ಪ	– " –
634.	587	ಶಂಕರಪ್ಪ	ನಂಜುಂಡಪ್ಪ	– " –
635.	588	ಕಮಲಮ್ಮ	ಜಯಪ್ಪ	– " –
636.	589	ರಾಜಮ್ಮ	ಶಂಕರಪ್ಪ	– " –
637.	590	ಯಶೋದಮ್ಮ	ತಿಮ್ಮೇಗೌಡ	– " –
638.	591	ಲಕ್ಷ್ಮೀದೇವಮ್ಮ	ರಾಮಾಂಜಿನಪ್ಪ	– " –
639.	592	ಸುಜಾತ	ಸಂಪಂಗಿರಾಮಯ್ಯ	ಕಮಲೂರು
640.	593	ರಂಗಪ್ಪ	ಹನುಮಣ್ಣ	–
641.	594	ವೆಂಕಟರಮಣಪ್ಪ	ತಿರುಮಲಯ್ಯ	–
642.	595	ದಾಳಪ್ಪ	ನರಸಿಂಹಯ್ಯ	–
643.	596	ಶೇವಲಿಬಾಯಿ	ರಾಮಾನಾಯ್ಕ	ಗೊಲ್ಲಹಳ್ಳಿ
644.	597			
645.	598	ಶಂಕರಪ್ಪ	ವೆಂಕಟಸ್ವಾಮಪ್ಪ	–
646.	599	ಗೋಪಿ	ಶಿವಾಜಿರಾವ್	–
647.	600	ಪದ್ಮಮ್ಮ	ಪುಟ್ಟಪ್ಪ	–
648.	601	ಕೃಷ್ಣಪ್ಪ	ಅರಸಪ್ಪ	ಪಾ।। ಜೋಗಿಹಳ್ಳಿ
649.	602	ಜಯರಾಮು	ಸುಬ್ಬಣ್ಣ	– " –
650.	603	ಸುಬ್ಬಣ್ಣ	ನಾರಾಯಣಪ್ಪ	– " –
651.	604	ಪಿಳ್ಳಪ್ಪ	ಆಂಜಿನಪ್ಪ	– " –
652.	605	ರಾಮಯ್ಯ	ರಾಮಯ್ಯ	– " –
653.	606	ರತ್ನಮ್ಮ		
654.	607	ರಾಮಯ್ಯ	ಮುನಿಶಾಮಯ್ಯ	–
655.	608	ಜಯಲಕ್ಷ್ಮಿ	ಶ್ರೀಕಂಠಯ್ಯ	ಇತರೆ
656.	609	ಮೈಲಾರಪ್ಪ	ಮಾರಪ್ಪ	ಅಳ್ಳಾಳಸಂದ್ರ
657.	610	ಹುಚ್ಚಮ್ಮ	ಮುನಿಯಪ್ಪ	ಇತರೆ
658.	611	ಶಾಂತ	ಸತೀಶ್	ಗೊಲ್ಲಹಳ್ಳಿ
659.	612	ಗುರುಮೂರ್ತಿ		ಹಸನ್‌ಘಟ್ಟ
660.	613	ಸುಮಿತ್ರ	ಬಂಡಿಯಪ್ಪ	ಇತರೆ
661.	614	ಪುಟ್ಟನರಸಮ್ಮ	ಸನಾತಪ್ಪ	ಪಾ।। ಜೋಗಿಹಳ್ಳಿ
662.	615	ಗೌರಮ್ಮ	ನರಸಿಂಹಯ್ಯ	ತಪಸಿಹಳ್ಳಿ
663.	616	ಗೌರಮ್ಮ	ಮಾರಪ್ಪ	ಇತರೆ
664.	617	ಮುನಿಯಾನಾಯ್ಕ	ಚಂದ್ರಾನಾಯ್ಕ	ಗೊಲ್ಲಹಳ್ಳಿ
665.	618	ನಾಗರತ್ನಮ್ಮ	ನಾಗರಾಜು	ಬಚ್ಚಹಳ್ಳಿ
666.	619	ನಾರಾಯಣಮ್ಮ	ತಿಮ್ಮೇಗೌಡ	ಕೊಳೂರು
667.	620	ಜಯಮ್ಮ	ನಾಗರಾಜಯ್ಯ	ಬಚ್ಚಹಳ್ಳಿ

668.	621	ಸಾಕೀಬಾಯಿ	ಮುನಿಯಾನಾಯ್ಕ	ಗೊಲ್ಲಹಳ್ಳಿ
669.	622	ಸೀತಮ್ಮ	ಶಾಮಾನಾಯ್ಕ	– ” –
670.	623	ಶಾರದಮ್ಮ	ಭೀಮಾನಾಯ್ಕ	– ” –
671.	624	ನಾಗರಾಜನಾಯ್ಕ	ಶಾಮಾನಾಯ್ಕ	– ” –
672.	625	ಜಯಲಕ್ಷ್ಮಿ	ಭೀಮಾನಾಯ್ಕ	– ” –
673.	626	ರತ್ನಮ್ಮ	ಮುನಿಯಾನಾಯ್ಕ	– ” –
674.	627	ಲಕ್ಷ್ಮೀಬಾಯಿ	ಕೃಷ್ಣಾನಾಯ್ಕ	– ” –
675.	628	ಮಂಜುಳಾದೇವಿ	ರಾಮಾನಾಯ್ಕ	– ” –
676.	629	ಗೀತಾಬಾಯಿ	ಕೃಷ್ಣಾನಾಯ್ಕ	– ” –
677.	630	ವೆಂಕಟೇಶ್‌ನಾಯ್ಕ	ಶಂಕರಾನಾಯ್ಕ	– ” –
678.	631	ರಾಮಚಂದ್ರ	ರಾಮಾನಾಯ್ಕ	– ” –
679.	632	ನಾರಾಯಣಪ್ಪ	ಚನ್ನಕೊಂಡಯ್ಯ	ಪಾ।। ಜೋಗಿಹಳ್ಳಿ
680.	633	ಸೋಮಯ್ಯ	ದೊಡ್ಡಪ್ಪಯ್ಯ	– ” –
681.	634	ಜಯಲಕ್ಷ್ಮಿ	ರಾಮಕೃಷ್ಣ	– ” –
682.	635	ನಾರಾಯಣಪ್ಪ	ಮುನಿಶಾಮಯ್ಯ	– ” –
683.	636	ಜಯಮ್ಮ	ರಾಮಸ್ವಾಮಿ	ಇತರೆ
684.	637	ಚನ್ನೀಬಾಯಿ	ಸಕ್ಕರೆನಾಯ್ಕ	ಗೊಲ್ಲಹಳ್ಳಿ
685.	638	ಅಬ್ದುಲ್‌ಸಲಾಂ	ಅಬ್ದುಲ್‌ಶಕೂರ್	ಇತರೆ
686.	639	ಕಾಂತಮ್ಮ	ಲಕ್ಷ್ಮೀನಾರಾಯಣಪ್ಪ	–
687.	640	ಲಕ್ಷ್ಮೀದೇವಮ್ಮ	ಗಂಗಾಚಾರಿ	ಕೊಡಿಗೆಹಳ್ಳಿ
688.	641	ರಾಜಣ್ಣ	ಮುನಿವೆಂಕಟಪ್ಪ	ಕೊಳೂರು
689.	642	ಸುಬ್ಬಣ್ಣ	ರಂಗಣ್ಣ	ಪಾ।। ಜೋಗಿಹಳ್ಳಿ
690.	643	ಗೌರಮ್ಮ	ಅಮರೇಶ್	ಇತರೆ
691.	644 (1)	ಮಹದೇವಮ್ಮ	ಗಿರಿಯಪ್ಪ	ಕುರುಬರಹಳ್ಳಿ
692.	644 (2)	ಪಿಳ್ಳಣ್ಣ	ಗದ್ದೆಮಲ್ಲಣ್ಣ	– ” –
693.	645	ಗಿರಿಯಪ್ಪ	ಶಿವಣ್ಣ	– ” –
694.	646	ತಿಮ್ಮಯ್ಯ	ಗಂಗಯ್ಯ	ಹಸನ್‌ಘಟ್ಟ
695.	647	ರಾಮಾಂಜನಪ್ಪ	ಮುನಿಯಪ್ಪ	–
696.	648	ಶಂಕರಪ್ಪ	ಅಬ್ಬಯ್ಯ	ಕೊಡಿಗೆಹಳ್ಳಿ
697.	649	ಖುರ್ಷಿದಾಬೇಗಂ	ಭಾಷಾ	–
698.	650	ಅಮ್ಮಯ್ಯ	ರಾಮಮೂರ್ತಿ	ಪಾ।। ಜೋಗಿಹಳ್ಳಿ
699.	651	ಮುನಿವೆಂಕಟಮ್ಮ	ತಿಮ್ಮರಾಯಪ್ಪ	–
700.	652	ರಾಜಮ್ಮ	ಹರೀಶ್	–
701.	653	ಪಾಪಮ್ಮ	ನಾರಾಯಣಪ್ಪ	–
702.	654	ಮೊಸೆಸ್	ಜ್ಞಾನಪ್ರಕಾಶಂ	–
703.	655	ಪೂಜಪ್ಪ	ತಿರುಮಲಪ್ಪ	–

704.	656	ತಿಮ್ಮೇಗೌಡ	ಸೊಣ್ಣಪ್ಪ	ತಪಸಿಹಳ್ಳಿ
705.	657	ಶಿವಣ್ಣ	ಗೊಪಣ್ಣ	ಪಾ।। ಜೋಗಿಹಳ್ಳಿ
706.	658	ರಾಮಚಂದ್ರಪ್ಪ	ಚಿಕ್ಕರಂಗಯ್ಯ	– ” –
707.	659	ರಂಗದಾಮಪ್ಪ	ದೊಡ್ಡರಂಗಪ್ಪ	– ” –
708.	660	ಮುನೇಗೌಡ	ವೀರಭದ್ರಯ್ಯ	ಹೊನ್ನಾಘಟ್ಟ
709.	661	ರಾಜಶೇಖರಯ್ಯ	ಬಸವರಾಜಪ್ಪ	ಕೊಡಿಗೆಹಳ್ಳಿ
710.	662	ಮುನಿಯಮ್ಮ	ಚನ್ನರಾಮಯ್ಯ	ಅಂತರಹಳ್ಳಿ
711.	663	ರಾಮಕೃಷ್ಣ	ನಾರಾಯಣಪ್ಪ	ಮಾದಗೊಂಡನಹಳ್ಳಿ
712.	664	ಭೈರೇಗೌಡ	ವೆಂಕಟಪ್ಪ	– ” –
713.	665	ಪಾರ್ವತಮ್ಮ	ಮುದ್ದಯ್ಯ	ಇತರೆ
714.	666	ಸಿದ್ದಗಂಗಮ್ಮ	ಹೊನ್ನಸಿದ್ದಪ್ಪ	–
715.	667	ಲಕ್ಷ್ಮೀದೇವಮ್ಮ	ದೇವರಾಯನಾಯಕ್	–
716.	668	ಪುಟ್ಟಮ್ಮ	ಪುಟ್ಟಣ್ಣ	ಕಮಲೂರು
717.	669	ಚಿಕ್ಕಮುನಿಯಪ್ಪ	ಕೆಂಚಪ್ಪ	–
718.	670	ಲಕ್ಷ್ಮೀದೇವಮ್ಮ	ನಾರಾಯಣಪ್ಪ	ಇತರೆ
719.	671	ಕಮಲಮ್ಮ	– ” –	ತಳಗವಾರ
720.	672	ಮಹೇಶ್‌ಕುಮಾರ್	ಬಸವರಾಜು	ಇತರೆ
721.	673	ಮಹದೇವಮ್ಮ	ಶಿವರುದ್ರಯ್ಯ	ಕೊಡಿಗೆಹಳ್ಳಿ
722.	674	ಕಮಲಮ್ಮ	–	ಇತರೆ
723.	675	ಗೌರಮ್ಮ	ಪುಟ್ಟನಂಜಮ್ಮ	ಇತರೆ
724.	676	ಸಿರಸ್ವತಮ್ಮ	ನರಸಿಂಹಯ್ಯ	ಇತರೆ
725.	677	ತಿಪ್ಪೇಸ್ವಾಮಿ	ವಿರೂಪಾಕ್ಷಪ್ಪ	– ” –
726.	678	ಶ್ರೀನಿವಾಸಮೂರ್ತಿ	ಕೆಂಚಪ್ಪ	– ” –
727.	679	ನಂಜಮ್ಮ	ನಾಗರಾಜು	–
728.	680	ನಾಗರಾಜು	ತಿಮ್ಮಣ್ಣ	ಪಾ।। ಜೋಗಿಹಳ್ಳಿ
729.	681	ಚಂದ್ರಶೇಖರ	ರಾಜಣ್ಣ	– ” –
730.	682	ಹನುಮಂತರಾಯಪ್ಪ	ಆಂಜನಪ್ಪ	– ” –
731.	683	ದೊಡ್ಡಮ್ಮ	ಹನುಮಯ್ಯ	– ” –
732.	684	ಕದರಪ್ಪ	ದದ್ದಲಪ್ಪ	ಕುರುಬರಹಳ್ಳಿ
733.	685	ನಾಗರತ್ನಮ್ಮ	ಸೀತಾರಾಮಯ್ಯ	ಇತರೆ
734.	686	ರಘು	ಲಿಂಗಪ್ಪಗೌಡ	– ” –
735.	687	ರಂಗಪ್ಪ	ಗಂಗರಂಗಯ್ಯ	– ” –
736.	688	ನಾಗರಾಜು	ಮರಿಯಪ್ಪ	ಪಾ।। ಜೋಗಿಹಳ್ಳಿ
737.	689	ರಾಜೇಂದ್ರ	ಮುನಿರತ್ನಂ	– ” –
738.	690	ಅನಂಜನಮ್ಮ	ಹನುಮಪ್ಪ	– ” –
739.	691	ಗುರುಶಂಕರಯ್ಯ	ಸಿದ್ದಲಿಂಗಯ್ಯ	ಕೊಡಿಗೆಹಳ್ಳಿ

740.	692 ರಾಜಮ್ಮ	ರಾಮಕೃಷ್ಣಯ್ಯ	ತಳಗವಾರ
741.	693 ರೇಣುಕಾ	ವಿಶ್ವೇಶ್ವರಯ್ಯ	– ” –
742.	694 ಕೃಷ್ಣಪ್ಪ	ಕೆಂಪಣ್ಣ	ಹಸನ್‌ಘಟ್ಟ
743.	695 ಸಿದ್ದಗಂಗಮ್ಮ	ಹೊನ್ನಪ್ಪ	ತಳಗವಾರ
744.	696 ವೆಂಕಮ್ಮ	ವೆಂಕಟರಾಮಯ್ಯ	– ” –
745.	697 ಸಿದ್ದಗಂಗಮ್ಮ	ಸಿದ್ದಪ್ಪ	ಕೊಡಿಗೆಹಳ್ಳಿ
746.	698 ಕುಸುಮ	ಬಸವಯ್ಯ	ಕುರುಬರಹಳ್ಳಿ
747.	699 ಗೋಪಮ್ಮ	ರಾಜಗೋಪಾಲಚಾರಿ	ಕೊಡಿಗೆಹಳ್ಳಿ
748.	700 ರಾಜಮ್ಮ	ಶಾಮಚಾರಿ	– ” –
749.	701 ನಾಗರತ್ನಮ್ಮ	ಆವಲಮಾರ್ತಾಚಾರಿ	– ” –
750.	702 ನಾರಾಯಣಪ್ಪ	ಸಂಜೀವಪ್ಪ	ಪಾ || ಜೋಗಿಹಳ್ಳಿ
751.	703 ವೆಂಕಟೇಶ್‌ಮೂರ್ತಿ	ಶ್ರೀನಿವಾಸ	– ” –
752.	704 ರಾಮಚಂದ್ರ	ತಿಮ್ಮಪ್ಪ	– ” –
753.	705 ಜಮ್ಮಿಪ್ರಭಾಕರ	ವಿಜಯ	– ” –
754.	706 ಮೈಮುನ್ನಿಸಾ	ಇಸ್ಮಾಯಿಲ್ಲ	– ” –
755.	707 ಅಬ್ರಹಾಂ	ಫಿಲಿಪ್	– ” –
756.	708 ರೂಬಿಪಂಚರತ್ನಾಬಾಯಿ	ವಿಜಯ್‌ಕುಮಾರ್	– ” –
757.	709 ನಯಾಜ್‌ಪಾಷಾ	ಅಲ್ಲಾಭಕ್ಷ್	– ” –
758.	710 ಚಾಂದ್‌ಪಾಷಾ	ಅಲ್ಲಾಭಕ್ಷ್	– ” –
759.	711 ಕೃಷ್ಣಪ್ಪ	ತಿಮ್ಮಪ್ಪ	– ” –
760.	712 ಮುನಿಶಾಮಯ್ಯ	ಚಿಕ್ಕಸುಬ್ಬಯ್ಯ	– ” –
761.	713 ಸಂಪತ್‌ಕುಮಾರಿ	ತೇಜ್‌ಪಾಲ್	– ” –
762.	714 ಜಾನ್‌ಮೊಸೆಸ್	ಮಾರ್ಟಿನ್	– ” –
763.	715 ಸುವಣ್ಣ	ಸಾಲೋಮನ್	– ” –
764.	716 ದೇವಾನಂದ್	ದೇವಪುತ್ರಪ್ಪ	– ” –
765.	717 ಚಾಂದ್‌ಪಾಷ	ಹುಸೇನ್‌ಖಾನ್	– ” –
766.	718 ಶ್ರೀನಿವಾಸ್	ಮುನಿವೆಂಕಟಪ್ಪ	– ” –
767.	719 ಮಂಜುನಾಥ್	ಕದರಪ್ಪ	ಬಚ್ಚಹಳ್ಳಿ
768.	720 ಉಮಾದೇವಮ್ಮ	ನರಸಿಂಹಯ್ಯ	ತಪಸೀಹಳ್ಳಿ
769.	721 ಲಕ್ಷ್ಮಮ್ಮ	ಕೃಷ್ಣಪ್ಪ	ಅಂತರಹಳ್ಳಿ
770.	722 ಮರಿಸ್ವಾಮಿ	ಮರಿದಾಸಯ್ಯ	ಪಾ || ಜೋಗಿಹಳ್ಳಿ
771.	723 ನಂಜಮ್ಮ	ಗೋವಿಂದಯ್ಯ	ಬಚ್ಚಹಳ್ಳಿ
772.	724 ಶಾರದಮ್ಮ	ನಾರಾಯಣಪ್ಪ	– ” –
773.	725 ಪದ್ಮಮ್ಮ	ಮುನಿಯಪ್ಪ	– ” –
774.	726 ಶಿವಮ್ಮ	ಶಾಂತಪ್ಪ	ಕೊಡಿಗೆಹಳ್ಳಿ
775.	727 ಮೇರಿ	ಪುಟ್ಟರಾಜು	ಪಾ || ಜೋಗಿಹಳ್ಳಿ

776.	728	ಭಾಗ್ಯಮ್ಮ	ವೆಂಕಟರಮಣಪ್ಪ	– " –
777.	729	ಸರೋಜಮ್ಮ	ಶ್ರೀನಿವಾಸ	– " –
778.	730	ನರಸಿಂಹಯ್ಯ	ನರಸಿಂಹಯ್ಯ	– " –
779.	731	ಸತ್ಯಮ್ಮ	ವಿಜಯ್‌ಕುಮಾರ್	– " –
780.	732	ಸುಂದರಪ್ಪ	ಅಂಡ್ರೂಸಪ್ಪ	– " –
781.	733	ಪ್ರಭಾವತಮ್ಮ	ವಿಡ್ಡಿಸ್	– " –
782.	734	ಮಲ್ಲಪ್ಪ	ಚಿಕ್ಕಲಿಂಗಯ್ಯ	– " –
783.	735	ಕೃಷ್ಣಪ್ಪ	ನರಸಪ್ಪ	ಮಾದಗೊಂಡನಹಳ್ಳಿ
784.	736	ಆನಂದ್‌ಕುಮಾರ್	ಲಕ್ಷ್ಮಯ್ಯ	– " –
785.	737	ಮುನ್ನೀರಾ	ಚಾಂದ್‌ಪಾಷಾ	ಪಾಲನಬೊಹಳ್ಳಿ
786.	738	ಖಲೀಲ್	ಅಬ್ದುಲ್‌ಸತ್ತಾರ್	– " –
787.	739	ಸೈಯದ್ ಹೈದರ್	ಭಕ್ಷುಸಾಬ್	– " –
788.	740	ಅಮಿರ್‌ಜಾನ್	ಸಿಲೇಮಾನ್	– " –
789.	741	ಸರ್ದಾರ್‌ಪಾಷಾ	ಮಹಮದ್‌ಗೌಸ್	– " –
790.	742	ಹಸನ್ ಆಲಿ	ರಹೀಂ ಬೇಗ್	– " –
791.	743	ಬಾಷಾ	ಪಕ್ರುದ್ದೀನ್	– " –
792.	744	ಮುನಿರತ್ನಮ್ಮ	ಶ್ರೀರಾಮುಲು	– " –
793.	745	ಜಯರಾಮು	ಕೆಂಪಣ್ಣ	– " –
794.	746	ಸುಭದ್ರಮ್ಮ	ನಾಗರಾಜು	– " –
795.	747	ಪುಟ್ಟಮ್ಮ	ವೆಂಕಟಪ್ಪ	– " –
796.	748	ಮೂರ್ತಿ	ಹನುಮಂತಪ್ಪ	– " –
797.	749	ಹನುಮೇಗೌಡ	ನಂಜೇಗೌಡ	– " –
798.	750	ಸಂಪಂಗಿರಾಮಯ್ಯ	ಪಿಳ್ಳಶೆಟ್ಟಪ್ಪ	– " –
799.	751	ಹಕ್ಕುಪತ್ರ ನೀಡಿದೆ	–	–
800.	752	ಸುಜಾತ	ಶ್ರೀನಿವಾಸ್	– " –
801.	753	ಪಾಯ್		– " –
802.	754	ಸೈಯದ್ ಅನ್ವರ್	ಸ:ವೆಕ್	– " –
803.	755	ಜೂಲಿಯಸ್ ರೋಬೋ	ಜಾನ್‌ಡಿಸೋಜ	ಪಾ।। ಜೋಗಿಹಳ್ಳಿ
804.	756	ಅಂತೋಣಿ ರಾಜ್	ಅಂತೋಣಿದಾಸ್	– " –
805.	757	ಆಸಿಪ್	ಬಾಬೂಜಾನ್	– " –
806.	758	ಲೂನಿಪರ್ನಾಂಡಿಸ್	ವಿಕ್ಟರ್	– " –
807.	759	ವಿ.ಎಂ. ಮಹದೇವಯ್ಯ	ಮಾದಪ್ಪ	– " –
808.	760	ಅಬ್ದುಲ್ ರಷೀದ್	ಅ: ರಸೂಲ್ ಖಾನ್	– " –
809.	761	ವೀರಭದ್ರಯ್ಯ	ಸುಬ್ಬರಾಯಪ್ಪ	– " –
810.	762	ಶೇಕ್‌ಪಕ್ರುದಿನ್	ಅಲ್ಲಾಭಕ್ಷ್	– " –

811.	763	ಹಕ್ಕುಪತ್ರ ನೀಡಿದೆ	–	–
812.	764	ಪುಟ್ಟಮ್ಮ	ಅಚ್ಚಪ್ಪ	ಕೊಡಿಗೆಹಳ್ಳಿ
813.	765	ನೀಲಾಂಬಿಕೆ	ರೇಣುಕಾಪ್ರಸಾದ್	– " –
814.	766	ಈರಮ್ಮ	ಸೋಮಣ್ಣ	– " –
815.	767	ಗಿರಿಜ	ಬಸವರಾಜು	– " –
816.	768	ಜ್ಯೋತಿಪ್ರಭ	ಶಂಕರಪ್ಪ	– " –
817.	769	ವಿಮಲಮ್ಮ	ವೀರಭದ್ರಯ್ಯ	– " –
818.	770	ಅನ್ನಪೂರ್ಣ	ಮಾದೇವಯ್ಯ	– " –
819.	772	ಸೌಭಾಗ್ಯಮ್ಮ	ಗಂಗಯ್ಯ	– " –
820.	773	ಗಂಗಾಧರಯ್ಯ	ನಾಗಪ್ಪ	ಇತರೆ
821.	774	ಗಂಗಾಧರ	ಚಿಕ್ಕರಸಪ್ಪ	ಇತರೆ
822.	775	ಭದ್ರಮ್ಮ	ಕರಿಸಿದ್ದಪ್ಪ	ಕೊಡಿಗೆಹಳ್ಳಿ
823.	776	ಸೈಯದ್ ಬಾಷ	ಸೈಯದ್‌ರಜಾಕ್	ಹಸನ್‌ಘಟ್ಟ
824.	777	ರಮೇಶ್	ಕೃಷ್ಣಪ್ಪ	ಪಾ।। ಜೋಗಿಹಳ್ಳಿ
825.	778	ಶ್ರೀನಿವಾಸಮೂರ್ತಿ	–	–
826.	779	ರಾಮು	ಚಿಕ್ಕನರಸಿಂಹಯ್ಯ	– " –
827.	780	ಮಮತ	ಶಿವಕುಮಾರ್	ಕೊಡಿಗೆಹಳ್ಳಿ
828.	781	ಶೋಭಾ	ಜಯರಾಮಯ್ಯ	– " –
829.	782	ವೆಂಕಟೇಶಪ್ಪ	ಚನ್ನರಾಯಪ್ಪ	ತಪಸೀಹಳ್ಳಿ
830.	783	ಸರೋಜಮ್ಮ	ಸತ್ಯಶೀಲಪ್ಪ	ಪಾ।। ಜೋಗಿಹಳ್ಳಿ
831.	784	ಜ್ಞಾನರೇಖಾಮಣಿ	ಬೆಂಜಮಿನ್	– " –
832.	785	ಲಕ್ಷ್ಮಮ್ಮ	ಹನುಮಂತಪ್ಪ	– " –
833.	786	ದೊಡ್ಡಂಜಿನಪ್ಪ	ಮುನಿಶಾಮಪ್ಪ	ಇತರೆ
834.	787	ಯಲ್ಲಮ್ಮ	ರಾಮಯ್ಯ	ಪಾ।। ಜೋಗಿಹಳ್ಳಿ
835.	788	ಜೈಮುನಿರಾವ್	ರಾಣೋಜಿರಾವ್	ಹಸನ್‌ಘಟ್ಟ
836.	789	ಪಿಳ್ಳಣ್ಣ	ನಾಗಪ್ಪ	– " –
837.	790	ನಟರಾಜು	ಮುನಿಯಪ್ಪ	ಇತರೆ
838.	791	ಶಾಂತಮ್ಮ	ರಾಜು	ಪಾ।। ಜೋಗಿಹಳ್ಳಿ
839.	792	ಶೈಲಜ	ಸುಂದರರಾಜು	– " –
840.	793	ಸಿರಿಯಮ್ಮ	ಖಾದ್ರಪ್ಪ	ಇತರೆ
841.	794	ಜಾನ್ ಡಿಸೋಜಾ	ಡಿಸೋಜ	–
842.	795	ದಿವ್ಯನಾಥನ್	ಇರುದಯಂ	– " –
843.	796	ಲಕ್ಷ್ಮಣಮೂರ್ತಿ	ಚಿಕ್ಕಣ್ಣ	– " –
844.	797	ಒಬಳಮ್ಮ	ಯಲ್ಲಪ್ಪ	ಪಾ।। ಜೋಗಿಹಳ್ಳಿ
845.	798	ಯಶೋದಮ್ಮ	ಕದರಪ್ಪ	ತಳಗವಾರ
846.	799	ಮುನಿಯಪ್ಪ	ದೊಡ್ಡಯ್ಯ	– " –

847.	800	ರತ್ನಮ್ಮ	ಮುನಿಯಪ್ಪ	– " –
848.	801	ಪ್ರಮೀಳಮ್ಮ	ನರಸಿಂಹಯ್ಯ	ತಪಸೀಹಳ್ಳಿ
849.	802	ಶಶಿಕಲಾ	ವೆಂಕಟೇಶ್	– " –
850.	803	ಪಾರ್ವತಮ್ಮ	ವೆಂಕಟಶಾಮಯ್ಯ	ಪಾ।। ಜೋಗಿಹಳ್ಳಿ
851.	804	ಆರ್. ನಾಗರಾಜ	ರಾಮಪ್ಪ	ತಪಸೀಹಳ್ಳಿ
852.	805	ಸುಬ್ಬಮ್ಮ	ನರಸಿಂಹಯ್ಯ	– " –
853.	806	ರತ್ನಮ್ಮ	ಶಂಕರಪ್ಪ	ನಾಗಸಂದ್ರ
854.	807	ಸೋಮಶೇಖರ್	– " –	– " –
855.	808	ಸುನಮ್ಮ	ನಾಗರಾಜು	– " –
856.	809	ಕೃಷ್ಣಪ್ಪ	ನಾರಾಯಣಪ್ಪ	ಇತರೆ
857.	810	ಚಂದ್ರಪ್ಪ	ಮಾರಪ್ಪ	–
858.	811	ಮುನಿಯಪ್ಪ	ಪಾಪಣ್ಣ	ಕರೇನಹಳ್ಳಿ
859.	812	ಶಾರದಮ್ಮ	ಗೋಪಾಲಪ್ಪ	ಕೊಡಿಗೆಹಳ್ಳಿ
860.	813	ನಾಗರಾಜ	ಹನುಮಂತಪ್ಪ	– " –
861.	814	ಮುನಿವೆಂಕಟಸ್ವಾಮಿ	ರಾಮಯ್ಯ	ಪಾ।। ಜೋಗಿಹಳ್ಳಿ
862.	815	ನಾಗರಾಜು	ಲಕ್ಷ್ಮೀನಾರಾಯಣ	– " –
863.	816	ಲಕ್ಷ್ಮೀನರಸಪ್ಪ	ಕೇಶವಮೂರ್ತಿ	– " –
864.	817	ಸದಾಶಿವಯ್ಯ	ವೆಂಕಟರಾಮಯ್ಯ	– " –
865.	819	ಜಗನ್ನಾಥ	ರಂಗಮ್ಮ	ಇತರೆ
866.	820	ರುದ್ರಮ್ಮ	ಮುನಿಚನ್ನಪ್ಪ	– " –
867.	821	ಕೇಶವಮೂರ್ತಿ	ವೆಂಕಟಸ್ವಾಮಿ	ಪಾ।। ಜೋಗಿಹಳ್ಳಿ
868.	822 (1)	ಪಿಳ್ಳಪ್ಪ	ನಂಜುಂಡಪ್ಪ	ಕುರುಬರಹಳ್ಳಿ
869.	822 (2)	ಮುನಿರಾಜು	ಮಲ್ಲಣ್ಣ	– " –
870.	823	ನಾಗರಾಜ	ನಾರಾಯಣಪ್ಪ	ಹಸನ್‌ಘಟ್ಟ
871.	824	ಹನುಮಣ್ಣ	ಶಂಕರಪ್ಪ	ಕಮಲೂರು
872.	825	ಪಾತೀಮಾ	ಅ: ಖುದ್ದೂಸ್	ಹಸನ್‌ಘಟ್ಟ
873.	826	ರಹಮುನ್ನಿಸಾ	ಅ: ಸಲಾಂ	ಇತರೆ
874.	827	ಮೊಹಸಿನ್ ತಾಜ್	ಅಕ್ತರ್‌ಶೇಕ್	– " –
875.	828	ವರಲಕ್ಷ್ಮಮ್ಮ	ವೆಂಕಟಸ್ವಾಮಿ	ಪಾ।। ಜೋಗಿಹಳ್ಳಿ
876.	829	ನಿರ್ಮಲ	ಮುನಿಯಪ್ಪ	– " –
877.	830	ಸೋಮಶೇಖರ್	ಮುನಿವೆಂಕಟಸ್ವಾಮಿ	– " –
878.	831	ರಾಮಕೃಷ್ಣ	ಮುನಿಶಾಮಯ್ಯ	– " –
879.	832	ಪ್ರಸಾದ್	ನಾರಾಯಣಪ್ಪ	– " –
880.	833	ಲಕ್ಷ್ಮಮ್ಮ	– " –	– " –
881.	834	ಭಾಸ್ಕರ್	ಮುನಿವೆಂಕಟಸ್ವಾಮಿ	– " –
882.	835	ವೆಂಕಟನರಸಿಂಹಯ್ಯ	ಚಿಕ್ಕನರಸಿಂಹಯ್ಯ	– " –

883.	836	ಲಕ್ಷ್ಮಯ್ಯ	ಕೊಂಡಪ್ಪ	– " –
884.	837	ಲಕ್ಷ್ಮೀನಾರಾಯಣ	ಲಕ್ಷ್ಮಯ್ಯ	– " –
885.	838	ಯಶೋದಮ್ಮ	ನಾರಾಯಣಸ್ವಾಮಿ	– " –
886.	839	ಶ್ರೀನಿವಾಸ್	ಪುಟ್ಟಣ್ಣ	ಕೊಡಿಗೆಹಳ್ಳಿ
887.	840	ವೆಂಕಟಚಲಪತಿ	ನರಸಿಂಹಯ್ಯ	– " –
888.	841	ಛಾಯಾಪತಿ	ವೆಂಕಟಸ್ವಾಮಿ	ಪಾ।। ಜೋಗಿಹಳ್ಳಿ
889.	842	ಲಕ್ಷ್ಮಮ್ಮ	ರುದ್ರಪ್ಪ	ಅಂತರಹಳ್ಳಿ
890.	842			
891.	843	ಪುಟ್ಟಮ್ಮ	ಬೈಯ್ಯಣ್ಣ	– " –
892.	844	ಕೆ.ಎಸ್. ನಾಗಮ್ಮ	ಹನುಮಪ್ಪ	– " –
893.	845	ಪಿ.ಎನ್. ಚಲಪತಿ	ನಾರಾಯಣಪ್ಪ	– " –
894.	846	ಗಂಗಮ್ಮ	ವೆಂಕಟಾಚಲಾಚಾರಿ	ಇತರೆ
895.	847	ಮಂಜುಳಮ್ಮ	ರಂಗಯ್ಯ	ತಳಗವಾರ
896.	848	ಚಿಕ್ಕಬೀರಯ್ಯ	ನಡುವಲಬೀರಯ್ಯ	– " –
897.	849	ಗಂಗಮ್ಮ	ರಾಮಚಂದ್ರ	ಕೊಡಿಗೆಹಳ್ಳಿ
898.	850	ಲಕ್ಷ್ಮಿ	ಪಾರ್ವತಮ್ಮ	ಇತರೆ
899.	851	ರಾಜಗೋಪಾಲಯ್ಯ	ನರಸಿಂಹಯ್ಯ	ಪಾ।। ಜೋಗಿಹಳ್ಳಿ
900.	852	ಇಂದ್ರಾಣಿ	ಕೇಶವಮೂರ್ತಿ	– " –
901.	853	ಅಕ್ತರ್ ಉನ್ನಿಸ್ಸಾ	ಫಯಾಜ್	ಇತರೆ
902.	854	ರಾಣೋಜಿರಾವ್	ಕಾಳೋಜಿರಾವ್	ಹಸನ್‌ಘಟ್ಟ
903.	855	ಗಂಗಮ್ಮ	ಹುಚ್ಚಪ್ಪ	ತಳಗವಾರ
904.	856	ಅಮರೇಶ್	ಗೋವಿಂದಪ್ಪ	– " –
905.	857	ದೇವಮ್ಮ	ಚೆನ್ನಪ್ಪ	– " –
906.	858	ಲಕ್ಷ್ಮೀನಾರಾಯಣ	ಸಂಜೀವಪ್ಪ	– " –
907.	859	ಎನ್. ವೆಂಕಟೇಶ್	ನರಸಿಂಹಯ್ಯ	– " –
908.	860	ಪ್ರೇಮ	ಉಮೇಶ್	ಕುರುಬರಹಳ್ಳಿ
909.	861	ಶಿವಲಿಂಗಯ್ಯ	ನಂಜುಂಡಪ್ಪ	– " –
910.	862	ಬಸವರಾಜು	ಚೆನ್ನಬಸವಯ್ಯ	ಹೊನ್ನಾಘಟ್ಟ
911.	863	ಪದ್ಮಾಕ್ಷಿ	ಮಂಜುನಾಥ್	ಇತರೆ
912.	864	ರಾಜಮ್ಮ	ಶಿವಕುಮಾರ್	ತಳಗವಾರ
913.	865	ಟಿ. ತಿಮ್ಮಪ್ಪಯ್ಯ	ವೆಂಕಟಪ್ಪ	– " –
914.	866	ಅನುಸೂಯ	ಕದಿರಪ್ಪ	ಕರೇನಹಳ್ಳಿ
915.	867	ಅನುಸೂಯಬಾಯಿ	ನರಸಿಂಹಾಚಾರ್	– " –
916.	868	ಹೆಚ್. ಯಶೋದಮ್ಮ	ಮಹದೇವಶಾಸ್ತ್ರಿ	ಕೊಡಿಗೆಹಳ್ಳಿ
917.	869	ವೀರಮ್ಮ	ರಾಜೇಂದ್ರ	– " –
918.	870	ಜಯಶ್ರೀ	ವೈ.ಆರ್. ರಾಜಣ್ಣ	– " –

919.	871	ತ್ರಿವೇಣಿ	ಲಕ್ಷ್ಮಿನಾರಾಯಣ	ತಳಗವಾರ
920.	872	ರಾಜಮ್ಮ	ವೆಂಕಟೇಶಮೂರ್ತಿ	– " –
921.	873	ಬಿ.ಎ. ಅಂಜನಕುಮಾರ್	ಆಂಜಿನಪ್ಪ	ಇತರೆ
922.	874	ವೆಂಕಟರಾಯಪ್ಪ	ಗಿಡ್ಡಪ್ಪ	– " –
923.	875	ಕೆ.ಎಸ್. ಚಂದ್ರಶೇಖರ್	ಸುನಂದಮ್ಮ	ಕೊಡಿಗೆಹಳ್ಳಿ
924.	876	ಗಿರಿಜಮ್ಮ	ವೀರಣ್ಣ	ಮದಗೊಂಡನಹಳ್ಳಿ
925.	877	ನಟರಾಜ	ಪಾರ್ವತಮ್ಮ	ಇತರೆ
926.	878	ಮಂಜುಳ	ಚಿಕ್ಕಪಾಪಣ್ಣ	ಮೆಣಸಿ
927.	879	ನಂಜಮ್ಮ	ಪುಟ್ಟಮ್ಮ	– " –
928.	880	ನಾಗರತ್ನಮ್ಮ	ಸಿದ್ದಲಿಂಗಯ್ಯ	ಕುರುಬರಹಳ್ಳಿ
929.	881	ಕೆ. ಉಮೇಶ್	ಕೆಂಪಣ್ಣ	– " –

ರಾಣೆಬೆನ್ನೂರಿನಲ್ಲಿ ಕೆ.ಎಸ್.ಆರ್.ಟಿ.ಸಿ. ಗೆ 20 ಎಕರೆ ಹುಲ್ಲುಗಾವಲು ಜಮೀನು ಕೊಡುವ ಬಗ್ಗೆ

(87): ಶ್ರೀ ಕೆ.ಬಿ. ಕೋಳಿವಾಡ್ (ರಾಣೇಬೆನ್ನೂರು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಣೇಬೆನ್ನೂರಿನಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋ ಕಟ್ಟುವ ಸಲುವಾಗಿ ಸುಮಾರು 20 ಎರೆ ಹುಲ್ಲುಗಾವಲನ್ನು ಬಿಟ್ಟು ಕೊಡುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ;

ಆ. ಹಾಗಿದ್ದಲ್ಲಿ, ಮಂಜೂರು ಮಾಡಲು ವಿಳಂಬವಾದುದಕ್ಕೆ ಕಾರಣಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಹೌದು.

ಆ. ಬೆಳಗಾವಿ ವಿಭಾಗಾಧಿಕಾರಿಗಳಿಂದ ಬಂದ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ವಿವಿಧ ಬೀಜಗಳ ಉತ್ಪಾದನೆ

1590: ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ವಿವಿಧ ಬೀಜಗಳ ಬೇಡಿಕೆ ಎಷ್ಟು;

ಆ. ಸರ್ಕಾರವು ಬೇಡಿಕೆ ಬೀಜವನ್ನು ಸಕಾಲದಲ್ಲಿ ರೈತರಿಗೆ ಪೂರೈಸುವ ಸ್ಥಿತಿಯಲ್ಲಿದೆಯೇ;

ಇ. ಸನ್ 1993–94 ಮತ್ತು 1994–95ಕ್ಕೆ ಬೀಜೋತ್ಪಾದನೆಯ ಗುರಿ ಎಷ್ಟು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ. ಪ್ರತಿಬೆಳೆಗೆ ನಿಗದಿಪಡಿಸಿದ ಬೀಜ ಬದಲಿಕೆ ಪ್ರಮಾಣದ ಆಧಾರದಂತೆ 1992–93 ಮತ್ತು 1993–94ನೇ ಸಾಲಿಗೆ ಪ್ರಮಾಣಿತ: ಗುಣಮಟ್ಟದ ಬೀಜದ ಬೇಡಿಕೆ ಈ ಕೆಳಗಿನಂತಿದೆ.

ವರ್ಷ	ಬೀಜದ ಬೇಡಿಕೆ (ಕ್ವಿಂಟಾಲ್‌ಗಳಲ್ಲಿ)
1992–93	4,29,810
1993–94	4,38,940

ಆ. ರಾಜ್ಯದಲ್ಲಿ ಬೇಕಾಗುವಂತಹ ಬೀಜವನ್ನು ಕರ್ನಾಟಕ ರಾಜ್ಯ ಬೀಜ ನಿಗಮ, ರಾಷ್ಟ್ರೀಯ ಬೀಜ ನಿಗಮ, ಕರ್ನಾಟಕ ಎಣ್ಣೆಕಾಳು ಬೆಳೆಗಾರರ ಅಭಿವೃದ್ಧಿ ಮಹಾ ಮಂಡಳಿ, ಕರ್ನಾಟಕ ಕೃಷಿ ಕೈಗಾರಿಕಾ ನಿಗಮ, ಸಹಕಾರಿ ಸಂಘ ಮತ್ತು ಖಾಸಗಿ ಸಂಸ್ಥೆಗಳ ಮೂಲಕ ಪೂರೈಸಲಾಗುತ್ತಿದೆ. ಇದೂ ಅಲ್ಲದೆ ರೈತರಲ್ಲಿದ್ದ ಗುಣಮಟ್ಟದ ಬೀಜವನ್ನು ಗುರುತಿಸಿ, ರೈತರಿಂದ ರೈತರಿಗೆ ಪೂರೈಕೆ: ಹಂಚಿಕೆ ಮಾಡಲಾಗುತ್ತಿದೆ.

ಇ. ಗುರಿ

1994–94	3,38,225 ಕ್ವಿಂಟಾಲ್
1994–95	3,51,355 ಕ್ವಿಂಟಾಲ್

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಮಾನ್ಯ ಸಂಸದೀಯ ವ್ಯವಹಾರಗಳ ಖಾತೆ ಸಚಿವರು):– ಮಾನ್ಯ ಅಧ್ಯಕ್ಷರೆ, ತಾರೀಖು 18.3.93ರಂದು ಲಿಖಿತ ಮೂಲಕ ಉತ್ತರಿಸುವ 22ನೇ ಪಟ್ಟಿಯಲ್ಲಿರುವ 60 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ: 704, 1113, 2088, 2089, 1707, 1713, 1765, 2055, 1944, 1945, 1994, 2068 ಮತ್ತು 2069 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ 47 ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದಲ್ಲಿ ಭೂಸಾರ ಸಂರಕ್ಷಣೆಗೋಸ್ಕರ ಒದಗಿಸಿದ ಹಣ

(177): ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯದಲ್ಲಿ ಭೂಸಾರ ಸಂರಕ್ಷಣೆಗೋಸ್ಕರ ಎಷ್ಟು ಹಣ ಒದಗಿಸಲಾಗಿದೆ ಹಾಗೂ ಇದುವರೆಗೂ ಎಷ್ಟು ಹಣ ಖರ್ಚು ಮಾಡಲಾಗಿದೆ. (ಜಿಲ್ಲಾವಾರು ವಿವರವನ್ನು ಒದಗಿಸುವುದು);

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):-

ಅ. ರಾಜ್ಯದಲ್ಲಿ ಭೂಸಾರ ಸಂರಕ್ಷಣೆಗೋಸ್ಕರ 1992–93ರ ಸಾಲಿಗೆ ರೂ. 4544.70 ಆರ್ಥಿಕ ಅನುದಾನ ನೀಡಿದ್ದು, ಜನವರಿ 1993ರ ವರೆಗೆ ರೂ. 3186.15 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. (ಜಿಲ್ಲಾವಾರು ವಿವರ ಲಗತ್ತಿಸಿದೆ);

ಕ್ರಮಸಂಖ್ಯೆ	ಜಿಲ್ಲೆ	ಒದಗಿಸಿರುವ ಹಣ (ಲಕ್ಷ ರೂ. ಗಳಲ್ಲಿ)	ಆಗಿರುವ ಖರ್ಚು (ಲಕ್ಷ ರೂ.ಗಳಲ್ಲಿ)
1.	ಬೆಂಗಳೂರು ನಗರ	110.10	47.44
2.	ಬೆಂಗಳೂರು ಗ್ರಾಮಾಂತರ	463.84	335.75
3.	ಬಳ್ಳಾರಿ	145.07	91.30
4.	ಬಿಜಾಪುರ	253.99	137.25
5.	ಬೆಳಗಾಂ	208.67	178.90
6.	ಬೀದರ್	160.52	119.07
7.	ಚಿತ್ರದುರ್ಗ	235.42	181.54
8.	ಚಿಕ್ಕಮಗಳೂರು	140.11	71.59
9.	ಧಾರವಾಡ	368.22	263.11
10.	ದಕ್ಷಿಣ ಕನ್ನಡ	104.30	50.39
11.	ಗುಲ್ಬರ್ಗಾ	228.84	126.62
12.	ಹಾಸನ	230.49	142.54
13.	ಕೋಲಾರ	367.70	239.37
14.	ಕೊಡಗು	39.75	31.18
15.	ಮಂಡ್ಯ	114.43	88.60

16.	ಮೈಸೂರು	318.35	257.44
17.	ರಾಯಚೂರು	224.40	155.68
18.	ಶಿವಮೊಗ್ಗ	199.54	129.37
19.	ತುಮಕೂರು	239.78	189.16
20.	ಉತ್ತರ ಕನ್ನಡ	391.16	299.95
		4544.70	3136.15

ಸರ್ಕಾರಿ ಖರಾಬುದಾರಿ ಹಾಗೂ ಹಿಡುವಳಿ ಜಮೀನುಗಳ ದಾರಿ ಬಿಡಿಸುವ ಬಗ್ಗೆ

(261): ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಿಡುವಳಿ ಜಮೀನುಗಳು ವಿಭಾಗವಾದ ನಂತರ ದಾರಿಗಾಗಿ ಹಿಸ್ಸೆದಾರರು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಇದರಿಂದಾಗಿ ಸಿವಿಲ್ ವ್ಯಾಜ್ಯಗಳು ಜಾಸ್ತಿ ಆಗಿಲ್ಲವೇ;

ಇ. ಸರ್ಕಾರಿ ಖರಾಬನ್ನು ಖುಲ್ಲಾ ಮಾಡಿಸಿ ದಾರಿ ಬಿಡಿಸುವುದು ಸರ್ಕಾರದ ಜವಾಬ್ದಾರಿಯಲ್ಲವೇ;

ಈ. ಇದರ ಜೊತೆಗೆ ನೀರು ಹರಿಯುವ ಭಾಗ, ಕೆರೆ ಅಂಗಳ ಹಾಗೂ ಕೆರೆಗೆ ನೀರು ಬರುವ ಜಾಗಗಳನ್ನು ಖುಲ್ಲಾ ಮಾಡಿಸಲು ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಹೌದು.

ಆ. ಹೌದು

ಇ. ಹೌದು

ಈ. ಕೆರೆ ಅಂಗಳ ಹಾಗೂ ನೀರು ಬರುವ ಪ್ರದೇಶಗಳಲ್ಲಿ ಒತ್ತುವರಿ ಮಾಡಿಕೊಂಡಿರುವ ಜಮೀನುಗಳನ್ನು ಕಂದಾಯ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ತೆರವು ಮಾಡಬಹುದಾಗಿದೆ.

ರೈತರಿಗೆ ಮಾರ್ಟ್‌ಗೇಜ್ ಕಾಲದ ಸ್ಟಾಂಪು ಶುಲ್ಕ ರದ್ದತಿ

(263): ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯ್ಕನಹಳ್ಳಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರೈತರು ಸಾಲ ಪಡೆಯುವಾಗ ಮಾರ್ಟ್‌ಗೇಜ್ ಮಾಡುವ ಮೊತ್ತಕ್ಕೆ ಸ್ಟಾಂಪು ಹಣ ತೆರಬೇಕಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಇದು ಅತ್ಯಂತ ಶೋಷಣೆ ಅಲ್ಲವೇ;

ಇ. ಇದರಂತೆ ಪಟ್ಟಣದಲ್ಲಿ ಮನೆ ಕಟ್ಟುವವರಿಗೆ ಹಾಗೂ ಸರ್ಕಾರಿ ಅಧಿಕಾರಿಗಳು ಮಾಡುವ ಸಾಲಕ್ಕೆ ಸ್ಟಾಂಪು ಶುಲ್ಕ ವಿಧಿಸಲಾಗಿದೆಯೇ;

ಈ. ಸ್ವಂತ ಉದ್ಯೋಗ ಯೋಜನೆ ಅಡಿಯಲ್ಲಿ ವಾಹನ ಕೊಳ್ಳುವವರಿಗೆ ಅಬ್ಕಾರಿ ಶುಲ್ಕ ವಿನಾಯಿತಿ ಹಾಗೂ ಕಡಿಮೆ ಬಡ್ಡಿ ದರ ಕೊಡಲಾಗುವುದೇ;

ಉ. ಅಂತೆಯೇ ಟ್ರಾಕ್ಟರ್ ಹಾಗೂ ಇತರೆ ಕೃಷಿ ಉಪಕರಣಗಳಿಗೆ ವಿನಾಯಿತಿ ಕೊಡಲಾಗುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಹೌದು. ಸಣ್ಣ ಮತ್ತು ಅತಿ ಸಣ್ಣ ರೈತರು ರೂ. 15,000-00 ಗಳವರೆಗೆ ಪಡೆಯುವ ಸಾಲಕ್ಕೆ ಮುದ್ರಾಂಕ ಶುಲ್ಕ ಈಗ ವಿನಾಯ್ತಿ ಇದೆ. ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ರೈತರು ಪಡೆಯುವ ರೂ. 25,000–00 ವರೆಗಿನ ಸಾಲಕ್ಕೆ ಮುದ್ರಾಂಕ ಶುಲ್ಕ ವಿನಾಯ್ತಿ ಇದೆ.

ಇಲ್ಲಾ, ಏಕೆಂದರೆ ಯಾರು ಸ್ಥಿರಾಸ್ತಿಗಳನ್ನು ನೋಂದಣಿ ಮಾಡಿಸಿದರೂ ಮುದ್ರಾಂಕ ಶುಲ್ಕವನ್ನು ಕೊಡಬೇಕಾಗುತ್ತದೆ.

ಇ. ಹೌದು.

ಈ. ಪ್ರಶ್ನೆ ಕಂದಾಯ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ಉ. ಇಲ್ಲಾ

ಚಿಕ್ಕನಾಯಕನಹಳ್ಳಿ ಕಂಬಳಿ ನೇಕಾರರ ಸಂಘದ ಪುನಃಶ್ಚೇತನ

(1708): ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):– ಮಾನ್ಯ ಜವಳಿ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಚಿಕ್ಕನಾಯ್ಕನಹಳ್ಳಿಯಲ್ಲಿ ಕಂಬಳಿ ತಯಾರಿಕೆಗಾಗಿ ಒಂದು ಸಹಕಾರ ಸಂಘ ಇದ್ದುದು ಹಾಗೂ ಈಗ ಅದು ಸ್ಥಗಿತವಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ. ಹಾಗಿದ್ದಲ್ಲಿ ಅದನ್ನು ಪುನಶ್ಚೇತನಗೊಳಿಸಲು ಸರ್ಕಾರವು ಆಲೋಚಿಸಿದೆಯೇ; ಹಾಗಿಲ್ಲವಾದಲ್ಲಿ ಆ ಸಂಸ್ಥೆಯನ್ನು ಅವಲಂಬಿಸಿದ್ದ ನೇಕಾರ ಸಂಖ್ಯೆ ಎಷ್ಟು; ಅವರಿಗೆ ಉಣ್ಣೆ ಸರಬರಾಜು ಮಾಡಲು ಮಾಡಿರುವ ಬೇರೆ ವ್ಯವಸ್ಥೆ ಯಾವುದು;

ಇ. ಹಾಗಿಲ್ಲದಿದ್ದಲ್ಲಿ ಅವರಿಗೆ ಇದರಿಂದಾದ ನಷ್ಟ ತುಂಬಿಸಲು ಬೇರೆ ಉದ್ಯೋಗ ಕಲ್ಪಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಚ್.ಕೆ. ಪಾಟೀಲ್ (ಜವಳಿ ಖಾತೆ ರಾಜ್ಯ ಸಚಿವರು):–

ಅ. ಹೌದು

ಆ. ಸದರಿ ಸಂಘದ ಪುನಶ್ಚೇತನಕ್ಕೆ ಪ್ರಸ್ತಾವನೆ ಬಂದಿದ್ದು ಪರಿಶೀಲನೆಯಲ್ಲಿದೆ.

ಇ. ಉದ್ಭವಿಸುವುದಿಲ್ಲ.

ನ್ಯಾಷನಲ್ ಕೋ– ಆಪರೇಟಿವ್ ಬ್ಯಾಂಕಿನಲ್ಲಿ ನೇಮಕಾತಿ ಸಮಯದಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸುತ್ತಿರುವ ಬಗ್ಗೆ

(1948): ಶ್ರೀಮತಿ ಸುಮಾ ವಸಂತ (ವೀರಾಜಪೇಟೆ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ನೇಮಕಾತಿ ಸಮಯದಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಕಾರಣಗಳೇನು;

ಆ. 121 ಜನ ಅಧಿಕಾರಿ ಸಿಬ್ಬಂದಿ, ಜವಾನರು ಇರುವಲ್ಲಿ ಇಬ್ಬರು ಮಾತ್ರ ಪರಿಶಿಷ್ಟ ಜಾತಿ ವರ್ಗದ ನೌಕರರು ಇದ್ದಲ್ಲಿ, ನೇಮಕಾತಿ ಸಮಯದಲ್ಲಿ ಮೀಸಲಾತಿ ನಿಯಮಗಳನ್ನು ಅನುಸರಿಸದಿರುವ ಕಾರಣವೇನು;

ಇ. ಮೀಸಲಾತಿ ನಿಯಮದ ಅನುಪಾತವನ್ನು ಮುಂದೆ ನೇಮಕಾತಿ ಸಮಯದಲ್ಲಿ ಸರಿಪಡಿಸಲಾಗುವುದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):-

ಅ. ಮತ್ತು ಆ. ಬಂದಿದೆ. ಸರ್ಕಾರದಿಂದ ಬ್ಯಾಂಕು ಯಾವುದೇ ತರಹದ ಆರ್ಥಿಕ ನೆರವು ಪಡೆದಿರುವುದಿಲ್ಲ. ಕರ್ನಾಟಕ ಸಹಕಾರಿ ಕಾಯ್ದೆ ಕಲಂ 30 (ಬಿ) ರಂತೆ ನಿಬಂಧಕರು ಹೊರಡಿಸಿದ ಆದೇಶದನ್ವಯ ಸರ್ಕಾರದಿಂದ ಆರ್ಥಿಕ ನೆರವು ಪಡೆದ ಸಂಘಗಳು ಕಡ್ಡಾಯವಾಗಿ ಮೀಸಲಾತಿ ಪಾಲಿಸಬೇಕಾಗಿರುತ್ತದೆ.

ಇ. ಪರಿಶೀಲಿಸಲಾಗುವುದು.

ರಾಜ್ಯದ ಕೃಷಿ ಉತ್ಪನ್ನದಲ್ಲಿ ಇಳಿಮುಖ

(1136): ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1991-92 ಮತ್ತು 1992-93ನೇ ಸಾಲಿನಲ್ಲಿ (1992 ಡಿಸೆಂಬರ್‌ವರೆಗೆ) ರಾಜ್ಯದಲ್ಲಿ ಉತ್ಪಾದಿಸಲಾದ ಸರಾಸರಿ ಕೃಷಿ ಉತ್ಪನ್ನ.

ಆ. ಹಿಂದಿನ ವರ್ಷಗಳಿಗೆ ಹೋಲಿಸಿದ್ದು, ಮೇಲ್ಕಾಣಿಸಿದ ಅವಧಿಯಲ್ಲಿ ರಾಜ್ಯದ ಕೃಷಿ ಉತ್ಪನ್ನದಲ್ಲಿ ಇಳಿಮುಖವಾಗಿದೆಯೇ;

ಇ. ಪ್ರತಿ ಹೆಕ್ಟೇರಿನಲ್ಲಿ ಕೃಷಿ ಬೆಳೆಗಳು ಮಂದವಾಗಿರುವುದನ್ನು ಸರ್ಕಾರವು ಗಮನಿಸಿದೆಯೇ;

ಈ. ಪ್ರತಿ ಹೆಕ್ಟೇರಿನಲ್ಲಿ ಇಳುವರಿಯನ್ನು ಹೆಚ್ಚಿಸಲು ಮಾರ್ಗೋಪಾಯಗಳನ್ನು ಸೂಚಿಸಲು ತಜ್ಞರ ಸಮಿತಿಯನ್ನು ರಚಿಸಲಾಗಿದೆಯೇ;

ಉ. ಹಾಗಿದ್ದಲ್ಲಿ ತಜ್ಞರ ಸಮಿತಿ ವರದಿಯನ್ನು ನೀಡಿದೆಯೇ;

ಊ. ವರದಿಯನ್ನು ಕೊಟ್ಟಿದ್ದಲ್ಲಿ ಅವರ ಶಿಫಾರಸ್ಸುಗಳ ವಿವರಗಳನ್ನು ಒದಗಿಸುವುದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):-

ಅ. 1991-92 ಮತ್ತು 1992-93ನೇ ಸಾಲಿನ (ಡಿಸೆಂಬರ್ 1992ರ ವರೆಗೆ) ರಾಜ್ಯದ ಕೃಷಿ ಉತ್ಪನ್ನಗಳು ಕೆಳಕಂಡಂತಿವೆ.

(ಉತ್ಪಾದನೆ ಲಕ್ಷ ಟನ್‌ಗಳಲ್ಲಿ)

ಕ್ರಮಸಂಖ್ಯೆ	ಬೆಳೆಗಳು	1991-92	1992-93 (ತಾತ್ಕಾಲಿಕ)

1.	ಧಾನ್ಯಗಳು	72.00	70.96
2.	ಬೇಳೆಗಳು	8.10	5.63
	ಒಟ್ಟು ಆಹಾರಧಾನ್ಯಗಳು (1+2)	80.10	76.59
3.	ಒಟ್ಟು ಎಣ್ಣೆಕಾಳುಗಳು	19.05	18.63
4.	ಹತ್ತಿ	9.56	7.32
5.	ಕಬ್ಬು	243.85	218.26
6.	ಹೊಗೆಸೊಪ್ಪು	0.32	0.37

ಆ. ಹೌದು

ಇ. ಹೌದು

ಈ. ಹೌದು

ಉ. ವರದಿಯನ್ನು ತಜ್ಞರ ಸಮಿತಿ ಇನ್ನೂ ಒಪ್ಪಿಸಬೇಕಾಗಿದೆ.

ಊ. ಉದ್ಭವಿಸುವುದಿಲ್ಲ.

ಲಾಲ್‌ಬಾಗ್ ಮತ್ತು ಕಬ್ಬನ್ ಉದ್ಯಾನವನ ತೋಟಗಾರಿಕೆ ಇಲಾಖೆಯ ವ್ಯಾಪ್ತಿ

(1988): ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ):– ಮಾನ್ಯ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಲಾಲ್‌ಬಾಗ್ ಮತ್ತು ಕಬ್ಬನ್ ಉದ್ಯಾನವನ ತೋಟಗಾರಿಕೆ ಇಲಾಖೆಯ ವ್ಯಾಪ್ತಿಗೆ ಸೇರಿರುವುದು ನಿಜವೆ;

ಆ. ಹಾಗಿದ್ದರೆ, ಈ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಎಷ್ಟು ಹಣವನ್ನು 1991–92ಮತ್ತು 1992–93 (ಡಿಸೆಂಬರ್ 92ರವರೆಗೆ) ರಲ್ಲಿ ವಿನಿಯೋಗಿಸಲಾಗಿದೆ;

ಇ. ಈ ಉದ್ಯಾನವನಗಳು ನಗರದ ಮಧ್ಯಭಾಗದಲ್ಲಿದ್ದು ವ್ಯವಸ್ಥಿತ ರೀತಿಯಲ್ಲಿ ನಿರ್ವಹಣೆ ಮಾಡಲು ಬೆಂಗಳೂರು ಮಹಾನಗರ ಪಾಲಿಕೆಗೆ ವರ್ಗಾಯಿಸುವ ಪ್ರಸ್ತಾವನೆ ಇದೆಯೆ ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):–

ಅ. ಹೌದು

ಆ. ಈ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಕೆಳಕಂಡಂತೆ ಹಣವನ್ನು ಖರ್ಚು ಮಾಡಲಾಗಿದೆ.

(ಲಕ್ಷ ರೂ.ಗಳಲ್ಲಿ)

	1991–92	92–93 (ಡಿಸೆಂಬರ್ 92ರವರೆಗೆ)
ಅ. ಲಾಲ್‌ಬಾಗ್ ಸಸ್ಯ ತೋಟ:		

1. ಯೋಜನೆ	03.00	14.45
2. ಯೋಜನೇತರ	34.92	17.47
3. ಅಂತರರಾಷ್ಟ್ರೀಯ ಫಿಲ್ಮೋತ್ಸವ	8.66	–
ಒಟ್ಟು	46.58	31.92

ಆ. ಕಬ್ಬನ್ ಉದ್ಯಾನವನ:

1. ಯೋಜನೆ	10.00	4.25
2. ಯೋಜನೇತರ	13.25	8.75
3. ಅಂತರರಾಷ್ಟ್ರೀಯ ಫಿಲ್ಮೋತ್ಸವ	04.04	–
ಒಟ್ಟು	27.29	13.00

ಇ. ಇಲ್ಲ

ರಾಜ್ಯದಲ್ಲಿ ಜೋಳದ ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಿರುವ ಜಿಲ್ಲೆಗಳು

(1154): ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಜೋಳದ ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಿರುವ ಜಿಲ್ಲೆಗಳು ಯಾವುವು;

ಆ. ಈ ಜಿಲ್ಲೆಗಳಲ್ಲಿನ ರೈತರು ಬೆಳೆಯುತ್ತಿರುವ ಜೋಳವನ್ನು ಬೆಂಬಲ ಬೆಲೆ ನೀಡಿ ಸರ್ಕಾರವು ಕೊಳ್ಳುವ ಬಗ್ಗೆ ಕ್ರಮ ಕೈಗೊಳ್ಳುವುದೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ. ರಾಜ್ಯದಲ್ಲಿ ಜೋಳದ ಬೆಳೆಯನ್ನು ಹೆಚ್ಚಾಗಿ ಬಿಜಾಪುರ, ಗುಲ್ಬರ್ಗಾ, ಬೀದರ್, ಬೆಳಗಾಂ, ಬಳ್ಳಾರಿ, ರಾಯಚೂರು, ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ.

ಆ. ಭಾರತ ಸರ್ಕಾರವು 1992–93ನೇ ಸಾಲಿನ ಒರಟು ಧಾನ್ಯಗಳ ಸಂಗ್ರಹಣೆ ನೀತಿಯಲ್ಲಿ ಜೋಳವನ್ನು (ಎಫ್.ಎ. ಕ್ಯೂ – ಉತ್ತಮ ಗುಣಮಟ್ಟದ) ಬೆಂಬಲ ಬೆಲೆಯಲ್ಲಿ ಖರೀದಿಸಲು ಪ್ರತಿ ಕ್ವಿಂಟಾಲ್‌ಗೆ ರೂ: 240–00 ನ್ನು ನಿಗದಿ ಮಾಡಿರುತ್ತದೆ. ಇದುವರೆಗೂ ಬಿಳಿ ಜೋಳದ ಮಾರುಕಟ್ಟೆ ದರ ಬೆಂಬಲ ಬೆಲೆಗಿಂತ ಕಡಿಮೆಯಾಗಿರುವುದಿಲ್ಲ. ಹೈಬ್ರಿಡ್ ಜೋಳದ ಮಾರುಕಟ್ಟೆ ದರ ಕೆಲವೊಂದು ಪ್ರದೇಶಗಳಲ್ಲಿ ಬೆಂಬಲ ಬೆಲೆಗಿಂತ ಕಡಿಮೆಯಾಗಿರುತ್ತದೆ. ಆದರೆ ಹೈಬ್ರಿಡ್ ಜೋಳವು ಹೆಚ್ಚು ಅವಧಿಯವರೆಗೆ ಸಂಗ್ರಹಿಸಿಡಲು ಸಾಧ್ಯವಿರುವುದಿಲ್ಲ. ಆದಕಾರಣ ಇದನ್ನು ಬೆಂಬಲ ಬೆಲೆಯಲ್ಲಿ ಸಾರ್ವಜನಿಕ ಪಡಿತರ ವಿತರಣೆಗಾಗಿ ಖರೀದಿಸುವ ಕಾರ್ಯಕ್ರಮವಿರುವುದಿಲ್ಲ.

ಮುಲ್ಕಿಯಲ್ಲಿ ಸಬ್–ರಿಜಿಸ್ಟ್ರಾರ್ ಕಾರ್ಯಾಲಯ ಕಟ್ಟಡ

(1171): ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮುಲ್ಕಿಯಲ್ಲಿ ಸಬ್–ರಿಜಿಸ್ಟ್ರಾರ್ ಕಟ್ಟಡ ಹಳೇಯದಾಗಿದ್ದು, ಈ ಕಟ್ಟಡವನ್ನು ಬಿಟ್ಟು ಬೇರೆ ಬಾಡಿಗೆ ಕಟ್ಟಡದಲ್ಲಿ ಕಾರ್ಯ ಪ್ರಾರಂಭಿಸಿ ಎಷ್ಟು ಸಮಯವಾಯಿತು;

ಆ. ಈಗ ತಿಂಗಳೊಂದಕ್ಕೆ ಕೊಡಲಾಗುತ್ತಿರುವ ಬಾಡಿಗೆ ಎಷ್ಟು;

ಇ. ಹಿಂದಿನ ಕಟ್ಟಡದ ಸ್ಥಳದಲ್ಲಿ ಹೊಸ ಕಟ್ಟಡವನ್ನು ಯಾವಾಗ ಕಟ್ಟಲಾಗುವುದು;

ಈ. ಹಳೇ ಕಟ್ಟಡವನ್ನು ಹಾಗೆಯೇ ಬಿಟ್ಟರೆ ಅದು ಕುಸಿದು ಬೀಳುವ ವಿಷಯವು ಸರ್ಕಾರದವ ಗಮನಕ್ಕೆ ಬಂದಿದೆಯೇ;

ಉ. ಹೊಸ ಕಟ್ಟಡದ ರಚನೆ ತಡವಾಗಲು ಕಾರಣವೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ದಿನಾಂಕ: 1–1–1991ರಿಂದ

ಆ. ತಿಂಗಳಿಗೆ ರೂ. 2,089–00

ಇ. ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿ ಮತ್ತು ನೀಲಿ ನಕ್ಷೆ ಬಂದ ನಂತ ಪರಿಶೀಲಿಸಲಾಗುವುದು.

ಈ. ಶಿಥಿಲವಾಗಿರುವುದರಿಂದ ಹೊಸ ಕಟ್ಟಡ ಕಟ್ಟಲು ಯೋಜಿಸಿದೆ.

ಉ. ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿ ಹಾಗೂ ನೀಲಿ ನಕ್ಷೆ ಬಂದಿರುವುದಿಲ್ಲ ಬಂದ ನಂತರ ಪರಿಶೀಲಿಸಿ ಅನುದಾನ ಪಡೆದು ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು ನಗರದಲ್ಲಿರುವ ಶ್ರೀ ಕಾರಂಜಿ ಆಂಜನೇಯ ಸ್ವಾಮಿ ಮತ್ತು ಶ್ರೀ ದೊಡ್ಡ ಬಸವಣ್ಣ ದೇವಸ್ಥಾನಗಳ ಮುಜರಾಯಿ ಜಮೀನು

(1947): ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ. ಬೆಂಗಳೂರು ನಗರದಲ್ಲಿರುವ ಶ್ರೀ ಕಾರಂಜಿ ಆಂಜನೇಯಸ್ವಾಮಿ ಮತ್ತು ಶ್ರೀ ದೊಡ್ಡ ಬಸವಣ್ಣ ದೇವಸ್ಥಾನಗಳ ಮುಜರಾಯಿ ಜಮೀನುಗಳನ್ನು ಬಿ.ಎಂ.ಎಸ್. ವಿದ್ಯಾಸಂಸ್ಥೆಗೆ ಗುತ್ತಿಗೆಗೆ ನೀಡಲಾಗಿದೆಯೇ;

ಬಿ. ಹಾಗಿದ್ದಲ್ಲಿ, ಗುತ್ತಿಗೆಗೆ ನೀಡಲಾಗಿರುವ ಜಮೀನಿನ ವಿಸ್ತೀರ್ಣವೆಷ್ಟು;

ಸಿ. ಈ ಜಮೀನುಗಳಿಗೆ ನಿಗದಿಪಡಿಸಿರುವ ಗುತ್ತಿಗೆ ಅವಧಿ, ಬಾಡಿಗೆ ಮತ್ತು ಗುಡ್‌ವಿಲ್ ಎಷ್ಟು;

ಡಿ. ಬಾಡಿಗೆ ಮತ್ತು ಗುಡ್‌ವಿಲ್ ಮೊತ್ತವನ್ನು ಆ ಪ್ರದೇಶದ ಈಗಿನ ಮಾರ್ಕೆಟ್ ದರಕ್ಕೆ ಅನುಗುಣವಾಗಿ ನಿಗದಿಪಡಿಸಲಾಗಿದೆಯೇ;

ಎಫ್. ಗುತ್ತಿಗೆಗೆ ನೀಡುವ ಮುನ್ನ ಬೆಂಗಳೂರು ಜಿಲ್ಲಾಧಿಕಾರಿಗಳ ವರದಿ ಪಡೆಯಲಾಗಿತ್ತೇ;

ಜಿ. ಸರ್ಕಾರವು ಈ ಜಮೀನುಗಳ ಗುತ್ತಿಗೆಯ ಮಂಜೂರಾತಿಯನ್ನು ರದ್ದುಪಡಿಸಿ, ಸರ್ಕಾರಿ ಸಂಸ್ಥೆಗಳಿಗೆ ನೀಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಎ. ಹೌದು

ಬಿ. ಈ ಕೆಳಕಂಡ ಜಮೀನನ್ನು ಗುತ್ತಿಗೆಗೆ ನೀಡಲಾಗಿದೆ. 1. ಶ್ರೀ ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನದ 6564 1/2 ಚದರಗಜ ಜಮೀನನ್ನು 50 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದೆ. ಮತ್ತು 2635 ಚದರಗಜ ವಿಸ್ತೀರ್ಣವುಳ್ಳ ಜಮೀನನ್ನು ತಾತ್ಕಾಲಿಕವಾಗಿ ಐದು ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದೆ.

ಶ್ರೀ ದೊಡ್ಡಬಸವಣ್ಣ ದೇವಸ್ಥಾನದ 8596 ಚ. ಮೀ. ವಿಸ್ತೀರ್ಣವುಳ್ಳ ಜಮೀನನ್ನು ಮೂವತ್ತು ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದೆ.

ಸಿ. 3,939 ಚದರಗಜ ಜಮೀನನ್ನು 50 ವರ್ಷಗಳ ಅವಧಿಗೆ ಹಿಂದಿರುಗಿಸಬೇಕಾದ ಮುಂಗಡ 20,000–00 ರೂ. ಮತ್ತು ತಿಂಗಳಿಗೆ ಒಂದು ಸಾವಿರ ರೂ.ಗಳ ಬಾಡಿಗೆಯ ಆಧಾರದ ಮೇಲೆ 1973ರಲ್ಲಿ ಗುತ್ತಿಗೆಗೆ ನೀಡಲಾಗಿದೆ. 2625 1/2 ಚದರಗಜ ಜಮೀನನ್ನು ಐದು ವರ್ಷಗಳ ಅವಧಿಗೆ ತಿಂಗಳಿಗೆ 2,500 ರೂ.ಗಳ ಬಾಡಿಗೆಯ ಆಧಾರದ ಮೇಲೆ 1991ರಲ್ಲಿ ನೀಡಲಾಗಿದೆ. 4844 ಚದರ ಮೀಟರ್ ಜಮೀನನ್ನು ಮೂವತ್ತು ವರ್ಷಗಳ ಅವಧಿಗೆ 1991ರಲ್ಲಿ ವಾರ್ಷಿಕ ರೂ. 12,000–00 ಗಳ ಬಾಡಿಗೆ ಹಣ ಮತ್ತು ಮೂವತ್ತು ಲಕ್ಷ ರೂ.ಗಳ ಗುಡ್‌ವಿಲ್ ಆಧಾರದ ಮೇಲೆ ಗುತ್ತಿಗೆಗೆ ನೀಡಲಾಗಿದೆ.

3752 ಚ.ಮೀ. ಜಮೀನನ್ನು ಮೂವತ್ತು ವರ್ಷಗಳ ಅವಧಿಗೆ ವಾರ್ಷಿಕ ರೂ. 11,000–00 ಬಾಡಿಗೆ ಹಣ ಮತ್ತು 27 ಲಕ್ಷ ರೂ. ಗುಡ್‌ವಿಲ್ ಆಧಾರದ ಮೇಲೆ ಗುತ್ತಿಗೆಗೆ ನೀಡಲಾಗಿದೆ.

ಡಿ. ಪ್ರತಿಯೊಂದು ಗುತ್ತಿಗೆಯನ್ನು ಸರ್ಕಾರದ ನಿರ್ದಿಷ್ಟ ಆದೇಶದ ಅನ್ವಯ ನೀಡಲಾಗಿದೆ.

ಎಫ್. 3839 ಚದರ ಗಜ ನಿವೇಶನವನ್ನು ಗುತ್ತಿಗೆಗೆ 1973 ರಲ್ಲಿ ನೀಡುವಾಗ್ಗೆ ಜಿಲ್ಲಾಧಿಕಾರಿಗಳ ವರದಿ ಪಡೆದಿಲ್ಲ.

2625 1/2 ಚದರಗಜ ನಿವೇಶನವನ್ನು 1981ರಲ್ಲಿ ಗುತ್ತಿಗೆಗೆ ನೀಡುವಾಗ್ಗೆ ಜಿಲ್ಲಾಧಿಕಾರಿಗಳ ವರದಿ ಪಡೆದಿರುವುದಿಲ್ಲ.

1991ರಲ್ಲಿ ತಾತ್ಕಾಲಿಕವಾಗಿ ಐದು ವರ್ಷಕ್ಕೆ 2635 ಚದರಗಜ ಜಮೀನನ್ನು ಗುತ್ತಿಗೆಗೆ ನೀಡುವಾಗ ಜಿಲ್ಲಾಧಿಕಾರಿಯವರ ವರದಿ ಪಡೆದಿರುವುದಿಲ್ಲ.

1991ರಲ್ಲಿ 4844 ಚದರ ಮೀಟರ್ ಜಮೀನನ್ನು ಗುತ್ತಿಗೆಗೆ ನೀಡುವಲ್ಲಿ ಜಿಲ್ಲಾಧಿಕಾರಿಗಳ ವರದಿ ಪಡೆದಿದೆ.

3752 ಚದರ ಮೀಟರ್ ಜಮೀನು 1992ರಲ್ಲಿ ಗುತ್ತಿಗೆಗೆ ನೀಡುವಾಗ ಜಿಲ್ಲಾಧಿಕಾರಿಯವರ ವರದಿ ಪಡೆದಿರುವುದಿಲ್ಲ.

ಜಿ. ಪ್ರಶ್ನೆ ಉದ್ಭವಿಸುವುದಿಲ್ಲ.

ಮೂಡಬಿದರೆಯಲ್ಲಿ ಸಹಕಾರಿ ತರಬೇತಿ ವಿದ್ಯಾಲಯಕ್ಕೆ ಕಟ್ಟಡ

(2008): ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೂಡಬಿದರೆ ಸಹಕಾರಿ ತರಬೇತಿ ವಿದ್ಯಾಲಯ ಯಾವಾಗ ಪ್ರಾರಂಭಗೊಂಡಿತು;

ಆ. ಈ ವಿದ್ಯಾಲಯವನ್ನು ಈಗ ಯಾವ ಕಟ್ಟಡದಲ್ಲಿ ನಡೆಸಲಾಗುತ್ತಿದೆ;

ಇ. ಈ ಕಟ್ಟಡವು ತರಬೇತಿ ಕೊಡುವವರೆ ಅಯೋಗ್ಯ ಎಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿರುವುದು ನಿಜವೇ;

ಈ. ಇದಕ್ಕೆ ಬೇರೆ ಸ್ವಂತ ಕಟ್ಟಡ ಕಟ್ಟುವ ಆಲೋಚನೆ ಸರ್ಕಾರಕ್ಕಿದೆಯೇ;

ಉ. ಸ್ವಂತ ಕಟ್ಟಡ ಯಾವಾಗ ಕಟ್ಟಲಾಗುವುದು ?

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):-

ಅ. ದಿನಾಂಕ: 1-1-1986 ರಿಂದ ಪ್ರಾರಂಭಿಸಲಾಗಿರುತ್ತೆ.

ಆ. ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿದೆ.

ಇ. ಹೌದು

ಈ. ಹೌದು

ಉ. ಸದ್ಯದಲ್ಲೇ ಕಟ್ಟಡ ಕಟ್ಟಲು ಪ್ರಾರಂಭಿಸಲಾಗುವುದು.

ಬೆಂಗಳೂರು ಬಸವನಗುಡಿ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನಲ್ಲಿ ಸಿಬ್ಬಂದಿಯ ನೇಮಕಾತಿ ಸಮಿತಿ

(2089): ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ):- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ನ್ಯಾಷನಲ್ ಸಹಕಾರ ಬ್ಯಾಂಕ್ ನಿ, ಬಸವನಗುಡಿ, ಬೆಂಗಳೂರು ಇದರ ವಿವಿಧ ಹುದ್ದೆಗಳಿಗೆ ಜನವರಿ 1989 ರಿಂದ ಡಿಸೆಂಬರ್ 1992ರ ವರೆಗೆ ನೇಮಕ ಮಾಡಲಾಗಿದೆಯೇ;

ಆ. ನೇಮಕ ಮಾಡಿದ್ದರೆ, ಈ ಅವಧಿಯಲ್ಲಿ ಭರ್ತಿ ಮಾಡಿರುವ ಹುದ್ದೆಗಳ ವಿವರಣೆ;

ಇ. ಈ ಹುದ್ದೆಗಳನ್ನು ಭರ್ತಿ ಮಾಡಿರುವುದಕ್ಕೆ ಸರ್ಕಾರದಿಂದ ಅನುಮತಿ ಪಡೆದಿದೆಯೇ;

ಈ. ಇಲ್ಲದೆಯಿದ್ದಲ್ಲಿ ಅನುಮತಿ ಪಡೆಯದೆ ಭರ್ತಿ ಮಾಡಿರುವುದಕ್ಕೆ ಸರ್ಕಾರವು ಯಾವ ಕ್ರಮ ಕೈಗೊಳ್ಳಲಾಗುವುದು;

ಉ. ಹುದ್ದೆಗಳಿಗೆ ನೇಮಕಾತಿ ಮಾಡುವಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗಿದೆಯೇ;

ಊ. ಮೇಲ್ಕಂಡ ಅವಧಿಯಲ್ಲಿ ನೇಮಕ ಮಾಡಿರುವ ಪರಿಶಿಷ್ಟ ಜಾತಿ: ವರ್ಗದವರ ಸಂಖ್ಯೆ ಎಷ್ಟು;

ಋ. ರೋಸ್ಟರ್ ಪದ್ಧತಿಯನ್ನು ಅನುಸರಿಸದಿದ್ದಲ್ಲಿ ಸರ್ಕಾರವು ಆಡಳಿತ ಮಂಡಳಿಯ ವಿರುದ್ಧ ಕ್ರಮ ಕೈಗೊಂಡು ರದ್ದುಪಡಿಸಿ, ಆಡಳಿತಾಧಿಕಾರಿಯವರನ್ನು ನೇಮಕ ಮಾಡಲಾಗಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):-

ಅ. ಹೌದು

ಆ. 55 ಹಿರಿಯ ಸಹಾಯಕರುಗಳು ಹಾಗೂ 8 ಅಟೆಂಡರುಗಳು.

ಇ. ಇಲ್ಲ

ಈ. ಬ್ಯಾಂಕು ಕರ್ನಾಟಕ ಸಹಕಾರ ಸಂಘಗಳ ನಿಯಮ 17ನ್ನು ಉಲ್ಲಂಘಿಸಿ, ಮಂಜೂರಾದ ಸಿಬ್ಬಂದಿ ಬಲಕ್ಕಿಂತ ಅಧಿಕವಾಗಿ ನೇಮಕಾತಿ ಮಾಡಿಕೊಂಡಿದೆ. ಈ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಳ್ಳಬೇಕೆಂಬುದನ್ನು ಪರಿಶೀಲಿಸುತ್ತಿದೆ.

ಉ. ಇಲ್ಲ.

ಊ. ಕಿರಿಯ ಸಹಾಯಕರ ಹುದ್ದೆಗೆ ಇಬ್ಬರನ್ನು ನೇಮಕ ಮಾಡಲಾಗಿದೆ.

ಋ. ಇಲ್ಲ

ರಾಜ್ಯದಲ್ಲಿ ತೋಟಗಾರಿಕಾ ಉತ್ಪಾದನಾ ಅಭಿವೃದ್ಧಿಗೆ ಇರುವ ಅವಕಾಶ

(1373): ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):- ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಹಣ್ಣು, ತರಕಾರಿ ಮತ್ತು ಹೂವು ಉತ್ಪಾದನೆ ದೃಷ್ಟಿಯಿಂದ ತೋಟಗಾರಿಕೆ ಅಭಿವೃದ್ಧಿಗೆ ವಿಪುಲ ಅವಕಾಶವಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ. ಹಾಗಿದ್ದಲ್ಲಿ ರಫ್ತು ಮಾಡಬಹುದಾದ ಈ ಉತ್ಪನ್ನಗಳಿಗಾಗಿ ವ್ಯಾಪಕ ಮಾರಾಟ ನಿಗಮ ಆರಂಭಿಸಲು ಸರ್ಕಾರವು ಪರಿಗಣಿಸುವುದೇ;

ಇ. ನೆದರ್‌ಲ್ಯಾಂಡ್‌ನಲ್ಲಿರುವಂತೆ ಹೂದೋಟ ಮತ್ತು ಪುಷ್ಪ ಪ್ರದರ್ಶನಗಳನ್ನು ವೈಜ್ಞಾನಿಕವಾಗಿ ಮತ್ತು ವಿವೇಚನೆಯಿಂದ ಆಧುನೀಕರಿಸಿ ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಪ್ರವಾಸಿಗಳನ್ನು ಆಕರ್ಷಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):-

ಅ. ಹೌದು.

ಆ. ರಫ್ತು ಮಾಡಬಹುದಾದ ತೋಟಗಾರಿಕೆ ಉತ್ಪನ್ನಗಳಿಗಾಗಿ ಮಾರಾಟ ನಿಗಮ ಆರಂಭಿಸುವ ಪ್ರಸ್ತಾವನೆ ಸರ್ಕಾರದಲ್ಲಿ ಇರುವುದಿಲ್ಲ. ಆದರೂ, ತೋಟಗಾರಿಕೆ ಉತ್ಪನ್ನಕ್ಕೆ ಬೆಳೆಗಾರರಿಗೆ ಉತ್ತಮ ಮಾರುಕಟ್ಟೆ ಸೌಲಭ್ಯ ಕಲ್ಪಿಸಲು ಸರಕಾರವು ಹಾಪ್ ಕಾಮ್ಸ್ ಮತ್ತು ಜಿಲ್ಲಾ ತೋಟಗಾರಿಕೆ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘಗಳಿಗೆ ಉತ್ತೇಜನ ನೀಡುತ್ತಿದೆ. ಈ ಸಂಘಗಳನ್ನು ಬಲಗೊಳಿಸಲು ಎನ್.ಸಿ.ಡಿ.ಸಿ. ಮತ್ತು ಎನ್.ಹೆಚ್.ಬಿ. ಸಂಸ್ಥೆಗಳು ಸಾಲ ಮತ್ತು ರಿಯಾಯಿತಿ ಮೂಲಕ ಧನ ಸಹಾಯ ಒದಗಿಸಲು ಮುಂದೆ ಬಂದಿವೆ.

ಇ. ನೆದರ್‌ಲ್ಯಾಂಡ್‌ನಲ್ಲಿರುವಂತೆ ಹೂದೋಟ ಮತ್ತು ಪುಷ್ಪ ಪ್ರದರ್ಶನಗಳನ್ನು ಆಧುನೀಕರಿಸುವ ಯೋಜನೆಯು ಸರ್ಕಾರದ ಮುಂದಿರುವುದಿಲ್ಲ.

ಗೊರೂರು ತೋಟಗಾರಿಕೆ ಫಾರಂನ ತಂತಿ ಬೇಲಿ ಕಳುವಾಗಿರುವ ಬಗ್ಗೆ

(1443): ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):- ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಅರಕಲಗೂಡು ತಾಲ್ಲೂಕು, ಗೊರೂರು ಬಳಿ ಇರುವ ತೋಟಗಾರಿಕೆ ಫಾರಂನಲ್ಲಿದ್ದ ಸುಮಾರು

65 ಎಕರೆ ಪ್ರದೇಶಕ್ಕೆ ಹಾಕಿದ್ದ ತಂತಿ ಬೇಲಿ ಕಳುವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿರುತ್ತದೆಯೇ;

ಆ. ಬಂದಿದ್ದರೆ ಯಾವಾಗ ಬಂದಿರುತ್ತದೆ. ಮತ್ತು ಯಾರ ಮೇಲೆ ಕ್ರಮಕೈಗೊಳ್ಳಲಾಗಿದೆ;

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):–

ಅ. ಈ ಕ್ಷೇತ್ರವು ತೋಟಗಾರಿಕೆ ಇಲಾಖೆಯ ವಶಕ್ಕೆ ಹಾಸನ ಜಿಲ್ಲಾ ಪರಿಷತ್ತಿನಿಂದ ದಿನಾಂಕ 9.6.1988 ರಂದು ವರ್ಗಾವಣೆಯಾಯಿತು. ಈ ಕ್ಷೇತ್ರವನ್ನು ತೋಟಗಾರಿಕೆ ಇಲಾಖೆಯ ವಶಕ್ಕೆ ತೆಗೆದುಕೊಳ್ಳುವಾಗ ಅದಕ್ಕೆ ತಂತಿ ಬೇಲಿ ಯಾವುದೂ ಇರಲಿಲ್ಲ.

ಆ. ಉದ್ಭವಿಸುವುದಿಲ್ಲ.

ಮಹಾಮಸ್ತಕಾಭಿಷೇಕಕ್ಕೆ ರಾಜ್ಯ ಹಾಗೂ ಕೇಂದ್ರದ ಸಹಾಯಧನ

(2057): ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಶ್ರವಣ ಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕವು ಯಾವ ತಿಂಗಳಲ್ಲಿ ನಡೆಯಲಿದೆ;

ಆ. ಈ ಮಹಾಮಸ್ತಕಾಭಿಷೇಕಕ್ಕೆ ರಾಜ್ಯ ಸರ್ಕಾರವು ಹಾಗೂ ಕೇಂದ್ರ ಸರ್ಕಾರವು ನೀಡಿರುವ ಸಹಾಯಧನ ಎಷ್ಟು;

ಇ. ಈ ಮಹಾ ಮಸ್ತಕಾಭಿಷೇಕಕ್ಕೆ ಉಸ್ತುವಾರಿಯನ್ನು ನೋಡಿಕೊಳ್ಳುವ ಸಲುವಾಗಿ ಸರ್ಕಾರದ ವತಿಯಿಂದ ವಿಶೇಷ ಅಧಿಕಾರಿಯನ್ನು ನೇಮಕ ಮಾಡಲಾಗಿದೆಯೇ; ಹಾಗಿದ್ದಲ್ಲಿ ಮಹಾ ಮಸ್ತಕಾಭಿಷೇಕದ ವಿಶೇಷ ಅಧಿಕಾರಿಯವರಿಗೆ ಎಷ್ಟು ಜನ ಸಿಬ್ಬಂದಿ ವರ್ಗದವರನ್ನು ಒದಗಿಸಲಾಗಿದೆ;

ಈ. ಇಲ್ಲದಿದ್ದಲ್ಲಿ ವಿಶೇಷ ಅಧಿಕಾರಿಯವರಿಗೆ ಸಿಬ್ಬಂದಿಯನ್ನು ಒದಗಿಸಿ, ವಿಶೇಷ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಕಾರ್ಯ ನಿರ್ವಹಿಸಲು ಶ್ರವಣಬೆಳಗೊಳಕ್ಕೆ ಹತ್ತಿರವಿರುವ ಚನ್ನರಾಯಪಟ್ಟಣ ಅಥವಾ ಹಾಸನ ಜಿಲ್ಲಾ ಕಛೇರಿ ಸೌಲಭ್ಯವನ್ನು ಒದಗಿಸಿಕೊಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. 1993ರ ಡಿಸೆಂಬರ್ ಮಾಹೆಯಲ್ಲಿ ಆಚರಿಸಲು ಉದ್ದೇಶಿಸಿದೆ.

ಆ. 1992–93ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಮಹಾಮಸ್ತಕಾಭಿಷೇಕ ಲೆಕ್ಕ ಶೀರ್ಷಿಕೆಯಲ್ಲಿ ..0 ಕೋಟಿ ರೂ.ವನ್ನು ಒದಗಿಸಿದೆ. ಇದಲ್ಲದೆ ರಾಜ್ಯ ಸಾದಿಲ್ವಾರು ನಿಧಿಯಿಂದ ಕುಡಿಯುವ ನೀರಿನ ವ್ಯವಸ್ಥೆಗಾಗಿ 242.00 ಲಕ್ಷಗಳನ್ನು ಮತ್ತು ಅತಿಥಿ ಗೃಹಗಳ ನಿರ್ಮಾಣ ಹಾಗೂ ರಸ್ತೆಗಳ ಕಾಮಗಾರಿಗಾಗಿ 2.00 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಕ್ರಮ ಕೈಗೊಂಡಿದೆ. 1993–94ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಮಹಾಮಸ್ತಕಾಭಿಷೇಕ ಲೆಕ್ಕ ಶೀರ್ಷಿಕೆಯಲ್ಲಿ 5.00 ಕೋಟಿ ರೂ.ಗಳನ್ನು ಒದಗಿಸಿರುತ್ತದೆ. 1993–94ನೇ ಸಾಲಿನ ವಿವಿಧ ಇಲಾಖೆಗಳ ಕಾಮಗಾರಿಗಾಗಿ ಪ್ರಸ್ತಾವನೆ ಬಂದಿದ್ದು ಇದರ ವೆಚ್ಚ ಅಂದಾಜು 8.00 ಕೋಟಿಗಳಷ್ಟು ಆಗಿರುತ್ತದೆ. ಹೆಚ್ಚುವರಿ ಹಣವನ್ನು ಆರ್ಥಿಕ ಇಲಾಖೆಯಿಂದ ಪಡೆಯಲು ಕ್ರಮ ಕೈಗೊಳ್ಳಲಾಗುವುದು. ಕೇಂದ್ರ ಸರ್ಕಾರವು

ಮಹಾಮಸ್ತಕಾಭಿಷೇಕದ ಅಂಗವಾಗಿ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ 20.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಇ. ಹೌದು, ಸರ್ಕಾರದ ಆದೇಶ ಸಂಖ್ಯೆ:ಕಂಇ 287 ಎಂಇಟಿ 92 ದಿ:26-3-1993 ರಲ್ಲಿ ವಿಶೇಷಾಧಿಕಾರಿಯವರನ್ನು ನೇಮಕ ಮಾಡಿದೆ. ಸದರಿ ಅಧಿಕಾರಿಗೆ ಬೇಕಾಗಿರುವ ಸಿಬ್ಬಂದಿಯನ್ನು ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಿಂದಲೇ ಒದಗಿಸಲು ಸೂಚಿಸಲಾಗಿದೆ.

ಈ. ಮಹಾ ಮಸ್ತಕಾಭಿಷೇಕದ ಕಾರ್ಯಕ್ರಮದ ಅಂಗವಾಗಿ ವಿವಿಧ ಇಲಾಖೆಗಳ ಕಾಮಗಾರಿಗಳು ನಡೆಯುಬೇಕಾಗಿದ್ದು ಅದರ ಸಂಬಂಧಿತ ಕಛೇರಿಗಳೆಲ್ಲವು ಬೆಂಗಳೂರಿನಲ್ಲೇ ಇದ್ದು ಕೆಲಸ ಕಾರ್ಯಗಳನ್ನು ನೋಡಿಕೊಳ್ಳಲು ಅನುಕೂಲವಾಗಿರುವುದರಿಂದ ವಿಶೇಷಾಧಿಕಾರಿಯವರ ಕೇಂದ್ರ ಸ್ಥಾನವನ್ನು ಬೆಂಗಳೂರಿನಲ್ಲಿಯೇ ಇಡಬೇಕೆಂದು ಪರಿಗಣಿಸಿ ಇವರು ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಲ್ಲಿ ಕಾರ್ಯನಿರ್ವಹಿಸುವಂತೆ ವ್ಯವಸ್ಥೆಯನ್ನು ಮಾಡಲಾಗಿದೆ.

ಅನಧಿಕೃತ ಕಟ್ಟಡಗಳ ಬಗ್ಗೆ ನಿರ್ಮಾಣಗಳನ್ನು ತಡೆಯುವುದರ ಬಗ್ಗೆ

(2058): ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಅನಧಿಕೃತ ನಿರ್ಮಾಣಗಳ ತಡೆ ಕಛೇರಿಯು ಬೆಂಗಳೂರು ನಗರದಲ್ಲಿ ಇರುವುದು ನಿಜವೇ;

ಆ. ಎಷ್ಟು ಜನ ಗ್ರೂಪ್–ಬಿ ಅಧಿಕಾರಿಗಳು, ಗ್ರೂಪ್–ಸಿ ಅಧಿಕಾರಿಗಳು ಈ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವರು;

ಇ. ಅನಧಿಕೃತ ಕಟ್ಟಡಗಳ ನಿರ್ಮಾಣಗಳನ್ನು ತಡೆಯುವ ಬದಲು ಜಾಸ್ತಿಯಾಗಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. 1989 ರಿಂದ 1992 ಡಿಸೆಂಬರ್ ಅಂತ್ಯದವರೆಗೆ ಎಷ್ಟು ಅನಧಿಕೃತ ನಿರ್ಮಾಣಗಳನ್ನು ತಡೆ ಹಿಡಿಯಲಾಗಿದೆ;

ಉ. ಈ ಕಛೇರಿಯಿಂದ ಸರ್ಕಾರಕ್ಕೆ ಏನಾದರೂ ಉಪಯೋಗವಾಗಿದೆಯೇ;

ಊ. ಇಲ್ಲದಿದ್ದಲ್ಲಿ ಈ ಕಛೇರಿಯನ್ನು ಮುಚ್ಚಲು ಸರ್ಕಾರವು ಕ್ರಮಕೈಗೊಳ್ಳುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಹೌದು.

ಆ. 5 ಜನ ಗ್ರೂಪ್–ಬಿ ಅಧಿಕಾರಿಗಳು
71 ಜನ ಗ್ರೂಪ್–ಸಿ ನೌಕರರು

ಇ. ಬಂದಿರುತ್ತದೆ.

ಈ. 12,738 ಕಟ್ಟಡಗಳು

ಉ. ಉಪಯೋಗವಿದೆ. ಈ ಕೆಲಸದ ಜೊತೆಗೆ ಈ ಸಿಬ್ಬಂದಿಯು ವಿವಿಧ ಇಲಾಖೆಗಳ ಸರ್ಕಾರಿ ಬಾಕಿ ಹಣವನ್ನು ಕೂಡ ವಸೂಲು ಮಾಡುತ್ತಾರೆ.

ಊ. ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಟಿ. ನರಸೀಪುರ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ

(1589): ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಟಿ. ನರಸೀಪುರ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ. ಬಂದಿದ್ದಲ್ಲಿ; ಯಾವಾಗ ಕೆಲಸ ಪ್ರಾರಂಭಿಸುವಿರಿ, ಹಾಗೂ ಅದಕ್ಕೆ ತಗಲುವ ವೆಚ್ಚವೆಷ್ಟು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಅ. ಬಂದಿದೆ.

ಆ. ಪರಿಶೀಲನೆಯಲ್ಲಿದೆ

ಮಾತೃ ಇಲಾಖೆಯಿಂದ ಬೇರೆ ಇಲಾಖೆಗೆ ಸರ್ಕಾರಿ ನೌಕರರ ಪ್ರತಿನಿಯೋಜನೆಯ ಗರಿಷ್ಠ ಅವಧಿ

(1591): ಶ್ರೀ ಕೆ.ಸಿ. ಮೊಡ್ಗೇಕರ್ ದೇಸಾಯಿ (ಹಿರೇಬಾಗೇವಾಡಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಾತೃ ಇಲಾಖೆಯಿಂದ ಸರ್ಕಾರದ ಬೇರೆ ಇಲಾಖೆಗೆ ಸರ್ಕಾರಿ ನೌಕರರ ಪ್ರತಿನಿಯೋಜನೆಯ ಗರಿಷ್ಠ ಅವಧಿ ಬಗ್ಗೆ ಸರ್ಕಾರವು ನಿಗದಿಪಡಿಸಿರುವ ಮಾರ್ಗಸೂಚಿಗಳು;

ಆ. ಪ್ರತಿನಿಯೋಜನೆ ಗರಿಷ್ಠ ಅವಧಿಯನ್ನು ಮೀರಿ ಬೆಳಗಾವಿ ಜಿಲ್ಲಾಧಿಕಾರಿಗಳ ಬೆಳಗಾವಿ ಕಛೇರಿಗಳಲ್ಲಿ ಪ್ರತಿನಿಯೋಜನೆ ಮೇಲೆ ಇರುವ ನೌಕರರ ಸಂಖ್ಯೆ (ತಾಲ್ಲೂಕುವಾರು ಮಾಹಿತಿ ನೀಡುವುದು);

ಇ. ಅಂತಹ ಸರ್ಕಾರಿ ನೌಕರರನ್ನು ಅವರುಗಳ ಮಾತೃ ಇಲಾಖೆಗೆ ಹಿಂದಿರುಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಅ. ಐದು ವರ್ಷಗಳು

ಆ. ಕರ್ನಾಟಕ ಸರ್ಕಾರದ ಸಚಿವಾಲಯದಿಂದ ಸಹಾಯಕ (ಪ್ರಥಮ ದರ್ಜೆ ಸಹಾಯಕ) ವೃಂದದ ನೌಕರರೊಬ್ಬರು ಮಾತ್ರ ದಿನಾಂಕ: 8-6-89ರಿಂದ ಚಿಕ್ಕೋಡಿ ಉಪ-ವಿಭಾಗಾಧಿಕಾರಿಗಳ ಕಛೇರಿಯಲ್ಲಿ ಪ್ರತಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇ. ಹಿಂದಿರುಗಿಸುವ ಪ್ರಶ್ನೆ ಸಧ್ಯಕ್ಕೆ ಉದ್ಭವಿಸುವುದಿಲ್ಲ.

ದಾವಣಗೆರೆ ನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಪರಿವರ್ತಿಸುವ ಬಗ್ಗೆ

(1709): ಶ್ರೀ ವೈ. ಎಂ. ವೀರಣ್ಣ (ದಾವಣಗೆರೆ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಾವಣಗೆರೆ ನಗರವನ್ನು ಜಿಲ್ಲೆಯನ್ನಾಗಿ ಪರಿಗಣಿಸುವುದಾಗಿ ಕಳೆದ ಅಧಿವೇಶನದಲ್ಲಿ 8–12–92ರಂದು ಭರವಸೆ ನೀಡಿದ್ದು ಈ ಭರವಸೆಯನ್ನು ಜಾರಿಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

ಆ. ಸದರಿ ವರ್ಷದಲ್ಲಿಯೇ ಜಿಲ್ಲಾ ಕೇಂದ್ರವನ್ನಾಗಿ ಮಾಡುವ ಯೋಚನೆ ಸರ್ಕಾರಕ್ಕಿದೆಯೇ;

ಇ. ಹಾಗಿದ್ದಲ್ಲಿ ಯಾವಾಗ ಆದೇಶ ಹೊರಡಿಸಲಾಗುವುದು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ರಾಜ್ಯದ ಜಿಲ್ಲೆ ಹಾಗೂ ತಾಲ್ಲೂಕು ಪುನರ್ರಚನೆ ಬಗ್ಗೆ ರಚಿಸಲಾಗಿದ್ದ ವಾಸುದೇವರಾವ್ ಹುಂಡೇಕರ್: ಗದ್ದೀಗೌಡರ್ ಸಮಿತಿಗಳು ನೀಡಿರುವ ವರದಿಗಳನ್ನು ಪರಿಶೀಲಿಸಿ ಸೂಕ್ತ ಅಭಿಪ್ರಾಯವನ್ನು ನೀಡುವಂತೆ ಕೋರಿ ಸಚಿವ ಸಂಪುಟವು ಸಚಿವ ಸಂಪುಟ ಉಪಸಮಿತಿಯನ್ನು ರಚಿಸಿತ್ತು. ಈ ಉಪಸಮಿತಿಯು ಕಾರ್ಯದರ್ಶಿಗಳ ಸಮಿತಿಯನ್ನು ರಚಿಸಿ, ಹೊಸದಾಗಿ ಜಿಲ್ಲೆ ಹಾಗೂ ತಾಲ್ಲೂಕುಗಳನ್ನು ರಚಿಸುವಾಗ ಭೌಗೋಳಿಕ ಆಡಳಿತಾತ್ಮಕ, ಆರ್ಥಿಕ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಪರಿಶೀಲಿಸಿ, ಪ್ರಸ್ತಾವನೆ ಸಲ್ಲಿಸಲು ನಿರ್ದೇಶಿಸಿತ್ತು. ಅದರ ಪ್ರಕಾರ ಅಧಿಕಾರಿಗಳ ಸಮಿತಿಯು ಸುದೀರ್ಘ ಪರಿಶೀಲನೆಯ ನಂತರ ಅಂತಿಮ ವರದಿಯನ್ನು ತಯಾರಿಸಿದೆ. ಇದನ್ನು ಸರ್ಕಾರ ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳುವುದು.

ಆ. ಪ್ರಶ್ನೆ – (ಅ) ಗೆ ನೀಡಿರುವ ಉತ್ತರವೇ ಇದಕ್ಕೂ ಅನ್ವಯಿಸುತ್ತದೆ.

ಇ. ಪ್ರಶ್ನೆ – (ಆ) ಗೆ ನೀಡಿರುವ ಉತ್ತರವೇ ಇದಕ್ಕೂ ಅನ್ವಯಿಸುತ್ತದೆ.

ತಾಲ್ಲೂಕು ಸಮಿತಿ ಅಧಿಕಾರಿಗಳ ಮತ್ತು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ದರ್ಜೆಯಲ್ಲಿ ತಾರತಮ್ಯ

(1710): ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ತಾಲ್ಲೂಕು ಪಂಚಾಯ್ತಿ ಸಮಿತಿಯಲ್ಲಿ ಬರತಕ್ಕಂಥಹ ಅಧಿಕಾರಿಗಳು ಪ್ರಥಮ ದರ್ಜೆ 'ಎ' ಗುಂಪಿನ ಅಧಿಕಾರಿಗಳಾಗಿದ್ದು, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಮಾತ್ರ ಪ್ರಥಮ ದರ್ಜೆ 'ಬಿ' ಗುಂಪಿನ ಅಧಿಕಾರಿಗಳಾಗಿರುವ ಬಗ್ಗೆ ಸರ್ಕಾರದ ತಾರತಮ್ಯವೇನು;

ಆ. ಈ ತಾರತಮ್ಯವನ್ನು ಹೋಗಲಾಡಿಸಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):–

ಅ. ವೃಂದ ಮತ್ತು ನೇಮಕಾತಿ ನಿಯಮಗಳ ಮತ್ತು ರಾಜ್ಯ ಸಿವಿಲ್ ಸೇವೆಗಳ ವರ್ಗೀಕರಣದ

ಪ್ರಕಾರ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಹುದ್ದೆಯು ರೂ. 1900–3650 ಗಳ ವೇತನ ಶ್ರೇಣಿಯನ್ನು ಹೊಂದಿದ ಸಮೂಹ 'ಬಿ' ಹುದ್ದೆಯಾಗಿರುತ್ತದೆ.

ಆ. ಕ್ಷೇತ್ರಾಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆಯನ್ನು ಕರ್ನಾಟಕ ನಾಲ್ಕನೆ ವೇತನ ಆಯೋಗದ ಪರಿಶೀಲನೆಗಾಗಿ ಮಂಡಿಸಿದೆ.

ರೈತರು ಬೆಳೆದ ಬೆಳೆಗಳಿಗೆ ಸಿಗುತ್ತಿರುವ ಬೆಲೆ ಕುರಿತು

(1711): ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರೈತರು ಬೆಳೆದ ಬೆಳೆಗಳಿಗೆ ಸಿಗುತ್ತಿರುವ ಬೆಲೆ ರೈತರು ಬೆಳೆ ಬೆಳೆಯಲು ಖರ್ಚು ಮಾಡಿದ ಹಣಕ್ಕಿಂತಲೂ ಕಡಿಮೆ ಹಣವನ್ನು ಪಡೆಯುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈ ಗೊಂಡಿರುವ ಕ್ರಮವೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ. ರಾಜ್ಯದಲ್ಲಿ ಬೆಳೆಯುವ ಮುಖ್ಯ ಕೃಷಿ ಉತ್ಪನ್ನಗಳಿಗೆ 1992–93ನೇ ಸಾಲಿಗೆ ಶಿಫಾರಸ್ಸು ಮಾಡಿದ ಬೆಂಬಲ ಬೆಲೆಗಳನ್ನು, ಇದೇ ವರ್ಷ ಮಾರುಕಟ್ಟೆಗಳಲ್ಲಿ ಮಾರಾಟವಾದ ಬೆಲೆಗಳಿಗೆ ಹೋಲಿಸಿದಲ್ಲಿ ಶಿಫಾರಸ್ಸು ಮಾಡಿದ ಬೆಲೆಗಿಂತ (ಉತ್ಪಾದನಾ ವೆಚ್ಚ) ಕಡಿಮೆ ಬೆಲೆಯಲ್ಲಿ ಮಾರಾಟವಾಗಿರುವುದು ಹೆಚ್ಚಾಗಿ ಕಂಡು ಬಂದಿರುವುದಿಲ್ಲ.

ಆ. ಒಂದು ವೇಳೆ ಕಡಿಮೆಯಾದಲ್ಲಿ ರೈತನು ಬೆಳೆದ ಬೆಳೆಗಳ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕಿಸಿಕೊಡುವುದು ರಾಜ್ಯ ಸರ್ಕಾರದ ಉದ್ದೇಶವಾಗಿರುತ್ತದೆ. ಆದರೆ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಗಳನ್ನು ನಿರ್ಧರಿಸುವುದು ಕೇಂದ್ರ ಸರ್ಕಾರದ ಕಾರ್ಯ ನೀತಿ ವಿಷಯವಾಗಿರುತ್ತದೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರವು ಸೂಚನಾ ರೂಪದಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದಾಗಿರುತ್ತದಷ್ಟೆ. ರಾಜ್ಯದ ವಿವಿಧ ಬೆಳೆಗಳ ಸಾಗುವಳಿ ಹಾಗೂ ಉತ್ಪನ್ನಗಳ ಮತ್ತು ಖರ್ಚುಗಳ ಅಧ್ಯಯನ ನಡೆಸಲು ರಾಜ್ಯ ಸರ್ಕಾರವು ತನ್ನದೇ ಆದ ಒಂದು ಕೃಷಿ ನಿರ್ವಹಣಾ ವಿಭಾಗವನ್ನು ಕೃಷಿ ಇಲಾಖೆ ಅಡಿಯಲ್ಲಿ ಹೊಂದಿರುತ್ತದೆ. ಈ ವಿಭಾಗವು ವಿವಿಧ ಕೃಷಿ ಬೆಳೆಗಳ ಉತ್ಪನ್ನದ ಖರ್ಚನ್ನು ವೈಜ್ಞಾನಿಕವಾಗಿ ಕಂಡುಹಿಡಿದು ಅದಕ್ಕೆ ಉಬ್ಬರದ ಬಾಬ್ತು ಹಾಗೂ ಶೇ. 15ರಷ್ಟು ಲಾಭಾಂಶವನ್ನು ಸೇರಿಸಿ ಕೇಂದ್ರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗಕ್ಕೆ ರಾಜ್ಯ ಸರ್ಕಾರದ ಮೂಲಕ ಬೆಂಬಲ ಬೆಲೆ ನಿರ್ಧರಿಸುವುದಕ್ಕೋಸ್ಕರ ಸೂಚನಾ ರೂಪದಲ್ಲಿ ಕಳುಹಿಸಿಕೊಡುತ್ತದೆ. ಆದರೆ ಕೇಂದ್ರ ಸರ್ಕಾರವು ವಿವಿಧ ರಾಜ್ಯಗಳ ಸಲಹೆಗಳನ್ನಲ್ಲದೇ ರಾಷ್ಟ್ರಮಟ್ಟದ ಇತರೇ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಬೆಂಬಲ ಬೆಲೆಗಳನ್ನು ನಿರ್ಧರಿಸುತ್ತಿದೆ.

ಭೂಸೇನಾ ನಿಗಮದವರಿಂದ ಸೇಡಂ ತಾಲ್ಲೂಕಿನಲ್ಲಿ ಕಳಪೆ ದರ್ಜೆಯ ಮನೆ ನಿರ್ಮಾಣ

(1764): ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):– ಮಾನ್ಯ ಸಕ್ಕರೆ ಮತ್ತು ಭೂಸೇನಾ ನಿಗಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಆಲೂರು (ಕೆ) ಗ್ರಾಮದಲ್ಲಿ

ಭೂಸೇನಾ ನಿಗಮದವರು ನಿರ್ಮಾಣ ಮಾಡುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ಅಡಿಪಾಯವು ಕಳಪೆ ದರ್ಜೆಯ ಅಡಿಪಾಯವಾಗಿರುವುದು ಸರ್ಕಾರಕ್ಕೆ ತಿಳಿದಿದೆಯೆ;

ಆ. ನಾನು ದಿನಾಂಕ 8-2-93ರಂದು ಆ ಭಾಗಕ್ಕೆ ಭೇಟಿ ನೀಡಿದಾಗ ಆ ಭಾಗದ ಪ್ರಮುಖರ ಸಮಕ್ಷಮದಲ್ಲಿ ಈ ಕಟ್ಟಡವನ್ನು ವೀಕ್ಷಿಸಿದರೆ ಎಲ್ಲಿಯೂ ಸಹ ಅಡಿಪಾಯ ಭದ್ರವಾಗಿಲ್ಲದೆ ಈ ಕಟ್ಟಡ ಅಭದ್ರವೆಂದು ಪರಿಗಣಿಸಿ ನಾನು ಸಂಬಂಧಪಟ್ಟ ಉಪನಿರ್ದೇಶಕರಿಗೆ ಹೇಳಿದರೆ ಅವರು ಕೈಗೊಂಡಿರುವ ಕ್ರಮವೇನು;

ಇ. ಭೂಸೇನಾ ನಿಗಮದವರು ಸೇಡಂ ತಾಲ್ಲೂಕಿನಲ್ಲಿ ಕಳಪೆ ದರ್ಜೆಯ ಮನೆಗಳ ನಿರ್ಮಾಣ ಮಾಡಿದರೆ ಮನೆಗಳು ಕುಸಿಯುವುದಿಲ್ಲವೇ;

ಈ. ಲಕ್ಷಾನುಗಟ್ಟಲೇ ರೂಪಾಯಿ ಮುಂಗಡವಾಗಿ ಇವರಿಗೆ ನೀಡಿ ಇಂತಹ ಅಭದ್ರವಾದ ಕಟ್ಟಡಗಳನ್ನು ನಿರ್ಮಿಸಿದವರ ವಿರುದ್ಧ ಸರ್ಕಾರವು ಕೈಗೊಂಡ ಕ್ರಮವೇನು; ಸುಭದ್ರ ಮನೆಗಳನ್ನು ಕಟ್ಟಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಬಿ.ಎಸ್. ಪಾಟೀಲ್ (ಸಕ್ಕರೆ ಮತ್ತು ಭೂಸೇನಾ ನಿಗಮ ಸಚಿವರು):-

ಅ. ಇಲ್ಲ

ಆ. ಮಾನ್ಯ ಸದಸ್ಯರು ದಿ: 8-2-93ರಂದು ಆ ಭಾಗಕ್ಕೆ ಭೇಟಿ ನೀಡಿರುತ್ತಾರೆ. ತದನಂತರ ಉಪನಿರ್ದೇಶಕರು ಸಂಬಂಧಿಸಿದ ಸಹಾಯಕ ನಿರ್ದೇಶಕರು ಹಾಗೂ ಇಂಜಿನೀಯರ್‌ರವರ ಜೊತೆಗೆ ಸ್ಥಳ ತನಿಖೆ ಮಾಡಿರುತ್ತಾರೆ. ಆ ಸಮಯದಲ್ಲಿ ಕೆಲಸ ಪ್ರಗತಿಯಲ್ಲಿದ್ದು ಬುನಾದಿಯು ಭದ್ರವಾದ ಸ್ಥಿತಿಯಲ್ಲಿರುವಂತೆ ಕ್ರಮ ಕೈಗೊಳ್ಳಲಾಗಿದೆ.

ಇ. ಕಳಪೆ ನಿರ್ಮಾಣ ಮಾಡಿಲ್ಲವಾದ ಕಾರಣ, ಮನೆಗಳು ಕುಸಿಯುವ ಪ್ರಮೇಯವಿರುವುದಿಲ್ಲ.

ಈ. ಭೂಸೇನಾ ನಿಗಮದ ನಿಯಮಗಳ ಪ್ರಕಾರ ಕಳಪೆ ದರ್ಜೆಯ ಮನೆ ಕಟ್ಟಿದ್ದು ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಯನ್ನು ವಿಚಾರಣೆಗೆ ಗುರಿಪಡಿಸುವುದಲ್ಲದೆ, ಸಂಬಂಧಪಟ್ಟವರಿಂದ ನಷ್ಟದ ಹಣವನ್ನು ಭರಿಸಲಾಗುವ ವ್ಯವಸ್ಥೆ ಇದೆ. ಅಲ್ಲದೆ, ಕಳಪೆ ಮಟ್ಟದ ಕಟ್ಟಡವನ್ನು ನಿರ್ಮಿಸಿರುವುದು ಸಾಬೀತಾದರೆ ನಿರ್ಮಿಸಿದವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಕಾಮಗಾರಿ ಕೆಲಸ

(2054): ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಭೀಮನಹಳ್ಳಿ ಬೆಳಗೇರ ರಸ್ತೆ ಹಾಗೂ ದಂಡಗುಂಡ - ಸಂಕನೂರು ರಸ್ತೆ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಯೋಜನೆಯ ಹಣದಲ್ಲಿ ಮಂಜೂರಾಗಿ 2 ವರ್ಷಗಳಾದಾರೂ ಸಹ ಕೆಲಸ ಪೂರ್ತಿಯಾಗಿಲ್ಲದಿರುವುದು ಸಕಾರದವರ ಗಮನಕ್ಕೆ ಬಂದಿದೆಯೆ;

2. ಸರ್ಕಾರದ ಗಮನಕ್ಕೆ ಬಂದಿದ್ದರೆ ಈ ಕಾಮಗಾರಿಗಳು ವಿಳಂಬವಾಗಿರುವುದಕ್ಕೆ ಕೈಗೊಂಡಿರುವ ಕ್ರಮಗಳು ಏನು;

3. ಈ ಎರಡು ಕಾಮಗಾರಿಗಳಿಗೆ ಮಂಜೂರಾಗಿರುವ ಹಣ ಎಷ್ಟು; ಕಾಮಗಾರಿಗಳವಾರು ವಿವರ ನೀಡುವುದು;

4. ಈ ಕಾಮಗಾರಿಗಳಿಗೆ ಖರ್ಚಾಗಿರುವ ಹಣಕ್ಕೆ ತಕ್ಕ ಕೆಲಸ ಆಗಿದೆಯೇ; ಒಂದು ವೇಳೆ ಹಣ ಖರ್ಚಾಗಿರುವಂತೆ ಕೆಲಸವಾಗಿಲ್ಲವೆಂದರೆ ಕೈಗೊಂಡಿರುವ ಕ್ರಮಗಳು ಏನು;

5. ಈ ಎರಡು ಕಾಮಗಾರಿಗಳನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):–

1. ಹೌದು.
ಈ ಕೆಲಸಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ 1992ರ ಮಾರ್ಚಿ ತಿಂಗಳಲ್ಲಿ ನೀಡಲಾಗಿರುವುದರಿಂದ ಎರಡು ವರ್ಷಗಳು ಕಳೆದಿರುವುದಿಲ್ಲ.

2. ಕೆಲಸಗಳನ್ನು ಮುಗಿಸುವ ದಿನಾಂಕ ಜೂನ್ 1993 ಆಗಿರುವುದರಿಂದ ವಿಳಂಬವಾಗಿರುವುದಿಲ್ಲ.

3. 1. ಭೀಮನಹಳ್ಳಿ – ಯಾಗಾಪೂರ ವಾಯ ಬೆಳಗೇರ ರಸ್ತೆ
= ರೂ. 26.65 ಲಕ್ಷಗಳು
2. ದಂಡಗುಂಡ – ಸಂಕನೂರ ರಸ್ತೆ
= ರೂ. 3.40 ಲಕ್ಷಗಳು

4. ಖರ್ಚಿಗೆ ತಕ್ಕಂತೆ ಕೆಲಸ ಆಗಿರುತ್ತದೆ.

5. ಈ ಎರಡು ಕೆಲಸಗಳನ್ನು ಜೂನ್ 1993ರ ಅಂತ್ಯದವರೆಗೆ ಪೂರ್ಣಗೊಳಿಸಲಾಗುವುದು.

ಸೇಡಂ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆ

(2056): ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರಕ್ಕೆ 25–30 ಸಾವಿರ ಜನಸಂಖ್ಯೆ ಇದ್ದು ಕಂದಾಯ ಉಪವಿಭಾಗ ಕೇಂದ್ರವಾಗಿ, ಸುತ್ತಲೂ ಬೃಹತ್ ಸಿಮೆಂಟ್ ಕಾರ್ಖಾನೆಗಳು ಇದ್ದು ಈ ವರ್ಷ ಅನಾವೃಷ್ಟಿಯಿಂದ ಕುಡಿಯುವ ನೀರಿನ ಸಮಸ್ಯೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಈ ನಗರಕ್ಕೆ ಈ ವರ್ಷದ ಅನಾವೃಷ್ಟಿಯಿಂದ ಕುಡಿಯುವ ನೀರಿನ ಸಮಸ್ಯೆಯುಂಟಾಗಿದೆ ಎಂದು ನಾನು ಸಂಬಂಧಪಟ್ಟ ಸಚಿವರಿಗೆ ಮಾಹಿತಿ ನೀಡಿದ್ದರೂ ಇಲ್ಲಿಯವರೆಗೆ ಕೈಗೊಂಡಿರುವ ಕ್ರಮವೇನು;

ಇ. ಇಂತಹ ದೊಡ್ಡ ಜನಸಂಖ್ಯೆ ಇರುವ ನಗರಕ್ಕೆ ಅನಾವೃಷ್ಟಿಯ ಶೀರ್ಷಿಕೆ ಹಣದಿಂದ ಈ ಕುಡಿಯುವ ನೀರಿನ ಕೊರತೆಯನ್ನು ನಿವಾರಿಸಬಹುದೇ; ಹಾಗೂ ನಿವಾರಿಸುವುದು ಯಾವಾಗ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಹೌದು.

ಆ. ಸೇಡಂ ಪಟ್ಟಣದಲ್ಲಿ ಬರ ಪರಿಹಾರ ಯೋಜನೆ ಅಡಿಯಲ್ಲಿ ಈಗಾಗಲೇ 6ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಅವುಗಳ ಪೈಕಿ 4 ಕೊಳವೆ ಬಾವಿಗಳಲ್ಲಿ ನೀರಿನ ಉತ್ಪತ್ತಿ ಅಧಿಕವಾಗಿರುವುದರಿಂದ ಅವುಗಳಿಗೆ ಪವರ್ ಪಂಪ್‌ಗಳನ್ನು ಅಳವಡಿಸಲಾಗುತ್ತಿದೆ. ಮತ್ತು 2 ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಕೂಡಿಸಲಾಗಿದೆ. ಅಲ್ಲದೆ, ಪಟ್ಟಣದಲ್ಲಿ ಹಾಲಿ ಇರುವ ಎಲ್ಲಾ ಕೊಳವೆ ಬಾವಿಗಳನ್ನು ಸುಸ್ಥಿತಿಯಲ್ಲಿಡಲು ಪುರಸಭೆಯುವರು ಸೂಕ್ತ ಕ್ರಮ ತೆಗೆದುಕೊಂಡಿರುತ್ತಾರೆ.

ಇ. ಸೇಡಂ ಪಟ್ಟಣಕ್ಕೆ ಕುಡಿಯುವ ನೀರಿನ ಶಾಶ್ವತ ಪರಿಹಾರ ಕಾಮಗಾರಿಗಾಗಿ ರೂ. 99.00 ಲಕ್ಷ ಮೊತ್ತಕ್ಕಾಗಿ ಸರ್ಕಾರವು ಈಗಾಗಲೇ ಮಂಜೂರಾತಿಯನ್ನು ನೀಡಿದೆ. ಆದರೆ, ಪರಿಷ್ಕೃತ ಅಂದಾಜು ವೆಚ್ಚದ ಪಟ್ಟಿ ರೂ. 160.00 ಲಕ್ಷ ಮೊತ್ತಕ್ಕಾಗಿ ಈಗಾಗಲೇ ಮಂಡಳಿಗೆ ಸಲ್ಲಿಸಲಾಗಿದೆ. ಈ ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ನಿರ್ವಹಿಸುತ್ತಲಿದ್ದು, ಕಾಮಗಾರಿ ವಿವಿಧ ಪ್ರಗತಿ ಹಂತದಲ್ಲಿದೆ. ಇಲ್ಲಿಯವರೆಗೆ ಈ ಕಾಮಗಾರಿಗಾಗಿ ಒಟ್ಟು ರೂ. 93.35 ಲಕ್ಷ ಖರ್ಚು ಮಾಡಲಾಗಿದೆ. ಇದನ್ನು ಡಿಸೆಂಬರ್ 1993ರೊಳಗಾಗಿ ಪೂರ್ತಿಗೊಳಿಸಲಾಗುವುದು. ಈ ಶಾಶ್ವತ ಪರಿಹಾರ ಕಾಮಗಾರಿಯು ಮುಗಿಯುವ ಮುನ್ನ ಉಂಟಾಗಬಹುದಾದ ಕುಡಿಯುವ ನೀರಿನ ಸಮಸ್ಯೆಯನ್ನು ಅಭಾವ ಪರಿಹಾರ ಶೀರ್ಷಿಕೆಯಡಿಯಲ್ಲಿ ಬಿಡುಗಡೆಯಾದ ಹಣದಿಂದ ನಿವಾರಿಸಲಾಗುವುದು.

1987ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ತೋಟಗಾರರ ಹುದ್ದೆಗೆ ಸಂದರ್ಶನ

(1900): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ 1987ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ತೋಟಗಾರರ ಹುದ್ದೆಗೆ ಸಂದರ್ಶನ ತೆಗೆದುಕೊಂಡು ಆಯ್ಕೆ ಮಾಡಲಾಗಿರುವ ತೋಟಗಾರರ ಸಂಖ್ಯೆ ಎಷ್ಟು;

ಆ. ಈ ಪೈಕಿ ಈಗಾಗಲೇ ನೌಕರಿಯನ್ನು ಕೊಡಲಾಗಿರುವವರ ಸಂಖ್ಯೆ ಎಷ್ಟು;

ಇ. ಉಳಿದವರಿಗೆ ಯಾವಾಗ ನೌಕರಿಯನ್ನು ಕೊಡಲಾಗುವುದು.

ಈ. ಸುಪ್ರೀಂ ಕೋರ್ಟ್ ಆದೇಶ ನೀಡಿದ್ದರೂ ಸಹ ಇದುವರೆವಿಗೆ ಅವರಿಗೆ ನೌಕರಿಯನ್ನು ಕೊಡಲಾಗಿಲ್ಲವೆಂಬ ಸಂಗತಿ ನಿಜವೆ;

ಉ. ಹಾಗಿದ್ದಲ್ಲಿ ಅವರಿಗೆ ಆದಷ್ಟು ಬೇಗನೆ ನೌಕರಿ ಕೊಡಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು.

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):–

ಅ. 182

ಆ. 83

ಇ. ನೇರ ನೇಮಕಾತಿಯ ಮೇಲೆ ಸರ್ಕಾರದ ಆರ್ಥಿಕ ಮಿತವ್ಯಯದ ನಿರ್ಬಂಧವಿದೆ. ಆರ್ಥಿಕ ಇಲಾಖೆ ನಿರ್ಬಂಧ ತೆಗೆದಾಗ ತೋಟಗಾರರ ಹುದ್ದೆಗಳು ಖಾಲಿ ಇದ್ದಲ್ಲಿ ಭರ್ತಿ ಮಾಡಲಾಗುವುದು.

ಈ. ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯದಿಂದ ಯಾವ ಆದೇಶವು ಬಂದಿಲ್ಲ.

ಉ. ಉದ್ಭವಿಸುವುದಿಲ್ಲ.

ಬೈಲಹೊಂಗಲ ತಾಲ್ಲೂಕಿನ ದೊಡ್ಡವಾಡ ಮತ್ತು ನೇಸರಗಿ ಎ.ಪಿ.ಎಂ.ಸಿ. ಯಾರ್ಡ್‌ಗಳ ಅಭಿವೃದ್ಧಿ

(2146): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ದೊಡ್ಡವಾಡ ಮತ್ತು ನೇಸರಗಿ ಎ.ಪಿ.ಎಂ.ಸಿ. ಯಾರ್ಡ್‌ಗಳನ್ನು ಅಭಿವೃದ್ಧಿಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

ಆ. ಈ ಎರಡು ಮಾರುಕಟ್ಟೆ ಯಾರ್ಡ್‌ಗಳಿಗಾಗಿ ವಶಪಡಿಸಿಕೊಳ್ಳಲಾಗಿರುವ ಜಮೀನಿನ ವಿಸ್ತೀರ್ಣವೆಷ್ಟು;

ಇ. ಈ ಮಾರುಕಟ್ಟೆ ಯಾರ್ಡ್‌ಗಳು ಪ್ರಾರಂಭವಾಗದೇ ಇರುವುದರಿಂದ ಹೆಚ್ಚಿಗೆ ಬೆಳೆಯುತ್ತಿರುವ ಕಾಯಿಪಲ್ಲೆಗಳನ್ನು ಮಾರಾಟ ಮಾಡಲು ಮಾರ್ಕೆಟ್ ಯಾರ್ಡ್ ಇಲ್ಲದಿರುವುದರಿಂದ ಅವುಗಳು ಬೇರೆ ಜಿಲ್ಲೆಗಳಿಗೆ ಹೋಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಈ. ಬಂದಿದ್ದಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಮದನಗೋಪಾಲ್ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):-

ಅ. ಬೆಳಗಾಂ ಜಿಲ್ಲೆಯ ಬೈಲಹೊಂಗಲ ಮಾರುಕಟ್ಟೆ ಕ್ಷೇತ್ರದಲ್ಲಿ ದೊಡ್ಡವಾಡ ಮತ್ತು ನೇಸರಗಿ ಇವುಗಳು ಉಪ ಮಾರುಕಟ್ಟೆಗಳಾಗಿದ್ದು, ದೊಡ್ಡವಾಡ ಉಪಮಾರುಕಟ್ಟೆ ಪ್ರಾಂಗಣಕ್ಕಾಗಿ ಜಮೀನು ಇಲ್ಲದಿರುವುದರಿಂದ ಅಭಿವೃದ್ಧಿಪಡಿಸಲು ಸಾಧ್ಯವಾಗಿರುವುದಿಲ್ಲ.

ನೇಸರಿಗಿ ಉಪ ಮಾರುಕಟ್ಟೆ ಪ್ರಾಂಗಣವನ್ನು ಅಭಿವೃದ್ಧಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದ್ದು, ಈಗಾಗಲೇ ಈ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಕಛೇರಿ – ವ – ಗೋದಾಮು, ಎನ್.ಜಿ.ಆರ್.ಜಿ. ಗೋದಾಮು (2) ಮತ್ತು ಕಾಂಪೌಂಡ್ ಗೋಡೆ ಈ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.

ಆ. ದೊಡ್ಡವಾಡ ಉಪ ಮಾರುಕಟ್ಟೆಗೆ ಜಮೀನು ಇರುವುದಿಲ್ಲ. ನೇಸರಗಿ ಉಪಮಾರುಕಟ್ಟೆ ಪ್ರಾಂಗಣಕ್ಕಾಗಿ 14 ಎಕರೆ 12 ಗುಂಟೆ ಜಮೀನು ವಶಪಡಿಸಿಕೊಳ್ಳಲಾಗಿದೆ.

ಇ. ಸದ್ಯಕ್ಕೆ ಈ ಮಾರುಕಟ್ಟೆ ಕ್ಷೇತ್ರದಲ್ಲಿ ಕಾಯಿಪಲ್ಲೆಗಳನ್ನು ನಿಯಂತ್ರಣ ಕಕ್ಷೆಗೆ ಒಳಪಡಿಸಿಲ್ಲ.

ಬೆಳಗಾವಿ ಜಿಲ್ಲೆಯಲ್ಲಿ ಜಿಲ್ಲಾಪರಿಷತ್ತಿನ ವತಿಯಿಂದ ಸರ್ಕಾರಿ ಪದವಿಪೂರ್ವ ಕಾಲೇಜಿನ ಹತ್ತಿರ ಶೌಚಾಲಯಗಳ ಕಟ್ಟಡ

(2173): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾವಿ ಜಿಲ್ಲೆಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹತ್ತಿರ, ಸರ್ಕಾರಿ ಹೈಸ್ಕೂಲ್

ಹತ್ತಿರ ಮತ್ತು ಕನ್ನಡ ಶಾಲೆಯ ಹತ್ತಿರ ಮೂತ್ರಾಲಯ ಹಾಗೂ ಶೌಚಾಲಯಗಳು ಇಲ್ಲದೆ ಇರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ಇವುಗಳನ್ನು ಕಟ್ಟಲು ಸರ್ಕಾರದವರು ಯಾವ ಕ್ರಮಗಳನ್ನು ಕೈಗೊಂಡಿರುವರು;

ಇ. ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಶಾಲೆಗಳಲ್ಲಿ ಇವುಗಳನ್ನು ಈಗಾಗಲೇ ಕಟ್ಟಲಾಗಿದೆ ಮತ್ತು ಇನ್ನು ಎಷ್ಟು ಶಾಲೆಗಳಲ್ಲಿ ಇವುಗಳನ್ನು ಈಗಾಗಲೇ ಕಟ್ಟಲಾಗಿದೆ ಮತ್ತು ಇನ್ನು ಎಷ್ಟು ಶಾಲೆಗಳಲ್ಲಿ ಕಟ್ಟಬೇಕಾಗಿದೆ ? (ತಾಲ್ಲೂಕುವಾರು ವಿವರ ಕೊಡುವುದಾಗಬೇಕು);

ಈ. ಇವುಗಳನ್ನು ಕಟ್ಟಲು ಎಷ್ಟು ಹಣ ಬೇಕಾಗುವುದು ಮತ್ತು ಇವುಗಳನ್ನು ಕಟ್ಟಲು ಸರ್ಕಾರದವರು ಹಣವನ್ನು ಒದಗಿಸಲು ಕ್ರಮ ಕೈಗೊಳ್ಳುವರೇ;

ಉ. ಜಿಲ್ಲಾ ಪರಿಷತ್ತಿನವರು ಈ ಮೂತ್ರಾಲಯ ಹಾಗೂ ಶೌಚಾಲಯಗಳನ್ನು ಕಟ್ಟಲು ರೂ. 1500–00 ಗಳನ್ನು ಒದಗಿಸಿರುವರು. ಅಷ್ಟು ಹಣದಲ್ಲಿ ಮೂತ್ರಾಲಯಗಳನ್ನು ಹಾಗೂ ಶೌಚಾಲಯಗಳನ್ನು ಕಟ್ಟಲು ಸಾಧ್ಯವಾಗುವುದಿಲ್ಲ ಎನ್ನುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಪ್ರತಿಯೊಂದು ಮೂತ್ರಾಲಯ ಹಾಗೂ ಶೌಚಾಲಯಗಳನ್ನು ಕಟ್ಟಲು ಕನಿಷ್ಠ ರೂ. 5000–00ಗಳನ್ನು ಒದಗಿಸಿದರೆ ಅನುಕೂಲವಾಗುವುದಿಲ್ಲವೇ ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಅ. ಮತ್ತು ಆ. ಇಲ್ಲ.

ಪದವಿ ಪೂರ್ವ ಕಾಲೇಜು ಸರ್ಕಾರಿ ಹೈಸ್ಕೂಲ್ ಮತ್ತು ಕನ್ನಡ ಶಾಲೆಗಳ ಹತ್ತಿರ ಮೂತ್ರಾಲಯ ಹಾಗೂ ಶೌಚಾಲಯಗಳನ್ನು ಕಟ್ಟುವ ಯೋಜನೆ ಇರುವುದಿಲ್ಲ.

ಇ. 1986–87 ಮತ್ತು 1988–89ರ ಸಾಲಿನಲ್ಲಿ ಗ್ರಾಮೀಣ ಭೂರಹಿತ ಉದ್ಯೋಗ ಉತ್ಪಾದನೆ ಯೋಜನೆಯಡಿಯಲ್ಲಿ ಬೆಳಗಾಂ ಜಿಲ್ಲೆಯಲ್ಲಿ 146 ಸಂಸ್ಥಿಕ ಶೌಚಾಲಯಗಳನ್ನು ಕಟ್ಟಲಾಗಿದೆ. ಈ ಕಾರ್ಯಕ್ರಮ ಈಗ ಜಾರಿಯಲ್ಲಿಲ್ಲ.

ಈ. ಮತ್ತು ಉ. ವಿದ್ಯಾ ಸಂಸ್ಥೆಗಳಿಗೋಸ್ಕರ ಶೌಚಾಲಯ ಹಾಗೂ ಮೂತ್ರಾಲಯಗಳನ್ನು ನಿರ್ಮಿಸುವ ವಿಷಯವನ್ನು ಪುನರ್ ಪರಿಶೀಲಿಸಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಲಾಗುವುದು.

ಬೆಳಗಾಂ ಜಿಲ್ಲೆಯಲ್ಲಿ ಸರ್ಕಾರಿ ಪ್ರೌಢಶಾಲೆಗಳ ಹತ್ತಿರ ಕೊಳವೆ ಬಾವಿ

(2174): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):–ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಬೆಳಗಾಂ ಜಿಲ್ಲೆಯಲ್ಲಿ ಸರ್ಕಾರಿ ಪ್ರೌಢಶಾಲೆಗಳ ಹತ್ತಿರ ಹಾಗೂ ಕಾಂಪೋಜಿಟ್ ಜೂನಿಯರ್ ಕಾಲೇಜುಗಳ ಹತ್ತಿರ ಮತ್ತು ಶಾಲೆಗಳ ಹತ್ತಿರ ಎಷ್ಟು ಕೊಳವೆ ಬಾವಿಗಳನ್ನು ವಿದ್ಯಾರ್ಥಿಗಳ ಅನುಕೂಲತೆಗಾಗಿ ತೋಡಿಸಲಾಗಿದೆ (ತಾಲ್ಲೂಕುವಾರು ವಿವರ ಕೊಡುವುದು);

2. ಒಂದು ವೇಳೆ ಇನ್ನೂವರೆಗೂ ಕೊಳವೆ ಬಾವಿಗಳನ್ನು ತೋಡದೆ ಇದ್ದಲ್ಲಿ ಸರ್ಕಾರದವರು ಕೊಳವೆ ಬಾವಿಗಳನ್ನು ತೋಡಿಸಲು ಕ್ರಮ ಕೈಗೊಳ್ಳುವರೇ;

3. ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ತೊಂದರೆ ಇದ್ದು ಅಲ್ಲಿಗೆ ಕೂಡಲೇ ಕೊಳವೆ ಬಾವಿಗಳನ್ನು ತೋಡಿಸಿ ವಿದ್ಯಾರ್ಥಿಗಳಿಗೆ ಅನುಕೂಲತೆ ಮಾಡಿಕೊಡಲು ಸರ್ಕಾರದವರು ಕ್ರಮಕೈಗೊಳ್ಳುವರೇ ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):–

ಅ. ಇಲ್ಲ

ಆ. ಗ್ರಾಮೀಣ ನೀರು ಸರಬರಾಜು ಯೋಜನೆಯಡಿಯಲ್ಲಿ ಶಾಲೆಗಳಿಗೆ ಸೀಮಿತವಾಗಿ ಕೊಳ ಬಾವಿಗಳನ್ನು ಒದಗಿಸಿರುವುದಿಲ್ಲ. ಹಳ್ಳಿಯ ಎಲ್ಲಾ ಸಾರ್ವಜನಿಕ ಉಪಯೋಗಕ್ಕಾ ಒದಗಿಸಲಾಗುವುದು.

ಡಂಕಲ್ ಡ್ರಾಫ್ಟ್ ಅನುಷ್ಠಾನ ಕುರಿತು

(1979): ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿ ದಯವಿಟ್ಟು ಉತ್ತರಿಸುವರೇ ?

ಅ. ಡಂಕಲ್ ಡ್ರಾಫ್ಟ್ ರಾಜ್ಯದ ರೈತರಿಗೆ ಮಾರಕವಾಗಿದೆ ಎಂಬ ಅಭಿಪ್ರಾಯ ರೈತ ಸಮುದಾಯ ಉಂಟಾಗಿರುವುದು ಸರ್ಕಾರವು ಗಮನಿಸಿದೆಯೆ;

ಆ. ಡಂಕಲ್ ಡ್ರಾಫ್ಟ್ ಅನುಷ್ಠಾನದ ಬಗ್ಗೆ ಸರ್ಕಾರವು ಏನಾದರೂ ನಿಲುವನ ತೆಗೆದುಕೊಂಡಿದೆಯೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ. ಸರ್ಕಾರದ ಗಮನಕ್ಕೆ ಬಂದಿದೆ

ಆ. "ಡಂಕಲ್ ಡ್ರಾಫ್ಟ್" ಬಗ್ಗೆ ಇನ್ನು ಕೇಂದ್ರ ಸರ್ಕಾರವು ಮಾತುಕತೆ ನಡೆಸುತ್ತಿರುವುದರಿಂ ಇದರ ಪರಿಣಾಮದ ಬಗ್ಗೆ ಈಗ ಸಮೀಕ್ಷಿಸುವುದು ಅಕಾಲಿಕವಾಗುತ್ತದೆ. ಆದರೂ, ರೈತರ ಹಿತವನ ರಕ್ಷಿಸಲು ಮತ್ತು ಪ್ರಸ್ತಾವನೆಯ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲು ರಾ ಸರ್ಕಾರವು ಕೇಂದ್ರ ಸರ್ಕಾರವನ್ನು ಕೋರಿದೆ.

ರಾಜ್ಯದಲ್ಲಿ ತೋಟಗಾರಿಕೆ ವ್ಯವಸಾಯವನ್ನು ಹೆಚ್ಚಿಸುವುದು

(1982): ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ):– ಮಾನ್ಯ ತೋಟಗಾರಿಕೆ ರಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾಂ ಜಿಲ್ಲೆಯಲ್ಲಿ ಹಾಗೂ ರಾಜ್ಯದಲ್ಲಿ ತೋಟಗಾರಿಕೆ ವ್ಯವಸಾಯವನ್ನು ಹೆಚ್ಚಿಸ ಸರ್ಕಾರದ ಕಾರ್ಯಕ್ರಮಗಳೇನು;

ಆ. ಹಿಡಕಲ್ ಜಲಾಶಯದಲ್ಲಿರುವ ಹಾರ್ಟಿಕಲ್ಚರಲ್ ಉದ್ಯಾನವನ್ನು ಗಣನೆಗೆ ತೆಗೆದುಕೊಂ ಹಾರ್ಟಿಕಲ್ಚರಲ್ ಕಾಲೇಜು ಸ್ಥಾಪಿಸಲು ಸರ್ಕಾರ ಹಿಂದೇಟು ಹಾಕುತ್ತಿರುವುದಕ್ಕೆ ಕಾರಣವೇನು;

ಇ. ಉತ್ತರ ಕರ್ನಾಟಕದಲ್ಲಿ ಹಣ್ಣು ಬೇಸಾಯ ಅಭಿವೃದ್ಧಿಗಾಗಿ ಒಳ್ಳೆಯ ಮಾವಿನ ತಳಿ, ಸಪೋ ತಳಿ, ಹಾಗೂ ಪೇರಲ ಹಣ್ಣು ಹಾಗೂ ಇದೇ ತರಹದ ಹಲವಾರು ಹಣ್ಣು ಅಭಿವೃದ್ಧಿ ಕಾರ್ಯಕ್ರ ತೆಗೆದುಕೊಳ್ಳಲು, ಹಮ್ಮಿಕೊಂಡಿರುವ ವಿಶೇಷ ಯೋಜನೆ ಏನು ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):-

ಅ. 1992-93ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯು ಕರ್ನಾಟಕ ರಾಜ್ಯದಲ್ಲಿ ತೋಟಗಾರಿಕೆಯ ಅಭಿವೃದ್ಧಿಗೆ ಒಟ್ಟು 63 ಕಾರ್ಯಕ್ರಮಗಳನ್ನು, ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದಕ್ಕಾಗಿ ಯೋಜನಾ ವೆಚ್ಚದಲ್ಲಿ 1752.80 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ 1992-93ನೇ ಸಾಲಿನಲ್ಲಿ ತೋಟಗಾರಿಕಾ ಅಭಿವೃದ್ಧಿಗೆ ಸಂಬಂಧಿಸಿದಂತೆ 19 ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ಯೋಜನೆಯ ವೆಚ್ಚ ಸುಮಾರು 30.37 ಲಕ್ಷ ರೂಪಾಯಿಗಳಾಗಿರುತ್ತದೆ.

ಆ. ಸದ್ಯದಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಇ. ಉತ್ತರ ಕರ್ನಾಟಕದ 8 ಜಿಲ್ಲೆಗಳಲ್ಲಿ ಮಾವು, ದಾಳಿಂಬೆ, ಸಪೋಟ, ಪೇರಲ, ಇತ್ಯಾದಿ ಹಣ್ಣಿನ ಗಿಡಗಳನ್ನು ಉತ್ತಮ ಗುಣಮಟ್ಟದ ವಿವಿಧ ಜಾತಿಯ ಹಣ್ಣಿನ ಗಿಡಗಳನ್ನು ಉತ್ಪಾದಿಸಿ ವಿತರಿಸುವ ವಿಶೇಷ ಯೋಜನೆಯಡಿಯಲ್ಲಿ ಹಾಗೂ ಯೋಜನೇತರ ಅಡಿಯಲ್ಲಿ ಇಲಾಖಾ ಕ್ಷೇತ್ರಗಳಲ್ಲಿ ಉತ್ಪಾದಿಸಿ ರೈತರಿಗೆ ಒದಗಿಸಲಾಗುತ್ತಿದೆ.

Amount of Pension paid to Ex-Patels and Ex. Shanbhogues

1984): Sri B.H. Lakshmanaiah (Belur):- Will the Minister for Revenue be leased to state

a. What is the amount of pension to Ex-Patels and also to x-Shanbhogues;

b. Whether Govt. is aware that Ex-Patels worked in Govt. service on par ith Shanbhogues? If so, why discrimination in the payment of pension?

Sri M. Rajashekhara Murthy (Minister for Revenue):-

a. 1) Compassionate Allowance of Rs. 100/- P.M. to Ex-Patels.

Compassionate Allowance of Rs. 100/- P.M. to Ex-Shanbhogues who ere on duty as on 1-2-63.

Rs. 500/- P.M. as Ad-hoc Pension is being paid to the Ex-Shanubhogues ho were continued as Village Accountant under sec. 16 (2) of the Land evenue Act either retired on super-annuation or replaced by new cumbents appointed under Sec. 16 (1) of the Land Revenue Act.

b. Yes. As stated above ad-hoc pension is being paid on the basis of e orders of the High court and the settlement entered into by the overnment.

ಅಗ್ರಹಾರದಲ್ಲಿರುವ ಇನಾಂ ಜಮೀನಿನ ಪಿ.ಆರ್. ಸರ್ವೆ ಕೆಲಸ

(1985): ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಕಂದಾಯ ಸಚಿವರು ಈ ಕೆಳಕಂ
ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೂಡಿಗೆರೆ ತಾಲ್ಲೂಕಿನ ಜೋಡಿ ಕನ್ನಾಪುರ ಮತ್ತು ಜಿ. ಅಗ್ರಹಾರದಲ್ಲಿ ಇನಾಮ್ ಜಮೀನಿ ಪಿ.ಆರ್. ಸರ್ವೆ ಕೆಲಸ ಯಾವಾಗ ಮಾಡಲಾಯಿತು;

ಆ. ಇನ್ನು ಪೂರ್ಣ (ಸರ್ವೆ ಕೆಲಸ) ಮಾಡದಿರಲು ಕಾರಣವೇನು; ಇದರಿಂದ ಜನರಿ ತೊಂದರೆಯಾಗುತ್ತಿರುವುದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಜೋಡಿ ಕನ್ನಾಪುರ ಮತ್ತು ಜಿ. ಅಗ್ರಹಾರ ಗ್ರಾಮಗಳ ಹಿಸ್ಸಾ ಸರ್ವೆ (ಹಕ್ಕು ದಾಖಲೆಗಳನ ಜಾರಿಗೆ ಕೊಡುವುದು) ಕಾರ್ಯವನ್ನು ಕ್ರಮವಾಗಿ 1992 ಮತ್ತು 1991ರಲ್ಲಿ ಮಾಡಿದೆ.

ಆ. ಎರಡು ಗ್ರಾಮಗಳ ಹಿಸ್ಸಾ ಸರ್ವೆ ಕಾರ್ಯವನ್ನು ಪೂರೈಸಲಾಗಿದೆ. ಹಿಸ್ಸಾವಾರು ಕಂದಾಯ ನಿರ್ಣಯ ಕಾರ್ಯ ಹಾಗೂ ಆರ್.ಟಿ.ಸಿ. ಬರೆಯುವ ಕಾರ್ಯ ಬಾಕಿ ಇದೆ. ಅವಶ್ಯಕವಾಗಿ ಬೇಕಾಗು ಪಹಣಿ ಫಾರಂಗಳನ್ನು ಕಳುಹಿಸಿಕೊಡುವಂತೆ ಮೂಡಿಗೆರೆ ತಹಸೀಲ್ದಾರ್‌ರವರಿಗೆ ಈಗಾಗಲೆ ಸೂಚಿಸಲಾಗಿದೆ. ಬಾಕಿ ಇರುವ ಕಾರ್ಯವನ್ನು ಜಾಗ್ರತೆಯಾಗಿ ಮಾಡಲಾಗುವುದು. ತನ್ಮೂಲ ಹಿಡುವಳಿದಾರರಿಗೆ ಆಗುತ್ತಿರುವ ತೊಂದರೆಗಳು ನಿವಾರಣೆಯಾಗುತ್ತದೆ.

ಆರಾಧನಾ ಯೋಜನೆಯಡಿಯಲ್ಲಿ ದುರಸ್ತಿಸಲ್ಪಟ್ಟ ದೇವಸ್ಥಾನಗಳು

(1983): ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಕಂದಾಯ ಸಚಿವರು ಈ ಕೆಳಕಂ
ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಆರಾಧನಾ ಯೋಜನೆಯಲ್ಲಿ ಎಷ್ಟು ದುರ್ಬಲ ವರ್ಗದವರ ಕೇರಿಗಳಲ್ಲಿ ದೇವಸ್ಥಾನಗಳ ದುರ ಅಥವಾ ಕಟ್ಟಿಸಲಾಗಿದೆ. (ಪಟ್ಟಿ ಕೊಡುವುದು);

ಆ. ಚಿಕ್ಕಮಗಳೂರು ಜಿಲ್ಲೆಗೆ ಈ ಯೋಜನೆಯಡಿಯಲ್ಲಿ ಬಂದ ಹಣವೆಷ್ಟು ? ಯಾವ ಯಾ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ದೇವಸ್ಥಾನಗಳನ್ನು ಕಟ್ಟಿಸಲಾಗಿದೆ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ರಾಜ್ಯದಲ್ಲಿ ಆರಾಧನಾ ಯೋಜನೆಯಡಿಯಲ್ಲಿ ದೇವಸ್ಥಾನಗಳ ದುರಸ್ತಿ ಮತ್ತು ಕಟ್ಟಿಸಿರು ವಿವರ ಈ ಕೆಳಕಂಡಂತೆ ಇದೆ.

ದುರಸ್ತಿಪಡಿಸಿರುವುದು	372
ಕಟ್ಟಿಸಿರುವುದು	66

ಆ. ಚಿಕ್ಕಮಗಳೂರು ಜಿಲ್ಲೆಗೆ ರೂ. 19,64,710-00 ಗಳನ್ನು ಬಿಡುಗಡೆ ಮಾಡಿದೆ.

ದೇವಾಲಯಗಳನ್ನು ಕಟ್ಟಿಸಿರುವ ವಿವರ ಕೆಳಕಂಡಂತೆ ಇದೆ.

<u>ಪೂರ್ಣಗೊಂಡಿರುವುದು ಪ್ರಗತಿ</u>

1. ಚಿಕ್ಕಮಗಳೂರು	7	12
2. ಕಡೂರು	1	22
3. ತರೀಕೆರೆ	–	3
ಒಟ್ಟು	8	37

ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಯ ಗೃಹನಿರ್ಮಾಣ ಸಹಕಾರ ಸಂಘಗಳು ಸ್ಥಗಿತಗೊಂಡಿರುವುದು

(1989): ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯದಲ್ಲಿರುವ ಬಹುಪಾಲು ಎಲ್ಲಾ ಪರಿಶಿಷ್ಟ ಜಾತಿಯ ಗೃಹನಿರ್ಮಾಣ ಸಹಕಾರ ಸಂಘಗಳು ಸ್ಥಗಿತಗೊಂಡಿರುವುದು ನಿಜವೇ;

ಆ. ಇದಕ್ಕೆ ಕಾರಣಗಳೇನು;

ಇ. ಈ ಸಂಘಗಳನ್ನು ಕೆಲಸ ಮಾಡುವಂತೆ ಮಾಡುವುದು ಸಾಧ್ಯವಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ಇಲ್ಲಾ

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ವರ್ಗ ಮತ್ತು ನೇಮಕಾತಿ ನಿಯಮ

2070): ಶ್ರೀ ಕೆ. ಸಿದ್ದಯ್ಯ (ಸಂತೇಮಾರನ ಹಳ್ಳಿ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ವರ್ಗ ಮತ್ತು ನೇಮಕಾತಿ (ಎಲ್ಲಾ ನೇಮಕಾತಿ ಮತ್ತು ಹುದ್ದೆಗಳಿಗೆ) ನಿಯಮಾವಳಿ ರೂಪಿಸಲಾಗಿದೆಯೇ (ವರ್ಗ ಮತ್ತು ನೇಮಕಾತಿ ನಿಯಮಾವಳಿಯ ಪ್ರತಿ ಒದಗಿಸುವುದು);

ಆ. ಹಾಗಿದ್ದಲ್ಲಿ, ಅದನ್ನು ಯಾವಾಗ ಜಾರಿಗೆ ಕೊಡಲಾಯಿತು;

ಇ. ಆಯ್ಕೆ ಅಥವಾ ನೇಮಕಾತಿ ಸಮಿತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿನಿಧ್ಯತೆಗೆ ಅವರ ಅವಕಾಶ ಕಲ್ಪಿಸಲಾಗಿದೆಯೇ;

ಈ. ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ. ಸಿಬ್ಬಂದಿ ವರ್ಗದ ಹುದ್ದೆಗಳಿಗೆ ಸಂಬಂಧಿಸಿದಂತೆ ಮಾತ್ರ ವರ್ಗ ಮತ್ತು ನೇಮಕಾತಿ ನಿಯಮಾವಳಿಗಳನ್ನು ರೂಪಿಸಲಾಗಿದೆ.

ಅಧಿಕಾರಿ ಹುದ್ದೆಗಳು ಮತ್ತು ಬೋಧಕ ವರ್ಗದ ಹುದ್ದೆಗಳ ನೇಮಕಾತಿ ವಿಧಾನವನ್ನು ಕೃಷಿ ವಿಶ್ವವಿದ್ಯಾನಿಲಯದ ಅಧಿನಿಯಮದಲ್ಲಿ (ಸ್ಟಾಟ್ಯೂಟ್) ರೂಪಿಸಲಾಗಿದೆ.

ಆ. ಸಿಬ್ಬಂದಿ ವರ್ಗದ ವರ್ಗ ಮತ್ತು ನೇಮಕಾತಿ ನಿಯಮಾವಳಿ ದಿನಾಂಕ: 15-9-1961ರಿಂದ ಜಾರಿಯಲ್ಲಿದೆ.

ಕೃಷಿ ವಿಶ್ವವಿದ್ಯಾನಿಲಯದ ಅಧಿನಿಯಮ (ಸ್ಟಾಟ್ಯೂಟ್) ದಿನಾಂಕ: 30-10-1964ರಿಂದ ಜಾರಿಯಲ್ಲಿದೆ.

ಇ. ಹೌದು

ಈ. ಉದ್ಭವಿಸುವುದಿಲ್ಲ.

ಹಾಸನ ಸಿಟಿ ಕೋ– ಆಪರೇಟಿವ್ ಬ್ಯಾಂಕಿನ ಕಟ್ಟಡ ಕಟ್ಟಲು ಮಂಜೂರಾದ ಹಣ (1990): ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):– ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನ ಸಿಟಿ ಕೋ ಆಪರೇಟಿವ್ ಬ್ಯಾಂಕ್, ನಿ. ಹಾಸನ ಕಟ್ಟಡ ಕಟ್ಟಲು ಪ್ರಾರಂಭದಲ್ಲಿ ಎಷ್ಟು ಮೊತ್ತದ ಅಂದಾಜನ್ನು ಮಂಜೂರು ಮಾಡಲಾಗಿತ್ತು;

ಆ. ಈ ಕಟ್ಟಡಕ್ಕೆ ಎಷ್ಟು ಹಣ ಖರ್ಚಾಗಿದೆ;

ಇ. ಈ ಕಟ್ಟಡಕ್ಕೆ ಬೇಕಾದ ಹಣವನ್ನು ಬ್ಯಾಂಕಿನ ಯಾವ ಬಾಬ್ತಿನಿಂದ ಒದಗಿಸಲಾಗಿದೆ;

ಈ. ಕಟ್ಟಡಕ್ಕೆ ಈ ರೀತಿ ಹಣವನ್ನು ಒದಗಿಸಲು ಕಾನೂನಿನಲ್ಲಿ ಅವಕಾಶವಿದೆಯೇ; ವಿವರಣೆ ನೀಡುವುದು;

ಉ. ಕಾನೂನು ಬಾಹಿರ ಕ್ರಮ ನಡೆಸಿದ ಅಧಿಕಾರಿ ವರ್ಗದವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ಬ್ಯಾಂಕಿನ ಮೂಲ ಅಂದಾಜಿನ ವೆಚ್ಚ ರೂ. 6ಲಕ್ಷಗಳಾಗಿದ್ದು, ಇಲಾಖಾ ವತಿಯಿಂದ ಅಂದಾಜು ವೆಚ್ಚವನ್ನು ಅನುಮೋದಿಸಿರುವುದಿಲ್ಲ.

ಆ. ರೂ. 19,38,673

ಇ. ಈ ಕಟ್ಟಡಕ್ಕೆ ಈ ಕೆಳಗಿನ ಬಾಬ್ತುಗಳಿಂದ ಒಟ್ಟು ರೂ. 19,38,673–00 ಗಳನ್ನು ಖರ್ಚು ಮಾಡಲಾಗಿದೆ.

1. ಕಟ್ಟಡ ನಿಧಿ	1,30,223–00
2. ಆಪದ್ಧನ	5,17,633–00
3. ಬಾಡಿಗೆದಾರರ ಮುಂಗಡ	2,56,303–00
4. ಬ್ಯಾಂಕಿನ ಧಿನನಿತ್ಯದ ದುಡಿಯುವ ಬಂಡವಾಳದಿಂದ	10,25,404–00
ಒಟ್ಟು	19,36,673–00

ಈ. ಕರ್ನಾಟಕ ಸಹಕಾರ ಸಂಘಗಳ ನಿಯಮಗಳ ಪ್ರಕಾರ ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿ ಮೇರೆಗೆ ಆಪದ್ಧನವನ್ನು ಕಟ್ಟಡ ನಿರ್ಮಾಣಕ್ಕೆ ಉಪಯೋಗಿಸಿಕೊಳ್ಳಲು ಅವಕಾಶವಿದೆ. ದುಡಿಯುವ ಬಂಡವಾಳವನ್ನು ಇಂತಹ ಕೆಲಸಕ್ಕೆ ಉಪಯೋಗಿಸುವ ಬಗ್ಗೆ ಕಾನೂನಿನಲ್ಲಿ ನಿರ್ದಿಷ್ಟಪಡಿಸಲಾಗಲಿಲ್ಲ.

ಉ. ಆಡಳಿತ ಮಂಡಳಿಯನ್ನು ರದ್ದುಪಡಿಸಿದೆ. ಬ್ಯಾಂಕಿಗಾಗಿರುವ ನಷ್ಟವನ್ನು ಹಾಗೂ ವ್ಯಕ್ತಿಗಳ ಜವಾಬ್ದಾರಿಯನ್ನು ನಿರ್ಧರಿಸಿ ಕ್ರಮಕ್ಕೈಗೊಳ್ಳಲಾಗುವುದು.

ಹಾಸನ ಸಿಟಿ ಕೋ–ಆಪರೇಟಿವ್ ಬ್ಯಾಂಕಿನ ಕಟ್ಟಡಕ್ಕೆ ಬಾಡಿಗೆ ಕಟ್ಟಲು ಮಂಜೂರಾದ ಹಣ

(1990[(ಎ]) ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ):– ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನ ಸಿಟಿ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ನಡೆಯುತ್ತಿರುವ ಕಟ್ಟಡಕ್ಕೆ ತಿಂಗಳಿಗೆ ಎಷ್ಟು ಬಾಡಿಗೆಯನ್ನು ಕೊಡಲಾಗುತ್ತಿದೆ;

ಆ. ಸಿಟಿ ಕೋ–ಆಪರೇಟಿವ್ ಬ್ಯಾಂಕಿನ ಕಟ್ಟಡದ ನೆಲಮಾಳಿಗೆ ಕೆಲಸ ಎಂದು ಪೂರ್ಣವಾಯಿತು;

ಇ. ಸಿಟಿ ಕೋ–ಆಪರೇಟಿವ್ ಬ್ಯಾಂಕಿನ ಕಟ್ಟಡಕ್ಕೆ ಇದುವರೆಗೂ ಬ್ಯಾಂಕಿನಿಂದ ಎಷ್ಟು ಹಣ ಖರ್ಚಾಗಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ರೂ. 3,500–00

ಆ. ದಿನಾಂಕ: 2–11–89 ರ ಪೂರ್ವ.

ಇ. ಸದರಿ ಕಟ್ಟಡಕ್ಕೆ ಒಟ್ಟು ರೂ. 19,38,673–32 ಗಳು ಬಿಲ್ ರೂಪದಲ್ಲಿ ಮತ್ತು ಮುಂಗಡ ರೂಪದಲ್ಲಿ ದಿನಾಂಕ: 22–3–1991 ವರೆಗೆ ಗುತ್ತಿಗೆದಾರರಿಗೆ ಪಾವತಿಯಾಗಿದೆ.

ಹಾಸನ ಸಿಟಿ ಕೋ–ಆಪರೇಟಿವ್ ಬ್ಯಾಂಕಿನಲ್ಲಿ ಅವ್ಯವಹಾರ

(1991): ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):– ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನ ಸಿಟಿ ಕೋ–ಆಪರೇಟಿವ್ ಬ್ಯಾಂಕಿನಲ್ಲಿ ಅನೇಕ ಅವ್ಯವಹಾರಗಳು ನಡೆದಿದ್ದು ಈ ಅವ್ಯವಹಾರಗಳ ನಿಜಾಂಶ ತಿಳಿಯಲು ಸರ್ಕಾರ ಯಾವ ತಾರೀಖಿನಲ್ಲಿ ಕೋ–ಆಪರೇಟಿವ್ ಆಕ್ಟ್‌ನ 64ನೇ ಸೆಕ್ಷನ್ ಪ್ರಕಾರ ವಿಚಾರಣೆಗೆ ಆರ್ಡರ್ ಮಾಡಿತು, ಈ 64ನೇ ವಿಚಾರಣೆಯಿಂದ ಬೆಳಕಿಗೆ ಬಂದ ಅಕ್ರಮಗಳು ಯಾವುವು, ಈ ಅಕ್ರಮಗಳ ಬಗ್ಗೆ ಸರ್ಕಾರವು, ಕ್ರಮ ತೆಗೆದುಕೊಂಡಿದೆ ಏನು ವಿವರ ಕೊಡಿ.

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):-

ಅ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 61ರ ಅನ್ವಯ ವಿಚಾರಣೆಯನ್ನು ಶಾಸನ

ಉಪವಿಭಾಗದ ಸಹಾಯಕ ನಿಬಂಧಕರು ದಿನಾಂಕ: 1-4-91 ರಂದು ಆದೇಶಿಸಿರುತ್ತಾರೆ. ವಿಚಾರಣಾ ವರದಿಯು ಮುಖ್ಯವಾಗಿ, ಸಾಲ ವಸೂಲಾತಿಯಲ್ಲಿ ಮತ್ತು ಪಾವತಿಯಲ್ಲಿ ಆಗಿರುವ ಲೋಪದೋಷಗಳು, ಅವಶ್ಯ ಮಂಜೂರಾತಿಯಿಲ್ಲದೆ ಸಾಲ ವಿತರಣೆ ಮಾಡಿರುವುದು, ಸುಸ್ತಿ ಸಾಲದ ವಸೂಲಾತಿಗೆ ಯಾವುದೇ ಕ್ರಮವಿಡದೇ ಇರುವುದು ಹಾಗೂ ಬ್ಯಾಂಕಿನ ಕಟ್ಟಡ ನಿರ್ಮಾಣದಲ್ಲಿ ಮಾಡಿರುವ ಅವ್ಯವಹಾರಗಳ ಬಗ್ಗೆ ಇತ್ಯಾದಿ ಅಂಶಗಳನ್ನು ಒಳಗೊಂಡಿರುತ್ತದೆ.

ವಿಚಾರಣಾ ವರದಿಯಲ್ಲಿ ಬಂದಿರುವ ಅಂಶಗಳ ಮೇಲೆ ಈಗಾಗಲೇ ಸಾಲ ವಸೂಲಾತಿಗೆ, ಸುಸ್ತಿ ಸಾಲಗಳ ಮೇಲೆ ಕಾನೂನು ಕ್ರಮ, ಕೆಲವು ನಿರ್ದೇಶಕರುಗಳ ಮೇಲೆ ಅಧಿಭಾರ ಪ್ರಕರಣ ದಾಖಲಾತಿ ಕ್ರಮ ಮತ್ತು ಅಂದಿನ ವ್ಯವಸ್ಥಾಪಕರ ಮೇಲೆ ಶಿಸ್ತಿನ ಕ್ರಮವಾಗಿ ಆಂತರಿಕ ವಿಚಾರಣೆಯನ್ನು ಆದೇಶಿಸಲಾಗಿದೆ. ಬ್ಯಾಂಕ್‌ನ ಹೊಸ ಕಟ್ಟಡದ ವಿಚಾರದಲ್ಲಿ, ಕಟ್ಟಡವನ್ನು ಗುತ್ತಿಗೆದಾರರಿಂದ ವಶಕ್ಕೆ ಪಡೆಯಲು ಹಾಗೂ ಕಟ್ಟಡದ ಬೆಲೆಯನ್ನು ಮೌಲೀಕರಣ ಮಾಡಿಸಲು ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಹಾಸನ ಸಿಟಿ ಕೋ ಆಪರೇಟಿವ್ ಬ್ಯಾಂಕಿನ ಕಟ್ಟಡ ಕಟ್ಟಲು ಗುತ್ತಿಗೆಗೆ ಪಡೆದ ಹಣ (1992): ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ):-

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನ ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಡೈರಕ್ಟರೊಬ್ಬರು ಬ್ಯಾಂಕಿನ ಕಟ್ಟಡವನ್ನು ಕಟ್ಟಲು ಗುತ್ತಿಗೆ ತೆಗೆದುಕೊಂಡು ಬಿಲ್ ಕೊಟ್ಟು ಚೆಕ್ ಪಡೆದಿರುವುದು ನಿಜವೇ;

ಆ. ಸಹಕಾರ ಸಂಘದ ಡೈರಕ್ಟರೊಬ್ಬರು ಅದೇ ಬ್ಯಾಂಕಿನ ಕಟ್ಟಡವನ್ನು ಕಟ್ಟಲು ಗುತ್ತಿಗೆ ತೆಗೆದುಕೊಳ್ಳುವುದು ಕಾನೂನು ಬಾಹಿರ ಕ್ರಮವಲ್ಲವೇ;

ಇ. ಈ ಕಾನೂನುಬಾಹಿರ ಕ್ರಮವು ಇಲಾಖೆಯ ಅಧಿಕಾರಿಗಳ ಗಮನಕ್ಕೆ ಯಾವ ತಾರೀಖಿನಲ್ಲಿ ಬಂದಿದೆ ? ಈ ವಿಚಾರವಾಗಿ ಸರ್ಕಾರದವರು ತೆಗದುಕೊಂಡ ಕ್ರಮವೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):-

ಅ. ಕಟ್ಟಡದ ಗುತ್ತಿಗೆಯನ್ನು ಒಂದು ಸಂಸ್ಥೆಗೆ ವಹಿಸಲಾಗಿತ್ತು. ಆ ಸಂಸ್ಥೆಯಲ್ಲಿ ಬ್ಯಾಂಕಿನ ಒಬ್ಬ ನಿರ್ದೇಶಕರು ಪಾಲುದಾರರಾಗಿದ್ದರು. ಸಂಸ್ಥೆಯ ಹೆಸರಿನಲ್ಲಿ ಬಿಲ್ಲುಗಳನ್ನು ಪಾವತಿಸಲಾಗಿದೆ.

ಆ. ಹೌದು.

ಇ. ಗುತ್ತಿಗೆ ಪಡೆದ ಸಂಸ್ಥೆಯು ಒಬ್ಬ ಪಾಲುದಾರರು ಬ್ಯಾಂಕಿನ ನಿರ್ದೇಶಕರಾಗಿದ್ದಾರೆಂಬುದು ಇಲಾಖೆಯ ಅಧಿಕಾರಿಗಳ ಗಮನಕ್ಕೆ ದಿನಾಂಕ: 3-10-91ರಂದು ಬಂದಿರುತ್ತದೆ. ಈ ನಿರ್ದೇಶಕರನ್ನು ಕಾಯ್ದೆ ಕಲಂ 29 (ಸಿ) ಅನ್ವಯ ಅನರ್ಹಗೊಳಿಸಲಾಗಿದೆ. ಈ ಅನರ್ಹಗೊಳಿಸಿದ ಆದೇಶವನ್ನು ಮೇಲ್ಮನವಿ ಪ್ರಾಧಿಕಾರವು ತಳ್ಳಿಹಾಕಿತು. ಹೊಸದಾಗಿ ತಿಳುವಳಿಕೆಯನ್ನು ಜಾರಿ ಮಾಡಲಾಯಿತು. ಈ ಕ್ರಮದ ಮೇಲೆ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ಪಡೆದಿರುತ್ತಾರೆ.

ಹಾಸನದ ಇಂಜಿನಿಯರಿಂಗ್ ಟೆಕ್ನಿಷಿಯನ್ ಕೋ–ಆಪರೇಟಿವ್ ಸೊಸೈಟಿ ಆಡಿಟ್

(1993): ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):– ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನದ ಇಂಜಿನೀಯರಿಂಗ್ ಮತ್ತು ಟೆಕ್ನೀಶಿಯನ್ ಕೋ-ಆಪ್ ಸೊಸೈಟಿಯ ಆಡಿಟ್ ಯಾವ ತಾರೀಖಿನಲ್ಲಿ ಆಯಿತು.

ಆ. ಈ ಸೊಸೈಟಿಯ ಆಡಿಟ್ ಸರಿಯಾಗಿ ನಡೆದಿಲ್ಲವೆಂದು ದೂರು ಬಂದ ನಂತರ ರಿ–ಆಡಿಟ್ ಯಾವ ತಾರೀಖಿನಲ್ಲಿ ಆಯಿತು.

ಇ. ರಿ–ಆಡಿಟ್ ಪ್ರಕಾರ ಎಷ್ಟು ಹಣ ದುರುಪಯೋಗವಾಗಿರುವುದು ಬೆಳಕಿಗೆ ಬಂದಿದೆ. ಈ ಹಣವನ್ನು ದುರುಪಯೋಗ ಮಾಡಿಕೊಂಡವರ ವಿವರ ನೀಡುವುದು.

ಈ. ಈ ಹಣ ದುರುಪಯೋಗ ಮಾಡಿಕೊಂಡ ವ್ಯಕ್ತಿಯ ಮೇಲೆ ಸರ್ಕಾರವು ಕಾನೂನು ರೀತ್ಯಾ ಯಾವ ಕ್ರಮ ತೆಗೆದುಕೊಂಡಿದೆ, ವಿವರ ಕೊಡಿರಿ.

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):-

ಅ. ಲೆಕ್ಕ ಪರಿಶೋಧನೆಯನ್ನು ಮಾಡಿದ ದಿನಾಂಕಗಳು ಈ ಕೆಳಕಂಡಂತೆ ಇರುತ್ತವೆ.

ವರ್ಷ	ದಿನಾಂಕ
1983-84	18-09-1984
1984-85	28-10-1985
1985-86	19-11-1986
1986-87	14-10-1988

ಆ. ಲೆಕ್ಕ ಪರಿಶೋಧನೆಯು ಸಮರ್ಪಕವಾಗಿ ಜರುಗಿಲ್ಲವೆಂಬ ದೂರು ಸಂಘದವರಿಂದ ಬಂದ ನಂತರ 1983-84, 1984-85, 1985-86 ಮತ್ತು 1986-87 ನೇ ಸಾಲುಗಳ ಲೆಕ್ಕಗಳ ಪುನರ್ ಪರಿಶೀಲನೆ ಹಾಗೂ ನ್ಯೂನತೆಗಳ ಪರಿಶೀಲನೆಯನ್ನು ಜರುಗಿಸಿ, ಪುನರ್ ಪರಿಶೀಲನಾ ಅಂಶಗಳನ್ನು 1989-90 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಅಳವಡಿಸಿಕೊಂಡಿದ್ದು ಈ ವರದಿಯು ದಿನಾಂಕ: 08-03-93ರಂದು ಬಿಡುಗಡೆ ಆಗಿರುತ್ತದೆ.

ಇ. ರೂ. 65,219–98 ಗಳನ್ನು ಈ ಕೆಳಗಿನಂತೆ ಹೊಣೆಗಾರರಾದವರಿಂದ ವಸೂಲಾಗಬೇಕಾಗಿದೆ.

	ರೂ.
1. ಶ್ರೀ ರಾಜಶೇಖರ, ಆಗಿನ ಕಾರ್ಯದರ್ಶಿ,	60,451–07
2. ಶ್ರೀ ಚಂದ್ರೇಗೌಡ, ಗುಮಾಸ್ತ	33–00
3. ಸಂಯುಕ್ತ ಹೊಣೆಗಾರಿಕೆ ನಿರ್ಧರಿಸಿದೆ– ಪುರವಾಟೆದಾರರಿಂದ: ಗ್ರಾಹಕರಿಂದ:	4,735–91

ಆಗಿನ **ಕಾರ್ಯದರ್ಶಿ ಶ್ರೀ** ರಾಜಶೇಖರ್
ರವರಿಂದ

ಒಟ್ಟು	65,219-98

ಈ. 1989-90ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ದಿನಾಂಕ: 08-03-1993ರಂದು ಬಿಡುಗಡೆ ಮಾಡಿದ್ದು ಈ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಸೋಮವಾರಪೇಟೆ (ತಾ)ನಲ್ಲಿ ಊರುಉಡವೇ ಜಾಗದಲ್ಲಿ ವಾಸವಾಗಿರುವ ಜನರ ಬಗ್ಗೆ

(2066): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ **ಪೇಟೆ**):- ಮಾನ್ಯ ಕಂದಾಯ ಸಚಿವರು **ಈ** ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಎಷ್ಟೋ ಜನ ಬಡವರು, ಕೂಲಿಕಾರರು ಊರುಉಡವ ಜಾಗದಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಅವರುಗಳಿಗೆ ಆ ಜಾಗಕ್ಕೆ ಹಕ್ಕುಪತ್ರ ನೀಡಲಾಗಿದೆಯೇ;

ಇ. ಇಲ್ಲದಿದ್ದಲ್ಲಿ ಹಕ್ಕುಪತ್ರ ನೀಡಲಾಗುವುದೆ ಹಾಗೂ ಯಾವಾಗ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಅ. ಹೌದು.

ಆ. ಇಲ್ಲ.

ಇ. **ಈ** ಬಗ್ಗೆ ಅರಣ್ಯ ಇಲಾಖೆಯವರೊಂದಿಗೆ ಪರಿಶೀಲಿಸಲಾಗುತ್ತಿದೆ.

ಸೋಮವಾರ ಪೇಟೆ ತಾಲ್ಲೂಕಿನ ದೇವಸ್ಥಾನಗಳ ಜೀರ್ಣೋದ್ಧಾರ

(2067): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ **ಪೇಟೆ**):- ಮಾನ್ಯ ಕಂದಾಯ ಸಚಿವರು **ಈ** ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸೋಮವಾರಪೇಟೆ ತಾಲ್ಲೂಕಿನಲ್ಲಿ ಒಟ್ಟು ಎಷ್ಟು **ದೇವಸ್ಥಾನ**ಗಳಿಗೆ ಜೀರ್ಣೋದ್ಧಾರ**ಕ್ಕಾಗಿ** 1891-92, 1992-93ನೇ ಸಾಲಿಗೆ ಹಣ ಒದಗಿಸಲಾಗಿದೆ;

ಆ. ಅದರ ಒಟ್ಟು ಮೊತ್ತವೆಷ್ಟು;

ಇ. ಎಷ್ಟು ಕೆಲಸ ಪೂರ್ಣಗೊಂಡಿದೆ;

ಈ. ಈ ವರ್ಷ ಎಷ್ಟು ಹಣ ಬಿಡುಗಡೆ ಮಾಡಲಾಗುವುದು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಅ. **1991-92**ರಲ್ಲಿ **8** ದೇವಸ್ಥಾನಗಳಿಗೆ ರೂ. 1,00,000-00 ಒದಗಿಸಲಾಗಿದೆ. 1992-**93** ರಲ್ಲಿ 2 **ದೇವಸ್ಥಾನಗಳಿಗೆ** ರೂ. 35,000-00 ಒದಗಿಸಲಾಗಿದೆ.

ಆ. ರೂ. 1,35,000–00 ಗಳು

ಇ. ಯಾವುದೂ ಪೂರ್ಣವಾಗಿಲ್ಲ.

ಈ. ಸರ್ಕಾರದ ಪರಿಶೀಲನೆಯಲ್ಲಿದೆ.

ಅತಿವೃಷ್ಟಿಯಿಂದ ಬಲಿಯಾದವರಿಗೆ ಪರಿಹಾರ ಧನ

(2104): ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಾದಾಮಿ ತಾಲ್ಲೂಕಿನಲ್ಲಿ ಅನಿರೀಕ್ಷಿತ ಮಳೆಯಿಂದ ಹಾಗೂ ಮಲಪ್ರಭಾ ನದಿಯ ಭಾರಿ ಪ್ರವಾಹದಿಂದ ಆದ ಹಾನಿ ಎಷ್ಟು; (ಬೆಳೆ, ದನಗಳ ಹಾಗೂ ಬಿದ್ದ ಮನೆಗಳ ವಿವರ ಒದಗಿಸುವುದು);

ಆ. ಇಲ್ಲಿಯವರೆಗೆ ನೀಡಲಾಗಿರುವ ಪರಿಹಾರ ಧನವೆಷ್ಟು;

ಇ. ಉಳಿದ ಪರಿಹಾರ ಧನವನ್ನು ಯಾವಾಗ ಬಿಡುಗಡೆ ಮೊದಲಾಗುವುದು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಹಾನಿಯು ವಿವರ ಕೆಳಕಂಡಂತೆ ಇದೆ:

	ಅಂದಾಜು ಹಾನಿ (ರೂ. ಲಕ್ಷಗಳಲ್ಲಿ)
1. ಪೂರ್ಣ ಹಾನಿಯಾಗಿರುವ ಮನೆಗಳ ಸಂಖ್ಯೆ 203	44.86
2. ಭಾಗಶಃ ಹಾನಿಯಾಗಿರುವ ಮನೆಗಳ ಸಂಖ್ಯೆ 3853	
3. ಹಾನಿಯಾಗಿರುವ ಜಾನುವಾರುಗಳ ಸಂಖ್ಯೆ 1070	1.45
4. ಬೆಳೆನಾಶ 1655 ಹೆಕ್ಟೇರುಗಳು	79.50
ಒಟ್ಟು:	125.81

ಆ. ನೀಡಲಾದ ಪರಿಹಾರ ಕೆಳಕಂಡಂತಿದೆ:

1. ಮನೆಗಳ ಹಾನಿಗೆ ರೂ.	9,49,280-00
2. ಜಾನುವಾರುಗಳ ಹಾನಿಗೆ ರೂ.	500-00
ಒಟ್ಟು: ರೂ.	9,49,780-00

ಇ. ಅಗತ್ಯಕ್ಕೆ ಅನುಗುಣವಾಗಿ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ತುಂಬೆಯಲ್ಲಿ ತೋಟಗಾರಿಕಾ ಇಲಾಖೆಗೆ ಸೇರಿದ ಜಮೀನಿನ ವಿಸ್ತೀರ್ಣ

(2124): ಶ್ರೀ ಎ. ರುಕ್ಮಯ ಪೂಜಾರಿ (ವಿಟ್ಲ):– ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಕ್ಷಿಣ ಕನ್ನಡ ಜಿಲ್ಲೆಯ ತುಂಬೆಯಲ್ಲಿ ತೋಟಗಾರಿಕಾ ಇಲಾಖೆಗೆ ಸೇರಿದ ಜಮೀನಿನ ವಿಸ್ತೀರ್ಣವೆಷ್ಟು;

ಆ. ಈ ಜಮೀನನ್ನು ಬೇರೆ ಉದ್ದೇಶಕ್ಕೆ ಉಪಯೋಗಿಸುವ ಆಲೋಚನೆಯು ಸರ್ಕಾರಕ್ಕಿದೆಯೇ;

ಇ. ಈ ಜಮೀನನ್ನು ಅಭಿವೃದ್ಧಿಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳಾವುವು ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):–

ಅ. 26 ಎಕರೆ – 29 ಗುಂಟೆ

ಆ. ಇಲ್ಲ

ಇ. ಪ್ರತಿ ವರ್ಷ ಈ ಕ್ಷೇತ್ರದಲ್ಲಿ ಮಳೆಗಾಲದಲ್ಲಿ 6 ಎಕರೆ ಪ್ರದೇಶದಲ್ಲಿ, ಬೇಸಿಗೆ ಕಾಲದಲ್ಲಿ 5 ಎಕರೆ ಪ್ರದೇಶದಲ್ಲಿ ತರಕಾರಿ ಬೀಜೋತ್ಪಾದನೆ ಮಾಡಲಾಗುತ್ತಿದೆ. ಉಳಿಕೆ ಪ್ರದೇಶದಲ್ಲಿ ಮುಂಬರುವ ವರ್ಷಗಳಲ್ಲಿ ಹಂತ, ಹಂತವಾಗಿ ತೆಂಗು, ಅಡಿಕೆ, ಸಾಂಬಾರು ಬೆಳೆಗಳನ್ನು ಹಾಕಿ ಅಭಿವೃದ್ಧಿಪಡಿಸಲಾಗುವುದು.

ಉತ್ತರ ಕನ್ನಡ ಜಿಲ್ಲೆಯ ಪಿ.ಎಲ್.ಡಿ. ಬ್ಯಾಂಕ್ ಹಿಡುವಳಿಯ ಕುರಿತು

(2102): ಶ್ರೀ ಆರ್.ಎನ್. ನಾಯಕ್ (ಭಟ್ಕಳ):– ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಉತ್ತರ ಕನ್ನಡ ಜಿಲ್ಲೆಯ ಪಿ.ಎಲ್.ಡಿ. ಬ್ಯಾಂಕುಗಳಲ್ಲಿ ಅತಿ ಕಡಿಮೆ ಅಂದರೆ ಎಷ್ಟು ಬಾಗಾಯಿತ ಹಿಡುವಳಿ ಇರುವವರಿಗೆ ಸಾಲ ನೀಡಲಾಗುತ್ತದೆಯೇ;

ಆ. ಸಧ್ಯ ಇರುವ ಪದ್ಧತಿಯನ್ನು ಬದಲಿಸಿ ಹಿಡುವಳಿಯ ವಿಲೇಯನ್ನು ಇನ್ನೂ ಕಡಿಮೆ ಮಾಡಲು ಸಾಧ್ಯವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ಅರ್ಧ ಎಕರೆ.

ಆ. ವಿಶೇಷ ಸಂದರ್ಭಗಳಲ್ಲಿ ಅಂದರೆ ವಿವಿಧೋದ್ದೇಶಗಳ ಯೋಜನೆಗಳಲ್ಲಿ ಯೋಜನೆಯ ಅರ್ಹತೆಯ ಮೇಲೆ ಕ್ಷೇತ್ರ ನಡುವಳಿಯ ಮಿತಿಗಿಂತ 5 ಗುಂಟೆಯವರೆಗೆ ಕಡಿಮೆ ಇದ್ದರೂ ಸಾಲ ನೀಡಲೂ ಪರಿಗಣಿಸಲಾಗುವುದು.

ಕನಕಪುರ ಎ.ಪಿ.ಎಂ.ಸಿ. ಮಾರ್ಕೆಟ್ ಯಾರ್ಡ್ ಪ್ರಾರಂಭ

(2147): ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ವ್ಯವಸಾಯೋತ್ಪನ್ನ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕನಕಪುರ ತಾಲ್ಲೂಕು ಕೇಂದ್ರದಲ್ಲಿ ಎ.ಪಿ.ಎಂ.ಸಿ. ಮಾರುಕಟ್ಟೆ ಯಾರ್ಡ್ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದಲ್ಲಿ ಎ.ಪಿ.ಎಂ.ಸಿ. ಮಾರ್ಕೆಟ್ ಯಾರ್ಡ್‌ನ್ನು ಪ್ರಾರಂಭ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮ ಏನು;

ಇ. ಇದನ್ನು ಈ ವರ್ಷದಲ್ಲಿ ಪ್ರಾರಂಭ ಮಾಡಲು ಸರ್ಕಾರ ಕ್ರಮ ತೆಗೆದುಕೊಂಡಿರುವುದೇ ?

ಶ್ರೀ ಮದನಗೋಪಾಲ ನಾಯಕ್ (ವ್ಯವಸಾಯೋತ್ಪನ್ನ ಮಾರುಕಟ್ಟೆ ರಾಜ್ಯ ಸಚಿವರು):–

ಅ. ಹೌದು

ಆ. ಕನಕಪುರದಲ್ಲಿ ಸ್ವಂತ ಉಪಮಾರುಕಟ್ಟೆ ಪ್ರಾಂಗಣವನ್ನು ನಿರ್ಮಾಣ ಮಾಡಲು ದಿನಾಂಕ: 29–12–1992ರಂದು 17 ಎಕರೆ 18 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಭೂಸ್ವಾಧೀನಕ್ಕಾಗಿ ಸುಮಾರು ರೂ. 7.36 ಲಕ್ಷ ವೆಚ್ಚವಾಗಬಹುದಾಗಿದ್ದು, ಇದರಲ್ಲಿ ರೂ. 2.50 ಲಕ್ಷ ಸರ್ಕಾರವು ಸಹಾಯ ಧನವನ್ನಾಗಿ ಒದಗಿಸಿರುತ್ತದೆ. ಬಾಕಿ ಹಣವನ್ನು ಚನ್ನಪಟ್ಟಣ ಮಾರುಕಟ್ಟೆ ಸಮಿತಿಯು ಭರಿಸುತ್ತದೆ. ನಿಯಂತ್ರಿತ ಪದಾರ್ಥಗಳ ವ್ಯಾಪಾರ ವಹಿವಾಟುಗಳಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ. ನಂತರ ಉಪಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ಪ್ರಾರಂಭಿಸಲು ಸಾಧ್ಯವಾಗುವುದು.

ಇ. ಕನಕಪುರ ಉಪಮಾರುಕಟ್ಟೆ ಪ್ರಾಂಗಣದಲ್ಲಿ ನಿಯಂತ್ರಿತ ಪದಾರ್ಥಗಳ ವ್ಯಾಪಾರ ವಹಿವಾಟುಗಳಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕಾಲಾವಕಾಶ ಬೇಕಾಗಿರುವುದರಿಂದ ಈ ವರ್ಷದಲ್ಲಿ ಕನಕಪುರ ಉಪಮಾರುಕಟ್ಟೆ ಪ್ರಾಂಗಣವನ್ನು ಅಭಿವೃದ್ಧಿಪಡಿಸಿ, ಅಲ್ಲಿ ವ್ಯಾಪಾರ ಪ್ರಾರಂಭಿಸಲು ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು:– ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಹಕ್ಕು ಚ್ಯುತಿ ನಿರ್ಣಯ

ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ (615)ರ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಕ್ರಿಮಿನಲ್ ಕೇಸ್‌ಗಳ ಪೆಂಡಿಂಗ್ ಎಂಬುದರ ಬಗ್ಗೆ (ಶ್ರೀ ಗೋಪಿನಾಥ್ ಆರ್. ಸಾಂಡ್ರ) ರವರ ಬಗ್ಗೆ.

† ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ನಾನು ಒಂದು ಪ್ರಿವಿಲೇಜ್ ಅನ್ನು ಪ್ರಶ್ನೋತ್ತರ ಅವಧಿಯ ನಂತರ ತೆಗೆದುಕೊಳ್ಳಬೇಕಾಗುತ್ತದೆಂದು ನಿಮಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೆ, ನಾನು ಕಳುಹಿಸಿರುವ ಪ್ರಿವಿಲೇಜ್ ಅನ್ನು ತೆಗೆದುಕೊಳ್ಳುತ್ತೀರೋ, ಇಲ್ಲವೋ ಎಂಬುದನ್ನು ಕೇಳುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ರಾಮಯ್ಯನವರೆ, ರೂಲ್ಸ್ ಆಫ್ ಪ್ರೊಸೀಜರ್ ಇದೆ. ನಾನು ಕಳುಹಿಸಿರುವ ಪ್ರಿವಿಲೇಜ್ ಬಹಳ ಮುಖ್ಯವಾದುದಾಗಿದೆ. That has to be taken only after question hour.

ಶ್ರೀ ವೈ.ಕೆ. ರಾಮಯ್ಯ:– ನಿಮಗಿಂತ ಮೊದಲೇ ನಾನು ಮಾನ್ಯ ಅಧ್ಯಕ್ಷರಿಗೆ ಪ್ರಿವಿಲೇಜ್

ಕಳುಹಿಸಿಕೊಟ್ಟಿದ್ದೇನೆ. ಅದರ ಬಗ್ಗೆ ಪ್ರಸ್ತಾಪಿಸುವುದಕ್ಕಾದರೂ ಅವಕಾಶ ಮಾಡಿಕೊಡಿ. ನಾನು ಮಾನ್ಯ ಮುಖ್ಯಮಂತ್ರಿಗಳ ಮೇಲೆ ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ:- ನಾನು ಪ್ರಿವಿಲೇಜ್ ಮೋಷನ್ ಅನ್ನು ನಿನ್ನೆ ಅಧ್ಯಕ್ಷರಿಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ:- ನಾನು ಮೊನ್ನೆ ದಿವಸ ಪ್ರಿವಿಲೇಜ್ ಮೋಷನ್ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಎ.ಕೆ. ಅನಂತಕೃಷ್ಣ:- ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ತಾವು ತೀರ್ಮಾನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:- ನಾನು ಈಗ ಪ್ರಿವಿಲೇಜ್ ಮೋಷನ್ ಮೇಲೆ ಹೇಳುತ್ತಿಲ್ಲ. ನಾನು ನಿನ್ನೆ ತಮ್ಮ ಕಛೇರಿಗೆ ಬಂದು ಪ್ರಾರ್ಥಿಸಿಕೊಂಡಿದ್ದೇನೆ.....

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರಾದ ದೇಶಪಾಂಡೆಯವರು ಪ್ರಿವಿಲೇಜ್ ಮೋಷನ್ ಅನ್ನು ಮೂವ್ ಮಾಡಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:- ಆಗಬಹುದು.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ ಒಂದು ಪ್ರಿವಿಲೇಜ್ ಮೋಷನನ್ನು under Rule 190 of the Karnataka Legislative Assembly Rules of Procedure.... ನಾನು ಮತ್ತು ಉಪನಾಯಕರಾದ ಶ್ರೀ ಸಿಂಧ್ಯರವರು, ಏಕಾಂತಯ್ಯನವರು ಹಾಗೂ ಶಿವಾನಂದ ಕೌಜಲಗಿಯವರು ಮೂವ್ ಮಾಡಿದ್ದೇವೆ. ಕಾರಣವೇನೆಂದರೆ, ಮಾನ್ಯ ಶಾಸಕರಾದ ಶ್ರೀ ಬಸವರಾಜ ರಾಯರೆಡ್ಡಿಯವರು ಅವರ ಪ್ರಶ್ನೆ ಸಂಖ್ಯೆ 615 ದಿನಾಂಕ 9.3.1993ರಂದು ಯಾವ ಮಂತ್ರಿಗಳ ವಿರುದ್ಧ ಯಾವ ತರಹದ ಕ್ರಿಮಿನಲ್ ಕೇಸ್‌ಗಳು ಪೆಂಡಿಂಗ್ ಇದೆ ಎಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಒಬ್ಬ ಸಚಿವರ ವಿರುದ್ಧ ಒಂದು ಕೇಸ್ ಪೆಂಡಿಂಗ್ ಇರುವುದನ್ನು ಉದ್ದೇಶಪೂರ್ವಕವಾಗಿ ನಮೂದು ಮಾಡಿರುವುದಿಲ್ಲ. ಅವರ ಪ್ರಶ್ನೆ ಏನೆಂದು ನಾನು ಓದುತ್ತೇನೆ. ಪ್ರಶ್ನೆ ಸಂಖ್ಯೆ 615ಕ್ಕೆ ಉತ್ತರ ಕೊಡುವಾಗ, "ಶ್ರೀ ಗೋಪಿನಾಥ ಸಾಂಡ್ರಾರವರ ವಿರುದ್ಧ ಯಾವ್ಯಾವ ಮೊಕದ್ದಮೆಗಳು ಪೆಂಡಿಂಗ್ ಇವೆಯೆಂಬುದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅವು ಯಾವುವೆಂದರೆ, ಹುಬ್ಬಳ್ಳಿ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಅಪರಾಧ ಸಂಖ್ಯೆ: 23087 under section 147, 148, 427, 506 read with section 149 ಇದೊಂದನ್ನು ಹೇಳಿದ್ದಾರೆ. ಮತ್ತೊಂದು, ಹುಬ್ಬಳ್ಳಿ ನಗರ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ:23287 ಸಿ.ಸಿ.ನಂ. 17888 ಬಗ್ಗೆ ಹೇಳಿದ್ದಾರೆ. ಆದರೆ, ಶ್ರೀ ಗೋಪಿನಾಥ ಸಾಂಡ್ರಾರವರ ವಿರುದ್ಧವಿರುವ ಮೊಕದ್ದಮೆ ಬಗ್ಗೆ ನನಗೆ ಬಂದಿರುವ ಮಾಹಿತಿ ಪ್ರಕಾರ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ಒಂದು ಕೇಸ್ ಪೆಂಡಿಂಗ್ ಇದೆ. ಇದರ ಸಿ.ಸಿ. ಸಂಖ್ಯೆ: 17988 ಪೊಲೀಸ್ ಕ್ರೈಂ ನಂಬರ್ 57:88. This is under Section 147, 451, 427, 506 real with section 149 of the IPC.

ಈ ಕೇಸ್ ದಾಖಲಾಗಿದೆ. ಇದರ ಬಗ್ಗೆ ನಾನೇನು ತಿಳಿದುಕೊಂಡಿದ್ದೇನೆಂದರೆ, ಅಲ್ಲಿ ಕೇಸ್ ದಾಖಲಾಗಿದ್ದು, ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಾನು ಪ್ರಯತ್ನಿಸಿದೆ. ಅದರಲ್ಲಿ ಏನು ಉಳಿದಿದೆಯೆಂದರೆ, ಹುಬ್ಬಳ್ಳಿಯ ಕ್ರೈಂ ನಂಬರ್ 230 ಇದ್ದು, ಇದು ನಂ:147, 148 ಮತ್ತು 427ರ ಕೆಳಗಡೆ ಇದೆ. ಆದರೆ ಇಲ್ಲಿ ಇದ್ದದ್ದು 451ರ ಕೆಳಗಡೆ. The Sections are also different,

The Crime No. is different. In addition, ಸಿ.ಸಿ. ನಂಬರ್ ಇದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಮೂದು ಮಾಡಿಲ್ಲ. ಆದುದರಿಂದ, ಮುಖ್ಯಮಂತ್ರಿಯವರು he has made a breach of privilege of the House by concealing this information intentionally, only to help his colleague.

ಹಾಗಾಗಿ, ಇವೊತ್ತು ಈ ಕೇಸಿನಲ್ಲಿ a Prima facie case is made out. ಹುಬ್ಬಳ್ಳಿಯಲ್ಲಿರುವ ಜೆಎಂಎಫ್‌ಸಿ–3ರಲ್ಲಿ ಮ್ಯಾಜಿಸ್ಟ್ರೇಟರು ಆರ್ಡರ್‌ನಲ್ಲಿ ಹೇಳುತ್ತಿದ್ದಾರೆ: A prima facie case is made out. Complaint is Vishwanath Nagendra Sha, Ilkal. ಇದರ ಬಗ್ಗೆ ಸರ್ಟಿಫೈಡ್ ಕಾಪಿಯನ್ನು ನಿಮ್ಮ ಕಛೇರಿಗೆ ಕೊಟ್ಟಿದ್ದೇನೆ. ಸರ್ಕಾರದ ಗಮನಕ್ಕೆ ಬೇಕಾದರೆ ಕಳುಹಿಸಿಕೊಡುತ್ತೇನೆ. ವಿಶ್ವನಾಥ್ ನಾಗೇಂದ್ರ ಷಾ, ಇಳಕಲ್ is the complainant for Hubli ಆರೋಪಿ ಗೋಪಿನಾಥ ರಂಗಸ್ವಾಮಿ ಸಾಂಡ್ರಾರವರ ಎರಡನೆಯ ಮಗನಾದ ಉದಯ ಗೋಪಿನಾಥ ಸಾಂಡ್ರಾ ಮತ್ತು ಮೂರನೆಯ ಮಗನಾದ ಸುನೀಲ್ ಗೋಪಿನಾಥ ಸಾಂಡ್ರಾ, ಈ ಮೂರು ಜನರು ಕೇಸಿನಲ್ಲಿ ಆರೋಪಿಗಳಾಗಿದ್ದಾರೆ. II Additional Munsiff and JMFC III Court, Hubli ಇಲ್ಲಿ ಕೇಸ್ ವಿಚಾರಣೆಯಲ್ಲಿದೆ. ಮತ್ತು ಈ ಕೇಸ್‌ನ ಕಂಟೆಂಟ್ಸ್ ಏನೆಂದರೆ, ಆರೋಪಿ ಮತ್ತು ಕೆಲವು ಗೂಂಡ ಜನರು ಸಿದ್ಧಾರೂಢ ಮಠಕ್ಕೆ ತೆರಳಿ ಅಲ್ಲಿನ ಸ್ವಾಮಿಗಳನ್ನು ಹೆದರಿಸಿದರೆಂಬ ಆಪಾದನೆ ಆರೋಪಿಗಳ ಮೇಲಿದೆ. ಈ ಕುರಿತು ಮ್ಯಾಜಿಸ್ಟ್ರೇಟರು ಆರ್ಡರ್‌ನಲ್ಲಿ ಏನೆಂದು ಬರೆದುಕೊಳ್ಳುತ್ತಾರೆಂದರೆ, "The Complaint is present. Witness No. II is examined. Persued the complaint. Sole statement of witness No. 1 and 2, and documents produced. A Prima facie case is made out against all the accused for the offence punishable under sections 147, 457, 427, 506 read with Section 149 of IPC, registered case in Register No. 3. Issue Process against the accused returnable by 18–1–89."

A Prima facie case has been made out. ಜೆಎಮ್‌ಎಫ್‌ಸಿಯವರು ಪ್ರೊಸೇಸ್ ಇಷ್ಯೂ ಮಾಡಿದ್ದಾರೆ.

ಮುಖ್ಯಮಂತ್ರಿಯವರು ಉದ್ದೇಶಪೂರ್ವಕವಾಗಿ ಈ ವಿಷಯವನ್ನು ಸದನದಿಂದ ದೂರವಿಡಲು ಪ್ರಯತ್ನ ಮಾಡಿದ್ದಾರೆ. ಅವರ ಸಂಪುಟದಲ್ಲಿ ಯಾರು ಸಚಿವರಿದ್ದಾರೆ ಅವರ ಪರವಾಗಿ ಮಾಡಿದ್ದಾರೆ. ಅದು ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆ. I am also demanding the resignation of the Minister. ಏಕೆಂದರೆ ಮಂತ್ರಿಗಳ ಇಂಥ ಕೇಸುಗಳು ಎಷ್ಟಿದೆ ಎನ್ನುವ ಬಗ್ಗೆ ಲೆಕ್ಕ ಸಿಗುತ್ತಿಲ್ಲ. ನಾನೇನು ಇದನ್ನು political ಆಗಿ motivation ಮಾಡಬೇಕು, ರಾಜಕೀಯವಾಗಿ ಅವರಿಗೆ ಕಷ್ಟವನ್ನು, ತೊಂದರೆಯನ್ನು ಕೊಡಬೇಕು ಎಂಬ ವಿಚಾರವಲ್ಲ. ಅವರು ಮೇಲ್ಮನೆಯಲ್ಲಿ ಇದರ ಬಗ್ಗೆ ಸ್ಟೇಟ್‌ಮೆಂಟ್ ಕೊಟ್ಟು ಬೊಮ್ಮಾಯಿಯವರನ್ನು ಸೋಲಿಸಿ ಬಂದೆ ಎಂಬುದಾಗಿ ಹೇಳಿದ್ದಾರೆ. ನಮಗೆ ಅವರ ಬಗ್ಗೆ ಬೇರೆ ರಾಜಕೀಯವಾದ ಉದ್ದೇಶವೇನೂ ಇಲ್ಲ. He is a good friend of mine. I have got personal regard for him. ಚುನಾವಣೆಯಲ್ಲಿ ಸೋಲು ಗೆಲುವು ಸಹಜ, ಇಂದಿರಾಗಾಂಧಿಯವರು, ರಾಮಕೃಷ್ಣಹೆಗಡೆಯವರು, ಟಿ.ಎ. ಪೈಯವರೂ ಸೋತಿದ್ದಾರೆ. ನಾನು ಸಹ ಚುನಾವಣೆಯಲ್ಲಿ ಸೋತಿದ್ದೇನೆ. It is a part of a game. ಆದರೆ ನಾನು ಬಂದು ಅದರ ಬಗ್ಗೆ character assassination ಮಾಡುವುದು ನನ್ನ ಕೆಲಸವಲ್ಲ. ನಾನು ಇಲ್ಲಿ ಬಂದು I have to give suggestions; constructive criticism ಮಾಡಬೇಕಾಗುತ್ತದೆ, ಅದನ್ನು ಬಿಟ್ಟು ಬೇರೆ

ಮಾಡಬಾರದು, ಆ ರೀತಿ ಮಾಡಿದರೆ ಅದು ಪಾಪದ ಕೆಲಸವಾಗುತ್ತದೆ, ನಾನು ಆ ವಿಚಾರಕ್ಕೆ ಹೋಗುತ್ತಿಲ್ಲ. ಹಾಗಾಗಿ ಯಾವ ಮುಖ್ಯಮಂತ್ರಿಯವರು ದಕ್ಷ, ಪ್ರಾಮಾಣಿಕ ಮತ್ತು ಸ್ವಚ್ಛ ಸರ್ಕಾರವನ್ನು ಕೊಡುತ್ತೇನೆಂದು ಹೇಳಿದ್ದರೋ, ಅವರಿಗೆ ನೇರವಾಗಿ ಕೇಳುವುದೇನೆಂದರೆ, ತಾವು ಉತ್ತರವನ್ನು ಕೊಡತಕ್ಕ ಕಾಲದಲ್ಲಿ ಈ ಕೇಸ್‌ನ ಬಗ್ಗೆ ಏಕೆ ಪ್ರಸ್ತಾಪ ಮಾಡಲಿಲ್ಲ? ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ, ಹಾಗಾಗಿ ಇವತ್ತು ಮುಖ್ಯಮಂತ್ರಿಗಳ ವಿರುದ್ಧವೇ ಬ್ರೀಚ್ ಆಫ್ ಪ್ರಿವಿಲೇಜ್‌ಗೆ ಶಿಫಾರಸ್ಸು ಮಾಡಬೇಕಾಗುತ್ತದೆ, ಬೇಕಾದರೆ ಒಂದು ಅವಕಾಶ ಕೊಡಬಹುದು.

SRI K.H. RANGANATH:– Not disclosing a case, would it amount to breach of privilege?

SRI R.V. DESHAPANDE:– Naturally, you have not heard me. The Hon'ble Chief Minister has replied to one question. ಮಾನ್ಯ ಮುಖ್ಯ ಮಂತ್ರಿಗಳು ಯಾವ ಯಾವ ಮಂತ್ರಿಗಳ ಮೇಲೆ ಯಾವ ರೀತಿಯಾದ ಕೇಸ್‌ಗಳು ಪೆಂಡಿಂಗ್ ಇವೆ ಎನ್ನುವ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ, ಆ ರೀತಿ ಉತ್ತರವನ್ನು ಕೊಡುವಾಗ ಅವರು ಈ ಕೇಸ್‌ನ ಬಗ್ಗೆ ಹೇಳಲಿಲ್ಲ. So, I am afraid that he has suppressed the facts intentionally and it amounts to breach of privilege.

ಶ್ರೀ ಕೆ.ಹೆಚ್. ರಂಗನಾಥ್:– ನಿಮ್ಮಲ್ಲಿ ಬಹಳಷ್ಟು ಜನರು ವಕೀಲರಾಗಿದ್ದೀರಿ... Many of you must have also conducted murder cases or any case on criminal side, Intentional suppressing, not disclosing intentionally is an offence. Prima facie, you will have to convince this August House that there has been an intention on the part of Chief Minister in suppressing these things. Supposing for argument sake, we depend on our Officers and supposing it has not come to our notice. ತಾವೂ ಸಹ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ, ವಿಷಯ ಏನು ಬರುತ್ತದೆಯೋ ಅದನ್ನು ಇಲ್ಲಿ ಓದುತ್ತೇವೆ, ಒಂದೊಂದು ಸಾರಿ ಅದು ತಪ್ಪಿ ಹೋಗುವ ಸಾಧ್ಯತೆಯೂ ಇದೆ, ಆ ರೀತಿ ಆದಾಗ, ಆ ರೀತಿ ಆಗಿದೆ ಎಂದು ನಮ್ಮ ಮನಸ್ಸಿಗೆ ಬಂದಾಗ, ಆ ರೀತಿ ಆಗಿದೆ ಎಂದು ನಮಗೆ ಗೊತ್ತಾದರೆ, ನಾನು ಮತ್ತೆ ಅದರ ಬಗ್ಗೆ ಆ ರೀತಿ ಆಗಿದೆ, ಈ ರೀತಿ ಆಗಿದೆ ಎಂದು ಹೇಳಿ ಕ್ಷಮೆಯನ್ನು ಕೇಳಬಹುದು: It was withheld because of this reason ಅಂತ ಅದನ್ನು to allege that there is an intentional suppression of a fact of an information.. ತಾವು ವಿರೋಧ ಪಕ್ಷದ ನಾಯಕರಾಗಿ ಆ ಮಟ್ಟಕ್ಕೆ ಈ ವಿಷಯವನ್ನು ಎಳೆದು ಇದರಲ್ಲಿ ಬ್ರೀಚ್ ಆಫ್ ಪ್ರಿವಿಲೇಜ್ ಆಗಿದೆ ಎಂದು ಹೇಳಿದರೆ ಅದು ಸರಿಯಲ್ಲ, ತಾವು ಬೇಕಾದರೆ ಇನ್ನೊಂದು ಸಾರಿ ಇದರ ಬಗ್ಗೆ ವಿಚಾರ ಮಾಡಿ ಪ್ರಸ್ತಾಪ ಮಾಡಿ. ಬರೀ ಮುಖ್ಯ ಮಂತ್ರಿಗಳು ಮಾತ್ರವಲ್ಲ ಅಥವಾ ನನ್ನದು ಮಾತ್ರವಲ್ಲ ಈ ಸದನದ ಯಾರೇ ಸದಸ್ಯರ ಬುದ್ಧಿಪೂರ್ವಕವಾಗಿ ಸದನದ ಗಮನಕ್ಕೆ ತಾರದೇ ಇರತಕ್ಕದ್ದು ದೊಡ್ಡ ಅಪರಾಧವಾಗುತ್ತದೆ. ಅದನ್ನು ಒಪ್ಪಿಕೊಳ್ಳೋಣ.

But, we will have to convince ourselves before we raise this aspect.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಮುಖ್ಯ ಮಂತ್ರಿಗಳು ಏನು ವಾದ ಮಾಡಬೇಕಾಗಿತ್ತೋ ಅದನ್ನು ತಾವು ಅವರ ಪರವಾಗಿ ಮಾಡಿದ್ದೀರಿ.

ಶ್ರೀ ಕೆ.ಹೆಚ್. ರಂಗನಾಥ್:– ಅವರ ಪರವಾಗಿ ನಾನೇ ಏಕೆ ಈ ಸದನದ ಎಲ್ಲಾ ಸದಸ್ಯರಲ್ಲಿ

ಯಾರು ಬೇಕಾದರೂ ಸಹ ಮಾಡಬಹುದು, ತಾವು ಒಂದು ಸಲ ಈ ಸಮಸ್ಯೆಯ ಬಗ್ಗೆ ಈ ಸದನದಲ್ಲಿ ಎತ್ತಿದಾಗ it is no more an individual's property. The whole issue becomes the property of this August House. ತಪ್ಪಾದರೆ ಈ ಸದನದಲ್ಲಿರತಕ್ಕ ಯಾರು ಬೇಕಾದರೂ ಸಹ ಇದು ತಪ್ಪಾಗಿದೆ ಎಂದು ಹೇಳಬಹುದು. Of course, I have not fully heard you. ಇದು ಉದ್ದೇಶಪೂರ್ವಕವಾಗಿ ಆಗಿಲ್ಲ, ಇದನ್ನು ತಾವು ಕನ್ವಿನ್ಸ್ ಮಾಡಿ ಎಂದು ಹೇಳಿದೆ. ಆದರೆ ಅವರ ಪರವಾಗಿ ಎನ್ನತಕ್ಕ ಪ್ರಶ್ನೆ ಅಲ್ಲ. ನಾವು ಮಾನ್ಯ ಅಧ್ಯಕ್ಷರಿಗೆ ಸರಿಯಾದ ಮಾಹಿತಿಯನ್ನು ಕೊಟ್ಟು ಅವರು ಒಳ್ಳೆಯ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಸಹಾಯ ಮಾಡಬೇಕು. ಮುಖ್ಯಮಂತ್ರಿಗಳ ಪರವಾಗಿ ಎಂದು ಏತಕ್ಕೆ ಆಪಾದನೆ ಮಾಡುತ್ತೀರಿ ?

ಶ್ರೀ ಆರ್.ವಿ. ದೇಶಪಾಂಡೆ:- ನಾನು ಮಾತನಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ. ತಾವು ಸದನಕ್ಕೆ ತಡವಾಗಿ ಬಂದಿರಿ. ನಾನು ಹೇಳಿದ್ದುದು, ಮಾನ್ಯ ರಾಯರೆಡ್ಡಿಯವರ ಪ್ರಶ್ನೆ ಬಂದಿತ್ತು. ಯಾವ ಮಂತ್ರಿಯ ವಿರುದ್ಧ ಮೊಕದ್ದಮೆಗಳು ಎನ್ನುವುದು ದಾಖಲಾಗಿವೆ.

ಈಗ ಪ್ರಶ್ನೆ ಏನು ಬರುತ್ತದೆ ನಾನು ಮಾನ್ಯ ಮುಖ್ಯಮಂತ್ರಿಯವರು intentional – ಆಗಿ ಮಾಹಿತಿಯನ್ನು ಸದನಕ್ಕೆ ಕೊಟ್ಟಿಲ್ಲ, you are right that I have to convince the Chair. To that extent I agree.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಪ್ರಿವಿಲೇಜ್ ಮೋಷನನ್ನು ತಾವು ಏನು ಕೊಟ್ಟಿದ್ದೀರಿ, ಆಗ ನಮಗೆ ಬಂದಿಲ್ಲ. ತಾವು ಮಾನ್ಯ ಮುಖ್ಯಮಂತ್ರಿಯವರ ಮೇಲೆ ಕೊಟ್ಟಿದ್ದೀರಿ. ಆದರೆ ಅದರ ಕಾಪಿ ನಮಗಾಗಲಿ, ಮಾನ್ಯ ಮುಖ್ಯ ಮಂತ್ರಿಯವರಿಗಾಗಲಿ ಬಂದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ನಿನ್ನೆ ನಾನು ಇಲ್ಲಿಯೇ ಕೊಟ್ಟಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ನಮಗೆ ಬಂದಿಲ್ಲ. ನಮಗೆ ಬಂದಿರತಕ್ಕದ್ದು 311ನೇ ನಿಯಮದ ಪ್ರಕಾರ ನೀವು ಕೊಟ್ಟಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ:- ನಿನ್ನೆ 11 ಗಂಟೆಯಲ್ಲಿ ನಾನು ಕೊಟ್ಟಿದ್ದೇನೆ. ಇದರ ಜೊತೆಗೆ ಮಾನ್ಯ ಅಧ್ಯಕ್ಷರ ಗಮನಕ್ಕೂ ಈ ವಿಚಾರವನ್ನು ನಾನು ತಂದಿದ್ದೇನೆ. ಹಿರಿಯ ಸಚಿವರಾದ ಮಾನ್ಯ ರಂಗನಾಥ್‌ರವರು ಒಂದು ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದಾರೆ. ಇದು ಇಂಟೆನ್‌ಷನ್‌ನಲ್ಲಿ ಆಗಿದ್ದರೆ ಹೇಳಿ ಎಂದು. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. To that extent, I have to convince the Chair. ಮಾನ್ಯ ಮುಖ್ಯಮಂತ್ರಿಗಳು ಕೇವಲ ಮುಖ್ಯಮಂತ್ರಿಗಳು ಅಷ್ಟೇ ಅಲ್ಲ. ಅವರು ಗೃಹಮಂತ್ರಿ ಕೂಡ ಆಗಿದ್ದಾರೆ. ಇಡೀ ಪೊಲೀಸ್ ಇಲಾಖೆಯೇ ಅವರ ಕೈಕೆಳಗೆ ಕೆಲಸ ಮಾಡುತ್ತಿದೆ. ಈ ಪ್ರಶ್ನೆಗೆ ಉತ್ತರ ಕೊಡುವಾಗ ಮಾನ್ಯ ಮುಖ್ಯಮಂತ್ರಿಯವರು 3 ಸಾರಿ ಕಾಲಾವಕಾಶ ತೆಗೆದುಕೊಂಡಿದ್ದಾರೆ. ಕಾರಣ ಅವರಿಗೆ ಸರಿಯಾಗಿ ಮಾಹಿತಿ ಬರುತ್ತಿಲ್ಲ ಎಂದು. ಇದು ಮುಖ್ಯಮಂತ್ರಿಗಳ ಕೈಯಲ್ಲಿಲ್ಲದಿದ್ದರೆ, ಬೇರೆ ಮಂತ್ರಿಗಳ ಕೈಯಲ್ಲಿದ್ದಿದ್ದರೆ ಆಗ ಇದನ್ನು ಒಪ್ಪಿಕೊಳ್ಳಬಹುದಿತ್ತು. ಇಡೀ ಇಲಾಖೆ ಮಾನ್ಯ ಮುಖ್ಯಮಂತ್ರಿಗಳ ಕೈಯಲ್ಲೇ ಇದೆ. ಇದು ಅವರಿಗೆ ಗೊತ್ತಿಲ್ಲ, ಅವರು ಮಾಹಿತಿಯನ್ನು ಸಪ್ರೆಸ್ ಮಾಡಿದ್ದಾರೆಂದರೆ ನಾನು ಇನ್ನು ಯಾವ ಅಭಿಪ್ರಾಯಕ್ಕೆ ಬರಬೇಕು ? ಮಾನ್ಯ ಮುಖ್ಯಮಂತ್ರಿಗಳು ಬಂದು ನನಗೆ ಇಂಟೆನ್‌ಷನಲ್ ಇಲ್ಲವೆಂದು ಹೇಳಲಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ನಿನ್ನೆ ಒಂದು ಮಾತನ್ನು ಹೇಳಿದೆ. ಇದನ್ನು ತಾವು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕು. ಇದನ್ನು ಮಾನ್ಯ ಮುಖ್ಯಮಂತ್ರಿಗಳಿಗೂ ಹೇಳಬಹುದು, ಬೇಡ ಎಂದು ನಾನು ಹೇಳಲಿಲ್ಲ. ಇದು ಇಂಟೆನ್‌ಷನಲ್ ಇಲ್ಲದಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. ಏಕೆಂದರೆ ಇಡೀ

ಪೋರ್ಟ್‌ಫೋಲಿಯೋನೇ ಅವರ ಕೈಯಲ್ಲಿದೆ. ಇಡೀ ಆಡಳಿತ ಯಂತ್ರವೇ ಅವರ ಕೈಯಲ್ಲಿದೆ. ಇದು ಒಂದು ಗಂಭೀರವಾದ ಅಪರಾಧವಾಗಿದೆ. ಇದರ ವಿರುದ್ಧ ಎಷ್ಟು ಕೇಸುಗಳಿವೆ ಎಂಬುದು ನನಗೆ ಗೊತ್ತಿಲ್ಲ. ಅವುಗಳನ್ನು ನಾವು ಹೇಗೆ ಲೆಕ್ಕ ಹಾಕಬೇಕೋ ಗೊತ್ತಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್:– ಇದೇನು ಪ್ರೈವೇಟ್ ಕಂಪ್ಲೇಂಟೇ ? ತಾವು ರೆಫರ್ ಮಾಡುತ್ತಿರುವುದು ಪ್ರೈವೇಟ್ ಕಂಪ್ಲೇಂಟೋ ಅಥವಾ ಸ್ಟೇಟ್‌ಗೋ....

ಶ್ರೀ ಆರ್.ವಿ. ದೇಶಪಾಂಡೆ:– ಇದು ಪ್ರೈವೇಟ್ ಕಂಪ್ಲೇಂಟ್.

SRI K.H. RANGANATH:– Then how the State Government comes into the picture and how can the State Government know about it?

SRI R.V. DESHPANDE:– It is JMFC Court. It is not a private matter between you and me. The Police are aware of it. It is pending in JMFC–II Court at Hubli.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಪೋಲೀಸ್ ಕೇಸ್ ಹಾಕಿದರೂ 'ಬಿ' ರಿಪೋರ್ಟ್ ಕೊಟ್ಟ ಮೇಲೆ ಅಲ್ಲಿಗೆ ವಿಷಯ ಮುಗಿದುಹೋಯಿತು. Later on, a private complaint was filed. That private complaint is pending before the court. It is not a case by the State Government.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ:– ಎಲ್ಲಾ ಪ್ರೈವೇಟ್ ಕಂಪ್ಲೇಂಟ್ಸ್‌ನ್ನೋ ಪೋಲೀಸ್ ಸ್ಟೇಷನ್‌ಗೆ ಕೋರ್ಟ್ ರೆಫರ್ ಮಾಡುತ್ತದೆಂಬುದು ತಮಗೆ ಗೊತ್ತಿರಬೇಕಲ್ಲವೇ ?

ಶ್ರೀ ಕೆ.ಹೆಚ್. ರಂಗನಾಥ್:– ಪ್ರೈವೇಟ್ ಕಂಪ್ಲೇಂಟನ್ನು ಯಾರೋ ಕೊಟ್ಟು ಕೇಸು ನಡೆಯುತ್ತಿದ್ದರೆ ಅದು ಸರ್ಕಾರದ ಗಮನಕ್ಕೆ ಹೇಗೆ ಬಂದಿರುತ್ತದೆ, If the State Government is the complainant, I can understand. ಅದು ಸರ್ಕಾರಕ್ಕೆ ಬರುತ್ತದೆ. ಅದು ಸರ್ಕಾರದ ಮಾಹಿತಿಯಲ್ಲಿದೆ, ಆಗ ನೀವು ಅಧಿಕಾರಿಗಳು ಕೊಟ್ಟಿಲ್ಲ ಅಥವಾ ಮಾನ್ಯ ಮುಖ್ಯಮಂತ್ರಿಗಳು ಬುದ್ಧಿಪೂರ್ವಕವಾಗಿ ತೆಗೆದುಕೊಂಡಿಲ್ಲ ಎಂದು ಹೇಳುವುದರಲ್ಲಿ ಅರ್ಥ ಇದೆ.

ಪ್ರೈವೇಟ್ ಕಂಪ್ಲೆಂಟ್ ಎಷ್ಟು ಬೇಕಾದರೂ ಬರಬಹುದು. ಅದು ಸರ್ಕಾರದ ಗಮನಕ್ಕೆ ಹೇಗೆ ಬರುತ್ತದೆ ? ಅಥವಾ ಸರ್ಕಾರ ಅದರಲ್ಲಿ ಪಾರ್ಟಿಯಾಗಿದ್ದು, ಅವರು ಇನ್ನೊಬ್ಬರು ಪಾರ್ಟಿಯಾಗಿದ್ದರೆ ಏನೋ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಬಹುದು. ಪ್ರೈವೇಟ್ ಕಂಪ್ಲೆಂ ಟ್‌ನಲ್ಲಿ how can the State Govt. know that which private complaint is pending? There should be an intention on the part of either the Dept. or on the part of the Chief Minister to suppress the fact then only it becomes the breach of privilege. If It is a private complaint, how can the State know? Hundreds of private complaints are there in the Court. How can the State Government know, in which particular private complaint a private particular individual is involved?

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಇದು ಪ್ರಿವಿಲೇಜ್ **ಮೋಷನ್‌ಗೆ ಬರುತ್ತ**ದೆಯೋ ಇಲ್ಲವೋ ಎನ್ನುವುದಕ್ಕೆ.

ಶ್ರೀ ಕೆ.ಹೆಚ್. ರಂಗನಾಥ್:- ನಾನು ವಿಷಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳಿದೆ. ನಾನು ವಿರೋಧಪಕ್ಷದ ನಾಯಕರನ್ನು ಇದು ಪ್ರೈವೇಟ್ ಕಂಪ್ಲೆಂಟೋ ಅಥವಾ ಸ್ಟೇಟ್ ಕಂಪ್ಲೆಂಟೋ ಎಂದು ಕೇಳಿದೆ. ಇದರಲ್ಲಿ ಸಣ್ಣ ವಿಷಯ ಇನ್‌ವಾಲ್ವ್ ಆಗಿದೆ. ಸರ್ಕಾರ ಬುದ್ಧಿಪೂರ್ವಕವಾಗಿ ಈ ವಿಷಯವನ್ನು ಸದನದ ಗಮನಕ್ಕೆ ತರಲಿಲ್ಲ, ಬುದ್ಧಿಪೂರ್ವಕವಾಗಿ ಸರ್ಕಾರ ತರಲಿಲ್ಲ ಎಂದು ಹೇಗೆ ಹೇಳುತ್ತೀರಿ. ಪ್ರೈವೇಟ್ ಕಂಪ್ಲೇಂಟ್ ಆದರೆ ಸರ್ಕಾರದ ಹತ್ತಿರ ಏನು ಮಾಹಿತಿ ಇರುತ್ತದೆ ? ಸರ್ಕಾರ ಹೇಗೆ ಮಾಹಿತಿಯನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ ?

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಈಗ ನಮ್ಮ ವಿರೋಧ ಪಕ್ಷದ ನಾಯಕರು ಎತ್ತಿರುವಂಥ ಪ್ರಶ್ನೆಗೆ ಉತ್ತರವನ್ನು **ಕೊಡುತ್ತಾ ಇದು** ಪ್ರೈವೇಟ್ ಕೇಸ್ ಆದರೆ ಪೋಲೀಸರ ಗಮನಕ್ಕೆ ಬರುವುದಿಲ್ಲ. ಆದ್ದರಿಂದ **ಸರ್ಕಾರ ಇದನ್ನು ಸಪ್ರೆಸ್** ಮಾಡಲಿಕ್ಕೆ ಪ್ರಶ್ನೆ ಎಲ್ಲಿ ಬರುತ್ತದೆನ್ನುವುದು ಅವರ ವಾದ. ಸನ್ಮಾನ್ಯ **ಅಧ್ಯಕ್ಷರೇ, ನನಗೆ** ಇರುವಂಥ ಮಾಹಿತಿ ಪ್ರಕಾರ ಒಂದು ಪ್ರೈವೇಟ್ ಕಂಪ್ಲೆಂಟನ್ನು ಮ್ಯಾಜಿಸ್ಟ್ರೇಟರ್ **ಮುಂದೆ ತಂದಾಗ** he will have two options. ಎರಡು ದಾರಿಯಿದೆ ಅವರಿಗೆ. ಒಂದು ಆ ಕೇಸನ್ನು **ವಿಚಾರಣೆಗಾಗಿ** ಪೋಲೀಸ್‌ಗೆ ಕಳುಹಿಸತಕ್ಕಂಥದ್ದು. ಅಂಥ ಸಂದರ್ಭ ಇರುವಾಗ ಪೋಲೀಸ್‌ನವರ ಗಮನಕ್ಕೆ ಇದು ಬಂದಿರುತ್ತದೆ, ಸರ್ಕಾರದ ಗಮನಕ್ಕೂ ಬಂದಿರುತ್ತದೆ. ಮತ್ತೊಂದು ದಾರಿ ಇದೆ 202, ಮಾನ್ಯ ಕೌಜಲಗಿಯವರು ಇನ್ನು ಪ್ರಾಕ್ಟೀಸ್ **ಮಾಡುತ್ತಿರುತ್ತಾ**ರೆಂದು ಕಾಣುತ್ತದೆ. ಸೆಕ್ಷನ್‌ಗಳು ಮರೆತುಹೋಗಿದೆ. ಮತ್ತೊಂದು ದಾರಿ **ಇರುವುದು** ಯಾವುದೆಂದರೆ he himself can take cognizance of the offence and register a case. ನನ್ನ ಪ್ರಕಾರ ಅಂಥ ಸಂದರ್ಭದಲ್ಲಿ ಅದು ಪೋಲೀಸ್‌ನವರ ಗಮನಕ್ಕೆ ಹೋಗದಿರಬಹುದು. ಅವರೇ ರಿಜಿಸ್ಟರ್ ಮಾಡಿಕೊಂಡು ನೋಟಿಸ್ ಇಷ್ಯೂ ಮಾಡಿದ್ದರೆ 202 ಪ್ರಕಾರ ಸಮನ್ಸ್ ಇಷ್ಯು ಮಾಡಿದ್ದರೆ under these circumstances, it may not be referred to Police.

ಇನ್ನೊಂದು ಆಪ್‌ಷನ್, ಅದನ್ನು ಪೋಲೀಸ್‌ಗೆ ರೆಫರ್ ಮಾಡಿದ್ದರೆ ಅದು ಅವರ ಗಮನಕ್ಕೆ **ಬರುತ್ತದೆ. ಆಗ** ಸರ್ಕಾರ ಉದ್ದೇಶಪೂರ್ವಕವಾಗಿ ಮುಚ್ಚಿಟ್ಟಿದೆ ಎಂದು ತಿಳಿಯಬಹುದು. ಅಧ್ಯಕ್ಷರೇ **ಇದನ್ನು ಏತಕ್ಕೆ** ಹೇಳುತ್ತಿದ್ದೇನೆಂದರೆ ನಾನು ಈಗಾಗಲೇ ತಮ್ಮನ್ನು ನನಗೆ ಅಪ್ಪಣೆ ಕೊಡಬೇಕೆಂದು, **ನನಗೆ ಅ**ವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಂಡಿದ್ದೇನೆ. ಇತ್ತೀಚಿನ ದಿವಸಗಳಲ್ಲಿ ಯಾರೋ ಅಧಿಕಾರಿಗಳ ಮೇಲೆ ಆಪಾದನೆ ಮಾಡಿದರೆ ಪ್ರಚಾರ ಸಿಕ್ಕುತ್ತದೆನ್ನುವುದು ದೊಡ್ಡ ತಲೆಗೆ ಬಂದಂತೆ ಕಾಣುತ್ತದೆ. ಆದ್ದರಿಂದ ನಮ್ಮ ಚರಿತ್ರಾವಧೆ, ನಮ್ಮ ಚರಿತ್ರೆ ಬೀದಿ ಪಾಲಾಗುತ್ತಿದ್ದರೂ. ನಮಗೆ ಅವಕಾಶವನ್ನು ಕೊಡುವುದಿಲ್ಲ. ನಾನು ಹತ್ತು ಸಾರಿ ನಿಮ್ಮಲ್ಲಿ ಬಂದು ಕೋರಿಕೆ ಮಾಡಿಕೊಂಡಿದ್ದೇನೆ. ಸ್ವಾಮಿ ನನ್ನ ಮೇಲೂ ಒಂದು ಆಪಾದನೆ ಇದೆ, ಪಟ್ಟಿಯಲ್ಲಿದೆ ಅದಕ್ಕೆ ನಮಗೆ ನಿಲುವಳಿ ಸೂಚನೆಯನ್ನು ಕೊಡಲಿಕ್ಕೆ ಒಂದು ಅವಕಾಶವನ್ನು ಮಾಡಿಕೊಡಬೇಕು ಎಂದು. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ ಇಂಥ ವಿಷಯಗಳನ್ನು ಚರ್ಚೆ ಮಾಡುವಂಥ ಸಂದರ್ಭದಲ್ಲಿ ಯಾವ ಸದಸ್ಯರ ವಿಷಯದಲ್ಲಿ ನೀವು ಚರ್ಚೆ ಮಾಡಲು ಅವಕಾಶವನ್ನು ಮಾಡಿಕೊಡುತ್ತೀರೋ ಅವರಿಗೆ **ಸಾರ್ವತ್ರಿಕವಾಗಿ** ಉತ್ತರವನ್ನು ಒದಗಿಸಿಕೊಡುವಂಥ ಅವಕಾಶವನ್ನು ಮಾಡಿಕೊಡಬೇಕು.

(ಗೊಂದಲ)

ಶ್ರೀ ಎ.ಕೆ. ಅನಂತಕೃಷ್ಣ:- ಸ್ವಾಮಿ ನನ್ನದೊಂದು ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು:- ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:- ಯಾವುದೇ ಸದಸ್ಯರ ಬಗ್ಗೆ ನೀವು ಆಪಾದನೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ಮಾಡಿ. ಅದಕ್ಕಿಂತ ಮೊದಲು ತಾವು ದಯವಿಟ್ಟು ನಮಗೆ ಉತ್ತರವನ್ನು ಕೊಡಲಿಕ್ಕೆ ಅವಕಾಶ **ಮಾಡಿಕೊಡಿ**.

ಶ್ರೀ ಎ.ಕೆ. ಅನಂತಕೃಷ್ಣ:- ಮಾನ್ಯ ಅಧ್ಯಕ್ಷರೇ ನನ್ನ ಪಾಯಿಂಟ್ ಆಫ್ ಆರ್ಡರ್ ಇಷ್ಟೆ. ಮಾನ್ಯ ವಿರೋಧಪಕ್ಷದ ನಾಯಕರು ಒಂದು ಪ್ರಶ್ನೆಯನ್ನು ತಮ್ಮ ಮುಂದಿಟ್ಟಿದ್ದಾರೆ. ಆ ಪ್ರಶ್ನೆ ಸೂಕ್ತವಾಗಿದೆಯೋ ಇಲ್ಲವೋ ಎಂದು ಹೇಳಿ ಮಾನ್ಯ ಮಂತ್ರಿಗಳಾದ ರಂಗನಾಥ್‌ರವರು ಅದಕ್ಕೆ ಅವರ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆ ಅಭಿಪ್ರಾಯಕ್ಕೆ ಸರಿಯಾಗಿ ಅವರು ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದಾರೆ. ಕೊಡಬೇಕಾದದ್ದು ನ್ಯಾಯವಾಗಿದೆ. ಅಷ್ಟರಲ್ಲಿ ಅವರು ನಿಂತು ಆ ವಿಷಯವನ್ನು ಬಿಟ್ಟು ಬೇರೆ ವಿಷಯವನ್ನು ತಮ್ಮಲ್ಲಿ ಪ್ರಶ್ನೆ ಮಾಡುತ್ತಿದ್ದಾರೆ. ಇದನ್ನು ನಾವು ಕೂಡ ತಿಳಿದುಕೊಳ್ಳಬೇಕೆಂದು ಬಹಳ ಕಾತುರರಾಗಿದ್ದೇವೆ. ಅದಕ್ಕೆ ಅಡಚಣೆಯಾಗಿದೆ. ಅದಕ್ಕೆ ಅವಕಾಶ ಮಾಡಬೇಡಿ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ನನಗೆ ಆಶ್ಚರ್ಯವಾಗುತ್ತಿದೆ. ರಂಗನಾಥ್ ಅವರು ಹಿರಿಯರು ಅಷ್ಟೇ ಅಲ್ಲ ಅವರೂ ಸಹ ನ್ಯಾಯವಾದಿಗಳು; ಇರಲಿ. ಇದು ನಿಮ್ಮ ನಮ್ಮ ಮನೆಯ ವ್ಯವಹಾರವಲ್ಲ. ಅದರಲ್ಲಿ ಒಬ್ಬ ಕ್ಯಾಬಿನೆಟ್ ಮಿನಿಸ್ಟರ್ ಇನ್‌ವಾಲ್ವ್ ಆಗಿದ್ದಾರೆ. He is under a shadow. ನಾನು ಒಂದು ಮಾತು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಶ್ರೀ ರಾಮಯ್ಯನವರು ಕೂಡ ಹೇಳಿದ್ದಾರೆ. ನನಗೆ ಅವರ ಕ್ಯಾರೆಕ್ಟರ್ ಅಸಾಸಿನೇಷನ್ ಮಾಡುವ ಉದ್ದೇಶವಿಲ್ಲ. I am the last man to do it and I am least interested in doing it.. ನನಗೆ ಅದರ ಅವಶ್ಯಕತೆ ಇಲ್ಲ. ನಾನು ಅವರ ಮೇಲೆ ಬೇಕಾದಷ್ಟು ಆಪಾದನೆಗಳನ್ನು ಮಾಡಬಹುದು. ಅದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಾಗ Offence is under sections 147 and 451, 427 and 506. These are serious offences. ಇವತ್ತು ಪ್ರಶ್ನೆ ಏನಿದೆ ಎಂದರೆ, ಇಷ್ಟು ಹಗುರವಾಗಿ ಸರ್ಕಾರ ಇದನ್ನು ನೋಡಬಾರದು. ಸ್ಟೇಟ್ ಕಂಪ್ಲೈಂಟ್ ಇರಬೇಕು ಎಂದು ಏನಿದೆ ? ಹಾರ್ನಳ್ಳಿ ರಾಮಸ್ವಾಮಿಯವರು ಹೇಳಿದರು, ನಾವು ಬಿ. ರಿಪೋರ್ಟ್ ಫೈಲ್ ಮಾಡಿದ್ದೇವೆ, ಅದರಂತೆ ಕಂಪ್ಲೈಂಟ್ ಕೋರ್ಟಿಗೆ ಹೋಗಿ ಪ್ರೊಸೆಸ್ ಇಷ್ಯೂ ಮಾಡಿದ್ದಾರೆಂದು ಹೇಳಿದರು. ಪ್ರೊಸೆಸ್ ಹಾಗೇ ಇಷ್ಯೂ ಆಗುವುದಿಲ್ಲ. ಮ್ಯಾಜಿಸ್ಟ್ರೇಟರು ಏನು ಹೇಳಿದರು ? A prima facie case is made out against all the accused for the offences punishable ಎಂದು ಹೇಳಿದ್ದಾರೆ. ಇದಕ್ಕೂ ಮೊದಲು ಇಲ್ಲ. ನಮಗೆ ಜೆ.ಎಫ್.ಸಿ.ಯಲ್ಲಿ ವಿಶ್ವಾಸ ಇಲ್ಲ, ಜುಡಿಷಿಯಲ್‌ನಲ್ಲಿ ವಿಶ್ವಾಸ ಇಲ್ಲ ಎಂದು ಹೇಳಿ. ಇವರು ಏನು ಮಾಡಿದ್ದಾರೆಂದರೆ ನಮಗೆ ಇನ್‌ಫಾರ್ಮೇಷನ್ ಸಿಕ್ಕಿತು, ಕಂಪ್ಲೈಂಟ್ ಫೈಲ್ ಮಾಡಿದೆವು. ಪ್ರೊಸೆಸ್ ಆದಾಗ ಆರೋಪಿಗಳು ಹೈಕೋರ್ಟಿಗೆ ಹೋಗಿ ಇದರ ಪ್ರೊಸಿಡಿಂಗ್ಸ್ ಸ್ಟೇ ಮಾಡಿದ್ದಾರೆ. The Hanging sword still remains on the Minister's head. The only thing that the Minister has done is, he has approached the High Court and obtained a stay of the proceedings. That does not absolve him from the charges. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಬಹಳ ಸ್ವಚ್ಛವಾಗಿ ಹೇಳಬೇಕಾಗಿತ್ತು. ಅದನ್ನು ಮಾಡಲಿಲ್ಲ. ಹಾಗಾಗಿ ಇದು breach of privilege of the house ಆಗಿದೆ. ಅಷ್ಟೇ ಅಲ್ಲ, ಮಾನ್ಯ ಸಚಿವರೂ ಸಹ ಅವರು ತಿಳಿದುಕೊಳ್ಳಬೇಕು. ಇಷ್ಟೊಂದು ಕಲುಷಿತ ವಾತಾವರಣ, ಕೇಸಸ್ ಅವರ ಮೇಲೆ ನಡೆಯುವಾಗ ಅವರು ರಾಜೀನಾಮೆ ಕೊಡಬೇಕಾಗಿತ್ತು. ಆದ್ದರಿಂದ ಮುಖ್ಯಮಂತ್ರಿಗಳು ಅವರ ರಾಜೀನಾಮೆಯನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇವೆ. ಸಮಾಜದಲ್ಲಿ ಈ ಒಂದು ಹೆಲ್ತಿ

ಪ್ರಾಕ್ಟೀಸ್ ಇರಬೇಕು. ಕೇಸಸ್ ಕ್ಲಿಯರ್ ಆದಮೇಲೆ ಪುನಃ ಅವರು ಅಧಿಕಾರಕ್ಕೆ ಬರಲಿ. ಆದರೆ ಕೇಸಸ್ ತಲೆ ಮೇಲೆ ಇಟ್ಟುಕೊಂಡು ಮಂತ್ರಿಮಂಡಲದಲ್ಲಿ ಇರುವುದು ಸರಿಯಲ್ಲ. ಮಂತ್ರಿಮಂಡಲಕ್ಕೆ ಗೌರವವಲ್ಲ, ನಮಗೂ ಗೌರವವಲ್ಲ. ಆದ್ದರಿಂದ ಅವರ ರಾಜೀನಾಮೆಯನ್ನು ತೆಗೆದುಕೊಳ್ಳಬೇಕೆಂದು ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್:– ವಿಷಯದ ಬಗ್ಗೆ ನಾನು ಪ್ರಸ್ತಾಪಿಸುವುದಕ್ಕೆ ಹೋಗುವುದಿಲ್ಲ. ಪ್ರಶ್ನೆ ಏನಿದೆ ? ಮಾನ್ಯ ಸದಸ್ಯರು ಹೇಳಿದ್ದನ್ನು ಪೂರಾ ಕೇಳಲಿಲ್ಲ. ಏಕೆಂದರೆ ಅವರು ಪ್ರಾರಂಭ ಮಾಡಿದಾಗ ನಾನು ಇರಲಿಲ್ಲ. ಉದ್ದೇಶ ಪೂರ್ವಕವಾಗಿ, ಬುದ್ಧಿಪೂರ್ವಕವಾಗಿ ಮುಖ್ಯಮಂತ್ರಿಗಳು ಈ ಸದನದಿಂದ ಒಂದು ವಿಚಾರವನ್ನು ಮುಚ್ಚಿಟ್ಟಿದ್ದಾರೆ, ಸದನದ ಗಮನಕ್ಕೆ ತರಲಿಲ್ಲ; ಹಾಗಾಗಿ ಸದನದ ಪ್ರಿವಿಲೇಜ್‌ಗೆ ಧಕ್ಕೆ ಬಂದಿದೆ ಎಂದು ಆಪಾದನೆ ಮಾಡಿದರು. ಯಾವ ಕೇಸನ್ನು ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಿದ್ದಾರೆ. ಅದು ಪ್ರೈವೇಟ್ ಕಂಪ್ಲೈಂಟ್ ಇದೆ, ಎನ್ನುವ ಮಾತನ್ನು ನಾನು ಪ್ರಸ್ತಾಪ ಮಾಡಿದೆ. ಪ್ರೈವೇಟ್ ಕಂಪ್ಲೈಂಟ್ ಸರ್ಕಾರದ ಗಮನಕ್ಕೆ ಬರುವುದಿಲ್ಲ. ಅಂದಾಗ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಿದ್ದಾರೆ ಇದರ ಬಗ್ಗೆ ಹೈಕೋರ್ಟಿನಲ್ಲಿ ಸ್ಟೇ ತೆಗೆದುಕೊಂಡಿದ್ದಾರೆ ಎಂದು. ಇದು ಮೇಲ್ಮನೆಯಲ್ಲಿ ಕೂಡ ಪ್ರಸ್ತಾಪವಾಗಿದೆ ಎಂದು ಕಾಣುತ್ತದೆ. ಈಗ ಕೋರ್ಟಿಗೆ ಒಂದು ಕಂಪ್ಲೈಂಟ್ ಕೊಟ್ಟು ಕೇಸ್ ರಿಜಿಸ್ಟರ್ ಮಾಡಿಕೊಂಡು ಸಮನ್ಸ್ ಜಾರಿ ಆಗಿದೆ ಎಂದು ಕೇಳಿದ್ದೇನೆ. ಕೋರ್ಟಿಗೆ ಕಂಪ್ಲೈಂಟ್ ಕೊಟ್ಟಿದ್ದಾರೆ, ಮ್ಯಾಜಿಸ್ಟ್ರೇಟರು ಅದನ್ನು ನೋಡುತ್ತಾರೆ. ಪ್ರೈಮಾಫೇಸಿ ಕೇಸ್ ಇದೆ ಎಂದು ರಿಜಿಸ್ಟರ್ ಮಾಡಿಕೊಂಡು ಸಮನ್ಸ್ ಇಷ್ಯೂ ಆಗಿದೆ. ಸಮನ್ಸ್ ಇಷ್ಯೂ ಆದಮೇಲೆ ಹೈಕೋರ್ಟಿಗೆ ಹೋಗಿದ್ದಾರೆ, ಸ್ಟೇ ತೆಗೆದುಕೊಂಡಿದ್ದಾರೆ, ಇದು ಫ್ಯಾಕ್ಟ್. ಇಲ್ಲಿಂದ ನಮ್ಮ ಪ್ರೀಮಿಸಸ್ ಪ್ರಾರಂಭವಾಗುತ್ತದೆ. ಈ ಹಂತದಿಂದ ಸರ್ಕಾರದಲ್ಲಿ, ಪೊಲೀಸ್ ಇಲಾಖೆಯಲ್ಲಿ ಅಥವಾ ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್ಸ್‌ನಲ್ಲಿ ಏನು ದಾಖಲೆ ಇರುತ್ತದೆ ? ಯಾರೋ ಪ್ರಶ್ನೆ ಕೇಳಿದರೆ ಸರ್ಕಾರ ಬುದ್ಧಿಪೂರ್ವಕವಾಗಿ ಇದನ್ನು ಸಪ್ರೆಸ್ ಮಾಡಿದೆ ಎಂದು ಹೇಗೆ ಹೇಳುವುದಕ್ಕೆ ಸಾಧ್ಯವಾಗುತ್ತದೆ ?

ತಾವು ವಿಚಾರ ಮಾಡಬೇಕು. ದೊಡ್ಡ ಅಪರಾಧ ಇರಬಹುದು. ದೊಡ್ಡ ಶಿಕ್ಷೆ ಆಗತಕ್ಕ, ಹೆಚ್ಚು ಪ್ರಮಾಣದಲ್ಲಿ ಶಿಕ್ಷೆ ಆಗತಕ್ಕ ಅಪರಾಧ ಇರಬಹುದು. ಅದು ಪ್ರಶ್ನೆ ಅಲ್ಲ; ನಮಗೆ ಸಂಬಂಧಪಟ್ಟಿರತಕ್ಕದ್ದು, ಸರ್ಕಾರದಲ್ಲಿ ಇದರ ಬಗ್ಗೆ ವಿಷಯ ಇತ್ತೇ ? ದಾಖಲೆಗಳು ಇದ್ದವೇ ? ನಾಗೇಂದ್ರ ಶಾ ಏನು ಪ್ರೈವೇಟ್ ಕಂಪ್ಲೇಂಟ್ ಕೊಟ್ಟಿದ್ದಾರೆ. ಆ ಪ್ರೈವೇಟ್ ಕಂಪ್ಲೇಂಟ್ ಕೊಟ್ಟಿದ್ದುದು ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್‌ಗೆ ಆಗಲೀ ಅಥವಾ ಐಜಿಪಿ, ಪೊಲೀಸ್ ಇಲಾಖೆಯಲ್ಲಿ ಅದಕ್ಕೆ ಸಂಬಂಧಪಟ್ಟ ದಾಖಲೆಗಳು ಇದ್ದವೇ ? ಅವು ಇದ್ದೂ ಕೂಡ ಸರ್ಕಾರ, ಮುಖ್ಯಮಂತ್ರಿಗಳು ಬುದ್ಧಿಪೂರ್ವಕವಾಗಿ ಅದನ್ನು ಸದನಕ್ಕೆ ಕೊಡಲಿಲ್ಲವೇ ? ಈ ಪ್ರಶ್ನೆ ಉದ್ಭವವಾಗುತ್ತದೆ. ಸ್ವಾಮಿ, ಪ್ರೈವೇಟ್ ಕಂಪ್ಲೇಂಟ್ ಕೊಟ್ಟಿದ್ದಾರೆ. ಯಾವ ಕೇಸ್ ಕೊಟ್ಟರೂ ಕೋರ್ಟ್ ನಂಬರ್ ಆಗಿಯೇ ಆಗುತ್ತದೆ. ಅದು ಅಲ್ಲ ಪ್ರಶ್ನೆ ಇಲ್ಲಿ. ಸಮನ್ಸ್ ಇಷ್ಯೂ ಮಾಡುತ್ತಾರೆ. ಸಮನ್ಸ್ ಇಷ್ಯೂ ಮಾಡಿರತಕ್ಕದ್ದು ಪೊಲೀಸ್‌ಗೆ ಹೋಗಿ, ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್ಸ್‌ಗೆ ಹೋಗಿ, ದಾಖಲೆ ಇದ್ದೂ ಕೂಡ ಈ ಪ್ರಶ್ನೆ ಬಂದಾಗ ಸರ್ಕಾರ ಅದನ್ನು ಮಾಹಿತಿ ಒದಗಿಸದೇ ಹೋದ ಪಕ್ಷದಲ್ಲಿ ಸಪ್ರೆಷನ್ ಆಫ್ ದಿ ಕೇಸ್ ಆಗುತ್ತದೆ. ಈ ಸದನದ ಗಮನಕ್ಕೆ ತರಲಿಲ್ಲ, ಅಪರಾಧ ಆಯಿತು ಎಂಬುದಾಗುತ್ತದೆ. ಮತ್ತೆ ಇದನ್ನೊಂದು ಇಂಟೆನ್‌ಷನಲಿ ಮಾಡಿದ್ದಾರೋ ಅದಕ್ಕೆ ವಿರೋಧ ಪಕ್ಷದ ನಾಯಕರನ್ನು ಕೇಳುತ್ತಿದ್ದೆ. ಅದು ಪ್ರೈವೇಟ್ ಕಂಪ್ಲೇಂಟ್ ಎಂಬುದನ್ನು ಅವರೇ ಒಪ್ಪಿದ್ದಾರೆ.. ಪ್ರೈವೇಟ್ ಕಂಪ್ಲೇಂಟ್ ಕೊಟ್ಟ ಮೇಲೆ ರಿಜಿಸ್ಟರ್ ಆಗಿದೆ. ಸಮನ್ಸ್ ಇಷ್ಯೂ ಆಗಿದೆ. ಮಾನ್ಯ ಮಂತ್ರಿಗಳಾದ ಸಾಂಡ್ರಾ ಅವರ ಗಮನಕ್ಕೆ ಬಂದಿರಬಹುದು. ಅವರು ಕೋರ್ಟಿನಲ್ಲಿ ಹೋಗಿ ತೆಗೆದುಕೊಂಡಿರಬಹುದು. ಅದು ಅಲ್ಲ ಪ್ರಶ್ನೆ. ಪ್ರಶ್ನೆ ಇರತಕ್ಕದ್ದು, ಸರ್ಕಾರದಲ್ಲಿ ದಾಖಲೆ ಇದ್ದೂ ಕೂಡ ಬುದ್ಧಿಪೂರ್ವಕವಾಗಿ ಮುಚ್ಚಿಟ್ಟು ಸದನದ

ಗಮನಕ್ಕೆ ತರಲಿಲ್ಲವೇ ? This is all the simple thing that is here. If there is an offence on his part then there is a Breach of Privilege. ಅದು ಪ್ರಶ್ನೆ ಇಲ್ಲ. ತಾವು ಅದನ್ನು ಹೇಳುತ್ತಿದ್ದೀರಿ. You will have to say the Government had the knowledge. ಈ ಪ್ರೈವೇಟ್ ಕಂಪ್ಲೇಂಟ್ ಕೊಟ್ಟಿದ್ದರು. ಅದರ ದಾಖಲೆ ಇತ್ತು. ಅದು ಸರ್ಕಾರದ ಗಮನಕ್ಕೆ ಬಂದಿದ್ದು, ಈ ಪ್ರಶ್ನೆ ಕೊಡುವಾಗ ಅದನ್ನು ಕೊಡಲಿಲ್ಲ ಎಂದರೆ I can understand that there is a Breach of privilege. Otherwise, how can there be a Breach of Privilege?

ಶ್ರೀ ಹೆಚ್. ಏಕಾಂತಯ್ಯ:– ನನ್ನ ಒಂದು ವಿನಂತಿ ಏನೆಂದರೆ, ಒಂದು ಖಾಸಗೀ ದೂರು ಏನಿದೆ ಅದನ್ನು ಕೊಟ್ಟಮೇಲೆ, ನಾನು ತಮ್ಮಲ್ಲಿ ತಿಳಿಯಬಯಸುತ್ತೇನೆ. ವಿರೋಧಪಕ್ಷದ ನಾಯಕರು ಏನು ಪ್ರಸ್ತಾಪ ಮಾಡಿದ್ದಾರೆ ಆ ಕೇಸ್ ಪೊಲೀಸರಿಗೆ ರೆಫರ್ ಆಗಿದೆಯೇ ಇಲ್ಲವೇ ? ರೆಫರ್ ಆಗಿದ್ದು ಅವರು 'ಬಿ' ರಿಪೋರ್ಟ್ ಕೊಟ್ಟಿದ್ದು ಅದನ್ನು ಇವರು ಒಪ್ಪದೇ, ಅದನ್ನು ಪ್ರೂವ್ ಮಾಡುತ್ತೇನೆಂದು ಹೇಳಿದರೆ ಇದು ಸರ್ಕಾರದ ಗಮನಕ್ಕೆ ಬರದ ಹಾಗೆ ಆಗುವುದಿಲ್ಲ. ನಾನು ನೇರವಾಗಿ ಕೇಳುತ್ತೇನೆ. ಮೊದಲನೆಯದಾಗಿ ಇದು ಪೊಲೀಸ್‌ನವರಿಗೆ ರೆಫರ್ ಆಗಿತ್ತೇ ಎಂಬುದನ್ನು ಹೇಳಬೇಕು.

ಶ್ರೀ ಕೆ.ಹೆಚ್. ರಂಗನಾಥ್:– ರೆಫರ್ ಆಗುತ್ತದೆ. Let us talk on hypothecation. ರೆಫರ್ ಆದ ಮೇಲೆ ಪೊಲೀಸರಿಗೆ ಹೋಗುತ್ತದೆ. 'ಬಿ' ರಿಪೋರ್ಟ್ ಕೊಡುತ್ತಾರೆ. ಅದು ಆದ ಮೇಲೆ if the complainant would come and say to the court. ನಾನು ಪ್ರೂವ್ ಮಾಡುತ್ತೇನೆಂದು ಕೊಟ್ಟರೆ ಅಲ್ಲಿಂದ ಮುಂದೆ ಏನು ಆಗುತ್ತದೆಯೋ ಅದು, ದಾಖಲೆಯಲ್ಲಿ ಉಳಿದುಕೊಳ್ಳುವುದಿಲ್ಲ. Let us bifurcate the issue.

ಶ್ರೀ ಹೆಚ್. ಏಕಾಂತಯ್ಯ:– ಅವರು ಏನು ಉತ್ತರ ಕೊಟ್ಟಿದ್ದಾರೆ ಅದಕ್ಕೆ ನಾನು ಹೇಳುತ್ತಿದ್ದೇನೆ. ನಾನು ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಅಲ್ಲಿಗೇ ಬಿಟ್ಟರು. ನಾನು ತಮ್ಮ ಗಮನಕ್ಕೆ ತರುತ್ತೇನೆ. ಈ ಒಂದು ಖಾಸಗೀ ದೂರು ಪೊಲೀಸರಿಗೆ ರೆಫರ್ ಆಗಿ ಪೊಲೀಸರು 'ಬಿ' ರಿಪೋರ್ಟ್ ಕೊಟ್ಟಿದ್ದಾರೆ ಎಂಬುದನ್ನು ಹೇಳಿ ಎನ್ನುವ ಮಾತನ್ನು ಹೇಳಿದೆ. ಆದರೆ ತಾವು ಬೇರೆಯುವರ ಪ್ರಕರಣದಲ್ಲಿ ಈ ಮಾತು ಹೇಳಿದಿರಿ. ಈ ವಿವರಗಳನ್ನು ಕೊಡುವಾಗ ಇಂತಿಂಥ ಕೇಸ್ ರೆಫರ್ ಮಾಡಿದ್ದರು, ಪೊಲೀಸರು ಬಿ ರಿಪೋರ್ಟ್ ಕೊಟ್ಟರು, ಅದರ ಮೇಲೆ ಕಂಪ್ಲೇನೆಂಟ್ ಇದನ್ನು ಪ್ರೂವ್ ಮಾಡುತ್ತೇನೆಂದು ಹೇಳಿದರು, ಇದು ಪೆಂಡಿಂಗ್ ಇದೆ ಎನ್ನುವ ವಿವರಣೆಯನ್ನು ಬೇರೆಯುವರಿಗೆ ಕೊಟ್ಟಿದ್ದೀರಿ. ಅದೇ ರೀತಿ ಇಲ್ಲಿ ನೀತಿ ಅನುಸರಿಸುವುದಾದರೆ ಅದನ್ನು ಅನುಸರಿಸದೇ ಇದ್ದರೆ, ಉದ್ದೇಶಪೂರ್ವಕವಾಗಿ ಮುಚ್ಚಿದ್ದೀರಿ ಎಂದು ವಿರೋಧ ಪಕ್ಷದ ನಾಯಕರಾಗಲೀ, ನಾವಾಗಲೀ ಹೇಳಬಾರದೇ ? ನಾನು ಸರ್ಕಾರವನ್ನು ಕೇಳುತ್ತೇನೆ. Whether it is referred to the police ರೆಫರ್ ಆಗಿ 'ಬಿ' ರಿಪೋರ್ಟ್ ಏನಾದರೂ ಕೊಟ್ಟಿದ್ದಾರೆಯೇ ಇಲ್ಲವೇ ಎಂಬುದನ್ನು ಹೇಳಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಏಕಾಂತಯ್ಯನವರು ಹೇಳಿದ್ದಕ್ಕೆ ಹೇಳುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಕಾಪಿಗಳನ್ನು ಕೊಟ್ಟಿದ್ದಾರೆ. ತಮ್ಮ ಪ್ರಶ್ನೆಗೆ ಉತ್ತರ ಹೇಳುತ್ತಿದ್ದೇನೆ. ತಾವು ಕೊಟ್ಟಿರುವ ಆರ್ಡರ್ ಶೀಟ್‌ನಲ್ಲಿ ಪೊಲೀಸ್‌ಗೆ ರೆಫರ್ ಆಗಿರುವುದಕ್ಕೆ ಯಾವ ದಾಖಲೆಯೂ ಸೋಲ್ ಇಲ್ಲ. ಸ್ಟೇಟ್‌ಮೆಂಟ್ ಮಾಡಿಸಿಕೊಂಡಿದ್ದಾರೆ. ಕೇಸು ರಿಜಿಸ್ಟರ್ ಮಾಡಿದ್ದಾರೆ. ಅವರು ಕೊಟ್ಟಿರುವ ಆರ್ಡರ್ ಶೀಟ್‌ನಲ್ಲಿ ಪೊಲೀಸ್‌ಗೆ ರೆಫರ್ ಆಗಿಲ್ಲ, ಬಿ ಶೀಟ್ ಇಲ್ಲ; ಅದರಲ್ಲಿ ಯಾವುದೂ ಇಲ್ಲ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೆ, ಮಾನ್ಯ ರಂಗನಾಥ್‌ರವರು ಏನು ವಾದ ಮಾಡಿದ್ದಾರೆ ನಾನು ಸಂಪೂರ್ಣವಾಗಿ ಒಪ್ಪಿಕೊಂಡು ಮತ್ತೊಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ಯಾವಾಗ ಕೋರ್ಟ್‌ಗೆ ಪ್ರೈವೇಟ್ ಕಂಪ್ಲೈಂಟ್ ಹೋಗುತ್ತದೆ. If that complaint is registered, taking

the case on file ಆಗ ಪೋಲೀಸರ ಗಮನಕ್ಕೆ ಬರುವುದಿಲ್ಲ, ಸರ್ಕಾರದ ಗಮನಕ್ಕೆ ಬರುವುದಿಲ್ಲ ಎನ್ನುವುದು ಅವರ ವಾದ. ಅಲ್ಲಿಂದ ಮುಂದಕ್ಕೆ ಒಂದು ಸಮಸ್ಯೆ ಬರುತ್ತದೆ. ಕೇಸ್ ರಿಜಿಸ್ಟರ್ ಆದಮೇಲೆ summons will be served only through the police. ದಯಮಾಡಿ ನನಗೆ ಅಕಾಡಮಿಕ್ ಇಂಟರೆಸ್ಟ್ ಇದ್ದರೆ ಕೇಸು ರಿಜಿಸ್ಟರ್ ಆದಾಗ ಪೊಲೀಸರ ಗಮನಕ್ಕೆ ಬರುವುದಿಲ್ಲ, ಸರ್ಕಾರದ ಗಮನಕ್ಕೆ ಬರುವುದಿಲ್ಲ. ಆದರೆ ಕೇಸು ರಿಜಿಸ್ಟರ್ ಆದಮೇಲೆ ಆ ಕೇಸಿನ ಸಮನ್ಸ್ ಏನಿದೆ ಅದು ಪೊಲೀಸ್ ಮುಖಾಂತರ ವಾರೆಂಟ್ ಸರ್ವ್ ಆಯಿತೇ ಎನ್ನುವುದನ್ನು ಕೋರ್ಟ್‌ಗೆ ವರದಿ ಮಾಡಬೇಕು. ಆದ್ದರಿಂದ ನನ್ನ ಪ್ರಕಾರ ಪ್ರೊಸಸ್‌ನಲ್ಲಿ ಪೊಲೀಸ್‌ನವರಿಗೆ ಈ ಕೇಸು ಇದೆ ಎನ್ನುವುದು ಗಮನಕ್ಕೆ ಬಂದಿದೆ ಎನ್ನುವುದು ನನ್ನ ವಾದ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಯ್ಯನವರು ಏನು ಪಾಯಿಂಟ್ ಔಟ್ ಮಾಡಿದ್ದಾರೆ it is perfectly a correct point. ಮಾನ್ಯ ರಂಗನಾಥ್‌ರವರೇ ಪ್ರೈವೇಟ್ ಕಂಪ್ಲೇಂಟ್ ಫೈಲ್ ಆಯಿತು. ಅದಕ್ಕೊಂದು ಸಿ.ಸಿ. ನಂಬರ್ ಬಿತ್ತು, ಪ್ರೈಮಾಫೇಸಿ ಕೇಸಿದೆ ಎಂದು ಮ್ಯಾಜಿಸ್ಟ್ರೇಟರ್ ಕನ್ವಿನ್ಸ್ ಆದರು. ಪ್ರೈಮಾಫೇಸಿ ಪ್ರೋಸಸ್ ಇಷ್ಯೂ ಆಯಿತು, ಪ್ರೋಸಸ್ ಸರ್ವ್ ಯಾರು ಮಾಡಬೇಕು, ಅದನ್ನು ಆರೋಪಿಗೆ ? ಪೊಲೀಸ್‌ನವರು ಮಾಡಬೇಕು. It is the Hubli Police Station through which the summons will be served to the Accused and only when the summons are served to the accused, the Police are aware of it.

ಶ್ರೀ ಕೆ.ಹೆಚ್. ರಂಗನಾಥ್:– ನಾನು ವಕೀಲಿ ಬಿಟ್ಟು ಬಹಳ ದಿವಸವಾಯಿತು. I cannot remember at this point of time.

SRI M. VEERAPPA MOILY:– I think we can dissolve the whole issue. We can verify from the records. ಉತ್ತರ ಕೊಡುವಾಗ ಎಲ್ಲಾ ಫ್ಯಾಕ್ಟ್ಸ್ ಹೇಳಿದೆ. ಆಮೇಲೆ ಕ್ಲಾರಿಫಿಕೇಷನ್ ಕೇಳುವಾಗ, either this House or that House, I don't exactly remember, you can go through the records. ನಾನು ಹೇಳಿದ್ದೆ ಅವರ ಕ್ಲಾರಿಫಿಕೇಷನ್‌ಗೆ when it was questioned to me, Whether in this House or that house, I remember to have said. ಏನು ಎಂದು ಹೇಳಿದರೆ ಒಂದು ಕೇಸು ಅದು ಕೋರ್ಟ್‌ನಲ್ಲಿ ಕ್ಲೋಸ್ ಆಯಿತು. ಆಮೇಲೆ ಅದು ಹೈಕೋರ್ಟ್‌ಗೆ ಹೋಯಿತು. ಹೈಕೋರ್ಟ್‌ನಲ್ಲಿ It is stayed. It is better you verify the records before raising the issue, because many things are said and it has come in the Press.

ಶ್ರೀ ಆರ್.ವಿ. ದೇಶಪಾಂಡೆ:– ನಾನು ವೆರಿ ಕ್ಲಿಯರ್ ಆಗಿ ರೆಫರ್ ಮಾಡುತ್ತಿದ್ದೇನೆ ತಾವು ತಮ್ಮ ಉತ್ತರದಲ್ಲಿ ಎರಡು ಕೇಸಸ್ ರೆಫರ್ ಮಾಡಿದ್ದೀರಿ. ಮಾನ್ಯ ವಸತಿ ಸಚಿವರ ಮೇಲೆ ರೆಫರ್ ಮಾಡಿದ್ದೀರಿ. ತಾವು ರೆಫರ್ ಮಾಡಿದ ಕ್ರೈಮ್ ನಂ. 230–87, ಹುಬ್ಬಳ್ಳಿ ನಗರ ಪೊಲೀಸ್ ಠಾಣೆ, ಅಪರಾಧ ಸಂಖ್ಯೆ 237–87, 147, 148,420 ಒಂದು ಕೇಸು ರೆಫರ್ ಮಾಡಿದ್ದೀರಿ. ಮತ್ತೊಂದು ಕ್ರಿಮಿನಲ್ ಕೇಸು ಮಾಡಿದ್ದೀರಿ. ಅದು 1178. ನಾನು ನೋಡಿದೆ. Section is different. It is Sections 147, 451,

SRI M. VEERAPPA MOILY:– You need not make much of it. I don't say ಎಲ್ಲಾ ಕೇಸು ಪಟ್ಟಿ ಕೊಟ್ಟಿದ್ದರಲ್ಲಿ ಇದೆಯೆಂದು. The other day Hon'ble Member Sri A.K. Subbaiah was telling, "There is a case against me in Bijapur Court,

You have not mentioned it." There is no intention to suppress anything. I think many people came to me and told that there are some more cases. Whatever we could gather, we brought it. There is no intention to hide anything. We will again verify from all the sources and furnish the details to you. There is absolutely no intention to suppress anything.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ಹೇಳುತ್ತೇನೆ. ಮಾನ್ಯ ಹಿರಿಯ ಸಚಿವರಾದ ರಂಗನಾಥ್‌ರವರು ಹೇಳಿದರು. ಆರ್ಗ್ಯುಮೆಂಟ್ ಸಲುವಾಗಿ ಹೇಳುತ್ತೇನೆ. ಇದು ನಮ್ಮ ಕಂಟ್ರೋಲ್‌ನಲ್ಲಿ ಬರುವುದಿಲ್ಲ ಎಂದು. ಹಾಗಾಗಿ ನಾನು ಹೇಳಿದ ಯಾವುದೇ ಒಂದು ಕ್ರಿಮಿನಲ್ ಕೇಸು ಫೈಲ್ ಆದರೆ Process has to be issued. In Criminal cases, Process/summons is served to the accused by the Police which is under the Chief Minister's control. ಎರಡನೆಯದು ಇದಕ್ಕಿಂತ ಮಹತ್ವದ್ದು ಮುಖ್ಯಮಂತ್ರಿಯವರು ಪ್ರಾಮಾಣಿಕ ಎಫರ್ಟ್ಸ್ ಮಾಡಬೇಕೆಂದು he takes time to answer. He is your colleague. He is in your Cabinet. He knows that things are going on there. He should have warned.

SRI K.H. RANGANATH:- Not in 1987-88?

ಶ್ರೀ ಆರ್.ವಿ. ದೇಶಪಾಂಡೆ:- ಹಾಗಾದರೆ ರೇವಣ್ಣನವರ ರಾಜೀನಾಮೆಯನ್ನು ಏಕೆ ತೆಗೆದುಕೊಂಡಿರಿ ? Revanna's case was of 1983, not after becoming Minister. Why do you adopt different norms for different Ministers?

SRI M. VEERAPPA MOILY:- We will make an amendment, Of course, I agree with you. I have not asked the colleagues and all the M.L.As., as to whether there are any cases pending against them? Whatever we could gather the information from the police, we got the information. I think I should have asked all the Ministers and the Legislators as to whether there are any cases which that exercise I have not made. Even my colleagues, I have not asked.

ಶ್ರೀ ಎಸ್.ಎಂ. ಕೃಷ್ಣ:- 'Who is Who' ಪುಸ್ತಕದಲ್ಲಿ ಇದನ್ನೂ ಸೇರಿಸಿಬಿಟ್ಟರೆ ಒಳ್ಳೆಯದು. ನಮ್ಮ ಮೇಲೆ ಎಷ್ಟೆಷ್ಟು ಮೊಕದ್ದಮೆಗಳು ಇವೆಯೆನ್ನುವಂಥಾದ್ದು.....

(ನಗು)

ಶ್ರೀ ಆರ್.ವಿ. ದೇಶಪಾಂಡೆ:- ಎಂ.ಎಲ್.ಎ.ಗಳನ್ನು ಕೇಳುವ ಪ್ರಶ್ನೆ ಬರುವುದಿಲ್ಲ. M.L.A., is not bound to reply. But a Cabinet Minister is bound to reply me. You should have asked him. Before inducting him into the Ministry, his credentials, you should have known. Why such type of persons who are having some criminal records are there in your Cabinet? You said, you want to give a clean Government. You are the Leader of the House. When you said, it is not the intention, I am convinced. I urge through the Hon'ble Speaker that you

should take the resignation of the Minister. I demand his resignation because so many cases are pending against him. This will strengthen your hands. I would request the Minister to co-operate with you and not to embarrass you and come out clean and again join your Ministry. This is my request.

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಅಧ್ಯಕ್ಷರೇ, ಮಾನ್ಯ ರಂಗನಾಥ್ ಅವರು ಹೇಳಿದ ಹಾಗೆ ಇದು ಆಗಿಲ್ಲ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಉದ್ದೇಶಪೂರ್ವಕವಾಗಿ ಮುಖ್ಯಮಂತ್ರಿಗಳು ಇದನ್ನು ಬಿಟ್ಟು ಹೇಳಿದ್ದಾರೆ ಎಂದರೆ ಅದು ತಮಗೆ ಬಿಟ್ಟ ವಿಚಾರ. ಉದ್ದೇಶಪೂರ್ವಕವಾಗಿ ಇದನ್ನು ಹೇಳಿಲ್ಲದಿದ್ದರೆ. It amount to privileges ಅದರಲ್ಲೇನೂ ಅನುಮಾನ ಇಲ್ಲ. ಉದ್ದೇಶ ಪೂರ್ವಕವಾಗಿ ಇದನ್ನು ಕೈಬಿಟ್ಟಿದ್ದಾರೆಯೇ ಎನ್ನುವುದರ ತೀರ್ಮಾನ ತಮಗೆ ಸೇರಿದ್ದುದು. ತಮ್ಮ ಗಮನಕ್ಕೆ ವಸ್ತುಸ್ಥಿತಿಯನ್ನು ನಾವು ತರುವುದಾದರೆ, ಈ ಫಿರ್ಯಾದು ಏನಿದೆ, ಮೊದಲು ಪೋಲೀಸ್ ಸ್ಟೇಷನ್‌ಗೆ ಅರ್ಜಿ ಕೊಟ್ಟಿದ್ದರು. ಇದನ್ನು ಯಾರೂ ಹೇಳಲಿಲ್ಲ. ಸರ್ಕಾರದವರು ಹೇಳಲಿಲ್ಲ. ಮೊದಲು ಒಬ್ಬ ಪೊಲೀಸ್ ಸ್ಟೇಷನ್‌ಗೆ ಫಿರ್ಯಾದು ಕೊಟ್ಟಮೇಲೆ ಪೊಲೀಸರು ಅದನ್ನು ವಿಚಾರಣೆ ಮಾಡುತ್ತಾರೆ. ತನಿಖೆ ಮಾಡಿ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ. ಅಂದಮೇಲೆ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಆಗುವುದಿಲ್ಲ. ಅದು ಸರ್ಕಾರದ ಗಮನಕ್ಕೆ ಬರುತ್ತದೆ. ಆದಾದ ಮೇಲೆ ಫಿರ್ಯಾದಿ ಏನು ಮಾಡುತ್ತಾರೆ ? ನಾನು ಇದನ್ನು ಪ್ರೂವ್ ಮಾಡುತ್ತೇನೆ ಎಂದು ಕೋರ್ಟಿಗೆ ಹೋಗುತ್ತಾನೆ.

SRI K.H. RANGANATH:– In the given case which you are now referring to before this August House, that is the position.

ಶ್ರೀ ಹೆಚ್. ಏಕಾಂತಯ್ಯ:– ಅದಕ್ಕೇ ನಾನು ಹೇಳುತ್ತಿದ್ದೇನೆ. That is not the position. ತಾವು ನಂಬುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ. ಅದನ್ನು ಓದುತ್ತೇನೆ. ಅವರ ಫಿರ್ಯಾದಿನಲ್ಲಿ 5 ನೇ ಪ್ಯಾರ ಓದಿ.

"ಈ ಫಿರ್ಯಾದಿಯು ಕೂಡಲೇ ಅಪರಾಧಿಗಳ ವಿರುದ್ಧ ಹುಬ್ಬಳ್ಳಿ ಶಹರದ ಪೊಲೀಸ್ ಸ್ಟೇಷನ್‌ನಲ್ಲಿ ಫಿರ್ಯಾದನ್ನು ದಾಖಲು ಮಾಡಿದ್ದನು.....

ಇಷ್ಟು ಸಾಕು ತಾನೇ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳುವುದಕ್ಕೆ ? ಉಳಿದುದನ್ನು ಬೇಕಾದರೆ ಕೈಬಿಡಿ. ಉದ್ದೇಶಪೂರ್ವಕವಾಗಿ ಮುಖ್ಯಮಂತ್ರಿಗಳು ಹೇಳಿಲ್ಲ ಎನ್ನುವ ಮಾತನ್ನು ತಾವು ಹೇಳಿದರೆ ಅದು ತಮಗೆ ಬಿಟ್ಟಿದ್ದು. ಆದರೆ ನಾನು ಹೇಳುತ್ತಿದ್ದೇನೆ, ಸರ್ಕಾರದ ಗಮನಕ್ಕೆ ಬಂದಿಲ್ಲ, ಆದಕ್ಕೋಸ್ಕರ ಹೇಳಿಲ್ಲ ಎನ್ನುವುದು ಸರಿಯಲ್ಲ. ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಉದ್ದೇಶಪೂರ್ವಕವಾಗಿ ಕೈಬಿಟ್ಟಿರಬಹುದು ಎನ್ನುವ ಮಾತನ್ನು ಹೇಳಿದರೆ, ಅದರ ಬಗ್ಗೆ ಪರಿಶೀಲನೆ ಮಾಡುವುದು ಮಾನ್ಯ ಅಧ್ಯಕ್ಷರಿಗೆ ಬಿಟ್ಟಿದ್ದುದು.

ಅಧ್ಯಕ್ಷರು:– ನಾನು ಎರಡು ಕಡೆಯವರೂ ಹೇಳಿದ್ದನ್ನು ಕೇಳಿದ್ದೇನೆ. ಇದನ್ನು ಪರಿಶೀಲನೆ ಮಾಡಿ ನಾನು ಯೋಗ್ಯ ನಿರ್ಣಯ ತೆಗೆದುಕೊಳ್ಳುತ್ತೇನೆ.

ವೃತ್ತಿಪರ ಶಿಕ್ಷಣ ಕಾಲೇಜುಗಳಲ್ಲಿ ಸೀಟುಗಳ ವಿತರಣೆಗೆ ಸುಪ್ರೀಂ ಕೋರ್ಟಿನ ತೀರ್ಪು

† ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ಇತ್ತೀಚಿನ ದಿವಸಗಳಲ್ಲಿ, ಈ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದಿಂದ ಒಂದು ತೀರ್ಪನ್ನು ಕೊಟ್ಟು ಈ ರಾಜ್ಯದ ವೃತ್ತಿಪರ ಶಿಕ್ಷಣದ, ವೈದ್ಯಕೀಯ ಕಾಲೇಜು, ದಂತವೈದ್ಯ ಕಾಲೇಜು, ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟುಗಳನ್ನು ವಿತರಣೆ ಮಾಡುವಂಥ ಸಂಪೂರ್ಣ ಅಧಿಕಾರವನ್ನು ಸರ್ಕಾರಕ್ಕೆ ಬಿಡಬೇಕು ಎನ್ನುವಂಥ ಒಂದು ತೀರ್ಮಾನವನ್ನು ಕೊಟ್ಟಿದೆ. ಈ ತೀರ್ಮಾನದ ಪ್ರಕಾರ ಶೇಕಡಾ ಐವತ್ತರಷ್ಟು ಭಾಗದ ಸೀಟುಗಳನ್ನು ಉಚಿತವಾಗಿ ವಿದ್ಯಾರ್ಥಿಗಳಿಗೆ ಮೆರಿಟ್ ಮೇಲೆ ಕೊಡಬೇಕು. ಇನ್ನು ಉಳಿದ 50 ಭಾಗ ಸೀಟುಗಳನ್ನು, ಅವನ್ನೂ ಕೂಡ ಅರ್ಹತೆ ಮೇಲೆಯೇ ಸೀಟು ಶುಲ್ಕವನ್ನು ವಸೂಲು ಮಾಡಿ. ಸೀಟನ್ನು ಹಂಚಬೇಕೆಂದು ನಿರ್ದಿಷ್ಟವಾದ, ನಿರ್ದೇಶನವನ್ನು ಈ ತೀರ್ಪಿನಲ್ಲಿ ಕೊಟ್ಟಿದ್ದಾರೆ. ಅಂಕಗಳ ಅರ್ಹತೆಯ ಮೇಲೆ ಮತ್ತು ತಜ್ಞರ ಸಮ್ಮತಿ ಮೂಲಕ ಭರ್ತಿ ಮಾಡಬೇಕು. 60 ಭಾಗ ಸೀಟುಗಳಿಗೂ, ಸರ್ಕಾರ ಸೀಟು ಶುಲ್ಕವನ್ನು ಗೊತ್ತುಪಡಿಸಬೇಕು. ಅಂದರೆ, ಒಂದು ವೃತ್ತಿಪರ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡಬೇಕಾದ ಎಲ್ಲಾ ಸ್ಥಾನಗಳನ್ನೂ ಅರ್ಹತೆಯ ಆಧಾರದ ಮೇಲೆ ಭರ್ತಿ ಮಾಡಬೇಕೆನ್ನುವುದು ಇದರ ತಿರುಳು, ಒಟ್ಟಾರೆ ಇದರ ಅರ್ಥ. ಸನ್ಮಾನ್ಯ ಅಧ್ಯಕ್ಷರೇ, ಒಂದು ಖಾಸಗಿ ಕಾಲೇಜಿನಲ್ಲಿ ನಡೆಯುತ್ತಾ ಇದ್ದಂಥ ವೈದ್ಯಕೀಯ ಶಿಕ್ಷಣ ಮತ್ತು ಇಂಜಿನಿಯರಿಂಗ್ ಶಿಕ್ಷಣ, ಇತ್ತೀಚಿನ ವರ್ಷಗಳಲ್ಲಿ, ಎಲ್ಲರಿಗೂ ಒಂದು ವಿಧವಾದ ತಲೆನೋವು ಇತ್ತು. ಜಾತಿಯ ಆಧಾರದ ಮೇಲೆ ಕಾಲೇಜುಗಳನ್ನು ಮಂಜೂರು ಮಾಡುವಂಥ ಪರಿಸ್ಥಿತಿ ಉಂಟು, ಜಾತಿಯ ಆಧಾರದ ಮೇಲೆ ಸೀಟುಗಳನ್ನು ಕೊಡುವುದು ಉಂಟು. ಇದರಲ್ಲಿ ವಿ.ಐ.ಪಿ. ಸೀಟೂ ಉಂಟು, ಮಂತ್ರಿಗಳ ಖೋಟಾ ಉಂಟು, ಹೀಗೆ ಅನೇಕ ವಿಚಾರಗಳಿಂದ ವಿದ್ಯಾಕ್ಷೇತ್ರದಲ್ಲಿ ಕೆಟ್ಟ ಪರಿಸ್ಥಿತಿಯನ್ನು ಸೃಷ್ಟಿ ಮಾಡುವಂಥ ಈ ವ್ಯವಸ್ಥೆಗೆ, ಎಲ್ಲಾ ಕಾಲದಲ್ಲಿಯೂ, ಏನಾದರೂ ಮಾಡಿ, ಇತಿಶ್ರೀ ಹಾಡಬೇಕೆಂದು ಪ್ರಯತ್ನ ನಡೆದಿದೆ. ಎಲ್ಲರೂ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದಾರೆ. ದುರಾದೃಷ್ಟವಶಾತ್, ಇದರಲ್ಲಿ ಯಾರೂ ಸಫಲರಾಗಿಲ್ಲ. ಇದಕ್ಕೆ ಈ ನಾಡಿನ ಪ್ರಮುಖ ಪತ್ರಿಕೆ ವ್ಯಾಖ್ಯಾನ ಮಾಡುತ್ತದೆ. ಒಂದಲ್ಲ ಒಂದು ವಿಧದಲ್ಲಿ ಎಲ್ಲಾ ರಾಜಕಾರಣಿಗಳೂ ಇಲ್ಲಿ ಶಾಮೀಲಾಗಿದ್ದಾರೆ. ಸೀಟಿಗಾಗೋ ಅಥವಾ ಚುನಾವಣೆಯ ಸಂದರ್ಭದಲ್ಲಿ ಪಣಕ್ಕಾಗಿಯೋ, ಈ ಲಾಬಿಗೆ ಎಲ್ಲಾ ರಾಜಕಾರಣಿಗಳೂ ಬಲಿಯಾಗಿದ್ದಾರೆಂದು, ಈ ರಾಜ್ಯದ ಪತ್ರಿಕೆ ವ್ಯಾಖ್ಯಾನ ಮಾಡಿದೆ. ಇದನ್ನು ಯಾರೂ ಚರ್ಚೆ ಮಾಡುವುದಕ್ಕೆ ಸಿದ್ಧವಿಲ್ಲ ಎನ್ನುವ ವ್ಯಾಖ್ಯಾನಕ್ಕೂ ಕೂಡ ಹೋಗಿದೆ. ಇಂತಹ ಸಂದರ್ಭದಲ್ಲಿ ನನ್ನ ಕೋರಿಕೆ ಇಷ್ಟೆ. ಇಡೀ ವೃತ್ತಿಪರ ಕಾಲೇಜಿನ ಸೀಟನ್ನು ಹಂಚುವಂಥ ಅಧಿಕಾರವನ್ನು ಸಂಪೂರ್ಣವಾಗಿ ಸರ್ಕಾರದವರ ಕೈಯಲ್ಲಿ ಕೊಟ್ಟಿರುವಂಥ ಈ ಸಂದರ್ಭದಲ್ಲಿ, ಸರ್ಕಾರ ಏನು ವ್ಯವಸ್ಥೆಯನ್ನು ಮಾಡಿದೆ. ಈ ಜಡ್ಜ್‌ಮೆಂಟನ್ನು ನಾನು ಮತ್ತು ನಮ್ಮ ಪ್ರೊಫೆಸರ್‌ರವರು ಕುಳಿತುಕೊಂಡು ಓದಿದೆವು. ಕೆಲವು ಸಂದರ್ಭದಲ್ಲಿ ಪ್ರಾಮಾಣಿಕವಾಗಿ ಮಾಡತಕ್ಕಂಥ ಪ್ರಯತ್ನಗಳು, ಪ್ರಾಮಾಣಿಕವಾಗಿ ತೆಗೆದುಕೊಂಡ ತೀರ್ಮಾನಗಳು ಅತ್ಯಂತ ಕೆಟ್ಟ ಪ್ರತಿಫಲವನ್ನು ಕೊಡುತ್ತವೆ ಎನ್ನುವುದಕ್ಕೆ ಬಹುಶಃ ಈ ತೀರ್ಮಾನ ಕೂಡ ನಮ್ಮ ಮುಂದೆ ಇದೆಯೆಂದು ನನ್ನ ಭಾವನೆ. 98 ನಂಬರ್ ತೆಗೆದುಕೊಂಡ ವಿದ್ಯಾರ್ಥಿ ಅರ್ಹತೆಯ ಮೇಲೆ ಸೀಟು ತೆಗೆದುಕೊಳ್ಳುತ್ತಾನೆ. ಅವನಿಗೆ ಫೀ ಇಲ್ಲ, ಏನೇನೂ ಕೊಡಬೇಕಾಗಿಲ್ಲ ಮತ್ತು ಒಳ್ಳೆಯ ಕಾಲೇಜಿನಲ್ಲಿ ಅವಕಾಶ ಸಿಕ್ಕುತ್ತದೆ 96 ನಂಬರನ್ನು ತೆಗೆದುಕೊಂಡ ವಿದ್ಯಾರ್ಥಿ ಸೀಟು ಶುಲ್ಕ ಕೊಡಬೇಕಾಗುತ್ತದೆ. 98 ನಂಬರನ್ನು ತೆಗೆದುಕೊಂಡ ವಿದ್ಯಾರ್ಥಿ ಪಟ್ಟಣದಲ್ಲಿರುತ್ತಾನೆ, ಧನಿಕರ ಮಗನಾಗಿರುತ್ತಾನೆ. ಪಟ್ಟಣದಲ್ಲಿರುವ ಧನಿಕನ ಮಗನ ವಿದ್ಯಾಭ್ಯಾಸಕ್ಕಾಗಿ, ಒಂದೆರಡು ಕಡಿಮೆ ಅಂಕ ತೆಗೆದುಕೊಂಡ ವಿದ್ಯಾರ್ಥಿ ಅವನ ವೆಚ್ಚವನ್ನು ಭರಿಸಬೇಕಾಗುತದೆ. 98 ತೆಗೆದುಕೊಂಡವರೆ ಮೆರಿಟ್ ಮೇಲೆ ...

ಸಿಗುತ್ತದೆ, 96 ತೆಗೆದುಕೊಂಡರೂ ಸೀಟು ಸಿಗುತ್ತದೆ. ಆದರೆ, ಸೀಟು ಶುಲ್ಕ ಕೊಡಬೇಕಾಗುತ್ತದೆ. ಅಂದರೆ, 98 ತೆಗೆದುಕೊಂಡಂಥ ಧನಿಕನ ಮಗನ ವಿದ್ಯಾಭ್ಯಾಸಕ್ಕೆ 96 ತೆಗೆದುಕೊಂಡು ಬಡವನ ಮಗ ತ್ಯಾಗ ಮಾಡಬೇಕಾಗುತ್ತದೆ. ಇದು ಈ ಜಡ್ಜ್‌ಮೆಂಟಿನಲ್ಲಿ ನೋಡಿದಂಥ ಪರಿಸ್ಥಿತಿ. ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ 18 ಮೆಡಿಕಲ್ ಕಾಲೇಜುಗಳಿವೆ, ಅದರಲ್ಲಿ 3,351 ಸೀಟುಗಳನ್ನು ಪ್ರತಿ ವರ್ಷ ಹಂಚುವಂಥ ಅವಕಾಶ ಇದೆ. 45 ಇಂಜಿನಿಯರಿಂಗ್ ಕಾಲೇಜುಗಳಿವೆ. ಇದರಲ್ಲಿ 12 ಸಾವಿರ ವಿದ್ಯಾರ್ಥಿಗಳಿಗೆ ಸೀಟನ್ನು ಕೊಡಬೇಕಾಗಿದೆ. ಈ ತೀರ್ಪಿನ ಪ್ರಕಾರ, ಈ ಕಾಲೇಜುಗಳಲ್ಲಿ ಸೀಟನ್ನು ವಿತರಣೆ ಮಾಡಿದರೆ, ಆಡಳಿತ ವರ್ಗದವರು, ನನಗೆ ಖುದ್ದಾಗಿ ಗೊತ್ತಿಲ್ಲ. ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದ್ದೇನೆ. ಸರ್ವೋಚ್ಚ ನ್ಯಾಯಾಲಯದ ತೀರ್ಮಾನದ ಆಧಾರದ ಮೇಲೆ ಸರ್ಕಾರದವರು ಕಾಲೇಜುಗಳನ್ನು ನಡೆಸಬೇಕು ಮತ್ತು ವಿದ್ಯಾರ್ಥಿಗಳಿಗೆ ಸೀಟನ್ನು ಕೊಡುವಂಥ ತೀರ್ಮಾನಕ್ಕೆ ಬರುವುದಾದರೆ, ಮುಂದಿನ ವರ್ಷದಿಂದ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಿಲ್ಲ.

ನಾವು ಈ ಕಾಲೇಜುಗಳನ್ನು ನಡೆಸಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ಯಾರೋ ಒಬ್ಬರು ಬಹಳ ತಮಾಷೆಯಾಗಿ ಹೇಳುತ್ತಿದ್ದರು. ನಾವೇ ಕಟ್ಟಿದಂತಹ ಕಾಲೇಜು ನಾವೇ ದುಡ್ಡು ಖರ್ಚು ಮಾಡಿದ್ದು ನಾವು ಶ್ರಮ ಪಟ್ಟಿದ್ದು ಕೊನೆಯ ಪಕ್ಷ ನನ್ನ ಮಗನಿಗೇ ಸೀಟು ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುವುದಾದರೆ ಈ ಸಂಸ್ಥೆಗಳನ್ನು ಏತಕ್ಕೆ ನಡೆಸಬೇಕು ಎನ್ನುವಂತಹ ವಾದವನ್ನು ಅವರ ಮುಂದೆ ಇಟ್ಟಿದ್ದಾರೆ. ಪತ್ರಿಕಾ ವರದಿ ಪ್ರಕಾರ. ಮಾನ್ಯ ಅಧ್ಯಕ್ಷರೇ, ಕಾಲೇಜುಗಳ ಪರವಾಗಿ ಮಾತನಾಡಿದರೆ ನಾವು ಯಾವುದೋ ಒಂದು ಲಾಬಿಗೆ ಸಿಕ್ಕಿಹಾಕಿಕೊಂಡಿದ್ದೇವೆ ಎನ್ನುವಂತಹ ಅಪಾಯ ಇದೆ ಎಂದು ಕೆಲವರ ಅಭಿಪ್ರಾಯ. ಅಪಾಯ ಇದ್ದರೂ ಪರವಾಗಿಲ್ಲ ನನಗಂತೂ ಆ ಅಪಾಯ ಇಲ್ಲ. ನನಗೆ ಯಾವ ಕಾಲೇಜಿನವರೂ ಪರಿಚಯ ಇಲ್ಲ. ನಾನು ಯಾರನ್ನು ಸೀಟು ಕೇಳುವುದಕ್ಕೆ ಹೋಗುವುದಿಲ್ಲ. ನನಗೆ ವಿ.ಐ.ಪಿ. ಕೋಟಾದಲ್ಲಿ ಇಷ್ಟರವರೆಗೂ ಯಾವ ಕಾಲೇಜಿನಲ್ಲಿ ಸೀಟು ಕೊಟ್ಟಿಲ್ಲ. ಆದ್ದರಿಂದ ನನಗೆ ಆ ಅಪಾಯ ಇಲ್ಲದೆ ಇರುವುದರಿಂದ ಈ ಒಂದು ತೀರ್ಪಿನ ಸಾಧಕಬಾಧಕಗಳ ಬಗ್ಗೆ ಸರ್ಕಾರದವರು ನಮ್ಮ ಗಮನಕ್ಕೆ ತರುವುದಕ್ಕಿಂತ ಮೊದಲು ಎರಡು ಮಾತುಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ತೀರ್ಮಾನವನ್ನು ಕಾರ್ಯರೂಪಕ್ಕೆ ತರುವುದಾದರೆ ಸಾಮಾನ್ಯ ಬುದ್ಧಿಮಟ್ಟ average IQ ಎಂದು ನಾವು ಏನು ಹೇಳುತ್ತೇವೆ ಯಾವುದೇ ಒಬ್ಬ ವ್ಯಕ್ತಿ ಇನ್ನು ಮುಂದೆ ವೃತ್ತಿಪರ ಶಿಕ್ಷಣದಿಂದ ಶಾಶ್ವತವಾಗಿ ವಂಚಿತನಾಗುತ್ತಾನೆ. He will be permanently debarred. ಇದು ಒಂದನೆಯದು. ಇನ್ನು ಎರಡನೆಯದು ಬಹಳ ಪ್ರಮುಖವಾದುದು. ಅನೇಕ ಸಂದರ್ಭಗಳಲ್ಲಿ ನಾವು ಇದನ್ನು ಚರ್ಚೆ ಮಾಡಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಸಂಗ ಮಾಡತಕ್ಕಂಥ ವಿದ್ಯಾರ್ಥಿಗಳಿಗೆ ಸೌಲಭ್ಯಗಳ ಕೊರತೆ. ಪರಿಸರದ ಒತ್ತಡ. ಬೆಳೆದು ಬಂದಂತಹ ಪರಿಸ್ಥಿತಿಯಲ್ಲಿ ಪಟ್ಟಣ ಪ್ರದೇಶಗಳಲ್ಲಿ ಎಲ್ಲಾ ಸೌಲಭ್ಯಗಳ ಸರದಾರರಾಗಿರತಕ್ಕಂಥ ಮಕ್ಕಳ ಜೊತೆಯಲ್ಲಿ ಸ್ಪರ್ಧೆ ಮಾಡುವುದು ಕಷ್ಟ. ಇದು ಅನೇಕ ಸಂದರ್ಭಗಳಲ್ಲಿ ಅಸಾಧ್ಯವಾದುದು ಎಂದೂ ಕೂಡ ನಾವು ಚರ್ಚೆ ಮಾಡಿದ್ದೇವೆ. ಈ ತೀರ್ಪನ್ನು ಆಧಾರವಾಗಿಟ್ಟುಕೊಂಡು ವೃತ್ತಿಪರ ಕಾಲೇಜುಗಳಲ್ಲಿ ನೀವು ಸೀಟು ಹಂಚಿಕೆ ಮಾಡುವುದಾದರೆ ಪಟ್ಟಣದ ಧನಿಕನ ಮಕ್ಕಳ ಜೊತೆಯಲ್ಲಿ ಸ್ಪರ್ಧೆ ಮಾಡಿ ಹೆಚ್ಚಿಗೆ ಅಂಕಗಳನ್ನು ಪಡೆಯಲಾರದ ಹಳ್ಳಿಯ ಹೈದ ಶಾಶ್ವತವಾಗಿ ಇಂಜಿನೀಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಂದ ದೂರವಾಗುತ್ತಾನೆ.

It is not that his IQ is less, it is not that he is incomepetent. ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ಈಗಾಗಲೇ ಹೇಳಿದ್ದೇನೆ. ಹಳ್ಳಿಗಳಲ್ಲಿ ನ್ಯೂಸ್ ಪೇಪರ್ಸ್ ಸಿಕ್ಕುವುದಿಲ್ಲ, ಬೇರೆ ಯಾವ ಸೌಲಭ್ಯಗಳೂ ಇರುವುದಿಲ್ಲ. ಇಲ್ಲಿ ದೊಡ್ಡ ದೊಡ್ಡ ಲೈಬ್ರರಿಗಳು ಇವೆ. ಇಂತಹ ಪರಿಸ್ಥಿತಿಯಲ್ಲಿ

ವಿದ್ಯಾಭ್ಯಾಸ ಮಾಡಿ ಹಸಿದ ಹೊಟ್ಟೆಯಲ್ಲಿ ಹರಕು ಬಟ್ಟೆಯಲ್ಲಿ ವಿದ್ಯಾಭ್ಯಾಸ ಮಾಡುವಂತಹ ಮಕ್ಕಳು ಪಟ್ಟಣ ಪ್ರದೇಶದಲ್ಲಿರತಕ್ಕ ಧನಿಕನ ಮಗನ ಜೊತೆಯಲ್ಲಿ ಸ್ಪರ್ಧೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ನಾವು ಅರ್ಹತೆ ಮೇಲೆ ಸೀಟು ಕೊಡುತ್ತೇವೆ ಅಂದರೆ ಪ್ರಾಮಾಣಿಕವಾಗಿ ಅನಿಸುತ್ತದೆ, ನಮ್ಮ ಗ್ರಾಮಾಂತರ ಪ್ರದೇಶದ ಮಕ್ಕಳು ಶಾಶ್ವತವಾಗಿ ಈ ವೃತ್ತಿಪರ ಶಿಕ್ಷಣದಿಂದ ದೂರ ಇರಬೇಕಾಗುತ್ತದೆ ಎಂದು. ಅಂತಹ ಪರಿಸ್ಥಿತಿ ಬರುತ್ತದೆ. ಮಾನ್ಯ ಅಧ್ಯಕ್ಷರೇ ಸರ್ಕಾರದವರು ಇದಕ್ಕೆ ಏನು ಉತ್ತರ ಕೊಡುತ್ತಾರೋ ನನಗೆ ಗೊತ್ತಿಲ್ಲ. ಸುಪ್ರೀಂ ಕೋರ್ಟ್ ತೀರ್ಪು ಬಂದಿದೆ ನಾವೇನೂ ಮಾಡುವುದಕ್ಕಾಗುವುದಿಲ್ಲ ಅದನ್ನು ಅನುಸರಿಸಬೇಕಾಗುತ್ತದೆ, ನಾವು ಕೋರ್ಟ್ ತೀರ್ಮಾನಕ್ಕೆ ಬದ್ಧರಾಗಿದ್ದೇವೆ ಅಂತ ಅವರು ಹೇಳುವುದಾದರೆ, ತಾವು ಇನ್ನೂ ಎಲ್ಲಾ ತೀರ್ಮಾನಗಳಿಗೆ ಬದ್ಧರಾಗಿಲ್ಲವಲ್ಲ. ಜೂನ್ ತಿಂಗಳಲ್ಲಿ ಜಿಲ್ಲಾಪರಿಷತ್ತು ಚುನಾವಣೆ ಆಗಬೇಕೆಂದು ಸುಪ್ರೀಂ ಕೋರ್ಟ್ ಆಜ್ಞೆ ಬಂದಿದೆ. ಅದಕ್ಕೂ ನೀವು ಟೈಮ್ ಕೇಳಿಕೊಂಡಿದ್ದೀರಿ ಇನ್ನು ಸುಪ್ರೀಂ ಕೋರ್ಟ್ ಮಂಡಲ್ ಕಮೀಷನ್ ವರದಿ ಅನುಷ್ಠಾನಗೊಳಿಸಬೇಕೆಂದು ಹೇಳಿದೆ, ಅದರ ಬಗ್ಗೆ ಕೂಡ ನೀವು ಇನ್ನೂ ಏನೂ ಕಾರ್ಯಕ್ರಮ ಕೈಗೊಂಡಿಲ್ಲ. ಆದ್ದರಿಂದ ಸುಪ್ರೀಂ ಕೋರ್ಟ್‌ನಿಂದ ಬಂದಿರತಕ್ಕಂಥ ತೀರ್ಪನ್ನು ಯಾವುದೇ ವಿಧದಲ್ಲಿ ಆದರೂ ಸರಿಯೇ ಬದಲಾವಣೆ ಮಾಡಿ ಎಂದು ನನ್ನ ಕೋರಿಕೆ. ಇಲ್ಲಾ ವೃತ್ತಿಪರ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರದವರೇ ತೆಗೆದುಕೊಳ್ಳುವುದಾದರೆ ನಮ್ಮದೇನೂ ಅಭ್ಯಂತರ ಇಲ್ಲ. ಅಥವಾ ಅಲ್ಲಿ ನಡೆಯುತ್ತಿರತಕ್ಕಂಥ ಅವ್ಯವಹಾರಗಳನ್ನು ತಡೆಗಟ್ಟಲಿಕ್ಕೆ ತಾವು ಏನು ಮಾಡುತ್ತೀರಿ, ಅನ್ಯಾಯವನ್ನು ತಡೆಗಟ್ಟಲಿಕ್ಕೆ ಏನಾದರೂ ವ್ಯವಸ್ಥೆ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಅಭ್ಯಂತರ ಇಲ್ಲ. ನಮ್ಮ ಕೋರಿಕೆ ಇಷ್ಟೇ ಈ ಒಂದು ತೀರ್ಪಿನ ಆಧಾರದ ಮೇಲೆ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಸೀಟು ಹಂಚಿಕೆ ಮಾಡುವುದಕ್ಕೆ ನೀವು ಏನಾದರೂ ಬದ್ಧರಾದರೆ ಬಹುಶಃ ಚರಿತ್ರೆಯಲ್ಲಿ ಇದು ಒಂದು ಅತ್ಯಂತ ಕರಾಳದಿನ ಆಗುತ್ತದೆ. ಏಕೆಂದರೆ ಕಡಿಮೆ ಅಂಕ ತೆಗೆದುಕೊಂಡು ಶಿಕ್ಷಣವನ್ನು ಪಡೆಯಲಿಕ್ಕೆ ಬರುವಂತಹ ನಮ್ಮ ಗ್ರಾಮಾಂತರ ಪ್ರದೇಶದ ಅಭ್ಯರ್ಥಿಯನ್ನು ಶಾಶ್ವತವಾಗಿ ವೃತ್ತಿಪರ ಶಿಕ್ಷಣದಿಂದ ದೂರ ಇಟ್ಟಂತಹ ಒಂದು ಕೆಟ್ಟ ಅಧ್ಯಾಯಕ್ಕೆ ನಾಂದಿಯಾಗುತ್ತದೆ. ಆದ್ದರಿಂದ ಸರ್ಕಾರ ಈ ವಿಷಯದಲ್ಲಿ ಗಂಭೀರವಾಗಿ ಯೋಚನೆ ಮಾಡಿ, ತೀರ್ಮಾನ ತೆಗೆದುಕೊಳ್ಳಬೇಕು. ಕೊನೆಯಲ್ಲಿ ಒಂದು ಮಾತು ಹೇಳುತ್ತೇನೆ.

12.10 ಪಿ.ಎಂ.

"ಈ ವಿಷಯದಲ್ಲಿ ರಾಜಕಾರಣಿಗಳು ಯಾರೂ ಮಾತನಾಡುತ್ತಾ ಇಲ್ಲ, ರಾಜಕಾರಣಿಗಳು ಬಾಯಿ ಬಿಡುತ್ತಾ ಇಲ್ಲ," ಇದನ್ನು ನಾನು ಹೇಳುತ್ತಾ ಇಲ್ಲ; ಇದು ಪತ್ರಿಕೆಯಲ್ಲಿ ಬಂದಿರುವ ವಿಚಾರವಾಗಿದೆ. "ಇದನ್ನು ಅನುಷ್ಠಾನಗೊಳಿಸುವುದು ಯಾವ ರಾಜಕಾರಣಿಗೂ ಬೇಕಾಗಿಲ್ಲ. ತಮಗೆ ಬೇಕಾಗುವ ಸೀಟು, ಹಾಗೂ ಚುನಾವಣ ವೆಚ್ಚ ಬರುವುದು ಕೈತಪ್ಪಿ ಹೋಗುವ ಆತಂಕವಿದೆ. ಆದರೂ ಈ ವಿಚಾರದಲ್ಲಿ ಯಾರೂ ಬಾಯಿ ಬಿಡುತ್ತಾ ಇಲ್ಲ. ಏಕೆಂದರೆ ಕ್ಯಾಪಿಟೇಶನ್ ದೊರೆಗಳೊಂದಿಗೆ ಶಾಮೀಲಾಗಿದ್ದಾರೆ ಎಂಬ ಸಾರ್ವತ್ರಿಕ ಅಭಿಪ್ರಾಯ ಮೂಡಿ, ತಮಗೂ ಹಾಗೂ ಸರಕಾರಕ್ಕೂ ಕಳಂಕ ಬರುತ್ತದೆ ಎಂಬ ಭೀತಿ ಅವರನ್ನು ಕಾಡುತ್ತಿದೆ. "– ಈ ವಿಚಾರವನ್ನು ನಾನು ಪತ್ರಿಕೆಗಳಲ್ಲಿ ಓದಿ ತಮ್ಮ ಗಮನಕ್ಕೆ ತಂದಿದ್ದೇನೆ. ತಾವುಗಳು ಉತ್ತರವನ್ನು ದಯಪಾಲಿಸುವಾಗ ಇದಕ್ಕೆ ಉತ್ತರಿಸಬಹುದಾಗಿದೆ. ಪತ್ರಿಕೆಯಲ್ಲಿ ಬಂದ ಅನುಮಾನಕ್ಕೆ ಪರಿಹಾರ ಸಿಗಲಿ ಎನ್ನುವ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಾ ಇದ್ದೇನೆ. ಈ ವಿಚಾರದಲ್ಲಿ ನಿರ್ದಿಷ್ಟವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ಮಾತನ್ನು ಮಾನ್ಯ ಆರೋಗ್ಯ ಸಚಿವರಿಗೆ ಹೇಳಬಯಸುತ್ತೇನೆ. I am not holding brief for anybody here.

ಪ್ರೊ: ಎಂ.ಡಿ. ನಂಜುಂಡ ಸ್ವಾಮಿ:– ಸನ್ಮಾನ್ಯ ಸದಸ್ಯರಾದ ವೈ. ಕೆ. ರಾಮಯ್ಯನವರು ಸರಕಾರಕ್ಕೆ ಕೊನೆಯಲ್ಲಿ ಒಂದು ಮಾತನ್ನು ಹೇಳಿದರು. ಈ ಬಗ್ಗೆ ಸರಕಾರವು ಏನು ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ಪ್ರಶ್ನೆ ಹಾಕಿದರು. ಸರಕಾರಕ್ಕೆ ಬೇರೆ ಯಾವ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ದಾರಿಯೇ ಇಲ್ಲ. ಸುಪ್ರೀಂ ಕೋರ್ಟ್‌ನ ತೀರ್ಮಾನವನ್ನು ಕೈಯಲ್ಲಿ ಹಿಡಿದುಕೊಂಡು ನಾನು ಮಾತನಾಡುತ್ತಾ ಇದ್ದೇನೆ. Civil Original Jurisdiction Writ Petition C No. 607/1992.

ಕ್ಯಾಪಿಟೇಶನ್ ಫೀ ಆಧಾರದ ಮೇಲೆ ನಡೆಯುತ್ತಾ ಇರುವಂಥ ಇಂಜಿನೀಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳ ಸಂಬಂಧವಾಗಿ ಕೊಟ್ಟಿರುವಂಥ ತೀರ್ಪು ಇದು. ಇದು ಇವೊತ್ತು ಕಾನೂನು. ಅದರ ಮೇಲೆ ಮೇಲ್ಮನವಿಗೆ ಹೋಗಲು ಪ್ರಯತ್ನ ನಡೆಯುತ್ತಾ ಇರುವುದು ನನಗೆ ಗೊತ್ತಿದೆ. ಅದು ದಾಖಲಾಗಿದೆಯೋ ಇಲ್ಲವೋ ಎನ್ನುವುದು ಗೊತ್ತಿಲ್ಲ. ದಾಖಲಾಗಿಲ್ಲ ಎಂದು ನಾನು ಭಾವಿಸಿದ್ದೇನೆ. ಮೇಲ್ಮನವಿ ದಾಖಲಾಗಿ ಏನು ತೀರ್ಪು ಬರುತ್ತದೆ ಅಲ್ಲಿಯವರೆಗೆ ಇದು ಕಾನೂನು. ಆ ಒಂದು ಕಾನೂನಿನ ಆಧಾರದ ಮೇಲೆ ಬರುವ ಜೂನ್ ತಿಂಗಳಿಂದ ಈ ಸರಕಾರವು ಈ ಕಾನೂನಿನ ಚೌಕಟ್ಟಿನೊಳಗೇ ಈ ಕ್ಯಾಪಿಟೇಷನ್, ಇದು ಬರೀ ಇಂಜಿನೀಯರಿಂಗ್ ಕಾಲೇಜು ಮಾತ್ರವಲ್ಲ, ಮೆಡಿಕಲ್ ಕಾಲೇಜುಗಳು ಮಾತ್ರವಲ್ಲ, ಕಾನ್ವೆಂಟ್‌ಗಳಿಂದ ಹಿಡಿದು ಎಲ್ಲಾ ವಿದ್ಯಾಸಂಸ್ಥೆಗಳಿಗೂ ಕೂಡ ಈ ಕ್ಯಾಪಿಟೇಷನ್ ಅಸ್ತ್ರದ ಮೂಲಕ ಈ ದೇಶದ ಪ್ರಜೆಗಳಿಗೆ ಏನು ಹಕ್ಕು ಇದೆ. ಈ ದೇಶದ ಮಕ್ಕಳಿಗೆ ಏನು ಹಕ್ಕು ಇದೆ, ಯಾವ ಹಕ್ಕು ಎಲ್ಲರಿಗೂ ಸಂವಿಧಾನದಲ್ಲಿ ಇದೆ, ಅದನ್ನು ಮೊಟಕಾಗದಂತೆ ನೋಡಿಕೊಳ್ಳುವಂಥ ಒಂದು ಜವಾಬ್ದಾರಿಯನ್ನು ಈ ಸರಕಾರದ ಮೇಲೆ ಸುಪ್ರೀಂ ಕೋರ್ಟ್ ಹೊರಿಸಿದೆ. ನಾವು ಸಂವಿಧಾನವನ್ನು ಮರೆತು ಸರಕಾರವನ್ನು ನಡೆಸುತ್ತಾ ಇದ್ದೇವೆ. ಸಂವಿಧಾನದಲ್ಲಿ ಆರ್ಟಿಕಲ್ – 21 ಇದೆ. ಅದು ಏನು ಹೇಳುತ್ತದೆ ಅಂದರೆ Right to liberty – right to personal liberty. But, personal liberty concept ನಮ್ಮ ನ್ಯಾಯಾಲಯಗಳು ಬಹಳ ವಿಶಾಲವಾಗಿ ವಿಶ್ಲೇಷಣೆ ಮಾಡಿವೆ. Even right to educaiton has been taken into right to personal liberty under Article 21 way back as 1984, Bandhuva Mukti Morcha V/s Union of India 1984. ಈ ಕೇಸ್‌ಗೆ ಸಂಬಂಧಪಟ್ಟ ಹಾಗೆ, ಇದರಲ್ಲಿ ತೀರ್ಪು ಕೊಡುತ್ತಾ ಅವರು ಅಮೇರಿಕಾದ ಸುಪ್ರೀಂ ಕೋರ್ಟ್‌ನ ಒಂದು ತೀರ್ಪನ್ನು ಎರವಲು ತೆಗೆದುಕೊಂಡಿದ್ದಾರೆ. ಈ ಅಮೇರಿಕಾದ ಸುಪ್ರೀಂಕೋರ್ಟ್‌ನ ತೀರ್ಪನ್ನು ಏಕೆ ಓದಿ ಹೇಳುತ್ತಾ ಇದ್ದೇನೆ ಅಂದರೆ ನಮ್ಮಲ್ಲಿಯೂ ಆರ್ಟಿಕಲ್ 14 ಎಂದು ಇದೆ. ಅದರಲ್ಲಿ ಸಮಾನತೆಯನ್ನು ಕಾಪಾಡಬೇಕು, ಸಮಾನತೆಯನ್ನು ಒದಗಿಸಬೇಕು ಎಂದು ಅದರಲ್ಲಿ ಇದೆ. There is no room for discriminations on the basis of either caste, creed, religion, colour or anything, even in our Constitution. ಅಮೇರಿಕಾದ ತೀರ್ಪು ಯಾವ ಸಂದರ್ಭದಲ್ಲಿ ತೆಗೆದುಕೊಂಡರು ಎಂದರೆ, when there was colour segregation in education. The case is Barning V/s Sharp. Chief Justice Warren speaking for the U.S. Supreme Court, observed:

"Although the Court has not assumed to define liberty with any great precision, the term is not confined to mere freedom from bodily restraint. Liberty under law extends to the full range of conduct which the individual is free to pursue and it cannot be....."

ಅಧ್ಯಕ್ಷರು:– ಪ್ರೊ: ಎಂ.ಡಿ. ನಂಜುಂಡ ಸ್ವಾಮಿಯವರು ಇನ್ನು 5 ನಿಮಿಷದಲ್ಲಿ ಮುಗಿಸಿ.

PROF. M.D. NANJUNDA SWAMY:– I will just say that this rules the State,

this rules the country and I will just keep quiet. 'Liberty under law extends to the full range'. But, that kind of liberty, I really don't tolerate even as a Member or as a teacher.

"Liberty under law extends to the full range of conduct which the individual is free to pursue and it cannot be restricted except for a proper governmental objective."

And he goes on to say 'Segregation in public education is not reasonably related to any proper governmental objective.'

The capitation system whether it is in Kindergarten or in the Engineering or Medical Colleges. You cannot justify it on the ground of proper governmental objective by any stretch of imagination.

Right to education has been specifically included under Article 21 of the Indian Constitution wherein the Supreme Court has declared that right to personal liberty includes right to education. Right to education is a fundamental right and you cannot restrict it by any measures direct or indirect.

ಆ ಕಾರಣದಿಂದ ಇನ್ನೇನು ಜೂನ್ ತಿಂಗಳು ಬರುತ್ತಾ ಇದೆ. ಇವೊತ್ತು ಕೂಡ ತಾವುಗಳು ಪತ್ರಿಕೆ ಓದಿ ನೋಡಿರಬಹುದು. ವಾಚಕರ ವಾಣಿಯಲ್ಲಿ ಬರೆದಿದ್ದಾರೆ. "ನಾನು ಬಡವನಯ್ಯಾ ನಾನೇನು ಮಾಡಲಯ್ಯ" – ನಿಮಗೆ ಆ ಹಕ್ಕಿಲ್ಲ. ನಿಮಗೆ ಆ ಹಕ್ಕು ಇದ್ದರೆ ಈ ವರ್ಷದಿಂದಲೇ ಶುಲ್ಕ ಎಷ್ಟು ಇರಬೇಕು, ಬೇರೆ ಖಾಸಗಿ ಸಂಸ್ಥೆಗಳು ಏನು ನಡೆಸುತ್ತಾ ಇವೆ, starting from the Kindergarten up to Post – graduation education ಅಲ್ಲಿ ಶುಲ್ಕ ಎಷ್ಟು ಇರಬೇಕೆಂದು ಈ ತರಹ ನೀತಿ ನಿಯಮಗಳನ್ನು ಮಾಡಬಹುದೇ ಹೊರತು, ಯಾರು ಶಾಲೆ – ಕಾಲೇಜುಗಳನ್ನು ನಡೆಸುತ್ತಾ ಇದ್ದಾರೆ, ಬೇರೆ ಯಾವುದೇ ರೀತಿಯಾದಂಥ ಕ್ಯಾಪಿಟೇಷನ್ ಶುಲ್ಕ ಇಲ್ಲದೇ ಇರುವ ಹಾಗೆ ನೋಡಿಕೊಳ್ಳುವ ಜವಾಬ್ದಾರಿಯು ನಿಮ್ಮ ಮೇಲಿದೆ. ಇಲ್ಲ ಅಂದರೆ You can expect a spate of writ petitions before this High Court starting from admission, questioning the admission procedures in different institutions, starting from Kindergarten up to all the Medical Colleges and the Engineering Colleges in this State.

ಅಧ್ಯಕ್ಷರು:– ಇವೊತ್ತು ವಿದ್ಯಾ ಇಲಾಖೆಯ ಬಗ್ಗೆ ಚರ್ಚೆಯೂ ಕೂಡ ಇದೆ. ಆಗ ತಾವು ಇದರ ಬಗೆಗೆ ಪ್ರಸ್ತಾಪಿಸಬಹುದು.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ.

ಅಧ್ಯಕ್ಷರು:– ನಾನು ಎದ್ದು ನಿಂತಾಗ ತಾವುಗಳು ಗಮನಕೊಟ್ಟು ಕೇಳಬೇಕು. ಈಗಾಗಲೇ ನಾನು 20 ನಿಮಿಷಗಳ ಕಾಲಾವಕಾಶವನ್ನು ಕೊಟ್ಟಿದ್ದೇನೆ. ಇವೊತ್ತು ಮಧ್ಯಾಹ್ನ ಚರ್ಚೆ ಇದೆ. ಆಗ ಸವಿಸ್ತಾರವಾಗಿ ಈ ವಿಚಾರವನ್ನು ಪ್ರಸ್ತಾವನೆ ಮಾಡಬೇಕು. ಈಗ ಗಮನ ಸೆಳೆಯುವ ಸೂಚನೆಗಳು.

ಶ್ರೀ ಸಿ. ಬೈರೇಗೌಡ:- ಈ ಪ್ರಸ್ತಾವನೆಗೆ ರುಜು ಮಾಡಿದವರಲ್ಲಿ ನಾನೂ ಕೂಡ ಒಬ್ಬ. ದಯವಿಟ್ಟು ನಾನು ತಮ್ಮಲ್ಲಿ ಅವಕಾಶ ಕೋರುತ್ತೇನೆ.

ಯಾರು\ ಸಹಿ ಮಾಡಿದ್ದಾರೆ ಅದರಲ್ಲಿ ಕೆಲವರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ನನಗೆ ಅವಕಾಶವನ್ನು ಕೊಡದೆ ಇದ್ದರೆ ಹೇಗೆ ?

ಅಧ್ಯಕ್ಷರು:- ತಮ್ಮ ಪಕ್ಷದವರಿಗೆ ಕೊಟ್ಟಿದ್ದೇನೆ. ಎಲ್ಲರಿಗೂ ಕೊಡಬೇಕು ಎಂದು ಇಲ್ಲ, ಎಷ್ಟು ಸಮಯದ ನಿಗದಿ ಇದೆ ಅದನ್ನು ನೋಡಬೇಕು.

ಶ್ರೀ ಸಿ. ಬೈರೇಗೌಡ:- ನನಗೆ ಅವಕಾಶ ಕೊಡದೇ ಇದ್ದರೆ ಹೇಗೆ ?

ಅಧ್ಯಕ್ಷರು:- ತಾವು ಇಲಾಖೆಯ ಬೇಡಿಕೆಯ ಬಗ್ಗೆ ಮಾತನಾಡುವಾಗ ಸಾಕಷ್ಟು ಮಾತನಾಡಿ.

ಶ್ರೀ ಸಿ. ಬೈರೇಗೌಡ:- ಇಲಾಖೆಯ ಬೇಡಿಕೆಯ ಮಾತನಾಡುವಾಗ ಎಲ್ಲಾ ವಿಷಯವನ್ನು ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು:- ಆಗ ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ:- ಪ್ರಾಥಮಿಕ ವಿದ್ಯಾಭ್ಯಾಸದ್ದು, ಮಾಧ್ಯಮಿಕ ವಿದ್ಯಾಭ್ಯಾಸದ್ದು ಇವುಗಳೆಲ್ಲದರ ಬಗ್ಗೆ ಮಾತನಾಡಬೇಕಾಗುತ್ತದೆ. ಇಲಾಖೆಯ ಬಗ್ಗೆ ಮಾತನಾಡುವುದು ಅಂದರೆ ಸಮುದ್ರದಷ್ಟು ಆಗುತ್ತದೆ. ಇದರ ಬಗ್ಗೆ ಅಷ್ಟು ವಿಸ್ತಾರವಾಗಿ ಮಾತನಾಡುವುದು ಅವಶ್ಯಕತೆ ಇಲ್ಲ. ಇದು ಬಹಳ ಪ್ರಾಮುಖ್ಯವಾಗಿದೆ. ನಾನು ಇದರ ಬಗ್ಗೆ ಹೆಚ್ಚಿಗೆ ಹೊತ್ತು ಮಾತನಾಡುವುದಕ್ಕೆ ಹೋಗುವುದಿಲ್ಲ. 5 ನಿಮಿಷ ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ನಾನು ನಿಮಗೆ ನಿನ್ನೆ ನಿಯಮ 311ರ ಕೆಳಗೆ ಒಂದು ನೋಟೀಸನ್ನು ಕೊಟ್ಟಿದ್ದೆ.

ಶ್ರೀ ವೈ.ಕೆ. ರಾಮಯ್ಯ:- ಸರ್ಕಾರದ ಪ್ರತಿಕ್ರಿಯೆ ಆದರೂ ಬರಲಿ.

ಅಧ್ಯಕ್ಷರು:- ತಮಗೆ ಅವಕಾಶವನ್ನು ಮಾಡಿಕೊಡುತ್ತೇವೆಂದು ಹೇಳಿ ಮಾಡಿಕೊಟ್ಟೆ.

ಶ್ರೀ ವೈ.ಕೆ. ರಾಮಯ್ಯ:- ಸರ್ಕಾರದ ಪ್ರತಿಕ್ರಿಯೆಯನ್ನು ಅವರು ಹೇಳುವುದಕ್ಕೆ ಹೇಳಿ.

ಅಧ್ಯಕ್ಷರು:- ಬೇಕಾದರೆ ಹೇಳಲಿ.

ಶ್ರೀ ಸಿ. ಬೈರೇಗೌಡ:- ನನ್ನ ಮೇಲೆ ನಿಮಗೆ ದಯೆ ಇಲ್ಲವಲ್ಲಾ, ನಾನು ಏನು ಮಾಡಲಿ ?

ಅಧ್ಯಕ್ಷರು:- ತಮ್ಮ ಮೇಲೆ ಎಲ್ಲರಿಗಿಂತಲೂ ಹೆಚ್ಚು ದಯೆ ಇದೆ. ತಾವು ಕೋಲಾರ ಕಡೆಯಿಂದ ಬಂದಿದ್ದೀರಿ ಎಂದು ನಿಮ್ಮ ಮೇಲೆ ಜಾಸ್ತಿ ದಯೆ ಇದೆ.

ಶ್ರೀ ಸಿ. ಬೈರೇಗೌಡ:- ನೀವು ಹೇಳುವ ಬಾಯಿ ಮಾತಿನಿಂದ ನಾನು ತೃಪ್ತಿಯಾಗಬೇಕು.

ಶ್ರೀ ಎಸ್. ಎಂ. ಯಾಹ್ಯ (ಉನ್ನತ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೇ, Nalini V/s State of Karnataka ಈ ತೀರ್ಪಿನ ಬಗ್ಗೆ ಮಾನ್ಯ ರಾಮಯ್ಯನವರು ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಈ ತೀರ್ಪಿನ ವಿಚಾರದಲ್ಲಿ ಇಲ್ಲಿ ಮಾತನಾಡಲಿಕ್ಕೆ ನನಗೆ ಸಾಧ್ಯವಿಲ್ಲ. ಪ್ರೊ: ಎಂ.ಡಿ. ನಂಜುಂಡ ಸ್ವಾಮಿಯವರು ಹೇಳಿದ ಹಾಗೆ ಇದು ಲಾ, the law laid by he Supreme Court

and the State Government has no other option than to meticulously follow the law laid by the Supreme Court.

ಆ ಕಾರಣದಿಂದ ಸರ್ಕಾರದವರು ಸುಪ್ರೀಂ ಕೋರ್ಟಿನ ತೀರ್ಪು ಏನಿದೆ ಇದೆ ಅದರ ಪ್ರಕಾರ ಈ ವಿಚಾರದಲ್ಲಿ ಈಗಲೇ ರೂಲ್ಸ್ ಮಾಡಿದ್ದೇವೆ. ಕ್ಯಾಬಿನೆಟ್ ಈ ರೂಲ್ಸ್‌ಗೆಲ್ಲಾ ಒಪ್ಪಿಕೊಂಡಿದೆ. ಅದರ ಪ್ರಕಾರವೇ ನಾವು ನಡೆದುಕೊಳ್ಳಬೇಕಾಗಿದೆ. ಅದಕ್ಕೆ ಇಲ್ಲಿ ಹೆಚ್ಚು ವಾದವಿವಾದಕ್ಕೂ ಅವಕಾಶ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಸುಪ್ರೀಂ ಕೋರ್ಟ್ ಹೇಳಿದ ಮೇಲೆ ಸಂವಿಧಾನದ ಪಾಯಿಂಟ್ ಮತ್ತು ಮಾನ್ಯ ರಾಮಯ್ಯನವರು ಹೇಳಿದ ಪಾಯಿಂಟ್ ಇದೆಲ್ಲಾ ಅಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಹೇಳಿ ತೀರಿಹೋಗಿದೆ. ಅವರು ತೀರ್ಪನ್ನು ಕೊಟ್ಟಿದ್ದಾರೆ. ಆ ತೀರ್ಪಿನ ಪ್ರಕಾರ ನಾವು ಕೆಲಸ ಮಾಡಬೇಕಾಗಿದೆ. ಅದು ಸರ್ಕಾರದ ನೀತಿಯಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿ 5 ಜನ ಜಡ್ಜಸ್‌ಗಳು ಹೇಳಿದಂತಹ ಜಡ್ಜ್‌ಮೆಂಟ್ ಬಿಟ್ಟು ನಾವು ಏನೂ ಮಾಡಲಿಕ್ಕೆ ಬರುವುದಿಲ್ಲ. ಅವರು ಯಾವ ರೀತಿ ಹೇಳಿದ್ದಾರೆ. strictly we will follow the judgement of the Supreme Court.

ಶ್ರೀ ವೈ.ಕೆ. ರಾಮಯ್ಯ:– ಹಳ್ಳಿ ಮಕ್ಕಳನ್ನು ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜಿನಿಂದ ದೂರ ಇಡುವಂತಹ ತೀರ್ಮಾನವನ್ನು ಈ ಸರ್ಕಾರ ತೆಗೆದುಕೊಂಡಿದೆ.

ಶ್ರೀ ಸಿ. ಬೈರೇಗೌಡ:– ಕೆಲವು ನೇಮಕಾತಿಗಳಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂಥ ವಿದ್ಯಾರ್ಥಿಗಳಿಗೆ ಮಾರ್ಕ್ಸ್ ಅನ್ನು ಕೊಡುತ್ತಿದ್ದೀರಿ, ಆ ಪ್ರಿನ್ಸಿಪಲ್ ಅನ್ನು ಅಡ್ಮಿಷನ್ ಸಮಯದಲ್ಲಾದರೂ ಅನುಸರಿಸಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜ್‌ಗೆ ಗ್ರಾಮಾಂತರ ಪ್ರದೇಶದಿಂದ ಬರತಕ್ಕಂಥ ವಿದ್ಯಾರ್ಥಿಗಳಿಗೆ ಮಾರ್ಕ್ಸನ್ನು ಕೊಟ್ಟು ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯ:– ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಯಾವ ರೀತಿಯಲ್ಲಿ ಇದೆ. ಅದೇ ರೀತಿ ಮಾಡಬೇಕಾಗುತ್ತದೆ. ಅದನ್ನು ಮೀರಿ ಹೋಗಲಿಕ್ಕೆ ಬರುವುದಿಲ್ಲ. ಅದಕ್ಕಾಗಿ ನಾವು ಈ ರೂಲ್ಸನ್ನು ಮಾಡಿದ್ದೇವೆ. ಆ ರೂಲ್ಸ್ ನಿಮ್ಮ ಎದುರು ಬರುತ್ತದೆ. ಆ ರೂಲ್ಸ್ ಪ್ರಕಾರವೇ ನಾವು ಮಾಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ:– ಹಳ್ಳಿಯಲ್ಲಿ ಹುಟ್ಟಿರುವ ಮಕ್ಕಳನ್ನು ದನ ಕಾಯುವುದಕ್ಕೆ ಬಿಟ್ಟು ಬಿಡುತ್ತೀರಾ ? ದನ ಕಾಯಿಕೊಂಡು ಇರಬೇಕು ಎಂದು ಹೇಳುತ್ತೀರಾ ? ಹಳ್ಳಿಯಿಂದ ಬರತಕ್ಕಂಥ ಹುಡುಗರು ಏನಾಗಬೇಕು ? ಅವರ ಗತಿ ಏನು ? ಹಳ್ಳಿಯಲ್ಲಿ ಎಷ್ಟು ಜನ ಮಕ್ಕಳಿಗೆ ಎಷ್ಟು ಜನ ಉಪಾಧ್ಯಾಯರನ್ನು ಕೊಡುತ್ತಿದ್ದೀರಿ, ಅವರ ಗತಿ ಇವತ್ತಿನ ದಿವಸ ಏನಾಗಬೇಕು ? 150–200 ಮಕ್ಕಳು ಇದ್ದರೆ, ಅವರಿಗೆ ಒಬ್ಬ ಉಪಾಧ್ಯಾಯರು ಇಲ್ಲ. ವರ್ಷಪೂರ್ತಿ ಶಾಲೆಗಳ ಬಾಗಿಲನ್ನು ತೆಗೆಯುವುದಿಲ್ಲ. ಬೀಗ ಹಾಕಿರುತ್ತೀರಿ, ಅವನನ್ನು ತೆಗೆದುಕೊಂಡು ಬಂದು ಇವತ್ತು ಸೋಫಿಯಾ ಸ್ಕೂಲ್‌ನಲ್ಲಿ ಓದತಕ್ಕಂಥವರ ಜೊತೆಗೆ ಹಾಕಿ ನೀವು ಮೆರಿಟ್ ಎಂದು ಮಾಡಿದರೆ ಈ ಮಕ್ಕಳ ಗತಿ ಏನಾಗಬೇಕು.

MR. SPEAKER:– No more discussion. I am not allowing it.

ಶ್ರೀ ಎಂ. ನಾರಾಯಣ ಸ್ವಾಮಿ:– ಮಂಡಲ್ ಪಂಚಾಯತಿ ವಿಚಾರದಲ್ಲಿ ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಅದನ್ನು ಏತಕ್ಕೆ ಫಾಲೋ ಮಾಡಲಿಲ್ಲ ?

ಅಧ್ಯಕ್ಷರು:– ತಾವು ಏನಾದರೂ ಪ್ರಸ್ತಾವನೆಯನ್ನು ಮಾಡಬೇಕಾದರೆ ಮೊದಲು ನನಗೆ ತಿಳಿಸಿ

ಎಂದು ಹೇಳಿದ್ದೇನೆ. ತಾವು ಮಂಡಲ್ ಬಗ್ಗೆ ಪ್ರಸ್ತಾಪ ಮಾಡುವುದಾದರೆ ನಾನು ಅವಕಾಶವನ್ನು ಕೊಡುವುದಿಲ್ಲ. ಆ ವಿಷಯದ ಬಗ್ಗೆ ನಿನ್ನೆ ನನಗೆ ಬಂದು ಹೇಳಿದ್ದರು. ಬಂದು ಹೇಳಿದ ನಂತರ 15–20 ನಿಮಿಷ ಮಾತನಾಡಿ ಎಂದು ಅವಕಾಶವನ್ನು ಕೊಟ್ಟಿದ್ದೇನೆ. ತಾವು ಕುಳಿತುಕೊಳ್ಳಿ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ನಾನು ನಿಯಮ 311ರ ಕೆಳಗೆ ತಮ್ಮ ಅಪ್ಪಣೆಯನ್ನು ಕೋರಿ ಒಂದು ನೋಟೀಸ್ ಕೊಟ್ಟಿರುತ್ತೇನೆ. ಮಾನ್ಯ ಸಚಿವರಿಗೂ ನೋಟೀಸ್ ಕಾಪಿಯನ್ನು ಕಳುಹಿಸಿರುತ್ತೇನೆ. ನನ್ನ ದೃಷ್ಟಿಯಿಂದ ಇದು ನಿಯಮ 311ರ ಕೆಳಗೆ ಬರುವ ಅವಶ್ಯಕತೆಯೂ ಇರಲಿಲ್ಲ. ಆದರೆ ಮೊನ್ನೆ ಸದನದಲ್ಲಿ ಮಾನ್ಯ ವಿರೋಧ ಪಕ್ಷದ ಉಪನಾಯಕರಾದಂಥ ಸಿಂಧ್ಯರವರು ಈ ವಿಷಯವನ್ನು ವಸತಿ ಸಚಿವರ ವಿರುದ್ಧ ರೈಸ್ ಮಾಡಿದಾಗ ಮಾನ್ಯ ಉಪ ಮುಖ್ಯಮಂತ್ರಿಗಳು in proper form ಕೊಡಿ ಎಂದು ಹೇಳಿದ್ದರು. ನಾನು ಒಂದು ಹೆಜ್ಜೆ ಮುಂದೆ ಹೋಗುತ್ತಿದ್ದೇನೆ. ಅವರ ವಿರುದ್ಧ ಅಲಿಗೇಷನ್ ಮಾಡಲು ಇಚ್ಛೆ ಇಲ್ಲ. ಅಥವಾ ಯಾವುದೇ ನಡತೆಯ ಬಗ್ಗೆ ಅಲಿಗೇಷನ್ ಮಾಡಲು ಇಚ್ಛೆ ಇಲ್ಲ. ಆದರೆ ಸಚಿವರು ಅವರು ಯಾವ ತರಹದ ಜನ ಇರಬೇಕು, ಯಾರ ವಿರುದ್ಧ ಕ್ರಿಮಿನಲ್ ಕೇಸಸ್ ಇವೆ, ಅವರು ಸಚಿವರಾಗಿ ಮುಂದುವರೆದರೆ ರಾಜ್ಯಕ್ಕೆ ಮತ್ತು ನಿಮ್ಮ ಸರ್ಕಾರಕ್ಕೆ ನಮಗೆಲ್ಲರಿಗೂ ಘನತೆ ತರುತ್ತದೆಯೇ ? ಇದರ ಬಗ್ಗೆ ತಾವು ವಿಚಾರ ಮಾಡಬೇಕಾಗಿದೆ. ಮಾನ್ಯ ಸಚಿವರ ಬಗ್ಗೆ ಪತ್ರಿಕೆಯಲ್ಲಿ ಬಂದಿರುವುದನ್ನು ಮಾತ್ರ ಹೇಳುತ್ತಿದ್ದೇನೆ. ಮೊನ್ನೆ ಪ್ರಸ್ತಾಪ ಮಾಡುವಾಗ politicaly motivated; ಮಾನ್ಯ ಬೊಮ್ಮಾಯಿಯವರನ್ನು ನಾನು ಸೋಲಿಸಿದ್ದೇನೆ. ಹಾಗಾಗಿ ಈ ರೀತಿ ಕ್ಯಾರೆಕ್ಟರ್ ಅಸಾಸಿನೇಷನ್ ನಡೆಯುತ್ತಿದೆ ಎಂದು ಹೇಳಿದ್ದಾರೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಯಾರ Character assassination ಮಾಡುವುದೂ ನಮ್ಮ ಪಕ್ಷದ ಉದ್ದೇಶ ಅಲ್ಲ, ಗುರಿಯೂ ಅಲ್ಲ, ಅದನ್ನು ಮಾಡಬಾರದು. ಅದನ್ನು ಮಾಡಿದರೆ ಪಾಪದ ಕೆಲಸ ಆಗುತ್ತದೆ. ಆದರೆ ಮಾನ್ಯ ಸಚಿವರು ನಿನ್ನೆ ಮಾತನಾಡುವಾಗ ಏನು ಹೇಳಿದ್ದಾರೆ. "Further he said that no complaint had been filed under the Dowry Prohibition Act either against him or his son before the police or in Court of law. The records before the Magistrate at Nellore also did not show that any such complaint had been filed" ನನ್ನ ವಿರುದ್ಧ ಯಾವುದು ನೆಲ್ಲೂರ್ ಕೋರ್ಟಿನಲ್ಲಿ ದಾಖಲು ಆಗಿಲ್ಲ, ಕೇಸೇ ಇಲ್ಲ ಎಂದು ಹೇಳಿದ್ದಾರೆ. ನನಗೆ ಬಹಳ ಆಶ್ಚರ್ಯವಾಗುತ್ತದೆ. ಮಾನ್ಯ ಗೋಪಿನಾಥ್ ಸಾಂಡ್ರರವರು ಇಷ್ಟೊಂದು ಸುಳ್ಳನ್ನು ಹೇಳುವುದಕ್ಕೆ ಏತಕ್ಕೆ ಪ್ರಯತ್ನ ಮಾಡಿದರು, ಏಕೆಂದರೆ ತಮ್ಮ ವಿರುದ್ಧ ಈ ಕೇಸ್ ದಾಖಲು ಆಗಿದೆ. ನಾನು ನಿಯಮ 311ರ ಕೆಳಗೆ ನೋಟೀಸ್ ಕೊಟ್ಟಿದ್ದೇನೆ. ಅದರ ಕಾಪಿಯನ್ನು ನಾನು ಹಾಕಿದ್ದೇನೆ. ಬೇಕಾದರೆ ಅದನ್ನು ನಾನು ಸರ್ಕಾರದ ಗಮನಕ್ಕೆ ಕಳುಹಿಸುತ್ತಿದ್ದೇನೆ. I have to suspect the bona–fides now. ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಕೇಸ್ ದಾಖಲಾಗಿಲ್ಲ ಎಂದು ಹೇಳುತ್ತಿದ್ದಾರೆ ಅದರ copy of the complaint. ಅದನ್ನು ನಾನು ತಮಗೆ ಕಳುಹಿಸುತ್ತಿದ್ದೇನೆ. ತಾವೇ ಇದನ್ನು ವೆರಿಫೈ ಮಾಡಿ, ಇದು ಕಂಪ್ಲೆಂಟ್ ಇದೆಯೋ ಇಲ್ಲವೋ ಇದರ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ. Under Section 637 of the Dowry Prohibition Act and under Section 190 of the Criminal Procedure Code, a complaint has been filed in the Second Additional Judicial Magistrate First Class, Nellore, Andhra Pradesh against Gopinath Sandra and his son.

ಅದರ ಪ್ರಕಾರ divorce petition ಆಗಿದೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. They are all internal personal matters. I don't want to say anything about

that. ಆದರೆ ಮಾನ್ಯ ಸಾಂಡ್ರರವರು ನನಗೆ ಅದು ಗೊತ್ತೇ ಇಲ್ಲ, ನನ್ನ ಮೇಲೆ ಕೇಸ್ ದಾಖಲಾಗಿಲ್ಲ ಎಂದು ಹೇಳಿದ್ದಾರೆ. ಇದು ಶುದ್ಧ ಸುಳ್ಳು, ಇವತ್ತು ನಾನು ಚಾಲೆಂಜ್ ತೆಗೆದುಕೊಳ್ಳುತ್ತೇನೆ.

ಇವರ ಪರವಾಗಿ ರಂಗನಾಥ್ ಎನ್ನುವ ಒಬ್ಬ ಫೇಮಸ್ ಕ್ರಿಮಿನಲ್ ಅಡ್ವೊಕೇಟ್ is appearing in this case. ಇಷ್ಟೇ ಅಲ್ಲ. ಈ ಕೇಸ್‌ನಲ್ಲಿ ಇನ್ನು ಪ್ರೊಸಸ್ ಇಷ್ಯೂ ಆಗಿಲ್ಲ.

'He is a Minister in Karnataka Government. So, whether permission of Karnataka Government is required before the issue of the process?' ಎಂದು ಮ್ಯಾಜಿಸ್ಟ್ರೇಟ್‌ರವರು ಕಾಂಪ್ಲನೆಂಟ್ ವಕೀಲರನ್ನು ಕೇಳಿದ್ದಾರೆ. ಆ ಸ್ಟೇಜ್‌ನಲ್ಲಿ ನೆಲ್ಲೂರ್ ಕೋರ್ಟ್‌ನಲ್ಲಿ ಇದೆ.

ನೆಲ್ಲೂರು ಕೋರ್ಟಿನಲ್ಲಿ ಕೇಸು ಇಲ್ಲ ಎಂದು ಯಾವ ಚಾಲೆಂಜ್ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಕೇಸ್ ದಾಖಲು ಆಗಿಲ್ಲ ಎಂದು ಹೇಳುವುದು ಶುದ್ಧ ಸುಳ್ಳು ಮಾತು. ಇವತ್ತು ಅಲ್ಲಿ ಕೇಸ್ ಇದೆ. ರಂಗನಾಥ್ ಎಂಬ ಅಡ್ವೋಕೇಟ್ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಡೈವರ್ಸ್ ಪಿಟಿಷನ್ ಯಾವಾಗ ಫೈಲ್ ಆಯಿತು ಎಂದರೆ, ಮಾರ್ಚಿಯಲ್ಲಿ ಸಾಂಡ್ರಾರವರು ಮಂತ್ರಿಯಾದ ನಂತರ ಇದು ಆಯಿತು. ಬುದ್ಧ್ಯಾಪೂರ್ವಕವಾಗಿ ಇವರನ್ನು ತೊಂದರೆಯಲ್ಲಿ ತರಬೇಕು, ಕಷ್ಟದಲ್ಲಿ ತರಬೇಕು. ಇವರನ್ನು ಡಿಫೇಮ್ ಮಾಡಬೇಕು ಎಂದಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ವಿರೋಧಪಕ್ಷದ ನಾಯಕರು Dowry Prohibition Act ಪ್ರಕಾರ ಕಂಪ್ಲೆಂಟ್ ದಾಖಲಾಗಿದೆ ಎಂದು ಹೇಳಿದರು.

I want to know whether the Hon'ble Leader of the Opposition is prepare to say positively that a case of that nature is pending before the Court of Nellore? Positively whether such a case is pending before the Court?

SRI R.V. DESHPANDE:– This case has been filed by Smt. Srisha, Daughter – in – law of the Hon'ble Minister.

SRI HARNAHALLI RAMASWAMY:– Because we respect you very highly. According to the best of information and knowledge we have, no such case is pending there. Verify ಮಾಡಿ, ತಾವು ಹೇಳಿದ್ದುದು ಇದ್ದರೆ ನಾವು ಒಪ್ಪಿಕೊಳ್ಳೋಣ.

ಶ್ರೀ ಆರ್.ವಿ. ದೇಶಪಾಂಡೆ:– ಒಂದು ಮಾತನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಕೇಸ್ ದಾಖಲಾಗಿಲ್ಲ ಎಂದು ಹೇಳುತ್ತಿದ್ದಾರೆ. The petition has been filed, but the process has not been issued. The Hon'ble Magistrate, there, at Nellore, is standing on a formality; he is asking the complainant Lawyer, to convince him whether permission of the Government of Karnataka is required. It is at this stage.

ಪ್ರೊಸೆಸ್ ಇಷ್ಯೂ ಆಗಿಲ್ಲ ಅಂತ ಹೇಳಿಲ್ಲ. He has been cited there as an accused. I am subject to correction. But, I have an information and I am bringing it to the notice of the House.

ಈಗ ಕಂಪ್ಲೆಂಟ್ ಫೈಲ್ ಆಗಿದ್ದು ಮಾರ್ಚಿನಲ್ಲಿ, ಇಲ್ಲಿ ಒಂದು ಪ್ರಶ್ನೆ ನಿರ್ಮಾಣವಾಗಬಹುದು.

ಅವರನ್ನು ಕೆಳಗೆ ತಳ್ಳಲಿಕ್ಕೆ ಇಂಥ ಕಂಪ್ಲೈಂಟ್ ಫೈಲ್ ಮಾಡಿದ್ದಾರೆ ಎಂಬುದು ಆದರೆ, 1988 ರಲ್ಲಿ ಮದುವೆ ಆದ ನಂತರ 1991 ರಲ್ಲಿ ಡೈವರ್ಸ್ ಪಿಟಿಷನ್ ಫೈಲ್ ಆಗಿದೆ.

The marriage took place in 1988, and the Diverce petition has been filed in the year 1991. The Divorce petition has been filed by Smt. Srisha. She has made several charges and allegations against her husband and also against the father – in – law and others. She talks about illtreatment, she talks about the dowry. When the petition was filed during the year 1991, Mr. Sandra was not the Minister; there was no cause to write that in that petition. Counter has been filed. That is, C.P. No. 39/91, Counter filed by Mr. Uday Sandra, where the Hon'ble Minister is not a party. It is just between the wife and the husband. I do not want to go into the merits of the case. I would read some of the portions.

"The petitioner was compelled to lead a miserable life at the hands of the respondents and the inmates of the respondents family. That the respondents and his father harrassed the petitioner for bringing huge sums of dowry from the father of the petitioner and that the petitioner was not responding to the demands and illtreatment of the petitioner was done is false".

This is what they say in the petition. So, in 1991 in the petition itself a reference has been made that the dowry was taken. Today, the Hon'ble Sri Sandra is a Minister now.

1991ಕ್ಕೆ ಇದು ಅಲಿಗೇಷನ್ ಮಾಡುವ ಅವಶ್ಯಕತೆ ಇರಲಿಲ್ಲ. ಅಷ್ಟೇ ಅಲ್ಲ, ಮಾನ್ಯ ಅಧ್ಯಕ್ಷರೇ, In the further counter, they deny that the petitioner was compelled to leave the House of the respondents leaving 30 sovereigns of gold and jewellery in the house of respondents under the threat of return without amount of dowry is also false. They have denied.

ಇವತ್ತು ನಾನು ಏನು ಹೇಳುತ್ತೇನೆ ಎಂದರೆ, ಮಾರ್ಚ್‌ಯಲ್ಲಿ ಇಂಥ ಒಂದು ಡೈವರ್ಸ್ ಪಿಟಿಷನ್ ಹಾಕಿ ಇವರು ಕಂಪ್ಲೈಂಟ್ ಮಾಡಿದ್ದು ಹೇಳಬಹುದು. ಐದು ವರ್ಷ ಮಲಗಿದ್ರೇನ್ರಿ ಎಂದು ಪ್ರಶ್ನೆಯನ್ನು ಕೇಳಬಹುದು. ಅದಕ್ಕೆ ಉತ್ತರ ಇಲ್ಲ.

All these references have come in 1991. So, what I say is, marriage has taken place in 1988 and the divorce petition has been filed after 5 years. All these averments have been given in the petition and they have been denied by the son of the Hon'ble Minister Sri Sandra. So, the Hon'ble Minister legally and morally is bound to resign. It is a serious offence because under the Dowry prohibition Act. It is a social evil. Your own party

leader late Sri Sanjay Gandhi had started a compaign once opposing dowry. He started anti–dowry campaign. ನಾವೆಲ್ಲಾ ಬೆಂಬಲ ಕೊಟ್ಟೆವು. therefore, I would like to take it clear that there is no political motivation behind my asking the resignation of the Hon'ble Minister. I urge the Hon'ble Chief Minister, through you Sir, to take action against the Hon'ble Minister by dismissing him or asking him to resign from the Cabinet in the interest of dignity and glory of the State. So many women organisations have also told that they are supporting the campaign. Do not allow that to happen. I request the Hon'ble Minister Mr. Sandra not to embarass the Chief Minister. I request him to co–operate with the Chief Minister and resign from the Cabinet. I know, though the Chief Minister is convinced, it has become difficult for him, to take a decision. In the interest of public life, one has to resign. If you come out of this, you come with colours and with more resign. If you come out of this, you come with colours and with more responsibility. We will welcome you. There is a criminal case pending against you in 11/78 and 88 in the High Court. There is a stay. You have stayed the proceedings. But, the criminal case is pending against you. There is a hanging sword on you. Having so many cases about your and you character, I am demanding the resignation. I also request the Chief Minister to verify. P. Suryanarayana, Retired Income tax Officer is the father of this girl Srisha. You can verify it.

ನೀವು ವೆರಿಫೈ ಮಾಡಿದೆ ಎಂದು ಹೇಳಿದಿರಿ,

I tried to contact him. I am giving this phone No. of Sri P. Suryanarayana. The phone no. is 23627. I contacted him yesterday and I wanted to ascertain the truth in it. He explained me some facts; when marriage took place and the other details. I do not want to go into the merits of the case. He said, marriage took place during the year 1988 etc, etc, Subsequently divorce petition has been filed and we have moved the court under the Dowry prohibition Act and Anti–Dowry Act. He has also said that people from Mr. Sandra's side have already gone there and they are pressurising the Plaintiff and her father to compromise and he was told that on Monday, the 22nd, they are coming with cash of Rs. 4 lakhs to settle the matter. This was told to me yesterday by the father of the girl. I have given the details. You verify it. If the facts are true, then the Chief Minister will have to dismiss him from the Cabinet or ask him to resign. Before doing so, I also request the Hon'ble Speaker to give an opportunity to Mr. Sandra to explain. Let him say whatever he wants to say. But, one thing is sure that I am not interested in the character assassination of Mr. Sandra. I am not interested in that. ಈ ಮನೆಯಲ್ಲಿ ನಾವು

ಬೇಜವಾಬ್ದಾರಿಯಾಗಿ ಆಪಾದನೆ ಮಾಡುವುದಕ್ಕೆ ಆಗುವುದಿಲ್ಲ. ನಾವೂ ಸಹ ಜವಾಬ್ದಾರಿ ಸ್ಥಾನದಲ್ಲಿ ಇದ್ದೆವು. ನಮಗೂ ಸಹ ಸಮಯ ಬರಬಹುದು. ಆದರೆ ನಾನು ಇದನ್ನು ಕೇವಲ ಪಬ್ಲಿಸಿಟಿ ಸಲುವಾಗಿ ಅಥವಾ ಪ್ರೆಸ್‌ಗೆ ಹೋಗುವ ಸಲುವಾಗಿ ಮಾಡುತ್ತಿಲ್ಲ.

I am bringing these facts before this House to uphold the dignity of this House and the dignity in public life. I am charging this with all responsibility. I am not irresponsible, nor am I interested in publicity and all that. It is a fact and I am convinced in doing so. If I am wrong, I am also subject to correction. I am prepared for it. I have given the telephone No. also. Let your government verify. If you are convinced that a criminal case is pending, then you can take action. Even there is a pressure for compromising. Under these circumstances, public morality is very important. Legal consequences are different. That is a different matter altogether. Smt. Srisha has filed a divorce petition, she has filed a criminal case; that is a different matter. And I do not want to go into the details of it; I do not want to go to the merits of the case. I am nobody to say that. God only knows the truth. But, today the case is pending. Merits of the case is different and the results of the case is also different. He may be acquitted; he may be convicted or the case itself may be dismissed. That apart; merits of the case apart. Moral grounds are important. Morality is important. The charge is so grave that he has to gracefully quit. Merits of the case is apart. Hearings of the court will be there and there will be final judgement after sometime. What is true, Mr. Sandra knows or the God only knows. But, the facts are before us. There is a criminal case pending and serious attempts have been made for compromise. These people are there and they are pressurising for a compromise. This has also been brought to the notice of the House. You can very well verify and as such I demand his resignation. Before it, I would also request that an opportunity may be given to the Hon'ble Minister also; let him say whatever he wants to say. The House should not go without his say.

2.40 ಪಿ.ಎಂ.

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ):– ಮಾನ್ಯ ಅಧ್ಯಕ್ಷರೇ, ನಾವೆಲ್ಲ ಸೈನ್ ಮಾಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿ, ಮಾನ್ಯ ವಸತಿ ಸಚಿವರು ರಾಜೀನಾಮೆ ನೀಡಬೇಕು, ನೀಡದಿದ್ದರೆ ಮುಖ್ಯಮಂತ್ರಿಗಳು ಅವರನ್ನು ವಜಾ ಮಾಡಬೇಕು ಎಂಬ ಮಾತುಗಳನ್ನು ಹೇಳಿದ್ದಾರೆ. ಇದು ವೈಯಕ್ತಿಕವಾದಂಥ ಕಾರಣದಿಂದ ಅಲ್ಲ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಅದೇ ಮಾತನ್ನು ನಾನು ಪುನಃ ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜಕಾರಣ ಜೀವನದಲ್ಲಿ ಎಲ್ಲಾ ಪಕ್ಷಗಳು ಒಪ್ಪುತ್ತೇವೆ. ಏನು, ಈ ದೇಶದಲ್ಲಿ ಈ ಸಾರ್ವಜನಿಕ ಕ್ಷೇತ್ರದಲ್ಲಿರುವಂಥ ವ್ಯಕ್ತಿಗಳು ಅತ್ಯಂತ ಪ್ರಾಮಾಣಿಕರಾಗಿರಬೇಕು ಮತ್ತು ಯಾವುದೇ ಕ್ರಿಮಿನಲ್

ಸ್ವರೂಪದ ಆಪಾದನೆಗಳನ್ನು ಒಳಗೊಂಡಂಥ ಜನರು ಇರಬಾರದು. ಎಲ್ಲದಕ್ಕಿಂತ ಹೆಚ್ಚಾಗಿ ರಾಜಕಾರಣದಲ್ಲಿ ಯಾರು ಅಧಿಕಾರದಲ್ಲಿದ್ದಾರೆ. ಆ ವ್ಯಕ್ತಿಗಳ ಸಂಬಂಧ ಈ ದೇಶದ ಸಮಾಜಘಾತುಕ ವ್ಯಕ್ತಿಗಳ ಜೊತೆ ಏನಾದರೂ ಇದ್ದರೆ ಅಂಥ ಒಂದು ಕೊಂಡಿಯನ್ನು ಕಿತ್ತುಹಾಕಬೇಕು ಎಂಬ ಮಾತನ್ನು ಎಲ್ಲಾ ಪಕ್ಷದ ಜನರು ಎಲ್ಲಾ ವೇದಿಕೆಗಳಲ್ಲೂ ಹೇಳಿದ್ದಾರೆ. ತಮಗೆ ಗೊತ್ತಿದೆ. ಇತ್ತೀಚಿನ ದಿವಸಗಳಲ್ಲಿ ಈ ರಾಜಕಾರಣದಲ್ಲಿರುವಂಥ ವ್ಯಕ್ತಿಗಳ ಸಂಬಂಧ ಈ ಗೂಂಡಾ ಸಂಸ್ಕೃತಿಯನ್ನು ಹೊಂದಿರುವಂಥವರ ಜೊತೆ ಇರುವುದರಿಂದ ದೇಶದ ಭದ್ರತೆ ಮತ್ತು ಸಮಗ್ರತೆಗೆ ಧಕ್ಕೆ ಬರುವಂಥ ಒಂದು ಪರಿಸ್ಥಿತಿ ನಮ್ಮ ರಾಷ್ಟ್ರದಲ್ಲಿ ನಿರ್ಮಾಣವಾಗಿದ್ದರೆ, ಇಂಥ ಪ್ರೋತ್ಸಾಹಕರ ನಡುವಳಿಕೆಗಳು ಏನಿದ್ದಾವೆ, ಅವರು ಯಾವುದೇ ಪಕ್ಷದಲ್ಲಿರಬಹುದು, ಅಂಥ ನಡವಳಿಕೆಗಳು ಇಂಥ ಒಂದು ಪರಿಸ್ಥಿತಿಗೆ ನಮ್ಮನ್ನು ತಂದಿದ್ದಾವೆ ಎಂಬುದನ್ನು ನಾವು ಮೊಟ್ಟಮೊದಲನೆಯದಾಗಿ ಯೋಚನೆ ಮಾಡಬೇಕಾಗಿದೆ. ಅನೇಕ ಸಂದರ್ಭದಲ್ಲಿ ಇದನ್ನು ಖಂಡಿಸಿದರೂ ಸಹಾ ನಮ್ಮ ದಿನನಿತ್ಯದ ನಡವಳಿಕೆಗಳಲ್ಲಿ ಒಂದಲ್ಲ ಒಂದು ಕಾರಣಕ್ಕಾಗಿ ಅದು ಪಕ್ಷ ರಾಜಕಾರಣ ಇರಬಹುದು ಅಥವಾ ಮತ್ಯಾವುದೇ ಗುಂಪಿನ ರಾಜಕಾರಣ ಇರಬಹುದು. ಇಂಥ ಸಣ್ಣ ಕಾರಣಗಳಿಗೋಸ್ಕರ ಅಥವಾ ಅಲ್ಪವಾದಂಥ ರಾಜಕೀಯ ಲಾಭಕ್ಕೋಸ್ಕರ ದೀರ್ಘಾವಧಿ ರಾಷ್ಟ್ರದ ಹಿತವನ್ನು ನಾವು ಮರೆತು ಇಂಥ ಒಂದು ಬವಣೆಗೆ ನಾವು ಒಳಗಾಗಿದ್ದೇವೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಆ ಹಿನ್ನೆಲೆಯಲ್ಲಿ ಇಂಥ ಒಂದು ಪ್ರಕರಣಗಳನ್ನು ತಾವು ನೋಡಬೇಕು, ಮತ್ತು ಮಾನ್ಯ ಮುಖ್ಯಮಂತ್ರಿಗಳಲ್ಲೂ ಸಹ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದನ್ನು ಯಾವುದೇ ಒಂದು ವೈಯಕ್ತಿಕ ಪ್ರತಿಷ್ಠೆ ಎಂದು ತಿಳಿದುಕೊಳ್ಳಬಾರದು. ಸಾರ್ವಜನಿಕ ಜೀವನದಲ್ಲಿ ಸರ್ಕಾರಗಳು ಏನು ಇವೆ, ಆ ಸರ್ಕಾರ ಯಾವುದೇ ಪಕ್ಷದಾಗಿದ್ದರೂ ಸಹ ಆ ಸರ್ಕಾರದ ಪ್ರತಿಷ್ಠೆಯ ದೃಷ್ಟಿಯಿಂದ ಗೌರವದ ದೃಷ್ಟಿಯಿಂದ ಇಂಥ ಒಂದು ನಡವಳಿಕೆಗಳನ್ನು ಅವರು ತಡೆಹಿಡಿಯಬೇಕಾದಂಥದ್ದು ಅವಶ್ಯಕ. ಇವತ್ತಿನ ದಿವಸ ಯಾವುದಾದರೂ ಒಬ್ಬ ವ್ಯಕ್ತಿಯ ಮೇಲೆ ಕ್ರಿಮಿನಲ್ ಸ್ವರೂಪದ, ತೀವ್ರ ಕ್ರಿಮಿನಲ್ ಸ್ವರೂಪದ ಅಪಾದನೆಗಳು ಇದ್ದರೆ ಇಂಥ ವ್ಯಕ್ತಿಗಳು ರಾಜ್ಯದ ಆಡಳಿತದಲ್ಲಿ ಇರಬೇಕೇ ? ಮಂತ್ರಿಯಾಗಿ ಇರಬೇಕೇ ? ಅದು ಪ್ರಶ್ನೆ. ಅಂಥವರು ಇರಲೇಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳಾಗಲಿ, ಸರ್ಕಾರದ ಮುಖ್ಯಸ್ಥರಾಗಲಿ ಅವರು ಪಕ್ಷದವರಾಗಿ ಹೇಳಿದರೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ನಾವು ಯಾವುದನ್ನು ಘೋಷಣೆ ಮಾಡುತ್ತೇವೆ, ಪ್ರತಿಯೊಂದು ಸಂದರ್ಭದಲ್ಲೂ ಸಹ ನಾವು ಏನನ್ನು ಹೇಳುತ್ತೇವೆ, ಅದಕ್ಕೆ ನಿಜವಾಗಿಯೂ ಸ್ವಲ್ಪವಾದರೂ ಮೌಲ್ಯ ಇದ್ದರೆ, ಬೆಲೆ ಇದ್ದರೆ ಇವತ್ತಿನ ದಿವಸ ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಂಥ ಒಂದು ಆಪಾದನೆಯಿಂದ ವಿಮುಕ್ತರಾಗುವವರೆಗೂ ಸಹ ಅವರನ್ನು ನೀವು ರಾಜೀನಾಮೆ ಕೊಡುವಂತೆ ಕೇಳಿ. ಅನಂತರ ಅವರನ್ನು ಮಂತ್ರಿಗಳನ್ನಾಗಿ ಮಾಡಿ. ಆ ಮಂತ್ರಿಗಳನ್ನಾಗಿ ಮಾಡುವುದು ಬಿಡುವುದು ನಿಮ್ಮ ಪಕ್ಷದ ಕೆಲಸ. ಅದಕ್ಕೆ ನಮಗೇನೂ ಸಂಬಂಧ ಇಲ್ಲ. ಆದರೆ ಈ ರಾಜ್ಯದ ವಿಧಾನಸಭೆಯ ವಿರೋಧ ಪಕ್ಷದವರಾಗಿ ಇಂಥ ನಡವಳಿಕೆಗಳು ಬಂದಾಗ ಮಾನ್ಯ ಮುಖ್ಯಮಂತ್ರಿಗಳನ್ನು ಗಮನ ಸೆಳೆದು ಇದರ ಬಗ್ಗೆ ಅವರದೇ ಆದಂಥ ಈ ನೀತಿ ಏನಿದೆ ಅದನ್ನು ನಾವು ಇವತ್ತಿನ ದಿವಸ ಪ್ರಶ್ನೆ ಮಾಡುತ್ತಿದ್ದೇವೆ. ಯಾವ ಒಂದು ವ್ಯಕ್ತಿ ತೀವ್ರವಾದಂಥ ಕ್ರಿಮಿನಲ್ ಸ್ವರೂಪದ ಆಪಾದನೆಗಳನ್ನು ಹೊಂದಿದ್ದಾರೆ, ಅಂಥವರನ್ನು ಈ ಒಂದು ಮಂತ್ರಿಮಂಡಲದಲ್ಲಿ ಇಟ್ಟುಕೊಳ್ಳಬೇಕಾದದ್ದು ಅತ್ಯಂತ ಅವಶ್ಯಕವೇ ? ಈ ದಿಶೆಯಲ್ಲಿ ನೋಡಬೇಕೆ ಹೊರತಾಗಿ ನಾವು ಯಾವುದೇ ದೃಷ್ಟಿಯಿಂದ ವೈಯಕ್ತಿಕವಾದಂಥ ಕಾರಣಗಳಿಗೋಸ್ಕರ ರಾಜೀನಾಮೆ ಕೊಡಬೇಕೆಂಬ ಬೇಡಿಕೆಯನ್ನು ನಾವಾಗಲಿ ನಮ್ಮ ವಿರೋಧ ಪಕ್ಷದ ಯಾವುದೇ ಸದಸ್ಯರಾಗಲೀ ಇವತ್ತಿನ ದಿವಸ ಇಟ್ಟಿಲ್ಲ. ಇನ್ನು ಉಳಿದ ಆಪಾದನೆಗಳು ಏನು ಇವೆ, ಅದು ವಿವಾಹವಿಚ್ಛೇದನದ ಬಗ್ಗೆ ಆಗಲಿ, ಅಥವಾ

ಇನ್ನಾವುದೇ ಇದ್ದರೂ ಅದನ್ನು ನಾವು ಪ್ರಸ್ತಾಪ ಮಾಡುವುದಿಲ್ಲ, ಅದು ನಮಗೆ ಸಂಬಂಧವಿಲ್ಲ ಎಂದು ನಾನು ಭಾವಿಸಿದ್ದೇನೆ. ಆದ್ದರಿಂದ ಇವತ್ತಿನ ದಿವಸ ಡೌರಿ ಪ್ರೊಹಿಬಿಷನ್ ಆಕ್ಟ್ ಪ್ರಹಾರ ಏನು ಯಾವ ಒಂದು ಅಪರಾಧಗಳು ಕಾಗ್ನಿಜಬಲ್ ಆಗಿದ್ದಾವೆ ಮತ್ತು non-cognizable / ಸ್ವರೂಪದ ಅಪಾದನೆಗಳು ಏನಿದ್ದಾವೆ, ಆರೋಪಗಳು ಏನಿದ್ದಾವೆ, ಅಂಥ ಆರೋಪಗಳು ರುಜುವಾತುವಾಗುವವರೆಗೆ ಅಥವಾ ಮುಕ್ತವಾಗುವವರೆಗೂ ಸಹ ಅವರನ್ನು ಈ ಒಂದು ಮಂತ್ರಿಮಂಡಲದಿಂದ ತೆಗೆಯಬೇಕು. ಆ ರೀತಿ ತೆಗೆಯುವುದರ ಮುಖಾಂತರ ಈ ಮಂತ್ರಿಮಂಡಲಕ್ಕೆ ಮತ್ತು ಮುಖ್ಯಮಂತ್ರಿಗಳಿಗೆ ಗೌರವ ಬರುತ್ತದೆ. ಈ ರಾಜ್ಯಕ್ಕೆ ಗೌರವ ಬರುತ್ತದೆ. ಮತ್ತು ಇಲ್ಲಿಯುವರೆಗೆ ನಾವು ಏನು ಹೇಳಿಕೊಂಡು ಬಂದಿದ್ದೇವೆ, ಈ ಒಂದು ರಾಜಕಾರಣದಲ್ಲಿ ನಾವು ಗೂಂಡಾ ಸಂಸ್ಕೃತಿಯನ್ನು ಪ್ರೋತ್ಸಾಹ ಮಾಡುವುದಿಲ್ಲ ಎನ್ನುವ ಮಾತನ್ನು ಹೇಳಿದ್ದೇವೆ.

ಅವೆಲ್ಲ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಗುಲ್ಬರ್ಗದ ಕಮಲಾಕರ್‌ನ ಪ್ರಕರಣ ಇರಬಹುದು, ಅಥವಾ ಹುಬ್ಬಳ್ಳಿಯ ಅನಿಲ್ ಕುಮಾರ್ ಪಾಟೀಲ್‌ನ ಪ್ರಕರಣ ಇರಬಹುದು ಅಥವಾ ಮತ್ತ್ಯಾವುದೇ ಜಿಲ್ಲೆಯಲ್ಲಿರುವಂಥ ಅನೇಕ ರೌಡಿಗಳ ಬಗ್ಗೆ ಏನು ಈ ರಾಜಕೀಯ ಸಂಬಂಧವನ್ನು ಬೆಳೆಸುವಂಥ ಒಂದು ಪ್ರಯತ್ನ ನಡೆಯುತ್ತಿದೆ, ಆ ಪ್ರಯತ್ನದ ಹಿನ್ನೆಲೆಯನ್ನು ತಾವು ಅರ್ಥ ಮಾಡಿಕೊಳ್ಳುತ್ತೀರಿ ಎಂದು ನಾನು ಭಾವಿಸಿದ್ದೇನೆ. ನಿಜವಾಗಲೂ ಸಹಾ ಈ ದೇಶದಲ್ಲಿರುವಂಥ ರಾಜಕಾರಣಿಗಳು ಈ ಗೂಂಡಾ ಸಂಸ್ಕೃತಿಯನ್ನು ಪ್ರೋತ್ಸಾಹ ಮಾಡಬಾರದು ಎಂದು ಇದ್ದರೆ ಈ ದೇಶದಲ್ಲಿರುವಂಥ ರಾಜಕಾರಣಿಗಳು ಕ್ರಿಮಿನಲ್ ಸ್ವರೂಪದ ಆರೋಪಣೆಗಳನ್ನು ಯಾರು ಹೊಂದಿದ್ದಾರೆಯೋ ಅವರು.....

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ ಇವತ್ತು ಏನು ಪ್ರಸ್ತಾಪನೆ ಮಾಡಿದ್ದಾರೋ ಆ ಪರಿಮಿತಿಯೊಳಗೆ ಮಾನ್ಯ ಸದಸ್ಯರು ಮಾತನಾಡಬೇಕು. ಗೂಂಡಾ ಸಂಸ್ಕೃತಿ......

ಶ್ರೀ ಹೆಚ್. ಏಕಾಂತಯ್ಯ:- ಇದನ್ನೂ ಸಹ ಕೇಳುವಷ್ಟು ತಾಳ್ಮೆ ನಿಮಗೆ ಇಲ್ಲದಿದ್ದರೆ ನಾನೇನು ಮಾಡಲಿಕ್ಕೆ ಸಾಧ್ಯವಿಲ್ಲ. ಸ್ವಾಮಿ, ಇವತ್ತಿನ ದಿವಸ ನಾನೇನು ಹೇಳಿದೆ. ಯಾವುದಾದರೂ ವ್ಯಕ್ತಿಯ ಬಗ್ಗೆ ಹೇಳಿದನೇ? ನನ್ನನ್ನು ಸೇರಿಸಿಕೊಂಡಂತೆ ನನ್ನ ಪಕ್ಷದವರನ್ನು ಸೇರಿಸಿಕೊಂಡಂತೆ ಪಕ್ಷದ ರಾಜಕಾರಣಿಗಳು ಯಾರೇ ಆಗಿರಲಿ, ಆ ಗೂಂಡಾ ಸಂಸ್ಕೃತಿಯೊಂದಿಗೆ ಇರುವಂಥ ಜನರ ಸಂಬಂಧವನ್ನು ಪ್ರೋತ್ಸಾಹ ಮಾಡಬಾರದು ಎಂದು ಹೇಳಿದರೂ ಸಹ ಅದನ್ನು ಕೇಳುವ ತಾಳ್ಮೆ ತಮಗೆ ಇಲ್ಲದಿದ್ದರೆ ಸಹನೆ ಇಲ್ಲದಿದ್ದರೆ ನಾವು ನೀವು ರಾಜಕಾರಣ ಮಾಡುವುದಕ್ಕೆ ಸಾಧ್ಯವಿಲ್ಲ.

ಗೂಂಡಾಗಿರಿ ಸಂಸ್ಕೃತಿಯನ್ನು ಹತ್ತಿಕ್ಕುವುದಕ್ಕೆ, ಗೂಂಡಾಗಿರಿ ಸಂಸ್ಕೃತಿಗೆ ಪ್ರೋತ್ಸಾಹ ಮಾಡದಂಥ ರೀತಿಯಲ್ಲಿ ನಾವೆಲ್ಲರೂ ನಡೆದುಕೊಳ್ಳಬೇಕು. ಈ ತತ್ವದಲ್ಲಿ ನಂಬಿಕೆ ಇದ್ದರೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದೆನೇ ಹೊರತು ಮತ್ತೇನೂ ಇಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಈ ಸದನದ ಒಳಗಡೆ ಮತ್ತು ಹೊರಗಡೆ ನಿಜವಾಗಿಯೂ ಸಹ ಒಂದು ಒಳ್ಳೆಯ ರಾಜಕೀಯ ಸಂಸ್ಕೃತಿಯನ್ನು, ಉತ್ತಮವಾದ ಸಂಸ್ಕೃತಿಯನ್ನು ಏನಾದರೂ ಬೆಳೆಸಬೇಕು ಎಂಬ ಮನಸ್ಸು ಇದ್ದರೆ, ಒಂದು ಮೌಲ್ಯಗಳನ್ನು ಎತ್ತಿ ಹಿಡಿಯಬೇಕು ಎಂಬ ಮನಸ್ಸು ಇದ್ದರೆ ತಾವು ಇವತ್ತಿನ ದಿವಸ ಅವರ ರಾಜೀನಾಮೆಯನ್ನು ಕೇಳಬೇಕು ಮತ್ತು ಅವರನ್ನು ವಜಾ ಮಾಡಬೇಕು. ಈ ಒಂದು ಆರೋಪಣೆಯಿಂದ ಮುಕ್ತರಾದ ಮೇಲೆ ನಮ್ಮದೇನೂ ತಕರಾರು ಇಲ್ಲ, ಅವರನ್ನು ಮಂತ್ರಿಗಳಾಗಿ ಆದರೂ ಮಾಡಿ, ಮುಖ್ಯಮಂತ್ರಿ ಆಗಿ ಆದರೂ ಮಾಡಿ. ಅದು ನಿಮಗೆ ಸಂಬಂಧಪಟ್ಟ ವಿಚಾರ, ನಮ್ಮ ಪಕ್ಷಕ್ಕೆ ಸಂಬಂಧಪಟ್ಟ ವಿಚಾರ ಎಂಬ ಮಾತನ್ನು ಹೇಳುತ್ತೇನೆ. ಇವತ್ತಿನ ದಿವಸ ಮಾನ್ಯ

ಮುಖ್ಯಮಂತ್ರಿಗಳು ಇದರ ಬಗ್ಗೆ ನಿರ್ದಿಷ್ಟವಾದ ಹೇಳಿಕೆಯನ್ನು ಕೊಡಬೇಕೆಂದು ಕೇಳುತ್ತೇನೆ ಮತ್ತು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ನಾವು ಸಿಗ್ನೇಚರ್ ಮಾಡಿದ್ದೇವೆ.

(ಗೊಂದಲ)

ಶ್ರೀ ಪಿ.ಸಿ. ಸಿದ್ದನಗೌಡರ್:- ನಮಗೆ ಅವಕಾಶ ಕೊಟ್ಟಿಲ್ಲ. ನಮಗೆ ಅವಕಾಶ ಕೊಡಲಿಲ್ಲ ಎಂದರೆ ಕಷ್ಟವಾಗುತ್ತದೆ. ದಯಮಾಡಿ ನಮಗೆ ಅವಕಾಶ ಕೊಡಿ. ಇಂತಹ ಮಹತ್ವವಾದ ವಿಷಯ ಇದೆ.

(ಗೊಂದಲ)

ಅಧ್ಯಕ್ಷರು:- ಎಲ್ಲರಿಗೂ ಅವಕಾಶ ಕೊಡಬೇಕು ಎಂದೇನೂ ಇಲ್ಲ. ರೂಲ್ 311 ಓದಿ ಆಮೇಲೆ ಮಾತನಾಡಿ. ಈಗ ನೀವು ಮಾತನಾಡುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ. ರೂಲ್ 311 ಓದಿದ ನಂತರ ನನಗೆ ಮನವಿ ಮಾಡಿ.

ಶ್ರೀ ಪಿ.ಸಿ. ಸಿದ್ದನಗೌಡರ್:- ನಾವೂ ಸಹ ಸಹಿ ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು:- ಸೈನ್ ಮಾಡಿದವರಿಗೆಲ್ಲಾ ಅವಕಾಶ ಕೊಡಬೇಕು ಎಂದೇನೂ ಇಲ್ಲ.

(ಗೊಂದಲ)

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಇದರಲ್ಲಿ ಎರಡು ಭಾಗ ಇದೆ. ಒಂದು ಕುಟುಂಬಕ್ಕೆ ಸಂಬಂಧಪಟ್ಟ ವಿಚಾರ. ಗಂಡ ಹೆಂಡತಿಗೆ ಸಂಬಂಧಪಟ್ಟ ವಿಚಾರ ಬರತಕ್ಕದ್ದು. ಎರಡನೆಯದು ವರದಕ್ಷಿಣೆ ತೆಗೆದುಕೊಂಡಿದ್ದಾರೆ ಎಂದು ಹೇಳತಕ್ಕ ವಿಚಾರ. ಎರಡೂ ಅಂಶಗಳನ್ನು ತಾವು ನಮೂದಿಸಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ:- ಪರ್ಸನಲ್ ಆಗಿ ನಾನೂ ಏನೂ ರೆಫರ್ ಮಾಡಿಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ತಾವು ಡೈವೋರ್ಸ್ ಕೇಸ್ ರೆಫರ್ ಮಾಡಿದ್ದೀರಿ. ಆದ್ದರಿಂದ ಉತ್ತರ ಹೇಳಬೇಕಾಗುತ್ತದೆ. ತಮಗೆ ಗೊತ್ತಿದೆ, ಇಡೀ ಸಮಾಜಕ್ಕೆ ಗೊತ್ತಿದೆ, ಎಲ್ಲರಿಗೂ ಗೊತ್ತಿದೆ. ಎಲ್ಲರ ಮನೆ ದೋಸೆ ತೂತು ಎಂದು. ಈ ರೀತಿ ಕುಟುಂಬದಲ್ಲಿ ಇರತಕ್ಕ ದೋಷಗಳನ್ನು ಹುಡುಕುತ್ತಾ ಹೋದರೆ ಪ್ರತಿ ಒಬ್ಬ ವ್ಯಕ್ತಿಯ, ಕುಟುಂಬದ ವಿಷಯ ಇದ್ದೇ ಇರುತ್ತದೆ ಇದನ್ನು ಬಗೆಹರಿಸುವುದಕ್ಕೋಸ್ಕರವಾಗಿ ನಮ್ಮ ನ್ಯಾಯ ನಿರ್ವಹಣೆ ಕ್ಷೇತ್ರದಲ್ಲಿ ಕುಟುಂಬಕ್ಕೆ ಸಂಬಂಧಪಟ್ಟ ಹಾಗೆ ಕೋರ್ಟುಗಳನ್ನು ನಾವು ನೇಮಕ ಮಾಡಿದ್ದೇವೆ. ಇವು ಇಡೀ ರಾಷ್ಟ್ರದಲ್ಲಿವೆ. ಆ ಕುಟುಂಬಕ್ಕೆ ಸಂಬಂಧಪಟ್ಟ ಫ್ಯಾಮಿಲಿ ಕೋರ್ಟುಗಳು ಇಂತಹ ಒಂದು ಘರ್ಷಣೆ ಬಂದ ಸಮಯದಲ್ಲಿ ಅವರನ್ನು ಪರಸ್ಪರ ಹತ್ತಿರ ತಂದು ವ್ಯಾಜ್ಯಗಳನ್ನು ಬಗೆಹರಿಸುವುದಕ್ಕೋಸ್ಕರವಾಗಿ ಇವೆ. ಕರ್ನಾಟಕದಲ್ಲಿ ಅಂತಹ ಕೋರ್ಟುಗಳು ಐದು ಜಿಲ್ಲೆಗಳಲ್ಲಿ ಇವೆ. ಈ ಕೋರ್ಟುಗಳ ಕೆಲಸ ಏನು ಅಂದರೆ ರಾಜಿ ಮಾಡತಕ್ಕ ಕೆಲಸ. ಆದ್ದರಿಂದ ಆರು ವರ್ಷದ ಕೆಳಗಡೆ ಯಾವುದೋ ಗಂಡ ಹೆಂಡಿರ ಘರ್ಷಣೆ ಇತ್ತು, ಆ ಕಾರಣವನ್ನು ಮುಂದೆ ಮಾಡಿ ಅದನ್ನು ಆಧಾರವಾಗಿ ಇಟ್ಟುಕೊಂಡು ಯಾವುದೇ ವಿಷಯವನ್ನು ಹೇಳತಕ್ಕದ್ದು ಸರಿಯಲ್ಲ. ತಾವು ಹಾಗೆ ಹೇಳಿಲ್ಲ ಎಂದು ಭಾವನೆ ಮಾಡಿಕೊಳ್ಳುತ್ತೇನೆ. ಅದು ಅವರಿಗೆ ಸಂಬಂಧಪಟ್ಟ ವಿಚಾರ. ಇದು ಸದನದಲ್ಲಿ ಚರ್ಚೆಯ ವಸ್ತು ಆಗಬಾರದು. ಈ ಒಂದು ಕಾರಣವನ್ನು ಹಿಡಿದು ಹೊರಟರೆ ಈ ಸದನದಲ್ಲಿ ಚರ್ಚೆ ಮುಗಿಯುವುದಿಲ್ಲ. ಆದ್ದರಿಂದ ನನ್ನ ಪ್ರಾರ್ಥನೆ ಏನು

ಎಂದರೆ ಖಾಸಗೀ ವಿಚಾರ, ಮನೆಯ ವಿಚಾರ ನಾವು ಅದಕ್ಕೆ ಕೈ ಹಾಕಬಾರದು. ಅದರ ಬಗ್ಗೆ ಪ್ರಸ್ತಾವನೆಗೆ ಅವಕಾಶ ಕೊಡಬಾರದು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ನಾನು ಡೈವರ್ಸ್ ಕೇಸ್ ರೆಫರ್ ಮಾಡಿಲ್ಲ.

(ಗೊಂದಲ)

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ನೀವು ರೆಫರ್ ಮಾಡಿದಿರಿ. ಎರಡನೆಯ ವಿಷಯ ಏನು ಎಂದರೆ ನೀವು ಹೇಳಿದ್ದೀರಿ, ಅದಕ್ಕೆ ಉತ್ತರ ಕೊಡಬೇಕಾಗಿದೆ. ಇವರುಗಳ ಮೇಲೆ ವರದಕ್ಷಿಣೆ ತೆಗೆದುಕೊಂಡ ಆಪಾದನೆ ಇದೆ ಎಂದು ಹೇಳುತ್ತೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಅರ್ಜಿಯ ನಕಲನ್ನು ಕೊಟ್ಟಿದ್ದಾರೆ.

1991ನೇ ಇಸವಿಯಲ್ಲಿ ಕೋರ್ಟಿಗೆ ಕೊಟ್ಟಂಥ ಅರ್ಜಿ, ಅಂದರೆ ಲಗ್ನವಾದ ಮೂರು ವರ್ಷಗಳ ಬಳಿಕ ಮೊದಲನೆಯ ಬಾರಿ ಕೋರ್ಟಿಗೆ ಸಲ್ಲಿಸಿದಂಥ ಅರ್ಜಿಯಲ್ಲಿ ಇವರುಗಳು ಯಾರೂ ವರದಕ್ಷಿಣೆ ತೆಗೆದುಕೊಂಡರೆಂದು ಇಲ್ಲ. ಇವೊತ್ತು ಅವರು 4 ಲಕ್ಷ ರೂಪಾಯಿಗಳ ವರದಕ್ಷಿಣೆ ತೆಗೆದುಕೊಂಡರು ಎನ್ನುವ ಮಾತನ್ನು ತಾವು ಎಲ್ಲಾ ಹೇಳಿರುತ್ತೀರಿ. 1991ನೇ ಇಸವಿಯಲ್ಲಿ ಇದೇ ಮೊದಲನೆ ಸಲ ಕೋರ್ಟಿಗೆ ಸಲ್ಲಿಸಿದ ಅರ್ಜಿಯಲ್ಲಿ ತಾವು ಹೇಳಿದ ರೀತಿಯಲ್ಲಿ ಏನಿದೆಯೆಂದರೆ, "The respondent and his father harassed the petitioner for bringing huge sums of dowry from the father of the petitioner and as the petitioner was not responding to the demands illtreatment commenced".

ಅಂದರೆ, 'ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹೇಳಿದರು, ಅದಕ್ಕೆ ಒಪ್ಪಲಿಲ್ಲ, ಆದುದರಿಂದ, ತೊಂದರೆ ಕೊಟ್ಟರು' ಎಂದು 1991ನೇ ಇಸವಿಯಲ್ಲಿ ಹೇಳಿದ್ದಾರೆ. ಆದರೆ, ಇವೊತ್ತು ಇವೊತ್ತು ನೀವು ಏನು ಹೇಳುತ್ತಿದ್ದೀರಿ: 'ಲಗ್ನವಾದ ಕಾಲದಲ್ಲಿ 4 ಲಕ್ಷ ರೂಪಾಯಿಗಳ ವರದಕ್ಷಿಣೆ ತೆಗೆದುಕೊಂಡರು' ಎಂದು.

(INTERRUPTIONS)

SRI R.V. DESHPANDE:– Sir, the Parliamentary Affairs Minister is going on a wrong track.

'ಅವರು ನಾಲ್ಕು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡರು' ಎಂದು ನಾನು ಹೇಳಲಿಲ್ಲ. ನಾನು ಏನು ಹೇಳಿದೆನೆಂದರೆ, ಈಗ ಕಾಂಪ್ರಮೈಸ್ ಮಾಡುವುದಕ್ಕೆ ಒತ್ತಡ ತರುತ್ತಿದ್ದಾರೆ. ಸೋಮವಾರ ನಾಲ್ಕು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಸ್ಯಾಂಡ್ರಾರವರು ಕರೆದುಕೊಂಡು ಹೋಗುತ್ತಿದ್ದಾರೆ. I have talked to the father of the girl yesterday. I have given the telephone number to the Hon'ble Chief Minister also.

(INTERUPPTIONS)

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ವಿರೋಧ ಪಕ್ಷದ ನಾಯಕರು ಇಷ್ಟೊಂದು ಆಸಕ್ತಿಯನ್ನು ಈ ಕುಟುಂಬದ ಬಗ್ಗೆ ವಹಿಸಿ, ಇವರಲ್ಲಿ ಅವರ ಮಾವನವರನ್ನು ಸಂಬಂಧ ಮಾಡಿ ಎಳೆಯುತಕ್ಕಂಥಾದ್ದು ಯೋಗ್ಯವಾದುದಲ್ಲ. 'ಅವರ ಮೇಲೆ ವರದಕ್ಷಿಣೆಯ ಆಪಾದನೆ ಇದೆ' ಎಂದು ತಾವು ಹೇಳುತ್ತಿದ್ದೀರಿ, ಇದನ್ನು ನಾನು ಒಪ್ಪುತ್ತೇನೆ, ನಾನು ಮಾತನಾಡುವುದಿಲ್ಲ. ಆದರೆ, ಇದನ್ನು ವೆರಿಫೈ ಮಾಡಿ ಎಂದು

ನಾನು ನಿಮಗೆ ಮೊದಲೇ ಹೇಳಿದೆ. ಈಗ ಯಾವುದೇ ಕೋರ್ಟಿನಲ್ಲಿಯೂ ನಮಗೆ ತಿಳಿದ ಮಟ to the best of our information and knowledge ಇವರು ವರದಕ್ಷಿಣೆ ಅ ತೆಗೆದುಕೊಂಡರು ಇಷ್ಟು ತೆಗೆದುಕೊಂಡರು ಎನ್ನುವ ಯಾವುದೇ ಫಿರ್ಯಾದು ಯ ಕೋರ್ಟಿನಲ್ಲಿಯೂ ಇಲ್ಲ. there is no pending case in any court of law either Karnataka or in Andhra Pradesh.

ಯಾವುದೇ ತರಹದ ಆಪಾದನೆ ಕೋರ್ಟಿನಲ್ಲಿ ಇಲ್ಲದಿರುವಾಗ, ಯಾವುದೋ ವಿಷಯವ ಗಾಳಿಯಲ್ಲಿ ಹೇಳಿಕೊಂಡು ತಾವು ಆಪಾದನೆ ಮಾಡುತ್ತಿದ್ದೀರಿ. ಸರ್ಕಾರವಾಗ ಮುಖ್ಯಮಂತ್ರಿಗಳಾಗಲಿ ಯಾವಾಗ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂಬುದು ತವ ಗೊತ್ತಿದೆ, ತಾವು ಓದಿದ್ದೀರಿ. ಈ ವಿಷಯ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಬಂದಿದ್ದು, ಅವ ಒಂದು ಅರ್ಜಿಯನ್ನು ಕೋರ್ಟಿಗೆ ಸಲ್ಲಿಸಲು ಹೋದರು, ಕೋರ್ಟ್ ಒಪ್ಪಲಿಲ್ಲವಾದ್ದರಿಂದ ಪು ಬೇರೆ ಅರ್ಜಿಯನ್ನು ಹಾಕುತ್ತೇವೆಂದು ಅವರು ಅರ್ಜಿಯನ್ನು ವಾಪಸ್ಸು ತೆಗೆದುಕೊಂಡು ಹೋದ ಬೇರೆ ಅರ್ಜಿ ಹಾಕಲಿಲ್ಲ' ಎಂದು. ಮೂರು ವರ್ಷಗಳಿಂದ ಡೈವೋರ್ಸ್ ಅರ್ಜಿ ಪೆಂಡಿಂಗ್ ಇದೆ. ರೀತಿ ಕುಟುಂಬಕ್ಕೆ ಸಂಬಂಧಿಸಿದಂತೆ ನಾಳೆ ಅವರು ರಾಜಿ ಮಾಡಿಕೊಳ್ಳಬಹುದು, ಗಂಡ – ಹೆಂ ಒಂದಾಗಬಹುದು, ಸಂಸಾರ ಚೆನ್ನಾಗಿ ಆಗಬಹುದು. ಇಂತಹ ಶಾಸನ ಸಭೆಯ ವೇದಿಕೆಯನ್ನು ಒಂ ಕುಟುಂಬದ ವಿಚಾರವಾಗಿ ಆಸಕ್ತಿ ತಳೆದು ಈ ರೀತಿ ಭಾಗವಹಿಸುವುದು ಬಹಳ ಅಕ್ಷಮ್ಯವಾದ ವಿಚಾ ಹಿರಿಯ ಸದಸ್ಯರಾಗಿರತಕ್ಕಂಥ ಶ್ರೀಮಾನ್ ದೇಶಪಾಂಡೆಯವರು, ಏಕಾಂತಯ್ಯನವರು ತುಂ ಗೌರವಸ್ಥರಾಗಿದ್ದು, ಈ ಬಗ್ಗೆ ಅವರ ಮೇಲೆ ತಾವು ಬೇರೆ ಆಪಾದನೆ ಮಾಡಿ, ಇದೇ ರೀತಿ ಆಪಾದನೆಯನ್ನು ಮೇಲ್ಮನೆಯಲ್ಲೂ ಸಹ ಮಾಡಿದರು. ಆದರೆ, ಅಂತಹ ಆಪಾದನೆಗಳಿಗೆ ಆಧಾರವಿ ಮುಖ್ಯಮಂತ್ರಿಯವರು ಕ್ರಮ ತೆಗೆದುಕೊಳ್ಳಲಿ. ಇಂತಹ ಕೌಟುಂಬಿಕ ಸಮಸ್ಯೆಗಳ ಮೇಲೆ ತಾವು ತರಹ ವಿಚಾರಗಳನ್ನು ಪ್ರಸ್ತಾಪ ಮಾಡಿದರೆ ಏನಾಗುತ್ತದೆಂದರೆ, ಕನ್ನಡದಲ್ಲಿ 'ಗೂಬೆ ಕೂರಿಸುವುದ ಎನ್ನುತ್ತಾರೆ, ಆ ತರಹದ ಕೆಲಸವಾಗುತ್ತದೆಯೆ ವಿನಾ ಇದರಿಂದ ಯಾವುದೇ ಯೋಗ್ಯವಾದ ಪ್ರತಿಫ ದೊರಕುವುದಿಲ್ಲ. ತಾವು ಎಲ್ಲಾ ಸದಸ್ಯರ ರಾಜಕೀಯ ಜೀವನ ಪರಿಶುದ್ಧವಾಗಿರಬೇಕೆನ್ನುವ ಒಳ್ಳೆ ಉದ್ದೇಶದಿಂದ ತಾವು ಪ್ರಸ್ತಾಪಿಸಿದ್ದೀರಿ, ತಮ್ಮ ಉದ್ದೇಶವನ್ನು ನಾನು ಪ್ರಶ್ನಿಸುವುದಿಲ್ಲ. ಆದ ವಸ್ತುಸ್ಥಿತಿ ಹೀಗಿದೆ. ತಾವು ಈ ಕುರಿತು ವಿಷಯವನ್ನು ಪ್ರಸ್ತಾಪಿಸಲು ನಿಯಮ 310ರಡಿ ಕೊಟ್ಟಿದ್ದೀ It does not refer to a Minister.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಸನ್ಮಾನ್ಯ ಅಧ್ಯಕ್ಷರೆ, ಕಾನೂನು ಮಂತ್ರಿಗ ಮಾತನಾಡುತ್ತಿದ್ದಾರೆ, ಅದು ಕಡತಕ್ಕೆ ಹೋಗುತ್ತಿದೆ. ಅವರು ವರದಕ್ಷಿಣೆಗೆ ಸಂಬಂಧಪಟ್ಟ ವಿಚಾ ಬಗ್ಗೆ ಮಾತನಾಡುತ್ತಿದ್ದಾರೆ. ತಾವು ವರದಕ್ಷಿಣೆಯನ್ನು ಕೌಟುಂಬಿಕ ಸಮಸ್ಯೆ ಎಂದು ವರ್ಣ ಮಾಡುತ್ತಿದ್ದೀರಿ, ಅದೇನು ಕೌಟುಂಬಿಕ ವಿಚಾರವೆ ? ವರದಕ್ಷಿಣೆ ಸಮಸ್ಯೆ ಕೌಟುಂಬಿಕ ಸಮಸ್ಯೆಯೇ ಅದು ಕೌಟುಂಬಿಕ ಸಮಸ್ಯೆ ಅಲ್ಲ.

(ಗೊಂದಲ)

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ವರದಕ್ಷಿಣೆಯಾಗಿದ್ದರೆ ಅದು ಸಾಮಾಜಿಕ ಅಪರಾಧವಾಗುತ್ತ

† ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, ಪ್ರೊ: ಎಂ. ನಂಜುಂಡಸ್ವಾಮಿಯವರು ಮತ್ತು ಏಕಾಂತಯ್ಯನವರು ಹೇಳುತ್ತಿರತಕ್ಕ ವಿಚಾರವನ್ನು ನಾನ ಕೇಳುತ್ತಿದ್ದೇನೆ, ಇದೇ ವಿಚಾರವನ್ನು ಮೇಲ್ಮನೆಯಲ್ಲಿಯೂ ಸಹ ಎತ್ತಿದ್ದಾರೆ. ಅದಕ್ಕೆ ಸಂಬಂಧಪಟ್ಟ ನಾನು ಕೆಲವು ದಾಖಲೆಗಳನ್ನು ನೋಡಿದ್ದೇನೆ. ಈ ವಿಚಾರ ಬಹುಶಃ 314ರ ನಿಯಮದ ಪ್ರಕ

ಲ್ಲಿ ಪ್ರಸ್ತಾಪ ಮಾಡಲು ಬರುವುದಿಲ್ಲ. ಏಕೆಂದರೆ ಅಸಂಬಂಧಿತ ಅಥವಾ ಪುನರುಕ್ತಿ: ಅಸಂಬಂಧ ಷಯಗಳನ್ನು ಪ್ರಸ್ತಾಪಿಸುವ ಅಥವಾ ತನ್ನ ವಾದವನ್ನು ಅಥವಾ ಸದಸ್ಯರ ವಾದಗಳನ್ನು ಬೇಸರ ಾಡುವಷ್ಟು, ಪುನಃ ಪುನಃ ಹೇಳುತ್ತಲೇ ಇರುವ ಸದಸ್ಯರ ವರ್ತನೆಯನ್ನು ಸದನದ ಗಮನಕ್ಕೆ ಂದನಂತರ ತಾವು ಆ ಸದಸ್ಯರ ಭಾಷಣವನ್ನು ನಿಲ್ಲಿಸಬೇಕೆಂದು ನಿರ್ದೇಶಿಸಬಹುದು. I would ke to bring it to the notice of the House rule No. 314 and 311. Here, it is ery clear. This is about what is irrelevance or tedious repetition. Here, it is ery clear. The procedure regarding the allegation against a person. That ou have to obtain permission to raise the issue. I am not raising that. ವೆರಡನ್ನು ತಾವು ಓದಿದರೆ ತಿಳಿಯುತ್ತದೆ. ಸನ್ಮಾನ್ಯ ಕಾನೂನು ಮಂತ್ರಿಗಳು ಹೇಳಿದಂತೆ ಪ್ರತಿಯೊಬ್ಬರ ೀವನದಲ್ಲಿ ಹೆಣ್ಣುಮಕ್ಕಳು ಮತ್ತು ಗಂಡು ಮಕ್ಕಳು ಇದ್ದವರೆಲ್ಲರೂ ಸಹ ಒಂದಲ್ಲಾ ಒಂದು ಂದರ್ಭದಲ್ಲಿ ಇದರ ಬಗ್ಗೆ ವಿಚಾರ ಮಾಡಲು ಬರುತ್ತದೆ, ಇದರ ಬಗ್ಗೆ ಏನನ್ನೂ ಹೇಳುವುದು ೇಡ ಎಂದು ನಾನಿದ್ದೆ, ಆದರೆ since everything has come out public, better I ention it.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ತಾವು ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳು ರುವವರಿಗೆಲ್ಲಾರಿಗೂ ಅದು ಬರತಕ್ಕ ವಿಚಾರವೆಂದು ಹೇಳುತ್ತಿದ್ದೀರಿ, ಅದೇ ಧಾಟಿಯಲ್ಲಿ ಕಾನೂನು ಂತ್ರಿಗಳು ಹೇಳಿದ್ದಾರೆ. ಈ ಅಪರಾಧಕ್ಕೆ ಸಂಬಂಧಪಟ್ಟಂತೆ ನಡೆಯುತ್ತಿರತಕ್ಕ ಚರ್ಚೆಯಲ್ಲಿ ಮತ್ತು ರದಕ್ಷಿಣೆಗೆ ಸಂಬಂಧಪಟ್ಟ ಸಮಸ್ಯೆಯ ಬಗ್ಗೆ ನಾನು ಆಗಲೇ ಎದ್ದು ನಿಂತು ಹೇಳಬೇಕೆಂದು ಇದ್ದೆ, ಾನೂನು ಮಂತ್ರಿಗಳು ಎಲ್ಲರ ಮನೆಯ ದೋಸೆಯೂ ತೂತೆ ಎಂದು ಯಾವ ರೀತಿಯಲ್ಲಿ ೇಳಿದರೋ ನನಗೆ ಗೊತ್ತಿಲ್ಲ, ಆದರೆ ಅಪರಾಧದ ದೃಷ್ಟಿಯಿಂದ ವರದಕ್ಷಿಣೆಯ ದೃಷ್ಟಿಯಿಂದ ನಮ್ಮ ನೆಯ ದೋಸೆ ತೂತಲ್ಲ, to that extent you have to qualify it. You cannot make uch a sweeping statement.

ಈ ವಿಷಯದಲ್ಲಿ ಎಲ್ಲರ ಮನೆಯ ದೋಸೆ ತೂತಲ್ಲ, ನನ್ನ ಮನೆಯು ದೋಸೆ ತೂತಲ್ಲ, ತಾವು ೇಕಾದರೆ ಕಡತ ತೆಗೆಸಿ ನೋಡಿ, ನೀವು ಬಹಳ ಸಡಿಲವಾಗಿ ಮಾತನಾಡುತ್ತಿದ್ದೀರಿ, ಆ ರೀತಿ ಡಿಲವಾಗಿ ಮಾತನಾಡಬಾರದು. ಈ ಸದನದಲ್ಲಿ ನಿಂತು ಎಲ್ಲರ ಮನೆಯ ದೋಸೆ ತೂತು ಎಂದು ೇಳಿದರೆ ಏನು ಅರ್ಥ? ಇದರಲ್ಲಿ ಏನಾದರೂ ಅರ್ಥವಿದೆಯೇ? ಅಪರಾಧದ ಕಾಂಟೆಸ್ಟ್‌ನಲ್ಲಿ, ರದಕ್ಷಿಣೆಯ ಕಾಂಟೆಸ್ಟ್‌ನಲ್ಲಿ ನನ್ನ ಮನೆಯ ದೋಸೆ ತೂತಲ್ಲ, ಬಹಳ ಜನ ಸನ್ಮಾನ್ಯ ಗೌರವಾನ್ವಿತ ದಸ್ಯರದ್ದು ಕೂಡ ಹಾಗೆಯೇ ಇರಬಹುದು that has got to be removed from the ecords.

ನೀವು ಹಾಗೆ ಹೇಳಬೇಕಾದರೆ ಸದನದ ಹೊರಗೆ ಉಪಯೋಗಿಸಿ ಹೇಳಿ. ಇಲ್ಲಿ ಅಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ನಂಜುಂಡಸ್ವಾಮಿಯವರು ನನ್ನ ಮಾತಿನ ಅರ್ಥವನ್ನು ಪ್ಪಾಗಿ ತಿಳಿದುಕೊಂಡಿದ್ದಾರೆ. ನಾನು ಈ ವಿಷಯವನ್ನು ಎರಡು ಭಾಗವಾಗಿ ವಿಂಗಡಣೆ ಾಡಿಕೊಂಡಿದ್ದೇನೆ. ಗಂಡ ಹೆಂಡತಿ ಸೇರತಕ್ಕದ್ದು ಮತ್ತು ವಿವಾಹವಿಚ್ಛೇದನ ಇದು ಆ ಎರಡು ಭಾಗ. ಲ್ಲಾರೂ ಸಹ ಲೋಕಾಭಿರಾಮವಾಗಿ ಮಾತನಾಡುತ್ತಾರೆ.

ನಾನು ಸಾಮಾಜಿಕವಾದಂಥ ಅಪರಾಧದ ಬಗ್ಗೆ ಹೇಳಲಿಲ್ಲ, ಸಾಮಾಜಿಕವಾಗಿ ಅಪರಾಧವಾದ ರದಕ್ಷಿಣೆ ತೆಗೆದುಕೊಳ್ಳುವುದಾಗಲಿ, ಅದರ ಬಗ್ಗೆ ಹಿಂಸೆ ಕೊಡುವುದಾಗಲಿ, ಹೆಣ್ಣುಮಕ್ಕಳಿಗೆ ತೊಂದರೆ ಡುವುದಾಗಲಿ ಇದ್ದರೆ you have got to withdraw those words.

ಇದರ ಬಗ್ಗೆ ಎಲ್ಲರ ಮನೆಯ ದೋಸೆಯೂ ತೂತು ಎಂದು ಹೇಳಿದರೆ ನ ಅಪರಾಧಿಯಾಗುತ್ತೇನೆ. ಆದುದರಿಂದ ಯಾವ ಕಾಂಟೆಸ್ಟ್ ಯಾವ ವಿಷಯ ಎಂಬ ಬಗ್ಗೆ ತ ತಿಳಿದುಕೊಳ್ಳಬೇಕು.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉ ಕೊಡುವುದಕ್ಕೆ ಮುಂಚಿತವಾಗಿ ಹೇಳುವುದಾದರೆ ನಾನು ಮಾತನಾಡುವಾಗ ಅವರು ಇರಲಿ ಆದ್ದರಿಂದ ನಾನು ಒಂದೆರಡು ವಿಷಯಗಳನ್ನು ಅವರ ಗಮನಕ್ಕೆ ತರುತ್ತೇನೆ. ನಾನು ಇಲ್ಲಿ ಅ ಯಾವುದೇ ಪರ್ಸನಲ್ ಮ್ಯಾಟರನ್ನೂ ಟಚ್ ಮಾಡಿಲ್ಲ. ನಾನು ಟಚ್ ಮಾಡಿದ್ದುದು ಪ್ರಾಹಿಬಿ ಆಫ್ ಡೌರಿ ಆಕ್ಟ್ ಸೆಕ್ಷನ್ 6 ಮತ್ತು 7 ಪ್ರಕಾರ ಕಂಪ್ಲೇಂಟ್ ನೆಲ್ಲೂರಿನ ಕೋರ್ಟ್‌ನಲ್ಲಿ ಪ್ರೆಸೆ ಆಯಿತು, ಆ ಕೇಸ್‌ನಲ್ಲಿ ಇನ್ನೂ ಪ್ರೋಸೆಸ್ ಇಷ್ಯೂ ಆಗಿಲ್ಲವೆಂದು ಹೇಳಿದೆ. ಏಕೆಂದರೆ, Magistrate asked the Complainant's advocate – He is a Minister Karnataka, whether permission of Karnataka Government is required.

ಆ ಕೇಸ್‌ನಲ್ಲಿ ಪ್ರೋಸೆಸ್ ಇಷ್ಯೂ ಆಗಿಲ್ಲ ಆದರೆ ಕಂಪ್ಲೇಂಟ್ ಮಾತ್ರ ಫೈಲ್ ಆಗಿದೆ ಎಂ ಹೇಳಿದೆ. I only said 1993ರಲ್ಲಿ ಆಂಟಿ ಡೌರಿ ಆಕ್ಟ್ ಪ್ರಕಾರ ಕೇಸ್ ಫೈಲ್ ಆಗಿದೆ. ಆದರೆ ಇ ಕ್ಯಾರೆಕ್ಟರ್ ಅಸ್ಯಾಸಿನೇಷನ್ ಸಲುವಾಗಿ ಮಾಡಿರತಕ್ಕದ್ದು ಎಂದು ಒಬ್ಬರು ಆರ್ಗ್ಯೂಮೆಂ ಮಾಡಬಹುದು. ಆದರೆ ನಾನು ಹೇಳಿದೆ, 91ನೇ ಇಸವಿಯಲ್ಲಿ ಏನು ಡೈವರ್ಸ್ ಪಿಟಿಷನ್ ಫೈ ಆಯಿತು ಅದರಲ್ಲಿ ಡೌರಿ ಬಗ್ಗೆ ನಮೂದಾಗಿದೆ. 30 ತೊಲ ಬಂಗಾರದ ಬಗ್ಗೆ ನಮೂದಾಗಿದೆ. ಇ ಹೊಸ ಡೌರಿ ಸ್ಟೋರಿ ಅಲ್ಲ. ನಾನು ಪರ್ಸನಲ್ ಮ್ಯಾಟರ್‌ಗೆ ಹೋಗಿಲ್ಲ. ಫಾದರ್ ಇನ್ ಲಾ ಏ ಮಾಡಿದ್ದಾರೆ, ಮದರ್ ಇನ್ ಲಾ ಏನು ಮಾಡಿದ್ದಾರೆ, ಡಾಟರ್ ಇನ್ ಲಾ ಏನು ಮಾಡಿದ್ದಾರೆ ನಾನು ಹೇಳಿಲ್ಲ. It is not my business, it is not my duty also. My only conc is about the social evil, dowry.

ಡೌರಿ ತೆಗೆದುಕೊಳ್ಳುವುದು, ಕೊಡುವುದು ಸೋಷಿಯಲ್ ಈವಿಲ್ ಆಗಿದೆ. ಇದನ್ನು ನಾವ ಒಪ್ಪಿಕೊಳ್ಳುತ್ತೇವೆ. And that is the only point I have argued and further I ha not gone.

ಶ್ರೀ ಎಂ. ವೀರಪ್ಪಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೆ, ಅವರು ಮಂತ್ರಿಗಳಾಗಿರಬಹುದು. ಆ ಇದರಲ್ಲಿ ಒಬ್ಬ ಸದಸ್ಯರಿಗೆ ಸಂಬಂಧಪಟ್ಟ ವಿಚಾರ ಅಡಗಿದೆ. ಅವರ ಮೇಲೆ ಮಾಡಿರುವ ಆಪಾ ಬಯಲಿಗೆ ಬಂದಿದೆ. ಇದನ್ನು ಈ ಸದನದಲ್ಲಿ ಎತ್ತಿದ್ದೀರಿ, ಆ ಸದನದಲ್ಲೂ ಎತ್ತಿದ್ದಾರೆ. ಇವ ಅವರು ಕೇವಲ ಸದಸ್ಯರಾಗಿಲ್ಲ. ಒಬ್ಬ ಮಂತ್ರಿಯಾಗಿದ್ದಾರೆ. ಆದ್ದರಿಂದ ಇದನ್ನು ಬಹಳ ಗಂಭೀರವ ಆಪಾದನೆ ಎಂದು ನಾವು ತೆಗೆದುಕೊಂಡಿದ್ದೇವೆ. ತಾವು ವಕೀಲರು, ಸಾಕಷ್ಟು ಅನುಭವ ಇದ್ದ ಶಾಸಕರಾಗಿದ್ದೀರಿ ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡಿರುವವರೂ ಕೂಡ ಇಲ್ಲಿದ್ದೀರಿ. ದಯವಿ ವಿಚಾರ ಮಾಡಿ. Perhaps, now it is better for Mr. Sandra to supply the copy the Divorce Petition. Let the public know about it. Now nothing rema secret. Let everything come out, let the people judge and suppose, ev there after if you feel, what is against Sandraji is right, perhaps I don't th he is attached much to this post. Nor he is very particular that he sho remain here. That is not the question before me. The question is, what k of allegations are made, I just put it to you. Here is a divorce petition fil

n 1991. It is filed. After 1988, 1988 ರಲ್ಲಿ ಅವರು ಒಂದೂವರೆ ತಿಂಗಳು ಸಂಸಾರ ಮಾಡಿ ಅನಂತರ ಮನೆಯನ್ನು ಬಿಟ್ಟು ಹೋಗಿದ್ದಾರೆ. 1991ರಲ್ಲಿ at that time he was not an MLA. In 1989 election took place where he was elected, and in 1991 this Divorce Petition was filed. You must go through the Divorce Petition, to know what kind of a Divorce Petition it is. The girl says within 1 1/2 months, she comes to a conclusion that the boy is impotent. It is left to her. I am not commenting on that.

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು...

ಶ್ರೀ ಎಂ. ವೀರಪ್ಪಮೊಯಿಲಿ:– ನಾನು ಈಲ್ಡ್ ಆಗಿಲ್ಲ. ತಾವು ಅನಂತರ ಮಾತನಾಡಿ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್:– ಇಲ್ಲಿ ಡೈವರ್ಸ್ ಬಗ್ಗೆ ಮತ್ತು ಡೌರಿ ಬಗ್ಗೆ ಮಾತ್ರ ಪ್ರಸ್ತಾಪವಾಗಬೇಕು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:– ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಈಲ್ಡ್ ಆಗಿಲ್ಲ. I am on my legs.

MR. SPEAKER:– Mr. Anantha Krishna please resume your seat.

SRI M. VEERAPPA MOILY:– I am on my legs. They say he is impotent. She does not want to continue with the husband. That is definite; Intention is correct. Then, you put an allegation that these people demanded dowry. How can both go together? ಎರಡೂ ಜೊತೆಯಲ್ಲಿ ಹೇಗೆ ಹೋಗಲಿಕ್ಕೆ ಸಾಧ್ಯವಾಗುತ್ತದೆ.

If she wants to continue, then the question of dowry comes. ಈಗ ಡೌರಿ ಡಿಮೆಂಟ್ ಮಾಡಿದ ಬಗ್ಗೆ ಫಸ್ಟ್ ಪಿಟಿಷನ್ ಯಾವುದು, ಇದು Divorce petition was the first thing. When the dowry offence will commit? When you take dowry, then dowry is demanded. There is no averment in the petition that the dowry is taken. What they say is, that the Respondent and his father harass the Petitioner for bringing huge sum of dowry from the father of the Petitioner. There is an allegation for bringing dowry. ಡೌರಿ ತೆಗೆದು ಕೊಂಡಿದ್ದಕ್ಕೆ ಒಂದು ಅವರ್‌ಮೆಂಟ್ ಇಲ್ಲ, ಒಂದು ಸೆಂಟೆನ್ಸ್ ಕೂಡ ಇಲ್ಲ.

If there is an allegation that dowry has been taken by him, and he is asking for further dowry, there is some credence for that But, further dowry they are asking, they complain and the boy is impotent. ಇವೆರಡೂ ಜೊತೆಯಲ್ಲಿ ಹೇಗೆ ಹೋಗುತ್ತದೆ ?

Some minimum logic will have to be applied here. How can these things

go together? That means because of the dowry harassment, she has left home, that is one thing, I can agree. Because the boy is Impotet. She has left home. I am just telling. It is left to the people to judge, and the House. Yes, regarding dowry, a petition has been filed before the Court When? After this, after lapse of so many months. When, I do not know I am not telling the date. After 1988, ಆದಮೇಲೆ, ಡೈವೋರ್ಸ್ ಪಿಟಿಷನ್ ಬಂದಿತು. ಡೈವೋರ್ಸ್ ಪಿಟಿಷನ್‌ನಲ್ಲಿ ಒಂದೇ ಸೆಂಟೆನ್ಸ್ asking for dowry; not for collecting dowry Whether he has asked for dowry or not, Prima facie ಏನಾದರೂ ಒಂದು ಎವಿಡೆನ್ಸ್ ಬೇಕಲ್ಲಾ, ನಮಗೆ ನಾವು ಮಂತ್ರಿಗಳನ್ನು ರಾಜೀನಾಮೆ ಕೊಡಿ ಎಂದು ಕೇಳುವುದಕ್ಕೆ ಅಥವಾ ಮಂತ್ರಿಗಳು ಹೋಗಿ ಅವರ ಇನ್ನೊಸೆನ್ಸ್ ಪ್ರೂವ್ ಮಾಡಿ ಬರಬೇಕಾದಂಥ ಅವಶ್ಯಕತೆ ಇಲ್ಲಿ ಇದ್ದರೆ.

We do not hesitate, if there is some evidence to show that dowry has been taken. He will have no hesitation and he would rather, as a gentleman will quit. Afterall, dowry taking is an offence, as you said. Dowry is a public offence, It comes to a public offence. ಈ ಡೌರಿಯನ್ನು ತೆಗೆದುಕೊಳ್ಳತಕ್ಕಂಥ ಆಪಾದನೆ ಸಚಿವರ ಮೇಲೆ ಇದ್ದದ್ದೇ ಆದರೆ We will not hesitate. But, ಡೌರಿ ತರಬೇಕೆಂದು ಹೇಳತಕ್ಕಂಥದ್ದು ಒಂದು ಧ್ವನಿ, ಮತ್ತೊಂದು ಕಡೆ Husband is impotent, ಎಂದು ಹೇಳತಕ್ಕಂಥ ಪ್ರಶ್ನೆ ಎಂದು ಹೇಳಿದರೆ ಡೌರಿಗಾಗಿ ನಾವು ಮನೆಬಿಟ್ಟೆ ಎಂದು ಹೇಳಿ; ಡೌರಿ ಹೆರಾಸ್‌ಮೆಂಟ್ ಇದ್ದುದರಿಂದ ನಾನು ಮನೆ ಬಿಟ್ಟೆ ಎಂಬ ಯಾವುದೇ ವಾದ, ಅದಕ್ಕೆ ಫೋರ್ಸ್ ಇರುತ್ತಿದ್ದರೆ I can understand. I do not think that we should step to that imagination. ಈ ಕೇಸ್ ಆಗುತ್ತಿದೆ ಅಲ್ಲಿ let the evidence come in the divorce petition that he has taken a dowry or anything. Yes, morally he is bound to leave, even if a criminal case is filed on dowry, alright. It has not been taken on file. Even the case has not been numbered according to our information or even if it is numbered, the process has not been issued, and divorce petition on one side and the dowry petition is filed much later on the other side. After a lapse of five to eight years, these things are prosecuted before the Court. Alright. Is there any petition pending before the Hubli Court? Afterall, she lived there. Afterall her father is not an ignorant person or illiterate person. Her father is an Income Tax Officer, a very well educated person. If there is a constant harassment for dowry and the allegations were thought of during 1988, but not after a lapse of five to eight years, and there is not even a single petition pending before the Police Station. ಪೊಲೀಸ್ ಸ್ಟೇಷನ್‌ನಲ್ಲಿ ಪಿಟಿಷನ್ ಹಾಕಿದ್ದರು, ಆ ಕೇಸನ್ನು ಮುಂದುವರಿಸಲಿಕ್ಕೆ ಮಂತ್ರಿಗಳ ಅವರ ಪ್ರಭಾವ ಬಿದ್ದಿದ್ದರೆ, ಅಥವಾ ಪ್ರಭಾವ ಬೀಳತಕ್ಕಂಥ ಪರಿಣಾಮ ಇದ್ದಿದ್ದರೆ yes, he is morally bound to quit; we will not depend on legal aspects.

1.10 ಪಿ.ಎಂ.

When the question of propriety is concerned, we are committed for a moral commitment. Morally we are bound to do it and morally the Minister will have to quit. Yes, there is a criminal petition but the process has not been issued. The criminal petition has been filed after a lapse of 6–7 years since the girl left. There is no petition and not even an iota of evidence to show that the dowry has been taken. There is not even iota of evidence to show that he has demanded the dowry. On both counts, there is no semblance of evidence. Tomorrow many more such cases will come after 8 years, after 10 years to harass a person. If you want to harass a person, file it and ask the man, the promises he made. Afterall, we are entitled to protect an innocent person. We are not entitled to protect a person who has committed a crime. If there is an iota of evidence (not necessarily the court to prove it), if there is any complaint, the complaint is filed or if that person is prevented from a complaint being filed or any such thing, – if you have any such record, come back to us, we will definitely ask the Minister to quit and will come back if he is proved innocent, irrespective of whether he is a Minister or a legislator or any one else. When it comes to the real dowry death question, dowry allegation, or the harassment, we are here, who ever he may be; – he may be a Minister or a legislator or whatever position he acquires – our Government is committed to take action on that either legally or morally. We are bound by it. You have raised this issue. If it is before the Court, alright at any point of time, if there is any evidence or an iota of evidence, we will definitely ask the minister to leave the office. But at this point of time, if you want the Minister to quit or the other two persons to quit, perhaps, it will be the travesty of truth. Suppose tomorrow ಈ ತರಹ ಬಲಿ ತೆಗೆದುಕೊಳ್ಳುತ್ತೀರಿ ಎಂಬ ಆಪಾದನೆ ನಿಮ್ಮ ಮೇಲೆ, ನಮ್ಮ ಮೇಲೆ ಬರಬಹುದು. tomorrow the history will be written that for we are for our political purpose. An innocent a person made a scape goal. ಒಬ್ಬರನ್ನು ಬಲಿಪಶು ಮಾಡತಕ್ಕ ಪ್ರವೃತ್ತಿಗೆ ಇಳಿಯಬಾರದು.

Afterall, I am very happy to say that in Karnataka, Women Organisations are very strong, particularly, in respect of these dowry cases. There is a lot of awakening. Hubli is a place where there is a lot of awakening. Eventhough he was not MLA, he was a public man in Hubli. ಅಂಥ ಪರಿಸ್ಥಿತಿ ಇದ್ದದ್ದೇ, ಆದರೆ I think, women organistions would have raised it. There would have been protests. But at this distance of time, when the matter is raised, I don't blame you. It has come in the Papers. May be the parents might

have approached you. I am not finding fault with any one of you fo having raised this. But it is our duty, let us touch our conscience anc see whether there is any semblance of evidence. When we touch ou conscience, let us make an introspection. Are we doing it for a politica reason or are we doing it for a real reason or are we doing it to brinc out the truth? Mr. Hon. Leader of the Opposition, there should be a needle of suspicion against him. When the needle of suspension is not against him, if you want him to take steps or myself to take steps ultimately that needle will have the targets everywhere. If you make the needle to go everywhere, it may prick you, me and prick everyone. Let us not do that. If there is a justified needle of suspicion, enough basis for entertaining that suspicion, we will not hesitate even for a minute to request Mr. Sandra to quit. I will not hesitate even for a minute to request him to submit his resignation. I will not legally gc into it. Legal intricacies will not matter for me. The moral ground is ultimate and a supreme objective with which I would like to function as a Chief Minister.

SRI A.K. ANANTHA KRISHNA:– Sir, the Hon. Leader of the Opposition has raised an issue. We have heard him with rapt attention. We have not interrupted him. We have also heard the Hon. Law Minister for his views on the matter. Now extensively we have heard the Hon. Chief Minister's say. All that I want to know is, whether the Hon. Leader of the Opposition who had taken all the pains to contact the father of daughter – in – law of Mr. Sandra to find out what he has in his mind and then come out with his statement, did he ever make an attempt to contact Mr. Sandra to find out what he has in his mind? This is the point we have got to consider. He has been talking about being fair to Mr. sandra. No malcious intentions, no character assasination. Nothing of the kind. That is his intention. But what is important is, have you held the scales even? As a responsible Hon. Leader of the Opposition, when you heard from one side, did you care to find out from the other side to know what their point of view is or did you contact any of their closest of the people? After doing this, he could have come to this House saying that he has heard both the sides and such is his conclusion and he would like the House to take into the confidence and he would like the House to give a decision. That is how it has to be done. That has not been done. Before such a thing has been done, even to disclose the intra – family affairs is not correct.

(Interruptions)

SRI M. VEERAPPA MOILY:– The circumstances have already hurt him in naming his son as impotent.

SRI R.V. DESHPANDE:– Who said it? We have never said.

SRI M. VEERAPPA MOILY:– The divorce petition has already said calling his son as impotent. His son is not impotent.

ಶ್ರೀ ಆರ್. ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾ ನಾಯಕರು, ಬಲಿಪಶು ಮಡುವುದು ಸರಿಯೇ ಎಂದು ಕೇಳಿದರು. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಗೆ ಲೇಟಾಗಿ ಬಂದರು. ನಾನು ಆಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ನಮಗೆ ಅವರನ್ನು ಬಲಿಪಶು ಮಾಡುವ ಇಚ್ಛೆ ಇಲ್ಲ. ನಾನು ಆಗಲೇ ಸ್ಪಷ್ಟವಾಗಿ ಹೇಳಿದೆ. I do not have any intention of making character assasination. I do not have any relation with divorce petition. They are personal matters. ನಾನು ಇನ್ನು ಮುಂದೆ ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಾವು ಏನು ಹೇಳಿದೆವು ಎಂದರೆ, ತಾವು ಕೇಳಿದ್ದೀರಿ. Whether you have contacted his father - in - law. Yes, I have contacted them. He told me that they have filed the petition in the Court and the Court is asking them to convince before issue of process, if the permission from the Karnataka Government is required because he is a Minister. ಆ ಮಾತನ್ನು ನಾನು ಹೇಳಿದೆ. ತಾವು ಇಲ್ಲಿ ಇದ್ದಿರಲಿಲ್ಲ. ಅಷ್ಟೇ ಅಲ್ಲ ಕಾಂಪ್ರಮೈಸ್ ಮಾಡಿ ಎಂದು ಪ್ರೆಷರ್ ಮಾಡುತ್ತಿದ್ದಾರೆ. They are coming on Monday with Rs. four lakhs ಹೇಳಿದ್ದಾರೆ. ಅಷ್ಟೇ ಅಲ್ಲ ನಾನು ಟೆಲಿಫೋನ್ ನಂಬರ್ ಕೊಟ್ಟೆ. ಸಭಾನಾಯಕರು ಅವರನ್ನು ಕಾಂಟಾಕ್ಟ್ ಮಾಡಲಿ ಎಂದು ಫಾದರ್ ಇನ್ ಲಾ ಹೆಸರು, ಟೆಲಿಫೋನ್ ನಂಬರ್ ಕೊಟ್ಟಿದ್ದೇನೆ. just to show my bonafides. ಪ್ರಶ್ನೆ ಏನೆಂದರೆ, 1993ರಲ್ಲಿ ಡೈವೋರ್ಸ್ ಪಿಟಿಷನ್, ಆಂಟಿ ಡೌರಿ ಆಕ್ಟ್ ಕೆಳಗೆ ಫೈಲ್ ಆಗಿದೆ. ಆಗ ತಾವು ಹೇಳಬಹುದು. 8 ವರ್ಷ ಏಕೆ ಸುಮ್ಮನೆ ಕುಳಿತಿದ್ದಿರಿ ಎಂದು. ಪ್ರಶ್ನೆ ಏನೆಂದರೆ 1991ರ ಪಿಟಿಷನ್ ತಾವು ಪೂರಾ ಓದಿಲ್ಲ. Only dowry taking is not an offence but even dowry asking is an offence. Secondly, when he is cited as an accused, more than legally, morally he should quit.

(Interruptions)

He can come with flying colours into the Cabinet, after he is acquitted. I have nothing against him. I have no personal enmity against anybody.

SRI M. VEERAPPA MOILY:– You raise the point on immoral grounds and asked him to resign on the moral grounds. It is a paradox of the highest order. How can you say that?

(Interruptions)

SRI R.V. DESHAPANDE:– Sir, I have given a notice. About his personal

matters, I have nothing. About Anti - Dowry Act, I have raised it and I have tried to convince the House and I am again requesting you to please drop him from the Ministry in the interest of the image of the Government.

SRI M. VEERAPPA MOILY:– I cannot ask the Minister to resign on the immoral grounds. If there is a moral ground, I will ask him to resign.

SRI R. V. DESHPANDE:– I had given a notice. The Minister is hesitating to make a statement. When the Minister is hesitating to make a statement, shadow is on you. He should have made a statement. I have given a notice.

(Interruptions)

ಶ್ರೀ ಎಂ. ಮಹದೇವ್:– ಕನ್ವಿನ್ಸ್ ಮಾಡಿದ್ದಾರೆಂದು ವಿರೋಧ ಪಕ್ಷ ನಾಯಕರು ಹೇಳುತ್ತಾರೆ, ಯಾರಿಗೆ ಮಾಡಿದ್ದಾರೆ ?

(Interruptions)

SRI R.V. DESHPANDE:– We are not convinced. We walk out.

(Members withdrew from the House)

SRI M. VEERAPPA MOILY:– For the sake of Mr. Bommai, you are walking out.

(Interruptions)

ಅಧ್ಯಕ್ಷರು:– ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ವಿವರವಾಗಿ ಹೇಳಿದ್ದರಿಂದ ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸುತ್ತೇನೆ.

ಶ್ರೀ ಎಂ.ವಿ.ವೆಂಕಟಪ್ಪ:– ಮಾನ್ಯ ಅಧ್ಯಕ್ಷರೇ ಉಪಾಧ್ಯಕ್ಷರ ಚುನಾವಣೆ ಇದೆ. 1.30 ಗಂಟೆಯ ಮೇಲೆ ರಾಹುಕಾಲ ಪ್ರಾರಂಭವಾಗುತ್ತದೆ.

ಅಧ್ಯಕ್ಷರು:– ಅಷ್ಟರೊಳಗೆ ಆಗುವುದಿಲ್ಲ.

ಪ್ರಕಟಣೆ

ದಿನಾಂಕ 17–3–93ರಂದು ನಡೆಯ ವಿಧಾನಸಭೆಯ ಕಾರ್ಯಕಲಾಪ ಸಲಹಾಸಮಿತಿಯ ಸಭೆಯು ಈ ಕೆಳಕಂಡಂತೆ ಸಭೆಯ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು.

18ನೇ ಮಾರ್ಚಿ 1993ರಿಂದ 22ನೇ ಮಾರ್ಚಿ 1993ರವರೆಗೆ	:	ಸರ್ಕಾರಿ ಕಾರ್ಯಕಲಾಪ ಹಾಗೂ 1993–94ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು.
23ನೇ ಮಾರ್ಚಿ 1993	:	ಧನ ವಿನಿಯೋಗ ವಿಧೇಯಕ ಮಂಡನೆ ಹಾಗೂ ಅಂಗೀಕಾರ
24ನೇ ಮಾರ್ಚಿ 1993ರಿಂದ 29ನೇ	:	ಉಪವೇಶನ ಇರುವುದಿಲ್ಲ.

ಮಾರ್ಚಿ 1993ರವರೆಗೆ
30ನೇ ಮಾರ್ಚಿ 1993ರಿಂದ : ಸರ್ಕಾರಿ ಕಾರ್ಯಕಲಾಪ ಹಾಗೂ ಶಾಸನ
8ನೇ ಏಪ್ರಿಲ್ 1993ರವರೆಗೆ : ರಚನಾ ಕಾರ್ಯಕಲಾಪಗಳು.

ಅಧ್ಯಕ್ಷರು:- ಈಗ ಸದನವನ್ನು ಒಂದು ಗಂಟೆ ಕಾಲ ಮುಂದೂಡಲಾಗಿದೆ. ಸಭೆ ಪುನಃ 2.30 ಗಂಟೆಗೆ ಸೇರುವುದು.

ಸಭೆಯು 1 ಗಂಟೆ 24 ನಿಮಿಷಗಳಿಗೆ ಮುಂದೂಡಲ್ಪಟ್ಟಿತು.

(ಮತ್ತೆ ಸಭೆಯು 2 ಗಂಟೆ 45 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

ಗಮನ ಸೆಳೆಯುವ ಸೂಚನೆಗಳು

ಬೆಂಗಳೂರಿನ ವಸಂತನಗರದ ಶ್ರೀ ಮುನೇಶ್ವರ ಸ್ವಾಮಿ ದೇವಸ್ಥಾನ ರಿಪೇರಿ ಮತ್ತು ಅಭಿವೃದ್ಧಿ

ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ ಕ್ಷೇತ್ರ):- ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ವಸಂತನಗರದ ಶ್ರೀ ಮುನೇಶ್ವರಸ್ವಾಮಿ ದೇವಸ್ಥಾನ ರಿಪೇರಿ ಮತ್ತು ಅಭಿವೃದ್ಧಿಗೊಳಿಸುವ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿರುವ ವಿಷಯಕ್ಕೆ ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆ ಕೊಡಬಯಸುತ್ತೇನೆ.

"ಬೆಂಗಳೂರು ವಸಂತನಗರದಲ್ಲಿರುವ ಶ್ರೀ ಮುನೇಶ್ವರಸ್ವಾಮಿ ದೇವಾಲಯದ ಜೀರ್ಣೋದ್ಧಾರಕ್ಕೆ ಆರಾಧನಾ ಯೋಜನೆಯ ಅಡಿ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಆದೇಶದ ಕ್ರಮಾಂಕ ಡಿಎಎಸ್ಎ 132-91-92 ದಿನಾಂಕ 4-8-1992 ರಲ್ಲಿ 20 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಸದರಿ ದೇವಾಲಯಕ್ಕೆ ಧನಸಹಾಯ ಮಂಜೂರಿಯಾದ ನಂತರ ಕಾಮಗಾರಿಯನ್ನು ವಿವಿಧೋದ್ದೇಶ ತಾಂತ್ರಿಕ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರುಗಳು ಕಂಟ್ರಾಕ್ಟ್ ಮೂಲಕ ಕೆಲಸ ಪ್ರಾರಂಭ ಮಾಡುವ ಸಂದರ್ಭದಲ್ಲಿ ಕುಂಚಿಟಿಗರ ವಿದ್ಯಾರ್ಥಿನಿಲಯದ ಆಡಳಿತ ವರ್ಗದವರು ಸದರಿ ದೇವಾಲಯದ ಕಾಮಗಾರಿಯನ್ನು ಪ್ರಾರಂಭಿಸಿದ್ದರಿಂದ ಶ್ರೀ ಮುನೇಶ್ವರ ದೇವಾಲಯ ಅಭಿವೃದ್ಧಿ ಸಂಸ್ಥೆಯವರಿಗೂ ಮತ್ತು ಕುಂಚಿಟಿಗರ ವಿದ್ಯಾರ್ಥಿನಿಲಯ ಆಡಳಿತವರ್ಗದವರ ನಡುವೆ ಭಿನ್ನಾಭಿಪ್ರಾಯ ಉಂಟಾಗಿರುವುದರಿಂದ ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್‌ರವರು ಸ್ಥಳಕ್ಕೆ ಭೇಟಿ ಮಾಡಿ ಎರಡೂ ಕಡೆಯವರ ಕಾಮಗಾರಿಗಳನ್ನು ಸಧ್ಯಕ್ಕೆ ನಿಲ್ಲಿಸಿರುತ್ತಾರೆ. ಸದರಿ ದೇವಾಲಯದ ಬಗ್ಗೆ ಕುಂಚಿಟಿಗರ ವಿದ್ಯಾರ್ಥಿನಿಲಯ ಆಡಳಿತವರ್ಗದವರಿಗೆ ಇರುವ ಹಕ್ಕಿನ ಬಗ್ಗೆ ದಾಖಲೆಗಳನ್ನು ಒದಗಿಸುವಂತೆ ಸೂಚಿಸಿದ್ದು, ದಾಖಲೆಗಳು ಬಂದ ಕೂಡಲೇ ಪರಿಶೀಲಿಸಿ ಸೂಕ್ತಕ್ರಮ ಕೈಗೊಳ್ಳಲಾಗುವುದು."

ಶ್ರೀ ಎ.ಕೆ. ಅನಂತಕೃಷ್ಣ:- ಮಾನ್ಯ ಅಧ್ಯಕ್ಷರೇ, ಇಲ್ಲಿ ಪ್ರಶ್ನೆ ಬಂದಿರುವುದು ಸುಮಾರು 150-160 ವರ್ಷಗಳಿಂದ ಆ ದೇವಾಲಯವಿದೆ. ಬಹಳ ಕಾಲದಿಂದ ಅಲ್ಲಿ ಬೇರೆ ಯಾವ ಜನಾಂಗದವರು ಇರಲಿಲ್ಲ. ಸಾಕಷ್ಟು ಗುಡಿಸಲು ಇದ್ದವು ಮಧ್ಯೆ ದೇವಾಲಯವಿತ್ತು. ಅವರೇ ಪೂಜೆಪುನಸ್ಕಾರಗಳನ್ನು

ಮಾಡುತ್ತಿದ್ದರು. ಅವರೇ ಅದನ್ನು ಮ್ಯಾನೇಜ್ ಮಾಡಿಕೊಂಡು ಬರುತ್ತಿದ್ದರು. ಸುಮಾರು 40 ವರ್ಷಗಳ ಕೆಳಗೆ ಸಿಐಟಿಬಿಯವರು ಒಂದು ಸೈಟನ್ನು ವಿದ್ಯಾರ್ಥಿನಿಲಯಕ್ಕೆ ಕೊಟ್ಟರು. ಆ ದೇವಾಲಯವನ್ನು ಬೇರೆ ಮಾಡಿಟ್ಟು ಅವರು ಕೊಟ್ಟಿದ್ದಾರೆ. 40 ವರ್ಷಗಳಿಂದ ಆ ದೇವಾಲಯಕ್ಕೆ ಅವರು ಏನೂ ಮಾಡಿರಲಿಲ್ಲ. ಆ ಜನ ಆರಾಧನಾ ಸ್ಕೀಮ್‌ನಲ್ಲಿ ನಾವು ಜೀರ್ಣೋದ್ಧಾರ ಮಾಡಲಿಕ್ಕೆ ಹೋದಾಗ ನಮ್ಮ ಜಾಗವೆಂದು ಆ ವಿದ್ಯಾರ್ಥಿನಿಲಯದವರು ಬಂದಿದ್ದಾರೆ. ನಾನು ಸಾಕಷ್ಟು ಅವರ ಹತ್ತಿರ ಮಾತನಾಡಿದ್ದೇನೆ. ಮೊದಲು ಆ ಮಾತು ಅವರು ಹೇಳಿರಲಿಲ್ಲ. ಈಗ ಅಲ್ಲಿಯೇ ವಾಸವಾಗಿರುವ ಜನರ ಮನಸ್ಸಿಗೆ ಬಹಳ ನೋವಾಗಿದೆ. ನಾವು ಹರಿಜನರು ನಮ್ಮ ದೇವಾಲಯಕ್ಕೆ ಬೇರೆ ಜನ ಬಂದು ಇದ್ದಕ್ಕಿದ್ದ ಹಾಗೆ ನಮ್ಮದು ಎಂದು ಹೇಳಿ ತೊಂದರೆ ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಮುಖ್ಯವಾದ ವಿಷಯ ಏನೆಂದರೆ ದೇವಾಲಯಗಳನ್ನು ಸರ್ಕಾರ ಅಥವಾ ಯಾವುದೋ ಒಂದು ಇಲಾಖೆ ಪರಭಾರೆ ಮಾಡುವುದಕ್ಕೆ ಅವಕಾಶವಿದೆಯೆ? ಎರಡನೆಯದು ಈ ತರಹ ಮಾಡಬೇಕಾದರೆ ಯಾವ ಷರತ್ತುಗಳಿಂದ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಈಗ ದಾಖಲೆಗಳನ್ನು ಕೊಡಿಯೆಂದು ಹೇಳಿದ್ದಾರೆ. ಅವರ ಹತ್ತಿರ ದಾಖಲೆ ಇರುವುದಕ್ಕೆ ಸಾಧ್ಯವಿಲ್ಲ. ಮೂಲಭೂತವಾಗಿ ಯಾವುದೇ ಒಂದು ದೇವಾಲಯ ಖಾಸಗೀ ಸಂಸ್ಥೆಯಾಗಿರುವುದಕ್ಕೆ ಸಾಧ್ಯವಿಲ್ಲ. ಆ ವಿಷಯದಲ್ಲಿ ಮಾನ್ಯಮಂತ್ರಿಗಳು ಏನು ಹೇಳುತ್ತಾರೆಂದು ಕೇಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಅನಂತಕೃಷ್ಣರವರು ಹೇಳಿದ ಅಭಿಪ್ರಾಯ ಸಾಧುವಾಗಿದೆ. ಆದರೆ ಎರಡು ವಾದವಿವಾದ ಬಂದ ಸಂದರ್ಭದಲ್ಲಿ ಅಧಿಕಾರಿಗಳು ಶಾಂತ ರೀತಿಯಲ್ಲಿ ಇದನ್ನು ಬಗೆಹರಿಸಬೇಕಾಗುತ್ತದೆ. ತಹಶೀಲ್ದಾರ್‌ರವರಿಗಿಂತ ಮೇಲಿನಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಶ್ರೀಮಾನ್ ಅನಂತಕೃಷ್ಣರವರು ಮತ್ತು ಸಂಬಂಧಪಟ್ಟವರು ಎಲ್ಲರ ಜೊತೆ ಮಾತನಾಡಿ ಆದಷ್ಟು ಬೇಗ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸೂಚನೆ ನೀಡುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ:- ಮಾನ್ಯ ಅಧ್ಯಕ್ಷರೆ ನನ್ನ ಮೂಲ ಪ್ರಶ್ನೆಗೆ ಉತ್ತರ ಬರಲಿಲ್ಲ. ದೇವಾಲಯವನ್ನು ಪರಭಾರೆ ಮಾಡುವಂಥಹದ್ದು ನಮ್ಮ ರಾಜ್ಯ ಸರ್ಕಾರದಲ್ಲಿ ಏನಾದರೂ ನೀತಿ ಇದೆಯೆ? ಅಲ್ಲಿ ಜನಗಳಿಗೂ ಮತ್ತು ಅವರಿಗೂ ಘರ್ಷಣೆ ಬಂದಿಲ್ಲ. ಘರ್ಷಣೆ ಬಂದಿರುವುದು ಆರಾಧನಾ ಸ್ಕೀಮ್‌ನಲ್ಲಿ ಸರ್ಕಾರ ರಿಪೇರಿ ಮಾಡುವುದಕ್ಕೆ ಹೋದಾಗ ಹಾಸ್ಟಲ್ ಮ್ಯಾನೇಜ್‌ಮೆಂಟ್‌ನವರು ಬಂದು ತೊಂದರೆ ಕೊಡುತ್ತಿದ್ದಾರೆ. ಜನಗಳಿಗೆ ತೊಂದರೆಯಾಗಿದ್ದರೆ ಇವರನ್ನು ಕರೆದುಕೊಂಡು ಬಂದು ಪಂಚಾಯಿತಿ ಮಾಡುವುದಕ್ಕೆ ಅನುಕೂಲವಾಗಿರುವುದು. ಬಂದಿರುವುದು ಸರ್ಕಾರಕ್ಕೂ ಮತ್ತು ವಿದ್ಯಾರ್ಥಿನಿಲಯದ ಮ್ಯಾನೇಜ್‌ಮೆಂಟಿಗೂ. ಅದರ ತೀರ್ಮಾನ ಯಾರು ಮಾಡಬೇಕು ಸ್ವಾಮಿ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೆ, ದೇವಾಲಯವನ್ನು ಪರಭಾರೆ ಮಾಡುವ ಪ್ರಶ್ನೆಯಿಲ್ಲ. ಪರಭಾರೆ ಮಾಡಬೇಕೆನ್ನುವುದು ಸರ್ಕಾರದ ಉದ್ದೇಶವೂ ಅಲ್ಲ. ಅದು ಸರ್ಕಾರದ ನೀತಿಯೂ ಅಲ್ಲ. ಇದು ಮುಜರಾಯಿ ದೇವಾಲಯವಲ್ಲ. ಇದು ಖಾಸಗಿ ದೇವಾಲಯ. ಆದ್ದರಿಂದ ಇಲಾಖೆಯ ಅಧಿಕಾರಿಗಳ ಮುಖಾಂತರ ತಮ್ಮನ್ನು ಸೇರಿಸಿ ಆದಷ್ಟು ಬೇಗ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ತಾವು ಹೇಳುವುದರಲ್ಲಿ ನ್ಯಾಯವಿದೆ.

ಶ್ರೀ ಎ.ಕೆ. ಅನಂತಕೃಷ್ಣ:- ಒಂದೇ ಒಂದು ಮಾತು. ಇದು ತಕರಾರು ಜನಕ್ಕೂ ಅವರಿಗೂ ಬಂದಿಲ್ಲ. ತಕರಾರು ಬಂದಿರುವುದು ಸರ್ಕಾರಕ್ಕೂ ಮತ್ತು ಜನಕ್ಕೆ. ಸರ್ಕಾರ ತೀರ್ಮಾನ ಮಾಡಬೇಕಾದರೆ ಪಂಚಾಯತಿಯ ಪ್ರಶ್ನೆ ಎಲ್ಲಿಂದ ಬರುತ್ತದೆ? ಅದು ಅವರು 150-160 ವರ್ಷಗಳಿಂದ ಪೂಜೆ ಮಾಡುತ್ತಿರುವ ಜಾಗ. ಅವರ ಜಾಗವನ್ನು ನಾವು ಅಕ್ವೈರ್ ಮಾಡಿ, ವಿದ್ಯಾರ್ಥಿ

ನಿಲಯವನ್ನು ಕಟ್ಟುವುದಕ್ಕೆ ತೀರ್ಮಾನ ಮಾಡಿ, ಆ ಜನರಿಗೆ ತೊಂದರೆ ಕೊಟ್ಟರೆ ಹೇಗೆ? ಈಗ ದೇವಸ್ಥಾನಕ್ಕೆ ತೊಂದರೆ ಕೊಡುತ್ತಾರೆ ಅಂದರೆ, ಸರ್ಕಾರ ತೀವ್ರ ಕ್ರಮ ತೆಗೆದುಕೊಳ್ಳಬೇಕು, ಕಟ್ಟಡ ಕಟ್ಟುವುದಕ್ಕೆ ಮುಂದುವರೆಯಬೇಕು. ಅವರು ಏನು ಅಡ್ಡಿ ಬರುತ್ತಾರೆ. ಅದನ್ನು ಎದುರಿಸಬೇಕಾದದ್ದು ಸರ್ಕಾರದ ಜವಾಬ್ದಾರಿ. ಹರಿಜನ – ಗಿರಿಜನರಿಗೆ ಏನು ರಕ್ಷಣೆ ಕೊಡಬೇಕು, ಅದನ್ನು ಕೊಡುವುದನ್ನು ಬಿಟ್ಟು ನಮ್ಮನ್ನು ಕರೆಸಿ ಪಂಚಾಯ್ತಿ ಮಾಡೋಣ ಎಂದರೆ, ಆ ಪಂಚಾಯತಿಗೆ ನಾನು ತಯಾರಾಗಿಲ್ಲ. ಸರ್ಕಾರ ತನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಸರ್ಕಾರಕ್ಕೂ, ದೇವಸ್ಥಾನದ ಆಡಳಿತ ವರ್ಗಕ್ಕೂ ಯಾವ ಘರ್ಷಣೆ ಇಲ್ಲ. ಇದು ವಿದ್ಯಾರ್ಥಿ ನಿಲಯಕ್ಕೆ ಅವರು ತಕರಾರು ಮಾಡಿದ್ದರಿಂದ ಈ ವಿಚಾರ ಎದ್ದಿದೆ. ಇದನ್ನು ಬಗೆಹರಿಸೋಣ. ವಿವಾದವನ್ನು ಇಟ್ಟುಕೊಳ್ಳಬೇಕೆಂದು ಯಾರ ಉದ್ದೇಶವೂ ಇಲ್ಲ. ಸರ್ಕಾರದವರು ಸೂಕ್ತ ರೀತಿಯಲ್ಲಿ, ಯಾವುದೇ ರೀತಿಯಲ್ಲಿ ಖಾಸಗಿ ದೇವಸ್ಥಾನಕ್ಕೆ ತೊಂದರೆಯಾಗದ ರೀತಿಯಲ್ಲಿ ಬಗೆಹರಿಸೋಣ.

ಪರಿವಾರ ಜನಾಂಗದವರಿಗೆ ಪರಿಶಿಷ್ಟ ವರ್ಗದ ಸೌಲಭ್ಯ ನೀಡುವಲ್ಲಿ ಉಂಟಾಗಿರುವ ತೊಂದರೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಮಾನ್ಯ ಅಧ್ಯಕ್ಷರೇ, ಪರಿವಾರ ಜನಾಂಗದವರಿಗೆ ಪರಿಶಿಷ್ಟ ವರ್ಗದ ಸೌಲಭ್ಯಗಳನ್ನು ನೀಡುವಲ್ಲಿ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಧರಮ್‌ಸಿಂಗ್ (ಸಮಾಜ ಕಲ್ಯಾಣ ಮಂತ್ರಿ):– ಮಾನ್ಯ ಅಧ್ಯಕ್ಷರೇ, ನನ್ನ ಹೇಳಿಕೆ ಓದಲು ತಮ್ಮ ಅಪ್ಪಣೆ ಕೋರುತ್ತೇನೆ.

ಭಾರತ ಸರ್ಕಾರ ಪ್ರಕಟಿಸಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಗಳ ಪಟ್ಟಿಯ ಪ್ರಕಾರ ಪರಿವಾರ ಜನಾಂಗ ಪರಿಶಿಷ್ಟ ವರ್ಗದಲ್ಲಿ ಸೇರಿಸಿರುವುದಿಲ್ಲ. ಆದರೆ ರಾಜ್ಯ ಸರ್ಕಾರವು ಪರಿವಾರ (ಅಲ್ಲದೆ ನಾಯಕ್, ನಾಯ್ಕ, ಬೇಡ, ಬೇಡರ್, ವಾಲ್ಮೀಕಿ, ತಳವಾರ) ಜನಾಂಗವನ್ನು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಇರುವ ನಾಯಕ ಜನಾಂಗದ ಸಮಾನ ಪಂಗಡವಾಗಿ ಪರಿಗಣಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಆದರೆ ಕೇಂದ್ರ ಸರ್ಕಾರವು ನಾಯಕ್, ನಾಯ್ಕ, ಬೇಡ, ವಾಲ್ಮೀಕಿ ಮತ್ತು ಬೇಡರ್ ಜಾತಿಗಳನ್ನು 19–4–91ರಿಂದ ಪರಿಶಿಷ್ಟ ವರ್ಗವಾಗಿ ಪರಿಗಣಿಸಿದೆ. ಆದರೆ ಪರಿವಾರ ಜನಾಂಗವನ್ನು ಇನ್ನು ಪರಿಶಿಷ್ಟ ವರ್ಗವೆಂದು ಪರಿಗಣಿಸಿರುವುದಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪುನಹ ಪತ್ರ ಬರೆದು ಪರಿವಾರ ಜನಾಂಗವನ್ನು ಪರಿಶಿಷ್ಟ ವರ್ಗವಾಗಿ ಪರಿಗಣಿಸಬೇಕೆಂದು ಈಗಾಗಲೇ ಕೋರಲಾಗಿದೆ. ಯಾವುದೇ ಜಾತಿಗಳನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಕ್ಕೆ ಸೇರಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇರುವುದರಿಂದ ಮಾನ್ಯ ಶಾಸಕರು ಕೋರಿರುವಂತೆ ರಾಜ್ಯ ಸರ್ಕಾರ ಪರಿವಾರ ಜನಾಂಗವನ್ನು ಪರಿಶಿಷ್ಟ ವರ್ಗವೆಂದು ಪರಿಗಣಿಸಲು ಸಾಧ್ಯವಿರುವುದಿಲ್ಲ. ಕೇಂದ್ರ ಸರ್ಕಾರವು ಈ ಜನಾಂಗವನ್ನು ಪರಿಶಿಷ್ಟ ವರ್ಗವೆಂದು ಪರಿಗಣಿಸಿದ ಕೂಡಲೇ ಇವರಿಗೆ ಪರಿಶಿಷ್ಟ ವರ್ಗದವರಿಗೆ ಸಲ್ಲಬೇಕಾದ ಎಲ್ಲಾ ಸೌಲಭ್ಯಗಳನ್ನು ನೀಡಲಾಗುವುದು.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರಕ್ಕೆ ಇದನ್ನು ಶಿಫಾರಸ್ಸು ಮಾಡಿದ್ದಾರೆ. ನಾಯಕ ಜನಾಂಗದ ಪರ್ಯಾಯ ವರ್ಗ ಪರಿವಾರ ಎನ್ನತಕ್ಕಂಥಾದ್ದನ್ನು ತತ್ವಶಃ ಸರ್ಕಾರ ಒಪ್ಪಿಕೊಂಡಿದೆ. ಸರ್ಕಾರ ಒಪ್ಪಿಕೊಂಡ ಮೇಲೆ, ಹಿಂದೆ ದೇವರಾಜ ಅರಸು ಅವರ ಕಾಲದಲ್ಲಿ ಕೇಂದ್ರ ಸರ್ಕಾರದಿಂದ ಆಜ್ಞೆ ಬರುವವರೆಗೆ ಅಥವಾ ತಿದ್ದುಪಡಿ ಆಗುವವರೆಗೆ ನಾವು ಅವರಿಗೆ ಶೈಕ್ಷಣಿಕವಾಗಿ

ಏನೇನು ಸೌಲಭ್ಯಗಳನ್ನು ಕೊಡಬೇಕೋ ಅದನ್ನು ಕೊಡುತ್ತೇವೆ ಎನ್ನತಕ್ಕಂಥಾದ್ದು ರಾಜ್ಯ ಸರ್ಕಾರದ ನಿರ್ಧಾರವಾಗಿದೆ. ಇದರ ಬಗ್ಗೆ ಸರ್ಕಾರದ ಆದೇಶವೂ ಹೊರಟಿದೆ. ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದ್ದರೆ, ಈಗ ಅದು ಬರುವವರೆಗೆ ಇಲ್ಲಿ ಏನೇನು ಸೌಲಭ್ಯಗಳನ್ನು ಅವರಿಗೆ ಕೊಡಬೇಕೋ, ಅದನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ನನಗೆ ತಮ್ಮ ಬಗ್ಗೆ ಬಹಳ ಗೌರವ ಇದೆ. ತಾವು ಡೆಲ್ಲಿಗೆ ಹೋಗಿ ತಾವೇ ಕುಳಿತುಕೊಂಡು ಈ ಬಗ್ಗೆ ತಿದ್ದುಪಡಿ ಲೋಕಸಭೆಯಲ್ಲಿ ಬರತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಕಳಕಳಿಯಿಂದ ನಾನು ಮನವಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ತಾವು ತತ್ವಶಃ ಒಪ್ಪಿಕೊಂಡಿರುವುದರಿಂದ, ಇದರ ಬಗ್ಗೆ ಹಿಂದೆ ಅರಸು ಅವರ ಕಾಲದಲ್ಲಿ ಏನು ಒಂದು ಆಜ್ಞೆ ಹೊರಟಿತ್ತೋ ಅದರಂತೆ ಅವರಿಗೆ ಅನುಕೂಲ ಮಾಡಿಕೊಡುವ ವ್ಯವಸ್ಥೆಯನ್ನು ತಾವು ಮಾಡಬೇಕು. ಎರಡನೆಯದಾಗಿ ನಮ್ಮಲ್ಲಿ ಈ ಪರಿವಾರ, ನಾಯಕ ಜನಾಂಗ ಅತ್ಯಂತ ಹಿಂದುಳಿದ ಜನಾಂಗ. ಇವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ಮೊದಲಿನಿಂದಲೂ ಒತ್ತಾಯ ಇದೆ. ಇವರ ಜೊತೆಗೆ ಉಪ್ಪಾರ ಮತ್ತು ಕಮ್ಮಾರ ಎನ್ನುವ ವರ್ಗಗಳು ಇವೆ. ಇವರ ಬಗ್ಗೆ ನಿಜವಾಗಿಯೂ ಯಾರಿಗೂ ಗೊತ್ತಿಲ್ಲ. ಹಿಂದುಳಿದ ವರ್ಗಗಳ ಆಯೋಗದವರು ಇವರನ್ನು ಗುರುತಿಸಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ತಮ್ಮ ಸರ್ಕಾರವಾದರೂ ಈ ಆಯೋಗ ಮಾಡಿ ಇವರನ್ನು ಗುರುತಿಸಬೇಕೆಂದು ನನ್ನ ಒತ್ತಾಯ ಇದೆ. ಅದರ ಜೊತೆಗೆ ಆಯೋಗ ರಚನೆ ಮಾಡುವುದರೊಳಗೇ ಈ ಉಪ್ಪಾರ ಮತ್ತು ಕಮ್ಮಾರ ವರ್ಗದವರು ಯಾರಿದ್ದಾರೆ, ಅವರನ್ನು ರಾಜ್ಯಸರ್ಕಾರವೇ ಗುರುತಿಸಿ ಅವರಿಗೆ ಏನೇನು ಸವಲತ್ತುಗಳು ಬೇಕು ಎಂದು ನೋಡಿ ಅದನ್ನು ಕೊಡಬೇಕು.

ಮೈಸೂರು ಜಿಲ್ಲೆಯಲ್ಲಿ ಕೆಲವು ಕಡೆ, ಕೆಲವು ಭಾಗದಲ್ಲಿ ಇವರು ಅತ್ಯಂತ ಕಡುಬಡತನದಿಂದ, ಯಾವುದೇ ಸೌಲಭ್ಯವಿಲ್ಲದೇ ಜೀವನ ಮಾಡುತ್ತಿದ್ದಾರೆ. ತಮಗೆ ಹೇಳುವುದಾದರೆ, ಈ ಉಪ್ಪಾರ ಮತ್ತು ಕಮ್ಮಾರ ಜನ ಬಹಳ ಒಳ್ಳೆಯ ಜನ. ಮಾನ್ಯ ದೇವರಾಜ ಅರಸರ ಕಾಲದಲ್ಲಿ, ಮಸಣಶೆಟ್ಟರು ಎನ್ನುವವರನ್ನು ವಿಧಾನ ಪರಿಷತ್ತಿಗೆ ನಾಮಕರಣ ಮಾಡಿದ್ದರು. ಹಿಂದಿನ ಸರ್ಕಾರ ಮತ್ತೊಬ್ಬರನ್ನು ಮಾಡಿದ್ದರು. ಈಗ ನಾನು ಹೇಳುವುದೇನೆಂದರೆ, ಈ ಸರ್ಕಾರದವರೂ ಕೂಡ ಮುಂದೆ ಯಾವುದಾದರೂ ಮಂಡಲಗಳಿಗೆ ಅಥವಾ ಅನೇಕ ಅಧಿಕಾರ ಸ್ಥಾನಗಳಿಗೆ ಭರ್ತಿ ಮಾಡುವಾಗ, ಈ ಉಪ್ಪಾರ ಮತ್ತು ಕಮ್ಮಾರ ಜನಾಂಗವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇವರಿಗೆ ಮಂಡಲಿಗಳಲ್ಲಿ ಅವಕಾಶ ಕೊಡಬೇಕೆಂಬುದು ನನ್ನ ಒತ್ತಾಯ. ಜೊತೆಗೆ, ಸಮಾಜ ಕಲ್ಯಾಣ ಸಚಿವರು, ಈ ಸದನ ಮುಗಿದ ನಂತರ, ನನ್ನ ಜೊತೆಯಲ್ಲಿ ಬರುವುದಾದರೆ, ಈ ಜನಾಂಗದವರನ್ನು ತೋರಿಸುತ್ತೇನೆ. 3–4 ತಾಲ್ಲೂಕಿನಲ್ಲಿ ಈ ಜನ ಹೇಗಿದ್ದಾರೆ, ಯಾವ ರೀತಿ ಜೀವಿಸುತ್ತಿದ್ದಾರೆ, ಅವರ ಪರಿಸ್ಥಿತಿ ಏನು ಎನ್ನುವುದನ್ನು ಅರಿತುಕೊಂಡು ಬರೋಣ. ನೀವು ಆಯೋಗ ರಚನೆ ಮಾಡಿ; ಆದರೆ, ಉಪ ಜಾತಿ ಎಂದು ವ್ಯವಸ್ಥೆ ಮಾಡುವುದಕ್ಕೆ ಮುಂಚೆ, ಸರ್ಕಾರಕ್ಕೆ ಒಂದು ವರದಿ ಕೊಟ್ಟು, ಇವರಿಗೆ ಜೀವನ ಮಾಡುವುದಕ್ಕೆ ಅನುಕೂಲ ಮಾಡತಕ್ಕ ವ್ಯವಸ್ಥಿತವಾದ ಒಂದು ತೀರ್ಮಾನವನ್ನು ಕೈಗೊಳ್ಳಬೇಕು ಮತ್ತು ಹಿಂದೆ ಇರತಕ್ಕಂಥ ಪರಿವಾರ ಜನಾಂಗದ ಬಗ್ಗೆ ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಾಬಾಗೌಡ ಆರ್. ಪಾಟೀಲ್:– ನಮ್ಮ ತಾಲ್ಲೂಕಿನಲ್ಲಿ ಮತ್ತು ತಮ್ಮ ತಾಲ್ಲೂಕಿನಲ್ಲಿ ಬೇಡರ ಎಂಬ ಜನಾಂಗದವರಿದ್ದಾರೆ. ಇವರನ್ನು ಪ್ರಾಥಮಿಕ ಶಾಲಾ ಶಿಕ್ಷಕರು "ಬೇಡರ" ಎಂದು ಬರೆದರೆ ಕಾಗದದ ಭಾಷೆಯಾಗುತ್ತದೆಂದು ತಿಳಿದು, "ಬೇರಡ" ಎಂದು ಬರೆದ ಕಾರಣ, ಇವರಿಗೆ ಸಿಗತಕ್ಕ ಸವಲತ್ತಿನಿಂದ ಸಾವಿರಾರು ಜನ ಮಕ್ಕಳು ವಂಚಿತರಾಗಿದ್ದಾರೆ. ಆದ್ದರಿಂದ, ಬೇಡರ ಮತ್ತು ಬೇರಡ ಎರಡೂ ಒಂದೇ ಎಂದು ತಾವು ಶಿಫಾರಸ್ ಮಾಡಬೇಕು.

ಅಧ್ಯಕ್ಷರು:– ಗಮನ ಸೆಳೆಯುವ ಸೂಚನೆಯ ಮೇಲೆ ಅವರು ಹೇಳುವುದಕ್ಕೂ, ತಾವು ಹೇಳುತ್ತಿರುವುದಕ್ಕೂ ಸಂಬಂಧ ಬರುವುದಿಲ್ಲ.

ಶ್ರೀ ಧರ್ಮಸಿಂಗ್:– ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜರು ಪ್ರಸ್ತಾಪ ಮಾಡಿದ ಹಾಗೆ, 23–1–86ರಲ್ಲಿ, ಶ್ರೀಮಾನ್ ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದಾಗ, ಈ ಪರಿವಾರ, ತಳವಾರ ಜನಾಂಗದವರಿಗೆ ಶೈಕ್ಷಣಿಕ ಮೀಸಲಾತಿ ಮತ್ತು ಇನ್ನೂ ಕೆಲವು ರಿಯಾಯಿತಿಗಳನ್ನು ಕೊಟ್ಟಿರತಕ್ಕ ಆದೇಶ ಇದೆ. ಈ ಆದೇಶವನ್ನು ಅನುಷ್ಠಾನಕ್ಕೆ ತರುತ್ತಿದ್ದೇವೆ. ಮೊನ್ನೆ ತಾವು ಮತ್ತು ಬೇರೆ ಶಾಸಕರೂ ಕೂಡ ಹೇಳಿದ್ದಾರೆ. ನಾವು ಈಗ 1986ರ ಆದೇಶವನ್ನು ಪರಿಪಾಲನೆ ಮಾಡಲು ಮತ್ತು ಅದನ್ನು ಜಾರಿಗೆ ತರತಕ್ಕ ರೀತಿಯಲ್ಲಿ ಆದೇಶವನ್ನು ಕೊಟ್ಟಿದ್ದೇವೆ. ಈಗಾಗಲೇ ಆ ಆದೇಶದ ಪ್ರಕಾರ, ಪರಿವಾರ ಮತ್ತು ತಳವಾರ ಜನರಿಗೆ ಎಜುಕೇಷನ್ ಸೌಲಭ್ಯ, ಶೈಕ್ಷಣಿಕ ಮೀಸಲಾತಿ ಮತ್ತು ಬೇರೆ ಬೇರೆ ರಿಯಾಯಿತಿಗಳೂ ಸಿಗುತ್ತಿವೆ. 19–4–91ರಲ್ಲಿ ಈ ಪರಿವಾರ ಮತ್ತು ತಳವಾರ ಜನಾಂಗವನ್ನೂ ಕೂಡ ಸೇರಿಸಬೇಕೆನ್ನುವುದು ಪ್ರಸ್ತಾಪಕ್ಕೆ ಬಂದಿತ್ತು. ಆದರೆ, ಇದಕ್ಕೆ ಸಂವಿಧಾನದ ತಿದ್ದುಪಡಿಯಾಗಬೇಕು. ಈ ವಿಷಯವನ್ನು ಈಗಾಗಲೇ ತಮಗೂ ಕೂಡ ಹೇಳಿದ್ದೇನೆ. ಇದು ತಿದ್ದುಪಡಿಯಾಗುವುದಕ್ಕೆ ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಮೊದಲು ಇದು ಏಕೆ ಬಿಟ್ಟುಹೋಯಿತೋ ಗೊತ್ತಾಗಲಿಲ್ಲ. ಈ ಪರಿವಾರ ಮತ್ತು ತಳವಾರ ಬಿಟ್ಟುಹೋಗಿದೆ. 15ನೇ ತಾರೀಖು ಜನವರಿ ತಿಂಗಳಲ್ಲಿ ಈ ಟ್ರೈಬಲ್ ಸಭೆಗೆ ಹೋದಾಗ, ಅಲ್ಲಿನ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯವರಾದ ಮೂರ್ತಿ ಎಂಬುವವರನ್ನೂ ಭೇಟಿಯಾಗಿದ್ದೆ. ಅವರು ಈ ವಿಚಾರವಾಗಿ ಎಕ್ಸಿಕ್ಯುಟಿವ್ ಆರ್ಡರ್ ಕೊಡುತ್ತೇವೆಂದು ಹೇಳಿದ್ದಾರೆ. 26ನೇ ತಾರೀಖು, ಡೆಲ್ಲಿಯಲ್ಲಿ 4 ದಿವಸ ಇರತಕ್ಕ ಸಂದರ್ಭದಲ್ಲಿ, ಈ ತಿದ್ದುಪಡಿ ತರುವುದಕ್ಕೆ ನಾನು ಮತ್ತೊಮ್ಮೆ ಹೆಚ್ಚಿನ ರೀತಿಯಲ್ಲಿ ಒತ್ತಾಯ ಮಾಡುತ್ತೇನೆ. ಇದು ಕೂಡ ಆಗಲೇಬೇಕು. ಈಗಾಗಲೇ ನಾವು ಕಳುಹಿಸಿದ್ದೇವೆ. ಒಂದೇ ಮನೆಯಲ್ಲಿ ತಳವಾರ ಸವಲತ್ತು ಪಡೆಯುತ್ತಿದ್ದಾನೆ, ಈ ಪರಿವಾರ, ನಾಯಕ ಎಂಬುವರಲ್ಲಿ ಒಬ್ಬರಿಗೆ ಸವಲತ್ತು ಸಿಕ್ಕುತ್ತಾ ಇದೆ, ಇನ್ನೊಬ್ಬರಿಗೆ ಸಿಕ್ಕುತ್ತಾ ಇಲ್ಲ. ಇದು ಬಹಳ ಅನ್ಯಾಯವಾಗಿದೆ, ತಮ್ಮ ಕಳಕಳಿ ನನಗೂ ಗುರುತಿದೆ. ಇದರ ಬಗ್ಗೆ ಸಾಕಷ್ಟು ಜನ ಬಂದು ಒತ್ತಾಯ ಮಾಡಿದ್ದಾರೆ, ನಾನು ಕೂಡ ಕೇಂದ್ರಕ್ಕೆ ಒತ್ತಾಯ ಮಾಡಿ, ಮಾಡುತ್ತೇನೆ. ಮತ್ತೊಂದು ಬೇರೆ ಬೇರೆ ಕೆಲವು ಉಪಜಾತಿಗಳನ್ನು ಸೇರಿಸುವ ವಿಚಾರದಲ್ಲಿ ಈಗಾಗಲೇ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪಸಮಿತಿ ರಚನೆಯಾಗಿದೆ. ಬೇರೆ ಬೇರೆ ವಿಷಯಗಳೂ ಇವೆ. ಇದನ್ನು ನೋಡಿ ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್:– ಈ 'ಬೇಡ' ಎಂಬುದರಲ್ಲಿ ಒಂದು ಅಕ್ಷರ ಬದಲಾವಣೆಯಾಗಿದೆ. ಈ ಪರಿವಾರ ಮತ್ತು ಕಮ್ಮಾರ ಜನಾಂಗದ ವಿಚಾರವಾಗಿ, ತಾವು ಒಂದು ಸಾರಿ ಆ ಕಡೆ ಪ್ರವಾಸ ಬಂದಾಗ ನೋಡಬೇಕು. ತಾವು ಈಗಾಗಲೇ ಸರ್ಕಾರದಿಂದ ಆದೇಶ ಹೊರಡಿಸಿ, ಅವರಿಗೆ ಅನುಕೂಲಗಳನ್ನು ಒದಗಿಸಿದ್ದೇವೆಂದು ಹೇಳಿದಿರಿ, ಈ ಆದೇಶವನ್ನು ನಮಗೆ ಕೊಡಬೇಕು.

ಶ್ರೀ ಧರ್ಮಸಿಂಗ್:– ತಾವು ಮತ್ತು ಬಾಬಾಗೌಡರು ಏನು ಪ್ರಸ್ತಾಪ ಮಾಡಿದ್ದೀರಿ, ಇವೆಲ್ಲವೂ ಉಪ ಸಮಿತಿ ಮುಂದೆ ಇದೆ. ಇದರ ಬಗ್ಗೆ ಕೂಡ ವಿಚಾರ ಮಾಡುತ್ತೇವೆ ಮತ್ತು ಹಾಲಿ ಹೊರಡಿಸಿರತಕ್ಕ ಸರ್ಕಾರಿ ಆದೇಶವನ್ನೂ ಕಳುಹಿಸಿಕೊಡುತ್ತೇನೆ.

ಉಪಾಧ್ಯಕ್ಷರ ಚುನಾವಣೆ

ಅಧ್ಯಕ್ಷರು:- ಶ್ರೀ ಎ. ನಾಗರಾಜುರವರು ಶ್ರೀ ಅಂಜನಮೂರ್ತಿ ಅವರನ್ನು ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂಬ ಪ್ರಸ್ತಾಪವನ್ನು ಮಂಡಿಸುವುದು.

ಶ್ರೀ ಎ. ನಾಗರಾಜು:- ಮಾನ್ಯ ಅಧ್ಯಕ್ಷರೇ.

"ಶ್ರೀ ಅಂಜನಮೂರ್ತಿ ಅವರನ್ನು ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ."

ಶ್ರೀ ಎಂ.ವಿ. ವೆಂಕಟಪ್ಪ:- ಮಾನ್ಯ ಅಧ್ಯಕ್ಷರೇ, ಶ್ರೀ ಎ. ನಾಗರಾಜುರವರು ಮಂಡಿಸಿದ ಸೂಚನೆಯನ್ನು ನಾನು ಅನುಮೋದಿಸುತ್ತೇನೆ.

ಅಧ್ಯಕ್ಷರು:- ಪ್ರಸ್ತಾವವನ್ನು ಮಂಡಿಸಲಾಯಿತು. ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಶ್ನೆ ಏನೆಂದರೆ:-

"ಶ್ರೀ ಅಂಜನಮೂರ್ತಿ ಅವರನ್ನು ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸುವುದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಶ್ರೀ ಅಂಜನಮೂರ್ತಿಯವರು ವಿಧಾನಸಭೆಯ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದರು.)

† ಶ್ರೀ ಎಂ. ವೀರಪ್ಪಮೊಯಿಲಿ:- ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ಶ್ರೀ ಅಂಜನಮೂರ್ತಿಯವರು ಈ ಸದನದ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದ ಬಗ್ಗೆ ಈ ಸದನದ ಎಲ್ಲಾ ಸದಸ್ಯರ ಪರವಾಗಿ ನಾನು ವಿಶೇಷವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಪ್ರಮುಖವಾಗಿ ನಮ್ಮ ವಿರೋಧಪಕ್ಷದ ನಾಯಕರು ಮತ್ತು ವಿರೋಧಪಕ್ಷದ ಸದಸ್ಯರು ಇವತ್ತು ಅವಿರೋಧವಾಗಿ ಉಪಾಧ್ಯಕ್ಷರ ಚುನಾವಣೆಗೆ ಸಹಕರಿಸಿದ್ದಾರೆ. ಅವರು ಒಳ್ಳೆಯ ಪರಂಪರೆಯನ್ನು ಒಳ್ಳೆಯ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ಅವರಿಗೂ ಕೂಡ ನಾನು ಅಭಿನಂದನೆಗಳನ್ನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಶ್ರೀ ಅಂಜನಮೂರ್ತಿಯವರು ಈ ಸದನದ ಸಕ್ರಿಯ ಸದಸ್ಯರು ಆಗಿದ್ದರು. ಮತ್ತು ಅವರು ಕಲಾ ಮತ್ತು ಕಾನೂನು ಪದವೀಧರರು ಕೂಡ. ಅವರು ಒಂದೆರಡು ದಶಕಗಳ ಕಾಲ ವಕೀಲರಾಗಿ ಹೈಕೋರ್ಟಿನಲ್ಲಿ ಮತ್ತು ಬೇರೆ ಬೇರೆ ಕೋರ್ಟುಗಳಲ್ಲಿ ಪ್ರಾಕ್ಟೀಸ್ ಮಾಡಿ ಅನುಭವವನ್ನು ಕೂಡ ಪಡೆದಂತಹ ಒಬ್ಬ ಸಂಪನ್ನರು. ತಮಗೆ ಗೊತ್ತಿರಬಹುದು ಈ ಹಿಂದೆ ಈ ಸದನದಲ್ಲಿ ಲೋಕಸೇವಾ ನಿರತ ಹನುಮಂತಪ್ಪನವರು ಬಹಳ ಉನ್ನತ ವ್ಯಕ್ತಿ. ಬಹುಶಃ ಅವರು ಒಂದೆರಡು ಬಾರಿ ಈ ಸದನದ ಸದಸ್ಯರಾಗಿದ್ದರು. ಅವರ ಸುಪುತ್ರರಾಗಿ ಒಳ್ಳೆಯ ಹೆಸರನ್ನು ಸಮಾಜ ಸೇವಾ ಕ್ಷೇತ್ರದಲ್ಲಿ ಗಳಿಸಿ ಕರ್ನಾಟಕ ರಾಜ್ಯದಲ್ಲಿ ಪ್ರಸಿದ್ಧರಾಗಿದ್ದಾರೆ.

3.15 ಪಿ.ಎಂ.

ಸಮಾಜ ಸೇವಾ ಕ್ಷೇತ್ರದಲ್ಲಿ ದುಡಿದು ಹೆಸರು ಗಳಿಸಿ ಪ್ರಸಿದ್ಧರಾಗಿದ್ದಾರೆ. ಅವರು ಅಂಥ ಒಂದು ಹಿನ್ನೆಲೆಯಲ್ಲಿ ಬಂದವರು. ಇವರು ನೆಲಮಂಗಲದಲ್ಲಿ ಬಹಳ ಒಳ್ಳೆಯ ವಿದ್ಯಾಸಂಸ್ಥೆಗಳನ್ನು ಕೂಡ ಕಟ್ಟಿ ನಡೆಸಿಕೊಂಡು ಬಂದಿದ್ದಾರೆ. 1989ರ ವಿಧಾನ ಸಭಾ ಚುನಾವಣೆಯಲ್ಲಿ ನೆಲಮಂಗಲ ಕ್ಷೇತ್ರದಿಂದ ಆಯ್ಕೆಗೊಂಡು ಬಂದಿರುತ್ತಾರೆ. ಕೀರ್ತಿ, ಘನತೆಗಳನ್ನು ಉಳಿಸಿಕೊಳ್ಳತಕ್ಕಂಥ ಎಲ್ಲಾ ಸಂಪನ್ನತೆಗಳನ್ನು ಪಡೆದಂಥ ಶ್ರೀ ಅಂಜನಮೂರ್ತಿಯವರು ನಮ್ಮೆಲ್ಲರಿಗೂ ಕೂಡ ಬಹಳ ಬೇಕಾದವರಾಗಿದ್ದು, ಈ

ಸದನದಲ್ಲಿ ತಮಗೆ ಸಹಾಯಕರಾಗುವುದರ ಜೊತೆಗೆ ನಮ್ಮೆಲ್ಲರಿಗೂ ಕೂಡ ಒಂದು ಅಭಿನಂದನೆಗೆ, ಪ್ರೀತಿವಿಶ್ವಾಸಕ್ಕೆ ಅರ್ಹತೆಯನ್ನು ಪಡೆದುಕೊಂಡಿರುತ್ತಾರೆ. ಈ ಸದನಕ್ಕೆ ವಿಧಾನಸಭೆಗೆ, ಒಂದು ಒಳ್ಳೆಯ ಪರಂಪರೆಯು ಇದೆ. ಅಂಥ ಒಂದು ಮಹಾನ್ ಇತಿಹಾಸವನ್ನು ಪಡೆದಂಥ ವಿಧಾನಸಭೆಗೆ ಒಂದು ಶೋಭೆಯನ್ನು ತರತಕ್ಕಂಥ ಕೆಲಸವನ್ನು ಕೂಡ ಖಂಡಿತವಾಗಿ ಮಾಡುತ್ತಾರೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿ, ಅವರಿಗೆ ಎಲ್ಲಾ ರೀತಿಯ ಸಹಕಾರವನ್ನು ಸದನದ ಮೂಲಕ, ಮತ್ತು ಸದನದ ಪರವಾಗಿ ಎಲ್ಲಾ ರೀತಿಯ ಬೆಂಬಲ ಮತ್ತು ಸಹಕಾರಗಳನ್ನು ಕೊಡುತ್ತೇವೆ ಎಂದು ಹೇಳಬಯಸುತ್ತೇನೆ. ಈ ಸದನದ ಪರವಾಗಿ ಮತ್ತು ವೈಯಕ್ತಿಕವಾಗಿ ನಾನು ಕೂಡ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಅಂಜನಮೂರ್ತಿಯವರ ಉಪಸಭಾಧ್ಯಕ್ಷರ ಸ್ಥಾನಕ್ಕೆ ಸರ್ವಾನುಮತದ ಆಯ್ಕೆಯು ನಮಗೆಲ್ಲರಿಗೂ ಸಾಕಷ್ಟು ಸಂತೋಷವನ್ನು ತಂದಿದೆ. ನನ್ನ ಪಕ್ಕದಲ್ಲಿರುವ ಒಂದು ಆಸನವು ಖಾಲಿ ಇದ್ದು ಅದು ಇವೊತ್ತು ತುಂಬಿ ನನಗೂ ಕೂಡ ಸಾಕಷ್ಟು ಅನುಕೂಲವನ್ನು ಮಾಡಿ ಕೊಟ್ಟಿದೆ. ಅದೇ ರೀತಿಯಲ್ಲಿ ತಮ್ಮ ಕಾರ್ಯಭಾರವನ್ನು ಹಂಚಿಕೊಂಡು ಕಡಿಮೆ ಮಾಡಿಕೊಳ್ಳಬಹುದು. ನಮ್ಮ ವಿರೋಧ ಪಕ್ಷದ ಪರವಾಗಿ ತಮಗೆ ಸಂಪೂರ್ಣವಾದ ಸಹಕಾರವನ್ನು ಕೊಡುತ್ತಿದ್ದೇನೆ. ಮಾನ್ಯರು ಕಳೆದ 25 ವರ್ಷಗಳಿಂದ ನ್ಯಾಯವಾದಿಯಾಗಿ ಕೆಲಸ ಮಾಡಿದ್ದಾರೆ. ಅವರ ಅನುಭವದ ಲಾಭವು ಕೂಡ ಈ ಸದನಕ್ಕೆ ಆಗುವುದರಲ್ಲಿ ಸಂದೇಹವಿಲ್ಲ. ಒಳ್ಳೆಯ ಮನೆತನದಿಂದ ಬಂದ ಇವರು ಶಿಕ್ಷಣ ರಂಗದಲ್ಲಿಯೂ ಕೂಡ ಸಾಕಷ್ಟು ಸೇವೆಯನ್ನು ಮಾಡಿದ್ದಾರೆ. ಆದ್ದರಿಂದ ಅವರ ಆಯ್ಕೆಯು ನಮಗೆಲ್ಲರಿಗೂ ಸಂತೋಷವನ್ನು ತಂದಿದೆ. ನನ್ನ ಎಲ್ಲಾ ಸ್ನೇಹಿತರುಗಳ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನಮಗೆಲ್ಲರಿಗೂ ಕೂಡ ಮಾನ್ಯ ಶ್ರೀ ಅಂಜನಮೂರ್ತಿಯವರ ಆಯ್ಕೆಯು ಆನಂದವನ್ನು ತಂದಿದೆ. ಇವೊತ್ತು ಉಪಾಧ್ಯಕ್ಷರಾಗಿ ಮಾನ್ಯರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಒಬ್ಬ ಪದವೀಧರರಾಗಿ, ವಕೀಲರಾಗಿ, ಸಾಕಷ್ಟು ಅನುಭವ ಇರುವಂಥ ವ್ಯಕ್ತಿ, ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ. ನಾವು ಒಂದು ಸಮಿತಿಯ ಸದಸ್ಯರಾಗಿ 15 ದಿನಗಳ ಕಾಲ ಸಮಿತಿಯ ಅಧ್ಯಯನ ಪ್ರವಾಸದಲ್ಲಿದ್ದಾಗ ಅವರನ್ನು ಹತ್ತಿರದಿಂದ ಪರಿಚಯ ಮಾಡಿಕೊಳ್ಳುವಂಥ ಅವಕಾಶವು ನನಗೆ ಸಿಕ್ಕಿತ್ತು. ತುಂಬಾ ಸರಳರು ಮತ್ತು ಎಲ್ಲರೊಂದಿಗೆ ಬೆರೆಯುವ ಗುಣವುಳ್ಳ ವ್ಯಕ್ತಿಗೆ ಈ ಸ್ಥಾನವು ದೊರೆತದ್ದು ನಮಗೆಲ್ಲರಿಗೂ ಆನಂದವನ್ನು ತಂದಿದೆ. ನಮ್ಮ ಈ ಕಡೆಯಿಂದ ಎಲ್ಲಾ ರೀತಿಯ ಸಹಕಾರವನ್ನು ಕೊಡಲು ನಾವೆಲ್ಲರೂ ಸಿದ್ಧರಿದ್ದೇವೆ. ಮಾನ್ಯ ಅಧ್ಯಕ್ಷರಿಗೂ ಕೂಡ ಸ್ವಲ್ಪ ಬಿಡುವು ಲಭ್ಯವಾದಂತಾಗಿದೆ. ಮಾನ್ಯ ಅಂಜನಮೂರ್ತಿಯವರಿಗೆ ಇನ್ನೂ ಹೆಚ್ಚಿನ ಅವಕಾಶಗಳು ಸಿಕ್ಕಿ, ಜನತೆಯ ಸೇವೆ ಮಾಡಲು ಅನುಕೂಲವಾಗಲಿ ಎಂದು ಅಪೇಕ್ಷೆಪಟ್ಟು ಪಕ್ಷದ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಅಂಜನಮೂರ್ತಿಯವರು ಈ ಸಭೆಯ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ನಾನು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಮಾನ್ಯ ಅಂಜನಮೂರ್ತಿಯವರು ಬಹಳ ಸರಳರು ಮತ್ತು ಬಹಳ ಸದ್ಭಾವನೆಯುಳ್ಳಂಥವರು. ಸಾಮಾನ್ಯವಾಗಿ ಅಧ್ಯಕ್ಷರು, ಉಪಾಧ್ಯಕ್ಷರು ಆಗಿರತಕ್ಕಂಥವರು ಸ್ವಲ್ಪಮಟ್ಟಿಗಾದರೂ ಕಾನೂನು ಕಟ್ಟಳೆಗಳನ್ನು ತಿಳಿದುಕೊಂಡಿರತಕ್ಕಂಥ ಅವಶ್ಯಕತೆ ಇದೆ. ಮಾನ್ಯ ಶ್ರೀ

ಅಂಜನಮೂರ್ತಿಯವರು ಎಲ್‌ಎಲ್‌ಬಿ ಪದವೀಧರರು ಎಂದು ನನ್ನ ಸ್ನೇಹಿತರ ಮೂಲಕ ತಿಳಿದು ಬಹಳ ಆಶ್ಚರ್ಯವಾಯಿತು. ಮಾನ್ಯರು ತಮ್ಮ ವಿದ್ಯೆಯನ್ನಾಗಲೀ, ತಮ್ಮ ದೊಡ್ಡತನವನ್ನಾಗಲೀ ಯಾವತ್ತೂ ತೋರಿಸಿಕೊಂಡವರಲ್ಲ. ಇಂಥವರು ಇವೊತ್ತು ಉಪಾಧ್ಯಕ್ಷರಾಗಿ ಬಂದಿರುವುದರಿಂದ ತಮ್ಮ ಕಾರ್ಯಭಾರವೂ ಕೂಡ ಕಡಿಮೆಯಾಗಲಿದೆ. ಮಾನ್ಯ ಶ್ರೀ ಅಂಜನಮೂರ್ತಿಯವರು ನಮ್ಮ ಕಡೆಯಲ್ಲಿ ಕುಳಿತಿರುತ್ತಾರೆ. ಆದ್ದರಿಂದ ಅವರು ನಮ್ಮ ಬಗ್ಗೆ ಹೆಚ್ಚಿನ ಗಮನವನ್ನು ಕೂಡ ನೀಡಬೇಕೆಂದು ಹೇಳಿ ಅವರಲ್ಲಿ ಪ್ರಥಮ ದರ್ಖಾಸ್ತನ್ನು ಹಾಕಿ ಮತ್ತೊಮ್ಮೆ ಅವರನ್ನು ಅಭಿನಂದಿಸಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಅಂಜನಮೂರ್ತಿಯವರ ಸರ್ವಾನುಮತದ ಆಯ್ಕೆಯನ್ನು ಅಭಿಮಾನಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಸ್ಥಾನಕ್ಕೆ ಒಬ್ಬ ಮಹಿಳೆಯರು ಬರುತ್ತಾರೆಂದು ತಿಳಿದುಕೊಂಡಿದ್ದೆವು. ಮಹಿಳೆಯರ ಕಡೆಗೆ ಗಮನಹರಿಸಿಲ್ಲವಲ್ಲ ಎಂದು ಮುಖ್ಯಮಂತ್ರಿಗಳ ಬಗ್ಗೆ ಒಳಒಳಗೆ ಸ್ವಲ್ಪ ಕೋಪ ಬರುತ್ತಾ ಇದೆ....

(ನಗು)

ಏಕೆಂದರೆ ಮಹಿಳೆಯರು ಆ ಸ್ಥಾನದಲ್ಲಿದ್ದರೆ ಕೋಪ ಬಂದಾಗ ಅವರ ಮುಖ ನೋಡಿ, ಅಂದರೆ ನಗುಮುಖ ನೋಡಿ ಕೋಪ ತಣ್ಣಗಾಗುತ್ತಿತ್ತು ಎಂದು ನಮ್ಮ ಭಾವನೆಯಾದ ಕಾರಣ ಈ ಉಲ್ಲೇಖ ಮಾಡಿದ್ದೇನೆ. ಮಾನ್ಯ ಶ್ರೀ ಅಂಜನಮೂರ್ತಿಯವರು ಆಯ್ಕೆಯಾದುದಕ್ಕೆ ನಮಗೂ ಸಂತೋಷ ತುಂಬಾ ಆಗಿದೆ. ಬೇರೆ ಭಾವನೆಗಳು ಇಲ್ಲ. ಸಾಮಾನ್ಯವಾಗಿ ಉಪಾಧ್ಯಕ್ಷ ಸ್ಥಾನವನ್ನು ವಿರೋಧ ಪಕ್ಷದ ಗುಂಪಿಗೆ ಕೊಡತಕ್ಕಂಥಾದ್ದು ಒಂದು ಸಂಪ್ರದಾಯವಾಗಿದೆ. ಲೋಕಸಭೆಯಲ್ಲಿಯೂ ಕೂಡ ವಿರೋಧಪಕ್ಷದವರು ಉಪಾಧ್ಯಕ್ಷರಾಗಿದ್ದಾರೆ. ಸಂಸದೀಯ ಸಚಿವರಾಗಿ ಮತ್ತು ಮುಖ್ಯಮಂತ್ರಿಗಳಾಗಿ, ವಿರೋಧ ಪಕ್ಷಗಳ ಬಗ್ಗೆ ಅಪಾರವಾದಂಥ ಕಾಳಜಿ ಇಟ್ಟುಕೊಂಡಿರತಕ್ಕಂಥ ಶ್ರೀಮಾನ್ ವೀರಪ್ಪ ಮೊಯಿಲಿಯವರು ಈ ವಿಚಾರವನ್ನು ತಮ್ಮ ಮನಸ್ಸಿನಲ್ಲಿ ಏಕೆ ತಂದುಕೊಂಡಿಲ್ಲ ಎನ್ನತಕ್ಕಂಥಾದ್ದು ನಮಗೆ ಒಂದು ರೀತಿಯಲ್ಲಿ ನೋವಾಗಿದೆ. ಅಂಜನಮೂರ್ತಿಯವರನ್ನು ಮಂತ್ರಿಗಳನ್ನಾಗಿ ಮಾಡಿದ್ದರೂ ನಮಗೆ ಸಂತೋಷವಾಗುತ್ತಿತ್ತು. ಅವರು ಬಹಳ ಸಜ್ಜನಿಕೆಯುಳ್ಳ ಮಾನ್ಯರಾಗಿದ್ದಾರೆ. ಹಾಗಾಗಿ ಈ ಒಂದು ಸಂಪ್ರದಾಯವನ್ನು ತಾವುಗಳು ಮುರಿದು ಹಾಕಿದ್ದೀರೋ ಎಂಬ ನೋವು ನಮಗೆ ಇದೆ. ಅವರು ನಮ್ಮ ಕಡೆಯಲ್ಲಿ ಕುಳಿತುಕೊಳ್ಳುವುದರಿಂದ ನಮ್ಮವರು ಎಂದು ಹೇಳಿಕೊಂಡು ಸಂತೋಷಪಡಬಹುದು. ಈ ಸಂತೋಷದಲ್ಲಿ ನಾನು ಭಾಗಿಯಾಗುತ್ತೇನೆ, ಅವರಿಗೆ ನಮ್ಮೆಲ್ಲರ ಸಂಪೂರ್ಣ ಸಹಕಾರವಿದೆ. ಅವರು ನಮಗೆ ಸ್ವಲ್ಪ ಹೆಚ್ಚಿನ ಬೆಂಬಲವನ್ನು ಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಅವರು ಕೊಟ್ಟೇ ಕೊಡುತ್ತಾರೆ ಎಂದು ನಮಗೆ ಗೊತ್ತಿದೆ. ಯಾರಾದರೂ ಒಬ್ಬ ಮಹಿಳೆಗೆ ಈ ಉಪಾಧ್ಯಕ್ಷ ಸ್ಥಾನವನ್ನು ಕೊಡಬೇಕೆಂಬ ಚಿಂತನೆ ಏನಿತ್ತು, ಅದನ್ನು ಈಡೇರಿಸುವುದಾದರೆ ಈಗಿರುವ 40 ಜನಕ್ಕಿಂತ ಒಂದೆರಡು ಹೆಚ್ಚಿಗೆ ಆದರೂ ಅಡ್ಡಿ ಇಲ್ಲ, ಮಹಿಳೆಯರ ಪರವಾಗಿ ನಾನು ಮಾತನಾಡುತ್ತಿರುವುದರಿಂದ ತಾವುಗಳು ನನ್ನ ಬಗ್ಗೆ ಕೃತಜ್ಞತೆ ಇಟ್ಟುಕೊಳ್ಳಬೇಕು. ಶ್ರೀಮತಿ ಮೋಟಮ್ಮನವರನ್ನು ನೀವು ಮಂತ್ರಿಯಾಗಿ ಮಾಡುವುದಾದರೆ ಅದರಿಂದ ನಮಗೆ ಸಂತೋಷ ಹಾಗೂ ಸದನಕ್ಕೂ ಒಂದು ರೀತಿಯ ಶಕ್ತಿ ಬರುತ್ತದೆ ಎಂದು ಹೇಳಬೇಕಾಗುತ್ತದೆ. ಮಾನ್ಯ ಅಂಜನಮೂರ್ತಿಯವರ ಆಯ್ಕೆಯನ್ನು ನಾನು ಅತ್ಯಂತ ಪ್ರೀತಿವಿಶ್ವಾಸದಿಂದ ಸ್ವಾಗತಿಸಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲೆಯವರೇ ಆಗಿರತಕ್ಕಂಥ ಶ್ರೀ ಅಂಜನಮೂರ್ತಿಯವರ ಆಯ್ಕೆಯು ಬಹಳ ಸಂತಸವನ್ನು ತಂದಿದೆ. ಅವರು ಬಹಳ ಸರಳರು ಮತ್ತು

ಅನುಭವಸ್ಥರೂ ಆಗಿದ್ದಾರೆ. ನಾವು ಕಳೆದ 2–3 ವರ್ಷಗಳ ಕಾಲ ವಿಧಾನ ಸಭೆಯಲ್ಲಿ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಕೆಲಸ ಮಾಡಿಕೊಂಡು ಬಂದಿದ್ದೇವೆ. ಪರಿಶಿಷ್ಟ ಜಾತಿ, ಜನಾಂಗದವರ ಬಗ್ಗೆ ಹಿಂದುಳಿದವರ ಬಗ್ಗೆ ವಿಶೇಷವಾದಂಥ ಅಭಿಮಾನವನ್ನು ಇಟ್ಟುಕೊಂಡಿರತಕ್ಕಂಥ ಮತ್ತು ಒಳ್ಳೆಯ ಮನೆತನದಿಂದ ಬಂದಿರತಕ್ಕಂಥ ಅಂಜನಮೂರ್ತಿಯವರು ಇವೊತ್ತು ಉಪಾಧ್ಯಕ್ಷರಾಗಿ ಆಯ್ಕೆಯಾಗಿ ಬಂದಿರುವುದು ನಮಗೆಲ್ಲರಿಗೂ ಆನಂದವನ್ನು ತಂದ ವಿಚಾರ. ಆ ಕಾರಣದಿಂದ ನಮ್ಮ ಪಕ್ಷದವರು ಮತ್ತು ನಮ್ಮ ನಾಯಕರಾದ ಮಾನ್ಯಶ್ರೀ ರಾಮಕೃಷ್ಣ ಹೆಗ್ಗಡೆಯವರನ್ನು ಸಂಪರ್ಕ ಮಾಡಿ ಪ್ರಸ್ತಾಪ ಮಾಡಿದಾಗ. ಮಾನ್ಯ ಶ್ರೀ ಅಂಜನಮೂರ್ತಿಯವರ ಪ್ರಶ್ನೆ ಬಂದಾಗ ಇದನ್ನು ನಾವು ಪಕ್ಷಾತೀತವಾಗಿ ನೋಡಿ ಅವರನ್ನು ಯಾವುದೇ ಚುನಾವಣೆ ಇಲ್ಲದೆ ಇರುವ ಹಾಗೆ ಉಪಾಧ್ಯಕ್ಷರ ಸ್ಥಾನವನ್ನು ಅಲಂಕರಿಸಲಿಕ್ಕೆ ಅವಕಾಶ ಮಾಡಿಕೊಡಬೇಕು ಅನ್ನತಕ್ಕ ಮಾತನ್ನು ಹೇಳಿದ್ದನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತೇನೆ. ಮಾನ್ಯ ಅಂಜನಮೂರ್ತಿಯವರ ತಂದೆಯವರು ನಮ್ಮ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ನೆಲಮಂಗಲ, ದೊಡ್ಡಬಳ್ಳಾಪುರ, ಮಾಗಡಿ, ಬೆಂಗಳೂರು ನಗರದ ಕೆಲವು ಭಾಗಗಳಲ್ಲಿ ಮಾಡಿರತಕ್ಕಂಥ ಕೆಲಸ ನಾವು ಮರೆಯಲಿಕ್ಕೆ ಸಾಧ್ಯವಿಲ್ಲ. ಈ ಸದನದ ಸದಸ್ಯರಾಗಿ ವಿಧಾನ ಪರಿಷತ್ತಿನ ಸದಸ್ಯರಾಗಿ ಅವರು ಮಾಡಿರತಕ್ಕಂಥ ಕೆಲಸವನ್ನು ಸಹ ನಾವು ಮರೆಯಲಿಕ್ಕೆ ಸಾಧ್ಯವಿಲ್ಲ. ಅವರ ಸುಪುತ್ರರಾಗಿರತಕ್ಕಂಥ ಮಾನ್ಯ ಅಂಜನಮೂರ್ತಿಯವರು ಈ ಸದನದ ಮೌಲ್ಯಗಳನ್ನು, ಆ ಸ್ಥಾನವನ್ನು ಎತ್ತಿ ಹಿಡಿಯುತ್ತಾರೆ ಅನ್ನತಕ್ಕ ನಂಬಿಕೆ ನಮಗೆಲ್ಲರಿಗೂ ಇದೆ. ಇದಕ್ಕೆ ಹಿಂದೆ ಉಪಾಧ್ಯಕ್ಷರಾಗಿದ್ದಂತಹ, ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಬಹಳ ಸಾಮರ್ಥ್ಯದಿಂದ ಈ ಸಭೆಯನ್ನು ನಡೆಸಿಕೊಂಡು ಬಂದಿದ್ದರು. ಇವತ್ತು ಅದೇ ಪರಂಪರೆಯನ್ನು ಅವರು ಸಹಿತ ಎತ್ತಿ ಹಿಡಿಯುತ್ತಾರೆ ಅನ್ನತಕ್ಕಂಥ ವಿಶ್ವಾಸ ನನಗಂತೂ ಇದೆ. ಬಹಳ ಮುಖ್ಯವಾಗಿ ನಮ್ಮ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ನಾವು ಕೆಲವು ಸಂಪ್ರದಾಯಗಳನ್ನು ನಡೆಸಿಕೊಂಡು ಹೋಗತಕ್ಕಂಥದ್ದು ಬಹಳ ಒಳ್ಳೆಯದು. ಮಾನ್ಯ ನಾಯಕರಾದಂತಹ ರಾಮಕೃಷ್ಣ ಹೆಗಡೆಯವರು ಆ ಮಾತನ್ನು ಹೇಳಿದರು. ತಾವು ಅಧ್ಯಕ್ಷ ಸ್ಥಾನವನ್ನು ಅಲಂಕಾರ ಮಾಡಿದಂತಹ ಸಂದರ್ಭದಲ್ಲಿ ಅಧ್ಯಕ್ಷರ ಚುನಾವಣೆಯನ್ನು ಮುಂದೆ ಅವರು ಯಾವಾಗ ಸ್ಪರ್ಧೆ ಮಾಡುತ್ತಾರೆ ಪಕ್ಷಾತೀತವಾಗಿ ಯಾರು ಅಭ್ಯರ್ಥಿಯನ್ನು ಹಾಕಬಾರದು ಮತ್ತು ಅಲ್ಲಿ ಕುಳಿತುಕೊಂಡಿರತಕ್ಕಂಥವರು ಮತ್ತೆ ಇಲ್ಲಿಗೆ ಬರಬಾರದು ಅನ್ನತಕ್ಕಂಥ ವಿಚಾರವನ್ನು ಸಹಿತ ಪ್ರಸ್ತಾಪ ಮಾಡಿದರು. ಇದು ಬಹಳ ಮುಖ್ಯವಾಗಿ ಇರತಕ್ಕಂಥ ವಿಚಾರ. ಲೀಡರ್ ಅನ್ನು ಡೆವಲಪ್ ಮಾಡುವುದು ಅಂತ ನಾವು ಹೇಳುತ್ತೇವೆ. ಯಾವುದೇ ಒಂದು ಆರ್ಗನೈಜೇಷನ್‌ನಲ್ಲಿ ಒಂದು ಲೀಡರ್ ಅನ್ನು ಡೆವಲಪ್ ಮಾಡತಕ್ಕಂಥದ್ದು. ಸೆಕೆಂಡ್ ಲೈನ್ ಲೀಡರ್‌ಶಿಪ್ ಅನ್ನು ಡೆವಲಪ್‌ಮಾಡತಕ್ಕಂಥ ಕಡೆ ನಾವೆಲ್ಲ ಚರ್ಚೆ ಮಾಡುತ್ತೇವೆ. ಅದೇ ರೀತಿಯಲ್ಲಿ ಇಲ್ಲಿಯೂ ಸಹಿತ ಉಪಾಧ್ಯಕ್ಷರಾಗಿದ್ದಾರೆ. ಮುಂದೆ ಅಧ್ಯಕ್ಷರಾಗಲಿಕ್ಕೆ, ಅಥವಾ ಇಲ್ಲಿರುವಂತಹ ನಡವಳಿಕೆಗಳನ್ನು ತಿಳಿದುಕೊಳ್ಳಲಿಕ್ಕೆ ಇದಕ್ಕೆಲ್ಲವೂ ಸಹಿತ ಬಹಳ ಉಪಯೋಗವಾಗುತ್ತದೆ. ಆ ಸ್ಥಾನದಲ್ಲಿ ಹಿಂದೆ ನೆಲಮಂಗಲ ತಾಲ್ಲೂಕಿನವರಾದ ವೀರಣ್ಣನವರು ಕೆಲವು ದಿನಗಳ ಕಾಲ ಕೆಲಸವನ್ನು ಬಹಳ ಸಮರ್ಥರಾಗಿ ಮಾಡಿರತಕ್ಕಂಥದ್ದು ಮಾನ್ಯ ಮೊಯಿಲಿಯವರಿಗೆ ಜ್ಞಾಪಕ ಇರಬೇಕು. ಇವತ್ತು ಅವರು ನಿಮ್ಮ ಪಕ್ಷದಲ್ಲಿಯೇ ಇದ್ದಾರೆ, ಜೊತೆಗೆ ರೈತ ಮುಖಂಡರಾಗಿರತಕ್ಕಂಥ ಮಾನ್ಯ ಯಾವಗಲ್‌ರವರು ಆ ಸ್ಥಾನದಲ್ಲಿ ಕುಳಿತುಕೊಂಡು ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅವರೆಲ್ಲರೂ ಮೆಚ್ಚತಕ್ಕಂಥ ಕೆಲಸವನ್ನು ಮಾಡಿದ್ದಾರೆ.

ಈ ದೃಷ್ಟಿಯಿಂದಾಗಿ ಅವರು ಪ್ರಥಮದಲ್ಲಿಯೇ ವಿಧಾನಸಭೆಗೆ ಬಂದಿರತಕ್ಕಂಥದ್ದು ಮುಂದೆ ಇಲ್ಲಿಯ ನಡವಳಿಕೆಗಳನ್ನು ತಿಳಿದುಕೊಂಡು ಸದನವನ್ನು ನಡೆಸುವ ದೃಷ್ಟಿಯಿಂದಾಗಿ ಬಹಳ ಮುಖ್ಯವಾಗಿ ಅನುಭವ ಇರಬೇಕು. ಈ ಸದನದಲ್ಲಿ ಬಹಳ ಅನುಭವ ಇರತಕ್ಕಂಥ ಮಾನ್ಯ ವೀರೇಂದ್ರ

ಪಾಟೀಲರು ಇದ್ದಾರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದಾರೆ. ಮಾನ್ಯ ನಾಗರತ್ನಮ್ಮನವರು ಇದ್ದಾರೆ. ಮಾನ್ಯ ಚಂದ್ರೇಗೌಡರು ಇದ್ದಾರೆ, ಮಾನ್ಯ ವಾಟಾಳ್ ನಾಗರಾಜ್ ಇದ್ದಾರೆ, ಅದೇ ರೀತಿ ನಮ್ಮ ಎಸ್.ಎಂ. ಕೃಷ್ಣರವರು ಇದ್ದಾರೆ, ಇಲ್ಲಿಂದ ಲೋಕಸಭೆಗೆ ಹೋಗಿದ್ದಾರೆ, ರಾಜ್ಯಸಭೆಗೆ ಹೋಗಿದ್ದಾರೆ. ಸದನಗಳಲ್ಲಿ ಕೆಲಸ ಮಾಡುವುದರಿಂದ ಅದರ ಉಪಯೋಗ ನಮಗೆ ಬಹಳವಾಗುತ್ತದೆ. ಇವತ್ತು ಆ ಎಲ್ಲಾ ದೃಷ್ಟಿಯಿಂದಲೂ ಮಾನ್ಯ ಅಂಜನಮೂರ್ತಿಯವರನ್ನು ಗುರುತು ಮಾಡಿರುವುದು, ವಿಶೇಷವಾಗಿ ಅವರು ನಮ್ಮ ಜಿಲ್ಲೆಯವರೇ ಆಗಿರುವುದರಿಂದ ನನಗಂತೂ ಬಹಳ ಸಂತೋಷವಾಗಿದೆ. ನಾವು ನಿಮಗೆ ಸಂಪೂರ್ಣವಾದಂತಹ ಸಹಕಾರವನ್ನು ಎಲ್ಲಾ ರೀತಿಯಲ್ಲಿಯೂ ಕೊಡುತ್ತೇವೆಂದು ಹೇಳಿದ್ದೇವೆ. ಉಪಾಧ್ಯಕ್ಷ ಸ್ಥಾನ ಏನಾಗಿದೆ ಅಂದರೆ ಪಕ್ಷದ ಚಟುವಟಿಕೆಗಳಲ್ಲಿಯೂ ಭಾಗವಹಿಸಬೇಕು ಅನ್ನತಕ್ಕದ್ದು ಇದೆ. ಆದರೆ, ನನ್ನ ಅಭಿಪ್ರಾಯದಲ್ಲಿ ಯಾವ ರೀತಿ ಅಧ್ಯಕ್ಷ ಸ್ಥಾನದಲ್ಲಿರತಕ್ಕವರು ಪಕ್ಷದ ಚಟುವಟಿಕೆಗಳಿಂದ ದೂರ ಇರುತ್ತಾರೆ, ಅದೇ ರೀತಿಯಲ್ಲಿ ಉಪಾಧ್ಯಕ್ಷರ ಸ್ಥಾನದಲ್ಲಿರುವವರೂ ಸಹಿತ ಪಕ್ಷದ ಚಟುವಟಿಕೆಗಳಿಂದ ಹೊರಗಡೆ ಇದ್ದರೆ ಪಕ್ಷಾತೀತ ದೃಷ್ಟಿಯಿಂದಾಗಿ ನಮ್ಮೆಲ್ಲರನ್ನು ಸಹಿತ ನೋಡಲಿಕ್ಕೆ ಬಹಳ ಅನುಕೂಲವಾಗುತ್ತದೆ ಎಂದು ನಾನು ತಿಳಿದಿರತಕ್ಕಂಥವನು. ಅದು ಏನೇ ಇರಲಿ ಇವತ್ತು ನಾನು ಅವರಿಗೆ ಅಭಿನಂದಿಸಿ, ಈ ಸದನದಲ್ಲಿ ಖಾಲಿ ಇದ್ದಂತಹ ಜಾಗವನ್ನು ಆದಷ್ಟು ಬೇಗ ಮುಖ್ಯಮಂತ್ರಿಗಳು ತುಂಬಬೇಕೆಂದು ನಮ್ಮೆಲ್ಲರ ಆಗ್ರಹ ಇತ್ತು, ಕಳೆದ 15–20ದಿವಸಗಳಿಂದ ಪ್ರಯತ್ನ ಮಾಡಿ ಆ ಕೆಲಸವನ್ನು ಮಾಡಿದ್ದಾರೆ, ಅವರಿಗೂ ನಾನು ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಅಂಜನಮೂರ್ತಿಯವರು ಅವಿರೋಧವಾಗಿ ಚುನಾಯಿತರಾಗಿರುವುದಕ್ಕೆ ಸ್ವಾಗತಾರ್ಹ. ನಾನು ನಿನ್ನೆ ಅವರ ನಾಮಪತ್ರವನ್ನು ಕೊಡುವಾಗಲೇ ನಾನು ಅವರಿಗೆ ನಿನ್ನೆಯೆ ಹೇಳಿದ್ದೆ, ಅವರು ರುಜು ಮಾಡುವುದಕ್ಕೆ ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ಕೌಲ್ ಅಂಡ್ ಶಕ್ದರ್ ಇವೆರಡು, ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಭಗವದ್ಗೀತೆ ಇದ್ದ ಹಾಗೆ. ಅದನ್ನು ನೀವು ಮೊದಲು ಬಾಯಿಪಾಠವನ್ನು ಮಾಡಿಕೊಳ್ಳಿ ಎಂದು ಹೇಳಿದ್ದೆ. ಅವರು ಮಾಡುತ್ತೇನೆಂದು ಹೇಳಿದ್ದಾರೆ. ಅದನ್ನು ದಯವಿಟ್ಟು ಮಾಡಬೇಕು. ಎರಡನೆಯದು ಅವರಿಗೆ ಸಾಮಾನ್ಯವಾಗಿ ತಾಳ್ಮೆ ಇರಬೇಕು. ಅವರಿಗೆ ತಾಳ್ಮೆಯೂ ಇದೆ. ಆಮೇಲೆ ಕ್ವಿಕ್ ಡಿಸಿಷನ್, ತೆಗೆದುಕೊಳ್ಳುವ ಚಾಕಚಕ್ಯತೆ ಇರಬೇಕು. ಸುಮಾರು 20 ವರ್ಷಗಳಿಂದ ನಾನು ಅವರನ್ನು ಬಲ್ಲೆ. ಜೊತೆಗೆ ಕೊನೆಯಲ್ಲಿ ಒಂದೇ ಒಂದು ಕಿವಿಯ ಮಾತು ಅವರಿಗೆ ಹೇಳುವುದೇನೆಂದರೆ ನಾನು ಸುಮಾರು ಕಳೆದ 19 ವರ್ಷದ ಹಿಂದೆ ವಿಧಾನ ಪರಿಷತ್ತಿನ ಸಭಾಪತಿಯಾಗಿದ್ದಾಗ 1975ರಲ್ಲಿ ವಿರೋಧ ಪಕ್ಷದ ನಾಯಕರಾದಂತಹ ಮಾನ್ಯ ಹೆಗಡೆಯವರು, ಬೊಮ್ಮಾಯಿಯವರು, ಒಂದು ಕಡೆ ಮಾನ್ಯ ಎ.ಕೆ. ಸುಬ್ಬಯ್ಯನವರು ಬಿ.ಜೆ.ಪಿ. ಸದಸ್ಯರಾದ ಮಾನ್ಯ ಮಲ್ಲಿಕಾರ್ಜುನಯ್ಯನವರು, ಉಲ್ಲಾಳ್, ದಯಾನಂದ ಸಾಗರ್ ಇವರು ನನಗೆ ಪ್ರತಿದಿನ ಜೀರೋ ಅವರ್‌ನಲ್ಲಿ ನಮ್ಮ ಚಾಕಚಕ್ಯತೆ ತೋರಿಸಬೇಕೆಂದು ಹೇಳಿದರೆ zero hour is most important. ಜೀರೋ ಅವರ್‌ನಲ್ಲಿ ನಾನು ಸಾಮಾನ್ಯವಾಗಿ ವಿರೋಧ ಪಕ್ಷದವರಿಗೆ ಹೆಚ್ಚಾಗಿ ಸಮಯವನ್ನು ಕೊಟ್ಟು ಆದ್ದರಿಂದ ಸ್ವಲ್ಪ ಉಪಾಯವಾಗಿ ನಡೆಸಿಕೊಂಡು ಹೋಗುತ್ತಿದ್ದೆ. ತಾವು ಸಹ ವಿರೋಧ ಪಕ್ಷದವರಿಗೆ ಹೆಚ್ಚಾಗಿ ಸಮಯವನ್ನು ಕೊಟ್ಟರೆ, ನಿಮ್ಮ ಕಾರ್ಯಕ್ರಮಗಳು ಸುಗಮವಾಗಿ ನಡೆಯುತ್ತದೆಂದು ಮತ್ತೊಮ್ಮೆ ಹೇಳುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ ಅಂಜನಮೂರ್ತಿಯವರು ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿರುವುದು ಬಹಳ ಸಂತೋಷದ ವಿಚಾರ. ಅದೇ ರೀತಿ ನನಗೆ ಒಂದು ಸಂತೋಷ ಏನು ಅಂದರೆ ಪ್ರಥಮ ಬಾರಿಗೆ ಅವರು ಈ ಸದನದ ಸದಸ್ಯರಾಗಿದ್ದಾರೆ. ಅವರಿಗೆ ಈ ಅವಕಾಶ ದೊರೆತಿದ್ದು ನಮ್ಮಂತಹ ಯುವಕರಿಗೆ ಪ್ರೋತ್ಸಾಹವನ್ನು ಕೊಡತಕ್ಕಂಥ ವಿಚಾರವಾಗಿದೆ. ಆದರೆ ನಾನು ಕಳಕಳಿಯಿಂದ ಮಾನ್ಯ ಉಪಾಧ್ಯಕ್ಷರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ನಮ್ಮ

ಮಾನ್ಯ ಸಿಂಧ್ಯರವರು ಹೇಳಿದ ರೀತಿಯಲ್ಲಿ ಹಿರಿಯರಿಗೆ ಹೆಚ್ಚಿನ ಅವಕಾಶವನ್ನು ಕೊಡುವುದರ ಬದಲು ಕಿರಿಯರಿಗೆ ಅವಕಾಶವನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು. ನನಗೆ ಮಾನ್ಯ ಅಂಜನಮೂರ್ತಿಯವರು ಬಹಳ ಆತ್ಮೀಯ ಸ್ನೇಹಿತರು. ಅವರ ವಿಚಾರದಲ್ಲಿಯೂ ಹೇಳಬೇಕಾದರೆ ಅವರು ಬಹಳ ದೊಡ್ಡ ಮನಸ್ಸಿನ ಧೀಮಂತ ವ್ಯಕ್ತಿ. ವಿಚಾರವನ್ನು ತಿಳಿದಿರತಕ್ಕಂಥ ಒಬ್ಬ ಧೀಮಂತ ವ್ಯಕ್ತಿ ಎಂದು ಹೇಳಿದರೂ ತಪ್ಪಾಗಲಾರದು ಎಂದು ನನ್ನ ಭಾವನೆ. ಆದ್ದರಿಂದ ಅವರಿಗೆ ಭಗವಂತನು ಇನ್ನು ಹೆಚ್ಚಿಗೆ ಉನ್ನತ ಪೀಠವನ್ನು ದಯಪಾಲಿಸಲೆಂದು ಹೇಳಿ, ಪಕ್ಷಾತೀತವಾಗಿ ಅವರು ಕೆಲಸವನ್ನು ಮಾಡಲಿ ಅಂತ ನನ್ನ ಅನಿಸಿಕೆಯನ್ನು ತಮ್ಮ ಮುಂದೆ ಇಟ್ಟು ತಮಗೆ ವಂದನೆಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ (ಉಲ್ಲಾಳ):- ಮಾನ್ಯ ಅಧ್ಯಕ್ಷರೇ, ಇವತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸರ್ವಾನುಮತದಿಂದ ಆಯ್ಕೆಯಾಗಿರತಕ್ಕಂಥ ಮಾನ್ಯ ಅಂಜನಮೂರ್ತಿಯವರನ್ನು ನಾನು ಕಳೆದ ಮೂರು ವರ್ಷಗಳಿಂದಲೂ ನೋಡಿದ್ದೇನೆ. ಅವರು ಬಹಳ ಸರಳವಾದಂಥ ಒಬ್ಬ ವ್ಯಕ್ತಿ. ಅವರ ಸರಳತ ಅವರ ಸಜ್ಜನ ಸ್ವಭಾವ ಮತ್ತು ಅವರು ಒಬ್ಬ ವಕೀಲರು ಅಂತ ಹೇಳುವುದನ್ನು ಸಹ ತೋರಿಸಿಕೊಳ್ಳದ ರೀತಿಯ ಅವರ ಸೌಜನ್ಯವನ್ನು ಕಂಡು ನಾವು ಬಹಳ ಸಂತೋಷವನ್ನು ಪಟ್ಟಿದ್ದೇವೆ. ಅದು ಅಲ್ಲದೆ, ಪರಿಶಿಷ್ಠ ವರ್ಗಕ್ಕೆ ಸೇರಿದಂತಹ ಅವರಿಗೆ ಇವತ್ತು ಈ ಉಪಾಧ್ಯಕ್ಷ ಸ್ಥಾನವನ್ನು ಕೊಟ್ಟಿದ್ದು ಬಹಳ ಸಂತೋಷದ ವಿಚಾರ. ಆದ್ದರಿಂದ ಅವರ ಪದವಿಯ ಪೂರ್ಣ ಕಾಲದಲ್ಲಿ ಅವರಿಗೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಲಿಕ್ಕೆ, ಯಾವಾಗಲೂ ಸಂತೋಷದಿಂದ ಕೆಲಸ ಮಾಡಲಿಕ್ಕೆ ದೇವರು ಅನುಗ್ರಹಿಸಲಿ ಅಂತ ಹೇಳುತ್ತೇನೆ. ಒಮ್ಮೊಮ್ಮೆ ಅಲ್ಲಿ ಕುಳಿತುಕೊಂಡರೆ ಆಳುವ ಪಕ್ಷದ ಕಡೆಗೆ ಕಣ್ಣು ಹೋಗಿಬಿಡುತ್ತದೆ. ಈಚೆ ಕಡೆಗೆ ಕಣ್ಣು ಬರುವುದಿಲ್ಲ. ಹಾಗೆ ಎಲ್ಲ ಕಡೆಗೂ ಕಣ್ಣು ಇರಬೇಕಾಗುತ್ತದೆ. ನಮ್ಮ ಅಧ್ಯಕ್ಷರು ಬಹಳ ಒಳ್ಳೆಯ ರೀತಿಯಿಂದ ಇದ್ದಾರೆ. ಉಪಾಧ್ಯಕ್ಷರಾಗಿ ಬಂದವರು ಕೂಡ ಪ್ರತಿಯೊಬ್ಬರನ್ನು ಸ್ಪಂದನ ಮಾಡಿ ಯಾರು ಯಾರು ಕೇಳುತ್ತಾರೆ. ಅವರನ್ನೆಲ್ಲಾ ನೋಡಿ ಮಾತನಾಡುವುದಕ್ಕೆ ಅವಕಾಶ ಸಿಕ್ಕದಂತಹ ಅನೇಕರು ಒಮ್ಮೊಮ್ಮೆ ಕೈ ತೋರಿಸಿ, ತೋರಿಸಿ, ಕೈಯನ್ನು ಕೆಳಗೆ ಹಾಕಬೇಕಾಗುತ್ತದೆ. ಅದನ್ನು ತಪ್ಪಿಸುವಂತಹ ಹೊಸ ವ್ಯವಸ್ಥೆಯನ್ನು ಕೂಡ ಈಗಿನ ಉಪಾಧ್ಯಕ್ಷರು ಮಾಡಿ ಒಳ್ಳೆಯ ರೀತಿಯಿಂದ ಕೆಲಸ ಮಾಡಲಿ ಅಂತ ಹೇಳಿ ನನ್ನ ಹೃದಯಪೂರ್ವಕ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ಸದಸ್ಯರಾದ ಶ್ರೀ ಅಂಜನಮೂರ್ತಿಯವರು ಇಂದು ವಿಧಾನಸಭೆಯ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದ ಈ ಶುಭ ಸಂದರ್ಭದಲ್ಲಿ ಅವರಿಗೆ ಇಡೀ ಸದನದ ಪರವಾಗಿ ಹಾಗೂ ವೈಯಕ್ತಿಕವಾಗಿ ಅಭಿನಂದಿಸುತ್ತೇನೆ. ಶ್ರೀ ಅಂಜನಮೂರ್ತಿಯವರು ಕಾನೂನು ಪದವೀಧರರಾಗಿದ್ದು ನೆಲಮಂಗಲ ಕ್ಷೇತ್ರದಿಂದ ಈ ಸಭೆಗೆ 1983ನೇ ನವೆಂಬರ್‌ನಲ್ಲಿ ಆಯ್ಕೆಗೊಂಡಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದು ನೆಲಮಂಗಲ ವಕೀಲ ಸಂಘದ ಅಧ್ಯಕ್ಷರಾಗಿ ಹಾಗೂ ಅರುಂಧತಿ ವಿದ್ಯಾಸಂಸ್ಥೆಯ ಅಧ್ಯಕ್ಷರಾಗಿ ಮತ್ತು ಸಮಾಜಸೇವಕರಾಗಿ ನಮ್ಮ ರಾಜ್ಯದ ಜನತೆಗೆ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಕಾನೂನು ಪದವೀಧರರಾದ ಇವರು ಸಂಸದೀಯ ವ್ಯವಹಾರಗಳ ಬಗ್ಗೆ ಸಾಕಷ್ಟು ಜ್ಞಾನವನ್ನು ಹೊಂದಿದ್ದಾರೆಂದು ನಾನು ಭಾವಿಸುತ್ತೇನೆ. ಆಡಳಿತ ಪಕ್ಷ ಹಾಗೂ ವಿರೋಧಪಕ್ಷಗಳ ಸದಸ್ಯರುಗಳು ಈಗಾಗಲೇ ಅವರ ಬಗ್ಗೆ ಸಾಕಷ್ಟು ವಿಚಾರಗಳನ್ನು ತಿಳಿಸಿರುತ್ತಾರೆ. ತಮ್ಮೆಲ್ಲರಿಂದ ಉತ್ತಮ ಸಲಹೆಗಳನ್ನು ನಿರೀಕ್ಷಿಸಿ ಕಾರ್ಯಕಲಾಪಗಳು ಹೆಚ್ಚು ಮಹತ್ವಪೂರ್ಣವಾಗುವಲ್ಲಿ ನಾನು ಉಪಾಧ್ಯಕ್ಷರು ಸೇರಿ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸುವ ಭರವಸೆಯನ್ನು ಕೊಡಬಯಸುತ್ತೇನೆ. ತಾವುಗಳು ಕೂಡ ಹೆಚ್ಚು ದಕ್ಷತೆಯಿಂದ ಈ ಸಭೆಯನ್ನು ನಡೆಸಲಿಕ್ಕೆ ನನಗೂ ಹಾಗೂ ಉಪಾಧ್ಯಕ್ಷರಿಗೂ ಹೆಚ್ಚು ಸಹಕಾರವನ್ನು ನೀಡಿ ಈ ಸದನದ

ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಸಹಕರಿಸುವರೆಂದು ಭಾವಿಸಿ ಮತ್ತೊಮ್ಮೆ ಶ್ರೀ ಅಂಜನಮೂರ್ತಿಯವರಿಗೆ ಶುಭವನ್ನು ಹಾರೈಸುತ್ತೇನೆ.

ಶ್ರೀ ಅಂಜನಮೂರ್ತಿ (ಉಪಾಧ್ಯಕ್ಷರು):– ಮಾನ್ಯ ಅಧ್ಯಕ್ಷರೇ, ಈ ಸದನದ ನಾಯಕರೇ, ವಿರೋಧಪಕ್ಷದ ನಾಯಕರೇ, ಗೌರವಾನ್ವಿತ ಸಚಿವರುಗಳೇ, ಮತ್ತು ಗೌರವಾನ್ವಿತ ಸದಸ್ಯರುಗಳೇ, ಮೊಟ್ಟ ಮೊದಲನೆಯದಾಗಿ ನಾನು ನಿಮ್ಮೆಲ್ಲರಿಗೂ ಮನಃಪೂರ್ವಕವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ಅದಕ್ಕೆ ಕಾರಣವಿಷ್ಟೇ, ಈ ಸದನದಲ್ಲಿ ವಿರೋಧ ವ್ಯಕ್ತಪಡಿಸದೆ ಅವಿರೋಧವಾಗಿ ನನ್ನನ್ನು ಆಯ್ಕೆ ಮಾಡುವ ಮೂಲಕವಾಗಿ ನೀವು ನನ್ನ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸವು ನನಗೆ ತುಂಬಲಾರದ ಸಂತೋಷದ ದಿನವೆಂದು ನಾನು ಭಾವಿಸುತ್ತೇನೆ. ಈ ಸದನದಲ್ಲಿ ನನ್ನ ಭರವಸೆ ಇಷ್ಟೇ, ಈ ಗೌರವಾನ್ವಿತ ಸ್ಥಾನವನ್ನು ಅಲಂಕರಿಸುವಾಗ ಈ ಸ್ಥಾನದ ಗೌರವ, ಘನತೆಯನ್ನು ನಾನು ಎತ್ತಿ ಹಿಡಿಯುತ್ತೇನೆ. ಈ ಸದನದಲ್ಲಿರತಕ್ಕಂಥವರು ಆ ಕಡೆಯವರಾಗಲೀ, ಈ ಕಡೆಯವರಾಗಲೀ ಒಳ್ಳೆಯ ಬುದ್ಧಿವಂತರು, ವಿಚಾರವಂತರು, ಆಗಿದ್ದಾರೆ. ಅವರು ರಾಜ್ಯದ ಮತ್ತು ಜನತೆಯ ಬಗ್ಗೆ ಕಳಕಳಿಯುಳ್ಳಂಥವರು. ಇವರ ಪೂರ್ಣ ಸಹಕಾರದಿಂದ, ಈ ಸದನದ ಗೌರವ, ಘನತೆಗಳನ್ನು ಎತ್ತಿ ಹಿಡಿಯುತ್ತೇನೆ ಎಂದು ಹೇಳುತ್ತಾ, ಮಾನ್ಯ ವಿರೋಧಪಕ್ಷದವರು, ಆಳುವ ಪಕ್ಷದ ಕಡೆಯವರು ನನ್ನ ಬಗ್ಗೆ ಹೆಚ್ಚು ಹೆಚ್ಚಾಗಿ ಹೇಳಿದ್ದಾರೆ. ಅವರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕಡೆಯದಾಗಿ ನಾನು ಮೊದಲೇ ಹೇಳಿದ ಪ್ರಕಾರ ನಿಮ್ಮೆಲ್ಲರ ಸಹಕಾರ, ನಿಮ್ಮೆಲ್ಲರ ಬೆಂಬಲದಿಂದ ಈ ಉನ್ನತ ಸ್ಥಾನವನ್ನು ಅಲಂಕರಿಸಿದ ನಂತರ ಎಲ್ಲರೂ ಒಂದೇ ಮನೆಯ ಕುಟುಂಬದ ಮಕ್ಕಳು ಎಂಬ ಭಾವನೆಯಿಂದ ನಾನು ನಡೆದುಕೊಳ್ಳುತ್ತೇನೆ. ಇದಕ್ಕೆ ನಿಮ್ಮೆಲ್ಲರ ಪೂರ್ಣ ಸಹಕಾರ, ಬೆಂಬಲ ಇರಲಿ ಎಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಚಾರ
ಕಾವೇರಿ ಗಲಭೆಯಲ್ಲಿ ಅರೆಸ್ಟ್ ಆದವರ ಬಿಡುಗಡೆಗೆ ಒತ್ತಾಯ

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ವಿನಂತಿ ಈಗ ತಾನೇ ಮೈಸೂರಿನಿಂದ ಟೆಲಿಫೋನ್ ಮೆಸೇಜ್ ಬಂದಿದೆ. ಒಂದು ವರ್ಷದ ಹಿಂದೆ ಕಾವೇರಿ ಆಜಿಟೇಷನ್ ಆಯಿತಲ್ಲಾ ಆಗ ಸಾಕಷ್ಟು ರೈತರು ಮತ್ತು ರೈತ ಮುಖಂಡರ ಮೇಲೆ ಕ್ರಿಮಿನಲ್ ಕೇಸ್‌ಗಳನ್ನು ಹಾಕಿದ್ದಾರೆ. ಕೆಲವು ಜನರನ್ನು ಅರೆಸ್ಟ್ ಮಾಡಿದ್ದಾರೆ. ಪರ್ಸನಲ್ ಬಾಂಡ್ ಮೇಲೆ ಅವರನ್ನು ಬಿಡುತ್ತಿಲ್ಲ. ತಾವು ಮೈಸೂರಿಗೆ ಹೋಗಿದ್ದಾಗ ಕೆಲವು ಜನರು ನಿಮ್ಮನ್ನು ಭೇಟಿಯಾದಾಗ ಯಾರು ನ್ಯಾಯವಾಗಿ ಹೋರಾಟ ಮಾಡಿದ್ದಾರೆ. ಅವರ ಕೇಸನ್ನು ವಿತ್‌ಡ್ರಾ ಮಾಡುತ್ತೇನೆ ಎಂದು ಹೇಳಿದ್ದೀರಂತೆ, ಹಾಗಾಗಿ ತಾವು ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಂಡರೆ ಒಳ್ಳೆಯದೆಂದು ಅಧ್ಯಕ್ಷರ ಮುಖಾಂತರ ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿ ಯಾರನ್ನು ಅರೆಸ್ಟ್ ಮಾಡಿದ್ದಾರೆ ಅವರನ್ನು ಜರೂರಾಗಿ ಬಿಡುಗಡೆ ಮಾಡಬೇಕಾಗಿದೆ. ಆ ದಿನ ಅಲ್ಲಿದ್ದಂತಹ ನಮ್ಮ ಪಕ್ಷದ ಮುಖಂಡರು ಆಗಿರತಕ್ಕಂಥ ಮಾಜಿ ಶಾಸಕರು ಆದ ಶ್ರೀ ವೇದಾಂತ್ ಹೆಮ್ಮಿಗ್ರೆ, ಜಿ. ಮಾದೇಗೌಡರು, ಅವರನ್ನೆಲ್ಲಾ ಬಿಡುಗಡೆ ಮಾಡತಕ್ಕದ್ದು ಒಂದು ಭಾಗ. ಇಡೀ ರಾಜ್ಯದಲ್ಲಿ ಏನು ಕೇಸುಗಳನ್ನು ಹಾಕಿದ್ದಾರೆ. ಇದರಲ್ಲಿ ಕ್ರಿಮಿನಲ್ ಆಪಾದನೆ ಇರತಕ್ಕಂಥ ಕೇಸುಗಳನ್ನು ಬಿಟ್ಟು ಬಾಕಿ ಎಲ್ಲಾ ಕೇಸ್‌ಗಳನ್ನು ವಿತ್‌ಡ್ರಾ ಮಾಡಬೇಕು. ಇದರಲ್ಲಿ ಲೂಟಿ, ಮರ್ಡರ್ ಆಗಿರುವಂತಹ ಕೇಸ್‌ಗಳಿಗೆ ನ್ಯಾಯಾಲಯವೇ ತೀರ್ಮಾನ ಕೊಡಲಿ. ತಮಗೆ ಗೊತ್ತಿರುವಂತೆ ಅಲ್ಲಿರುವ ಪೋಲೀಸ್‌ನವರು ವಾತಾವರಣವನ್ನು ಕಂಟ್ರೋಲ್‌ಗೆ ತರಬೇಕೆಂಬ ದೃಷ್ಟಿಯಿಂದ ಅನೇಕರನ್ನು ಬಂಧಿಸಿದ್ದಾರೆ, ಅವರ ಮೇಲೆ ಕೇಸ್ ಹಾಕಿರತಕ್ಕದ್ದು ತಮಗೆಲ್ಲಾ ಗೊತ್ತಿರುವ ವಿಚಾರ. ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಒತ್ತಾಯ ಮಾಡುವುದೇನೆಂದರೆ,

ಅವೆಲ್ಲವನ್ನು ಪರಿಶೀಲನೆ ಮಾಡಬೇಕು. ಯಾವ ಜನರ ಮೇಲೆ ಕೇಸ್ ಹಾಕಿದ್ದಾರೆ; ಅವರು 3–4 ತಿಂಗಳು ರಜಾಕ್ಕೆ ಬಂದಿದ್ದವರು ಮತ್ತು ಸುಮ್ಮನೆ ಕೋರ್ಟಿಗೆ ಹೋಗುತ್ತಿದ್ದಾರೆ. ಇದು ನನಗೆ ಗೊತ್ತಿದೆ. ಅಧ್ಯಕ್ಷರೇ, ಕಾಮಾಕ್ಷಿಪಾಳ್ಯದಲ್ಲಿದ್ದಂತಹ ಅನೇಕ ಜನರನ್ನು ಪಾಪ, ಅದಕ್ಕೆ ಸಂಬಂಧವಿಲ್ಲದಂಥವರನ್ನು ಮನೆಗಳಿಂದ ಕರೆದುಕೊಂಡು ಹೋಗಿ ಕೇಸ್ ಹಾಕಿದ್ದಾರೆ. ಅವರು ಧಾರವಾಡ, ಮೈಸೂರುಗಳಲ್ಲಿ ಕೆಲಸ ಮಾಡುತ್ತಿರುವವರು ಬೆಂಗಳೂರು ಕೋರ್ಟಿಗೆ 2–3 ತಿಂಗಳಿಗೆ ಬರುವಂತಹ ಸಂದರ್ಭ ಸಹ ಬಂದಿದೆ. ಆದ್ದರಿಂದ ಈ ತರಹ ಕೇಸ್‌ಗಳನ್ನು ಕ್ರಿಮಿನಲ್ ಸ್ವರೂಪದ ಆಪಾದನೆ ಇರುವಂತಹ ಜನರನ್ನು, ಲೂಟಿಂಗ್ ಅರೆಸ್ಟನ್ನು ಬಿಟ್ಟು ಬಾಕಿ ಕೇಸ್‌ಗಳನ್ನು ವಿತ್‌ಡ್ರಾ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ ಕಾವೇರಿ ಬಂದ್ ಸಂದರ್ಭದಲ್ಲಿ ಅನೇಕ ಕಡೆ ಗಲಾಟೆಯಾಗಿದೆ. ಈ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿ ಕೇವಲ ಮೈಸೂರು ಒಂದೇ ಅಲ್ಲ , ಕರ್ನಾಟಕದ ಅನೇಕ ಕಡೆಗಳಲ್ಲಿ ಕರ್ನಾಟಕದ ಸಾವಿರಾರು ಜನರ ಮೇಲೆ ಕೇಸ್‌ಗಳು ಇವೆ. ಆ ಕೇಸ್‌ಗಳು ಬಹಳ ಗಂಭೀರವಾದಂತಹ ಪರಿಸ್ಥಿತಿಯಲ್ಲಿ ಸಣ್ಣ ಸಣ್ಣ ವಿಚಾರದಲ್ಲಿ ಮೆರವಣಿಗೆ, ಮಾಡಿದವರು ಘೋಷಣೆ ಕೂಗಿದರು. ಈ ವಿಚಾರಗಳಿಗೆ ಮೊಕದ್ದಮೆಗಳಾಗಿದೆ. ಇದರ ಬಗ್ಗೆ ಸರ್ಕಾರ ಬಿಚ್ಚು ಮನಸ್ಸಿನಲ್ಲಿದೆ ಎಂದು ತಿಳಿದುಕೊಂಡಿದ್ದೇನೆ. ಅವರ ಮೇಲೆ ಹಾಕಿರುವಂತಹ ಮೊಕದ್ದಮೆಗಳನ್ನು ತೆಗೆಯುವ ಬಗ್ಗೆ ಸಚಿವ ಸಂಪುಟದಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಹಿಂದಿನ ಸರ್ಕಾರವೇ ಮಾಡಬೇಕಾಗಿತ್ತು. ಈಗ ಬಂದಿರುವ ಸರ್ಕಾರವಾದರೂ ಈ ಕೆಲಸವನ್ನು ಮಾಡಬೇಕು. ಇದರಿಂದ ನಷ್ಟಕ್ಕೆ ಒಳಗಾದವರಿಗೆ ಪರಿಹಾರ ಕೊಡುವುದರಲ್ಲಿ ಇವತ್ತಿನವರೆಗೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಈ ಸಂದರ್ಭದಲ್ಲಿ ಸತ್ತಿರುವವರಿಗೆ, ಗೋಲಿಬಾರ್‌ನಲ್ಲಿ ಸತ್ತವರಿಗೆ ಯಾವ ರಕ್ಷಣೆ, ಪರಿಹಾರ ಕೊಡಬೇಕೆಂಬ ಬಗ್ಗೆ ಪರಿಣಾಮಕಾರಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ.

ಇದು ನಮ್ಮ ರಾಜ್ಯದ ಪರಿಸ್ಥಿತಿ. ಇದರ ಬಗ್ಗೆ ತಾವು ತಮಿಳುನಾಡಿನ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತನಾಡಬೇಕು. ಉದಕಮಂಡಲದಲ್ಲಿ, ಊಟಿಯಲ್ಲಿ, ಗೋಪಿಚೆಟ್ಟಿ ಪಾಳ್ಯದಲ್ಲಿ, ತಾಳವಾಡಿಯಲ್ಲಿ ನಡೆದಂತಹ ಗದ್ದಲದಲ್ಲಿ ತಮಗೆ ಹೇಳುವುದಾದರೆ ಅಲ್ಲಿ ನಮ್ಮ ಕರ್ನಾಟಕದವರು ಹೋಗಿ ನೆಲಸಿದ್ದಾರೆ. ಅದರಲ್ಲೂ ಹಾಸನ ಜಿಲ್ಲೆ ಮತ್ತು ನಮ್ಮ ನಾಗಮಂಗಲ ತಾಲ್ಲೂಕಿನ ಸಾವಿರಾರು ಜನ ಅಲ್ಲಿ ನೆಲೆಸಿದ್ದಾರೆ. ಉದಕಮಂಡಲ ಒಂದು ಕಾಲದಲ್ಲಿ ನಮ್ಮ ಕರ್ನಾಟಕಕ್ಕೆ ಸೇರಬೇಕು ಎಂದು ನಮ್ಮ ಹೋರಾಟ ಇತ್ತು. ನಮ್ಮ ಸ್ನೇಹಿತರಾದಂತಹ ಜಯಚಂದ್ರರವರು ಆ ಸಂದರ್ಭದಲ್ಲಿ ಅಲ್ಲಿಗೆ ಹೋಗಿ ಬಂದರು. ಅಲ್ಲಿಯ ಜನ ತಮ್ಮ ಹಕ್ಕನ್ನು ಮತ್ತು ತಮಗೆ ಕೊಡಬೇಕಾಗಿರುವ ಪರಿಹಾರವನ್ನು ಕೇಳಲು ಹೆದರುತ್ತಿದ್ದಾರೆ. ಆದುದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಈ ಉದಕಮಂಡಲದಲ್ಲಿ, ಊಟಿ, ತಾಳವಾಡಿ, ಗೋಪಿಚೆಟ್ಟಿ ಪಾಳ್ಯದಲ್ಲಿ ಮತ್ತು ಈ ಗಡಿಪ್ರದೇಶದಲ್ಲಿ ಏನು ಗಲಾಟೆ ನಡೆಯಿತು. ಆ ಸಂದರ್ಭದಲ್ಲಿ ಆಗಿರತಕ್ಕಂಥಹ ನಷ್ಟವನ್ನು ತಮಿಳುನಾಡು ಸರ್ಕಾರದವರು ಇದುವರೆಗೂ ತುಂಬಿ ಕೊಟ್ಟಿಲ್ಲ. ಈ ಕ್ಷಣದವರೆಗೂ, ನಾವಾದರೂ ಸ್ವಲ್ಪ ಕೊಟ್ಟಿದ್ದೇವೆ ಆದರೆ ಅವರು ತುಂಬಿಕೊಟ್ಟಿಲ್ಲ. ಆದುದರಿಂದ ತಾವು ಈ ಬಗ್ಗೆ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತುಕತೆಯಾಡಿ ಅವರಿಗೆ ಸ್ವಲ್ಪ ಪರಿಹಾರ ದೊರಕುವ ಹಾಗೆ ಮಾಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಾ, ಇಲ್ಲಿರುವಂತಹ ಕೇಸುಗಳನ್ನು ಕೂಡಲೇ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ನಾನು ಅವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು, ಉಪನಾಯಕರು ಮತ್ತು ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರು ಎತ್ತಿರುವಂತಹ ವಿಷಯವಾಗಿ

ಹೇಳುವುದಾದರೆ, ಹಾಸನದಲ್ಲಿ ಲೂಟಿ ಮಾಡಿರುವಂಥಾದ್ದು ಬಹಳ ಮೇಜರ್. ಅದರಲ್ಲಿ ಕ್ರಿಮಿನಲ್ ಅಫೆನ್ಸ್‌ಸ್ ಇದ್ದರೆ ಬಹುಶಃ ಅದನ್ನು ಮುಟ್ಟುವುದು ಬಹಳ ಕಷ್ಟವಾಗುತ್ತದೆ. ಉಳಿದಂತಹ ಕೇಸುಗಳು ಏನು ಇವೆ ಅದರ ಬಗ್ಗೆ ನಾವು ಪುನರ್ ಪರಿಶೀಲನೆ ಮಾಡಿ ಅದನ್ನು ವಾಪಸ್ಸು ಹಿಂದೆ ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಮತ್ತು ಪರಿಹಾರದ ವಿಚಾರವಾಗಿ ತಾವು ಏನು ಹೇಳಿದಿರಿ ಅದು ಕರ್ನಾಟಕ ರಾಜ್ಯದಲ್ಲಿ ಮತ್ತು ಆ ರಾಜ್ಯದಲ್ಲೂ ಕೂಡ ಎಷ್ಟರಮಟ್ಟಿಗೆ ತಲುಪಿದೆ ಎಂದು ತಿಳಿಯಬೇಕಾಗಿದೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ತಾವು ಈ ಕೇಸುಗಳನ್ನು ವಿತ್‌ಡ್ರಾ ಮಾಡುತ್ತೇವೆ ಎಂದು ಏನು ಹೇಳಿದ್ದೀರಿ ಅದಕ್ಕೆ ತಮ್ಮನ್ನು ನಾನು ಅಭಿನಂದಿಸುತ್ತೇನೆ. ಆದರೆ ಪ್ರಶ್ನೆ ಏನಿದೆ ಎಂದರೆ ಕೇಸ್‌ಗಳನ್ನು ವಿತ್‌ಡ್ರಾ ಮಾಡುವುದಕ್ಕೆ ಬಹಳ ದೊಡ್ಡ ಪ್ರೊಸೀಜರ್ ಇದೆ. ಆ ಪ್ರೊಸೀಜರ್ ಪ್ರಕಾರ ಫಾಲೋ ಮಾಡಿದರೆ ಒಂದೊಂದು ವರ್ಷವಾಗುತ್ತದೆ. ಹಾಗಾಗಿ ನೀವು ಒಂದು ಟೈಂಬೌಂಡ್ ಹಾಕಿ ಇಮ್ಮಿಡಿಯೇಟಾಗಿ ಡೈರೆಕ್ಷನ್ ಕೊಟ್ಟು ಈ ಕೇಸ್‌ಗಳನ್ನು ವಿತ್‌ಡ್ರಾ ಮಾಡಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ:– ತಾವು ಹೇಳುವ ವಿಚಾರ ಸರಿ ಇದೆ. ಆ ಪ್ರೊಸೆಸನ್ನು ಆದಷ್ಟು ಜಾಗ್ರತೆ ಮಾಡುವ ಹಾಗೆ ನಾನು ಮಾಡುತ್ತೇನೆ. ಮತ್ತು ಆ ರಾಜ್ಯದ ಮುಖ್ಯಮಂತ್ರಿಗಳ ಜೊತೆ ಪರಿಸ್ಥಿತಿಯ ಮನವರಿಕೆ ಮಾಡಿ, ಅಗತ್ಯವಿದ್ದರೆ ಮಾತನಾಡಿ ಆ ಕೆಲಸವನ್ನು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ನಿಮಗೆ ನನ್ನ ಮೇಲೆ ನಂಬಿಕೆ ಇದೆ ತಾನೇ. ಅಲ್ಲಿ ಜನಗಳಿಗೆ ತೊಂದರೆ ಏನು ಆಗಿದೆ ಅದನ್ನು ಸರಿಪಡಿಸಬಹುದು ಅಷ್ಟೇ.

ವಿತ್ತೀಯ ಕಾರ್ಯಕಲಾಪಗಳು

(1993–94ನೇ ಸಾಲಿಗೆ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು)

ಬೇಡಿಕೆ ಸಂಖ್ಯೆ: 13 ಮತ್ತು 54

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು):– ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ "ದಿನಾಂಕ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದ ಕಾಲಾವಧಿಯಲ್ಲಿ ಬೇಡಿಕೆಗಳ ಸಂಖ್ಯೆ 13ಮತ್ತು 54ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಕ್ರಮವಾಗಿ 201,47,65,000 ಮತ್ತು 307,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾಪಿಸಲು ನಾನು ಅನುಮತಿಯನ್ನು ಕೋರುತ್ತೇನೆ.

ಬೇಡಿಕೆ ಸಂಖ್ಯೆ: 16

ಡಾ. ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):– ಸ್ವಾಮಿ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ "ದಿನಾಂಕ 31–3–94 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದ ಕಾಲಾವಧಿಯಲ್ಲಿ ಬೇಡಿಕೆಯ ಸಂಖ್ಯೆ: 16, ಇದಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1137,79,49,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 45,00,000

ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾಪಿಸಲು ನಾನು ಅನುಮತಿಯನ್ನು ಕೋರುತ್ತೇನೆ.

ಬೇಡಿಕೆಗಳ ಸಂಖ್ಯೆ: 14 ಮತ್ತು 15

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):– ಸ್ವಾಮಿ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ "ದಿನಾಂಕ 31–3–94 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದ ಕಾಲಾವಧಿಯಲ್ಲಿ ಬೇಡಿಕೆಗಳ ಸಂಖ್ಯೆ: 14 ಮತ್ತು 15, ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಕ್ರಮವಾಗಿ 21,71,63,000 ರೂಪಾಯಿಗಳು ಮತ್ತು 11,71,27,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾಪಿಸಲು ನಾನು ಅನುಮತಿಯನ್ನು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 11 – ಲೇಖನ ಸಾಮಗ್ರಿ ಮತ್ತು ಮುದ್ರಣ

ಶ್ರೀ ಪ್ರಭಾಕರ್ ಎಸ್. ರಾಣೆ (ವಯಸ್ಕರ ಶಿಕ್ಷಣ ಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 20,55,28,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 12 – ಸಾರ್ವಜನಿಕ ವಾಚನಾಲಯ ಇತ್ಯಾದಿ

ಶ್ರೀ ಪ್ರಭಾಕರ್ ಎಸ್. ರಾಣೆ (ವಯಸ್ಕರ ಶಿಕ್ಷಣ ಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಾರ್ವಜನಿಕ ವಾಚನಾಲಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 34,77,02,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 31 – ವೈದ್ಯಕೀಯ ಶಿಕ್ಷಣ

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಶಿಕ್ಷಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 94,70,08,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ.

ಅಧ್ಯಕ್ಷರು:– ಬೇಡಿಕೆಗಳನ್ನು ಮಂಡಿಸಲಾಯಿತು. ಈಗ ಬೇಡಿಕೆಗಳ ಮೇಲಿನ ಚರ್ಚೆಯನ್ನು ಶ್ರೀ ಆರ್. ಎಲ್. ಜಾಲಪ್ಪ ಅವರು ಪ್ರಾರಂಭಿಸುವುದು.

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ):– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಇದ್ದರು. ಅವರು ಹೋದರು. ಹೋದರೂ ಪರವಾಗಿಲ್ಲ. ಉಪಮುಖ್ಯಮಂತ್ರಿಗಳು ಮತ್ತು ಕಾನೂನು ಮಂತ್ರಿಗಳು ಇರುತ್ತಾರೆ. ಸಂಬಂಧಪಟ್ಟಂಥ ಮಂತ್ರಿಗಳು ಇರುತ್ತಾರೆ. ನಾನು ಅವತ್ತಿನ ದಿವಸ ಒಂದು ವಿಧಿಬಿಂದುವನ್ನು ಎತ್ತಿದಾಗ ಅವರು ಹೇಳಿದರು, ಇಲ್ಲ, ನಿಮಗೆ ಬೇಕಾದಂಥ ನಿರ್ವಹಣ

ಆಯವ್ಯಯವನ್ನು ಕೊಡುತ್ತೇನೆ ಎಂದು ಇವತ್ತು ಕೊಟ್ಟಿದ್ದಾರೆ. ಇಂಥ ನಿರ್ವಹಣ ಆಯವ್ಯಯವನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಇದ್ದಾರೆ, ಅವರು ಒಪ್ಪಿದರೆ ನನ್ನದೇನು ತಕರಾರು ಇಲ್ಲ. ನಮ್ಮ ಮೂಲ ಉದ್ದೇಶವೇನೆಂದರೆ ಈ ವರ್ಷ ಅಂದರೆ 1992–93ನೇ ಸಾಲಿನಲ್ಲಿ ಏನು ನಮ್ಮ ಈ ಒಂದು ಇಲಾಖೆಯ ಅಡಿಯಲ್ಲಿ ಕಾರ್ಯಕ್ರಮ ಇತ್ತೋ, ಕಾರ್ಯವ್ಯಾಪ್ತಿ ಏನಿತ್ತೋ ಅದರ ಚಟುವಟಿಕೆ ಏನಿತ್ತು, ಎಷ್ಟು ಹಣವನ್ನು ನಿಗದಿ ಮಾಡಿದ್ದೇವೆ, ಭೌತಿಕವಾಗಿ ಏನು ನಮ್ಮ ಗುರಿ ಇತ್ತೋ ಮತ್ತು ಆರ್ಥಿಕವಾಗಿ ಏನು ಗುರಿ ಇತ್ತು ಎಂಬ ಮಾತನ್ನು ಹೇಳುತ್ತಾ ಯಾವುದನ್ನಾದರೂ ನಾವು ಸಾಧನೆ ಮಾಡಿದ್ದೇವೆಯೇ ಎಂಬ ವಿಚಾರವನ್ನೂ ಸಹಾ ಆ ನಿರ್ವಹಣ ಆಯವ್ಯಯದಲ್ಲಿ ಕೊಡಬೇಕು. ಅವರು ಈಗ ತಂದುಕೊಟ್ಟರು, ನಾನು ನೋಡಿದೆ. ವೈದ್ಯಕೀಯ ಶಿಕ್ಷಣದಲ್ಲಿ ಅವರು ನಿರ್ವಹಣ ಆಯವ್ಯಯವನ್ನು ಕೊಟ್ಟಿದ್ದಾರೆ. ನನಗೆ ಬಹಳ ನೋವಾಗುತ್ತದೆ. ಇಂಥ ಒಂದು ನಿರ್ವಹಣ ವೆಚ್ಚವನ್ನು ಕೊಡುವುದಕ್ಕಿಂತ ನಾವು ಕೊಡುವುದಿಲ್ಲ, ನಿಮಗೆ ತಿಳಿದಿದ್ದನ್ನು ನೀವು ಮಾತನಾಡಿ ಎಂದು ವಿರೋಧ ಪಕ್ಷದ ಸದಸ್ಯರಿಗಾಗಲಿ ಆ ಕಡೆ ಸದಸ್ಯರಿಗೆ ಹೇಳಿದರೆ ಅದು ಒಂದೇ ಒಂದು ಬೇಡಿಕೆಯ ಬಾಬ್ತು ಅಥವಾ ಉಳಿದ ಹೆಡ್‌ಗಳು ಇದ್ದಾವೆ, ಒಂದೇ ಒಂದು ಹೆಡ್‌ಗಳ ಬಾಬ್ತು ಆದರೂ ಇಷ್ಟು ಹಣವನ್ನು ಖರ್ಚು ಮಾಡಿದ್ದೇವೆ ಎನ್ನುವ ಮಾತನ್ನೂ ಸಹಾ ಇದರಲ್ಲಿ ಹೇಳಿಲ್ಲ. ಇದನ್ನು ನಿರ್ವಹಣ ವೆಚ್ಚ ಎಂದು ಹೇಗೆ ಕರೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಮಾನ್ಯ ಹಿರಿಯ ಉಪಮುಖ್ಯಮಂತ್ರಿಗಳು ಏನಿದ್ದಾರೆ, ಅವರನ್ನು ಕೇಳುತ್ತೇನೆ, ಉದಾಹರಣೆಗೆ ಯೋಜನೆಯ ವೆಚ್ಚ ಇರಬಹುದು, ಯೋಜನೇತರ ವೆಚ್ಚ ಇರಬಹುದು 1992–93ನೇ ಸಾಲಿನಲ್ಲಿ ಸುಮಾರು 12 ಕೋಟಿ + 69 ಕೋಟಿ ಒಟ್ಟು 81 ಕೋಟಿ ರೂಪಾಯಿಗಳನ್ನು ಈ ಒಂದು 92–93ನೇ ಸಾಲಿನಲ್ಲಿ ತಾವು ನಿಗದಿ ಮಾಡಿದ್ದೀರಿ. ನಾನು ತಮ್ಮನ್ನು ಕೇಳುತ್ತಿದ್ದೇನೆ, ತಾವು ಏನು ಇದರಲ್ಲಿ ಕೊಟ್ಟಿದ್ದೀರಿ, ಯಾವ ಯಾವ ಹೆಡ್‌ಗಳ ಬಾಬ್ತಿಗೆ ಎಷ್ಟೆಷ್ಟು ಹಣವನ್ನು ನಿಗದಿ ಮಾಡಿದ್ದೀರಿ ಎನ್ನುವ ಪಟ್ಟಿಯನ್ನು ಕೊಟ್ಟಿದ್ದೀರಿ, ಹೊರತಾಗಿ ಒಂದೇ ಒಂದು ಇದರಲ್ಲಿ ಇಷ್ಟು ಹಣವನ್ನು 1992–93ನೇ ಸಾಲಿನಲ್ಲಿ ಕನಿಷ್ಟಪಕ್ಷ ಫೆಬ್ರವರಿಗೆ ಅಥವಾ ಡಿಸೆಂಬರ್‌ವರೆಗಾಗಿ ನಾವು ಇಂಥ ಯೋಜನೆಗಳ ಬಾಬ್ತು ಅಥವಾ ಯೋಜನೇತರ ವೆಚ್ಚಗಳ ಬಾಬ್ತು ಖರ್ಚು ಮಾಡುತ್ತೇವೆ ಎಂಬ ಮಾತನ್ನು ಹೇಳಿಲ್ಲ. ಈ ರೀತಿಯಾಗಿ ಕೊಡುವುದರ ಮುಖಾಂತರ ಎಷ್ಟರಮಟ್ಟಿಗೆ ಸರ್ಕಾರ ನಮ್ಮ ಕೆಲಸಕ್ಕೆ ಸಹಾಯವಾಗುತ್ತದೆ ಎಂಬುದನ್ನು ತಮ್ಮ ಯೋಚನೆಗೆ ಬಿಟ್ಟಿದ್ದೇನೆ. ಇವತ್ತಿನ ದಿವಸ ತಾವು ಇದನ್ನು ಸರಿಪಡಿಸುವುದಕ್ಕಾಗುವುದಿಲ್ಲ ಎಂಬುದು ನನಗೆ ಗೊತ್ತಿದೆ. ಆದರೆ ಇನ್ನು ಮುಂದಾದರೂ ನಾನು ತಮ್ಮಿಂದ ತಿಳಿಯಬಯಸುತ್ತೇನೆ ತಾವು ಸರ್ಕಾರಕ್ಕೆ ಸೂಚನೆ ಕೊಡಬೇಕು. ನಿಜವಾಗಿಯೂ ನಿರ್ವಹಣ ವೆಚ್ಚ ಏನು ಆಯವ್ಯಯ ಇದೆ, ಇದನ್ನು ಸರಿಯಾದ ರೀತಿಯಲ್ಲಿ ಅವರು ಮಾಡಿ ಕೊಡಬೇಕು. ಏನೂ ಇಲ್ಲದೆ ಹೋದ ವರ್ಷ ಇಷ್ಟು ರೂಪಾಯಿ ಕೊಟ್ಟಿದ್ದೆವು, ಈ ವರ್ಷ ಇಷ್ಟು ರೂಪಾಯಿ ಕೊಟ್ಟಿದ್ದೇವೆ ಎಂದು ಹೇಳಿ ಇದನ್ನು ಕಾರ್ಯನಿರ್ವಹಣ ಆಯವ್ಯಯ ಎಂದು ಹೇಳುವುದಾದರೆ ಅದು ಸರಿ ಇಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುತ್ತ ಇದರ ಬಗ್ಗೆ ಸರ್ಕಾರದವರ ಅಭಿಪ್ರಾಯ ಏನು ಎಂದು ತಿಳಿಯಬಯಸುತ್ತೇನೆ ಹಾಗೂ ಇದರ ಬಗ್ಗೆ ತಮ್ಮ ಆದೇಶವನ್ನು ನಾನು ಕೋರುತ್ತೇನೆ.

† ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ನಾವು ಸರ್ಕಾರವನ್ನು ನಡೆಸಿದ್ದೇವೆ. ನಾವೆಲ್ಲ ರಿಪೋರ್ಟ್ಸ್ ಕೇಳುವುದಕ್ಕೆ ಮುಂಚೆ ಪರ್‌ಫಾರ್ಮೆನ್ಸ್ ರಿಪೋರ್ಟನ್ನು ಕೊಡುತ್ತಿದ್ದೆವು. ಈಗ ಪರಿಸ್ಥಿತಿ ಏನಾಗಿದೆ ಎಂದರೆ ಮೆಡಿಕಲ್ ಎಜುಕೇಷನ್ ಬಗಗೆ ಕೊಟ್ಟಿರುವುದು ನಾವು ಏನು ಮಾತನಾಡಬೇಕು ಎನ್ನುವುದು ಗೊತ್ತಾಗುತ್ತಿಲ್ಲ. ಆಪಾದನೆ ಏನೆಂದರೆ – ಈ ಸರ್ಕಾರದಲ್ಲಿ ಹಣ ಇಲ್ಲ, ಖಜಾನೆ ಖಾಲಿಯಾಗಿದೆ. ಎಲ್.ಓ.ಸಿ. ಕೊಡುತ್ತಿಲ್ಲ, ಇವರ ಹತ್ತಿರ ದುಡ್ಡು ಇಲ್ಲ. ಇದೆಲ್ಲವೂ ಸಹಿತ ಇದರಿಂದ ಪ್ರೂವ್ ಆಗುತ್ತದೆ. ಈ ಸರ್ಕಾರ ಕೆಲಸ ಮಾಡುತ್ತಿಲ್ಲ. ಮತ್ತು ಇನ್ನೊಂದು ಬಹಳ ಜವಾಬ್ದಾರಿ

ಎಂದರೆ ಈ ಅಧಿಕಾರಿಗಳು ಏನು ಮಾಡುತ್ತಿದ್ದರು, ಮೆಡಿಕಲ್ ಎಜುಕೇಷನ್ ಡೈರೆಕ್ಟರ್ ಏನು ಮಾಡುತ್ತಿದ್ದರು, ಇದು ನಮಗೆ ಬಹಳ ಮುಖ್ಯವಾಗಿರತಕ್ಕಂಥದ್ದು. ಇದರ ಆಧಾರದ ಮೇಲೆ ನಾವು ಏನು ಚರ್ಚೆ ಮಾಡುವುದಕ್ಕಾಗುತ್ತದೆ ದಯವಿಟ್ಟು ತಾವೇ ಹೇಳಿ. ಈಗ ತಾವೆಲ್ಲ ಜವಾಬ್ದಾರಿ ಸ್ಥಾನದಲ್ಲಿ ಇದ್ದಂಥವರು. ಇನ್ನು ಹೆಚ್ಚಿನ ಜವಾಬ್ದಾರಿ ತೆಗೆದುಕೊಳ್ಳುವವರು ಸ್ವಾಮಿ. ನಾವು ಏನು ಚರ್ಚೆ ಮಾಡುವುದಕ್ಕಾಗುತ್ತದೆ ? ಇದರಿಂದ ಏನು ಎಂದರೆ ನೀವೇನು ಬೇಕಾದರೆ ಮಾತನಾಡಿಕೊಳ್ಳಿ, ನಾವು ಮಾಡುವುದು ಮಾಡುತ್ತೇವೆ ಎಂದಂತಾಗುತ್ತದೆ. ಇವತ್ತು ಮೆಡಿಕಲ್ ಎಜುಕೇಷನ್ ಬಗ್ಗೆ ಸುಮಾರು 90 ಕೋಟಿ ರೂಪಾಯಿ ನಾವು ಖರ್ಚು ಮಾಡುತ್ತಿದ್ದೇವೆ. ನಮ್ಮ ಆಲ್ ಇಂಡಿಯಾ ಇನ್ಸಿಟ್ಯೂಟ್‌ಗಳೆಲ್ಲ ಇದೆ. ನಿಮ್ಹಾನ್ಸ್ ಇದೆ, ನಮ್ಮ ಕ್ಯಾನ್ಸರ್ ಇನ್ಸ್‌ಸ್ಟಿಟ್ಯೂಟ್ ಇದೆ, ಜಯದೇವ ಆಸ್ಪತ್ರೆ ಇದೆ, ವಿಕ್ಟೋರಿಯಾ ಆಸ್ಪತ್ರೆ ಇದೆ, ಡಿಸ್ಟ್ರಿಕ್ಟ್ ಆಸ್ಪತ್ರೆಗಳು ಇದೆ, ಇದರ ಬಗ್ಗೆ ನಾವು ಚರ್ಚೆ ಮಾಡಬೇಕು. ಡೆಂಟಲ್ ಕಾಲೇಜು ಇದೆ, ಏನು ಇದರ ಕಥೆ ಎನ್ನತಕ್ಕಂಥಾದ್ದು ಗೊತ್ತಾಗುತ್ತಿಲ್ಲ. ಇದನ್ನು ಕೊಡದಿದ್ದರೇ ಒಳ್ಳೆಯದು.

3.45 ಪಿ.ಎಂ.

ಇದನ್ನು ಕೊಡದೆ ಹೋದರೆ ನಮಗೆ ಏನು ಗಮನಕ್ಕೆ ಬರುತ್ತದೆ ಅದನ್ನಾದರೂ ನಾವು ತೋಚಿದ ಹಾಗೆ ಹೇಳಬಹುದು. This is ridiculing ourselves. ಇದನ್ನು ಕೊಡದೇ ಇದ್ದರೆ ಒಳ್ಳೆಯದು. ಈ ವಿಧಿಬಿಂದುಗೆ ನಿಮ್ಮ ಹತ್ತಿರ ಉತ್ತರ ಇಲ್ಲ ಅನ್ನುವುದು ನಮಗೆ ಗೊತ್ತಿದೆ. ನಿಮ್ಮ ಹತ್ತಿರ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ನೀವು ಮೌನವಾಗಿದ್ದೀರಿ. To that extent ನೀವು ಪ್ರಾಮಾಣಿಕರಿದ್ದೀರಿ, ನಾನು ಅದನ್ನು ಅಪ್ರಿಶಿಯೇಟ್ ಮಾಡುತ್ತೇನೆ. ಇನ್ನು ಮುಂದಾದರೂ ಈ ರೀತಿ ಮಾಡಬೇಡಿ. ಇದರ ಬಗ್ಗೆ ಏನು ಹೇಳಬೇಕು ಅನ್ನುವುದು ನಮಗೆ ಅರ್ಥವಾಗುತ್ತಿಲ್ಲ. ತಮಗೆ ಬಿಟ್ಟು ಬಿಡುತ್ತೇವೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಸಿಂಧ್ಯರವರು ಕೊನೆಯ ವಾಕ್ಯವನ್ನು ಏನು ಹೇಳಿದ್ದಾರೆ ನಾನು ಅದನ್ನು ಮುಂದುವರಿಸಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಸರ್ಕಾರ ಈ ಪರಿಸ್ಥಿತಿಯಲ್ಲಿದೆ. ತಾವು ಬಹಳ ಕತ್ತಲೆಯಲ್ಲಿದ್ದೀರಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ನಿಮ್ಮ ಗಾಂಭೀರ್ಯ ಈ ರೀತಿ ಮಾಡಿದರೆ ಹೊರಟು ಹೋಗುತ್ತದೆ. ಅದರ ಮಹತ್ವ ಹೊರಟುಹೋಗುತ್ತದೆ. ಅವರು ಕೆಲವು ಲೋಪದೋಷವನ್ನು ಎತ್ತಿ ತೋರಿಸಿದರು ಅದಕ್ಕೆ ಮಹತ್ವ ಇದೆ ಅಷ್ಟಕ್ಕೆ ಮಾತ್ರ ಲಿಮಿಟ್ ಮಾಡಿಕೊಳ್ಳೋಣ.

ಶ್ರೀ ಹೆಚ್. ಏಕಾಂತಯ್ಯ:– ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವು ಇದನ್ನು ಬಹಳ ತೀವ್ರವಾಗಿ ಮತ್ತು ಗಂಭೀರವಾಗಿ ತೆಗೆದುಕೊಳ್ಳಬೇಕು. ಸುಮಾರು 112 ಕೋಟಿ ರೂಪಾಯಿಗಳನ್ನು ಈ ವರ್ಷ ಇಟ್ಟಿದ್ದೀರಿ. 92 ಕೋಟಿ ರೂಪಾಯಿಗಳನ್ನು ಮೆಡಿಕಲ್ ಎಜ್ಯುಕೇಶನ್ ಬಗ್ಗೆ 1992–93 ನೇ ಸಾಲಿನಲ್ಲಿ ತಾವು ಖರ್ಚು ಮಾಡಲಿಕ್ಕೆ ನಿಗದಿ ಮಾಡಿದ್ದೀರಿ, ಆ ಹಣದಲ್ಲಿ ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ನಿಮ್ಹಾನ್ಸ್‌ಗಾಗಲಿ, ಅಥವಾ ಜಯದೇವ ಹೃದ್ರೋಗ ಆಸ್ಪತ್ರೆಗಾಗಲಿ, ಅಥವಾ ಬೇರೆ ಬೇರೆ ಎಲ್ಲಾ ಘಟಕಗಳ ಬಗ್ಗೆ ತಾವು ಹಣವನ್ನು ಇಟ್ಟಿದ್ದೀರಿ. ನಾನು ತಮ್ಮನ್ನು ಕೇಳುವುದೇನೆಂದರೆ ಈ ಯೋಜನೆಗೆ ಕೇಂದ್ರ ಸರ್ಕಾರ ಕೋಟಿಗಟ್ಟಲೆ ಹಣವನ್ನು ಕೊಟ್ಟಿದೆ. ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಸುಮಾರು 6 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಕೊಟ್ಟಿದ್ದಾರೆ. ಕನಿಷ್ಠ ಪಕ್ಷ ನಾವು ಕೇಳುವುದೇನೆಂದರೆ ಆ ಹಣವನ್ನಾದರೂ ತಾವು ಖರ್ಚು ಮಾಡಲಿಲ್ಲ ಎಂದು ನೋಡಿಕೊಳ್ಳುವುದಕ್ಕೆ ಬೇಕಾದಂತಹ ಮಾಹಿತಿಯನ್ನು ಕೊಡದೆ ಇದ್ದರೆ ನಾವು ಏನು ಮಾಡಬೇಕು ? ಇದರ ಬಗ್ಗೆ ನಾನು ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ವಿನಂತಿ

ಮಾಡಿಕೊಳ್ಳುವುದೇನೆಂದರೆ ಇದನ್ನು ತಾವು ತೀವ್ರವಾದಂತಹ ರೀತಿಯಲ್ಲಿ ಗಂಭೀರವಾದಂತಹ ರೀತಿಯಲ್ಲಿ ಪರಿಗಣಿಸಬೇಕು. ಇಂತಹವುಗಳು ಆಗದೇ ಇದ್ದರೆ ನೀವು ಸಾರ್ಥಕವಾದಂತಹ ಚರ್ಚೆಯನ್ನು ಇದರ ಬಗ್ಗೆ ಮಾಡಲು ಸಾಧ್ಯವಿಲ್ಲ.

ಈ ಚರ್ಚೆಯ ಉದ್ದೇಶ ಏನಿದೆ ಆ ಉದ್ದೇಶ ಖಂಡಿತವಾಗಿಯೂ ಈಡೇರುವುದಿಲ್ಲ. ನಾವು ಯಾವುದೇ ಅಧಿಕಾರಿಗಳ ಬಗ್ಗೆಯಾಗಲಿ, ವೈಯಕ್ತಿಕವಾಗಿ ಹೇಳದೇ ಇದ್ದರೂ ಸಹ ಇಲಾಖೆಯ ಮುಖ್ಯಸ್ಥರು ಯಾರಿದ್ದಾರೆ, ಅಥವಾ ಇಲಾಖೆಯ ಕಾರ್ಯವೈಖರಿ ಏನಿದೆ ಅದನ್ನು ಟೀಕೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ, ನಮ್ಮ ಸದುದ್ದೇಶದ ಟೀಕೆಯನ್ನು ತಾವು ಕೇಳಲಿಕ್ಕೆ ತಯಾರಿಲ್ಲ. ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆ ರೀತಿಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ ಹೊರತಾಗಿ ಸರ್ಕಾರವನ್ನು ಟೀಕೆ ಮಾಡುವುದಕ್ಕಾಗಲೀ ಅಥವಾ ಮತ್ತು ಯಾವ ಉದ್ದೇಶದಿಂದ ನಾವು ಖಂಡಿತವಾಗಿ ಹೇಳುತ್ತಿಲ್ಲ ಎನ್ನುವಂತಹ ಮಾತನ್ನು ಹೇಳುತ್ತೇನೆ. ಸರ್ಕಾರ ಇದಕ್ಕೆ ತನ್ನದೇ ಆದಂತಹ ರೀತಿಯಲ್ಲಿ ಒಂದು ಸದ್ಭಾವನೆಯಿಂದ ತಮ್ಮ ಹೃದಯ ಶ್ರೀಮಂತಿಕೆಯನ್ನು ತೋರಿಸುವುದರ ಮುಖಾಂತರ ಇದನ್ನು ಸರಿಪಡಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ಉಪನಾಯಕರು ನಾವು ಏನನ್ನು ಹೇಳಬೇಕೋ ಗೊತ್ತಾಗುವುದಿಲ್ಲ ಎಂದು ಅನ್ನುತ್ತಿದ್ದಾರೆ. ರಾಜ್ಯದ ಕಾನೂನು ಮಂತ್ರಿಗಳು ನಾವು ಏನು ಹೇಳಬೇಕೋ ಗೊತ್ತಾಗುವುದಿಲ್ಲ ಅಂತ ಅನ್ನುವುದು ಇವರಿಬ್ಬರ ಮಧ್ಯೆ ಸಿಕ್ಕಿಕೊಂಡಿರುವಂತಹ ನನ್ನಂತಹವರಿಗೆ ಕಷ್ಟವಾಗುತ್ತದೆ. ಇವತ್ತು ಏನೂ ತಡವಾಗಿಲ್ಲ. ಈ ಮಾರ್ಚಿ 31ಕ್ಕೆ ನಿಮಗೆ ಏನು ತಾತ್ಕಾಲಿಕವಾಗಿ ಅನುಮತಿ ಬೇಕೋ ಅದನ್ನು ತೆಗೆದುಕೊಳ್ಳಿ, ಅನಂತರ ಎಲ್ಲಾ ಸಿದ್ಧ ಮಾಡಿಕೊಂಡು ಏತಕ್ಕೆ ನೀವು ಬರಬಾರದು ? Otherwise, all of us will be considered as irresponsible by the people of this State.

ಈಗಲೂ ಗಂಭೀರವಾಗಿ ಆಲೋಚನೆ ಮಾಡಿ; ಇಷ್ಟು ಲಘುವಾಗಿ ನಗುವುದು ಮಾಡುವುದು ಬೇಡಿ. ನನಗೆ ಪ್ರತಿನಿಧಿಯಾಗಿ ಬೇಜಾರಾಗುತ್ತಿದೆ. ಇನ್ನು ನಮ್ಮನ್ನು ಇಲ್ಲಿಗೆ ಕಳುಹಿಸಿದವರಿಗೆ ಎಷ್ಟು ಬೇಜಾರಾಗಬಹುದು. ಇವತ್ತೂ ತಡವಾಗಿಲ್ಲ. 31ಕ್ಕೆ ನಿಮಗೆ ಏನು ತಾತ್ಕಾಲಿಕ ಒಪ್ಪಿಗೆ ಬೇಕೋ ಅದನ್ನು ತೆಗೆದುಕೊಳ್ಳಿ, ಎಲ್ಲಾ ಸಿದ್ಧ ಮಾಡಿಕೊಂಡು ಬನ್ನಿ ಆಮೇಲೆ ಮತ್ತೆ ಸೇರೋಣ.

ಶ್ರೀ ಹೆಚ್. ಏಕಾಂತಯ್ಯ:– ಸರ್ಕಾರದ ಪರವಾಗಿ ಇದಕ್ಕೆ ಏನೂ ಉತ್ತರ ಇಲ್ಲವೇ ? ಏನಾದರೂ ಹೇಳಬೇಕಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್:– ಇಷ್ಟೊಂದು ಗಂಭೀರವಾಗಿ ಚರ್ಚೆ ನಡೆಯುತ್ತಿದೆ, ನಾವು ವಿಷಯವನ್ನು ಇಲ್ಲಿಗೆ ಬಿಟ್ಟರೆ ಹೇಗೆ ?

ಶ್ರೀ ಆರ್.ವಿ. ದೇಶಪಾಂಡೆ:– ಅವರು ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡಿದ್ದಾರೆ. ನಿಮಗೆ ಕನ್ವಿನ್ಸ್ ಆಗಿದ್ದರೆ ಉತ್ತರವನ್ನು ಕೊಡಿ; ಕನ್ವಿನ್ಸ್ ಆಗಿರಲಿಲ್ಲ ಅಂದರೆ ಇನ್ನು ಚರ್ಚೆ ಮಾಡಬೇಕಾಗುತ್ತದೆ. ಸಮಯದ ಅಭಾವದಿಂದಾಗಿ ನೀವು ಓಟ್ ಆನ್ ಅಕೌಂಟ್ ತೆಗೆದುಕೊಳ್ಳುವ ಸಂದರ್ಭ ಬರುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಈ ಅಧಿಕಾರಿಗಳಿಗೆ ಇದರ ಬಗ್ಗೆ ಮಾಹಿತಿಯನ್ನು ಒದಗಿಸಲಿಕ್ಕೆ ತೊಂದರೆಯಾದರೂ ಏನಿದೆ, ಇದರ ಬಗ್ಗೆ ಮಾಹಿತಿಯನ್ನು ಏತಕ್ಕೆ ಒದಗಿಸುತ್ತಿಲ್ಲ. ಮೇಲಿಂದ ಮೇಲೆ ಇದು ಪ್ರಸ್ತಾಪವಾಗುತ್ತಿದೆ, ಸರ್ಕಾರ ಅವರಿಗೇನು ಸರಿಯಾದಂತಹ ಆದೇಶವನ್ನು ಕೊಡುತ್ತಿಲ್ಲವೋ

ಅಥವಾ ಸರ್ಕಾರದ ಹತೋಟಿಯಲ್ಲಿ ಅಧಿಕಾರಿಗ್ಳು ಇಲ್ಲವೋ ಈ ರೀತಿಯಾಗಿ ಇದನ್ನು ಇಷ್ಟೊಂದು ಲಘುವಾಗಿ ಏತಕ್ಕೆ ತೆಗೆದುಕೊಳ್ಳಬೇಕು.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಬರೀ ಅಧಿಕಾರಿಗಳ ಬಗ್ಗೆ ಏನು ಮಾತನಾಡುತ್ತೀರಿ. The entire government is responsible for this.

ಶ್ರೀ ಬಿ.ಎಚ್. ಬನ್ನಿಕೋಡ್:– ಅಧಿಕಾರಿಗಳು ಏನು ಮಾಡುತ್ತಿದ್ದಾರೆಂಬುದರ ಬಗ್ಗೆ ಸರ್ಕಾರ ನೋಡುತ್ತಿದೆಯೆ ? ಇಲ್ಲವೆ ? ಎಂಬ ಮಾತನ್ನು ಹೇಳುತ್ತಿದ್ದೇನೆ. ಈ ಕುರಿತು ಸದನವಲ್ಲಿ ವರ್ಣಿಸುವಾಗ ಸರ್ಕಾರದ ಸಂಬಂಧಪಟ್ಟ ಸಚಿವರು ಇದು ಸರಿಯಿದೆಯೇ ? ಇಲ್ಲವೇ ? ಕೊಟ್ಟಿದ್ದಾರೆಯೆ ? ಇಲ್ಲವೆ ? ಎಂಬುದನ್ನು ನೋಡಿ ಹೇಳಬೇಕು. ದಿನವೂ ಇದನ್ನೇ ಹೇಳುವುದಾದರೆ ಈ ಸದನಕ್ಕೆ ಗೌರವ ತರತಕ್ಕಂಥಾದ್ದಲ್ಲ. ಆದುದರಿಂದ, ದಯಮಾಡಿ ಸರ್ಕಾರ ಈ ಬಗ್ಗೆ ಒಂದು ಸೂಕ್ತ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಅಧ್ಯಕ್ಷರೇ, ಇವರ್ಯಾರಿಗೂ ಉತ್ತರ ಕೊಡುವುದಕ್ಕಾಗುವುದಿಲ್ಲ, ದಯವಿಟ್ಟು ತಾವು ಸದನಕ್ಕೆ ಮುಖ್ಯಮಂತ್ರಿಗಳನ್ನು ಕರೆಯಿಸಿ.

ಅಧ್ಯಕ್ಷರು:– ತಾವು ಪ್ರಸ್ತಾವನೆ ಮಾಡುವುದಕ್ಕೆ ಮುನ್ನ 'ನಮ್ಮದ್ದು ತಪ್ಪಾಗಿದೆ' ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿ, 'ಇನ್ನು ಮುಂದೆ ಈ ರೀತಿ ಮಾಡುವುದಿಲ್ಲ' ಎಂದೂ ಹೇಳಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ:– ನಾನು ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಕೇಳುತ್ತಿಲ್ಲ. ಸರ್ಕಾರದವರು ಈ ರೀತಿ ಮಾಡಿರುವುದರ ಬಗ್ಗೆ ಅವರ ಪ್ರತಿಕ್ರಿಯೆ ಏನು ? ಎನ್ನುವುದು ನಮ್ಮ ಜನರಿಗೆ ಗೊತ್ತಾಗಬೇಕಲ್ಲವೇ ? ಕೇವಲ ನಾವು ಇಲ್ಲಿ ಅರ್ಥ ಮಾಡಿಕೊಳ್ಳುವುದಕ್ಕೆ ಬಂದಿಲ್ಲ. ಈ ಕುರಿತು ಸರ್ಕಾರದ ಪ್ರತಿಕ್ರಿಯೆ ಏನೆಂದು ಈ ದೇಶದ ಜನರಿಗೆ ಗೊತ್ತಾಗಬೇಕು. ಈ ಪ್ರಶ್ನೆಯನ್ನು ನಾವು ಸದನದಲ್ಲಿ ಎತ್ತಿದಾಗ ಏನೂ ಪ್ರತಿಕ್ರಿಯೆ ಇಲ್ಲವೆಂದಾದರೂ ಸರ್ಕಾರ ಹೇಳಲಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ತಾವು ಕ್ಷಮಾಪಣೆ ಕೇಳಬಾರದೆಂಬುದೇ ನನ್ನ ಆಸೆ.

ಶ್ರೀ ಬಿ.ಎಚ್. ಬನ್ನಿಕೋಡ್:– ಅವರಿಗೆ ಅದರ ಅರಿವೇ ಇಲ್ಲ.

PROF M.D. NANJUNDA SWAMY:– I am suggesting a way out of the whole thing. ಕ್ಷಮಾಪಣೆ ಕೇಳಬಾರದೆಂಬುದೇ ನನ್ನ ಆಸೆ. ಇದರಿಂದ ಹೇಗಾದರೂ ತಪ್ಪಿಸಿಕೊಳ್ಳುವುದಕ್ಕೆ ಒಂದು ದಾರಿ ಇದೆಯೇ ? ನಾವು ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದೇವೆಂದು ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ನಾನು ಸಲಹೆ ಮಾಡಿದೆ. ಈಗಲಾದರೂ ತಾವು ಅದರ ಬಗ್ಗೆ ಆಲೋಚನೆ ಮಾಡಿ. 31ಕ್ಕೆ ಏನು ಬೇಕೋ ಅದನ್ನು ಮಾಡೋಣ. ಎಲ್ಲಾ ಸಿದ್ಧತೆ ಮಾಡಿಕೊಂಡು ಸ್ವಲ್ಪ ಜವಾಬ್ದಾರಿಯಿಂದ ಚರ್ಚೆ ಮಾಡೋಣ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿದ ವಿಚಾರವನ್ನು ಮೊದಲೇ ಯೋಚನೆ ಮಾಡಬಹುದಾಗಿತ್ತು. ಈಗಾಗಲೇ ಕಾರ್ಯಕಲಾಪಗಳ ಸಲಹಾ ಸಮಿತಿಗೆ ಎಲ್ಲಾ ಪಕ್ಷಗಳ ನಾಯಕರುಗಳು ಬಂದು ಒಂದು ಕಾರ್ಯಕ್ರಮವನ್ನು ನಿಗದಿ ಮಾಡಬೇಕೆಂದು, ಈಗ ಮುಕ್ಕಾಲು ಭಾಗ ಕೆಲಸವಾಗಿದ್ದು, ಇನ್ನು ಸ್ವಲ್ಪ ಕೆಲಸ ಮಾತ್ರ ಮಾಡಬೇಕಾಗಿದೆ. ವೋಟ್ ಆನ್ ಅಕೌಂಟ್ ತೆಗೆದುಕೊಳ್ಳತಕ್ಕಂಥ ಪ್ರಶ್ನೆ ಪುನಃ ಅದನ್ನು ಪರಿಶೀಲಿಸುವ ಸಂದರ್ಭವಿಲ್ಲ. ಆಗಿರತಕ್ಕಂಥ ಲೋಪ–ದೋಷಗಳ ಬಗ್ಗೆ ಮೊನ್ನೆ ದಿವಸ ಉಪ ಮುಖ್ಯಮಂತ್ರಿಗಳು. ಸರ್ಕಾರದ ಕಡೆಯಿಂದ ಲೋಪವಾಗಿದೆ ಎಂದು ತಮ್ಮ ಕ್ಷಮಾಪಣೆ ಯಾಚಿಸಿದ್ದಾರೆ. ನಾನು ಅಧಿಕಾರಿಗಳ ಬಗ್ಗೆ ಹೇಳುತ್ತಿಲ್ಲ.

ಶ್ರೀ ಎಚ್. ಏಕಾಂತಯ್ಯ:– ಅವೊತ್ತಿನ ಮಾನ್ಯ ಉಪಮುಖ್ಯಮಂತ್ರಿಗಳ ದೊಡ್ಡಸ್ಥಿಕೆ ಏನೆಂದರೆ, ಅವರು ಸೌಜನ್ಯತೆಯಿಂದ ಆ ಮಾತನ್ನು ಒಪ್ಪಿಕೊಂಡರು. ಅದನ್ನು ನಾವು ಅಲ್ಲಿಗೆ ಕೈಬಿಟ್ಟಿದ್ದು, ಮತ್ತೆ ಅದೇ ಪರಿಸ್ಥಿತಿ ಮುಂದುವರಿಯಬೇಕೆ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮುಂದುವರೆಯಬಾರದು,

ಶ್ರೀ ಆರ್.ವಿ. ದೇಶಪಾಂಡೆ:– ನಿಮಗೆ ಸಮಸ್ಯೆಯಾಗಿರುವುದೇನೆಂದರೆ, 40 ಜನ ಮಂತ್ರಿಗಳಿದ್ದು, ಯಾರಿಗೆ ಯಾರೆಂದು ಗೊತ್ತಿಲ್ಲ. ಏಕೆಂದರೆ, ಎಲ್ಲಾ ಬೇಜವಾಬ್ದಾರಿತನದ ಜನರೇ ಹೆಚ್ಚಾಗಿದ್ದಾರೆ. ಅಧಿಕಾರಿಗಳ ಮೇಲೆ ಹೇಳುತ್ತಿರುವಾಗ ಅವರಿಗೆ ನೋಟೀಸ್ ಕೊಟ್ಟು ಮನೆಗೆ ಕಳುಹಿಸುವುದಕ್ಕೆ ಮುಂಚೆ ಅದು ಸರಿ ಇದೆಯೆ ? ತಪ್ಪಿದೆಯೆ ? ಸರಿಯಾಗಿ ಪ್ರಾವಿಜನ್ ಆಗಿದೆಯೆ ? ಇಲ್ಲವೆ ? ಎನ್ನುವುದನ್ನು ನೋಡಬೇಕಲ್ಲ. ಆ ರೀತಿ ನೋಡದೆ ಪ್ರತಿ ಹಂತದಲ್ಲಿ ತಪ್ಪಾಗಿದೆಯೆಂದು ಹೇಳಿದರೆ ಹೇಗೆ ? ಮಾನ್ಯ ಉಪ ಮುಖ್ಯಮಂತ್ರಿಗಳು ಆ ಮಾತನ್ನು ಬಹಳ ಸೌಜನ್ಯತೆಯಿಂದ ಒಪ್ಪಿಕೊಂಡರು. ಅದಾದ ನಂತರ ಅದೇ ಪರಿಸ್ಥಿತಿ ಮುಂದುವರಿಯಬೇಕೆ ? ಮುಂದಿನ ಡಿಪಾರ್ಟ್‌ಮೆಂಟಿನ ವಿತರಣೆ ಸರಿಯಾಗಿ ಆಗಬೇಕಲ್ಲ. ಇಲ್ಲಿ ಏನು ಕಾಣಿಸುತ್ತದೆಂದರೆ ಅಧಿಕಾರಿಗಳು ನಿಮಗೆ ಬಹಳ ಮಿಸ್‌ಗೈಡ್ ಮಾಡುತ್ತಿದ್ದಾರೆ. ನಿಮ್ಮನ್ನು ಯಾವುದೋ ತೊಂದರೆಗೆ ಸಿಕ್ಕಿಹಾಕಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಕಾಣಿಸುತ್ತಿದೆ. ಆದುದರಿಂದ ಸ್ವಲ್ಪ ಜವಾಬ್ದಾರಿಯಿಂದಾದರೂ ಈ ಸದನವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಹೋದಸಲ ನಾವು ಈ ಸದನದಲ್ಲಿ ಪಾಲ್ಗೊಳ್ಳಲು ಬಹಿಷ್ಕರಿಸಿ ಹೊರಗಡೆ ಕುಳಿತಿದ್ದೆವು, ಆಗ ನಮ್ಮ ಕಣ್ಣಿಗೆ ಸದನದಲ್ಲಿ ಏನು ನಡೆಯುತ್ತಿದೆಯೆಂದು ಕಾಣುತ್ತಿರಲಿಲ್ಲ. ಏನೋ ಕಲಾಪ ನಡೆದುಕೊಂಡು ಹೋಗುತ್ತಿದೆಯೆಂದು ಭಾವಿಸಿದ್ದೆವು. ಈಗ ನಾವು ಸದನದಲ್ಲಿ ಕುಳಿತು ಈ ಪರಿಸ್ಥಿತಿ ನಡೆಯುವುದಾದರೆ ಇದಕ್ಕಿಂತ ಘೋರ ಅನ್ಯಾಯ ಮತ್ತೊಂದಿಲ್ಲ. ಇದನ್ನು ಉಪಮುಖ್ಯಮಂತ್ರಿಗಳಾದ ತಾವು ತತ್ವಶಃ ಒಪ್ಪಿಕೊಳ್ಳುತ್ತೀರಾ ? ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಹಾರ್ನಳ್ಳಿ ರಾಮಸ್ವಾಮಿಯವರು ಪ್ರತಿಯೊಂದಕ್ಕೂ ಹೇಳುತ್ತಿದ್ದಾರೆ. ನಿಮ್ಮನ್ನು ನೋಡಿದರೆ ನಮಗೆ ಕೋಪ ಬರುವುದಿಲ್ಲ, ನಮಗೆ ಅಂತಹ ಪರಿಸ್ಥಿತಿಯುಂಟಾಗಿದೆ. ಇದರ ಬಗ್ಗೆ ನಿಜವಾಗಿ ನನಗನ್ನಿಸುತ್ತದೆ: 'ಬೇಜವಾಬ್ದಾರಿತನ'ವೆಂದರೂ ನಿ..ಗೆ ಕೋಪ ಬರುತ್ತದೆ, ಅಥವಾ ಸರ್ಕಾರವನ್ನು ಬಯ್ದರೆ ಈ ರೀತಿ ಬಯ್ಯಬೇಡಿ ಎಂದು ಹೇಳುತ್ತೀರಿ. ಇನ್ನು ಯಾವ ರೀತಿ ಹೇಳಬೇಕು ? ಎರಡು ಕೈಗಳಿಂದ ಸಾಷ್ಟಾಂಗ ಹಾಕೋಣವೆ ? ಇದು ಸರಿಯಲ್ಲ. ಲೇಖಾನುದಾನವನ್ನು ತೆಗೆದುಕೊಳ್ಳಿ ಏನಾಗುತ್ತದೆ ? ನಿನ್ನೆ ದಿವಸದ ಕಾರ್ಯಕಲಾಪಗಳ ಪಟ್ಟಿಯಲ್ಲಿದ್ದ ಬೇಡಿಕೆಗಳನ್ನು ನೋಡಿದರೆ, ಅದರ ಮೇಲೆ ನಾವು ಕನಿಷ್ಠ ಮೂರು ದಿವಸವಾದರೂ ಚರ್ಚಿಸಬೇಕು, ಮತ್ತು ಬೇಡಿಕೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುವುದಕ್ಕೆ ಒಂದು ದಿವಸ ಅಥವಾ ಒಂದೂವರೆ ದಿವಸ ಬೇಕಾಗಿತ್ತು, ಬೇಡಿಕೆಗಳ ಪಟ್ಟಿ ಒಂದು ಮೈಲಿನಷ್ಟು ದೂರವಿದೆ. ಅದರಲ್ಲೂ ವಿದ್ಯಾ ಇಲಾಖೆಯನ್ನು ನಾಲ್ಕು ಭಾಗಗಳನ್ನಾಗಿ ಮಾಡಿ ಹರಿದು ಹಂಚಿದ್ದಾರೆ, ಅದರ ಜೊತೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದ್ದು, ಇದನ್ನೆಲ್ಲಾ ಸೇರಿ ಇಷ್ಟು ಬೇಡಿಕೆಗಳ ಮೇಲಿನ ಚರ್ಚೆಯನ್ನು ಬೇಗ ಮುಗಿಸಬೇಕೆನ್ನುವ ಸರ್ಕಾರದ ಧೋರಣೆಯಾದರೂ ಏನು ? ಇದನ್ನು ನೋಡಿದರೆ ಅತ್ಯಂತ ಶೋಚನೀಯವೆನಿಸುತ್ತದೆ. ಇದೊಂದು ಚರ್ಚೆ ಎನಿಸಿಕೊಳ್ಳುತ್ತದೆಯೆ ? ಪ್ರಾಮಾಣಿಕವಾಗಿ ನಾವು ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಿದ್ದೇವೆಯೇ ? ತಾವು ಹೃದಯ ಬಿಚ್ಚಿ ಮಾತನಾಡಿ: ಇದು ಚರ್ಚೆ ಎಂದು ಅನಿಸಿಕೊಳ್ಳುತ್ತದೆಯೆ ? ಸಾಧ್ಯವಿಲ್ಲ. ಬೇಡಿಕೆಗಳ ಮೇಲೆ ಅವರು ಹತ್ತು ನಿಮಿಷ, ಇವರು ಹತ್ತು ನಿಮಿಷ ಮಾತನಾಡುತ್ತಿದ್ದಾರೆ. ಯಾರೋ ತಿರುಪತಿ ಬಗ್ಗೆ ಮಾತನಾಡುತ್ತಿದ್ದರು. ಅದರ

ಬಗ್ಗೆ ಅಗೌರವವಾಗಿ ಮಾತನಾಡುವುದಿಲ್ಲ. ಆ ತರಹ ಎಲ್ಲಾ ಬೇಡಿಕೆಗಳ ಮೇಲೆ ಒಂದೊಂದು ಚೂರು ಮಾತನಾಡುತ್ತಾ ಹೋಗುವುದಾದರೆ ನಮಗೇನು ಬರುತ್ತದೆ.? ನಿಮ್ಮ ಕಷ್ಟ ಏನೆಂದು ಅರ್ಥವಾಗಿದೆ.

ತಾವು ತಕ್ಷಣ ನಿಂತು ಬೆಲ್ ಮಾಡುತ್ತೀರಿ, ಆಗ ನಾವು ತಕ್ಷಣ ಬೇರೆಯದಕ್ಕೆ ಜಂಪ್ ಮಾಡುತ್ತೇವೆ; ವಿದ್ಯಾ ಇಲಾಖೆಯಿಂದ ಕನ್ನಡಕ್ಕೊ ಅಥವಾ ಕನ್ನಡದಿಂದ ಇನ್ನಾವುದಕ್ಕೊ ಹೋಗುತ್ತೇವೆ, ಸಂಪೂರ್ಣವಾಗಿ ಒಂದೇ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಅವರು ಚರ್ಚೆ ಮಾಡುವಾಗ ಪರಿಣಾಮಕಾರಿಯಾದ ವಸ್ತುಗಳನ್ನು ಒದಗಿಸುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಇಲ್ಲದಿದ್ದರೆ ಈ ಸದನವನ್ನು ಮುಂದಕ್ಕೆ ಹಾಕಿ, ಬೇಕಾದರೆ ಅವರು ನಾಳೆ ಅದೇನು ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿಕೊಂಡು ಬರುತ್ತಾರೆ ಅಲ್ಲಿಂದ ಬಂದು ಏನಾದರೂ ಹೇಳುವುದಾದರೆ ಹೇಳಲಿ, ಇಲ್ಲದಿದ್ದರೆ ಲೇಖಾನುದಾನವನ್ನು ತೆಗೆದುಕೊಳ್ಳಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ, ಏಕೆಂದರೆ ನಾವು ಪುನಃ ಏಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ಸಭೆ ಸೇರುತ್ತಿದ್ದೇವೆ, ಅದರ ಬಗ್ಗೆ ತೀರ್ಮಾನವಾಗಿದೆ, ಮತ್ತು ಸರ್ಕಾರದವರು ನೂರು ದಿನಗಳ ಕಾಲ ಸದನ ನಡೆಯಬೇಕೆಂದು ತೀರ್ಮಾನ ತೆಗೆದುಕೊಂಡಿರುವುದು ನಿಜವಾಗಿಯೂ ಸಂತೋಷಪಡತಕ್ಕ ವಿಚಾರ. ಅದು ನೀವು ಈ ಸದನಕ್ಕೆ ಕೊಟ್ಟಿರುವ ಗೌರವವಾಗುತ್ತದೆ. ಆದುದರಿಂದ ತಮಗೆ ಮನವಿ ಮಾಡಿಕೊಳ್ಳುವುದೇನೆಂದರೆ ಈ ಒಂದು ಪರಿಸ್ಥಿತಿಯಲ್ಲಿ ತಾವು ನಮಗೆ ಮಾರ್ಗದರ್ಶನ ಕೊಡಬೇಕಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ:– ಸನ್ಮಾನ್ಯ ಅಧ್ಯಕ್ಷರೆ, ಈ ಬೇಡಿಕೆಯ ಬಗ್ಗೆ ಹೇಳುವುದಾದರೆ,

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಜಾಲಪ್ಪನವರೆ, ತಾವು ಬೇಡಿಕೆಯ ಮೇಲೆ ಮಾತನಾಡುತ್ತಿದ್ದೀರಿ. ಆದ್ದರಿಂದ ನಾನು ನಿಮ್ಮ ಬಗ್ಗೆಯೂ ಸಹ ಪ್ರತಿಭಟನೆಯನ್ನು ವ್ಯಕ್ತ ಮಾಡಿ ಹೊರಗೆ ಹೋಗುತ್ತಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ:– ಅಧ್ಯಕ್ಷರೆ ಇದರಲ್ಲಿ ಏನು ಪ್ರತಿಕ್ರಿಯೆ ಇದೆ ತಾವೇ ಹೇಳಿ, ಸರ್ಕಾರಕ್ಕೆ ಇಷ್ಟೊಂದು ಜಿದ್ದು ಹಿಡಿದರೆ ಹೇಗೆ ? ತಾವು ಅದನ್ನು ಸ್ವಲ್ಪ ಚುರುಕುಗೊಳಿಸಬೇಕು, ತಾವು ಜನರ ಪರವಾಗಿ ಕೆಲಸ ಮಾಡಬೇಕಾಗುತ್ತದೆ, ನಮ್ಮ ಪರವಾಗಿ ಕೆಲಸ ಮಾಡಬೇಕಾಗುತ್ತದೆ, ನಾವು ಸರ್ಕಾರಕ್ಕೆ ಇಕ್ಕಟ್ಟಿನಲ್ಲಿ ಸಿಕ್ಕಿಸಬೇಕು ಎಂದು ಇಲ್ಲ, ಅವರ ಪ್ರತಿಕ್ರಿಯೆ ಏನಾದರೂ ಬಂತೇ ತಾವೇ ಹೇಳಿ, Is anything on record? ಸರ್ಕಾರಕ್ಕೆ ಏಕೆ ಇಷ್ಟೊಂದು ಜಿದ್ದು ಹಿಡಿದಿದೆ ?

ಶ್ರೀ ಆರ್.ವಿ. ದೇಶಪಾಂಡೆ:– ಇವತ್ತಿನದು ಆಯಿತು, ನಾಳೆಯಾದರೂ ಸಹ ಮಾಡುತ್ತೇನೆಂದು ಹೇಳಲಿ At least you say that.

† ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ):– ಇದರಲ್ಲಿ ಕಷ್ಟ ಬಂದಿರುವುದೇನೆಂದರೆ performance budget ಬಗ್ಗೆ ಹೊಸಬರಿಗೆ ಸ್ವಲ್ಪ ಗೊತ್ತಿರುವುದಿಲ್ಲ, ಆದ್ದರಿಂದ ಅವರೇ ಇದು ಮೊದಲನೆಯ ವರ್ಷ ನಮಗೆ ಗೊತ್ತಾಗಲಿಲ್ಲ ಮುಂದಿನ ವರ್ಷ ಸರಿಮಾಡುತ್ತೇವೆಂದು ಹೇಳಿದ್ದರೆ ಮುಗಿದು ಹೋಗುತ್ತಿತ್ತು, ಮತ್ತು ಅಧಿಕಾರಿಗಳಾದರೂ ಸಹ ಅವರಿಗೆ ಸಲಹೆ ಕೊಡಬೇಕಾಗಿತ್ತು. ಇಲ್ಲಿ ನನಗೆ ಬಂದಿರತಕ್ಕ ಆಶ್ಚರ್ಯವೇನೆಂದರೆ ಒಂದೊಂದು ಇಲಾಖೆಯನ್ನು 3–4 ಇಲಾಖೆಗಳನ್ನಾಗಿ ಮಾಡಿ ಬಟ್ಟೆಗೆ, ಸಕ್ಕರೆಗೆ, ಬೆಂಕಿಕಡ್ಡಿಗೆ, ಬೀಡಿಗೆ ಈ ರೀತಿ ಒಬ್ಬೊಬ್ಬರು ಮಂತ್ರಿಗಳನ್ನು ಮಾಡಿದ್ದಾರೆ. ಆರೋಗ್ಯ ಇಲಾಖೆಯನ್ನು ಎರಡು ಇಲಾಖೆಗಳಾಗಿ ಮಾಡಿ ಇಬ್ಬರು ಮಂತ್ರಿಗಳನ್ನು ಮಾಡಿದ್ದಾರೆ, ವಿದ್ಯಾ ಇಲಾಖೆಯಲ್ಲಿ 3–4 ಜನ ಮಂತ್ರಿಗಳನ್ನು ಮಾಡಿದ್ದಾರೆ, ಸಣ್ಣಸಣ್ಣವುಗಳನ್ನು ನೋಡಿಕೊಳ್ಳಲು ಆಗುವುದಿಲ್ಲವೆಂದರೆ ನಾನು ಯಾರನ್ನು ಬೈಯಬೇಕೋ ಅರ್ಥವಾಗುತ್ತಿಲ್ಲ, ಅದು ಏನಾದರೂ ಇರಲಿ,

ತಾವು ಇಲ್ಲಿ ನನಗೆ ಇದರ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ ಅದರಂತೆ ಮಾತನಾಡುತ್ತಿದ್ದೇನೆ. ಮಾನ್ಯ ನಂಜುಂಡಸ್ವಾಮಿಯವರು ನಾನು ಇದರ ಬಗ್ಗೆ ಮಾತನಾಡುವುದನ್ನು ಪ್ರತಿಭಟಿಸಿ ಹೊರಗೇ ಹೋಗಿಬಿಟ್ಟರು. ಅದು ನನ್ನ ತಪ್ಪಲ್ಲ. ನೀವು ನನಗೆ ಮಾತನಾಡಲು ಹೇಳಿದಿರಿ ನಾನು ಮಾತನಾಡಲು ಎದ್ದುನಿಂತೆ. ಇವತ್ತು ವಿದ್ಯಾ ಇಲಾಖೆಯ ಬೇಡಿಕೆಯ ಬಗ್ಗೆ ನಾವು ಚರ್ಚೆಯನ್ನು ನಡೆಸುತ್ತಿದ್ದೇವೆ. ನಮ್ಮ ರಾಜ್ಯದ ನಾಲ್ಕೂವರೆ ಕೋಟಿ ಜನರ ಅಭಿವೃದ್ಧಿ ಬಗ್ಗೆ ಕೂಡ ಇಲ್ಲಿ ಚರ್ಚೆ ನಡೆಯುತ್ತಿದೆ. ಯಾವುದೇ ಒಂದು ರಾಷ್ಟ್ರ ಮುಂದುವರೆದಿದೆ, ಪ್ರಪಂಚದ ಅಗ್ರಮಾನ್ಯ ರಾಷ್ಟ್ರಗಳಲ್ಲಿ ನಮ್ಮ ರಾಷ್ಟ್ರವೂ ಕೂಡ ಸರಿಸಮಾನವಾಗಿ ನಿಲ್ಲುತ್ತದೆ ಎನ್ನತಕ್ಕದ್ದಕ್ಕೆ ಬಹಳ ಮುಖ್ಯವಾದ ಅಳತೆಗೋಲು ವಿದ್ಯೆ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಅದನ್ನು ಅರ್ಥಮಾಡಿಕೊಂಡು ಅದನ್ನು ನಡೆಸಿಕೊಂಡು ಹೋಗಬೇಕಾದುದು ಬಹಳ ಮುಖ್ಯವಾದುದು ಇದರ ಬಗ್ಗೆ ಒಬ್ಬರು ಒಂದು ಈ ರೀತಿಯಾಗಿ ಹೇಳಿದ್ದಾರೆ. Education means knowledge. Knowledge itself is power. ಇದರಿಂದ ನಮಗೆ ವಿದ್ಯಾಭ್ಯಾಸದ ಮಹತ್ವ ಎಷ್ಟು ಎನ್ನುವುದು ಅರ್ಥವಾಗುತ್ತದೆ, ಒಂದು ರಾಷ್ಟ್ರ ವಿದ್ಯಾಭ್ಯಾಸದಲ್ಲಿ ಮುಂದುವರೆದಿದೆ ಎಂದು ಹೇಳುವುದಾದರೆ ಕೇವಲ ನಾಲ್ಕು ಜನ ಪಂಡಿತರು ಮುಂದುವರೆಯುವುದಲ್ಲ, ಯಾವುದೇ ಒಂದು ವರ್ಗದ ಜನರು ಮುಂದುವರೆಯುವುದಲ್ಲ, ಇಲ್ಲಿ ಜಾನ್ ಆಡಂ ಎಂಬುವವರು ಹೇಳಿರತಕ್ಕದನ್ನು ಟಿಪ್ಪಣಿ ಮಾಡುತ್ತೇನೆ.

"The preservation of means of knowledge among the lowest ranks is of more importance to the public than the property of the richmen in the country."

ಅಂದರೆ ವಿಷಯಗಳಿಗೆ ಎಷ್ಟರಮಟ್ಟಿಗೆ ಅಗ್ರಸ್ಥಾನವಿದೆ ಎಂಬುದನ್ನು ಮತ್ತೆ ನಾನು ಹೇಳಬೇಕಾಗಿಲ್ಲ. ಕಳೆದ ತಿಂಗಳು 4–2–93ರಲ್ಲಿ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಏನು ಕೊಟ್ಟಿದ್ದಾರೆ ಅದರಲ್ಲಿ ಬಹಳ ಮುಖ್ಯವಾಗಿ ಹೇಳಿದ್ದಾರೆ. 14ವರ್ಷದವರೆಗೆ ಈ ದೇಶದ ಪ್ರಜೆಗಳಿಗೆ ವಿದ್ಯಾಭ್ಯಾಸ ಪಡೆಯತಕ್ಕ ಜನ್ಮಸಿದ್ಧ ಹಕ್ಕು ಇದೆ ಎಂದು. ಆದರೆ ನಾವು 45–46 ವರ್ಷಗಳಾದ ಮೇಲಾದರೂ ಇದನ್ನು ಪೂರ್ಣವಾಗಿ ಸಾಧಿಸಿದ್ದೇವೆಯೇ ಎಂಬುದನ್ನು ಗಂಭೀರವಾಗಿ ಯೋಚಿಸಬೇಕಾಗಿದೆ. ಈ ಸಂದರ್ಭದಲ್ಲಿ ಜಸ್ಟೀಸ್ ಚಿನ್ನಪ್ಪ ರೆಡ್ಡಿಯವರ 3ನೇ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ರಿಪೋರ್ಟ್‌ನ ಕೆಲವು ಭಾಗಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

"In regard to compulsory primary education, there is already in force in Karnataka a Compulsory Primary Education Act. But clearly, the Act is not properly implemented. The will to implement the Act appears to be lacking. To my shock, I discovered that in the State of Karnataka there are 13,024 single–teacher schools as against the total of 20,830 primary, secondary and high schools in the entire state. The State of Karnataka leads all other States and has the highest percentage of such schools. The number of pupils attending these 13,024 single–teacher primary schools in Karnataka is 8,34,885. The naked fact therefore is that 8,34,885 pupils now in the primary schools of the Karnataka State are receiving next to no education since it is humanly impossible for a single teacher to manage four different classes, teaching different subjects simultaneously. What makes it even

worse is that a large number of these schools are also single–roomed. Out of the total 23,023 primary schools in the State of Karnataka, 16,383 are single – roomed while 3,796 are two – roomed. One can imagine the raucous cacophony on one side and the bewildered helplessness of the teacher on the other. Out of the 23,023 primary schools, only 5,380 have adequate play grounds. Out of 14,969 upper primary schools in the Karnataka State only 4,956 have adequate play grounds. Out of 3,572 secondary schools, only 1,677 have adequate play grounds. Out of the 3,572 secondary schools, 1,199 have no laboratory facilities at all. There are also some primary schools without black boards even. All these figures are official figures taken from the educational statistics published by the National Council for Educational Research and Training. In this sorry state of affairs, how is it possible to expect children of the socially and educationally backward classes who prefers to attend government schools and no other to perform well or to show any interest at all in education."

ಇದು ಯಾರಿಗಾದರೂ ಗೌರವ ತರುತ್ತದೆಯೆ ? ನಮ್ಮ ರಾಜ್ಯಾಂಗವನ್ನು ರೂಪಿಸಿದವರು 10 ವರ್ಷದೊಳಗೆ ಕಂಪಲ್ಸರಿ ಎಜುಕೇಷನ್, ಅಂದರೆ ಲಿಟ್ರಸಿಯನ್ನು ಅಚೀವ್ ಮಾಡಬೇಕೆಂದು ಹೇಳಿದ್ದಾರೆ. ಆದರೆ 45 ವರ್ಷಗಳಾದರೂ ಇನ್ನೂ ನಾವು ಅಚೀವ್ ಮಾಡುವುದಕ್ಕಾಗಿಲ್ಲ ಎಂದರೆ ನಾವು ನಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿದ್ದೇವೆಯೋ ? ಸ್ವಾತಂತ್ರ್ಯ ಬಂದಮೇಲೆ ಜನರಿಗೆ ಏನು ಅನುಕೂಲ ಮಾಡಿಕೊಡುತ್ತೇವೆಂದು ನಮ್ಮ ಮುಖಂಡರು ಹೇಳಿದ್ದರು ಅದನ್ನು ನಾವು ಸಾಧಿಸಿದ್ದೇವೆಯೋ ಎಂಬುದನ್ನು ನೋಡಬೇಕಾಗಿದೆ. ತಮಗೆ ಅನುಭವ ಇದೆ. ಇನ್ನೂ ಅನೇಕ ಶಾಲೆಗಳಲ್ಲಿ ಮಕ್ಕಳು ಕುಳಿತುಕೊಳ್ಳುವುದಕ್ಕೆ ಸ್ಥಳ ಇಲ್ಲ, ಪೀಠೋಪಕರಣಗಳಿಲ್ಲ, ಉಪಾಧ್ಯಾಯರೂ ಕುಳಿತುಕೊಳ್ಳುವುದಕ್ಕೆ ಕುರ್ಚಿಗಳಿಲ್ಲ. ಬೆಟರ್‌ಮೆಂಟ್ ಕಮಿಟಿಯುವರು ಹೋದರೆ ಅಲ್ಲೊಂದು ಟೇಬಲ್, ಇಲ್ಲೊಂದು ಕುರ್ಚಿ ಎಂದು ಭಿಕ್ಷೆ ಬೇಡಿ ತಂದು ಒದಗಿಸುತ್ತಾರೆ.

ಇದರ ಜೊತೆಗೆ ಗ್ರಾಮಾಂತರ ಪ್ರದೇಶದ ಮಕ್ಕಳು, ಅವರು ಯಾವುದೇ ವರ್ಗಕ್ಕೆ ಸೇರಿರಬಹುದು ಅದು ನನಗೆ ಮುಖ್ಯವಲ್ಲ, ಬ್ರಾಹ್ಮಣರೇ ಇರಬಹುದು, ಅಥವಾ ಪರಿಶಿಷ್ಟವರ್ಗದವರೇ ಇರಬಹುದು ಇವರು ಈ ರಾಷ್ಟ್ರದ ಈ ಆಡಳಿತದಲ್ಲಿ ಇಂಥ ಒಂದು ವಿದ್ಯಾಭ್ಯಾಸವನ್ನು ಪಡೆದು ಪಾಲ್ಗೊಳ್ಳುವುದಕ್ಕೆ ಸಾಧ್ಯವೇ ? ಇದನ್ನು ನಾವು ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ಈ ಪರಿಸ್ಥಿತಿ ಇರುವಾಗ ಇದಕ್ಕೆ ಯಾರು ಕಾರಣರು ? ಈ ಒಂದು ಪರಿಸ್ಥಿತಿ ಆಗಬೇಕಾದರೆ, ನಾವು ಮಾಡಬೇಕಾದ ಕೆಲಸವನ್ನು ನಾವು ಮಾಡದೆ ಇವತ್ತು ಸೆಕೆಂಡರಿಗಾಗಲಿ, ಸೆಕೆಂಡರಿಗಾಗಲಿ, ಟರ್‌ಶಿಯರಿ ಎಜ್ಯುಕೇಷನ್‌ಗಾಗಲೀ ಜಾಸ್ತಿ ಗಮನ ಕೊಡುತ್ತಿದ್ದೇವಲ್ಲ, ಇದಕ್ಕೆ ಕಾರಣಕರ್ತರು ಯಾರು ಅದಕ್ಕೆ ಗನ್ನರ್ ಮಿರ್ಡಾಲ್ ಎಂದು ಕಡೆ ಹೇಳುತ್ತಾರೆ.

Gunner Mirdal – a noted economist and socialist and a recognised authourity on South Asia in his book "Asian Drama" published in 1972 makes this perspective observation:

"But there is another and more valid criticism to make. Although the declared purpose was to give priority to the increase of elementary schooling, in order to raise the rate of literacy in the population what has actually happened is that secondary schooling has increased still more rapidly. There is fairly a general tendency for plan targets of increased primary schooling not to be reached, whereas targets are overreached sometimes substantially as regards secondary, particularly tertiary schooling. This has all happened in-spite of the fact that secondary schooling seems to be 3 to 5 times more expensive than primary schooling. On the contrary, at the tertiary level it is 5 to 7 times more expensive than at the secondary level. What we see here is the distortion of development from planned targets under the influence of pressure from parents and pupils in the upper strata who everywhere are politically powerful. Even more remarkable is, that this tendency is distortioned from the point of view of planning objectives is more accentuated in poorest countries like Pakistan, India, Burma, start out with fewer children in primary schools and Indonesia which started with far fewer children in primary schools and which should therefore have the strongest reason to carry out the programme of primary schooling the highest priority. It is generally the poorest countries that are spending least even literally on primary education and that are permitting the largest distortions from the planned targets in favour of secondary and tertiary education."

ಮಾನ್ಯ ಅಧ್ಯಕ್ಷರೇ ನಾನು ಇದನ್ನು ಮಾನ್ಯ ಮಂತ್ರಿಗಳ ಮತ್ತು ಸದನದ ಗಮನಕ್ಕೆ ತರಬಯಸುತ್ತೇನೆ. ನಾವು ಯಾವುದಕ್ಕೆ ಹೆಚ್ಚು ಒತ್ತು ಕೊಡಬೇಕಾಗಿತ್ತೋ ಅದಕ್ಕೆ ಹೆಚ್ಚು ಒತ್ತು ಕೊಟ್ಟಿಲ್ಲ. ಯಾವಾಗ ನಾವು ಇದರ ಬಗ್ಗೆ ಹೆಚ್ಚು ಗಮನ ನಾವು ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ, ರಾಜ್ಯ ಸರ್ಕಾರಗಳು ಮತ್ತು ರಾಷ್ಟ್ರ ಸರ್ಕಾರಗಳು ಫೇಲ್ ಆಯಿತು. ಆಗ ಈ ಪ್ರೈವೇಟ್ ಎಜ್ಯುಕೇಷನ್ ಇನ್‌ಸ್ಟಿಟ್ಯೂಶನ್ಸ್ ಹೆಚ್ಚು ಬರಲು ಸಾಧ್ಯವಾಯಿತು.

ಯಾರು ಈಗ ಈ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುವವರು ಅಂದರೆ ಏನೂ ಶಕ್ತಿ ಇಲ್ಲದವರು ಮತ್ತು ಗ್ರಾಮಾಂತರ ಪ್ರದೇಶದ ಜನತೆ. ತಮ್ಮ ಮಕ್ಕಳನ್ನು ಒಳ್ಳೆಯ ಶಾಲೆಗಳಿಗೆ ಕಳುಹಿಸುತ್ತಿರುವವರು ಕೈಯಲ್ಲಿ ಕಾಸು ಇರುವವರು, ಅಧಿಕಾರಿಗಳು, ವ್ಯಾಪಾರಸ್ಥರು, ಅರ್ಬನ್ ಏರಿಯಾದಲ್ಲಿರತಕ್ಕವರು; ಇವರು ಮಾತ್ರ ತಮ್ಮ ಮಕ್ಕಳನ್ನು ಒಳ್ಳೆಯ ಶಾಲೆಗಳಿಗೆ ಕಳುಹಿಸುತ್ತಿದ್ದಾರೆ. ಅಂದರೆ ನೂರಕ್ಕೆ 60–70 ಭಾಗ ಹಿಂದುಳಿದವರು ಇದ್ದಾರೆ. ಬರೀ ಜಾತಿಯಿಂದ ಅಲ್ಲ, ಎಕನಾಮಿಕಲಿ ಅಲ್ಲ, ಎಜುಕೇಷನಲಿ ಬ್ಯಾಕ್‌ವರ್ಡ್ ಇದ್ದಾರೆ. Academically they are backward, educationally they are backward and we are forcing them to be backward and the Government is forcing them to be backward because the Governments are not discharging their durtises properly.

ಇದನ್ನು ಯಾವತ್ತು ಸಾಧಿಸುತ್ತೀರಿ ? ನೀವು ಇಟ್ಟಿರುವ ಬಡ್ಜೆಟ್ಟಿನಲ್ಲಿ ಸಾಧಿಸುವುದಕ್ಕೆ ಸಾಧ್ಯವೇ ? ನೀವು ಇಟ್ಟಿರುವುದರಲ್ಲಿ ಶೇಕಡ 75 ಭಾಗ ಉಪಾಧ್ಯಾಯರ ಸಂಬಳಕ್ಕೆ ಹೋಗುತ್ತದೆ. ಅಂದಾಗ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದೆಲ್ಲಿ ? ನಮ್ಮ ಜಿಲ್ಲೆ ಒಂದರಲ್ಲೇ ಒಂದು ಸಾವಿರ ಉಪಾಧ್ಯಾಯರ ಸ್ಥಾನ ಖಾಲಿ ಇದೆ. ಮಾನ್ಯ ಸದಸ್ಯರು ಎಲ್ಲಾ ಸೇರಿ ವಿಷಯವನ್ನು ಸರ್ಕಾರಕ್ಕೆ ತಲುಪಿಸಿದ್ದೇವೆ; ಒಂದುಸಾವಿರ ಹುದ್ದೆಗಳು ಖಾಲಿ ಇವೆ, ದಯವಿಟ್ಟು ಬೇಗ ಭರ್ತಿ ಮಾಡಿ ಎಂದು ಹೇಳಿದ್ದೇವೆ. ನೀವು ಕೊಟ್ಟಿರುವ ಹಣದಲ್ಲಿ ಇದೆಲ್ಲವನ್ನು ಸರಿದೂಗಿಸುವುದಕ್ಕೆ ಸಾಧ್ಯವೇ ? ದಯವಿಟ್ಟು ಇದರ ಬಗ್ಗೆ ಯೋಚಿಸಬೇಕು. ಇದರಿಂದ ಏನಾಗಬಹುದು ? ನಾವು ಗ್ರಾಮಾಂತರ ಪ್ರದೇಶದ ಜನರು, ಹುಚ್ಚಮಾಸ್ತಿಗೌಡರು, ನನ್ನಂಥವರು ಹೇಗೋ ರಾಜಕೀಯಕ್ಕೆ ಜಾರಿಕೊಂಡು ಬಂದಿರಬಹುದು. 70 ಪರ್ಸೆಂಟ್ ಜನ ಏನು ಮಾಡಿದರೂ ಮುಂದೆ ಬರಲಿಕ್ಕೆ ಸಾಧ್ಯವಿಲ್ಲ. ಅವರು ವಿದ್ಯಾಭ್ಯಾಸದಲ್ಲಿ ಮುಂದುವರಿದು, ಇಲ್ಲಿ ಅರ್ಬನ್‌ನವರ ಜೊತೆ ಬಂದು ನಾನು ನಿಮ್ಮ ಹಾಗೆ ಸಮಾನ ಎಂದು ಹೇಳಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು ಸರ್ಕಾರ ಇದನ್ನು ಗಮನಿಸಬೇಕು. ಇಂಥ ಸಮಯದಲ್ಲಿ ಪ್ರೈವೇಟ್ ಎಜುಕೇಷನ್‌ನವರು ಮುಂದೆ ಬಂದಿದ್ದಾರೆ. ಪ್ರೈವೇಟ್ ಎಜುಕೇಷನ್ ನಮ್ಮಲ್ಲಿ ಇವತ್ತಿನ ದಿವಸ ಎಷ್ಟರಮಟ್ಟಿಗೆ ಇದೆ ಅಂದರೆ ಈ ಪ್ರೈವೇಟ್ ಎಜುಕೇಷನ್ ಇವತ್ತು ಬಂದದ್ದಲ್ಲ. ಕೆಲವು ಖಾಸಗಿ ವಿದ್ಯಾ ಸಂಸ್ಥೆಗಳು ನೂರಾರು ವರ್ಷಗಳಿಂದ ಇವೆ, ಕೆಲವಕ್ಕೆ 10–15 ವರ್ಷಗಳಾಗಿರಬಹುದು. ಈ ಸಂದರ್ಭದಲ್ಲಿ ಕೆಲವು ಅಂಕಿ ಅಂಶಗಳನ್ನು ತಮ್ಮ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ. ಲೋಯರ್ ಪ್ರೈಮರಿ ಸ್ಕೂಲ್ಸ್ ಸರ್ಕಾರಿ 21953 ಇವೆ. ಪ್ರೈವೇಟ್ local ಎಲ್ಲ ಸೇರಿಸಿದರೆ 17,000 ಇವೆ. ಲೋಕಲ್ ಬಾಡೀಸ್ 17, ಏಡೆಡ್ 468, ಅನ್ ಏಡೆಡ್ 1553 ಇವೆ.

ಸರ್ಕಾರಿ ಪ್ರೌಢಶಾಲೆಗಳು 1523, ಲೋಕಲ್ ಬಾಡೀಸ್ 42, ಏಡೆಡ್ 2048, ಅನ್ ಏಡೆಡ್ 1005; ಅಂದರೆ ಸರ್ಕಾರಿ ಶಾಲೆಗಳು 1/3 ಭಾಗ, ಅಂದರೆ 3 ಭಾಗ ಪ್ರೈವೇಟ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ನಮ್ಮಲ್ಲಿ ಕೆಲಸ ಮಾಡುತ್ತಿವೆ. ಕಾಂಪೋಸಿಟ್ ಜೂನಿಯರ್ ಕಾಲೇಜುಗಳು ಗವರ್ನ್‌ಮೆಂಟ್ 398, ಲೋಕಲ್ ಬಾಡೀಸ್ 8, ಏಡೆಡ್ 347, ಅನ್ ಏಡೆಡ್ 77. ಅಲ್ಲಿಯೂ ಕೂಡ ಸರ್ಕಾರಕ್ಕಿಂತ ಹೆಚ್ಚಿಗೆ ಖಾಸಗಿ ಸಂಸ್ಥೆಗಳು ನಡೆಸುತ್ತಿವೆ. ಇಂಡಿಪೆಂಡೆಂಟ್ ಜೂನಿಯರ್ ಕಾಲೇಜುಗಳು ಗವರ್ನಮೆಂಟ್ 18, ಏಡೆಡ್ 128, ಅನ್‌ಏಡೆಡ್ 174. ಕಾಂಪೊಸಿಟ್ ಡಿಗ್ರಿ ಕಾಲೇಜುಗಳು ಸರ್ಕಾರದವು 35, ಏಡೆಡ್ 163, ಅನ್‌ಏಡೆಡ್ 14. ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ಸ್ ಸರ್ಕಾರಿ 34, ಏಡೆಡ್ 33, ಅನ್‌ಏಡೆಡ್ 56. ಬಿ.ಎಡ್. ಕಾಲೇಜುಗಳು ಸರ್ಕಾರಿ 8, ಏಡೆಡ್ 14, ಅನ್‌ಏಡೆಡ್ 41. ಮೆಡಿಕಲ್ ಕಾಲೇಜುಗಳು 4 ಸರ್ಕಾರಿ, ಖಾಸಗಿ 14; ಇಂಜಿನಿಯರಿಂಗ್ ಕಾಲೇಜುಗಳು ಸರ್ಕಾರಿ 5, ಏಡೆಡ್ 11, ಪ್ರೈವೇಟ್ 33; ಡೆಂಟಲ್ ಕಾಲೇಜುಗಳು ಸರ್ಕಾರಿ – 1, ಖಾಸಗಿ – 36; ಈಗ 10–15 ಕೊಟ್ಟಿದ್ದೀರಿ. ಅದು ಲೆಕ್ಕಕ್ಕೆ ಇಲ್ಲ. ಈ ಸಂಸ್ಥೆಗಳು ಇವತ್ತಿನ ದಿವಸ ತಮ್ಮ ಕೈಲಾದಷ್ಟು ಸೇವೆಯನ್ನು ಸಮಾಜಕ್ಕೆ ಮಾಡುತ್ತಿವೆ. ಅವು ಮ್ಯಾನೇಜ್ ಮಾಡಬೇಕಾದರೆ ಫೀಜ್, ಡೊನೇಷನ್, ಕ್ಯಾಪಿಟೇಷನ್ ಎಲ್ಲ ಜಾಸ್ತಿ ತೆಗೆದುಕೊಳ್ಳುತ್ತಿವೆ. ಡೊನೇಷನ್ ತೆಗೆದುಕೊಳ್ಳುವವರು ಎಲ್ಲ, ಫೀಜ್ ತೆಗೆದುಕೊಳ್ಳುವವರೆಲ್ಲ ಹಗಲು ದರೋಡೆಕೋರರು ಎಂದು ಹೇಳುವುದು ಎಷ್ಟರಮಟ್ಟಿಗೆ ಸಮಂಜಸವೆಂದು ಗೊತ್ತಿಲ್ಲ. ಆ ರೀತಿ ಹೇಳುವುದಾದರೆ ನಮ್ಮಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ಅಸಿಸ್ಟೆಂಟ್ ಇಂಜಿನಿಯರ್ ಹತ್ತಿರ, ಅವರ ಹತ್ತಿರ, ಇವರ ಹತ್ತಿರ ತೆಗೆದುಕೊಳ್ಳಬಹುದು; ಬೇರೆ ಕೆಲಸ ಮಾಡಿ ತೆಗೆದುಕೊಳ್ಳಬಹುದು. ಅಂದಾಕ್ಷಣ 224 ಜನರು ಕರಪ್ಟ್ ಎಂದು ಹೇಳುವುದು ಎಷ್ಟರಮಟ್ಟಿಗೆ ಸಾಧುವಾಗುತ್ತದೆ ? ಎಲ್ಲರೂ ದರೋಡೆಕೋರರು ಎಂದು ಹೇಳುವುದಕ್ಕಾಗುತ್ತದೆಯೆ ? ಹಾಗೆಯೇ ಎಲ್ಲಾ ಸಂಸ್ಥೆಗಳು ಕರಪ್ಟ್ ಎಂದು ಹೇಳುವುದು ಅಸಹಜ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

4.15 ಪಿ.ಎಂ.

ಒಂದು ಸಮಯ ಈ ಸಂಸ್ಥೆಗಳು ನಾಳೆ ದಿವಸ ಮುಚ್ಚಿದರೆ (ಮುಚ್ಚುವ ಸ್ಥಿತಿ ಬಂದಿದೆ) ಅವತ್ತು ಈ ರಾಷ್ಟ್ರದ ಈ ರಾಜ್ಯದ ವಿದ್ಯಾಭ್ಯಾಸದ ಗತಿ ಏನಾಗಬೇಕು ? ಯಾರಾದರೂ ಯೋಚನೆ ಮಾಡಿದ್ದೀರಾ ? ಇವತ್ತು ಸುಪ್ರೀಮ್ ಕೋರ್ಟ್‌ನ ತೀರ್ಪು ಬಂದಿದೆ. ಸುಪ್ರೀಂ ಕೋರ್ಟ್ ತೀರ್ಪು, ಯಾವ ಸಂಸ್ಥೆಯಾಗಲೀ ರೆಕಗ್ನಿಷನ್ ಅಥವಾ ಅಫಿಲಿಯೇಷನ್ ಕಾಲೇಜು ಇದ್ದರೆ ಆ ಸಂಸ್ಥೆಗಳು ಏಡೆಡ್ ಇನ್‌ಸ್ಟಿಟ್ಯೂಷನ್ಸ್. ಏಡೆಡ್ ಇನ್‌ಸ್ಟಿಟ್ಯೂಷನ್ಸ್ ಎಂದ ತಕ್ಷಣವೇ ಸರ್ಕಾರದ ಸಂಸ್ಥೆಗಳಿಗೆ ಏನೇನು ರೂಲ್ಸ್, ಕಾನೂನು ಅಪ್ಲೈ ಆಗುತ್ತವೆಯೋ ಅದೆಲ್ಲಾ ಕೂಡ ಈ ಸಂಸ್ಥೆಗಳಿಗೆ ಅಪ್ಲೈ ಆಗುತ್ತವೆಂದು ತೀರ್ಪು ಕೊಟ್ಟಿದ್ದಾರೆ, ಕೊಡುವಾಗ ಒಂದು ಹೇಳಿದ್ದಾರೆ. ಸಧ್ಯಕ್ಕೆ ನಾವು ಈ ಪ್ರೊಫೆಷನಲ್ ಕಾಲೇಜುಗಳಿಗೆ ಮಾತ್ರ ಇದನ್ನು ಸೀಮಿತಗೊಳಿಸುತ್ತೇವೆಂದು ಹೇಳಿದ್ದಾರೆ. ನಾಳೆ ದಿವಸ ಯಾರಾದರೂ ಹೋಗಿ ಎಲ್.ಕೆ.ಜಿ.ಯಲ್ಲಾಗಲೀ, ಯು.ಕೆ.ಜಿ.ಯಲ್ಲಾಗಲೀ, ಮಿಡಲ್ ಸ್ಕೂಲ್, ಹೈಸ್ಕೂಲು ಪ್ರೈವೇಟ್ ಕಾಲೇಜುಗಳಲ್ಲಾಗಲೀ ನನಗೆ 14 ವರ್ಷದವರೆಗೆ ಫ್ರೀ ಎಜ್ಯುಕೇಷನ್ ಸಿಗಬೇಕು ಎಂದು, it is my fundamental right. ನಾನು ಎಲ್.ಕೆ.ಜಿ. ಒಳಗೋ, ಯು.ಕೆ.ಜಿ ಒಳಗೋ ನಮ್ಮ ಮಕ್ಕಳನ್ನು ಓದಿಸುತ್ತಿದ್ದೇನೆ ಅಥವಾ ಪ್ರೈಮರಿ, ಮಿಡಲ್ ಸ್ಕೂಲ್‌ನಲ್ಲಿ ಓದಿಸುತ್ತಿದ್ದೇನೆ. ಏಕೆಂದರೆ ಗೌರ್ನಮೆಂಟ್‌ನಲ್ಲಿ ಸ್ಟಾಂಡರ್ಡ್ ಇಲ್ಲ ಎಂದು ಅಲ್ಲಿ ಹೋದರೆ, ನಮ್ಮ ಹುಡುಗರು ಹಾಳಾಗುತ್ತದೆ ಎಂದು ಓದಿಸುತ್ತಿರುತ್ತಾರೆ. ಈ ಪರಿಸ್ಥಿತಿ ಇರುವಾಗ ಏನು ಇವತ್ತು ಖರ್ಚು ಮಾಡುತ್ತಿದ್ದೇವೆ ಅದನ್ನು ಸಬ್ಸಿಡೈಸ್ ಮಾಡಿ; ಇಲ್ಲದಿದ್ದರೆ ನೀವು ಫ್ರೀ ಎಜ್ಯುಕೇಷನ್, ಸ್ಟಾಂಡರ್ಡ್ ಎಜ್ಯುಕೇಷನ್ ಕೊಡಿ ಎಂದರೆ ಇವತ್ತು ಏನು ಮಾಡುತ್ತೀರಿ ? ನಾನು ಒಂದು ಪ್ರಶ್ನೆ ಮಾನ್ಯ ಯಾಹ್ಯಾ ಅವರಿಗೆ ಕೇಳಿದ್ದೆ. What are the implications of the Supreme Court Judgement? ತಾವು ಏನು ಉತ್ತರ ಕೊಟ್ಟಿರಿ ಅದನ್ನೇ ಅಲ್ಲಿಯೂ ಉತ್ತರ ಕೊಟ್ಟಿದ್ದಾರೆ. I wanted to know the implications? Not what you are going to do. That is very easy; anybody can do.

ಸುಪ್ರೀಮ್ ಕೋರ್ಟ್‌ನವರು ಏನು ಹೇಳಿದ್ದಾರೆ ಅದನ್ನು ಯಾರು ಬೇಕಾದರೂ ಕಾರ್ಯಗತ ಮಾಡಬಹುದು. ಇದರಿಂದ ರಾಜ್ಯದ ರಾಷ್ಟ್ರದ ಎಜ್ಯುಕೇಷನ್ ಮೇಲೆ ಏನು ಪರಿಣಾಮ ಬೀರುತ್ತದೆಂದು ಯೋಚನೆ ಮಾಡಿದ್ದೀರಾ ? ಅದನ್ನು ಯಾರೂ ಮಾಡಿಲ್ಲ. ಯೋಚನೆ ಮಾಡುವುದಕ್ಕೆ ಹೋಗುವುದಿಲ್ಲ. It is a different thing to be a politician, and a statesman. Anybody can be a politician we want the statesman to deal in such matters. ಇದು ಬರೀ ಒಬ್ಬರ, ಇಬ್ಬರ ಪ್ರಶ್ನೆ ಅಲ್ಲ. ತಾವು ತಿಳಿದುಕೊಂಡಿರಬಹುದು. ಜಾಲಪ್ಪ ಮೆಡಿಕಲ್ ಕಾಲೇಜು ಕೋಲಾರದಲ್ಲಿ ನಡೆಸುತ್ತಿದ್ದಾನೆ ಎಂದು. ಹಾಳುಬಿತ್ತು, ಇವತ್ತೇ ತೆಗೆದುಕೊಳ್ಳಿ, ಕೊಡುತ್ತೇನೆ. ಅದು ಒಂದು ಸಂಸ್ಥೆ. ಅದನ್ನು ಹೇಗೋ ತಲೆ ಮೇಲೆ ಹಾಕಿಕೊಳ್ಳಬೇಕೆಂದು ಇಲ್ಲ. ನನ್ನ ಕೆಲಸ ನಾನು ಮಾಡಿದ್ದೇನೆ. ನಮ್ಮ ಮೇನೇಜ್‌ಮೆಂಟ್ ಸೀಟ್‌ನಲ್ಲಿ 17 ಗೋಲ್ಡ್ ಮೆಡಲ್‌ಗಳನ್ನು ಮೊನ್ನೆ ನಡೆದ ಕಾನ್ವೊಕೇಷನ್‌ನಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿ ತೆಗೆದುಕೊಂಡಿದ್ದಾಳೆ. We have done our best. ಮೆರಿಟ್ ಇಲ್ಲದೇ ಇದ್ದರೆ, ಅದೇ ಕನ್ಸಿಡರೇಷನ್ ಆದರೆ ಇವತ್ತು ಬಿ.ಎಂ.ಸಿ.ಯಲ್ಲಾಗಲೀ, ಗೌರ್ನಮೆಂಟ್ ಕಾಲೇಜಿನಲ್ಲಾಗಲೀ ಎಲ್ಲರೂ ಫಸ್ಟ್ ಕ್ಲಾಸ್ ಬರಬೇಕಲ್ಲವೇ ? ಫೇಲ್ ಆಗುವುದು, ಸೆಕೆಂಡ್ ಹಾಗೂ ಥರ್ಡ್ ಕ್ಲಾಸ್ ಬಧುತ್ತಾ ಇರುವುದು ಏಕೆ ? Merit is not important. ಎಲ್ಲಿ ಮೆರಿಟ್ ? ಬರೀ ಪರೀಕ್ಷೆಯಲ್ಲಿ ಬರೆಯೋದೇ ? ಕಾಪಿ ಹೊಡೆಯೋದೇ ಮೆರಿಟ್ಟೇ ? ಅದಕ್ಕೆ ನಾನು ಮುಂದೆ ಬರುತ್ತೇನೆ. ಈ ಕಾಲೇಜುಗಳನ್ನು ನಿಲ್ಲಿಸಿದರೆ ಗತಿ ಏನು ? ನಾಳೆ ಇನ್ನೊಬ್ಬ ಹೋಗುತ್ತಾನೆ. ಇವತ್ತು ಆರ್ಟ್ಸ್ ಕಾಲೇಜು ಇದೆ, ಸೈನ್ಸ್ ಕಾಲೇಜು ಇದೆ, ಕಾಮರ್ಸ್ ಕಾಲೇಜುಗಳು ಇವೆ. ಅವನು

ಹೇಳುತ್ತಾನೆ. ಈಗ ಪ್ರೊಫೆಷನಲ್ ಕಾಲೇಜುಗಳಲ್ಲಿ ಏನು ತೀರ್ಮಾನ ಬಂದಿದೆ ಆ ತೀರ್ಮಾನ ನಮಗೆ ಅಪ್ಲೈ ಮಾಡಬೇಕು ಆದ್ದರಿಂದ ಆ ಕಾಲೇಜು ಒಳಗೆ ಏನು ತೆಗೆದುಕೊಳ್ಳುತ್ತಿದ್ದಾರೆ ಅದೇ ಫೀಸ್ ನಾನು ಕೊಡುತ್ತೇನೆಂದರೆ ಕಾಲೇಜು ನಡೆಸುವುದಕ್ಕಾಗುತ್ತದೆಯೇ ? ಅಥವಾ ಈ ಪ್ರಿನ್ಸಿಪಾಲ್ ಅಲ್ಲೂ ಅಪ್ಲೈ ಮಾಡಿ 50 ಪರ್ಸೆಂಟ್ ಸರ್ಕಾರದ್ದು, 50 ಪರ್ಸೆಂಟ್ ನಾವೇ ಸೆಲೆಕ್ಟ್ ಮಾಡುತ್ತೇವೆಂದರೆ, ಅವರು ಕಾಲೇಜು ನಡೆಸುತ್ತಾರೇನು ? ಸುಪ್ರೀಮ್ ಕೋರ್ಟ್‌ನವರು ಹೇಳುತ್ತಾರೆ ಸ್ವಾಮಿ

"The scheme evolved herewith is in the nature of guidelines which the appropriate Governments are recognising and affiliating authorities shall impose and implement in addition to such other conditions and stipulations as they may think appropriate conditions for grant, permission for grant of recognition or grant for affiliation as the case may be. We are confining the scheme for the present only to professional colleges. "For the present professional colleges only" that does not to say that it will not apply to all other private institutions which have been recognised or which have been given the affiliation by the competent authorities.

ಇವತ್ತು ನಮ್ಮ ಸ್ನೇಹಿತರೊಬ್ಬರು ಮಾತನಾಡುವಾಗ ಹೇಳಿದರು A spate of writ petitions will be there. ರಿಟ್‌ಪಿಟಿಷನ್ ಹಾಕುತ್ತಾರೆಂದರು. ಅವರದೊಂದು ಕಾಲೇಜು ಇದೆ, ಮಾನ್ಯ ಹಾರ್ನಹಳ್ಳಿ ರಾಮಸ್ವಾಮಿಯವರು ಒಂದು ಕಾಲೇಜು ನಡೆಸುತ್ತಿದ್ದಾರೆ. ಅವರು ಅಧ್ಯಕ್ಷರಾಗಿದ್ದರು. ಈಗ ಇದ್ದಾರೋ ಇಲ್ಲವೋ ಗೊತ್ತಿಲ್ಲ. ಹತ್ತಾರು ವರ್ಷಗಳಿಂದ ಕಷ್ಟಪಟ್ಟು ದುಡಿದು ಅವರ ಮೊಮ್ಮಗ ಅಥವಾ ಮೊಮ್ಮಗಳಿಗೆ ನನ್ನ ಮೊಮ್ಮಗ ಮೊಮ್ಮಗಳಿಗೆ ಸೀಟು ಕೊಡುವುದಿಲ್ಲವೆಂದರೆ ಯಾರಿಗೋಸ್ಕರ ಆ ಕಾಲೇಜು ? ಇದನ್ನಾದರೂ ಯೋಚನೆ ಮಾಡಿದ್ದೀರಾ ? ಕಾಲೇಜು ನಡೆಸುವುದಕ್ಕೆ ? ನಮಗೇನು ಗ್ರಹಚಾರ ? ಯಾರೂ ಧರ್ಮಾತ್ಮರು ಇಲ್ಲ. ಬೇರೆಯವರೆಲ್ಲ ಕಾಸು ಮಾಡಿಕೊಳ್ಳಬಹುದು. ಇವರೊಂದು ನಾಲ್ಕು ಕಾಸು ಮಾಡಿಕೊಂಡರೆ ಇವರನ್ನು ದರೋಡೆಕೋರರು ಎಂದು ಹೇಳುವುದಾದರೆ ಕಾಲೇಜು ಬೇಡವೇ ಬೇಡ ನೀವೇ ನಡೆಸಿಕೊಳ್ಳಿ ಎಂದು ಹೇಳುವ ಕಾಲ ಬರಬಹುದು. ಆದ್ದರಿಂದ ನಾನು ಹೇಳುವುದು ಈವೊಂದು ಜಡ್ಜ್‌ಮೆಂಟನ್ನು ತಾವು ಪೂರ್ಣವಾಗಿ ಸ್ಟಡಿ ಮಾಡಿ ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

"(iii) such other colleges to which this scheme is made applicable by the government, recognising and/or affiliating authority."

You have got every power under this Supreme Court judgement to apply the schemes to all other institutions which are run by private Management. Am I correct?

SRI S.M. YAHYA:– Yes.

SRI R.L. JALAPPA:– Then what will be the effect of this private institution that has to be considered by the Government I have already brought to the notice of this August House and the Government that ಈಗ ಬಹಳ ಮುಖ್ಯವಾಗಿ ವಿದ್ಯಾಭ್ಯಾಸ ರಂಗದಲ್ಲಿ ಈ ಜಡ್ಜ್‌ಮೆಂಟ್‌ನಿಂದಾಗುವ ತೊಂದರೆಗಳನ್ನು ನಾನು ನಿಮಗೆ ಹೇಳಿದ್ದೇನೆ.

ಜಡ್ಜ್‌ಮೆಂಟಿನಲ್ಲಿ ಏನಿದೆಯೆಂದು ಬಹಳ ಜನಗಳಿಗೆ ಸರಿಯಾಗಿ ಗೊತ್ತಿದೆಯೋ ಇಲ್ಲವೋ ಗೊತ್ತಿ 50 ಭಾಗ ಸೀಟುಗಳನ್ನು ಸರ್ಕಾರಕ್ಕೆ ಬಿಟ್ಟು ಕೊಡಬೇಕು.

2 ಸಾವಿರ ಫೀಸು ಮೆಡಿಕಲ್ ಕಾಲೇಜಿಗೆ. ಇಂಜಿನಿಯರಿಂಗ್ ಕಾಲೇಜಿಗೆ 200–300–400 ಫೀ ಇರುತ್ತದೆ. 2 ಸಾವಿರ ರೂಪಾಯಿ ಫೀಸನ್ನು ಸರ್ಕಾರದವರೇ ಫಿಕ್ಸ್ ಮಾಡಬೇಕು. ಸರ್ಕಾರದವ ಅಪ್ಲಿಕೇಶನ್ ಕರೆಯಬೇಕು. ಮತ್ತು ಯಾವ್ಯಾವ ಕಾಲೇಜುಗಳಿಗೆ ಕಳುಹಿಸಬೇಕೆಂದು ಅವರೇ ನಿ ಮಾಡಬೇಕು. ಮೆಡಿಕಲ್ ಕಾಲೇಜು, ಫಾರ್ಮಸಿ ಕಾಲೇಜು, ಡೆಂಟಲ್ ಕಾಲೇಜು ಮತ್ತು ಅಲೋಪ ಸಬ್ಜೆಕ್ಟ್ ಏನೇನು ಇದೆ ಅವೆಲ್ಲ, ಇಂಜಿನಿಯರಿಂಗ್ ಕಾಲೇಜು ಕಂಪ್ಯೂಟರ್ ಸೈನ್ಸ್ ಕಾಲೇಜು ಇವೆ ಆ ಟೆಕ್ನಿಕಲ್ ಇದರಲ್ಲಿ ಬರುತ್ತವೆ. ಇದು ಒಂದು ಸ್ಕೀಮ್ ಇದೆ. ಜೊತೆಗೆ ಅಡ್ವರ್‌ಟೈಸ್‌ಮೆಂ ಮಾಡುವುದಕ್ಕೆ ಅಧಿಕಾರವಿಲ್ಲ ಪ್ರೈವೇಟ್ ಕಾಲೇಜುಗಳಿಗೆ ಮತ್ತು ಅಪ್ಲಿಕೇಷನ್ಸ್ ಕರೆಯುವುದಕ್ಕೆ ಕೂ ನಮಗೆ ಅಧಿಕಾರವಿಲ್ಲ. ಈಗಾಗಲೇ ಒಂದು ಸರ್ಕ್ಯುಲರ್ ಹೊರಡಿಸಿದ್ದೀರಿ. ಯಾರಾದರೂ ಅಪ್ಲಿಕೇಶ ಕರೆದು ಅಡ್ಮಿಶನ್ ಮಾಡಿಕೊಂಡರೆ ಮೂರು ವರ್ಷ ಜೈಲು ಶಿಕ್ಷೆಯೆಂದು ಇದೆ. ಗ್ರಹಚಾರ ಯಾವ ಮಾಡುವುದಕ್ಕೆ ಹೋಗುತ್ತಾನೆ ? ಸೆಲೆಕ್ಷನ್ ಮೆರಿಟ್ ಮೇಲೆ. ಮೆರಿಟ್ ಬಗ್ಗೆ ನಾನು ಈಗಾಗ ಹೇಳಿದ್ದೇನೆ. ಅದರಲ್ಲಿ ಒಂದು ಸೂಚನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಜಸ್ಟೀ ಚಿನ್ನಪ್ಪರೆಡ್ಡಿಯವರು ಮೆರಿಟ್ ಬಗ್ಗೆ ಮಾತನಾಡುವಾಗ ಡಿಸ್‌ಕಷನ್ ಮಾಡುವಾಗ ಒಂದು ಮಾ ಹೇಳಿದ್ದಾರೆ.

"I ask the question posed in Vasanth Kumar's case by one of the Judge "and, what is the merit? There is no merit in a system which brings abo such consequences Is not a child of the Scheduled Castes, Schedule Tribes or other Backward Classes who has been brought up in an atmosphe of penury, illiteracy and anti–culture, who is looked down upon by traditic and society, who has no books and magazines to read at home, no rad to listen, no T.V. to watch, no one to help him with his home work, who go to the nearest local board school and college, whose parents are eith illiterate or so ignorant and illinformed that he cannot even hope to see their advice on any matter of importance, a child who must perforce trud to the nearest public reading room to read a newspaper to know what happening in the world, has not this child got merit if he, with all h disadvantages is able to secure the qualifying 40% or 50% of the marks a competitive examiniation where the children of the upper classes wh have all the advantages, who go to St. Paul's High School and St. Stephen College, and who have perhaps been specialy coached for the examinatic may secure 70, 80 or even 90% of the marks?"

"Surely a child who has been able to jump so many hurdles may b expected to do better and better as he progress, in his life. If spring – flow he cannot be."

I would like the Government to note this:

"If spring – flower he cannot be, autumn–flower he maybe, why then, should be stopped at the threshold of on an alleged meritorian principle? The requirements of efficenc of may be always be safeguarded by the prescription of minimum standards. Mediocrity has always triumphed in the past in the case of upper classes. But why should the so called meritorian principle be put against mediocrity when we to the Scheduled Caste, Scheduled Tribes and Backward Classes I had the privilege of interviewing about twenty students of the Bangalore Medical College who had been admitted in the 'Reservation quota."

ಅದೆಲ್ಲಾ ಹೇಳಿದ್ದಾರೆ. ಮೆಡಿಕಲ್ ಸ್ಟೂಡೆಂಟ್ಸ್ ಇಂಟರ್‌ವ್ಯೂ ಮಾಡಿದಾಗ ಯಾರು ಪಿ.ಯು.ಸಿ. ಯಲ್ಲಿ 54–55 ಪರ್ಸೆಂಟ್ ತೆಗೆದುಕೊಂಡು ಅಡ್ಮಿಟ್ ಆಗಿದ್ದರು ಅವರು ಫಸ್ಟ್ ಇಯರ್‌ನಲ್ಲಿ They have faired well and they have not secured lesser marks what they have secured in the Pre–University. ಎಂದು ಹೇಳಿದ್ದಾರೆ. ಈಗ ಏನಾಗಿದೆ ? ಪ್ರತಿಯೊಬ್ಬರಿಗೂ ಮೆರಿಟ್ ಮೇಲೆಯೇ ಕೊಡಬೇಕು. ಹಾಗಾದರೆ ನಮ್ಮ ಹಳ್ಳಿಯವರ ಗತಿ ಏನು ? ಬೆಳಿಗ್ಗೆ ನಮ್ಮ ಬೈರೇಗೌಡರು ದನ ಮೇಯಿಸುವುದಕ್ಕೆ ನನ್ನನ್ನು ಕಳಿಸಿ ಅಂತ ಹೇಳಿದ್ದರು. It is decided, with greatest respect to the Supreme Court. ಸುಪ್ರೀಂಕೋರ್ಟ್ ನಮ್ಮ ರಾಷ್ಟ್ರದಲ್ಲಿ ಒಳ್ಳೆಯ ತೀರ್ಮಾನಗಳನ್ನು ಕೊಟ್ಟಿದೆ. ಇವತ್ತು ನಾವು ಡೆಮಾಕ್ರಾಟಿಕ್ ಗವರ್ನಮೆಂಟನ್ನು ನಡೆಸುತ್ತಿದ್ದರೂ ಕೂಡ we are not perfect in running the Democratic Government because our political parties are not so well educated as to when they take over Government, they will not be able to give us equal opportunities and justified Government. ಅಂತಹ ಒಂದು ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶ ಮಾಡಿ ಬಹಳ ಒಳ್ಳೆಯ ತೀರ್ಮಾನಗಳನ್ನು ಕೊಟ್ಟಿದೆ. We have got greatest respect for the Supreme Court and their Judges. But unfortunately....

ಇದು ಏನಾಗಿದೆ ಎಂದರೆ ಮನೆಯಲ್ಲಿ ಇಲಿ ಬಿದ್ದಿದೆ. ಇಲಿಯನ್ನು ಓಡಿಸುವುದಕ್ಕೆ ಹೋಗಿ ಮನೆಗೇ ಬೆಂಕಿ ಕೊಟ್ಟಹಾಗಿದೆ, ಈ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್. ಇದನ್ನು ದಯಮಾಡಿ ಸರ್ಕಾರದವರು ಯೋಚನೆ ಮಾಡಬೇಕು. ಎರಡನೆಯದಾಗಿ.

† ಶ್ರೀ ಕೆ. ಸೋಮಪ್ಪ ಸುವರ್ಣ:– ಈ ಕ್ಯಾಪಿಟೇಷನ್‌ನಲ್ಲಿ ನಡೆಯುತ್ತಾ ಇರತಕ್ಕಂಥ ಕಾಲೇಜುಗಳಲ್ಲಿ ಯಾವ ಸವಲತ್ತೂ ಹಿಂದುಳಿದ ಸಮಾಜಕ್ಕೆ ಸಿಕ್ಕಿಲ್ಲ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಒಂದು ಆಶಾಕಿರಣವಾಗಿ ಹಿಂದುಳಿದ ವರ್ಗದವರಿಗೆ ಮತ್ತು ಅಲ್ಪಸಂಖ್ಯಾತ ಸಮಾಜಕ್ಕೆ ಹಾಗೂ ಹರಿಜನ–ಗಿರಿಜನರಿಗೆ ಇದು ಸಿಕ್ಕಿದೆಯೆಂದು ಅಭಿಪ್ರಾಯವನ್ನು ಎಲ್ಲರೂ ವ್ಯಕ್ತಪಡುವಾಗ ಮಾನ್ಯ ಜಾಲಪ್ಪನವರು ಹಿಂದುಳಿದ ಸಮಾಜಕ್ಕಾಗಿ ಹೋರಾಡಿದವರು, ಹಿಂದುಳಿದ ಆಶಾಕಿರಣವಾಗಿ ಅವರು ಕಾಲೇಜನ್ನು ಕಟ್ಟಿದ್ದಾರೆ; ಸ್ವಲ್ಪ ತೊಂದರೆ ಅವರ ಪಾಲಿಗೆ ಬರಬಹುದು, ಬಾಕಿಯವರಿಗೂ ಬರಬಹುದು, ಆದರೆ ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ನಿಜವಾಗಿಯೂ ಒಂದು ಮಹತ್ತರವಾದ ಜಡ್ಜ್‌ಮೆಂಟ್ ಆಗಿದೆ. ನಮ್ಮ ಭಾರತ ದೇಶದಲ್ಲಿ ಎಲ್ಲಾ ಬುದ್ಧಿವಂತರು, ವಿದ್ಯಾವಂತರು ಎಲ್ಲರೂ ಹಿಂದುಳಿದ ವರ್ಗದವರು ಎಂದು ಹೇಳಿಕೊಳ್ಳಲಪೇಕ್ಷಿಸುವಾಗ ಸ್ವಲ್ಪ ತಾವು ಅದಕ್ಕಾಗಿ ತ್ಯಾಗ ಮಾಡಬೇಕಾಗುತ್ತದೆ. ಈಗ ಇರುವ ಕಾಲೇಜುಗಳಲ್ಲಿ ನಮ್ಮ ಹಿಂದುಳಿದ ವಿದ್ಯಾರ್ಥಿಗಳಿಗೆ ಅಲ್ಲ, ನಮ್ಮ

ವಿದ್ಯಾರ್ಥಿಗಳಿಗೆ ಸೀಟು ಸಿಗದೆ ಪರದೇಶದ ವಿದ್ಯಾರ್ಥಿಗಳು ಇಲ್ಲಿ ಬಂದು ಕಲಿಯುತ್ತಿದ್ದಾರೆ. ನಮ್ಮ ಹುಡುಗರಿಗೆ ಸೀಟು ಇಲ್ಲ. ಇಂತಹ ಪರಿಸ್ಥಿತಿ ಉಂಟು.

(ಶ್ರೀಮತಿ ಮೋಟಮ್ಮ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಚೇರ್ಮನ್: ಯಾರು ಮಾತನಾಡುತ್ತಿದ್ದಾರೆ ಎಂದು ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ:– ನನ್ನ ಸ್ನೇಹಿತರು ಮಾತನಾಡಿದರು. ಮೊದಲು 45–50 ಪರ್ಸೆಂಟ್‌ಗೆ ಮಾಡುತ್ತಿದ್ದೆವು. ಅದು ರೋಸ್ಟರ್ ಸಿಸ್ಟಮ್‌ನಲ್ಲಿ ಹಂಚಿಕೆಯಾಗುತ್ತಿತ್ತು. ಇವತ್ತು ಫೀ ಕೊಟ್ಟು ತೆಗೆದುಕೊಳ್ಳುವ ಸೀಟುಗಳು, ಅವು ನಿಮಗೇನೂ ಕೊಡುವುದಿಲ್ಲ. ಹಿಂದುಳಿದವರಿಗೆ ಏನೂ ಇಟ್ಟಿಲ್ಲ. ಇದರಲ್ಲಿ ಲೆಸ್ ಮೆರಿಟ್ ಯಾರು ಇರುತ್ತಾರೆ, ಯಾರು ದುಡ್ಡು ಕೊಟ್ಟು ತೆಗೆದುಕೊಳ್ಳುವ ಶಕ್ತಿ ಇದೆ ಅವರಿಗೆ ಅದು ಹೋಗುತ್ತದೆಯೇ ವಿನಹ ಎಲ್ಲ ನಿಮಗೇ ಬಂದುಬಿಡುವುದಿಲ್ಲ. 50 ಪರ್ಸೆಂಟ್ ಮೊದಲು ಕೊಡುತ್ತಿದ್ದರು. ಏಡೆಡ್ ಇನ್ಸಿಟ್ಯೂಷನ್‌ಗಳಲ್ಲಿ, ಮಾನ್ಯ ಯಾಹ್ಯಾರವರಿಗೆ ಗೊತ್ತಿದೆ. ಇಂಜಿನಿಯರಿಂಗ್ ಕಾಲೇಜುಗಳಲ್ಲಿ 70–80 ಪರ್ಸೆಂಟ್ ತೆಗೆದುಕೊಳ್ಳುತ್ತಿದ್ದರು. ಅದೆಲ್ಲ ರೋಸ್ಟರ್ ಸಿಸ್ಟಮ್ ಮೇಲೆ ಹೋಗುತ್ತಿತ್ತು. ಇವತ್ತು 50 ಪರ್ಸೆಂಟ್ ಆಗೋದೂ 50 ಪರ್ಸೆಂಟ್ ಸಿಗುವುದಿಲ್ಲ. ತಾವು ಜಡ್ಜ್‌ಮೆಂಟ್ ಓದಿ. ಪೇಪರಲ್ಲಿ ಬರುವುದನ್ನು ಓದುವುದಕ್ಕೆ ಹೋಗಬೇಡಿ. ಪೇಪರಲ್ಲಿ ಬರೆಯುವುದು ಯಾರು ಅಂತ ನಿಮಗೆ ಗೊತ್ತಿದೆ, ನಮಗೂ ಗೊತ್ತಿದೆ. ನಾವು ಸ್ಟೇಟ್ಸ್‌ಮನ್ ಆಗಿ ರಕ್ಷಣೆ ಮಾಡಬೇಕಾಗಿರುವುದು ಇಡೀ ರಾಜ್ಯದ ಜನತೆಯನ್ನು. ಒಂದು ಮೆಡಿಕಲ್ ಕಾಲೇಜು ಇದ್ದರೆ ಎಷ್ಟು, ಹೋದರೆ ಎಷ್ಟು. ಒಂದು ಇಂಜಿನಿಯರಿಂಗ್ ಕಾಲೇಜ್ ಇದ್ದರೆ ಎಷ್ಟು ಹೋದರೆಷ್ಟು. ಅದು ಮುಖ್ಯವಾದುದಲ್ಲ. ಒಂದು ಕಡೆ ಆ ತರಹ ಹೇಳುತ್ತೀರಿ. ಇನ್ನೊಂದು ಕಡೆ ಹೇಳುವುದನ್ನು ಮಾನ್ಯ ಸುವರ್ಣ ಅವರ ಗಮನಕ್ಕೆ ತರುತ್ತೇನೆ. ಇಲ್ಲೊಂದು ಆರ್.ಬಿ.ಐ.ನ ರಿಲ್ಯಾಕ್ಸೇಷನ್ ಬಂದಿದೆ. ಇದನ್ನು ಓದುತ್ತಾ ಇದ್ದೇನೆ, ಕೇಳಿ.

"Exchange control regulations for release of exchange for higher studies abroad have also been liberalised. Under the liberalised regulations, a student who has passed higher secondary examination (10+2) of a recognised Board in India with at least 55 per cent marks or a degree examination of a recognised university in India would be granted foreign exchange for pursuing a full-time course leading to a diploma – degree / post-graduate degree in any field abroad, the duration of which is not less than one academic year."

ಅಂದರೆ ಏನರ್ಥ. 55 ಪರ್ಸೆಂಟ್ ಮಿನಿಮಮ್ ಮಾರ್ಕ್ಸ್ ಇದ್ದರೆ, ಅವರು ಫಾರಿನ್‌ನಲ್ಲಿ ಓದುತ್ತೇವೆಂದರೆ, ಪೂರ್ಣವಾಗಿ ಅವರಿಗೆ ಈ ಫಾರಿನ್ ಎಕ್ಸ್‌ಚೇಂಜ್ ಕೊಡಿ ಎಂದು. ದುಡ್ಡಿರುವವನು 55 ಪರ್ಸೆಂಟ್ ಮಾರ್ಕ್ಸ್ ಇದ್ದರೂ ಅಲ್ಲಿ ಹೋಗಿ ಓದಬಹುದು. ಇಲ್ಲಿ 55–60 ಪರ್ಸೆಂಟ್ ಇರುವವರಿಗೆ, ಸೀಟ್ ಸಿಗುವುದಿಲ್ಲವೆಂದರೆ ಇದೇನರ್ಥ. ಇದು ಆಭಾಸ. ದಯಮಾಡಿ ಇದನ್ನು ಅರ್ಥಮಾಡಿಕೊಳ್ಳಿ ಎಂದು ಹೇಳುತ್ತೇನೆ.

(ಮಾನ್ಯ ಉಪಾಧ್ಯಕ್ಷರು, ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು.)

ಆಮೇಲೆ ಎರಡನೆಯದಾಗಿ, ಇದರಲ್ಲಿ ಒಂದು ಬಹಳ ಮುಖ್ಯವಾಗಿ ನಾವು ಯೋಚನೆ ಮಾಡಬೇಕಾಗಿರುವುದು. ಗ್ರಾಮಾಂತರ ಪ್ರದೇಶಗಳ ಎಜುಕೇಷನ್ ಯಾವ ಸಿಸ್ಟಂನಲ್ಲಿ ಇದೆ

ಎಂಬುದನ್ನು ಹೇಳಿದೆ. ಹಾಗಿದ್ದಾಗ, ಅವರಿಗೆ ಒಳ್ಳೆಯ ಎಜುಕೇಷನ್ ಸಿಗುವುದಿಲ್ಲ, ಅರ್ಬನ್ ಪೀಪಲ್ ಜೊತೆಯಲ್ಲಿ ಅವರು ಕಾಂಪೀಟ್ ಮಾಡುವುದಕ್ಕಾಗುವುದಿಲ್ಲ. ಈಗ ನಮ್ಮ ಸ್ನೇಹಿತರೊಬ್ಬರು ವೆಂಕಟಾಚಲಯ್ಯ ಎನ್ನುವವರು ಬ್ರಾಹ್ಮಣರು. ಅವರಿಗೆ ಮೂರು ಜನ ಹೆಣ್ಣು ಮಕ್ಕಳು. ಒಂದು ಹೆಣ್ಣು ಮಗು 53 ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಂಡಿದ್ದಾಳೆ. ಏನು ಮಾಡುವುದು ಜಾಲಪ್ಪನವರೇ ಎಂದು ಕೇಳಿದರು. ಆಯಿತು, ಸೀಟು ಕೊಡುತ್ತೇನೆಂದು ಹೇಳಿದೆ. ಅವರಿಗೆ ನಾನು ಸೀಟು ಕೊಟ್ಟೆ. She has passed in all the subjects of all the years. She has taken final year examination now.

ಅವರು 53 ಪರ್ಸೆಂಟ್ ಮಾತ್ರ ತೆಗೆದುಕೊಂಡಿದ್ದರು. ಅಂದಾಗ, ಇವರಿಗೂ ಅಪೊರ್ಚುನಿಟೀಸ್ ಕೊಟ್ಟರೆ, ಒಂದು ಪರೀಕ್ಷೆಯಲ್ಲಿ ಅಥವಾ ಇನ್ನೊಂದು ಪರೀಕ್ಷೆಯಲ್ಲಿ ಪಾಸ್ ಆಗಿಯೇ ಆಗುತ್ತಾರೆ. ಈ ಸಿಸ್ಟಂನಿಂದ ಏನಾಗುತ್ತದೆಂದರೆ, ಯಾವುದೇ ಕಾರಣದಿಂದ ಇವರಿಗೆ ಸೀಟು ಸಿಕ್ಕುವುದಿಲ್ಲ. Neither they can compete with the urban people (counterpart) nor they have the money power to pay higher fee and get into the colleges. This is the biggest lacunae and thereby we are shutting our doors to majority of the village students from this professional education for the present and in the future also.

ಡಾ: ಗಂಗಪ್ಪ:- ತಾವು ಈಗ ಹೇಳಿದಿರಿ. 50 ಅಥವಾ 53 ಪರ್ಸೆಂಟ್ ಬಂದಂಥ ಹುಡುಗರಿಗೆ ಮೆಡಿಕಲ್ ಸೀಟು ಕೊಟ್ಟರೂ ಪಾಸ್ ಆಗುತ್ತಾರೆ ಎಂದು. ಆದರೆ, ಏನಾಗಿದೆ. ಯಾವುದೇ ಒಂದು ಪ್ರೈವೇಟ್ ಮೆಡಿಕಲ್ ಕಾಲೇಜಿನಲ್ಲಿ, ನಮ್ಮ ಹಳ್ಳಿಯಿಂದ ಬಂದಂಥ 55ರಿಂದ 60 ಪರ್ಸೆಂಟ್ ಏನು ತೆಗೆದಿದ್ದಾರೆ, ಮಕ್ಕಳು, ಆ ಮಕ್ಕಳಿಗೆ ಯಾವ ಯಾವ ಕಾಲೇಜಿನಲ್ಲಿ ಎಷ್ಟೆಷ್ಟು ಸೀಟು ಕೊಟ್ಟಿದ್ದಾರೆ ಎಂಬುದನ್ನು ತಾವು ಹೇಳಿದರೆ ಒಳ್ಳೆಯದು. ಯಾರೂ 1–2–3 ಲಕ್ಷ ಡೊನೇಷನ್ ಕೊಡುವುದಕ್ಕಾಗುವುದಿಲ್ಲ. 55–60 ಪರ್ಸೆಂಟ್ ತೆಗೆದುಕೊಂಡು ಈ ರೀತಿ ಸೀಟು ಪಡೆಯುವವರು ಶ್ರೀಮಂತರ ಮಕ್ಕಳಾಗುತ್ತಾರೆ. ನಮ್ಮ ಹಳ್ಳಿ ಹುಡುಗರು ಯಾರೂ ಸಹ 2–3 ಲಕ್ಷ ಕೊಟ್ಟು ಹೋಗುವುದಕ್ಕಾಗುವುದಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ:- ಮಾನ್ಯ ಅಧ್ಯಕ್ಷರೇ, ಯಾವ ಯಾವ ಕಾಲೇಜುಗಳಲ್ಲಿ ಎಷ್ಟೆಷ್ಟು ಸೀಟು ಕೊಟ್ಟಿದ್ದಾರೆಂದು ಹೇಳುವುದಕ್ಕೆ ನನ್ನ ಹತ್ತಿರ ಅಂಕಿಅಂಶಗಳಿಲ್ಲ. ಆದರೆ ನನ್ನ ಕಾಲೇಜಿನೊಳಗೆ, ಹಿಂದುಳಿದವರಿಗೆ, 40 ರಿಂದ 45 ಪರ್ಸೆಂಟ್ ಪ್ರತಿವರ್ಷ ನಾವು ಕೊಟ್ಟಿದ್ದೇವೆ. ಯಾರು ಬೇಕಾದರೂ ಬಂದು ನೋಡಬಹುದು; ತಾವೇ ಬಂದು ನೋಡಿಕೊಳ್ಳಬಹುದು. ಹಳ್ಳಿಯವರಿಗೆ ಕೊಟ್ಟಿದ್ದೇವೆ.

ಡಾ: ಗಂಗಪ್ಪ:- ನಿಮ್ಮ ಕಾಲೇಜಿನಲ್ಲಿ ಕೊಟ್ಟಿರಬಹುದು. ಆದರೆ, ನನಗೆ ಗೊತ್ತಿರುವ ಹಾಗೆ, ಯಾವ ಕಾಲೇಜಿನಲ್ಲೂ ಒಂದು ಸೀಟೂ ಕೂಡ ಕೊಟ್ಟಿರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಹಾಗೆ ಕೊಡದೇ ಇದ್ದರೆ, ತಾವು ಹೇಗೆ ಡಾಕ್ಟರಾಗುತ್ತಿದ್ದಿರಿ ಎಂಬುದನ್ನು ಈ ಸಭೆಗೆ ಹೇಳಿ.

ಶ್ರೀ ಆರ್.ಎಲ್. ಜಾಲಪ್ಪ:- ನೀವು ಒಂದೂ ಸೀಟು ಕೊಟ್ಟಿಲ್ಲವೆಂದು ಹೇಳಬೇಡಿ. ತಾವು ಮ್ಯಾನೇಜ್‌ಮೆಂಟ್ ಕೋಟಾದಿಂದ ಬಂದಿದ್ದೀರಿ ?

ಡಾ: ಗಂಗಪ್ಪ:- ಮಾನ್ಯ ಮಾಧುಸ್ವಾಮಿಯವರು ತಪ್ಪು ತಿಳಿದುಕೊಂಡಿದ್ದಾರೆ. ನಾನು ಹಳ್ಳಿ

ಹುಡುಗನಾಗಿ, ಮೆರಿಟ್‌ನಲ್ಲಿ ಸೀಟು ತೆಗೆದುಕೊಂಡೆನೇ ಹೊರತು, 72 ಪರ್ಸೆಂಟ್ ತೆಗೆದುಕೊಂಡು ಸೀಟು ತೆಗೆದುಕೊಂಡಿದ್ದೇನೆ.

ಶ್ರೀ ಎಂ. ನಾರಾಯಣಸ್ವಾಮಿ:– ಎಷ್ಟು ಜನ ಮೆರಿಟ್ ಮೇಲೆ ಪಾಸ್ ಮಾಡುವುದಕ್ಕಾಗುತ್ತದೆ ಎಷ್ಟು ಸವಲತ್ತು ಇದೆ. ಸಾಹುಕಾರರು, ಐ.ಎ.ಎಸ್. ಪಾಸ್ ಮಾಡಿಸಬಹುದು, ಆದರೆ ಹಳ್ಳಿಯವರು ಮೆರಿಟ್ ತೆಗೆದುಕೊಳ್ಳುವುದಿಲ್ಲವೆಂದು ಹೇಳಬೇಡಿ.

ಡಾ: ಗಂಗಪ್ಪ:– ನಾನು ಒಪ್ಪುತ್ತೇನೆ. 50–60 ಪರ್ಸೆಂಟ್ ತೆಗೆದುಕೊಂಡ ಹಳ್ಳಿಯವರು, ಯಾರು ಕೂಡ 2–3 ಲಕ್ಷ ಡೊನೇಷನ್ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ನಾರಾಯಣಸ್ವಾಮಿ:– ಹಳ್ಳಿಗಾಡು ಜನಕ್ಕೆ ಟ್ಯೂಷನ್ ಫೀಜು ಕೊಡುವುದಕ್ಕೆ ಯೋಗ್ಯತೆ ಇಲ್ಲ. ಸುಪ್ರೀಂಕೋರ್ಟ್ ತೀರ್ಮಾನ ಆಗಿದೆ. ಒಪ್ಪುತ್ತೇನೆ. ಸರ್ಕಾರದವರು ಸುಪ್ರೀಂಕೋರ್ಟ್ ತೀರ್ಮಾನ ಒಪ್ಪುತ್ತೇವೆಂದು ಹೇಳುತ್ತಾರೆ. ಆದರೆ, ಮಂಡಲ್ ಪಂಚಾಯಿತಿಯಲ್ಲಿ ಈ ತೀರ್ಪು ಜಾರಿ ಕೊಡುವುದಕ್ಕಾಗಿಲ್ಲ. ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಇಡತಕ್ಕ ಕೆಲಸ ಸರ್ಕಾರದಿಂದ ಆಗುತ್ತಾ ಇದೆ. ಯಾವುದಕ್ಕೆ ಕಾಳಜಿ ವಹಿಸಬೇಕೋ ಅದನ್ನು ವಹಿಸುತ್ತ ಇಲ್ಲ.

ಉಪಾಧ್ಯಕ್ಷರು:– ನಾರಾಯಣಸ್ವಾಮಿಯವರೇ ಈ ಬೇಡಿಕೆ ಮೇಲೆ ಮಾತನಾಡಲು ತಾವು ತಮ್ಮ ಹೆಸರನ್ನು ನೋಂದಾಯಿಸಿದ್ದೀರಾ? ನೋಂದಾಯಿಸಿದ್ದರೆ ನಿಮ್ಮ ಅವಕಾಶ ಬಂದಾಗ ತಾವು ಮಾತನಾಡಬಹುದು. ಇನ್ನು 20 ಜನ ಮಾನ್ಯ ಸದಸ್ಯರು ಮಾತನಾಡುವವರು ಇದ್ದಾರೆ. ಮಾನ್ಯ ಜಾಲಪ್ಪನವರು ಮಾತನಾಡಲಿ.

ಶ್ರೀ ಆರ್.ಎಲ್. ಜಾಲಪ್ಪ:– ಮಾನ್ಯ ಅಧ್ಯಕ್ಷರೇ, ಗೌರ್ನಮೆಂಟ್ ಕಾಲೇಜು ಬಳ್ಳಾರಿ. ಅದರ ಗತಿ ಏನಾಗಿದೆ ಸ್ವಾಮಿ? ಇವತ್ತು ಅದು ಏನಾದರೂ ಕಾಲೇಜು ಎಂದು ಅನಿಸಿಕೊಳ್ಳುವುದಕ್ಕೆ ಯೋಗ್ಯವಾಗಿದೆಯೇ? ನೀವಿದ್ದಾಗ ಕಾಲೇಜು ಯಾವ ರೀತಿ ಇತ್ತು ಅದು ಈಗ ಇಲ್ಲ. ಈಗ ಅಲ್ಲಿ ಉಪಾಧ್ಯಾಯರು ಇಲ್ಲ. ಎಕ್ವಿಪ್‌ಮೆಂಟ್ಸ್ ಇಲ್ಲ. ಡೀ ರೆಕರ್ಗನೈಸ್ ಮಾಡಬೇಕೆಂದು ಐ.ಎಂ.ಸಿ.ಯವರು ಹೇಳಿದ್ದಾರೆ. 4 ಯೂನಿವರ್ಸಿಟಿಗಳವರು ಹೇಳುತ್ತಿದ್ದಾರೆ. ಮೊನ್ನೆ ತಾನೆ ಮಾನ್ಯ ಮುಖ್ಯಮಂತ್ರಿಗಳು ಹೋಗಿದ್ದಾಗ ಅಲ್ಲಿ ದೊಡ್ಡ ಗದ್ದಲ ಆಯಿತು. 4 ದಿವಸ ಕೌನ್ಸಿಲ್‌ನಲ್ಲಿ ಆ ಕಾಲೇಜು ಬೇಗ ಮುಚ್ಚಿ ಇಲ್ಲದಿದ್ದರೆ ಎಕ್ವಿಪ್‌ಮೆಂಟ್ ಮಾಡಿ, ಉಪಾಧ್ಯಾಯರನ್ನು ಕೊಡಿ ಅಂತ ಹೇಳಿದರು. ಈ ಪೊಜಿಷನ್‌ನಲ್ಲಿ ಗೌರ್ನಮೆಂಟ್ ಕಾಲೇಜು ಇದೆ.

ಡಾ: ಗಂಗಪ್ಪ:– ಪ್ರೈವೇಟ್ ಕಾಲೇಜುಗಳಲ್ಲಿ ಸಂಬಳ ಹೆಚ್ಚು ಕೊಟ್ಟು ಆಕರ್ಷಣೆ ಮಾಡುತ್ತಾರೆ.

ಶ್ರೀ ಆರ್.ಎಲ್. ಜಾಲಪ್ಪ:–:– ಸಂಬಳ ಕೊಡುತ್ತಾರೆ ಮತ್ತು ಖಾಸಗಿ ಇಂಜನೀಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಬೆಟರ್ ಎಕ್ವಿಪ್‌ಮೆಂಟ್ಸ್ ಇದೆ. ಗೌರ್ನಮೆಂಟ್ ಕಾಲೇಜುಗಳಲ್ಲಿ ಏನಿದೆ ಸುಮ್ಮನೆ ಯಾರೋ ಏನೋ ಹೇಳುತ್ತಾರೆ ಅಂದರೆ ತಮ್ಮಂತಹವರು ಹೇಳುವುದು ಅಲ್ಲ. ಹೋಗಿ ನೋಡಿ. ತಾವು ಪ್ರೊಫೆಶನಲಿಸ್ಟ್. ಎಲ್ಲೆಲ್ಲಿ ಬೆಟರ್ ಇನ್‌ಫ್ರಾಸ್ಟಕ್ಚರ್ ಇದೆ ಎಂದು. ಅವರು ಸ್ವಲ್ಪ ದುಡ್ಡು ಜಾಸ್ತಿ ತೆಗೆದುಕೊಳ್ಳಬಹುದು. ಈಗ ಮಣಿಪಾಲ್ ಕಾಲೇಜು ನೋಡಿ ಜೆ.ಜೆ.ಎಂ. ಕಾಲೇಜು ನೋಡಿ. ಬೆಳಗಾಂ ಕಾಲೇಜು ಇದೆ, ಗುಲ್ಬರ್ಗದಲ್ಲಿದೆ. ಇವೆಲ್ಲಾ ನೋಡಿ. ತಮಗೆ ಗೊತ್ತಾಗುತ್ತದೆ ಮಾನ್ಯ ಅಧ್ಯಕ್ಷರೇ ಈಗಾಗಲೇ ನಾನು ಹೇಳಿದ್ದೆ. ಹಳ್ಳಿಯ ಹುಡುಗರಿಗೆ ಮೆರೀಟ್‌ನಲ್ಲಿ ಬರುವುದಕ್ಕಾಗುವುದಿಲ್ಲ. ಅವರು ಕಾಸು ಕೊಟ್ಟು ಸೀಟು ತೆಗೆದುಕೊಳ್ಳುವುದಕ್ಕೂ ಆಗುವುದಿಲ್ಲ. ಇದು ಒಂದು ದೊಡ್ಡ ದುರಂತ. ಇದರಲ್ಲಿ ಏನಾಗಿದೆ ಅಂದರೆ ಬಹುಶಃ ನಮ್ಮ ಜಡ್ಜಸ್‌ಗಳನ್ನು ಸರಿಯಾಗಿ ಕನ್ವಿನ್ಸ್ ಆಗಿಲ್ಲ. ನಮ್ಮ ಆರ್ಗ್ಯುಮೆಂಟ್ಸ್ ಸರಿಯಾಗಿಲ್ಲ, ಅಡ್ವೋಕೇಟ್ಸ್ ಸರಿಯಾಗಿ ಕನ್‌ವಿನ್ಸ್

ಮಾಡಿಲ್ಲ. ಆದರೂ ಒಂದು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ನಾವು ಇದರ ಬಗ್ಗೆ ರಿವ್ಯೂ ಮಾಡಿ ಎಂದು ರಿವ್ಯೂ ಪಿಟೀಶನ್ ಹಾಕಿದ್ದೇವೆ. ಸ್ವಾಮಿ ನಾವು ಇದನ್ನು ನಡೆಸುವುದಕ್ಕಾಗುವುದಿಲ್ಲವೆಂದು ಸುಪ್ರೀಂ ಕೋರ್ಟ್ ಮುಂದೆ ರಿವ್ಯೂ ಪಿಟೀಶನ್ ಹಾಕಿದ್ದೇವೆ. ನೋಡೋಣ ಏನಾಗುತ್ತದೆ ? ಮುಖ್ಯವಾಗಿ ಮೆಡಿಕಲ್ ಎಜುಕೇಶನ್ ಪುಕ್ಕಸಾಟೆ ಎಲ್ಲರಿಗೂ ಕೊಡುವುದಕ್ಕಾಗುವುದಿಲ್ಲ. ದಯಮಾಡಿ ಅರ್ಥಮಾಡಿಕೊಳ್ಳಿ. ಇದರಲ್ಲಿ 50 ಭಾಗ ಪುಕ್ಕಸಾಟೆ ಎಜುಕೇಶನ್. ಇನ್ನು 50 ಭಾಗ ಎಜುಕೇಶನ್ ಈ 50 ಭಾಗ ಪುಕ್ಕಸಾಟೆ ಎಜುಕೇಶನ್ ಕೊಟ್ಟಿದ್ದೇವಲ್ಲಾ ಅವರಿಗೆ ಇವರು ಸಬ್ಸಿಡೈಸ್ ಮಾಡಬೇಕು. ಸ್ವಾಮಿ ಪುಕ್ಕಸಾಟೆ ಎಜುಕೇಶನ್ ಏನೂ ಕೊಟ್ಟಿಲ್ಲ. ಅರ್ಥಮಾಡಿಕೊಳ್ಳಿ. ಅವರು ಎರಡು ಲಕ್ಷ ಒಂದು ಲಕ್ಷ ಒಬ್ಬ ಹುಡುಗ ಕೊಡಬೇಕು ಈ 50 ಭಾಗದ ಜನ 4 ಲಕ್ಷ ರೂಪಾಯಿ ಕೊಡಬೇಕು. ಪುಕ್ಕಸಟ್ಟೆ ಕೊಟ್ಟಿಲ್ಲ, ಧರ್ಮಕ್ಕೂ ಕೊಟ್ಟಿಲ್ಲ. ದಯಮಾಡಿ ಯೋಚನೆ ಮಾಡಿ. ಆಮೇಲೆ ಇದಕ್ಕೆ ಕಾರಣ ಕೊಟ್ಟಿರುವುದು.

"The theoretical foundation for our method is that a candidate/student who is doing march over his compatriot on account of his economic power should be made not only to pay for himself but also to pay for another meritorian student."

This is the social justification behind 50% role described in Clause – II of this scheme.

ಈಗ ಈ ಸ್ಕೀಮ್ ಕೊಟ್ಟಿದ್ದಾರೆ. ಈ ಸ್ಕೀಮ್‌ನಲ್ಲಿ 50 ಭಾಗ ಪುಕ್ಕಸಟ್ಟೆ ಸೀಟು ಆಯಿತು. ಇನ್ನು 50 ಭಾಗದಲ್ಲಿ ಮೆರೀಟ್ ಮೇಲೆ ಏನು ಸೆಲೆಕ್ಟ್ ಮಾಡುತ್ತಾರೆ ಅವರು ಕೊಡುವ ಹಣ ಈ 50 ಭಾಗ ಫ್ರೀ ಸೀಟ್‌ಗೆ ಖರ್ಚಾಗುತ್ತದೆ, ಮೆಡಿಕಲ್ ಕಾಲೇಜು ಎಕ್ಸಪೆಂಡಿಚರನ್ನು ಇವರು ಬೇರೆ ಮಾಡಬೇಕು. What is this? Is it not a capitation fee? ಸರ್ಕಾರದ ಆಡಳಿತ ನಡೆಸುವವರು ಇದನ್ನು ಸ್ವಲ್ಪ ನೋಡಿ. ತಮಗೆ ನಾನು ಒಂದು ಸಲಹೆ ಕೊಡುತ್ತೇನೆ.

SRI S.M. YAHYA:– Sir, Mr. Jalappa is a senior Hon. Member. He has pointed out number of defects or impracticabilities about the decision of the Supreme Court. He has his own opinion and many have. However, the point is, this is a full Bench judgement by the Supreme Court. When the Supreme Court has given this judgement, what the State Government can do about it. Can it go to Supreme Court in appeal or review? It is none of our State Governments business. The judgement whatever has been given by the Supreme Court is final. The Supreme Court judgement is law to–day. We have to implement it. Therefore, whatever the implications, there may be so many other implications we have to implement it. When we brought the Land Reforms Act when the Supreme Court upheld it, there were so many implications. We had to face so many implications. When we want to implement the Supreme Court judgement, by implications we cannot do anything. Nobody can blame the Government. But, if we do not implement

the Supreme Court decision then they will say the Government is not implementing the Supreme Court judgement.

The Government will have to implement the judgement and we have nothing also to do. If you go and get a stay, that is a different matter altogether. We have to implement the judgement.

SRI R.L. JALAPPA:– Are you really feel that this is practicable. There was a case and there was a decision by the Supreme Court formerly that any muslim women who has given Tallak should be given some maintenance allowance. Did you not amend the constitution in this regard? You know everything.

SRI S.M. YAHYA:– If you put forward the anology of this kind, I am sorry.

SRI R.L. JALAPPA:– I know analogy is not an argument.

SRI S.M. YAHYA:– It is a clear judgement. There are directions from the Supreme Court and even the procedure has been laid by the Supreme Court. In such a situation, what do you suggest? It is no use in going on criticising the judgement. What we can do now?

ಶ್ರೀ ಆರ್.ಎಲ್. ಜಾಲಪ್ಪ:– ಸುಪ್ರೀಂ ಕೋರ್ಟ್‌ನವರು ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಅದಕ್ಕೆ ಸರಕಾರವಾಗಲೀ, ನಾವಾಗಲೀ ವಿರುದ್ಧ ಹೋಗುವುದಕ್ಕೆ ಸಾಧ್ಯವಿಲ್ಲ. ಆದರೆ ನಮಗೆ ಸಮಯ ಇದೆ. ಇದು ನಿಮಗೆ ಇಂಪ್ರಾಕ್ಟಿಕೇಬಲ್ ಎಂದು ಗೊತ್ತಾದರೆ ಅದರ ಬಗ್ಗೆ ನಿಮ್ಮ ವಿಚಾರಗಳನ್ನು ಹೇಳಿಕೊಳ್ಳಬಹುದು. You can file a revision petition also before the Supreme Court. Do you feel this is not practicable. If you feel this is practicable go ahead.

SRI S.M. YAHYA:– How can a State Government go in review, I just cannot understand. We being in the Government why should we go on review?

ಉಪಾಧ್ಯಕ್ಷರು:– ಮಾನ್ಯ ಸದಸ್ಯರು ಹೇಳಿರುವ ಪ್ರಕಾರ, ಒಪ್ಪಿಕೊಂಡಿರುವ ಪ್ರಕಾರ, ಸುಪ್ರೀಂ ಕೋರ್ಟ್‌ನಲ್ಲಿ ರಿವಿಷನ್ ಪಿಟಿಷನ್ ಹಾಕಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ:– ನಾವು ಹಾಕಿದ್ದೇವೆ.

SRI S.M. YAHYA:– Better ask your advocate to argue that matter.

ಶ್ರೀ ಆರ್.ಎಲ್. ಜಾಲಪ್ಪ:– ಇದಕ್ಕೆ ಎಂಟ್ರೆನ್ಸ್ ಎಕ್ಸಾಮ್ ಮಾಡಬೇಕು, ಎಸ್.ಆರ್.ಎಂ.ನಲ್ಲಿ ಎಂಟ್ರೆನ್ಸ್ ಎಕ್ಸಾಂ ಮಾಡುತ್ತೀರಿ ? ಆದ್ದರಿಂದ ಸರಕಾರದವರು ಈ ಬಗ್ಗೆ ಹೇಳಬಹುದು, ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಾಡಬಹುದು, ಆಗುವುದಿಲ್ಲ ಅಂದರೆ, ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಫುಲ್ ಅಲ್ಲ; ನಮ್ಮ ರಿವ್ಯೂ ಪಿಟಿಷನ್‌ನಲ್ಲಿಯೂ ನಮಗೆ ಅನುಕೂಲವಾಗದಿದ್ದರೆ ಮುಂದೆ ಕಾಲೇಜು

ನಡೆಸುವುದು ಬಿಡುವುದು ಮುಂದಿನ ವಿಚಾರ. We are forced to obey the Supreme Court Judgment ಆದರೆ ನಿಮಗೆ ಅಲ್ಲಿ ಹೇಳಲು ಅವಕಾಶ ಇದೆ, ಹೋಗಿ ನೋಡಿ ಎಂದು ಹೇಳುತ್ತಾ ಇದ್ದೇವೆ ವಿನಹ ಬೇರೆ ಏನೂ ಇಲ್ಲ. To everybody it applies; I have quoted the Supreme Court judgement also. But as it is the Supreme Court Judgement, ಎಲ್ಲೆಲ್ಲಿ ಖಾಸಗಿ ಮ್ಯಾನೇಜ್‌ಮೆಂಟ್, ಅದು ಯು.ಕೆ.ಜಿ. ಆಗಿರಬಹುದು, ಎಲ್.ಕೆ.ಜಿ ಆಗಿರಬಹುದು, ಪ್ರೈಮರಿ, ಹೈಯರ್ ಎಜುಕೇಶನ್ ಇರಬಹುದು, ಕಾಲೇಜು ಇರಬಹುದು. it applies to everybody.

4.45 ಪಿ.ಎಂ.

ಆಗ ನಾವು ನೂರು ವರ್ಷಗಳ ಹಿಂದಕ್ಕೆ ಹೋಗುತ್ತೇವೆ ಸ್ವಾಮಿ ? ಆಗ ಏನಾಗುತ್ತದೆ ಗೊತ್ತೇ ? ಹಣ ಇದ್ದವರಿಗೆ ಮಾತ್ರ ಅದು ಲಭ್ಯವಾಗುತ್ತದೆ. ಅಂಥ ಒಂದು ಪರಿಸ್ಥಿತಿಯು ಇನ್ನು ಮುಂದೆ ಬರುತ್ತದೆ. ಆ ಒಂದು ಪರಿಸ್ಥಿತಿ ಬಂದರೆ ಗ್ರಾಮಾಂತರ ಪ್ರದೇಶದವರಿಗೆ ಇಲ್ಲಿ ಎಲ್ಲಿಯೂ ಅವಕಾಶ ಸಿಗುವುದಿಲ್ಲ. ಟೆಕ್ನಿಕಲ್, ವಿದ್ಯಾಭ್ಯಾಸಗಳನ್ನು ಅವರಿಗೆ ಕೊಡಲು ಆಗುವುದಿಲ್ಲ. ಇದನ್ನು ಯೋಚನೆ ಮಾಡಬೇಕು. ಆದ್ದರಿಂದ ಇದು ಸ್ಕೀಮ್ ಇಂಪ್ರಾಕ್ಟಿಕೇಬಲ್ ಎಂದು ತಮಗೆ ಗೊತ್ತಾದರೆ ಸುಪ್ರೀಂ ಕೋರ್ಟ್‌ನ ಮುಂದೆ ಹೋಗಿ.

You can submit that this is not practicable, please review your judgement. That I will leave it to the Government. You take any decision that you feel correct.

ಈಗ ಕೆಲವರಲ್ಲಿ ಎಲ್ಲರಿಗೂ ಫ್ರೀಯಾಗಿ ಸೀಟುಗಳು ಸಿಗುತ್ತವೆ ಎಂಬ ಅಭಿಪ್ರಾಯ ಬಂದಿದೆ. ಅದನ್ನು 50 ಪರ್ಸೆಂಟ್‌ನಷ್ಟು ಮೊದಲು ಕೂಡ ಕೊಡುತ್ತಿದ್ದೆವು. ಈಗಲೂ ಕೊಡುತ್ತಾ ಇದ್ದೇವೆ. ಅದರಲ್ಲಿ ಹೈಯರ್ ಲೆವೆಲ್‌ನಲ್ಲಿ ಮೆನ್ಯುಪ್ಲೇಶನ್‌ಗೆ ಅವಕಾಶ ಆಗುತ್ತದೆಯೇ ವಿನಹ ಬೇರೇನೂ ಇಲ್ಲ. ಕ್ಯಾಪಿಟೇಶನ್ ಫೀ ಒಬ್ಬೊಬ್ಬರು ಮಾತ್ರ ತೆಗೆದುಕೊಳ್ಳುತ್ತಾ ಇದ್ದರು. ಆದ್ದರಿಂದ, All India Technical Board is there. Consult them. Take your own decision. ಕೆಲವರು ಕ್ಯಾಪಿಟೇಶನ್ ಫೀ ಎಂದು ಅರ್ಧ ಮುಕ್ಕಾಲು ಭಾಗ ತಿನ್ನುತ್ತಾ ಇದ್ದರು, ಇನ್ನು ಕೆಲವರು ತಮ್ಮ ಸಂಸ್ಥೆಗೆ ಅದನ್ನು ಉಪಯೋಗಿಸುತ್ತಿದ್ದರು. ಹಾಗೆಯೇ ಕೆಲವರಿಗೆ ಅವಕಾಶವೇ ಇರಲಿಲ್ಲ. ಹೀಗೆ ಇರುವಾಗ ತಾವುಗಳು ಐ.ಎಂ.ಸಿ ಇದೆ ಅವರನ್ನು ಕನ್ಸಲ್ಟ್ ಮಾಡಿ, ಆಲ್ ಇಂಡಿಯಾ ಟೆಕ್ನಿಕಲ್ ಬೋರ್ಡ್ ಇದೆ ಅವರನ್ನು ಕನ್ಸಲ್ಟ್ ಮಾಡಿ, ನೀವೇ ಒಂದು ನಿರ್ಣಯಕ್ಕೆ ಬಂದುಬಿಡಿ. ಹಾಗೆಯೇ ಇಲ್ಲಿ ಫಂಡಮೆಂಟಲ್ ರೈಟ್ಸ್ ಇರುವುದು ಅದು 14 ವರ್ಷದವರೆಗೆ ಮಾತ್ರ. ಅದು ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟ್‌ನಲ್ಲಿಯೂ ಇದೆ. 14 ವರ್ಷದ ಮೇಲೆ ಸ್ಟೇಟ್ ಸ್ಕೀಮ್‌ನಲ್ಲಿ ದುಡ್ಡು ಉಳಿದಿದ್ದರೆ, ಶಕ್ತಿ ಇದ್ದರೆ ಆಗ ಕೊಡಬಹುದು. ಇಲ್ಲದಿದ್ದರೆ they are not bound to give higher education and no citizen in our country can claim higher education as the fundamental right. Am I right Sir?

SRI S.M. YAHYA:– Depending upon the resources.

SRI R.L. JALAPPA:– When you are unable to run the primary schools properly, when you are unable to provide buildings, primary school buildings in the village side, when you are unable to provide them sufficient teachers,

what moral right you have got to spend Rs. 40 crores over this professional education? What moral right you have? You are bound by the Constitution to provide education to these urchins. We call ourselves as urchins, these village boys. We are not able to do it. I have quoted Chinnappa Reddy Commission's report, It is a fact. Everybody knows it is a fact. Every Hon'ble Member in this House knows it is a fact. What moral right you have got to provide higher education freely? I have already quoted one paragraph here.

"It is at the pleasure of the affluent people and their children who have got more backing of politicians and economic power".

ಅವರಿಗೋಸ್ಕರವಾಗಿ ನಾವು ಈವತ್ತು ಮಾಡುತ್ತಾ ಇದ್ದೇವೆ ವಿನಹ Not to satisfy the major portion of the urchins in the country. If the State has to bear the cost of education of millions of children, it will never be able to raise enough money by any conceivable measures of taxation. But it is the primary duty of the State to bring to the School every boy and girl and give them proper note functionary education is an axiomatic truth but in a country like India, such education must largely if not wholly pay for itself. Whoever is taking this higher education they must pay for that because the State cannot afford to give so much on higher education free of cost. Secondly what planning commission says is reported in Financial Express dated 11th August, 1991. "Since the Government debt burden has been increasing, the commission has suggested a reduction in the effective interest rate on government borrowings, improved cost recovery in publicly provided services such as Government housing higher education that benefit mainly the upper income group". This is what the planning commission has said. "Are we not bound by all these things? Should you not go through all these things when we are providing free education to a few people? Unfortunately, this judgement, it reads like this. "Whoever takes more marks and takes a free seat is poor and whoever takes lesser marks and wants a seat in the Medical College or Engineering College, or in any other college are rich so that taking seat by paying money should subsidise the cost of the education of the so called merited students also". Does it stand to reason? I will leave it to you. The Government should now think whether primary education is important or whether this professional education is important.

ಪ್ರೈಮರಿ ಎಜ್ಯುಕೇಷನ್ ಇಂಪಾರ್ಟೆಂಟ್ ಏಕೆ ? ರಾಷ್ಟ್ರದಲ್ಲಿ ತಕ್ಕಮಟ್ಟಿಗೆ ಎಲ್ಲರಿಗೂ ಓದುವುದು ಬರೆಯುವುದು ಬರಬೇಕು. ಆದರಿಂದ ದಿನನಿತ್ಯ ಏನೇನು ಪ್ರಪಂಚದಲ್ಲಿ ನಡೆಯುತ್ತದೆ, ಏನೇನು

ರಾಷ್ಟ್ರದಲ್ಲಿ ನಡೆಯುತ್ತದೆ, ಎನ್ನುವುದನ್ನು ಅವರು ತಿಳಿದುಕೊಳ್ಳಬೇಕು. ಮತ್ತು ತಮ್ಮನ್ನು ತಾವು ಈ ರಾಷ್ಟ್ರದ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬೇಕು ಎನ್ನುವುದಕ್ಕಾಗಿ 14 ವರ್ಷದವರೆಗೂ ಉಚಿತ ಶಿಕ್ಷಣಾಭ್ಯಾಸ ಕೊಡಬೇಕೆಂದು ಮಾಡಿದ್ದುದು. ಅದನ್ನು ನಾವು ಈಗ ಮೊದಲು ಕೊಡಬೇಕೇ, ಅಥವಾ ಯಾರು ಕೆಲವರಿಗೆ ಮಾತ್ರ ಹೈಯರ್ ಎಜ್ಯುಕೇಶನ್ ಕೊಟ್ಟು, ಅವರೇನು ಎಲ್ಲಿಯೂ ಫ್ರೀ ಕೆಲಸ ಮಾಡುವುದಿಲ್ಲ ಇದನ್ನು ನಾನು ಮಾತನಾಡುವುದರಿಂದ ಏನೇನು ಆಗಬೇಕೆಂದು ನನಗೆ ಗೊತ್ತಿದೆ. I I am prepared for any eventuality. Maximum, you will take over the College. Take over.

ಅದು ಬ್ಯಾಕ್‌ವರ್ಡ್ class ಟ್ರಸ್ಟ್, ಕಾಂಪನ್‌ಸೇಷನ್‌ನನ್ನಾದರೂ ಕೊಡಿ, ಅದನ್ನೇ ತೆಗೆದುಕೊಂಡು ಒಂದು ಕಡೆ ಡಿಪಾಸಿಟ್ ಮಾಡುತ್ತೇವೆ ಅದರಲ್ಲಿ ಬಂದ ದುಡ್ಡಿನೊಳಗೆ ಏನಾದರೂ ಸ್ಕಾಲರ್‌ಶಿಪ್‌ನ್ನು ಕೊಟ್ಟುಕೊಂಡು ಹೋಗುತ್ತೇನೆ. We won't lose anything. ತೆಗೆದುಕೊಂಡು ನಡೆಸಿಕೊಳ್ಳಿ. I am the last person. I know what is going to happen but as a responsible citizen of India, I want to pose a question to you, Sir, whether primary education you will give more important or to professional education where you are spending more than Rs. 40 crore every year? This, you have to decide now. A time has come to decide the future of education of the State and as well as of the country.

SRI S.M. YAHYA:– I don't know, for all your experience and our experience both should co–exist i.e., primary education and higher education. It cannot be bifurcated; only a few can go for higher education. It has been the tradition of our country also from time immemorial and therefore just bifurcate because you are spending Rs. 40 crores for higher education but kindly see how much we spend for primary education.

SRI R.L. JALAPPA:– What is the magnitude of students benefit?

SRI S.M. YAHYA:– What is the percentage of primary and high school and higher education? It is only 15% of the budget we spend for higher education. Just we cannot bifurcate. We want higher education, we want primary eduction also. This will not hold good in a particular system.

SRI R.L. JALAPPA:– I am telling, we want professional education. I am not saying that.....

SRI S.M. YAHYA:– That argument will not hold water.

SRI R.L. JALAPPA:– No, I only say, higher education or technical education should be self–sufficient. They must pay for their education. There are banks to pay. Let them pay. There are poor people also. You give sufficient scholarships and all that. In which developed country, technical education is given free? No where in the world Sir. When we argued before

the Supreme Court, we got 7–8 prospectus from outside the country. No University gives free education, Sir.

ಉಪಾಧ್ಯಕ್ಷರು:– ತಾವು ಇನ್ನು ಎಷ್ಟು ನಿಮಿಷ ತೆಗೆದುಕೊಳ್ಳುತ್ತೀರಿ. ಈಗಾಗಲೇ 55 ನಿಮಿಷ ಆಗಿದೆ.

ಶ್ರೀ ಆರ್.ಎಲ್. ಜಾಲಪ್ಪ:– ಇನ್ನು 5–10 ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ಕಡೆಯದಾಗಿ ಮಂಡಲ್ ಕಮೀಷನ್ ರಿಪೋರ್ಟನ್ನು ಕೊಟ್ಟಿದ್ದಾರೆ. ಮಂಡಲ್ ಕಮೀಷನ್ ರಿಪೋರ್ಟನ್ನು ಕೊಟ್ಟಾಗ, ಈ ಮಂಡಲ್ ಕಮೀಷನ್ ರಿಪೋರ್ಟಿನಲ್ಲಿ ನಮಗೆ ಏನಾದರೂ ಸಿಕ್ಕಬೇಕು ಅಂದರೆ ಗ್ರಾಮಾಂತರ ಪ್ರದೇಶದಲ್ಲಿ ಅದರಲ್ಲಿಯೂ ಹಿಂದುಳಿದವರಿಗೆ ಎಜುಕೇಶನ್ ಸಿಕ್ಕಿದರೆ ತಾನೆ ಇಲ್ಲಿ ನಮ್ಮ ಮಕ್ಕಳು ಬಂದು ಬೇರೆಯವರ ಜೊತೆಗೆ ಕಾಂಪೀಟ್ ಮಾಡುವುದು ? ಅಲ್ಲಿ ಏನೂ ಸಿಗದಿದ್ದರೆ ಕಾಂಪೀಟ್ ಮಾಡುವುದು ಹೇಗೆ ? This means, Mandal Commission Report is going to be negatived by this judgement. Unfortunately, with all due respect to the Judges and the Supreme Court, I bring to the knowledge of this House, through you, Sir, that this is going to be negatived. This may kindly be looked into and it is high time to decide whether these private institutions should survive or not, whether Government is capable of financing for education – primary, middle and high school fully. Even now by stopping other expenditure, it is for the Government to think over but I want you should take a positive and calculated decision. This has got to be discussed among the educated people of the State or the country. There are plenty of people who can guide the Government. Public opinion also please see that they are called and their opinion is obtained and then you take your own decision. With these words, I just want to conclude.

ನಾನು ಏನು ಹೇಳಬೇಕು ಅಂತ ಇದ್ದೆ, ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಎಲ್ಲವನ್ನು ಅವರ ಗಮನಕ್ಕೆ ತಂದಿದ್ದೇನೆ. ನಾನು ಹೇಳಿದ್ದು ಹೊಸದೇನೂ ಅಲ್ಲ. ಪ್ರತಿಯೊಂದು ಅನುಭವ ಇರತಕ್ಕ ಮಂತ್ರಿಗಳಿಗೆ ಗೊತ್ತಿದೆ. ಇಲ್ಲಿ ಮಾನ್ಯ ಹುಚ್ಚಮಾಸ್ತಿಗೌಡರು ಇದ್ದಾರೆ, ಮಾನ್ಯ ಯಾಹ್ಯರವರು ಇದ್ದಾರೆ, ಇದೆಲ್ಲಾ ಇವರಿಗೆ ಗೊತ್ತಿರುವುದೇ. ನಾನೇನೂ ಹೊಸದು ಹೇಳಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಆದರೆ ಇದನ್ನು ಅವರು ಎಷ್ಟರಮಟ್ಟಿಗೆ ಪಾಲಿಸುತ್ತಾರೋ ಏನೋ ಗೊತ್ತಿಲ್ಲ. ಬರೀ ಮೆರಿಟ್ ಮೇಲೆ ಕೊಡುವುದಕ್ಕೆ ಹೋದರೆ ಏನಾಗಬಹುದು ಎಂಬುದನ್ನು ಹೇಳಿದ್ದೇನೆ. ಎಲ್ಲಾ ಅರ್ಬನ್‌ನವರಿಗೆ ಸಿಗುತ್ತದೆ, ಬೇರೆ ಯಾರಿಗೂ ಸಿಕ್ಕುವುದಿಲ್ಲ. ರೂರಲ್‌ನವರಿಗೆ ಆಪರ್‌ಚ್ಯುನಿಟಿ ಸಿಕ್ಕುವುದಿಲ್ಲ. ಮತ್ತು ಮೆರಿಟ್ ಒಂದೇ ಕ್ರೈಟೀರಿಯಾ ಇಲ್ಲ. ಬರೀ ಪರೀಕ್ಷೆಯಲ್ಲಿ ನಾಲ್ಕು ನಂಬರ್ ಜಾಸ್ತಿ ತೆಗೆದು ಕೊಂಡರೆ ಅವನಿಗೆ ಮೆರಿಟ್ ಇದೆ ಎಂದು ನಾನಂತೂ ಒಪ್ಪುವುದಿಲ್ಲ. ನಾವು ಇದನ್ನು ಲೈಫ್‌ನಲ್ಲಿ ನೋಡಿರುವವರೆ, ನಾನೇ ಉದಾಹರಣೆಗೆ ಹೇಳಬೇಕಾದರೆ ನಾನು ಪರೀಕ್ಷೆಯಲ್ಲಿ ಹಿಂದಿನ ದಿವಸ ಲಾಟರಿ ಬಂದು ಇಂಟರ್‌ಮಿಡಿಟ್‌ಯೊಳಗೆ 12 ಪ್ರಶ್ನೆಯನ್ನು ಹಾಕಿಬಿಟ್ಟು, 6 ಎತ್ತಿ ಓದಿಬಿಟ್ಟು ಹೋಗಿ ಪಾಸು ಮಾಡಿಕೊಂಡು ಬಂದಿದ್ದೇನೆ. Do you call me a merited man? I have done this for myself.

ಮೊದಲು ಅಲ್ಲಿ ಇಲ್ಲಿ ಇಸ್ಪೀಟ್ ಆಡಿಕೊಂಡು ಕುಳಿತುಕೊಳ್ಳುವುದು, ಪರೀಕ್ಷೆ ಬಂದಾಗ ಹಿಂದಿನ

ಮೂರು ವರ್ಷದ ಪ್ರಶ್ನೆ ಪತ್ರಿಕೆಯನ್ನು ನೋಡಿ, ಎಲ್ಲವನ್ನು ಕ್ರೋಢೀಕರಿಸಿ ಅದರಲ್ಲಿ 6ನ್ನು ಆಯ್ಕೆ ಮಾಡಿಕೊಂಡು ಓದಿಕೊಂಡು ಹೋಗಿ ಇಂಟರ್‌ಮೀಡಿಯೇಟ್ ಅನ್ನು ಪಾಸ್ ಮಾಡಿಕೊಂಡು ಬಂದಿದ್ದೇನೆ. Do you call me a merited man? No. It is not possible.

ಒಬ್ಬ ಮಾನ್ಯ ಸದಸ್ಯರು:– ಬಹಳ ಜನ ಹಾಗೆಯೇ ಮಾಡುತ್ತಾರೆ ಎಂದೇ ನಿಮ್ಮ ಅಭಿಪ್ರಾಯ ?

ಶ್ರೀ ಆರ್.ಎಲ್. ಜಾಲಪ್ಪ:– ಬಹಳ ಜನ ಹಾಗೆಯೇ ಮಾಡುತ್ತಾರೆ.

ಶ್ರೀ ಆರ್.ಎನ್. ನಾಯಕ್:– ಆ ದಿವಸ ನೀವು ಇಸ್ಪೀಟ್‌ನಲ್ಲಿ ಗೆದ್ದಿದ್ದೀರೋ, ಸೋತಿದ್ದೀರೋ. ನೀವು ಇಸ್ಪೀಟ್‌ನಲ್ಲಿ ಗೆದ್ದಿದ್ದರೆ you are a merited man. ಹಾಗಾದರೆ ನೀವು ಒಳ್ಳೆಯ ವಿದ್ಯಾರ್ಥಿ ಎಂದು ಅರ್ಥ.

ಶ್ರೀ ಆರ್.ಎಲ್. ಜಾಲಪ್ಪ:– ಸರ್ಕಾರಿ ಕಾಲೇಜಿನಲ್ಲಿ ಸೀಟ್ ಕೊಡದೆ ಮುಳುಬಾಗಿಲನವರು ರಿಜೆಕ್ಟ್ ಮಾಡಿದ್ದಾರೆ, ಮ್ಯಾನೇಜ್‌ಮೆಂಟ್ ಕೋಟಾದಲ್ಲಿ ಸೀಟು ಪಡೆದು she has secured 17 gold medals in the convocation that was recently held. She had paid Rs. 75,000/– in 1986–87 as Donation to college. She herself has agreed. How could she get 17 Gold medals? Why such a girl was rejected a seat in the Government College? All these things are to be taken into consideration and I appeal to your sagacity to think over all these things. With these few words, I oppose this demand because sufficent funds are not provided for primary, middle and higher education, specially in rural parts. ಅವರಿಗೆ ಕುಳಿತುಕೊಳ್ಳುವುದಕ್ಕೆ ಜಾಗವಿಲ್ಲ. ಸ್ಕೂಲ್‌ಗಳು ಸೋರುತ್ತವೆ, ಒಂದೊಂದು ರೂಮಿನಲ್ಲಿ 4–4 ಕ್ಲಾಸ್‌ಗಳು ನಡೆಯುತ್ತವೆ. ಒಂದು ಕ್ಲಾಸ್‌ನಲ್ಲಿ 60–80–120 ವಿದ್ಯಾರ್ಥಿಗಳು ಇದ್ದು ಒಂದೇ ಒಂದು ರೂಮು ಇದೆ. ಉಪಾಧ್ಯಾಯರುಗಳು ಇಲ್ಲ, ನಮ್ಮ ಜಿಲ್ಲೆಯಲ್ಲಿ 1000 ಜನ ಉಪಾಧ್ಯಾಯರ ಹುದ್ದೆಗಳು ಖಾಲಿ ಇವೆ. ಇದಕ್ಕೆ ಹೆಚ್ಚಿನ ಗಮನವನ್ನು ನೀವು ಕೊಡಬೇಕು, ಅದನ್ನು ಕೊಡುತ್ತಿಲ್ಲ ಎಂದು ಈ ಬೇಡಿಕೆಯನ್ನು ಅಪೋಸ್ ಮಾಡುತ್ತೇನೆ. ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ರುಕ್ಮಯ್ಯ ಪೂಜಾರಿ (ವಿಟ್ಲ):– ಮಾನ್ಯ ಅಧ್ಯಕ್ಷರೇ, ನಾನು ಬೇಡಿಕೆಗಳ ಸಂಖ್ಯೆ: 13, 54, 16, 14, 15, 12, 11, 31 ಇದನ್ನು ವಿರೋಧಿಸುತ್ತಾ ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ನನ್ನ ಕೆಲವು ಅನಿಸಿಕೆಗಳನ್ನು ಹೇಳಲಿಕ್ಕೆ ಇಚ್ಛೆ ಪಡುತ್ತಿದ್ದೇನೆ. ಒಂದು ಒಳ್ಳೆಯ ಸಮಾಜ ನಿರ್ಮಾಣ ಆಗಬೇಕೆಂದು ಹೇಳಿದರೆ ಪ್ರಾಥಮಿಕ ಹಂತದ ಶಿಕ್ಷಣ ಸರಿಯಾಗಿ ಕೊಡುವಂಥದ್ದು ತುಂಬ ಅಗತ್ಯವೆಂದು ನಮಗೆಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ನಾವೆಲ್ಲಾ ಶಿಕ್ಷಣದ ಬಗ್ಗೆ ಬಹಳ ಮಾತನಾಡುತ್ತಿದ್ದೇವೆ. ಆದರೆ ನಿಜವಾಗಿಯೂ ಶಿಕ್ಷಣದ ವಿಧಾನ, ಶಿಕ್ಷಣ ಪದ್ಧತಿ ಏನಿದೆ ಅದನ್ನು ಪರಿವರ್ತನೆ ಮಾಡುವ ದಿಕ್ಕಿನಲ್ಲಿ ಚಿಂತನೆಯನ್ನು ಮಾಡುವುದು ಕೂಡ ತುಂಬಾ ಅಗತ್ಯವಾಗಿ ಕಂಡುಬರುತ್ತದೆ. ನಮಗೆಲ್ಲ ಗೊತ್ತಿರುವ ಹಾಗೆ ಇವತ್ತು ನಾವೆಲ್ಲ ಶಾಸಕರಾಗಿ ಬೇರೆ ಬೇರೆ ಪ್ರಾಥಮಿಕ ಶಾಲೆಗಳ ವಾರ್ಷಿಕೋತ್ಸವ ಸಮಯದಲ್ಲಿ ಭಾಗವಹಿಸುತ್ತಿದ್ದೇವೆ. ಭಾಗವಹಿಸುವಂತಹ ಸಂದರ್ಭದಲ್ಲಿ ಎಲ್ಲಾ ಶಾಲೆಗಳಿಂದ ಬರತಕ್ಕಂಥ ಮನವಿಗಳಲ್ಲಿ ಏನೂ ವ್ಯತ್ಯಾಸ ಇಲ್ಲ ಒಂದೇ ತರಹದ ಮನವಿಗಳು ಬರುತ್ತವೆ. ಅದು ಏನೆಂದರೆ ನಮ್ಮ ಶಾಲೆಗಳಲ್ಲಿ ಕೊಠಡಿ ಇಲ್ಲ, ನಮ್ಮ ಶಾಲೆಯಲ್ಲಿ ಅಧ್ಯಾಪಕರ ಕೊರತೆ ಇದೆ, ನಮ್ಮ ಶಾಲೆಯಲ್ಲಿ ಪೀಠೋಪಕರಣದ ವ್ಯವಸ್ಥೆ ಇಲ್ಲ. ಇದು ಸರ್ವೇ ಸಾಮಾನ್ಯವಾಗಿ ಎಲ್ಲಾ ಶಾಲೆಗಳಲ್ಲಿ ಬರತಕ್ಕಂಥ ಮನವಿಯ ರೀತಿಯಾಗಿದೆ.

ನಿಮಗೆ ಗೊತ್ತಿರುವ ಹಾಗೆ ಪ್ರಾಥಮಿಕ ಶಾಲೆಗಳಲ್ಲಿ ಮೂಲಭೂತ ಅವಶ್ಯಕತೆಗಳು ಕಡಿಮೆಯಾದಾಗ ಆ ಶಾಲೆಗಳಲ್ಲಿ ಯಾವ ರೀತಿ ವಿದ್ಯಾಭ್ಯಾಸ ಪಡೆಯಬಹುದು ಎಂಬುದನ್ನು ಅರಿತುಕೊಳ್ಳಬೇಗಿದೆ. ಸಣ್ಣ ಸಣ್ಣ ಪ್ರಾಯದ ಮಕ್ಕಳು ವಿದ್ಯಾಭ್ಯಾಸ ಮಾಡಬೇಕಾದರೆ ಅವರಿಗೆ ಪರಿಶುದ್ಧವಾದ ವಾತಾವರಣದಲ್ಲಿ ವಿದ್ಯಾಭ್ಯಾಸ ಮಾಡುವಂಥ ವಾತಾವರಣವನ್ನು ನಿರ್ಮಾಣ ಮಾಡಿದಾಗ ಅಂತಹ ಮಕ್ಕಳಿಂದ ಒಳ್ಳೆಯ ವಿದ್ಯಾಭ್ಯಾಸದ ನಿರೀಕ್ಷೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಸಾಮಾನ್ಯವಾಗಿ ಬರಡು ಭೂಮಿಯಲ್ಲಿ ಪ್ರಾಥಮಿಕ ಶಾಲೆಗಳು ಕಟ್ಟಲ್ಪಟ್ಟಿವೆ. ಇಂತಹ ಸಂದರ್ಭದಲ್ಲಿ ಅಲ್ಲಿಯ ಮಕ್ಕಳಿಗೆ ಯಾವ ರೀತಿಯ ವಿದ್ಯಾಭ್ಯಾಸ ಸಿಕ್ಕುವುದು ಎನ್ನುವುದನ್ನು ಪರಿಗಣಿಸುವುದು ತುಂಬಾ ಅಗತ್ಯವಾಗಿದೆ. ನನ್ನ ತಿಳಿವಳಿಕೆಯಲ್ಲಿ ಸುಂದರವಾದ, ಪರಿಶುದ್ಧವಾದ ವಾತಾವರಣ ಇದ್ದಾಗ ಮಾತ್ರ ಒಳ್ಳೆಯ ವಿದ್ಯಾಭ್ಯಾಸ ಪಡೆಯಬಹುದು. ಒಂದು ತರಗತಿಗೆ ಒಂದು ಕೊಠಡಿಯೆಂದು ಸರ್ಕಾರದ ನಿಯಮವೂ ಇದೆ. 50ಮಕ್ಕಳಿಗೆ ಒಬ್ಬರು ಅಧ್ಯಾಪಕರು ಅಗತ್ಯ. ಈಗ ಅದು ಇಲ್ಲದಿದ್ದರೂ ಕೂಡ ಇನ್ನು ಮುಂದಾದರೂ ಒಂದು ತರಗತಿಗೆ ಒಂದು ಅಧ್ಯಾಪಕರನ್ನು ನೇಮಕ ಮಾಡುವುದು ತುಂಬಾ ಅಗತ್ಯ ಇದೆ. ಇಲ್ಲದೆ ಇದ್ದರೆ ನಮ್ಮ ನಿರೀಕ್ಷೆಗೆ ತಕ್ಕ ವಿದ್ಯಾಭ್ಯಾಸ ಮಕ್ಕಳು ಪಡೆಯಲಿಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಗ್ರಾಮಾಂತರ ಶಾಲೆಗಳಲ್ಲಿ ಮರಮುಟ್ಟುಗಳು ಇಲ್ಲ. ಮತ್ತು ಶಾಲೆಯ ಪಕ್ಕ ನೀರಿನ ವ್ಯವಸ್ಥೆ ಇರಬೇಕಾದುದು ಅಗತ್ಯ ಇದೆ. ನಂತರ ಆಸುಪಾಸಿನಲ್ಲಿ ಹೂದೋಟ ನೆಡುವಂತ ವ್ಯವಸ್ಥೆ ಇದ್ದಾಗ ಅಲ್ಲಿ ಪರಿಶುದ್ಧವಾದ ವಾತಾವರಣ ನಿರ್ಮಾಣವಾಗುತ್ತದೆ. ಶಾಲೆಯಲ್ಲಿ ಹಾಜರಾತಿ ಹೆಚ್ಚು ಮಾಡುವ ದೃಷ್ಟಿಯಿಂದ ಸರ್ಕಾರ ಬೇರೆ ಬೇರೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಹಿಂದೆ ರಾಮಕೃಷ್ಣ ಹೆಗಡೆಯವರು ಇದ್ದಾಗ, ಶಾಲಾ ಮಕ್ಕಳಿಗೆ ಬಟ್ಟೆ ಪುಸ್ತಕ ಕೊಡುವ ಕಾರ್ಯಕ್ರಮ ಹಾಕಿದ್ದರು. ಸನ್ಮಾನ್ಯ ಬಂಗಾರಪ್ಪನವರು ಬಂದಾಗ ಅಕ್ಷಯ ಯೋಜನೆ ಹಾಕಿಕೊಂಡಿದ್ದರು. ನಾನು ಹೇಳುವುದೇನೆಂದರೆ ಈ ಸಣ್ಣ ಪ್ರಾಯದ ಮಕ್ಕಳ ಮೇಲೆ ಈ ರೀತಿ ಪ್ರಯೋಗ ಮಾಡುವುದನ್ನು ಬಿಟ್ಟು ನಿಜವಾಗಿ ಅವರಿಗೆ ಏನು ಅವಶ್ಯಕತೆ ಇದೆ ಅದರ ಬಗ್ಗೆ ಸಂಪೂರ್ಣವಾದ ತನಿಖೆ ಮಾಡಿ, ಅವರ ಒಳಿತು, ಕೆಡಕು ಆಲೋಚನೆ ಮಾಡಬೇಕಾದ ಅಗತ್ಯ ಇದೆ. ಈ ಅಕ್ಷಯ ಯೋಜನೆ ಯಾವ ರೀತಿ ಜಾರಿಯಾಗಿದೆ ? ನಾನು ಒಂದು ಘಟನೆ ಹೇಳಬಯಸುತ್ತೇನೆ. ಮೊನ್ನೆ ಅಕ್ಟೋಬರ್ 2ನೇ ತಾರೀಖು ಗಾಂಧೀ ಜಯಂತಿ ದಿನದಂದು, ನಮ್ಮ ಕರ್ನಾಟಕ ಸರ್ಕಾರ ಬೃಹತ್ ಕಾರ್ಯಕ್ರಮದ ಅನುಷ್ಠಾನ ದಿನಾಚರಣೆ ಮಾಡಿತ್ತು. ಆ ದಿನ ಗ್ರಾಮಾಂತರ ಪ್ರದೇಶದ ಪ್ರಾಥಮಿಕ ಶಾಲೆಯ ಮಕ್ಕಳು ಮತ್ತು ತಾಯಂದಿರು ಒಂದು ಕೇಂದ್ರ ಸ್ಥಾನಕ್ಕೆ ನಡೆದು ಬರುತ್ತಾರೆ.

ಅಲ್ಲಿ ಸಂಜೆಯವರೆಗೆ ಕಾಯುತ್ತಾರೆ. ಅಲ್ಲಿ ಸಿಗುವುದು ಒಂದು ತಿಂಗಳದ್ದು ಮಾತ್ರ ಅಂದರೆ 20-24 ರೂಪಾಯಿಗಳು, ಆ ತಾಯಂದಿರಿಗೆ ಸಿಗುತ್ತದೆ. ಆದರೆ ನಾವು ಇಲ್ಲಿ ಗಮನಿಸಬೇಕಾದ್ದು ಆ 20 ರೂಪಾಯಿ ಪಡೆಯಬೇಕಾದರೆ ಎಷ್ಟು ಖರ್ಚಾಗುತ್ತದೆ ಎನ್ನುವುದನ್ನು. ಗ್ರಾಮಾಂತರ ಪ್ರದೇಶದಿಂದ ಆ ತಾಯಿ ಮತ್ತು ಮಗು ಬಸ್‌ನಲ್ಲಿ ಬರಬೇಕು. ಮಧ್ಯಾಹ್ನದ ಊಟವನ್ನು ಹೋಟೆಲ್‌ನಲ್ಲಿ ಮಾಡಬೇಕು. ಪುನಃ ಬಸ್‌ನಲ್ಲಿ ವಾಪಸ್ಸು ಹೋಗಬೇಕು. ಬಹುಶಃ ಆ ಇಪ್ಪತ್ತು ರೂಪಾಯಿಗಳನ್ನು ಖರ್ಚು ಮಾಡಿ ಮತ್ತೆ ಕೈನಿಂದ ಖರ್ಚು ಮಾಡತಕ್ಕಂಥ ಒಂದು ವ್ಯವಸ್ಥೆ ಇದು. ಇಂತಹ ಅಕ್ಷಯ ಯೋಜನೆಯಿಂದ ಏನು ಪ್ರಯೋಜನ ಎನ್ನುವುದನ್ನು ನಾವು ಅರಿತುಕೊಳ್ಳಬೇಕಾಗಿದೆ. ಯಾವುದೇ ಒಂದು ಯೋಜನೆ ಮಾಡಿದಾಗ ಹೆತ್ತವರಿಂದ ಒಂದು ಪೈಸೆ ಖರ್ಚಾಗದ ರೀತಿಯಲ್ಲಿ ಅದರ ಫಲ ಸಿಗುವಂಥ ಒಂದು ವ್ಯವಸ್ಥೆ ಮಾಡಿದರೆ ಮಾತ್ರ ಆ ಕಾರ್ಯಕ್ರಮದ ಸರಿಯಾದ ಪ್ರಯೋಜನವಾಗುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ನಾನು ಇಚ್ಛೆ ಪಡುತ್ತೇನೆ. ಮತ್ತು ಆಟದ ಬಗ್ಗೆ ಹೆಚ್ಚು ಗಮನ ಕೊಡುವುದು ಅಗತ್ಯ ಇದೆ. ಯಾವ ರೀತಿ ಶಿಕ್ಷಣದ ಬಗ್ಗೆ ಗಮನ ಕೊಡುತ್ತೇವೆಯೋ ಅದೇ ರೀತಿಯಲ್ಲಿ ಆಟದ ಬಗ್ಗೆ ಗಮನ ಕೊಡಬೇಕಾಗಿದೆ. ಮಕ್ಕಳಿಗೆ ಬೇಕಾದಂತ

ಆಟದ ಸಾಮಾನುಗಳನ್ನು ಒದಗಿಸಬೇಕು. ಸುಮಾರು ಒಂದೂವರೆ ಗಂಟೆಗಳು ಶಾಲೆಯಲ್ಲಿ ಆಟದ ವ್ಯವಸ್ಥೆ ಮಾಡಿದಾಗ ಮಕ್ಕಳು ಆಟದ ದೃಷ್ಟಿಯಿಂದಲಾದರೂ ಶಾಲೆಗೆ ಬರುತ್ತಾರೆ. ಪ್ರತಿ ಶಾಲೆಗೂ ಆಟದ ಸಾಮಾನುಗಳನ್ನು ಒದಗಿಸತಕ್ಕಂಥದ್ದು ಬಹಳ ಅಗತ್ಯ ಇದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ಯೋಗಾಸನದ ವ್ಯವಸ್ಥೆಯು ಶಾಲೆಗಳಲ್ಲಿ ಇದೆ. ಇದು ನಮ್ಮ ದೇಶದ ಕ್ರೀಡೆಯಾದರೂ ಪರದೇಶದಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ. ಮಕ್ಕಳಿಗೆ ಪ್ರಾರಂಭದಲ್ಲಿ ಯೋಗಾಸನ ತರಬೇತಿ ಕೊಡುವುದರಿಂದ ಅವರ ಆರೋಗ್ಯಕ್ಕೆ ಅಲ್ಲದೆ ಅವರ ಬುದ್ಧಿ ಶಕ್ತಿ ಹೆಚ್ಚಾಗಿ, ವಿದ್ಯಾಭ್ಯಾಸ ಚೆನ್ನಾಗಿ ಪಡೆಯಲಿಕ್ಕೆ ಸಾಧ್ಯವಿದೆ. ಇದರ ಬಗ್ಗೆಯೂ ಕೂಡ ಸರ್ಕಾರ ಗಮನ ಕೊಡುವುದು ತುಂಬ ಅಗತ್ಯವೆಂದು ನಾನು ಹೇಳಲು ಇಚ್ಛೆಪಡುತ್ತೇನೆ.

ಇವೊತ್ತು ಸರ್ಕಾರ ಒಂದು ಹೊಸ ಯೋಜನೆ ಮಾಡಿದೆ. ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 33 ಸಾವಿರ ರೂ.ನಂತೆ ಒಂದೊಂದು ಮಾದರಿ ಶಾಲೆ ಕೊಟ್ಟಿದ್ದಾರೆ. ಅದರ ಬಗ್ಗೆ ಘೋಷಣೆ ಕೂಡ ಮಾಡಿದ್ದಾರೆ. ಲಿಸ್ಟನ್ನು ಕೇಳಿದ್ದಾರೆ. ಇದು ನಿಜವಾಗಿಯೂ ಒಂದು ಉತ್ತಮವಾದ ಮಾದರಿ ಶಾಲೆ ಆಗಬೇಕಾದರೆ ಎಷ್ಟು ಕೊಠಡಿ ಬೇಕು, ಅಷ್ಟು ಕೊಠಡಿಯನ್ನು ಪೂರ್ತಿ ಕೊಡತಕ್ಕದ್ದು, ಅಧ್ಯಾಪಕರನ್ನು ಒದಗಿಸತಕ್ಕದ್ದು, ಮತ್ತು ಎಲ್ಲಾ ಅವಕಾಶಗಳನ್ನು ಒದಗಿಸುವಂತೆ ಮಾಡಬೇಕು. ಆ ರೀತಿ ಮಾಡಿದರೆ ಆಗ ನಿಜವಾದ ಮತ್ತು ಆದರ್ಶ ಶಾಲೆ ಆಗುತ್ತದೆ. ಈ ರೀತಿ ಕ್ರಮಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಅಧ್ಯಾಪಕರುಗಳ ವರ್ಗಾವಣೆಯ ಬಗ್ಗೆ ಹೇಳುವುದಾದರೆ ಒಂದು ಕಡೆ ಜಿಲ್ಲಾಪರಿಷತ್‌ನವರು ಮಾಡುತ್ತಾರೆ, ಮತ್ತೊಂದು ಕಡೆ ಸರ್ಕಾರದವರು ಮಾಡುತ್ತಾರೆ. ಇದರಿಂದ ಒಂದು ತರಹದ ಗೊಂದಲ ನಿರ್ಮಾಣವಾಗುತ್ತಿದೆ. ಸರ್ಕಾರದವರು ಮಾಡಬೇಕೋ ಇಲ್ಲಾ ಜಿಲ್ಲಾಪರಿಷತ್‌ನವರು ಮಾಡಬೇಕು ಯಾರಾದರೊಬ್ಬರು ಮಾಡಬೇಕು. ಆಗ ಮಾತ್ರ ಅಧ್ಯಾಪಕರುಗಳಿಗೆ ಇರತಕ್ಕ ಗೊಂದಲ ನಿವಾರಣೆ ಮಾಡಲು ಸಾಧ್ಯವಾಗುತ್ತದೆ.

ಇನ್ನೂ ಪ್ರೌಢಶಾಲೆಗಳ ಬಗ್ಗೆ ಹೇಳುವುದಾದರೆ ಸರ್ಕಾರಿ ಪ್ರೌಢಶಾಲೆಗಳಲ್ಲಿ ಪ್ರಯೋಗಾಲಯದ ವ್ಯವಸ್ಥೆ ಇಲ್ಲ; ಶಾಲೆಯಲ್ಲಿ ಪ್ರಯೋಗಾಲಯಗಳು ತುಂಬಾ ಮುಖ್ಯವಾದುದು. ಆದ್ದರಿಂದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಪ್ರಯೋಗಾಲಯಗಳನ್ನು ತೆರೆಯಬೇಕು.

ವಿಧಾನಸಭೆ ಶುರುವಾದ ಸಂದರ್ಭದಲ್ಲಿ ಗೌರವ ಶಿಕ್ಷಕರು, ಅರೆಕಾಲಿಕ ಶಿಕ್ಷಕರು, ಅರೆಕಾಲಿಕ ಉಪನ್ಯಾಸಕರು ಮುಂತಾದವರು ಸತ್ಯಾಗ್ರಹ ಮಾಡುತ್ತಾರೆ. ಸುಪ್ರೀಂ ಕೋರ್ಟಿನಲ್ಲಿ ತೀರ್ಪು ಆಗಿದೆ. ಆದರೂ ಅವರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿದ್ದಾರೆ. ಅಧ್ಯಾಪಕರುಗಳ ಅವಶ್ಯಕತೆ ಇದೆ. ಅವರಿಗೆ 5–6 ವರ್ಷಗಳು ಅಧ್ಯಾಪಕರಾಗಿ ಕೆಲಸ ಮಾಡಿದ ಅನುಭವ ಇದೆ. ಇಂಥವರನ್ನು ನೇಮಕಾತಿ ಮಾಡಿಕೊಂಡು ಆ ಒಂದು ಸಮಸ್ಯೆಯನ್ನು ಪೂರ್ತಿ ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ರೀತಿ ಅನುಭವ ಇದ್ದಂತವರನ್ನು ಬಿಟ್ಟು ಹೊಸಬರನ್ನು ನೇಮಕಾತಿ ಮಾಡಿಕೊಂಡರೆ ಅವರಿಗೆ ಸರಿಯಾಗಿ ಪ್ರತಿಫಲ ಸಿಗದಂತಾಗುತ್ತದೆ. ಆದ್ದರಿಂದ 100ಕ್ಕೆ ನೂರರಷ್ಟು ಈ ಗೌರವ ಶಿಕ್ಷಕರು, ಅರೆಕಾಲಿಕ ಶಿಕ್ಷಕರು ಹಾಗೂ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಈ ಸದನದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಕೇಂದ್ರ ಸರ್ಕಾರದಿಂದ ನೂರಕ್ಕೆ ನೂರರಷ್ಟು ಕಪ್ಪು ಹಲಗೆ ಯೋಜನೆಯಲ್ಲಿ ಕೊಠಡಿ ಕಟ್ಟಲಿಕ್ಕೆ ಹಣ ಬರುತ್ತದೆ. 91–92ರಲ್ಲಿ 6761 ಕೊಠಡಿಗಳಿಗೆ ಕೇಂದ್ರ ಸರ್ಕಾರದವರು ಹಣ ಒದಗಿಸಿದ್ದಾರೆ. ಆದರೆ 92–93ರಲ್ಲಿ ನೀವು ಮಾಡಿರತಕ್ಕದ್ದು ನಾಲ್ಕು ನೂರು ಶಾಲಾ ಕೊಠಡಿಗಳನ್ನು ಮಾತ್ರ. ಅದೂ [illegible] ಕೇಂದ್ರ ಸರ್ಕಾರ ಕೊಠಡಿ ಕಟ್ಟಲಿಕ್ಕೆ ಹಣ ಕೊಟ್ಟರೂ ಸಹ ಅದನ್ನು ಬೇರೊಂದು

ಕೆಲಸಗಳಿಗೆ ಏತಕ್ಕೆ ಉಪಯೋಗಿಸಿಕೊಂಡಿದ್ದೀರಿ. ನೂರಕ್ಕೆ ನೂರರಷ್ಟು ಆ ಹಣವನ ಉಪಯೋಗಿಸಿಕೊಂಡು 6761 ಶಾಲಾಕೊಠಡಿಗಳನ್ನು ನಿರ್ಮಾಣ ಮಾಡಬೇಕಾಗಿತ್ತು. ಇದನ್ನೆಲ ಯಾವಾಗ ಪೂರ್ತಿ ಮಾಡುತ್ತೀರಿ ? ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ನೀಡಬೇಕು.

ಇನ್ನು ಬಾಲವಾಡಿ ಶಿಕ್ಷಕರ ಬಗ್ಗೆ ಹೇಳುವುದಾದರೆ ಈಗಾಗಲೇ 25,000ಅಂಗನವಾಡಿ, ಬಾಲವಾ ಶಿಕ್ಷಕರುಗಳ ತರಬೇತಿಯಾಗಿದೆ. ಆದರೆ ನೇಮಕಾತಿ ಮಾಡಿಕೊಂಡಿಲ್ಲ. ನೇಮಕಾತಿ ಮಾಡಿಕೊಳ್ಳದಿದ್ದ ತರಬೇತಿ ಕೊಡುವ ಅವಶ್ಯಕತೆ ಏನು ಇತ್ತು ? ಈಗ ಬಾಲವಾಡಿ ಶಿಕ್ಷಕರ ಅವಶ್ಯಕತೆ ಬಹಳ ಇದ ಹಾಗೂ ತರಬೇತಿ ಪಡೆದಂಥ ಶಿಕ್ಷಕರೂ ಇದ್ದಾರೆ ಅವರಿಗೆ ಏನಾದರೂ ಉದ್ಯೋಗ ಕೊಡುವಂ ವ್ಯವಸ್ಥೆ ಮಾಡುತ್ತೀರಾ ಎಂದು ಈ ಸಂದರ್ಭದಲ್ಲಿ ಕೇಳಲಿಕ್ಕೆ ಇಷ್ಟಪಡುತ್ತೇನೆ.

1992–93ರಲ್ಲಿ, 30 ಸರ್ಕಾರಿ ಪದವೀಪೂರ್ವ ಕಾಲೇಜುಗಳವರು ವಿಜ್ಞಾನ ವಿಭಾಗವನ ತೆಗೆದಿದ್ದಾರೆ. ಆದರೆ, ಅದರಲ್ಲಿ ಸುಮಾರು 20 ಕಾಲೇಜುಗಳಲ್ಲಿ ಉಪನ್ಯಾಸಕರುಗಳು 10 ತಿಂಗಳಿಂ ಕೆಲಸ ಮಾಡುತ್ತಿದ್ದಾರೆ. ಆದರೆ ಅವರಿಗೆ ಸಂಬಳ ಪಾವತಿ ಮಾಡಿಲ್ಲ. ಏತಕ್ಕೆ ಮಾಡಲಿಲ್ಲ ಎಂದ ಕೇಳುತ್ತೇನೆ. ಉದಾಹರಣೆಗೆ ಬಾಲಕಿಯರ ಪದವಿಪೂರ್ವ ಕಾಲೇಜು ಬಳ್ಳಾರಿಯಲ್ಲಿ 4 ಜ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿದ್ದಾರೆ. ಶ್ರೀ ಶಿವಲಿಂಗಪ್ಪ ಎಂಬುವರು ಬೇರೆ ಕಾಲೇಜಿನಲ 20 ವರ್ಷ ಇದ್ದರು. ಅವರನ್ನು ವರ್ಗಾವಣೆ ಮಾಡಿದ್ದಾರೆ. ಈಗಾಗಲೇ ಹತ್ತು ತಿಂಗಳು ಆಯಿತು ಇದುವರೆಗೂ ಅವರಿಗೆ ಸಂಬಳ ಪಾವತಿ ಮಾಡಿಲ್ಲ. ಈ ರೀತಿ ಏತಕ್ಕೆ ಮಾಡುತ್ತಿದ್ದಾರೆ ? ಇದರ ಬ ಮಾಹಿತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಾರ್ವಜನಿಕ ಗ್ರಂಥಾಲಯದ ಬಗ್ಗೆ ಹೇಳುವುದಾದರೆ ನೀವು ಪ್ರತಿ ಮಂಡಲಗಳಲ ಸಾರ್ವಜನಿಕ ಗ್ರಂಥಾಲಯಗಳನ್ನು ಸ್ಥಾಪಿಸುವುದಕ್ಕೆ ಒತ್ತಾಯಿಸುತ್ತೀರಿ. ಸುಮಾರು 55 ಮಂಡಲಗಳಲ್ಲಿ ಗ್ರಂಥಾಲಯಗಳನ್ನು ತೆರೆದಿದ್ದೇವೆ ಎಂದೂ ಹೇಳಿದ್ದೀರಿ. ಪ್ರತಿ ಮಂಡಲಗಳಲ್ಲಿಯ ಗ್ರಂಥಾಲಯಗಳನ್ನು ತೆಗೆಯುವುದು ಅಗತ್ಯ ಇದೆ. ಗ್ರಂಥಾಲಯಗಳಲ್ಲಿ ಎಲ್ಲಾ ರೀತಿಯ ವ್ಯವಸ್ಥೆಯನ ಒದಗಿಸುವುದೂ ಕೂಡ ಅಗತ್ಯ ಇದೆ.

ಇಲ್ಲಿ ಸರ್ಕಾರ ಬೇರೆ ಬೇರೆ ಸ್ಕೀಮುಗಳನ್ನು ಹಾಕಿಕೊಂಡಿದೆ. ಬೇರೆ ಬೇರೆ ಯೋಜನೆ ಹಾಕಿಕೊಂಡಿದೆ ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರದ ಹಲವಾರು ಸ್ಕೀಮುಗಳ ಬಗ್ಗೆ ಮಾಹಿತಿ ಗೊತ್ತಿರುವುದಿಲ್ಲ ಈ ಗ್ರಂಥಾಲಯ ಕೇಂದ್ರಗಳಲ್ಲಿ ಈ ಸ್ಕೀಮುಗಳ ಬಗ್ಗೆ ಸಂಪೂರ್ಣ ಮಾಹಿತಿ ಇರತಕ್ಕಂಥ ಒಂದ ಪುಸ್ತಕ ಪ್ರಿಂಟ್ ಮಾಡಿ ಅಲ್ಲಿ ಇಟ್ಟಾಗ ಅವರಿಗೆ ಸರ್ಕಾರದ ಯೋಜನೆಗಳ ಬಗ್ಗೆ ತಿಳಿವಳಿಕೆ ಬರುತ್ತದ ಇನ್ನು ಯುವಜನ ಸೇವೆ ಇಲಾಖೆಯ ಬಗ್ಗೆ ನೀವು ವರ್ಷಕ್ಕೊಮ್ಮೆ ಯುವಜನ ಮೇಳವನ ಮಾಡುತ್ತಿದ್ದೀರಿ. ಅದಕ್ಕೆ ಗ್ರಾಮಾಂತರ ಪ್ರದೇಶದಿಂದ ಬೇರೆ ಬೇರೆ ಜಾನಪದ ಕಲೆ. ಇದರ ಬಗ್ಗೆ ಕೂ ಪರಿಶೀಲನೆ ನಡೆಯುತ್ತಿದೆ. ಆದರೆ ಇಲ್ಲಿ ತೀರ್ಪು ಕೊಡುವಂಥ ಸಂದರ್ಭದಲ್ಲಿ ಆಯಾ ಕಲೆಯಲ್ಲಿ ಅನುಭವ ಇರತಕ್ಕಂಥವರನ್ನು ತೀರ್ಪುಗಾರರನ್ನಾಗಿ ಮಾಡಬೇಕಾಗುತ್ತದೆ. ಮಾಡಿದ ನಂತರ ಯಾರ ಅದರಲ್ಲಿ ಪ್ರತಿಭೆಯನ್ನು ಪಡೆದು ಮೊದಲ ಬಹುಮಾನವನ್ನು ಪಡೆಯುತ್ತಾರೆ, ಕೇವಲ ಬಹುಮಾ ಕೊಡುವಂಥದ್ದಲ್ಲ, ಮುಂದೆ ಅವರಿಗೆ ಪ್ರೋತ್ಸಾಹ ಕೊಡುವಂಥ ದೃಷ್ಟಿಯಿಂದಲೂ ಕೂಡ ವಿಚಾ ಮಾಡುವುದು ತುಂಬ ಅಗತ್ಯ ಇದೆ. ಮತ್ತು ಈ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕೆಂದು ಹೇಳುತ್ತೇನೆ ನಮ್ಮ ಜಿಲ್ಲೆಯಲ್ಲಿ ಮುಖ್ಯವಾಗಿ ಯಕ್ಷಗಾನ ಬಯಲಾಟ ಬಹಳ ಪ್ರಸಿದ್ಧವಾಗಿದೆ. ಗ್ರಾಮಾಂತ ಪ್ರದೇಶದಲ್ಲಿರತಕ್ಕಂಥ ಜನರಿಗೆ ಮುಖ್ಯವಾಗಿ ಹಿಂದಿನ ಮಹಾಭಾರತ ಅಥವಾ ರಾಮಾಯಣ ಮತ್ತು ಹಿಂದಿನ ಹಲವಾರು ಕತೆಗಳ ಬಗ್ಗೆ ಗೊತ್ತಿರುವಂಥದ್ದು ಯಾವುದು ಪುಸ್ತಕಗಳನ್ನು ಓದಿದರೂ ತಿಳಿಯುವುದಿಲ್ಲ. ಅದು ಯಕ್ಷಗಾನ ಬಯಲಾಟದ ಮೂಲಕ ಪ್ರತಿಯೊಬ್ಬ ವ್ಯಕ್ತಿಗೂ ಕೂಡ

ವಿದ್ಯಾಭ್ಯಾಸ ಇಲ್ಲದಿದ್ದರೂ ಕೂಡ ಆ ಘಟನೆಗಳ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಇಂಥ ಸಂದರ್ಭದಲ್ಲಿ ನಮ್ಮ ಜಿಲ್ಲೆಯಲ್ಲಿರತಕ್ಕಂಥ ಯಕ್ಷಗಾನ ಬಯಲಾಟ ಯಾವುದು ಇದೆ, ಅದಕ್ಕೆ ಕೂಡ ಸರಿಯಾದ ಪ್ರೋತ್ಸಾಹವನ್ನು ಕೊಡಬೇಕು. ಇನ್ನು ವೈದ್ಯಕೀಯ ಶಿಕ್ಷಣ ಬಗ್ಗೆ ಕ್ಯಾಪಿಟೇಷನ್ ಫೀ ಯ ಬಗ್ಗೆ ನಾವು ಪ್ರತಿಸಲ ಪ್ರಸ್ತಾಪ ಮಾಡುತ್ತಿದ್ದೇವೆ. ವೈದ್ಯಕೀಯ ಶಿಕ್ಷಣವನ್ನು ಯಾರು ಪಡೆಯುತ್ತಿದ್ದಾರೆ, ಪಡೆದಂಥ ವೈದ್ಯರುಗಳಿಗೆ ಕಡಿಮ ಪಕ್ಷ ಐದು ವರ್ಷ ಗ್ರಾಮಾಂತರ ಪ್ರದೇಶಕ್ಕೆ ಹೋಗಿ ಆ ಜನರ ಸೇವೆ ಮಾಡುವಂಥ ಒಂದು ಅವಕಾಶ ಅಥವಾ ಒಂದು ವ್ಯವಸ್ಥೆ ಮಾಡುವಂಥದ್ದು ಅಗತ್ಯ ಇದೆ. ಹೆಚ್ಚಿಗೆ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಕೊನೆಯದಾಗಿ ನಾವು ಮುಖ್ಯವಾಗಿ ಪ್ರಾಥಮಿಕ ಶಾಲೆಯ ಬಗ್ಗೆ ಪುನಃ ಪುನಃ ಹೇಳುವುದೇನೆಂದರೆ, ನಮ್ಮ ದೇಶದಲ್ಲಿ ಒಂದು ಒಳ್ಳೆಯ ಸಮಾಜವನ್ನು ನಿರ್ಮಾಣ ಮಾಡಬೇಕೆಂದರೆ ಮೂಲಭೂತ ಅವಶ್ಯಕತೆಗಳನ್ನು ಪ್ರಾಥಮಿಕ ಶಾಲೆಗೆ ಒದಗಿಸಿ ಅಲ್ಲಿ ಒಳ್ಳೆಯ ಒಂದು ವಿದ್ಯಾಭ್ಯಾಸ ಕೊಡುವಂಥ ವ್ಯವಸ್ಥೆ ಮಾಡಿದಾಗ ನಿಜವಾಗಿ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಒಂದು ಕ್ರಾಂತಿಕಾರಕ ಪರಿವರ್ತನೆ ಮಾಡುವುದಕ್ಕೆ ಸಾಧ್ಯ ಇದೆ ಎಂಬುದನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಅಧ್ಯಕ್ಷರೇ, ನಾನು ಬೇಡಿಕೆ ಸಂಖ್ಯೆ 16 ರ ಬಗ್ಗೆ ಮಾತ್ರ ಮಾತನಾಡುತ್ತೇನೆ. ಕಾರಣ ಅದಕ್ಕೆ ಬೇಕಾದ ಮಾಹಿತಿಗಳು ನನಗೆ ತಲುಪಿರುವುದರಿಂದ. ಬೇರೆ ಬೇಡಿಕೆಗಳ ಬಗ್ಗೆ ನಾನು ಮಾತನಾಡುವುದಿಲ್ಲ. ಏಕೆಂದರೆ ಅದನ್ನು ನಾನು ಸಂಪೂರ್ಣ ವಿರೋಧ ಮಾಡುತ್ತೇನೆ. ಬೇಡಿಕೆ ಸಂಖ್ಯೆ 16 ರ ಬಗ್ಗೆಯೂ ತಮ್ಮ ಕಾರ್ಯಕ್ರಮ ಏನಿದೆ ಈ ವರ್ಷ, ಅದನ್ನು ನಾನು ಸಂಪೂರ್ಣ ವಿರೋಧ ಮಾಡಬೇಕಾಗಿ ಬಂದಿದೆ. ಸಭಾಧ್ಯಕ್ಷರೇ, ತಮಗೆ ನೆನಪಿರಬೇಕು. ಈ ಸದನದಲ್ಲಿ ಬೆಂಗಳೂರು ನಗರಕ್ಕೆ ಚಕ್ರ ರಸ್ತೆ, ಚಕ್ರ ರೈಲು, ಭೂಮಿ ಕೆಳಗಡೆ ಸುರಂಗ ತೋಡಿ ರೈಲು ಓಡಿಸುವಂಥ ಕಾರ್ಯಕ್ರಮ ಬಂದಾಗ, ನಾನು ಪದೇ ಪದೇ ಎದ್ದು ನಿಂತು ವಿರೋಧ ಮಾಡುತ್ತಿದ್ದೆ. ಆಗ ಸನ್ಮಾನ್ಯ ಮುಖ್ಯಮಂತ್ರಿಗಳು ನನಗೆ ಒಂದು ಮಾತನ್ನು ಹೇಳಿದ್ದರು. ಸದನದಲ್ಲಿ ಕನಿಷ್ಠ ಶಿಸ್ತು ಇರಬೇಕು ಎಂದು. ನಾನು ಅದೇ ಮಾತನ್ನು ಈಗ ಹೇಳುವುದಕ್ಕೆ ಎದ್ದು ನಿಂತಿರುವುದು.

5.15 ಪಿ.ಎಂ.

ಒಂದು ರಾಜ್ಯದ ವ್ಯವಸ್ಥೆಯಲ್ಲಿ ಕನಿಷ್ಟ ಶಿಸ್ತು ಇರಬೇಕು. ಈ ಸರ್ಕಾರಕ್ಕೆ ಶಿಸ್ತು ಹೇಳುವುದಕ್ಕೋಸ್ಕರ ನಾನು ಎದ್ದು ನಿಂತಿದ್ದೇನೆ. 1991–92ನೇ ಬಜೆಟ್ ಅಧಿವೇಶನದಲ್ಲಿ ನಾನು ಒಂದು ಪ್ರಶ್ನೆಯನ್ನು ಹಾಕಿದ್ದೆ ಯಾವಾಗ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಶಾಲೆಗಳಿಗೆ, ಪ್ರತಿ ತರಗತಿಗೆ ಒಂದು ಕೊಠಡಿ, ಪ್ರತಿ ತರಗತಿಗೆ ಒಬ್ಬ ಶಿಕ್ಷಕನನ್ನು ಕೊಡುತ್ತೀರಿ ಎಂದು. ಇದೇ ಶಿಸ್ತನ್ನು ಹೇಳುವಂತ ಮಾನ್ಯ ಮುಖ್ಯಮಂತ್ರಿಗಳು ಆಗ ಶಿಕ್ಷಣ ಮಂತ್ರಿಗಳಾಗಿದ್ದರು. ಆಗ ನನಗೆ ಹೇಳಿದ್ದರು, ಮೇ 92ರೊಳಗೆ ಈ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು. ಮತ್ತೆ 1992–93ರಲ್ಲಿ ಅದೇ ಪ್ರಶ್ನೆಯನ್ನು ಹಾಕಿದೆ. ಆಗ ಅವರು ತೊದಲುವುದಕ್ಕೆ ಶುರು ಮಾಡಿದರು. ಅದು ದಾಖಲೆಯಲ್ಲಿ ಇದೆ. 1992–93ರಲ್ಲಿ ಹೇಳಿದ್ದೂ ದಾಖಲೆಯಲ್ಲಿ ಇದೆ, ಅವರ ತೊದಲು ಉತ್ತರ ಸಹ ದಾಖಲೆಯಲ್ಲಿ ಇದೆ. ಮತ್ತು ಈ ವರ್ಷ ಅವರ ಭಾಷಣದಲ್ಲಿ ಹೇಳುತ್ತಾರೆ, ಪ್ಯಾರಾ 81ರ ಪ್ರಾರಂಭದಲ್ಲಿ.

"ಕ್ರಿ.ಶ. 2000 ದ ವೇಳೆಗೆ ಒಂದು ತರಗತಿಗೆ ಕನಿಷ್ಠ ಒಂದು ಕೊಠಡಿ ಮತ್ತು ಒಬ್ಬ ಶಿಕ್ಷಕ ದೊರೆಯುವಂತೆ ಮಾಡುವುದು ಸರ್ಕಾರದ ಪ್ರಯತ್ನವಾಗಿರುತ್ತದೆ."

ಏನು ಶಿಸ್ತು ಇದೆ ಈ ಸರ್ಕಾರದಲ್ಲಿ? ಎಂದು ನಾನು ಕೇಳುತ್ತೇನೆ. ಕ್ರಿ.ಶ. 2000 ಏನು ಇದೆ, -ಗಲೂ ನಿಮಗೆ ಕೊಡುವುದಕ್ಕಾಗುವುದಿಲ್ಲ ಎಂದು ನಾನು ನಿಮಗೆ ಹೇಳುತ್ತಿದ್ದೇನೆ. ಅದಕ್ಕೆ ಕಾರಣ

ಒಂದು ದೇಶದ ವ್ಯವಹಾರದಲ್ಲಿ ಯಾವ ವಿಚಾರಕ್ಕೆ ಪ್ರಾಮುಖ್ಯತೆ ಕೊಡಬೇಕು ? ಯಾವ ವಿಚಾರಕ್ಕೆ ಆದ್ಯತೆಯನ್ನು ಕೊಡಬೇಕು ಎನ್ನುವುದರ ಬಗ್ಗೆ ಈ ಸರ್ಕಾರದಲ್ಲಿ ಶಿಸ್ತು ಇಲ್ಲ. ಆ ಕಾರಣ ಈ ಆಯವ್ಯಯದಲ್ಲಿ ಯಾವ ಯಾವ ಬಾಬ್ತುಗಳಿಗೆ ಎಷ್ಟು ಖರ್ಚು ಮಾಡುತ್ತೇವೆ, ಯಾವುದಕ್ಕೆ ಎಷ್ಟು ಪ್ರಾಮುಖ್ಯತೆ ಕೊಡುತ್ತೇವೆ. ಅದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ತಾವೇ ಆಲೋಚನೆ ಮಾಡಿದರೆ ಎರಡು ಸಾವಿರದ ಇಸವಿಗೆ ಆಗ ಎಷ್ಟು ಶಾಲೆಯ ಅಗತ್ಯತೆ ಬೀಳುತ್ತದೆ, ಅದಕ್ಕೆ ಎಷ್ಟು ಶಿಕ್ಷಕರ ಅಗತ್ಯತೆ ಬೀಳುತ್ತದೆ ? ಅದನ್ನು ತಾವು ಲೆಕ್ಕ ಹಾಕಿ ನೋಡಿದರೆ ತಮ್ಮಿಂದ ಇದು ಸಾಧ್ಯವಾಗುತ್ತದೆಯೇ ಎಂದು ಗೊತ್ತಾಗುತ್ತದೆ. ಕಳೆದ ಎರಡು ಆಯವ್ಯಯದ ಅಧಿವೇಶನದಲ್ಲಿ ಮತ್ತೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಹೋಗಲಿ ಪ್ರಾಥಮಿಕ ಮತ್ತು ಶಿಕ್ಷಣ ಇಲಾಖೆಯಲ್ಲಿ ಬೇರೆ ಸೇವಾ ನಿಯಮಾವಳಿಗಳನ್ನು ಏನಾದರೂ ರೂಪಿಸಿ, ಬೇರೆ ವೇತನ ಶ್ರೇಣಿಯನ್ನು ನಿಗದಿ ಮಾಡಿ ನಮ್ಮ ಗ್ರಾಮೀಣ ಮಕ್ಕಳಿಗೆ ಪೂರ್ತಿ ಶಿಕ್ಷಣ ಕೊಡುವಂತಹ ಕಾರ್ಯಕ್ರಮದ ಬಗ್ಗೆ ಏನಾದರೂ ಆಲೋಚನೆ ಮಾಡುತ್ತೀರಾ ಎಂದು. ಈ ಒಂದು ಕಾರ್ಯಕ್ರಮ ಮಾತ್ರ ಸಾಧ್ಯ ಎಂದು ಮನಗಂಡು ಸಭಾಧ್ಯಕ್ಷರಾದ ಮಾನ್ಯ ಕೃಷ್ಣ ಅವರೂ ಕೂಡ ಅದೇ ಪ್ರಶ್ನೆಯನ್ನು ಹಾಕಿದ್ದರು. ಸನ್ಮಾನ್ಯ ಮೊಯಿಲಿ ಅವರು ಶಿಕ್ಷಣ ಸಚಿವರು ಆಗಿದ್ದರು. ಆಗಲೂ ಅವರಿಂದ ಬಂದಿದ್ದು ತೊದಲು ಉತ್ತರ ಮಾತ್ರ. ಇವತ್ತು ಬೆಳಿಗ್ಗೆ ನಾವು ಒಂದು ಸುಪ್ರೀಂ ಕೋರ್ಟಿನ ತೀರ್ಪು ಓದುವ ಪ್ರಯತ್ನ ಮಾಡಿದೆವು. ಅಮೇರಿಕಾದ ಸುಪ್ರೀಂ ಕೋರ್ಟಿನ ತೀರ್ಪು ನಮ್ಮ ನ್ಯಾಯಾಲಯದಲ್ಲಿ ಅಳವಡಿಸಿಕೊಂಡು ಮತ್ತೆ ಇತ್ತೀಚೆಗೆ ಕೊಟ್ಟಂತಹ ತೀರ್ಪು. Miss Mohini Jain V. State of Karnataka. ಬೆಳಿಗ್ಗೆ ಓದಿದೆ. ರಿಟ್ ಪಿಟಿಷನ್ ಸಿ ನಂ: 607:92. ಇದರಲ್ಲಿ ಸುಪ್ರೀಂ ಕೋರ್ಟ್ ಹಿಂದೆ ಏನು ಹೇಳಿತ್ತು ? ಶಿಕ್ಷಣ ಮೂಲಭೂತ ಹಕ್ಕು ನಮ್ಮ ದೇಶದಲ್ಲಿ. ಅದನ್ನು ಮತ್ತೆ ಹೇಳಿದೆ. ಈಗ ಇನ್ನೊಂದು ಸಾರಿ ಮಾನ್ಯ ಶಿಕ್ಷಣ ಸಚಿವರ ಅನುಕೂಲಕ್ಕಾಗಿ ಓದಿ ಹೇಳುತ್ತೇನೆ.

ಉಪಾಧ್ಯಕ್ಷರು:– ತಾವು ಶಿಕ್ಷಣ ಸಚಿವರಿಗೆ ರೆಫರ್ ಮಾಡುವುದಾದರೆ ದಯಮಾಡಿ ಆ ಸೈಟೇಷನ್ AIR ನಲ್ಲಿ ಆಗಿದೆಯೆ ? ಲಾ ಜರ್ನಲ್‌ನಲ್ಲಿ ಅಪಿಯರ್ ಆಗಿದೆಯೆ ? ಎಂಬುದರ ಬಗ್ಗೆ ಸ್ವಲ್ಪ ಹೇಳಬೇಕು.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಸೈಟೇಷನ್ ಬೆಳಿಗ್ಗೆ ಕೊಟ್ಟಿದ್ದೇನೆ. I will read out once again. This is still an unreported judgement. ಆದುದರಿಂದ, ಪೇಜ್ ನಂಬರ್ ಹೇಳುವುದಕ್ಕಾಗುವುದಿಲ್ಲ. ಪ್ಯಾರಾ 42 in Bandhra Mukti Morcha, this court held that the right to life guaranteed by Art. 21, does take in educational facilities. Having regard to the fundamental significance of education to the life of an individual and the nation and adopting the reasoning and logic adopted in the earlier decisions of this Court referred to hereinbefore, we hold, agreeing with the statement in Bandhra Mukti Morcha that right to education is implicit in and flows from the right to life guaranteed by Art. 21.

ಇದನ್ನು ಒದಗಿಸುವಂಥ ಕರ್ತವ್ಯ ಸರ್ಕಾರದ ಮೇಲಿದೆ. ಆ ಕಾರಣ, ನಿಮ್ಮ ಈ ಆಯವ್ಯಯದಲ್ಲಿ ಯಾವ್ಯಾವುದಕ್ಕೆ ಆದ್ಯತೆ ಕೊಡಬೇಕೆನ್ನುವುದರ ಬಗ್ಗೆ ಮತ್ತೆ ಪುನರ್ವಿಮರ್ಶೆ ಮಾಡಬೇಕು. ಈ ಸರ್ಕಾರದ sense of priorities ಅದು ತಲೆಕೆಳಗಾಗಿದೆ. ಅದನ್ನು ಮತ್ತೆ ತಿರುಗು–ಮುರುಗು ಮಾಡದಿದ್ದರೆ ನೀವು ಈ ದೇಶದ ಮಕ್ಕಳಿಗೆ, ಆರ್ಟಿಕಲ್ 21ರ ಪ್ರಕಾರ ನಿಮ್ಮ ಕರ್ತವ್ಯವೇನಿದೆ, ಅದನ್ನು ಒದಗಿಸುವುದರಲ್ಲಿ ಕರ್ತವ್ಯಲೋಪಿಗಳಾಗುತ್ತಿದ್ದೀರೆನ್ನುವುದನ್ನು ತಮಗೆ ಹೇಳಬಯಸುತ್ತೇನೆ.

ಆ ಕಾರಣ, ನಾನು ನಿಮಗೆ ಪರ್ಯಾಯ ವ್ಯವಸ್ಥೆ ಬಗ್ಗೆ ಒಂದು ಸಲಹೆ ಮಾಡುತ್ತಿದ್ದೇನೆ. ನಿಮಗೋಸ್ಕರ ನಾವು ಕಾಯುವುದಕ್ಕೆ ತಯಾರಿಲ್ಲ. ನೀವು ಶಾಲೆಗಳನ್ನು ಒದಗಿಸುತ್ತಿದ್ದೀರಿ, ನಮ್ಮ ಮಕ್ಕಳಿಗೆ ಪೂರ್ಣ ಶಿಕ್ಷಣ ಕೊಡುತ್ತೀರೆನ್ನುವ ವಿಶ್ವಾಸ ನಮಗಂತೂ ಇಲ್ಲ. ನಾವು ನಿಮಗೆ ಕಾಯುವುದಕ್ಕೆ ತಯಾರಿಲ್ಲ. 1ನೇ ಜೂನ್ 1992ರಂದು ಈ ಕುರಿತು ನೀವು ಪ್ರಾಥಮಿಕ ಶಿಕ್ಷಣದ ಬಗ್ಗೆ ಒಂದು ಸರ್ಕಾರಿ ಆಜ್ಞೆ ಹೊರಡಿಸಿದ್ದೀರಿ. ಅದರಲ್ಲೂ ದೋಷಗಳಿವೆ. ಮೊದಲನೇ ಪ್ಯಾರಾದಲ್ಲಿ, 1992–93ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಆಂಗ್ಲ ಮಾಧ್ಯಮವನ್ನು ಹೊರತುಪಡಿಸಿ, ಮಕ್ಕಳ ಮಾತೃಭಾಷೆಯ ಮಾಧ್ಯಮದಲ್ಲಿ ಅಥವಾ ಕನ್ನಡ ಮಾಧ್ಯಮದಲ್ಲಿಯೇ ಒಂದರಿಂದ ನಾಲ್ಕನೇ ತರಗತಿಯವರೆಗೆ ಖಾಸಗಿ ಪ್ರಾಥಮಿಕ ಶಾಲೆಗಳನ್ನು ಆಡಳಿತ ಮಂಡಳಿಗಳು ಕೆಳಗೆ ಸೂಚಿಸಿರುವ ಷರತ್ತು ಗೊಳಪಟ್ಟು ಮತ್ತು ಪೂರ್ವಾನುಮತಿಯಿಲ್ಲದೆ ಪ್ರಾರಂಭಿಸಬಹುದು. ಇದರಲ್ಲಿ ಮೊದಲನೇ ಷರತ್ತು: ಹೀಗೆ ಪ್ರಾರಂಭಿಸಲಾದ ಶಾಲೆಗಳು ಶಾಶ್ವತವಾಗಿ ಅನುದಾನರಹಿತವಾಗಿರುತ್ತದೆ, ಆಗಬಹುದು. ನಮಗೆ ನಿಮ್ಮ ಹಣ ಬೇಡ, ನಾನು ಇದನ್ನು ಒಪ್ಪುತ್ತೇನೆ. ಆದರೆ, ಇಲ್ಲಿ ಮತ್ತೆ 4, 5, 6, 7ನೇ ಷರತ್ತಿಗೆ ಬರುತ್ತಾ, ಅನುದಾನ ಶಾಶ್ವತವಾಗಿ ಇಲ್ಲದಿರುವಂಥ ಶಾಲೆಗಳಿಗೆ ಅನುದಾನ ಸಂಹಿತೆ ನಿಯಮಗಳ ಪ್ರಕಾರ ನಡೆಯಬೇಕೆಂದು ಹೇಳುತ್ತೀರಿ. ಈ ರೀತಿ ಹೇಳುವುದಕ್ಕೆ ನಿಮಗೆ ಎಷ್ಟರಮಟ್ಟಿಗೆ ಹಕ್ಕು ಇದೆ ಎಂದು ನಾನು ಕೇಳುತ್ತಿದ್ದೇನೆ. ಮತ್ತೆ ಕೊನೆಯಲ್ಲಿ ಹೇಳುತ್ತಾರೆ: 'ಮುಂದೆ ಈ ಶಿಕ್ಷಣ ಸಂಸ್ಥೆಗಳು ಐದನೇ ತರಗತಿಯನ್ನು ಪ್ರಾರಂಭಿಸಬೇಕಾಗಿದ್ದಲ್ಲಿ ಶಿಕ್ಷಣ ಇಲಾಖೆಯಿಂದ ಪೂರ್ವಾನುಮತಿ ಅಗತ್ಯ.' What right do you have? ಏಕೆ ? ನಿಮಗೆ ಯಾವಾಗ ಹಕ್ಕು ಬರುತ್ತದೆಂದು ಹೇಳುವುದಕ್ಕೆ ಬೇರೊಂದು ವ್ಯವಸ್ಥೆ ಮಾಡಿದ್ದೇವೆಂದು ನೀವು ಸಿದ್ಧವಾಗುವುದು ? ನನಗೆ ಬೇರೊಂದು ಶಾಲೆಯಲ್ಲಿ ಪ್ರವೇಶಾಕಾಶವನ್ನು ಕೊಡುತ್ತಾರೆನ್ನುವುದಾದರೆ ಈ ಮಾತನ್ನು ನೀವು ಇಂತಹ ಶಾಲೆಗಳಿಗೆ ಉಪಯೋಗಿಸಬಹುದು. Otherwise, you have no right to put restrictions on the efforts of the citizens to exercise their own rights under art. 21. ಆ ಕಾರಣ ನಾನು ತಮಗೆ ಹೇಳುತ್ತಿರುವುದೇನೆಂದರೆ: ಈ ವರ್ಷದಿಂದ ನಾವು ಗ್ರಾಮಾಂತರ ಪ್ರದೇಶಗಳಲ್ಲಿ ನಮ್ಮ ಶಾಲೆಗಳನ್ನು ನಾವು ತೆರೆದುಕೊಳ್ಳುತ್ತೇವೆ. ಪಠ್ಯಕ್ರಮ ಏನಿದೆ, ಏನೇನು ವ್ಯವಸ್ಥೆಯನ್ನು ನಾವು ನಮ್ಮ ಮಕ್ಕಳಿಗೆ ಮಾಡಿಕೊಡಬೇಕೆನ್ನುವುದರ ಬಗ್ಗೆ ನಮ್ಮ ಮಕ್ಕಳ ಬಗ್ಗೆ ನಿಮಗಿಂತ ನಮಗೇ ಜಾಸ್ತಿ ಪ್ರೀತಿ ಇದೆ. ಆ ಕಾರಣ ನೀವು ಏನು ವ್ಯವಸ್ಥೆಯನ್ನು ಈಗ ಮಾಡಿದ್ದೀರಿ, ಅದಕ್ಕಿಂಥ ಉತ್ತಮವಾದ ವ್ಯವಸ್ಥೆ ನಾವು ಮಾಡಿಕೊಳ್ಳುತ್ತೇವೆ. ಆದರೆ, 'ಪೂರ್ವಾನುಮತಿ' ಎನ್ನುವಂಥ ಒಂದು ಪದವನ್ನು ತೆಗೆದುಹಾಕಬೇಕು. ಪೂರ್ವಾನುಮತಿಯ ಅವಶ್ಯಕತೆ ಇರಬಾರದು. ಮತ್ತು ಸ್ವಯಂಸ್ಫೂರ್ತಿಯಿಂದ ಕೆಲಸ ಮಾಡುವುದಕ್ಕೆ ಯಾವ ಶಿಕ್ಷಕರು ಬರುತ್ತಾರೆ ?

ನಿಮ್ಮ ಎಲ್ಲಾ ಬೇರೆ ನಿಯಮಗಳನ್ನು ನಾವು ಪಾಲಿಸುತ್ತೇವೆ, ಆದರೆ ನಿಮ್ಮಲ್ಲಿ ಏನು ಒಂದು ಕೊರತೆ ಇದೆ ಅದೇ ಕೊರತೆ ನಮಗೂ ಉಂಟು, ನೀವು ಏಕೆ ನಮಗೆ ಅಕ್ಷರ ಕೊಡುವುದಕ್ಕೆ ಎರಡು ಸಾವಿರ ಇಸವಿ ಎಂದು ಹೇಳುತ್ತಿದ್ದೀರೆಂದರೆ, ನಿಮ್ಮ ಹತ್ತಿರ ಹಣವಿಲ್ಲ, ಇದಲ್ಲದೆ ನಿಮಗೆ ಏನನ್ನೂ ಕೊಡುವುದಕ್ಕೂ ಹಣವಿಲ್ಲ, ಅದು ಬೇರೆ ವಿಚಾರ, ಆದರೆ ಈ ಕೊರತೆಯನ್ನು ಸ್ವಯಂಸೇವೆಯಿಂದ ಭರಿಸತಕ್ಕ ವಾತಾವರಣ ನಮಗೆ ಇದೆ, ಕೇವಲ 500 ರೂಪಾಯಿಗಳಿಗೆ ನಮ್ಮಲ್ಲಿ ಶಿಕ್ಷಕರಾಗಿ ಕೆಲಸ ಮಾಡಲು ವಿದ್ಯಾರ್ಹತೆಯನ್ನು ಪಡೆದಿರುವ ನಮ್ಮ ಹಳ್ಳಿಯ ಮಕ್ಕಳೇ ಇದ್ದಾರೆ, ಅವರನ್ನೇ ನಾವು ಕೆಲಸಕ್ಕೆ ತೊಡಗಿಸುತ್ತೇವೆ, ಈ ವರ್ಷದಿಂದ ನೀವು ಏನು ಹೊಸದಾಗಿ ಅಕ್ಷರ ಕ್ರಾಂತಿಯನ್ನು ಮಾಡುತ್ತೇವೆಂದು ಬಹಳ ದಿವಸದಿಂದ ಏನು ಹೇಳುತ್ತಾ ಬಂದಿರಿ, ಅದನ್ನು ನಾವು ಬಹಳ ದಿನಗಳ ಹಿಂದೆಯೇ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ನಾವೇ ಪ್ರಾರಂಭ ಮಾಡಬೇಕು ಎನ್ನತಕ್ಕ ತೀರ್ಮಾನಕ್ಕೆ ಬಂದಿದ್ದೇವೆ. ಆ ಕಾರಣಕ್ಕೋಸ್ಕರ ಸರ್ಕಾರಿ ಆಜ್ಞೆ ಏನಿದೆ ಅದನ್ನು ತಾವು ಸಂಪೂರ್ಣವಾಗಿ

ಮಾರ್ಪಾಟು ಮಾಡಲೇಬೇಕಾಗುತ್ತದೆ, ನಾವು ಮತ್ತೆ ನ್ಯಾಯಾಲಯಕ್ಕೆ ಹೋಗಿ ಅದನ್ನು ಮಾರ್ಪಾಟ ಮಾಡಿಸಿಕೊಂಡು ಬರತಕ್ಕ ಕೆಲಸವನ್ನು ನಮಗೆ ಕೊಡಬೇಡಿ.

ಡಾ: ಹೆಚ್.ಡಿ. ಲಮಾಣಿ (ಪ್ರಾಥಮಿಕ ಶಿಕ್ಷಣ ಸಚಿವರು):– ಸನ್ಮಾನ್ಯ ಅಧ್ಯಕ್ಷರೆ, ನಾವು ನಾಲ್ಕನೆ ತರಗತಿಯವರೆಗೆ ಯಾವುದೇ ರೀತಿಯಾದ ಕಟ್ಟುಪಾಡನ್ನು ಹಾಕಿಲ್ಲ, ಅಲ್ಲಿ ಪೂರ್ವಾನುಮತಿಯ ಅವಶ್ಯಕತೆ ಇಲ್ಲ, ನಾಲ್ಕನೇ ತರಗತಿಯವರೆಗೆ ವಿದ್ಯಾರ್ಥಿಗೆ ತನ್ನ ಮಾತೃಭಾಷೆಯಲ್ಲಿಯೇ ಶಿಕ್ಷಣವನ ಮಾಡಲಾಗುತ್ತದೆ, ಆ ರೀತಿ ಶಿಕ್ಷಣವನ್ನು ಕೊಡಬೇಕೆಂದು ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದಾರೆ ಅವರ ಅಭಿಪ್ರಾಯದಂತೆ ನಾವು ಒಪ್ಪಿಕೊಂಡು ಕೆಲಸ ಮಾಡುತ್ತಿದ್ದೇವೆ. ಇನ್ನು 5 ನೇ ತರಗತಿ ವಿದ್ಯಾರ್ಥಿ ಬಂದಾಗ medium of instruction ಅನ್ನು ಬದಲಾಯಿಸಿಕೊಳ್ಳುವುದಕ್ಕೆ ಅವನಿ ಸ್ವಾತಂತ್ರ್ಯವಿದೆ, ಆತ ಇಂಗ್ಲಿಷ್‌ನಲ್ಲಾಗಲಿ ಅಥವಾ ಕನ್ನಡದಲ್ಲಾಗಲಿ ಅಥವಾ ಇತರೆ ಯಾವುದ ಭಾಷೆಯಲ್ಲಾಗಲಿ ಅಭ್ಯಾಸ ಮಾಡಲು ಅವನಿಗೆ ಅವಕಾಶ ಇದೆ. ಅಂದರೆ ಅವನು ಮುಂದೆ ಯಾ ಕಡೆಗೆ ಹೋಗುತ್ತಾನೆ, ಯಾವ ಶಿಕ್ಷಣವನ್ನು ಪಡೆಯಬೇಕಾಗುತ್ತದೆ ಎಂಬ ದೃಷ್ಟಿಯಿಂದ ಅವನಿ ಪೂರ್ವಾನುಮತಿಯನ್ನು ಪಡೆಯಬೇಕೆಂದು ಕಂಡೀಷನ್‌ನ್ನು ಹಾಕಿದ್ದೇವೆ. ಮತ್ತೆ ಬೇರೆ ಯಾ ಉದ್ದೇಶದಿಂದಲೂ ಅಲ್ಲ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಶಿಕ್ಷಣದ ಮಾಧ್ಯಮಕ್ಕೂ ಪೂರ್ವಾನುಮತಿಗೂ ಯಾ ರೀತಿಯಲ್ಲಿ ಮತ್ತು ಹೇಗೆ ಸಂಬಂಧವನ್ನು ಕಲ್ಪಿಸುತ್ತೀರೋ ನನಗೆ ಅರ್ಥವಾಗುತ್ತಿಲ್ಲ. Right t education and the right to choose the language/ medium of education ar one and the same.

ಆ ಕಾರಣಕ್ಕೆ ಅದನ್ನು ಇಟ್ಟುಕೊಳ್ಳಲು ನಿಮ್ಮ ಹತ್ತಿರ ಯಾವ ಸಮರ್ಥನೆಯೂ ಸಹ ಇ ಆಮೇಲೆ ಮತ್ತೊಂದು ಆಶ್ವಾಸನೆಯನ್ನು ನಾನು ಕೊಡುತ್ತೇನೆ. ನಾನು ಏನು ಗ್ರಾಮಾಂತ ಪ್ರದೇಶಗಳಲ್ಲಿ ಶಾಲೆಗಳನ್ನು ತೆರೆಯಬೇಕೆಂದು ಹೇಳುತ್ತಿದ್ದೇನೋ ಅದನ್ನು ನಾವೇ ನೋಡಿಕೊಳ್ಳುತ್ತೇವ ನಾನೂ ಕೂಡ ಒಬ್ಬ ಶಿಕ್ಷಣ ತಜ್ಞ. ಕೆಲವರು ಹೇಳುತ್ತಾರೆ, 4ನೇ ತರಗತಿಯವರೆಗೆ ಮಾತೃಭಾಷೆಯ ಶಿಕ್ಷಣ ಇದ್ದರೆ ಸಾಕು. ಆಮೇಲೆ 4ನೇ ತರಗತಿಯ ನಂತರ ಇಂಗ್ಲೀಷ್ ಇರಲಿ ಎಂದು. ನಿಮಗೇನಾದರು ನಿಮ್ಮ ಮಕ್ಕಳನ್ನು ದಡ್ಡರನ್ನು ಮಾಡಬೇಕೆಂಬ ಆಸೆ ಇದ್ದರೆ ನೀವು ಇಂಗ್ಲೀಷ್ ಮಾಧ್ಯಮಕ್ಕೆ ಸೇರಿ ಇದರ ಬಗ್ಗೆ ನಾನು ಬಹಳ ಸಾರಿ ಇಲ್ಲಿ ಹೇಳಿದ್ದೇನೆ. you don't know the magic of mothe tongue.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೆ, ಪ್ರೊ: ಎಂ.ಡಿ. ನಂಜುಂಡಸ್ವಾಮಿಯವರು, ಶಿಕ್ಷ ತಜ್ಞರು, ಇದರ ಬಗ್ಗೆ ಬಹಳ ತಿಳುವಳಿಕೆ ಇರತಕ್ಕವರು, ಜೊತೆಗೆ ಕಾನೂನಿನ ಪಾಂಡಿತ್ಯವನ ಪಡೆದಿರತಕ್ಕವರು ಸುಪ್ರೀಮ್ ಕೋರ್ಟ್‌ನವರು ಇತ್ತೀಚೆಗೆ ಒಂದು ಆಜ್ಞೆಯನ್ನು ಹೊರಡಿಸಿರತ ಹಿನ್ನೆಲೆ ಏನಿರಬಹುದು ಎನ್ನುವ ಬಗ್ಗೆ ದಯಮಾಡಿ ತಿಳಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿ.

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಆಡಳಿತ ಸಂಪೂರ್ಣವಾ ಕನ್ನಡದಲ್ಲೇ ನಡೆಯಬೇಕೆಂದು ಪದೇ ಪದೇ ಸರ್ಕಾರ ಹೇಳುತ್ತಲೇ ಇದೆ. ಈಗಂತೂ ತೀವ್ರವಾ ಹೇಳುತ್ತಿದೆ, ಸರ್ಕಾರದ ಆಜ್ಞೆಗಳನ್ನೆಲ್ಲಾ ಬರುವ ಏಪ್ರಿಲ್ 1 ರಿಂದ ಕನ್ನಡದಲ್ಲೇ ಮಾಡುತ್ತೇವೆಂದ ಹೇಳುತ್ತಿದ್ದಾರೆ. ಅಂದರೆ ಮುಂದೆ ಬರುಬರುತ್ತಾ ಪೂರ್ಣವಾಗಿ ಕನ್ನಡದಲ್ಲೇ ಎಲ್ಲವ ಆಗಬೇಕೆಂದಿರುವಾಗ ನಮ್ಮ ಶಾಲೆಗಳಲ್ಲಿ 4ನೇ ತರಗತಿಯವರೆಗೆ ಕನ್ನಡ, ಅದಾದ ಮೇಲೆ ಹುಡುಗರ ಇಷ್ಟಕ್ಕೆ ಬಂದಂತೆ ಎಂದು ಹೇಳುವುದಾದರೆ, ಅವರು ಯಾವ ರೀತಿ ಕನ್ನಡದಲ್ಲಿ ಪರಿಣತರಾ

ತಜ್ಞರಾಗಿ ಕನ್ನಡದಲ್ಲಿ ಆಡಳಿತವನ್ನು ನಡೆಸುವಂಥವರು ನಮಗೆ ಸಿಕ್ಕುತ್ತಾರೆಂಬುದನ್ನು ತಾವು ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಅಧ್ಯಕ್ಷರೇ, ಆಡಳಿತವನ್ನು ನಡೆಸುವವರ, ಅಧಿಕಾರದಲ್ಲಿರುವವರ ಮನಸ್ಸೇ ಆಂಗ್ಲೋ ಇಂಡಿಯನ್ ಆದರೆ ಏನು ಮಾಡುವುದಕ್ಕಾಗುತ್ತದೆ ? Mind of the ruling class is Anglo–Indian style... ಇದಕ್ಕೇನಾದರೂ ಚಿಕಿತ್ಸೆ ಇದ್ದರೆ ಅದನ್ನು ನಾವು ಮಾಡಬೇಕು. ಇಂಗ್ಲೀಷ್‌ನಿಂದ ನಮಗೆ ಮೋಕ್ಷ ಸಿಕ್ಕುತ್ತದೆಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಶುದ್ಧ ಅವಿವೇಕತನ. ಎಲ್ಲಾ ಹಂತಗಳಲ್ಲೂ ಶಿಕ್ಷಣ ಮಾತೃಭಾಷೆಯಲ್ಲೇ ಆಗಬೇಕೆಂದು ಹೇಳುವವನು ನಾನು. ನಿಮ್ಮ ಸರ್ಕಾರೀ ಆಜ್ಞೆಯಲ್ಲಿ ಏನು ವಿರೋಧಾಭಾಸ ಇದೆ ಇದನ್ನು ದಯವಿಟ್ಟು ಸಂಪೂರ್ಣವಾಗಿ ತೆಗೆಯಬೇಕು. ಇದರಲ್ಲಿ ದಯಮಾಡುವುದೇನು ಬಂತು, ನೀವು ಇದನ್ನು ತೆಗೆಯಲೇಬೇಕು. as a matter of duty you have to remove it....

ಇದನ್ನು ನೀವು ಮಾಡದಿದ್ದರೆ ಇದರ ಬಗ್ಗೆಯೇ ನಾವು ಒಂದು ಚಳುವಳಿಯನ್ನು ಮಾಡಬೇಕಾಗುತ್ತದೆ. ಶಾಲೆಗಳನ್ನು ಸ್ಥಾಪನೆ ಮಾಡುವ ಬಗ್ಗೆ ಚಳುವಳಿ ಎಂದರೆ ಮಕ್ಕಳನ್ನು ನಾವು ಇಲ್ಲಿಗೆ ಕರೆದುಕೊಂಡು ಬರಬೇಕಾಗುತ್ತದೆ. ಅವರ ಶಿಕ್ಷಣವನ್ನು ಪಡೆಯುವ ಹಕ್ಕು ಏನಿದೆ ಅದನ್ನು ಮೊಟಕು ಮಾಡುವ ಹಕ್ಕು ನಮಗೆ, ನಿಮಗೆ ಯಾರಿಗೂ ಇಲ್ಲ. ನಾನು ಕೇವಲ ಇದರ ಬಗ್ಗೆಯೇ ಮಾತನಾಡಬೇಕೆಂದಿದ್ದೆ. ಆದರೆ ನಮ್ಮ ವಿರೋಧಪಕ್ಷದ ಮಾನ್ಯ ಉಪ ನಾಯಕರು ಇತ್ತೀಚಿನ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟಿನ ಬಗ್ಗೆ ಮಾತನಾಡಬೇಕೆಂದು ಹೇಳುತ್ತಿದ್ದಾರೆ. ನಾನು ಶಿಸ್ತಿನ ಮನುಷ್ಯ. ವೈದ್ಯಕೀಯ ಶಿಕ್ಷಣದ ಬಗ್ಗೆಯೇ ನಾನು ಸಭಾತ್ಯಾಗವನ್ನು ಮಾಡಿದವನು. ಆದುದರಿಂದ ಮಾನ್ಯ ಸಿಂಧ್ಯರವರು ಮನ್ನಿಸಬೇಕು, ನಾನು ಮಾತನಾಡುವುದಿಲ್ಲ.

† ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ):– ಮಾನ್ಯ ಅಧ್ಯಕ್ಷರೆ, ಇಷ್ಟು ಬೇಗ ನಾನು ಮಾತನಾಡುವುದಕ್ಕೆ ಅವಕಾಶ ಬರುತ್ತದೆಂದು ನಾನು ತಿಳಿದಿರಲಿಲ್ಲ. ಆದರೂ ನನಗೆ ತಿಳಿದ ಒಂದೆರಡು ವಿಷಯಗಳನ್ನು ಸಭೆಯ ಮುಂದಿಡಬಯಸುತ್ತೇನೆ. ಶಿಕ್ಷಣದ ಬಗ್ಗೆ ಸದನದ ಮುಂದೆ ಇವತ್ತು ಮಂಡಿಸಿರತಕ್ಕ ಎಲ್ಲಾ ಬೇಡಿಕೆಗಳನ್ನೂ ಬೆಂಬಲಿಸುತ್ತಾ......

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಈಗತಾನೆ ಪ್ರಾರಂಭ ಮಾಡಿದ್ದಾರೆ, ಅವರದ್ದು ಮುಗಿಯಲಿ, ನಾನು ಕೊನೆಯಲ್ಲಿ ಮಾತನಾಡಿ ನಾಳೆಗೆ ಮುಂದುವರಿಸುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ:– ಮಾನ್ಯ ಸಿಂಧ್ಯರವರು ಪ್ರೊ: ನಂಜುಂಡಸ್ವಾಮಿಯವರಿಗೆ ವಿನಂತಿಸಿದ ವಿಚಾರದಲ್ಲಿ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟನ್ನು ಸಂಪೂರ್ಣವಾಗಿ ಅಭ್ಯಾಸ ಮಾಡುವುದಕ್ಕೆ ನನಗೂ ಆಗಲಿಲ್ಲ. ಇವತ್ತು ವಿದ್ಯಾಭ್ಯಾಸ ಎನ್ನತಕ್ಕದ್ದು ಎರಡು ಹಂತದಲ್ಲಿ ನಡೆಯುತ್ತಿದೆ. ಸರ್ಕಾರಿ ಶಾಲಾ ಕಾಲೇಜುಗಳು ಮತ್ತು ಪ್ರೈವೇಟ್ ಮ್ಯಾನೇಜ್‌ಮೆಂಟ್‌ನಲ್ಲಿ ನಡೆಯುವಂಥ ಶಾಲಾ ಕಾಲೇಜುಗಳು. ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಬರತಕ್ಕ ರಿಸಲ್ಟನ್ನೂ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನಲ್ಲಿ ನಡೆಯುವಂಥ ಶಾಲಾಕಾಲೇಜುಗಳಲ್ಲಿ ಬರುವ ರಿಸಲ್ಟನ್ನೂ ನೋಡಿದಾಗ ನಮಗನ್ನಿಸುತ್ತದೆ, ಈ ಸರ್ಕಾರೀ ಶಾಲಾ ಕಾಲೇಜುಗಳನ್ನೆಲ್ಲಾ ಮುಚ್ಚುವುದು ಬಹಳ ಒಳ್ಳೆಯದು ಎಂದು.

ಸ್ವಾಮಿ ಇಷ್ಟೊಂದು ಹಣವನ್ನು ಈ ಇಲಾಖೆಗೆ ಕೊಡುತ್ತಾ ಇರುವಾಗ ಈ ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ಬರತಕ್ಕಂಥ ಫಲಿತಾಂಶವನ್ನು ನೋಡಿದಾಗ ಅನೇಕ ಶಾಲೆಗಳಲ್ಲಿ ಜೀರೋ ಪರ್ಸೆಂಟ್. ಇದು ಏತಕ್ಕೆ ಆಗುತ್ತಿದೆ ? ಈ ಡಿಪಾರ್ಟ್‌ಮೆಂಟಿನಲ್ಲಿ ಆರ್ಮಿ ಆಫ್ ಆಫೀಸರ್ಸ್ ಇದ್ದಾರೆ. ಸಬ್ಜೆಕ್ಟ್ ಇನ್‌ಸ್ಪೆಕ್ಟರ್ಸ್ ಇದ್ದಾರೆ, ಒಂದೊಂದು ತಾಲ್ಲೂಕಿಗೆ 4–5 ಜನರು ಇದ್ದಾರೆ. ಮತ್ತೆ ಎ.ಇ.ಓ ಇದ್ದಾರೆ

ಆದರ ಮೇಲೆ ಡಿ.ಡಿ.ಪಿ.ಐ ಇದ್ದಾರೆ. ಇವರೆಲ್ಲಾ ಏನು ಮಾಡುತ್ತಿದ್ದಾರೆ. ಬರೀ ಸಂಬಳ ತೆಗೆದುಕೊಂಡು ಸಂಬಳ ಕೊಡುವುದಕ್ಕೋಸ್ಕರ ಇದ್ದಾರೆಯೇ ? ಇದರ ಬಗ್ಗೆ ಯೋಚನೆ ಮಾಡುತ್ತಾರೆಯೇ ಎಂದು ನಾವು ವಿಚಾರ ಮಾಡಿದಾಗ, ನಿಜವಾಗಿಯೂ ಕೂಡ ಈ ಒಂದು ವ್ಯವಸ್ಥೆ ಅಸ್ತವ್ಯಸ್ತವಾಗಿದೆ. ನಾನು ಮಾನ್ಯ ಮಂತ್ರಿಗಳಲ್ಲಿ ಕೈಮುಗಿದು ಪ್ರಾರ್ಥನೆ ಮಾಡುತ್ತಿದ್ದೇನೆ, ಬಹಳಷ್ಟು ಜನ ಹಳ್ಳಿಯ ಮಕ್ಕಳು ಇದರಿಂದ ವಂಚಿತರಾಗುತ್ತಿದ್ದಾರೆ. ಮತ್ತೆ ಸರಿಯಾದ ಒಂದು ಶಿಕ್ಷಣವಿಲ್ಲದೆ ಇವತ್ತಿನ ದಿವಸ ಒಂದು ಒಳ್ಳೆಯ ಸಮಾಜವನ್ನು ನಾವು ನಿರೀಕ್ಷಣೆ ಮಾಡಲಿಕ್ಕೆ ಸಾಧ್ಯವಿಲ್ಲ.

ಇನ್ನು ಉಪಾಧ್ಯಾಯರು, ಕೊಠಡಿಗಳ ಸಂಖ್ಯೆ ಇವುಗಳನ್ನು ನೋಡಿದಾಗ ಹಳ್ಳಿಗಳಲ್ಲಿ ನಾನು ಓದಿದವನು, ಒಂದು ರೂಮಿನಲ್ಲಿ 5 ಕ್ಲಾಸ್, ಒಬ್ಬನೇ ಮೇಷ್ಟ್ರು. ಪೂರ್ವದ ಕಡೆ ತಿರುಗುತ್ತಾನೆ ಒಂದು ಎರಡು ಹೇಳಿ ಎನ್ನುತ್ತಾನೆ. ಪಶ್ಚಿಮದ ಕಡೆ ತಿರುಗುತ್ತಾನೆ ಅಆಇಈ ಹೇಳು ಎನ್ನುತ್ತಾನೆ. ಇಂಥ ಸ್ಕೂಲ್‌ನಲ್ಲಿ ವಿದ್ಯಾಭ್ಯಾಸ ಮಾಡಿದಂಥ ಮಕ್ಕಳು ಹೇಗೆ ಈ ಪಟ್ಟಣದಲ್ಲಿ ಇನ್ನೂ ಮೂರು ವರ್ಷ ತುಂಬದೆ ಇರತಕ್ಕಂಥ ಮಕ್ಕಳು, ಪ್ರಿಪ್ರೈಮರಿಗೆ ಹೋಗಿ ಸೇರಿಕೊಳ್ಳುತ್ತಾರಲ್ಲ, ಅವರು ಇಂಗ್ಲೀಷ್ ಓದುವುದಕ್ಕೆ ಪ್ರಾರಂಭ ಮಾಡುವ ಹೊತ್ತಿಗೆ ನಮಗೆ ಇನ್ನು ಆಲ್ಫಬೆಟ್ಸ್ ಬರುತ್ತಿರಲಿಲ್ಲ. 5ನೇ ಕ್ಲಾಸ್‌ನಲ್ಲಿ ಇದ್ದರೂ ಸಹಿತ ನಮ್ಮ ಹಳ್ಳಿಯ ಮಾಸ್ತರು ಕಲಿಸಿಕೊಡುವುದಕ್ಕೆ ಆಗುತ್ತಿರಲಿಲ್ಲ. ಇಂಥ ಒಂದು ವ್ಯವಸ್ಥೆಯೊಳಗೆ ನೀವು ಮೆರಿಟ್ ಆಧಾರದ ಮೇಲೆ ಎಲ್ಲವನ್ನು ತೀರ್ಮಾನ ಮಾಡುತ್ತೇವೆಂದು ಹೇಳತಕ್ಕಂಥ ಸರ್ಕಾರದ ಒಂದು ಆಜ್ಞೆ ಏನಿದೆ ಇದು ನಿಜವಾಗಿಯೂ ಕೂಡ ನಮ್ಮ ದೇಶದ, ನಮ್ಮ ನಾಡಿನ ನಮ್ಮ ರೈತರಿಗೆ ಮೋಸ ಮಾಡತಕ್ಕಂಥ ಒಂದು ಕೆಲಸವೆಂದು ಹೇಳಿದರೆ ತಪ್ಪಾಗಲಾರದು. ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. 100ಕ್ಕೆ 75 ಜನ ಹಳ್ಳಿಯಲ್ಲಿ ವಾಸಮಾಡುತ್ತಿದ್ದಾರೆ. ಪ್ರತಿಯೊಂದರಲ್ಲಿಯೂ 100ಕ್ಕೆ 75 ಪರ್ಸೆಂಟ್ ನಮಗೆ ಕೊಡಿ, 18 ಪರ್ಸೆಂಟ್ ಕೊಡಬೇಕಾಗಿದ್ದರೂ 75 ಪರ್ಸೆಂಟ್ ನಮಗೆ ಕೊಡಿ, ಬ್ಯಾಕ್‌ವರ್ಡ್‌ಗೆ ಕೊಡಬೇಕಾಗಿದ್ದರೂ 75 ಪರ್ಸೆಂಟ್ ಕೊಡಿ, ಆಮೇಲೆ ಜನರಲ್ ಮೆರಿಟ್‌ಗೆ ಕೊಡಬೇಕಾದರೂ 75 ಪರ್ಸೆಂಟ್ ಕೊಡಿ. ಏತಕ್ಕೆ ಆಗಬಾರದು ? ಒಂದು ಸ್ಕೂಲ್‌ನ್ನು ಕಟ್ಟಿಸಿ ಕೊಡಿ ಎಂದರೆ ನಿಮ್ಮ ಪಾರ್ಟಿಸಿಪೇಷನ್ ಏನು ಎಂದು ಕೇಳುವಂಥ ಕಾಲ ಒಂದಿತ್ತು, ಇವತ್ತೇನೋ ಕೇಂದ್ರ ಸರ್ಕಾರದವರು ಒಂದೊಂದು ಶಾಲೆಯಂತೆ ಕೆಲವು ಕಡೆ ಅದನ್ನು ಕೊಟ್ಟು, ಏಕ ಉಪಾಧ್ಯಾಯರ ಶಾಲೆಗೆ ಬದಲಾಗಿ ಇಬ್ಬರು ಮೇಷ್ಟ್ರುಗಳು ಇರಬೇಕು, ಒಂದು ಕೊಠಡಿಯ ಬದಲಾಗಿ ಎರಡು ಕೊಠಡಿ ಇರಬೇಕು ಅನ್ನತಕ್ಕಂಥದ್ದು, ಕೆಲವು ಕಡೆ ಈ ಕಟ್ಟಡದ ಮತ್ತು ಉಪಾಧ್ಯಾಯರ ಕೊರತೆ ಈಗ ಸ್ವಲ್ಪ ನೀಗಿದಂತೆ ಕಾಣುತ್ತದೆ. ಇದಕ್ಕೆ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಆದರೆ ಮೇಷ್ಟ್ರುಗಳ ಬಗ್ಗೆ ಹೇಳಬೇಕಾದರೆ ಕೆಲವು ಮೇಷ್ಟ್ರುಗಳು ಒಳ್ಳೆಯವರಿದ್ದಾರೆ. ಕರೆಕ್ಟಾಗಿ ಬರುತ್ತಾರೆ, ಬಾಗಿಲನ್ನು ತೆಗೆಯುತ್ತಾರೆ, ಇನ್ನು ಕೆಲವರು 9 ಗಂಟೆಗೆ ಸ್ಕೂಲನ್ನು ತೆಗೆಯಬೇಕೆಂದರೆ 12 ಗಂಟೆಗೆ ಬಂದು ಬಾಗಿಲನ್ನು ತೆಗೆಯುತ್ತಾರೆ. ಒಂದು ಗಂಟೆಗೆ ಬಾಗಿಲನ್ನು ಕ್ಲೋಸ್ ಮಾಡಿಕೊಂಡು ಹೋಗುತ್ತಾರೆ. ಇದು ಏತಕ್ಕೆ ಈ ರೀತಿಯಲ್ಲಿ ಹಳ್ಳಿಕಡೆ ಆಗುತ್ತಿದೆ ದಯಮಾಡಿ ನಾನು ಮಂತ್ರಿಗಳನ್ನು ಕೇಳುತ್ತಿದ್ದೇನೆ, ಈ ಸ್ಕೂಲ್‌ಗಳನ್ನು ಪ್ರತಿ ತಿಂಗಳಾಗಲಿ, ಪ್ರತಿ ವಾರದಲ್ಲಿ ಆಗಲಿ ಹೋಗಿ ಯಾರಾದರೂ ಚೆಕ್ ಮಾಡಿದ್ದರ ಬಗ್ಗೆ ನಿಮಗೇನಾದರೂ ಮಾಹಿತಿ ಇದೆಯೇ ? ಇದ್ದರೆ ಏನು ರಿಪೋರ್ಟ್, ಇದನ್ನು ತರಿಸಿಕೊಂಡು ನಾಳೆ ರಿಪ್ಲೈ ಹೇಳಲಿಕ್ಕೆ ಸಾಧ್ಯವೇ ? ಮತ್ತೆ ಎಂತೆಂಥ ಮೇಷ್ಟ್ರುಗಳನ್ನು ಹಾಕುತ್ತಿದ್ದಿರಿ ಎಂದರೆ, ಜೂನಲ್ಲಿಡಬೇಕಾಗಿರತಕ್ಕಂಥ ಮೇಷ್ಟ್ರುಗಳನ್ನು ನಮ್ಮ ಹಳ್ಳಿಗೆ ಕಳುಹಿಸುತ್ತಿದ್ದಾರೆ. ಅವರ ಕೈಕೆಳಗೆ ತಯಾರಾದಂಥ ವಿದ್ಯಾರ್ಥಿಗಳು ಯಾವ ರೀತಿ ಶಿಕ್ಷಣ ಪಡೆಯಬೇಕು, ಯಾವ ರೀತಿ ಪಟ್ಟಣದಲ್ಲಿ ಓದಿದಂಥ ಮಮ್ಮಿ ಡ್ಯಾಡಿ ಈ ಸಂಸ್ಕೃತಿಯಲ್ಲಿ ಬೆಳೆದಂಥ ಮಕ್ಕಳ ಜೊತೆಯೊಳಗೆ ಅಮ್ಮ ಅಪ್ಪ ಎಂದು ಓದಿದಂಥ ವಿದ್ಯಾರ್ಥಿಗಳು ಇಲ್ಲಿ ಕಾಂಪಿಟೇಷನ್ ಮಾಡತಕ್ಕಂಥ ಒಂದು ಪ್ರಶ್ನೆ ಇಲ್ಲಿ ಬಂದಿದೆ. ಇದನ್ನು ಹೇಗಾದರೂ ಮಾಡಿ, ನಮಗೆ

ನೀವು ನ್ಯಾಯ ದೊರಕಿಸಿಕೊಡದೆ ಹೋದರೆ ಇವತ್ತಲ್ಲ ನಾಳೆ ಈ ರಾಜ್ಯದಲ್ಲಿ ಮತ್ತೆ ಈ ರಾಷ್ಟ್ರದಲ್ಲಿ ಕ್ರಾಂತಿಯಾಗತಕ್ಕಂಥದ್ದು ನಿಜ ಎನ್ನತಕ್ಕಂಥ ಮಾತನ್ನು ನಿಮಗೆ ಹೇಳಬೇಕಾಗುತ್ತದೆ.

ಒಬ್ಬರು ಸ್ಕೂಲ್ ಇನ್ಸ್‌ಪೆಕ್ಟರ್ ಒಂದು ಶಾಲೆಗೆ ಇನ್ಸ್‌ಪೆಕ್ಟ್ ಮಾಡಲಿಕ್ಕೆ ಹೋದರಂತೆ. ಜವಾನ ಹೇಳಿದ ಇನ್ಸ್‌ಪೆಕ್ಟರ್ ಬರುತ್ತಿದ್ದಾರೆಂದು. ಮೇಷ್ಟ್ರು ಏನು ಮಾಡಿದರು ಅಂದರೆ, ಬೇಸಿಗೆ, ಅವರೆಕಾಯಿ ಕಾಲ, ಚೆನ್ನಾಗಿ ಊಟ ಮಾಡಿದ್ದ, ಬಿಸಿಲಿನಲ್ಲಿ ಎರಡು ಮೇಲಿ ಹೋದ, ಬಿಸಿಲು ಜಾಸ್ತಿ ಆಯಿತು, ಬಟ್ಟೆ ಬಿಚ್ಚಿ ಟೇಬಲ್ ಮೇಲೆ ಮಲಗಿದ. ಜವಾನ ಬಂದು ಮೇಷ್ಟ್ರೆ ಇನ್ಸ್‌ಪೆಕ್ಟರ್ ಬರುತ್ತಿದ್ದಾರೆ ಅಂದ. ಬರಲಿ ಬಿಡು ಅಂದರು ಮೇಷ್ಟ್ರು. ಇನ್ಸ್‌ಪೆಕ್ಟರ್ ಇನ್ನೇನು ಒಳಗೆ ಬರಬೇಕು, ಅಷ್ಟರಲ್ಲಿ ಟೇಬಲ್ ಮೇಲೆ ಕುಳಿತುಕೊಂಡು ನಾನು ಇವತ್ತಿನ ದಿವಸ ಹೈಜೈನ್ ಪಾಠ ಮಾಡುತ್ತಿದ್ದೇನೆ ಎಂದ. ಇದು ನಡೆದ ಕಥೆ. ಅಂಥ ಮೇಷ್ಟ್ರು ಇದ್ದಾರೆ. ಟೇಬಲ್ ಮೇಲೆ ಕುಳಿತುಕೊಂಡು ಹೇಳಿದನಂತೆ, ಇವೆಲ್ಲ ಬೆನ್ನು ಮೂಳೆಗಳು, ಇವು ತೋಳು, ಬೆರಳುಗಳು 5, ತಲೆಬುರುಡೆ, ಇದಕ್ಕೆ ಇಂಗ್ಲಿಷ್‌ನಲ್ಲಿ ಸ್ಕಲ್; ತೊಡೆ, ಇದಕ್ಕೆ ಫೇಮರ್ ಎಂದು ಹೇಳುತ್ತಾರೆ ಅಂದ. ಹೀಗೆ ಎಲ್ಲ ಹೇಳುತ್ತಿದ್ದ, ಇನ್ಸ್‌ಪೆಕ್ಟರ್ ಒಳಗೆ ಬಂದರು. ಇನ್ಸ್‌ಪೆಕ್ಟರಿಗೆ ಸಿಟ್ಟು ಬಂತು. ಏನು ಕೆಲಸ ಮಾಡುತ್ತಿರುವುದು ಅಂದರು. ಇವತ್ತು ಹೈಜೈನ್ ಮೇಲೆ ಪಾಠ ಮಾಡುತ್ತಿದ್ದೇನೆ. ಹಾಗಾಗಿ ಹಾಗೇ ಹೇಳಿದರೆ ಗೊತ್ತಾಗುವುದಿಲ್ಲ, ಆದ್ದರಿಂದ ಪ್ರಾಕ್ಟಿಕಲ್ ಆಗಿ ತೋರಿಸುತ್ತಿದ್ದೇನೆ, ಇದು ಸ್ಕೂಲ್ ಎಂದು. ಬಹಳ ಖುಷಿ ಆಯಿತು. ವಿಸಿಟ್ ಬುಕ್ ಕೊಡಿ ಎಂದರು. ಬಹಳ ಚೆನ್ನಾಗಿ ಪಾಠ ಹೇಳುತ್ತೀರಿ ಎಂದು ಅವರಿಗೆ ಪ್ರಶಸ್ತಿ ಕೊಡಬೇಕೆಂದು ರೆಕಮಂಡ್ ಮಾಡಿ ಸೆಂಟ್ರಲ್ ಗವರ್ನಮೆಂಟ್‌ಗೆ ಹೋಯಿತು, ಪ್ರಶಸ್ತಿ ಸಿಕ್ಕಿತಂತೆ. ಇಂಥ ಮೇಷ್ಟ್ರುಗಳ ಕೈಕೆಳಗೆ ವಿದ್ಯಾಭ್ಯಾಸ ಮಾಡಿ, ಹಳ್ಳಿಯಲ್ಲಿ ಓದಿದಂಥ ಮಕ್ಕಳನ್ನು ಪಟ್ಟಣದಲ್ಲಿ ಓದಿದ ಮಕ್ಕಳ ಜೊತೆ ಕಾಂಪೀಟ್ ಮಾಡು ಎಂದರೆ ಮಾಡುವುದಕ್ಕಾಗುತ್ತದೆಯೆ ? ಈ ವ್ಯವಸ್ಥೆಯನ್ನು ನೀವು ಸರಿ ಮಾಡಬೇಕಾಗುತ್ತದೆ. ಜನತಾ ಸರ್ಕಾರದಲ್ಲಿ 40 ಮಕ್ಕಳು ಸಿಕ್ಕಿದರೆ ಸಾಕು ಸ್ಕೂಲ್ ಮಾಡಿಕೊಡುತ್ತೇವೆಂದು ಹೇಳಿದ್ದರು. ನಾನು 30–40 ಶಾಲೆಗಳನ್ನು ಮಂಜೂರು ಮಾಡಿಸಿದೆ, ಅದರಲ್ಲಿ 15 ಮಾತ್ರ ತೆರೆಯುವುದಕ್ಕೆ ಸಾಧ್ಯವಾಯಿತು. ಕಾರಣ ಮೇಷ್ಟ್ರುಗಳಿಲ್ಲ. ನಮ್ಮ ಜಿಲ್ಲೆಯಲ್ಲಿ 800 ಜನ ಮೇಷ್ಟ್ರುಗಳ ಕೊರತೆ ಇದೆ. ನನ್ನ ಕ್ಷೇತ್ರದಲ್ಲಿ 150 ಜನರ ಕೊರತೆ ಇದೆ. ಇದನ್ನು ಯಾವಾಗ ಭರ್ತಿ ಮಾಡುತ್ತೀರಿ ? ಹಿಂದೆ ಉಪಾಧ್ಯಾಯರನ್ನು ನೇಮಕ ಮಾಡುವಾಗ ನಮ್ಮ ಕ್ಷೇತ್ರಕ್ಕೂ ಮಾಡಿದ್ದರು; ಅದಕ್ಕೆ ಆ ಸರ್ಕಾರಕ್ಕೆ ಧನ್ಯವಾದಗಳನ್ನರ್ಪಿಸಬೇಕಾಗುತ್ತದೆ. ಮತ್ತೆ ಈಗ ನೀವು ನೇಮಕ ಮಾಡಬೇಕಾಗುತ್ತದೆ. ತಕ್ಷಣ ಈ ಬಗ್ಗೆ ಕ್ರಮ ತೆಗೆದುಕೊಂಡು ಮೇಷ್ಟ್ರುಗಳ ಕೊರತೆಯನ್ನು ನೀಗತಕ್ಕ ಪ್ರಯತ್ನದಲ್ಲಿ ಹೆಚ್ಚಿನ ಶ್ರಮ ವಹಿಸಬೇಕು. ಮತ್ತು ಈ ವಿದ್ಯಾ ಇಲಾಖೆಯನ್ನು ಸ್ವಲ್ಪ ಸ್ಟ್ರೀಂಲೈನ್ ಮಾಡಬೇಕಾಗುತ್ತದೆ.

ನೀವು ಮಂತ್ರಿಗಳಾಗಿ 3–4 ತಿಂಗಳಾಗಿದೆ. ತಾವು ಯಾವ ಡಿಡಿಪಿಐ. ಅಥವಾ ಎಇಓ. ಆಫೀಸಿಗೆ ಹೋಗಿ ಇನ್ಸ್‌ಪೆಕ್ಟ್ ಮಾಡಿಲ್ಲವೆಂದು ನನ್ನ ಭಾವನೆ. ಮಾಡಿದ್ದರೆ ಧನ್ಯವಾದಗಳು. ಆ ಕಡೆ ಈ ಕಡೆ ಹೋಗಬೇಕಾಗುತ್ತದೆ, ಸರ್‌ಪ್ರೈಸ್ ವಿಸಿಟ್ ಮಾಡ ಬೇಕಾಗುತ್ತದೆ. ಇದನ್ನು ಮಾಡಿ ಎಂದು ಹೇಳುತ್ತಾ, ಕಾಲೇಜು ಶಿಕ್ಷಣದಲ್ಲಿ ನಮಗೆ ಸೀಟು ಸಿಗುವುದು ಕಷ್ಟವಾಗುತ್ತದೆ. ನಂಜುಂಡಸ್ವಾಮಿಯವರೆ, ರಂಗನಾಥ್ ಅವರು ಅಗ್ರಿಕಲ್ಚರ್ ಮಿನಿಸ್ಟರ್ ಆಗಿದ್ದಾಗ ಒಬ್ಬ ಹುಡುಗನಿಗೆ 49 1/2 ಪರ್ಸೆಂಟ್ ಪಿಯುಸಿಯಲ್ಲಿ ಬಂದಿತ್ತು. ಅವನಿಗೆ ಅಗ್ರಿಕಲ್ಚರಲ್ ಕಾಲೇಜಿಗೆ ಸೇರಬೇಕೆಂದು ವ್ಯಾಮೋಹ. ರಂಗನಾಥ್ ಅವರ ಹತ್ತಿರ ಬಹಳ ಬೇಡಿಕೊಂಡೆ, ಅವರು ಬಹಳ ಪ್ರಯತ್ನ ಮಾಡಿ ಸೀಟು ಕೊಟ್ಟರು. ಐದೂ ವರ್ಷಗಳ ಅವಧಿಯಲ್ಲಿ ಆ ಹುಡುಗ ಫಸ್ಟ್‌ಕ್ಲಾಸ್ ಬಂದ. ಇದಕ್ಕೆ ಏನು ಅನ್ನುತ್ತೀರಿ ? ಮೆರಿಟ್ ಎಂದು ಅಳತೆಗೋಲು ಇಟ್ಟುಕೊಂಡಾಗ 49 1/2 ಪರ್ಸೆಂಟ್ ಬಂದ ಹುಡುಗನಿಗೆ ಸೀಟು ಸಿಗುವುದಿಲ್ಲ. 5 ವರ್ಷಗಳ ಅವಧಿಯಲ್ಲಿ ಅಗ್ರಿಕಲ್ಚರಲ್ ಕಾಲೇಜಿನಲ್ಲಿ ಅವನು ಫಸ್ಟ್‌ಕ್ಲಾಸ್ ಬಂದಿದ್ದಾನೆ.

ನಮ್ಮ ಎದುರಿಗೆ ಇಂಥ ಉದಾಹರಣೆಗಳಿರುವಾಗ ನೀವು ಕಾಂಪಿಟಿಷನ್ ರೀತಿಯಲ್ಲಿ ಮೆರಿಟ್ ಮೇಲೆ ಕೊಡುವುದಾದರೆ ಮತ್ತು ಸಿಂಧ್ಯರವರು ಹೇಳಿದಂಥ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಏನಿದೆ ಅದನ್ನು ಇಂಪ್ಲಿಮೆಂಟ್ ಮಾಡಿದರೆ, ನಿಜವಾಗಿಯೂ ಆ ತರಹ ಕಂಡೀಷನ್ ಇದ್ದರೆ ಹಳ್ಳಿಯ ಮಕ್ಕಳನ್ನು ದೇವರೇ ಕಾಪಾಡಬೇಕು.

5.45 ಪಿ.ಎಂ.

ಇಂತಹ ಒಂದು ಸನ್ನಿವೇಶದಲ್ಲಿ ನಾವು ಇದ್ದೇವೆ. ತಾವು ಈ ಶಿಕ್ಷಣ ಇಲಾಖೆಯಲ್ಲಿ ಪ್ರೈಮರಿ, ಮಿಡಲ್ ಹಾಗೂ ಹೈಸ್ಕೂಲುಗಳನ್ನು ನಿಗಾವಹಿಸಿ ನೋಡಬೇಕು. ಇನ್ನು ಉನ್ನತ ಶಿಕ್ಷಣದ ಬಗ್ಗೆ ಹೇಳಬೇಕೆಂದರೆ ತಾವು ಹೈಸ್ಕೂಲುಗಳನ್ನು ಕೇಳಿದಷ್ಟು ಕೊಡಿ. ಹರಿಜನರಿಗೆ ಕಾಲೇಜುಗಳನ್ನು ಹೈಸ್ಕೂಲುಗಳನ್ನು ಮಂಜೂರು ಮಾಡುತ್ತಿದ್ದೀರಿ. ಅವರಿಗೆ ಅನುದಾನವನ್ನು 5 ವರ್ಷ ಆದಮೇಲೆ ಕೊಟ್ಟರೆ ಆ ಹರಿಜನರು ಆ ಕಾಲೇಜು, ಹೈಸ್ಕೂಲುಗಳನ್ನು ನಡೆಸುವುದಕ್ಕೆ ಸಾಧ್ಯವೇ ಎಂದು ನೋಡಬೇಕು. ಅವರು ಎಂದು ಪ್ರಾರಂಭ ಮಾಡುತ್ತಾರೋ ಆವೊತ್ತಿನಿಂದಲೇ ಅನುದಾನ ಕೊಡಬೇಕೆಂದು ಕಾನೂನಿನಲ್ಲಿ ಇದೆ. ಆದರೆ ಅದನ್ನು ಕೊಡುತ್ತಿಲ್ಲ. ಈ ಪ್ರಶ್ನೆ ನಮ್ಮ ಮುಂದೆ ಇದೆ. ಮತ್ತೆ ನಾಗರಾಜುರವರ ಸಮಿತಿ ವರದಿ ಸರ್ಕಾರಕ್ಕೆ ಬಂದಿದೆ ಎಂದು ಕಾಣುತ್ತದೆ. ಬಂದಿದ್ದರೆ ಅದನ್ನು ನೋಡಿ. ಇವತ್ತು ಬೇಕಾದಷ್ಟು ಕಾಲೇಜು, ಹೈಸ್ಕೂಲುಗಳನ್ನು ಮಂಜೂರು ಮಾಡಿದ್ದೀರಿ. ಯಾರೋ ಕೆಲವರು ಕಾಲೇಜು, ನಡೆಸುತ್ತಿಲ್ಲ ಎಂದರೆ ಸಾರಾಸಗಟು ಅನುದಾನವನ್ನೇ ನಿಲ್ಲಿಸುವುದು ಸರಿಯಾದ ಕ್ರಮ ಅಲ್ಲ. ಕೊಟ್ಟಮೇಲೆ, ಯಾವ ಯಾವ ಕಾಲೇಜುಗಳು ಅನುದಾನಕ್ಕೆ ಒಳಪಡತಕ್ಕ ಸಂಸ್ಥೆಗಳು ಇವೆ, ಅವಕ್ಕೆ ತಕ್ಷಣದಿಂದ ಅನುದಾನ ಕೊಡಬೇಕು. ಯಾರು ಯಾರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಆ ಸಂಸ್ಥೆಗಳ ಬಗ್ಗೆ ವರದಿ ತರಿಸಿಕೊಂಡು ತಕ್ಷಣ ಡೀರೆಕಗ್ನೈಸ್ ಮಾಡಿ. ಚೆನ್ನಾಗಿ ನಡೆಯುವ ಹಾಗೂ ಚೆನ್ನಾಗಿ ನಡೆಯದ ಎಲ್ಲಾ ಸಂಸ್ಥೆಗಳಿಗೆ ಒಂದೇ ನಿರ್ಧಾರ ತೆಗೆದುಕೊಳ್ಳುವ ಸರಿಯಾಗುವುದಿಲ್ಲ. ಹರಿಜನ ಗಿರಿಜನರು ನಡೆಸತಕ್ಕ ಸಂಸ್ಥೆಗಳಿಗೆ ತಕ್ಷಣ ಅನುದಾನ ಬಿಡುಗಡೆ ಮಾಡುವ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಸರ್ಕಾರಿ ಕಾಲೇಜುಗಳಲ್ಲಿ ಬರತಕ್ಕ ರಿಸಲ್ಟ್‌ಗೂ ಮತ್ತು ಪ್ರೈವೇಟ್ ಮ್ಯಾನೇಜ್‌ಮೆಂಟ್‌ನಲ್ಲಿ ಬರತಕ್ಕ ರಿಸಲ್ಟ್‌ಗೂ ಬಹಳ ವ್ಯತ್ಯಾಸ ಇದೆ. ಉನ್ನತ ಶಿಕ್ಷಣ ಮಂತ್ರಿಗಳೂ ಕೂಡ ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕೆಂದು ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ:– ಪ್ರೈವೇಟ್ ಕಾಲೇಜಿಗೆ ಬೇರೆ ರಿಸಲ್ಟ್, ಗೌರ್ನಮೆಂಟ್ ಕಾಲೇಜಿಗೇ ಬೇರೆ ರಿಸಲ್ಟ್ ಬರುವುದಿಲ್ಲ. ಎಲ್ಲಾ ಪರೀಕ್ಷೆಗಳನ್ನು ಯೂನಿವರ್ಸಿಟಿ ಮಾಡುವುದರಿಂದ ಬೇರೆ ಬೇರೆ ರಿಸಲ್ಟ್ ಹೇಗೆ ಬರುತ್ತದೆ ?

ಶ್ರೀ ಜಿ.ಎಸ್. ಶಿವನಂಜಪ್ಪ:– ಬೇರೆ ಬೇರೆ ನಡೆಸುತ್ತಾರೆ ಎಂದು ಅಲ್ಲ. ರಿಸಲ್ಟ್ ಬೇರೆ ಬೇರೆ ಬರುತ್ತಾ ಇದೆ. ಫೇಲ್ ಆಗುವಂತಹದ್ದು ಗೌರ್ನಮೆಂಟ್ ಕಾಲೇಜುಗಳಲ್ಲಿ, ಗೌರ್ನಮೆಂಟ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಜಾಸ್ತಿ ಇದೆ. ಆದರೆ ಪ್ರೈವೇಟಿನಲ್ಲಿ ರ್‍ಯಾಂಕ್ಸ್ ಕ್ಲಾಸ್‌ಗಳು ಚೆನ್ನಾಗಿ ಬರುತ್ತವೆ. ಈ ವ್ಯತ್ಯಾಸ ಏಕೆ ? ಇದಕ್ಕೆ ಕಾರಣ ಯಾರು ? ಇದು ನಿಮಗೆ ಗೊತ್ತಿಲ್ಲ. ಇವತ್ತು ಬಹಳ ಜನ ಉಪಾಧ್ಯಾಯರು, ಮಾಸ್ತರುಗಳು ಲೆಕ್ಚರರ್‌ಗಳು, ಶಾಲೆ ಕಾಲೇಜುಗಳಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸುವ ಬದಲು ಬೇರೆ ಬೇರೆ ಟ್ರೇಡ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಸಂಸ್ಥೆಯಲ್ಲಿ ಕೆಲಸ ಮಾಡುವುದಿಲ್ಲ. ಆ ಮಕ್ಕಳನ್ನು ಮನೆಗೆ ಪಾಠಕ್ಕೆ ಬನ್ನಿ ಎಂದು ಹೇಳುತ್ತಾರೆ. ಎಲ್ಲಿ ಲೋ ಪರ್ಸೆಂಟೇಜ್ ಬರುತ್ತದೆಯೋ ಅಂತಹ ಸಂಸ್ಥೆಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡರೆ ಹತೋಟಿಯಲ್ಲಿ ಇಡಬಹುದು ಎಂದು ನನ್ನ ಭಾವನೆ. ಇದರ ಬಗ್ಗೆ ತಾವು ಗಮನಿಸಬೇಕು. ಇನ್ನು ವಿಶ್ವವಿದ್ಯಾನಿಲಯಗಳ ಬಗ್ಗೆ ಹೇಳಬೇಕೆಂದರೆ, ಬಹುಶಃ ನಾವು ಮಾಡಿದ್ದು ತಪ್ಪೇನೋ ಎನಿಸುತ್ತದೆ. ಏಕೆಂದರೆ ಇವತ್ತು

ಅನುದಾನವನ್ನು ಕೊಡುತ್ತೇವೆ. ಆದರೆ ಅವುಗಳ ಆಡಳಿತದ ಅಧಿಕಾರ ನಮಗೆ ಇಲ್ಲ. ಸ್ವಾಯತ್ತತೆ ಮುಂದೆ ಇಟ್ಟುಕೊಂಡು ಸ್ವೇಚ್ಛಾಚಾರ ಮಾಡುತ್ತಿರುವ ವಿಶ್ವವಿದ್ಯಾನಿಲಯಗಳು ಇವೆ. ಅವುಗಳು ಏನು ಮಾಡಿದರೂ ಸರಿ ಎನ್ನುವುದಲ್ಲ. ಅಂತಹವಕ್ಕೆ ಅನುದಾನ ಕೊಡುವುದು ಬೇಡ. ಮೊನ್ನೆ ಬೆಂಗಳೂರು ವಿಶ್ವಾವಿದ್ಯಾನಿಲಯದಲ್ಲಿ ನಡೆದ ವಿಚಾರ ಪೇಪರ್‌ನಲ್ಲಿ ಬಂದಿದೆ. ಅದನ್ನು ನೀವು ನೋಡಿರಬಹುದು. ಎಷ್ಟು ಜನರಿಗೆ ಅಪಾಯಿಂಟ್‌ಮೆಂಟ್, ಎಷ್ಟು ಜನರಿಗೆ ಅಪ್ರೂವಲ್! ಒಂದು ಕಡೆ ಹೇಳುತ್ತೇವೆ ರೋಸ್ಟರ್ ಫಾಲೋ ಮಾಡಬೇಕು ಎಂದು. ಇವರಿಗೆ ರೋಸ್ಟರ್ ಪದ್ಧತಿ ಅನ್ವಯವಾಗುವುದಿಲ್ಲವೇ? ಇದೆಲ್ಲಾ ನೋಡಬೇಕು. ಬಹಳ ವಿಶ್ವವಿದ್ಯಾನಿಲಯಗಳು ರಾಜಕೀಯ ಕೇಂದ್ರಗಳಾಗಿವೆ ಎಂದರೆ ತಪ್ಪಾಗಲಾರದು. ಅಲ್ಲಿ ಮಾಸ್ಟರ್ಸ್, ಟೀಚರ್ಸ್ ಲೆಕ್ಚರರ್ಸ್ ಏನಿದ್ದಾರೆ ಅವರೇ ಅರ್ಧ ಮಕ್ಕಳನ್ನು ಕೆಡಿಸತಕ್ಕ ಪರಿಪಾಠ ಇದೆ. ನಾನು ಸ್ವಾತಂತ್ರ್ಯ ಬರುವುದಕ್ಕಿಂತಲೂ ಮುಂಚೆ ಶಾಲೆಯಲ್ಲಿ ಓದಿದವನು. ಇವತ್ತು ತೊಂದರೆ ಏನು ಇದೆ ಎಂದರೆ, ನಾವು ಓದುವಾಗ ನೀತಿ ಚಿಂತಾಮಣಿ ಇತ್ತು. ನಮ್ಮ ಮಕ್ಕಳಿಗೆ ಇವತ್ತು ನೀತಿ ಏನೂ ಬೇಡ. ಈಗ ನಾವು ಬಿಗಿನಿಂಗ್‌ನಲ್ಲೇ ದಾರಿ ತಪ್ಪಿದ್ದೇವೆ. ಇನ್ನು ಹೇಗೆ ವಿದ್ಯೆ ಬರುತ್ತದೆ? ನಾವು ಮೊದಲ ಕ್ಲಾಸ್‌ನಲ್ಲಿ ಓದುವಾಗ, 'ಶಂಕರ' ಗುರುಗಳು ಬರುತ್ತಿದ್ದಾರೆ, ಎದ್ದು ನಿಲ್ಲು; ಕೈಮುಗಿ, ಸ್ವಾಗತಿಸು, ಕುಳಿತುಕೋ, ಪಾಠ ಓದು ಎನ್ನುವುದಿತ್ತು.

ಈಗ ಸ್ವಾತಂತ್ರ್ಯ ಬಂದಿದೆ. ಕಾಲ ಬದಲಾಗಿದೆ, ಗುರುಗಳೇ, ವಿದ್ಯಾರ್ಥಿಗಳು ಬರುತ್ತಿದ್ದಾರೆ ಒಳಗೆ ಕರೆಯಿರಿ ಕೈಮುಗಿಯಿರಿ ಕೂಡಿಸಿ ಅವರನ್ನು ಮಾತನಾಡಿಸಬೇಡಿ ಓದಿದರೆ ಓದಿಸಿ ಇಲ್ಲವೆಂದರೆ ಆಚೆಗೆ ಕಳುಹಿಸಿ ಎನ್ನತಕ್ಕ ಪರಿಸ್ಥಿತಿ ಬಂದಿದೆ. ಇಂತಹ ಮಕ್ಕಳಿಂದ ಇಂತಹ ವಿದ್ಯಾಭ್ಯಾಸದಿಂದ ನಮ್ಮ ನಾಡಿನ ನಮ್ಮ ರಾಜ್ಯದ ಒಂದು ಜನಾಂಗವನ್ನು ಉತ್ತಮಪಡಿಸುತ್ತೇವೆಂದು ಹೇಗೆ ಹೇಳುತ್ತೀರೆಂದು ಪ್ರಶ್ನೆಯನ್ನು ನಾನು ವಿದ್ಯಾ ಸಚಿವರಿಗೆ ಕೇಳುತ್ತೇನೆ.

ಉಪಾಧ್ಯಕ್ಷರು:– ಮಾನ್ಯ ಶಿವನಂಜಪ್ಪನವರೇ, ಇನ್ನು ಬಹಳ ಜನ ಮಾತನಾಡುವವರು ಇದ್ದಾರೆ. ತಾವು ಬೇಗ ಮುಗಿಸಿ.

ಶ್ರೀ ಜಿ.ಎಸ್. ಶಿವನಂಜಪ್ಪ:– ನಾನು ತಯಾರಾಗಿ ಬರಲಿಲ್ಲ, ನಾನು ಕುಳಿತುಕೊಳ್ಳುತ್ತಿರಲಿಲ್ಲ. ಆದರೂ ಹೇಳುತ್ತಿದ್ದೇನೆ. ವಯಸ್ಕರ ಶಿಕ್ಷಣ ಖಾತೆಯನ್ನು ನಮ್ಮ ರಾಣಿಯವರಿಗೆ ಕೊಟ್ಟಿದ್ದಾರೆ. ಬಹುಶಃ ಅವರು ಈ ಇಲಾಖೆಯನ್ನು ಅರ್ಥಮಾಡಿಕೊಂಡಿದ್ದಾರೋ ಏನೋ ಗೊತ್ತಿಲ್ಲ. ವಯಸ್ಕರ ಶಿಕ್ಷಣ ಸಮಿತಿ ಮೈಸೂರು ಅದರ ಗತಿ ಏನಾಯಿತು? ಇದರ ಬಗ್ಗೆ ಹೊರದೇಶಗಳಿಂದ ಡೆನ್ಮಾರ್ಕ್‌ನಿಂದ ಬೇಕಾದಷ್ಟು ಹಣ ಬಂದಿದೆ. ಸರಿಯಾಗಿ ನಡೆಸುತ್ತಿದ್ದಾರೆಯೆ? ಹಣ ಏನಾಯಿತು? ಇದರ ಬಗ್ಗೆ ತಾವು ಉತ್ತರ ಕೊಡಬೇಕು. ಸಾಕ್ಷರತೆಯ ಬಗ್ಗೆ ಕೇಂದ್ರ ಸರ್ಕಾರದಿಂದ ನಮ್ಮ ಜಿಲ್ಲೆಗೆ 3 ಕೋಟಿ ರೂಪಾಯಿ ಬಂದಿದೆ. ಅದೇ ರೀತಿ ಐದಾರು ಜಿಲ್ಲೆಗಳಿಗೆ ಸಾಕ್ಷರತಾ ಕಾರ್ಯಕ್ರಮ ಮಾಡುತ್ತಿದ್ದಾರೆ. ಇದು ಒಳ್ಳೆಯ ಕೆಲಸ. ಸ್ವಾತಂತ್ರ್ಯ ಬಂದ ಮೇಲೆ ಎಲ್ಲರಿಗೂ ವಿದ್ಯೆ ಸಿಗಬೇಕು ಆ ದೃಷ್ಟಿಯೊಳಗೆ ಯಾರು ಇದುವರೆಗೆ 9 ರಿಂದ 45 ವರ್ಷದ ತನಕ ವಿದ್ಯೆಯಿಂದ ವಂಚಿತರಾಗಿದ್ದಾರೆ ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕೆನ್ನುವ ಕಾರಣದಿಂದ ಒಂದು ಸ್ಕೀಮ್ ತಂದಿದ್ದಾರೆ. ನಾವು ಪದೇ ಪದೇ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಇದರಲ್ಲಿ ಹಣ ಪೋಲಾಗುತ್ತಿದೆ. ನಿಜವಾಗಿಯೂ ಸಾರ್ವಜನಿಕ ಆಂದೋಳನವಾಗಬೇಕಾಗಿದೆ. ಇದು ದುರದೃಷ್ಟ ಅಧಿಕಾರಿಗಳ ಆಂದೋಳನವಾಗಿದೆ. ಮತ್ತೆ ಕುಷ್ಟಗಿಯಲ್ಲಿ ನಡೆದ ಒಂದು ಕಥೆಯನ್ನು ಕೇಳಿದಾಗ....

ಉಪಾಧ್ಯಕ್ಷರು:– ಮಾನ್ಯ ಸದಸ್ಯರು ಬೇಗ ಮುಗಿಸಿ. ಬಹಳ ಜನ ಮಾತನಾಡುವವರು ಇದ್ದಾರೆ. ಇನ್ನು 15 ಜನ ಮಾತನಾಡುವವರು ಇದ್ದಾರೆ. ನೀವು ಬಹಳ ಸಮಯ ತೆಗೆದುಕೊಂಡಿದ್ದೀರಿ. ಪ್ರೊಫೆಸರ್ ನಂಜುಂಡಸ್ವಾಮಿಯವರು 15 ನಿಮಿಷ ಮಾತ್ರ ತೆಗೆದುಕೊಂಡಿದ್ದಾರೆ.

ಶ್ರೀ ಜಿ.ಎಸ್. ಶಿವನಂಜಪ್ಪ:– ನಾನು ಬೇಗ ಪೂರೈಸುತ್ತೇನೆ. ಸಾಕ್ಷರತೆಯ ರಿಸಲ್ಟ್ ಏನು ? ಎಷ್ಟು ಪರ್ಸೆಂಟೇಜ್ ಆಗಿದೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ? ಅದರ ಬಗ್ಗೆ ತಾವು ವರದಿ ಕೊಡಬೇಕು. ಇದರಿಂದ ನಾವು ಹೆಚ್ಚಿನ ನಿರೀಕ್ಷೆ ಮಾಡಿದ್ದೇವೆ. ನನ್ನ ತಾಲ್ಲೂಕಿನಲ್ಲಿ ಸಮರ್ಪಕವಾಗಿ ಆಗಿದೆ. ವಿದ್ಯಾಪೀಠಗಳೆಂದು ಸುಮಾರು 16 ವಿದ್ಯಾಪೀಠಗಳು ಇವೆ. ಆವೊತ್ತಿನಿಂದ ಇವತ್ತಿನವರೆಗೆ ಎಷ್ಟು ಹಣವನ್ನು ಒದಗಿಸಲಾಗಿತ್ತು ? ಕಟ್ಟಡಗಳ ಗತಿ ಏನಾಗಿದೆ ? ಯಾವ್ಯಾವ ಬಾಬ್ತಿಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ? ಏನಾದರೂ ಕೆಲಸ ನಡೆದಿದೆಯೆ ? ಅಂತಹದ್ದು ಎಲ್ಲೂ ನಡೆದಿಲ್ಲ. ಅದರ ಕಡೆಗೆ ಹೆಚ್ಚಿನ ಗಮನಹರಿಸಬೇಕೆಂದು ಹೇಳುತ್ತೇನೆ. ಸಮಯ ಬಂದರೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ನಮ್ಮ ನಂಜುಂಡಸ್ವಾಮಿಯವರ ಜೊತೆ ಸೇರಿ ಅದನ್ನು ಓದಿ ಮತ್ತೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು:– ಮಾನ್ಯ ಶಿವಾನಂದ ಕೌಜಲಗಿಯವರು ತಮ್ಮ ಭಾಷಣ ಶುರು ಮಾಡಿ. ಮುಂದೆ ಮಾತನಾಡತಕ್ಕವರು ಚಿಕ್ಕದಾಗಿ ಚೊಕ್ಕವಾಗಿ ಮಾತನಾಡಿ ದಯಮಾಡಿ ಸಹಕರಿಸಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ:– ನಮ್ಮ ಪಕ್ಷಕ್ಕೆ ಕೊಟ್ಟಂಥಹ ವೇಳೆಯಲ್ಲಿ ನಾವು ಎಲ್ಲಾ ಮುಗಿಸುತ್ತೇವೆ. ನಾವು ಜಾಸ್ತಿ ಸಮಯ ತೆಗೆದುಕೊಳ್ಳುವುದಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ:– ನಾನು ಇನ್ನು ಮುಗಿಸಿಲ್ಲ. ತಮಗೆ ಧನ್ಯವಾದಗಳನ್ನು ಹೇಳಬೇಕು. ತಾವು ಬೇರೆಯವರ ಹೆಸರು ಕರೆದಿರಿ ಇದು ಹೇಗೆ ?

ಉಪಾಧ್ಯಕ್ಷರು:– ತಾವು ಕುಳಿತುಕೊಳ್ಳುವುದಕ್ಕೆ ಹೋದಿರಿ, ತಮ್ಮ ಭಾಷಣ ಮುಗಿದಿದೆ ಎಂದು ತಿಳಿದು ಬೇರೆಯವರನ್ನು ಕರೆದಿದ್ದೇನೆ. ತಾವು ಜಾಗ್ರತೆ ಮುಗಿಸಿ.

ಶ್ರೀ ಜಿ.ಎಸ್. ಶಿವನಂಜಪ್ಪ:– ಈ ದಿವಸ ತಂದಿರತಕ್ಕ ಬೇಡಿಕೆಗಳನ್ನು ಮತ್ತೆ ನಾನು ಬೆಂಬಲಿ ತಾವು ಇಷ್ಟು ಹೊತ್ತು ನಾನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಎಷ್ಟು ಗಂಟೆಗೆ ಸಭೆಯನ್ನು ಮುಕ್ತಾಯ ಮಾಡುತ್ತೀರಿ ?

ಉಪಾಧ್ಯಕ್ಷರು:– ಸರ್ಕಾರದವರು ಹೇಳಿದ ಹಾಗೆ. ಇನ್ನೂ ಹತ್ತು – ಹನ್ನೆರಡು ಜನ ಮಾತನಾಡುವವರು ಇದ್ದಾರೆ. ಇನ್ನೂ ಒಂದೂ–ಒಂದೂವರೆ ಗಂಟೆ ಕುಳಿತುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್:– ತಾವು ಎಷ್ಟು ಹೊತ್ತು ಎಂದು ಹೇಳಿದರೂ ಸರಿ. ಏಳುಗಂಟೆವರೆಗೆ ಬೇಕಾದರೆ ಕುಳಿತುಕೊಳ್ಳೋಣ.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಚರ್ಚೆ ಇವತ್ತು ನಡೆಸಬೇಕೋ ಬೇಡವೋ ? ಈಗಲ್ಲದಿದ್ದರೆ ಇನ್ಯಾವಾಗ ನಾವು ಮಾತನಾಡಬೇಕು ? ಎಲ್ಲಾ ಗಿಲೇಟಿನ್‌ಗೆ ಹಾಕಬೇಕು ಅಂತೀರೇನು ?

ಶ್ರೀ ಎಸ್.ಎಂ. ಯಾಹ್ಯಾ:– ಅದಕ್ಕೆ ಏಕೆ ಕೋಪ ಮಾಡಿಕೊಳ್ಳುತ್ತೀರಿ ? ಬೇಕಾದರೆ ಒಂಬತ್ತು ಗಂಟೆವರೆಗೆ ಕುಳಿತುಕೊಳ್ಳೋಣ. ಮಾತನಾಡುವುದು ಬೇಡ ಎಂದು ನಮ್ಮ ಉದ್ದೇಶ ಅಲ್ಲ.

ಉಪಾಧ್ಯಕ್ಷರು:– ಮಾನ್ಯ ಕೌಜಲಗಿಯವರೇ, ನೀವು ಮಾತನಾಡಿ. ಏಳು ಗಂಟೆವರೆಗೆ ಕುಳಿತುಕೊಳ್ಳೋಣ.

† ಶ್ರೀ ಶಿವಾನಂದ ಹೆಚ್, ಕೌಜಲಗಿ (ಬೈಲಹೊಂಗಲ):– ಮಾನ್ಯ ಅಧ್ಯಕ್ಷರೇ, ಇವತ್ತಿನ ದಿನ

ಮಾನ್ಯ ಶಿಕ್ಷಣ ಸಚಿವರು ಹಾಗೂ ಆರೋಗ್ಯ ಸಚಿವರು, ಮೆಡಿಕಲ್ ಎಜ್ಯುಕೇಶನ್ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಎರಡು ಸಲಹೆಗಳನ್ನು ಮಾತ್ರ ಸರ್ಕಾರಕ್ಕೆ ಕೊಡಬಯಸುತ್ತೇನೆ. ಮೊದಲನೆಯದಾಗಿ ಸರ್ಕಾರದವರು ಈ ಶಿಕ್ಷಣ ಇಲಾಖೆಯ ಬಗ್ಗೆ ಯಾವುದೇ ಒಂದು ಪರ್‌ಫಾರ್ಮೆನ್ಸ್ ಬಜೆಟನ್ನು ಕೊಟ್ಟಿರುವುದಿಲ್ಲ. ಇದು ನಿಜವಾಗಿಯೂ ಖಂಡನೀಯ. ಯಾವುದೇ ಒಂದು ಇಲಾಖೆಯ ಹೋದವರ್ಷದ ಪರ್‌ಫಾರ್ಮೆನ್ಸ್ ಬಜೆಟ್ ಕೊಡದೇ ಆ ಇಲಾಖೆಯ ಬಗ್ಗೆ ಮಾತನಾಡುವುದು ಸರಿಯಾಗುವುದಿಲ್ಲ. ಏಕೆಂದರೆ ಪರ್‌ಫಾರ್ಮೆನ್ಸ್ ಬಜೆಟ್ ಇದ್ದಾಗ ಮಾತ್ರ ಈ ಇಲಾಖೆ ಹೋದವರ್ಷ ಯಾವ ಪ್ರಕಾರ ಕೆಲಸ ನಿರ್ವಹಿಸಿದೆ ಎನ್ನುವುದನ್ನು ನೋಡುವುದಕ್ಕೆ ನಮಗೆಲ್ಲರಿಗೂ ಅನುಕೂಲವಾಗುತ್ತದೆ. ಆದಕಾರಣ ನಾನು ಮೊದಲನೆಯದಾಗಿ ಪರ್‌ಫಾರ್ಮೆನ್ಸ್ ಬಜೆಟನ್ನು ಕೊಡದೇ ಇದ್ದುದರ ಸಲುವಾಗಿ ನಾನು ಸರ್ಕಾರವನ್ನು ಖಂಡಿಸುತ್ತೇನೆ. ಎರಡನೆಯದಾಗಿ, ಹೊಸ ಸರ್ಕಾರ ರಾಜ್ಯದಲ್ಲಿ ಬಂದನಂತರ ಶ್ರೀಮಾನ್ ವೀರೇಂದ್ರಪಾಟೀಲರು ಇದೇ ವಿಧಾನಸಭೆಯಲ್ಲಿ ಒಂದು ಮಾತನ್ನು ಹೇಳಿದ್ದರು. ಇವತ್ತಿನ ದಿವಸ ಹಿಂದಿನ ಸರ್ಕಾರದವರು ಕನ್ನಡ ಶಾಲೆಗಳಲ್ಲಿ ಶಿಕ್ಷಕರನ್ನು ನೇಮಿಸಿರುವುದಿಲ್ಲ. ಹೀಗಾಗಿ ವಿದ್ಯಾಸಂಸ್ಥೆಗಳು ಹಾಳಾಗುತ್ತಿವೆ, ತಕ್ಷಣ ನಾನು ಶಿಕ್ಷಕರನ್ನು ಹಾಗೂ ಡಾಕ್ಟರುಗಳನ್ನು ನೇಮಿಸಲು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಅವರು ಹೇಳಿದ್ದರು. ನಾನು ಒಂದು ಮಾತನ್ನು ಸರ್ಕಾರಕ್ಕೆ ಕೇಳುತ್ತೇನೆ. ತಾವು ಕೊಟ್ಟಂಥ ವಚನವನ್ನು ಪಾಲಿಸಿಲ್ಲ, ಏಕೆ ? ಏಕೆಂದರೆ ವೀರೇಂದ್ರ ಪಾಟೀಲರಂಥವರು ಇಲ್ಲಿ ಹೇಳಿದರು, ಹಿಂದಿನ ಸರ್ಕಾರದವರು ಶಿಕ್ಷಕರನ್ನು ನೇಮಿಸದಿದ್ದ ಕಾರಣ......

ಉಪಾಧ್ಯಕ್ಷರು:– ಸರ್ಕಾರಕ್ಕೆ ಏನು ಸಲಹೆ ಕೊಡುತ್ತೀರೋ ಕೊಡಿ. ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ. ಏಳು ಗಂಟೆವರೆಗೆ ಕುಳಿತುಕೊಳ್ಳುವುದು ಎಂದು ಹೇಳುತ್ತೀರಿ ದಯಮಾಡಿ ಸರ್ಕಾರಕ್ಕೆ ಏನು ಸಲಹೆ ಇದೆ, ಅದನ್ನು ಕೊಡಿ.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಕಡೆಯಲ್ಲಿ ಕೊಡುತ್ತೇನೆ. ಆದಕಾರಣ, ಇಲ್ಲಿಯವರೆಗೂ ಶಿಕ್ಷಕರನ್ನು ನೇಮಿಸಿಕೊಂಡಿರುವುದಿಲ್ಲ. ಇವತ್ತು 11,793 ಪ್ರಾಥಮಿಕ ಶಾಲಾ ಶಿಕ್ಷಕರ ಕೊರತೆ ಇದೆ.

11,793 ಹುದ್ದೆಗಳು ಖಾಲಿ ಇದ್ದಾಗ, ಯಾವ ಪ್ರಕಾರ, ನಮ್ಮ ಪ್ರಾಥಮಿಕ ಶಿಕ್ಷಣ ನಡೆಯುತ್ತಿದೆ ಎನ್ನುವುದನ್ನು ವಿಚಾರ ಮಾಡಬೇಕು. ಈ ಪ್ರಾಥಮಿಕ ಶಿಕ್ಷಣ ಬಹಳ ಮಹತ್ವದ್ದು. ನಮ್ಮ ಸಂವಿಧಾನದ ಪ್ರಕಾರ, 6 ರಿಂದ 13ವರ್ಷದವರೆಗೆ ಕಡ್ಡಾಯ ಶಿಕ್ಷಣ ಕೊಡಬೇಕೆಂದಿದೆ. ಆದರೆ, ಇಂತಹ ಶಿಕ್ಷಣವನ್ನು ಕೊಡುವುದಕ್ಕೂ ಸಹಿತ ಆಗಿಲ್ಲವೆಂದು ಹೇಳಬಹುದು. ಸನ್ಮಾನ್ಯ ಅಧ್ಯಕ್ಷರೇ, 12 ಸಾವಿರ ಶಿಕ್ಷಕರ ಹುದ್ದೆಗಳನ್ನು ತುಂಬುತ್ತೇವೆಂದು ಹೇಳಿದ್ದಾರೆ. ಆದರೆ, ಈ 12 ಸಾವಿರ ಹುದ್ದೆಗಳನ್ನು ಎಷ್ಟು ದಿವಸಗಳಲ್ಲಿ ಭರ್ತಿ ಮಾಡುತ್ತಾರೆಂಬುದನ್ನು ಬಹಳ ಮುಖ್ಯವಾಗಿ ಹೇಳಬೇಕು. ಮೊನ್ನೆ ಮಂತ್ರಿಗಳು ಅಸೆಂಬ್ಲಿಯಲ್ಲಿ ಹೇಳಿದರು, 6 ಸಾವಿರ ಶಿಕ್ಷಕರ ಹುದ್ದೆಗಳನ್ನು ತುಂಬುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ ಎಂದು. ಮತ್ತೆ 2 ಸಾವಿರ ಹುದ್ದೆಗಳು ಎಂದು ಹೇಳಿದರು. ಅವರು ಯಾವುದನ್ನೂ ನಿಖರವಾಗಿ ಹೇಳುವಂಥ ಸ್ಥಿತಿಯಲ್ಲಿ ಇಲ್ಲ. ಆ ಕಾರಣ, ಮೊದಲನೆಯದಾಗಿ, 12 ಸಾವಿರ ಶಿಕ್ಷಕರನ್ನು ಎಷ್ಟು ದಿವಸದಲ್ಲಿ ನೇಮಿಸುತ್ತೀರಿ ಎಂಬುದನ್ನು ಕೇಳುತ್ತೇನೆ. ಎರಡನೆಯದಾಗಿ, ಪ್ರಾಥಮಿಕ ಶಾಲಾ ಕಟ್ಟಡಗಳ ವಿಷಯವನ್ನು ತಾವು ವಿಚಾರ ಮಾಡಬೇಕು. ಇವತ್ತು ಯಾವುದೇ ಒಂದು ಹಳ್ಳಿಯಲ್ಲೂ, ಯಾವುದೇ ಊರಿನಲ್ಲೂ ಈ ಪ್ರಾಥಮಿಕ ಶಾಲೆಗೆ ಸುಸಜ್ಜಿತವಾದ ಕಟ್ಟಡ ಇಲ್ಲ. ನಮ್ಮ ಹಳ್ಳಿಗಳಲ್ಲಿ 1 ರಿಂದ 4ನೇ ತರಗತಿಯವರೆಗಿನ, ವಿದ್ಯಾರ್ಥಿಗಳು ಒಂದೇ ಕೊಠಡಿಯಲ್ಲಿರುತ್ತಾರೆ. ಒಬ್ಬರೇ ಶಿಕ್ಷಕರು ಇರುತ್ತಾರೆ. ಈಗಾಗಲೇ ಮಾನ್ಯ ಶಿವನಂಜಪ್ಪನವರು ಹೇಳಿದ ಪ್ರಕಾರ, ಒಂದು ಮೂಲೆಯಲ್ಲಿ "ಅ" ಕಲಿಸುವುದು, ಇನ್ನೊಂದು ಮೂಲೆಯಲ್ಲಿ "ಇ" ಕಲಿಸುವುದು ಈ ರೀತಿ ಕಲಿಸತಕ್ಕ ಪರಿಸ್ಥಿತಿ ಇದೆ. ಆದಕಾರಣ,

ಇದನ್ನು ವಿಚಾರ ಮಾಡಿ, ಈ ಕಟ್ಟಡಗಳು ಎಲ್ಲೆಲ್ಲಿ ಅವಶ್ಯ ಇದೆ, ಆ ಪ್ರಕಾರ ಕಟ್ಟಡ ಕಟ್ಟಬೇಕೆಂದು ಕೇಳುತ್ತಿದ್ದೇನೆ. ಬೆಳಗಾಂ ಜಿಲ್ಲೆಯಲ್ಲಿ ಸುಮಾರು 40 ಲಕ್ಷ ರೂಪಾಯಿಗಳನ್ನು ಪ್ರಾಥಮಿಕ ಶಾಲಾ ಕಟ್ಟಡಗಳಿಗಾಗಿ ಇಟ್ಟಿದ್ದಾರೆ. ಆ ಜಿಲ್ಲೆಯಲ್ಲಿ 18 ಶಾಸಕರ ಕ್ಷೇತ್ರಗಳಿವೆ. ಒಬ್ಬ ಶಾಸಕರಿಗೆ 2 ಲಕ್ಷದ 25 ಸಾವಿರ ಬಂತು ಎಂದು ಅಲ್ಲಿನ ಜಿಲ್ಲಾಪರಿಷತ್ ಮುಖ್ಯ ಕಾರ್ಯದರ್ಶಿಯವರು ಹೇಳುತ್ತಾರೆ. ಮತ್ತು ಒಬ್ಬರಿಗೆ ಮೂರು ಕಟ್ಟಡಗಳು ಬರುತ್ತವೆ, ಈ ರೀತಿ ಹಂಚಿಕೊಳ್ಳಿ ಎಂದು ಹೇಳಿದರು. ಅಂದರೆ, ಒಬ್ಬ ಮನುಷ್ಯನಿಗೆ ಒಂದು ಕಟ್ಟಡಕ್ಕೆ 75 ಸಾವಿರ ರೂಪಾಯಿಗಳಂತೆ, 2 ಲಕ್ಷ 25 ಸಾವಿರ ಕೊಟ್ಟರೆ, ಎಷ್ಟು ವರ್ಷಗಳಲ್ಲಿ ಈ ಶಾಲಾ ಕಟ್ಟಡಗಳನ್ನು ಕಟ್ಟಿ, ಮುಗಿಸುವುದಕ್ಕೆ ಸಾಧ್ಯತೆ ಇದೆ ಎನ್ನುವುದನ್ನು ತಾವು ವಿಚಾರ ಮಾಡಬೇಕು. ಆದಕಾರಣ, ಇದರ ಸಲುವಾಗಿ, ಒಂದು ಕಾಲ ನಿಗದಿ ಮಾಡಬೇಕು. ಇಷ್ಟು ವರ್ಷದಲ್ಲಿ, ಪ್ರತಿಯೊಂದು ಕನ್ನಡ ಶಾಲಾ ಕಟ್ಟಡಗಳನ್ನೂ ಕಟ್ಟಿಯೇ ಕಟ್ಟುತ್ತೇವೆಂದು ದೃಢ ನಿರ್ಧಾರ ಮಾಡಬೇಕು.

ಮತ್ತು ಎಲ್ಲೆಲ್ಲಿ ಈ ಕಟ್ಟಡಗಳು ಇಲ್ಲ, ಅಲ್ಲಿ ಕಟ್ಟಡಗಳನ್ನು ಕಟ್ಟಬೇಕು. ಮತ್ತೆ ಜವಹರ್ ರೋಜ್‌ಗಾರ್ ಯೋಜನೆಯಲ್ಲಿ ಈ ಕಟ್ಟಡಗಳನ್ನು ಕಟ್ಟಿರಿ, ಮಂಡಲ್ ಪಂಚಾಯಿತಿ ಹಣದಲ್ಲಿ ಕಟ್ಟಿರಿ ಅಥವಾ ಜನರ ವಂತಿಕೆಯಿಂದ ಕಟ್ಟಿರಿ ಎಂದು ಹೇಳುತ್ತಾರೆ. ಇದು ಯಾವ ಪ್ರಕಾರ ಸಾಧ್ಯ ? ಜವಹರ್ ರೋಜ್‌ಗಾರ್ ಯೋಜನೆಯಲ್ಲಿ ಮತ್ತು ಮಂಡಲ್ ಪಂಚಾಯಿತಿಯಲ್ಲಿರತಕ್ಕ ಹಣದಲ್ಲಿ ಬೇರೆ ಬೇರೆ ಕೆಲಸ ಮಾಡುವುದಕ್ಕೇ ಹಣ ಇಲ್ಲ. ಅಲ್ಲಿ ಎಲೆಕ್ಟ್ರಿಸಿಟಿ ಬಿಲ್ ತುಂಬುವುದಕ್ಕೇ ರೊಕ್ಕ ಇಲ್ಲದಿದ್ದರೆ, ಈ ಕಟ್ಟಡಗಳನ್ನು ಕಟ್ಟುವುದಕ್ಕೆ ಹೇಗೆ ಸಾಧ್ಯ ಎನ್ನುವುದನ್ನು ತಾವು ವಿಚಾರ ಮಾಡಬೇಕು. ಆದಕಾರಣ, ಸರ್ಕಾರದವರು, ಇದರ ಸಲುವಾಗಿ ಒಂದು ಸ್ಕೀಮ್ ಹಾಕಿಕೊಂಡು, ಈ ಕಟ್ಟಡಗಳನ್ನು ಕಟ್ಟುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹೊಸ ಸರ್ಕಾರ ಬಂದನಂತರ, ಸ್ಕೂಲ್ ಎನ್‌ರೋಲ್‌ಮೆಂಟ್ ಎಂದು ಮಾಡಿದರು. ಶ್ರೀಮಾನ್ ವೀರಪ್ಪ ಮೊಯಿಲಿಯವರು ಶಿಕ್ಷಣ ಮಂತ್ರಿಗಳಾಗಿದ್ದಾಗ, ಯಾರು ಶಾಲೆ ಬಿಟ್ಟಿದ್ದಾರೆ, ಅವರಿಗೆ ಎನ್‌ರೋಲ್‌ಮೆಂಟ್ ಮಾಡಬೇಕೆಂದು ಹೊಸ ಸ್ಕೀಮ್ ಹಾಕಿಕೊಂಡರು. ತಾವು ಈ ಸ್ಕೀಮಿನಿಂದ 3 ಲಕ್ಷ ವಿದ್ಯಾರ್ಥಿಗಳು ಎನ್‌ರೋಲ್‌ಮೆಂಟ್ ಆಗಿದ್ದಾರೆಂದು ಹೇಳಿದ್ದೀರಿ. ನೀವು 5 ಲಕ್ಷ ವಿದ್ಯಾರ್ಥಿಗಳನ್ನು ಎನ್‌ರೋಲ್ ಮಾಡುತ್ತೇವೆಂಬ ಗುರಿ ಇಟ್ಟುಕೊಂಡಿದ್ದೀರಿ, ಅದರಲ್ಲಿ 3 ಲಕ್ಷ ಎನ್‌ರೋಲ್ ಮಾಡಿದ್ದೀರಿ. ಈ ರೀತಿ 3 ಲಕ್ಷ ವಿದ್ಯಾರ್ಥಿಗಳ ಎನ್‌ರೋಲ್ ಆದಾಗ, ನೀವು ಎಷ್ಟು ಜನ ಶಿಕ್ಷಕರನ್ನು ನೇಮಿಸಿದ್ದೀರಿ ? ಅಥವಾ ನೇಮಿಸುವುದಕ್ಕೆ ಕ್ರಮಕೈಗೊಂಡಿದ್ದೀರಿ. ಮೊದಲೇ 12 ಸಾವಿರ ಶಿಕ್ಷಕರುಗಳದ್ದು ರೆಗ್ಯುಲರ್ ವೇಕೆನ್ಸಿ ಇದೆ. ಈಗ ಮೂರು ಲಕ್ಷ ವಿದ್ಯಾರ್ಥಿಗಳು ಹೆಚ್ಚಾಗಿದ್ದು, ಇವರಿಗೆ ಹೆಚ್ಚು ಶಿಕ್ಷಕರನ್ನು ನೇಮಕ ಮಾಡುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ ? ಬರೀ ಎನ್‌ರೋಲ್‌ಮೆಂಟ್ ಮಾಡಿಕೊಳ್ಳುವುದು, ಕುರಿ ದೊಡ್ಡಿ ತುಂಬಿದ ಹಾಗೆ ತುಂಬಿಕೊಂಡರೆ ಏನೂ ಉಪಯೋಗವಾಗುವುದಿಲ್ಲ. ಇವತ್ತಿನ ದಿವಸ ನನ್ನ ಮತಕ್ಷೇತ್ರದಲ್ಲಿ ತುರುಕರಸೀಗೆ ಎಂಬ ಹಳ್ಳಿಯಲ್ಲಿ 280 ವಿದ್ಯಾರ್ಥಿಗಳಿದ್ದಾರೆ, ಅಲ್ಲಿ 3 ಮಂದಿ ಶಿಕ್ಷಕರು ಇದ್ದಾರೆ. ಈ ಮೂರು ಮಂದಿಯಲ್ಲಿ, ಅಕ್ಷಯಕ್ಕೆ ಹಣ ತುಂಬುವುದು, ಹಣ ತರುವುದು, ಎ.ಇ.ಒ. ಆಫೀಸಿಗೆ ಹೋಗುವುದು ಇದೇ ಕೆಲಸವಾಗುತ್ತದೆ. ಮತ್ತೆ ಶಿಕ್ಷಕರ ಕೆಲಸ ಮಾತ್ರ ಆಗುತ್ತಾ ಇಲ್ಲ. ಮತ್ತೆ ಕೆಂಗನೂರು ಎಂಬ ಹಳ್ಳಿಯಲ್ಲಿ 320 ವಿದ್ಯಾರ್ಥಿಗಳಿದ್ದರೂ ಸಹಿತ, ಶಿಕ್ಷಣ ಕೊಡುವುದಕ್ಕೆ ಆಗುತ್ತಾ ಇಲ್ಲ. ಈ ಬಗ್ಗೆ ಕೇಳಿದರೆ, ಸ್ಯಾಂಕ್ಷನ್ ಪೋಸ್ಟ್ ಇಲ್ಲವೆಂದು ಹೇಳುತ್ತಾರೆ. ಸ್ಯಾಂಕ್ಷನ್ ಪೋಸ್ಟ್ ಎಂದು ಕೇಳಿದರೆ, ಸ್ಯಾಂಕ್ಷನ್ ಪೋಸ್ಟ್ ಇಲ್ಲವೆಂದು ಹೇಳುತ್ತಾರೆ. ಸ್ಯಾಂಕ್ಷನ್ ಪೋಸ್ಟ್ ಎಂದು ಹೇಳಿದರೆ, ಒಂದಕ್ಕೆ ನಲವತ್ತು, ಒಂದಕ್ಕೆ ಐವತ್ತು ಇದು ಮುಂದೆ ಈ ಅಕ್ಷಯ ಇದೆಲ್ಲಾ ಬಂದು, ಒಂದಕ್ಕೆ ಎಪ್ಪತ್ತೈದು ಆಗಬಹುದು.

75 ವಿದ್ಯಾರ್ಥಿಗಳನ್ನು ಒಂದು ...

ವಿದ್ಯಾರ್ಥಿಗಳು ಎಷ್ಟೊಂದು ಅಭ್ಯಾಸ ಮಾಡುತ್ತಿರಬೇಕು ಏನು ಎನ್ನುವುದನ್ನು ವಿಚಾರ ಮಾಡಬೇಕು. ತಾವು ಮಂತ್ರಿಗಳಿದ್ದೀರಿ, ನಿಮ್ಮ ಮಕ್ಕಳು ನಿಮ್ಮ ಮೊಮ್ಮಕ್ಕಳು ಇಲ್ಲಿ ಮುಂದೆ ಕುಳಿತಿರುವ ಐ.ಎ.ಎಸ್. ಆಫೀಸರ್ಸ್ ಮಕ್ಕಳು, ಮೊಮ್ಮಕ್ಕಳು ಕನ್ನಡ ಶಾಲೆಗೆ ಹೋಗುತ್ತಾರೇನೋ ? ಹಳ್ಳಿ ಶಾಲೆಗಳಿಗೆ ನಿಮ್ಮ ಮಕ್ಕಳು ಮೊಮ್ಮಕ್ಕಳನ್ನು ಈ 75 ಜನ ವಿದ್ಯಾರ್ಥಿಗಳ ಜೊತೆ ಕಳುಹಿಸಿದರೆ ಏನು ಪರಿಸ್ಥಿತಿ ಆಗುತ್ತದೆ ಅನ್ನುವುದು ಆಗ ಗೊತ್ತಾಗುತ್ತದೆ. ಮಂತ್ರಿಗಳ ಮೊಮ್ಮಕ್ಕಳು ಹಾಗೂ ಈ ಐಎಎಸ್ ಆಫೀಸರ್ಸ್ ಮಕ್ಕಳು ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗೆ ಹೋಗಬೇಕು, ತಮ್ಮ ಮಕ್ಕಳು ಜಾಣರಾಗಬೇಕು. ನಮ್ಮ ಮಕ್ಕಳು 75 ಮಕ್ಕಳ ಜೊತೆ ಕಲಿತುಕೊಂಡು ಅವು ಹಾಗೆ ಮಕ ಮಾಡಿಕೊಂಡು ಸಿಂಬಳ ಹೊರಿಸಿಕೊಳ್ಳುತ್ತಾ ಎದ್ದು ನಿಂತುಕೊಂಡು ಕುಳಿತಿರಬೇಕೇ ಹೊರತಾಗಿ ಬೇರೇನೂ ಇಲ್ಲ. ನೀವು ಇವತ್ತಿನ ದಿವಸ ಯಾವ ರೀತಿ ಈ ಶಾಲೆ ಸುಧಾರಿಸುತ್ತೀರಿ ಎಂದು ನಾನು ಕೇಳುತ್ತೇನೆ.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಮಾನ್ಯ ಅಧ್ಯಕ್ಷರೇ ತಮ್ಮ ಒಂದು ಅವಗಾಹನೆಗೆ ತರುತ್ತೇನೆ. ನನ್ನ ಮಕ್ಕಳು ಕನ್ನಡ ಶಾಲೆಯಲ್ಲಿ ಕಲಿತವರು. ಹಳ್ಳಿ ಶಾಲೆಯಲ್ಲಿ ಕಲಿತು ಈಗ ಎಂ.ಬಿ.ಬಿ.ಎಸ್. ನಲ್ಲಿದ್ದಾರೆ.

ಶ್ರೀ ಎಸ್. ಹೆಚ್. ಕೌಜಲಗಿ:– ಈಗ ನಿಮ್ಮ ಮೊಮ್ಮಕ್ಕಳು ಎಲ್ಲಿ ಕಲಿಯುತ್ತಾರೆ ? ಈಗ ನೀವು ಇಲ್ಲಿ ಮನೆ ಮಾಡಿದ್ದೀರಿ ಇನ್ನು ಮೇಲೆ ನಿಮ್ಮ ಮೊಮ್ಮಕ್ಕಳು ಎಲ್ಲಿ ಕಲಿಯುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಇಷ್ಟು ದಿವಸ ಮಂತ್ರಿಗಳಾಗಿರಲಿಲ್ಲ ಹಳ್ಳಿಯಲ್ಲಿದ್ದರು ನೀವು ಮಂತ್ರಿಗಳಾದ ಮೇಲೆ ನಿಮ್ಮ ಜೀವನ ಯಾವ ರೀತಿ ಚೇಂಜ್ ಆಗುತ್ತದೆಂದು ನಾನು ಮುಂದೆ ನೋಡುತ್ತೇನೆ. ತಾವು ವಿಚಾರ ಮಾಡಿ. ಆದಕಾರಣ ಇವತ್ತಿನ ದಿವಸ ಇವರು ಏನು ಮಾಡಲಿಕ್ಕೆ ಹತ್ತಿದ್ದಾರೆಂದರೆ ಇದು ಕನ್ನಡ ಪ್ರಾಥಮಿಕ ಶಾಲೆ ಅಂದರೆ ಭಾರಿ ನೆಗ್ಲೆಕ್ಟೆಡ್ ಶಾಲೆ. ಇದರ ಸಲುವಾಗಿ ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ಯಾವುದೇ ಪರಿಸ್ಥಿತಿ ಒಳಗೆ ಕನ್ನಡ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಉತ್ತಮಪಡಿಸಬೇಕು ಎಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಇಂಗ್ಲೀಷ್ ಶಾಲೆಗಳನ್ನು ತೆರೆಯುವ ಬಗ್ಗೆ ಇವತ್ತಿನವರೆಗೂ ಯಾವುದೇ ಒಂದು ದೃಢ ನಿರ್ಧಾರ ಇಲ್ಲ. ನಾವು ನಿಯಮದ ಪ್ರಕಾರವಾಗಿ ಅನುಮತಿ ಕೊಡುತ್ತೇವೆಂದು ಹೇಳುತ್ತಾರೆ, ಅನುಮತಿ ಇಲ್ಲದಿದ್ದರೆ ಆ ಮಕ್ಕಳ ವಿದ್ಯಾಭ್ಯಾಸ ಯಾವ ಪ್ರಕಾರವಾಗಿರುತ್ತದೆನ್ನುವುದನ್ನು ತಾವು ವಿಚಾರ ಮಾಡಬಹುದು. ಒಂದರಿಂದ ನಾಲ್ಕನೆಯ ತರಗತಿಯವರೆಗೆ ಯಾವುದೇ ಕನ್ನಡ ಪ್ರಾಥಮಿಕ ಶಾಲೆ ತೆಗೆಯಲಿಕ್ಕೆ ಅನುಮತಿ ಎ.ಇ.ಓ. ಪರ್ಮಿಶನ್ ಇದ್ದರೆ ಸಾಕು ಹೆಚ್ಚಿನದ್ದು ಏನೂ ಇಲ್ಲ ಅಂತ ಹೇಳುತ್ತಾರೆ. ಇವತ್ತಿನದಿವಸ ನಾವು ಕ್ಯಾಪಿಟೇಷನ್ ತೆಗೆದುಕೊಳ್ಳಬೇಡಿ ಎಂದು ಹೇಳುತ್ತೇವೆ, ಅವರು 30–40 ರೂಪಾಯಿ ಶಾಲಾ ಮಕ್ಕಳಿಂದ ಫೀಜು ತೆಗೆದುಕೊಳ್ಳುತ್ತಾರೆ. ನಮ್ಮ ಊರಿನಲ್ಲಿ ನಾನೇ ಸುಮಾರು 17 ಶಾಲೆಗಳನ್ನು ಉದ್ಘಾಟನೆ ಮಾಡಿದೆ. ಇವತ್ತಿನ ದಿವಸ 17 ಶಾಲೆಗಳನ್ನು ಉದ್ಘಾಟನೆ ಮಾಡಬೇಕಾದಂತಹ ಪ್ರಸಂಗ ಬಂತು. ಪ್ರತಿಯೊಂದು ಓಣಿಗೂ ನಾನು ಹೋದೆ. ಏಕೆ ನಿಮ್ಮ ಶಾಲೆಯಲ್ಲಿ ಜಾಗ ಇಲ್ಲ ಶಿಕ್ಷಕರು ಇಲ್ಲ ಯಾವುದೇ ಫರ್ನೀಚರ್ ಇಲ್ಲ ಅಂತಹ ಪರಿಸ್ಥಿತಿಯಲ್ಲಿ 30–40 ರೂಪಾಯಿ ಪ್ರತಿಯೊಬ್ಬರ ಕಡೆಯಿಂದ ಕಲೆಕ್ಟ್ ಮಾಡಿಕೊಳ್ಳುತ್ತಾ ಶಾಲೆ ನಡೆಸುತ್ತಿದ್ದಾರೆ. ಈ ಕಡೆ ನಾವು ಕ್ಯಾಪಿಟೇಷನ್ ಫೀ ತೆಗೆಯಿರಿ ಎಂದು ಹೇಳುವುದು, ಆ ಕಡೆಯಿಂದ ನೀವು ಅವರಿಗೆ ಅಲೋ ಮಾಡಿ ಅಂತ ಹೇಳಿ ಒಂದರಿಂದ ನಾಲ್ಕರವರೆಗೂ ಏನೋ ಪರ್ಮಿಶನ್ ಕೊಟ್ಟಿರಿ. ಇವತ್ತು ಈ ಸರ್ಕಾರದಲ್ಲಿ ಹಣ ಇಲ್ಲ ಈ ಶಿಕ್ಷಣ ಖಾತೆಯನ್ನು ನೀವು ಸುಧಾರಿಸುವ ಸ್ಥಿತಿಯಲ್ಲಿ ಇಲ್ಲ ಈ ಒಂದು ಉದ್ದೇಶದಿಂದ ನೀವು ಮಾಡಿದಿರಿ, ಇದು ಬಹಳ ಅನ್ಯಾಯ. ಮುಂದೆ ಅವರು 5ನೇ ಕ್ಲಾಸ್‌ಗೆ ಎಲ್ಲಿ ಹೋಗಬೇಕು ಒಂದರಿಂದ ನಾಲ್ಕು ಆದ ಮೇಲೆ ಮುಂದೆ ಹೋಗಬೇಕಾದರೆ ಟಿ.ಸಿ. ಯಾರು

ಕೊಡುವವರು ಅವರಿಗೆ ? ಮೊನ್ನೆ ನಾನು ಕೇಳಿದೆ ಎರಡು ಮತ್ತು ಮೂರು ಆದ ಕೂಡಲೇ ಅವರು ಹೇಳುತ್ತಾರೆ ನೀವು ಆ ಸ್ಕೂಲ್‌ನಲ್ಲಿ ಕಲಿಸುತ್ತೀರಿ ಅದರಿಂದ ನಾವು ಟಿ.ಸಿ. ಕೊಡಲಿಕ್ಕೆ ಬರುವುದಿಲ್ಲ ಅಂತ ಹೇಳುತ್ತಾರೆ ಆ ಮಕ್ಕಳ ಭವಿಷ್ಯ ಏನು ತಾವು ಇದನ್ನು ವಿಚಾರ ಮಾಡಬೇಕು.

ಉಪಾಧ್ಯಕ್ಷರು:- ಆಯಿತು ಟೈಮ್.

ಶ್ರೀ ಎಸ್. ಹೆಚ್. ಕೌಜಲಗಿ:- ನನಗೆ ಇನ್ನು ಒಂದು 10 ನಿಮಿಷ ಬೇಕು.

ಉಪಾಧ್ಯಕ್ಷರು:- ಕ್ಯಾಬಿನೇಟ್ ಮೀಟಿಂಗ್ ಇದೆಯಂತೆ ಇನ್ನು ಸುಮಾರು ಜನ ಮಾತನಾಡುವವರು ಇದ್ದಾರೆ. ತಾವೆಲ್ಲಾ ಸಹಕಾರ ಕೊಡದಿದ್ದರೆ ಹೇಗೆ ?

ಉಪಾಧ್ಯಕ್ಷರು:- ಚಿಕ್ಕದಾಗಿ ಚೊಕ್ಕವಾಗಿ ಮಾತನಾಡಿ ಮುಗಿಸಿ. ಈ ತರಹ ಹೇಳಿದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. 5 ನಿಮಿಷ ಕೊಡುತ್ತೇನೆ ಅಷ್ಟರಲ್ಲಿ ಮುಗಿಸಿ.

ಶ್ರೀ ಎಸ್. ಹೆಚ್. ಕೌಜಲಗಿ:- ನನಗೆ ಕನಿಷ್ಟ 15 ನಿಮಿಷ ಬೇಕು. ಪ್ರಾಥಮಿಕ ಶಿಕ್ಷಣ ಮತ್ತು ಹೈಸ್ಕೂಲ್ ಬಗ್ಗೆ ನಾನು ಮಾತನಾಡುತ್ತೇನೆ. ಇವತ್ತಿನ ದಿವಸ ನಾವು 13ನೂರು ಕೋಟಿ ರೂಪಾಯಿಗಳ ಒಂದು ಅಪ್ರೂವಲ್ ಮಾಡುವ ಹೊತ್ತಿನಲ್ಲಿ 8 ಮಂದಿ ಸಹ ಮಾತನಾಡದಿದ್ದರೆ ಹೇಗೆ ?

ಉಪಾಧ್ಯಕ್ಷರು:- 5 ನಿಮಿಷ ಕೊಡುತ್ತೇನೆ ಮುಗಿಸಿ.

ಶ್ರೀ ಎಸ್. ಹೆಚ್. ಕೌಜಲಗಿ:- 6-30 ಗಂಟೆಗೆ ನಾನು ಮುಗಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ನಾವು ಪ್ರಾಥಮಿಕ ಶಿಕ್ಷಣಕ್ಕೆ ಬರೀ ಹಾಜರಾತಿಗೆ ಒತ್ತು ಕೊಡುತ್ತಿದ್ದೇವೆ. ಆದರೆ ಈ ಕಲಿಕೆ ಮತ್ತು ಗ್ರಹಿಕೆಗೆ ಅರ್ಥ ತುಂಬುತ್ತಿಲ್ಲ. ಹಾಗೂ ಪ್ರಯೋಗ ಶಾಲೆ ಇಲ್ಲ, ಇದರಿಂದ ಒಬ್ಬ ತಂದೆ ತನ್ನ ಮಗನನ್ನು ಅರ್ಜಿ ಬರೆ ಅಂದ. ಆತನಿಗೆ ಒಂದು ಅರ್ಜಿ ಸಹ ಬರೆಯಲಿಕ್ಕೆ ಆಗಲಿಲ್ಲ. ಇಂತಹ ಒಂದು ನಮ್ಮ ಪ್ರಾಥಮಿಕ ಶಿಕ್ಷಣ ಕಲಿತಂತಹ ಒಬ್ಬನ ಹಣೇಬರಹ ಆದಾಗ, ಇವತ್ತಿನ ದಿವಸ ಆತ ಇಂಗ್ಲೀಷ್‌ನಲ್ಲಿ ಕಲಿತಾಗ ಪರಿಸ್ಥಿತಿ ಏನಾಗುತ್ತದೆ. ತಾವು ಅದನ್ನು ವಿಚಾರ ಮಾಡಬೇಕು. ಆದಕಾರಣ ಪ್ರಾಥಮಿಕ ಶಿಕ್ಷಣ ಸುಧಾರಿಸುವುದು ಅತಿ ಅವಶ್ಯಕ ಎಂದು ನಾನು ಹೇಳುತ್ತೇನೆ.

ಶಾಲೆಗಳಲ್ಲಿ ಶಿಕ್ಷಕರು ಇಲ್ಲದೆ ಇದ್ದರೂ, ಪುಸ್ತಕಗಳು ಇಲ್ಲದೆ ಇದ್ದರೂ, ಇವತ್ತಿನ ದಿವಸ ನಮ್ಮ ವಿದ್ಯಾರ್ಥಿಗಳು ಮಾತ್ರ ಪಾಸಾಗುತ್ತಾರೆ. ಏಕೆಂದರೆ ಒಂದು ರೂಲ್ ಮಾಡಿದ್ದಾರೆ ಯಾರೂ ವಿದ್ಯಾರ್ಥಿಗಳು ಒಂದರಿಂದ 7 ರ ತನಕ ನಪಾಸು ಮಾಡಬೇಡಿ ಅಂತ, ಆ ಸಲುವಾಗಿ ಬಹಳ ಒಳ್ಳೆಯದು ಮಾಡಿದ್ದೀರಿ, ಇನ್ನು ಕಾಲೇಜಿನಲ್ಲೂ ಮಾಡಬೇಕು. ಕಾಲೇಜಿನಲ್ಲಿ ಇವತ್ತಿನ ದಿವಸ ಟೀಚರ್ಸ್ ಇಲ್ಲ ಎಕ್ವಿಪ್‌ಮೆಂಟ್ಸ್ ಇಲ್ಲ ಪ್ರಾಕ್ಟಿಕಲ್ ಆಗಿಲ್ಲ ಅದರ ಸಲುವಾಗಿ ನೀವು ಪಾಸ್ ಸರ್ಟಿಫಿಕೇಟ್ ಕೊಡುತ್ತೀರಿ. ಇದು ನಮಗೆ ಬಹಳ ಸಂತೋಷದ ಸುದ್ದಿ ಏಕೆಂದರೆ ಶಾಲೆಗಳಲ್ಲಿ ಮಾಸ್ಟರ್ ಇಲ್ಲ, ಅವರಿಗೆ ಯಾವುದೇ ಒಂದು ಪುಸ್ತಕ ಇಲ್ಲ. ಪುಸ್ತಕ ಇದ್ದರೆ ಕ್ಲಾಸ್ ತೆಗೆದುಕೊಂಡಿಲ್ಲ ಆದರೂ ಪಾಸಾಗುತ್ತಾರೆ ಇದು ಒಂದು ಬಹಳ ಹೆಮ್ಮೆಯ ಸಂಗತಿ. ನಾನು ಎರಡನೇ ಎರಡು ಸೂಚನೆಗಳನ್ನು ಮಾತ್ರ ಪ್ರಾಥಮಿಕ ಶಿಕ್ಷಣದ ಬಗ್ಗೆ ಕೊಡುತ್ತಿದ್ದೇನೆ. ಈ ಅಕ್ಷಯ ಯೋಜನೆ ಇದೆಯಲ್ಲಾ, ದಯಮಾಡಿ ಇದನ್ನು ಕೈ ಬಿಡಬೇಕು ಇವತ್ತಿನ ದಿವಸ 80 ಕೋಟಿ ರೂಪಾಯಿಗಳನ್ನು ಹಾಳು ಮಾಡುವುದಕ್ಕೆ ಹತ್ತಿದ್ದೇವೆ.

6.15 ಪಿ.ಎಂ.

ಡಾ।। ಹೆಗ್ಗಪ್ಪ ಡಿ. ಲಮಾಣಿ:- ಸನ್ಮಾನ್ಯ ಅಧ್ಯಕ್ಷರೇ, ಈಗ ತಾವು ಹೇಳಿದಿರಿ ಅದು ರೆ...ಡ್‌ಗೆ ಹೋಗುತ್ತದೆ. 1ರಿಂದ 7ನೇ ಕ್ಲಾಸ್‌ವರೆಗೂ ಯಾರಿಗೂ ಫೇಲ್ ಮಾಡಬಾರದು ಅಂತ ಜಿ... ಇದೆ

ಅಂತ ಏನು ಹೇಳಿದಿರಿ, ಅಂತಹ ಜಿಓ ಏನೂ ಇಲ್ಲ. ಕೆಲವು ವಿದ್ಯಾರ್ಥಿಗಳು ಪಾಸ್ ಆಗಬಹುದು ಕೆಲವು ವಿದ್ಯಾರ್ಥಿಗಳು ಫೇಲ್ ಆಗಬಹುದು ಅಂಥಾದ್ದು ಏನೂ ಇಲ್ಲ.

ಶ್ರೀ ಎಸ್. ಹೆಚ್. ಕೌಜಲಗಿ:- ಸನ್ಮಾನ್ಯ ಅಧ್ಯಕ್ಷರೇ ನಮ್ಮ ಮಂತ್ರಿಗಳು ಹೇಳಿದರು ನನಗೆ ಬಹಳ ಸಂತೋಷ ಇವತ್ತಿನ ದಿವಸ ರಾಜ್ಯದಲ್ಲಿ ಒಂದರಿಂದ 6ನೇ ಕ್ಲಾಸ್‌ತನಕ ಸರ್ಕಾರಿ ಶಾಲೆಗಳಲ್ಲಿ ಒಬ್ಬರಾದರೂ ಹುಡುಗರು ಫೇಲ್ ಆಗಿದ್ದಾರೆಯೇ ನನಗೆ ತೋರಿಸಿ. ನಾನು ಒಪ್ಪುತ್ತೇನೆ ತಮ್ಮ ಹುಡುಗರು ಕನ್ನಡ ಶಾಲೆಯಲ್ಲಿ ಕಲಿತು ಪಾಸಾದರೆ ನನಗೆ ಬಹಳ ಸಂತೋಷ. ನಮ್ಮ ಕರ್ನಾಟಕದ ಮಾದರಿಯನ್ನು ಬೇರೆ ರಾಜ್ಯದವರು ಅನುಸರಿಸಲಿ. ಯಾವ ಪ್ರಕಾರ ಇಲ್ಲಿ ಶಾಲೆ ಕಲಿಯಲಿಕ್ಕೆ ಹತ್ತಿದ್ದಾರೆ, ಯಾವ ಪ್ರಕಾರ ನಡೆದಿದೆ ಎನ್ನುವುದು ಇದು ಮಾದರಿ ರಾಜ್ಯವಾಗಲಿ ಅಂತ ನಾನು ಕೇಳಿಕೊಳ್ಳುತ್ತಿದ್ದೇನೆ. ಒಂದೇ ಒಂದು ನಾನು ಪ್ರಾಥಮಿಕ ಶಿಕ್ಷಣದ ಬಗ್ಗೆ ಹೇಳುವುದೆಂದರೆ ಈ ಅಕ್ಷಯ ಯೋಜನೆಯನ್ನು ಕೈ ಬಿಡಬೇಕು, ಟೀಚರ್ಸ್ ಅಪಾಯಿಂಟ್‌ಮೆಂಟ್ಸ್ ಕೂಡಲೇ ಮಾಡಬೇಕು ಪಿ.ಇ. ಟೀಚರ್ ಕೂಡಲೇ ಅಪಾಯಿಂಟ್ ಮಾಡಬೇಕು, ಪಿ.ಇ. ಟೀಚರ್ಸ್ ಅಪಾಯಿಂಟ್‌ಮೆಂಟ್ ಇಲ್ಲಿಯವರೆಗೂ ಆಗಿಲ್ಲ, ಮುಂದೆ ಗಾಯನ ಟೀಚರ್ಸ್ ಅಪಾಯಿಂಟ್‌ಮೆಂಟ್ ಮಾಡಬೇಕು ಏಕೆಂದರೆ ಕೆಲವು ಹೆಣ್ಣುಮಕ್ಕಳ ಶಾಲೆಯಲ್ಲಿ ಗಾಯನ ಟೀಚರ್ ಅಪಾಯಿಂಟ್ ಅವಶ್ಯಕತೆ ಇದೆ ಆದಕಾರಣ ಎಲ್ಲೆಲ್ಲಿ ಕನ್ನಡ ಹೆಣ್ಣುಮಕ್ಕಳ ಶಾಲೆ ಇದೆ ಅಲ್ಲಿ ತಾವು ಗಾಯನ ಟೀಚರ್ ಅಪಾಯಿಂಟ್‌ಮೆಂಟ್ ಮಾಡಬೇಕು ಮತ್ತೆ ಶಾಲೆ ಕೊಠಡಿಗಳನ್ನು ಕಟ್ಟಬೇಕು, ಮತ್ತೆ ಪ್ರತಿ ಶಾಲೆಯಲ್ಲಿ ಆರ್.ಎಲ್.ಜಿ.ಪಿ. ಯೋಜನೆಯಡಿಯಲ್ಲಿ ಅಥವಾ ಯಾವುದಾದರೂ ಯೋಜನೆಯಡಿಯಲ್ಲಿ ಒಂದು ಕುಡಿಯುವ ನೀರಿನ ಬೋರ್‌ವೆಲ್ ಹಾಕಿಸಬೇಕು. ಏಕೆಂದರೆ ವಿದ್ಯಾರ್ಥಿಗಳಿಗೆ ಅದರಿಂದ ತೊಂದರೆ ಆಗುತ್ತಿದೆ ಮತ್ತೆ ಅಲ್ಲಿ ಮೂತ್ರಾಲಯಗಳನ್ನು ಕಟ್ಟಿಸುವಂತಹ ಕ್ರಮ ಕೈಗೊಳ್ಳಬೇಕು. ನೀವು ಇವತ್ತಿನ ದಿವಸ ನಿಮ್ಮ ಇಲಾಖೆಯಲ್ಲಿ ಹಣ ಇಲ್ಲದಿದ್ದರೂ ಸಹ ಆರ್.ಡಿ.ಪಿ.ಯವರಿಗೆ ಬರೆಯಿರಿ. ಅವರ ಮನ ಹೊಲಿಸಿ ನೀವು ಇವತ್ತು ಹೆಣ್ಣುಮಕ್ಕಳ ಶಾಲೆಗಳಲ್ಲಿ ಶೌಚಾಲಯಗಳನ್ನು ಕಟ್ಟಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಮತ್ತೆ ಪ್ರತಿಯೊಂದು ಶಾಲೆಯ ಜಾಗವನ್ನು ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ, ಅಷ್ಟೆ ಅಲ್ಲ ಹಳ್ಳಿಯಲ್ಲಿ ಶಾಲೆಗಳಲ್ಲಿ ಶೇಂಗಾ ತಂದು ಹಾಕುತ್ತಾರೆ. ಅಂಥ ಶಾಲೆಗಳಿಗೆ ಒಂದು ಕಾಂಪೌಂಡ್ ವಾಲ್ ಕಟ್ಟಿ ಆ ಶಾಲೆಯನ್ನು ಕಾಪಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ ಇನ್ನು ನಾನು ಹೈಸ್ಕೂಲ್ ಬಗ್ಗೆ ಬರುತ್ತಿದ್ದೇನೆ. ಇವತ್ತಿನ ದಿವಸ ಅನುದಾನ ಹೈಸ್ಕೂಲ್, ಅನುದಾನ ರಹಿತ ಹೈಸ್ಕೂಲ್, ಗೌರ್ನಮೆಂಟ್ ಹೈಸ್ಕೂಲ್ ಇದು ಮೊದಲನೆಯದು. ನಮ್ಮ ಗೌರ್ನಮೆಂಟ್ ಹೈಸ್ಕೂಲ್‌ನಲ್ಲಿ 1879 ಗುರುಗಳ ಹುದ್ದೆಗಳು ಖಾಲಿ ಇವೆ. ಇವುಗಳನ್ನು ಇನ್ನು ಎಷ್ಟು ದಿವಸದಲ್ಲಿ ತುಂಬುತ್ತೀರಿ. ಇದು ಗೌರ್ನಮೆಂಟ್ ಹೈಸ್ಕೂಲಿನಲ್ಲಿ ಆಯಿತು. ಇನ್ನು ಪ್ರೈವೇಟ್ ಹೈಸ್ಕೂಲಿನಲ್ಲಿ ಏನು ಮಾಡಿದ್ದಾರೆಂದರೆ ಎಕಾನಮಿ ಆರ್ಡರ್ ಎಂದು ಮಾಡಿಕೊಂಡಿದ್ದಾರೆ. ಆ ಎಕಾನಮಿ ಮೆಜರ್ ದೆಸೆಯಿಂದ ಕಳೆದ 1986ರಿಂದ ಇವತ್ತಿನವರೆಗೂ ಅಪಾಯಿಂಟ್‌ಮೆಂಟ್ ಆಗಿಲ್ಲ.

ಈಗ ಎಕಾನಮಿ ಮೇಜರ್ ತೆಗೆಯಲಾಗಿದೆ.

ಶ್ರೀ ಎಸ್.ಎಚ್. ಕೌಜಲಗಿ.:- ಎಕಾನಮಿ ಮೆಜರ್ ತೆಗೆದಿದ್ದೇವೆ ಎಂದು ಹೇಳುತ್ತಾರೆ, ರೋಸ್ಟರ್ ಫಾಲೋ ಮಾಡಿಲ್ಲ, ಆದ್ದರಿಂದ ಫೈನಾನ್ಸ್‌ನಿಂದ ಅಪ್ರೂವ್ ಆಗುವುದಿಲ್ಲ. ವಿಚಾರ ಮಾಡಿರಿ ಅದನ್ನು ಹೇಳುವುದೇನೋ ಬರೀ ಎಲ್ಲಾ ಪೇಪರ್ ಪಬ್ಲಿಸಿಟಿ, ಎಕಾನಮಿ ಆರ್ಡರ್ ತೆಗೆದುಬಿಟ್ಟಿದ್ದಾರೆ ಅಂತ. ಮಾಸ್ತರ್ ಬಾಯಿ ತೆಗೆದು ಕುಳಿತಿರಬೇಕು. ಹೊಸ ಸರ್ಕಾರ ಬಂದಿದೆ. ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿ ಆದ ಕೂಡಲೇ ಎಕಾನಮಿ ಮೆಜರ್ ತೆಗೆದುಬಿಟ್ಟರು. ಆದರೆ ಆ ಎಕಾನಮಿ ಮೆಜರ್ ತೆಗೆದರೂ ಕ್ವೆರಿ ಹಾಕುವುದರಲ್ಲಿ ಎಜುಕೇಶನ್ ಡಿಪಾರ್ಟ್‌ಮೆಂಟ್‌ನಲ್ಲಿ ತಪ್ಪಿಲ್ಲ. ಇನ್ನು ಮಾಸ್ತರ್

ಅಪಾಯಿಂಟ್‌ಮೆಂಟ್ ಆಗಲಿಕ್ಕೆ ಇಲ್ಲ. ತಾವು ಅದನ್ನು ವಿಚಾರ ಮಾಡಿಕೊಳ್ಳಬೇಕು. ಸನ್ಮಾನ್ಯ ಅಧ್ಯಕ್ಷರೇ ಈ ಜೂನಿಯರ್ ಕಾಲೇಜಿನಲ್ಲಿ 1050 ವೇಕೆನ್ಸಿಗಳು ಇದ್ದಾವೆ. ಪ್ರಿನ್ಸಿಪಾಲ್ ಪೋಸ್ಟ್‌ಗಳು 130 ಇವೆ. ಇವುಗಳನ್ನು ತಾವು ಎಷ್ಟು ದಿವಸದಲ್ಲಿ ತುಂಬುತ್ತೀರಿ ವಿಚಾರ ಮಾಡಿ. ನಾನು ಗೌರ್ನಮೆಂಟ್ ಕಾಲೇಜುಗಳ ಬಗ್ಗೆ ಹೇಳುವುದಕ್ಕೆ ಹೊರಟಿದ್ದೇನೆ, ಖಾಸಗಿ ಕಾಲೇಜುಗಳ ಬಗ್ಗೆ ಅಲ್ಲ. ಹೋದ ವರ್ಷ 700 ಶಾಲೆ ಕೊಟ್ಟರು. ಪರ್ಮನೆಂಟ್ ಅನ್ ಎಯ್ಡ್ ಅಂದರೆ ಆ ಮಾಸ್ತರ್‌ಗೆ ಕಲ್ಪನೆ ಇರಲಿಕ್ಕೆ ಇಲ್ಲ, 7 ವರ್ಷ ಆದ ನಂತರ ನಮಗೆ ಗ್ರ್ಯಾಂಟ್ ಬರುತ್ತದೆಂದು ಅವರೆಲ್ಲರೂ ದುಡಿಯುತ್ತಿರುತ್ತಾರೆ.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಇದನ್ನು ಯಾರು ಕೊಟ್ಟರು ಯಾರು ಪ್ರಾರಂಭ ಮಾಡಿದರು ಅದನ್ನು ಸ್ವಲ್ಪ ಹೇಳಿಬಿಡಿ.

ಶ್ರೀ ಎಸ್. ಹೆಚ್. ಕೌಜಲಗಿ:– ಮಾನ್ಯ ಅಧ್ಯಕ್ಷರೇ ಪರ್ಮನೆಂಟಲಿ ಆನ್ ಎಯಡ್ ಶಾಲೆಗಳನ್ನು ಇವತ್ತು ನಾವೇ ಕೊಡಲಿ ಅವರೇ ಕೊಡಲಿ ಸರ್ಕಾರ ಕೊಟ್ಟಿದೆ. ಅದು ಬಹಳ ಮುಖ್ಯ. ಹೋದವರ್ಷ 700 ಶಾಲೆಗಳನ್ನು ಶ್ರೀಮಾನ್ ವೀರಪ್ಪ ಮೊಯಿಲಿಯವರು ಕೊಟ್ಟರು. ಅದು ಇಂಪಾರ್ಟೆಂಟ್ ಅಲ್ಲ ಆದರೆ ಕೊಡುವುದು ಸರ್ಕಾರ. ತಾವು ಅದರ ಬಗ್ಗೆ ಮರುಪರಿಶೀಲನೆ ಮಾಡಬೇಕು. ಇನ್ನು ಮೇಲೆ ಕೊಡುವ ಕಾಲಕ್ಕೆ ತಾವು ಆ ಭಾಗದಿಂದ ಬಂದಿದ್ದೀರಿ, ನಮಗೆ ಏನು ತೊಂದರೆ ಇದೆ ಎನ್ನುವುದು ಗೊತ್ತಿದೆ. ಇಷ್ಟೇ ಅಲ್ಲ 6–7 ವರ್ಷ ಆದರೂ ಅವರಿಗೆ ಏನೂ ಸಿಗುತ್ತಿಲ್ಲ, ಅದಕ್ಕೆ ರೋಸ್ಟರ್ ಫಾಲೋ ಆಗಿಲ್ಲ ಅಂತ ಹೇಳುತ್ತಾರೆ. ಆ ರೋಸ್ಟರ್ ಆಗಬೇಕಾದರೆ ಜಿಲ್ಲಾ ಪರಿಷತ್ತಿನಲ್ಲಿ ಅವರು ಅಪ್ರೂವಲ್ ಕೊಡಬೇಕು, ಕೊಟ್ಟಿದ್ದಾರೆ. ಡಿ.ಡಿ.ಪಿ.ಐ. ಅಪ್ರೂವಲ್ ಕೊಟ್ಟಿದ್ದಾರೆ ಮತ್ತು ಇನ್ನು ಏಕೆ ನೀವು ರೋಸ್ಟರ್ ಕೇಳುತ್ತೀರಿ ? ಅದು ಬಹಳ ಮುಖ್ಯ ಅನ್ನುವುದಾದರೆ, ಆವಾಗಲೇ ಕೇಳಬೇಕಾಗಿತ್ತು, ಇವತ್ತಿನ ದಿವಸ ಅಪ್ರೂವಲ್ ಕೊಡುತ್ತಾರೆ. ಡಿ.ಡಿ.ಪಿ.ಐ. ಅಪ್ರೂವಲ್ ಕೊಟ್ಟ ನಂತರ ಮತ್ತೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಕೇಳುತ್ತಾರೆ ರೋಸ್ಟರ್ ಫಾಲೋ ಮಾಡಿಲ್ಲ ಅಂತ, ಆ ಶಾಲೆಯಲ್ಲಿ ರೋಸ್ಟರ್ ತುಂಬಬೇಕು ತುಂಬಿ ಅಂದರೆ ಹೇಗೆ ? ಇದರಲ್ಲಿ ನ್ಯಾಯ ಇದೆಯೇ ಸ್ವಲ್ಪ ಮೆರಿಟ್ ಗ್ರೌಂಡ್ ಮೇಲೆ ವಿಚಾರ ಮಾಡಬೇಕು. 6–7 ವರ್ಷಗಳವರೆಗೂ ಅವರು ಪುಕ್ಕಟೆಯಾಗಿ ಆ ಶಾಲೆಯಲ್ಲಿ ದುಡಿದಿರುತ್ತಾರೆ. ಇನ್ನು ಮುಂದೆ ಆದರೂ ಪಗಾರ ಜಾಸ್ತಿ ಆಗಬಹುದೆನ್ನುವ ಉದ್ದೇಶದಿಂದ ಇರುತ್ತಾರೆ. ಆದಕಾರಣ ಅವರ ಹೊಟ್ಟೆ ಮೇಲೆ ಎದೆಯ ಮೇಲೆ ಬಡಿಯುವುದಲ್ಲ, ಅವರಿಗೆ ಸಹಾಯ ಮಾಡಿ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಾನೆ. ಅದರ ಬಗ್ಗೆ ತಾವು ಸ್ವಲ್ಪ ಸಾಫ್ಟ್ ಕಾರ್ನರ್ ಎಂದು ಏನು ಹೇಳುತ್ತೇವೆ ಆ ರೀತಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನೊಂದು ಧಾರವಾಡ ಜಿಲ್ಲೆಯಲ್ಲಿ ಮುಖ್ಯವಾದುದು ಅಂದರೆ ಹೈಸ್ಕೂಲ್‌ಗಳನ್ನು ಜಿಲ್ಲಾಪರಿಷತ್ತಿನಿಂದ ತೆಗೆದಿದ್ದಾರೆ. ಜಿಲ್ಲಾಪರಿಷತ್ತಿಗೆ ಕೊಟ್ಟರೆ ಇವತ್ತಿನವರೆಗೂ ಸರ್ಕಾರ ಅದಕ್ಕೆ ಅಪ್ರೂವಲ್ ಕೊಡಲಿಲ್ಲ ಇವತ್ತು ತಾವು ತಮ್ಮ ಪುಸ್ತಕದಲ್ಲಿ ಹೇಳಿದ್ದೀರಿ ಜಿಲ್ಲಾ ಪರಿಷತ್ತಿಗೂ ಸಹ ಹೈಸ್ಕೂಲ್ ತೆಗೆಯಲಿಕ್ಕೆ ಅಧಿಕಾರ ಇದೆ ಎಂದು. ಇದೇ ನಿಮ್ಮ ವರದಿಯಲ್ಲಿ ಹೇಳುತ್ತೀರಿ ಇವತ್ತಿನ ದಿವಸ ಜಿಲ್ಲಾಪರಿಷತ್ತಿನವರು ಗೌರ್ನಮೆಂಟ್ ಪರ್ಮಿಶನ್ ತೆಗೆದುಕೊಂಡಿದ್ದರೂ ಸಹ ಟೀಚರ್ಸ್‌ಗೆ ಪಗಾರ ಕೊಡುತ್ತಿಲ್ಲ. ಗೌರ್ನಮೆಂಟ್ ಪರ್ಮಿಶನ್ ತೆಗೆದುಕೊಳ್ಳದಿದ್ದರೆ ನಾನು ಒಪ್ಪುತ್ತೇನೆ. ಗೌರ್ನಮೆಂಟ್ ಪರ್ಮಿಶನ್ ತೆಗೆದುಕೊಂಡು ಇವತ್ತಿನದಿವಸ ನೀವು ಆ ಪೋಸ್ಟ್‌ಗಳನ್ನು ಅಪ್ರೂವ್ ಮಾಡದಿದ್ದರೆ ಮುಂದೆ ಆ ಟೀಚರ್ಸ್ ಎಲ್ಲಿಗೆ ಹೋಗಬೇಕು ? ಇನ್ನು ಅರೆಕಾಲಿಕ ಶಿಕ್ಷಕರ ಬಗ್ಗೆ ಕೂಡ ಮಾತನಾಡಿದ್ದೇವೆ. ಇನ್ನು ಮೇಲೆ ನಾನು ಈ ಪುಸ್ತಕಗಳ ಬಗ್ಗೆ ಹೇಳುತ್ತೇನೆ. ಈ ಪಠ್ಯಪುಸ್ತಕದ್ದು ಒಂದು ದೊಡ್ಡ ಗದ್ದಲ. ಅಪ್‌ಟು ಜೂನ್ ಜುಲೈ ತನಕ ಬುಕ್ ಪ್ರಿಂಟ್ ಮಾಡುವಂತೆ ಇಲ್ಲ, ಒಮ್ಮೆ ಹೇಳುತ್ತಾರೆ ಇದೇ ವರ್ಷದ ಪುಸ್ತಕ ಅಂತ ಮುಂದೆ ಹೇಳುತ್ತಾರೆ. ನೆಕ್ಸ್ಟ್ ಇಯರ್ ಬದಲಾಯಿತು ಅಂತ ಹೇಳುತ್ತಾರೆ, ಹೀಗಾಗಿ ಒಮ್ಮೆ ಸರ್ಕಾರ ಪ್ರಿಂಟ್ ಮಾಡಿತು ಅಂತ ಹೇಳುತ್ತಾರೆ, ಒಂದು ಸಾರಿ ಖಾಸಗಿಯವರು

ಪ್ರಿಂಟ್ ಮಾಡಬೇಕೆಂದು ಹೇಳುತ್ತಾರೆ. ಒಂದು ದೃಢ ನಿರ್ಧಾರ ತೆಗೆದುಕೊಳ್ಳಿ. ಇವತ್ತಿನ ದಿವಸ ಖಾಸಗಿಯವರಿಗೆ ಕೊಡುತ್ತೀರಾ ಖಾಸಗಿಯವರಿಗೆ ಕೊಡುತ್ತೇನೆಂದು ಹೇಳಿ. ಇವತ್ತು ಸರ್ಕಾರಕ್ಕೆ ಕೊಡುತ್ತೇನೆಂದರೆ ಸರ್ಕಾರಕ್ಕೆ ಕೊಡಿ. ಇವತ್ತಿನವರೆಗೂ ಪುಸ್ತಕ ಸಿಗುತ್ತಿಲ್ಲ. ವಿದ್ಯಾರ್ಥಿಗಳು ಝೆರಾಕ್ಸ್ ಮಾಡಿಕೊಂಡು ಓದುತ್ತಿದ್ದಾರೆ. ಮೊದಲಿನ ಪದ್ಧತಿ ಚಲೋ ಇತ್ತು. ಸರ್ಕಾರ ತಾವೇ ಪ್ರಿಂಟ್ ಮಾಡಿ ತಾವೇ ಕೊಡುತ್ತೇವೆ. ಆ ಕಾಲಕ್ಕೆ ಎಲ್ಲಾ ಕಡೆ ಬರುತ್ತಿತ್ತು ಚೆನ್ನಾಗಿರುತ್ತಿತ್ತು. ಅದನ್ನು ಬಿಟ್ಟು ನೀವು ಮತ್ತೆ ಖಾಸಗಿಯವರಿಗೆ ಕೊಡಲಿಕ್ಕೆ ಹತ್ತಿದಿರಿ. ಖಾಸಗಿಯವರಿಗೆ ಕೊಡುವುದರಿಂದ ಮನೋಪಾಲಿಯಾಗುತ್ತದೆ. ಅದರಿಂದ ಭ್ರಷ್ಟಾಚಾರ ಹೆಚ್ಚಾಗುತ್ತದೆ. ಆ ಕಾರಣ ಮೊದಲಿನ ಪದ್ಧತಿ ಚೆನ್ನಾಗಿತ್ತು. ತಾವು ಪುಸ್ತಕಗಳಲ್ಲಿ ತಿದ್ದುಪಡಿ ಮಾಡುವುದಿದ್ದರೆ ಬೇಗ ಮಾಡಿಕೊಳ್ಳಬೇಕು. ಈ ಪ್ರೈಮರಿ ವಿದ್ಯಾರ್ಥಿಗಳಿಗೆ 7–8 ಪುಸ್ತಕಗಳು ಇರುತ್ತವೆ. ಈ ಪುಸ್ತಕಗಳನ್ನು ಹುಡುಗರು ಹೊತ್ತುಕೊಂಡು ಬಗ್ಗಿಕೊಂಡು ಹೋಗಬೇಕು. ಆ ಹುಡುಗರ ನಡು ಬಗ್ಗಿ ಹೋಗುತ್ತದೆ. ಎಷ್ಟು ಎಷ್ಟು ಶಾಲೆ ಏನು ಕಲಿತೆ ಅಂತ ಈ ಪುಸ್ತಕ ಕಮಿಟಿ ಎಂದು ಏನು ಇದೆ, ಆ ಕಮಿಟಿಯವರು ಸ್ವಲ್ಪ ವಿಚಾರ ಮಾಡಬೇಕು. ಆ ಪುಸ್ತಕ ಯಾವ ಪ್ರಕಾರ ಇದೆ ಎಂದು ಅವರಿಗೆ ಗೊತ್ತಿಲ್ಲ. ಅದರ ಬಗ್ಗೆ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಮತ್ತು ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಂತಹ ವರದಿಗಳನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ, ತಾವು ದಯಮಾಡಿ ಓದಿ. ಓದಿದರೆ ತಮಗೆ ತಿಳಿಯುತ್ತದೆ. ಯಾವ ಪ್ರಕಾರ ನಮ್ಮ ರಾಜ್ಯದಲ್ಲಿ ಪುಸ್ತಕಗಳು ಪ್ರಿಂಟ್ ಆಗುತ್ತವೆ ಎಂದು. ಕಮಿಟಿ ಮಾಡುವ ಹೊತ್ತಿನಲ್ಲಿ ಆ ಮಕ್ಕಳ ವಯಸ್ಸು ಎಷ್ಟು ಇದೆ ಎಷ್ಟು ಭಾರ ಅವರ ಮೇಲೆ ನಾವು ಹಾಕುವುದಕ್ಕೆ ಅನುಕೂಲವಾಗುತ್ತದೆ ಅವರಿಗೆ ಎಷ್ಟು ತಿಳುವಳಿಕೆ ಇದೆ ಎನ್ನುವುದನ್ನೆಲ್ಲಾ ವಿಚಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇವತ್ತಿನದಿವಸ ಈ ಕಾಲೇಜಿನಲ್ಲಿ ತಾವು ನೋಡಬಹುದು. 140 ಕಾಲೇಜುಗಳು ಕರ್ನಾಟಕದ ವಿಶ್ವವಿದ್ಯಾಲಯದಲ್ಲಿದೆ. ನಮ್ಮ ಬಹುದಿನಗಳ ಬೇಡಿಕೆಯಿದೆ, ಬೆಳಗಾವಿಯಲ್ಲಿ ಯೂನಿವರ್ಸಿಟಿ ಆಗಬೇಕು ಅಂತ. ಅದೇರೀತಿ ಒಂದು ಮಹಿಳಾ ವಿಶ್ವವಿದ್ಯಾಲಯ ಮಾಡಬೇಕೆಂದೂ ಇದೆ. ಅದನ್ನು ಮಾಡಬೇಕಾದರೆ ಒಂದು ಪ್ರಪೋಸಲ್ ಕಮಿಟಿ ಎಂದು ನೇಮಕ ಮಾಡಿ, ಆಗ ಮುಂದೆ ಡಿಸಿಷನ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಒಮ್ಮೆಗೇ ಹಣಕಾಸಿನ ಈ ಸ್ಥಿತಿಯಲ್ಲಿ ಮಾಡುವುದಕ್ಕೆ ಆಗುವುದಿಲ್ಲ ಎಂದು ನನಗೂ ಗೊತ್ತಿದೆ. ಆದಕಾರಣ ತಮ್ಮಲ್ಲಿ ಕೇಳುವುದು, ಒಂದು ಕಮಿಟಿ ಮಾಡಿ. ಕುವೆಂಪು ಯೂನಿವರ್ಸಿಟಿ ಮಾಡಬೇಕಾದರೆ ರಿಪೋರ್ಟ್ ತರಬೇಕಾದರೆ ನಾಲ್ಕೈದು ವರ್ಷಗಳು ಬೇಕಾಯಿತು. ಮಹಿಳಾ ಯೂನಿವರ್ಸಿಟಿ ನಮ್ಮ ಕರ್ನಾಟಕದಲ್ಲಿ ಅತ್ಯವಶ್ಯವಿದೆ. ಅದನ್ನು ಕಿತ್ತೂರಿನಲ್ಲಿ ಮಾಡಬೇಕು, ಕಿತ್ತೂರು ಚೆನ್ನಮ್ಮ ರಾಣಿ ಹೆಸರಿನಲ್ಲಿ ಮಾಡಬೇಕು. ಈ ಕಾಲೇಜುಗಳಲ್ಲಿ ಇವತ್ತಿನತನಕ ಟೀಚರ್ಸ್ ನೇಮಕಾತಿ ಇಲ್ಲದೇ ಇರುವುದನ್ನು ನೋಡಬಹುದು. ಸರ್ಕಾರಿ ಕಾಲೇಜುಗಳಲ್ಲಿ ಫ್ಯಾನ್ಸ್ ಇಲ್ಲ, ಒಬ್ಬ ಕ್ಲರ್ಕ್ ಇಲ್ಲ. ನಮ್ಮ ನೇಸರ್ಗಿ ಸರ್ಕಾರಿ ಕಾಲೇಜಿನಲ್ಲಿ ಒಂದು ಟೈಪರೈಟರ್ ಇಲ್ಲ, ಆದರೆ ಟೈಪಿಸ್ಟ್ ಇದ್ದಾನೆ. ಟೈಪರೈಟರ್ ಕೆಟ್ಟಿದ್ದು ಅದನ್ನು ರಿಪೇರಿ ಮಾಡಿಸೋಕೆ 700 ರೂ. ಆಗುತ್ತದೆ. ಕೇವಲ 30 ಡೆಸ್ಕ್‌ಗಳನ್ನು ಅಲ್ಲಿಗೆ ಕೊಟ್ಟಿದ್ದಾರೆ. ಮತ್ತೆ ಕಪಾಟುಗಳಿವೆ, ಅವುಗಳ ಕ್ವಾಲಿಟಿ ಚಲೋ ಇಲ್ಲ. ಅವಕ್ಕೆ ಒದ್ದು ತೆಗೆಯುವಂತಹ ಪ್ರಸಂಗ ಇದೆ, ಏಕೆಂದರೆ ಅವು ತೆಗೆಯುವುದಕ್ಕೆ ಬರೋದಿಲ್ಲ. ಅಂತಹ ಕ್ವಾಲಿಟಿ ಏಕೆ ಉಪಯೋಗ ಮಾಡ್ತೀರಿ ? ನೀವು ಒಳ್ಳೆಯ ಕ್ವಾಲಿಟಿಯ ಡೆಸ್ಕ್ ತೆಗೆದುಕೊಳ್ಳಿ. ನಿಮ್ಮ ಬೆಂಗಳೂರಿನಲ್ಲಿ ಯಾವ ಪ್ರಕಾರ ನಿಮ್ಮ ಮಕ್ಕಳು ಕಲಿಯುತ್ತಾರೋ ನೋಡಿ, ನಮ್ಮ ಮಕ್ಕಳೂ ಹಳ್ಳಿಯವರೂ ಆ ಪ್ರಕಾರ ಕಲಿಯಬೇಕೆಂಬುದನ್ನು ವಿಚಾರ ಮಾಡಿ. ಇನ್ನೊಂದು, 15 ಪರ್ಸೆಂಟ್ ಮಾರ್ಕ್ಸ್ ಕೊಡುತ್ತೇವೆಂದು ಹೇಳಿದಿರಿ, ಅದೇನು ಮಾಡಿದಿರಿ ? ಹಳ್ಳಿಯಿಂದ ಯಾರು ಬಂದವರೋ ಅವರಿಗೆ, 15 ಪರ್ಸೆಂಟೋ ಅಥವಾ 5 ಮಾರ್ಕ್ಸ್ ಅನ್ನೋದು ಈ ಸರ್ಕಾರದಲ್ಲಿ ನಿರ್ಧಾರ ಇಲ್ಲ.

ಡಾ।। ಹೆಗಪ್ಪ, ಡಿ. ಲಮಾಣಿ:– ಅಧ್ಯಕ್ಷರೇ, ಅದು ತಪ್ಪಾಗಬಾರದು. ನಾವು 15 ಪರ್ಸೆಂಟ್

ಮಾರ್ಕ್ಸ್ ಕೊಡ್ತೇವೆ ಅಂತ ಹೇಳಿಯೇ ಇಲ್ಲ. 15ಮಾರ್ಕ್ಸ್ ಮಾಡುತ್ತೇವೆಂದು ಹೇಳಿದ್ದೇವೆ. ಮೊದಲು 15ಪರ್ಸೆಂಟ್ ಕೊಡುತ್ತಾ ಇದ್ದುದನ್ನು 15ಮಾರ್ಕ್ಸ್ ಅಂತ ಬದಲಾಯಿಸಿದ್ದೇವೆ. ಬೇಕಿದ್ದರೆ, ದಾಖಲೆ ತೆಗೆಸಿ ನೋಡಿ.

ಈಗ ನೀವು ಬೆಂಗಳೂರಿನಲ್ಲಿ ಮನೆ ಮಾಡಿದ್ದೀರಿ, ಆದ್ದರಿಂದ ನಿಮಗೆ ಗೊತ್ತಾಗುವುದಿಲ್ಲ, ನೀವು ಬೆಳಗಾವಿಯಲ್ಲಿ ಮನೆ ಮಾಡಿದ್ದರೆ ಗೊತ್ತಾಗುತ್ತಿತ್ತು, ಈಗ ಗೊತ್ತಾಗುವುದಿಲ್ಲ, 15 ಪರ್ಸೆಂಟ್ ಎಂದರೇನು, 15ಎಂದರೇನು ಎಂದು. 15ಪರ್ಸೆಂಟ್ ಏನಿದೆ 15ಪರ್ಸೆಂಟೇ ಇರಬೇಕು. ಟೋಟಲ್‌ಗೆ 15ಮಾರ್ಕ್ಸ್ ಅಂತ ಇಡುವುದಕ್ಕೆ ನಮ್ಮ ತಕರಾರು ಇದೆ. ಅನ್‌ಎಡೆಡ್ ಕಾಲೇಜುಗಳು ಸ್ಟಾರ್ಟಾಗಿವೆ ಪರ್ಮನೆಂಟ್ಲಿ ಅನ್‌ಎಡೆಡ್. ಇವತ್ತು ಕ್ಯಾಪಿಟೇಶನ್ ತೆಗೆದುಕೊಳ್ಳಬೇಡಿ ಅಂದರೆ, ಕಾಲೇಜಿನವರು ಹೇಗೆ ಕಾಲೇಜ್ ನಡೆಸಬೇಕು ? ಒಮ್ಮೆ ಯಾರೋ ನಮಗೆ ಅಷ್ಟು ಡೊನೇಶನ್ ಕೊಡಬಹುದು, ಒಂದು ವರ್ಷ ಎರಡು ವರ್ಷ ಕೊಡ್ತಾರೆ. ಸೋ ಇದು ಇನ್‌ಡೈರೆಕ್ಟ್ ಕರಪ್ಶನ್ ಇದೆ ಸರ್ಕಾರದವರೇ ಭ್ರಷ್ಟಾಚಾರ ಮಾಡಲಿಕ್ಕೆ ಹಚ್ಚಿದ್ದಾರೆ. ಇಷ್ಟಷ್ಟು ರೂಪಾಯಿ ತೆಗೆದುಕೊಳ್ಳಬೇಕೆಂದು ಹೇಳಿಬಿಡಿ, ಕೊನೆಯದಾಗಿ ಅಧ್ಯಕ್ಷರೇ ನಮ್ಮ ಭಾಗದಲ್ಲಿ ಕಿತ್ತೂರು ಚೆನ್ನಮ್ಮ ರೆಸಿಡೆನ್ಶಿಯಲ್ ಸ್ಕೂಲ್ ಇದೆ, ಇದು ಮಹಿಳೆಯರ ಸಲುವಾಗಿದ್ದುದು, ಒಳ್ಳೆಯ ಸ್ಕೂಲು, ನೂರಕ್ಕೆ ನೂರು ಮಕ್ಕಳು ಪಾಸಾಗುತ್ತಾರೆ. ಈಗ ಅದರ ಹಣಕಾಸಿನ ಸ್ಥಿತಿ ಒಳ್ಳೆಯದಿಲ್ಲ. ಆದಕಾರಣ ಅದಕ್ಕೆ ತಾವು ಹೆಚ್ಚಿನ ಹಣಕಾಸು ಕೊಡಬೇಕೆಂದು ಕೇಳುತ್ತೇನೆ. ಆ ಕಿತ್ತೂರು ಚೆನ್ನಮ್ಮ ರೆಸಿಡೆನ್ಶಿಯಲ್ ಸ್ಕೂಲ್‌ನಲ್ಲಿ 5 ಮಂದಿಗೆ ಮೆರಿಟ್ ಮೇಲೆ ಮೆಡಿಕಲ್ ಸೀಟು, ಇಬ್ಬರಿಗೆ ಡೆಂಟಲ್ ಸಿಕ್ಕರೆ 9ಮಂದಿಗೆ ಇಂಜಿನಿಯರಿಂಗ್ ಸಿಕ್ಕಿದೆ. ಕೇವಲ 32ವಿದ್ಯಾರ್ಥಿಗಳಲ್ಲಿ ಆ ಪ್ರಕಾರ ಸಿಕ್ಕಿದೆ. ಆ ಸಲುವಾಗಿ ತಮ್ಮ ಕೃಪಾದೃಷ್ಟಿ ಆ ಶಾಲೆ ಮೇಲಿರಲಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಬಿಜಾಪುರ ಸೈನಿಕ್ ಸ್ಕೂಲ್ ಕೂಡ ಇವತ್ತು ಆರ್ಥಿಕ ಮುಗ್ಗಟ್ಟಿನಲ್ಲಿದೆ. ತಾವು ಹೇಳಿದಿರಿ, ಬಿಜಾಪುರ ಸೈನಿಕ್ ಸ್ಕೂಲಿಗೆ 15ಲಕ್ಷ ಬೇಕಾಗಿದೆ ನಾನು ಆರ್ಥಿಕ ಇಲಾಖೆಗೆ ಕಳಿಸಿದ್ದೇನೆ ಕೊಡಿಸ್ತೇನೆ ಎಂದು. ಇವತ್ತಿನತನಕ ಆ ಹಣ ಬಿಡುಗಡೆಯಾಗಿಲ್ಲ. ಮೊನ್ನೆ ಪ್ರಿನ್ಸಿಪಾಲರು ಭೇಟಿಯಾಗಿದ್ದರು, ಸಾರ್ ಬರೀ ಪೇಪರಿನಲ್ಲಿ ಬಂತು, ಏನೂ ಆಗಿಲ್ಲ ಎಂದು ಹೇಳಿದರು. ಕರ್ನಾಟಕದ ಹೆಮ್ಮೆಯ ಸ್ಕೂಲು, ಬಿಜಾಪುರದ ಸೈನಿಕ್ ಸ್ಕೂಲ್ ಹಾಗೂ ಕಿತ್ತೂರು ಚೆನ್ನಮ್ಮ ರೆಸಿಡೆನ್‌ಶಿಯಲ್ ಸ್ಕೂಲ್ ದಿವಂಗತ ಎಸ್.ಆರ್. ಕಂಠಿಯವರು ಕಟ್ಟಿದ ಶಾಲೆ. ಅವರು ವಿದ್ಯಾ ಇಲಾಖೆಗೆ ಒಳ್ಳೆಯ ಹೆಸರು ತಂದಂಥವರು. ಅಂತಹ ಶಾಲೆಗೆ ತಾವು ಸಹಾಯ ಮಾಡಬೇಕು ಅದೂ ಅಲ್ಲದೆ, ಚಂದ್ರಗಿರಿ ರೆಸಿಡೆನ್ಶಿಯಲ್ ಸ್ಕೂಲ್ ಎಂದು ಒಂದಿದೆ. ಇದೊಂದು ಸ್ಪೋರ್ಟ್ಸ್ ಸ್ಕೂಲ್. ನಮ್ಮ ಭಾಗದಲ್ಲಿ ಸ್ಪೋರ್ಟ್ಸ್ ಸಲುವಾಗಿ ಚಂದ್ರಗಿರಿ ರೆಸಿಡೆನ್ಸ್ ಸ್ಕೂಲ್ ಇದೆ. ಅದಕ್ಕೂ ಕೂಡ ಆರ್ಥಿಕ ಸಹಾಯ ಮಾಡುವುದು ಅತ್ಯವಶ್ಯವಿದೆ. ಈ ವರ್ಷದಿಂದ ಅವರು ಸೈನ್ಸ್ ವಿಭಾಗವನ್ನು ಪ್ರಾರಂಭಿಸುತ್ತಿದ್ದಾರೆ. ತಾವು ಆರ್ಟ್ಸ್ ಮತ್ತು ಕಾಮರ್ಸ್ ಕೊಟ್ಟಿದ್ದೀರಿ, ಆದಕಾರಣ ಸೈನ್ಸ್‌ನಲ್ಲೂ ಪರೀಕ್ಷೆಗೆ ವಿದ್ಯಾರ್ಥಿಗಳು ಕೂಡಬೇಕಾಗಿದೆ. ಅದಕ್ಕೆ ತಾವು ಅನುಮತಿಯನ್ನು ಬೇಗನೆ ಕೊಡಬೇಕೆಂದು ನಾನು ಕೇಳುತ್ತೇನೆ ಮತ್ತು ಅದಕ್ಕೆ ಹೆಚ್ಚಿನ ಗ್ರ್ಯಾಂಟ್ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ನಮ್ಮ ಜನರಿಗೆ ಯಾವ ತರಹದ ಗವರ್ನಮೆಂಟ್ ಆರ್ಡರ್‌ಗಳಿವೆ ಎಂದು ಗೊತ್ತಿಲ್ಲ. ಈ ಶಾಲೆ ತೆಗೆಯುವವರಿಗೆ ಒಂದು ಜಿಒಸ್ ಇಲ್ಲ. ಆದಕಾರಣ ನಾನು ಹೋದವರ್ಷ ಸಜೆಸ್ಟ್ ಮಾಡಿದ್ದೆ ಕೇರಳದಲ್ಲಿ ಒಂದು ಜಿಒ ಪುಸ್ತಕ ಇಟ್ಟಿದ್ದಾರೆ. ಯಾವ ಕಾಲದಲ್ಲಿ ಅಪ್ಲಿಕೇಶನ್ ಕೊಡಬೇಕು, ಯಾವ ನಿಯಮಗಳಿವೆ, ಅನ್ ಏಡೆಡ್ ಯಾವುವು, ಎಸ್.ಸಿ.ಎಸ್.ಟಿ. ಮ್ಯಾನೇಜ್‌ಮೆಂಟಿನವು ಎಂದು ಎಲ್ಲಾ ಸೇರಿಸಿ ಒಂದು ಜಿಒಸ್ ಪುಸ್ತಕ ಮಾಡಿಬಿಟ್ಟಿದ್ದಾರೆ. ಅವರೇನು ಪುಕ್ಕಟೆ ಕೊಡುವುದಿಲ್ಲ. ಪ್ರತಿ ಶಾಲೆಯವರೂ ಪರ್ಚೇಸ್ ಮಾಡುತ್ತಾರೆ. ಅದು ಸರ್ಕಾರಕ್ಕೆ ವರಮಾನವಾಗುವುದು. ಆದಕಾರಣ ಅಂತಹ ಪುಸ್ತಕವನ್ನು ತಾವು ಪ್ರಿಂಟ್ ಮಾಡಬೇಕು. ಏಕೆಂದರೆ, ಇವತ್ತು ನಾವು ಕೇಳ್ತೀವೆ, ಅನ್

ಏಡೆಡ್ ಇವು, ಎಸ್.ಸಿ.ಎಸ್.ಟಿ. ಮ್ಯಾನೇಜ್‌ಮೆಂಟಿನೊಳಗಿದ್ದುದು ಅನ್ ಏಡೆಡ್ ಆಯಿತು ಅಂದರೆ ಅವರ ಕಲ್ಪನೆ ಏನಾಗುತ್ತದೆ ಅಂದರೆ ಇದು ಗ್ರಾಂಟ್ ಏಡ್ ಆಗುತ್ತದೆಂದು ಹೇಳುತ್ತಾರೆ. ಅದು ಪರ್ಮನೆಂಟ್ ಅನ್ ಏಡೆಡ್ ಇದ್ದರೆ ಅದು ಆಗುವುದಿಲ್ಲ ಎಂದು ಯಾರಿಗೂ ಗೊತ್ತಿಲ್ಲ. ಆದಕಾರಣ ಗವರ್ನಮೆಂಟ್ ಜಿಓಗಳ ಒಂದು ಪುಸ್ತಕ ಪ್ರಿಂಟ್ ಮಾಡಿಸಬೇಕೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತಿದ್ದೇನೆ. ಮತ್ತೆ ಎ.ಇ.ಓ.ಗಳಿಗೆ ಒಂದು ಜೀಪ್ ತಾವು ಕೊಡಬೇಕು. ಎಇಓಗೆ ತಾಲ್ಲೂಕು ತುಂಬಾ ಅಡ್ಡಾಡಬೇಕಾದರೆ ಜೀಪು ಬೇಕಾಗುತ್ತದೆ. ಇಲ್ಲದಿದ್ದರೆ, ಯಾವ ಕೆಲಸ ಮಾಡಲಿಕ್ಕಾಗುವುದಿಲ್ಲ. ಇವತ್ತಿನ ದಿವಸ ಟ್ಯೂಷನ್ ಹಾವಳಿ ಪ್ರಾಥಮಿಕ ಶಿಕ್ಷಣದಿಂದ ಕಾಲೇಜ್ ಶಿಕ್ಷಣದ ತನಕ ಸ್ಟಾರ್ಟಾಗಿದೆ. ಅಧ್ಯಕ್ಷರೇ, ವೆಕೇಶನ್ ಮೂರು ತಿಂಗಳು ಅಂತ ಗವರ್ನಮೆಂಟ್ ಹೈಸ್ಕೂಲ್ ಹೆಡ್ಮಾಸ್ಟರ್ ಪ್ರಿನ್ಸಿಪಾಲ್ಸ್ ಎಲ್ಲ, ಮೂರು ಸಾವಿರ ಎರಡು ಸಾವಿರ ತೊಗೊಳ್ಳುತ್ತಾರೆ. ತಾವು ಕಾಯಿದೆ ತನ್ನಿರಿ. ಆ ಕಾಯಿದೆ ತಂದರೆ ಎಲ್ಲಿಯವರೆಗೆ ನಮ್ಮ ಶಾಲೆಗಳು ಸುಧಾರಿಸುವುದಿಲ್ಲವೋ ಅಲ್ಲಿಯವರೆಗೆ ಈ ಟ್ಯೂಷನ್ ಹಾವಳಿ ಹೋಗುವುದಿಲ್ಲ. ಟ್ಯೂಶನ್ ಯಾವಾಗ ಹಾಳಾಗಿಹೋಗುತ್ತದೆ ಎಂದರೆ ನಮ್ಮ ಶಾಲೆಯೊಳಗೆ ಒಳ್ಳೆಯ ಅಭ್ಯಾಸ ಮಾಡುತ್ತಿದ್ದರೆ, ಆಗ ಟ್ಯೂಷನ್ ತನ್ನ ತಾನೇ ಹೋಗುತ್ತದೆ ಹೊರತಾಗಿ ಅಲ್ಲಿಯವರೆಗೆ ಹೋಗುವುದಿಲ್ಲ. ಯಾವ ಶಾಲೆ ಉತ್ತಮ ರೀತಿಯಲ್ಲಿ ನಡೆಯುತ್ತಿರುತ್ತದೆ ಅಲ್ಲಿ ಟ್ಯೂಷನ್ ಇರುವುದಿಲ್ಲ. ಆದಕಾರಣ ಶಾಲೆಗಳಲ್ಲಿ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿಗೆ ಲಕ್ಷ್ಯ ಕೊಡಬೇಕು. ಮಂತ್ರಿಗಳಾದವರೂ ಕಮೀಶನ್‌ರ ಆದವರು ಸರ್ಪ್ರೈಸ್ ವಿಸಿಟ್ ಮಾಡಬೇಕು. ಒಬ್ಬರೂ ಮಾಡುವುದಿಲ್ಲ. ನಿಮ್ಮನ್ನು ಕೇಳುತ್ತೇನೆ. ಹಿಂದಿನ ಮಂತ್ರಿಗಳಾಯಿತು, ನೀವಾಯಿತು, ಒಮ್ಮೆಗ್ಗೆ ಸರ್ಪ್ರೈಸ್ ವಿಸಿಟ್ ಮಾಡಿಲ್ಲ.

ಡಾ।। ಹೆಗ್ಗಪ್ಪ ಡಿ. ಲಮಾಣಿ:- ಇದರಲ್ಲಿ ನಾನು ಇಂಟರ್‌ಫಿಯರ್ ಮಾಡುತ್ತೇನೆ. ಈಗಾಗಲೇ ನಾನು ಕಮೀಶನರ್ ಆಫೀಸಿಗೆ ವಿಸಿಟ್ ಮಾಡಿದ್ದೇನೆ. ನಾನು ಅಧಿಕಾರ ವಹಿಸಿಕೊಂಡ ನಂತರ ಸುಮಾರು 50 ಶಾಲೆಗಳಿಗೆ ಭೇಟಿ ಕೊಟ್ಟಿದ್ದೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:- ಮಂತ್ರಿಗಳು ಎಲ್ಲಾದರೂ ಸರ್‌ಪ್ರೈಸ್ ವಿಸಿಟ್ ಕೊಟ್ಟರೆ, ತಕ್ಷಣ ಪೇಪರ್ನಲ್ಲಿ ಬರುತ್ತದೆ, ಇದು ಬಂದಿಲ್ಲ. ಅಧ್ಯಕ್ಷರೇ, ನಮ್ಮಲ್ಲಿ ಚೀಫ್ ಸೆಕ್ರೆಟರಿ ಒಬ್ಬರಿದ್ದರು, ಅವರು ಸರ್ಪ್ರೈಸ್ ವಿಸಿಟ್ ಮಾಡುತ್ತಿದ್ದರು. ಆಗ ನಮ್ಮ ಬೆಳಗಾಂ ಜಿಲ್ಲೆಯ ಶಿಕ್ಷಣ ಇಲಾಖೆಯು ಸುಧಾರಿಸಿದಂತಹ ಮತ್ತೊಬ್ಬ ಚೀಫ್ ಸೆಕ್ರೆಟರಿ ಇಲ್ಲ ಅಂತ ನಾನು ಹೆಮ್ಮೆಯಿಂದ ಹೇಳ್ತಿದ್ದೇನೆ. ಅದೇ ರೀತಿ ನಿಮ್ಮ ಚೀಫ್ ಸೆಕ್ರೆಟರಿಗಳಿಗೆ ಎಲ್ಲಾ ಕಡೆ ಸರ್‌ಪ್ರೈಸ್ ವಿಸಿಟ್ ಕೊಡ್ರಿ ಅಂತ ಹೇಳಿ ಅವನು ಏನು ಮಾಡಲಿಲ್ಲ, 4 ಮಂದಿ ಸಸ್ಪೆಂಡ್ ಇಟ್ಟರು. ಇನ್ನೇನೂ ಮಾಡಲಿಲ್ಲ. ಆ ದೃಷ್ಟಿಯಿಂದ ಇದನ್ನು ನೀವು ಸುಧಾರಿಸುವುದು ಅತಿ ಜರೂರಿದೆ.

SRI DERRICK M. FULLINFAW (Nominated):- Mr. Deputy Speaker, Sir, I am speaking today on behalf of the educationally crippled Anglo- Indian Community and also on behalf of the poor and middle class people of our society whose children continue to be denied education in the existing English Medium Schools in Bangalore because of the shameful evil and unethical practice of extracting huge donations for securing admissions in the English Medium schools in Bangalore. The Anglo-Indian Community is an educationally crippled community and that is why the State Government in 1987 introduced a scheme of fee reimbursement for the children of the Anglo-Indian Community from Standards 1 to 10. I am happy to say that

this scheme has greatly helped the Anglo-Indian Community and today more and more children are attending schools and the number of school drop-outs from the Anglo-Indian Community has greatly reduced. However, due to the economic circumstances and due to the high cost of living in Bangalore City, most of the Anglo-Indian children who have completed their High Schools are forced to discontinue their studies and seek employment to look after themselves and their families. At the moment, there must be only 75 to 100 children in Anglo-Indian Community. in PUC and Degree courses in various colleges in Karnataka. The number of PUC and Degree drop-outs has been steadily increasing.

Whereas the number of school drop-outs has greatly reduced because of the fee-reimbursement scheme introduced by the Government in 1987. It is my fear as representative of the Anglo-Indian Community, this micro scopic community that if the State Government does not come to our rescue with liberal educational aid, due to the economic circumstances and the massive poverty affecting the Anglo-Indian Community there will be hardly any fresh PUC or Degree students coming out in the future. It will be really unfortunate because at the moment there are only 100. Because of the economic circumstances and the high cost of the fees, I think in another few years, the Anglo-Indian Community will hardly have any PUC., or Degree students. I therefore, humbly appeal to both the Minister for Education and the Government to come to the rescue of the Anglo-Indian Community and provide us free education in PUC and Degree courses for the children of the Anglo-Indian Community or introduce a scheme for reimbursement of the college fees for the children of the Anglo-Indian Community as it is done in the schools.

In the State of Kerala, the Anglo-Indian Community is classified as a backward community and therefore the children of Anglo-Indian Community get free education in colleges. When this Anglo-Indian Community was doing fairly well, it has contributed significantly to the progress of our country. The Anglo-Indian Community has been pioneers in the field of Education, Health, Railway, Posts and Telegraphs and so many fields. They have done good for the country. Today, the community has come down due to various reasons. Today they are in a very miserable stage. I appeal to the Government, come to our rescue, give us the chance and I can assure you, a day will come when the community will re-pay the good deed done by the Government. I have already spoken to the Minister for Higher Education Sri S.M. Yahya in this regard and he has been very sympathetic and he has offered his support in this matter. Now, I appeal to the Hon'ble Minister for Primary and Secondary Education to please

consider our matter, as it is a very genuine case and I appeal to the Government to come to our rescue with liberal educational aid. I am happy that the recent judgment of the Supreme Court of India has virtually given a death-blow to the evil practice of capitation fee in Professional and Technical colleges. I am also confident that our Hon'ble Minister for Higher Education Mr. S.M. Yahya, who is a dynamic Minister, will give this evil practice of capitation fee, a descent burial. Proper implementation of the court's verdict will definitely ensure, as absolute end of this evil practice. But what is most unfortunate is this evil practice of donations is still continuing in the schools of Bangalore City and our Government is keeping its eyes closed and no action has been taken. I do not know why? This practice is really affecting the poor and middle class of our State. I am sure all the Members of this House, are one in this matter and we want an end to this evil practice of donation.

Today, we believe in a socialistic welfare state where the people are to be provided equal opportunities in the matter of employment, education etc., subject to the restrictions laid down in the Constitution. These corrupt institutions which are extracting and demanding huge donations from Rs. five thousand to thirty thousand for L.K.G. seat, do not provide equal opportunities. They are providing opportunities only to the rich and affluent sections of the society who can pay these heavy donations, and the poor and middle class of our State are denied educational opportunities because of this evil practice. I strongly feel that in a socialistic State like Karnataka, where 60% of the population are below the poverty line, such corrupt institutions which cater only to the affluent sections of the society should not be allowed to continue in this arrogant and indecent manner. Today, particularly Primary and Secondary Education is essential for the survival of poor and middle class of our society. The rich can manage with or without education. I therefore, demand that this evil practice of donations which has caused and is causing denial of education to the poor and middle class of our State should be eliminated once and for all. What is even more shocking is a good percentage of Students in these schools are Students from other states, because they can afford to pay huge and heavy donations, whereas the poor and middle class of our State are denied education because they are unable to pay these donations. I describe the managements of these corrupt institutions as nothing short of murderers, they have murdered and destroyed the children of poor and middle class of our society. Should we, as responsible representatives of the people be silent spectators to these crimes that are committed on our people? It has gone too far. There are some schools in the name of building funds for the past thirty years. They are extracting money in the name of building fund.

One building after another comes up and these buildings are in no wa used for the benefit of our poor and middle class people of the society. therefore, want to say, what difference is there between scoundrel dacoits, anti-social elements and the management of these corru institutions? They are one and the same. I therefore appeal to the Hon'b Members of this House, let us in the name of God, in the name of truth, p down this very shameful and evil practice of donations, before it destro the education system in our State, and our country.

(HON'BLE MR. SPEAKER SRI V.S. KOUJALAGI in the Chair)

I would also like to say that for the past thirty years, there has been demand to set up a Government College in the Cantonment area. In th Cantonment area, there are only private colleges and as you know, the private colleges cater only to the affluent sections of our society ar therefore the poor and middle class in the Cantonment area are put to gre difficulty because there is no Government college. I therefore, appeal our Hon'ble Minister for Higher Education who is not here, to kindly tal up this matter and see that a Government College is set up in th Cantonment area. It is the demand for the past thirty years.

Further, the previous Government had set up a committee to overse the educational facilities of the Anglo-Indian Community. This committ had its meeting in May 1990 when I was the Member of the Legislati Assembly representing the Anglo-Indian Community. But unfortunately t previous M.L.A., was called for the meeting and I was not called. I broug this matter to the notice of the then Education Minister Mr. K.H. Rangana who said it was a gross mistake. Thereafter, till today, not a single meeti of this Committee has been held. I also demand that the Committee shou be reconstituted with the people who will do justice to this particu community. But I don't know, this community has so many problems, a such an important committee under the Chiarmanship of our Hon'b Minister for Education has not held even a single meeting so far. T previous Education Minister and the present Chief Minister had giv directions to call for the meeting immediately. The other day I had rais the matter under Rule 334 and the reply given was not satisfactor therefore humbly appeal to our Hon'ble Minister to kindly see that t committee......

ಶ್ರೀ ವಾಟಾಳ್ ನಾಗರಾಜ್:- ನಾನು ಸ್ನೇಹಿತರಲ್ಲಿ ಒಂದು ಮನವಿ ಮಾಡುತ್ತೇನೆ. ತಾವು ಎ ವರ್ಷದಿಂದ ಬೆಂಗಳೂರು ನಗರದಲ್ಲಿ ಇದ್ದೀರಿ. ಬಹುಶಃ ತಾವು ಹತ್ತಾರು ವರ್ಷಗಳಿಂದ ಬೆಂಗಳೂ ನಗರದಲ್ಲಿ ಇದ್ದೀರಿ ಎಂದು ಭಾವಿಸಿಕೊಂಡಿದ್ದೇವೆ. ಆದುದರಿಂದ ನೀವು ಕನ್ನಡವನ್ನು ಕಲಿತು ಚೆನ ಮಾತನಾಡಬಹುದಾಗಿತ್ತು. ನೀವು ಏಕೆ ಕನ್ನಡದಲ್ಲಿ ಮಾತನಾಡುತ್ತಿಲ್ಲ. ಇದು ನಿಜವಾಗಲೂ ಮನ

ಬಹಳ ನೋವು ಮತ್ತು ಆಘಾತ ಆಗುತ್ತಿದೆ. ನೀವು ಆಂಗ್ಲ ಭಾಷೆಯಲ್ಲಿ ನಿಮ್ಮ ಅನ್ಯಾಯಗಳ ಬಗ್ಗೆ ನಿಮಗೆ ಅನ್ಯಾಯವಾಗಿದೆ ಎಂದು ಏನು ಹೇಳುತ್ತಿದ್ದೀರಿ ಅದನ್ನೇ ಮಧುರವಾದಂತಹ ಕನ್ನಡ ಭಾಷೆಯಲ್ಲಿ ಹೇಳಿದರೆ ಈ ಸದನದ ಎಲ್ಲರಿಗೂ ಸಹ ಅರ್ಥವಾಗುತ್ತದೆ. ಇದು ನಿಮ್ಮ ಒಬ್ಬರಿಗೆ ಅರ್ಥವಾಗುವುದು ಸರಿ ಕಾಣುವುದಿಲ್ಲ. ಆದುದರಿಂದ ತಾವು ಕನ್ನಡದಲ್ಲಿ ಮಾತನಾಡಿದಾಗ ತಪ್ಪಾದರೂ ಚಿಂತೆ ಇಲ್ಲ ಸ್ವಲ್ಪ ಭಾಷೆ ವ್ಯತ್ಯಾಸವಾದರೂ ಚಿಂತೆ ಇಲ್ಲ, ನಾವು ಅದನ್ನು ಸಹಿಸಿಕೊಂಡು ಕಲಿತುಕೊಳ್ಳುತ್ತೇವೆ. ಆದುದರಿಂದ ದಯವಿಟ್ಟು ತಾವು ಕನ್ನಡದಲ್ಲೇ ಮಾತನಾಡಿ ನೋಡೋಣ.

ಶ್ರೀ ಕೆ.ಹೆಚ್. ಹನುಮೇಗೌಡ:– ಇಲ್ಲಿಯವರೆಗೂ ತಾವು ಏತಕ್ಕೆ ಸುಮ್ಮನೆ ಇದ್ದೀರಿ. ಮಲಗಿದ್ದಿರಾ ? ಅವರು ಅರ್ಧ ಗಂಟೆ ಮಾತನಾಡಿದರಲ್ಲಾ !

ಶ್ರೀ ವಾಟಾಳ್ ನಾಗರಾಜ್:– ನೀವು ಮಲಗಿದ್ದೀರಿ ಎಂದು ನನಗನಿಸುತ್ತದೆ. ಮಲಗಿರುವುದು ನನಗೆ ಗೊತ್ತಿದೆ. ನನಗೆ ಗೊತ್ತಿದೆ ಹನುಮೇಗೌಡ್ರೇ, ನಿಮ್ಮಿಂದ ನಾನೇನು ಬುದ್ಧಿ ಕಲಿಯಬೇಕಾಗಿಲ್ಲ. ಮಲಗಿಕೊಳ್ಳುವುದು, ಕುಳಿತುಕೊಳ್ಳುವುದು ನನಗೆ ಗೊತ್ತಿದೆ. ಅವರಿಗೆ ಭಾಷೆಯೇ ಬರುವುದಿಲ್ಲ ಎಂದು ಅನಂದುಕೊಂಡಿದ್ದೆ ನಾನು. ನಿಮಗೆ ಭಾಷೇನೆ ಬರುವುದಿಲ್ಲವೇನೋ. ಭಾಷೆ ಬರುವುದಿಲ್ಲ ಎಂದರೆ ಏನು ತಮಗೆ ಹೇಳುತ್ತಿದ್ದೇನೆ, ನಾನೇನು ನಿಮ್ಮನ್ನು ವಿರೋಧ ಮಾಡುತ್ತಿಲ್ಲ. ಈ ಸದನದ ಸದಸ್ಯರಾಗಿದ್ದೀರಿ. ನಿಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ. ಕನ್ನಡದಲ್ಲಿ ತಾವು ಮಾತನಾಡತಕ್ಕಂಥ ಅಭ್ಯಾಸ ಇಟ್ಟುಕೊಂಡರೆ ಒಳ್ಳೆಯದು. ಮತ್ತು ಕನ್ನಡದಲ್ಲಿ ಮಾತನಾಡಿ. ನಾವು ಅಷ್ಟೊತ್ತಿನಿಂದ ಬಹಳ ವಕ ಪಡುತ್ತಿದ್ದೇವೆ.

SRI DERRICK M. FULLINFAW:– Respected Mr. Speaker Sir, I can appreciate what Mr. Vatal Nagaraj has said. In fact, I have great respect for him, as a champion of Kannada, I feel very ashamed that we are unable to learn this language. But we, the Anglo Indian people, have always found the language very difficult. I also appeal to the Hon'ble Minister to kindly arrange for some Kannada Teachers to teach the language to the children of Anglo–Indian Community. I am the first person to learn the language.

ಶ್ರೀ ವಾಟಾಳ್ ನಾಗರಾಜ್:– ಅವರಲ್ಲಿ ಮನವಿ ಮಾಡುತ್ತೇನೆ. ಸಂತೋಷ. ನಿಮ್ಮ ಭಾವನೆ ಅರ್ಥವಾಯಿತು. ನಾನು ತಮಗೆ ಏನು ಹೇಳುತ್ತಿದ್ದೇನೆ ಎಂದರೆ ನಮ್ಮಲ್ಲಿ ಕನ್ನಡ ಶಾಲೆಗಳು ಬಹಳ ಇವೆ. ನೀವು ನಾಳೆ ನಿಮ್ಮಲ್ಲಿ ಎಷ್ಟು ಜನ ನಿಮ್ಮ ವಿದ್ಯಾರ್ಥಿಗಳನ್ನು ಕನ್ನಡ ಮಾಧ್ಯಮದಲ್ಲಿ ಕಲಿಸುವುದಕ್ಕೆ ಕಳುಹಿಸುವುದಾದರೆ ನಾನೇ ಮುಂದೆ ನಿಂತುಕೊಂಡು ಎಲ್ಲರನ್ನು ಸೇರಿಸುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು):– ಮಾನ್ಯ ವಾಟಾಳ್ ನಾಗರಾಜ್‌ರವರು ಮಾನ್ಯ ಡೆರಿಕ್ ಪುಲಿನ್‌ರವರನ್ನು ಸದಸ್ಯರನ್ನು ಕೇಳಿದ್ದು ಮಾತನಾಡಿ ಎಂದು ಕೇಳಿದ್ದೇ ಹೊರತು ಅವರು ಬರವಣಿಗೆ ಮಾಡಿ ಓದಿ ಎಂದು ಕೇಳಲಿಲ್ಲ. ಮಾನ್ಯ ಸದಸ್ಯರು ನಮ್ಮ ಜೊತೆಯಲ್ಲೇ ಕನ್ನಡದಲ್ಲಿ ಮಾತನಾಡುತ್ತಾರೆ. ಸಾಮಾನ್ಯವಾಗಿ ಒಬ್ಬರಿಗೊಬ್ಬರು ಮಾತನಾಡುವಾಗ. ಅದನ್ನು ಕೇಳಿದ್ದಾರೆ ಶ್ರೀ ವಾಟಾಳ್ ನಾಗರಾಜ್‌ರವರು. ಆದ್ದರಿಂದ ನಾವು ಓದಿ ಅಥವಾ ಬರೆಯಿರಿ ಎಂದು ಕೇಳುತ್ತಿಲ್ಲ. ಕನ್ನಡದಲ್ಲಿ ನಮ್ಮ ಜೊತೆ ಕಾರಿಡಾರ್‌ನಲ್ಲಿ ಸಿಕ್ಕಿದಾಗ ಮಾತನಾಡುತ್ತಾರೆ. ಅದೇ ರೀತಿ ಕನ್ನಡದಲ್ಲಿ ಸ್ವಲ್ಪ ಮಾತನಾಡಿ ಎಂದು ಹೇಳಿ.

SRI DERRICK M. FULLIN FAW:– Unless I am able to reply him, properly,

I may not be able to speak. I can speak Kannada here. But I don want to murder such a good language in this House.

ಶ್ರೀ ವಾಟಾಳ್ ನಾಗರಾಜ್:– ಭಾಷೆ ಸ್ವಲ್ಪ ವ್ಯಾಕರಣ ವ್ಯತ್ಯಾಸವಾದರೂ ಚಿಂತೆಯಿಲ್ಲ. ಕಾಗುಣಿ ವ್ಯತ್ಯಾಸವಾದರೂ ಚಿಂತೆಯಿಲ್ಲ. ಕನ್ನಡವನ್ನು ಕಾನಡ ಎಂದರೂ ಚಿಂತೆಯಿಲ್ಲ. ಆದರೂ ನಾವ ಕೇಳಿಕೊಳ್ಳೋಣ. ಸಧ್ಯ ಕನ್ನಡದಲ್ಲಿ ಅವರು ಹೇಳಿದರೆ ನನಗೆ ಸಂತೋಷವಾಗುತ್ತದೆ.

SRI DERRIC K. M. FULLINFAW:– Not now, it is not the time. With thes words, I thank you, for giving me this opportunity to speak on thes demands for grants.

† ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯ್ಕನಹಳ್ಳಿ):– ಸನ್ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಗಳ ಮೇ ಮಾತನಾಡುತ್ತಾ ಕೆಲವೇ ಕೆಲವು ವಿಷಯಗಳನ್ನು ಮಾತನಾಡುವುದಕ್ಕೆ ಬಯಸುತ್ತೇವ ಮೊದಲನೆಯದಾಗಿ ನಾವು 74.9ಲಕ್ಷ ಜನ ಇರುವ ಶಾಲೆಗಳಿಗೆ 1ಲಕ್ಷದ 42ಸಾವಿರ ಉಪಾಧ್ಯಾಯರ ಎಂದು ಏನು ಕೊಟ್ಟಿದ್ದೀರಿ, ಸನ್ಮಾನ್ಯ ಸಚಿವರು ಅದನ್ನು ತಾಳೆ ಮಾಡಬೇಕು. ಇದರಲ್ಲಿ ಎರಡ ತಾಪತ್ರಯ ಆಗಿದೆ. ಈ ಸ್ಟ್ರೆಂತ್‌ನಲ್ಲಿ ಒಂದು ಅಲ್ಲಿರುವ ಉಪಾಧ್ಯಾಯರು ತಾಲ್ಲೂಕು ಕೇಂದ್ರಗಳ ಹೋಬಳಿ ಕೇಂದ್ರಗಳಲ್ಲಿ ಕೇಂದ್ರೀಕೃತವಾಗಿಬಿಟ್ಟಿದ್ದಾರೆ. ಬಹಳ ವರ್ಷಗಳಿಂದ ಕೇಳುತ್ತಿದ್ದೇವ ಅವರನ್ನಾದರೂ ಸ್ವಲ್ಪ ವಿಕೇಂದ್ರೀಕರಣ ಮಾಡಿ, ಗ್ರಾಮೀಣ ಪ್ರದೇಶಕ್ಕೆ ಹಾಕಿಕೊಡಿ ಎಂದು. ಆ ಕೆಲ ನಾಲ್ಕೈದು ವರ್ಷಗಳಿಂದ ಆಗಿಲ್ಲ. ಏನು ಮೇಸ್ಟ್ರು ಇದ್ದಾರೆ ಎಂದು ತಿಳಿದುಕೊಂಡಿದ್ದೇವೆ, ಅವರ ಪಟ್ಟಣಗಳಲ್ಲಿ ಸೇರಿಕೊಂಡುಬಿಟ್ಟಿದಾರೆ. ಎರಡನೆಯದು ಸಿ.ಪಿ.ಎಡ್. ನಲ್ಲಿ ಮೇಷ್ಟ್ರುಗಳು ಇದ್ದಾ ಎಂಟರಿಂದ ಹತ್ತು ವರ್ಷದವರೆಗೆ ಕ್ಯಾಂಪಸ್ ರಿಕ್ರೂಟ್‌ಮೆಂಟ್ ಆಗಿಲ್ಲ. ಅವರಿಗೆ ಕೆಲಸವನ ಕೊಡಲಿಲ್ಲ. 1ರಿಂದ 7ನೇ ಕ್ಲಾಸ್‌ವರೆಗೇ ಏನಾದರೂ ಈ ದೈಹಿಕ ಶಿಕ್ಷಕರನ್ನು ತಾವು ಹಾಕಿಕೊಟ್ಟ ಹಳ್ಳಿಗಾಡಿನ ಹುಡುಗರಿಗೆ ಸ್ವಲ್ಪ ಸಹಾಯವಾಗುತ್ತದೆ. ದಯಮಾಡಿ ಆ ಕೆಲಸವನ್ನು ಮಾಡಬೇಕು.

6.45 ಪಿ.ಎಂ.

ಮೂರನೆಯದಾಗಿ ಹೈಸ್ಕೂಲುಗಳನ್ನು ಕೊಡಬೇಕಾದರೆ ತಾವು ಹೇಳಿದಿರಿ ಎಲ್ಲಾ ಸರ್ಕಾರಗಳ ಕೊಟ್ಟಿದ್ದಾರೆ ಎಂದು. ಹೋದವರ್ಷ 700 ಹೈಸ್ಕೂಲುಗಳನ್ನು ಕೊಟ್ಟಿದ್ದೀರಿ. ಮೂರು ಮಕ್ಕಳ ಆದವರಿಗೆ ಸ್ವಲ್ಪ ತಾಪತ್ರಯ ಕಡಿಮೆ. 4–5 -6 ಆದರೆ ಹೆಚ್ಚು ಆಗುತ್ತದೆ, ತಾವು ಯೋಚನೆ ಮಾ ಮೂರು ಮಕ್ಕಳು ಆದರೆ ಸಾಕಬಹುದು. 4–5 ಮಕ್ಕಳ ಭಾರ ಏಕೆ ಹೊತ್ತುಕೊಳ್ಳುತ್ತೀರಿ ?

ಶ್ರೀ ವಾಟಾಳ್ ನಾಗರಾಜ್:– ನಿಮಗೆ ಮಕ್ಕಳು ಎಷ್ಟು ?

ಶ್ರೀ ಜೆ.ಸಿ. ಮಾಧುಸ್ವಾಮಿ:– ನನಗೆ ಒಬ್ಬನೇ ಮಗ, ನನ್ನ ಸುದ್ದಿ ಬೇಡ ನಿಮಗೆ. ಈಗ ನಾ ಕೇಳುವುದು ಇವರಿಗೆ ಏಕೆ ಪರಿವೆಯೇ ಇಲ್ಲ. ಆನ್ ಏಡೆಡ್ ಸ್ಕೂಲ್ ಕೊಡುತ್ತೀರಿ. ಕೋರ್ಟಿ ಹೋದರೆ ಕಮಿಟಿ ಅಪಾಯಿಂಟ್ ಮಾಡಿದಿರಿ, ತಾವು ಕಮಿಟಿ ರಿಪೋರ್ಟ್ ಬಂದಮೇಲೆ ನಮ ಗ್ರಾಂಟ್ ಬರಬಹುದು ಎಂದು ಮಾಡಿದ್ದೀರಿ. ನಮ್ಮ ರಾಜ್ಯದ ಹಣಕಾಸಿನ ಸ್ಥಿತಿಯನ್ನು ತಾವು ಯೋಚ ಮಾಡಬೇಕಾಗುತ್ತದೆ. ಈಗ ಐದು ವರ್ಷ ಆದಮೇಲೆ ಅಥವಾ 7 ವರ್ಷ ಆದ ಮೇಲೆ ಅವರಿ ಗ್ರಾಂಟ್ ಕೊಡುತ್ತೇವೆ ಎನ್ನುವ ಭಾವನೆ ಇದ್ದರೆ ಅದಕ್ಕೆ ತಾಳೆ ಮಾಡಿ, ಏನಾದರ ಮಾಡಬೇಕಾಗುತ್ತದೆ. ಎಜುಕೇಶನಲ್ ಆಫೀಸರ್ ಕ್ಯಾಡರ್ ತರುತ್ತೇವೆ, ಇ.ಓ. ಗಳಿಗೆ ಎಂದು ಹೋ ವರ್ಷ ತಾವು ಮಾತನಾಡಿದ್ದೀರಿ. ಇದುವರೆಗೆ ಅದು ಏನು ಆಯಿತೋ ನಮಗೆ ಗೊತ್ತಿಲ್ಲ. ಏಕೆಂದ ಹೈಸ್ಕೂಲ್ ಇನ್‌ಸ್ಪೆಕ್ಷನ್ ಇಲ್ಲವೇ ಇಲ್ಲ. ಹೈಸ್ಕೂಲು ಇನ್ಸ್‌ಪೆಕ್ಷನ್ ಆಗುತ್ತಾ ಇಲ್ಲ, ಇ.ಓ. ಗ

ಜಿಲ್ಲೆಯಲ್ಲಿ ಏನು ಇದ್ದಾರೆ, ಒಂದೊಂದು ಜಿಲ್ಲೆಗೆ 500, 600 ಹೈಸ್ಕೂಲ್ ಆಗಿರುವ ಕಾಲದಲ್ಲಿ, 3–4 ಜನ ಇನ್ಸ್‌ಪೆಕ್ಷನ್ ಮಾಡುತ್ತಿದ್ದಾರೆ ಎಂದು ತಾವು ನಿರೀಕ್ಷಣೆ ಮಾಡಬಾರದು. ತಾಲ್ಲೂಕು ಮಟ್ಟದಲ್ಲಿ ಇದನ್ನು ತರಬೇಕು. ಇಓ ಕ್ಯಾಡರ್‌ನಲ್ಲಿ ಸ್ಕೂಲ್ ಇನ್ಸ್‌ಪೆಕ್ಷನ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಈ ಕೆಲಸ ಆಗಬೇಕು. ಅಲ್ಲಿ ಇದರ ಜೊತೆಗೆ ಶಾಲಾ ಕಟ್ಟಡಗಳನ್ನು ನಮಗೆ ಮಾಡಿಸಿಕೊಡಬೇಕು. ಓಬಿಬಿನಲ್ಲಿ ಏನು ಗ್ರಾಂಟ್ ಬರುತ್ತದೆ, ಅದರ ಜೊತೆ ಇನ್ನೂ ಸ್ವಲ್ಪ ಮ್ಯಾಚಿಂಗ್ ಗ್ರಾಂಟ್ ಕೊಟ್ಟು ತಾವು ಶಾಲೆಗಳನ್ನು ಕಟ್ಟಿಸಿಕೊಡಬೇಕೆಂದು ಕೇಳುತ್ತೇನೆ. ನಾನು ಮೆಡಿಕಲ್ ಎಜುಕೇಶನ್ ಬಗ್ಗೆ ಮಾತನಾಡಬೇಕಾಗುತ್ತದೆ. ನಿಮ್ಹಾನ್ಸ್ ಇನ್ಸ್‌ಸ್ಟಿಟ್ಯೂಷನ್ ಇದೆ. ಕಿದ್ವಾಯಿ ಇನ್‌ಸ್ಟಿಟ್ಯೂಟ್‌ಗೂ ನಮ್ಮ ರಾಜ್ಯ ಸರ್ಕಾರಕ್ಕೆ ಸಂಬಂಧ ಇಲ್ಲ ಎನ್ನುವ ಸ್ಥಿತಿ ನಿರ್ಮಾಣ ಆಗಿದೆ. ಒಂದರ ಉದಾಹರಣೆಯನ್ನು ನಿಮ್ಹಾನ್ಸ್ ಬಗ್ಗೆ ಹೇಳುತ್ತೇನೆ. ನನ್ನ ಕಾನ್ಸ್‌ಸ್ಟಿಟ್ಯುಯೆನ್ಸಿಯಲ್ಲಿನ ಒಬ್ಬರು ನಿಮ್ಹಾನ್ಸ್‌ಗೆ ಅಡ್ಮಿಟ್ ಆದರು. ಸ್ಕಲ್ ಓಪನ್ ಮಾಡಿದರು. ಟ್ಯೂಬ್ ಹಾಕಿಬಿಟ್ಟು ಬ್ರೈನ್ ಟ್ಯೂಮರ್ ಆಗಿದೆ, ಒಂದು ವಾರ ಬಿಟ್ಟು ಮತ್ತೆ ಅಡ್ಮಿಟ್ ಮಾಡುತ್ತೇವೆ ಎಂದು ಹೇಳಿದರು. ಒಂದು ವಾರ ಬಿಡುವುದಕ್ಕೆ ಊರಿಗೆ ಹೋಗಬೇಕು ಎಂದು ಬಸ್‌ನಲ್ಲಿ ಹೊರಟಾಗ ಅನ್‌ಕಾನ್ಸಿಯಸ್ ಆಗಿ ವಾಪಸ್ಸು ಬಂದರು, ಅಡ್ಮಿಷನ್ ಕೊಡಲಿಲ್ಲ. ನೀನು ಮಣಿಪಾಲ್ ಗ್ರೂಪ್ ಹಾಸ್ಪಿಟಲ್‌ಗೆ ಹೋಗು, ಅಲ್ಲಿ ಜಾಯಿನ್ ಆಗು ಎಂದರು. ಮಣಿಪಾಲ್ ಗ್ರೂಪ್ ಹಾಸ್ಪಿಟಲ್‌ನಲ್ಲಿ ಒಂದು ಲಕ್ಷ ಅರವತ್ತು ಸಾವಿರ ಬಿಲ್ ಆಯಿತು. ಆತ ಸತ್ತ ದಿವಸ. ಆತ ಸರ್ಕಾರಿ ನೌಕರ, ಹೈಸ್ಕೂಲ್ ಮೇಸ್ಟ್ರು? ನಿಮ್ಹಾನ್ಸ್‌ನವರಿಗೆ. ನೀವು ರೆಫರೆನ್ಸ್ ಮಾಡಿ ಎಂದು ಹೇಳಿಕೊಂಡರೂ ಮಾಡುವುದಿಲ್ಲ. ಇದೇ ಸ್ಥಿತಿ ಕಿದ್ವಾಯಿ ಆಸ್ಪತ್ರೆ. ಯಾರಾದರೂ ಕ್ಯಾನ್ಸರ್ ಎಂದು ಕಿದ್ವಾಯಿ ಹಾಸ್ಪಿಟಲ್‌ಗೆ ಹೋಗುತ್ತಾರೆ. ಬೆಂಗಳೂರು ಕ್ಯಾನ್ಸರ್ ಹಾಸ್ಪಿಟಲ್ ಎಂದು ಮಾಡಿಕೊಂಡು ಅಲ್ಲಿನ ಡಾಕ್ಟರ್‌ಗಳು ಇಲ್ಲಿಗೆ ಕಳಿಸುತ್ತಾರೆ. ನಿಮ್ಹಾನ್ಸ್‌ನಲ್ಲಿರುವವರನ್ನು ಇಲ್ಲಿಗೆ ಕಳಿಸುತ್ತಾರೆ. ನನಗೆ ವಿಚಾರ ಗೊತ್ತು. ನಮ್ಮ ಹೆಲ್ತ್ ಮಿನಿಸ್ಟರ್ ಕಮಿಟಿಯೊಳಗೆ, ಡೆಪ್ಯುಟಿ ಛೇರ್ಮನ್ ಇರುತ್ತಾರೆ, ನಮಗೆ ಏನೂ ಸಂಬಂಧ ಇಲ್ಲ ಎನ್ನುವ ಹಾಗೆ ಎರಡೂ ಇನ್‌ಸ್ಟಿಟ್ಯೂಷನ್ ನಡೆಯುತ್ತಿದೆ. ಮೂರನೆಯದು ನಮ್ಮ ವಿಕ್ಟೋರಿಯಾ ಮತ್ತು ಬೌರಿಂಗ್ ಇನ್‌ಸ್ಟಿಟ್ಯೂಷನ್ ಏನು ಆಗಿದೆ ಎಂದು ನಾನು ಮಾತನಾಡಬೇಕಾಗಿಲ್ಲ. ನಾನು ಮಾನ್ಯ ಸಚಿವರಿಗೆ ಕೇಳಿದೆ ಬೆಂಗಳೂರು ಆಸ್ಪತ್ರೆಯಲ್ಲಿ ಅಥವಾ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಒಂದು ಕಾರ್ಡಿಯಾಲಜಿ ಪೋಸ್ಟ್ ವೇಕೆಂಟ್ ಇದೆ, ಅಲ್ಲಿಗೆ, ಒಬ್ಬರು ನನ್ನ ಸ್ನೇಹಿತರು, ನನಗೆ ಗೊತ್ತಿರುವವರು ಕಾರ್ಡಿಯಾಲಜಿ ಡಿ.ಎ. ಮಾಡಿ ವರ್ಕ್ ಮಾಡುತ್ತಿದ್ದಾರೆ ಅವರನ್ನು ಹಾಕಿ ಎಂದರೆ ಹಾಕಲಿಲ್ಲ. ಎಂದರೆ ಇವರು ತೆವಲಿಗೆ ಇಟ್ಟುಕೊಂಡವರನ್ನು ಯಾರಿಗೆ ಬೇಕೋ ಅವರನ್ನು ಎಗೆನೆಸ್ಟ್ ವೇಕೆಂಟ್ ಪ್ಲೇಸ್ ಆಫ್ ಕಾರ್ಡಿಯಾಲಜಿಸ್ಟ್ ಎಂದು ಹಾಕುತ್ತಾರೆ. ಏಕೆಂದರೆ ನಮ್ಮಲ್ಲಿರುವವರು ಮನುಷ್ಯರು ಇಲ್ಲ. ಏನು ಮಾಡಬೇಕು ನಾಳೆ ಹೋಗಿ ಅವರು ಪ್ರೈವೇಟ್ ಕಾಲೇಜಿನಲ್ಲಿ ಕೆಲಸ ಮಾಡಿಕೊಂಡು ಇದ್ದರೆ ಈ ನರ್ಸಿಂಗ್ ಹೋಮ್ ಕ್ಲಿನಿಕ್‌ನಲ್ಲಿ ಕೆಲಸ ಮಾಡಿಕೊಂಡು ಇದ್ದರೆ ಬಹುಶಃ ಈ ಸರ್ಕಾರಕ್ಕೆ ಸಮಾಧಾನ ಆಗಬಹುದು. ವೇಕೆಂಟ್ ಪ್ಲೇಸ್‌ನಲ್ಲಿ ಕ್ವಾಲಿಫೈಡ್ ಇರುವವರನ್ನು ಫಿಲಪ್ ಮಾಡಿ, ಜನ ಇದ್ದಾರೆ ಎಂದರೆ ತಾವು ಹಾಕುವುದಿಲ್ಲ. ಇನ್ನು ಆಸ್ಪತ್ರೆಯ ಸ್ಥಿತಿ ಹೇಗೆ ಇದೆ? ನಾನು ಟೈಫಾಯ್ಡ್ ಆಗಿ ಬೆಂಗಳೂರಿಗೆ ಬಂದೆ. ನನಗೆ ನಾನು ಎಂ.ಎಲ್.ಎ. ಆಗಿಬಿಟ್ಟಿದ್ದೇನೆ ಮೊದಲನೆಯ ಸಾರಿ ಎಂದು ಭಾರಿ ಆಸೆ ಇಟ್ಟುಕೊಂಡು ಬಂದೆ. ನಿಮ್ಮ ಬೌರಿಂಗ್ ಇನ್‌ಸ್ಟಿಟ್ಯೂಷನ್‌ನಲ್ಲಿ ಒಂದು ವಾರ್ಡ್ ಸಿಗುತ್ತದೆ ಎಂದು ಬಂದೆ. ಮಾನ್ಯ ವಾಟಾಳ್ ನಾಗರಾಜ್ ಹಾಗೂ ಮಾನ್ಯ ಜಾಲಪ್ಪನವರಿಗೆ ಗೊತ್ತಿದೆ. ಇಲ್ಲೇ ಇದ್ದಾರೆ ಕೇಳಿ. ಮೂರು ದಿವಸ ನಾನು ಕಾದೆ, ಒಂದು ವಾರ್ಡ್ ಯಾವ ರೀತಿ ತೆಗೆದುಕೊಳ್ಳಬೇಕು ಎಂದು. ಯಾರಾದರೂ ಒಬ್ಬ ಎಂ.ಎಲ್.ಎ. ಇದ್ದಾರಾ ಎಂದು ಕೇಳಿದೆ.

ಒಬ್ಬ ಎಂಎಲ್‌ಎ ಇಲ್ಲ. ಎಲ್ಲ ಖಾಸಗೀ ಜನರೇ ಇದ್ದಾರೆ. ಎರಡು ತಿಂಗಳು, ಮೂರು ತಿಂಗಳು,

ನಾಲ್ಕು ತಿಂಗಳು ಇವತ್ತು ವಿಐಪಿ ವಾರ್ಡ್‌ಗಳನ್ನು ತೆಗೆದುಕೊಂಡು ಮಜಾ ಮಾಡುತ್ತಿದ್ದಾರೆ. ಯಾರೂ ನಿಗ್ರಹಿಸುವವರು ಇಲ್ಲವೇ ರಾಜ್ಯ ಸರ್ಕಾರದಲ್ಲಿ ಎಂದು ಕೇಳಬೇಕಾಗುತ್ತದೆ. ಒಂದು ವಿಐಪಿ ವಾರ್ಡನ್ನು ಮಿನಿಮಮ್ ಎರಡು ತಿಂಗಳು 40 ರೂಪಾಯಿ, 20 ರೂಪಾಯಿ ವಾರ್ಡ್ ಛಾರ್ಜ್ ಕೊಟ್ಟುಕೊಂಡು ಕೊಟ್ಟು ಹೋಗುತ್ತಾ ಇದ್ದಾರೆ. ಯಾರು ? ಮೆಜಾರಿಟಿ ಆಫ್ ದೆಮ್ ಅಲ್ಲಿ ಕೆಲಸ ಮಾಡುವ ಡಾಕ್ಟರ್‌ಗಳ ರಿಲೇಟೀವ್ಸ್, ಯಾರೋ ಆಫೀಸರ್ಸ್ ರಿಲೇಟೀವ್ಸ್. ಇಲ್ಲಿ ಹಾಗಾದರೆ ನಾವು ಗ್ರಾಮೀಣ ಪ್ರದೇಶದಿಂದ ಬಂದಂಥ ಜನರಿಗೆ ಯಾವ ರೀತಿಯಿಂದಲೂ ವಾರ್ಡ್ ದಕ್ಕಬಾರದೇ ? ಸರ್ಕಾರದಲ್ಲಿ ಇದನ್ನು ಯಾವ ರೀತಿ ನಡೆಸುತ್ತಾ ಇದ್ದಾರೆ ? ಏನಾದರೂ ನಾವು ಇವತ್ತು ರೂಮ್ ಪಡೆಯುವುದಕ್ಕೆ ಬೌರಿಂಗ್ ಇನ್‌ಸ್ಟಿಟ್ಯೂಷನ್‌ನಲ್ಲಿ ಮಂತ್ರಿ ಆಗಿರಬೇಕು. ವಿಐಪಿ ವಾರ್ಡ್, ದುಡ್ಡು ಕೊಡಿ ಎಂದರೆ ನಾವು ಸಹ ಕೊಡುತ್ತೇವೆ. ಎಂಎಲ್‌ಎಗಳು ತೀರಾ ವಾರ್ಡಿಗೆ ದುಡ್ಡು ಕೊಡದೇ ಇರುವ ಸ್ಥಿತಿಗೆ ಬಂದಿಲ್ಲ. ನಾವು ಆಸೆ ಇಟ್ಟುಕೊಂಡು ಬಂದಾಗ ಸಿಗಲಿಲ್ಲ ಎಂದರೆ ಈ ಮ್ಯಾನೇಜ್‌ಮೆಂಟ್ ಎಲ್ಲಿದೆ ಎಂದು ತಾವು ನೋಡಬೇಕಾಗಿದೆ.

ಮುಖ್ಯವಾಗಿ ನಾನು ರಾಜ್ಯ ಸರ್ಕಾರವನ್ನು ಬೇಡುವುದು ಒಂದೇ ಒಂದು ಮಾತು. ಉರ್ದು ಶಾಲೆಗಳನ್ನು ತಾವು ನಿಲ್ಲಿಸಬೇಕಾಗುತ್ತದೆ. ಎಲ್ಲಾ ಕನ್ನಡ ಶಾಲೆಗಳಲ್ಲಿ ಉರ್ದು ಕಲಿಸುತ್ತಾರೆಯೇ ? ಹುಳಿಯಾರಿನಲ್ಲಿ 4 ವರ್ಷಗಳವರೆಗೆ ಉರ್ದು ಟೀಚರ್ ಇಲ್ಲ. ಎಸ್‌ಎಸ್‌ಎಲ್‌ಸಿಯಲ್ಲಿ ಉರ್ದು ಸಬ್ಜೆಕ್ಟ್‌ನಲ್ಲಿ ಯಾರೂ ಫೇಲ್ ಆಗಿಲ್ಲ. ಏಕೆ ಈ ತಾರತಮ್ಯ ? ಇವತ್ತು ಸಂಸ್ಕೃತ ವಿಷಯದಲ್ಲಿ, ಕರ್ನಾಟಕ ರಾಜ್ಯದಲ್ಲಿ ಯಾರೂ ಫೇಲ್ ಆಗುವುದಿಲ್ಲ. ಏನು ನಡೆಯುತ್ತಿದೆ ರಾಜ್ಯದಲ್ಲಿ ? ರ್‍ಯಾಂಕ್ ಬರಬೇಕು ಎಂದರೆ ಇವತ್ತು ಸಂಸ್ಕೃತ ತೆಗೆದುಕೊಳ್ಳಬೇಕು. ಕನ್ನಡ ಓದಿದವನು ಯಾರೂ ರಾಜ್ಯದಲ್ಲಿ ರ್‍ಯಾಂಕ್ ಬರುವುದಿಲ್ಲ. ನಮ್ಮ ರಾಜ್ಯದಲ್ಲಿ ತಾವು ಏನಾದರೂ ಮಾಡಿ ಈ ಸ್ಥಿತಿಯನ್ನು ಬದಲಾವಣೆ ಮಾಡಬೇಕಾಗಿದೆ. ಮೂರನೆಯದು ತಾವು ಗ್ರಾಮೀಣ ಪ್ರದೇಶದ ಬಗ್ಗೆ ಏನು ಆದ್ಯತೆ ಕೊಡುತ್ತಿದ್ದೀರಿ, ಇದನ್ನು ಸ್ವಲ್ಪ ಜಾಸ್ತಿ ಮಾಡದೇ ಹೋದರೆ ಈ ತಾರತಮ್ಯ ಹೋಗಲಾಡಿಸುವುದಕ್ಕೆ ಆಗುವುದಿಲ್ಲ. ಮೆರಿಟ್ ಎಂದು ಇಂಗ್ಲೀಷ್‌ನವರ ಸಿಸ್ಟಂ ಇಟ್ಟಿದ್ದೀರಿ. ಏಕೆಂದರೆ ಯಾರಿಗೆ ಜ್ಞಾಪಕ ಶಕ್ತಿ ಜಾಸ್ತಿ ಇದೆ, ಯಾರು ಮನೆಯಲ್ಲಿಯೇ ಕುಳಿತುಕೊಂಡು ಅಪ್ಪ ಅಮ್ಮನ ಕೈಯಲ್ಲಿ ಹೇಳಿಸಿಕೊಂಡು ಪರೀಕ್ಷೆಯಲ್ಲಿ ಬರೆಯಲು ಹೋಗುತ್ತಾನೆ ಆತನು ಭಾರೀ ಮೇಧಾವಿ. ಪಾಪ ಗ್ರಾಮೀಣ ಪ್ರದೇಶದಲ್ಲಿ ಓದತಕ್ಕ ಹುಡುಗನಿಗೆ ಏನೂ ತಿಳುವಿಕೆ ಇಲ್ಲ ಎಂದು ಮಾಡಿದ್ದೀರಿ. ಇದನ್ನು ತಾವು ತಪ್ಪಿಸಬೇಕು.

ನಿಮ್ಮ ವ್ಯವಸ್ಥೆ ಸರಿಯಿಲ್ಲ. ಎರಡು ಹೊತ್ತು, ಮೂರು ಹೊತ್ತು ಪಾಠ ಹೇಳಿಕೊಡುವ, ಬೆಳೆಯುವ ಮಕ್ಕಳಿಗೆ ನಾವು ಕುಳಿತುಕೊಂಡು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಓದಿಸುವುದಕ್ಕಾಗುತ್ತದೆಯೇ ? ದಯಮಾಡಿ ಈ ಸ್ಥಿತಿಯನ್ನು ತಪ್ಪಿಸಬೇಕು. ಮತ್ತು ಕೆಲಸಕ್ಕೆ ಸೇರುವಾಗ ಏನು 15 ಪರ್ಸೆಂಟ್ ರಿಸರ್ವೇಶನ್ ಇರಬೇಕೆಂದು ಹೇಳಿದ್ದಾರೆ, ಅದನ್ನು ಮುಂದುವರೆಸಬೇಕಾಗುತ್ತದೆ. ನಾನು ಒಂದು ಮಾತನ್ನು ಯುವಜನ ಸೇವೆ ಮತ್ತು ಕನ್ನಡ ಸಂಸ್ಕೃತಿ ಸಚಿವರ ಬಗ್ಗೆ ಹೇಳಬೇಕಾಗಿದೆ. ಅವರನ್ನು ತೆಗೆದುಬಿಡಿ, ಅವರಿಗೆ ಮಂತ್ರಿಗಿರಿ ಬೇಡ. ಕೇವಲ 5–10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೋಸ್ಕರ ಒಬ್ಬ 'ವಿಶ್ವನಾಥ್' ಎನ್ನುವ ಮಂತ್ರಿಯನ್ನು ರಾಜ್ಯ ಸರ್ಕಾರದ ಸಚಿವ ಸಂಪುಟಲ್ಲಿ ಇಟ್ಟುಕೊಂಡು ಏಕೆ ವೇಸ್ಟ ಮಾಡುತ್ತೀರಿ ? ಅವರಿಗೇನಾದರೂ ಮಾಡಿ ಸ್ವಾಮಿ ? ಒಂದೆರಡು ಸ್ಟೇಡಿಯಂಗಳನ್ನು ಕಟ್ಟಿಸುವುದಕ್ಕೋಸ್ಕರವಾದರೂ ಅವರ ಖಾತೆಗೆ ದುಡ್ಡು ಒದಗಿಸಿಕೊಡಿ. ಕಲಾವಿದರನ್ನು ಕರೆದುಕೊಂಡು ಬಂದು ಅಲ್ಲಿ–ಇಲ್ಲಿ ಪ್ರದರ್ಶನ ಮಾಡುವುದಕ್ಕೆ ನಾವು ಲೆಟರ್ ಕೊಟ್ಟರೂ ಅವರನ್ನು ಕನ್ಸಲ್ಟ್ ಮಾಡಬೇಕು. ಇಲ್ಲಿ ಏನಾಗಿದೆಯೆಂದರೆ, ಕಲಾವಿದರಿಗೆ ನೀವು ಎರಡು ಸಾವಿರ ರೂಪಾಯಿಗಳವರೆಗೆ ಕೊಡುತ್ತೀರಿ; ಬೇಕಾದರೆ ಕರೆದುಕೊಂಡು ಹೋಗಿ ಎಂದು ಹೇಳುತ್ತಾರೆ. ಹಾಗೆ ಕೊಡುವ ಹಣದ ಜೊತೆಗೆ ಇನ್ನು ನಾಲ್ಕು ಸಾವಿರ ರೂಪಾಯಿಗಳನ್ನು ಅವರಿಗೆ ಕೊಟ್ಟು ಬನ್ನಿ,

ನೀವು ಒಳ್ಳೆಯ ಕಲಾವಿದರು, ಅಲ್ಲೊಂದು ಪ್ರದರ್ಶನ ಕೊಡಿ ಎಂದು ಹೇಳಬೇಕು. ನಾನು ಸತ್ಯ ಸಂಗತಿಯನ್ನು ಹೇಳುತ್ತಿದ್ದೇನೆ. ಅವರಿಗೆ ನಾಲ್ಕು ಸಾವಿರ ರೂಪಾಯಿಗಳನ್ನು ಕೊಡದೆ ಹೋದರೆ, ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆವತಿಯಿಂದ ಯಾರೂ ಕೂಡ ಬರುವುದಿಲ್ಲ. ಅವರು ಅರಳು ಕಲಾವಿದರಿರಲಿ, ಪ್ರಭಾತ್ ಕಲಾವಿದರಿರಲಿ, ತಮಗೆ ಇದು ಚೆನ್ನಾಗಿ ಗೊತ್ತಿದೆ. ಅವರನ್ನು ಕರೆಯಿಸಿ ಕೇಳಿ. ಈಗ ಅವರಿಗೆ, ಎರಡು ಸಾವಿರದಿಂದ ಎರಡೂವರೆ ಸಾವಿರ ರೂಪಾಯಿಗಳವರೆಗೆ ಕೊಡುತ್ತಿದ್ದೇವೆ. ಆದುದರಿಂದ, ಅವರಿಗೆ 6000–7000 ರೂಪಾಯಿಗಳನ್ನು ಸರ್ಕಾರ ಕೊಡಬೇಕು. ಅಲ್ಲದೆ, ಅವರು ನೀವು ಮ್ಯಾಚಿಂಗ್ ಕೊಡುವುದಾದರೆ ನಾವು ಕಳುಹಿಸಿ ಪ್ರದರ್ಶನ ಮಾಡುತ್ತೇವೆ' ಎಂದು ಇನ್‌ಡೈರೆಕ್ಟ್ ಆಗಿ ಹೇಳುತ್ತಾರೆ. ಅವರಿಗೆ ಸ್ವಲ್ಪ ಹಣಕಾಸಿನ ಸಹಾಯ ಮಾಡಬೇಕಾಗಿದೆ. ಅನಂತರ ಗ್ರಾಮೀಣ ಗ್ರಂಥಾಲಯ, ಮಂಡಲ ಗ್ರಂಥಾಲಯ ಎಂದು ಮಾಡಿದ್ದೀರಿ. ಆ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಅವು ಪ್ರಾರಂಭಿಸಿದ ದಿವಸದಲ್ಲಿ ಕೊಟ್ಟಿದ್ದಾರಷ್ಟೆ. ರಾಜ್ಯದಲ್ಲಿ ಒಟ್ಟು 551 ಗ್ರಂಥಾಲಯಗಳಿವೆ, ಹೊಸ ಪುಸ್ತಕಗಳನ್ನು ಗ್ರಂಥಾಲಯಗಳಿಗೆ ಸರಬರಾಜು ಮಾಡಲಿಲ್ಲ. ಅದುವೇ ಕಷ್ಟಪಟ್ಟು ಎರಡು ಪತ್ರಿಕೆಗಳನ್ನು ಅಲ್ಲಿಗೆ ಕಳುಹಿಸಿ ಕೊಡಲಾಗುತ್ತದೆ. ಅದರಲ್ಲೊಂದು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆ ಇರುತ್ತದೆ. ಆ ಇಂಗ್ಲೀಷ್ ಪತ್ರಿಕೆಯನ್ನು ಮಂಡಲ್‌ನಲ್ಲಿರುವ ಗ್ರಂಥಾಲಯದಲ್ಲಿ ಕುಳಿತುಕೊಂಡು ಯಾರು ಓದುತ್ತಾರೋ ನನಗೆ ಅರ್ಥವಾಗಿಲ್ಲ. ಏನಾದರೂ ಮಾಡಬೇಕಾದರೆ ಸರ್ಕಾರದ ಪ್ರಕಟಣೆಗಳನ್ನಾದರೂ ಆ ಊರುಗಳಲ್ಲಿರುವ ಗ್ರಂಥಾಲಯಗಳಿಗೆ ಕಳುಹಿಸಿಕೊಡಬೇಕು.

ನಿಮ್ಮ ಸರ್ಕಾರದ ಪ್ರಕಟಣೆಗಳು ಏನು ಆಗುತ್ತವೆ, ಅದನ್ನು ಗ್ರಂಥಾಲಯಗಳಿಗೆ ಹಾಕುವಷ್ಟು ದೊಡ್ಡತನವನ್ನು ತಾವು ತೋರಿಸದಿದ್ದರೆ ಇದನ್ನು 'ಸರ್ಕಾರ' ಎಂದು ಕರೆಯುವುದಕ್ಕಾಗುವುದಿಲ್ಲ. ಆದುದರಿಂದ, ಸ್ವಲ್ಪಮಟ್ಟಿಗೆ ಆ ಕಡೆ ಸರ್ಕಾರ ನಿಗಾ ವಹಿಸಬೇಕು. ಈ ಪ್ರೈವೇಟ್ ಸ್ಕೂಲುಗಳನ್ನು ಕೊಡುವುದನ್ನು ನಿಲ್ಲಿಸಬೇಕಾಗಿದೆ. ಗ್ರಾಮೀಣ ಪ್ರದೇಶಗಳನ್ನು ಉದ್ಧಾರ ಮಾಡುವುದಕ್ಕೆ ಶಾಲೆಗಳನ್ನು ಕೊಡುತ್ತೇವೆನ್ನುವುದು ಬರಿ ಘೋಷಣೆಯಲ್ಲಿ ಪರಿಸಮಾಪ್ತಿಯಾಗುತ್ತಿದೆ. ಮಾಸ್ತರುಗಳನ್ನು ಅವರ ಕೈಕಾಲು ಕಟ್ಟಿ ಕರೆದುಕೊಂಡು ಹೋಗಿ ದುಡಿಸಿಕೊಳ್ಳಬೇಕಾಗಿದೆ. ಸ್ವಾಮಿ, ಈ ಪರಿಸ್ಥಿತಿಯಲ್ಲಿ ಒಬ್ಬ ಸೆಕ್ರೆಟರಿ ಸಹ ನಮ್ಮ ಹತ್ತಿರ ಬರುವುದಿಲ್ಲ. ನಮ್ಮ ಶಾಲೆಗೆ ಅನುದಾನವನ್ನು ಬಿಡುಗಡೆ ಮಾಡಿ. ಮಾಸ್ತರುಗಳು ಒಂದು ಅಸೋಸಿಯೇಷನ್ ಮಾಡಿಕೊಳ್ಳುತ್ತಾರೆ. ಕಬ್ಬನ್ ಪಾರ್ಕ್‌ನಲ್ಲಿ ಐದು ತಿಂಗಳುಗಳ ತನಕ ಪರ್ಮನೆಂಟ್ ಆಗಿ ಗುಡಾರ ಹಾಕಿಕೊಂಡು ಕುಳಿತುಕೊಳ್ಳುತ್ತಾರೆ. ಎಲ್ಲಿಯವರೆಗೆ ಇವರಿಗೆ ಈ ರೀತಿ ಕೊಡುತ್ತಾ ಹೋಗುತ್ತೀರಿ ? ಹೋದ ವರ್ಷ ಒಂದೂ ಸರ್ಕಾರಿ ಪ್ರೌಢಶಾಲೆ ಕೊಟ್ಟಿಲ್ಲ. 700 ಪ್ರೈವೇಟ್ ಹೈಸ್ಕೂಲುಗಳನ್ನು ಕೊಟ್ಟಿದ್ದೇವೆಂದು ತಾವು ಬರೆಯುತ್ತೀರಲ್ಲಾ, ಇದು ಸರ್ಕಾರಕ್ಕೆ ಗೌರವ ತರುವಂಥ ಕೆಲಸವೆ ? 700 ಖಾಸಗೀ ಶಾಲೆಗಳನ್ನು ಕೊಡುವಂಥ ನಿಮಗೆ ಸರ್ಕಾರಿ ಪ್ರೌಢಶಾಲೆಯನ್ನು ಕೊಡುವುದಕ್ಕೆ ತಾಕತ್ತು, ಶಕ್ತಿ ಇರಲಿಲ್ಲವೇ ? ಏಕೆ ಈ ಕೆಲಸ ಮಾಡುತ್ತಿದ್ದೀರಿ ?

ಇನ್ನು ಯೂನಿವರ್ಸಿಟಿ ಬಗ್ಗೆ ನಾನು ಒಂದು ಮಾತನ್ನು ಆಡಬೇಕಾಗುತ್ತದೆ. ಈ ಪ್ರೈವೇಟ್ ಯೂನಿವರ್ಸಿಟಿಗೆ ಸೇರುವಂಥ ಕಾಲೇಜುಗಳಲ್ಲಿ ಗ್ರ್ಯಾಂಟ್–ಇನ್–ಏಡ್ ಬರುವವರೆಗೆ ರೋಸ್ಟರ್ ಅನ್ನು ನೀವು ಕೇಳುವಂತೆಯೇ ಇಲ್ಲ, ಹಾಗಾಗಿದೆ ಅಲ್ಲಿನ ಪರಿಸ್ಥಿತಿ. ಅದಕ್ಕೆ ಅಡ್ಮಿಟ್ ಆಗುವ ದಿವಸ, ಮತ್ತು ಅಲ್ಲಿಂದ ಮುಂದಕ್ಕೆ ಅಡ್ಮಿಟ್ ಮಾಡಿಕೊಂಡರೆ ಮಾತ್ರ ರೋಸ್ಟರ್ ಫಾಲೋ ಮಾಡಬೇಕೆಂದು ನೀವು ಇಟ್ಟುಕೊಂಡು ಕುಳಿತಿದ್ದೀರಿ. ಯಾವ ವೇಕೆನ್ಸಿಯನ್ನು ಅವರಿಗೆ ಉಳಿಸಿರುವುದಿಲ್ಲ. ಯಾವಾಗ ಕಾಲೇಜು ಆರಂಭವಾಗುತ್ತದೆ, ಆವೊತ್ತೆ ಅವರಿಗೆ ಬೇಕಾದಂಥವರಿಗೆ ಅಡ್ಮಿಟ್ ಮಾಡಿ ಅವರಿಂದ ಹಣ ತೆಗೆದುಕೊಂಡು ತುಂಬಿಸಿಕೊಂಡಿರುತ್ತಾರೆ. ಗ್ರ್ಯಾಂಟ್–ಇನ್–ಏಡ್ ಬಂದಾಗ ಅವರಿಗೆ ಏನೂ ಬರುವುದಿಲ್ಲ. 20–25 ವರ್ಷಗಳಾದ ನಂತರ ಆ ಕಾಲೇಜಿನಲ್ಲಿ ಏನಾದರೂ ವೇಕೆನ್ಸಿ ನಾವು

ಕಾಣಬಹುದು. ಎರಡನೆಯದಾಗಿ, ಡೈರೆಕ್ಟೊರೇಟ್ ಆಫೀಸ್ ಅನ್ನು ತಾವು ಸ್ವಲ್ಪ ಗಮನಕ್ಕೆ ತೆಗೆದುಕೊಳ್ಳಬೇಕು. ಇದಕ್ಕೆ ಸಂಬಂಧಪಟ್ಟ ಸಚಿವರು ಸದನದಲ್ಲಿಲ್ಲ. ಕುಳಿತಲ್ಲಿಯೇ ಸಿಬ್ಬಂದಿಯನ್ನು ಅಲ್ಲಿಗೆ ಕಳುಹಿಸುತ್ತಾರೆ. ಐದು ಜನರಿಗೆ ಅಪ್ರೂವಲ್ ಕೊಡಿ ಎಂದರೆ, ಬೇಡ ಏಳು ಜನರಿಗೆ ಮಾಡುತ್ತೇನೆ, ನಮ್ಮವರಾದ ಇಬ್ಬರು ಕ್ಯಾಂಡಿಡೇಟ್‌ಗಳನ್ನು ಹಾಕಿದ್ದೇನೆ, ಅನಂತರ ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ ಎಂದು ಅಥವಾ ವೇಕೆನ್ಸಿ ಇರುವ ಕಡೆ ಶಿಫ್ಟ್ ಮಾಡುತ್ತಾರೆ. ಈ ವಿಚಾರ ಸಚಿವರಾದ ಪರಮೇಶ್ವರರಿಗೆ ಗೊತ್ತಿದೆ, ಕೇಳಿ ನೋಡಿ. ಏಕೆಂದರೆ, ನಾನು ಒಂದು ಕಾಲೇಜನ್ನು ನಡೆಸುತ್ತಿದ್ದು, ಅದಕ್ಕೆ ನಾನೇ ಅಧ್ಯಕ್ಷನಾಗಿದ್ದು, ನಾವು ಕೇಳಿದ್ದು ಹತ್ತು ಜನರೆಂದರೆ, ಡೈರೆಕ್ಟೋರೇಟ್ ಆಫೀಸಿನಿಂದ 13 ಜನರಿಗೆ ಅಪ್ರೂವಲ್ ಕೊಡುತ್ತಾರೆ. ಇದನ್ನು ನಿಲ್ಲಿಸದೆ ಹೋದರೆ ಸರ್ಕಾರ ಉದ್ಧಾರವಾಗುವುದಿಲ್ಲ. ಮತ್ತೆ ನಿಮ್ಮಲ್ಲಿ ಅರೆಕಾಲಿಕ ಶಿಕ್ಷಕರು ಏನಿದ್ದಾರೆ, ಅವರನ್ನು ತಕ್ಷಣ ಖಾಯಂ ಮಾಡುತ್ತೀರಾ ? ಇಲ್ಲವೆ ತೆಗೆದುಹಾಕುತ್ತೀರಾ ? ಎಂಬ ಬಗ್ಗೆ ಒಂದು ನಿಲುವು ತೆಗೆದುಕೊಳ್ಳಿ ಎಂದು ಕೇಳುತ್ತೇನೆ. ಜೊತೆಗೆ ಜಾಬ್–ಓರಿಯೆಂಟೆಡ್ ಕೋರ್ಸ್‌ಗಳನ್ನು ಹೋದ ಮತ್ತು ಕಳೆದ ವರ್ಷಗಳಿಂದ ಆರಂಭಿಸುತ್ತಿದ್ದೀರಿ. ಈ ಸ್ಥಿತಿ ಎಲ್ಲಿಗೆ ಹೋಗುತ್ತದೆಯೋ ನಮಗೆ ಗೊತ್ತಿಲ್ಲ. ಯಾವ್ಯಾವ ಭಾಗಕ್ಕೆ ಯಾವ ಜಾಬ್–ಓರಿಯೆಂಟೆಡ್ ಕೋರ್ಸ್ ಕೊಡಬೇಕೆಂಬುದರ ಬಗ್ಗೆ ಮೊದಲು ಒಂದು ಪಟ್ಟಿ ಮಾಡಬೇಕು. ನನ್ನಲ್ಲಿ ಕಾಯಿರ್ ಪ್ರಾಡಕ್ಟ್ ಆಗುತ್ತಿದೆಯೆಂದು ನನಗೆ ಯಾವುದೋ ಬೇರೆ ಕೋರ್ಸ್ ಕೊಟ್ಟು, ಇನ್ನೊಬ್ಬರನ್ನು ತೆಗೆದುಕೊಂಡು ನೀವು ಬೀದರ್, ಗುಲ್ಬರ್ಗದಲ್ಲಿ ಕಾಯಿರ್ ಪ್ರಾಡಕ್ಟ್ ಮಾಡುವ ಕೋರ್ಸ್ ಕೊಡುವುದನ್ನು ತಪ್ಪಿಸಬೇಕು. ಬೇಕಾದಷ್ಟು ಕೋರ್ಸ್‌ಗಳನ್ನು ನೀವು ಕೊಡಬಹುದಾಗಿದೆ. ಅದರ ಬಗ್ಗೆ ಏನಾದರೂ ಸ್ವಲ್ಪ ನಿಗಾ ವಹಿಸಿ, ಯಾವ್ಯಾವ ವಿಷಯಕ್ಕೆ ಯಾವ ಕೋರ್ಸ್ ಕೊಟ್ಟರೆ ಕೆಲಸವಾಗುತ್ತದೆ ಅಥವಾ ಹುಡುಗರಿಗೆ ಅನುಕೂಲವಾಗುತ್ತದೆಂಬುದನ್ನು ನೋಡಿ ಕೋರ್ಸ್ ಕೊಡಬೇಕು. ಜೊತೆಗೆ ಯೂನಿವರ್ಸಿಟಿಗೆ ಸರ್ಕಾರ ಒಂದು ಕಡಿವಾಣ ಹಾಕಬೇಕಾಗಿದೆ ನಾನು ಆವೊತ್ತು ಮೈಸೂರು ಯೂನಿವರ್ಸಿಟಿ ಬಗ್ಗೆ ಮಾತನಾಡುವಾಗ ಹೇಳಿದೆ. ಅಕಾಡೆಮಿಕ್ ಕೌನ್ಸಿಲ್ ಎಲೆಕ್ಷನ್ ಇಲ್ಲದೆ ಸಿಂಡಿಕೇಟ್ ಎಲೆಕ್ಷನ್ ಕರೆಯುತ್ತಾರೆಂದು. ಮಾಡೆಲ್ ಯೂನಿವರ್ಸಿಟಿ ಆಕ್ಟ್‌ಗೆ ಅಮೆಂಡ್‌ಮೆಂಟ್ ಆಗಿದ್ದರೂ ಸಹ ಇವರು ಇಲ್ಲ, ಹಳೆಯ ರೀತಿಯಲ್ಲಿ ಯೂನಿವರ್ಸಿಟಿ ಇರುತ್ತದೆ ರೆಪ್ರಸೆಂಟೇಷನ್ ಹಾಗೆ ಫಿಕ್ಸ್ ಮಾಡುತ್ತೇವೆ, ನಾವು ಸೀನಿಯರ್ ಲೆಕ್ಚರರ್, ಸೆಲೆಕ್ಷನ್ ಕೇಡರ್ ಲೆಕ್ಚರರ್ ಎಂದು ಒಪ್ಪುವುದಿಲ್ಲ, ರೀಡರ್ ಆಗಿ, ಪ್ರೊಫೆಸರ್ ಆಗಿ ಇರುತ್ತೇವೆ ಎಂದು ಯಾರು ಮೆರೆಯುತ್ತಾರೋ, ಅವರನ್ನು ಸ್ವಲ್ಪ ಕರೆದು ಹೇಳಬೇಕು. ಕಾಯಿದೆ ಎಂದರೆ ಎಲ್ಲರಿಗೂ ಅನ್ವಯಿಸುತ್ತದೆ. ಯಾರೋ ಒಬ್ಬರಿಗೆಂದು ಒಂದು ಪ್ರತ್ಯೇಕ ಕಾಯಿದೆಯನ್ನು ಇಟ್ಟುಕೊಂಡು ರಾಜ್ಯ ಸರ್ಕಾರದಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಲೆಕ್ಚರರ್, ಸೀನಿಯರ್ ಲೆಕ್ಚರರ್, ಸೆಲೆಕ್ಷನ್ ಕೇಡರ್ ಲೆಕ್ಚರರ್ ಎಂದರೆ ಮೈಸೂರು ಯೂನಿವರ್ಸಿಟಿಯಲ್ಲೂ ಅದೇ ರೀತಿ ಇರಬೇಕು, ಮಂಗಳೂರು ಯೂನಿವರ್ಸಿಟಿಯಲ್ಲೂ ಅದೇ ರೀತಿ ಇರಬೇಕು.

ಅಲ್ಲಿ ಆ ರೀತಿ ಇಲ್ಲ. ಬೆಂಗಳೂರು, ಕುವೆಂಪುನಲ್ಲಿ ಒಂದು ಡಿಸಿಗ್‌ನೇಷನ್ ಇದ್ದರೆ ಮೈಸೂರಿನಲ್ಲಿ ಬೇರೆ ಇರುತ್ತದೆ, ಇವೆಲ್ಲವುಗಳನ್ನು ತಾವು ಕುಳಿತು ಸರ್ಕಾರವೆನ್ನಿಸಿಕೊಂಡವರು ಸ್ವಲ್ಪ ನಾರ್ಮಲೈಸ್ ಮಾಡಬೇಕು, ಏನು ಭಾರಿ ಸಾಧನೆಯನ್ನು ಮಾಡುತ್ತೇನೆಂದು ಹೇಳದಿದ್ದರೂ ಸಹ ಸ್ವಲ್ಪ ವ್ಯವಸ್ಥೆಯನ್ನು ತರಬೇಕು. ಜೊತೆಗೆ ನಾನು ಅನೇಕ ಸಲ ತಮಗೆ ಹೇಳಿದ್ದೇನೆ. ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಶಿಕ್ಷಕರಿಗೆ ಕ್ವಾರ್ಟರ್ಸ್ ಕಟ್ಟಿದ್ದೀರಿ, ಆದರೆ ಇವತ್ತಿನವರೆಗೆ ಒಂದೂ ಮನೆಯನ್ನೂ ಬಳಕೆ ಮಾಡಿಲ್ಲ, ಒಂದೊಂದು ತಾಲ್ಲೂಕಿಗೆ 12 ಕ್ವಾರ್ಟರ್ಸ್‌ಗಳನ್ನು ಕಟ್ಟಿದ್ದೀರಿ, ಇದನ್ನು ಕಟ್ಟಿ 14–15 ವರ್ಷಗಳಾಗಿದೆ ಆದರೆ ಇದುವರೆಗೆ ಅಲ್ಲಿಗೆ ಯಾರೂ ಬಂದಿಲ್ಲ, ಅದರ ಬಗ್ಗೆ ಯಾರಾದರೂ ರಿಪೇರ್‌ಮೆಂಟ್ ಬಂತಾ ಎನ್ನುವ ಬಗ್ಗೆ ನೋಡುವುದಿಲ್ಲ, ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಇದರ

ತೀರ್ಮಾನ ತೆಗೆದುಕೊಂಡದ್ದು, ಆವತ್ತು ಕಟ್ಟಿರತಕ್ಕ ಮನೆಗಳನ್ನು ಇವತ್ತಿನವರೆಗೆ ವಾಸಕ್ಕೆ ಮಾಡಿಕೊಂಡಿಲ್ಲವೆಂದರೆ, ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿರತಕ್ಕವರು ಯಾರು ? ಇದನ್ನು ಕಂಟ್ರೋಲ್ ಮಾಡುವವರು ಯಾರು ? ಇದರ ಬಗ್ಗೆ ಕೇಳಿದರೆ ಸರ್ಕಾರದವರು ನಮಗೆ ಗೊತ್ತಿಲ್ಲ ಎನ್ನುತ್ತಾರೆ ಮತ್ತು ಜಿಲ್ಲಾಪರಿಷತ್ತಿನ ಅಸೆಟ್ಸ್ ಲಿಸ್ಟ್‌ನಲ್ಲೂ ಸಹ ಇದು ಸೇರಿಲ್ಲ, ಇದರ ಬಗ್ಗೆ ಯಾರಾದರೂ ಅಧಿಕಾರಿಗಳು ಬರೆದುಕೊಂಡು ಹೋಗಿ ನೋಡುವಷ್ಟು ಸೌಜನ್ಯ ಮಾಡಲಿಲ್ಲವೆಂದರೆ ನಾವು ಇಲ್ಲಿ ಭಾಷಣ ಮಾಡುವುದರಲ್ಲಿ ಅರ್ಥವಿಲ್ಲವೆಂದು ತಿಳಿದುಕೊಂಡು ಸುಮ್ಮನಿರಬೇಕಾಗುತ್ತದೆ. ಮತ್ತೆ ತಮ್ಮ ಹತ್ತಿರ ಅನುದಾನ ಪ್ರೌಢಶಾಲೆಗಳ ಪೆಂಡಿಂಗ್ ಯಾವುದು ಇದೆ ಅದನ್ನು ದಯಮಾಡಿ ಕ್ಲಿಯರ್ ಮಾಡಬೇಕು. ಎರಡನೆಯದಾಗಿ ತಾವು ಡಿ.ಡಿ.ಪಿ.ಐ. ಕಛೇರಿಗೆ ಸೂಚನೆ ಕೊಡಬೇಕು, ಬಂದಿರುವ ಅಲಾಟ್‌ಮೆಂಟ್ ಕಡಿಮೆ ಇದೆ, ಗ್ರ್ಯಾಂಟ್ ಬಂದಿರುವುದು ಕಡಿಮೆ ಇದೆ ಯಾರು ಮೊದಲು ಬರುತ್ತಾರೋ ಅವರಿಗೆ ಕೊಡುತ್ತೇವೆ ಎಂದು ದುಡ್ಡನ್ನು ತಿನ್ನುತ್ತಿದ್ದಾರೆ. ಅವ್ಯವಹಾರದ ಸೋರ್ಸ್ ಅದು, ಇವತ್ತು ಗ್ರ್ಯಾಂಟ್ ಏಕೆ ಕಡಿಮೆ ಬರುತ್ತದೆ ಎನ್ನುವ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ, ಇದನ್ನು ತಾವು ತಪ್ಪಿಸಬೇಕು. ಇನ್ನು ಮೂರನೆಯದಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಬೇರೆ ಕಡೆಯಿಂದ ಬರುವ ಹುಡುಗರ ಬಗ್ಗೆ ಹೇಳುವುದಾದರೆ, ಬೆಳಗಾಂನಿಂದ ನನ್ನ ತಾಲ್ಲೂಕಿಗೆ ಪರೀಕ್ಷೆಗೆ ಬರುತ್ತಾರೆ, ಏಕೆಂದರೆ ಸೆಕೆಂಡರಿ ಬೋರ್ಡ್‌ನವರು ಇಂಥ ಕೇಂದ್ರಕ್ಕೆ ಹೋಗಿ, ನೀವು ಅಲ್ಲಿ ಕಾಪಿ ಹೊಡೆದು ಪಾಸಾಗಬಹುದು ಎಂದು ಹೇಳಿಕಳಿಸುತ್ತಾರೆ. ಇವೆಲ್ಲವನ್ನು ತಾವು ನಿಲ್ಲಿಸಬೇಕಾಗುತ್ತದೆ. ನಾನು ತಮಗೆ ಒಂದು ಮಾತನ್ನು ಹೇಳುವುದಾದರೆ ನನ್ನ ತಾಲ್ಲೂಕಿನ ಒಂದು ಕೇಂದ್ರದಲ್ಲಿ ಇಂಗ್ಲೀಷ್ ಮತ್ತು ಮ್ಯಾಥ್ಸ್ ಪತ್ರಿಕೆಗಳು ಕಳುವಾಯಿತು, ಏಕೆಂದರೆ ಈ ಎರಡು ಪೇಪರ್‌ಗಳಲ್ಲಿ ಹೆಚ್ಚು ಹುಡುಗರು ಕಾಪಿ ಹೊಡೆಯೋದು, ಪರೀಕ್ಷೆ ಆಗುವಾಗ ಪತ್ರಿಕೆಗಳೇ ಇಲ್ಲ, ಅನಂತರ ಪುನಃ ಪರೀಕ್ಷೆಗೆ ಏರ್ಪಾಟು ಮಾಡಿದರು, ಆದರೆ ಯಾರ ಮೇಲೂ ಕ್ರಮ ತೆಗೆದುಕೊಳ್ಳಲಿಲ್ಲ, ಈ ರೀತಿ ಪರೀಕ್ಷೆ ಮಾಡಿದರೆ ಹುಡುಗರ ಗತಿ ಏನು ? ನೀವು ಆ ಪತ್ರಿಕೆಗಳು ಏಕೆ ಕಳುವಾಯಿತು ಎನ್ನುವ ಬಗ್ಗೆ ಪ್ರಶ್ನೆ ಕೇಳದಿದ್ದರೆ ಇದು ಸರಿಯಾಗುವುದಿಲ್ಲ, ತಾವು ಇಲಾಖೆಯನ್ನು ಸ್ವಲ್ಪ ನೋಡಿಕೊಳ್ಳಬೇಕು, ಮಾನ್ಯ ಶಿವಣ್ಣನವರು ಹೇಳಿದ್ದುದು ನಿಜ. ಎ.ಇ.ಓ ಮತ್ತು ಶಿಕ್ಷಕರು ಒಂದೇ ಬಸ್‌ನಲ್ಲಿ ಹೋಗುತ್ತಾರೆ, ಯಾವ ಶಿಕ್ಷಕರೂ ಸಹ ಹಳ್ಳಿಯಲ್ಲಿ ಇಲ್ಲ, ಎ.ಇ.ಓ. ಇನ್ಸ್‌ಪೆಕ್ಟರ್ ಮತ್ತು ಶಿಕ್ಷಕ ಇವರುಗಳು ಒಟ್ಟಿಗೆಯೇ ಮಾತನಾಡಿಕೊಂಡು ಒಂದೇ ಬಸ್‌ನಲ್ಲಿ ಹೋಗುತ್ತಾರೆ, ಅನಂತರ ಶಾಲೆಯ ಇನ್ಸ್‌ಪೆಕ್ಷನ್ ಆಗುತ್ತದೆ, ಇವರೇನು ಸರ್‌ಪ್ರೈಸ್ ಆಗಿ ಇನ್ಸ್‌ಪೆಕ್ಷನ್ ಮಾಡುವ ಸ್ಥಿತಿಯಲ್ಲಿ ಇಲ್ಲ, ಏಕೆಂದರೆ ಅವರಿಗೆ ವಾಹನದ ಸೌಕರ್ಯವಿಲ್ಲ, ಅವರುಗಳು ಬಸ್‌ನಲ್ಲಿಯೇ ಹೋಗಬೇಕು, ನನ್ನ ಗೆಳೆಯರೊಬ್ಬರು ಹೆಡ್‌ಮಾಸ್ಟರ್ ಇದ್ದರು, ಅವರಿಗೆ ಏನು ನೀವು 10–30 ಆಯಿತು ಇಲ್ಲೇ ಇದ್ದೀರಿ ಎಂದು ನಾನು ಕೇಳಿದಾಗ ಅವರು ಇನ್ಸ್‌ಪೆಕ್ಷನ್‌ಗೆ ಬಂದಿದ್ದಾರೆ ಅವರು ನನ್ನ ಜೊತೆಯಲ್ಲೇ ಬರಬೇಕು, ಬೇರೆ ಬಸ್ಸು ಇಲ್ಲ ಎಂದು ಹೇಳಿದರು, ತಾವು ಆ ಸ್ಥಿತಿಯನ್ನು ತಪ್ಪಿಸಬೇಕು, ಮತ್ತು 10–30ಕ್ಕೆ ಶಾಲೆ ತೆರೆಯತಕ್ಕ ವ್ಯವಸ್ಥೆ ಆಗಬೇಕು. ನೀವು 50 ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷಕರೆಂದು ಹೇಳಿದ್ದೀರಿ, ಆದರೆ ನಮ್ಮ ಕಡೆಯಲ್ಲಿ ಒಂದರಿಂದ ನಾಲ್ಕು ಮತ್ತು 5 ರಿಂದ 7 ವರೆಗೆ ಎರಡು ತರಗತಿಗಳಿರುತ್ತವೆ, ಕೆಲವು ಕಡೆ 1 ರಿಂದ 7ನೇ ತರಗತಿಯವರೆಗೆ ಒಬ್ಬರೇ ಒಬ್ಬರು ಶಿಕ್ಷಕರು ಇದ್ದಾರೆ, ಇದು ಒಂದು ರೀತಿಯಾದ ದೊಡ್ಡಿಯಂತೆ, ಬೆಳಿಗ್ಗೆ ಕೂಡಿಕೊಳ್ಳುವುದು ಆಮೇಲೆ ಬಿಟ್ಟು ಕಳಿಸಿ, ಆಯಿತು ಹೋಗಿ 1 ರಿಂದ 6ನೇ ತರಗತಿಯವರೆಗೆ ಪಾಸ್ ಎಂದು ಹೇಳುವುದು, ಇದು ಶಿಕ್ಷಣಕ್ಕೆ ಗೌರವವನ್ನು ತರತಕ್ಕ ಸ್ಥಿತಿಯಲ್ಲ, ದಯಮಾಡಿ ಇದರ ಬಗ್ಗೆ ಗಮನಿಸಬೇಕು. ಇವತ್ತು ನಮ್ಮಲ್ಲಿರತಕ್ಕ ಶಿಕ್ಷಕರನ್ನು ತಾಲ್ಲೂಕು ಮತ್ತು ಹಳ್ಳಿಗಳಿಗೆ ಹಾಕಿದರೆ ಎಷ್ಟೋ ನಿಭಾಯಿಸಬಹುದು, ನಮ್ಮ ತುಮಕೂರಿನಲ್ಲಿ 25–30 ವರ್ಷಗಳಿಂದ ಶಿಕ್ಷಕರೇ ಇದ್ದಾರೆ, ಅವರಿಗೆ ಒಂದೇ ಒಂದು ವರ್ಗಾವಣೆ ಮಾಡಲು ಆಗಿಲ್ಲ, ವರ್ಗಾವಣೆ ಮಾಡಲು ಶಕ್ತಿ ಇಲ್ಲ, ಜಿಲ್ಲಾ

ಪರಿಷತ್ತಿನವರು ಆ ಸಾಧನೆ ಮಾಡಲು ಆಗಲಿಲ್ಲ, ಸರ್ಕಾರದವರು ಬಂದರೂ ಆಗಲಿಲ್ಲ, ಅವರುಗಳು ಅಲ್ಲೇ ಇರುತ್ತಾರೆ. ಆದುದರಿಂದ ತಾವು ಆಡಳಿತದಲ್ಲಾದರೂ ಕೈಹಾಕಿ. ಇದ್ದಿದ್ದರಲ್ಲಿ ಏನಾದರೂ ಸ್ವಲ್ಪ ಸುಧಾರಣೆಯಾಗಬಹುದು. ತಾವು ಒಂದೇ ಒಂದು ಮಾತನ್ನು ಸದನಕ್ಕೆ ಕೊಡಬೇಕಾಗುತ್ತದೆ.

ಪ್ರೊಫೆಷನಲ್ ಇನ್ಸಿಟಿಟ್ಯೂಷನ್ ಬಗ್ಗೆ ಸುಪ್ರೀಂ ಕೋರ್ಟ್‌ನವರು ಏನು ತೀರ್ಮಾನ ಮಾಡಿದ್ದಾರೆ ಅದರ ಬಗ್ಗೆ ನಿಮ್ಮ ಪಾಲಿಸಿಯನ್ನು ಹೇಳಬೇಕಾಗುತ್ತದೆ, ಸುಪ್ರೀಮ್ ಕೋರ್ಟ್ ಏನು ಹೇಳಿದೆ ಅದನ್ನು ಮಾಡುತ್ತೇವೆ ಅಥವಾ ಇಲ್ಲ ಎಂದು ಹೇಳಬೇಕು. ಇದು ಪಾಲಿಸಿ ಡಿಸಿಷನ್, ಸುಪ್ರೀಂ ಕೋರ್ಟ್‌ನ ಎಗ್ಸಿಸ್‌ಟಿಂಗ್ ಕಾನೂನನ್ನು ಅನುಸರಿಸಿ, ಸಂವಿಧಾನದ ಮೇಲೆ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ We can certainly amend ಹೇಳಬೇಕು. ಆ ರೀತಿ ಹೇಳತಕ್ಕ ಕಾಲದಲ್ಲಿ ಗ್ರಾಮಾಂತರ ಪ್ರದೇಶವನ್ನು ಮತ್ತು ಹಿಂದಿನ ವರ್ಷದ ಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಂಡು ಹೇಳಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ವೈ. ಮೇಟಿ (ತಿಮ್ಮಾಪುರ):– ಮಾನ್ಯ ಅಧ್ಯಕ್ಷರೇ, ಶಿಕ್ಷಣ ಇಲಾಖೆಯ ಬಗ್ಗೆ ಮಾತನಾಡುವಾಗ ಹೆಚ್ಚು ಗ್ರಾಮೀಣ ಪ್ರದೇಶದ ಬಗ್ಗೆ ಮಾತನಾಡಬೇಕಾಗುತ್ತದೆ. ಇವತ್ತಿನ ಸರ್ಕಾರ ಗ್ರಾಮೀಣ ಪ್ರದೇಶದ ಶಿಕ್ಷಣವನ್ನು ಎಷ್ಟು ಕಡೆಗಣಿಸಿದೆ ಎಂದರೆ ಅದನ್ನು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ 40 ಮಕ್ಕಳಿಗೆ ಒಬ್ಬ ಶಿಕ್ಷಕ ಇರಬೇಕೆಂದು ಇವರು ಮಾಡಿಕೊಂಡಿದ್ದರೂ 200–300 ಮಕ್ಕಳಿರುವ ಜಾಗದಲ್ಲೂ ಕೂಡ ಕೇವಲ ಒಬ್ಬಿಬ್ಬರು ಮಾತ್ರ ಶಿಕ್ಷಕರಿದ್ದಾರೆ. ಇಂಥ ಪರಿಸ್ಥಿತಿ ಇರುವಾಗ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಮುಂದೆ ಬರುವುದಕ್ಕೆ ಹೇಗೆ ಸಾಧ್ಯ? ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಷಹರದಲ್ಲಿ ಓದಿದ ಮಕ್ಕಳಿಗೂ, ಗ್ರಾಮೀಣ ಪ್ರದೇಶದಲ್ಲಿ ಓದಿದ ಮಕ್ಕಳಿಗೂ ಅಂತರವನ್ನು ನೋಡಿದರೆ ಅಜಗಜಾಂತರ ವ್ಯತ್ಯಾಸವಿದೆ. ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ ಗ್ರಾಮೀಣ ಪ್ರದೇಶದಲ್ಲಿ ಯಾವ ಸೆಂಟರ್‌ನಲ್ಲಿ ಹೆಚ್ಚು ಕಾಪಿ ಮಾಡಿ ಪಾಸು ಮಾಡುವುದಕ್ಕೆ ಅನುಕೂಲವಿದೆ ಅಂಥ ಸೆಂಟರ್‌ನಲ್ಲಿ ಕುಳಿತು ಕಾಪಿ ಮಾಡಿ ಎಸ್.ಎಸ್.ಎಲ್.ಸಿಯನ್ನು ಪಾಸ್ ಮಾಡಿಕೊಂಡು ಮುಂದೆ ಕಾಲೇಜಿಗೆ ಹೋದಾಗ ಷಹರದಿಂದ ಕಾಲೇಜಿನ ಮಕ್ಕಳಿಗೂ, ಹಳ್ಳಿಯಿಂದ ಬಂದ ಮಕ್ಕಳಿಗೂ ಇರತಕ್ಕ ತಾರತಮ್ಯವನ್ನು ತಾವು ನೋಡಬೇಕು. ಹಳ್ಳಿಯಿಂದ ಬಂದ ವಿದ್ಯಾರ್ಥಿಗಳು ಷಹರದ ಮಕ್ಕಳ ಎಜುಕೇಷನ್ ಸ್ಟ್ಯಾಂಡರ್ಡನ್ನು ನೋಡಿ ನಾಚಿಕೆಯಿಂದ ತನಗೆ ಏನೂ ಬರುವುದಿಲ್ಲವೆಂದು ಭಾವಿಸಿ ಅವರು ಕಾಲೇಜಿಗೆ ಹೋಗುವುದೇ ಇಲ್ಲ. ಏಕೆಂದರೆ ಅವರಂತೆ ಇವರು ವಿದ್ಯಾಭ್ಯಾಸ ಮಾಡುವುದಕ್ಕೆ ಆಗಿರುವುದಿಲ್ಲ. ಅವರು ಕಾಲೇಜಿಗೆ ಹೋಗದೆ ಬಜಾರ್‌ನಲ್ಲಿ ಅಡ್ಡಾಡಿ ಕೊನೆಗೆ ಅವನು ಶಾಲೆಯಲ್ಲಿ ವಿದ್ಯೆಯನ್ನೂ ಕಲಿಯುವುದಿಲ್ಲ, ಮನೆಯಲ್ಲಿ ಒಕ್ಕಲುತನವನ್ನೂ ಮಾಡುವುದನ್ನೂ ಕಲಿಯುವುದಿಲ್ಲ. ಹಳ್ಳಿಯಲ್ಲೂ ಅವರು ಇರಲಾರದಂಥ ಪರಿಸ್ಥಿತಿ ನಮ್ಮ ಹಳ್ಳಿಗಳಲ್ಲಿದೆ. ನಾನು 1500 ಜನಸಂಖ್ಯೆ ಇದ್ದಂಥ ಹಳ್ಳಿಯಿಂದ ಬಂದವನು. ಈಗತಾನೆ ನನ್ನ ಮಿತ್ರರೊಬ್ಬರು ಮಾತನಾಡಿದರು. ನಾನಾದರೂ ಹೇಳುತ್ತೇನೆ ಷಹರದ ಇಂಗ್ಲೀಷ್ ಶಾಲೆಯಲ್ಲಿ ಓದಿ ಬಂದಿರುವ ಅವರು ಮಾತನಾಡುವುದಕ್ಕೂ ನಾನು ಮಾತನಾಡುವುದಕ್ಕೂ ಎಷ್ಟು ಅಂತರವಿದೆ. ಅವರ ರೀತಿಯಲ್ಲಿ ಮಾತನಾಡುವುದಕ್ಕೆ ನನ್ನಿಂದಾಗುವುದಿಲ್ಲ. ಈ ರೀತಿ ತಾರತಮ್ಯ ಆಗುವುದಕ್ಕೆ ಕಾರಣ ಸರ್ಕಾರ. ಅದು ಯಾವುದೇ ಸರ್ಕಾರವಿರಲಿ; ಪಕ್ಷಭೇದವಿಲ್ಲದೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನಮಗೆ ಸ್ವಾತಂತ್ರ್ಯ ಸಿಕ್ಕು 46 ವರ್ಷ ಕಳೆದುವು. ಗ್ರಾಮೀಣ ಪ್ರದೇಶದಲ್ಲಿ ಒಳ್ಳೆಯ ಶಿಕ್ಷಣವನ್ನು ಕೊಡದೇ ಇರುವಂಥ ಇಂಥ ಸರ್ಕಾರವನ್ನು ತೆಗೆದುಕೊಂಡು ನಾವು ಏನು ಮಾಡಬೇಕು? ಈ ಸಂದರ್ಭದಲ್ಲಿ ಸರ್ವಜ್ಞನ ಒಂದು ವಚನ ನೆನಪಿಗೆ ಬರುತ್ತದೆ.

"ಬುದ್ಧಿ ಹೇಳದಾ ತಂದೆ,

ವಿದ್ಯೆ ಕೊಡದಾ ಗುರುವು,
ಬಿದ್ದಾಗ ಬಂದು ನೋಡದಾ ತಾಯಿ,
ಈ ಮೂವರು ಶುದ್ಧವೈರಿಗಳಯ್ಯ ಸರ್ವಜ್ಞ''

ಎಂದು ಹೇಳಿದ್ದಾನೆ.

ಇವತ್ತು ಷಹರಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳಲ್ಲಿ ನೂರಕ್ಕೆ ನೂರನ್ನೂ ತುಂಬುತ್ತೀರಿ. ಅದೇ ಗ್ರಾಮೀಣ ಪ್ರದೇಶದಲ್ಲಿ ಏತಕ್ಕೆ ನೀವು ತುಂಬುವುದಿಲ್ಲ ? ಷಹರಗಳಲ್ಲಿರುವ ಶಿಕ್ಷಕರಿಗೇ ಒಂದು, ಗ್ರಾಮಾಂತರ ಪ್ರದೇಶದ ಶಿಕ್ಷಕರಿಗೇ ಒಂದು ಇಂಥ ತಾರತಮ್ಯ ಏತಕ್ಕೆ? ಷಹರದಲ್ಲಿರುವ ಶಿಕ್ಷಕರಿಗೆ ಏನು ಖರ್ಚು ಇರುತ್ತದೆ ಅವರಿಗೆ ಮನೆ ಬಾಡಿಗೆ ಭತ್ಯ ಹೆಚ್ಚಿಗೆ ಕೊಡುತ್ತಿದ್ದೀರಿ. ಆದರೆ ಗ್ರಾಮಾಂತರ ಪ್ರದೇಶದಲ್ಲಿರುವ ಶಿಕ್ಷಕರಿಗೆ ಇದನ್ನು ನೀವು ಕೊಡುವುದಿಲ್ಲ. ಗ್ರಾಮಾಂತರ ಪ್ರದೇಶದ ಶಿಕ್ಷಕರು, ಹೆಂಡತಿ ಮಕ್ಕಳಿಗೆ ಏನಾದರೂ ಖಾಯಿಲೆ ಆದರೆ ವೈದ್ಯಕೀಯದ ಸಲುವಾಗಿ ಷಹರಿಗೆ ಬರಬೇಕಾಗುತ್ತದೆ. ಅದಕ್ಕೆ ಖರ್ಚು ಬರುತ್ತದೆ. ವಾರಕ್ಕೊಮ್ಮೆ ಅವರು ಸಂತೆಗೆ ಬರಬೇಕಾದರೆ ಅದಕ್ಕೆ ಖರ್ಚು ಬರುತ್ತದೆ. ಆದರೆ ಅವರಿಗೆ ಹೆಚ್ಚು ಭತ್ಯೆ ಕೊಡುವುದಿಲ್ಲ. ಸಿಟಿಯೊಳಗೆ ಇರುವವರಿಗೆ ಹೆಚ್ಚು ಕೊಡುತ್ತಿದ್ದೀರಿ. ಈ ತಾರತಮ್ಯ ಹೋಗಬೇಕು. ಒಂದೊಂದು ತಾಲ್ಲೂಕಿನಲ್ಲಿ 100 ರಿಂದ 160 ಹಳ್ಳಿಗಳಿವೆ. ಇಷ್ಟು ಹಳ್ಳಿಗಳಿಗೆ ಒಬ್ಬ ಸಹಾಯಕ ಶಿಕ್ಷಣಾಧಿಕಾರಿ ಹಾಕಿದ್ದೀರಿ. ಅವನು ಅಷ್ಟೊಂದು ಹಳ್ಳಿಗಳಿಗೆ ಹೇಗೆ ಹೋಗುವುದಕ್ಕೆ ಸಾಧ್ಯ ? ಅವನು ಆಫೀಸಿನ ಕಾಗದ ಪತ್ರಗಳನ್ನು ಸಿದ್ಧಮಾಡಿ ಇಟ್ಟುಕೊಳ್ಳಬೇಕು, ನಮ್ಮ ಪತ್ರಗಳಿಗೆ ಉತ್ತರ ಕೊಡಬೇಕು, ಇದರ ಜೊತೆಗೆ ಅವನು ಹಳ್ಳಿಯ ಶಾಲೆಗಳಿಗೆ ಭೇಟಿ ನೀಡಬೇಕು ಇದು ಸಾಧ್ಯವಾಗುವುದಿಲ್ಲ. ಷಹರದಲ್ಲಿ ಅಧಿಕಾರಿಗಳಿಗೆ ಕಾರ್‌ಗಳನ್ನು ಕೊಟ್ಟಿದ್ದೀರಿ. ಅವರು ಹೆಂಡತಿ ಮಕ್ಕಳು, ನಾಯಿ, ನರಿಗಳನ್ನು ಕರೆದುಕೊಂಡು ದವಾಖಾನೆಗೆ ಹೋಗುತ್ತಾರೆ. ಇದನ್ನೆಲ್ಲಾ ಕಡಿಮೆ ಮಾಡಿ, ಶಿಕ್ಷಣಕ್ಕೆ ಪ್ರಾಧ್ಯಾನ್ಯತೆ ಕೊಡಿ. ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಸುಧಾರಣೆ ಆಗದಿದ್ದರೆ, ನಮ್ಮ ಹಳ್ಳಿಗಳು ಎಂದೂ ಉದ್ಧಾರವಾಗುವುದಿಲ್ಲ. ಅದು ಯಾವುದೇ ಸರ್ಕಾರ ಇರಲಿ. ಗ್ರಾಮೀಣ ಪ್ರದೇಶದ ಶಿಕ್ಷಣ ಸುಧಾರಣೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ನಾನು ಹೇಳುತ್ತೇನೆ. ಇನ್ನು ಖಾಸಗಿ ಹೈಸ್ಕೂಲುಗಳು ಸಾಕಷ್ಟು ಹೆಚ್ಚಿವೆ. ಇವುಗಳಲ್ಲಿ ಅನುದಾನ ರಹಿತ ಮತ್ತು ಅನುದಾನ ಸಹಿತವೂ ಇವೆ. ತಮಗೂ ಗೊತ್ತಿದೆ ಹೈಸ್ಕೂಲ್‌ಗಳಲ್ಲಿ ಎಂಥ ಉಪಾಧ್ಯಾಯರನ್ನು ತೆಗೆದುಕೊಳ್ಳುತ್ತಾರೆ ಎಂದು. ಕೆಲವರು ಸ್ವಲ್ಪ ಪರ್ಸೆಂಟೇಜ್ ಇರುವವರನ್ನು ತೆಗೆದುಕೊಳ್ಳುತ್ತಾರೆ. ಇನ್ನು ಕೆಲವರು ಹೈಸ್ಕೂಲಿಗೆ ಹೆಚ್ಚು ಮೆರಿಟ್ ಇರುವವರನ್ನು, ಉತ್ತಮ ಶಿಕ್ಷಕರೆಂದು ಕಂಡುಬಂದವರನ್ನು ತೆಗೆದುಕೊಳ್ಳುತ್ತಾರೆ. ಆದರೆ ಬಹಳಷ್ಟು ಕಡೆಗಳಲ್ಲಿ ಹೈಸ್ಕೂಲಿಗೆ ಮಾಸ್ತರನ್ನು ತೆಗೆದುಕೊಳ್ಳಬೇಕಾದರೆ 1 ಲಕ್ಷ ಒಂದೂವರೆ ಲಕ್ಷ ರೂ.ಗಳನ್ನು ತೆಗೆದುಕೊಳ್ಳುತ್ತಾರೆ. ಇಷ್ಟೊಂದು ಹಣವನ್ನು ಅವರು ಕೊಡುವಾಗ ಪರ್ಸೆಂಟೇಜನ್ನು ಯಾರೂ ಕೂಡ ನೋಡುವುದಿಲ್ಲ. ಅವನ ಪರ್ಸೆಂಟೇಜ್ 30ರಿಂದ 40 ಪರ್ಸೆಂಟ್‌ನೊಳಗೆ ಇರುತ್ತದೆ.

ಇಂಥ ಶಿಕ್ಷಕರನ್ನು ನಾವು ಘಾಡಿದರೆ ಶಾಲೆ ಉದ್ಧಾರವಾಗುತ್ತದೆಯೇ ? ಅದು ಗ್ರಾಮೀಣ ಪ್ರದೇಶದ ಶಾಲೆಗಳು. ಅದೇ ಪಟ್ಟಣ ಪ್ರದೇಶಗಳಲ್ಲಿ ನೋಡಿ, ಹೈಸ್ಕೂಲ್ ಮಟ್ಟದಲ್ಲಿ ಅಂಥವರನ್ನು ತೆಗೆದುಕೊಳ್ಳುವುದಿಲ್ಲ. ಅದಕ್ಕೆ ಸ್ವಲ್ಪ ಕಡಿವಾಣ ಹಾಕಿ ಸರಿಯಾದಂಥ ಶಿಕ್ಷಕರನ್ನು ತೆಗೆದುಕೊಳ್ಳುವಂತೆ ಹೇಳಿ, ಸರಿಯಾದಂಥ ಶಿಕ್ಷಕರನ್ನು ತೆಗೆದುಕೊಳ್ಳುವಂತೆ ಹೇಳಬೇಕು. ಶಾಲೆಯನ್ನು ತೆಗೆದಾದ ಮೇಲೆ ಶಾಲೆಯನ್ನು ಕೊಡುವ ಮುಂಚೆ ವಿಚಾರ ಮಾಡಬೇಕು. ಅಲ್ಲಿಯ ಶಾಲೆಗೆ ಬೇಕಾದಂಥ ಉಪಕರಣಗಳು, ಶಾಲೆಗೆ ಬೇಕಾದಂಥ ಕಟ್ಟಡಗಳು ಯಾವ ರೀತಿ ಮಾಡುತ್ತಾರೆ ಅದನ್ನು ತಾವು ಗಮನಿಸಬೇಕು. ಶಾಲೆ ತೆಗೆದ ತಕ್ಷಣ ಟೀಚರ್ಸ್ ಇಂಟರ್‌ವ್ಯೂಸ್ ಕರೆಯುತ್ತಾರೆ, ಅದಕ್ಕೆ ರೊಕ್ಕ

ತೆಗೆದುಕೊಳ್ಳುತ್ತಾರೆ, ತೆಗೆದುಕೊಂಡು ಅರ್ಧಂಬರ್ಧ ತಾನು ಹಾಕಿಕೊಳ್ಳುತ್ತಾನೆ, ಅರ್ಧಂಬರ್ಧ ಒಂದಿಷ್ಟು ಅಂಥ ಇಂಥ ಕುರ್ಚಿ ಪೀಠೋಪಕರಣಗಳನ್ನು ಮಾಡಿ ಶಾಲೆ ಮಾಡುತ್ತಾರೆ. ಅಂಥ ಶಾಲೆಗಳು ಹೇಗೆ ನಡೆಯುತ್ತವೋ ಏನೋ. ಇಂಥವು ನಮ್ಮ ಜಿಲ್ಲೆಯಲ್ಲಿ ಬಹಳ ನಡೆಯುತ್ತಿವೆ. ಉಳಿದ ಕಡೆ ನನಗೆ ಗೊತ್ತಿಲ್ಲ. ಅದಕ್ಕೆ ಸರಿಯಾದ ಹೈಸ್ಕೂಲ್‌ಗಳನ್ನು ಕೊಡಿ, ಅದನ್ನು ತಪ್ಪೆಂದು ಹೇಳುವುದಿಲ್ಲ. ಆದರೆ ಅವು ಸರಿಯಾಗಿ ನಡೆಯುತ್ತವೋ ಇಲ್ಲವೋ ಎನ್ನುವುದನ್ನು ನೋಡತಕ್ಕಂಥದ್ದು ಸರ್ಕಾರದ ಒಂದು ಕೆಲಸವೆಂದು ಹೇಳುತ್ತೇನೆ.

ಇನ್ನು ಈ ಕಪ್ಪು ಹಲಗೆಯ ಕಾರ್ಯಕ್ರಮ. ಕೇಂದ್ರ ಸರ್ಕಾರದಿಂದ ಈ ಒಂದು ಕಾರ್ಯಕ್ರಮ ಬಂತು. ಎಲ್ಲೆಲ್ಲಿ ಒಂದು ಸ್ಕೂಲ್ ಇದೆ ಅಲ್ಲಿ ಮತ್ತೊಂದು ಸ್ಕೂಲನ್ನು ಕಟ್ಟಬೇಕು. ಎಲ್ಲಿ ಒಬ್ಬ ಶಿಕ್ಷಕರು ಇದ್ದಾರೆ ಅಲ್ಲಿ ಇಬ್ಬರು ಶಿಕ್ಷಕರನ್ನು ಕೊಡಬೇಕು ಎಂದು. ಆದರೆ ಅಧ್ಯಕ್ಷರೇ ಪರಿಸ್ಥಿತಿ ಹೀಗಾಗುವುದಿಲ್ಲ. ನಾನು ಹೇಳಿದರೆ ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲೂಬಹುದು. ಆದರೆ ಅಧಿಕಾರಿಗಳು ತಪ್ಪಿಲ್ಲ. ಇಲ್ಲಿ ಶಿಕ್ಷಕರನ್ನು ಈ ಕಪ್ಪು ಹಲಗೆ ಕಾರ್ಯಕ್ರಮಕ್ಕೆ ಒಬ್ಬರು ಶಿಕ್ಷಕರಲ್ಲ ಇಬ್ಬರು ಶಿಕ್ಷಕರನ್ನು ಹಾಕಿದರೂ ಅವರನ್ನು ಮರುದಿವಸವೇ ಡೆಪ್ಯುಟೇಷನ್ ಮಾಡುವಂಥ ಪ್ರಸಂಗ ಬಂದಿತು. ಅದಕ್ಕೆ ನಾವೂ ಕಾರಣರು. ಏತಕ್ಕೆಂದರೆ ಈ ಹಳ್ಳಿಯಲ್ಲಿ ಒಬ್ಬರೇ ಮಾಸ್ತರರು ಇದ್ದಾರೆ. ಅವರನ್ನು ಟ್ರಾನ್ಸ್‌ಫರ್ ಮಾಡುವುದು, ಡೆಪ್ಯುಟೇಷನ್ ಮಾಡುವುದು ಸರಿಯಲ್ಲ. ಇದನ್ನು ಸರ್ಕಾರದವರು ನೋಡಿರುತ್ತಾರೆಯೇ ? ಯಾರು ನೋಡುವುದಕ್ಕಾಗುವುದಿಲ್ಲ. ಅದಕ್ಕೆ ಒಬ್ಬ ಶಿಕ್ಷಕರು ಇರುವ ಕಡೆ ಇಬ್ಬರು ಶಿಕ್ಷಕರನ್ನು ಕೊಟ್ಟರೆ ಮತ್ತೆ ಅದೇ ಪರಿಸ್ಥಿತಿಯಾಗುತ್ತದೆ. ಹಳ್ಳಿಗಳಲ್ಲಿ ಈ ಪದ್ಧತಿ ಹೋಗಬೇಕು. ಅದಕ್ಕೆ ದಯಮಾಡಿ ತಾವು ಶಿಕ್ಷಣ ಸಚಿವರು ಈ ಗ್ರಾಮೀಣ ಪ್ರದೇಶಕ್ಕೆ ಹೆಚ್ಚು ಆದ್ಯತೆಯನ್ನು ಕೊಡಿ. ಇವತ್ತು ನಾನು ನಿಮಗೆ ಒಂದು ಹೇಳುವುದೇನೆಂದರೆ ನಿಮ್ಮ ಸಚಿವಾಲಯದೊಳಗೆ ನಿಮ್ಮ ಅಧಿಕಾರಿಗಳು ಇದಾರಲ್ಲ ಅದರಲ್ಲಿ ಒಂದು ಪರ್ಸೆಂಟ್ ಎರಡು ಪರ್ಸೆಂಟ್ ನೋಡಿ, ಗ್ರಾಮೀಣ ಪ್ರದೇಶದಿಂದ ಶಾಲೆಯಲ್ಲಿ ಕಲಿತುಬಂದವರು ಯಾರಾದರೂ ಒಬ್ಬರು ಇದ್ದಾರೆಯೇ ? ಎಲ್ಲರೂ ಪಟ್ಟಣ ಪ್ರದೇಶದಲ್ಲಿ ಕಲಿತವರೇ ಇದ್ದಾರೆ. ಒಂದು ಪರ್ಸೆಂಟ್ ಎರಡು ಪರ್ಸೆಂಟ್ ಇದ್ದಾರೆಯೇ ತೋರಿಸಿ. ಸಚಿವಾಲಯದಲ್ಲಿ ಅಧಿಕಾರಿಗಳು ಎಷ್ಟು ಮಂದಿ ಇದ್ದಾರೆ, ಅದರಲ್ಲಿ ಒಂದು ಪರ್ಸೆಂಟ್ ಎರಡು ಪರ್ಸೆಂಟ್ ತೋರಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಇದು ಹೋಗಬೇಕು. ಅಧಿಕಾರಿಗಳ ಮಕ್ಕಳೇ ಮುಂದೆ ಅಧಿಕಾರಿಗಳಾಗುವುದು. ಎಲ್ಲರೂ ಮಾಡುವುದು ಅವರ ಕರ್ತವ್ಯ. ನಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕೆನ್ನುವುದು ಇದೆ, ಕಳುಹಿಸಿ, ಆದರೆ ಇದೇ ಪರಿಸ್ಥಿತಿ ಹಳ್ಳಿಗಳಿಗೂ ಬರಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಮ್ಮ ಸರ್ಕಾರಿ ಶಾಲೆಗಳನ್ನು ಸರಿಯಾದ ವ್ಯವಸ್ಥೆಯಲ್ಲಿಟ್ಟು ಪ್ರತಿ ಶಾಲೆಯಲ್ಲಿ ಒಂದು ಕ್ಲಾಸಿಗೆ ಒಬ್ಬ ಮಾಸ್ತರು, ಕೊಟ್ಟರೆ ಅದು ಸರಿಯಾಗಿ ನಡೆಯುತ್ತದೆ. ಅಂದರೆ ನಮ್ಮ ಮಕ್ಕಳು ವಿದ್ಯಾವಂತರಾಗುತ್ತಾರೆ. 200–300 ಹುಡುಗರು ಇರುತ್ತಾರೆ, ಒಬ್ಬರು ಮಾಸ್ತರಿದ್ದರೆ, ಹುಡುಗರು ಜಗಳವಾಡುತ್ತಿರುತ್ತಾರೆ, ಬಡಿದಾಡುತ್ತಿರುತ್ತಾರೆ ಇವರನ್ನು ಒಬ್ಬ ಮಾಸ್ತರಿಂದ, ಹೇಗೆ ಕಂಟ್ರೋಲ್ ಮಾಡಲಿಕ್ಕೆ ಸಾಧ್ಯವಾಗುತ್ತದೆ ಹುಡುಗರು ಜಗಳವಾಡಿಕೊಂಡು ಬಂದು ಊರಿನಲ್ಲಿ ಮನೆಮುಂದಿಗೆ ಜಗಳವಾಗುತ್ತದೆ. ಬೇಕಾದರೆ ಪೊಲೀಸ್ ಅಧಿಕಾರಿಗಳನ್ನು ಹಳ್ಳಿಗಳಲ್ಲಿ ಇಂಥ ಜಗಳ ಬಂದಿರುತ್ತವೆಯೋ ಇಲ್ಲವೋ ಎಂದು ಕೇಳಿ. ಇಂಥ ಪರಿಸ್ಥಿತಿಯಲ್ಲಿ ಸರ್ಕಾರ ಇದನ್ನು ತೀವ್ರಗತಿಯಿಂದ ಯೋಚನೆ ಮಾಡಬೇಕು. ಈಗ ನಮ್ಮ ನಂಜುಂಡಸ್ವಾಮಿಯವರು ಹೇಳಿದರು 2000 ಸಾವಿರ ಇಸವಿಗೆ ಒಂದು ವರ್ಗಕ್ಕೆ ಒಬ್ಬ ಶಿಕ್ಷಕರನ್ನು ಮತ್ತು ಒಂದು ಕೋಣೆಯನ್ನು ಕೊಡುತ್ತೇವೆಂದು ಹೇಳಿದರು. ಎರಡು ಸಾವಿರ ಇಸವಿಗೆ ಅಂದರೆ ಗತಿ ಏನು ಸ್ವಾಮಿ. ಸ್ವಾತಂತ್ರ್ಯ ಸಿಕ್ಕಿ 43 ವರ್ಷವಾದರೂ ನಮ್ಮ ಮಕ್ಕಳಿಗೆ ವಿದ್ಯೆ ಕಲಿಸತಕ್ಕಂಥ ಗತಿ ಇಲ್ಲ. ಇನ್ನು ಮುಂದೆ 2000 ಇಸವಿಗೆ ಎಂದರೆ ಹೇಗೆ ಸಾಧ್ಯ ? ನಾನು ಶಾಸಕನಾಗಿ ಬಂದಾಗಲೇ ಇಲ್ಲಿ ಹೇಳಿದ್ದೆ. ನಾನು ಮಾತನಾಡಲಿಲ್ಲ,

ಮಾತನಾಡದಿದ್ದರೂ ಸಹಿತ ಇಲ್ಲಿ ನೀವು ಮುಂದಿನ ಜನಾಂಗಕ್ಕೆ ಯಾವ ರೀತಿಯ ಶಿಕ್ಷಕರನ್ನು ತುಂಬುತ್ತೀರೆಂಬುದರ ಬಗ್ಗೆ ನಾನು ಕೇಳುತ್ತಿದ್ದೇನೆ.

ಪ್ರತಿವರ್ಷ ಇದೇ ಹೇಳುತ್ತಿದ್ದಾರೆ. ಷಹರದಲ್ಲಿ ಕಡಿಮೆ ಮಾಡಿದರೆ ನಡೆಯುತ್ತದೆ. ತಂದೆ ತಾಯಿಗಳು ವಿದ್ಯಾವಂತರಿರುತ್ತಾರೆ. ಮುಂಜಾನೆ ಎದ್ದು ಅವರಿಗೆ ಮೊದಲನೆ ಕೆಲಸ ಅಂದರೆ ಮಕ್ಕಳನ್ನು ಸ್ನಾನ ಮಾಡಿಸಿ ಶಾಲೆಗೆ ಕಳುಹಿಸುವುದು. ಆದರೆ ಆ ಪರಿಸ್ಥಿತಿ ಹಳ್ಳಿಯಲ್ಲಿ ಇಲ್ಲ, ಮುಂಜಾನೆ ಎದ್ದು ಮಕ್ಕಳು ಸಗಣಿ ಬಳಿಯಬೇಕು, ನೀರು ತರಬೇಕು, ದನಕರುಗಳಿಗೆ ಹುಲ್ಲು ಹಾಕಬೇಕು; ಹೊಲಕ್ಕೆ ಹೋಗಿ ಎತ್ತುಗಳನ್ನು ಕಟ್ಟಿ ಬರಬೇಕು. ನಂತರ ಶಾಲೆಗೆ ಹೋಗಬೇಕು ಅಂದಾಗ ಅವರು ಹೇಗೆ ವಿದ್ಯೆ ಕಲಿಯುವುದಕ್ಕೆ ಸಾಧ್ಯ? ಅದಕ್ಕೆ ಮೊಟ್ಟಮೊದಲು 3 ತಾಸು ಶಾಲೆ ಕಲಿಸುವ, ಸರಿಯಾಗಿ ಶಿಕ್ಷಣ ಕೊಡುವ ಮಾಸ್ತರನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಶಾಲೆಗಳಲ್ಲಿ ಇಡಿ. ಷಹರ ಮತ್ತು ಹಳ್ಳಿಯಲ್ಲಿ ಈ ಒಂದು ತಾರತಮ್ಯ ಇದೆ. ಶಹರದಲ್ಲಿ ಕಲಿಸುವ ಶಿಕ್ಷಕರಿಗೆ ಕಡಿಮೆ ಮಾಡಿ, ಹಳ್ಳಿಯಲ್ಲಿ ಕಲಿಸುವ ಶಿಕ್ಷಕರಿಗೆ ಹೆಚ್ಚಿನ ಸೌಲಭ್ಯ ಕೊಡಿ. ಮೊದಲು ಸಹಾಯಕ ಶಿಕ್ಷಣಾಧಿಕಾರಿಗಳಿಗೆ ವೆಹಿಕಲ್ ವ್ಯವಸ್ಥೆ ಮಾಡಿಕೊಡಿ. ಪ್ರತಿ ದಿವಸ ಶಾಲೆಗೆ ಹೋಗಿ ಕಲಿಸಬೇಕು ಶಿಕ್ಷಕ. ಅವನು ಮುಂಜಾನೆ ಬಸ್ ಹೋಗಿ ಹೊಳ್ಳಿ ಬರುವವರೆಗೆ ಅವನು ಅಲ್ಲೇ ಇರಬೇಕಾಗುತ್ತದೆ. ಅನೇಕ ಕಡೆ ಸ್ಕೂಲ್ ಬೆಟರ್‌ಮೆಂಟ್ ಕಮಿಟಿ ಎಂದು ಮಾಡಿರುತ್ತಾರೆ. ನಾನು ಕೂಡ ಸಾಕಷ್ಟು ಸಲ ಬೆಟರ್‌ಮೆಂಟ್ ಕಮಿಟಿ ಚೇರ್ಮನ್ ಇದ್ದೆ. ಅಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ನಮಗೆ 108 ಕೆಲಸಗಳು ಇರುತ್ತವೆ. ನಾವು ಹಾಗೆ ಕಾಲ ನೂಕಬೇಕಾಗುತ್ತದೆ. ಪರಿಸ್ಥಿತಿ ಅನಿವಾರ್ಯ ಇರುವುದರಿಂದ ಏನೂ ಮಾಡುವುದಕ್ಕಾಗುವುದಿಲ್ಲ. ದಯವಿಟ್ಟು ಈ ಗ್ರಾಮಾಂತರ ಪ್ರದೇಶದ ಶಾಲೆಗಳ ಬಗ್ಗೆ ಹೆಚ್ಚು ಕಾಳಜಿ ವಹಿಸಿ. ಯಾವುದೇ ಪರಿಸ್ಥಿತಿಯಲ್ಲೂ ಜೂನ್‌ಗೆ ಶಿಕ್ಷಕರನ್ನು ನೇಮಿಸುವುದನ್ನು ತಪ್ಪಿಸಬೇಡಿ. ಎಷ್ಟು ಕನ್ನಡ ಶಾಲಾ ಶಿಕ್ಷಕರು ಕಡಿಮೆ ಇದ್ದಾರೆ ಅವರನ್ನು ಯಾವುದೇ ರೀತಿಯಲ್ಲಾದರೂ ತುಂಬಿ. ಹಳ್ಳಿಯ ವಿದ್ಯಾರ್ಥಿಗಳನ್ನು ನೌಕರಿಗೆ ತೆಗೆದುಕೊಳ್ಳುವಾಗ 15 ಪರ್ಸೆಂಟ್ ಗ್ರೇಸ್ ಮಾರ್ಕ್ಸ್ ಎಂದು ಏನು ಮಾಡಿದ್ದೀರಿ ಅದನ್ನು ಮುಂದುವರಿಸಿ, ಇಲ್ಲದಿದ್ದರೆ ಹಳ್ಳಿಯವರು ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ, ಹಳ್ಳಿಯ ಮಕ್ಕಳು ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ಇವತ್ತು ನೀವು ಅದನ್ನು ಮುಂದುವರಿಸಿಕೊಂಡು ಹೋದರೆ ಗ್ರಾಮಾಂತರ ಪ್ರದೇಶದವರು ಸುಧಾರಣೆಯಾಗಬೇಕಾದರೆ ಇನ್ನೂ 50 ವರ್ಷ ಬೇಕು. ಏಕೆಂದರೆ 47 ವರ್ಷವಾದರೂ ಇನ್ನೂ ಏನೂ ಆಗಿಲ್ಲ. ಇನ್ನೂ 50 ವರ್ಷ ಬೇಕು ಸುಧಾರಿಸಿಬೇಕಾದರೆ, ಮಾನ್ಯ ಮಂತ್ರಿಗಳು ಈ ಗ್ರಾಮೀಣ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಗ್ರಾಮೀಣ ಪ್ರದೇಶದ ಮಕ್ಕಳನ್ನು ಉದ್ಧರಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಹಿಂದುಳಿದವರು, ಬಡವರು ಯಾರಿದ್ದಾರೆ ಅವರ ಬಗ್ಗೆ ಹೆಚ್ಚು ಕಳಕಳಿ ವಹಿಸಿ ಗ್ರಾಮೀಣ ಪ್ರದೇಶದ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುತ್ತೀರೆಂದು ಆಶಿಸಿದ ನಾನು ಈ ಒಂದು ಬೇಡಿಕೆಯನ್ನು ವಿರೋಧ ಮಾಡಿ, ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಕುಶಾಲ (ಸೂಳ್ಯ):- ಮಾನ್ಯ ಅಧ್ಯಕ್ಷರೆ, ಇಂದಿನ ಬೇಡಿಕೆಗಳಾದ ಶಿಕ್ಷಣ, ಯುವಜನ ಮತ್ತು ವೈದ್ಯಕೀಯ ಶಿಕ್ಷಣ ಏನಿವೆ ಇವುಗಳನ್ನು ಬೆಂಬಲಿಸಿ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. 1982–83ರಲ್ಲಿ ರಾಜ್ಯದಲ್ಲಿ ಸರ್ಕಾರ ಹಲವಾರು ಪ್ರೌಢಶಾಲೆಗಳಿಗೆ ಮಂಜೂರಾತಿ ನೀಡಿದೆ. ಅದೇ ರೀತಿಯಲ್ಲಿ 1987ರಲ್ಲಿ ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದನಂತರ ಕೂಡ 10–10–87ರಂದು ಜಿಲ್ಲಾ ಪರಿಷತ್ತು ಆದೇಶ ನೀಡಿದಂತೆ 1991ರಲ್ಲಿ ತೆರೆದಂಥ ಎಲ್ಲಾ ಪ್ರೌಢಶಾಲೆಗಳಿಗೆ ಮಂಜೂರಾತಿ ನೀಡಿದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಈಗಾಗಲೇ ಹಲವಾರು ಮಾನ್ಯ ಸದಸ್ಯರು ಹೇಳಿದಂತೆ 1982–83ರಲ್ಲಿ ಮಂಜೂರಾದ ಪ್ರೌಢಶಾಲೆಗಳಲ್ಲಿ ಈಗಲೂ ಕೂಡ ಏಕೋಪಾಧ್ಯಾಯರು ಇರುವುದನ್ನು ಕಾಣುತ್ತಿದ್ದೇವೆ. ಅಥವಾ 1982–83ರಲ್ಲಿ ಮಂಜೂರಾದ ಪ್ರೌಢಶಾಲೆಗಳಲ್ಲಿ ಒಂದೆರಡು

ಅಧ್ಯಾಪಕರನ್ನು ಬಿಟ್ಟರೆ ಯಾವುದೇ ದೈಹಿಕ ಶಿಕ್ಷಕರನ್ನು ಅಥವಾ ವೃತ್ತಿ ಶಿಕ್ಷಕರನ್ನು ಅಥವಾ ಜವಾನ ಹುದ್ದೆಯನ್ನು ಭರ್ತಿ ಮಾಡದೆ ಇರುವುದನ್ನು ಕಾಣುತ್ತಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಉಪಾಧ್ಯಕ್ಷರು 7 ಗಂಟೆಯವರೆಗೆ ಸಭೆ ನಡೆಸಿ ಕ್ಲೋಸ್ ಮಾಡೋಣವೆಂದು ಹೇಳಿದ್ದರು. ಈಗ ಎಲ್ಲಾ ಪತ್ರಿಕಾಕರ್ತರು ಹೋದರು, ಸದಸ್ಯರ ಸಂಖ್ಯೆಯ ಕಡಿಮೆ ಇದೆ. ಆದ್ದರಿಂದ ನಾಳೆ ಮುಂದುವರಿಸಿ.

ಅಧ್ಯಕ್ಷರು:- ಅವರೊಬ್ಬರು ಮಾತನಾಡಲಿ.

ಶ್ರೀ ಕೆ. ಕುಶಾಲ:- 1987ರಲ್ಲಿ ಮಂಜೂರಾದ ಜಿಲ್ಲಾಪರಿಷತ್ತಿನ ಪ್ರೌಢ ಶಾಲೆಗಳಲ್ಲಿ ಕೇವ ಒಬ್ಬ ಹೈಸ್ಕೂಲ್ ಅಧ್ಯಾಪಕರನ್ನು ಎರವಲು ಸೇವೆಯಲ್ಲಿ ನೇಮಿಸಿ 1987ರಿಂದ ಈವರೆಗೆ 3 ಬ್ಯಾ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳು ಶಿಕ್ಷಣ ಪಡೆದು ಹೊರಬರುವಂಥ ಪರಿಸ್ಥಿತಿಯಾಗಿದೆ. ಇಂ ಸಂದರ್ಭದಲ್ಲಿ ಶಾಲಾ ಅಭಿವೃದ್ಧಿ ಸಮಿತಿಯವರು ಖಾಸಗಿ ಶಿಕ್ಷಕರನ್ನು ಅನಿವಾರ್ಯವಾ ಗೌರವಧನದಲ್ಲಿ ನೇಮಕ ಮಾಡಿದ್ದನ್ನು ಕಾಣುತ್ತಿದ್ದೇವೆ.

7.15 ಪಿ.ಎಂ.

ಬಹುಶಃ ಈಗಾಗಲೇ ಹೊರಗಡೆ ಇಂತಹ ಗೌರವಧನದ ಶಿಕ್ಷಕರು ತಮ್ಮ ಸೇವೆಯ ಮುಂದುವರಿಸುವಂತೆ ಧರಣಿ ಹೂಡಿದ್ದುದನ್ನು ನಾವು ನೋಡಿದ್ದೇವೆ. ಈ ಸಂದರ್ಭದಲ್ಲಿ ಅವ ಸೇವೆ ಮುಂದುವರಿಕೆ ಅಥವಾ ಸೇವೆ ಭದ್ರತೆ, ಕನಿಷ್ಠ ವೇತನವನ್ನು ಅವರಿಗೆ ನೀಡಿ ಅವರನ್ನು ಸರ್ಕಾ ಪ್ರೌಢಶಾಲೆ ಶಿಕ್ಷಕರನ್ನು ನೇಮಕ ಮಾಡುವಾಗ ಅವರಿಗೆ ಹೆಚ್ಚಿನ ಆದ್ಯತೆ ಕೊಟ್ಟು, ರೋಸ್ಟ ಬಗ್ಗೆಯೂ ನಿಯಮ ಅನುಸರಿಸಿ, ಇವರಿಗೂ ಕೂಡ ರೋಸ್ಟರ್ ಪ್ರಕಾರವೇ ಅವಕಾಶ ನೀಡಿ ನೇಮ ಮಾಡಿದರೆ ಒಳ್ಳೆಯದು. ಕಳೆದ 45 ವರ್ಷಗಳಿಂದ ಈ ನಮ್ಮ ದೇಶ ಬಡತನದ ಮುಂದುವರಿಯುತ್ತಿದೆ ಆ ಬಡತನಕ್ಕೆ ಮೂಲ ಕಾರಣವಾದ ಅವಿದ್ಯಾವಂತತೆ. ಈ ಅವಿದ್ಯಾವಂತ ತೊಲಗಿಸುವ ಶಿಕ್ಷಣದ ವ್ಯವಸ್ಥೆ ಸರಿಯಾಗಿ ಆಗದೇ ಇದ್ದರೆ ಖಂಡಿತ ನಮ್ಮ ದೇಶದ ಬಡತ ನಿರ್ಮೂಲನ ಆಗುವುದಕ್ಕೆ ಸಾಧ್ಯವಿಲ್ಲ. ಈ ದಿಸೆಯಲ್ಲಿ ಇವತ್ತು ಶಿಕ್ಷಣಕ್ಕೆ ಅತಿ ಮಹ ಕೊಡಬೇಕಾಗಿದ್ದು ಈ ಶಿಕ್ಷಕರ ಬಗ್ಗೆ ಗಮನ ಕೊಡಬೇಕು. ನಮ್ಮ ರಾಜ್ಯದಲ್ಲಿ ಅಥವಾ ದೇಶದಲ್ಲಿ ಸಂಪನ್ಮೂಲ ಆದಾಯದ ಶೇಕಡಾ 50ರಷ್ಟನ್ನು ಶಿಕ್ಷಣಕ್ಕೆ ವ್ಯಯ ಮಾಡುತ್ತಿದ್ದೇವೆ ಎನ್ನು ಸಂದರ್ಭದಲ್ಲಿ ಬಹುಶಃ ಇವತ್ತು ಇಂತಹ ಪ್ರೌಢ ಶಾಲೆಗಳಲ್ಲಿ ಕೇವಲ ಒಬ್ಬ ಡೆಪ್ಯುಟೇಶ ಅಧ್ಯಾಪಕರು ಇದ್ದು ಉಳಿದ ಶಿಕ್ಷಕರನ್ನು ಗೌರವ ಧನದಲ್ಲಿ ನೇಮಿಸಿ ಅವರಿಗೆ ಏನೋ ಶಾಲಾ ಅಭಿವೃ ಸಮಿತಿಯಿಂದ ವಸೂಲಿ ಮಾಡಿ 100-200 ರೂಪಾಯಿ ಕೊಟ್ಟು ಇವತ್ತು ಶಿಕ್ಷಣ ನೀಡುವ ಪರಿಸಿ ಇದೆ. ಇಂತಹ ಸಂದರ್ಭದಲ್ಲಿ ನೇಮಕಾತಿಯಲ್ಲಿ ಆದ್ಯತೆ ನೀಡಿ ನೇಮಿಸಬೇಕೆಂದು ಕೇಳಿಕೊಳ್ಳುತ್ತೇ ಅಷ್ಟೇ ಅಲ್ಲ ಇವತ್ತು ಪ್ರೌಢ ಶಾಲೆಗಳೇ ಇರಲಿ, ಕಾಲೇಜುಗಳೇ ಇರಲಿ ಅಥವಾ ಪ್ರಾಥಮಿಕ ಶಾಲೆಗ ಇರಲಿ ಅಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲದೇ ಇರುವುದು ನೋಡುತ್ತಿದ್ದೇವೆ. ಬಹುಶಃ ಈ ಸಂದರ್ಭದ ಶೌಚಾಲಯಗಳ ಬಗ್ಗೆ ಹೆಚ್ಚು ಆದ್ಯತೆ ನೀಡಿ ಪ್ರೌಢಶಾಲೆ, ಪ್ರಾಥಮಿಕ ಶಾಲೆ, ಕಾಲೇಜುಗಳ ಶೌಚಾಲಯ ನೀಡುವ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರದಲ್ಲಿ ಒತ್ತಾಯ ಮಾಡಿ ಅದೇ ರಿ ಈಗಾಗಲೇ ಏಡೆಡ್ ಶಾಲೆಗಳ ಬಗ್ಗೆ ಹೇಳಿದ್ದಾರೆ. ಇವತ್ತು ಪರಿಶಿಷ್ಟ ಜಾತಿ ಹಾಗೂ ಪಂಗಡದವ ನಡೆಸುತ್ತಿರುವ ಶಾಲೆಗಳಿಗೆ ಅನುದಾನ ರಹಿತದಿಂದಾಗಿ ಅವರಿಗೆ ಆ ಸಂಸ್ಥೆಗಳ ಮುಂದುವರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಅವರಿಗಾದರೂ ಕಾನೂನು ತಿದ್ದುಪಡಿ ಮಾಡಿ ಈಗಾಗ ನಾಗರಾಜ್ ಸಮಿತಿ ಏನು ನೇಮಕ ಮಾಡಿದ್ದೀರಿ ಆಸಮಿತಿಯ ಶಿಫಾರಸ್ಸನ್ನು ಜಾರಿಗೆ ತರುವ ಹಾಗೂ ಹೆಚ್ಚಿನ ಆದ್ಯತೆ ನೀಡುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತಾ, ಇವತ್ತು ಉಚ್ಚ ಶಿಕ್ಷಣ

ಬಗ್ಗೆ ಹೇಳುವುದಾದರೆ 1985ರಲ್ಲಿ ಪ್ರತಿ ಜಿಲ್ಲೆಗೆ ಒಂದು ನವೋದಯ ಶಾಲೆ ಕೊಡುವ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿತ್ತು. ನವೋದಯ ಶಾಲೆ ಯಾವುದೇ ಜಿಲ್ಲೆಯಲ್ಲಿ ಪ್ರಾರಂಭ ಆಗಿಲ್ಲ. ಯಾವ ಸ್ಥಿತಿಗೆ ಹೋಗಿದೆ ಎಂಬುದನ್ನು ತಿಳಿಯಬಯಸುತ್ತೇನೆ. ಅದೇ ರೀತಿ ಉಚ್ಚ ಶಿಕ್ಷಣದ ಬಗ್ಗೆ ಹೇಳುವುದಾದರೆ ಈಗಾಗಲೇ ಹಲವಾರು ಪ್ರಥಮ ದರ್ಜೆ ಕಾಲೇಜುಗಳನ್ನು ನೀಡಿದ್ದು ಈಗಾಗಲೇ ಆನ್ ಗೋಯಿಂಗ್ ಇರುವ ಕಾಲೇಜುಗಳಿಗೆ ಸರಿಯಾದ ಕಟ್ಟಡ ವ್ಯವಸ್ಥೆಯನ್ನು ಮಾಡುವುದಕ್ಕೆ ಸರ್ಕಾರ ಹೆಚ್ಚಿನ ಹಣ ತೊಡಗಿಸಬೇಕೆಂದು ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತಾನೆ. ಯುವಜನ ಸೇವೆ ಬಗ್ಗೆ ಹೇಳುವುದಾದರೆ, ಯುವ ಜನ ಸೇವೆಯಲ್ಲಿ ಹಲವಾರು ಯುವಕ ಮಂಡಲ ಮತ್ತು ಯುವತಿ ಮಂಡಲಗಳಿಗೆ ಸರ್ಕಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಇದೆ. ಆದರೆ ತಾಲ್ಲೂಕು ಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ಹಾಕುವ ಯುವಜನ ಕಾರ್ಯಕ್ರಮಗಳಿಗೆ ಈ ಇಲಾಖೆಯಿಂದ ಕೇವಲ ಸಾವಿರ ರೂಪಾಯಿಗಳನ್ನು ವೆಚ್ಚ ಮಾಡುವುದಕ್ಕೆ ನೀಡಿದಾಗ ಬಹುಶಃ ಇವತ್ತು ನಮ್ಮ ರಾಜ್ಯದಲ್ಲಿ ಆಗಲೀ ಅಥವಾ ದೇಶದಲ್ಲಿ ಯುವ ಶಕ್ತಿಗಳ ನಿರ್ಮಾಣ ಮಾಡುವುದಕ್ಕೆ ಅಥವಾ ಹೆಚ್ಚಿನ ಒಂದು ಯುವ ಜನರ ಕಾರ್ಯಕ್ರಮ ಹಮ್ಮಿಕೊಳ್ಳುವುದಕ್ಕೆ ಕಷ್ಟ ಇದೆ. ವೈದ್ಯಕೀಯ ಸೇವೆಗೆ ಎಂದು ಹೇಳಿ, ವೈದ್ಯಕೀಯ ಶಿಬಿರ ಕಾರ್ಯಕ್ರಮ ಹಮ್ಮಿಕೊಳ್ಳಲು ಕೇವಲ 300ರೂಪಾಯಿ ಕೊಡುವ ಕಾರ್ಯಕ್ರಮ. ಎಷ್ಟು ಯುವಕ ಮಂಡಲ ಅಥವಾ ಮಹಿಳಾ ಮಂಡಲಗಳು ತೆರೆಯಲ್ಪಟ್ಟಿದ್ದರೂ ಕೂಡ ಆ ತೆರೆದಂದಿನಿಂದ ಈ ತನಕ ಅದರ ದುರಸ್ತಿ ಮಾಡುವ ಕಾರ್ಯಕ್ರಮ ಕೂಡ ಇವತ್ತು ನಡೆಯುತ್ತಿಲ್ಲ. ಈ ಇಲಾಖೆಯಲ್ಲಿ ಹೆಚ್ಚಿನ ಹಣ ತೊಡಗಿಸಿ ಇಂತಹ ಯುವ ಶಕ್ತಿಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ವೈದ್ಯಕೀಯ ಸೇವೆಯ ಬಗ್ಗೆ ಹೇಳುವುದಾದರೆ, ನನ್ನ ತಾಲ್ಲೂಕು ಕೇಂದ್ರ ಆಸ್ಪತ್ರೆಯನ್ನು 1985ರಲ್ಲಿ ಮೇಲ್ದರ್ಜೆಗೆ ಏರಿಸಿದ್ದಾರೆ. ಅಲ್ಲಿ ಸ್ಟಾಫ್ ನರ್ಸ್ ಕೂಡ ಇರುವುದಿಲ್ಲ. ಕೇವಲ ಒಬ್ಬ ವೈದ್ಯರನ್ನು ನೇಮಿಸಿಕೊಂಡು ಅಲ್ಲಿ ಅಡಿಗೆಯವನನ್ನು ಈ ತನಕ ನೇಮಿಸದೆ ಇದ್ದುದನ್ನು ನಾವು ಕಾಣುತ್ತಿದ್ದೇವೆ. ಅದರ ಬಗ್ಗೆ ಏನಾದರೂ ಮಾಡಿ ಸರ್ಕಾರ ಹೆಚ್ಚಿನ ಗಮನ ಕೊಡಬೇಕು. ಅಲ್ಲಿಗೆ ಬೇಕಾದ ಸಿಬ್ಬಂದಿಯನ್ನು ನೇಮಕ ಮಾಡುವಂತೆ ನಾನು ಕೇಳಿದ್ದೇನೆ. ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಾವೆಲ್ಲ ಬೆಳಿಗ್ಗೆ 10 ಗಂಟೆಗೆ ಬರುವ ಸದಸ್ಯರು. ನೀವು ರಾತ್ರಿ 10 ಗಂಟೆಯವರೆಗೂ ಮಾಡಿ. ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಿ. ಅಷ್ಟೇ ನಾವು ಕೇಳುವುದು. ನಾವು ಮಾತನಾಡುವುದಕ್ಕೆ 2 ಗಂಟೆ ಅವಕಾಶ ಕೊಡಿ.

ಅಧ್ಯಕ್ಷರು:– ತಾವು ಈಗ ಮಾತನಾಡುತ್ತೀರಾ ? ಮಾನ್ಯ ಇದಿನಬ್ಬನವರು 10 ನಿಮಿಷದಲ್ಲಿ ಮುಗಿಸಿ. 7.30ಕ್ಕೆ ಮುಗಿಸಿ, ಪಾಪ ಎಲ್ಲರಿಗೂ ಹಸಿವು ಆಗಿದೆ.

† ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):– ಮಾನ್ಯ ಅಧ್ಯಕ್ಷರೆ, ಪ್ರಾಮುಖ್ಯವಾದ ವಿದ್ಯೆ ಕನ್ನಡ ಮತ್ತು ಸಂಸ್ಕೃತಿ ಆರೋಗ್ಯ ಈ ಬೇಡಿಕೆಗಳನ್ನು ಬೆಂಬಲಿಸಿ ಕೆಲವು ಮಾತುಗಳನ್ನು ಹೇಳಬೇಕೆಂದು ಬಂದುಕೊಂಡಿದ್ದೇನೆ. ವಿದ್ಯೆ ವಿಷಯದಲ್ಲಿ ಅನೇಕ ವಿಷಯಗಳನ್ನು ಹೇಳುವುದಕ್ಕೆ ಸಾಧ್ಯ. ನಮ್ಮ ಹಳ್ಳಿಯ ಪ್ರದೇಶದಲ್ಲಿ ಅನೇಕರು ಹೇಳಿದರು, ಕಟ್ಟಡಗಳು ಇಲ್ಲ. ಕೋಣೆ ಇಲ್ಲ. ಕಟ್ಟಡ ಇದ್ದರೆ ಅಧ್ಯಾಪಕರು ಇಲ್ಲ, ಅಧ್ಯಾಪಕರು ಇದ್ದರೆ ಶಾಲೆಯಿಲ್ಲ. ಶಾಲೆಯಿದ್ದರೆ ಹೆಡ್‌ಮಾಸ್ಟರ್ ಇಲ್ಲ. ಆ ಪರಿಸ್ಥಿತಿಯಲ್ಲಿ ನಮ್ಮ ಹಳ್ಳಿಯ ಶಾಲೆಗಳು ನಡೆಯುತ್ತಾವುಂಟು. ಆದ್ದರಿಂದ ನಾನು ಮಂತ್ರಿಗಳ ಹತ್ತಿರ ಕೇಳಿಕೊಳ್ಳುವುದು ಎಲ್ಲೆಲ್ಲಿ ಶಾಲಾ ಕಟ್ಟಡಗಳು ಇಲ್ಲ ಕೋಣೆಗಳು ಇಲ್ಲ ಅದನ್ನು ಮಾಡಿಸಬೇಕು. ಎಲ್ಲೆಲ್ಲಿ ಅಧ್ಯಾಪಕರನ್ನು ನೇಮಕ ಮಾಡಬೇಕು ಅದನ್ನು ಬಹಳ ತೀವ್ರವಾಗಿ ಮಾಡಬೇಕು. ನಮ್ಮ

ಉಳ್ಳಾಳ ಕ್ಷೇತ್ರದಲ್ಲಿ ಅನೇಕ ಶಾಲೆಗಳಿಗೆ ಅಧ್ಯಾಪಕರು ಇಲ್ಲದೆ ಬಹಳ ತೊಂದರೆಯುಂಟು. ಇದನ್ನು ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳಿಗೆ ತಿಳಿಸುತ್ತಿದ್ದೇನೆ. ಇವತ್ತು ವಿದ್ಯೆ ಇಲ್ಲದೆ ಬಹಳ ತಪ್ಪಾಗಿದೆಯೆಂದು ಹೇಳುತ್ತಾರೆ. ಇವತ್ತಿನ ಪಠ್ಯಪುಸ್ತಕಗಳಲ್ಲಿ ಬಹಳ ತಪ್ಪಾಗಿದೆಯೆಂದು ನಾನು ಹೇಳುತ್ತಿದ್ದೇನೆ. ಏಕೆಂದರೆ ಇವತ್ತು ಶಾಲೆಗೆ ಹೋಗಬೇಕಾದ ಮಕ್ಕಳ ಬೆನ್ನಿನಲ್ಲಿ ಮೂರು ಮಣ ನಾಲ್ಕು ಮಣ ತೂಕದ ಪುಸ್ತಕಗಳನ್ನು ಅವರ ಬೆನ್ನಿನಲ್ಲಿ ಹಾಕಿ ಅವರು ತೆಗೆದುಕೊಂಡು ಹೋಗಬೇಕಾಗಿದೆ. 2–3–4–5ನೇ ತರಗತಿಯ ಮಕ್ಕಳು ತೇನ್‌ಸಿಂಗ್ ಪರ್ವತ ಹತ್ತಲಿಕ್ಕೆ ಹೊರಟಹಾಗೆ ಅವರ ಬೆನ್ನಿನ ಮೇಲೆ ಅಷ್ಟು ದೊಡ್ಡ ತೂಕದ ಪುಸ್ತಕಗಳನ್ನು ಅವರ ಬೆನ್ನಿನ ಮೇಲೆ ಹಾಕಿಕೊಂಡು ಹೋಗುವ ಪರಿಸ್ಥಿತಿಯನ್ನು ನೋಡಿದರೆ ಎಲ್ಲಾ ಮಕ್ಕಳು ನಾಳೆ ಗೂನ ಬೆನ್ನಿನವರಾಗುತ್ತಾರೆ. ಅವರಿಗೆ ಹುಡುಗಿ ಕೂಡ ಸಿಗುವುದು ಬಹಳ ಕಷ್ಟವಾಗಬಹುದೆಂದು ಮನಸ್ಸಿನಲ್ಲಿ ಭಯವಾಗುತ್ತಾ ಉಂಟು. ಇದು ಖಂಡಿತಾ ಈ ರೀತಿಯಾಗಬಾರದು. 5ನೇ ತರಗತಿಯವರೆಗೆ ಪಾಠ ಕಲಿಸತಕ್ಕ ರೀತಿಯೇ ಬೇರೆ ಎಂದು ಡಾ: ಶಿವರಾಮಕಾರಂತರು ಹೇಳುತ್ತಿದ್ದಾರೆ. 5ನೇ ತರಗತಿಯವರೆಗೆ ಮಕ್ಕಳಿಗೆ ಎಂತಹ ವಿದ್ಯೆ ಕಲಿಸಬೇಕು. ಅವರ ಕೋಮಲ ಮನಸ್ಸಿಗೆ ಯಾವುದನ್ನು ಅಳವಡಿಸಬೇಕು ಎನ್ನುವುದನ್ನು ನಾವು ಮರೆತಿದ್ದೇವೆ. ಹಿಂದೆ ನಮ್ಮ ಶಿವನಂಜಪ್ಪನವರು ಹೇಳಿದ ಹಾಗೆ ನೀತಿ ಪಾಠ ಇತ್ತು. ಗುರುಹಿರಿಯರ ಬಗ್ಗೆ ವಿದ್ಯಾರ್ಥಿ ಹೇಗಿರಬೇಕು, ಅಧ್ಯಾಪಕರ ಬಗ್ಗೆ ಯಾವ ರೀತಿ ನಡೆದುಕೊಳ್ಳಬೇಕು ಯಾವ ರೀತಿ ಮನ್ನಣೆ ಕೊಡಬೇಕು, ಇವತ್ತು ಅದೆಲ್ಲ ಇಲ್ಲ. ನಾವು ಪತ್ರಿಕೆಗಳಲ್ಲಿ ಓದುತ್ತೇವೆ. ಎಷ್ಟೋ ಕಡೆಗಳಲ್ಲಿ ಮಾಸ್ಟರುಗಳನ್ನು ಮತ್ತು ಪ್ರಿನ್ಸಿಪಾಲರನ್ನು ಅವರನ್ನು ಘೇರಾವು ಮಾಡಿ ಕೋಣೆಯಲ್ಲಿ ಕೂಡಿಹಾಕಿ ಬೀಗಹಾಕಿ ಸಂತೋಷಪಡತಕ್ಕ ವಿದ್ಯಾರ್ಥಿಗಳು ಇದ್ದಾರೆ. ಇಲ್ಲೂ ಕೂಡ ಎಷ್ಟೋ ಕಡೆ ಹಾಗೆ ಆದದ್ದನ್ನು ನಾವು ಕಂಡಿದ್ದೇವೆ. ಅದು ಎಲ್ಲಿಯವರೆಗೆ ಬಂದಿದೆ ಅಂದರೆ ನಾನೊಂದು ಕಾರ್ಟೂನ್ ನೋಡಿದೆ. ಆ ಕಾರ್ಟೂನಿನಲ್ಲಿ ಹಿಂದಿನ ಒಬ್ಬ ಶಿಷ್ಯ ಮತ್ತು ಅಧ್ಯಾಪಕರು ಹೇಗಿರುತ್ತಾರೆಂದರೆ ಶಿಷ್ಯ ಬಂದು ಅಧ್ಯಾಪಕರಿಗೆ ಸಾಷ್ಟಾಂಗ ನಮಸ್ಕಾರ ಮಾಡುವುದು. ಈಗಿನ ವರ್ತಮಾನ ಕಾಲದಲ್ಲಿ ಶಿಷ್ಯ ಮತ್ತು ಅಧ್ಯಾಪಕರು ಯಾವ ರೀತಿ ಇದ್ದಾರೆಂದರೆ ಅಧ್ಯಾಪಕರು ಬರುತ್ತಾರೆ, ಶಿಷ್ಯ ಅದರ ಎದುರಿಗೆ ಹೋಗಿ ಬಾಯಲ್ಲಿ ಸಿಗರೇಟು ಉಂಟು ಸಿಗರೇಟು ಸೇದಿ ಹೊಗೆಯನ್ನು ಅಧ್ಯಾಪಕರ ಮುಖಕ್ಕೆ ಬಿಟ್ಟುಕೊಂಡು ಹೋಗುತ್ತಿದ್ದಾನೆ. ಈಗ ಬರತಕ್ಕ ಭವಿಷ್ಯತ್‌ನಲ್ಲಿ ಹಾಗೆಂದು ಹೇಳಿ, ಈಗ ನಡೆಯತಕ್ಕ ಪರಿಸ್ಥಿತಿಯನ್ನು ನೋಡಿ ಹಾಗೆಯೇ ಕಾಣುತ್ತದೆ. ಶಿಷ್ಯನ ಹತ್ತಿರ ಅಧ್ಯಾಪಕರು ಬಂದು ಸಾಷ್ಟಾಂಗ ನಮಸ್ಕಾರ ಮಾಡುವಂತಹ ಪರಿಸ್ಥಿತಿ ಬರುತ್ತದೆ. ಆದ್ದರಿಂದ ವಿದ್ಯಾ ಇಲಾಖೆಯಲ್ಲಿ ಈ ಮಟ್ಟಿಗೆ ಗುರುಗಳ ಬಗ್ಗೆ ಹಿರಿಯರ ಬಗ್ಗೆ ನಡೆನುಡಿ ಒಳ್ಳೆಯ ರೀತಿಯಲ್ಲಿ ಬರತಕ್ಕ ಒಂದು ವ್ಯವಸ್ಥೆ ಶಾಲೆಯಲ್ಲಿರಬೇಕು. ಪಠ್ಯಪುಸ್ತಕಗಳಲ್ಲಿ ಬರತಕ್ಕ ಪಾಠಗಳು ಬಹಳ ಅನ್ಯಾಯವಾಗಿವೆ. ಇವತ್ತು ಮಕ್ಕಳಿಗೆ ಮತಗಳ ದ್ವೇಷವನ್ನು ತೋರಿಸತಕ್ಕ, ಆ ಪುಸ್ತಕಗಳನ್ನು ಇವತ್ತು ನಾನು ತರಲಿಲ್ಲ. ತಂದಿದ್ದರೆ ಅದನ್ನು ಹೇಳಲಿಕ್ಕೆ ನನಗೆ ಅರ್ಧಗಂಟೆ ಬೇಕಾಗುತ್ತಿತ್ತು. ಪ್ರತಿಯೊಂದು ಪಠ್ಯಪುಸ್ತಕಗಳಲ್ಲಿ ನೋವು ಆಗತಕ್ಕ, ಬೇರೆ ಬೇರೆ ಮತಗಳ ಪ್ರವಾದಿಗಳಿಗೆ ನೋವಾಗತಕ್ಕ ಅನೇಕ ಲೇಖನಗಳನ್ನು ಬರೆದಿದ್ದಾರೆ. ಅಂತಹ ಪಠ್ಯಪುಸ್ತಕಗಳು ಏತಕ್ಕೆ ಬೇಕು ? ಪಠ್ಯಪುಸ್ತಕಗಳಲ್ಲಿ ದೇಶಪ್ರೇಮದ ಬಗ್ಗೆ ಲೇಖನಗಳು ಬರಲಿ. ರಾಷ್ಟ್ರಪ್ರೇಮದ ಬಗ್ಗೆ ಲೇಖನಗಳು ಬರಲಿ. ಪಠ್ಯಪುಸ್ತಕದಲ್ಲಿ ಕೋಮು ಸೌಹಾರ್ದತೆ ಇವತ್ತು ಅತಿ ಅಗತ್ಯವಾಗಿ ಬೇಕಾದಂತಹ ಆ ಲೇಖನಗಳು ಆ ಪಾಠಗಳು ಬಂದರೆ ಮಾತ್ರ ಇವತ್ತು ಮಕ್ಕಳು ದೇಶಪ್ರೇಮಿಗಳಾಗುತ್ತಾರೆ, ರಾಷ್ಟ್ರಪ್ರೇಮಿಗಳಾಗುತ್ತಾರೆ.

ಅದೇ ರೀತಿ ಕೋಮುಸೌಹಾರ್ದತೆಯನ್ನು ಉಳಿಸಿಕೊಳ್ಳತಕ್ಕಂಥ ಶಕ್ತಿ ಮಕ್ಕಳಿಗೆ ಬರುತ್ತದೆ. ಆದ್ದರಿಂದ ಪಠ್ಯಪುಸ್ತಕಗಳನ್ನು ತಯಾರು ಮಾಡುವಾಗ ಮತ್ತು ಪಠ್ಯಪುಸ್ತಕ ಸಮಿತಿ ಮಾಡುವಾಗ ಎಲ್ಲಾ ಧರ್ಮಗಳ ಅನುಭವಿಗಳು, ತಜ್ಞರು, ಸಾಹಿತಿಗಳನ್ನು ಸೇರಿಸಿ ಪಠ್ಯಪುಸ್ತಕಗಳ ಸಮಿತಿಯನ್ನು

ಮಡಬೇಕು. ಹೀಗೆ ಮಾಡಿದರೆ ಸ್ವಲ್ಪವಾದರೂ ಉಪಕಾರವಾದೀತು. ಈ ಬಗ್ಗೆ ಹಿಂದೆ ನಾನು ಸೂಚನೆ ಕೊಟ್ಟಿದ್ದಾಗ ಮಾನ್ಯ ರಂಗನಾಥ್ ಅವರು ವಿದ್ಯಾಮಂತ್ರಿಗಳಾಗಿದ್ದರು. ಇದು ಒಂದು ಒಳ್ಳೆಯ ಅಭಿಪ್ರಾಯವೆಂದು ಅವರು ಬರೆದುಕೊಂಡಿದ್ದರು. ನಂತರ ಅದು ಏನು ಆಯಿತೋ ಗೊತ್ತಿಲ್ಲ. ಆದ್ದರಿಂದ ಈ ರೀತಿ ನಾವು ಮಾಡದೇ ಹೋದರೆ ಮುಂದೆ ಒಳ್ಳೆಯತನವನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗಲಿಕ್ಕಿಲ್ಲ. ಮತ್ತೆ ಪಠ್ಯಪುಸ್ತಕಗಳು ಸರಿಯಾಗಿ ಸಿಗುತ್ತಿಲ್ಲ. ಖಾಸಗಿ ಪ್ರೆಸ್‌ಗೆ ಕೊಡುತ್ತೀರಿ, ಸರ್ಕಾರಿ ಪ್ರೆಸ್‌ಗೆ ಕೊಡುತ್ತೀರಿ. ಅಲ್ಲಿ ಹಣ ಲೂಟಿಯಾಗಿ ಹೋಗುತ್ತಿದೆ ಎಂದು ಪತ್ರಿಕೆಗಳಲ್ಲಿ ಬರುತ್ತಲೇ ಉಂಟು. ಅದನ್ನು ಓದುವಾಗ ನಮಗೆ ದುಃಖವಾಗುತ್ತದೆ. ನಾನು ಹೇಳುವಂಥಾದ್ದು ಏನೆಂದರೆ, ಈಗಿನ ಮಂತ್ರಿಗಳಾದ ಡಾ. ಲಮಾಣಿಯವರು ಬಹಳ ಮುತುವರ್ಜಿ ವಹಿಸಿ ಕೆಲಸ ಮಾಡುತ್ತಾರೆ. ಇದನ್ನೆಲ್ಲಾ ಅವರು ಬಗ್ಗುಬಡಿಯಬೇಕು. ಏನೇ ಆಗಲಿ, ಒಂದು ಹೆಸರು ತೆಗೆದುಕೊಳ್ಳಬೇಕಾದರೆ ಇಂತಹ ಅನ್ಯಾಯಗಳನ್ನು ಬಗ್ಗುಬಡಿಯತಕ್ಕಂಥ ಶಕ್ತಿಯನ್ನು ಅವರು ತೋರಿಸಬೇಕು. ಮಾನ್ಯ ಯಾಹ್ಯಾರವರೂ ಹಾಗೆಯೇ. ಬೇಕಾದರೆ ಮಂತ್ರಿ ಪದವಿ ಹೋದರೂ ಚಿಂತೆ ಇಲ್ಲ, ಇಂತಹ ಅನ್ಯಾಯಗಳನ್ನು ಬಗ್ಗುಬಡಿದು ದೇಶಕ್ಕೆ ಒಂದು ಮಾದರಿ ತೋರಿಸಿ ಮುಂದೆ ನಮ್ಮ ಮಕ್ಕಳಿಗೆ, ಭಾವಿ ಪ್ರಜೆಗಳಿಗೆ, ದೇಶವನ್ನು ಉಳಿಸತಕ್ಕಂಥ ಮುಂದಿನ ಜನಾಂಗಕ್ಕೆ ಒಂದು ದಾರಿಯನ್ನು ಮಾಡಿಕೊಟ್ಟ ಹಾಗೆ ಆಗುತ್ತದೆ.

ಇನ್ನು ವಯಸ್ಕರ ಶಿಕ್ಷಣ ಸಮಿತಿ ಬಗ್ಗೆ ಹೇಳುವುದಿದ್ದರೆ ನಾನು 1968ನೇ ಇಸವಿಯಲ್ಲಿ ಈ ಸಮಿತಿಯ ಸದಸ್ಯನಾಗಿದ್ದೆ. ಬಹಳ ಒಳ್ಳೆಯ ರೀತಿಯಲ್ಲಿ ವಯಸ್ಕರ ಶಿಕ್ಷಣ ಸಮಿತಿ ನಡೆಯುತ್ತಿತ್ತು. ಒಳ್ಳೆಯ ಜೀವ ಇತ್ತು, ಉಸಿರು ಇತ್ತು, ರಕ್ತ ಇತ್ತು. ಈಗ ಅದು ನಿರ್ಜೀವವಾಗಿದೆ. ಈಗ ರಕ್ತ ಇಲ್ಲ, ಶಕ್ತಿಯೂ ಇಲ್ಲ, ಮಾಂಸವೂ ಇಲ್ಲ. ಈ ರೂಪದಲ್ಲಿ ವಯಸ್ಕರ ಶಿಕ್ಷಣ ಸಮಿತಿಯು ಉಂಟು. ನಮ್ಮ ರಾಣೆಯವರು ಈಗ ಬಂದಿದ್ದಾರೆ. ಬಹಳ ಸಂತೋಷ. ಅವರು ಈ ವಯಸ್ಕರ ಶಿಕ್ಷಣ ಸಮಿತಿಗೆ ಸಾಣೆ ಹಾಕಿ, ಹರಿತಬರಿಸಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ ವಯಸ್ಕರ ಶಿಕ್ಷಣ ಸಮಿತಿ ಒಳ್ಳೆಯದು. ಆದರೆ ಅದು ನಿರ್ಜೀವಗೊಂಡರೆ ಏನು ಮಾಡುವುದಕ್ಕೆ ಆಗುತ್ತದೆ? ಅಲ್ಲಿ ಏನೋ ಕೆಲವು ತೋಟಗಳು ಉಂಟಂತೆ, ಅಲ್ಲಿ ತೆಂಗಿನಕಾಯಿ ಆಗುತ್ತದಂತೆ. ಅದನ್ನು ಯಾರು ತಿನ್ನುತ್ತಾರೋ, ಏನು ಮಾಡುತ್ತಾರೋ ದೇವರಿಗೇ ಗೊತ್ತು. ಅದರಡಿಯಲ್ಲಿ ಒಂದು ಸಾಕ್ಷರತೆ ಎನ್ನುವುದು ಬಂದಿದೆ. ಕೋಟಿ ಕೋಟಿ ರೂಪಾಯಿಗಳನ್ನು ಅದಕ್ಕೆ ಕೊಡುತ್ತಿದ್ದಾರೆ. ಅನೇಕರು ಹೇಳುತ್ತಾರೆ, ಕೋಟ್ಯಾಂತರ ರೂಪಾಯಿ ಇದರಲ್ಲಿ ಲೂಟಿಯಾಗುತ್ತಿದೆ ಅಂತ. ನಮ್ಮ ಶಿವನಂಜಪ್ಪನವರು ಒಂದು ಒಳ್ಳೆಯ ಮಾತನ್ನು ಹೇಳಿದರು. ಅದು ಜನರ ಆಂದೋಳನ ಆಗಬೇಕು ಎಂದು. ಅದು ಈಗ ಅಧಿಕಾರಿಗಳ ಆಂದೋಳನವಾಗಿದೆ. ಅಧಿಕಾರಿಗಳೇ ನಡೆಸುವಂಥಾದ್ದು, ಅಧಿಕಾರಿಗಳೇ ಮಾತನಾಡುವಂಥಾದ್ದು ಆಗಿದೆ. ಇದು ತಪ್ಪಬೇಕು. ಆದ್ದರಿಂದ ವಿದ್ಯೆ ಒಳ್ಳೆಯ ರೀತಿಯಲ್ಲಿ ಬಂದರೆ ಮಾತ್ರ ಬದುಕುವುದಕ್ಕೆ ಸಾಧ್ಯ. ಇನ್ನು ಕನ್ನಡ ಸಂಸ್ಕೃತಿ ಬಗ್ಗೆ. ಇದರ ಬಗ್ಗೆ ಕಳೆದ ವರ್ಷ ನಾನೊಬ್ಬನೇ ಮಾತನಾಡಿದ್ದುದ್ದು. ಮತ್ತು ಮಾನ್ಯ ವಾಟಾಳ್ ನಾಗರಾಜ್ ಅವರು ಮಾತನಾಡಿದ್ದಾರೆ. ಅವರನ್ನು ಬಿಟ್ಟರೆ ಬೇರೆ ಯಾರೂ ಇದರ ಬಗ್ಗೆ ಮಾತನಾಡಲಿಲ್ಲ. ಈ ಕನ್ನಡ ಸಂಸ್ಕೃತಿ ಬಹಳ ಪ್ರಮುಖವಾದದ್ದು. ಇದು ಕರ್ನಾಟಕ ರಾಜ್ಯದ ಉಸಿರು, ಕರ್ನಾಟಕ ರಾಜ್ಯದ ಜೀವ. ಭಾಷಾವಾರು ರಾಜ್ಯ ರಚನೆಯಾದ ಮೇಲೆ ನಮ್ಮದು ಕರ್ನಾಟಕವಾಗಿದೆ. ಕರ್ನಾಟಕ ಆದಮೇಲೆ ಕನ್ನಡ, ಕನ್ನಡ ಸಂಸ್ಕೃತಿ, ಕನ್ನಡ ಕಲಾವಿದರ ಬಗ್ಗೆ, ಕನ್ನಡ ಸಾಹಿತಿಗಳ ಬಗ್ಗೆ ಕೆಲಸ ಮಾಡುವಂಥಾದ್ದು ಕನ್ನಡ ಸಂಸ್ಕೃತಿ ಇಲಾಖೆಯ ಕೆಲಸ. ಇವತ್ತು ಏನಾಗಿದೆ? ಏಳೆಂಟು ಅಕಾಡೆಮಿಗಳನ್ನು ಮಾಡಿದ್ದಾರೆ. ಲಲಿತಕಲಾ ಅಕಾಡೆಮಿ, ನಾಟಕ ಅಕಾಡೆಮಿ, ಸಾಹಿತ್ಯ ಅಕಾಡೆಮಿ, ಉರ್ದು ಅಕಾಡೆಮಿ, ಕೊಂಕಣಿ ಅಕಾಡೆಮಿಗಳಿದ್ದು, ಇವರೆಲ್ಲ ಮಾಡುವುದು ಒಂದೇ ಕೆಲಸ. ಇವರೆಲ್ಲರೂ ಕೂಡ ಮಾಡಿದ್ದನ್ನೇ

ಮಾಡುವ ಹಾಗೆ ಕಾಣುತ್ತಾ ಉಂಟು. ಅಲ್ಲೊಂದು ಕನ್ನಡ ಸಾಹಿತ್ಯ ಪರಿಷತ್ತು. ಅವರು ಕನ್ನಡಕ್ಕಾಗಿ ಮಾಡುತ್ತೇವೆ ಎಂದು ಹೇಳುತ್ತಾರೆ. ಸಾಹಿತ್ಯ ಅಕಾಡೆಮಿಯವರು ಕನ್ನಡಕ್ಕಾಗಿ ಮಾಡುತ್ತೇವೆ ಎಂದು ಹೇಳುತ್ತಾರೆ. ಕನ್ನಡ ಸಂಸ್ಕೃತಿಯವರೂ ಕನ್ನಡಕ್ಕಾಗಿ ಮಾಡುತ್ತೇವೆ ಎಂದು ಹೇಳಿ, ಈ ರೀತಿ ಹಂಚಿಹೋದರೆ ಕನ್ನಡದ ಉದ್ಧಾರ ಆಗುವುದಿಲ್ಲ. ಇವತ್ತು ಶ್ರೀ ವಿಶ್ವನಾಥ್ ಅವರು ಇದ್ದಾರೆ. ಅವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಒಂದು ರೀತಿಯಲ್ಲಿ ಇದನ್ನು ಬಗ್ಗುಬಡಿದು ಅದಕ್ಕೊಂದು ಜೀವ ಕೊಡಬೇಕೆಂದು ಅವರು ಹೇಳುತ್ತಿದ್ದಾರೆಂದು ಪತ್ರಿಕೆಗಳಲ್ಲಿ ಬರುತ್ತಿದೆ. ಕೆ.ವಿ ಪುಟ್ಟಪ್ಪ ಅವರನ್ನು ಹೋಗಿ ಕಂಡಿದ್ದಾರೆ, ಅನೇಕ ದೊಡ್ಡ ದೊಡ್ಡ ಮಹನೀಯರುಗಳನ್ನು ಸಾಹಿತಿಗಳನ್ನು ಕಂಡು ಇದಕ್ಕೊಂದು ಜೀವಕಳೆ ತರಬೇಕೆಂದು ಬಯಸಿದ್ದಾರೆ. ಹಾಗೆ ತಂದರೆ ಮಾತ್ರ ಈ ಕನ್ನಡ ಸಂಸ್ಕೃತಿ ಇಲಾಖೆ ಉಳಿಯುತ್ತದೆ. ಕುವೆಂಪು ಅವರು ಹೇಳಿದ್ದಾರೆ –

'ಕನ್ನಡಕೆ ಹೋರಾಡು ಕನ್ನಡದ ಕಂದ,
ಕನ್ನಡವ ಕಾಪಾಡು ನನ್ನ ಆನಂದ'

ಕನ್ನಡವನ್ನು ಮತ್ತು ಯಾರು ಕಾಪಾಡಬೇಕು ? ಇದಕ್ಕೆ ನೀವು ಐದೂವರೆ ಕೋಟಿ ಕೊಟ್ಟರೆ ಎಲ್ಲಿಗೆ ಸಾಕಾಗುತ್ತದೆ ? ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆ ಆದಹಾಗೆ ಆಗುತ್ತದೆ. ಇವತ್ತು ಎಂಟು – ಒಂಬತ್ತು ಅಕಾಡೆಮಿಗಳನ್ನು ಮಾಡಿ ಮಾಡಿದ್ದನ್ನೇ ಮಾಡುತ್ತಾ ಇದ್ದಾರೆ. ಅವರು ಮಾಡಿದ್ದನ್ನು ಇವರು ಮಾಡುತ್ತಾರೆ, ಇವರು ಮಾಡಿದ್ದನ್ನು ಅವರು ಮಾಡುತ್ತಾರೆ. ಇವುಗಳನ್ನು ಒಟ್ಟುಗೂಡಿಸಿ, ಮಾನ ವಿಶ್ವನಾಥ್ ಅವರು ಇದನ್ನು ಒಂದು ಹದ್ದುಬಸ್ತಿಗೆ ತಂದು ಒಳ್ಳೆಯ ಕೆಲಸ ಮಾಡಬೇಕು. ಕನ್ನಡ ಸಂಸ್ಕೃತಿ ಇಲಾಖೆಯ ಮುಖ್ಯವಾದ ಒಂದು ಕೆಲಸ ಎಂದರೆ ಮಾಸಾಶನ ಕೊಡುವಂಥಾದ್ದು.

ನಿಜವಾಗಿಯೂ ಬಹಳ ಪ್ರಾಮುಖ್ಯವಾದುದು. ನಿಶ್ಶಕ್ತರಾದ ಕಲಾವಿದರು ತಮ್ಮ ಜೀವಮಾನವನ್ನೇ ಕನ್ನಡಕ್ಕಾಗಿ, ಸಾಹಿತ್ಯಕ್ಕಾಗಿ ದುಡಿದಂಥ ಕಲಾವಿದರು ಇವತ್ತು ವೃದ್ಧರಾಗಿದ್ದಾರೆ. ಅವರಿಗೆ ಮಾಸಾಶ ಕೊಡತಕ್ಕ ಕಾರ್ಯಕ್ರಮ 4–5 ವರ್ಷಗಳಿಂದ ನಿಂತು ಹೋಗಿದೆ. ಇದು ಬಹಳ ದೊಡ್ಡ ಅನ್ಯಾಯ ಏಕೆಂದರೆ, ಕನ್ನಡ ಸಂಸ್ಕೃತಿ ಇಲಾಖೆ ಇಷ್ಟಾದರೂ ಮಾಡದಿದ್ದರೆ, ಮತ್ತೆ ಯಾವುದು ಮಾಡುವುದು ' ಇದನ್ನಾದರೂ ಮಾಡಿ, ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿ, ಕರ್ನಾಟಕಕ್ಕೆ ಹೆಸರು ತಂದಿರತಕ್ಕ ಕಲಾವಿದರು ಸೋತಿರತಕ್ಕ ಕಾಲದಲ್ಲಿ, ಅವರಿಗೆ ಮಾಸಾಶನ ಕೊಟ್ಟರೆ ಸಂತೋಷವಾಗುತ್ತದೆ. ಈ ರೀತಿಯಲ್ಲಿ ಕೆಲಸ ನಡೆಯಬೇಕೆಂದು ಹೇಳುತ್ತೇನೆ. ಕನ್ನಡ ಸಾಹಿತ್ಯ ಪರಿಷತ್ತು ಕೂಡ ಅದೇ ಮಾಡುತ್ತಾ ಉಂಟು. ಇದೇ ರೀತಿಯಲ್ಲಿ ಎಲ್ಲರೂ ಮಾಡಬೇಕು. ನಮ್ಮ ಮಂತ್ರಿಗಳಾದ ವಿಶ್ವನಾಥ್‌ನವರೂ ಕೂ ಈ ಕಡೆ ಗಮನಹರಿಸಬೇಕು. ಒಂದೇ ಒಂದು, ಮೂಲದಲ್ಲಿ ಕನ್ನಡದ ಕೆಲಸ ಸರಿಯಾಗಿ ಆಗು ಹಾಗೆ, ಕನ್ನಡ ಸಾಹಿತ್ಯದ ಕೆಲಸ ಆಗುವ ಹಾಗೆ ಮಾಡಬೇಕು. ಇವತ್ತು ಡಿ.ವಿ. ಗುಂಡಪ್ಪನವರು ಮಾಸ್ತಿ ವೆಂಕಟೇಶ್ ಅಯ್ಯಂಗಾರ್ಯರು, ಕುವೆಂಪುರವರು, ಜಿ.ಪಿ. ರಾಜರತ್ನಂರವರು, ಶಿವರಾಮ ಕಾರಂತರು, ಕಡೆಂಗೋಡ್ಲು ಶಂಕರಭಟ್ಟರು, ಕಯ್ಯಾರ ಕಿಞ್ಞಣ್ಣರೈ, ಇಂತಹವರು ಬರೆದ ಪುಸ್ತಕಗ ಸಮಗ್ರ್ಯ ಕಾವ್ಯ, ಲೇಖನ ಇದನ್ನೆಲ್ಲಾ ಕ್ರೋಢೀಕರಣ ಮಾಡಿ, 5 ರೂಪಾಯಿಗಳಿಗೆ ಕೊಡತಕ್ಕ ವ್ಯವ ಕನ್ನಡ ಸಂಸ್ಕೃತಿ ಇಲಾಖೆಯಲ್ಲಿ ಆಗಬೇಕು. ಇದು ಮನೆ ಮನೆಗೂ ಮುಟ್ಟಬೇಕು. 40–50 ರೂಪಾಯಿ ಆದರೆ, ಯಾರು ತೆಗೆದುಕೊಳ್ಳುತ್ತಾರೆ; ಯಾರೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ದೊಡ್ಡ ದೊ ಸಾಹಿತಿಗಳು ಬರೆದಂತ ಕವನಗಳನ್ನು ಲೇಖನಗಳನ್ನು, ಎಲ್ಲವನ್ನೂ ಒಟ್ಟುಗೂಡಿಸಿ, ಅವರ ಸಮ ಸಾಹಿತ್ಯವನ್ನು 5 ರೂಪಾಯಿಗಳಿಗೆ ಸಿಗುವಂತೆ ಮಾಡಬೇಕು. ಇವತ್ತು, ಕೆಂಗಲ್ ಹನುಮಂತಯ್ಯನವರ 1968ನೇ ಇಸವಿಯಲ್ಲಿ ಕುಮಾರವ್ಯಾಸ ಭಾರತವನ್ನು 2 ರೂಪಾಯಿಗೆ ಕೊಡತಕ್ಕ ವ್ಯವಸ್ಥೆ ಮಾಡಿದ್ದರು ಇದು ನಮಗೆ ಗೊತ್ತಿದೆ. ಆಗ ಎಲ್ಲಾ ಮನೆ ಮನೆಗೂ ಈ ಪುಸ್ತಕ ಹೋಯಿತು. ನಮ್ಮ ಹೆಂಡತಿ

ಮಕ್ಕಳು, ಸೊಸೆ ಪ್ರತಿಯೊಬ್ಬರೂ ಓದತಕ್ಕ ವ್ಯವಸ್ಥೆಯಾಯಿತು. ಪ್ರತಿಯೊಂದು ಮನೆಯಲ್ಲಿಯೂ ಅದೊಂದು ವಾಚನಾಲಯವಾಯಿತು. ಅದೇ ರೀತಿಯಲ್ಲಿ ಮಂತ್ರಿಗಳಾದ ವಿಶ್ವನಾಥ್‌ರವರು ಈ ಕೆಲಸವನ್ನು ಮಾಡಿದರೆ, ಅದ್ಭುತವಾದ ಕೆಲಸವಾಗುತ್ತದೆಂದು ನನ್ನ ಭಾವನೆ. ಏಕೆಂದರೆ, ಇವತ್ತು ಕನ್ನಡಕ್ಕೆ ಈ ರೀತಿಯ ಕೆಲಸ, ಮತ್ತು ಸಹಾಯ ಮಾಡಬೇಕು. ಕನ್ನಡ ಸಂಸ್ಕೃತಿ ಎಂದು ಹೇಳಿದರೆ, ಕರ್ನಾಟಕದ ಉಸಿರು ಎಂದು ಹೇಳಿದೆ. ಬರೀ ಹೊಟ್ಟೆಯನ್ನೇ ಬೆಳೆಸುವಂಥಾದ್ದು, ಬರೀ ಬೆನ್ನನ್ನೇ ಬೆಳೆಸುವಂಥಾದ್ದು, ಬರೀ ಕಾಲನ್ನೇ ಬೆಳೆಸುವಂತಾದ್ದು ಆಗಬಾರದು. ಇಂತಹ ಬೇರೆ ಡಿಮ್ಯಾಂಡ್ಸ್ ಕೂಡ ಉಂಟು.

ಹಣ ಬೇಕು, ಆರೋಗ್ಯ ಬೇಕು, ವಿಷಯ ಬೇಕು, ಅದೇ ರೀತಿಯಲ್ಲಿ ಪಿ.ಡಬ್ಲ್ಯು.ಡಿ. ಬೇಕು. ಆದರೆ, ಇದು ನಮ್ಮ ಉಸಿರು. ಉಸಿರು ಇಲ್ಲದ ಅನ್ನ ಇದು. ನಾವು ಈ ಅನ್ನವನ್ನೇ ಕೈಬಿಟ್ಟು ಐದೂವರೆ ಕೋಟಿ ಎಲ್ಲಿಗೆ ಸಾಕು. ಇದಕ್ಕೆ 15 ಕೋಟಿಯನ್ನಾದರೂ ಮುಖ್ಯಮಂತ್ರಿಗಳು ಬಿಡುಗಡೆ ಮಾಡಿ, ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ, ಉಮೇದು ಇರತಕ್ಕಂಥ ವಿಶ್ವನಾಥರಿಗೆ ಎಡೆ ಮಾಡಿಕೊಟ್ಟರೆ ಕನ್ನಡದ ಮೇಲೆ ಪ್ರೀತಿ ಇರತಕ್ಕ ನಮಗೆ, ಕನ್ನಡದ ಯಾವುದೇ ಕೆಲಸ ಆಗಬೇಕೆಂದು ಹೇಳತಕ್ಕಂಥ ನಮಗೆ ಅಥವಾ ಈ ಚಿಂತನೆ ಇರತಕ್ಕ ಸರ್ವರಿಗೂ ಆನಂದವಾಗಬಹುದೆಂದು ನನ್ನ ಅನಿಸಿಕೆ. ಅದೇ ರೀತಿಯಲ್ಲಿ ಸೋತಿರತಕ್ಕ ಕಲಾವಿದರಿಗೂ ಕೂಡ ಏನಾದರೂ ಮಾಡಬೇಕು. ಇವತ್ತು ಎಲ್ಲಿ ನೋಡಿದರೂ ಇಂಗ್ಲೀಷ್ ಪತ್ರಿಕೆ, ಇಂಗ್ಲೀಷ್ ಪುಸ್ತಕ ಓದುವುದನ್ನು ನೋಡುತ್ತೇವೆ. ನಾನು ಈ ರೀತಿ ಓದುವುದನ್ನು ಬೇಡ ಎಂದು ಹೇಳುವುದಿಲ್ಲ. ಆದರೆ, ಪ್ರಾಮುಖ್ಯವಾಗಿ ಉಸಿರಾಗಿರತಕ್ಕ, ನಮಗೆ ಅನ್ನವಾಗಿರತಕ್ಕ, ಕನ್ನಡವನ್ನು ಬಿಟ್ಟು ಬೇರೆ ಹೋಗಬಾರದು. ಕನ್ನಡ ಅನ್ನ ಮತ್ತೆ ಚಪಾತಿ, ಸಾಂಬಾರ್ ಹಾಕಿ ಸಾರು ಹಾಕಿ, ಹೋಳಿಗೆ ಹಾಕಿ, ಲಡ್ಡು ಹಾಕಿ, ಇನ್ನು ಏನೆಲ್ಲಾ ಬೇಕೋ ಅದನ್ನೆಲ್ಲಾ ತಿನ್ನೋಣ. ಆದರೆ, ಇದು ಅನ್ನ. ಇದರ ಬಗ್ಗೆ ಗಮನ ಕೊಡಬೇಕು. ''ಉತ್ತರದ ಕಾಶಿಯಲಿ, ಕತ್ತೆ ಮಿಂದೈತರಲು, ದಕ್ಷಿಣ ದೇಶಕದು ಕುದುರೆಯಹುದೇ'' ಕುವೆಂಪುರವರು ಹೇಳುತ್ತಾರೆ. ಉತ್ತರದ ಕಾಶಿಯಲ್ಲಿ ಒಂದು ಕತ್ತೆಯನ್ನು ಕೊಂಡು, ಮೇಯಿಸಿ ಇಲ್ಲಿಗೆ ತಂದರೆ, ಅದು ಕುದುರೆಯಾಗುತ್ತದೆಯೇ ? ''ತಾಯಿತ್ತ ಮೊಲೆ ಹಾಲೇ ನಮ್ಮ ಮೈಗಾಗದಿರೆ, ಮತ್ತೆ ಹೊರಬಲಕಾರಿ ನೆತ್ತರಹುದೇ'' ತಾಯಿತ್ತ ಮೊಲೆ ಹಾಲೇ ನಮಗೆ ಆಗದಿದ್ದರೆ, ಮತ್ತೆ ಏನು ಆಗಬೇಕೆಂದು'' ಕವಿ ಹೇಳುತ್ತಿದ್ದಾರೆ. ಮತ್ತೆ ಬೇಂದ್ರೆಯವರು ಹೇಳುತ್ತಾರೆ, ''ಕರ್ನಾಟಕ ಒಂದೇ, ಕರ್ನಾಟಕವೊಂದೇ, ಕರ್ನಾಟಕವೊಂದೇ, ಇದನ್ನು ಹಳಿಯುವ ಜನರಿದ್ದರು ಒಂದೇ, ಇಲ್ಲದಿದ್ದರೂ ಒಂದೇ. ಇದನ್ನು ತೆಗಳುವಂಥ ಜನ, ಇದನ್ನು ತಮಾಷೆ ಮಾಡುವಂಥ ಜನ ಇದ್ದರೂ ಒಂದೇ, ಅವರು ಇಲ್ಲದೇ ಹೋದರೂ ಒಂದೇ ಎಂದು ಕವಿ ಹೇಳುತ್ತಿದ್ದಾರೆ. ಆದ್ದರಿಂದ ಇಂತಹ ಅನೇಕ ಕವಿಗಳ ಸಾಲುಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಕನ್ನಡ ಸಂಸ್ಕೃತಿಯನ್ನು ಬೆಳೆಸಬೇಕೆಂದು ಹೇಳುತ್ತೇನೆ. ಇನ್ನು ವಕ್ಫ್ ಬಗ್ಗೆ ಮಾತನಾಡುತ್ತೇನೆ. ಈ ವಕ್ಫ್ ಬರೀ ಹಾಳಾಗಿ ಹೋಯಿತು. ಈ ವಕ್ಫ್ ಸಂಸ್ಥೆಯನ್ನು ಕೇಳುವವರೇ ಇಲ್ಲ, ಎಷ್ಟೋ ಜನರು ಇದನ್ನು ಗುರುವಿಹಾಕುತ್ತಿದ್ದಾರೆ. ಎಷ್ಟೋ ಮಸೀದಿಗಳಿಗೆ ಹಣ ಸಿಕ್ಕುತ್ತಾ ಇಲ್ಲ. ಅಲ್ಲಿ ಏನೋ ಜಗಳ. ವಕ್ಫ್ ಬೋರ್ಡ್‌ನವರು ನಾವು ಸ್ವತಂತ್ರರು ಎಂದು ಹೇಳುತ್ತಾರೆ. ನಾವು ಯಾರ ಹಂಗಿನಲ್ಲಿಯೂ ಇಲ್ಲ, ಮಂತ್ರಿಗಳ ಹಂಗಿನಲ್ಲಿಯೂ ಇಲ್ಲವೆಂದು ಹೇಳುತ್ತಿದ್ದಾರೆ. ಅವರ ದರ್ಬಾರು ಅವರು ಮಾಡುತ್ತಿದ್ದಾರೆ. ಈ ಮಂತ್ರಿಗಳು, ಇವರ ಕೆಲಸವನ್ನು, ಇವರು ಮಾಡುತ್ತಾರೆ. ಆದರೆ, ಈ ವಕ್ಫ್ ಬಂದಿದ್ದು ಏಕೆ ? ಈ ಮುಸ್ಲಿಂ ಸಮುದಾಯದಲ್ಲಿರತಕ್ಕ, ಮಸೀದಿಗಳಿಗೆ, ಮದ್ರಸಾಗಳಿಗೆ ಒಳ್ಳೆಯ ಸಹಾಯ ಕೊಡಬೇಕು, ಬಿದ್ದುಹೋಗಿರತಕ್ಕ ಕಟ್ಟಡಗಳನ್ನು ಕಟ್ಟಿಸಬೇಕೆಂದು ಹೇಳತಕ್ಕಂಥ ರೀತಿಯಲ್ಲಿ ಬಂತು. ಮತ್ತು ವಕ್ಫ್ ಇರತಕ್ಕ ಆಸ್ತಿಯನ್ನು ಒಳ್ಳೆಯ ರೀತಿಯಲ್ಲಿ ಸಂರಕ್ಷಿಸಬೇಕು. ಆದರೆ, ಇವತ್ತು ಯಾರು ಯಾರೋ ತಿಂದು ಹಾಕಿದ್ದಾರೆ. ಗುಲ್ಬರ್ಗಾದಲ್ಲಿ, ಬೆಂಗಳೂರಿನಲ್ಲಿ ಯಾರು ಯಾರೋ

ತಿಂದುಹಾಕಿದ್ದಾರೆಂದು ಪತ್ರಿಕೆಯಲ್ಲಿ ಬಂದುದನ್ನು ಓದಿದ್ದೇನೆ. ಇದನ್ನು ನಿಲ್ಲಿಸತಕ್ಕ ಕಾರ್ಯಕ್ರಮವನ ನಮ್ಮ ಯಾಹ್ಯಾ ಸಾಹೇಬರು ಮಾಡಬೇಕು. ಇದನ್ನು ಖಡಾಖಂಡಿತವಾಗಿ ಮಾಡುತ್ತಾರೆಂದು ನಾನ ಭಾವಿಸಿದ್ದೇನೆ. ಏಕೆಂದರೆ, ಬಹಳ ಪ್ರಾಮುಖ್ಯವಾಗಿ, ಅದರಲ್ಲಿಯೂ ಜಿಲ್ಲೆ, ಜಿಲ್ಲೆಗಳಿಗೆ ಕೊಡತಕ್ ಮಸೀದಿಗಳಿಗೆ, ಮದ್ರಸಾಗಳಿಗೆ, ಇವುಗಳ ಜೀರ್ಣೋದ್ಧಾರಕ್ಕೆ ಏನಾದರೂ ಕಟ್ಟಡಗಳಿಗೆ ಕೊಡತ ಹಣ ಸರಿಯಾಗಿ ಉಪಯೋಗವಾಗತಕ್ಕ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಇವತ್ತು ಏನಾಗಿ ಎಂದರೆ, "ಕಲ್ಲಪ್ಪ, ಗುಂಡಪ್ಪನ ನಡುವೆ ಮೆಣಸಪ್ಪ ಚಟ್ನಾದ" ಎಂಬಂತಾಗಿದೆ. ಇಲ್ಲಿ ಅದಾಗಬೇಕು ಇದಾಗಬೇಕು ಎಂದು ದೊಡ್ಡವರ ಶಕ್ತಿ ನಡೆಯುತ್ತಿದೆ. ಸಾಧಾರಣ, ಸಾಮಾನ್ಯವಾದ ಮನುಷ್ ಸಾಮಾನ್ಯವಾದ ಜನರು, ಇವರ ದರ್ಬಾರಿನಲ್ಲಿ ಹೊರಟು ಹೋಗುತ್ತಾರೆ. "ಕಲ್ಲಪ್ಪ, ಗುಂಡಪ್ಪ ನಡುವೆ, ಮೆಣಸಪ್ಪ ಚಟ್ನಾದ" ಎಂಬಂತೆ.

ಅದೇ ರೀತಿಯಲ್ಲಿ ನಾವು ಯಾವಾಗಲೂ ನಮ್ಮ ಕನ್ನಡವನ್ನು ಮರೆತರೆ ಉಂಡ ಮನೆಗೆ ಗುಂಡ ಹೊಡೆದಂತೆ ಎಂದು ನಾನು ಹೇಳುತ್ತೇನೆ. ಕನ್ನಡದ ಬಗ್ಗೆ ನಮಗೆಲ್ಲರಿಗೂ ಅಭಿಮಾನ ಇರಬೇಕು ಕೆಲವರು ಹೇಳುವಂತೆ ಇದು ಭಾಷಾ ವ್ಯಾಮೋಹವಲ್ಲ. ನೀವು ಬೇಕಾದರೆ ತಮಿಳುನಾಡು, ಕೇರಳ ಹೋಗಿ, ಅಲ್ಲಿ ಒಬ್ಬನೂ ಕನ್ನಡ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಿಮ್ಮ ಸಂಬಂಧಿಗಳ ಯಾರಾದರೂ ಇದ್ದರೆ ಅವರು ನಿಮ್ಮೊಂದಿಗೆ ಮಾತನಾಡಿಯಾರೇ ಹೊರತು ಅಲ್ಲಿಯವರು ಕನ್ನಡವನ ಮಾತನಾಡಲು ಸಾಧ್ಯವಿಲ್ಲ. ಅಲ್ಲಿನ ಬಿಎ, ಎಂಎ, ಮುಂತಾಗಿ ವಿದ್ಯಾವಂತ ಜನರ ಹತ್ತಿರ ಕೂ ಇಂಗ್ಲೀಷ್ ಪತ್ರಿಕೆಯನ್ನು ನೀವು ನೋಡಲಾರಿರಿ, ಅವರು ತಮಿಳು, ಮಲೆಯಾಳಿ ಪತ್ರಿಕೆಗಳನ್ನು ಮಾತ್ ಓದುತ್ತಾರೆ. ಭಾಷಾವಾರು ರಾಜ್ಯವಾದುದನ್ನು ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮತ ಮಹಾರಾಷ್ಟ್ರ ರಾಜ್ಯಗಳು ಒಳ್ಳೆಯ ರೀತಿಯಲ್ಲಿ ಉಪಯೋಗಮಾಡಿಕೊಂಡಿವೆ. ಆದ ಕರ್ನಾಟಕದವರು ನಾವು ಸೌಜನ್ಯಶೀಲರು, ನಮ್ಮ ಮನಸ್ಸು ಬಹಳ ದೊಡ್ಡದು, ನಾವು ಯಾರನ ಬೇಕಾದರೂ ಬರಮಾಡಿಕೊಳ್ಳುತ್ತೇವೆ, ವಿಶಾಲ ಮನಸ್ಸಿನವರು ಎಂದು ಹೇಳಿ ಕಡೆಗೆ ಒಂದು ದಿವ ನಾವುಗಳು ದೊಡ್ಡ ಮೋಸದಲ್ಲಿ ಬೀಳುತ್ತೇವೆ. ಇದನ್ನು ನಾನು ಇದಕ್ಕಿಂತಲೂ ಮೊದಲು ಹೇಳಿದ್ದೇನ ಇನ್ನು 15 ವರ್ಷಗಳ ಕಾಲ ಇದೇ ರೀತಿಯಲ್ಲಿ ಬಿಟ್ಟರೆ ಬೆಂಗಳೂರು ತಮಿಳು, ತೆಲುಗ ವಶವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ನೀವು ಏನಾದರೂ ಚಾಕಚಕ್ಯತೆಯಿಂದ ಅಂಕುಶವನ ಹಾಕಿ, ಅವರ ಬಗ್ಗೆ ಒಳ್ಳೆಯ ಕೆಲಸವನ್ನು ಮಾಡಿ, ಕನ್ನಡವನ್ನು ಮೇಲೆ ತರತಕ್ಕಂಥ ಕೆಲಸವನ ಮಾಡಿದರೆ ನಾವು ಬದುಕುತ್ತೇವೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಕೂಡ ಇನ್ನು 15–20 ವರ್ಷಗಳವರೆ ಇದೇ ರೀತಿಯಲ್ಲಿ ಬಿಟ್ಟರೆ ಮಲೆಯಾಳಿಗರ ಕೈಯಲ್ಲಿ, ಕೇರಳೀಯರ ಕೈಯಲ್ಲಿ ಹೋಗುತ್ತದೆ. ಅಲ್ಲಿಯ ಕೇಳಪ್ಪನ್ ಹೇಳಿದ್ದಾನೆ, ಹಿಂದೆ ಗೋಕರ್ಣದವರೆಗೂ ಕೇರಳ ರಾಜ್ಯವಾಗಿತ್ತಂತೆ. ಈಗಲೂ ಕೇರಳೀಯ ಮನಸ್ಸಿನಲ್ಲಿ ಅದೇ ವಿಚಾರ ಇದೆ. ಅವರೆಲ್ಲರೂ ಬಂದು ನಮ್ಮಲ್ಲಿ ನೆಲೆಸುತ್ತಾ ಇದ್ದಾರೆ. ಓಟರ್ಸ್ ಲಿಸ್ಟ್‌ನಲ್ಲಿ ಅವರ ಹೆಸರನ್ನು ಹಾಕಿಕೊಳ್ಳುತ್ತಾರೆ. ಪಂಚಾಯತ್ ಬೋರ್ಡ್ ಮತ್ತು ಕಾರ್ಪೋರೇಶನ ಚುನಾವಣೆಗೆ ನಿಲ್ಲುತ್ತಾರೆ. ಗೆದ್ದು ಬರುತ್ತಾರೆ. ಗೆದ್ದು ಬಂದ ಮೇಲೆ ಅವರ ಶಕ್ತಿಯ ಎದುರು ಏನ ಮಾಡಲು ಸಾಧ್ಯವಾಗುತ್ತದೆ ನಮಗೆ ? ಆಗ ಏನೂ ಮಾಡಲು ಸಾಧ್ಯವಾಗುವುದಿಲ್ಲ. ಆದರೆ ಇಲ್ ಕನ್ನಡ ಕನ್ನಡ ಎಂದು ವಾಟಾಳ್ ನಾಗರಾಜ್‌ರವರು ಬಹಳ ಒಳ್ಳೆಯ ರೀತಿಯಲ್ಲಿ ಹೋರಾಡುತ್ ಇದ್ದಾರೆ. ಆದರೆ ಅವರಿಗೆ ಸಹಾಯಕರಾಗಿ ಯಾರಿದ್ದಾರೆ ? ದೇವರೇ ಗತಿ ? ಮಾನ್ಯ ಸಿಂಧ್ಯಾರವರ ಬಹಳ ಮಟ್ಟಿಗೆ ಅವರಿಗೆ ಸಹಾಯ ಮಾಡುತ್ತಾ ಇದ್ದಾರೆ. ಅವರನ್ನು ಬಿಟ್ಟು ಬೇರೆ ಯಾರೂ ಇಲ್ಲ ವಾಟಾಳ್‌ರವರಿಗೆ ನೂರಕ್ಕೆ ನೂರರಷ್ಟು ಬೆಂಬಲ ಕೊಟ್ಟು ನೀವು ಕನ್ನಡದ ಪರ ಹೇಳುವುದು ಹೌದು ನಿಜವಾಗಿದೆ, ನಮ್ಮ ಬೆಂಬಲವಿದೆ ಎಂದು ಯಾರು ಹೇಳುವುದಿಲ್ಲ, ಹಾಗೆ ಬೆಂಬಲ ಕೊಡುವವರ

ಬೇಕು. ಹಾಗೆ ಎಲ್ಲರೂ ಅವರಿಗೆ ಬೆಂಬಲ ಕೊಟ್ಟರೆ ವಾಟಾಳ್‌ರವರು ಅದ್ಭುತದಲ್ಲಿ ಅದ್ಭುತವನ್ನು ಸಾಧಿಸಲು ಸಾಧ್ಯವಾಗಬಹುದು ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಎಚ್. ಏಕಾಂತಯ್ಯ:– ವಾಟಾಳ್ ನಾಗರಾಜ್‌ರವರಿಗಾಗಲೀ, ನಿಮಗಾಗಲೀ, ಕನ್ನಡದ ವಿಚಾರದಲ್ಲಿ ಯಾರ ಅಡ್ಡಿ ಅಭ್ಯಂತರವೂ ಇಲ್ಲ...

ಶ್ರೀ ಬಿ.ಎಂ. ಇದಿನಬ್ಬ:– ನಾನಂತೂ ಅಭಿಮಾನವನ್ನು ಇಟ್ಟುಕೊಂಡಿದ್ದೇನೆ. ನನ್ನ ಮನೆ ಮಾತು ಮಲೆಯಾಳವಾದರೂ ಕೂಡ ನನ್ನ 6ನೇ ವಯಸ್ಸಿನಿಂದ ಕನ್ನಡವನ್ನು ಕಲಿತಿದ್ದರಲ್ಲಿ ಇವೊತ್ತಿನವರೆಗೂ ನಾನು ಕನ್ನಡವನ್ನೇ ಬರೆಯುತ್ತಾ ಬಂದಿದ್ದೇನೆ. ನಾನು ಇಷ್ಟರವರೆಗೂ ಕೂಡ ಟೈಪ್ ಮಾಡಿ ವಿಧಾನಸಭೆಗೂ ಕೂಡ ಕೊಟ್ಟಿಲ್ಲ, ಏನಿದ್ದರೂ ನಾನು ನನ್ನ ಕೈಬರಹದಿಂದಲೇ ಬರೆಯುತ್ತೇನೆ. ನಾನು ಈ ಸಾರಿ ಸುಮಾರು 85 ಪ್ರಶ್ನೆಗಳನ್ನು ಕಳುಹಿಸಿದ್ದೇನೆ. ಒಂದು ಪ್ರತಿಯನ್ನು ಇಟ್ಟುಕೊಂಡು ಅವೆಲ್ಲವನ್ನೂ ಕೈಬರಹದಿಂದಲೇ ಬರೆದಿದ್ದೇನೆ. ಹೀಗೆ ನನ್ನ ಕೈಬರಹದ ಪ್ರತಿಗಳು ಒಂದು ಬೆಟ್ಟದಷ್ಟು ಆಗಿವೆ. ನನ್ನ ಮಕ್ಕಳು ಇದು ಏತಕ್ಕಾಗಿ ಇಟ್ಟಿದ್ದೀರಿ ? ಇದರಿಂದ ಒಂದು ಹಂಡೆ ನೀರು ಕಾಯಿಸಿ ಸ್ನಾನ ಮಾಡಬಹುದಲ್ಲ ಎಂದು ಹೇಳುತ್ತಾರೆ. ಆದರೆ ಅದು ಸರಿಯಲ್ಲ. ನಾವು ಏನು ಮಾಡಿದ್ದೇವೆ ಎಂದು ನೋಡಿಕೊಳ್ಳಲು ಇದು ಬೇಕಾಗುತ್ತದೆ. ಅದಕ್ಕಾಗಿ ನಾನು ಮಕ್ಕಳ ಹತ್ತಿರ ವಿವರವಾಗಿ ಹೇಳಿದ್ದೇನೆ. ಏಕೆಂದರೆ ಮನಸ್ಸು ಬಂದ ಹಾಗೆ ಯಾವುದೇ ಒಂದು ಕೆಲಸಕ್ಕೂ ನಾವು ಮನಸ್ಸನ್ನು ಗಟ್ಟಿ ಮಾಡಿಕೊಳ್ಳಬೇಕು, ಅದರಲ್ಲಿ ಚಂಚಲತೆ ಇರಬಾರದು. ಯಾರೋ ಒಬ್ಬರು ಉರ್ದು ಶಾಲೆಗಳಿಗೆ ಕನ್ನಡ ಅಧ್ಯಾಪಕರು ಇಲ್ಲ ಎಂದು ಹೇಳಿದರು. ಅಲ್ಲಿಗೆ ಕನ್ನಡ ಅಧ್ಯಾಪಕರನ್ನು ಕೊಡಬಾರದು ಎಂದು ಯಾರಾದರೂ ಹೇಳಿದ್ದಾರೆಯೇ ? ಇಲ್ಲ. ಅದೇ ರೀತಿಯಲ್ಲಿ ಕನ್ನಡ ಶಾಲೆಗಳಲ್ಲಿಯೂ ಕೂಡ ಉರ್ದು ಇಡಬಹುದು. ನಾನು ಇಲ್ಲಿ ಕನ್ನಡ ಮಾತನಾಡುವಾಗ ಉರ್ದು ಮಾತನಾಡುವವರು ನನ್ನನ್ನು ತಮಾಷೆ ಮಾಡುತ್ತಿದ್ದಾರೆ. ನನಗೆ ಉರ್ದು ಬರುವುದಿಲ್ಲ ಎಂದು ಅವರು ತಿಳಿದುಕೊಂಡಿದ್ದಾರೆ. ಹಾಗಲ್ಲ, ನನಗೆ ಉರ್ದು ಬರುತ್ತದೆ, ಅರ್ಥವಾಗುತ್ತದೆ. ನಮ್ಮ ಕನ್ನಡ ನಾಡಿನಲ್ಲಿ ಕನ್ನಡವನ್ನು ನೂರಕ್ಕೆ ನೂರರಷ್ಟು ನಾವು ಮಾತನಾಡಬೇಕು, ಅದನ್ನು ಬಿಟ್ಟು ಬೇರೆ ಯಾವ ಭಾಷೆಯನ್ನು ಕೂಡ ನಾನು ಇಲ್ಲಿ ಆಡುವುದಿಲ್ಲ ಎಂಬುದು ಒಂದು ನನ್ನ ನಿರ್ಧಾರವಾಗಿದೆ. ನನಗೆ ನನ್ನ ಊರಲ್ಲಿ ಮೊದಲು ಕನ್ನಡ ಮಾತನಾಡುವಾಗ ಮಲೆಯಾಳಿ ಮಾತನಾಡು ಎಂದು ಹೇಳುತ್ತಿದ್ದರು. ಅದಕ್ಕೆ ನಾನು ನನಗೆ ಮಲೆಯಾಳಕ್ಕಿಂತಲೂ ಹೆಚ್ಚು ಅರ್ಥ ಕನ್ನಡದಲ್ಲಿಯಾಗುತ್ತದೆ, ನೀವು ಬಲಾತ್ಕಾರ ಮಾಡಿದರೆ ನಾನು ಸಭೆಯಿಂದ ಹೊರಗೆ ಹೋಗುತ್ತೇನೆ ಎಂದು ಹೆದರಿಸಿದೆ. ಅವರೇ ಈಗ ಹೇಳುತ್ತಾರೆ, ಕನ್ನಡ ಮಾತನಾಡಿ, ಕನ್ನಡವೇ ಬೇಕು ಎಂದು ಹೇಳುತ್ತಾರೆ. ಹೀಗೆ ಕನ್ನಡದ ಬಗ್ಗೆ ಅಭಿಮಾನ ಬರುತ್ತಾ ಇದೆ, ಅನೇಕ ಜನರು ಕನ್ನಡದ ಬಗ್ಗೆ ಒಳ್ಳೆಯ ಕೆಲಸವನ್ನು ಮಾಡುತ್ತಾ ಇದ್ದಾರೆ. ಅಲ್ಪಸಂಖ್ಯಾತರಲ್ಲಿಯೂ ಕೂಡ ಅನೇಕ ಸಾಹಿತಿಗಳು ಕವಿಗಳು ಬಂದಿದ್ದಾರೆ. ಆದ್ದರಿಂದ ಈ ಕನ್ನಡ ಮತ್ತು ಸಂಸ್ಕೃತಿಗೆ ಆಯವ್ಯಯದಲ್ಲಿ 15 ಕೋಟಿ ಕೊಡಬೇಕು. ವಿದ್ಯಾ ಇಲಾಖೆಯಲ್ಲಿ ಪಠ್ಯಪುಸ್ತಕಕ್ಕೆ ಒಳ್ಳೆಯ ಚೇತನ ಕೊಡಬೇಕು, ಪಠ್ಯಪುಸ್ತಕಗಳಲ್ಲಿ ದೇಶಪ್ರೇಮ, ರಾಷ್ಟ್ರಪ್ರೇಮ ಹಾಗೂ ಕೋಮುಸೌಹಾರ್ದತೆಗಳ ಬಗ್ಗೆ ಲೇಖನಗಳು ಇರಬೇಕು. ಅದೇ ರೀತಿಯಲ್ಲಿ ಕನ್ನಡ ವಿಶ್ವಕೋಶದ ಒಂದೊಂದು ಪ್ರತಿಯನ್ನು ಪ್ರತಿಯೊಬ್ಬ ಶಾಸಕರಿಗೂ ಕೊಡತಕ್ಕಂಥ ವ್ಯವಸ್ಥೆಯನ್ನು ಕನ್ನಡ ಸಂಸ್ಕೃತಿಯವರು ಅಥವಾ ವಿದ್ಯಾ ಇಲಾಖೆಯವರು ಮಾಡಬೇಕು.

ಅದು ಬಹಳ ಒಳ್ಳೆಯ ಕೆಲಸವಾಗುತ್ತದೆ. ಅದು ಬಹಳ ಪ್ರಾಮುಖ್ಯವಾದುದು, ಶಾಸಕರುಗಳು ಕೂಡ ಎಲ್ಲಾ ವಿಚಾರವನ್ನು ಕನ್ನಡದಲ್ಲಿ ತಿಳಿದುಕೊಳ್ಳುವ ಸಂದರ್ಭವು ಬರುತ್ತದೆ. ನಾವುಗಳು

ಇವೊತ್ತು ನಮಗೆ ಸಂಸ್ಕೃತ ಬೇಕು, ಇಂಗ್ಲೀಷ್ ಬೇಕು, ನಮಗೆ ಹಿಂದಿ ಬೇಕು ಎಂದು ಹೇಳುತ್ತಿದ್ದೇವೆ. ರಾಷ್ಟ್ರಕವಿ ಪುಟ್ಟಪ್ಪನವರು ಏನು ಹೇಳುತ್ತಾರೆ ಎಂದು ನೋಡಬೇಕು.

''ರಾಜ್ಯ ನುಡಿಯೆಂದೊಂದು,
ರಾಷ್ಟ್ರ ನುಡಿಯೆಂದೊಂದು,
ವೇದನುಡಿಯೆಂದೊಂದು ಹತ್ತಿಜಗ್ಗಿ,
ನಿರಿನಿಟಿಲು ನಿಟಿಲೆಂದು ಒಡಿಲುವದೆಯುರಿಯುತಿದೆ ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ,
ಕೂಗಿಕೊಳ್ಳಲು ಕೂಡ ಬಲವಿಲ್ಲ, ಮಕ್ಕಳೇ ಬಾಯ್ಮುಚ್ಚಿ ಹಿಡಿದಿಹರು ಕೆಲವು ಮಂದಿ,
ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರಾ ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ,
ಒಡಗೂಡಿ ಬಂದ ನುಡಿ ತಾಯಿ ನುಡಿ, ಕೊಲೆಗೈದರಮ್ಮನನೆ ಕೊಲಿಸಿದಂತೆ, ತಾಯ್ಮುತ್ತು ಕೊಡುವಂದು ನಿಮ್ಮ ಕೆನ್ನೆಯ ಮೇಲೆ ಅದು ಪೋಣಿಸಿದ ಮುತ್ತಿನಂತೆ, ನಿನ್ನ ನನ್ನುಡಿಯ ಹಸುಳೆಗಳನೆತ್ತಿ ನುಡಿನುಡಿಯೆಂದು ಕನ್ನಡವೇ ಕಲಿಸುವುದು ತುಟಿಗೆ ಬಂದು,
ಸಾಯುತಿದೆ ನಿಮ್ಮ ನುಡಿ ಓ ಕನ್ನಡದ ಕಂದರಿರಾ, ನಿರಿನಿಟಿಲು ನಿಟಿಲೆಂದು ಒಡಿಮೂಳೆ ಮುರಿಯುತಿದೆ,
ಕನ್ನಡಮ್ಮನು ಮೂಳೆ ಬಳುಕಿ ಬಗ್ಗಿ, ಕೂಗಿಕೊಳ್ಳಲು ಕೂಡ ಬಲವಿಲ್ಲ....

ಎಂದು ಹೇಳಿ ಕವಿ ಪುಟ್ಟಪ್ಪನವರು ಹೇಳುತ್ತಿದ್ದಾರೆ. ಜಿ.ಪಿ. ರಾಜರತ್ನಂರವರು ಹೇಳುತ್ತಾರೆ –

ನರಕಕ್ಕಿಳ್ಸಿ, ನಾಲಗೆ ಸೀಳ್ಸಿ,
ಮೂಗ್ನಲ್ ಕನ್ನಡ ಪದವಾಡ್ತೀನಿ ನನ್ನ್ ಮನಸನ್ ನೀ ಕಾಣೆ,
ಹೆಂಡ ಹೋಗ್ಲಿ, ಹೆಂಡ್ತಿ ಹೋಗ್ಲಿ ಎಲ್ಲಾ ಕೊಚ್‌ಕೊಂಡ್ ಹೋಗ್ಲಿ, ಪರ್‌ಪಂಚ್ ಇರೋತನಕ ಮುಂದೆ ಕನ್ನಡ ಪದಗೋಳ್ ನುಗ್‌ಲಿ.... ಎಂದು ಹೇಳುತ್ತಾರೆ.

ಆ ರೀತಿಯಲ್ಲಿ ಕನ್ನಡವು ಆಗಲಿ, ಬೆಳೆಯಲು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಸಭೆಯು ಇಂದಿನ ಕಾರ್ಯಕಲಾಪಗಳನ್ನು ಮುಗಿಸಿ ನಾಳೆ ಮತ್ತೆ ಬೆಳಿಗ್ಗೆ 9–30ಕ್ಕೆ ಸೇರಲಿದೆ.

(ಸದನವು 7–45ಕ್ಕೆ ಮುಗಿದು ನಾಳೆ ಬೆಳಿಗ್ಗೆ 9–30ಕ್ಕೆ ಪುನಃ ಸೇರಲು ನಿರ್ಧರಿಸಿತು.)

† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣಗಳನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

BLANK PAGE

ಕರ್ನಾಟಕ ವಿಧಾನಸಭೆ

ಶುಕ್ರವಾರ 19ನೇ ಮಾರ್ಚ್ 1993

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 9-45 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: ಶ್ರೀ ವಿ.ಎಸ್. ಕೌಜಲಗಿಯವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು:

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಮಂಜೂರಾದ ಸಹಾಯಧನ ಕುರಿತು

2157: ಶ್ರೀ ಎನ್. ತಮ್ಮಣ್ಣ (ಕೆರೆಗೋಡು):– ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1991-92 ಮತ್ತು 1992-93 ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ನೋಂದಾಯಿಸಲ್ಪಟ್ಟ ಸಣ್ಣ ಕೈಗಾರಿಕೆಗಳೆಷ್ಟು;

ಆ. ನೋಂದಾಯಿಸಲ್ಪಟ್ಟ ಸಣ್ಣ ಕೈಗಾರಿಕೆಗಳಿಗೆ ಮಂಜೂರಾದ ಸಹಾಯ ಧನವೆಷ್ಟು;

ಇ. ಈ ಸಣ್ಣ ಕೈಗಾರಿಕೆಗಳಿಗೆ ಮಂಜೂರಾದ ಸಹಾಯಧನವನ್ನು ಯಾವಾಗ ಬಿಡುಗಡೆ ಮಾಡುತ್ತೀರಾ ?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):–

ಅ. 1991–92ನೇ ಸಾಲಿನಲ್ಲಿ 181 ಸಣ್ಣ ಕೈಗಾರಿಕೆಗಳು ಮತ್ತು 1992–93ನೇ ಸಾಲಿನ ಫೆಬ್ರವರಿ ಅಂತ್ಯದವರೆಗೆ 121 ಸಣ್ಣ ಕೈಗಾರಿಕೆಗಳು ಮಂಡ್ಯ ಜಿಲ್ಲೆಯಲ್ಲಿ ನೋಂದಾಯಿಸಲ್ಪಟ್ಟಿರುತ್ತವೆ.

ಆ. 1991–92ನೇ ಸಾಲಿನಲ್ಲಿ ರೂ.49.93 ಲಕ್ಷಗಳ ಸಹಾಯಧನ ಮತ್ತು 1992–93ನೇ ಸಾಲಿನ ಫೆಬ್ರವರಿ ಅಂತ್ಯದವರೆಗೆ ರೂ.67.58 ಲಕ್ಷ ಸಹಾಯಧನವನ್ನು ಮಂಡ್ಯ ಜಿಲ್ಲೆಯ ಸಣ್ಣ ಕೈಗಾರಿಕೆಗಳಿಗೆ ಮಂಜೂರು ಮಾಡಲಾಗಿದೆ.

ಇ. ಅದಷ್ಟು ಬೇಗನೆ ಬಿಡುಗಡೆ ಮಾಡಲಾಗುವುದು.

ಶ್ರೀ ಎನ್. ತಮ್ಮಣ್ಣ:– ಮಾನ್ಯ ಸಭಾಧ್ಯಕ್ಷರೆ, ಯಾವುದೇ ಒಂದು ಕೈಗಾರಿಕೆಯನ್ನು ಪ್ರಾರಂಭಿಸುವಾಗ ಒಂದು ಪ್ರಾಜೆಕ್ಟ್ ರಿಪೋರ್ಟ್ ಮಾಡುತ್ತಾರೆ. ಆ ಪ್ರಾಜೆಕ್ಟ್ ರಿಪೋರ್ಟ್‌ನಲ್ಲಿ ಸಬ್ಸಿಡಿ ಸೇರಿರುತ್ತದೆ. ಕೈಗಾರಿಕೆ ಪ್ರಾರಂಭವಾದ ಎರಡು ಮೂರು ವರ್ಷಗಳಾದರೂ ಹಣ ಕೊಡದಿದ್ದರೆ ಆ ಸಬ್ಸಿಡಿಗೆ ಗೌರವ ಇರುತ್ತದೆಯೇ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ:– ಮಾನ್ಯ ಅಧ್ಯಕ್ಷರೆ, ಈ ವರ್ಷ ಮಂಡ್ಯ ಜಿಲ್ಲೆಗೆ 67.58 ಲಕ್ಷ ರೂಪಾಯಿಗಳನ್ನು ನಾವು ರಿಲೀಸ್ ಮಾಡಿದ್ದೇವೆ. ಈವೊಂದು ಜಿಲ್ಲೆಗೆ ರಿಲೀಸ್ ಮಾಡಬೇಕಾಗಿರುವುದು ಇನ್ನೂ ಬಹಳ ಇದೆ. ಈ ವರ್ಷ 1993–94ರಲ್ಲಿ ಜಾಸ್ತಿ ಹಣ ಇಟ್ಟಿದ್ದೇವೆ. ಇಡೀ ಕರ್ನಾಟಕ ರಾಜ್ಯಕ್ಕೆ ಪ್ರತಿ ವರ್ಷ 15ಕೋಟಿ ರೂಪಾಯಿ ಸಹಾಯಧನವೆಂದು ನಾವು ಏನು ತೆಗೆದು ಇಡುತ್ತಿದ್ದೆವು, ಈ ವರ್ಷ ಅದನ್ನು 30ಕೋಟಿ ರೂಪಾಯಿಗೆ ಏರಿಸಿರುವುದರಿಂದ ಮುಂದಿನ

ವರ್ಷದಲ್ಲಿ ಈ ಎಲ್ಲ ಬ್ಯಾಕ್‌ಲಾಗನ್ನು ಕ್ಲಿಯರ್ ಮಾಡುವುದಕ್ಕೆ ಸಾಧ್ಯತೆ ಇದೆಯೆಂದು ಹೇಳುವುದಕ್ಕೆ ಇಚ್ಚೆ ಪಡುತ್ತೇನೆ.

ಶ್ರೀ ಎಸ್. ತಮ್ಮಣ್ಣ:– ಮಾನ್ಯ ಅಧ್ಯಕ್ಷರೆ, ಕೈಗಾರಿಕೆಗಳನ್ನು ಪ್ರಾರಂಭ ಮಾಡಲು ಕರ್ನಾಟಕ ಹಣಕಾಸು ಸಂಸ್ಥೆಯಿಂದ ಮುಕ್ಕಾಲು ಪಾಲು ಹಣಕಾಸು ಪಡೆದಿದ್ದಾರೆ. ಈ ಹಣಕಾಸು ಸಂಸ್ಥೆಯವರು ಮಾರ್ವಾಡಿಗಳಿಗಿಂತ ಹೆಚ್ಚಾಗಿ ಒಂದು ಕಂತು ಕಟ್ಟದಿದ್ದರೆ ಕಾರ್ಖಾನೆಗಳಿಗೆ ಬೀಗಮುದ್ರೆ ಹಾಕುತ್ತಾರೆ. ಅವರಿಗೆ ಏನಾದರೂ ಮಾನ್ಯ ಸಚಿವರು ಡೈರೆಕ್ಷನ್ ಕೊಡುವುದಕ್ಕಾಗುತ್ತದೆಯೇ ? ಸಬ್ಸಿಡಿ ರಿಲೀಸ್ ಆಗುವವರೆಗೆ ನೀವು ಬೀಗಮುದ್ರೆಯನ್ನು ಹಾಕಬೇಡಿಯೆಂದು ಏನಾದರೂ ಮಾರ್ಗದರ್ಶನ ನೀಡುತ್ತೀರಾ ಎಂದು ಕೇಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ:– ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ನಾನು ಈಗಾಗಲೇ ಹೇಳಿದ ಹಾಗೆ, 1993–94ರಲ್ಲಿ ನಾವೇನು ಕೊಡಬೇಕಾಗಿದೆ ಬ್ಯಾಕ್‌ಲಾಗ್ ಸಹಾಯಧನ ರೂಪದಲ್ಲಿ, ಅದನ್ನೆಲ್ಲ ನಾವು ಈ ವರ್ಷ ಮುಗಿಸುತ್ತಿದ್ದೇವೆ. ಈ ವರ್ಷ 1ಲಕ್ಷಕ್ಕಿಂತ ಕೆಳಗೆ ಇರತಕ್ಕ ಸಬ್ಸಿಡಿಯನ್ನು ಆದಷ್ಟು ಅದೇ ವರ್ಷದಲ್ಲಿ ರಿಲೀಸ್ ಮಾಡಬೇಕೆಂದು ಒಂದು ಯೋಜನೆಯನ್ನು ಈ ವರ್ಷದಲ್ಲಿ ನಾವು ಜಾರಿಗೆ ತರುತ್ತಿದ್ದೇವೆ.

ಕೆರೂರು ನಗರಕ್ಕೆ ಕುಡಿಯುವ ನೀರಿನ ಸರಬರಾಜು ಕುರಿತು

2106: ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಕೆರೂರು ನಗರದಲ್ಲಿ ಕುಡಿಯುವ ನೀರಿನ ಪೂರೈಕೆಯ ಮೂಲಗಳು ಯಾವುದು;

2. ಕುಡಿಯುವ ನೀರಿನ ತೊಂದರೆ ಇದ್ದದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

3. ಗಮನಕ್ಕೆ ಬಂದಿದ್ದರೆ ಈ ತೊಂದರೆ ನಿವಾರಿಸಲು ಕೈಗೊಂಡ ಕ್ರಮವೇನು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

1. ಕೆರೂರು ನಗರಕ್ಕೆ ಕುಡಿಯುವ ನೀರಿನ ಪೂರೈಕೆಯ ಮೂಲಗಳು 2 ತೆರೆದ ಬಾವಿಗಳು ಮತ್ತು 16 ಕೊಳವೆ ಬಾವಿಗಳು 11 ಕೊಳವೆ ಬಾವಿ ಮತ್ತು 2 ತೆರೆದ ಬಾವಿಗಳಿಗೆ ವಿದ್ಯುತ್ ಚಾಲಿತ ಪಂಪ್‌ನ್ನು ಅಳವಡಿಸಲಾಗಿದೆ. ಉಳಿದ 5 ಕೊಳವೆ ಬಾವಿಗಳಿಗೆ ಕೈಪಂಪನ್ನು ಅಳವಡಿಸಲಾಗಿದೆ.

2. ಹೌದು.

3. 1992-93ನೇ ಸಾಲಿನ ಅಭಾವ ಕಾಮಗಾರಿಕೆಗಳ ಅಡಿಯಲ್ಲಿ 9 ಕೊಳವೆ ಬಾವಿಗಳನ್ನು ತೋಡಲಾಗಿದೆ. ಅವುಗಳಲ್ಲಿ 7 ಕೊಳವೆ ಬಾವಿಗಳು ಫಲಪ್ರದವಾಗಿದ್ದು, 4 ಕೊಳವೆ ಬಾವಿಗಳಿಗೆ ಕೈ ಪಂಪನ್ನು ಮತ್ತು 3 ಕೊಳವೆ ಬಾವಿಗಳಿಗೆ ವಿದ್ಯುತ್ ಚಾಲಿತ ಪಂಪನ್ನು ಅಳವಡಿಸಲಾಗಿದೆ. ಇದು ಅಲ್ಲದೆ ಹೆಚ್ಚು ಒರತೆ ಇರುವ ಹಾಲಿ 2 ಕೊಳವೆ ಬಾವಿಗಳಿಗೆ ವಿದ್ಯುತ್ ಚಾಲಿತ ಪಂಪನ್ನು ಅಳವಡಿಸಿ ಕಿರು ನೀರು ಸರಬರಾಜು ಮುಖಾಂತರ ನೀರನ್ನು ವಿತರಿಸಲಾಗುತ್ತಿದೆ. 1992–93ನೇ ಸಾಲಿನ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಹಾಲಿ ಇರುವ ಒಂದು ಕೊಳವೆ ಬಾವಿಗೆ ಕೊಳವೆ ಮಾರ್ಗವನ್ನು ಅಳವಡಿಸಿ ಕುಡಿಯುವ ನೀರಿನ ತೊಂದರೆ ನಿವಾರಿಸಲು ಕ್ರಮ ಕೈಗೊಳ್ಳಲಾಗಿದೆ. ಇದು ಅಲ್ಲದೇ ಇನ್ನಷ್ಟು ಕೊಳವೆ ಬಾವಿಗಳನ್ನು ತೋಡಿ ಅವುಗಳಿಗೆ ವಿದ್ಯುತ್ ಚಾಲಿತ ಪಂಪನ್ನು ಅಳವಡಿಸಿ ನೀರು

ಸರಬರಾಜನ್ನು ಹೆಚ್ಚುವರಿಗೊಳಿಸಲು ಸುಮಾರು 37.80ಲಕ್ಷ ರೂಪಾಯಿಗಳ ಅಂದಾಜು ಪತ್ರಿಕೆಯನ್ನು ತಯಾರಿಸಲಾಗಿದೆ.

ಶ್ರೀ ಎಂ.ಕೆ. ಪಟ್ಟಣ್ಣಶೆಟ್ಟಿ:– ಮಾನ್ಯ ಅಧ್ಯಕ್ಷರೆ, ಕೆರೂರು ಸುಮಾರು 16–18ಸಾವಿರ ಜನಸಂಖ್ಯೆಯುಳ್ಳ ನಗರಸಭೆ. ಈಗಾಗಲೇ ಅಲ್ಲಿ ನಾಲ್ಕೈದು ದಿನಗಳಿಗೊಮ್ಮೆ ನೀರು ಪೂರೈಸುತ್ತಿದ್ದಾರೆ. ಮುಖ್ಯವಾಗಿ ಅವರು ಹೇಳಿದಂತಹ ಉತ್ತರವನ್ನು ನೋಡಿದರೆ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಂದು ನಾನು ಹೇಳುತ್ತೇನೆ. ಇದ್ದ ಕೊಳವೆ ಬಾವಿಗಳು ವಿಫಲವಾಗಿ ಅಲ್ಲಿ ನೀರಿನ ತೊಂದರೆಯಿದೆ. ಈ ಕಾರಣ ಅಲ್ಲಿ ಮಾನ್ಯ ಸಚಿವರು ಇನ್ನೂ ಹೆಚ್ಚಿನ ಕೊಳವೆ ಬಾವಿಗಳನ್ನು ಕೊರೆಸಬೇಕು. ಅದರಂತೆ ನೀವು 37ಲಕ್ಷದ 80ಸಾವಿರ ರೂಪಾಯಿ ಏನೊಂದು ಯೋಜನೆಯನ್ನು ತೆಗೆದುಕೊಂಡಿದ್ದಾರೆ ಅದನ್ನು ಯಾವಾಗ ಕೈಗೊಳ್ಳುತ್ತೀರಿ ? ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಕೆರೂರು ನಗರದಿಂದ ಸುಮಾರು 15ಕಿಲೋಮೀಟರ್ ದೂರದಲ್ಲಿ ಹರಿಯತಕ್ಕ ಮಲಪ್ರಭಾ ನದಿಗೆ ಒಂದು ಖಾಯಂ ಅದ ನೀರು ಸರಬರಾಜು ಮಾಡುವ ಯೋಜನೆಯನ್ನು ಕೈಗೆ ಎತ್ತಿಕೊಳ್ಳುತ್ತೀರಾ ? ಈ ದಿಸೆಯಲ್ಲಿ ತಾವು ಉತ್ತರ ಕೊಡುತ್ತೀರಿ ಎಂದು ನಾನು ಆಸೆ ಇಟ್ಟುಕೊಂಡಿದ್ದೇನೆ.

ಶ್ರೀ ಚೌಡರೆಡ್ಡಿ:– ಸನ್ಮಾನ್ಯ ಅಧ್ಯಕ್ಷರೆ, 1972ರಲ್ಲಿ ಎನ್ಆರ್ಇಡಬ್ಲ್ಯೂ ಸ್ಕೀಮ್‌ನಲ್ಲಿ ಇದು ಸ್ಟಾರ್ಟ್ ಆಗಿತ್ತು. ಅದರಲ್ಲಿ 2 ಓಪನ್‌ವೆಲ್ಸ್, 16 ಬೋರ್‌ವೆಲ್ ತೋಡಿಸಿ ಇದರಿಂದ ನೀರನ್ನು ಪಂಪ್ ಮಾಡಲಾಗುತ್ತಿತ್ತು. ಆಮೇಲೆ 16 ಬೋರ್‌ವೆಲ್‌ಗಳಲ್ಲಿ 11ಕ್ಕೆ ಪಂಪ್‌ಗಳನ್ನು ಫಿಕ್ಸ್ ಮಾಡಿದ್ದೇವೆ. ಅಲ್ಲಿಂದ ನೀರು ಬರುತ್ತಿದೆ. ಈಗ ಏನಾಗಿದೆ ಎಂದರೆ, ಊರು ಬೆಳೆದು ನೀರಿಗೆ ತೊಂದರೆಯಾಗುತ್ತಿದೆ; ಮಾನ್ಯ ಸದಸ್ಯರು ಹೇಳಿದ್ದು ನಿಜ. ಅದಕ್ಕೋಸ್ಕರ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಹೊಸ ಸ್ಕೀಮ್‌ನ್ನು ತಯಾರು ಮಾಡಿದ್ದೇವೆ. 37.8ಲಕ್ಷ ರೂಪಾಯಿಗಳ ಸ್ಕೀಮ್‌ನ್ನು ಮುಂದಿನ ಬೋರ್ಡ್ ಮೀಟಿಂಗ್‌ನಲ್ಲಿ ಇಟ್ಟು ಅದನ್ನು ಅಪ್ರೂವ್ ಮಾಡಿಸಿ ಬೇಗನೆ ಅದನ್ನು ಕಾರ್ಯರೂಪಕ್ಕೆ ತರುತ್ತೇನೆ.

ಶ್ರೀ ಎಂ.ಕೆ. ಪಟ್ಟಣಶೆಟ್ಟಿ:– 37.8 ಲಕ್ಷ ರೂಪಾಯಿಗಳ ಯೋಜನೆ ಕೂಡ ತಾತ್ಕಾಲಿಕ ವ್ಯವಸ್ಥೆಯಾಗುತ್ತದೆ. ಖಾಯಂ ಆಗಿ ನೀರು ಬರತಕ್ಕಂಥ ಯೋಜನೆ, ಮಲಪ್ರಭಾ ವಿಚಾರ ಏನು ಮಾಡಿದ್ದೀರಿ ?

ಶ್ರೀ ಚೌಡರೆಡ್ಡಿ:– ಮಲಪ್ರಭಾ ವಿಚಾರದಲ್ಲಿ ನನ್ನಲ್ಲಿ ಮಾಹಿತಿ ಇಲ್ಲ. ಮಾನ್ಯ ಸದಸ್ಯರು ನನ್ನ ಹತ್ತಿರ ಮಾತನಾಡಲಿ. ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳೋಣ. ಖಾಯಂ ಆಗಿ ಪರಿಹಾರ ಮಾಡಿದರೆ ಒಳ್ಳೆಯದೆಂದು ನಾನು ಕೂಡ ಒಪ್ಪುತ್ತೇನೆ.

ಕೆಂಗೇರಿ ಸ್ಯಾಟಲೈಟ್ ಟೌನ್‌ನಲ್ಲಿ ಕುಡಿಯುವ ನೀರಿನ ಆಭಾವ ಕುರಿತು

2059: ಶ್ರೀ ಎಸ್. ರಮೇಶ್ (ಉತ್ತರಹಳ್ಳಿ):– ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕೆಂಗೇರಿ ಸ್ಯಾಟಲೈಟ್ ಟೌನ್‌ನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹಾಗೂ ಗೃಹ ಮಂಡಳಿಯವರ ಲೇಔಟ್‌ಗಳು ಇರುವುದು ನಿಜವೇ;

ಆ. ಈ ಲೇಔಟ್‌ನಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಅಭಾವವಿರುವುದು ನಿಜವಲ್ಲವೇ;

ಇ. ಹಾಗಿದ್ದಲ್ಲಿ ಸದರಿ ಲೇಔಟ್‌ಗೆ ಕಾವೇರಿ ನೀರನ್ನು ಸರಬರಾಜು ಮಾಡುವ ಬಗ್ಗೆ ಸರ್ಕಾರದವರು ಕ್ರಮವೇನನ್ನಾದರೂ ಕೈಗೊಂಡಿರುವರೇ;

ಈ. ಇಲ್ಲದಿದ್ದಲ್ಲಿ ಕೂಡಲೇ ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿಗಳು):–

ಅ. ಇರುವುದು ನಿಜ.

ಆ. ಈ ಉಪನಗರದಲ್ಲಿರುವ ಸಾರ್ವಜನಿಕರಿಗೆ ನೀರನ್ನು ದಿನ ಬಿಟ್ಟು ದಿನ ಒದಗಿಸಲಾಗುತ್ತಿದೆ.

ಇ. ಕಾವೇರಿ ನೀರು ಸರಬರಾಜು ಮಾಡಲು ಕ್ರಮ ಕೈಗೊಂಡಿದ್ದು ಈಗಾಗಲೆ ಬೆಂಗಳೂರು ಜಲಮಂಡಳಿಯವರಿಂದ ರೈಸಿಂಗ್ ಮೆಯಿನ್ ಸಲುವಾಗಿ 277 ಲಕ್ಷ ರೂ.ಗಳ ಅಂದಾಜು ಪಟ್ಟಿ ಬಂದಿದ್ದು ಅದರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 119 ಲಕ್ಷ ರೂ.ಗಳನ್ನು ಮತ್ತು ಕರ್ನಾಟಕ ಗೃಹ ಮಂಡಳಿಯು 158 ಲಕ್ಷ ರೂ.ಗಳನ್ನು ಕಟ್ಟಬೇಕಾಗಿದ್ದು ಬಿಡಿಎ ವತಿಯಿಂದ ತುಂಬ ಬೇಕಾದ ಹಣವನ್ನು ತುಂಬಲು ಕ್ರಮ ಕೈಗೊಳ್ಳುತ್ತಿದೆ.

ಈ. ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್. ರಮೇಶ್:– ಮಾನ್ಯ ಅಧ್ಯಕ್ಷರೆ, ಕೆಂಗೇರಿ ಸೆಟ್‌ಲೈಟ್ ಟೌನ್‌ನಲ್ಲಿ ಹೌಸಿಂಗ್‌ಬೋರ್ಡ್ ಮತ್ತು ಬಿ.ಡಿ.ಎ. ಎರಡೂ ಸೇರಿ ಒಂದು ಲೇಔಟ್ ಮಾಡಿದ್ದಾರೆ. ಅಲ್ಲಿ ಸುಮಾರು ವರ್ಷಗಳಿಂದ ಕುಡಿಯುವ ನೀರಿನ ಸಮಸ್ಯೆ ಇದೆ. ಹಿಂದೆ ಮುಖ್ಯ ಮಂತ್ರಿಗಳಾದ ಶ್ರೀ ಬಂಗಾರಪ್ಪನವರು ಇದ್ದಾಗ ಒಂದು ಸಭೆ ನಡೆಸಿ ಹೌಸಿಂಗ್ ಬೋರ್ಡ್ ಮತ್ತು ಬಿ.ಡಿ.ಎ.ನವರು ಕೂಡಲೇ ಹಣ ಕಟ್ಟಬೇಕೆಂದು ಸೂಚನೆಯನ್ನು ಕೊಟ್ಟಿದ್ದರು. ಶ್ರೀಮಾನ್ ಬಸವಲಿಂಗಪ್ಪನವರು ನಗರಾಭಿವೃದ್ಧಿ ಮಂತ್ರಿಗಳಾಗಿದ್ದಾಗ ಈ ಸಭೆಯಾಗಿ ಸುಮಾರು ವರ್ಷಗಳು ಕಳೆಯುತ್ತಾ ಬಂತು. ಆದರೂ ಕೂಡ ಇನ್ನೂ ಕೂಡ ಹಣ ಕಟ್ಟಿಲ್ಲ. ಮತ್ತು ಜನರ ನೀರಿನ ಬವಣೆಯೂ ನೀಗಿಲ್ಲ. ಸುಮಾರು ವರ್ಷಗಳಿಂದ ಈ ತೊಂದರೆ ಇದೆ. ವರ್ಷದಲ್ಲಿ ಸುಮಾರು ಒಂಭತ್ತು ತಿಂಗಳು ನೀರಿನ ಕೊಡ ಹಿಡಿದುಕೊಂಡು ಹೆಂಗಸರು ಆಚೆ ಹೋಗುತ್ತಾರೆ. ಇದು ನಾವು ಮಾಡಿರುವ ಲೇಔಟ್. ಇದಕ್ಕೆ ಕೂಡಲೇ ಪರಿಹಾರ ಕ್ರಮ ತೆಗೆದುಕೊಳ್ಳಬೇಕು. ಅವರಿಂದ ಹಣ ಕಟ್ಟಿಸುತ್ತೀರಾ ? ಯಾವಾಗ ಕಟ್ಟಿಸುತ್ತೀರಿ ? ಹೌಸಿಂಗ್ ಬೋರ್ಡ್ ಮತ್ತು ಬಿ.ಡಿ.ಎ. ಅವರಿಂದ ಯಾವಾಗ ಹಣ ಕಟ್ಟಿಸುತ್ತೀರಿ ? ಈ ಎರಡು ಡಿಪಾರ್ಟಮೆಂಟ್‌ಗಳ ಮಧ್ಯೆ ಅಲ್ಲಿ ಜನರಿಗೆ ತೊಂದರೆಯಾಗುವುದು ಬೇಡ. ಇದಕ್ಕೆ ಯಾವಾಗ ಪರಿಹಾರ ಕಂಡುಹಿಡಿಯುತ್ತೀರೆಂದು ತಾವು ಹೇಳಬೇಕು.

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೆ, ಕೆಂಗೇರಿ ಸೆಟಲೈಟ್ ಟೌನ್‌ನಲ್ಲಿ ಎರಡು ಲೇಔಟ್‌ಗಳಿವೆ. ಬಿ.ಡಿ.ಎ. ಲೇಔಟ್ ಮತ್ತು ಕರ್ನಾಟಕ ಹೌಸಿಂಗ್‌ಬೋರ್ಡಿನ ಲೇಔಟ್ ಇನ್ನೊಂದು. ಎರಡಕ್ಕೂ ನೀರನ್ನು ಆಲ್ಟರ್‌ನೇಟಿವ್‌ಡೇಸ್‌ನಲ್ಲಿ ಕೊಡುತ್ತಿದ್ದೇವೆ. ಇವರು ನಮಗೆ ಬೆಂಗಳೂರು ವಾಟರ್ ಅಂಡ್ ಸಿವರೇಜ್ ಬೋರ್ಡ್‌ನವರಿಗೆ ರೆಫರ್ ಮಾಡಿದ್ದರು. ಇದಕ್ಕೆ ಒಂದು ಸ್ಕೀಮ್‌ಅನ್ನು ತಯಾರು ಮಾಡಿ ರೆಡಿ ಮಾಡಿದರೆ ನಾವು ದುಡ್ಡುಕೊಡುತ್ತೇವೆ ಎಂದು, ಅದಕ್ಕೋಸ್ಕರ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. 277 ಲಕ್ಷ ರೂಪಾಯಿ ಅಂದಾಜಿನಲ್ಲಿ ಈ ಯೋಜನೆ ತಯಾರಾಗಿದೆ. ಇದಕ್ಕೆ ಬಿ.ಡಿ.ಎ.ನವರ ವಂತಿಕೆ 119 ಲಕ್ಷ ರೂಪಾಯಿಗಳು ಮತ್ತು ಕರ್ನಾಟಕ ಹೌಸಿಂಗ್ ಬೋರ್ಡ್‌ನವರ ವಂತಿಕೆ 158 ಲಕ್ಷ ರೂಪಾಯಿಗಳು. ಇಷ್ಟು ಅವರು ಕೊಡಬೇಕಾಗುತ್ತದೆ. ಅದನ್ನು ಅವರು ಕೊಟ್ಟರೆ ನಾವು ಬೇಗ ಕ್ರಮ ತೆಗೆದುಕೊಳ್ಳುತ್ತೇವೆಂದು ಅವರಿಗೆ ಅನೇಕ ಕಾಗದಗಳನ್ನು ಬರಿದಿದ್ದೇವೆ. ಮತ್ತೆ ಅವರಿಗೆ ಕಾಗದ ಬರೆದು ಒತ್ತಾಯ ಮಾಡಿ ದುಡ್ಡು ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ರಮೇಶ್:– ಅಲ್ಲಿ ಒಂದು ಕೊಡ ನೀರೂ ತುಂಬುತ್ತಿಲ್ಲ, ಅಷ್ಟು ಸಣ್ಣಗೆ ನೀರು ಬರುತ್ತದೆ. ಕುಡಿಯುವ ನೀರಿನ ಬಗ್ಗೆ ಪರ್ಯಾಯ ವ್ಯವಸ್ಥೆ ಮಾಡುವ ಬಗ್ಗೆ ಹೇಳಬೇಕು. ಹೌಸಿಂಗ್‌ಬೋರ್ಡ್ ಮತ್ತು ಬಿ.ಡಿ.ಎ.ನವರಿಂದ ಕೂಡಲೇ ಹಣ ತುಂಬಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ಕುಡಿಯುವ ನೀರಿನ ಬವಣೆಗೆ ಏನು ಪರಿಹಾರ ಮಾಡುತ್ತೀರಿ ?

ಶ್ರೀ ಚೌಡರೆಡ್ಡಿ:– ಕುಡಿಯುವ ನೀರಿನ ತೊಂದರೆ ಇಲ್ಲವೆಂದು ನಾನು ಹೇಳುತ್ತಿಲ್ಲ; ಅಲ್ಲಿ ತೊಂದರೆ ಇದೆ. ಅದಕ್ಕೋಸ್ಕರವಾಗಿ ಈಗ ಬೇಸಿಗೆಕಾಲ ಬರುತ್ತಿದೆ. ಬೋರ್‌ವೆಲ್ ಹಾಕಿಸಿ ತುರ್ತು ಕ್ರಮ ತೆಗೆದುಕೊಳ್ಳುತ್ತೇವೆ. ಜೊತೆಗೆ ಬಿ.ಡಿ.ಎ. ಮತ್ತು ಕರ್ನಾಟಕ ಹೌಸಿಂಗ್ ಬೋರ್ಡ್‌ನವರಿಗೆ ಪರ್ಸಿಸ್ಟ್ ಮಾಡಿ ಬೇಗ ದುಡ್ಡು ಕಟ್ಟಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ. ಬೋರ್‌ವೆಲ್‌ಗಳನ್ನು ಹಾಕಿಸುವುದಕ್ಕೆ ನಮ್ಮ ಬೋರ್ಡಿನಿಂದ ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿಯವರು ಪಿಟಿಷನ್ ಕಮಿಟಿ ಅಧ್ಯಕ್ಷರಾಗಿದ್ದಾಗ ನಾವು ಅಲ್ಲಿಗೆ ಭೇಟಿ ಕೊಟ್ಟಿದ್ದೆವು. ಬಿ.ಡಿ.ಎ.ನವರು, ಹೌಸಿಂಗ್ ಬೋರ್ಡ್‌ನವರು, ಎಲ್ಲರೂ ಸಹಿತ ತಮಗೆ ತಪ್ಪು ವರದಿಯನ್ನು ಕೊಡುತ್ತಿದ್ದಾರೆ. ಅಲ್ಲಿ ಬಹಳಷ್ಟು ತೊಂದರೆ ಇದೆ. ದಯವಿಟ್ಟು ತಾವು ಅಲ್ಲಿಗೆ ಭೇಟಿಕೊಟ್ಟು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಸೆಷನ್ ಆದಮೇಲೆ ಬೇಕಾದರೆ ಒಂದು ಸಲ ಹೋಗಿಬನ್ನಿ. ಆಗ ನೇರವಾಗಿ ನಿಮ್ಮ ಗಮನಕ್ಕೆ ಬರುತ್ತದೆ. ಅವರೆಲ್ಲ ಬಂದು ನೋಡಿ ನಾವು ಮಾಡಿಕೊಡುತ್ತೇವೆ ಎಂದು ಪಿಟಿಷನ್ ಕಮಿಟಿಗೆ ಹೇಳಿದ್ದರು. ಇದು ನನ್ನ ಪಾರ್ಲಿಮೆಂಟರಿ ಕ್ಷೇತ್ರಕ್ಕೆ ಬರುತ್ತದೆ. ನಾನು ಸಹ ಭೇಟಿಕೊಟ್ಟು ನೋಡಿದ್ದೇನೆ. ಅವರು ಏನೇನೂ ಮಾಡಿಲ್ಲ.

ಶ್ರೀ ಚೌಡರೆಡ್ಡಿ:– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಸಿಂಧ್ಯರವರೂ ಬರಲಿ, ನಾವು ಬೇಗ ಅಲ್ಲಿಗೆ ಭೇಟಿ ಕೊಡೋಣ, ಜೊತೆಗೆ ಅವರನ್ನೂ ಕರೆಸುತ್ತೇನೆ. ನೀವೂ, ನಾವೂ ಕುಳಿತುಕೊಂಡು ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ.

ಬೀದಿಭಾಗ್ಯ ಯೋಜನೆ ಕುರಿತು

394: ಶ್ರೀ ಜಿ. ರಾಜುಗೌಡ (ಹನೂರು):– ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜೀವಗಾಂಧಿ ಶ್ರಮ ಕಲ್ಯಾಣ ನಿಧಿ ಮತ್ತು ಬೀದಿಭಾಗ್ಯ ಯೋಜನೆಯಿಂದ ಎಷ್ಟು ಜನ ಫಲಾನುಭವಿಗಳು ಯಾವ ಯಾವ ರೀತಿ ಸಹಾಯ ಪಡೆದಿರುತ್ತಾರೆ. (ಜಿಲ್ಲಾವಾರು ಅಂಕಿ–ಅಂಶಗಳನ್ನು ನೀಡುವುದು);

ಆ. ಇದರಿಂದ ಸರ್ಕಾರಕ್ಕೆ ಆಗಿರುವ ವೆಚ್ಚವೆಷ್ಟು;

ಇ. 1992–93ರ ಆಯವ್ಯಯದಲ್ಲಿ ಇದಕ್ಕಾಗಿ ನಿಗದಿಪಡಿಸಿದ ಮೊತ್ತವೆಷ್ಟು ?

ಶ್ರೀ ಬ್ಲೇಸಿಯಸ್.ಎಂ. ಡಿಸೋಜ (ಕಾರ್ಮಿಕ ಸಚಿವರು) ಇವರ ಪರವಾಗಿ ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ. ಈ ಯೋಜನೆಯ ರೂಪರೇಷೆಗಳನ್ನು ಇನ್ನೂ ರೂಪಿಸಬೇಕಾಗಿರುವ ಕಾರಣ, ಯಾವುದೇ ವೆಚ್ಚ ಮಾಡಿರುವುದಿಲ್ಲ.

ಆ. ಉದ್ಭವಿಸುವುದಿಲ್ಲ.

ಇ. 1992–93ರ ಆಯವ್ಯಯದಲ್ಲಿ ರಾಜೀವಗಾಂಧಿ ಕೃಷಿ ಕಾರ್ಮಿಕರ ಕಲ್ಯಾಣನಿಧಿ ಯೋಜನೆಗೆ ರೂ.5 ಕೋಟಿ ಹಾಗೂ ಬೀದಿಭಾಗ್ಯ ಯೋಜನೆಗೆ ರೂ.1 ಕೋಟಿ ಒದಗಿಸಲಾಗಿದೆ.

ಶ್ರೀ ಜಿ. ರಾಜುಗೌಡ:– ಸ್ವಾಮಿ, ತಾವು ಬೀದಿಭಾಗ್ಯ ಮತ್ತು ರಾಜೀವ್‌ಗಾಂಧಿ ಶ್ರಮ ಕಲ್ಯಾಣ ನಿಧಿ ಎನ್ನುವ ವಿಚಾರದಲ್ಲಿ ರೂಪುರೇಷೆ ಇಲ್ಲ ಎಂದು ಹೇಳಿರುವುದು ವಿಪರ್ಯಾಸದ ವಿಷಯ. 1992–93ರಲ್ಲಿ, ಬಜೆಟ್‌ನಲ್ಲಿ 15 ಕೋಟಿ ನಿಗದಿ ಮಾಡಿದ್ದೇವೆ. ನಾವು ರೂಪುರೇಷೆ ತಯಾರು ಮಾಡಿದ್ದೇವೆ. ಆದರೂ ಈ ರೂಪುರೇಷೆ ಮಾನ್ಯ ಸಚಿವರ ಗಮನಕ್ಕೆ ಬಾರದೇ ಇರುವುದಕ್ಕಾಗಿ ನಾನು ವಿಷಾದವನ್ನು ವ್ಯಕ್ತ ಪಡಿಸುತ್ತೇನೆ. ಈ ಕಾರ್ಯಕ್ರಮದಲ್ಲಿ ಬರತಕ್ಕವರು ಕೃಷಿ ಕಾರ್ಮಿಕರು, ತಳ್ಳುವ ಗಾಡಿಯವರು, ಆಟೋರಿಕ್ಷಾ ಚಾಲಕರು, ಹಣ್ಣು ಮಾರುವವರು, ಈ ರೀತಿ ಶ್ರಮಪಡುವವರೆಲ್ಲರೂ ಈ ವ್ಯಾಪ್ತಿಗೆ ಬರುತ್ತಾರೆ. 1992–93ನೇ ಆಯವ್ಯಯದಲ್ಲಿ ಇದಕ್ಕೆ 15ಕೋಟಿ ಮೀಸಲಿಟ್ಟಿದ್ದೇವೆ. ನಾವು ರೂಪುರೇಷೆ ತಯಾರು ಮಾಡಿದ್ದೇವೆ ಮತ್ತು ಪ್ರತಿಯೊಂದು ತಾಲ್ಲೂಕಿನಲ್ಲೂ ರಾಜೀವ್ ಗಾಂಧಿ ಸ್ಮರಣಾರ್ಥವಾಗಿ, 25 ಅಂಗವಿಕಲರಿಗೆ ಮೂರು ಚಕ್ರದ ವಾಹನ ಕೊಡುವಂಥಾದ್ದು, ಉದ್ಯೋಗ ಮೀಸಲಾತಿಯಲ್ಲಿ ಶೇಕಡ 2ರಷ್ಟು ಕೊಡುವಂಥಾದ್ದು. ಈ ಎಲ್ಲವನ್ನೂ ಮಾಡಿದ್ದೇವೆ. ದಯಮಾಡಿ, ತಾವು ಮಾಡಿಲ್ಲವೆಂದು ಹೇಳಿದರೆ, ನಾನು ಇದಕ್ಕೆ ಅಳಬೇಕೋ ನಗಬೇಕೋ ಗೊತ್ತಿಲ್ಲ. ತಾವು 1992–93ರಲ್ಲಿ ಬಜೆಟ್‌ನಲ್ಲಿ 5 ಕೋಟಿ ಅಲ್ಲ, 15 ಕೋಟಿ ಇಟ್ಟಿದ್ದೀರಿ. ರೂಪುರೇಷೆ ತಯಾರು ಮಾಡಿದ್ದೇವೆ, ಇದರ ಬಗ್ಗೆ ಎಷ್ಟರ ಮಟ್ಟಿಗೆ ಕಾರ್ಯವೈಖರಿ ಮಾಡಿದ್ದೀರಿ ಎನ್ನುವುದು ನನ್ನ ಪ್ರಶ್ನೆ. ದಯಮಾಡಿ ನೋಡಿ ಹೇಳಿ. ಇದು ತಮಗೆ ಬರುವುದಿಲ್ಲ, ಇದು ಸಮಾಜ ಕಲ್ಯಾಣ ಇಲಾಖೆಯವರಿಗೆ ಬರುತ್ತದೆ.

ಶ್ರೀ ಧರ್ಮಸಿಂಗ್:– ಸನ್ಮಾನ್ಯ ಅಧ್ಯಕ್ಷರೇ, ಈ ಬೀದಿಭಾಗ್ಯ ಯೋಜನೆ ನಮಗೂ ಮತ್ತು ಕಾರ್ಮಿಕ ಇಲಾಖೆಗೂ ಸಂಬಂಧ ಇದೆ. ಸನ್ಮಾನ್ಯ ರಾಜುಗೌಡರು ಹೇಳಿದ ಹಾಗೆ, ಕರ್ನಾಟಕ ರಾಜ್ಯದಲ್ಲಿ ಬೀದಿಭಾಗ್ಯದಲ್ಲಿ ಮಕ್ಕಳಿಗಾಗಿ ಎಲ್ಲಾ ಕಡೆಗೂ ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮೊನ್ನೆ ಕೂಡ ಬೆಂಗಳೂರು ನಗರ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿರತಕ್ಕ ರ್‍ಯಾಗ್ ಪಿಕ್ಕರ್ಸ್ ಎಂದು ನಾವೇನು ಹೇಳುತ್ತೇವೆ, ಇದರ ವಿಚಾರದಲ್ಲಿ ಈಗ ವಾಲಂಟರಿ ಆರ್ಗನೈಸೇಷನ್ಸ್‌ನವರೂ ಕೂಡ ನಮ್ಮ ಕಡೆಗೆ ಬರುತ್ತಿದ್ದಾರೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಒಂದು ಲಕ್ಷಕ್ಕಿಂತಲೂ ಹೆಚ್ಚು ಮತ್ತು ಬೆಂಗಳೂರು ನಗರದಲ್ಲಿಯೂ ಕೂಡ 42 ಸಾವಿರ ಹುಡುಗರನ್ನು ಗುರುತಿಸಿದ್ದೇವೆ. ರೈಲ್ವೆ ನಿಲ್ದಾಣ, ಬಸ್ ಸ್ಟ್ಯಾಂಡ್‌ನಲ್ಲಾಗಲೀ, ಹಾಗೂ ಬೇರೆ ಕಡೆಯಲ್ಲಿಯೂ ಕೂಡ ಈ ರೀತಿ ಬರತಕ್ಕಂಥ ಮಕ್ಕಳಿಗೆ ಶೋಷಣೆ ಆಗದಂತೆ ನೋಡಿಕೊಳ್ಳುವುದು ನಮ್ಮ ಕೆಲಸವಾಗಿದೆ ಈಗಾಗಲೇ 1993–94ನೇ ಸಾಲಿನಲ್ಲಿ ಈ ಬೀದಿಭಾಗ್ಯ ಕಾರ್ಯಕ್ರಮಕ್ಕೆ ಒಂದು ಕೋಟಿ ರೂಪಾಯಿಗಳ ಬಜೆಟ್ ಪ್ರಾವಿಷನ್ ಮಾಡಿದ್ದೇವೆ. ಮತ್ತು ಇದು ಎಲ್ಲಾ ಜಿಲ್ಲೆಗಳಲ್ಲಿಯೂ ಬೃಹತ್ತಾದ ಕೆಲಸವಾಗಿದೆ. ಇದು ಶೋಷಣೆಗೆ ಒಳಗಾಗದೇ ಇರತಕ್ಕ ರೀತಿಯಲ್ಲಿ ಕೆಲಸ ಮಾಡಲು ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳುತ್ತದೆ.

ಶ್ರೀ ಜಿ. ರಾಜುಗೌಡ:– ಅದರ ಜೊತೆಗೆ, ರಾಜೀವ್ ಗಾಂಧಿಯವರ ಸ್ಮರಣಾರ್ಥ ಎಂದು ಬಜೆಟ್‌ನಲ್ಲಿ ಮಾಡಿದ್ದೀರಿ. ಪ್ರತಿಯೊಂದು ತಾಲ್ಲೂಕಿನಲ್ಲೂ ಕನಿಷ್ಠ 25 ಜನಕ್ಕೆ ಮೂರು ಚಕ್ರದ ವಾಹನ ಒದಗಿಸುವಂತಾದ್ದು ಮತ್ತು ಅಂಗವಿಕಲರಿಗೆ ಶೇಕಡ 2ರಷ್ಟು ಉದ್ಯೋಗಗಳನ್ನು ಕಾದಿರಿಸುವಂಥಾದ್ದು ಕೂಡ ರೂಪುರೇಷೆಯಲ್ಲಿದೆ. ಆದ್ದರಿಂದ, ದಯಮಾಡಿ ಇದರ ಬಗ್ಗೆಯೂ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೆಲಸ ಮಾಡಿದ್ದೀರಿ ಎನ್ನುವುದನ್ನು ಹೇಳಬೇಕು.

ಶ್ರೀ ಧರ್ಮಸಿಂಗ್:– ರಾಜೀವ್‌ಗಾಂಧಿ ಪೂರ್ಣಾಂಗ ಯೋಜನೆಗೆ, ಕರ್ನಾಟಕ ರಾಜ್ಯದಲ್ಲಿ 1992–93 ನೇ ಸಾಲಿನಲ್ಲಿ 89 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಒಟ್ಟು 4,490 ಟ್ರೇಸೈಕಲ್‌ಗಳನ್ನು

ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿಯೂ, ತಲಾ 20ರಂತೆ ಕೊಡತಕ್ಕ ಕಾರ್ಯಕ್ರಮ ಹಾಕಿಕೊಂಡು, ಅದನ್ನು ವಿತರಣೆ ಮಾಡುತ್ತಿದ್ದೇವೆ.

ರಾಜಾಜಿನಗರ ಎಂಟ್ರೆನ್ಸ್‌ನಲ್ಲಿರುವ ಎಂ.ಇ.ಐ ಫ್ಯಾಕ್ಟರಿಯಿಂದ ರಾಮ್‌ಕುಮಾರ್ ಮಿಲ್‌ವರೆಗೆ ಮೇಲು ಸೇತುವೆಯ ನಿರ್ಮಾಣ ಕುರಿತು

183: ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜಾಜಿನಗರ ಎಂಟ್ರೆನ್ಸ್‌ನಲ್ಲಿರುವ ಎಂ.ಇ.ಐ. ಫ್ಯಾಕ್ಟರಿಯಿಂದ ರಾಮ್‌ಕುಮಾರ್ ಮಿಲ್‌ವರೆಗೆ ವಾಹನ ಒತ್ತಡ ಜಾಸ್ತಿಯಾಗಿರುವುದರಿಂದ ಓವರ್ ಬ್ರಿಡ್ಜ್ ರಸ್ತೆ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಆ. ತೆಗೆದುಕೊಂಡಿದ್ದಲ್ಲಿ ಅದರ ಅಂದಾಜು ಹಣವೆಷ್ಟು ಹಾಗೂ ಇದುವರೆವಿಗೂ ಎಷ್ಟು ಹಣ ಖರ್ಚು ಮಾಡಲಾಗಿದೆ;

ಇ. ಆ ಓವರ್ ಬ್ರಿಡ್ಜ್ ಕೆಲಸ ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಶ್ರೀ ಕೆ. ಲಕ್ಕಣ್ಣ:- ಮಾನ್ಯ ಅಧ್ಯಕ್ಷರೇ, ರಾಜಾಜಿನಗರ ಎಂಟ್ರೆನ್ಸ್‌ನಲ್ಲಿ, ಎಂ.ಇ.ಐ. ಫ್ಯಾಕ್ಟರಿಯಿಂದ, ರಾಮ್‌ಕುಮಾರ್ ಮಿಲ್ಸ್‌ನವರೆಗೂ ಫ್ಲೈ ಓವರ್ ರಸ್ತೆ ಮಾಡುವ ಯೋಜನೆ ಇದೆಯೋ ಎಂದು ಕೇಳಿದ್ದೆ, "ಇಲ್ಲ" ಎಂದು ಹೇಳಿದ್ದಾರೆ. ಇದು ತುಂಬಾ ಅವಶ್ಯಕತೆ ಇದೆ. ಏಕೆಂದರೆ, ಅಲ್ಲಿ ವಾಹನಗಳ ಒತ್ತಡ ತುಂಬಾ ಜಾಸ್ತಿಯಾಗಿದೆ; ಬಡಾವಣೆಗಳು ಕೂಡ ಜಾಸ್ತಿಯಾಗಿವೆ. ನಾನು ಹಿಂದೆ ಮಹಾನಗರ ಪಾಲಿಕೆಯ ಸದಸ್ಯನಾಗಿದ್ದಾಗ, ಇದರ ಬಗ್ಗೆ ಕೆಲಸ ಮಾಡಬೇಕೆಂದು ನಕ್ಷೆ ಕೂಡ ತಯಾರಾಗಿತ್ತು. ದಯಮಾಡಿ ಈ ಕೆಲಸವನ್ನು ಮಾಡಿಸಬೇಕು. ಮತ್ತು ರಸ್ತೆ ಅಗಲ ಮಾಡತಕ್ಕ ಕೆಲಸ ಈಗಾಗಲೇ ಸ್ಥಗಿತವಾಗಿದೆ, ಹೀಗೆ 2 ವರ್ಷಗಳಿಂದ ನಿಂತಿದೆ. ಈ ಕೆಲಸವೂ ಬಹುಬೇಗನೆ ಆಗಬೇಕು, ಇಲ್ಲದಿದ್ದರೆ, ಅಲ್ಲಿ ವಾಹನಗಳ ಒತ್ತಡ ಜಾಸ್ತಿಯಾಗಿ, ಅಪಘಾತಗಳು ತುಂಬಾ ಆಗುತ್ತವೆ. ಈಗಾಗಲೇ ಆ ರಸ್ತೆಯಲ್ಲಿ ಸುಮಾರು 2-3 ಜನ ಮರಣ ಹೊಂದಿದ್ದಾರೆ. ಈ ದೃಷ್ಟಿಯಿಂದ ಮಾನ್ಯ ಸಚಿವರಲ್ಲಿ ತಮ್ಮ ಮುಖಾಂತರ ಕೇಳುತ್ತೇನೆ. ಮೇಲೆ ವೈಡನ್ ಮಾಡತಕ್ಕ ರಸ್ತೆ ಮತ್ತು ಓವರ್ ಬ್ರಿಡ್ಜ್ ಕಟ್ಟಿಸತಕ್ಕ ವ್ಯವಸ್ಥೆ ಮಾಡಬೇಕು; ಇಲ್ಲದಿದ್ದರೆ, ಬೆಂಗಳೂರು ನಗರದಲ್ಲಿ, ವಾಹನಗಳ ಒತ್ತಡ ಜಾಸ್ತಿಯಾಗಿ, ನಾಗರೀಕರು ಓಡಾಡುವುದೇ ಕಷ್ಟವಾಗುತ್ತಿದೆ. ಆದ್ದರಿಂದ ತಮ್ಮ ಮೂಲಕ ನಗರಾಭಿವೃದ್ಧಿ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಅಲ್ಲಿ ಓವರ್ ಬ್ರಿಡ್ಜ್ ಮತ್ತು ವೈಡನ್ ಆಗತಕ್ಕ ರಸ್ತೆಯನ್ನು ಬಹುಬೇಗನೆ ಮಾಡುವುದಕ್ಕೆ ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಚೌಡರೆಡ್ಡಿ:- ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಮಾನ್ಯ ಸದಸ್ಯರು ಹೇಳಿರುವಂಥಾದ್ದು ನಿಜ. ಅಲ್ಲಿ ಟ್ರಾಫಿಕ್ ಜಾಸ್ತಿಯಾಗಿದೆ. ರಾಜಾಜಿನಗರ ಎಂಟ್ರೆನ್ಸ್‌ನಲ್ಲಿ ಟ್ರಾಫಿಕ್ ವಿಪರೀತ ಜಾಸ್ತಿಯಾಗಿದೆ. ಅದಕ್ಕೋಸ್ಕರ ರೋಡ್ ವೈಡನ್ ಮಾಡಬೇಕೆಂದು 14.96 ಲಕ್ಷ ರೂಪಾಯಿಗಳ ಎಸ್ಟಿಮೇಟ್

ಸಿದ್ಧಮಾಡಿ, ಕೆಲಸ ನಡೆಯುತ್ತಿತ್ತು. ಈ ರೀತಿ ನಡೆಯುತ್ತಿರತಕ್ಕ ಸಂದರ್ಭದಲ್ಲಿ ಮಿನರ್ವ ಮಿಲ್ಸ್‌ನವರು ಬಂದು, ಆ ಜಾಗ ನಮಗೆ ಸೇರಿದ್ದು ಎಂದು ಪ್ರೊಟೆಸ್ಟ್ ಮಾಡಿ, ಗಲಾಟೆಯಾದ ಮೇಲೆ, ಕಾರ್ಪೊರೇಷನ್‌ನವರು ತಹಶೀಲ್ದಾರ್‌ರವರನ್ನು ಕೇಳಿದರೆ, ಅದು ಅವರದಲ್ಲವೆಂದು ಹೇಳಿದ್ದಾರೆ. ಆದರೆ, ಆ ಟೈಮ್‌ನಲ್ಲಿದ್ದ ಮುಖ್ಯ ಕಾರ್ಯದರ್ಶಿಯವರು ವಿಸಿಟ್ ಮಾಡಿ, ಆ ಟೈಮ್‌ನಲ್ಲಿ, ಹೆಚ್.ಯು.ಡಿ. ಸೆಕ್ರೆಟರಿಯವರೂ ವಿಸಿಟ್ ಮಾಡಿ, ಸ್ವಲ್ಪ ಕೆಲಸ ನಿಲ್ಲಿಸಿ, ಅವರನ್ನು ಕರೆಸ ಮಾತನಾಡಿ, ತೀರ್ಮಾನ ಮಾಡೋಣವೆಂದು ಹೇಳಿದ್ದಕ್ಕೋಸ್ಕರ, 6 ತಿಂಗಳಿಂದ ಕೆಲಸ ಸ್ಥಗಿತಗೊಂಡಿದೆ. ಇದನ್ನು ಬೇಗನೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಇದಲ್ಲದೆ, ಇನ್ನೊಂದು ಮಹಾರಾಣಿ ಸರ್ಕಲ್‌ನಿಂದ ರಾಜಾಜಿನಗರ ಎಂಟ್ರೆನ್ಸ್‌ವರೆಗೂ ಫ್ಲೈ ಓವರ್ ಮಾಡಬೇಕೆಂದು ಎಸ್ಟಿಮೇಟ್ ರೆಡಿ ಮಾಡುತ್ತಿದ್ದಾರೆ. ಇದೆಲ್ಲ ಹಣದ ಪರಿಸ್ಥಿತಿ ನೋಡಿಕೊಂಡು ಆಗುತ್ತದೆ. ಒಟ್ಟಿನಲ್ಲಿ ಅಲ್ಲಿಯ ಕೆಲಸ ಶುರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಲಕ್ಕಣ್ಣ:– ಮಾನ್ಯ ಅಧ್ಯಕ್ಷರೇ, ಅಲ್ಲಿ ರಸ್ತೆ ಅಗಲ ಮಾಡತಕ್ಕ ಕೆಲಸ, ಸುಮಾರು ಒಂದು ವರ್ಷದಿಂದ ನಿಂತುಹೋಗಿದೆ. ದಯಮಾಡಿ, ಇದು ಬೇಗ ಆಗಬೇಕು. ಇಲ್ಲದಿದ್ದರೆ, ಬಹಳ ತೊಂದರೆಯಾಗುತ್ತದೆ. ಮಹಾನಗರ ಪಾಲಿಕೆಯ ಇಂಜಿನಿಯರುಗಳು ಏನು ಮಾಡುತ್ತಿದ್ದಾರೆ. ಇವರು ಸಾರ್ವಜನಿಕರಿಗೆ ಏನು ಕೆಲಸವಾಗಬೇಕೋ ಅದನ್ನು ಮಾಡುತ್ತಾ ಇಲ್ಲ. ಸುಮ್ಮನೆ ಫುಟ್‌ಪಾತ್‌ನಲ್ಲಿ ಮಾಡತಕ್ಕ ಕೆಲಸಗಳೇ ಜಾಸ್ತಿಯಾಗಿವೆ. ಆದ್ದರಿಂದ, ಸಾರ್ವಜನಿಕ ಹಿತದೃಷ್ಟಿಯಿಂದ ಏನು ಕೆಲಸ ಆಗಬೇಕೊ ಆ ಕೆಲಸಗಳು ಆಗತಕ್ಕ ವ್ಯವಸ್ಥೆಯನ್ನು ತಾವು ಮಾಡಬೇಕಾಗಿದೆ.

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೇ, ಅದರ ಮೇಲೆ ಯಾವುದೇ ಸ್ಟೇ ಇಲ್ಲ. ಮಿನರ್ವ ಮಿಲ್‌ನವರು ಎಲ್ಲಿಯೂ ಕೋರ್ಟಿಗೆ ಹೋಗಿಲ್ಲ, ಸ್ಟೇ ಮಾಡಿಸಿಲ್ಲ. ಏಕೆಂದರೆ, ಅಂದಿದ್ದ ಮುಖ್ಯ ಕಾರ್ಯದರ್ಶಿಯವರು ಮೌಖಿಕವಾಗಿ ಹೇಳಿದ್ದಕ್ಕೆ ನಿಂತಿದೆ. ಇದರ ಬಗ್ಗೆ ಬೇಗ ಕೆಲಸ ಪ್ರಾರಂಭಿಸುವಂತೆ ಹೇಳಿ ಮಾಡಿಸುತ್ತೇನೆ.

ಅಧ್ಯಕ್ಷರು:– 450 (2156)ನೇ ಪ್ರಶ್ನೆಯನ್ನು ನಗರಾಭಿವೃದ್ಧಿ ಮಂತ್ರಿಗಳಿಗೆ ಕಳುಹಿಸಲಾಗಿದೆ.

ಶ್ರೀಮತಿ ಮೋಟಮ್ಮ:– ಇದು ನಗರಾಭಿವೃದ್ಧಿ ಮಂತ್ರಿಗಳಿಗೆ ಸಂಬಂಧಪಡುವುದಿಲ್ಲ. ಏಕೆಂದರೆ, ಇದು ಎಸ್.ಸಿ.ಪಿ. ಸ್ಕೀಮ್‌ನಲ್ಲಿ ಮನೆ ಕಟ್ಟಿಸಿಕೊಡುವಂಥಾದ್ದು; ಇದು ನಗರಾಭಿವೃದ್ಧಿ ಮಂತ್ರಿಗಳಿಗೆ ಹೇಗೆ ಬರುತ್ತದೆ ? ದುಡ್ಡು ರೂರಲ್ ಡೆವಲಪ್‌ಮೆಂಟ್‌ಗೆ ಬರುತ್ತದೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):– ಇದೇನಾಗಿದೆ ಎಂದರೆ, ವಿಶೇಷ ಘಟಕ ಯೋಜನೆ, ಹರಿಜನ ಗಿರಿಜನರಿಗೆ ಸಂಬಂಧಪಟ್ಟಿದ್ದು ಮತ್ತು ಇದು ಚಿಕ್ಕಮಗಳೂರು ಜಿಲ್ಲಾಪರಿಷತ್ ಎಂದು ಹೇಳಿದುದರಿಂದ, ವರ್ಗಾವಣೆ ಮಾಡಲಾಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಇರೆಗ್ಯುಲಾರಿಟೀಸ್, ಏನು ಅಕ್ರಮ ನಡೆದಿದೆ, ಮುನಿಸಿಪಾಲಿಟಿ ದುಡ್ಡನ್ನು, ಜಿಲ್ಲಾಪರಿಷತ್ ಖರ್ಚು ಮಾಡಿಕೊಳ್ಳುವುದಕ್ಕೆ ಎಂದು ಕೇಳಿರತಕ್ಕ ಪ್ರಶ್ನೆ. ನಮಗೆ ಗೊತ್ತಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ, ಈ ಜನರಿಗೆ 18ಪರ್ಸೆಂಟ್ ಹಣ ಖರ್ಚಾಗುತ್ತಿದೆಯೋ ಇಲ್ಲವೋ ಎನ್ನುವುದನ್ನು ನೋಡಬೇಕಾಗಿದೆ.

ಶ್ರೀ ಧರ್ಮಸಿಂಗ್:– ಇದು ವರ್ಗಾವಣೆ ಏಕೆ ಆಗಿದೆ ಎಂದು ನನಗೆ ಗೊತ್ತಿಲ್ಲ. ಅವರು ವಿಶೇಷವಾಗಿ ಚಿಕ್ಕಮಗಳೂರು ವಿಚಾರ ಕೇಳಿದ್ದಾರೆ. ತಾವು ಹೆಲ್ಡ್ ಓವರ್ ಮಾಡಿ; ಸೋಮವಾರ ಇದಕ್ಕೆ ಉತ್ತರ ಕೊಡುತ್ತೇನೆ.

ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಲೋಕಲ್) ದಿನಗೂಲಿ ಹುದ್ದೆಗಳನ್ನು ನೇಮಿಸುವ ಬಗ್ಗೆ

2107: ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1989ರಿಂದ 1993ರ ಜನವರಿವರೆಗೆ ಎಷ್ಟು ದಿನಗೂಲಿ:ಹಂಗಾಮಿ ಕೆಲಸಗಾರರನ್ನು ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ವೇತನ ಶ್ರೇಣಿಗಳ ವಿವರ;

ಆ. ಸಾಲುವಾರು ಹೆಸರು, ಉದ್ಯೋಗ ಮತ್ತು ವೇತನ ಶ್ರೇಣಿಗಳ ವಿವರ;

ಇ. ಇವರಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರು ಎಷ್ಟು;

ಈ. ನೇಮಕಾತಿ ಅಧಿಕಾರಿ ಮತ್ತು ಯಾವ ನಿಯಮಾವಳಿಗಳ ಪ್ರಕಾರ ನೇಮಕಾತಿ ಮಾಡಲಾಗಿದೆ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಇಲ್ಲ.

ಆ. ಅನ್ವಯಿಸುವುದಿಲ್ಲ.

ಇ. ಅನ್ವಯಿಸುವುದಿಲ್ಲ.

ಈ. ಅನ್ವಯಿಸುವುದಿಲ್ಲ.

ಶ್ರೀ ಕೆ. ಸಿದ್ದಯ್ಯ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸ್ವಲ್ಪ ಮರೆತು ಬಿಟ್ಟಿದ್ದಾರೆಂದು ಕಾಣುತ್ತದೆ. 1989ರಿಂದ 1993ನೇ ವಾರ್ಷಿಕ ವರದಿಯಲ್ಲಿ ಹೇಳಿದ್ದಾರೆ. ಅದರಲ್ಲಿ ಆಡಿಟರ್ಸ್ ಅಬ್ಸರ್ವೇಷನ್ಸ್ ಇದೆ. ದಯಮಾಡಿ, ಅದನ್ನು ತರಿಸಿ ನೋಡಿ ಸರಿಪಡಿಸುತ್ತೀರಾ ? ಆ ರಿಮಾರ್ಕ್ಸ್‌ನಲ್ಲಿ ಇದೆಯೆಂದು ನನಗೆ ಜ್ಞಾಪಕ, ನಾನು ಅದನ್ನು ಹುಡುಕಿದೆ, ಅದು ಸಿಗಲಿಲ್ಲ. ತಾವು, ತಮ್ಮ ಡಿಪಾರ್ಟ್‌ಮೆಂಟಿನಿಂದ ತರಿಸಿ ನೋಡಿ, ಇದನ್ನು ಸರಿಪಡಿಸುತ್ತೀರಾ ?

ಶ್ರೀ ಚೌಡರೆಡ್ಡಿ:– ದಾವಣಗೆರೆ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ 1989ರಿಂದ 1993ರವರೆಗೆ ದಿನಗೂಲಿ ಮೇಲೆ ಯಾರನ್ನೂ ತೆಗೆದುಕೊಂಡಿಲ್ಲ.

ಶ್ರೀ ಕೆ. ಸಿದ್ದಯ್ಯ:– ಆ ರಿಪೋರ್ಟ್‌ನಲ್ಲಿ ಆಡಿಟರ್ಸ್ ರಿಮಾರ್ಕ್ಸ್ ಇದೆ. ತಮ್ಮ ಡಿಪಾರ್ಟ್‌ಮೆಂಟ್‌ನಿಂದ, ದಯಮಾಡಿ ನೋಡಿ.

ಶ್ರೀ ಚೌಡರೆಡ್ಡಿ:– ಆಡಿಟ್ ರಿಪೋರ್ಟ್‌ನಲ್ಲಿದ್ದರೆ, ತಮ್ಮನ್ನು ಕರೆಸಿ ಮಾತನಾಡುತ್ತೇನೆ.

ಮಂಡ್ಯ ನಗರಕ್ಕೆ ಕುಡಿಯುವ ನೀರಿನ ಸರಬರಾಜು ಕುರಿತು

2185: ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಂಡ್ಯ ನಗರಕ್ಕೆ ಕುಡಿಯುವ ನೀರಿನ ಸರಬರಾಜು ಮಾಡುವ ಕಾವೇರಿ 2ನೇ ಹಂತದ ಯೋಜನೆಯು ಮಂಜೂರಾಗಿದೆಯೇ;

ಆ. ಹಾಗಿದ್ದಲ್ಲಿ ಇದರ ವಿವರಗಳೇನು;

ಇ. ಈ ಯೋಜನೆಯು ಎಂದಿನಿಂದ ಅನುಷ್ಠಾನಕ್ಕೆ ಬರುವುದು;

ಈ. ಮಂಡ್ಯ ನಗರದ ಒಳಚರಂಡಿ ಯೋಜನೆಯನ್ನು ಪೂರ್ಣಗೊಳಿಸಲಾಗಿದೆಯೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಹೌದು.

ಆ. ಸಂಖ್ಯೆ:ಹೆಚ್‌ಯುಡಿ 641 ಯುಡಬ್ಲ್ಯುಎಸ್ 90, ದಿನಾಂಕ 3–4–92 ರಲ್ಲಿ ರೂ.1360.00 ಲಕ್ಷಗಳಿಗೆ ಈ ಕೆಳಕಂಡ ಆರ್ಥಿಕ ವ್ಯವಸ್ಥೆಯಂತೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

1.	ಜೀವವಿಮಾ ನಿಗಮದ ಸಾಲ	ರೂ.680.00 ಲಕ್ಷ
2.	ಸರ್ಕಾರದ ಸಾಲ	ರೂ.340.00 ಲಕ್ಷ
3.	ಮಂಡ್ಯ ನಗರಸಭೆ ಪಾಲು	ರೂ.340.00 ಲಕ್ಷ
	ಒಟ್ಟು	ರೂ.1360.00 ಲಕ್ಷ

ಇ. ಈ ಯೋಜನೆಯನ್ನು 1995–96ರ ಸಾಲಿನಲ್ಲಿ ಚಾಲ್ತಿಗೊಳಿಸಲು ಉದ್ದೇಶಿಸಲಾಗಿದೆ.

ಈ. ಒಳಚರಂಡಿ ಗ್ರಾಮಸಾರ ಶುದ್ಧೀಕರಣಗಾರರ ಕಾಮಗಾರಿಯ ಹೊರತು ಮಿಕ್ಕೆಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಶುದ್ಧೀಕರಣಗಾರದ ಕಾಮಗಾರಿಯು ಪ್ರಗತಿಯಲ್ಲಿದೆ.

ಶ್ರೀ ಎಂ.ಎಸ್. ಆತ್ಮಾನಂದ:– ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರಕ್ಕೆ ಕುಡಿಯುವ ನೀರಿನ 2ನೇ ಹಂತದ ಯೋಜನೆ ಮಂಜೂರಾಗಿರುವ ಬಗ್ಗೆ 3–4–90ರಲ್ಲಿ ಸರ್ಕಾರ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಈ ಯೋಜನೆಯ ಅನುಷ್ಠಾನ 1995–96ನೇ ಇಸವಿಯಲ್ಲಿ ಬರುತ್ತದೆಂದು ಹೇಳಿದ್ದಾರೆ. ಮೊದಲನೆ ಹಂತದ ಕೆಲಸವನ್ನು 1974ರಲ್ಲಿ ಕಾರ್ಯಗತಗೊಳಿಸಲಾಯಿತು. ಮಂಡ್ಯ ಟೌನ್ ಆಗಿದ್ದಾಗ ಆ ಯೋಜನೆಯ ಅಂದಾಜನ್ನು ತಯಾರು ಮಾಡಿದ್ದರು. ಈಗ ಮಂಡ್ಯ ನಗರ ಸಭೆಯಾಗಿ, ನಗರವಾಗಿ ಸುಮಾರು 1 ಲಕ್ಷ 50 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಪ್ರದೇಶವಾಗಿದೆ. ಈಗಾಗಲೇ ನಾವು ಕುಡಿಯುವ ನೀರಿನ ತೊಂದರೆಯನ್ನು ಅನುಭವಿಸುತ್ತಿದ್ದೇವೆ. ಈ ಯೋಜನೆಯನ್ನು ಅತಿ ಶೀಘ್ರವಾಗಿ ಅನುಷ್ಠಾನ ಮಾಡಲಿಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಚೌಡರೆಡ್ಡಿ:– ಸನ್ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರದಲ್ಲಿ ನೀರಿಗೆ ತೊಂದರೆ ಇರತಕ್ಕಂಥ ವಿಚಾರ ತಮಗೂ ಗೊತ್ತಿದೆ. ಇದಕ್ಕೆ ಒಂದು ಯೋಜನೆಯನ್ನು ಕೂಡ ತಯಾರು ಮಾಡಿದ್ದೇವೆ. ಆ ಯೋಜನೆಗೆ 1360 ಲಕ್ಷ ರೂಪಾಯಿ ಅಂದಾಜು ತಯಾರು ಮಾಡಿದ್ದೇವೆ. ಆ ಯೋಜನೆಗೆ ಬೇಕಾದಂಥಾದ್ದು ಸಿ.ಎಂ.ಸಿ. ಮಂಡ್ಯ ಶೇರು 340 ಲಕ್ಷ. ಅದಕ್ಕೆ 10 ಲಕ್ಷ ರೂಪಾಯಿಯನ್ನು ಕೊಟ್ಟಿದ್ದಾರೆ. 10 ಲಕ್ಷ ರೂಪಾಯಿಗೆ ಮೇಲ್ಪಟ್ಟ ಯೋಜನೆಯಾದರೆ ಅದನ್ನು ಸೆಂಟ್ರಲ್ ಗೌರ್ನ್‌ಮೆಂಟಿಗೆ ಕಳುಹಿಸಬೇಕಾಗುತ್ತದೆ. ಅದರಂತೆ ನಾವು ಸೆಂಟ್ರಲ್ ಗೌರ್ನಮೆಂಟಿಗೆ ಕಳುಹಿಸಿದ್ದೇವೆ. ಎಲ್.ಐ.ಸಿ. ಮತ್ತು ಹುಡ್ಕೋನಿಂದ ಲೋನ್ ತೆಗೆದುಕೊಳ್ಳಬೇಕಾದರೆ ಅವರಿಂದ ಕ್ಲಿಯರೆನ್ಸ್ ಬೇಕಾಗುತ್ತದೆ. ಮೊನ್ನೆ ನಾವು ಒಂದು ಕಾನ್‌ಫರೆನ್ಸ್‌ಗೆ ಹೋಗಿದ್ದಾಗ ಇದರ ಬಗ್ಗೆ ಪ್ರಯತ್ನ ಮಾಡಿದ್ದೇವೆ. ಏಪ್ರಿಲ್‌ನಲ್ಲಿ ಇದಕ್ಕೆ ಅಂತಿಮವಾಗಿ ಸೆಂಟ್ರಲ್ ಗೌರ್ನ್‌ಮೆಂಟ್‌ನಿಂದ ಕ್ಲಿಯರೆನ್ಸ್ ಬರುತ್ತಿದೆ. ಈ ಮಧ್ಯೆ ಸ್ವಲ್ಪ ಕೆಲಸಗಳನ್ನು ಶುರು ಮಾಡುತ್ತಿದ್ದೇವೆ. ಲೋಕಪಾವನಿ ರಿವರ್ ಹತ್ತಿರ ಬ್ರಿಡ್ಜ್ ಮಾಡುವುದು ಹಾಗೂ ಮದರ್ ಟ್ಯಾಂಕ್ ಒಂದು, 50 ಲಕ್ಷದ ಟ್ರೀಟ್‌ಮೆಂಟ್ ಪ್ಲಾಂಟ್ ಒಂದು, ಈ ತರಹ ಎಲ್ಲಾ

ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ನಾವು ನಿಧಾನ ಮಾಡುತ್ತಿಲ್ಲ. ಅದು ಬಂದ ತಕ್ಷಣ ಕೆಲಸ ಶುರು ಮಾಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ:- ಅಧ್ಯಕ್ಷರೇ, ಈ ಒಳಚರಂಡಿ ಯೋಜನೆ ಸಹ ಅಷ್ಟೇ, ಅನೇಕ ಹೊಸ ಬಡಾವಣೆಗಳಲ್ಲಿ ಮತ್ತು ಮಂಡ್ಯ ನಗರ ಸಭೆಯ ಸುತ್ತ ಇರುವ ಗ್ರಾಮಗಳಲ್ಲಿ ಒಳಚರಂಡಿ ಯೋಜನೆ ಕೈಬಿಟ್ಟುಹೋಗಿದೆ. ಇದರ ಬಗ್ಗೆ 2ನೇ ಹಂತದ ಒಳಚರಂಡಿ ಯೋಜನೆ ಕೈಗೊಳ್ಳಲಿಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ಕೇಳುತ್ತೇನೆ.

ಶ್ರೀ ಚೌಡರೆಡ್ಡಿ:- ಒಳ ಚರಂಡಿ ಯೋಜನೆಯ ಕೆಲಸ ನಡೆಯುತ್ತಿದೆ. ಅದರಲ್ಲಿ ಎರಡು ಟ್ರೀಟ್‌ಮೆಂಟ್ ಪ್ಲಾಂಟ್‌ಗಳಲ್ಲಿ ಒಂದು ಟ್ರೀಟ್‌ಮೆಂಟ್ ಪ್ಲಾಂಟನ್ನು 1993ನೇ ಅಕ್ಟೋಬರ್ ಒಳಗೆ ಕಟ್ಟುತ್ತಿದ್ದೇವೆ. ಇನ್ನೊಂದಕ್ಕೆ ಜಾಗದ ಬಗ್ಗೆ ಗಲಾಟೆ ಬಿದ್ದಿದೆ. ಅದರ ಬಗ್ಗೆ ಡಿ.ಸಿ.ಯವರ ಹತ್ತಿರ ಈಗ ಫೈಲ್ ಇದೆ. ಅದನ್ನು ತಾವು ಬೇಗ ಮಾಡಿಸಿ.

ಶ್ರೀ ಎಂ.ಎಸ್. ಆತ್ಮಾನಂದ:- ನಾನು ಕೇಳುತ್ತಿರುವುದು ಹೊಸ ಬಡಾವಣೆಗಳು ಮತ್ತು ಏನು ಕೆಲವು ಗ್ರಾಮಗಳು ಸೇರಿವೆ. ಅಲ್ಲಿ ಒಳ ಚರಂಡಿ ಸೌಲಭ್ಯ ಇಲ್ಲ. ಆ ಸೌಲಭ್ಯವನ್ನು ಯಾವಾಗ ದೊರಕಿಸಿಕೊಡುತ್ತೀರಿ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಕೆಲವು ಬಡಾವಣೆಗಳ ಅಂದಾಜು ಮಾಡಿ ಕಳುಹಿಸಿಕೊಡಲಾಗಿದೆ. ಅದನ್ನು ದಯವಿಟ್ಟು ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಚೌಡರೆಡ್ಡಿ:- ಯಾವುದು ತಪ್ಪಿ ಹೋಗಿದೆಯೋ ಅದನ್ನು ಸರ್ವೆ ಮಾಡಿಸಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಕರ್ನಾಟಕ ರಾಜ್ಯ ರೇಷ್ಮೆ ಕೈಗಾರಿಕಾ ನಿಗಮವು ನಷ್ಟವನ್ನು ಅನುಭವಿಸುತ್ತಿರುವ ಬಗ್ಗೆ

2184: ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಕರ್ನಾಟಕ ರಾಜ್ಯ ರೇಷ್ಮೆ ಕೈಗಾರಿಕಾ ನಿಗಮವು ನಷ್ಟದಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

2. ಬಂದಿದ್ದಲ್ಲಿ, ಕಳೆದ ಎರಡು ವರ್ಷಗಳಲ್ಲಿ ಉಂಟಾಗಿರುವ ನಷ್ಟವೆಷ್ಟು; ಘಟಕ (ಯೂನಿಟ್) ವಾರು ವಿವರಗಳನ್ನು ಕೊಡುವುದು.

ವರ್ಷಗಳು	ಜೂಟು ರೇಷ್ಮೆ ಗಿರಣಿ, ಚೆನ್ನಪಟ್ಟಣ
1990-91	(177.42)
1991-92	(88.34)
	ಕೇಂದ್ರ ಉಗ್ರಾಣ, ಚನ್ನಪಟ್ಟಣ
	(13.38)
	(11.56)

(ಆವರಣದೊಳಗಿರುವ ಅಂಕಿಗಳು ನಷ್ಟದ ಬಗ್ಗೆ ಸೂಚಿಸುತ್ತವೆ);

3. ಈ ಉದ್ದಿಮೆಗಳನ್ನು ಬಲಪಡಿಸಲು ಸರ್ಕಾರವು ಏನಾದರೂ ಕ್ರಮಗಳನ್ನು ತೆಗೆದುಕೊಂಡಿದೆಯೇ;

4. ಹಾಗಿದ್ದಲ್ಲಿ ಹಾಕಿಕೊಂಡಿರುವ ಕಾರ್ಯಕ್ರಮಗಳ ಯೋಜನೆಗಳೇನು ?

ಡಾ. ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):-

1. ಹೌದು.

2. ಕಳೆದ ಎರಡು ವರ್ಷಗಳಲ್ಲಿ ಕಂಪನಿಯ ಘಟಕಗಳೂ ಸೇರಿದಂತೆ ಉಂಟಾದ ನಷ್ಟದ ವಿವರ ಈ ಕೆಳಕಂಡಂತಿದೆ.

ರೇಷ್ಮೆ ನೇಯ್ಗೆ ಗಿರಣಿ ಮೈಸೂರು	ರೇಷ್ಮೆ ನೂಲು ತೆಗೆಯುವ ಘಟಕ ಟಿ.ನರಸೀಪ್ಪುರ	ರೇಷ್ಮೆ ನೂಲು ತೆಗೆಯುವ ಘಟಕ ಕನಕಪ್ಪುರ
	(ರೂ. ಲಕ್ಷಗಳಲ್ಲಿ)	
74.79	(148.42)	(90.94)
113.35	(132.03)	(101.13)

ಒಟ್ಟು 355.37
43.03

3. ಹೌದು.

4. ಈ ಸಂಸ್ಥೆಯನ್ನು ಬಲಗೊಳಿಸುವುದಕೋಸ್ಕರ ಮತ್ತು ಲಾಭದಾಯಕವಾಗಿ ನಡೆಸಲು ಪುನಸಜ್ಜೀಕರಣ ಯೋಜನೆಯ ಪಟ್ಟಿಯನ್ನು ಇಂಡಸ್ಟ್ರೀಯಲ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ (ಐ.ಡಿ.ಬಿ.ಐ.)ಗೆ ಒದಗಿಸಲಾಗಿದೆ. ಈ ಪ್ರಧಾನ ಸಂಸ್ಥೆ ಅವಧಿ ಸಾಲವನ್ನು ಕೊಡುವುದಕ್ಕಾಗಿ ಇರುತ್ತದೆ. ಐ.ಡಿ.ಬಿ.ಐ. ಬಡ್ಡಿ ದರದಲ್ಲಿ ಮತ್ತು ಕಾಲಮಿತಿಯಲ್ಲಿ ಮರುಪಾವತಿಯ ರಿಯಾಯಿತಿ ಕೊಡುವುದರೊಂದಿಗೆ ಪುನಸಜ್ಜೀಕರಣ ಯೋಜನೆಯ ಪಟ್ಟಿಗೆ ಒಪ್ಪಿಗೆಯನ್ನು ನೀಡಿರುತ್ತದೆ. ಈ ಪಟ್ಟಿಯ ಒಂದು ಭಾಗವಾಗಿ ಕರ್ನಾಟಕ ಸರ್ಕಾರವು ರೂ.3.00 ಕೋಟಿಗಳನ್ನು ಬಿಡುಗಡೆ ಮಾಡಲು ತೀರ್ಮಾನಿಸಿದ್ದು, ಅದರಂತೆ ಈಗಾಗಲೇ, 2.00 ಕೋಟಿ ಹಣ ಬಿಡುಗಡೆ ಮಾಡಲಾಗಿದ್ದು, ಇನ್ನು ಉಳಿದ 1.00 ಕೋಟಿ ಹಣವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಕಂಪನಿಯ ಅವಧಿ ಸಾಲದ ಬಾಬ್ತು 113.68 ಲಕ್ಷ ರೂ.ಗಳ ಬಡ್ಡಿಯನ್ನು ಮಾರ್ಚ್ 1992 ಮತ್ತು ಜೂನ್ 1992ರ ಮೂರು ತಿಂಗಳುಗಳ ಕೊನೆಯಲ್ಲಿ ಕೊಟ್ಟಿರುತ್ತವೆ. ಕಂಪನಿಯು ತಾನಾಗಿಯೇ ತನ್ನ ಇತರೆ ಘಟಕಗಳ ಸಾಮರ್ಥ್ಯವನ್ನು ಈ ಕೆಳಕಂಡಂತೆ ಹೆಚ್ಚಿಸಬೇಕಾಗಿರುತ್ತದೆ.

ರೇಷ್ಮೆ ನೇಯ್ಗೆ ಕಾರ್ಖಾನೇ ಮೈಸೂರಿನಲ್ಲಿ ಒಂದು ತಿಂಗಳಿಗೆ 60,000 ಮೀಟರುಗಳನ್ನು ನೇಯುವುದು.
ಜೂಟು ರೇಷ್ಮೆ ಘಟಕ ಚನ್ನಪಟ್ಟಣದಲ್ಲಿ ಒಂದು ತಿಂಗಳಿಗೆ 10 ಟನ್ನುಗಳಷ್ಟು ಜೂಟು ರೇಷ್ಮೆ ದಾರ ತಯಾರಿಸುವುದು.
ರೇಷ್ಮೆ ನೂಲು ತೆಗೆಯುವ ಘಟಕ ಟೀ.ನರಸಿಪುರದಲ್ಲಿ ಒಂದು ತಿಂಗಳಿಗೆ 4.5 ಟನ್ನುಗಳಷ್ಟು ಕಚ್ಚಾ ರೇಷ್ಮೆ ತಯಾರಿಸುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಸಚಿವರು ಪ್ರಾಮಾಣಿಕವಾದ ಉತ್ತರವನ್ನು ಕೊಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯದ ಅತ್ಯಂತ ಪ್ರತಿಷ್ಠಿತವಾಗಿರತಕ್ಕಂಥ, ಹಾಗೂ ವಿಶ್ವವಿಖ್ಯಾತವಾಗಿರತಕ್ಕಂಥ ರೇಷ್ಮೆಯನ್ನು ಬಟ್ಟೆ ಮಾಡತಕ್ಕಂಥ ಘಟಕಗಳಿವು.

ಚನ್ನಪಟ್ಟಣದಲ್ಲಿರತಕ್ಕಂಥ ನಿಮ್ಮ ಕೇಂದ್ರ ಉಗ್ರಾಣದಲ್ಲಿ ಏಕೆ ಲುಕ್ಸಾನು ಆಗುತ್ತಿದೆಯೆಂದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಕಾರ್ಖಾನೆಗಳಲ್ಲಿ ಲುಕ್ಸಾನು ಆಗುವುದಕ್ಕೆ ಬೇರೆ ಬೇರೆ ಕಾರಣಗಳಿರುತ್ತವೆ. ಆದರೆ ಉಗ್ರಾಣದಲ್ಲಿ ಲುಕ್ಸಾನು ಏಕೆ ಆಗುತ್ತಿದೆ ? ಇಲ್ಲಿ ಕಾರ್ಮಿಕರಿಗೆ ಫುಲ್ ವೇಜಸ್ ಕೊಡುತ್ತಿದ್ದೇವೆ. ಆದರೆ ಅವರಿಗೆ 50 ಪರ್‌ಸೆಂಟ್ ಕೆಲಸ ಕೂಡ ಕೊಡಲಿಕ್ಕಾಗುತ್ತಿಲ್ಲ. ಕೆಎಸ್‌ಐಸಿ ಯೂನಿಟ್‌ಗಳಲ್ಲಿ ದುಡ್ಡು ಇಲ್ಲದೇ ಇರುವುದರಿಂದ ಅವರಿಂದ ರೇಷ್ಮೆ ಗೂಡನ್ನು ಖರೀದಿ ಮಾಡಲಿಕ್ಕೆ ಆಗುತ್ತಿಲ್ಲ. ಇದು ಬಹಳ ಮುಖ್ಯವಾದ ಕಾರಣವೆಂದು ನಾನು ತಿಳಿದಿದ್ದೇನೆ. ಇದನ್ನು ಸರಿಪಡಿಸುವುದಕ್ಕೆ ಸಾಧ್ಯವೇ ? ಮತ್ತೆ ಐಡಿಬಿಐನಿಂದ ಸಾಲ ಕೊಡತಕ್ಕಂಥ ವಿಚಾರವನ್ನು ತಾವು ಏನು ಹೇಳಿದ್ದೀರಿ, ಇದರಿಂದ ಹೆಚ್ಚಿಗೆ ಪ್ರಯೋಜನವಾಗುವುದಿಲ್ಲವೆಂದು ಕಾಣುತ್ತದೆ. ಏಕೆಂದರೆ ಮತ್ತೆ ಹೊರೆ ಜಾಸ್ತಿಯಾಗುತ್ತದೆ ಕೆ.ಎಸ್.ಐ.ಸಿ. ಯೂನಿಟ್‌ಗಳಿಗೆ ತಾವು ಆಗಾಗ್ಗೆ ಅನಿರೀಕ್ಷಿತ ಭೇಟಿ ಕೊಡುತ್ತಿದ್ದೀರಿ, ಅದನ್ನು ನಾನೂ ಮೆಚ್ಚುತ್ತೇನೆ. ಕಳೆದ ಮೂರ್ನಾಲ್ಕು ವರ್ಷಗಳಿಂದ ವರ್ಷಕ್ಕೆ ಮೂರರಿಂದ ಮೂರೂವರೆ ಕೋಟಿ ರೂಪಾಯಿ ಲುಕ್ಸಾನಾಗುತ್ತಿದೆ. ಇದರ ಬಗ್ಗೆ ಬಿಗಿಯಾದ ಕ್ರಮವನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ. ಕಾರ್ಮಿಕರಿಗೆ ಪೂರ್ಣವಾದ ಕೆಲಸವನ್ನು ಕೊಡಬೇಕಾಗುತ್ತದೆ. ಇವುಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ತಿಳಿಸಬೇಕು.

ಡಾ: ಜಿ. ಪರಮೇಶ್ವರ:– ಸನ್ಮಾನ್ಯ ಅಧ್ಯಕ್ಷರೆ, ಈ ಕೆ.ಎಸ್.ಐ.ಸಿ.ಯನ್ನು 1980ರಲ್ಲಿ ಪ್ರಾರಂಭ ಮಾಡಿದ್ದಾರೆ. ಇದರಲ್ಲಿ 27 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿ ಅದರ ಮಾಡರ್ನೈಸೇಷನ್ ಪ್ರೋಗ್ರಾಮ್‌ನಲ್ಲಿ ಹೊಸ ಮೆಷಿನರಿಗಳಿಗಾಗಿ 18 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ಮೈಸೂರು, ಟಿ.ನರಸಿಪುರ, ಚನ್ನಪಟ್ಟಣ, ಕನಕಪುರ, ಈ ಎಲ್ಲ ಕಡೆಗಳಲ್ಲಿ ಮಾಡರ್ನೈಸೇಷನ್‌ಗೆ ಎಕ್ವಿಪ್‌ಮೆಂಟ್‌ಗಳನ್ನು ಪರ್ಚೇಸ್ ಮಾಡಿ, ಎಫೆಕ್ಟೀವ್ ಆಗಿ ನಡೆಯಬೇಕು, ಈ ಸಂಸ್ಥೆ ಲಾಭಗಳಿಸಬೇಕೆಂದು ಮಾಡಿದ್ದಾರೆ. ನಮ್ಮ ದುರಾದೃಷ್ಟಕ್ಕೆ ಇದಕ್ಕೆ ಅನೇಕ ಕಾರಣಗಳು ಅಡ್ಡ ಬಂದಿವೆ. ಅದರಲ್ಲಿ ವರ್ಕಿಂಗ್ ಕ್ಯಾಪಿಟಲ್‌ಗೆ ತೊಂದರೆಯಾಗಿದೆ. ಇದಕ್ಕಾಗಿ ಐಡಿಬಿಐನಿಂದ 3ಕೋಟಿ ರೂಪಾಯಿ ಟರ್ಮ್ ಲೋನ್ ತೆಗೆದುಕೊಳ್ಳಬೇಕೆಂದು ಒಂದು ರಿಕ್ವಿಜಿಷನ್ ಕಳುಹಿಸಲಾಗಿದೆ. ಸರ್ಕಾರ ಕೂಡ 2ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಈ ವರ್ಷ ಅಂದರೆ 93–94ಕ್ಕೆ 1ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆಂಬ ಒಂದು ಆಶ್ವಾಸನೆ ಕೂಡ ಇದೆ. ಬಿಡುಗಡೆ ಮಾಡುತ್ತಾರೆ. ನಮ್ಮ ರಿಸೋರ್ಸಸ್ ಬಗ್ಗೆ, ಟಿ.ನರಸಿಪುರದಲ್ಲಿ ನಾನ್–ಅವೈಲಿಬಿಲಿಟಿ ಆಫ್ ಬೈ–ವೋಲ್ಟೀನ್ ಕಕೂನ್ಸ್‌ನಿಂದ ಆ ಒಂದು ಸಂಸ್ಥೆಯಲ್ಲೇ ನಮಗೆ ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿ ಒಂದು ವರ್ಷಕ್ಕೆ ಲಾಸ್ ಆಗುತ್ತಿದೆ. ನಾನು ಈಗಾಗಲೇ ಎಲ್ಲಾ ಕಡೆ ಭೇಟಿ ಮಾಡಿದ್ದೇನೆ. ಆದರೆ ಒಂದು ವಿಚಾರವನ್ನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ 5 ವರ್ಷಗಳಿಂದ ನಾನು ಸ್ಟ್ಯಾಟಿಸ್ಟಿಕ್ಸ್ ತೆಗೆದು ಯಾವ ರೀತಿ ಲಾಸ್ ಆಗುತ್ತಿದೆ ಎಂದು ನೋಡಿದರೆ, 5ವರ್ಷಗಳಿಂದ 376ಕೋಟಿ ರೂಪಾಯಿ ಟೋಟಲ್ ಲಾಸ್ ಕೆಎಸ್‌ಐಸಿದು. 1987–88ರಲ್ಲಿ ಇದ್ದರೆ, ಸ್ವಾಮಿ 1990–91ಕ್ಕೆ 355 ಲಕ್ಷ ಇದೆ. ಈಗ 1991–92ಕ್ಕೆ ಕಡಿಮೆಯಾಗಿದೆ. 43 ಲಕ್ಷಕ್ಕೆ ಬಂದಿದೆ. 1992–93ರಿಂದ ಇಲ್ಲಿಯವರೆಗೂ 70 ಲಕ್ಷ ರೂಪಾಯಿ ಲಾಸ್‌ನಲ್ಲಿ ಇದೆ. ಅಂದರೆ 498 ಲಕ್ಷ ಹೈಯೆಸ್ಟು ಇದ್ದದ್ದು ಈಗ 70 ಲಕ್ಷಕ್ಕೆ ಇಳಿದಿದೆ. ಇದು ಪೂರ್ತಿ ಹೋಗಿ ಲಾಭಗಳಿಸಬೇಕು ಎನ್ನುವುದೇ ನಮ್ಮ ಉದ್ದೇಶ. ಮೈಸೂರು ಮತ್ತು ಚನ್ನಪಟ್ಟಣದಲ್ಲಿರುವ ಫ್ಯಾಕ್ಟರಿಗಳಲ್ಲಿ ಮಾತ್ರ ನಮಗೆ ಲಾಭ ಬರುತ್ತಿದೆ. ಆದರೆ, ಟಿ.ನರಸಿಪುರ ಮತ್ತು ಕನಕಪುರ ಫ್ಯಾಕ್ಟರಿಗಳ ಲಾಸ್ ಅನ್ನು ಇವೆರಡೂ ಫ್ಯಾಕ್ಟರಿಗಳು ತಿಂದು ಹಾಕುತ್ತಿವೆ. ಅದಕ್ಕೆ ನಾವು ಏನು ಮಾಡಿದ್ದೇವೆಂದರೆ, ಕನಕಪುರದಲ್ಲಿ ಮತ್ತು ಟಿ.ನರಸಿಪುರದಲ್ಲಿ ರೀ–ವೈಟಲೈಸ್ ಮಾಡಿ ಫುಲ್ ಪ್ರೊಡಕ್ಷನ್ ಮಾಡುವುದಕ್ಕೆ ಸೂಕ್ತವಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ಮುಂದಿನ

ವರ್ಷದಲ್ಲಿ ಈಗಿರತಕ್ಕಂಥ ಲಾಸ್ ಏನಿದೆ. ಅದು ಇಲ್ಲದೇ ಇರತಕ್ಕಂಥ ರೀತಿಯಲ್ಲಿ ನಾನು ನೋಡಿಕೊಳ್ಳುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಒಂದು ಮಾತನ್ನು ಹೇಳುತ್ತೇನೆ, ಟಿ.ನರಸೀಪುರದಲ್ಲಿ ಮಾಡರ್ನೈಸೇಷನ್‌ಗೋಸ್ಕರವೆಂದು ಹೇಳಿ ಹೊಸ ಮೆಷಿನರಿಗಳನ್ನು ಪರ್ಚೇಸ್ ಮಾಡಿಕೊಂಡು ಏನು ತಂದಿಟ್ಟಿದ್ದೇವೆ, ಅದು ಉಪಯೋಗವಾಗಲಿಕ್ಕೆ ಸಾಧ್ಯವೇ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಉಗ್ರಾಣದಲ್ಲಿ ಲಾಸ್ ಏಕೆ ಆಗಬೇಕು ? ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ, ಕೆ.ಎಸ್.ಐ.ಸಿ. ಸೀರೆಗಳು ಬಹಳ ಕಾಸ್ಟ್ಲಿಯಸ್ಟ್ ಆಗಿರುತ್ತವೆ. 5-6 ಸಾವಿರ ರೂಪಾಯಿ ಆಗುತ್ತದೆ. ಪ್ರೈವೇಟ್‌ನಲ್ಲಿ ಅಷ್ಟೊಂದಕ್ಕೆ ಮಾರದೆ ಇದ್ದರೂ ಸಹ ಅವರು ಪ್ರಾಫಿಟ್ ಮಾಡಿಕೊಳ್ಳುತ್ತಾರೆ. ಕೆ.ಎಸ್.ಐ.ಸಿ.ನವರು ಒಂದು ಸೀರೆಯನ್ನು 5-6 ಸಾವಿರ ರೂಪಾಯಿಗಳಿಗೆ ಮಾರಿದರೂ ಸಹಿತಾ ಲಾಸ್ ಆಗುತ್ತಿದೆ ಎಂದರೆ, ಮ್ಯಾನೇಜ್‌ಮೆಂಟ್‌ನಲ್ಲಿ ತಪ್ಪಿದೆ ಎಂದು ನನಗೆ ಖಚಿತವಾಗಿ ತಿಳಿದು ಬಂದಿರತಕ್ಕಂಥ ವಿಚಾರ. ಇದನ್ನು ಸರಿಪಡಿಸಲಿಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು. ಇದಕ್ಕೆ ಭರವಸೆ ಕೊಡಲಿಕ್ಕೆ ಸಾಧ್ಯವೇ ಎಂದು ನಾನು ಕೇಳುವುದು ?

ಡಾ: ಜಿ. ಪರಮೇಶ್ವರ:- ನಾನು ಕೆ.ಎಸ್.ಐ.ಸಿ. ಶೋ ರೂಂಗಳಿಗೂ ಕೂಡ ಅನಿರೀಕ್ಷತವಾಗಿ ಭೇಟಿ ಕೊಟ್ಟಿದ್ದೇನೆ. ಅಲ್ಲಿ ಯಾವ ರೀತಿ ಮಾರಾಟ ಮಾಡುತ್ತಿದ್ದಾರೆ, ಯಾವ ರೀತಿ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎನ್ನುವುದನ್ನು ಯೋಚನೆ ಮಾಡಿ, ಗಂಡಸರಿಗೆ ಶರ್ಟ್‌ಗಳನ್ನು ಕೆ.ಎಸ್.ಐ.ಸಿ. ಇದುವರೆಗೆ ತಯಾರು ಮಾಡಿರಲಿಲ್ಲ. ಈಗ ಹೊಸದಾಗಿ ಶರ್ಟ್‌ಗಳನ್ನು ಮಾಡಿ 22ನೇ ತಾರೀಖು ರಿಲೀಸ್ ಮಾಡುತ್ತಿದ್ದೇವೆ. ಅದರ ಜೊತೆಗೆ ಲೋ ಕಾಸ್ಟ್ ಸೀರೆಗಳೆಂದು 600 ರಿಂದ 700 ರೂಪಾಯಿಗಳಿಗೆ ಸಿಗತಕ್ಕಂಥ ಸಿಲ್ಕ್ ಸೀರೆಗಳನ್ನು ತಯಾರು ಮಾಡುತ್ತಿದ್ದೇವೆ. ಸಮಾಜದಲ್ಲಿ ಇವತ್ತು 30 ಭಾಗ ಮಾತ್ರ ಸಿಲ್ಕ್ ಸೀರೆಗಳನ್ನು ಉಡುವುದು ಎಂದು ಇರುವುದಿಂದ ಸಾಮಾನ್ಯ ಜನರಿಗೂ ಕೂಡ ಸಿಲ್ಕ್ ಸೀರೆಗಳನ್ನು ಉಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಒಂದು ಕಾರ್ಯಕ್ರಮವನ್ನು ಹಾಕಿ ಲೋ ಕಾಸ್ಟ್ ಸೀರೆಗಳ ಪ್ರೊಡಕ್ಷನ್ ಪ್ರಾರಂಭವಾಗಿದೆ. ಅದೂ ಕೂಡ 22ನೇ ತಾರೀಖು ಮಾರ್ಕೆಟ್‌ಗೆ ರಿಲೀಸ್ ಆಗುತ್ತಿದೆ. ಆಮೇಲೆ ತಾವು ಹೇಳಿದಂತೆ, ಟಿ.ನರಸೀಪುರದಲ್ಲಿ ಮಾಡರ್ನೈಸೇಷನ್‌ಗೆ 6ಕೋಟಿ 31ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 6ಕೋಟಿ 31ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಈಗ ಫುಲ್ ಕೆಪಾಸಿಟಿ ಆಗುತ್ತಿಲ್ಲ. ಏನು ಪೊಟೆನ್‌ಷಿಯಾಲಿಟಿ ಇದೆ, ಅಷ್ಟು ಮಾಡರ್ನೈಸೇಷನ್ ಮಾಡಿ, ಎಕ್ವಿಪ್ ಮಾಡಿ ಅದು ಫುಲ್ ಕೆಪಾಸಿಟಿ ಆಗುತ್ತಿಲ್ಲ ಎನ್ನುವುದು ಮಾನ್ಯ ಸಿಂಧ್ಯರವರ ಏನು ಪ್ರಶ್ನೆ ಇದೆ ಅದಕ್ಕೆ ಅಲ್ಲಿ ಒಂದು ಕಾರಣ ಇದೆ. ಅಲ್ಲಿ ಎಷ್ಟು ಬೈ-ವೋಲ್ಟೀನ್ ಕಕೂನ್ಸ್ ಬರಬೇಕಾಗಿತ್ತೋ ಅಷ್ಟೂ ಕೂಡ ಅಲ್ಲಿ ಬರುತ್ತಿಲ್ಲ. ಅದಕ್ಕೋಸ್ಕರ ತೊಂದರೆಯಾಗಿದೆ. ಅದಕ್ಕೆ ಯೋಚನೆ ಮಾಡಿ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ. ಮುಂದಿನ ವರ್ಷ ಯಾವ ಯೂನಿಟ್‌ನಲ್ಲೂ ಲಾಸ್ ಆಗದೇ ಇರುವ ಹಾಗೆ ನೋಡಿಕೊಳ್ಳುತ್ತೇನೆಂದು ನಾನು ಭರವಸೆ ಕೊಡುತ್ತೇನೆ.

10.15 ಎ.ಎಂ.

ಶ್ರೀ ಜಿ. ರಾಜುಗೌಡ:- ಮಾನ್ಯ ಅಧ್ಯಕ್ಷರೆ, ರೇಷ್ಮೆ ಕೈಗಾರಿಕೆಯಲ್ಲಿ ಕರ್ನಾಟಕದ ರೇಷ್ಮೆ ಕೈಗಾರಿಕಾ ನಿಗಮ ಒಂದು ದೊಡ್ಡ ಬಿಳಿ ಆನೆ ಇದ್ದಹಾಗೆ. ಈ ಕಾರ್ಖಾನೆಯನ್ನು ಆಧುನೀಕರಿಸಲು ಮತ್ತು ವಿಸ್ತರಿಸಲು ಇವರು ಐ.ಡಿ.ಬಿ.ಐ. ಹಾಗೂ ವಿಶ್ವ ಬ್ಯಾಂಕ್‌ನಿಂದ ಸುಮಾರು 28.44 ಕೋಟಿ ರೂಪಾಯಿಯನ್ನು ಸಾಲ ತೆಗೆದುಕೊಂಡಿದ್ದಾರೆ. ಈ ಸಾಲ ಪೂರ್ತಿ ವೈಪ್‌ಔಟ್ ಆಗಿದೆ. ಬರೀ ಎರಡು ವರ್ಷದ್ದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಆ ಕಾರ್ಖಾನೆಗಳೆಲ್ಲ ಪೂರ್ತಿ ಮುಚ್ಚಿ ಅಲ್ಲಿ ಇರತಕ್ಕಂಥ ಕಾರ್ಮಿಕರಿಗೆ ವರ್ಷ

ಪೂರ್ತಿ ಸಂಬಳವನ್ನು ಕೊಟ್ಟರೆ ಎಷ್ಟು ನಷ್ಟವಾಗುತ್ತದೋ ಅದಕ್ಕಿಂತ ನಾಲ್ಕರಷ್ಟು ನಷ್ಟವಾಗುತ್ತದೆ. ನಮ್ಮ ರಾಜ್ಯದಲ್ಲಿ 10 ಸಾವಿರ ಮೆಟ್ರಿಕ್ ಟನ್ ಬೈವೊಲ್‌ಟಿನ್ ಗೂಡು ಉತ್ಪಾದನೆಯಾಗುತ್ತದೆ ಎಂಬ ಕಲ್ಪನೆಯನ್ನು ಮಾಡಿಕೊಂಡು ಅಧಿಕಾರಿಗಳು ದಕ್ಷಿಣ ಕೊರಿಯಾ ಮತ್ತು ಜಪಾನಿಗೆ ಹೋಗಿ 6.59ಕೋಟಿ ರೂಪಾಯಿಯ ಯಂತ್ರವನ್ನು ತಂದರು. ಅದನ್ನು ತೆಗೆದುಕೊಂಡು ಹೋಗಿ ಮೂಲೆಗೆ ಇಟ್ಟಿದ್ದಾರೆ. 10 ಸಾವಿರ ಟನ್ ಅಲ್ಲಿ ಒಂದು ಸಾವಿರ ಟನ್ ಬೈವೊಲ್‌ಟಿನ್ ಗೂಡು ಉತ್ಪತ್ತಿಯಾಗುತ್ತಿಲ್ಲ. ಕೊನೆಗೆ ಮಲ್ಟಿವೋಲ್ಟಿನ್ ಹಾಕಿದರು. ಇದರಿಂದ ಪ್ರತಿವರ್ಷವೂ ನಷ್ಟವಾಗುತ್ತಿದೆ. ಇದನ್ನು ಇಂಪ್ರೂವ್ ಮಾಡಲಿಕ್ಕೆ ಆಗುವುದಿಲ್ಲ. ಮಾನ್ಯ ಸಚಿವರು ಇದರ ನಷ್ಟವನ್ನು ತಪ್ಪಿಸುವುದಕ್ಕೆ ಏರ್ಪಾಡು ಮಾಡುತ್ತೇವೆಂದು ಹೇಳುತ್ತಾರೆ. 28.44 ಕೊಟಿ ರೂಪಾಯಿ ವೈಪ್‌ಔಟ್ ಆಗಿದೆ. ನಮ್ಮ ಕೆ.ಎಸ್.ಐ.ಸಿ. ಅದಕ್ಕೆ ನಾಲ್ಕು ಕೋಟಿ ರೂಪಾಯಿಯನ್ನು ಸಾಲ ಕೊಟ್ಟರು. ರೈತರಿಗೆ ಖರ್ಚು ಮಾಡತಕ್ಕಂಥ ಹಣದಲ್ಲಿ 4 ಕೋಟಿ ರೂಪಾಯಿಯನ್ನು ಸಾಲ ಕೊಟ್ಟರು. ಆದ್ದರಿಂದ ಇದನ್ನು ವಿಸ್ತರಣೆ ಮಾಡುವುದು ಬೇಡ, ಆಧುನೀಕರಣವನ್ನು ಮಾಡತಕ್ಕದ್ದೂ ಬೇಡ, 6.59 ಕೋಟಿ ರೂಪಾಯಿಗಳನ್ನು ತಾವೇನು ಯಂತ್ರಕ್ಕೆ ಹಾಕಿದ್ದೀರಿ ಅದನ್ನು ತೆಗೆದುಕೊಂಡು ಮೂಲೆಗೆ ಇಟ್ಟಿದ್ದೀರಿ. ಆ ಅಧಿಕಾರಿಗಳು ಪರದೇಶಕ್ಕೆ ಮಜಾ ಮಾಡಬೇಕೆನ್ನುವ ದೃಷ್ಟಿಯಿಂದ ಹೋದರೇ ಹೊರತು ನಿಜವಾಗಿಯೂ ನಮ್ಮ ರಾಜ್ಯಕ್ಕೆ ಒಳ್ಳೆಯದನ್ನು ಮಾಡಬೇಕೆನ್ನುವ ದೃಷ್ಟಿಯಿಂದ ಅವರು ಹೋಗಲಿಲ್ಲ. ಆದ್ದರಿಂದ ನಾನು ತಮಗೆ ಸಲಹೆಯನ್ನು ಕೊಡುವುದು ಇಷ್ಟೆ; ದಯಮಾಡಿ ಅದನ್ನು ಮುಚ್ಚಿ ನಷ್ಟವನ್ನು ತಪ್ಪಿಸಬೇಕೆಂದು ಇದ್ದರೆ ಬೇರೆ ರೀತಿ ಮಾಡುವುದು, ಇದಕ್ಕಾಗಿ ಒಂದು ಸಲಹಾ ಸಮಿತಿಯನ್ನು ಕರೆದು ಎಲ್ಲರನ್ನು ಕೇಳಿ ಮಾಡಬೇಕೇ ಹೊರತು ನೀವು ಖಂಡಿತವಾಗಿ ನಷ್ಟವನ್ನು ಹೋಗಲಾಡಿಸುವುದಕ್ಕೆ ಆಗುವುದೇ ಇಲ್ಲ.

ಡಾ: ಜಿ. ಪರಮೇಶ್ವರ:- ಮಾನ್ಯ ರಾಜೂಗೌಡರು ಬಹಳ ಹಿರಿಯರು. ಅವರು ಈ ಕ್ಷೇತ್ರದಲ್ಲಿ ಬಹಳ ಅನುಭವಸ್ಥರಾಗಿದ್ದಾರೆ. ಅವರು ಏಕೆ ಬಿಳಿ ಆನೆಯನ್ನು ಕರಿ ಆನೆ ಮಾಡಬೇಕೆಂದು ಸಲಹೆ ಕೊಟ್ಟರೋ ನನಗೆ ಗೊತ್ತಿಲ್ಲ. ನಾನು ಕರಿ ಆನೆ ಮಾಡಬೇಕೆಂದು ಅಂದುಕೊಂಡಿದ್ದೇನೆ. ಅವರು ಬಿಳಿ ಆನೆ ಎಂದು ಹೇಳುತ್ತಿದ್ದಾರೆ.

ಏಕೆಂದರೆ ಇಲ್ಲಿ ನಮ್ಮ ಉದ್ದೇಶವೇನೆಂದರೆ ನಮ್ಮ ಸಂಸ್ಕೃತಿಗೆ ಹೊಂದಾಣಿಕೆ ಇರತಕ್ಕಂಥದ್ದು ಈ ಸಿಲ್ಕ್ ಸೀರೆಗಳು, ಸಿಲ್ಕ್ ಮೆಟಿರಿಯಲ್ಸ್. ಸಾವಿರಾರು ಜನ, ಲಕ್ಷಾಂತರ ಜನ ಈ ಕ್ಷೇತ್ರದಲ್ಲಿ ಕೆಲಸ ಮಾಡಿಕೊಂಡು ಅವರ ಜೀವನವನ್ನು ಸಾಗಿಸುತ್ತಿದ್ದಾರೆ. ಅವರ ಸಲಹೆ ಏನೆಂದರೆ, ಈ ಫ್ಯಾಕ್ಟರಿಯನ್ನು ಮುಚ್ಚಿಬಿಡಿ, ಅವರಿಗೆ ಸಂಬಳವನ್ನು ಕೊಟ್ಟುಬಿಟ್ಟು ಆ ಕಡೆ ಕಳುಹಿಸಿದರೆ ಅಷ್ಟು ಲಾಸ್ ಒಂದೇ ಸಾರಿ ಲಾಸ್ ಆಗಿ ಬಿಡಲಿ ಎನ್ನತಕ್ಕಂಥ ಉದ್ದೇಶ ಇಲ್ಲ. ನಾವು ಅದನ್ನು ಹೇಗಾದರೂ ಮಾಡಿ ಸರಿಪಡಿಸಬೇಕು ಎನ್ನತಕ್ಕಂಥ ಉದ್ದೇಶವನ್ನು ಇಟ್ಟುಕೊಂಡು ನಾವು ಕೆಲಸ ಮಾಡಬೇಕೆ ವಿನಃ ಈಗ ಮುಚ್ಚತಕ್ಕಂಥದ್ದು ಸೂಕ್ತವಾದುದಲ್ಲ. ಅವರು ನಿರಾಸೆಯಿಂದ ಹೇಳಿದ್ದಾರೆ. ಆ ನಿರಾಸೆ ನನಗಂತೂ ಇಲ್ಲ. ನಾನು ಬಹಳ ಆಶಾವಾದಿ. ಏನಾದರೂ ಮಾಡಿ ಅದನ್ನು ನಿಲ್ಲಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಶ್ರೀ ಜಿ. ರಾಜೂಗೌಡ:- ಅದಕ್ಕೆ 30 ಕೋಟಿ ರೂಪಾಯಿಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ನಾನು ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರವನ್ನು ಸ್ವಾಗತಮಾಡುತ್ತೇನೆ. ಅವರು ಇದನ್ನು ಅಭಿವೃದ್ಧಿ ಮಾಡಬೇಕೆಂದು ಬಹಳ ಕಾಳಜಿಯನ್ನು ಇಟ್ಟುಕೊಂಡಿದ್ದಾರೆ. ರೇಷ್ಮೆ ಸೀರೆಗಳನ್ನು ಸಾಮಾನ್ಯ ಜನರು ಉಡುವ ರೀತಿಯಲ್ಲಿ ಆಗಬೇಕು ಎನ್ನತಕ್ಕದ್ದು ಅವರ ಕಾಳಜಿ ಇದೆ. ರೇಷ್ಮೆ ಬರೀ ಕೆಲವರದೇ ಸ್ವತ್ತು ಎನ್ನತಕ್ಕದ್ದು ಅಲ್ಲ. ಆದರೆ ಅದರ ದರವನ್ನು ಪರಿಶೀಲಿಸಬೇಕು. ಸಾಮಾನ್ಯ ಜನ ರೇಷ್ಮೆ ಸೀರೆಯನ್ನು ಉಟ್ಟುಕೊಳ್ಳಬೇಕಾದರೆ ಆಕಾಶಕ್ಕೆ ಏರಿರುವ ದರವನ್ನು ಕಡಿಮೆ ಮಾಡತಕ್ಕಂಥ ಒಂದು ವ್ಯವಸ್ಥೆ ಆಗಬೇಕು. ಅದಕ್ಕೆ ಸರ್ಕಾರದವರು

ಸಹಾಯಧನವನ್ನು ಕೊಟ್ಟು ಸಾಮಾನ್ಯ ಜನರು ಉಡುವಂತೆ ಮಾಡಬೇಕು. ಮೈಸೂರು ರೇಷ್ಮೆ ಎನ್ನುವುದು ಹೆಸರಿಗೆ ಮಾತ್ರವಾಗಿದ್ದು ವಿದೇಶಗಳಲ್ಲಿ ಬಹಳ' ಪ್ರಖ್ಯಾತಿ ಪಡೆದಿದೆ. ನಮ್ಮ ಸಾಮಾನ್ಯ ಜನರೂ ರೇಷ್ಮೆ ಸೀರೆಯನ್ನು ಉಡಬೇಕು ಎನ್ನುವುದಾದರೆ ತಾವು ಅದಕ್ಕೆ ಸಹಾಯಧನವನ್ನು ಕೊಟ್ಟು ಸಾಮಾನ್ಯ ಜನರೂ ವ್ಯಾಪಾರ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ ? ಚನ್ನಪಟ್ಟಣದಲ್ಲಿರತಕ್ಕ ಕಾರ್ಖಾನೆಯಲ್ಲಿ ಈಗ ಬರೀ ಸೀರೆ ಮಾತ್ರ ತಯಾರಾಗುತ್ತಿದೆ, ಮಿಕ್ಕ ಬಟ್ಟೆ ತಯಾರು ಮಾಡುವುದನ್ನು ನಿಲ್ಲಿಸಿದ್ದಾರೆ, ಬೇರೆ ಬಟ್ಟೆಗಳನ್ನು ತಯಾರು ಮಾಡುವುದಕ್ಕೆ ಪ್ರಾರಂಭ ಮಾಡುತ್ತೀರಾ ಹೇಳಿ ?

ಡಾ: ಜಿ. ಪರಮೇಶ್ವರ:- ಈಗಾಗಲೇ ಚನ್ನಪಟ್ಟಣದಲ್ಲಿ ಶರ್ಟ್ ಮೆಟೀರಿಯಲ್‌ಅನ್ನು ತಯಾರು ಮಾಡಿ ರೆಡಿಮೆಡ್ ಶರ್ಟ್‌ಗಳನ್ನು ತಯಾರು ಮಾಡುತ್ತಿದ್ದೇವೆ. ತಾವು ಕಡಿಮೆ ದರದಲ್ಲಿ ಸೀರೆಗಳನ್ನು ತಯಾರು ಮಾಡಬೇಕೆಂದು ಏನು ಹೇಳಿದ್ದೀರಿ ಅದಕ್ಕೋಸ್ಕರವೇ ನಾನು ಹೊಸದಾಗಿ ಕಾರ್ಯಕ್ರಮವನ್ನು ಹಾಕಿ 600-700 ರೂಪಾಯಿಯ ಬೆಲೆಯಲ್ಲಿ ಸಿಕ್ಕತಕ್ಕಂಥ ಸೀರೆಗಳನ್ನು ಈಗಾಗಲೇ ತಯಾರು ಮಾಡಿದ್ದೇವೆ. 22ನೇ ತಾರೀಖು ಮಾನ್ಯ ಮುಖ್ಯ ಮಂತ್ರಿಗಳು ಅದರ ಮಾರಾಟವನ್ನು ಪ್ರಾರಂಭ ಮಾಡುತ್ತಿದ್ದಾರೆ. ತಾವೆಲ್ಲರೂ ಅದಕ್ಕೆ ಬರಬೇಕಾಗುತ್ತದೆ.

ರಾಜ್ಯದಲ್ಲಿನ ಕೊಳವೆ ಬಾವಿಗಳ ಅಂಕಿಅಂಶ ಕುರಿತು

2183: ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ನಗರ ನೀರು ಸರಬರಾಜು ಯೋಜನೆ ಅನ್ವಯ ಅಂತರ ಭೂ ಜಲ ಸಂಪನ್ಮೂಲ ಉಪಯೋಗಿಸುವ ಭಾಗವಾಗಿ ಪ್ರಾರಂಭವಾದಾಗಿನಿಂದಲೂ ಈವರೆಗೆ ವರ್ಷ ವರ್ಷವೂ ಕರ್ನಾಟಕ ಒಳಚರಂಡಿ ಮಂಡಳಿಯು ತೋಡಿರುವ ಕೊಳವೆ ಬಾವಿಗಳ ಅಂಕಿ ಸಂಖ್ಯೆ ಎಷ್ಟು ? ಅದರಲ್ಲಿ ಎಷ್ಟು ಪ್ರಮಾಣದಲ್ಲಿ ಕೊಳವೆ ಬಾವಿಗಳು ಯಶಸ್ವಿಯಾಗಿವೆ;

ಆ. ಕೊಳವೆ ಬಾವಿಗಳನ್ನು ತೋಡಿರುವ ಮತ್ತು ಉಸ್ತುವಾರಿ ಮಾಡುವ ಜವಾಬ್ದಾರಿಯನ್ನು ಬೋರ್ಡಿನಲ್ಲಿ ಹೇಗೆ ನಿರ್ವಹಿಸಲಾಗುತ್ತಿದೆ. ಭೂವಿಜ್ಞಾನದಲ್ಲಿ ಪರಿಣತರಾದ ಸಿಬ್ಬಂದಿಗೆ ಇಂತಹ ಜವಾಬ್ದಾರಿಯ ನಿರ್ವಹಣೆ ವಹಿಸಿಕೊಡಲಾಗಿದೆಯೇ;

ಇ. ಕೊಳವೆ ಬಾವಿಗಳನ್ನು ತೋಡಿಸುವ ಮುನ್ನಾ ಭೂ ಅಂತರ ಜಲಸಂಪನ್ಮೂಲದ ಬಗ್ಗೆ ವಿವರವಾಗಿ ವೈಜ್ಞಾನಿಕವಾಗಿ ಸರ್ವೆಗಳನ್ನು ನಡೆಸಲಾಗುತ್ತದೆಯೇ ? ಇದಕ್ಕಾಗಿ ಬೋರ್ಡಿನಲ್ಲಿ ಭೂವಿಜ್ಞಾನ ವಿಭಾಗ ರಚಿಸಲ್ಪಟ್ಟಿದೆಯೇ, ರಚಿಸಲ್ಪಟ್ಟಿದ್ದರೆ ಈವರೆಗೆ ಅಂತಹ ವಿಭಾಗದ ಕಾರ್ಯನಿರ್ವಹಣೆ ಏನು, ಇದಕ್ಕಾಗಿ ವಿಶೇಷ ಪರಿಣತ ಸಿಬ್ಬಂದಿಯನ್ನು ನೇಮಕಗೊಳಿಸಲಾಗಿದೆಯೇ;

ಈ. ಇಷ್ಟು ದೊಡ್ಡ ಪ್ರಮಾಣದಲ್ಲಿ ಭೂ ಅಂತರಜಲ ಸಂಪನ್ಮೂಲವನ್ನು ಉಪಯೋಗಿಸುತ್ತಿರುವಾಗ ಬೋರ್ಡಿನಲ್ಲಿ ಭೂವಿಜ್ಞಾನ ವಿಭಾಗ ರೂಪಿಸುವುದಕ್ಕೆ ಏಕೆ ಪ್ರಾಮುಖ್ಯತೆ ನೀಡಿರುವುದಿಲ್ಲ. ಇದಕ್ಕೆ ಅಡಚಣೆಗಳೇನು ? ಮತ್ತು ರೂಪುಗೊಳಿಸುವ ಯೋಜನೆ ಏನಾದರೂ ಇದೆಯೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

ಅ. ಒಟ್ಟು 12051, ಇದರಲ್ಲಿ ಒಟ್ಟು 10578 ಕೊಳವೆ ಬಾವಿಗಳು ಯಶಸ್ವಿಯಾಗಿವೆ. ವಿವರಕ್ಕೆ ಅನುಬಂಧ - 1ನ್ನು ಲಗತ್ತಿಸಿದೆ.

ಆ. ಈ ಕೊಳವೆ ಬಾವಿಗಳನ್ನು ತೋಡಲು ಸಂಬಂಧಿಸಿದ ಭೂ ವಿಜ್ಞಾನಿಯ ಸಲಹೆಯ ಮೇರೆಗೆ

ನಿರ್ವಹಿಸಲಾಗುತ್ತಿದೆ.

ಹೌದು.

ಇ. ಹೌದು. ಈ ಕೊಳವೆ ಬಾವಿಗಳನ್ನು ತೋಡುವ ಮುನ್ನಾ ಭೂ ಅಂತರ ಜಲ ಸಂಪನ್ಮೂಲದ ಅನ್ವಯ ವೈಜ್ಞಾನಿಕವಾಗಿ ಸರ್ವೆ ಆಧಾರದ ಮೇರೆಗೆ ಕೊಳವೆ ಬಾವಿಗಳನ್ನು ಭೂವಿಜ್ಞಾನಿಯವರು ನಿರ್ಧರಿಸುವವರು ಮತ್ತೆ ಮಂಡಳಿಯಲ್ಲಿ ಈ ಬಗ್ಗೆ ಪ್ರತ್ಯೇಕವಾದ ಭೂವಿಜ್ಞಾನ ವಿಭಾಗ ರಚಿಸಲ್ಪಟ್ಟಿಲ್ಲ ಹಾಗೂ ವಿಶೇಷ ಪರಿಣಿತರಾದ ಸಿಬ್ಬಂದಿ ನೇಮಕಗೊಂಡಿಲ್ಲ.

ಈ. ಹೆಚ್ಚಿನ ಭೂ ಅಂತರ ಜಲಸಂಪನ್ಮೂಲವನ್ನು ಉಪಯೋಗಿಸುವ ನಿಮಿತ್ತ ಆಯಾ ಜಿಲ್ಲಾ ಹಾಗೂ ತಾಲ್ಲೂಕಿನಲ್ಲಿರುವ ಸರ್ಕಾರದ ಪರಿಣಿತ ಭೂವಿಜ್ಞಾನಿಯ ಸಲಹೆ ಪಡೆದು ಕೊಳವೆ ಬಾವಿಗಳನ್ನು ತೋಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗಾಗಿ ಈ ಮಂಡಳಿಯ ಭೂವಿಜ್ಞಾನ ವಿಭಾಗ ರೂಪಿಸುವುದಕ್ಕೆ ಯಾವ ಪ್ರಸ್ತಾವನೆಯು ಸದ್ಯದಲ್ಲಿ ಇರುವುದಿಲ್ಲ.

ಅನುಬಂಧ – 1

ವರ್ಷ	ಒಟ್ಟು ಕೊಳವೆ ಬಾವಿ ಕೊರೆದದ್ದು	ಒಟ್ಟು ಕೊಳವೆ ಸಫಲವಾದದ್ದು	ಒಟ್ಟು ಕೊಳವೆ ಬಾವಿ ವಿಫಲವಾದದ್ದು	ಷರಾ
1975–76	79	76	3	
1976–77	253	222	31	ಶೇಕಡಾ 87.78
1977–78	99	89	10	ಕೊಳವೆ ಬಾವಿಗಳು
1978–79	240	93	47	ಸಫಲವಾದದ್ದು.
1979–80	52	47	65	
1980–81	584	458	126	
1981–82	607	510	97	
1982–83	571	517	54	
1983–84	938	802	136	
1984–85	644	595	49	
1985–86	704	588	116	
1986–87	984	899	85	
1987–88	1104	999	64	
1988–89	62	303	59	
1989–90	1058	994	64	
1990–91	1278	1151	127	
1991–92	1181	1038	143	
1992–93	1328	1015	313	
ಮೊತ್ತ	12051	10578	1473	

ಶ್ರೀ ಎಂ.ವಿ. ವೆಂಕಟಪ್ಪ:– ಮಾನ್ಯ ಅಧ್ಯಕ್ಷರೇ, ತಮ್ಮ ಉತ್ತರದಲ್ಲಿ ಕೊಳವೆ ಬಾವಿಗಳನ್ನು ತೋಡುವುದಕ್ಕೆ ಮೊದಲು ನೀರು ಸಿಗುತ್ತದೆಂದು ಐಡೆಂಟಿಫೈ ಮಾಡುವ ಭೂವಿಜ್ಞಾನಿಯವರ ಬಗ್ಗೆ ಹೇಳಿದ್ದೀರಿ. ತಾವು ಇದುವರೆಗೂ 12,051 ಕೊಳವೆ ಬಾವಿಗಳನ್ನು ತೋಡಿದ್ದೀರಿ, ಸ್ವಲ್ಪ ಹೆಚ್ಚುಕಡಿಮೆ ಆದಕ್ಕೆ ಪೈಪು, ಮೋಟಾರು ಎಲ್ಲಾ ಸೇರಿ ಒಂದೊಂದು ಕೊಳವೆ ಬಾವಿಗೆ ಒಂದು ಲಕ್ಷ ರೂಪಾಯಿಯವರೆಗೂ ಖರ್ಚು ಬರುತ್ತದೆ. ಅಂದರೆ 120 ಕೋಟಿ ರೂಪಾಯಿಯಾಯಿತು. ಜೊತೆಗೆ 12 ಪರ್ಸೆಂಟ್ ಫೇಲ್ಯೂರ್ ಆಗಿದೆ ಎಂದು ಹೇಳಿದ್ದೀರಿ. ಇಂತಹ ಸಮಯದಲ್ಲಿ ಎಲ್ಲಿ ನೀರು ಸಿಗುತ್ತದೆ ಎಂದು ಐಡೆಂಟಿಫೈ ಮಾಡುವ ಎಷ್ಟು ಭೂವಿಜ್ಞಾನಿಯವರನ್ನು ಇಟ್ಟುಕೊಂಡಿದ್ದೀರಿ ? ಇಲ್ಲಿ ಬೆಂಗಳೂರು ವಲಯದಲ್ಲಿ ಎಷ್ಟು ಜನರನ್ನು ಇಟ್ಟುಕೊಂಡಿದ್ದೀರಿ, ಬೇರೆ ವಲಯದಲ್ಲಿ ಎಷ್ಟು ಜನರನ್ನು ಇಟ್ಟುಕೊಂಡಿದ್ದೀರಿ ?

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೆ, ಈ ಬೋರ್ಡ್ ಬಂದಾಗಲಿಂದಲೂ ನಾವು ಟೋಟಲ್ ಮಾಡಿರತಕ್ಕಂಥದ್ದು 12,051. ಅದರಲ್ಲಿ ಕೊಳವೆ ಬಾವಿಗಳು ಯಶಸ್ವಿಯಾಗಿರುವುದು 10,578 ಅಂದರೆ 87.78 ಪರ್ಸೆಂಟೇಜ್ ಆಗಿದೆ. ಇನ್ನೊಂದು, ಮಾನ್ಯ ಸದಸ್ಯರು ಬೋರ್ಡ್‌ನವರೇ ಅಲ್ಲಿ

ಜಿಯಾಲಿಸ್ಟ್‌ವಿಂಗ್ ಏತಕ್ಕೆ ಮಾಡಬಾರದೆಂದು ಹೇಳುತ್ತಿದ್ದಾರೆ. ಈಗ ಜಿಯಾಲಾಜಿಕಲ್ ಸರ್ವೆ ಮಾಡತಕ್ಕಂಥವರು ಜಿಯಲಾಜಿಕಲ್ ಡಿಪಾರ್ಟ್‌ಮೆಂಟ್‌ನವರು ಎಲ್ಲಾ ಜಿಲ್ಲೆಯಲ್ಲಿಯೂ ಇದ್ದಾರೆ. ಅವರನ್ನೇ ನಾವು ಕರೆಸಿಕೊಂಡು ಆಯಾ ಜಿಲ್ಲೆಯಲ್ಲಿ ಸರ್ವೆಯನ್ನು ಮಾಡಿಸುತ್ತಾ ಇದ್ದೇವೆ. ಆದರೂ ಕೂಡ ಅಂಡರ್‌ಗ್ರೌಂಡ್ ವಾಟರ್ ಬಗ್ಗೆ 100 ಪರ್ಸೆಂಟ್ ರಿಜಲ್ಟ್ ಎಲ್ಲಿಯೂ ಬರುತ್ತಾ ಇಲ್ಲ. ಆದರೂ ಕೂಡ ಸಾಧ್ಯವಾದಮಟ್ಟಿಗೆ ನಾವು ಬೇರೆ ವಿಂಗ್ ಮಾಡುವುದಕ್ಕೂ ಡಿಸ್ಟ್ರಿಕ್ಟ್‌ನಲ್ಲಿ ಜಿಯಾಫಿಜಿಕ್ಸ್ ಸರ್ವೆಯನ್ನೇ ಮಾಡುತ್ತಿದ್ದೇವೆ. ಅದಕ್ಕೆ ಸಪರೇಟಾಗಿ ಬೋರ್ಡಿನಿಂದ ಒಂದು ವಿಂಗ್ ಮಾಡಿದರೆ ಅದರಿಂದ ಏನು ಪ್ರತ್ಯೇಕವಾದಂತಹ ರಿಜಲ್ಟ್ ಬರುತ್ತದೋ ನನಗಂತೂ ಅರ್ಥವಾಗುತ್ತಿಲ್ಲ. ಜೊತೆಗೆ ಇಲ್ಲಿ ಕ್ರಿಯೇಷನ್ ಆಗುತ್ತಿದೆ. ನಮಗೆ ಏನಾದರೂ ಡಿಸ್ಟ್ರಿಕ್‌ನಲ್ಲಿರತಕ್ಕಂಥ ಸೀನಿಯರ್ ಜಿಯಾಲಿಸ್ಟ್ ಅಭಾವವಾಗಿ ನಮಗೆ ಸರಿಯಾದ ಸಂದರ್ಭದಲ್ಲಿ ಅವರು ಬಂದು ಟೆಸ್ಟ್ ಮಾಡದೇ ಇದ್ದರೆ ತಾವು ತಯಾರು ಮಾಡಬೇಕಾಗುತ್ತದೆ. ಆದ್ದರಿಂದ ನಮಗೆ ಫೆಸಿಲಿಟೀಸ್ ಬರುತ್ತಿರುವಾಗ ಬೋರ್ಡಿನಲ್ಲಿ ಇನ್ನೊಂದು ವಿಂಗ್‌ಅನ್ನು ತಯಾರು ಮಾಡುವುದು ಸೂಕ್ತವಲ್ಲವೆಂದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಎಂ.ವಿ. ವೆಂಕಟಪ್ಪ:– ಬೆಂಗಳೂರು ವಿಭಾಗದಲ್ಲಿ ಎಲ್ಲಿ ನೀರು ಸಿಗುತ್ತದೆಂದು ಐಡೆಂಟಿಫೈ ಮಾಡುವವರು ಒಬ್ಬರೇ ಒಬ್ಬರು ಇದ್ದಾರೆ. ಸುಮಾರು ಆರು ಜಿಲ್ಲೆಗಳಿವೆ. ಆರು ಜಿಲ್ಲೆಗಳು ಅಂದರೆ 70 ತಾಲ್ಲೂಕು ಅಥವಾ 70 ಮುನಿಸಿಪಾಲಿಟೀಸ್ ಬರುತ್ತದೆ, ಬೆಂಗಳೂರು ಕಾರ್ಪೊರೇಷನ್ ಇದೆ. ಇವೆಲ್ಲ ಇದೆ. ಒಬ್ಬರು ಸಾಲದು, ಎಲ್ಲ ಡಿವಿಜನ್ನಿಗೂ ಒಬ್ಬೊಬ್ಬರನ್ನು ಮಾಡಿ ಒಂದು ವಿಂಗ್‌ಅನ್ನು ಬೆಂಗಳೂರು ಡಿವಿಜನ್‌ನಲ್ಲಿ ಅಥವಾ ಎಂಟೈರ್ ಸ್ಟೇಟ್‌ಗೆಲ್ಲ ಒಂದು ವಿಂಗ್ ಮಾಡಿ, ನೀರು ಎಲ್ಲಿ ಸಿಗುತ್ತದೆಂದು ಐಡೆಂಟಿಫೈ ಮಾಡುವವರನ್ನು ಜಾಸ್ತಿ ಮಾಡಿಕೊಳ್ಳಿ. ತಾವು ಆಯಾ ಜಿಲ್ಲೆಯಲ್ಲಿಯೇ ಇದ್ದಾರೆಂದು ಹೇಳಿದ್ದೀರಿ, ಆಯಾ ಜಿಲ್ಲೆಯಲ್ಲಿರುವವರು ಜಿಲ್ಲಾ ಪರಿಷತ್ತಿಗೆ ಹೋಗಬೇಕು, ಉದಾಹರಣೆಗೆ ನಮ್ಮ ಕ್ಷೇತ್ರಕ್ಕೆ ಒಬ್ಬ ಜಿಯಾಲಿಸ್ಟ್ ಬೇಕೆಂದು ಇಂಡೆಂಟ್ ಕೊಟ್ಟು ಸುಮಾರು ಒಂದು ತಿಂಗಳಾಯಿತು. ಅವರು ಬರಲೇ ಇಲ್ಲ. ಕಾರಣ ಏನು ಅಂದರೆ ಅವರು ಅಲ್ಲಿ ಹೋಗಬೇಕು, ಇಲ್ಲಿ ಹೋಗಬೇಕೆಂದು ಹೇಳುತ್ತಾರೆ. ಈಗ ವಿಶೇಷವಾಗಿ ಬೇಸಿಗೆಯಲ್ಲಿ ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ನೀವು ಹೆಚ್ಚಾಗಿ ಐಡೆಂಟಿಫೈ ಮಾಡುವವರನ್ನು ಇಟ್ಟುಕೊಳ್ಳಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೆ, ಈ ಬೋರ್ಡ್ ವ್ಯಾಪ್ತಿಯಲ್ಲಿ ಸುಮಾರು 172 ಸಿ.ಎಂ.ಸಿ., ಟಿ.ಎಂ.ಸಿ. ಇದೆ. ಇವತ್ತು ನಾವು ಇಲ್ಲಿಂದ ಏನಾದರೂ ವಿಂಗ್‌ಅನ್ನು ಇಟ್ಟುಕೊಂಡುಬಿಟ್ಟು ಎಲ್ಲಾ ಕಡೆಗೂ ಕಳುಹಿಸುವುದಾದರೆ ಬಹುಶಃ ಇದಕ್ಕಿಂತ ಲೇಟಾಗುತ್ತದೆ. ಈಗ ಆಯಾ ಜಿಲ್ಲೆಯಲ್ಲಿ ಏನು ಸೀನಿಯರ್ ಜಿಯಾಲಿಸ್ಟ್ ಇದ್ದಾರೆ, ಎಲ್ಲಿಯಾದರೂ ಕಡಿಮೆ ಇದ್ದರೆ ನಾವು ಬೆಂಗಳೂರಿನಿಂದ ಬೇಕಾದರೆ ಕರೆಸಿಕೊಳ್ಳಬಹುದು. ನಿಮ್ಮ ಸಲಹೆ ಚೆನ್ನಾಗಿದ್ದರೆ ನಾವು ಒಪ್ಪಿಕೊಳ್ಳೋಣ. ಏಕೆಂದರೆ ಈಗ ನಾವು ಬೋರ್ಡಿನಲ್ಲಿ ಬೆಂಗಳೂರಿನಲ್ಲಿ ಜಿಯಾಲಿಸ್ಟ್‌ರನ್ನು ತೆಗೆದುಕೊಂಡಿದ್ದೇವೆ. ಅವರು 172 ಜಾಗಕ್ಕೆ ಓಡಾಡಬೇಕಾಗುತ್ತದೆ. ರಾಜ್ಯಾದ್ಯಂತ ಇಲ್ಲಿಂದ ಹೋಗುವುದಾದರೆ ಇನ್ನೂ ಲೇಟಾಗುತ್ತದೆ. ಆ ಜಿಲ್ಲೆಯಲ್ಲಿ ನಮಗೆ ಹೆಚ್ಚು ಕಡಿಮೆ ಇದ್ದರೆ ಅದನ್ನು ನಾವು ಸರಿ ಮಾಡಬಹುದು.

ಶ್ರೀ ಎಂ.ವಿ. ವೆಂಕಟಪ್ಪ:– ನಾಲ್ಕು ಡಿವಿಜನ್ ಇದೆಯಲ್ಲಾ, ಆ ಡಿವಿಜನ್‌ಗಳಿಗೆ ಒಬ್ಬೊಬ್ಬರನ್ನು ನೇಮಕ ಮಾಡಿ. ಈಗ ಎಂಟೈರ್ ಸ್ಟೇಟ್‌ಗೆಲ್ಲ ಒಬ್ಬರೇ ಇದ್ದಾರೆ.

ಶ್ರೀ ಚೌಡರೆಡ್ಡಿ:– ಇದರ ಬಗ್ಗೆ ಪರಿಶೀಲನೆ ಮಾಡೋಣ. ಏಕೆಂದರೆ, ಎಕಾನಮಿಯನ್ನು ನೋಡಬೇಕಾಗುತ್ತದೆ. ಪುನಃ ಅವರ ಮೇಲೆಯೇ ಹೊರೆ ಬೀಳುತ್ತದೆ.

ರಾಜ್ಯದಲ್ಲಿ ಆಶ್ರಯ ಯೋಜನೆ ಕುರಿತು ಮುಂಗಡ ಹಣದ ಮಂಜೂರಾತಿ ಕುರಿತು

118: ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಆಶ್ರಯ ಯೋಜನೆಯಲ್ಲಿ ಮನೆ ಕಟ್ಟಿಕೊಡಲು ಅಥವಾ ಮನೆ ಕಟ್ಟಲು ಬೇಕಾದ ಸಾಮಗ್ರಿಯನ್ನು ಒದಗಿಸಲು ಯಾರು ಯಾರಿಗೆ ಎಷ್ಟು ಮುಂಗಡ ಹಣ ಕೊಡಲಾಗಿದೆ;

ಆ. ಆ ಹಣ ದುರುಪಯೋಗ ಮಾಡಿಕೊಂಡು ಮನೆ ಕಟ್ಟದ ಕಾರಣ ಲೋಕಾಯುಕ್ತದವರು ಕೆಲವರನ್ನು ಬಂಧಿಸಿ ತನಿಖೆ ಮಾಡುತ್ತಿರುವುದು ನಿಜವೇ;

ಇ. ಹಾಗಿದ್ದಲ್ಲಿ, ಆ ವ್ಯಕ್ತಿಗಳ ಪೂರ್ಣ ವಿವರ ಒದಗಿಸುವುದು;

ಈ. ಕಾನೂನು ಬಾಹಿರವಾಗಿ ಹಣ ಮಂಜೂರು ಮಾಡಿದ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಗೋಪಿನಾಥ ಆರ್. ಸಾಂಡ್ರ (ವಸತಿ ಸಚಿವರು):–

ಅ. ವಿವರಣಾ ಪಟ್ಟಿ ಅನುಬಂಧ "ಅ" ಲಗತ್ತಿಸಿದೆ.

ಆ. ಇಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಸಿ.ಓ.ಡಿ. ತನಿಖೆ ನಡೆಯುತ್ತಿದೆ.

ಅನುಬಂಧ – ಅ

ಕರ್ನಾಟಕ ಗೃಹ ಮಂಡಳಿಯು ಆಶ್ರಯ ಯೋಜನೆಯಡಿಯಲ್ಲಿ ಗುತ್ತಿಗೆದಾರರಿಗೆ ನೀಡಿರುವ ಮುಂಗಡಗಳ ವಿವರಗಳು

ಕ್ರ. ಸಂ.	ಗುತ್ತಿಗೆದಾರರ ಹೆಸರು ಮತ್ತು ವಿಳಾಸ	ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟಬೇಕಾಗಿರುವ ಜಿಲ್ಲೆಯ ಹೆಸರು	ಗುತ್ತಿಗೆದಾರರಿಗೆ ನೀಡಿರುವ ಮೊಬಿಲೈಸೇಷನ್ ಮುಂಗಡ ಮೊತ್ತ: ಲಕ್ಷಗಳು	ಗುತ್ತಿಗೆದಾರರಿಗೆ ನೀಡಿರುವ ಸೆಕ್ಯೂರ್ಡ್ ಮುಂಗಡದ ಮೊತ್ತ: ಲಕ್ಷಗಳು	ಒಟ್ಟು ಮುಂಗಡ ಬಿಡುಗಡೆ ಮೊತ್ತ ಲಕ್ಷಗಳು	ಷರಾ
1	2	3	4	5	6	7
1.	ಶ್ರೀ ತಿರುಮಲ ಕನ್ಸ್‌ಟ್ರಕ್ಷನ್ ಕಂಪನಿ, ಮಲ್ಲೇಶ್ವರಂ, ಬೆಂಗಳೂರು.	ಚಿತ್ರದುರ್ಗ, ಚಿಕ್ಕಮಗಳೂರು, ಬೆಂಗಳೂರು (ಗ್ರಾಮಾಂತರ), ತುಮಕೂರು	–	2,96,00,000–00	2,96,00,000–00	
2.	ಮಲೆನಾಡು ಕನ್ಸ್‌ಟ್ರಕ್ಷನ್ ಕಂ., ಸೌಲಂಗ ರಸ್ತೆ, ಶಿವಮೊಗ್ಗ.	ಶಿವಮೊಗ್ಗ, ಕೋಲಾರ, ಮೈಸೂರು.	–	2,35,60,000–00	2,35,60,000–00	
3.	ನಿತ್ಯಾನಂದ ಅಸೋಸಿಯೇಟ್ಸ್, 572, ಇರ್ವಿನ್ ರೋಡ್, ಮೈಸೂರು.	ಮೈಸೂರು	1,36,00,000–00	–ಇಲ್ಲ–	1,36,00,000–00	

4. ಆ್ಯಂಕರ್ ಶೈನ್ಸ್ ಪ್ರೈವೇಟ್ ಲಿಮಿಟೆಡ್, ಕೇರಳ ಸಮಾಜಮ್ ಕಾಂಪ್ಲೆಕ್ಸ್, ಕೆ.ಎಸ್.ರಾವ್ ರೋಡ್, ಮಂಗಳೂರು.	ಹಾಸನ ಜಿಲ್ಲೆ	68,82,000–00	4,61,302–00	73,43,302–00
5. ಸ್ವರ್ಣಮುಖಿ ಬಿಲ್ಡಿಂಗ್ ಕಾಂಪೋನೆಂಟ್ಸ್ ಲಿಮಿಟೆಡ್, 1249, ಜೂಬಿಲಿ ಹಿಲ್ಸ್, ಹೈದರಾಬಾದ್.	ನಗರ ಮತ್ತು ಹುಬ್ಬಳ್ಳಿ ಗ್ರಾಮಾಂತರ ಧಾರವಾಡ ಗ್ರಾಮಾಂತರ ಮತ್ತು ನಗರ.	1,01,96,113–00	17,38,070–00	1,19,34,183–00
6. ಶ್ರೀ ಭವಾನಿ ಕನ್ಸ್ಟ್ರಕ್ಷನ್ಸ್, 482:2 ವಾಯಲ್ ರೆಸಿಡೆನ್ಸಿ ನಂ.8 ಬರ್ಟನ್ ರೋಡ್, ಬೆಂಗಳೂರು –560 025.	ಕೋಲಾರ ಜಿಲ್ಲೆ	1,04,17,250–00	12,58,475–00	1,16,75,725–00
7. ಪ್ರಿರಾಗ್ ಕಾರ್ಪೊರೇಷನ್, ನಂ.3, 5ನೇ ಕ್ರಾಸ್ ರೋಡ್, ಶಂಕರಪುರ, ಬೆಂಗಳೂರು – 4.	ಮಂಡ್ಯ ಜಿಲ್ಲೆ	66,00,000–00	10,94,828–00	76,94,828–00

8. ಆ್ಯಂಕರ್ ಲೈನ್ಸ್ ಪ್ರೈವೇಟ್ ಲಿಮಿಟೆಡ್, ಕೇರಳ ಸಮಾಜಮ್ ಕಾಂಪ್ಲೆಕ್ಸ್, ಕೆ.ಎಸ್.ರಾವ್ ರೋಡ್, ಮಂಗಳೂರು.	ಬೆಂಗಳೂರು ನಗರ	27,01,550–00	6,91,953–00	33,93,593–00	
9. ವಿಕಾಸ್ ಕನ್ಸ್‌ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್, 15:393–ಬಿ, ರಾಜು ರೋಡ್, ಕಮಲಾನಗರ, ಅನಂತಪುರ.	ಬಳ್ಳಾರಿ ಜಿಲ್ಲೆ	79,72,600–00	11,87,000–00	91,59,500–00	
10. –ಅದೇ–	ತುಮಕೂರು ಜಿಲ್ಲೆ	1,10,26,500–00	15,00,000–00	1,25,26,500–00	
11. ಆ್ಯಂಕರ್ ಲೈನ್ಸ್ ಪ್ರೈವೇಟ್ ಲಿಮಿಟೆಡ್, ಕೇರಳ ಸಮಾಜಮ್ ಕಾಂಪ್ಲೆಕ್ಸ್, ಕೆ.ಎಸ್.ರಾವ್ ರೋಡ್, ಮಂಗಳೂರು	ಬೆಂಗಳೂರು ಗ್ರಾಮಾಂತರ	86,00,000–00	—	86,00,000–00	ಕಾಂಟ್ರಾಕ್ಟ್ ರದ್ದತಿಯಿಂದಾಗಿ ಎಂಭತ್ತಾರು ಲಕ್ಷ ರೂ.ಗಳನ್ನು ದಿನಾಂಕ 9-9-92ರಂದು ವಾಪಸ್ಸು ಪಡೆಯಲಾಗಿದೆ

12. ಅಸೋಸಿಯೇಟೆಡ್ ಕನ್ಸ್ಟ್ರಕ್ಷನ್, ನಂ.1728, 4ನೇ ಬಿ ಕ್ರಾಸ್, 9ನೇ ಮುಖ್ಯ ರಸ್ತೆ, ಹೆಚ್‌ಎಎಲ್, 3ನೇ ಹಂತ, ಬೆಂಗಳೂರು – 35.	ರಾಯಚೂರು ಜಿಲ್ಲೆ	94,43,750–00	14,90,363–00	1,19,34,183–00
13. ನವ ವಿಕಾಸ್ ಬಿಲ್ಡರ್ಸ್ ಪ್ರೈವೇಟ್ ಲಿಮಿಟೆಡ್, ಎರಡನೇ ಮಹಡಿ 'ಸಿ' ಬ್ಲಾಕ್ ಅಕ್ಷಯ ಕಮರ್ಷಿಯಲ್ ಕಾಂಪ್ಲೆಕ್ಸ್, ವಿಕ್ಟೋರಿಯ ರೋಡ್, ಬೆಂಗಳೂರು – 47.	ಧಾರವಾಡ ಜಿಲ್ಲೆ	61,29,750–00		61,29,750–00
14. ಆ್ಯಂಕರ್ ಲೈನ್ಸ್ ಪ್ರೈವೇಟ್ ಲಿಮಿಟೆಡ್, ಕೇರಳ ಸಮಾಜಮ್ ಕಾಂಪ್ಲೆಕ್ಸ್, ಕೆ.ಎಸ್.ರಾವ್ ರೋಡ್, ಮಂಗಳೂರು.	ಕೊಡಗು ಜಿಲ್ಲೆ	25,02,800–00		25,02,800–00

15. ಅಸೋಸಿಯೇಟ್ಸ್ ಕನ್ಸ್ಟ್ರಕ್ಷನ್, ನಂ.17:28, 4ನೇ ಬಿ ಕ್ರಾಸ್, 9ನೇ ಮುಖ್ಯ ರಸ್ತೆ, ಹೆಚ್‌ಎಎಲ್, 3ನೇ ಹಂತ, ಬೆಂಗಳೂರು.	ಬೀದರ್ ಜಿಲ್ಲೆ	50,56,250–00	21,55,878–00	72,12,123–00	
16. ಆ್ಯಂಕರ್ ಪ್ರೆಸ್ ಪ್ರೈವೇಟ್ ಲಿಮಿಟೆಡ್, ಕೇರಳ ಸಮಾಜಮ್ ಕಾಂಪ್ಲೆಕ್ಸ್, ಕೆ.ಎಸ್.ರಾವ್ ರೋಡ್, ಮಂಗಳೂರು.	ಉತ್ತರ ಕನ್ನಡ ಜಿಲ್ಲೆ	67,65,000–00	4,61,302–00	72,26,302	ಕಾಂಟ್ರಾಕ್ಟ್ ರದ್ದತಿಯಿಂದಾಗಿ ದಿನಾಂಕ 21-10-92ರಂದು ರೂ.59,60,556-00 ಗಳನ್ನು ವಾಪಸ್ಸು ಪಡೆಯಲಾಗಿದೆ
17. ಅಕ್ಷಯ ಕನ್ಸ್ಟ್ರಕ್ಷನ್ಸ್ ಬೆಳಗಾವಿ, ನಂ.103, ಹ್ಯಾವ್ ಲಾಕ್ ರಸ್ತೆ ಬೆಳಗಾಂ.	ಬೆಳಗಾವಿ ಜಿಲ್ಲೆ		5,00,000–00	5,00,000–00	
18. ಶ್ರೀ ಮಹಮ್ಮದ್ ಸೇಠ್, 157, ಬೆಳಗಾಲ್ ಕ್ರಾಸ್ ಬಳ್ಳಾರಿ.	ಬೆಳಗಾಂ ಜಿಲ್ಲೆ		58,25,000–00	58,25,000–00	

19. ಶ್ರೀ ಕೆ.ಹೆಚ್. ಅಬ್ದುಲ್ ರೆಹಮಾನ್, ಸಿವಿಲ್ ಇಂಜಿನಿಯರ್ ಮತ್ತು ಟ್ರಾನ್ಸ್‌ಪೋರ್ಟ್ ಕಂಟ್ರಾಕ್ಟರ್, ಪಂಪ್ ಹೌಸ್, ಸುರುಂಜಿ, ಮಂಗಳೂರು.	ಮಂಗಳೂರು ಜಿಲ್ಲೆ	17,79,750–00	7,93,773,–00	25,73,523–00
20. ಚೆಬ್ಬಿ ಅಸೋಸಿಯೇಟ್ಸ್, ಇಂಜಿನಿಯರ್ಸ್ ಮತ್ತು ಬಿಲ್ಡರ್ಸ್, ಎಸ್.ಬಿ.ಐ. ಕಾಲೋನಿ, ಸಿರ್ಸಿ.	ಉತ್ತರ ಕನ್ನಡ (ಸಿರ್ಸಿ ಮತ್ತು ಹಳಿಯಾಳ)	20,00,000–00	5,07,466–00	25,07,466–00
21. ಆ್ಯಂಕರ್ ಲೈನ್ಸ್ ಪ್ರೈವೇಟ್ ಲಿಮಿಟೆಡ್, ಕೇರಳ ಸಮಾಜಮ್ ಕಾಂಪ್ಲೆಕ್ಸ್, ಕೆ.ಎಸ್.ರಾವ್ ರೋಡ್, ಮಂಗಳೂರು.	ಮಂಗಳೂರು		12,31,095–00	12,31,096–00
22. ನಾಗಾರ್ಜುನ ಎಸ್.ಎಲ್.ಬಿ. ಲಿಮಿಟೆಡ್, ಹೈದರಾಬಾದ್.	ಗುಲ್ಬರ್ಗಾ ಜಿಲ್ಲೆ		5,89,864–00	5,89,864–00

23.	ಕೆ.ಎ. ಅಬ್ದುಲ್ ರೆಹಮಾನ್, ಪಿಡಬ್ಲ್ಯೂಡಿ ಕಂಟ್ರಾಕ್ಟರ್, ಸೂರ್ಕೈಕಲ್, ಮಂಗಳೂರು.	ಮಂಗಳೂರು ಜಿಲ್ಲೆ		3,06,220–00	3,06,220–00
24.	ಶ್ರೀ ಜಾಲಣ್ಣನವರು, ಬ್ಯಾಂಕ್ ಕಾಲೋನಿ, ಜೇವರ್ಗಿರೋಡ್, ಗುಲ್ಬರ್ಗಾ.	ಗುಲ್ಬರ್ಗಾ ಜಿಲ್ಲೆ		4,65,750–00	4,65,750–00
25.	ಕೀರ್ತಿ ಕರ್ಕೇರ, ಕರ್ಕೆರ ಮ್ಯಾನ್‌ಷನ್, ಮೈದಾನ ವೆಸ್ಟ್ ರೋಡ್, ಮಂಗಳೂರು.	ಗುಲ್ಬರ್ಗಾ ಜಿಲ್ಲೆ		4,89,000–00	4,89,000–00
26.	ಶ್ರೀ ಹೇಮರೆಡ್ಡಿ, ಕಂಟ್ರಾಕ್ಟರ್, ದೇವರೆಡ್ಡಿ ಪಾಳ್ಯ, ಚಿತ್ರದುರ್ಗ ಜಿಲ್ಲೆ.	ಚಿತ್ರದುರ್ಗ ಜಿಲ್ಲೆ	–	65,000–00	65,000–00
27.	ಎಸ್.ಎಸ್.ವಿ. ಕನ್‌ಸ್ಟ್ರಕ್ಷನ್ಸ್, 291, ಕೆಹೆಚ್‌ಬಿ ಕಾಲೋನಿ, ಹಾಸನ.	ಹಾಸನ	–	19,56,237–00	19,56,237–00

28. ಕಡೂರ್ ಇಂಜಿನಿಯರಿಂಗ್ ಬಿಜಿನೆಸ್.	ಬೆಂಗಳೂರು ಗ್ರಾಮಾಂತರ		5,00,000-00	5,00,000-00	
29. ನ್ಯಾಷನಲ್ (ಇಂಡಿಯಾ) ಕಂಟ್ರ್ಯಾಕ್ಟರ್ಸ್ ಮತ್ತು ಇಂಜಿನಿಯರ್ಸ್, 1584, 17ನೇ ಮೈನ್, 2ನೇ ಘಟ್ಟ, ಜೆಪಿ ನಗರ, ಬೆಂಗಳೂರು – 78.	ಬೆಂಗಳೂರು ಜಿಲ್ಲೆ	16,00,000-00		16,00,000-00	ಈ ಗುತ್ತಿಗೆದಾರರು ಆಶ್ರಯ ಯೋಜನೆಯಡಿಯಲ್ಲಿ ಬೆಂಗಳೂರು ನಗರದಲ್ಲಿಯ ಕೊಳಚೆ ಪ್ರದೇಶ ನಿವಾಸಿಗಳಿಗೆ ಎಲ್‌ಐಜಿ – 2 ರ ಮನೆಗಳನ್ನು ನಿರ್ಮಿಸುತ್ತಿದ್ದು, ಇವರಿಗೆ ಆಶ್ರಯ ಯೋಜನೆಯಡಿಯಲ್ಲಿ ಮುಂಗಡಗಳನ್ನು ನೀಡಲಾಗಿದೆ.
30. ಕಾರ್ನಿಕ್, ನಾಲ್ಕನೇ ಮಹಡಿ, ಕರ್ನಾಟಕ ಗೃಹಮಂಡಳಿ, ಕಾವೇರಿ ಭವನ, ಬೆಂಗಳೂರು – 9.	ಬೆಂಗಳೂರು ಜಿಲ್ಲೆ	20,00,000-00	–	20,00,000-00	
31. ನಿರ್ಮಿತಿ ಕೇಂದ್ರ, 4ನೇ ಮಹಡಿ, ಕರ್ನಾಟಕ ಗೃಹ ಮಂಡಳಿ.	ಬೆಂಗಳೂರು ಜಿಲ್ಲೆ	11,50,000-00	–	11,50,000-00	

32. ಸ್ವಾನ್ ಇಂಡಿಯಾ ಕನ್‌ಸ್ಟ್ರಕ್ಷನ್, ಕಾರ್ಪೊರೇಷನ್, ಇಂಜನಿಯರ್ಸ್ ಮತ್ತು ಬಿಲ್ಡರ್ಸ್, ನಂ.435, 1ನೇ ಕ್ರಾಸ್, 7ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 34.	ಬೆಂಗಳೂರು ಜಿಲ್ಲೆ	9,24,450–00	–	9,24,450–00
ಮೊತ್ತ		11,73,47,663–00	7,84,28,572–00	19,51,60,622–00

ಗೋಪ್ವಾರೆ:–

1.	ಮೊಬಲೈಸೇಷನ್ ಮುಂಗಡ	ರೂ.11,67,82,050–00
2.	ಸೆಕ್ಯೂರ್ಡ್ ಮುಂಗಡ	ರೂ.7,84,28,572–00
3.	ಗುತ್ತಿಗೆದಾರರಿಗೆ ನೀಡಿರುವ ಒಟ್ಟು ಮುಂಗಡ	ರೂ.19,51,60,622–00

ಟಿಪ್ಪಣಿ:–

ಅ. ಗುತ್ತಿಗೆದಾರರಿಗೆ ನೀಡಿರುವ ಮುಂಗಡಗಳನ್ನು ಅವರು ಸಲ್ಲಿಸುವ ರನ್ನಿಂಗ್ ಅಕೌಂಟ್ಸ್ ಬಿಲ್ಲುಗಳಿಂದ ಶೇಕಡಾ 75 ಕಾಮಗಾರಿಯು ಮುಗಿಯುವ ಮೊದಲೇ ಪೂರ್ತಿ ಮೊತ್ತವನ್ನು ಕಟಾಯಿಸಲು ಗೃಹಮಂಡಳಿಯ ವಿಭಾಗಗಳ ಕಾರ್ಯ ನಿರ್ವಾಹಕ ಅಭಿಯಂತರರುಗಳಿಗೆ ಈಗಾಗಲೇ ನಿರ್ದೇಶನಗಳನ್ನು ನೀಡಲಾಗಿದೆ. ಈ ನಿರ್ದೇಶನಗಳಂತೆ ಕಾರ್ಯ ನಿರ್ವಾಹಕ ಅಭಿಯಂತರುಗಳು. ಗುತ್ತಿಗೆದಾರರು ಸಲ್ಲಿಸಿರುವ ರನ್ನಿಂಗ್ ಅಕೌಂಟ್ಸ್ ಬಿಲ್ಲುಗಳಿಂದ ಮುಂಗಡದ ಕಂತುಗಳನ್ನು ಕಟಾಯಿಸಲು ಪ್ರಾರಂಭಿಸಿದ್ದಾರೆ.

ಆ. ಲೋಕಾಯುಕ್ತದವರು ಆಶ್ರಯ ಯೋಜನೆಯ ಕಾಮಗಾರಿ ಕೆಲಸದಲ್ಲಿ ಯಾರನ್ನೂ ಬಂಧಿಸಿಲ್ಲ ಹಾಗೂ ತನಿಖೆ ಮಾಡುತ್ತಿಲ್ಲ. (ಇ) ಯಾರೂ ಇಲ್ಲ.

ಈ. ಸಿ.ಓ.ಡಿ. ತನಿಖೆ ಮುಂದುವರೆದಿದೆ. ತನಿಖೆ ವರದಿ ಸಿ.ಓ.ಡಿ.ಯಿಂದ ಬಂದಿರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದಂತಹ ವಿಷಯು ಇಡೀ ರಾಜ್ಯದಲ್ಲಿ ಇದರ ಬಗ್ಗೆ ಚರ್ಚೆಯಾಗುತ್ತಿದೆ. ರಾಜ್ಯದಲ್ಲಿ ಆಶ್ರಯ ಯೋಜನೆಯಲ್ಲಿ ಮನೆ ಕಟ್ಟಿಕೊಡಲು ಅಥವಾ ಮನೆಕಟ್ಟಲು ಬೇಕಾದ ಸಾಮಗ್ರಿಗಳನ್ನು ಕೊಡುವುದಕ್ಕೋಸ್ಕರ ಒಟ್ಟು 19,51,60,622 ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಪ್ರಾರಂಭದಲ್ಲಿ ತಾವು ಸಚಿವರಾದ ತಕ್ಷಣ ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇವೆ. ತನಿಖೆ ಮಾಡುತ್ತೇವೆ ಎನ್ನತಕ್ಕ ದೊಡ್ಡದೊಡ್ಡ ಮಾತನ್ನು ಹೇಳಿದ್ದೀರಿ. ನನಗೆ ಬೇಕಾಗಿರುವುದು ಇಷ್ಟೆ; ಅಭಿವೃದ್ಧಿ ಕಾರ್ಯಕ್ಕೆ ಹಣ ಇಲ್ಲದೆ ಇರುವಂತಹ ಸಂದರ್ಭದಲ್ಲಿ ಕೆಲಸ ಮಾಡುವುದಕ್ಕೆ ಮುಂಚೆನೇ ಇಷ್ಟು ದೊಡ್ಡ ಪ್ರಮಾಣದ ಹಣವನ್ನು ಬಿಡುಗಡೆ ಮಾಡಲು ಕಾರಣವೇನು ? ಈ ಹಣವನ್ನು ಕೊಟ್ಟು ತಿಂಗಳಾಯಿತು ? ಈ ಹಣವನ್ನು ಕೊಡುವುದಕ್ಕೆ ಮಂತ್ರಿಮಂಡಲದ ಸಭೆಯಲ್ಲಿ ಏನಾದರೂ ಅನುಮತಿ ಸಿಕ್ಕಿದೆಯೇ ? ಈ ಗುತ್ತಿಗೆಯನ್ನು ಕೊಡುವಂತಹ ಸಂದರ್ಭದಲ್ಲಿ ಏನಾದರೂ ನಿಯಮಾವಳಿಗಳನ್ನು ಪಾಲಿಸಿದ್ದೀರಾ ? ಈಗಾಗಲೇ ಈ ಮನೆಗಳ ಪೈಕಿ ಎಷ್ಟು ಮನೆಗಳು ಕಟ್ಟಿ ಮುಗಿದಿದೆ ?

ಶ್ರೀ ಗೋಪಿನಾಥ್ ಆರ್. ಸಾಂಡ್ರ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ವ್ಯಕ್ತಪಡಿಸಿದಂತಹ ವಿಚಾರ ಸರಿಯಾಗಿದೆ. ಆಶ್ರಯ ಯೋಜನೆಯಲ್ಲಿ ನಾವು ಮೊಟ್ಟಮೊದಲು ಮೊಬಲೈಜೇಷನ್ ಅಡ್ವಾನ್ಸ್ ಮತ್ತು ಸೆಕೆಂಡ್ ಲೋನ್ ಎಂದು ಎರಡು ತರಹದ ಅಡ್ವಾನ್ಸ್‌ಗಳನ್ನು ಕಾಂಟ್ರಾಕ್ಟ್‌ದಾರರಿಗೆ ಕೊಟ್ಟಿದ್ದೇವೆ. ಕೊಟ್ಟ ನಂತರ ಆ ಗುತ್ತಿಗೆದಾರರು ಸರಿಯಾಗಿ ಕೆಲಸವನ್ನು ಮಾಡದೇ ಇದ್ದುದರಿಂದ, ನಮ್ಮ ಜೊತೆ ಅವರು ಏನು ವ್ಯವಹಾರಗಳನ್ನು ಮಾಡಿದ್ದಾರೆ, ಆ ವ್ಯವಹಾರಗಳನ್ನು ಸರಿಯಾಗಿ ಮಾಡಿಲ್ಲ ಎನ್ನುವುದು ನಮಗೆ ಕಂಡು ಬಂದಿದ್ದರಿಂದ ಆ ಎಲ್ಲಾ ವ್ಯವಹಾರವನ್ನು ನಾವು ಸಿ.ಓ.ಡಿ.ಯವರಿಗೆ ಅದರ ಬಗ್ಗೆ ವಿಚಾರಮಾಡಲಿಕ್ಕೆ ಕೊಟ್ಟಿದ್ದೇವೆ. ಲೋಕಾಯುಕ್ತಕ್ಕೆ ಕೊಟ್ಟಿಲ್ಲ, ಸಿ.ಓ.ಡಿ.ಯವರು ಎನ್‌ಕ್ವೈರಿ ಮಾಡಿ ಆ ತೀರ್ಪು ನಮ್ಮ ಕಡೆಗೆ ಬರುವಂತಹ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಎಷ್ಟು ಮನೆಗಳನ್ನು ಕಟ್ಟಿದ್ದೀರಿ ?

ಶ್ರೀ ಗೋಪಿನಾಥ್ ಆರ್. ಸಾಂಡ್ರ:- ಈಗ ಮೂರು ಸಾವಿರ ಮನೆಗಳನ್ನು ಪೂರ್ತಿ ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ಕಂಟ್ರಾಕ್ಟ್‌ದಾರರಿಗೆ 19ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದುವರೆಗೂ ಎಷ್ಟು ಮನೆಗಳನ್ನು ಕಟ್ಟಿದ್ದಾರೆ ?

ಶ್ರೀ ಗೋಪಿನಾಥ್ ಆರ್. ಸಾಂಡ್ರ:- ಈ ಕಂಟ್ರಾಕ್ಟ್‌ದಾರರುಗಳಿಗೇ ಕೊಟ್ಟಿರುವುದು. ಬೇರೆಯವರಿಗೆ ಕೊಟ್ಟಿಲ್ಲ. 19ಕೋಟಿ ರೂಪಾಯಿಗಳನ್ನು ಏನು ಅಡ್‌ವಾನ್ಸ್ ಕೊಟ್ಟಿದ್ದೇವೆ. ಅದರಲ್ಲಿ ಆರು ಜನರು ಇವತ್ತಿನ ದಿನಾಂಕಕ್ಕೆ ಮೂರು ಸಾವಿರ ಮನೆಗಳನ್ನು ಪೂರ್ತಿ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಇದು ಬಹಳ ಮುಖ್ಯವಾದುದು. ಈ ಒಂದು ತನಿಖೆಯ ಸಂದರ್ಭದಲ್ಲಿ ಯಾವ ಈ ಭ್ರಷ್ಟ ಅಧಿಕಾರಿಗಳು ಹಣವನ್ನು ಕೊಡುವುದಕ್ಕೆ ಶಾಮೀಲಾಗಿದ್ದರೋ, ಅದೇ ಅಧಿಕಾರಿಗಳು ಮುಂದುವರೆಯುತ್ತಿದ್ದಾರೆಯೇ ? ಅವರನ್ನು ಪಕ್ಕಕ್ಕೆ ಸರಿಸಿ ಡಾಕ್ಯುಮೆಂಟ್‌ನ್ನು ತಿದ್ದುಪಡಿ ಮಾಡಿ ಮೋಸ ಆಗದಂತೆ ನೋಡಿಕೊಳ್ಳುವುದಕ್ಕೆ ಅವರನ್ನು ಬೇರೆ ಕಡೆಗೆ ಏನಾದರೂ ವರ್ಗಾವಣೆ ಮಾಡಿದ್ದಿರಾ ? ಈ ತನಿಖೆಯ ವ್ಯಾಪ್ತಿಯಲ್ಲಿ ಕಾನೂನು ಬಾಹಿರವಾಗಿ, ನಿಯಮಗಳನ್ನು ಗಾಳಿಗೆ ತೂರಿ, ಈ ಹಣವನ್ನು ಕೊಟ್ಟು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆಯೇ ? ಈ ಹಣವನ್ನು ಲೂಟಿ ಮಾಡಿದಂತಹ ಕಂಟ್ರಾಕ್ಟ್‌ದಾರರ

ಪೈಕಿ ಯಾರನ್ನಾದರೂ ಬಂಧಿಸಿದ್ದೀರಾ ? ಸಿ.ಓ.ಡಿ.ಯವರಿಗೆ ಇದುವರೆಗೂ ಏನಾದರೂ ಮಧ್ಯಂತರ ವರದಿ ಕೊಟ್ಟಿದೆಯೇ ?

ಶ್ರೀ ಗೋಪಿನಾಥ್ ಆರ್. ಸಾಂಡ್ರ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದಂತೆ ಈಗಾಗಲೇ ನಾವು ಸಿ.ಓ.ಡಿ.ಗೆ ತನಿಖೆಗೆ ಕೊಟ್ಟಿದ್ದೇವೆ. ಸಿ.ಓ.ಡಿ. ತನಿಖೆ ನಡೆಯುತ್ತಿದೆ. ಅವರು ಅಧಿಕಾರಿಗಳನ್ನೂ ವಿಚಾರಣೆ ಮಾಡಿದ್ದಾರೆ, ಮತ್ತು ಅಧಿಕಾರೇತರು ಯಾರು ಈ ಸಮಸ್ಯೆಗೆ ಒಳಗಾಗಿದ್ದಾರೆ, ಅವರ ಬಗ್ಗೆಯು ವಿಚಾರಣೆ ನಡೆದಿದೆ. ಇದುವರೆಗೂ ಯಾರನ್ನೂ ಬಂಧನ ಮಾಡಿಲ್ಲ; ಮತ್ತು ಇದರ ಬಗ್ಗೆ ಸಿ.ಓ.ಡಿ. ರಿಪೋರ್ಟ್ ಬಂದ ಮೇಲೆ ಅವರು ಯಾರೇ ಇರಲಿ ಅವರ ಮೇಲೆ ಶೀಘ್ರವಾದಂತಹ, ಯೋಗ್ಯವಾದಂತಹ, ಉಗ್ರವಾದಂತಹ, ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಅನೇಕ ವಿಚಾರಗಳಲ್ಲಿ ಈ ಸದನದಲ್ಲಿ ಸಿ.ಓ.ಡಿ.ಗೆ ವಹಿಸಿದ್ದೇವೆ ಎಂದು ಹೇಳುತ್ತಾರೆ. ನೀವು ಸಿ.ಓ.ಡಿ.ಗೆ ವಹಿಸಬೇಕಾದರೆ ಅವರ ಮೇಲೆ ಗುರುತರವಾದಂತಹ ಅಪಾದನೆ ಇದ್ದರೆ ತಾನೆ ವಹಿಸಬೇಕಾದ್ದು. ಅಂದ ಮೇಲೆ ಇವತ್ತಿನವರೆಗೂ ನೀವು ಯಾರನ್ನೂ ಬಂಧಿಸದೇ ಇರುವುದು ನಿಮ್ಮ ಮೇಲೆ ರಾಜಕೀಯ ಒತ್ತಡವೇ ಅಥವಾ ನಿಮ್ಮ ಬಗ್ಗೆ ಯಾವ ಒತ್ತಡವಿದೆ ಅದನ್ನು ಹೇಳಬೇಕು. ಸಾಮಾನ್ಯವಾಗಿ ಯಾರೋ ಕೆಲಸಕ್ಕೆ ಬಾರದವರ ಮೇಲೆ ಸಿ.ಓ.ಡಿ.ಗೆ ಹಾಕಿದರೆ ಅವರ ಮನೆಗೆ ನುಗ್ಗುತ್ತೀರಿ, ಅವರ ಆಸ್ತಿಪಾಸ್ತಿಯನ್ನು ಜಪ್ತಿ ಮಾಡುತ್ತೀರಿ, ಅವರನ್ನು ದಸ್ತಗಿರಿ ಮಾಡುತ್ತೀರಿ, ಹೊರಗಡೆ ಹಾಕುತ್ತೀರಿ. ಇದರಲ್ಲಿ ಸುಮಾರು 20–25ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ ಮತ್ತು ರಾಜ್ಯದ ಜನತೆಗೆ ಬಹಳ ಅನ್ಯಾಯವಾಗಿದೆ. ತಾವು ಅಧಿಕಾರ ವಹಿಸಿಕೊಂಡ ನಂತರ ಈ ಬಗ್ಗೆ ಎಷ್ಟು ಉದ್ದುದ್ದವಾದ ಹೇಳಿಕೆಗಳನ್ನು ಕೊಟ್ಟಿದ್ದೀರಿ. ನಾವು ಯಾರನ್ನೂ ಬಿಡುವುದಿಲ್ಲ, ಬಂಧಿಸುತ್ತೇವೆ, ದಸ್ತಗಿರಿ ಮಾಡುತ್ತೇವೆ, ಗುತ್ತಿಗೆದಾರರನ್ನು ಬಿಡುವುದಿಲ್ಲ, ಎಂದೆಲ್ಲ ಹೇಳಿ ಇವತ್ತು ನೀವು ವೇದಾಂತ ಹೇಳುತ್ತಿದ್ದೀರಾ ? ಇವತ್ತು ನೀವು ಸ್ಪಷ್ಟವಾಗಿ ಹೇಳಬೇಕು, ಯಾರನ್ನು ಯಾವತ್ತು ಯಾವ ಘಳಿಗೆಯಲ್ಲಿ ಬಂಧಿಸುತ್ತೀರಿ ಎಂದು ಹೇಳಬೇಕು. ಇಲ್ಲದಿದ್ದರೆ ನಾವು ಇದನ್ನು ಅಷ್ಟು ಸುಲಭವಾಗಿ ಬಿಡತಕ್ಕಂತಹವರಲ್ಲ.

ಶ್ರೀ ಗೋಪಿನಾಥ್ ಆರ್. ಸಾಂಡ್ರ:– ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಬಹಳ ಅನುಭವಸ್ಥರು. ಒಮ್ಮೆ ಸಿ.ಓ.ಡಿ.ಗೆ ಮತ್ತು ಕಮಿಟಿಗೆ ಕೊಡಲ್ಪಟ್ಟಾಗ ನಮ್ಮ ಅಧಿಕಾರ ಅಲ್ಲಿ ಉಳಿಯುವುದಿಲ್ಲ. ಸಿ.ಓ.ಡಿ.ಯವರು ಏನು ರಿಪೋರ್ಟ್ ಕೊಡುತ್ತಾರೆ, ಆ ರಿಪೋರ್ಟ್ ಆಧಾರದ ಮೇಲೆ ಏನಾದರೂ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವರಿಗೆ ಶಿಕ್ಷೆ, ದಂಡ, ಏನಾದರೂ ವಿಧಿಸಬೇಕಾಗುತ್ತದೆ. ಅದು ಬರುವವರೆಗೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಈ ವ್ಯವಹಾರದಲ್ಲಿ ಏನು ನಡೆದಿದೆ ಇದರ ಬಗ್ಗೆ ಸಂಪೂರ್ಣವಾಗಿ ತನಿಖೆ ನಡೆಸಲು ಎರಡು ತನಿಖಾ ಕಮಿಟಿಗಳನ್ನು ನಾವು ನೇಮಕ ಮಾಡಿದ್ದೇವೆ. ಒಂದು ಸಿ.ಓ.ಡಿ.ಗೆ ಕೊಟ್ಟಿದ್ದೇವೆ, ಇನ್ನೊಂದು ಹಿಂದಿನ ಛೀಫ್ ಸೆಕ್ರೆಟರಿಯವರಾದ ವಿಶ್ವನಾಥ್‌ರವರಿಗೆ ಕೊಟ್ಟಿದ್ದೇವೆ. ಅವರಿಗೆ ಆದಷ್ಟು ಬೇಗ ರಿಪೋರ್ಟ್ ಕೊಡಿ ಎಂದು ಒತ್ತಾಯ ಮಾಡುತ್ತಿದ್ದೇವೆ. ಶ್ರೀ ವಾಟಾಳ್ ನಾಗರಾಜ್‌ರವರು ಮತ್ತಿತರರು, ಜನರೂ ನಮ್ಮನ್ನು ಕೇಳುತ್ತಿದ್ದಾರೆ. ನಾವು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದೇವೆ. ಅದು ಸರಿಯೋ ಸುಳ್ಳೋ ಎನ್ನುವುದನ್ನು ನಾವು ನಿರ್ಧಾರ ಮಾಡಬಾರದು; ಸಿ.ಓ.ಡಿ.ಯವರು ಮಾಡಬೇಕೆಂದು ಹೇಳಿ ಅವರಿಗೆ ನಾವು ಒತ್ತಾಯ ತರುತ್ತಿದ್ದೇವೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:– ಮಾನ್ಯ ಸಚಿವರು ಸಿ.ಓ.ಡಿ. ಎಂದು ಏಕೆ ಹೇಳುತ್ತಿದ್ದಾರೋ ಗೊತ್ತಿಲ್ಲ. ಪೋಲೀಸ್ ಇಲಾಖೆ ಏನು ಮಾಡುತ್ತದೆ ? ಪೋಲೀಸ್ ಇಲಾಖೆಯ ಮುಖಾಂತರ ತನಿಖೆ ಮಾಡಿಸಿ. ಸಿ.ಓ.ಡಿ. ಅಂದರೇ ಅಧಿಕಾರಿಗಳು ಏನು ಗುಳುಂ ಮಾಡಿರುತ್ತಾರೋ

ಅದೆಲ್ಲಾ ಹಂಚಿಕೊಳ್ಳಲಿಕ್ಕೆ ಮಾಡತಕ್ಕದ್ದು ಏನಾದರೂ ಇದೆಯೋ ಎಂದು ಕೇಳುತ್ತಿದ್ದೇನೆ. ಏಕೆಂದರೆ ಸಿ.ಓ.ಡಿ.ಯಿಂದ ಇಲ್ಲಿಯವರೆಗೆ ತನಿಖೆ ಏನು ಮಾಡಿಸಿದ್ದೀರಿ, ಅದರಿಂದ ಒಬ್ಬರಿಗೆ ಏನಾದರೂ ಶಿಕ್ಷೆ ಆಗಿದೆಯೇ ಹೇಳಿ ನೋಡೋಣ. ಲೋಕಾಯುಕ್ತದಿಂದ ಒಬ್ಬರಿಗಾದರೂ ಶಿಕ್ಷೆ ಆಗಿದೆಯೇ ಹೇಳಿ ನೋಡೋಣ. ಈ ಎರಡೂ ಸಂಸ್ಥೆಗಳನ್ನು ಇಟ್ಟುಕೊಂಡು ಎಷ್ಟು ಜನರಿಗೆ ಶಿಕ್ಷೆ ಕೊಡಿಸಿದ್ದೀರಿ. ನನಗೆ ಇರುವಂತಹ ಅನುಮಾನವೆಂದರೆ, ಈ ಸಿ.ಓ.ಡಿ.ಗೆ ಕೊಡುವುದು ಎಂದರೆ ಇದೆಲ್ಲವನ್ನೂ ಮುಚ್ಚಿ ಹಾಕುವುದು ಎಂದು ಅರ್ಥ. ಆದ ಕಾರಣ ಈ ಪೋಲೀಸ್ ಇಲಾಖೆಯ ಮುಖಾಂತರ ನೀವು ತನಿಖೆ ಮಾಡಿಸುವುದಕ್ಕೆ ಏಕೆ ಒಪ್ಪಲಿಲ್ಲ ಅಥವಾ ಮಾಡಿಸಲಿಲ್ಲ ?

ಶ್ರೀ ಗೋಪಿನಾಥ್ ಆರ್. ಸಾಂಡ್ರ:- ಆರ್ಡಿನರಿ ಕೇಸುಗಳಲ್ಲಿ ಪೋಲೀಸ್ ಖಾತೆಯವರು ಮಾಡತಕ್ಕದ್ದು ಒಂದು. ವಿಶೇಷವಾದಂತಹ ಪ್ರಶ್ನೆಯಾಗಿರುವುದರಿಂದ ಪೋಲೀಸ್‌ನವರನ್ನು ಬಿಟ್ಟು, ಸಿ.ಓ.ಡಿ.ಯ ಸ್ಪೆಷಲ್ ತನಿಖೆಗೆ ಏಕೆ ಆಜ್ಞೆ ಮಾಡಿದ್ದಾರೆ ಎನ್ನುವುದರ ಅರ್ಥ ಮಾನ್ಯ ಸದಸ್ಯರಿಗೆ ಗೊತ್ತಿರಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ನೇರವಾಗಿ ಅವರು ಉತ್ತರ ಕೊಡುತ್ತಾ ಇಲ್ಲ.

ಡಾ॥ ಜೀವರಾಜ್ ಆಳ್ವ:- ಸನ್ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕದ ಇತಿಹಾಸದಲ್ಲಿ ರಾಜಕಾರಣಿಗಳು ಮತ್ತು ಅಧಿಕಾರಿಗಳು ಸೇರಿ ಖಜಾನೆಯನ್ನು ದರೋಡೆ ಮಾಡುವಂತಹ ಕೆಲಸ ಇದು. ಕಂಟ್ರಾಕ್ಟ್‌ದಾರ ಕೊನೆಗೆ ಬರುತ್ತಾನೆ. ಈ ಆಶ್ರಯ ಕಾರ್ಯಕ್ರಮದ ಬಗ್ಗೆ ಆಲೋಚನೆ ಮಾಡಿರುವುದೇ ಸರ್ಕಾರದ ಖಜಾನೆಯನ್ನು ಹೇಗೆ ದರೋಡೆ ಮಾಡುವುದು ಎಂದು. ಅದಕ್ಕೆ ಪೂರ್ಣವಾಗಿ ಶಾಮೀಲಾಗಿರುವವರು ರಾಜಕಾರಣಿಗಳು ಹಾಗೂ ಅಧಿಕಾರದ ಗದ್ದುಗೆಯಲ್ಲಿ ಇದ್ದವರು, ಅಧಿಕಾರಿಗಳು. ಈ ಎರಡು ಜನರನ್ನು ಬಿಟ್ಟು ಸಿಓಡಿಯವರು ಏನು ಮಾಡುತ್ತಾರೆ. ಈಗ ಅಧಿಕಾರದ ಸ್ಥಾನದಲ್ಲಿ ಇರುವವರೆನ್ನು ನಾನೂ ಒಪ್ಪಬೇಕಾಗುತ್ತದೆ. ತಾವೂ ಒಪ್ಪಬೇಕಾಗುತ್ತದೆ. ಇವತ್ತು ಸುಮ್ಮನೇ ಕಮಿಷನರ್‌ನ್ನಾಗಲಿ, ಇತರ ಅಧಿಕಾರಿಗಳನ್ನಾಗಲಿ ಟ್ರಾನ್ಸ್‌ಫರ್ ಮಾಡಿದ್ದೀರಿ.' ಈ ಅಧಿಕಾರ ಸ್ಥಾನದಲ್ಲಿ ಇದ್ದ ರಾಜಕಾರಣಿಗಳ ಮೇಲೆ ನಿಮ್ಮ ಕೈಹೋಗುವುದಿಲ್ಲ. ಈ ಮೆಟಿರಿಯಲ್ ಬಂದಿದೆ ಎಂದು ಹೇಳಿ ಸರ್ಟಿಫೈ ಮಾಡಿದ ಅಧಿಕಾರಿ ಹೋಗುತ್ತಾನೆ. ಅಲ್ಲಿ ನಿಮಗೆ ಕಂಟ್ರಾಕ್ಟ್‌ದಾರ ಸಿಗುತ್ತಾನೆ. ಆ ಕಂಟ್ರಾಕ್ಟ್‌ದಾರ ಏನು ಮಾಡಿದ್ದಾನೆಂದರೆ, ನಿಮಗೆ ಕಮಿಷನ್ ಕೊಟ್ಟಿದ್ದಾನೆ. ಅದು 10 ಅಥವಾ 15 ಪರ್ಸೆಂಟ್ ಕಮಿಷನ್ ಕೊಟ್ಟಿದ್ದಾನೆ. ಅದು ಲೋಕಕ್ಕೆ ಗೊತ್ತಾಗಿದೆ. ಆದುದರಿಂದ ಮಾನ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ, ನಿಮಗೆ ಕೆಚ್ಚು ಇದ್ದರೆ, ಕ್ಲಾರಿಟಿ ಇದ್ದರೆ ಸಿಓಡಿಗೆ ಡೈರೆಕ್ಷನ್ ಕೊಡಿ. ಇದಕ್ಕೆ ಪೂರ್ಣವಾಗಿ ಸಿಓಡಿ ಅಧಿಕಾರಿಗಳಿರಲಿ, ಪೊಲಿಟಿಕಲ್ ಆಕ್ಷನ್ ತೆಗೆದುಕೊಳ್ಳಬೇಕಾದರೆ ಧೈರ್ಯವಾಗಿ ತೆಗೆದುಕೊಳ್ಳಬೇಕು. ಹೆಸರಿಗೆ ಯಾವನೋ ಒಬ್ಬ ಕಂಟ್ರಾಕ್ಟ್‌ದಾರನ ಮೇಲೆ ಎಫ್‌ಐಆರ್‌ಗೆ ಹಾಕಿ, ಜೈಲಿಗೆ ಹಾಕಿ, ನಂತರ ಆ್ಯಂಟಿಸಿಪೇಟರಿ ಬೇಲ್ ಮೇಲೆ ಬಿಡುವಂತಹ ಈ ಒಂದು ಕಪಟ ನಾಟಕ ಬೇಡ. ಏಕೆಂದರೆ ನಿಮ್ಮ ಸರ್ಕಾರದ ಬಗ್ಗೆ ನಮಗೆ ನಂಬಿಕೆ ಇದೆ. ನೀವು ಏನೋ ಮಾಡುತ್ತೀರಿ ಎಂದು ನಂಬಿದ್ದೇವೆ. ಇತ್ತೀಚೆಗೆ ನಿಮ್ಮ ಸರ್ಕಾರದ ವ್ಯವಸ್ಥೆಯಲ್ಲಿ ನಿಮ್ಮ ರಾಜಕಾರಣಿಗಳನ್ನು ಪ್ರೊಟೆಕ್ಟ್ ಮಾಡುವಂತಹ ವ್ಯವಸ್ಥೆ ಕಂಡುಬರುತ್ತಿದೆ. ಆ ರೀತಿ ಆದರೆ ಕರ್ನಾಟಕದ ಜನತೆ ನಿಮ್ಮನ್ನು ಕ್ಷಮಿಸುವುದಿಲ್ಲ ಎಂದು ನಾನು ಈ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇಲ್ಲಿ ತಮಗೆ ಗೊತ್ತಿರುವ ಹಾಗೆ, ಕುಷ್ಟಗಿ ಪ್ರಕರಣದಲ್ಲಿ ಮೂರು ದಿವಸದಲ್ಲಿ ಸಿಓಡಿಯಿಂದ ಇಂಟರಿಂ ವರದಿಯನ್ನು ತರಿಸಿಕೊಂಡಿದ್ದೀರಿ. ಇವತ್ತು ಇಷ್ಟೊಂದು ಪ್ರಮುಖವಾಗಿರುವಂತಹ ವಿಷಯದ ಬಗ್ಗೆ ಸುಮಾರು 20 ಕೋಟಿ ರೂಪಾಯಿ

ದುರುಪಯೋಗವಾಗಿರುವಂತಹ ಈ ಸಂದರ್ಭದಲ್ಲಿ ಒಂದು ಇಂಟರಿಂ ವರದಿಯನ್ನು ತೆಗೆದುಕೊಂಡು ಸಂಬಂಧಪಟ್ಟವರ ಮೇಲೆ ಕ್ರಮತೆಗೆದುಕೊಳ್ಳುವಂತಹ ಪ್ರಯತ್ನ ಮಾಡುತ್ತಿಲ್ಲದಿರುವುದನ್ನು ನೋಡಿದಾಗ ತನಿಖೆಯನ್ನು ಮಾಡಿಸದೆ ಈ ಭ್ರಷ್ಟಾಚಾರವನ್ನು ಮುಚ್ಚಿ ಹಾಕುತ್ತಿದ್ದಾರೆ ಎನ್ನುವಂತಹ ಭಾವನೆ ಜನರಲ್ಲಿ ಬಂದಿದೆ. ಅದಕ್ಕೆ ನೀವು ಒತ್ತು ಕೊಟ್ಟಂತೆ ಆಗುತ್ತದೆ. ಈಗ ನಾನು ನಿಮ್ಮನ್ನು ನೇರವಾಗಿ ಕೇಳುವಂಥಾದ್ದು ಏನೆಂದರೆ, ಈ 20 ಕೋಟಿ ರೂಪಾಯಿಗಳು ದುರುಪಯೋಗ ಆಗಿರುವಂತಹ ಈ ಸಂದರ್ಭದಲ್ಲಿ, ದಯಮಾಡಿ ನೀವು ತಪ್ಪು ತಿಳಿದಕೊಳ್ಳದೆ ಇದ್ದರೆ ಒಂದು ಮಾತು ಹೇಳುತ್ತೇನೆ. ಏನೆಂದರೆ, ನಿಮಗೆ ಪ್ರಾರಂಭದಲ್ಲಿ ಇದ್ದಂತಹ ಕಳಕಳಿ ಈಗ ಇಲ್ಲ. ನಿಮ್ಮ ಖುರ್ಚಿಗೆ ಈಗ ಧಕ್ಕೆ ಬಂದಿದೆ ಎನ್ನುವ ಕಾರಣದಿಂದ ನೀವು ಸಿಓಡಿಯವರಿಗೆ ಗೋ ಸ್ಲೋ ಎಂದು ಹೇಳಿದ್ದೀರಿ ಎನ್ನುವ ಸುದ್ದಿ ನಮಗೆ ಬಂದಿದೆ. ಆದ್ದರಿಂದ ಈಗಲಾದರೂ ಆ ಇಂಟರಿಂ ವರದಿಯನ್ನು ತರಿಸಿಕೊಂಡು ಸಂಬಂಧಪಟ್ಟ ಕಂಟ್ರಾಕ್ಟ್‌ದಾರರನ್ನು, ಅಧಿಕಾರಿಗಳನ್ನು ಬಂಧನ ಮಾಡುತ್ತೀರಾ? ಎಷ್ಟು ಅವಧಿಯೊಳಗೆ ಮಾಡುತ್ತೀರಿ? ಏಕೆಂದರೆ ಅದು ಬಡ ಬೋರೇಗೌಡನ ದುಡ್ಡು. ಅಭಿವೃದ್ಧಿ ಕಾರ್ಯಕ್ಕೆ ದುಡ್ಡು ಇಲ್ಲದೆ ಇರುವಾಗ ಈ ರೀತಿ ನೀವು ಹಣವನ್ನು ದುರುಪಯೋಗ ಮಾಡಿಕೊಳ್ಳುವಂತಹ ಅಧಿಕಾರವನ್ನು ನಿಮಗೆ ಯಾರು ಕೊಟ್ಟರು? ಇದಕ್ಕೆ ತಾವು ದಯಮಾಡಿ ನೇರವಾಗಿ ಉತ್ತರವನ್ನು ಕೊಡಬೇಕು.

ಶ್ರೀ ಗೋಪಿನಾಥ್ ಆರ್. ಸಾಂಡ್ರ:– ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಯಡಿಯೂರಪ್ಪನವರು ಇದಕ್ಕೆ ಸಂಬಂಧಪಟ್ಟ ಹಾಗೆ ಕೆಲವು ಮಾತುಗಳನ್ನು ಆಡಿದ್ದಾರೆ. ಅವರು ತನಿಖೆ ಸರಿಯಾಗಿ ನಡೆಯುತ್ತಿದೆಯೋ ಇಲ್ಲವೋ ಎಂದು ಕೇಳುತ್ತಿದ್ದಾರೆ. ಯಾರು ಈ ತನಿಖೆಗೆ ಪಾತ್ರರಾಗಿದ್ದಾರೆ, ಅವರು ಕಂಟ್ರಾಕ್ಟರ್ ಆಗಲಿ, ಅಫೀಷಿಯಲ್ಸ್ ಆಗಲಿ, ನಾನ್‌ಅಫೀಷಿಯಲ್ಸ್ ಆಗಲಿ, ಯಾರೇ ಇರಲಿ, ಸಿಓಡಿ ರಿಪೋರ್ಟ್ ಬಂದತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ನಾನು ಈ ಖುರ್ಚಿಗೆ, ಈ ಅಧಿಕಾರಕ್ಕೆ ಅಂಟಿಕೊಂಡಂತಹ ವ್ಯಕ್ತಿಯಲ್ಲ. ನಾನು ಏನು ಹೇಳುತ್ತೇನೆ. ಅದನ್ನು ಅನುಷ್ಠಾನಕ್ಕೆ ತರುವಂತಹ ವ್ಯಕ್ತಿ ನಾನು. ನಾನು ಸ್ಪಷ್ಟವಾಗಿ ಹೇಳುತ್ತೇನೆ, ಸಿಓಡಿ ರಿಪೋರ್ಟ್ ಬಂದತಕ್ಷಣ ನಿರ್ದಾಕ್ಷಿಣ್ಯವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಶ್ರೀಮಾನ್ ಯಡಿಯೂರಪ್ಪನವರು ಹೇಳಿದ ಹಾಗೆ, ನಮ್ಮ ಮಾನ್ಯ ಮೊಯಿಲಿಯವರ ಸರ್ಕಾರದಲ್ಲಿ ಪ್ರಾಮಾಣಿಕವಾದ ರೀತಿಯಿಂದ ನಿಷ್ಠೆಯಿಂದ, ಯಾರು ತಪ್ಪಿತಸ್ಥರು ಇದ್ದಾರೆ ಅಂತಹವರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಮತ್ತೊಮ್ಮೆ ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸರ್ಕಾರದ ಖಜಾನೆಯನ್ನು ಲೂಟಿ ಮಾಡುವಂತಹ ಹಗಲು ದರೋಡೆ ಇದು. ಅವರನ್ನು ಏಕೆ ಬಂಧಿಸಿಲ್ಲ, ಸಿಓಡಿಯಿಂದ ಒಂದು ಮಧ್ಯಂತರ ವರದಿಯನ್ನು ನೀವು ಏಕೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿ ಮತ್ತು ಅಲ್ಲಿ ಅಧಿಕಾರಿಗಳನ್ನೂ ಕೂಡ ಸಸ್ಪೆಂಡ್ ಮಾಡಿಲ್ಲ. ಅವರು ನನ್ನ ಪ್ರಶ್ನೆಗೆ ಉತ್ತರ ಕೊಡಲಿ. ಇಲ್ಲಿ ಉತ್ತರದಲ್ಲಿ ಏನು ಹೇಳಿದ್ದಾರೆಂದರೆ, "ಕಾಂಟ್ರಾಕ್ಟ್ ರದ್ದತಿಯಿಂದಾಗಿ 86 ಲಕ್ಷ ರೂಪಾಯಿಗಳನ್ನು ದಿನಾಂಕ 9–9–92ರಂದು ಆ್ಯಂಕರ್ ಲೈನ್ಸ್ ಪ್ರೈವೇಟ್ ಲಿಮಿಟೆಡ್, ಮಂಗಳೂರು, ಇವರಿಂದ ವಾಪಸ್ಸು ಪಡೆಯಲಾಗಿದೆ" ಎಂದು ಹೇಳಿದ್ದಾರೆ. ನೀವು ಅದನ್ನು ವಾಪಸ್ಸು ಪಡೆದಾಗ ಕೇವಲ ಅಸಲನ್ನು ಪಡೆದಿದ್ದೀರೋ ಅಥವಾ ಕೋಟ್ಯಾಂತರ ರೂಪಾಯಿ ಕೊಟ್ಟಂತಹ ಹಣಕ್ಕೆ ಬಡ್ಡಿ ಸಹಿತ ವಾಪಸ್ಸು ಪಡೆದಿದ್ದೀರೋ? ಎಷ್ಟು ತೆಗೆದುಕೊಂಡಿದ್ದೀರಿ ಎನ್ನುವ ವಿವರ ಕೊಡಿ.

ಶ್ರೀ ಗೋಪಿನಾಥ ಆರ್. ಸಾಂಡ್ರ:– ಬಡ್ಡಿ ಸಹಿತ ತೆಗೆದುಕೊಂಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಎಷ್ಟು ತೆಗೆದುಕೊಂಡಿದ್ದೀರಿ ಎಂದು ಹೇಳಿ.

ಶ್ರೀ ಗೋಪಿನಾಥ ಆರ್. ಸಾಂಡ್ರ:– ಮೂರು ಕೋಟಿ ರೂಪಾಯಿಗಳನ್ನು ನಾವು ವಸೂಲು ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಬಡ್ಡಿ ಎಷ್ಟು ಹಾಕಿದ್ದೀರಿ ?

ಶ್ರೀ ಗೋಪಿನಾಥ ಆರ್. ಸಾಂಡ್ರ:– ಬ್ಯಾಂಕ್‌ನವರು ಗ್ಯಾರಂಟಿ ಕೊಟ್ಟಿದ್ದಾರೆ. ಆ ಗ್ಯಾರಂಟಿ ಪ್ರಕಾರ, ಟರ್ಮ್ಸ್ ಅಂಡ್ ಕಂಡೀಷನ್ಸ್ ಪ್ರಕಾರ ನಾವು ಹಣವನ್ನು ತೆಗೆದುಕೊಂಡಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್ ಯಡಿಯೂರಪ್ಪ:– ಕಂಟ್ರಾಕ್ಟರ್‌ಗೆ ಅಡ್ವಾನ್ಸ್ ಕೊಟ್ಟಿರಲ್ಲ, ಇದು ಯಾರಪ್ಪನ ದುಡ್ಡು ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಗುತ್ತಿಗೆದಾರರಿಂದ ಅನ್ಯಾಯವಾಗಿದೆ. ಗುತ್ತಿಗೆದಾರರನ್ನು ಬಂಧಿಸುವುದರಲ್ಲಿ ಇವರು ಹಿಂದುಮುಂದು ನೋಡುತ್ತಿದ್ದಾರೆ. ಪ್ರಾರಂಭದಲ್ಲಿ ತಾವು ಮಂತ್ರಿಗಳಾದ ನಂತರ ಏನು ಹೇಳಿದಿರಿ, ಎಷ್ಟು ಧೈರ್ಯವಾಗಿ ಹೇಳಿದಿರಿ, ದಿಟ್ಟತನದಿಂದ ಹೇಳಿದಿರಿ....

ಶ್ರೀ ಗೋಪಿನಾಥ್ ಆರ್. ಸಾಂಡ್ರ:– ನನಗೆ ಈಗಲೂ ಅದೇ ಧೈರ್ಯ ಇದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ತಾವು ಅವಧಿಯನ್ನು ನಿಶ್ಚಯವೇನಾದರೂ ಮಾಡಿದ್ದೀರಾ ? ಒಂದು ತಿಂಗಳು, ಎರಡು ತಿಂಗಳು ಎಂದು ಅವಧಿ ನಿಶ್ಚಯ ಮಾಡಿದ್ದೀರಾ ?

(ಗೊಂದಲ)

ಅಧ್ಯಕ್ಷರು:– ಈ ಬಗ್ಗೆ ಅವರ ಇಲಾಖಾ ಬೇಡಿಕೆ ಬಂದಾಗ ತಾವು ಮಾತನಾಡಬಹುದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಇದರಲ್ಲಿ 20 ಕೋಟಿ ರೂಪಾಯಿ ಲೂಟಿ ಮಾಡಿದ್ದಾರೆ. ಸಿ.ಓ.ಡಿ.ಗೆ ರೆಫರ್ ಮಾಡಿರುವುದು ಅದನ್ನು ಮುಚ್ಚಿಹಾಕುವುದಕ್ಕೋಸ್ಕರ. ಕಂಟ್ರಾಕ್ಟರ್ ಸರ್ಕಾರಕ್ಕೆ ಇಷ್ಟಿಷ್ಟು ಕಮಿಷನ್ ಕೊಟ್ಟಿದ್ದೇನೆ ಎಂದು ಸತ್ಯ ಹೇಳುವುದಕ್ಕೆ ಹೊರಟಿದ್ದಾನೆ. ನೀವೂ ಅವರೂ ಹೊಂದಾಣಿಕೆ ಮಾಡಿಕೊಳ್ಳುವಂಥ ಪ್ರಯತ್ನ ನಡೆಯುತ್ತಿದೆ. ಒಬ್ಬ ಸಚಿವರನ್ನು ಅದಕ್ಕೆ ನೇಮಕ ಮಾಡಿದ್ದಾರೆ ಎಂದು ನಮಗೆ ಗೊತ್ತಿದೆ. ಈ ನೀತಿಯನ್ನು ಪ್ರತಿಭಟನೆ ಮಾಡಿ ಬಡವರಿಗೆ ಮನೆ ಕಟ್ಟುವುದರಲ್ಲಿ ನೀವು ಅನ್ಯಾಯಮಾಡಿ ಇದುವರೆಗೆ ಮೂರು ಸಾವಿರ ಮನೆಗಳನ್ನು ಕಟ್ಟಿದ್ದೇವೆ ಎಂದು ಹೇಳುವುದಕ್ಕೆ ನಾಚಿಕೆಯಾಗುವುದಲ್ಲಿವೇ ? 20 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಅಭಿವೃದ್ಧಿ ಕಾರ್ಯಕ್ಕೆ ದುಡ್ಡು ಇಲ್ಲ. ಈ ರೀತಿ ಲೂಟಿ ಮಾಡುತ್ತಿರತಕ್ಕಂಥ ನೀತಿ ಏನು ಇದೆ, ಅದನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ಇದು ರಾಜ್ಯದ ಜನರಿಗೆ ಗೊತ್ತಾಗಲಿ.

(ಗೊಂದಲ)

ಶ್ರೀ ಬಿ.ಎಸ್ ಯಡಿಯೂರಪ್ಪ:– ಮೇಜರ್ ಶಸ್ತ್ರ ಚಿಕಿತ್ಸೆ ಮಾಡುತ್ತೇನೆ ಎಂದು ಹೇಳಿ ಅವರ ಜೊತೆ ನೀವೂ ಸಹ ಶಾಮೀಲಾಗಿದ್ದೀರಿ. ಸರ್ಕಾರದ ಈ ನೀತಿಯನ್ನು ಪ್ರತಿಭಟನೆ ಮಾಡುತ್ತೇನೆ. 20

ಕೋಟಿ ರೂಪಾಯಿ ನುಂಗಿರುವವರ ಹಾಗೂ ಅಧಿಕಾರಿಗಳ ಬಗ್ಗೆ ನಿಮ್ಮ ಸರ್ಕಾರ ಶಾಮೀಲಾಗಿ ಅನ್ಯಾಯ ಮಾಡಿದ್ದೀರಿ. ಇದರ ಬಗ್ಗೆ ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗುತ್ತೇವೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಬಿ.ಎಸ್. ಯಡಿಯೂರಪ್ಪನವರು ಸಭಾತ್ಯಾಗ ಮಾಡಿದರು.)

ಶ್ರೀ ವಾಟಾಳ ನಾಗರಾಜ್:– ನಿಮ್ಮ ಬಗ್ಗೆ ನಮಗೆ ವೈಯುಕ್ತಿಕವಾಗಿ ಏನೂ ಇಲ್ಲ. ಇದನ್ನು ನಾನು ಕೂಡ ಪ್ರತಿಭಟನೆ ಮಾಡುತ್ತೇನೆ.

(ಗೊಂದಲ)

ಕರ್ನಾಟಕದಲ್ಲಿ ಕೈಗಾರಿಕಾ ಎಸ್ಟೇಟುಗಳು

459 (2176): ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ):–

ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಯಾವ ಯಾವ ತಾಲೂಕುಗಳಲ್ಲಿ ಈವರೆವಿಗೂ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲಾಗಿದೆ ? (ಜಿಲ್ಲಾವಾರು ವಿವರಗಳನ್ನು ನೀಡುವುದು);

2. 1989–90, 90–91, 91–92, 92–93 (ಫೆಬ್ರವರಿ 93ರವರೆಗೆ) ಎಷ್ಟು ತಾಲೂಕುಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ? (ಜಿಲ್ಲಾವಾರು ವಿವರಣೆ ನೀಡುವುದು);

3. ಚನ್ನಪಟ್ಟಣ ತಾಲೂಕಿನ ತಗಚಗೆರೆ ಗ್ರಾಮದಲ್ಲಿ ಉದ್ದೇಶಿತ ಕೈಗಾರಿಕಾ ವಸಾಹತು ಸ್ಥಾಪಿಸಲು ಈವರೆವಿಗೆ ಜಮೀನು ಸ್ವಾಧೀನಪಡಿಸಿಕೊಂಡಿಲ್ಲದಿರುವುದು ನಿಜವೇ;

4. ಹಾಗಿದ್ದಲ್ಲಿ ಕಾರಣಗಳೇನು;

5. ಹಿಂದಿನ ಮಾನ್ಯ ಕೈಗಾರಿಕಾ ಸಚಿವರು ಸದನದಲ್ಲಿ ನೀಡಿದ್ದ ಆಶ್ವಾಸನೆಯಂತೆ ಚನ್ನಪಟ್ಟಣ ತಾಲೂಕಿನಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಲು ತೆಗೆದುಕೊಂಡ ಕ್ರಮಗಳ ಅನುಷ್ಠಾನದ ಬಗ್ಗೆ ನಿಖರವಾದ ಸಮಯಾವಕಾಶ ತಿಳಿಸುವುದು ?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) ಇವರ ಪರವಾಗಿ ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

1. 107 ಕೈಗಾರಿಕಾ ವಸಾಹತುಗಳನ್ನು 82 ತಾಲೂಕುಗಳಲ್ಲಿ ಸ್ಥಾಪಿಸಲಾಗಿದೆ. (ಅನುಬಂಧ – ಎ)

2. ವಿವರಣಾ ಪಟ್ಟಿ ಲಗತ್ತಿಸಿದೆ (ಅನುಬಂಧ – ಬಿ)

3. ಚನ್ನಪಟ್ಟಣ ತಾಲೂಕಿನ ತಗಚಗೆರೆ ಗ್ರಾಮದಲ್ಲಿ 22.37 ಎಕರೆ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಲಿಯವರು ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಂಡಿದ್ದು ಈ ಸಂಬಂಧ ಪ್ರಕಟಣೆ ಹೊರಡಿಸಲಾಗಿದೆ.

4. ಉದ್ಭವಿಸುವುದಿಲ್ಲ.

5. ಜಮೀನಿನ ತಪಾಸಣೆಯನ್ನು ನಡೆಸಿ ನಂತರ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಲಿಗೆ ಜಮೀನಿನ ಮೌಲ್ಯವನ್ನು ಪಾವತಿಸಲಾಗುವುದು. ಜಮೀನಿನ ವರ್ಗಾವಣೆ ಆದ ನಂತರ ಕೈಗಾರಿಕಾ ವಸಾಹತು ಸ್ಥಾಪಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ANNEXURE - A

DETAILS OF INDUSTRIAL ESTATE IN KARNATAKA

Sl. No.	District	Taluk	Name of the Indl. Estate	Year of commence-ment of I.E
1.	Bangalore (U)	Bangalore North	Rajajinagar	1960
			Peenya I stage	1974
			Peenya II stage	1978
			Peenya III stage	1986
			Yelahanka	1983
			B.E.L.	1984
		Bangalore South	Dyavasandra	1972
			H.A.L.	1973
			N.G.E.F.	1980
			Kumbalgodu	1988
			Keonics	1985
2.	Bangalore (R)	Annekal Tq.	Bommasandra	1988
		Anekal Tq.	Veerasandra	1982
		Ramanagaram	Ramanagaram	1982
		Hosakote	Hosakote	1988
		Doddaballapur	Doddaballapur	1986
		Magadi	Magadi	1988
		Kanakapura	Kanakapura	1991
3.	Kolar	Bangarpet	K.G.F.	1980
		Chikkaballapur	Muddenahalli	1980
		Kolar	Tamaka	1984
		Kolar	Kyalanoor	1992
		Chinthamani	Chinthamani	1985
		Malur	Malur	1985
		Mulbhagal	Mulbhagal	1990
		Siddlaghatta	Siddlaghatta	1991
		Gowribidhanur	Gowribidanur	1991

4.	Tumkur	Tumkur	Tumkur	1973
		Tumkur	Antharasanahalli	1985
		Tumkur	Hirehally	1984
		Sira	Sira	1969
		Tiptur	Tiptur	1984
		Kunigal	Kunigal	1987
5.	Mysore	Mysore	Yadavagiri	1972
		Mysore	Metagalli	1983
		Mysore	Hebbal	1987
		Kollegal	Kollegal	1967
		Hunsur	Hunsur	1980
		Periyapatna	Seegur	1980
		Nanjangud	Nanjangud	1984
6.	Dharwad	Dharwad	Hubli I&II Stage	1960
		Dharwad	Lakkammanahalli	1984
		Dharwad	Ramankoppa	1992
		Gadag	Gadag	1977
		Ranibennur	Ranibennur	1983
		Haweri	Haweri	1990
		RON	RON	1992
7.	Chitradurga	Chitradurga	Chitradurga	1981
		Harihar	Harihar	1978
		Hosadurga	Hosadurga	1986
		Davanagere	Davanagere	1972
8.	North Kanara	Sirsi	Sirsi	1980
		Dandeli	Dandeli	1965
		Kumta	Kumta	1985
		Haliyala	Haliyala	1986
		Bhatkal	Bhatkal	1987
		Soppa	Ramnagar	1989
		Karwar	Karwar	1991
9.	Belgaum	Belgaum	Belgaum (Udyambag)	1961
		Belgaum	Belgaum (Angol)	1982
		Kahapur	Khanapur	1984
		Gokak	Gokak	1986
		Bylahongal	Bylahongal	1990

10.	Gulbarga	Gulbarga	Gulbarga	1962
		Gulbarga	Shahabad	1982
		Kappanur	Kappanur	1984
		Chithapur	Chithapur	1983
		Aland	Aland	1990
		Shorapur	Shorapur	1990
		Chincholy	Chincholy	1991
		Jeevargi	Jeevargi	1992
11.	Raichur	Raichur	Raichur	1981
		Lingasagur	Lingasagur	1991
		Gangavathy	Gangavathy	1992
12.	Bellary	Bellary	Bellary	1966
		Hospet	Hospet	1981
13.	Bijapur	Bijapur	Bijapur	1980
		Jamakhandi	Jamakhandi	1965
		Bagalkote	Bagalkote	1983
14.	Bidar	Bidar	Bidar Gunj	1968
		Bidar	Navabad	1986
		Humnabad	Humnabad	1985
		Bhalki	Bhalki	1986
15.	Mandya	Mandya	Mandya I Stage	1976
		Mandya	Mandya II Stage	1988
		Srirangapatna	Srirangapatna	1982
		Pandavapura	Pandavapura	1990
16.	Hassan	Hassan	Hassan	1982
		Sakaleshpur	Sakaleshpur	1983
		Arasikere	Arasikere	1984
		Channarayapatna	Channarayapatna	1987
		Holenarasipur	Holenarasipur	1985
17.	Kodagu	Madikeri	Madikeri	1967
		Somawarpet	Kushalnagar	1987
18.	Shimoga	Shimoga	Shimoga	1968
		Shimoga	Mandali	1992
		Bhadravathi	Bhadravathi	1979
		Shikaripura	Shiralkoppa	1967
		Sagar	Sagar	1984

19.	Chickmag alur	Chickmagalur	Chickmagalur	1983
		Kadur	Kadur	1962
20.	South Kanara	Mangalore	Yeyyadi	1960
		Mangalore	Baikampady	1974
		Udupi	Manipal	1982
		Karkala	Karkala	1979
		Karkala	Moodabidre	1983
		Kundapur	Koteshwar	1990

ANNEXURE - B

STATEMENT SHOWING DETAILS OF SHEDS TAKEN UP BY KSSIDC DURING 1989 TO 1993 TALUKWISE AND DISTRICTWISE

1989-90

Sl. No.	District	Taluk	Name of the Estate
1.	Bangalore	1. Bangalore North	a) Peenya I stage
			b) Peenya II stage
			c) Peenya III stage
		2. Bangalore South	d) Dyavasandra
		3. Anekal	e) Bommasandra
2.	Belgaum	1. Belgaum	a) Angol
			b) Udyambag
		2. Khanpur	c) Khanapur
3.	Gulbarga	1. Gulbarga	a) kapnoor
4.	Bangalore Rural	1. Kanakapura	a) Kanakapura
5.	Kolar	1. Bangarpet	a) K.G.F.
		2. Shidlaghatta	b) Shidlaghatta
		3. Gowribidanur	c) Gowribidanur
6.	Mysore	1. Mysore	a) Metagalli
			b) Hebbal
		2. Kollega	c) Kollegal
7.	Mandya	1. Srirangapatna	a) Srirangapatna
8.	D.K.	1. Kundapur	a) Koteshwara
9.	U.K.	1. Karwar	a) Karwar
10.	Tumkur	1. Tumkur	a) Tumkur

STATEMENT SHOWING DETAILS OF SHEDS TAKEN UP BY KSSIDC DURING 1989 TO 1993 TALUK WISE AND DISTRICTWISE

1990-91

Sl. No.	District	Taluk	Name of the Estate
1.	Bangalore	1. Bangalore North	1. Peenya I stage
			2. Peenya II stage
			3. Peenya III stage
		2. Bangalore South	1. Dyavasandra
2.	Bangalore (R)	1. Anekal	1. Bommasandra
		2. Doddaballapur	2. Doddaballapur
3.	Bellary	1. Bellary	1. Bellary
4.	Belgaum	1. Belgaum	1. Udyambag
			2. Angol
		2. Bylahongal	3. Bylahongal
5.	Dharwar	1. Gadag	1. Gadag
		2. Hubli	2. Hubli
6.	Gulbarga	1. Gulburga	1. Kapnoor
		2. Aland	2. Aland
		3. Shorapur	3. Shorapur
		4. Chincholi	4. Chincholi
7.	Hassan	1. Hassan	1. Hassan
8.	Kolar	1. Bangarpet	1. K.G.F.
9.	Mandya	1. Pandavapura	1. Pandavapura
10.	Mysore	1. Mysore	1. Yadavagiri
			2. Hebbal
		2. Nanjangud	3. Nanjangud
11.	Madikeri	1. Madikeri	1. Madikeri
12.	Raichur	1. Lingasagoor	1. Lingasagoor
13.	Shimoga	1. Shimoga	1. Shimoga
		2. Bhadravathi	2. Bhadravathi
14.	D.K.	1. Mangalore	1. Bykampady
			2. Yeyyadi
		2. Udupi	3. Manipal

STATEMENT SHOWING DETAILS OF SHEDS TAKEN UP BY KASSIDC DURING 1989 TO 1993 TALUK WISE AND DISTRICT WISE

1991-92

Sl. No.	District	Taluk	Name of the Estate
1.	Bangalore	1. Anekal	1. Bommasandra
		2. Bangalore South	2. Kumbalgodu
		3. Anekal	3. NGEF
			4. Veerasandra
		4. Bangalore North	5. Yelahanka
2.	Bangalore Rural	1. Kanakapura	1. Kanakapura
		2. Doddaballapur	2. Doddaballapur
3.	Mysore	1. Mysore	1. Yadavagiri
			2. Hebbal
4.	Mandya	1. Mandya	1. Mandya I stage
5.	Shimoga	1. Shimoga	1. Shimoga
		2. Sagar	2. Sagar
6.	Chikkamagalore	1. Chikkamagalore	1. Chikkamagalore
7.	Dharwar	1. Hubli	1. Hubli
		2. Haveri	2. Haveri
		3. Hubli	3. Ramankoppa
		4. Ron	4. Ron
8.	Belgaum	1. Belgaum	1. Angol
			2. Udyambag
9.	Bijapur	1. Bijapur	1. Mahalbagalyet
		2. Bagalkot	2. Bagalkot
10.	Raichur	1. Raichur	1. Raichur
		2. Gangavathi	2. Gangavathi
11.	Gulbarga	1. Kapnoor	1. Kapnoor
		2. Jevargi	2. Jevargi

STATEMENT SHOWING DETAILS OF SHEDS TAKEN UP BY KSSIDC DURING 1989 TO 1993 TALUK WISE AND DISTRICT WISE

1992-93 February

Sl. No.	District	Taluk	Name of the Estate
1.	Bangalore Rural	1. Hoskote	1. Hoskote
2.	Kolar	1. Kolar	1. Kyalanoor
		2. Malur	2. Malur
3.	Tumkur	1. Tumkur	1. Tumkur
		2. Tiptur	2. Tiptur
4.	Mysore	1. Nanjangud	1. Nanjangud
		2. Gundalpet	2. Gundalpet
		3. Mysore	3. Hebbal
		4. Hunsur	4. Hunsur
5.	Mandya	1. Maddur	1. Somanahalli
		2. Srirangapatna	2. Srirangapatna
6.	Shimoga	1. Shimoga	1. Mandali
			2. Honnali
7.	D.K.	1. Mulki	1. Mulki
8.	Dharwar	1. Hubli	1. M.T. Sagar
		2. Shiggon	2. Shiggon
9.	U.K.	1. Halyal	1. Halyal
10.	Gulbarga	1. Gulbarga	1. Kapnoor
		2. Sedum	2. Sedum
11.	Bellary	1. Hospet	1. Hospet
12.	Bijapur	1. Jamakhandi	1. Banahatti
		2. Mudhol	2. Mudhol
		3. Muddebihal	3. Muddebihal

ಶ್ರೀ ಸಾದತ್ ಆಲಿ ಖಾನ್:– ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ನಾಲ್ಕನೇ ಸಾರಿ ಬರುತ್ತಿರುವುದು. ಇದು ನನ್ನದೇ ಪ್ರಶ್ನೆ. ಈ ಪ್ರಶ್ನೆ 1990ರಲ್ಲಿ ಬಂದಿದೆ. 1991ನೇ ಇಸವಿಯಲ್ಲಿ ಬಂದಿದೆ, 1992ರಲ್ಲಿ ಬಂದಿದೆ, ಈಗ 93ರಲ್ಲಿ ಬಂದಿದೆ. ಇದು ಸ್ಟೀರಿಯೊಟೈಪ್ ತರಹ ಪ್ರಿಂಟ್ ಮಾಡಿ ನಮಗೆ ಬಂದಿದೆ. ಉತ್ತರ ಕೊಡುತ್ತಿರುವುದು ಈಗ ಕರ್ನಾಟಕದಲ್ಲಿ 82 ತಾಲ್ಲೂಕುಗಳಲ್ಲಿ 107 ಇಂಡಸ್ಟ್ರಿಯಲ್ ಎಸ್ಟೇಟ್‌ಗಳನ್ನು ನೀವು 33 ವರ್ಷಗಳಲ್ಲಿ ಮಾಡಿದ್ದೀರಿ. ಈ ಚನ್ನಪಟ್ಟಣದ್ದು ತಗಚಕೆರೆಯಲ್ಲಿ 22.37 ಎಕರೆ ಲ್ಯಾಂಡ್ ಅಕ್ವೈರ್ ಮಾಡುತ್ತಿದ್ದೇವೆ ಎಂದು ಇದೇ ಉತ್ತರ ಬರುತ್ತಿರುವುದು. ಇನ್ನೂ ಹಣ ರಿಲೀಸ್ ಮಾಡಿಲ್ಲ. ಎಲ್ಲಿ ಇದನ್ನು ಅಕ್‌ವೈರ್ ಮಾಡುವುದಕ್ಕಾಗುತ್ತದೆ ? ಸೇಮ್ ಕ್ವಶ್ಚನ್, ನಾನು

ಹಾಕುತ್ತಿದ್ದೇನೆ. ಸೇಮ್ ಆನ್ಸರ್ ಮೂರು ವರ್ಷದಿಂದ ಬರುತ್ತಿದೆ. ಅದಕ್ಕೆ ನೀವು ಯಾವತ್ತು ಹಣವನ್ನು ರಿಲೀಸ್ ಮಾಡುತ್ತೀರಿ? ಯಾವತ್ತು ಈ ಅಕ್ವಿಜಿಷನನ್ನು ತೆಗೆದುಕೊಳ್ಳುತ್ತೀರಿ? ಹಣ ರಿಲೀಸ್ ಮಾಡಲಿಲ್ಲ ಎಂದರೆ ಅಕ್ವಿಜಿಷನ್ ಎಲ್ಲಿ ಆಗುತ್ತದೆ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):– ಮಾನ್ಯ ಅಧ್ಯಕ್ಷರೇ, ಕೆ.ಎಸ್.ಎಸ್.ಐ.ಡಿ.ಸಿ.ಯವರು 22.37 ಎಕರೆಗಳನ್ನು ತಗಚಕೆರೆ ಗ್ರಾಮದಲ್ಲಿ ತೆಗೆದುಕೊಳ್ಳಬೇಕು ಎಂದು ಈಗ ತೀರ್ಮಾನ ಮಾಡಿ ಕೆ.ಐ.ಎ.ಡಿ.ಬಿ. ಮೂಲಕ ಇದನ್ನು ತೆಗೆದುಕೊಳ್ಳಬೇಕು ಎಂದು ಅವರಿಗೆ ವಹಿಸಿದ್ದಾರೆ. ಈ ಮಂಡಲಿಯವರು ಇದರ ಬಗ್ಗೆ ಪ್ರಕಟಣೆಯನ್ನು ಸಹ ಹೊರಡಿಸಿದ್ದಾರೆ. ತಾವು ಹೇಳುವುದು ಸತ್ಯ ಇದೆ, ಇದರ ಬಗ್ಗೆ ಸ್ವಲ್ಪ ನಿಧಾನವಾಗಿದೆ. ಈ ವರ್ಷದಲ್ಲಿ ಖಂಡಿತ ಈ ಒಂದು ಇಂಡಸ್ಟ್ರಿಯಲ್ ಎಸ್ಟೇಟನ್ನು ಸ್ಥಾಪನೆ ಮಾಡುವುದಕ್ಕೆ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ. ಪಿ.ಜಿ.ಆರ್. ಸಿಂಧ್ಯ:– ಇವರು ಏನು ಇಂಡಸ್ಟ್ರಿಯಲ್ ಷೆಡ್‌ಗಳನ್ನು ಕಟ್ಟಿದ್ದಾರೆ ಇದರ ಅಲಾಟ್‌ಮೆಂಟ್‌ನಲ್ಲಿ ಮೂರು ವರ್ಷ, ನಾಲ್ಕು ವರ್ಷ, ಐದು ವರ್ಷ, ಆರು ವರ್ಷ ತೆಗೆದುಕೊಂಡಿದ್ದಾರೆ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ನಮ್ಮ ಕ್ಷೇತ್ರದಲ್ಲಿ ಅವರೇನು ಹೇಳಲಿಲ್ಲ, ಕೇಳಲಿಲ್ಲ, ಒಂದು ಸರ್ವೆ ಮಾಡಲಿಲ್ಲ ಏನೂ ಮಾಡಲಿಲ್ಲ, 40 ಷೆಡ್ಡುಗಳನ್ನು ಕಟ್ಟಿದ್ದಾರೆ. ಇನ್ನೂ ಕಟ್ಟುತ್ತಲೇ ಇದ್ದಾರೆ. ಒಂದು ಷೆಡ್ಡು ಸಹ ಅಲಾಟ್ ಮಾಡಿಲ್ಲ. ತಾವು ಒಂದು ಸಾರಿ ನಮ್ಮಲ್ಲಿ ಬಂದು ನೋಡಬೇಕು. ತಾವು ಅಲಾಟ್ ಮಾಡುವುದಕ್ಕೆ ಸಾಧ್ಯವೇ ಎಂದು ನಾನು ಕೇಳುತ್ತಿದ್ದೇನೆ. ಈಗ ಅಲ್ಲಿ ನರಿ, ನಾಯಿಗಳು, ಕತ್ತೆಗಳು, ಸೇರಿಕೊಂಡು ಆ ಷೆಡ್ಡುಗಳು ಕೆಲಸಕ್ಕೆ ಬಾರದಂತೆ ನಿಂತಿವೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ:– ಈಗ ನಾವು ಈ ಇಂಡಸ್ಟ್ರಿಯಲ್ ಎಸ್ಟೇಟನ್ನು ಎಸ್ಟಾಬ್ಲಿಷ್ ಮಾಡಬೇಕಾದರೆ ಅಲ್ಲಿರತಕ್ಕಂಥ ಒಂದು ಬೇಡಿಕೆಯನ್ನು ಸರ್ವೆ ಮಾಡಿ ಅಂದರೆ ಅಲ್ಲಿ ಎಷ್ಟು ಜನ ಮುಂದೆ ಬರುತ್ತಾರೆ, ಎಷ್ಟು ಜನ ಎಂಟರ್‌ಪ್ರಿನರ್ಸ್ ಇದ್ದಾರೆ. ಅದನ್ನು ಸರ್ವೆ ಮಾಡಿ ಇಂಡಸ್ಟ್ರಿಯಲ್ ಎಸ್ಟೇಟನ್ನು ಡೆವಲಪ್ ಮಾಡುತ್ತೇವೆ ಹಾಗೂ ಇಂಡಸ್ಟ್ರಿಯಲ್ ಶೆಡ್ಸನ್ನೂ ಕಟ್ಟುತ್ತೇವೆ. ನಿಮ್ಮ ಏರಿಯಾದಲ್ಲಿ ಇಂಡಸ್ಟ್ರಿಯಲ್ ಶೆಡ್ಸ್‌ಗಾಗಿ ಯಾರೂ ಬಂದು ಅದಕ್ಕೆ ಅಕ್ಯುಪೈ ಮಾಡಿಕೊಂಡಿಲ್ಲ ಎಂದರೆ ಆ ಪ್ರಶ್ನೆಗೆ ನನ್ನ ಹತ್ತಿರ ಈಗ ಉತ್ತರ ಇಲ್ಲ. ತಾವು ಬೇರೆ ಪ್ರಶ್ನೆ ಕೇಳಿದರೆ ನಾನು ಖಂಡಿತವಾಗಿ ಅದನ್ನು ಪರಿಶೀಲನೆ ಮಾಡುತ್ತೇನೆ. This question pertaining to his Taluk.

Sri P.G.R. SINDHYA:– In the entire State, ಕೆಎಸ್ ಐ ಡಿ ಸಿಯಿಂದ ಎಲ್ಲೆಲ್ಲಿ ಶೆಡ್ಸ್‌ಗಳನ್ನು ಕಟ್ಟಿದ್ದಾರೆ, ಅದರ ಅಲಾಟ್‌ಮೆಂಟ್ ಬಗ್ಗೆ ಹೇಳಬೇಕು. ನಾವು ಸಪರೇಟ್ ಕ್ವಶ್ಚನ್ ಕೇಳಬಹುದು. ಆದರೆ ತಾವು ಹಿರಿಯ ಮಂತ್ರಿಗಳು, ತಮಗೆ ಅನುಭವವಿದೆ, ಗೊತ್ತಿದೆ. ಇದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕು. ಆರು ತಿಂಗಳ ಒಳಗಡೆಯೋ ಅಥವಾ ಒಂದು ವರ್ಷದ ಒಳಗೋ ಅಲಾಟ್ ಮಾಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳುತ್ತೇನೆ ಎನ್ನತಕ್ಕ ಭರವಸೆಯನ್ನು ಕೊಡಬೇಕು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:– ತಾವು ಸಹ ನೋಡಿದ್ದೀರಿ, ತಾವು ಇಂಜಿನಿಯರ್. ಇವರು ಷೆಡ್‌ಗಳನ್ನು ಕಟ್ಟುತ್ತಾರೆ. ಕಟ್ಟಿಬಿಟ್ಟು ಅದನ್ನು ಅಲಾಟ್‌ಮೆಂಟೇ ಮಾಡುವುದಿಲ್ಲ. ಅಲಾಟ್‌ಮೆಂಟ್ ಮಾಡದೇ ಇರುವುದಕ್ಕೆ ಏನು ಕಾರಣ ಎಂದು ನನಗೆ ಸಹ ಅರ್ಥ ಆಗುತ್ತಾ ಇಲ್ಲ. ಅನೇಕ ಕಡೆಗಳಲ್ಲಿ ಎರಡು ವರ್ಷದಿಂದ ಮೂರು ವರ್ಷದಿಂದ ಖಾಲಿ ಇದೆ. ನನ್ನ ಕಳಕಳಿ ಇಷ್ಟೇ; ಕನಕಪುರದಲ್ಲಿ ಅಲಾಟ್ ಮಾಡುವ ಪ್ರಶ್ನೆ ನಾನು ಕೇಳುತ್ತಾ ಇಲ್ಲ. ಇಡೀ ರಾಜ್ಯದಲ್ಲಿ ಎಷ್ಟು ಷೆಡ್ಸ್‌ಗಳು ಇವೆ, ಅವನ್ನು ತಾವು

ಅಲಾಟ್ ಮಾಡುವುದಕ್ಕೆ ಆರು ತಿಂಗಳಲ್ಲೋ, ಒಂದು ವರ್ಷದಲ್ಲೋ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕ ಭರವಸೆಯನ್ನು ಕೊಡುವುದಕ್ಕೆ ಸಾಧ್ಯವೇ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇಂಡಸ್ಟ್ರಿಯಲ್ ಷೆಡ್ಸ್‌ಅನ್ನು ಕನ್‌ಸ್ಟ್ರಕ್ಟ್ ಮಾಡಿ ಅದನ್ನು ಆರು ತಿಂಗಳು, ಒಂದು ವರ್ಷ ಆದರೂ ಅಲಾಟ್ ಮಾಡಿಲ್ಲ ಎನ್ನುವ ವಿಷಯವನ್ನು ಅವರು ಏನು ಸರ್ಕಾರದ ಗಮನಕ್ಕೆ ತಂದಿದ್ದಾರೆ, ಇದರ ಬಗ್ಗೆ ತೀವ್ರ ಆಲೋಚನೆ ಮಾಡಿ, ಆದಷ್ಟು ಬೇಗ ಎಲ್ಲೆಲ್ಲಿ ಇಂಡಸ್ಟ್ರಿಯಲ್ ಷೆಡ್ಸ್ ಆಗಿದೆ, ಅದನ್ನು ಅಲಾಟ್ ಮಾಡುವುದಕ್ಕೆ ಇನ್ನು ಮೂರು ಅಥವಾ ನಾಲ್ಕು ತಿಂಗಳಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರಿಗೆ ಒಂದು ಸಲಹೆ ಕೊಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನಾನೂ ಸ್ವಲ್ಪ ಕಾಲ ಕೈಗಾರಿಕಾ ಮಂತ್ರಿ ಆಗಿದ್ದೆ. Sheds were also given under my Portfolio. ಏನು ಆಗಿದೆ ಎಂದರೆ ನಾವು ಷೆಡ್ಸ್ ಕಟ್ಟುತ್ತಾ ಹೋಗಿದ್ದೇವೆ. ಮತ್ತೊಂದು ಕಡೆ ಷೆಡ್ಸ್ ಖಾಲಿ ಬಿದ್ದಿವೆ. ನನ್ನದೇ, 12 ಅಡಿ ಶೆಡ್ಸ್ ಕಟ್ಟಿದ್ದು ಇವತ್ತು ಖಾಲಿ ಇದ್ದಾವೆ. ಅದಕ್ಕೆ ಮುಖ್ಯವಾದ ಕಾರಣ ಏನೆಂದರೆ ಇವತ್ತು ಕಾಸ್ಟ್ ಆಫ್ ದಿ ಶೆಡ್ಸ್ ಹೆಚ್ಚು ಆಗಿದೆ. ಏಕೆಂದರೆ ಕೆಎಸ್‌ಐಡಿಸಿಯಿಂದ ಕಟ್ಟುವಾಗ ಅಡ್ಮಿನಿಸ್ಟ್ರೇಟೀವ್ ಕಾಸ್ಟ್ ಎಲ್ಲಾ ಸೇರಿಸಿ ಕಾಸ್ಟ್ ಹೆಚ್ಚಾಗಿರುವುದರಿಂದ ಒಬ್ಬ ಸಣ್ಣ ಕೈಗಾರಿಕೋದ್ಯಮಿ, ಸ್ಮಾಲ್ ಎಂಟರ್‌ಪ್ರಿನರ್ ಅಷ್ಟೊಂದು ಹಣ ಕೊಟ್ಟು ಈ ಶೆಡ್ಸ್ ತೆಗೆದುಕೊಳ್ಳುವ ಶಕ್ತಿ ಬೆಂಗಳೂರಿನಲ್ಲಿ ಇರಬಹುದು, ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಬ್ಯಾಕ್‌ವರ್ಡ್ ಏರಿಯಾದಲ್ಲಿ ಇಂಡಸ್ಟ್ರಿ ಡೆವಲಪ್ ಮಾಡಬೇಕಾದರೆ ಕಷ್ಟ ಇದೆ. ಹಾಗಾಗಿ ನಾನು ಮಂತ್ರಿ ಇದ್ದಾಗ ಒಂದು ಪ್ರಯತ್ನ ಮಾಡಿದ್ದೆ. ಶೆಡ್ ಅಲಾಟ್ ಮಾಡಿದ ನಂತರ first year–no payment, second year–interest payment and third year–instalment payment ಎಂದು ಮಾಡಿದೆ. ಆದರೂ ಸಹ ಶೆಡ್ ಟೇಕ್ ಓವರ್ ಆಗುತ್ತಾ ಇಲ್ಲ. ನಾನು ತಮ್ಮಲ್ಲಿ ಒಂದು ಸಲಹೆ ಮಾಡುತ್ತಿದ್ದೇನೆ. ಸರ್ಕಾರದ ಹಿತ ದೃಷ್ಟಿಯಿಂದ ಮತ್ತು ಎಂಟರ್‌ಪ್ರಿನರ್ಸ್ ಹಿತದೃಷ್ಟಿಯಿಂದ ಗುಜರಾತ್‌ನಲ್ಲಿ ಏನು ಮಾಡಿದ್ದಾರೆ ಎಂದರೆ ಅವರು ಶೆಡ್ಸ್ ಕಟ್ಟುವುದಿಲ್ಲ, ಅವರು ಬಹಳ ದೊಡ್ಡ ಪ್ರಮಾಣದಲ್ಲಿ ಪ್ಲಾಟ್‌ಗಳನ್ನು ಮಾಡುತ್ತಾರೆ. ಐದು ಗಂಟೆ, ಹತ್ತು ಗಂಟೆ, ಇಪ್ಪತ್ತು ಗುಂಟೆನಲ್ಲಿ ಪ್ಲಾಟ್ಸ್ ಮಾಡಿ, ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡುತ್ತಾರೆ. ವಾಟರ್, ಪವರ್ ಇವೆಲ್ಲಾ ಮಾಡಿಕೊಂಡು ಎಂಟರ್‌ಪ್ರಿನರ್ಸ್‌ಗೆ ಕೊಡುತ್ತಾರೆ. ಇದರಿಂದ ಏನು ಆಗುತ್ತದೆ ಎಂದರೆ ಗವರ್ನಮೆಂಟಿಗೂ ಲಾಭ. ಯಾವ ಲಾಭ ಅಂದರೆ ಒಂದು ಸಣ್ಣ ಕೈಗಾರಿಕೆ ಶುರು ಮಾಡಬೇಕಾದಾಗ ಆತ ಒಂದು ಲಕ್ಷ ರೂಪಾಯಿ ಕೊಡಬೇಕಾಗಿದೆ; 10 ಪೈಸೆ ಅವನ ಕಡೆ ಇಲ್ಲ. ನೀವು ನಾಲ್ಕು ಲಕ್ಷಕ್ಕೆ ಶೆಡ್ ಕೊಡುತ್ತೀರಿ. ಆತ ನಾಲ್ಕು ಲಕ್ಷ ಕೊಟ್ಟು ತೆಗೆದುಕೊಂಡರೆ, ಆ ನಾಲ್ಕು ಲಕ್ಷ ರೂಪಾಯಿ ಮರು ಪಾವತಿ ಮಾಡುವುದಕ್ಕೆ ಆಗುವುದಿಲ್ಲ. The Government has to give subsidy of Rs. 4 lakhs. But genuine requirement is Rs. One lakh:– He can very well manage within Rs. One lakh. The subsidy portion will also come down.

ಹಾಗಾಗಿ ತಮಗೆ ಒಂದು ಸಲಹೆ ಮಾಡುತ್ತಿದ್ದೇನೆ. ಈ ಶೆಡ್ ಎಲ್ಲಿ ಅವಶ್ಯಕತೆ ಇದೆ. ಅಲ್ಲಿ ಕಟ್ಟಿ ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಪ್ಲಾಟ್ಸ್ ಮತ್ತು ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಬಗ್ಗೆ ತಾವು ಏನಾದರು ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

Smt. NAGAMMA C. KESHAVA MURTHY:– Sir, the Hon.Leader of the Opposition has given a very good suggestion in this matter. I will get the report of Gujarat Government as to how industrial sheds are being

developed and allotted there and see whether it can be implemented in our State. Certainly we will consider the suggestion of the Hon.Leader of the Opposition.

ಹರಿಜನ – ಗಿರಿಜನರಿಗೆ ಶೇಕಡ 18 ಎಸ್.ಸಿ.ಪಿ. ಹಣವನ್ನು ಖರ್ಚು ಮಾಡುವ ಬಗ್ಗೆ

830: ಕುಮಾರಿ ಮಲ್ಲಾಜಮ್ಮ (ಮಳವಳ್ಳಿ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದ ಹರಿಜನ – ಗಿರಿಜನರಿಗೆ ಶೇಕಡ 18•ಎಸ್.ಸಿ.ಪಿ. ಹಣವನ್ನು ಸರ್ಕಾರದ ಎಲ್ಲಾ ಇಲಾಖೆಯವರು ಸೂಕ್ತ ಸಮಯದಲ್ಲಿ ಖರ್ಚು ಮಾಡುತ್ತಿದ್ದಾರೆಯೇ: ಹಾಗಿಲ್ಲದಿದ್ದಲ್ಲಿ ಈ ಶೇಕಡ 18 ಹಣವನ್ನು ಸದುಪಯೋಗಪಡಿಸಿಕೊಂಡಿರದ ಇಲಾಖೆಗಳಾವುವು ಹಾಗೂ ಅದಕ್ಕೆ ಕಾರಣವೇನು;

ಆ. ಸದುಪಯೋಗಪಡಿಸಿಕೊಳ್ಳದಿರುವ ಅಧಿಕಾರಿಗಳ ಮೇಲೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ. ಹೌದು. ಬಹುತೇಕ ಇಲಾಖೆಗಳಲ್ಲಿ ಈ ಹಣವನ್ನು ಸೂಕ್ತ ಸಮಯದಲ್ಲಿ ಖರ್ಚು ಮಾಡುತ್ತಿದ್ದು ಯಾವುದೇ ಅಭಿವೃದ್ಧಿ ಇಲಾಖೆಗಳಲ್ಲಿ ವಿಶೇಷ ಘಟಕ ಯೋಜನೆ ಹಣವು ಸದುಪಯೋಗವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ. ಉದ್ಭವಿಸುವುದಿಲ್ಲ.

ಕುಮಾರಿ ಮಲ್ಲಾಜಮ್ಮ:–. ಮಾನ್ಯ ಅಧ್ಯಕ್ಷರೆ, ನಾನು ಕೇಳಿರತಕ್ಕ ಪ್ರಶ್ನೆ ಈ ರೀತಿ ಇದೆ. ರಾಜ್ಯದ ಹರಿಜನ – ಗಿರಿಜನರಿಗೆ 18, ಎಸ್.ಸಿ.ಪಿ. ಹಣವನ್ನು ಸರ್ಕಾರದ ಎಲ್ಲಾ ಇಲಾಖೆಯವರು ಸೂಕ್ತ ಸಮಯದಲ್ಲಿ ಖರ್ಚು ಮಾಡುತ್ತಿದ್ದಾರೆಯೇ; ಹಾಗಿದ್ದಲ್ಲಿ ಶೇಕಡ 18 ಸದುಪಯೋಗಿಸಿಕೊಂಡಿರದ ಇಲಾಖೆಗಳು ಯಾವುವು ಹಾಗೂ ಇದಕ್ಕೆ ಕಾರಣ ಏನು ಎನ್ನುವುದು ನನ್ನ ಪ್ರಶ್ನೆ. ಆದರೆ ಇಲಾಖೆಯವರು ಕೊಟ್ಟಿರತಕ್ಕ ಉತ್ತರ ಏನೆಂದರೆ, ಬಹುತೇಕ ಇಲಾಖೆಗಳಲ್ಲಿ ಈ ಹಣ ಸೂಕ್ತ ಸಮಯದಲ್ಲಿ ಖರ್ಚು ಮಾಡುತ್ತಿದ್ದು, ಯಾವುದೇ ಅಭಿವೃದ್ಧಿ ಇಲಾಖೆಗಳಲ್ಲಿ ವಿಶೇಷ ಘಟಕ ಯೋಜನೆ ಹಣವನ್ನು ಸದುಪಯೋಗವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ ಎನ್ನತಕ್ಕ ಉತ್ತರವನ್ನು ಕೊಟ್ಟಿದ್ದಾರೆ.

10.45 ಎ.ಎಂ.

ಮಾನ್ಯ ಮಂತ್ರಿಗಳಿಗೆ ಇಲಾಖಾಧಿಕಾರಿಗಳು ತಪ್ಪು ಮಾಹಿತಿಗಳನ್ನು ಒದಗಿಸಿದ್ದಾರೆನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಏಕೆಂದರೆ, ಸಾಕಷ್ಟು ಇಲಾಖೆಗಳಲ್ಲಿ ಶೇಕಡ 18ರಷ್ಟು ಹಣ ಖರ್ಚಾಗದೆ ಮಾರ್ಚಿ ತಿಂಗಳಲ್ಲಿ ಸರ್ಕಾರಕ್ಕೆ ವಾಪಸ್ ಕೊಡತಕ್ಕಂಥಾದ್ದು ನನಗೆ ಗೊತ್ತಾಗಿದೆ. ಉದಾಹರಣೆಗೆ ಹೇಳಬೇಕೆಂದರೆ, ಕಾರ್ಪೊರೇಷನ್, ಪುರಸಭೆ, ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳಲ್ಲಿ ಕೊಟ್ಟಿರುವ ಬಹಳಷ್ಟು ಹಣ ಹಾಗೇ ಉಳಿದಿದೆ. ಅಲ್ಲದೆ, ಬೆಳಗಾಂ ಸಿಟಿ ಕಾರ್ಪೊರೇಷನ್‌ನಲ್ಲಿ ಎಸ್.ಸಿ.ಪಿ.ಯಡಿ ಒದಗಿಸಿದ ಹಣದಲ್ಲಿ 45 ಲಕ್ಷ ರೂಪಾಯಿಗಳ ದುರುಪಯೋಗವಾಗಿದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ

ತೆಗೆದುಕೊಂಡಿದ್ದೀರಿ ? ಎರಡನೆಯದಾಗಿ, ಸದುಪಯೋಗಪಡಿಸಿಕೊಳ್ಳದಿರುವ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ಎಂದು ಕೇಳಿದ್ದಕ್ಕೆ ಉತ್ತರವಾಗಿ 'ಉದ್ಭವಿಸುವುದಿಲ್ಲ' ಎಂದು ಹೇಳಿದ್ದಾರೆ. ಬೆಳಗಾಂ ಜಿಲ್ಲಾ ಕಾರ್ಪೊರೇಷನ್‌ನಲ್ಲಿ ಹಣದ ದುರುಪಯೋಗವಾಗಿರುವುದರಿಂದ ಆ ಅಧಿಕಾರಿ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಅವರನ್ನು ಅಮಾನತ್ತಿನಲ್ಲಿಡುತ್ತೀರಾ ? ಮೂರನೆಯದಾಗಿ, ಇದಕ್ಕೆ ಶಾಸಕರುಗಳ ಒಂದು ಸಮಿತಿ ಮಾಡಿ, ಈ ಸಮಿತಿ ಪ್ರತಿ ತಿಂಗಳಿಗೊಮ್ಮೆ ಅಧಿಕಾರಿಗಳನ್ನು ರಿವ್ಯೂ ಮಾಡತಕ್ಕಂಥ ಒಂದು ವ್ಯವಸ್ಥೆ ತಾವು ಮಾಡುತ್ತೀರಾ ಎಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್:– ಮಾನ್ಯ ಅಧ್ಯಕ್ಷರೆ, ಕುಮಾರಿ ಮಲ್ಲಾಜಮ್ಮನವರು ಬಹಳ ಮಹತ್ವವಾದ ಒಂದು ಪ್ರಶ್ನೆ ಕೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ 38 ಇಲಾಖೆಗಳೇನಿವೆ, ಆ ಇಲಾಖೆಗಳಲ್ಲಿ ಶೇಕಡ 18ರಷ್ಟು ಹಣ ಅಂದರೆ ಇದರಲ್ಲಿ ಹರಿಜನರಿಗೆ ಶೇಕಡ 15ರಷ್ಟು ಮತ್ತು ಗಿರಿಜನರಿಗೆ ಶೇಕಡ 3ರಷ್ಟು ಹಣ ಖರ್ಚು ಮಾಡತಕ್ಕಂಥಾದ್ದು ಏನಿದೆ, ಇದು That is mandatory. ಯೋಜನಾ ಆಯೋಗದವರು ಕೂಡ ಆರನೇ ಪಂಚವಾರ್ಷಿಕ ಯೋಜನೆಯಾದ ನಂತರ They have given direction to all the State Governments according to which, ಇವೊತ್ತು ಅಭಿವೃದ್ಧಿಗಾಗಿ ಇರತಕ್ಕಂಥ ಹಣದಲ್ಲಿ ಶೇಕಡ 18ರಷ್ಟು ಹಣವನ್ನು ಕಡ್ಡಾಯವಾಗಿ ಖರ್ಚು ಮಾಡಬೇಕೆಂದು ಇದೆ. ನಾನು ಸಮಾಜ ಕಲ್ಯಾಣ ಇಲಾಖೆ ಮಂತ್ರಿಯಾದ ನಂತರ 2ನೇ ಜನವರಿಯಲ್ಲಿ ಎಲ್ಲಾ ಇಲಾಖೆಗಳ ಉನ್ನತಾಧಿಕಾರಿಗಳ ಸಭೆ ನಡೆಸಿದ್ದು, ಆಗ ಒಟ್ಟು ಶೇಕಡ 49 ರಷ್ಟು ಹಣ ಖರ್ಚಾಗಿದೆಯೆಂಬುದು ನನ್ನ ಗಮನಕ್ಕೆ ಬಂತು.

ಇದಲ್ಲದೆ, ಮೊನ್ನೆ 6ನೇ ಫೆಬ್ರವರಿಯಲ್ಲಿ ಕೂಡ ಒಂದು ಸಭೆ ಕರೆದಿದ್ದು, ಈಗಾಗಲೇ ಶೇಕಡ 80ರಷ್ಟು ಹಣ ಖರ್ಚು ಮಾಡಲಾಗಿದೆ ಎಂದು ತಿಳಿದು ಬಂತು. ಕರ್ನಾಟಕ ರಾಜ್ಯದಲ್ಲಿ ಖರ್ಚು ಮಾಡಲು ಬಜೆಟ್‌ನಲ್ಲಿರತಕ್ಕಂಥ ಒಟ್ಟು ಹಣ 176 ಕೋಟಿ ರೂಪಾಯಿಗಳು. ಅದರಲ್ಲಿ 145 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನು 1 ಲಕ್ಷ 25 ಸಾವಿರ ರೂಪಾಯಿಗಳನ್ನು ಫಲಾನುಭವಿಗಳಿಗೆ ಖರ್ಚು ಮಾಡುವಂತೆ ಆದೇಶ ಕೊಡಲಾಗಿದೆ. ನನ್ನ ಗಮನಕ್ಕೆ ಬಂದಿರುವಂತೆ, ಒಟ್ಟು 38 ಇಲಾಖೆಗಳಲ್ಲಿ 15 ಇಲಾಖೆಗಳು ದುಡ್ಡನ್ನು ಖರ್ಚು ಮಾಡಿಲ್ಲ. ಅದರ ವಿವರಗಳನ್ನು ನಾನು ಕೊಡಬೇಕಾಗಿತ್ತು, ಕೊಟ್ಟಿಲ್ಲ. ಯಾವ 15 ಇಲಾಖೆಗಳು ಹಣವನ್ನು ಖರ್ಚು ಮಾಡಿಲ್ಲವೋ, ಆ ಇಲಾಖೆಗಳಿಗೆ ಆದೇಶ ಕೊಟ್ಟಿದ್ದೇವೆ. ಈ ಕುರಿತು ಮಾರ್ಚಿ ತಿಂಗಳ ಕೊನೇ ವಾರದಲ್ಲಿ ಸಭೆ ಕರೆಯುತ್ತಿದ್ದೇನೆ. ಎಲ್ಲಾ ಕಡೆಗೂ ಪುರಸಭೆಯಾಗಲಿ, ಕಾರ್ಪೊರೇಷನ್ ಆಗಲಿ, ಎಲ್ಲಾ ಇಲಾಖೆಗಳಿಗೂ ಶೇಕಡ 18ರಷ್ಟು ಹಣವನ್ನು ಖರ್ಚು ಮಾಡಬೇಕೆಂದು ಏನು ನಿಗದಿಪಡಿಸಲಾಗಿದೆ, ಆ ರೀತಿ ಖರ್ಚು ಮಾಡದಂಥ ಅಧಿಕಾರಿಗಳಿಗೆ ಎಚ್ಚರಿಕೆ ಕೊಟ್ಟಿದ್ದೇವೆ. ಮಾನ್ಯ ಸಿಂಧ್ಯರವರೇ, ಈ ವಿಚಾರ ತಮಗೂ ಕೂಡ ಗೊತ್ತಿದೆ. ಏಕೆಂದರೆ, ತಾವು ಕೂಡ ಹಿಂದೆ ಸಮಾಜ ಕಲ್ಯಾಣ ಮಂತ್ರಿಗಳಾಗಿದ್ದಿರಿ. I have given strict instructions. ಇವೊತ್ತು ಏನಾಗಿದೆಯೆಂದರೆ, ಅವರ ಕಾನ್‌ಫಿಡೆನ್ಸ್‌ನಲ್ಲಿ, ಪ್ರಮೋಷನ್‌ನಲ್ಲಿ ಆಗತಕ್ಕಂಥ ರೀತಿಯಲ್ಲೂ ಕೂಡ ಕಡ್ಡಾಯವಾಗಿ, ಈ ಒಂದು ಕೆಲಸ ಯಾರು ಮಾಡುವುದಿಲ್ಲವೊ ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥಾದ್ದಕ್ಕೆ There is a provision. ಮತ್ತು ಮುಖ್ಯ ಕಾರ್ಯದರ್ಶಿಯವರೂ ಕೂಡ ಆದೇಶ ಕೊಟ್ಟಿದ್ದಾರೆ, ನಾನು ಕೂಡ ಆದೇಶ ಕೊಟ್ಟಿದ್ದೇನೆ. ಅಲ್ಲದೆ, 1992–93ನೇ ಸಾಲಿನಲ್ಲಿ ಖರ್ಚು ಮಾಡಲು ನಿಗದಿ ಮಾಡಿದಂತ ಹಣ ಏನಿದೆ, ಅದನ್ನು ಖರ್ಚು ಮಾಡುವ ಜವಾಬ್ದಾರಿ ನಮ್ಮದು ಇದೆ. ಬೆಳಗಾಂ ಕಾರ್ಪೊರೇಷನ್‌ನಲ್ಲಿ ಹಣ ದುರುಪಯೋಗವಾಗಿರುವ ಕುರಿತು ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೆ ನಾನು ಕಳೆದ ಡಿಸೆಂಬರ್ 28ನೇ ತಾರೀಖಿನಂದು ಗುಲ್ಬರ್ಗ ವಿಭಾಗದ

ಮತ್ತು ಜಿಲ್ಲಾ ಪರಿಷತ್ತಿನ ಅಧಿಕಾರಿಗಳ ಜೊತೆ ರಿವ್ಯೂ ಮಾಡಿದ್ದೇನೆ, 3ನೇ ಜನವರಿ ತಿಂಗಳಿನಲ್ಲಿ ಮೈಸೂರಿನಲ್ಲಿ ರಿವ್ಯೂ ಮಾಡಿದ್ದು, ಜನವರಿ 9ನೇ ತಾರೀಖಿನಂದು ಬೆಳಗಾಂ ಡಿವಿಜನ್‌ನಲ್ಲಿ ರಿವ್ಯೂ ಮಾಡಿದ್ದೇನೆ. ಅದೇ ರೀತಿ ಇಲ್ಲಿಯೂ ಕೂಡ ಜನವರಿ 12ನೇ ತಾರೀಖು ರಿವ್ಯೂ ಮಾಡಿ, ಫಾಲೋ–ಅಫ್ ಆಕ್ಷನ್ ಏನೇನು ಆಗಬೇಕಾಗಿದೆಯೆಂಬುದರ ಬಗ್ಗೆ ಮಂತ್ರಿಯಾಗಿ ಎಲ್ಲಾ ಇಲಾಖೆಗಳಿಗೂ ಸೂಚನೆ ಕೊಟ್ಟಿದ್ದೇನೆ. ಅದರೂ ಕೂಡ ಬೆಳಗಾಂ ಜಿಲ್ಲಾ ಕಾರ್ಪೊರೇಷನ್‌ನಲ್ಲಿ ಹಣ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಸಿ.ಆರ್.ಇ. ಸೆಲ್ ಏನಿದೆ, ಎಲ್ಲೆಲ್ಲಿ, ಯಾವ್ಯಾವ ಅಧಿಕಾರಿಗಳು ಶೇಕಡ 18ರಷ್ಟು ಹಣವನ್ನು ಖರ್ಚು ಮಾಡಿಲ್ಲವೋ ಅಂತಹ ಅಧಿಕಾರಿಗಳ ಮೇಲೆ ಸಿ.ಆರ್.ಇ. ಸೆಲ್ ಮೂಲಕ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀಮತಿ ಮೋಟಮ್ಮ:– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ದಕ್ಷತೆ ಬಗ್ಗೆ ನನ್ನದೇನೂ ಪ್ರಶ್ನೆ ಇಲ್ಲ. ನಿಜವಾಗಿಯೂ ಅವರು ಉತ್ತಮವಾದ ಕೆಲಸ ಮಾಡುತ್ತಿದ್ದಾರೆ. ಆದರೆ, ಅವರು ಕೊಟ್ಟಿರುವ ಉತ್ತರ ಅವರ ಅಂತರಂಗದಿಂದ ಬಂದಿದ್ದಲ್ಲ. ಅಧಿಕಾರಿಗಳು ಆಫೀಸಿನಲ್ಲಿ ಕುಳಿತುಕೊಂಡು ಸ್ಟ್ಯಾಟಿಸ್ಟಿಕ್ಸ್ ಕಲೆಕ್ಟ್ ಮಾಡುತ್ತಾರಲ್ಲ ಆ ದೃಷ್ಟಿಯಲ್ಲಿ ಕೊಟ್ಟಿರುವ ಉತ್ತರ. ನಾನು ಹೋದ ಸಲ ಈ ಇಲಾಖೆ ಮೇಲೆ ಮಾತನಾಡುತ್ತಾ, 'ಈ ಇಲಾಖೆಯಲ್ಲಿ ಕೆಲಸ ಮಾಡಬೇಕಾದರೆ ಅಧಿಕಾರಿಗಳಿಗೆ ಒಂದು ಡೆಡಿಕೇಷನ್, ಇನ್‌ವಾಲ್ವ್‌ಮೆಂಟ್ ಇರಬೇಕು, ಅದು ಇಲ್ಲದಿದ್ದರೆ ಆ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ, ಇಲಾಖೆಯಲ್ಲಿ ಯೋಜನೆಗಳನ್ನು ಸಹ ಕಾರ್ಯಗತ ಮಾಡುವುದಕ್ಕಾಗವುದಿಲ್ಲ' ಎಂದು ಹೇಳಿದ್ದೆ. ಆ ದೃಷ್ಟಿಯಿಂದ ವಿಚಾರ ಮಾಡಿದರೆ ಇವರು ಕೊಟ್ಟಿರುವ ಈ ಉತ್ತರ ಕಂಡು ನಿಜವಾಗಿಯೂ ನಾವೆಲ್ಲ ತಲೆತಗ್ಗಿಸಬೇಕಾಗಿದೆ. ಬಹುತೇಕ ಇಲಾಖೆಗಳಲ್ಲಿ ಸೂಕ್ತ ಸಮಯದಲ್ಲಿ ಹಣ ಖರ್ಚಾಗುತ್ತಿದ್ದು, ಯಾವುದೇ ಅಭಿವೃದ್ಧಿ ಕಾರ್ಯಗಳಲ್ಲಿ ಹಣ ದುರುಪಯೋಗವಾಗಿಲ್ಲವೆನ್ನುವ ಮಾತನ್ನು ಹೇಳಿದರೆ ಇದನ್ನು ಯಾರಾದರೂ ಒಪ್ಪುವುದಕ್ಕೆ ಸಾಧ್ಯವೇ ?

ಯಾವ ಇಲಾಖೆಯಲ್ಲಿಯೂ ಕೂಡ ಈ 18 ಪರ್‌ಸೆಂಟ್ ಹಣ ಖರ್ಚಾಗುತ್ತಿಲ್ಲ. ಉದಾಹರಣೆಗೆ ಬೆಳಗಾಂ ಜಿಲ್ಲೆಯ ಬಗ್ಗೆ ಮೊನ್ನೆ ಮೇಲ್ಮನೆಯಲ್ಲಿ ಕಾಲಿಂಗ್ ಅಟೆನ್‌ಷನ್ ತಂದು 45 ಲಕ್ಷ ಲಾಸ್ ಆಗಿದೆ. ದುರುಪಯೋಗವಾಗಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ರಾಯಚೂರು ಜಿಲ್ಲೆಗೆ ನಮ್ಮ ಕಲ್ಯಾಣ ಸಮಿತಿಯವರು ಹೋಗಿ ಅಲ್ಲಿ ಈ 18 ಪರ್‌ಸೆಂಟ್ ಹಣವನ್ನು ಸರಿಯಾಗಿ ಖರ್ಚು ಮಾಡಿದ್ದಾರೋ ಇಲ್ಲವೋ ಎಂಬ ಬಗ್ಗೆ ಪರಿಶೀಲನೆ ಮಾಡಿಬಂದಿದ್ದೇವೆ. ಆಗ ನಮ್ಮ ಜೊತೆಯಲ್ಲಿ ಇಲಾಖಾ ಅಧಿಕಾರಿಗಳು ಸಹ ಬಂದಿದ್ದರು, ಅವರು ಏಕೆ ಅದರ ಮಾಹಿತಿಯನ್ನು ಇವತ್ತು ಕೊಡಲಿಲ್ಲ. ಏಕೆಂದರೆ ರಾಯಚೂರು ಜಿಲ್ಲೆಯಲ್ಲಿ 1 ಕೋಟಿ 60 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿಲ್ಲ, ಕುಡಿಯುವ ನೀರಿಗೆ, ಮನೆಯನ್ನು ಕಟ್ಟಿಕೊಡಲು, ರಸ್ತೆಗಳನ್ನು ಮಾಡಲು ಕೊಟ್ಟಿದ್ದ ಹಣ ಖರ್ಚಾಗಿಲ್ಲ, ಇದೇ ರೀತಿ ಬೇರೆ ಬೇರೆ ಜಿಲ್ಲೆಗಳಲ್ಲೂ ಸಹ ಆಗಿದೆ. ಮೈಸೂರಿನಲ್ಲಿ ಸಹ ಇದನ್ನು ಸರಿಯಾಗಿ ಸದುಪಯೋಗ ಮಾಡಿಲ್ಲ. ಬರಿಯಲ್ ಗ್ರೌಂಡ್ ರಿಪೇರಿಗೆಂದು ಪ್ರತಿವರ್ಷ ಒಂದೂವರೆ ಲಕ್ಷ ರೂಪಾಯಿ ಖರ್ಚು ತೋರಿಸಿದ್ದರೂ ಸಹ ಖರ್ಚು ಮಾಡಿಲ್ಲ. ಸತ್ತ ಹೆಣಗಳೇನಾದರು ಬರಿಯಲ್ ಗ್ರೌಂಡ್‌ನ್ನು ರಿಪೇರಿ ಮಾಡಿಕೊಡಬೇಕೆಂದು ಕೇಳುತ್ತವೆಯೇ ? ಆದ್ದರಿಂದ ಸಚಿವರು ಈ 18 ಪರ್‌ಸೆಂಟ್ ಹಣವನ್ನು ಸರಿಯಾಗಿ ಖರ್ಚು ಮಾಡುವ ರೀತಿಯಲ್ಲಿ ವಿಚಾರಣೆ ಮಾಡಬೇಕು. ಆಮೇಲೆ ಶಾಸಕಿಯಾದ ಮಲ್ಲಾಜಮ್ಮನವರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಜಾರಿ ಮಾಡಬೇಕಾಗುತ್ತದೆ. ತಾವು ಇದನ್ನು ರಿವ್ಯೂ ಮಾಡಲು ಒಂದು ಸಮಿತಿಯನ್ನು ಮಾಡಿ, ಅವರು ಮೂರು ತಿಂಗಳಿಗೆ ಒಂದು ಸಲ ಈ 18 ಪರ್‌ಸೆಂಟ್ ಹಣ ಸರಿಯಾಗಿ ಖರ್ಚಾಗುತ್ತಿದೆಯೇ ಅಥವಾ ಇಲ್ಲವೇ ಎನ್ನುವ ಬಗ್ಗೆ

ರಿವ್ಯೂ ಮಾಡಲಿ. ಇಲ್ಲದಿದ್ದರೆ ಸಿಂಗಲ್ ವಿಂಡೋ ಏಜೆನ್ಸಿಯನ್ನು ಮಾಡಿ ಅದರ ಮೂಲಕ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಧರ್ಮಸಿಂಗ್:– ಮಾನ್ಯ ಸದಸ್ಯಣಿಯರಾದ ಮೋಟಮ್ಮನವರು ಹೇಳಿದ ರೀತಿಯಲ್ಲಿ ನಾನು ಎಲ್ಲಾ ಕಡೆ ಈ ಹಣವನ್ನು ಸಮರ್ಪಕವಾಗಿ ಖರ್ಚು ಮಾಡುತ್ತಿದ್ದಾರೆ ಎನ್ನತಕ್ಕ ಮಾತನ್ನು ಹೇಳುತ್ತಿಲ್ಲ. ಹಣವನ್ನು ಸರಿಯಾಗಿ ಖರ್ಚು ಮಾಡುತ್ತಿದ್ದಾರೆ ಎಂಬುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ ಇದರ ಬಗ್ಗೆ ಎಲ್ಲಾ ಕಡೆ ರಿವ್ಯೂ ಮಾಡಬೇಕೆಂದು ಕಡ್ಡಾಯವಾಗಿ ಹೇಳಿದ್ದೇನೆ. ಎಲ್ಲಿಯವರೆಗೆ ಈ ಬ್ಯೂರೊಕ್ರಸಿಯಲ್ಲಿ ಈ ಜನರ ಬಗ್ಗೆ ಕಮಿಟ್‌ಮೆಂಟ್ ಇರುವುದಿಲ್ಲವೋ ಅಲ್ಲಿಯವರೆಗೆ ಕೆಲಸವಾಗುವುದಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇವತ್ತು ಏನಾಗಿದೆ ಎಂದರೆ ಈ 18 ಪರ್‌ಸೆಂಟ್ ಹಣ ಯಾವ ರೀತಿಯಲ್ಲಿ ಖರ್ಚು ಆಗಬೇಕು ಎನ್ನುವುದರ ಬಗ್ಗೆ there is a circular from the state Government. ಇವತ್ತು ಸಾಮಾಜಿಕ ನ್ಯಾಯಮಂಡಳಿ ಎಂಬ ಸಮಿತಿ ಎಲ್ಲಾ ಕಾರ್ಪೊರೇಷನ್ಸ್, ತಾಲ್ಲೂಕು ಪಂಚಾಯಿತಿಗಳು, ಮಂಡಳ ಪಂಚಾಯಿತಿಗಳು ಮತ್ತು ಬೇರೆ ಕಡೆಗಳಲ್ಲಿಯೂ ಕೂಡ ಇದೆ. ಅಲ್ಲಿರತಕ್ಕ ಶಾಸಕರೂ ಸಹ ಇದರ ಬಗ್ಗೆ ನಿಗಾವಹಿಸಿಕೊಂಡು ಹೋಗಬೇಕಾಗುತ್ತದೆ. ಮತ್ತು ಯಾವ ರೀತಿಯಲ್ಲಿ ಖರ್ಚು ಮಾಡಬೇಕು ಎನ್ನತಕ್ಕ ರೀತಿಯಲ್ಲಿ ನಾರ್ಮಲ್ ಆಗಿ ಅವರ ದೈನಂದಿನ ಜೀವನಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸತಕ್ಕ ರೀತಿಯಲ್ಲಿ ಹಣವನ್ನು ಖರ್ಚು ಮಾಡುವುದು ಒಂದು. ಮತ್ತು ವಿಶೇಷವಾದ ರೀತಿಯಲ್ಲಿ ಈ 18 ಪರ್‌ಸೆಂಟ್ ಹಣವನ್ನು ಕಡ್ಡಾಯವಾಗಿ ಖರ್ಚು ಮಾಡಬೇಕೆಂಬ ನೀತಿಯನ್ನು ಜಾರಿ ಮಾಡಿದ್ದೇವೆ. ಇದರಲ್ಲಿ ಲೋಪದೋಷವಾಗಿದೆ. ತಮಗೆ ಆಶ್ವಾಸನೆ ಕೊಡುತ್ತೇನೆ. 1992–93ನೇ ಸಾಲಿನಲ್ಲಿ 80–85 ಪರ್‌ಸೆಂಟ್‌ಗಿಂತ ಹೆಚ್ಚು ಖರ್ಚು ಆಗಬಹುದು. ಮುಂದೆ ಈ ರೀತಿ ಆಗುವುದಿಲ್ಲ, ಆದರ ಹಣ ಲ್ಯಾಪ್ಸ್ ಆಗದಂತೆ ಮುಂದುವರೆಸಿಕೊಂಡು ಹೋಗಿ ಪೂಲ್ ಅಮೌಂಟ್ ಮಾಡಿ ಬಿ.ಡಿ. ಆಕೌಂಟ್‌ನಲ್ಲಿಟ್ಟು ಮುಂದಿನ ವರ್ಷ ಕೂಡ ಖರ್ಚು ಮಾಡುತ್ತೇವೆ. ಇದರಲ್ಲಿ ಮತ್ತೊಂದು ವಿಷಯ ಏನಾಗಿದೆ ಎಂದರೆ, the Action plan well in advance ಸರ್ಕಾರದ ವತಿಯಿಂದ ಮಂಜೂರಾಗಿ ಹೋಗುವುದಿಲ್ಲ. That is also one of the major points. ಆದ್ದರಿಂದ ಎಲ್ಲಾ ಕಡೆ ಆ್ಯಕ್ಷನ್ ಪ್ಲಾನ್ ಏನಿದೆ ಏಪ್ರಿಲ್ ತಿಂಗಳಿನೊಳಗೆ ಬೆನಿಫಿಶರೀಸ್ ಲಿಸ್ಟ್ ಮಾಡತಕ್ಕಂಥ ಆದೇಶವನ್ನು ಕೊಟ್ಟಿದ್ದೇವೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:– ಈ ಸರ್ಕಾರದ ಮಾನ ಬೆಳಗಾಂನ ಬೀದಿಯಲ್ಲಿ ಹರಾಜಾಗಿ ಹೋಗಿದೆ, 50 ಲಕ್ಷ ರೂಪಾಯಿಗಳು ಹೇಗೆ ದುರುಪಯೋಗವಾಗಿದೆ ಎಂಬುದು ಅಲ್ಲಿನ ಸಣ್ಣ ಮಕ್ಕಳಿಗೂ ಸಹ ಗೊತ್ತಿದೆ. ಮೇಲ್ನೋಟಕ್ಕೆ ಇದರಲ್ಲಿ ದುರುಪಯೋಗವಾಗಿದೆ ಎಂದು ಕಂಡು ಬಂದರೂ ಸಹ ಪೋಲೀಸ್ ಇಲಾಖೆಯವರು ಏಕೆ ಈ ಕೇಸನ್ನು ದಾಖಲು ಮಾಡಿಕೊಳ್ಳಲಿಲ್ಲ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ಇದರ ಬಗ್ಗೆ ತಾವು ಏನು ಉತ್ತರ ಕೊಡುತ್ತೀರಿ ?

ಶ್ರೀ ಧರ್ಮಸಿಂಗ್:– ಈಗ್ಗಾಗಲೆ ಪೋಲೀಸ್‌ನವರು ಕೇಸನ್ನು ದಾಖಲು ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಸನ್ಮಾನ್ಯ ಅಧ್ಯಕ್ಷರೆ, ಇವರು ಸಮಾಜ ಕಲ್ಯಾಣ ಮಂತ್ರಿಗಳಾದ ಮೇಲೆ ಇವರ ಕಾರ್ಯದಕ್ಷತೆಯ ಬಗ್ಗೆ, ಇವರು ಕೆಲಸ ಮಾಡುವುದರ ಬಗ್ಗೆ ನಮ್ಮಲ್ಲಿ ಎರಡು ಮಾತಿಲ್ಲ. ಇವರು ಈಗಾಗಲೇ ಮುನಿಸಿಪಾಲಿಟಿಯ ಅಧಿಕಾರಿಗಳೆಲ್ಲರನ್ನೂ ಕರೆದು ಅದರ ಬಗ್ಗೆ ರಿವ್ಯೂ ಮಾಡಿದ್ದಾರೆ. ಆದರೆ ಇವರು ಕೊಟ್ಟಿರತಕ್ಕ ಉತ್ತರ ಅಂತರಂಗದಿಂದ ಕೊಟ್ಟಿರತಕ್ಕ ಉತ್ತರವಲ್ಲ; ಮುನಿಸಿಪಾಲಿಟಿಯವರು 40 ಪರ್‌ಸೆಂಟ್ ಹಣವನ್ನು ಡಿಸೆಂಬರ್ ಕೊನೆಯಾದರೂ ಸಹ ಖರ್ಚು ಮಾಡಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿಲ್ಲ. ಮತ್ತು ಸರ್ಕಾರ ಆ್ಯಕ್ಷನ್ ಪ್ಲಾನನ್ನು ಅಪ್ರೂ

ಮಾಡತಕ್ಕ ಪ್ರಶ್ನೆಯೇ ಬರುವುದಿಲ್ಲ. ಏಕೆಂದರೆ ಮುನಿಸಿಪಾಲಿಟಿಗಳೇ ಹಣವನ್ನು ಜೂನ್ ತಿಂಗಳಿನಲ್ಲಿ ಖರ್ಚು ಮಾಡಿಕೊಳ್ಳುತ್ತೇವೆ, ಆದರೆ ಅವರೇ ಡಿಸೆಂಬರ್‌ವರೆಗೆ ಖರ್ಚು ಮಾಡಿಲ್ಲವೆಂದರೆ ಇದನ್ನು ರಿವ್ಯೂ ಮಾಡತಕ್ಕ ಅವಶ್ಯಕತೆ ಇದೆ.

ತಾವು ಇದನ್ನು ರಿವ್ಯೂ ಮಾಡುವುದರ ಜೊತೆಗೆ ತಮಗೆ ಒಂದು ಸಲಹೆಯನ್ನು ಕೊಡುತ್ತೇನೆ, ಏನೆಂದರೆ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ special component plan ಬಗ್ಗೆ ರಿವ್ಯೂ ಮಾಡುವುದಕ್ಕೆ ವಿಶೇಷವಾದ ಸಮಿತಿ ಇದೆ. ಅದು ಕಳೆದ ಇಡೀ ವರ್ಷ ಸಭೆಯೇ ಸೇರಿಲ್ಲ. ಈ ವರ್ಷದಲ್ಲಿ ಇದುವರೆಗೂ ಸಭೆ ಸೇರಿಲ್ಲ. ಎಲ್ಲಾ ಮುಖ್ಯ ಮಂತ್ರಿಗಳು ಇಲ್ಲಿ ಬಂದವರು ನಾವು ಹರಿಜನರಿಗೋಸ್ಕರ, ಗಿರಿಜನರಿಗೋಸ್ಕರ, ನಾವು special component plan implement ಮಾಡುತ್ತೇವೆ ಎಂದು ಭಾಷಣ ಮಾಡುತ್ತಾರೆ. ಆದರೆ ಇವರಿಗೆ ರಿವ್ಯೂ ಮಾಡುವುದಕ್ಕೆ ಮೂರು ಗಂಟೆ ಸಮಯ ಸಿಗುವುದಿಲ್ಲ. ಇದು ಪ್ರಶ್ನೋತ್ತರ ವೇಳೆ ಆಗಿರುವುದರಿಂದ ಇದರ ಬಗ್ಗೆ ನಾನು ಹೆಚ್ಚು ಮಾತನಾಡಲು ಹೋಗುತ್ತಿಲ್ಲ, ನಾನು ತಮ್ಮಲ್ಲಿ ನೇರವಾಗಿ ಕೇಳುತ್ತಿದ್ದೇನೆ, ನಿಮ್ಮಿಂದ ನಮಗೆ ಒಂದು ಆಶ್ವಾಸನೆ ಬೇಕು. ಏನೆಂದರೆ ನೀವೆಲ್ಲರೂ/ಸೇರಿ ಮುಖ್ಯ ಮಂತ್ರಿಗಳ ಮೇಲೆ ಒತ್ತಡ ತರಬೇಕು. ತಿಂಗಳಿಗೊಮ್ಮೆ ರಿವ್ಯೂ ಮಾಡಬೇಕು ಎಂದು; ಇಲ್ಲದಿದ್ದರೆ ಹೈ ಪವರ್ ಕಮಿಟಿ ಎಂದು ಏಕೆ ಮಾಡಿದ್ದೀರಿ? ಚೀಫ್ ಸೆಕ್ರೆಟರಿ ಏನು ಮಾಡುತ್ತಿರುತ್ತಾರೆ? ಇವತ್ತು ಮುನಿಸಿಪಾಲಿಟಿಗಳು, ಕಾರ್ಪೋರೇಷನ್‌ಗಳು, ಯೂನಿವರ್ಸಿಟಿಗಳು, ಜಿಲ್ಲಾಪರಿಷತ್ತುಗಳು ಹೀಗೆ ಪ್ರತಿಯೊಂದೂ ಕೂಡ ತಮ್ಮ ವ್ಯಾಪ್ತಿಯಲ್ಲಿ ಬರುತ್ತವೆ. ತಾವು ಹೇಳಿದ್ದನ್ನು ಅವರು ಕೇಳುವುದಿಲ್ಲ. ಹಿಂದೆ ತಾವು ಹೋಂ ಮಿನಿಸ್ಟರ್ ಆಗಿದ್ದಾಗ ತಮ್ಮ ಮಾತು ಏನು ನಡೆಯುತ್ತಿತ್ತು ಅದೇ ರೀತಿ ಈಗ ನೀವು ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಆಗಿರುವಾಗ ನಡೆಯುವುದಿಲ್ಲ. ನಾನು ಈ ಮಾತನ್ನು ಹೇಳುತ್ತಿರುವುದರಿಂದ ದಯವಿಟ್ಟು ಬೇಸರಪಟ್ಟುಕೊಳ್ಳಬೇಡಿ. ನಾನೂ ಕೂಡ ಇದನ್ನೆಲ್ಲಾ ಅನುಭವಿಸಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಪ್ರತಿ ತಿಂಗಳೂ ಹೈ ಪವರ್ ಕಮಿಟಿ ಮೀಟಿಂಗ್ ಮಾಡಲು ಮಾನ್ಯ ರಾಮಸ್ವಾಮಿಯವರೂ ಸೇರಿದಂತೆ ತಾವು ನಮಗೆ ಒಂದು ಭರವಸೆಯನ್ನು ಕೊಡುತ್ತೀರಾ?

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯರವರು ಹೇಳಿರತಕ್ಕದ್ದು ಬಹಳ ಒಳ್ಳೆಯ ಸಲಹೆ. ಪ್ರತಿ ತಿಂಗಳೂ ಕೆ.ಡಿ.ಪಿ. ಮೀಟಿಂಗ್ ಆಗುತ್ತದೆ. ಶಾಸನಸಭಾ ಸದಸ್ಯರು ಇರುವಂಥ ಸಮಿತಿಗಳು ತಾಲೂಕು ಮಟ್ಟದಲ್ಲಿ ಏನು ಇರುತ್ತವೆ, ಅಲ್ಲಿ ಸ್ಪೆಷಲ್ ಕಾಂಪೋನೆಂಟ್ ಪ್ರೋಗ್ರಾಮ್ ರಿವ್ಯೂ ಮಾಡುವಂಥ ಸಬ್ಜೆಕ್ಟ್ ಇಲ್ಲ. ಅದನ್ನು ಇಡಲಿಕ್ಕೆ ತಾವು ಪ್ರಯತ್ನ ಮಾಡಿ. ಪ್ರತಿ ತಿಂಗಳೂ ಅದೂ ರಿವ್ಯೂ ಆಗಲಿ. ಎರಡನೆಯದಾಗಿ ಮಾನ್ಯ ಸಿಂಧ್ಯರವರು ಹೇಳಿದಂತೆ ತಾವು ರಿವ್ಯೂ ಮಾಡಿ ಬಂದಿರಿ. ಆದರೆ ಆ ಇಲಾಖೆಯ ಮೇಲೆ ತಮ್ಮ ಕಂಟ್ರೋಲ್ ಇಲ್ಲ. You have to take the co-operation of other Ministries. Your have to tell other Ministers that when they review their departments, they should strictly review the special component. Then only the results will come.

ಶ್ರೀ ಧರ್ಮಸಿಂಗ್:- 3 ತಿಂಗಳಿಗೊಮ್ಮೆ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲ ಇಲಾಖೆಗಳ ಅಧಿಕಾರಿಗಳ ಸಭೆಯನ್ನು ಸೇರಿಸಬೇಕಾಗುತ್ತದೆ. ಮುಖ್ಯ ಮಂತ್ರಿಗಳಿಗೆ ಕಾಲಾವಕಾಶ ಇಲ್ಲದಿದ್ದರಿಂದ ಅವರ ಜೊತೆ ನಾನು ಸಮಾಲೋಚನೆ ಮಾಡಿ ಆ ಮೀಟಿಂಗ್‌ನಲ್ಲಿ ಅವರ ಪರವಾಗಿ ಹಾಜರಿದ್ದೆ. ನಾನು ಹಾಜರಿದ್ದ ಎರಡು ಸಭೆಗಳಿಗೂ ಎಲ್ಲಾ ಇಲಾಖೆಗಳ ಅಧಿಕಾರಿಗಳೂ ಬಂದಿದ್ದರು. ಆದರೆ ಮಾನ್ಯ ಮುಖ್ಯ ಮಂತ್ರಿಯವರು ಆ ಮೀಟಿಂಗ್‌ಗೆ ಬಂದರೆ ಸ್ವಲ್ಪ ಮಟ್ಟಿಗೆ ನಿಯಂತ್ರಣ ಆಗುತ್ತದೆ.

ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಕೆ.ಡಿ.ಪಿ. ಮೀಟಿಂಗ್‌ನಲ್ಲೂ ಕೂಡ ಸ್ಪೆಷಲ್ ಕಾಂಪೊನೆಂಟ್ ಬಗ್ಗೆ ರಿವ್ಯೂ ಮಾಡುವ ಯೋಚನೆ ಮಾಡುತ್ತಿದ್ದೇವೆ. ಈಗಾಗಲೇ ನಾವು ಕ್ರಮ ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು:– ಮುನಿಸ್ವಾಮಿಯವರೆ, ತಮ್ಮ ಮುಂದೂಡಲಾದ 1689ನೇ ಪ್ರಶ್ನೆಗೆ ಉತ್ತರ ಬಂದಿಲ್ಲ.

ಶ್ರೀ ಎಂ. ಮುನಿಸ್ವಾಮಿ:– ನನಗೆ ಉತ್ತರ ಬಂದಿದೆ. ನಾನು ಕೇಳಿರತಕ್ಕ ಪ್ರಶ್ನೆ ಎಂದರೆ "The present rate of water supply charges collected on domestic and non–domestic water supply in Bangalore City. ಇದಕ್ಕೆ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ.

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೆ, ತಾವು ಹೇಳುತ್ತಿರುವುದು ಹೆಲ್ಡ್‌ಓವರ್ ಪ್ರಶ್ನೆ ಬಗ್ಗೆ. ಆದರೆ ಮಾನ್ಯ ಸದಸ್ಯರು ಕೇಳುತ್ತಿರುವುದು ಬೇರೆ ಪ್ರಶ್ನೆ ಬಗ್ಗೆ;

ಶ್ರೀ ಎಂ. ಮುನಿಸ್ವಾಮಿ:– ಮಾನ್ಯ ಅಧ್ಯಕ್ಷರೇ, ಈಗತಾನೆ ನನಗೆ ಉತ್ತರವನ್ನು ಒದಗಿಸಿದ್ದಾರೆ. ಇಡೀ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರ ಇದಾಗಿರುವುದರಿಂದ ಇದನ್ನು ಪೂರ್ಣವಾಗಿ ಓದುವುದಕ್ಕೆ ನನಗೆ ಸಾಧ್ಯವಾಗುತ್ತಿಲ್ಲ. ಆದರೂ ಕೆಲವು ವಿಷಯಗಳ ಬಗ್ಗೆ ಕೇಳಬಯಸುತ್ತೇನೆ. ಕೆಲವು ಕೆಲಸಗಳಾಗಿವೆ ಎಂದು ಹೇಳುತ್ತಿದ್ದಾರೆ. ಆದರೆ ಅದಕ್ಕೆ ಸಂಬಂಧಪಟ್ಟಂತೆ ಕೇವಲ ಬಿಲ್ಸ್ ಪಾಸ್ ಆಗಿವೆಯೇ ಹೊರತು ಕೆಲಸವಂತೂ ಆಗಿಲ್ಲ. ಇತ್ತೀಚೆಗೆ ನಾನು ಹೋಗಿ ನೋಡಿದ್ದೇನೆ. ನನ್ನ ಕ್ಷೇತ್ರದಲ್ಲಿ ರಿಚ್‌ಮಂಡ್ ರಸ್ತೆ ಒಂದು ಇದೆ. ಅದು ಎಷ್ಟು ಹದಗೆಟ್ಟಿದೆ ಎಂದರೆ ಹೇಳುವುದಕ್ಕಾಗುವುದಿಲ್ಲ. ಇದರ ರಿಪೇರಿಗೋಸ್ಕರ ಸಾಕಷ್ಟು ಪತ್ರಗಳನ್ನು ಬರೆದಿದ್ದೇನೆ. ಇನ್ನೂ ಅನೇಕ ಮುಖ್ಯ ರಸ್ತೆಗಳು ಇವೆ. ಅವುಗಳಿಗೆ ರಿಪೇರಿ ಮಾಡಿದ್ದಾರೆಂದು ಹೇಳಿ ಕೇವಲ ದುಡ್ಡು ಪೇಮೆಂಟ್ ಮಾಡಿದ್ದಾರೆ. ಕೇವಲ ಟಾರ್ ಬಳಿಯುತಕ್ಕ ಕಂಟ್ರಾಕ್ಟರ್‌ಗಳಿಗೆ ಸಹಾಯ ಮಾಡತಕ್ಕ ಕೆಲಸ ಆಗುತ್ತಿದೆಯೇ ಹೊರತು ಸರಿಯಾದ ಕೆಲಸ ಎಲ್ಲೂ ಕೂಡ ಆಗುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಟ್ರಿನಿಟಿ ಚರ್ಚ್ ಹತ್ತಿರ ಇಂಟರ್ ಸ್ಟೇಟ್ ಟ್ರ್ಯಾನ್ಸ್‌ಪೋರ್ಟ್ ವೆಹಿಕಲ್ಸ್ ಓಡಾಡುವಂಥ ಒಂದು ರಸ್ತೆ ಇದೆ. ಆ ರಸ್ತೆಯಲ್ಲಿ ಸುಮಾರು ಒಂದು ಅಡಿ ಒಂದೂವರೆ ಅಡಿ ಹಳ್ಳಗಳು ಬಿದ್ದಿವೆ. ಇಂಥ ರಸ್ತೆಗಳ ರಿಪೇರಿ ಕೆಲಸವನ್ನು ಬಿಟ್ಟು ಉತ್ತಮವಾಗಿರತಕ್ಕ ರಸ್ತೆಗಳಿಗೆ ಟಾರ್ ಹಾಕಿದ್ದಾರೆಂದು ದುಡ್ಡನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಉತ್ತರ ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೇ, ಈ ಕೆಲಸವನ್ನು ಕಾರ್ಪೊರೇಷನ್‌ನವರು ಮಾಡಿಸುತ್ತಿದ್ದಾರೆ. ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಬರತಕ್ಕ ಡಿವಿಜನ್ಸ್ 61,62,63,64,65,86, 66(ಎ),67. ಇದರಲ್ಲಿ ಕಾನ್‌ಸ್ಟಿಟ್ಯೂಯನ್ಸಿವೈಸ್ ಎಷ್ಟೆಷ್ಟು ಹಣ ಅಲೋಕೇಷನ್ ಆಗಿದೆ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಕಾರ್ಪೊರೇಷನ್‌ನಲ್ಲಿ ಕಾನ್‌ಸ್ಟಿಟ್ಯೂಯನ್ಸಿವೈಸ್ ಅಲೋಕೇಷನ್ ಮಾಡುತ್ತಿಲ್ಲ. ಎಕ್ಸಿಕ್ಯುಟಿವ್ ಇಂಜಿನಿಯರ್‌ವೈಸ್ ಕೊಡುತ್ತಿದ್ದಾರೆ. ಅದರಲ್ಲಿ ಭಾರತಿ ನಗರ, ಶಾಂತಿನಗರ ಇವೆರಡಕ್ಕೂ ಸೇರಿಸಿ ಕೊಡುತ್ತಿದ್ದಾರೆ. ಕಾರ್ಪೊರೇಷನ್‌ನಲ್ಲಿ ವರ್ಕ್ಸ್ ಕಮಿಟಿ ಇದೆ. ಅದರಲ್ಲಿ ಚರ್ಚೆ ಮಾಡಿ ಈ ಕೆಲಸಗಳನ್ನು ತೆಗೆದುಕೊಳ್ಳುತ್ತಾರೆ. ಮಾನ್ಯ ಸದಸ್ಯರು ಇಂಥಿಂಥ ಕೆಲಸಗಳು ಆಗಿಲ್ಲವೆಂದು ನಿರ್ದಿಷ್ಟವಾಗಿ ಹೇಳಿದರೆ ಅದನ್ನು ನಾವು ಪರಿಶೀಲನೆಮಾಡಬಹುದು. ಇಲ್ಲಿ ಏನಾಗಿದೆ ಎಂದರೆ, ಇವರ ಅಲಾಟ್‌ಮೆಂಟ್ ಎಷ್ಟಿದೆ ಎಂದರೆ 221.89 ಲಕ್ಷ ಕಾರ್ಪೊರೇಷನ್‌ನವರು ಅಲಾಟ್ ಮಾಡಿದ್ದಾರೆ. ಇಂಥದ್ದರಲ್ಲಿ ಯಾವುದೆಂದು ಅವರು ಸ್ಪೆಸಿಫಿಕ್‌ಆಗಿ ತಿಳಿಸಿದರೆ ನಾನು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮುನಿಸ್ವಾಮಿ:– ಮಾನ್ಯ ಅಧ್ಯಕ್ಷರೇ 1992–93ರಲ್ಲಿ ಕಾರ್ಪೊರೇಷನ್ ಡಿವಿಜನ್‌ವೈಸ್

ಕೆಲಸ ಮಾಡಿದ್ದೇವೆಂದು ಹೇಳಿದ್ದಾರೆ. 1992–93ನೇ ಸಾಲಿನಲ್ಲಿ 5ಕೋಟಿ 67ಲಕ್ಷ 23ಸಾವಿರ ರೂಪಾಯಿಗಳ ಕೆಲಸ ಮಾಡಿದ್ದೇವೆಂದು ಹೇಳಿದ್ದಾರೆ. ನನಗೆ ತಿಳಿದ ಪ್ರಕಾರ ಈ ವರ್ಷ ಒಂದು ಕೆಲಸವೂ ಕೂಡ ಆಗಿಲ್ಲವೆಂದು ನಾನು ಸತ್ಯದಿಂದ ಹೇಳುತ್ತಿದ್ದೇನೆ. ಯಾವುದೋ ಒಂದು ಕಡೆ ಟಾರ್ ಹಾಕುವ ಕೆಲಸವನ್ನು ಬಿಟ್ಟರೆ ಉಳಿದ ಯಾವ ಕೆಲಸವನ್ನಾದರೂ ತಾವು ನೋಡಿದ್ದೀರಾ ? ಯಾವುದೇ ಕೆಲಸದ ಬಗ್ಗೆ ಚೀಫ್ ಇಂಜಿನಿಯರ್ ಹತ್ತಿರಹೋಗಿ ಕೇಳಿದರೆ ನಮಗೆ ಯಾವುದೇ ಕೆಲಸ ಮಾಡಬಾರದೆಂದು ಸರ್ಕಾರದಿಂದ ಆದೇಶ ಬಂದುಬಿಟ್ಟಿದೆ ಎಂದು ಹೇಳುತ್ತಾರೆ. ಉದಾಹರಣೆಗೆ ಒಂದು ಹೇಳುತ್ತೇನೆ, ಆಶ್ರಯ ಸ್ಕೀಮ್‌ನಲ್ಲಿ ಒಂದು ಸ್ಲಮ್‌ನ್ನು ಶಿಫ್ಟ್ ಮಾಡಿದ್ದೀರಿ, ಶಿಫ್ಟ್ ಮಾಡಿದ ಮೇಲೆ ಅಲ್ಲಿ ಒಂದು ಕಕ್ಕಸ್ಸನ್ನು ಕಟ್ಟಿ ಎಂದು ಕೇಳಿಕೊಂಡಾಗ, ಟೆಂಡರ್ ಸಿಸ್ಟಮ್ ಇಲ್ಲ, ಕಕ್ಕಸ್ ಕೆಲಸ ಶುರು ಮಾಡಿಬಿಟ್ಟಿದ್ದಾರೆಂದು ಹೇಳಿ 6 ತಿಂಗಳಿಂದ ಆ ಕೆಲಸವನ್ನು ಪೂರೈಸದೆ ಇರುವುದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಆದರೆ ಈ ಇಲಾಖೆಯವರು 6ಕೋಟಿ 67ಲಕ್ಷ ರೂಪಾಯಿಗಳ ಕೆಲಸ ಮಾಡಿದ್ದಾರೆಂದು ಉತ್ತರವನ್ನು ಕೊಟ್ಟಿದ್ದಾರೆ. ಇದು ಎಷ್ಟರ ಮಟ್ಟಿಗೆ ಸತ್ಯ, ನ್ಯಾಯವಾಗಿದೆ ಎನ್ನುವುದು ನನಗೆ ಗೊತ್ತಾಗಲಿಲ್ಲ. ದಯವಿಟ್ಟು ಇದರ ಬಗ್ಗೆ ತನಿಖೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಚೌಡರೆಡ್ಡಿ:– ಸನ್ಮಾನ್ಯ ಅಧ್ಯಕ್ಷರೇ ಕಾರ್ಪೊರೇಷನ್‌ನಲ್ಲಿ ಮೂರು ವರ್ಷಗಳಿಂದ ನಡೆದಿರತಕ್ಕಂಥದ್ದು ಎಲ್ಲ ಪೀಸ್ ವರ್ಕ್ ಸಿಸ್ಟಮ್ ಮೇಲೆ. 10 ಸಾವಿರ, 20 ಸಾವಿರ, 30 ಸಾವಿರ, 50ಸಾವಿರದವರೆಗೂ ಪೀಸ್ ವರ್ಕ್ ಸಿಸ್ಟಮ್‌ನಲ್ಲಿ ಮಾಡಿದ್ದಾರೆ. ಅದನ್ನು ಎಲ್ಲಿಯವರೆಗೆ ಮಾಡಿದ್ದಾರೆಂದರೆ, 100 ಕೋಟಿ ರೂಪಾಯಿಗಳವರೆಗೆ ಪೀಸ್ ವರ್ಕ್ ಸಿಸ್ಟಮ್ ಮೇಲೆ ಮಾಡಿದ್ದಾರೆ. ಮೊದಲು ಇದ್ದ ಮಂತ್ರಿಗಳು ಪೀಸ್ ವರ್ಕ್ ಸಿಸ್ಟಮ್‌ನಲ್ಲಿ ಮಾಡಬಾರದು, ಗೌವರ್ನಮೆಂಟ್ ಆರ್ಡರ್ ಇದೆ. ಇದರ ಮೇಲೆ ಮಾಡಬೇಡಿ ಟೆಂಡರ್ ಕರೆದು ಮಾಡಿ ಎಂದು ಹೇಳಿ ಅವರು ಸ್ಟ್ರಿಕ್ಟ್ ಆಗಿ ಆರ್ಡರ್ ಮಾಡಿದರು. ಅದನ್ನು ನಾನು ಕ್ಯಾರಿಓವರ್ ಮಾಡುತ್ತಿದ್ದೇನೆ. ಇವತ್ತು ದುಡ್ಡೇ ಇಲ್ಲದಿದ್ದರೂ ಕೂಡ ಎಷ್ಟು ಕೆಲಸ ಮಾಡಿದ್ದಾರೋ ಅದಕ್ಕೆ ಪೇಮೆಂಟ್ ಮಾಡುವುದಕ್ಕೆ ಕಾರ್ಪೊರೇಷನ್‌ನಲ್ಲಿ ದುಡ್ಡೇ ಇಲ್ಲ. ನಾವು ಒಂದು ತಿಂಗಳಿಂದ ಕಡ್ಡಾಯವಾಗಿ ವಸೂಲು ಮಾಡುತ್ತಿದ್ದೇವೆ. ಬಹಳ ಮುತುವರ್ಜಿ ವಹಿಸಿ 75 ಪರ್ಸೆಂಟ್ ವಸೂಲಿ ಮಾಡುತ್ತಿದ್ದೇವೆ. ಅವರೇನಾದರು ಇಂಥ ಕಡೆ ಹೆಚ್ಚುಕಡಿಮೆಯಾಗಿದೆ ಎಂದು ಸ್ಪೆಸಿಫಿಕ್ ಆಗಿ ಹೇಳಿದರೆ ಅದರ ಬಗ್ಗೆ ಎನ್‌ಕ್ವಯರಿ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ರೆಡಿ ಇದ್ದೇವೆ.

ಶ್ರೀ ಎಂ. ಮುನಿಸ್ವಾಮಿ:– ಮಾನ್ಯ ಅಧ್ಯಕ್ಷರೇ, ಕಕ್ಕಸ್‌ಗೋಡೆಗಳನ್ನು ಕಟ್ಟಿಸುವುದಕ್ಕೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಅದೇ ಕಕ್ಕಸ್ಸು ಗೋಡೆ ಬಿದ್ದು ಒಬ್ಬ ಬಿ.ಎ. ಓದತಕ್ಕಂಥ ಹುಡುಗ ಸತ್ತಿದ್ದಾನೆ. ಅದರ ಬಗ್ಗೆ ಕಮಿಷನರ್‌ನ್ನು ಕರೆದುಕೊಂಡು ಹೋಗಿ, ಮೇಯರ್‌ರವರನ್ನು ಕರೆದುಕೊಂಡುಹೋಗಿ ತೋರಿಸಿದ್ದಲ್ಲದೆ ತಮಗೂ ಕಾಗದ ಬರೆದಿದ್ದೇನೆ. ಹತ್ತು ಸಾವಿರ ರೂಪಾಯಿಗಳ ಕೆಲಸವಾಗಿಲ್ಲ; 5ಕೋಟಿ 67ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ಉತ್ತರವನ್ನು ಕೊಡುತ್ತಿದ್ದಾರೆ. ಇದನ್ನು ಕೂಡಲೇ ತನಿಖೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಚೌಡರೆಡ್ಡಿ:– ಅದು ಯಾವುದು ಎಂದು ಸ್ಪೆಸಿಫಿಕ್ ಆಗಿ ಕಂಪ್ಲೆಂಟ್ ಬಂದರೆ ಯಾವ ರೀತಿ ಬೇಕಾದರೂ ತನಿಖೆ ಮಾಡಿಸುತ್ತೇವೆ. ತಾವು ದಯವಿಟ್ಟು ಬರೆದು ಕಳುಹಿಸಿ; ಅದರ ಬಗ್ಗೆ ತನಿಖೆ ಮಾಡಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಮುಂಡರಗಿ ತಾಲ್ಲೂಕಿನಲ್ಲಿನ ರೇಷ್ಮೆ ಫಾರಂ ಬಗ್ಗೆ

2180: ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ):—ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮುಂಡರಗಿ ತಾಲ್ಲೂಕಿನಲ್ಲಿ ರೇಷ್ಮೆ ಫಾರಂ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅದಕ್ಕೆ ನೀರಿನ ಕೊರತೆ ಇರುವುದನ್ನು ಸರ್ಕಾರವು ಗಮನಿಸಿದೆಯೇ;

ಆ. ತುಂಗಭದ್ರಾ ನದಿಯಿಂದ ಈ ಫಾರಂಗೆ ನೀರು ಪೂರೈಸುವ ಪ್ರಸ್ತಾವನೆಯನ್ನು ಅಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಿದ್ದು ಸಹ ವಿಳಂಬಕ್ಕೆ ಕಾರಣಗಳು ಏನು ? ಹಾಗೂ ಈ ಕಾರ್ಯವನ್ನು ಎಂದಿನಿಂದ ಪ್ರಾರಂಭ ಮಾಡುತ್ತೀರಿ ?

ಡಾ. ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):—

ಅ. ಬಂದಿದೆ. ಗಮನಿಸಿದೆ.

ಆ. ಹಾಲಿ ಇರುವ ಕೊಳವೆ ಬಾವಿಗಳಿಂದ ದೊರಕಿರುವ ನೀರಿನಿಂದ 3 ಎಕರೆ ಹಿಪ್ಪುನೇರಳೆಗೆ ನೀರಾವರಿ ಸೌಲಭ್ಯ ಇದೆ. ಸೆಪ್ಟೆಂಬರ್ 1992ರಲ್ಲಿ ಮತ್ತೊಂದು ಕೊಳವೆ ಬಾವಿಯನ್ನು ಕೊರೆದಿದ್ದು ಆ ಬಾವಿಯಿಂದ ಸುಮಾರು 900 ಗ್ಯಾಲನ್ ನೀರು ಬರುತ್ತಿದೆ. ತುಂಗಭದ್ರ ನದಿಯಿಂದ ನೀರು ತರಲು 6.09 ಲಕ್ಷ ರೂ.ಗಳು ಅಂದಾಜು ವೆಚ್ಚ ಪರಿಶೀಲನೆಯಲ್ಲಿದೆ.

ನೀರು ಸರಬರಾಜು ತೆರಿಗೆ (ದರ) ಕುರಿತು

1539: ಶ್ರೀ ಎಂ. ಮುನಿಸ್ವಾಮಿ (ಶಾಂತಿನಗರ):— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಬೆಂಗಳೂರು ನಗರದಲ್ಲಿ ಪ್ರಸ್ತುತ ವಿಧಿಸಿರುವ ಗೃಹ ಹಾಗೂ ಗೃಹೇತರ ಬಳಕೆಯ ನೀರಿನ ದರವೇನು;

2. ನೀರಿನ ದರವನ್ನು ಪರಿಷ್ಕರಿಸಲು ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆಯೇ;

3. ನೀರಿನ ಸಂಪರ್ಕಕ್ಕಾಗಿ ಪ್ರೋರೇಟಾ ದರವನ್ನು ವಸೂಲಿ ಮಾಡಲು ನಿಗದಿಪಡಿಸಿರುವ ವಿಧಿ ವಿಧಾನಗಳು;

4. ಪ್ರೋರೇಟಾ ದರ ಎಂದಿನಿಂದ ಜಾರಿಗೆ ಬಂದಿದೆ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):—

1) ಪ್ರಸ್ತುತ ದರಗಳು ಹೀಗಿದೆ.

1. ಗೃಹ ಬಳಕೆ: 0 ಇಂದ 25,000 ಲೀಟರ್‌ವರೆಗೆ 1000 ಲೀ.ಗೆ 60 ಪೈಸೆಯಂತೆ, ಕನಿಷ್ಠ ರೂ.15.00. 25,000 ಲೀಟರ್ ಮೇಲ್ಪಟ್ಟು ಲೀಟರ್‌ಗೆ ರೂ.0.60 ರಿಂದ ರೂ.7.50 ತನಕ ಹೆಚ್ಚಳ.

2. ಗೃಹೇತರ ಬಳಕೆ: ಮೊದಲ 10,000 ಲೀಟರ್‌ವರೆಗೆ ಲೀಟರ್‌ಗೆ ರೂ.7–50ರಂತೆ 10,000 ಲೀಟರ್ ಮೇಲ್ಪಟ್ಟು ಲೀಟರ್‌ಗೆ ರೂ. 7–50ರಿಂದ ರೂ.18.00 ತನಕ ಹೆಚ್ಚಳ.

2. ಇಲ್ಲ.

3. ಈಗಿನ ಪ್ರೋರೇಟಾ ದರ

1. ನೆಲ ಹಾಗೂ 1ನೇ ಮಹಡಿಗಿಂತ ಹೆಚ್ಚು ಇರುವ ಗೃಹ ಬಳಕೆಯ ನೀರಿನ ಸಂಪರ್ಕ ಹಾಗೂ ಒಳಚರಂಡಿ ಸಂಪರ್ಕ - ತಲಾ 4 ರೂ.ಗಳು ಚದರ ಅಡಿಗೆ. (ನಿವೇಶನ ಅಳತೆ 30 x 40 ಅಡಿಗಳಿಗೆ ಮೇಲ್ಪಟ್ಟವುಗಳಿಗೆ ಮಾತ್ರ).

2. ಗೃಹೇತರ ಬಳಕೆಯ ಕಟ್ಟಡಗಳ ನೀರಿನ ಸಂಪರ್ಕ ಹಾಗೂ ಒಳಚರಂಡಿ ಸಂಪರ್ಕಕ್ಕಾಗಿ ತಲಾ 6 ರೂ.ಗಳು ಚದರ ಅಡಿಗೆ. ಇದು ಎಲ್ಲಾ ಗೃಹೇತರ ಕಟ್ಟಡಗಳಿಗೂ ಅನ್ವಯಿಸುತ್ತದೆ.

4. ಈಗಿನ ಪ್ರೋರೇಟಾ ದರವು 30–7–1992ರಿಂದ ಜಾರಿಗೆ ಬಂದಿರುತ್ತದೆ.

ಹುಬ್ಬಳ್ಳಿ ಕಾರ್ಮಿಕ ನ್ಯಾಯಾಲಯದಲ್ಲಿ ಬಾಕಿಯಿರುವ ಪ್ರಕರಣಗಳ ಬಗ್ಗೆ

2182: ಶ್ರೀ ಸುಭಾಷ್ ಜೋಶಿ (ನಿಪ್ಪಾಣಿ):– ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹುಬ್ಬಳ್ಳಿಯಲ್ಲಿನ ಕಾರ್ಮಿಕ ನ್ಯಾಯಾಲಯದಲ್ಲಿ ಎಷ್ಟು ಮೊಕದ್ದಮೆಗಳು ಬಾಕಿ ಉಳಿದಿವೆ;

ಆ. ಬೆಳಗಾಂನಲ್ಲಿ ಹೆಚ್ಚುವರಿ ಕಾರ್ಮಿಕ ನ್ಯಾಯಾಲಯದ ಸ್ಥಾಪನೆ ಬಗ್ಗೆ ಸರ್ಕಾರದ ಆಲೋಚನೆಯಲ್ಲಿದೆಯೇ;

ಇ. ಹಾಗಿದ್ದಲ್ಲಿ, ಯಾವಾಗ ಸ್ಥಾಪಿಸಲ್ಪಡುವುದು ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ (ಕಾರ್ಮಿಕ ಸಚಿವರು):–

ಅ. ಡಿಸೆಂಬರ್ 1992ರ ಅಂತ್ಯಕ್ಕೆ 3206 ಮೊಕದ್ದಮೆಗಳು.

ಆ. ಇಲ್ಲ.

ಇ. ಉಪಪ್ರಶ್ನೆ (ಆ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹಾಸನದಲ್ಲಿ ಕೈಗಾರಿಕಾ ಉಪನಗರಕ್ಕೆ ಭೂ ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ

975: ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು):– ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನದಲ್ಲಿ ಕೈಗಾರಿಕಾ ಉಪನಗರಕ್ಕಾಗಿ ಎಷ್ಟು ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆ;

ಆ. ಸ್ವಾಧೀನಪಡಿಸಿಕೊಂಡಿರುವ ಭೂಮಿಯಲ್ಲಿ ಕೈಗಾರಿಕೆ ಸ್ಥಾಪಿಸಲು ಅಭಿವೃದ್ಧಿಪಡಿಸಲಾಗಿದೆಯೇ;

ಇ. ಹಾಗಿದ್ದಲ್ಲಿ, ಎಷ್ಟು ಜನರು ಕೈಗಾರಿಕೆ ಪ್ರಾರಂಭಿಸಲು ನಿವೇಶನ ಕೋರಿ ಅರ್ಜಿ ಸಲ್ಲಿಸಿದ್ದಾರೆ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು):–

ಅ. ಹಾಸನ ತಾಲ್ಲೂಕಿನ 9 ಗ್ರಾಮಗಳಲ್ಲಿ ಸುಮಾರು 2,000 ಎಕರೆ ಜಮೀನನ್ನು ಕೈಗಾರಿಕಾ ಬೆಳವಣಿಗೆ ಕೇಂದ್ರವನ್ನು ಸ್ಥಾಪಿಸಲು ಭೂಸ್ವಾಧೀನ ಕ್ರಮಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ, 1966ರ ಪ್ರಕಾರ ಕೈಗೊಳ್ಳಲಾಗಿದೆ.

ಆ. ಭೂ ಸ್ವಾಧೀನ ಕ್ರಮಗಳು ಇನ್ನೂ ಸಂಪೂರ್ಣವಾಗಿಲ್ಲದಿರುವುದರಿಂದ ಅಭಿವೃದ್ಧಿ ಕಾರ್ಯವನ್ನು ಕೈಗೊಂಡಿಲ್ಲ.

ಇ. ಉದ್ದೇಶಿತ ಕೈಗಾರಿಕಾ ಬೆಳವಣಿಗೆ ಕೇಂದ್ರದಲ್ಲಿ ಒಟ್ಟು 23 ಎಕರೆ ಜಮೀನನ್ನು ಮಂಜೂರು ಮಾಡಲು ಕೋರಿ 3 ಅರ್ಜಿಗಳು ಬಂದಿರುತ್ತವೆ.

ತುಮಕೂರು ನಗರದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಜಾರಿಗೆತರುವ ಬಗ್ಗೆ

2211: ಶ್ರೀ ಎಸ್.ಶಫೀ ಅಹಮ್ಮದ್ (ತುಮಕೂರು):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯುವಿಟ್ಟು ಉತ್ತರಿಸುವರೇ ?

1. ತುಮಕೂರು ಪಟ್ಟಣ ಜನಸಂಖ್ಯೆಯ 2.5 ಲಕ್ಷ ಮೀರಿರುವುದರಿಂದ ಈ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಮಾಡುವ ಪ್ರಸ್ತಾವನೆ ಇದೆಯೇ;

2. ನಗರಸಭೆ ಸರಹದ್ದಿನಲ್ಲಿ ಅನಧಿಕೃತವಾಗಿರುವ ಕಟ್ಟಡಗಳನ್ನು ಖಾಯಂಗೊಳಿಸುವ ಬಗ್ಗೆ ನಿರ್ದೇಶನ ನೀಡಲಾಗಿದೆಯೇ ? ಹಾಗಿದ್ದಲ್ಲಿ ಇದು. ಯಾವಾಗ ಜಾರಿಗೆ ಬರುವುದು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

1. ಹೌದು. ತುಮಕೂರು ಪಟ್ಟಣಕ್ಕೆ ಒಳಚರಂಡಿ ಯೋಜನೆಗೆ ಭೂಸಮೀಕ್ಷೆಯನ್ನು ನಡೆಸಲು ರೂ.76.000–00ಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಿ ತುಮಕೂರು ನಗರಸಭೆಗೆ ದಿನಾಂಕ 12–1–1993ರಂದು ಮಂಡಳಿಗೆ ಹಣ ಠೇವಣಿ ಮಾಡುವಂತೆ ಕೋರಲಾಗಿದೆ.

2. ಕರ್ನಾಟಕ ನಗರ ಪ್ರದೇಶ ಅನಧಿಕೃತ ಕಟ್ಟಡಗಳ ಸಕ್ರಮಗೊಳಿಸುವ ಕಾಯ್ದೆ 1991ನ್ನು ದಿನಾಂಕ 1–8–92ರಿಂದ ಜಾರಿಗೆ ಬರುವಂತೆ ಪ್ರಕಟಿಸಲಾಗಿದೆ. ಮತ್ತು ಸದರಿ ಕಾಯ್ದೆಯನ್ವಯ ಕರಡು ನಿಯಮಾವಳಿಗಳನ್ನು ಪ್ರಕಟಿಸಲಾಗಿದೆ. ಹಾಗೂ ಆಕ್ಷೇಪಣೆಗಳನ್ನು ಕರೆಯಲಾಗಿದ್ದು ಸದರಿ ನಿಯಮಾವಳಿಗಳನ್ನು ಅಂತಿಮವಾಗಿ ಪ್ರಕಟಿಸುವ ಬಗ್ಗೆ ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ. ಸದರಿ ಕಾಯ್ದೆಯನ್ವಯ ಅಂತಿಮ ನಿಯಮಾವಳಿಗಳನ್ನು ಪ್ರಕಟಿಸಿದ ಮೇಲೆ ಕಾಯ್ದೆಯನ್ನು ಪೂರ್ಣವಾಗಿ ಜಾರಿಗೆ ತರಲಾಗುವುದು.

ತೀರ್ಥಹಳ್ಳಿ ತಾಲ್ಲೂಕು ಶಂಕರಹಳ್ಳಿ ಗ್ರಾಮದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಹಂಚಿರುವ ನಿವೇಶನಗಳ ಬಗ್ಗೆ

2028: ಶ್ರೀ ಬಿ. ಸ್ವಾಮಿರಾವ್ (ಹೊಸನಗರ):– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ತೀರ್ಥಹಳ್ಳಿ ತಾಲ್ಲೂಕು ಶಂಕರಹಳ್ಳಿ ಗ್ರಾಮದಲ್ಲಿ 1991–92ರಲ್ಲಿ ಆಶ್ರಯ ಯೋಜನೆಯಡಿಯಲ್ಲಿ ನಿವೇಶನರಹಿತರಿಗೆ ಎಷ್ಟು ನಿವೇಶನವನ್ನು ನೀಡಲಾಗಿದೆ ? (ವಿವರ ನೀಡುವುದು);

ಆ. ಫಲಾನುಭವಿಗಳನ್ನು ಯಾವ ಆಧಾರದ ಮೇರೆಗೆ ಗುರುತಿಸಲಾಗಿದೆ;

ಇ. ಫಲಾನುಭವಿಗಳನ್ನು ಗುರುತಿಸುವಾಗ ಭಾರಿ ಪ್ರಮಾಣದಲ್ಲಿ ಹಣದ ಅವ್ಯವಹಾರ ಕಂದಾಯ ಇಲಾಖೆಯ ಅಧಿಕಾರಿಗಳ ವತಿಯಿಂದ ನಡೆದಿರುವುದರ ಬಗ್ಗೆ ಸದರಿ ಗ್ರಾಮಸ್ಥರು ನೀಡಿದ

ದೂರಿನನ್ವಯ ತಾಲ್ಲೂಕು ಪಂಚಾಯ್ತಿ ಸಮಿತಿಯಿಂದ ವಿಚಾರಣೆ ನಡೆಸಲಾಗಿದೆಯೇ; ಹಾಗಿದ್ದರೆ ವಿಚಾರಣೆಯ ವಿವರನೀಡುವುದು ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು):–

ಅ. ಒಟ್ಟು 40 ನಿವೇಶನಗಳನ್ನು ಹಂಚಲಾಗಿದೆ. ವಿವರ ಕೆಳಕಂಡಂತೆ ಇದೆ.

1. ಎ.ಕೆ. 1
2. ಈಡಿಗಾಸ್ 32
3. ಒಕ್ಕಲಿಗ 07

ಆ. ಸರ್ಕಾರಿ ಮಾರ್ಗದರ್ಶನದ ಸುತ್ತೋಲೆ ಸಂ.ಆರ್.ಡಿ.ಪಿ. 67 ಹೆಚ್‌ಎಲ್‌ಎ 91 ದಿನಾಂಕ:25–4–91 ಹಾಗೂ 2–11–91 ರ ಪ್ರಕಾರ.

ಇ. ಸದರಿ ವಿಷಯದ ಬಗ್ಗೆ ಯಾವ ತರದ ದೂರಿನ ಅರ್ಜಿಯನ್ನು ತಾಲ್ಲೂಕು ಪಂಚಾಯ್ತಿ ಸಮಿತಿ ಮುಂದಿಡಲಾಗಿರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ದಿನಾಂಕ 19-3–1993ರ ಲಿಖಿತ ಮೂಲಕ ಉತ್ತರಿಸುವ 23ನೇ ಪಟ್ಟಿಯಲ್ಲಿರುವ 67 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 176, 178, 179, 1520, 248, 1532, 1630, 1166, 2029, 1540ಎ ಮತ್ತು 1366, ಈ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 56 ಚುಕ್ಕಿ ಗುರುತಿಲ್ಲದ ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮೈಸೂರು ನಗರದಲ್ಲಿರುವ ಕಾಫಿ ಕ್ಯೂರಿಂಗ್ ವರ್ಕ್ಸ್ ಕೆಲಸದ ಬಗ್ಗೆ

54: ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೈಸೂರು ನಗರದಲ್ಲಿರುವ ಕಾಫಿ ಕ್ಯೂರಿಂಗ್ ವರ್ಕ್ಸ್ ಲಾಭದಲ್ಲಿ ನಡೆಯುತ್ತಿದೆಯೇ;

ಆ. ಈ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸಂಖ್ಯೆ ಎಷ್ಟು ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ಮತ್ತು ಆ. ಮೈಸೂರಿನಲ್ಲಿ ಕೆಳಕಂಡ 3 ಕಾಫಿ ಕ್ಯೂರಿಂಗ್ ವರ್ಕ್ಸ್ ಘಟಕಗಳು ಹಾಲಿ ಕೆಲಸ ನಿರ್ವಹಿಸುತ್ತಿವೆ. ಅವುಗಳಲ್ಲಿರುವ ಕೆಲಸಗಾರರ ಸಂಖ್ಯೆ ಹಾಗೂ ಅವುಗಳ ಲಾಭ:ನಷ್ಟಗಳ ಮಾಹಿತಿಯನ್ನು ಪ್ರತಿ ಘಟಕದ ಹೆಸರಿನ ಮುಂದೆ ತೋರಿಸಲಾಗಿದೆ:–

ಘಟಕದ ಹೆಸರು	ಕೆಲಸಗಾರರ ಸಂಖ್ಯೆ		ಘಟಕದ ಲಾಭ:ನಷ್ಟ
	ಸಿಬ್ಬಂದಿ ವರ್ಗ	ಕೆಲಸಗಾರರು	(1991-92ನೇ ಸಾಲಿನದು)
1) ಮೆ:ಮೈಸೂರು ಕಾಫಿ ಪ್ರೋಸೆಸಿಂಗ್ ಕೋ ಅಪರೇಟಿವ್ ಸೊಸೈಟಿ	62	152	ನಷ್ಟ (ರೂ. 36.547–37)

ಲಿಮಿಟೆಡ್ ಯಾದವಗಿರಿ, ಮೈಸೂರು.			
2) ಮೆ:ಕೂರ್ಗ್ ಅಂಡ್ ಮೈಸೂರ್ ಕಾಫಿ ಕಂಪನಿ (1937) ಲಿಮಿಟೆಡ್ ಚಾಮುಂಡಿ.ಕ್ಯೂರಿಂಗ್ ವರ್ಕ್ಸ್ ಕೆ.ಆರ್.ರಸ್ತೆ ಮೈಸೂರು.	50	155	ನಷ್ಟ (ರೂ.470000-00)
3. ಮೇ:ಬಿ.ಎನ್. ಸುಬ್ಬಯ್ಯ ಅಂಡ್ ಸನ್ಸ್, ಕಾಫಿ ಕ್ಯೂರಿಂಗ್ ವರ್ಕ್ಸ್ ಹಳೇ ಹೆಗ್ಗಡದೇವನಕೋಟೆ ರಸ್ತೆ, ಮೈಸೂರು ದಕ್ಷಿಣ.	7	35	ನಷ್ಟ (ರೂ. 2,97,526-78)

ಬೆಂಗಳೂರು ನಗರಕ್ಕೆ ಈವರೆಗೆ ಕುಡಿಯುವ ನೀರಿಗಾಗಿ ಬಿಡುಗಡೆ ಮಾಡಿರುವ ಹಣದ ಬಗ್ಗೆ

55: ಶ್ರೀ ಹರ್ಷಕುಮಾರ ಗೌಡ (ಚಾಮರಾಜ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಬೆಂಗಳೂರು ನಗರ ನೀರಿನ ವಿವಿಧ ಹಂತಗಳಿಗೆ ಯಾವ ಯಾವ ಯೋಜನೆಗಳಲ್ಲಿ ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

2. ಮೈಸೂರು ನಗರದ ಕುಡಿಯುವ ನೀರು ಸರಬರಾಜು ಯೋಜನೆಗೆ ಈವರೆವಿಗೂ ಬಿಡುಗಡೆ ಮಾಡಿರುವ ಹಣವೆಷ್ಟು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

1.

		ರೂ.ಕೋಟಿಗಳಲ್ಲಿ	
1.	ಕಾವೇರಿ ಮೊದಲನೆ ಹಂತ (1970-74)	ಕರ್ನಾಟಕ ಸರ್ಕಾರ	18.84
		ಡಿಬೆಂಚರ್ಸ್	10.45
		ಜೀವ ವಿಮಾ ಇಲಾಖೆ	7.00
		ರಕ್ಷಣಾ ಇಲಾಖೆ	2.00
		ಒಟ್ಟು ಮೊತ್ತ	38.29
2.	ಕಾವೇರಿ ಎರಡನೇ ಹಂತ (1980-84)	ಕರ್ನಾಟಕ ಸರ್ಕಾರ	19.95
		ಡಿಬೆಂಚರ್ಸ್	12.93
		ಜೀವವಿಮಾ ಇಲಾಖೆ	19.75
		ರಕ್ಷಣಾ ಇಲಾಖೆ	3.44

	ಸರ್ಕಾರಕ್ಕೆ ಕೊಡಬೇಕಾಗಿದ್ದ ಕಂತಿನ ಹಣ ಹಾಗೂ ಬಡ್ಡಿಯನ್ನು		
		ಯೋಜನೆಗೆ ಬಳಸಿದ್ದು	10.47
		ಒಟ್ಟು ಮೊತ್ತ	66.54
3.	ಕಾವೇರಿ ಮೂರನೇ ಹಂತ (1986–93)	ಕರ್ನಾಟಕ ಸರ್ಕಾರ	54.90
		ಜೀವವಿಮಾ ಇಲಾಖೆ	49.50
		ಡಿಬೆಂಚರ್ಸ್	22.82
		ರಕ್ಷಣಾ ಇಲಾಖೆ	13.00
		ಹುಡ್ಕೊ	28.50
		ಬಿ.ಡಿ.ಎ.	21.30
		ಬಿ.ಸಿ.ಸಿ.	25.50
		ರೇಲ್ವೇಸ್	4.00
		ಒಟ್ಟು ಮೊತ್ತ	219.52

2. ರೂ. 184.67.

ರಾಜ್ಯದಲ್ಲಿ ಬಂಡವಾಳ ಹೂಡಿರುವ ವಿದೇಶಿ ಭಾರತೀಯರನ್ನು ಕುರಿತು

56: ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):– ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಬಂಡವಾಳ ಹೂಡಿರುವ ವಿದೇಶಿ ಭಾರತೀಯರುಗಳು ಯಾರು;

ಆ. ಅವರುಗಳು ಪ್ರಾರಂಭಿಸುವ ಉದ್ದಿಮೆಗಳಾವುವು ಹಾಗೂ ಅವರುಗಳು ಹೂಡಿರುವ ಒಟ್ಟು ಬಂಡವಾಳವೆಷ್ಟು;

ಇ. ಅವರುಗಳಿಗೆ ಸರ್ಕಾರ ಯಾರ್‍ಯಾರಿಗೆ ಯಾವ ರೀತಿಯ ಸವಲತ್ತುಗಳನ್ನು ನೀಡಿದೆ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ರಾಜ್ಯದಲ್ಲಿ ಬಂಡವಾಳ ಹೂಡಿರುವ ವಿದೇಶಿ ಭಾರತೀಯರುಗಳ ಮಾಹಿತಿಯು, ಅಡಕ–'ಅ' ದಲ್ಲಿ ನೀಡಲಾಗಿದೆ.

ಆ. ಅಡಕ–'ಆ' ನಲ್ಲಿ ಸದರಿ ಘಟಕಗಳ ಹೆಸರುಗಳನ್ನು ಮತ್ತು ಅವರು ಹೂಡಿರುವ ಬಂಡವಾಳದ ಮಾಹಿತಿಯನ್ನು ಒದಗಿಸಲಾಗಿದೆ.

ಇ. ವಿದೇಶಿ ಭಾರತೀಯರಿಗಾಗಿ ರಾಜ್ಯ ಸರ್ಕಾರವು ಯಾವ ವಿಶೇಷವಾದ ಸವಲತ್ತುಗಳನ್ನೂ ನೀಡಿರುವುದಿಲ್ಲ. ವಿದೇಶಿ ಭಾರತೀಯರಿಗಾಗಿ ರಾಜ್ಯದಲ್ಲಿ ಸ್ಥಾಪಿತವಾಗಿರುವ ನಾಡಲ್ ಏಜೆನ್ಸಿಯು ಇವರುಗಳಿಗಾಗಿ ಸೇವಾ ಸೌಲಭ್ಯಗಳನ್ನು ಒದಗಿಸುತ್ತಿದೆ. ಮತ್ತು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ಒದಗಿಸಬೇಕಾದ ಮಾಹಿತಿಯನ್ನು ಸಲ್ಲಿಸಲು ವಿದೇಶಿ ಭಾರತೀಯರಿಗೆ ಸಹಾಯ ನೀಡಲಾಗುತ್ತಿದೆ.

ಅನಿವಾಸಿ ಭಾರತೀಯರಿಂದ ಸ್ಥಾಪಿಸಲ್ಪಟ್ಟ ಉದ್ದಿಮೆಗಳ ಪೈಕಿ ಉತ್ಪಾದನೆ ಪ್ರಾರಂಭ ಮಾಡಿರುವ ಘಟಕಗಳ ವಿವರಗಳು

ಕ್ರ. ಸಂ.	ಕಾರ್ಖಾನೆಗಳ ಹೆಸರು	ಮಾಲೀಕರ ಹೆಸರು	ಬಂಡವಾಳ ಹೂಡಿಕೆ (ರೂ.ಲಕ್ಷಗಳಲ್ಲಿ)
1.	ಎಕ್‌ಸೆಲ್ ಸರ್‌ಕ್ಯೂಟ್ಸ್ ಪ್ರೈ.ಲಿ.	ಶ್ರೀ ವೆಂಕಟರಾಮನ್	126.00
2.	ಶಿಲ್‌ಟ್ರಾನ್ ಎಲೆಕ್ಟ್ರಾನಿಕ್ ಎಂಜಿನಿಯರಿಂಗ್	ಶ್ರೀ ಡಿ.ಎಂ. ಬಂಡಾರ್‌ಕರ್	40.00
3.	ಸಂಮಾನ್ ಪಾಲಿಮರ್ಸ್ ಪ್ರೈ.ಲಿ.	ಶ್ರೀ ತಾಮಸ್ ಪಿಲಿಪ್ಸ್	38.50
4.	ಕಾರ್ಲ್‌ಜೆಯ್ ಆಫೆಟಿಕ್ಸ್ ಲಿ.	ಶ್ರೀ ಸೀತಾರಾಮ್ ಶೆಟ್ಟಿ	40.00
5.	ಎಲ್.ಜೆ. ಫೋಂನ್ಸ್ ಪ್ರಾಡಕ್ಟ್ಸ್	ಶ್ರೀಮತಿ ಲೀಲಾಮಾತ್ಯೂನ್	12.00
6.	ವಿಜಯಾ ವೈಯರ್ಸ್ ಅಂಡ್ ಫಿಲಮೆಂಟ್ಸ್	ಶ್ರೀ ಬಿ.ಆರ್.ಪೈ ಅಂಡ್ ಅಲೋಕ್ ಗುಪ್ತ	100.00
7.	ಸನ್‌ಕ್ರಷ್ ಫ್ರೂಟ್ಸ್ ಪ್ರೈ.ಲಿ.	ಶ್ರೀ ಎಂ.ಜಿ.ಕಿನಿ	110.00
8.	ಬೈಫೋರಾ ಕ್ಲಾಕ್ ಇಂಡಸ್ಟ್ರೀ ಲಿ.	ಶ್ರೀ ಜವಹರ್ ಕಂಡಾರೀ	231.00
9.	ಇನ್‌ಫೋಯ್‌ಸಿಸ್ ಕನ್‌ಸಲ್‌ಟೆಂಟ್ಸ್ ಲಿ.	ಶ್ರೀ ಎನ್. ನಾರಾಯಣಮೂರ್ತಿ	100.00
10.	ಬ್ಲೋ ಮೋಳ್‌ಡರೆನ್ ಇಂಡಿಯಾ ಪ್ರೈ.ಲಿ.	ಶ್ರೀ ಜಿ.ಎಂ. ಕೃಷ್ಣ	174.00
11.	ವೆನ್‌ಲನ್ ಪಾಲಿಯಸ್ಟರ್ ಫಿಲಂಸ್ ಲಿ.	ಶ್ರೀ ನಾನಿಕ್ ರೊಹೇರಾ	942.00
12.	ಭೈಪೋರಾ ವಾಚ್ ಕಂಪನಿ ಲಿ.	ಶ್ರೀ ಜವಹರ್ ಕಂಡಾರಿ	1000.00
13.	ಹೊಯ್ಸಳಾ ಮೀಲಾವೇರ್ಸ್ ಪ್ರೈ ಲಿ.	ಶ್ರೀ ಜಿ.ಎಂ. ಕೃಷ್ಣ	5.00
14.	ಹೊಯ್ಸಳಾ ಪಾಲೀಯಸ್‌ಟರೀನ್ ಫಿಲಮ್ಸ್ ಪ್ರೈ ಲಿ.	ಶ್ರೀ ಜಿ.ಎಂ. ಕೃಷ್ಣ	4.57
15.	ಕೇಸಿಯೋ ಕಾಲಿಕ್ಯುಲೇಟರ್ಸ್	ಶ್ರೀ ಕರತಾರ್‌ಸಿಂಗ್ ತಕರಾಲ್	40.00
16.	ಹೊಯ್ಸಳಾ ತೆಲ್‌ಮೋಫಾರಮರ್ಸ್ ಪ್ರೈ ಲಿ.	ಶ್ರೀ ಜಿ.ಎಂ. ಕೃಷ್ಣ	11.00
17.	ಇಂಡಿಯಾ ಫೋಟೋಗ್ರಾಫಿಕ್ಸ್ ಕಂ.ಲಿ.	ಶ್ರೀ ಕೋಡಕ್ ಗ್ರೂಪ್	200.00
18.	ಗುರುಕರ್ ಪ್ಲಾಸ್ಟಿಕ್ಸ್	ಶ್ರೀ ಗುರುಕರ್	740.00
19.	ಜೆಲಕ್ಸ್ ಕನೆಕ್ಟರ್ಸ್ ಲಿ.	ಶ್ರೀ ನಾರಾಯಣ ಶಾ	150.00

20. ಅಪೋಲೋ ಫುಟ್ ವೇರ್ ಇಂಡಿಯಾ ಲಿ.	ಶ್ರೀ ಪಾರ್ಥಸಾರತಿ	35.00
21. ಎಲೆಕ್ಟ್ರಿಕ್ಸ್ ಇಂಡಿಯಾ ಪ್ರೈ ಲಿ.	ಶ್ರೀ ಅಚ್ಚುತ ಹೆಗಡೆ	300.00
22. ಕೈರೂನ್ ಇಂಡಸ್ಟ್ರೀಸ್	ಶ್ರೀ ಕೈರೂನ್	13.05
23. ಪೆನೋಟಿಕ್ ಪ್ರೈ ಲಿ.	ಶ್ರೀ ಹೆಚ್.ಸಿ. ಸೆತ್	138.00
24. ಸಿಟಿ ಡ್ರಿಂಕ್ಸ್ ಪ್ರೈ ಲಿ.	ಶ್ರೀ ಮೋಹನ್	155.00
25. ಹೋಟೆಲ್ ಹಾಲಿಡೇ ಇನ್	ಶ್ರೀ ಸಿ.ಬಿ. ಪರದಾನಾನಿ	1858.00
26. ಬೈಯೋ ಪಾಲಿಮರ್ಸ್ ಪ್ರೈ ಲಿ.	ಶ್ರೀ ನಾರಾಯಣನ್	238.00
27. ರಾಯಲ್ ಎಲೆಕ್ಟ್ರಾನಿಕ್ಸ್ ಪ್ರೈ ಲಿ.	ಶ್ರೀ ಕೆ.ಹೆಚ್.ಕೆ. ಸೋದಾರಂಗಾಣಿ	76.00
28. ಹೈಲೋಜನ್ ರೆಡಿಯೇಟರ್ಸ್ ಪ್ರೈ ಲಿ.	ಶ್ರೀ ದಕ್ಷಿಣಾಮೂರ್ತಿ	60.00
29. ಷಾಶೀನಾಗ್ ಇಂಡಸ್ಟ್ರೀಸ್	ಶ್ರೀ ಷಾಶೀನಾಗ್	6.30
30. ಅಸ್ವಿನಿ ಲೆದರ್ ಪ್ರೈ ಲಿ.	ಶ್ರೀ ಜೋಸೆಫ್ ಮ್ಯಾಡ್ಯೂ	30.00
31. ಸ್ಟಾರ್ ಷೂಸ್ ಪ್ರೈ ಲಿ.	ಶ್ರೀ ಅರುಣ್ ಸಂಗಿ	180.00
32. ಕಾನ್‌ಕರ್ಡ್ ಇಂಡಸ್ಟ್ರೀಸ್	ಶ್ರೀ ಕಾಮತ್	16.00
33. ತಕರಾಲ್ ಬ್ರದರ್ಸ್ ಪ್ರೈ ಲಿ.	ಶ್ರೀ ಕರತಾರ್ ಎಸ್. ತಕರಾಲ್	30.00
34. ಕ್ಯಾನ್ಸರ್ ಅಸ್ಪಿಟಲ್ ಅಂಡ್ ರಿಸರ್ಚ್ ಸೆಂಟರ್ ಪ್ರೈ ಲಿ.	ಡಾ: ರವೀಂದ್ರ ಪಿ. ರಾವ್	200.00
35. ಸಿಎಡಿ ಮಿಷನ್ಸ್ ಲಿ.	ಶ್ರೀ ಆರ್. ಎಲ್. ರಾಮಚಂದ್ರ	76.00
36. ಮಸ್ಕಾಟ್ ವೊಕಾಯಿಟ್ ಪ್ರೈ ಲಿ.	ಡಾ: ಎಂ.ಸಿ. ಸಂಪತ್ ಕುಮಾರನ್	38.00
37. ಪಾಲಿಯೂರಿತಿನ್ ಪ್ರೈ ಲಿ.	ಶ್ರೀ ಗೋವಿಂದ್ ಲಕ್ಷ್ಮನ್	200.00
38. ಡಿ.ಎಸ್. ಗ್ರಾನೈಟ್ಸ್ ಪ್ರೈ ಲಿ.	ಡಾ: ಸುನಿಲ್ ಸ್ವಾಮಿ	200.00
39. ಶಕೀಲ್ ಕಳಶ ಪ್ರೊಫೈಲ್ ಲಿ.	ಶ್ರೀ ಶೈಕ್ ಕಳಶ	750.00
40. ಭಾರತ ಕ್ಯಾನ್ಸರ್ ಅಸ್ಪಿಟಲ್	ಡಾ: ಅಜಯಕುಮಾರ್	157.50
41. ಇ. ಎಂ. ಕಂಪನಿ (ಯುಎಸ್‌ಎ)	ಬಿರ್ಲಾ ಗ್ರೂಪ್	1000.00
42. ಮೂಗ್ ಕಂಟ್ರೋಲ್ಸ್ ಪ್ರೈ ಲಿ.	ಡಾ: ಡಿ. ವರ್ಮಾ	306.00
43. ಯೂನಿಜೆಟ್ ನೀಡಲ್ಸ್ ಲಿ.	ಶ್ರೀ ಆರ್.ಬಿ. ಕೃಷ್ಣನ್	294.00
44. ಪೆರಿಫೋನ್ ಸಾಫ್ಟ್‌ವೇರ್ ಸಿಸ್ಟಮ್ಸ್ ಪ್ರೈ ಲಿ.	ಪೆರಿಫೋನ್ ಗ್ರೂಫ್	270.000
45. ಬಿ.ಆರ್.ಎಸ್. ಎಗ್ಜಮ್ಸ್ ಪ್ರೈ ಲಿ.	ಶ್ರೀ ಬಿ.ಆರ್. ಶೆಟ್ಟಿ	284.50
46. ಮಿಚುಗನ್ ಗ್ಲೇಜಿಸ್ ಲಿ.	ಶ್ರೀ ಜಾರ್ಜ್ ಚೆಮ್ಮನೂರ್	600.00
	ಒಟ್ಟು	11574.92

ಮೈಸೂರು ನಗರದ ಗಂಧದ ಎಣ್ಣೆಯ ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ಕುರಿತು

1523: ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೈಸೂರು ನಗರದ ಗಂಧದ ಎಣ್ಣೆ ಕಾರ್ಖಾನೆ ಆರ್ಥಿಕವಾಗಿ ಯಾವ ಪರಿಸ್ಥಿತಿಯಲ್ಲಿದೆ;

ಆ. ಇದನ್ನು ಅಭಿವೃದ್ಧಿಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ಈ ಘಟಕ ನಷ್ಟದಲ್ಲಿ ನಡೆಯುತ್ತಿದೆ.

ಆ. ಈ ಘಟಕ ಸೇರಿದಂತೆ ಕೆ.ಎಸ್.ಅಂಡ್ ಡಿ.ಎಲ್. ಕಂಪನಿಯನ್ನು ಪುನರುಜ್ಜೀಕರಣ ಮಾಡಲು ಸರ್ಕಾರ ಅನುಮೋದನೆ ನೀಡಿದೆ ಮತ್ತು ರೂ.2.50 ಕೋಟಿ ರೂ. ಇದುವರೆಗೆ ಬಿಡುಗಡೆ ಮಾಡಿದೆ. ಅಲ್ಲದೆ ಮೈಸೂರು ಮತ್ತು ಶಿವಮೊಗ್ಗದಲ್ಲಿರುವ ಗಂಧದ ಎಣ್ಣೆ ಕಾರ್ಖಾನೆಗಳನ್ನು ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮಕ್ಕೆ ವರ್ಗಾಯಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಕೇಂದ್ರ ಸರ್ಕಾರದಿಂದ ಇತ್ತೀಚಿನ ವರ್ಷಗಳಲ್ಲಿ ರಾಜ್ಯಕ್ಕೆ ಮಂಜೂರಾದ ಹೊಸ ಕೈಗಾರಿಕೆಗಳ ಸಂಖ್ಯೆ ಕುರಿತು

1524: ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ):– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕೇಂದ್ರ ಸರ್ಕಾರದಿಂದ ಇತ್ತೀಚಿನ ವರ್ಷಗಳಲ್ಲಿ ರಾಜ್ಯಕ್ಕೆ ಹೊಸದಾಗಿ ಮಂಜೂರಾಗಿರುವ ಕೈಗಾರಿಕೆಗಳೆಷ್ಟು ? ಅವುಗಳು ಯಾವುವು;

ಆ. ರಾಜ್ಯದಲ್ಲಿ ಈ ಕೈಗಾರಿಕೆಗಳನ್ನು ಮಂಜೂರು ಮಾಡಲಾಗಿರುವ ಜಿಲ್ಲೆಗಳಾವುವು ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ಯಾವುದು ಇಲ್ಲ.

ಆ. ಉದ್ಭವಿಸುವುದಿಲ್ಲ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಯಲ್ಲಿನ ಕಾರ್ಯದರ್ಶಿಯ ಹುದ್ದೆ ಕುರಿತು

180: ಶ್ರೀ ಕೆ.ಲಕ್ಕಣ್ಣ (ರಾಜಾಜಿನಗರ):– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಕಾರ್ಯದರ್ಶಿಯ ಹುದ್ದೆ ಯಾವ ಅರ್ಹತೆಯನ್ನು ಒಳಗೊಂಡಿರುವುದು;

ಆ. ಆ ಕಾರ್ಯದರ್ಶಿಯ ಹುದ್ದೆಯನ್ನು ಯಾವ ದಿನಾಂಕದಿಂದ ಮಂಜೂರು ಮಾಡಲಾಗಿದೆ;

ಇ. ಆ ದಿವಸದಿಂದ ಇಂದಿನವರೆಗೆ ಎಷ್ಟು ಜನ ಕಾರ್ಯದರ್ಶಿ ಹುದ್ದೆಯಲ್ಲಿ ಸೇವೆ ಮಾಡಿರುವರು;

ಈ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಈಗಿನ ಕಾರ್ಯದರ್ಶಿಯವರು ನಿಯಮ ಪ್ರಕಾರ ಇರುವರೇ ?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ದಿನಾಂಕ:15.01.1984ರಲ್ಲಿ ಜಾರಿಗೆ ಬಂದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ದರ್ಜೆ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಚಿಸಿರುವಂತೆ ಕಾರ್ಯದರ್ಶಿ ಹುದ್ದೆಯು ಈ ಕೆಳಗಿನ ಅರ್ಹತೆಯನ್ನು ಒಳಗೊಂಡಿರುತ್ತದೆ.

1. ನೇರ ನೇಮಕಾತಿ:

ಅ. ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಕಲೆ ವಿಜ್ಞಾನ ಅಥವಾ ಕಾನೂನು ವಿಭಾಗದಲ್ಲಿ ಪ್ರಥಮ ದರ್ಜೆಯ ಪದವೀಧರರಾಗಿರಬೇಕು.

ಆ. ಕಂಪನಿ ಸೆಕ್ರೆಟೇರಿಯೇಸ್ ಸಂಸ್ಥೆಯ ಸದಸ್ಯರಾಗಿರಬೇಕು ಅಥವಾ ತತ್ಸಮಾನ ಹುದ್ದೆಯನ್ನು ಹೊಂದಿದವರಾಗಿರಬೇಕು. ಅದಲ್ಲದೆ, ಸರ್ಕಾರಿ ಅಥವಾ ವಾಣಿಜ್ಯ ಸಂಸ್ಥೆಗಳಲ್ಲಿ ಕನಿಷ್ಟ 5 ವರ್ಷದ ಅನುಭವವಿರಬೇಕು.

ಇ. ವಯಸ್ಸು 40 ವರ್ಷ ಮೀರಿರಬಾರದು.

2. ಪದೋನ್ನತಿ:

ಸಹಾಯಕ ಕಾರ್ಯದರ್ಶಿ ಹುದ್ದೆಯಲ್ಲಿ ಕನಿಷ್ಟ 4 ವರ್ಷ ಸೇವೆ ಸಲ್ಲಿಸಿರಬೇಕು.

ಆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಕಾರ್ಯದರ್ಶಿ ಹುದ್ದೆಯು ದಿನಾಂಕ:14.07.1966ರಿಂದ ಮಂಜೂರು ಮಾಡಲಾಗಿದೆ.

ಇ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಬೇರೆ ಇಲಾಖೆಯ 4 ಮಂದಿ ಅಧಿಕಾರಿಗಳು ಕಾರ್ಯದರ್ಶಿಯಾಗಿ ಎರವಲು ಸೇವೆಯಲ್ಲಿ ಕೆಲಸ ಮಾಡಿರುವರು.

ಈಗಿರುವ ಕಾರ್ಯದರ್ಶಿಯವರು ದಿ: 23.09.1981ರಿಂದ 03.10.1988ರವರೆಗೆ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದ್ದು, ಮಂಡಳಿಯ ಸಹಾಯಕ ಕಾರ್ಯದರ್ಶಿಯೊಬ್ಬರು ಸಲ್ಲಿಸಿದ್ದ ರಿಟ್ ಅರ್ಜಿಯ ಮೇಲೆ ಅವರನ್ನು ಸಹಾಯಕ ಕಾರ್ಯದರ್ಶಿ ಸ್ಥಾನಕ್ಕೆ ದಿ: 04.10.1988ರಿಂದ ಹಿಂಬಡ್ತಿ ನೀಡಲಾಯಿತು.

ನಂತರ ಉಚ್ಚನ್ಯಾಯಾಲಯದ ಅನುಮತಿಯನ್ನು ಪಡೆದು ಸಹಾಯಕ ಕಾರ್ಯದರ್ಶಿಗಳಲ್ಲಿ ಆಯ್ಕೆಯನ್ನು ನಡೆಸಿ ಈಗ ಕೆಲಸ ಮಾಡುತ್ತಿರುವ ಕಾರ್ಯದರ್ಶಿಯವರನ್ನು ಈ ಸ್ಥಾನಕ್ಕೆ ಆಯ್ಕೆ ಮೇಲೆ ದಿನಾಂಕ 13.03.1990 ರಿಂದ ಮುಂಬಡ್ತಿ ನೀಡಲಾಯಿತು.

ಈ. ನಿಯಮಾವಳಿ ಪ್ರಕಾರ ಈಗಿನ ಕಾರ್ಯದರ್ಶಿಯವರಿಗೆ ಸಹಾಯಕ ಕಾರ್ಯದರ್ಶಿಯ ಹುದ್ದೆಯಿಂದ ಬಡ್ತಿ ನೀಡಿ ನೇಮಕ ಮಾಡಲಾಗಿದೆ.

ರೇಷ್ಮೆ ಮಾರುಕಟ್ಟೆಯಲ್ಲಿ ನ್ಯಾಯಬೆಲೆಗೆ ರೈತರಿಂದ ರೇಷ್ಮೆ ಗೂಡನ್ನು ಖರೀದಿಸುವ ಬಗ್ಗೆ

181: ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):– ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರೇಷ್ಮೆ ಮಾರುಕಟ್ಟೆಯಲ್ಲಿ ನ್ಯಾಯಬೆಲೆಗೆ ರೈತರಿಂದ ರೇಷ್ಮೆ ಗೂಡನ್ನು ಖರೀದಿಸಲಾಗಿವೆಯೇ;

ಆ. ರೇಷ್ಮೆ ಮಾರುಕಟ್ಟೆಯಲ್ಲಿರುವ ಅಧಿಕಾರಿಗಳು ಮತ್ತು ಖಾಸಗಿ ಟ್ರೇಡರ್ಸ್‌ಗಳಿಗೂ ಇರುವ ಸಂಬಂಧವೇನು;

ಇ. ರೇಷ್ಮೆ ಮಾರುಕಟ್ಟೆಯಲ್ಲಿ ರೈತನ ಉತ್ಪಾದನೆಗೆ ತಕ್ಕಂತಹ ಬೆಲೆ ಸಿಗುತ್ತದೆಯೇ;

ಈ. ರೇಷ್ಮೆ ಇಲಾಖೆಯವರು ರೈತರಿಗೆ ವಿತರಿಸುತ್ತಿರುವ ಮೊಟ್ಟೆಗಳು ರೋಗ ರಹಿತವಾಗಿದೆಯೇ ? ಹಾಗೂ ರೋಗದ ಮೊಟ್ಟೆಗಳಿಂದ ತೀವ್ರ ನಷ್ಟಕ್ಕೆ ಒಳಗಾಗಿರುವುದು ನಿಜವೇ;

ಉ. ಬಡ ರೇಷ್ಮೆ ನೇಕಾರರಿಗೆ, ಸಬ್ಸಿಡಿ ದರದಲ್ಲಿ ರೇಷ್ಮೆ ಕಚ್ಚಾ ಮಾಲನ್ನು ವಿತರಿಸಲು ಸಾಧ್ಯವಾಗುವುದಿಲ್ಲವೇ ?

ಡಾ. ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

ಅ. ನೂಲು ಬಿಚ್ಚಾಣಿಕೆದಾರರು ರೈತರಿಂದ ರೇಷ್ಮೆ ಗೂಡನ್ನು ಸ್ಪರ್ಧಾತ್ಮಕ ಬೆಲೆಗೆ ಖರೀದಿಸುತ್ತಿದ್ದಾರೆ.

ಆ. ಮಾರುಕಟ್ಟೆಯಲ್ಲಿರುವ ಅಧಿಕಾರಿಗಳು ನೂಲು ಬಿಚ್ಚಾಣಿಕೆದಾರರು ಮಾರುಕಟ್ಟೆಯಲ್ಲಿ ಗೂಡನ್ನು ಕೊಳ್ಳಲು ಹಾಗೂ ರೈತರು ಗೂಡನ್ನು ಮಾರಾಟ ಮಾಡಲು ವ್ಯವಸ್ಥೆ ಮಾಡಿ, ಗೂಡನ್ನು ಬಹಿರಂಗ ಹರಾಜು ಮಾಡಿ ನೂಲು ಬಿಚ್ಚಾಣಿಕೆದಾರರು ಕೂಗಿದ ಬೆಲೆಗೆ ರೈತರು ಒಪ್ಪಿದ್ದಲ್ಲಿ ಆ ಗೂಡನ್ನು ತೂಕ ಮಾಡಿಸಿ ನೂಲು ಬಿಚ್ಚಾಣಿಕೆದಾರರಿಂದ ಹಣವನ್ನು ರೈತರಿಗೆ ಕೊಡಿಸಿ ಗೂಡನ್ನು ಬಿಚ್ಚಾಣಿಕೆದಾರರಿಗೆ ಬಿಡುಗಡೆ ಮಾಡುತ್ತಾರೆ. ಇದಲ್ಲದೆ ಬೇರೆ ಯಾವುದೇ ಸಂಬಂಧ ಇರುವುದಿಲ್ಲ.

ಇ. ಉತ್ಪಾದನೆಗೆ ತಕ್ಕಂತಹ ಸ್ಪರ್ಧಾತ್ಮಕ ಬೆಲೆ ಸಿಗುತ್ತದೆ.

ಈ. ರೈತರಿಗೆ ರೋಗರಹಿತ ಮೊಟ್ಟೆಗಳನ್ನು ವಿತರಣೆ ಮಾಡುತ್ತಿದೆ. ಇದರಿಂದ ರೈತರಿಗೆ ನಷ್ಟ ಆಗಿಲ್ಲ.

ಉ. ರೇಷ್ಮೆ ಕಚ್ಚಾ ಮಾಲನ್ನು ರಿಯಾಯಿತಿ ದರದಲ್ಲಿ ಪೂರೈಸುವ ಉದ್ದೇಶ ಸಧ್ಯಕ್ಕೆ ಇರುವುದಿಲ್ಲ.

ಚಿಕ್ಕೋಡಿ ಪಟ್ಟಣದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ನಿರ್ಮಿಸಲಾಗುವ ಗೃಹಗಳಿಗೆ ಸರ್ಕಾರಿ ಜಮೀನನ್ನು ನೀಡದಿರುವ ಬಗ್ಗೆ

237: ಶ್ರೀ ಎಸ್.ಎಸ್. ಭೀಮಣ್ಣನವರ್ (ಚಿಕ್ಕೋಡಿ):– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಚಿಕ್ಕೋಡಿ ಪಟ್ಟಣದಲ್ಲಿ 'ಆಶ್ರಯ' ಯೋಜನೆಯಡಿಯಲ್ಲಿ ನಿರ್ಮಿಸಲಾಗುವ ಗೃಹಗಳಿಗಾಗಿ ಸರ್ಕಾರಿ ಜಮೀನನ್ನು ನೀಡದಿರುವುದು ನಿಜವೆ;

ಆ. ಹಾಗಿದ್ದಲ್ಲಿ ಸದರಿ ಯೋಜನೆಯ ಅನುಷ್ಠಾನ ಕಷ್ಟಸಾಧ್ಯವಾಗುವುದಿಲ್ಲವೆ;

ಇ. ಜಮೀನು ಬಿಡುಗಡೆಗಾಗಿ ಬೇಕಾಗಿರುವ ಕಾಲಾವಧಿಯೆಷ್ಟು ? ಹಾಗೂ ಎಂದು ಬಿಡುಗಡೆ ಮಾಡಲಾಗುವುದು ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು):–

ಅ. ಇಲ್ಲ. ದಿನಾಂಕ 4.3.93ರಂದು ಆಶ್ರಯ ಯೋಜನೆಯಡಿಯಲ್ಲಿ ನಿವೇಶನ ಹಂಚಲು ಚಿಕ್ಕೋಡಿ ಪುರಸಭೆಗೆ ಭೂಮಿಯನ್ನು ಬಿಡುಗಡೆ ಮಾಡಿ ಬೆಳಗಾಂ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಆಶ್ರಯ ಯೋಜನೆಯ ಅವ್ಯವಹಾರ

687: ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಆಶ್ರಯ ಯೋಜನೆಯ ಅನುಷ್ಠಾನದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ನಡೆಸಿದ ವಿಚಾರಣೆಯ ವರದಿ ಸರ್ಕಾರಕ್ಕೆ ಬಂದಿದೆಯೇ;

ಆ. ಬಂದಿದ್ದಲ್ಲಿ, ವರದಿಯನ್ನು ಆಧರಿಸಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುದು ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು):–

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಪರಿಶಿಷ್ಟ ಜಾತಿ ಮತ್ತು ವರ್ಗಗಳ ವಿದ್ಯಾರ್ಥಿನಿಲಯಗಳ ಕಟ್ಟಡಗಳ ದುಸ್ಥಿತಿ ಕುರಿತು

773: ಶ್ರೀ ಅಂಜನಮೂರ್ತಿ (ನೆಲಮಂಗಲ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ 1992–93ರ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ವಿದ್ಯಾರ್ಥಿನಿಲಯಗಳ ಎಷ್ಟು ಕಟ್ಟಡಗಳಿಗೆ, ಹಾಗೂ ಎಷ್ಟು ಹಣವನ್ನು ನಿಗದಿ ಮಾಡಲಾಗಿದೆ ? (ಪೂರ್ಣ ವಿವರಗಳನ್ನೊದಗಿಸುವುದು);

ಆ. ಹಳೇ ವಿದ್ಯಾರ್ಥಿನಿಲಯಗಳನ್ನು ದುರಸ್ತಿ ಮಾಡಲು ಎಷ್ಟು ಹಣವನ್ನು ನಿಗದಿ ಪಡಿಸಲಾಗಿದೆ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ. 1992–93ನೇ ಸಾಲಿನ ಆಯವ್ಯದಲ್ಲಿ 85 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ಒಟ್ಟು 620.86 ಲಕ್ಷ ರೂ.ಗಳನ್ನು ನಿಗದಿಪಡಿಸಿದೆ. ವಿವರ ಕೆಳಕಂಡಂತಿದೆ.

	ರಾಜ್ಯ ಆಯುವ್ಯಯದಲ್ಲಿ ಸರ್ಕಾರಿ ಕಟ್ಟಡಗಳ ನಿರ್ಮಾಣಕ್ಕಾಗಿ ನಿಗದಿಪಡಿಸಿರುವ ಮೊತ್ತ ಲಕ್ಷ ರೂ.ಗಳು	ಕಟ್ಟಡಗಳ ಸಂಖ್ಯೆ
1. ಪರಿಶಿಷ್ಟ ಜಾತಿ ಬಾಲಕರ: ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗಾಗಿ	320.00	27
	ಜಿಲ್ಲಾವಲಯದ ಆಯುವ್ಯಯದಲ್ಲಿ ಸರ್ಕಾರಿ ಕಟ್ಟಡ ನಿರ್ಮಾಣಕ್ಕೆ	
1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಬಾಲಕರ ವಿದ್ಯಾರ್ಥಿನಿಲಯಗಳಿಗಾಗಿ.	137.36	34
2. ಪರಿಶಿಷ್ಟ ವರ್ಗಗಳ ಬಾಲಕಿಯರ ವಿದ್ಯಾರ್ಥಿನಿಲಯಗಳಿಗಾಗಿ.	143.50	18
3. ರಾಜ್ಯ ಆಯುವ್ಯಯದಲ್ಲಿ ಖಾಸಗಿ ಸಂಸ್ಥೆಯವರು ನಡೆಸುತ್ತಿರುವ ಅನುದಾನಿತ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ ಧನಸಹಾಯಕ್ಕೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳಿಗಾಗಿ.	20.00	6

ಆ. 1992–93ನೇ ಸಾಲಿನಲ್ಲಿ 54.05ಲಕ್ಷ ರೂ.ಗಳನ್ನು (ಜಿಲ್ಲಾವಲಯದಲ್ಲಿ) ನಿಗದಿಪಡಿಸಿರುತ್ತದೆ.

ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ಎರವಲು ಸೇವೆಯಲ್ಲಿರುವ ಅಧಿಕಾರಿಗಳನ್ನು ಕೆಲಸದಿಂದ ವಿಮುಕ್ತಿಗೊಳಿಸಿರುವುದರ ಬಗ್ಗೆ

895: ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಎರವಲು ಸೇವೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ 24ಜನ ಸಹಾಯಕ ಅಭಿಯಂತರರನ್ನು ಕೆಲಸದಿಂದ ವಿಮುಕ್ತಿಗೊಳಿಸಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ. ಸರ್ಕಾರಿ ನೌಕರರ ವರ್ಗಾವಣೆ ಸೂಚನೆಗಳ ವಿರುದ್ಧವಾಗಿ ಈ ನೌಕರರನ್ನು ಮಧ್ಯಂತರದಲ್ಲಿ ಕೆಲಸದಿಂದ ವಿಮುಕ್ತಿಗೊಳಿಸುವಂತಹ ಅವಸರವೇನಿತ್ತು;

ಇ. ಕೆಲಸದಿಂದ ವಿಮುಕ್ತಿಗೊಳಿಸಿದ ನೌಕರರು ಮರು ನೇಮಕಾತಿ ಇಲ್ಲದೆ ತೊಂದರೆ ಅನುಭವಿಸುತ್ತಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಹಾಗಿದ್ದಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು ?

ಅ. ಹೌದು.

ಆ. ಎರವಲು ಕೋಟಾಗಿಂತ ಹೆಚ್ಚಿನ ಅಭಿಯಂತರರನ್ನು ನೇಮಕ ಮಾಡಲಾಗಿತ್ತು.

ಇ. ಹೌದು.

ಈ. ನೇಮಕಾತಿ ಮಾಡಲು ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿದೆ.

ಮಂಗಳೂರು ಐ.ಟಿ.ಐ.ನಲ್ಲಿ ಸ್ಥಾನ ಹೆಚ್ಚಿಸುವ ಕುರಿತು

1114: ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್):— ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಂಗಳೂರು ಐ.ಟಿ.ಐ.ನಲ್ಲಿ ವಿವಿಧ ಅಧ್ಯಯನ ಶಾಖೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರ ಉದ್ದೇಶಿಸಿದೆಯೇ;

ಆ. ಮಂಗಳೂರಿನಲ್ಲಿ ಬಾಲಕಿಯರ ಐ.ಟಿ.ಐ. ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ;

ಇ. ಮಂಗಳೂರು ಐ.ಟಿ.ಐ.ನ ಕಟ್ಟಡ ವಿಸ್ತರಣೆಗಾಗಿ ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):—

ಅ. ಇಲ್ಲ.

ಆ. ಸದ್ಯಕ್ಕೆ ಇಲ್ಲ.

ಇ. ಸದ್ಯಕ್ಕೆ ಇಲ್ಲ.

ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಆಸ್ತಿಯಾದ ಶಿವಾಜಿನಗರ ಸ್ಟೇಡಿಯಂನ್ನು ಮಹಾನಗರ ಪಾಲಿಕೆಯು ಮಾರಾಟ ಮಾಡುವ ಬಗ್ಗೆ

1138: ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಆಸ್ತಿಯಾದ ಶಿವಾಜಿನಗರ ಸ್ಟೇಡಿಯಂನ್ನು ಮಹಾನಗರ ಪಾಲಿಕೆಯು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಸಾರ್ವಜನಿಕ ಹಿತದೃಷ್ಟಿಯಿಂದ ಇಂತಹ ಉದ್ದೇಶ ಪೂರ್ವಕವಾಗಿ ಸರ್ಕಾರದ ಆದೇಶಗಳನ್ನು ಉಲ್ಲಂಘಿಸುತ್ತಿರುವುದನ್ನು ರದ್ದುಗೊಳಿಸುವಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು;

ಇ. ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿದ ಅಧಿಕಾರಿಗಳು, ನೌಕರರ ವಿರುದ್ಧ ಸರ್ಕಾರವು ತೆಗೆದುಕೊಂಡ ಕ್ರಮ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):—

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಬಹುತೇಕ ಕೈಗಾರಿಕೆಗಳು ಮತ್ತು ಇತರೆ ಸ್ಥಳಗಳಲ್ಲಿ ಉದ್ಯೋಗದಿಂದ ಬಾಲ ಕಾರ್ಮಿಕರು ಶೋಷಣೆಗೊಳಗಾಗುತ್ತಿರುವ ಬಗ್ಗೆ

1463: ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):- ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಹುತೇಕ ಕೈಗಾರಿಕೆಗಳು ಮತ್ತು ಇತರೆ ಸ್ಥಳಗಳಲ್ಲಿ ಉದ್ಯೋಗದಿಂದ ಬಾಲ ಕಾರ್ಮಿಕರು ಶೋಷಣೆಗೊಳಗಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ. ಹಾಗಿದ್ದಲ್ಲಿ, ಇದು ಕಾರ್ಮಿಕ ಕಾಯಿದೆಯ ಉಲ್ಲಂಘನೆ ಅಲ್ಲವೆ;

ಇ. ಬಾಲ ಕಾರ್ಮಿಕರನ್ನು ಉದ್ಯೋಗ ಮಾಡಲು ಅನುಮತಿಸುವುದರ ಪರಿಣಾಮವಾಗಿ ಹೆತ್ತವರನ್ನು ತ್ಯಜಿಸುವುದು ಮತ್ತು ಅದರಿಂದ ಮೂಲ ಸಮಾಜ ವಿರೋಧಿಗಳಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಹಾಗಿದ್ದಲ್ಲಿ, ಕಾಯಿದೆಯ ಅನ್ವಯ ಕಟ್ಟುನಿಟ್ಟಾಗಿ ಬಾಲ ಕಾರ್ಮಿಕರ ನೇಮಕಾತಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):-

ಅ. ಕಾರ್ಮಿಕ ಕಾಯ್ದೆ 1948ರ ಪ್ರಕಾರ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲ ಕಾರ್ಮಿಕರನ್ನು ನೊಂದಾಯಿತ ಕಾರ್ಖಾನೆಗಳಲ್ಲಿ ನೇಮಿಸಿಕೊಳ್ಳುವಂತಿಲ್ಲ. ಕೆಲವೊಂದು ಅಸಂಘಟಿತ ವಿಭಾಗಗಳಲ್ಲಿ ಮತ್ತು ಸಣ್ಣ ಸಂಸ್ಥೆಗಳು ಅಂದರೆ ಗ್ಯಾರೇಜುಗಳು, ಸೈಕಲ್ ಶಾಪ್, ಅಂಗಡಿಗಳು, ಹೋಟೆಲ್‌ಗಳು ಇತ್ಯಾದಿ ಇಲ್ಲಿ ಬಾಲ ಕಾರ್ಮಿಕರನ್ನು ನೇಮಿಸಿಕೊಂಡ ಸಂದರ್ಭಗಳು ಇವೆ.

ಆ. ಬಾಲ ಕಾರ್ಮಿಕರನ್ನು ಕಾನೂನು ಬಾಹಿರವಾಗಿ ನೇಮಿಸಿಕೊಂಡಿದ್ದ ಸಂದರ್ಭಗಳು ಇಲಾಖಾ ಅಧಿಕಾರಿಗಳ ಗಮನಕ್ಕೆ ಬಂದಾಗ ಅಂಥಹ ಮಾಲೀಕರಿಗೆ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳುವುದು ಕಾನೂನು ಬಾಹಿರ ಎಂದು ಬೋಧಿಸುವುದಲ್ಲದೆ, ಅಂತಹವರ ವಿರುದ್ಧ ಕಾನೂನಿನ ಉಲ್ಲಂಘನೆಯನ್ನು ಮುಂದುವರೆಸುವುದನ್ನು ಕಠಿಣವಾಗಿ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು.

ಇ. ಇಲ್ಲ.

ಈ. ಈ ಕೆಳಗೆ ನಮೂದಿಸಿರುವ ಕಾಯ್ದೆಗಳಡಿಯಲ್ಲಿ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳದಂತೆ ಮತ್ತು ಕಾನೂನು ರೀತಿಯಲ್ಲಿ ನಿಷೇಧ ಮತ್ತು ಕ್ರಮಬದ್ಧ (ರೆಗ್ಯೂಲೇಟ್) ಗೊಳಿಸುತ್ತದೆ.

1. ಬಾಲ ಕಾರ್ಮಿಕ (ನಿಷೇಧ ಮತ್ತು ನಿರ್ಬಂಧ) ಕಾಯಿದೆ 1986.
2. ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆ.
3. ಕಾರ್ಖಾನೆಗಳ ಕಾಯಿದೆ
4. ಪ್ಲಾಂಟೇಷನ್ ಕಾರ್ಮಿಕ ಕಾಯಿದೆ
5. ವಾಹನ ಸಾರಿಗೆ ಕಾಯಿದೆ
6. ಬೀಡಿ ಮತ್ತು ಸಿಗಾರ್ ವರ್ಕರ್ಸ್ ಕಾಯಿದೆ.

ಮಂಗಳೂರು ಎಣ್ಣೆ ಶುದ್ಧೀಕರಣಕ್ಕೆ ಸರ್ಕಾರವು ವಶಪಡಿಸಿಕೊಂಡ ಜಾಗಕ್ಕೆ ಪರಿಹಾರ ಧನ ನೀಡುವ ಬಗ್ಗೆ

1674: ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ):– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಂಗಳೂರು ಎಣ್ಣೆ ಶುದ್ಧೀಕರಣ ಕೇಂದ್ರಕ್ಕೆ ಸರಕಾರವು ವಶಪಡಿಸಿದ ಜಾಗದ ಭೂಮಾಲೀಕರಿಗೆ ಪರಿಹಾರದ ಹಣ ಮಂಜೂರು ಮಾಡಿರುವುದೇ;

ಆ. ಪರಿಹಾರ ಹಣವನ್ನು ಕೃಷಿ ಭೂಮಿ ಮತ್ತು ಕೃಷಿಯೇತರ ಭೂಮಿ ಎಂದು ಪರಿಗಣಿಸಲಾಗಿದೆಯೇ;

ಇ. ಪರಿಗಣಿಸಿದ್ದಲ್ಲಿ ಒಂದೇ ಭೂಮಿಯಲ್ಲಿ ಒಬ್ಬರಿಗೆ ಜಾಸ್ತಿ ಒಬ್ಬರಿಗೆ ಕಡಿಮೆ ಪರಿಹಾರ ಧನ ಕೊಡಲಾಗಿದೆಯೇ;

ಈ. ಹಾಗಿದ್ದಲ್ಲಿ ಒಂದೇ ಭೂಮಿಯಲ್ಲಿ ಪರಿಹಾರ ಹಣ ಮಂಜೂರು ಮಾಡುವಾಗ ತಾರತಮ್ಯ ಮಾಡಿದ ಹಾಗೆ ಆಗುವುದಿಲ್ಲವೇ;

ಉ. ತಾರತಮ್ಯವಾದಲ್ಲಿ ಎಲ್ಲರಿಗೂ ಒಂದೇ ದರದಲ್ಲಿ ಪರಿಹಾರ ಹಣ ಮಂಜೂರು ಮಾಡುವಂತೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ಮಂಗಳೂರು ತೈಲ ಶುದ್ಧೀಕರಣ ಕೇಂದ್ರಕ್ಕೆ ಸರ್ಕಾರವು ವಶಪಡಿಸಿದ ಜಾಗದ ಭೂಮಾಲೀಕರಿಗೆ ಪರಿಹಾರದ ಹಣ ಮಂಜೂರು ಮಾಡಿದೆ.

ಆ. ಪರಿಹಾರ ಹಣವನ್ನು ಕೃಷಿ ಭೂಮಿ ಮತ್ತು ಕೃಷಿಯೇತರ ಭೂಮಿ ಎಂದು ಪರಿಗಣಿಸಿರುವುದಿಲ್ಲ. ಕಂದಾಯ ಇಲಾಖೆಯ ದಾಖಲಾತಿಗಳಲ್ಲಿರುವಂತೆ ತರಿ, ಖುಷ್ಕಿ ಮತ್ತು ಬಾಗಾಯ್ತು ಭೂಮಿ ಎಂದು ಪರಿಗಣಿಸಲಾಗಿದೆ.

ಇ. ಪರಿಗಣಿಸಿರುವುದಿಲ್ಲ. ಆದುದರಿಂದ ಒಬ್ಬರಿಗೆ ಜಾಸ್ತಿ ಒಬ್ಬರಿಗೆ ಕಡಿಮೆ ಪರಿಹಾರ ಕೊಡುವ ಪ್ರಮೇಯ ಇರುವುದಿಲ್ಲ.

ಈ. ಹಾಗಿಲ್ಲದಿರುವುದರಿಂದ ತಾರತಮ್ಯವಾಗಿರುವುದಿಲ್ಲ.

ಉ. ಉದ್ಭವಿಸುವುದಿಲ್ಲ.

ಕೊಳ್ಳೆಗಾಲದ ಮಹದೇಶ್ವರ ಕಾಲೇಜು ಹಾಸ್ಟಲ್ ಕಟ್ಟಡ ನಿರ್ಮಾಣ ಮಾಡುವಲ್ಲಿ ವಿಳಂಬ ಉಂಟಾಗುತ್ತಿರುವ ಬಗ್ಗೆ

1322: ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೈಸೂರು ಜಿಲ್ಲೆ ಕೊಳ್ಳೇಗಾಲದಲ್ಲಿ ಸರ್ಕಾರಿ ಮಹದೇಶ್ವರ ಕಾಲೇಜು ಪ್ರಾರಂಭವಾಗಿ ಸುಮಾರು 26 ವರ್ಷಗಳಾಗಿರುವುದು ನಿಜವೇ;

ಆ. ಹಾಗಿದ್ದಲ್ಲಿ, ಸದರಿ ಸ್ಥಳದಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗೆ ಸೇರಿದ ಸುಮಾರು 3000 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾಗ್ಯೂ ಅಲ್ಲಿ ಒಂದು ಸರ್ಕಾರದ ಹಾಸ್ಟೆಲ್ ಕಟ್ಟಡವಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ, ಇಲ್ಲಿ ಒಂದು ಹಾಸ್ಟೆಲ್ ಕಟ್ಟಡವನ್ನು ನಿರ್ಮಿಸಲು ಸರ್ಕಾರದವರಿಗೆ ಅಡ್ಡಿ ಆತಂಕಗಳೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಅ. ಹೌದು.

ಆ. ಹೌದು.

ಇ. ಮೇಲೆ ಹೇಳಿದ ಸ್ಥಳದಲ್ಲಿ ವಿದ್ಯಾರ್ಥಿನಿಲಯದ ಕಟ್ಟಡ ಕಟ್ಟಲು ಯಾವುದೇ ತೊಂದರೆ ಇಲ್ಲ. ಈಗಾಗಲೇ ಈ ವಿದ್ಯಾರ್ಥಿನಿಲಯ ಕಟ್ಟಲು ಬೇಕಾಗುವ ನಿವೇಶನವನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಮತ್ತು ಈಗಾಗಲೇ 49.64 ಲಕ್ಷ ರೂ.ಗಳ ಅಂದಾಜು ವೆಚ್ಚ ಮತ್ತು ನಕ್ಷೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ವಿಷಯ ಸರ್ಕಾರ ಪರಿಶೀಲಿಸುತ್ತಿದೆ.

ಹಾಸನ ಜಿಲ್ಲೆಯಲ್ಲಿ ಮಂಜೂರಾತಿಯಾಗಿರುವ ಕೈಗಾರಿಕಾ ಅಭಿವೃದ್ಧಿ ಕೇಂದ್ರದ ಬಗ್ಗೆ

1522: ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೇನರಸೀಪುರ):- ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನ ಜಿಲ್ಲೆಗೆ ಮಂಜೂರಾಗಿರುವ "ಕೈಗಾರಿಕಾ ಅಭಿವೃದ್ಧಿ ಕೇಂದ್ರ" ಯೋಜನೆಯ ಪ್ರಗತಿಯು ಯಾವ ಹಂತದಲ್ಲಿದೆ;

ಆ. ಈ ಯೋಜನೆಯಲ್ಲಿ ಭೂಮಿ ಕಳೆದುಕೊಳ್ಳುವ ನಿರಾಶ್ರಿತರ ಪುನರ್ವಸತಿಗೆ ಸರ್ಕಾರ ರೂಪಿಸುವ ವಿಶೇಷ ಯೋಜನೆಗಳಾವುವು ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-

ಅ. ಹಾಸನ ಜಿಲ್ಲೆಯಲ್ಲಿ ಕೈಗಾರಿಕಾ ಅಭಿವೃದ್ಧಿ ಕೇಂದ್ರಕ್ಕಾಗಿ 2000 ಎಕರೆ ಜಮೀನುಗಳಿಗೆ ಭೂಸ್ವಾಧೀನ ನಡವಳಿಕೆಯನ್ನು ಕೈಗೊಂಡಿದ್ದು ಅಂತಿಮ ಅಧಿಸೂಚನೆಯನ್ನು ಪ್ರಕಟಿಸುವ ಹಂತದಲ್ಲಿರುತ್ತದೆ.

ಆ. ಈ ಯೋಜನೆಯಡಿಯಲ್ಲಿ ಜನವಸತಿ ಇರುವ ಯಾವ ಗ್ರಾಮವನ್ನೂ ಸ್ಥಳಾಂತರಿಸುವ ಅವಶ್ಯಕತೆ ಇರುವುದಿಲ್ಲ. ಭೂಸ್ವಾಧೀನಗೊಳ್ಳಲಿರುವ ಜಮೀನಿಗೆ ಸೂಕ್ತ ಪರಿಹಾರ ಧನವನ್ನು ನೀಡುವುದೇ ಅಲ್ಲದೇ ಗುತ್ತಿಗೆ ಕರಾರು ಪತ್ರದಲ್ಲಿ ಭೂಮಿ ಕಳೆದುಕೊಂಡ ರೈತರ ಕುಟುಂಬದ ಒಬ್ಬ ಸದಸ್ಯರಿಗೆ ಉದ್ಯೋಗ ನೀಡುವಂತೆ ನಿಬಂಧನೆಯನ್ನು ವಿಧಿಸಿ ಉದ್ಯೋಗಕ್ಕಾಗಿ ಭೂಮಿ ಕಳೆದುಕೊಂಡ ರೈತರಿಂದ ಹಾಗೂ ಅವರ ಕುಟುಂಬದವರಿಂದ ಬಂದ ಮನವಿಗಳನ್ನು ಶಿಫಾರಸ್ಸು ಮಾಡಿ ಸಂಬಂಧಿಸಿದ ಕಾರ್ಖಾನೆಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗುವುದು.

ರಾಜ್ಯದಲ್ಲಿನ ಬೇದಿಭಾಗ್ಯ ಯೋಜನೆ ಕುರಿತು

2153: ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೇನರಸೀಪುರ):- ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ರಾಜ್ಯದಲ್ಲಿ 'ಬೀದಿಭಾಗ್ಯ' ಯೋಜನೆಯನ್ನು ಪ್ರಕಟಿಸಿದ ದಿನಾಂಕ ಯಾವುದು ?

2. 1992–93ನೇ ಸಾಲಿನ ಜನವರಿ 1993ರ ಮಾಹೆಯವರೆಗೆ ಈ ಯೋಜನೆಗಾಗಿ ಖರ್ಚು ಮಾಡಿರುವ ಹಣವೆಷ್ಟು;

3. ಈ ಯೋಜನೆಯಡಿಯಲ್ಲಿಯ ಫಲಾನುಭವಿಗಳ ಸಂಖ್ಯೆ ಎಷ್ಟು;

4. ಇದುವರೆಗೂ ಹಣ ಖರ್ಚಾಗದೇ ಇದ್ದಲ್ಲಿ, ಅದಕ್ಕೆ ಕಾರಣಗಳು;

5. 1993–94ನೇ ಸಾಲಿನಲ್ಲಿ ಈ ಯೋಜನೆಯನ್ನು ಕಾರ್ಯಗತ ಮಾಡುವ ಪ್ರಸ್ತಾಪವೇನಾದರೂ ಇದೆಯೇ;

6. ಹಾಗಿದ್ದಲ್ಲಿ, 1993–94ನೇ ಸಾಲಿನಲ್ಲಿ ಈ ಯೋಜನೆಗೆ ಖರ್ಚುಮಾಡಲು ಉದ್ದೇಶಿಸಿರುವ ಹಣವೆಷ್ಟು ?

ಶ್ರೀ ಬ್ಲೇಸಿಯಸ್ ಎಂ.ಡಿಸೋಜ (ಕಾರ್ಮಿಕ ಸಚಿವರು):–

1. ಈ ಯೋಜನೆಯನ್ನು ಆಯವ್ಯಯ ಭಾಷಣದಲ್ಲಿ ದಿನಾಂಕ:3–3–92ರಂದು ಪ್ರಕಟಿಸಲಾಯಿತು.

2. ಹಣವನ್ನೇನೂ ಖರ್ಚು ಮಾಡಲಾಗಿರುವುದಿಲ್ಲ.

3. ಇಲ್ಲ.

4. ಈ ಯೋಜನೆಯನ್ನು ಇನ್ನೂ ಜಾರಿಗೊಳಿಸಿರುವುದಿಲ್ಲ.

5. 1993–94ರಲ್ಲಿ ಈ ಯೋಜನೆಯನ್ನು ಮರು ಹೆಸರಿನಿಂದ ಜಾರಿಗೊಳಿಸಲಾಗುವುದು.

6. ರೂ. ಒಂದು ಕೋಟಿ.

ಬೆಂಗಳೂರು ನಗರದಲ್ಲಿ ಅಂಗಡಿ ನಡೆಸುವ ಪರವಾನಗಿಯನ್ನು ನವೀಕರಿಸುವುದಕ್ಕಿಂತ ಮೊದಲು ಮಾಲೀಕರಿಂದ ಆಸ್ತಿ ತೆರಿಗೆಯನ್ನು ಸಂಗ್ರಹಿಸುವ ಬಗ್ಗೆ

2154: ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೇನರಸೀಪುರ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿ ಅಂಗಡಿಗಳ ಮಾಲೀಕರು ಆಸ್ತಿ ತೆರಿಗೆ ಬಾಕಿಯನ್ನು ನೀಡದ ಹೊರತು ಅಂಗಡಿಗಳ ಪರರಾನಗಿಯನ್ನು ನವೀಕರಿಸದಿರುವುದು ವಾಸ್ತವ ಸಂಗತಿಯೇ;

ಆ. ಹಾಗಿದ್ದಲ್ಲಿ, ಅಂಗಡಿಗಳ ಮಾಲೀಕರು ಬೇಕೆಂದೇ ಆಸ್ತಿ ತೆರಿಗೆಯನ್ನು ಅಂಗಡಿ ನಡೆಸುವ ಪರವಾನಗಿಯನ್ನು (ಬಾಡಿಗೆದಾರರು) ನವೀಕರಿಸದಂತೆ ನೋಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ, ಬೆಂಗಳೂರು ನಗರದಲ್ಲಿ ಅಂಗಡಿ ನಡೆಸುವ ಪರವಾನಗಿಯನ್ನು ನವೀಕರಿಸುವುದಕ್ಕಿಂತ ಮಾಲೀಕರಿಂದ ಆಸ್ತಿ ತೆರಿಗೆಯನ್ನು ಸಂಗ್ರಹಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಹೌದು.

ಆ. ಇಲ್ಲ.

ಇ. ನಗರಪಾಲಿಕೆಯು ಪರವಾನಗಿಯನ್ನು ನವೀಕರಿಸುವ ಮೊದಲು ಕಂದಾಯವನ್ನು ಸಂಗ್ರಹಿಸುತ್ತದೆ.

ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿಗೆ ಅಧ್ಯಕ್ಷರನ್ನು ನೇಮಿಸುವ ಬಗ್ಗೆ

2155: ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೇನರಸೀಪುರ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿಗೆ ಅಧ್ಯಕ್ಷರನ್ನು ನೇಮಿಸಲಾಗಿದೆಯೇ;

ಆ. ಇಲ್ಲವಾದಲ್ಲಿ, ಅದಕ್ಕೆ ಕಾರಣಗಳು ಏನು ? ಮತ್ತು ಹುದ್ದೆಯು ಎಂದಿನಿಂದ ಖಾಲಿ ಇರುತ್ತದೆ;

ಇ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆಯೇ;

ಈ. ಹಾಗಿದ್ದಲ್ಲಿ, ಯಾವಾಗ;

ಉ. ಈ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ವಿಷಯವನ್ನು ಇತ್ಯರ್ಥಗೊಳಿಸಲು ಸರ್ಕಾರವು ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮಗಳೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಅ. ಇಲ್ಲ.

ಆ. ಈ ಹುದ್ದೆಯು ದಿನಾಂಕ:25-11-91ರಿಂದ ಖಾಲಿ ಇರುತ್ತದೆ. ಹೆಸರುಗಳ ಯಾದಿ ಪಟ್ಟಿಯ ಬಗ್ಗೆ ಅಂತಿಮ ತೀರ್ಮಾನವಾಗಿಲ್ಲವಾದ್ದರಿಂದ ವಿಳಂಬವಾಗಿದೆ.

ಇ. ಈ ಬಗ್ಗೆ ಕೇಂದ್ರ ಸಮಾಜ ಕಲ್ಯಾಣ ಮಂಡಳಿ, ನವದೆಹಲಿ, ಇವರಿಗೆ ಸಂದೇಶವನ್ನು ಕಳುಹಿಸಲಾಗಿದೆ.

ಈ. ದಿನಾಂಕ:3-3-1993ರಂದು.

ಉ. ಈ ಬಗ್ಗೆ ಉಪಪ್ರಶ್ನೆ (ಇ) ಮತ್ತು (ಈ)ರಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳಲಾಗಿದೆ.

ಬೀದರ್ ಜಿಲ್ಲೆಯಲ್ಲಿ ಬಹಳಷ್ಟು ಮನೆಗಳು ಅಪೂರ್ಣ ಸ್ಥಿತಿಯಲ್ಲಿರುವ ಬಗ್ಗೆ

1527: ಶ್ರೀ ನಾರಾಯಣರಾವ್ ಮನಹಳ್ಳಿ, (ಬೀದರ್):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಬೀದರ್ ಜಿಲ್ಲೆಯಲ್ಲಿ ಬಹಳಷ್ಟು ಮನೆಗಳು ಅಪೂರ್ಣ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಹಾಗಿದ್ದಲ್ಲಿ, ಅವುಗಳನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ;

3. ಇಲ್ಲದಿದ್ದಲ್ಲಿ ಪಾಯದವರೆಗೆ, ಛಾವಣಿಯವರೆಗೆ ಪೂರ್ಣಗೊಳಿಸಿರುವ ಫಲಾನುಭವಿಗಳ ಗತಿಯೇನು ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು):-

1. ಇಲ್ಲ. ಬೀದರ್ ಜಿಲ್ಲೆಗೆ 1978:79ರಿಂದ 1989:90ರವರೆಗೆ ಒಟ್ಟು 18,365 ಮನೆಗಳು ಮಂಜೂರಾಗಿರುತ್ತವೆ. ಇವುಗಳಲ್ಲಿ 16,756 ಮನೆಗಳು ಪೂರ್ಣಗೊಂಡಿದ್ದು 1897 ಮನೆಗಳು ಪ್ರಗತಿಯ ವಿವಿಧ ಹಂತಗಳಲ್ಲಿದ್ದು, ಇನ್ನು 212 ಮನೆಗಳ ಕಾರ್ಯ ಪ್ರಾರಂಭವಾಗಬೇಕಾಗಿದೆ. (1990-91ನೇ ಸಾಲಿಗೆ 903ಮನೆಗಳು ಮಂಜೂರಾಗಿದ್ದು, ಹುಡ್ಕೋ ಸಾಲ ಬರದಿದ್ದರಿಂದ ಆಶ್ರಯ ಯೋಜನೆಯಲ್ಲಿ ಈ ಮನೆಗಳನ್ನು ವಿಲೀನಗೊಳಿಸಲಾಗಿದೆ. ಆದಾಗ್ಯೂ ಸರ್ಕಾರ ಬಿಡುಗಡೆ ಮಾಡಿದ ಸಹಾಯಧನವನ್ನಾಧರಿಸಿ ಮನೆಗಳ ಕಾರ್ಯ ಕೈಗೆತ್ತಿಕೊಂಡಿದ್ದು, 44 ಮನೆಗಳು ಪೂರ್ಣಗೊಂಡಿದ್ದು 67 ಮನೆಗಳ ಕಾರ್ಯ ವಿವಿಧ ಹಂತದಲ್ಲಿರುತ್ತದೆ).

2. ಮನೆಗಳ ಪ್ರಗತಿಯನ್ನಾಧರಿಸಿ ಹುಡ್ಕೋ ಸಂಸ್ಥೆ ಸಾಲದ ಕಂತು ಬಿಡುಗಡೆ ಮಾಡುತ್ತಿದ್ದು ಇನ್ನೂ 104.09ಲಕ್ಷ ಸಾಲ ಬಿಡುಗಡೆ ಮಾಡಬೇಕಾಗಿದೆ. ಜೂನ್ 93ರ ಒಳಗೆ 40.04ಲಕ್ಷ ಸಾಲದ ಕಂತು ಬಿಡುಗಡೆ ಮಾಡಿ ಅಪೂರ್ಣ ಮನೆಗಳನ್ನು ಪೂರ್ಣಗೊಳಿಸಲಾಗುವುದು.

3. ಪ್ರಗತಿ ಆಧರಿಸಿ ಉಳಿದ 60ಲಕ್ಷ ಸಾಲದ ಹಣ ಹುಡ್ಕೋದಿಂದ ಪಡೆದು ಅಪೂರ್ಣ ಮನೆಗಳನ್ನು ಪೂರ್ಣಗೊಳಿಸಲಾಗುವುದು.

ರೇಷ್ಮೆ ಬೆಳೆ ಅಭಿವೃದ್ಧಿ ಬಗ್ಗೆ

1528: ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ):- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಾವಣಗೆರೆ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಯ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮವೇನು ಹಾಗೂ ತೆಗೆದುಕೊಳ್ಳಬೇಕಾಗಿರುವ ಕ್ರಮಗಳಾವುವು ?

ಅ. (ಅ) ಪೂರ್ವಭಾವಿ ಸಿದ್ಧತೆ:

1. ಒಂದು ತಾಂತ್ರಿಕ ಸೇವಾ ಕೇಂದ್ರ ಸ್ಥಾಪಿಸಿದೆ.
2. ಒಂದು ರೇಷ್ಮೆ ಗೂಡಿನ ಮಾರುಕಟ್ಟೆ ಸ್ಥಾಪಿಸಿದೆ.
3. ದಾವಣಗೆರೆ ತಾಲ್ಲೂಕು ತೋಳಹುಣಸೆಯಲ್ಲಿ ತರಬೇತಿ ಶಾಲೆಯನ್ನು ಮತ್ತು ಅರೆ ಸ್ವಯಂ ಚಾಲಿತ ನೂಲು ಬಿಚ್ಚಾಣಿಕೆ ಘಟಕವನ್ನು ಸ್ಥಾಪಿಸಿದೆ.

(ಆ) ಇಲಾಖೆಯಿಂದ ಸಹಾಯ:

1. ರೈತರಿಗೆ ಹಿಪ್ಪುನೇರಳೆ ವ್ಯವಸಾಯ ಮತ್ತು ಹುಳು ಸಾಕಾಣಿಕೆಯಲ್ಲಿ ತಾಂತ್ರಿಕ ಸಲಹೆಗಳನ್ನು ಕೊಡಲಾಗುತ್ತಿದೆ.
2. ರೈತರು ಬೆಳೆದ ಗೂಡನ್ನು ಅಲ್ಲಿನ ಮಾರುಕಟ್ಟೆಯಲ್ಲೇ ಮಾರಾಟ ಮಾಡಿದರೆ ಪ್ರತಿ ಕೆ.ಜಿ. ಗೂಡಿಗೆ 5 ರೂ. ಪ್ರೋತ್ಸಾಹ ಧನ ಕೊಡಲಾಗುವುದು.
3. ಹೊಸ ಪ್ರದೇಶದಲ್ಲಿ ಉತ್ಪನ್ನರಾದ ಪ್ರತಿ ಕೆ.ಜಿ. ರೇಷ್ಮೆಗೆ 50 ರೂ. ಪ್ರೋತ್ಸಾಹ ಧನ ಕೊಡಲಾಗುವುದು.
4. ರೇಷ್ಮೆ ಹುಳುಗಳಿಗೆ ಬರತಕ್ಕ ರೋಗಗಳನ್ನು ನಿಯಂತ್ರಣ ಮಾಡಲು ಹಾಗೂ ತಡೆಗಟ್ಟಲು

ಇಲಾಖೆಯು ಸೋಂಕು ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳುವುದು.

5. ಬೈವೊಲ್‌ಟೀನ್ ರೇಷ್ಮೆ ಬೆಳೆಗಾರರಿಗೆ ಹುಳು ಸಾಕಾಣಿ ಮನೆ ನಿರ್ಮಾಣಕ್ಕೆ ಸರ್ಕಾರ ಶೇ.25 ಭಾಗ ಸಹಾಯಧನ ಕೊಡುತ್ತಿದೆ. ಇದು ಅಲ್ಲದೆ ಪರಿಶಿಷ್ಟ ಜಾತಿ ರೇಷ್ಮೆ ಕೃಷಿಕರಿಗೆ ಹೊಸದಾಗಿ ರೇಷ್ಮೆ ವ್ಯವಸಾಯ ಕೈಗೊಳ್ಳಲು ಪ್ರೋತ್ಸಾಹ ಧನ ಕೊಡುವುದು. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಿಸಲು ಶೇ.60 ರಷ್ಟು ಸಹಾಯ ಧನ ಕೊಡುವುದು. ರೇಷ್ಮೆ ಕೃಷಿಕರಿಗೆ ಹುಳು ಸಾಕಾಣಿಕೆ ಉಪಕರಣಗಳನ್ನು ಪುಕ್ಕಟೆ ಸರಬರಾಜು ಮಾಡುವುದು.

ದಾವಣಗೆರೆ ನಗರ ಸಭೆಯನ್ನು ಕಾರ್ಪೊರೇಷನ್ ಮಾಡುವ ಬಗ್ಗೆ

1530: ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಾವಣಗೆರೆ ನಗರಸಭೆಯನ್ನು ಕಾರ್ಪೊರೇಷನ್ನಾಗಿ ಮಾಡಲು ಹಿಂದಿನ ಅಧಿವೇಶನದಲ್ಲಿ ಭರವಸೆ ನೀಡಿದ್ದು, ಇದನ್ನು ಕಾರ್ಯರೂಪಕ್ಕೆ ತರಲು ಸರ್ಕಾರವು ಕೈಗೊಂಡ ಕ್ರಮವೇನು;

ಆ. ಹಾಗಿಲ್ಲದಿದ್ದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಪರಿಶೀಲನೆಯಲ್ಲಿದೆ.

ಆ. ಮೇಲೆ (ಅ)ಗೆ ನೀಡಿರುವ ಉತ್ತರದ ಪ್ರಕಾರ ಇದು ಉದ್ಭವಿಸುವುದಿಲ್ಲ.

ದಾವಣಗೆರೆ ನಗರಸಭೆಯ ಈಜುಕೊಳವನ್ನು ಸುವ್ಯವಸ್ಥಿತಗೊಳಿಸುವ ಬಗ್ಗೆ

1531: ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಾವಣಗೆರೆ ನಗರಸಭೆಯ ವತಿಯಿಂದ 72ರಲ್ಲಿ ನಿರ್ಮಿತವಾದ ಈಜುಕೊಳವು ಅತ್ಯಾಧುನಿಕ ರೀತಿಯಿಂದ ಕೂಡಿದ್ದು ಈಗ ಸ್ಥಗಿತಗೊಂಡಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ. ಅಲ್ಲಿಯ ಜನರಿಗೆ ಈಜುಕೊಳದ ಅವಶ್ಯಕತೆ ಇರುವುದರಿಂದ ಸುವ್ಯವಸ್ಥಿತಗೊಳಿಸಿ ಕಾರ್ಯ ಆರಂಭಿಸಲು ಸರ್ಕಾರವು ಕ್ರಮಕ್ಕೈಗೊಳ್ಳುವುದೇ;

ಇ. ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಹೌದು.

ಆ. ನಗರಸಭೆ ದಾವಣಗೆರೆಯಿಂದ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಿ ಕ್ರಮಕ್ಕೈಗೊಳ್ಳಲಾಗುವುದು.

ಇ. ಉದ್ಭವಿಸುವುದಿಲ್ಲ.

ದಾವಣಗೆರೆ ನಗರದಲ್ಲಿರುವ ರೈಲ್ವೆ ಗೇಟನ್ನು ಅಂಡರ್ ಬ್ರಿಡ್ಜ್ ಮಾಡುವ ಬಗ್ಗೆ

1537: ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಾವಣಗೆರೆ ನಗರದಲ್ಲಿರುವ ಅತ್ಯಧಿಕ ಜನಸಂದಣಿಯನ್ನು ಹೊಂದಿರುವ ಎರಡು ರೈಲ್ವೆ ಗೇಟ್‌ಗಳನ್ನು ಅಂಡರ್ ಬ್ರಿಡ್ಜ್ ಮಾಡುವ ಯೋಜನೆ ಸರ್ಕಾರಕ್ಕಿದೆಯೇ;

ಆ. ಹಾಗಿದ್ದಲ್ಲಿ, ಯಾವಾಗ ಈ ಕಾರ್ಯವನ್ನು ಪ್ರಾರಂಭಿಸಲಾಗುವುದು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

ಅ. ಈ ಪ್ರಸ್ತಾವನೆ ಭಾರತ ಸರ್ಕಾರದ ರೈಲ್ವೆ ಇಲಾಖೆಗೆ ಸಂಬಂಧಿಸಿದೆ.

ಆ. ಉದ್ಭವಿಸುವುದಿಲ್ಲ.

ಎಲ್ಲಾ ತಾಲ್ಲೂಕು ಮಟ್ಟಗಳಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸುವ ಬಗ್ಗೆ

1538: ಶ್ರೀ ಶಫಿ ಅಹಮದ್ (ತುಮಕೂರು):- ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸರ್ಕಾರಿ ಮತ್ತು ಖಾಸಗೀ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಂಖ್ಯೆ ಎಷ್ಟು ? ಜಿಲ್ಲಾವಾರು ವಿವರ ಒದಗಿಸುವುದು);

ಆ. ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ನೀಡುತ್ತಿರುವ ಅನುದಾನ ಮತ್ತು ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಕೇಂದ್ರ, ಹಾಗೂ ರಾಜ್ಯ ಸರ್ಕಾರದ ಆಯವ್ಯಯದಿಂದ ಅನುದಾನ ನೀಡುವ ಬಗ್ಗೆ ಇರುವ ನೀತಿ ಏನು;

ಇ. ಎಲ್ಲಾ ತಾಲ್ಲೂಕು ಮಟ್ಟಗಳಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸುವ ಬಗ್ಗೆ ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):-

ಅ. ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು-44
ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು-51.

(ಜಿಲ್ಲಾವಾರು ವಿವರವನ್ನು ಅನುಬಂಧ I ಮತ್ತು IIರಲ್ಲಿ ಒದಗಿಸಿದೆ)

ಆ. ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ನೇರವಾಗಿ ಸರ್ಕಾರದ ಆಡಳಿತಕ್ಕೊಳಪಟ್ಟಿವೆ. ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಅನುದಾನ ನೀಡಲು ಅವಕಾಶ ಕಲ್ಪಿಸಿಲ್ಲ.

ಇ. ಇಲ್ಲ.

ಅನುಬಂಧ – 1

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಜಿಲ್ಲಾವಾರು ಪಟ್ಟಿ

ಬೆಂಗಳೂರು ನಗರ ಜಿಲ್ಲೆ

1. ಕೈಗಾರಿಕಾ ತರಬೇತಿ ಸಂಸ್ಥೆ, ಹೊಸೂರು ರಸ್ತೆ, ಬೆಂಗಳೂರು – 560 029
2. ಕೈಗಾರಿಕಾ ತರಬೇತಿ ಸಂಸ್ಥೆ, ತುಮಕೂರು ರಸ್ತೆ, ಬೆಂಗಳೂರು – 560 022.
3. ಕೈಗಾರಿಕಾ ತರಬೇತಿ ಸಂಸ್ಥೆ, ವಿವೇಕನಗರ, ಕೆರ್ ಆಫ್ ಹೊಸೂರು ರಸ್ತೆ, ಬೆಂಗಳೂರು – 29.
4. ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ), ಹೊಸೂರು ರಸ್ತೆ, ಬೆಂಗಳೂರು – 29

ಬೆಂಗಳೂರು ಗ್ರಾಮಾಂತರ ಜಿಲ್ಲೆ

5. ಕೈಗಾರಿಕಾ ತರಬೇತಿ ಸಂಸ್ಥೆ, ದೇವನಹಳ್ಳಿ.
6. ಕೈಗಾರಿಕಾ ತರಬೇತಿ ಸಂಸ್ಥೆ, ಕನಕಪುರ.

ತುಮಕೂರು

7. ಕೈಗಾರಿಕಾ ತರಬೇತಿ ಸಂಸ್ಥೆ, ಅಮ್ಮಸಂದ್ರ.
8. ಕೈಗಾರಿಕಾ ತರಬೇತಿ ಸಂಸ್ಥೆ, ಬಿ.ಹೆಚ್.ರಸ್ತೆ, ತುಮಕೂರು.
9. ಕೈಗಾರಿಕಾ ತರಬೇತಿ ಸಂಸ್ಥೆ, (ಮಹಿಳಾ) ತಿಪಟೂರು.

ಬಳ್ಳಾರಿ ಜಿಲ್ಲೆ

10. ಕೈಗಾರಿಕಾ ತರಬೇತಿ ಸಂಸ್ಥೆ, ಕೌಲ್ ಬಜಾರ್, ಬಳ್ಳಾರಿ.
11. ಕೈಗಾರಿಕಾ ತರಬೇತಿ ಸಂಸ್ಥೆ, ಹೂವಿನಹಡಗಲಿ.

ಬೆಳಗಾಂ ಜಿಲ್ಲೆ

12. ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ). ಬೆಳಗಾಂ.
13. ಕೈಗಾರಿಕಾ ತರಬೇತಿ ಸಂಸ್ಥೆ, ಬೆಳಗಾಂ.

ಶಿವಮೊಗ್ಗ ಜಿಲ್ಲೆ

14. ಕೈಗಾರಿಕಾ ತರಬೇತಿ ಸಂಸ್ಥೆ, ಕಾವಲುಗುಂಡಿ, ಭದ್ರಾವತಿ.
15. ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ) ಶಿವಮೊಗ್ಗ.

ಬಿಜಾಪುರ ಜಿಲ್ಲೆ

16. ಕೈಗಾರಿಕಾ ತರಬೇತಿ ಸಂಸ್ಥೆ, ಶೋಲಾಪುರ ರಸ್ತೆ, ಬಿಜಾಪುರ.
17. ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ) ನಲತವಾಡ.

<u>ಬೀದರ್ ಜಿಲ್ಲೆ</u>

18. ಕೈಗಾರಿಕಾ ತರಬೇತಿ ಸಂಸ್ಥೆ, ಬೀದರ್.

<u>ಚಿಕ್ಕಮಗಳೂರು ಜಿಲ್ಲೆ</u>

19. ಕೈಗಾರಿಕಾ ತರಬೇತಿ ಸಂಸ್ಥೆ, ಚಿಕ್ಕಮಗಳೂರು.

<u>ಚಿತ್ರದುರ್ಗ ಜಿಲ್ಲೆ</u>

20. ಕೈಗಾರಿಕಾ ತರಬೇತಿ ಸಂಸ್ಥೆ, ಹದಡಿ ರಸ್ತೆ ದಾವಣಗೆರೆ.

<u>ಕೋಲಾರ ಜಿಲ್ಲೆ</u>

21. ಕೈಗಾರಿಕಾ ತರಬೇತಿ ಸಂಸ್ಥೆ, ದೇವರಾಯನ ಸಮುದ್ರ.
22. ಮಹಿಳಾ ವೃತ್ತಿ ತರಬೇತಿ ಸಂಸ್ಥೆ, ಗೌರಿಬಿದನೂರು.
23. ಕೈಗಾರಿಕಾ ತರಬೇತಿ ಸಂಸ್ಥೆ, ಕೆ.ಜಿ.ಎಫ್.
24. ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ) ಕೋಲಾರ್.

<u>ಗುಲ್ಬರ್ಗಾ ಜಿಲ್ಲೆ</u>

25. ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ), ಗುಲ್ಬರ್ಗಾ.
26. ಕೈಗಾರಿಕಾ ತರಬೇತಿ ಸಂಸ್ಥೆ ಗುಲ್ಬರ್ಗಾ
27. ಕೈಗಾರಿಕಾ ತರಬೇತಿ ಸಂಸ್ಥೆ, ವಾಡಿ.

<u>ಉತ್ತರ ಕನ್ನಡ ಜಿಲ್ಲೆ</u>

28. ಕೈಗಾರಿಕಾ ತರಬೇತಿ ಸಂಸ್ಥೆ, ಹಳಿಯಾಳ.
29. ಕೈಗಾರಿಕಾ ತರಬೇತಿ ಸಂಸ್ಥೆ, ಹೊನ್ನಾವರ.
30. ಕೈಗಾರಿಕಾ ತರಬೇತಿ ಸಂಸ್ಥೆ, ಕಾರವಾರ.

<u>ಹಾಸನ ಜಿಲ್ಲೆ</u>

31. ಕೈಗಾರಿಕಾ ತರಬೇತಿ ಸಂಸ್ಥೆ, ಹೊಳೆನರಸೀಪುರ.
32. ಕೈಗಾರಿಕಾ ತರಬೇತಿ ಸಂಸ್ಥೆ, ಹಾಸನ.

<u>ಧಾರವಾಡ ಜಿಲ್ಲೆ</u>

33. ಕೈಗಾರಿಕಾ ತರಬೇತಿ ಸಂಸ್ಥೆ, ಹುಬ್ಬಳ್ಳಿ.
34. ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ), ಗದಗ.

<u>ಕೊಡಗು ಜಿಲ್ಲೆ</u>

35. ಕೈಗಾರಿಕಾ ತರಬೇತಿ ಸಂಸ್ಥೆ, ಮಡಿಕೇರಿ.

36. ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ) ಪೊನ್ನಂಪೇಟೆ.

ಮಂಡ್ಯ ಜಿಲ್ಲೆ

37. ಕೈಗಾರಿಕಾ ತರಬೇತಿ ಸಂಸ್ಥೆ, ಮಂಡ್ಯ.

38. ಕೈಗಾರಿಕಾ ತರಬೇತಿ ಸಂಸ್ಥೆ, ಮಳವಳ್ಳಿ.

ದಕ್ಷಿಣ ಕನ್ನಡ ಜಿಲ್ಲೆ

39. ಕೈಗಾರಿಕಾ ತರಬೇತಿ ಸಂಸ್ಥೆ, ಕದ್ರಿ, ಮಂಗಳೂರು.

40. ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ), ಪುತ್ತೂರು.

ಮೈಸೂರು ಜಿಲ್ಲೆ

41. ಕೈಗಾರಿಕಾ ತರಬೇತಿ ಸಂಸ್ಥೆ, ಮೈಸೂರು.

42. ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ), ಗುಂಡ್ಲುಪೇಟೆ.

ರಾಯಚೂರು ಜಿಲ್ಲೆ

43. ಕೈಗಾರಿಕಾ ತರಬೇತಿ ಸಂಸ್ಥೆ, ರಾಯಚೂರು.

44. ಕೈಗಾರಿಕಾ ತರಬೇತಿ ಸಂಸ್ಥೆ, ಕುಕನೂರು.

ಅನುಬಂಧ – II

ಜಿಲ್ಲಾವಾರು ಖಾಸಗೀ ಕೈಗಾರಿಕಾ ತರಬೇತಿ ಸಂಸ್ಥೆಗಳ ಪಟ್ಟಿ

ಬೆಂಗಳೂರು ನಗರ ಜಿಲ್ಲೆ

1. ಶ್ರೀ ಶ್ರೀನಿವಾಸ ಕೈಗಾರಿಕಾ ತರಬೇತಿ ಸಂಸ್ಥೆ, ನಂ.334, 22ನೇ ಕ್ರಾಸ್, 1 ಮತ್ತು 3ನೇ ಬ್ಲಾಕ್ ಈಸ್ಟ್, ಜಯನಗರ, ಬೆಂಗಳೂರು – 11.
2. ಗೌಷಿಯಾ ಕೈ.ತ.ಸಂ. ಹೊಸೂರು ರಸ್ತೆ, ಬೆಂಗಳೂರು – 29.
3. ಆಚಾರ್ಯ ಕೈ.ತ.ಸಂ, ನಂ.15, 1ನೇ ಕ್ರಾಸ್, 1ನೇ ಸ್ಟೇಜ್, ಪೀಣ್ಯ ಇಂಡಸ್ಟ್ರೀಯಲ್ ಎಸ್ಟೇಟ್, ಬೆಂಗಳೂರು – 58.
4. ವಿದ್ಯಾಸದನ ಕೈ.ತ.ಸಂ, ಈಸ್ಟ್ ಆಂಜನೇಯ ಟೆಂಪಲ್ ಸ್ಟ್ರೀಟ್, ಪಿ.ಬಿ.ನಂ.409, ಗಾಂಧಿ ಬಜಾರ್, ಬೆಂಗಳೂರು – 4.
5. ಅಸೋಸಿಯೋಷನ್ ಆಫ್ ಫೀಸಿಕಲೀ ಹ್ಯಾಂಡಿ ಕ್ಯಾಪ್‌ಡ್ ಕೈ.ತ.ಸಂ, ಹೆನ್ನೂರು ರಸ್ತೆ, ಲಿಂಗರಾಜಪುರಂ, ಸೇಂಟ್ ಥಾಮಸ್ ಟೌನ್ ಪೋಸ್ಟ್, ಬೆಂಗಳೂರು – 84.
6. ಕೆ.ಎಸ್.ಆರ್.ಟಿ.ಸಿ. ಕೈ.ತ.ಸಂ. ಶಾಂತಿನಗರ, ಬೆಂಗಳೂರು – 27.
7. ಆರ್.ಟಿ.ಪಿ.ಐ. ಕೈ.ತ.ಸಂ. ನಂ.205, ಚಾಮರಾಜಪೇಟೆ, ಬೆಂಗಳೂರು – 16.

8. ರೆಡ್ಡಿ ಜನಸಂಘ ಕೈ.ತ.ಸಂ. ಸಿ.ಎ. ಸೈಟಿ ನಂ.1, 16ನೇ ಮೈನ್ 3ನೇ ಬ್ಲಾಕ್, ಕೋರಮಂಗಲ ಲೇಔಟ್, ಬೆಂಗಳೂರು – 34.
9. ಗುಡ್‌ವಿಲ್ ಇಂಟರ್‌ನ್ಯಾಷನಲ್ ಕೈ.ತ.ಸಂ. ನಂ.5, ನಂದೀ ದುರ್ಗ ರಸ್ತೆ, ಬೆಂಗಳೂರು – 46.
10. ಸೇಂಟ್ ಮೇರಿಸ್ ಕೈ.ತ.ಸಂ. ಸೇಂಟ್ ಮೇರಿಸ್ ಟೌನ್, ಬೆಂಗಳೂರು – 84.
11. ಶ್ರೀ ಮಂಜುನಾಥ ಕೈ.ತ.ಸಂ. ಬಿ.ಸಿ. ಇಂಡಸ್ಟ್ರೀಯಲ್ ಎಸ್ಟೇಟ್, ಬೆಂಗಳೂರು – 16.
12. ಮುಸ್ಲಿಮ್ ಅರ್‌ಫನೇಜ್ ಕೈ.ತ.ಸಂ. ನಂ.43, ಡಿಕನ್‌ಸನ್ ರಸ್ತೆ, ಬೆಂಗಳೂರು – 42.
13. ಸೇಂಟ್ ಪೇಟ್ರಿಕ್ ಕೈ.ತ.ಸಂ. ನಂ.21, ಮ್ಯೂಸಿಯಂ ರಸ್ತೆ, ಬೆಂಗಳೂರು – 25.
14. ರ್‍ಯಾಕ್ ಇನ್‌ಸ್ಟಿಟ್ಯೂಟ್ ಕಂಪ್ಯೂಟರ್ ಸೆಂಟರ್ ನಂ.67, ಮಿಲ್ಲರ್ ರಸ್ತೆ, ಬೆನ್‌ಸನ್ ಟೌನ್, ಬೆಂಗಳೂರು – 46.
15. ಎಲೆಕ್ಟ್ರಾನಿಕ್ ಟ್ರೈನಿಂಗ್ ಸೆಂಟರ್ ಫಾರ್ ವುಮೇನ್ ಜಿಟಿಟಿಸಿ, ಪ್ರಿಮಿಸೆಸ್, ರಾಜಾಜಿನಗರ ಇಂಡಸ್ಟ್ರೀಯಲ್ ಎಸ್ಟೇಟ್, ಬೆಂಗಳೂರು – 44.
16. ಉಷಾ ಕೈ.ತ.ಸಂ. ನಂ.1534 ಬಿ, 2ನೇ ಕ್ರಾಸ್, 16ನೇ ಮೈನ್ ಜೆ.ಪಿ.ನಗರ, 2ನೇ ಫೇಸ್, ಬೆಂಗಳೂರು – 78.
17. ಬಿ.ಟಿ.ಎಲ್. ಕೈ.ತ.ಸಂ. ನಂ.259 ಬಿ, ಬೊಮ್ಮಸಂದ್ರ ಹೊಸೂರು ರಸ್ತೆ, ಬೆಂಗಳೂರು – 58.
18. ಭಾರತ ರತ್ನ ವಿಶ್ವೇಶ್ವರಯ್ಯ ಕೈ.ತ.ಸಂ. 12ನೇ ಕ್ರಾಸ್, ಫಸ್ಟ್ ಬ್ಲಾಕ್, ರಾಜಾಜಿನಗರ, ಬೆಂಗಳೂರು – 10.
19. ಕ್ಯಾಡ್ ಪಾಯಿಂಟ್, ನಂ.1 ಸಿಲ್ವರ್ ಜುಬಿಲಿ ಬಿಲ್ಡಿಂಗ್ ಅಫ್ ಯು.ವಿ.ಸಿ.ಇ. ಕೆ.ಆರ್.ಸರ್ಕಲ್, ಬೆಂಗಳೂರು – 1.
20. ಕೆ.ಕೆ.ಎಂ.ಪಿ. ಕೈ.ತ.ಸಂ. ನಂ.16 ಎ, ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆ, ವಸಂತನಗರ, ಬೆಂಗಳೂರು – 52.
21. ಭುವನ್ ಕೈ.ತ.ಸಂ. ವೆಂಕಟಾಲ, ಯಲಹಂಕ, ಬೆಂಗಳೂರು – 64.
22. ನಾಡಿಗರ್ ಕೈ.ತ.ಸಂ. ನಂ.18 (ಸಿ), 2ನೇ ಫೇಸ್ ಪೀಣ್ಯ ಇಂಡಸ್ಟ್ರೀಯಲ್ ಏರಿಯಾ, ಬೆಂಗಳೂರು – 58.
23. ಅಯ್ಯಪ್ಪನ್ ಕೈ.ತ.ಸಂ. ಎಂ.ಎಂ.ರಸ್ತೆ ಕ್ರಾಸ್, ಬೆಂಗಳೂರು – 46.
24. ರಾಮನ್ ಕೈ.ತ.ಸಂ, ನಂ.134, ಕಾಮಕ್ಷಿಪಾಳ್ಯ, ಬೆಂಗಳೂರು – 74
25. ಗ್ಲೋಬ್ ಕೈ.ತ.ಸಂ. ಓಬಲಪ್ಪ ಗಾರ್ಡನ್, ಬೆಂಗಳೂರು.
26. ಸಫೈರ್ ಕಂಪ್ಯೂಟರ್ಸ್, ಜಯನಗರ, ಬೆಂಗಳೂರು – 11.
27. ನಿತ್ಯಾಂಜನ ಇನ್ಸ್‌ಟ್ಯೂಟ್ ಅಫ್ ಕಂಪ್ಯೂಟರ್ ಎಜುಕೇಶನ್, 9:1, ರಾಮಕೃಷ್ಣ ಸ್ಕ್ವೆಯರ್, ಬುಲ್ ಟೆಂಪಲ್ ರಸ್ತೆ, ಬೆಂಗಳೂರು – 19.

28. ಆಚಾರ್ಯ ಕೈ.ತ.ಸಂ. ಬನ್ನೇರುಘಟ್ಟ ರಸ್ತೆ, ಬೆಂಗಳೂರು–29.

29. ಗುರು ಸಾಫ್ಟ್‌ಟೆಕ್ ಕೈ.ತ.ಸಂ. ಗುರುಕೃಪ 16:ಎ, ನಾಗರಬಾವಿ, ಬೆಂಗಳೂರು–92.

30. ಪ್ರೊಫೆಷನಲ್ ಎಜುಕೇಷನ್ ಟ್ರಸ್ಟ್ ಕೈ.ತ.ಸಂ. ಎಸ್.ಆರ್.ನಗರ, ಬೆಂಗಳೂರು–27.

<u>ಬೆಂಗಳೂರು ಗ್ರಾಮಾಂತರ ಜಿಲ್ಲೆ:–</u>

31. ಜಿ.ಸಿ.ಎಸ್. ಕೈ.ತ.ಸಂ. ನೆಲಮಂಗಲ–562 123.

32. ಹೊಂಬೇಗೌಡ ಕೈ.ತ.ಸಂ. ಕೆಂಗಲ್–571501, ಚನ್ನಪಟ್ಟಣ ತಾಲ್ಲೂಕು.

<u>ತುಮಕೂರು ಜಿಲ್ಲೆ:–</u>

33. ಹೆಚ್.ಎಂ.ಎಸ್. ಕೈ.ತ.ಸಂ. ಹೆಚ್.ಎಂ.ಎಸ್ ಎಕ್ಸ್‌ಟೆಂಷನ್, ಶೆಟ್ಟಿಹಳ್ಳಿ ರಸ್ತೆ, ತುಮಕೂರು–572 103.

34. ಸಿ.ಎಸ್.ಐ. ವೊಕೇಶನ್ ಕೈ.ತ.ಸಂ, ಪಿ.ಬಿ.ನಂ.101, ಬಿ.ಹೆಚ್.ರಸ್ತೆ, ತುಮಕೂರು–572 102.

35. ರಾಘವೇಂದ್ರ ಕೈ.ತ.ಸಂ. 9ನೇ ಕ್ರಾಸ್, ಎಸ್.ಎಸ್.ಪುರಂ, ತುಮಕೂರು–02.

36. ವಿದ್ಯಾವಾಹಿನಿ ಕೈ.ತ.ಸಂ. ಎಸ್.ಐ.ಟಿ ಎಕ್ಸ್‌ಟೆಂಷನ್, ತುಮಕೂರು–03.

37. ಸಿದ್ಧಾರ್ಥ ಕೈ.ತ.ಸಂ. ಕುಣಿಗಲ್ ರಸ್ತೆ, ಮರಳೂರು, ತುಮಕೂರು–05.

38. ಸಿದ್ಧಾರ್ಥ ಕೈ.ತ.ಸಂ. ಕುಣಿಗಲ್–572 130.

39. ಲಾಲ್ ಬಹದ್ದೂರ್ ಕೈ.ತ.ಸಂ. ಜಿ.ಬಿ.ಎನ್.ರಸ್ತೆ, ಮಧುಗಿರಿ–572 132.

40. ಶ್ರೀ ಶಂಕರೇಶ್ವರ ಕೈ.ತ.ಸಂ. ರಂಗಾಪುರ, ತಿಪಟೂರು ತಾಲ್ಲೂಕು–572 202.

41. ಮಾರುತಿ ಕೈ.ತ.ಸಂ. ತುರುವೇಕೆರೆ–572 227.

<u>ಕೋಲಾರ ಜಿಲ್ಲೆ:–</u>

42. ಸರ್.ಎಂ.ವಿ. ಕೈ.ತ.ಸಂ. ಪಿ.ಬಿ.ನಂ.14, ಕೆ.ವಿ. ಕ್ಯಾಂಪಸ್, ಚಿಕ್ಕಬಳ್ಳಾಪುರ –01.

43. ರಾಯಲ್ ಕೈ.ತ.ಸಂ. ಪ್ಲಮ್ಮರ್ ರಸ್ತೆ, ಅಶೋಕ ನಗರ, ಕೆ.ಜಿ.ಎಫ್–563 120.

44. ಹಿಲಾಲ್ ಕೈ.ತ.ಸಂ. ಅಪೋಸಿಟ್ ಜನರಲ್ ಹಾಸ್ಪಿಲ್ ಬಿ.ಎಂ.ರಸ್ತೆ, ರಾಬರ್ಟ್‌ಸನ್ ಪೇಟೆ, ಕೆ.ಜಿ.ಎಫ್–563 122.

45. ನೂರಿ ಕೈ.ತ.ಸಂ. ಆಂಡರ್‌ಸನ್‌ಪೇಟೆ, ಕೆ.ಜಿ.ಎಫ್–563 113.

46. ಶ್ರೀನಿವಾಸ ಕೈ.ತ.ಸಂ. ವಿಜಯನಗರ, ಬಂಗಾರುಪೇಟೆ–563 114.

47. ಕೆಂಗಲ್ ಹನುಮಂತಯ್ಯ ಕೈ.ತ.ಸಂ. ಬೇತಮಂಗಲ–563 116, ಬಂಗಾರುಪೇಟೆ ತಾಲ್ಲೂಕು.

48. ಎಂ.ಐ.ಟಿ.ಸಿ. ಕೈ.ತ.ಸಂ. ವಿ.ಗುಟ್ಟಹಳ್ಳಿ, ಮುಳಬಾಗಿಲು–563 131.

49. ಮಿಲ್ಲತ್ ಕೈ.ತ.ಸಂ. ಪ್ರಭಾತ್ ಟಾಕೀಸ್ ಹತ್ತಿರ ಪಿ.ಬಿ. ನಂ.55, ಕೋಲಾರ–563 101.

50. ಎ.ಇ.ಸಿ.ಎಸ್ ಪವನ್ ಕೈ.ತ.ಸಂ. ಪವನ್ ನಗರ, ಪಿ.ಸಿ.ಹಳ್ಳಿ ಎಕ್ಸ್‌ಟೆಂಷನ್, ಬಿ.ಎಂ.ರಸ್ತೆ, ಕೋಲಾರ–01.

51. ಕೋಲಾರ ಕೈ.ತ.ಸಂ. ಕಲಾಯ್ ಪೇಟೆ, ಕೋಲಾರ–563 101.

52. ಬಿಷಪ್ ಜಾತಣ್ಣ ಕೈ.ತ.ಸಂ. ಮೈರೆಡ್ಡಿಮರ್ಸ್ ಚರ್ಚ್ ಕಾಂಪೌಂಡ್, ಮಾರಿಕುಪ್ಪಂ, ಕೆ.ಜಿ.ಎಫ್–19.

ಚಿತ್ರದುರ್ಗ ಜಿಲ್ಲೆ:–

53. ಟಿ.ಎಂ.ಎ.ಇ. ಸೊಸೈಟಿಸ್ ಕೈ.ತ.ಸಂ, ಜೋಗಿಮಠ್ ರೋಡ್, ಚನ್ನಬಸಪ್ಪ ಕಾಂಪೌಂಡ್, ಚಿತ್ರದುರ್ಗ–01.

54. ದುರ್ಗ ಕೈ.ತ.ಸಂ. ಹೊಸದುರ್ಗ–577 527.

55. ಟಿಪ್ಪು ಸುಲ್ತಾನ್ ಕೈ.ತ.ಸಂ, ಹರದಿ ರಸ್ತೆ, ದಾವಣಗೆರೆ–05.

56. ಟಿ.ಎಂ.ಎ.ಇ. ಸೊಸೈಟೀಸ್ ಕೈ.ತ.ಸಂ. ಹಿರಿಯೂರು–572 143.

57. ರೂರಲ್ ಕೈ.ತ.ಸಂ. ಕುಕವಾಡ, ದಾವಣಗೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

ಶಿವಮೊಗ್ಗ ಜಿಲ್ಲೆ:–

58. ಟಿ.ಎಂ.ಎ.ಇ. ಸೊಸೈಟಿಸ್ ಕೈ.ತ.ಸಂ. ಎಸ್.ಪಿ.ಎಂ.ರಸ್ತೆ, ಶಿವಮೊಗ್ಗ–02.

59. ಶ್ರೀ ಅಕ್ಕಮಹಾದೇವಿ ಕೈ.ತ.ಸಂ. ಹೊಂಡದಕೆರೆ, ಶಿರಾಳಕೊಪ್ಪ–577 428.

60. ಅನ್ನಪೂರ್ಣಮ್ಮ ಎನ್.ಹೆಚ್. ಶಂಕರಪ್ಪ ಕೈ.ತ.ಸಂ. ನ್ಯಾಮತಿ, ಹೊನ್ನಾಳಿ ತಾಲ್ಲೂಕು–577 223.

61. ಟಿ.ಎಂ.ಎ.ಇ.ಎಸ್. ಶ್ರೀ ಮಹಾರುದ್ರಸ್ವಾಮಿ ಕೈ.ತ.ಸಂ. ಚನ್ನಗಿರಿ–577213.

62. ಟಿ.ಎಂ.ಎ.ಇ. ಸೊಸೈಟಿಸ್ ಕೈ.ತ.ಸಂ, ಚನ್ನಗಿರಿ ರಸ್ತೆ, ಭದ್ರಾವತಿ.

ಧಾರವಾಡ ಜಿಲ್ಲೆ:–

63. ಶಾ.ಡಿ.ಜೆ. ಜೆಡ್ಡಾ ಕೈ.ತ.ಸಂ, ರಾಜಾಜಿನಗರ, ಹುಬ್ಬಳ್ಳಿ–32.

64. ಎಸ್.ಜೆ.ಎಂ.ವಿ.ಸಂಘ ಕೈ.ತ.ಸಂ.(ಮ), ಮೂರುಸಾವಿರದ ಮಠ ಕಾಂಪೌಂಡ್, ಹುಬ್ಬಳ್ಳಿ –580 028.

65. ಕೆ.ಎಸ್.ಆರ್.ಟಿ.ಸಿ. ಕೈ.ತ.ಸಂ, ಗೋಕುಲ ರಸ್ತೆ, ಹುಬ್ಬಳ್ಳಿ–580 020.

66. ಜೀವೇಶ್ವರ ಶಿಕ್ಷಣ ಸಮಿತಿ ಕೈ.ತ.ಸಂ. ಹಳೇ ಹುಬ್ಬಳ್ಳಿ, ಹುಬ್ಬಳ್ಳಿ–580 024.

67. ಎಸ್.ಎಸ್.ಕೆ. ಹಿತವರ್ಧಕ ಸಂಘ ಮೈ.ಟಿ.ಮಿಸ್ಕಿನ್, ಕೈ.ತ.ಸಂ, ದಾಜಿನ್‌ಪೇಟೆ, ಹುಬ್ಬಳ್ಳಿ –580 029.

68. ಕೆ.ಹೆಚ್. ಪಾಟೀಲ್ ಕೈ.ತ.ಸಂ. ವಿದ್ಯಾನಗರ, ಹುಬ್ಬಳ್ಳಿ–580 021.

69. ಸರ್. ಸಿದ್ದಪ್ಪ ಕಂಬಳಿ ಮೆಮೋರಿಯಲ್ ಕೈ.ತ.ಸಂ. ಗದಗ್–582 101.

70. ಶ್ರೀ ಕೊಟ್ಟೂರು ಸ್ವಾಮಿ ಕೈ.ತ.ಸಂ. ನೇರಗಲ್–582 119, ರೋಣ ತಾಲ್ಲೂಕು.

71. ಶ್ರೀ ಜಗದ್ಗುರು ತೋಂಟದಾರ್ಯ ಕೈ.ತ.ಸಂ. ಡಂಬಳ–582 113, ಮುಂಡರಗಿ ತಾಲ್ಲೂಕು.

72. ಎಸ್.ಇ.ಎ. ಅವ್ವಪ್ಪಣ್ಣ ಅತ್ತೀಗೇರಿ ಕೈ.ತ.ಸಂ. ಟೌನ್‌ಹಾಲ್, ಧಾರವಾಡ–580 008.

73. ಶ್ರೀ ಜಗದ್ಗುರು ಅಜಾತ ನಾಗಲಿಂಗ ಮಹಾಸ್ವಾಮಿ ವಿದ್ಯಾಪೀಠ ಕೈ.ತ.ಸಂ. ನವಲಗುಂದ–582208.

74. ಸಂಜಯ ಗ್ರಾಮೀಣ ವಿದ್ಯಾ ಸಂಸ್ಥೆ, ಕೈ.ತ.ಸಂ. ಹೊಳೆ ಆಲೂರು–582 203.

75. ಟಿ.ಎಂ.ಎ.ಇ. ಸೊಸೈಟಿಸ್ ಟೊಂಕದ ವೀರಪ್ಪ ಕೈ.ತ.ಸಂ. ಹಾವೇರಿ–581 110.

76. ಟಿ.ಎಂ.ಎ.ಇ.ಎಸ್. ಶ್ರೀ ಮಹರ್ಷಿ ವಾಲ್ಮೀಕಿ ಕೈ.ತ.ಸಂ. ರಾಣೆಬೆನ್ನೂರು–581 115.

77. ಬಾಪೂಜಿ ಕೈ.ತ.ಸಂ. ಲಕ್ಷ್ಮೇಶ್ವರ–582 116, ಶಿರಹಟ್ಟಿ ತಾಲ್ಲೂಕು.

78. ಮಾದರ ಚನ್ನಯ್ಯ ಕೈ.ತ.ಸಂ. ಶಿರೋಳ–582 212, ನರಗುಂದ ತಾಲ್ಲೂಕು.

79. ಡಾ: ಅಂಬೇಡ್ಕರ್ ಶಿಕ್ಷಣ ಸಮಿತಿ ಕೈ.ತ.ಸಂ. ಮಿಶ್ರಿಕೋಟಿ, ಕಲಘಟಗಿ ತಾಲ್ಲೂಕು.

<u>ಬಿಜಾಪುರ ಜಿಲ್ಲೆ:–</u>

80. ಶ್ರೀ ಸಂಗಬಸವೇಶ್ವರ ಕೈ.ತ.ಸಂ. ಲಚ್ಯಾಣನ–586 211, ಇಂಡಿ ತಾಲ್ಲೂಕು.

81. ವಿ.ವಿ.ಸಂಘ ಎನ್.ಎನ್. ಬಾಳಶೆಟ್ಟಿ ಕೈ.ತ.ಸಂ. ತಾಳೀಕೋಟಿ–586 214.

82. ಜಗದ್ಗುರು ಗಂಗಾಧರ ಮೂರುಸಾವಿರ ಮಠ ಕೈ.ತ.ಸಂ. ಇಳಕಲ್–587 125. ಹುನಗುಂದ ತಾಲ್ಲೂಕು.

83. ಶ್ರೀಮಾನ್ ಮಧ್ವಾಚಾರ್ಯರ ಕೈ ತ.ಸಂ. ವೆಂಕಟಪೇಟೆ, ಬಾಗಲಕೋಟೆ - 587101

84. ಸಿಂದಗಿ ಶಾಂತವೀರ ಪಟ್ಟಾಧ್ಯಕ್ಷರ ಕೈ.ತ.ಸಂ. ಮೊರಟಗಿ–586 123, ತಾ:ಸಿಂದಗಿ.

85. ಕಾಳಿದಾಸ್ ಕೈ.ತ.ಸಂ. ಬಾದಾಮಿ–587 201.

86. ವಿ.ವಿ.ಸಂಘ ಶ್ರೀ ಎಂ.ವಿ. ಪಂಚಾಕ್ಷರಿ ಕೈ.ತ.ಸಂ. ತೇರದಾಳ್–587 315, ಜಮಖಂಡಿ ತಾಲ್ಲೂಕು.

87. ಅಂಜುಮಾನ್ ಕೈ.ತ.ಸಂ. ಮುದ್ದೆಬಿಹಾಳ್–586 212.

88. ಬನಶಂಕರಿ ರೂರಲ್ ಕೈ.ತ.ಸಂ. ಬನಶಂಕರಿ–587208ಪೋ:ಚೊಳಚ ಗುಡ್, ತಾ: ಬಾದಾಮಿ.

89. ಬಿ.ಡಿ.ಪಿ.ಹೆಚ್.ಡಬ್ಲ್ಯು.ಎ. ಕೈ.ತ.ಸಂ. ಮಠಪತಿಗಲ್ಲಿ, ಬಿಜಾಪುರ–586 101.

90. ಅಂಜುಮಾನ್ ಕೈ.ತ.ಸಂ. ಸಿಂದಗಿ–586 128.

91. ಅಲ್‌ಮಿಜಾನ್ ಕೈ.ತ.ಸಂ. ಬಾಗಲಕೋಟೆ–587 101.

ಬೆಳಗಾಂ ಜಿಲ್ಲೆ:-

92. ಭರತೇಶ್ ಕೈ.ತ.ಸಂ. ಪಿ.ಬಿ.ರಸ್ತೆ, ಬೆಳಗಾಂ-590 016.

93. ಎಸ್.ಎಸ್.ಎಜುಕೇಶನ್ ಟ್ರಸ್ಟ್ ಕೈ.ತ.ಸಂ. ಶಿವಬಸವನಗರ್, ಬೆಳಗಾಂ-590 010.

94. ಇಸ್ಲಾಮಿಯಾ ಕೈ.ತ.ಸಂ. ಕ್ಯಾಂಪ್ ಬೆಳಗಾಂ-590 001.

95. ನೀಲಕಂಠೇಶ್ವರ ವಿದ್ಯಾವರ್ಧಕ ಸಂಸ್ಥೆ, ಕೈ.ತ.ಸಂ, ಬೈಲಹೊಂಗಲ-591 102.

ಉತ್ತರಕನ್ನಡ ಜಿಲ್ಲೆ:-

96. ಮಲ್ಲಿಕಾರ್ಜುನ ಕೈ.ತ.ಸಂ. ಸಿದ್ದಾರ್, ಕಾರವಾರ -581 301.

97. ಶ್ರೀ ಸೋಮನಾಥ ಕೈ.ತ.ಸಂ. ಬಿನಗಾ, ಕಾರವಾರ.

ಮೈಸೂರು ಜಿಲ್ಲೆ:-

98. ಮೆಸ್ಕೋ ಕೈ.ತ.ಸಂ. ಬಿಹೈಂಡ್ ಸರ್ಕಾರಿ ಕೈ.ತ.ಸಂ. ಎನ್.ಆರ್. ಮೊಹಲ್ಲಾ, ಮೈಸೂರು-570007.

99. ಎಂ.ಇ.ಎಸ್. ಕೈ.ತ.ಸಂ. ತಿಲಕ್‌ನಗರ, ಈಡೀಗಾ ಗ್ರೌಂಡ್, ಮೈಸೂರು-570 021.

100. ಎನ್.ಐ.ಐ.ಇ. ಕೈ.ತ.ಸಂ. ನಂ.65, ಇಂಡಸ್ಟ್ರೀಯಲ್ ಸಬರ್ಬ್ ವಿಶ್ವೇಶ್ವರನಗರ, ಮೈಸೂರು-08.

101. ಮೈಸೂರು ರೂರಲ್ ಕೈ.ತ.ಸಂ. ಬಿಹೈಂಡ್ ಎಲೆಕ್ಟ್ರೊಮೊಬೈಲ್ಸ್, ಹುಣಸೂರ್ ರಸ್ತೆ, ಹಿನಕಲ್,- ಮೈಸೂರು-570 017.

102. ಸೇಂಟ್ ಫಿಲೋಮಿನಾಸ್ ಕೈ.ತ.ಸಂ. ಬಿ.ಎಂ. ರಸ್ತೆ ಮೈಸೂರು-570 001.

103. ವಿದ್ಯಾವರ್ಧಕ ಕೈ.ತ.ಸಂ. ಗೋಕುಲಮ್, 3ನೇ ಸ್ಟೇಜ್, ಮೈಸೂರು-570 002.

104. ಜೆ.ಎಸ್.ಎಸ್. ಕೈ.ತ.ಸಂ. ಚಾಮರಾಜನಗರ-571 313.

105. ಜೆ.ಎಸ್.ಎಸ್. ಕೈ.ತ.ಸಂ. ನಂಜನಗೂಡು-571 301.

106. ವಿ.ಪಿ.ಟಿ. ಕೈ.ತ.ಸಂ. ಮಂಗಲ, ಚಾಮರಾಜನಗರ ತಾಲ್ಲೂಕು, ಮೈಸೂರು ಜಿಲ್ಲೆ.

107. ವಿಶ್ವೇಶ್ವರಯ್ಯ ಎಜುಕೇಶನ್ ಟ್ರಸ್ಟ್, ಕೈ.ತ.ಸಂ. ಮೈಸೂರು.

ದಕ್ಷಿಣ ಕನ್ನಡ ಜಿಲ್ಲೆ:-

108. ಸೇಂಟ್ ಅಲಾಯುಸಿಯಸ್ ಕೈ.ತ.ಸಂ. ಮಂಗಳೂರು-575 003.

109. ಸೈಯದ್ ಮದಾನಿ ಕೈ.ತ.ಸಂ. ಉಳ್ಳಾಲ್-574 154, ಮಂಗಳೂರು.

110. ಹೆಬೀಚ್ ಕೈ.ತ.ಸಂ. ಬಲ್ಮಠ, ಮಂಗಳೂರು-575001.

111. ಕೆ.ಎ.ಸಿ.ಇ.ಎಸ್. ಸ್ಟೀಚ್ ಕ್ರಾಫ್ಟ್ ಕೈ.ತ.ಸಂ, ಬಲ್ಮಠ, ಮಂಗಳೂರು–575 001.

112. ಕ್ಷೇವಿಯರ್ ಕೈ.ತ.ಸಂ. ಜ್ಯೋತಿ ಮಂದಿರ, ಮುಕ್ಕ–577177.

113. ಮುಲ್ಕಿ ರಾಮಕೃಷ್ಣ ಪುಂಜ ಕೈ.ತ.ಸಂ. ಮುಲ್ಕಿ –571154.

114. ನ್ಯಾಷನಲ್ ಕೈ.ತ.ಸಂ. ಹೆರಾಡಿ, ಬಾರ್‌ಕೂರ್–576 210. ತಾ:ಉಡುಪಿ.

115. ಬ್ರಹ್ಮಶ್ರೀ ನಾರಾಯಣಗುರು ಕೈ.ತ.ಸಂ. ಕಾಟಿಪಳ್ಳ, ಮಂಗಳೂರು–574 140.

116. ನಾರಾಯಣಗುರು ಕೈ.ತ.ಸಂ. ಕುದ್ರೋಳಿ, ಮಂಗಳೂರು–03.

117. ಸೇಂಟ್ ಮೇರಿಸ್ ಕೈ.ತ.ಸಂ. ಚಿಟ್‌ಪಾಡಿ, ಉಡುಪಿ–576 101.

118. ಎ.ಜಿ. ಸೋನ್ಸ್ ಕೈ.ತ.ಸಂ. ಕೆಸೀಡನ್‌ಗಲ್ಲು ಪೋಸ್ಟ್, ಮೂಡುಬಿದರೆ–574 197.

119. ರೆವರೆಂಡ್ ಫಾದರ್ ರಾಬರ್ಟ್ ಜೆಡ್‌ಎಮ್. ಡಿಸೋಜ ಮೆಮೋರಿಯಲ್ ಕೈ.ತ.ಸಂ. ಪಡುಕೋಣೆ ಪೋಸ್ಟ್, ಕುಂದಾಪುರ ತಾಲ್ಲೂಕು–576 262.

120. ಮಹಾಲಿಂಗೇಶ್ವರ ಕೈ.ತ.ಸಂ. ಪುತ್ತೂರು–574 201.

121. ಧರ್ಮಸ್ಥಳ ಮಂಜುನಾಥೇಶ್ವರ ಕೈ.ತ.ಸಂ. ವೇಣೂರು–574 242.

122. ಕುರಂಜಿ ವೆಂಕಟರಮಣ ಗೌಡ ಕೈ.ತ.ಸಂ. ಕುಂಜಿಭಾಗ್, ಸುಳ್ಯ–574 239.

<u>ಹಾಸನ ಜಿಲ್ಲೆ:–</u>

123. ಸಿದ್ದೇಶ್ವರ ಕೈ.ತ.ಸಂ, ಬಿ.ಎಂ.ರಸ್ತೆ, ಹಾಸನ–573 201.

124. ಕೆ.ಎಸ್.ಆರ್.ಟಿ.ಸಿ. ಕೈ.ತ.ಸಂ. ಹಾಸನ–574 301.

125. ರಾಮೇಶ್ವರ ಕೈ.ತ.ಸಂ. ಅರಸೀಕೆರೆ–573 103.

126. ಆದಿಚುಂಚನಗಿರಿ ಕೈ.ತ.ಸಂ. ಚನ್ನರಾಯಪಟ್ಟಣ–573 116.

<u>ಮಂಡ್ಯ ಜಿಲ್ಲೆ:–</u>

127. ಆದಿಚುಂಚನಗಿರಿ ಕೈ.ತ.ಸಂ, ತಾವರೆಕೆರೆ, ಬೆಳ್ಳೂರ್ ಹತ್ತಿರ, ತಾಲ್ಲೂಕು:ನಾಗಮಂಗಲ –571 418.

128. ಶಿವಾನಂದ ಸ್ವಾಮೀಜೀ ಕೈ.ತ.ಸಂ. ಮೇಲುಕೋಟೆ, ಪಾಂಡವಪುರ ತಾಲ್ಲೂಕು.

<u>ಚಿಕ್ಕಮಗಳೂರು ಜಿಲ್ಲೆ:–</u>

129. ಶ್ರೀ ಜಗದ್ಗುರು ರೇಣುಕಾಚಾರ್ಯ ಕೈ.ತ.ಸಂ. ಬಾಳೇಹೊನ್ನೂರು–577 112.

130. ಸಹ್ಯಾದ್ರಿ ನ್ಯಾಷನಲ್ ಕೈ.ತ.ಸಂ. ಬಿ.ಹೆಚ್.ರಸ್ತೆ, ಬೀರೂರ್–577 116. ಕಡೂರ್ ತಾಲ್ಲೂಕು.

<u>ಗುಲ್ಬರ್ಗಾ ಜಿಲ್ಲೆ:–</u>

131. ಆದರ್ಶ ಎಜುಕೇಶನ್ ಟ್ರಸ್ಟ್, ಕೈ.ತ.ಸಂ. ಎಸ್.ಬಿ.ಹೆಚ್. ಕಾಲೋನಿ, ನೆಹರುಗಂಜ್, ಗುಲ್ಬರ್ಗಾ–585 104.

132. ವೊಕೇಶನಲ್ ಎಜುಕೇಶನ್ ಸೊಸೈಟಿ, ಕೈ.ತ.ಸಂ, ಗುಲ್ಬರ್ಗಾ–585 101.

133. ಹೆಚ್.ಕೆ.ಇ. ಸೊಸೈಟಿಸ್ ಕೈ.ತ.ಸಂ, ಗುಲ್ಬರ್ಗಾ–585 101.

134. ಕೆ.ಎಸ್.ಆರ್.ಟಿ.ಸಿ. ಕೈ.ತ.ಸಂ. ಎಂ.ಎಸ್.ಕೆ. ಮಿಲ್ ರಸ್ತೆ, ಗುಲ್ಬರ್ಗಾ–2.

135. ಹೆಚ್.ಕೆ.ಇ. ಸೊಸೈಟಿಸ್ ಕೈ.ತ.ಸಂ. ನಿಂಬರ್ಗಾ–585 244. ತಾ:ಆಲಂದ್.

136. ಚರಬಸವೇಶ್ವರ ಕೈ.ತ.ಸಂ. ಶಹಾಪುರ–585 223.

137. ಹೆಚ್.ಕೆ.ಇ. ಸೊಸೈಟಿಸ್ ಕೈ.ತ.ಸಂ. ಕಮಲಾಪುರ–585 313.

138. ಜವಹರ್ ಕೈ.ತ.ಸಂ. ಮೈನ್ ರೋಡ್, ಯಾದಗಿರಿ–585 201.

139. ಐಡಿಯಲ್ ಮಹಿಳಾ ಮಂಡಳಿ ಕೈ.ತ.ಸಂ. ಸ್ಟೇಶನ್ ಬಜಾರ್, ಗುಲ್ಬರ್ಗಾ–585 102.

ರಾಯಚೂರು ಜಿಲ್ಲೆ:–

140. ಶ್ರೀ ಜಗದ್ಗುರು ತೋಂಟಾದಾರ್ಯ ಕೈ.ತ.ಸಂ. ಮಂಡಲಗಿರಿ, ತಾಲ್ಲೂಕು, ಯಲಬುರ್ಗಾ-583236.

141. ವಳಬಳ್ಳಾರಿ ತಾತನವರ ಕೈ.ತ.ಸಂ. ಸಿಂಧನೂರ್–584 128.

142. ಎ.ಎಂ.ಇ.ಎಸ್. ಕೈ.ತ.ಸಂ. ಕೇರಾಫ್ ವಿ.ಎಲ್. ಕಾಲೇಜ್ ಫಾರ್ಮಸಿ ಕ್ಯಾಂಪಾಸ್, ರಾಯಚೂರು–584 101.

143 ಜನತಾಸೇವಾ ಕೈ.ತ.ಸಂ. ಟಿಎಪಿಸಿಎಂಎಸ್ ಕಾಂಪೌಂಡ್, ಗಂಗಾವತಿ–583 227.

144. ಟಿ.ಎಂ.ಎ.ಇ. ಸೊಸೈಟಿ ಕೈ.ತ.ಸಂ, ಅನಂತಶಯನಗುಡಿ ಹಂಪಿ ರಸ್ತೆ, ಹೊಸಪೇಟೆ–583 201.

145. ಟಿ.ಎಂ.ಎ.ಇ.ಸೊಸೈಟಿಸ್ ತಿಮ್ಮಯ್ಯ ಶೆಟ್ಟಿ ಕೈ.ತ.ಸಂ. ರಾಮನಗರ, ಹಗರಿಬೊಮ್ಮನ ಹಳ್ಳಿ–583201.

146. ಜಗದ್ಗುರು ಕೊಟ್ಟೂರುಸ್ವಾಮಿ ಕೈ.ತ.ಸಂ., ಶಿರಗೊಪ್ಪ–583 121.

ಬೀದರ್ ಜಿಲ್ಲೆ:–

147. ಕರ್ನಾಟಕ ಕೈ.ತ.ಸಂ. ಮಾನಹಳ್ಳಿ ರಸ್ತೆ, ಗಾಂಧಿಗುಂಜ್, ಬೀದರ್–585 401.

148. ಶ್ರೀ ವೀರಭದ್ರೇಶ್ವರ ಎಜುಕೇಶನ್ ಸೊಸೈಟಿಸ್ ಕೈ.ತ.ಸಂ., ಹುಮ್ನಾಬಾದ್–585 330.

149. ಶಾಂತಿ ವಿದ್ಯಾವರ್ಧಕ ಎಜುಕೇಶನ್ ಸೊಸೈಟಿಸ್ ಕೈ.ತ.ಸಂ., ಭಾಲ್ಕಿ–585 328.

150. ರೂರಲ್ ಕೈ.ತ.ಸಂ., ಔರಾದ್–585 326.

151. ನಿಟ್ಟೂರ್ ಎಜುಕೇಶನ್ ಸೊಸೈಟಿಸ್ ಬಸವೇಶ್ವರ ಫಿಸಿಕಲೀ ಹ್ಯಾಂಡೀಕ್ಯಾಪಡ್ ಕೈ.ತ.ಸಂ., ಬೀದರ್.

ಕಚ್ಚಾರೇಷ್ಮೆ ಸರಬರಾಜು ಮಾಡುವ ಬಗ್ಗೆ

1629: ಶ್ರೀ ಜಿ.ಎಸ್. ಶಿವಸಂಜಪ್ಪ (ಗುಬ್ಬಿ):– ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಗುಬ್ಬಿ ತಾಲ್ಲೂಕು ಕಡಬಾ ಹೋಬಳಿ ಕಲ್ಲೂರು ಗ್ರಾಮದಲ್ಲಿ ಕೆ.ಹೆಚ್.ಡಿ.ಸಿ. ವತಿಯಿಂದ ರೇಷ್ಮೆ ಮಗ್ಗಗಳನ್ನು ನಡೆಸುತ್ತಿರುವುದು ನಿಜವಲ್ಲವೇ;

2. ಕಚ್ಚಾ ರೇಷ್ಮೆ ಸರಬರಾಜು ಸರಿಯಾಗಿ ಆಗುತ್ತಿಲ್ಲವೆಂಬುದು ನಿಜವಲ್ಲವೆ: ಇದರಿಂದ ಕಾರ್ಮಿಕರಿಗೆ ತೊಂದರೆಯಾಗುವುದಿಲ್ಲವೆ, ಇದನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;

3. ಸಿದ್ಧ ಉಡುಪುಗಳಿಗೆ ಸರಿಯಾಗಿ ರೇಷ್ಮೆ ಸಿಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಹಾಗಾದರೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗುವುದು (ವಿವರಣೆ ನೀಡುವುದು) ?

ಡಾ।। ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

1. ನಿಜ.

2. ನಿಜವಲ್ಲ. ಕಚ್ಚಾ ರೇಷ್ಮೆಯನ್ನು ಸರಿಯಾಗಿ ಸರಬರಾಜು ಮಾಡಲಾಗುತ್ತಿದೆ.

3. ಗಮನಕ್ಕೆ ಬಂದಿಲ್ಲ.

ರಾಜ್ಯದಲ್ಲಿ 92–93ರಲ್ಲಿ ಫೆಬ್ರವರಿ ಅಂತ್ಯದವರೆವಿಗೆ ಉತ್ಪನ್ನವಾಗಿರುವ ರೇಷ್ಮೆ 6548 ಟನ್ನುಗಳು ಕಳೆದ ವರ್ಷಕ್ಕೆ ಹೋಲಿಸಿದಾಗ ಉತ್ಪನ್ನ 1554 ಟನ್ನು ಜಾಸ್ತಿಯಾಗಿದೆ. ರಾಜ್ಯದಲ್ಲಿ ಉತ್ಪನ್ನವಾದ ರೇಷ್ಮೆ ಸುಮಾರು ಶೇಕಡಾ 50 ರಷ್ಟು ಮಾತ್ರ ರಾಜ್ಯದಲ್ಲಿ ಬಳಕೆಯಾಗುತ್ತಿದೆ. ಉಳಿದದ್ದು ಹೊರ ರಾಜ್ಯಗಳಿಗೆ ಮಾರಾಟವಾಗುತ್ತಿದೆ. ಆದುದರಿಂದ ರೇಷ್ಮೆ ರಾಜ್ಯದಲ್ಲಿ ಬೇಕಾದುದಕ್ಕಿಂತ ಜಾಸ್ತಿ ಉತ್ಪನ್ನವಾಗುತ್ತಿದೆ.

Programmes undertaken by SC & ST Development Corporation.

2000: Sri k. Siddaiah (Sonthemaralli):– Will the Minister for Social Welfare be pleased to state.

a) The amount alloted to SCs & STs Development Corporation for 1987–88, 1988–89, 1989–90, 1990–91, 1991–92 and the amount actually spent during the last five years;

b) The various programmes undertaken by the Corporation;

c) The powers of Supervision and control, if any, exercised by the said corporation?

SRI DHARAMSINGH (Minister for Social Welfare):–

a) Total amount allotted Rs.3250.565 lakhs.

Total amount spent Rs.3661.91 lakhs. (the excess amount spent out of recoveries and out of unspent balance of previous years).

b) Self-employment programme, Land Owning Scheme, Individual Irrigation Borewell programme, Rehabilitation of Devadasis programme, Rehabilitation of Atrocity victims, Skill Development programme, Rehabilitation of Sweepers and Scavengers, Energisation of Borewells in Sch.Castes lands, Enterprenuership Development programme. Lift Irrigation, Dry land Development programme.

c) The Board of Directors and the Managing Director of the Corporation have full powers and control over the activities of corporation.

ಉಡುಪಿ ಪುರಸಭೆಯ ಕುಡಿಯುವ ನೀರಿನ ಯೋಜನೆಯ ಮಂಜೂರಾತಿ ಕುರಿತು

1662: ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಉಡುಪಿ ಪುರಸಭೆಯ ಪರಿಸರದ ಹಿರಿಯಡ್ಕ ಹೆಗಾರ, ಶಿವಳ್ಳಿ, ಬೈಲಚಾರು ಮತ್ತು ಮಲ್ಪೆ ಹಾರ್ಬರ್, ಪ್ರಾಜೆಕ್ಟ್ ಇವುಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ; ಇಹರ ವೆಚ್ಚವನ್ನು ಯಾರು ಭರಿಸುತ್ತಾರೆ;

ಆ. ಇನ್ನು ಮುಂದೆ ಕೂಡ ಕುಡಿಯುವ ನೀರಿನ ಕೊರತೆ ಉಂಟಾಗದಂತೆ ಕ.ನ.ನೀ.ಸ.ಒ.ಚ. ಮಂಡಲಿ ಇವರು ನಿರ್ವಾಹಕ ನಿರ್ದೇಶಕರುರವರು ಸದರಿ ಯೋಜನೆಗೆ ಹೆಚ್ಚುವರಿಯಾಗಿ 2ಎಂ.ಜಿ.ಡಿ. ನೀರು ಸರಬರಾಜು ಬಗ್ಗೆ ಅಂದಾಜು ಪಟ್ಟಿ ತಯಾರಿಸಿ ಮಂಜೂರಾತಿಗಾಗಿ ನಗರಾಭಿವೃದ್ಧಿ ಕಾರ್ಯದರ್ಶಿಯವರಿಗೆ ಕಳುಹಿಸಿದೆಯೇ;

ಇ. ಮಂಜೂರಾತಿಯಾಗಿದೆಯೇ; ಆಗದೇ ಇದ್ದರೆ ಯಾಕೆ, ಯಾವಾಗ ಮಂಜೂರಾತಿ ನೀಡುವಿರಿ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

ಅ. ಹೌದು.

ಉಡುಪಿ ಪುರಸಭೆಯು ನಿರ್ವಹಣೆ ವೆಚ್ಚವನ್ನು ಭರಿಸುತ್ತದೆ.

ಆ. ರೂ.395 ಲಕ್ಷಗಳ ಮೊತ್ತಕ್ಕೆ ತಯಾರಿಸಿದ ಅಂದಾಜು ಪಟ್ಟಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ. ಇಲ್ಲ.

ನಕ್ಷೆ ಮತ್ತು ಅಂದಾಜು ಪಟ್ಟಿಯು ಆಡಳಿತಾತ್ಮಕ ಅನುಮೋದನೆಯ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಗ್ರಾಮಾಂತರ ಪ್ರದೇಶದಲ್ಲಿ ಜಲ್ಲಿ ಕ್ರಶ್ಶರ್ ಕಾರ್ಯಾಗಾರಕ್ಕೆ ಪರವಾನಗಿ ಕೊಡುವ ಬಗ್ಗೆ

2125: ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):– ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗ್ರಾಮಾಂತರ ಪ್ರದೇಶದಲ್ಲಿ ಜಲ್ಲಿಕ್ರಶ್ಶರ್ ಕಾರ್ಯನಿರ್ವಹಿಸುತ್ತಿರುವ ಪ್ರದೇಶಗಳಲ್ಲಿ ರೈತರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಜಲ್ಲಿಕ್ರಶ್ಶರ್ ಕಾರ್ಯಾಗಾರಕ್ಕೆ ಪರವಾನಗಿ ಕೊಡುವಾಗ ಅಧಿಕಾರಿಗಳು ಅದರ ಒಳಿತು ಕೆಡಕುಗಳ ಬಗ್ಗೆ ಅಧ್ಯಯನ ಮಾಡುತ್ತಾರೆಯೇ ?

ಶ್ರೀ ಡಿ.ಎ. ಚಿಣ್ಣಪ್ಪ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):–

ಅ. ಕೆಲವು ಪ್ರದೇಶದ ಬಗ್ಗೆ ಬಂದಿದೆ.

ಆ. ಕಲ್ಲುಗಣಿ ಗುತ್ತಿಗೆ ಮಂಜೂರಾತಿಯ ಬಗ್ಗೆ ಅರ್ಜಿ ಸಲ್ಲಿಸುವಾಗ ಅರ್ಜಿದಾರರು ಜಲ್ಲಿ ಕ್ರಶ್ಶರ್ ಸ್ಥಾಪಿಸುವ ಬಗ್ಗೆ ತಿಳಿಸುವುದಿಲ್ಲ. ಇಲಾಖಾವತಿಯಿಂದ ಕಲ್ಲುಗಣಿ ಗುತ್ತಿಗೆಗಳನ್ನು ಮಾತ್ರ ಮಂಜೂರು ಮಾಡಲಾಗುತ್ತದೆ. ಜಲ್ಲಿ ಕ್ರಶ್ಶರ್ ಕಾರ್ಯಾಗಾರ ಸ್ಥಾಪನೆಯ ಬಗ್ಗೆ ಪರವಾನಗಿಯನ್ನು ಕೈಗಾರಿಕಾ ಇಲಾಖೆ ಹಾಗೂ ಕರ್ನಾಟಕ ರಾಜ್ಯದ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರಿಂದ ಪಡೆಯಬೇಕಾಗುತ್ತದೆ. ಕ್ರಶರ್‌ನಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಮುಖ್ಯವಾಗಿ ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಪರಿಶೀಲಿಸುತ್ತದೆ.

ಬೆಂಗಳೂರಿನ ಗಾಂಧಿನಗರದಲ್ಲಿರುವ ಕಾರ್ಮಿಕ ನ್ಯಾಯಾಲಯವನ್ನು ಸಿಟಿ ಕೋರ್ಟ್ ಆವರಣಕ್ಕೆ ಸ್ಥಳಾಂತರಿಸುವ ಬಗ್ಗೆ

1845: ಶ್ರೀ ಆರ್. ದಯಾನಂದ ರಾವ್ (ಗಾಂಧಿನಗರ):– ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರಿನ ಗಾಂಧಿನಗರದಲ್ಲಿರುವ ಕಾರ್ಮಿಕ ನ್ಯಾಯಾಲಯ ಕಟ್ಟಡದಲ್ಲಿ ವಾಹನ ನಿಲುಗಡೆ ಸೌಲಭ್ಯ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಸದರೀ ನ್ಯಾಯಾಲಯದ ಕಟ್ಟಡದಲ್ಲಿ ನೀರು ಸರಬರಾಜು ಮತ್ತು ಶೌಚಾಲಯ ಸೌಲಭ್ಯಗಳು ಇಲ್ಲದೇ ಇರುವುದು ನಿಜವೇ;

ಇ. ಸದರಿ ಕಾರ್ಮಿಕ ನ್ಯಾಯಾಲಯವನ್ನು ಮೈಸೂರು ಬ್ಯಾಂಕ್ ವೃತ್ತದಲ್ಲಿರುವ ನಗರ ಸಿವಿಲ್ ನ್ಯಾಯಾಲಯ ಕಟ್ಟಡದ ಸಮುಚ್ಚಯಕ್ಕೆ ಸ್ಥಳಾಂತರಿಸಲು ವಕೀಲರು ಒತ್ತಾಯಿಸಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಏನು ಕ್ರಮ ಕೈಗೊಳ್ಳಲಿದೆ ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):–

ಅ. ಇಲ್ಲ.

ಆ. ಇಲ್ಲ.

ಇ. ಹೌದು.

ಈ. ಕಾರ್ಮಿಕ ಆಯುಕ್ತರೊಂದಿಗೆ ಸಮಾಲೋಚನೆಯಲ್ಲಿದೆ.

ಮೇಣದಂತಹ ಕಚ್ಚಾ ಸಾಮಗ್ರಿಯು ಕಡಿಮೆ ಪೂರೈಕೆಯಿಂದ ಸಣ್ಣ ಕೈಗಾರಿಕೆಗಳಿಗೆ ನಷ್ಟವಾಗುತ್ತಿರುವುದರ ಬಗ್ಗೆ

1838: ಶ್ರೀ ಆರ್. ದಯಾನಂದರಾವ್ (ಗಾಂಧಿನಗರ):- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೇಣದಂತಹ ಕಚ್ಚಾ ಸಾಮಗ್ರಿಯು ಕಡಿಮೆ ಪೂರೈಕೆಯಿಂದ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಹೆಚ್ಚಿನ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ರಾಜ್ಯದ ಮೇಣದ ಹಾಲಿ ಕೋಟಾ ಪ್ರಮಾಣ ಎಷ್ಟು;

ಇ. ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಬೇಕಾಗಬಹುದಾದ ಮೇಣದ ಪ್ರಮಾಣದ ಮೊತ್ತ ಎಷ್ಟು;

ಈ. ಕೋಟಾ ಪ್ರಮಾಣವನ್ನು ಹೆಚ್ಚಿಸುವಂತೆ ಸರ್ಕಾರವು ಕೇಂದ್ರವನ್ನು ಕೋರಲಾಗಿದೆಯೇ;

ಉ. ಹಾಗಿದ್ದಲ್ಲಿ ಅದರ ವಿವರಗಳು ?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):-

ಅ. ಹೌದು.

ಆ. ವಾರ್ಷಿಕ 2,400 ಟನ್.

ಇ. ವಾರ್ಷಿಕ ಸುಮಾರು 6,900 ಟನ್‌ಗಳು.

ಈ. ಹೌದು.

ಉ. ವಾರ್ಷಿಕ 5,000 ಟನ್ ಮೇಣವನ್ನು ಸರಬರಾಜು ಮಾಡುವಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಕೋರಿದೆ.

ಮಂಗಳೂರು ಸಮೀಪದ ತೂಬೆ ಅಣೆಕಟ್ಟಿನ ಕಾರ್ಯ ಕುರಿತು

1950: ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಮಂಗಳೂರು ಸಮೀಪದ ತೂಬೆ ಅಣೆಕಟ್ಟಿನ ಕಾರ್ಯ ಸಂಪೂರ್ಣವಾಗಿದೆಯೇ;

2. ಈ ಅಣೆಕಟ್ಟಿಗೆ ಆಗಿರುವ ಒಟ್ಟು ಖರ್ಚು ಎಷ್ಟು;

3. ಮಂಗಳೂರು ನಗರಕ್ಕೆ ಮುಂದಿನ ತಿಂಗಳುಗಳಲ್ಲಿ ಕುಡಿಯುವ ನೀರಿನ ತೊಂದರೆಯಾಗಲಿದೆಯೇ ? ತೂಬೆ ಅಣೆಕಟ್ಟಿನ ನೀರು ಸರಾಗವಾಗಿ ವಿತರಣೆಯಾಗುವುದೇ;

4. ನೀರಿನ ಭಾರಿ ಕೊರತೆ ಇರುವ ಬಜಾಲ್ ಗ್ರಾಮಕ್ಕೂ ಅದೇ ಅಣೆಕಟ್ಟಿನ ನೀರನ್ನು ಕೊಡುವಂತಹ ಏರ್ಪಾಡು ಮಾಡಲಾಗುವುದೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

1. ಶೇಕಡ 95ರಷ್ಟು ಕಾಮಗಾರಿ ಪೂರ್ಣವಾಗಿದೆ.

2. ರೂ.1,89,51,980–00

3. ತೊಂದರೆಯಾಗುವ ಸಾಧ್ಯತೆ ಇಲ್ಲ. ಪಂಪುಗಳು ಆಗಾಗ್ಗೆ ಬರುವ ಯಾಂತ್ರಿಕ ತೊಂದರೆ ಮತ್ತು ವಿದ್ಯುಚ್ಛಕ್ತಿ ಅಡಚಣೆ ಬಿಟ್ಟರೆ ಅಣೆಕಟ್ಟಿನ ನೀರು ಸರಾಗವಾಗಿ ವಿತರಣೆಯಾಗುವುದು.

4. ಈಗಿರುವ ವಿತರಣಾ ವ್ಯವಸ್ಥೆಯಲ್ಲಿ ಬಜಾಲ್ ಗ್ರಾಮಕ್ಕೂ ಕುಡಿಯುವ ನೀರನ್ನು ಸರಬರಾಜು ಮಾಡುವಂತಹ ಏರ್ಪಾಡು ಮಾಡಲಾಗಿದೆ.

ಅಪೂರ್ಣವಾಗಿರುವ ಹುಡ್ಕೋ ಯೋಜನೆಯ ಮನೆಗಳ ಕೆಲಸವನ್ನು ಪೂರ್ಣಗೊಳಿಸುವ ಬಗ್ಗೆ

1951: ಶ್ರೀ ಜಿ.ಎಸ್. ಆಚಾರ್ (ಬೈಂದೂರು):– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಆಶ್ರಯ ಯೋಜನೆ ಅನುಷ್ಠಾನಗೊಳಿಸುವ ಮೊದಲು ಮಂಜೂರಾದ ಎಷ್ಟು ಹುಡ್ಕೋ ಯೋಜನೆಯ ಮನೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಪೂರ್ಣವಾಗಿವೆ; (ತಾಲ್ಲೂಕುವಾರು ವಿವರ ನೀಡುವುದು);

ಆ. ಅವುಗಳನ್ನು ಪೂರ್ಣಗೊಳಿಸಲು ಬೇಕಾಗುವ ಹಣವೆಷ್ಟು; ಪೂರ್ಣಗೊಳಿಸದೇ ಇದ್ದಲ್ಲಿ ಆಗುವ ತೊಂದರೆ ಸರ್ಕಾರದವರ ಗಮನಕ್ಕೆ ಬಂದಿದೆಯೇ; ಪೂರ್ಣಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗುತ್ತದೆ ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು):–

ಅ. ಅಪೂರ್ಣ ಮನೆಗಳ ಸಂಖ್ಯೆ 1510

ಮಂಗಳೂರು	202
ಸುಳ್ಯಾ	163
ಉಡುಪಿ	277
ಪುತ್ತೂರು	231
ಕಾರ್ಕಳ	175
ಕುಂದಾಪುರ	100
ಬೆಳ್ತಂಗಡಿ	145
ಬಂಟ್ವಾಳ	217
ಒಟ್ಟು	1510

ಆ. ಪೂರ್ಣಗೊಳಿಸಲು 97.198 ಲಕ್ಷ ರೂ.ಗಳು ಬೇಕಾಗುತ್ತದೆ. ಅಪೂರ್ಣ ಮನೆಗಳನ್ನು ಪೂರ್ಣಗೊಳಿಸಲು ಜೂನ್ ತಿಂಗಳೊಳಗೆ ರೂ.49.48 ಲಕ್ಷ ರೂ. ಬಿಡುಗಡೆ ಮಾಡಲಾಗುತ್ತದೆ. ಉಳಿದ ಹಣವನ್ನು ಪ್ರಗತಿ ಆಧರಿಸಿ ಹುಡ್ಕೋದಿಂದ ಬಿಡುಗಡೆ ಹೊಂದಲು ಕ್ರಮ ಕೈಗೊಳ್ಳಲಾಗುವುದು.

ಹಾಸನ ನಗರಸಭೆಯವರು ಮಳಿಗೆಗಳನ್ನು ಕಟ್ಟಿಸಲು ಹಾಸನ ಪಟ್ಟಣದಲ್ಲಿನ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಪೂರ್ವಾನುಮತಿ ಪಡೆಯಬೇಕಾಗಿರುವ ಬಗ್ಗೆ

1999: ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನ ಪಟ್ಟಣದಲ್ಲಿ "ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್" ಇರುವುದರಿಂದ ಹಾಸನ ನಗರಸಭೆಯವರು ಮಳಿಗೆಗಳನ್ನು ಅಥವಾ ಇತರೆ ಕಟ್ಟಡಗಳನ್ನು ಕಟ್ಟಬೇಕಾದರೆ ಹಾಸನ ಸಿಟಿ ಟ್ರಸ್ಟ್ ಬೋರ್ಡ್‌ನ ಪೂರ್ವಾನುಮತಿ ಪಡೆಯಬೇಕಾಗಿರುವುದು ಕಡ್ಡಾಯ ಅಲ್ಲವೇ;

ಆ. ಈ ರೀತಿ ಪೂರ್ವಾನುಮತಿ ಪಡೆಯದೆ ಹಾಸನ ನಗರಸಭೆಯವರು ಕಟ್ಟಡ ಕಟ್ಟಿರುವುದು ಕಾನೂನುಬಾಹಿರ ಅಲ್ಲವೇ;

ಇ. ಇಂತಹ ಕಾನೂನು ಬಾಹಿರ ಕ್ರಮ ಮಾಡಿದವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳಲಿದೆ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. "ಯೋಜನಾ ಪ್ರಾಧಿಕಾರ" ದಿಂದ ಅನುಮೋದನೆ ಪಡೆಯಬೇಕಾಗುತ್ತದೆ.

ಆ. "ಹಾಸನ ಅಭಿವೃದ್ಧಿ ಪ್ರಾಧಿಕಾರ" ದಿಂದ ಅನುಮೋದನೆ ಪಡೆಯಲಾಗುತ್ತಿದೆ.

ಇ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿನ ಅಂತರ್ಜಲ ಲಭ್ಯತೆಯ ಬಗ್ಗೆ

2073: ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):– ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಸರ್ವೆ ಪ್ರಕಾರ ಎಷ್ಟು ಪ್ರಮಾಣದ ಅಂತರ್ಜಲ ಲಭ್ಯವಿದೆ; (ಅಂದರೆ ಎಷ್ಟು ಎಕರೆಗಳಿಗೆ ನೀರನ್ನು ಒದಗಿಸಬಹುದು) ಇದರ ಬಗ್ಗೆ ವೈಜ್ಞಾನಿಕ ಸರ್ವೆ ಆಗಿದೆಯೇ;

ಆ. ಹೆಚ್ಚು–ಬೋರ್‌ಗಳನ್ನು ಹಾಕುವುದರಿಂದ ಭೂ ಅಂತರ್ಜಲ ಕಡಿಮೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ; ಇಂಥ ಬೋರ್‌ವೆಲ್‌ಗಳ ಪ್ರದೇಶದಲ್ಲಿ ಹೆಚ್ಚು ನೀರು ಬರುವಂತೆ ಮತ್ತು ಭೂಗರ್ಭ ಜಲಸಂಪತ್ತು ಹೆಚ್ಚುವಂತೆ ಏನು ಕಾರ್ಯಕ್ರಮ ತೆಗೆದುಕೊಳ್ಳಲು ಸರ್ಕಾರವು ಆಲೋಚಿಸಿದೆ ?

ಶ್ರೀ ಡಿ.ಎ. ಚಿಣ್ಣಪ್ಪ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):–

ಅ. ಇತ್ತೀಚಿನ ಅಂದಾಜಿನ ಪ್ರಕಾರ 15424 ದಶಲಕ್ಷ ಘನ ಮೀಟರ್‌ನಷ್ಟು ಅಂತರ್ಜಲವು ಪ್ರತಿವರ್ಷವೂ ಉತ್ಕರ್ಷವಾಗುತ್ತೆ. ಇದರಿಂದ ಸುಮಾರು 19.00 ಲಕ್ಷ ಎಕರೆಯನ್ನು ನೀರಾವರಿ ಮಾಡಬಹುದೆಂದು ಅಂದಾಜು ಮಾಡಲಾಗಿದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆ ಈ ಬಗ್ಗೆ ಪ್ರಾಥಮಿಕ ಹಂತದ ವೈಜ್ಞಾನಿಕ ಸಮೀಕ್ಷೆ ಮಾಡಿದೆ.

ಆ. ಕೊಳವೆಬಾವಿಗಳ ಸಾಂದ್ರತೆ ಹೆಚ್ಚು ಇರುವ ಪ್ರದೇಶದಲ್ಲಿ ಅಂತರ್ಜಲ ಮಟ್ಟ ಹೆಚ್ಚು ಆಳಕ್ಕೆ

ಹೋಗುತ್ತಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆ. ಈ ರೀತಿಯ ಪ್ರದೇಶದ ಸವಿವರವಾದ ಭೂಜಲ ವೈಜ್ಞಾನಿಕ ಸಮೀಕ್ಷೆ ನಡೆಸಿ ಪ್ರತಿರೋಧಕ ಕ್ರಮಗಳು ಹಾಗೂ ಅಂತರ್ಜಲ ಕೃತಕ ಮರುಪೂರೈಕೆ ಸಾಧ್ಯತೆ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಕೆ.ಎಸ್.ಎಫ್.ಸಿ. ವತಿಯಿಂದ ನೀಡಿರುವ ಸಾಲದ ಮೊತ್ತ ಕುರಿತು

2031: ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ):– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಬೃಹತ್ ಮತ್ತು ಮಧ್ಯಮ ಪ್ರಮಾಣದ ಉದ್ಯಮಿಗಳಿಗೆ ಕೆ.ಎಸ್.ಎಫ್.ಸಿ. ವತಿಯಿಂದ ನೀಡಿರುವ ಸಾಲದ ಮೊತ್ತವೆಷ್ಟು ಹಾಗೂ ಅವುಗಳ ಹೆಸರುಗಳೇನು;

ಆ. ಕೆ.ಎಸ್.ಎಫ್.ಸಿ 2.00 ಲಕ್ಷಕ್ಕಿಂತ ಹೆಚ್ಚು ರೂ. ಬಾಕಿ ಕೊಡಬೇಕಾಗಿರುವ ಉದ್ಯಮಗಳ ವಿರುದ್ಧ ವಸೂಲಿಗಾಗಿ ತೆಗೆದುಕೊಂಡಿರುವ ಕ್ರಮವೇನು;

ಇ. ಸಬ್ಸಿಡಿ ಪಡೆದು ಇಂಡಸ್ಟ್ರಿಗಳನ್ನು ಹಾಳು ಮಾಡಿದ ಜನರ ವಿರುದ್ಧ ತೆಗೆದುಕೊಂಡ ಕಾನೂನಿನ ಕ್ರಮ ಹಾಗೂ ಇಂಥವರ ಯಾದಿಯನ್ನು ಪತ್ರಿಕೆಗಳಲ್ಲಿ ಪ್ರಕಟಿಸಿ ಈ ವ್ಯವಹಾರವನ್ನು ತಡೆಗಟ್ಟಲು ತೆಗೆದುಕೊಳ್ಳುವ ಕಾರ್ಯಕ್ರಮವೇನು ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ದಿನಾಂಕ 30.03.1992ರಂತೆ 192 ಮಧ್ಯಮ ಹಾಗೂ ಬೃಹತ್ ಕೈಗಾರಿಕಾ ಘಟಕಗಳಿಗೆ ಒಟ್ಟು 118.13 ಕೋಟಿ ರೂ.ಗಳನ್ನು ಅವಧಿ ಸಾಲವಾಗಿ ಮಂಜೂರಾತಿ ನೀಡಿರುತ್ತಾರೆ. ಘಟಕವಾರು ಮಂಜೂರು ಮಾಡಲ್ಪಟ್ಟ ಮೌಲ್ಯದ ವಿವರಗಳನ್ನು ಅನುಬಂಧ – 1ರಲ್ಲಿ ಲಗತ್ತಿಸಿದೆ.

ಆ. ಕೆ.ಎಸ್.ಎಫ್.ಸಿ.ಯು ಬಾಕಿ ಕೊಡಬೇಕಾಗಿರುವ ಉದ್ಯಮಗಳ ಬಾಕಿ ವಸೂಲಿಗಾಗಿ ಉಪಯೋಗಿಸುವ ಕ್ರಮಗಳನ್ನು ಈ ಕೆಳಗೆ ವಿವರಿಸಲಾಗಿದೆ:

1. ಸಂಸ್ಥೆಯ ವಸೂಲಾತಿ ವಿಭಾಗದವರು ಆಗ್ಗಿಂದಾಗ್ಯೆ ಕೊಟ್ಟ ಸಾಲದ ಮರುಪಾವತಿಗೆ, ಕೈಗಾರಿಕೆಗಳಿಗೆ ಖುದ್ದಾಗಿ, ಭೇಟಿ ನೀಡುವ ಮೂಲಕ ಕಂತುಗಳ ಮರುಪಾವತಿ ವಿಧಾನವನ್ನು ತಿಳಿಸಲಾಗುವುದು.

2. ಮರುಪಾವತಿ ಮಾಡುವ ಬಗ್ಗೆ ಜ್ಞಾಪನ ಪತ್ರ ಮುಖೇನ ಕಂತು ಕಟ್ಟಲು ಶೀಘ್ರ ಕ್ರಮ ಕೈಗೊಳ್ಳಲು ತಿಳಿಸಲಾಗುವುದು.

3. ಮೇಲಿನ ಎರಡು ಕ್ರಮಗಳಿಗೂ ಉದ್ದಿಮೆದಾರರಿಂದ ಸೂಕ್ತ ಪ್ರತಿಕ್ರಿಯೆ ಬರದಿದ್ದರೆ ಅವರುಗಳನ್ನು ''ಸುಸ್ತಿ ಬಾಕಿ ಪರಿಶೀಲನಾ ಸಮಿತಿಯ'' (ಡಿ.ಆರ್.ಸಿ.) ಮುಂದೆ ಹಾಜರುಪಡಿಸಿ ಹಣ ಮರುಪಾವತಿ ಮಾಡಲು ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಲಾಗುವುದು. ಈ ಸಮಸ್ಯೆಗಳು ಯಥಾರ್ಥವೆಂದು ಕಂಡು ಬಂದರೆ ಸಂಸ್ಥೆಯು ಆ ಘಟಕವನ್ನು ಅಸ್ವಸ್ಥ ಘಟಕವೆಂದು ಭಾವಿಸಿ ಪರಿಷ್ಕೃತ ಮರುಪಾವತಿ ವಿಧಾನ ಹಾಗೂ ಪುನರ್ವಸತಿಯನ್ನು ಕಲ್ಪಿಸುತ್ತದೆ.

4. ಸಂಸ್ಥೆಯು ಈ ಎಲ್ಲಾ ಕ್ರಮ ಕೈಗೊಂಡ ನಂತರವೂ ಬಾಕಿ ಹಣ ಮರುಪಾವತಿ ಮಾಡದಿದ್ದಲ್ಲಿ ಅವರ ಮೇಲೆ ಕಾನೂನಿನ ಕ್ರಮವಾಗಿ ಷೋಕಾಸ್ ನೋಟೀಸ್‌ನ್ನು ಬಾಕಿ ಮರುಪಾವತಿ ಮಾಡಲು ಜಾರಿ ಮಾಡಲಾಗುತ್ತದೆ.

5. ಕಾನೂನಿನ ಕ್ರಮ ಕೈಗೊಂಡು ಸೂಕ್ತ ಅವಕಾಶಗಳನ್ನು ಕಲ್ಪಿಸಿದಾಗ್ಯೂ ಉದ್ದಿಮೆದಾರರು ಹಣ ಮರುಪಾವತಿ ಮಾಡದಿದ್ದಲ್ಲಿ ಸಂಸ್ಥೆಯು, ರಾಜ್ಯ ಹಣಕಾಸು ಸಂಸ್ಥೆಗಳ ಸೆಕ್ಷನ್ 29ರ ಅನ್ವಯ ಅಂತಹ ಉದ್ಯಮಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಉದ್ಯಮಗಳನ್ನು ಯಶಸ್ವಿಯಾಗಿ ನಡೆಸಬಲ್ಲ ಮೂರನೇ ವ್ಯಕ್ತಿಗೆ ಮಾರಾಟ ಮಾಡಲಾಗುವುದು. ಹಾಗೂ ಸಂದರ್ಭಾನುಸಾರವಾಗಿ ಅಂತಹ ಘಟಕಗಳನ್ನು ಕರ್ನಾಟಕ ರಾಜ್ಯ ಸಾರ್ವಜನಿಕ ಹಣಕಾಸು ಸಂಸ್ಥೆ (ಕೆ.ಪಿ.ಎಮ್.) (ಆರ್.ಡಿ) ಕಾಯ್ದೆಯನ್ವಯ ಜಿಲ್ಲಾಧಿಕಾರಿಗಳಿಗೆ ಬಾಕಿ ವಸೂಲಾತಿಗಾಗಿ ವಹಿಸಿಕೊಡಲಾಗುವುದು.

ಇ. ಸಹಾಯಧನ ಮಂಜೂರಾತಿ ನಿಯಮಾವಳಿಯನ್ವಯ ಮಂಜೂರಾತಿ ಪಡೆದ ಕೈಗಾರಿಕಾ ಘಟಕಗಳು ಮಂಜೂರಾತಿ ಪಡೆದ ಕಾಲದಿಂದ 5 ವರ್ಷಗಳ ಕಾಲ ಮುಚ್ಚದೆ ಕಾರ್ಯಾಚರಣೆಯಲ್ಲಿ ತೊಡಗಿರಬೇಕು. (ಕಚ್ಚಾ ಸಾಮಗ್ರಿ ಮಾರಾಟ, ಇತರ ತಾಂತ್ರಿಕ ತೊಂದರೆಗಳಿಂದಾಗಿ 6 ತಿಂಗಳಿಗೆ ಮೀರದಂತೆ ಮುಚ್ಚಲ್ಪಟ್ಟ ಅವಧಿಯನ್ನು ಹೊರತುಪಡಿಸಿ) ಈ ಷರತ್ತನ್ನು ಉಲ್ಲಂಘಿಸಿ, ಕೈಗಾರಿಕೆಗಳು ಕಾರ್ಯಾಚರಣೆಯನ್ನು ನಿಲ್ಲಿಸಿದ್ದಲ್ಲಿ, ಅವರು ಸರ್ಕಾರದಿಂದ ಪಡೆದ ಸಹಾಯಧನವನ್ನು ಸರ್ಕಾರಕ್ಕೆ ಮರುಪಾವತಿ ಮಾಡಬೇಕಾಗಿರುತ್ತದೆ. ಅಂತಹವರು ಮರುಪಾವತಿ ಮಾಡದಿದ್ದಲ್ಲಿ, ಮಂಜೂರಾದ ಹಣವನ್ನು ಭೂ ಕಂದಾಯ ಬಾಕಿಯೆಂದು ತಿಳಿದು ವಸೂಲಾತಿ ಕ್ರಮವನ್ನು ಕೈಗೊಳ್ಳಲು ಅವಕಾಶವಿರುತ್ತದೆ.

ಜೊತೆಯಲ್ಲಿ ಮಂಜೂರಾದ ಹಣವನ್ನು ಕೈಗಾರಿಕಾ ಘಟಕ ಸ್ಥಾಪನೆಯಲ್ಲಿ ಆಗಿರುವ ಪ್ರಗತಿಯ ಆಧಾರದ ಮೇಲೆ ಕಂತುಗಳಲ್ಲಿ ಹಾಗೂ ಘಟಕವು ಕಾರ್ಯಾಚರಣೆಯಲ್ಲಿ ಪ್ರಾರಂಭವಾದ ನಂತರ ಬಿಡುಗಡೆ ಮಾಡಲಾಗುತ್ತದೆ. ಮಂಜೂರಾತಿ ಪಡೆದ ಪ್ರತಿಯೊಂದು ಘಟಕದವರೂ ಸಹ ಈ ಷರತ್ತುಗಳನ್ನು ಪಾಲಿಸಲು ಒಪ್ಪಿಕೊಂಡು ರೂ. 10.00ಗಳ ಛಾಪಾ ಕಾಗದದಲ್ಲಿ ಕರ್ನಾಟಕ ಸರ್ಕಾರಕ್ಕೆ ಒಂದು ಒಪ್ಪಂದ ಪತ್ರವನ್ನು ನೀಡಬೇಕಾಗಿರುತ್ತದೆ.

ANNEXURE -I

LIST OF MEDIUM SCALE INDUSTRIES ASSISTED BY K.S.F.C.

Sl. No.	Name of the Unit	Location	Amount Sanctioned	Type of Industry
1.	M/s. Sri Patravali Mining Equipments	Dharwad	43,00,000/-	Coal Mining
2.	M/s. Bangalore Disc Tech (P) Ltd.	Anekal	23,00,000/-	Electronic Equipments & Co.
3.	M/s. Rukmani Steel Industries	Hoskote	60,75,000/-	Basic Metal
4.	M/s. Karnataka Wollens Limited	Hunsur	15,00,000/-	Textiles
5.	M/s. Gears and Pinions P. Ltd.	Bangalore South Taluk	66,00,000/-	Electrical
6.	M/s. Anjan Khimji Ginning & Pressing Co.	Hubli	90,00,000/-	Mecheneries
7.	M/s. Ananta Refinery Private Ltd.	Challakere	90,00,000/-	Chemicals & Chemical PR
8.	M/s. Subhadra Textiles (P) Ltd.	Bangalore South Taluk	83,00,000/-	Textiles
9.	M/s. Vijaya Wires and Filaments P. Ltd.	Mysore	90,00,000/-	Electrical
10.	M/s. Insulated Conducters P. Ltd.	Bangalore North Taluk	84,00,000/-	Electrical
11.	M/s. Jay Electric Wire Corporation Ltd.	Mysore	50,00,000/-	Electrical
12.	M/s. Opto Circuits (India) P. Ltd.	Bangalore South Taluk	90,00,000/-	Electronic Equipment & C
13.	M/s. Maru Granites Pvt. Ltd.	Malur	90,00,000/-	Non-Metalic Mineral Prod
14.	M/s. Unity Process	Bangalore City	57,20,000/-	Printing Publishing & All
15.	M/s. Akshit Organisation Pvt. Ltd.	Bidar	68,10,000/-	Chemicals & Chemical Pr.
16.	M/s. Tubeman (P) Ltd.	Malur	72,00,000/-	Miscellaneous Mfg. Industry
17.	M/s. J.V.R. Laboratories Pvt Ltd.	Bidar	18,60,000/-	Electronic Equipments & C

18.	M/s. Stiven Selvex (I) Pvt. Ltd.	Dharwad	64,00,000/-	Chemicals & Chemical Pr.
19.	M/s. Sree.Vallappa Textiles Servicing C	Kanakapura	70,00,000/-	Textiles
20.	M/s. Stumpp Scheule & Somappa Ltd.	Bangalore North Taluk	13,25,000/-	Electronic Equipments & C
21.	M/s. Mysore Spinning & Mfg. Co. Mills	Bangalore City	20,00,000/-	Textiles
22.	M/s. Minerva Mills	Bangalore City	20,00,000/-	Textiles
23.	M/s. Amylon Chemicals Pvt. Ltd.	Bangalore North Taluk	15,50,000/-	Chemicals & Chemical PR
24.	M/s. CAD Machines Ltd.	Chikkaballapur	13,50,000/-	Metal Product
25.	M/s. Bhaskara Hi-Tech Brick Mfg.	Malur	73,20,000/-	Non-Metallic Mineral Prod.
26.	M/s. Dyteck Tools Pvt Ltd.	Bangalore South Taluk	97,30,000/-	Miscellaneous Mfg. Industries
27.	M/s. Krishna Flour Mills Bangalore (P) Ltd.	Bangalore City	27,00,000/-	Food Mfg. Industries
28.	M/s. SSS Engineering Co. Ltd.	Anekal	53,75,000/-	Basic Metal
29.	M/s. Panchavarna Textile Processing (P) Ltd.	Bangalore City	53,84,000/-	Textiles
30.	M/s. NAV Bharath Flange & Allied Inds Ltd.	Anekal	30,00,000/-	Machineries
31.	M/s. Shetron Metals.	Anekal	30,00,000/-	Electrical
32.	M/s. Bulgarian Foods Pvt. Ltd.	Anekal	1,20,00,000/-	Food Mfg. Industries
33.	M/s. Gemini Steel Tubes Ltd.	Hoskote	30,00,000/-	Plastic Goods
34.	M/s. Svictor Multicore Solder Pvt.	Anekal	45,21,000/-	Mechineries
35.	M/s. Karnataka Consumer Products Ltd.	Bangalore North Taluk	74,50,000/-	Rubber & Rubber Products.
36.	M/s. Prameela Plastics Industries (P) Ltd.	Anekal	31,00,000/-	Plastic Goods

37.	M/s. Phoenix Printing Co. Pvt. Ltd.	Anekal	57,50.000 -	Printing Publishing & All
38.	M/s. Asian Computer Stationery & Security	Bangalore City	30,00.000 -	Printing Publishing & All
39.	M/s. Sabson Freight Cooniainers Pvt. Ltd.	Hoskote	60.00,000 -	Transport Equipment
40.	M/s. Vioryl (India) Pvt. Ltd.	Anekal	30,00.000 -	Textiles
41.	M/s. Bill Forge Pvt. Ltd.	Anekal	57,85,000 -	Transport Equipment
42.	M/s. Maanay Roller Flour Mills.	Belamangala	47,50,000 -	Food Mfg. Industries
43.	M/s. Alltron Electronics India Ltd.	Anekal	52,50,000/-	Electronic Equipments & C
44.	M/s. Ittina Printers Pvt. Ltd.	Anekal	94,00.000/-	Printing Publishing & All
45.	M/s. Bifora Clock Industry	Anekal	1,57,22.000/-	Electronic Equipments & C
46.	M/s. Poly Flex (India) Pvt. Ltd.	Anekal	62,72.000/-	Plastic Goods
47.	M/s. Eapann Forge Pvt. Ltd.	Bangalore South Taluk	41,05.000/-	Basic Metal
48.	M/s. Sanketh Electronics	Bangalore North Taluk	47,20.000/-	Motion Pictures
49.	M/s. All Weather Roofings Pvt. Ltd.	Anekal	28,00,000 -	Paper & Paper Product
50.	M/s. General Foundries Pvt. Ltd.	Anekal	41,95.000/-	Basic Metal
51.	M/s. Dimo Castings (P) Ltd.	Anekal	67,50.000/-	Metal Product
52.	M/s. Suncrush Fruits pvt. Ltd.	Doddaballapura	60,00,000/-	Food Mfg. Industries
53.	M/s. Chamundi Granites Pvt. Ltd.	Anekal	60,00,000/-	Non-Metallic Mineral Product
54.	M/s. Geometric Tools	Doddaballapura	30,00,000/-	Metal Product
55.	M/s. Kuduma Fasteners Pvt. Ltd.	Bangalore South Taluk	59,70,000/-	Mechineries
56.	M/s. Tulsyan Synthetics Pvt. Ltd.	Doddaballapura	77,00,000/-	Plastic Goods
57.	M/s. Electrex (India) Pvt. Ltd.	Bangalore City	1,16,00,000/-	Electrical

58.	M/s. Excel Circuits Pvt. Ltd.	Anekal	60,50,000/-	Electronic Equipments & C
59.	Hoyosala Blow Moulders India Ltd.	Anekal	60,00,000/-	Metal Product
60.	M/s. Indtech Speciality Chemicals Ltd.	Hoskote	60,00,000/-	Petroleum Products
61.	M/s. Raseltroics Limited	Doddaballapura	30,00,000/-	Electronic Equipments & C
62.	M/s. The Mysore Stones Ware Pipes Ltd.	Bangalore North Taluk	62,40,000/-	Stone Quarrying Clay & SA
63.	M/s. Vinayaka Computerised Numerical	Bangalore South Taluk	86,58,000/-	Mechineries
64.	M/s. Safe Pack Plastics Pvt. Ltd.	Bangalore City	36,00,000/-	Plastic Goods
65.	M/s. Som-Han Electronic Pvt. Ltd.	Bangalore City	75,00,000/-	Electronic Equipments & C
66.	M/s. Cosmic Material Test Centre P. Ltd.	Bangalore City	55,50,000/-	Miscellaneous Mfg. Industry
67.	M/s. City Drinks P. Ltd.	Bangalore City	60,00,000/-	Beverage Industry
68.	M/s. Amitronics P. Ltd.	Bangalore South Taluk	80,50,000/-	Non-Metallic Mineral Prod.
69.	M/s. Swarna Baker Pvt. Ltd.	Anekal	68,00,000/-	Electrical
70.	M/s. Karnataka Telecom Ltd.		87,50,000/-	Electronic Equipments & C
71.	M/s. Kolar Woolens & Textiles Ltd.	Doddaballapura	75,90,000/-	Textiles
72.	M/s. Karnataka Horologicals Ltd.	Magadi	50,67,000/-	Metal Product
73.	M/s. Sanmathi Engineers	Bangalore South Taluk	6,00,000/-	Chemicals & Chemicals PR
74.	M/s. Anil Rerolling Mills P. Ltd.	Bangalore North Taluk	60,00,000/-	Basic Metal
75.	M/s. Raja Magnetic (P) Ltd.	Bangalore South Taluk	83,70,000/-	Electrical
76.	M/s. Measurement & Controls	Bangalore North Tq	59,90,000/-	Rubber & Rubber Products
77.	M/s. Bangalore Textiles Pvt. Ltd.	Doddaballapura	4,70,000/-	Textiles
78.	M/s. Nandi Re-rolling Mills P. Ltd.	Bangalore City	56,00,000/-	Basic Metal

79.	M/s. Intex Tapes P. Ltd.	Anekal	60,00,000/-	Plastic Goods
80.	M/s. NSP Electronic P. Ltd.	Bangalore City	67,00,000/-	Electronic Equipments & C
81.	M/s. Rukmani Steel Industries	Hoskote	60,75,000/-	Basic Metal
82.	M/s. Southern Upto Electronic Devices	B'lore North Tq		Machineries
83.	M/s. Sunil Roller Flour Mills Ltd.	Hoskote	31,80,000/-	Food Mfg. Industry
84.	M/s. Panotech Limited	Doddaballapura	4,40,000/-	Electronic Equipments & C
85.	M/s. Bangalore Disc Tech P. Ltd.	Anekal	98,60,000/-	Computer & Computer SER
86.	M/s. Hindustan Jewells P. Ltd.	Anekal	54,95,000/-	Electronic Equipments & C.
87.	M/s. Bevel Gears (India) P. Ltd.	B'lore South Tq.	29,70,000/-	Machineries
88.	M/s. Verifone Software Systems P. Ltd.	B'lore North Tq.	90,00,000/-	Computer & Computer SER
89.	M/s. Atlantic Apparels	B'lore North Tq.	37,20,000/-	Textiles
90.	M/s. Gemini Exports	B'lore North Tq.	37,20,000/-	Textiles
91.	M/s. Jamal Gear Machinery Ltd.	Hoskote	41,50,000/-	Electrical
92.	M/s. Karson Paints Ltd.	Anekal	43,00,000/-	Chemical & Chemical PR
93.	M/s. Mittal Steel Ltd.	Chikballapura	60,00,000/-	Metal Products
94.	M/s. Moog Controls (India) P. Ltd.	B'lore North Tq.	11,00,000/-	Basic Metal
95.	M/s. KEONICS Mangovision Computers P.L.	B'lore South Tq.	90,00,000/-	Computer & Computer SER
96.	M/s. Hemkund Precision Engg. (P) Ltd.		51,50,000/-	Machineries
97.	M/s. Rochan (India) Ltd.	B'lore South Tq.	76,00,000/-	Electrical
98.	M/s. Karnataka Chemayn Ltd.	Anekal	90,00,000/-	Chemical & Chemical PR
99.	M/s. Elva Induction India Ltd.	Anekal	80,90,000/-	Machineries

5182-37

100. M/s. BTP Structurals (India) P. Ltd.	Belgaum	57,60,00/-	Metal Product
101. M/s. Katwa Cements Pvt. Ltd.	Chikkodi	60,00,000/-	Non-Metallic Mineral Prod.
102. M/s. Mahant Oil Industries Ltd.	Belgaum	74,40,000/-	Food Mfg. Industries
103. M/s. Nava Karnataka Steels Ltd.		54,00,000/-	Basic Metal
104. M/s. Mineral Sales Pvt. Ltd.	Bidar	49,85,000/-	Basic Metal
105. M/s. Pampapathy. R.	Bellary	62,60,000/-	Metal Mining
106. M/s. Impact Tubes Ltd.	Bidar	60,00,000/-	Metal Product
107. M/s. Nandi Cylinders pvt. Ltd.	Bidar	48,00,000/-	
108. M/s. Bidar Special Alloy Steels Pvt. Ltd.	Bidar	30,00,000/-	Basic Metal
109. M/s. C. Well Drugs Pvt. Ltd.	Bidar	1,09,18,000/-	Chemicals and Chemicals Products
110. M/s. Cosmos Watch Industry Pvt. Ltd.	Bidar	43,00,000/-	Metal Products.
111. M/s. Bio Polymers Pvt. Ltd.	Bidar	63,80,000/-	Plastic Goods
112. M/s. Supersonic Rubber Industries Pvt Ltd.	Bidar	46,90,000/-	Rubber & Rubber Products.
113. M/s. ACE Pack Containers Pvt Ltd.	Bidar	60,00,000/-	Non-Metallic Mineral Products
114. M/s. Amgloan Chemicals Pvt Ltd.		15,50,000/-	
115. M/s. B.L. Chemicals Pvt Ltd.	Bidar	38,86,000/-	Chemicals and Chemicals products
116. M/s. Acme Spinners Ltd.	Bidar	90,00,000/-	Textiles

117.	M/s. Arundathi Laboratories Pvt. Ltd.	Bidar	87,50,000/-	Chemicals and Chemicals Products
118.	M/s. Honnalli Cement Industry P. Ltd.	Sindgi	60,00,000/-	Non-Metallic Mineral Products
119.	M/s. Vasupujya Cements & Allied Chemical		90,00,000/-	Non-Metallic Mineral Products
120.	M/s. Mahaveer Silicons Pvt. Ltd.	Mudhol	60,00,000/-	Non-Metallic Mineral Products
121.	M/s. Mangalwade Sun Soya Ltd.	Bijapur	90,00,000/-	Chemicals & Chemical Products
122.	M/s. Birur Polysacks Pvt. Ltd.	Kadur	60,00,000/-	Paper and Paper Products
123.	M/s. Shiva Minerals & Cement Industries Pvt. Ltd.	Hosadurga	67,94,000/-	Non-Metallic Mineral Products
124.	M/s. Lokhandwala Cement Pvt. Ltd.	Hosadurga	54,97,897/-	Non-Metallic Mineral Products
125.	M/s. Rahyan Minerals & Chemicals Pvt. Ltd.	Hosadurga	60,00,000/-	Non-Metallic Mineral Products
126.	M/s. Nandi Duplex Ltd.	Davangere	60,00,000/-	Paper & Paper Products
127.	M/s. Chitradurga Sunflower Oil Complex Pvt. Ltd.	Chitradurga	65,00,000/-	Food Manufacturing Industries
128.	M/s. Ashwaraya Hospital	Davangere	20,38,000/-	Miscellaneous Mfg. Industry

129.	M/s. Challakere Solvent Refinery Pvt. Ltd.	Challakere	98,00.000/-	Chemicals and Chemical Products
130.	M/s. Panchamal Plastics Pvt. Ltd.	Mangalore	74,75,000/-	Other Industries
131.	M/s. Mahabaleshwara Enterprises	Mangalore	30,00,000/-	Hotel Industry
132.	M/s. Sangam Solvent Extracts Ltd.	Dharwad	12,25,000/-	Chemical & Chemicals Products
133.	M/s. Karnataka Poly Products Ltd.	Hubli	37,48,122/-	Plastic Goods
134.	M/s. Rayots Textiles & Oils Pvt Ltd.	Dharwad	55,00,000/-	Textiles
135.	M/s. *Sha Dejikeshavji Ginning Trading*	Hubli	30,00,000/-	Textiles
136.	M/s. B.D.K. Engineering Industries (P) Ltd.	Hubli	1,04,78,000/-	Non-Metallic minerls Products
137.	M/s. Karnataka Rubbers Ltd.	Kalghatgi	40,00,000/-	Rubber & Rubber Products
138.	M/s. G.H. Associates Pvt. Ltd.	Kalghatgi	36,70,000/-	Electronic Equipments & Capacitors
139.	M/s. Karnataka Automotive Tubes Ltd.	Hubli	60,00,000/-	Transport Equipment
140.	M/s. Karnataka Bellad Auto Ltd.	Kalghatgi	64,50,000/-	Trasnport Equipment
141.	M/s. Kuntal Granites Pvt Ltd.	Dharwad	1,06,60,000/-	Non-Metallic Mineral Products
142.	M/s. Joja Chemicals (P) Ltd.	Dharwad	1,12,00,000/-	Chemicals & Chemicals Products
143.	M/s. Laxmi Polyxtrusions Pvt Ltd.	Dharwad	68,00,000/-	Plastic Goods

144.	M/s. Hoysala Cements & Ceramics (INDIA)	Gulbarga	28,00,000/-	Non-Metallic Mineral Products
145.	M/s. Rekha Cements & Chemicals Ltd.	Shorapur	29,06,000/-	Non-Metallic Mineral Products
146.	M/s. Mikrotek Dyes P. Ltd.	Chickballapur	60,00,000/-	Metal Products
147.	M/s. Bhat Metal Research Pvt. Ltd.	Kolar	3,60,00,000/-	Basic Metal
148.	M/s. Nucor Weld Pvt. Ltd.	Chickballapur	30,50,000/-	Electrical
149.	M/s. Natural Stone Tiles Pvt. Ltd.	Bagepalli	1,33,10,000/-	Non-Metallic Mineral
150.	M/s. Habib Solvent Extracts Pvt. Ltd.	Srirangapatna	90,88,750	Chemicals & Chemicals Pr.
151.	M/s. Badheka Paper Mfg. Co., Pvt. Ltd.	Nanjangud	60,00,000/-	Paper & Paper Product
152.	M/s. Kasturi Papers Foods & Chems. Ltd.	Mysore	47,89,407/-	Chemicals & Che. Pr.
153.	M/s. Vishnu Fore (Mysore) Ltd.	Mysore	1,08,75,000/-	Basic Metal
154.	M/s. Chamundi Machine Tools Pvt. Ltd.	Mysore	30,00,000/-	Machineries
155.	M/s. Orrcee Electronics Pvt. Ltd.	Mysore	51,20,000/-	Plastic Goods
156.	M/s. Vishnu Textiles Ltd.	Periyapatna	33,36,000/-	Textiles
157.	M/s. Narris Spinners Pvt. Ltd.	Hunsur	15,12,000/-	Non-Metallic Mineral Pr.
158.	M/s. Gemini Distilleries Ltd.	Nanjangud	55,00,000/-	Non-Metallic Mineral Pr.
159.	M/s. Mysore Polymers & Rubber Products	Mysore	89,33,000/-	Rubber & Rubber Product
160.	M/s. Alpha DIC casts (P) Ltd.	Mysore	30,00,000/-	Basic Metal
161.	M/s. AES Chemicals (P) Ltd.	Mysore	72,50,000/-	Chemicals & Chemicals Pr.
162.	M/s. C.S.I. Fabric (P) Ltd.	Nanjangud	3,46,55,000/-	Mfg. Foot Wear, Other Text.

163. M/s. India Pistons Repco Ltd.	Nanjangud	7,00,00,000/-	Transport Equipment
164. M/s. Ennen Castings Ltd.	Mysore	50,00,000/-	Basic Metal
165. M/s. Mysore Penals & Boards Pvt. Ltd.	Nanjangud	69,09,000/-	Wood & Cork
166. M/s. Centuary Diagonstic Services (P) Ltd.	Mysore	59,00,000/-	Mis. Mfg. Industries
167. M/s. Precision Penal Work (P) Ltd.	Nanjangud	10,94,000/-	Computer & Computer Ser.
168. M/s. Nilagiri Cancer Centre (P) Ltd.		72,00,000/-	Miscellaneous Manufacturing Industries
169. M/s. Government Toolroom and Training Centre	Bangalore City	30,00,000/-	Miscellaneous Manufacturing Industries
170. M/s. Whiterock Flexsole Raman Limited	Nanjangud	60,00,000/-	Manufacturing Foot Wear, Other Textiles.
171. M/s. Ponnappa Coffee Curing Works	Periyapatna	66,00,000/-	Food Manufacturing Inds.
172. M/s. Dixith Engg. Components Pvt. Ltd.	Mysore	55,00,000/-	
173. M/s. Chamption Rubbers (P) Ltd.	Mysore	32,00,000/-	Rubber & Rubber Products
174. M/s. H.R.G. Oil Industries (P) Ltd.	Koppal	78,91,000/-	Food Manufacturing Inds.
175. M/s. Shri Ramchandra Oils & Fats Ltd.	Gangavathi	90,00,000/-	Food Manufacturing Inds.
176. M/s. Malnad Alloy Casting (P) Ltd.	Shimoga	1,84,25,000/-	Basic Metal
177. M/s. Sri K. Ravindra	Bhadravathi	30,00,000/-	Paper & Paper Products
178. M/s. Sri T. Subba Rao	Bhadravathi	60,00,000/-	Chemicals & Chemicals Pr.
179. M/s. Sri R.B. Amaresha Tailor	Shimoga	60,00,000/-	Chemicals & Chemicals Pr.
180. M/s. Shree Vaishnavi Printers Pvt. Ltd.	Tumkur	30,00,000/-	Printing Publishing & All

181.	M/s. IBIS Health Aids Ltd.	Tumkur	64,50,000/-	Chemicals & Chemicals Pr.
182.	M/s. Gem Properties Pvt ltd.	Tumkur	55,60,000/-	Plastic Goods
183.	M/s. Aradya Hi-Tech Printing Pvt. Ltd.	Raichur	44,10,000/-	Plastic Goods
184.	M/s. Titanida Coatings Pvt.Ltd.	Tumkur	34,50,000/-	Chemicals & Chemicals Pr.
185.	M/s. Highland Granite Monuments Pvt.Ltd.	Tumkur	60,00,000/-	Non-Metallic Mineral Products
186.	M/s. B.M.B. Foundry Machinery Ltd.		6,00,000/-	Machineries
187.	M/s. Mishal Paper Mills Pvt. Ltd.	Haliy	90,00,000/-	Paper & Product
188.	M/s. Designer Paving & Tiles (P) Ltd.	Tumkur	25,50,000/-	Food Mfg. Industries
189.	M/s. Electronic Research Pvt. Ltd.	Bangalore City	14,50,000/-	Electronic Equipments & Cap.
190.	M/s. Parimala Feeds & Foods Pvt. Ltd.	Shimoga	77,65,000/-	Food Manufacturing Inds.
191.	M/s. Lakahmic Tile Industry	Kumta	52,60,488/-	Non-Metallic Mineral Products
192.	M/s. Munirabad Chemicals Company	Koppal	25,63,086/-	Chemicals & Chemicals Products
		Total	1,18,13,23,750/-	

ರಾಜ್ಯದಲ್ಲಿನ ಪಟ್ಟಣ ಪ್ರದೇಶಗಳಿಗೆ ಮಂಜೂರಾಗಿರುವ ಕುಡಿಯುವ ನೀರಿನ ಯೋಜನೆಗಳನ್ನು ಕುರಿತು

2002: ಶ್ರೀ ಮಲ್ಲಾರಿಗೌಡ.ಎಸ್. ಪಾಟೀಲ್ (ಸಂಕೇಶ್ವರ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕಳೆದ 3 ವರ್ಷಗಳಲ್ಲಿ ರಾಜ್ಯದ ಎಷ್ಟು ಪಟ್ಟಣ ಪ್ರದೇಶಗಳಿಗೆ ಕುಡಿಯುವ ನೀರಿನ ಯೋಜನೆಗಳು ಮಂಜೂರು ಆಗಿವೆ;

ಆ. ಬೆಳಗಾವಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ಹಣ ಕೊಡುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು;

ಇ. ಬೆಳಗಾವಿ ಜಿಲ್ಲೆಯಲ್ಲಿ ನಿರ್ಮಾಣ ಹಂತದಲ್ಲಿರುವ ಕುಡಿಯುವ ನೀರಿನ ಯೋಜನೆಗಳನ್ನು ಪೂರ್ಣಗೊಳಿಸುವ ದಿನಾಂಕ ಯಾವುವು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಒಟ್ಟು 46 ನೀರು ಸರಬರಾಜು ಯೋಜನೆಗಳು ಮಂಜೂರು ಆಗಿವೆ.

ಆ. ಹಣ ಬಿಡುಗಡೆ ಮಾಡುವಲ್ಲಿ ವಿಳಂಬ ಆಗಿಲ್ಲ.

ಇ. ಹಣದ ವ್ಯವಸ್ಥೆ ಮೇರೆಗೆ ಪೂರ್ತಿಗೊಳಿಸುವ ಸೂಕ್ತವಾದ ದಿನಾಂಕ ಈ ಕೆಳಕಂಡಂತೆ ಇದೆ.

1. ಬೆಳಗಾವಿ	3:96
2. ಹುಕ್ಕೇರಿ	10:93
3. ಚಿಕ್ಕೋಡಿ	3:95
4. ನಿಪ್ಪಾಣಿ	3:94
5. ಸದಲಗಾ	6:94
6. ಹುಕ್ಕೇರಿ ಸಂಕೇಶ್ವರ	3:95
7. ಬೈಲಹೊಂಗಲ	3:94

ಹಾಸನದ ರೇಷ್ಮೆ ಕೃಷಿ ತರಬೇತಿ ಕೇಂದ್ರದ ಅಭಿವೃದ್ಧಿ ಕುರಿತು

2030: ಶ್ರೀ ಬಿ. ಶಿವರಾಮು (ಗಂಡಸಿ):– ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರೇಷ್ಮೆ ಕೃಷಿ ತರಬೇತಿ ಕೇಂದ್ರ, ಹಾಸನ ಪ್ರಾರಂಭವಾದದ್ದು ಯಾವಾಗ ಹಾಗೂ ಯಾವ ಹಣಕಾಸು ನೆರವಿನಿಂದ ಪ್ರಾರಂಭಿಸಲಾಗಿದೆ. ವೆಚ್ಚವಾಗಿರುವ ಹಣವೆಷ್ಟು;

ಆ. ತರಬೇತಿ ಕೇಂದ್ರಕ್ಕೆ ಮಂಜೂರಾಗಿರುವ ಒಟ್ಟು ಭೂಮಿ ಎಷ್ಟು; ಭೂಮಿಯಲ್ಲಿ ಹಾಲಿ ಇರುವ ರೇಷ್ಮೆ ಕೃಷಿ ಮತ್ತು ಬೇರೆ ಬೇರೆ ಕೃಷಿಗಳೇನು;

ಇ. ಹಾಲಿ ಇರುವ ನೀರಿನ ವ್ಯವಸ್ಥೆ ಏನು;

ಈ. ರೇಷ್ಮೆ ಕೃಷಿ ತರಬೇತಿಯ ಕ್ರಮವೇನು ? ಮತ್ತು ಒಟ್ಟು ಎಷ್ಟು ಮಂದಿ ತರಬೇತಿ ಪಡೆದಿದ್ದಾರೆ;

ಉ. ರೇಷ್ಮೆ ಗೂಡು ಬಿಚ್ಚುವ ಘಟಕ ಮಂಜೂರಾಗಿದೆಯೇ;

ಊ. ಹಾಗಿದ್ದರೆ ಅದರ ಅನುಷ್ಠಾನ ಯಾವಾಗ ಜಾರಿಗೆ ತರಲಾಗಿದೆ; ಮಂಜೂರಾಗದಿದ್ದರೆ ಮಂಜೂರಾಗುವ ಸಂಭವವಿದೆಯೇ ?

ಡಾ।। ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

ಅ. 25ನೇ ಮೇ 1985 ರಂದು ರೇಷ್ಮೆ ಕೃಷಿ ತರಬೇತಿ ಕೇಂದ್ರ ಪ್ರಾರಂಭವಾದದ್ದು, ಇದನ್ನು ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿಯಲ್ಲಿ ಪ್ರಾರಂಭ ಮಾಡಿದ್ದು ಇದಕ್ಕೆ ವೆಚ್ಚವಾಗಿರುವ ಹಣ 66.19 ಲಕ್ಷ ರೂಪಾಯಿಗಳು.

ಆ. ಮಂಜೂರಾಗಿರುವ ಒಟ್ಟು ಭೂಮಿ 54.32 ಎಕರೆ. ಹಿಪ್ಪು ನೇರಳೆ ವ್ಯವಸಾಯ 4 ಎಕರೆಗಳಲ್ಲಿ, ಸಾಮೂಹಿಕ ಅರಣ್ಯ 24.32 ಎಕರೆ ಪ್ರದೇಶದಲ್ಲಿ ಸಾಮೂಹಿಕ ಸಮುದಾಯ ತೋಟ 10 ಎಕರೆಗಳಲ್ಲಿ, ಕಟ್ಟಡಗಳಿಗಾಗಿ ನಿಗದಿಪಡಿಸಿರುವ ಪ್ರದೇಶ 10 ಎಕರೆ.

ಇ. ಮೂರು ಕೊಳವೆ ಬಾವಿಗಳು ಇವೆ. ಬಾವಿಯಿಂದ 1 ಘಂಟೆ ಅವಧಿಯಲ್ಲಿ ಬರತಕ್ಕಂತಹ ನೀರಿನ ಪ್ರಮಾಣ 4000 ಗ್ಯಾಲನ್‌ಗಳು.

ಈ. ಹಾಲಿ ರೇಷ್ಮೆ ಕೃಷಿ ರೈತರಿಗೆ ತರಬೇತಿ ನೀಡಲಾಗುತ್ತಿದೆ. ರಾಷ್ಟ್ರೀಯ ರೇಷ್ಮೆ ಕೃಷಿ ಯೋಜನೆಯಡಿಯಲ್ಲಿ ಮಹಿಳೆಯರಿಗೆ ತರಬೇತಿ ನೀಡಲು ಅವಕಾಶ ಕಲ್ಪಿಸಲಾಗುತ್ತಿದೆ. ನೂಲು ಬಿಚ್ಚಾಣಿಕೆಯಲ್ಲಿ ತರಬೇತಿ ಕೊಡಲು ಅವಕಾಶವನ್ನು ಕಲ್ಪಿಸಲಾಗಿದೆ. ಒಟ್ಟು 6.516 ಮಂದಿ ತರಬೇತಿ ಪಡೆದಿದ್ದಾರೆ.

ಉ.. ಮಂಜೂರಾಗಿದೆ.

ಊ. ಈಗಾಗಲೇ ಕಟ್ಟಡದ ಕೆಲಸ ಪ್ರಾರಂಭವಾಗಿದೆ. ನೂರು ಬಿಚ್ಚಾಣಿಕೆ ಯಂತ್ರಗಳನ್ನು ಖರೀದಿಸಿ 1994-95ರಲ್ಲಿ ಅನುಷ್ಠಾನಕ್ಕೆ ತರಲಾಗುವುದು.

ರಾಜ್ಯದಲ್ಲಿರುವ ಅಂಧರ ಸಂಖ್ಯೆಯ ಬಗ್ಗೆ

2090: ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿರುವ ಕಿವುಡ, ಮೂಕರ ಹಾಗೂ ಅಂಧರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ. ಅವರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರವು ಕೈಗೊಳ್ಳಲಾಗಿರುವ ಕ್ರಮವೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ. 1992ರ ಅಂಗವಿಕಲರ ಸಮೀಕ್ಷೆ ತಾತ್ಕಾಲಿಕ ವರದಿ ಆಧಾರದ ಮೇಲೆ ರಾಜ್ಯದಲ್ಲಿ;

ಕಿವುಡರು:ಮೂಕರು	48,757
ಅಂಧರು	39,317

(ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ).

ಆ. ಅಂಗವಿಕಲರ ಕಲ್ಯಾಣಕ್ಕಾಗಿ ಸರ್ಕಾರವು ಈ ಕೆಳಗಿನ ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತಂದಿದೆ.

1) ಶೈಕ್ಷಣಿಕ ಕಾರ್ಯಕ್ರಮಗಳು.
2) ಉದ್ಯೋಗ ಮತ್ತು ತರಬೇತಿ ಕಾರ್ಯಕ್ರಮ.
3) ಪುನರ್ವಸತಿ ಯೋಜನೆ.
4) ಸಾಮಾಜಿಕ ಭದ್ರತಾ ಕಾರ್ಯಕ್ರಮಗಳು.
5) ಸಾರ್ವಜನಿಕ ಅರಿವು ಮೂಡಿಸುವ ಕಾರ್ಯಕ್ರಮ.

ಅನುಬಂಧ

1991–92ರ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿರುವ ಜಿಲ್ಲಾವಾರು ಅಂಧರು, ಕಿವುಡರುಗಳ ಸಂಖ್ಯೆ

ಕ್ರಮ ಸಂಖ್ಯೆ ಜಿಲ್ಲೆಯ ಹೆಸರು	ಅಂಧರು	ಕಿವುಡರು:ಮೂಕರು
1. ಬೆಂಗಳೂರು (ಗ್ರಾಮಾಂತರ)	1,179	1,275
2. ಬೆಂಗಳೂರು (ನಗರ)	2,357	2,131
3. ಬೆಳಗಾಂ	2,153	3,584
4. ಬಳ್ಳಾರಿ	1,470	1,800
5. ಬೀದರ್	1,332	1,139
6. ಬಿಜಾಪುರ	618	2,626
7. ಚಿಕ್ಕಮಗಳೂರು	1,645	1,283
8. ಚಿತ್ರದುರ್ಗ	1,811	2,398
9. ಕಾರವಾರ	2,797	3,706
10. ದಕ್ಷಿಣ ಕನ್ನಡ	1,554	2,607
11. ಗುಲ್ಬರ್ಗಾ	2,283	3,786
12. ಹಾಸನ	1,428	1,979
13. ಕೊಡಗು	467	598
14. ಕೋಲಾರ	2,508	2,722
15. ಮಂಡ್ಯ	1,457	2,295
16. ಮೈಸೂರು	4,711	4,313
17. ರಾಯಚೂರು	3,527	3,750
18. ಶಿವಮೊಗ್ಗ	1,532	1,730
19. ತುಮಕೂರು	2,497	3,696
20. ಉತ್ತರ ಕನ್ನಡ	591	1,259
	39,317	48,757

ವಿಶ್ವ ಕಾರ್ಯಕ್ರಮದ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸಿರುವ ಬಗ್ಗೆ

2092: ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ್):– ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ರಾಜ್ಯ ಸರ್ಕಾರವು ವಿಶ್ವ ಕಾರ್ಯಕ್ರಮದ ಯೋಜನೆಯಡಿ ಗುರುತಿಸಲಾಗುವ ಫಲಾನುಭವಿಗಳೆಷ್ಟು ? ಈ ಬಗ್ಗೆ ಖರ್ಚು ಮಾಡಲಾಗಿರುವ ಹಣವೆಷ್ಟು;

2. ರಾಜ್ಯದಲ್ಲಿ ಪ್ರಾರಂಭಿಸಲಾಗಿರುವ ಇಂಡಸ್ಟ್ರಿಯಲ್ ಕೋ-ಅಪರೇಟಿವ್ ಸೊಸೈಟಿಗಳೆಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು);

3. ಇಂಡಸ್ಟ್ರಿಯಲ್ ಕೋ-ಅಪರೇಟಿವ್ ಸೊಸೈಟಿ ಪ್ರಾರಂಭ ಮಾಡಲು ಇರುವ ನಿಯಮಾವಳಿಗಳೇನು ? ಹಾಗೂ ಅವುಗಳನ್ನು ಪ್ರಾರಂಭ ಮಾಡಿದ್ದಲ್ಲಿ ಸರ್ಕಾರದಿಂದ ಸಿಗುವ ಸವಲತ್ತುಗಳೇನು ?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):-

1. 1,44,000 ಫಲಾನುಭವಿಗಳನ್ನು ಆಳವಡಿಸಲಾಗುವುದು. ಜನವರಿ 1993 ರವರೆಗೆ ವಿಶ್ವ ಕಾರ್ಯಕ್ರಮದಡಿಯಲ್ಲಿ ಒಟ್ಟು 1694.021 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು ಇದರಲ್ಲಿ 1532.89 ಲಕ್ಷ ರೂ.ಗಳನ್ನು ರಾಜ್ಯ ಮಟ್ಟದ ನಿಗಮಗಳು ಮತ್ತು ಮಂಡಲಿಗಳ ಮುಖಾಂತರವೂ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮುಖಾಂತರವೂ ಒಟ್ಟು 161.131 ಲಕ್ಷ ರೂ.ಗಳನ್ನು ದಿನಾಂಕ: 31-1-93ರವರೆಗೆ ಖರ್ಚು ಮಾಡಲಾಗಿರುತ್ತದೆ. (ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮುಖಾಂತರ ಖರ್ಚು ಮಾಡಿರುವ ವಿವರಗಳನ್ನು ಜಿಲ್ಲಾವಾರು ಅನುಬಂಧ - 1ರಲ್ಲಿ ಲಗತ್ತಿಸಲಾಗಿದೆ.

2. 1ನೇ ಅನುಬಂಧದಲ್ಲಿ ಒದಗಿಸಲಾಗಿದೆ.

3. ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 6ರ ಪ್ರಕಾರ ಕೈಗಾರಿಕಾ ಸಹಕಾರ ಸಂಘಗಳನ್ನು ನೋಂದಾಯಿಸಲು ಈ ಕೆಳ ಕಾಣಿಸಿದ ನಿಬಂಧನೆಗಳನ್ನು ಅನುಸರಿಸಬೇಕಾಗುತ್ತದೆ.

ಅ) ನಿಗದಿತ ಅರ್ಜಿ ನಮೂನೆಯೊಂದಿಗೆ ಉದ್ದೇಶಿತ ಕೈಗಾರಿಕಾ ಸಹಕಾರ ಸಂಘಗಳ ಉಪನಿಯಮಗಳ ಮೂರು ಪ್ರತಿ ಲಗತ್ತಿಸಬೇಕು.

ಆ) ಸದರೀ ಸಂಘದ ಒಟ್ಟು ಸದಸ್ಯರ ಸಂಖ್ಯೆ 10ಕ್ಕಿಂತ ಕಡಿಮೆ ಇರಬಾರದು.

ಇ) ಈ ಅರ್ಜಿದಾರರ ವಯಸ್ಸು 18 ಕ್ಕಿಂತ ಕಡಿಮೆ ಇರಬಾರದು.

ಈ) ಉದ್ದೇಶಿತ ಸಹಕಾರ ಸಂಘದ ಉದ್ದೇಶವು ಕೈಗಾರಿಕಾ ಚಟುವಟಿಕೆ ಇರಬೇಕು, ಮತ್ತು ಸದರೀ ಸಂಘವು ಸದಸ್ಯರ ಆರ್ಥಿಕ ಅಭಿವೃದ್ಧಿಗೆ ಅನುಕೂಲವಾಗುವಂತಿರಬೇಕು ಮತ್ತು ಎಲ್ಲಾ ಸದಸ್ಯರು ಸದರೀ ಸಂಘದ ಕಾರ್ಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು ಹಾಗೂ ಸದರೀ ಸದಸ್ಯರು ಅದೇ ಬಗೆಯ ಉದ್ಯೋಗದಲ್ಲಿ ನಿರತರಾಗಿರಬೇಕು.

ಉ) ಎಲ್ಲಾ ಅರ್ಜಿದಾರರು ಅರ್ಜಿಯಲ್ಲಿ ಸಹಿ ಮಾಡಿರಬೇಕು.

ಈ ಮೇಲಿನ ನಿಬಂಧನೆಗಳಲ್ಲದೆ ಈ ಕಛೇರಿಯಿಂದ ಕೈಗಾರಿಕಾ ಸಹಕಾರ ಸಂಘಗಳನ್ನು ನೋಂದಾಯಿಸಲು ಆಡಳಿತಾತ್ಮಕ ಅನುಮತಿ ಪಡೆದುಕೊಳ್ಳಬೇಕು. ಮತ್ತು ಇದಲ್ಲದೇ ಸಾಧ್ಯತಾ ವರದಿಯನ್ನು ಇಲಾಖೆಯಿಂದ ಪಡೆಯಬೇಕು.

ಊ) ನೋಂದಣಿ ಸಮಯದಲ್ಲಿ ಉದ್ದೇಶಿತ ಕೈಗಾರಿಕಾ ಸಹಕಾರ ಸಂಘದ ಕೈಗಾರಿಕೆಯ ಕಾರ್ಯ ಚಟುವಟಿಕೆ ಬಗ್ಗೆ ಯೋಜನಾ ವರದಿ ಲಗತ್ತಿಸಬೇಕಾಗಿರುತ್ತದೆ.

ಪ್ರಾರಂಭಗೊಂಡ ಕೈಗಾರಿಕಾ ಸಹಕಾರ ಸಂಘಗಳಿಗೆ ಅಗತ್ಯಕ್ಕನುಸಾರವಾಗಿ ಮತ್ತು ಸದರೀ ಯೋಜನೆಯ ನಿಯಮಕ್ಕೆ ಅನುಸಾರವಾಗಿ ಕೆಳಕಂಡ ಸವಲತ್ತುಗಳನ್ನು ನೀಡಲಾಗುವುದು.

1) <u>ರಾಜ್ಯವಲಯದಲ್ಲಿ.</u>

ಅ) ಶೇರು ಬಂಡವಾಳ ಹೂಡಿಕೆ.
ಆ) ಶೇರು ಬಂಡವಾಳ ಸಾಲ.
ಇ) ಮ್ಯಾನೇಜೀರಿಯಲ್ ಗ್ರಾಂಟ್

ಈ) ತೆಂಗಿನ ನಾರಿನ ಕೈಗಾರಿಕಾ ಸಹಕಾರ ಸಂಘಗಳಿಗೆ ಉತ್ಪಾದಿಸಿದ ವಸ್ತುಗಳನ್ನು ಮಾರಾಟ ಮಾಡಲು ಶೇ.20ರ ರಿಬೇಟ್ ನೀಡಲಾಗುವುದು (ಅದರಲ್ಲಿ ರಾಜ್ಯ ಸರ್ಕಾರದ ಪಾಲು ಶೇ.10ಹಾಗೂ ಕೇಂದ್ರ ಸರ್ಕಾರದ ಪಾಲು ಶೇ.10).

2) ಜಿಲ್ಲಾ ವಲಯದಲ್ಲಿ:

ಅ) ಕೈಗಾರಿಕಾ ಸಹಕಾರ ಸಂಘಗಳಿಗೆ ಗ್ರಾಂಟ್ ಶೇರು ಬಂಡವಾಳ ಮತ್ತು ಶೇರು ಬಂಡವಾಳ ಸಾಲ.
ಆ) ಕೈಗಾರಿಕಾ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಲು ಹೊಸ ಸದಸ್ಯರಿಗೆ ಶೇರು ಬಂಡವಾಳ ಸಾಲ.
ಇ) ರಾಜ್ಯ ಸರ್ಕಾರದಿಂದ ನಿಯಮಾನುಸಾರ ಬಂಡವಾಳ ಸಹಾಯಧನ ನೀಡಲಾಗುವುದು. ಶೇ.51ಕ್ಕಿಂತ ಸರ್ಕಾರದ ಬಂಡವಾಳ ಕಡಿಮೆ ಇದ್ದಲ್ಲಿ ಮಾತ್ರ ಅಂತಹ ಕೈಗಾರಿಕಾ ಸಹಕಾರ ಸಂಘಗಳಿಗೆ ಬಂಡವಾಳ ಸಹಾಯಧನ ನೀಡಲಾಗುವುದು.
ಈ) ದುಡಿಮೆ ಬಂಡವಾಳ ಸಾಲ.

ವಿಧಾನಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2092

"ಅನುಬಂಧ – 1"

ರಾಜ್ಯದಲ್ಲಿರುವ ಜಿಲ್ಲಾವಾರು ಕೈಗಾರಿಕಾ ಸಹಕಾರ ಸಂಘಗಳು

ಸಂಖ್ಯೆ	ಜಿಲ್ಲೆಯ ಹೆಸರು	ಕೈಗಾರಿಕಾ ಸಹಕಾರ ಸಂಘಗಳ ಸಂಖ್ಯೆ
1.	ಬೆಂಗಳೂರು ನಗರ	65
2.	ಬೆಂಗಳೂರು ಗ್ರಾಮಾಂತರ	54
3.	ಚಿತ್ರದುರ್ಗ	44
4.	ಕೋಲಾರ	53
5.	ಶಿವಮೊಗ್ಗ	25
6.	ತುಮಕೂರು	52
7.	ಬೆಳಗಾಂ	97
8.	ವಿಜಾಪೂರ	20
9.	ಧಾರವಾಡ	141
10.	ಉತ್ತರಕನ್ನಡ	103
11.	ಚಿಕ್ಕಮಗಳೂರು	21
12.	ಕೊಡಗು	22
13.	ಹಾಸನ	40
14.	ಮಂಡ್ಯ	52
15.	ಮಂಗಳೂರು (ದ.ಕ.)	90

16.	ಮೈಸೂರು	93
17.	ಬಳ್ಳಾರಿ	52
18.	ಬೀದರ್	47
19.	ಗುಲ್ಬರ್ಗಾ	50
20.	ರಾಯಚೂರು	48
	ಒಟ್ಟು	1169

ಬೆಂಗಳೂರು ಜಲಮಂಡಳಿಯಲ್ಲಿ ಬೆಳಗಿನ ಸಮಯದಲ್ಲಿ ಹಣಪಾವತಿ ಕೌಂಟರ್‌ಗಳನ್ನು ತೆರೆಯುವ ಬಗ್ಗೆ

2103: ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ಜಲ ಮಂಡಳಿಯಲ್ಲಿ ಹಣ ಪಾವತಿ ಮಾಡುವ ಕೌಂಟರುಗಳು ಜಯನಗರದಲ್ಲಿ ಕಛೇರಿ ವೇಳೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಸಾರ್ವಜನಿಕರಿಗೆ ಹಾಗೂ ಉದ್ಯೋಗಸ್ಥ ನೌಕರರಿಗೆ ಸದರಿ ಸಮಯದಲ್ಲಿ ಹಣಪಾವತಿ ಮಾಡಲು ತೊಂದರೆ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ವಿದ್ಯುತ್ ಮಂಡಳಿಯಲ್ಲಿರುವಂತೆ ಬೆಳಿಗ್ಗೆ 8–30ಕ್ಕೆ ಕೌಂಟರುಗಳನ್ನು ತೆರೆಯುವುದರ ಜೊತೆಗೆ ಆಯಾ ಬಡಾವಣೆಗಳಲ್ಲಿ ಹಣ ಪಾವತಿ ಮಾಡಲು ಸಾರ್ವಜನಿಕರಿಗೆ ಅನುಕೂಲವಾಗಲು ಸಂಚಾರಿ ಘಟಕಗಳನ್ನು ಸ್ಥಾಪಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಬಂದಿದೆ. ಪ್ರಸ್ತುತ ಜಯನಗರ ಜಲಮಂಡಳಿ ಕಛೇರಿಯಲ್ಲಿ ಎರಡು ಹಣ ಪಾವತಿ ಮಾಡುವ ಕೌಂಟರುಗಳಿದ್ದು ಅವು ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾನ 2.00 ಘಂಟೆಗಳವರೆಗೆ ಕೆಲಸ ಮಾಡುತ್ತಿದೆ. ಅದರಲ್ಲಿ ಜಲ ಮಂಡಳಿ ಕೌಂಟರ್‌ನ್ನು ಸಾರ್ವಜನಿಕರ ಅನುಕೂಲಕ್ಕಾಗಿ, ಬೆಳಿಗ್ಗೆ 8.30ಕ್ಕೆ ತೆರೆಯಲು ಅನುವು ಮಾಡಿಕೊಡಲಾಗುವುದು.

ಆ. ಆಯಾ ಬಡಾವಣೆಗೆ ಸಂಬಂಧಿಸಿದ ಸೇವಾ ಠಾಣೆಯಲ್ಲಿ ಒಂದೊಂದು ಜಲ ಮಂಡಳಿಯ ಹಣ ಪಾವತಿ ಮಾಡುವ ಕೌಂಟರುಗಳನ್ನು ತೆರೆಯಲಾಗಿದ್ದು ಅವು ಈಗ ಸಮರ್ಪಕವಾಗಿ ಕೆಲಸ ಮಾಡುತ್ತಿವೆ. ಆದುದರಿಂದ ಸಂಚಾರಿ ಕೌಂಟರುಗಳನ್ನು ಸ್ಥಾಪಿಸುವ ಅವಶ್ಯಕತೆ ಸಧ್ಯದಲ್ಲಿ ಜಲಮಂಡಳಿಗೆ ಇಲ್ಲ.

ಆಗ್ರೋ ಪ್ರೋಟೀನ್ಸ್ ನೌಕರರನ್ನು ಕೃಷಿ ಇಲಾಖೆಯಲ್ಲಿ ವಿಲೀನಗೊಳಿಸುವ ಬಗ್ಗೆ

1412: ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):– ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಯಚೂರಿನಲ್ಲಿದ್ದ ಕರ್ನಾಟಕ ಆಗ್ರೋ ಪ್ರೋಟಿನ್ಸ್ ನಿಯಮಿತಿಯನ್ನು ಕರ್ನಾಟಕ ಎಣ್ಣೆ

ಬೀಜಗಳ ಸಹಕಾರ ನಿಮಕ್ಕೆ ಮಾರಾಟ ಮಾಡಿದ ನಂತರ ಅದರಲ್ಲಿ ನಿರ್ವಹಿಸುತ್ತಿದ್ದ ನೌಕರರನ್ನು ಕೃಷಿ ಇಲಾಖೆಗೆ ತೆಗೆದುಕೊಳ್ಳಲು ದಿನಾಂಕ: 19-9-1992ರಂದು ನಡೆದ ಸಚಿವ ಸಂಪುಟದಲ್ಲಿ ತೀರ್ಮಾನ ಕೈಗೊಂಡಿರುವುದು ನಿಜವೇ;

ಆ. ಹಾಗಿದ್ದಲ್ಲಿ ಸದರಿ ನೌಕರರ ಬಗ್ಗೆ ಸರ್ಕಾರದವರು ಈವರೆಗೆ ಕೈಗೊಳ್ಳಲಾಗಿರುವ ಕ್ರಮಗಳೇನು;

ಇ. ಸದರಿ ನೌಕರರಿಗೆ 2 ವರ್ಷಗಳಿಗಿಂತಲೂ ಮೇಲ್ಪಟ್ಟು ಸಂಬಳವಿಲ್ಲದೆ ಹೆಚ್ಚಿನ ರೀತಿಯ ತೊಂದರೆಗೊಳಗಾಗಿರುವುದರಿಂದ ಈಗಾಗಲೇ ಆಗಿರುವ ತೀರ್ಮಾನದ ಬಗ್ಗೆ ಸರ್ಕಾರದವರು ಕೂಡಲೇ ಕ್ರಮಗಳನ್ನು ಕೈಗೊಳ್ಳುವರೇ ?

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ಖಾತೆ ರಾಜ್ಯ ಸಚಿವರು):-

ಅ. ಹೌದು.

ಆ. ಈ ನೌಕರರನ್ನು ಕೃಷಿ ಇಲಾಖೆ ತೆಗೆದುಕೊಳ್ಳುವ ಸಾಧ್ಯತೆಯ ಬಗ್ಗೆ ಪರಿಶೀಲಿಸಿ ವಿಶೇಷ ನಿಯಮಗಳನ್ನು ಮಾಡಬೇಕಿದ್ದು ಈ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಇ. ಈ ನೌಕರರಿಗೆ ಬಾಕಿ ಇರುವ ಸಂಬಳವನ್ನು ಕೃಷಿ ಇಲಾಖೆಯ ವೆಚ್ಚದ ಉಳಿತಾಯದಲ್ಲಿ ನೀಡಬೇಕಾಗಿದ್ದು ಇದರ ಬಗ್ಗೆ ಈಗಾಗಲೇ ಕ್ರಮ ಕೈಗೊಂಡು ಅತಿ ಶೀಘ್ರದಲ್ಲೇ ಬಾಕಿ ಇರುವ ಸಂಬಳವನ್ನು ಪಾವತಿ ಮಾಡಲಾಗುವುದು.

ಹಾಸ್ಟೆಲ್ ಸೌಲಭ್ಯದ ಬಗ್ಗೆ

1465: ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಾಗಡಿ ಟೌನ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಸಿ., ಎಸ್.ಟಿ. ಹಿಂದುಳಿದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿದ್ಯಾರ್ಥಿನಿಲಯದ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಯಾವಾಗ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲಾಗುವುದು;

ಇ. ಎಷ್ಟು ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಮಾಡಿಕೊಡಲಾಗುವುದು;

ಈ. ಬರುವ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಸರ್ಕಾರ ತೀವ್ರವಾಗಿ ಯೋಚಿಸುವುದೇ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಅ. ಹೌದು.

ಆ. ಸಂಬಂಧಪಟ್ಟ ಜಿಲ್ಲಾಪರಿಷತ್‌ನಿಂದ ಪ್ರಸ್ತಾವನೆ ಬಂದ ಕೂಡಲೇ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸುವ ಸಾಧ್ಯತೆಯ ಬಗ್ಗೆ ಸರ್ಕಾರವು ಪರಿಗಣಿಸುತ್ತದೆ.

ಇ. ಜಿಲ್ಲಾಪರಿಷತ್ತಿನ ಪ್ರಸ್ತಾವನೆಯ ಅನುಗುಣವಾಗಿ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಮಾಡಿಕೊಡಲಾಗುವುದು.

ಈ. ಅ ಮತ್ತು ಇ ಪ್ರಶ್ನೆಗೆ ನೀಡಿರುವ ಉತ್ತರದಿಂದಾಗಿ ಇದು ಸಧ್ಯಕ್ಕೆ ಉದ್ಭವಿಸುವುದಿಲ್ಲ.

ಬೆಂಗಳೂರು ಜಲಮಂಡಳಿಯ ಸೂಪರ್ ನ್ಯೂಮರರಿ ನೌಕರರಿಗೆ ಪದನಾಮ ನೀಡುವ ಬಗ್ಗೆ

1505: ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಬೆಂಗಳೂರು ಜಲಮಂಡಳಿಯಲ್ಲಿರುವ ಸೂಪರ್‌ನ್ಯೂಮರರಿ ನೌಕರರಿಗೆ ಪದನಾಮ ನೀಡುವ ವಿಚಾರವು ಯಾವ ಹಂತದಲ್ಲಿದೆ;

2. ಪದನಾಮ ನೀಡದೆ ಇರುವುದರಿಂದ ಅಕ್ಷರಸ್ಥ ನೌಕರರಿಗೆ ವಿವಿಧ ಬಣ್ಣಗಳ ಗುರುತಿನ ಚೀಟಿ ನೀಡುವಲ್ಲಿ ತೊಂದರೆ ಆಗಿರುವುದು ನಿಜವೇ;

3. ಹಾಗಿದ್ದಲ್ಲಿ ಪದನಾಮವನ್ನು ಹಾಗೂ ಗುರುತಿನ ಚೀಟಿಯನ್ನು ನೀಡಲು ಕ್ರಮ ತೆಗೆದುಕೊಳ್ಳಲಾಗುವುದೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

1. ಮಂಡಳಿಯ ಪರಿಶೀಲನೆಯಲ್ಲಿದೆ.

2. ಇಲ್ಲ.

3. ಉದ್ಭವಿಸುವುದಿಲ್ಲ.

ಅಂಗನವಾಡಿ ಕೇಂದ್ರಗಳನ್ನು ಕುರಿತು

2181: ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಾದಾಮಿ ತಾಲ್ಲೂಕಿನಲ್ಲಿ ಇರುವ ಅಂಗನವಾಡಿ ಕೇಂದ್ರಗಳು ಎಷ್ಟು;

ಆ. ಜನಸಂಖ್ಯೆಯ ಅನುಗುಣವಾಗಿ ಇದೆಯೇ;

ಇ. ಇಲ್ಲದಿದ್ದ ಪಕ್ಷದಲ್ಲಿ ಉಳಿದ ಅಂಗನವಾಡಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ. 140

ಆ. ಇಲ್ಲ.

ಇ. ಹಂತ ಹಂತವಾಗಿ ಪ್ರಾರಂಭಿಸಲಾಗುವುದು.

ವಿಶೇಷ ಘಟಕ ಯೋಜನೆಯಲ್ಲಿ ಬಿಡುಗಡೆ ಮಾಡಿದ ಹಣದ ಬಗ್ಗೆ

2175: ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1990–91, 91–92, 92–93 ಮತ್ತು ಫೆಬ್ರವರಿ 93ರವರೆಗೆ ವಿಶೇಷ ಘಟಕ ಯೋಜನೆಯಡಿ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಿಡುಗಡೆ ಮಾಡಿರುವ ಮೊತ್ತವೆಷ್ಟು: (ಜಿಲ್ಲಾವಾರು ವಿವರ ನೀಡುವುದು);

ಆ. ಬೆಂಗಳೂರು ಜಿಲ್ಲೆಯಲ್ಲಿ ಈ ಯೋಜನೆಯಡಿ ಯಾವ ಯಾವ ಕಾರ್ಯಕ್ರಮಗಳಿಗೆ ಈ ಹಣ ಬಳಸಲಾಗಿದೆ. (ತಾಲ್ಲೂಕುವಾರು ವಿವರ ನೀಡುವುದು);

ಇ. ಈ ಯೋಜನೆಗಾಗಿ ಒದಗಿಸಲಾದ ಹಣ ಕಳೆದ ಮೂರು ವರ್ಷಗಳಲ್ಲಿ ವ್ಯರ್ಥವಾಗಿದೆಯೇ;

ಈ. ಹಾಗಿದ್ದಲ್ಲಿ, ಹಣ ವ್ಯರ್ಥವಾಗಲು (ಲ್ಯಾಪ್ಸ್) ಕಾರಣಗಳೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಅ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. (ಅನುಬಂಧ - 1)

ಆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. (ಅನುಬಂಧ - 2)

ಇ. ಇಲ್ಲ.

ಈ. ಉದ್ಭವಿಸುವುದಿಲ್ಲ.

ಅನುಬಂಧ - 1

1990-91, 91-92, 92-93 (ಫೆಬ್ರವರಿ 93ರವರೆಗೆ) ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ಬಿಡುಗಡೆ ಮಾಡಲಾದ ಮೊತ್ತದ ಜಿಲ್ಲಾವಾರು ವಿವರ

ಕ್ರ.ಸಂ.	ಜಿಲ್ಲೆಯ ಹೆಸರು	ಬಿಡುಗಡೆ ಮಾಡಲಾದ ಹಣ (ರೂ. ಲಕ್ಷಗಳಲ್ಲಿ)
1.	ಬೆಂಗಳೂರು ನಗರ	184.99
2.	ಬೆಂಗಳೂರು ಗ್ರಾಮಾಂತರ	483.91
3.	ಚಿತ್ರದುರ್ಗ	318.29
4.	ಕೋಲಾರ	427.68
5.	ಶಿವಮೊಗ್ಗ	352.06
6.	ತುಮಕೂರು	454.68
7.	ಚಿಕ್ಕಮಗಳೂರು	229.44
8.	ದಕ್ಷಿಣ ಕನ್ನಡ	309.40
9.	ಹಾಸನ	313.98
10.	ಮಡಿಕೇರಿ	123.61
11.	ಮಂಡ್ಯ	363.23
12.	ಬೆಳಗಾಂ	422.32
13.	ಬಿಜಾಪುರ	488.31
14.	ಧಾರವಾಡ	496.36
15.	ಉತ್ತರ ಕನ್ನಡ	148.21
16.	ಗುಲ್ಬರ್ಗಾ	714.31

17.	ಬಳ್ಳಾರಿ	300.35
18.	ಬೀದರ್	288.95
19.	ರಾಯಚೂರು	550.90
20.	ಮೈಸೂರು	551.65
	ಒಟ್ಟು ರೂ. ಲಕ್ಷಗಳಲ್ಲಿ	7522.63

ಅನುಬಂಧ – 2

1990–91, 91–92, 92–93ನೇ ಸಾಲಿನಲ್ಲಿ ಬೆಂಗಳೂರು ಜಿಲ್ಲೆ (ನಗರ, ಗ್ರಾಮಾಂತರ)ಯಲ್ಲಿ ವೆಚ್ಚ ಮಾಡಿದ ಬಾಬ್ತು ಹಾಗೂ ಹಣದ ತಾಲ್ಲೂಕುವಾರು ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಇಲಾಖೆಯ ಹೆಸರು	ಆನೇಕಲ್	ಬೆಂಗಳೂರು - ದಕ್ಷಿಣ	ಬೆಂಗಳೂರು ಉತ್ತರ	ಚನ್ನಪಟ್ಟಣ	ರಾಮನಗರ	ಮಾಗಡಿ	ಕನಕಪುರ	ಹೊಸಕೋಟೆ	ದೇವನಹಳ್ಳಿ	ನೆಲಮಂಗಲ	ದೊಡ್ಡಬಳ್ಳಾಪುರ
1	2	3	4	5	6	7	8	9	10	11	12	13
1.	ಸಮಾಜ ಕಲ್ಯಾಣ	4.18	3.09	2.69	2.68	6.43	1.21	3.85	2.78	9.07	1.29	1.56
2.	ತೋಟಗಾರಿಕೆ	1.82	1.65	1.61	1.38	1.36	1.30	1.52	1.44	1.14	1.35	1.36
3.	ಅರಣ್ಯ	1.16	0.50	0.37	0.19	0.19	0.18	0.23	0.19	0.19	0.19	0.20
4.	ಪಶುಸಂಗೋಪನೆ	3.92	0.88	2.90	1.71	2.37	1.50	1.80	1.86	1.68	2.12	1.84
5.	ಭೂಸಾರ ಸಂರಕ್ಷಣೆ	1.65	1.55	2.10	1.25	1.25	1.49	1.71	1.32	1.50	1.50	1.46
6.	ಸಣ್ಣ ಕೈಗಾರಿಕೆ	3.08	5.36	3.93	4.56	2.19	2.49	3.24	2.84	2.04	3.38	2.73
7.	ವಿಶೇಷ ಪೌಷ್ಟಿಕ ಆಹಾರ ಯೋಜನೆ	3.66	4.00	3.53	–	–	–	–	5:91	5.91	7.63	–
8.	ಗ್ರಾಮೀಣ ವಸತಿ	2.45	3.10	2.45	–	–	–	–	–	–	–	–
9.	ರೇಷ್ಮೆ	2.00	1.63	1.73	5.55	1.94	3.68	5.60	3.77	3.92	1.08	3.20
10.	ಕೃಷಿ	1.83	1.50	1.50	1.45	1.37	1.48	1.79	1.45	1.80	1.76	1.45
11.	ಗ್ರಾಮೀಣ ನೀರು ಸರಬರಾಜು	16.02	12.61	9.50	6.41	0.23	17.59	3.58	9.16	2.95	4.50	0.97

12. ರಸ್ತೆ ಮತ್ತು ಸೇತುವೆಗಳು	11.86	13.93	6.49	9.54	11.84	19.23	16.36	5.49	2.54	9.42	3.89
13. ಗಂಗಾ ಕಲ್ಯಾಣ ಯೋಜನೆ	–	–	–	5.52	3.83	5.65	5.17	3.65	4.02	1.17	3.88
ಒಟ್ಟು ರೂ. ಲಕ್ಷಗಳಲ್ಲಿ	53.63	49.80	38.80	40.24	33.10	55.80	44.85	39.86	37.76	34.94	22.54

ಲಾಕ್‌ಔಟ್ ಆಗಿರುವ ಗಿರಣಿಗಳನ್ನು ಪುನಃ ಪ್ರಾರಂಭಿಸುವ ಬಗ್ಗೆ

2177: ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ):– ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ರಾಜ್ಯದಲ್ಲಿರುವ ಜವಳಿ ಗಿರಣಿಗಳ ಸಂಖ್ಯೆ;

2. ಈ ಗಿರಣಿಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ;

3. ಇವುಗಳ ಪೈಕಿ ಲಾಕ್‌ಔಟ್ ಆಗಿರುವ ಗಿರಣಿಗಳ ಸಂಖ್ಯೆ;

4. ಈ ಗಿರಣಿಗಳಲ್ಲಿ ಸರ್ಕಾರದ ಪಾಲು (ಶೇರು)ಗಳಿವೆಯೇ;

5. ಹಾಗಿದ್ದಲ್ಲಿ, ಸರ್ಕಾರದ ಶೇರಿನ ಹಣದ ಒಟ್ಟು ಮೊತ್ತವೇನು (ಗಿರಣಿಗಳ ವಿವರವನ್ನು ನೀಡುವುದು);

6. ಲಾಕ್‌ಔಟ್ ಆಗಿರುವ ಗಿರಣಿಗಳನ್ನು ಪುನಃ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು):–

1. 46 (ನಲವತ್ತಾರು ಮಾತ್ರ)

2. 31,553

3. ಇಲ್ಲ.

4. ಹೌದು.

5. ವಿವರಗಳನ್ನು ಪಡೆದು ಸಭೆಯ ಮುಂದೆ ಮಂಡಿಸಲಾಗುವುದು.

6. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ರೇಷ್ಮೆ ಅಭಿವೃದ್ಧಿಗೆ ವಿಶ್ವ ಬ್ಯಾಂಕಿನಿಂದ ಆರ್ಥಿಕ ಸಹಾಯ ಪಡೆಯುವ ಬಗ್ಗೆ

2178: ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ):– ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ರೇಷ್ಮೆ ಅಭಿವೃದ್ಧಿಗೆ ಮತ್ತು ರೇಷ್ಮೆ ಉದ್ಯಮಗಳ ಅಭಿವೃದ್ಧಿಗೆ ವಿಶ್ವಬ್ಯಾಂಕ್ ಆರ್ಥಿಕ ಸಹಾಯಕ್ಕಾಗಿ ಕರಡು ಯೋಜನೆಯನ್ನು ತಯಾರಿಸಲಾಗಿದೆಯೇ;

ಆ. ಉತ್ಪಾದಕ ಮತ್ತು ಅನುತ್ಪಾದಕ ವಸ್ತುಗಳ ಮೇಲೆ ಆಗಬಹುದಾದ ವೆಚ್ಚವನ್ನು ಯೋಜನೆಯಡಿಯಲ್ಲಿ ಸಿದ್ದಪಡಿಸಲಾಗಿದೆಯೇ;

ಇ. ರೇಷ್ಮೆಯ ಗುಣಮಟ್ಟ ಮತ್ತು ಇಳುವರಿ ಸುಧಾರಣೆ ಮಾಡಲು ಹೊಸದಾಗಿ ಯೋಜನೆಯಲ್ಲಿ ಸೇರಿಸಲಾಗಿದೆಯೇ ?

ಡಾ. ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

ಅ. ಇಲ್ಲ.

ವಿಶ್ವಬ್ಯಾಂಕ್ ಆರ್ಥಿಕ ಸಹಾಯದ ರಾಷ್ಟ್ರಿಯ ರೇಷ್ಮೆ ಕೃಷಿ ಯೋಜನೆ ರಾಜ್ಯದಲ್ಲಿ 1–4–89ರಿಂದ ಅನುಷ್ಠಾನದಲ್ಲಿದೆ ಇದರ ಅವಧಿ 7 ವರ್ಷಗಳು.

ಆ. ಈ ಯೋಜನೆಯಡಿಯಲ್ಲಿ ತೊಡಗಿಸಿರತಕ್ಕಂತ ಹಣ ಉತ್ಪಾದಕತೆ ಗುರಿಯನ್ನು ಇಟ್ಟು ಮಾತ್ರ ತಯಾರಿಸಿದೆ. ಈ ಯೋಜನೆ ಅಡಿಯಲ್ಲಿ ನಿಗದಿಪಡಿಸಿರುವ ಮೊತ್ತ ರೂ. 64.10 ಕೋಟಿ ರೂಪಾಯಿಗಳು.

ಇ. ರೇಷ್ಮೆಯ ಗುಣಮಟ್ಟವನ್ನು ಜಾಸ್ತಿ ಮಾಡಬೇಕೆಂದು ಮಲ್ಟಿಎಂಡ್ ಬೇಸಿನ್ ಸ್ಥಾಪನೆಯನ್ನು ಹೊಸದಾಗಿ ಯೋಜನೆಯಲ್ಲಿ ಸೇರಿಸಲಾಗಿದೆ.

ರಾಜ್ಯದ ಸಕ್ಕರೆ ಕಾರ್ಖಾನೆಗಳಿಂದ ಮಾಹೆಯಾನ ಹಾಗೂ ವರ್ಷಕ್ಕೆ ಉತ್ಪಾದನೆಯಾಗುವ ಸಕ್ಕರೆ ಪ್ರಮಾಣ ಕುರಿತು

2179: ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ):– ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು (ಸಹಕಾರಿ ಕ್ಷೇತ್ರ, ಖಾಸಗಿ ಕ್ಷೇತ್ರ, ಸಾರ್ವಜನಿಕ ಕ್ಷೇತ್ರಕ್ಕೆ ಪ್ರತ್ಯೇಕ ಮಾಹಿತಿ ನೀಡುವುದು);

ಆ. ಅವುಗಳ ಪೈಕಿ ಮುಚ್ಚಲ್ಪಟ್ಟಿರುವ ಕಾರ್ಖಾನೆಗಳಾವುವು;

ಇ. ಎಲ್ಲಾ ಕ್ಷೇತ್ರದ ಸಕ್ಕರೆ ಕಾರ್ಖಾನೆಗಳಿಂದ ಮಾಹೆಯಾನ ಹಾಗೂ ವರ್ಷಕ್ಕೆ ಉತ್ಪಾದನೆಯಾಗುವ ಸಕ್ಕರೆ ಉತ್ಪಾದನೆ ಎಷ್ಟು;

ಈ. ಒಂದು ಟನ್ ಸಕ್ಕರೆಗೆ ಸರ್ಕಾರ ನಿಗದಿಪಡಿಸಿರುವ ಬೆಲೆ ಏನು;

ಉ. ಸಕ್ಕರೆ ಕಾರ್ಖಾನೆಯಿಂದ ಕಾರ್ಖಾನೆಗೆ ಸಕ್ಕರೆ ಬೆಲೆಯಲ್ಲಿ ಯಾವುದಾದರೂ ವ್ಯತ್ಯಾಸವಿರುವುದೇ ?

ಶ್ರೀ ಬಿ.ಎಸ್. ಪಾಟೀಲ್ (ಸಕ್ಕರೆ ಸಚಿವರು):–

ಅ. ರಾಜ್ಯದಲ್ಲಿ 30 ಸಕ್ಕರೆ ಕಾರ್ಖಾನೆಗಳು ಸ್ಥಾಪಿಸಲ್ಪಟ್ಟಿವೆ. (ವಿವರವನ್ನು ಅನುಬಂಧ – ಅ ದಲ್ಲಿ ನೀಡಲಾಗಿದೆ)

ಆ. ಅವುಗಳ ಪೈಕಿ ಸಹಕಾರಿ ಕ್ಷೇತ್ರದ ಒಂದು ಕಾರ್ಖಾನೆ (ವಾಣಿವಿಲಾಸ್ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ಹಿರಿಯೂರು, ಚಿತ್ರದುರ್ಗ ಜಿಲ್ಲೆ) ಮುಚ್ಚಲ್ಪಟ್ಟಿದೆ.

ಇ. ಎಲ್ಲಾ ಕ್ಷೇತ್ರದ ಸಕ್ಕರೆ ಕಾರ್ಖಾನೆಗಳಿಂದ ಮಾಹೆಯಾನ ಹಾಗೂ ವರ್ಷಕ್ಕೆ ಉತ್ಪಾದನೆಯಾಗುವ ಸಕ್ಕರೆ ಪ್ರಮಾಣ ಈ ಕೆಳಕಂಡಂತೆ ಇರುತ್ತದೆ.

ಹಂಗಾಮಿನಲ್ಲಿ ಮಾಹೆಯಾನ ಸರಾಸರಿ ಸಕ್ಕರೆ ಉತ್ಪಾದನೆ	1.66 ಲಕ್ಷ ಮೆ.ಟನ್
ವರ್ಷಕ್ಕೆ ಉತ್ಪಾದನೆಯಾಗುವ ಸಕ್ಕರೆ ಉತ್ಪಾದನೆ	10.35 ಲಕ್ಷ ಮೆ.ಟನ್

(1991-92ರ ಅಂಕಿ ಅಂಶಗಳ ಪ್ರಕಾರ)

ಈ. ರಾಜ್ಯ ಸರ್ಕಾರಕ್ಕೆ ಸಕ್ಕರೆ ಬೆಲೆ ನಿಗದಿಪಡಿಸುವ ಅಧಿಕಾರ ಇರುವುದಿಲ್ಲ. ಆದರೆ ಕೇಂದ್ರ ಸರ್ಕಾರವು ಲೆವಿ ಸಕ್ಕರೆ ಮೇಲೆ ಟನ್ ಒಂದಕ್ಕೆ ರೂ. 6538.00ನ್ನು ನಿಗದಿಪಡಿಸಿರುತ್ತದೆ.

ಉ. ಹೌದು. ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ – 772.00 (ನಿ), ಬ್ರಹ್ಮಾವರ ಇದನ್ನು ಹೊರತುಪಡಿಸಿ ಉಳಿದೆಲ್ಲಾ ಕಾರ್ಖಾನೆಗಳ ಲೆವಿ ಸಕ್ಕರೆ ಬೆಲೆಯಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ.

ಅನುಬಂಧ-ಆ

ಸಂ.	ಸಕ್ಕರೆ ಕಾರ್ಖಾನೆಯ ಹೆಸರು, ಕಾರ್ಖಾನೆ ಇರುವ ಸ್ಥಳ	ದಿನಂಪ್ರತಿ ಕಬ್ಬು ಅರೆಯುವ ಸಾಮರ್ಥ್ಯ (ಮೆ. ಟನ್‌ಗಳಲ್ಲಿ)	ಉತ್ಪಾದನೆ ಪ್ರಾರಂಭಿಸಿದ ವರ್ಷ
01.	ಪಾಂಡವಪುರ ಸಸಕಾ, ಪಾಂಡವಪುರ, ಮಂಡ್ಯ ಜಿಲ್ಲೆ	1500	1959
02.	ಹಿರಣ್ಯಕೇಶಿ ಸಸಕಾ, ಸಂಕೇಶ್ವರ, ಬೆಳಗಾಂ ಜಿಲ್ಲೆ	5000	1960
03.	ಕಂಪ್ಲಿ ಕೋಆಪರೇಟಿವ್ ಶುಗರ್ ಫ್ಯಾ. ಕಂಪ್ಲಿ, ಬಳ್ಳಾರಿ ಜಿಲ್ಲೆ	1200	1958
04.	ಬಿದರ್ ಸಸಕಾ, ಹಳ್ಳಿಖೇಡ್, ಹುಮುನಾಬಾದ್, ಬೀದರ್ ಜಿಲ್ಲೆ	2000	1968
05.	ಮಲಪ್ರಭಾ ಸಸಕಾ, ಸಿಎಸ್‌ಎಫ್, ಎಂಕೆ, ಹುಬ್ಬಳ್ಳಿ, ಬೈಲಹೊಂಗಲ ತಾ. ಬೆಳಗಾಂ ಜಿಲ್ಲೆ	3500	1970
06.	ಘಟಪ್ರಭಾ ಸಸಕಾ, ಗೋಕಾಕ್, ಗೋಕಾಕ್ ತಾ. ಬೆಳಗಾಂ ಜಿಲ್ಲೆ	1250	1980
07.	ದೂದ್‌ಗಂಗಾ ಕೃಷ್ಣಾ ಸಸಕಾ, ಚಿಕ್ಕೋಡಿ, ಬೆಳಗಾಂ ಜಿಲ್ಲೆ	2000	1974
08.	ಶ್ರೀ ಶ್ರೀರಾಮ ಸಸಕಾ, ಚುಂಚನಕಟ್ಟೆ, ಕೆ.ಆರ್.ನಗರ ತಾ. ಮೈಸೂರು ಜಿಲ್ಲೆ	1250	1979
09.	ರಾಯಬಾಗ್ ಸಸಕಾ, ರಾಯಬಾಗ್, ರಾಯಬಾಗ್ ತಾ. ಬೆಳಗಾಂ ಜಿಲ್ಲೆ	1250	1977
10.	ಹೇಮಾವತಿ ಸಸಕಾ, ಶ್ರೀನಿವಾಸಪುರ, ಚೆನ್ನರಾಯಪಟ್ಟಣ ತಾ. ಹಾಸನ ಜಿಲ್ಲೆ	1250	1984
11.	ಹಾಲಸಿದ್ದ ಸಸಕಾ, ನಿಪ್ಪಾಣಿ, ಬೆಳಗಾಂ ಜಿಲ್ಲೆ	1250	1987
12.	ಕರ್ನಾಟಕ ಸಸಕಾ, ಹಾವೇರಿ, ಧಾರವಾಡ ಜಿಲ್ಲೆ	1250	1983
13.	ಭದ್ರಾ ಸಸಕಾ, ದೊಡ್ಡಬಾತಿ, ದಾವಣಗೆರೆ, ಚಿತ್ರದುರ್ಗಾ ಜಿಲ್ಲೆ	1250	1978
14.	ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಬೂಸನೂರು, ಆಳಂದ್ ತಾ. ಗುಲ್ಬರ್ಗಾ ಜಿಲ್ಲೆ	1250	1989
15.	ದಕ್ಷಿಣ ಕನ್ನಡ ಸಸಕಾ, ಬ್ರಹ್ಮಾವರ, ಉಡುಪಿ ತಾ. ದಕ್ಷಿಣ ಕನ್ನಡ ಜಿಲ್ಲೆ	1250	1984
16.	ನದಿ ಸಸಕಾ, ಕೃಷ್ಣಾ ನಗರ, ಬಿಜಾಪುರ ಜಿಲ್ಲೆ	2500	1992

17. ವಾಣಿವಿಲಾಸ ಸಸಕಾ ಕೋಆಪರೇಟಿವ್ ಶುಗರ್ ಫ್ಯಾಕ್ಟರಿ, ಹಿರಿಯೂರು, ಚಿತ್ರದುರ್ಗ ಜಿಲ್ಲೆ	1250	1971
ಸಾರ್ವಜನಿಕ ಮತ್ತು ಜಂಟಿ ವಲಯ:		
18. ಮೈಸೂರು ಸಕ್ಕರೆ ಕಂ. ಮಂಡ್ಯ ಜಿಲ್ಲೆ, ಮಂಡ್ಯ	5000	1933
19. ಎಂ.ಪಿ.ಎಂ. ಶುಗರ್ಸ್, ಭದ್ರಾವತಿ, ಶಿವಮೊಗ್ಗ ಜಿಲ್ಲೆ	2500	1984
20. ಗಂಗಾವತಿ ಸಕ್ಕರೆ ಕಾರ್ಖಾನೆ, ಮರಳಿ, ಗಂಗಾವತಿ ತಾ. ರಾಯಚೂರು ಜಿಲ್ಲೆ	2500	1975
21. ದಾವಣಗೆರೆ, ಕುಕ್ಕವಾಡಾ, ದಾವಣಗೆರೆ ತಾ. ಚಿತ್ರದುರ್ಗ ಜಿಲ್ಲೆ	1250	1974
ಖಾಸಗಿ ವಲಯ:		
22. ಗೋದಾವರಿ ಶುಗರ್ಸ್, ಸಮೀರವಾಡಿ, ಬಿಜಾಪುರ ಜಿಲ್ಲೆ	5000	1972
23. ಸಿರಗುಪ್ಪ ಶುಗರ್ಸ್, ದೇಶನೂರು, ಸಿರಗುಪ್ಪ, ಬಳ್ಳಾರಿ ಜಿಲ್ಲೆ	1250	1973
24. ಉಗಾರ್ ಶುಗರ್ ವರ್ಕ್ಸ್, ಉಗಾರ್ ಖುರ್ದ್, ಬೆಳಗಾಂ ಜಿಲ್ಲೆ	5000	1943
25. ತುಂಗಭದ್ರಾ ಶುಗರ್ಸ್, ಶಿವಮೊಗ್ಗ	2500	1954
26. ಚಾಮುಂಡೇಶ್ವರಿ ಶುಗರ್ಸ್, ಕೆ.ಎಮ್.ದೊಡ್ಡಿ, ಮದ್ದೂರು ತಾ. ಮಂಡ್ಯ ಜಿಲ್ಲೆ	4000	1974
27. ಮಹದೇಶ್ವರ, ಕುಂತೂರ್, ಕೊಳ್ಳೆಗಾಲ ತಾ. ಮೈಸೂರು	1250	1975
28. ಐ.ಎಸ್.ಆರ್.ಣಿ, ಹೊಸಪೇಟೆ, ಬಳ್ಳಾರಿ ಜಿಲ್ಲೆ	2000	1934
29.	1250	1965
30. ಬನ್ನಾರಿ ಅಮ್ಮನ್ ಶುಗರ್ಸ್, ಕೋಲಾರ್ ಜಿಲ್ಲೆ	2500	1992

ಬೆಳಗಾಂ ಜಿಲ್ಲೆಯಿಂದ ಕಬ್ಬು ಬೇರೆ ರಾಜ್ಯಗಳಿಗೆ ಹೋದ ಬಗ್ಗೆ

2208: ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾಂ ಜಿಲ್ಲೆಯಿಂದ ಈ ವರ್ಷ ಬೇರೆ ರಾಜ್ಯಗಳಿಗೆ ಎಷ್ಟು ಟನ್ ಕಬ್ಬು ಹೊರಕ್ಕೆ ಹೋಗಿರುತ್ತದೆ;

ಆ. ಬೇರೆ ರಾಜ್ಯಗಳಿಗೆ ಬೆಳಗಾಂ ಜಿಲ್ಲೆಯಿಂದ ಕಬ್ಬು ಹೋಗಿರುವುದರಿಂದ ಸರ್ಕಾರಕ್ಕೆ ಹಾನಿಯಾಗಿರುವುದೆಷ್ಟು;

ಇ. ಜಿಲ್ಲೆಯಿಂದ ಬೇರೆ ರಾಜ್ಯಗಳಿಗೆ ಕಬ್ಬು ಹೋದುದರಿಂದ ಈ ವರ್ಷ ಜಿಲ್ಲೆಯ ಎಲ್ಲಾ ಸಕ್ಕರೆ

ಕಾರ್ಖಾನೆಗಳು ಬೇಗನೆ ಕಬ್ಬು ಅರೆಯುವುದನ್ನು ನಿಲ್ಲಿಸಿದ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಈ. ಬೆಳಗಾಂ ಜಿಲ್ಲೆಯಲ್ಲಿ ಈ ವರ್ಷ ಕಬ್ಬು ಬೆಳೆಯಾಗಿರುವುದೆಷ್ಟು;

ಉ. ಬೆಳಗಾಂ ಜಿಲ್ಲೆಯಲ್ಲಿರುವ ಪ್ರತಿಯೊಂದು ಕಬ್ಬಿನ ಕಾರ್ಖಾನೆಯವರು ಎಷ್ಟೆಷ್ಟು ಕಬ್ಬನ್ನು ಇಲ್ಲಿಯವರೆಗೆ ನುರಿಸಿರುವರು ಹಾಗೂ ಹೋದವರ್ಷ ಪ್ರತಿಯೊಂದು ಕಾರ್ಖಾನೆಯವರು ಕಬ್ಬನ್ನು ಎಷ್ಟೆಷ್ಟು ನುರಿಸಿರುವರು ?

ಶ್ರೀ ಬಿ.ಎಸ್. ಪಾಟೀಲ್ (ಸಕ್ಕರೆ ಸಚಿವರು):-

ಅ. ಬೆಳಗಾಂ ಜಿಲ್ಲೆಯಿಂದ ಈ ವರ್ಷ ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳಿಗೆ 1,05,624 ಮೆಟ್ರಿಕ್ ಟನ್ ಕಬ್ಬು ಪರ್ಮಿಟ್ ಮೇಲೆ ಸಾಗಿಸಲ್ಪಟ್ಟಿದೆ.

ಆ. ಪರ್ಮಿಟ್ ಪಡೆದು ಸಾಗಿಸಲಾಗಿರುವ ಕಬ್ಬಿನಿಂದ ರಾಜ್ಯ ಸರ್ಕಾರಕ್ಕೆ ರೂ. 41,44,750.00 ಕಬ್ಬು ಕೊಳ್ಳುವ ತೆರಿಗೆಯಾಗಿ ಸಂದಾಯವಾಗಿರುತ್ತದೆ. ಸರ್ಕಾರಕ್ಕೆ ಯಾವ ಹಾನಿಯೂ ಆಗಿರುವುದಿಲ್ಲ.

ಇ. ಬಂದಿರುವುದಿಲ್ಲ.

ಈ. ಸುಮಾರು 58.55 ಲಕ್ಷ ಮೆಟ್ರಿಕ್ ಟನ್.

ಉ. ವಿವರ ಈ ಕೆಳಕಂಡಂತೆ ಇರುತ್ತದೆ:

ಕಾರ್ಖಾನೆಯ ಹೆಸರು	ನುರಿಸಿರುವ ಕಬ್ಬಿನ ಪ್ರಮಾಣ (ಮೆ.ಟನ್) 1992-93 ಹಂಗಾಮು ಫೆಬ್ರವರಿ 93ರ ಕೊನೆಗೆ	91-92ರ ಹಂಗಾಮಿನಲ್ಲಿ
1) ಹಿರಣ್ಯಕೇಶಿ ಸಸಕಾ ಸಂಕೇಶ್ವರ	5,59,965	7,48,594
2) ಮಲಪ್ರಭಾ ಸಸಕಾ ಎಂ.ಕೆ. ಹುಬ್ಬಳ್ಳಿ	3,59,810	7,15,502
3) ದೂದಗಂಗಾಕೃಷ್ಣಾ ಚಿಕ್ಕೋಡಿ	2,77,020	4.05,786
4) ಘಟಪ್ರಭಾ ಸಸಕಾ ಗೋಕಾಕ್	1,83,750	2,88,826
5) ರಾಯಬಾಗ್ ಸಸಕಾ ರಾಯಬಾಗ್	2,02,025	2,63,064
6) ಹಾಲಸಿದ್ಧನಾಥ ಸಸಕಾ ನಿಪ್ಪಾಣಿ	1,76,365	2,42,425
7) ಉಗಾರ್ ಶುಗರ್ ವರ್ಕ್ಸ್ ಉಗಾರ್ ಖುರ್ದ್	4,61,155	10,15,853

ವಿಧಾನಸಭೆಯಲ್ಲಿ ಆಶ್ವಾಸನೆ ನೀಡಿದ ಪ್ರಕಾರ ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಪೈಕಿ ಮಲ್ಲಾಪುರ ಕೆ.ಎನ್. ಗ್ರಾಮದಲ್ಲಿ ಸರ್ಕಾರಿ ಬಿಸಿಎಂ ಹಾಸ್ಟೆಲ್ ಪ್ರಾರಂಭಿಸುವ ಬಗ್ಗೆ

2209: ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಪೈಕಿ ಮಲ್ಲಾಪುರ ಕೆ.ಎನ್. ಗ್ರಾಮದಲ್ಲಿ ಸರ್ಕಾರಿ

ಪ್ರೌಢಶಾಲೆಗಳ ವಿದ್ಯಾರ್ಥಿಗಳ ಅನುಕೂಲತೆಗಾಗಿ ಬಿ.ಸಿ.ಎಂ. ಹಾಸ್ಟೆಲ್‌ನ್ನು ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು (ಪ್ರೀ ಮೆಟ್ರಿಕ್ಯುಲೇಟ್);

ಆ. ಒಂದು ವೇಳೆ ಸರ್ಕಾರದವರು ಇದುವರೆಗೂ ಇಲ್ಲಿ ಬಿ.ಸಿ.ಎಂ. ಹಾಸ್ಟೆಲ್‌ನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳದಿದ್ದಲ್ಲಿ 1993-94ನೇ ಸಾಲಿನಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳುವರೇ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ. ಇಲ್ಲ.

ಆ. ಪರಿಶೀಲಿಸಲಾಗುವುದು.

ಮಕ್ಕಳ ಸಮಗ್ರ ಅಭಿವೃದ್ಧಿ ಯೋಜನೆ ಕಾರ್ಯಕ್ರಮ ಜಾರಿ ಕುರಿತು

1365: ಶ್ರೀ ಬಿ. ಹಂಪನಗೌಡ (ಸಿಂಧನೂರು):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಸಮಗ್ರ ಬಾಲವಿಕಾಸ ಯೋಜನೆ ಜಾರಿಗೆ ತಂದಿರುವುದು ಯಾವಾಗ; (ಜಿಲ್ಲಾ ಮತ್ತು ತಾಲ್ಲೂಕುವಾರು ವಿವರ ನೀಡುವುದು). ಅಂದಿನಿಂದ ಪ್ರತಿ ವರ್ಷ ಈ ಯೋಜನೆ ವ್ಯಾಪ್ತಿಗೆ ಸೇರ್ಪಡೆಯಾಗಿರುವ ತಾಲ್ಲೂಕುಗಳು ಯಾವುವು; (ಕೇಂದ್ರ ಮತ್ತು ರಾಜ್ಯ ಸರ್ಕಾರದ ಪುರಸ್ಕೃತ ಪತ್ರದ ಪಟ್ಟಿಯನ್ನು ನೀಡುವುದು);

ಆ. ಸಮಗ್ರ ಬಾಲವಿಕಾಸ ಯೋಜನೆಯಡಿಯಲ್ಲಿ ವಿನಿಯೋಗಿಸಲಾಗಿರುವ ಹಣದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ತಲಾಪಾಲು ಎಷ್ಟು ? ಈ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿರುವ ತಾಲ್ಲೂಕುಗಳು ಯಾವುವು;

ಇ. ರಾಯಚೂರು ಜಿಲ್ಲೆಯಲ್ಲಿ ಕೇಂದ್ರ ಸರ್ಕಾರ ಪುರಸ್ಕೃತ ಕಾರ್ಯಕ್ರಮ ಜಾರಿಗೆ ಅನುಮತಿ ನೀಡಲಾಗಿರುವ ತಾಲ್ಲೂಕುಗಳಾವುವು ಹಾಗೂ ಎಂದಿನಿಂದ ಜಾರಿಯಲ್ಲಿ ತರಲಾಯಿತು. ವಿಳಂಬಕ್ಕೆ ಕಾರಣಗಳೇನು ?

ಈ. ರಾಯಚೂರು ಜಿಲ್ಲೆಯಲ್ಲಿ ಈ ಕಾರ್ಯಕ್ರಮದ ವ್ಯಾಪ್ತಿಗೆ ಒಳಪಡದಿರುವ ತಾಲ್ಲೂಕುಗಳು ಯಾವುವು; ಎಲ್ಲಾ ತಾಲ್ಲೂಕುಗಳನ್ನು 93–94ರ ಆರ್ಥಿಕ ಸಾಲಿನಲ್ಲಿಯೇ ಈ ಯೋಜನೆಯಡಿಯಲ್ಲಿ ಸೇರ್ಪಡೆ ಮಾಡಲಾಗುವುದೇ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ. ರಾಜ್ಯದಲ್ಲಿ ಸಮಗ್ರ ಬಾಲವಿಕಾಸ ಯೋಜನೆಯು ದಿನಾಂಕ: 2–10–75ರಂದು ಜಾರಿಗೊಳಿಸಲಾಗಿದೆ. ವರ್ಷಾವಾರು, ಜಿಲ್ಲಾವಾರು, ಹಾಗೂ ವಲಯವಾರು ವಿವರಗಳನ್ನು ಅನುಬಂಧ – 1ರಲ್ಲಿ ಕೊಟ್ಟಿದೆ.

ಆ. 92–93ನೇ ಸಾಲಿನ ಐಸಿಡಿಎಸ್‌ನ ಒಟ್ಟು ಮೊತ್ತ 48.91 ಕೋಟಿ ರೂ.ಗಳ ವಾರ್ಷಿಕ ಆಯವ್ಯಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲು ಈ ಕೆಳಕಂಡಂತಿದೆ.

	ಕೇಂದ್ರ	ರಾಜ್ಯ
ಆಡಳಿತ ವೆಚ್ಚ	2219.07	326.84

ಪೌಷ್ಟಿಕ ಆಹಾರ	123.40	2222.59
	2342.47	2549.43

ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ 36 ತಾಲ್ಲೂಕುಗಳ ಪಟ್ಟಿಯನ್ನು ಅನುಬಂಧ – 2ರಲ್ಲಿ ಕೊಟ್ಟಿದೆ.

ಇ.	ಮಂಜೂರಾದ ವರ್ಷ
ಕುಷ್ಟಗಿ	1981–82
ಲಿಂಗಸೂಗೂರು	82–83
ದೇವದುರ್ಗ	86–87
ಮಾನ್ವಿ	89–90
ರಾಯಚೂರು (ಗ್ರಾ)	90–91
ಸಿಂದನೂರು	91–92

ರಾಯಚೂರು ಜಿಲ್ಲೆಯ ಈ ಮೇಲಿನ 6 ತಾಲ್ಲೂಕುಗಳಲ್ಲಿ ಕೇಂದ್ರ ಪುರಸ್ಕೃತ ಐಸಿಡಿಎಸ್ ಯೋಜನೆಗಳು ಮಂಜೂರಾಗಿವೆ. ಮಾನ್ವಿ, ರಾಯಚೂರು (ಗ್ರಾ) ಹಾಗೂ ಸಿಂಧನೂರು ತಾಲ್ಲೂಕುಗಳಲ್ಲಿ ಯೋಜನೆಗಳನ್ನು ಪ್ರಾರಂಭಿಸಲು ಕ್ರಮವಾಗಿ 90–91ರಲ್ಲಿ 91–92ರಲ್ಲಿ ಹಾಗೂ 92–93ರಲ್ಲಿ ರಾಜ್ಯ ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಮಂಜೂರಾತಿ ನಂತರ ಶೀಘ್ರದಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಆಡಳಿತಾತ್ಮಕ ತೊಂದರೆಗಳಿಂದಾಗಿ ರಾಯಚೂರು (ಗ್ರಾ) ಯೋಜನೆಯಲ್ಲಿ ಮಾತ್ರ ಅನುಷ್ಠಾನ ಸ್ವಲ್ಪ ಮಟ್ಟಿಗೆ ವಿಳಂಬಗೊಂಡಿತ್ತು.

ಈ. ಕೊಪ್ಪಳ ಮತ್ತು ಗಂಗಾವತಿ ತಾಲ್ಲೂಕುಗಳು ಮಾತ್ರ ಈ ಕಾರ್ಯಕ್ರಮದ ವ್ಯಾಪ್ತಿಗೆ ಇನ್ನೂ ಒಳಪಟ್ಟಿರುವುದಿಲ್ಲ. 92–93 ಅಥವಾ 93–94ನೇ ಸಾಲಿಗೆ ಕೇಂದ್ರ ಸರ್ಕಾರವು ಈ ತಾಲ್ಲೂಕುಗಳಿಗೆ ಐಸಿಡಿಎಸ್ ಯೋಜನೆಗಳನ್ನು ಮಂಜೂರು ಮಾಡಿದಲ್ಲಿ ರಾಜ್ಯ ಸರ್ಕಾರವು ಅನುಷ್ಠಾನಗೊಳಿಸಲಾಗುವುದು.

ANNEXURE - I

LIST OF ICDS PROJECTS SANCTIONED IN KARNATAKA SINCE 1975
CATEGORISED DISTRICTWISE SECTOR WISE AND YEARWISE

CENTRAL SECTOR					STATE SECTOR				
Sl. No.	Year of saction	Project	AWCs San	District	Sl. No.	Year of saction	Project	AWCs San	District
1	2	3	4	5	6	7	8	9	10
1.	1975-76	1) T. Narasipur	220	Mysore					
2.	1976-77		Nil		1.		Udupi	125	Dakshina Kannada
					2.		Dharwad	125	Dharwad
3.	1977-78		Nil		3.		Molakalmuru	125	Chitradurga
					4.		Jamakhandi	100	Bijapur
					5.		Chittapura	100	Gulbarga
					6.		C.B. Pura	100	Kolar
					7.		S.R. Patna	100	Mandya
					8.		Ankola	100	Uttara Kannada
					9.		Sandur	100	Bellary
4.	1978-79	2) Raibagh	213	Belgaum	10.		Pavagada	100	Tumkur

1	2	3	4	5	6	7	8	9	10
		3) Basavakalyana	200	Bidar	11.		Soraba	100	Shimoga
		4) Kanakapura	272	Bangalore (R)	12.		Yelburga	100	Raichur
		5) Ponnampet	257	Kodagu	13.		Hassan	100	Hassan
					14.		Kadur	100	Chikkamaga-lur
5.	1979-80	6) Bangalore (City)	100	Bangalore (U)	15.		Bangalore City	100	Bangalore
		7) Hunsur	179	Mysore					
		8) Channagiri	223	Shimoga					
6.	1980-81	9) Sindagi	222	Bijapur					
		10) Holalkere	158	Chitradurga					
		11) Mangalore (U)	100	Dakshina Kannada					
7.	1981-82	12) Kudligi	166	Bellary	16.		Anekal	100	Bangalore Urban
		13) Shirahatti	139	Dharwad	17.		Athani	100	Belgaum
		14) Hirekerur	162	Dharwad	18.		Bidar	100	Bidar
		15) Humnabad	192	Bidar	19.		Badami	100	Bijapur
		16) Mudigere	113	Chikmagalur	20.		Koppa	100	Chikkamaga-lur

1	2	3	4	5	6	7	8	9	10
		17) Hiriyur	196	Chitradurga	21.		Karkala	100	Dakshina Kannada
		18) Belthangadi	175	Dakshina Kannada	22.		Hangal	100	Dharwad
		19) Kundapura	312	Dakshina Kannada	23.		Pandavapura	100	Mandya
		20) Shorapura	222	Gulbarga	24.		Sagar	100	Shimoga
		21) C.R. Patna	218	Hassan	25.		Koratagere	100	Tumkur
		22) Malur	143	Kolar	26.		Kunigal	100	Tumkur
		23) H.D. Kote	171	Mysore	27.		Supa	100	Uttara Kannada
		24) Tumkur (Urban)	100	Tumkur	28.		Somvarpet	100	Kodagu
		25) Kumta	117	Uttara Kannada	29.		Jewargi	100	Gulbarga
		26) Bhalki	182	Bidar	30.		Yadgiri	100	Gulbarga
		27) Ranebennur	217	Dharwad					
		28) Afzalpura	130	Gulbarga					
		29) Bangarpet	341	Kolar					
		30) Kustagi	137	Raichur					

1	2	3	4	5	6	7	8	9	10
8.		31) Soundatti	222	Belgaum					
		32) Harapanahalli	183	Bellary					
		33) Indi	244	Bijapur					
		34) Mudhol	164	Bijapur					
		35) Hosadurga	173	Chitradurga					
		36) Sulliya	105	Dakshina Kannada					
		37) Gadag	253	Dharwad					
		38) Mundargi	91	Dharwad					
		39) Santhapura	174	Bidar					
		40) Chincholi	158	Gulbarga					
	1982-83	41) H.N. Pura	131	Hassan					
		42) Nagamangala	157	Mandya					
		43) Kollegala	263	Mysore					
		44) Mysore (Urban)	100	Mysore					
		45) Lingasugur	200	Raichur					
		46) Bhadravathi	292	Shimoga					
		47) Honnali	172	Shimoga					
		48) Yellapura	60	Uttara Kannada					
9.	1984-85	49) Challakere	219	Chitradurga					

1	2	3	4	5	6	7	8	9	10
		50) Nelamangala	128	Bangalore Rural					
		51) Ron	194	Dharwad					
		52) Sedam	129	Gulbarga					
		53) Belur	147	Hassan					
		54) Mulabagilu	171	Kolar					
		55) Malavalli	229	Mandya					
		56) Madhugiri	214	Tumkur					
10.	1986-87	57) Hubli	106	Dharwad					
		58) Gulbarga Urban	100	Gulbarga					
		59) Begepalli	140	Kolar					
		60) Gundlupet	186	Mysore					
		61) Yelandur	68	Mysore					
		62) Deodurga	155	Raichur					
		63) Sira	236	Tumkur					
		64) Hospet	184	Bellary					
11.	1988-89	65) Bangalore North	386	Bangalore Urban					
		66) Puttur	330	Dakshina Kannada					
		67) Chintamani	233	Kolar					

1	2	3	4	5	6	7	8	9	10
		68) Srinivasapura	168	Kolar					
		69) Sringeri	113	Chikkamagalur					
		70) Karwar	92	Uttara Kannada					
	1988-89	71) C.N. Halli	202	Tumkur					
		72) Madikeri	202	Kodagu					
		73) H. Hadagali	136	Bellary					
		74) Muddebihal	217	Bijapur					
		75) Jagalur	131	Chitradurga					
		76) Chitradurga	307	Chitradurga					
		77) Shahapura	225	Gulbarga					
		78) Aland	254	Gulbarga					
12.	1989-90	79) Devanahalli	211	Bangalore Rural					
		80) Hoskote	244	Bangalore Rural					
		81) Bangalore (S)	185	Bangalore Urban					
		82) Belgaum urban	100	Belgaum					
		83) Hukkeri	327	Belgaum					
		84) Gokak	431	Belgaum					

1	2	3	4	5	6	7	8	9	10
		85) Bellary Urban	100	Bellary					
		86) Bijapur Rural	258	Bijapur					
		87) Bilagi	118	Bijapur					
		88) Davanagere	243	Chitradurga					
		89) Hubli-Dharwad	100	Dharwad					
		90) Savanur	125	Dharwad					
		91) Gulbarga Rural	217	Gulbarga					
		92) Alur	83	Hassan					
		93) Sakaleshpura	137	Hassan					
		94) Manvi	242	Raichur					
		95) Shimoga	163	Shimoga					
		96) Chikmagalur (R)	273	Chikmagalur					
		97) Bantwal	488	Dakshina Kannada					
		98) Gouribidanur	256	Kolar					
		99) Maddur	293	Mandya					
		100) Chamarajanagar	469	Mysore					
		101) Nanjangud	464	Mysore					
		102) Tiptur	210	Tumkur					
		103) Tumkur Rural	271	Tumkur					

1	2	3	4	5	6	7	8	9	10
		104) Bhatkal	116	Uttara Kannada					
		105) Kolar	294	Kolar					
		106) Shidlaghatta	169	Kolar					
13.	1990-91	107) Siruguppa	179	Bellary					
		108) Kalagatagi	69	Dharwad					
		109) Raichur Rural	329	Raichur					
		110) Shikaripura	184	Shimoga					
		111) Tarikere	216	Chikmagalur					
		112) Gudibanda	47	Kolar					
14.	1991-92	113) Bellary (R)	221	Bellary					
		114) H.B. Halli	119	Bellary					
		115) Shiggaon	146	Dharwad					
		116) Sindhanur	263	Raichur					
		117) Hosanagara	121	Shimoga					
		118) N.R. Pura	62	Chickmagalur					

Note:

1. Davanagere project was sanctioned under the State sector during the year 1977-78 with 125 centres. Govt. of India has also sanctioned a Central project with 243 centres to Davangere taluk during 1989-90. Hence, State Govt. decided to shift Davanagere state sector project to the nearly taluk Molakalmuru with 125 centres during the year 1991, retaining the Central project in Davangere.
2. Government of Karnataka vide its order No.SWL 120 ICD 90 dated 27.2.92 has saturated 24 State sector projects with 800 additional centres.

ANNEXURE - II

STATEMENT SHOWING THE DETAILS OF 36 UNCOVERED TALUKS UNDER ICDS CATEGORISED AS PER GOVT. OF INDIA GUIDELINES

Statement - A (Taluks taken under Tribal Sub-plan)

Sl. No.	Name of the Taluk	Dist.	Population of the Taluks (in lakhs)						Whether educationally Backward minority concentrated area	Whether covered under DPAP	Whether covered under tribal sub plan ITDP	Whether covered under Hill area devt. Programme	Whether nutritionally backward	REMARKS
			Total Population	SC Population	%	ST Population	%	Total SC & ST %						
1	2	3	4	5	6	7	8	9	10	11	12	13	14	15
1.	Periya-patna	Mysore	1.55	0.22	14.0	0.05	3.0	17	-	-	yes	-	yes	-
2.	Manga-lore(R)	D.K.	2.43	0.22	9.0	0.04	2.0	11.0	-	-	yes	-	-	-

Statement - B

Details of Taluks which have 30% or more SC & ST population

i) DPAP: **Statement - C**

3.	Doddaballapur	Bangalore (R)	1.91	0.37	19.0	0.07	4.0	23.0	-	yes	-	-	yes	-
4.	Gubbi	Tumkur	1.88	0.28	15.0	0.11	7.0	22.0	-	yes	-	-	yes	-
5.	Bagalkot	Bijapur	1.82	0:23	12.6	0.13	7.1	19.7	yes	yes	-	-	yes	-
6.	B. Bagewadi	Bijapur	2.20	0.35	15.9	0.06	2.7	18.6	yes	yes	-	-	-	-
7.	Hungund	Bijapur	2.20	0.25	11.0	0.14	7.0	18.0	yes	yes	-	-	yes	-
8.	Arasikere	Hassan	2.55	0.41	16.0	0.03	1.17	17.17	-	yes	-	-		
9.	Byadagi	Dharwad	0.93	0.08	8.6	0.07	7.5	16.0	-	yes	-	-	yes	-
10.	Koppala	Raichur	1.99	0.13	6.5	0.18	9.0	25.5	-	yes	-	-	yes	-
11.	Ramdurga	Belgaum	1.68	0.19	11.3	0.05	2.9	14.0	-	yes	-	-	yes	-
12.	Haveri	Dharwad	1.81	0.16	9.0	0.08	4.0	13.0	-	yes	-	-	yes	-

13. Kundgol	Dharwad	1.27	0.11	8.6	0.04	3.1	11.5	-	yes	-	-	yes	-

ii) WGDP (Western Ghat Development Programmes) Taluks

14. Belgaum (R)	Belgaum	2.45	0.14	6.0	0.14	6.0	12.0	-	-	-	yes	-	
15. B. Hongal	Belgaum	2.53	0.15	6.0	0.17	6.7	12.7	-	-	yes	yes	yes	-
16. Honnavara	U.K.	1.28	0.13	10.0	0.001	0.02	10.0	-	-	-	yes	yes	
17. Sirsi	U.K.	1.35	0.13	10.0	0.002	0.16	10.0	-	-	-	yes	yes	-
18. Khanapura	Belgaum	1.88	0.12	6.5	0.04	2.75	8.25	-	-	-	yes	yes	-
19. Thirthahalli	Shimoga	1.24	0.08	7.0	0.01	1.00	8.0	-	-	-	yes	yes	-
20. Siddapura	U.K.	0.84	0.05	6.0	0.002	0.2	6.0	-	-	-	yes	yes	-

Statement - D

21. Gangawathi	Raichur	2.57	0.37	14.0	0.25	10.0	24.0	-	-	-	-	-	-
22. Mysore (R)	Mysore	1.66	0.27	16.2	0.12	7.2	23.4	-	-	-	-	-	-

Statement - E

23. Magadi	Bangalore (R)	2.03	0.35	18.0	0.04	2.0	20.0	-	-	-	-	yes	-
24. Ramanagar	Bangalore (R)	1.72	0.30	18.0	0.12	1.0	19.0	-	-	-	-	-	-
25. Harihara	Chitradurga	1.73	0.20	12.0	0.12	7.0	19.0	-	-	-	-	-	-
26. Arakalagudu	Hassan	1.55	0.28	18.0	0.01	0.6	18.6	-	-	-	-	-	-
27. K.R. Nagar	Mysore	1.84	0.24	13.0	0.09	5.0	18.0	-	-	-	-	yes	-
28. Channapatna	Bangalore (R)	2.18	0.35	16.0	0.007	0.3	16.3	-	-	-	-	yes	-
29. Nargund	Dharwad	0.68	0.06	3.8	0.05	7.3	16.2	-	-	-	-	-	-
30. Chikkodi	Belgaum	4.22	0.63	14.9	0.01	0.2	15.0	-	-	-	-	yes	-
31. Mundagod	U.K.	0.58	0.08	13.7	0.008	1.3	15.0	-	-	-	-	yes	-
32. Turuvekere	Tumkur	1.48	0.17	12.0	0.03	2.0	14.0	-	-	-	-	yes	-
33. Mandya (R)	Mandya	3.31	0.41	12.4	0.02	0.6	13.0	-	-	-	-	-	-

34. K.R. Pet	Mandya	1.86	0.21	11.2	0.03	1.6	12.8	-	-	-	-	-	-
35. Navalgund	Dharwad	1.38	0.11	7.9	0.06	4.3	12.2	-	-	-	-	yes	-
36. Haliyal	U.K.	1.32	0.10	7.5	0.01	0.75	8.25	-	-	-	-	yes	-

ಅಧ್ಯಕ್ಷರು:- ಪಟ್ಟಿಯನ್ನು ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):-

ಮಾನ್ಯ ಅಧ್ಯಕ್ಷರೆ, 1984ನೇ ಇಸವಿಯ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳು (ಕ್ಯಾಪಿಟೇಷನ್ ಶುಲ್ಕದ ನಿರ್ಬಂಧ ಅಧಿನಿಯಮದ 14ನೇ ಕಲಮಿನ ಮೇರೆಗೆ:

1993ನೇ ಇಸವಿಯ ಇಂಜಿನೀಯರಿಂಗ್, ವೈದ್ಯಕೀಯ, ದಂತ, ಫಾರ್ಮಸಿ ಹಾಗೂ ಶಿಶ್ರೂಷಾ ತರಗತಿಗಳಿಗೆ ಅಭ್ಯರ್ಥಿಗಳ ಆಯ್ಕೆ ನಿಯಮಕ್ಕೆ ಸಂಬಂಧಿಸಿದಂತೆ ದಿನಾಂಕ 10-3-1993 ರಂದು ಹೊರಡಿಸಲಾದ ಇಡಿ:33:ಟಿಎ:ಎಸ್‌ಇ:6:92ರ ಕ್ರಮಾಂಕದ ಅಧಿಸೂಚನೆಯನ್ನು ಉನ್ನತ ಶಿಕ್ಷಣ ಸಚಿವರಾದ ಶ್ರೀ ಮಾನ್ಯ ಎಸ್.ಎಂ. ಯಾಹ್ಯಾರವರ ಪರವಾಗಿ ಮಂಡಿಸುತ್ತಿದ್ದೇನೆ.

ವರದಿಯನ್ನೊಪ್ಪಿಸುವುದು

ಶ್ರೀ ಎಂ. ಪುಟ್ಟಸ್ವಾಮಿಗೌಡ (ಅಧ್ಯಕ್ಷರು, ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿ):-

ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನ ಸಭೆಯ ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ 7ನೇ 8ನೇ 9ನೇ 10ನೇ 11ನೇ 12ನೇ 13ನೇ 14ನೇ ಮತ್ತು 15ನೇ ವರದಿಗಳನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:- ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯುಗಳು

ಬಂಗಾರಪೇಟೆ ತಾಲ್ಲೂಕಿನಲ್ಲಿ ಚಿರತೆಯಿಂದ ಹತ್ತು ಜನ ಸತ್ತಿರುವುದರ ಬಗ್ಗೆ

† ಶ್ರೀ ಎಂ.ನಾರಾಯಣಸ್ವಾಮಿ (ಬೇತಮಂಗಲ):- ಮಾನ್ಯ ಅಧ್ಯಕ್ಷರೆ, ನಮ್ಮ ಬಂಗಾರಪೇಟೆ ತಾಲ್ಲೂಕಿನಲ್ಲಿ ಭಾನುವಾರ ಒಂದು ಚಿರತೆ ಬಂದಿತ್ತು. ಆ ದಿನ ನಾವು ಅರಣ್ಯ ಇಲಾಖೆಗೆ ಮೆಸೇಜ್ ಕೊಟ್ಟು ತಾವು ಬರಬೇಕು ಅದನ್ನು ಹಿಡಿಯಬೇಕು ಎಂದು ಹೇಳಿದೆವು. ಆದರೂ ಕೂಡ ಅವರು ಬರಲಿಲ್ಲ. ಅದು ಹತ್ತು ಜನರನ್ನು ಕಚ್ಚಿ ಸಾಯಿಸಲಿಕ್ಕೆ ಪ್ರಯತ್ನ ಮಾಡಿತ್ತು. ಈ ಬಗ್ಗೆ ಹೇಳುವುದಕ್ಕೆ ನನಗೆ ಎರಡು ನಿಮಿಷ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಬಂಗಾರಪೇಟೆ ತಾಲ್ಲೂಕಿನ ಮೋತಕಪಲ್ಲಿ ಎಂಬ ಗ್ರಾಮಕ್ಕೆ ಬೆಳಿಗ್ಗೆ ಹತ್ತೂವರೆ ಗಂಟೆ ಸಮಯಕ್ಕೆ ಒಂದು ಚಿರತೆ ಬಂತು. ಅದು ಬಂದ ಮೇಲೆ ಅರಣ್ಯ ಇಲಾಖೆಯವರಿಗೆ ಫೋನ್ ಮೂಲಕ ಸುದ್ದಿ ಮುಟ್ಟಿಸಿದೆವು; ಆದರೆ ಅರಣ್ಯ ಇಲಾಖೆಯವರು 5 ಗಂಟೆಯವರೆಗೆ ಬರಲಿಲ್ಲ. 5 ಗಂಟೆಗೆ ಎಸ್.ಪಿ.ಯವರಿಗೆ ಮೆಸೇಜ್ ಕೊಟ್ಟು 100-120ಜನ ಪೋಲೀಸರನ್ನು ಕರೆಸಿಕ್ಕೊಂಡು ಚಿರತೆಯನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡಿದೆವು. ಆದರೆ ಅದು ಇಬ್ಬರು ಪೋಲೀಸರು ಮತ್ತು ಎಂಟು ಜನ ಬೇರೆಯವರನ್ನು ಹೀಗೆ ಒಟ್ಟು ಹತ್ತು ಜನರನ್ನು ಕಚ್ಚಿ ಗಾಯಗೊಳಿಸಿದೆ. ಅದರ ಬಗ್ಗೆ ಇಲಾಖೆಯ ವತಿಯಿಂದ, ಸರ್ಕಾರದ ವತಿಯಿಂದ ಸೌಜನ್ಯಕ್ಕಾದರೂ ನನ್ನ ಕ್ಷೇತ್ರಕ್ಕೆ ಭೇಟಿ ಕೊಟ್ಟು ಏನು ವಿಷಯ ನಡೆದಿದೆ. ನಿಜವೇ ಸುಳ್ಳೇ ಎಂದು ಪರಿಶೀಲಿಸತಕ್ಕ ಕೆಲಸ ಸರ್ಕಾರದಿಂದ ಆಗಲಿಲ್ಲ. ಅರಣ್ಯ ಇಲಾಖೆಯ ಅಧಿಕಾರಿಗಳು ಇದುವರೆಗೆ ಭೇಟಿ ಕೊಡಲಿಲ್ಲ. ಯಾರಿಗೆ ಏನು ಗಾಯಗಳಾಗಿವೆ, ಅವರಿಗೆ ಸರ್ಕಾರದಿಂದ ಏನು ಪರಿಹಾರ ಕೊಡಬೇಕು ಅದನ್ನು ಕೊಡತಕ್ಕ ಕೆಲಸ ಕೂಡ ಆಗಿಲ್ಲ. ಹೀಗೆ 4 ತಿಂಗಳ ಹಿಂದೆ ಬೂದಿಕೋಟೆ ಹತ್ತಿರ ಚಿರತೆಯನ್ನು ಕಂಡಾಗ ನಾವು ಸರ್ಕಾರಕ್ಕೆ ಸುದ್ದಿ ಮುಟ್ಟಿಸಿದ್ದೇವೆ. ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರ ಗಮನಕ್ಕೂ

ತಂದಿದ್ದೇವೆ. ಆಗ ಇಬ್ಬರಿಗೆ ಗಾಯವಾಗಿದ್ದರೂ ಸಹ ಸರ್ಕಾರ ಕಣ್ತೆರೆದು ನೋಡಲಿಲ್ಲ. ಇದರ ಬಗ್ಗೆ ಅರಣ್ಯ ಇಲಾಖೆ ಏನು ಕ್ರಮ್ಮ ತೆಗೆದುಕೊಳ್ಳುತ್ತದೆ? ಜನ ಏನು ನೊಂದಿದ್ದಾರೆ, ಏನು ಗಾಯಗೊಂಡಿದ್ದಾರೆ ಅವರಿಗೆ ಪರಿಹಾರ ಕೊಡತಕ್ಕ ಕೆಲಸ ಸರ್ಕಾರದ ವತಿಯಿಂದ ಆಗಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಈ ವಿಷಯವನ್ನು ಪರಿಶೀಲನೆ ಮಾಡಿ ಹೇಳಿಕೆ ಕೊಡುವುದಕ್ಕೆ ಮಾನ್ಯ ಅರಣ್ಯ ಮಂತ್ರಿಗಳಿಗೆ ತಿಳಿಸುತ್ತೇನೆ.

ಗೋಕಾಕ್ ನಗರಸಭೆಯಲ್ಲಿ
ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ

† ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನಾನು ಗೋಕಾಕ್ ನಗರಸಭೆ ವಿಚಾರದಲ್ಲಿ ತಮ್ಮ ಅನುಮತಿ ತೆಗೆದುಕೊಂಡು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಸಿಂಧ್ಯರವರು, ಶಿವಾನಂದ ಕೌಜಲಗಿಯವರು ಮತ್ತು ಸಿದ್ಧನಗೌಡರು ಸಹ ಇದರ ಬಗ್ಗೆ ಬೆಳಕನ್ನು ಚೆಲ್ಲಬಹುದು. ನಾನು ಈ ಹಿಂದೆ ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗಿದ್ದೆ. ಆದರೆ ಇಂಥ ಒಂದು ನಗರಸಭೆಯಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ, ಇಷ್ಟು ದೊಡ್ಡ ಪ್ರಮಾಣದಲ್ಲಿ ಜನರ ವಿರುದ್ಧ ಕೆಲಸ ನಡೆಯುತ್ತಿದೆ ಎಂದು ಭಾವಿಸಿರಲಿಲ್ಲ. ರಾಜ್ಯದ ಯಾವ ನಗರಸಭೆಯಲ್ಲೂ ಈ ಪ್ರಕಾರ ನಡೆಯುತ್ತಿಲ್ಲವೆಂದು ನನ್ನ ಭಾವನೆ. ಅಲ್ಲಿ ಏನಾಗಿದೆ ಎಂದರೆ ಅಲ್ಲಿನ ಅಧ್ಯಕ್ಷರು ಕಂಟ್ರಾಕ್ಟರ್ ಕೈಗೊಂಬೆಯಾಗಿದ್ದಾನೆ. ಅಲ್ಲಿ ಒಬ್ಬ ದೊಡ್ಡ ಎಕ್ಸೈಜ್ ಕಂಟ್ರಾಕ್ಟರ್ ಸತೀಶ್ ಜಾರ್‌ಚುಗಳಿ ಎಂದು ಇದ್ದಾರೆ. ಅವರ ಆಶ್ರಯದಲ್ಲಿ ಅವರ ಆಜ್ಞೆ ಮೇಲೆ ಮುನಿಸಿಪಾಲಿಟಿ ನಡೆಯುತ್ತಿದೆ ಸರಿಯಾಗಿ ಆಶ್ರಯ ಇದ್ದರೆ ನಡೆಯಲಿ, ಬೇಡ ಎನ್ನುವುದಿಲ್ಲ. ಸರಿಯಾದ ಆಜ್ಞೆ ಮಾರ್ಗದರ್ಶನ ಇದ್ದರೆ ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇಲ್ಲಿ ಏನಾಗುತ್ತಿದೆ ಎಂಬುದಕ್ಕೆ 2-3 ಉದಾಹರಣೆಗಳನ್ನು ಮಾತ್ರ ಕೊಡುತ್ತೇನೆ. ಬಡವರ ಸಲುವಾಗಿ, ಪರಿಶಿಷ್ಟ ಜಾತಿ ಜನರ ಸಲುವಾಗಿ 1987ರಲ್ಲಿ 28 ಎಕರೆ ಭೂಮಿಯನ್ನು ಹರಾಜು ಮಾಡಬೇಕೆಂದು 17-11-87ಕ್ಕೆ ಮುಂಚಿನ ಬೋರ್ಡಿನಲ್ಲಿ ನಿರ್ಣಯವಾಯಿತು. ನಿರ್ಣಯ ಆದನಂತರ ಮುನಿಸಿಪಾಲಿಟಿಯವರು 5,97,999ರ ರೂಪಾಯಿಗಳನ್ನು ಜಮಾ ಮಾಡಿದರು. ಹಣ ಜಮಾ ಆಯಿತು. 4(1) ನೋಟಿಫಿಕೇಷನ್ ಆಯಿತು, 6(1) ನೋಟಿಫಿಕೇಷನ್ ಆಯಿತು. ಅದಾದ ನಂತರ ಭೂಮಿಯನ್ನು ವಶಕ್ಕೆ ತೆಗೆದುಕೊಂಡು ಬಡವರಿಗೆ ಹಂಚಬೇಕು. ಈ ಅವಧಿಯಲ್ಲಿ ಅವರು ಏನು ಮಾಡಿದರು ಅಂದರೆ, ಆ ಭೂಮಿಯನ್ನು ಅಕ್ವೈರ್ ಮಾಡುವ ಅವಶ್ಯಕತೆ ಇಲ್ಲವೆಂದು ರೆಸಲ್ಯೂಷನ್ ಮಾಡಿದರು.

ರೆಸಲ್ಯೂಷನ್ ಮಾಡಿ ಯಾವ ಹಳೇ ಮಾಲೀಕರಿದ್ದಾರಲ್ಲಾ ಅವರಿಗೆ ಹೆದರಿಸಿದ್ದಾರೆ, ಬೆದರಿಸಿದ್ದಾರೆ. ಹೀಗೀಗೆ ನಿಮ್ಮ ಭೂಮಿ ಅಕ್ವೈರ್ ಆಗುತ್ತದೆ, ನೀವು ಬೇರೆಯವರಿಗೆ ಮಾರಾಟ ಮಾಡಿ ಎಂದು ಹೇಳಿದರು. ಈ ಸತೀಶ್ ಇದ್ದಾರಲ್ಲಾ ಅವರ ಸಂಬಂಧೀಕರು, ಫ್ರೆಂಡ್ಸ್ ಸೇರಿ ಬೇನಾಮಿ ಹೆಸರಿನಲ್ಲಿ ಈ ಭೂಮಿ ತೆಗೆದುಕೊಂಡಿದ್ದಾರೆ. ತೆಗೆದುಕೊಂಡ ನಂತರ ಭೂಮಿ ಡೀನೋಟಿಫೈ ಆಯಿತು. ಡೀನೋಟಿಫೈ ಆದ ನಂತರ ಪ್ರತಿಯೊಂದು ಎಕರೆಗೆ 40 ಸಾವಿರ ರೂಪಾಯಿ ತೆಗೆದುಕೊಂಡಿದ್ದಾರೆ. ಆದಾದನಂತರ ಹೊಸದಾಗಿ ಏನು ಮಾಡಿದ್ದಾರೆ ಎಂದರೆ, ಏನು ಬಡವರ ಸಲುವಾಗಿ ಆ ಅಕ್ವೈರ್ ಆಗುವ ಭೂಮಿ ಇತ್ತು ಅದನ್ನು ಹಳೇ ಮಾಲೀಕರು ಯಾರಿದ್ದಾರೆ ಅವರಿಂದ ಬೇನಾಮಿ ಜನರಿಗೆ ಮಾರಾಟ ಮಾಡಿ, ಮುನಿಸಿಪಾಲಿಟಿಗೆ ಲೇಔಟ್ ಪ್ಲಾನ್ ಮಾಡಿ ಪ್ಲಾಟ್ ಮಾಡುವುದಕ್ಕೆ ಇವರು ಅರ್ಜಿ ಸಲ್ಲಿಸಿದ್ದಾರೆ; ಅದನ್ನು ಮುನಿಸಿಪಾಲಿಟಿಯವರು ಒಪ್ಪಿಕೊಂಡಿದ್ದಾರೆ. ಮುನಿಸಿಪಾಲಿಟಿ ಒಪ್ಪಿಕೊಂಡು ಗುಂಟಾಗೆ 50-60 ಸಾವಿರ ರೂಪಾಯಿ ಪ್ರಕಾರ ಪ್ಲಾಟ್ ಮಾಡುವುದಕ್ಕೆ ವ್ಯವಸ್ಥೆ

ಮಾಡುತ್ತಿದ್ದಾರೆ. ಆ ಗುಂಟಾ ಮಾರಾಟ ಮಾಡುವುದಕ್ಕೆ ಅವರಿಗೆ ಕಮೀಷನ್ ಇದೆ. ಯಾವ ಪ್ರಕಾರ ಸಾಮಾನ್ಯ ಬಡಜನರ ಹಿತದ ವಿರುದ್ಧ ಮುನಿಸಿಪಾಲಿಟಿ ಕೆಲಸ ಮಾಡುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವರು ಇವತ್ತು ಏನು ಕೆಲಸ ಮಾಡುತ್ತಿದ್ದಾರೆ ಅಂದರೆ ಬಡವರನ್ನು ಹೆದರಿಸುವುದಕ್ಕೆ ರೆಸಲ್ಯೂಷನ್ ಮಾಡುವುದು. ಭೂಮಿ ಅಕ್ವೈರ್ ಮಾಡುತ್ತೇವೆಂದು ಹೇಳುವುದು; ಅಲ್ಲಿ ಅವರಿಗೆ ಹೇಳಿ ಕಳುಹಿಸುವುದು. ಆ ಭಾಗದಲ್ಲಿ ಉಪ್ಪಾರರು, ಕಮ್ಮಾರರು, ಕುರುಬರು, ಬಡವರು ಇದ್ದಾರೆ. ಅವರ ಭೂಮಿಯನ್ನು ಅಕ್ವೈರ್ ಮಾಡುತ್ತೇವೆ ಎಂದು ನಿರ್ಣಯ ಮಾಡುವುದು; ಆಮೇಲೆ ಅಲ್ಲಿ ಕಳುಹಿಸಿ ಹಣ ತೆಗೆದುಕೊಂಡು ನಂತರ ರೆಸಲ್ಯೂಷನ್ ವಿತ್‌ಡ್ರಾ ಮಾಡುವುದು; ಇದು ನಡೆಯುತ್ತಿದೆ. ಮತ್ತೊಂದು ವಿಚಾರ ತಮಗೆ ಹೇಳಬೇಕು. ಅಲ್ಲಿ ಒಂದು ಹಳೇ ಬಿಲ್ಡಿಂಗ್ ಇತ್ತು. ಅಲ್ಲಿ ಆಯುರ್ವೇದಿಕ್ ಹಾಸ್ಪಟಲ್ ಇತ್ತು. ಆ ಬಿಲ್ಡಿಂಗ್ ಬೆಲೆ ಇವತ್ತು ಐದೂವರೆಯಿಂದ 6ಲಕ್ಷವರೆಗೆ ಇದೆ. ಅಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಬೇಕೆಂದು ಹೇಳಿ ಬಿಲ್ಡಿಂಗ್ ಬೆಲೆ ಇವತ್ತು ಐದೂವರೆಯಿಂದ ಆರು ಲಕ್ಷದವರೆಗೆ ಇದೆ. ಅಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಬೇಕೆಂದು ಹೇಳಿ ಬಿಲ್ಡಿಂಗ್ ಮಾರಾಟ ಮಾಡಿದರು. ಮಾರಾಟ ಮಾಡುವುದಕ್ಕೆ ಟೆಂಡರ್ ಇಲ್ಲ; ಯಾವುದೇ ಕಾಯ್ದೆ ಇಲ್ಲ. ಪತ್ರಿಕೆಯಲ್ಲಿ ಪ್ರಕಟಣೆ ಇಲ್ಲ. ಕೇವಲ 52 ಸಾವಿರ ರೂಪಾಯಿಗೆ ಆ ಐದೂವರೆ ಲಕ್ಷ ರೂಪಾಯಿ ಬೆಲೆ ಬಾಳುವ ಬಿಲ್ಡಿಂಗ್‌ನ್ನು ಆ ಸತೀಶ್ ಎಂಬ ಮನುಷ್ಯನಿಗೆ ಕೊಟ್ಟಿದ್ದಾರೆ. ಇದು ಇಷ್ಟೇ ವಿಚಾರಗಳು ಅಲ್ಲ. ಇವತ್ತು ಬಡವರು, ಹರಿಜನರು, ಯಾರಿದ್ದಾರೆ ಅವರಿಗೆ ಗೋಕಾಕ್ ಸುತ್ತಮುತ್ತ ಭೂಮಿ ಇದೆ. ಅವರನ್ನು ಹೆದರಿಸಿ ಅಲ್ಲಿ ಶಾಲಾ ಕಟ್ಟಡ ಕಟ್ಟುತ್ತೇವೆ, ಭೂಮಿ ಅಕ್ವೈರ್ ಮಾಡುತ್ತೇವೆ, ಎಲ್ಲಾ ಭೂಮಿ ಮಾರಾಟ ಮಾಡಿ ಎಂದು ಹೇಳಿ ಜನರಿಂದ ಸೇಲ್ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ.

ಭೂಮಿಯ ಪೊಸಿಷನ್ ತೆಗೆದುಕೊಂಡಿದ್ದಾರೆ. ಎಕರೆಗೆ ಅವರಿಗೆ ಕೊಟ್ಟಿದ್ದು ಕೇವಲ 20–30 ಸಾವಿರ ರೂಪಾಯಿ ಮಾತ್ರ. ಇನ್ನೂ ಸೇಲ್‌ಡೀಡ್ ಆಗಿಲ್ಲ. ಏಕೆ ಆಗಿಲ್ಲ ಎಂದರೆ, ಎಸ್.ಸಿ. ಎಸ್.ಟಿ. ಜನರಿಗೆ ಸರ್ಕಾರದಿಂದ ಮಂಜೂರು ಆದ ಜಾಗ ಅದು. ಆ ಪೀರಿಯಡ್ ಮುಗಿಯುವರೆಗೆ ಸೇಲ್‌ಡೀಡ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ, ಯಾವ ಎಸ್.ಸಿ., ಎಸ್.ಟಿ. ಜನರಿಂದ ಈ ಭೂಮಿಯನ್ನು ತೆಗೆದುಕೊಂಡಿದ್ದಾರೆ ಆ ಭೂಮಿ ಆ ಜನರಿಗೆ ವಾಪಸ್ಸು ಸಿಗುವಂತೆ ಮಾಡಬೇಕು. ಇವತ್ತು ಕೊಂಡಿರುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಬಡವರ, ಕಡು ಬಡವರ, ಷೆಡ್ಯೂಲ್ಡ್ ಕ್ಯಾಸ್ಟ್ ಜನರ ವಿರುದ್ಧ ಈ ನಗರಸಭೆ ಕೆಲಸ ಮಾಡುತ್ತಿದೆ. ಇಂತಹ ಒಂದು ನಗರಸಭೆಯಲ್ಲಿ ಭ್ರಷ್ಟಾಚಾರ, ಫೇವರ್‌ಟಿಸಂ ನಡೆಯುತ್ತಿದೆ. ಇವತ್ತು ಆ ಸತೀಶ್ ಏನು ಇದ್ದಾರೆ ಅವರ ಪರಿಚಯ ನನಗೆ ಇಲ್ಲ. ಆದರೆ ನಾನು ಅವರ ವಿಚಾರ ತಿಳಿದುಕೊಂಡಿದ್ದೇನೆ. ಅವರು ಬಹಳ ದೊಡ್ಡ ಎಕ್ಸೈಸ್ ಕಾಂಟ್ರಾಕ್ಟರ್. ಅವರು ಹೇಳಿದ್ದು ಅಲ್ಲಿ ನಡೆಯುತ್ತದೆ. ಅವರು ಏಳು ಎಂದರೆ ಏಳಬೇಕು, ಕುಳಿತುಕೋ ಎಂದರೆ ಕುಳಿತುಕೊಳ್ಳಬೇಕು. ಇವತ್ತು ದುರ್ದೈವ ಮುನಿಸಿಪಾಲಿಟಿಯಲ್ಲಿ ಚೀಫ್ ಆಫೀಸರ್ ಇಲ್ಲ. ಆದ್ದರಿಂದ ಇವರು ಏನು ಹೇಳುತ್ತಾರೋ ಅದೇ ದರ್ಬಾರು ಆಗುತ್ತದೆ. ಅದೇ ತೀರ್ಮಾನ ಆಗುತ್ತದೆ. ಮತ್ತೊಂದು ವಿಚಾರ ಎಂದರೆ, ಅಲ್ಲಿ ಇದ್ದ ಪಾರ್ಕ್ಸ್, ರಸ್ತೆ ಎಲ್ಲಾ ಮಾರಾಟ ಮಾಡಿದ್ದಾರೆ. ಯಾರೇ ಬೇಕೆಂದು ಕೇಳಿದರೆ ಪಾರ್ಕ್, ರಸ್ತೆ ಕೊಡುತ್ತಿದ್ದಾರೆ. ಈ ರೀತಿ ಆಗಿ ಅಲ್ಲಿ ಅಭಿವೃದ್ಧಿ ಕೆಲಸ ನಡೆಯುತ್ತಿಲ್ಲ. ಗೋಕಾಕ್ ನಗರಾಭಿವೃದ್ಧಿ ಮಾಡುತ್ತೇವೆಂದು ಸರ್ವೇ ಸಾಮಾನ್ಯ ಜನರಿಂದ ಹಣವನ್ನು ವಸೂಲಿ ಮಾಡಿದರು. ಅದರ ಪಾವತಿ ಇಲ್ಲ. ಆ ಹಣ ಎಲ್ಲಿ ಹೋಯಿತು ಎಂದು ಗೊತ್ತಿಲ್ಲ. ಮತ್ತೊಂದು ಕೆಲಸ ಮಾಡಲು ಹೊರಟಿದ್ದಾರೆ. ಏನೆಂದರೆ ಈ ಶಾಪಿಂಗ್ ಕಾಂಪ್ಲೆಕ್ಸ್‌ಗೆ ಆ ಸತೀಶ್ ಅವರ ಹೆಸರು. ಅವರು ಏನು ಪುಣ್ಯದ ಕೆಲಸ ಮಾಡಿದ್ದರೆ ? ಏನು ತ್ಯಾಗ ಮಾಡಿದ್ದಾರೆ ಎಂದು ಗೊತ್ತಾಗುತ್ತಿಲ್ಲ. ಅವರು ಒಬ್ಬ ಎಕ್ಸೈಸ್ ಕಾಂಟ್ರಾಕ್ಟರ್. ಇವತ್ತು ನಾನು ಸೈಟ್ ವಿಚಾರ ಹೇಳಿದ್ದೇನೆ. ಅಷ್ಟೇ ಅಲ್ಲ, ಮುನಿಸಿಪಾಲಿಟಿಯ ಮೀಟಿಂಗ್‌ನಲ್ಲಿ ಒಂದು

ಆಗುತ್ತದೆ, ರೆಸಲ್ಯೂಷನ್ ಮತ್ತೊಂದು ಆಗುತ್ತದೆ. ಏನು ಹಣ ಖರ್ಚು ಆಗುತ್ತದೆ ಅದೆಲ್ಲಾ ಪೋಲೂ ಆಗುತ್ತದೆ. ಹೀಗಾಗಿ ಅಲ್ಲಿ ಸರಿಯಾಗಿ ಯಾವುದೇ ಅಬಿವೃದ್ಧಿ ಕೆಲಸ ನಡೆಯುತ್ತಿಲ್ಲ. ಸುಳ್ಳು ಮೆಷರ್‌ಮೆಂಟ್ ಪುಸ್ತಕ ತಯಾರು ಮಾಡುತ್ತಾರೆ. ಅಲ್ಲಿ ಏನೇನೂ ಕೆಲಸ ನಡೆಯುತ್ತಿಲ್ಲ. ಇವತ್ತು ಅಧಿಕಾರದಲ್ಲಿ ಕಾಂಗ್ರೆಸ್ ಪಕ್ಷ ಇರಬಹುದು ಅಥವಾ ಜನತಾ ಪಕ್ಷದವರು ಇರಬಹುದು. ಆ ಮಾತು ಬೇರೆ.

11.15 ಎ.ಎಂ.

ನನ್ನ ಇಂಟರೆಸ್ಟ್ ಏನಿದೆ ಎಂದರೆ, ಬಡವರ ಹಿತದೃಷ್ಟಿಯಿಂದ, ಜನರ ಹಿತದೃಷ್ಟಿಯಿಂದ ಸರಿಯಾಗಿ ಆಡಳಿತ ನಡೆಯಬೇಕು ಹಾಗೂ ಅಭಿವೃದ್ಧಿಯಾಗಬೇಕೆನ್ನುವುದು ನನ್ನ ಉದ್ದೇಶ. ಹಾಗಾಗಿ ಅಲ್ಲಿ ಅಪೋಸಿಷನ್ ಇಲ್ಲ, ಯಾವ ಜನ ಆರಿಸಿಬಂದಿದ್ದಾರೆ ಅದು ಮುಖ್ಯವಲ್ಲ. ತಮ್ಮ ಮುಖಾಂತರ ಮಾನ್ಯಸಚಿವರಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಈ ಕೂಡಲೇ ಆ ಮುನಿಸಿಪಾಲಿಟಿಯನ್ನು ಸೂಪರ್‌ಸೀಡ್ ಮಾಡಬೇಕು. ನಮಗೆ ಮುಖ್ಯ ಮಂತ್ರಿಗಳು ಒಳ್ಳೆಯ, ದಕ್ಷ ಆಡಳಿತ ಕೊಡುತ್ತೇವೆ, ಸ್ವಚ್ಛ ಆಡಳಿತ ಕೊಡುತ್ತೇನೆ, ಪ್ರಾಮಾಣಿಕ ಆಡಳಿತ ಕೊಡುತ್ತೇವೆಂದು ಹೇಳಿದ್ದಾರೆ. ನಿಮಗೆ ಆ ಪ್ರಾಮಾಣಿಕತೆ ಇದ್ದರೆ ಕ್ರಮ ತೆಗೆದುಕೊಳ್ಳಿ. ನಾನು ಹೇಳುವುದು ಸತ್ಯವಾಗಿದ್ದರೆ ತಕ್ಷಣ ಆ ಮುನಿಸಿಪಾಲಿಟಿಯನ್ನು ಸೂಪರ್‌ಸೀಡ್ ಮಾಡಬೇಕಾಗುತ್ತದೆ. ಒಬ್ಬ ಹಿರಿಯ ಅಧಿಕಾರಿ ಬೆಂಗಳೂರಿನಿಂದ ಅಲ್ಲಿಗೆ ಹೋಗಬೇಕು. ಅಲ್ಲಿನ ಇಡೀ ರೆಕಾರ್ಡ್ಸ್ ಅನ್ನು ಸೀಸ್ ಮಾಡಬೇಕು. ಮುನಿಸಿಪಾಲಿಟಿಯ ಎಲ್ಲ ರಿಕಾರ್ಡ್‌ಗಳನ್ನು ಸೀಸ್‌ಮಾಡಿ. ನಾನು ಏನು ಹೇಳಿದ್ದೇನೆ ಅದನ್ನು ಬಿಟ್ಟು ಇನ್ನೂ ಎಷ್ಟೋ ವಿಚಾರಗಳಿವೆ. ನಾನು ಸದನದ ಸಮಯವನ್ನು ಹೆಚ್ಚು ತೆಗೆದುಕೊಳ್ಳುವುದಿಲ್ಲ. ಇದರ ಬಗ್ಗೆ ಬೇರೆಯವರು ಮಾತನಾಡುತ್ತಾರೆ. ನನ್ನ ಕಡೆ ಕೆಲವು ಕಾಗದಪತ್ರಗಳು ಇವೆ, ಪುರಾವೆಗಳಿವೆ. ನಾನು ಅವುಗಳನ್ನು ತಮಗೆ ಕಳುಹಿಸುತ್ತೇನೆ. ಎಷ್ಟೋ ಬಡಜನರು ಹಿಂದುಳಿದವರ್ಗದವರು ಹರಿಜನ, ಗಿರಿಜನರು ನಾನು ಬೆಳಗಾಂಗೆ ಹೋದಾಗ ಬಂದು ಭೇಟಿಯಾಗಿ ಕಾಗದಪತ್ರಗಳನ್ನು ಕೊಟ್ಟು, ಸ್ವಾಮಿ, ನೀವು ಏನಾದರೂ ಮಾಡಿ, ಬಹಳ ಕಷ್ಟವಿದೆ, ಬಹಳ ಅನ್ಯಾಯವಾಗುತ್ತಿದೆ, ಭ್ರಷ್ಟಾಚಾರ ಬಹಳ ಬೆಳೆದಿದೆ ಎಂದು ಹೇಳಿದರು. ಹಾಗಾಗಿ ಒಬ್ಬ ಹಿರಿಯ ಅಧಿಕಾರಿಯನ್ನು ತನಿಖೆ ಮಾಡಲಿಕ್ಕೆ ಕಳುಹಿಸಬೇಕು. ಅವರ ಕಡೆಯಿಂದ ರಿಪೋರ್ಟ್ ತರಿಸಿ ಕ್ರಮ ತೆಗೆದುಕೊಳ್ಳಬೇಕು. ಎಲ್ಲಿ ಅನ್ಯಾಯವಾಗಿದೆ ಅದನ್ನು ಸರಿಪಡಿಸಬೇಕು. ಯಾವ ಹರಿಜನ-ಗಿರಿಜನ ಭೂಮಿಯನ್ನು ಅವರು ಪಡೆದುಕೊಂಡಿದ್ದಾರೆ ಅದನ್ನು ಜಿಲ್ಲಾಧಿಕಾರಿಗಳವರಿಗೆ ಹೇಳಿ ಅವರಿಗೆ ವಾಪಸ್ಸು ಕೊಡುವಂತಹ ವ್ಯವಸ್ಥೆಯಾಗಬೇಕು. 28 ಎಕರೆ ಭೂಮಿಯನ್ನು ಪುನಃ ಡೀನೋಟಿಫೈ ಮಾಡಬೇಕೆಂದು ನಿರ್ಣಯ ಮಾಡಿದ್ದಾರೆ. ಅದನ್ನು ಕ್ಯಾನ್ಸಲ್ ಮಾಡಿ ಆ 28 ಎಕರೆ ಭೂಮಿ ಏನಿದೆ ಅದನ್ನು ಬಡ ಜನರಿಗೆ ಸೈಟುಮಾಡಿ ಹಂಚುವ ವ್ಯವಸ್ಥೆ ಸರ್ಕಾರದ ಕಡೆಯಿಂದ ಆಗಬೇಕು. ನಿರ್ಣಯ ಮಾಡುವುದು, ಹಣ ವಸೂಲಿ ಮಾಡುವುದು ಏನಿದೆ ಇದನ್ನು ತಕ್ಷಣ ನಿಲ್ಲಿಸಬೇಕು ಮತ್ತೆ ಮುನಿಸಿಪಾಲಿಟಿಯವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ನಾನು ನಿಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ.

† ಶ್ರೀ ಪಿ.ಜಿ.ಆರ್. ಸಿಂಧ್ಯ (ವಿರೋಧಪಕ್ಷದ ಉಪನಾಯಕರು):- ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ, ಗೋಕಾಕ್‌ನಗರ ನಮ್ಮ ರಾಜ್ಯದಲ್ಲಿಯೇ ಸುಂದರವಾದ ನಗರ. ಜೊತೆಗೆ ಬೆಳಗಾಂ ಜಿಲ್ಲೆಗೆ ಬರುವವರೆಲ್ಲರೂ ಸಹ ಗೋಕಾಕ್‌ಗೆ ಭೇಟಿ ಕೊಟ್ಟು ಅಲ್ಲಿರತಕ್ಕ ಫಾಲ್ಸ್ ನೋಡತಕ್ಕ ಪದ್ಧತಿ ಇದೆ. ಇಡೀ ಮುಂಬಯಿ-ಕರ್ನಾಟಕ ಭಾಗದಲ್ಲಿ ಗೋಕಾಕ್ ಡೆವಲಪ್‌ಮೆಂಟ್ ಆಗಿರತಕ್ಕ ನಗರವಾಗಿದೆ. ಅಲ್ಲಿ ಮಿಲ್‌ಗಳು ಇದ್ದು, ಅದು ವ್ಯಾಪಾರಕೇಂದ್ರವಾಗಿ ಬಹಳ ಉತ್ತಮ ಬೆಳವಣಿಗೆಯಾಗಿರತಕ್ಕ ಪಟ್ಟಣವಾಗಿದೆ. ಈ ಪಟ್ಟಣಕ್ಕೆ ಭೂತದ ರೀತಿಯಲ್ಲಿ ಅಲ್ಲಿನ ಪುರಸಭೆಯವರು

ಒಂದು ಸಂಪೂರ್ಣವಾಗಿ ನಾಶ ಮಾಡಲಿಕ್ಕೆ ಹೊರಟಿದ್ದಾರೆ ಎನ್ನುವುದನ್ನು ಬಹಳ ಚೆನ್ನಾಗಿ ನಮ್ಮ ವಿರೋಧಪಕ್ಷದ ನಾಯಕರು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಾನಾದರು ಸರ್ಕಾರವನ್ನು ಕೇಳುವುದಕ್ಕೆ ಬಯಸತಕ್ಕದ್ದು ಏನೆಂದರೆ, ಈ ಮುನಿಸಿಪಾಲಿಟಿಗಳಿಗೆ ಒಂದು ಸಾರಿ 4(1) ಮತ್ತು 6(1) ನೋಟೀಫಿಕೇಷನ್ ಆದಮೇಲೆ ಇದನ್ನು ಮಾಡಬೇಡಿಯೆಂದು ಹೇಳುವುದಕ್ಕೆ ಹಕ್ಕು ಎಲ್ಲಿದೆಯೆಂದು ನನಗಂತೂ ಅರ್ಥವಾಗುವುದಿಲ್ಲ. ಇವತ್ತು ಅನೇಕ ಕಡೆಗಳಲ್ಲಿ ಬಡವರಿಗೋಸ್ಕರ, ಯಾರಿಗೆ ವಸತಿಯಿಲ್ಲ ಅಂತಹ ಜನರಿಗೋಸ್ಕರ ಸೈಟು ಕೊಡಬೇಕೆಂದು ನಾವು ನಿರ್ಧಾರ ಮಾಡಿ ನೋಟೀಫಿಕೇಶನ್ ಮಾಡಿರುತ್ತೇವೆ. ಅವರಿಗೆ ಅನುಕೂಲವಾಗುತ್ತದೆಂದು ಹೇಳಿ ಇವತ್ತು ಪುರಸಭೆಯವರು ಹಣವನ್ನು ತೆಗೆದುಕೊಳ್ಳಬೇಕು ಎನ್ನುವ ಒಂದೇ ಒಂದು ಉದ್ದೇಶದಿಂದ ಈ ಕೆಲಸ ಮಾಡುವುದಕ್ಕೆ ಹೊರಟಿದ್ದಾರೆ. ಆದರ ಜೊತೆಗೆ ಅಲ್ಲಿರತಕ್ಕ ಪಾರ್ಕ್‌ಗಳನ್ನು ವೇಕೆಂಟ್ ಜಮೀನನ್ನು, ಲಕ್ಷಾಂತರ ರೂಪಾಯಿ ಬೆಲೆ ಬಾಳತಕ್ಕ ಜಮೀನನ್ನು ಅವರು ತಮಗೆ ಬೇಕಾಗಿರತಕ್ಕ ಜನಗಳಿಗೆ ಹರಾಜು ಮಾಡಲಿಕ್ಕೆ ಹೊರಟಿದ್ದಾರೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ, ಇದರ ಹಿಂದೆ ಇರತಕ್ಕ ಶಕ್ತಿ ಬಹಳ ಮುಖ್ಯವಾದ ಕಾರಣವೆಂದು ಅದನ್ನು ತಾವು ಗುರುತು ಮಾಡಬೇಕಾಗಿದೆ. ಸರ್ಕಾರವನ್ನು ನಾನು ಈ ಬಗ್ಗೆ ಒತ್ತಾಯ ಮಾಡತಕ್ಕದ್ದು ಏನೆಂದರೆ, ತಾವು ತಕ್ಷಣ ಜಿಲ್ಲಾಧಿಕಾರಿಗಳ ಮೂಲಕ ವರದಿಯನ್ನು ತರಿಸಿಕೊಂಡು ಗೋಕಾಕ್ ಪುರಸಭೆಯನ್ನು ರದ್ದುಮಾಡುವುದು ಒಂದು ಭಾಗ. ಆದಕ್ಕಿಂತ ಹೆಚ್ಚಾಗಿ ಪುರಸಭೆಯ ಅಧ್ಯಕ್ಷರನ್ನು ಟಾಡಾ ಕಾಯಿದೆಯಡಿಯಲ್ಲಿ ಅರೆಸ್ಟ್ ಮಾಡಬೇಕಾಗುತ್ತದೆ. ಅವರು ಮಾಡಿರತಕ್ಕ ಅಕ್ರಮಗಳಿಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲಿ ಪಕ್ಷದ ಪ್ರಶ್ನೆ ಬರುವುದಿಲ್ಲ. ಮಾನ್ಯ ಕಾನೂನು ಸಚಿವರಾದ ರಾಮಸ್ವಾಮಿಯವರು ನಗುತ್ತಿದ್ದಾರೆ. ಅಲ್ಲಿರತಕ್ಕ ಪಾರ್ಕ್ ಮತ್ತು ಗೋಕಾಕ್ ನಗರದೊಳಗಡೆ ಇರತಕ್ಕ ಜಮೀನನ್ನು ಖಾಸಗಿಯವರಿಗೆ ಮುನಿಸಿಪಾಲಿಟಿಯವರು ಮೆಜಾರಿಟಿ ಇದೆಯೆಂದು ಹೇಳಿ ಪುರಸಭಾಧ್ಯಕ್ಷರಿಗೆ 2 ಸಾವಿರ 3 ಸಾವಿರ 5 ಸಾವಿರ ರೂಪಾಯಿಗಳನ್ನು ಕೊಟ್ಟು ನಿರ್ಣಯ ಮಾಡಿಸಿ ತೆಗೆದುಕೊಂಡರೆ ಹೇಗೆ ? ಒಂದು ಸಾರಿ ಪೊಸಿಷನ್ ಕೊಟ್ಟಮೇಲೆ ತೆಗೆದುಕೊಳ್ಳುವುದು ಕಷ್ಟ.

ಇಂತಹವರನ್ನು ಟಾಡಾ ಕಾಯಿದೆಯನ್ವಯ ಬಂಧಿಸಬೇಕೇ ಬೇಡವೇ ಎನ್ನುವುದನ್ನು ನೀವೇ ತಿಳಿಸಬೇಕು ? ನಾನಾದರೂ ಒತ್ತಾಯ ಮಾಡತಕ್ಕದ್ದು ಏನೆಂದರೆ, ನೀವು ಪುರಸಭೆಯನ್ನು ಸೂಪರ್‌ಸೀಡ್ ಮಾಡಿದರೆ ಸಾಕಾಗುವುದಿಲ್ಲ. ಪುರಸಭೆಯನ್ನು ಸೂಪರ್‌ಸೀಡ್ ಮಾಡಿ ಜಿಲ್ಲಾಧಿಕಾರಿಗಳವರ ಕೈಗೆ ಕೊಡುತ್ತೀರಿ. ಅವರು ಕೋರ್ಟ್‌ಗೆ ಹೋಗುತ್ತಾರೆ. ಕೋರ್ಟ್‌ನಿಂದ ಸ್ಟೇ ತರುತ್ತಾರೆ. ಯಾರು ಪೊಸಿಷನ್‌ನಲ್ಲಿರುತ್ತಾರೊ ಅವರದೇ ಬಿಲ್ಡಿಂಗ್ ಆಗುತ್ತದೆ. ಇದು ಬೇರೆ ಮುನಿಸಿಪಾಲಿಟಿಗಳಿಗೆ ಮಾದರಿಯಾಗುತ್ತದೆ. ಯಾರು ಅಧಿಕಾರದಲ್ಲಿರುತ್ತಾರೆ ಅಂತಹವರಿಗೆ ಹೆದರಿಕೆ ಇರಬೇಕಾಗುತ್ತದೆ. ಅಂತಹವರಿಗೆ ರಕ್ಷಣೆ ಕೊಡುತ್ತೇವೆಂದರೆ ಹೇಗೆ ? ಮಾನ್ಯ ಮೊಯಿಲಿಯವರು ಮೂರ್ನಾಲ್ಕು ತಿಂಗಳ ಹಿಂದೆ ಒಳ್ಳೆಯ ದಕ್ಷ, ಪ್ರಾಮಾಣಿಕ ಮತ್ತು ಸ್ವಚ್ಛ ಸರ್ಕಾರ ಕೊಡುತ್ತೇವೆಂದು ಹೇಳಿದಾಗ ಜನಗಳಲ್ಲಿ ಸ್ವಲ್ಪ ವಿಶ್ವಾಸ ಬಂದಿತ್ತು; ಆ ವಿಶ್ವಾಸಕ್ಕೆ ಎರಡು ಮೂರು ವಿಚಾರಗಳಲ್ಲಿ ಈಗಾಗಲೆ ಧಕ್ಕೆಯಾಗಿದೆ.

ಯಾವ ಯಾವ ವಿಚಾರಗಳಿಂದ ಧಕ್ಕೆಯಾಗಿದೆಯೆಂದು ತಮಗೆ ಗೊತ್ತಿದೆ. ಆ ರೀತಿ ತಾವು ಇದೊಂದು, ಗೂಬೆ ಕೂರಿಸಿಕೊಳ್ಳಬೇಕೆನ್ನುವುದಾದರೆ ನಮ್ಮದೇನೂ ಅಡ್ಡಿಯಿಲ್ಲ. ಆದರೆ ಬೇರೆ ಪುರಸಭೆಗಳಾದರೂ ಈ ರೀತಿ ಮಾಡಬಾರದು ಎಂದು ಸರ್ಕಾರದಿಂದ ಎಚ್ಚರಿಕೆ ಕೊಡಬೇಕೆಂದು ತಮ್ಮ ಮನಸ್ಸಿನಲ್ಲಿದ್ದರೆ, ಇವತ್ತೇ ಅದನ್ನು ಸೂಪರ್‌ಸೀಡ್ ಮಾಡಿ ಅಲ್ಲಿರತಕ್ಕಂಥ ಕಾಗದಪತ್ರಗಳನ್ನು ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರ ವಶಪಡಿಸಿಕೊಂಡು, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

† ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಗರಸಭೆಗಳಲ್ಲಿ ಈ ಒಂದು ಹಣದ ದುರುಪಯೋಗ ಹಾಗೂ ಅವ್ಯವಹಾರ ಆಗುತ್ತಾ ಇರುವುದನ್ನು ನೋಡಿದಾಗ, ಸರ್ಕಾರದವರು ಯಾವ ಪ್ರಕಾರವಾಗಿ ಇದನ್ನು ತಡೆಗಟ್ಟಬೇಕು ಎಂಬುದು ಬಹಳ ಮಹತ್ವದ ವಿಷಯ. ಮೊನ್ನೆ ದಿವಸ ಬೆಳಗಾಂ ಕಾರ್ಪೊರೇಷನ್‌ನಲ್ಲಿ ಸುಮಾರು ಅರ್ಧ ಕೋಟಿ ರೂಪಾಯಿ ಅವ್ಯವಹಾರವಾದರೂ ಸಹಿತ ಅಲ್ಲಿ ಒಬ್ಬ ಅದಿಕಾರಿಯನ್ನೂ ಸಸ್ಪೆಂಡ್ ಮಾಡುವುದಲ್ಲ ಟ್ರಾನ್ಸ್‌ಫರ್ ಮಾಡುವುದಕ್ಕೂ ಈ ಸರ್ಕಾರಕ್ಕೆ ಧೈರ್ಯವಿಲ್ಲವೆಂದರೆ ಅವರು ಇವತ್ತು ನಮ್ಮನ್ನು ಟ್ರಾನ್ಸ್‌ಫರ್ ಮಾಡುವವರು ಯಾರಿದ್ದಾರೆ, ಬಂದು ತನಿಖೆ ಮಾಡುವಂಥ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿಸುತ್ತೇವೆ, ಟ್ರಾನ್ಸ್‌ಫರ್ ಮಾಡಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಮೂರು ವರ್ಷವಾದರೂ ಸಹ ಇದುವರೆಗೂ ಏನೂ ಮಾಡಿಲ್ಲ. ಏತಕ್ಕೆ ಅವರನ್ನು ಫೈಲುಗಳನ್ನು ಸರಿಪಡಿಸುವುದಕ್ಕೆ ಇಟ್ಟಿದ್ದಾರೆಯೇ ಎಂದು ಯೋಚನೆ ಮಾಡುವಾಗ, ಯಾವ ಪ್ರಕಾರ ಈ ಸರ್ಕಾರ ದಕ್ಷ ಆಡಳಿತವನ್ನು ಕೊಡುತ್ತಿದೆ, ಯಾವ ಪ್ರಕಾರ ಸರ್ಕಾರ ಹೇಳುತ್ತಿದೆ ಎನ್ನುವುದಕ್ಕೆ ಇದೊಂದು ನಿದರ್ಶನ. ಅದೇ ಪ್ರಕಾರ ಇವತ್ತು ಗೋಕಾಕ್ ನಗರಸಭೆಯಲ್ಲಿ ಆಗುತ್ತಿರುವ ಅನ್ಯಾಯಗಳನ್ನು ನೋಡಿದಾಗ, ಅದು ದೇವರಿಗೇ ಗೊತ್ತು. 18 ಪರ್ಸೆಂಟ್ ಹಣ ಇದೆಯಲ್ಲ, ಅದು ಯಾವ ಪ್ರಕಾರ ದುರುಪಯೋಗವಾಗುತ್ತಿದೆ ಎಂದು ತಾವು ವಿಚಾರ ಮಾಡಬೇಕು. ಇಷ್ಟೊಂದು ಹಣ ದುರುಪಯೋಗವಾಗಿದೆಯಲ್ಲ ಇದರ ಬಗ್ಗೆ ವಿಚಾರ ಮಾಡಿಯೆಂದು ಹೇಳಿದರೂ ಸಹಿತ ಯಾರೂ ಕೇಳುವುದಕ್ಕೆ ತಯಾರಿಲ್ಲ. ಅಂದ ಮೇಲೆ ಈ 18 ಪರ್ಸೆಂಟ್ ಹಣ ಏಕೆ ಇಡುತ್ತೀರಿ ? ಈ ಎಸ್.ಸಿ.: ಎಸ್.ಟಿ. ಕಮಿಟಿ ಏಕೆ ಬೇಕು ? ದಯಮಾಡಿ ಅದಕ್ಕೆ ಒಂದು ಆಡಿಟ್ ಸೆಲ್ ಆದರೂ ಇಡಬೇಕು. 18 ಪರ್ಸೆಂಟ್ ಹಣದಲ್ಲಿ ಆ ಜನರಿಗೇ ಅನುಕೂಲವಾಗಬೇಕು. ನಾವು ಇಲ್ಲಿ ತುಳಿತಕ್ಕೆ ಒಳಗಾಗಿರತಕ್ಕಂಥ ಜನರು ಮೇಲ್ಮಟ್ಟಕ್ಕೆ ಬರಬೇಕು, ಅದರ ಸಲುವಾಗಿ ಹಣ ಇಟ್ಟಿದ್ದೇವೆ ಎಂದು ಹೇಳುತ್ತೇವೆ. ಏನು ಹಣ ಅವರ ಸಲುವಾಗಿ ಇಟ್ಟಿದ್ದೀರಿ, ಅದನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, 4(1), 6(1), ನೋಟಿಫಿಕೇಷನ್ ಎಲ್ಲ ಆದನಂತರ ಅಕ್ವಿಸಿಶನ್ ಪ್ರೊಸೀಡಿಂಗ್ಸ್‌ನ್ನು ಡ್ರಾಪ್ ಮಾಡಬೇಕಾದರೆ ಸರ್ಕಾರದ ಪರವಾನಗಿಬೇಕು. ಸರ್ಕಾರದ ಪರವಾನಗಿ ಇಲ್ಲದೆ ಇದನ್ನು ಡ್ರಾಪ್ ಮಾಡುವುದಕ್ಕೆ ಬರುವುದಿಲ್ಲ. 1981ನೇ ಇಸವಿಯಲ್ಲಿ ಅಕ್ವಿಸಿಶನ್ ಪ್ರೊಸೀಡಿಂಗ್ಸ್ ಆಗುತ್ತದೆ, ಮುನಿಸಿಪಾಲಿಟಿಯವರು ಕಬ್ಜ ತೆಗೆದುಕೊಳ್ಳುತ್ತಾರೆ, ನಂತರ ಅವರು ಒಂದು ರೆಜಲ್ಯೂಷನ್ ಪಾಸ್ ಮಾಡುತ್ತಾರೆ; ಆ ಜಮೀನನ್ನು ಬಿಟ್ಟು ಕೊಡುತ್ತಾರೆ. ಇದು ಯಾವ ನ್ಯಾಯ ? ಮುಂದೆ ಅದನ್ನು ಬಿಟ್ಟುಕೊಟ್ಟು ಪ್ಲಾಟ್ ಮಾಡಿ ಬೇರೆಯವರಿಗೆ ಆಕ್ಷನ್ ಮಾಡಿ ಕೊಡುತ್ತಾರೆ. ಆದ್ದರಿಂದ ಯಾರು ಆಶ್ರಯ ಇಲ್ಲದ ಬಡಬಗ್ಗರು ಇದ್ದಾರೆ ಹಾಗೂ ಮನೆಯಿಲ್ಲದವರಿಗೆ ಕೊಡಬೇಕೆಂದು, ಆ ಜನರ ಸಲುವಾಗಿ ಅಕ್ವೈರ್ ಮಾಡಿಕೊಂಡಂಥ ಸ್ಥಳವನ್ನು ಮುನಿಸಿಪಾಲಿಟಿಯವರು, ಆಕ್ವಿಸಿಷನ್ ಆದನಂತರ ಬಿಟ್ಟು ಕೊಡುತ್ತಾರೆ ಎಂದರೆ ಏನರ್ಥ ? ಗೋಕಾಕ್‌ದಲ್ಲಿ 1992–93ರಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಜಾಹೀರಾತು ಸಲುವಾಗಿ ಕೊಡುತ್ತಾರೆ. 'ಗೋಕಾಕ್ ಟೈಮ್ಸ್' ಎನ್ನುವ ಸಣ್ಣ ಪತ್ರಿಕೆಗೆ 70 ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಉಳಿದ ಪತ್ರಿಕೆಗಳಿಗೂ ಜಾಹಿರಾತು ಕೊಡುತ್ತಾರೆ. ಇದನ್ನು ನೋಡಿದಾಗ ಯಾವ ಪ್ರಕಾರವಾಗಿ ಹಣವನ್ನು ಯಾವುದರ ಸಲುವಾಗಿ ಕೊಡುತ್ತಾರೆಂದರೆ ಇದು ಡೆವಲಪ್‌ಮೆಂಟ್ ಸಲುವಾಗಿ ಆಗದೆ, ಬರೇ ಪತ್ರಿಕೆಗಳಿಗೆ ಜಾಹೀರಾತು ಸಲುವಾಗಿ ಕೊಡುತ್ತಾರೆ. ಆಮೇಲೆ ಜನರನ್ನು ಕರೆಸಿ ಎನ್‌ಕ್ರೋಚ್‌ಮೆಂಟ್ ಆಗಿದೆ ಎನ್ನುವುದು, ಮುನಿಸಿಪಲ್ ರೂಲ್ಸ್ ಪ್ರಕಾರ ನೀವು ಮನೆ ನಿರ್ಮಾಣ ಮಾಡಿಲ್ಲ ಎನ್ನುವುದು, ಇಂಥಾದೆಲ್ಲ ಮಾಡಿ ಜನರಿಗೆ ತೊಂದರೆ ಕೊಟ್ಟು ಅವರಿಂದ ರೊಕ್ಕ ವಸೂಲು ಮಾಡುವುದು ನಡೆದಿದೆ. ಇದು ಹಗಲುದರೋಡೆ ಅಲ್ಲದೆ ಬೇರೇನು ? ನೀನು ಮನೆ

ಸರಿಯಾಗಿ ಕಟ್ಟಿಲ್ಲ, ಚಕ್ಕುಬಂದಿ ಬರೋಬರಿಯಾಗಿ ಬಿಟ್ಟಿಲ್ಲ, ಎಂದೆಲ್ಲ ಹೇಳಿ ಅದೇನೋ ತಮ್ಮತಮ್ಮೊಳಗೆ ವ್ಯವಹಾರ ಮುಗಿಸುತ್ತಾರಲ್ಲ, ಹಾಗೆ ಮಾಡುವುದು ನಡೆದಿದೆ. ಇದನ್ನು ವಿಚಾರ ಮಾಡಬೇಕಾಗುತ್ತದೆ. ಇದರಲ್ಲಿ ಏನಾದರೂ ಸುಳ್ಳು ಇದ್ದರೆ ನಾನು ನೀವು ಹೇಳಿದೆಲ್ಲ ಕೇಳುವುದಕ್ಕೆ ತಯಾರಿದ್ದೇನೆ. ಎಷ್ಟು ಮನೆಗಳು ಎನ್‌ಕ್ರೋಚ್ ಮಾಡಿದ್ದನ್ನು ರೆಗ್ಯುಲೈಸ್ ಮಾಡಲಾಗಿದೆ ?

ಗೋಕಾಕ್ ಅಭಿವೃದ್ಧಿ ಎಂದು ಹೇಳಿಕೊಂಡು ಸಮಿತಿ ಮಾಡಿ ಎಂದು ಹೇಳುತ್ತಾರೆ. ಇವೆಲ್ಲಾ ನೋಡಿದಾಗ ದಯಮಾಡಿ ತಾವು ಒಳ್ಳೆಯ ಮಂತ್ರಿಗಳು, ಆದಕಾರಣ ಈ ಮುನಿಸಿಪಾಲಿಟಿಯನ್ನು ಸೂಪರ್‌ಸೀಡ್ ಬೇಗ ಮಾಡಬೇಕು. ಅಲ್ಲಿಗೆ ಒಬ್ಬ ದಕ್ಷ ಅಡ್ಮಿನಿಸ್ಟ್ರೇಟರನ್ನು ನಿಮಗೆ ವಿಶ್ವಾಸ ಇದ್ದವರನ್ನು ಪೋಸ್ಟಿಂಗ್ ಮಾಡಿ. ಸರ್ಕಾರಕ್ಕೆ ಯಾರ ಮೇಲೆ ವಿಶ್ವಾಸ ಇದೆ ಅಂತಹ ಒಬ್ಬ ದಕ್ಷ ಅಡ್ಮಿನಿಸ್ಟ್ರೇಟರನ್ನು ಈ ಕೂಡಲೇ ತಾವು ಪೋಸ್ಟಿಂಗ್ಸ್ ಮಾಡಿ. ಯಾರು ಮೂರು ವರ್ಷಗಳ ಕಾಲ ಸರ್ವೀಸ್ ಮುಗಿಸಿದ್ದಾರೆ ಆ ಕಮೀಷನರನ್ನು ಇನ್ನೂ ಅಲ್ಲಿಡುತ್ತೇವೆ ಎಂದರೆ ಎಂಥಾದ್ದು ಇದು. ಮುನಿಸಿಪಾಲಿಟಿ ಬಗ್ಗೆ ಜನರಲ್ಲಿ ಒಂದು ಫೇತ್ ಇರಬೇಕು. ಆ ಮುನಿಸಿಪಾಲಿಟಿಯನ್ನು ಕೂಡಲೇ ಸೂಪರ್‌ಸೀಡ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಸಿದ್ದನಗೌಡ (ಕಲಘಟಗಿ):– ಸನ್ಮಾನ್ಯ ಅಧ್ಯಕ್ಷರೇ, ಗೋಕಾಕ್ ನಗರದ ಭ್ರಷ್ಟಾಚಾರ ಮತ್ತು ಅಲ್ಲಿ ನಡೆದಂತಹ ಅವ್ಯವಹಾರವನ್ನು....

ಅಧ್ಯಕ್ಷರು:– ತಾವು ಬರೆದು ಕಳುಹಿಸಿದ್ದೀರಾ ?

ಶ್ರೀ ಪಿ.ಸಿ. ಸಿದ್ದನಗೌಡ:– ನಾನು ಬರೆದು ಕಳುಹಿಸಿದ್ದೇನೆ.

ಶ್ರೀ. ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಒಬ್ಬರು ಒಂದು ವಿಷಯ ಪ್ರಸ್ತಾಪ ಮಾಡಿ ಅದನ್ನೇ 10 ಜನ ಪ್ರಸ್ತಾಪ ಮಾಡಿಕೊಂಡು ಹೋದರೆ ಹೇಗೆ ಇದು ನಿಯಮದ ಪ್ರಕಾರವೂ ಇಲ್ಲ.

(ಗೊಂದಲ)

ಶ್ರೀ ಪಿ.ಸಿ. ಸಿದ್ದನಗೌಡ:– ಮಾನ್ಯ ಅಧ್ಯಕ್ಷರೇ, ಮುನಿಸಿಪಾಲಿಟಿಯವರು ಕಟ್ಟಿಸುವ ಸ್ಟಾಲ್‌ಗೆ ಅಬಕಾರಿ ಗುತ್ತಿಗೆದಾರರ ಹೆಸರು ಇಡುತ್ತಾರೆ. ನಾಳೆ ಗೋಕಾಕ್ ಮುನಿಸಿಪಾಲಿಟಿ ಹೆಸರು ತೆಗೆದು ಆ ಗುತ್ತಿಗೆದಾರರ ಹೆಸರು ಇಟ್ಟರೆ ಏನು ಮಾಡುವುದು. ಮಾನ್ಯ ಕಾನೂನು ಸಚಿವರು, ಬೇರೆಯವರು ಮಾತನಾಡಬಾರದು ಎಂದರೆ ಹೇಗೆ ? ನಾವು ಸಹಿ ಮಾಡಿ ಕಳುಹಿಸಿದ್ದೇವೆ. ಆದ್ದರಿಂದ ಮಾತನಾಡುತ್ತಿದ್ದೇನೆ.

ಈಗ ಗೋಕಾಕ್ ನಗರದಲ್ಲಿ ಆಗತಕ್ಕಂಥ ಭ್ರಷ್ಟಾಚಾರ ಏನು ಇದೆ, ಈ ಬಗ್ಗೆ ಹೇಳಬೇಕೆಂದರೆ 4(1), 6(1) ನೋಟಿಫಿಕೇಷನ್ ಆದ ಮೇಲೆ ವಾಪಸ್ ಕೊಡುವಂತಹ ಪ್ರಶ್ನೆ ಬರುತ್ತಿರಲಿಲ್ಲ. ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗದವರಿಗೆ ನಾವು ಸಹಾಯ ಮಾಡುತ್ತೇವೆಂದು ಹೇಳಿ ಅವರ ಜಮೀನು ತೆಗೆದುಕೊಂಡು ಬೇರೆಯವರು ಲೂಟಿ ಮಾಡಿ ಜಮೀನು ಮಾಡಿದರೆ, ಅದನ್ನು ಸೂಪರ್‌ಸೀಡ್ ಮಾಡುವುದು ಅಷ್ಟೇ ಅಲ್ಲ, ಅವರಿಗೆ ಶಿಕ್ಷೆ ಮಾಡಬೇಕಾಗುತ್ತದೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತಹ ಅನೇಕ ವಿಚಾರಗಳನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಮಾನ್ಯ ಸಚಿವರು ಕೂಡಲೇ ಅವರ ಮೇಲೆ ಕ್ರಮ ತೆಗೆದುಕೊಂಡರೆ ಬೇರೆ ಕಾರ್ಪೊರೇಷನ್‌ನವರು ಈ ರೀತಿ ಮಾಡದಂತೆ ಆಗುತ್ತದೆ. ಇದನ್ನೆಲ್ಲಾ ನಾವು ಹಿಂದೆ ಇಲ್ಲಿ ಹೇಳಿದ್ದೇವೆ. ಇಲ್ಲಿ ಬೆಂಗಳೂರಿನಲ್ಲಿ ಕೂಡ ಮಾಡಿದರು. ಈ ನಮ್ಮ ಗೌರ್ನರ್ ಮನೆ ಹಿಂದೆ ಇದೆಯಲ್ಲಾ ಅಲ್ಲಿನ ಜಾಗ ಕೂಡ ಆ ತರಹ ಆಗಿದೆ. ಪರ್ಮಿಷನ್

ಇಲ್ಲದೆ ಬಿಲ್ಡಿಂಗ್ ಕಟ್ಟುತ್ತಾರೆ. ನಿಮ್ಮ ಪ್ಲಾನ್‌ನಲ್ಲಿ ಗಾರ್ಡನ್ ಬಿಡಬೇಕು ಎಂದು ಇರುತ್ತದೆ. ಗಾರ್ಡನ್ ಮಾರಾಟ ಮಾಡುತ್ತಾರೆ, ಲ್ಯಾಟ್ರಿನ್ ಮಾರಾಟ ಮಾಡುತ್ತಾರೆ. ಮುನಿಸಿಪಾಲಿಟಿ ಅಂದರೆ ಹೇಳುವವರು ಇಲ್ಲ, ಕೇಳುವವರು ಇಲ್ಲ, ಕಸದ ಡಬ್ಬಿ ಎನ್ನುತ್ತಾರಲ್ಲ ಆ ಕಸದ ಡಬ್ಬಿ ಆದಂತೆ ಆಗಿದೆ. ಮಾನ್ಯ ಸಚಿವರು ಈ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಷಯ ಹೇಳುವುದು ಮರೆತೆ. ಈ ಮುನಿಸಿಪಾಲಿಟಿ ಲೆಟರ್ ಹೆಡ್ಸ್ ಸೀಲ್, ಪ್ರೆಸಿಡೆಂಟ್‌ದು ಲೆಟರ್ ಹೆಡ್ಸ್ ಸೀಲು ಅವು ಸತೀಶ್ ಅವರ ಮನೆಯಲ್ಲಿವೆ. ಅವರು ಪ್ರೆಸಿಡೆಂಟ್ ಪರವಾಗಿ ಸಹಿ ಮಾಡಿ ಅವರೇ ಲೆಟರ್ ಕಳುಹಿಸಿಕೊಡುತ್ತಿದ್ದಾರೆ. ಅವರ ಮನೆಯನ್ನು ಸೀಜ್ ಮಾಡಿ. ಸತೀಶ್ ಜಾರ್‌ಕೊಳೆ ಎಂಬ ಎಕ್ಸೈಜ್ ಕಂಟ್ರಾಕ್ಟರ್ ಇದ್ದಾರಲ್ಲ ಅವರ ಮನೆಯಲ್ಲಿ ಲೆಟರ್ ಹೆಡ್ಸ್, ಸೀಲು ಇದ್ದು, ಅವರ ಮನೆಯಲ್ಲಿ ಮುನಿಸಿಪಾಲಿಟಿ ನಡೆಯುತ್ತಿದೆ. ಅದನ್ನು ಮೊದಲು ಸೀಜ್ ಮಾಡುವುದಕ್ಕೆ ಹೇಳಿ.

ಡಾ: ಎಸ್.ಬಿ. ನಂಜಪ್ಪ (ಶ್ರವಣಬೆಳಗೊಳ):– ಮಾನ್ಯ ಅಧ್ಯಕ್ಷರೇ, ಮುನಿಸಿಪಲ್ ಅಧ್ಯಕ್ಷರು ಶೇರು ಸರ್ಟಿಫಿಕೇಟ್‌ಗೆ ಸಹಿ ಮಾಡಿ 150 ರೂಪಾಯಿಗೆ ಇರತಕ್ಕಂಥ ಸೈಟ್ ಎಂದು ಸರ್ಕಾರದ ಆದೇಶ ಇಲ್ಲದೆ ಅವರು ಬೇನಾಮಿ ಹೆಸರುಗಳನ್ನು ಬರೆದು ಸುಮಾರು 150–200 ಸೈಟ್‌ಗಳನ್ನು ಇವತ್ತು ಮಾರಾಟ ಮಾಡುತ್ತಿದ್ದಾರೆ. ಬಹುಶಃ ನಾನು ಸಂಬಂಧಪಟ್ಟ ಅಧಿಕಾರಿ ವರ್ಗದವರಿಗೂ, ಮಂತ್ರಿಗಳಿಗೂ ಸುಮಾರು ಕಾಗದಗಳನ್ನು ಬರೆದಿದ್ದೇನೆ. ಅದು ಲೋಕಾಯುಕ್ತಕ್ಕೂ ಬಂದಿದೆ. ಆದರೆ ಇವತ್ತಿನವರೆಗೂ ಕ್ರಮ ತೆಗೆದುಕೊಂಡಿಲ್ಲ. ಪ್ರಭಾವಶಾಲಿ ರಾಜಕಾರಣಿಗಳ ಮಧ್ಯೆ ಅದಕ್ಕೆ ಲೈಸೆನ್ಸ್ ಇಲ್ಲ, ಖಾತಾ ಇಲ್ಲ, ಕಿರಿದಿ ಇಲ್ಲ, ಏನೂ ಇಲ್ಲ. ಅಲ್ಲಿ ಸುಮಾರು 3 ಲಕ್ಷ ರೂಪಾಯಿಗಳ ಮನೆ ಕಟ್ಟಿಕೊಂಡು ಇಲ್ಲಿ ನಮ್ಮ ಸೇಲ್ಸ್ ಟ್ಯಾಕ್ಸ್ ಆಫೀಸ್‌ಗೆ ಮನೆಯನ್ನು ಬಾಡಿಗೆಗೇ ಕೊಟ್ಟಿದ್ದಾರೆ. ಇಲ್ಲಿ ಸುಮಾರು ಅವ್ಯವಸ್ಥೆ ಆಗಿದೆ. ಇವತ್ತು ತಾವು ತನಿಖೆ ಮಾಡಿದರೆ ಚಳ್ಳಕೆರೆ ಮುನಿಸಿಪಾಲಿಟಿಗೆ ಇನ್ನು 10 ವರ್ಷಗಳವರೆಗೂ ನಮಗೆ ಡೆವಲಪ್‌ಮೆಂಟ್ ಲೋನ್ ಬೇಕಾಗಿಲ್ಲ. ಇವತ್ತು ಕೋಟಿಗಟ್ಟಲೆ ರೊಕ್ಕ ಅನ್ಯಾಯವಾಗಿದೆ. ಇವತ್ತು ಯಾರೇ ಬಂದು ತನಿಖೆ ಮಾಡಲಿ. ಸ್ವಾಮಿ, 150 ರೂಪಾಯಿಗೆ ರಸೀದಿ ಬರೆದು 2–3 ಲಕ್ಷಕ್ಕೆ ಸೈಟ್ ಮಾರಿಕೊಂಡಿದ್ದಾರೆ. ಬೇನಾಮಿ ಒಳಗೆ ಸಬ್‌ರಿಜಿಸ್ಟರ್ ಆಫೀಸ್‌ನಲ್ಲಿ ತಿಮ್ಮಣ್ಣ ಬೊಮ್ಮಣ್ಣ ಎಂದು ಅವರೇ ಹೋಗಿ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಇದರ ಮೇಲೆ ಮುನಿಸಿಪಾಲಿಟಿ ಚೀಫ್ ಆಫೀಸರ್ ಮಾಡತಕ್ಕಂಥ ಸಹಿಯನ್ನು ಸಹ ದುರುಪಯೋಗ ಮಾಡಿಕೊಂಡು ಶೇರ್ ಸರ್ಟಿಫಿಕೇಟ್‌ಗೆ ಅವರೇ ಸಹಿ ಮಾಡಿಕೊಟ್ಟಿದ್ದಾರೆ. ದಯಮಾಡಿ ಇದನ್ನು ತನಿಖೆ ಮಾಡಿ ಸೂಕ್ತ ವ್ಯವಸ್ಥೆ ಮಾಡಿದರೆ ಚಳ್ಳಕೆರೆ ಮುನಿಸಿಪಾಲಿಟಿಗೆ ಇನ್ನು 10 ವರ್ಷಗಳವರೆಗೂ ಡೆವಲಪ್‌ಮೆಂಟ್ ಲೋನ್ ಒಂದು ರೂಪಾಯಿಯೂ ಬೇಕಾಗಿಲ್ಲ. ದಯಮಾಡಿ ತನಿಖೆ ಮಾಡಿ ನ್ಯಾಯ ದೊರಕಿಸಿಕೊಡಬೇಕು, ಬಡಬಗ್ಗರಿಗೆ ಬಹಳ ಅನ್ಯಾಯವಾಗಿದೆ. ಒಂದು ಎರಡು ಸೈಟು ಅಲ್ಲ ಸುಮಾರು 300–400 ಸೈಟ್‌ಗಳದ್ದು ಈ ರೀತಿ ಅವ್ಯವಸ್ಥೆ ಆಗಿವೆ. ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳಿದರು ಅದು ನೂರಕ್ಕೆ ನೂರರಷ್ಟು ಸತ್ಯ. ಅದಕ್ಕಿಂತ ಹೆಚ್ಚಾಗಿ ನಮ್ಮ ಮುನಿಸಿಪಾಲಿಟಿಯಲ್ಲಿ ಆಗಿದೆ. ಅದು ದೊಡ್ಡ ವ್ಯಾಪಾರದ ಸ್ಥಳ, ಇಡೀ ಕರ್ನಾಟಕ ರಾಜ್ಯದಲ್ಲಿ ಎರಡನೇ ದೊಡ್ಡ ತಾಲೂಕು ಆಗಿರುವುದರಿಂದ, ಮುನಿಸಿಪಾಲಿಟಿಗೆ ವರಮಾನ ಇರುವುದರಿಂದ ಅಲ್ಲಿ ಬಡವರಿಗೆ ಬಹಳ ಅನ್ಯಾಯವಾಗಿದೆ. ಇದಕ್ಕೆ ಅಧಿಕಾರಿ ವರ್ಗದವರು ದೊಡ್ಡ ದೊಡ್ಡ ರಾಜಕೀಯ ವರ್ಗದವರು ಸಹಕಾರ ಕೊಟ್ಟು ಅವ್ಯವಸ್ಥೆ ಆಗಿದೆ ಎಂದು ನಾನು ತಮಗೆ ತಿಳಿಸುತ್ತಾ, ದಯಮಾಡಿ ಇದರ ಬಗ್ಗೆ ಕ್ರಮ ತೆಗೆದುಕೊಂಡು ಬಡವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಚೌಡರೆಡ್ಡಿ:– ಸನ್ಮಾನ್ಯ ಅಧ್ಯಕ್ಷರೇ, ನಮ್ಮ ವಿರೋಧಪಕ್ಷದ ನಾಯಕರು ಗೋಕಾಕ್

ನಗರಸಭೆಯಲ್ಲಿ ಇಲ್ಲೀಗಲ್ ಆಗಿ ವ್ಯವಹಾರಗಳು ನಡೆದಿದೆ, ಆಮೇಲೆ ನೋಟಿಫಿಕೇಷನ್ ಆಗಿ ಅದನ್ನು ಬಿಟ್ಟು ಕೊಟ್ಟಿದ್ದಾರೆ, ಮಿಸ್ ಅಪ್ರೊಪ್ರಿಯೇಷನ್ ಆಗಿದೆ, ಯಾರೋ ಎಕ್ಸೈಜ್ ಕಂಟ್ರಾಕ್ಟರ್ ಹಿಂದೆ ನಿಂತುಕೊಂಡು ಇದನ್ನೆಲ್ಲ ಮಾಡಿಸುತ್ತಿದ್ದಾರೆ, ಸೀಲು ವೆಗೈರೆ ಎಲ್ಲಾ ಅವರ ಮನೆಯಲ್ಲಿದೆ ಎಂದು ಹೇಳಿದರು. ಸಂಬಂಧಪಟ್ಟ ಜಾಯಿಂಟ್ ಡೈರೆಕ್ಟರ್‌ನ್ನು ನಾನು ಇವತ್ತೇ ಕಳುಹಿಸಿಬಿಟ್ಟು ಅದರ ಬಗ್ಗೆ ರಿಪೋರ್ಟ್ ತರಿಸುತ್ತೇನೆ. ನಾನು ಬಂದ ಮೇಲೆ ಬಹಳ ಮುನಿಸಿಪಾಲಿಟಿಗಳ ಮೇಲಿರುವ ಅಲಿಗೇಶನ್ಸ್ ರೆಡಿ ಮಾಡುತ್ತಿದ್ದೇನೆ. ಯಾವ ಯಾವ ಮುನಿಸಿಪಾಲಿಟಿಗಳ ಮೇಲೆ ಅಲಿಗೇಶನ್ಸ್ ಬಂದಿವೆಯೋ ನಿರ್ದಾಕ್ಷಿಣ್ಯವಾಗಿ ಕಳುಹಿಸಿದ್ದೇವೆ. ಇವತ್ತು ನಾವು ಬಹಳ ಮುನಿಸಿಪಾಲಿಟಿಗಳನ್ನು ಸೂಪರ್‌ಸೀಡ್ ಮಾಡುವುದಕ್ಕೂ ತಯಾರಾಗಿದ್ದೇವೆ.

ಇನ್ನು ಕೆಲವೇ ದಿನಗಳಲ್ಲಿ ಅವರ ಮೇಲೆ ಕಾನೂನು ಪ್ರಕಾರ ಏನು ಅವಕಾಶ ಬರುತ್ತೋ ಆ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹಿಂಜರಿಯುವುದಿಲ್ಲ. ಜೊತೆಗೆ ನಾನು ಡೆಪ್ಯುಟಿ ಕಮೀಷನರ್ ಹತ್ತಿರ ಫೋನ್ ಮುಖಾಂತರ ಮಾತನಾಡುತ್ತೇನೆ. ಇವತ್ತು ನಾನು ನಮ್ಮ ಸಂಬಂಧಪಟ್ಟ ಆಫೀಸರನ್ನು ಅಲಿಗೇಶನ್ಸ್ ಬಗ್ಗೆ ತನಿಖೆಗಾಗಿ ಕಳುಹಿಸಿ ಕೊಡುತ್ತಿದ್ದೇನೆ. ನಮ್ಮ ಚೀಫ್ ವಿಪ್‌ರವರು ಹೇಳಿದಂತೆ ಈಗಾಗಲೇ ಸಂಬಂಧಪಟ್ಟ ಆಫೀಸರನ್ನು ಕಳುಹಿಸಿದ್ದೇವೆ. ಎನ್‌ಕ್ವೈರಿ ಆಗಿದೆ, ಇನ್ನು ಎರಡು-ಮೂರು ದಿವಸಗಳಲ್ಲಿ ರಿಪೋರ್ಟ್ ಬರುತ್ತದೆ. ನನಗೆ ಅವರು ತಿಳಿಸಿದ ತಕ್ಷಣ ನಾನು ಕ್ರಮ ತೆಗೆದುಕೊಂಡಿದ್ದೇನೆ. ಹಾಸನದ ಬಗ್ಗೆ ಕೂಡ ನಾನು ಕ್ರಮ ತೆಗೆದುಕೊಂಡಿದ್ದೇನೆ. ಅಲಿಗೇಶನ್ಸ್ ಎಲ್ಲಾ ಬಂದಿದೆ. ಸೂಪರ್‌ಸೀಡ್ ಮಾಡಬೇಕಾದರೆ ಅಲಿಗೇಶನ್ಸ್ ಬಗ್ಗೆ ಎನ್‌ಕ್ವೈರಿ ಆಗಬೇಕು, ಅವರಿಗೆ ಅವಕಾಶ ಕೊಡಬೇಕು. ಇಷ್ಟು ದಿವಸ ಟೈಮ್ ತೆಗೆದುಕೊಂಡ ಮೇಲೆ ನಾವು ಅದರ ಪ್ರಕಾರ ಮಾಡಬೇಕು. ಅವರಿಗೆ ಎಲ್ಲಾ ಗೊತ್ತಿದೆ. ನಾವು ಯಾವುದಕ್ಕೂ ಹಿಂಜರಿಯುತ್ತಿಲ್ಲ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ರೆಡಿ ಇದ್ದೇವೆ. ನಾನು ಡೆಪ್ಯುಟಿ ಕಮೀಷನರ್ ಜೊತೆ ಫೋನ್ ಮುಖಾಂತರ ಮಾಡುತ್ತೇನೆ. ನಮ್ಮ ಡಿ.ಎಂ.ಎ. ಆಫೀಸ್‌ನಿಂದ ಜವಾಬ್ದಾರಿಯುತವಾದ ಅಧಿಕಾರಿಯನ್ನು ನಾನು ಇವತ್ತೇ ಕಳುಹಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ರೆಕಾರ್ಡ್ ಸೀಜ್ ಮಾಡಿಸಿ. ಆಮೇಲೆ ಎನ್‌ಕ್ವೈರಿ ಮಾಡಿ.

ಶ್ರೀ ಚೌಡರೆಡ್ಡಿ:– ನಾನು ಮಾತನಾಡುತ್ತೇನೆ, ನಮ್ಮ ಆಫೀಸಿನಿಂದ ನಾನು ಇವತ್ತೇ ಅಲ್ಲಿಗೆ ಕಳುಹಿಸುತ್ತೇನೆ.

3. ಮಂಡ್ಯ ನಗರದಲ್ಲಿರತಕ್ಕ ಮೈಸೂರು ಸಕ್ಕರೆ ಕಾರ್ಖಾನೆಯ ಕಾರ್ಯನಿರ್ವಹಣೆ ಬಗ್ಗೆ

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):– ಮಾನ್ಯ ಅಧ್ಯಕ್ಷರೇ, ನಮ್ಮ ಮಂಡ್ಯ ನಗರದಲ್ಲಿರತಕ್ಕಂಥ ಮೈಸೂರು ಸಕ್ಕರೆ ಕಾರ್ಖಾನೆಯ ವಾರ್ಷಿಕ ಸಭೆ ದಿನಾಂಕ 20–3–93ರಲ್ಲಿ ಮಂಡ್ಯದಲ್ಲಿ ನಡೆಯುತ್ತಿದೆ. ಮೈಸೂರು ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ರೈತರು ನಾವು ಉತ್ತಮ ಗುಣಮಟ್ಟದ ಕಬ್ಬನ್ನು ಬೆಳೆದುಕೊಟ್ಟಿದ್ದರೂ ಸಹ ಸಕ್ಕರೆ ಕಾರ್ಖಾನೆ ದಕ್ಷವಾಗಿ, ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದೆ ನಮಗೆ ಕೊಡತಕ್ಕಂಥ ಬೆಲೆಯಲ್ಲಿ ತೀರಾ ಅನ್ಯಾಯವಾಗಿದೆ ಎಂದು ಹೇಳಿ ವಾರ್ಷಿಕ ಮಹಾಸಭೆಯಲ್ಲಿ ರೈತರು ಇತರ ರೈತ ಸಂಘಟಕರೆಲ್ಲ ಪ್ರತಿಭಟನೆ ಮಾಡತಕ್ಕಂಥ ವಿಷಯವನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಾ ಈ ಒಂದು ಸಕ್ಕರೆ ಕಾರ್ಖಾನೆಯಲ್ಲಿ 91–92ನೇ ಸಾಲಿನಲ್ಲಿ ಕೂಡ ಅನೇಕ ಸ್ಟಾಕ್ ಉಳಿದಿದೆ. 1992–93ನೇ ಸಾಲಿನಲ್ಲೂ ಕೂಡ ಸಕ್ಕರೆ ಸ್ಟಾಕ್ ಉಳಿದಿದ್ದು ಇತ್ತೀಚೆಗೆ ಕೇಂದ್ರ ಸರ್ಕಾರದ ನೀತಿಯಿಂದ ಸಕ್ಕರೆಯ ಮುಕ್ತಮಾರುಕಟ್ಟೆ ದರ ಹಾಗೂ

ಲೆವಿ ದರ ಹೆಚ್ಚಾಗಿದ್ದು ನಮ್ಮ ರೈತರಿಗೆ ಆ ಸೌಲಭ್ಯವನ್ನು, ದರವನ್ನು ಸರ್ಕಾರ ಮಧ್ಯೆ ಪ್ರವೇಶಿಸಿ ದೊರಕಿಸಿಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ (ಸಕ್ಕರೆ ಸಚಿವರು):– ಮಾನ್ಯ ಅಧ್ಯಕ್ಷರೇ, ಈ ವಿಷಯ ಸರ್ಕಾರದ ಗಮನಕ್ಕೆ ಬಂದ ಮೇಲೆ ನನ್ನ ಕೊಠಡಿಯಲ್ಲಿ ಶ್ರೀಮಾನ್ ಆತ್ಮಾನಂದರವರನ್ನು ಮತ್ತು ಶ್ರೀ ಹೇಚ್.ಡಿ. ಚೌಡಯ್ಯನವರನ್ನೂ ಸಮಕ್ಷಮ ಕರೆಸಿ ಶುಗರ್ ಫ್ಯಾಕ್ಟರಿ ಸಿ.ಎಂ.ಡಿ. ಯವರನ್ನು ಕರೆಸಿ ಅರ್ಧ ಗಂಟೆ ಸವಿಸ್ತಾರವಾಗಿ ಚರ್ಚೆ ಆದ ನಂತರ ಅವರಿಗೆ ತೃಪ್ತಿಯಾದ ಮೇಲೆ ನಾನು ಸಭೆಯನ್ನು ಮುಗಿಸಿ ಬಂದಿದ್ದೇನೆ. ಆದರೆ ಇವತ್ತು ಅವರು ಏಕೆ ಆ ವಿಷಯ ಪ್ರಸ್ತಾಪ ಮಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಅವತ್ತಿನ ದಿವಸ ಅವರ ಎಲ್ಲಾ ಸಮಸ್ಯೆಗಳ ಬಗ್ಗೆ ಒಪ್ಪಿಕೊಂಡು ಸಿ.ಎಂ.ಡಿ.ಯವರು ಆಶ್ವಾಸನೆ ಕೊಟ್ಟರು. 20ನೇ ತಾರೀಖು ಏನು ಜನರಲ್ ಬಾಡಿ ಮೀಟಿಂಗ್ ಆಗುತ್ತದೆ ಆ ದಿವಸ ಯಾವ ತರಹದ ಅಹಿತಕರ ಘಟನೆ ಜರುಗದಂತೆ ನೋಡಿಕೊಳ್ಳುವುದಾಗಿ ಅವರ ಸಮಕ್ಷಮದಲ್ಲಿ ಹೇಳಿದ್ದಾರೆ. ಆದರೂ ಅವರಿಗೆ ಏಕಕ್ಕೋ ಸಂಶಯವೆಂದು ನನಗೆ ಅರ್ಥವಾಗುತ್ತಿಲ್ಲ.

4. ಬಾಂಬೆ ಮತ್ತು ಕಲ್ಕತ್ತದಲ್ಲಿ ನಡೆದಂಥ ಬಾಂಬ್ ಪ್ರಕರಣದ ಹಿನ್ನೆಲೆಯಲ್ಲಿ ನಗರದಲ್ಲಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ಅಧ್ಯಕ್ಷರೇ, ನಿನ್ನೆ ವಿಧಾನ ಪರಿಷತ್ತಿನಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟು ರಾಜ್ಯದಲ್ಲಿರತಕ್ಕಂಥ ಕಾನೂನು ಪರಿಸ್ಥಿತಿಯ ಬಗ್ಗೆ ಸವಿಸ್ತಾರವಾಗಿ ತಿಳಿಸಿದ್ದಾರೆ. ಜೊತೆಗೆ ಬಾಂಬೆಯಲ್ಲಿ ಮತ್ತು ಕಲ್ಕತ್ತದಲ್ಲಿ ನಡೆದಿರತಕ್ಕಂಥ ಬಾಂಬ್ ಪ್ರಕರಣದ ಹಿಂದಗಡೆ ರಾಜ್ಯದಲ್ಲಿ ತೆಗೆದುಕೊಂಡಿರತಕ್ಕಂತ ಕಾರ್ಯಕ್ರಮಗಳು ಮತ್ತು ಅಂತಹ ಗುಂಪುಗಳು ಏನಾದರೂ ಅಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರೆ ಕಂಡಲ್ಲಿ ಗುಂಡು ಹಾಕತಕ್ಕಂಥ ಆದೇಶವನ್ನು ಕೊಟ್ಟಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇವತ್ತಿನ ದಿವಸ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ಮುಖಪುಟದಲ್ಲಿ ಮುಖ್ಯವಾಗಿರತಕ್ಕಂಥ ಸುದ್ದಿ ಪ್ರಕಟಣವಾಗಿದೆ. ಮುಂಬೈ ಘಟನೆ ಆದ ನಂತರ ಮಧ್ಯಪ್ರದೇಶಕ್ಕೆ, ಗುಜರಾತಿಗೆ ಮತ್ತು ಕರ್ನಾಟಕ ರಾಜ್ಯಕ್ಕೆ ಆಸ್ಫೋಟಕಗಳನ್ನು ಒಳಗೊಂಡ ಬಾಂಬ್‌ಗಳಿರತಕ್ಕ ಕನ್‌ಸೈನ್‌ಮೆಂಟ್ ಬೆಂಗಳೂರಿಗೆ ತಲುಪಿದೆ ಎನ್ನುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನತಕ್ಕಂಥಾದ್ದು ಒಂದು ಪ್ರಶ್ನೆ. ಎರಡನೆಯದಾಗಿ ಇದರ ಬಗ್ಗೆ ತೆಗೆದುಕೊಂಡಿರತಕ್ಕಂಥ ಕ್ರಮಗಳು ಕೆಲವು ಸೂಕ್ಷ್ಮ ವಿಚಾರಗಳು ಏನು ಇರುತ್ತವೆ ಅದರ ಬಗ್ಗೆ ಸದನಕ್ಕೆ ಬಹಿರಂಗವಾಗಿ ಸರ್ಕಾರಕ್ಕೆ ಹೇಳುವುದಕ್ಕಾಗುವುದಿಲ್ಲ. ಅದು ಕಾನೂನು ಹಿತದೃಷ್ಟಿಯಿಂದ ಹೇಳತಕ್ಕಂಥ ಅವಶ್ಯಕತೆಯೂ ಇಲ್ಲವೆಂದು ನಾನು ತಿಳಿದುಕೊಂಡಿರತಕ್ಕವನು.

ಆದರೆ, ಮುಖ್ಯ ಮಂತ್ರಿಯವರು ಸವಿಸ್ತಾರವಾಗಿ ವಿಧಾನ ಪರಿಷತ್ತಿನಲ್ಲಿ ಹೇಳಿದ್ದಾರೆ. ವಿಶೇಷವಾಗಿ ಇವತ್ತು ಎಕ್ಸ್‌ಪ್ಲೋಸಿವ್ಸ್ ಕರ್ನಾಟಕಕ್ಕೆ ಸಹಿತ ಬಂದಿವೆ. ಇದರ ಬಗ್ಗೆ ಏರೋಪ್ಲೇನ್‌ಗಳಲ್ಲಿ ಬರತಕ್ಕಂಥವರನ್ನು, ಟ್ರೈನ್‌ನಲ್ಲಿ ಬರತಕ್ಕಂಥವರನ್ನು ಚೆಕ್ ಮಾಡುತ್ತೇವೆ ಮತ್ತು ಸಸ್ಪೆಕ್ಟೆಡ್ ಎಲಿಮೆಂಟ್ಸ್‌ನ್ನು ಅರೆಸ್ಟ್ ಮಾಡುತ್ತೇವೆಂದು ಏನು ಹೇಳಿದ್ದಾರೆ ಇವರ ಬಗ್ಗೆಯೂ ಸಹಿತ ಈ ಸದನಕ್ಕೆ ತಿಳಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಜೊತೆಗೆ ಈ ಆಂಟಿ ಸೋಷಿಯಲ್ ಎಲಿಮೆಂಟ್ಸ್ ಯಾರಿದ್ದಾರೆ; ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ. ಕಾವೇರಿ ಗಲಾಟೆಯಾದ ಸಂದರ್ಭದಲ್ಲಿ ಎರಡು ದಿನ ಮುಂಚಿತವಾಗಿ ಆಂಟಿ ಸೋಷಿಯಲ್ ಎಲಿಮೆಂಟ್ಸ್‌ನ್ನು ಅರೆಸ್ಟ್ ಮಾಡಿದ್ದಿದ್ದರೆ ಅಂಥಾ ಘಟನೆಗಳೇ ನಡೆಯುತ್ತಿರಲಿಲ್ಲ. ಆದರಿಂದಾಗಿ ಇವತ್ತು ಆ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆಯೇ ಎನ್ನುವುದು ನಮಗೆಲ್ಲಾ ತಿಳಿಯಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು

ಇಲ್ಲಿ ಇಲ್ಲ. ಆದರೆ ಸಂಸದೀಯ ವ್ಯವಹಾರಗಳ ಮಂತ್ರಿಯವರು ಇದರ ಬಗ್ಗೆ ಸದನಕ್ಕೆ ತಿಳಿಸಬೇಕು. ಸರ್ಕಾರದ ವಿಚಾರ ಏನು ? ಸರ್ಕಾರದ ಗಮನಕ್ಕೆ ಈ ವಿಷಯ ಬಂದಿದೆಯೋ ಎನ್ನುವುದನ್ನು ನಮಗೆಲ್ಲರಿಗೂ ತಿಳಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

† ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೇ, ಉಪ ನಾಯಕರಾದ ಸಿಂಧ್ಯಾರವರು ಪ್ರಸ್ತಾಪ ಮಾಡಿದ ಹಾಗೆ, ಯಾವ ಎಕ್ಸ್‌ಪ್ಲೋಸಿವ್ಸ್ ಬಾಂಬೆಯಲ್ಲಿ ಉಪಯೋಗ ಮಾಡಲಾಯಿತೋ ಅದೇ ಎಕ್ಸ್‌ಪ್ಲೋಸಿವ್ಸ್ ಈಗಾಗಲೆ ಕರ್ನಾಟಕಕ್ಕೂ ಬಂದಿದೆಯೆಂದು ಟೈಮ್ಸ್ ಆಫ್ ಇಂಡಿಯಾದಲ್ಲಿ ಸುದ್ದಿ ಬಂದಿದೆ. ಇದನ್ನು ಪೋಲೀಸ್ ಅಧಿಕಾರಿಗಳು ಗಮನಿಸಿ ಮಂಗಳೂರು, ಬೆಳಗಾಂ, ಹುಬ್ಬಳ್ಳಿ, ಕಾರವಾರದಲ್ಲಿ ಸಾಕಷ್ಟು ಸೆಕ್ಯುರಿಟಿ ಮೆಷರ್ ತೆಗೆದುಕೊಳ್ಳಬೇಕಾಗುತ್ತದೆ. ಇನ್ನೂ ಅವು ಬಂದಿಲ್ಲವೆಂದರೆ ಬಾರ್ಡರ್ ಏರಿಯಾದಲ್ಲಿ ಸೆಕ್ಯುರಿಟಿ ಮೆಷರ್‌ಅನ್ನು ಟೈಟ್ ಮಾಡಬೇಕು. ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆಯೋ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಈಗಾಗಲೇ ಸಾಕಷ್ಟು ಸಮಯ ಚರ್ಚೆಯಾಗಿದೆ. ನಿನ್ನೆ ಮಾನ್ಯ ಮುಖ್ಯ ಮಂತ್ರಿಯವರು ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಬೇಕಾಗಿತ್ತು. ಏಕೆಂದರೆ ಈಗಾಗಲೇ ಮೇಲ್ಮನೆಯಲ್ಲಿ ಸ್ಟೇಟ್‌ಮೆಂಟ್ ಆಗಿದೆ. ಇವತ್ತು ಈ ಸಂಬಂಧ ಎಲ್ಲಾ ವಿಚಾರಗಳನ್ನು ಇಲ್ಲಿ ಹೇಳಲಿಕ್ಕೆ ಬರುವುದಿಲ್ಲ; ಹೇಳಲೂಬಾರದು. ಕೆಲವು ವಿಚಾರವನ್ನು ನಿಮ್ಮಲ್ಲೇ ಇಟ್ಟುಕೊಳ್ಳಬೇಕಾಗುತ್ತದೆ. ಅದೆಲ್ಲ ಹೇಳಿದರೆ ನಿಮಗೆ ಕ್ರಮ ತೆಗೆದುಕೊಳ್ಳಲಿಕ್ಕೂ ಆಗುವುದಿಲ್ಲ. ಕೊನೆಯಪಕ್ಷ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಏನು ನಡೆಯುತ್ತಿದೆ; ನೀವು ಏನು ಕ್ರಮ ತೆಗೆದುಕೊಂಡಿರಿ, ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ ಎಂದು ನಮಗೆ ಹೇಳಬೇಕಾಗುತ್ತದೆ. ಈಗ ಎಲ್ಲಾ ಕಡೆ ಒಂದು ಭಯದ ವಾತಾವರಣ ನಿರ್ಮಾಣ ಉಂಟಾಗಿದೆ. ನಾನು ಇವತ್ತು ಬಾಂಬೆಗೆ ಹೊರಟಿದ್ದೇನೆ. ನಮ್ಮ ಮಿಸೆಸ್ ಹೇಳಿದರು, ಬಾಂಬೆಗೆ ಏಕೆ ಹೋಗುತ್ತೀರಿ, ಅಷ್ಟು ತೊಂದರೆ ಬೇಡ ಎಂದು. ಅಂದರೆ ಇಂತಹ ವಾತಾವರಣ ಪ್ರತಿಯೊಂದು ಕಡೆ ಉಂಟಾಗಿದೆ. ಆ ಭಯದ ವಾತಾವರಣ ಹೋಗುವುದಕ್ಕಾಗಿ ಸರ್ಕಾರ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಸಾರ್ವಜನಿಕರು ಭಯಪಡುವ ಕಾರಣವಿಲ್ಲ, ನಾವು ಇಂಥಾ ಕ್ರಮ ತೆಗೆಧುಕೊಂಡಿದ್ದೇವೆ ಎಂಬ ಮಾತು ಮುಖ್ಯ ಮಂತ್ರಿಗಳ ಕಡೆಯಿಂದ ಬರಬೇಕಾಗುತ್ತದೆ. ಇವತ್ತು ಮುಖ್ಯ ಮಂತ್ರಿಗಳು ಇದ್ದರೆ ಅವರ ಮುಖಾಂತರ ಒಂದು ಸ್ಟೇಟ್‌ಮೆಂಟ್ ಅನ್ನು ಈ ಸದನದಲ್ಲಿ ಮಾಡಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಮಾನ್ಯ ಅಧ್ಯಕ್ಷರೇ, ಈ ಬಗ್ಗೆ 3 ದಿನಗಳ ಹಿಂದೆ ಈ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯ ಸರ್ಕಾರ ಕೈಗೊಂಡಿರತಕ್ಕಂಥ ಕ್ರಮಗಳ ಬಗ್ಗೆ ಒಂದು ಹೇಳಿಕೆ ನೀಡಬೇಕೆಂದು ನಾವು ಒತ್ತಾಯ ಮಾಡಿದ್ದೇವೆ. ಆದರೆ ಅದನ್ನು ವಿಧಾನ ಪರಿಷತ್ತಿನಲ್ಲಿ ಹೇಳಿದ್ದಾರೆ. ಅತಿ ಮುಖ್ಯವಾಗಿ ಕರ್ನಾಟಕದಲ್ಲಿ ವಿಧಾನಸೌಧ ಇದೆ, ಅನೇಕ ಜಲಾಶಯಗಳು ಇವೆ, ಕರ್ನಾಟಕದ ಮೂಲೆ ಮೂಲೆಯಲ್ಲಿ ಅನೇಕ ದೊಡ್ಡ ಮಹಡಿಗಳು ಇವೆ, ಮತ್ತು ಅನೇಕ ಪ್ರಮುಖವಾದ ಸ್ಥಳಗಳಿವೆ. ಹಿಂದೆಯೂ ಸಹ ನಮ್ಮ ಅನೇಕ ಜಲಾಶಯಗಳ ಬಗ್ಗೆ ಒಂದು ದೊಡ್ಡ ಬೆದರಿಕೆ ಬಂದಿತ್ತು. ಕರ್ನಾಟಕದಲ್ಲಿ ಭಯೋತ್ಪಾದಕರು ಇಲ್ಲವೆಂಬ ಮಾತನ್ನು ನಾನಂತೂ ತಳ್ಳಿಹಾಕುವುದಕ್ಕಾಗುವುದಿಲ್ಲ. ಸರ್ಕಾರದವರೂ ಸಹ ಅದನ್ನು ತೆರೆಮರೆಯಲ್ಲಿ ಒಪ್ಪಿಕೊಂಡಿದ್ದಾರೆ. ಭಯೋತ್ಪಾದಕರ ನೆಲೆ ಕರ್ನಾಟಕದ ಕೆಲವು ಗಡಿ ಭಾಗಗಳಲ್ಲಿ ಇದೆ ಎಂದು ಕರ್ನಾಟಕದಲ್ಲಿ ಹಿಂದೆ ಗೃಹ ಸಚಿವರಾಗಿದ್ದ ಧರ್ಮಸಿಂಗ್‌ರವರು ಒಪ್ಪಿಕೊಂಡಿದ್ದರು. ಇಂಥ ಭಯೋತ್ಪಾದಕರ ನೆಲೆ ಇಲ್ಲಿರುವಾಗ ನಾವು ಕರ್ನಾಟಕದಲ್ಲಿ ಯಾವ ರೀತಿ ಇದ್ದೇವೆ ? ಗಡಿ ಪ್ರದೇಶವನ್ನು ಬಂದ್ ಮಾಡತಕ್ಕಂಥಾದ್ದು, ಹೊರಗಡೆಯಿಂದ ಬರತಕ್ಕಂಥ ಎಲ್ಲರನ್ನೂ ತಪಾಸಣೆ ಮಾಡತಕ್ಕಂಥಾದ್ದು ಆಗಬೇಕು. ಬೆಂಗಳೂರಿನಲ್ಲಿ 50ಲಕ್ಷ ಜನ ವಾಸ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ

ಯಾರು ಎಲ್ಲಿದ್ದಾರೆ ಎಂದು ನಿಮಗೆ ಗೊತ್ತಿಲ್ಲ. ಬೆಂಗಳೂರಿನ ಯಾವ ಯಾವ ಮೂಲೆಯಲ್ಲಿ ಯಾರ್ಯಾರಿದ್ದಾರೆ ಎಂಬುದು ನಮ್ಮ ಪೋಲೀಸರಿಗೆ ಗೊತ್ತಿಲ್ಲ ಎನ್ನುವುದಕ್ಕೆ ಉದಾಹರಣೆ, ಹಿಂದೆ ನಡೆದಂಥ ದೊಡ್ಡ ದುರಂತವೇ ಸಾಕ್ಷಿಯಾಗಿದೆ. ರಾಜೀವ್ ಗಾಂಧಿಯವರನ್ನು ಕೊಲೆ ಮಾಡುವುದರಲ್ಲಿ ಪಾತ್ರ ವಹಿಸಿದಂತ ಶಿವರಾಸನ್ ಬೆಂಗಳೂರಿನಲ್ಲಿ ಇದ್ದದ್ದು ಎರಡು ತಿಂಗಳ ಕಾಲ ಪೋಲೀಸರಿಗೇ ಗೊತ್ತಿರಲಿಲ್ಲ.

ಅದು ಹಲಗೂರು ಹತ್ತಿರ ಮುತ್ತತ್ತಿ ಎನ್ನುವಂಥ ಗ್ರಾಮದ ಕೆಲವು ರೈತರಿಂದ ಹಾಗೂ ಜನರಿಂದ ಗೊತ್ತಾಯಿತು.. ಇಂತಹ ಪರಿಸ್ಥಿತಿ ಇರುವಾಗ ಬೆಂಗಳೂರಿನಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ಸದನಕ್ಕೆ ಸ್ಪಷ್ಟವಾಗಿ ಹೇಳಬೇಕು. ಇವತ್ತು ಇಡೀ ಕರ್ನಾಟಕದಲ್ಲಿ ತುರ್ತು ಪರಿಸ್ಥಿತಿಯ ಘೋಷಣೆ ಇದ್ದ ಹಾಗೆ ಇದೆ. ಯಾವ ರಸ್ತೆಯಲ್ಲೂ ಹೋಗುವುದಕ್ಕಾಗುತ್ತಿಲ್ಲ. ಕಾರುಗಳನ್ನು ರಸ್ತೆಗಳಲ್ಲಿ ನಿಲ್ಲಿಸುವುದಕ್ಕಾಗುವುದಿಲ್ಲ. ನಿಲ್ಲಿಸಿದ್ದ ಕಾರುಗಳನ್ನು ಯದ್ವಾತದ್ವ ಎಳೆದುಕೊಂಡು ಹೋಗುತ್ತಿದ್ದೀರಿ. ಬಾಂಬೆಯಲ್ಲಿ ಕಲ್ಕತ್ತಾದಲ್ಲಿ ಈ ಘಟನೆ ಆಯಿತು; ಇಂಥಾ ಸಂದರ್ಭದಲ್ಲಿ ಮಾತ್ರ ನೀವು ಎಚ್ಚರವಾಗಿರುತ್ತೀರಿ; ಸಂಧರ್ಭ ಬರಲಿಲ್ಲ ಎಂದಾಗ ನೀವೆಲ್ಲರೂ ಎಚ್ಚರ ತಪ್ಪುತ್ತೀರಿ. ಯಾವಾಗಲೂ ಎಚ್ಚರವಾಗಿರುವುದಕ್ಕೆ ಸರ್ಕಾರದ ಪರಿಣಾಮಕಾರಿಯಾದ ಕ್ರಮಗಳೇನು ಎನ್ನುವುದನ್ನು ಈ ಸದನದ ಮುಂದೆ ಇಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಹಾರನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿರತಕ್ಕಂಥ ಆತಂಕ ಎಲ್ಲರ ಮನಸ್ಸಿನಲ್ಲೂ ಇದೆ. ಇದಕ್ಕೆ ಸರ್ಕಾರ ಈಗಾಗಲೆ ಸೂಕ್ತ ಕ್ರಮ ತೆಗೆದುಕೊಂಡಿದೆ. ಅದನ್ನು ಮೇಲ್ಮನೆಯಲ್ಲಿ ತಿಳಿಸಲಾಗಿದ. ಈ ಮನೆಯಲ್ಲೂ ಅದನ್ನು ಹೇಳಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಮುಖ್ಯ ಮಂತ್ರಿಗಳಿಗೆ ಈ ಬಗ್ಗೆ ಹೇಳಿಕೆ ಕೊಡಲಿಕ್ಕೆ ತಿಳಿಸುತ್ತೇನೆ. ನಾಳೆ ಪ್ರಧಾನ ಮಂತ್ರಿಯವರು ಬರುತ್ತಿರುವುದರಿಂದ ಈ ರೀತಿ ಎಲ್ಲಾ ರೀತಿಯ ಸೆಕ್ಯುರಿಟಿ ಮೇಷರ್ ತೆಗೆದುಕೊಳ್ಳುವುದಕ್ಕೆ ಹಗಲಿರುಳೂ ವ್ಯವಸ್ಥೆ ಮಾಡಲಾಗುತ್ತಿದೆ. ಅವರು ಬಹುಶಃ ಅದೇ ಉದ್ದೇಶಕ್ಕೆ ಹೊರಗಡೆ ಹೋಗಿದ್ದಾರೋ ಏನೋ ಗೊತ್ತಿಲ್ಲ. ಹೋಗಿದ್ದರೆ ಸೋಮವಾರದ ದಿನ ಹೇಳಿಕೆ ನೀಡಲು ಹೇಳುತ್ತೇವೆ. ಹೋಗದಿದ್ದರೆ ಈಗಲೇ ಬಂದು ಹೇಳುವುದಕ್ಕೆ ತಿಳಿಸುತ್ತೇವೆ. ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಇವತ್ತಿನ ಪತ್ರಿಕೆಗಳಲ್ಲಿ ಬಂದಿರುವುದು ನಮ್ಮ ಸರ್ಕಾರದ ಗಮನಕ್ಕೆ ಬಂದಿದೆ. ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಏನು ಕ್ರಮ ಎಂದು ಹೇಳುವ ಅವಶ್ಯಕತೆ ಇಲ್ಲ. ಸರ್ಕಾರ ಇದರ ಬಗ್ಗೆ ವಿಜಿಲೆಂಟ್ ಆಗಿದೆ; ಕಾಳಜಿಯಿಂದ ಇದೆ, ಸರ್ಕಾರದ ಎಲ್ಲ ದೃಷ್ಟಿಯೂ ಈ ಬಗ್ಗೆಯೇ ಇದೆಯೆಂದು ಹೇಳುತ್ತೇನೆ.

ಡಾ. ಜೀವರಾಜ ಆಳ್ವ:- ಪತ್ರಿಕೆಗಳಲ್ಲಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದರೆ, it reflects on the Government. I am sorry, I am afraid....

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಪತ್ರಿಕೆಗಳಲ್ಲಿ ಬಂದಿರುವುದನ್ನು ಕ್ವೋಟ್ ಮಾಡಿದರು. ಅದೂ ಗಮನಕ್ಕೆ ಬಂದಿದೆ ಎಂದು ಹೇಳಿದೆ. ಇದಲ್ಲದೆ ಇನ್ನೂ ಬೇಕದಾಷ್ಟು ವಿಚಾರಗಳು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನೆಲ್ಲಾ ಇಲ್ಲಿ ಹೇಳುವ ಹಾಗಿಲ್ಲ.

ಗಮನ ಸೆಳೆಯುವ ಸೂಚನೆಗಳು

1. ಬೆಂಗಳೂರು ಜಯದೇವ ಹೃದಯ ರೋಗ ಆಸ್ಪತೆಯಲ್ಲಿ ಬಡರೋಗಿಗಳಿಗೆ ಆಗುತ್ತಿರುವ ತೊಂದರೆ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಜಯದೇವ ಹೃದಯ ರೋಗ ಆಸ್ಪತ್ರೆಯಲ್ಲಿ ಬಡರೋಗಿಗಳಿಗೆ ಆಗುತ್ತಿರುವ ತೊಂದರೆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಸ್ಥಾನವನ್ನು ಅಲಂಕರಿಸಿದರು)

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡುತ್ತೇನೆ.

ಈ ಚಿಕಿತ್ಸಾ ಕೇಂದ್ರವು ವಿಕ್ಟೋರಿಯಾ ಆಸ್ಪತ್ರೆಯಿಂದ ಬೇರ್ಪಟ್ಟು, ಶ್ರೀ ಜಯದೇವ ಹೃದ್ರೋಗ ಚಿಕಿತ್ಸಾ ಕೇಂದ್ರ ಎಂದು ನಾಮಾಂಕಿತಗೊಂಡು ಫೆಬ್ರವರಿ ಮಾಹೆ 1984ರಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಅಂದಿನಿಂದ ಇಂದಿನವರೆಗೂ ಈ ಸಂಸ್ಥೆಯು ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಆರೋಗ್ಯ ಮಂತ್ರಿಗಳು, ಸರ್ಕಾರದ ಅಧಿಕಾರಿಗಳು ಹಾಗೂ ಇತರೆ ಸಾರ್ವಜನಿಕ ಪ್ರಮುಖರನ್ನೊಳಗೊಂಡ ಸಂಸ್ಥೆಯ ಗೌರ್ನಿಂಗ್ ಕೌನ್ಸಿಲ್ ಮಂಡಳಿಯ ಆದೇಶದಂತೆ ಕೆಲಸ ನಿರ್ವಹಿಸುತ್ತಿದೆ. ಸಂಸ್ಥೆಗೆ ಸಂಬಂಧಪಟ್ಟ ನಿಯಮಾವಳಿಗಳು ಸಹ ಇದರಡಿಯಲ್ಲಿ ರೂಪುಗೊಂಡಿವೆ.

2. ಶ್ರೀ ಜಯದೇವ ಹೃದ್ರೋಗ ಸಂಸ್ಥೆ ಇದೊಂದು ಹೊಸ ಸಂಸ್ಥೆಯಾಗಿದ್ದು, ಕೆಲವು ಆಡಳಿತಾತ್ಮಕ ಸಮಸ್ಯೆಗಳನ್ನು ಹೊಂದಿರುತ್ತದೆ. ಈ ಚಿಕಿತ್ಸಾ ಕೇಂದ್ರದ ಕೆಲವು ವೈದ್ಯರು ಕೆಲವು ಸಂದರ್ಭಗಳಲ್ಲಿ ರಜೆಯ ಮೇಲೆ ತೆರಳಿ ಬೇರೆ ಖಾಸಗಿ ಹೃದ್ರೋಗ ಚಿಕಿತ್ಸಾ ಕೇಂದ್ರಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಆಸ್ಪತ್ರೆಯ ವೇಳಯಲ್ಲಿಯೇ ಖಾಸಗಿ ಚಿಕಿತ್ಸಾ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವುದು ತಿಳಿದು ಬಂದಿದೆ. ಈ ಪ್ರವೃತ್ತಿಯು ಈ ಚಿಕಿತ್ಸಾ ಕೇಂದ್ರವು ಬಡರೋಗಿಗಳಿಗೆ ನೀಡುವ ವೈದ್ಯಕೀಯ ಸೌಲಭ್ಯಕ್ಕೆ ಧಕ್ಕೆ ತರುವಂತಹದಾಗಿದೆ. ಈಗಾಗಲೇ ಈ ಬಗ್ಗೆ ಕೆಲವು ಸುತ್ತೋಲೆಗಳನ್ನು ಹಾಗೂ ಸೂಚನೆಗಳನ್ನು ಸಂಬಂಧಪಟ್ಟವರಿಗೆ ಕಳುಹಿಸಿ ಇನ್ನು ಮುಂದೆ ಹೀಗೆ ಮಾಡದಂತೆ ನೋಡಿಕೊಳ್ಳಲು ಆದೇಶಿಸಲಾಗಿದೆ. ಮತ್ತು ನಿಯಮಗಳನ್ನು ಉಲ್ಲಂಘಿಸಿ, ಖಾಸಗಿ ಪ್ರಾಕ್ಟೀಸ್ ಮಾಡುತ್ತಿರುವ ವೈದ್ಯರುಗಳನ್ನು ಉಗ್ರವಾಗಿ ಶಿಕ್ಷೆಗೊಳಪಡಿಸಲಾಗುವುದೆಂದು ಸಹ ಎಚ್ಚರಿಸಲಾಗಿದೆ. ಈ ಚಿಕಿತ್ಸಾ ಕೇಂದ್ರವು ತನ್ನದೇ ಆದ ನೇಮಕಾತಿ ನಿಯಮಾವಳಿಗಳನ್ನು ತನ್ನ ಕೇಂದ್ರದ ನೌಕರರಿಗೆ (ವೈದ್ಯರೂ ಸೇರಿದಂತೆ) ರೂಪಿಸಿಕೊಂಡಿದೆ, ಇದರಡಿಯಲ್ಲಿ ನೌಕರರಿಗೆ (ವೈದ್ಯರೂ ಸೇರಿದಂತೆ) ಬಡ್ತಿ ನೀಡುವ ನಿಯಮಾವಳಿಗಳು ಸೇರಿದೆ. ಬಡ್ತಿ ನೀಡಲು ಒಂದು ಸಮಿತಿಯೂ ಇದ್ದು ಅದು ನಿರ್ದೇಶಕರು, ಜಯದೇವ ಹೃದ್ರೋಗ ಚಿಕಿತ್ಸಾ ಕೇಂದ್ರ, ಅಧ್ಯಕ್ಷರಾಗಿಯೂ, ವೈದ್ಯಕೀಯ ಅಧೀಕ್ಷಕರು ಮತ್ತು ಆಡಳಿತಾಧಿಕಾರಿಗಳು ಶ್ರೀ ಜಯದೇವ ಹೃದ್ರೋಗ ಚಿಕಿತ್ಸಾ ಕೇಂದ್ರ, ಇವರು ಸದಸ್ಯರಾಗಿಯೂ ಇರುತ್ತಾರೆ. ಬಡ್ತಿ ನೀಡುವಾಗ ಮೇಲ್ಕಂಡ ಸಮಿತಿಯ ಶಿಫಾರಸ್ಸುಗಳನ್ನು ನೇಮಕಾತಿ ಮಂಡಳಿಯೂ ಅನುಮೋದಿಸುತ್ತದೆ. ಈ ಚಿಕಿತ್ಸಾ ಕೇಂದ್ರವು ಸೇವಾನಿಯಮಾವಳಿಗಳ ವಿಷಯದಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮಗಳನ್ನು ಹಾಗೂ ಈ ಚಿಕಿತ್ಸಾ ಕೇಂದ್ರವು ರೂಪಿಸಿಕೊಂಡಿರುವ ನಿಯಮಾವಳಿಗಳನ್ನು ತನ್ನ ಚಿಕಿತ್ಸಾ ಕೇಂದ್ರದ ನೌಕರರಿಗೆ ಅಳವಡಿಸಿಕೊಂಡಿದೆ.

3. ಈ ಚಿಕಿತ್ಸಾ ಕೇಂದ್ರವು ಬಡ ರೋಗಿಗಳಿಂದ ಈ ಕೆಳಕಂಡ ವಿದೇಶಿ ಸಾಮಗ್ರಿಗಳ ಔಷಧಿಗಳ ವೆಚ್ಚವನ್ನು ಮಾತ್ರ ಕಡ್ಡಾಯವಾಗಿ ವಸೂಲು ಮಾಡಬೇಕಾಗಿರುತ್ತದೆ. ಅವುಗಳೆಂದರೆ:

1. ವಾಲ್ವ್‌ಗಳು (ಕವಾಟಗಳು)
2. ಪೇಸ್‌ಮೇಕರ್‌ಗಳು
3. ಗ್ರಾಫ್ಟ್‌ಗಳು — ಜೀವ ಉಳಿಸುವ ಸಾಮಗ್ರಿಗಳು
4. ಅಕ್ಸಿಜನೇಟರ್, ಕಾರ್ಡಿಯಾಟಮಿ ರಿಸರ್‌ವಾಯರ್‌ಗಳು
ಕ್ಯಾನುಲಾ ಮತ್ತು ಬ್ಲಡ್ ಫಿಲ್ಟರ್‌ಗಳು
5. ಕಬಿಕಿನಾಸೆ:ಸೆಪ್ಟೊಕೀನಾಸ್ — ಜೀವ ಉಳಿಸುವ ಔಷಧಿಗಳು.

ಈ ಮೇಲ್ಕಂಡ ವಿದೇಶಿ ಸಾಮಗ್ರಿಗಳ ಹಾಗೂ ಔಷಧಿಗಳ ವೆಚ್ಚವು ತುಂಬಾ ದುಬಾರಿಯಾಗಿರುತ್ತದೆ. ಇವುಗಳನ್ನು ಖರೀದಿಸಿ ರೋಗಿಗಳಿಗೆ ನೀಡಬೇಕಾಗಿರುತ್ತದೆ. ಈ ಸಾಮಗ್ರಿ ಅಥವಾ ಔಷಧಿಗಳ ವೆಚ್ಚವನ್ನು ಈ ಚಿಕಿತ್ಸಾ ಕೇಂದ್ರವು ಭರಿಸಲು ಅಸಾಧ್ಯವಾಗಿರುತ್ತದೆ. ಅದ ಪ್ರಯುಕ್ತ ಸಂಬಂಧಿಸಿದ ರೋಗಿಗಳಿಂದ ವಿದೇಶಿ ಸಾಮಗ್ರಿ ಮತ್ತು ಔಷಧಿಗಳ ವೆಚ್ಚವನ್ನು ಪಡೆಯಬೇಕಾಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ರೋಗಿಗಳು ತುಂಬಾ ಬಡವರಾಗಿದ್ದ ಪಕ್ಷದಲ್ಲಿ ಹಾಗೂ ತುರ್ತು ಸಂದರ್ಭಗಳಲ್ಲಿ ಚಿಕಿತ್ಸಾ ಕೇಂದ್ರವು ಮೇಲ್ಕಂಡ ವಿದೇಶಿ ಸಾಮಗ್ರಿ:ಔಷದಿಗಳ ವೆಚ್ಚವನ್ನು ಸಂಪೂರ್ಣವಾಗಿ ಮನ್ನಾ ಮಾಡಿರುತ್ತದೆ. ಯಾವುದೇ ಬಡ ರೋಗಿಗೆ ಚಿಕಿತ್ಸಾ ಕೇಂದ್ರದಲ್ಲಿ ತೆರೆದ ಹೃದಯ ಶಸ್ತ್ರ ಚಿಕಿತ್ಸೆ ಮಾಡಿದಾಗ ರೂ. 10,000-00ಗಳಿಂದ ರೂ. 15,000-00ಗಳವರೆಗೆ ಚಿಕಿತ್ಸಾ ವೆಚ್ಚವನ್ನು ಚಿಕಿತ್ಸಾ ಕೇಂದ್ರವು ತನ್ನ ವತಿಯಿಂದ ಭರಿಸುತ್ತಿದೆ. ಈ ಕೇಂದ್ರವು ಬಡರೋಗಿಗಳು ತೆರೆದ ಹೃದಯ ಶಸ್ತ್ರ ಚಿಕಿತ್ಸೆಗಾಗಿ ಹಣ ತುಂಬಲು ಮಾನ್ಯ ಮುಖ್ಯ ಮಂತ್ರಿಗಳ, ಮಾನ್ಯ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ಹಾಗೂ ಇತರೆ ಧಾರ್ಮಿಕ ಹಾಗೂ ಸಮಾಜ ಸುಧಾರಕ ಸಂಸ್ಥೆಗಳಿಂದ ಹಣವನ್ನು ಅರ್ಥಿಕ ನೆರವಿನ ರೂಪದಲ್ಲಿ ತರಲು ತುಂಬಾ ಸಹಕರಿಸುತ್ತಿದೆ. ಹಾಗೂ ಬಡ ರೋಗಿಗಳಿಗೆ ಆಸ್ಪತ್ರೆಯಲ್ಲಿ ಲಭ್ಯವಿರುವ ಎಲ್ಲಾ ದೇಶೀಯ ಅಗತ್ಯ ಔಷಧಿಗಳನ್ನು ಸಂಪೂರ್ಣವಾಗಿ ಉಚಿತವಾಗಿ ಕೊಡಲಾಗುತ್ತದೆ.

4. ಈ ಚಿಕಿತ್ಸಾ ಕೇಂದ್ರದಲ್ಲಿ ಬರುವ ಯಾವುದೇ ರೋಗಿಗಳಿಗೆ ಚಿಕಿತ್ಸೆಯನ್ನಾಗಲೀ ಅಥವಾ ತೆರೆದ ಹೃದಯ ಶಸ್ತ್ರ ಚಿಕಿತ್ಸೆಯನ್ನಾಗಲೀ ನಿರಾಕರಿಸಿಲ್ಲ ಮತ್ತು ಯಾವುದೇ ರೋಗಿಗಳಿಂದ ನಿಗಧಿಪಡಿಸಿದ ದರಕ್ಕಿಂತ ಹೆಚ್ಚಿಗೆ ಹಣವನ್ನು ಯಾವುದೆ ಸಂದರ್ಭದಲ್ಲಿ ಪಡೆಯುತ್ತಿಲ್ಲ. ಆಡಳಿತಾತ್ಮಕ ಸಮಸ್ಯೆಗಳನ್ನು ಪರಿಹರಿಸಿ, ಸೂಕ್ತ ಚಿಕಿತ್ಸೆ ದೊರೆಯುವಂತಾಗಲು ಪ್ರಯತ್ನಿಸಲಾಗುತ್ತಿದೆ.

† ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಈ ಗಮನ ಸೆಳೆಯುವ ಸೂಚನೆಗೆ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ನಾನು ನಿಮಗೆ ಅಭಿನಂದಿಸುತ್ತೇನೆ. ಮುಖ್ಯ ಮಂತ್ರಿಗಳ ಪರವಾಗಿ ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಕೊಟ್ಟಿರತಕ್ಕಂಥ ಉತ್ತರದಲ್ಲಿ ನಾನು ಯಾವ ಕಾರಣದಿಂದ ಈ ಪ್ರಶ್ನೆಯನ್ನು ಇಲ್ಲಿ ಎತ್ತಿದ್ದೇನೆ ಎನ್ನತಕ್ಕ ಬಗ್ಗೆ ಅವರು ಗಮನಹರಿಸಿ, ಕೆಲವು ಸಂದರ್ಭದಲ್ಲಿ ಅಸ್ಪತ್ರೆಯ ವೇಳೆಯಲ್ಲಿ ಇಲ್ಲಿ ಕೆಲಸ ಮಾಡುತ್ತಿರತಕ್ಕಂಥ ವೈದ್ಯರುಗಳು ಖಾಸಗಿ ಚಿಕಿತ್ಸಾ ಕೇಂದ್ರದಲ್ಲಿ ಸೇವೆಯನ್ನು ಸಲ್ಲಿಸಿರತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ; ಅವರನ್ನು ಅತಿ ಉಗ್ರವಾಗಿ ಶಿಕ್ಷೆಗೆ ಒಳಪಡಿಸಲಾಗುವುದು ಎನ್ನತಕ್ಕಂಥ ವಿಚಾರವನ್ನು ಹೇಳಿದ್ದಾರೆ. ಆದರೆ ಆಕಸ್ಮಿಕವಾಗಿ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಬಂದಿರುವುದು ಒಳ್ಳೆಯದಾಗಿದೆ. ಈ ಜಯದೇವ ಆಸ್ಪತ್ರೆಯನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಅಂದಿನ ರಾಷ್ಟ್ರಪತಿ ಗ್ಯಾನಿ ಜೈಲ್‌ಸಿಂಗ್‌ರವರನ್ನು ಕರೆಸಿ ಪ್ರಾರಂಭಿಸಿದರು. ನಮ್ಮ ಇಡೀ ದಕ್ಷಿಣ ಭಾರತದಲ್ಲಿ ಅದರಲ್ಲಿಯೂ

ವಿಶೇಷವಾಗಿ ಕರ್ನಾಟಕದಲ್ಲಿ ಬಡ ರೋಗಿಗಳು ಯಾರಿದ್ದಾರೆ, ಹೃದಯ ರೋಗಕ್ಕೆ ಯಾರು ಒಳಗಾಗುತ್ತಾರೆ ಅಂತಹವರ ಆಪರೇಷನ್ ಮಾಡಬೇಕಾದರೆ ಲಕ್ಷಾಂತರ ರೂಪಾಯಿ ಹಣವನ್ನು ಅವರು ಖರ್ಚು ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಸದುದ್ದೇಶ ಇಟ್ಟುಕೊಂಡು ಇದನ್ನು ಪ್ರಾರಂಭ ಮಾಡಲಾಯಿತು. ಇದು ದಿವಂಗತ ದೇವರಾಜ್ ಅರಸುರವರ ಕಲ್ಪನೆಯಾಗಿತ್ತು; ಈ ಜಯದೇವ ಆಸ್ಪತ್ರೆ ಅವರ ಕೂಸಾಗಿತ್ತು. ಜಯದೇವ ಎನ್ನತಕ್ಕಂಥ ಹೃದಯ ರೋಗದ ಆಸ್ಪತ್ರೆಯನ್ನು ವಿಶೇಷವಾಗಿ ಮಾಡಬೇಕೆಂದು 1984ನೇ ಇಸವಿಯಲ್ಲಿ ನಾವು ಮಾಡಿ ಈ ಸಂಸ್ಥೆಯ ಅಧ್ಯಕ್ಷರಾಗಿ ಮುಖ್ಯ ಮಂತ್ರಿಗಳೇ ಇರಬೇಕೆನ್ನತಕ್ಕ ತೀರ್ಮಾನವನ್ನು ಸಹಿತ ಮಾಡಿ ಅದು ಒಂದು ಅಟಾನಮಸ್ ಬಾಡಿ ಆಗಬೇಕೆಂದು ಹೇಳಿ ಅದಕ್ಕೋಸ್ಕರ ಒಂದ ಗೌರ್ನಿಂಗ್ ಕೌನ್ಸಿಲ್ ಅನ್ನು ಸಹಿತ ಮಾಡಿ ಪ್ರಾರಂಭಮಾಡಿ ಮಾನ್ಯ ದೇಶಪಾಂಡೆಯವರು ಹೆಚ್.ಯು.ಡಿ. ಮಿನಿಸ್ಟರ್ ಆಗಿದ್ದಂತಹ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ನಿಮ್ಹಾನ್ಸ್ ಆಸ್ಪತ್ರೆಯ ಪಕ್ಕದಲ್ಲಿರತಕ್ಕ ಸುಮಾರು 15 ಎಕರೆ ಜಮೀನನ್ನು ಸಹಿತ ನಾವು ಈ ಆಸ್ಪತ್ರೆಗೋಸ್ಕರವೆಂದು ಕೊಡಿಸಿದ್ದೆವು. ಅದರ ಜೊತೆಗೆ ಅವತ್ತಿನ ಆ ಸಂಸ್ಥೆಯ ನಿರ್ದೇಶಕರಾಗಿದ್ದಂತಹ ಡಾ: ಚಿನ್ನಯ್ಯನವರನ್ನು ನಾವು ನೆನಸಿಕೊಳ್ಳಬೇಕು. ಅವರು ಭಾರತದ ರಾಷ್ಟ್ರಪತಿಗಳಿಗೆ ಫಿಜಿಷಿಯನ್ ಆಗಿದ್ದವರು. ಸುಮಾರು ಒಂದು ಕೋಟಿ ರೂಪಾಯಿಯನ್ನು ಅವರ ಆಫೀಸಿನಿಂದ ಕಲೆಕ್ಟ್ ಮಾಡಿದರು, ಮಾನ್ಯ ಹೆಗಡೆಯವರು ಅದಕ್ಕೋಸ್ಕರ ಬೇಕಾದಷ್ಟು ಸಹಾಯಮಾಡಿದರು. ಆ ಕಟ್ಟಡವನ್ನು ಕಟ್ಟಬೇಕು, ಇದೊಂದು ಪ್ರೀಮಿಯರ್ ಇನ್‌ಸ್ಟಿಟ್ಯೂಶನ್ ದೇಶದಲ್ಲಿ ಆಗಬೇಕು. ಈ ಕಾಯಿಲೆಗೆ ಸಂಬಂಧಪಟ್ಟ ಹಾಗೆ ರೀಸರ್ಚ್ ಇನಸ್ಟ್‌ಟ್ಯೂಟ್ ಆಗಬೇಕು ಎಂದು ಇದನ್ನು ಪ್ರಾರಂಭ ಮಾಡಿದರೆ ದುರ್ದೈವದಿಂದ ನಿಮ್ಮ ಸರ್ಕಾರ ಬಂದಮೇಲೆ ಒಂದು ಹೀನಾಯಸ್ಥಿತಿಗೆ ಆ ಆಸ್ಪತ್ರೆ ಹೋಗಿರತಕ್ಕಂಥದ್ದಕ್ಕೆ ನನಗಂತೂ ಬಹಳ ನೋವಾಗುತ್ತದೆ. ತಾವು ಮುಖ್ಯ ಮಂತ್ರಿಗಳಾಗಿ ಮೂರು ತಿಂಗಳಾಗಿದೆ. ಅದರ ಸಭೆಯನ್ನು ಕರೆದು ಅದರ ಬಗ್ಗೆ ರಿವ್ಯೂ ಮಾಡಿದ್ದೀರೋ ಏನೋ ನನಗಂತೂ ಗೊತ್ತಿಲ್ಲ. ಸಮಯದ ಅಭಾವದಿಂದ ಮಾಡದೇ ಇರಬಹುದು. ಒಂದು ಪಕ್ಷ ಮಾಡದೇ ಹೋಗಿದ್ದರೆ ಅದನ್ನು ತಕ್ಷಣ ಮಾಡಬೇಕೆಂದು ನಾನು ತಮಗೆ ಒತ್ತಾಯ ಮಾಡುತ್ತೇನೆ. ಈ ಇನ್ಸ್‌ಟ್ಯೂಟ್‌ಗೆ ಮಾನ್ಯ ವೀರೇಂದ್ರ ಪಾಟೀಲರು ಅಧ್ಯಕ್ಷರಾಗಿದ್ದಂತಹ ಸಂದರ್ಭದಲ್ಲಿ ಒಂದು ತೀರ್ಮಾನವನ್ನು ಮಾಡಿದ್ದೆವು. ಇದಕ್ಕೆ ಯಾರನ್ನು ಡೈರೆಕ್ಟರ್‌ರಾಗಿ ಮಾಡಬೇಕು ಎನ್ನತಕ್ಕಂಥ ವಿಚಾರವನ್ನು ಮಾಡಿದೆವು. ಅಲ್ಲಿ ಒಬ್ಬ ಡಾಕ್ಟರ್ ಚಂದ್ರಶೇಖರ್ ಎಂದು ಇದ್ದಾರೆ, ಅವರನ್ನು ಡೈರೆಕ್ಟರನ್ನಾಗಿ ಮಾಡಬೇಕೆಂದು ಹೇಳಿ ಆ ಗೌರ್ನಿಂಗ್ ಕೌನ್ಸಿಲ್‌ನಲ್ಲಿ ವಿರೋಧ ಪಕ್ಷದವರು ಯಾರು ಇರಲಿಲ್ಲ. ನಿಮ್ಮ ಸಹೋದ್ಯೋಗಿಗಳಾದಂತಹ ಮಾನ್ಯ ಯಾಹ್ಯರವರೇ ಅದರಲ್ಲಿ ಇದ್ದರು. ತಮಗೆ ಅದರ ರೆಸಲೂಷನ್ ಕಾಪಿಯನ್ನೂ ಸಹ ಕಳುಹಿಸಕೊಡುತ್ತೇನೆ. ಇಂತಹವರನ್ನೇ ಇದರ ಡೈರೆಕ್ಟರನ್ನಾಗಿ ಮಾಡಬೇಕು ಎನ್ನತಕ್ಕಂಥ ತೀರ್ಮಾನವನ್ನು ಮಾಡಲಾಗಿತ್ತು. ಅದಾದನಂತರ ತರಾತುರಿಯಲ್ಲಿ ಯಾಹ್ಯರವರು ಇದ್ದಂತಹ ಬೋರ್ಡನ್ನೂ ಸಹ ಸೂಪರ್‌ಸೀಡ್ ಮಾಡಿ 60–70 ಜನ ತಮಗೆ ಬೇಕಾದಂತಹವರಿಗೆ ಅಲ್ಲಿ ಕೆಲಸವನ್ನು ಕೊಡಿಸಿಕೊಂಡು ಬಡ ರೋಗಿಗಳಿಗೆ ಒಂದು ವಾಲ್ವ್ ರೀಪ್ಲೇಸ್ ಮಾಡಲಿಕ್ಕೆ ಒಂದು ಲಕ್ಷ ರೂಪಾಯಿಯನ್ನು ಕೇಳುತ್ತಾರೆ, ಲಂಚ ಇಲ್ಲದೆ ಏನೂ ಸಹಿತ ಅಲ್ಲಿ ನಡೆಯುವುದಿಲ್ಲ, ನಿಮಗೆ ಶಾಪವನ್ನು ಹಾಕುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳೇ, ನಾನು ತಮಗೆ ಹೇಳುತ್ತೇನೆ, ಅಲ್ಲಿ ಬರತಕ್ಕಂಥ ರೋಗಿಗಳಿಗೆ ಅಲ್ಲಿರತಕ್ಕಂಥ ಕೆಲವು ವೈದ್ಯರುಗಳು ಮತ್ತು ಆಡಳಿತದ ಜವಾಬ್ದಾರಿ ಹೊತ್ತಿರತಕ್ಕಂಥ ಜನ, ನೀವು ಖಾಸಗಿ ಆಸ್ಪತ್ರೆಗಳಿಗೆ ಹೋಗಿ ಮಾಡಿಸಿಕೊಳ್ಳಿ, ಇಲ್ಲಿ ನಾವು ಮಾಡುವುದಿಲ್ಲ ಎಂದು ಹೇಳುತ್ತಾರೆ. ದುಡ್ಡನ್ನು ಕೊಟ್ಟರೆ ಮಾತ್ರ ಮಾಡುತ್ತಾರೆ. ತಾವು ಮಾನ್ಯ ರಾಮಕೃಷ್ಣರವರಿಗೆ ಇದರ ಜವಾಬ್ದಾರಿಯನ್ನು ಕೊಟ್ಟಿದ್ದೀರಿ. ಕಳೆದ ಒಂದು ವರ್ಷದಿಂದ ಅಲ್ಲಿ ಆಪರೇಷನ್ ಆಗಿರತಕ್ಕಂಥ ಬಹಳಷ್ಟು ಕೇಸ್‌ಗಳು ಫೇಲ್ಯೂರ್ ಆಗಿದೆ.

ಪ್ರೈಮಾಫೇಸಿ ಕಂಡುಬರುತ್ತದೆ. ಎಲ್ಲಾ ಡಾಕ್ಟರ್ಸ್ ನೆಗ್ಲೆಟ್ ಮಾಡಿದ್ದಾರೆ. ಡ್ಯೂಟಿ ಅವರ್ಸ್‌ನಲ್ಲಿ ಬೇರೆ ಕಡೆ ಹೋಗಿ ಆಪರೇಷನ್ ಮಾಡುತ್ತಾರೆ. ತಾವೇನು ಎಕ್ಯುಪ್‌ಮೆಂಟ್‌ಗಳ ಹೆಸರುಗಳನ್ನು ಇಲ್ಲಿ ಓದಿದ್ದೀರಿ ತಕ್ಷಣ ಹೋಗಿ ನೋಡಿ ಅದೆಲ್ಲವನ್ನೂ ಅವರು ಖಾಸಗಿ ಆಸ್ಪತ್ರೆಗಳಿಗೆ ಕೊಟ್ಟುಕೊಂಡಿದ್ದಾರೆ. ಇದರ ಬಗ್ಗೆ ಎನ್‌ಕ್ವೈರಿಯಾಗಬೇಕೆಂದು ನಾನು ಅತ್ಯಂತ ಕಳಕಳಿಯಿಂದ ಹೇಳುತ್ತೇನೆ. ಯಾರ ಮೇಲಾದರೂ ಕ್ರಮ ತೆಗೆದುಕೊಳ್ಳಬೇಕು ಎನ್ನುವ ದೃಷ್ಟಿಯಿಂದಾಗಿ ವೈಯುಕ್ತಿಕವಾಗಿ ನಾನು ಯಾರ ಮೇಲೂ ದೋಷಾರೋಪಣೆಯನ್ನು ಮಾಡದೇ ಹೋದರೂ ಸಹಿತ, ಈ ಆಸ್ಪತ್ರೆಯಲ್ಲಿ ಇವತ್ತು ನಡೆದಿರತಕ್ಕಂಥ ಅವ್ಯವಹಾರಕ್ಕೆ ಈ ರಾಜ್ಯದ ಒಂದು ಅತಿ ಪ್ರತಿಷ್ಠಿತವಾದಂತಹ ಈ ಒಂದು ಸಂಸ್ಥೆಯಿಂದ ಯಾವ ಬಡರೋಗಿಗಳಿಗೆ ಅನುಕೂಲವಾಗಬೇಕು, ಅದೂ ಹೃದಯಬೇನೆಗೆ ಸಂಬಂಧಪಟ್ಟ ಹಾಗೆ ಮಾಡಬೇಕು ಎನ್ನತಕ್ಕದ್ದು ಇದ್ದರೆ ಇವತ್ತು ಸಂಪೂರ್ಣವಾಗಿ ಆ ಉದ್ದೇಶ ನಾಶವಾಗಿದೆ ಎನ್ನತಕ್ಕದ್ದನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. 1989ರ ಕಾಂಗ್ರೆಸಿನ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರಿ ಅಂದರೆ..

ಉಪಾಧ್ಯಕ್ಷರು:– ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಕ್ಯಾನ್ಸರ್, ಮೂತ್ರಪಿಂಡ ಕಾಯಿಲೆ ಹೃದಯ ಶಸ್ತ್ರ ಚಿಕಿತ್ಸೆ ಮುಂತಾದ ತುಂಬ ದುಬಾರಿ ಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ಬಡ ಜನರಿಗೆ ನೆರವು ನೀಡಲು ಅನುಕೂಲವಾಗುವ ರೀತಿಯಲ್ಲಿ ಒಂದು ಆರೋಗ್ಯ ವಿಮಾ ಯೋಜನೆಯನ್ನು ಸೂಕ್ತ ರೀತಿಯಲ್ಲಿ ಜಾರಿಗೆ ತರಲು ನಮ್ಮ ಪಕ್ಷ ಕ್ರಮ ಕೈಗೊಳ್ಳುತ್ತದೆ ಎನ್ನತಕ್ಕ ಭರವಸೆಯನ್ನು ಕೊಟ್ಟಿದ್ದೀರಿ. ಆದರೆ ಆಗಿರತಕ್ಕಂಥಾದ್ದು ಏನು ಅಂದರೆ, ಇವತ್ತು ಚಿತ್ರದುರ್ಗದಲ್ಲಿ ಇರತಕ್ಕಂಥ ಆಸ್ಪತ್ರೆಯಲ್ಲಿ, ತ್ರಿವೇಡ್ರಂನಲ್ಲಿ ಇರತಕ್ಕಂಥ ಆಸ್ಪತ್ರೆಯಲ್ಲಿ 20 ಸಾವಿರ ರೂಪಾಯಿಗಳನ್ನು ಕೊಟ್ಟರೆ ಆಪರೇಷನ್ ಮಾಡಿಸಿಕೊಂಡು ಬರಬಹುದು. ಆದರೆ ಅಲ್ಲಿ ಎರಡು–ಮೂರು ವರ್ಷ ಕಾಯಬೇಕಾಗಿದೆ. ಎಕ್ಯುಪ್‌ಮೆಂಟ್ಸ್ ಇದೆ, ಒಳ್ಳೆಯ ಕಾಂಪಿಟೆಂಟ್ ಡಾಕ್ಟರ್ಸ್ ಇದ್ದಾರೆ. ಅಲ್ಲಿ ಒಂದು ವಾತಾವರಣ ನಿರ್ಮಾಣ ಮಾಡದೆ ನೀವು ಕೊಡತಕ್ಕಂಥ 2.5 ಕೋಟಿ ರೂಪಾಯಿಯಲ್ಲಿ 2.30 ಕೋಟಿ ರೂಪಾಯಿ ಸಂಬಳವನ್ನು ಕೊಡತಕ್ಕಂತ ಫ್ಯಾರಫರ್ನಿಯರನ್ನು ಅಪಾಯಿಂಟ್‌ಮೆಂಟ್ ಮಾಡಿಕೊಂಡಿದ್ದೀರಿ. ಇದು ಏತಕ್ಕೋಸ್ಕರ ಏನು ಅವಶ್ಯಕತೆ ಇದೆ; ಆದರಿಂದಾಗಿ ತಾವು ಸ್ವತಃ ಮುಖ್ಯ ಮಂತ್ರಿಗಳು ಇದರ ಸಭೆಯನ್ನು ಆಗಾಗ್ಗೆ ಕರೆಯುತ್ತಿರಬೇಕು. 15 ಎಕರೆ ಜಮೀನು ಎನ್‌ಕ್ರೋಚ್‌ಮೆಂಟ್ ಆಗತಕ್ಕಂತ ಸಂಭವ ಇದೆ. ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. It is a very valuable land. ಅದು ಇವತ್ತು ಬೇರೆಯವರ ಪಾಲಾಗತಕ್ಕಂಥ ಸಂದರ್ಭ ಇದೆ. ಅದಕ್ಕೆ ಸಾರ್ವಜನಿಕರು ಒಂದು ಕೋಟಿ ರೂಪಾಯಿ ವಂತಿಕೆ ಕೊಟ್ಟಿದ್ದಾರೆ. ಅವತ್ತು ನಾವು ಕಂಡಕಂಡವರ ಕಾಲಿಗೆ ಬಿದ್ದು ಹಣವನ್ನು ಕೊಡಿಸಿದ್ದೇವೆ. ಆ ದುಡ್ಡು ಏನಾಯಿತು ಎಂದು ಇವತ್ತು ಕೇಳುವುದಕ್ಕೆ ನನಗೆ ಹಕ್ಕಿದೆ. ಆದರಿಂದಾಗಿ ತಾವು ಇದರ ಬಗ್ಗೆ ಎನ್‌ಕ್ವೈರಿ ಮಾಡಬೇಕು ಮತ್ತು ಇದರ ಬಗ್ಗೆ ಗಮನವನ್ನು ಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಯಪೂರ್ವಕರಾಗಿ ಒತ್ತಾಯಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):– ಮಾನ್ಯ ಉಪಾಧ್ಯಕ್ಷರೇ, ಈಗ ಮಾನ್ಯ ವಿರೋಧ ಪಕ್ಷದ ಉಪನಾಯಕರಾದಂತಹ ಮಾನ್ಯ ಸಿಂಧ್ಯರವರು ಬಹಳ ಪ್ರಾಮುಖ್ಯವಾದಂತಹ ವಿಚಾರವನ್ನು ಎತ್ತಿದ್ದಾರೆ. ಏಕೆಂದರೆ, ಒಂದು ಮಹದೋದ್ದೇಶದಿಂದ ಈ ಸಂಸ್ಥೆಯನ್ನು ಸರ್ಕಾರ ಸ್ಥಾಪನೆ ಮಾಡಿದೆ. ಹಾಗಿರುವಾಗ ಅದರ ಧ್ಯೇಯ, ಉದ್ದೇಶವನ್ನು ಕಾಪಾಡುವುದರ ಜೊತೆಯಲ್ಲಿ ಈ ಸಂಸ್ಥೆಯನ್ನು ನಾವು ಯಾವಾಗಲೂ ಕೂಡ ಉತ್ಕೃಷ್ಟ ರೀತಿಯಲ್ಲಿ ನಡೆಸಿಕೊಂಡು ಹೋಗುವಂತಹ ಜವಾಬ್ದಾರಿ ಈ ಸರ್ಕಾರಕ್ಕೆ ಇದೆ. ತಾವು ತನಿಖೆಯನ್ನು ಮಾಡಬೇಕೆಂದು ಹೇಳಿದ್ದೀರಿ, ತನಿಖೆಯನ್ನು

ಮಾಡುವುದಕ್ಕೆ ಏನೂ ಅಡ್ಡಿ ಇಲ್ಲ. ಆದರೆ ತನಿಖೆ ಮಾಡಿದರೆ ಇನ್ನೂ ಒಂದು ವರ್ಷ ಹಾಗೆಯೇ ಉಳಿಯುತ್ತದೆ. ಇದಕ್ಕೆ ತನಿಖೆ ಬೇಕಾಗಿಲ್ಲ. ನೀವು ಹೇಳಿದಂತಹ ಸಮಸ್ಯೆಗೆ ಪರಿಹಾರವನ್ನು ಮಾಡಲಿಕ್ಕೆ ಸರ್ಕಾರಕ್ಕೆ ಸಾಧ್ಯವಿದೆ. ಅದನ್ನು ನಾವು ಪರಿಹಾರ ಮಾಡುತ್ತೇವೆ. ಯಾರು ಡ್ಯೂಟಿ ಅವರ್ಸ್‌ನಲ್ಲಿ ಹೊರಗೆ ಹೋಗಿ ಕೆಲಸ ಮಡುತ್ತಾರೆ ಅವರು ಎಂತಹ ಪ್ರಭಾವಶಾಲಿಯಾಗಿದ್ದರೂ ಕೂಡ ಅವರನ್ನು ಇಷ್ಟರವರೆಗೆ ನೋಡಿದ್ದೇವೆ; ಆದರೆ ಸ್ವಲ್ಪ ಸಡಿಲವಾಗಿದೆ ಎಂದು ಕಾಣುತ್ತದೆ. ನಾಳೆಯಿಂದ ಯಾರಾದರೂ ಡ್ಯೂಟಿ ಅವರ್‌ನಲ್ಲಿ ಹೊರಗೆ ಹೋಗಿದ್ದೇ ಆದರೆ we will keep them under suspension. We will keep a vigil. We will not spare anyone. He cannot go

ಎರಡನೆಯದಾಗಿ, ತಾವು ಬಡ ರೋಗಿಗಳಿಗೆ ಆಪರೇಷನ್ ಮಾಡಿಸಿಕೊಳ್ಳಲಿಕ್ಕೆ ಮತ್ತು ಹೊರಗಿನಿಂದ ಔಷಧಿ ತರಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದೀರಿ. ಅಂತಹ ಕೇಸ್‌ನಲ್ಲಿ ನಾವು ಅದಕ್ಕಾಗಿಯೇ ಒಂದು ಫಂಡ್ ಇಯರ್‌ಮಾರ್ಕ್ ಮಾಡಿ ಜನರಿಗೆ ಮದ್ದು ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಮಾಡಿ ಅದನ್ನು ಸರಿಮಾಡುತ್ತೇವೆ. ಒಬ್ಬರು ಇಬ್ಬರು ಮೂರು ಜನ ಡಾಕ್ಟರ್‌ಗಳ ಒಂದು ಸಮಿತಿಯನ್ನು ಅಂದರೆ ಗೌರ್ನಿಂಗ್ ಕೌನ್ಸಿಲಿನ ಸಬ್ ಕಮಿಟಿ ಮಾಡಬಹುದು ಅಥವಾ ಅಲ್ಲೇ ಸ್ಥಳೀಯವಾಗಿ ಇರತಕ್ಕಂಥ 2–3 ಜನ ಡಾಕ್ಟರ್‌ಗಳ ಸಣ್ಣ ಸಮಿತಿ ಮಾಡಿ ಅವರಿಗೆ ಅಧಿಕಾರ ಕೊಟ್ಟು ಆ ಫಂಡ್ ಆಪರೇಟ್ ಮಾಡಲಿಕ್ಕೆ ಅವಕಾಶವನ್ನು ಕೊಡುತ್ತೇವೆ. ಎಷ್ಟು ಅವಶ್ಯಕತೆ ಇದೆ ಅದಕ್ಕೆ ಅನುಗುಣವಾಗಿ ಅದನ್ನು ಇಯರ್‌ಮಾರ್ಕ್ ಮಾಡಿ ನಾವು ಕೊಡುತ್ತೇವೆ. ಮತ್ತು ಅಲ್ಲಿ ಕೆಲವು ಅವ್ಯವಹಾರಗಳು ಏನು ನಡೆಯುತ್ತಿವೆ, ಆದು ನೇಮಕಾತಿಯಲ್ಲಿರಬಹುದು ಅಥರಾ ಬೇರೆ ವ್ಯವಹಾರಗಳಲ್ಲಿರಬಹುದು. ಅದನ್ನು ನಾವು ತಕ್ಷಣ ಸರಿಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಏನು ಘನ ಉದ್ದೇಶದಿಂದ ಈ ಸಂಸ್ಥೆ ಪ್ರಾರಂಭವಾಗಿದೆ ಅದನ್ನು ನೆರವೇರಿಸುತ್ತೇವೆ. ಮತ್ತು ಆರೋಗ್ಯ ವಿಮಾ ವಿಚಾರ ಹೇಳಿದ್ದೀರಿ, ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಇರುವುದನ್ನು ಹೇಳಿದ್ದೀರಿ. ಅದನ್ನು ನೋಡುತ್ತೇವೆ. ಮತ್ತು 15 ಎಕರೆ ಜಾಗ ಕೂಡ ಎನ್‌ಕ್ರೋಚ್‌ಮೆಂಟ್ ಆಗದ ರೀತಿಯಲ್ಲಿ ಮತ್ತು ಕಟ್ಟಡ ಆದಷ್ಟು ಬೇಗ ಬರುವ ರೀತಿಯಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು 15 ದಿವಸದೊಳಗಾಗಿ ತಾವು ಏನು ಬದಲಾವಣೆ ನಿರೀಕ್ಷೆ ಮಾಡುತ್ತೀರಿ ಅದನ್ನು ನಾವು ಮಾಡಿಸುತ್ತೇವೆ.

2. ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಬೀದಿ ದೀಪಗಳಿಗೆ ಮೈಸೂರು ಲ್ಯಾಂಪ್‌ನವರು ಕಳಪೆ ಗುಣಮಟ್ಟದ ವಿದ್ಯುತ್ ಜೋಡಣೆಗಳನ್ನು ಸರಬರಾಜು ಮಾಡುತ್ತಿರುವುದರ ಬಗ್ಗೆ

ಶ್ರೀಮತಿ ಸುಮಾವಸಂತ (ವಿರಾಜಪೇಟೆ):- ಸನ್ಮಾನ್ಯ ಅಧ್ಯಕ್ಷರೇ, ಮಂಡಲ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಬೀದಿ ದೀಪಗಳಿಗೆ ಬೆಂಗಳೂರಿನ ಮೈಸೂರು ಲ್ಯಾಂಪ್‌ನವರು ಕಳಪೆ ಗುಣಮಟ್ಟದ ವಿದ್ಯುತ್ ಜೋಡಣೆಗಳನ್ನು ಸರಬರಾಜು ಮಾಡುತ್ತಿರುವುದರಿಂದ ಆಗುತ್ತಿರುವ ತೊಂದರೆ ಬಗ್ಗೆ ಮಾನ್ಯ ಗ್ರಾಮೀಣಾಬಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ. ಮೈಸೂರು ಲ್ಯಾಂಪ್ಸ್‌ನಿಂದ ಈಗ ಕೊಂಡು ಆಳವಡಿಸುತ್ತಿರುವ ಎಲ್ಲಾ ಟ್ಯೂಬ್ ಲೈಟ್ಸ್ ಹಾಗೂ ಬಲ್ಬುಗಳು ಹೆಚ್ಚುಬಾಳಿಕೆ ಬಾರದವಾಗಿವೆ ಹಾಗೂ

ಹಾಕಿದ ಒಂದು ತಿಂಗಳಲ್ಲೇ ಬರ್ನ್ ಆಗಿ ಹೋಗುತ್ತಿರುವ ಯಾವ ನಿದರ್ಶನಗಳೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಹಿಂದಿನ ಅನುಭವದ ಪ್ರಕಾರ ಚಿಲ್ಲರೆ ವ್ಯಾಪಾರಿಗಳು ಕೀಳು ದರ್ಜೆಯ ಟ್ಯೂಬ್ ಲೈಟ್‌ಗಳು ಹಾಗೂ ಉಪಕರಣಗಳನ್ನು ಮೈಸೂರು ಲ್ಯಾಂಪ್ಸ್ ಹೆಸರಿನಲ್ಲಿ ಒದಗಿಸಿ, ಮೈಸೂರು ಲ್ಯಾಂಪ್ಸ್ ದರವನ್ನೇ ಹಾಕುತ್ತಿದ್ದುದು, ಇದನ್ನು ತಪ್ಪಿಸಲು ಮಂಡಲ ಪಂಚಾಯಿತ್ತಿಗಳು ಮೈಸೂರು ಲ್ಯಾಂಪ್ಸ್‌ನಿಂದ ನೇರವಾಗಿಯಾಗಲೀ ಅಥವಾ ಅಧಿಕೃತ ಜಿಲ್ಲಾ ಮಾರಾಟಗಾರರಿಂದಾಗಲೀ ಖರೀದಿಸಬೇಕೆಂದು ಒತ್ತಾಯಿಸಲಾಯಿತು. ಒದಗಿಸಿದ ಟ್ಯೂಬ್‌ಲೈಟ್‌ಗಳಲ್ಲಿ ದೋಷಗಳೇನಾದರೂ ಕಂಡು ಬಂದಲ್ಲಿ ಅಂತಹ ಟ್ಯೂಬ್ ಲೈಟ್‌ಗಳನ್ನು ಖರ್ಚಿಲ್ಲದೆ ಬದಲಾಯಿಸುವ ಹಾಗೆ ಸಂಬಂಧಪಟ್ಟ ಅಧಿಕೃತ ಮಾರಾಟಗಾರರಿಗೆ ಮೈಸೂರು ಲ್ಯಾಂಪ್ಸ್‌ನವರು ಸೂಚಿಸಿದ್ದಾರೆ.

ಶ್ರೀಮತಿ ಸುಮಾವಸಂತ:– ಸನ್ಮಾನ್ಯ ಸಭಾಧ್ಯಕ್ಷರೆ, ಮೈಸೂರು ಲ್ಯಾಂಪ್ಸ್ ಬಲ್ಬನ್ನು ಮಾತ್ರ ಕೊಳ್ಳಬೇಕೆಂದು ಏಕೆ ಆರ್ಡರ್ ಮಾಡಿದ್ದಾರೆ. ಗ್ರಾಮಾಂತರ ಜನಗಳಿಂದ ಈ ಬಲ್ಬ್ ಹಾಕಿ ಒಂದು ತಿಂಗಳಿಗೆ ಹಾಳಾಗುತ್ತಿದೆ ಎಂದು ನಮಗೆ ತುಂಬಾ ಕಂಪ್ಲೆಂಟ್ ಬರುತ್ತಿದೆ. ಇದಕ್ಕೆ ಮೈಸೂರು ಲ್ಯಾಂಪ್ಸ್‌ನವರು ಗ್ಯಾರಂಟಿ ಕೊಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಮೈಸೂರು ಲ್ಯಾಂಪ್ಸ್ ಎನ್ನುವುದು ನಮ್ಮ ಸರ್ಕಾರಿ ಕ್ಷೇತ್ರದಲ್ಲಿರತಕ್ಕಂತಹ ಒಂದು ಪ್ರತಿಷ್ಠಿತ ಸಂಸ್ಥೆ. ಆದುದರಿಂದ ಅದೇ ಸಂಸ್ಥೆಯಿಂದ ಕೊಂಡುಕೊಳ್ಳಬೇಕೆಂದು ನಿಯಮ ಮಾಡಿದ್ದಾರೆ. ಮಾನ್ಯ ಸದಸ್ಯಣಿಯವರು ಹೇಳಿದ ಹಾಗೆ, ಅದರಲ್ಲಿ ಏನಾದರೂ ದೋಷ ಕಂಡು ಬಂದರೆ ಯಾವುದೇ ಖರ್ಚಿಲ್ಲದೆ ಬದಲಾವಣೆ ಮಾಡಬೇಕೆಂದು ನಿಗದಿ ಮಾಡಲಾಗಿದೆ. ದೋಷಪೂರಿತವಾದಂತಹ ನಿದರ್ಶನವನ್ನು ಮಾನ್ಯ ಸದಸ್ಯರು ಹೇಳಿದರೆ ತಕ್ಷಣ ಅದಕ್ಕೆ ಸೂಕ್ತ ಪರಿಹಾರ ನೀಡಲಾಗುವುದು.

ಶ್ರೀಮತಿ ಸುಮಾವಸಂತ:– ಪ್ರತಿಯೊಂದು ಮಂಡಲದಲ್ಲೂ ಗ್ರಾಮೀಣ ಪ್ರದೇಶದಲ್ಲೂ ನಮ್ಮ ಜಿಲ್ಲೆಯಲ್ಲಿಯೂ ಈ ರೀತಿ ಆಗುತ್ತಿದೆ. ಇದರ ಬಗ್ಗೆ ತುಂಬಾ ಕಂಪ್ಲೆಂಟ್ ಬರುತ್ತಿದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಅದನ್ನು ನಮ್ಮ ಈ ಇಲಾಖೆ ಮುಖಾಂತರ ಪರಿಶೀಲನೆ ಮಾಡುತ್ತೇವೆ.

ಉಪಸಭಾಧ್ಯಕ್ಷರು:– ಈಗ ಮುಂದುವರಿದ ಬೇಡಿಕೆಗಳ ಮೇಲೆ ಚರ್ಚೆ.

ಶ್ರೀಮತಿ ಸುಮಾವಸಂತ ಅವರು ದಯಮಾಡಿ ಕೇವಲ 5 ನಿಮಿಷಗಲ್ಲಿ ಮುಗಿಸಬೇಕು. ಏಕೆಂದರೆ ಹೆಚ್ಚು ಸದಸ್ಯರು ಮಾತನಾಡುವವರಿದ್ದಾರೆ.

ವಿತ್ತೀಯ ಕಾರ್ಯಕಲಾಪಗಳು
(1993-94 ನೇ ಸಾಲಿನ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ)

† ಶ್ರೀಮತಿ ಸುಮಾವಸಂತ (ವಿರಾಜಪೇಟೆ):– ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿನ ಮಾನ್ಯ ವಿದ್ಯಾ ಮಂತ್ರಿಗಳು ಸದನದಲ್ಲಿ ಮಂಡಿಸಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಕೆಲವು ವಿಚಾರಗಳನ್ನು ಮತ್ತು ಸಲಹೆಗಳನ್ನು ಕೊಡಲು ಇಚ್ಛೆಪಡುತ್ತೇನೆ. ಬೇಡಿಕೆ ಸಂಖ್ಯೆ: 13,54,16, 14, 15, 12,11, 31. ಈ ಬೇಡಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸಲು ಇಚ್ಛೆಪಡುತ್ತೇನೆ. ಸರ್ಕಾರಿ ಶಿಕ್ಷಣ ಸಂಸ್ಥೆಗಳು ಸುಧಾರಿಸಿದರೆ ಖಾಸಗಿ ವಿದ್ಯಾ ಸಂಸ್ಥೆಗೆ ಹೆಚ್ಚಿನ ವಿದ್ಯಾರ್ಥಿಗಳು ಹೋಗುವುದನ್ನು ತಪ್ಪಿಸಬಹುದೆಂದು ನಾನು ಹೇಳುತ್ತೇನೆ. ಅದೂ ಅಲ್ಲದೆ, ಈ ಸರ್ಕಾರಿ ವಿದ್ಯಾ ಸಂಸ್ಥೆಗಳಿಗೆ ಹೆಚ್ಚಾಗಿ ಹಿಂದುಳಿದವರು, ಹರಿಜನರು, ಬಡ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಆದರೆ ಸರ್ಕಾರಿ ವಿದ್ಯಾ ಸಂಸ್ಥೆಗಳ ಪರಿಸ್ಥಿತಿ ಈಗ

ಹೇಗಿದೆ ಎಂದು ಹೇಳಿದರೆ, ಸರಿಯಾದ ಪೀಠೋಪಕರಣಗಳು ಇಲ್ಲ, ಶಿಕ್ಷಕರು ಇರುವುದಿಲ್ಲ, ಕಟ್ಟಡಗಳು ಸರಿಯಾಗಿರುವುದಿಲ್ಲ.

ಇವು ಇತ್ತೀಚಿನ ವಿದ್ಯಾಸಂಸ್ಥೆಗಳ ಪರಿಸ್ಥಿತಿಯಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಈ ಪರಿಸ್ಥಿತಿಯಿಂದ ಕಾಲಕ್ರಮೇಣ ಸರ್ಕಾರಿ ವಿದ್ಯಾಸಂಸ್ಥೆಗಳನ್ನು ಮುಚ್ಚುವ ಪ್ರಸಂಗ ಬಂದರೂ ತಪ್ಪಲ್ಲ. ಇದರಿಂದ ಖಾಸಗಿ ವಿದ್ಯಾಸಂಸ್ಥೆಗಳಿಗೆ ಹಾಗೂ ಕಾನ್ವೆಂಟ್‌ನವರಿಗೆ ಅನುಕೂಲ ಮಾಡಿದಂತಾಗುತ್ತದೆ. ಪ್ರಾಥಮಿಕ ಶಿಕ್ಷಣವೇ ಉನ್ನತ ಶಿಕ್ಷಣಕ್ಕೆ ಅಡಿಗಲ್ಲಾಗಿದ್ದು, ಇಂದಿನ ಪ್ರಾಥಮಿಕ ಶಿಕ್ಷಣವು ಅಧೋಗತಿಯತ್ತ ಸಾಗುತ್ತಿರುವುದು ತುಂಬಾ ಶೋಚನೀಯ. ಶಾಲೆಗಳ ಅಭಿವೃದ್ಧಿಗಾಗಿ ಹಲವಾರು ದಾನಿಗಳನ್ನು ಸಂಪರ್ಕಿಸಿ ಅವರ ನೆರವಿನಿಂದ ಸಾಗಿಸಿದ ಅಭಿವೃದ್ಧಿ ಕಾರ್ಯಕ್ರಮಗಳು ಸರ್ಕಾರದ ದೂರದೃಷ್ಟಿರಹಿತ ನೀತಿಯಿಂದಾಗಿ ಅಭಿವೃದ್ಧಿಯ ಬದಲು ಅವನತಿ ಕಾಣುವಂತಹ ಪ್ರಸಂಗ ತಲೆದೋರಿದೆ. ಕೆಲವು ವಿದ್ಯಾಸಂಸ್ಥೆಗಳಿಗೆ ಸಂಬಂಧಿಸಿದ ಕೆಲವು ನಿರ್ಣಯಗಳನ್ನು ತ್ವರಿತವಾಗಿ ರೂಪಿಸದೆ ಪ್ರಾಥಮಿಕ ಶಿಕ್ಷಣದ ಬಗ್ಗೆ ತಾತ್ಸಾರ ತೋರುವುದು ಸರಿಯಲ್ಲ. ಶತಮಾನದ ಹಿಂದೆಯೇ ದಾನಿಗಳ ನೆರವಿನಿಂದ ನಿರ್ಮಿಸಿದ ಹಲವಾರು ಶಾಲಾ ಕಟ್ಟಡಗಳು ಸಮರ್ಪಕವಾಗಿ ವಾರ್ಷಿಕ ದುರಸ್ತಿಯಿಲ್ಲದೆ ಬೀಳುವಂಥ ಶಿಥಿಲಾವಸ್ಥೆಗೆ ತಲುಪಿದ್ದು, ತರಗತಿಗಳನ್ನು ಅಪಾಯಕಾರಿಯಾದಂಥ ಕೊಠಡಿಗಳಲ್ಲಿ ನಡೆಸುತ್ತಿರುವುದು ಶೋಚನೀಯ. ಅದರಲ್ಲಿಯೂ ಮಲೆನಾಡು ಪ್ರದೇಶದಲ್ಲಿ ಕಟ್ಟಡಗಳ ಪರಿಸ್ಥಿತಿಯೂ ಶೋಚನೀಯವಾಗುತ್ತಿದೆ. ಇವುಗಳು ಜಿಲ್ಲಾಪರಿಷತ್ ಮತ್ತು ಮಂಡಲಪಂಚಾಯತ್‌ಗಳಿಗೆ ಬರುವುದರಿಂದ ಇವುಗಳ ದುರಸ್ತಿಗೆ ಹೆಚ್ಚಿನ ಹಣವನ್ನು ಸರ್ಕಾರದವರು ಮಂಜೂರು ಮಾಡಿಕೊಡಬೇಕು. ಉಪಾಧ್ಯಾಯರುಗಳಿಗೆ ತಿಳಿಸದೆ ಗುತ್ತಿಗೆದಾರರು ಅಥವಾ ಕಂಟ್ರ್ಯಾಕ್ಟರ್ಸ್ ದುರಸ್ತಿ ಕೆಲಸ ಮಾಡುತ್ತಾರೆ. ಅದರೆ ಮತ್ತೆ ಒಂದೇ ವರ್ಷದಲ್ಲಿ ಅವು ಬೀಳುವಂಥ ಪರಿಸ್ಥಿತಿಗೆ ಬರುತ್ತವೆ. ಈ ಕೊಠಡಿಗಳನ್ನು ಯಾರು ಗುತ್ತಿಗೆದಾರರು ಅಥವಾ ಇಂಜಿನಿಯರ್ಸ್ ದುರಸ್ತಿ ಮಾಡುತ್ತಾರೋ ಅವರು ಅಲ್ಲಿಯ ಶಾಲಾ ಮುಖ್ಯೋಪಾಧ್ಯಾಯರುಗಳಿಂದ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕೆಂದು ಸರ್ಕಾರ ಆದೇಶ ಹೊರಡಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಮುಖ್ಯೋಪಾಧ್ಯಾಯರುಗಳಿಂದ ಸರ್ಟಿಫಿಕೇಟ್ ದೊರೆತ ನಂತರವೇ ಗುತ್ತಿಗೆದಾರರಿಗೆ ಬಿಲ್ಲಿನ ಹಣವನ್ನು ಪಾವತಿ ಮಾಡಬೇಕು. ಇದರಿಂದ ಕಳಪೆ ಕೆಲಸಗಳನ್ನು ತಡೆಗಟ್ಟಲು ಸಾಧ್ಯವಾಗುತ್ತದೆ. ನಮ್ಮ ಕೊಡಗಿನಲ್ಲಿ ಬಹುತೇಕ ಶಾಲಾಕಾಲೇಜುಗಳಲ್ಲಿ ತುಂಬಾ ಬೆಲೆ ಬಾಳುವ ವಸ್ತುಗಳು ಆಗಿಂದಾಗ್ಗೆ ಕಳ್ಳತನವಾಗುತ್ತಿವೆ. ಇದರಿಂದ ದಾನಿಗಳು ದೊರೆಯದೆ-ಕಷ್ಟವಾಗಿದೆ. ಆದ್ದರಿಂದ ಈ ರೀತಿ ಆಗುತ್ತಿರುವ ಕಳ್ಳತನವನ್ನು ನಿಲ್ಲಿಸಲು ಕ್ರಮಕೈಗೊಳ್ಳಬೇಕು. ಎಲ್ಲಾ ಮಾದರಿ ಮತ್ತು ಪ್ರಾಥಮಿಕ ಶಾಲೆಗಳಿಗೆ 4ನೇ ದರ್ಜೆಯ ನೌಕರರನ್ನು ನೇಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದುಳಿದ ಮತ್ತು ಬಡಮಕ್ಕಳು ವ್ಯಾಸಂಗ ಮಾಡುತ್ತಿರುವ ಶಾಲೆಗಳು ಒಂದಕ್ಕೊಂದು ಬಹುದೂರ ಇರುವುದರಿಂದ ಮಕ್ಕಳಿಗೆ ಬಹಳ ಕಷ್ಟವಾಗಿದ. ಜನವಸತಿ ತೀರ ವಿರಳವಾಗುತ್ತಿದೆ. ಸರ್ಕಾರದ ಪ್ರಸ್ತುತ ಜಾರಿಯಲ್ಲಿರುವ ನೀತಿಯಂತೆ ಒಬ್ಬ ಶಿಕ್ಷಕರಿಗೆ 50 ವಿದ್ಯಾರ್ಥಿಗಳು ಅನುಪಾತದಂತೆ ಶಿಕ್ಷಕರನ್ನು ನೇಮಿಸಿದರೆ ಸಾಲದು ಮತ್ತು ಬಡ ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ನಿರೀಕ್ಷಿಸುವುದು ತಪ್ಪಾಗುತ್ತದೆ. ಆದ್ದರಿಂದ ಮಕ್ಕಳು ಕಡಿಮೆ ಇರತಕ್ಕ ತರಗತಿಗೆ ಒಬ್ಬ ಶಿಕ್ಷಕರಂತೆಯೂ ಮತ್ತು ಮಕ್ಕಳ ಸಂಖ್ಯೆ ಹೆಚ್ಚಾಗಿರುವ ಅಂದರೆ 30-40 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರನ್ನು ನೇಮಿಸುವ ನೀತಿಯನ್ನು ಸರ್ಕಾರ ಪಾಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕೆಲವು ಕಾರ್ಯಕ್ರಮಗಳನ್ನು ಈ ಸಾಲಿನಲ್ಲಿ ಹಮ್ಮಿಕೊಂಡಿದ್ದಾರೆ. ಅವುಗಳನ್ನು ನಾನು ಸ್ವಾಗತಿಸುತ್ತಾ ಕೇವಲ ಪುಸ್ತಕದಲ್ಲೇ ಇರದೆ ಅವುಗಳನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. 1992-93ರಲ್ಲಿ 83 ಖಾಸಗಿ ಪದವಿಪೂರ್ವ ಕಾಲೇಜುಗಳಿಗೆ

ಹಾಗೂ 700 ಖಾಸಗಿ ಪ್ರೌಢ ಶಾಲೆಗಳಿಗೆ ಮಂಜೂರಾತಿ ನೀಡಲಾಗಿದೆ ಎಂದು ಹೇಳಿದ್ದಾರೆ. ಈಗ ಇರುವ ಶಾಲಾ ಕಾಲೇಜುಗಳಿಗೆ ಸರಿಯಾದ ಕಟ್ಟಡ, ಸರಿಯಾದ ರಿಪೇರಿ ಇಲ್ಲದೆ....

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಮುಖ್ಯ ಮಂತ್ರಿಗಳು ಈಗ ಇಲ್ಲಿ ಒಂದು ಹೇಳಿಕೆಯನ್ನು ಕೊಡಬೇಕಾಗಿದೆ. ತಾವು ಈಗಾಗಲೇ ವಿಧಾನ ಪರಿಷತ್ತಿನಲ್ಲಿ ಹೇಳಿಕೆಯನ್ನು ಕೊಟ್ಟಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಅಧ್ಯಕ್ಷರ ಪರವಾನಿಗೆ ಪಡೆದು ವಾಟಾಳ್ ನಾಗರಾಜ್‌ರವರು, ನಾನು ಮತ್ತು ದೇಶಪಾಂಡೆಯವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದೆವು. ಮಾನ್ಯ ರಾಮಸ್ವಾಮಿಯವರು ಮುಖ್ಯ ಮಂತ್ರಿಗಳು ನಾಳೆ ಪ್ರಧಾನಿಗಳ ಭೇಟಿ ಸಂದರ್ಭದಲ್ಲಿ ಬ್ಯುಸಿ ಇದ್ದಾರೆ. ಒಂದು ಹೇಳಿಕೆಯನ್ನು ಕೊಡುತ್ತೇವೆ ಎಂದು ಹೇಳಿದ್ದರು. ತಾವು ಹೋಗುವುದಕ್ಕೆ ಮುಂಚೆ ಒಂದು ಹೇಳಿಕೆಯನ್ನು ಕೊಟ್ಟರೆ ಒಳ್ಳೆಯದು.

ಉಪಾಧ್ಯಕ್ಷರು:– ಸುಮಾವಸಂತ್ ಅವರು ಮುಗಿಸಲಿ.

ಶ್ರೀಮತಿ ದಮಯಂತಿ ಬೋರೇಗೌಡ:– ತಮ್ಮಂಥ ನುರಿತ ರಾಜಕಾರಣಿಗಳಿಗೆ ನಾನು ಹೇಳುವುದೇನೆಂದರೆ, ಒಬ್ಬ ಮಹಿಳಾ ಸದಸ್ಯರು ಮಾತನಾಡುತ್ತಿದ್ದಾರೆ. ಮಧ್ಯೆ ನಿಂತುಕೊಂಡು ಇಂಟರಪ್ಟ್ ಮಾಡುತ್ತೀರಲ್ಲಾ ?

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ,

ಉಪಾಧ್ಯಕ್ಷರು:– ಮಾನ್ಯ ವಾಟಾಳರೇ, ಸುಮಾವಸಂತ್ ಅವರು ಮುಗಿಸಿ ಬಿಡಲಿ.

ಶ್ರೀ ವಾಟಾಳ್ ನಾಗರಾಜ್:– ನಾವು ಅವರಿಗೆ ಅಗೌರವ ಮಾಡಬೇಕು ಎಂದೇನೂ ಇಲ್ಲ. ಅವರು ಎಷ್ಟು ಹೊತ್ತು ಮಾತನಾಡಿದರೂ ಸಂತೋಷವಾಗಿ ಕುಳಿತಿರುತ್ತೇವೆ. ಅವರಾದ ಮೇಲೆ ಒಂದು ಹೇಳಿಕೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕು.

ಉಪಾಧ್ಯಕ್ಷರು:– ಸುಮಾವಸಂತ್‌ರವರೇ, ಮುಗಿಸಿ. ಈಗ ಆರು ನಿಮಿಷ ತೆಗೆದುಕೊಂಡಿದ್ದೀರಿ. ಇನ್ನು ಎರಡು ನಿಮಿಷದಲ್ಲಿ ಮುಗಿಸಿ.

ಶ್ರೀಮತಿ ಸುಮಾ ವಸಂತ್:– ಜಾಸ್ತಿ ಹೊತ್ತೇನು ತೆಗೆದುಕೊಳ್ಳುವುದಿಲ್ಲ. ಕೆಲವು ವಿಚಾರಗಳನ್ನು ಮಾತ್ರ ನಾನು ಹೇಳುತ್ತೇನೆ. ಸರ್ಕಾರಿ ಶಾಲೆಗಳಲ್ಲಿ ಏನಾಗಿದೆ ಎಂದರೆ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳಿಗೆ ಪಠ್ಯಪುಸ್ತಕ ಮತ್ತು ಬಟ್ಟೆ ವಿತರಣೆ ಮಾಡುತ್ತಿದ್ದಾರೆ. ಇದೇನಾಗುತ್ತದೆ ಎಂದರೆ, ಶಾಲೆ ಪ್ರಾರಂಭದಲ್ಲೇ ವಿತರಣೆ ಮಾಡದೆ ಪರೀಕ್ಷೆ ಹತ್ತಿರ ಬಂದಾಗ ಪಠ್ಯಪುಸ್ತಕಗಳನ್ನು ವಿತರಣೆ ಮಾಡುತ್ತಾರೆ, ಇದು ಸರಿಯಲ್ಲ. ಶಾಲೆಗಳು ಪ್ರಾರಂಭ ಆಗುವಾಗಲೇ ಅದನ್ನು ವಿತರಣೆ ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಏನು ಬಡ ಮಕ್ಕಳಿಗೆ ಬಟ್ಟೆಗಳನ್ನು ವಿತರಣೆ ಮಾಡುತ್ತಾರೆ, ಅವು ಸಣ್ಣ ಮಕ್ಕಳ ಸೈಜ್‌ಗೆ ಸರಿಯಾಗಿರುವುದಿಲ್ಲ. ಆದುದರಿಂದ ಆಯಾ ಶಾಲಾ ಅಧ್ಯಾಪಕರುಗಳಿಗೆ ಅಥವಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರುಗಳಿಗೆ ಈ ಜವಾಬ್ದಾರಿ ಕೊಟ್ಟು ಅಲ್ಲಿಯ ಮಕ್ಕಳಿಗೆ ಅಳತೆಗೆ ಸರಿಯಾಗಿ ಈ ಬಟ್ಟೆಗಳನ್ನು ಹೊಲಿಸಿ ಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕು ಮತ್ತು ಪ್ರಾರಂಭದಲ್ಲೇ ಇದನ್ನು ಕೊಡಿಸಿಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಅದೇ ರೀತಿ 5ನೇ ತರಗತಿಯಿಂದಲೆ ಹಿಂದಿ ಭಾಷೆಯನ್ನು ಬೋಧಿಸುವ ನೀತಿಯನ್ನು ಜಾರಿಗೆ ತಂದಿರುವುದನ್ನು ನಾನು ಸ್ವಾಗತಿಸುತ್ತೇನೆ. ಹಿಂದಿ ಭೋಧನೆಗೆ ಸಹಕಾರಿಯಾಗುವಂತೆ ಪ್ರತಿ ಶಾಲೆಗಳಲ್ಲೂ ಹಿಂದಿ ಶಿಕ್ಷಕರನ್ನು ನೇಮಿಸುವ ಒಂದು ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು

ಹೇಳುತ್ತೇನೆ. ಮತ್ತೆ ನಮ್ಮ ಕೊಡಗು ಜಿಲ್ಲೆಯಲ್ಲಿ ಏನಾಗಿದೆ ಎಂದರೆ ಶೇಕಡ 90ರಷ್ಟು ಶಾಲೆಗಳಿಗೆ ಸೇರಿದ ಜಾಗವು ಬಹಳ ವರ್ಷಗಳಿಂದ ಅದು ದಾನಿಗಳಿಂದ ನೀಡಲ್ಪಟ್ಟಿದ್ದು ಆ ಜಮೀನುಗಳಲ್ಲಿ ಈ ಶಾಲಾಕಾಲೇಜುಗಳು ನಡೆಯುತ್ತಿವೆ. ಇತ್ತೀಚೆಗೆ ಏನಾಗಿದೆ ಎಂದರೆ, ಅದನ್ನು ಎಲ್ಲರೂ ಎನ್‌ಕ್ರೋಚ್ ಮಾಡಿಕೊಳ್ಳುತ್ತಿದ್ದಾರೆ. ಈ ಶಾಲಾ ಜಮೀನಿನ ಬಗ್ಗೆ ರೆವಿನ್ಯೂ ಇಲಾಖೆಯವರನ್ನು ಕೇಳಿದರೆ ಅದು ನಮಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಎಜುಕೇಷನ್ ಡಿಪಾರ್ಟ್‌ಮೆಂಟ್‌ನವರನ್ನು ಕೇಳಿದರೆ ಇದು ನಮಗೆ ಸಂಬಂಧಪಟ್ಟಿದ್ದು ಅಲ್ಲ ಎಂದು ಹೇಳುತ್ತಾರೆ. ಈ ಒಂದು ವಿವಾದ ಹಲವಾರು ವರ್ಷಗಳಿಂದ ನಡೆಯುತ್ತಿದೆ. ಅದಕ್ಕೆ ಈ ಜಮೀನನ್ನು ಶಾಲೆಯ ಹೆಸರಿಗೆ ವರ್ಗಾಯಿಸಲು ಅನುಕೂಲವಾಗುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಅಥವಾ ಇಲಾಖೆಗೆ ಸೂಕ್ತ ಆದೇಶವನ್ನು ಜಾರಿಗೊಳಿಸಬೇಕು ಎಂದು ನಾನು ಮಾನ್ಯ ಸಚಿವರಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಪೀಠೋಪಕರಣಕ್ಕಾಗಿ ಅವರಿಗೆ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ. ಮತ್ತು ನಮ್ಮಲ್ಲಿ ಶಾಲಾಕಾಲೇಜುಗಳಲ್ಲಿ ಏನು ಜಮೀನುಗಳು ಬರುತ್ತವೆ, ಅಲ್ಲಿ ಒಳ್ಳೆಯ ಮರಗಳಿರುತ್ತವೆ. ಅಂತ ಮರಗಳಿಂದ ಶಾಲೆಗೆ ಬೇಕಾದಂಥ ಪೀಠೋಪಕರಣಗಳನ್ನು ಮಾಡುವುದಕ್ಕೆ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರುಗಳಿಗೆ ತಾವು ಪರ್ಮಿಷನ್‌ನ್ನು ಕೊಡಿಸಿಕೊಟ್ಟರೆ ಈ ಒಂದು ಪೀಠೋಪಕರಣಗಳಿಲ್ಲದೆ ಏನು ತೊಂದರೆಯನ್ನು ಅನುಭವಿಸುತ್ತಿದ್ದಾರೆ, ಅದನ್ನು ನೀಗಿಸುವುದಕ್ಕೆ ಸಾಧ್ಯ ಇದೆ ಎಂದು ನಾನು ತಿಳಿಸುತ್ತೇನೆ. ಮತ್ತು ಹೆಚ್ಚಿನ ಶಾಲಾಕಾಲೇಜುಗಳಲ್ಲಿ ಶೌಚಾಲಯದ ಕೊರತೆ ಜಾಸ್ತಿ ಇದೆ. ದೂರದೂರದಿಂದ ಹೆಣ್ಣುಮಕ್ಕಳು ಬರುತ್ತಾರೆ, ಅಧ್ಯಾಪಕರು ಬರುತ್ತಾರೆ, ಅವರುಗಳು ಶೌಚಾಲಯಕ್ಕೆ ಹೋಗಬೇಕು ಎಂದರೆ ಬಹಳ ತೊಂದರೆ ಇದೆ. ಇದನ್ನು ತಪ್ಪಿಸುವುದಕ್ಕೆ ನೀವು, ಪ್ರತಿ ಶಾಲಾಕಾಲೇಜುಗಳಿಗೆ ಒಂದು ಜೆ.ಆರ್.ಓ.ಎಲ್.ಎ. ಅಥವಾ ಜಿಲ್ಲಾ ಪರಿಷತ್ ವತಿಯಿಂದ ಹೆಚ್ಚಿನ ಹಣ ಕೊಟ್ಟು ಪ್ರತಿ ಪ್ರಾಥಮಿಕ ಶಾಲೆಗೆ ಒಂದೊಂದು ಶೌಚಾಲಯವನ್ನು ಕಟ್ಟಿಸಿಕೊಡುವ ಒಂದು ಅನುಕೂಲ ತಾವು ಮಾಡಿಕೊಡಬೇಕು. ಹಾಗೆಯೇ ಕುಡಿಯುವ ನೀರಿನ ವ್ಯವಸ್ಥೆ ಯಾವುದೇ ಶಾಲಾಕಾಲೇಜುಗಳಲ್ಲಿ ಇರುವುದಿಲ್ಲ. ನಾವು ಮಂಡಲಪಂಚಾಯತ್ ಅಥವಾ ಜಿಲ್ಲಾ ಪರಿಷತ್‌ನಲ್ಲಿ ಕೇಳಿದರೆ ಅವರು ಇದಕ್ಕೆ ನಮಗೆ ಯಾವುದೇ ಅನುದಾನ ಬರುವುದಿಲ್ಲ, ನಾವು ಮಾಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ತಾವು ಕುಡಿಯುವ ನೀರಿನ ವ್ಯವಸ್ಥೆಯನ್ನು ಶಾಲಾಕಾಲೇಜುಗಳಲ್ಲಿ ಮಾಡಿಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

ಈಗ ಏನು ಬೋರ್ ವೆಲ್ಸ್ ಮತ್ತು ಬಾವಿಗಳಿವೆ ಅವನ್ನು ದುರಸ್ತಿ ಮಾಡುವ ವ್ಯವಸ್ಥೆಯನ್ನು ತಾವು ಮಾಡಬೇಕಾಗುತ್ತದೆ. ಪ್ರತಿ ಶಾಲಾಕಾಲೇಜುಗಳಲ್ಲಿ ಕ್ರೀಡೆಗೆ ಸಂಬಂಧಪಟ್ಟ ಹಾಗೆ ಉಪಕರಣಗಳು ಏನು ಇರುತ್ತವೆ ಅವನ್ನು ಜಾಸ್ತಿ ಸರಬರಾಜು ಮಾಡುತ್ತಾ ಇಲ್ಲ. ಆದ್ದರಿಂದ ವಿಶೇಷವಾಗಿ ಕ್ರೀಡಾ ನಿಧಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳಿಗೆ ಆಟೋಟ ಸಾಮಗ್ರಿಗಳನ್ನು ಪೂರೈಸುವಂತಹ ಒಂದು ಕಾರ್ಯಕ್ರಮಗಳನ್ನು ಕೂಡ ಹಾಕಿಕೊಳ್ಳಬೇಕಾಗುತ್ತದೆ. ಜಿಲ್ಲಾ ಆಯ್ಕೆ ಸಮಿತಿ ಮೂಲಕ ಶಿಕ್ಷಕರನ್ನು ಆಯ್ಕೆ ಮಾಡುವಾಗ ಸ್ಥಳೀಯರಿಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು. ಕೆಲವೊಂದು ಮಲೆನಾಡು ಪ್ರದೇಶಕ್ಕೆ ಗುಲ್ಬರ್ಗಾ, ರಾಯಚೂರು, ಬೀದರ್‌ನಿಂದ ಶಿಕ್ಷಕರು ಸೆಲೆಕ್ಟ್ ಆಗಿರುತ್ತಾರೆ. ಅವರು ಬಂದು ಮೂರು ತಿಂಗಳಿಗೆ ಟ್ರಾನ್ಸ್‌ಫರ್ ಮಾಡಿಸಿಕೊಂಡು ಹೋಗವಂತಹ ಪರಿಸ್ಥಿತಿ ಜಾಸ್ತಿ ಇದೆ. ಆಗ ಅಲ್ಲಿ ಶಿಕ್ಷಕರ ಕೊರತೆ ಜಾಸ್ತಿ ಆಗುತ್ತದೆ. ಆದ್ದರಿಂದ ಸ್ಥಳೀಯರಿಗೆ ಆದ್ಯತೆಯನ್ನು ಕೊಟ್ಟರೆ ಈ ಒಂದು ಶಿಕ್ಷಕರ ಕೊರತೆಯನ್ನು ತಪ್ಪಿಸುವುದಕ್ಕೆ ಸಾಧ್ಯ ಆಗುತ್ತದೆ ಎಂದು ಹೇಳಬಯಸುತ್ತೇನೆ. ಮತ್ತೆ ಪ್ರತಿ ಶಾಲಾ ಮಕ್ಕಳಿಗೆ ಶೈಕ್ಷಣಿಕ ಪ್ರವಾಸವನ್ನು ಏರ್ಪಾಡು ಮಾಡಿದಾಗ ಮಾತ್ರ ಮಕ್ಕಳ ಜ್ಞಾನಾಬಿವೃದ್ಧಿಗೆ ಸಹಕಾರಿ ಆಗುತ್ತದೆ ಎಂದು ಹೇಳಿ ಒಂದು ಕಾರ್ಯಕ್ರಮ ತಮ್ಮ ವಿದ್ಯಾ ನೀತಿಯಲ್ಲಿ ಇದೆ. ಆದರೆ ಇಂದಿನ ದುಬಾರಿ ಪ್ರಯಾಣ ವೆಚ್ಚದಲ್ಲಿ

ಮಕ್ಕಳನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗುವುದು ತುಂಬಾ ತೊಂದರೆ ಆಗುತ್ತದೆ. ಜೊತೆಗೆ ಇನ್ನೂ ಒಂದು ಸಮಸ್ಯೆ ಏನಾಗಿದೆ ಎಂದರೆ, ಖಾಸಗಿ ಬಸ್‌ಗಳನ್ನು ಪ್ರವಾಸಕ್ಕೆ ತೆಗೆದುಕೊಂಡು ಹೋಗುವ ವ್ಯವಸ್ಥೆ ಇಲ್ಲ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರ ನೀತಿಯಿಂದಾಗಿ ಮುಂಗಡ ಡಿಪಾಸಿಟ್ ಮಾಡಬೇಕಾಗುತ್ತದೆ. ಈ ಶಾಲೆಯಲ್ಲಿರುವ ಅಧ್ಯಾಪಕರುಗಳಿಗೆ ಡಿಪಾಸಿಟ್ ತುಂಬುವುದು ಕಷ್ಟ ಆಗುತ್ತದೆ. ತಾವು ಜಿಲ್ಲಾ ಪರಿಷತ್ ಅಥವಾ ಮಂಡಲ್ ಪಂಚಾಯತ್‌ನವರಿಗೆ ಈ ಒಂದು ಠೇವಣಿ ಕಟ್ಟಲಿಕ್ಕೆ ರಿಯಾಯಿತಿ ತೋರಿಸಬೇಕೆಂದು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಿಗೆ ತಾವು ಹೇಳಬೇಕು. ಡಿಪಾಸಿಟ್ ತುಂಬಲಿಕ್ಕೆ ಜಿಲ್ಲಾ ಪರಿಷತ್ ಅಥವಾ ಮಂಡಲ್ ಪಂಚಾಯತ್‌ಗೆ ಆದೇಶವನ್ನು ಕೊಟ್ಟರೆ ಮಕ್ಕಳಿಗೆ ತುಂಬಾ ಅನುಕೂಲವಾಗುತ್ತದೆ ಎಂದು ತಿಳಿಸುತ್ತೇನೆ. ತಾವು ಏನು ಸಾಕ್ಷರತಾ ಆಂದೋಳನ ಮಾಡುತ್ತಿದ್ದೀರಿ, ಅದಕ್ಕೋಸ್ಕರವಾಗಿ ಹೆಚ್ಚಿನ ಹಣವನ್ನು ಖರ್ಚು ಮಾಡುತ್ತಿದ್ದೀರಿ.

ಈ ವಿದ್ಯಾ ಕ್ಷೇತ್ರವನ್ನು ಅಬಿವೃದ್ಧಿ ಪಡಿಸಬೇಕು. ಏಕೆಂದರೆ ಮನುಷ್ಯನಿಗೆ ವಿದ್ಯೆ ಮುಖ್ಯವೆಂದು ನಾವು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದೇವೆ. ಆದರೆ ಅದಕ್ಕೆ ಬೇಕಾಗುವಂತಹ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಿಲ್ಲ. ಹಿಂದೆ ಏನು ಏಳನೇ ತರಗತಿಗೆ ಎಲ್ಲಾ ಜಿಲ್ಲಾ ಮಟ್ಟದಲ್ಲಿ ಪರೀಕ್ಷೆ ನಡೆಯುತ್ತಿದ್ದವು. ಅದೇ ರೀತಿ ಈಗ ನಡೆಯುವಂತೆ ವ್ಯವಸ್ಥೆ ಆಗಬೇಕು ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಅಂತರ ಜಿಲ್ಲಾ ವಿಭಾಗದ ಮಟ್ಟದಲ್ಲಿ ನಡೆದಾಗ ಮಕ್ಕಳ ವಿದ್ಯಾಭ್ಯಾಸದ ಮಟ್ಟವನ್ನು ಉತ್ತಮಗೊಳಿಸುವುದಕ್ಕೆ ಸಾಧ್ಯ ಎಂದು ಹೇಳುತ್ತೇನೆ. ಅಲ್ಲದೆ ಒಂದು ಮತ್ತು ಎರಡನೇ ತರಗತಿಗಳಿಗೆ ಸಮೂಹವಾಗಿ ಉತ್ತೀರ್ಣ ನೀಡುತ್ತಾ ಇರುವುದು ಸರಿಯಲ್ಲ ಎಂದು ನಾನು ಹೇಳುತ್ತಿದ್ದೇನೆ. ಇದರಿಂದ ಏನು ಆಗುತ್ತದೆ ಎಂದರೆ, ಮಕ್ಕಳ ಶೈಕ್ಷಣಿಕ ಪ್ರಗತಿ ಕುಂಠಿತವಾಗುತ್ತದೆ. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ ಗಾದೆಯಂತೆ ಆಗುತ್ತದೆ. ಒಬ್ಬ ಆಂಗ್ಲ ಕವಿ ಏನು ಹೇಳಿದ್ದಾನೆ ಎಂದರೆ, ಭಾರತದಲ್ಲಿ ವಿದ್ಯಾ ಸಂಸ್ಥೆ ಹೇಗಿದೆ ಎಂದರೆ, ಆತ ಪ್ರಾಥಮಿಕ ಶಿಕ್ಷಣವನ್ನು ಹುಲ್ಲಿನ ಜೋಪಡಿಗೆ, ಕಾಲೇಜು ಶಿಕ್ಷಣವನ್ನು ಕಾಂಕ್ರೀಟ್ ಕಟ್ಟಡಕ್ಕೆ ಹೋಲಿಸಿದ್ದು ಈ ದಿನ ನನ್ನ ನೆನಪಿಗೆ ಬರುತ್ತಿದೆ. ಏಕೆಂದರೆ ತಳಪಾಯ ಗಟ್ಟಿ ಇಲ್ಲದಿದ್ದರೆ ಅವರ ವಿದ್ಯಾಭ್ಯಾಸದ ಮಟ್ಟ ಹೇಗೆ ಸುಧಾರಿಸುವುದಕ್ಕೆ ಸಾಧ್ಯ? ಆದ್ದರಿಂದ ಪ್ರಾಥಮಿಕ ಹಂತದಲ್ಲಿಯೇ ಅವರಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಬೇಕಾಗುತ್ತದೆ. ತಮಗೆಲ್ಲ ತಿಳಿದಿರುವಂತೆ ಒಂದನೇ ತರಗತಿಯಿಂದ ಎಸ್‌ಎಸ್‌ಎಲ್‌ಸಿವರೆಗೆ ಪಾಸಾಗುತ್ತಾ ಬರುತ್ತಾರೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಫೇಲ್ ಆಗುವಂತಹ ಸಂದರ್ಭ ಜಾಸ್ತಿ ಬರುತ್ತದೆ. ಇದಕ್ಕೆ ಒಂದು ಮತ್ತು ಎರಡನೇ ತರಗತಿಯಿಂದ ಮುಂದೂಡುವಂತಹ ಪ್ರಸಂಗವನ್ನು ತಪ್ಪಿಸಿ ಅಲ್ಲಿಂದಲೇ ಒಳ್ಳೆಯ ವಿದ್ಯಾಭ್ಯಾಸ ಕಲಿಸಬೇಕಾಗುತ್ತದೆ.

ಇನ್ನು ಹರಿಜನರು ನಡೆಸುವಂತಹ ವಿದ್ಯಾ ಸಂಸ್ಥೆಗೆ ಮೊದಲನೆ ವರ್ಷದಿಂದ ಅನುದಾನವನ್ನು ಕೊಡಬೇಕು. ಇಲ್ಲದಿದ್ದರೆ ಅವರಿಗೆ ವಿದ್ಯಾಸಂಸ್ಥೆಯನ್ನು ನಡೆಸುವುದಕ್ಕೆ ತೊಂದರೆ ಆಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಯಾರು ಸರಿಯಾಗಿ ನಡೆಸುತ್ತಾ ಇಲ್ಲವೋ ಅಂತಹವರಿಗೆ ತಾವು ಎನ್‌ಕ್ವೈರಿ ಮಾಡಿಸಿ ಹರಿಜನರ ಹೆಸರಿನಲ್ಲಿ ಎಲ್ಲಿ ಬೇರೆಯವರು ನಡೆಸುತ್ತಿದ್ದಾರೆ, ಅಂತಹವರನ್ನು ಮಾಹಿತಿ ತರಿಸಿಬಿಟ್ಟು ಬೇಕಾದರೆ ರದ್ದು ಮಾಡಬಹುದು. ಯಾರು ಸರಿಯಾಗಿ ನಡೆಸುತ್ತಿದ್ದಾರೆ, ಅವರಿಗೆ ಕೂಡಲೇ ಅನುದಾನವನ್ನು ಕೊಡಬೇಕು ಎಂದು ಕೇಳುತ್ತಿದ್ದೇನೆ. ಈ ದಿನ ಈ ದೈಹಿಕ ಶಿಕ್ಷಕರ ಹುದ್ದೆಗಳನ್ನು ನೇಮಕ ಮಾಡುವ ಬಗ್ಗೆ ಕೇಳಿದ್ದೆ. ಸಧ್ಯದಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ತಾವು ಮಕ್ಕಳಿಗೆ ಈ ದೈಹಿಕ ಶಿಕ್ಷಣವನ್ನು ಎನ್‌ಕರೇಜ್ ಮಾಡಬೇಕು ಎಂದು ಹೇಳುತ್ತೀರಿ. ಆದರೆ ಯಾವುದೇ ಶಾಲಾಕಾಲೇಜುಗಳಲ್ಲಿ ನೋಡಿದರೂ ಅಲ್ಲಿ ದೈಹಿಕ ಶಿಕ್ಷಕರೇ ಇರುವುದಿಲ್ಲ. ಆದ್ದರಿಂದ ದೈಹಿಕ ಶಿಕ್ಷಕರ ಹುದ್ದೆಗಳನ್ನು ತುಂಬುವಂತಹ ವ್ಯವಸ್ಥೆ ಆಗಬೇಕೆಂದು ನಾನು ಹೇಳುತ್ತೇನೆ. ಇಷ್ಟು ಹೇಳಿ, ಇನ್ನು ವಕ್ಫ್

ವಿಚಾರವಾಗಿ ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿಲ್ಲ. ಆದರೂ ಅದರ ಬೇಡಿಕೆ ಈ ದಿನ ಇರುವುದರಿಂದ ಆದರ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ.

ಈ ವಕ್ಫ್ ಮಂಡಳಿ ವತಿಯಿಂದ ಶಾಲೆಗಳನ್ನು ಸುಮಾರು 30–40 ವರ್ಷಗಳಿಂದ ಬಾಡಿಗೆ ಕೊಟ್ಟು ನಡೆಸಿಕೊಂಡು ಬರಲಾಗುತ್ತಿದೆ. ಶಿಥಿಲಗೊಂಡ ವಕ್ಫ್ ಕಟ್ಟಡಗಳನ್ನು ದುರಸ್ತಿ ಪಡಿಸಲು ಇಲ್ಲವೆ ಅವುಗಳನ್ನು ಕೆಡವಿ ಹೊಸದಾಗಿ ಕಟ್ಟಬೇಕು. ಅಲ್ಲದೆ, ವಕ್ಫ್ ಮಂಡಳಿಯ ವತಿಯಿಂದ ನಡೆಸಲಾಗುತ್ತಿರುವ ಶಾಲೆಗಳಿಗೆ ಕನ್ನಡ ಅಧ್ಯಾಪಕರನ್ನು ಕಡ್ಡಾಯವಾಗಿ ನೇಮಿಸಬೇಕೆಂದು ಹೇಳುತ್ತಿದ್ದೇನೆ. ಇಲ್ಲದಿದ್ದರೆ, ಮುಸ್ಲಿಂ ಬಾಲಕರಿಗೆ ಕನ್ನಡ ಭಾಷೆಯ ಪರಿಜ್ಞಾನ ಇಲ್ಲದೆ ಮುಂದೆ ಅವರಿಗೆ ನೌಕರಿಗೆ ಸೇರುವುದಕ್ಕೆ ತೊಂದರೆಯಾಗುತ್ತದೆ. ಕಳೆದ ಸಾಲಿನಲ್ಲಿ ವಕ್ಫ್ ಕಟ್ಟಡಗಳಿಗೆ ಕೇವಲ ಹತ್ತು ಸಾವಿರ ರೂಪಾಯಿಗಳನ್ನು ಮಾತ್ರ ಅನುದಾನವಾಗಿ ಕೊಟ್ಟಿದ್ದಾರೆ. ಕಟ್ಟಡವನ್ನು ಕಟ್ಟಿಸಲು 1 ಲಕ್ಷ 2ಲಕ್ಷ ರೂಪಾಯಿಗಳ ಅಂದಾಜು ಮಾಡಿರುತ್ತಾರೆ. ಆದುದರಿಂದ, ಜಾಸ್ತಿ ಹಣವನ್ನು ಗ್ರಾಮಾಂತರ ಪ್ರದೇಶಗಲ್ಲಿರುವ ವಕ್ಫ್ ಕಟ್ಟಡಗಳಿಗಾಗಿ ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. ಸನ್ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಯಾವಾಗಲೂ 'ಕನ್ನಡ, ಕನ್ನಡ' ಎಂದು ಹೇಳುತ್ತಿರುತ್ತಾರೆ. ಇದರ ಬಗ್ಗೆ ಹೇಳುವುದಕ್ಕೆ ಬೇಸರವಾಗುತ್ತದೆ. ಏಕೆಂದರೆ, ನಾವು ಕೇವಲ ಇಲ್ಲಿ ಕನ್ನಡವನ್ನು ಬಲಪಡಿಸಬೇಕೆಂದರೆ ಸಾಲದು. 'ನಾವು ಕನ್ನಡ ನಾಡಿನಲ್ಲಿ ಹುಟ್ಟಿದವರು, ಕರ್ನಾಟಕದವರು, ನಾವು ಕನ್ನಡಿಗರು' ಎನ್ನುವ ಭಾವನೆ ಇಲ್ಲಿರುವ ಪ್ರತಿಯೊಬ್ಬರಿಗೂ, ಅವರ ಮನಸ್ಸಿನ ಹೃದಯಾಂತರಾಳದಿಂದ ಹುಟ್ಟಿ ಬರಬೇಕು. ನಾವು ಸಾಧಾರಣವಾಗಿ ಗಡಿ ಪ್ರದೇಶ ಎಂದು ಹೇಳುತ್ತೇವೆ. ಉದಾಹರಣೆಗೆ ನಮ್ಮ ಕರ್ನಾಟಕ ರಾಜ್ಯಕ್ಕೆ ಹೊಂದಿದಂತೆ ಕೇರಳ ರಾಜ್ಯದ ಗಡಿ ಪ್ರದೇಶ ಬರುತ್ತದೆ. ಆ ಗಡಿ ಪ್ರದೇಶದಲ್ಲಿರುವ ಜನರು ಅವರ ಭಾಷೆ ಮಲಯಾಳಿಯಲ್ಲಿ ಮಾತನಾಡುತ್ತಾರೆಯೇ ಹೊರತು ಕರ್ನಾಟಕ ರಾಜ್ಯದ ಗಡಿ ಪ್ರದೇಶದ ಜನರ ಜೊತೆ ಕನ್ನಡದಲ್ಲಿ ಮಾತನಾಡುವುದಿಲ್ಲ. ಅದೇ ರೀತಿ ನಾವು ಕೇರಳಕ್ಕೆ ಹೋದರೆ ಅಲ್ಲಿ ನಾವು ಮಲಯಾಳಿ ಭಾಷೆಯನ್ನು ಮಾತನಾಡಬೇಕಾಗುತ್ತದೆ. ಹಾಗೆಯೇ ಆಂಧ್ರಪ್ರದೇಶದ ಗಡಿ ಪ್ರದೇಶದಲ್ಲಿ ನೀವು ನೋಡಬಹುದು. ಆ ರಾಜ್ಯದ ಗಡಿ ಪ್ರದೇಶಕ್ಕೆ ಕರ್ನಾಟಕ ರಾಜ್ಯವೂ ಹೊಂದಿಕೊಂಡಿದ್ದು, ಗಡಿ ಪ್ರದೇಶಗಳಲ್ಲಿರುವವರು ತೆಲುಗು ಮಾತನಾಡುತ್ತಾರೆಯೇ ಹೊರತು ನಮ್ಮ ಜೊತೆ ಯಾರೂ ಸಹ ಕನ್ನಡದಲ್ಲಿ ಮಾತನಾಡುವುದಿಲ್ಲ. ಇದೇ ಪರಿಸ್ಥಿತಿ ತಮಿಳುನಾಡು ಗಡಿ ಪ್ರದೇಶದಲ್ಲಿದೆ. ಎಲ್ಲಿಯವರೆಗೆ ಕರ್ನಾಟಕ ರಾಜ್ಯದಲ್ಲಿರುವ ಪ್ರತಿಯೊಬ್ಬರ ಮನಸ್ಸಿನಲ್ಲಿ 'ನಾವು ಕನ್ನಡಿಗರು, ನಾನು ಕನ್ನಡಿಗ' ಎನ್ನುವ ಮನೋಭಾವನೆಯನ್ನು ಬೆಳೆಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಕನ್ನಡ ಭಾಷೆಯ ಅವನತಿಗೆ ಕಾರಣವಾಗುತ್ತದೆ. ಆದುದರಿಂದ, ಪ್ರತಿಯೊಬ್ಬರೂ ಕೂಡ 'ನಾನು ಕನ್ನಡಿಗ' ಎನ್ನುವ ಭಾವನೆ ಬೆಳೆಸಿಕೊಂಡರೆ ಮಾತ್ರ ಕರ್ನಾಟಕ ರಾಜ್ಯದಲ್ಲಿ ಕನ್ನಡ ಭಾಷೆ ಭದ್ರವಾಗಿ ನೆಲೆಯೂರಲು ಸಾಧ್ಯವಾಗುತ್ತದೆ, ಮತ್ತು ಬೆಂಗಳೂರು ದೂರದರ್ಶನದಲ್ಲಿ ಪ್ರಸಾರವಾಗುವ ಕನ್ನಡ ಕಾರ್ಯಕ್ರಮದ ಅವಧಿ ಕಡಿಮೆಯಿರುವುದರಿಂದ, ಅದರ ಅವಧಿ ಜಾಸ್ತಿ ಮಾಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ.

ಆದರೆ, ವಾಸ್ತವ ಪರಿಸ್ಥಿತಿ ಏನಾಗಿದೆಯೆಂದರೆ, ದೂರದರ್ಶನದಲ್ಲಿ ಕನ್ನಡ ಕಾರ್ಯಕ್ರಮ ಬರುವಾಗ ಮಕ್ಕಳು ಟಿವಿಯನ್ನು ಬಂದ್ ಮಾಡಿ ಹೋಗುವಂಥ ಪರಿಸ್ಥಿತಿ ಇದೆ. ಕೇವಲ ಕಳಪೆ ದರ್ಜೆಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡದೆ ಉತ್ತಮ ಗುಣಮಟ್ಟದ ಕಾರ್ಯಕ್ರಮಗಳನ್ನು ಬೆಂಗಳೂರು ದೂರದರ್ಶನದಲ್ಲಿ ಪ್ರಸಾರ ಮಾಡುವಂತಾಗಬೇಕು. ಅಲ್ಲದೆ, ಕಾರ್ಯಕ್ರಮಗಳ ಗುಣಮಟ್ಟ ಸುಧಾರಿಸಲು ಕೇಂದ್ರ ಸರ್ಕಾರದ ಜೊತೆ ಸಮಾಲೋಚಿಸಿ ಒಂದು ಸಲಹಾ ಸಮಿತಿ ರಚಿಸಿ, ಕನ್ನಡ ಸಂಸ್ಕೃತಿ ಇಲಾಖೆಗೆ ಈಗ ಸಮಗ್ರ ನೀತಿ ರೂಪಿಸಿ, ಇಲಾಖೆಯನ್ನು ಬಲಪಡಿಸಬೇಕೆಂದು ಹೇಳುತ್ತೇನೆ, ಮತ್ತು ಈ ಇಲಾಖೆಗೆ ಹೆಚ್ಚಿನ ಹಣ ಒದಗಿಸಬೇಕಾಗುತ್ತದೆ. ಅದೇ ರೀತಿ ಇದಕ್ಕೆ ಸಂಬಂಧಪಟ್ಟಂತೆ

ಯುವಕ–ಯುವತಿ ಮಂಡಳಿ ಏನಿದೆ, ಆ ಮಂಡಳಿಯವರು ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ 25 ಸಾವಿರ ರೂಪಾಯಿಗಳನ್ನು ಜಾಸ್ತಿ ಕೊಡಬೇಕೆಂದು ಕೇಳುತ್ತಿದ್ದೇನೆ. ಹಾಗೆಯೇ ಕಟ್ಟಡಕ್ಕಾಗಿ 15 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ, ಇದು ಏನೇನೂ ಸಾಕಾಗುವುದಿಲ್ಲ, ಇನ್ನೂ ಜಾಸ್ತಿ ಮಾಡಬೇಕು. ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ 'ಯುವಜನ ಮೇಳ' ಎಂದು ಮಾಡುತ್ತಾರೆ, ಈ ಕಾರ್ಯಕ್ರಮಕ್ಕೆ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಆದರೆ, ಈ ಹಣದಿಂದ ಅವರಿಗೆ ಯಾವ ಕಾರ್ಯಕ್ರಮ ನಡೆಸುವುದಕ್ಕೂ ಆಗುವುದಿಲ್ಲ. ಆದುದರಿಂದ, ತಾಲೂಕು ಮಟ್ಟದಲ್ಲಾಗಲಿ, ಜಿಲ್ಲಾ ಮಟ್ಟದಲ್ಲಾಗಲಿ ಕಾರ್ಯಕ್ರಮ ನಡೆಸುವುದಕ್ಕೆ 5 ಸಾರಿರ ರೂಪಾಯಿಗಳು ಅಥವಾ 10 ಸಾವಿರ ರೂಪಾಯಿಗಳನ್ನು ಜಾಸ್ತಿ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಅಲ್ಲದೆ, 5 ಸಾವಿರ ರೂಪಾಯಿಗಳನ್ನು ಕೊಟ್ಟರೆ ಮಾತ್ರ ಸಾಲದು, ಕಾರ್ಯಕ್ರಮಗಳನ್ನು ಇಲಾಖಾ ವತಿಯಿಂದಲೇ ರೂಪಿಸುವುದಕ್ಕೆ ಏರ್ಪಾಡು ಮಾಡಬೇಕು, ಇದಕ್ಕಾಗಿ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಹೇಳುತ್ತಿದ್ದೇನೆ. ಇನ್ನು ಮನೋರಂಜನಾ ತೆರಿಗೆಯಾಗಿ ಸರ್ಕಾರಕ್ಕೆ ಏನು 200 ಕೋಟಿ ರೂಪಾಯಿಗಳು ಬರುತ್ತದೆ, ಈ ಹಣವನ್ನು ಯಾವುದಕ್ಕಾಗಿ ಖರ್ಚು ಮಾಡಲಾಗುತ್ತಿದೆ ? ಮತ್ತು ಈ ಹಣದಿಂದ ಯಾವ ಕಾರ್ಯಕ್ರಮ ರೂಪಿಸಿಕೊಳ್ಳಲಾಗಿದೆ ಎಂಬುದನ್ನು ನಾನು ಕೇಳಬಯಸುತ್ತೇನೆ. ಕಲಾವಿದರ ಮಾಸಾಶನಕ್ಕೆ ವಯಸ್ಸಿನ ಮಿತಿ ಹಾಕಬಾರದು ಮತ್ತು ಜಾನಪದ ಅಕಾಡೆಮಿಯನ್ನು ಒಂದೇ ವರ್ಗದವರು ಸೇರಿಕೊಂಡಿರುವುದು ಸರಿಯಲ್ಲ. ಎಲ್ಲಾ ವರ್ಗದವರಿಗೂ ಅದರಲ್ಲೂ ಹರಿಜನ–ಗಿರಿಜನರಿಗೂ ಸದಸ್ಯತ್ವದ ಪ್ರಾತಿನಿಧ್ಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಜಾನಪದ ಕಲೆ ಹುಟ್ಟಿದ್ದೇ ಅಲ್ಲಿ. ಆದುದರಿಂದ, ಅವರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡಬೇಕಾಗುತ್ತದೆ. ಇನ್ನು ಸ್ಪೋರ್ಟ್ಸ್ ಹಾಗೂ ಹಾಸ್ಟೆಲ್ಸ್ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬೇಕಾಗುತ್ತದೆ. ನಮ್ಮ ಜಿಲ್ಲೆಯ ಕೂಡ್ಲಿಗಿಯಲ್ಲೂ ಸಹ ಒಂದು ಸ್ಪೋರ್ಟ್ಸ್ ಹಾಸ್ಟೆಲ್ ಇದೆ. ಅದರ ಪರಿಸ್ಥಿತಿ ಯಾವ ರೀತಿ ಇದೆಯೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇತ್ತೀಚೆಗೆ. ಯುವಜನ ಸೇವೆ ಸಚಿವರಾಗಿದ್ದ ಡಾ: ಪ್ರೇಮಚಂದ್ರ ಸಾಗರ್‌ರವರು ಅಲ್ಲಿಗೆ ಭೇಟಿ ನೀಡಿ ಸುಧಾರಿಸುವ ಭರವಸೆ ಕೊಟ್ಟಿದ್ದರು. ಆದರೆ, ಸ್ವಲ್ಪ ದಿವಸಗಳಲ್ಲೇ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಗಿ ಬಂತು.

ಅಲ್ಲಿ ಮಕ್ಕಳಿಗೆ ಆಟದ ಸಾಮಾನುಗಳಿಲ್ಲ, ಕುಡಿಯುವ ನೀರಿಲ್ಲ, ಮೈದಾನವಿಲ್ಲ, ಕಟ್ಟಡವಿಲ್ಲ. ಇವೆಲ್ಲವುಗಳನ್ನು ತಾವು ಸುಧಾರಿಸಬೇಕಾಗುತ್ತದೆ. ಮತ್ತು ಮಡಿಕೇರಿಯ ಸ್ಟೇಡಿಯಂಗೆ ಏನು ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ ಅದಕ್ಕೆ ತಾವು ಒಂದು 50 ಲಕ್ಷವಾದರೂ ಈ ಸಲ ಕೊಟ್ಟು ಆ ಸ್ಟೇಡಿಯಂ ಅನ್ನು ಆದಷ್ಟು ಬೇಗ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಸರ್ಕಾರಿ ಮುದ್ರಣಾಲಯದ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗುತ್ತದೆ. ನಮ್ಮ ಕೊಡಗಿನಲ್ಲಿ ಸರ್ಕಾರದ ಒಂದು ಮುದ್ರಣಾಲಯವಿದೆ ಎಂದು ಈ ಇಲಾಖೆಗೆ ಮರೆತೇ ಹೋಗಿದೆಯೋ ಏನೋ; ಕೇವಲ ಬೆಂಗಳೂರಿನಲ್ಲಿರುವ ಮುದ್ರಣಾಲಯಕ್ಕೆ ಮಾತ್ರ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿದ್ದಾರೆ. ನಾವು ಹಲವಾರು ಬಾರಿ ಸರ್ಕಾರದ ಗಮನಕ್ಕೆ ಇದನ್ನು ತಂದರೂ ಸಹ ಇದರ ಬಗ್ಗೆ ಏನೂ ಕಾಳಜಿ ವಹಿಸಿಲ್ಲವೆಂದರೆ ತಪ್ಪಾಗುವುದಿಲ್ಲ. ಅಲ್ಲಿರುವ ಕಟ್ಟಡ ಜಾಸ್ತಿ ಮಳೆಯಿಂದ ಬೀಳುವ ಪರಿಸ್ಥಿತಿಯಲ್ಲಿದೆ, ಆದ್ದರಿಂದ ಆ ಕಟ್ಟಡವನ್ನು ಆದಷ್ಟು ಬೇಗ ರಿಪೇರಿ ಮಾಡಿಸಿ; ಇಲ್ಲದಿದ್ದರೆ ಜನರಿಗೆ ತೊಂದರೆಯಾಗತಕ್ಕ ಸಾಧ್ಯತೆ ಜಾಸ್ತಿ ಇದೆ. ಮತ್ತು ಅಲ್ಲಿ ಸ್ಟಾಕ್ ಸರಿಯಾಗಿ ಇಲ್ಲ. ಅಲ್ಲಿ ಕ್ವಾರ್ಟ್ರಸ್ ಇದ್ದರೂ ಸಹ ಅಲ್ಲಿ ಯಾರೂ ಸಹ ವಾಸಮಾಡದೇ ಇರತಕ್ಕ ಪರಿಸ್ಥಿತಿ ಬಂದಿದೆ. ಆದ್ದರಿಂದ ಆ ಕ್ವಾರ್ಟ್ರಸ್‌ನ್ನು ಕೂಡಲೆ ರಿಪೇರಿ ಮಾಡಿಸಬೇಕು ಮತ್ತು ಅಲ್ಲಿನ ಎಲೆಕ್ಟ್ರಿಫಿಕೇಷನ್ ಹಾಳಾಗಿದೆ ಇದನ್ನೂ ಕೂಡ• ರಿಪೇರಿ ಮಾಡಿಸಬೇಕೆಂದು ಹೇಳುತ್ತಿದ್ದೇನೆ. ಅನಂತರ ಲೈಬ್ರರಿಯ ಬಗ್ಗೆ ಹೇಳುವುದಾದರೆ ಪ್ರತಿ ಜಿಲ್ಲೆಯಲ್ಲಿ ಲೈಬ್ರರಿ ಸಮಿತಿ ಇದೆ, ಅದಕ್ಕೆ ಜಿಲ್ಲಾಧಿಕಾರಿಯವರು ಅಧ್ಯಕ್ಷರಾಗಿರುತ್ತಾರೆ. ಆದರೆ ನಮ್ಮಲ್ಲಿ ಇನ್ನೂ

ಕೊಡ ಲೈಬ್ರರಿ ಸಮಿತಿಯನ್ನೇ ನೇಮಕ ಮಾಡಿಲ್ಲ, ಆದ್ದರಿಂದ ಆ ಸಮಿತಿಯನ್ನು ಕೂಡಲೇ ನೇಮಕ ಮಾಡಬೇಕು ಮತ್ತು ಲೈಬ್ರರಿಗೆ ಹೆಚ್ಚು ಹಣವನ್ನು ಕೊಡಬೇಕೆಂದು ಹೇಳುತ್ತಿದ್ದೇನೆ. ಹಾಗೆಯೇ 1982ರಲ್ಲಿ ಕೊಡಗು ಜಿಲ್ಲೆಯ ಹೆಬ್ಬಾಳೆಯಲ್ಲಿ ಒಂದು ವಿದ್ಯಾಪೀಠಕ್ಕೆ ತರಬೇತಿ ಕ್ಯಾಂಪನ್ನು ಸ್ಯಾಂಕ್ಷನ್ ಮಾಡಿದ್ದರು. ಆದರೆ ಅದನ್ನು ಈಗ ತುಮಕೂರು ಜಿಲ್ಲೆಗೆ ವರ್ಗಾವಣೆ ಮಾಡಿದ್ದಾರೆ, ಇದನ್ನು ಏಕೆ ವರ್ಗಾವಣೆ ಮಾಡಿದರೋ ನನಗೆ ಗೊತ್ತಿಲ್ಲ. ನಾವು ಅದಕ್ಕಾಗಿ 100 ಎಕರೆ ಜಮೀನನ್ನು ಸಹ ಕೊಟ್ಟಿದ್ದೇವೆ. ಅದನ್ನು ಕೊಡಗಿನಲ್ಲೇ ಮುಂದುವರಿಸಿಕೊಂಡು ಹೋಗಬೇಕೆಂದು ಹೇಳುತ್ತಿದ್ದೇನೆ. ಅದೇ ರೀತಿಯಲ್ಲಿ ಅಡಲ್ಟ್ ಎಜ್ಯುಕೇಷನ್ ಆಕ್ಟಿವಿಟಿಸ್‌ಗಳು ಸಂಪೂರ್ಣವಾಗಿ ನಿಂತುಹೋಗಿದೆ. ಅಲ್ಲಿಗೆ ಚುನಾವಣೆಯಾಗದೆ 15 ವರ್ಷಗಳಾಗಿದೆ. ಈಗ ಮಾನ್ಯ ರಾಣೆಯವರು ಅದರ ಮಂತ್ರಿಗಳಾಗಿ ಬಂದಿದ್ದಾರೆ; ಅವರಾದರೂ ಸಹ ಸ್ವಲ್ಪ ಇದಕ್ಕೆ ಚಾಲನೆಯನ್ನು ಕೊಡಬೇಕೆಂದು ಹೇಳಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ತಾವು ಬೇರೆಯವರ ಹೆಸರನ್ನು ಕರೆಯುತ್ತಿದ್ದೀರಿ, ತಾವು ಯಾವ ಪಟ್ಟಿಯನ್ನು ಓದುತ್ತಿದ್ದೀರೋ ಗೊತ್ತಿಲ್ಲ. ಅಧ್ಯಕ್ಷರ ಕೊಠಡಿಯಲ್ಲಿ ಮೊದಲು ನಾನು ಅನಂತರ ಆಳ್ವರವರು ಮಾತನಾಡಬೇಕೆಂದು ನಿರ್ಧಾರವಾಗಿದೆ. ಪಾಪ ಮಹಿಳೆಯರು ಮಾತನಾಡಲು ಎದ್ದುನಿಂತಾಗ ಗದ್ದಲ ಮಾಡಬಾರದೆಂದು ನಾವು ಸುಮ್ಮನೆ ಕುಳಿತು ಕೊಂಡೆವು. ಆದರೆ ತಾವು ಈ ರೀತಿ ಬೇರೆಯವರ ಹೆಸರನ್ನು ಮಾತನಾಡಲು ಕರೆದರೆ ನಾವು ಏನು ಮಾಡಬೇಕಾಗುತ್ತದೆ ?

ಉಪಾಧ್ಯಕ್ಷರ ಅನುಮತಿಯ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಬಾಂಬೆ ಮತ್ತು ಕಲ್ಕತ್ತದಲ್ಲಿ ನಡೆದಂತಹ ಬಾಂಬ್ ಪ್ರಕರಣದ ಹಿನ್ನೆಲೆಯಲ್ಲಿ ನಗರದಲ್ಲಿ ತೆಗೆದುಕೊಂಡ ಮುನ್ನೆಚ್ಚರಿಕೆ ಕ್ರಮದ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ನಾವು ಏನು ಹೇಳಿದ್ದೇವೆಂದರೆ ಎಕ್ಸ್‌ಪ್ಲೋಸಿವ್ಸ್ ಕನ್‌ಸೈನ್‌ಮೆಂಟ್ Explosives, ಎಲ್ಲಾ ಕರ್ನಾಟಕಕ್ಕೆ ಬಂದಿದೆ ಎನ್ನತಕ್ಕ ಸುದ್ದಿ ಬಂದಿದೆ. ಅದು ಪೋಲೀಸ್‌ರವರ ಗಮನಕ್ಕೂ ಬಂದಿದೆ. ಇವತ್ತು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಇದರ ಬಗ್ಗೆ ಬಂದಿರತಕ್ಕ ವರದಿಯು ಸರ್ಕಾರದ ಗಮನಕ್ಕೆ ಈಗಾಗಲೇ ಬಂದಿದೆ. Bombay explosion ಆದಮೇಲೆ ಒಂದು ಕನ್‌ಸೈನ್‌ಮೆಂಟ್ ಗುಜರಾತ್, ಮಧ್ಯಪ್ರದೇಶ, ಮಹಾರಾಷ್ಟ್ರ ಮುಂತಾದ ಕಡೆಗೆ ಹೋಗಿದೆ ಎನ್ನತಕ್ಕ ವರದಿ ಇದೆ. ಎರಡನೆಯದಾಗಿ ನಿನ್ನೆದಿನ ವಿಧಾನ ಪರಿಷತ್ತಿನಲ್ಲಿ ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರತಕ್ಕ ಕಾರ್ಯಕ್ರಮದ ಬಗ್ಗೆ, ಮುಂಜಾಗ್ರತೆಯ ಕ್ರಮವಾಗಿ ಯಾರನ್ನೆಲ್ಲಾ ಬಂಧನದಲ್ಲಿಟ್ಟಿದ್ದೇವೆ, ಮತ್ತು ಕಂಡಲ್ಲಿ ಗುಂಡನ್ನು ಹಾಕತಕ್ಕ ಒಂದು ಆಜ್ಞೆಯನ್ನು ಹೊರಡಿಸಿದ್ದೇವೆ ಎನ್ನತಕ್ಕ ಹೇಳಿಕೆಯನ್ನು ಮುಖ್ಯ ಮಂತ್ರಿಗಳು ಕೊಟ್ಟಿರುವುದರಿಂದ ಅದರ ಬಗ್ಗೆ ಇಲ್ಲಿಯೂ ಒಂದು ವಿವರಣೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮುಖ್ಯ ಮಂತ್ರಿಗಳ ಗೈರುಹಾಜರಿಯಲ್ಲಿ ಶೂನ್ಯ ವೇಳೆಯಲ್ಲಿ ಈ ವಿಚಾರವನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ತಾವು ಈಗಾಗಲೆ ವಿಧಾನಪರಿಷತ್ತಿನಲ್ಲಿ ಈ ಭಯೋತ್ಪಾದನೆಯ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದೀರಿ. ಈ ಭಯೋತ್ಪಾದನೆಯನ್ನು ತಡೆಯುವುದಕ್ಕೆ ಸರ್ಕಾರದ ಸ್ಪಷ್ಟವಾದ ನಿರ್ಧಾರ ಏನು ? ಬೆಂಗಳೂರು ನಗರ ಮತ್ತು ಕರ್ನಾಟಕವೂ ಸೇರಿದಂತೆ ಅನೇಕ ಕಡೆಯಿಂದ ಗಡಿಪ್ರದೇಶದಿಂದ ಭಯೋತ್ಪಾದಕರು ಇಲ್ಲಿಗೆ ಬರುತ್ತಿದ್ದಾರೆ ಎನ್ನತಕ್ಕ ಸುದ್ದಿ ಇದೆ. ಇವರನ್ನು ತಡೆಯುವುದಕ್ಕೆ ಸರ್ಕಾರ ಪರಿಣಾಮಕಾರಿಯಾದ ಕಾರ್ಯಕ್ರಮವೇನನ್ನು ತೆಗೆದುಕೊಂಡಿದೆ ಎಂಬುದನ್ನು ಈ ಸದನವು ನಡೆಯುತ್ತಿರುವಾಗಲೇ ಸ್ಪಷ್ಟವಾಗಿ ಹೇಳಬೇಕು. ಈಗ ಏನಾಗಿದೆ ಎಂದರೆ,

ಅನೇಕ ಕಡೆಗಳಲ್ಲಿ ಜನರಿಗೆ ರಸ್ತೆಗಳಲ್ಲಿ ತಡೆಯುತ್ತಿದ್ದಾರೆ, ಕಾರನ್ನು ತಡೆದು ನಿಲ್ಲಿಸುತ್ತಿದ್ದಾರೆ, ಇದು ಒಂದು ರೀತಿಯಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾದ ಹಾಗೆ ಕಾಣಿಸುತ್ತಿದೆ. ಸರ್ಕಾರ ಏನೇನು ಕ್ರಮಗಳನ್ನು ಈ ದಿಶೆಯಲ್ಲಿ ತೆಗೆದುಕೊಂಡಿದೆ ಎನ್ನುವುದನ್ನು ಸಾರ್ವಜನಿಕರಿಗೆ ಹೇಳಬೇಕು. ಮತ್ತು ನಮ್ಮ ಗಡಿ ಪ್ರದೇಶವನ್ನು ಬಂದ್ ಮಾಡುವ ಪ್ರಯತ್ನವಿದೆಯೋ ? ಬೆಂಗಳೂರು ನಗರವೂ ಸೇರಿದಂತೆ ಅನೇಕ ಪಟ್ಟಣಗಳು ಬೃಹದಾಕಾರವಾಗಿ ಬೆಳೆದಿದೆ, ಹೊರಗಿನಿಂದ ಬರತಕ್ಕವರು ಯಾರು ಇದ್ದಾರೆ ಅವರನ್ನು ತಪಾಸಣೆ ಮಾಡತಕ್ಕ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವ ಬಗ್ಗೆ ಸ್ಪಷ್ಟವಾಗಿ ತಿಳಿಸಬೇಕೆಂದು ತಮ್ಮ ಮೂಲಕ ಅವರಲ್ಲಿ ಎರಡನೆ ಬಾರಿ ಕೇಳಿಕೊಳ್ಳುತ್ತಿದ್ದೇನೆ.

† ಶ್ರೀ ಎಂ. ವೀರಪ್ಪಮೊಯ್ಲಿ (ಮುಖ್ಯ ಮಂತ್ರಿಗಳು):– ಮಾನ್ಯ ಉಪಾಧ್ಯಕ್ಷರೇ, ನಿನ್ನೆ ವಿಧಾನ ಪರಿಷತ್ತಿನಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ನಾನು ಅಲ್ಲಿ ಸ್ಪಷ್ಟವಾದ ಒಂದು ಹೇಳಿಕೆಯನ್ನು ಕೊಟ್ಟಿದ್ದೇನೆ. ನಿನ್ನೆಯಿಂದ ಇವತ್ತಿನವರೆಗೆ ಆ ಹೇಳಿಕೆಯಲ್ಲಿ ಬದಲಾವಣೆ ಇಲ್ಲ. ನಿನ್ನೆಯ ಹೇಳಿಕೆಯನ್ನೇ ಇವತ್ತು ಕೊಡುತ್ತೇನೆ. ಎಮೆರ್ಜೆನ್ಸಿ ಕ್ರೈಸಿಸ್ ಮ್ಯಾನೇಜ್‌ಮೆಂಟ್ ಎಂದು ಒಂದು ಸಮಿತಿಯನ್ನು ಮಾನ್ಯ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಮಾಡಿದ್ದೇವೆ. ಅವರು ಕನಿಷ್ಠ ಪಕ್ಷ ದಿವಸಕ್ಕೆ ಎರಡು ಸಾರಿ, ಅವಶ್ಯಕಬಿದ್ದರೆ ಇನ್ನೂ ಹೆಚ್ಚು ಸಾರಿ ಸಮೀಕ್ಷೆಯನ್ನು ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ. ನಾನೂ ಕೂಡ ಒಂದು ಸಮೀಕ್ಷೆಮಾಡಿ ಈ ದಿಸೆಯಲ್ಲಿ ಏನೇನು ಕಾರ್ಯಕ್ರಮ ನಡೆದಿದೆ ಎಂಬುದನ್ನು ನೋಡುತ್ತೇನೆ. ಇದೆಲ್ಲಾ ಮುಂಜಾಗರೂಕತಾ ಕ್ರಮವೇ ಹೊರತು ಏನೊ ಆಗಿದೆ ಎಂದು ಕ್ರಮವನ್ನು ತೆಗೆದುಕೊಂಡಿದ್ದಲ್ಲ. ನಮ್ಮ ಕರ್ನಾಟಕ ರಾಜ್ಯದ ಜನರ ಆಸ್ತಿಪಾಸ್ತಿಗೆ ಯಾವುದೇ ರೀತಿಯ ಹಾನಿ, ನಷ್ಟ ಉಂಟಾಗಬಾರದು ಎಂಬುದು ನಮ್ಮ ಉದ್ದೇಶವಾಗಿದೆ. ಏಕೆಂದರೆ, We must always be prepared for the worst even if nothing happens. ಬಹಳ ದೊಡ್ಡ ಪ್ರಮಾಣದಲ್ಲಿ ಬರಬಹುದಾದ ಅನಾಹುತವನ್ನು ಮೊದಲೇ ಕಿತ್ತುಹಾಕುವ ಸಲುವಾಗಿ ಸಮರೋಪಾದಿಯಲ್ಲಿ ನಮ್ಮನ್ನು ನಾವೇ ಸಜ್ಜುಮಾಡಿಕೊಳ್ಳತಕ್ಕ ಜಾಗರೂಕತಾ ಮನೋಭಾವದಿಂದ ಇದನ್ನೆಲ್ಲಾ ಮಾಡುತ್ತಿದ್ದೇವೆ. ತಮಗೆ ಹೇಳುವುದಾದರೆ, ಬೊಂಬಾಯಿಯಲ್ಲಿ ಬಾಂಬ್ ಸ್ಫೋಟವಾದ ಕೂಡಲೇ ನಮ್ಮ ಅಡಿಷನಲ್ ಪೋಲೀಸ್ ಕಮೀಷನರ್‌ರವರನ್ನು ಅಲ್ಲಿಗೆ ಕಳುಹಿಸಿದ್ದೇವೆ. ಏಕೆಂದರೆ ಅಲ್ಲಿ ಯಾವ ರೀತಿಯಲ್ಲಿ ಎಕ್ಸ್‌ಪ್ಲೋಷನ್ ಆಗಿದೆ, ಯಾವ ರೀತಿಯ ಬಾಂಬ್ ಉಪಯೋಗ ಮಾಡಿದ್ದಾರೆ, ಅದನ್ನು ನಿಗ್ರಹಿಸುವುದಕ್ಕೆ ಏನೇನು ಕ್ರಮವನ್ನು ತೆಗೆದುಕೊಂಡು ಅದು ಎಕ್ಸ್‌ಪ್ಲೋಷನ್ ಆಗದಂತೆ ಮಾಡಬಹುದು, ನಾಗರೀಕರಲ್ಲಿ ಸಮಯಪ್ರಜ್ಞೆ ಉಂಟುಮಾಡುವ ದಿಸೆಯಲ್ಲಿ ಏನೇನು ಮುಂಜಾಗರೂಕತಾ ಕ್ರಮ ಮತ್ತು ಅನಂತರದ ಕ್ರಮವನ್ನು ತೆಗೆದುಕೊಳ್ಳಬಹುದೆಂಬ ಬಗ್ಗೆ ತಿಳಿದುಕೊಳ್ಳಲು ಕಳುಹಿಸಿಕೊಟ್ಟಿದ್ದೇವೆ. ದುಷ್ಟ ಶಕ್ತಿಗಳಾದ ಆ ಉಗ್ರಗಾಮಿಗಳು ಈ ಕೆಲಸವನ್ನು ಏನು ಮಾಡುತ್ತಿದ್ದಾರೆ ಅದನ್ನೆಲ್ಲಾ ಸಂಪೂರ್ಣವಾಗಿ ಅಧ್ಯಯನ ಮಾಡಿಕೊಂಡು ಬಂದು ಇಲ್ಲಿ ನಮಗೆ ತಿಳುವಳಿಕೆ ಕೊಡಲಿ ಎಂದು ಕಳುಹಿಸಿದ್ದೇವೆ. ಅವರು ಬಂದಮೇಲೆ ಅದಕ್ಕೆ ಸಂಬಂಧಪಟ್ಟಂಥ ಕೆಲವು ಉಪಕರಣಗಳನ್ನು ಪರ್ಚೇಸ್ ಮಾಡುವುದಕ್ಕೆ ನಾವು ಹಣವನ್ನೂ ಕೂಡ ಬಿಡುಗಡೆ ಮಾಡಿದ್ದೇವೆ. ಫೈರ್ ಫೈಟಿಂಗ್ ಎಕ್ವಿಪ್‌ಮೆಂಟ್ಸ್‌ಗೆ ಕೂಡ ಹಣ ಬಿಡುಗಡೆ ಮಾಡಿದ್ದೇವೆ. ಇದಕ್ಕೆ ಅವಶ್ಯಕವಾದ ಎಲ್ಲ ಸಜ್ಜನ್ನೂ ನಾವು ಮಾಡಿಕೊಳ್ಳುತ್ತಿದ್ದೇವೆ. ಕೇವಲ ಬೆಂಗಳೂರಿನಲ್ಲಿ ಮಾತ್ರವಲ್ಲ; ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ ಅದರಲ್ಲೂ ಬಹಳ ಪ್ರಮುಖವಾಗಿ ಇರಿಗೇಷನ್ ಡ್ಯಾಂ, ಪವರ್ ಡ್ಯಾಂ ಇನ್ನೂ ಮುಂತಾದ ಪ್ರಮುಖ ಸ್ಥಳಗಳಲ್ಲಿ ವಿಶೇಷವಾದ ನಿಗಾ ಇಟ್ಟಿದ್ದೇವೆ. ಇದರಿಂದ ಸಾರ್ವಜನಿಕರಿಗೆ ಸ್ವಲ್ಪ ಮಟ್ಟಿಗೆ ಅನಾನುಕೂಲವಾಗಿರಬಹುದು. ತಮಗೂ ಕೂಡ ತಿಳಿದಂತೆ ನಮ್ಮ ಬೆಂಗಳೂರಿನಲ್ಲೂ ಸಹ ಕೆಲವು ಮುಖ್ಯ ಸ್ಥಳಗಳಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದೇವೆ. ಅನುಮಾನಾಸ್ಪದ ವ್ಯಕ್ತಿಗಳನ್ನು ಅರೆಸ್ಟ್

ಮಾಡುವ ಕ್ರಮವನ್ನೂ ಕೂಡ ಪೋಲೀಸರು ತೆಗೆದುಕೊಂಡಿದ್ದಾರೆ. ಈ ನಿಟ್ಟಿನಲ್ಲಿ ನಮ್ಮ ಕೆಲವು ಪ್ರೋಗ್ರಾಂಗಳನ್ನು ನಿಲ್ಲಿಸಬೇಕೆಂದು ಕರೆಕೊಟ್ಟಿದ್ದೇನೆ.

Our concentration should be against these terrorists who are destabilising the country. Our concentration should be against these Anti–Social elements.

ಇದನ್ನೆಲ್ಲಾ ನಾವು ಏಕಾಗ್ರತೆಯಿಂದ ನೋಡಿ; ಪರಿಶೀಲನೆ ಮಾಡಿ ನಿಗ್ರಹಿಸತಕ್ಕ ದಿಸೆಯಲ್ಲಿ ಯಾವುದೇ ದುಷ್ಟ ಶಕ್ತಿಗಳು ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ನಾಶಮಾಡತಕ್ಕ ರೀತಿಯಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಚಲನವಲನವುಳ್ಳ ಹಾಗೂ ಇಂಥ ದುಷ್ಕೃತ್ಯಗಳಲ್ಲಿ ತೊಡಗುವಂಥ ಪ್ರಯತ್ನ ಮಾಡಿದ ವ್ಯಕ್ತಿಗಳನ್ನು ಕಂಡಲ್ಲಿ ಗುಂಡಿಟ್ಟು ಕೊಲ್ಲುವಂತೆ ಕಟ್ಟುನಿಟ್ಟಿನ ಆದೇಶವನ್ನು ಕೊಟ್ಟಿದ್ದೇವೆ. ಇಂಥ ಯಾವುದೇ ಅನಾಹುತವಾಗಲಿ, ಅದು ಸಣ್ಣ ರೂಪದಲ್ಲಿರಬಹುದು, ದೊಡ್ಡ ರೂಪದಲ್ಲಿರಬಹುದು. ಅದು ಆಗಬಾರದು. ಇದನ್ನು ತಡೆದುಕೊಳ್ಳುವ ಶಕ್ತಿ ನಮ್ಮ ಜನಮನದಲ್ಲಿಲ್ಲ. ಆದುದರಿಂದ ನಾವೆಲ್ಲಾ ಜಾಗೃತರಾಗಿ ನಮ್ಮ ಪಕ್ಷಭೇದ, ಮತಭೇದಗಳನ್ನು, ಭಾಷಾ ಭೇದಗಳನ್ನು ಬಿಟ್ಟು ಎಲ್ಲರೂ ಭಾರತೀಯರಾಗಿ ಒಗ್ಗಟ್ಟಾಗಿ ಕಾರ್ಯಾಚರಣೆಯನ್ನು ಕೈಗೊಳ್ಳಲು ತಮ್ಮ ಮುಖೇನ ರಾಜ್ಯದ ಜನತೆಯ ಸಹಕಾರವನ್ನು ಕೋರುತ್ತಿದ್ದೇನೆ. ಅವರ ಸ್ಪಂದನವನ್ನು ಕೋರುತ್ತಿದ್ದೇನೆ. ಪರಕೀಯರಿಂದ ಎಂಥ ಸಂಕಷ್ಟ ಬಂದರೂ ಕೂಡ ಆ ದುಷ್ಟ ಶಕ್ತಿಗಳನ್ನು ನಿಗ್ರಹಿಸುವಂಥ ಶಕ್ತಿ ನಮ್ಮಲ್ಲಿ ರಕ್ತಗತವಾಗಿದೆ ಎಂಬುದನ್ನು ಯಾರೂ ಸಹ ಮರೆಯುವಂತಿಲ್ಲ. ಸಮಯಪ್ರಜ್ಞೆ, ಕರ್ತವ್ಯಪ್ರಜ್ಞೆ ಎರಡೂ ಜನತೆಯಲ್ಲಿದ್ದರೆ ಸರ್ಕಾರಕ್ಕೆ ಆಗಲಿ, ಸಾರ್ವಜನಿಕರಿಗಾಗಲಿ ಯಾವುದೇ ಕಷ್ಟವೂ ಬರುವುದಿಲ್ಲ; ಅದು ಬರಬಾರದು.

ನಾವೆಲ್ಲ ಒಂದು ಕಬ್ಬಿಣದ ಮನಸ್ಸಿನಿಂದ, ಒಂದು ಕಬ್ಬಿಣದ ಏಕಾಗ್ರತೆಯಿಂದ ಇದನ್ನು ಎದುರಿಸಬೇಕೆಂದು ನಾನು ಕರೆಯನ್ನು ಕೊಟ್ಟು, ಈ ಸದನದ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಬಹುಶಃ ಅನಾಹುತ ಆಗದೆ ಇರಲಿ, ಆಗುವುದಿಲ್ಲ; ಆದರೆ ಅದನ್ನು ತಡೆಯಲಿಕ್ಕೆ ಎಲ್ಲ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ. ಯಾರೂ ಭಯಭೀತರಾಗಬೇಕಾದಂಥ ಅವಶ್ಯಕತೆ ಇಲ್ಲ. ನಾವು ಕ್ರೈಸೆಸ್ ಮ್ಯಾನೇಜ್‌ಮೆಂಟ್ ಕಂಟ್ರೋಲ್ ರೂಮನ್ನು ಡಿ.ಜಿ.ಪಿ. ಕಛೇರಿಗಳಲ್ಲಿ, ಪೋಲೀಸ್ ಕಮೀಷನರ ಆಫೀಸಿನಲ್ಲಿ, ಮತ್ತು ವಿಧಾನಸೌಧದಲ್ಲಿ ಈಗಾಗಲೇ ಇಟ್ಟಿದ್ದೇವೆ. ಇದಕ್ಕೆ ದೂರದರ್ಶನದ ಮುಖಾಂತರ ಮತ್ತು ರೇಡಿಯೋ ಮೂಲಕ ನಮ್ಮ ಪೋಲೀಸ್ ಅಧಿಕಾರಿಗಳು ಈಗಾಗಲೇ ಅದರ ಸಮಾಚಾರವನ್ನು, ಆದರ ಮಾಹಿತಿಗಳನ್ನು ಒದಗಿಸಿಕೊಟ್ಟಿದ್ದಾರೆ. ಬೇರೆ ಬೇರೆ ಮೊಹಲ್ಲಗಳಲ್ಲಿ ಪ್ರಾಮುಖ್ಯವಾದ ಇನ್‌ಫ್ಲೇಷನ್ ಏನಿದೆ, ಕೈಗಾರಿಕೆಗಳು ಏನಿದೆ ಅಂಥ ಪ್ರಮುಖವಾದ ಸ್ಥಳಗಳಲ್ಲಿ ಆಯಾ ಪ್ರದೇಶಗಳಲ್ಲಿ ಆಯಾ ಮೊಹಲ್ಲಗಳಲ್ಲಿ, ಬೀದಿಗಳಲ್ಲಿ ಇದನ್ನೆಲ್ಲ ಇಟ್ಟಿದ್ದೇವೆ. ಸಾರ್ವಜನಿಕರು ಇರುವಂತಹ ಒಂದು ಜಾಗ್ರತದಳನನ್ನು ಕೂಡ ಏರ್ಪಾಡು ಮಾಡಿದ್ದೇವೆ. ಜಾಗ್ರತಾದಳದ ಮುಖ್ಯಸ್ಥರು ಅಥವಾ ಕಾಂಟ್ಯಾಕ್ಟ್ ನಂಬರ್ ನಮ್ಮ ಸಂಬಂಧಪಟ್ಟ ಹತ್ತಿರದ ಪೋಲೀಸ್ ಅಧಿಕಾರಿಗಳಿಗೆ ನೇರವಾದಂಥ ಮತ್ತು ಸ್ಪಷ್ಟವಾದ ಕಡಿಮೆ ಸಮಯದಲ್ಲಿ ಸಮಾಚಾರವನ್ನು ನಮಗೆ ತಿಳಿಸಿ ತಕ್ಷಣ ಕಾರ್ಯಾಚರಣೆ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನೂ ಕೂಡ ಮಾಡಿದ್ದೇವೆ. ಅದಕ್ಕೆ ನಾಗರೀಕರ ಸಹಕಾರಬೇಕಾಗಿದೆ. ಅದನ್ನು ಕೂಡ ನಾನು ಕೇಳಿಕೊಂಡು ಇವತ್ತು ಸ್ವಲ್ಪ ಅನಾನುಕೂಲವಾದರೆ ಸಾರ್ವಜನಿಕರು ತಮ್ಮ ಆಸ್ತಿಪಾಸ್ತಿ ಮತ್ತು ಪ್ರಾಣದ ಒಂದು ರಕ್ಷಣೆ ಮಾಡತಕ್ಕಂಥ ದೃಷ್ಟಿಯಲ್ಲಿ ಸಹನೆಯಿಂದ ಈ ಅನಾನುಕೂಲತೆಗಳನ್ನು ಎಲ್ಲರೂ ಕೂಡ ಸಹಿಸಿಕೊಳ್ಳಬೇಕೆಂದು ತಮ್ಮ

ಮುಖಾಂತರ, ಈ ಸದನದ ಮುಖಾಂತರ ರಾಜ್ಯದ ಜನತೆಯಲ್ಲಿ ನಾನು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

1993-94ನೇ ಸಾಲಿನ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ

† ಡಾ. ಜೀವರಾಜ ಆಳ್ವ (ಮಲ್ಲೇಶ್ವರ):– ಮಾನ್ಯ ಅಧ್ಯಕ್ಷರೇ, ಮೊನ್ನೆ ನೀರಾವರಿ ಇಲಾಖೆಯ ಮೇಲೆ ಮಾತನಾಡಬೇಕಾದರೆ, ಅದರ ವಾರ್ಷಿಕ ವರದಿಯನ್ನು ಸಾಧಾರಣವಾಗಿ ಹಿಂದಿನ ದಿವಸ ಕೊಡಬೇಕೆಂದು ಇದೆ. ಆದರೆ 21ನೇ ಶತಮಾನದಲ್ಲಿ ಇನ್‌ಫರ್‌ಮೇಷನ್ ಟೆಕ್ನಾಲಜಿಗೆ ನಾವು ಪ್ರಾಮುಖ್ಯತೆಯನ್ನು ಕೊಡುತ್ತಿರುವಾಗ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳ ಇಲಾಖೆಯ ರಿಪೋರ್ಟ್ ಈಗತಾನೆ ಬಂದಿದೆ. ಬಹಳ ವಿಪರ್ಯಾಸ ಸಂಗತಿ ಎಂದರೆ, ಈ ತರಹದ ವರದಿ ಔಟ್‌ಡೇಟೆಡ್ ಎಂದು ಹೇಳುತ್ತಾರೆ. ಈ ಔಟ್‌ಡೇಟೆಡ್ ಇನ್‌ಫರ್‌ಮೇಷನಲ್ಲಿ ಅವರು ಹೇಳುವಂಥ ಸಾಧನೆ ಏನೆಂದರೆ, ನಾವು 610 ಸ್ಪಷ್ಟೀಕರಣಗಳನ್ನು ಕೊಟ್ಟಿದ್ದೇವೆ. 320 ಪ್ರೆಸ್ ಕಾನ್‌ಫರೆನ್ಸ್‌ಗಳನ್ನು ಅರೆಂಜ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ನಾವು ಯಾವ ಸ್ಥಿತಿಗೆ ಬಂದಿದ್ದೇವೆಂದರೆ ಈ ತರಹದ ಒಂದು ಸಾಧನೆಯಿಂದ ನಮಗೇನೂ ಲಾಭವಾಗುತ್ತಿಲ್ಲ. ಏತಕ್ಕೆಂದರೆ ನಾನೂ ಕೂಡ ಈ ಇಲಾಖೆಯನ್ನು ನಡೆಸಿಕೊಂಡು ಬಂದಿದ್ದೇನೆ. ಆದ್ದರಿಂದ ಸ್ವಲ್ಪ ಇತ್ತ ಕಡೆ ಗಮನಕೊಡಿ ಎಂದು ಸೂಚಿಸುತ್ತಾ ಇನ್ನು ಮುಂದಕ್ಕೆ ಹೋಗಿ ಮಾತನಾಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಎಲ್ಲೋ ಹೋಗಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ಬೇರೆ ವಿಚಾರಕ್ಕೆ ಬರುತ್ತೇನೆ. ಏತಕ್ಕೆಂದರೆ, ಇದು ಬಹಳ ಪ್ರಾಮುಖ್ಯವಾದ ಇಲಾಖೆ. ನಿನ್ನೆ ವಿದ್ಯಾ ಇಲಾಖೆಯ ಅನುದಾನದ ಬೇಡಿಕೆಯ ಬಗ್ಗೆ ಬಹಳವಾಗಿ ಚರ್ಚೆ ನಡೆಯಿತು, ಗಹನವಾದ ಚರ್ಚೆ ನಡೆಯಿತು. ಬಹಳ ಹಿರಿಯ ಸದಸ್ಯರನೇಕರು ಮಾತನಾಡಿದರು. ಈ ಭಾಷಣವಾದನಂತರ ಕೆಲವು ಪತ್ರಿಕಾಮಿತ್ರರು ನನ್ನ ಹತ್ತಿರ ಬಂದು ಒಂದು ಪ್ರಶ್ನೆಯನ್ನು ಕೇಳಿದರು. ಈ ವಿದ್ಯಾಇಲಾಖೆಯ ಬಗ್ಗೆ ತಮ್ಮ ಪಕ್ಷದಿಂದ ಭಾಷಣ ಮಾಡಿದಂಥ ವ್ಯಕ್ತಿಗಳ ಭಾಷಣವನ್ನು ಮತ್ತು ಅವರು ಹೇಳಿದಂಥ ವಿಚಾರಧಾರೆಯನ್ನು ತಾವು ಒಪ್ಪುತ್ತೀರಾ ಎಂದು.

ಅದಕ್ಕಾಗಿ ನಾನು ಏನು ಹೇಳಬೇಕಾಗಿ ಬಂತು ಅಂದರೆ ನಾನು ಕಾರ್ಯಾಧ್ಯಕ್ಷನಾಗಿ, ಶಾಸಕನಾಗಿ ಮಾತನಾಡುತ್ತಿದ್ದೇನೆಯೇ ಹೊರತು ವೈಯಕ್ತಿಕವಾಗಿ ನಾನು ಮಾತನಾಡುತ್ತಿಲ್ಲ. ಕರ್ನಾಟಕ ಜನತಾ ದಳದ ಪಕ್ಷದ ವತಿಯಿಂದ ಈ ಕ್ಯಾಪಿಟೇಷನ್ ಸಿಸ್ಟಂಗೆ ವಿರುದ್ಧವಾಗಿ ಅತ್ಯಂತ ಉಗ್ರವಾದ ಚಳುವಳಿಯನ್ನು ಏನು ಮಾಡಿದೆವೋ, ರಾಜಕೀಯವಾಗಿ ವಿಧಾನಸಭೆಯಲ್ಲಿ ಪ್ರತಿ ಸಾರಿ ನಾವು ಇದರ ಬಗ್ಗೆ ಖಚಿತವಾದ ನಿಖರವಾದ ಅಭಿಪ್ರಾಯಗಳನ್ನು ಏನು ಹೊಂದಿದ್ದೆವೋ ಆ ಖಚಿತವಾದ, ನಿಖರವಾದ ಅಭಿಪ್ರಾಯಗಳಿಗೆ ನಿನ್ನೆ ತಿಲಾಂಜಲಿ ಆಯಿತಲ್ಲಾ ಎಂಬ ನೋವು ಕರ್ನಾಟಕ ಜನತಾ ದಳದ ಕಾರ್ಯಾಧ್ಯಕ್ಷನಾದ ನನಗೆ ಇದೆ. ಅದನ್ನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಏಕೆಂದರೆ ಶಾಸಕನಾಗಿ ಒಂದು ಮಾತು ಹೇಳುವುದಿದ್ದರೆ, ವೈಯಕ್ತಿಕ ಭಾವನೆಗಳು ಹಲವಾರು. ಇದರಲ್ಲಿ ನಮ್ಮ ಲೋಪ ಇದೆ, ನಾಯಕರ ಲೋಪ ಇದೆ ಅನ್ನಿಸುತ್ತದೆ. ಇವತ್ತು ಯಾವುದೇ ವಿಚಾರಧಾರೆಯಲ್ಲಿ a concept, a philosophy, a fundamental issue cannot be compromised; a basic compromise on a fundamental issue has been done by a person who has initiated the debate and I offer my sincere apology to the people of Karnataka. ಏಕೆಂದರೆ ಇದು ಒಂದು ಅನ್ಯಾಯದ ಪರಮಾವಧಿ. ರಾಜ್ಯದ ವಿದ್ಯಾಮಂತ್ರಿಯಾಗಿ

ಕ್ಯಾಪಿಟೇಷನ್ ಶುಲ್ಕದ ಬಗ್ಗೆ, ಜಾಯಿಂಟ್ ಸೆಲೆಕ್ಟ್ ಕಮಿಟಿಯ ಬಗ್ಗೆ, ಹಲವಾರು ನ್ಯೂನತೆಗಳ ಬಗ್ಗೆ there are inherent weaknesses in the system.

ಆದರೆ ಇವತ್ತು ಶಾಸಕನಾಗಿ, ವಿರೋಧ ಪಕ್ಷದ ಸದಸ್ಯನಾಗಿ ವಿದ್ಯಾ ಇಲಾಖೆಯ ಬಗ್ಗೆ ಖಚಿತವಾಗಿ ಭಾಷಣವನ್ನು ಆರಂಭ ಮಾಡಿದಾಗ ಬರೀ ಬಂಡವಾಳಶಾಹಿಗಳ ಪರವಾಗಿ ಮಾತನಾಡಿದರೆ ಅದಕ್ಕಿಂತ ದೊಡ್ಡ ತಪ್ಪು ಯಾವುದೂ ಇಲ್ಲ. ಏಕೆಂದರೆ there must be a frank and fair discussion. ಇದನ್ನು ನಮ್ಮ ಪಕ್ಷದ ಶಾಸಕಾಂಗದೊಳಗೆ, ಕಾರ್ಯಾಂಗದೊಳಗೆ ಮಾತನಾಡಬಹುದಾಗಿತ್ತು ಎಂದು ಸೂಚನೆ ಮಾಡುವವರಿದ್ದಾರೆ. ನಿನ್ನೆ ಪತ್ರಿಕೋದ್ಯಮಿಗಳು ಕೇಳಿದಾಗ ವಿದ್ಯಾ ಇಲಾಖೆಯ ಮೇಲೆ ಭಾಷಣ ಮಾಡಬೇಕೆಂಬ ಇಚ್ಛೆ ನನ್ನದಾಗಿರಲಿಲ್ಲ. ಆದರೆ ನಿನ್ನೆ ನಡೆದ ಭಾಷಣದ ರೀತಿನೀತಿಗಳನ್ನು ಕೇಳಿದಾಗ ಇದರ ಭಗ್ಗೆ ಖಚಿತವಾಗಿ ನಿಖರವಾಗಿ ಮತ್ತು ಕಟುವಾಗಿ ಕೆಲವು ಶಬ್ದಗಳನ್ನು ಹೇಳಬೇಕಾಗಿ ಬಂದಿದೆ. ನಾನೂ ರಾಜ್ಯದ ವಿದ್ಯಾ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ರಾಜ್ಯದ ವಿದ್ಯಾ ಮಂತ್ರಿಯಾಗುವಾಗ there was a terrible ambiguity I faced. ಆ ಅಮ್‌ಬ್ಯುಗಿಟಿ ಏನೆಂದರೆ ಸುಮಾರು ನೂರು ದಿನಗಳ ಕಾಲ ಈ ಕ್ಯಾಪಿಟೇಷನ್ ವಿರುದ್ಧವಾದ ಒಂದು ಚಳುವಳಿಯ ನಾಯಕತ್ವ ವಹಿಸಿದ್ದ ನಾನೇ ಈ ರಾಜ್ಯದ ವಿದ್ಯಾ ಮಂತ್ರಿಯಾಗುವಂಥ ವಿಪರ್ಯಾಸ ನಡೆಯಿತು. ಅಲ್ಲಿ ಇವತ್ತು ಕಾಲೇಜುಗಳಿಗೆ ಬಹಳಷ್ಟು ಸೀಟುಗಳನ್ನು ಲಿಬರಲ್ ಆಗಿ ಕೊಟ್ಟರು ಎಂದು ಟೀಕೆ ಮಾಡುವವರಿದ್ದಾರೆ. ಆದರೆ by conceding one argument.

ಇವತ್ತು ಹಲವಾರು ವ್ಯಕ್ತಿಗಳಿಂದ ನಡೆಯುವಂಥ there are hundreds of institutions. The State is richer in terms of number of graduates produced by medical colleges and engineering colleges by very very reputed endowments.

ನಾನು ಕರ್ನಾಟಕ ಶಾಸನಸಭಾ ಸದಸ್ಯನಾಗಿ ಪ್ರಥಮವಾಗಿ ಇದರ ಬಗ್ಗೆ ಮಾತನಾಡಿದಾಗ ನನಗೆ ಇನ್ನೂ ನೆನಪಿದೆ. ಮಾನ್ಯ ಆರ್ಮುಗಂರವರು ಅಂಬೇಡ್ಕರ್ ಮೆಡಿಕಲ್ ಕಾಲೇಜ್ ಎಂದು ಆರಂಭ ಮಾಡಿದರು. ಇವತ್ತು ನಮ್ಮ ಜೊತೆ ಅವರು ಇಲ್ಲ. ಬಾಯಿ ತಪ್ಪಿ ನಾನು ಒಂದು ಸಲ ಆರ್ಮುಗಂ ಮೆಡಿಕಲ್ ಕಾಲೇಜ್ ಎಂದು ಹೇಳಿದೆ. ಆಗ ಅವರಿಗೆ ಬಹಳ ಕೋಪ ಬಂತು, ಕೋಪ ಬಂದು he said what does this young man know, a half baked medical doctor; It is not Armugam medical college, but it is Ambedker Medical College, it is by the Sch. Castes, of the Sch. Castes and for the Sch. Castes. Then I rose up with all humility at my command and I concede that the institution is being named after Dr. Ambedkar, the great architect of our Constitution, but it may be by the Sch. Castes, of the Sch. Castes but not for the Sch. Castes. ಈ ಮಾತನ್ನು ಪುನರುಚ್ಚರಿಸಲಿಕ್ಕೆ ಇಷ್ಟಪಡುತ್ತೇನೆ. ಜಾತಿ ಆಧಾರದ ಮೇಲೆ, ಪ್ರತಿಯೊಂದು ಬ್ಯಾಕ್‌ವರ್ಡ್ ಕ್ಲಾಸ್; ಷೆಡ್ಯೂಲ್ಡ್ ಕ್ಯಾಸ್ಟ್, ಮೈನಾರಿಟಿ ಮಾಡಿ ಎಂದು ಇವತ್ತು ಹೊಸ ಕಲುಷಿತ ವಾತಾವರಣವನ್ನು one of the most vicions atmosphere is created in this field of education.

ಇವತ್ತು ಬಹಳ ಒಳ್ಳೆಯ ಸಂಸ್ಥೆಗಳೂ ಇವೆ. ಜೆಎಸ್‌ಎಸ್ ಸಂಸ್ಥೆ ಇರಲಿ ಅಥವಾ ಆದಿಚುಂಚನಗಿರಿ ಸಂಸ್ಥೆ ಇರಲಿ, ಇವತ್ತು ಒಂದು ಧರ್ಮದ ಬುನಾದಿ ಮೇಲೆ ಇರಲಿ ಅಥವಾ ಕ್ಯಾಥೊಲಿಕ್ಸ್ ಇನ್‌ಸ್ಟಿಟ್ಯೂಷನ್ಸ್ ಇರಲಿ, ಮೈನಾರಿಟೀಸ್‌ದೇ ಇರಲಿ, ಆ ಸಂಸ್ಥೆಗಳು ಮಾಡಿದ ಸೇವೆಯನ್ನು

ಕೊಂಡಾಡಿದರೂ ಕೂಡಾ the trade, the barter, the compromise at every second that is being bartered.

ಇವತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಹೆಸರಿನಲ್ಲಿ, ಬ್ಯಾಕ್‌ವರ್ಡ್ ಕ್ಲಾಸಸ್ ಹೆಸರಿನಲ್ಲಿ ಅಥವಾ ಡಾ. ಅಂಬೇಡ್ಕರ್‌ರವರ ಹೆಸರಿನಲ್ಲಿ ಅಥವಾ ದೇವರಾಜ ಅರಸ್ ಅವರ ಹೆಸರಿನಲ್ಲಿ ಆದ ಸಂಸ್ಥೆಗಳ ಅನ್ಯಾಯದ ಪರಮಾವಧಿಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಸೀಟಿಗೆ 15ಲಕ್ಷ ರೂಪಾಯಿ ಕೊಡಬೇಕಾದರೆ ಆ 15 ಲಕ್ಷವನ್ನು 500 ರೂಪಾಯಿ ಮೌಲ್ಯದ ನೋಟುಗಳಲ್ಲೇ ಇವರಿಗೆ ಕಳುಹಿಸಬೇಕು. ಏಕೆಂದರೆ ಆ ನೂರರ ನೋಟುಗಳನ್ನು ಇಡುವಷ್ಟು ಸ್ಥಳ ಅವರಲ್ಲಿ ಇಲ್ಲ. ಆ ಖಜಾನೆಗಳು ಭರ್ತಿಯಾಗಿವೆ. ಇವತ್ತು This is exactly what I want to ask the Minister; ಎಲ್ಲಿದ್ದಾರೆ ನಿಮ್ಮ ಮಿನಿಸ್ಟರ್ ? ನನಗೆ ಯಾಹ್ಯಾ ಸಾಹೇಬರು ಬೇಕು. ಇವತ್ತು ವೆರಿಸೀರಿಯಸ್ ಡಿಸ್‌ಕಷನ್ ಆಗುತ್ತಿರಬೇಕಾದರೆ.....

ಶ್ರೀ ಶಿವಾನಂದ.ಹೆಚ್. ಕೌಜಲಗಿ:– ಚರ್ಚೆ ಮಾಡುವ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇದ್ದರೆ ಹೇಗೆ ?

ಉಪಾಧ್ಯಕ್ಷರು:– ವೈದ್ಯಕೀಯ ಶಿಕ್ಷಣ ಮಂತ್ರಿಗಳು ಇಲ್ಲಿ ಇದ್ದಾರೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ನಾವು ನಮ್ಮ ಭಾಷಣಗಳನ್ನು ಬರೆದು ಕೊಟ್ಟರೆ ಆಯಿತು. ಏಕೆ ನಾವು ಇಲ್ಲಿ ಇರಬೇಕು ?

ಉಪಾಧ್ಯಕ್ಷರು:– ವೈದ್ಯಕೀಯ ಶಿಕ್ಷಣ ಮಂತ್ರಿ ಜಿ. ರಾಮಕೃಷ್ಣ ಅವರು ಇಲ್ಲಿ ಇದ್ದಾರೆ. ಇಲ್ಲಿ ಚರ್ಚೆ ಮಾಡುತ್ತಿರುವವರು ಡಾ: ಆಳ್ವರವರು. ಆಳ್ವ ಅವರು ಮಾತನ್ನು ಪ್ರಾರಂಭ ಮಾಡಿದಾಗ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲೋ ಹೊರಟಿದ್ದಾರೆಂದೇ ತಮ್ಮ ಭಾಷಣ ಪ್ರಾರಂಭ ಮಾಡಿದರು.

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೇ, ಮೆಡಿಕಲ್ ಎಜ್ಯುಕೇಷನ್‌ಗೆ ಸಂಬಂಧಪಟ್ಟ ಹಾಗೆ ನಾನು ಇಲ್ಲಿ ಇದ್ದೇನೆ. ನನಗೆ ಸಂಬಂಧಪಟ್ಟ ಹಾಗೆ ಅವರು ಮಾತನಾಡುತ್ತಿದ್ದಾಗ ಒಳ್ಳೆಯ ರೀತಿಯಿಂದ ಮಾತನಾಡುತ್ತಿದ್ದಾರೆ. ಸುಮ್ಮನೆ ಎಲ್ಲರೂ ಏಕೆ ಅವರಿಗೆ ಡಿಸ್‌ಟರ್ಬ್ ಮಾಡುತ್ತಿದ್ದಾರೆ ?

ಉಪಾಧ್ಯಕ್ಷರು:– ಡಾ: ಆಳ್ವಾ ಅವರೇ, ಚರ್ಚೆ ಮುಂದುವರೆಸಿ. ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ. ಉತ್ತರ ಬರದಿದ್ದರೆ ಕೇಳಿ.

ಡಾ: ಜೀವರಾಜ ಆಳ್ವ:– ಮೆಡಿಕಲ್ ಎಜ್ಯುಕೇಷನ್ ಬಗ್ಗೆ ಇದ್ದಾರೆ. ಆ ಬಗ್ಗೆ ಪ್ರಶ್ನೆ ಇಲ್ಲ. ಆದರೆ ಉನ್ನತ ಶಿಕ್ಷಣ ಮಂತ್ರಿಗಳು ಇದ್ದರೆ ಸ್ವಲ್ಪ ಒಳ್ಳೆಯದೆಂದು ನನ್ನ ಭಾವನೆ. ನಾನು ಶಾಸಕಾಂಗದ ಮೂಲಕ ಸರ್ಕಾರಕ್ಕೆ ತಿಳಿಸುತ್ತಿದ್ದೇನೆ. ಅವರು ಇದ್ದರೆ ಒಳ್ಳೆಯದು. ಆಗ ಸಭೆಯ ಕಲಾಪ ಇನ್ನೂ ಹೆಚ್ಚು ಗಹನವಾಗಿ ನಡೆಯುತ್ತದೆ. ಮಾನ್ಯ ಅಧ್ಯಕ್ಷರೇ, ನನಗೆ ಅತ್ಯಂತ ನೋವು ಇದೆ. ನಾನು ಒಂದು ಸಾರಿ ಹೇಳಿದೆ. ಕರ್ನಾಟಕದ ಯುವಜನ ಸೇವಾ ಇಲಾಖೆಯ ಮಂತ್ರಿಯಾಗಿ ಹೋಗುವಾಗ ನನ್ನ ತಲೆ ನನ್ನ ಭುಜದ ಮೇಲೆ ಇರುತ್ತಿತ್ತು. ಯುವಜನ ಶಕ್ತಿ ಮೇಲೆ ನಂಬಿಕೆ ಇತ್ತು. ಪ್ರವಾಸೋದ್ಯಮ ಮಂತ್ರಿ ಎಂದರೆ ಇನ್ನೂ ಹೆಚ್ಚು ಉಲ್ಲಾಸ. ನಂತರ ನಾನು ಯಾವುದೇ ಇಲಾಖೆ, ಚಿಕ್ಕಚಿಕ್ಕ ಇಲಾಖೆಗಳ ಮಂತ್ರಿ ಆಗಿದ್ದ ಕಾಲದಲ್ಲಿ ಬಹಳ ಹೆಮ್ಮೆಯಿಂದ ಕರ್ನಾಟಕ ರಾಜ್ಯದ ಪ್ರವಾಸೋದ್ಯಮ ಮಂತ್ರಿ ಯುವಜನ ಸೇವಾ ಮಂತ್ರಿ ಎಂದು ಹೇಳುತ್ತಿದ್ದೆ. ಆದರೆ ರಾಜ್ಯದ ವಿದ್ಯಾಮಂತ್ರಿ ಆದಾಗ ನಾನು ತಲೆ ತಗ್ಗಿಸಿ "ನಾನು ಕರ್ನಾಟಕ ರಾಜ್ಯದ ವಿದ್ಯಾ ಮಂತ್ರಿಯಪ್ಪ" ಎನ್ನುವ ಒಂದು ಕಲುಷಿತ

ವಾತಾವರಣವನ್ನು ನಾವು ನೀವೂ ಎಲ್ಲರೂ ಸೇರಿ ನಿರ್ಮಾಣ ಮಾಡಿದ್ದೇವೆ. We are all abettors in this crime, we all sinners in the crime perpectuated on the people of Karnataka. ನನಗೆ ನೆನಪು ಇದೆ. ನಿಜಲಿಂಗಪ್ಪನವರ ಸಮಯದಲ್ಲಿ ನನ್ನ ಪೂಜ್ಯ ತಂದೆ ನಾಗಪ್ಪ ಆಳ್ವ ಅವರ ಹತ್ತಿರ ಕೇಳಿದೆ. ಆದರೆ ಆ ಸಂಸ್ಥೆಗಳು ಆರಂಭವಾದವು. ಆದರೆ ಆ ಸಂಸ್ಥೆಗಳು ಒಳ್ಳೆಯ ಕೆಲಸ ಮಾಡಿದವು. ಈಗ ಕೆಎಲ್‌ಇ ಇನ್‌ಸ್ಟಿಟ್ಯೂಷನ್ ಇರಲಿ; ಮತ್ತೊಂದು ಇರಲಿ, ಅಲ್ಪಸ್ವಲ್ಪ ನ್ಯೂನತೆಗಳು ಇದ್ದವು.

12.45 ಎ.ಎಂ.

ಆದರೆ ಇತ್ತೀಚೆಗೆ ಯಾವ್ಯಾವ ಹೆಸರಿನಿಂದ ಇವೆ ಆ ಸಂಸ್ಥೆಗಳಿಗೆ ನಮ್ಮ ಸರ್ಕಾರದಿಂದ ಸರಿಯಾದ ಮಾನಿಟರಿಂಗ್ ಇರಬೇಕು. I demand a House Committee. ಇವತ್ತು ಹೈಯರ್ ಎಜುಕೇಷನ್ ಬಗ್ಗೆ ಎಲ್ಲಿಯವರೆಗೆ ನಾವು ಈ ವ್ಯವಸ್ಥೆಯಲ್ಲಿ ಕ್ಲೀನ್ ಆಗಿದ್ದೇವೆಂದು ಹೇಳಿದರೆ, ಸುಪ್ರೀಂಕೋರ್ಟ್ ಒಂದು ಡಿಸಿಷನ್ ಕೊಟ್ಟರೆ ಆದಕ್ಕೆ ಅಪೀಲ್ ಮಾಡಬೇಕು ಎಂದು ಸರ್ಕಾರವನ್ನು ಕೇಳುವಂತಹ ಅತ್ಯಂತ ನಾಚಿಕೆಗೇಡಿನ ಸಂಗತಿ ಈ ಶಾಸಕಾಂಗಕ್ಕೆ ಬಂದಿದೆಯೆಂದರೆ, it is most disgraceful and I bow down my head in shame.

ಇವತ್ತು ಸುಪ್ರೀಂಕೋರ್ಟ್ ಒಂದು ತೀರ್ಮಾನ ಕೊಟ್ಟಿದೆ, ಅದರಲ್ಲೆ ಬೇಕಾದರೆ ಅಪೀಲ್ ಹೋಗಲಿ. ಸಂವಿಧಾನದ ಪ್ರಕಾರ they must go in appeal and they must tell that, they must implead themselves. ಆದರೆ ಸರ್ಕಾರ ಏಕೆ ಮಾಡಬೇಕು ? The Government is committed for total abolition of capitation fee.

ನಿಮಗೆ ಸಂಸ್ಥೆ ನಡೆಸುವುದಕ್ಕೆ ಸಾಧ್ಯವಿಲ್ಲವೆಂದರೆ ಕೊಡಿ. ನಿನ್ನೆ ಒಂದು ಪಂಥಾಹ್ವಾನವನ್ನು ಕೊಟ್ಟರಂತೆ. ಈ ಸಂಸ್ಥೆಗಳನ್ನು ನಡೆಸುವವರು ಇದ್ದರೆ ತೆಗೆದುಕೊಳ್ಳಿ, ಎಂದು. ನಾವು ಎರಡು ವರ್ಷಗಳ ಹಿಂದೆಯೇ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೆವು. ಆದ್ದರಿಂದ ಇದೊಂದು ಅತ್ಯಂತ ದೊಡ್ಡ ಪಿಡುಗು, ಸೋಶಿಯಲ್ ಇವೆಂಟ್ಸ್. ಇದನ್ನು ಸರಿಪಡಿಸಬೇಕಾದರೆ ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಿಯೆಂದು ನಾನು ಹೇಳುವುದಿಲ್ಲ. Because if is an Act. ಇವತ್ತು ಸುಪ್ರೀಂಕೋರ್ಟ್ ತೀರ್ಮಾನದ ಬಗ್ಗೆ ನಮ್ಮ ಉಪನಾಯಕರಾದ ಮಾನ್ಯ ಸಿಂಧ್ಯರವರು ಒಂದು ಮಾತನ್ನು ಹೇಳಿದರು. One of the most well–thought of and well beautifully administerd order. It is a mandate; it does not give a philosophical, ideological order. It does not strike of anythiing. It clearly says what is to be done, how it is to be done, what percentage of seats is to be alloted.

ನೀವು ಅದಕ್ಕೆ ಬೇಕಾದರೆ ಅಪೀಲ್ ಹೋಗಿ, ಮ್ಯಾನೇಜ್‌ಮೆಂಟ್‌ನವರು ಹೋಗಲಿ. ಆದರೆ ಸರ್ಕಾರ ಹೋಗುವಂತಹ ತಪ್ಪು ಕೆಲಸ ಮಾಡಬೇಡಿ. ಏಕೆಂದರೆ ಕರ್ನಾಟಕದ ಜನತೆ ನಿಮ್ಮನ್ನು ಕ್ಷಮಿಸುವುದಿಲ್ಲ. ಎಲ್ಲರೂ ನನ್ನ ಆತ್ಮೀಯ ಮಿತ್ರರು ಇದ್ದಾರೆ. ಆದರೆ ಇಲ್ಲಿ ನಡೆಯುವ ದುರ್ವ್ಯವಹಾರ ಏನೇ ಆಗಲಿ, ಕ್ಯಾಪಿಟೇಶನ್ ಫೀ ಬಗ್ಗೆ ಸುಪ್ರೀಂಕೋರ್ಟ್‌ಗೆ ಹೋಗಿ ಅವರು ರಿವೈಸ್ ಆರ್ಡರ್ ತಂದರೂ ಕೂಡ ನೀವು ಮಾತ್ರ ಆರೋಗ್ಯ ಮಂತ್ರಿಗಳಾಗಿರುವವರು ಮೆಡಿಕಲ್ ಎಜುಕೇಶನ್ ತೆಗೆದುಕೊಂಡು ಅತ್ಯಂತ ಹೈಯರ್ ಆ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕೆಂದು ವಿನಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಅದರ ಬಗ್ಗೆ ಮಾಡಿ. ಯಾವತ್ತೂ ಕಮಿಟಿಗೆ ಹಾಕಿಸಿಕೊಳ್ಳುವಂತಹ ಗೋಜಿಗೆ ಹೋಗುವವನು ನಾನಲ್ಲ. ಇದರ ಬಗ್ಗೆ ಸ್ಥೂಲವಾಗಿ ವಿಷಯವನ್ನು ಚರ್ಚೆ ಮಾಡಬೇಕಾದರೆ, ಇದರಲ್ಲಿ ಪೂರ್ಣವಾಗಿ ಅತ್ಯಂತ ಆಳಕ್ಕೆ ಹೋಗಬೇಕಾದರೆ ಬಹಳ

ಸುಲಭವಾಗಿ ಕಣ್ಣುಮುಚ್ಚಾಲೆ ಆಡುವಂತಹ ಕೆಲಸವಲ್ಲ. ಬಹಳ ಅಗೋಚರ ಶಕ್ತಿಗಳು ಇದರಲ್ಲಿದೆ. ರಾಜಕೀಯ, ಪೊಲಿಟಿಕಲ್ ಪ್ಯಾಟ್ರನೈಜ್ ಇದ್ದಾರೆ. ನಾನು ನಿನ್ನೆ ಒಂದು ಮಾತನ್ನು ಹೇಳಿದೆ; to introduce a provision in a provision. ಅದನ್ನು ಬಹಳ ತೂಕವಾಗಿ, ನೋವಿನಿಂದ ಹೇಳಿದೆ. ಏಕೆಂದರೆ ದಿನಾ ಅನ್ಯಾಯ ಮಾಡುತ್ತಿದ್ದೇವೆ; ದಿನಾ ತಪ್ಪುಗಳನ್ನು ಮಾಡುತ್ತಿದ್ದೇವೆ, ದಿನಾ ಪಾಪಗಳನ್ನು ಮಾಡುತ್ತಿದ್ದೇವೆ. ಅದೇ ವ್ಯವಸ್ಥೆ ಈ ಕ್ಯಾಪಿಟೇಷನ್ ಸಿಸ್ಟಮ್‌ನಲ್ಲಿದೆ. ಅದಕ್ಕೆ ಬೇಕಾದರೆ ಒಂದು ಕಮಿಟಿ ಮಾಡಿ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, ನಿನ್ನೆ ಈ ವಿಷಯವನ್ನು ನಾನು ಸದನದಲ್ಲಿ ಪ್ರಸ್ತಾಪ ಮಾಡಿ ಒಂದು ಮಾತನ್ನು ಹೇಳಿದೆ. ಸರ್ವೋಚ್ಚ ನ್ಯಾಯಾಲಯ ಎರಡು ವಿಷಯಗಳನ್ನು ಪ್ರಸ್ತಾಪಮಾಡಿ, ಕ್ಯಾಪಿಟೇಶನ್ ಫೀ ಎನ್ನುವ ಕೆಟ್ಟ ಪದ್ಧತಿ ಏನು ಇದೆ, ಅದನ್ನು ಅಬಾಲಿಷ್ ಮಾಡುವಂತಹ ಅತ್ಯುನ್ನತ ತೀರ್ಮಾನವನ್ನು ತೆಗೆದುಕೊಂಡಿದೆ. ಆ ವಿಷಯದಲ್ಲಿ ಮಾನ್ಯ ಆಳ್ವರವರ ದನಿಗೆ ನಾನು ಸಹ ಅಷ್ಟೇ ಎತ್ತರದ ದನಿಗೂಡಿಸುತ್ತೇನೆ. ಕ್ಯಾಪಿಟೇಷನ್ ಫೀ ಪಿಡುಗು ಕೆಟ್ಟ ವ್ಯವಸ್ಥೆ ಎಂದು ಏನು ಹೇಳುತ್ತೇವೆ, ಅದು ನಾಶವಾಗಲಿ. ಆ ಜಡ್ಜ್‌ಮೆಂಟನ್ನು ನಾನು ಮೊದಲಿನಿಂದ ಕೊನೆಯವರೆಗೂ ಓದಿದೆ. ನೂರಕ್ಕೆ ನೂರು ಸೀಟುಗಳನ್ನು ಅರ್ಹತೆಯ ಆಧಾರದ ಮೇಲೆ ಸರ್ಕಾರವೇ ನಿರ್ಧಾರ ಮಾಡಬೇಕೆಂದು ತೀರ್ಮಾನದಲ್ಲಿದೆ. ಮಾನ್ಯ ಆಳ್ವರವರು ಹಿಂದೆ ವಿದ್ಯಾಮಂತ್ರಿಗಳಾಗಿದ್ದರು, ಈ ಪದ್ಧತಿ ನಾಶವಾಗಬೇಕು ಎನ್ನುವವರಲ್ಲಿ ನಾನೂ ಒಬ್ಬ. ಅದರೊಳಗೆ ಎರಡನೆಯ ಮಾತಿಲ್ಲ. ಆದರೆ ನೂರಕ್ಕೆ ನೂರು ಸೀಟುಗಳನ್ನು ಅರ್ಹತೆಯ ಆಧಾರದ ಮೇಲೆ ಕೊಡುವಂತಹ ಸಂದರ್ಭ ಬಂದರೆ, ನಮ್ಮ ಭಯ ಏನೆಂದರೆ, ನಮ್ಮ ಆತಂಕ ಏನೆಂದರೆ, ಅವರು ದಯಮಾಡಿ ಈ ವಿಷಯದಲ್ಲಿ ಬೆಳಕು ಚೆಲ್ಲಬೇಕು, ನೂರಕ್ಕೆ ನೂರು ಸೀಟುಗಳನ್ನು ಅರ್ಹತೆಯ ಆಧಾರದ ಮೇಲೆ ಕೊಡುವಂತಹ ಸಂದರ್ಭ ಬಂದಾಗ ಗ್ರಾಮಾಂತರ ಪ್ರದೇಶಗಳ ಮಕ್ಕಳು ಆ ಸೀಟುಗಳನ್ನು ಪಡೆಯುವಲ್ಲಿ ವಂಚಿತರಾಗುತ್ತಾರೆ. They cannot compete with the urban elites, urban students. ಅದರ ಬಗ್ಗೆ ನನ್ನ ತಕರಾರು ಇದೆಯೇ ಹೊರತು, ಸರ್ಕಾರದವರು ಕ್ಯಾಪಿಟೇಶನ್ ಫೀಯನ್ನು ಅಬಾಲಿಷ್ ಮಾಡಬೇಕೆಂದು ಇವತ್ತೂ ಹೇಳುತ್ತೇನೆ, ನಾಳೆಗೂ ಹೇಳುತ್ತೇನೆ. ನಮ್ಮ ಒತ್ತಾಯ ಇಷ್ಟೇ; ಬೇರೆಯವರದ್ದು ಏನೋ ಗೊತ್ತಿಲ್ಲ. ನಾನು ಹೇಳುತ್ತಾ ಇರುವುದು ನೂರಕ್ಕೆ ನೂರರಷ್ಟು ನೀವು ಅರ್ಹತೆ ಮೇಲೆ ಕೊಡುವ ಸಂದರ್ಭ ಇರುವುದರಿಂದ ಗ್ರಾಮಾಂತರ ಪ್ರದೇಶದ ಮಕ್ಕಳನ್ನು ಶಾಶ್ವತವಾಗಿ ಈ ವೃತ್ತಿಪರ ಶಿಕ್ಷಣದಿಂದ ವಂಚಿತರನ್ನಾಗಿ ಮಾಡುತ್ತಿದ್ದೀರಿ. ಇದಕ್ಕೆ ಏನಾದರೂ ಸರ್ಕಾರ ಏರ್ಪಾಟು ಮಾಡುವುದಕ್ಕೆ ಸಾಧ್ಯವೇ ಎಂದು ನಾನು ಕೇಳಿಕೊಂಡಿರುವುದು.

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು):- ಮಾನ್ಯ ಸದಸ್ಯರು ನಿನ್ನೆಯಿಂದ ಅದೇ ಮಾತನ್ನು ಹೇಳುತ್ತಿದ್ದಾರೆ. ಇವತ್ತು ನಾವು ರೂಲ್ಸ್‌ಅನ್ನು ಪ್ಲೇಸ್ ಮಾಡಿದ್ದೇವೆ. ನಿಮ್ಮ ಟೇಬಲ್ ಮೇಲೆ ಇವತ್ತು ಇಟ್ಟಿದ್ದೇವೆ. Supreme Court Judgment ಆಧಾರದ ಮೇಲೆ ರೂಲ್ಸ್ ಮಾಡಿದ್ದೇವೆ. ಈ ರೂಲ್ಸ್ ಪ್ರಕಾರ ಜಡ್ಜ್‌ಮೆಂಟ್ ಇದ್ದಹಾಗೆ ರಿಯಾಯಿತಿ ಯಾವುದೆಲ್ಲ ಇತ್ತು, 15 ಪರ್ಸೆಂಟ್‌ನ್ನು ರೂರಲ್ ಏರಿಯಾದ ಮಕ್ಕಳಿಗೆ ಈ ರೂಲ್ಸ್ ಪ್ರಕಾರವೇ ಕೊಡುತ್ತಿದ್ದೇವೆ. ಶೆಡ್ಯೂಲ್ ಕ್ಯಾಸ್ಟ್‌ಗೆ ಕೊಡುತ್ತಿದ್ದೇವೆ, ಬ್ಯಾಕ್‌ವರ್ಡ್ ಕ್ಲಾಸ್‌ಗೆ ಕೊಡುತ್ತಿದ್ದೇವೆ; ಜಡ್ಜ್‌ಮೆಂಟ್ ಪ್ರಕಾರ ಇನ್ನೂ ಐದು ವರ್ಷಗಳವರೆಗೆ ಕಂಟಿನ್ಯೂ ಮಾಡಬೇಕೆಂದು ಇದೆ. ಆದ್ದರಿಂದ ರೂರಲ್ ಏರಿಯಾದವರಿಗೆ ಈ ಜಡ್ಜ್‌ಮೆಂಟ್‌ನಿಂದ ಖಂಡಿತವಾಗಿ ಅನ್ಯಾಯವಾಗುವುದಿಲ್ಲ. ಏಕೆಂದರೆ 15 ಪರ್ಸೆಂಟ್ ನಾವು ಕೊಡಲೇಬೇಕಾಗುತ್ತದೆ.

ಡಾ: ಜೀವರಾಜ ಆಳ್ವ:- ಸಮಾಜದ ಅತ್ಯಂತ ದೀನದಲಿತರಿಗೆ, ಕೆಳವರ್ಗದವರಿಗೆ, ಬ್ಯಾಕ್‌ವರ್ಡ್

ಕ್ಲಾಸ್‌ಗೆ ಶೆಡ್ಯೂಲ್ಡ್ ಕ್ಯಾಸ್ಟ್‌ಗೆ ಮತ್ತು ಗ್ರಾಮಾಂತರ ಪ್ರದೇಶದ ಯುವಕರಿಗೆ ಈ ಸೌಲಭ್ಯ ಸಿಗಬೇಕು. ಶ್ರೀ ವೈ.ಕೆ. ರಾಮಯ್ಯನವರು, ನಮ್ಮ ನಾಯಕರು ಮತ್ತು ಶ್ರೀ ಬೈರೇಗೌಡರು ಗ್ರಾಮಾಂತರ ಪ್ರದೇಶದ ಜನರಿಗೆ ಏನು ಮಾಡುತ್ತೀರಿ ಎಂದು ಕೇಳಿದರು. ಮಾನ್ಯ ಯಾಹ್ಯಾ ಸಾಹೇಬರು ಈಗ ಹೇಳಿದ್ದರಿಂದ ಅದನ್ನು ನಾನು ಒಪ್ಪುತ್ತೇನೆ. ರೂಲ್ಸ್‌ನ್ನು ಸಭೆಯ ಮುಂದೆ ಇಟ್ಟಿದ್ದೇವೆಂದು ಹೇಳಿದ್ದಾರೆ. ಅದನ್ನು ಚರ್ಚೆ ಮಾಡೋಣ. ಏಕೆಂದರೆ ಅದರಲ್ಲಿ ನ್ಯೂನತೆ ಇದ್ದರೆ I would go a step forward ಗ್ರಾಮಾಂತರ ಪ್ರದೇಶದ ಜನರಿಗೆ ಶೇಕಡ 25ರಷ್ಟು ಗ್ರೇಸ್ ಎಂದು ಏನು ಹೇಳುತ್ತೇವೆ ಅದನ್ನು ಕೊಡಿ. ಆದರೆ ಬ್ಯಾಕ್‌ವರ್ಡ್ ಕ್ಲಾಸ್ ಸಂಸ್ಥೆ ಮಾಡಿ, ಶೆಡ್ಯೂಲ್ಡ್ ಕ್ಯಾಸ್ಟ್ ಸಂಸ್ಥೆ ಎಂದು ಮಾಡಿ ಯಾರೂ ಅಲ್ಲಿ ಇಲ್ಲ. ಒಕ್ಕಲಿಗರ ಸಂಸ್ಥೆ ಎಂದು ಮಾಡುತ್ತೀರಿ. ಒಕ್ಕಲಿಗ ಸಮಾಜಕ್ಕೆ ಸೇರಿದವರಾಗಿ ಅಲ್ಲಿ ಒಕ್ಕಲಿಗ ಸಮಾಜದ ಎಷ್ಟು ಜನ ಇದ್ದಾರೆ ಎಂದು ಕೇಳಿದರೆ ಅವರು ಇಲ್ಲ. ನೀವು ಏಕೆ ಮೆಡಿಕಲ್ ಕಾಲೇಜು ತೆಗೆದುಕೊಂಡಿರಿ ? ಅಂಬೇಡ್ಕರ್ ಅವರ ಹೆಸರನ್ನು ಹೇಳಿ ಏಕೆ ತೆಗೆದುಕೊಂಡಿರಿ ? ದೇವರಾಜು ಅರಸು ಅವರ ಹೆಸರು ಹೇಳಿ ಏಕೆ ಮೆಡಿಕಲ್ ಕಾಲೇಜು ತೆಗೆದುಕೊಂಡಿರಿ ? ಯಾವುದಕ್ಕೂ ಒಂದು ಇತಿಮಿತಿ ಇದೆ. ದುರಾಡಳಿತಕ್ಕೆ ನೀವು ಯಾವುದೇ ದೊಡ್ಡತನ ತೋರಿಸಬಹುದು.

ಆದರೆ ನೀವು ಮಾಡಿದ್ದು ಸರಿಯೇ ? ನಿಮ್ಮ ಕಣ್ಮುಂದೆ ಇದು ನಡೆಯುತ್ತಿದೆ. ನಿಮ್ಮ ಪಾಪದ ಕೂಪ, ದುರ್ವಂಚನೆ ಸಮಾಜದ ಎದುರಿಗಿದೆ. ಇದನ್ನು ಮುಚ್ಚಿಕೊಳ್ಳುವುದಕ್ಕೆ ಆಗುವುದಿಲ್ಲ. ನಮಗೆ ಗೊತ್ತಿದೆ ಎಷ್ಟುಎಷ್ಟು ಕಲಿಸ್ತಿದ್ದೇವೆ, ಏನೇನು ಕಟ್ಟಡಗಳು ಬಂದಿವೆ ಎಂದು. If every asset of this institution, if they are to be investigated, ಇವರೆಲ್ಲರ ಪಾಪದ ಕೂಪಗಳು ಹೊರಗೆ ಬರುತ್ತವೆ. ಯಾಹ್ಯಾ ಸಾಹೇಬರು ಧೈರ್ಯ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ a person with unquestionable integrity, a person who has an idealism in him.

ತಾವು ಧೈರ್ಯ ಮಾಡದೇ ಇದ್ದರೆ ಇವತ್ತು posterity will not pardon. ಏಕೆಂದರೆ I am not trying to say that we have been good. ನಾವು ಇದು ಆಗಬೇಕೆಂದು ಮಾಡಿದವರು. ನಮ್ಮ ಭಾವನೆಗಳು ಹಲವಾರು. ಬ್ಯಾಕ್‌ವರ್ಡ್ ಕ್ಲಾಸ್‌ಗೆ ಆಗಬೇಕು, ಶೆಡ್ಯೂಲ್ಡ್ ಕ್ಯಾಸ್ಟ್‌ಗೆ ಆಗಬೇಕು, ಹಿಂದುಳಿದ ಜನಾಂಗದ ಒಂದು ಪ್ರದೇಶಕ್ಕೆ ಸಹಾಯ ಆಗಬೇಕು ಎನ್ನುವ ಭಾವನೆಯಿಂದ ಮಾಡಿದ ಭಾವನೆಗಳಿಗೆ ತಿಲಾಂಜಲಿ ಕೊಟ್ಟು these institutions have become trading institutions or bartering institutions. ಇವತ್ತು ತಮ್ಮತಮ್ಮ ವೈಯಕ್ತಿಕ ಜೋಬುಗಳಲ್ಲಿ ಕೋಟಿಗಟ್ಟಲೆ ತುಂಬಿಕೊಂಡು ಇಡೀ ರಾಜ್ಯವನ್ನು, ಸಮಾಜವನ್ನು they are taking the whole society to ransom. ಇದನ್ನು ಸರಿಪಡಿಸುವ ಛಲವನ್ನು ಮೆಡಿಕಲ್ ಎಜುಕೇಶನ್ ಮಂತ್ರಿಗಳು, ಹೈಯರ್ ಎಜುಕೇಶನ್ ಮಂತ್ರಿಗಳು ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಇನ್ನೊಂದು very delicate issue. I am committed to a caste–less society.

ಆದರೂ ಕೂಡ ಈ ಜಾತ್ಯಾತೀತ ಸಮಾಜದ ಕಲ್ಪನೆಯ ಅಡಿಯಲ್ಲಿ ರಾಷ್ಟ್ರೀಯತೆ, ರಾಷ್ಟ್ರ ಸಂವಿಧಾನದಲ್ಲಿ a protection to minority institutions ಎಂದು ಇದೆ. ನಾವು, there are times and I sincerely feel ಕೆಲವು ದಿವಸಗಳ ಹಿಂದೆ, ತಿಂಗಳ ಹಿಂದೆ, ಈ secularism protection to minority institutions, have we stretched too far? ಶ್ರೀ ಅಜೀಜ್‌ಸೇಠ್ ಅವರು ಇದ್ದಾರೋ ಇಲ್ಲವೋ ಗೊತ್ತಿಲ್ಲ. ಅವರು ಇದ್ದಿದ್ದರೆ ಚೆನ್ನಾಗಿತ್ತು. ಏಕೆಂದರೆ ಅವರು ಹೇಳುತ್ತಿದ್ದರು, ಮೈನಾರಿಟಿ ಇನ್ಸ್ಟಿಟ್ಯೂಶನ್ಸ್ ಮಾಡುವಂಥ ತಪ್ಪು, ಅನ್ಯಾಯ, ಮೋಸ ಮತ್ತು totally

under the protection of this constitutional protection that they are enjoying, they are literally taking the whole society. ಇವತ್ತು ಯಾವ ಸಂಸ್ಥೆಯನ್ನಾದರೂ ತೆಗೆದುಕೊಳ್ಳಿ; ಅವರ ದುರಂಹಕಾರ ಎಷ್ಟಿದೆ ಎಂದರೆ ಈಗ ಸಾಮಾನ್ಯ ಜನರಿಗೆ, ಶಾಸಕರಿಗೆ ಬೆಲೆ ಇಲ್ಲ. ಜೀವರಾಜ ಆಳ್ವ ಎಂದು ಹೇಳಿ ಯಾವುದಾದರೂ ಅಡ್ಮಿಶನ್‌ಗೆ ಹೋದರೆ ಕೆಲಸ ಆಗುವುದಿಲ್ಲ.

ಕ್ಯಾಥೋಲಿಕ್ ಸಂಸ್ಥೆಗೆ ಶೇಕಡ 50 ಕೊಡಿ, ಮುಸ್ಲಿಮರಿಗೆ ಶೇಕಡ 50 ಕೊಡಿ. ಆದರೆ, ಯಾವುದೇ ಕಹಿ ಭಾವನೆಗಳಿಗೆ ಭಾವುಕತೆಗಳಿಗೆ ಎಡೆಕೊಡಬಾರದು. ಕ್ರೈಸ್ತ ಕಾಲೇಜು ಎಂದು ನಮ್ಮ ಯಾಹ್ಯಾ ಸಾಹೇಬರು ಇಡಬಹುದು. ಸಿರಿಯನ್ ಎಂಬುವರು, ಕೇರಳದಿಂದ ಬಂದು ಕ್ರೈಸ್ತ ಕಾಲೇಜು ಪ್ರಾರಂಭ ಮಾಡಿದ್ದಾರೆ. ಆದರೆ, ಅಲ್ಲಿ ಪ್ರೊಫೆಸರುಗಳು ಕುಳಿತುಕೊಂಡು ಜಾತಿ, ಭಾಷೆಗೆ ಹೊರತಾದ ರಾಜಕೀಯ ಮಾಡಬೇಕು. ಭಾರತೀಯ ಸಮಗ್ರತೆಗೆ ಭಾವುಕತೆ ಕೊಟ್ಟವನು ನಾನು. ಆದರೆ, ಈ ಜನ ಬಂದು, ಈ ಸಂಸ್ಥೆಗಳನ್ನು ಕಟ್ಟಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಶ್ರೀಮಾನ್ ಬಸವಯ್ಯನವರು 4 ಬಾರಿ ಶಾಸಕರಾಗಿ, ಬಿ.ಡಿ.ಎ. ಚೇರ್ಮನ್ ಆಗಿ, ಆ ಕಾಲೇಜಿಗೆ ತಮ್ಮ ಮಗಳಿಗೆ ಸೀಟು ತೆಗೆದುಕೊಳ್ಳುವುದಕ್ಕಾಗಿ ಹೋಗುತ್ತಾರೆ. 4 ಬಾರಿ ಶಾಸಕರಾಗಿ, ಬಿ.ಡಿ.ಎ. ಚೇರ್ಮನ್ ಆಗಿ, ರಾಷ್ಟ್ರಕ್ಕೆ ಸೇವೆ ಸಲ್ಲಿಸಿದಂಥ ಒಬ್ಬ ಶ್ರೇಷ್ಠ ರಾಜಕಾರಣಿ, ವಯೋವೃದ್ಧ ತಮ್ಮ 70 ವರ್ಷ ವಯಸ್ಸಿನಲ್ಲಿ ಆ ಕ್ರೈಸ್ತ ಕಾಲೇಜಿಗೆ ಹೋಗುತ್ತಾರೆ. ಒಂದೇ ಒಂದು ಇಂತಹ ಸ್ಯಾಂಪಲ್ ಕೊಟ್ಟಿರುವುದು. ನೀವೂ ಒಬ್ಬರು ಮೈನಾರಿಟಿ ಸಂಸ್ಥೆಗೆ ಸೇರಿದವರು. If they donot behave, if the Government cannot teach them a lesson, ಅವತ್ತು ಶ್ರೀಮಾನ್ ಬಸವಯ್ಯನವರನ್ನು ಅವಮಾನ ಮಾಡಿ ಕಳುಹಿಸುತ್ತಾರೆ. ಅವರು ಎಫಿಷಿಯಂಟ್ ಆಗಲಿ. ಆದರೆ, ಇವರನ್ನು ಕೂಡಿಸಿ, ಮೆರಿಟ್ ಪ್ರಕಾರ ನಿಮ್ಮ ಮಗಳಿಗೆ ಸೀಟು ಕೊಡಲಿಲ್ಲವೆಂದು ಹೇಳಿದರೆ ಪರವಾಗಿಲ್ಲ. ಆದರೆ, ಈ ಸಂಸ್ಥೆಯಲ್ಲಿ ಬಸವಯ್ಯನವರಿಗೆ ಇಂಟರ್‌ವ್ಯೂ ಸಿಗುವುದಿಲ್ಲ. ಇಂತಹ ನೂರಾರು ಸಂಸ್ಥೆಗಳು ಬೆಂಗಳೂರಿನಲ್ಲಿವೆ, ಕರ್ನಾಟಕಾದ್ಯಂತ ಇವೆ. ಇವತ್ತು ಮೈನಾರಿಟಿ ಸಂಸ್ಥೆ ಹೆಸರಿನಲ್ಲಿ ಬಹಳ ಸುಲಭವಾಗಿ, ಯಾಹ್ಯಾ ಸಾಹೇಬರು ಮತ್ತು ಸಂಬಂಧಪಟ್ಟ ಮಂತ್ರಿಗಳು ಹೇಳುತ್ತಾರೆ. "they come under the protection of the Constitution. We cannot do anything about them. No. They are accountable because they come under the Grant-in-Aid rules.

ಇವತ್ತು ಸಹಸ್ರ, ಸಹಸ್ರ ಕೋಟಿ ರೂಪಾಯಿಗಳನ್ನು ಈ ಸಂಸ್ಥೆಗಳಿಗೆ ಕೊಡುತ್ತೇವೆ. ಕರ್ನಾಟಕದ ಅತ್ಯಂತ ಅಮೂಲ್ಯವಾದ ನೆಲವನ್ನು ಅವರಿಗೆ ಕೊಟ್ಟಿದ್ದೇವೆ. ಕೋಟಿಗಟ್ಟಲೆ ಬೆಲೆ ಬಾಳುವಂಥ ಜಾಗಗಳನ್ನು ಕೊಟ್ಟಿದ್ದರಿಂದ, ಅವರು ಇವತ್ತು ಕೋಟ್ಯಾಂತರ ರೂಪಾಯಿಗಳ ಬಿಸಿನೆಸ್ ಹೌಸ್ ಮಾಡಿದ್ದಾರೆ, ಮಾರ್ಕೆಟಿಂಗ್ ಕಾಂಪ್ಲೆಕ್ಸ್ ಮಾಡಿದ್ದಾರೆ. Are we to be silent spectators? ಇವತ್ತು ಶಾಸಕರಾಗಲೀ, ಮಂತ್ರಿಗಳಾಗಲೀ, let them show the results. ಮೆರಿಟ್‌ನಲ್ಲಿ ಎಷ್ಟು ಜನರಿಗೆ ಕೊಟ್ಟಿದ್ದಾರೆ. ಅವರು ಬೇಕಾಬಿಟ್ಟಿ ಕೊಡಬಹುದು, ವ್ಯವಹಾರ ಮಾಡಿಕೊಳ್ಳಬಹುದು, ಇವತ್ತು, ಈ ವಿದ್ಯಾಸಂಸ್ಥೆಗಳಲ್ಲಿ ಏನು ಪಾವಿತ್ರ್ಯತೆ ಇರಬೇಕು, ಅದು ಇಲ್ಲವಾಗಿದೆ. ಈ ಪಾವಿತ್ರ್ಯತೆಯನ್ನು ಉಳಿಸಿಕೊಳ್ಳುವುದಕ್ಕೆ, ಕೆಲವು ಮೈನಾರಿಟಿ ಸಂಸ್ಥೆಗಳು ಕೆಲಸ ಮಾಡಿರಬಹುದು. There have been institutions which have served for 100 years but the arrogance that they show, they total apathy that they show, ಯಾರಿಗೂ ಇಲ್ಲ. ನಿಮ್ಮ ವಿದ್ಯಾಮಂತ್ರಿಗಳನ್ನು ಸಹ ಅವರು ಕೇರ್ ಮಾಡುವುದಿಲ್ಲ, ಕಮೀಷನರ್ ಆಫ್ ಎಡುಕೇಶನ್ ಅವರನ್ನು ಕೇರ್ ಮಾಡುವುದಿಲ್ಲ. Because, ಅವರು ಕುಳಿತ ಕಡೆ ನಿಮ್ಮ ಗ್ರಾಂಟ್ ಹೋಗುತ್ತದೆ. ಅವರ ಮುಂದೆ ನಿಮ್ಮ ಯಾವ ಟೀಚರ್ಸ್, ಯಾ .ಎ.ಇ.ಓ. ಯಾರೂ ಇಲ್ಲ. They go by their

whims & fancies. ಇವತ್ತು ನೀವು ಪ್ರೈಮರಿ ಮತ್ತು ಸೆಕೆಂಡರಿ ಸ್ಕೂಲ್ಸ್ ಬಗ್ಗೆ, ಕರ್ನಾಟಕದ ಸ್ಕೂಲ್ಸ್ ಬಗ್ಗೆ ಸ್ವಲ್ಪ ಅಕೌಂಟೆಬಿಲಿಟಿ ಕೇಳಿದ್ದೀರಾ ? ಏನಾದರೂ ಮಾಡಿದ್ದಾರಾ, ಏನು ಮಾಡಿದೆ ಎಂದು ಕೇಳಿದ್ದೀರಾ ? ಅವರಿಗೆ ಕಾನೂನು ಇರುತ್ತದೆ; ಅದರ ಪ್ರಕಾರ ಕೋಟಿಗಟ್ಟಲೆ ಹಣ ನಿಮ್ಮ ಖಜಾನೆಯಿಂದ ಅವರಿಗೆ ಹೋಗುತ್ತಲೇ ಇರುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಬೇರೆ ಯಾವುದೋ ಕಾರ್ಯಕ್ರಮಕ್ಕೆ ಹೋಗಬೇಕೆಂದು ಹೇಳಿದರು. ಏಕೆಂದರೆ, ಇವತ್ತು ಯೂತ್ ಸರ್ವೀಸ್ ಡಿಪಾರ್ಟ್‌ಮೆಂಟ್ ಡಿಮ್ಯಾಂಡ್ ಇದೆ. ಆದ್ದರಿಂದ, ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಮತ್ತು ಮುಖ್ಯ ಮಂತ್ರಿಗಳಿಗೆ ಸಲಹೆ ಕೊಡಬೇಕಾಗಿದೆ. ಏನೆಂದರೆ ಅನಿಲ್ ಕುಂಬ್ಳೆಯವರು ನಮ್ಮ ರಾಜ್ಯಕ್ಕೆ ಮತ್ತು ನಮ್ಮ ದೇಶಕ್ಕೆ ಬಹಳ ಒಳ್ಳೆಯ ಹೆಸರನ್ನು ತಂದಿದ್ದಾರೆ. ಅವರ ಬಗ್ಗೆ ನಮಗೆ, ಹೆಮ್ಮೆ ಗೌರವ ಇದೆ. ಇದನ್ನು ತಾವೂ ಸಹ ಹೇಳಿದ್ದೀರಿ. ಆದ್ದರಿಂದ, ಕ್ರೀಡಾಪಟುಗಳಿಗೆ ಪ್ರೋತ್ಸಾಹ ಕೊಡುವಂಥ ಕಾರ್ಯಕ್ರಮ ಸರ್ಕಾರದ ಕಡೆಯಿಂದ ಆಗಬೇಕು. ಹಾಗಾಗಿ, ತಮ್ಮ ಮೇಲೆ ಬಹಳ ಆಗ್ರಹದಿಂದ ಒತ್ತಾಯ ಮಾಡುತ್ತಿದ್ದೇನೆ. ಅವರಿಗೆ ಒಂದು ನಿವೇಶನ ಮತ್ತು 50 ಸಾವಿರ ರೂಪಾಯಿಗಳ ನಗದನ್ನು ಕೊಟ್ಟು ಗೌರವಿಸಬೇಕೆಂದು ತಮ್ಮಲ್ಲಿ ಒತ್ತಾಯಿಸುತ್ತೇನೆ

ಡಾ. ಜೀವರಾಜ ಆಳ್ವ:– ಭಾರತದ ಕ್ಯಾಪ್ಟನ್ ಅಜರುದ್ದೀನ್ ನಮ್ಮ ಮನೆಗೆ ಬಂದಿದ್ದರು. ಜೊತೆಗೆ ನಿಮ್ಮ ಮನೆಗೂ ಅವರು ಬಂದಿದ್ದಾರೆ. ಅವರಿಗೆ ಹೈದರಾಬಾದ್‌ನಲ್ಲಿ ಅತ್ಯಂತ ಪ್ರೀತಿಯ ವಾತಾವರಣದಲ್ಲಿ ಮನೆ ಇದೆ. ಅವರ 7 ಬೆಡ್ ರೂಮಿನ ಮನೆಯನ್ನು ಬಿಟ್ಟುಬಿಟ್ಟಿದ್ದಾರೆ. ಏಕೆಂದರೆ, ಅಲ್ಲಿ ಯಾವಾಗಲೂ ಕಲ್ಲು ಬೀಳುತ್ತವೆ, ಗಲಾಟೆಯಾಗುತ್ತದೆ ಎಂದು, ಬೇರೊಂದು ಬಹಳ ಚಿಕ್ಕ ಮನೆಯಲ್ಲಿ ಇಡೀ ಕುಟುಂಬ ಸಮೇತ, ಸಹೋದರರ ಸಮೇತ ಅಲ್ಲಿದ್ದಾರೆ. ಶ್ರೀ ಅಜರುದ್ದೀನ್‌ರವರು ಬೆಂಗಳೂರಿಗೆ ಬರತಕ್ಕ ಅಪೇಕ್ಷೆಯನ್ನು ತೋರಿಸಿದ್ದಾರೆ. ಆದ್ದರಿಂದ ಅನಿಲ್ ಕುಂಬ್ಳೆಯವರ ಜೊತೆ, ಅಜರುದ್ದೀನ್‌ರವರಿಗೂ ನಿವೇಶನ ಕೊಟ್ಟರೆ ಒಳ್ಳೆಯದೆಂದು ನನ್ನ ಭಾವನೆ.

ಶ್ರೀ ಎಂ. ವೀರಪ್ಪಮೊಯ್ಲಿ (ಮಾನ್ಯ ಮುಖ್ಯ ಮಂತ್ರಿಗಳು):– ಮಾನ್ಯ ಉಪಾಧ್ಯಕ್ಷರೇ, ಈಗ ಅನಿಲ್ ಕುಂಬ್ಳೆಯವರು ಕರ್ನಾಟಕದವರು. ಏಕೆಂದರೆ, ಕ್ರೀಡಾಪಟುಗಳಿಗೆ ಒಳ್ಳೆಯ ಉತ್ತೇಜನ ಕೊಡಬೇಕೆಂಬುದು ನಮ್ಮ ನೀತಿಯಾಗಿದೆ. ಇದರ ಬಗ್ಗೆ ಈಗಾಗಲೇ ಆಲೋಚನೆ ಮಾಡಿಕೊಂಡಿದ್ದೇವೆ. ಒಂದು ಸೈಟನ್ನು ಬಿ.ಡಿ.ಎ.ನಿಂದ ಧರ್ಮಾರ್ಥವಾಗಿ ಕೊಡಬೇಕು ಮತ್ತು 25 ಸಾವಿರ ರೂಪಾಯಿ ನಗದಾಗಿ ಕೊಡಬೇಕೆಂದು ಈಗಾಗಲೆ ಆಲೋಚನೆ ಮಾಡಿದ್ದೇವೆ. ಮತ್ತೆ ಅಜರುದ್ದೀನ್‌ರವರು ನನ್ನ ಹತ್ತಿರ ಬಂದಿದ್ದರು; ಈ ಬಗ್ಗೆ ವಿಚಾರಿಸಿದ್ದಾರೆ. ಅದು ಪರಿಶೀಲನೆಯಲ್ಲಿದೆ. ಇದರ ಬಗ್ಗೆ ಸಹ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಡಾ. ಜೀವರಾಜ ಆಳ್ವ:– ಇಷ್ಟು ವಿಚಾರಗಳನ್ನು ತಿಳಿಸಿ, ಇನ್ನು ನಾನು ಮಂತ್ರಿಯಾಗಿ ನಡೆಸಿಕೊಂಡು ಬಂದಂತಹ ಕೆಲವಾರು ವರ್ಷಗಳು ಅಂದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವಜನ ಇಲಾಖೆಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಏಕೆಂದರೆ ಹಿರಿಯರಾದ ವಾಟಾಳ್ ನಾಗರಾಜ್‌ರವರು ಇದರ ಬಗ್ಗೆ ದೀರ್ಘವಾಗಿ ಪ್ರಸ್ತಾಪ ಮಾಡಲಿದ್ದಾರೆ. ಆದರೆ ನನಗೆ ಏನು ನೋವು ಎಂದು ಹೇಳಿದರೆ, ಕಂಡು ಕೇಳಿದಂತಹ ಇಲಾಖೆಗೆ ಅತ್ಯಂತ ವಿಶ್ವಾಸದಿಂದ ಒಂದು ಚಾಲನೆಕೊಟ್ಟೆ. ನಾನು ಯಾವ ಚಾಲನೆಯನ್ನು ಕೊಟ್ಟೆನೋ ಆ ವೇಗದಲ್ಲಿ ಒಂದು ಆರಂಭ ಕೊಟ್ಟೆ. ಒಂದು ಐತಿಹಾಸಿಕ ಬದಲಾವಣೆಯನ್ನು ಮಾಡಿದ್ದೇನೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ನನ್ನ ನಾಯಕರಾದ ಶ್ರೀ ರಾಮಕೃಷ್ಣ ಹೆಗಡೆಯವರ ಆಶೀರ್ವಾದದಿಂದ ಮತ್ತು ಅವರು ಬಹಳಷ್ಟು ಹಣವನ್ನು ಒದಗಿಸಿಕೊಟ್ಟರು. ಸುಮಾರು 30 ಲಕ್ಷ ಬಜೆಟ್ ಇದ್ದದ್ದು 6 ಕೋಟಿ ರೂಪಾಯಿಗಳಿಗೆ ಹೆಚ್ಚಿಸಿದರು.

ಆದರೆ ಇವತ್ತು ಪೂರ್ಣ ಸ್ಥಗಿತವಾಗಿದೆ. ಈ ಇಲಾಖೆಯಲ್ಲಿ ಮಿತ್ರರಾದ ರಮೇಶ್‌ರವರು ಇದ್ದರು. ಡಾಕ್ಟರ್ ಪ್ರೇಮಚಂದ್ರಸಾಗರ್ ಅವರು ಬಂದ ಮೇಲೆ ಯುವಕರಿದ್ದಾರೆ, ಚೆನ್ನಾಗಿ ಕೆಲಸ ಮಾಡುತ್ತಾರೆ ಅಂದುಕೊಂಡೆ. ಈಗ ವಿಶ್ವನಾಥ್‌ರವರು ಈ ಇಲಾಖೆಯ ಜವಾಬ್ದಾರಿಯನ್ನು ಹೊತ್ತು ಕೊಂಡಿದ್ದಾರೆ. ಅವರು ಹೊಸದಾಗಿ ಯುವಜನ ಸೇವೆ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಬಗ್ಗೆ ಹೆಚ್ಚಿನ ಕಳಕಳಿ ತೋರಿಸಿ ಒಂದು ಹೊಸ ಚಾಲನೆ ಕೊಡುವ ತೀರ್ಮಾನ ಮಾಡಿದ್ದಾರೆಂದು ಬಯಸುತ್ತೇನೆ. ಆದರೆ ಈ ಇಲಾಖೆಯನ್ನು ನೋಡಿದಾಗ, ಈ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಗ್ಗೆ ವಾಟಾಳ್ ನಾಗರಾಜ್‌ರವರೇ, ತಾವು ಸ್ವಲ್ಪ ಗಮನ ಕೊಡಬೇಕು. ಯಾವ ಇಲಾಖೆ ಸಂಸ್ಕೃತಿ ಮತ್ತು ಸಾಹಿತ್ಯದ ಬಗ್ಗೆ ಕೆಲಸ ಮಾಡಬೇಕು, ಏನು ಪ್ರಕಟಣೆ ಮಾಡಬೇಕು...

ಶ್ರೀ ಆರ್. ದಯಾನಂದರಾವ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಕುಂಬ್ಳೆಯವರಿಗೆ ಸೈಟ್ ಕೊಡುವುದಾಗಿ ಹೇಳಿದರು. ಆದರೆ ಜಾವಗಲ್ ಶ್ರೀನಾಥ್‌ರವರೂ ಕೂಡ ಕ್ರೀಡಾಪಟುಗಳು, ಅವರು ಕರ್ನಾಟಕದವರು. ಅವರನ್ನು ಕೈ ಬಿಟ್ಟಿದ್ದೀರಲ್ಲ.

ಡಾ. ಜೀವರಾಜ ಆಳ್ವ:– ಎಲ್ಲರಿಗೂ ಕೊಡಿ.

ಉಪಾಧ್ಯಕ್ಷರು:– ಮುಖ್ಯ ಮಂತ್ರಿಗಳು ಹೋದ ಮೇಲೆ ಹೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:– ನಿವೇಶನವೇ ಇಲ್ಲ. ಏನು ಕೊಡುತ್ತೀರಿ.

ಉಪಾಧ್ಯಕ್ಷರು:– ತಮ್ಮ ಬೇಡಿಕೆಯನ್ನು ಮುಖ್ಯ ಮಂತ್ರಿಗಳು ಬಂದ ಮೇಲೆ ಇಡಿ.

ಶ್ರೀ ವಾಟಾಳ್ ನಾಗರಾಜ್:– ಖಜಾನೆಯಲ್ಲಿ ದುಡ್ಡು ಇಲ್ಲ, ಹೊರಗಡೆ ನಿವೇಶನ ಇಲ್ಲ. ಬಂಡವಾಳ ಇಲ್ಲದೆ ಬಡಾಯಿ ಏಕೆ ಕೊಚ್ಚಿಕೊಳ್ಳುತ್ತೀರಿ.

ಶ್ರೀ ಎಂ. ಮುನಿಸ್ವಾಮಿ:– ಮಾನ್ಯ ಅಧ್ಯಕ್ಷರೇ, ಶಂಕರಮೂರ್ತಿ ಎನ್ನುವವರು ಇಂಡಿಯನ್ ಹಾಕಿ ಆಟಗಾರರು. ಅವರು ಗೋಲ್ಡ್ ಮೆಡಲಿಸ್ಟ್. ಅವರು 3 ಸಾರಿ ವರ್ಲ್ಡ್ ಕಪ್ ತಂದಿದ್ದಾರೆ. ಅವರು ತೀರಿಕೊಂಟ ಮೇಲೆ ಅವರ ಕುಟುಂಬ ಈಗ ಬೀದಿಪಾಲಾಗಿದೆ. ಆದ್ದರಿಂದ ಅವರಿಗೂ ಒಂದು ಸೈಟ್ ಕೊಡಿ.

ಉಪಾಧ್ಯಕ್ಷರು:– ತಮ್ಮ ಬೇಡಿಕೆಯನ್ನು ಮುಖ್ಯ ಮಂತ್ರಿಗಳ ಹತ್ತಿರ ಇಡಿ. ಆಳ್ವರವರೇ ತಾವು ಮುಂದುವರಿಸಿ.

ಡಾ. ಜೀವರಾಜ್ ಆಳ್ವ:– ಮಾನ್ಯ ಅಧ್ಯಕ್ಷರೇ, ಈ ಇಲಾಖೆಗೆ ಒಳ್ಳೆಯ ಮಂತ್ರಿಗಳು ಒಳ್ಳೆಯ ಕಾರ್ಯದರ್ಶಿಗಳು ಇದ್ದಾರೆ, ಒಳ್ಳೆಯ ಅಧಿಕಾರಿ ವರ್ಗದವರು ಇದ್ದಾರೆ. ಆದರೆ ಏನಾಗಿದೆ ಎಂದರೆ I am simply amazed. ಈ ಪುಸ್ತಕಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡತಕ್ಕಂಥಾದ್ದು. ಇಲಾಖಾ ಕೈಪಿಡಿ, ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಲಿ ಪುಸ್ತಕ, ಈಗ ಪರಿಷ್ಕರಣೆ ಆಗುತ್ತಿದೆ. ಇದು ಅರಣ್ಯ ಇಲಾಖೆ ಪಾರಿತೋಷಕ. ಇದಕ್ಕೆ ಹಣ ಈ ಇಲಾಖೆಯಿಂದ ಖರ್ಚಾಗಿದೆ. ಈ ಇಲಾಖೆಗೆ ಕೊಡುವ ಹಣ ಕಡಿಮೆ. ಇದನ್ನು ಇವತ್ತೇ ಸ್ಥಗಿತಗೊಳಿಸಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬೇರೆ ಇಲಾಖೆ ಕೆಲಸಕ್ಕೆ ಒಂದು ನಯಾಪೈಸೆ ಹಣ ಕೊಡಬೇಡಿ. ಇವರ ಹತ್ತಿರ ಕೋಟ್ಯಾಂತರ ರೂಪಾಯಿ ಹಣ ಇದೆ. ಲೋಕೋಪಯೋಗಿ ಇಲಾಖೆಯಲ್ಲಿ ಹಣ ಇದೆ. ಅಲ್ಲಿ ರೋಡ್ ಮಾಡಲಿಕ್ಕೆ ದಳ್ಳಾಳಿ ಮಿಡ್ಲ್‌ಮ್ಯಾನ್‌ಗಳಿಗೆ ಕೊಡಲಿಕ್ಕೆ ಹಣ ಇದೆ. ನಿಮ್ಮಲ್ಲಿ ಇರುವ ಅಲ್ಪಸ್ವಲ್ಪ ಹಣ ಅಂದರೆ 6 ಕೋಟಿ ರೂಪಾಯಿಗಳಲ್ಲಿ 50 ಲಕ್ಷ ರೂಪಾಯಿಗಳನ್ನು ಕನ್ನಡ ಪುಸ್ತಕಗಳಿಗೇ ಕೊಡುತ್ತೀರಿ. ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ ಪಾರಿಭಾಷಿಕ ಪದಕೋಶ ಏನು ಸ್ವಾಮಿ

ಇದು. ಯಾವ ಪರಿಸ್ಥಿತಿಗೆ ಬಂತು. ಕನ್ನಡ ಕನ್ನಡ ಎಂದು ವಾಟಾಳ್‌ರವರು ಮಾತನಾಡುತ್ತಾರೆ. ಇಡೀ ಸರ್ವಾಂಗೀಣ ಕನ್ನಡದ ವಾತಾವರಣ ನಿರ್ಮಾಣ ಮಾಡುತ್ತೇವೆಂದು ನಾವು ಛಲ ತೆಗೆದುಕೊಳ್ಳುತ್ತೇವೆ. ಕನ್ನಡಕ್ಕೆ ಖರ್ಚು ಮಾಡುವ ಹಣದಲ್ಲಿ ಮುಖ್ಯಪಾಲು. ಈ ಕೆಲಸಕ್ಕೆ ಹೋಗಿದೆ.

ಇದು ಸ್ಕೂಲ್ ಮಕ್ಕಳಿಗೆ ಕೊಡುವಂಥ ರಿಪೋರ್ಟ್. ಪ್ರೈಮರಿ ಸ್ಕೂಲ್ ರಿಪೋರ್ಟ್. ಇದು ಶಾಸಕಾಂಗಕ್ಕೆ ಕೊಡುವಂಥ ರಿಪೋರ್ಟಾ ಇದು ? ನಾನು ದುರಹಂಕಾರದಿಂದ ಈ ಮಾತನ್ನು ಹೇಳುತ್ತಿಲ್ಲ. ಯವನಿಕ ಯಾವಾಗ ಕಟ್ಟಿದ್ದು ಯವನಿಕ ಬಂದು 7 ವರ್ಷ ಆಯಿತು. ಗುರುನಾನಕ್ ಭವನ ಬಂದು 6 ವರ್ಷವಾಯಿತು. ಅದರ ಬಗ್ಗೆ ಇಲ್ಲಿ ಏಕೆ ಸೂಚನೆ ಕೊಡಬೇಕು ? ಪೇಜ್ ತುಂಬಿಸಲಿಕ್ಕಾ ? ಇಡೀ ಕರ್ನಾಟಕ ರಾಜ್ಯದಲ್ಲಿ ಕನ್ನಡ ಬೆಳವಣಿಗೆ ಬಗ್ಗೆ ಏನು ಹೊಸ ಯೋಜನೆಗಳನ್ನು ತೆಗೆದುಕೊಂಡಿದ್ದೀರಿ ? ನಾವು ಇಷ್ಟು ಖರ್ಚು ಮಾಡಿದ್ದೇವೆ, ನಾವು ಇಷ್ಟು ಮಾಸಾಶನ ಕೊಟ್ಟಿದ್ದೇವೆ, the whole concept is beyond my perception.

ಇದನ್ನು ಅರ್ಥ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ತಾವು ಇದಕ್ಕೆ ಹೊಸ ಚುರುಕು, ವೇಗ ಕೊಡುತ್ತೇನೆಂದು ಒಂದು ಕಡೆ ಹೇಳಿದ್ದೀರಿ. ತಾವು ಉತ್ಸಾಹದಿಂದ ಕೆಲವು ಮಾತುಗಳನ್ನು ಆಡಿದ್ದೀರಿ. ತಾವು ಅನ್ಯಥಾ ಭಾವಿಸಬಾರದು. ಮಾಸಾಶನ ಮತ್ತು ಗೌರವಧನದ ಬಗ್ಗೆ ಪರಿಷ್ಕರಣ ಮಾಡುತ್ತೇವೆ ಎಂಬ ಮಾತನ್ನು ಹೇಳಿದ್ದೀರಿ. ನಾವು ಧಾರಾಳತನದಿಂದ ಸಾವಿರಾರು ಜನರಿಗೆ ಮಾಸಾಶನ, ಗೌರವಧನ ಕೊಟ್ಟಿದ್ದೆವು. ಹಿಂದಿನ ಸರ್ಕಾರ ಕೊನೆ ನಿಮಿಷದವರೆಗೂ 167 ಜನಕ್ಕೆ ಸ್ಟೇಟ್ ಅವಾರ್ಡ್ ಕೊಟ್ಟಿತು. ಆದರೆ ಕರ್ನಾಟಕದಲ್ಲಿರತಕ್ಕಂಥ ಬಡ, ಅತ್ಯಂತ ನಿಕೃಷ್ಟ ಬಡತನದಲ್ಲಿರತಕ್ಕಂಥ ಒಬ್ಬ ಕಲಾವಿದನಿಗೆ ನಿಮ್ಮ ಸರ್ಕಾರದ ಒಂದು ಮಾಸಾಶನ ಸಹ ಕೊಡಲಿಲ್ಲ; ಒಂದು ಗೌರವಧನ ಕೊಡಲಿಲ್ಲ. ನೀವು ಏನು ಕಾರ್ಯಕ್ರಮ ಮಾಡುತ್ತೀರಾ ? ಕಾರ್ಯಕ್ರಮ ಮಾಡುವುದು ಪ್ರಶಸ್ತಿ ಸಮಾರಂಭಗಳು. ಕರ್ನಾಟಕ ರತ್ನ ಅಂಥ ಮಾಡುವುದು, ಕಾಳಿದಾಸ ಅಂಥ ಮಾಡುವುದು ಈ ಪ್ರಶಸ್ತಿ ಸಮಾರಂಭಗಳಿಗೆ 1 ಲಕ್ಷ ರೂಪಾಯಿ ಕೊಡುವುದು, ಆ ಪ್ರಶಸ್ತಿ ಸಮಾರಂಭಗಳಿಗೆ ಸಂಬಂಧಪಟ್ಟ ಮಂತ್ರಿ ಮತ್ತು ಮುಖ್ಯ ಮಂತ್ರಿ ಹೋಗಿ ಅದನ್ನು ಇಡೀ ಜನರಿಗೆ ತೋರಿಕೆಗೆ ತೋರಿಸುವುದು. ಏಕೆಂದರೆ, ಬೆಳಿಗ್ಗೆ ಇಡೀ ಪೇಪರ್‌ಗಳಲ್ಲಿ ಬರುತ್ತದೆ, ಕಾಳಿದಾಸ ಅವಾರ್ಡ್ ಫಂಕ್ಷನ್ ಆಯಿತು ಎಂದು ಮುಖ್ಯ ಮಂತ್ರಿಗಳದ್ದು ಫೋಟೋ ಬಂತು.

ಶ್ರೀ ಬಿ.ಎಂ. ಇದಿನಬ್ಬ:– ತಾವು ಹೇಳಿದ್ದನ್ನು ನಾನು ಸಂಪೂರ್ಣ ಒಪ್ಪುತ್ತೇನೆ. ಕಳೆದ ನಾಲ್ಕು ವರ್ಷಗಳಿಂದ ಸೋತಿರತಕ್ಕಂಥ ವೃದ್ಧ ಕಲಾವಿದರಿಗೆ ಮಾಸಾಶನ ಕೊಡಲಿಲ್ಲ. ಇದಕ್ಕಿಂತ ದೊಡ್ಡ ಅನ್ಯಾಯವಿಲ್ಲವೆಂದು ನಿನ್ನೆ ನನ್ನ ಬಾಷಣದಲ್ಲಿ ಹೇಳಿದ್ದೇನೆ. ಮತ್ತೆ ಇಟ್ಟಿರತಕ್ಕಂಥ ಐದೂವರೆ ಕೋಟಿ ಏನೇನೂ ಸಾಲದು. ಕೊನೆ ಪಕ್ಷ ಒಂದು 15 ಕೋಟಿ ರೂಪಾಯಿಗಳವರೆಗಾದರೂ ಇಡಬೇಕು. ಕನ್ನಡ ಮರೆದರೆ ಮಾತ್ರ ಕರ್ನಾಟಕ ಮರೆಯುತ್ತದೆ. ಕನ್ನಡವನ್ನು ಬಿಡಬಾರದೆಂದು ನಾನು ಹೇಳಿದ್ದೇನೆ. ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ.

ಡಾ. ಜೀವರಾಜ ಆಳ್ವ:– ಸಭಾಧ್ಯಕ್ಷರೇ, ಇದರ ಬಗ್ಗೆ ಕಮಿಟಿ ಮಾಡಿ ಯಾರಿಗೂ ವಹಿಸಬೇಡಿ. ನಿಮ್ಮ ಮೇಲೆ ಪೂರ್ಣ ವಿಶ್ವಾಸ ಇದೆ. ಕನ್ನಡ ಚಳುವಳಿಯ ಹೋರಾಟದಲ್ಲಿದ್ದಂಥ ಒಬ್ಬ ವ್ಯಕ್ತಿ ಇವತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂತ್ರಿಯಾಗಿದ್ದಾರೆ. ಕರ್ನಾಟಕದ ಕಲಾವಿದರು ಯಾರು ಎಂದು ಒಬ್ಬ ಕಾರಕೂನ ಅಥವಾ ಕೇಸ್ ವರ್ಕರ್ ನಮಗೆ ಹೇಳಬೇಕಾಗಿಲ್ಲ; That gut feeling. ನಿಮ್ಮ ಆತ್ಮವನ್ನು ಕೇಳಿಕೊಳ್ಳಿ. ಒಬ್ಬ ಕಲಾವಿದ ಬರುತ್ತಾನೆ. ಅವನಿಗೆ ಏನು ಕೊಡುತ್ತೀರಿ ?

ಒಬ್ಬ ಡೊಳ್ಳು ಭಾರಿಸಿಕೊಂಡು ಬರುತ್ತಾನೆ, ಒಬ್ಬ ಜಾನಪದ ಕಲಾವಿದ ಬರುತ್ತಾನೆ. ಇವರುಗಳನ್ನು ಒಬ್ಬ ಕಲಾವಿದ ಎಂದು ಹೇಳುವುದಕ್ಕೆ ಡೆಪ್ಯುಟಿ ಸೆಕ್ರೆಟರಿ ಮತ್ತು ಅಂಡರ್ ಸೆಕ್ರೆಟರಿಯನ್ನು ಸೇರಿಸಿ

ಕಮಿಟಿ, ಮಾಡಬೇಕಾ ? ಬೇಕಾಗಿಲ್ಲ. ಕಲಾವಿದನನ್ನು ಗುರುತಿಸುವಂಥ ಶಕ್ತಿ ತಮಗೆ ಇದೆ. ಆ ಅಧಿಕಾರವನ್ನು ತಾವೇ ಇಟ್ಟುಕೊಳ್ಳಿ. ಯಾರಿಗೂ ಕೊಡುವಂಥ ಅಗತ್ಯವಿಲ್ಲ. ಕಮಿಟಿ, ಸ್ಕ್ರೀನಿಂಗ್ ಕಮಿಟಿ, ಇವೆಲ್ಲಾ ಆಗುವಂಥ ಹೋಗುವಂಥ ಕೆಲಸವಲ್ಲ. ನಮಗೆ ನಿಮ್ಮ ಮೇಲೆ ಪೂರ್ಣ ನಂಬಿಕೆ ಇದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಯಾಗಿ ಕಲಾವಿದರಿಗೆ ನೀವು ಮಾಸಾಶನ ಕೊಡಬೇಕು. ಹಿಂದೆ ಒಬ್ಬರು ಕಲಾವಿದರು ಮುಖ್ಯ ಮಂತ್ರಿಗಳಾಗಿದ್ದರು. ಅವರು ಏನು ಮಾಡಿದರು ? ನಾನು ಇದನ್ನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಅತ್ಯಂತ ಬಡ ಕುಟುಂಬದ, ಬಡ ಕಲಾವಿದರ ಜೊತೆ ಸ್ಪಂದಿಸದೇ ಇದ್ದಂಥ ವ್ಯಕ್ತಿ ಮತ್ತು ಆ ಸರ್ಕಾರ, ಎರಡು ವರ್ಷದ ಅಂತರದಲ್ಲಿ ಒಂದೇ ಒಂದು ಮಾಸಾಶನವನ್ನೂ ನೀಡಲಿಲ್ಲ; ಒಂದು ನಿವೇಶನ ನೀಡಲಿಲ್ಲ. ನಾನು ಹೆಮ್ಮೆಯಿಂದ ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯದ ಎಲ್ಲಾ ಕಡೆ ಜನ ಗುರುತಿಸುತ್ತಿದ್ದಾರೆ, ಜನತಾ ಸರ್ಕಾರವನ್ನು ನೆನಸುತ್ತಿದ್ದಾರೆ, ಶ್ರೀ ರಾಮಕೃಷ್ಣ ಹೆಗಡೆಯವರನ್ನು ನೆನಸುತ್ತಿದ್ದಾರೆ. ಅಂಥಾ ಒಳ್ಳೆಯ ಕೆಲಸಗಳನ್ನು ಮಾಡಿದ್ದೇವೆ. ನ್ಯೂನ್ಯತೆಗಳು ಕೆಲವು ಇರಬಹುದು, ಒಬ್ಬ ಜಾಸ್ತಿ ಬಯಸಿರಬಹುದು, ಸರಿಯಾದವನನ್ನು ಗುರುತಿಸದೇ ಇರಬಹುದು; ಈಗ ತಾವು ಇನ್ನೂ 1 ಸಾವಿರ ಜನಕ್ಕೆ ಬೇಕಾದರೆ ಮಾಸಾಶನ ಕೊಡಿ. ನೀವೇ ಎಲ್ಲಾ ಜಿಲ್ಲೆಗಳಿಗೂ ಪ್ರವಾಸ ಹೋಗುತ್ತಿದ್ದೀರಿ. ಏಕೆಂದರೆ ಅಧಿಕಾರಿ ವರ್ತುಲದಲ್ಲಿ ಹೋದರೆ ನಿಮಗೆ ಅವರು ಹಣವನ್ನು ಕೊಡುವುದಿಲ್ಲ. ಅವರ ಲೆಕ್ಕಾಚಾರವೇ ಬೇರೆ. ನಾನು ನಿಮಗೆ ಒಂದು ಮಾತನ್ನು ಮೈಸೂರು ಸ್ಟೇಡಿಯಂ ಬಗ್ಗೆ ಹೇಳುತ್ತೇನೆ; ಮೈಸೂರು ಸ್ಟೇಡಿಯಂ ಮಾಡುವುದಕ್ಕೆ ನಾನು ಯುವಜನ ಸೇವಾ ಖಾತೆ ಸಚಿವನಾಗಿ ಬಹಳ ಹುಮ್ಮಸ್ಸಿನಿಂದ ಹೋದೆ. ಆ ಕ್ರೀಡಾಂಗಣಕ್ಕೆ 38 ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದು ಪೇಪರ್‌ನಲ್ಲಿ ತೋರಿಸಿದ್ದಾರೆ. ಅಲ್ಲಿ ನೋಡಿದರೇ ಏನೂ ಇಲ್ಲ. ಬರೀ ನೆಲ; 37 ಲಕ್ಷ ರೂಪಾಯಿ ಎಲ್ಲಿ ಹೋಯಿತೆಂದು ಕೇಳಿದರೆ ಅದಕ್ಕೆ ಉತ್ತರ ಇಲ್ಲ. ನಾನು ಅದನ್ನು ಕಟುವಾಗಿ ಟೀಕೆ ಮಾಡಿ ಲೋಕಾಯುಕ್ತಕ್ಕೆ ಹಾಕಬೇಕೆಂದು ಹೇಳಿದ ಮೇಲೆ, ಇದಕ್ಕೂ ಮೊದಲು ಪಿ.ಡಬ್ಲ್ಯೂ.ಡಿ. ಇಲಾಖೆ ಈ ಕೆಲಸವನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳಿತು. ಆಗ ಅಲ್ಲಿನ ಅಧಿಕಾರಿ ಮುನಿಸ್ವಾಮಿಯವರ ಹತ್ತಿರ ನಾನು ಬೇಡಿಕೊಂಡೆ, ಅವರು ಅಲ್ಲಿ ಇಲ್ಲಿ ಜನಗಳಿಂದ ಬೇಡಿ 47 ಲಕ್ಷ ರೂಪಾಯಿಗಳನ್ನು ತಂದು ಆ ಕೆಲಸವನ್ನು ಮಾಡಿಸಿದರು. ನಾವು ಯವನಿಕಾ ಬಿಲ್ಡಿಂಗ್‌ನ್ನು ಪೂರ್ತಿ ಮಾಡಬೇಕೆಂದು ತೆಗೆದುಕೊಂಡಾಗ ಅದಕ್ಕೂ ಮೊದಲು 12 ವರ್ಷಗಳಿಂದ ಅದು ಬರೀ ಅಸ್ಥಿಪಂಜರ ಇದ್ದ ಹಾಗೆ ಇತ್ತು. ಗುರುನಾನಕ್ ಭವನ ಸಹ ಅದೇ ರೀತಿ ಇತ್ತು. ಅದಕ್ಕೆ ಅಧಿಕಾರಿಗಳ ಹತ್ತಿರ ಕೇಳಿದರೆ ದುಡ್ಡು ಇಲ್ಲವೆಂದು ಹೇಳುತ್ತಿದ್ದರು.

ಪ್ರತಿ ವರ್ಷ 50 ಸಾವಿರ, 60 ಸಾವಿರ ರೂಪಾಯಿಗಳನ್ನು ಈ ಕಟ್ಟಡದ ಕೆಲಸಕ್ಕೆ ಎಂದು ಉಪಯೋಗಿಸುವುದು; ಇದಕ್ಕೆ ಬಹಳ ಜಗಳ ಆಯಿತು. ಅದಕ್ಕೆ ಪೊಲಿಟಿಕಲ್ ವಿಲ್ ಬೇಕು. ಅಧಿಕಾರಿಗಳ ವರ್ತುಲದಲ್ಲಿ ಹೋದರೆ, ಅವರನ್ನೂ ಬ್ಲೇಮ್ ಮಾಡುವುದಕ್ಕಾಗುವುದಿಲ್ಲ. ಅವರದು ಒಂದು ಸಿಸ್ಟಮ್ ಇದೆ. ಅವರದೇ ಒಂದು ವ್ಯವಸ್ಥೆಯನ್ನು ಅವರು ನಿರ್ಮಾಣ ಮಾಡಿದ್ದಾರೆ. They become captives of their own frame of mind and the style of functioning. ಅದಕ್ಕೆ ಅವಕಾಶ ಕೊಡಬೇಡಿ ವಿಶ್ವನಾಥ್‌ರವರೇ, ನಿಮ್ಮ ಹತ್ತಿರ 6 ಕೋಟಿ ಇದಕ್ಕಾಗಿ ಇದೆ. ನೀವು ಇದಕ್ಕೆ ಏನಾದರೂ ವ್ಯವಸ್ಥೆ ಮಾಡದೇ ಇದ್ದರೆ ಇದೆಲ್ಲಾ ದರೋಡೆಯಾಗುತ್ತದೆ. ಇದು ಚಿಕ್ಕ ಇಲಾಖೆ ಆದರೂ ಇಲ್ಲೂ ಅವ್ಯವಸ್ಥೆ ಇದೆ. ನಾನು ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರನ್ನು ಇಡೀ ಲೋಕ ಮರೆತಿತ್ತು. ನಾನಾಗಲಿ ಮತ್ತು ಸಿಂಧ್ಯಾ ಆಗಲಿ, ನಾವು ಅವರಿಂದ ರಾಜಕೀಯಕ್ಕೆ ಬಂದವರು. ವಿದ್ಯಾನಗರದಲ್ಲಿ ಜಯಪ್ರಕಾಶ್ ನಾರಾಯಣರ ಹೆಸರಿನಲ್ಲಿ ಯುವಕರಿಗೆ ಒಂದು ಕ್ಯಾಂಪ್ ಮಾಡಿದ್ದೆವು. ಅದು ಎರಡನೇ ಮಹಾಯುದ್ಧದ ಕಾಲದಲ್ಲಿ ಇಟಾಲಿಯನ್ ಪ್ರಿಸನರ್ಸ್ ಇದ್ದಂಥ ಜಾಗ. ಅದರ ಹೆಂಚು, ಬಾಗಿಲು, ಕಿಟಕಿ–ದೇವನಹಳ್ಳಿ

ಮಾರ್ಕೆಟ್‌ನಲ್ಲಿ ಮಾರಾಟವಾಗುತ್ತಿತ್ತು. ಅದರ ಬಗ್ಗೆ ಹೆಗಡೆಯವರಿಗೆ ಬಹಳ ಹೇಳಿ ಕಷ್ಟಪಟ್ಟು ಹಣವನ್ನು ಒದಗಿಸಿ ಅದನ್ನು ಒಂದು ಒಳ್ಳೆಯ ಕ್ಯಾಂಪ್ ಸೈಟ್ ಮಾಡಿದೆ. ಅದು ಎಷ್ಟು ಸುಂದರವಾಗಿತ್ತು? ಈಗ ಹೇಗಿದೆ ಎಂದು ತಾವು ಹೋಗಿ ನೋಡಬೇಕಾಗಿದೆ. ಇವತ್ತು ಯೂತ್ ಮೂವ್‌ಮೆಂಟ್ ಆಗಲಿ ಯಾವುದೇ ಆಗಲಿ ಏನು ಆಗುತ್ತಿದೆ? ತಮ್ಮಿಂದ ನಾವು ಬಹಳ ಅಪೇಕ್ಷೆಪಡುತ್ತೇವೆ. ವಿಶ್ವನಾಥ್‌ರವರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರೇಮಚಂದ್ರಸಾಗರ್‌ರವರಿಗೂ, ಮುಖ್ಯ ಮಂತ್ರಿಯವರಿಗೂ ಈ ಇಲಾಖೆಯ ಫೈನಾನ್ಸಿಯಲ್ ಅಲೋಕೇಷನ್ ಬಗ್ಗೆ ಭಿನ್ನಾಭಿಪ್ರಾಯ ಬಂತು ಎಂದು ಕೇಳಿದೆ. ಅದು ಬಂದಿದ್ದರೆ ಅದಕ್ಕಿಂತ ನೋವಿನ ಮಾತಿಲ್ಲ. ಏಕೆಂದರೆ ನಾನಂತೂ ಕರ್ನಾಟಕದ ಯುವಜನತೆ ಮೇಲೆ ಪೂರ್ಣ ನಂಬಿಕೆ ಇಟ್ಟಿರತಕ್ಕಂಥವನು. ಅದಕ್ಕೆ 20 ಕೋಟಿ ಅಲ್ಲ, 50 ಕೋಟಿ ಕೊಟ್ಟರೂ ಸಾಲದು. ಇವತ್ತು ಇಡೀ ರಾಜ್ಯದ ಕನ್ನಡ ಬಗ್ಗೆ ಮಾತನಾಡುತ್ತೇವೆ. ಸಂಸ್ಕೃತಿ ಬಗ್ಗೆ ಮಾತನಾಡುತ್ತೇವೆ, ಮಿನಿಸ್ಟರ್ ಆಫ್ ಸ್ಟೇಟ್ ಆಗಿ ಬಂದಿದ್ದಾರೆ. ಅವರಿಗೆ ಒಂದು ಗೌರವ ಕೊಡಿ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಯವರಿಗೆ ಪೂರ್ಣಮ ಕ್ಯಾಬಿನೆಟ್ ದರ್ಜೆಯ ಮರ್ಯಾದೆ ಕೊಡಬೇಕಾಗುತ್ತದೆ. ಅವರಿಗೆ ಫೈನಾನ್ಷಿಯಲ್ ಅಲೋಕೇಷನ್ ಕೊಡಬೇಕಾಗುತ್ತದೆ. ನಾವು ಮೊದಲು ನಾಯಕರ ಜೊತೆ ಬೇಡಿ ಬೇರೆ ಬೇರೆ ಇಲಾಖೆಗಳಿಂದ ಹಣ ತರುತ್ತಿದ್ದೆವು. ನಾವು ಐತಿಹಾಸಿಕ ಬದಲಾವಣೆಗಳನ್ನು ತಂದಿದ್ದೇವೆಂದು ಹೇಳಲಿಕ್ಕಾಗುವುದಿಲ್ಲ. ಎಲ್ಲಾ ಕ್ರೀಡಾಂಗಣಗಳ ಕೆಲಸ ಮುಗಿಸಿದ್ದೇವೆಂದು ಹೇಳಲಿಕ್ಕೆ ಸಾಧ್ಯವಿಲ್ಲ. ಯಾವುದೇ ಮೂವ್‌ಮೆಂಟ್ ಇಲ್ಲದೇ ಇದ್ದಂಥ ಈ ಯುವಜನ ಇಲಾಖೆಯಲ್ಲಿ ಮೂವ್‌ಮೆಂಟ್ ಕೊಡಲಿಕ್ಕೆ ನಾನು ಅತ್ಯಂತ ಪ್ರಾಮಾಣಿಕತೆಯಿಂದ ಕೆಲಸ ಮಾಡಿದ್ದೆ. ಆ ಚಾಲನೆಗೆ ಹೆಚ್ಚು ಶಕ್ತಿ ಕೊಡುವಂಥ ಒಂದು ಸ್ಫೂರ್ತಿಯನ್ನು ಕಂಡುಕೊಳ್ಳಲಿ ಎಂದು ವಿಶ್ವನಾಥ್‌ರವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಗ್ಗೆ ಮೊನ್ನೆ ದಿವಸ ಮಾತನಾಡುತ್ತಾ, ನಾನು ಒಂದು ಮಾತನ್ನು ಹೇಳಿದೆ. ತಮ್ಮ ಬಗ್ಗೆ ನಾನು ಡೂಪ್ಲಿಕೇಟಿಂಗ್ ಆಫೀಸ್ ಎಂದು ಹೇಳುತ್ತಿಲ್ಲ. ಆದರೆ ಕನ್ನಡದ ಬಗ್ಗೆ, ಸಂಸ್ಕೃತಿ ಬಗ್ಗೆ, ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿ ಬಗ್ಗೆ ಅತ್ಯಂತ ಕಳವಳ ಮತ್ತು ನಿಷ್ಠೆ, ಛಲ ತೆಗೆದುಕೊಂಡಿರತಕ್ಕಂಥ ವ್ಯಕ್ತಿ ಇದ್ದರೆ ಅವರೇ ಶ್ರೀ ವಾಟಾಳ್ ನಾಗರಾಜ್. ಅವರು ಗಡಿ ನಾಡು ಬಗ್ಗೆ, ಹೊರ ನಾಡು ಕನ್ನಡಗರ ಬಗ್ಗೆ ಇದರ ಆಯಾಮಗಳು ಹಲವಾರು. ಬಹಳ ದೊಡ್ಡ ಡೈಮೆನ್‌ಷನ್ ಇದು. ಇದರ ಬಗ್ಗೆ ಏನೋ ಭಾಷಣಗಳಾಗುತ್ತವೆ, ಮಾತನಾಡುತ್ತೇವೆ; ಇಷ್ಟಾದರೆ ಸಾಲದು; ಇದರ ಬಗ್ಗೆ ಪೂರ್ಣವಾಗಿ ಚರ್ಚೆ ಮಾಡಬೇಕು. ಇಲ್ಲಿ ಹಿರಿಯ ಸದಸ್ಯರಾದ ಹುಚ್ಚಮಾಸ್ತಿ ಗೌಡರು ಇದ್ದಾರೆ. ಯಾಹ್ಯಾ ಸಾಹೇಬರು ಇದ್ದಾರೆ, ಇದರ ಬಗ್ಗೆ ಮುಖ್ಯ ಮಂತ್ರಿಗಳ ಹತ್ತಿರ ಸಚಿವ ಸಂಪುಟ ಸಭೆಯಲ್ಲಿ ಮಾತನಾಡಿ, ಇದರ ಬಗ್ಗೆ ಒಂದು ಸಮಿತಿ ನೇಮಕವಾಗಬೇಕು. ಏಕ ಸದಸ್ಯ ಸಮಿತಿಯಾದರೂ ಪರವಾಗಿಲ್ಲ. ಏಕೆಂದರೆ ಅವರಿಗೆ ಇದರ ಆಳ ಗೊತ್ತಿದೆ.

1.15 ಪಿ.ಎಂ.

ಕನ್ನಡದ ಬಗ್ಗೆ ಕನ್ನಡ ಸಂಸ್ಕೃತಿಯ ಬಗ್ಗೆ ಕನ್ನಡದ ವಾತಾವರಣದ ಬಗ್ಗೆ ಪೂರ್ಣವಾಗಿ ಮಾಹಿತಿ ಇರತಕ್ಕ ವ್ಯಕ್ತಿ ಎಂದರೆ ಮಾನ್ಯ ವಾಟಾಳ್ ನಾಗರಾಜ್‌ರವರು. ನಾನು ಸದನದ ಸಮಿತಿ ಕೇಳುತ್ತಿಲ್ಲ. ನೀವು ಸ್ಟೇಟ್‌ವೈಸ್ ಕಮಿಟಿ ಎಂದು ಮಾಡಿ. ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಇದಕ್ಕೆ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕು. ಏಕೆಂದರೆ ಕನ್ನಡ ಕಾವಲು ಸಮಿತಿ, ಕನ್ನಡ ಗಡಿ ಸಮಿತಿ ಎಂದು ನಾನು ಹೇಳುತ್ತಿಲ್ಲ. ಈ ವಿಧಾನಸಭೆಯಲ್ಲಿ ನಮ್ಮಲ್ಲಿ ಅತ್ಯಂತ ವಿಶ್ವಾಸ ಪೂರ್ವಕವಾಗಿ ಧೈರ್ಯವಾಗಿ ಕನ್ನಡದ ಸಂಸ್ಕೃತಿಯ ಬಗ್ಗೆ ಮಾತನಾಡುವಂತಹ ಯಾರಾದರೂ ಒಬ್ಬ ವ್ಯಕ್ತಿ ಇದ್ದರೆ ಅವರು ಮಾನ್ಯ

ವಾಟಾಳ್ ನಾಗರಾಜ್‌ರವರು. ಅವರನ್ನು ಅಧ್ಯಕ್ಷರನ್ನಾಗಿ ನೇಮಕಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ಒಂದೇ ಒಂದು ಮಾತನ್ನು ಹೇಳುತ್ತಿದ್ದೇನೆ. ನಾನು ಮಾನ್ಯ ಅಜೀಜ್ ಸೇಠ್‌ರವರ ಭಾಷಣದ ವೈಖರಿಯ ಬಗ್ಗೆ ಹೇಳುತ್ತೇನೆ. ಈಗಲೇ ಮಾನ್ಯ ವಿಶ್ವನಾಥ್‌ರವರನ್ನು ಕೋರ್ಟಿಗೆ ಎಳೆಯುತ್ತೇವೆಂದು ಹೇಳಿದ್ದಾರೆ. ನನ್ನನ್ನು ಎಳೆಯಲಿ ಎಂದು ನಾನೂ ಅದಕ್ಕೆ ಸೇರುತ್ತಿದ್ದೇನೆ. ಅದು ಏನು ಅಂದರೆ ರಾಜ್ಯದ ದುರಾದೃಷ್ಟ. ನಾನು ಅಲ್ಪಸಂಖ್ಯಾತರ ಸಂಸ್ಥೆಗಳು ಇವತ್ತು ಮುಸ್ಲಿಂ ಬಾಂಧವರ ಹತ್ತಿರ ಆಗಲಿ, ಕ್ರಿಶ್ಚಿಯನ್ ಮೈನಾರಿಟೀಸ್ ಆಗಲಿ ಇವತ್ತು ಅತ್ಯಂತ ಉದ್ದೇಶ ಪೂರ್ವಕವಾಗಿ ಅತ್ಯಂತ ಕಟುವಾಗಿ ಟೀಕೆ ಮಾಡಿದ್ದು when I provoked them, the saner sentiments will prevails, ನಾಲ್ಕು ಶತಮಾನಗಳಿಂದ, ನಾಲ್ಕು ವಂಶಪರ್ಯಂತ ಈ ರಾಜ್ಯದಲ್ಲಿದ್ದು ನನಗೆ ಕನ್ನಡ ಟೀಚರ್ ಕೊಟ್ಟಿಲ್ಲ, ಕನ್ನಡ ಬರುವುದಿಲ್ಲ ಎಂದು ಹೇಳಿದರೆ ಹೇಗೆ ? ಹಾಗಿದ್ದರೆ ಮಾನ್ಯ ಯಾಹ್ಯಾ ಸಾಹೇಬರು ಏತಕ್ಕೆ ಅಷ್ಟು ಶುದ್ಧವಾಗಿ ಕನ್ನಡವನ್ನು ಮಾತನಾಡುತ್ತಾರೆ. ಏಕೆಂದರೆ ಇಂತಹ ಅಜೀಜ್ ಸೇಠ್‌ಗಳು ಇರುವುದರಿಂದ ಕನ್ನಡದ ಮುಸಲ್ಮಾನರು, ಕರ್ನಾಟಕದ ಮುಸಲ್ಮಾನರು ಕರ್ನಾಟಕದ ಕ್ರಿಶ್ಚಿಯನ್ನರು ಯಾವ ನಾಚಿಕೆಯ ಪರಿಸ್ಥಿತಿಗೆ ಬಂದಿದ್ದಾರೆ ಅಂದರೆ ಅದನ್ನು ಹೇಳುವುದಕ್ಕಾಗುವುದಿಲ್ಲ. ನನ್ನದು ತುಳು ಮಾತೃ ಭಾಷೆ. ಮದ್ರಾಸಿಗೆ ಹೋದರೆ 24 ಗಂಟೆಯಲ್ಲಿ ಅವರು ತಮಿಳು ಮಾತನಾಡುತ್ತಾರೆ. ಇವತ್ತು ಅವರ ನಾಲ್ಕು ವಂಶಸ್ಥರು ಇಲ್ಲಿದ್ದಾರೆ. ಈ ನೆಲ ನಾಡು, ನುಡಿ, ಜಲದಿಂದ ರಾಜಕೀಯವಾಗಿ ನೀವು ಮುಂದೆ ಬಂದಿದ್ದೀರಿ. ಇವತ್ತು ಮಾನ್ಯ ಅಜೀಜ್ ಸೇಠ್‌ರವರು ನಾನು ಕನ್ನಡ ಮಾತನಾಡಬೇಕಾಗಿಲ್ಲ ಎಂದು ಹೇಳುತ್ತಾರೆ; ನಮಗೆ ಕನ್ನಡ ಟೀಚರ್ಸ್ ಕೊಟ್ಟಿಲ್ಲ ಎಂದು ಹೇಳುತ್ತಾರೆ. ನಿಮಗೆ ತಮಿಳುನಾಡಿನಲ್ಲಿ ತಮಿಳು ಟೀಚರ್ಸ್‌ಅನ್ನು ಕೊಡುತ್ತಾರೆಯೋ ? ನೀವು 24 ಗಂಟೆಯಲ್ಲಿ ತಮಿಳು ಮಾತನಾಡಲಿಕ್ಕೆ. ಇವತ್ತು ವಿಧಾನ ಸಭೆಯ ಮೂಲಕ ಬೆಂಗಳೂರಿನ ಸಮಸ್ತ ಕನ್ನಡಿಗರನ್ನು, ಕರ್ನಾಟಕದ ಸಮಸ್ತ ಕನ್ನಡೇತರರನ್ನು ವಿಶ್ವಾಸಪೂರ್ವಕವಾಗಿ ಕಾಣಬೇಕಾಗಿದೆ.

ಹಿಂದೆ ನಾನು ಮೂರು ಸಾರಿ ಜಯಮಹಲ್ ಕ್ಷೇತ್ರದಲ್ಲಿ ಗೆದ್ದವನು. ಅಲ್ಲಿ ಮುಸಲ್ಮಾನರು, ಉರ್ದು ಮಾತನಾಡುವವರು, ತಮಿಳು ಮಾತನಾಡುವವರು ಹೆಚ್ಚಾಗಿದ್ದಾರೆ. ಆದರೆ ಇವತ್ತು ಬಹಳ ಚೆನ್ನಾಗಿ ಮಾನ್ಯ ಯಾಹ್ಯಾ ಸಾಹೇಬರು ಕನ್ನಡ ಮಾತನಾಡುತ್ತಾರೆ. ಐ.ಟಿ.ವೈ. ಸೆಕ್ರೆಟರಿ ಚಿರಂಜೀವಿ ಸಿಂಗ್ ಅವರ ಹತ್ತಿರ ಕನ್ನಡ ಮಾತನಾಡಲಿಕ್ಕೆ ಸಂತೋಷವಾಗುತ್ತದೆ. ಯಾರು ಯಾರೋ ಇಲ್ಲಿಗೆ ಬಂದು ಕನ್ನಡ ಮಾತನಾಡಬಹುದು, ಇವತ್ತು ಇಲ್ಲಿ ಹುಟ್ಟಿಬೆಳೆದು ವಂಶಪರಂಪರಾಗತವಾಗಿದ್ದಂತಹವರು. ನೂರಾರು ವರ್ಷಗಳಿಂದ ಇದ್ದಂತಹವರು ಕನ್ನಡವನ್ನು ಮಾತನಾಡದಿದ್ದರೆ ಅವರಿಗೆ ಕನ್ನಡ ನಾಡಿನಲ್ಲಿ ಜಾಗ ಇರಬಾರದು. ಈ ಮಾತನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತಿದ್ದೇನೆ. ಕೇಸ್ ಮಾಡಲಿ. ಇದಕ್ಕೆ ಮಾನ್ಯ ವಾಟಾಳ್ ನಾಗರಾಜ್‌ರವರ ಮೇಲೆ ಮಾಡಲಿ, ಮಾನ್ಯ ಸಿಂಧ್ಯರ ಮೇಲೆ ಮಾಡಲಿ, ನನಗೆ ಬಹಳ ಗೌರವ ಇತ್ತು. ಅವರು ವಾಕಿಂಗ್ ಸ್ಟಿಕ್ ಹಿಡಿದುಕೊಂಡು ಏನೋ ಒಂದು ತರಹದ ಲೈಟಾಗಿ ಮಾತನಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಯಾವಾಗ ಈ ಮಾನ್ಯ ಅಜೀಜ್ ಸೇಠ್‌ರವರಿಗೆ, ಮಾನ್ಯ ವಿಶ್ವನಾಥ್‌ರವರನ್ನು ಕೋರ್ಟಿಗೆ ಎಳೆಯುತ್ತೇನೆ ಎನ್ನುವಂತಹ ಧೈರ್ಯ ಬಂದಿದೆಯೋ ಗೊತ್ತಿಲ್ಲ. ಬರಲಿ, ಇವತ್ತು ಅವರಿಗೆ ಪಂಥಾಹ್ವಾನವನ್ನು ನೀಡುತ್ತೇನೆ. ಕೋರ್ಟಿಗೆ ನನ್ನನ್ನೂ ಎಳೆಯಲಿ, ಇವತ್ತು ಆ ಮಾತನ್ನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಅತ್ಯಂತ ಪ್ರೀತಿ ವಿಶ್ವಾಸದಿಂದ ಮುಸಲ್ಮಾನ್ ಬಾಂಧವರನ್ನು, ಕ್ರೈಸ್ತ ಬಾಂಧವರನ್ನು, ಕನ್ನಡೇತರರನ್ನು ಇವತ್ತು ಕನ್ನಡ ಸಂಸ್ಕೃತಿಯೊಡನೆ ಮಿಲಿನವಾಗಿ ಆ ಒಂದು ಭಾವನಾತ್ಮಕ ಬೆಸುಗೆಯನ್ನು ಬೆಳೆಸಿಕೊಳ್ಳಲಿ ಎಂದು ಕೇಳಲಿಕ್ಕೆ ಇಷ್ಟಪಡುತ್ತೇನೆ. ಎಷ್ಟು ದಿವಸ ನೀವು ಹೊರಗೆ ಇರುತ್ತೀರಿ ? ಇವತ್ತು come to the main stream.

ಗೊತ್ತಿಲ್ಲ. ಕನ್ನಡ ಭಾಷೆ ಗೊತ್ತಿಲ್ಲ, ಕನ್ನಡದ ನುಡಿ ನಿಮಗೆ ಗೊತ್ತಿಲ್ಲ, ಇವತ್ತು ಅಧಿಕಾರಿಗಳನ್ನು ಕನ್ನಡವನ್ನು ಕಲಿಯಿರಿ, ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತನ್ನಿ ಎಂದು ನಾವು ಹೇಳಲಿಕ್ಕೆ ಬಹಳ ಸುಲಭ; ಆದರೆ ಕಡತದಲ್ಲಿ ನಮ್ಮ ಚೀಫ್ ಸೆಕ್ರೆಟರಿ ಸೈನ್ ಮಾಡುತ್ತಾರೆಂದು ಮುಖ್ಯ ಮಂತ್ರಿಗಳು ಹೇಳುತ್ತಾರೆ. ಇದಲ್ಲ; ಇಡೀ ಸಮಾಜದ ವಾತಾವರಣ ಬದಲಾಗಬೇಕಾಗುತ್ತದೆ. ಅದನ್ನು ಜಾರಿ ಮಾಡಬೇಕಾದರೆ ಸ್ವಲ್ಪ ಎದೆಗಾರಿಕೆ ಬೇಕಾಗುತ್ತದೆ. ಎಷ್ಟು ಸಮಯ ಈ ತರಹ ಸಮ್ಮನೆ ಕುಳಿತುಕೊಳ್ಳುವುದು. ಇಡೀ ರಾಜ್ಯದಲ್ಲಿ ಇವತ್ತು ಕೂಡ ನಾವು ಕನ್ನಡವನ್ನು ಕಲಿಯಿರಿ ಎಂದು ಕೈಮುಗಿದು ಕೇಳಬೇಕಾಗುತ್ತದೆಯೋ ! ಇವರು ಒಬ್ಬರಿಗೆ ಕನ್ನಡ ಬರುವುದಿಲ್ಲ. ಈ ಭಾವನೆ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಾಗ ಹಿಂದೆ 15 ವರ್ಷದಿಂದ ಸ್ವಲ್ಪ ಜಾಸ್ತಿ ಹೇಳುತ್ತಾರೆ ಅನ್ನುವ ಭಾವನೆ ಇತ್ತು. ಆದರೆ ಇವತ್ತು ಬಹಳ ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಕನ್ನಡ ನಾಡಿನಲ್ಲಿ, ಕರ್ನಾಟಕದಲ್ಲಿ ಮಂತ್ರಿಯಾಗಿ ರಾಜಕೀಯದ ಎಲ್ಲಾ ಲಾಭಗಳನ್ನು ಪಡೆದುಕೊಂಡು ಈಗ ನಾನು ಕೋರ್ಟಿಗೆ ಹೋಗುತ್ತೇನೆಂದು ಹೇಳುವ ಪ್ರಚೋದನೆಗೆ ಉತ್ತರವಾಗಿ ಈ ಮಾತನ್ನು ಹೇಳಿದ್ದೇನೆ.

ಆ ಭಾವನೆಯನ್ನು ಪ್ರೀತಿ ವಿಶ್ವಾಸದಿಂದ ತಮ್ಮ ಮೂಲಕ ಕರ್ನಾಟಕದ ಸಮಸ್ತ ಜನರಿಗೆ ಕನ್ನಡೀಕರಣ ಆಗಲಿ, ಕನ್ನಡದ ವಾತಾವರಣ ಆಗಲಿ, ಕನ್ನಡಕ್ಕೋಸ್ಕರ, ಕನ್ನಡ ನಾಡು ನುಡಿ, ಜಲಕ್ಕೋಸ್ಕರ, ಆ ಸ್ವಾಭಿಮಾನಕ್ಕೋಸ್ಕರ ನಾವೆಲ್ಲ ಹೋರಾಡೋಣ ಎಂದು ಕೇಳಿಕೊಂಡು, ಮತ್ತೊಮ್ಮೆ ಮಾನ್ಯ ವಿಶ್ವನಾಥ್‌ರವರಾಗಲಿ, ಯಾಹ್ಯಾ ಸಾಹೇಬರಾಗಲಿ, ರಾಮಕೃಷ್ಣ ಅವರಾಗಲಿ, ಇವರ ಇಲಾಖೆಗಳ ಮತ್ತು ಇತರೆ ಎಲ್ಲಾ ಇಲಾಖೆಗಳ ಬಗ್ಗೆ ಗಹನವಾಗಿ ಅತ್ಯಂತ ಟೀಕೆ ಮಾಡಬೇಕೆಂದು ಮಾಡಿಲ್ಲ. ವಿಶ್ವಾಸಪೂರ್ವಕವಾಗಿ ಟೀಕೆಗಳನ್ನು ಮಾಡಿದ್ದೇನೆ. ಇದನ್ನು ಸರಿಪಡಿಸಿಕೊಳ್ಳಿ, ನಮ್ಮಲ್ಲಿಯೂ ಹಲವಾರು ನ್ಯೂನತೆಗಳು ಲೋಪಗಳು ಇವೆ. ನಾನು ವಿದ್ಯಾ ಮಂತ್ರಿಯಾಗಿ I concede if there is one department where I failed, with all humility at my command, ನಾನು ವಿದ್ಯಾ ಇಲಾಖೆಯಲ್ಲಿ ಮಂತ್ರಿಯಾಗಿ ಬಹಳ ಒಳ್ಳೆಯ ಕೆಲಸ ಮಾಡಿದ್ದೇವೆ ಎನ್ನುವ ಧೈರ್ಯ, ಕೆಚ್ಚು ಇಲ್ಲ. ಆದರೆ ಕನ್ನಡ ಸಂಸ್ಕೃತಿ ಇಲಾಖೆಯಲ್ಲಾಗಲಿ, ಯುವಜನಸೇವಾ ಇಲಾಖೆಯಲ್ಲಾಗಲಿ, ಪ್ರವಾಸೋದ್ಯಮ ಇಲಾಖೆಯಲ್ಲಾಗಲಿ ಅತ್ಯಂತ ಪ್ರಾಮಾಣಿಕವಾಗಿ ಒಳ್ಳೆಯ ಕೆಲಸ ಮಾಡಿ ಹೊಸ ನಾಂದಿಯನ್ನು ಹಾಕಿಸಲಿಕ್ಕೆ, ಒಂದು ಚಾಲನೆಯನ್ನು ಕೊಡಲಿಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನ ಮಾಡಿದ್ದೇನೆ. ಆ ಹೆಗ್ಗಳಿಕೆಯನ್ನು ನಡೆಸಿಕೊಂಡು ಹೋಗಿ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

(ಶ್ರೀ ಬಿ.ಎಂ. ಇದಿನಬ್ಬ ಅವರು ಅಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

† ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ):– ಮಾನ್ಯ ಅಧ್ಯಕ್ಷರೇ, ಇವತ್ತು ಈ ಸದನದ ಮುಂದೆ ಇರತಕ್ಕಂಥ ಬೇಡಿಕೆಗಳಾದ ಉಚ್ಚ ಶಿಕ್ಷಣ, ವಕ್ಫ್, ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ, ಯುವಜನಸೇವೆ, ಕಲೆ ಸಂಸ್ಕೃತಿ ಮತ್ತು ಕನ್ನಡ ಅಭಿವೃದ್ಧಿ, ಸಾರ್ವಜನಿಕರ ವಾಚನಾಲಯ ಇತ್ಯಾದಿ...,

ಶ್ರೀ ವಾಟಾಳ್ ನಾಗರಾಜ್:– ನನ್ನ ಮನಸ್ಸಿಗೆ ನೋವಾಗುತ್ತಿದೆ.

ಛೇರ್ಮನ್:– ತಮ್ಮ ಸರದಿ ಬರುತ್ತದೆ.

ಶ್ರೀಮತಿ ದಮಯಂತಿ ಬೋರೇಗೌಡ:– ಈ ಬೇಡಿಕೆಗಳನ್ನು ಬೆಂಬಲಿಸಿ ನಾನು ನಾಲ್ಕು

ಮಾತುಗಳನ್ನು ಆಡುತ್ತಿದ್ದೇನೆ. ಮೊಟ್ಟಮೊದಲನೆಯದಾಗಿ ಶಿಕ್ಷಣ ಕ್ಷೇತ್ರದಲ್ಲಿ ಇವತ್ತು ಇರತಕ್ಕಂಥ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೆ ಹೋದರೆ ಬಹಳ ತೊಂದರೆಯಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಹೈಯರ್ ಪ್ರೈಮರಿ ಸ್ಕೂಲ್‌ನಲ್ಲಿ 7 ತರಗತಿಗಳು ಇರುವ ಕಡೆ ಕೇವಲ ನಾಲ್ಕು ಜನ ಉಪಾಧ್ಯಾಯರು ಇದ್ದಾರೆ. ಅದರಲ್ಲಿಯೂ ಒಬ್ಬ ಉಪಾಧ್ಯಾಯರು ಟ್ರೈನಿಂಗ್ ಅಥವಾ ಡೆಪ್ಯುಟೇಷನ್ ಎಂದು ಹೊರಗೆ ಹೋಗುತ್ತಿದ್ದಾರೆ. ಈ ನಡುವೆ ನಮ್ಮ ಸಾಕ್ಷರತಾ ಆಂದೋಳನ ಬಂದ ಮೇಲೆ ಉಪಾಧ್ಯಾಯರಿಗೆ ಆ ಕೆಲಸವನ್ನು ಸಹ ನಾವು ವಹಿಸಿದ್ದೇವೆ. ಆದ್ದರಿಂದ ಶಿಕ್ಷಕರ ಕೊರತೆ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಹೆಚ್ಚಾಗಿದೆ. ಇದು ಹೋಗಬೇಕು, ನಮ್ಮಲ್ಲಿ ಕಂಪಲ್ಸರಿ ಪ್ರೈಮರಿ ಎಜುಕೇಶನ್ ಇದ್ದರೂ ಸಹ ಅದನ್ನು ತೀವ್ರಗತಿಯಲ್ಲಿ ಜಾರಿಗೆ ತರದೇ ಇರುವುದರಿಂದ 35 ವರ್ಷದಿಂದ 60 ವರ್ಷದೊಳಗೆ ಇರತಕ್ಕಂಥವರು ಸುಮಾರು 60 ಲಕ್ಷ ಅನಕ್ಷರಸ್ಥರು ಇದ್ದಾರೆ. ಗ್ರಾಮಾಂತರ ಪ್ರದೇಶಗಳಿಗೆ ಹೋದಾಗ ಅವರು ನಮ್ಮನ್ನು ಕೇಳುತ್ತಾರೆ. ನಮ್ಮ ಮಕ್ಕಳಿಗೆ ಪಾಠವನ್ನು ಕಲಿಸುವುಥಕ್ಕೆ ಉಪಾಧ್ಯಾಯರೇ ಇಲ್ಲವಲ್ಲ, ಇನ್ನು ನಾವು ಹೇಗೆ ಕಲಿಯುವುದು ಎಂದು; ಆದ್ದರಿಂದ ಕೂಡಲೆ ಬೇರೆ ಇಲಾಖೆಗೆ ಅದ್ಯತೆಯನ್ನು ಕೊಡದೇ ಇದ್ದರೂ, ಶಿಕ್ಷಣ ಇಲಾಖೆಗೆ ಆದ್ಯತೆಯನ್ನು ಕೊಟ್ಟು ಟೀಚರ್ಸ್‌ಅನ್ನು ಅಪಾಯಿಂಟ್ ಮಾಡಬೇಕೆಂದು ನಾನು ಬೇಡಿಕೊಳ್ಳುತ್ತಿದ್ದೇನೆ. 1992ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ನಡೆದಂತಹ ಎರಡನೆಯ ಪಿ.ಯು.ಸಿ. ಪರೀಕ್ಷೆಯಲ್ಲಿ ಕನ್ನಡ ಮೀಡಿಯಂನಲ್ಲಿ ಪಾಸಾಗಿರತಕ್ಕಂಥವರ ಸಂಖ್ಯೆ ಶೇಕಡ 19.66. ಇಂಗ್ಲೀಷ್ ಮೀಡಿಯಂನಲ್ಲಿ ಪಾಸಾಗಿರುವವರ ಸಂಖ್ಯೆ: ಶೇಕಡ 21.70. ಆದ್ದರಿಂದ ಜನರ ಒಲವು ಯಾವ ಕಡೆ ಇದೆ ಎನ್ನುವುದನ್ನೂ ಕೂಡ ನಾವು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಇಡೀ ನಮ್ಮ ರಾಜ್ಯದಲ್ಲಿ 324 ಜೂನಿಯರ್ ಕಾಲೇಜುಗಳು ಇವೆ. ಜೂನಿಯರ್ ಕಾಲೇಜು ಇದ್ದರೆ ಸಾಲದು, ಆದಷ್ಟು ಜಾಬ್ ಓರಿಯಂಟೆಡ್ ಕೋರ್ಸನ್ನು ನಾವು ಹೆಚ್ಚು ಹೆಚ್ಚು ಅದರಲ್ಲಿ ಜಾರಿಗೆ ತರಬೇಕು. ಇವತ್ತು ಒಂದಲ್ಲ, ಎರಡಲ್ಲ, ಮೂರು ಅಲ್ಲ, ನಾಲ್ಕು ಪದವಿಗಳನ್ನು ತೆಗೆದುಕೊಂಡು ನಿರುದ್ಯೋಗಿಗಳಾಗಿರತಕ್ಕಂಥ ಯುವಕರ, ಯುವತಿಯರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಆದ್ದರಿಂದ ಜಾಬ್ ಓರಿಯೆಂಟೆಡ್ ಕೋರ್ಸಸ್‌ಗಳಿಗೆ ನಾವು ಹೆಚ್ಚು ಒತ್ತನ್ನು ಕೊಟ್ಟು ಅದರ ಕಡೆ ಗಮನವನ್ನು ಹರಿಸಬೇಕು. ಆ ಜಾಬ್ ಓರಿಯೆಂಟೆಡ್ ಕೋರ್ಸನಲ್ಲಿ ಈ ಹಿಂದೆ 75 ಸಾವಿರಕ್ಕೆ ಒಂದು ವರ್ಕ್‌ಶೆಡ್ ನಿರ್ಮಾಣವಾಗುತ್ತಿತ್ತು. ಆದರೆ ಇವತ್ತು ಸಹ ಅದೇ ರೇಟು, ಅಷ್ಟೇ ಗ್ರಾಂಟ್ ಇದೆ. ಅದರಲ್ಲಿ ಒಂದು ಗೂಡು ಆಗುತ್ತದೆ. ಇದನ್ನು ಹೆಚ್ಚಿಸಿ ಈಗಿನ ಎಸ್.ಆರ್. ಪ್ರಕಾರ ಗ್ರಾಂಟನ್ನು ಜಾಸ್ತಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಲೋಕ ಶಿಕ್ಷಣದಲ್ಲಿ 60 ಲಕ್ಷ ಅನಕ್ಷರಸ್ಥರು ಇದ್ದರೂ ಕೂಡ ಅವರಿಗೆ ಸಾಕಷ್ಟು ತೀವ್ರವಾದಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆದರೂ ನಮ್ಮ ನಿರೀಕ್ಷೆಗೆ ತಕ್ಕಂತೆ ಪ್ರತಿಫಲ ಇನ್ನೂ ಸಿಕ್ಕಿಲ್ಲ. ಉಪಾಧ್ಯಾಯರಿಗೆ ನೀವು ಟ್ರೈನಿಂಗ್ ಪ್ರೋಗ್ರಾಂ ಯಾವಾಗ ಮಾಡುತ್ತೀರಿ ಎಂದು ಹೇಳಿದರೆ ವರ್ಷದ ಕೊನೆಯಲ್ಲಿ ಮಾರ್ಚಿ ತಿಂಗಳಲ್ಲಿ ಅವರನ್ನು ಟ್ರೈನಿಂಗ್‌ಗೆ ಡೆಪ್ಯೂಟ್ ಮಾಡುತ್ತಿದ್ದೀರಿ. ಇದರಿಂದ ಪರೀಕ್ಷೆಗೆ ಕುಳಿತುಕೊಳ್ಳುವಂತಹ ಮಕ್ಕಳಿಗೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಫಸ್ಟ್ ಟರ್ಮ್‌ನಲ್ಲಿಯೇ ಅಂದರೆ ಡಿಸೆಂಬರ್‌ನೊಳಗಡೆ ಅವರನ್ನು ಟ್ರೈನಿಂಗ್‌ಗೆ ನೀವು ಕಳುಹಿಸಿಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ನನ್ನ ಅಭಿಪ್ರಾಯ. ಇನ್ನು ಮೌಲ್ಯಮಾಪನ ಸೆಂಟರ್‌ಗಳ ಬಗ್ಗೆ ನಾನು ಕಳೆದ ಸಲ ಒಂದು ಮಾತನ್ನು ಹೇಳಿದ್ದೆ. ದಯಮಾಡಿ ಬೆಂಗಳೂರು ಕೇಂದ್ರದಲ್ಲಿ ಈ ರಾಜಧಾನಿಯಲ್ಲಿ ವ್ಯಾಲ್ಯುಯೆಷನ್ ಸೆಂಟರ್ ಇಲ್ಲದೇ ಇದ್ದರೆ ಒಳ್ಳೆಯದು ಎಂದು ನನ್ನ ಭಾವನೆ. ಏಕೆಂದರೆ ಅಲ್ಲಿ ಅರ್ಧಂಬರ್ಧ ವ್ಯಾಲ್ಯೂಯೇಷನ್ ಮಾಡಿಬಿಟ್ಟು ಇಲ್ಲಿ ವಿಧಾನಸೌಧ ಮತ್ತು ಲೆಜಿಸ್ಲೇಚರ್ ಹೋಮ್‌ನಲ್ಲಿ ಟ್ರಾನ್ಸ್‌ಫರ್‌ಗಾಗಿ ಓಡಾಡುವಂತಹ ಉಪಾಧ್ಯಾಯರು ಜಾಸ್ತಿಯಾಗಿದ್ದಾರೆ.

ಸುಮಾರು ಶೇಕಡಾ 70ರಷ್ಟು ಮಾರ್ಕ್ಸ್ ಕೊಟ್ಟರೆ, ಇನ್ನೊಬ್ಬರು ಅದನ್ನು ವ್ಯಾಲ್ಯೂಯೇಷನ್

ಮಾಡುತ್ತಾರೆ ಎಂದು ಮಾರ್ಕ್ಸನ್ನು 68ಕ್ಕೋ 69ಕ್ಕೋ ನಿಲ್ಲಿಸುತ್ತಾರೆ. ಇದರಿಂದ ಮಕ್ಕಳು ಎಷ್ಟೇ ಕಷ್ಟಪಟ್ಟು ಓದಿದರೂ ಕೂಡ ಅವರಿಗೆ ನ್ಯಾಯ ದೊರಕುವುದಿಲ್ಲ. ಹಿಂದೆ ಶ್ರೀ ರಂಗನಾಥ್‌ರವರು ವಿದ್ಯಾ ಮಂತ್ರಿಗಳಾಗಿದ್ದಾಗ ಅವರ ಕಚೇರಿಯ ಹತ್ತಿರ ಪೋಲೀಸಿನವರು ಇದ್ದರು. ಎಲ್ಲೂ ಇಲ್ಲದ ನೂಕುನುಗ್ಗಲು ಟ್ರಾನ್ಸ್‌ಫರ್‌ಗಾಗಿ ಅವರ ಕಚೇರಿಯ ಹತ್ತಿರ ಇರುತ್ತಿತ್ತು. ಆದುದರಿಂದ ದಯಮಾಡಿ ಬೆಂಗಳೂರಿನಲ್ಲಿ ವ್ಯಾಲ್ಯೂಯೇಷನ್ ಸೆಂಟರ್ ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ಇನ್ನು ಕಾಲೇಜುಗಳಲ್ಲಿ, ಜೂನಿಯರ್ ಕಾಲೇಜುಗಳಲ್ಲಿ, ಹೈಸ್ಕೂಲ್‌ಗಳಲ್ಲಿ, ಕೆಲವು ಸಬ್‌ಜೆಕ್ಟ್‌ಗಳಿಗೆ ಲೆಕ್ಚರರ್ಸ್ ಮತ್ತು ಟೀಚರ್‌ಗಳು ಇರುವುದಿಲ್ಲ; ಇನ್ನು ಕೆಲವು ಸಬ್‌ಜೆಕ್ಟಗಳಿಗೆ ಜಾಸ್ತಿ ಇರುತ್ತಾರೆ. ಇದರ ಬಗ್ಗೆ ಒಂದು ಉದಾಹರಣೆ ಹೇಳಬೇಕಾದರೆ ಶ್ರೀರಂಗಪಟ್ಟಣದ ಗೌರ್ವನ್ಮೆಂಟ್ ಜೂನಿಯರ್ ಕಾಲೇಜ್‌ನಲ್ಲಿ ಬಯಾಲಜಿಗೆ ಇಬ್ಬರು ಲೆಕ್ಚರರ್ಸ್ ಸೋಷಿಯಾಲಜಿಗೆ ಇಬ್ಬರು ಲೆಕ್ಚರರ್ಸ್ ಇದ್ದಾರೆ. ಅವರು ವಾರಕ್ಕೆ ಪಾಠ ಮಾಡುವುದು ನಾಲ್ಕು ಪಿರೀಯಡ್, ಅಂದರೆ ನಾಲ್ಕು ಗಂಟೆಗಳು ಪಾಠ ಹೇಳಿದರೆ ಆಯಿತು. ಅದಕ್ಕೆ ಅವರು ತೆಗೆದುಕೊಳ್ಳುವ ಪಗಾರ ಅಥವಾ ಸಂಭಾವನೆ ತಿಂಗಳಿಗೆ 6ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚು. ಒಂದು ಸಬ್‌ಜೆಕ್ಟ್‌ಗೆ 2–3ಲೆಕ್ಚರರ್‌ಗಳು ಇರುತ್ತಾರೆ. ಇದು ನನಗೆ ಅರ್ಥವಾಗುತ್ತಿಲ್ಲ. ಆದುದರಿಂದ ಈ ಸಲ ಒಂದು ಸ್ಕೀಮ್‌ಲೈನ್ ಮಾಡಿ ಯಾವ ಒತ್ತಡಕ್ಕೂ ಮಣಿಯದೆ ಒಂದೊಂದು ಸಬ್‌ಜೆಕ್ಟ್‌ಗೆ ಅವಶ್ಯಕತೆ ಇರುವಷ್ಟು ಮಾತ್ರ ಲೆಕ್ಚರರ್‌ಗಳು ಇರುವಂತೆ ಮಾಡಬೇಕು. ನಮ್ಮಂಥ ಪ್ರದೇಶಗಳು ಮೈಸೂರಿಗೆ ಹತ್ತಿರವಿರುವುದರಿಂದ ಇಲ್ಲಿಂದ ಒತ್ತಡ ತಂದು ಟ್ರಾನ್ಸ್‌ಫರ್ ಮಾಡಿಸಿಕೊಳ್ಳುತ್ತಾರೆ. ಅಲ್ಲಿ ಅವರುಗಳಿಗೆ ಸಾಕಷ್ಟು ವರ್ಕ್‌ಲೋಡ್ ಇಲ್ಲದೆ ಇರುವುದರಿಂದ ಸರ್ಕಾರದ ಬೊಕ್ಕಸಕ್ಕೂ ನಷ್ಟವಾಗುತ್ತದೆ. ಈಗ ಶ್ರೀರಂಗಪಟ್ಟಣ ತಾಲೂಕಿಗೆ ನ್ಯಾಷನಲ್ ಅವಾರ್ಡ್ ಮತ್ತು ಸ್ಟೇಟ್ ಅವಾರ್ಡ್ ನಾಲ್ಕು ಜನ ಉಪಾಧ್ಯಾಯರುಗಳಿಗೆ ಬಂದಿದೆ ಎಂದು ಹೆಮ್ಮೆಯಿಂದ ಹೇಳುತ್ತೇನೆ. ಇನ್‌ಫರ್‌ಮೇಷನ್ ಅಂದರೆ ಪಬ್ಲಿಸಿಟಿ ಡಿಪಾರ್ಟ್‌ಮೆಂಟ್‌ನವರು ಗ್ರಾಮಾಂತರ ಪ್ರದೇಶಗಳಲ್ಲಿ ಅದರಲ್ಲೂ ಎಸ್.ಸಿ. ಮತ್ತು ಎಸ್.ಟಿ.ಯವರು ಇರತಕ್ಕಂಥ ಬಡಾವಣೆಗಳಿಗೆ ಟಿ.ವಿ.ಸೆಟ್ ಒದಗಿಸಿದ್ದಾರೆ. ಕಳೆದ ಸಾಲಿನಲ್ಲಿ ನಮ್ಮ ತಾಲೂಕಿಗೆ ಒಂದೇ ಒಂದು ಟಿ.ವಿ.ಸೆಟ್ ಬಂತು. ಈಗ ಟಿ.ವಿ.ಸೆಟ್‌ಗೆ ಎಲ್ಲಿಲ್ಲದ ಬೇಡಿಕೆ ಇದೆ. ಇದು ಒಂದು ರೀತಿಯಾಗಿ ಒಳ್ಳೆಯ ಕಾರ್ಯಕ್ರಮ. ಆದುದರಿಂದ ಎಲ್ಲಾ ಗ್ರಾಮಗಳಿಗೂ ಟಿ.ವಿ.ಸೆಟ್ಟನ್ನು ಸಬ್ಸಿಡೈಸ್ ರೇಟ್ ಮಾಡಿ ಕೊಡಬೇಕು. ಅಥವಾ ಮುಫತ್ತಾಗಿಯಾದರೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೂ ಗ್ರಾಮಾಂತರ ಪ್ರದೇಶದಲ್ಲಿ ಓಪನ್ ಏರ್ ಥಿಯೇಟರ್ ಅವಶ್ಯಕತೆ ಇದೆ. ಗ್ರಾಮಸ್ಥರು ವರ್ಷಕ್ಕೆ ಒಂದು ನಾಟಕವನ್ನು ಆಡಬೇಕಾದರೆ 8–10ತಿಂಗಳುಗಳು ಪ್ರಾಕ್ಟೀಸ್ ಮಾಡುತ್ತಾರೆ. ಆಮೇಲೆ ದುಡ್ಡು ಹಾಕಿಕೊಂಡು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಒಂದು ಸ್ಟೇಜ್ ಮಾಡಿ ಒಂದೇ ರಾತ್ರಿಯಲ್ಲಿ ಕಾರ್ಯಕ್ರಮವನ್ನು ಮುಗಿಸುತ್ತಾರೆ. ಆದುದರಿಂದ ಹಳ್ಳಿಗಳಿಗೆ ಬಯಲು ರಂಗಮಂದಿರಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕನ್ನಡ ಸಿನಿಮಾಗಳಿಗೆ ಸಬ್ಸಿಡಿ ಕೊಡುತ್ತೀರಿ. ಆದರೆ ಅದರಲ್ಲಿ ಒಳ್ಳೆಯ ಸ್ಟಾಂಡರ್ಡ್ ಸಿನಿಮಾಗಳಿಗೆ ಜಾಸ್ತಿ ಸಬ್ಸಿಡಿ ಕೊಡಿ. ಆದರೆ ಕಳಪೆ ಸಿನಿಮಾಗಳಿಗೆ ಸಬ್ಸಿಡಿ ಕೊಡುವುದೇ ಬೇಡ. ಉದಾಹರಣೆಗೆ ಮನೆಯಲ್ಲಿ ರಾಮಣ್ಣ ಬೀದಿಯಲ್ಲಿ ಶಾಮಣ್ಣ, ತರ್ಲೆನನ್ಮಗ. ಈ ರೀತಿ ಸಿನಿಮಾಗಳ ಹೆಸರನ್ನೂ ಹೇಳುವುದಕ್ಕೆ ಬೇಸರವಾಗುತ್ತದೆ. ಈಗ ನಮ್ಮ ಊರಿನಲ್ಲಿ ರೌಡಿ ಎಂ.ಎಲ್.ಎ. ಸಿನಿಮಾ ನಡೆಯುತ್ತಿದೆ. ಇಂಥ ಸಿನಿಮಾಗಳಿಗೆ ಸಬ್ಸಿಡಿ ಕೊಟ್ಟು ಬಡಬೋರೇಗೌಡನ ತಲೆ ಮೇಲೆ ಚಪ್ಪಡಿ ಎಳೆಯುವುದು ಬೇಡ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಂತಹ ಸಿನಿಮಾಗಳನ್ನು ಬ್ಯಾನ್ ಮಾಡಿದರೂ ಒಳ್ಳೆಯದು ಎನಿಸುತ್ತದೆ. ಪ್ರತಿ ವರ್ಷ ದಸರಾ ವಸ್ತುಪ್ರದರ್ಶನ ಮಾಡುತ್ತೀರಿ, ಮಾಡೋದು ಮಾಡುತ್ತೀರಿ, ಆಗೋ ಖರ್ಚು ಆಗುತ್ತದೆ. ಅದು ಯಾವಾಗ ಶುರು ಮಾಡುತ್ತೀರಿ,

ಪ್ರಾರಂಭೋತ್ಸವದ ದಿನವೂ ಇನ್ನೂ ಮೊಳೆ ಹೊಡೆಯುತ್ತಿರುತ್ತಾರೆ. ಇದು ಸರಿಯಾಗಿ ಸೆಟ್ ಅಪ್ ಆಗುವ ವೇಳೆಗೆ ವಿಜಯದಶಮಿ ಮುಗಿದಿರುತ್ತದೆ. ಈ ರೀತಿ ಆಗಬಾರದು. ಒಂದು ವ್ಯವಸ್ಥಿತವಾದ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸಗಳನ್ನು ಸಕಾಲದಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈ ಯುವಜನ ಇಲಾಖೆಯ ಬಗ್ಗೆ ಮಾತನಾಡುವುದಕ್ಕೆ ಬಹಳ ನೋವಾಗುತ್ತದೆ. ಇಡೀ ದೇಶಕ್ಕೆ ಬೆನ್ನೆಲುಬಾಗಿರುವ ಯುವಜನ ಇಲಾಖೆಗೆ ಕೊಟ್ಟಿರುವಂತಹ ಹಣ ಏನೇನೂ ಸಾಲದು. ಎಲ್ಲಾ ಕಡೆ ನಾವು ಯುವಕರ ಮಂಡಳಿ ಮತ್ತು ಯುವತಿಯರ ಮಂಡಳಿ ಎಂದು ಭಾಷಣ ಮಾಡಿ ಪ್ರಚಾರ ಮಾಡಿ, ಒಂದು ಬೋರ್ಡನ್ನು ಸಹ ಹಾಕಿಬಿಟ್ಟಿದ್ದೇವೆ.

ಆದರೆ ಅಲ್ಲಿ ಹಣ ಇಲ್ಲ ಮತ್ತು ಕಾರ್ಯಕ್ರಮಗಳೂ ಇಲ್ಲ. ಆದ್ದರಿಂದ ಅವರಿಗೆ ಫಂಡ್ಸ್ ಮತ್ತು ಪ್ರೋಗ್ರಾಮ್ಸ್ ಕೊಟ್ಟರೆ ಅವರು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಜೀವನಾಡಿಯಾಗಿ ಆ ಗ್ರಾಮದ ಆಗುಹೋಗುಗಳ ಬಗ್ಗೆ ಮತ್ತು ಇತರ ಎಲ್ಲಾ ಚಟುವಟಿಕೆಗಳಲ್ಲೂ ಕೂಡ ಕ್ರಿಯಾತ್ಮಕವಾಗಿ ಕೆಲಸ ಮಾಡುವುದಕ್ಕೂ ಕೂಡ ಅನುಕೂಲವಾಗುತ್ತದೆ. ಆದುದರಿಂದ ಈ ಯುವಜನ ಇಲಾಖೆಗೆ ಕೊಡುತ್ತಿರುವಂತಹ ಹಣವನ್ನು ಆದಷ್ಟು ಜಾಸ್ತಿ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರಲ್ಲಿ ಇರುವಂತಹ ಶಕ್ತಿಯನ್ನು ಕ್ರೋಢೀಕರಿಸಿ ನಮ್ಮ ರಾಜ್ಯದ ಮುನ್ನಡೆಗೆ ಉಪಯೋಗಿಸಿಕೊಳ್ಳಬೇಕು ಎಂದು ಹೇಳುತ್ತೇನೆ. ಇನ್ನು ಈ ಸ್ಟೇಡಿಯಂ ಬಗ್ಗೆ ಯಾರೋ ಹೇಳಿದರು. ಈ ಕಲ್ಲು ಅಂದರೆ ಫೌಂಡೇಷನ್ ಸ್ಟೋನ್ ಹಾಕುವ ಒಂದು ವ್ಯವಸ್ಥೆ ನಮ್ಮಲ್ಲಿ ನಡೆದುಕೊಂಡು ಬಂದುಬಿಟ್ಟಿದೆ. ಒಂದು ಕೆರೆಗೆ ಮಾನ್ಯ ದೇವೇಗೌಡರು ಕಲ್ಲು ಹಾಕಿದರು, ಅದು ಇನ್ನೂ ಹಾಗೆಯೇ ಇದೆ. ಮತ್ತು ನಮ್ಮ ಶ್ರೀರಂಗಪಟ್ಟಣದ ಸ್ಟೇಡಿಯಂಗೆ ಬಹುಶಃ ಮಾನ್ಯ ಶಂಕರ್‌ರವರು ಮಂತ್ರಿಗಳಾಗಿದ್ದಾಗ ಕಲ್ಲು ಹಾಕಿದರು. ಅದೂ ಹಾಗೆಯೇ ಇದೆ. ಒಂದು ಸ್ವಲ್ಪವೂ ಕೂಡ ಪ್ರೋಗ್ರೆಸ್ ಇಲ್ಲ. ಬಹುಶಃ ಇದು ಅಡ್ಮನಿಸ್ಟ್ರೇಟೀವ್ ಅಪ್ರೂವಲ್ ಇಲ್ಲದೆ ಈ ರೀತಿ ಒಂದು ಕಡೆಯಿಂದ ಹಾಕಿಕೊಂಡು ಬರುತ್ತಿದ್ದಾರೋ ಏನೋ ಗೊತ್ತಿಲ್ಲ. ಆದರೆ ಶ್ರೀರಂಗಪಟ್ಟಣದಲ್ಲಿ ಸ್ಟೇಡಿಯಂಗೆ ಬದಲು ಇನ್ನೂ ಒಂದು ಕಲ್ಲು ಇದೆ. ತಾವೆಲ್ಲರೂ ಕೂಡ ಮೈಸೂರಿಗೆ ಹೋಗುವಾಗ ಬಂದು ನೋಡಬಹುದು. ಇನ್ನು ಯೂನಿವರ್ಸಿಟಿಗಳಲ್ಲಿ ಅಶಿಸ್ತು ಜಾಸ್ತಿ ಇದೆ. ಜೊತೆಗೆ ಲಾಟ್ ಆಫ್ ಕರಪ್ಷನ್, ನೆಪೋಟಿಸಂ, ಅಂಡ್ ಕ್ಯಾಸ್ಟಿಸಂ ಇವೆಲ್ಲಾ ತುಂಬಿ ತುಳುಕಾಡುತ್ತಾ ಇವೆ. ಅದು ಯಾವ ರೀತಿ ಸರಸ್ವತಿ ದೇಗುಲವಾಗಿ ಇರಬೇಕೋ ಆ ರೀತಿ ಇರದೇ ಅಲ್ಲಿ ಆಗತಕ್ಕಂತಹ ಅನ್ಯಾಯಗಳನ್ನು ನೋಡಿದರೆ ಬಹಳ ಬುದ್ಧಿವಂತರಾದಂತಹ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಒಂದೊಂದು ಸಲ ತುಂಬಾ ಅನ್ಯಾಯವಾಗುತ್ತದೆ ಮತ್ತು ಬೇಸರವೂ ಆಗುತ್ತದೆ. ಇವತ್ತು ಸಾಕಷ್ಟು ಯೂನಿವರ್ಸಿಟಿಗಳು ಇದ್ದು, ಅದರಲ್ಲಿ ಇರತಕ್ಕಂತಹ ನ್ಯೂನತೆಗಳನ್ನು ಸರಿಪಡಿಸಿಕೊಂಡರೆ ಸಾಕಾಗಿದೆ. ಇನ್ನು ಮುಂದೆ ಯೂನಿವರ್ಸಿಟಿ ಪ್ರಾರಂಭ ಮಾಡಬೇಕಾದರೆ ಚೆನ್ನಾಗಿ ಯೋಚನೆ ಮಾಡಿ, ಅದು ತುಂಬಾ ಅವಶ್ಯಕತೆ ಇದ್ದರೆ ಮಾತ್ರ ಮಾಡಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕ್ಯಾಪಿಟೇಷನ್ ಫೀಜ್ ಪಿಡುಗಿನ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಈ ಪಿಡುಗನ್ನು ಹೇಗೆ ಹೋಗಲಾಡಿಸಬೇಕು ಎನ್ನುವುದು ನಮ್ಮ ಸರ್ಕಾರದ ಮುಂದೆ ಪೆಡಂಭೂತವಾಗಿ ಇದೆ. ಸರಿಯಾಗಿ ಒಂದು ಲೆಕ್ಕ ಮಾಡಿದರೆ ಕರ್ನಾಟಕದಿಂದ ಹೊರಗಡೆ ಇರತಕ್ಕಂತಹ ವಿದ್ಯಾರ್ಥಿಗಳಿಗೇ ಹೆಚ್ಚಿನ ಸೀಟುಗಳು ಹೋಗುತ್ತಿವೆ. ಅನೇಕರು ಬ್ಲಾಂಕ್ ಚೆಕ್ ಕೊಟ್ಟು ಈ ಸೀಟನ್ನು ತೆಗೆದುಕೊಳ್ಳುತ್ತಿದ್ದಾರೆ.

ನಮ್ಮ ಮಕ್ಕಳಿಗೆ ಸೀಟು ಸಿಗುವುದು ದುರ್ಲಭವಾಗಿದೆ. ಇದನ್ನು ತಡೆಗಟ್ಟಬೇಕಾದರೆ ಒಂದು ತೀವ್ರವಾದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಮತ್ತು ಕಠಿಣವಾದಂತಹ ಒಂದು ನಿಲುವನ್ನೂ ಕೂಡ ತೆಗೆದುಕೊಳ್ಳಬೇಕು. ಇನ್ನು ಕನ್ನಡದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ

ಇಚ್ಛೆಪಡುತ್ತೇನೆ. ಕನ್ನಡದ ಬಗ್ಗೆ ತೀರಾ ಮಡಿವಂತಿಕೆ ಬೇಡ ಎನ್ನುವುದು ನನ್ನ ಇಚ್ಛೆ. ಇಲ್ಲಿ ಮಾನ್ಯ ವಾಟಾಳ್ ನಾಗರಾಜ್ ಮತ್ತೆ ಒಂದಿಬ್ಬರು ಬಿಟ್ಟರೆ ಎಲ್ಲರೂ ಕೂಡ ಧಾರಳವಾಗಿ ಇಂಗ್ಲೀಷ್ ಉಪಯೋಗಿಸುತ್ತಿದ್ದೇವೆ. ಮತ್ತು ಕನ್ನಡದ ಬಗ್ಗೆ ಭಾಷಣ ಮಾಡುವವರ ಬಹುತೇಕ ಮನೆಗಳ ಮಕ್ಕಳೆಲ್ಲಾ ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳಿಗೆ ಹೋಗುತ್ತಾರೆ. ಅದರಲ್ಲೂ ಇನ್ನೊಂದು ವಿಪರ್ಯಾಸವೆಂದರೆ ನಮಗೆ ಕನ್ನಡ ಬೇಡ, ಸಂಸ್ಕೃತ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಏಕೆಂದರೆ ಸಂಸ್ಕೃತ ನಂಬರ್ ಸ್ಕೋರಿಂಗ್ ಸಬ್ಜೆಕ್ಟ್. ಅದರಲ್ಲಿ ಹೆಚ್ಚಿಗೆ ನಂಬರ್ ತೆಗೆದುಕೊಳ್ಳಬಹುದು. ಅದೇ ಕನ್ನಡದಲ್ಲಿ ಏನೇ ಬರವಣಿಗೆ ಮಾಡಿದರೂ ಕೂಡ, ಉಪಾಧ್ಯಾಯರು ಅಥವಾ ಎಕ್ಸಾಮಿನರ್ಸ್ 60 ಪರ್ಸೆಂಟ್ ಕೊಟ್ಟುಬಿಟ್ಟರೆ ಏನೋ ಕೊಟ್ಟ ಹಾಗೆ ಆಗುತ್ತದೆಂದು ತಿಳಿದುಕೊಳ್ಳುತ್ತಾರೆ. ಆದರೆ ಸಂಸ್ಕೃತದಲ್ಲಿ 85ರಿಂದ 90ರವರೆಗೆ ಸುಲಭವಾಗಿ ಸ್ಕೋರ್ ಮಾಡಬಹುದು. ಈ ರೀತಿ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹೀಗಾಗಿ ಕನ್ನಡ ಅಭಿವೃದ್ಧಿ ಮಾಡಬೇಕು ಎಂದು ಹೇಳಿದರೆ ಹೇಗೆ ಆಗುತ್ತದೆ. ಕನ್ನಡ ಸಬ್ಜೆಕ್ಟ್‌ಗೆ ಮಾರ್ಕ್ಸ್ ಜಾಸ್ತಿ ಕೊಟ್ಟರೆ ಆದರ ಪಾಡಿಗೆ ಅದೇ ಕನ್ನಡ ಅಭಿವೃದ್ಧಿ ಆಗುತ್ತದೆ. ಆಗ ಮಕ್ಕಳು ಅದರ ಕಡೆ ಗಮನ ಜಾಸ್ತಿ ಕೊಡುತ್ತಾರೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಈಗ ಕಾನ್ವೆಂಟಿನಲ್ಲಿ ಓದುವ ಅನೇಕ ಮಕ್ಕಳು ಕನ್ನಡದಲ್ಲಿ ಫೇಲ್ ಆಗಿರುವುದನ್ನು ನೋಡುತ್ತಿದ್ದೇವೆ. ನಾವು ಇಲ್ಲಿ ಕನ್ನಡ ಕನ್ನಡ ಎಂದು ಭಾಷಣ ಮಾಡುವುದು, ನಮ್ಮ ಮನೆ ಮಕ್ಕಳನ್ನು ಕಾನ್ವೆಂಟಿಗೆ ಇಂಗ್ಲೀಷ್ ಮೀಡಿಯಂಗೆ ಕಳುಹಿಸುವುದು ಇದು ಎಂತಹ ವಿಪರ್ಯಾಸ. ಇದರ ಬಗ್ಗೆ ನಾವು ಚಿಂತನೆ ಮಾಡಬೇಕು. ನಾವು ಏನು ಮಾತನಾಡುತ್ತೇವೆ ಅದನ್ನು ಜೀವನದಲ್ಲೂ ಕೂಡ ಆಚರಣೆಗೆ ತರಬೇಕು. ಆಕಸ್ಮಾತ್ ನಾವೇನಾದರೂ ಹೆಚ್ಚು ಒತ್ತಾಯ ಮಾಡಿ ಹೇಳಿದರೆ, ಹೋಗಮ್ಮ ನಿಮಗೆ ಏನು ಗೊತ್ತು, ಈಗಿನ ಕಾಲದಲ್ಲಿ ಇಂಟರ್‌ನ್ಯಾಷನಲ್ ಲಾಂಗ್ವೇಜ್ ಇಂಗ್ಲೀಷ್, ನಾವು ಅದನ್ನೇ ತೆಗೆದುಕೊಳ್ಳುತ್ತೇವೆ, ಅದರಲ್ಲಿಯೇ ಓದುತ್ತೇವೆ ಎಂದು ಹೇಳುವಂತಹ ಮಕ್ಕಳಿಗೆ ನಾವು ಏನು ಉತ್ತರ ಹೇಳಬೇಕು ಎಂದು ನಮಗೆ ಗೊತ್ತಾಗುವುದಿಲ್ಲ. ಆದುದರಿಂದ ಕನ್ನಡದ ಬಗ್ಗೆ ನನಗೆ ಸಾಕಷ್ಟು ಕಳಕಳಿ ಇದೆ. ಆದರೆ ಅನೇಕ ಹೊರರಾಜ್ಯಗಳಲ್ಲಿ ಕನ್ನಡ ಕಲಿಯಬೇಕಾದರೆ ಸಾಕಷ್ಟು ಉಪಾಧ್ಯಾಯರು ಸಿಗುತ್ತಾ ಇಲ್ಲ. ಆ ಕಷ್ಟವನ್ನು ಅನುಭವಿಸಿರುವವರಲ್ಲಿ ನಾನು ಕೂಡ ಒಬ್ಬಳು. ಆದರಿಂದ ನಮ್ಮ ಸ್ಟೇಟ್‌ನಲ್ಲಿ ಮಾತ್ರವಲ್ಲ, ಇತರ ಸ್ಟೇಟ್‌ಗಳಲ್ಲೂ ಕೂಡ ಕನ್ನಡ ಕಲಿಸುವಂಥ ಉಪಾಧ್ಯಾಯರುಗಳ ಒಂದು ನೇಮಕ ಮಾಡಿದರೆ ಒಳ್ಳೆಯದು ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇವತ್ತು ಸ್ವಲ್ಪ ಹೆಚ್ಚು ಕಡಿಮೆ 8ಬೇಡಿಕೆಗಳು ಇವೆ. ಇವೆಲ್ಲದರ ಬಗ್ಗೆ ಯಾವ ರೀತಿ ಮಾತನಾಡಬೇಕು ಎಂದು ತಿಳಿಯುತ್ತಿಲ್ಲ. ಒಂದೇ ಸಾರಿ ಇಷ್ಟು ಇಲಾಖೆಗಳ ಬಗ್ಗೆ ಮಾತನಾಡಲು ಕಷ್ಟವಾಗುತ್ತದೆ. ಇಷ್ಟು ಇಲಾಖೆಗಳ ಬೇಡಿಕೆಗಳನ್ನಿಟ್ಟರೆ ಯಾವ ಇಲಾಖೆಯ ಬಗ್ಗೆ ನಾವು ಮಾತನಾಡಬೇಕು ? ನಾಳೆ ಬಹುಶಃ ಇನ್ನೊಂದು ಇದೆ. ಮುಖ್ಯ ಮಂತ್ರಿಗಳ ಬೇಡಿಕೆಗಳಿವೆ. ಅದರಲ್ಲಿ ಸುಮಾರು 29ಇಲಾಖೆಗಳಿವೆ ಎಂದು ಕಾಣುತ್ತದೆ. ಸೋಮವಾರಕ್ಕೆ 29 ಇಲಾಖೆಗಳಿವೆ. ಇದು ಒಂದು ರೀತಿ ನಾವು ನಾಚಿಕೆ ಪಡತಕ್ಕಂಥದ್ದು. ಅದು ಹೇಗೆ ಎಂದರೆ, ಚರ್ಚೆಯಲ್ಲಿ ಇಷ್ಟಿಷ್ಟನ್ನು ಒಂದು ನಿಮಿಷದಲ್ಲಿ ನಾವು ಹೇಳಿ ಹೋಗತಕ್ಕಂಥದ್ದು ಒಂದು. ದಿನಗಟ್ಟಲೆ ಮಾನ್ಯ ಮಂತ್ರಿಗಳ ಉತ್ತರ. ಸುಮ್ಮನೆ ನಾವು 1,2,3,4,5,6 ಈ ಬೇಡಿಕೆಗಳನ್ನು ನಾವು ವಿರೋಧಿಸಿದ್ದೇವೆ. ಇದನ್ನಾದರೂ ಹೇಳಬೇಕು. ಈ ಸದನದಲ್ಲಿ ಚರ್ಚೆ ಅರ್ಥಪೂರ್ಣವಾಗಿ ಆಗಬೇಕಾದರೆ ಮತ್ತು ನಾವು ಪ್ರತಿ ಇಲಾಖೆಯ ಮೇಲೂ ಚರ್ಚೆಯಲ್ಲಿ ಭಾಗವಹಿಸಬೇಕಾಗಿದ್ದರೆ ಚರ್ಚೆಗೆ ಸಾಕಷ್ಟು ಅವಕಾಶ ಸಿಗಬೇಕು. ಕೊನೆ ಕೊನೆಗೆ ಕೆಲವು ಬೇಡಿಕೆಗಳು ಬರುತ್ತವೆ. ಅವು ತಬ್ಬಲಿಯಾದ ಬೇಡಿಕೆಗಳು, ಅವು ಕೊನೆಗೆ ಎಲ್ಲಿಗೆ ಹೋಗುತ್ತವೋ ಗೊತ್ತಿಲ್ಲ. ಈ ಪರಿಸ್ಥಿತಿ ಆಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಪ್ರಸ್ತಾಪಮಾಡಿದಾಗ ಮಾನ್ಯ ಮುಖ್ಯ ಮಂತ್ರಿಗಳು ಸರ್ಕಾರದ ಪರವಾಗಿ ನಮ್ಮನ್ನು ದೂಷಣೆ ಮಾಡಿದರು. ಏನೆಂದರೆ ನೀವು ಸಹಾ ಈ ಸದನದ ಕಾರ್ಯಕಲಾಪದ ಸಮಿತಿಯಲ್ಲಿ ಇದ್ದೀರಿ, ನಿಮ್ಮ ಎಲ್ಲಾ ಸದಸ್ಯರುಗಳು ಒಪ್ಪಿಕೊಂಡು ಬಂದಿದ್ದಾರೆ, ನಾವೇನು ಮಾಡಬೇಕು ಎಂಬ ಮಾತನ್ನು ಹೇಳಿದರು. ಆದ್ದರಿಂದ ನಾನು ಮಾನ್ಯ ವಾಟಾಳ್ ನಾಗರಾಜ್‌ರವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು ?

ಶ್ರೀ ವಾಟಾಳ್ ನಾಗರಾಜ್:- ಸದನದ ಸಮಿತಿಯಲ್ಲಿ ಅನೇಕ ತೀರ್ಮಾನಗಳು ಆಗುತ್ತವೆ. ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಅನೇಕ ಚರ್ಚೆಗಳಾಗುತ್ತವೆ. ಆದರೂ ಸಹಾ ಒಂದೊಂದು ಸಾರಿ ಅದು ಈ ಸದನಕ್ಕೆ ಬಂದಾಗ ಬದಲಾವಣೆ ಆಗತಕ್ಕಂಥದ್ದು ಇದೆ. ಇದು ಮೊದಲಿನಿಂದ ನಡೆದುಕೊಂಡು ಬಂದಿರತಕ್ಕಂಥದ್ದು. ಕಲಾಪದ ಸಲಹಾ ಸಮಿತಿಯಲ್ಲಿ ಏನು ತೀರ್ಮಾನವಾಗಿದೆ, ಅದೇ ರೀತಿ ಯಾವುದೇ ಒಂದು ಬದಲಾವಣೆ ಇಲ್ಲದೆ ನಡೆದಿರತಕ್ಕಂಥದ್ದು ಕಡಿಮೆ, ಅನೇಕ ಸಾರಿ ಬದಲಾವಣೆಗಳಾಗಿವೆ. ಈಗ ಶೂನ್ಯ ವೇಳೆ, ಈ ಶೂನ್ಯ ವೇಳೆ ಎನ್ನುವುದು ಒಂದು ಸೃಷ್ಟಿಯಾಗಿದೆ. ಅದು ಆಗಲೇಬೇಕು. ಏಕೆಂದರೆ ಅತೀ ಮುಖ್ಯವಾದಂತಹ, ಪ್ರಾಮುಖ್ಯವಾದಂಥ ವಿಚಾರಗಳನ್ನು ಇಲ್ಲಿ ತರಬೇಕಾಗುತ್ತದೆ, ಅದು ಬೇಕಾಗುತ್ತದೆ. ಅದು ಇರಲಿ, ಇದರ ಬಗ್ಗೆ ಬದಲಾವಣೆ ಆಗಬೇಕಾಗುತ್ತದೆ. ನಿನ್ನೆ ಮಾತನಾಡಿದಂತೆ ಹೋದ ಸಾರಿ ನಾವೇನೊ ಈ ಸಭೆಯಿಂದ ಹೊರಗಡೆ ಇದ್ದೆವು. ನಮಗೆ ಇದರ ಒಂದು ಮಹತ್ವ ಕಾಣಲಿಲ್ಲ. ಪ್ರತಿಭಟನೆ ಮಾಡುತ್ತೇವೆ ಎಂದು ಹೇಳಿ ನಾವು ಹೊರಗಡೆ ಇದ್ದೆವು. ಇಲ್ಲಿ ಮುಖ್ಯ ಮಂತ್ರಿಗಳು ಧಾರಾಳವಾಗಿ ಅವರವರ ಇಚ್ಛೆಗೆ ಬಂದಂತೆ ಸಭೆಯನ್ನು ನಡೆಸಿಕೊಂಡು, ಅವರ ಇಚ್ಛೆಗೆ ಬಂದಂತೆ ಮಾತನಾಡಿಕೊಂಡು ಹೋದರು. ಇವತ್ತು ನಾನು ತಮಗೆ ಹೇಳುತ್ತೇನೆ, ಇವತ್ತು ಒಂದೇ ಒಂದು ಕನ್ನಡ ಸಂಸ್ಕೃತಿ ಇಲಾಖೆಯ ಬಗ್ಗೆ ಮಾತನಾಡುವುದಾದರೆ ಒಂದು ಇಡೀ ದಿನ ಮಾತನಾಡತಕ್ಕಂಥ ಎರಡು ದಿನ ಮಾತನಾಡತಕ್ಕಂಥ ವಿಚಾರಗಳು ಇವೆ. ಇದರ ಬಗ್ಗೆ ನಾವು ಬಹಳ ಚಿಂತನೆ ಮಾಡಬೇಕಾಗುತ್ತದೆ. ಮಾಡಲಿಲ್ಲ ಎಂದರೆ, ಈ ಚರ್ಚೆ ಅಷ್ಟೊಂದು ಅರ್ಥಪೂರ್ಣವಾದ ಚರ್ಚೆ ಆಗುತ್ತದೆ ಎಂದು ನಾನಂತೂ ಅಂದುಕೊಂಡಿಲ್ಲ. ನಮ್ಮಲ್ಲಿ ಕನ್ನಡ ಕಲಿಯಲೇಬೇಕು. ಪಾಪ ಏನೋ ಒಂದು ರೀತಿ ಕನ್ನಡದ ಮೇಲೆ ಏನೋ ಪಾಪ, ಏನೋ ಯಾವುದೋ ಒಂದು ಯಾರೋ ಭಿಕ್ಷೆ ಕೊಟ್ಟಹಾಗೆ ಏನೋ ಪಾಪ ಕಲಿಯಲಿ ಎನ್ನುವುದಿಲ್ಲ. ನಾವು ಕನ್ನಡ ಕಲಿಯಬೇಕು, ಶಾಸಕರಾದವರು ಕನ್ನಡ ಕಲಿಯಬೇಕು, ಅಧಿಕಾರಿಗಳಾದವರು ಕನ್ನಡ ಕಲಿಯಬೇಕು. ಇದು ಯಾವುದೋ ಒಂದು ತಬ್ಬಲಿ ಮಕ್ಕಳನ್ನು ಸಾಕಿದಂತಿದೆ. ತಂದೆ ತಾಯಿ ಯಾರೂ ಇಲ್ಲದೇ ಇರತಕ್ಕಂಥ ಮಕ್ಕಳು ಈ ಕನ್ನಡ ಭಾಷೆ ಎನ್ನುವ ರೀತಿ ಕೆಲವರಿಗೆ ಆಗಿದೆ ಎಂದು ಅನಿಸುತ್ತದೆ. ಆದರೆ ಇದು ತಬ್ಬಲಿ ಅಲ್ಲ. ಈ ನಾಡಿನಲ್ಲಿ ಕನ್ನಡಕ್ಕೆ ಅಗ್ರಸ್ಥಾನ ಇರಬೇಕು. ಕನ್ನಡಕ್ಕೆ ಸಾರ್ವಭೌಮತ್ವ ಇರಬೇಕು, ಕನ್ನಡ ಚಕ್ರಾಧಿಪತ್ಯವನ್ನು ಎತ್ತಿ ಹಿಡಿಯಬೇಕು. ನನ್ನ ತಾಯಿ ನುಡಿ ಕನ್ನಡ, ನನ್ನ ನುಡಿ ಕನ್ನಡ ಎನ್ನತಕ್ಕಂಥ ಆತ್ಮಾಭಿಮಾನ ಇರಬೇಕು.

ನಾವೆಲ್ಲ ಶಾಸಕರೂ, ಅಲ್ಲಿ ಕುಳಿತಿರತಕ್ಕ ಅಧಿಕಾರಿಗಳೂ, ಆತ್ಮ ಶೋಧನೆ ಮಾಡಿಕೊಳ್ಳಬೇಕು. ಏನೆಂದರೆ, ನಾವು ಕನ್ನಡಕ್ಕಾಗಿ ಎಷ್ಟು ಅಭಿಮಾನದಿಂದ ಇದ್ದೇವೆ; ಕನ್ನಡವನ್ನು ಎಷ್ಟರಮಟ್ಟಿಗೆ ಅನುಷ್ಠಾನದಲ್ಲಿ ತರುವ ಬಗ್ಗೆ ಚಿಂತನೆ ಇದೆ. ಈ ಬಗ್ಗೆ ಆತ್ಮಶೋಧನೆ ಆಗಲೇಬೇಕು. ಆತ್ಮಶೋಧನೆ ಆಗಲಿಲ್ಲ ಎಂದರೆ ನಾವು ನಾಟಕದಲ್ಲಿ ರಾಮನ ಪಾತ್ರ ಮಾಡಿದ ಹಾಗೆ ಆಗುತ್ತದೆ. ನಾಟಕದಲ್ಲಿ ಚಕ್ರವರ್ತಿಯ ಪಾತ್ರ ಮಾಡಿದ ಹಾಗೆ ಆಗುತ್ತದೆ, ಅದಲ್ಲ. ನಿಜಜೀವನದಲ್ಲಿ ಕನ್ನಡಕ್ಕೆ ಎಷ್ಟು ಗೌರವವನ್ನು ಕೊಡಬೇಕೋ ಆ ಗೌರವವನ್ನು ಕೊಡಬೇಕಾದುದು ನಮ್ಮ ಕರ್ತವ್ಯ. ಇವತ್ತು ಒಬ್ಬ ಅಧಿಕಾರಿ ಬಗ್ಗೆ ಹೇಳುತ್ತೇನೆ. ರಾಜ್ಯೋತ್ಸವದ ಮೆರವಣಿಗೆ ಬರುತ್ತಿತ್ತು. ಅದರಲ್ಲಿ ಎಚ್ಚಮ ನಾಯಕನ ಸ್ತಬ್ಧ ಚಿತ್ರ ಬರುತ್ತಿತ್ತು. ಎಚ್ಚಮ ನಾಯಕ ಎಂದರೆ ಹಾಮಾ ನಾಯಕ್ ಅವರಾ ಎಂದು ಒಬ್ಬರು

ಇಂಗ್ಲೀಷ್ ಅಧಿಕಾರಿ ಕೇಳಿದರು. ನಾನು ಹಾಮಾ ನಾಯಕ್ ಅಲ್ಲ ಎಚ್ಚಮ ನಾಯಕ ಎಂದು ಹೇಳಿದೆ. ಆ ಅಧಿಕಾರಿಗೆ ಎಚ್ಚಮ ನಾಯಕ ಯಾರು ಎಂದು ಗೊತ್ತಿಲ್ಲ. ಹಾಮಾ ನಾಯಕ್ ಆಗ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕೆಲಸ ಮಾಡಿದವರು, ಅವರ ಹೆಸರು ಎಂದು ತಿಳಿದಿದ್ದರು. ಎಚ್ಚಮ ನಾಯಕ ಒಬ್ಬ ದೊಡ್ಡ ಮಹಾನ್ ವ್ಯಕ್ತಿ ಎಂದು ಹೇಳಿದೆ. ಇವರೂ ಬೇರೆ ಇದ್ದಾರಾ ಎಂದರು. ಇವರು ಏನು ತಿಳಿದುಕೊಂಡಿದ್ದಾರೆ ಎಂದರೆ ಹಾಮಾ ನಾಯಕರೆಂದು ತಿಳಿದುಕೊಂಡಿದ್ದಾರೆ. ಹೊರಗಡೆಯಿಂದ ಬಂದಿರತಕ್ಕ, ಕನ್ನಡದ ಗಂಧವೇ ಗೊತ್ತಿಲ್ಲದೇ ಇರತಕ್ಕ ಅಧಿಕಾರಿಗಳ ಹಣೇ ಬರಹ ಇದು. ಡಾ: ಜೀಳರಾಜ್ ಆಳ್ವ ಅವರು ಹೇಳಿದರು. ನಾನು ಬಹಳ ಹೆಮ್ಮೆಯಿಂದ ಹೇಳುತ್ತೇನೆ. ಚಿರಂಜೀವಿ ಸಿಂಗ್ ಬಗ್ಗೆ ನಾನು ಸಂತೋಷದಿಂದ ಹೇಳುತ್ತೇನೆ. ಆತ ಹೊರಗಡೆಯಿಂದ ಬಂದಿರತಕ್ಕ ಒಬ್ಬ ಅಧಿಕಾರಿ. ಅವರಿಗೆ ಕನ್ನಡದ ಬಗ್ಗೆ ಸಾಕಷ್ಟು ತಾಳ್ಮೆ ಕಾಳಜಿ ಅಭಿಮಾನ ಇದೆ, ಇದು ಸಂತೋಷಪಡತಕ್ಕದ್ದು. ಅದೇ ರೀತಿ ನಮ್ಮಲ್ಲಿ ಇನ್ನೂ ಕೆಲವು ಐಎಎಸ್ ಅಧಿಕಾರಿಗಳು ಇದ್ದಾರೆ. ಶ್ರೀ ಪಾರ್ಥಸಾರಥಿ ಅವರು, ರೇಷ್ಮೆ ಇಲಾಖೆಯ ನಿರ್ದೇಶಕರಾಗಿದ್ದಾರೆ. ನಾವು ಸಂತೋಷಪಡತಕ್ಕ ವಿಚಾರ. ಪಾರ್ಥಸಾರಥಿ ಅವರದು 'ಪಾರ್ಥಸಾರಥಿಯ ತೀರ್ಪು' ಎಂದು ಒಂದು ಕನ್ನಡದ ಪುಸ್ತಕ ಬಂದಿದೆ. ಅದನ್ನು ನಮ್ಮ ಎಲ್ಲ ಅಧಿಕಾರಿಗಳೂ ಓದಬೇಕು. ಪಾರ್ಥಸಾರಥಿಯ ತೀರ್ಪುಗಳು, ಇದರಲ್ಲಿ ಅವರು ಎಲ್ಲೆಲ್ಲಿ ಯಾವ ಯಾವ ಅಧಿಕಾರದಲ್ಲಿ ಇದ್ದರು ಅಲ್ಲಿ ಅವರು ಕೊಟ್ಟಂತಹ ತೀರ್ಪುಗಳನ್ನೆಲ್ಲಾ ಸೇರಿಸಿ ಒಂದು ಪುಸ್ತಕ ಬಂದಿದೆ. ಅದು ಎಷ್ಟು ಮಾಧುರ್ಯವಾಗಿದೆ, ಎಷ್ಟು ಸುಂದರವಾಗಿದೆ. ನಮ್ಮ ಅಧಿಕಾರಿಗಳ ಆತ್ಮ ಶೋಧನೆ ಆಗಬೇಕು. ನಾವು ಈ ನಾಡಿನಲ್ಲಿದ್ದೇವೆ, ಈ ನಾಡಿನ ಸರ್ಕಾರದ ಅಧೀನದಲ್ಲಿದ್ದೇವೆ. ಈ ನಾಡಿನ ಸರ್ಕಾರದ ಸವಲತ್ತುಗಳನ್ನು ಪಡೆದಿದ್ದೇವೆ. ಈ ನಾಡಿನ ನೀತಿ ಏನು ? ಕನ್ನಡ ಭಾಷೆ, ಕನ್ನಡದಲ್ಲಿ ಆಡಳಿತವನ್ನು ನಡೆಸಬೇಕು ಎನ್ನತಕ್ಕ ನೀತಿಗೆ ನೀವು ಬದ್ಧರಾಗಿರುವುದೇ ಆದರೆ ನಿಮ್ಮ ಸೋಗನ್ನು, ನಿಮ್ಮ ನಯವಂಚನೆಯನ್ನು ಬಿಟ್ಟು ಸಂಪೂರ್ಣವಾಗಿ ಕನ್ನಡದ ಬಗ್ಗೆ ಒಂದು ಹೊಸ ಚೈತನ್ಯ ಬರುವ ರೀತಿಯಲ್ಲಿ ತಾವು ಕನ್ನಡದ ಸೇವೆಯನ್ನು ಮಾಡಲೇಬೇಕು. ಯಾರದ್ದೋ ಉಪಕಾರಕ್ಕೋಸ್ಕರವಾಗಿ ಅಲ್ಲ, ಅಧಿಕಾರಿಗಳ ಕೃಪೆ ಎಂದು ಕೇಳುವುದಿಲ್ಲ. ಅಧಿಕಾರಿಗಳೇ, ನಿಮ್ಮನ್ನು ಭಿಕ್ಷೆ ಕೇಳುತ್ತಾ ಇಲ್ಲ. ಈ ನಾಡಿನ ಆಡಳಿತವನ್ನು ಹಿಡಿದಿರತಕ್ಕ ಹಾಗೂ ಭಾಗಿಗಳಾಗಿರತಕ್ಕ ಅಧಿಕಾರಿ ವರ್ಗ, ನೀವು ಪ್ರಾಮಾಣಿಕವಾಗಿ ಕನ್ನಡವನ್ನು ಬೆಳೆಸುವ ಬಗ್ಗೆ ಕನ್ನಡದಲ್ಲಿ ಆಡಳಿತ ನಡೆಸುವ ಬಗ್ಗೆ ನಿಮ್ಮಲ್ಲಿ ಪರಿಣಾಮಕಾರಿಯಾದ ಚಿಂತನೆ ಬೇಕು; ಜೊತೆಗೆ ನಮ್ಮ ರಾಜಕಾರಣಿಗಳಲ್ಲೂ ಸಹ ಬರಬೇಕು. ಅಧಿಕಾರಿಗಳಲ್ಲಿ ಕನ್ನಡದ ಬಗ್ಗೆ ಒಂದು ಅತ್ಯಂತ ಪರಿಣಾಮಕಾರಿ ಆದಂತಹ ಒಂದು ಶಕ್ತಿ, ಚೈತನ್ಯ ತರತಕ್ಕ ಮನಸ್ಸು ಬೇಕು. ಸುಮ್ಮನೆ ನಾವು ಮಾತನಾಡತಕ್ಕದ್ದು ಅಲ್ಲ. ನಾನು ನೇರವಾಗಿ ಕೇಳುತ್ತೇನೆ. ಎಷ್ಟು ಜನ ಐಎಎಸ್ ಅಧಿಕಾರಿಗಳು, ದೊಡ್ಡ ದೊಡ್ಡ ಅಧಿಕಾರಿಗಳು ಮತ್ತು ಶಾಸಕರು, ಮಂತ್ರಿಗಳು ತಮ್ಮ ತಮ್ಮ ಮಕ್ಕಳನ್ನು, ಮೊಮ್ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗಳಿಗೆ ಸೇರಿಸಿದ್ದಾರೆ ? ಇದು ಬಹಿರಂಗ ಆಗಬೇಕು. ಈ ಬಗ್ಗೆ ಸರ್ಕಾರವನ್ನು ನೇರವಾಗಿ ಕೇಳುತ್ತೇನೆ.

ನೀವು ಹತ್ತು ವರ್ಷದ ಒಂದು ಸಮಗ್ರ ಚಿತ್ರವನ್ನು ತೆಗೆದುಕೊಂಡು ಯಾರ್‍ಯಾರ ಮಕ್ಕಳಿಗೆ ಯಾವ ಯಾವ ಭಾಷೆಯ ಶಾಲೆಯಲ್ಲಿ ಅಭ್ಯಾಸ ಮಾಡಿಸುತ್ತಿದ್ದಾರೆ ಎನ್ನತಕ್ಕ ಒಂದು ಶ್ವೇತ ಪತ್ರವನ್ನು ಈ ಸದನದ ಮುಂದೆ ಮಂಡಿಸಲಿ ಎಂದು ನಾನು ಹೇಳುತ್ತಿದ್ದೇನೆ. ಇದು ಆಗುತ್ತಾ ಇಲ್ಲ. ಈ ವ್ಯವಸ್ಥೆ ನಮ್ಮಲ್ಲಿ ತೀವ್ರತರವಾಗಿ ಜಾರಿ ಆಗಬೇಕು. ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಇದರಿಂದ ಇವರಿಗೆ ಕನ್ನಡದ ಬಗ್ಗೆ ಸ್ವಲ್ಪವೂ ಅಭಿಮಾನ ಇಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇವತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಏನು ಮಾಡಿದ್ದೇವೆ ಎಂದರೆ ಯಾವುದೋ ಒಂದು ಪುರಸಭೆಯ ಕಸದ ತೊಟ್ಟಿ ಎಂಬಂತೆ ಮಾಡಿದ್ದೇವೆ. ಇದಕ್ಕೆ ಏನಾದರೂ ಒಂದು ಬೆಲೆ ಬೇಡವೇ ?

ಈ ನಾಡು ಕನ್ನಡ ನಾಡು, ಈ ರಾಜ್ಯ ಕರ್ನಾಟಕ ರಾಜ್ಯ, ಈ ನಾಡಿನ ಹಿನ್ನೆಲೆ, ಈ ನಾಡಿನ ಬೆನ್ನೆಲುಬು ಕನ್ನಡ ಭಾಷೆ, ಈ ಭಾಷೆಯ ಅಭಿವೃದ್ಧಿಗೋಸ್ಕರವಾಗಿ, ಕಲೆಯ ಸಂಸ್ಕೃತಿಯ ಬೆಳವಣಿಗೆಗೆ ಇರತಕ್ಕ ಈ ಇಲಾಖೆ ಪುರಸಭೆಯ ಕಸದ ತೊಟ್ಟಿ ಆಗಿದೆ.

1.45 ಪಿ.ಎಂ.

ಏಕೆ ಸ್ವಾಮಿ ? ಈ ಒಂದು ಇಲಾಖೆಯನ್ನು ಎಷ್ಟು ಎತ್ತರವಾಗಿ ಬೆಳೆಸಬೇಕಾಗಿತ್ತು, ಎಷ್ಟು ಪರಿಣಾಮಕಾರಿಯಾಗಿ ಬೆಳೆಸಬೇಕಾಗಿತ್ತು. ಈ ಇಲಾಖೆಗೆ ಕೊಡತಕ್ಕಂಥ ಹಣ ಎಷ್ಟಿದೆಯೆಂದರೆ ಬರಿ 5 ಕೋಟಿ ರೂಪಾಯಿಗಳು. ನನಗನ್ನಿಸುತ್ತದೆ: ಏಕೆ ಅದಕ್ಕೊಬ್ಬರು ಸಚಿವರಾಗಬೇಕು ? ಬೇಕಾಗಿಲ್ಲ. ನಿಮಗೆ ಆ ಇಲಾಖೆ ಬಗ್ಗೆ ಅಷ್ಟೊಂದು ತಾತ್ಸಾರವಿದ್ದರೆ ಯಾರಾದರೊಬ್ಬ ಗುಮಾಸ್ತರನ್ನು ಕೊಡಿ ಸಾಕು. ಅದಕ್ಕೆ ಒಬ್ಬರು ರಾಜ್ಯ ಸಚಿವರು, ಅದಕ್ಕೊಂದು ವ್ಯವಸ್ಥೆ ಏಕೆ ಬೇಕು ? ಬೇಕಾಗಿಲ್ಲ. ಆ ಇಲಾಖೆಯಲ್ಲಿ ಒಬ್ಬ ಗುಮಾಸ್ತರನ್ನಿಟ್ಟು ಸರ್ಕಾರ ಇಲಾಖೆಗೆ ಕೊಡುವ ಐದೂವರೆ ಕೋಟಿ ರೂಪಾಯಿಗಳಲ್ಲಿ ಎರಡೂವರೆ ಕೋಟಿ ರೂಪಾಯಿಗಳು ಸಂಬಳ ಸಾರಿಗೆಗೆಂದು, ಇನ್ನೊಂದು ಕೋಟಿ ಸಂಗೀತ, ನಾಟಕಗಳಿಗೆಂದು, ಮತ್ತೊಂದು ಕೋಟಿಯನ್ನು ಬರಹಗಾರರಿಗೆ ಕೊಟ್ಟು ಒಂದು ದಿವಸ ಲೆಕ್ಕವನ್ನು ಮುಚ್ಚಿಬಿಡೋಣ ಎನ್ನುವುದಕ್ಕೋಸ್ಕರವೇ ಒಂದು ಇಲಾಖೆ ಇರಬೇಕೆ ? ಹೀಗಾಗಬಾರದು. ಈ ಇಲಾಖೆ ಬಗ್ಗೆ ಕಾಳಜಿ ಇರುವುದಾದರೆ ಮುಖ್ಯ ಮಂತ್ರಿಗಳು ಇವೊತ್ತು ಸದನದಲ್ಲಿದ್ದರೆ ಹೇಳುತ್ತಿದ್ದೆ. ಅವರಿಗೆ ಕನ್ನಡದ ಬಗ್ಗೆ ಬಹಳ ಅಭಿಮಾನ, ಕಾಳಜಿ ಇದೆ. ಕನ್ನಡ ಭಾಷೆಯನ್ನು ಶಕ್ತಿಪೂರ್ಣವಾಗಿ ಬೆಳೆಸಬೇಕೆಂಬ ಬಗ್ಗೆ ಒಂದು ಚಿಂತನೆ ಕೂಡ ಇದೆ. ಅದನ್ನು ನಾನು ಮೆಚ್ಚಿದ್ದೇನೆ. ಅವರ ಬಗ್ಗೆ ಸಾರ್ವಜನಿಕನಾಗಿ, ಬಹಿರಂಗವಾಗಿ ನೂರಾರು ಸಭೆಗಳಲ್ಲಿ ಹೇಳಿದ್ದೇನೆ. ಇವೊತ್ತು ಈ ಇಲಾಖೆಯನ್ನು ತಬ್ಬಲಿ ಇಲಾಖೆಯನ್ನಾಗಿ ಮಾಡಬಾರದು. ಈ ಇಲಾಖೆಯನ್ನು ಉಳಿದ ಎಲ್ಲಾ ಇಲಾಖೆಗಳಿಗಿಂತಲೂ ಹೆಚ್ಚಿನ ಮಟ್ಟದಲ್ಲಿ ಇಡಬೇಕಾದ್ದು ಸರ್ಕಾರದ ಕರ್ತವ್ಯ. ಇವೊತ್ತು ಈ ಇಲಾಖೆಗೆ ಒದಗಿಸಿರುವ ಹಣ 5 ಕೋಟಿ ರೂಪಾಯಿಗಳೆಂದರೆ ನಮಗೆ ನಾಚಿಕೆಯಾಗುತ್ತದೆ. ಈ 5 ಕೋಟಿ ರೂಪಾಯಿಗಳು ಯಾವುದಕ್ಕಾಗಿ ಸ್ವಾಮಿ ?

ಛೇರ್ಮನ್:– ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ನಾಮಕಾವಸ್ಥೆಯಾಗಿ ಅಪ್ಪ ನೆಟ್ಟ ಆಲದ ಮರದ ಹಾಗೆ ಇರಲಿ ಎಂದು ಇಟ್ಟಿದ್ದಾರೆ. ಆ ಇಲಾಖೆಯನ್ನು ಪರಿಶುದ್ಧಗೊಳಿಸುವುದಕ್ಕೆ ಸರಿಯಾದ ಒಂದು ವ್ಯವಸ್ಥೆಯಾಗಲೇಬೇಕು. ಇಲ್ಲದಿದ್ದರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೇ ಬೇಡ.

ಶ್ರೀ ವಾಟಾಳ್ ನಾಗರಾಜ್:– ನನಗನ್ನಿಸುತ್ತದೆ; ಅನೇಕರು ಈ ಇಲಾಖೆಗೆ ಬಂದು ಹೋಗಿದ್ದಾರೆ. ನಾವು ಇವೊತ್ತು ಪಕ್ಷಬೇಧ ಮರೆತು ಕೆಲವು ವಿಚಾರಗಳ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಶ್ರೀಮಾನ್ ಇದಿನಬ್ಬರವರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಅವರ ಮಾತೃಭಾಷೆ ಮಲಯಾಳಿಯಾಗಿದ್ದರೂ ಸಹ ಕನ್ನಡ ಭಾಷೆ ಬಗ್ಗೆ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಬಗ್ಗೆ ಅವರಿಗಿರತಕ್ಕಂಥ ಅಭಿಮಾನ ಗೌರೀಶಂಕರ ಶಿಖರದಷ್ಟು ಎತ್ತರವಾಗಿದೆ. ನಾನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅವರ ಮನೆಗೆ ತೆರಳಿ ಅವರನ್ನು ಸನ್ಮಾನಿಸಿದೆ. ಅವರಿಗೆ ಕನ್ನಡ ಭಾಷೆ ಬಗ್ಗೆ ಎಷ್ಟೊಂದು ಕಳಕಳಿಯಿದೆಯೆಂದರೆ, ಕನ್ನಡ ಭಾಷೆಯ ಬೆಳವಣಿಗೆ ಮಾಡಬೇಕೆಂಬ ಬಗ್ಗೆ ಚಿಂತನೆ ಇದೆ. ಈ ಹಿಂದೆ ಡಾ: ಜೀವರಾಜ್ ಆಳ್ವರವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದಾಗ ಈ ಇಲಾಖೆಗೆ 70–75 ಲಕ್ಷ ರೂಪಾಯಿಗಳನ್ನು ಒದಗಿಸುತ್ತಿದ್ದು, ಈಗ ಇರುವ ಸರ್ಕಾರ ಐವತ್ತು ಕೋಟಿ ರೂಪಾಯಿಗಳನ್ನು ಒದಗಿಸುತ್ತಿದೆ. ನಾನು ಇದರ ಬಗ್ಗೆ ಹೇಳುತ್ತಿಲ್ಲ. ಇದಕ್ಕೆ ಶಕ್ತಿ ತುಂಬಬೇಕಾದರೆ, ಒಂದು ಚೈತನ್ಯಪೂರ್ಣವಾದ ವ್ಯವಸ್ಥೆಯನ್ನು ನಾವು ಕೊಡಲಿಲ್ಲವೆಂದರೆ ಈ ಇಲಾಖೆ ಇರುವ ಬದಲು ಮುಚ್ಚತಕ್ಕಂಥ ಕೆಲಸವನ್ನಾದರೂ ಮಾಡಬೇಕು. ಯಾರಿಗೋಸ್ಕರ ಕೊಡುತ್ತಿದ್ದೀರಿ ಸ್ವಾಮಿ ? ಯಾವ ಉದ್ದೇಶಕ್ಕೋಸ್ಕರ ಕೊಡುತ್ತಿದ್ದೀರಿ ?

ಇವೊತ್ತು ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರಾಗಿರುವಂಥ ಶ್ರೀ ವಿಶ್ವನಾಥ್‌ರವರು ಕನ್ನಡದ ಬಗ್ಗೆ ಅಪಾರವಾದ ಅಭಿಮಾನವಿಟ್ಟಿರುವ, ನನ್ನ ಜೊತೆಯಲ್ಲಿ ನೂರಾರು ಚಳುವಳಿಗಳಲ್ಲಿ ಭಾಗವಹಿಸಿ ಕನ್ನಡಪರ ಕೂಗು ಹಾಕಿ ಅನೇಕ ಬಾರಿ ಬಂಧನಕ್ಕೊಳಗಾಗಿರುವವರು; ಅಂತೆಯೇ ಡಾ: ಜೀವರಾಜ್ ಆಳ್ವರವರು ಕೂಡ ಕನ್ನಡಪರ ಚಳುವಳಿ ಹೋರಾಟದಲ್ಲಿ ಓಡಾಡಿರತಕ್ಕಂಥವರಾಗಿದ್ದಾರೆ. ಶ್ರೀ ವಿಶ್ವನಾಥ್ ಅವರು ಈ ಇಲಾಖೆಗೆ ಬಂದ ನಂತರ ನಾನು ಅವರ ಅನೇಕ ಭಾಷಣಗಳನ್ನು ಕೇಳಿದ್ದೇನೆ. ನಾನು ಅದನ್ನು 'ಗಂಡು ಭಾಷಣ' ಎಂದು ಕರೆಯುತ್ತೇನೆ. ಅಷ್ಟು ಚೈತನ್ಯಪೂರ್ಣವಾಗಿ ಭಾಷಣ ಮಾಡಿದ್ದಾರೆ. ಆದರೆ ಭಾಷಣ ಮಾಡಿರುವ ರೀತಿಯಲ್ಲಿ ಕಾರ್ಯರೂಪಕ್ಕೆ ಒಂದೂ ಬಂದಿಲ್ಲ. ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಭಾಷಣ ಮಾಡಿದ್ದಾರೆ. ಏನೆಂದರೆ, 'ವಿಧಾನಸೌಧದಲ್ಲಿರತಕ್ಕಂಥ ಎಲ್ಲಾ ಇಂಗ್ಲೀಷ್ ನಾಮಫಲಕಗಳಿಗೆ ನಾನೇ ಟಾರು ಬಳಿಯುತ್ತೇನೆ' ಎಂದು ಹೇಳಿದರು. ಇದುವರೆವಿಗೂ ಟಾರು ಬಳಿದಿಲ್ಲ. ಆದುದರಿಂದ, ನಾವಿಬ್ಬರೂ ಒಂದು ದಿನ ಕುಳಿತು ಜೊತೆಯಲ್ಲಿ ಡಾ: ಜೀವರಾಜ್ ಆಳ್ವರನ್ನು, ಇದಿನಬ್ಬರವರನ್ನು ಕುಳ್ಳಿರಿಸಿಕೊಂಡು ಒಂದು ತೀರ್ಮಾನಕ್ಕೆ ಬರುತ್ತೇವೆ. ಮಾನ್ಯ ಅಧ್ಯಕ್ಷರೇ, ತಮಗೂ ಈ ಸಭೆಯಲ್ಲಿ ಹೇಳಿದ್ದೇವೆ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ಇನ್ನು ಅದು ಬದಲಾವಣೆಯಾದರೆ ಆಗಬಹುದು, ಇಲ್ಲದಿದ್ದರೆ ಬಿಡಬಹುದು. ಅಲ್ಲದೆ, ಯಾರು ಕನ್ನಡದ ವಿರೋಧಿಗಳಿದ್ದಾರೆ ಅವರ ಬಗ್ಗೆ ನನಗೆ ಸ್ವಲ್ಪವೂ ಗೌರವವಿಲ್ಲ. ಅವರು ಮಂತ್ರಿಗಳಾಗಿರಬಹುದು, ಶಾಸಕರಾಗಿರಬಹುದು, ಅಧಿಕಾರಿಗಳಾಗಿರಬಹುದು, ಸಾರ್ವಜನಿಕರಾಗಿರಬಹುದು, ಯಾರೇ ಆಗಿರಬಹುದು.

ಅವರು ಒಂದು ತೀರ್ಮಾನಕ್ಕೆ ಬರಬೇಕು, ಇಲ್ಲದಿದ್ದರೆ ಸರಿಯಾಗುವುದಿಲ್ಲ. ಇದು ಅತ್ಯಂತ ನೋವಿನ ಪ್ರಸಂಗ, ಈ ಇಲಾಖೆಯನ್ನು ನಾವೆಲ್ಲರೂ ಸೇರಿ ಸಂಪೂರ್ಣವಾಗಿ ಮೇಲ್ಮಟ್ಟಕ್ಕೆ ತರಬೇಕು. ಈ ಇಲಾಖೆಯ ಸಚಿವರು ರಾಜ್ಯ ಸಚಿವರಾಗಬಾರದು, ಅವರು ಸಂಪುಟದರ್ಜೆಯ ಸಚಿವರಾಗಬೇಕು. ಸಕ್ಕರೆ ಮತ್ತು ಸಣ್ಣ ಸಣ್ಣ ಇನ್ನೂ ಅನೇಕ ಖಾತೆಗಳಿಗೆ ಸಂಪುಟದರ್ಜೆ ಸಚಿವರನ್ನು ಕೊಟ್ಟಿರುವಾಗ ನಮ್ಮ ಕನ್ನಡದ ಬಗ್ಗೆ ಸಮಗ್ರವಾಗಿ ಚಿಂತನೆಯನ್ನು ಇಟ್ಟುಕೊಂಡಿರುವ ಕನ್ನಡದ ಅಭಿವೃದ್ಧಿಯ ಬಗ್ಗೆ, ಬೆಳವಣಿಗೆಯ ಬಗ್ಗೆ ಇರುವ ಮಂತ್ರಿಗಳು ಸಂಪುಟದರ್ಜೆಗೆ ಹೋಗುವಂತೆಯೇ ಇಲ್ಲ, ಇವರನ್ನು ಯಾವಾಗ ಬೇಕಾದರೂ ಕಳೆದುಕೊಳ್ಳಬಹುದು, ತೋಟಿ ತಳವಾರ ಇದ್ದಂತೆ ಇವರು, ಇದು ಎಲ್ಲಾದರೂ ಇದೆಯೋ ? ಅದು ಅಗೌರವ, ಈ ರಾಜ್ಯಕ್ಕೇ ಅಗೌರವ. ಈ ರಾಜ್ಯದ ಭಾಷೆಗೆ ಅಗೌರವ, ಇದು ಈ ಸರ್ಕಾರ ಮಾಡತಕ್ಕದ್ದು. ನಾಳೆ ವಿಶ್ವನಾಥ್‌ರವರು ಹೋಗಿ ಬೇರೆಯವರು ಬರಬಹುದು. ಆದ್ದರಿಂದ ಈ ಇಲಾಖೆಯ ಮಂತ್ರಿಗಳು ಸಂಪುಟದರ್ಜೆಗೆ ಏರಬೇಕಾಗುತ್ತದೆ, ಸಂಪುಟದರ್ಜೆಯ ಸ್ಥಾನಮಾನ, ಗೌರವ, ಶಕ್ತಿ ಕೊಡಬೇಕು. ಅವರ ವರದಿಯ ಪ್ರಕಾರ ಕನ್ನಡ ಸಂಸ್ಕೃತಿ ಇಲಾಖೆ ಏನೇನು ಮಾಡುತ್ತಿದೆ ಎಂದರೆ, ಕನ್ನಡದ ಅಭಿವೃದ್ಧಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು, ಇವೆರಡನ್ನು ಬಿಟ್ಟರೆ ಇನ್ನು ಯಾವ ಕೆಲಸವೂ ಇದಕ್ಕೆ ಇಲ್ಲ, ಇದರ ಹಣೇಬರಹ ಇಷ್ಟು, ನಮ್ಮ ರಾಜ್ಯದ ಆಡಳಿತ ಭಾಷೆಯಾಗಿ ಕನ್ನಡವನ್ನು ಸಮಗ್ರವಾಗಿ ಏಪ್ರಿಲ್ ಒಂದರಿಂದ ಜಾರಿ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಆಗ ಏಪ್ರಿಲ್ ಒಂದನ್ನು ಇಂಗ್ಲಿಷ್‌ನವರು ಮೂರ್ಖರ ದಿನವೆಂದು ಕರೆದಿರುವುದು. ಅದಕ್ಕೆ ನಮ್ಮನ್ನು ಸೇರಿಸಿ ಆ ರೀತಿ ಕರೆದು ಹಾಳುಮಾಡಬೇಡಿ ಎಂದು ಮುಖ್ಯ ಮಂತ್ರಿಗಳಿಗೆ ಹೇಳಿದೆ, ಆಗ ಅವರು ಇಲ್ಲ ಇಲ್ಲ, ಕನ್ನಡದವರು ಮೂರ್ಖರಲ್ಲ ಎಂದು ಹೇಳಿದರು. ಇವರು ಆ ರೀತಿ ಮಾಡುವುದಾಗಿದ್ದರೆ 23–24ರಂದು ಬರುವ ಯುಗಾದಿ ಹಬ್ಬದ ದಿನ ಮಾಡಬಹುದಾಗಿತ್ತು. ತಮಗೆ ನೇರವಾಗಿ ಕೇಳುತ್ತಿದ್ದೇನೆ ತಾವು ಏಪ್ರಿಲ್ ಒಂದರಂದು ಕನ್ನಡವನ್ನು ಸಮಗ್ರವಾಗಿ ಜಾರಿಗೆ ತರುತ್ತೇವೆಂದು ಹೇಳಿದ್ದೀರಿ. ಅದಕ್ಕೆ ಇನ್ನು 13–14 ದಿನಗಳು ಮಾತ್ರ ಇದೆ, ಇಷ್ಟು ದಿನಗಳಲ್ಲಿ ನೀವು ಕನ್ನಡವನ್ನು ಜಾರಿಗೆ ತರುವುದಕ್ಕೆ ಸಮರೋಪಾದಿಯಲ್ಲಿ ಯುದ್ಧಕ್ಕೆ ಯಾವ ರೀತಿಯಲ್ಲಿ

ತಯಾರಾಗಿದ್ದೀರಿ ? ನಿಮ್ಮ ನಿಲುವು ಏನು ? ನಿಮ್ಮ ನಿಯಮಗಳು ಏನು ? ಎಷ್ಟು ಅಧಿಕಾರಿಗಳನ್ನು ಕರೆಸಿ ಸಭೆ ಮಾಡಿದ್ದೀರಿ ? ಏನೇನು ಕಾರ್ಯಕ್ರಮ ಕೈಗೊಂಡಿದ್ದೀರೆಂದರೆ ಏನೂ ಇಲ್ಲ, ಬರೀ ದೊಡ್ಡ ಸೊನ್ನೆ ಅಷ್ಟೆ. ಇಲ್ಲಿ ಅದನ್ನು ಜಾರಿಗೆ ತರುವ ಬಗ್ಗೆ ಮುಖ್ಯ ಮಂತ್ರಿಗಳು ಘೋಷಣೆ ಮಾಡಿದರೆ ಅದು ಅಲ್ಲಿಗೇ ಮುಗಿಯಿತು; ಇವತ್ತಿನವರೆಗೂ ಏಪ್ರಿಲ್ ಒಂದನೇ ದಿನಾಂಕದಿಂದ ಕನ್ನಡವನ್ನು ಸಮಗ್ರವಾಗಿ ಜಾರಿಗೆ ತರುವ ಬಗ್ಗೆ ಸರ್ಕಾರ ಯಾವುದೇ ಕ್ರಮವನ್ನು ರೂಪಿಸಿಲ್ಲ, ನೀವು ಇದರ ಬಗ್ಗೆ ಸಚಿವ ಸಂಪುಟದಲ್ಲಿ ಎಷ್ಟು ಬಾರಿ ಚರ್ಚೆ ಮಾಡಿದ್ದೀರಿ.' ಖಂಡಿತವಾಗಿ ಇದರ ಬಗ್ಗೆ ಚರ್ಚೆ ಮಾಡಿಲ್ಲ, ಇದನ್ನು ಚರ್ಚೆಯ ವಿಷಯವನ್ನಾಗಿ ತೆಗೆದುಕೊಂಡೇ ಇಲ್ಲ.

ನೀವು ಇಷ್ಟೊಂದು ರೀತಿಯಲ್ಲಿ ಏಪ್ರಿಲ್ ಒಂದರಿಂದ ಕನ್ನಡವನ್ನು ಸಮಗ್ರವಾಗಿ ಜಾರಿಗೆ ತರುತ್ತೇವೆಂದು ಹೇಳಿದಿರಲ್ಲ, ಇದರ ಬಗ್ಗೆ ನನ್ನ ತೀವ್ರವಾದ ತಕರಾರು ಇದೆ, ಬಹಳ ನೋವು ಇದೆ. ನನಗನ್ನಿಸುತ್ತದೆ, ಇದು ಸರಿಯಾದ ರೀತಿಯಲ್ಲ, ತಾವು ಇದನ್ನು ಮಾಡುವುದಾದರೆ ಪರಿಣಾಮಕಾರಿಯಾಗಿ ಮಾಡಿ, ಈಗ ಕನ್ನಡ ಬೆರಳಚ್ಚು ಯಂತ್ರಗಳಿಗಾಗಿ ಟೆಂಡರ್‌ನ್ನು ಕರೆದಿದ್ದಾರೆ. ಅದರಲ್ಲಿ 250 ಬೆರಳಚ್ಚು ಯಂತ್ರಗಳಿಗೆ ಮಾತ್ರ ಕರೆದಿದ್ದಾರೆ; ಆದರೆ ನಮಗೆ ತಕ್ಷಣಕ್ಕೆ ಹೆಚ್ಚು ಕಡಿಮೆ ಸುಮಾರು 5 ಸಾವಿರ ಬೆರಳಚ್ಚು ಯಂತ್ರಗಳು ಬೇಕಾಗಿದೆ, ನಿಮಗೆ ಏನಾದರೂ ಕನ್ನಡದ ಬಗ್ಗೆ ಪ್ರಾಮಾಣಿಕತೆ ಇದ್ದರೆ, ಕನ್ನಡದ ಬಗ್ಗೆ ಚಿಂತನೆ ಇದ್ದರೆ 5 ಸಾವಿರ ಕನ್ನಡ ಬೆರಳಚ್ಚು ಯಂತ್ರಗಳಿಗೆ ಟೆಂಡರ್‌ನ್ನು ಕೊಡಬಹುದಾಗಿತ್ತು. ಇದೇನಿದು; ಕನ್ನಡದ ಹೆಸರಿನಲ್ಲಿ ಬರೀ ನಾಟಕ; ಇದು ಆಗಬಾರದು, ಈ ಸರ್ಕಾರ ನನಗೇನು ಮುಲಾಜು ಕೊಡಬೇಕಾಗಿಲ್ಲ, ಬೇಕಾದರೆ ನಾನು ತಮಗೆ ಒಂದು ವರದಿಯನ್ನು ಕೊಡುತ್ತೇನೆ, ನೀವು ಪ್ರಾಮಾಣಿಕವಾಗಿ ಮತ್ತು ಯಾವ ಅಕ್ಷರವನ್ನೂ ಬಿಡದೆ ನನ್ನ ವರದಿಯನ್ನು ಚಾಚೂ ತಪ್ಪದೆ ಒಪ್ಪಿಕೊಳ್ಳುವುದಾದರೆ ನಾನು 1–2 ತಿಂಗಳಿನಲ್ಲಿ ತಮಗೆ ಒಂದು ವರದಿಯನ್ನು ಕೊಡುತ್ತೇನೆ. ಆಗ ಸಮಗ್ರ ಕನ್ನಡದ ಕೂಗು, ಕನ್ನಡದ ಕೆಲಸವಾಗುತ್ತದೆ ಎನ್ನತಕ್ಕಂಥ ಮಾತನ್ನು ಅಭಿಮಾನದಿಂದ ಹೇಳುತ್ತಿದ್ದೇನೆ. ನಾವು ಮಂತ್ರಿಗಳಾದ ವಿಶ್ವನಾಥ್‌ರವರನ್ನು ಹಿಡಿದುಕೊಂಡರೆ ಅವರು ತಾನೇ ಏನು ಮಾಡುವುದಕ್ಕಾಗುತ್ತದೆ. ರಂಗಭೂಮಿ ಕಲಾವಿದರಿಗೆ ಮಾಸಾಶನವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ. ಆದರೆ ಹಣವೆಲ್ಲಿದೆ ?

ಈ ಹಿಂದೆ ಮಾನ್ಯ ದೇವರಾಜ್ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದರು; ಮಾನ್ಯ ಕೆ.ಹೆಚ್. ಶ್ರೀನಿವಾಸ್‌ರವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂತ್ರಿಗಳಾಗಿದ್ದರು. ನಾನು 10 ಜನ ರಂಗಭೂಮಿ ನಟರ ಪಟ್ಟಿಯನ್ನು ತೆಗೆದುಕೊಂಡು ಹೋಗಿ, ಸ್ವಾಮಿ, ಈ ಪಟ್ಟಿಯಲ್ಲಿರುವವರಿಗೆ, ಈ ಕೂಡಲೇ 500 ರೂಪಾಯಿ ಮಾಸಾಶನ ಕೊಡಬೇಕೆಂದು ಕೇಳಿದೆ. ಆ ಕೂಡಲೇ ಅವರು ಮಾಡಿಕೊಟ್ಟರು. ಅವರನ್ನು ಇವತ್ತು ನಾವು ನೆನೆಸಿಕೊಳ್ಳಬೇಕು. ನಾನು ಅವರಿಗೆ ಒಂದು ಮಾತನ್ನು ಏನು ಹೇಳಿದೆ ಅಂದರೆ, ಈ 10 ಜನರಲ್ಲಿ ಇನ್ನು 15 ದಿವಸದಲ್ಲಿ 5 ಜನ ಸತ್ತುಹೋಗುತ್ತಾರೆ, ಇನ್ನು 5 ಜನರು 1 ತಿಂಗಳು ಉಳಿದಿರುತ್ತಾರೆಂದು ಹೇಳಿದೆ. ಏಕೆಂದರೆ ಅಂಥ ಪರಿಸ್ಥಿತಿಯಲ್ಲಿ ಈ ನಟರು ನೆಲವನ್ನು ಕಚ್ಚಿದ್ದಾರೆ. ಆ ನಟರಿಗೆ ಮಾಸಾಶನ ಕೊಡಲು ಸರ್ಕಾರೀ ಆದೇಶ ಹೊರಟಿತು. ಸರ್ಕಾರದ ಆದೇಶ ಹೊರಟ 15 ದಿವಸದಲ್ಲೇ ಮೈಸೂರಿನ ದೊಡ್ಡಬಸವರಾಜು ಎನ್ನುವವರು ಶಕುನಿ ಪಾತ್ರವನ್ನು ಮಾಡುತ್ತಿದ್ದವರು ಸತ್ತುಹೋದರು; ಚಿಕ್ಕಬಸವರಾಜು ಎನ್ನುವವರು ಅಸುನೀಗಿದರು. ಇದನ್ನು ನಾನು ಹೇಳುವುದಕ್ಕೆ ಕಾರಣ ಏನೆಂದರೆ ಇನ್ನೂ 2 ವರ್ಷ ಕಳೆದ ಮೇಲೆ ಇಡೀ ರಾಜ್ಯದ ಎಲ್ಲಾ ಪತ್ರಿಕೆಗಳಲ್ಲೂ ಜಾಹಿರಾತನ್ನು ಕೊಟ್ಟು, ಕಲಾವಿದರು ಯಾರಾದರೂ ಇದ್ದರೆ ಬನ್ನಿ ಎಂದು ಕರೆದರೂ ಯಾರೂ ನಿಮಗೆ ಸಿಕ್ಕುವುದಿಲ್ಲ. ಇವತ್ತು ಆ ಕಲಾವಿದರ ಪರಿಸ್ಥಿತಿ ಅಷ್ಟೊಂದು ಶೋಚನೀಯವಾಗಿದೆ. ಇವತ್ತು ಈ ಕನ್ನಡ ಸಂಸ್ಕೃತಿ ಇಲಾಖೆಯ ಸುತ್ತ 6 ಅಕಾಡೆಮಿಗಳಿವೆ. ಅದರ ಜೊತೆಗೆ ಈಗ ತುಳು ಅಕಾಡೆಮಿ, ಕೊಡವ ಅಕಾಡೆಮಿ, ಕೊಂಕಣಿ ಅಕಾಡೆಮಿ ಹೀಗೆ 9 ಇವೆ. ಇವುಗಳಿಗೆ ನೀವು ಹಣವನ್ನು ಎಲ್ಲಿ

ಕೊಟ್ಟಿದ್ದೀರಿ ? ಈ ಅಕಾಡೆಮಿಗಳನ್ನು ಸ್ಥಾಪನೆ ಮಾಡುವ ಉದ್ದೇಶವಾದರೂ ಏನು ? ಒಂದು ಕಡೆ ಅಕಾಡೆಮಿಗಳು, ಇನ್ನೊಂದು ಕಡೆ ಕನ್ನಡ ಸಾಹಿತ್ಯ ಪರಿಷತ್ತು; ಪುಸ್ತಕ ಪ್ರಾಧಿಕಾರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತೊಂದು. ಹೀಗೆ. ತಾವು ಎಲ್ಲವನ್ನೂ ಸೇರಿಸಿಕೊಂಡು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಎಂದು ಹೇಳುತ್ತೀರಿ. ಈ ಸದನದಲ್ಲಿ ಸಮಗ್ರ ನೀತಿಯನ್ನೊಳಗೊಂಡಂತಹ ಒಂದು ಮಸೂದೆ ಬರಬೇಕು. ಸ್ಪಷ್ಟವಾಗಿ ಇದು ತೀರ್ಮಾನವಾಗಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಗ್ಗೆ ಮಾನ್ಯ ಮಂತ್ರಿಗಳು ಮಾಡಿರುವ ಅನೇಕ ಭಾಷಣಗಳನ್ನು ನಾನು ಕೇಳಿದ್ದೇನೆ. ಈ ಇಲಾಖೆಗೆ ಒಂದು ನೀತಿ ಇಲ್ಲ. ಆದೇ ಬೇರೆ ಬೇರೆ ಇಲಾಖೆಗಳಿಗೆ ನೀತಿಗಳಿವೆ. ಸಚಿವ ಸಂಪುಟದ ಇಲಾಖೆಗಳಿಗೆ ನೀತಿ ಇವೆ. ಆದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಒಂದು ನೀತಿ ಇಲ್ಲ ಎಂದರೆ ನಾವೆಲ್ಲರೂ ಇಲ್ಲಿ ತಲೆ ತಗ್ಗಿಸಬೇಕಾಗಿದೆ. ಆದ್ದರಿಂದ ಇದರ ಬಗ್ಗೆ ಒಂದು ಸಮಗ್ರವಾದ ನೀತಿಯನ್ನು ನಿರೂಪಣೆ ಮಾಡುವಂಥ ಒಂದು ಮಸೂದೆ ಈ ಸದನದಲ್ಲಿ ಬರಲೇಬೇಕಾಗಿದೆ. ಸ್ವಾಮಿ, ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ. ನಿಮಗೇನು ಕೆಲಸ, ನಿಮ್ಮ ನಿರ್ದೇಶಕರಿಗೆ ಏನು ಕೆಲಸ ? ಉಪ ನಿರ್ದೇಶಕರಿಗೆ ಏನು ಕೆಲಸ ? ನಾನಾದರೂ ಹೇಳುತ್ತೇನೆ, ಯಾರ್‍ಯಾರ ಕೆಲಸ ಏನೇನು ಎಂದು ಇಲ್ಲಿ ಹೇಳಿಯೇ ಇಲ್ಲ. ಮಂತ್ರಿ ಏನು ಮಾಡಬೇಕು...

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ನಾನು ಈ ಬೇಡಿಕೆಯ ಮೇಲೆ ಮಾತನಾಡದೇ ಇರುವುದರಿಂದ ನಾನು ಒಂದು ಸಲಹೆಯನ್ನು ಮಾನ್ಯ ಮಂತ್ರಿಗಳಿಗೆ ಕೊಡಬಯಸುತ್ತೇನೆ. ಏನೆಂದರೆ, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಎಂದು ಇದೆ. ಕೇವಲ ಈ ಇಲಾಖೆಗೆ ಕೊಡತಕ್ಕ ಹಣವನ್ನು ಮಾತ್ರ ಈ ಮಂತ್ರಿಗಳು ರಿವ್ಯೂ ಮಾಡುವುದಿಲ್ಲ. ಎಲ್ಲಾ ಇಲಾಖೆಗಳಿಗೂ ಕೊಡುವಂಥ ಹಣದಲ್ಲಿ ಸ್ಪೆಷಲ್ ಕಾಂಪೊನೆಂಟ್ ಸ್ಕೀಮನ್ನು ರಿವ್ಯೂ ಮಾಡುತ್ತಾರೆ. ಅದೇ ರೀತಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳಾದ ತಾವು ಎರಡು ಕೆಲಸವನ್ನು ಮಾಡಬೇಕು. ನಾವೆಲ್ಲಾ ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿದ್ದೇವೆ. ಮಾನ್ಯ ವಿಶ್ವನಾಥ್‌ರವರು ನಮಗೆ ಬೇಕಾಗಿರತಕ್ಕ ಮಂತ್ರಿಗಳು ಎನ್ನತಕ್ಕ ಉದ್ದೇಶದಿಂದಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳು ಸಚಿವ ಸಂಪುಟದ ಸ್ಥಾನ ಹೊಂದಿರಬೇಕೆಂದು ಏತಕ್ಕೆ ಹೇಳುತ್ತಿದ್ದೇವೆಂದರೆ, ಎಲ್ಲಾ ಇಲಾಖೆಗಳಲ್ಲೂ ಕನ್ನಡೀಕರಣ ಎಷ್ಟುಮಟ್ಟಿಗೆ ಆಗಿದೆ ಎಂಬ ಬಗ್ಗೆ ಪ್ರತಿ 2–3 ತಿಂಗಳಿಗೊಮ್ಮೆ ತಾವು ರಿವ್ಯೂ ಮಾಡಬೇಕು. ತಮಗೆ ಹೇಳುವುದಾದರೆ ನಮ್ಮಲ್ಲಿ ಕೆಲವು ಸಾರ್ವಜನಿಕ ಸೇವಾ ಸಂಸ್ಥೆಗಳಿವೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಸಾರಿಗೆ ಸಂಸ್ಥೆ. ನಾನು ಮಂತ್ರಿಯಾದ ಮೊದಲನೇ ವಾರದಲ್ಲಿ ಎರಡು ಪ್ರಮುಖ ಕೆಲಸಗಳನ್ನು ಮಾಡಿದ್ದೇನೆ. ಮೊದಲನೆಯದು ಯಾವುದೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಇದ್ದ ಬ್ಯಾಕ್‌ಲಾಗನ್ನು ತುಂಬಲು ರಿಕ್ರೂಟ್‌ಮೆಂಟ್ ಮಾಡಲಿಕ್ಕೆ ಕ್ರಮ ತೆಗೆದುಕೊಂಡಿದ್ದು. ಎರಡನೆಯದಾಗಿ ಈ ಸಂಸ್ಥೆಯ ಆಡಳಿತದಲ್ಲಿ ಎಲ್ಲ ಹಂತಗಳಲ್ಲೂ ಕನ್ನಡದಲ್ಲೇ ಆಡಳಿತ ಮಾಡಲು ಕ್ರಮ ತೆಗೆದುಕೊಂಡಿದ್ದು. ನನಗೆ ಇದು ಬಹಳ ಸಂತೋಷವಾಗುತ್ತದೆ. ಚಿತ್ರದುರ್ಗದ ಶ್ರೀ ತಿಪ್ಪೇಸ್ವಾಮಿ ಎನ್ನುವವರು ಈ ಸದನದ ಸದಸ್ಯರಾಗಿದ್ದರು. ಅವರು ನಮ್ಮ ಸಂಸ್ಥೆಯ ವರದಿಯನ್ನು ನೋಡಿ ಅದನ್ನು ನಂಬದೆ ಅವರೇ ಸ್ವತಃ ಅಲ್ಲಿಗೆ ಬಂದು ರಿವ್ಯೂ ಮಾಡಿ ಸಂತೋಷಪಟ್ಟರು. ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಿರುವ ಎರಡು ಸಾರ್ವಜನಿಕ ಸಂಸ್ಥೆಗಳು ಎಂದರೆ; ಒಂದು ಎನ್.ಜಿ.ಇ.ಎಫ್. ಇನ್ನೊಂದು ಕೆ.ಎಸ್.ಆರ್.ಟಿ.ಸಿ. ಬೇರೆ ಬೇರೆ ರಾಜ್ಯಗಳ ಜೊತೆ ವ್ಯವಹಾರ ಮಾಡುವಾಗ ಅಲ್ಲಿ ಇಂಗ್ಲಿಷ್‌ನಲ್ಲೂ ವ್ಯವಹಾರ ಮಾಡುತ್ತಾರೆ. ಆದರೆ ಅದರ ಕೆಳಗೇ ಕನ್ನಡೀಕರಣ ಇದೆ. ಅದೇ ರೀತಿ ನೀವು ಕ್ಯಾಬಿನೆಟ್ ಸಚಿವರಾದರೆ ಪ್ರತಿಯೊಂದು ಇಲಾಖೆಯಲ್ಲೂ ಯಾವ ಯಾವ ಹಂತದಲ್ಲಿ ಕನ್ನಡ ಜಾರಿಯಲ್ಲಿದೆ ಅಥವಾ ಜಾರಿಯಲ್ಲಿಲ್ಲದಿದ್ದರೆ ಇದಕ್ಕೆ ಕಾರಣವೇನು ಎಂದು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಬೇಕು. ಇದಕ್ಕಾಗಿ ಒಂದು ಕಾರ್ಯಕ್ರಮ

ಹಾಕಿಕೊಳ್ಳಬೇಕು. ಏಕೆಂದರೆ ಕೆಲವು ಸಮಸ್ಯೆಗಳಿವೆ. 35 ಇಲಾಖೆಗಳಲ್ಲೂ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಲು ಇರುವಂಥ ತೊಂದರೆಗಳೇನೆಂದು ಕೇಳಬೇಕು. ಅದಕ್ಕೋಸ್ಕರ ನಾನು ಒತ್ತಾಯ ಮಾಡುತ್ತಿದ್ದೇನೆ. ಈ ಒಂದು ಖಾತೆಗೆ ಸಚಿವ ಸಂಪುಟದ ಸ್ಥಾನ ಬೇಕು. ಇದು ನಿಮಗೋಸ್ಕರವಾಗಿ ಎಂದಲ್ಲ. ಅದು ಯಾರೇ ಆಗಿರಲಿ, ತಾವು ಸಹಿತ ಇವತ್ತಿನಿಂದಲೇ ಈ ಕೆಲಸವನ್ನು ಪ್ರಾರಂಭ ಮಾಡಬೇಕು. ಈ ಬಗ್ಗೆ ತಮ್ಮಿಂದ ಒಂದು ಉತ್ತರವನ್ನು ನಿರೀಕ್ಷೆ ಮಾಡುತ್ತೇವೆ. ದಯವಿಟ್ಟು ಈ ಕೆಲಸವನ್ನು ಎಲ್ಲಾ ಇಲಾಖೆಗಳಲ್ಲೂ ಮಾಡಿದರೆ ಸರಿಹೋಗುತ್ತದೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಈಗ ನಮ್ಮಲ್ಲಿ ದ್ವಂದ್ವ ಶುರುವಾಗಿಬಿಟ್ಟಿದೆ. ಮಾನ್ಯ ಅಜೀಜ್ ಸೇಠ್‌ರವರು ಕನ್ನಡ ಭಾಷೆಯ ಬಗ್ಗೆ ನಮ್ಮ ಸಚಿವರಾದಂಥ ಮಾನ್ಯ ವಿಶ್ವನಾಥ್‌ರವರ ಮೇಲೆ ನ್ಯಾಯಾಲಯಕ್ಕೆ ಹೋಗುತ್ತೇನೆಂದು ಹೇಳಿದ್ದಾರೆ. ಅವರು ಹೇಳುವಾಗ ಈ ಸದನದಲ್ಲಿ ಆ ವಿಚಾರವನ್ನು ತರುವುದಿಲ್ಲ, ನಾನು ನ್ಯಾಯಾಲಯಕ್ಕೆ ಹೋಗುತ್ತೇನೆಂದು ಹೇಳಿದ್ದಾರೆ. ಈ ಸದನಕ್ಕೆ ಮಾಡಿದ ಮೊದಲನೆ ಅಪಚಾರ ಅದು. ನಾವು ಅವರ ಮೇಲೆ ಹಕ್ಕುಚ್ಯುತಿ ತರುತ್ತೇವೆ. ಈ ಸದನದಲ್ಲಿ ಅದು ಚರ್ಚೆಯಾಗಬೇಕು. ಈ ಸದನದ ಬಗ್ಗೆ ಅವರಿಗೆ ಗೌರವವಿಲ್ಲವೆಂದರೆ ಏನು ಅದರ ಅರ್ಥ. ಅದನ್ನು ನಾನು ಒಪ್ಪುವುದಿಲ್ಲ. ಯಾರೂ ಸಹ ಇವತ್ತು ಈ ರಾಜ್ಯದಲ್ಲಿ ಕನ್ನಡವನ್ನು ಅಗೌರವದಿಂದ ಕಾಣತಕ್ಕಂಥದ್ದಲ್ಲ, ಕನ್ನಡವನ್ನು ಗೌರವದಿಂದ ಕಾಣಬೇಕು. ಮಾನ್ಯ ಅಧ್ಯಕ್ಷರೇ, ತಮ್ಮ ಬಗ್ಗೆ ಹೇಳುತ್ತೇನೆ. ತಮ್ಮ ಬಗ್ಗೆ ಎಷ್ಟು ಗೌರವವಿದೆ ಅಂದರೆ ನಿಮ್ಮನ್ನು ನಾವು ಮುಸಲ್ಮಾನ ಎಂದು ಗುರುತಿಸಿಲ್ಲ; ಅಥವಾ ಹಿಂದೂ ಎಂದು ಗುರುತಿಸಿಲ್ಲ, ಒಬ್ಬ ದೊಡ್ಡ ಮಾನವ, ದೊಡ್ಡ ವ್ಯಕ್ತಿತ್ವವನ್ನು ಹೊಂದಿರತಕ್ಕಂಥ, ಒಬ್ಬ ದೊಡ್ಡ ವ್ಯಕ್ತಿ ಎಂದು ಗುರುತಿಸಿದ್ದೇವೆ. ಒಬ್ಬ ಕನ್ನಡದ ಶ್ರೀಮಂತಿಕೆ ಇರುವಂಥವರೆಂದು ಗುರುತಿಸಿದ್ದೇವೆ. ಅದೇ ನಿಸಾರ್ ಅಹಮದ್ ಅವರು ಎಂಥ ದೊಡ್ಡ ಮಹಾಕವಿ; ಅಕ್ಬರ್ ಆಲಿಯವರು ಎಂಥ ಕವಿ; ನಮ್ಮಲ್ಲಿ ಶತಮಾನಗಳ ಹಿಂದೆ 200 ವರ್ಷಗಳ ಹಿಂದೆ ಶಿಶುನಾಳ ಶರೀಫರು ಎಂಥ ಒಂದು ದೊಡ್ಡ ಪವಿತ್ರವಾದಂಥ ಕವಿತೆಗಳನ್ನು ಬರೆದಿದ್ದಾರೆ. ನಾವು ಇವತ್ತು ಈ ನಾಡಿನ ಮಣ್ಣಿನಲ್ಲಿ ಬದುಕುತ್ತಿರುವಾಗ, ಈ ನಾಡಿನ ಗಾಳಿಯನ್ನು ಕುಡಿಯುತ್ತಿರುವಾಗ, ಈ ನಾಡಿನ ನೀರನ್ನು ಕುಡಿಯುತ್ತಿರುವಾಗ, ಈ ನಾಡಿನ ಅನ್ನವನ್ನು ತಿನ್ನುತ್ತಿರುವಾಗ ಕನ್ನಡಕ್ಕೆ ಎರಡನ್ನು ಎಣಿಸುತ್ತಿರತಕ್ಕಂಥವರು ಕನ್ನಡದ ದ್ರೋಹಿಗಳು. ಅದರಲ್ಲಿ ಅನುಮಾನವಿಲ್ಲ. ಮೇಲುನೋಟಕ್ಕೆ ಮಾನ್ಯ ಅಜೀಜ್ ಸೇಠ್‌ರವರು ಯಾರನ್ನು ಹೆದರಿಸುತ್ತಿದ್ದಾರೆ, ನಾವು ತಯಾರಾಗಿದ್ದೇವೆ; ಇಡೀ ರಾಜ್ಯವೇ ತಯಾರಾಗಿದೆ. ಅಜೀಜ್ ಸೇಠ್‌ರವರ ಗೊಡ್ಡು ಬೆದರಿಕೆಗೆ ನಾವು ಯಾರೂ ಬಗ್ಗತಕ್ಕಂಥವರಲ್ಲ. ನಾನು ಅದನ್ನೇ ಹೇಳಿದೆ; ಅವತ್ತು ಮಾನ್ಯ ಸಚಿವರ ಮೇಲೆ ಹಕ್ಕುಚ್ಯುತಿ ತರುತ್ತೇವೆಂದು ಹೇಳಿದಾಗ ನಾನು ಧರಣಿ ಮಾಡುತ್ತಿದ್ದೆ. ನಾನು ಎದ್ದು ಮಾನ್ಯ ವಿಶ್ವನಾಥ್‌ರವರೇ, ನಾವು ಧರಣಿಬಿಟ್ಟು ಮೇಲೆ ಬಂದಾಗ ಈ ಚರ್ಚೆ ಬರಲಿ, ಸವಾಲು ಕೊಡುತ್ತೇವೆಂದು ಹೇಳಿದೆ. ಮಾನ್ಯ ಅಜೀಜ್ ಸೇಠ್‌ರವರು ಈ ಸಭೆಯನ್ನು ಕಡೆಗಾಣಿಸಿ, ಈ ಸದನವನ್ನು ಗಾಳಿಗೆ ತೂರಿ ಹೊರಗಡೆ ನ್ಯಾಯಾಲಯಕ್ಕೆ ಹೋಗುತ್ತೇನೆಂದು ಹೇಳಿದ್ದಾರಲ್ಲ, ಅದು ಸರಿಯಾದ ಕ್ರಮವಲ್ಲ. ನ್ಯಾಯಾಲಯದ ಬಗ್ಗೆ ನಮಗೆ ಗೌರವವಿದೆ.

ನ್ಯಾಯಾಲಯದ ಬಗ್ಗೆ ನಮಗೆ ಅತ್ಯಂತ ಮಹತ್ತರವಾದ ಗೌರವಿದೆ. ಇದು ಜನತೆ ನೀಡಿರುವ ನ್ಯಾಯಾಲಯ. ಇದು ಪ್ರಜಾಪ್ರಭುತ್ವದ ನ್ಯಾಯಾಲಯ. ಇಲ್ಲಿ ಹಕ್ಕುಚ್ಯುತಿಯನ್ನು ತರಲಿ, ಅದರ ಬಗ್ಗೆ ಚರ್ಚೆಯು ನಡೆಯಲಿ. ಅದನ್ನು ಬಿಟ್ಟು ನಾನು ಕೋರ್ಟಿಗೆ ಹೋಗುತ್ತೇನೆಂದು ಹೇಳುತ್ತಿದ್ದಾರಲ್ಲ, ಇದು ಈ ಸದನ ಒಂದೇ ಅಲ್ಲ, ರಾಜ್ಯಾದ್ಯಂತ ಅವರ ವಿರುದ್ಧ ದೊಡ್ಡ ಹೋರಾಟವೇ ನಡೆದೀತು ಎನ್ನತಕ್ಕಂಥ ಎಚ್ಚರಿಕೆಯನ್ನು ನನ್ನ ಮಿತ್ರರಾದ ಶ್ರೀಮಾನ್ ಅಜೀಜ್ ಸೇಠ್‌ರವರಿಗೆ ಕೊಡುತ್ತಿದ್ದೇನೆ, ಈ ರೀತಿ ಹೋಗಬಾರದು, ಇದು ಹೋಗತಕ್ಕಂಥ ರೀತಿಯಲ್ಲ. ಈಗ ನಮ್ಮಲ್ಲಿ ತಮಿಳು ಶಾಲೆಗಳು,

ತೆಲುಗು ಶಾಲೆಗಳು, ಉರ್ದು ಶಾಲೆಗಳು ಇವೆ. ಏನು ಸ್ವಾಮಿ ಇದು. ಇದು ಅರ್ಥವಿಲ್ಲದ್ದು; ಯಾರು ಬೇಕಾದರು ಈ ಊರಲ್ಲಿ ಬಂದು ಏನುಬೇಕಾದರೂ ಮಾಡಿಕೊಂಡು ಹೋಗಬಹುದೇ ? ಇದನ್ನು ಹೇಳತಕ್ಕಂಥವರು, ಕೇಳತಕ್ಕಂಥವರು, ಮೂಗುದಾರ ಹಾಕತಕ್ಕಂಥವರು, ಯಾರೂ ಇಲ್ಲವೋ ? ಅವರು ಇಚ್ಛೆಗೆ ಬಂದಂತೆ ಶಾಲೆಗಳು ಇರತಕ್ಕಂಥಾದ್ದಲ್ಲ. ಇಲ್ಲಿ ನೂರಕ್ಕೆ ನೂರು ಕನ್ನಡ ಶಾಲೆಗಳೇ ಇರಬೇಕು. ಇಂಗ್ಲೀಷ್ ಶಾಲೆಗಳವರು ಮಹಾಮೋಸಗಾರರು, ವಂಚಕರು, ದರೋಡೆಕೋರರು, ಹಗಲು ದರೋಡೆ ಮಾಡತಕ್ಕಂಥವರು, ಇವತ್ತು ಪಾಪ ಒಬ್ಬರು ಇದ್ದಾರೆ. ಅವರ ಹೆಸರನ್ನು ಹೇಳುತ್ತೇನೆ. ಅವರ ಹೆಸರೂ ಕುಮಾರನ್ ಎಂದು. ಕುಮಾರನ್ ಮಕ್ಕಳಶಾಲೆ ಎಂದು ಇದೆ. ಇಂಥದ್ದು ಏನು ಪ್ರಾರಂಭ ಮಾಡಿದ್ದಾರೆ, ಅವರು 20–25 ವರ್ಷಗಳಿಂದ ಕರ್ನಾಟಕದಲ್ಲಿಯೇ ಇದ್ದಾರೆ. ಆ ವ್ಯವಸ್ಥೆಯನ್ನು ಮಾಡಿರತಕ್ಕಂಥವರು ಅವರು. ಅದು ದರೋಡೆ ಸ್ವಾಮಿ. ಸಣ್ಣ ಮಕ್ಕಳನ್ನು ಪ್ರಾಥಮಿಕ ಶಾಲೆಗೆ ಸೇರಿಸಿಕೊಳ್ಳುವಾಗ 10 ಸಾವಿರ, 30 ಸಾವಿರ, 40 ಸಾವಿರ ತೆಗೆದುಕೊಳ್ಳುತ್ತಾರೆ. ಏನು ಈ ಪರಿಸ್ಥಿತಿ ? ಈ ಮಟ್ಟದಲ್ಲಿ ನಮ್ಮ ಆಂಗ್ಲ ಮಾಧ್ಯಮ ಶಾಲೆಗಳು ದರೋಡೆ ಮಾಡುತ್ತಿದ್ದರೂ ನಾವು ಕಣ್ಮುಚ್ಚಿಕೊಂಡು ಕುಳಿತಿದ್ದೇವೆ.

ನಮಗೆ ಕಣ್ಣಿಲ್ಲವೆ, ಕಿವಿ ಇಲ್ಲವೆ, ಹೃದಯ ಇಲ್ಲವೆ ? ಈ ನಾಡಿನಲ್ಲಿ ನಾವು ಯಾವುದಕ್ಕೋಸ್ಕರ ಇರಬೇಕು ? ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿದ ರಾಜ್ಞಾರಾಮಣ್ಣ ವಿಶ್ವವಿಖ್ಯಾತರಾಗಲಿಲ್ಲವೆ ? ಸರ್.ಎಂ. ವಿಶ್ವೇಶ್ವರಯ್ಯನವರು ವಿಶ್ವವಿಖ್ಯಾತರಾಗಲಿಲ್ಲವೆ ? ಇವತ್ತು ಈ ಒಂದು ಕೆಟ್ಟ ಚಾಳಿ ಬೆಳೆದಿದೆ. ನಾನು ನೇರವಾಗಿ ಪ್ರಾಥಮಿಕ ಶಿಕ್ಷಣ ಮಂತ್ರಿಗಳಾದ ಶ್ರೀ ಲಮಾಣಿಯವರಿಗೆ ಹೇಳುತ್ತಿದ್ದೇನೆ, ನೀವು ಕನ್ನಡದ ಬಗ್ಗೆ ಅಭಿಮಾನ ಇರತಕ್ಕವರು. ನಿಮ್ಮ ಪುತ್ರನನ್ನು ಕನ್ನಡ ಚಿತ್ರದಲ್ಲಿ ಪಾತ್ರ ಮಾಡಲು ಕಳುಹಿಸಿದ್ದೀರಿ. ಒಂದು ಕಡೆ ಕನ್ನಡ ಚಿತ್ರದಲ್ಲಿ ಪಾತ್ರ, ಮತ್ತೊಂದು ಕಡೆ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಬೆಂಬಲ ಕೊಡತಕ್ಕ ದ್ವಂದ್ವ ನೀತಿಗೆ ನೀವು ಹೋಗುವುದಾದರೆ ಅದು ಒಳ್ಳೆಯದಲ್ಲ. ಈ ಆಂಗ್ಲ ಶಾಲೆಗಳನ್ನು ನಡೆಸತಕ್ಕ ಕೆಟ್ಟ, ಕಳ್ಳ, ದರೋಡೆಕೋರರು ಯಾರಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಈ ದರೋಡೆಕೋರರು ಹಣವಿಲ್ಲದೆ ಸಣ್ಣ ಮಕ್ಕಳನ್ನು ಶಾಲೆಗೆ ಕರೆದುಕೊಳ್ಳುವುದಕ್ಕೆ ತಯಾರಿರುವುದಿಲ್ಲ. ಅವರು ಒಂದಲ್ಲ ನಾನಾ ರೀತಿಯಲ್ಲಿ ಹಣದ ಸುಲಿಗೆ ಮಾಡುತ್ತಾರೆ. ಅಂಥ ಶಿಕ್ಷಣ ಸಂಸ್ಥೆಗಳ ಬಗ್ಗೆ ಸರ್ಕಾರ ತೀವ್ರ ಕ್ರಮ ಕೈಗೊಳ್ಳಬೇಕು. ಇಂಥ ಎಷ್ಟು ಶಾಲೆಗಳು ಬೆಂಗಳೂರಿನಲ್ಲಿವೆ ಮತ್ತು ಎಷ್ಟು ಶಾಲೆಗಳು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿವೆ ? ಇವಕ್ಕೆಲ್ಲ ಪರವಾನಗಿ ಕೊಟ್ಟವರು ಯಾರು ? ಈ ಬಗ್ಗೆ ಚರ್ಚೆ ಮಾಡಲಿಕ್ಕೆ ಸದನದ ಮುಂದೆ ಸಮಗ್ರವಾದ ಒಂದು ವರದಿಯನ್ನು ಇಡಬೇಕು. ಮಾನ್ಯ ಅಧ್ಯಕ್ಷರೇ, ತಾವು ನೋಡಿದ್ದೀರಿ, ನಿಮ್ಮ ಜಿಲ್ಲೆಯಲ್ಲೂ ಉಂಟು.

ಛೇರ್ಮನ್:– ಎಲ್ಲ ಕಡೆಯಲ್ಲೂ ಉಂಟು.

ಶ್ರೀ ವಾಟಾಳ್ ನಾಗರಾಜ್:– ಇದು ಬಹಳ ಕೆಟ್ಟ ಪರಿಣಾಮವನ್ನು ಬೀರುತ್ತಿದೆ. ಜಿಲ್ಲೆಗಳು ವಿಂಗಡಣೆ ಆದಾಗ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಎಂದು ಹೇಳಿದ್ದು ನಮಗೆ ತುಂಬ ಸಂತೋಷ. ಇದು ಎಷ್ಟು ಸುಂದರವಾದ ಹೆಸರು. ನೀವು ಕನ್ನಡ ಉಗಮದಿಂದ ಬಂದವರು ಎಂದು ಸಂತೋಷಪಡುತ್ತೇವೆ. ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಎಂದು ಈ ಜಿಲ್ಲೆಗಳಿಗೆ ಎಷ್ಟು ಚೆನ್ನಾಗಿರುವ ಹೆಸರು ಇಟ್ಟಿದ್ದಾರೆ. ಅದನ್ನು ಇಂಗ್ಲಿಷ್‌ನಲ್ಲಿ ಕರೆಯುವಾಗ ಎಷ್ಟು ಕರ್ಕಶವಾಗಿರುತ್ತದೆ, ಎಷ್ಟು ಕೆಟ್ಟದ್ದಾಗಿರುತ್ತದೆ. ಇಂಗ್ಲಿಷ್‌ನಲ್ಲಿ ಜಿಲ್ಲೆಗಳನ್ನು ಕರೆಯುವವರು ಕೊಡಗನ್ನು ಎಷ್ಟು ಕೆಟ್ಟದಾಗಿ ಕರೆಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯನ್ನು, ಉತ್ತರ ಕನ್ನಡ ಜಿಲ್ಲೆಯನ್ನು ಇಂಗ್ಲಿಷ್‌ನಲ್ಲಿ ಎಷ್ಟು ಕೆಟ್ಟದಾಗಿ ಕರೆಯುತ್ತಾರೆ. ಅದನ್ನು ನೋಡಿದರೆ ನಾವು ಯಾವ ಜಿಲ್ಲೆಯವರು ಎಂದು ವ್ಯಸನ, ಚಿಂತೆ ಬರುತ್ತದೆ.

ಆದುದರಿಂದ ನಾನು ತಮಗೆ ಹೇಳುತ್ತಿದ್ದೇನೆ, ಕನ್ನಡದ ಬಗ್ಗೆ ಸಮಗ್ರ ನೀತಿ–ಚಿಂತನೆ ಆಗಬೇಕಾಗಿದೆ. ಇದರ ಬಗ್ಗೆ ತಾವು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೆಂದು ಅತ್ಯಂತ ಕಳಕಳಿಯಿಂದ ಹೇಳುತ್ತೇನೆ.

ತಾವು ನೋಡಿದ್ದೀರಿ, ನಿಮ್ಮಲ್ಲಿ ಯಕ್ಷಗಾನ ಇದೆ; ಅದನ್ನು ನಾವು ಬಯಲಾಟ ಎಂದು ಹೇಳುತ್ತೇವೆ. ನಮ್ಮಲ್ಲಿ ನಾಟಕಗಳು ಇವೆ. ತಮಗೆ ಸ್ಥೂಲವಾಗಿ ನಾಟಕದ ವಿಚಾರ ಹೇಳುತ್ತೇನೆ. ಇವತ್ತಿನ ದಿವಸ ನಮ್ಮಲ್ಲಿ ಕನ್ನಡ ರಂಗಭೂಮಿ ನೆಲ ಕಚ್ಚಿದೆ. ಅದರಲ್ಲಿ ಎರಡು ವಿಧ. ಹಳ್ಳಿಗಳಲ್ಲಿ ನಾಟಕಗಳ ಪ್ರದರ್ಶನ ಮಾಡಿಸಬೇಕಾದರೆ, ಹಳ್ಳಿಯಲ್ಲಿನ ಉಪಾಧ್ಯಾಯರನ್ನು ನಾಟಕದ ಮೇಷ್ಟ್ರು ಎಂದು ಕರೆಯುತ್ತಾರೆ. ಈಗಲೂ ಸಹ ಅವರು ಹಳ್ಳಿಯಲ್ಲಿ ಬಂದರೆ ಎಲ್ಲಿಲ್ಲದ ಸಂತೋಷ. ಲೆಗ್ ಹಾರ್ಮನಿ ಎಂದು ಇಂಗ್ಲಿಷ್ ಹೆಸರು ಅನ್ವರ್ಥವಾಗಿದೆ. ಲೆಗ್ ಏನಾಗಿದೆ ಎಂದರೆ ಕನ್ನಡಕ್ಕೆ ಸೇರಿದೆ. ಹಳ್ಳಿಯಲ್ಲಿ ಭಾಷೆ ಬಾರದವರನ್ನು ಕೇಳಿದರೂ ಲೆಗ್ ಹಾರ್ಮನಿ ಬಂತು ಎಂದು ಹೇಳುತ್ತಾರೆ. ಈ ಲೆಗ್ ಹಾರ್ಮನಿ ಬಂದರೆ ಊರ ಹಬ್ಬ ಇದ್ದ ಹಾಗೆ. ಆರು ತಿಂಗಳು ನಾಟಕ ಕಲಿಸಿ, ನಮ್ಮ ಸಾಹಿತ್ಯ ಸಂಸ್ಕೃತಿ ಮುಂದುವರಿಸತಕ್ಕ ಮೇಷ್ಟ್ರು ಪರಿಸ್ಥಿತಿ ಏನಾಗಿದೆ ಎಂದರೆ, ನಾಟಕದ ಮೇಷ್ಟ್ರನ್ನು ಇವತ್ತು ಯಾರೂ ಗಣನೆಗೆ ತೆಗೆದುಕೊಂಡಿಲ್ಲ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ. ವಿಶ್ವನಾಥ್ ಅವರ ಹತ್ತಿರ ಹೋಗಿ ಅವರಿಗೆ ಮಾಸಾಶನ ಕೊಡಿ ಎಂದರೆ, ದುಡ್ಡು ಇದ್ದರೆ ತಾನೇ ಕೊಡಿ ಅನ್ನುವುದು ? ದುಡ್ಡು ಎಲ್ಲಿ ಕೊಟ್ಟಿದ್ದಾರೆ ಅನ್ನುತ್ತಾರೆ. ಈ ರಂಗಭೂಮಿಯ ವೈಭವ ಒಂದು ಕಾಲದಲ್ಲಿ ತುಂಬಿ ತುಳುಕುತ್ತಿತ್ತು. ರಂಗಭೂಮಿ ಅತ್ಯುನ್ನತ ಶಿಖರಕ್ಕೆ ಹೋಗಿತ್ತು. ಪೀರ್ ಸಾಹೇಬರ ಬಗ್ಗೆ ತಾವು ಕೇಳಿರಬಹುದು. ಆತ ಮಹತ್ತರ ಮೇಧಾಶಕ್ತಿ ಇದ್ದ ದೊಡ್ಡ ಕಲಾವಿದ. ಗುಬ್ಬಿ ವೀರಣ್ಣ, ಹಿರಣ್ಣಯ್ಯ, ವರದಾಚಾರ್ ಅವರ ನಾಟಕ ಕಂಪನಿಗಳನ್ನು ನೋಡಿದಾಗ ಈಗಿನ ವೃತ್ತಿ ರಂಗಭೂಮಿ ಸಂಪೂರ್ಣ ನೆಲಸಮವಾಗಿದೆ, ನೆಲಕಚ್ಚಿದೆ, ಈ ವೃತ್ತಿ ರಂಗಭೂಮಿಯನ್ನು ಮತ್ತೆ ಆ ಒಂದು ವೈಭವಕ್ಕೆ ತರತಕ್ಕ ವ್ಯವಸ್ಥೆ ಈ ನಿಮ್ಮ ಸರ್ಕಾರದಲ್ಲಿದೆಯೇ ? ಖಂಡಿತ ಇಲ್ಲ. ಸುಮ್ಮನೆ ಸಂಗೀತ ಅಕಾಡೆಮಿ, ನಾಟಕ ಅಕಾಡೆಮಿ ಎಂದು ಹೇಳುವುದು. ವರ್ಷಕ್ಕೆ ಒಂದು ಸಾರಿ ಅಲ್ಲಿಗೆ ಯಾರಾದರೂ 4 ಜನ ಕಲಾವಿದರನ್ನು ಕರೆಸಿ ಶಾಲು ಹೊದಿಸಿ 5 ರೂಪಾಯಿ ಖರ್ಚು ಮಾಡಿ ಹಣ್ಣು ಹಂಪಲು ಕೊಡುವುದಕ್ಕಲ್ಲ ಅಕಾಡೆಮಿ ಇರುವುದು. ಅಲ್ಲಿ ಹೊಸ ಚಿಂತನೆ ಆಗಬೇಕು. ಇವತ್ತಿನ ಚಲನಚಿತ್ರ ರಂಗ ಉಳಿಯಬೇಕಾದರೆ ಅದಕ್ಕೆ ಬುನಾದಿ ಯಾವುದು ಎಂದರೆ ಈ ರಂಗಭೂಮಿ ಮೂಲಕ ಏಣಿಯನ್ನು ಹತ್ತಿ ಅದೇ ಏಣಿಯನ್ನು ತಳ್ಳಿದ್ದೇವೆ. ರಂಗಭೂಮಿಯನ್ನು ಉಳಿಸುವುದಕ್ಕೆ, ಯಕ್ಷಗಾನವನ್ನು ಉಳಿಸುವುದಕ್ಕೆ ಸಮಗ್ರ ಚಿಂತನೆಯ ಒಂದು ಯೋಜನೆ ಆಗಬೇಕು. ಹಿಂದೆ ಗುಂಡೂರಾವ್ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ನಾನು ಒಂದು ಸಲಹೆಯನ್ನು ಕೊಟ್ಟಿದ್ದೆ. ನಶಿಸಿ ಹೋಗತಕ್ಕ ಪ್ರತಿಯೊಂದು ನಾಟಕ ಕಂಪೆನಿಗಳಿಗೆ ನಾವು ಕನಿಷ್ಠ 1 ವರ್ಷಕ್ಕೆ 1 ಲಕ್ಷ ರೂಪಾಯಿಗಳನ್ನಾದರೂ ಸಹಾಯಧನವನ್ನಾಗಿ ಕೊಡೋಣ. ಇದರ ಉದ್ದೇಶ ಏನು ಎಂದರೆ, ವರ್ಷದಲ್ಲಿ 6 ತಿಂಗಳು ನಾಟಕ ಆಡುತ್ತಾರೆ. ಇನ್ನು 6 ತಿಂಗಳು ಮಳೆ; ನಾಟಕ ಆಗುವುದಿಲ್ಲ. ಆಗ ಪರದೆ, ಮುಂತಾದ ವ್ಯವಸ್ಥೆಯನ್ನೆಲ್ಲಾ ಗಿರವಿ ಇಡಬೇಕಾಗುತ್ತದೆ. ಅದಕ್ಕಾಗಿ 1 ಲಕ್ಷ ರೂಪಾಯಿ ಧೈರ್ಯವಾಗಿ ಇಟ್ಟುಕೊಳ್ಳಲಿ ಎಂದು ಆ ಮಾತನ್ನು ಹೇಳಿದೆ. ಅವತ್ತು ಅವರು 50 ಸಾವಿರ ರೂಪಾಯಿಯಂತೆ ಎರಡು ನಾಟಕ ಕಂಪೆನಿಗಳಿಗೆ ಕೊಟ್ಟರು. ಒಂದು ಉತ್ತರ ಕರ್ನಾಟಕದ ಕಂಪೆನಿ ಮತ್ತು ಇಲ್ಲಿ ಇರತಕ್ಕ ಒಂದು ನಾಟಕ ಕಂಪೆನಿಗೆ ಕೊಟ್ಟರು. ಆದಾದ ನಂತರ ಆ ಒಂದು ವ್ಯವಸ್ಥೆ ನಿಂತು ಹೋಯಿತು. ಇವತ್ತಿನ ದಿವಸ ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಚರ್ಚೆ ಮಾಡಲಿ. ಏಕೆಂದರೆ ನಮ್ಮ ಪ್ರಾಚೀನ, ನಮ್ಮ ಅತ್ಯಂತ ಐತಿಹಾಸಿಕವಾದ ಈ ರಂಗಭೂಮಿ ನಾಶ ಆಗುವುದಕ್ಕೆ ನಾವು ಬಿಡಬಾರದೆಂದು ತಮಗೆ ಹೇಳುತ್ತೇನೆ. ರಂಗಭೂಮಿ ಕಲಾವಿದರ ಬಗ್ಗೆ ನಾನು ಅತ್ಯಂತ ನಾಚಿಕೆಗೇಡಿನ ವಿಚಾರವನ್ನು ತಮಗೆ ಹೇಳುತ್ತಿದ್ದೇನೆ. ಈ ಕಲಾವಿದರು ಮಾಸಾಶನ

ತೆಗೆದುಕೊಳ್ಳಬೇಕಾದರೆ ಜಿಲ್ಲಾಧಿಕಾರಿಗಳ ಹತ್ತಿರ ಹೋಗಬೇಕು. ಹೋಗಿ ಅವರಿಂದ ಅರ್ಹತೆ ಪತ್ರ ಪಡೆಯಬೇಕು. ಅವರು ಏನಂತ ಹೋಗಬೇಕು ? ನಾನು ದುರ್ಯೋಧನನ ಪಾತ್ರ ಮಾಡುತ್ತೇನೆಂದು ಅವನಿಗೆ ಏನು ಗೊತ್ತಿರುತ್ತದೆ ? ಅವನಿಗೆ ಏನೂ ಗೊತ್ತಿರುವುದಿಲ್ಲ. ಇನ್ನು ದುರ್ಯೋಧನನ ಉಡುಪು ಹಾಕಿಕೊಂಡು, ದುರ್ಯೋಧನನ ಪಾತ್ರ ಮಾಡಿಕೊಂಡು ಹೋಗಬೇಕಾಗಿದೆ. ಏನು ನಾಚಿಕೆಗೇಡು ? ಅದನ್ನು ಕೇಳುವುದಕ್ಕೆ ಜಿಲ್ಲಾಧಿಕಾರಿ ಯಾರು ? ಅದನ್ನು ಒಬ್ಬ ಕಲಾವಿದ ಹೇಳಬೇಕು. ಒಬ್ಬ ಕಲಾವಿದರನ್ನು ನೀವು ನೇಮಿಸಿ, ಆ ಕಲಾವಿದರು ಈ ಕಲಾವಿದರಿಗೆ ಒಂದು ಅರ್ಹತಾ ಪತ್ರ ಕೊಟ್ಟರೆ ಸಾಕು ಎಂದು ಹೇಳಬೇಕೇ ಹೊರತು ತಹಶೀಲ್ದಾರರ ಹತ್ತಿರ, ಜಿಲ್ಲಾಧಿಕಾರಿಗಳ ಹತ್ತಿರ ಹೋಗುವುದಲ್ಲ. ಇಂತಹ ನಾಚಿಕೆಗೇಡು ಪ್ರಸಂಗ ಆಗಬಾರದು. ಈ ಸಂದರ್ಭದಲ್ಲಿ ಯಾವ ರಂಗಭೂಮಿಯಲ್ಲಿ ರಾಜರಾಣಿಯರಾಗಿ ಮೆರೆದ ದೊಡ್ಡ ಕಲಾವಿದರನ್ನು ನೆನಪು ಮಾಡಿಕೊಳ್ಳುತ್ತೇನೆ. ಅವರು ಎಂತೆಂತಹ ಕಲಾವಿದರು, ಅಧ್ಯಕ್ಷರೇ, ನಾನು ತಮಗೆ ನೋವಿನಿಂದ ಹೇಳುತ್ತಿದ್ದೇನೆ. ಇದೆಲ್ಲಾ ನಮ್ಮ ಕಡತದಲ್ಲಿ ಹೋಗಲಿ ಹೆಂಗಸಿನ ಪಾತ್ರವನ್ನು ಮಾಡುತ್ತಿದ್ದ ಒಬ್ಬರ ಬಗ್ಗೆ ಹೇಳುತ್ತಿದ್ದೇನೆ. ನಮ್ಮ ರಂಗಭೂಮಿಯ ಮೇಲೆ ಪದ್ಮರಾಜಮ್ಮ ಎನ್ನುವವರು ದ್ರೌಪದಿ ಪಾತ್ರವನ್ನು ಮಾಡುತ್ತಿದ್ದರು; ಅತ್ಯುನ್ನತ ದೊಡ್ಡ ನಟನೆಯನ್ನು ಮಾಡಿ, ವೈಭವವಾಗಿ ಮೆರೆಸಿಕೊಂಡು ಜಯಕಾರ ಹಾಕಿಸಿಕೊಂಡು ಕೀರ್ತಿವೆತ್ತಂತೆ ಹೋದವರು, ಕೊನೆಯಲ್ಲಿ ಬೀದಿಯಲ್ಲಿ ಭಿಕ್ಷೆ ಎತ್ತಿ ಸತ್ತರು; ಆ ಹಣಕ್ಕೆ ವಾರಸುದಾರರು ಇಲ್ಲದೇ ಸತ್ತಿರತಕ್ಕದ್ದು ಉಂಟು. ಇಂತಹ ಉದಾಹರಣೆಗಳು ನೂರಾರು ಇವೆ.

ಇಂತಹ ರಂಗಭೂಮಿ ಕಲಾವಿದರ ಬಗ್ಗೆ ನಾವು ಏನು ಚಿಂತನೆ ಮಾಡಿದ್ದೇವೆ. ಸುಬ್ಬಯ್ಯನಾಯ್ಡು ಅವರು ಅಷ್ಟೆ ಸ್ವಾಮಿ, ನಾನು ಹೇಳುತ್ತೇನೆ. ಈ ಎಲ್ಲಾ ಕಲಾವಿದರಿಗೆ ನಾನು ಅಪಾರವಾದ ಸೇವೆ ಮಾಡಿದ್ದೇನೆ. ನನಗೆ ಆ ಒಂದು ಸಂತೋಷ ಇದೆ. ಕಲಾವಿದರನ್ನು ಗೌರವಿಸಿದ್ದೇನೆ. ಅಧ್ಯಕ್ಷರೇ, ತಮಗೆ ಗೊತ್ತಿದೆ. ತಾವೂ ಕೂಡ ನೋಡಿದ್ದೀರಿ. ಶಾಂತಕುಮಾರ್ ಎನ್ನುವವರು ಟಿಪ್ಪೂ ಸುಲ್ತಾನ್ ನಾಟಕದಲ್ಲಿ ಮೀರ್‌ಸಾದಕ್‌ನ ಪಾತ್ರವನ್ನು ಮಾಡುತ್ತಾ ಇದ್ದವರು. ಟಿಪ್ಪೂ ಸುಲ್ತಾನ್‌ನ ಕಾಲದಲ್ಲಿ ಕೂಡ ಮೀರ್‌ಸಾದಕ್ ಆ ರೀತಿ ಇರಲಿಲ್ಲ. ಅಂತಹ ಮೇಧಾವಿ ಅವರು. ಮತ್ತೆ ಶ್ರೀಧರರಾವ್ ಎನ್ನುವವರು ಥ್ಯಾಕರೆ ಪಾತ್ರವನ್ನು ಮಾಡುತ್ತಿದ್ದರು. ಇವತ್ತು ಒಬ್ಬೊಬ್ಬರನ್ನು ನೆನೆಸಿಕೊಂಡರೆ, ಇತಿಹಾಸ ನೆನೆಸಿಕೊಂಡರೆ ನನಗೆ ನೋವಾಗುತ್ತದೆ; ಸಂಕಟವಾಗುತ್ತದೆ. ಶ್ರೀಧರರಾವ್ ಅವರು 6 ತಿಂಗಳ ಹಿಂದೆ ಒಂದು ಯಾವುದಾದರೂ ಹೋಟೆಲ್‌ನಲ್ಲಿ ಬಿಲ್ ಬರೆಯುವ ಕೆಲಸ ಕೊಡಿಸಿ ಎಂದು ಕೇಳಿದರು. ಒಂದು ಕಾಲದಲ್ಲಿ ಆ ಇಂಗ್ಲೀಷ್ ಪಾತ್ರವನ್ನು ಮಾಡಲು ಸಭಾಭವನಕ್ಕೆ ಬಂದರೆ ಸಭಾಂಗಣದಲ್ಲಿ ಕುಳಿತಿದ್ದ ಜನ ಮೆಚ್ಚಿ ಸಂತೋಷಪಡುತ್ತಿದ್ದರು. ಇವತ್ತು ಆ ರಂಗಭೂಮಿ ನಟರು ದಿಕ್ಕೆಟ್ಟು ಹೋಗಿದ್ದಾರೆ. ಇವತ್ತು ಆ ನಾಟಕ ಕಂಪೆನಿಗಳ ಇತಿಹಾಸ ತಮ್ಮಲ್ಲಿ ಇದೆಯೋ ? ಗುಬ್ಬಿ ಕಂಪೆನಿ ಬಗ್ಗೆ, ವರದಾಚಾರ್ ಕಂಪೆನಿ ಬಗ್ಗೆ, ಹಿರಣ್ಣಯ್ಯ ಕಂಪೆನಿ ಬಗ್ಗೆ ತಮ್ಮ ಹತ್ತಿರ ಇತಿಹಾಸ ಇದೆಯೋ ? ಯಾವುದು ಇದೆ ನಿಮ್ಮ ಸರ್ಕಾರದಲ್ಲಿ ಎಂದು ಹೇಳಿ. ಖಂಡಿತಾ ಇಲ್ಲ. ಇತಿಹಾಸ ಕೊಡುವುದಾದರೆ ಒಂದು ವಾಸ್ತುಶಿಲ್ಪ, ಒಂದು ದೊಡ್ಡ ಪ್ರಮಾಣದಲ್ಲಿ ಅವರ ಇತಿಹಾಸವನ್ನು ಸಾರತಕ್ಕ ಒಂದು ಭವನ ಆಗಬೇಕು. ಅದರಲ್ಲಿ ಎಲ್ಲಾ ರಂಗಭೂಮಿಯ ಸಮಗ್ರ ಚಿಂತನೆ ಇರತಕ್ಕ ವ್ಯವಸ್ಥೆ ಇರಬೇಕು. ಇವತ್ತು ಎಷ್ಟು ಜನ ಗುಬ್ಬಿ ವೀರಣ್ಣನವರನ್ನು ನೋಡಿದ್ದಾರೆ ? ಅವರ ಅ ಒಂದು ಪೇಟ, ಅವರ ದೊಡ್ಡ ಕೋಟು, ಎಷ್ಟು ಚೆನ್ನ ? ಬಿ. ಜಯಮ್ಮನವರಿಗೆ ನಾನು ಕಾಡಿ ಬೇಡಿ ವಿಧಾನಪರಿಷತ್ತಿನಲ್ಲಿ ನಾಮಕರಣ ಸದಸ್ಯರನ್ನಾಗಿ ಮಾಡಿಸಿದೆ. ಹೌದು, ಈ ಸ್ಥಿತಿಯಲ್ಲಿ ನಾವಿದ್ದೇವೆ. ಆದುದರಿಂದ ರಂಗಭೂಮಿಯನ್ನು ಮತ್ತೆ ಮೇಲ್ದರ್ಜೆಗೆ ಏರಿಸಬೇಕಾದರೆ ಅದಕ್ಕೊಂದು ಚೈತನ್ಯಪೂರ್ಣವಾದ ಒಂದು ಶಕ್ತಿಯನ್ನು ಕೊಡಬೇಕಾದುದು ನಮ್ಮ ಕರ್ತವ್ಯ.

2.15 ಪಿ.ಎಂ.

ಶ್ರೀಮತಿ ದಮಯಂತಿ ಬೋರೇಗೌಡರವರು:- ಕನ್ನಡ ಚಿತ್ರಗಳಲ್ಲಿ ಕೆಟ್ಟ ಚಿತ್ರಗಳು ಬರುತ್ತವೆಂದು ಹೇಳಿದರು, ಅದು ನಿಜ. ಒಂದು ಕಾಲದಲ್ಲಿ ಕನ್ನಡ ಚಿತ್ರವನ್ನು ಬೆಂಗಳೂರು ನಗರದಲ್ಲಿಯೇ ಅಲ್ಲ ಇಡೀ ಕರ್ನಾಟಕ ರಾಜ್ಯದಲ್ಲಿ ಕೇಳುವವರು ಇರಲಿಲ್ಲ. ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ಚಿತ್ರ ತೆಗೆಯತಕ್ಕ ಚೈತನ್ಯ ಇರಲಿಲ್ಲ. ಅಂತಹ ಕಾಲದಲ್ಲಿ ರಸ್ತೆ ರಸ್ತೆಯಲ್ಲಿ ನಿಂತು ಚಳುವಳಿಯನ್ನು ಮಾಡಿ ಬೂಟ್ ಕಾಲಿನಲ್ಲಿ ಒದೆಸಿಕೊಂಡು, ಲಾಠಿ ಏಟು ತಿಂದು ಅದು ಯಾವುದನ್ನು ಲೆಕ್ಕಿಸದೆ ಕನ್ನಡದ ಉಳುವಿಗಾಗಿ ಕನ್ನಡ ಚಿತ್ರರಂಗದ ಬೆಳವಣಿಗೆಗಾಗಿ ಕನ್ನಡ ರಂಗಭೂಮಿಯ ಉದ್ಧಾರಕ್ಕಾಗಿ ಹೋರಾಟ ನಡೆಸಿದ್ದೇನೆ. ಮಾನ್ಯ ಅಧ್ಯಕ್ಷರೇ, ತಮಗೆ ಹೇಳುತ್ತೇನೆ ಆವತ್ತಿನ ಕಾಲದಲ್ಲಿ ಕನ್ನಡ ಚಿತ್ರ ಪ್ರದರ್ಶನಕ್ಕೆ ಒಂದು ಥಿಯೇಟರ್ ಸಹ ಇರಲಿಲ್ಲ. ಹಿಮಾಲಯ ಟಾಕೀಸ್ ಕಟ್ಟ ಕಡೆಯ, ಕೊನೆಯ ಚಿತ್ರಮಂದಿರ. ಅಷ್ಟು ಹೋರಾಟ ನಡೆದ ನಂತರ ನಮ್ಮಲ್ಲಿ ಅದ್ಭುತ ವೈಭವವನ್ನು ಮೆರೆಸಿದಂತಹ ಚಿತ್ರ ಸಾಹಿತಿಗಳು ಬಂದರು. ತಾಂತ್ರಿಕ ವರ್ಗದವರು ಬಂದರು. ಒಳ್ಳೆಯ ನಿರ್ದೇಶಕರು ಬಂದರು. ಕನ್ನಡ ಚಿತ್ರರಂಗ ಚೆನ್ನಾಗಿ ಬರುವಂತೆ ಮಾಡಿದ್ದರು. ಇವತ್ತು ಬರತಕ್ಕ ಚಿತ್ರಗಳ ಸಂಖ್ಯೆಯಲ್ಲಿ 10 ಚಿತ್ರಗಳು ಒಳ್ಳೆಯವು ಇರಬಹುದು. 90 ಚಿತ್ರಗಳು ಕೆಟ್ಟ ಚಿತ್ರಗಳು ಬರುತ್ತವೆ. ಕನ್ನಡದ ಹೆಸರಿನಲ್ಲಿ ಒಂದು ರೀತಿಯ ಕೆಟ್ಟ ಸಂಸ್ಕೃತಿ ಇವತ್ತು ಕನ್ನಡ ಚಿತ್ರರಂಗದಲ್ಲಿ ಧಾಳಿ ಮಾಡುತ್ತಿವೆ. ನಿಜವಾಗಲೂ ಚಲನಚಿತ್ರ ಮಾಧ್ಯಮ ಕೆಡಬಾರದು.

ಶ್ರೀ ಟಿ.ಎಂ. ಮಂಜುನಾಥ್ (ಯೋಜನಾ ರಾಜ್ಯ ಸಚಿವರು):- ಮಾನ್ಯ ಸದಸ್ಯರು ತಪ್ಪು ತಿಳಿದುಕೊಳ್ಳಬಾರದು. ದಯಮಾಡಿ ತಮ್ಮ ಸಲಹೆ ಹೇಳಿ. ತಾವು ಹೇಳುವುದು ಸತ್ಯವಿದೆ. 10 ಚಿತ್ರಗಳು ಒಳ್ಳೆಯವು ಬಂದರೆ 90 ಚಿತ್ರಗಳು ಅಶ್ಲೀಲ ಚಿತ್ರಗಳು ಬರುತ್ತಿವೆ. ಅದಕ್ಕೆ ತಮ್ಮ ಸಲಹೆ ಕೊಟ್ಟರೆ ಒಳ್ಳೆಯದು. ತಾವು ತಪ್ಪು ತಿಳಿದುಕೊಳ್ಳಬೇಡಿ ನಾನು ಏನೋ ಹೇಳಿದೆನೆಂದು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಕನ್ನಡ ಸಂಸ್ಕೃತಿ, ಕನ್ನಡ ಸಾಹಿತ್ಯ ಮತ್ತು ಕನ್ನಡದ ಹಿನ್ನೆಲೆಯಿರತಕ್ಕ ಚಿತ್ರಗಳನ್ನು ತೆಗೆದರೆ ಮಾತ್ರ ಎಲ್ಲಾ ರೀತಿಯ ರಕ್ಷಣೆ ಸಹಾಯ ಮತ್ತು ಬೆಂಬಲವನ್ನು ಕೊಡುತ್ತೇವೆಂದು ಸರ್ಕಾರದವರು ಹೇಳಬೇಕು. ಇಲ್ಲದಿದ್ದರೆ ಮನೋರಂಜನಾ ತೆರಿಗೆ ರಿಯಾಯಿತಿ ಕೊಡುವುದಿಲ್ಲ, ಸಹಾಯಧನ ಕೊಡುವುದಿಲ್ಲವೆಂದು ಹೇಳಬೇಕು.

ಛೇರ್ಮನ್:- ಸಬ್ಸಿಡಿ ಕೊಡಬಾರದು.

ಶ್ರೀ ವಾಟಾಳ್ ನಾಗರಾಜ್:- ನಾವು ಸ್ಪಷ್ಟವಾದ ಒಂದು ನೀತಿಯನ್ನು ಮಾಡಬೇಕು. ಸಹಾಯಧನ ಕೊಡಬಾರದು. ಏಕೆ ಕೊಡಬೇಕು ? ಯಾವುದೋ ಚಿತ್ರ ತೆಗೆಯುವುದು, ರೀಲುಗಳನ್ನು ಡಬ್ಬಕ್ಕೆ ಹಾಕುವುದು, ಜನ ನೋಡುವುದು ಅದು ಸರಿಯಲ್ಲ. ಇದಕ್ಕೊಂದು ಹೊಸ ಆಯಾಮ ಬರಬೇಕು. ಆದು ಬರಲಿಲ್ಲವೆಂದರೆ ನಮ್ಮ ಹಿರಿಯರಲ್ಲಿ ಎಷ್ಟೋ ಜನ ಚಿತ್ರರಂಗದಲ್ಲಿ ದುಡಿದಂತಹವರು ಇವತ್ತು ನೋವು ಪಡುತ್ತಿದ್ದಾರೆ. ಅಂತ ಅನೇಕರ ಜೊತೆಯ ಒಡನಾಡಿ ನಾನು. ನನಗೆ ಬಹಳ ಸಂತೋಷ ಇಂತಹ ಜನಗಳ ಜೊತೆಗೆ ಇದ್ದೆನೆಂದು. ಕಣಗಾಲ್ ಪುಟ್ಟಣ್ಣನವರು ನಮ್ಮ ಕನ್ನಡ ಚಿತ್ರವನ್ನು ಅಂತರ ರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋದರು. ಕು.ರಾ. ಸೀತಾರಾಮಶಾಸ್ತ್ರಿಗಳು ಪಾಪ ಇವತ್ತು ಅವರನ್ನು ನೆನಸಿಕೊಳ್ಳಬೇಕು; ಸಮಗ್ರ ರಾಮಾಯಣವನ್ನು ರಾಮನ ಅವತಾರವೆಂದು ಒಂದು ಗೀತೆಯಲ್ಲಿ ಬರೆಯುತ್ತಾರೆ. ನಮ್ಮಲ್ಲಿ ಪುಟ್ಟಣ್ಣಕಣಗಾಲ್‌ರವರು ಎಂತಹ ಒಬ್ಬ ಮೇಧಾವಿ. ಕಣಗಾಲ್ ಪ್ರಭಾಕರಶಾಸ್ತ್ರಿಯವರನ್ನು ಇವತ್ತು ನೆನಸಿಕೊಳ್ಳಬೇಕು. ಅಂತಹ ದೊಡ್ಡ ಉನ್ನತವಾದ ಶ್ರೇಷ್ಠಮಟ್ಟದವರು. ಸಿ.ವಿ. ಶಿವಶಂಕರ್‌ರವರು, ಸೊರಟ್ ಅಶ್ವಥ್‌ರವರು ಹೀಗೆ ಹೇಳುತ್ತಾ ಹೋದರೆ ಕನ್ನಡದಲ್ಲಿ ಇಡೀ ಪರ್ವತದಷ್ಟು ಜನರು ಇದ್ದಾರೆ. ಅವರುಗಳನ್ನೆಲ್ಲ ಕಡೆಗಣಿಸಿ ತಮಿಳುನಾಡಿನಿಂದ

ಬಂದಿರತಕ್ಕ ತಾಂತ್ರಿಕವರ್ಗದವರು, ತಮಿಳುನಾಡಿನಿಂದ ಬಂದಿರತಕ್ಕ ನಿರ್ಮಾಪಕರು ಹಣಕ್ಕೋಸ್ಕರ ಕನ್ನಡಿಗರನ್ನು ಕನ್ನಡದ ಹೆಸರಿನಲ್ಲಿ ಕೊಳ್ಳೆಮಾಡತಕ್ಕದ್ದು ನಿಲ್ಲಬೇಕು. ಅದಕ್ಕಾಗಿ ಸರ್ಕಾರ ಪರಿಣಾಮಕಾರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಟಿ.ಎಂ. ಮಂಜುನಾಥ್:– ತಮಿಳುನಾಡಿನಿಂದ ಬಂದಿರತಕ್ಕ ನಟ ನಟಿಯರ ಬಗ್ಗೆ ಹೇಳಿ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಮಂಜುನಾಥ್‌ರವರು ಒಂದು ಚಿತ್ರಮಂದಿರ ನಡೆಸುತ್ತಿದ್ದಾರೆ. ಅದು ನನಗೆ ಗೊತ್ತು. ಇವತ್ತು ಕನ್ನಡ ಚಿತ್ರರಂಗ ಎಷ್ಟು ಸಮೃದ್ಧಿಯಾಗಿ ಬೆಳೆಯುತ್ತದೆಯೋ ಅಷ್ಟೂ ನಮ್ಮ ಭಾಷೆಗೆ ಮತ್ತು ನಾಡಿಗೆ ಒಳ್ಳೆಯದು. ಅದು ದಿಕ್ಕು ತಪ್ಪಿದರೆ ನಿಜವಾಗಿಯೂ ಅದಕ್ಕೆ ಅಪಾಯವಿದೆ. ಈ ಬೆಳವಣಿಗೆ ನಿಲ್ಲಬೇಕಾಗಿದೆ. ನಮ್ಮ ಕನ್ನಡ ಚಲನಚಿತ್ರ ನಿರ್ಮಾಪಕರು, ಕನ್ನಡ ನಿರ್ದೇಶಕರು, ಕನ್ನಡ ಚಿತ್ರಸಾಹಿತಿಗಳನ್ನು ಇವತ್ತು ಉಳಿಸಿ ಕನ್ನಡ ಚಲನಚಿತ್ರವನ್ನು ಬೆಳೆಸತಕ್ಕ ಚಿಂತನೆಯಾಗಬೇಕು. ಇವತ್ತು ಅದಕ್ಕಾಗಿ ಸರ್ಕಾರ ಕನ್ನಡ ಚಲನಚಿತ್ರರಂಗದ ಬಗ್ಗೆ ಹೊಸ ಚಿಂತನೆ ಮಾಡಬೇಕು ಎನ್ನತಕ್ಕ ಮಾತನ್ನು ತಮಗೆ ನಾನು ಹೇಳುತ್ತಿದ್ದೇನೆ.

ಇನ್ನು ಶಿಕ್ಷಣದ ಬಗ್ಗೆ ಒಂದು ಸಮಗ್ರ ನೀತಿ ಆಗಬೇಕಾಗಿದೆ. ಇದನ್ನು ಯಾವ ರೀತಿಯಲ್ಲಿ ನಾವು ಚಿಂತನೆ ಮಾಡಬೇಕು? ಈಗಿರತಕ್ಕ ಶಿಕ್ಷಣ ನೀತಿಯನ್ನು, ಬದಲಾವಣೆ ಮಾಡಿ ಒಂದು ಹೊಸ ದಿಕ್ಕಿನತ್ತ ತೆಗೆದುಕೊಂಡು ಹೋಗಬೇಕಾಗಿದೆ. ನಾವು ವೃತ್ತಿ ಶಿಕ್ಷಣಕ್ಕೆ ಹೆಚ್ಚಿನ ರೀತಿಯಲ್ಲಿ ಆಯಾಮವನ್ನು ಕೊಡಬೇಕು, ಹೆಚ್ಚಿನ ಶಕ್ತಿಯನ್ನು ಕೊಡಬೇಕು. ಈ ಅಲ್ಪ ಸಂಖ್ಯಾತ ಭಾಷೆಗಳಿಗೆ ಒಬ್ಬ ನಿರ್ದೇಶಕರು. ನಿಮ್ಮಲ್ಲಿ ಶಿಕ್ಷಣ ಇಲಾಖೆಯಲ್ಲಿ ಎಂಟು ಜನ ನಿರ್ದೇಶಕರುಗಳು. ಅಷ್ಟು ಜನ ಏಕೆ ಸ್ವಾಮಿ? ಈಗ ಒಂದೊಂದಕ್ಕೂ ಒಬ್ಬೊಬ್ಬರು ನಿರ್ದೇಶಕರು. ಒಂದು ಕಾಲದಲ್ಲಿ ಒಬ್ಬರೇ ಒಬ್ಬರು ನಿರ್ದೇಶಕರು ಇದ್ದರು. ಈಗ ನೀವು ಹುದ್ದೆಗಳನ್ನು ಹೆಚ್ಚು ಮಾಡಿಕೊಂಡು ಹೋಗುತ್ತಿದ್ದೀರಿ; ಹುದ್ದೆಗಳನ್ನು ಕಡಿಮೆ ಮಾಡಿ ಕೆಲಸವನ್ನು ಜಾಸ್ತಿ ಮಾಡತಕ್ಕಂಥ ಹೊಸ ಯೋಚನೆ, ಚಿಂತನೆ ನಮ್ಮಲ್ಲಿ ಬರಬೇಕಾಗಿದೆ. ಬರಲಿಲ್ಲವೆಂದರೆ ಅದು ಸರಿಯಾದ ಮಾರ್ಗ ಅಲ್ಲವೆಂದು ನಾನು ಹೇಳುತ್ತೇನೆ. ಈ ಅಲ್ಪಸಂಖ್ಯಾತ ಭಾಷೆಗಳೇನಿವೆ ಅದಕ್ಕೇ ಒಬ್ಬರು ನಿರ್ದೇಶಕರು. ಇದು ಬೇರೆ ರಾಜ್ಯದಲ್ಲಿ ಇದೆಯೇ ಇಲ್ಲವೇ ಎಂಬುದನ್ನು ಮೊದಲು ಪತ್ತೆಹಚ್ಚಿ. ಕೇರಳದಲ್ಲಿ ಕೇಳುವವರು ಗತಿ ಇಲ್ಲ, ಆಂಧ್ರಪ್ರದೇಶದಲ್ಲಿ ಕೇಳುವವರೇ ಗತಿ ಇಲ್ಲ; ತಮಿಳುನಾಡಿನಲ್ಲಿ ಕೇಳುವವರಿಲ್ಲ. ಕೇರಳದಲ್ಲಿ ತಾವು ಹೇಳಿದ ಹಾಗೆ ಮಲೆಯಾಳಂ ಭಾಷೆ ಬಿಟ್ಟರೆ ಒಂದು ಅಕ್ಷರ ಕನ್ನಡ ಇಲ್ಲ. ಕಾಸರಗೋಡನ್ನು ನುಂಗಿದರು. ಈ ಕಾಸರಗೋಡನ್ನು ಜಿಲ್ಲೆ ಮಾಡುವ ನೆಪದಲ್ಲಿ ನುಂಗಿದ್ದಾರೆ. ಈ ಮಲೆಯಾಳಂ ಪ್ರಭುತ್ವದ ಹುಲಿಬಾಯಿಗೆ ಕಾಸರಗೋಡು ಸಿಕ್ಕಿದೆ. ಇದನ್ನು ಜಿಲ್ಲೆ ಮಾಡಿ ನಾಶ ಮಾಡಿದ್ದಾರೆ. ಅದು ಕಾಸರಗೋಡು ಆಗಿ ಉಳಿದಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು.

ಛೇರ್ಮನ್:– ಕಾಸರಗೋಡಿನವರು ಈಗಲೂ ಹೇಳುತ್ತಾರೆ. ಏನೆಂದರೆ ನಾವು ಕರ್ನಾಟಕಕ್ಕೆ ಬರುತ್ತೇವೆ, ನಮ್ಮನ್ನು ಕರೆದುಕೊಳ್ಳಿ, ಮಲೆಯಾಳಿಗಳ ಉಪದ್ರವ ಹೆಚ್ಚಾಗುತ್ತಿದೆ ಎಂದು;

ಶ್ರೀ ವಾಟಾಳ್ ನಾಗರಾಜ್:– ಕಾಸರಗೋಡಿನ ಅನೇಕ ಹಿರಿಯರೂ ಕರ್ನಾಟಕಕ್ಕೆ ಬರಬೇಕೆಂದು ಆತುರದಲ್ಲಿದ್ದಾರೆ. ಆದರೆ ಇವತ್ತು ನಮ್ಮ ದಕ್ಷಿಣ ಕನ್ನಡವೇ ಕೇರಳಕ್ಕೆ ಹೋಗುವಂಥ ಪರಿಸ್ಥಿತಿ ಆಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೆಯಾಳಂ ಪ್ರಾಬಲ್ಯ ಸುತ್ತಲೂ ತುಂಬಿದೆ. ದಕ್ಷಿಣ ಕನ್ನಡದ ಸೌಂದರ್ಯ, ಉತ್ತರ ಕನ್ನಡದ ಸೌಂದರ್ಯ, ಅಲ್ಲಿಯ ಜನತೆ, ಅಲ್ಲಿನ ಪರಿಸ್ಥಿತಿ ಇವೆಲ್ಲವನ್ನೂ ನೋಡಿದಾಗ ಸಂತೋಷ ಪಡತಕ್ಕದ್ದೇ. ಕರ್ನಾಟಕ ಏಕೀಕರಣಕ್ಕಾಗಿ ಕಾರಂತರು ಎಷ್ಟು ಸೇವೆ ಮಾಡಿದರು. ನಾಗಪ್ಪ ಆಳ್ವರವರು, ನಿಜಲಿಂಗಪ್ಪನವರು, ವಕೀಲರಾದ ಕಾರಂತರು ಅಪಾರವಾಗಿ ಸೇವೆ ಮಾಡಿದಂಥ ಜನ.

ಇನ್ನು ಸ್ವಲ್ಪ ದಿವಸ ನೀವು ಎಚ್ಚರಿಕೆಯಿಂದ ಇಲ್ಲದಿದ್ದರೆ, ಕಾಸರಗೋಡನ್ನು ನಾವು ಕೇಳುವುದಿಲ್ಲ, ದಕ್ಷಿಣ ಕನ್ನಡ ಕೂಡ ಕೇರಳದವರದ್ದೇ ಆಗುತ್ತದೆ.

ಛೇರ್ಮನ್:- ಇಷ್ಟರಲ್ಲೇ ಸಾಧಾರಣ 50 ಪರ್ಸೆಂಟ್ ಹೋಗಿ ಆಗಿದೆ. ವೋಟರ್ಸ್ ಲಿಸ್ಟ್‌ನಲ್ಲಿ ಅವರ ಹೆಸರುಗಳನ್ನು ಸೇರಿಸಿಯೂ ಆಗಿದೆ.

ಶ್ರೀ ವಾಟಾಳ್ ನಾಗರಾಜ್:- ಈ ಪರಿಸ್ಥಿತಿ ಇದ್ದರೆ ನಾವು ಎಲ್ಲಿ ನಿಲ್ಲಬೇಕು ? ನೀವು ಎಲ್ಲಿ ನಿಲ್ಲಬೇಕು ? ರಾಜ್ಯದ ಪರಿಸ್ಥಿತಿ ಏನು, ನಮ್ಮ ಪರಿಸ್ಥಿತಿ ಏನು ? 1956ರಲ್ಲಿ ಕರ್ನಾಟಕ ಏಕೀಕರಣ ಆಯಿತು. ಆದಕ್ಕಾಗಿ ಅತಿರಥಮಹಾರಥರೆಲ್ಲರ ಹೋರಾಟ. ಅವರಿಗೆ ಪ್ರಣಾಮಗಳು. ಇವತ್ತು ಪರಿಸ್ಥಿತಿ ಏನಾಗಿದೆ ? ಅಲ್ಲಿಂದ ಇಲ್ಲಿಯವರೆಗೆ ಹೊರರಾಜ್ಯಗಳಿಂದ ಬರತಕ್ಕಂಥ ಜನರ ಸಂಖ್ಯೆ ಕನಿಷ್ಟ ಒಂದು ಕೋಟಿ. ಮತದಾರರು ಕನಿಷ್ಟ 60 ಲಕ್ಷ. ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಇದು ಕನ್ನಡದ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಈ ಬಗ್ಗೆ ನಾವು ವಲಸೆಯನ್ನು ತಡೆಯಲಿಲ್ಲವೆಂದರೆ, ನಮಗೆ ಇಲ್ಲಿ ಉಳಿಗಾಲ ಇಲ್ಲ. ಇದನ್ನು ತಡೆಯುವುದಕ್ಕೆ ಒಂದಾದರೂ ನಿಮ್ಮ ಕಾರ್ಯಕ್ರಮ ಇದೆಯೇ ? ಇಲ್ಲ. ನಾವು ಎಲ್ಲರೂ ಸ್ವಾರ್ಥಿಗಳು. ಮತಗಳಿಗೋಸ್ಕರ ನಾವು ಈ ಮಾತನ್ನು ಎಲ್ಲಿಯೂ ಹೇಳುವುದಿಲ್ಲ. ಇದರ ಬಗ್ಗೆ ಚಕಾರವೆತ್ತುವುದಿಲ್ಲ. ಇದು ಅತ್ಯಂತ ಅಪಾಯಕಾರಿಯದ ಬೆಳವಣಿಗೆ. ಅಷ್ಟು ಸಂಖ್ಯೆಯಲ್ಲಿ ಕನ್ನಡಿಗರು ಕೇರಳಕ್ಕೆ ವಲಸೆ ಹೋಗಿಲ್ಲ, ಕನ್ನಡಿಗರು ಆಂಧ್ರಕ್ಕೆ ಹೋಗಿಲ್ಲ. ಈ ಪರಿಸ್ಥಿತಿ ನಮ್ಮಲ್ಲಿ ಉದ್ಭವವಾಗಿದೆ. ನಮ್ಮ ಗಡಿಯಲ್ಲಿ ಜನರು ಯಾರೂ ಬೇಕಾದರೂ ಬರಬಹುದು. ಕರ್ನಾಟಕಕ್ಕೆ ಬಾಗಿಲೇ ಇಲ್ಲ. ಯಾರು ಬೇಕಾದರೂ, ಎಲ್ಲಿ ಬೇಕಾದರೂ ಬರಬಹುದು. ಏನು ಬೇಕಾದರೂ ಮಾಡಬಹುದು. ಇದು ಅತ್ಯಂತ ಶೋಚನೀಯ. ಇವತ್ತು ಬೆಂಗಳೂರು ನಗರದಲ್ಲಿ 50 ಲಕ್ಷದವರೆಗೆ, ಜನಸಂಖ್ಯೆಯ ಬೆಳವಣಿಗೆ ಆಗಿದೆ. ನಾವು ನಾಳೆ ಏನಾಗುತ್ತೇವೆ ಎಂಬ ಭಯ ಬಂದಿದೆ.

ಮಾನ್ಯ ಅನಂತಕೃಷ್ಣರವರು ಮೇಯರ್ ಆಗಿದ್ದರು; ಅವರಿಗೂ ಈ ಚಿಂತನೆ ಗೊತ್ತು. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎಲ್ಲಾ ಪಕ್ಷದಲ್ಲಿಯೂ, ಬೇರೆ ಭಾಷೆಯವರು ಎಷ್ಟು ಜನರಿದ್ದಾರೆ ಗೊತ್ತೇ ? ಕನಿಷ್ಟ 40 ಜನ ಇದ್ದಾರೆ. ತಮಿಳುನಾಡಿನಲ್ಲಾಗಲೀ, ಆಂಧ್ರದಲ್ಲಾಗಲೀ, ಕೇರಳದಲ್ಲಾಗಲೀ, ಒಂದು ಸಾವಿರ ಮೆ.ವಾ. ಶಕ್ತಿಯ ದೊಡ್ಡ ದೊಡ್ಡ ಗಾತ್ರದ ಬೆಳಕಿನ ಶಕ್ತಿಯನ್ನು ಹಾಕಿ ಹುಡುಕಿದರೂ ನಮ್ಮವರೊಬ್ಬರೂ ಸಿಗುವುದಿಲ್ಲ. ಅಲ್ಲಿಯ ಪುರಸಭೆಯಲ್ಲಾಗಲೀ, ಅಲ್ಲಿಯ ನಗರಸಭೆಯಲ್ಲಾಗಲೀ, ಮಹಾನಗರ ಪಾಲಿಕೆಯಲ್ಲಾಗಲೀ ಯಾರೂ ಇಲ್ಲ. ಆದರೆ, ಇಲ್ಲಿ ಎಲ್ಲರೂ ಇದ್ದಾರೆ, ಎಲ್ಲಾ ಸಮಿತಿಯಲ್ಲೂ ಇದ್ದಾರೆ, ಅಧ್ಯಕ್ಷರೂ ಆಗಿದ್ದಾರೆ. ನಮ್ಮ ಪರಿಸ್ಥಿತಿ ಈ ರೀತಿ ಆಗುವುದಾದರೆ, ಮುಂದೆ ಬಹಳ ಕಷ್ಟವಾಗುತ್ತದೆ. ನಾನು 25 ವರ್ಷಗಳಿಂದ ಇದನ್ನು ಒಂದೇ ಸಮನೆ ಹೇಳುತ್ತಿದ್ದೇನೆ; ಇವತ್ತೂ ಕೂಡ ಹೇಳುತ್ತೇನೆ. ಇದು ಮತ್ತೊಂದು ಅಸ್ಸಾಂ ಆಗುತ್ತದೆ, ನಾಳೆ ನೀವೇನು ಮಾಡುತ್ತೀರಿ; ತಡೆಯುತ್ತೀರಾ ? ನಮಗೆಲ್ಲರಿಗೂ ಕೆಲಸ ಸಿಕ್ಕುವುದಿಲ್ಲ, ಜಾಗ ಸಿಕ್ಕುವುದಿಲ್ಲ, ಇರುವುದಕ್ಕಾಗುವುದಿಲ್ಲ. ಅನ್ನ ಸಿಕ್ಕುವುದಿಲ್ಲವೆಂದು ನಾವು ಎಲ್ಲಿ ಹೋಗುತ್ತೇವೆ, ನಾವೇ ಅದಕ್ಕೆ ದಾರಿ ಮಾಡಿಕೊಡುತ್ತೇವೆ. ಅಸ್ಸಾಂ ಪರಿಸ್ಥಿತಿ ಉದ್ಭವವಾಗುತ್ತದೆ ಎಂಬ ಭವಿಷ್ಯವನ್ನು ಈ ದಿನ ನಾನು ನುಡಿಯುತ್ತಿದ್ದೇನೆ. ಇದಕ್ಕೆ, ರಾಜಕಾರಣಿಗಳು ಎಚ್ಚರ ವಹಿಸಬೇಕು ಪ್ರಭುತ್ವ ನಡೆಸತಕ್ಕವರು, ಆಡಳಿತವನ್ನು ನಡೆಸತಕ್ಕವರು ಎಚ್ಚರ ವಹಿಸಲಿಲ್ಲ ಎಂದರೆ, ಕನ್ನಡ ನಾಡಿಗೆ ನಾವು ಮಾಡಿದಂಥ ಮಹಾದ್ರೋಹವಾಗುತ್ತದೆ ಎಂಬ ಮಾತನ್ನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಈಗ ನಮ್ಮಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸತಕ್ಕವರ ಬಗ್ಗೆ ಡಾ: ಜೀವರಾಜ ಆಳ್ವ ಅವರು ಅವರ ಬಾಯಿಂದ, ಸ್ಪಷ್ಟವಾದ ನುಡಿಗಳಲ್ಲಿ ಹೇಳಿದರು. ಅದನ್ನು ಕೇಳಿ ನಿಜವಾಗಿಯೂ ನಾನು ಸಂತೋಷಪಟ್ಟೆ. ಇವತ್ತು ಯಾರು ಶಿಕ್ಷಣ ಸಂಸ್ಥೆಗಳನ್ನು ನಡೆಸತಕ್ಕವರು ಇದ್ದಾರೆ ಅವರು ಬೇರೆಯವರು. ಈ ಒಂದು ಕ್ಷೇತ್ರ ಬೇರೆಯವರ ಕೈಗೆ, ಬೇರೆ ಭಾಷೆಯವರ ಕೈಗೆ

ಹೋಗಿದೆ. ಅಲ್ಪಸಂಖ್ಯಾತರ ಹೆಸರಿನಲ್ಲಿ, ಕನ್ನಡಕ್ಕೆ ದ್ರೋಹ ನಡೆಯುತ್ತಿದೆ. ಅದಕ್ಕಾಗಿ ಈ ರಾಜ್ಯದಲ್ಲಿರತಕ್ಕ ಅಲ್ಪಸಂಖ್ಯಾತರು ಸಮಗ್ರವಾಗಿ ಮೊದಲನೇ ಭಾಷೆ ಕನ್ನಡ ಎಂದು ಕಲಿಯಲಿ, ಕನ್ನಡದ ಬಗ್ಗೆ ಅವರಿಗೆ ಅಭಿಮಾನ ಇರಲಿ, ತಾಳ್ಮೆ ತೆಗೆದುಕೊಳ್ಳಲಿ. ಆದರೆ ಇವತ್ತು ಇದರ ಬಗ್ಗೆ ಅವರಿಗೆ ಕಾಳಜಿ ಎಲ್ಲಿದೆ ? ಕರ್ನಾಟಕದಲ್ಲಿ ನಾನು ಯಾರ ಬಗ್ಗೆ ಹೆಮ್ಮೆಪಡುತ್ತೇನೆಂದರೆ, ನಮ್ಮ ಮುಸಲ್ಮಾನ್ ಬಾಂಧವರು, ನೂರಕ್ಕೆ ನೂರು ಭಾಗ, ಕನ್ನಡದ ಅಭಿಮಾನಿಗಳು, ಕನ್ನಡದ ಬಗ್ಗೆ ಅಪಾರ ಕಾಳಜಿ ಇರತಕ್ಕವರು. ಅವರು ಎಂದೂ ಭಾಷೆ ಬಗ್ಗೆ ತಕರಾರು ತೆಗೆದವರಲ್ಲ. ಇದನ್ನು ನಾನು ನೋಡಿರತಕ್ಕಂಥಾದ್ದು. ಎಲ್ಲೋ ಅಪರೂಪ; ಅಜೀಜ್ ಸೇಠ್‌ರವರಂಥವರು ಒಬ್ಬರನ್ನು ಬಿಟ್ಟರೆ, ನಾನು ಯಾರನ್ನೂ ನೋಡಿಲ್ಲ. ಆದೇ ನಿಸ್ಸಾರ್ ಅಹಮದ್‌ರವರು ಎಷ್ಟು ಸುಂದರವಾಗಿ ಕವನ ಬರೆದಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ಕರೀಂಖಾನ್‌ರವರನ್ನು ನೆನೆಸಿಕೊಳ್ಳಬೇಕು. ಇವರೆಲ್ಲರೂ ಕನ್ನಡಕ್ಕೋಸ್ಕರ ದುಡಿದಿದ್ದಾರೆ. ಮಾನ್ಯ ಇಮಾಮ್ ಸಾಹೇಬರನ್ನು ಇವತ್ತು ನೆನೆಯಬೇಕು. ಈ ಸದನದ ವಿರೋಧಪಕ್ಷದ ನಾಯಕರಾಗಿ, ಸುಮಾರು 25 ವರ್ಷಗಳ ಹಿಂದೆ, ಮಹಮದ್ ಇಮಾಮ್‌ರವರು ಈ ಸದನದಲ್ಲಿದ್ದರು. ಅವರು ಕೆ.ಎಂ.ಪಿ.ಪಿ. ಪಕ್ಷದಿಂದ ಗೆದ್ದು, ಈ ಸದನದಲ್ಲಿ ಎಷ್ಟು ಸ್ವಚ್ಛವಾದ ಕನ್ನಡ ಮಾತನಾಡುತ್ತಿದ್ದರು. ಆದರೆ, ನಾವು ಈಗ ಎಲ್ಲಿ ಹೋಗುತ್ತಿದ್ದೇವೆ. ಮಾನ್ಯ ಇದಿನಬ್ಬನವರನ್ನು ಸಾವಿರ ಭಾಷೆಯಲ್ಲಿ ಹೊಗಳುತ್ತೇನೆ. ಮಾನ್ಯ ಉಮರಬ್ಬರವರನ್ನು ಇವತ್ತು ನೆನೆಯಬೇಕು, ಅವರು ಈ ಸದನಕ್ಕೆ ಕನ್ನಡದ ಆಸ್ತಿಯಾಗಿದ್ದರು. ನಿಜವಾಗಿಯೂ ಇವತ್ತು ಅಂಥವರನ್ನು ಕಳೆದುಕೊಂಡಿದ್ದೇವೆ. ಅಂತಹ ಒಬ್ಬ ಸ್ನೇಹಜೀವಿ, ಕನ್ನಡದ ಪರ ಇದ್ದ ವ್ಯಕ್ತಿ, ಯಾರನ್ನೂ ಕಾಣಲಿಲ್ಲ, ಮಾನ್ಯ ಉಮರಬ್ಬನವರು ಎಷ್ಟು ಚೆನ್ನಾಗಿ ಈ ಸದನದಲ್ಲಿದ್ದರು, ದುರ್ದೈವ ಇವತ್ತು ಅವರು ಇಲ್ಲ. ಅಲ್ಪಸಂಖ್ಯಾತರಿಗೆ ನಾವು ಜಾಗ, ಮನೆ, ಮಠ, ಊಟ ಎಲ್ಲವನ್ನೂ ಕೊಟ್ಟು, ಈಗ ಅವರು ತಕರಾರು ತೆಗೆದು ಬಹುಸಂಖ್ಯಾತ ಭಾಷೆಯವರ ಮೇಲೆ ಕುಳಿತು, ಸವಾರಿ ಮಾಡಿ, ಆ ಭಾಷೆಗೆ ಅಪಚಾರ ಮಾಡುವಂಥಾದ್ದು ಆಗಬಾರದೆನ್ನುವ ಮಾತನ್ನು ತಮ್ಮಲ್ಲಿ ಕಳಕಳಿಯಿಂದ ಹೇಳುತ್ತೇನೆ.

ಛೇರ್ಮನ್:– ಅಲ್ಪಸಂಖ್ಯಾತ ಮುಸ್ಲಿಮರು, ಕನ್ನಡದ ಮೇಲೆ ನೂರಕ್ಕೆ ನೂರು ಸಂಪೂರ್ಣ ಭರವಸೆ ಇಟ್ಟಂಥವರು ಎಂದು ನೀವು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ, ಕೆಲವು ಪಿತೂರಿಗಾರರು ಇದನ್ನು ಹಾಳು ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ನೂರಕ್ಕೆ ನೂರು ತಮ್ಮನ್ನು ಒಪ್ಪುತ್ತೇನೆ. ಆದರೆ, ಕೆಲವು ಪಿತೂರಿಗಾರರು ಇದ್ದಾರೆ.

ಶ್ರೀ ಟಿ.ಎಂ. ಮಂಜುನಾಥ್:– ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರಿಗೆ ಇನ್ನೂ ಎಷ್ಟು ಸಮಯ ಕಾಲಾವಕಾಶ ಮಾಡಿ ಕೊಡುತ್ತೀರಿ ? ಅವರು ಮಾತನಾಡುವುದಕ್ಕೆ ನನ್ನ ವಿರೋಧ ಏನೂ ಇಲ್ಲ. ಟೈಮ್ ಇದ್ದರೆ ಆಫ್ಟರ್ ಲಂಚ್ ಅವರು ಮುಂದುವರೆಸಬಹುದಲ್ಲ.

ಛೇರ್ಮನ್:– ಆಫ್ಟರ್ ಲಂಚ್ ಇಲ್ಲ.

ಶ್ರೀ ಟಿ.ಎಂ. ಮಂಜುನಾಥ್:– ಅವರು ಬಹಳ ಸ್ವಾರಸ್ಯಕರವಾಗಿ ಮಾತನಾಡುತ್ತಿದ್ದಾರೆ. ನಮ್ಮ ಅಭ್ಯಂತರ ಏನೂ ಇಲ್ಲ.

ಛೇರ್ಮನ್:– 10 ನಿಮಿಷದಲ್ಲಿ ಮುಗಿಸಿ.

ಶ್ರೀ ಟಿ.ಎಂ. ಮಂಜುನಾಥ್:– ಹೊಟ್ಟೆ ತುಂಬಿದ ಮೇಲೆ ಅವರ ಭಾಷಣ ಚೆನ್ನಾಗಿ ಕೇಳಬಹುದು.

ಶ್ರೀ ವಾಟಾಳ್ ನಾಗರಾಜ್:- ಈಗ ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜುಗಳ ಬಗ್ಗೆ ಹೇಳಬೇಕೆಂದರೆ, ಮಾನ್ಯ ಯಾಹ್ಯಾರವರ ಬಗ್ಗೆ ನನಗೆ ಗೌರವ ಇದೆ. ಅವರಿಗೆ ಕನ್ನಡದಲ್ಲಿ ಸ್ಪಷ್ಟವಾಗಿ ಚೆನ್ನಾಗಿ ಮಾತನಾಡತಕ್ಕಂಥ ಒಂದು ಧಾಟಿ ಇದೆ, ಶಕ್ತಿ ಇದೆ. ಆ ಶಕ್ತಿಯನ್ನು ಅವರು ಪಡೆದುಕೊಂಡಿದ್ದಾರೆ, ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಈ ಸಭೆಯಲ್ಲಿ ಅವರು ಯಾವಾಗಲೋ ಒಂದೊಂದು ಸಾರಿ ವಾಟಾಳ್ ನಾಗರಾಜ್‌ರವರೇ ಅಂತ ಏನೋ ಒಂದು ತರಹ ಕರೆಯಬಹುದು. ನಾನು ಅದನ್ನು ತಪ್ಪು ಎಂದು ತಿಳಿದುಕೊಳ್ಳುವುದಿಲ್ಲ. ಯಾವುದೇ ಸಂದರ್ಭದಲ್ಲಿ ಅವರು ಮಾತನಾಡುವಾಗ ಕನ್ನಡದಲ್ಲಿ ಮಾತನಾಡತಕ್ಕಂಥ ಉತ್ಸಾಹ ಕಾಳಜಿ ಇದೆ. ನಾನು ಅವರನ್ನು ನೇರವಾಗಿ ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ. ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರತಕ್ಕಂಥ ವಿದ್ಯಾರ್ಥಿಗಳು ಕರ್ನಾಟಕದವರೇ, ಹೊರಗಡೆ ರಾಜ್ಯದವರೇ ಅಥವಾ ಹೊರಗಡೆ ದೇಶದವರೇ ಎನ್ನುವುದನ್ನು ತಾವು ಸ್ಪಷ್ಟಪಡಿಸಬೇಕು. ಏಕೆಂದರೆ ಈ ರಾಜ್ಯದ ನೆಲದಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಿ, ತಾಂತ್ರಿಕ ಕಾಲೇಜುಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಿ ಸರ್ಕಾರದಲ್ಲಿ ಕಾಡಿ, ಬೇಡಿ ಕಾಲೇಜುಗಳನ್ನು ಪ್ರಾರಂಭ ಮಾಡಿರುವುದು ವಿದೇಶಿ ಡಾಲರ್‌ಗಳನ್ನು ಸಂಪಾದನೆ ಮಾಡುವುದಕ್ಕಲ್ಲ, ಕನ್ನಡ ನಾಡಿನ ಮಕ್ಕಳಿಗೋಸ್ಕರ, ಕನ್ನಡ ನಾಡಿನ ಮಣ್ಣಿನ ಮಕ್ಕಳಿಗೋಸ್ಕರ. ನೀವು ಅಲ್ಲಿ ಪ್ರವೇಶವನ್ನು ಕೊಡಬೇಕು ಎಂದು ನಾನು ತಮಗೆ ಹೇಳುತ್ತೇನೆ. ಇದರಲ್ಲಿ ಎರಡು ವಿಧ ಇದೆ. ಒಂದು, ಕ್ಯಾಪಿಟೇಶನ್, ಮತ್ತೊಂದು ಭಾಷೆ. ಇವೆರಡರಲ್ಲೂ ನಮ್ಮವರು ವಂಚಿತರಾಗುತ್ತಿದ್ದಾರೆ. ಇವು ಎರಡರಲ್ಲೂ ಮೋಸವಾಗುತ್ತಿದೆ. ಇವತ್ತು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ವೈದ್ಯಕೀಯ ಕಾಲೇಜುಗಳಲ್ಲಿ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಅಭ್ಯಾಸ ಮಾಡತಕ್ಕಂಥವರ ಅಂಕಿ ಅಂಶಗಳನ್ನು ಇಡಿ. ತೀರಾ ಹಿಂದೆ ಹೋಗುವುದು ಬೇಡ, 10 ವರ್ಷಗಳ ಸಮಗ್ರ ಚಿತ್ರವನ್ನು ಒಳಗೊಂಡ ಅಂದರೆ ಯಾವ ಯಾವ ರಾಜ್ಯದವರು, ಯಾವ ಯಾವ ದೇಶದವರು ನಮ್ಮ ವೈದ್ಯಕೀಯ ಕಾಲೇಜುಗಳಲ್ಲಿ, ತಾಂತ್ರಿಕ ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದಾರೆ ಎನ್ನತಕ್ಕಂಥ ಸ್ಪಷ್ಟವಾದ ಶ್ವೇತಪತ್ರವನ್ನು ಇಡಿ. ಆಗ ನಿಮಗೂ ಗೌರವ ಬರುತ್ತದೆ. ಅದನ್ನು ಇಡಿ ಇರಾನ್‌ರವರು ಎಷ್ಟು, ಇರಾಕ್‌ನವರು ಎಷ್ಟು ಇಟಲಿಯವರು ಎಷ್ಟು, ಅಮೇರಿಕಾದವರು ಎಷ್ಟು, ತಮಿಳುನಾಡಿನವರು ಎಷ್ಟು, ಕನ್ನಡದವರು ಎಷ್ಟು ಪ್ರವೇಶ ಪಡೆದಿದ್ದಾರೆ ಎನ್ನುವುದು ಹೊರಗಡೆ ಬರಲಿ. ಈ ಚಿತ್ರ ಸಾರ್ವಜನಿಕರಿಗೆ ಗೊತ್ತಾಗಲಿ, ಜನತೆಗೆ ಗೊತ್ತಾಗಲಿ. ಇದನ್ನು ತಾವು ಹೇಳಬೇಕು. ಕ್ಯಾಪಿಟೇಶನ್ ಬಗ್ಗೆ ನಮ್ಮ ಆತ್ಮಶೋಧನೆ ಆಗಲೇಬೇಕು. ಇದರಲ್ಲಿ ಸುಮ್ಮನೆ ನೀವು ಯಾವುದೋ ದಾರಿಯಲ್ಲಿ ತಪ್ಪಿಸಿಕೊಂಡು ಹೋಗಲು ಕ್ಯಾಪಿಟೇಶನ್ ತೆಗೆದುಕೊಳ್ಳುವುದು ಕಾಣುತ್ತಿಲ್ಲ; ಸಿಕ್ಕಿಲ್ಲ ಎನ್ನುವುದಲ್ಲ.

ಶ್ರೀ ಮನೋಹರ ಐನಾಪುರ್:- ವಾಟಾಳ್‌ರೇ, ಕ್ಯಾಪಿಟೇಶನ್‌ಗೆ ಕನ್ನಡದಲ್ಲಿ ಏನು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಆ ರೀತಿ ಹೇಳಿದರೆ ತಪ್ಪೇನೂ ಇಲ್ಲ; ಈಗ ಒಬ್ಬಟ್ಟಿಗೆ ಇಂಗ್ಲೀಷ್‌ನಲ್ಲಿ ಏನು ಹೇಳುತ್ತಾರೆ. ಪಾಯಸಕ್ಕೆ ಇಂಗ್ಲೀಷ್‌ನಲ್ಲಿ ಏನು ಹೇಳುತ್ತಾರೆ ?

ಛೇರ್ಮನ್:- ಪಂಡಿತರಾದಂಥ ಗೋವಿಂದಪೈಗಳು ಏನು ಹೇಳಿದ್ದಾರೆಂದರೆ, ಕೆಲವು ಶಬ್ದಗಳನ್ನು ಹಾಗೆಯೇ ಹೇಳಬೇಕು. ಪೋಲೀಸ್ ಎಂದು ಇದ್ದರೆ ಪೋಲೀಸ್ ಎಂದು ಹೇಳಿದರೆ ತಪ್ಪೇನೂ ಇಲ್ಲ; ನೀವು ಅದರಲ್ಲಿ ಜಿಪುಣತನ ತೋರಿಸಬೇಡಿ; ಇಲ್ಲದಿದ್ದರೆ ಅಪಾರ್ಥವಾಗುತ್ತದೆ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಹಿಂದೆ ಪೋಲೀಸ್ ಎಂದರೆ ಜನಗಳಿಗೆ ಒಂದು ಹೆದರಿಕೆ, ಭಯ, ಭೀತಿ ಇರುತ್ತಿತ್ತು. ಪೋಲೀಸ್ ಅಂದ ತಕ್ಷಣ ಜನ ಓಡುತ್ತಿದ್ದರು. ಈಗ ಆರಕ್ಷಕರು ಬರುತ್ತಾರೆ ಎಂದರೆ ಕೇಳುವವರೇ ಇಲ್ಲ. ಆರಕ್ಷಕ ನಿರೀಕ್ಷಕ, ಮಹಾನಿರೀಕ್ಷಕ, ನಿರೀಕ್ಷಕ, ಮಹಾ ನಿರೀಕ್ಷಕ ಇದು ನಮಗೆ

ಇನ್ನು 10 ವರ್ಷಗಳಾದರೂ ಅರ್ಥವಾಗುವುದಿಲ್ಲ. ಆರಕ್ಷಕ, ನಿರೀಕ್ಷಕ, ವೃತ್ತನಿರೀಕ್ಷಕ ಎನ್ನುವುದು ಯಾವುದು ಸ್ವಾಮಿ ಇದು. ಆದ್ದರಿಂದ ಪೋಲೀಸ್ ಎಂದೇ ಇಟ್ಟುಕೊಳ್ಳಿ.

ಛೇರ್ಮನ್:- ಇನ್ನು 5 ನಿಮಿಷದಲ್ಲಿ ಮುಗಿಸಿ; 1 ಗಂಟೆ 5 ನಿಮಿಷ ಮಾತನಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ಆಯಿತು; ಪದಗಳನ್ನು ತರ್ಜುಮೆ ಮಾಡತಕ್ಕಂಥ ಮಹಾನ್ ದೊಡ್ಡ ದೊಡ್ಡ ಮೇಧಾವಿಗಳು ಜನ ಸಾಮಾನ್ಯರ ಆಡುಭಾಷೆಯಲ್ಲಿ ಇರುವಂತಹ ಪದಗಳನ್ನು ಕೊಡಬೇಕು. ತರ್ಜುಮೆ ಅಂದ ತಕ್ಷಣ ಇಂಗ್ಲೀಷನ್ನು ಕನ್ನಡಕ್ಕೆ ವರ್ಗ ಮಾಡತಕ್ಕಂಥಾದ್ದು ಆಗಿದೆ.

(ಅಧ್ಯಕ್ಷರು ಪೀಠದಲ್ಲಿ ಉಪಸ್ಥಿತರಾದರು)

ಈಗ ಅಮಲ್ದಾರ ಎನ್ನುವ ಶಬ್ದ ನಮ್ಮ ಕನ್ನಡಕ್ಕೆ ಬೇರೆ ಭಾಷೆಯಿಂದ ಆಡುಭಾಷೆಯಾಗಿ ಬಂದಿದೆ. ಆ ಶಬ್ದವನ್ನು ನಾವು ಅತ್ಯಂತ ಪರಿಣಾಮಕಾರಿಯಾಗಿ ಉಳಿಸಿಕೊಳ್ಳಬೇಕು. ಟೈ ಎನ್ನುವುದಕ್ಕೆ ಕನ್ನಡದಲ್ಲಿ ಹೇಳುವುದು ಬಹಳ ಕಷ್ಟ ಅಧ್ಯಕ್ಷರೇ, ಗಂಟಲು ಲಂಗೋಟಿ ಎನ್ನಬಹುದು, ಉರಳ ಪಟ್ಟಿ ಎನ್ನಬಹುದು. ನಾನು ಭಾಷೆಯ ಪಂಡಿತರಿಗೆ ಮನವಿ ಮಾಡಿಕೊಳ್ಳುತ್ತೇನೆ, ಭಾಷೆಯ ತರ್ಜುಮೆ ಕನ್ನಡವಾಗಿದ್ದು ಅದು ಅರ್ಥವಾಗಬೇಕು. ಪೋಲೀಸರಿಗೆ ಇವತ್ತು ಕಳ್ಳರೂ ಸಹ ಹೆದರುವುದಿಲ್ಲ. ಆರಕ್ಷಕ ಎಂದರೆ ಯಾವುದು ಸ್ವಾಮಿ ಅದು ಆರಕ್ಷಕ ? ಅದು ಯಾವ ಪದ ? ಅದನ್ನು ಎಲ್ಲಿಂದ ತಂದರು ? ಈಗ ಕನ್ನಡವನ್ನು ತೆಗೆದು ಮತ್ತೊಂದು ಭಾಷೆ ಸೃಷ್ಟಿಯಾಗುತ್ತಿದೆ. ಹಿಂದೆ ಕನಕದಾಸರು, ಪುರಂದರದಾಸರು, ಬಸವೇಶ್ವರರು ಕನ್ನಡಕ್ಕಾಗಿ ಸಾಹಿತ್ಯ ಬರೆದಿದ್ದಾರೆ. ಆಂಗ್ಲ ಭಾಷೆಯವರಾದ ರೈಸ್ ಮತ್ತು ಕಿಟಲ್ ಅವರು ಕನ್ನಡಕ್ಕೆ ಶಬ್ದಕೋಶ ಕೊಟ್ಟರಲ್ಲ, ಅವರಿಗೆ ನಾವು ಶರಣು ಹೋಗಬೇಕು. ಸಂತರು, ಶರಣರು, ಜೈನರು, ವೀರಶೈವರು ಕನ್ನಡ ಸಾಹಿತ್ಯ ಬೆಳವಣಿಗೆಯಲ್ಲಿ ಅಪಾರವಾದ ಸೇವೆಯನ್ನು ಮಾಡಿದ್ದಾರೆ. ಇವತ್ತಿನ ಪೀಳಿಗೆಯವರಾದ ನಮ್ಮಿಂದ ಆ ಕನ್ನಡ ಶಬ್ದವನ್ನೇ ನಾಶ ಮಾಡಿ, ಅರ್ಥವನ್ನೇ ಅಪಾರ್ಥ ಮಾಡತಕ್ಕಂಥ ಕೆಲಸ ಆಗುತ್ತಿದೆ.

ಶ್ರೀ ಬಿ.ಎಂ. ಇದಿನಬ್ಬ:- ಮೈಸೂರಿನ ಹುಲಿ ಟಿಪ್ಪು ಸುಲ್ತಾನ್ ಕಾಲದಲ್ಲಿ ಕನ್ನಡಕ್ಕೆ ಎಷ್ಟು ಮಹತ್ವ ಇತ್ತು ಎನ್ನುವುದು ನೀವು ದಾಖಲೆ ತೆಗೆದುನೋಡಿದರೆ ಗೊತ್ತಾಗುತ್ತದೆ. ಅದು ಯಾರಿಗೂ ಗೊತ್ತಿಲ್ಲ. ಆಗ ಕನ್ನಡಕ್ಕೆ ಬಹಳ ಪ್ರಾಶಸ್ತ್ಯ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಇವತ್ತು ಮಹದೇವ ಬಣಕಾರ ಒಳ್ಳೆಯ ವಚನಕಾರರು. ಇಂಗ್ಲೀಷರ ಆಡಳಿತದಲ್ಲಿ ಕನ್ನಡ ಎಂದು ದೊಡ್ಡ ಪುಸ್ತಕವನ್ನು ಬರೆದಿದ್ದಾರೆ. ಇಂಗ್ಲೀಷರ ಆಡಳಿತದಲ್ಲಿ, ಟಿಪ್ಪು ಸುಲ್ತಾನ್ ಕಾಲದಲ್ಲಿ ಇದ್ದಂಥ ಅನೇಕ ಕನ್ನಡ ದಾಖಲೆಗಳನ್ನು ಅದರಲ್ಲಿ ತೋರಿಸಿದ್ದಾರೆ. ಆದರೆ ಇವತ್ತು ಕನ್ನಡದ ಬಗ್ಗೆ ಅನ್ಯಾಯ ಮಾಡುತ್ತಿದ್ದೇವೆಂದರೆ ಅದು ಅತ್ಯಂತ ನೋವಿನ ಪ್ರಸಂಗ. ಆಗಿನ ಕಾಲದಲ್ಲಿ ಟಿಪ್ಪೂ ಸುಲ್ತಾನ್ ಕನ್ನಡದಲ್ಲೇ ಮಾತನಾಡುತ್ತಿದ್ದನಂತೆ. ಇವತ್ತು ನಾವು ಯಾವುದೋ ದಿಕ್ಕಿಗೆ ಸಾಗುತ್ತಿದ್ದೇವೆ. ಇದಕ್ಕೆ ಪರಿಣಾಮಕಾರಿಯಾದ ವ್ಯವಸ್ಥೆ ಇವತ್ತು ಆಗಬೇಕಾಗಿದೆ. ನಮ್ಮಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಇದೆ. ಅದು ಅನೇಕ ದಿಗ್ಗಜಗಳನ್ನು ಬೆಳೆಸಿರತಕ್ಕಂಥಾದ್ದು. ಕೃಷ್ಣರಾಜೇಂದ್ರ ಒಡೆಯರ್ ಅವರ ಕಾಲದಲ್ಲಿ ಬೆಂಬಲವನ್ನು ಕೊಟ್ಟು, ಸಹಕಾರವನ್ನು ಕೊಟ್ಟು ಕನ್ನಡ ಸಾಹಿತ್ಯ ಪರಿಷತ್ತನ್ನು ಬೆಳೆಸಿದರು. ಅಂಥ ಸಂಸ್ಥೆಗೆ ಸರ್ಕಾರ ಎಲ್ಲಾ ರೀತಿಯ ನೆರವು ನೀಡಬೇಕೆಂದು ನಾನು ಕೇಳುತ್ತೇನೆ. ಕ್ಯಾಪಿಟೇಷನ್ ಫೀ ಬಗ್ಗೆ ನಿಮ್ಮಲ್ಲಿ ಮೂರ್ನಾಲ್ಕು ನೀತಿಗಳಿವೆ. ಯಾರು ಕ್ಯಾಪಿಟೇಷನ್ ಫೀಸ್ ತೆಗೆದುಕೊಳ್ಳುತ್ತಾರೋ ಅಂಥವರನ್ನು ಶಿಕ್ಷೆ ಮಾಡಬಹುದು, 3 ತಿಂಗಳು ಜೈಲಿಗೆ ಹಾಕಬಹುದು ಎಂದು ಕಾನೂನು ಮಾಡಿದ್ದೀರಿ. ನಿಮ್ಮ ಕಣ್ಣಿಗೆ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುವವರು ಯಾರೂ ಕಾಣಲಿಲ್ಲವೋ ? ಇದುವರೆಗೆ ಯಾರೂ ಕ್ಯಾಪಿಟೇಷನ್ ತೆಗೆದುಕೊಂಡಿಲ್ಲ ಎನ್ನುವಂಥ ತೀರ್ಮಾನಕ್ಕೆ

ಬಂದಿದ್ದೀರೋ ? ಹಾಗಿದ್ದರೆ ನೀವು ಆತ್ಮ ಮುಟ್ಟಿ ಹೇಳಿ. ಇವತ್ತು 15 ಲಕ್ಷ ರೂಪಾಯಿ ಮೆಡಿಕಲ್ ಸೀಟಿಗೆ ಇದೆ. ನಮ್ಮ ಕನ್ನಡದ ವಿದ್ಯಾರ್ಥಿಗಳು ಯಾರು 15 ಲಕ್ಷ ರೂಪಾಯಿಗಳನ್ನು ಕೊಟ್ಟು ಓದಲು ಸಾಧ್ಯ ಇದೆ ಸ್ವಾಮಿ ? ನಾವು ಇದರ ಬಗ್ಗೆ ಕೇಳಿದರೆ ಯಾರೂ ನಮಗೆ ದೂರು ಕೊಟ್ಟಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ಯಾರು ತಮಗೆ ದೂರು ಕೊಡುತ್ತಾರೆ ಸ್ವಾಮಿ ? ತೆಗೆದುಕೊಳ್ಳುವವರೂ ಕಳ್ಳರು, ಕೊಟ್ಟವರೂ ಕಳ್ಳರು. ದೂರು ಕೊಡುವುದಕ್ಕೆ ದಾಖಲೆ ಏನಿರುತ್ತದೆ ? ಈ ರೀತಿ ಹಗಲು ದರೋಡೆ ನಡೆಸುತ್ತಿದ್ದರೂ ನಮಗೆ ಏನೂ ಗೊತ್ತಿಲ್ಲವೆಂದರೆ ಆಗುವುದಿಲ್ಲ. ಕೆಲವು ಧಾರ್ಮಿಕ ಸಂಸ್ಥೆಗಳು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಅವರ ಬಗ್ಗೆ ನನ್ನ ತಕರಾರು ಇಲ್ಲ. ಆದರೆ ಕೆಲವು ವ್ಯಕ್ತಿಗಳೇ ನಡೆಸುತ್ತಿದ್ದಾರೆ. ಅವರು ಪಾಳೆಯಗಾರರಾಗಿದ್ದಾರೆ. ವೈದ್ಯಕೀಯ ಕಾಲೇಜು, ತಾಂತ್ರಿಕ ಕಾಲೇಜು ಇಟ್ಟುಕೊಂಡಿರುವವರು ಪಾಳೆಯಗಾರರು ಇದ್ದ ಹಾಗೆ. ನಾನು ಎರಡು ವರ್ಗ ಮಾಡಿದ್ದೇನೆ, ಒಂದು ಸಂಸ್ಥೆ ಮಾಡತಕ್ಕಂಥಾದ್ದು, ಎರಡನೆಯದು ವ್ಯಕ್ತಿ ಮಾಡತಕ್ಕಂಥಾದ್ದು. ವ್ಯಕ್ತಿ ಮಾಡತಕ್ಕಂಥಾದ್ದು ಬೇರೆ, ಸಂಸ್ಥೆ ಮಾಡತಕ್ಕಂಥಾದ್ದು ಬೇರೆ. ಈ ರೀತಿ ಲೂಟಿ ನಡೆಯುತ್ತಿಲ್ಲವೆಂದು ಹೇಳಿದರೆ ನಿಮಗೆ ಒಳ್ಳೆಯ ಹೆಸರು ಬರುವುದಿಲ್ಲ. 10 ವರ್ಷಗಳಿಂದ ಬಂದಂಥ ಎಲ್ಲಾ ಮುಖ್ಯ ಮಂತ್ರಿಗಳು ವೈದ್ಯಕೀಯ ಕಾಲೇಜುಗಳಿಗೆ ಬೆಂಬಲ ಕೊಟ್ಟಿದ್ದಾರೆ; ಪ್ರತಿಯೊಬ್ಬರೂ ಕೊಟ್ಟಿದ್ದಾರೆ. ಒಂದೊಂದು ವೈದ್ಯಕೀಯ ಕಾಲೇಜು ತೆಗೆದುಕೊಳ್ಳಬೇಕಾದರೆ ಸರ್ಕಾರಕ್ಕೂ ಲಂಚ ಕೊಟ್ಟಿದ್ದಾರೆ, ಚುನಾವಣೆಗೆ ದುಡ್ಡು ಕೊಟ್ಟಿದ್ದಾರೆ. ಎಲ್ಲಾ ಕೊಟ್ಟೇ ಇದನ್ನು ಮಾಡಿರತಕ್ಕಂಥಾದ್ದು. ಆದ್ದರಿಂದ ಈ ಕ್ಯಾಪಿಟೇಷನ್ ಫೀ ಅನ್ನು ತಡೆಯತಕ್ಕಂಥ ಪ್ರಾಮಾಣಿಕ ಪ್ರಯತ್ನ ತಮ್ಮಲ್ಲಿ ಇದೆಯೇ ಎಂದು ನಾನು ಕೇಳುತ್ತಿದ್ದೇನೆ. ಸುಪ್ರೀಮ್ ಕೋರ್ಟ್ ಕೊಟ್ಟಿರುವ ತೀರ್ಪು ಇನ್ನೂ ಭದ್ರವಾಗಿರಬೇಕಾಗಿತ್ತು. ತೀರ್ಪಿನ 50 ಭಾಗ ಅವರಿಗೆ ಸ್ವಲ್ಪ ರಕ್ಷಣೆ ಸಿಕ್ಕಿದೆ. ಅದು ಆಗಬಾರದು. ಅದು ನನ್ನ ವೈಯಕ್ತಿಕವಾದ ಅಭಿಪ್ರಾಯ. ನೀವು ಸಮಾಜವಾದಿ ಸಿದ್ಧಾಂತವನ್ನು ಒಪ್ಪಿಕೊಳ್ಳುವುದಾದರೆ, ನಿಮ್ಮಲ್ಲಿ ಒಂದು ಹೊಸ ಚಿಂತನೆ ಇದೆ ಎನ್ನುವುದಾದರೆ ನೀವು ಅದಕ್ಕೆ ಏಕೆ ಸಿಕ್ಕಿ ಬೀಳುತ್ತೀರಿ. ನಿಮ್ಮ ಹೊಸ ಸರ್ಕಾರ ಬಂದ ಮೇಲೆ ವೈದ್ಯಕೀಯ ಕಾಲೇಜುಗಳನ್ನು ಕೊಡುವುದಿಲ್ಲವೆಂದು ಹೇಳಿದ್ದೀರಿ. ತಾಂತ್ರಿಕ ಕಾಲೇಜುಗಳನ್ನು ಕೊಡುವುದಿಲ್ಲವೆಂದು ಹೇಳಿದ್ದೀರಿ. ಅದಕ್ಕೆ ನಾನು ಸಂತೋಷಪಟ್ಟೆ.

ಈಗ ಅನುಮತಿ ಪಡೆದಿರತಕ್ಕಂಥ ಕಾಲೇಜಿನವರು ಮಾಡುತ್ತಿರತಕ್ಕಂಥ ದರೋಡೆಯನ್ನು ನಿಲ್ಲಿಸುವುದಕ್ಕೆ ನಿಮ್ಮಲ್ಲಿ ಅಸ್ತ್ರ ಇದೆಯೇ ಎಂದು ನಾನು ನೇರವಾಗಿ ತಮ್ಮನ್ನು ಪ್ರಶ್ನೆ ಮಾಡುತ್ತಿದ್ದೇನೆ. ನಾವು ಶಿಕ್ಷಣವನ್ನು ಯಾವ ಲೆವೆಲ್‌ಗೆ ಮಾರುತ್ತಿದ್ದೇವೆಂದರೆ, ನಮಗೆ ಇಚ್ಛೆ ಬಂದ ಹಾಗೆ ಮಾರುತ್ತಿದ್ದೇವೆ. ದಾರಿ ದಾರಿಯಲ್ಲಿ ಮಾರುತ್ತಿದ್ದೇವೆ. ವರ್ಷಕ್ಕೆ ಒಂದು ಸಾರಿ ಶಿಕ್ಷಣದ ಮಾರಾಟದ ಸುಗ್ಗಿ. ಅದಕ್ಕೆ ಎಂತೆಂಥವರು ಬರುತ್ತಾರೆ ? ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ನಮ್ಮ ನಾಡಿನ ಮಕ್ಕಳು ಆ ಮಟ್ಟದಲ್ಲಿ ಹೋಗಿ ಪ್ರವೇಶವನ್ನು ಪಡೆಯುವುದಕ್ಕಾಗುವುದಿಲ್ಲ. ಇದರ ಬಗ್ಗೆ ಸಾಮಾಜಿಕ ನ್ಯಾಯ ದೊರಕಬೇಕು ಎನ್ನುವುದಾದರೆ ಈ ಕ್ಯಾಪಿಟೇಷನ್ ನಿಲ್ಲಿಸಿ. ಇಲ್ಲವೆಂದರೆ ಧೈರ್ಯವಾಗಿ ತಾಂತ್ರಿಕ ಕಾಲೇಜುಗಳನ್ನು ಮತ್ತು ವೈದ್ಯಕೀಯ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಿ. ಧೈರ್ಯವಾಗಿ ರಾಷ್ಟ್ರೀಕರಣ ಮಾಡಿ. ಒಬ್ಬೊಬ್ಬ ವಿದ್ಯಾರ್ಥಿಗೆ ಇಷ್ಟಿಷ್ಟು ಖರ್ಚು ಬರುತ್ತದೆ; ಅದಕ್ಕಾಗಿ ಇಷ್ಟು ವಂತಿಕೆಯನ್ನು ಕೊಡಬೇಕಾಗುತ್ತದೆಂದು ಬಹಿರಂಗವಾಗಿ ಹೇಳಿ. ಅದು ಬಿಟ್ಟು ಇವುಗಳನ್ನು ವ್ಯಾಪಾರಿ ಕೇಂದ್ರಗಳಾಗಿ ಮಾಡುವುದು ಸರಿಯಲ್ಲ. ನಾವು ಮಾಡಿರುವುದನ್ನು ಪ್ರಪಂಚದ ಮಟ್ಟದಲ್ಲಿ ನೋಡಿ ನಗುತ್ತಾರೆ. ಆದ್ದರಿಂದ ಈ ನಗೆಪಾಟಲಿಗೆ ನಾವು ಈಡಾಗಬಾರದೆಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗನ್ನು ಮುಗಿಸುತ್ತೇನೆ.

† ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರ್):– ಮಾನ್ಯ ಅಧ್ಯಕ್ಷರೇ, ಉನ್ನತ ಶಿಕ್ಷಣಕ್ಕಿಂತಲೂ ಮುಖ್ಯವಾಗಿ ಪ್ರಾಥಮಿಕ ಶಿಕ್ಷಣದಲ್ಲಿ ಇಲ್ಲಿಯವರೆಗೆ ಎಲ್ಲರಿಗೂ ಅಕ್ಷರಜ್ಞಾನವನ್ನು ಕೊಡಲಿಕ್ಕೂ ಸಹಿತ

ನಮಗೆ ಸಾಧ್ಯವಾಗಿಲ್ಲ. ಮಕ್ಕಳಿಗೆ ಅಕ್ಷರಜ್ಞಾನ ಕೊಡುವುದು ಬಿಟ್ಟು ವೃದ್ಧರಿಗೆ ಅಕ್ಷರಜ್ಞಾನ ಕೊಡಲಿಕ್ಕೆ ಹತ್ತಿದ್ದಾರೆ. ಇಷ್ಟರ ಮಟ್ಟಿಗೆ ನಮ್ಮ ರಾಣೆ ಅವರ ಇಲಾಖೆಯೇ ಅದನ್ನು ಪ್ರಾರಂಭ ಮಾಡಲಿಕ್ಕೆ ಕಾರಣ ? ಸ್ವಾತಂತ್ರ್ಯ ಬಂದ ನಂತರ ಹುಟ್ಟಿದಂಥ ಮಕ್ಕಳಿಗೆ ಅಕ್ಷರ ಜ್ಞಾನವನ್ನು ಕೊಡಲಿಕ್ಕೆ ಪ್ರಾಥಮಿಕ ಶಿಕ್ಷಣ ಕೊಡಲಿಕ್ಕೆ ವಿಫಲರಾಗಿರುವುದೇ ಇದಕ್ಕೆ ಕಾರಣವೆಂದು ನಾನು ಭಾವಿಸುತ್ತಿದ್ದೇನೆ.

2.45 ಪಿ.ಎಂ.

ಇವತ್ತಿಗೂ ಸಹಿತ ಅವಶ್ಯಕತೆ ಇರತಕ್ಕಂಥ ಪ್ರಾಥಮಿಕ ಶಿಕ್ಷಣವನ್ನು ಕೊಡಲಿಕ್ಕೆ ಆಗಿಲ್ಲ. ಅಲ್ಲಿ ಅವಶ್ಯಕತೆ ಇರತಕ್ಕಂಥ ಕೊಠಡಿಗಳನ್ನು ಕೊಡಲಿಕ್ಕೆ ಆಗಿಲ್ಲ. ಇಂತಹ ಗ್ರಾಮೀಣ ಪ್ರಾಥಮಿಕ ವಿದ್ಯೆಯನ್ನು ನೋಡಿದರೆ ನಮ್ಮ ಉನ್ನತ ಶಿಕ್ಷಣ ಹಾಗೂ ಅಲ್ಲಿರತಕ್ಕಂಥ ವ್ಯವಸ್ಥೆ ಈ ಪ್ರಾಥಮಿಕ ಶಿಕ್ಷಣಕ್ಕಿಂತ ಕಡಿಮೆ ಮಟ್ಟದಲ್ಲಿ ಇದೆ. ಇನ್ನು ಉನ್ನತ ಶಿಕ್ಷಣದ ಬಗ್ಗೆ ಹೇಳಬೇಕಾದರೆ, ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ನೋಡಿದರೆ ಗೊತ್ತಾಗುತ್ತದೆ. ಆ ವಿಶ್ವವಿದ್ಯಾನಿಲಯಕ್ಕೆ ಮಹಾಕವಿ ಕುವೆಂಪುರವರ ಹೆಸರನ್ನು ಇಟ್ಟಿದ್ದೇವೆ. ಇವತ್ತಿನವರೆಗೂ ಸಹಿತ ಅಲ್ಲಿ ಹಳೆಯ ಪ್ರಾಥಮಿಕ ಶಾಲೆಯ ಮುರುಕು ಕೊಠಡಿಯಲ್ಲಿ ಪಾಠಗಳು ನಡೆಯುತ್ತಿದೆ, ಇದನ್ನು ಮಾನ್ಯ ಯಾಹ್ಯರವರು ನೋಡಿರಬೇಕು. ಅಲ್ಲಿ ಒಂದು ಪ್ರಾಥಮಿಕ ಶಾಲೆ ನಡೆಯುತ್ತಿತ್ತು, ಅದು ಇವತ್ತು ಹಾಳಾಗಿಹೋಗಿದೆ. ಅದು ಸೋರುತ್ತಿದೆ, ಅಲ್ಲಿ ಇವತ್ತು ಎಂ.ಎ. ತರಗತಿಯವರಿಗೆ ಪಾಠಗಳನ್ನು ಮಾಡುತ್ತಿದ್ದಾರೆ, ಎಂ.ಎಸ್.ಸಿ.ಯವರಿಗೆ ಪಾಠಗಳನ್ನು ಮಾಡುತ್ತಿದ್ದಾರೆ. ಇವತ್ತು ಈ ರಾಜ್ಯದಲ್ಲಿ ಈ ವಿಶ್ವವಿದ್ಯಾನಿಲಯದ ಶಿಕ್ಷಣ ಮಟ್ಟ ಪ್ರಾಥಮಿಕ ಶಿಕ್ಷಣ ಮಟ್ಟಕ್ಕಿಂತಲೂ ಕೆಳದರ್ಜೆಯಲ್ಲಿ ನಡೆಯುತ್ತಿದೆ. ತಾವು ಕುವೆಂಪು ವಿಶ್ವವಿದ್ಯಾನಿಲಯವನ್ನು ನೋಡಿದ್ದೀರಿ, ಅಲ್ಲಿರತಕ್ಕಂಥ ಸಮಸ್ಯೆಗಳನ್ನು ನೋಡಿದರೆ ನಾವು ಏತಕ್ಕೆ ಈ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭಿಸಬೇಕು ? ಯಾವ ಪ್ರಚಾರಕ್ಕಾಗಿ ಪ್ರಾರಂಭಿಸುತ್ತಿದ್ದೇವೆಯೋ ಎಂದು ಗೊತ್ತಿಲ್ಲ. ನಿಜವಾಗಿಯೂ ಶಿಕ್ಷಣದ ಮಟ್ಟವನ್ನು ಎತ್ತರಿಸಲಿಕ್ಕೆ, ಶಿಕ್ಷಣವನ್ನು ಕೊಡಲಿಕ್ಕೆ ಇವರು ಪ್ರಾರಂಭಿಸುತ್ತೇವೆಂದು ಹೇಳುತ್ತಿದ್ದಾರೆ, ಆದರೆ ಇದು ಶೋಚನೀಯ ಸ್ಥಿತಿಯಲ್ಲಿದೆ. ಕುವೆಂಪು ವಿಶ್ವವಿದ್ಯಾನಿಲಯ ಶಿವಮೊಗ್ಗದಿಂದ 23 ಕಿ.ಮೀ. ದೂರದಲ್ಲಿದೆ. ಕನಿಷ್ಠ ಅವಶ್ಯಕತೆಯಾದಂತಹ ಬಸ್ಸುಗಳ ವ್ಯವಸ್ಥೆ ಸಹಿತ ಇವತ್ತಿಗೂ ಇಲ್ಲ. ಅಲ್ಲಿನ ವಿದ್ಯಾರ್ಥಿಗಳಿಗೆ, ಬೋಧಕಸ ಶಿಕ್ಷಕರಿಗೆ ಅಲ್ಲಿಗೆ ಹೋಗುವುದಕ್ಕೆ ಬಸ್ಸಿನ ವ್ಯವಸ್ಥೆ ಇಲ್ಲ. ಶಿಕ್ಷಕರುಗಳ ವ್ಯವಸ್ಥೆ ಸರಿಯಾಗಿಲ್ಲ. ಇಷ್ಟೊಂದು ಅಧೋಗತಿಗೆ ಹೋಗಿರಬೇಕಾದರೆ, ಅದನ್ನು ಸರಿಪಡಿಸಲು ಏನು ವ್ಯವಸ್ಥೆಯನ್ನು ಮಾಡಿದ್ದೀರಿ. ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಕನಿಷ್ಟ ವ್ಯವಸ್ಥೆಯನ್ನಾದರೂ ಮಾಡಬೇಕು. ಈ ವರ್ಷವಾದರೂ ಕನಿಷ್ಟ ಬಸ್ಸಿನ ವ್ಯವಸ್ಥೆಯನ್ನಾದರೂ ಮಾಡಿಕೊಡುತ್ತೀರಾ. ಅಲ್ಲಿರತಕ್ಕಂಥ ವರ್ಗಗಳನ್ನು ನಡೆಸಲಿಕ್ಕೆ, ಅವಶ್ಯಕತೆ ಇರತಕ್ಕಂತ ಪೋಸ್ಟ್ ಗ್ರ್ಯಾಜ್ಯುಯೇಟ್ ತರಬೇತಿಯನ್ನು ಕೊಡತಕ್ಕಂಥವರಿಗೆ ಹಾಗೂ ಅಲ್ಲಿರತಕ್ಕಂಥ ಹೆಣ್ಣು ಮಕ್ಕಳಿಗೆ ವಸತಿ ನಿಲಯ ಮಾಡಿಕೊಡುತ್ತೀರಾ; ಇವತ್ತು ಅಲ್ಲಿ ಕುಡಿಯಲಿಕ್ಕೆ ನೀರು ಇಲ್ಲ. ಇಷ್ಟೊಂದು ಕೆಟ್ಟ ಪರಿಸ್ಥಿತಿಯನ್ನು ಇವತ್ತು ಸರ್ಕಾರ ಗಮನಿಸದೆ ಹೋದರೆ, ಈ ಶಿಕ್ಷಣದ ಬಗ್ಗೆ ಹಾಡಿ ಹೊಗಳಿ ಶಿಕ್ಷಣವನ್ನು ಅಧೋಗತಿಗೆ ತಂದರೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಹೊಸದಾಗಿ ವಿಶ್ವವಿದ್ಯಾನಿಲಯಗಳನ್ನು ತೆಗೆಯುವುದನ್ನು ನಿಲ್ಲಿಸಬೇಕು. ಇದ್ದ ವಿಶ್ವವಿದ್ಯಾನಿಲಯವನ್ನು ಸುಧಾರಣೆ ಮಾಡುವಂತಹ ಒಂದು ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಕನಿಷ್ಟ ಅವಶ್ಯಕತೆಗಳನ್ನಾದರೂ ಪೂರೈಸಬೇಕು. ಕುವೆಂಪು ವಿಶ್ವವಿದ್ಯಾನಿಲಯ ನಾನು ನೋಡಿದ ಹಾಗೆ ನಮ್ಮ ರಾಜ್ಯದ ಉಳಿದೆಲ್ಲ ವಿಶ್ವವಿದ್ಯಾನಿಲಯಗಳಿಗಿಂತಲೂ ಸಹಿತ ಕನಿಷ್ಟ ಮಟ್ಟದಲ್ಲಿ ಇವತ್ತು ನಡೆಯುತ್ತಿದೆ. ಸರ್ಕಾರ ಸರ್ವವಿಧವಾದಂತಹ ಸಹಕಾರವನ್ನು ಮತ್ತು ಹಣವನ್ನು ಒದಗಿಸಬೇಕೆನ್ನುವಂತಹ ಮಾತನ್ನು ತಮ್ಮ ಮೂಲಕ ಹೇಳುತ್ತಿದ್ದೇನೆ.

ಇನ್ನು ಪ್ರಾಥಮಿಕ ಶಿಕ್ಷಣದಲ್ಲಿ ನಮಗೆ ಯಾರಿಗೆ ಮಕ್ಕಳಿಗೆ ಶಿಕ್ಷಣವನ್ನು ಕೊಡಲಿಕ್ಕೆ ಆಗುವುದಿಲ್ಲ,

ಆದರಲ್ಲಿ ಯಾರು ವಿಫಲರಾಗಿದ್ದೇವೆ ಆ ತಪ್ಪನ್ನು ತಿದ್ದಿಕೊಳ್ಳಲಿಕ್ಕೆ ಎಲ್ಲರಿಗೂ ಅಕ್ಷರಜ್ಞಾನವನ್ನು ಕೊಡುತ್ತೇವೆ, ಎಲ್ಲರಿಗೂ ಅಕ್ಷರವನ್ನು ಕಲಿಸುತ್ತೇವೆ ಎಂದು ಹೇಳಿ ಇವತ್ತು ಮಾನ್ಯ ಪ್ರಭಾಕರ ರಾಣೆಯವರ ಇಲಾಖೆ ಮುಂದೆ ಬಂದಿದೆ. ನಮ್ಮಲ್ಲಿ ಹಿಂದೆ ರಾತ್ರಿ ಶಾಲೆಗೆ ಕಳುಹಿಸುತ್ತಾರಾ ಎಂದು ಕೇಳುತ್ತಿದ್ದರು. ನಂತರ ರಾತ್ರಿ ಶಾಲೆಗಳಿಗೆ ಹೋಗುವುದನ್ನು ಪ್ರಾರಂಭ ಮಾಡಿದರು. ನಮ್ಮ ಸುಧಾರಣೆ ಏನು ಅಂದರೆ ಎಳೆಯ ವಯಸ್ಸಿನಲ್ಲಿ ಮಕ್ಕಳಿಗೆ ಕೊಡಬೇಕಾದಂತಹ ಪ್ರಾಥಮಿಕ ಹಂತದ ಅಕ್ಷರಜ್ಞಾನವನ್ನು ಕೊಡಲಿಕ್ಕೆ ವಿಫಲರಾಗಿದ್ದೇವೆ. ನಮ್ಮ ಗುರಿ ಏನಿದೆ ಅದು ದಾರಿ ತಪ್ಪಿದ ಗುರಿಯಾಗಿದೆ. ನಿರ್ದಿಷ್ಟವಾದಂತಹ ನೀತಿ ಇಲ್ಲ; ನಿಯಮ ಇಲ್ಲ, ಪಠ್ಯ ಪುಸ್ತಕಗಳನ್ನು ನೋಡಿದರೆ ಆ ಮಕ್ಕಳಿಗೆ ಹೊರಲಿಕ್ಕೂ ಸಾಧ್ಯವಿಲ್ಲ. ಕನ್ನಡ ಶಾಲೆಗಳನ್ನು ಇವತ್ತು ಸರ್ಕಾರ ಪ್ರಾರಂಭಿಸಲಿಕ್ಕೆ ಆಗದೇ ಇದ್ದರೆ ಪ್ರೌಢಶಾಲೆಗಳನ್ನು ಪ್ರಥಮ ದರ್ಜೆಯ ಕಾಲೇಜುಗಳನ್ನು, ವಿಶ್ವವಿದ್ಯಾನಿಲಯಗಳನ್ನು ಎಷ್ಟರಮಟ್ಟಿಗೆ ನಾವು ನಡೆಸಿಕೊಂಡು ಹೋಗಿದ್ದೇವೆ, ಎಷ್ಟರಮಟ್ಟಿಗೆ ಜನತೆಯ ಆಶೋತ್ತರಗಳನ್ನು ಈಡೇರಿಸಲಿಕ್ಕೆ ಶಿಕ್ಷಣದ ಬಗ್ಗೆ ನಾವು ಮಹತ್ವವನ್ನು ಕೊಟ್ಟಿದ್ದೇವೆ ಅನ್ನುವುದನ್ನು ಸ್ಪಷ್ಟವಾಗಿ ಈ ರಾಜ್ಯದಲ್ಲಿ ನಾವು ಕಾಣುತ್ತಿದ್ದೇವೆ. ಆದಕ್ಕಾಗಿ ನಾನು ಹೇಳುತ್ತಿದ್ದೇನೆ, ನಿಮ್ಮ ಸರ್ಕಾರಕ್ಕೆ ಆದರೆ ಮಾಡುತ್ತೇವೆಂದು ಹೇಳಿ ಇಲ್ಲದೇ ಹೋದರೆ ಬಿಟ್ಟುಬಿಡಿ, ವಿದ್ಯೆಯನ್ನು ಕಲಿಯುವಂತಹವರಿಗೆ ಯಾವುದಾದರೂ ಒಂದು ಸಂಘದವರು, ಸಂಸ್ಥೆಯವರು ಅಲ್ಲಿ ಶಿಕ್ಷಕರನ್ನು ಇಟ್ಟು ಕಲಿಸುವುದಾದರೆ ಸರ್ಕಾರದ ಕನಿಷ್ಠ ಮಟ್ಟದ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆಂದು ಡಿಕ್ಲೇರ್ ಮಾಡಿಬಿಡಿ. ನಿಮಗೆ ಆಗದೇ ಇದ್ದರೆ, ಯಾರು ಮುಂದೆ ಬರುತ್ತಿದ್ದಾರೆ ಅವರಿಗೆ ಅಲ್ಲಿ ಒಟ್ಟು ಖರ್ಚಾಗತಕ್ಕಂಥ ಕಟ್ಟಡ ಇರಲಿ, ಅಥವಾ ಶಿಕ್ಷಕರು ಇರಲಿ, ಯಾವುದೇ ದೃಷ್ಟಿಯಿಂದ ನಾವು ಕನಿಷ್ಟ 100ಕ್ಕೆ 50ರಷ್ಟು, 60ರಷ್ಟು ಹಣವನ್ನು ಕೊಡುತ್ತೇವೆ, ಯಾರು ಪ್ರಾರಂಭ ಮಾಡುತ್ತೀರೋ ಅವರೆಲ್ಲ ಮಾಡಿ ಎಂದು ಹೇಳಿ. ಇವತ್ತು ವಿದ್ಯಾಸಂಸ್ಥೆಗಳು ನಾಯಿಕೊಡೆಗಳಂತೆ ಬೆಳೆದುಕೊಂಡಿದೆ; ಅಲ್ಲಿ ಒಂದು ವ್ಯವಸ್ಥೆ ಇಲ್ಲ, ಕಟ್ಟಡ ಇಲ್ಲ, ಜಾಗ ಇಲ್ಲ; ಅಂತಹವರಿಗೆ ಕೊಟ್ಟರೆ ಏನು ಪ್ರಯೋಜನವಾಗುತ್ತದೆ. ಕೆಲವೊಂದು ನಿಯಮಗಳನ್ನು ಹಾಕಿಕೊಳ್ಳಿರಿ. ಯಾವ ಸಂಸ್ಥೆ, ಯಾವ ವ್ಯಕ್ತಿ ಅವಶ್ಯಕತೆ ಇರತಕ್ಕಂಥ ನಿವೇಶನ, ಕಟ್ಟಡ, ಕನಿಷ್ಟ ವ್ಯವಸ್ಥೆಯನ್ನಾದರೂ ಹೊಂದಿರುತ್ತಾರೆ ಅವರಿಗೆ ಸಹಾಯ ಮಾಡುತ್ತೇವೆಂದು ಹೇಳಿದರೆ ಈ ಉದ್ದೇಶ ಸ್ವಲ್ಪ ಮಟ್ಟಿಗಾದರೂ ಈಡೇರಬಹುದು, ತನ್ಮೂಲಕ ಪ್ರಗತಿಯಾಗಬಹುದು. ಸರ್ಕಾರದ ಕೈಯಿಂದ ಮಾಡುವುದಕ್ಕಿಂತ ಜನರಿಗೆ ಇದನ್ನು ಕೊಟ್ಟರೆ, ಆ ಜನರಾದರೂ ಸಾರ್ವಜನಿಕ ವಂತಿಕೆಯಿಂದ ಅಥವಾ ತಮ್ಮ ಸ್ವಂತ ಹಣವನ್ನು ಖರ್ಚು ಮಾಡಿ, ಸರ್ಕಾರದ ಸಹಾಯದಿಂದ, ಸರ್ಕಾರಿ ಪ್ರಾಥಮಿಕ ಶಾಲೆಗಿಂತ ಉತ್ತಮವಾದಂತಹ ಶಾಲೆಗಳನ್ನು ನಡೆಸಲಿಕ್ಕೆ ಸಾಧ್ಯ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಇನ್ನು ಇವತ್ತಿನ ವಿದ್ಯಾ ಮಟ್ಟವನ್ನು ನೋಡಿದರೆ ಇವತ್ತು ನಾವು ಶಾಲೆಗಳಲ್ಲಿ ಪಾಠ ಹೇಳಿ ಕೊಡುವಂತಹ ಪದ್ಧತಿ, ಪರೀಕ್ಷೆಗಳನ್ನು ನಡೆಸತಕ್ಕಂಥ ಪದ್ಧತಿ ಏನು ಇದೆ ಇದು ಬ್ರಿಟಿಷರು ಹಾಕಿಕೊಟ್ಟಂತಹ ಪದ್ಧತಿಯಾಗಿದೆ.

ಈ ಪದ್ಧತಿ ಅವರಿಗೆ ಬೇಕಾಗಿತ್ತು, ಆದರೆ ಇದು ಬುದ್ಧಿವಂತಿಕೆ ಶಿಕ್ಷಣ ಅಲ್ಲ, ಉದ್ಯೋಗವನ್ನು ಕಲ್ಪಿಸತಕ್ಕಂಥ ಶಿಕ್ಷಣ ಇಲ್ಲ, ಕಾರಕೂನಿಕೆ ಮಾಡತಕ್ಕಂಥ ಶಿಕ್ಷಣ ಮಾತ್ರ ಬ್ರಿಟಿಷರಿಗೆ ಬೇಕಾಗಿತ್ತು, ಉನ್ನತ ಹುದ್ದೆಗಳನ್ನು, ಪರಿಣಿತ ಹುದ್ದೆಗಳನ್ನು, ಬುದ್ಧಿವಂತಿಕೆ ಹುದ್ದೆಗಳನ್ನು ಅವರೇ ವಹಿಸಿಕೊಳ್ಳುತ್ತಿದ್ದರು. ಕ್ಲರಿಕಲ್ ವರ್ಕ್ ಮಾಡಲಿಕ್ಕೆ ಏನು ಬೇಕಾಗಿತ್ತು ಅಂಥ ವಿದ್ಯೆಯನ್ನು ಮಾತ್ರ ಅವರು ಕೊಡುತ್ತಿದ್ದರು. ಇವತ್ತಿಗೂ ಅದನ್ನೇ ನಾವು ಮುಂದುವರಿಸಿಕೊಂಡು ಬಂದಿದ್ದೇವೆ. ಇವತ್ತಿನ ಪಾಠಗಳ ವ್ಯವಸ್ಥೆ ಏನಿದೆ ಇದು ಓಬಿರಾಯನ ಕಾಲದ್ದು; ಇದು ಸರಿಯಲ್ಲ. ಉದ್ಯೋಗವನ್ನು ಆಧರಿಸಿರತಕ್ಕಂಥ ಒಂದು ಶಿಕ್ಷಣ ಪದ್ಧತಿ ಇವತ್ತು ಜಾರಿಗೆ ಬರಬೇಕು. ಇವತ್ತು ಒಕ್ಕಲುತನದಲ್ಲಿ ಬಂದಂಥವನು ವಿದ್ಯೆ ಕಲಿತು, ಪರೀಕ್ಷೆಯಲ್ಲಿ ಪಾಸಾಗಿ ಹೆಚ್ಚು ಪರ್ಸೆಂಟೇಜ್ ಅನ್ನು ತೆಗೆದುಕೊಂಡರೆ

ಮಾತ್ರ ಅವನಿಗೆ ಉದ್ಯೋಗ ಸಿಕ್ಕುತ್ತದೆ. ಯಾರಿಗೆ ಆ ಉದ್ಯೋಗ ಗೊತ್ತಿರುವುದಿಲ್ಲ; ಅದರ ಜ್ಞಾನ ಯಾರಿಗೆ ಇರುವುದಿಲ್ಲ, ಅವರು ಕೇವಲ ಪುಸ್ತಕ ಓದಿ ಪಡೆದಂತಹ ಸರ್ಟಿಫಿಕೇಟ್‌ಗೆ ಹುದ್ದೆ ಸಿಕ್ಕಿದರೆ ಅವನಿಗೆ ಅನುಭವ ಇರುವುದಿಲ್ಲ. ಅಂತಹ ರೀತಿಯಲ್ಲಿ ಇವತ್ತು ನಾವು ಆಯ್ಕೆ ಮಾಡುತ್ತಿದ್ದೇವೆ. ಅದಕ್ಕಾಗಿ ಇವತ್ತು ಯಾರಿಗೆ ಎಂತಹ ಶಿಕ್ಷಣವನ್ನು ಕೊಡಬೇಕು ಎಂದು ವಿಚಾರಮಾಡಬೇಕು. ಇವತ್ತು ಸರ್ಟಿಫಿಕೇಟ್ ಪಡೆಯತಕ್ಕಂಥ ಶಿಕ್ಷಣಕ್ಕಿಂತ ಉದ್ಯೋಗ ಪ್ರಧಾನ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಬೇಕು. ಅವರು ಅಕ್ಷರಜ್ಞಾನವನ್ನು ಎಲ್ಲಾದರೂ ಕಲಿಯಲಿ, ಏನಾದರೂ ಕಲಿಯಲಿ; ಆದರೆ ಇವತ್ತು ಮೀನುಗಾರಿಕೆ ಇರಬಹುದು, ಅಗ್ರಿಕಲ್ಚರಲ್ ಇರಬಹುದು, ಅಥವಾ ಬೇರೆ ಬೇರೆ ಉದ್ಯೋಗ ಪ್ರಧಾನ ವಿದ್ಯೆ ಇರಬಹುದು; ಅದಕ್ಕೆ ಸೀಮಿತವಾದಂತಹ ಪರೀಕ್ಷೆಗಳನ್ನು ಮಾತ್ರ ನಡೆಸಿ ಹುದ್ದೆಗಳಿಗೆ ಆಯ್ಕೆ ಮಾಡತಕ್ಕಂಥ ಒಂದು ಪದ್ಧತಿಯನ್ನು ಜಾರಿಗೆ ತರಬೇಕೇ ವಿನಃ ಇವತ್ತು ಇರತಕ್ಕಂಥ ಸರ್ಟಿಫಿಕೇಟ್ ಪಡೆದು ಆ ಅಂಕಗಳ ಮೇಲಿನಿಂದ ನೌಕರಿಯನ್ನು ಕೊಡತಕ್ಕಂಥದ್ದು, ಮೆರಿಟ್ ಮೇಲೆ ಕೊಡತಕ್ಕಂಥದ್ದು ಏನಿದೆ, ಇದು ಪ್ರಾಕ್ಟಿಕಲ್ ಆಗಿ ಸರಿಯಲ್ಲ, ಮತ್ತು ಇದು ಉದ್ಯೋಗವನ್ನು ಸೃಷ್ಟಿಸತಕ್ಕಂಥ ಶಿಕ್ಷಣವೂ ಅಲ್ಲ ಎಂಬ ಮಾತನ್ನು ನಾನು ಹೇಳುತ್ತಾ ಇದ್ದೇನೆ. ಕನಿಷ್ಠ ನೀವು ಈ ವರ್ಷ ಪ್ರಾಥಮಿಕ ಶಿಕ್ಷಣಕ್ಕೆ ಉಪಾಧ್ಯಾಯರನ್ನು ನೇಮಕ ಮಾಡುತ್ತೇವೆಂದು ಏನು ಹೇಳಿದ್ದೀರಿ, ಅದನ್ನು ಮೂರು ವರ್ಷಗಳಿಂದಲೂ ಹೇಳಿಕೊಂಡು ಬಂದಿದ್ದೀರಿ. ನಾವು ಇಲ್ಲಿ ಕೇಳುತ್ತಾ ಬಂದಿದ್ದೇವೆ. ಮುಂದೆ ಜೂನ್ ತಿಂಗಳಲ್ಲಿ ಪ್ರಾಥಮಿಕ ಶಾಲೆಗಳು ಪ್ರಾರಂಭವಾಗುವುದರೊಳಗಾಗಿ ನೀವು ಎಷ್ಟು ಪ್ರಾಥಮಿಕ ಶಾಲೆಯ ಉಪಾಧ್ಯಾಯರನ್ನು ತುಂಬುತ್ತಿದ್ದೀರೆಂದು ನಿರ್ದಿಷ್ಟವಾಗಿ ಹೇಳಬೇಕು. ಇಂದು ಪ್ರತಿಯೊಂದು ಗ್ರಾಮದಲ್ಲಿಯೂ ಒಂದರಿಂದ ಏಳನೆಯ ತರಗತಿಯವರೆಗೂ 350 ವಿದ್ಯಾರ್ಥಿಗಳಿಗೆ ಒಬ್ಬರೇ ಒಬ್ಬರು ಶಿಕ್ಷಕರು ಇದ್ದಾರೆ. ಹಳ್ಳಿಗಳಿಗೆ ಹೋದರೆ ಜನರು ಏನು ಹೇಳುತ್ತಿದ್ದಾರೆ ಅಂದರೆ, ಎಲ್ಲ ಶಹರದಲ್ಲಿ ಮಕ್ಕಳಿಗೆ ವಿದ್ಯೆಯನ್ನು ಕೊಟ್ಟು ನಮ್ಮ ಮಕ್ಕಳನ್ನೆಲ್ಲ ದಡ್ಡರನ್ನಾಗಿ ಮಾಡುತ್ತೀರಿ, ದನಕಾಯುವವರನ್ನಾಗಿ ಮಾಡುತ್ತೀರಿ ಎಂದು ಹೇಳುತ್ತಿದ್ದಾರೆ.

ಪ್ರಾಥಮಿಕ ಶಿಕ್ಷಕರ ಖಾಲಿ ಇರತಕ್ಕಂತ ಎಲ್ಲಾ ಹುದ್ದೆಗಳನ್ನು ಜೂನ್ ಅಂತ್ಯದೊಳಗಾಗಿ ತುಂಬಬೇಕು. ಎಷ್ಟು ಶಿಕ್ಷಕರನ್ನು ತುಂಬುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು. ಶಿಕ್ಷಕರನ್ನು ತುಂಬುವಾಗ ಯಾವ ನಿಯಮಗಳನ್ನು ಅನುಸರಿಸುತ್ತೀರಿ ಎನ್ನುವುದನ್ನು ಸಹ ಹೇಳಬೇಕೆಂದು ಕೇಳುತ್ತಿದ್ದೇನೆ. ಇನ್ನು ಮಾಧ್ಯಮಿಕ ಶಿಕ್ಷಣದ ಬಗ್ಗೆ ಹೇಳುವುದಾದರೆ, ಇವತ್ತು ಅನೇಕ ಸಂಸ್ಥೆಗಳಿಗೆ ಜಿಲ್ಲಾಪರಿಷತ್ತಿನವರು ಅನುಮತಿಯನ್ನು ಕೊಟ್ಟಿದ್ದಾರೆ. ಆದರೆ ಸರ್ಕಾರದವರು ಮನ್ನಣೆಯನ್ನು ಕೊಟ್ಟಿಲ್ಲ. ತ್ರಿಶಂಕು ಸ್ವರ್ಗ ಅಲ್ಲಿಗೆ ಹೋಗಬೇಡಿ ಎಂದು ಇವರು ಕಾನೂನು ಮಾಡಿದ್ದಾರೆ. ಇವತ್ತು ಮಕ್ಕಳ ಸಂಖ್ಯೆ ಹೆಚ್ಚಿಗೆ ಆಗಿದೆ. ವಿದ್ಯೆಯನ್ನು ಕಲಿಯುವವರ ಸಂಖ್ಯೆ ಹೆಚ್ಚಿಗೆ ಆಗಿದೆ. ಸರ್ಕಾರಿ ಶಾಲೆಗಳಲ್ಲಿ, ಅನುಮತಿಕೊಟ್ಟಂತಹ ಶಾಲೆಗಳಲ್ಲಿ ಇವತ್ತು ಜಾಗವಿಲ್ಲ. ಜಿಲ್ಲಾಪರಿಷತ್ತಿನವರು ಅನುಮತಿಕೊಟ್ಟು ಈಗಾಗಲೆ 3–4 ವರ್ಷಗಳಾಗಿವೆ. ಅವುಗಳಿಗೆ ಸರ್ಕಾರ ಮನ್ನಣೆ ಕೊಟ್ಟಿಲ್ಲ. ಅಲ್ಲಿಗೆ ಹೋದರೆ ಶಿಕ್ಷೆ ಹಾಗೂ ದಂಡ ಎಂದು ಕಾನೂನನ್ನು ತಂದರೆ, ಇವತ್ತು ಆ ಶಿಕ್ಷಣ ಸಂಸ್ಥೆಗಳ ಗತಿ ಏನು ? ಅಲ್ಲಿಗೆ ಹೋಗತಕ್ಕಂಥ ಮಕ್ಕಳ ಗತಿ ಏನು ? ಅಲ್ಲಿಯೂ ಸಹಿತ ಉತ್ತಮ ಸಂಸ್ಥೆಗಳಿವೆ. 3–4 ವರ್ಷ ಅವುಗಳು ನಡೆದಿವೆ. ಅಲ್ಲಿ ವಿದ್ಯಾರ್ಥಿಗಳು ಇದ್ದಾರೆ, ಶಿಕ್ಷಕರು ಇದ್ದಾರೆ. ಅಂತಹ ಸಂಸ್ಥೆಗಳಿಗೆ ಸರ್ಕಾರ ಕೂಡಲೆ ಮನ್ನಣೆಯನ್ನು ಕೊಡಬೇಕೆಂದು ಒತ್ತಾಯದಿಂದ ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳುತ್ತಿದ್ದೇನೆ.

ಇನ್ನು ನಮ್ಮ ವೈದ್ಯಕೀಯ ಶಿಕ್ಷಣದ ಬಗ್ಗೆ ಹೇಳಬೇಕೆಂದರೆ, ಈ ವೈದ್ಯಕೀಯ ಶಿಕ್ಷಣ ಇಲಾಖೆಗೆ ಯಾವುದೇ ನೀತಿ, ನಿಯಮ, ಲಂಗು ಲಗಾಮು ಇಲ್ಲದ ಇಲಾಖೆಯೆಂದು ಸ್ಪಷ್ಟವಾಗಿ ಈ ಸದನದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ, ಇವರದು ದಿನಬೆಳಗಾದರೆ ಒಂದು ನೀತಿ. ಅದಕ್ಕೆ ಕಾರಣ ಈ

ಇಲಾಖೆಗೆ ಗೊತ್ತಿದೆ. ಯಾವುದೇ ನೀತಿ ನಿಯಮ ಕನಿಷ್ಟ ಒಂದು ವರ್ಷಕ್ಕೊ, ಎರಡು ವರ್ಷಕ್ಕೊ ಅಥವಾ ಇಂತಿಷ್ಟೇ ವರ್ಷಕ್ಕೆ ಇರಬೇಕು ಎನ್ನುವುದು ಇಲ್ಲ. 1992–93ನೇ ಸಾಲಿನಲ್ಲಿ ಕರ್ನಾಟಕದಲ್ಲಿ ಪಿ.ಜಿ.ಕೋರ್ಸ್‌ಗೆ ಎಂಟರೆನ್ಸ್ ಎಗ್ಸಾಮ್ ಕಂಡಕ್ಟ್ ಮಾಡಿದ್ದರು. ಈ ವರ್ಷದಲ್ಲಿ ಎಲ್ಲಾ ಸೀಟನ್ನು ಕೊಟ್ಟರು. ಹಿಂದಿನ ವರ್ಷ ಅದರ ಹಿಂದಿನ ವರ್ಷ ಖಾಲಿ ಇದ್ದ ಜಾಗಗಳಿಗೆ ಕೆಲವು ವಿಷಯಗಳಿಗೆ ಕೊಟ್ಟಿದ್ದಾರೆ ಮತ್ತು ಕೆಲವು ವಿಷಯಗಳಿಗೆ ಕೊಡದೆ ಹಾಗೆ ನಿಲ್ಲಿಸಿದ್ದಾರೆ. ಇದಕ್ಕೆ ಕಾರಣ ಏನು ? ಯಾವ ವಿದ್ಯಾರ್ಥಿ 100ಕ್ಕೆ 94 ಅಂಕ ಪಡೆದು 26ನೇ ರ್‍ಯಾಂಕ್ ಬಂದಿದ್ದಾನೆ ಅಂತಹ ಗ್ರಾಮಾಂತರ ವಿದ್ಯಾರ್ಥಿಗೆ ಪರೀಕ್ಷೆಯಲ್ಲಿ ಅರ್ಹತೆ ಇದ್ದರೂ ಸಹಿತ ಅವನಿಗೆ ಪ್ರವೇಶ ಇಲ್ಲ. ಇದಕ್ಕೆ ಕಾರಣ ಏನೆಂದರೆ, ಇವರಿಗೆ ಒಂದು ಸರಿಯಾದ ನೀತಿ ನಿಯಮಗಳು ಇಲ್ಲದೇ ಇರುವುದು. ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಕೇಳುತ್ತೇನೆ, ಕನಿಷ್ಟ ಒಂದು ವರ್ಷವಾದರೂ ಒಂದು ನೀತಿ ಇರಬೇಕು. ಹಿಂದಿನ ವರ್ಷದಲ್ಲಿ ಪಿ.ಜಿ.ಕೋರ್ಸ್‌ನಲ್ಲಿ ಖಾಲಿ ಇದ್ದಂತಹ ಕೆಲವು ವಿಷಯಗಳಿಗೆ ಈ ವರ್ಷದಲ್ಲಿ ಕೊಟ್ಟು ಮತ್ತೆ ಕೆಲವು ವಿಷಯಗಳಿಗೆ ಏಕೆ ಕೊಡಲಿಲ್ಲ. ಮಾನ್ಯ ಅಧ್ಯಕ್ಷರೆ, ಸರ್ಕಾರದ ಮೇಲೆ ಗುರುತರವಾದ ಆಪಾದನೆ ಮಾಡುತ್ತೇನೆ. 1992–93ನೇ ಸಾಲಿನಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಯಾವ ಯಾವ ವಿಷಯದಲ್ಲಿ ಪಿ.ಜಿ.ಕೋರ್ಸ್‌ಗೆ ಕೊಟ್ಟಿದ್ದಾರೆ ಮತ್ತು ಈ ವರ್ಷದಲ್ಲಿ ಪರೀಕ್ಷೆಗೆ ಕುಳಿತಂಥವರಿಗೆ ಹಿಂದಿನ ವರ್ಷದಲ್ಲಿ ಖಾಲಿ ಇದ್ದಂತಹ ಯಾವ ಯಾವ ವಿಷಯದಲ್ಲಿ ಎಷ್ಟು ವಿದ್ಯಾರ್ಥಿಗಳನ್ನು ತುಂಬಿದ್ದೀರಿ, ಇನ್ನುಳಿದ ಖಾಲಿ ಇರುವ ಹುದ್ದೆಗಳನ್ನು ಏಕೆ ತುಂಬಲಿಲ್ಲ. ಅಧ್ಯಕ್ಷರೆ, ಇದರ ಅರ್ಥ ಸ್ಪಷ್ಟವಾಗುತ್ತದೆ. ಈ ಇಲಾಖೆ ಮನಸ್ಸಿಗೆ ಬಂದಂತೆ ಸ್ವೇಚ್ಛಾಚಾರದಿಂದ ತನ್ನ ಲಾಭಕ್ಕಾಗಿ ಇದನ್ನು ದುರ್ಬಳಕೆ ಮಾಡುತ್ತಿದೆ. ಇವರಿಗೆ ಯಾವುದೇ ನಿಯಮ ಇಲ್ಲ. ಇದನ್ನು ನಾವು ಸರ್ಕಾರದ ಗಮನಕ್ಕೆ ತಂದರೂ ಸಹಿತ ಸುಮಾರು 6 ತಿಂಗಳಿನಿಂದ ಅದಕ್ಕೆ ಉತ್ತರ ಇಲ್ಲ. ಇವರಿಗೆ ಯಾವುದೇ ಒಂದು ನೀತಿ, ನಿಯಮ ಇದೆಯೇ ? ಯಾರ್‍ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ? ಅವರನ್ನೆಲ್ಲಾ ವಾಪಸ್ಸು ಕಳುಹಿಸುತ್ತೀರಾ ? ಇವತ್ತು ತಮಗೆ ಬೇಕಾದಾಗ ಏನು ಬೇಕಾದರೂ ಮಾಡುವುದು. ಇವತ್ತು ಯಾರು ಹೆಚ್ಚು ಅಂಕ ಪಡೆದು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ ಅವರಿಗೆ ಸೀಟು ಕೊಡದೆ, ಯಾರು ಇವರಿಗೆ ಅನುಕೂಲವಾಗುತ್ತಾರೋ ಅವರಿಗೆ ಮಾತ್ರ ಕೊಡುತ್ತಾರೆ.

ನಾನು ಈ ಇಲಾಖೆ ಮೇಲೆ ಸ್ಪಷ್ಟವಾಗಿ, ನಿರ್ಭೀತಿಯಿಂದ ಈ ಆಪಾದನೆ ಮಾಡುತ್ತಿದ್ದೇನೆ. ತಾವು ಸ್ಪಷ್ಟವಾದ ಮಾಹಿತಿ ಕೊಡಬೇಕು. 1992–93ಕ್ಕಿಂತ ಹಿಂದೆ ಪಿ.ಜಿ.ಕೋರ್ಸ್‌ನಲ್ಲಿ ಯಾವ ಯಾವ ವಿಷಯದಲ್ಲಿ ಎಷ್ಟು ಹುದ್ದೆಗಳು ಖಾಲಿ ಇತ್ತು, ಹೋದ ವರ್ಷ ಖಾಲಿ ಇದ್ದಂತಹ ಹುದ್ದೆಗಳನ್ನು ಈ ವರ್ಷ ತುಂಬಲಿಕ್ಕೆ ಕಾರಣ ಏನು ಮತ್ತು ಅದರಲ್ಲಿ ಕೆಲವು ವಿಷಯಗಳಿಗೆ ಮಾತ್ರ ಕೊಟ್ಟು ಬೇರೆ ವಿಷಯಗ್ಳಳಿಗೆ ಏಕೆ ಕೊಟ್ಟಿಲ್ಲ ? ಇಲ್ಲಿರತಕ್ಕಂತಹ ಸಮಸ್ಯೆಗೆ ಕಾರಣ ಏನು ಎನ್ನುವುದು ಆ ಇಲಾಖೆಯವರಿಗೆ ಗೊತ್ತು. ಸರ್ಕಾರಕ್ಕೆ ಒಂದೇ ನೀತಿ, ಸುತ್ತೋಲೆ ಇದ್ದರೆ ಅದನ್ನು ಯಾರಾದರೂ ತಿಳಿದುಕೊಳ್ಳಬಹುದು. ಒಂದೊಂದು ಪ್ರಕರಣಕ್ಕೆ ಒಂದೊಂದು ನೀತಿ ಅನುಸರಿಸಿದರೆ ಇದು ತಮ್ಮ ಅನುಕೂಲತೆಗಾಗಿ ಮಾಡಿಕೊಂಡ ಸುತ್ತೋಲೆಯಾಗುತ್ತದೆಯೇ ವಿನಃ ಸಾರ್ವಜನಿಕ ಹಿತದೃಷ್ಟಿಯಿಂದ ಜಾರಿ ಮಾಡಿದಂತೆ ಆಗುವುದಿಲ್ಲ ಎನ್ನುವುದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಅದನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಸದನದಲ್ಲಿ ಉತ್ತರ ಕೊಡಬೇಕೆಂದು ತಮ್ಮ ಮೂಲಕ ಸಚಿವರನ್ನು ಕೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ಸಹಕಾರಿ ರಂಗದಲ್ಲಿ ಇವತ್ತು ಈ ರಾಜ್ಯದ ಆಯವ್ಯಯ ಸೊನ್ನೆ, ಏನೂ ಇಲ್ಲ. ಗ್ರಾಮೀಣ ಆರ್ಥಿಕ ಅಭಿವೃದ್ಧಿಗೆ ಸಹಕಾರಿ ಸಂಸ್ಥೆಗಳು ತಳಪಾಯ, ಅದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದೀರಿ. ಮತ್ತು ಅದನ್ನು ಸರ್ಕಾರದವರು ಕೈ ಬಿಟ್ಟಿದ್ದಾರೆ.

ಅದೇ ರೀತಿ ಇವೊತ್ತು ಮಂಡಲ ಪಂಚಾಯತ್‌ಗಳಲ್ಲಿ ಕೆಲಸ ಮಾಡತಕ್ಕಂಥ ನೌಕರರು ಯಾರು

ಇದ್ದಾರೆ, ಅಂದರೆ ಜಮೀನಿಗೆ ನೀರು ಬಿಡತಕ್ಕವರು, ಕಸ ಹೊಡೆಯುವವರು 50-60-100 ರೂಪಾಯಿಗಳಿಗೆ ಕೆಲಸ ಮಾಡುತ್ತಿದ್ದಾರೆ. ಗ್ರಾಮೀಣ ಜನತೆಗೆ ಸಂಬಂಧಪಟ್ಟಂಥ ಕೆಲಸ ಮಾಡತಕ್ಕವರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ. ನಗರ ಪ್ರದೇಶದಲ್ಲಿ ಕೆಲಸ ಮಾಡತಕ್ಕವರ ಬಗ್ಗೆ, ಹಾಗೂ ಶಹರಗಳಲ್ಲಿ ಕೆಲಸ ಮಾಡತಕ್ಕ ನಾಗರೀಕರ ಬಗ್ಗೆ ಸರ್ಕಾರ ಹೆಚ್ಚು ಕಾಳಜಿ ವಹಿಸುತ್ತಿದೆ. ಈ ಗ್ರಾಮಾಂತರ ಪ್ರದೇಶದಲ್ಲಿ ಈ ನೌಕರರು ಅವರ ಜೀವನ ಪರ್ಯಂತ 50 ರೂಪಾಯಿಗಳಿಂದ 100 ರೂಪಾಯಿಗಳ ಸಂಬಳಕ್ಕೋಸ್ಕರ ಕೆಲಸ ಮಾಡಬೇಕಾಗಿದೆ. ಅವರು ಸತ್ಯಾಗ್ರಹ ಮಾಡಿದರು. ಅದರೂ ಕೂಡ ಗ್ರಾಮೀಣ ಅಭಿವೃದ್ಧಿ ಇಲಾಖೆಯವರು ಅವರ ಸಮಸ್ಯೆಯನ್ನು ಬಗೆಹರಿಸಲಿಲ್ಲ. ಇದರಿಂದ ಏನಾಗಿದೆ ಎಂದರೆ ಹಳ್ಳಿಗಳಲ್ಲಿ ಶುಚಿ ಮಾಡುವವರಿಲ್ಲ, ನೀರು ಬಿಡುವವರಿಲ್ಲ. ಆದ್ದರಿಂದ ಸರ್ಕಾರದಿಂದ ಅವರುಗಳಿಗೆ ಸಂಪೂರ್ಣ ವೇತನ ಮತ್ತಿತರ ಸೇವಾ ಸೌಲಭ್ಯಗಳನ್ನು ನೀಡಬೇಕು ಎಂದು ಗ್ರಾಮೀಣ ಅಭಿವೃದ್ಧಿ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಕೃಷಿ ಬಗ್ಗೆ ಹೇಳುವುದಾದರೆ,.....

ಡಾ: ಹೆಚ್.ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):- ಈಗ ಡಿಮ್ಯಾಂಡ್ ಇರುವುದು ಯಾವುದು, ನೀವು ಮಾತನಾಡುತ್ತಿರುವುದು ಯಾವುದು.....

ಶ್ರೀ ಬಿ.ಹೆಚ್. ಬನ್ನಿಕೋಡ್:- ಇವೊತ್ತು ಹೊಸ ಲಿಸ್ಟ್ ಬಂದಿದೆ. ಅದರ ಪ್ರಕಾರ ಎಲ್ಲಾ ಇಲಾಖೆಗಳು ಇವೆ. ನಾವು ಎಲ್ಲಾ ಇಲಾಖೆಗಳ ಬಗ್ಗೆ ಮಾತನಾಡಿದ ಮೇಲೆ ಎಲ್ಲಾ ಮಂತ್ರಿಗಳು ಉತ್ತರ ಕೊಡುತ್ತಾರೆಂದು ತಿಳಿದುಕೊಂಡಿದ್ದೇನೆ. ಇಷ್ಟು ಮಾತು ಹೇಳಿ ತಾವು ಕೊನೆ ಘಳಿಗೆಯಲ್ಲಿ ಏನು ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮ್ಮನ್ನು ವಂದಿಸುತ್ತಾ, ಈ ಬೇಡಿಕೆಗಳನ್ನು ವಿರೋಧಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಮನೋಹರ ಐನಾಪುರ್ (ಬಳ್ಳೊಳ್ಳಿ):- ಸನ್ಮಾನ್ಯ ಸಭಾಧ್ಯಕ್ಷರೇ ಇವೊತ್ತು ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣ ಹಾಗೂ ಉನ್ನತ ಶಿಕ್ಷಣದ ಮೇಲೆ ಮಂಡಿಸಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಚೆನ್ನಾಗಿ ಮಾತನಾಡಿದರು. ವಿಶೇಷವಾಗಿ ಅವರನ್ನು ಏತಕ್ಕೆ ರೆಫರೆನ್ಸ್‌ಗಾಗಿ ತೆಗೆದುಕೊಳ್ಳುತ್ತೇನೆಂದರೆ ಅವರು ಪ್ರಾಥಮಿಕ ಶಿಕ್ಷಣದ ಬಗ್ಗೆ ಅದರಲ್ಲೂ ವಿಶೇಷವಾಗಿ ಹಳ್ಳಿಗಳಲ್ಲಿ ಗೊಲ್ಲರಹಟ್ಟಿಗಳಲ್ಲಿ, ತಾಂಡಾಗಳಲ್ಲಿ, ಹರಿಜನ ಕೇರಿಗಳಲ್ಲಿ ಏನು ಪರಿಸ್ಥಿತಿ ಇದೆ ಎಂಬುದನ್ನು ಹೇಳಿದ್ದಾರೆ. ನನ್ನ ಕ್ಷೇತ್ರವಾದ ಬಳ್ಳೊಳ್ಳಿ, ಮಹಾರಾಷ್ಟ್ರದ ಬಾರ್ಡರ್‌ನಲ್ಲಿ ಇದೆ. ಅಲ್ಲಿನ ಶಾಲೆಗಳ ಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಹೇಳುತ್ತೇನೆ. ಅಲ್ಲಿ ಸಾಕಷ್ಟು ಶಾಲೆಗಳು ಇಲ್ಲ. ಎಲ್ಲಿ ಶಾಲೆಗಳು ಇವೆ, ಅಲ್ಲಿ ಶಿಕ್ಷಕರು ಇಲ್ಲ. ಶಿಕ್ಷಕರಿದ್ದರೂ ಸಹ ಅವರು ಸರಿಯಾಗಿ ಬರುತ್ತಿಲ್ಲ. ಅಲ್ಲಿಯ ಶಾಲೆಗಳಿಗೆ ಸಾಕಷ್ಟು ಕೊಠಡಿಗಳಿಲ್ಲ. ಶಾಲೆಗಳಿಗೆ ಮೇಲೆ ಛಾವಣಿ ಇಲ್ಲ. ನನ್ನ ಕ್ಷೇತ್ರದಲ್ಲಿ ಸುಮಾರು 20-25 ಪ್ರಾಥಮಿಕ ಶಾಲೆಗಳು ಮರದ ಕೆಳಗೆ ನಡೆಯುತ್ತಿವೆ. ನಾನು ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 45 ವರ್ಷಗಳಾದರೂ ಸಹ ಪರಿಸ್ಥಿತಿ ಹಾಗೆಯೇ ಇದೆ. ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಲಮಾಣಿಯವರು ಇದನ್ನು ವಿಶೇಷವಾಗಿ ಗಮನಿಸಿ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಶ್ರೀ ಲಮಾಣಿಯವರು ಪರಿಶಿಷ್ಟ ಪಂಗಡವಾದ ಲಂಬಾಣಿ ಜಾತಿಗೆ ಸೇರಿದವರು. ಆದ್ದರಿಂದ ತಾವು ಪರಿಶಿಷ್ಟ ಪಂಗಡ, ಜಾತಿ ಹಾಗೂ ಹಿಂದುಳಿದ ವರ್ಗದವರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಈ ಮಕ್ಕಳ ವಿದ್ಯಾಭ್ಯಾಸಕ್ಕೆ ವಿಶೇಷವಾಗಿ ಅನುಕೂಲ ಮಾಡಿಕೊಡಬೇಕು. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆ ಬಹಳ ಕಡಿಮೆ ಇದೆ. ಒಂದು ಶಾಲೆಯುಲ್ಲಿ ಸುಮಾರು 300 ರಿಂದ 500ವಿದ್ಯಾರ್ಥಿಗಳು ಓದುತ್ತಿದ್ದಾರೆ. ಆದರೆ ಅಲ್ಲಿ ಶಿಕ್ಷಕರು ಒಬ್ಬರು ಅಥವಾ ಇಬ್ಬರು ಇರುತ್ತಾರೆ. ಅವರು ಸರಿಯಾಗಿ ಪಾಠ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಅವರು ಮಕ್ಕಳನ್ನು ಸುಮ್ಮನೆ ಕೂಡಿಸಿ

ಸಾಯಂಕಾಲ ಮನೆಗೆ ಕಳುಹಿಸುತ್ತಾರೆ. ಪ್ರತಿ ಅಧಿವೇಶನದಲ್ಲೂ ಸಹ ಬಹಳಷ್ಟು ಶಾಸಕರುಗಳು ಈ ವಿಷಯುಗಳನ್ನು ಪ್ರಸ್ತಾಪ ಮಾಡುತ್ತಿರುತ್ತಾರೆ. ಆದರೂ ಹೆಚ್ಚಿನ ಪರಿಣಾಮ ಏನೂ ಆಗಿರುವುದಿಲ್ಲ. ಇದುವರೆಗೆ ಶಿಕ್ಷಕರ ನೇಮಕಾತಿ ಆಗಿಲ್ಲದೆ ಬಹಳ ತೊಂದರೆ ಉಂಟಾಗಿದೆ. ವಿಶೇಷವಾಗಿ ನಮ್ಮ ಬಿಜಾಪೂರ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳು ಸಾಕಷ್ಟು ಇವೆ. ಆದರೆ ಶಿಕ್ಷಕರ ಕೊರತೆ ಸಹ ಸಾಕಷ್ಟು ಇದೆ. ನಾವು ಪದೇ ಪದೇ ಮುಖ್ಯ ಮಂತ್ರಿಗಳಿಗೆ ಅಂದರೆ ಹಿಂದಿನ ಶಿಕ್ಷಣ ಸಚಿವರಾದವರಿಗೆ 2–3 ಮನವಿಗಳನ್ನು ಕೊಟ್ಟಿದ್ದೇವೆ. ಅದರೂ ಸಹ ವ್ಯವಸ್ಥೆ ಇನ್ನೂ ಪರಿಣಾಮಕಾರಿಯಾಗಿಲ್ಲ. ಆದ್ದರಿಂದ ತಾವು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಗಳ ವಿಚಾರದಲ್ಲಿ ವಿಶೇಷ ಗಮನಹರಿಸಿ ಶಿಕ್ಷಕರ ನೇಮಕಾತಿಯನ್ನು ಆದಷ್ಟು ಬೇಗನೆ ಈ ಅಕಾಡೆಮಿಕ್ ಇಯರ್ ಪ್ರಾರಂಭ ಆಗುವುದರಲ್ಲಿ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಇದರ ಜೊತೆಗೆ ಈ ಪ್ರಾಥಮಿಕ ಶಿಕ್ಷಣವನ್ನು ಇಂಪ್ರೂವ್‌ಮೆಂಟ್ ಮಾಡುವುದಕ್ಕೋಸ್ಕರ ನಾನು ಕೆಲವೊಂದು ಸಲಹೆಗಳನ್ನು ಕೊಡಬಯಸುತ್ತೇನೆ. ಹೋದ ವರ್ಷದ ಬಜೆಟ್ ಅಧಿವೇಶನದಲ್ಲಿ ನಾನು ಪ್ರಸ್ತಾಪ ಮಾಡಿದ್ದೆ. ಏನೆಂದರೆ, ಶಿಕ್ಷಕರ ಪೈಕಿ ಯಾರು ಯಾರು ಐದು ವರ್ಷದಿಂದ 25ವರ್ಷಗಳವರೆಗೆ ಒಂದೇ ಶಾಲೆಯಲ್ಲಿ ನೌಕರಿ ಮಾಡುತ್ತಿದ್ದಾರೆ, ಅವರನ್ನು ಬದಲಾವಣೆ ಮಾಡುವುದಕ್ಕೆ ಇದುವರೆಗೂ ಯಾವ ಸರ್ಕಾರಕ್ಕೂ ಸಾಧ್ಯವಾಗಿಲ್ಲ ಎಂದು ನಿನ್ನೆ ನನ್ನ ಶಾಸಕ ಮಿತ್ರರುಗಳು ಹೇಳಿದರು. ಒಂದು ವಿಶೇಷ ಅಜ್ಞೆಯನ್ನು ಹೊರಡಿಸುವುದಕ್ಕೆ ಸರ್ಕಾರಕ್ಕೆ ಆಗುವುದಿಲ್ಲವೇ ? 20 ವರ್ಷಗಳಿಂದ ಶಿಕ್ಷಕರು ಏನು ಮಾಡಿದರು ಎಂದರೆ, ಅವರು ಶಾಲೆಯಲ್ಲಿ ಮಕ್ಕಳಿಗೆ ಪಾಠ ಕಲಿಸುವುದಿಲ್ಲ, ಅವರು ತೋಟ ಮಾಡುತ್ತಾರೆ, ಕಿರಾಣಿ ಅಂಗಡಿ ಇಟ್ಟುಕೊಂಡಿರುತ್ತಾರೆ, ಅಥವಾ ಯಾವುದಾದರೂ ಒಂದು ವ್ಯಾಪಾರ ಮಾಡುತ್ತಾರೆ, ಶಾಲೆಯಲ್ಲಿ ಅಟೆಂಡೆನ್ಸ್ ಹಾಕುತ್ತಾರೆ, ಪಗಾರ ತೆಗೆದುಕೊಳ್ಳುತ್ತಾರೆ. ಆಮೇಲೆ ಇದಕ್ಕಿಂತ ವಿಶೇಷವಾಗಿ ಅವರು ರಾಜಕೀಯ ಮಾಡುತ್ತಾರೆ. ಇದು ಎಲ್ಲಾ ಶಾಸಕರಿಗೆ ಗೊತ್ತಿದೆ; ಸಚಿವರುಗಳಿಗೆ ಗೊತ್ತಿದೆ. ಇದಕ್ಕೋಸ್ಕರ ನಾನು ಮಾನ್ಯ ಸಚಿವರಲ್ಲಿ ಇದರ ಬಗ್ಗೆ ವಿಶೇಷ ಗಮನ ಹರಿಸಿ ಎಂದು ಕೇಳುತ್ತಿದ್ದೇನೆ. ಈ ಬಗ್ಗೆ ವಿಶೇಷವಾದ ಆದೇಶವನ್ನು ಹೊರಡಿಸಿ ಐದು ವರ್ಷದಿಂದ ಇಪ್ಪತ್ತು ಇಪ್ಪತ್ತೈದು ವರ್ಷಗಳವರೆಗೆ ಒಂದೇ ಕಡೆ ಇರುವಂಥ ಶಿಕ್ಷಕರನ್ನು ಬದಲಾವಣೆ ಮಾಡುತ್ತೀರೋ ಇಲ್ಲವೋ ? ಇದು ನನ್ನೊಬ್ಬನ ಬೇಡಿಕೆ ಅಲ್ಲ, ಪ್ರತಿಯೊಬ್ಬ ಶಾಸಕರ ಬೇಡಿಕೆ ಇದೆ. ಇದನ್ನು ಮಾಡಿದರೆ ಮಾತ್ರ ನಮ್ಮ ಶಿಕ್ಷಣದ ಗುಣಮಟ್ಟ ಒಳ್ಳೆಯದಾಗಬಹುದು, ಸುಧಾರಿಸಬಹುದು ಎಂದು ನನ್ನ ನಂಬಿಕೆ. ಎರಡನೆಯದಾಗಿ, ಈ ಪ್ರಾಥಮಿಕ ಶಿಕ್ಷಣವನ್ನು ಸುಧಾರಣೆ ಮಾಡುವುದಕ್ಕೆ ಇನ್ನೊಂದು ಸಲಹೆ, ಎ.ಇ.ಓ.ಗಳು ಮೇಲಿಂದ ಮೇಲೆ ಹೋಗಿ ಅಲ್ಲಿ ಏನು ನಡೆದಿದೆ, ಶಾಲೆಯಲ್ಲಿ ಇವರು ಸರಿಯಾಗಿ ಪಾಠಗಳನ್ನು ಕಲಿಸುತ್ತಾರೋ ಇಲ್ಲವೋ, ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುತ್ತಾರೋ ಇಲ್ಲವೋ ಎಂದು ನೋಡಬೇಕು. ಆ ರೀತಿ ನೋಡುವುದಕ್ಕೆ ಇವರನ್ನು ಇಟ್ಟಿರುತ್ತೇವೆ. ಆದರೆ ಅವರು ಅಲ್ಲಿಗೆ ಹೋಗುವುದೇ ಇಲ್ಲ. ನಿನ್ನೆ ಮಾನ್ಯ ಮಾಧುಸ್ವಾಮಿರವರು ಹೇಳಿದರು. ಶಿಕ್ಷಕರು ಮತ್ತು ಎ.ಇ.ಓ.ಗಳು ಜೊತೆಯಲ್ಲೇ ಬಸ್‌ನಲ್ಲಿ ಹೋಗುತ್ತಾರೆ; ಹೋಗಿ ಇನ್ಸ್‌ಪೆಕ್ಷನ್ ಮಾಡುವುದೇನು ಅಲ್ಲಿ. ನಾನು ಒಂದು ವಾರದ ಹಿಂದೆ ಸದನದಲ್ಲಿ ಹೇಳಿದ್ದೇನೆ ಎ.ಇ.ಓ.ಗಳಿಗೆ ಒಂದು ಜೀಪನ್ನು ಕೊಡಬೇಕು ಎಂದು. ಜೀಪನ್ನು ಕೊಡಲಿಕ್ಕೆ ಆಗದಿದ್ದರೆ ಕನಿಷ್ಟ ಒಂದು ಮೋಟಾರ್ ಸೈಕಲ್‌ನಾದರೂ ಕೊಟ್ಟರೆ ಅಟ್‌ಲಿಸ್ಟ್ ಅವರು ಹೋಗಿ ಶಾಲೆಗಳನ್ನು ತಪಾಸಣೆ ಮಾಡಿದರೆ ಆ ಶಿಕ್ಷಕರಿಗೆ ಒಂದು ಹೆದರಿಕೆ ಇರುತ್ತದೆ. ಅದಕ್ಕೋಸ್ಕರ ಮಾನ್ಯ ಸಚಿವರು ಇದನ್ನೂ ಸಹ ಗಮನದಲ್ಲಿಟ್ಟುಕೊಂಡು ಈ ಪೀರಿಯಾಡಿಕಲ್ ಇನ್ಸ್‌ಪೆಕ್ಷನ್ ಮಾಡುವುದರಿಂದ ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ. ಇನ್ನು ಹೈಸ್ಕೂಲುಗಳ ಬಗ್ಗೆ ಹೇಳುವುದಾದರೆ, ಹೋದ ವರ್ಷ ಸುಮಾರು 700 ರಿಂದ 800 ಹೈಸ್ಕೂಲುಗಳ ಮಂಜೂರಾತಿ ಆಯಿತು. ಮಾನ್ಯ ಮುಖ್ಯ ಮಂತ್ರಿಗಳಾದ ವೀರಪ್ಪ

ಮೊಯಿಲಿಯವರು ಆಗ ಶಿಕ್ಷಣ ಸಚಿವರು ಇದ್ದರು. ಅವರು ಬಹಳ ಉದಾರವಾಗಿ ಯಾವ ಶಾಸಕರು ಹೋದರೂ, ಯಾರು ಅರ್ಜಿಗಳನ್ನು ಸಲ್ಲಿಸಿದ್ದರೋ ಅವರಿಗೆಲ್ಲ ಹೈಸ್ಕೂಲುಗಳ ಮಂಜೂರಾತಿಯನ್ನು ಕೊಟ್ಟರು. ಆದರೆ ಅದರಲ್ಲಿ ಶಾಶ್ವತ ಅನುದಾನ ರಹಿತ ಎಂದು ಒಂದು ಕಂಡೀಷನ್ ಹಾಕಿದರು. ಆದರೂ ಯಾರೂ ಬಿಡಲಿಲ್ಲ. ಪ್ರತಿಯೊಬ್ಬರೂ ಮಂಜೂರಾತಿ ತೆಗೆದುಕೊಂಡರು. ಶಾಲೆಯನ್ನು ಪ್ರಾರಂಭ ಮಾಡಿದರು. ಇವತ್ತು ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ಶಿಕ್ಷಕರು ಬಂದು ಮನೆ ಮುಂದೆ ಕುಳಿತುಕೊಳ್ಳುತ್ತಿದ್ದಾರೆ. ಯಾರು ಸಂಸ್ಥೆಗಳನ್ನು ನಡೆಸುತ್ತಾರೆ ಅವರ ಮನೆ ಮುಂದೆ ಅಥವಾ ಯಾರು ಅವರಿಗೆ ನೌಕರಿ ಕೊಟ್ಟಿರುತ್ತಾರೆ ಅವರ ಮನೆ ಮುಂದೆ ಕುಳಿತುಕೊಳ್ಳುತ್ತಿದ್ದಾರೆ. ಅದಕ್ಕೆ ಒಂದು ಕೊನೆ ಬೇಕಲ್ಲ ! ಯಾವಾಗ ಇವರಿಗೆ ಶಾಶ್ವತ ಅನುದಾನ ರಹಿತ ಎಂದು ಹೇಳಿದರು. ಇದಕ್ಕೆ ಒಂದು ಕೊನೆ ಬೇಕು. ಅದಕ್ಕೋಸ್ಕರ ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಹೈಸ್ಕೂಲ್‌ನ್ನು ಕೊಡುವುದಾದರೆ ಶಾಶ್ವತ ಅನುದಾನ ರಹಿತ ಪದವನ್ನು ತೆಗೆದು ಮಂಜೂರಾತಿಯನ್ನು ಕೊಡಿ. ಇಲ್ಲದಿದ್ದರೆ ಮಂಜೂರಾತಿ ಕೊಡುವ ಅವಶ್ಯಕತೆ ಇಲ್ಲ ಎಂದು ನನಗನಿಸುತ್ತದೆ. ಇದು ನನ್ನ ವೈಯುಕ್ತಿಕ ಅಭಿಪ್ರಾಯ. ಇದರಲ್ಲಿ ವಿಶೇಷವಾಗಿ ನಾನು ಎಸ್.ಸಿ.ಎಸ್.ಟಿ. ಮ್ಯಾನೇಜ್‌ಮೆಂಟ್‌ಗಳ ಬಗ್ಗೆ ಹೇಳಬಯಸುತ್ತೇನೆ. ಇದರ ಬಗ್ಗೆ ಪ್ರತಿ ಸದನದಲ್ಲಿ ಹಲವಾರು ಬಾರಿ ನಾನೊಬ್ಬನೇ ಅಲ್ಲ, ಹಲವಾರು ಶಾಸಕರು, ಪರಿಶಿಷ್ಟ ಜಾತಿ ಶಾಸಕರು, ಪರಿಶಿಷ್ಟ ಪಂಗಡದ ಶಾಸಕರು ಒತ್ತಾಯ ತಂದಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳಾದ ವೀರಪ್ಪ ಮೊಯಿಲಿಯವರು ಶಿಕ್ಷಣ ಸಚಿವರಿದ್ದಾಗ ನಾವು ಎರಡು–ಮೂರು ಸಭೆಗಳನ್ನು ಸಹ ಮಾಡಿದ್ದೇವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮ್ಯಾನೇಜ್‌ಮೆಂಟ್, ಆಡಳಿತ ಮಂಡಲಿಯ ಶಾಲಾ ನೌಕರರಿಗೆ ಅನುದಾನವನ್ನು ಪ್ರಥಮ ವರ್ಷದಿಂದ ಕೊಡಬೇಕು ಎನ್ನುವ ಒಂದು ನೀತಿ, ಸರ್ಕಾರದ ಆದೇಶ ಇನ್ನೂ ಚಾಲ್ತಿಯಲ್ಲಿದೆ. ಆದರೂ ಸಹಿತ ಸರ್ಕಾರದವರು ಶಾಶ್ವತ ಅನುದಾನ ರಹಿತ ಎಂದು ಕೊಟ್ಟಿದ್ದಾರೆ. ಅದನ್ನು ವಿತ್‌ಡ್ರಾ ಮಾಡಿ. ಏಕೆಂದರೆ ಪ್ರಥಮ ವರ್ಷದಿಂದಲೇ ಈ ಶಾಲೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಬೇಕು ಎಂದು ಸರ್ಕಾರದ ಆದೇಶ ಇದೆ.

ಈಗ ಗ್ರಾಂಟ್ ಇನ್–ಏಡ್ ಕೋಡನ್ನು ಅಮೆಂಡ್‌ಮೆಂಟ್ ಮಾಡಿಲ್ಲ. ಸರ್ಕಾರಿ ಆದೇಶವನ್ನು ವಿತ್‌ಡ್ರಾ ಮಾಡಿಲ್ಲ. ಆದರೂ ಶಾಶ್ವತ ಅನುದಾನ ರಹಿತ ಎಂಬುದನ್ನು ಎಸ್.ಸಿ. ಎಸ್.ಟಿ. ಮ್ಯಾನೇಜ್‌ಮೆಂಟ್‌ಗಳ ಮೇಲೆ ಹೇರಲಾಗಿದೆ. ಏನೋ ದೊಡ್ಡ ದೊಡ್ಡ ಸಂಸ್ಥೆಗಳು ಇವೆ, ಕೆಎಲ್‌ಇ ಸೊಸೈಟಿ ಇದೆ. ಬಿಎಲ್‌ಡಿ ಅಸೋಸಿಯೇಷನ್ ಇದೆ. ಹೆಚ್.ಬಿ.ಎ ಸೊಸೈಟಿ ಇದೆ. ಸಿದ್ಧಗಂಗಾ, ಸಿದ್ಧಾರ್ಥ ಎಜುಕೇಶನ್ ಸೊಸೈಟಿ ಹೀಗೆ ದೊಡ್ಡ ದೊಡ್ಡ ಸಂಸ್ಥೆಗಳು ಇವೆ. ಆದರೆ ಚಿಕ್ಕ ಚಿಕ್ಕ ಸಂಸ್ಥೆಗಳವರು ಪರಿಶಿಷ್ಟ ಜಾತಿ ವತಿಯಿಂದ ಈ ಪ್ರಾಥಮಿಕ ಶಾಲೆಗಳನ್ನು, ಪ್ರೌಢ ಶಾಲೆಗಳನ್ನು ನಡೆಸುತ್ತಿದ್ದಾರಲ್ಲ, ಅವರಿಗೆ ಏಕೆ ನಿರ್ಬಂಧ ಹಾಕುತ್ತಿದ್ದೀರಿ ? ಪ್ರತಿಯೊಬ್ಬ ಶಾಸಕರು, ಈ ಬೇಡಿಕೆಯ ಮೇಲೆ ಮಾತನಾಡುತ್ತಾ ಹೇಳಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮ್ಯಾನೇಜ್‌ಮೆಂಟ್ ವತಿಯಿಂದ ಏನು ಶಾಲೆಗಳನ್ನು ನಡೆಸುತ್ತಿದ್ದಾರೆ, ಇವುಗಳಿಗೆ ಶಾಶ್ವತ ಅನುದಾನ ರಹಿತವನ್ನು ತೆಗೆದು ಕೂಡಲೇ ಅವರಿಗೆ ಅನುದಾನವನ್ನು ಕೊಡಲೇಬೇಕು. ಇದು ಪ್ರತಿಯೊಬ್ಬ ಶಾಸಕರ ಒತ್ತಾಯವೆಂದು ತಮ್ಮ ಮೂಲಕ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಸಚಿವರು ಸಹಿತ ಪರಿಶಿಷ್ಟ ಜಾತಿಯವರು ಇದ್ದಾರೆ; ಪರಿಶಿಷ್ಟ ಜಾತಿಯವರ ತೊಂದರೆ ಅವರಿಗೆ ಅರ್ಥ ಆಗುತ್ತದೆ. ಈ ಮುಂಚೆ ನಮ್ಮ ಜೊತೆ ಹೋರಾಟದಲ್ಲಿದ್ದರು, ಈಗ ಸಚಿವರಾಗಿದ್ದಾರೆ. ಅವರ ಜೊತೆ ನಮ್ಮ ಯಾಹ್ಯಾ ಸಾಹೇಬರು ಮೈನಾರಿಟಿ ಸಮಾಜದಿಂದ ಬಂದವರು. ಆಮೇಲೆ ನಮ್ಮ ವೈದ್ಯಕೀಯ ಶಿಕ್ಷಣ ಸಚಿವರು ಸಹಿತ ಪರಿಶಿಷ್ಟ ಜಾತಿಯವರು ಇದ್ದಾರೆ. ನೀವು ಎಲ್ಲಾ ಸೇರಿ ಈ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಪಂಗಡದಿಂದ ನಡೆಸುತ್ತಾ ಇರತಕ್ಕ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ, ಮತ್ತು ಕಾಲೇಜುಗಳಿಗೆ

ಅನುದಾನವನ್ನು ಕೂಡಲೇ ಬಿಡುಗಡೆ ಮಾಡುವಂಥ ವ್ಯವಸ್ಥೆ ಮಾಡುತ್ತೀರೆಂದು ನಂಬಿದ್ದೇನೆ. ಈಗ ತಾವು ಮಾಡದೇ ಇದ್ದರೆ ಇನ್ನೂ ಯಾರ ಕೈಯಲ್ಲೂ ಆಗುವುದಿಲ್ಲ ಎನ್ನುವ ಆತ್ಮ ವಿಶ್ವಾಸ ನನಗೆ ಇದೆ. ಏಕೆಂದರೆ, ತಾವು ಪರಿಶಿಷ್ಟ ಜಾತಿಯ ಸಚಿವರು ಆಗಿದ್ದೀರಿ. ಪರಿಶಿಷ್ಟ ಜಾತಿಯವರ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ಸಹ ತಾವು ಮಾಡದೇ ಇದ್ದರೆ ಬೇರೆ ಯಾರೂ ಸಹ ಮಾಡುವುದಕ್ಕೆ ಸಾಧ್ಯ ಆಗುವುದಿಲ್ಲ ಎಂದು ಹೇಳಬಯಸುತ್ತೇನೆ. ಈ ವಿಷಯದಲ್ಲಿ ನಾಗರಾಜ್ ಕಮಿಟಿಯೆಂದು ಮಾಡಿದ್ದಾರೆ. ಅದು ಮಲಗಿದೆ. ಆ ಕಮಿಟಿಯವರಿಗೆ ಕಾರ್ಯ ವ್ಯವಸ್ಥೆಯನ್ನು ಏಳು ತಿಂಗಳ ನಂತರ ಕೊಟ್ಟಿದ್ದಾರೆ; ಸ್ಟಾಫನ್ನು 7–8 ತಿಂಗಳ ನಂತರ ಕೊಟ್ಟಿದ್ದಾರೆ. ಅವರು ಏನೂ ಕೆಲಸ ಮಾಡಿಲ್ಲ. ಯಾವಾಗಲೂ ಒಂದು ಸಮಿತಿ ಅಥವಾ ಕಮಿಟಿ ಯಾವಾಗ ರಚನೆ ಆಗುತ್ತದೆ ಎಂದರೆ ಆ ವ್ಯವಸ್ಥೆಯನ್ನು ಅಲ್ಲಿಯೇ ಮಲಗಿಸುವುದಕ್ಕೋಸ್ಕರ ಸಮಿತಿ ಮಾಡುತ್ತಾರೆ. ಆ ನಾಗರಾಜ್ ಕಮಿಟಿಯನ್ನು ಚಾಲನೆಗೆ ತನ್ನಿ ಇಲ್ಲ ಎಂದರೆ ಅದನ್ನು ಬರ್ಖಾಸ್ತ್ ಮಾಡಿ. ಅವರು ಏನೂ ಮಾಡುತ್ತಾ ಇಲ್ಲ. ಅವರ ಕಮಿಟಿ ವರದಿಯ ಆಧಾರದ ಮೇಲೆ ನಾವು ಅನುದಾನವನ್ನು ಕೊಡುತ್ತೇವೆಂದು ತಾವು ಹೇಳಿದ್ದೀರಿ. ಆದರೆ ಆ ಕಮಿಟಿಯವರು ಏನು ವರದಿ ಸಲ್ಲಿಸಿದ್ದಾರೆ ಅದು ನಿಮಗೆ ಗೊತ್ತು. ಅದಕ್ಕೋಸ್ಕರ ಅದನ್ನು ತೆಗೆದುಹಾಕಿಬಿಡಿ. ಇಲ್ಲದಿದ್ದರೆ ಅವರಿಗೆ ಟೈಮ್ ಬೌಂಡ್ ಲಿಮಿಟ್ ಕೊಟ್ಟು ಇಷ್ಟು ಅವಧಿಯೊಳಗಾಗಿ ಎಲ್ಲ ಪರಿಶಿಷ್ಟ ಜಾತಿಯವರು ನಡೆಸುತ್ತಾ ಇರತಕ್ಕ ಎಲ್ಲಾ ಶಾಲೆಗಳನ್ನು ಅನುದಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕು. ರೋಸ್ಟರ್ ಪದ್ಧತಿ ಬಗ್ಗೆ ನಾನು ಸ್ವಲ್ಪ ಹೇಳಬಯಸುತ್ತಿದ್ದೇನೆ. ಈ ರೋಸ್ಟರ್ ಪದ್ಧತಿ ಈ ಶಾಲೆಗಳಲ್ಲಿ, ಅನುದಾನಿತ ಶಾಲೆಗಳಲ್ಲಿ ಕಾಲೇಜುಗಳಲ್ಲಿ ಅಪಾಯಿಂಟ್‌ಮೆಂಟ್ ಮಾಡುವಾಗ ಅನುಸರಿಸಬೇಕು ಎಂದು ಸರ್ಕಾರಿ ಆದೇಶ ಇದೆ. ಇದು ಕೇವಲ ಚಿಕ್ಕ ಚಿಕ್ಕ, ಸಣ್ಣ ಸಣ್ಣ ಸಂಸ್ಥೆಗಳಿಗೆ ಇದೆಯೋ ಅಥವಾ ದೊಡ್ಡ ದೊಡ್ಡ ಸಂಸ್ಥೆಗಳಿಗೂ ಇದೆಯೋ ? ದೊಡ್ಡ ದೊಡ್ಡ ಸಂಸ್ಥೆಗಳನ್ನು ನಾನು ನೋಡಿದ್ದೇನೆ. ಅವುಗಳ ಹೆಸರನ್ನು ತೆಗೆದುಕೊಳ್ಳುವುದು ಬೇಡ, ದೊಡ್ಡ ಸಂಸ್ಥೆಗಳು ಎಂದು ಹೇಳುತ್ತೇನೆ. ಕೊಲಿಜಿಯೇಟ್ ಎಜುಕೇಷನ್‌ನವರ ಒಂದು ಯಾದಿಯನ್ನು ನೋಡಿದೆ, 30–35 ಲೆಕ್ಚರರ್ಸ್ ಅಪಾಯಿಂಟ್ ಆಗಿದ್ದಾರೆ, ಅದರಲ್ಲಿ ಒಬ್ಬರೂ ಪರಿಶಿಷ್ಟ ಜಾತಿಯವರು ಇಲ್ಲ. ಜನರಲ್ ಮೆರಿಟ್, ಜನರಲ್ ಮೆರಿಟ್ ''ಸಿ'' ಗ್ರೂಪ್, ''ಡಿ''ಗ್ರೂಪ್, No scheduled caste or scheduled tribe persons appointed in that particular list. I am referring particularly to one list approved by the Collegiate Education in the appointment of Lecturers in Bijapur during 1990–91. I have brought this notice to the notice of the former Education Secretary Nagarajan and now the present Secretary also... ಅದರಲ್ಲಿ ಏನು ಇದೆ ಎಂದರೆ ರೋಸ್ಟರ್ ಮೇಂಟೆನೆನ್ಸ್ ಇಲ್ಲ; ಎಲ್ಲಾ ಜನರಲ್ ಮೆರಿಟ್, ದೊಡ್ಡ ಸಂಸ್ಥೆಗಳಿಗೆ ಅಪ್ರೂವಲ್ ಕೊಡುತ್ತಾರೆ, ಸ್ಯಾಲರಿ ಕೊಡುತ್ತಾರೆ. ಆದರೆ ಸಣ್ಣ ಸಣ್ಣ ಸಂಸ್ಥೆಗಳಿಗೆ ಕಟ್ಟುನಿಟ್ಟಾಗಿ ಪಾಲನೆ ಮಾಡುವುದಕ್ಕೆ ಒಂದು ಆದೇಶವನ್ನು ನೀಡುತ್ತಾರೆ. ಈ ತಾರತಮ್ಯ ಏಕೆ ? ಮೆಡಿಕಲ್ ಕಾಲೇಜ್ ಹಾಗೂ ಇಂಜಿನಿಯರಿಂಗ್ ಕಾಲೇಜ್‌ಗಳನ್ನು ಆ ಸಂಸ್ಥೆಯವರು ನಡೆಸುತ್ತಾರೆ. ಅವರು ಒಂದು ರೋಸ್ಟರ್ ರಿಜಿಸ್ಟರ್ ಎಂದು ಮೇಂಟೇನ್ ಮಾಡಿರುತ್ತಾರೆ.

ಅದನ್ನು ಯಾವ ರೀತಿ ಮಾಡಿರುತ್ತಾರೆ ಅಂದರೆ, ತಮಗೆ ಯಾವುದು ಆದ್ಯತೆ ಬೇಕು; ಉದಾಹರಣಾರ್ಥವಾಗಿ ಸಂಸ್ಕೃತ ಸಬ್ಜೆಕ್ಟ್‌ಗೆ ಎಸ್.ಸಿ.ಗೆ ಒಂದು ರಿಸರ್ವೇಷನ್ ಇರುವುದು, ಇಂಗ್ಲೀಷ್ ಲಿಟರೇಚರ್‌ಗೆ ಎಸ್.ಟಿ ಇಡುವುದು. ಅಥವಾ ಗಣಿತಕ್ಕೆ ಇಡುವುದು. ಅಂದರೆ ಆ ತರಹ ಯಾವ ಅಭ್ಯರ್ಥಿಗಳೂ ಎಸ್.ಸಿ. ಎಸ್.ಟಿ.ಯಲ್ಲಿ ಸಿಗುವುದಿಲ್ಲ; ನಾಟ್ ಅವ್ಯೆಲಬಲ್ ಎಂದು ಹೇಳಿ ತಮಗೆ

ಬೇಕಾದ ಅಭ್ಯರ್ಥಿಯನ್ನು ಅಪಾಯಿಂಟ್ ಮಾಡುವುದು. ಇದಕ್ಕೋಸ್ಕರ ನಾನು ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ಅತೀ ಕಳಕಳಿಯಿಂದ ಹೇಳುತ್ತಿದ್ದೇನೆ

ಚಿಕ್ಕ ಚಿಕ್ಕ ಸಂಸ್ಥೆಗಳು ಒಂದೋ ಎರಡೋ ಹೈಸ್ಕೂಲನ್ನೋ, ಕಾಲೇಜನ್ನೋ, ತೆಗೆದಿರುತ್ತಾರೆ, ಅವರಿಗೆ ಸ್ಟ್ರಿಕ್ಟ್ ಆರ್ಡರನ್ನು ಇಶ್ಯೂ ಮಾಡುತ್ತೀರಿ. ಅವರಿಗೆ ಯಾವುದೂ ಅಪಾಯಿಂಟ್‌ಮೆಂಟ್ ಅಪ್ರೂವ್ ಮಾಡುವುದಿಲ್ಲ. ಈ ತಾರತಮ್ಯವನ್ನು ದಯವಿಟ್ಟು ತಾವು ಕೈಬಿಡಬೇಕು. ಇವತ್ತು ರೋಸ್ಟರ್ ಸಿಸ್ಟಂ ಅನ್ನು ತೆಗೆದು ಹಾಕಿಬಿಡಿ. If you want to apply the roster system, you apply properly to all the Institutions, otherwise you abolish the roster system in Karnataka... ಅದರ ಜೊತೆಗೆ ಬ್ಯಾಕ್‌ಲಾಗ್ ಬಗ್ಗೆ ಒಂದು ವಿಷಯ. ಕರ್ನಾಟಕ ಸರ್ಕಾರ ಪದೇ ಪದೇ ಬ್ಯಾಕ್‌ಲಾಗ್ ಫಿಲಪ್ ಮಾಡಬೇಕು ಎಂದು ಆದೇಶವನ್ನು ಹೊರಡಿಸುತ್ತಲೇ ಇರುತ್ತದೆ. ಅದನ್ನು ಯಾರೂ ಮಾನ್ಯತೆ ಮಾಡುವುದಿಲ್ಲ; ಅದಕ್ಕೋಸ್ಕರ ಮಾನ್ಯ ಸಚಿವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ; ಯಾರು ಬ್ಯಾಕ್‌ಲಾಗ್ ಫಿಲಪ್ ಮಾಡಿಲ್ಲ, ಅಂತಹ ಸಂಸ್ಥೆಗಳಿಗೆ ಅನುದಾನವನ್ನು ಸ್ಟಾಪ್ ಮಾಡಿ, ನಿಮಗೆ ಧೈರ್ಯವಿದ್ದರೆ. ಏಕೆ ಮಾಡಬಾರದು ? ಬರೇ ಸರ್ಕಾರಿ ಸಂಸ್ಥೆಗಳಿಗೆ ಏಕೆ ? ದೊಡ್ಡ ದೊಡ್ಡ ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್ ಇದ್ದಾವೆ, ಸಾಕಷ್ಟು ಪರಿಶಿಷ್ಟ ಜಾತಿ, ಮತ್ತು ಪರಿಶಿಷ್ಟ ಪಂಗಡದ, ಹಿಂದುಳಿದ ವರ್ಗದವರಿಗೆ ಸಿಗುತ್ತದೆ. ಬ್ಯಾಕ್‌ಲಾಗ್ ಫಿಲಪ್ ಮಾಡುವುದಕ್ಕೋಸ್ಕರ ವಿಶೇಷವಾದ ಒಂದು ಆದೇಶವನ್ನು ಹೊರಡಿಸಿ ಯಾರು ಫಿಲಪ್ ಮಾಡುವುದಿಲ್ಲ ಅವರಿಗೆ ಅನುದಾನವನ್ನು ಕೂಡಲೇ ನಿಲ್ಲಿಸಿದರೆ ಮಾತ್ರ ಇದು ಸಾಧ್ಯವಾಗುತ್ತದೆ; ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ, ಎಂಬ ಮಾತನ್ನು ತಮ್ಮ ಮೂಲಕ ಉನ್ನತ ಶಿಕ್ಷಣ ಸಚಿವರಿಗೆ ಪ್ರಾಥಮಿಕ ಶಿಕ್ಷಣ ಸಚಿವರಲ್ಲಿ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

3.15 ಪಿ.ಎಂ.

ಈ ಆದೇಶವನ್ನು ಕೂಡಲೇ ತಾವುಗಳೆಲ್ಲರೂ ಸೇರಿ ಸಚಿವ ಸಂಪುಟ ಸಭೆಯಲ್ಲಿ ಅಥವಾ ಬೇರೆ ಯಾವುದೋ ಒಂದು ರೀತಿಯಲ್ಲಿ ಹೊರಡಿಸಿ ಇದನ್ನು ತಕ್ಷಣ ಜಾರಿಗೆ ತರುತ್ತೀರೆನ್ನುವ ಭರವಸೆಯನ್ನು ಇಟ್ಟುಕೊಳ್ಳುತ್ತೇನೆ. ಇನ್ನು ವಯಸ್ಕರ ಶಿಕ್ಷಣದ ಬಗ್ಗೆ ಹೇಳಬೇಕೆಂದರೆ, ಈ ವಯಸ್ಕರ ಶಿಕ್ಷಣ ಖಾತೆಯನ್ನು ಶ್ರೀ ಪ್ರಭಾಕರ ರಾಣೆಯವರಿಗೆ ಕೊಟ್ಟಿದ್ದು, ಅವರಿನ್ನೂ ಯುವಕರಾಗಿದ್ದು, ಅವರ ಬದಲಿಗೆ ಈ ಖಾತೆಯನ್ನು ಮಾನ್ಯ ಡಾ: ಲಮಾಣಿಯವರಿಗೆ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತೆಂದು ನನಗನ್ನಿಸುತ್ತದೆ. ಶ್ರೀಮಾನ್ ಪ್ರಭಾಕರ ರಾಣೆಯವರಿಗೆ ಒಳ್ಳೆಯ ಅನುಭವವಿದ್ದು, ಅವರಿಗೆ ಮತ್ತು ಶ್ರೀ ಯಾಹ್ಯಾರವರಿಗೆ ಬೇರೆ ಯಾವುದಾದರೊಂದು ಒಳ್ಳೆಯ ಖಾತೆ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಆದರೂ ಅವರಿಗೆ ವಹಿಸಿರುವ ಖಾತೆಯನ್ನು ಶ್ರೀ ರಾಣೆಯವರು ಚೆನ್ನಾಗಿ ನಿಭಾಯಿಸುತ್ತಿದ್ದಾರೆ. ಆದರೆ, ನಾನು ಸಾಕ್ಷರತೆ ಬಗ್ಗೆ ಕಳೆದ ಅಧಿವೇಶನದಲ್ಲಿಯೂ ಹೇಳಿದ್ದೇನೆ. It is mere waste ಎಂದು ನನ್ನ ವೈಯಕ್ತಿಕ ಅಭಿಪ್ರಾಯ. ಪಠ್ಯ–ಪುಸ್ತಕಗಳನ್ನು ವಿತರಿಸುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡುತ್ತಾರೆ. ಆದರೆ, ಆ ರೀತಿ ಕಳುಹಿಸಿಕೊಡುವಂಥ ಪುಸ್ತಕಗಳು ಜಿಲ್ಲಾಧಿಕಾರಿಗಳಿಗೆ ತಲುಪದೆ ನೇರವಾಗಿ ಪ್ರಾವಿಷನ್ ಸ್ಟೋರ್ಸ್‌ಗೆ ಹೋಗುತ್ತದೆ. ಅಲ್ಲಿ ಕಾಫಿ ಪುಡಿ, ಸಕ್ಕರೆ ಮುಂತಾದ ಪದಾರ್ಥಗಳನ್ನು ಕಟ್ಟಿಕೊಡಲು ಈ ಪಠ್ಯ–ಪುಸ್ತಕಗಳ ಹಾಳೆಗಳನ್ನು ಉಪಯೋಗಿಸುತ್ತಾರೆ. ಇದನ್ನು ನಾನು ಜಿಲ್ಲಾಧಿಕಾರಿಗಳಿಗೆ ಮತ್ತು ಮುಖ್ಯ ಕಾರ್ಯದರ್ಶಿಯವರಿಗೆ ತೋರಿಸಿದ್ದೇನೆ. ಆದುದರಿಂದ ಈ ವ್ಯವಸ್ಥೆಯನ್ನು ಸರಿಯಾಗಿ ಮಾಡುವುದಾದರೆ ಮಾಡಿ. ಇದು ಸಾಕ್ಷರತಾ ಆಂದೋಳನವಾಗಿಲ್ಲ, 'ಅಧಿಕಾರಿಗಳ ಆಂದೋಳನ'ವಾಗಿದೆ. ಸಾಕ್ಷರತಾ ಕಾರ್ಯಕ್ರಮದಡಿ ಬಿಜಾಪುರ ಜಿಲ್ಲೆಗೆ ಮೂರೂವರೆ ಕೋಟಿ ರೂಪಾಯಿಗಳನ್ನು ಕೊಟ್ಟರು. ಆ ಹಣ ಎಷ್ಟರಮಟ್ಟಿಗೆ ಉಪಯೋಗವಾಯಿತು ? ಯಾವ

ರೀತಿ ಹಾಳಾಯಿತು ? ಎಂಬುದರ ಬಗ್ಗೆ ಹೋದ ಸಲ ಹೇಳಿದ್ದೇನೆ, ಇವೊತ್ತು ಸಹ ಅದೇ ಮಾತನ್ನು ಹೇಳುತ್ತಿದ್ದೇನೆ. ಸಾಕ್ಷರತೆ ಬೇಕು. ಆದರೆ, ಅದನ್ನು ಸರಿಯಾಗಿ ಜಾರಿಗೊಳಿಸಬೇಕಾದರೆ.....

ಶ್ರೀ ಬಿ.ಎಂ. ಇದಿನಬ್ಬ:- ಸಾಕ್ಷರತಾ ಆಂದೋಳನದ ಘೋಷಣೆಗಾಗಿ ಕೊಟ್ಟಿರತಕ್ಕಂಥ ಹಣದಲ್ಲೂ ಕೂಡ ಅರ್ಧಕ್ಕರ್ಧ ಸೋರಿ ಹೋಗಿದೆಯೆಂದು ಎಲ್ಲಾ ಕಡೆ ಜನರು ಹೇಳುತ್ತಿದ್ದಾರೆ.

ಶ್ರೀ ಮನೋಹರ ಐನಾಪುರ:- ಮಾನ್ಯ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆ ಬಗ್ಗೆ ಹೇಳಿದರು. ಬಿಜಾಪುರ ಜಿಲ್ಲೆಯಲ್ಲಿ ಶೇಕಡಾ 90ರಷ್ಟು ದುಡ್ಡು ಸೋರಿಕೆಯಾಗಿಲ್ಲ, ಅದು ಯಾವ ರೀತಿ ಖರ್ಚಾಗಿದೆಯೆಂದು ಇಲ್ಲಿ ಹೇಳುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ಆ ರೀತಿ ಅಲ್ಲಿ ದುಡ್ಡು ಹಾಳಾಗಿದೆ. ಅದರ ಬದಲು ಶಾಲೆ ಕಟ್ಟಡಗಳಿಗಾಗಿ, ಶಿಕ್ಷಕರ ನೇಮಕಾತಿಗಾಗಿ ಉಪಯೋಗಿಸಿಕೊಳ್ಳಿ. ಶಾಲೆಗಳಲ್ಲಿ ಶಿಕ್ಷಕರಿಲ್ಲ. ಅದಕ್ಕೋಸ್ಕರ, ಮಾನ್ಯ ಸಚಿವರಾದ ಶ್ರೀ ಪ್ರಭಾಕರ ರಾಣೆಯವರನ್ನು ಕೇಳಬಯಸುತ್ತೇನೆ; ಈ ವಯಸ್ಕರ ಶಿಕ್ಷಣದ ವಿಷಯದಲ್ಲಿ ಅವರು ವಿಶೇಷವಾದ ಗಮನಹರಿಸಿ ಸಾಕ್ಷರತೆಯನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನು ಪಠ್ಯ-ಪುಸ್ತಕಗಳು ಯಾವ ರೀತಿ ಮುದ್ರಣಗೊಳ್ಳುತ್ತವೆ, ಯಾವ ರೀತಿ ವಿತರಣೆಯಾಗುತ್ತದೆನ್ನುವುದರ ಬಗ್ಗೆ ಎಲ್ಲ ಸದಸ್ಯರೂ ಹೇಳಿದ್ದಾರೆ. ಈ ಕುರಿತು ನನ್ನ ಸ್ವಂತ ಅನುಭವ ಹೇಳುತ್ತೇನೆ. ನನ್ನ ಮಗ ಒಂದು ಶಾಲೆಯಲ್ಲಿ ಓದುತ್ತಿದ್ದಾನೆ, ಅತನಿಗೆ ಓದಲು ಪಠ್ಯಪುಸ್ತಕ ಸಿಗಲಿಲ್ಲವಾದ ಕಾರಣ ಪಠ್ಯಪುಸ್ತಕದ ಜೆರಾಕ್ಸ್ ಪ್ರತಿ ಮಾಡಿ ಓದಿಕೊಂಡು ಮೊನ್ನೆ ದಿವಸ ಪರೀಕ್ಷೆಗೆ ಹೋಗಿದ್ದಾನೆ. ಶೈಕ್ಷಣಿಕ ವರ್ಷ ಮುಗಿದು ಹೋಗಿದ್ದರೂ ಇನ್ನೂ ಪುಸ್ತಕ ಸಿಕ್ಕಿಲ್ಲ. ಶಾಲಾ ಪಠ್ಯಪುಸ್ತಕಗಳನ್ನು ಒಮ್ಮೆ ಸರ್ಕಾರದವರು ಮುದ್ರಿಸುತ್ತಾರೆ, ಮತ್ತೊಮ್ಮೆ ಖಾಸಗಿಯವರಿಗೆ ವಹಿಸುತ್ತಾರೆ. ಇದಕ್ಕೊಂದು ಶಾಶ್ವತವಾದಂಥ ವ್ಯವಸ್ಥೆ ಮಾಡಿ; ಪಠ್ಯಪುಸ್ತಕಗಳ ಮುದ್ರಣವನ್ನು ಸರ್ಕಾರವೇ ಮಾಡಲಿ ಅಥವಾ ಖಾಸಗಿಯವರಿಗಾದರೂ ವಹಿಸಿಕೊಡಲಿ. ಈಗ ಪಠ್ಯಪುಸ್ತಕಗಳು ಸಕಾಲದಲ್ಲಿ ಸಿಗದೆ ಶಾಲಾಮಕ್ಕಳಿಗೆ ಬಹಳಷ್ಟು ತೊಂದರೆಯಾಗಿದೆ. ಈಗ ಸದನದಲ್ಲಿ ಉನ್ನತ ಶಿಕ್ಷಣ ಸಚಿವರು, ಹಾಗೂ ಎಲ್ಲಾ ಸಚಿವರಿದ್ದಾರೆ. ಅವರಿಗೆ ವಿನಂತಿಸುತ್ತಾ ಪಠ್ಯಪುಸ್ತಕಗಳ ವಿತರಣೆಯನ್ನು ಮಾಡುವುದಕ್ಕೆ ಸರಿಯಾದ ಒಂದು ವ್ಯವಸ್ಥೆಯನ್ನು ಮೇ ತಿಂಗಳೊಳಗೆ ಮಾಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಶಿಕ್ಷಣ ಇಲಾಖೆಯಲ್ಲಿ ಕಡತಗಳ ವಿಲೇವಾರಿಯಿಂದ ಜನರಿಗೆ ಯಾವ ರೀತಿ ತೊಂದರೆಯಾಗುತ್ತಿದೆ ಎನ್ನುವುದರ ಬಗ್ಗೆ ನನ್ನ ಅನುಭವದ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಒಂದೊಂದು ಕಡತವೂ ಸುಮಾರು 6-6 ತಿಂಗಳುಗಳ ತನಕ ಒಂದೇ ಇಲಾಖೆಯಲ್ಲಿರುತ್ತದೆ. ಈ ಕುರಿತು ಸಂಬಂಧಪಟ್ಟವರಿಗೆ ಹೋಗಿ ಕೇಳಿದಾಗ ಏನು ಹೇಳುತ್ತಾರೆಂದರೆ 'ಡೆಪ್ಯೂಟಿ ಸೆಕ್ರೆಟರಿ ಪೋಸ್ಟಿಂಗ್ ಆಗಿಲ್ಲ, ಅಡಿಷನಲ್ ಸೆಕ್ರೆಟರಿ ಪೋಸ್ಟಿಂಗ್ ಆಗಿಲ್ಲ. ಅಂಡರ್ ಸೆಕ್ರೆಟರಿ ಇಲ್ಲ' ಎಂದು. ಒಂದು ವಾರಕ್ಕೆ ನಾಲ್ಕು ಸಲ ಅಧೀನ ಕಾರ್ಯದರ್ಶಿಗಳ ಪೋಸ್ಟಿಂಗ್ ಆಗಿದೆ. ಆದುದರಿಂದ, ಶಿಕ್ಷಣ ಇಲಾಖೆ ಬಹು ದೊಡ್ಡ ಇಲಾಖೆಯಾಗಿದ್ದು ಸರಿಯಾದ ಪ್ರಮಾಣದಲ್ಲಿ ಸಿಬ್ಬಂದಿ ವರ್ಗದವರನ್ನು ಕೊಟ್ಟರೆ ಕಡತಗಳ ವಿಲೇವಾರಿಯನ್ನು ಶೀಘ್ರವಾಗಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆ ದಿಶೆಯಲ್ಲಿ ಮಾನ್ಯ ಸಚಿವರು ಗಮನಹರಿಸಿ ಸೆಕ್ರೆಟೇರಿಯೇಟ್‌ಗಾಗಲಿ ಅಥವಾ ಡೈರೆಕ್ಟೊರೇಟ್ ಆಫೀಸ್‌ಗಾಗಲಿ ಒಂದು ಸರಿಯಾದ ವ್ಯವಸ್ಥೆ ಮಾಡಿದರೆ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆಂದು ತಮ್ಮ ಮೂಲಕ ಹೇಳಬಯಸುತ್ತೇನೆ. ಕೊನೆಯದಾಗಿ, ಬಿಜಾಪುರ ಜಿಲ್ಲೆಯಲ್ಲಿರುವ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆಯವರು ಇತ್ತೀಚೆಗೆ ಯಾವುದೋ ಒಂದು ವಿಶೇಷ ಪ್ರಶಸ್ತಿ ವಿತರಣೆ ಮಾಡುತ್ತಾರೆ. ಆ ಪ್ರಶಸ್ತಿ ವಿತರಣೆಯನ್ನು ಶೇಕಡ 50ರಷ್ಟು ಒಂದೇ ಕೋಮಿಗೆ ಸೇರಿದ ಜನರಿಗೆ ಮಾಡಿದ್ದಾರೆ. 10 ಜನರಲ್ಲಿ 5 ಜನರು ಒಂದೇ ಕೋಮಿನವರು, [illegible]

ಮಾಡಬೇಕಾದರೆ ವ್ಯಕ್ತಿಯ ಗುಣ, ಅರ್ಹತೆ ನೋಡಿ ಕೊಡಬೇಕೆ ವಿನಃ ಅವರು ಇದನ್ನೆಲ್ಲಾ ಗಾಳಿಗೆ ತೂರಿ ತಮ್ಮ ಮನಸ್ಸಿಗೆ ಬಂದಂತೆ ಪ್ರಶಸ್ತಿ ವಿತರಿಸಿದ್ದಾರೆ. ಈ ಕುರಿತು ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರು ಗಮನಹರಿಸಿ, ಆ ಪ್ರಶಸ್ತಿಯನ್ನು ಕೂಡಲೇ ರದ್ದುಪಡಿಸಿ ಬೇರೊಂದು ವ್ಯವಸ್ಥೆ ಮಾಡಬೇಕು. ಏಕೆಂದರೆ, ನನಗೆ ಈ ವಿಷಯದ ಬಗ್ಗೆ ಬಿಜಾಪುರ ಜಿಲ್ಲೆಯಿಂದ ಮನವಿ ಬಂದಿದೆ. ಶಿಕ್ಷಕರಿಗೆ ಅವರ ಅರ್ಹತೆಯ ಮೇಲೆ ಪ್ರಶಸ್ತಿಗಳನ್ನು ಕೊಡಬೇಕೇ ವಿನಃ ರಾಜಕಾರಣದ ಒತ್ತಾಯದಿಂದಲ್ಲ. ಅದಕ್ಕೋಸ್ಕರ ಮಾನ್ಯ ಸಚಿವರು ಇದರ ಕಡೆ ಗಮನಹರಿಸಬೇಕು.

ಇನ್ನು ಕೊನೆಯದಾಗಿ ಮೆಡಿಕಲ್ ಎಜುಕೇಷನ್ ಬಗ್ಗೆ ಹೇಳುವುದಾದರೆ; ಮಾನ್ಯ ವಾಟಾಳ್ ನಾಗರಾಜ್‌ರವರು ಇದನ್ನು ರಾಷ್ಟ್ರೀಕರಣ ಮಾಡಿ ಎಂದು ಹೇಳಿದ್ದಾರೆ. ಆದರೆ ನಾನು ಇದನ್ನು ರಾಷ್ಟ್ರೀಕರಣ ಮಾಡಬಾರದೆಂದು ಹೇಳುತ್ತೇನೆ. ಏಕೆಂದರೆ, ಇದುವರೆಗೆ ಮೆಡಿಕಲ್ ಮತ್ತು ತಾಂತ್ರಿಕ ಕಾಲೇಜುಗಳು ಕೆಲವೊಂದು ವರ್ಗದವರಿಗೆ, ದೊಡ್ಡ ದೊಡ್ಡ ಸಂಸ್ಥೆಯವರಿಗೆ, ಮಠಗಳಿಗೆ ಮಾತ್ರ ಸಿಕ್ಕಿವೆ, ನಾನು ಒಂದೇ ಒಂದು ಜಾತಿಯ ಬಗ್ಗೆ ಹೇಳುತ್ತಿಲ್ಲ, ತಾವು ಇದರ ಬಗ್ಗೆ ತಪ್ಪು ಭಾವಿಸಬಾರದು. ಹಿಂದುಳಿದ ವರ್ಗದವರಿಗೆ ಇದು ಸಿಕ್ಕಿಲ್ಲ. ಆದ್ದರಿಂದ ಗೊಲ್ಲರಿಗೆ, ಲಂಬಾಣಿಯವರಿಗೆ, ಬುಡು ಬುಡುಕೆಯವರಿಗೆ ಅಂಥ ಸಮಾಜದವರಿಗೆ ಮೆಡಿಕಲ್ ಮತ್ತು ತಾಂತ್ರಿಕ ಕಾಲೇಜುಗಳನ್ನು ಕೊಟ್ಟು ಎಲ್ಲಾರಿಗೂ ಸರಿಸಮಾನವಾಗಿ ಕೊಟ್ಟಮೇಲೆ ಬೇಕಾದರೆ ನೀವು ಇವುಗಳನ್ನು ರಾಷ್ಟ್ರೀಕರಣ ಮಾಡಿ, ಅದಕ್ಕೆ ನನ್ನ ತಕರಾರು ಇಲ್ಲ. ಇದುವರೆಗೆ ಇದು ಬರೇ ಒಂದೇ ವರ್ಗದವರಿಗೆ ಮಾತ್ರ ಸಿಗುತ್ತಿದೆ. ಆದ್ದರಿಂದ ಎಲ್ಲಾ ವರ್ಗದವರಿಗೂ ಇದು ಸಿಕ್ಕಿದ ನಂತರ ರಾಷ್ಟ್ರೀಕರಣವಾಗಲಿ. ಒಂದು ಸೀಟಿಗೆ 15 ಲಕ್ಷವನ್ನು ಕೊಡುತ್ತಾರೆಂದು ತಾವೇ ಹೇಳಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. When one side people are getting the facility, why not the poorer classes like Backward classes, Scheduled Castes and Scheduled Tribes. ಎಲ್ಲಾ ವರ್ಗದವರಿಗೂ ಒಂದೊಂದು ಕಾಲೇಜನ್ನು ಕೊಟ್ಟು ಅನಂತರ ರಾಷ್ಟ್ರೀಕರಣ ಮಾಡಲಿ. ಆಗ ಸರಿಸಮಾನತೆ ಬರುತ್ತದೆ. ಆಗ ರಾಷ್ಟ್ರೀಕರಣ ಮಾಡಿ.

ಶ್ರೀಮತಿ ಮೋಟಮ್ಮ:– ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೆ ವೈದ್ಯಕೀಯ ಪದವಿಯನ್ನು ಪಡೆದಿರುವವರು ಒಬ್ಬರೂ ಸಹ ಹಳ್ಳಿಗೆ ಬಂದು ಕೆಲಸ ಮಾಡುವುದಿಲ್ಲ. ಇನ್ನು ಎಲ್ಲಾ ವರ್ಗದವರಿಗೂ ಕಾಲೇಜನ್ನು ಕೊಟ್ಟರೆ ಆ ವೈದ್ಯರುಗಳು ಎಲ್ಲಿಗೆ ಹೋಗುತ್ತಾರೆ ಹೇಳಿ ?

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಮೋಟಮ್ಮನವರು ಹೇಳಿದಂತೆ ಹೆಚ್ಚಿನ ವೈದ್ಯಕೀಯ ಕಾಲೇಜುಗಳಿಗೆ ಅವಕಾಶವನ್ನು ಕೊಟ್ಟರೆ, ಈಗ ಇರತಕ್ಕ ವೈದ್ಯರಿಗೇ ಕೆಲಸ ಸಿಗುತ್ತಿಲ್ಲ, ಇನ್ನು ಹೊಸ ಕಾಲೇಜಿನಿಂದ ಹೊರಗೆ ಬರತಕ್ಕ ವೈದ್ಯರು ಏನು ಮಾಡಬೇಕು ? ನಾವುಗಳು ಅವರ ಹತ್ತಿರ ಹೋಗುವ ಬದಲು ಅವರುಗಳೇ ಹಳ್ಳಿಹಳ್ಳಿಗೆ ಹೋಗಿ ನಿಮಗೆ ಹೊಟ್ಟೆ ನೋವು ಇದೆಯೋ ? ನಿಮಗೆ ಜ್ವರವಿದೆಯೇ ? ಎಂದು ಕೇಳಬೇಕಾದ ಪರಿಸ್ಥಿತಿ ಬರುತ್ತದೆ. ನಾವುಗಳು ವೈದ್ಯರ ಹತ್ತಿರ ಹೋಗದಿದ್ದರೂ ಸಹ ಅವರೇ ಕೇಳಿಕೊಂಡು ಹೋಗುವ ಪರಿಸ್ಥಿತಿ ಬರುತ್ತದೆ. ಕೆಲಸಸಿಗದೇ ಇರತಕ್ಕ ವೈದ್ಯರ ಹಣೇಬರಹ ಇದೇ ರೀತಿಯಾಗುತ್ತದೆ.

ಶ್ರೀಮತಿ ಮೋಟಮ್ಮ:– ಹೊಟ್ಟೆತುಂಬಿರತಕ್ಕ ವೈದ್ಯರಿಗೆ ಕೆಲಸ ಬೇಕಾಗಿಲ್ಲ, ಆದರೆ ಹೊಟ್ಟೆತುಂಬದ ವೈದ್ಯರೂ ಸಹ ಹಳ್ಳಿಯ ಕಡೆಗೆ ನೇಮಕ ಮಾಡಿದರೆ ಹೋಗುವುದಿಲ್ಲ. ಈಗ ನಾವು ಲೋಕಲ್ ವೈದ್ಯರನ್ನು ನೇಮಕ ಮಾಡಿಕೊಂಡಿದ್ದೇವೆ. ಆದರೆ ಅವರುಗಳು ಹಳ್ಳಿಗೆ ಹೋಗಿದ್ದಾರೆಯೇ ? ನಮ್ಮಲ್ಲಿ ಒಂದು ಆಸ್ಪತ್ರೆಯಲ್ಲಿ 10 ಹುದ್ದೆಗಳು ಖಾಲಿ ಇವೆ. ಯಾವ ವೈದ್ಯರೂ ಸಹ ಹಳ್ಳಿಗೆ ಬಂದು ಕೆಲಸಮಾಡಲು ತಯಾರಾಗಿಲ್ಲ. ಅವರುಗಳಿಗೆ ಬೆಂಗಳೂರು ಇಲ್ಲವೆ ಮೈಸೂರು ಇಂಥ ನಗರಗಳೇ

ಬೇಕು, ಇಂಥ ಪರಿಸ್ಥಿತಿಯಲ್ಲಿ ವೈದ್ಯಕೀಯ ಕಾಲೇಜುಗಳನ್ನು ಏಕೆ ತೆರೆಯಬೇಕು, ನಮ್ಮ ಜನರ ಹಣ ನಷ್ಟವಾಗುತ್ತದಷ್ಟೇ;

ಶ್ರೀ ಮನೋಹರ ಐನಾಪುರ್:- ಇವುಗಳು ಎಲ್ಲರಿಗೂ ಸರಿಸಮಾನವಾಗಿ ಸಿಕ್ಕಿದ ಮೇಲೆ ರಾಷ್ಟ್ರೀಕರಣ ಮಾಡಿ ಅದಕ್ಕೆ ನನ್ನ ತಕರಾರು ಇಲ್ಲ, ಅದಕ್ಕೆ ಶಾಸಕರ ಮತ್ತು ಜನರ ಒಪ್ಪಿಗೆ ಇದೆ. ಮೆಡಿಕಲ್ ಎಜುಕೇಷನ್ ಮತ್ತು ಟೆಕ್ನಿಕಲ್ ಎಜುಕೇಷನ್ ಬರೇ ಒಂದೇ ಒಂದು ಭಾಗದ ಜನರಿಗೆ ಹೋಗುತ್ತಿದೆ. ಅದನ್ನು ಎಲ್ಲರೂ ಸಹ ಹಂಚಿಕೊಂಡು ತಿನ್ನಬೇಕೆಂದು ನನ್ನ ಭಾವನೆ. ಆದಕ್ಕೋಸ್ಕರ ಮಾನ್ಯ ಸಚಿವರಿಗೆ ಈ ಶಿಕ್ಷಣ ಇಲಾಖೆಯ ಬೇಡಿಕೆಯ ಮೇಲೆ ಈವರೆಗೆ ಕೆಲವೊಂದು ಸಲಹೆ ಸೂಚನೆಗಳನ್ನು ಕೊಟ್ಟಿದ್ದೇನೆ, ಅವರು ಅದನ್ನು ಗಮನದಲ್ಲಿಟ್ಟುಕೊಂಡು, ಆದಷ್ಟು ಬೇಗ ಅದನ್ನು ಜಾರಿಗೆ ತರುತ್ತಾರೆ ಎಂದು ನಂಬಿ ಈ ಬೇಡಿಕೆಯ ಬಗ್ಗೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:- ಸನ್ಮಾನ್ಯ ಅಧ್ಯಕ್ಷರೆ, ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಕಾಲದಲ್ಲಿ ಈ ರೋಸ್ಟರ್ ಪದ್ಧತಿಯಿಂದ ಎಸ್.ಸಿ. ಎಸ್.ಟಿ.ಯವರಿಗೆ ಅನ್ಯಾಯವಾಗುತ್ತಿದೆ ಎಂದು ಹೇಳಿದ್ದಾರೆ. ಆದರೆ ಅದು ಆ ರೀತಿ ಆಗಿಲ್ಲ. ಇವತ್ತಿನ ದಿನ ಉದಾಹರಣೆಗೆ ಒಂದು ಕಾಲೇಜಿನಲ್ಲಿ 8 ಹುದ್ದೆ ಖಾಲಿ ಇದ್ದರೆ, ಅದರಲ್ಲಿ ಒಂದು ಕನ್ನಡ, ಒಂದು ಇಂಗ್ಲೀಷ್, ಒಂದು ಸಂಸ್ಕೃತ ಈ ರೀತಿ ಹುದ್ದೆ ಖಾಲಿ ಇದ್ದರೆ ಅವೆಲ್ಲವೂಗಳೂ ಸಹ ಎಸ್.ಸಿ. ಎಸ್.ಟಿ.ಯವರಿಗೆ ಮೀಸಲಾಗಿರುತ್ತದೆ.

ಅಧ್ಯಕ್ಷರು:- ಅವರು ಅವರ ಅಭಿಪ್ರಾಯವನ್ನು ತಿಳಿಸಿದ್ದಾರೆ, ಮಂತ್ರಿಗಳು ಉತ್ತರ ಕೊಡುವಾಗ ಅದರ ಬಗ್ಗೆ ತಿಳಿಸುತ್ತಾರೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:- ಇವತ್ತಿನ ದಿನ ನಿಜವಾಗಿಯೂ ಸಾಮಾನ್ಯ ವರ್ಗದ ಜನರಿಗೆ ಅನ್ಯಾಯವಾಗುತ್ತಿದೆ. ಉದಾಹರಣೆಗೆ ಒಂದು ಕಾಲೇಜಿನಲ್ಲಿ 8 ಹುದ್ದೆಗಳನ್ನು ತುಂಬುವುದಿದ್ದರೆ ಅದರಲ್ಲಿ ಒಂದು ಕನ್ನಡ, ಒಂದು ಇಂಗ್ಲಿಷ್ ಒಂದು ಸಂಸ್ಕೃತ ಇದ್ದರೆ ಆ ಎಲ್ಲಾವುಗಳಲ್ಲಿ ಎಸ್.ಸಿ. ಎಸ್.ಟಿ.ನವರಿಗೆ ಇರುತ್ತದೆ. ಆದ್ದರಿಂದ ನಿಜವಾಗಿ ಅನ್ಯಾಯ, ಜನರಲ್ ಮೆರಿಟ್ ಮತ್ತು 'ಡಿ' ಗ್ರೂಪ್‌ನವರಿಗೆ ಆಗುತ್ತಿದೆ. ದಯಮಾಡಿ ಇದನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):- ಎಸ್.ಸಿ. ಎಸ್.ಟಿ.ನಲ್ಲಿ ಎಷ್ಟು ಜನ ಸಂಸ್ಕೃತ ಪಾಸ್ ಮಾಡಿರುವವರು ಇರುತ್ತಾರೆ? ಎಷ್ಟು ಜನ ಇಂಗ್ಲಿಷ್‌ನವರು ಇರುತ್ತಾರೆ? ಇದರಲ್ಲೇ ಇರತಕ್ಕದ್ದು ಟ್ರಿಕ್. ಇದನ್ನು ಬದಲಾವಣೆ ಮಾಡಬೇಕು.

ಶ್ರೀ ಶಿವಾನಂದ ಹೆಚ್. ಕೌಜಲಗಿ:- ತಾವು ಸಮಾಧಾನದಿಂದ ತೆಗೆದುನೋಡಿ, ಅವಸರ ಮಾಡಬೇಡಿ. ನಾನು ಹೇಳುವುದನ್ನು ವಿಚಾರಮಾಡಿನೋಡಿ. ಯಾವುದೂ ಸಂಸ್ಕೃತ ಅಲ್ಲ. ಒಂದು ಕನ್ನಡ, ಒಂದು ಇಂಗ್ಲಿಷ್, ಒಂದು ಜಾಗ್ರಫಿ, ಹೀಗೆ ಒಂದೊಂದೇ ಸಬ್ಜೆಕ್ಟ್ ಇದ್ದಾಗ ಅವುಗಳಿಗೆಲ್ಲಾ ರಿಸರ್ವೇಷನ್ ಇದೆ. ಇವತ್ತು ನಮ್ಮ ಬೈಲಹೊಂಗಲ ತಾಲೂಕಿನಲ್ಲಿ 8 ಸೀಟು ಇವೆ ಎಂದು ತಿಳಿದುಕೊಳ್ಳಿ. ಒಂದು ಕನ್ನಡ, ಒಂದು ಹಿಸ್ಟರಿ, ಒಂದು ಜಾಗ್ರಫಿ ಇಷ್ಟು ಬಿಟ್ಟರೆ ಉಳಿದುವೆಲ್ಲಾ ರಿಸರ್ವೇಷನ್ ಇದೆ. ಇದರಿಂದ ಜನರಲ್ ಮೆರಿಟ್‌ನವರಿಗೆ ಮತ್ತು ಡಿ. ಗ್ರೂಫ್‌ನವರಿಗೆ ಅನ್ಯಾಯವಾಗುತ್ತದೆ.

ಅಧ್ಯಕ್ಷರು:- ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಇದನ್ನೆಲ್ಲಾ ಹೇಳುತ್ತಾರೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ನಾವು ಹಳ್ಳಿಗಳಿಗೆ ಹೋದಾಗ ಜನರಲ್ ಮೆರಿಟ್‌ನವರು 'ಡಿ' ಗ್ರೂಪ್‌ನವರಿಗೆ ಏನು ಮಾಡುತ್ತೀರಿ ಎಂದು ಜನ ನಮ್ಮನ್ನು ಕೇಳುತ್ತಾರೆ. ಎಸ್.ಸಿ. ಎಸ್.ಟಿ.ನವರು ಎಂದು ಹೇಳುತ್ತಾ ಕುಳಿತಿರುತ್ತಾರೆ. ಅದನ್ನು ನೀವು ಕೇಳಿಸಿಕೊಂಡು ಕುಳಿತಿರುತ್ತೀರಾ ಎಂದು ನಮ್ಮನ್ನು ಕೇಳುತ್ತಾರೆ. ಇವತ್ತು ನಮಗೆ ತುಂಬಾ ಅನ್ಯಾಯವಾಗುತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್:– ನಿಮ್ಮ ಸಂಸ್ಥೆಯಲ್ಲಿ ಚೆನ್ನಾಗಿರಬಹುದು. ಆದರೆ ಎಲ್ಲ ಸಂಸ್ಥೆಗಳಲ್ಲೂ ಹಾಗಿರುತ್ತದೆಂದು ಹೇಗೆ ಹೇಳುತ್ತೀರಿ ? ಆ ರೀತಿ ಏಕೆ ಭಾವನೆ ಮಾಡಿಕೊಳ್ಳುತ್ತೀರಿ. ಅದು ಆಗದೇ ಇರುವುದರಿಂದ, ಆ ಸತ್ಯಾಂಶ ಕಾಣುತ್ತಿರುವುದರಿಂದ ನಾವಾಗಲಿ, ಬೇರೆ ಸದಸ್ಯರಾಗಲಿ ಆಗುತ್ತಿಲ್ಲ ಎಂದು ಹೇಳುತ್ತಿದ್ದೇವೆ ಅಷ್ಟೆ; ಇದು ಎಲ್ಲಿ ಆಗಿದೆ ಅಲ್ಲಿಗೆ ಅಷ್ಟೆ ಆಗುತ್ತದೆ. ಎಲ್ಲರೂ ತಮ್ಮ ಹೆಗಲನ್ನು ಏತಕ್ಕೆ ಮುಟ್ಟಿ ನೋಡಿಕೊಳ್ಳಬೇಕು ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ಅಧ್ಯಕ್ಷರೆ, 4–5 ಇಲಾಖೆಗಳ ಬೇಡಿಕೆಗಳ ಬಗ್ಗೆ ಅಂದರೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಲು ಬೇಕಾಗಿರತಕ್ಕ ಪರವಾನಗಿಯ ಬಗ್ಗೆ ಎರಡು ನಿಮಿಷ ಮಾತನಾಡಲು ನನಗೆ ಅವಕಾಶ ಸಿಕ್ಕಿರತಕ್ಕದ್ದು ನನ್ನ ಪುಣ್ಯವೆಂದು ತಿಳಿದಿದ್ದೇನೆ. ಇದು ತಮ್ಮ ತಪ್ಪಲ್ಲ. ತಪ್ಪು ನಮ್ಮದು. ಏಕೆಂದರೆ, ತಮಗೆ ಗೊತ್ತಿರುವಂತೆ, ಈ ಸದನದ ಪ್ರಾರಂಭವಾಗುವುದಕ್ಕೆ ಅರ್ಧ ಗಂಟೆ ಮುಂಚಿತವಾಗಿ ಬಂದು ಸದನದ ಕೊನೆಯವರೆಗೂ ನಾನು ಕುಳಿತೇ ಇರುತ್ತೇನೆ. ಈ ಒಂದು ಕನಿಕರದಿಂದ ನನಗೆ ಸಮಯ ಕೊಟ್ಟಿರುವುದಕ್ಕೆ ತಮಗೆ ತುಂಬಾ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಎರಡು ಮೂರು ಸಲಹೆಗಳನ್ನು ಸರ್ಕಾರಕ್ಕೆ ಕೊಡಬೇಕೆಂದಿದ್ದೇನೆ. ಉನ್ನತ ಶಿಕ್ಷಣದಲ್ಲಿ ಆದರಲ್ಲೂ ವೈದ್ಯಕೀಯ ಶಿಕ್ಷಣದ ಬಗ್ಗೆ ಮಾತನಾಡಲು ನನಗೆ ಇರತಕ್ಕ ಅನುಭವ ಹಿನ್ನೆಲೆಯಲ್ಲಿ ಹೇಳುವಂಥಾದ್ದು ಬಹಳ ವಿಷಯಗಳಿದ್ದರೂ ಸಮಯದ ಅಭಾವದಿಂದ ಮಾನ್ಯ ಮಂತ್ರಿಗಳಿಗೆ ಎರಡು ಸಲಹೆಗಳನ್ನು ಕೊಡಬಯಸುತ್ತೇನೆ. ಮೊದನೆಯದು ಬಹಳ ಮುಖ್ಯವಾದುದು ಎಂದರೆ, ಮೆಡಿಕಲ್ ಮತ್ತು ಟೆಕ್ನಿಕಲ್ ಯೂನಿವರ್ಸಿಟಿಗಳನ್ನು ಪ್ರಾರಂಭಮಾಡುವ ಬಗ್ಗೆ ನಮ್ಮ ಸರ್ಕಾರದ ಕಮಿಟ್‌ಮೆಂಟ್ಸ್ ಇದೆ. Particularly in the background of the judgment on the capitation fee and other respects. ಮೆಡಿಕಲ್ ಯೂನಿವರ್ಸಿಟಿಗೆ ಸಂಬಂಧಪಟ್ಟಂತೆ ಒಬ್ಬ ಅಧಿಕಾರಿಯನ್ನು ನೇಮಿಸಿದ್ದೇವೆ. ಅದು ಈ ಅಕಾಡಿಮಿಕ್ ಇಯರ್‌ನಲ್ಲಿ ಜಾರಿಗೆ ಬರುವಂತೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಟೆಕ್ನಿಕಲ್ ಯೂನಿವರ್ಸಿಟಿಯನ್ನು ಬೆಳಗಾಂನಲ್ಲಿ ಪ್ರಾರಂಭ ಮಾಡಬೇಕೆಂದು ಸರ್ಕಾರದಲ್ಲಿ ನಿರ್ಧಾರವಾಗಿತ್ತು. ಅದಕ್ಕೆ ಇಂಬುಕೊಟ್ಟು ಅದನ್ನೂ ಈ ವರ್ಷ ಪ್ರಾರಂಭಮಾಡಬೇಕೆಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಎರಡನೆ ವಿಚಾರ ಎಂದರೆ, ಚೈಲ್ಡ್ ಹೆಲ್ತ್ ಇನ್‌ಸ್ಟಿಟ್ಯೂಟ್ ಬೆಂಗಳೂರಿನಲ್ಲಿ ಸ್ಥಾಪನೆಯಾಗಬೇಕೆಂದು ಬಹಳ ದಿನಗಳಿಂದ ಒತ್ತಾಯ ಇದೆ. ತಮಗೆ ಗೊತ್ತಿರುವಂತೆ ಇಲ್ಲಿ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆದ ನಿಮ್ಹಾನ್ಸ್ ಇದೆ; ಕ್ಯಾನ್ಸರ್ ಇನ್‌ಸ್ಟಿಟ್ಯೂಟ್ ಇದೆ. ಮೆಂಟಲ್ ಡಿಸೀಸಸ್‌ಗೆ ಸಂಬಂಧಪಟ್ಟಂತೆ ಇರತಕ್ಕ ನಿಮ್ಹಾನ್ಸ್ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್, ಟಿ.ಬಿ.ಗೆ ಸಂಬಂಧಪಟ್ಟಂತೆ ಅನೇಕ ಆಸ್ಪತ್ರೆಗಳಿವೆ. ಆದರೆ ಇಲ್ಲಿ ಚೈಲ್ಡ್ ಹೆಲ್ತ್ ಇನ್‌ಸ್ಟಿಟ್ಯೂಟ್ ಇಲ್ಲ. ಶ್ರೀಮತಿ ಇಂದಿರಾಗಾಂಧಿಯವರ ಹೆಸರಿನಲ್ಲಿ ಒಂದು ಚೈಲ್ಡ್ ಹೆಲ್ತ್ ಇನ್‌ಸ್ಟಿಟ್ಯೂಟನ್ನು ಪ್ರಾರಂಭ ಮಾಡಬೇಕೆಂಬ ಉದ್ದೇಶದಿಂದ ಡಾ: ಬೆನಕಪ್ಪ ಎನ್ನುವವರ ಅಧ್ಯಕ್ಷತೆಯಲ್ಲಿ ನಾವು ಒಂದು ಸಮಿತಿಯನ್ನೂ ಮಾಡಿದ್ದೇವೆ. ಸರ್ಕಾರದ ಹತ್ತಿರ ಹಣವಿಲ್ಲವೆಂಬುದು ನಮಗೂ ಗೊತ್ತಿದೆ. ಇದಕ್ಕಾಗಿ ಸಾರ್ವಜನಿಕರು ವಂತಿಗೆಯನ್ನು ಕೊಡುವುದಕ್ಕೂ ತಯಾರಿದ್ದಾರೆ. ಆದ್ದರಿಂದ ಈ ಚೈಲ್ಡ್ ಹೆಲ್ತ್ ಇನ್‌ಸ್ಟಿಟ್ಯೂಟನ್ನು ಈ ವರ್ಷ ಪ್ರಾರಂಭ ಮಾಡಬೇಕು, ಅಂದರೆ ಈ ವರ್ಷವೇ ಕೆಲಸ ಪ್ರಾರಂಭವಾಗಬೇಕು. ಈಗ ವಾಣಿವಿಲಾಸ್ ಆಸ್ಪತ್ರೆ ಏನಿದೆ ಅದನ್ನೇ

ಅಪ್ ಗ್ರೇಡ್ ಮಾಡಿ ಈ ಇನ್‌ಸ್ಟಿಟ್ಯೂಟನ್ನು ಅಲ್ಲಿಯೇ ಪ್ರಾರಂಭ ಮಾಡಬಹುದು. ಹೃದ್ರೋಗಕ್ಕೆ ಸಂಬಂಧಪಟ್ಟ ಖಾಯಿಲೆಗಳಿಗೆ ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಲಜಿ ಎಂದು ಒಂದು ಇಂಡಿಪೆಂಡೆಂಟ್ ಆಸ್ಪತ್ರೆಯನ್ನು ಏನು ಮಾಡಿದ್ದೇವೆ ಅದೇ ರೀತಿ ಚೈಲ್ಡ್ ಹೆಲ್ತ್‌ಗೆ ಸಂಬಂಧಪಟ್ಟಂತೆ ರೀಸರ್ಚ್ ಇನ್‌ಸ್ಟಿಟ್ಯೂಟ್ ಮತ್ತು ಟ್ರೀಟ್‌ಮೆಂಟ್‌ಗೆ ವ್ಯವಸ್ಥೆ ಮಾಡಬೇಕು. ನಮ್ಮಲ್ಲಿರತಕ್ಕ ಇ.ಎನ್.ಟಿ. ಆಸ್ಪತ್ರೆ ಬಹಳ ಉತ್ತಮವಾದುದಾಗಿದೆ. One of the best E.N.T. facilities we have. We are proud of it, Speaker Sir...

ಇದೇ ಮಾದರಿಯಲ್ಲಿ ಇ.ಎನ್.ಟಿ. ಇನ್‌ಸ್ಟಿಟ್ಯೂಟನ್ನು ಈ ವರ್ಷ ಪ್ರಾರಂಭ ಮಾಡಿದರೆ ನಿಮಗೆ ಇದೊಂದು ಕ್ರೆಡಿಟ್. ನಿಮಗಿರತಕ್ಕ 18 ತಿಂಗಳೊಳಗೆ ಚೈಲ್ಡ್ ಹೆಲ್ತ್ ಇನ್‌ಸ್ಟಿಟ್ಯೂಟನ್ನು ಜೊತೆಗೆ ಇ.ಎನ್.ಟಿ. ಇನ್‌ಸ್ಟಿಟ್ಯೂಟನ್ನು ಸ್ಥಾಪನೆ ಮಾಡಿದರೆ ಇದರಿಂದ ನಮ್ಮ ಇಡೀ ರಾಜ್ಯದ ಜನತೆಗೆ ಅನುಕೂಲವಾಗುತ್ತದೆ. ಮುಂಬೈ ಕರ್ನಾಟಕ್ಕೆ, ಹೈದರಾಬಾದ್ ಕರ್ನಾಟಕಕ್ಕೆ ಇಂಥ ಇನ್‌ಸ್ಟಿಟ್ಯೂಷನ್‌ಗಳನ್ನು ಕೊಡಬೇಕೆಂದು ಹೇಳುತ್ತಾರೆ. ಅದನ್ನು ಕೊಡಲೇಬೇಕು. ಈಗ ಉದಾಹರಣೆಗೆ ಅರ್ಬುದ ರೋಗ ಎಂದರೆ ಕ್ಯಾನ್ಸರ್ ಕಾಯಿಲೆಗೆ ಸಂಬಂಧಪಟ್ಟ ಹಾಗೆ ಕಲ್ಬುರ್ಗಿಯಲ್ಲಿ, ಬೆಳಗಾಮ್‌ನಲ್ಲಿ, ದಾವಣಗೆರೆಯಲ್ಲಿ, ಹುಬ್ಬಳ್ಳಿಯಲ್ಲಿ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್ ಫ್ಯಾರಫರ್ನಿಯ ಫೆಸಿಲಿಟೀಸ್ ಏನಿದೆ, ಇನ್‌ಫ್ರಾಸ್ಟ್ರಕ್ಚರ್ ಏನಿದೆ ಅದನ್ನು ಜಾಸ್ತಿ ಮಾಡಲಿಕ್ಕೆ ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕು. ಬಹಳ ಮುಖ್ಯವಾಗಿ ಈ ಎರಡು ಇನ್‌ಸ್ಟಿಟ್ಯೂಷನ್‌ಗಳನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ಇಲ್ಲಿ ನಾಲ್ಕು ಜನ ಶಿಕ್ಷಣ ಸಚಿವರು ಇದ್ದಾರೆ. ನನಗಂತೂ ಶಿಕ್ಷಣ ಇಲಾಖೆಯ ಬಗ್ಗೆ ಬಹಳಷ್ಟು ವಿಚಾರಗಳನ್ನು ಕುರಿತು ಮಾತನಾಡಬೇಕೆನ್ನತಕ್ಕಂಥ ನಿಜವಾದ ಕಾಳಜಿ ಇತ್ತು. ರೂಲ್ 68ರ ಪ್ರಕಾರ ಏಪ್ರಿಲ್-5ನೇ ತಾರೀಖು 4–5 ಜನರಿಗೆ ಮಾತನಾಡಲು ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದೀರಿ. ನಾನು ಆವಾಗ ಮಾತನಾಡುತ್ತೇನೆ. ಮಾನ್ಯ ಕೆ.ಹೆಚ್. ರಂಗನಾಥ್‌ರವರೇ, ಈಗ ಮಾನ್ಯ ಶಿವಾನಂದ ಕೌಜಲಗಿಯವರು ನೇಮಕಾತಿ ಬಗ್ಗೆ ಕೊಟ್ಟಿರತಕ್ಕಂಥ ಅಭಿಪ್ರಾಯ ಅವರ ವೈಯಕ್ತಿಕವಾದ ಅಭಿಪ್ರಾಯ. ಅದು ನಮ್ಮ ಪಕ್ಷದ ಅಭಿಪ್ರಾಯವಲ್ಲ. ಇವತ್ತು ಇಡೀ ಒಂದು ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಸೋಷಿಯಲ್ ಜಸ್ಟೀಸ್ ಅದರ ಹಿನ್ನೆಲೆಯಲ್ಲಿ ಯಾವ ರೀತಿ ನಮ್ಮ ಎಜುಕೇಷನ್ ಫೀಲ್ಡ್‌ನಲ್ಲಿ ಇದನ್ನು ತೆಗೆದುಕೊಳ್ಳಬೇಕೆಂಬುದು ಮುಖ್ಯ. ಈ ದೇಶವನ್ನು ಯಾವ ರೀತಿ ಕಟ್ಟಬೇಕೆಂಬುದನ್ನು ವಿಚಾರ ಮಾಡತಕ್ಕಂಥ ಒಂದು ಇಲಾಖೆ ಅಂದರೆ ವಿದ್ಯಾ ಇಲಾಖೆ. ನಾನು ಒಂದು ವಿಚಾರವನ್ನು ಮೆಚ್ಚುತ್ತೇನೆ. ಮಾನವ ಸಂಪನ್ಮೂಲವನ್ನು ಉಪಯೋಗಿಸಿಕೊಳ್ಳತಕ್ಕಂಥ ಇಲಾಖೆಯೆಂದು ಶಿಕ್ಷಣ ಇಲಾಖೆಗೆ ನಾವು ಹೆಸರನ್ನು ಕೊಟ್ಟಿದ್ದೇವೆ. ಅಂದರೆ ಈ ರಾಷ್ಟ್ರವನ್ನು ಯಾವ ರೀತಿ ಕಟ್ಟಬೇಕು, ಇಲ್ಲಿರತಕ್ಕಂಥ ಮಾನವನ ಕೈಗೆ ಕೆಲಸವನ್ನು ಕೊಟ್ಟು ದುಡಿಮೆಯನ್ನು ಕೊಟ್ಟು ಅದರ ಮೂಲಕವಾಗಿ ರಾಷ್ಟ್ರ ನಿರ್ಮಾಣವನ್ನು ಮಾಡತಕ್ಕಂಥ ಕೆಲಸ ಇದು. ಅಂದರೆ ಸಂಪನ್ಮೂಲ ಇಲಾಖೆ, ಮಾನವ ಸಂಪನ್ಮೂಲ ಇಲಾಖೆ ಎನ್ನತಕ್ಕಂಥ ವಿಚಾರ ಇದು. ನನಗೆ ಗೊತ್ತಿದೆ, ಬಹಳ ಯೋಗ್ಯವಾದ ಜನಗಳ ಕೈಗೆ ನಮ್ಮ ಮುಖ್ಯ ಮಂತ್ರಿಗಳು ಶಿಕ್ಷಣ ಇಲಾಖೆಯನ್ನು ಕೊಟ್ಟಿದ್ದಾರೆ. ಮಾನ್ಯ ಯಾಹ್ಯಾರವರ ಬಗ್ಗೆ ನಮಗೆ ಅಭಿಮಾನವಿದೆ. ಕನ್ನಡದ ಬಗ್ಗೆ ಅಷ್ಟೇ ಅಲ್ಲ, ಪ್ರೌಢ ಶಿಕ್ಷಣದ ಬಗ್ಗೆ, ಹಣಕಾಸಿನ ವ್ಯವಸ್ಥೆಯ ಬಗ್ಗೆ, ರಾಜ್ಯದ ಅಭಿವೃದ್ಧಿ ಯೋಜನೆಯ ಬಗ್ಗೆ ಅವರಿಗಿರತಕ್ಕಂಥ ಕಾಳಜಿಯನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಯುವಕರನ್ನು ತಮ್ಮ ಕೈಯಲ್ಲಿ ಕೊಟ್ಟಿದ್ದಾರೆ. ಇವತ್ತು ಈ ಇಲಾಖೆಯಲ್ಲಿ ರಾಮಕೃಷ್ಣರವರು ಇರಬಹುದು, ಮಾನ್ಯ ಲಮಾಣಿಯವರಿರಬಹುದು, ವಿಶ್ವನಾಥ್‌ರವರು ಇರಬಹುದು ನಮ್ಮ ರಾಣೆಯವರಿರಬಹುದು. ತಾವೆಲ್ಲರೂ ಸಹಿತ ಬಹಳ ಮುಖ್ಯವಾಗಿ ವಿಚಾರ ಮಾಡಬೇಕಾಗಿರತಕ್ಕಂಥದ್ದು ನನ್ನ ದೃಷ್ಟಿಯಲ್ಲಿ, ಶಿಕ್ಷಣ ಇಲಾಖೆಯನ್ನು ಕೇವಲ ಉಪಾಧ್ಯಾಯರುಗಳ ವರ್ಗಾವಣೆ, ಅಲ್ಲಿರತಕ್ಕಂಥ ಜಾತೀಯ

ರಾಜಕೀಯವನ್ನು ಹರಡುತ್ತಿರತಕ್ಕಂಥ ಈ ವಿಶ್ವವಿದ್ಯಾನಿಲಯಗಳು, ಸರಸ್ವತಿಯ ದೇಗುಲಗಳು ಎಂದು ಹೇಳುತ್ತಿರತಕ್ಕಂಥವುಗಳಲ್ಲಿ ಜಾತಿಯ ರಾಜಕಾರಣವನ್ನು ಇವತ್ತು ನೂರ್‌ಮಡಿಯಾಗಿ ಬೆಳೆಸತಕ್ಕಂಥ ಶಿಕ್ಷಣ ಸಂಸ್ಥೆಗಳಿಗೆ ತಾವು ಮಾರ್ಪಾಡನ್ನು ಕೊಡಬೇಕಾದರೆ ಹಾಗೂ ಇದನ್ನು ಮಾನವ ಸಂಪನ್ಮೂಲ ಇಲಾಖೆಯನ್ನಾಗಿ ಮಾಡಬೇಕೆಂದರೆ ಬಹಳ ಮುಖ್ಯವಾಗಿ, ತಳಹದಿಯನ್ನು ಹಾಕತಕ್ಕಂಥದ್ದು. ನಮ್ಮ ಮಕ್ಕಳನ್ನು ಯಾವ ರೀತಿ ಬೆಳೆಸಬೇಕೆನ್ನುವುದರ ಬಗ್ಗೆ ಅವರು ಯಾವ ರೀತಿ ಹೇಳಿದರು ಎಂದರೆ ಮಾತೃಭಾಷೆಯ ಮೂಲಕವಾಗಿ ನಾವು ಶಿಕ್ಷಣ ಮಾಧ್ಯಮವನ್ನು ಜಾರಿ ಮಾಡಬೇಕೆಂದು ಹೇಳುವುದರ ಜೊತೆಗೆ ಬಹಳ ಮುಖ್ಯವಾಗಿ ನಮ್ಮ ರಾಷ್ಟ್ರದ ಅತಿ ದೊಡ್ಡ ಸಂಪತ್ತಾಗಿರುವ ನಮ್ಮ ಹಿರೀಕರು, ನಮಗೆ ಮೌಲ್ಯವನ್ನು ಕೊಟ್ಟು ಹೋಗಿರತಕ್ಕಂಥ ಯೋಗಾಸನವನ್ನು ಪ್ರಾರಂಭ ಮಾಡಬೇಕು. ಇದು ಬಹಳ ಮುಖ್ಯವಾಗಿರತಕ್ಕಂಥದ್ದು. ಕೇವಲ ರಕ್ತದ ಒತ್ತಡ, ಅಥವಾ ಸಕ್ಕರೆ ಖಾಯಿಲೆಗಳನ್ನು, ಹೃದಯರೋಗಗಳನ್ನು ವಾಸಿ ಮಾಡತಕ್ಕಂಥ ಒಂದು ಮದ್ದು ಅಂದರೆ ಯೋಗಾಸನ. ನಾನು ಕಳೆದ ಒಂದೂವರೆ–ಎರಡು ವರ್ಷಗಳಲ್ಲಿ ಇದನ್ನು ಸ್ವತಃ ಅಭ್ಯಾಸ ಮಾಡಲಿಕ್ಕೆ ಪ್ರಯತ್ನ ಮಾಡಿಕೊಂಡಿದ್ದೇನೆ. ಇದು ನಿಜವಾಗಿಯೂ ಸಹಿತ ನಮ್ಮ ನಿತ್ಯದ ಜೀವನದಲ್ಲಿ ಹೊಸ ದಿಕ್ಕನ್ನು ತೋರಿಸತಕ್ಕಂಥದ್ದಾಗಿದೆ. ಯೋಗಕ್ಕೆ ಭಾಷೆ ಇಲ್ಲವೆಂದು ತಿಳಿದಿದ್ದೇನೆ. ಇದು ಮೂಗರ ಭಾಷೆ. ಅದನ್ನು ಅಭ್ಯಾಸದಿಂದ ಮಾತ್ರ ಅನುಭವಿಸಲಿಕ್ಕೆ ಸಾಧ್ಯವೇ ಹೊರತು ಬೇರೆ ಲೋಕಕ್ಕೆ ಹೋಗತಕ್ಕಂಥ ಒಂದು ಸಾಧ್ಯತೆ ಇದೆ. ಆ ಕಾರಣದಿಂದಾಗಿ ಮಾನ್ಯ ವೀರಪ್ಪ ಮೊಯಲಿಯವರು ಒಂದು ಬಹಳ ದೊಡ್ಡ ಕೆಲಸವನ್ನು ಮಾಡಿದ್ದಾರೆ. ಈ ಯೋಗದ ಬಗ್ಗೆ ಸ್ವಲ್ಪ ಹೆಚ್ಚಿನ ಮಹತ್ವವನ್ನು ಕೊಟ್ಟು, ಪ್ರಾಥಮಿಕ ಶಾಲೆಯಲ್ಲಿ ಇದನ್ನು ಕಲಿಸಲು ಆಗದಿದ್ದರೆ ಮಾಧ್ಯಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ, ಕಾಲೇಜಿನಲ್ಲಿ, ನಮ್ಮ ಐ.ಎ.ಎಸ್. ಐ.ಪಿ.ಎಸ್. ಅಧಿಕಾರಿಗಳಿಗೆ, ನಮಗೆಲ್ಲರಿಗೂ ಸಹಿತ ಇದು ಬಹಳ ಅಗತ್ಯವಾಗಿರತಕ್ಕಂಥದ್ದು. ರಾಜ್ಯದಲ್ಲಿ ಇದನ್ನು ಎಲ್ಲೂ ಕೂಡ ಜಾರಿ ಮಾಡಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ಯೋಗ ಡೈರೆಕ್ಟರೇಟನ್ನು ಸ್ಥಾಪನೆ ಮಾಡಬೇಕೆಂದು ನಾನು ಒತ್ತಾಯಮಾಡಿ, ನನಗೆ ಎರಡು ಮಾತುಗಳನ್ನು ಹೇಳಲಿಕ್ಕ ಅವಕಾಶ ಕೊಟ್ಟಿದಕ್ಕಾಗಿ ನಿಮ್ಮನ್ನು ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು:– ವಿಧಾನ ಸಭೆಯ ಸದಸ್ಯರಾದ ಡಾ: ಡಿ.ಬಿ. ಗಂಗಪ್ಪರವರನ್ನು ಕುಷ್ಟಗಿ ಅಂಗನವಾಡಿ ಕಾರ್ಯಕರ್ತೆಯ ಮೇಲೆ ನಡೆಯಿಸಲಾದ ಅತ್ಯಾಚಾರದ ಪ್ರಕರಣದ ಸತ್ಯಾಸತ್ಯತೆಯ ಪರಿಶೀಲನೆಗಾಗಿ ರಚಿಸಲಾಗಿರುವ ಜಂಟಿ ಸದನದ ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

ಬೇಡಿಕೆ 13–54–16–15–14–12–11 ಮತ್ತು 30ರ ಮೇಲಿನ ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸಿ, ಸೋಮವಾರ ಬೆಳಿಗ್ಗೆ 10–00 ಗಂಟೆಗೆ ಸದನ ಮತ್ತೆ ಸೇರುತ್ತದೆ.

(ಸದನವು 3–35 ಗಂಟೆಗೆ ಮುಕ್ತಾಯವಾಗಿ ಮತ್ತೆ ಸೋಮವಾರ ದಿನಾಂಕ 22–3–1993 ಬೆಳಗ್ಗೆ 10–00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ

ಕರ್ನಾಟಕ ವಿಧಾನಸಭೆ

ಸೋಮವಾರ 22ನೇ ಮಾರ್ಚ್ 1993

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10-20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: ಶ್ರೀ ವಿ.ಎಸ್. ಕೌಜಲಗಿ ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಬಳ್ಳಾರಿ ತಾಲ್ಲೂಕಿನಲ್ಲಿ ಹಾನಿಯಾಗಿರುವ ರಸ್ತೆಗಳ ದುರಸ್ತಿ

2197: ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ತಾಲ್ಲೂಕಿನಲ್ಲಿ ಇತ್ತೀಚೆಗೆ ಬಿರುಗಾಳಿ ದಾಳಿಗೊಳಗಾಗಿ ಹಾಳಾದ ರಸ್ತೆಗಳ ದುರಸ್ತಿ ಬಗ್ಗೆ ಲೋಕೋಪಯೋಗಿ ಇಲಾಖೆಯು ಯಾವುದಾದರೂ ಕಾರ್ಯಕ್ರಮವನ್ನು ರೂಪಿಸಲು ಯೋಚಿಸಿದೆಯೇ;

ಆ) ಆಂಧ್ರಪ್ರದೇಶಕ್ಕೆ ಸೇರುವ ರಸ್ತೆಗಳ ಸಂಖ್ಯೆ ಎಷ್ಟು ಮತ್ತು ಈ ರಸ್ತೆಗಳನ್ನು ದುರಸ್ತಿಪಡಿಸಲು ಯಾವುದಾದರೂ ಯೋಜನೆ ಇದೆಯೇ;

ಇ) ಹೊಸ ಹಗರಿ ಸೇತುವೆಯನ್ನು ನಿರ್ಮಾಣ ಮಾಡುವ ಬಗ್ಗೆ ಪ್ರಸಕ್ತ ಪರಿಸ್ಥಿತಿ;

ಈ) ಇದು ಯಾವಾಗ ಮುಗಿಸಲು ಉದ್ದೇಶಿಸಲಾಗಿದೆ ?

ಶ್ರೀ ಕೆ.ಹೆಚ್ ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಒಂದು ಕಾರ್ಯಕ್ರಮದ ಪಟ್ಟಿಯನ್ನು ಬಳ್ಳಾರಿ ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗಿದೆ.

ಆ) ಬಳ್ಳಾರಿ ತಾಲ್ಲೂಕಿನಲ್ಲಿ ಆಂಧ್ರಪ್ರದೇಶದ ಗಡಿಗೆ 9 ರಸ್ತೆಗಳು ಸೇರುತ್ತವೆ. ತಾಳೂರಿನಿಂದ ಆಂಧ್ರ ಗಡಿ ಸೇರುವ ಒಂದು ರಸ್ತೆಯ ಅಭಿವೃದ್ಧಿಯನ್ನು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿ ತೆಗೆದುಕೊಳ್ಳಲಾಗಿದೆ. ಮತ್ತು ಕಾಮಗಾರಿಯು ಪ್ರಗತಿಯಲ್ಲಿದೆ. ಉಳಿದ 8 ರಸ್ತೆಗಳನ್ನು ವಾರ್ಷಿಕ ನಿರ್ವಹಣಾ ಮತ್ತು ದುರಸ್ತಿ ಅನುದಾನದಲ್ಲಿ ಪ್ರತಿ ವರ್ಷವೂ ನಿರ್ವಹಿಸಲಾಗುವುದು.

ಇ) ಸೇತುವೆಯ ಎಲ್ಲಾ 23 ಕಂಬಗಳ ನಿರ್ಮಾಣವು ಮುಗಿದಿದೆ. 24 ಸ್ಪಾನ್‌ಗಳ ಪೈಕಿ 17 ಸ್ಪಾನ್‌ಗಳ ತೊಲೆಗಳು ನಿರ್ಮಾಣವಾಗಿದೆ. ಒಂದು ಭಾಗದ ಅಬಟ್‌ಮೆಂಟ್‌ನ ನಿರ್ಮಾಣವು ಪ್ರಗತಿಯಲ್ಲಿದೆ. ಮತ್ತೊಂದು ಭಾಗದ ಅಬಟ್‌ಮೆಂಟ್‌ನ ಕಾಮಗಾರಿಯು ಭೂಸ್ವಾಧೀನದ ತೊಂದರೆಯಿಂದ ನಿಧಾನವಾಗಿದೆ. ಸೇತುವೆಗಳ ಕೂಡು ರಸ್ತೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ.

ಈ) ಕಾಮಗಾರಿಗಳು 1994-95ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಅಲ್ಲಂ ವೀರಭದ್ರಪ್ಪ:– ಮಾನ್ಯ ಅಧ್ಯಕ್ಷರಿಗೆ, ಮಾನ್ಯ ಮಂತ್ರಿಗಳಿಗೆ ಹೇಳುವುದೇನೆಂದರೆ, ನಮ್ಮ ಭಾಗದಲ್ಲಿ, ನವೆಂಬರ್ ತಿಂಗಳ ಪ್ರವಾಹದಲ್ಲಿ ಬಹಳಷ್ಟು ರಸ್ತೆಗಳು ಕೆಟ್ಟು ಹೋಗಿವೆ.

ಜಿಲ್ಲಾಧಿಕಾರಿಗಳಿಗೆ ವರದಿ ಕಳುಹಿಸಿದ್ದಾರೆಂದು ಹೇಳಿದ್ದಾರೆ. ತಾವು ದಯವಿಟ್ಟು ಎಕ್ಸ್‌ಟ್ರಾ **ಅಲೋಕೇಷನ್** ಮಾಡಬೇಕೆಂದು ಹೇಳುತ್ತಾ, ಫ್ಲಡ್ ಪ್ರೊಟೆಕ್ಷನ್ ಫಂಡ್‌ನಲ್ಲಿ ಈ ವರ್ಷದಲ್ಲಿ ಬಳ್ಳಾರಿ **ತಾಲ್ಲೂಕಿ**ಗೆ ಹೆಚ್ಚು ಹಣವನ್ನು ಕೊಡಬೇಕೆಂದು ಹೇಳುತ್ತೇನೆ. ಮತ್ತೆ ಬಳ್ಳಾರಿಯಿಂದ ಆಂಧ್ರಪ್ರದೇಶಕ್ಕೆ **ಬಹಳಷ್ಟು** ರೋಡುಗಳು ಹೋಗಿವೆ. ಅದರಲ್ಲೂ ನನ್ನ ತಾಲ್ಲೂಕಿನಿಂದ ಬಹಳಷ್ಟು ರೋಡುಗಳು **ಹೋಗು**ತ್ತಿವೆ. ಸುಮಾರು, ನನ್ನ ತಾಲ್ಲೂಕಿನಿಂದ 4-5 ಜಿಲ್ಲೆಗಳಲ್ಲಿ ಆಂಧ್ರಪ್ರದೇಶಕ್ಕೆ ಹೋಗಿವೆ. ಇದರಲ್ಲಿ **ಒಂದನ್ನು** ಮಾತ್ರ ತೆಗೆದುಕೊಂಡಿದ್ದಾರೆ. ಇನ್ನುಳಿದ 8 ರಸ್ತೆಗಳನ್ನೂ ತೆಗೆದುಕೊಂಡು, ದುರಸ್ತಿ **ಮಾಡಬೇ**ಕೆಂದು ಹೇಳುತ್ತೇನೆ. ಈಗಿರತಕ್ಕ ಹಗರಿ ಸೇತುವೆ ಬಹಳ ಕೆಟ್ಟುಹೋಗುವ ಪರಿಸ್ಥಿತಿಯಲ್ಲಿದ್ದು **ಬೀಳತಕ್ಕ** ಪರಿಸ್ಥಿತಿಯಲ್ಲಿದೆ. ಇದನ್ನು ಹೊಸದು ಮಾಡುತ್ತಿದ್ದೀರಿ. ಕೆಲವು ಸ್ಪ್ಯಾನ್‌ಗಳು ಇನ್ನೂ ಆಗಿಲ್ಲ. **ಇದನ್ನು** ಹೇಗಾದರೂ ಮಾಡಿ, ಮುಂದಿನ ವರ್ಷದೊಳಗಡೆ ಪೂರ್ತಿಮಾಡಬೇಕೆಂದು **ಕೇಳಿಕೊ**ಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್:– ಸ್ವಾಮಿ, ಮಾನ್ಯ ಸದಸ್ಯರ ಕೊನೆಯ ಪ್ರಶ್ನೆ, ಸೇತುವೆ ಬಗ್ಗೆ ಪ್ರಸ್ತಾಪ **ಮಾಡಿ**ದ್ದಾರೆ. ಈಗಾಗಲೇ ಬಹಳಷ್ಟು ಕೆಲಸ ನಡೆದಿದೆ. ಇದು ಸುಮಾರು 210 ಲಕ್ಷದ ಕೆಲಸ. ಭೂಮಿ **ಸ್ವಲ್ಪ ಅಕ್ವೈರ್** ಮಾಡಬೇಕಾಗಿತ್ತು. ಅದೂ ಕೂಡ ಆಗಿದೆ. ಮತ್ತೆ ಒಂದು ಭಾಗದಲ್ಲಿ ಡಿಸೈನ್ ಕೂಡ **ಬದಲಾವಣೆ** ಮಾಡಬೇಕಾಗಿತ್ತು, ಅದನ್ನೂ ಮಾಡಿ, ಈಗ ಮುಗಿದಿದೆ, ಹೀಗಾಗಿ, ಆ ಕೆಲಸವನ್ನು **ಅತಿ ಶೀಘ್ರ**ವಾಗಿ ಪೂರೈಸುತ್ತೇವೆ. ಮತ್ತು ವಾಹನ ಸಂಚಾರಕ್ಕೆ ಅನುಕೂಲ ಮಾಡತಕ್ಕ ವ್ಯವಸ್ಥೆ **ಮಾಡಲಾ**ಗುತ್ತಿದೆ. ಆಮೇಲೆ, ಮಳೆ ಹಾನಿಯಲ್ಲಿ ಏನು ತೊಂದರೆಯಾಗಿದೆ ಎಂದರೆ, ಬಳ್ಳಾರಿ **ಜಿಲ್ಲೆಯಲ್ಲಿ** ಸುಮಾರು 13,34,12,000 ಕಾಮಗಾರಿಗಳಿಗೆ ಅಂದಾಜು ಮಾಡಲಾಗಿದೆ. ಅಷ್ಟು ದೊಡ್ಡ **ಪ್ರಮಾಣ**ದಲ್ಲಿ ಹಾನಿಯಾಗಿದ್ದು, ಕೇವಲ 21,55,000 ಮತ್ತು 12,45,000 ರೂಪಾಯಿಗಳ **ಕೆಲಸ**ಗಳು ತ್ವರಿತಗತಿಯಲ್ಲಿ ನಡೆಯುತ್ತಿವೆ. ಹಾಗೂ ಇನ್ನೂ ಮಾಡಬೇಕಾಗಿದೆ, ಅದನ್ನು ಮಾಡುವುದಕ್ಕೆ **ಹಣ** ಬಂದಮೇಲೆ,ಮಾಡಲಾಗುತ್ತದೆ. ಮತ್ತೆ 9 ರೋಡುಗಳೇನಿವೆ, ಆಂಧ್ರಪ್ರದೇಶಕ್ಕೆ ಸೇರತಕ್ಕಂಥ ರಸ್ತೆಗಳು, ಅದರಲ್ಲಿ ಒಂದು ರಸ್ತೆಯನ್ನು, inter-state importance and economic importance ಆ ಹಣದ ಅಡಿಯಲ್ಲಿ ತೆಗೆದುಕೊಂಡಿದ್ದೇವೆ. ಸುಮಾರು 60 ಲಕ್ಷದ ಕಾಮಗಾರಿ, 20-22 ಕಿಲೋಮೀಟರ್ ಉದ್ದದ ರಸ್ತೆ ಇದೆ. ಇದನ್ನು ವ್ಯವಸ್ಥೆ ಮಾಡಿ, ಮುಗಿಸತಕ್ಕ ಕೆಲಸ ನಡೆಯುತ್ತಾ ಇದೆ. ಇನ್ನು ಎಂಟು ರಸ್ತೆಗಳನ್ನು, ನಮ್ಮ ಬಜೆಟ್ ಏನಿದೆ, ಅದರಲ್ಲಿ repairs and maintenance ನಿಂದ ಭರಿಸತಕ್ಕ ಹಣದಲ್ಲಿ ಆ ಕೆಲಸ ನಡೆಯುತ್ತದೆ. ಆದ್ದರಿಂದ ಮಾನ್ಯಸದಸ್ಯರ **ಅಭಿಪ್ರಾ**ಯ ಏನಿದೆ, ಇದನ್ನು ಶೀಘ್ರವಾಗಿ ಮಾಡಬೇಕೆನ್ನುವಂಥದ್ದು, ಇದು ಸರ್ಕಾರದ ಗಮನದಲ್ಲಿದೆ, **ಕೆಲಸ** ನಡೆಯುತ್ತಾ ಇದೆ.

ಶ್ರೀ ಅಲ್ಲಂ ವೀರಭದ್ರಪ್ಪ:– ಅತಿ ಮುಖ್ಯವಾದ ಎರಡು ರೋಡುಗಳು ಎಂದರೆ, ಮಂತ್ರಾಲಯದಿಂದ ಒಂದು ಶ್ರೀಶೈಲಕ್ಕೆ ಹೋಗುತ್ತದೆ. ಉತ್ತರ ಕರ್ನಾಟಕದ, ಪುಣ್ಯಕ್ಷೇತ್ರಗಳಿಗೆ ಬಹಳಷ್ಟು ಜನ ಹೋಗುತ್ತಾರೆ. ನಮ್ಮ ಭಾಗದಿಂದ, ಆಂಧ್ರ ಭಾಗಕ್ಕೆ ಹೋಗತಕ್ಕ ಈ ರೋಡುಗಳು ಬಹಳ ಕೆಟ್ಟು ಹೋಗಿವೆ. ಆದರೆ, ಆಂಧ್ರ ಬಾರ್ಡರಿನಲ್ಲಿ ರೋಡುಗಳು ಬಹಳ ಚೆನ್ನಾಗಿವೆ. ಬಹಳಷ್ಟು ಜನ ಕರ್ನಾಟಕ ಸ್ಟೇಟ್‌ಗೆ ಬಂದ ಕೂಡಲೇ ಇವು ಕರ್ನಾಟಕ ರೋಡುಗಳು ಎಂಬ ಅಭಿಪ್ರಾಯ ಬಂದಿದೆ. ಇದನ್ನು ಹೇಗಾದರೂ ಮಾಡಿ ಸರಿಪಡಿಸಬೇಕು.

ಶ್ರೀ ಕೆ. ಹೆಚ್. ರಂಗನಾಥ್:– ಮೊದಲು ವ್ಯಾಪಾರ, ಉದ್ದಿಮೆ ಈ ಭಾಗಗಳ ಸಂಚಾರಕ್ಕೆ ಆದ್ಯತೆ **ಕೊಟ್ಟು**, ತದನಂತರ, ಪುಣ್ಯ ಕ್ಷೇತ್ರಗಳಿಗೆ ಆದ್ಯತೆ ಕೊಡಬೇಕು.

ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿರುವ ಮೊಕದ್ದಮೆಗಳ ಸಂಖ್ಯೆ

2252: ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಹೈಕೋರ್ಟ್ ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೆ ಉಳಿದಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು;

ಆ) ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿರುವ ಮೊಕದ್ದಮೆಗಳನ್ನು ಬಗೆಹರಿಸುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಈ ವಿಳಂಬವನ್ನು ನೀಗಿಸಲು ಸರ್ಕರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–

ಅ) 31ನೇ ಡಿಸೆಂಬರ್ 1992ರಲ್ಲಿದ್ದಂತೆ

	ಸಿವಿಲ್	ಕ್ರಿಮಿನಲ್
ಉಚ್ಚ ನ್ಯಾಯಾಲಯ	1,12,637	2,527
ಜಿಲ್ಲಾ ನ್ಯಾಯಾಲಯಗಳು (ನಗರ ಸಿವಿಲ್ ನ್ಯಾಯಾಲಯಗಳನ್ನು ಒಳಗೊಂಡಂತೆ)	1,43,203	19,675

ಆ) ಹೌದು.

ಇ) ನ್ಯಾಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಹಾಗೂ ನ್ಯಾಯಾಧೀಶರಿಗೆ ಮೊಕದ್ದಮೆಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡಲು ಅವಶ್ಯವಿರುವ ಸವಲತ್ತುಗಳನ್ನು ನೀಡುವ ಬಗ್ಗೆಯೂ ಪರಿಶೀಲಿಸಲಾಗುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ನ್ಯಾಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಮತ್ತು ಅವರಿಗೆ ಅವಶ್ಯಕವಿರುವ ಸವಲತ್ತುಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆ ಸವಲತ್ತುಗಳು ಏನೇನು ? ಮತ್ತೆ ಎರಡನೆಯ ಉಪ ಪ್ರಶ್ನೆ, ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬುತ್ತೀರಿ ? ಎಷ್ಟು ಹುದ್ದೆಗಳು ಖಾಲಿ ಇವೆ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಹೈಕೋರ್ಟಿನಲ್ಲಿ 6 ಖಾಲಿ ಹುದ್ದೆಗಳು ಇವೆ. ಅದನ್ನು ಸಧ್ಯದಲ್ಲೇ ಭರ್ತಿ ಮಾಡಲಾಗುತ್ತದೆ. ಜಿಲ್ಲಾ ನ್ಯಾಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಮತ್ತೆ ಅದಕ್ಕಿಂತ ಕೆಳಗಿನ ಮುನ್ಸೀಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಿಗೆ ಸಧ್ಯದಲ್ಲೇ ಇಂಟರ್‌ವ್ಯೂ ಮುಗಿದಿದ್ದು 39 ಮುನ್ಸೀಫ್ ಮ್ಯಾಜಿಸ್ಟ್ರೇಟ್ ನೇಮಕವಾಗುತ್ತದೆ. ಮುಂದೆ ಎರಡು ಮೂರು ತಿಂಗಳಲ್ಲಿ ಪುನಃ ಖಾಲಿ ಆಗಬಹುದು. ಆಗ ಖಾಲಿ ಆಗುವ ಜಾಗಗಳಿಗೆಲ್ಲಾ ಭರ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ; ನಾನು ಕೇಳಿದ್ದು ಉಪಪ್ರಶ್ನೆ ನ್ಯಾಯಾಧೀಶರಿಗೆ ಏನೇನು ಸವಲತ್ತುಗಳನ್ನು ಕೊಡುತ್ತಿದ್ದೀರಿ ಎಂದು; ಅದಕ್ಕೆ ಉತ್ತರ ಬರಲಿಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಜಿಲ್ಲಾ ನ್ಯಾಯಾಧೀಶರುಗಳಿಗೆ ಒಂದು

ವಾಹನ ಕೊಟ್ಟಿದ್ದೇವೆ. ಈಗ ಹೊಸದಾಗಿ ವಿಶೇಷವಾಗಿ ಲೇಬರ್ ಕೋರ್ಟಿನಲ್ಲಿ ಕೆಲಸ ಮಾಡತಕ್ಕಂಥ ಜಿಲ್ಲಾ ನ್ಯಾಯಧೀಶರುಗಳು ಅವರು 2–3 ಜಿಲ್ಲೆಯ ಕೆಲಸ ಮಾಡಬೇಕಾಗುತ್ತದೆ. ಅವರಿಗೆ ವಾಹನ ಸೌಲಭ್ಯ ಇದುವರೆಗೆ ಇರಲಿಲ್ಲ. ಅದನ್ನು ಕೊಡಬೇಕೆಂದು ನಾವು ನಿರ್ಣಯ ಮಾಡಿದ್ದೇವೆ. ಮತ್ತು ನ್ಯಾಯಾಧೀಶರುಗಳಿಗೆಲ್ಲಾ ವಸತಿ ಗೃಹಗಳನ್ನು, ಅಂದರೆ ವಾಸದ ಮನೆಗಳನ್ನು ಕಟ್ಟಲು ಯೋಜನೆ ಹಾಕಿಕೊಂಡು ಮೊನ್ನೆ ನಮ್ಮ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಅದಕ್ಕೆ ಅಡಿಗಲ್ಲು ಹಾಕಿದ್ದಾರೆ. ಬೆಂಗಳೂರಿನಲ್ಲಿ; ಅದೇ ರೀತಿಯಲ್ಲಿ ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ, ನ್ಯಾಯಾಧೀಶರುಗಳಿಗೆ ಎಲ್ಲಿಲ್ಲಿ ನ್ಯಾಯಾಧೀಶರುಗಳಿಗೆ ವಾಸಕ್ಕೆ ಮನೆ ಇಲ್ಲವೋ, ಅವರಿಗೆಲ್ಲಾ ಕೊಡುತ್ತಿದ್ದೇವೆ. ಮತ್ತೆ ಅವರ ಲೈಬ್ರರಿ ಉತ್ತಮಪಡಿಸಿಕೊಳ್ಳಲು ಹಣದ ಸಹಾಯವನ್ನು ಕೊಡುತ್ತಿದ್ದೇವೆ. ಅದನ್ನು ಸುಪ್ರೀಂ ಕೋರ್ಟ್‌ನವರೂ ಕೂಡ ಸೂಚನೆ ಮಾಡಿದ್ದಾರೆ. ಆ ಬಗ್ಗೆ ನಾವು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಅಧ್ಯಕ್ಷರೇ, ನ್ಯಾಯಾಲಯಗಳ ಕಾರ್ಯವೈಖರಿ ಬಗ್ಗೆ ನಾವು ಇಲ್ಲಿ ಚರ್ಚೆಮಾಡುವುದಕ್ಕೆ ಆಗದಿದ್ದರೂ ಸಹ ನಮಗೆಲ್ಲಾರಿಗೂ ಗೊತ್ತಿರುವ ಹಾಗೆ ವಾಸ್ತಾವಾಂಶದಲ್ಲಿ ಸಿವಿಲ್ ಲಿಟಿಗೇಷನ್ನ ರೆಂಟ್ ಕಂಟ್ರೋಲ್‌ಗೆ ಸಂಬಂಧಪಟ್ಟ ವಿಚಾರಗಳು ವರ್ಷಾನುಗಟ್ಟಲೆ ಮುಂದೆ ಹೋಗುತ್ತಿರತಕ್ಕದ್ದು ಸಾಮಾನ್ಯ ಜನಗಳಿಗೆ ಬಹಳ ತೊಂದರೆಯಾಗಿರತಕ್ಕಂಥದ್ದು ನಮುಗೆಲ್ಲರಿಗೂ ಅನುಭವಕ್ಕೆ ಬಂದಿರುವ ಮಾತು. ನಾನು ಸರ್ಕಾರಕ್ಕೆ ಎರಡು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಅವುಗಳನ್ನು ಪರಿಶೀಲನೆ ಮಾಡಬೇಕು. ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಹೆಚ್ ಆರ್ ಸಿ. ಕೇಸ್‌ಗಳು ಏನಿವೆ ಇವುಗಳಿಗೆ ಸ್ಪೆಷಲ್ ಕೋರ್ಟ್‌ಗಳನ್ನು ಮಾಡಿ ಇದನ್ನು ಬೇಗ ಬಗೆಹರಿಸುವುದಕ್ಕೆ ಸಾಧ್ಯವೇ ಎಂಬುದು ಒಂದು. ಅದಕ್ಕೆ ಸಮಯದ ಮಿತಿ ಹಾಕಬೇಕೆಂಬುದು ನನ್ನ ಅಭಿಪ್ರಾಯ. ಇದರ ಬಗ್ಗೆ ತಾವು ಕೋರ್ಟಿಗೆ ನಿರ್ದೇಶನ ಕೊಡಲಿಕ್ಕೆ ನಮ್ಮ ಶಾಸಕಾಂಗಕ್ಕೆ ಅಧಿಕಾರ ಇಲ್ಲದೆ ಇರಬಹುದು; ಆದರೆ ಸಂಬಂಧಪಟ್ಟ ನ್ಯಾಯಮೂರ್ತಿಗಳ ಜೊತೆಯಲ್ಲಿ ಮಾತನಾಡಿ ಇದನ್ನು ಅವರ ಗಮನಕ್ಕೆ ತಂದು ಒಂದು ಟೈಮ್ ಲಿಮಿಟ್ ಅನ್ನು ಹಾಕಿಸುವುದಕ್ಕೆ ಸಾಧ್ಯವೇ ಎಂಬುದರ ಬಗ್ಗೆ ತಾವು ದಯವಿಟ್ಟು ಉತ್ತರಿಸಬೇಕು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಸದಸ್ಯರ ಕಳಕಳಿ ಅರ್ಥವಾಗುತ್ತದೆ. ಇದು ಇಡೀ ರಾಷ್ಟ್ರದ ಸಮಸ್ಯೆ ಆಗಿದೆ, ಇದನ್ನು ಎಲ್ಲಾ ರಾಜ್ಯದ ಕಾನೂನು ಮಂತ್ರಿಗಳು ಮತ್ತು ಕಾನೂನು ಕಾರ್ಯದರ್ಶಿಗಳು ಸೇರಿ ಅನೇಕ ಸಭೆ ಸಮ್ಮೇಳನಗಳನ್ನು ಮಾಡಿ ಕೋರ್ಟ್‌ಗಳಲ್ಲಿ ಆಗತಕ್ಕಂಥ ನಿಧಾನ ಮತ್ತು ಇದರಿಂದ ಜನಗಳಿಗೆ ಆಗತಕ್ಕಂಥ ತೊಂದರೆ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಿದ್ದಾರೆ. ಮೊನ್ನೆ ತಾನೆ ಪಾಂಡಿಚೇರಿಯಲ್ಲಿ ನಡೆದ ಸಮ್ಮೇಳನದಲ್ಲಿ ಬಹಳ ಮುಖ್ಯವಾಗಿ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಯಿತು. ಮಾನ್ಯ ವಾಟಾಳ್‌ನಾಗರಾಜ್‌ರವರು ಕ್ಷಮಿಸಬೇಕು. ಅದು ಇಂಗ್ಲೀಷ್‌ನಲ್ಲಿದೆ ಅದನ್ನು ನಾನು ಓದುತ್ತೇನೆ. ಅದನ್ನು ನೋಡಿದರೆ ಎಷ್ಟು ಕಾಳಜಿ ಆತಂಕ ಸರ್ಕಾರಕ್ಕೆ ಜನಗಳ ಪರವಾಗಿ ಇದೆ ಎನ್ನುವುದು ಗೊತ್ತಾಗುತ್ತದೆ. ಅಂದರೆ ಜನಗಳಿಗೆ ಇರತಕ್ಕ ಆತಂಕಕ್ಕೆ ಸರ್ಕಾರ ಪ್ರತಿಕ್ರಿಯೆ ತೋರಿಸಿದೆ.

ನಮ್ಮ ಇರತಕ್ಕಂಥ ಸಮಸ್ಯಗಳು:– In ordinate concentration of work in the hands of some members of the bar. Long arguments and prolific judgments. Lack of Priority for disposal of Old cases. Granting of unnecessary adjournment; inordinate delay in the supply of certified copies of judgements and orders; printing of paper books in criminal matters; claassification,

grouping and listing of cases; lawyers not appearing in courts due to strikes etc., indiscriminate closure of courts –

ಇವು ಇದಕ್ಕೆ ಕೆಲವು ಕಾರಣಗಳಾಗಿವೆ. ಇನ್ನೂ ಇದಲ್ಲದೆ ಬೇರೆ ಕಾರಣಗಳಿವೆ. ಪ್ರತಿ ವರ್ಷ ಎಷ್ಟು ಕೇಸುಗಳು ದಾಖಲಾಗುತ್ತವೋ ಅದಕ್ಕಿಂಥ ಕಡಿಮೆ ಕೇಸ್‌ಗಳು ಡಿಸ್ಪೋಸಲ್ ಆಗುತ್ತವೆ. ಈ ಸಂಖ್ಯೆ ಪ್ರತಿ ವರ್ಷ ಬೆಳೆಯುತ್ತಲೇ ಇದೆ. ಇದು ತುಂಬ ಆತಂಕ ಬರಿಸತಕ್ಕಂಥ ಪರಿಸ್ಥಿತಿ. ಇದರ ಬಗ್ಗೆ ಸರ್ಕಾರ ತೀವ್ರ ಕ್ರಮ ತೆಗೆದುಕೊಳ್ಳುತ್ತದೆ. ಹೆಚ್.ಆರ್.ಸಿ. ಕೇಸ್‌ಗಳನ್ನು ಡಿಸ್ಪೋಸಲ್ ಮಾಡುವುದಕ್ಕೆ ಸ್ಪೆಷಲ್ ಕೋರ್ಟ್ಸ್ ಮಾಡುತ್ತೀರಾ ಎಂದು ಕೇಳಿದ್ದೀರಿ. ಆ ಸಲಹೆಯನ್ನು ಬಹಳ ತೀವ್ರವಾಗಿ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀಮತಿ ದಮಯಂತಿ ಬೋರೇಗೌಡ:– ಹೈಕೋರ್ಟ್‌ನಲ್ಲಿ 6ನ್ಯಾಯಾಧೀಶರುಗಳ ಪೋಸ್ಟ್ ಖಾಲಿ ಇವೆ. ಎಷ್ಟೋ ಸ್ಟೇಟ್‌ಗಳಲ್ಲಿ ಮಹಿಳಾ ನ್ಯಾಯಾಧೀಶರನ್ನು ಅಪಾಯಿಂಟ್ ಮಾಡಿದ್ದಾರೆ. ತಾವು ಏತಕ್ಕೆ ಒಬ್ಬರಿಗೂ ಕೊಡುತ್ತಿಲ್ಲ? ತಾವು ಈಗಲಾದರೂ ಅವಕಾಶ ಕೊಡುತ್ತೀರಾ?

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಸದಸ್ಯಣಿಯವರಾದ ಶ್ರೀಮತಿ ದಮಯಂತಿ ಬೋರೇಗೌಡರು ಕೊಟ್ಟಿರತಕ್ಕಂಥ ಸಲಹೆ ನನಗೆ ಬಹಳ ಪ್ರಿಯವಾಗಿದೆ. ಅದನ್ನು ಕೊಡಬೇಕಾದರೆ ಕೆಲವು ನಿಯಮಗಳಿವೆ. ಹೈಕೋರ್ಟ್‌ಗೆ ಮಹಿಳಾ ನ್ಯಾಯಧೀಶರು ಆಗಲು ಕ್ವಾಲಿಫಿಕೇಷನ್, ಎಕ್ಸಪೀರಿಯನ್ಸ್ ಇರುವವರು ಸಲಹೆ ಮಾಡಿದರೆ ಅದನ್ನು ತೀವ್ರವಾಗಿ ಪರಿಶೀಲನೆ ಮಾಡುತ್ತೇವೆ. ಒಬ್ಬ ಮಹಿಳಾ ನ್ಯಾಯಾಧೀಶರು ಆಗಬೇಕಾದದ್ದು ತಾತ್ವಿಕವಾಗಿ ಒಳ್ಳೆಯ ಅಭಿಪ್ರಾಯ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೈಕೋರ್ಟ್‌ನಲ್ಲಿ ಬಾಕಿ ಇರುವ ಸಿವಿಲ್ ಪ್ರಕರಣ 1,12,637, ಕ್ರಿಮಿನಲ್ 2527, ಡಿಸ್ಟ್ರಿಕ್ಟ ಕೋರ್ಟ್‌ಗಳಲ್ಲಿ ಸಿವಿಲ್ ಕೇಸಸ್ 1,43,203, ಕ್ರಿಮಿನಲ್ 19,675 ಕೇಸುಗಳು ಪೆಂಡಿಂಗ್ ಇದೆ ಎಂದು ಹೇಳಿದ್ದಾರೆ. ಮುನ್ಸೀಫ್ ಕೋರ್ಟ್ ಮತ್ತು ಸಿವಿಲ್ ಕೋರ್ಟ್ ಲೆವೆಲ್‌ನಲ್ಲಿ ಇನ್ನೂ ಲಕ್ಷಾಂತರ ಕೇಸಸ್ ಬಾಕಿ ಇವೆ. ಇವತ್ತು ಲಕ್ಷಾವಧಿ ಕೇಸ್‌ಗಳು ಸಿವಿಲ್ ಇರಬಹುದು ಕ್ರಿಮಿನಲ್ ಇರಬಹುದು, ನಮ್ಮ ಕೋರ್ಟ್‌ಗಳಲ್ಲಿ ಪೆಂಡಿಂಗ್ ಇವೆ. ನಾವು ನೀವು ಒಂದು ಮಾತನ್ನು ಒಪ್ಪಿಕೊಳ್ಳುತ್ತೇವೆ. "Justice delayed is justice denied".

ತಾವು ಮುನ್ಸೀಫ್ಸ್‌ಗೆ ಕ್ವಾರ್ಟರ್ಸ್ ಮತ್ತೊಂದು ಕೊಡುತ್ತೇವೆಂದು ಹೇಳಿದ್ದೀರಿ. ಅದನ್ನು ಕೊಡಿ. ಅದರಿಂದ ಬಾಕಿ ಇರುವ ಕೇಸಸ್ ಡಿಸ್ಪೋಸ್ ಆಗಲಿಕ್ಕೆ ಸಾಧ್ಯವಿಲ್ಲ. ಕೇಸಸ್‌ಗಳು ಡಿಸ್ಪೋಸ್ ಆಗಬೇಕಾದರೆ ನಾನು ಎರಡು ಸಲಹೆ ಕೊಡುತ್ತೇನೆ. ಒಂದು ಲೋಕಅದಾಲತ್ ಏನಿದೆ ಅದರ ವ್ಯಾಪ್ತಿಯನ್ನು ಹೆಚ್ಚು ಮಾಡಿ. ವ್ಯಾಪ್ತಿ ಹೆಚ್ಚು ಮಾಡಿದರೆ ಪ್ರೀತಿ ವಿಶ್ವಾಸದಿಂದ ಬಗೆಹರಿಯಬಹುದು. ನಿಮ್ಮ ಗೌರ್ನಮೆಂಟ್ ಅಡ್ವೋಕೇಟ್ಸ್ ಇದ್ದರಲ್ಲಾ with all respects to them ನಾನೂ ಅಡ್ವೋಕೇಟ್, ಏತಕ್ಕೆಂದರೆ ನಾನು ಬಹಳ ಜವಾಬ್ದಾರಿಯಿಂದ ಈ ಮಾತನ್ನು ಹೇಳುತ್ತಿದ್ದೇನ್ನೆ;ಬಹಳ ಜನ ಇದರಲ್ಲಿ ಇಂಟರೆಸ್ಟೇ ತೆಗೆದುಕೊಳ್ಳುವುದಿಲ್ಲ. ತಾವುಗಳು ಜಿಲ್ಲೆಗಳಿಗೆ ಹೋದಾಗ ಎಲ್ಲಾ ಗೌರ್ನಮೆಂಟ್ ಅಡ್ವೋಕೇಟ್ಸ್‌ನ್ನು ಕರೆಯಿಸಿ ಇದರ ಬಗ್ಗೆ ರಿವ್ಯೂ ಮಾಡಬೇಕಾಗುತ್ತದೆ. ಏಕೆಂದರೆ ಬಹಳ ಕಡೆ The Government Advocates don't attend, or they collude. ಹೀಗಾಗಿ ಇವತ್ತು ಸಾಕಷ್ಟು ಕಡೆ ತೊಂದರೆಯಾಗಿದೆ. ಆ ಸಮಸ್ಯೆಯನ್ನೂ ಬಗೆಹರಿಸಲಿಕ್ಕೆ ತಾವು ಪ್ರಯತ್ನ ಮಾಡಬೇಕು. 3ನೆಯದು ಕೆ.ಇ.ಬಿ ಅರಿಯರ್ಸ ಬಗ್ಗೆ ಎಕ್ಸೈಸ್ ಅರಿಯರ್ಸ್ ಬಗ್ಗೆ, ನಾವು ಚೀಫ್ ಜಸ್ಟೀಸ್ ಅವರನ್ನು ರಿಕ್ವೆಸ್ಟ್ ಮಾಡಿ ಅಲ್ಲಿ ಒಂದು ಸ್ಪೆಷಲ್ ಕೋರ್ಟ್‌ನ್ನು ಅದಕ್ಕಾಗಿ ಕ್ರಿಯೇಟ್

ಮಾಡಿ ಅದಕ್ಕೆ ಸಪರೇಟ್ ಆಗಿ ಜಡ್ಜ್ ಅವರನ್ನು ಅಪಾಯಿಂಟ್ ಮಾಡಿ ಕೇಸಸ್ ಡಿಸ್ಪೋಸ್ ಮಾಡಿಸುತ್ತೇವೆಂದು ಹೇಳಿದಿರಿ. ಅದರ ಬಗ್ಗೆ ಇವತ್ತು ಏನು ಕ್ರಮ ಆಗಿದೆಯೆಂಬುದನ್ನು ಹೇಳಬೇಕು.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಕಾನೂನು ನೆರವು ಮಂಡಳಿ ಮುಖಾಂತರ ಅನೇಕ ಮೊಕದ್ದಮೆಗಳನ್ನು ತಕ್ಷಣ ಬಗೆಹರಿಸುವುದಕ್ಕೆ ವ್ಯಾಪಕವಾದಂಥ ಪ್ರಯತ್ನ ಮಾಡಿದ್ದೇವೆ. ಈಗಾಗಲೇ 1200 ಅಂತಹ ಶಿಬಿರಗಳು ನಡೆದಿವೆ. ಲಕ್ಷಾಂತರ ಮೊಕದ್ದಮೆಗಳನ್ನು ಅಲ್ಲಿ ಬಗೆಹರಿಸಲಾಗಿದೆ. ಎರಡನೆಯದಾಗಿ ಪ್ರಾಸಿಕ್ಯೂಟರ್‌ಗಳನ್ನು ಮಾಡುವ ಕೆಲಸಗಳನ್ನು ರಿವ್ಯೂ ಮಾಡಬೇಕೆಂದು ಹೇಳಿದಿರಿ. ಅದು ಒಳ್ಳೆಯ ಸಲಹೆ. ನೆನ್ನೆ ತಾನೇ ರಾಜ್ಯ ಮಟ್ಟದ ಎಲ್ಲಾ ಪ್ರಾಸಿಕ್ಯೂಟರ್‌ಗಳನ್ನು ಕರೆಸಿ ಸಮ್ಮೇಳನ ಮಾಡಲಾಯಿತು. ಇವತ್ತೂ ನಡೆಯುತ್ತಿದೆ. ಅವರು ಮುಂದೆ ಏನು ಮಾಡಲೇಕೆಂಬದನ್ನು ಜನಗಳ ದೃಷ್ಟಿಯುಂದ ಬೇಗ ಡಿಸ್ಪೋಸ್‌ಲ್ ಆಗುವ ದೃಷ್ಟಿಯಿಂದ competency in conducting cases ದೃಷ್ಟಿಯಿಂದ ಏನು ಮಾಡಬೇಕೆಂದು ಅವರಿಗೆ ತಿಳಿಸಿದ್ದೇವೆ. ಪುನಃ ನಮ್ಮ ಇಲಾಖೆವತಿಯಿಂದ ರಿವ್ಯೂ ಕೂಡ ಮಾಡುತ್ತೇವೆ. ನೀವು ಇನ್ನೊಂದು ಮಾತು ಹೇಳಿದಿರಿ. ಅದು ನಿಜ. ನಮ್ಮ ವಾರ್ಷಿಕ ವರಿದಿ ಪ್ರಕಾರ ಎಲ್ಲಾ ಕೋರ್ಟ್‌ಗಳು ಸೇರಿದರೆ 10,05,533 ಕೇಸಸ್‌ಗಳು 31-12-94 ರಲ್ಲಿ ಬಾಕಿ ಇದ್ದವು ಇದು ಸ್ವಲ್ಪ ಆತಂಕಕಾರಿಯಾದ ಪ್ರವೃತ್ತಿ. ಇನ್ನೂ ಒಂದು ಯೋಚನೆಯನ್ನು ಸರ್ಕಾರದವರು ಮಾಡುತ್ತಿದ್ದಾರೆ – Under Article 323B of the Constitution. ವಿಶೇಷವಾದ ಟ್ರಿಬ್ಯೂನಲ್ ಅನ್ನು ಏಕೆ ಮಾಡಬಾರದು ಎಂದು. ಇದರಿಂದ ಹೈಕೋರ್ಟ್‌ಗೂ ಭಾರ ಕಡಿಮೆಯಾಗುತ್ತದೆ. ಜೊತೆಗೆ ಅಲ್ಲಿ ಡಿಸ್ಪೋಸಲ್ ಆಗುತ್ತದೆ. ಇದರ ಬಗ್ಗೆ ಯೋಚನೆ ನಡೆದಿದೆ. ಇನ್ನೂ ಯಾವ ತೀರ್ಮಾನವನ್ನೂ ತೆಗೆದುಕೊಂಡಿಲ್ಲ. ಎಲ್ಲಾ ವಿಧದಲ್ಲೂ ಈ ಮೊಕದ್ದಮೆಗಳು ಬೇಗ ತೀರ್ಮಾನವಾಗಬೇಕು. ಮತ್ತೆ ಸೆಷನ್ಸ್ ಕೇಸ್‌ಗಳಲ್ಲಿ ಹಿಂದೆ ನಡೆಯುತ್ತಿದ್ದ ಹಾಗೆ ಡೇಟು – ಡೇ ನಡೆಯುತ್ತಿಲ್ಲ. ಒಂದು ವರ್ಷ ಎರಡು ವರ್ಷ ಎಳೆದುಕೊಂಡು ಹೋಗುತ್ತಿದೆ. ಈವನ್ ಮರ್ಡ್‌ರ್ ಕೇಸ್‌ನಲ್ಲಿ. ಇದನ್ನು ತಡೆಗಟ್ಟುವುದಕ್ಕೆ ಸಕಲ ಪ್ರಯತ್ನಗಳನ್ನು ಮಾಡುತ್ತೇವೆ.

ಪ್ರೋ ಎಂ.ಡಿ. ನಂಜುಂಡಸ್ವಾಮಿ:– ಸಭಾಧ್ಯಕ್ಷರೇ, ಇದರ ಬಗ್ಗೆ ನಾವು ಸುಮ್ಮನೆ ಮಾತನಾಡಿಕೊಂಡೇ ಹೋಗುತ್ತಿರುತ್ತೇವೆ. "Justice delayed is justice denied" ಅಂತ ಮಾತನಾಡಿಕೊಂಡೇ ಮುಂದುವರಿಯುತ್ತೇವೆ. ಅದ್ದರಿಂದ ಇಲ್ಲಿ ಕೆಲವು ಸಲಹೆಗಳು ಬಂತು. ಇಲ್ಲಿ ಮೊದಲು ತೊಡಕು ಇರುವುದು ನಮ್ಮ ಪ್ರೊಸೀಜರಲ್ ಲಾ, both civil procedure and criminal procedure.

ಇದನ್ನು ಯಾವ ರೀತಿ ನಾವು ಸುಧಾರಣೆ ಮಾಡಬೇಕು ಎನ್ನುವುದರ ಬಗ್ಗೆ ತಾವು ಗಮನಹರಿಸಬೇಕು. ಎರಡನೆಯದು ಪಾಂಡಿಚೇರಿ ಸರ್ಕಾರದವರು ಏನು ಪ್ರಕಟಣೆ ಮಾಡಿದ್ದಾರೆ. ಆ ಕಾರಣಗಳನ್ನು ಹೇಳಿದರು; ಅಲ್ಲಿ ಅಡ್ವೋಕೇಟ್ಸ್‌ದು ಪ್ರಶ್ನೆ ಬರುತ್ತದೆ. You will have to amend the Advocates Act, in consultation with the office–bearers of the Bar Association, ಅದನ್ನು ಮಾಡಬೇಕು. concentration of work in a few hands ಅಂತ ಮಾತನಾಡಿದಿರಿ.....

ಅದರ ಬಗ್ಗೆ ಬೇರೆ ದೇಶಗಳಲ್ಲಿ ಬೇರೆ ಕ್ರಮ ತೆಗೆದುಕೊಂಡಿದ್ದಾರೆ. ತೆಗೆದುಕೊಂಡು distribution of work will be done by the superior courts themselves. ಇಂಥಾದ್ದನ್ನೆಲ್ಲಾ ಬದಲಾವಣೆ ಮಾಡಬೇಕಾಗುತ್ತದೆ. ಕೋರ್ಟ್ ರೂಲ್ಸನ್ನೂ ಬದಲಾವಣೆ ಮಾಡಬೇಕಾಗುತ್ತದೆ. High Court rules will have to be amended. So, you will have to have a detailed discussion

with the Chief Justice of the High Court of Karnataka, the President of the Karnataka Bar Association and also the Law Commission to amend the procedural laws in the country.

ಅವೆಲ್ಲಾ ಲಾರ್ಡ್ ಮೆಖಾಲೆ ಕಾಲದ್ದು. ಬ್ರಿಟೀಷರ ಕಾಲದ ಪ್ರೊಸೀಜರ್ ಅನ್ನು ನಾವು. ಮಾಡುತ್ತಿದ್ದೇವೆ. ಇಷ್ಟನ್ನೂ ಗಮನ ಹರಿಸಿದರೆ ಆಗುತ್ತದೆ ಇಲ್ಲದಿದ್ದರೆ ಆಗುವುದಿಲ್ಲ;

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಮಾನ್ಯ ಸದಸ್ಯರು ಹೇಳಿರತಕ್ಕಂಥ ಸಲಹೆಗಳು ಸೂಕ್ತವಾಗಿವೆ ಈಗಾಗಲೇ ಲಾ ಕಮಿಷನ್ 5 ರಿಪೋರ್ಟ್‌ಗಳನ್ನು ಕೊಟ್ಟಿದ್ದಾರೆ. ಹೇಗೆ ತಿದ್ದುಪಡಿ ಮಾಡಿಕೊಳ್ಳಬೇಕು ಪ್ರೊಸೀಜರ್ ಅನ್ನು ಎಂದು. ಅದೂ ಅಲ್ಲದೆ ಜಸ್ಟೀಸ್ ಮಳೀಮಠ ಅವರ ಅಧ್ಯಕ್ಷತೆಯಲ್ಲಿ ವಿಶೇಷವಾಗಿ ಇಡೀ ವಿಷಯವನ್ನು ಚರ್ಚೆಮಾಡಿ ಸಲಹೆ ಮಾಡುವುದಕ್ಕೆ ಒಂದು ಕಮಿಷನ್ ಆಗಿ, ಆ ಕಮಿಷನ್ ರಿಪೋರ್ಟ್ ಕೂಡ ಈಗ ಬಂದಿದೆ. ಅದೆಲ್ಲವನ್ನೂ ಗಣನೆಗೆ ತೆಗೆದಕೊಂಡು ತಾವು ಹೇಳಿದ ಹಾಗೆ ಪ್ರೊಸೀಜರ್ ಲಾ ನಲ್ಲಿ ಏನು ಬದಲಾವಣೆ ಮಾಡಬೇಕೆನ್ನುವುದನ್ನು ಚಿಂತನೆ ಮಾಡೋಣ.

ಹುಲಿವಾನ ಹಾಗೂ ತುಂಬಿಕೆರೆ ಹತ್ತಿರ ಮದ್ದೂರು ನಾಲೆಯಲ್ಲಿ ಕಿರು ಜಲವಿದ್ಯುಚ್ಛಕ್ತಿ ಯೋಜನೆ

2188: ಶ್ರೀ ಎಂ.ಎಸ್. ಆತ್ಮಾನಂದ, (ಮಂಡ್ಯ) ಶ್ರೀ ಎನ್. ತಮ್ಮಣ್ಣ (ಕೆರೆಗೋಡ್):- ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕೆರಗೋಡು ಹೋಬಳಿಯ ಹುಲಿವಾನ ಹಾಗೂ ತುಂಬಿಕೆರೆ ಹತ್ತಿರ ಮದ್ದೂರು ಯೋಜನೆ ತೆಗೆದುಕೊಳ್ಳಬೇಕೆಂದು ಸರ್ಕಾರದ ಗಮನದಲ್ಲಿದೆಯೇ;

ಆ. ಹಾಗಾದರೆ ಈ ಕೆಲಸವನ್ನು ಯಾವಾಗ ಪ್ರಾರಂಭಿಸುತ್ತೀರಿ;

ಇ. ದ್ಯಾಪಸಂದ್ರದ ಹತ್ತಿರ ನಿರ್ಮಿಸಿರುವ ಕಿರು ಜಲವಿದ್ಯುಚ್ಛಕ್ತಿ ಯೋಜನೆ ಈಗ ಯಾವ ಹಂತದಲ್ಲಿದೆ;

ಈ. ಈ ಕಿರುಜಲವಿದ್ಯುಚ್ಛಕ್ತಿ ಯೋಜನೆಯ ಉತ್ಪಾದನಾ ಸಾಮರ್ಥ್ಯ ಎಷ್ಟು ? ಹಾಗೂ ಯಾವಾಗ ಪ್ರಾರಂಭಿಸುತ್ತೀರಿ ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):-

ಅ. ಹೌದು.

ಆ. ಖಾಸಗಿ ಸಂಸ್ಥೆಗಳು ಸಧ್ಯದಲ್ಲಿಯೇ ಕೆಲಸಗಳನ್ನು ಪ್ರಾರಂಭಿಸುವರು.

ಇ. ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲೂಡಿ 182 ಪಿಪಿಸಿ 85 ದಿನಾಂಕ 4-3-1986ರಲ್ಲಿ ದ್ಯಾಪಸಂದ್ರದ ಹತ್ತಿರ ಶಿವಾ ಕಿರುಜಲವಿದ್ಯುತ್ ಯೋಜನೆಯನ್ನು ಕಾವೇರಿ ಹೈ ಡ್ರೋ ಎನರ್ಜಿ ಲಿಮಿಟೆಡ್‌ರವರಿಗೆ ಕ್ಯಾಪ್ಟಿವ್ ವಿದ್ಯುತ್ತನ್ನು ಉತ್ಪಾದಿಸಲು ವಹಿಸಲಾಗಿದೆ. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸಂಸ್ಥೆ ಯೋಜನೆ ಸೆಪ್ಟೆಂಬರ್, 1992ರಲ್ಲಿ ಒಪ್ಪಂದಕ್ಕೆ ಬರಲಾಗಿದೆ.

ಇ. 3 ಮೆ. ವ್ಯಾಟ್. ಯೋಜನಾ ಕೆಲಸಗಳನ್ನು ಪ್ರಾರಂಭಿಸಲು ಎಲ್ಲಾ ವ್ಯವಸ್ಥೆಗಳನ್ನು ಸಂಸ್ಥೆಯು ಮಾಡುತ್ತಾ ಇದೆ.

ಶ್ರೀ ಎಂ.ಎಸ್. ಆತ್ಮಾನಂದ:- ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ, 86ನೇ ಇಸವಿಯಲ್ಲಿ ದ್ಯಾಪಸಂದ್ರ ಹತ್ತಿರ ಇರತಕ್ಕಂಥ ಕಿರು ಜಲವಿದ್ಯುತ್ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಆ ಸಂಸ್ಥೆಗೆ ಕಾವೇರಿ ಹೈಡ್ರೋ ಎನರ್ಜಿ ಲಿಮಿಟೆಡ್ ಅವರಿಗೆ 92 ರಲ್ಲಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಸಮಯ ನಿಗದಿ ಮಾಡಲಾಗಿತ್ತು. ಈಗಾಗಲೇ ನಾವು 93ನೇ ಇಸವಿಯ 3ನೇ ತಿಂಗಳಲ್ಲಿ ಇದ್ದೇವೆ. ಈ ಯೋಜನೆ ಏಕೆ ಇಷ್ಟು ತಡವಾಯಿತು ? ಇದನ್ನು ಶೀಘ್ರ ಅನುಷ್ಠಾನ ಮಾಡಲು ಶ್ರಮ ಕೈಗೊಳ್ಳುತ್ತೀರಾ ? ಅಂತೆಯೇ ಹುಲಿವಾನ ಮತ್ತು ತುಂಬಿಕೆರೆ ಹತ್ತಿರ ಇರುವ ಮದ್ದೂರು ಯೋಜನೆಗೆ ಖಾಸಗಿ ಸಂಸ್ಥೆಯವರಿಗೆ ವಹಿಸಲಾಗಿದೆ ಎಂದು ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳಿದ್ದು, ನಮಗೆ ಬಹಳ ವಿದ್ಯುಚ್ಛಕ್ತಿ ಕೊರತೆಯನ್ನು ಅನುಭವಿಸುತ್ತಿರುವುದರಿಂದ ಇನ್ನೂ 8-10 ಮಿನಿ ಯೋಜನೆಗಳನ್ನು ಮಾಡಲು ಗುರುತಿಸಲಾಗಿದೆ. ವಿಶ್ವೇಶ್ವರಯ್ಯ ನಾಲೆ 300 ದಿವಸ ನಮ್ಮಲ್ಲಿ ಹರಿಯುವುದರಿಂದ ಈ ಯೋಜನೆಗಳನ್ನು ಮಾಡುವುದಕ್ಕೆ ಅಂದಾಜು ತಯಾರು ಮಾಡಿದ್ದಾರೆ. ಈ ಯೋಜನೆಗಳ ಬಗ್ಗೆ ಯಾವಾಗ ಕ್ರಮ ಕೈಗೊಳ್ಳುತ್ತಾರೆಂದು ನಾನು ಕೇಳಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಅಧ್ಯಕ್ಷರೇ, ಮದ್ದೂರು ಕಿರುಜಲ ವಿದ್ಯತ್ ಯೋಜನೆಯನ್ನು ಎಲ್.ಕೆ ಪವರ್ ಕಾರ್ಪೊರೇಷನ್‌ನವರಿಗೆ ಕ್ಯಾಪ್ಟೀವ್ ವಿದ್ಯುತ್ ಉತ್ಪಾದನೆ ಮಾಡುವುದಕ್ಕೋಸ್ಕರ 1990ನೇ ಇಸವಿಯಲ್ಲಿ ಗುತ್ತಿಗೆ ನೀಡಿದೆ. ಆದರೆ ಅವರು ಇನ್ನೂ ಯೋಜನಾ ಕೆಲಸಗಳನ್ನು ಪ್ರಾರಂಭಿಸಬೇಕಾಗಿದೆ.

ಕೀಲಾರ ಜಲವಿದ್ಯುತ್ ಯೋಜನೆಯನ್ನು 1992ರಲ್ಲಿ ಎಲೆಕ್ಟ್ರಾನಿಕ್ ಟೆಕ್ನಾಲಾಜಿ ಕಂಪನಿ (ಪ್ರೈವೇಟ್) ಲಿಮಿಟೆಡ್ ಇವರಿಗೆ ಗುತ್ತಿಗೆಯನ್ನು ನೀಡಿದೆ. ಅವರೂ ಯೋಜನಾ ಕೆಲಸವನ್ನು ಪ್ರಾರಂಭಿಸಬೇಕಾಗಿದೆ. ದ್ಯಾಪಸಂದ್ರದ ಶಿವ ಕಿರತ್ ಜಲವಿದ್ಯುತ್ ಯೋಜನೆ ಕಾವೇರಿ ಹೈಡ್ರೋ ಎನರ್ಜಿ ಲಿಮಿಟೆಡ್‌ರವರಿಗೆ ಒಂದು ಕ್ಯಾಪ್ಟಿವ್ ವಿದ್ಯುತ್ತನ್ನು ಉತ್ಪಾದಿಸಲು ವಹಿಸಲಾಗದೆ. ಇದು 1992ನೇ ಇಸವಿಯಲ್ಲಿ ಇವರ ಜೊತೆಯಲ್ಲಿ ಒಪ್ಪಂದಕ್ಕೆ ಬರಲಾಗಿದೆ. ಎಲ್ಲಾ ಒಪ್ಪಂದಕ್ಕೆ ಬರಲಾಗಿದೆ. ಯಾರೂ ಕೆಲಸವನ್ನು ಪ್ರಾರಂಭ ಮಾಡಲಿಲ್ಲ; ಅದಕ್ಕೆ ನಾನು ಆಲೋಚನೆ ಮಾಡುತ್ತಿದ್ದೇನೆ. ಯೋಚನೆ ಮಾಡುತ್ತಿದ್ದೇನೆ. ಇವರೆಲ್ಲರಿಗೂ ಒಂದು ಟೈಂ ಲಿಮಿಟ್ ಕೊಟ್ಟು ಇಂತಿಷ್ಟು ದಿನಗಳಲ್ಲಿ ಅಥವಾ ಇಂತಿಷ್ಟು ತಿಂಗಳಲ್ಲಿ ಅವರು ಈ ವಿದ್ಯುತ್ ಉತ್ಪಾದನಾ ಕೆಲಸ ಕಾರ್ಯಗಳಲ್ಲಿ ಸೀರಿಯಸ್‌ನೆಸ್ ಮತ್ತು ಸಾಕಷ್ಟು ಕೆಲಸವನ್ನು ಮಾಡುತ್ತಿದ್ದೇವೆ ಎನ್ನತಕ್ಕದ್ದನ್ನು ನಮಗೆ ನಂಬಿಕೆ ಬರತಕ್ಕಂಥ ರೀತಿಯಲ್ಲಿ ಅವರು ನಿರ್ವಹಿಸಬೇಕು ಇಲ್ಲದಿದ್ದರೆ ಈ ಒಪ್ಪಂದಗಳನ್ನೆಲ್ಲವನ್ನು ಕೂಡ ನಾವು ರದ್ದು ಮಾಡಿ ಹೊಸದಾಗಿ ಪೇಪರ್‌ಗಳ ಮೂಲಕ ಟೆಂಡರ್‌ಗಳನ್ನು ಕರೆದು ಯಾರಾದರೂ ಖಾಸಗೀ ವಲಯದವರು ವಿದ್ಯುತ್ ಉತ್ಪಾದನೆಯನ್ನು ಮಾಡುವುದಕ್ಕೆ ಮುಂದಕ್ಕೆ ಬಂದರೆ ಅವರಿಗೆ ಕೊಡಬಹುದು ಅಥವಾ ಪವರ್ ಕಾರ್ಪೊರೇಷನ್‌ನವರೇ ಈ ಮೂರು ಸಣ್ಣ ಉತ್ಪಾದನಾ ಕಾಮಗಾರಿಗಳನ್ನು ಮಾಡತಕ್ಕದ್ದು - ಈ ಎರಡೂ ಆಪ್‌ಷನ್‌ಗಳನ್ನು ಕೂಡ ಸರ್ಕಾರದವರು ಇಟ್ಟುಕೊಂಡಿರುತ್ತಾರೆ.

ಶ್ರೀ ಎಂ.ಎಸ್. ಆತ್ಮಾನಂದ:- ಈ ಮೂರು ಯೋಜನೆಗಳ ಜೊತೆಗೆ ಇನ್ನೂ ಕೂಡ ನಾಲ್ಕು, ಒಟ್ಟು ಏಳು ಯೋಜನೆಗಳನ್ನು - ವಿಶ್ವೇಶರಯ್ಯ ನಾಲಾ ಸಂಕೀರ್ಣ ಪ್ರದೇಶದಲ್ಲಿ ಕಿರುವಿದ್ಯುತ್ ಜಲಘಟಕಗಳನ್ನು ಸ್ಥಾಪಿಸಬಹುದೆಂದು ಗುರುತಿಸಲಾಗಿದೆ. ಈ ಯೋಜನೆಗಳನ್ನು ತಾವು ತೆಗೆದುಕೊಳ್ಳುತ್ತೀರಾ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:- ಅವುಗಳೂ ಕೂಡ ತಾಂತ್ರಿಕವಾಗಿ ಸಾಧ್ಯವಾಗಬಹುದು ಎನ್ನತಕ್ಕಂಥದ್ದು ನಮಗೆ ಮನದಟ್ಟಾದರೆ ಅವುಗಳ ಬಗ್ಗೆಯೂ ಕೂಡ ಇದೇ ನೀತಿಯನ್ನು ಅನುಸರಿಸುತ್ತೇವೆ.

ಅಧ್ಯಕ್ಷರು:- ಇದರ ಬಗ್ಗೆ ಎರಡು ಉಪಪ್ರಶ್ನೆಗಳನ್ನು ಅವರು ಕೇಳಿದ್ದಾರೆ.

ಶ್ರೀ ಎನ್. ತಮ್ಮಣ್ಣ:- ನಾನೂ ಕೇಳಿದ್ದೇನೆ.

ಅಧ್ಯಕ್ಷರು:- ಇದು ನಿಮ್ಮ ಪ್ರಶ್ನೆ ಅಲ್ಲ. ಇದರಲ್ಲಿ ಆತ್ಮನಂದರವರ ಹೆಸರು ಇದೆ. ಆದರೂ, ಪರವಾಗಿಲ್ಲ ಕೇಳಿ.

ಶ್ರೀ ಎನ್. ತಮ್ಮಣ್ಣ:- ಉಲುವಾಲ ಗ್ರಾಮದ ಹತ್ತಿರ ಒಂದು ಮಿನಿ ಜಲವಿದ್ಯುತ್ ಯೋಜನೆಯನ್ನು ಮಾಡಬೇಕೆಂದು ಸುಮಾರು ಒಂದು ವರ್ಷದಿಂದ ತೀರ್ಮಾನ ಮಾಡಿದ್ದಾರೆ. ಅಲ್ಲಿ ಸುಮಾರು 3 ಎಕರೆ ಜಮೀನನ್ನು ಗುರ್ತಿಸಿ ನಾನು ಮತ್ತು ತಹಶೀಲ್ದಾರರು ರೈತರ ಜೊತೆಯಲ್ಲಿ ನೆಗೋಸಿಯೇಷನ್ ಮಾಡಿ ಒಂದು ವರ್ಷವಾಗಿದೆ. ಒಂದು ಎಕರೆಗೆ ಒಂದು ಲಕ್ಷ ರೂಪಾಯಿ ಅಂತ ನಿಗದಿ ಮಾಡಿದ್ದೇನೆ. ಆದರೆ ಇಲ್ಲಿಯವರೆಗೂ ಪವರ್ ಕಾರ್ಪೊರೇಷನ್‌ನವರಾಗಲಿ ಯಾರೂ ಮುಂದೆ ಬಂದಿಲ್ಲ. ಅಲ್ಲಿ ಏನಾಗಿದೆ ಎಂದರೆ ರೈತರು ಏನು ತಮ್ಮ ಜಮೀನನ್ನು ಕಳೆದುಕೊಳ್ಳುತ್ತಾರಲ್ಲಾ, ಆ ಜಮೀನಿಗೆ ಬೇರೆ ಜಮೀನನ್ನು ತೆಗೆದುಕೊಳ್ಳಬೇಕಾದರೆ ವರ್ಷವರ್ಷಕ್ಕೆ ಜಮೀನಿನ ಬೆಲೆ ಜಾಸ್ತಿಯಾಗುತ್ತದೆ. ಆದ್ದರಿಂದ ಈ ಜಮೀನನ್ನು ಯಾವಾಗ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುತ್ತಾರೆ ಎಂದು ತಮ್ಮ ಮೂಲಕ ಮಾನ್ಯ ಉಪಮುಖ್ಯಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:- ಇವರು ಸ್ಥಳವನ್ನು ಗುರ್ತಿಸಿದ್ದೇವೆಂದು ಮಾನ್ಯ ಸದಸ್ಯರು ನನಗೆ ತಿಳಿಸುತ್ತಿದ್ದಾರೆ. ನಾನು ಅವರಿಗೆ ಮರುಸೂಚನೆಯನ್ನು ಕೊಡುಬಹುದಾದರೆ ಇಂತಹ ಸಣ್ಣ ಘಟಕಗಳನ್ನು ಕೋ-ಆಪರೇಟಿವ್ ಎಫರ್ಟ್ ಸ್ಥಳೀಕರು ತಾವೇ ಮುಂದಾಳುತನವನ್ನು ವಹಿಸಿ ಒಂದು ಕೋ-ಆಪರೇಟಿವ್ ಎಫರ್ಟ್ ಮಾಡಿ ಇಂತಹ ಸಣ್ಣ ಸಣ್ಣ ಜಲ ವಿದ್ಯುತ್ ಉತ್ಪಾದನೆಯನ್ನು ನೀವೇ ಮಾಡಿದರೆ ನಿಮ್ಮ ಕೋ-ಆಪರೇಟಿವ್ ಸೊಸೈಟಿಗೂ ಲಾಭ ಬರುತ್ತವೆ. ಜನಕ್ಕೂ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಅದನ್ನು ಪರಿಶೀಲಿಸಿ ಅಂತ ಹೇಳಿ ಮಾನ್ಯ ಸದಸ್ಯರಿಗೆ ಸೂಚನೆಯನ್ನು ಕೊಡುತ್ತೇನೆ.

ಮುಂಡರಗಿ ತಾಲ್ಲೂಕಿನಲ್ಲಿ ಕೆರೆಗಳ ದುರಸ್ತಿ

2191: ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮುಂಡರಗಿ ತಾಲ್ಲೂಕಿನಲ್ಲಿ ನೀರಾವರಿ ಕೆರೆಗಳಾದ ಡಂಬಳ, ಅಲೂರ ಮತ್ತು ಜಂಟ್ಲಿ ಶಿಲೋರ್ ಕೆರೆಗಳ ಕಾಲುವೆಗಳ ದುರಸ್ತಿಯಾಗಿಲ್ಲದ್ದರ ಕಾರಣಗಳು ಏನು ? ಮೇಲ್ಕಾಣಿಸಿದ ಕಾಲುವೆಗಳ ದುರಸ್ತಿ ಎಂದಿನಿಂದ ಪ್ರಾರಂಭ ಮಾಡುತ್ತೀರಿ;

ಆ. ಮುಂಡರಗಿ ತಾಲ್ಲೋಕಿನಲ್ಲಿ ಕಕ್ಕೂರ ಹಾಗೂ ಮುರಡಿ ಹೊಸಕೆರೆಗಳನ್ನು ನಿರ್ಮಾಣ ಮಾಡಲಿಕ್ಕೆ ಮನವಿಕೊಟ್ಟಿದ್ದರೂ ಇಲ್ಲಿಯವರೆಗೂ ಸರ್ವೆ ಕಾರ್ಯ ನಡೆದಿಲ್ಲದಿರುವುದಕ್ಕೆ ಕಾರಣಗಳೇನು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ. ಸದರಿ ಕೆರೆಗಳ ಕಾಲುವೆ ದುರಸ್ತಿ ಕಾರ್ಯವನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಆ. ಮುಂಡರಗಿ ತಾಲ್ಲೂಕು ಮುರಡಿ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ನಿರ್ಮಿಸಲು ಪೂರ್ವಭಾವಿ ತನಿಖಾ ವರದಿಯನ್ನು ತಯಾರಿಸಲಾಗಿದೆ. ಮತ್ತು 1993-94ನೇ ಸಾಲಿನ

ಆಯವ್ಯಯದಲ್ಲಿ 24 ಲಕ್ಷರೂ. ಗಳ ಅನುದಾನವನ್ನು ಒದಗಿಸಲಾಗಿದೆ. ಕಕ್ಕೂರ ಗ್ರಾಮದ ಬಳಿ ಹೊಸಕೆರೆ ನಿರ್ಮಾಣದ ಮನವಿ ಬಂದಿರುವುದಿಲ್ಲ.

ಶ್ರೀ ಕೆ.ಹೆಚ್. ಕುರುಡಗಿ:– ಮಾನ್ಯ ಅಧ್ಯಕ್ಷರೇ, ಈ ಎಲ್ಲಾ ತಾಲ್ಲೂಕ್‌ಗಳನ್ನು ತೆಗೆದುಕೊಳ್ಳುತ್ತೀರೆಂದು ಹೇಳಿದ್ದೀರಿ. ಎರಡನೆಯ–ಪ್ರಶ್ನೆಯಲ್ಲಿ ತಾವು ಕಕ್ಕೂರ್ ಗ್ರಾಮದಲ್ಲಿ ಹೊಸ ಕೆರೆಯನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದ್ದೀರಿ. ನಾನು ಹೊಸ ಕೆರೆಯು ಬಗ್ಗೆ ಕೇಳಿಯೇ ಇಲ್ಲ, ಅಲ್ಲಿ ಹೊಸ ಕೆರೆಯು ಆಗುವುದೇ ಇಲ್ಲ. ಅದು ಡಿ.ಪಿ.ಎ.ಪಿ ಯೊಳಗೆ ಲಿಫ್ಟ್ ಇರಿಗೇಷನ್ ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಿ, ಏನು ಮಾಡುತ್ತಿದ್ದೀರಿ ? ಈಗಾಗಲೇ ಅದರ ಬಗ್ಗೆ ಸ್ಟ್ರೈಕ್ ನಡೆಯುತ್ತಿದೆ. ಅದರ ಬಗ್ಗೆ ತಮ್ಮ ಅಭಿಪ್ರಾಯ ಏನು ?

ಡಾ. ಆರ್.ಬಿ. ಚೌಧರಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೊಸಕೆರೆ ನಿರ್ಮಾಣದ ಬಗ್ಗೆ ಮಾತ್ರ ಕೇಳಿದ್ದಾರೆ. ಲಿಫ್ಟ್ ಇರಿಗೇಷನ್ ಬಗ್ಗೆ ಅವರು ಕೇಳಿಲ್ಲ. ಹೊಸಕೆರೆಯನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಈಗಾಗಲೇ ನಾವು ಉತ್ತರ ಕೊಟ್ಟಿದ್ದೇವೆ. ಲಿಫ್ಟ್ ಇರಿಗೇಷನ್ ಸಲುವಾಗಿ ಡಿ.ಪಿ.ಎ.ಪಿ ಯಡಿಯಲ್ಲಿ ತೆಗೆದುಕೊಂಡ ಕಾಮಗಾರಿ ಇದು. ಆದ್ದರಿಂದ ಒಂದನೇಯ ಹಂತ ಮುಗಿಯಲಿಕ್ಕೆ ಬಂದಿತ್ತು. ಎರಡನೇ ಹಂತ ಇನ್ನೂ ಅನುದಾನಕ್ಕೆ ಒಳಪಟ್ಟಿಲ್ಲ. ಅನುದಾನಕ್ಕೆ ಒಳಪಟ್ಟ ಮೇಲೆ ನಾವು ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ.ಹೆಚ್. ಕುರುಡಗಿ:– ಈಗಾಗಲೇ 10 ವರ್ಷವಾಗಿದೆ. ಇದು ಡಿ.ಪಿ.ಎ.ಪಿ ಯೋಜನೆಯಲ್ಲಿ ಬಂದು ಹಾಗೆಯೇ ಉಳಿದಿದೆ. ಎಷ್ಟು ದಿವಸದಲ್ಲಿ ತೆಗೆದುಕೊಳ್ಳುತ್ತೀರಿ, ಈಗಾಗಲೇ ಅಲ್ಲಿ ರೈತರು ಸ್ಟ್ರೈಕ್ ಮಾಡುತ್ತಿದ್ದಾರೆ.

ಡಾ. ಆರ್.ಬಿ. ಚೌಧರಿ:– ಎರಡನೇ ಸ್ಟೇಜ್ ಅನ್ನು ಅನುದಾನಕ್ಕೆ ಒಳಪಡಿಸಬೇಕಾಗಿದೆ. ಅನುದಾನಕ್ಕೆ ಒಳಪಡಿಸಿದಮೇಲೆ ಮಾಡಬಹುದು.

ಶ್ರೀ ಕೆ.ಹೆಚ್. ಕುರುಡಗಿ:– ಟೈಮ್ ಲಿಮಿಟ್ ಬೇಕಲ್ಲ !

ಡಾ. ಆರ್.ಬಿ. ಚೌಧರಿ:– ಆದಷ್ಟು ಶೀಘ್ರ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶೃಂಗೇರಿ, ಕೊಪ್ಪ, ಎನ್ ಆರ್ ಪುರ ಪ್ರವಾಸಿ ಮಂದಿರಗಳ ದುರಸ್ತಿ

2198: ಶ್ರೀ ಯು.ಕೆ. ಶಾಮಣ್ಣ, (ಶೃಂಗೇರಿ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಶೃಂಗೇರಿ, ಕೊಪ್ಪಾ, ಎನ್ ಆರ್ ಪುರದಂತ ಪ್ರವಾಸಿ ಯಾತ್ರಾಸ್ಥಳಗಳಲ್ಲಿ ಪ್ರವಾಸಿ ಮಂದಿರಗಳ ಹಳೆಯ ಕಟ್ಟಡ ದುರಸ್ತಿ, ಹೆಚ್ಚುವರಿ ಕೊಠಡಿಗಳನ್ನು ಕಟ್ಟಲು ಸರ್ಕಾರ ಉದ್ದೇಶಿಸಿದೆಯೆ;

ಆ. ಹಾಗಿದ್ದಲ್ಲಿ, ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು;

ಇ. ಹಾಗಿಲ್ಲದಿದ್ದಲ್ಲಿ, ಯಾವ ಮೊತ್ತದಿಂದ ಹಣ ಒದಗಿಸಲಾಗುವುದು ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ. ದುರಸ್ತಿ ಮಾಡಲಾಗಿದೆ. ಹೆಚ್ಚುವರಿ ಕೊಠಡಿಗಳ ನಿರ್ಮಾಣದ ಪ್ರಸ್ತಾವನೆ ಸರ್ಕಾರಕ್ಕೆ ಬಂದಿಲ್ಲ.

ಆ. ಮೇಲಿನ 'ಅ' ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಯು.ಕೆ. ಶಾಮಣ್ಣ:- ಮಾನ್ಯ ಅಧ್ಯಕ್ಷರೇ, ನನಗೆ ಕೊಟ್ಟಿರುವಂತಹ ಉತ್ತರವನ್ನು ನೋಡಿದರೆ ಇದು ನಿಜವಾಗಿಯೂ ಸತ್ಯಕ್ಕೆ ಬಹಳ ದೂರವಾಗಿದೆ. ನಾನು ಟ್ರಾವಲರ್ಸ್ ಬಂಗಲೆ ಬಗ್ಗೆ ಕೇಳಿದ್ದೆ. ಶೃಂಗೇರಿ ಕ್ಷೇತ್ರದ ಮೂರು ತಾಲ್ಲೂಕ್‌ಗಳಲ್ಲಿರುವಂತಹ ಶೃಂಗೇರಿ, ಕೊಪ್ಪ, ಎನ್.ಆರ್. ಪುರದಲ್ಲಿರುವಂಥ ಟ್ರಾವಲರ್ಸ್ ಬಂಗಲೆಗಳು ದುರಸ್ತಿಯಾಗದೆ ಬಹಳ ವರ್ಷಗಳಿಂದ ನಾದುರಸ್ತಿಯಲ್ಲಿದೆ. ಇದನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಹೇಳುವಂತಹ ದೃಷ್ಟಿಯಿಂದ ನಾನು ಈ ಮನೆಯ ಸದಸ್ಯನಾಗಿ ಇದುವರೆಗೂ ಪ್ರತಿವರ್ಷವೂ ಈ ಪ್ರಶ್ನೆಯನ್ನು ಕೇಳುತ್ತಾ ಬಂದಿದ್ದೇನೆ. ಉತ್ತರಗಳು ವಿವಿಧ ಹಂತದಲ್ಲಿವೆ. ಆದರೆ ಈ ಸಾರಿ ದುರಸ್ತಿಯನ್ನು ಮಾಡಲಾಗಿದೆ ಅಂತ ಹೇಳಿದ್ದಾರೆ. ಖಂಡಿತವಾಗಿಯೂ ಒಂದನ್ನೂ ದುರಸ್ತಿ ಮಾಡಿಲ್ಲ. ಹಾಗೂ ಹೆಚ್ಚುವರಿ ಕೊಠಡಿಗಳ ನಿರ್ಮಾಣದ ಪ್ರಸ್ತಾವನೆ ಸರ್ಕಾರಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ನಾನು ಈ ಮನೆಯ ಸದಸ್ಯನಾದ ಮೇಲೆ ಪ್ರತಿವರ್ಷವೂ ಅದನ್ನು ಕಳುಹಿಸಿ ಕೊಡುವ ಪಾಠವನ್ನು ನಾನು ಕೇಳುತ್ತಾ ಬಂದಿದ್ದೇನೆ. ಆ ಪ್ರಸ್ತಾವನೆಯು ಎಲ್ಲಿಗೆ ಹೋಯಿತು ಎಂದು ನನಗೆ ಗೊತ್ತಿಲ್ಲ. ತಾವು ದಯಮಾಡಿ ನನ್ನ ರಕ್ಷಣೆಗೆ ಬರಬೇಕು. ಈ ಮಾತನ್ನು ಏತಕ್ಕೆ ಹೇಳುತ್ತೇನೆ ಎಂದರೆ ಶೃಂಗೇರಿಯು ಯಾತ್ರಾ ಸ್ಥಳ; ಹಾಗೆಯೇ ಕೊಪ್ಪ, ಎನ್.ಆರ್. ಪುರವೂ ಸಹ ಅಷ್ಟೇ ಯಾತ್ರಸ್ಥಳವಾಗಿದೆ. ಎನ್.ಆರ್. ಪುರದಲ್ಲಿ ಬಸ್ತಿಮಠ ಇರುವುದರಿಂದ ಅಲ್ಲಿ ಟ್ರಾವಲರ್ಸ ಬಂಗ್ಲೊದಲ್ಲಿ ಎರಡು ಕೊಠಡಿಗಳು ಇವೆ. ಒಂದು ಮೇಟಿ ಮಲಗಿಕೊಳ್ಳುವುದಕ್ಕೆ ಒಂದು ರೂಮು, ಮತ್ತೊಂದು ರೂಮು. ಅವನು ಅಡಿಗೆಯನ್ನು ಮಾಡಿಕೊಂಡು ಅವರ ಊಟೋಪಚಾರಗಳನ್ನು ಮಾಡಿಕೊಂಡು ಹೋಗುವಂಥಾದಕ್ಕೆ ಒಂದು ರೂಮಿನ ವ್ಯವಸ್ಥೆ ಇದೆ. ಆದರೆ ಹೆಸರಿಗೆ ಮಾತ್ರ ಇದು ಟಿ.ಬಿ ಯಾಗಿದೆ. ಏಕೆ ಅಂದರೆ ಟ್ರಾವಲರ್ಸ ಬಂಗಲೆನಲ್ಲಿ ಏನು ಮೇಟಿ ಕ್ವಾಟರ್ಸ್ ಮತ್ತು ಅಡಿಗೆ ಮನೆ ಇತ್ತೋ ಅದು 10 ವರ್ಷಗಳಿಂದ ಬಿದ್ದು ಹೋಗಿದೆ. ಆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ನಾವು ಕಳುಹಿಸಿಕೊಟ್ಟಿದ್ದೇನೆ. ರಿಪೇರಿ ಮಾಡುವುದಕ್ಕೆ ಎಸ್ಟಿಮೇಟ್ ಮಾಡಿ ಕಳುಹಿಸಿಕೊಟ್ಟಿದೆ. ಇದುವರೆಗೂ ಹಣವನ್ನು ಮಂಜೂರಾತಿ ಮಾಡಿಲ್ಲ. ನನ್ನ ಕ್ಷೇತ್ರಕ್ಕೆ ಯಾತ್ರಾರ್ಥಿಗಳು ಬಹಳಷ್ಟು ಜನ ಬರುವುದರಿಂದ ಇದನ್ನು ಕೂಡಲೇ ಮಾಡಿಕೊಡಬೇಕು. ಮಾನ್ಯ ಪ್ರಧಾನಮಂತ್ರಿಯವರು ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಮಾನ್ಯ ಕಾನೂನು ಮಂತ್ರಿಗಳೂ ಸಹ ಮೊನ್ನೆ ನಮ್ಮ ಕ್ಷೇತ್ರಕ್ಕೆ ಬಂದಿದ್ದಾರೆ. ಅವರು ಚಿಕ್ಕಮಗಳೂರಿನಲ್ಲಿ ಮಲಗಿಕೊಂಡು ಬೆಳಿಗ್ಗೆ 8 ಘಂಟೆಗೆ ಶೃಂಗೇರಿಗೆ ಬಂದಿದ್ದಾರೆ. ಏಕೆಂದರೆ ಅಲ್ಲಿ ಯಾರೇ ಬಂದು ಇರುವುದಕ್ಕೂ ನಮ್ಮ ಟಿ.ಬಿ. ಚೆನ್ನಾಗಿರುವುದಿಲ್ಲ. ರಿಪೇರಿ ಮಾಡಿಲ್ಲ. ಮಳೆಗಾಲದಲ್ಲಿ ಧಾರಾಕಾರವಾಗಿ ಮಳೆಯ ನೀರು ಕೆಳಗಡೆಗೆ ಸುರಿಯುತ್ತದೆ. ಆದ್ದರಿಂದ ಎನ್.ಆರ್. ಪುರ, ಶೃಂಗೇರಿ ಕೊಪ್ಪ, ಟಿ.ಬಿ.ಗಳನ್ನು ರಿಪೇರಿ ಮಾಡುವುದರ ಬಗ್ಗೆ ಈ ರೀತಿಯಾದಂತಹ ಸುಳ್ಳು ಉತ್ತರವನ್ನು ಕೊಡುವಂತದ್ದು ಯೋಗ್ಯವಲ್ಲವೆಂದು ನಾನು ಭಾವಿಸಕೊಂಡು ಈ ಸಾಲಿನಲ್ಲಿ ಅದನ್ನು ರಿಪೇರಿ ಮಾಡುವಂತಹ ಕ್ರಮವನ್ನು ಸರ್ಕಾರದವರು ಕೈಗೆತ್ತಿಕೊಳ್ಳದೇ ಹೋದರೆ ಇರುವ ಬಿಲ್ಡಿಂಗ್ ಸಹ ಬಿದ್ದು ಹೋಗುತ್ತದೆ. ತಾವು ಅದಕ್ಕೆ ರಕ್ಷಣೆಯನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್:- ಮಾನ್ಯ ಅಧ್ಯಕ್ಷರೇ, ಶೃಂಗೇರಿ ಪರಿವೀಕ್ಷಣ ಮಂದಿರ ಇದು ಯಾತ್ರಾರ್ಥಿಗಳಿಗೆ ಕಟ್ಟಿರುವಂಥದ್ದು ಅಲ್ಲ. ಈ ಪರಿವೀಕ್ಷಣ ಮಂದಿರವು 1974ರಲ್ಲಿ ನಿರ್ಮಿತವಾಗಿದ್ದು ಅದರಲ್ಲಿ 4 ಕೊಠಡಿಗಳಿವೆ. ತುಂಬಾ ಹಳೆಯದು ಆಗಿಲ್ಲ. 1992ರ ಮಾರ್ಚ್‌ನಲ್ಲಿ ಅಧುನೀಕರಣವನ್ನು ಮಾಡಿ ಇದಕ್ಕೆ ಹಿಂದಿನ ಎರಡು ವರ್ಷದಲ್ಲಿ 1.20 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ದುರಸ್ತಿ ಮಾಡಲಾಗಿದೆ. ಶೃಂಗೇರಿ ಪ್ರಮುಖಯಾತ್ರಸ್ಥಳ ಎನ್ನತಕ್ಕದ್ದು ವಾಸ್ತವಾಂಶ. ಹಾಗೆ ಮತ್ತೆ ಅಲ್ಲಿ ಹೆಚ್ಚುವರಿ ನಾಲ್ಕು ಕೊಠಡಿಗಳನ್ನು ಸುಮಾರು 12 ಲಕ್ಷ ರೂಪಾಯಿಯಲ್ಲಿ ನಿರ್ಮಿಸುವ ಅವಶ್ಯಕತೆ ಇದೆ ಎಂದು ತಿಳಿದು ಬಂದಿದ್ದರು ಆ ಬಗ್ಗೆ ಇದುವರೆಗೂ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿರುವುದಿಲ್ಲ.

ಮಾನ್ಯ ಸದಸ್ಯರು ಏನು ಅವಶ್ಯಕತೆ ಇದೆ ಎಂದು ಹೇಳುತ್ತಾರೆ ಅದನ್ನು ನಾನು ನಿರಾಕರಣೆ ಮಾಡುತ್ತಿಲ್ಲ. ಅವಶ್ಯಕತೆ ಇದೆ. ಹೆಚ್ಚು ಕಟ್ಟಡವನ್ನು ಕಟ್ಟಬೇಕಾಗುತ್ತದೆ.

10.50 ಎ.ಎಂ

ಆದರೆ ಆ ಪ್ರಸ್ತಾವನೆ ಸರ್ಕಾರಕ್ಕೆ ಬಂದ ಮೇಲೆ ಹಣದ ಪರಿಸ್ಥಿತಿಯನ್ನು ನೋಡಿಕೊಂಡು ಅದನ್ನು ವ್ಯವಸ್ಥೆಗೊಳಿಸುತ್ತೇವೆ. ಇನ್ನು ಕೊಪ್ಪಾದಲ್ಲಿ ಹಳೆಯ ಕಾಲದ ಟಿ.ಬಿ. ಇದೆ. 1940ರಲ್ಲಿ ನಾಲ್ಕು ಕೊಠಡಿಯುಳ್ಳ ಪರಿವೀಕ್ಷಣಾ ಮಂದಿರವನ್ನು ಕಟ್ಟಲಾಗಿದೆ. ಕಳೆದ ಎರಡು ವರ್ಷಗಳಲ್ಲಿ 41 ಸಾವಿರ ರೂಪಾಯಿಗಳ ವೆಚ್ಚದಲ್ಲಿ ದುರಸ್ತಿ ಮಾಡಲಾಗಿದೆ. 1992 ಮಾರ್ಚಿಯಲ್ಲಿ ಎರಡು ಕೊಠಡಿಗಳನ್ನು ಆಧುನೀಕರಿಸಲಾಯಿತು. ಉಳಿದ ಎರಡು ಕೊಠಡಿಗಳನ್ನು ಸಹ ಸುಮಾರು ಒಂದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆಧುನೀಕರಿಸುವ ಅವಶ್ಯಕತೆ ಇರುತ್ತದೆ. ಸದರಿ ಪರಿವೀಕ್ಷಣಾ ಮಂದಿರಕ್ಕೆ ಪಾಕ ಶಾಲೆ, ಊಟದ ಹಾಲ್ ಇತ್ಯಾದಿಗಳ ಅವಶ್ಯಕತೆ ಇರುತ್ತದೆ. ಈ ಕಾಮಗಾರಿಗಳಿಗೆ ಸುಮಾರು ಎರಡು ಲಕ್ಷ ರೂಪಾಯಿಗಳು ಬೇಕಾಗಬಹುದೆಂದು ಇಲಾಖೆಯವರು ಆದರ ಒಂದು ಪರಿಸ್ಥಿತಿಯನ್ನು ಸರ್ಕಾರಕ್ಕೆ ತಿಳಿಸಿದ್ದಾರೆ. ಹಾಗೆಯೇ ಎನ್.ಆರ್. ಪುರದಲ್ಲಿಯೂ ಕೂಡ ಎರಡು ಕೊಠಡಿಯುಳ್ಳ ಪರಿವೀಕ್ಷಣ ಮಂದಿರವನ್ನು 1940ರಲ್ಲಿ ನಿರ್ಮಿಸಲಾಯಿತು. ಇದು ಸಹ ಹಳೆಯದು. ಬಹಳ ಮಟ್ಟಿಗೆ ಒಳ್ಳೆಯ ಸ್ಥಿತಿಯಲ್ಲಿ ಇರಲಿಕ್ಕಿಲ್ಲವೆಂಬುದು ನನ್ನ ಅಭಿಪ್ರಾಯ ಕೂಡ. ಕಳೆದ ಎರಡು ವರ್ಷಗಳಲ್ಲಿ ಸುಮಾರು 18 ಸಾವಿರ ರೂಪಾಯಿಗಳ ವೆಚ್ಚದಲ್ಲಿ ದುರಸ್ತಿ ಮಾಡಲಾಗಿದೆ. ಈ ಸ್ಥಳವು ಯಾತ್ರಸ್ಥಳವಾಗಿರುವುದರಿಂದ ಇಲ್ಲಿ ವಸತಿ ಸೌಕರ್ಯ ಸಾಲದಾಗಿದ್ದು ಸುಮಾರು 8 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸುವ ಅವಶ್ಯಕತೆ ಇರುವುದಾದರೂ ಈ ಬಗ್ಗೆ ಇನ್ನೂ ಸರ್ಕಾರಕ್ಕೆ ಪ್ರಸ್ತಾವನೆಗಳು ಬಂದಿಲ್ಲ. ಆದುದರಿಂದ ಸುಳ್ಳು ಮಾಹಿತಿಯನ್ನು ಸರ್ಕಾರ ಸದನಕ್ಕೆ ಏನೂ ಕೊಟ್ಟಿಲ್ಲ ಮತ್ತು ಮಾನ್ಯ ಸದಸ್ಯರಿಗೂ ಕೊಟ್ಟಿಲ್ಲ. ಅದರ ಅವಶ್ಯಕತೆ ಇದೆ, ಹಣದ ಪರಿಸ್ಥಿತಿಯನ್ನು ನೋಡಿಕೊಂಡು ಕೆಲಸಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಯು.ಕೆ. ಶಾಮಣ್ಣ:– ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಪ್ರಸ್ತಾವನೆ ಇನ್ನೂ ಬಂದಿಲ್ಲದೇ ಹೋದರೂ ಮಾನ್ಯ ಮಂತ್ರಿಗಳು ಈಗಾಗಲೇ ಅದರ ಅವಶ್ಯಕತೆ ಇದೆ ಎಂದು ಹೇಳಿರುವುದರಿಂದ ದಯಮಾಡಿ ಈ ಸಾಲಿನ ಬಡ್ಜೆಟ್‌ನಲ್ಲಿ ಇದನ್ನು ಸೇರಿಸುವಂತಹ ವ್ಯವಸ್ಥೆಯಾಗಲಿ ಮತ್ತು ಬೇರೆ ರೂಪದಲ್ಲಿ ಹಣವನ್ನು ಕೊಡುವ ಮೂಲಕವಾಗಲಿ ಈ ಕೆಲಸವನ್ನು ತೆಗೆದುಕೊಳ್ಳಬೇಕು. ಮಳೆಗಾಲದಲ್ಲಿ ಮಾತ್ರ ರಿಪೇರಿ ಮಾಡಿದ್ದರು. ಎರಡು ಟಿ.ಬಿ.ಯನ್ನು ಮಾತ್ರ ಬಿಟ್ಟರೆ ಬೇರೆಯದ್ದನ್ನು ಮಾಡಿಲ್ಲ. ಅದ್ದರಿಂದ ದಯಾಮಾಡಿ ರಿಪೇರಿ ಮಾಡುವಂತಹ ವ್ಯವಸ್ಥೆಯನ್ನು ಮಾಡಿದರೆ ನಮ್ಮ ಮರ್ಯಾದೆ ಉಳಿಯುತ್ತದೆ. ಹೊರಗಡೆಯಿಂದ ಬಂದವರಿಗೆ ಸರ್ಕಾರಿ ಟಿ.ಬಿ. ಇಲ್ಲ. ಟ್ರಾವಲರ್ಸ್ ಬಂಗಲೆ ಇಲ್ಲವೆಂದು ಹೇಳತಕ್ಕಂಥ ಕೊರತೆಯನ್ನು ನೀಗಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್:– ಅದನ್ನು ಗಮನಿಸುತ್ತೇನೆ.

ಚಿಕ್ಕೋಡಿ ತಾಲ್ಲೂಕಿನ ಕಬ್ಬೂರು ಗ್ರಾಮದಿಂದ ರಾಯ್‌ಬಾಗ್ ತಾಲ್ಲೂಕು ಕೇಂದ್ರಕ್ಕೆ ಇರುವ ರಸ್ತೆಗಳ ಡಾಂಬರೀಕರಣ

238: ಶ್ರೀ ಎಸ್.ಎಸ್. ಭೀಮಣ್ಣನವರು (ಚಿಕ್ಕೋಡಿ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾಂ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ಕಬ್ಬೂರು ಗ್ರಾಮದಿಂದ ರಾಯ್‌ಬಾಗ್ ತಾಲ್ಲೂಕು ಕೇಂದ್ರಕ್ಕೆ ಇರುವ ರಸ್ತೆ ಸಂಚಾರ ಯೋಗ್ಯವಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಇದರ ಡಾಂಬರೀಕರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ. ಈ ಕಾರ್ಯವನ್ನು ಎಂದು ಪೂರ್ಣಗೊಳಿಸಲಾಗುವುದು ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ. ಸದರಿ ರಸ್ತೆಯು ರಾಯಭಾಗ- ಕಬ್ಬೂರು ಮುಖ್ಯ ಜಿಲ್ಲಾ ರಸ್ತೆಯ ಭಾಗವಾಗಿದ್ದು ಸಂಚಾರಕ್ಕೆ ಯೋಗ್ಯವಾಗಿರುವಂತೆ ನಿರ್ವಹಿಸಲಾಗಿದೆ.

ಆ. ಈ ರಸ್ತೆಯು ಒಟ್ಟು 17.50 ಕಿಮಿ. ಉದ್ದವಿದ್ದು ಅತಿ ಕೆಟ್ಟು ಹೋಗಿದ್ದ ಸುಮಾರು 4.50 ಕಿಮಿ ಆಯ್ದ ಭಾಗಗಳನ್ನು ದುರಸ್ತಿ ಪಡಿಸಲಾಗಿದೆ. ಹಾಗೂ 1.75 ಕಿಮಿ. ಉದ್ದವನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದ್ದು ಅದರಲ್ಲಿ 1.00 ಕಿಮಿ.ಉದ್ದಕ್ಕೆ ಡಾಂಬರೀಕರಣ ಮಾಡುವ ಬಗ್ಗೆ ಗುತ್ತಿಗೆಗಳನ್ನು ಕರೆಯಲಾಗಿದೆ.

ಇ. ಅನುದಾನದ ಲಭ್ಯತೆಯನ್ನು ಅನುಸರಿಸಿ ಹಂತ ಹಂತವಾಗಿ ಈ ರಸ್ತೆಯ ಡಾಂಬರೀಕರಣವನ್ನು ಮಾಡುವ ಪ್ರಸ್ತಾಪವಿದೆ.

ಶ್ರೀ ಎಸ್.ಎಸ್. ಭೀಮಣ್ಣನವರು:- ಮಾನ್ಯ ಅಧ್ಯಕ್ಷರೇ, ಪ್ರಶ್ನೆಗೆ ಉತ್ತರ ಬಂದಿದೆ. ಇಲ್ಲಿ ಬಡ್ಜೆಟ್‌ನಲ್ಲಿ ಕೆಲವೊಂದು ಕಾಮಗಾರಿಗಳನ್ನು ಸೂಚಿಸಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಬಡ್ಜೆಟ್‌ನಲ್ಲಿ ಹಾಕಿದರೆ ಈ ಕೆಲಸ ಪೂರ್ಣವಾಗುತ್ತದೆ ಎಂದು ಹೇಳಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್:- ಅವರು ಪ್ರಶ್ನೆಯನ್ನೇ ಹಾಕಲಿಲ್ಲ.

ಅಧ್ಯಕ್ಷರು:- ಅವರು ಉತ್ತರ ಬಂದಿದೆ ಎಂದು ಹೇಳಿದರು.

ಶ್ರೀ ಕೆ. ಹೆಚ್. ರಂಗನಾಥ್:- ಚಿಕ್ಕೋಡಿ ತಾಲ್ಲೂಕಿನ ಕಬ್ಬೂರು ಗ್ರಾಮದಿಂದ ರಾಯಭಾಗ್‌ಗೆ ಕೇಂದ್ರಕ್ಕೆ ಹೋಗುವ ರಾಯ್‌ಭಾಗ್ - ಕಬ್ಬೂರ್ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಸುಮಾರು 12.8 ಕಿ.ಮೀ ನಿಂದ 29.30 ಕಿ.ಮೀ ವ್ಯಾಪ್ತಿಯಲ್ಲಿ ಈ ರಸ್ತೆ ಬರುತ್ತದೆ. ಇದು ರಸ್ತೆಯಾಗಿದ್ದು ರಾಯ್‌ಭಾಗ್‌ಗೆ ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಬರುವುದರಿಂದ ಕಬ್ಬಿನ ಲಾರಿಗಳ ಪ್ರಯಾಣ ಜಾಸ್ತಿಯಾಗಿರುವುದರಿಂದ ರಸ್ತೆಗಳು ಕೆಟ್ಟಿವೆ ಎಂಬುದು ಸರ್ಕಾರದ ಗಮನಕ್ಕೂ ಕೂಡ ಬಂದಿವೆ. ಹೀಗೆ ಕೆಟ್ಟು ಹೋಗಿರುವ ಭಾಗಗಳಲ್ಲಿ ದುರಸ್ತಿ ಕೂಡ ಮಾಡಲಾಗಿದೆ. ಪ್ರಸಕ್ತ 1.75ಕಿ.ಮೀ ಉದ್ದದ ಆಯ್ದ ಭಾಗಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಗಳನ್ನು ಕೂಡ ಸರ್ಕಾರ ಕೈಗೆತ್ತಿಕೊಂಡಿದೆ. ಅದು ಅಲ್ಲದೆ 1 ಕಿ.ಮೀ. ಉದ್ದಕ್ಕೆ ಡಾಂಬರೀಕರಣ ಮಾಡುವ ಸಲುವಾಗಿ ಗುತ್ತಿಗೆಯನ್ನು ಕರೆಯಲಾಗಿದೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:- 17 ಕಿ.ಮೀ ರಸ್ತೆಯಲ್ಲಿ 7 ಕಿಮೀ ರಸ್ತೆಯನ್ನು ದುರಸ್ತಿ ಮಾಡುವುದಕ್ಕೆ ತಾವು ಕ್ರಮ ತೆಗೆದುಕೊಂಡಿದ್ದೀರಿ. ಇನ್ನು 10 ಕಿ.ಮೀ ಪೂರ್ತಿ ಹಾಳಾಗಿದೆ. ರಸ್ತೆ ಸಂಚಾರ ಮಾಡುವುದಕ್ಕೆ ಅನರ್ಹವಾಗಿದೆ. ಕೊನೆಯ ಪಕ್ಷ ಪಾಟ್‌ಹೋಲ್ಸ್ ತುಂಬಿಸಿ; ರಾಯ್‌ಭಾಗ್‌ವರೆಗೆ ಪ್ರಯಾಣ ಮಾಡುವುದಕ್ಕೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್:- 1993-94ರ ಆಯವ್ಯಯದಲ್ಲಿ ಈ ರಸ್ತೆ ಅಭಿವೃದ್ಧಿ ಮಾಡಬೇಕೆಂದು 18 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ತೆಗೆದುಕೊಳ್ಳಬೇಕೆಂಬ ಪ್ರಸ್ತಾವನೆಯನ್ನು ಮುಖ್ಯ ಇಂಜಿಯರ್ ಸಲ್ಲಿಸಿದ್ದಾರೆ. ಅದರ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆ.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯ ಪ್ರಮಾಣ

397: ಶ್ರೀ ಜಿ. ರಾಜುಗೌಡ (ಹನೂರು):– ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ಮೆಗಾವಾಟ್ ವಿದ್ಯುತ್ ಉತ್ಪಾದನೆ ಸಾಧ್ಯವಿರುವುದು;

ಆ) 1992-93ನೇ ಸಾಲಿನಲ್ಲಿ ರಾಜ್ಯದಲ್ಲಿ ವಿದ್ಯುತ್ ಬರವನ್ನು ಹೋಗಲಾಡಿಸಲು ನಿಗದಿಪಡಿಸಿದ ಹಣ ಎಷ್ಟು;

ಇ) ಇದರಲ್ಲಿ ಯಾವ ಯಾವ ಕಾರ್ಯಕ್ರಮಕ್ಕೆ ಎಷ್ಟೆಷ್ಟು ವೆಚ್ಚ ಮಾಡಲಾಗಿದೆ;

ಈ) ಖಾಸಗಿ ವಲಯಗಳ ಬಂಡವಾಳ ಹೂಡಿಕೆಯ ದೃಷ್ಟಿಯಿಂದ ಸರ್ಕಾರದ ಯಾವ ರೀತಿ ಎಷ್ಟರ ಮಟ್ಟಿಗೆ ಪ್ರಗತಿ ಸಾಧಿಸಿರುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ರಾಜ್ಯದಲ್ಲಿ ಒಟ್ಟು ವಿದ್ಯುತ್ ಉತ್ಪದನೆ ಸಾಧ್ಯತೆ 3122 ಮೆ.ವ್ಯಾ. ಇದರಲ್ಲಿ ಖಾಸಗಿ ವಲಯದ 18 ಮೆ.ವ್ಯಾ. ಉತ್ಪಾದನೆಯು ಸೇರಿರುತ್ತದೆ.

ಆ) 1992-93ನೇ ಸಾಲಿಗೆ ಒದಗಿಸಲಾಗಿರುವ ಮೊತ್ತ 355,01 ಕೋಟಿ ರೂಪಾಯಿಗಳಾಗಿರುತ್ತದೆ.

ಇ) ವಿವಿಧ ಯೋಜನೆಗಳು ಆಗಿರುವ ಒಟ್ಟು ವೆಚ್ಚ 279.25 ಕೋಟಿ ರೂಪಾಯಿಗಳು.

ಈ) ಪ್ರಸ್ತುತದಲ್ಲಿ ಖಾಸಗಿ ವಲಯದಲ್ಲಿನ ಉತ್ಪಾದನಾ ಶಕ್ತಿ 18 ಮೆ. ವ್ಯಾ.

ಶ್ರೀ ಎಸ್.ಎಂ. ಕೃಷ್ಣ:– 'ಆ' ಉತ್ತರಕ್ಕೆ ಒಂದು ಸಣ್ಣ ತಿದ್ದುಪಡಿ ಇದೆ. ಇನ್ನೂ ನಾಲ್ಕು ಸಾವಿರ ಮೆಗವ್ಯಾಟ್ ಹೈಡಲ್ ಸಾಮರ್ಥ್ಯವನ್ನು ರಾಜ್ಯ ಹೊಂದಿದೆ.

ಶ್ರೀ ಜಿ. ರಾಜುಗೌಡ:– ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ತಾವು ವಿದ್ಯುತ್ ಉತ್ಪಾದನೆ 3122 ಮೆ.ವ್ಯಾ. ಎಂದು ಹೇಳಿದ್ದೀರಿ. ಎಷ್ಟು ಉತ್ಪಾದನೆ ಮಾಡುವುದಕ್ಕೆ ಈ ರಾಜ್ಯದಲ್ಲಿ ಅವಕಾಶವಿದೆ ಎನ್ನತಕ್ಕಂಥ ಒಂದು ಪ್ರಶ್ನೆ. ತಾವು ಹೊರ ರಾಜ್ಯದ ಎಷ್ಟು ವಿದ್ಯುತ್‌ನ್ನು ಪಡೆಯುತ್ತಿದ್ದೀರಿ ? ರಾಜ್ಯದಲ್ಲಿ ಎಷ್ಟು ಉತ್ಪಾದನೆ ಮಾಡಲಿಕ್ಕೆ ಅವಕಾಶವಿದೆ; ಮತ್ತು ಉತ್ಪಾದನೆ, ಬೇಡಿಕೆ ಮತ್ತು ವಿತರಣೆಗೆ ಏನು ಸಂಬಂಧವಿದೆ ? ಎಂಬುದನ್ನು ತಿಳಿಸಬೇಕು.

ಶ್ರೀ ಎಸ್.ಎಂ. ಕೃಷ್ಣ:– ಮಾನ್ಯ ಅಧ್ಯಕ್ಷರೇ, ನಾನು ಸದನಕ್ಕೆ ಆಗಿಂದಾಗ್ಗೆ ಹೇಳುತ್ತಿದ್ದೇನೆ, ನಮ್ಮ ಒಟ್ಟು ಅವೇಲೆಬಲ್ ಪವರ್ 47 ಲಕ್ಷ ಮಿಲಿಯನ್ ಯೂನಿಟ್ಸ್; ನಮಗೆ ಇವತ್ತು ಬೇಕಾಗಿರತಕ್ಕಂಥಾದ್ದು 57 ಲಕ್ಷ ಮಿಲಿಯನ್ ಯೂನಿಟ್ಸ್ ಎಂದು. ಉತ್ಪಾದನಾ ದೃಷ್ಟಿಯಿಂದ ಹೇಳುವುದಾದರೆ ಒಟ್ಟು 3,122 ಮೆಗವ್ಯಾಟ್ ನಮ್ಮ ವಿದ್ಯುತ್ ಉತ್ಪಾದನೆ. ಅದರಲ್ಲಿ ಕರ್ನಾಟಕ ವಿದ್ಯುತ್ ನಿಗಮ ಮತ್ತು ಕರ್ನಾಟಕ ವಿದ್ಯುತ್ ಮಂಡಲಿ ಇವೆರಡೂ ಸೇರಿವೆ. ಮತ್ತು ಇನ್ನೊಂದು ಖಾಸಗಿ ವಲಯದ 18 ಮೆಗವ್ಯಾಟ್ ಸೇರಿದೆ. ಇನ್ನು ಹೊರರಾಜ್ಯಗಳಲ್ಲಿ ನಾವು ಎಷ್ಟು ಪಡೆಯುತ್ತಿದ್ದೇವೆ ಎಂದರೆ ಸುಮಾರು 500 ರಿಂದ 600 ಮೆಗವ್ಯಾಟ್‌ನಷ್ಟು ವಿದ್ಯುತ್‌ನ್ನು ನಾವು ತರಿಸಿಕೊಳ್ಳುತ್ತಿದ್ದೇವೆ. ಅದೂ ಕೂಡ ಸಾಕಾಗುವುದಿಲ್ಲ.

ಶ್ರೀ ಜಿ. ರಾಜುಗೌಡ:– ತಾವು ಖಾಸಗೀ ವಲಯದಿಂದ ಸುಮಾರು 18 ಮೆಗವ್ಯಾಟ್ ವಿದ್ಯುತ್

ಉತ್ಪಾದನೆಯಾಗಿದೆ ಎಂದು ಹೇಳಿದಿರಿ. ಖಾಸಗೀ ವಲಯದಲ್ಲಿ ಉತ್ಪಾದನೆ ಮಾಡಿದಾಗ ಒಂದು ಕಿಲೋವ್ಯಾಟ್‌ಗೆ ಎಷ್ಟು ಖರ್ಚಾಗುತ್ತದೆ ?

ಶ್ರೀ ಎಸ್.ಎಂ. ಕೃಷ್ಣ:– ನನ್ನ ಹತ್ತಿರ ಕಿಲೋವ್ಯಾಟ್ ಬ್ರೇಕಪ್ ಇಲ್ಲ. ನನ್ನ ಹತ್ತಿರ ಮೆಗವ್ಯಾಟ್ ಬ್ರೇಕ್‌ಅಪ್ ಇದೆ. ಮಾನ್ಯ ರಾಜುಗೌಡರು ಕೇಳಿರತಕ್ಕಂತಹ ಪ್ರಶ್ನೆಗೆ ನನ್ನ ದೃಷ್ಟಿಯಲ್ಲಿ ಖಾಸಗೀ ವಲಯದಲ್ಲಿ ವಿದ್ಯುತ್ ಉತ್ಪಾದನೆ ಮಾಡಿದರೂ ಒಂದೇ ಖರ್ಚು ಬರುತ್ತದೆ. ಆದರೆ ಸರ್ಕಾರಿ ವಲಯದಲ್ಲಿ ವಿದ್ಯುತ್ ಉತ್ಪಾದನೆ ಮಾಡಿದರೆ ಅದು ತಡವಾದರೆ ಖರ್ಚು ಜಾಸ್ತಿಯಾಗಬಹುದು ಎನ್ನುವಂತಹ ಭಯ ನನಗೆ ಇದೆ. ಆದುದರಿಂದ ಖರ್ಚಿನಲ್ಲಿ ಏನೂ ಅಂತಹ ಹೆಚ್ಚುಕಡಿಮೆ ಬರುವುದಿಲ್ಲ. ನನ್ನ ಅಂದಾಜಿನ ಪ್ರಕಾರ ಒಂದು ಮೆಗವ್ಯಾಟ್ ವಿದ್ಯುತ್ ಉತ್ಪಾದನೆ ಆಗಬೇಕಾಗದರೆ ಕನಿಷ್ಠ 3 ಕೋಟಿಯಿಂದ ಮೂರುವರೆ ಕೋಟಿ ರೂಪಾಯಿಗಳು ಎಂದು ಅಂದಾಜು ಮಾಡಲಾಗಿದೆ. ಹೈಡಲ್ ಪವರ್ ಆದರೆ ಸ್ವಲ್ಪ ಚೀಪ್ ಆಗಬಹುದು. ಕಡಿಮೆ ವೆಚ್ಚದಲ್ಲಿ ಹೈಡಲ್ ಪವರ್ ಅನ್ನು ಮಾಡಬಹುದು.

ಶ್ರೀ ಜಿ. ರಾಜುಗೌಡ:– ಖಾಸಗೀ ವಲಯದಲ್ಲಿ ತಾವು ಉತ್ಪಾದನೆ ಮಾಡುವುದಕ್ಕೆ ತಮಗೆ ಇರತಕ್ಕಂಥಹ ತೊಂದರೆಗಳು ಏನು ? ಬಂಡವಾಳ ಹೂಡುವುದಕ್ಕೆ ತಮಗೆ ತೊಂದರೆ ಇದೆಯೇ ? ಹಾಗಿದ್ದ ಮೇಲೆ ವೆಚ್ಚ ಕಡಿಮೆಯಾಗುತ್ತದೆ ಎಂದು ತಮಗೆ ಅಭಿಪ್ರಾಯ ಬಂದಮೇಲೆ ತಾವು ಏಕೆ ಖಾಸಗೀ ವಲಯಕ್ಕೆ ಹೆಚ್ಚಿಗೆ ಉತ್ಪಾದನೆ ಮಾಡುವುದಕ್ಕೆ ಅವಕಾಶ ಮಾಡಬಾರದು ? ಇದರಿಂದ ತಮಗೆ ಇರತಕ್ಕಂತಹ ತೊಂದರೆ ಏನು ?

ಶ್ರೀ ಎಸ್.ಎಂ. ಕೃಷ್ಣ:– ಈಗ ನಮ್ಮ ಸರ್ಕಾರದಲ್ಲಿ ಸಂಪನ್ಮೂಲಗಳ ಕೊರತೆ ಇದೆ ಎನ್ನುವುದು ಎಲ್ಲರಿಗೂ ತಿಳಿದಿರತಕ್ಕಂತಹ ವಿಚಾರ. ಆದುದರಿಂದಲೇ ಕೇಂದ್ರ ಸರ್ಕಾರದವರು ಕೇಂದ್ರ ವಿದ್ಯುತ್ ಆ್ಯಕ್ಟನ್ನು ಬದಲಾವಣೆ ಮಾಡಿ, ಮೊಟ್ಟ ಮೊದಲನೆಯ ಬಾರಿಗೆ ಖಾಸಗಿ ಕ್ಷೇತ್ರದವರು ವಿದ್ಯುತ್ ಉತ್ಪಾದನೆಗೆ ಬರಬೇಕು ಎಂದು ಅವರಿಗೆ ಅವಕಾಶ ಕೊಟ್ಟಿರುವುದರ ಹಿನ್ನೆಲೆಯಲ್ಲಿ ಈಗಾಗಲೇ ನಾವು ಕೆಲವು ಖಾಸಗಿ ಸಂಸ್ಥೆಯವರ ಜೊತೆಯಲ್ಲಿ ನಾನಾ ಘಟ್ಟಗಳಲ್ಲಿ ಮಾತುಕತೆಗಳು ನಡೆಯುತ್ತಿವೆ. ಒಂದೆರಡು ಪ್ರಾಜೆಕ್ಟ್‌ಗಳು ಮಾತ್ರ ಅಂತಿಮ ಘಟ್ಟವನ್ನು ತಲುಪಿದೆ. ಆ ಅಂತಿಮ ಘಟ್ಟ ತಲುಪಿರತಕ್ಕಂಥಹ ಎರಡು ಪ್ರಾಜೆಕ್ಟಗಳ ಮೂಲಕ ಸುಮಾರು ಒಂದೂವರೆ ಸಾವಿರ ಮೆಗವ್ಯಾಟ್ ವಿದ್ಯುತ್ ಉತ್ಪಾದನೆ ಕೆಲಸ ನಮ್ಮ ರಾಜ್ಯದಲ್ಲಿ ಉಂಟಾಗುತ್ತದೆ ಎನ್ನುವಂತಹ ಆಸೆ ನನಗೆ ಇದೆ.

ಶ್ರೀ ಸಿ. ಬೈರೇಗೌಡ:– ಈ ಖಾಸಗಿ ರಂಗಕ್ಕೆ ಹೈಡ್ರೋ ಎಲೆಕ್ಟ್ರಿಕ್ ಪವರನ್ನು ಜನರೇಟ್ ಮಾಡತಕ್ಕಂಥ ಅವಕಾಶವನ್ನು ತಾವು ಒದಗಿಸಿಕೊಡುತ್ತೀರಿ ಎನ್ನುವಂಥ ಮಾತನ್ನು ಹೇಳುತ್ತಿದ್ದೀರಿ. ಯಾವ್ಯಾವ ಯೋಜನೆಗಳನ್ನು ಖಾಸಗೀ ವಲಯಕ್ಕೆ ವಹಿಸಬೇಕು ಎನ್ನುವಂಥ ಆಲೋಚನೆಯನ್ನು ತಾವು ಮಾಡಿದ್ದೀರಿ ? ಮತ್ತು ಎಷ್ಟು ಪ್ರಮಾಣದ ವಿದ್ಯುತ್‌ಅನ್ನು ಅವರು ಉತ್ಪಾದನೆ ಮಾಡಬೇಕು ಎನ್ನುವುದನ್ನು ಏನಾದರೂ ತಾವು ಅಂದಾಜು ಮಾಡಿದ್ದೀರಾ ? ಈ ಯೋಜನೆಗಳನ್ನು ಕಾಲಬದ್ಧವಾಗಿ ಮುಗಿಸಬೇಕು ಎನ್ನುವುದಕ್ಕೆ ಖಾಸಗಿಯವರಿಗೆ ಏನಾದರೂ ನಿರ್ದೇಶನ ಕೊಡುತ್ತೀರಾ ?

ಶ್ರೀ ಎಸ್.ಎಂ. ಕೃಷ್ಣ:– ಈಗಾಗಲೇ ಸಚಿವ ಸಂಪುಟ ತೆಗೆದುಕೊಂಡಿರುವ ನಿರ್ಧಾರದ ಪ್ರಕಾರ ಈ ಜಲ ವಿದ್ಯುತ್ ಯೋಜನಾ ಉತ್ಪಾದನೆಯನ್ನು ಸಾರ್ವಜನಿಕ ಕ್ಷೇತ್ರಕ್ಕೆ ಮೀಸಲಾಗಿಡಬೇಕು. ಮತ್ತು ಈ ಥರ್ಮಲ್ ಮತ್ತಿತರ ವಿದ್ಯುತ್ ಉತ್ಪಾದನಾ ಕ್ಷೇತ್ರಗಳನ್ನು ಖಾಸಗೀ ಕ್ಷೇತ್ರಕ್ಕೆ ಕೊಡಬೇಕು ಎನ್ನುವಂತಹ ನೀತಿಯನ್ನು ಈಗಾಗಲೇ ಸರ್ಕಾರ ರೂಪಿಸಿಕೊಂಡಿದೆ. ಈ ನೀತಿಯ ಹಿನ್ನೆಲೆಯಲ್ಲಿ ಎಷ್ಟು ಹಣ ಕರ್ನಾಟಕ ವಿದ್ಯುತ್ ನಿಗಮ ಇದಕ್ಕೆ ತೆರಬೇಕು ಎನ್ನುವುದರ ಬಗ್ಗೆ ಈಗ ನಾವು ಅಂದಾಜನ್ನು ಸಿದ್ಧಪಡಿಸುತ್ತಿದ್ದೇವೆ. ಅದು ಸಿದ್ಧವಾದ ಕೂಡಲೇ ಎಷ್ಟು ಹಣ ಬೇಕಾಗುತ್ತದೆ. ಮತ್ತು

ಅಷ್ಟು ಹಣವನ್ನು ಕ್ರೋಢೀಕರಿಸುವುದಕ್ಕೆ ಸಾಧ್ಯವೇ ಎನ್ನುವುದನ್ನು ಕೂಡ ಈ ಸಭೆಯ ಗಮನಕ್ಕೆ ತಂದು ಆದರ ಜೊತೆಯಲ್ಲಿ ನನ್ನ ಚಿಂತನೆಯನ್ನು ಹಂಚಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತ ತಡೆಗಟ್ಟಲು ಕ್ರಮ

1953: ಶ್ರೀ ಜಿ.ಎಸ್. ಆಚಾರ್ (ಬೈಂದೂರು):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿ 1991-92, 1992-93ನೇ ವರ್ಷಗಳಲ್ಲಿ ಸಮುದ್ರ ಕೊರೆತದಿಂದ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳಾವುವು, ಅದಕ್ಕೆ ತಗುಲಿದ ವೆಚ್ಚವೆಷ್ಟು;

ಆ) ಅವುಗಳಲ್ಲಿ ಅಪೂರ್ಣವಾದವು ಎಷ್ಟು ? ಪೂರ್ಣಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗುತ್ತದೆ;

ಇ) 1993-94ರಲ್ಲಿ ಯಾವ ಯಾವ ಸಮುದ್ರ ಕೊರೆತ ಮಾಡಿಸಲಾಗುವ ಕಾಮಗಾರಿಗಳೆಷ್ಟು ? ಅವು ಯಾವುವು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) 1991-92ರಲ್ಲಿ ಯಾವ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ. 1992-93ರಲ್ಲಿ 5 ಕಾಮಗಾರಿಗಳನ್ನು ಕೈಗೊಂಡಿದ್ದು ವಿವರವನ್ನು ಅನುಬಂಧ–ಎ ನಲ್ಲಿ ನೀಡಲಾಗಿದೆ.

ಆ) ಕೈಗೊಂಡಿರುವ ಎಲ್ಲ 5 ಕಾಮಗಾರಿಗಳು ಪ್ರಗತಿಯಲ್ಲಿವೆ ಮತ್ತು ಮುಂಬರುವ ಮಳೆಗಾಲದೊಳಗೆ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುವುದು.

ಇ) ಸಮುದ್ರ ಕೊರೆತ ಮಾಡಿಸುವ ಕಾಮಗಾರಿಗಳು ಯಾವುದೂ ಇಲ್ಲ. ಆದರೆ ಸಮುದ್ರ ಕೊರೆತ ತಡೆಗೋಡೆ ನಿರ್ಮಿಸುವ 7 ಕಾಮಗಾರಿಗಳನ್ನು ಉದ್ದೇಶಿಸಲಾಗಿದೆ. ವಿವರಗಳನ್ನು ಅನುಬಂಧ ಬಿ ನಲ್ಲಿ ನೀಡಲಾಗಿದೆ.

ಅನುಬಂಧ – ಎ

ವಿಧಾನ ಸಭಾ ಸದಸ್ಯರಾದ ಶ್ರೀ ಜಿ.ಎಸ್. ಆಚಾರ್‌ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1953ರ (ಅ) ಪ್ರಶ್ನೆಗೆ ಸಂಬಂಧಿಸಿದಂತೆ ವಿವರ.

1992-93ರಲ್ಲಿ ಬೈಂದೂರು ಕ್ಷೇತ್ರದಲ್ಲಿ ಕೈಗೊಂಡಿರುವ ಸಮುದ್ರ ರಕ್ಷಣಾ ಕಾಮಗಾರಿಗಳ ವಿವರ

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ತಾಲ್ಲೂಕು	ಅಂದಾಜು ವೆಚ್ಚ	1992-93 ಅನುದಾನ	1992-93 ರಲ್ಲಿ ಮಾಡಲಾದ ವೆಚ್ಚ
1.	ಪಡುವರಿ ಗ್ರಾಮದ ಕೋಟೆ ಬಾಗಿಲು ಬಳಿ ಸಮುದ್ರ ಕೊರೆತ ತಡೆಗೋಡೆ ಚೈ. 60-160 ಮೀ.	ಕುಂದಾಪುರ	13.00	4.00	2.44
2.	ಕಳಿಹಿತ್ಲು ಬಳಿ ಸಮುದ್ರ ಕೊರೆತ ತಡೆಗೋಡೆ ನಿರ್ಮಾಣ ಚೈ. 150-250ಮೀ.	ಕುಂದಾಪುರ	13.25	4.00	1.12
3.	ಅಳವೆಗದ್ದೆ ಬಳಿ ಸಮುದ್ರ ಕೊರೆತ ತಡೆಗೋಡೆ ನಿರ್ಮಾಣ ಚೈ.50-150 ಮೀ.	ಕುಂದಾಪುರ	13.40	4.25	3.17
4.	ಗುಜ್ಜಾಡಿ ಬಳಿ ಸಮುದ್ರ ಕೊರೆತ ತಡೆಗೋಡೆ ನಿರ್ಮಾಣ ಚೈ. 0-100 ಮೀ.	ಕುಂದಾಪುರ	11.65	3.50	2.80
5.	ಗುಜ್ಜಾಡಿ ಬಳಿ ಸಮುದ್ರ ಕೊರೆತ ತಡೆಗೋಡೆ ನಿರ್ಮಾಣ ಚೈ. 100-200 ಮೀ.	ಕುಂದಾಪುರ	13.30	4.00	5.37
		ಒಟ್ಟು:	64.60	19.75	14.90

ಅನುಬಂಧ – ಬಿ

ವಿಧಾನ ಸಭಾ ಸದಸ್ಯರಾದ ಶ್ರೀ ಜಿ.ಎಸ್. ಆಚಾರ್‌ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1953ರ (ಇ) ಪ್ರಶ್ನೆಗೆ ಸಂಬಂಧಿಸಿದಂತೆ ವಿವರ.

1993–94ನೇ ಸಾಲಿನಲ್ಲಿ ಬೈಂದೂರು ಕ್ಷೇತ್ರದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಸಮುದ್ರ ಕೊರೆತ ರಕ್ಷಣಾ ಕಾಮಗಾರಿಗಳು

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ಕಾಮಗಾರಿಗಳ ವಿವರ	ತಾಲ್ಲೂಕು	ಅಂದಾಜು ವೆಚ್ಚ	1993–94ನೇ ಸಾಲಿನ ಅನುದಾನ
1.	ಕಿರುಮಂಜೇಶ್ವರ ಹೊಸ ಹಿತ್ತಲು ಎಂಬಲ್ಲಿ ಸಮುದ್ರ ಕೊರೆತ ತಡೆಗೋಡೆ ಕಾಮಗಾರಿ (100 ಮೀ.)	ಕುಂದಾಪುರ	14.00	4.25
2.	ಗಂಗೇಬೈಲು ಎಂಬಲ್ಲಿ ಸಮುದ್ರ ಕೊರೆತ ತಡೆ ಕಾಮಗಾರಿ (100 ಮೀ.)	ಕುಂದಾಪುರ	13.00	4.00
3.	ಕರ್ಕಿಕಾಳಿ ಎಂಬಲ್ಲಿ ಸಮುದ್ರ ಕೊರೆತ ತಡೆಗೋಡೆ ಕಾಮಗಾರಿ ಚೈ. 125–600ರಿಂದ 125.800 ಕಿ.ಮೀ.	ಕುಂದಾಪುರ	37.50	11.25
4.	ಕರ್ಕಿಕಾಳಿ ಎಂಬಲ್ಲಿ ಸಮುದ್ರ ಕೊರೆತ ತಡೆಗೋಡೆ ಕಾಮಗಾರಿ ಚೈ. 125.800 ರಿಂದ 126–100 ಕಿ.ಮೀ.	ಕುಂದಾಪುರ	50.00	0.10
5.	ಕೋಟೆ ಬಾಗಿಲು ಎಂಬಲ್ಲಿ ಸಮುದ್ರ ಕೊರೆತ ತಡೆಗೋಡೆ ಕಾಮಗಾರಿ. ಚೈ. 131.840 ರಿಂದ 131.990 ಕಿ.ಮೀ.	ಕುಂದಾಪುರ	20.00	6.00
6.	ಕಳಿಹಿತ್ತಲು ಎಂಬಲ್ಲಿ ಸಮುದ್ರ ಕೊರೆತ ತಡೆಗೋಡೆ ಕಾಮಗಾರಿ ಚೈ. 250 ರಿಂದ 675 ಮೀ.	ಕುಂದಾಪುರ	50.00	15.00
7.	ಅಳಿವೆಗದ್ದೆ ಎಂಬಲ್ಲಿ ಸಮುದ್ರ ಕೊರೆತ ತಡೆಗೋಡೆ ಕಾಮಗಾರಿ ಚೈ. 137.115 ರಿಂದ 137.215 ಕಿ.ಮೀ.	ಕುಂದಾಪುರ	14.00	4.50
		ಒಟ್ಟು:	198.50	45.10

ಶ್ರೀ ಜಿ.ಎಸ್. ಆಚಾರ್:– ಮಾನ್ಯ ಅಧ್ಯಕ್ಷರೇ,ನನ್ನ ಕ್ಷೇತ್ರದಲ್ಲಿ ಸಮುದ್ರ ಕೊರೆತದ ಐದು ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿದೆ ಎನ್ನುವ ವಿಚಾರವನ್ನು ಮಂತ್ರಿಗಳು ಹೇಳಿದ್ದಾರೆ. ಆದರೆ ನನಗೆ ತಿಳಿದ ಹಾಗೆ ಬೈಂದೂರು, ಕುಂದಾಪುರ, ಹಾಗೂ ಬ್ರಹ್ಮಾವರ ಕ್ಷೇತ್ರಗಳಲ್ಲಿ ಕಾಮಗಾರಿಗಳಿಗೆ 39 ಲಕ್ಷ ರೂಪಾಯಿಗಳ ಪಾವತಿ ಬಾಕಿ ಇದೆ. ಈ ಹಣವನ್ನು ಮಾರ್ಚಿ ಅಂತ್ಯದೊಳಗೆ ಕೊಡುತ್ತೀರಾ ? ಮತ್ತು ಮಳೆಗಾಲದೊಳಗೆ ಆ ಕಾಮಗಾರಿ ಸಂಪೂರ್ಣವಾಗುವುದೇ ಎನ್ನುವುದು ಒಂದು. ಎರಡನೆಯದು ನನ್ನ ಪ್ರಶ್ನೆಯಲ್ಲಿ 'ಇ' ವಿಭಾಗದಲ್ಲಿ ನಾನು ಸಮುದ್ರ ಕೊರೆತ ಮಾಡಿಸುವ ಕಾಮಗಾರಿಗಳೆಷ್ಟು ಎಂದು ಕೇಳಲೇ ಇಲ್ಲ. ನನ್ನ ಕ್ಷೇತ್ರದಲ್ಲಿ ಸಮುದ್ರ ಕೊರೆತ ಆಗಲಿ, ಅದಕ್ಕೋಸ್ಕರ ಕಾಮಾಗಾರಿಯಾಗಲಿ ಎಂದು ನಾನು ಕೇಳಲಿಲ್ಲ. ಇದು ಏತಕ್ಕೆ ನಾನು ಕೇಳಿದ ಪ್ರಶ್ನೆ ತಿರುವಾಗಿ ಪ್ರಿಂಟ್ ಆಯಿತೋ ನನಗೆ ಗೊತ್ತಿಲ್ಲ. ಅಲ್ಲಿಯ ಶಾಸಕನಾಗಿ ಸಮುದ್ರದ ಕೊರೆತ ಏನು ಎಂದು ನನಗೆ ಗೊತ್ತಿದ್ದು ಸಮುದ್ರ ಕೊರೆತ ಮಾಡಿಸುವುದಕ್ಕೆ ಏನು ಕಾಮಗಾರಿ ಮಾಡುತ್ತೀರಿ ಎಂದು ಕೇಳುವಷ್ಟು ನಾನು ಮೂರ್ಖನಲ್ಲ. ಇದು ಪ್ರಶ್ನೆ ತಿರುವು ಮುರುವು ಆಗಿದೆ. ಈ ರೀತಿ ಬಂದಿದೆ. ಹೋಗಲಿ. ಅದಕ್ಕೆ ಸಮುದ್ರ ಕೊರೆತ ಮಾಡಿಸುವ ಕಾಮಗಾರಿ ನಾವು ತೆಗೆದುಕೊಳ್ಳುತ್ತಿಲ್ಲ ಎನ್ನುವ ಪ್ರಾಮಾಣಿಕ ಉತ್ತರಕೊಟ್ಟಿದ್ದಾರೆ. ಧನ್ಯವಾದಗಳು. ಆದರೆ ಮುಂದೆ ಆಗುವಂಥ ಏಳು ಕಾಮಗಾರಿಗಳು ಯಾವುದು ಇದೆ. ಆ ಕಾಮಗಾರಿಯನ್ನು ಮುಂದಿನ ವರ್ಷ ತೆಗೆದುಕೊಳ್ಳಲಾಗುವುದೇ ? ಇದಕ್ಕೆ ನನಗೆ ಬೇಕು ಸ್ಪಷ್ಟವಾದ ಉತ್ತರ.

ಡಾ।। ಆರ್.ಬಿ. ಚೌಧರಿ:– ಮಾನ್ಯ ಅಧ್ಯಕ್ಷರೇ, 39 ಲಕ್ಷ ಗ್ರಾಂಟನ್ನು ಬಿಡುಗಡೆ ಮಾಡುತ್ತೀರಾ ಎಂದು ಕೇಳಿದ್ದೀರಿ. ಅದರ ಬಗ್ಗೆ ಆದ್ಯತೆ ಮೇರೆಗೆ ನಾವು ಗ್ರಾಂಟನ್ನು ಕೊಡುತ್ತಿದ್ದೇವೆ. ಸಮುದ್ರ ತಡೆ ಏನು ಇದೆ, ಅದಕ್ಕೆ ಗೋಡೆ ಕಟ್ಟುವ ಕಾಮಗಾರಿಗಳ ಸಲುವಾಗಿ ನಾವು ಗ್ರಾಂಟ್ ಕೊಡುತ್ತೇವೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಮತ್ತು ಈ ಪ್ರಶ್ನೆ ತಿರುವು ಮುರುವು ಆಗಿರುವುದು ನಿಜ. ಆದರೆ ಈ ಕೆಲಸಗಳನ್ನು ಶೀಘ್ರ ತೆಗೆದುಕೊಳ್ಳುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ.ಎಸ್. ಆಚಾರ್:– ಆದ ಕೆಲಸ ಇದೆ; ಉಳಿದದ್ದು ಆದ್ಯತೆ ಮೇಲೆ ತೆಗೆದುಕೊಳ್ಳುತ್ತೀರಿ. ಆದ ಕೆಲಸ ಇದೆ, ಅದಕ್ಕೆ ಪಾವತಿ ಮಾಡದಿದ್ದರೆ ಬಹಳ ತೊಂದರೆಯಾಗುತ್ತದೆ.

ಡಾ।। ಆರ್. ಬಿ. ಚೌಧರಿ:– ಪಾವತಿ ಮಾಡಬೇಕಾಗುತ್ತದೆ. ಅದರ ಸಲುವಾಗಿ ಮಾಡುತ್ತೇವೆ.

ಕನಕಪುರ ತಾಲ್ಲೂಕು ಕಬ್ಬಾಳ ನಾಲಾ ಯೋಜನೆ

2216:–ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಕನಕಪುರ ತಾಲ್ಲೂಕು ಕಬ್ಬಾಳ ನಾಲಾ ಯೋಜನೆಗೆ ಬಿಡುಗಡೆ ಮಾಡಲಾಗಿರುವ ಹಣವೆಷ್ಟು;

2. ಈ ಯೋಜನೆಗೆ ನಿಗದಿಪಡಿಸಿರುವ ಅವಧಿ ಎಷ್ಟು;

3. ಈ ಯೋಜನೆಯನ್ನು ಇನ್ನು ಮುಂದೆ ಈ ತಾಲ್ಲೂಕಿನಲ್ಲಿ ಮುಂದುವರಿಸುವ ಯೋಜನೆ ಸರ್ಕಾರದಲ್ಲಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

1. ಕಬ್ಬಾಳ ನಾಲಾ ಯೋಜನೆಗೆ ಪ್ರಾರಂಭದಿಂದ ಇದುವರೆಗೆ ಬಿಡುಗಡೆಯಾದ ಹಣದ ಮೊತ್ತ ರೂ.1000.58 ಲಕ್ಷ ರೂಪಾಯಿಗಳು.

2. 1984-85ರಿಂದ 9 ವರ್ಷಗಳ ಅವಧಿಯನ್ನು ನಿಗದಿಪಡಿಸಲಾಗಿದೆ. ಅಂದರೆ 1993 ಮಾರ್ಚಿಗೆ ಯೋಜನೆಯು ಅಂತ್ಯಗೊಳ್ಳಲಿದೆ.

3. ಇಲ್ಲ.

ಶ್ರೀ ಡಿ.ಕೆ ಶಿವಕುಮಾರ್:- ಮಾನ್ಯ ಅಧ್ಯಕ್ಷರೇ, ನನ್ನ ತಾಲ್ಲೂಕಿನಲ್ಲಿ ಸುಮಾರು 84-85ರಿಂದ ಕಬ್ಬಾಳ ನಾಲಾ ಯೋಜನೆಯಡಿಯಲ್ಲಿ ಈ ಒಣ ಭೂಮಿ ಅಭಿವೃದ್ಧಿಪಡಿಸುವಂಥ ಯೋಜನೆ ವಿಶ್ವಬ್ಯಾಂಕ್ ಆರ್ಥಿಕ ನೆರವಿನೊಂದಿಗೆ ಪ್ರಾರಂಭವಾಯಿತು. ಪ್ರಾರಂಭವಾಗಿ ಈ ವರ್ಷ ಮಾರ್ಚಿ 31ಕ್ಕೆ ಮುಚ್ಚುತ್ತೇವೆ ಎಂದು ಹೇಳಿ ಈಗಾಗಲೇ ಕಾರ್ಯದರ್ಶಿಗಳು ಆಜ್ಞೆಯನ್ನು ಮಾಡಿದ್ದಾರೆ. ಈಗಾಗಲೇ ಅದರ ಪ್ರಕಾರ ಐದು ಸಾವಿರ ಚಿಲ್ಲರೆ ಎಕರೆ ಅಭಿವೃದ್ಧಿಯಾಗಿದೆ. ಇನ್ನೊಂದು 800-900 ಎಕರೆ ಮಾತ್ರ ಉಳಿದಿದೆ. ಅದನ್ನು ಈ ವರ್ಷ ಮುಚ್ಚುತ್ತೇವೆ ಎಂದು ಹೇಳಿ ಆಜ್ಞೆಯನ್ನು ಮಾಡಿದ್ದಾರೆ. ನಾನಂತೂ ಹೇಳುತ್ತೇನೆ, ಈ 31ನೇ ತಾರೀಖಿಗೆ ಏನಾದರೂ ಮುಚ್ಚಿದರೆ ನಾನು ವಾಪಸ್ ನನ್ನ ತಾಲ್ಲೂಕಿಗೆ ಹೋಗುವ ಹಾಗೆ ಇಲ್ಲ. ಘೇರಾವ್ ಮಾಡುವಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ ದಯವಿಟ್ಟು ನನಗೆ ರಕ್ಷಣೆಯನ್ನು ಕೊಡಬೇಕಾಗಿದೆ. ಎರಡನೆಯದು ಈ ವರ್ಷ ಇದನ್ನು ಮುಂದುವರಿಸಿಕೊಂಡು ಹೋಗಲೇಬೇಕಾಗಿದೆ. ಇನ್ನು 500-600 ಎಕರೆ ಉಳಿದಿರುವಂಥ ಸಂದರ್ಭದಲ್ಲಿ ಇದನ್ನು ಮುಚ್ಚುವುದು ಬಹಳ ನೋವಾಗುತ್ತದೆ. ಒಂಭತ್ತು ವರ್ಷದಿಂದ 84-85ರಿಂದ ಪ್ರಾರಂಭವಾಗಿದೆ. ಕೃಷಿ ಮಂತ್ರಿಗಳು ಮಾನ್ಯ ಹುಚ್ಚಮಾಸ್ತಿಗೌಡರ ಕಾಲದಲ್ಲಿ ಇದನ್ನು ಮುಚ್ಚುವಂಥ ವ್ಯವಸ್ಥೆ ನಿಜವಾಗಿಯೂ ಬಹಳ ವಿಷಾದಕರ. ತಾವು ದಯವಿಟ್ಟು ನನ್ನ ರಕ್ಷಣೆಗೆ ಬರಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಮಾನ್ಯ ಅಧ್ಯಕ್ಷರೇ, ಈ ಯೋಜನೆ ಕೇವಲ ಒಂಭತ್ತು ವರ್ಷಕ್ಕೆ ಸಂಬಂಧಪಟ್ಟ ಯೋಜನೆ. ಅದರೊಳಗೆ ಅದು ಆಖೈರು ಆಗಬೇಕು. 29 ಸಾವಿರ ಹೆಕ್ಟೇರ್ ಭೂಮಿಯನ್ನು ಅಭಿವೃದ್ಧಿ ಮಾಡಬೇಕು ಎಂದು ಹೇಳಿ ಇದಕ್ಕೆ ಹತ್ತು ಕೋಟಿ ಚಿಲ್ಲರೆ ಹಣವನ್ನು ಒದಗಿಸಬೇಕು ಎಂದು ತೀರ್ಮಾನವಾಗಿದೆ. ಅದರಂತೆ ಈಗ ಒದಗಿಸಬೇಕಾದದ್ದನ್ನೆಲ್ಲಾ ಪಡೆದುಕೊಂಡಿದ್ದರೂ ಸರ್ಕಾರ ಅದರ ಜೊತೆಗೆ ಇನ್ನು ಎರಡು ಲಕ್ಷ ಚಿಲ್ಲರೆ ಹಣ ಹೆಚ್ಚಾಗಿ ಖರ್ಚಾಗಿದೆ. ಆದ್ದರಿಂದ ಈ ಅವಧಿಯಲ್ಲಿ ಮಾರ್ಚಿ ಆಖೈರಿನೊಳಗಾಗಿ ಇದು ಮುಗಿಯಲೇಬೇಕು. ಸರ್ಕಾರದಿಂದ ಈ ಸ್ಪಷ್ಟವಾದ ಚಿತ್ರ ನಮ್ಮ ಮುಂದಿರುವುದರಿಂದ, ಮಾನ್ಯ ಸದಸ್ಯರ ಸತ್ಯಾಗ್ರಹದಿಂದ ಇದು ಉಪಯೋಗವಾಗುವ ಹಾಗೆ ಇಲ್ಲ. ಬೇರೆ ವಿಧದಲ್ಲಿ ಇದು ಮುಂದಿನ ಅಭಿವೃದ್ಧಿ ಯಾವ ರೀತಿ ಮಾಡುವುದಕ್ಕೆ ಸಾಧ್ಯ ಎಂದು ಹೇಳಿ ನಾವು ಆಲೋಚನೆ ಮಾಡಬೇಕಾಗಿದೆ. ಈ ಕೆಲಸಕ್ಕೆ ಈಗಾಗಲೇ ಚೆನ್ನಾಗಿ ಆಗಿದೆ ಎಂದು ಕೇಂದ್ರದ ಪ್ರಶಸ್ತಿಯೂ ಕೂಡ ಬಂದಿದೆ. ಹೀಗಿರುವಾಗ ಮಾನ್ಯ ಸದಸ್ಯರು ಯಾವ ವಿಷಯದಲ್ಲಿ ಲೋಪ ಆಗಿದೆ ಏನು ಎನ್ನುವುದನ್ನು ಸರ್ಕಾರದ ಗಮನಕ್ಕೆ ತಂದರೆ ಅದನ್ನು ಬೇರೆ ರೀತಿಯಲ್ಲಿ ಯೋಚನೆ ಮಾಡುವುದಕ್ಕೆ ಸಾಧ್ಯ ಇದೆ. ಆಲೋಚನೆ ಮಾಡಬಹುದು ಅಷ್ಟೆ.

ಶ್ರೀ ಡಿ.ಕೆ. ಶಿವಕುಮಾರ್:- ನಿಮ್ಮ ಕೈಯಿಂದ ಮಾಡುತ್ತೀರೊ, ಸರ್ಕಾರದಿಂದ ಮಾಡುತ್ತೀರೋ, ಕೇಂದ್ರ ಸರ್ಕಾರದಿಂದ ಮಾಡುತ್ತೀರೋ, ವಿಶ್ವ ಬ್ಯಾಂಕ್‌ನಿಂದ ಮಾಡುತ್ತೀರೋ ನಮಗೆ ಗೊತ್ತಿಲ್ಲ. ಈ ವರ್ಷ ಮಾರ್ಚ್ 31ನೇ ತಾರೀಖು ಮುಚ್ಚುತ್ತೇವೆ ಎಂದು ಆಜ್ಞೆ ಹೊರಡಿಸಿದ್ದೀರಲ್ಲಾ ಅದನ್ನು ತಾವು ರದ್ದು ಮಾಡಬೇಕು. ಮತ್ತೆ ಈ ವರ್ಷ ಮುಂದುವರಿಸಿ ಈಗ ಏನು ಆರು ನೂರು ಎಕರೆ ಜಮೀನು ಉಳಿದುಕೊಂಡಿದೆ. ಆ ಜಮೀನನ್ನು ತಾವು ಅಚ್ಚುಕಟ್ಟು ಮಾಡುವಂತಹ ವ್ಯವಸ್ಥೆ ಮಾಡಬೇಕೆಂದು ಅದ.ಕ.ರ ಮೂಲಕ ಮನವಿ ಮಾಡಿಕೊಳುತಿದೇನೆ. ಅದನು. ತಾವು ಹೇಳಬೇಕು

ಈ ಆಜ್ಞೆ ರದ್ದು ಮಾಡುತ್ತೀರೋ ಅಥವಾ ಮುಂದುವರಿಸುತ್ತೀರೋ ಎಂದು. 9 ವರ್ಷದಿಂದ ಇದ ನಡೆದುಕೊಂಡು ಬರುತ್ತಿದೆ. ತಾವು ಬಂದ ಮೇಲೆ ಇದನ್ನು ಮುಚ್ಚುವಂತಹ ಆಜ್ಞೆ ಮಾಡಿದ್ದೀ ಹಣ ಎಲ್ಲಿಂದ ಬರುತ್ತದೆ ನಮಗೇನು ಗೊತ್ತಿದೆ. ನಮಗೆ ಸರ್ಕಾರ ನಡೆಸುತ್ತಿದೆ ಅಷ್ಟು ಮಾತ್ರ ಗೊತ್ತಿ ಆದ್ದರಿಂದ ದಯವಿಟ್ಟು ನಮ್ಮ ರೈತರುಗಳು ನಿಮ್ಮ ಕಛೇರಿಗೆ ಬೀಗ ಹಾಕುವ ಸಂದರ್ಭ ಬಂದಿ ಅದಕ್ಕೆ ಅವಕಾಶ ಕೊಡಬಾರದು.

ಶ್ರೀ. ಎನ್. ಹುಚ್ಚಮಾಸ್ತಿಗೌಡ:– ಮಾನ್ಯ ಅಧ್ಯಕ್ಷರೇ, ಇದು ಸಾಮಾನ್ಯವಾದಂತಹ ನೀರಾವ ಯೋಜನೆಯಲ್ಲಿ ಬದಲಾವಣೆ ಮಾಡಿಕೊಳ್ಳುವುದಾಗಲೀ ಅಥವಾ ಹಣ ಹೆಚ್ಚು ಕಡಿಮ ಮಾಡಿಕೊಳ್ಳುವುದಕ್ಕೆ ಆಗಲಿ ಸ್ವಲ್ಪ ಅವಕಾಶ ಉಂಟು. ಇದರಲ್ಲಿ ಆ ರೀತಿ ಹೆಚ್ಚು ಕಡಿಮ ಮಾಡುವುದಕ್ಕೆ ಸಾಧ್ಯವಿಲ್ಲ. 29 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ನಾವು ಈ ಪ್ರದೇಶದ ಅಭಿವೃ ಮಾಡಬೇಕೆಂದು ಸ್ಪಷ್ಟವಾಗಿದೆ. ಅದರಂತೆ ಮಾಡಿದ್ದೇವೆಂದು ಹೇಳುತ್ತಾರೆ. ಜೊತೆಗೆ ಇದಕ್ಕೆ ರಾಷ್ಟ್ರೀಯ ಪ್ರಶಸ್ತಿ ಕೂಡ ಸಿಕ್ಕಿದೆ. ಆದ್ದರಿಂದ ಇದನ್ನು ಮುಂದುವರಿಸುವ ಯೋಜನೆ ಸಧ್ಯಕ್ಕಂತೂ ಇಲ್ಲ. ಮುಂ ಅವರು ಈಗಾಗಲೇ ಸಲಹೆ ಮಾಡಿದ ಹಾಗೆ ಬೇರೆ ರೂಪದಲ್ಲಿ ಹೇಗೆ ಮಾಡುವುದಕ್ಕೆ ಸಾಧ್ಯ. ಪ್ರದೇಶದಲ್ಲಿ ಹೇಗೆ ಎಂದು ಈ ಯೋಜನೆ ಪ್ರಕಾರ ಅರಣ್ಯವನ್ನೂ ಅಭಿವೃದ್ಧಿ ಮಾಡುವುದು ಇದೆ ತೋಟಗಾರಿಕೆಯನ್ನೂ ಅಭಿವೃದ್ಧಿ ಮಾಡುವುದು ಇದೆ. ಹೀಗೆ ತೀರಾ ನೀರಾವರಿ ಮಾಡುವುದಕ ಆಗದೇ ಇದ್ದರೂ ಅರೆ ನೀರಾವರಿಯಿಂದ ಅಭಿವೃದ್ಧಿ ಮಾಡಬೇಕಾದ ಪ್ರದೇಶ ಇದೆ. ಇದೆಲ್ಲಾ ಯೋಜ ಸೇರಿ ಈ ಕೆಲಸ ಆಗಿರುವುದರಿಂದ ಇನ್ನೂ ಅವಧಿಯನ್ನು ಹೆಚ್ಚು ಮಾಡತಕ್ಕಂಥ ಪ್ರಶ್ನೆ ನಮ್ಮ ಮುಂ ಸಧ್ಯಕ್ಕಂತೂ ಇಲ್ಲ.

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಅಧ್ಯಕ್ಷರೇ, ಅವರು ರಾಜ್ಯ ಪ್ರಶಸ್ತಿ ರಾಷ್ಟ್ರ ಪ್ರಶಸ್ತಿ ಸಿಕ್ಕಿದ ಎಂದು ಮಾತ್ರ ಹೇಳುತ್ತಾರೆ. ಇದನ್ನು ಮುಂದುವರಿಸುವಂತಹ ಯೋಜನೆ ಇಲ್ಲ ಎಂದರೆ ನಾವು ರೈತರಿಗೋಸ್ಕರ ಏನು ಸಹಾಯ ಮಾಡುವುದು ? ದಯವಿಟ್ಟು ಏನಾದರೂ ಮಾಡಿ ಎಂದು ಒತ್ತಾಯ ಮಾಡುತ್ತೇನೆ. ನಮ್ಮ ರಾಜ್ಯದ ಹಣದಿಂದಲಾದರೂ ಇದನ್ನು ಮುಂದುವರಿಸುವಂತಹ ಕೆಲಸ ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಸನ್ಮಾನ್ಯ ಅಧ್ಯಕ್ಷರೇ, 1984-85ರಲ್ಲಿ ವಿಶ್ವ ಬ್ಯಾಂಕ್ ಆಶ್ರಯದಲ್ಲಿ ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದೆವು. ಆದರೆ ಹಣ ತಾವು ಒಂದು ಸಾವಿರ ಲಕ್ಷ ಬಿಡುಗಡೆ ಮಾಡಿರತಕ್ಕದು ನಿಜ. ಎಷ್ಟೊಂದು ಕೆಲಸ ಅಲ್ಲಿ ಆಗಬೇಕಿತ್ತು. ಆ ಟಾರ್ಗೆಟ್ ಅನ್ನು ಅಲ್ಲಿ ರೀಚ್ ಮಾಡುವುದಕ್ಕೆ ಆಗಿಲ್ಲ. ತಾವು ಹೇಳಿರುವ ಪ್ರಕಾರ ಫಾರ್ಮಿಂಗ್ ಬಗ್ಗೆ ಒಣ ಭೂಮಿ ಪ್ರದೇಶದ ಅಭಿವೃದ್ಧಿ ಬಗ್ಗೆ ತೆಗೆದುಕೊಂಡಿರತಕ್ಕ ಒಂದು ಕಾರ್ಯಕ್ರಮ. ಅದಕ್ಕೆ ನನ್ನ ಸಲಹೆ ತಮಗೆ ಏನು ಎಂದರೆ ವಿಶ್ವ ಬ್ಯಾಂಕಿನ ಹಣ ನಿಂತಿದ್ದರೂ ಪರವಾಗಿಲ್ಲ. ಈಗ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನ ಸೇವಿಂಗ್ಸ್‌ನಿಂದಲೋ ಮತ್ತೊಂದರಿಂದಲೋ ಇನ್ನು ಒಂದು ವರ್ಷ ಇನ್ನು 12 ತಿಂಗಳುಗಳ ಕಾಲ ಇದನ್ನು ಮುಂದುವರಿಸತಕ್ಕಂಥ ರಾಜ್ಯದ ಯೋಜನೆ ಅಡಿಯಲ್ಲಿ ಮುಂದುವರಿಸುವುದಕ್ಕೆ ಒಂದು ಭರವಸೆಯನ್ನು ಕೊಡುವುದಕ್ಕೆ ಸಾಧ್ಯ ಇಲ್ಲವೇ ? ಕೊಡಬೇಕು ಎಂದು ಹೇಳಿ ನನ್ನ ಒತ್ತಾಯ ಸ್ವಾಮಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಈಗ ಇರುವ ಹಾಗೆ ಕೊಡಲಿಕ್ಕೆ ಸಾಧ್ಯ ಇಲ್ಲ. ಅವರು ಸರ್ಕಾರದ ಮೇಲೆ ಇಟ್ಟಿರತಕ್ಕ ಭರವಸೆ, ಇದನ್ನು ಎಷ್ಟು ಪ್ರದೇಶಕ್ಕೆ ಅನ್ವಯಿಸಬೇಕಾಗಿತ್ತೋ ಅಷ್ಟಕ್ಕೆ ಅನ್ವಯಿಸಿ ಕೆಲಸ ಪೂರೈಸದೇ ಇರುವುದು, ಪೂರೈಸಿಲ್ಲ ಎಂದು ಹೇಳಿ ಮಾನ್ಯ ಸದಸ್ಯರಿಬ್ಬರೂ ಹೇಳುತ್ತಿದ್ದಾರೆ. ಆದ್ದರಿಂದ ಈ ಯೋಜನೆ ಅಡಿಯಲ್ಲಿ ಇದನ್ನು ವಿಸ್ತರಿಸಿ ಹೆಚ್ಚು ಹಣ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆಯೇ ಇಲ್ಲವೇ ಎಂದು ಯೋಚನೆ ಮಾಡಿ ಒಂದು ಪಕ್ಷ ಸಾಧ್ಯ ಆದರೆ...

ಶ್ರೀ. ಪಿ.ಜಿ.ಆರ್. ಸಿಂಧ್ಯ:- ಈಗ ನಾವು ಕೇಳುವುದು ಇಷ್ಟೇ. ಇನ್ನೂ ಒಂದು ಸಾವಿರ ಎಕರೆಯಷ್ಟು ಜಮೀನನ್ನು ಈ ಡ್ರೈ ಲ್ಯಾಂಡ್ ಫಾರ್ಮಿಂಗ್ ಬಗ್ಗೆ ಅರ್ಧಂಬರ್ಧ ಮಾಡಿದ್ದಾರೆ. ಪೂರ್ತಿ ಮುಗಿಸಿಲ್ಲ. ಆದ್ದರಿಂದ ನಮ್ಮ ಸಲಹೆ ಏನೆಂದರೆ ನೀವು ಸ್ಟೇಟ್ ಸೆಕ್ಟಾರ್‌ನಲ್ಲಿ ಈ ಕಾರ್ಯಕ್ರಮವನ್ನು 31 ನೇ ತಾರೀಖಿಗೆ ಮುಗಿಸುವುದಿಲ್ಲ. ನಾವು ಮುಂದುವರೆಸುತ್ತೇವೆ ಎನ್ನುವ ಭರವಸೆ ಕೊಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಈಗ ಮುಂದುವರಿಸಬೇಕಾದ ಭರವಸೆ ಕೊಡುವುದಕ್ಕೆ ಇದು ರಾಜ್ಯ ಸರ್ಕಾರದ ಯೋಜನೆ ಅಲ್ಲ. ಕೇಂದ್ರ ಸರ್ಕಾರದ ಯೋಜನೆಯಲ್ಲಿ ಬಂದಿರತಕ್ಕ ಕೆಲಸ ಇದು. ಅದಕ್ಕಾಗಿ ಇಷ್ಟು ದಿವಸಕ್ಕೆ ಆಕ್ಸೈರಾಗಬೇಕು. ಮಾರ್ಚ್‌ಗೆ ಆಕ್ಸೈರ್‌ಗೆ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಆದರೆ ಮಾನ್ಯ ಸದಸ್ಯರು ಹೇಳುವ ಹಾಗೆ ಅಭಿವೃದ್ಧಿ ಆಗಬೇಕಾದ ಜಾಗದಲ್ಲಿ ಸಾಕಷ್ಟು ಇನ್ನೂ ಕೆಲಸ ಬಾಕಿ ಇದ್ದು ಇನ್ನು ಅಗತ್ಯವಾಗಿ ಮಾಡಲೇಬೇಕು ಎನ್ನುವುದು ಇದ್ದರೆ ನಮ್ಮ ಪರಿಣಿತರನ್ನು ಕಳುಹಿಸಿ ಎಷ್ಟು ಮಾಡಬೇಕು. ಎಷ್ಟು ಮಾಡುವುದಕ್ಕೆ ಸಾಧ್ಯ ಆಗುತ್ತದೆ. ಎಷ್ಟು ಹಣ ಬೇಕಾಗುತ್ತದೆ ? ಇದನ್ನೆಲ್ಲಾ ಆಲೋಚನೆ ಮಾಡಿ ನಾನು ಮುಂದಿನ ಉತ್ತರವನ್ನು ಹೇಳಬೇಕಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್:- 31ನೇ ತಾರೀಖು ಮುಚ್ಚುವುದಿಲ್ಲ ಎಂದು ಹೇಳಿ.

ನಿಪ್ಪಾಣಿ ಮತ ಕ್ಷೇತ್ರಕ್ಕೆ ಗಡಿ ಅನುದಾನ

2213: ಶ್ರೀ ಸುಭಾಷ್ ಎನ್. ಜೋಷಿ (ನಿಪ್ಪಾಣಿ):- ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಡಿ ಪ್ರದೇಶಾಭಿವೃದ್ಧಿಗೆ ಒದಗಿಸಲಾಗಿರುವ ಹಣದಿಂದ ನಿಪ್ಪಾಣಿ ಕ್ಷೇತ್ರಕ್ಕೆ ಮಂಜೂರಾಗಿರುವ ಹಣವೆಷ್ಟು;

ಆ) ಗಡಿ ಪ್ರದೇಶಾಭಿವೃದ್ಧಿಗೆ ಒದಗಿಸಲಾಗಿರುವ ಹಣದಿಂದ ತೆಗೆದುಕೊಳ್ಳಲಾಗಿರುವ ಕಾಮಗಾರಿಗಳಾವುವು ?

ಶ್ರೀ ರಂಗದೇವರಾಯುಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):-

ಅ) ಗಡಿ ಪ್ರದೇಶಾಭಿವೃದ್ಧಿ ಕಾರ್ಯಕ್ರಮದಡಿ ಅನುದಾನವನ್ನು ತಾಲ್ಲೂಕುವಾರು ಬಿಡುಗಡೆ ಮಾಡಲಾಗುತ್ತಿದೆ. ಚಿಕ್ಕೋಡಿ ತಾಲ್ಲೂಕಿನಲ್ಲಿ ವರ್ಷಾವಾರು ತೆಗೆದುಕೊಂಡಿರುವ ಕಾಮಗಾರಿಗಳು ಮತ್ತು ಖರ್ಚು ಮಾಡಲಾದ ಹಣ ಈ ಕೆಳಕಂಡಂತಿವೆ:-

(ಲಕ್ಷ ರೂ.ಗಳಲ್ಲಿ)

ವರ್ಷ	ಕಾಮಗಾರಿಗಳ ಸಂಖ್ಯೆ	ಬಿಡುಗಡೆ ಮಾಡಲಾದ ಮೊತ್ತ	ಖರ್ಚು ಮಾಡಲಾದ ಹಣ
1990-91	10	9.00	9.00
1991-92	10	25.00	26.18
1992-93	16	16.00	2.17
ಒಟ್ಟು	36	50.00	37.35

ತಕ್ಕದ್ದನ್ನು ಇನ್ನು ಏಳು ವರ್ಷಗಳಲ್ಲಿ ಮಾಡುತ್ತೀರಾ ಎನ್ನತಕ್ಕಂಥ ಅನುಮಾನ ನನಗಂತೂ ಇದೆ. ಈ ಯೋಜನೆಯನ್ನು ಮುಗಿಸಲೇಬೇಕೆಂಬ ಏನು ನಿಮ್ಮ ಅನಿಸಿಕೆ ಇದೆ, ಸಂಕಲ್ಪ ಮಾಡಿದ್ದೀರಿ, ಅದಕ್ಕೆ ನಾನು ಧ್ವನಿಗೂಡಿಸುತ್ತೇನೆ. ಅದು ಬೇರೆ ಪ್ರಶ್ನೆ. ಆದರೆ ನಾನು ನಿಮ್ಮ ಬಗ್ಗೆ ಅನುಮಾನಪಡುತ್ತಿಲ್ಲ.

ಇನ್ನು ಮುಂದಿನ ಏಳು ವರ್ಷಗಳಲ್ಲಿ ನೀವು ಇರುತ್ತೀರಿ ಎನ್ನತಕ್ಕದ್ದು ಅಲ್ಲ; ಬೇರೆ ಸರ್ಕಾರಗಳು ಬರಬಹುದು. ಟ್ರಿಬ್ಯೂನಲ್ ಆರ್ಡರ್ ಅದು ಆದೇಶವಲ್ಲ. 2000 **ವರ್ಷದ** ನಂತರ ನೀವು ಮುಂದುವರಿಯುವುದು ಸಾಧ್ಯವೇ ಇಲ್ಲ. ಅದಕ್ಕೋಸ್ಕರ ನಾನು ಕೇಳುತ್ತಿದ್ದೇನೆ. **ಈ ಯೋಜನೆಯಲ್ಲಿ** ಬರೀ ನಮ್ಮ ರಾಜ್ಯದ ಪಾಲು ಮಾತ್ರ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳಿಗೆ **ತಮ್ಮದೇ** ಆದಂಥ ಹಕ್ಕು, ಪಾಲು ಇದೆ. ಆ ಹಕ್ಕು, ಪಾಲನ್ನು ಅವರು ಇಲ್ಲಿಯವರೆಗೆ ಉಪಯೋಗಿಸಿ**ಕೊಂಡಿದ್ದಾರೋ** ಇಲ್ಲವೋ ? ಆ ರಾಜ್ಯಗಳ ಕಾರ್ಯಕ್ರಮಗಳು ಯಾವ್ಯಾವ ರೀತಿಯಾಗಿವೆ ಎನ್ನುವುದನ್ನು **ತಾವು** ದಯವಿಟ್ಟು ತಿಳಿಸಿದರೆ ಮುಂದೆ ಏನು ಈ ದಿಶೆಯಲ್ಲಿ ಮಾಡಬೇಕೆಂಬುದು ಗೊತ್ತಾಗುತ್ತದೆ. ಇನ್ನು ಕ್ರಿಸ್ತಶಕ 2000 ಇಸವಿಯೊಳಗಾಗಿ ನೀವು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ಅದು ನನ್ನ ಅನಿಸಿಕೆ. ಟ್ರಿಬ್ಯೂನಲ್ ಆದೇಶದ ಪ್ರಕಾರ 2000 ಇಸವಿಯಾದ ನಂತರವೂ ನಮಗೆ ನೀರಿನ ಮೇಲೆ ಹಕ್ಕು ಇರುತ್ತದೆಯೇ ಎಂಬುದನ್ನು ತಾವು ಖಚಿತಪಡಿಸಬೇಕು.

ಶ್ರೀ ಎಸ್.ಎಂ. ಕೃಷ್ಣ:– ಮಾನ್ಯ ಅಧ್ಯಕ್ಷರೇ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕೆಂಬುದು ಸರ್ಕಾರದ ನಿರ್ಧಾರ ಮತ್ತು ಜನತೆ ನಮಗೆ ಕೊಟ್ಟಿರತಕ್ಕಂಥ ಮ್ಯಾನ್‌ಡೇಟ್. ಅದಕ್ಕೋಸ್ಕರ, ಮುಂದಿನ ಏಳು ವರ್ಷಗಳಲ್ಲಿ ಯಾವ ಪ್ರಮಾಣದಲ್ಲಿ ಈ ಯೋಜನೆಗೆ ನಾವು ಸಂಪನ್ಮೂಲಗಳನ್ನು ಒದಗಿಸಿಕೊಡುತ್ತೇವೆಯೋ, ಅದರ ಆಧಾರದ ಮೇಲೆ ನಮಗೆ ನಿಯೋಜಿತವಾಗಿರತಕ್ಕಂಥ ನೀರನ್ನು ನಾವು ಉಪಯೋಗಿಸಿಕೊಳ್ಳತಕ್ಕಂಥ ಮ್ಯಾನ್‌ಪವರ್ ಇದೆ. ಟೆಕ್ನಿಕಲ್ ಪವರ್ ಇದೆ, ಕೃಷ್ಣಾ ಜಲಾನಯನ ಪ್ರದೇಶಾಭಿವೃದ್ಧಿಗಾಗಿ ವಿಶೇಷವಾಗಿ ಬೇಕಾಗಿರತಕ್ಕಂಥ ಸಂಪನ್ಮೂಲಗಳನ್ನು ಒದಗಿಸಿಕೊಡುವುದಕ್ಕೆ ಸರ್ಕಾರ ಈ ವರ್ಷದಿಂದ ಪ್ರಾರಂಭ ಮಾಡಿದೆ. Upwarc revision upward increase ಈ ಕೃಷ್ಣಾ ಕೊಳದ ಜಲಾನಯನ ಪ್ರದೇಶಕ್ಕೆ. ಆದುದರಿಂದ ಮುಂದಿನ ದಿನಗಳಲ್ಲಿ ನಾವು ಇದಕ್ಕೆ ಇನ್ನೂ ಹೆಚ್ಚು ಒತ್ತು ಕೊಟ್ಟರೆ ಸಾಧ್ಯವಾದೀತು ಎನ್ನತಕ್ಕಂಥ ವಿಶ್ವಾಸ ನನ್ನದು. ಆದರೆ, ನೀವು ಕೇಳಿದ ಇನ್ನೊಂದು ಹೈಪಾಥಿಟಿಕಲ್ ಪ್ರಶ್ನೆಗೆ ನಾನು ಉತ್ತ ಹೇಳತಕ್ಕಂಥ ಸ್ಥಿತಿಯಲ್ಲಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ಹೈಪಾಥಿಟಿಕಲ್ ಬರುವ ಪ್ರಶ್ನೆಯೇ ಇಲ್ಲ. ಈ ಯೋಜನೆಗಾ ಸುಮಾರು 17 ವರ್ಷಗಳಲ್ಲಿ ನೀವು ಖರ್ಚು ಮಾಡಿರುವುದು 1806 ಕೋಟಿ ರೂಪಾಯಿಗಳು. ಇನ್ನು ಉಳಿದ ಏಳು ವರ್ಷಗಳಲ್ಲಿ ಅಂದರೆ ಕ್ರಿಸ್ತಶಕ 2000 ಇಸವಿಯೊಳಗೆ 4136 ಕೋಟಿ ರೂಪಾಯಿಗಳನ್ನು ಯಾವ ರೀತಿ ಖರ್ಚು ಮಾಡುತ್ತೀರೆಂಬುದನ್ನು ದಯವಿಟ್ಟು ಹೇಳಿ; ಮುಂದೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಬಗ್ಗೆ ಹೇಳಿದ್ದೀರಿ.

SRI SUBHASH JOSHI : Sir, specifically I know that the amount is releasec talukwise under Border Area Development Programme. However, I hav specifically asked, which are the works and what is the amount spent in Nippani Constituency for which I have not received answer.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೇ, ಗಡಿ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಹಣವನ್ನು ತಾಲ್ಲೂಕುವಾರು ಬಿಡುಗಡೆ ಮಾಡುತ್ತೇವೆಯೇ ವಿನಾ ಕ್ಷೇತ್ರವಾರು ಬಿಡುಗಡೆ ಮಾಡುವುದಿಲ್ಲ. ಕ್ಷೇತ್ರವಾರು ಎಷ್ಟು ಹಣ ಎನ್ನತಕ್ಕಂಥ ಉತ್ತರ ನಮ್ಮ ಹತ್ತಿರವಿಲ್ಲ. ಅಲ್ಲದೆ ಈ ಕೆಲಸವನ್ನು ಯಾವಾಗ ಕೈಗೆತ್ತಿಕೊಳ್ಳಲಾಗಿದೆಯೆಂದು ಕೇಳಿದ್ದೀರ, ಚಿಕ್ಕೋಡಿ ತಾಲ್ಲೂಕಿನಲ್ಲಿ ಯಾವಾಗ ಕಾಮಗಾರಿಯನ್ನು ತೆಗೆದುಕೊಂಡಿದ್ದಾರೆನ್ನುವುದರ ಬಗ್ಗೆ ಉತ್ತರ ಕೊಡುತ್ತೇನೆ ಮತ

ನಿಪ್ಪಾಣಿ ಮತಕ್ಷೇತ್ರದಲ್ಲಿ ಎಷ್ಟು ಕೆಲಸವಾಗಿದೆಯೆನ್ನುವ ಮಾಹಿತಿ ಬೇಕಾಗಿದ್ದರೆ ಅದರ ವಿವರಗಳನ್ನು ನಂತರ ಒದಗಿಸಿಕೊಡುತ್ತೇನೆ.

ಬಚಾವತ್ ತೀರ್ಪಿನಂತೆ ಕೃಷ್ಣ ನೀರಿನ ಬಳಕೆ

847: ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಚಾವತ್ ತೀರ್ಪಿನಂತೆ 2000ನೇ ಇಸವಿಯ ವೇಳೆಗೆ 733 ಟಿಎಂಸಿ ನೀರನ್ನು ರಾಜ್ಯವು ಉಪಯೋಗಿಸಿಕೊಳ್ಳಬೇಕಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ. ಹಾಗಿದ್ದಲ್ಲಿ, ಅದಕ್ಕೆ ಬೇಕಾಗಿರುವ ಹಣವೆಷ್ಟು ಮತ್ತು ಇಲ್ಲಿಯವರೆವಿಗೂ ಖರ್ಚು ಮಾಡಿರುವ ಹಾಗೂ ಬಾಕಿ ಬೇಕಾಗಿರುವ ಹಣವೆಷ್ಟು. (ಪ್ರತ್ಯೇಕ ವಿವರ ನೀಡುವುದು);

ಇ. ಸರ್ಕಾರ ಇಲ್ಲಿಯವರೆಗೂ ಒದಗಿಸಿರುವ ಹಣ ಸಾಲದೆಂಬುದು ಸರ್ಕಾರಕ್ಕೆ ತಿಳಿದಿದೆಯೇ;

ಈ. ಹಾಗಿದ್ದಲ್ಲಿ, ಅದನ್ನು ಪೂರ್ಣಗೊಳಿಸಲು ಹಣ ಪೂರೈಸಲು ಸರ್ಕಾರದ ಕ್ರಮಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):-

ಅ. ಹೌದು.

ಆ. ಕೃಷ್ಣಾ ಕೊಳ್ಳದ ಯೋಜನೆಗಳ ಮೇಲೆ 31.3.92ರವರೆಗೆ ಮಾಡಿರುವ ವೆಚ್ಚ ರೂ. 1806 ಕೋಟಿಗಳು. ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಬಾಕಿ ಹಣ ರೂ. 4136 ಕೋಟಿಗಳು. (1.4.92ರ ದರಗಳ ಪ್ರಕಾರ)

ಇ. ಇಲ್ಲಿಯವರೆಗೆ ಒದಗಿಸಿರುವ ಹಣ ರಾಜ್ಯದ ಸಂಪನ್ಮೂಲವನ್ನಾಧರಿಸಿದೆ.

ಈ. ಎಲ್ಲಾ ಯೋಜನೆಗಳನ್ನು ನಿಯಮಿತ ಅವಧಿಯೊಳಗೆ ಪೂರ್ಣಗೊಳಿಸಲು ಅವಶ್ಯವಿರುವ ಹಣವನ್ನು ಒದಗಿಸುವ ಬಗ್ಗೆ ಸರ್ವಪ್ರಯತ್ನ ಮಾಡಲಾಗುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಮಾನ್ಯ ಉಪ ಮುಖ್ಯ ಮಂತ್ರಿಗಳು ತಮ್ಮ ಇಲಾಖಾ ಬೇಡಿಕೆಗಳ ಮೇಲೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಬಚಾವತ್ ತೀರ್ಪಿನ ಪ್ರಕಾರ ನೀರನ್ನು ಉಪಯೋಗಿಸಿಕೊಳ್ಳತಕ್ಕಂಥ ಹಕ್ಕು ಅದು ಸರ್ಕಾರದ ಪ್ರತಿಷ್ಠೆ ಪ್ರಶ್ನೆ ಮತ್ತು ಈ ರಾಜ್ಯದ ಎಲ್ಲಾ ಜನರ ಹಕ್ಕು ಎನ್ನತಕ್ಕಂಥ ಮಾತನ್ನು ಹೇಳಿದಿರಿ ಮತ್ತು ಅದಕ್ಕೆ ಯಾವ್ಯಾವ ತರಹವಾದ ಹಣವನ್ನು ಕೂಡಿಸಬೇಕೆನ್ನುವುದರ ಬಗ್ಗೆಯೂ ಹೇಳಿದಿರಿ. ಆದರೆ, ಈಗ ತಾವು ನನಗೆ ಒದಗಿಸಿರತಕ್ಕಂಥ ಉತ್ತರದಲ್ಲಿ ಕಾಣುತ್ತಿರತಕ್ಕಂಥಾದ್ದು, ಬಚಾವತ್ ತೀರ್ಪು ಬಂದು ಸುಮಾರು 17 ವರ್ಷಗಳಾಯಿತು. ಅಂದಿನಿಂದ ಇಂದಿನವರೆಗೆ ನೀವು ಖರ್ಚು ಮಾಡಿರತಕ್ಕಂಥ ಹಣ 1806 ಕೋಟಿ ರೂಪಾಯಿಗಳು,ಇನ್ನು ನಿಮಗೆ ಉಳಿದಿರತಕ್ಕಂಥ ಕಾಲ ಕೇವಲ ಏಳು ವರ್ಷಗಳು ಮಾತ್ರ. ಈ ಏಳು ವರ್ಷಗಳಲ್ಲಿ ನೀವು 4136 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಅಲ್ಲದೆ, ವರ್ಷದಿಂದ ವರ್ಷಕ್ಕೆ ಎಸ್ಕಲೇಷನ್ ಚಾರ್ಜ್ ಹೆಚ್ಚಾಗುತ್ತಾ ಹೋಗುತ್ತದೆ. ಈಗಾಗಲೇ ಹದಿನೇಳು ವರ್ಷಗಳಿಂದ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದಿಂದ ನೀವು ನಿಮ್ಮ ಸ್ಥಾನದಲ್ಲಿ ಮುಂದೆ ಇರುವುದಿಲ್ಲ, ಬೇರೆಯವರು ಇರುವಂಥ ಪ್ರಶ್ನೆ ಬಂದಾಗ ಒಂದು ವರ್ಷಕ್ಕೆ ಸುಮಾರು 600–700 ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡಬೇಕಾಗುತ್ತದೆ. ಅದಕ್ಕೋಸ್ಕರ, ನನಗೆ ಅನುಮಾನವಿದೆಯೆಂದು ಕೇಳುತ್ತಿದ್ದೇನೆ. ಈಗ ಒಂದು ವೇಳೆ ಟ್ರಿಬ್ಯೂನಲ್ ಆದೇಶದ ಪ್ರಕಾರ ಕ್ರಿ.ಶ.

2000 ಇಸವಿಯೊಳಗೆ ಈ ಯೋಜನೆಯನ್ನು ಮುಗಿಸುವುದಕ್ಕಾಗುವುದಿಲ್ಲವೆಂದು ಇಟ್ಟುಕೊಳ್ಳೋಣ, ಆಗ ನೀವು (ಸರ್ಕಾರ) ನೀರಿನ ಮೇಲಿನ ಹಕ್ಕನ್ನು ಕಳೆದುಕೊಳ್ಳುತ್ತೀರಾ ? ಹೌದೇ ಇಲ್ಲವೇ ಎಂಬುದನ್ನು ತಿಳಿಸಬೇಕು.

SRI S.M. KRISHNA:– Sir, according to the rule of procedure, I am not expeceted to answer hypothetical questions.

ಆದರೆ, ನಿಯೋಜಿತ ವೆಚ್ಚಗಳನ್ನು ನಾನು ಏನು ಸೂಚನೆ ಮಾಡಿದ್ದೇನೆ, ಅದಕ್ಕೆ ಒಂದು ಕಾರಣವಿತ್ತು. ಆ ಕಾರಣವೇನೆಂದರೆ, 'ಮುಂದೆ ನಾನು ಇರುವುದಿಲ್ಲ' ಎನ್ನುವ ಮಾತನ್ನು ತಾವು ಹೇಳುತ್ತಿದ್ದೀರಿ. ಅದು ಭವಿಷ್ಯದ ಮಾತು, ಕಾಲಗರ್ಭದಲ್ಲಿ ಏನೇನು ಅಡಗಿದೆ ಎಂಬುದು ನಾನು ಹೇಳುವುದಕ್ಕೆ ಸಾಧ್ಯವಿಲ್ಲ, ನೀವೂ ಕೂಡ ಹೇಳುವುದಕ್ಕೆ ಸಾಧ್ಯವಿಲ್ಲ. ನಾನು ಮತ್ತೆ ಇದೇ ಸ್ಥಾನದಲ್ಲಿ ಕುಳಿತಿದ್ದರೆ ನಿಮಗೆ ಆಶ್ಚರ್ಯವಾಗಬಹುದು. ಆದುದರಿಂದ, ನಾನು ಇಲ್ಲಿ ಕುಳಿತಿದ್ದರೆ ಆ ರೀತಿ ಮಾಡಬೇಕೆನ್ನುವಂಥದ್ದು, ಮತ್ತು ಇನ್ನೊಂದು ಮಾತನ್ನು ಹೇಳಿದೆ. ಏನೆಂದರೆ, ಈ ಸ್ಥಾನದಲ್ಲಿ ಯಾರೇ ಬಂದು ಕುಳಿತಿರಲಿ, ಅವರ ಮೇಲೆ ಸಾರ್ವಜನಿಕ ಒತ್ತಡವೇನಿದೆ, ಜನತೆಯ ಸ್ಯಾಂಕ್ಷನ್ ಏನಿದೆ, It is a mandatory that thay will have to fall in line with the time schedule, with that kind of expenediture which is needed for the completion of these Krishna basin projects.

ಶ್ರೀ ಟಿ.ಬಿ. ಜಯಚಂದ್ರ:– ನಾನು ಕೇಳಿರತಕ್ಕದ್ದು ಹೈಪಾಥಿಟಿಕಲ್ ಆಗುತ್ತದೆಂದು ಹೇಳಿದ್ದೀರಿ. ಆದರೆ ಮುಂದೆ 7 ವರ್ಷದಲ್ಲಿ ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಇದಕ್ಕೆ ಖರ್ಚು ಮಾಡುತ್ತೇವೆಂದು ತಾವು ಏನುಹೇಳುತ್ತಿದ್ದೀರಿ. ಅದು ಹೈಪಾಥಿಟಿಕಲ್ ಅಲ್ಲವೇ ?

ಶ್ರೀ ಎಸ್.ಎಂ. ಕೃಷ್ಣ:– 17 ವರ್ಷಗಳಿಂದ ಏನು ನಡೆಯಿತು ಎನ್ನತಕ್ಕ ಬಗ್ಗೆ ಇವತ್ತು ಪೋಸ್ಟ್ ಮಾರ್ಟಮ್ ಮಾಡುವುದರಿಂದ ಜಯಚಂದ್ರರವರಿಗಾಗಲಿ ನನಗಾಗಲಿ ಪ್ರಯೋಜನವಾಗುವುದಿಲ್ಲ. ಆದುದರಿಂದ ನಾವು ಒಟ್ಟಾರೆಯಾಗಿ ಭವಿಷ್ಯದಲ್ಲಿ ಯಾವ ರೀತಿಯಾಗಿ ಇರಬೇಕೆಂಬುದನ್ನು ಗಮನದಲ್ಲಿಟ್ಟಕೊಂಡು ಮುಂದಿನ 7 ವರ್ಷಗಳಲ್ಲಿ ಎಷ್ಟು ಖರ್ಚು ಮಾಡಬಹುದು ಎಂಬುದನ್ನು ಗಮನಿಸಿ ಅಷ್ಟನ್ನು ಮಾಡುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ. ವೈ.ಕೆ. ರಾಮಯ್ಯ:– ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದ ಪ್ರಾಮಾಣಿಕತೆಯ ಬಗ್ಗೆ ನನಗೆ ಅನುಮಾನವಿಲ್ಲ, ಅವರುಗಳು ಇದರ ದಿಸೆಯಲ್ಲಿ ಪ್ರಯತ್ನ ಮಾಡುತ್ತಿಲ್ಲವೆಂದು ನನ್ನ ಆಪಾದನೆ ಅಲ್ಲ, ಅವರು ಉತ್ತರ ಕೊಡುವಾಗ ಸರ್ಕಾರ ಅವಶ್ಯಕತೆ ಇರುವಷ್ಟೂ ಹಣವನ್ನು ಒದಗಿಸುವ ಬಗ್ಗೆ ಸರ್ವಪ್ರಯತ್ನವನ್ನು ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಈ ರಾಜ್ಯದ ಜನತೆಗೆ ಮತ್ತು ನಮಗೆ ಆ ಒಂದು ತಮ್ಮ ಸರ್ವಪ್ರಯತ್ನದ ಒಂದು ನಿರ್ದಿಷ್ಟವಾದ ಕಾರ್ಯಕ್ರಮಗಳು ಯಾವುದು ಎಂದು ಹೇಳಬೇಕು. ಅವರನ್ನು ನಾವು ಗೊಂದಲಕ್ಕೆ ಮತ್ತು ಸರ್ಕಾರವನ್ನು ಇಕ್ಕಟಿಗೆ ಸಿಕ್ಕಿಸಬೇಕೆನ್ನುವುದು ನಮ್ಮ ಆಸಕ್ತಿಯಲ್ಲ. ನಮ್ಮ ಆಸಕ್ತಿ ಏನೆಂದರೆ ಇಂಥ ವಿಶೇಷವಾದ ಪರಿಸ್ಥಿತಿಯಲ್ಲಿ ಅವರು ಸರ್ವಪ್ರಯತ್ನವನ್ನೂ ಮಾಡುತ್ತೇವೆಂದು ಹೇಳಿದ್ದೀರಿ. ಅಂಥ ಪ್ರಯತ್ನಗಳಲ್ಲಿ ಯಾವುದಾದರೊಂದು ಪ್ರಯತ್ನವನ್ನು ನಮ್ಮ ಗಮನಕ್ಕೆ ಅವರು ತರಲು ಸಾಧ್ಯವೇ ಎನ್ನತಕ್ಕದನ್ನು ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ:– 460 ಕೋಟಿ ರೂಪಾಯಿಗಳನ್ನು ಈ ಯೋಜನೆಗಳಿಗೆ ಒದಗಿಸಿರುವುದೇ ಸರ್ವಪ್ರಯತ್ನದ ಮೊದಲ ಮೆಟ್ಟಿಲು. ಮುಂದಿನ ವರ್ಷ ಎರಡನೆಯ ಮೆಟ್ಟಿಲಿಗೆ ಹೋಗುತ್ತೇವೆ.

ದಾವಣಗೆರೆ ಮತ್ತು ಅದಕ್ಕೆ ಹೊಂದಿಕೊಂಡಂತೆ ಅನೇಕ ಹಳ್ಳಿಗಳ ಜನತೆ ಸಮಸ್ಯೆ

1673: ಶ್ರೀ ವೈ.ಎಂ. ವೀರಣ್ಣ, (ದಾವಣಗೆರೆ):- ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ನಗರ ಮತ್ತು ಅದಕ್ಕೆ ಹೊಂದಿಕೊಂಡಂತೆ ಅನೇಕ ಹಳ್ಳಿಗಳ ಜನತೆ ಸಮಸ್ಯೆಯ ಇತ್ಯರ್ಥಕ್ಕಾಗಿ ದಾವಣಗೆರೆ ನ್ಯಾಯಾಲಯಕ್ಕೆ ಬರಬೇಕಾಗಿರುವುದರಿಂದ ಅಪಾದನೆಗಳ ಇತ್ಯರ್ಥದಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿವೆಯೇ;

ಆ) ಬಂದಿದ್ದಲ್ಲಿ ತ್ವರಿತ ವಿಲೇವಾರಿ ಮಾಡಲು ಹೆಚ್ಚುವರಿ ನ್ಯಾಯಾಲಯವನ್ನು ಆರಂಭಿಸುವರೇ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ವೈ.ಎಂ. ವೀರಣ್ಣ:- ಸನ್ಮಾನ್ಯ ಅಧ್ಯಕ್ಷರೇ, ನಾನು ದಾವಣಗೆರೆ ತಾಲ್ಲೂಕು ಮತ್ತು ಅದಕ್ಕೆ ಹೊಂದಿಕೊಂಡಿರುವ ಗ್ರಾಮಾಂತರ ಪ್ರದೇಶಗಳಿಂದ ನ್ಯಾಯಾಲಯಕ್ಕೆ ಅಪಾದನೆಗಳು ಇತ್ಯರ್ಥಕ್ಕಾಗಿ ಬಂದಂತಹ ಸಂದರ್ಭದಲ್ಲಿ ಬಹಳ ಸಂಖ್ಯೆಯಲ್ಲಿ ಬಹಳ ವರ್ಷಗಳಿಂದ ಇತ್ಯರ್ಥವಾಗದೇ ಈ ಜನರಿಗೆ ಬಹಳ ತೊಂದರೆ ಆಗಿದೆ. ಆ ದೃಷ್ಟಿಯಲ್ಲಿ ಮಾನ್ಯ ಮಂತ್ರಿಗಳು ಅದರ ಅಂಕಿಅಂಶಗಳನ್ನು ತಿಳಿಸಿಲ್ಲ. ಅದು ನಮ್ಮ ಗಮನಕ್ಕೆ ಬಂದಿಲ್ಲವೆಂದು ತಿಳಿಸಿರುತ್ತಾರೆ. ಅದ್ದರಿಂದ ಇಂಥ ಅಪಾದನೆಗಳು ಇತ್ಯರ್ಥವಾಗದೆ ಇರುವ ಬಗ್ಗೆ ಅದರ ಅಂಕಿಅಂಶಗಳನ್ನು ತರಿಸಿಕೊಂಡು ತಕ್ಷಣವೇ ಏನಾದರೂ ಅದನ್ನು ಇತ್ಯರ್ಥ ಮಾಡುವುದಕ್ಕೆ ಸಂಬಂಧಪಟ್ಟರಿಗೆ ಸೂಕ್ತ ಸೂಚನೆಯನ್ನು ನೀಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂಬುದನ್ನು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹಾರನಳ್ಳಿರಾಮಸ್ವಾಮಿ:- ಸನ್ಮಾನ್ಯ ಅಧ್ಯಕ್ಷರೇ, ನ್ಯಾಯಾಸ್ಥಾನಗಳಲ್ಲಿ ಮೊಕದ್ದಮೆಗಳು ಬಗೆಹರಿಸುವುದಕ್ಕೆ ತಡವಾಗುತ್ತಿರತಕ್ಕದ್ದು ದಾವರಣಗೆರೆಗೆ ವಿಶೇಷವಾಗಿ ಅನ್ವಯಿಸತಕ್ಕದ್ದಲ್ಲ. ರಾಜ್ಯದ ಎಲ್ಲಾ ಭಾಗದಲ್ಲಿಯೂ ಕೂಡ ಇದೆ. ದಾವಣಗೆರೆಯಲ್ಲಿನ ನ್ಯಾಯಾಸ್ಥಾನಗಳಲ್ಲಿರುವ ಮೊಕದ್ದಮೆಗಳನ್ನು ಬಗೆಹರಿಸುವುದಕೋಸ್ಕರವಾಗಿ ಒಂದು ಅಡಿಷನಲ್ ಮುನ್ಸೀಫ್ ಕೋರ್ಟ್‌ನ್ನು ಮಾಡಿದ್ದೇವೆ ಮತ್ತು Additional Judicial Magistrate First Class court ಅನ್ನು ಸ್ಥಾಪನೆ ಮ್ಮಾಡ್ದಿದ್ದೇವೆ ಮತ್ತು ಪಕ್ಕದಲ್ಲಿರತಕ್ಕ ಜಗಳೂರು ತಾಲ್ಲೂಕಿನ ಕೇಂದ್ರಕ್ಕೂ ಒಂದು ಕೋರ್ಟ್‌ನ್ನು ಕೊಡತಕ್ಕ ವ್ಯವಸ್ಥೆ ಸರ್ಕಾರದ ಯೋಚನೆಯಲ್ಲಿದೆ. ಇವೆಲ್ಲಾ ಇರುವುದರಿಂದ ಈಗ ಇರತಕ್ಕ ಮೊಕದ್ದಮೆಗಳನ್ನು ಬಗೆಹರಿಸುವುದಕ್ಕೆ ಸಾಕಷ್ಟು ಅವಕಾಶ ಇದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಶ್ರೀ. ವೈ.ಎಂ. ವೀರಣ್ಣ:- ಮಾನ್ಯ ಮಂತ್ರಿಗಳು ತಿಳಿಸಿರುವಂತೆ ಅಡಿಷನಲ್ ಮುನ್ಸೀಫ್ ಕೋರ್ಟುಗಳನ್ನು ಮಾಡಿರತಕ್ಕದ್ದು ನಿಜ, ಆದರೆ 1980ನೇ ಇಸವಿಯಿಂದ ಇಲ್ಲಿಯವರೆಗೆ ಅನೇಕ ಆಪಾದನೆಗಳು ಇತ್ಯರ್ಥವಾಗದೆ ಬಹಳ ವರ್ಷಗಳಿಂದ ಅದು ವಿಳಂಬವಾಗುತ್ತಿದೆ. ಅದರ ಬಗ್ಗೆ ಅಂಕಿಅಂಶಗಳನ್ನು ತರಿಸಿಕೊಂಡು ಸೂಕ್ತವಾದ ಸೂಚನೆಯನ್ನು ನೀಡುವುದರ ಮೂಲಕ ಅಂಥ ಮೊಕದ್ದಮೆಗಳನ್ನು ತಕ್ಷಣ ಇತ್ಯರ್ಥಗೊಳಿಸುವ ರೀತಿಯಲ್ಲಿ ಕ್ರಮತೆಗೆದುಕೊಳ್ಳುತ್ತಾರೆಯೇ ಎನ್ನತಕ್ಕ ಪ್ರಶ್ನೆಯನ್ನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹಾರನಳ್ಳಿರಾಮಸ್ವಾಮಿ:- ಅಂಕಿಅಂಶಗಳನ್ನು ತರಿಸಿಕೊಳ್ಳುತ್ತೇವೆ. ಸಂವಿಧಾನಾತ್ಮಕವಾಗಿ

ಸರ್ಕಾರದ ಯಾವ ಮಟ್ಟದಲ್ಲಿ ಅಧಿಕಾರವಿದೆಯೋ ಅಷ್ಟರಮಟ್ಟಿಗೆ ಮಾತ್ರ ಅವರಿಗೆ ತಿಳಿಸಿ ಬೇಗನೆ ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡುವಂತೆ ಹೈಕೋರ್ಟ್‌ಗೆ ತಿಳಿಸುತ್ತೇವೆ.

ಅಧ್ಯಕ್ಷರು – ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಚಿತ್ರದುರ್ಗ ಜಿಲ್ಲೆಯಲ್ಲಿ ಬಂದ ಅರ್ಜಿಗಳ ಸಂಖ್ಯೆ

2227: ಶ್ರೀ ಎನ್.ಜಿ. ನಾಯಕ್, (ಮೊಳಕಾಲ್ಮೂರು):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1990-91 ಹಾಗೂ 1991-92ನೇ ಸಾಲಿಗೆ ರೈತರ ಪಂಪುಸೆಟ್ಟುಗಳಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಬೇಡಿಕೆಗೆ ಬಂದ ಅರ್ಜಿಗಳೆಷ್ಟು ? ಈ ಬೇಡಿಕೆಗಳಲ್ಲಿ ವಿದ್ಯುತ್ ಪೂರೈಸಲಾಗಿರುವ ಅರ್ಜಿಗಳ ಸಂಖ್ಯೆಯೆಷ್ಟು. ಬಾಕಿ ಇರುವ ಅರ್ಜಿಗಳೆಷ್ಟು;

ಆ) ಬಾಕಿ ಇರುವ ಅರ್ಜಿಗಳಲ್ಲಿ ಒಂದು ವರ್ಷ ಅವಧಿಗೂ ಮೇಲ್ಪಟ್ಟು ಬಾಕಿ ಇವರು ಅರ್ಜಿಗಳೆಷ್ಟು;

ಇ) ಹಾಗಾದರೆ ಅವುಗಳಿಗೆ ಯಾವಾಗ ವಿದ್ಯುತ್ ಪೂರೈಸುತ್ತೀರಿ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) 1990–91 ಹಾಗೂ 1991–92ನೇ ಸಾಲುಗಳಲ್ಲಿ ರೈತರ ಪಂಪು ಸೆಟ್ಟುಗಳಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಪೂರೈಕೆಗಾಗಿ ನೋಂದಾಯಿತವಾದ ಅರ್ಜಿಗಳ ಸಂಖ್ಯೆ ಅನುಕ್ರಮವಾಗಿ 3787 ಮತ್ತು 4429. ಇವುಗಳ ಪೈಕಿ 1990–91 ಮತ್ತು 1991–92ರ ಸಾಲುಗಳಲ್ಲಿ ಅನುಕ್ರಮವಾಗಿ 2199 ಮತ್ತು 2447 ಅರ್ಜಿದಾರರುಗಳಿಗೆ ವಿದ್ಯುತ್ ಪೂರೈಕೆ ಮಾಡಲಾಗಿದೆ. ಫೆಬ್ರವರಿ 93ರ ಅಂತ್ಯದಲ್ಲಿ ಒಟ್ಟು 3364 ಅರ್ಜಗಳು ವಿದ್ಯುದೀಕರಣಕ್ಕಾಗಿ ಬಾಕಿ ಉಳಿದಿದ್ದುವು.

ಆ) ಬಾಕಿ ಇರುವ ಅರ್ಜಿಗಳಲ್ಲಿ ಒಂದು ವರ್ಷ ಅವಧಿಗೂ ಮೇಲ್ಪಟ್ಟು ಬಾಕಿ ಇರುವ ಅರ್ಜಿಗಳ ಸಂಖ್ಯೆ 518.

ಇ) ರೋಸ್ಟರ್ ಮತ್ತು ಆದ್ಯತಾ ಪಟ್ಟಿಯಲ್ಲಿನ ಹಿರಿತನದ ಮೇರೆಗೆ ಬಾಕಿ ಉಳಿದ ಅರ್ಜಿದಾರರುಗಳಿಗೆ ವಿದ್ಯುತ್ ಪೂರೈಕೆ ಮಾಡಲಾಗುವುದು.

ಹುಕ್ಕೇರಿ ತಾಲ್ಲೂಕಿನಲ್ಲಿ ರಸ್ತೆಗಳ ದುರಸ್ತಿ

2247: ಶ್ರೀ ಉಮೇಶ ವಿ. ಕತ್ತಿ, (ಹುಕ್ಕೇರಿ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ಜಿಲ್ಲಾ ಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡಿರುವ ರಸ್ತೆಗಳೆಷ್ಟು;

ಆ) ಆ ರಸ್ತೆಗಳ ದುರಸ್ತಿಗೆ ಒದಗಿಸಿದ ಹಣವೆಷ್ಟು; ಯಾವ್ಯಾವ ರಸ್ತೆಗಳಿಗೆ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು;

ಇ) ಎಷ್ಟು ರಸ್ತೆಗಳು ದುರಸ್ತಿಯಾಗಿವೆ, ದುರಸ್ತಿಯಾಗದೇ ಉಳಿದ ರಸ್ತೆಗಳ ಸಂಖ್ಯೆ ಎಷ್ಟು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ಜಿಲ್ಲಾ ಪರಿಷತ್ತಿನಿಂದ ಹತ್ತು ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳಲಾಗಿದೆ.

ಆ) ಇಲ್ಲಿಯವರೆಗೆ ಈ ರಸ್ತೆಗಳ ದುರಸ್ತಿ ಮತ್ತು ಸುಧಾರಣೆಗೆ ಪ್ರತ್ಯೇಕ ಹಣ ಒದಗಿಸಿಲ್ಲ. ಆದಾಗ್ಯೂ ಲಭ್ಯವಿದ್ದ ನಿರ್ವಹಣ ಅನುದಾನದಿಂದ, 7.45 ಲಕ್ಷ ರೂ.ಗಳನ್ನು ಈ ಮೇಲಿನ ರಸ್ತೆಗಳಲ್ಲಿ ಅಗತ್ಯವಾಗಿ ಆಗಬೇಕಿದ್ದ ಕೆಲವು ತುರ್ತು ದುರಸ್ತಿಗಳಿಗೆ ಖರ್ಚು ಮಾಡಲಾಗಿದೆ. (ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ);

ಇ) ಈ ಎಲ್ಲಾ ಹತ್ತು ರಸ್ತೆಗಳಲ್ಲಿ ಆಗಬೇಕಿದ್ದ ಅತಿ ತುರ್ತು ದುರಸ್ತಿಗಳನ್ನು ಮಾಡಲಾಗಿದೆ.

ಅನುಬಂಧ

ಹುಕ್ಕೇರಿ ತಾಲ್ಲೂಕಿನಲ್ಲಿ ಮೇಲ್ದರ್ಜೆಗೇರಿಸಿರುವ ರಸ್ತೆಗಳ ವಿವರ ಹಾಗೂ ದುರಸ್ತಿಗಾಗಿ ಮಾಡಿರುವ ವೆಚ್ಚ.

(ಲಕ್ಷ ರೂ.ಗಳಲ್ಲಿ)

	ರಸ್ತೆಗಳ ವಿವರ	ಕಿ.ಮೀ ಉದ್ದ	ತುರ್ತು ದುರಸ್ತಿಗೆ ಮಾಡಿರುವ ವೆಚ್ಚ
1.	ಬೆಲ್ಲದ ಬಾಗೇವಾಡಿ ಹುಕ್ಕೇರಿ ರಸ್ತೆ	14.00	0.95
2.	ಬಾಗೇವಾಡಿ ಬೆಳಗಾವಿ ಸಾರಾಪುರ ಮುಖಾಂತರ ಚಿಕೋಡಿ ಹತ್ತರಗಿ ರಸ್ತೆಗೆ ಸೇರುವ ರಸ್ತೆ	12.00	0.24
3.	ಪಾಶ್ವಾಪುರ ರೈಲ್ವೆ ನಿಲ್ದಾಣದಿಂದ ಉಕ್ಕಡಕ್ಕೆ ಸೇರುವ ರಸ್ತೆ	16.00	0.24
4.	ರಾಕ್ಷಿಯಿಂದ ಶಿರಗಾಂವ್ ಸುಲ್ತಾನ್‌ಪುರ ರಸ್ತೆ	7.00	0.33
5.	ಮಡಲಗಾ ಶಿಪ್ಪೂರ ರಸ್ತೆ	12.00	4.13
6.	ಯಾದಗೂಡ ಗೇಟ್ ಸಂಕೇಶ್ವರ ರಸ್ತೆ	16.40	0.21
7.	ಕಣಗಾಲಾ-ಬೊಡೆಗಲರಸ್ತೆ	13.00	0.26
8.	ಬಗಟೆ ಆಲೂರದಿಂದ ಎನ್.ಹೆಚ್. 48ಕ್ಕೆ ಸೇರುವ ರಸ್ತೆ	9.20	0.69
9.	ಕೊತಳಿ ಸಂಕೇಶ್ವರ ರಸ್ತೆ (ಹುಕ್ಕೇರಿ ವ್ಯಾಪ್ತಿ)	6.40	0.34
10.	ಯಾದಗೂಡ ಬರಗಾಂವ್ ಬೆಳಕೊಡದಿಂದ ಎಂ.ಎಸ್. ರಸ್ತೆಗೆ ಸೇರುವ ರಸ್ತೆ (ಹುಕ್ಕೇರಿ ವ್ಯಾಪ್ತಿ)	2.00	0.06
	ಒಟ್ಟು	08.00	7.45

ಕೃಷ್ಣ ಮೇಲ್ದಂಡೆ ಯೋಜನೆಯ ಪ್ರಗತಿ

2255: ಶ್ರೀ ಬಸವನಗೌಡ ಪಾಟೀಲ್, (ಮಾನ್ವಿ):- ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣ ಮೇಲ್ದಂಡೆ ಯೋಜನೆಯ ಅಡಿಗಲ್ಲನ್ನು ದಿ:ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಯಾವ ವರ್ಷದ ದಿನದಂದು ನೆರವೇರಿಸಿದರು; ಈ ಅಣೆಕಟ್ಟಿನ ಕೆಲಸಕ್ಕೆ ಯಾವ ವರ್ಷ ಕೇಂದ್ರ ಸರ್ಕಾರವು ಆಡಳಿತಾತ್ಮಕ ಒಪ್ಪಿಗೆ ನೀಡಿತು; ಎಂದಿನಿಂದ ಕೆಲಸ ಪ್ರಾರಂಭಿಸಲಾಗಿದೆ;

ಆ) ಕೃಷ್ಣಾ ಮೇಲ್ದಂಡೆ ಯೋಜನೆ ಆಡಳಿತಾತ್ಮಕ ಮಂಜೂರಾತಿ ನೀಡಿದಾಗ ಯಾವ ಯಾವ ಹಂತದ ಯಾವ ಘಟ್ಟಗಳಲ್ಲಿ ಯಾವ ಯಾವ ಕೆಲಸಗಳನ್ನು ಕಾರ್ಯಗತ ಮಾಡಲು ಉದ್ದೇಶಿಸಲಾಗಿತ್ತು; ಅಂದಿನ ಒಟ್ಟು ಅಂದಾಜು ವೆಚ್ಚವೆಷ್ಟು;

ಇ) ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವ ಬ್ಯಾಂಕಿನ ಆರ್ಥಿಕ ನೆರವು ಯಾವ ವರ್ಷದಿಂದ ದೊರಕಿಸಿಕೊಳ್ಳಲಾಗಿದೆ. ಇಂದಿನವರೆಗೂ ವಿನಿಯೋಗಿಸಲಾಗಿರುವ ಮೊತ್ತವೆಷ್ಟು; ನಾರಾಯಣಪುರ ಅಣೆಕಟ್ಟಿನ ಬಲದಂಡೆಯ ಕಾಲುವೆಯ ನಿರ್ಮಾಣ ಕಾರ್ಯವನ್ನು ಈ ವರ್ಷವೇ ಪ್ರಾರಂಭಿಸಲಾಗುವುದೇ; ಸ್ಪಷ್ಟಪಡಿಸಬೇಕು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):-

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಗಲ್ಲನ್ನು ದಿವಂಗತ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿಯವರು ದಿನಾಂಕ 22-5-1964ರಂದು ನೆರವೇರಿಸಿದರು. ಈ ಯೋಜನೆಗೆ ಕೇಂದ್ರ ಸರ್ಕಾರದ ಯೋಜನಾ ಆಯೋಗವು 1963ರಲ್ಲಿ ಒಪ್ಪಿಗೆ ನೀಡಿತು. ಯೋಜನೆಯ ಕಾಮಗಾರಿಯನ್ನು 1968-69ರಲ್ಲಿ ಪ್ರಾರಂಭಿಸಲಾಯಿತು.

ಆ) 1963ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾದ 58.20 ಕೋಟಿ ರೂ.ಗಳ ಅಂದಾಜಿನ ಈ ಯೋಜನೆಯು ಸಮಗ್ರ ಯೋಜನೆಯಾಗಿದ್ದು. ಅದರಲ್ಲಿ ನಾರಾಯಣಪುರ ಅಣೆಕಟ್ಟು ಮತ್ತು 6 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ನಾರಾಯಣಪುರ ಎಡದಂಡೆ ಕಾಲುವೆ ಕಾಮಗಾರಿಗಳು ಅಡಕವಾಗಿದ್ದವು.

ಇ) ಯೋಜನೆಯ ಮೊದಲ ಘಟ್ಟದ ಮೊದಲ ಹಂತಕ್ಕೆ 1978 ರಿಂದ 86ರವರೆಗೆ ದೊರೆತ 117.64 ಮಿಲಿಯನ್ ಡಾಲರ್ ಮೊತ್ತದ ವಿಶ್ವ ಬ್ಯಾಂಕ್ ನೆರವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲಾಗಿದೆ. 1989ರಿಂದ ಕಾರ್ಯಗತಗೊಳ್ಳುತ್ತಿರುವ ಯೋಜನೆಯ ಮೊದಲ ಘಟ್ಟದ 2ನೇ ಹಂತಕ್ಕೆ 245 ಮಿಲಿಯನ್ ಡಾಲರ್ ಮೊತ್ತದ ನೆರವನ್ನು ವಿಶ್ವ ಬ್ಯಾಂಕಿನಿಂದ ಪಡೆಯಲಾಗುತ್ತಿದೆ. 1993ರ ಫೆಬ್ರವರಿ ಕೊನೆಯವರೆಗೆ ವಿಶ್ವ ಬ್ಯಾಂಕ್‌ನಿಂದ 36.54 ಮಿಲಿಯನ್ ಡಾಲರ್ ಮೊತ್ತವನ್ನು ಮರುಪಾವತಿಯಾಗಿ ಪಡೆಯಲಾಗಿದೆ. ನಾರಾಯಣಪುರ ಬಲದಂಡೆ ಕಾಲುವೆಯು, ಇನ್ನೂ ಮಂಜುರಾತಿ ದೊರಕಬೇಕಾಗಿರುವ, ಕೃಷ್ಣಾ ಮೇಲ್ದಂಡೆ ಯೋಜನೆಯ 2ನೇ ಘಟ್ಟದಲ್ಲಿ ಬರುತ್ತದೆ. ಅದನ್ನು ಈ ವರ್ಷ ಪ್ರಾರಂಭಿಸುವ ಕಾರ್ಯಕ್ರಮವಿರುವುದಿಲ್ಲ.

ಬಾದಾಮಿಗೆ 110 ಕೆ.ವಿ. ಸ್ಟೇಷನ್ ಮಂಜೂರಾತಿ

2110: ಶ್ರೀ ಎಂ.ಕೆ. ಪಟ್ಟಣಶೆಟ್ಟಿ, (ಬಾದಾಮಿ):- ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಾದಾಮಿಗೆ 110 ಕೆವಿ ಸ್ಟೇಷನ್ ಮಂಜೂರು ಆಗಿದಯೇ, ಆಗಿದ್ದರೆ ಮಂಜೂರಾದ ದಿನಾಂಕ ಹಾಗೂ ವಿವರ ನೀಡುವುದು.

ಆ) ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು;

ಇ) ಆಯವ್ಯಯದಲ್ಲಿ ಕಾಯ್ದಿರಿಸಲಾಗಿರುವ ಹಣವೆಷ್ಟು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):-

ಅ) ಹೌದು, ಮಂಜೂರು ಆಗಿದೆ. ಅಕ್ಟೋಬರ್ 1991ರಲ್ಲಿ ಮಂಡಳಿಯ ತಾಂತ್ರಿಕ ಸಮಿತಿ ಒಪ್ಪಿಗೆ ನೀಡಿದೆ.

ಆ) 1993-94ರ ಸಾಲಿನಲ್ಲಿ ಕೆಲಸವನ್ನು ಪ್ರಾರಂಭಿಸಲಾಗುವುದು.

ಇ) ಪ್ರಸಕ್ತ ಸಾಲಿನ (1992-93) ಆಯವ್ಯಯದಲ್ಲಿ ಪೂರ್ವಭಾವಿ ಕೆಲಸಗಳಿಗಾಗಿ 30 ಲಕ್ಷ ರೂ.ಗಳನ್ನು ಒದಗಿಸಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ತಾ।। 22.3.93ರ ಲಿಖಿತ ಮೂಲಕ ಉತ್ತರಿಸಿರುವ 24ನೇ ಪಟ್ಟಿಯಲ್ಲಿರುವ 67 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 2161, 1663, 1952, 2126, 2200, 2195, 2228, 2250, 2251,1156 ಮತ್ತು 2052 ಪ್ರಶ್ನೆಗಳನ್ನು ಹೊರತುಪಡಿಸಿ, ಇನ್ನು ಉಳಿದ 56 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಮೂಡಿಗೆರೆ ತಾಲ್ಲೂಕು ಉಪಗ್ರಾಮಗಳಿಗೆ ವಿದ್ಯುತ್ತೀಕರಣ

242: ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಎಷ್ಟು ಉಪ ಗ್ರಾಮಗಳಿಗೆ ವಿದ್ಯುದ್ದೀಕರಣ ಮಾಡಲು ರೆವಿನ್ಯೂ ಆದಾಯ ಕಡಿಮೆಯಿದ್ದು, 1 ಲಕ್ಷಕ್ಕೂ ಹೆಚ್ಚು ಖರ್ಚು ಆಗುತ್ತಿರುವುದರಿಂದ ವಿದ್ಯುದ್ದೀಕರಣ ಮಾಡಲಾಗುತ್ತಿಲ್ಲ;

ಆ) ಇಂತಹ ಗ್ರಾಮಗಳಿಗೆ ಸರ್ಕಾರ ವಿದ್ಯುದ್ದೀಕರಣ ಮಾಡಲು ಏನು ಕ್ರಮ ಕೈಗೊಂಡಿದೆ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):-

ಅ) ಮೂಡಿಗೆರೆ ತಾಲ್ಲೂಕಿನಲ್ಲಿ 8 ಉಪ ಗ್ರಾಮಗಳಿಗೆ ವಿದ್ಯುದ್ದೀಕರಣ ಮಾಡಲು ರೆವಿನ್ಯೂ ಆದಾಯ ಕಡಿಮೆ ಇದ್ದು 1 ಲಕ್ಷಕ್ಕೂ ಹೆಚ್ಚು ಖರ್ಚು ಆಗುತ್ತಿರುವುದರಿಂದ ವಿದ್ಯುದ್ದೀಕರಣ ಮಾಡಲಾಗುತ್ತಿಲ್ಲ.

ಆ) ಇಂತಹ ಗ್ರಾಮಗಳನ್ನು ವಿದ್ಯುದ್ದೀಕರಣ ಮಾಡಲು ಮಂಡಳಿಯು ತನ್ನ ಸಂಪನ್ಮೂಲವನ್ನು ಗಮನದಲ್ಲಿಟ್ಟುಕೊಂಡು ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳುವುದು.

ಮೂಡಿಗೆರೆಯಲ್ಲಿ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಸ್ಥಾಪನೆ

2004: ಶ್ರೀಮಾತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಸ್ಥಾಪನೆ ಮಾಡಿದ್ದು ಯಾವಾಗ, ಯಾವ ಉದ್ದೇಶಕ್ಕಾಗಿ ಸ್ಥಾಪನೆ ಮಾಡಲಾಯಿತು.

ಆ) ಇದರಿಂದ ಎಷ್ಟು ಲಿಫ್ಟ್ ಇರಿಗೇಷನ್ ಸ್ಕೀಮ್ ಮಂಜೂರು ಮಾಡಲಾಗಿದೆ ? ಇವುಗಳು ಯಾವ ಹಂತದಲ್ಲಿವೆ;

ಇ) ಮೂಡಿಗೆರೆ ಉದುಸೆ ಲಿಫ್ಟ್ ಇರಿಗೇಷನ್ ಯೋಜನೆಯ ಕೆಲಸವು ಪ್ರಾರಂಭಿಸದಿರಲು ಕಾರಣವೇನು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಕಾವೇರಿ ಬೇಸಿನ್ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್‌ನನ್ನು ದಿನಾಂಕ 2-6-86ರಂದು ಮೈಸೂರಿನಲ್ಲಿ ಸ್ಥಾಪಿಸಲಾಯಿತು. ಕೃಷ್ಣಾ ಬೇಸಿನ್ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್‌ನನ್ನು ದಿನಾಂಕ 9-6-86 ರಂದು ಬಿಜಾಪುರದಲ್ಲಿ ಸ್ಥಾಪಿಸಲಾಯಿತು.

ವಾಣಿಜ್ಯ ಸಂಸ್ಥೆಗಳಿಂದ ಸಾಲ ಪಡೆದು ಏತ ನೀರಾವರಿ ಯೋಜನೆಗಳ ಮೂಲಕ ಹೆಚ್ಚಿನ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಲು ಸದರಿ ನಿಗಮಗಳನ್ನು ಸ್ಥಾಪಿಸಿದೆ.

ಆ) ಕಾವೇರಿ ಜಲಾನಯನ ಏತ ನೀರಾವರಿ ನಿಗಮದಲ್ಲಿ 17ಯೋಜನೆ ಮತ್ತು ಕೃಷ್ಣಾ ಜಲಾನಯನ ಏತ ನೀರಾವರಿ ಯೋಜನೆ ನಿಗಮದಲ್ಲಿ 8 ಯೋಜನೆಗಳು ಮಂಜೂರಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

ಇ) ಈ ಯೋಜನೆಯ ಅಂದಾಜನ್ನು ನಬಾರ್ಡ್‌ಗೆ ಸಲ್ಲಿಸಿದ್ದು ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಮೂಡಿಗೆರೆ ತಾಲ್ಲೋಕಿನಲ್ಲಿ ರಾಷ್ಟ್ರೀಯ ಹೆದ್ದಾರಿಯ ರಸ್ತೆಗಳು

2161: ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯೊಳಗೆ ಬರುವ ರಾಷ್ಟ್ರೀಯ ಹೆದ್ದಾರಿ ರಸ್ತೆ, ರಾಜ್ಯ ಹೆದ್ದಾರಿ ರಸ್ತೆ, ಎಂಡಿಆರ್ ರಸ್ತೆಗಳ ಉದ್ದವೆಷ್ಟು; (ಪ್ರತ್ಯೇಕ ವಿವರ ನೀಡುವುದು);

ಆ) ಅವುಗಳ ಅಭಿವೃದ್ಧಿಗೆ ಒದಗಿಸುವ ಹಣವೆಷ್ಟು;

ಇ) ಜಿಲ್ಲಾ ಪರಿಷತ್ ವ್ಯಾಪ್ತಿ ಒಳಗೆ ಬರುವ ಒಡಿಆರ್ ರಸ್ತೆ, ಹಳ್ಳಿ ಹೆದ್ದಾರಿ, ಹರಿಜನ, ಗಿರಿಜನವಾಡ್ ರಸ್ತೆಗಳು ಎಷ್ಟು ಕಿ.ಮೀ; ಇವುಗಳ ದುರಸ್ತಿಗಾಗಿ ಒದಗಿಸುವ ಹಣವೆಷ್ಟು;

ಈ) ಈ ಮೇಲಿನ ಎರಡು ಇಲಾಖೆ ವ್ಯಾಪ್ತಿಯೊಳಗೆ ಬರುವ ರಸ್ತೆಗಳ ಉಸ್ತುವಾರಿಗಾಗಿ ಇರುವ ಗ್ಯಾಂಗ್ ಮ್ಯಾನ್‌ಗಳೆಷ್ಟು ಎಷ್ಟು ಕಿ.ಮೀ ರಸ್ತೆಗೆ ಒಬ್ಬ ಗ್ಯಾಂಗ್ ಮ್ಯಾನ್ ಇರಬೇಕಾಗುತ್ತದೆ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಬರುವ ರಸ್ತೆಗಳ ಉದ್ದ:–

1) ರಾಷ್ಟ್ರೀಯ ಹೆದ್ದಾರಿಯ ಉದ್ದ	–	ಇಲ್ಲ
2) ರಾಜ್ಯದ ಹೆದ್ದಾರಿ ಉದ್ದ	–	151 ಕಿ.ಮೀ
3) ಜಿಲ್ಲಾ ಮುಖ್ಯ ರಸ್ತೆ ಉದ್ದ	–	128 ಕಿ.ಮೀ
		279 ಕಿ.ಮೀ

ಆ) ಯೋಜನೆ ಮತ್ತು ಯೋಜನೇತರ ಶೀರ್ಷಿಕೆಯಲ್ಲಿ ಒಟ್ಟು 41.80 ಲಕ್ಷ ರೂ. ಅನುದಾನ ಒದಗಿಸಿದೆ.

ಇ) ಜಿಲ್ಲಾ ಪರಿಷತ್ ವ್ಯಾಪ್ತಿಯೊಳಗೆ ಬರುವ ರಸ್ತೆಗಳ ಒಟ್ಟು ಉದ್ದ – 3,611.35 ಕಿ.ಮೀ ಇರುತ್ತಿದ್ದು ಇವುಗಳ ದುರಸ್ತಿಗೆ ಒಟ್ಟು 85.31 ಲಕ್ಷ ರೂ. ಅನುದಾನ ಒದಗಿಸಲಾಗಿದೆ.

ಈ) 1) ಲೋಕೋಪಯೋಗಿ ಇಲಾಖೆ ಅಡಿ 32 ಹಾಗೂ ಜಿಲ್ಲಾ ಪರಿಷತ್ ಇಂಜನಿಯರಿಂಗ್ ಇಲಾಖೆ ಅಡಿ 75 ಗ್ಯಾಂಗ್ ಮೆನ್‌ಗಳು ಇದ್ದಾರೆ.

2) ಸಾಧಾರಣವಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ 5 ಕಿ.ಮೀಗೆ ಒಬ್ಬರಂತೆ, ರಾಜ್ಯ ಹೆದ್ದಾರಿ ಮತ್ತು ಮುಖ್ಯ ಜಿಲ್ಲಾ ರಸ್ತೆಗಳಿಗೆ 10 ಕಿ.ಮೀಗೆ ಒಬ್ಬರಂತೆ, ಗ್ಯಾಂಗ್ ಮನ್ ಇರಬೇಕಾಗುತ್ತದೆ. ಇತರ ರಸ್ತೆಗಳಿಗೆ ಕಾಮಗಾರಿಗಳ ಅವಶ್ಯಕತೆಯಂತೆ. ಗ್ಯಾಂಗ್‌ಮೆನ್‌ಗಳು ಇರಬೇಕು. ಇದಕ್ಕೆ ನಿರ್ದಿಷ್ಟವಾಗಿ ಇಷ್ಟೇ ಇರಬೇಕೆಂಬ ನಿಯಮ ಇರುವುದಿಲ್ಲ.

ಸಿಂಧನೂರು ತಾಲ್ಲೂಕು ಏತ ನೀರಾವರಿ ಯೋಜನೆ

395ಎ: ಶ್ರೀ ಬಿ. ಹಂಪನ ಗೌಡ (ಸಿಂಧನೂರು):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವಿರಾ ?

1993–94ನೇ ಸಾಲಿನಲ್ಲಿ ಸಿಂಧನೂರು ತಾಲ್ಲೂಕು ಒಳಬಳ್ಳಾರಿ ಏತ ನೀರಾವರಿ ಯೋಜನೆಯನ್ನು ಮಂಜೂರಾತಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಈ ಯೋಜನೆಯ ಶಕ್ಯತೆ ಬಗ್ಗೆ ಇನ್ನು ಪರಿಶೀಲಿಸಬೇಕಾಗಿದೆ. ಶಕ್ಯವೆಂದು ಕಂಡು ಬಂದ ನಂತರವೇ ಕೈಗೆತ್ತಿಕೊಳ್ಳುವ ಪ್ರಶ್ನೆ ಉದ್ಭವಿಸುವುದು.

ತುಂಗಭದ್ರ ಜಲಾಶಯದ ವ್ಯಾಪ್ತಿಯಲ್ಲಿ ಉಪಕಾಲುವೆಗಳ ದುರಸ್ತಿ

395–ಬಿ: ಶ್ರೀ ಬಿ. ಹಂಪನಗೌಡ (ಸಿಂಧನೂರು):– ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಭದ್ರಾ ಜಲಾಶಯದ ವ್ಯಾಪ್ತಿಯಲ್ಲಿ ಬರುವ 36ನೇ ಉಪ ಕಾಲುವೆ, 40ನೇಯ ಉಪಕಾಲುವೆಗಳ ದುರಸ್ತಿ ಕೆಲಸ ಮಾಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಇದ್ದಲ್ಲಿ ಎನ್‌ಡಬ್ಲ್ಯೂಎಂಪಿಯಲ್ಲಿ ಯೋಜನೆ ಏಕೆ ನೇಮಿಸಬಾರದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) 36ನೇ ಉಪ ಕಾಲುವೆ ದುರಸ್ತಿಯ ಕೆಲಸ ಮಾಡಿಸಲು ಉದ್ದೇಶಿಸಲಾಗಿದೆ. 40ನೇ ಉಪ ಕಾಲುವೆಯ ದುರಸ್ತಿ ಕೆಲಸ ಮಾಡಲು ಉದ್ದೇಶಿಸಲಾಗಿಲ್ಲ.

ಆ) ಪರಿಶೀಲಿಸಲಾಗುವುದು

ತುಂಗಭದ್ರ ಜಲಾಶಯದಲ್ಲಿ ಹೂಳು ತುಂಬಿರುವ ವಿಷಯ

396: ಶ್ರೀ ಬಿ. ಹಂಪನಗೌಡ (ಸಿಂಧನೂರು):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಹೂಳು ತೆಗೆಯಲು ತಗಲುವ ವೆಚ್ಚವೆಷ್ಟು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಬಂದಿರುತ್ತದೆ.

ಆ) ಈಗ ಶೇಖರವಾಗಿರುವ 24 ಟಿ.ಎಂ.ಸಿ.ಯಷ್ಟು ಹೂಳನ್ನು ತೆಗೆಯಲು ಸುಮಾರು ರೂ 2,400,00 ಕೋಟಿಗಳೆಂದು ಅಂದಾಜಿಸಲಾಗಿದೆ.

ಗಂಗಾವತಿ ತಾಲ್ಲೂಕು ವಿಠಲಾಪುರ ಕೆರೆ

2193: ಶ್ರೀ ಬಿ. ಹಂಪನಗೌಡ (ಸಿಂಧನೂರು):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಂಗಾವತಿ ತಾಲ್ಲೂಕಿನಲ್ಲಿ ಬರುವ ವಿಠಲಾಪುರದ ಕೆರೆಯು ಯಾವಾಗ ಮತ್ತು ಯಾವ ಯೋಜನೆಯಡಿಯಲ್ಲಿ ಮಂಜೂರಾಗಿದೆ;

ಆ) ಈ ಕೆರೆಯಿಂದ ನೀರಾವರಿ ಪ್ರದೇಶವಾಗುವ ಜಮೀನಿನ ವಿಸ್ತೀರ್ಣವೆಷ್ಟು ?

ಇ) ಈ ಕೆರೆ ಪೂರ್ಣಗೊಳ್ಳಲು ತಗಲುವ ವೆಚ್ಚವೆಷ್ಟು ?

ಡಾ. ಆರ್.ಬಿ. ಚೌದರಿ (ಸಣ್ಣ ನೀರಾವರಿ ಸಚಿವರು):–

ಅ) ಗಂಗಾವತಿ ತಾಲ್ಲೂಕಿನ ವಿಠಲಾಪುರ ಕೆರೆಯು 1980ರಲ್ಲಿ 506 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಮಂಜೂರಾಗಿದೆ (ಈಗಿನ ಲೆಕ್ಕ ಶೀರ್ಷಿಕೆ 4702).

ಆ) 140 ಹೆಕ್ಟೇರ್ (350 ಎಕರೆ)

ಇ) 33.350 ಲಕ್ಷರೂ.ಗಳು.

ಧಾರವಾಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳ ನೀರಾವರಿ ಬಾವಿಗಳಿಗೆ ವಿದ್ಯುತ್ ಪೂರೈಕೆಯಲ್ಲಿ ತಾರತಮ್ಯ

457: ಶ್ರೀ ಡಿ.ಆರ್. ಪಾಟೀಲ್ (ಗದಗ್):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿಯ ನೀರಾವರಿ ಬಾವಿಗಳಿಗೆ ವಿದ್ಯುತ್ ಸಂಪರ್ಕವು 5 ಕಂಬಗಳ ಅಂತರದಲ್ಲಿಯ ಬಾವಿಗಳಿಗೆ ಮಾತ್ರ ಸೀಮಿತವಾಗಿರುವುದೇ;

ಆ) 5 ಕಂಬಗಳಿಗಿಂತ ಅಧಿಕ ಅಂತರದಲ್ಲಿರುವ ನೀರಾವರಿ ಬಾವಿಗಳು ರೈತರಿಗೆ ವಿದ್ಯುತ್ ಪೂರೈಕೆ ನಿರಾಕರಿಸುವುದು ತಾರತಮ್ಯ ಹಾಗೂ ಅನ್ಯಾಯವಾಗುವುದಿಲ್ಲವೆ;

ಇ) ಸಾಕಷ್ಟು ಇತರ ಸಂಪನ್ಮೂಲಗಳನ್ನು ಹರಿಸಲಾಗುತ್ತಿದ್ದರೂ ವಿದ್ಯುತ್ ಪೂರೈಕೆ ನಿರ್ಬಂಧವಿಲ್ಲದಿರುವಾಗ ಧಾರವಾಡ ಜಿಲ್ಲೆಗೇಕೆ ಈ ನಿಯಮ ಅನ್ವಯಿಸಲಾಗಿದೆ;

ಈ) ಧಾರವಾಡ ಜಿಲ್ಲೆಯ 17 ತಾಲ್ಲೂಕುಗಳಲ್ಲಿ 14 ತಾಲ್ಲೂಕುಗಳ ಬರಗಾಲ ಪೀಡಿತವೆಂದು ಘೋಷಿತವಾಗಿರುವುದರಿಂದ ಜಿಲ್ಲೆಯಾದ್ಯಂತ ನೀರಾವರಿ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಇರುವ ನಿರ್ಬಂಧ ರದ್ದುಗೊಳಿಸಲು ಸರ್ಕಾರ ಪರಿಶೀಲಿಸುವುದೆ ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯ ಮಂತ್ರಿಗಳು):–

ಅ) 60,000 ನೀರಾವರಿ ಪಂಪುಸೆಟ್ಟುಗಳ ಗುರಿಯನ್ನು ನಿಗದಿತ ಸಮಯದಲ್ಲಿ ಸಾಧಿಸಲು 5 ಕಂಬಗಳಿಗಿಂತ ಹೆಚ್ಚು ಕಂಬಗಳು ಬೇಕಾಗುವ ಸಾಮಾನ್ಯ ವರ್ಗಕ್ಕೆ ಸೇರಿದ ಅರ್ಜಿದಾರರ ಕೆಲಸಗಳನ್ನು ಈ ಹಿಂದೆ ತಡೆ ಹಿಡಿಯಲಾಗಿತ್ತು. ಇದು ಕೇವಲ ಧಾರವಾಡ ಜಿಲ್ಲೆಗೆ ಮಾತ್ರ ಅನ್ವಯಿಸದೇ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಿಗೂ ಅನ್ವಯಿಸುತ್ತಿತ್ತು. ಆದರೆ, ಇತ್ತೀಚೆಗೆ ಮಂಡಳಿಯು 31-3-92ರಲ್ಲಿರುವಂತೆ ಬಾಕಿ ಇರುವ ಸಾಮಾನ್ಯ ವರ್ಗಕ್ಕೆ ಸೇರುವ ಎಲ್ಲಾ ಮಂಜೂರಾಗಿರುವ ನೀರಾವರಿ ಪಂಪುಸೆಟ್ಟುಗಳ ಕೆಲಸಗಳನ್ನು ಕಂಬಗಳ ಸಂಖ್ಯೆಗಳನ್ನು ಗಣನೆಗೆ ತೆಗೆದುಕೊಳ್ಳದೇ 'ರೋಸ್ಟರ್' ಪ್ರಕಾರ ಮಾಡಿ ಮುಗಿಸುವಂತೆ ನಿರ್ದೇಶನ ನೀಡಿದೆ. ಇದು ಧಾರವಾಡ ಜಿಲ್ಲೆಗೂ ಅನ್ವಯಿಸುತ್ತದೆ.

ಆ) ಪ್ರಶ್ನೆ 'ಅ' ಭಾಗಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) ರಾಜ್ಯದಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣಕ್ಕೆ ಸರ್ಕಾರವು ಅಂಗೀಕರಿಸಿರುವ 'ರೋಸ್ಟರ್' ಪದ್ಧತಿ ಪ್ರಕಾರ ನೀಡಲಾಗುತ್ತಿದೆ. ಇದನ್ನು ಸಾರ್ವತ್ರಿಕವಾಗಿ ಒಂದೇ ರೀತಿಯಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಜಾರಿಗೊಳಿಸಿದೆ. ಧಾರವಾಡ ಜಿಲ್ಲೆಯಲ್ಲೂ ಸಹಾ 'ರೋಸ್ಟರ್' ಪದ್ಧತಿ ಪ್ರಕಾರ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ. ಈ ವಿಷಯದಲ್ಲಿ ಯಾವ ರೀತಿಯ ತಾರತಮ್ಯವೂ ಇರುವುದಿಲ್ಲ.

ಈ) ಪ್ರಶ್ನೆಯ 'ಅ' ಮತ್ತು 'ಇ' ಭಾಗಗಳಿಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ವೀರಾಜಪೇಟೆ ಮಾಕುಟ್ಟ ರಸ್ತೆಯ ದುಸ್ಥಿತಿ

810: ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವೀರಾಜಪೇಟೆ ಮಾಕುಟ್ಟ ರಸ್ತೆ ಕರ್ನಾಟಕ ರಾಜ್ಯಕ್ಕೊಳಪಟ್ಟಿದೆಯೇ ಅಥವಾ ಕೇರಳ ರಾಜ್ಯಕ್ಕೊಳಪಟ್ಟಿದೆಯೆ;

ಆ) ಕರ್ನಾಟಕ ರಾಜ್ಯಕ್ಕೊಳಪಟ್ಟಿದ್ದಲ್ಲಿ, ಸದರಿ ರಸ್ತೆ ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಇ) ಈ ರಸ್ತೆ ಜಿಲ್ಲಾ ರಸ್ತೆಯೇ ? ಅಥವಾ ರಾಜ್ಯ ಹೆದ್ದಾರಿಯೇ;

ಈ) ಸದರಿ ರಸ್ತೆಯ ರಿಪೇರಿಗೆ ಹಣವನ್ನು ಏನಾದರೂ ವೆಚ್ಚ ಮಾಡಲಾಗಿದೆಯೇ;

ಉ) ಈ ರಸ್ತೆಯನ್ನು ಸುಸ್ಥಿತಿಯಲ್ಲಿಡಲು ಶಾಶ್ವತ ಕ್ರಮವನ್ನೇನಾದರೂ ಯೋಜಿಸಲಾಗಿದೆಯೇ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ವೀರಾಜಪೇಟೆ–ಮಾಕುಟ್ಟ ರಸ್ತೆ ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿದೆ.

ಆ) ಸದರಿ ರಸ್ತೆಯ ಕಿ.ಮೀ. 50.00 ರಿಂದ 69.7 ರವರೆಗೆ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಈ ರಸ್ತೆಯ ರಾಜ್ಯ ಹೆದ್ದಾರಿ ಸಂಖ್ಯೆ 88 (ಬಿ) ಆಗಿದೆ.

ಈ) ಸದರಿ ರಸ್ತೆ ಅಭಿವೃದ್ಧಿಗೆ ಮಂಜೂರಾದ 8.71 ಲಕ್ಷ ರೂ.ಗಳ ಅಂದಾಜಿನ ಕಾಮಗಾರಿಗಳಲ್ಲಿ

ಜನವರಿ 93ರ ವರೆವಿಗೂ 3.89 ಲಕ್ಷರೂ. ವೆಚ್ಚ ಮಾಡಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ. ಕಾಮಗಾರಿಗಳನ್ನು ಏಪ್ರಿಲ್ 93ರಲ್ಲಿ ಮುಗಿಸುವ ಕಾರ್ಯಕ್ರಮವಿದೆ.

ಉ) ವರ್ಷವಾರು ಬಿಡುಗಡೆಯಾಗುವ ನಿರ್ವಹಣ ಅನುದಾನಕ್ಕೆ ಅನುಗುಣವಾಗಿ ರಸ್ತೆಯನ್ನು ಸುಸ್ಥಿತಿಯಲ್ಲಿಡಲಾಗುವುದು.

ಕೊಡಗು ಜಿಲ್ಲೆಯ ರಸ್ತೆಗಳನ್ನು ದುರಸ್ತುಗೊಳಿಸುವುದು.

2186: ಶ್ರೀಮತಿ ಸುಮಾ ವಸಂತ (ವೀರಾಜಪೇಟೆ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರಿನಿಂದ ವಿರಾಜಪೇಟೆ ಮಾಕುಟ್ಟ ಮೂಲಕ ಕೇರಳಕ್ಕೆ ಹೋಗುವ ರಸ್ತೆ ಹಾಳಾಗಿದ್ದು ಕಳೆದ 10 ವರ್ಷಗಳಿಂದ ದುರಸ್ತಿಯಾಗುದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹುಣಸೂರು-ಪಿರಿಯಾಪಟ್ಟಣ-ಕುಶಾಲನಗರ ರಸ್ತೆ, ಹಾಗೂ ಹುಣಸೂರು ಆನೇಚೌಕೂರು ಗೇಟ್-ಗೋಣೀಕೊಪ್ಪ-ವೀರಾಜಪೇಟೆ ರಸ್ತೆಗಳು ತೀರಾ ಹದಗೆಟ್ಟದ್ದು ಕಳೆದ 10 ವರ್ಷಗಳಿಂದಲೂ ದುರಸ್ತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮೇಲ್ಕಂಡ ರಸ್ತೆಗಳು ಉದ್ದವೆಷ್ಟು ಮತ್ತು ಈವರೆಗೂ ದುರಸ್ತಿಯಾಗದಿರುವುದಕ್ಕೆ ಕಾರಣವೇನು;

ಈ) ಯಾವಾಗ ದುರಸ್ತಿಗೊಳಿಸಲಾಗುವುದು ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಲಭ್ಯವಿರುವ ನಿರ್ವಹಣ ಅನುದಾನದಿಂದ ಸದರಿ ರಸ್ತೆಯನ್ನು ಸಾಕಷ್ಟು ಸುಸ್ಥಿತಿಯಲ್ಲಿಡಲಾಗಿದೆ.

ಆ) ಲಭ್ಯವಿರುವ ನಿರ್ವಹಣ ಅನುದಾನದಿಂದ ಸದರಿ ರಸ್ತೆಯನ್ನು ಸಾಕಷ್ಟು ಸುಸ್ಥಿತಿಯಲ್ಲಿಡಲಾಗಿದೆ.

ಇ) 1) ಹುಣಸೂರು ಪಿರಿಯಾಪಟ್ಟಣ ಕುಶಾಲನಗರ ರಸ್ತೆಯು ಮೈಸೂರು-ಬಂಟ್ವಾಳ ರಾಜ್ಯ ಹೆದ್ದಾರಿಯ ಭಾಗವಾಗಿದ್ದು, ಈ ಭಾಗವು 72.30 ಕಿ.ಮೀ ಉದ್ದವಿದೆ.

2) ಹುಣಸೂರುನಿಂದ ಆನೇಚೌಕೂರು-ಗೋಣಿಕೊಪ್ಪ-ವೀರಾಜಪೇಟೆ ರಸ್ತೆಯ ಉದ್ದವು 54.78 ಕಿ.ಮೀ. ಉದ್ದವಿದೆ.

3) ಮೈಸೂರಿನಿಂದ ವೀರಾಜಪೇಟೆ ಮಾಕುಟ್ಟ ಮೂಲಕ ಕೇರಳಕ್ಕೆ ಹೋಗುವ ರಸ್ತೆಯ ಉದ್ದವು 537.4 ಕಿ.ಮೀ. ಇರುತ್ತದೆ.

4) ಈ ರಸ್ತೆಗಳನ್ನು ಪ್ರತಿ ವರ್ಷವೂ ಲಭ್ಯವಾಗುವ ನಿರ್ವಹಣಾ ಅನುದಾನದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸುಸ್ಥಿತಿಯಲ್ಲಿಡಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಕೊಡಗು ಜಿಲ್ಲಾ ವ್ಯಾಪ್ತಿಗೆ ಬರುವ ರಸ್ತೆಗಳ ನಿರ್ವಹಣೆ ಭಾಗದ ಹಾಗೂ ದುರಸ್ಥಿಗಾಗಿ 45.12 ಲಕ್ಷ ರೂ.ಗಳನ್ನು ವೆಚ್ಚ ಮಾಡಿದೆ.

ಈ) ಈ ರಸ್ತೆಗಳ ನಿರ್ವಹಣೆ ದುರಸ್ತಿ ನವೀಕರಣ ಹಾಗೂ ವಿಶೇಷ ದುರಸ್ತಿ ಕಾಮಗಾರಿಗಳನ್ನು ಪ್ರತಿ ವರ್ಷ ಲಭ್ಯವಾಗಿರುವ ಅನುದಾನಕ್ಕೆ ಅನುಗುಣವಾಗಿ ಕೈಗೊಳ್ಳಲಾಗುತ್ತದೆ. ಇದು ಪ್ರತಿ ವರ್ಷವೂ ಮಾಡಲಾಗುವ ಪ್ರಕ್ರಿಯೆಯಾಗಿರುತ್ತದೆ.

ವೀರಾಜಪೇಟೆ ತಾಲ್ಲೂಕಿನ ಕೆರೆಗಳ ಹೂಳು ತೆಗೆಯುವುದು

2187: ಶ್ರೀಮತಿ ಸುಮಾವಸಂತ (ವೀರಾಜಪೇಟೆ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವೀರಾಜಪೇಟೆ ತಾಲ್ಲೂಕಿನ ಅನೇಕ ಕೆರೆಗಳ ಹೂಳು ತೆಗೆಯದಿರುವುದರಿಂದಾಗಿ ಕೆರೆಗಳಲ್ಲಿ ಸಾಕಷ್ಟು ನೀರು ನಿಲ್ಲದೆ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿಈ ಬಗ್ಗೆ ಕೂಡಲೆ ಕ್ರಮ ಕೈಗೊಂಡು ಹೂಳು ತೆಗೆಸಿ ರೈತರ ತೊಂದರೆ ನಿವಾರಣೆ ಮಾಡಲಾಗುವುದೆ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯಸಚಿವರು):-

ಅ) ಬಂದಿದೆ.

ಆ) ಪರಿಶೀಲಿಸಲಾಗುವುದು.

ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಹೊಸ ನೀರಾವರಿ ಯೋಜನೆ.

846: ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರಿನ ಶಿರಾ, ಮಧುಗಿರಿ, ಪಾವಗಡ ಹಾಗೂ ಚಿತ್ರದುರ್ಗದ ಹೊಸದುರ್ಗ, ಹೊಳಲ್‌ಕೆರೆ, ಮೊಳಕಾಲ್ಮೂರ್ ಮತ್ತು ಇತರ ತಾಲ್ಲೂಕುಗಳು ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶಗಳಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ) ಈ ಎಲ್ಲಾ ತಾಲ್ಲೂಕುಗಳನ್ನೊಳಗೊಂಡಂತೆ ಸರ್ಕಾರ ಯಾವುದಾದರೂ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳು ಉದ್ದೇಶಿಸಿದೆಯೇ;

ಇ) ಹೀಗಿದ್ದಲ್ಲಿ ಅವು ಯಾವುವು ? ಅವುಗಳನ್ನು ಕಾರ್ಯಗತಗೊಳಿಸಲು ಕಾಲಮಿತಿ ಏನಾದರೂ ಇದೆಯೇ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ತಿಳಿದಿದೆ.

ಆ) ಈ ಎಲ್ಲಾ ತಾಲ್ಲೂಕುಗಳನ್ನೊಳಗೊಂಡಂತೆ ಯಾವುದೇ ಸಮಗ್ರ ನೀರಾವರಿ ಯೋಜನೆ ಇರುವುದಿಲ್ಲ. ಆದಾಗ್ಯೂ .ಈ ತಾಲ್ಲೂಕುಗಳಲ್ಲಿ ಕೆಲವು ಸಣ್ಣ ನೀರಾವರಿ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ.

ಇ) 1) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

2) ಇನ್ನೆರಡು ವರ್ಷಗಳಲ್ಲಿ ಈ ಯೋಜನೆಗಳನ್ನು ಪೂರೈಸಲು ಉದ್ದೇಶಿಸಿದೆ

ಅನುಬಂಧ

ವಿಧಾನ ಸಭಾ ಸದಸ್ಯರಾದ ಶ್ರೀ ಟಿ.ಬಿ. ಜಯಚಂದ್ರರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 846ಕ್ಕೆ ಸಂಬಂಧಿಸಿದ ಮಾಹಿತಿ

ಕ್ರಮಸಂಖ್ಯೆ	ಕಾಮಗಾರಿಯ ಹೆಸರು
	ತುಮಕೂರು ಜಿಲ್ಲೆ
1)	ಶಿರಾ ತಾಲ್ಲೂಕು ಕಳ್ಳಂಬೆಳ್ಳ ಜಲಾನಯನ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ (ಹುಂಜನಾಳ ವಾಟರ್ ಶೆಡ್) ಶೀಬಿ ಅಗ್ರಹಾರ ದೊಡ್ಡಕೆರೆಯ ಅಭಿವೃದ್ಧಿ ಯೋಜನೆ (ಸಿಎಡಿಪಿ)
2)	ಶಿರಾ ತಾಲ್ಲೂಕು ತರೂರು ಲಕ್ಷ್ಮೀಸಾಗರ ಕೆರೆ ಅಭಿವೃದ್ಧಿ ಯೋಜನೆ (ಸಿಎಡಿಪಿ)
3)	ಶಿರಾ ತಾಲ್ಲೂಕು ಬ್ರಹ್ಮಸಂದ್ರ ಕೊಡಗಿ ಕೆರೆ ಅಭಿವೃದ್ಧಿ ಯೋಜನೆ (ಸಿಎಡಿಪಿ)
4)	ಶಿರಾ ತಾಲ್ಲೂಕು ಬೈಜಾಪುರ ಕೆರೆ ಅಭಿವೃದ್ಧಿ ಯೋಜನೆ (ಸಿಎಡಿಪಿ)
5)	ಶಿರಾ ತಾಲ್ಲೂಕು ಕಳ್ಳಂಬೆಳ್ಳ ಕೆರೆಯ ಜೀರ್ಣೋದ್ಧಾರ
6)	ಶಿರಾ ತಾಲ್ಲೂಕು ಮಾರಗೊಂಡನಹಳ್ಳಿ ಹೊಸಕೆರೆ ನಿರ್ಮಾಣ
7)	ಶಿರಾ ತಾಲ್ಲೂಕು ಬುಕ್ಕಾಪಟ್ಟಣ ನಂದಿಹಳ್ಳ ಕೆರೆ
8)	ಶಿರಾ ತಾಲ್ಲೂಕು ತಿಮ್ಮಜ್ಜಿ ಕಟ್ಟೆ ಬಳಿ ಹೊಸಕೆರೆ ನಿರ್ಮಾಣ
9)	ಮಧುಗಿರಿ ತಾಲ್ಲೂಕು ತಾಯಿಗೊಂಡನಹಳ್ಳಿ ಹೊಸಕೆರೆ ನಿರ್ಮಾಣ
10)	ಮಧುಗಿರಿ ತಾಲ್ಲೂಕು ಗಿರಿಗೊಂಡನಹಳ್ಳಿ ಹೊಸಕೆರೆ ನಿರ್ಮಾಣ
11)	ಮಧುಗಿರಿ ತಾಲ್ಲೂಕು ಕಲಿದೇವರಪುರ ಹೊಸಕೆರೆ ನಿರ್ಮಾಣ
12)	ಮಧುಗಿರಿ ತಾಲ್ಲೂಕು ಸಜ್ಜೇಹೊಸಹಳ್ಳಿ ಬಳಿ ಹೊಸಕೆರೆ ನಿರ್ಮಾಣ
13)	ಮಧುಗಿರಿ ತಾಲ್ಲೂಕು ಹೊಸಕೋಟೆ ಬಳಿ ಹೊಸಕೆರೆ ನಿರ್ಮಾಣ
14)	ಮಧುಗಿರಿ ತಾಲ್ಲೂಕು ಗಾಳಿಹಳ್ಳಿ ಬಳಿ ಹೊಸಕೆರೆ ನಿರ್ಮಾಣ
15)	ಮಧುಗಿರಿ ತಾಲ್ಲೂಕು ಹುಣಸೇಮರದ ಹಟ್ಟಿ ಬಳಿ ಹೊಸಕೆರೆ ನಿರ್ಮಾಣ
16)	ಮಧುಗಿರಿ ತಾಲ್ಲೂಕು ವಿರೂಪಗೊಂಡಹಳ್ಳಿ ಬಳಿ ಹೊಸಕೆರೆ ನಿರ್ಮಾಣ
17)	ಪಾವಗಡ ತಾಲ್ಲೂಕು ಪಲ್ಲವಳ್ಳಿ ಪಲ್ಲವರಾಯನಕೆರೆ ಜೀರ್ಣೋದ್ಧಾರ
18)	ಪಾವಗಡ ತಾಲ್ಲೂಕು ದಳವಾಯಿಹಳ್ಳಿ ಹೊಸಕೆರೆ ನಿರ್ಮಾಣ
19)	ಪಾವಗಡ ತಾಲ್ಲೂಕು ಕಣಿವೇನಹಳ್ಳಿ ಹೊಸಕೆರೆ ನಿರ್ಮಾಣ
20)	ಪಾವಗಡ ತಾಲ್ಲೂಕು ನೇರಳಕುಂಟೆ ಬಳಿ ಹೊಸಕೆರೆ ನಿರ್ಮಾಣ

ಚಿತ್ರದುರ್ಗ ಜಿಲ್ಲೆ

1) ಹೊಸದುರ್ಗ ತಾಲ್ಲೂಕು ದೊಡ್ಡಗಟ್ಟ ಬಳಿ ಗಂಗಾ ಕಲ್ಯಾಣ ಯೋಜನೆ
2) ಹೊಸದುರ್ಗ ತಾಲ್ಲೂಕು ಹರೇನಹಳ್ಳಿ (ಬೆಲಗೂರು ಬಳಿ) ಗಂಗಾ ಕಲ್ಯಾಣ ಯೋಜನೆ
3) ಹೊಸದುರ್ಗ ತಾಲ್ಲೂಕು ವಳಲಿ ಬಳಿ ಗಂಗಾ ಕಲ್ಯಾಣ ಯೋಜನೆ
4) ಹೊಳಲ್ಕೆರೆ ತಾಲ್ಲೂಕು ಹಾಲೇನಹಳ್ಳಿ ಬಳಿ ಹೊಸಕೆರೆ ನಿರ್ಮಾಣ
5) ಹೊಳಲ್ಕೆರೆ ತಾಲ್ಲೂಕು ಗಂಡೇರಿಕಾವಲ್ ಬಳಿ ಗಂಗಾ ಕಲ್ಯಾಣ ಯೋಜನೆ
6) ಹೊಳಲ್ಕೆರೆ ತಾಲ್ಲೂಕು ಕಣಿವೇಜೋಗಿಹಳ್ಳಿ ಬಳಿ ಗಂಗಾ ಕಲ್ಯಾಣ ಯೋಜನೆ
7) ಹೊಳಲ್ಕೆರೆ ತಾಲ್ಲೂಕು ಕಸವನಹಳ್ಳಿ ಬಳಿ ಗಂಗಾ ಕಲ್ಯಾಣ ಯೋಜನೆ
8) ಹೊಳಲ್ಕೆರೆ ತಾಲ್ಲೂಕು ಹೊಳಲ್ಕೆರೆ ಹಿರೇಕಟ್ಟೆ ಫೋಷಕ್ ಕಾಲುವೆ ನಿರ್ಮಾಣ
9) ಮೊಳಕಾಲ್ಮೂರು ತಾಲ್ಲೂಕು ರಂಗಯ್ಯನದುರ್ಗ ಯೋಜನೆ

ಹಾಸನ ವಿಧಾನಸಭೆ ಕ್ಷೇತ್ರದ ತ್ಯಾಗಟೂರು ಗ್ರಾಮದ ಸ್ಥಳಾಂತರ

1002: ಶ್ರಿ ಕೆ.ಹೆಚ್. ಹನುಮೇಗೌಡ, (ಹಾಸನ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ವಿಧಾನಸಭಾ ಕ್ಷೇತ್ರದ ಕಟ್ಟಾಯ ಹೋಬಳಿ ತ್ಯಾಗಟೂರು ಗ್ರಾಮವನ್ನು ಸ್ಥಳಾಂತರಿಸಲು ಸರ್ಕಾರದ ಯಾವ ದಿನಾಂಕದಂದು ನಿರ್ಣಯ ತೆಗೆದುಕೊಂಡಿತು, ಈ ಗ್ರಾಮವನ್ನು ಸ್ಥಳಾಂತರಿಸಲು ಅವಾರ್ಡ್ ಯಾವ ದಿನಾಂಕದಂದು ಆಗಿದೆ.

ಆ) ಅವಾರ್ಡ್ ಅನುಸರಿಸಿ ಸಂಬಂಧಿಸಿದ ಅಲ್ಲಿಯ ಜನವರಿಗೆ ಇದುವರೆಗೆ ಅವಾರ್ಡ್ ಹಣವನ್ನು ಕೊಡದಿರಲು ಕಾರಣವೇನು; (ವಿವರ ನೀಡುವುದು);

ಇ) ಹಾಸನ ಕ್ಷೇತ್ರದ ಕಟ್ಟಾಯ ಹೋಬಳಿ ನಾಯಕನಹಳ್ಳಿ ಮತ್ತು ಕಲ್ಲಹಳ್ಳಿ ಗ್ರಾಮಗಳನ್ನು ಅಲ್ಲಿನ ಈ ಗ್ರಾಮಗಳ ಜನರ ಆರೋಗ್ಯ ದೃಷ್ಟಿಯಿಂದ ಸ್ಥಳಾಂತರಿಸಲು ಸರ್ಕಾರವು ತೆಗೆಧುಕೊಂಡಿರುವ ಕ್ರಮವೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ನೆಲಮಂಗಲ ಕೊರಟಗೆರೆ ಲೋಕೋಪಯೋಗಿ ರಸ್ತೆಗಳು

1115: ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೆಲಮಂಗಲ ಮತ್ತು ಕೊರಟಗೆರೆ ತಾಲ್ಲೂಕುಗಳಲ್ಲಿ ಒಟ್ಟು ಎಷ್ಟು ಕಿ.ಮೀ. ಲೋಕೋಪಯೋಗಿ ರಸ್ತೆಗಳಿವೆ; (ತಾಲ್ಲೂಕುವಾರು ವಿವರ ಕೊಡುವುದು);

ಆ) ಇವುಗಳ ಪೈಕಿ ಎಷ್ಟು ಕಿ.ಮೀ.ಗಳಲ್ಲಿ ಬಸ್ಸು ಸಂಚಾರ ಮಾಡಲು ಯೋಗ್ಯವಾಗಿದೆ;

ಇ) ಉಳಿದ ಕಿ.ಮೀ.ಗಳಲ್ಲಿ ಶೀಘ್ರದಲ್ಲಿ ರಸ್ತೆ ದುರಸ್ತಿ ಮಾಡಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ನೆಲಮಂಗಲ ಮತ್ತು ಕೊರಟಗೆರೆಯಲ್ಲಿರುವ ಲೋಕೋಪಯೋಗಿ ಇಲಾಖೆ ರಸ್ತೆ ವಿವರ ಕೆಳಕಂಡಂತಿದೆ:-

ತಾಲ್ಲೂಕು	ರಾಜ್ಯ ಹೆದ್ದಾರಿ	ಜಿಲ್ಲಾ ಮುಖ್ಯ ರಸ್ತೆ	ಒಟ್ಟು
ನೆಲಮಂಗಲ	30.00	104.00	134.00
ಕೊರಟಗೆರೆ	40.10	169.60	209.70
	70.10	273.60	343.70

ಆ) ಇವುಗಳಲ್ಲಿ 294.40 ಕಿಮೀ. ರಸ್ತೆಗಳು ಬಸ್ ಸಂಚಾರಕ್ಕೆ ಯೋಗ್ಯವಾಗಿವೆ.

ಇ) 1993-94ನೇ ಸಾಲಿನಲ್ಲಿ ಅನುದಾನ ಲಭ್ಯತೆಯನ್ನು ಅನುಸರಿಸಿ, ಉಳಿದ 49.30 ಕಿಮೀ. ರಸ್ತೆಯನ್ನು ಸಂಚಾರಕ್ಕೆ ತೊಂದರೆ ಉಂಟಾಗದಂತೆ ನಿರ್ವಹಿಸಲಾಗುವುದು.

ಮೂಡಬಿದರೆ ಏತ ನೀರಾವರಿ ಕುರಿತು

1172: ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಬಿದರೆ ಜಂಗರಗುಂಡಿ ಏತ ನೀರಾವರಿಯಿಂದ ನೀರಾವರಿಯಾಗುವ ಜಮೀನಿನ ವಿಸ್ತೀರ್ಣವೆಷ್ಟು; ಫಲಾನುಭವಿಗಳ ಸಂಖ್ಯೆ ಎಷ್ಟು;

ಆ) ಈ ಯೋಜನೆಗೆ ಪ್ಲಾನ್ ಮತ್ತು ಅಂದಾಜು ತಯಾರಿಸಲಾಗಿದೆಯೇ; ಹಾಗೂ ಯೋಜನಾ ವೆಚ್ಚವೆಷ್ಟು;

ಇ) ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು ಯಾವಾಗ;

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರಾವರಿ ಬಗ್ಗೆ ಬಹಳ ಕಮ್ಮಿ ಹಣ ಖರ್ಚಾಗುವುದರಿಂದ ಈ ಯೋಜನೆಯನ್ನಾದರೂ ಸರ್ಕಾರವು ಬೇಗನೆ ಕಾರ್ಯಗಕಗೊಳಿಸುವುದೆ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) 64.37 ಹೆಕ್ಟೇರ್: ಫಲಾನುಭವಿಗಳ ಸಂಖ್ಯೆ: 68.

ಆ) ತಯಾರಿಸಲಾಗಿದೆ. ಅಂದಾಜು ವೆಚ್ಚ ರೂ.23.61 ಲಕ್ಷ.

ಇ) ಯೋಜನೆಯು ಆರ್ಥಿಕವಾಗಿ ಶಕ್ಯವಾಗಿಲ್ಲವಾದ ಕಾರಣ ಇದನ್ನು ಪುನಃ ಪರಿಶೀಲಿಸಲಾಗುತ್ತಿದೆ.

ಈ) ಇದು ಯೋಜನೆಯ ಶಕ್ಯತೆಯನ್ನು ಅವಲಂಬಿಸಿದೆ.

ಅಧಿಕ ವಿದ್ಯುತ್ ಪಡೆಯುವ ಖಾಸಗಿ ಕಾರ್ಖಾನೆಗಳು

1262: ಶ್ರೀ. ಕೆ. ಹರ್ಷಕುಮಾರ ಗೌಡ (ಚಾಮರಾಜ):– ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅತ್ಯಧಿಕ ಪ್ರಮಾಣದ ವಿದ್ಯುಚ್ಛಕ್ತಿ ಪಡೆಯುವ ಖಾಸಗೀ ಕೈಗಾರಿಕೆಗಳೆಷ್ಟು;

ಆ) ಮೈಸೂರು ನಗರದ ಐಡಿಯಲ್ ಜಾವಾ ಕಾರ್ಖಾನೆಗೆ ವಿತರಣೆ ಮಾಡುವ ವಿದ್ಯುಚ್ಛಕ್ತಿಯ ಪ್ರಮಾಣದಲ್ಲಿ ಕೊರತೆ ಮಾಡಲು ಕಾರಣವೇನು;

ಇ) ಈ ಕೊರತೆಯ ಪ್ರಮಾಣವನ್ನು ಯಾವಾಗ ಸರಿಪಡಿಸಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) 10,000 ಕೆವಿಎ ಮತ್ತು ಅದಕ್ಕೂ ಮೇಲ್ಪಟ್ಟು ಕಂಟ್ರಾಕ್ಟ್ ಡಿಮ್ಯಾಂಡ್‌ವುಳ್ಳ ಬೃಹತ್ ಖಾಸಗಿ ಕೈಗಾರಿಕೆಗಳ ಸಂಖ್ಯೆ: 20

ಆ) ರಾಜ್ಯ ಅನುಭವಿಸುತ್ತಿರುವ ವಿದ್ಯುತ್ ಕೊರತೆಯನ್ನು ಭಾಗಶಃ ತುಂಬಲು 251 ಕೆವಿಎ ಮತ್ತು ಅದಕ್ಕೂ ಮೇಲ್ಪಟ್ಟು ಕಂಟ್ರಾಕ್ಟ್ ಡಿಮಾಂಡ್ ಉಳ್ಳ ಹೆಚ್.ಟಿ. ಕೈಗಾರಿಕೆಗಳಿಗೆ ಶೇ. 40 ರಿಂದ ಶೇ. 60ರವರೆಗೆ ವಿದ್ಯುತ್ ಕಡಿತವನ್ನು ವಿಧಿಸಲಾಗಿದೆ. ಸದ್ಯದ ಕ್ಲಿಷ್ಟಕರ ವಿದ್ಯುತ್ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವೂ ಆಗಿದೆ. ಆದಾಗ್ಯೂ ಐಡಿಯಲ್ ಜಾವಾ ಕಾರ್ಖಾನೆಯು 'ರೋಗಗ್ರಸ್ತ' ಕೈಗಾರಿಕೆಯೆಂದು ಘೋಷಿತವಾಗಿರುವುದರಿಂದ, ಬೇರೆ ಕೈಗಾರಿಕೆಗೆ ವಿಧಿಸಲಾಗುವ ವಿದ್ಯುತ್ ಕಡಿತದ ಅರ್ಧದಷ್ಟನ್ನು ಮಾತ್ರ ಈ ಕಾರ್ಖನೆಗೆ ವಿಧಿಸಲಾಗುತ್ತಿದ್ದು, ವಿದ್ಯುತ್ ಕಡಿತದ ಬಗ್ಗೆ ಸಾಕಷ್ಟು ರಿಯಾಯ್ತಿನ್ನು ನೀಡಲಾಗುತ್ತಿದೆ.

ಇ) ಮುಂಗಾರು ಮಳೆಯ ತಿಂಗಳುಗಳಲ್ಲಿ ರಾಜ್ಯದ ವಿದ್ಯುತ್ ಪರಿಸ್ಥಿತಿಯಲ್ಲಿ ಉಂಟಾಗಬಹುದಾದ ಸುಧಾರಣೆಯನ್ನು ಅವಲೋಕಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

ಕಾವೇರಿ ಮತ್ತು ಕೃಷ್ಣಾ ಬೇಸಿನ್ ಯೋಜನೆ

1664: ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾವೇರಿ ಮತ್ತು ಕೃಷ್ಣಾ ಬೇಸಿನ್‌ಗಳ ಏತ ನೀರಾವರಿ ಕಾರ್ಪೋರೇಷನ್‌ಗಳನ್ನು ಸ್ಥಾಪನೆ ಮಾಡಿದಂದಿನಿಂದ ಇಲ್ಲಿಯವರೆಗೆ ಎಷ್ಟು ಯೋಜನೆ ಕೈಗೆತ್ತಿಕೊಳ್ಳಲಾಗಿದೆ;

ಆ) ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಕಾವೇರಿ ಜಲಾನಯನ ಏತ ನೀರಾವರಿ ನಿಗಮವು 17 ಯೋಜನೆಯನ್ನು ಹಾಗೂ ಕೃಷ್ಣಾ ಜಲಾಯನ ಏತ ನೀರಾವರಿ ನಿಗಮವು 8 ಯೋಜನೆಗಳನ್ನು ಕೈಗೆತ್ತಿಕೊಂಡಿದೆ.

ಆ) ಫೆಬ್ರವರಿ 93ರವರೆಗೆ ಕಾಮಗಾರಿಗಳಿಗಾಗಿ ಮಾಡಿದ ಖರ್ಚು ಲಕ್ಷ ರೂ.ಗಳಲ್ಲಿ ಈ ಕೆಳಕಂಡಂತಿದೆ

ಕಾವೇರಿ ಜಲಾನಯನ ಏತ ನೀರಾವರಿ ನಿಗಮ	99.140 ಲಕ್ಷರೂ.
ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ	16.269 ಲಕ್ಷ ರೂ.
ಒಟ್ಟು:	115.409 ಲಕ್ಷ ರೂ.

ರಾಜ್ಯದ ಏತ ನೀರಾವರಿ ಯೋಜನೆಗೆ ಒಳಪಟ್ಟ ಪ್ರದೇಶ

1665: ಶ್ರೀ ಮಂಜುನಾಥ್. ಸಿ. ಕುನ್ನೂರ (ಶಿಗ್ಗಾಂವ):– ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ಈವರೆಗೂ ಎಷ್ಟು ಎಕರೆ ನೀರಾವರಿ ಕ್ಷೇತ್ರಕ್ಕೆ ಒಳಪಡಿಸಲಾಗಿದೆ;

ಆ) ಕರ್ನಾಟಕ ರಾಜ್ಯದಲ್ಲಿ ಮಧ್ಯಮ ಮತ್ತು ಭಾರೀ ನೀರಾವರಿ ಯೋಜನೆಗಳು (ಈವರೆಗೂ ಮುಗಿದ ಹಾಗೂ ಮುಗಿಯುವ) ಯಾವುವು; ಅವುಗಳಿಗೆ ಖರ್ಚು ಮಾಡಿದ ಹಣದ ವಿವರ ಹಾಗೂ ಮುಂದೆ ಬೇಕಾಗಿರುವ ಹಣವೆಷ್ಟು;

ಇ) ಸದರಿ ಯೋಜನೆಗಳನ್ನು ಎಷ್ಟು ದಿವಸಗಳಲ್ಲಿ ಮುಗಿಸಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) 75.32 ಲಕ್ಷ ಎಕರೆಗಳು (31–3–1992ರ ವರೆಗೆ)

ಆ) ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯಲ್ಲಿ ಕೊಡಲಾಗಿದೆ.

ಇ) ಇದು ಹಣದ ಲಭ್ಯತೆಯನ್ನವಲಂಬಿಸಿರುತ್ತದೆ.

ಶ್ರೀ ಮಂಜುನಾಥ್ ಸಿ. ಕುನ್ನೂರ, ವಿಧಾನಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1665ರ ಉತ್ತರಗಳು

ಕ್ರ. ಸಂ.	ಯೋಜನೆ	ಯೋಜನೆಯ ಮೇಲೆ ಖರ್ಚುಮಾಡಿದ ಹಣ ಜನವರಿ 1993ರ ಅಂತ್ಯದವರೆಗೆ (ಕೋಟಿ ರೂ.ಗಳಲ್ಲಿ)	ಯೋಜನೆ ಪೂರ್ಣಗೊಳಿಸಲು ಬೇಕಾಗಿರುವ ಹಣ 1.2.93 ರಂತೆ
1	2	3	4,
ಅ.	**ಪೂರ್ಣಗೊಂಡಿರುವ ಯೋಜನೆಗಳು:**		
	ಭಾರಿ ನೀರಾವರಿ ಯೋಜನೆಗಳು		
1.	ಘಟಪ್ರಭಾ ಹಂತ 1 ಮತ್ತು 2ನೇ ಹಂತ	72.26	–
2.	ತುಂಗಾ ಅಣೆಕಟ್ಟು	3.31	–
3.	ತುಂಗಭದ್ರಾ ಎಡದಂಡೆ ಕೆಳಮಟ್ಟದ ಕಾಲುವೆ	7.12	–
4.	ವಾಣಿ ವಿಲಾಸ್ ಸಾಗರ	0.45	–
5.	ವಿಜಯನಗರ ಕಾಲುವೆಗಳು	ಮಾಹಿತಿ ಇರುವುದಿಲ್ಲ	–

6. ಕಾವೇರಿ ಅಣೆಕಟ್ಟು ಕಾಲುವೆಗಳು	ಮಾಹಿತಿ ಇರುವುದಿಲ್ಲ	—
7. ಕೃಷ್ಣರಾಜಸಾಗರ	6.93	—
8. ನುಗು	3.15	—
ಮಧ್ಯಮ ನೀರಾವರಿ ಯೋಜನೆಗಳು:		
1. ಅಂಬ್ಲಿಗೊಳ	1.16	—
2. ಅಂಜನಾಪುರ	0.21	—
3. ಅರೇಶಂಕರ್	0.21	—
4. ಭದ್ರಾ ಅಣೆಕಟ್ಟು	ಮಾಹಿತಿ ಇರುವುದಿಲ್ಲ	—
5. ಚಂದ್ರಂಪಲ್ಲಿ	1.85	—
6. ಚಿತ್ತವಾಡಗಿ	0.41	—
7. ಧರ್ಮ	1.33	—
8. ಗಾಯಿತ್ರಿ	0.40	—
9. ಗೋಕಾಕ್ ಕಾಲುವೆ	ಮಾಹಿತಿ ಇರುವುದಿಲ್ಲ	—
10. ಹಗರಿ ಬೊಮ್ಮನಹಳ್ಳಿ	3.95	—
11. ಹತ್ತಿಕೋಣಿ	0.84	—
12. ಜಂಬದ ಹಳ್ಳ	1.15	—
13. ಕಳಾಸ್ ಕೋಪ್	0.20	—
14. ಕನಕ ನಾಲಾ	1.00	—
15. ಕೊಳಚಿವೇರ್	0.43	—
16. ನಾಗತಾನ	0.15	—
17. ನಾರಾಯಣಪುರ	0.34	—
18. ನಾರೀಹಳ್ಳ	3.20	—
19. ರಾಜೋಲಿ ಬಂಡ	0.52	—
20. ರಾಮನಹಳ್ಳಿ	0.42	—
21. ಸೌದಾಗರ್	5.57	—
22. ಹೆಬ್ಬಳ್ಳ	0.54	—
23. ಭೈರಮಂಗಲ	ಮಾಹಿತಿ ಇರುವುದಿಲ್ಲ	—
24. ಚಿಕ್ಕಹೊಳೆ	4.24	—
25. ಗುಂಡಾಲ್	4.52	—
26. ಕಣ್ವ	0.35	—
27. ಮಂಗಳ	0.60	—
28. ಮಾರ್ಕೋನಹಳ್ಳಿ	0.35	

29. ನಲ್ಲೂರ್ ಅಮಾನಿಕೆರೆ	5.17	–
30. ಸುವರ್ಣಾವತಿ	3.81	–
31. ತಾರಕ	13.56	6.27
32. ಬಾಚಂಕಿ	0.37	–
33. ತೀತಾ	3.73	–
ಆ. **ಪೂರ್ಣಗೊಳ್ಳಬೇಕಾಗಿರುವ ಯೋಜನೆಗಳು:**		
ಭಾರೀ ನೀರಾವರಿ ಯೋಜನೆಗಳು		
1. ಕೃಷ್ಣಾ ಮೇಲ್ದಂಡೆ – 1ನೇ ಹಂತ	818.37	685.35
2. ಹಿಪ್ಪರಗಿ	10.69	246.02
3. ಘಟಪ್ರಭಾ – 3ನೇ ಹಂತ	149.28	353.20
4. ಮಲಪ್ರಭಾ	291.46	83.59
5. ಬೆಣ್ಣೆತೊರ	27.90	46.03
6. ಭದ್ರಾ	92.67	28.08
7. ತುಂಗ ಭದ್ರಾ ಎಡದಂಡೆ ಕಾಲುವೆ	122.47	23.42
8. ತುಂಗ ಭದ್ರಾ ಬಲದಂಡೆ ಮೇಲ್ಗಾಲುವೆ	25.20	7.34
9. ರಾಷ್ಟ್ರೀಯ ಜಲನಿರ್ವಹಣಾ ಯೋಜನೆ	37.86	7.78
10. ದೂಧಗಂಗಾ	4.73	25.27
11. ಮಾರ್ಕಂಡೇಯ	–	127.00
12. ಮಹಾಧಾಯಿ	0.20	87.80
13. ರಾಮತಾಲ್ ಏತ ನೀರಾವರಿ	–	95.00
14. ಭೀಮಾ ಏತ ನೀರಾವರಿ	0.14	68.48
15. ಭೀಮಾ ಹರಿ ನೀರಾವರಿ	0.07	117.65
16. ತುಂಗಾ ಮೇಲ್ದಂಡೆ	0.44	329.56
17. ಕೃಷ್ಣರಾಜ ಸಾಗರ ಆಧುನೀಕರಣ	37.72	44.36
18. ಹಾರಂಗಿ	146.12	47.38
19. ಹೇಮಾವತಿ	522.20	325.21
20. ಕಬಿನಿ	194.28	384.81
21. ಡಿ. ದೇವರಾಜ್ ಅರಸ್ ಕಾಲುವೆ	39.78	56.92
22. ಯುಗಚಿ	22.28	24.61
23. ಕಾರಂಜ	89.79	65.96
24. ವರಾಹಿ	3.17	116.83

ಮಧ್ಯಮ ನೀರಾವರಿ ಯೋಜನೆಗಳು:

1. ಅಮರ್ಜ	19.31	15.98
2. ಮುಲ್ಲಾಮಾರಿ ಮೇಲ್ದಂಡೆ	16.26	2.28
3. ಮುಲ್ಲಾಮಾರಿ ಕೆಳದಂಡೆ	17.24	28.23
4. ಹಿರೇಹಳ್ಳ	14.07	29.79
5. ಮಸ್ಕಿನಾಲಾ	3.83	18.19
6. ರಾಣಿಕೆರೆ ಪೂರಕ ನಾಲೆ	6.87	0.17
7. ಗಂಡೋರಿನಾಲಾ	0.14	37.65
8. ಹೋಡಿರಾಯನ ಹಳ್ಳ	0.17	2.83
9. ಭದ್ರಾ ಅಣೆಕಟ್ಟು ಆಧುನೀಕರಣ	2.67	0.17
10. ಮಂಚನ ಬೆಲೆ	23.92	11.20
11. ವೋಟಿಹೊಳೆ	21.45	1.62
12. ಅರ್ಕಾವತಿ	13.97	37.17
13. ಚಿಕ್ಲಿಹೊಳೆ	9.31	1.36
14. ಇಗ್ಗಲೂರು	7.75	9.40
15. ಕಾಮಸಮುದ್ರ	6.06	1.64
16. ಹುಚ್ಚನ ಕೊಪ್ಪಲು	2.49	12.52
17. ಉಡುತೊರೆಹಳ್ಳ	27.34	11.85
18. ಚುಲ್ಕಿನಾಲಾ	10.01	10.86

ಸವಣೂರು ತಾಲ್ಲೂಕು ತಲಬ ಕೆರೆ ಹಾಗೂ ಹತ್ತಿ ಮತ್ತೂರ ಕೆರೆ ವಿಸ್ತೀರ್ಣ

2093: ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ್):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆ ಸವಣೂರ ತಾಲ್ಲೂಕ್ ಮೋತಿ ತಲಾಬ್ ಕೆರೆ ಹಾಗೂ ಹತ್ತಿ ಮತ್ತೂರ ಕೆರೆಗಳ ವಿಸ್ತೀರ್ಣವೆಷ್ಟು; ಈ ಕೆರೆಗಳ ಹೂಳೆತ್ತಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು;

ಆ) ರಾಜ್ಯದಲ್ಲಿ ಕೆರೆಗಳ ಹೂಳೆತ್ತಲು ಈವರೆಗೂ ಖರ್ಚು ಮಾಡಲಾಗಿರುವ ಹಣವೆಷ್ಟು ? (ವಿವರ ನೀಡುವುದು)

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) 1) ಮೋತಿ ತಲಾಬ್ ಕೆರೆ 86 ಹೆಕ್ಟೇರ್‌ಗಳು
2) ಹತ್ತಿ ಮತ್ತೂರ ಕೆರೆ 48 ಹೆಕ್ಟೇರ್‌ಗಳು. ಪ್ರಸ್ತುತದಲ್ಲಿ ಯಾವಕ್ರಮವನ್ನು ಕೈಗೊಂಡಿಲ್ಲ.

ಆ) 54.63 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. (ವಿವರವನ್ನು ಅನುಬಂಧದಲ್ಲಿ ನೀಡಿದೆ)

ಸಣ್ಣ ನೀರಾವರಿ ವಲಯದಲ್ಲಿ ಹೂಳು ಎತ್ತುವ ಕಾಮಗಾರಿಯಡಿಯಲ್ಲಿ ಆಗಿರುವ ಅನುದಾನ ಹಾಗೂ ಜನವರಿ 93ರ ಅಂತ್ಯದವರೆಗಾದ ವಿಭಾಗವಾರು ವೆಚ್ಚ

ಕ್ರ. ಸಂ.	ವಿಭಾಗದ ಹೆಸರು	1990–91		1991–92		1992–93	
		ರಾಜ್ಯದ ಒಟ್ಟು ಅನುದಾನ ಲಕ್ಷಗಳಲ್ಲಿ	ವೆಚ್ಚ ಲಕ್ಷಗಳಲ್ಲಿ	ರಾಜ್ಯದ ಒಟ್ಟು ಅನುದಾನ ಲಕ್ಷಗಳಲ್ಲಿ	ವೆಚ್ಚ ಲಕ್ಷಗಳಲ್ಲಿ	ರಾಜ್ಯದ ಒಟ್ಟು ಅನುದಾನ ಲಕ್ಷಗಳಲ್ಲಿ	ವೆಚ್ಚ ಲಕ್ಷಗಳಲ್ಲಿ
1.	ಬೆಂಗಳೂರು ಸಣ್ಣ ನೀರಾವರಿ ವಿಭಾಗ	–	–	–	11.73	–	0.72
2.	ಸಣ್ಣ ನೀರಾವರಿ ವಿಭಾಗ, ಕೋಲಾರ	–	8.18	–	8.15	–	–,
3.	ಸಣ್ಣ ನೀರಾವರಿ ವಿಭಾಗ, ಚಿತ್ರದುರ್ಗ	–	–	–	0.03	–	0.40
4.	ಸಣ್ಣ ನೀರಾವರಿ ವಿಭಾಗ, ಶಿವಮೊಗ್ಗ	–	–	–	1.07	–	–,
5.	ಸಣ್ಣ ನೀರಾವರಿ ವಿಭಾಗ, ತುಮಕೂರು	–	–	–	2.62	–	1.0
6.	ಸಣ್ಣ ನೀರಾವರಿ ವಿಭಾಗ, ಮೈಸೂರು	–	0.01	–	8.39	–	4.17
7.	ಸಣ್ಣ ನೀರಾವರಿ ವಿಭಾಗ, ಮಂಡ್ಯ	–	–	–	1.53	–	0.67
8.	ಸಣ್ಣ ನೀರಾವರಿ ವಿಭಾಗ, ಹಾಸನ	–	–	–	–	–	0.25
9.	ಸಣ್ಣ ನೀರಾವರಿ ವಿಭಾಗ, ಚಿಕ್ಕಮಗಳೂರು	–	–	–	2.39	–	3.22
	ಒಟ್ಟು	40.00	8.19	300.00	35.91	50.00	10.53

(ಒಟ್ಟು ಖರ್ಚು 54.63 ಲಕ್ಷ ರೂ.ಗಳು)

ಶಿಗ್ಗಾಂವ್ ಮತ್ತು ಸವಣೂರ್ ತಾಲ್ಲೂಕುಗಳಲ್ಲಿ ವಿದ್ಯುತ್ತಿನ ಅಭಾವ

2108: ಶ್ರೀ ಎಂ.ಸ. ಕುನ್ನೂರು (ಶಿಗ್ಗಾಂವ್):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳಲ್ಲಿ ವಿದ್ಯುತ್ತಿನ ಅಭಾವ ಬಹಳ ಇದ್ದು ಇದರಿಂದ ತಾಲ್ಲೂಕಿಗೆ ಹಾಗೂ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಶಿಗ್ಗಾಂವ್‌ದಲ್ಲಿ ಸವಣೂರಿನಲ್ಲಿ ಈಗಿರುವ 110 ಕೆವಿ ಸ್ಟೇಷನ್ ಎಷ್ಟು ಕಿ.ಮೀ. ಅಂತರದಲ್ಲಿ ಹಾದು ಹೋಗಿದೆ;

ಇ) ಹಾಗಿದ್ದಲ್ಲಿ ಶಿಗ್ಗಾಂವ್ ಅಥವಾ ಸವಣೂರಿನಲ್ಲಿ ಈಗಿರುವ 33 ಕೆವಿ ಸ್ಟೇಷನ್ ಬದಲಾಗಿ 110 ಕೆವಿ ಸ್ಟೇಷನ್ ಕೂಡಲೇ ಪ್ರಾರಂಭ ಮಾಡಲಾಗುವುದೇ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಹೌದು.

ಆ) ಸವಣೂರಿನಿಂದ ಸುಮಾರು 7 ಕಿ.ಮೀ. ಅಂತರದಲ್ಲಿ 110 ಕೆವಿ ಹುಬ್ಬಳ್ಳಿ ಹಾವೇರಿ ವಿದ್ಯುತ್ ಪ್ರಸರಣಾ ಲೈನು ಹಾದು ಹೋಗಿರುತ್ತದೆ.

ಇ) ಶಿಗ್ಗಾಂವ್‌ದಲ್ಲಿ 110 ಕೆವಿ ಸಬ್–ಸ್ಟೇಷನ್ ಸ್ಥಾಪನೆ ಬಗ್ಗೆ ಪ್ರಸ್ತಾವನೆಯು ಮಂಡಳಿಯ ಮುಂದೆ ಸಧ್ಯಕ್ಕಿರುವುದಿಲ್ಲ. ಸವಣೂರಿನಲ್ಲಿ 110 ಕೆವಿ ಸಬ್–ಸ್ಟೇಷನ್ ಸ್ಥಾಪನೆ ಮಾಡುವ ಬಗ್ಗೆ ಪ್ರಸ್ತಾವನೆಯು ಮಂಡಳಿಯ ಪರಿಶೀಲನೆಯಲ್ಲಿದೆ. ಆದರೆ ಈಗಾಗಲೇ 110 ಕೆವಿ ಹುಬ್ಬಳ್ಳಿ–ಹಾವೇರಿ ವಿದ್ಯುತ್ ಲೈನು ಓವರ್ ಲೋಡ್ ಆಗಿರುವುದರಿಂದ, ಈ ಓವರ್ ಲೋಡ್ ಪರಿಸ್ಥಿತಿಯನ್ನು ನಿವಾರಿಸಲು ಹಾವೇರಿಯಲ್ಲಿ ಒಂದು 220:11 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರವನ್ನು 8ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಸ್ಥಾಪಿಸಲು ಉದ್ದೇಶಿಸಿದೆ. ಈ ಕೆಲಸವು ಮುಗಿದ ನಂತರ ಸವಣೂರಿನಲ್ಲಿ 10 ಕೆವಿ ಸಬ್–ಸ್ಟೇಷನ್ ಸ್ಥಾಪನೆ ಬಗ್ಗೆ ಪರಿಶೀಲಿಸಲಾಗುವುದು.

ಧಾರವಾಡ ಜಿಲ್ಲೆಯಲ್ಲಿ ರಸ್ತೆಗಳ ಡಾಂಬರೀಕರಣ

2109: ಶ್ರೀ ಎಂ.ಸಿ. ಕುನ್ನೂರ (ಶಿಗ್ಗಾಂವ್):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1991–92 ಹಾಗೂ 1992–93ರ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಪಿ.ಡಬ್ಲ್ಯೂ.ಡಿ. ಇಲಾಖೆಯಿಂದ ಡಾಂಬರೀಕರಣ ಮಾಡಲಾಗಿರುವ ರಸ್ತೆಯ ಉದ್ದವೆಷ್ಟು; (ತಾಲ್ಲೂಕ್‌ವಾರು ಮಾಹಿತಿ ನೀಡುವುದು)

ಆ) ಪ್ರಸಕ್ತ ಸಾಲಿನಲ್ಲಿ ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕ್‌ಗಳಲ್ಲಿ ಡಾಂಬರೀಕರಣ ಮಾಡಲು ಕೈಗೆತ್ತಿಕೊಳ್ಳಲಾಗಿರುವ ರಸ್ತೆಯ ಉದ್ದವೆಷ್ಟು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):– ಅ) ಧಾರವಾಡ ಜಿಲ್ಲೆಯಲ್ಲಿ 1991–92 ಹಾಗೂ 92–93ನೇ ಸಾಲಿನಲ್ಲಿ ಅನುಕ್ರಮವಾಗಿ 88.95 ಕಿಮೀ ಹಾಗೂ 63.80 ಕಿಮೀ ರಸ್ತೆಯನ್ನು ಡಾಂಬರೀಕರಣ ಮಾಡಲಾಗಿದೆ [illegible]

ತಾಲ್ಲೂಕು	ಡಾಂಬರೀಕರಣ ರಸ್ತೆಯ ಉದ್ದ ಕಿಮೀ 91-92	92-93
1. ಧಾರವಾಡ	4.00	2.00
2.ಕಲಘಟಗಿ	1.00	0.50
3. ಹುಬ್ಬಳ್ಳಿ	5.00	1.00
4. ಕುಂದಗೋಳ	3.00	0.70
5. ಹಾವೇರಿ	4.00	12.00
6. ಬ್ಯಾಡಗಿ	4.00	6.00
7. ಸವಣೂರ	5.00	2.00
8. ಹಾನಗಲ್	5.00	2.00
9. ರಾಣೆಬೆನ್ನೂರ	5.00	1.50
10. ಶಿಗ್ಗಾಂವ್	4.00	3.00
11. ಹಿರೇಕೆರೂರ	3.00	0.70
12. ಗದಗ	14.60	6.30
13. ರೋಣ	12.80	12.80
14. ನವಲಗುಂದ	3.00	8.30
15. ನರಗುಂದ	6.20	1.00
16. ಮುಂಡರಗಿ	5.05	2.00
17. ಶಿರಹಟ್ಟಿ	4.30	2.00
ಜಿಲ್ಲಾ ಒಟ್ಟು	88.95	63.80

ಅ) ಪ್ರಸಕ್ತ ಸಾಲಿನಲ್ಲಿ ಶಿಗ್ಗಾಂವ ತಾಲ್ಲೂಕಿನಲ್ಲಿ 14.87 ಕಿ.ಮೀ ಹಾಗೂ ಸವಣೂರು ತಾಲ್ಲೂಕಿನಲ್ಲಿ 2.00 ಕಿ.ಮೀ ರಸ್ತೆಯನ್ನು ಡಾಂಬರೀಕರಣ ಮಾಡಲು ಕೈಗೆತ್ತಿಕೊಳ್ಳಲಾಗಿದೆ. ವಿವರಗಳು ಈ ಕೆಳಗಿನಂತಿವೆ.

ಶಿಗ್ಗಾಂವ್ ತಾಲ್ಲೂಕು

ಕೆಲಸದ ಹೆಸರು	ಕಿ.ಮೀ
1) ಕುಮಟಾ-ಹುಬ್ಬಳ್ಳಿ ರಸ್ತೆಯ ಬದಿಗಳಿಗೆ ಡಾಂಬರೀಕರಣ ಮಾಡುವುದು.	4.50
2) ಶಿಗ್ಗಾಂವ್ ಗುಡಗೇರಿ ರಸ್ತೆಯ ಬದಿಗಳಿಗೆ ಡಾಂಬರೀಕರಣ ಮಾಡುವುದು	1.27
3) ಕಾರವಾರ-ಇಳಕಲ್ ರಸ್ತೆಯ ಬದಿಗಳಿಗೆ ಡಾಂಬರೀಕರಣ ಮಾಡುವುದು	3.10
4) ಶಿಗ್ಗಾಂವ್ ಸವಣೂರು ರೈಲ್ವೆ ಸ್ಟೇಷನ್ ರಸ್ತೆಯ ಬದಿಗಳಿಗೆ ಡಾಂಬರೀಕರಣ ಮಾಡುವುದು.	5.00
5) ಗೋಟಗೋಡಿ-ದುರಸ್ತಿ ರಸ್ತೆ ಡಾಂಬರೀಕರಣ	1.00
ಶಿಗ್ಗಾಂವ್ ತಾಲ್ಲೂಕ್ ಒಟ್ಟು	14.87

ಸವಣೂರ ತಾಲ್ಲೂಕ್

1) ಕಾರವಾರ-ಇಳಚಕಲ್ ರಸ್ತೆಯ ಬದಿಗಳಿಗೆ ಡಾಂಬರೀಕರಣ	2.00

ತಗಡೂರು – ಕಲ್ಕುಂದ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಸೇರಿಸಲು ಒತ್ತಾಯ

1666: ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡು ತಾಲ್ಲೂಕು ತಗಡೂರು ಕಲ್ಕುಂದ ಮಾರ್ಗವಾಗಿ ಟಿ. ನರಸೀಪುರ ರಸ್ತೆಯವರೆಗೆ ಹಾಗೂ ಹೊಸಕೋಟೆಯಿಂದ ವರುಣ ರಸ್ತೆ ಜಿಲ್ಲಾ ಪರಿಷತ್‌ನಿಂದ ಲೋಕೋಪಯೋಗಿ ಇಲಾಖೆಗೆ ಸೇರಿಸಲು ಸಾರ್ವಜನಿಕರಿಂದ ಮನವಿ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಸದರಿ ರಸ್ತೆಗಳಿಗೆ ಡಾಂಬರ್ ಹಾಕಿಸಿ ದುರಸ್ತಿ ಮಾಡಲಾಗುವುದು ಯಾವಾಗ;

ಇ) ಕುರುಬೂರುನಿಂದ ಕೊತ್ತೇಗಾಲ ಮಾರ್ಗವಾಗಿ ಸಿ. ಹಳ್ಳಿವರೆಗೆ ಡಾಂಬರ್ ರಸ್ತೆ ಮಾಡುವುದು ಯಾವಾಗ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) 1) ನಂಜನಗೂಡು ತಾಲ್ಲೂಕು ತಗಡೂರಿನಿಂದ ಕಲ್ಕುಂದ ಮಾರ್ಗವಾಗಿ ಟಿ. ನರಸೀಪುರ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಸೇರಿಸಲು ಸಾರ್ವಜನಿಕರಿಂದ ಮನವಿ ಬಂದಿಲ್ಲ.

2) ಹೊಸಕೋಟೆ–ವರುಣ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳಬೇಕೆಂದು ಮನವಿ ಬಂದಿದೆ.

ಆ) 1) ಜಿಲ್ಲಾಪರಿಷತ್ ವತಿಯಿಂದ ಪ್ರಸ್ತುತದಲ್ಲಿ ಹೊಸಕೋಟೆ –ವಗುಣ ರಸ್ತೆಗೆ 5.00 ಲಕ್ಷ ರೂ.ಗಳ ಅಂದಾಜಿನಲ್ಲಿ ಡಾಂಬರ್ ಮಾಡಲು ಉದ್ದೇಶಿಸಲಾಗಿದೆ.

2) ತಗಡೂರಿನಿಂದ ಕಲ್ಕುಂದ ಮಾರ್ಗ ಟಿ. ನರಸೀಪುರದವರೆಗೆ ಇರುವ ರಸ್ತೆಗೆ ಪ್ರಸ್ತುತ ಸಾಲಿಗೆ ಅನುದಾನವು ಇಲ್ಲದಿರುವ ಕಾರಣ ಡಾಂಬರೀಕರಣವನ್ನು ತೆಗೆದುಕೊಂಡಿರುವುದಿಲ್ಲ.

ಇ) ಸಧ್ಯದಲ್ಲಿ ಪ್ರಸ್ತಾಪ ಇರುವುದಿಲ್ಲವೆಂದು ಜಿಲ್ಲಾ ಪರಿಷತ್ತಿನವರಿಂದ ತಿಳಿದು ಬಂದಿದೆ.

ತಾಂಡವಪುರ – ರಾಂಪುರ ರಸ್ತೆ ರಿಪೇರಿ

1667: ಶ್ರೀ ಎಂ. ಶ್ರೀನಿವಾಸಯ್ಯ, (ಟಿ. ನರಸೀಪುರ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡು ತಾಲ್ಲೂಕು ತಾಂಡವಪೂರದಿಂದ ರಾಂಪುರದವರೆಗೆ ಜಿಲ್ಲಾ ಪರಿಷತ್ ರಸ್ತೆಯಾಗಿದ್ದು ಲೋಕೋಪಯೋಗಿ ಇಲಾಖೆಗೆ ವರ್ಗಮಾಡಿ ರಸ್ತೆ ದುರಸ್ತಿ (ಡಾಂಬರ್) ಮಾಡಲು ಕೋರಲಾಗಿದೆಯೇ;

ಆ) ತೊರೆಮಾವುನಿಂದ ಇಮ್ಮಾವು ಗ್ರಾಮದವರೆಗೆ ರಸ್ತೆ ದುರಸ್ತಿ ಮಾಡಿಸುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):– ಅ) ನಂಜನಗೂಡು ತಾಲ್ಲೂಕು ತಾಂಡವಪುರದಿಂದ ರಾಮಾಪುರದ ರಸ್ತೆಯ ಭಾಗವಾದ ಬಿದರ ಗೂಡಿನಿಂದ ರಾಮಪುರದವರೆಗಿನ ರಸ್ತೆಯು ಲೋಕೋಪಯೋಗಿ [illegible]

ರಸ್ತೆಯ ಭಾಗವು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿದ್ದು ಈ ಭಾಗದ ರಸ್ತೆಯನ್ನು ಮೇಲ್ದರ್ಜೆಗೇರಿಸುವಂತೆ ಸಾರ್ವಜನಿಕರಿಂದ ಮನವಿ ಬಂದಿಲ್ಲ.

ಆ) ಈ ರಸ್ತೆಯು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿದ್ದು ಜಿಲ್ಲಾ ಪರಿಷತ್ತಿನವರು ದುರಸ್ತಿ ಮಾಡಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ.

ಟಿ. ನರಸೀಪುರ ಕ್ಷೇತ್ರದ ರಸ್ತೆಗಳ ದುರಸ್ತಿ

1668: ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಟಿ. ನರಸೀಪುರ ಕ್ಷೇತ್ರಕ್ಕೆ ಸೇರಿದ ಮೂಗೂರುನಿಂದ ಟಿ. ನರಸೀಪುರಕ್ಕೆ ಹಾಗೂ ಮೂಗೂರುನಿಂದ ಕೊಳ್ಳಗಾಲ ಹಾಗೂ ಸಂತೇಮಾರಹಳ್ಳಿವರೆವಿಗೂ ಲೋಕೋಪಯೋಗಿ ಇಲಾಖೆಗೆ ಸೇರಿದ್ದು ರಸ್ತೆ ಬಹಳ ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಆ ರಸ್ತೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ದುರಸ್ತಿಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಬಂದಿದೆ.

ಆ) ಈ ರಸ್ತೆಯ ಅತಿ ಕೆಟ್ಟು ಹೋದ ಭಾಗಗಳನ್ನು (3.15 ಕಿಮೀ.) ದುರಸ್ತಿಪಡಿಸುವ ಕಾಮಗಾರಿ ಪ್ರಗತಿಯಲ್ಲಿದ್ದು ಸಂಚಾರಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳಲಾಗುತ್ತದೆ.

ಟಿ. ನರಸೀಪುರದಿಂದ ನಂಜನಗೂಡಿನವರೆಗೆ ರಸ್ತೆ ದುರಸ್ತಿ ಕಾರ್ಯ

1669: ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಟಿ. ನರಸೀಪುರದಿಂದ ನಂಜನಗೂಡಿನವರೆಗೆ ರಸ್ತೆಯು ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇದನ್ನು ದುರಸ್ತಿ ಮಾಡಲು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಬಂದಿದೆ.

ಆ) ಈ ರಸ್ತೆಯ ಅತಿಕೆಟ್ಟು ಹೋದ ಭಾಗಗಳ ದುರಸ್ಥಿಯನ್ನು ಮಾಡಲಾಗುತ್ತಿದೆ. ಹಾಗೂ 6ನೇ ಕಿ.ಮೀ ನಿಂದ 8ನೇ ಕಿ.ಮೀವರೆವಿಗೆ ರಸ್ತೆಯನ್ನು ಡಾಂಬರೀಕರಿಸಲಾಗುತ್ತಿದೆ. ಲಭ್ಯವಿರುವ ನಿರ್ವಹಣ ಅನುದಾನದಿಂದ ಈ ರಸ್ತೆಯನ್ನು ಆದಷ್ಟು ಮಟ್ಟಿಗೆ ಸುಸ್ಥಿತಿಯಲ್ಲಿಡಲಾಗುತ್ತಿದೆ.

ಹಿರೇಕೆರೂರು ತಾಲ್ಲೂಕು ಮದಗ – ಮಾಸೂರು ನೀರಾವರಿ ಕೆರೆ ಅಭಿವೃದ್ಧಿ

1670: ಶ್ರೀ ಬಿ.ಹೆಚ್. ಬನ್ನಿಕೋಡ (ಹಿರೇಕೆರೂರು):- ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿರೇಕೆರೂರು ತಾಲ್ಲೂಕು ಮದಗ – ಮಾಸೂರು ನೀರಾವರಿ ಕೆರೆಯ ಅಚ್ಚುಕಟ್ಟು ಪ್ರದೇಶವನ್ನು ಸುವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಲು ರಾಷ್ಟ್ರೀಯ ನೀರು ನಿರ್ವಹಣಾ ಯೋಜನೆಯಡಿಯಲ್ಲಿ (ಎನ್‌ಡಬ್ಲ್ಯೂಎಂಪಿ) ಕೇಂದ್ರ ಸರ್ಕಾರದಿಂದ ಮಂಜೂರಾತಿ ನೀಡಲಾಗಿದೆಯೇ;

ಆ) ಈ ಯೋಜನೆಯ ಅಂದಾಜು ವೆಚ್ಚವೆಷ್ಟು; ನೀರಾವರಿ ಸೌಲಭ್ಯ ಪಡೆಯುವ ಕ್ಷೇತ್ರವೆಷ್ಟು; (ಗ್ರಾಮವಾರು ವಿವರಣೆ ನೀಡುವುದು)

ಇ) ಈ ಯೋಜನೆಯಡಿಯಲ್ಲಿ ಕೈಗೊಳ್ಳಲಾಗುವ ಅಭಿವೃದ್ಧಿ ಕಾಮಗಾರಿಗಳು ಎಷ್ಟು; 1992–93ನೇ ಸಾಲಿನಲ್ಲಿ ಈ ಕಾಮಗಾರಿಗಳಿಗೆ ಒದಗಿಸಿದ ಹಣವೆಷ್ಟು;

ಈ) ಈ ಯೋಜನೆಯ ಕಾಮಗಾರಿಗಳನ್ನು ಕಾರ್ಯಗತ ಮಾಡದೇ ಬೇಸಿಗೆ ಬೆಳೆಗೆ ನೀರು ಒದಗಿಸದೇ ಇರುವುದನ್ನು ಸರ್ಕಾರವು ಗಮನಿಸಿದೆಯೇ; ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ದಿನಾಂಕ 31-3-1993ರೊಳಗಾಗಿ ಎಷ್ಟು ಹಣ ಒದಗಿಸಲಾಗುವುದು;

ಉ) 1993–94ನೇ ಸಾಲಿನಲ್ಲಿ ಈ ಯೋಜನೆಗೆ ಎಷ್ಟು ಹಣ ಒದಗಿಸಲಾಗುವುದು. ಈ ಬಗ್ಗೆ ರಾಜ್ಯ ಸರ್ಕಾರದ ನೀತಿ ಹಾಗೂ ಕ್ರಮವೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಮದಗ–ಮಾಸೂರು ನೀರಾವರಿ ಕೆರೆಯ ಯೋಜನಾ ಸಾರಾಂಶವು ಈಗಾಗಲೇ ಕೇಂದ್ರ ಸರ್ಕಾರದಿಂದ ಮಂಜೂರಾಗಿದೆ. ಯೋಜನಾ ವರದಿಯನ್ನು ಕೇಂದ್ರ ಸರ್ಕಾರದ ಮಂಜೂರಾತಿಗಾಗಿ ಕಳುಹಿಸಲಾಗಿದೆ.

ಆ) ಈ ಯೋಜನೆಯ ಅಂದಾಜು ಮೊತ್ತವು 99.00 ಲಕ್ಷ ರೂ.ಗಳು. ಈ ಯೋಜನೆಯಿಂದ 3155 ಹೆಕ್ಟೇರ್ ಪ್ರದೇಶಕ್ಕೆ ಇದ್ದ ನೀರಿನ ಕೊರತೆ ನೀಗಿಸಲಾಗುವುದು. ಈ ಯೋಜನೆಯಿಂದ 18 ಹಳ್ಳಿಗಳು ನೀರಾವರಿ ಸೌಲಭ್ಯ ಪಡೆಯುತ್ತವೆ.

ಇ) ಈ ಯೋಜನೆಯಡ್ಡಿಯಲ್ಲಿ ಮಣ್ಣು ಅಗೆಯುವುದು, ಕಾಲುವೆಯ ರಿಸೆಕ್ಷನಿಂಗ್ ಮಾಡುವುದು, ನಾಲಾ ರಿಪೇರಿಗಳು, ಮಳೆ ಮಾಪಕ, ಮತ್ತು ನೀರು ಮಾಪನ ಉಪಕರಣಗಳನ್ನು ಸ್ಥಾಪಿಸುವುದು ಇತ್ಯಾದಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು. 1992–93ನೇ ಸಾಲಿನಲ್ಲಿ ಯಾವುದೇ ಹಣವನ್ನು ಒದಗಿಸಿಲ್ಲ.

ಈ) ಗಮನಿಸಲಾಗಿದೆ.

ಈ ಯೋಜನೆಯ ಕಾಮಗಾರಿಗಳನ್ನು ಕೇಂದ್ರ ಸರ್ಕಾರವು ಯೋಜನಾ ವರದಿಗೆ ಮಂಜೂರಾತಿ ನೀಡಿದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಉ) 1993–94ನೇ ಸಾಲಿಗೆ ರೂ.50.00 ಲಕ್ಷ ರೂ.ಗಳು ಒದಗಿಸಲಾಗಿದೆ. ಕೇಂದ್ರ ಸರ್ಕಾರದ ಮಂಜೂರಾತಿ ದೊರೆತ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಹಿರೇಕೆರೂರು ತಾಲ್ಲೂಕು ನೇಶ್ವಿ ಕೆರೆಯಿಂದ ಮಾವಿನ ತೋಪ್ ಕೆರೆಗೆ ಫೀಡರ್ ಚಾನಲ್

1671: ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೇಶ್ವಿ ಕೆರೆಯಿಂದ ಮಾವಿನತೋಪ್ ಕೆರೆಗೆ ಫೀಡರ್ ಚಾನಲ್ ನಿರ್ಮಾಣ ಮಾಡಲು ನಕ್ಷೆ ಹಾಗೂ ಅಂದಾಜು ಪಟ್ಟಿ ತಯಾರಿಸಲಾಗಿ ದೊರೆತಿದೆಯೇ;

ಆ) ಈ ಕಾಮಗಾರಿಯ ಅಂದಾಜು ಮೊತ್ತವೆಷ್ಟು; 1992–93ರ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು; ಈವರೆಗೆ ಈ ಕಾಮಗಾರಿಗೆ ಆಗಿರುವ ವೆಚ್ಚವೆಷ್ಟು;

ಇ) 1993–94ನೇ ಆಯವ್ಯಯದಲ್ಲಿ ಈ ಯೋಜನೆಗೆ ಒದಗಿಸಿದ ಹಣವೆಷ್ಟು;

ಈ) ಈ ಕಾಮಗಾರಿಯ ಕೆಲಸ ಈಗ ಯಾವ ಹಂತದಲ್ಲಿದೆ;

ಉ) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಸಮಯವೆಷ್ಟು; ಈ ಕಾಮಗಾರಿಯ ಬಗ್ಗೆ ರಾಜ್ಯ ಸರ್ಕಾರದ ನೀತಿ ಹಾಗೂ ಕ್ರಮವೇನು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ)1) ತಯಾರಿಸಲಾಗಿದೆ.
2) ಮಂಜೂರಾತಿ ಇನ್ನೂ ನೀಡಿರುವುದಿಲ್ಲ.

ಆ)1) 8.70 ಲಕ್ಷ ರೂ.ಗಳು
2) 92–93ರಲ್ಲಿ 2.00 ಲಕ್ಷ ರೂ.ಗಳ ಅನುದಾನ ಒದಗಿಸಿದೆ.
3) ಇಲ್ಲಿಯವರೆಗೆ ಈ ಕಾಮಗಾರಿಗೆ ಯಾವುದೇ ವೆಚ್ಚ ಆಗಿರುವುದಿಲ್ಲ.

ಇ) 3.00 ಲಕ್ಷ ರೂ.ಗಳು.

ಈ) ಇನ್ನು ಕಾಮಗಾರಿಯನ್ನು ಕೈಗೆತ್ತಿ ಕೊಂಡಿರುವುದಿಲ್ಲ.

ಉ) ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ನಂತರ ಕಾಮಾಗಾರಿಯನ್ನು ಪೂರ್ಣಗೊಳಿಸುವ ಸಾಧ್ಯತೆಯು, ಆ ಕೆಲಸಕ್ಕೆ ಪ್ರತಿ ವರ್ಷ ಒದಗುವ ಅನುದಾನ ಲಭ್ಯತೆ ಮೇಲೆ ಅವಲಂಬಿಸಿದೆ.

ಬಳ್ಳೊಳ್ಳಿ ಕ್ಷೇತ್ರದ ಹಳ್ಳಿಗಳಿಗೆ ನೀರಾವರಿ ಯೋಜನೆ

1846: ಶ್ರೀ ಮನೋಹರ ಯು. ಐನಾಪುರ, (ಬಳ್ಳೊಳ್ಳಿ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ–ಮಹಾರಾಷ್ಟ್ರ ಗಡಿಯ ಭೀಮಾ ನದಿಗೆ ಎರಡು ರಾಜ್ಯಗಳು ಸೇರಿ ಎಂಟು ಬ್ಯಾರೇಜ್ ನಿರ್ಮಿಸಲು ಹೊಂದಾಣಿಕೆ ಮಾಡಿಕೊಂಡಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ) ಹಾಗಿದ್ದಲ್ಲಿ ಸದರಿ ಬ್ಯಾರೇಜ್ ನಿರ್ಮಾಣದಿಂದ ಸುತ್ತಮುತ್ತಲಿನ ಅದರಲ್ಲಿ ಮುಖ್ಯವಾಗಿ ಬಳ್ಳೊಳ್ಳಿ ಕ್ಷೇತ್ರದ ನೀರಾವರಿಯಾಗುವ ಪ್ರದೇಶದ ವಿಸ್ತೀರ್ಣವೆಷ್ಟು;

ಇ) 1993–94ನೇ ಆಯವ್ಯಯದಲ್ಲಿ ಸದರಿ ಬ್ಯಾರೇಜ್ ನಿರ್ಮಾಣಕ್ಕಾಗಿ ಗುರುತಿಸಲಾದ ಹಾಗೂ ಬಿಡುಗಡೆ ಮಾಡಲಾದ ಹಣವೆಷ್ಟು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಈ ಬಗ್ಗೆ ಎರಡೂ ರಾಜ್ಯಗಳು ಯಾವುದೇ ಹೊಂದಾಣಿಕೆ ಮಾಡಿಕೊಂಡಿರುವುದಿಲ್ಲ ಮತ್ತು ಮಹಾರಾಷ್ಟ್ರ ಸರ್ಕಾರದಿಂದ ಕರ್ನಾಟಕ ಸರ್ಕಾರಕ್ಕೆ ಯಾವ ಪ್ರಸ್ತಾವನೆಯೂ ಬಂದಿರುವುದಿಲ್ಲ. ಆದರೆ ಈ ಬಗ್ಗೆ ಮಹಾರಾಷ್ಟ್ರ ರಾಜ್ಯದ ಶೊಲ್ಲಾಪುರ ಸಣ್ಣ ನೀರಾವರಿ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಕರ್ನಾಟಕ ರಾಜ್ಯದ ಸಣ್ಣ ನೀರಾವರಿ ವಿಭಾಗ, ಬಿಜಾಪುರ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಗೆ ಪ್ರಸ್ತಾವನೆ ಕಳುಹಿಸಿದ್ದಾರೆ.

ಆ) ತನಿಖೆ ಮಾಡಿರುವ ನಾಲ್ಕು ಬ್ಯಾರೇಜ್‌ಗಳಿಂದ ಬಳ್ಳೊಳ್ಳಿ ಕ್ಷೇತ್ರದ ಸುಮಾರು 2800 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಆಗಬಹುದೆಂದು ಮತ್ತು ಉಳಿದ ನಾಲ್ಕು ಬ್ಯಾರೇಜ್‌ಗಳ ತನಿಖೆ ನಡೆಯುತ್ತಿದೆ ಎಂದು ತಿಳಿದು ಬಂದಿದೆ.

ಇ) ಯಾವುದೂ ಇಲ್ಲ.

ಮಹದಾಯಿ ಪ್ರಾಜೆಕ್ಟ್ ಯೋಜನೆಯನ್ನು ಪ್ರಾರಂಭಿಸುವ ವಿಚಾರ

2231: ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಹದಾಯಿ ಯೋಜನೆಯನ್ನು ಪ್ರಾರಂಭಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರದವರು ಕೊಡಲಾಗಿದೆಯೆ. ಹಾಗಿದ್ದಲ್ಲಿ ಎಷ್ಟು ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಲಾಗಿದೆ.

ಆ) ಈ ಯೋಜನೆಗೆ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆಯೇ ಹಾಗಿದ್ದಲ್ಲಿ ತಾಂತ್ರಿಕ ಮಂಜೂರಾತಿಯನ್ನು ಎಂದು ಕೊಡಲಾಯಿತು. ಹಾಗೂ ಇನ್ನು ಎಷ್ಟು ದಿನಗಳಲ್ಲಿ ಈ ಕೆಲಸವನ್ನು ಮಾಡಿ ಮುಗಿಸಲಾಗುವುದು;

ಇ) 1992–93ನೇ ಸಾಲಿನಲ್ಲಿ ಈ ಯೋಜನೆಗೆ ಆಯವ್ಯಯದಲ್ಲಿ ನಿಗದಿಪಡಿಸಲಾದ ಹಣವೆಷ್ಟು ಮತ್ತು ಇಲ್ಲಿಯವರೆಗೆ ಈ ಯೋಜನೆಗೆ ಖರ್ಚು ಆಗಿರುವ ಹಣ ವೆಷ್ಟು;

ಈ) ಈ ಯೋಜನೆಯಿಂದ ಬೆಳಗಾಂ ಜಿಲ್ಲೆಯ ಯಾವ್ಯಾವ ಗ್ರಾಮಗಳಿಗೆ ಎಷ್ಟೆಷ್ಟು ಎಕರೆ ನೀರಾವರಿ ಆಗುವುದು;

ಉ) ಈ ಯೋಜನೆಯ ಕೆಲಸವು ಬಹಳ ಮಂದಗತಿಯಿಂದ ಸಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) 1993–94ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಈ ಯೋಜನೆಗೆ ಎಷ್ಟು ಹಣವನ್ನು ಒದಗಿಸಲಾಗಿದೆ. ಈ ಯೋಜನೆಗೆ ಇಲ್ಲಿಯವರೆಗೆ ಎಷ್ಟು ಎಲ್.ಓ.ಸಿ. ಬಿಡುಗಡೆ ಮಾಡಲಾಗಿದೆ. ಹಾಗೂ ಅದರಲ್ಲಿ ಖರ್ಚಾಗಿರುವ ಹಣ ವೆಷ್ಟು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಇಲ್ಲ.

ಆ) ಇಲ್ಲ.

ಇ) ನಿಗದಿ ಮಾಡಿದ ಹಣ : 1.00 ಕೋಟಿ ರೂ.ಗಳು
ಖರ್ಚಾದ ಹಣ : 20.70 ಲಕ್ಷ ರೂ.ಗಳು
(ಪ್ರಸ್ತುತ ವರ್ಷದಲ್ಲಿ 28.2.93 ರವರೆಗೆ)

ಈ) ಈ ಯೋಜನೆಯಿಂದ ಮಲಪ್ರಭಾ ಜಲಾಶಯಕ್ಕೆ ನೀರು ಪೂರೈಕೆ ಮಾಡಲಾಗುವುದೇ ವಿನಃ ಹೊಸದಾಗಿ ನೀರಾವರಿ ಸೌಲಭ್ಯ ಒದಗುವುದಿಲ್ಲ.

ಉ) ಈ ಯೋಜನೆಗೆ ಇನ್ನೂ ಆಡಳಿತಾತ್ಮಕ ಮಂಜೂರಾತಿ ನೀಡಿಲ್ಲವಾದ್ದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) 1993-94ನೇ ಸಾಲಿನಲ್ಲಿ 3.00 ಕೋಟಿ ರೂ.ಗಳನ್ನು ಒದಗಿಸಲಾಗಿದೆ. 1992-93ನೇ ಸಾಲಿನಲ್ಲಿ 28-2-93 ರವರೆಗೆ 21 ಲಕ್ಷ ರೂ.ಗಳ ಎಲ್.ಓ.ಸಿ. ಬಿಡುಗಡೆ ಮಾಡಲಾಗಿದೆ.

ಮಾರ್ಕಂಡೇಯ ಯೋಜನೆ ಪ್ರಾರಂಭಿಸುವ ವಿಚಾರ

2230: ಶ್ರೀ. ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾರ್ಕಂಡೇಯ ಯೋಜನೆಗೆ ಸರ್ಕಾರದವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜಾರಾತಿಯನ್ನು ಕೊಟ್ಟಿರುವರೇ;

ಆ) ಹಾಗಿದ್ದಲ್ಲಿ ಈ ಕೆಲಸಕ್ಕೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಎಂದು ಕೊಡಲಾಯಿತು. ಮತ್ತು ಎಷ್ಟು ಮೊತ್ತಕ್ಕೆ ಕೊಡಲಾಗಿದೆ;

ಇ) ಈ ಕೆಲಸಕ್ಕೆ 1992-93ನೇ ಸಾಲಿನಲ್ಲಿ ಈ ಯೋಜನೆಗೆ ಒದಗಿಸಲಾಗಿರುವ ಹಣವೆಷ್ಟು ಮತ್ತು ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ ಮತ್ತು ಈ ಯೋಜನೆಗೆ ಎಷ್ಟು ಹಣ ಎಲ್.ಓ.ಸಿ. ಬಿಡುಗಡೆ ಮಾಡಲಾಗಿರುವ ಹಣವೆಷ್ಟು ಮತ್ತು ಅದರಲ್ಲಿ ಎಲ್.ಓ.ಸಿಯಿಂದ ಖರ್ಚಾಗಿರುವ ಹಣವೆಷ್ಟು;

ಈ) ಈ ಯೋಜನೆಯಿಂದ ಯಾವ್ಯಾವ ತಾಲ್ಲೂಕಿನಲ್ಲಿ ನೀರಾವರಿಯಾಗಿರುವುದು ಹಾಗೂ ಬೈಲಹೊಂಗಲ ಮತ್ತು ಸೌದತ್ತಿ ತಾಲ್ಲೂಕಿನ ಯಾವ್ಯಾವ ? ಗ್ರಾಮಗಳಿಗೆ ಎಷ್ಟೆಷ್ಟು ಎಕರೆ ನೀರಾವರಿ ಆಗುವುದು;

ಉ) ಈ ಯೋಜನೆ ಬಹಳ ಮಂದಗತಿಯಿಂದ ಸಾಗುತ್ತಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):-

ಅ) ಇಲ್ಲ.

ಆ) ಇಲ್ಲ.

ಇ) 50 ಲಕ್ಷರೂ.ಗಳು

ಈ) ಈ ಯೋಜನೆಯಿಂದ ಹುಕ್ಕೇರಿ, ಗೋಕಾಕ್, ಬೆಳಗಾವಿ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ

ನೀರಾವರಿಯಾಗುವುದು. ಗ್ರಾಮವಾರು ವಿವರಗಳು ಯೋಜನೆಯ ವರದಿ ಪೂರ್ಣಗೊಂಡ ನಂತರ ಗುರುತಿಸಬಹುದುದಾಗಿದೆ.

ಉ) ಯೋಜನೆಯ ರೂಪರೇಷೆಯನ್ನು ತಾಂತ್ರಿಕ ಸಮಿತಿಯ ಹಲವಾರು ಸೂಚನೆಗಳಿಗನುಸಾರ ತಯಾರಿಸಬೇಕಾದ್ದುದರಿಂದ ವಿಳಂಬವಾಗಿದೆ.

ಸಂಗೊಳ್ಳಿಯಲ್ಲಿ ಶಾಲಾ ಕೋಣೆಗಳನ್ನು ಕಟ್ಟುವ ಬಗ್ಗೆ

2163: ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿಯಲ್ಲಿ ನೀರಾವರಿ ಇಲಾಖೆಯವರು ಕಟ್ಟಿದ ಶಾಲೆಯನ್ನು ಕೆಡವಿ ಅದೇ ಸಾಮಾನುಗಳನ್ನು ಉಪಯೋಗಿಸಿ ಶಾಲೆಯ ಕಟ್ಟಡ ಕಟ್ಟಲು ಅಂದಿನ ಲೋಕೋಪಯೋಗಿ ಸಚಿವರು ಆದೇಶ ನೀಡಿದ್ದರೂ ಯಾವುದೇ ಕ್ರಮಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಸಂಗೊಳ್ಳಿಯಲ್ಲಿ ದುಸ್ಥಿತಿಯಲ್ಲಿದ್ದ ಶಾಲಾ ಕಟ್ಟಡವನ್ನು ಕೆಡವಲು ದಿನಾಂಕ 2.5.1992ರ ಸರ್ಕಾರಿ ಪತ್ರದಲ್ಲಿ ಅನುಮತಿ ನೀಡಲಾಗಿದೆ. ಸದರಿ ಕಟ್ಟಡದಲ್ಲಿ ಸಿಕ್ಕಬಹುದಾದ ಉಪಯುಕ್ತ ವಸ್ತುಗಳನ್ನು ಉಪಯೋಗಿಸಿ ಶಾಲಾ ಕಟ್ಟಡವನ್ನು ಪುನರ್ ನಿರ್ಮಾಣ ಮಾಡುವ ಬಗ್ಗೆ ಪ್ರಸ್ತಾವನೆಯು ಯೋಜನಾ ಮಟ್ಟದಲ್ಲಿ ತಯಾರಿಕೆಯ ಹಂತದಲ್ಲಿದೆ.

ಆ) ಅಂದಾಜು ಪಟ್ಟಿ ತಯಾರಿಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಬೈಲಹೊಂಗಲ ತಾಲ್ಲೂಕ್ ಪೈಕಿ ಮೈಕೇಲ ಮರಡಿ ನೀರಾವರಿ ಕೆಲಸ ಪ್ರಾರಂಭ

650: ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕ್ ಪೈಕಿ ಮೈ ಕೇಲಮರಡಿ ನೀರಾವರಿ ಕೆಲಸ 1992–93ನೇ ಸಾಲಿನಲ್ಲಿ ಆಯವ್ಯಯ ಪಟ್ಟಿಯಲ್ಲಿ ಸೇರಿರುವುದು ನಿಜವೇ;

ಆ) 1992–93ನೇ ಸಾಲಿನಲ್ಲಿ ಈ ಕೆಲಸಕ್ಕೆ ಎಷ್ಟು ಹಣವನ್ನು ಒದಗಿಸಲಾಗಿದೆ;

ಇ) ಈ ಕೆಲಸಕ್ಕೆ ಸರ್ಕಾರದಿಂದ ಆಡಳಿತಾತ್ಮಕ ಮಂಜುರಾತಿಯನ್ನು ಇದುವರೆಗೂ ಕೊಡದೇ ಇದ್ದದ್ದರಿಂದ ಈ ಕೆಲಸಗಳು ಪ್ರಾರಂಭವಾಗಿರುವುದಿಲ್ಲವೆಂಬುದು ನಿಜವೇ;

ಈ) ಹಾಗಿದ್ದಲ್ಲಿ ಎಷ್ಟು ದಿವಸಗಳಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗುವುದು;

ಉ) ಉತ್ತರ ಕರ್ನಾಟಕ ನೀರಾವರಿ ಕೆಲಸಗಳು ಆಯವ್ಯಯ ಪಟ್ಟಿಯಲ್ಲಿ ಸೇರಿದ್ದರೂ ಕೂಡ ಆ ಕೆಲಸಗಳು ಬೇಗ ಪ್ರಾರಂಭವಾಗಬಾರದೆಂಬ ಉದ್ದೇಶದಿಂದ ಹಾಗೂ ಸರ್ಕಾರದಲ್ಲಿ ಹಣ ಇಲ್ಲದೆ

ಇರುವುದರಿಂದ ವಿನಾಕಾರಣ ಕೆಲವೊಂದು ಮಂಜೂರಾತಿ ನೀಡದೆ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ ಅಂಥಹ ಅಧಿಕಾರಿಗಳ ಮೇಲೆ ಸರ್ಕಾರದವರು ಯಾವ ಕ್ರಮವನ್ನು ಕೈಗೊಳ್ಳುವರು;

ಋ) ಈ ಕೆಲಸಕ್ಕೆ ಒದಗಿಸಿದ ಹಣವನ್ನು ಇದೇ ವರ್ಷ ಖರ್ಚಾಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ನಿಜ.

ಆ) 20.00 ಲಕ್ಷ ರೂ.ಗಳು

ಇ) ನಿಜ.

ಈ) ದಿನಾಂಕ 11-3-93ರ ಸರ್ಕಾರದ ಆದೇಶ ಸಂಖ್ಯೆ: ನೀ ಇ 135 ಸನೀಬೆ 92ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ.

ಉ) ಇಲ್ಲ.

ಊ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಋ) ಸಾಧ್ಯವಿದ್ದಷ್ಟು ಮಟ್ಟಿಗೆ. ಕ್ರಮ. ಕೈಗೊಳ್ಳಲಾಗುವುದು.

ಬೈಲಹೊಂಗಲ ತಾಲ್ಲೂಕು ವಕ್ಕುಂದ ಹಾಗೂ ಸವದತ್ತಿ ತಾಲ್ಲೂಕು ಗ್ರಾಮಗಳಲ್ಲಿ ಮಲಪ್ರಭಾ ಪುನರ್ವಸತಿ

651: ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಭಾರಿ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ವಕ್ಕುಂದ ಹಾಗೂ ಸವದತ್ತಿ ತಾಲ್ಲೂಕಿನ ಸುತಗಟ್ಟಿ ಗ್ರಾಮಗಳಲ್ಲಿ ಮಲಪ್ರಭಾ ಪುನರ್ವಸತಿ ಜನರ ಅನುಕೂಲತೆಗಾಗಿ ಶಾಲಾ ಕೊಠಡಿಗಳನ್ನು ಕಟ್ಟಲು ಮಾನ್ಯ ನೀರಾವರಿ ಸಚಿವರ ಆದೇಶದ ಪ್ರಕಾರ ನೀರಾವರಿ ಇಲಾಖೆ ಪತ್ರ ನಂ:ಐಡಿ 312 ಎನ್ಐಎನ್ 91 ದಿನಾಂಕ 27–12–91ನೇ ಪ್ರಾಕಾರ ಮುಖ್ಯ ಇಂಜಿನಿಯರ್, ನೀರಾವರಿ ಇಲಾಖೆ ಉತ್ತರ ವಲಯ, ಬೆಳಗಾಂ ಇವರಿಗೆ ಆದೇಶ ನೀಡಿರುವುದು ನಿಜವೇ;

ಆ) ಮುಖ್ಯ ಇಂಜಿನಿಯರ್, ನೀರಾವರಿ ಇಲಾಖೆ, ಉತ್ತರ ವಲಯ, ಬೆಳಗಾವಿ, ಇವರು ಪುನಃ ಸರ್ಕಾರಕ್ಕೆ ಈ ಕಟ್ಟಡಗಳನ್ನು ಕಟ್ಟಲು ಅನುಮತಿ ಕೇಳಿದ್ದಕ್ಕೆ ಸರ್ಕಾರದವರು ಈ ಕಟ್ಟಡಗಳನ್ನು ಈ ಮೊದಲೇ ಆದೇಶ ನೀಡಿದಂತೆ ಕಟ್ಟಬೇಕೆಂದು ದಿನಾಂಕ: 27–4–92 ರಂದು ಪುನಃ ಒಪ್ಪಿಗೆ ನೀಡಿರುವುದು ನಿಜವೇ;

ಇ) ವಾಸ್ತುಶಿಲ್ಪಿಗಳು ಸರ್ಕಾರವು ಈ ಕಟ್ಟಡಗಳನ್ನು ಕಟ್ಟಲು ನಕಾಶೆ ತಯಾರಿಸಿ ಕಾರ್ಯಕಾರಿ ಅಭಿಯಂತರರು ಮಲಪ್ರಭಾ ಪ್ರೊಜೆಕ್ಟ್, ನವಿಲುತೀರ್ಥ, ಇವರಿಗೆ ಕಳುಹಿಸಿರುವುದು ನಿಜವೇ;

ಈ) ಸರ್ಕಾರದವರು ಈಗಾಗಲೇ ಆದೇಶ ನೀಡಿದ ಪ್ರಕಾರ ಬೇಗನೆ ಕಟ್ಟಡ ಕಟ್ಟಲು ಕ್ರಮ ಕೈಗೊಳ್ಳುವರೇ ?

ಶ್ರೀ ಓಂ ಪ್ರಕಾಶ್ ಕಣಗಲಿ (ಭಾರಿ ನೀರಾವರಿ ರಾಜ್ಯ ಮಂತ್ರಿಗಳು):-

ಅ) ಬೈಲಹೊಂಗಲ ತಾಲ್ಲೂಕಿನ ವಕ್ಕುಂದ ಹಾಗೂ ಸವದತ್ತಿ ತಾಲ್ಲೂಕಿನ ಸುತಗಟ್ಟಿ ಗ್ರಾಮಗಳಲ್ಲಿ 7 ಶಾಲಾ ಕೋಣೆಗಳನ್ನು, ಪುನರ್ವಸತಿ ಕಾರ್ಯಕ್ರಮದ ಅಡಿಯಲ್ಲಿ ಕಟ್ಟುವ ಬಗ್ಗೆ ಅವಶ್ಯ ಕ್ರಮ ತೆಗೆದುಕೊಳ್ಳಬೇಕೆಂದು, ಕ್ರಮವಾಗಿ ಸರ್ಕಾರಿ ಪತ್ರಗಳ ಸಂಖ್ಯೆ: ಐಡಿ 315 ಎನ್‌ಐಎನ್ 91 ದಿನಾಂಕ 27-12-91 ಮತ್ತು ನಂ. ಐಡಿ 312 ಎನ್‌ಐಎನ್ 91 ದಿನಾಂಕ 27-12-91ರಲ್ಲಿ ಬೆಳಗಾವಿಯ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರಿಗೆ ಸೂಚನೆ ನೀಡಲಾಗಿದೆ.

ಆ) ದಿನಾಂಕ 27-12-91ರ ಸರ್ಕಾರಿ ಪತ್ರಗಳಲ್ಲಿ ಈಗಾಗಲೇ ನೀಡಿರುವ ಸೂಚನೆಗಳಂತೆ ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ಮುಖ್ಯ ಇಂಜಿನಿಯರ್‌ರವರಿಗೆ ದಿನಾಂಕ 27-4-92ರ ಸರ್ಕಾರಿ ಪತ್ರದಲ್ಲಿ ಸ್ಪಷ್ಟೀಕರಣ ನೀಡಲಾಗಿದೆ.

ಇ) ಹೌದು.

ಈ) ಮುಖ್ಯ ಇಂಜಿನಿಯರ್‌ರವರು ದಿನಾಂಕ 24-12-92ರ ತಮ್ಮ ಪತ್ರದಲ್ಲಿ ಸರ್ಕಾರದ ನಿರ್ದಿಷ್ಟ ಸ್ಪಷ್ಟೀಕರಣ ಕೋರಿದ್ದು, ಅದು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಈ ಬಗ್ಗೆ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳಲಾಗುವುದು.

ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಚುನಾವಣೆಗಳಲ್ಲಿ ಪ್ರಾಥಮಿಕ ಶಾಲೆಯ ಉಪಾಧ್ಯಾಯರುಗಳಿಗೆ ಮತಚಲಾವಣೆ

2003: ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ):- ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಚುನಾವಣೆಗಳಲ್ಲಿ ಪ್ರಾಥಮಿಕ ಶಾಲೆಯ ಉಪಾಧ್ಯಾಯರುಗಳಿಗೆ ಮತ ಚಲಾಯಿಸುವ ಅರ್ಹತೆ ಇರುವುದಿಲ್ಲವೆಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳಿಗೆ ಮತ ಚಲಾಯಿಸುವ ಹಕ್ಕನ್ನು ಕೊಡುವ ಸಲುವಾಗಿ ಭಾರತದ ಸಂವಿಧಾನವನ್ನು ತಿದ್ದುಪಡಿ ಮಾಡಲು ಸರ್ಕಾರವು ಕೇಂದ್ರ ಸರ್ಕಾರಕ್ಕೆ ಕೋರುವ ಪ್ರಸ್ತಾವನೆ ಇದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ) ಇಲ್ಲ. ಪ್ರಜಾಪ್ರಾತಿನಿಧ್ಯ ಅಧಿನಿಯಮ 1950 ಇದರಲ್ಲಿರುವ ಪರಿಚ್ಛೇದ 27 (5) (ಎ) ಇದರಲ್ಲಿರುವ ಷರತ್ತುಗಳನ್ನು ಪೂರೈಸಿದ್ದಲ್ಲಿ, ಪದವಿ: ಡಿಪ್ಲೊಮೊ ಇವುಗಳನ್ನು ಹೊಂದಿದ್ದರೆ ಮತ್ತು ಹೆಸರುಗಳನ್ನು ಪದವೀಧರ ಮತಪಟ್ಟಿಗಳಲ್ಲಿ ಸೇರಿಸಿದ್ದರೆ, ಅಂತಹ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳು ಪದವೀಧರ ಕ್ಷೇತ್ರಗಳಿಂದ ವಿಧಾನ ಪರಿಷತ್ತಿನ ಚುನಾವಣೆಗಳಲ್ಲಿ ಮತ ಚಲಾಯಿಸಲು ಅರ್ಹರಾಗುತ್ತಾರೆ.

ಆ) ಉದ್ಭವಿಸುವುದಿಲ್ಲ.

ಹೆಲಿಕ್ಯಾಪ್ಟರ್ ಬಳಕೆಯ ಬಗ್ಗೆ

2158: ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ):– ಮಾನ್ಯ ಲೋಕೋಪಯೋಗಿ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜನವರಿ 1992ರಿಂದ ಡಿಸೆಂಬರ್ 1992ರವರೆಗೆ ರಾಜ್ಯ ಸರ್ಕಾರದ ಹೆಲಿಕಾಪ್ಟರ್‌ಗಳನ್ನು ಎಷ್ಟು ಸಾರಿ ಮತ್ತು ಯಾರು ಯಾರು ಉಪಯೋಗಿಸಿದರು;(ಪ್ರತಿ ಸಾರಿ ಪ್ರಯಾಣ ಮಾಡಿದವರ ಹೆಸರು ಮತ್ತು ಹುದ್ದೆಗೆ ಸಂಬಂಧಪಟ್ಟಂತೆ ವಿವರ ನೀಡುವುದು).

ಆ) ರಾಜ್ಯ ಸರ್ಕಾರದ ಹೆಲಿಕಾಪ್ಟರ್ ಅಲ್ಲದೆ ಖಾಸಗಿ ಹೆಲಿಕಾಪ್ಟರನ್ನು ಎಷ್ಟು ಸಾರಿ ಬಾಡಿಗೆಗೆ ಪಡೆಯಲಾಗಿದೆ. ಹಾಗೂ ಅದಕ್ಕೆ ಕೊಟ್ಟಂತಹ ಬಾಡಿಗೆ ಎಷ್ಟು; ಇಂಧನ ವೆಚ್ಚವೆಷ್ಟು; ಅದನ್ನು ಉಪಯೋಗಿಸುವ ಅವಶ್ಯಕತೆ ಇತ್ತೆ;

ಇ) ರಾಜ್ಯ ಸರ್ಕಾರದ ಅಧಿಕಾರಿಗಳು ಈ ಹೆಲಿಕಾಪ್ಟರನ್ನು ಉಪಯೋಗಿಸಿದ್ದಾರೆಯೇ; ಯಾವ ಕಾರಣಕ್ಕಾಗಿ ಹಾಗೂ ಯಾವ ಯಾವ ಅಧಿಕಾರಿಗಳು ಉಪಯೋಗಿಸಿದ್ದಾರೆಂಬ ವಿವರವನ್ನು ನೀಡುವುದು ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):–

ಅ) ಜನವರಿ 1992 ರಿಂದ ಡಿಸೆಂಬರ್ 92 ರವರಗೆ 83 ಬಾರಿ ಉಪಯೋಗಿಸಲಾಗಿದೆ.
(ವಿವರಗಳು ಕೆಳಕಂಡಂತಿವೆ):–

1)	ಕರ್ನಾಟಕ ರಾಜ್ಯಪಾಲರು	2 ಬಾರಿ
2)	ರಾಜಸ್ತಾನ ರಾಜ್ಯಪಾಲರು	4 "
3)	ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳು.	40 "
4)	ಆಂಧ್ರಪ್ರದೇಶದ ಮುಖ್ಯ ಮಂತ್ರಿಗಳು	2"
5)	ಕರ್ನಾಟಕ ಪೋಲೀಸ್ ಇಲಾಖೆ	3 "
6)	ಕರ್ನಾಟಕ ರಾಜ್ಯದ ಗೃಹ ಮಂತ್ರಿಗಳು	8"
7)	ಕೇಂದ್ರ ಸರ್ಕಾರದ ವಾಣಿಜ್ಯ ಮಂತ್ರಿಗಳು	3 "
8)	ಕರ್ನಾಟಕ ರಾಜ್ಯದ ವ್ಯವಸಾಯ ಮಂತ್ರಿಗಳು	2 "
9)	ಕರ್ನಾಟಕ ರಾಜ್ಯದ ಯುವಜನ ಖಾತೆ ಮಂತ್ರಿಗಳು	1 "
10).	ಕರ್ನಾಟಕ ರಾಜ್ಯದ ಶಿಕ್ಷಣ ಇಲಾಖೆ ಮಂತ್ರಿಗಳು	1"
11)	ಕೇಂದ್ರ ಯೋಜನಾ ಆಯೋಗದ ಡೆಪ್ಯೂಟಿ ಛೇರ್‌ಮನ್	1"
12)	ಕರ್ನಾಟಕ ರಾಜ್ಯದ ಕಂದಾಯ ಇಲಾಖೆ ಮಂತ್ರಿಗಳು	1"
13)	ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಮಂತ್ರಿಗಳು	3"
14)	ಕೇಂದ್ರ ಸರ್ಕಾರದ ಸಾರಿಗೆ ಮಂತ್ರಿಗಳು	5"
15)	ಕರ್ನಾಟಕ ರಾಜ್ಯದ ಮುಖ್ಯ ಕಾರ್ಯದರ್ಶಿಗಳು	1"
16)	ಕರ್ನಾಟಕ ರಾಜ್ಯದ ಇಂಧನ ಖಾತೆ ಮಂತ್ರಿಗಳು	2"
17)	ಕರ್ನಾಟಕ ರಾಜ್ಯದ ನೀರಾವರಿ ಇಲಾಖೆ ಮಂತ್ರಿಗಳು	1"
18)	ಕರ್ನಾಟಕ ರಾಜ್ಯದ ಲೋಕೋಪಯೋಗಿ ಮತ್ತು ಗೃಹ ನಿರ್ಮಾಣ ಮಂತ್ರಿಗಳು	1"

19)	ಕೇಂದ್ರ ಸರ್ಕಾರದ ಸಂಸದೀಯ ವ್ಯವಹಾರ ಮಂತ್ರಿಗಳು	1"
20)	ಕರ್ನಾಟಕ ರಾಜ್ಯದ ಪಶುಸಂಗೋಪನಾ ಮಂತ್ರಿಗಳು	1"
	ಒಟ್ಟು	83 ಬಾರಿ

ಆ) ರಾಜ್ಯದ ಹೆಲಿಕಾಪ್ಟರ್ ದುರಸ್ತಿಯಲ್ಲಿದ್ದಾಗ ಹಾರಾಟಕ್ಕೆ ಲಭ್ಯವಿಲ್ಲದಿದ್ದಂತಹ ತುರ್ತು ಸಂದರ್ಭಗಳಲ್ಲಿ ಖಾಸಗಿಯವರ ಹೆಲಿಕಾಪ್ಟರ್‌ನ್ನು 6 ಬಾರಿ ಬಾಡಿಗೆಗೆ ಪಡೆಯಲಾಗಿದೆ. ಅದಕ್ಕೆ ನೀಡಲಾದ ಬಾಡಿಗೆ ರೂ. 4,03,849–00.

ಇಂಧನದ ವೆಚ್ಚ – 47,818–00 ರೂ.ಗಳು. ರಾಜ್ಯದ ಹೆಲಿಕಾಪ್ಟರ್ ದುರಸ್ತಿಯಲ್ಲಿದ್ದುದರಿಂದ ಖಾಸಗಿಯವರ ಹೆಲಿಕಾಪ್ಟರ್‌ನ್ನು ಬಳಸುವ ಅವಶ್ಯಕತೆ ಇತ್ತು.

ಇ) ರಾಜ್ಯ ಸರ್ಕಾರದ ಅಧಿಕಾರಿಗಳು 4 ಬಾರಿ ಉಪಯೋಗಿಸಿರುತ್ತಾರೆ. ವಿವರಗಳನ್ನು ಕೆಳಗೆ ನಮೂದಿಸಲಾಗಿದೆ.

ಅ) ಪೋಲೀಸ್ ಇಲಾಖೆ – 3 ಬಾರಿ

ಆ) ಮುಖ್ಯ ಕಾರ್ಯದರ್ಶಿಗಳು – 1 ಬಾರಿ.

ಮಲಪ್ರಭಾ ನದಿಗೆ ಅಡ್ಡಲಾಗಿ ಏತ ನೀರಾವರಿ ಯೋಜನೆ

1537 (2111): ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ):–

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕನಸಬಿ ಗ್ರಮಾದ ಹತ್ತಿರ ಮಲಪ್ರಭಾ ನದಿಗೆ ಅಡ್ಡಲಾಗಿ ಏತ ನೀರಾವರಿ ಮಾಡುವ ಯೋಜನೆ ಮಂಜೂರಾಗಿದೆಯೇ;

ಆ) ಆಗಿದ್ದರೆ ಯಾವಾಗ ಮಂಜೂರಾಗಿದೆ;

ಇ) ಕೆಲಸದ ಪ್ರಗತಿಯ ವಿವರಗಳನ್ನು ಒದಗಿಸುವುದು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಹೌದು.

ಆ) ಈ ಯೋಜನೆಯು ನಬಾರ್ಡ್‌ದಿಂದ 3–7–92 ಪತ್ರ ಸಂ:ಎನ್‌ಬಿ (ಬಿ: ಕೆಎಲ್‌ಸಿ 29:91–92ರಲ್ಲಿ ಮಂಜೂರಾಗಿರುತ್ತದೆ.

ಇ) ಯೋಜನೆಯ ಕಟ್ಟಡ ಭಾಗದ ರೂ.2.696 ಲಕ್ಷ ವೆಚ್ಚದ ಕಾಮಗಾರಿಯುನ್ನು ಮುಗಿಸಲಾಗಿದ್ದು ಇನ್ನುಳಿದ ಜಾಕ್‌ವೆಲ್, ಯಂತ್ರಗಾರ, ಇನಟೇಕ್ ವೆಲ್, ಇನಟೇಕ್ ಪೈಪ್ ಲೈನ್, ರೈಸಿಂಗ್ ಮೇನ್ ಮತ್ತು ಡೆಲಿವರಿ ಚೇಂಬರ್ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಕರೆಯಲಾಗಿದೆ. ಯೋಜನೆಯ ಯಂತ್ರೋಪಕರಣಗಳನ್ನು ಪೂರೈಸಿ ಅಳವಡಿಸಲು ಎನ್.ಜಿ.ಇ.ಎಫ್ ಬೆಂಗಳೂರು ಇವರಿಗೆ ವಹಿಸಲಾಗಿದೆ. ಸದರಿ ಸಂಸ್ಥೆಯವರು ಕೆಲವೊಂದು ಭಾಗದ ಯಂತ್ರೋಪಕರಣಗಳನ್ನು ಈಗಾಗಲೇ ಪೂರೈಸಿದ್ದಾರೆ.

5182-4

ನಂದೀಶ್ವರ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಬ್ಯಾರೇಜು ನಿರ್ಮಾಣ

2112: ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ):- ಮಾನ್ಯ ಭಾರಿ ನೀರಾವರಿ ರಾಜ್ಯ ಮಂತ್ರಿಗಳು **ಈ ಕೆಳಕಂಡ** ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ನಂದೀಶ್ವರ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಬ್ಯಾರೇಜು ನಿರ್ಮಾಣದ ಯೋಜನೆಯು **ಮಂಜೂರಾ**ಗಿದೆಯೇ;

ಆ) ಆಗಿದ್ದರೆ, ಯಾವ ಯೋಜನೆಯ ಅಡಿಯಲ್ಲಿ ಮಂಜೂರಾಗಿದೆ;

ಇ) ಕೆಲಸದ ಪ್ರಗತಿಯ ವಿವರ ಒದಗಿಸುವುದು ?

ಶ್ರೀ ಓಂ ಪ್ರಕಾಶ್ ಕಣಗಲಿ (ಭಾರಿ ನೀರಾವರಿ ರಾಜ್ಯ ಮಂತ್ರಿಗಳು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ಬಂಟ್ವಾಳ ತಾಲ್ಲೂಕಿನ ಏತ ನೀರಾವರಿ ಯೋಜನೆ ಕಾಮಗಾರಿ ಕೆಲಸ

2126: ಶ್ರೀ ಎ. ರುಕ್ಮಯ್ಯ ಪೂಜಾರಿ, (ವಿಟ್ಲ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ **ಕೆಳಕಂಡ ಪ್ರಶ್ನೆ**ಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಂಟ್ವಾಳ ತಾಲ್ಲೂಕಿನ ಏತ ನೀರಾವರಿ ಯೋಜನೆಯ ಕಾಮಗಾರಿ ಕೆಲಸಗಳು **ನಿಧಾನಗತಿ**ಯಿಂದ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ನಿಧಾನ ಗತಿಯಿಂದ ಸಾಗಲು ಕಾರಣಗಳೇನು ಇದರಿಂದ ರೈತರಿಗೆ ತೊಂದರೆಯಾಗುತ್ತಿರುವುದು **ಸರ್ಕಾರಕ್ಕೆ** ತಿಳಿದಿದೆಯೇ;

ಇ) ಹಾಗಿದ್ದಲ್ಲಿ ಸದರಿ ಯೋಜನೆಯ ಕೆಲಸಗಳು ಬೇಗನೆ ಪೂರ್ತಿ ಆಗಲು ಸರ್ಕಾರವು **ತೆಗೆದುಕೊಳ್ಳು**ವ ಕ್ರಮವೇನು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಬಂದಿದೆ.

ಆ) ಯೋಜನೆಗೆ ನಬಾರ್ಡ್‌ನಿಂದ ಸಾಲ ಸೌಲಭ್ಯ ಇನ್ನೂ ದೊರಕದೆ ಇರುವುದರಿಂದ ಕೆಲಸಗಳು **ನಿಧಾನಗತಿ**ಯಲ್ಲಿ ನಡೆದಿದೆ.

ಇ) ನಬಾರ್ಡ್‌ನಿಂದ ಆರ್ಥಿಕ ನೆರವು ದೊರೆತ ನಂತರ ಕಾಮಗಾರಿಗಳನ್ನು **ಪೂರ್ಣ**ಗೊಳಿಸಲಾಗುವುದು.

ಶಿವಮೊಗ್ಗ – ಮಂಗಳೂರು ವಿದ್ಯುತ್ ವಾಹಕ ಟವರ್‌ಗಳ ರಿಪೇರಿ

2127: ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗಕ್ಕೆ ಅಂದರೆ, ಉಡುಪಿ, ಕುಂದಾಪುರ, ಕಾರ್ಕಳ ತಾಲ್ಲೂಕುಗಳಿಗೆ ವಿದ್ಯುತ್‌ನ್ನು 1958ನೇ ಇಸವಿಯಲ್ಲಿ ಹಾಕಿರುವ 110 ಕೆವಿ ಶಿವಮೊಗ್ಗ – ಮಂಗಳೂರು ವಾಹಕಗಳಲ್ಲಿ ಸರಬರಾಜು ಮಾಡಲಾಗುತ್ತಿರುವುದು ನಿಜವೇ;

ಆ) ಈ ವಿದ್ಯುತ್ ಲೈನು ಆಮೇಲೆ ಯಾವುದೇ ದುರಸ್ತಿ ಉಸ್ತುವಾರಿ ಇಲ್ಲದೇ ನಡುರಸ್ತೆಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ವಿದ್ಯುತ್ ವಾಹಕಗಳ ಟವರ್‌ಗಳು ತುಕ್ಕು ಹಿಡಿದಿರುವುದರಿಂದ ಟವರ್ ಕುಸಿದು ಬಿದ್ದು ವಿದ್ಯುತ್ ಸರಬರಾಜು ನಿಲುಗಡೆ ಆಗುವ ಭೀತಿ ಇರುವುದು ನಿಜವೆ;

ಈ) ಇದನ್ನು ಸರಿಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಹೌದು.

ಆ) ಈ ವಿದ್ಯುತ್ ಲೈನನ್ನು ಅಗತ್ಯ ಬಂದಾಗಲೆಲ್ಲಾ ದುರಸ್ತಿ ಮಾಡಲಾಗುತ್ತದೆ ಮತ್ತು ಸರಿಯಾದ ಉಸ್ತುವಾರಿಯಿಂದ ನಿರ್ವಹಣೆ ಕೆಲಸಗಳನ್ನು ಮಾಡಲಾಗುತ್ತಿದೆ.

ಇ) ನಿರ್ವಹಣೆ ಕೆಲಸಗಳನ್ನು ಮಾಡಲಾಗುತ್ತಿರುವುದರಿಂದ ಟವರ್ ಕುಸಿದು ಬಿದ್ದು ವಿದ್ಯುತ್ ಸರಬರಾಜು ನಿಲುಗಡೆ ಆಗುವ ಭೀತಿ ಇರುವುದಿಲ್ಲ.

ಈ) ತುಕ್ಕು ಹಿಡಿದಿದ್ದ ಎರಡು ಟವರ್‌ಗಳನ್ನು ಈಗಾಗಲೇ ಬದಲಾಯಿಸಲಾಗಿದೆ. ಕೆಲವು ಟವರ್‌ಗಳಲ್ಲಿ ತುಕ್ಕು ಹಿಡಿದಿರುವ ಮೇಲ್ಭಾಗದ ಕ್ರಾಸ್ ಅರ್ಮಗಳನ್ನು ತ್ವರಿತ ಗತಿಯಲ್ಲಿ ಬದಲಾಯಿಸುವ ಕ್ರಮ ಕೈಗೊಳ್ಳಲಾಗಿದೆ.

ಗುಲ್ಬರ್ಗಾ ಜಿಲ್ಲೆಯ ಕೋಡಂಗಲ್ ರಸ್ತೆ ಹಾಗೂ ಸೇಡಂ ಹಂದರಿಕಿ ರಸ್ತೆ ದುರಸ್ತಿ

2199: ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1992–93ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಯ ಲೋಕೋಪಯೋಗಿ ರಸ್ತೆಗಳಾದ ಗುಲ್ಬರ್ಗಾ ಕೋಡಂಗಲ್ ರಸ್ತೆ ಸೇಡಂ ಸರಹದ್ದಿನಿಂದ ಗಡಿ ಪ್ರಾಂತ್ಯದ ರೆಬ್ಬನ್ ಪಲ್ಲಿಯವರೆಗೆ ಹಾಗೂ ಸೇಡಂ ಹಂದರಿಕಿ ರಸ್ತೆಗಳ (ಕೋಡ್ಲಾ ಮಾರ್ಗವಾಗಿ) ದುರಸ್ತಿಗಾಗಿ ಮಾಡಿರುವ ವೆಚ್ಚವೆಷ್ಟು;

ಆ) ಇವುಗಳ ದುರಸ್ತಿ ಮಾಡಿದ್ದರೆ ಈಗಲೂ ಸಹ ದೊಡ್ಡ ದೊಡ್ಡ ತಗ್ಗುಗಳು ಬಿದ್ದು ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗಿಲ್ಲವೆ.

ಇ) ಗುಲ್ಬರ್ಗಾ ವಿಭಾಗದಲ್ಲಿಯ ಇಂತಹ ಹದಗಟ್ಟಿರುವ ರಸ್ತೆಗಳು ಬೇರೆಯಲ್ಲಿಯೂ ಇಲ್ಲವಲ್ಲವೇ;

ಇ) ಈ ರಸ್ತೆಗಳನ್ನು ದುರಸ್ತಿ ಮಾಡಿ ಸಂಚಾರಕ್ಕೆ ಅನುಕೂಲ ಮಾಡಿಕೊಡುವದು ಯಾವಾಗ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) 1992-93ನೇ ಸಾಲಿನಲ್ಲಿ ಗುಲ್ಬರ್ಗಾ ಕೋಡಂಗಲ್ ರಸ್ತೆ (ಸೇಡಂ ಸರಹದ್ದಿನಿಂದ ಗಡಿ ಪ್ರಾಂತದವರೆಗೆ) ಹಾಗೂ ಸೇಡಂ ಹಂದರಕಿಯ (ಕೊಡ್ಲಾ) ಮಾರ್ಗವಾಗಿ ಹೋಗುವ ರಸ್ತೆಗಳಿಗೆ ಅನುಕ್ರಮವಾಗಿ 1993 ಫೆಬ್ರವರಿ ಅಂತ್ಯದವರೆಗೆ ಮಾಡಿದ ವೆಚ್ಚ ಕ್ರಮವಾಗಿ 5,86,562 ಮತ್ತು ರು.1,48,692 ಆಗಿದೆ.

ಆ) ಈ ರಸ್ತೆಗಳ ಮೇಲೆ ಆಗಾಗ್ಗೆ ಕಂಡು ಬಂದ ತಗ್ಗುಗಳನ್ನು ಮುಚ್ಚಿ ರಸ್ತೆಯಲ್ಲಿ, ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗದಂತೆ ದುರಸ್ತಿ ಕಾರ್ಯಕೈಕೊಂಡು ಸುಸ್ಥಿತಿಯಲ್ಲಿಡಲಾಗುತ್ತಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಮೇಲೆ ತಿಳಿಸಿದ ಎರಡೂ ರಸ್ತೆಗಳ ಅಭಿವೃದ್ಧಿ ಕಾರ್ಯವನ್ನು ಹೈದ್ರಾಬಾದ್ – ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದಲ್ಲಿ ತೆಗೆದುಕೊಳ್ಳಲಾಗಿದೆ. ಈ ಕೆಲಸಗಳು ಪ್ರಗತಿಯಲ್ಲಿವೆ. ಈ ರಸ್ತೆಗಳ ಸಂಚಾರಕ್ಕೆ ಅಡಚಣೆ ಆಗದಂತೆ ನೋಡಿಕೊಳ್ಳಲಾಗುತ್ತಿದೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಒಡೆದು ಹೋಗುವ ಕೆರೆಗಳ ದುರಸ್ತಿ

2201. ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ನೈಜಾಮ ಕಾಲದ ಒಡೆದು ಹೋಗಿರುವ ಕೆರೆಗಳು ದುರಸ್ತಿ ಮಾಡದೇ ರೈತರಿಗೆ ಸಾವಿರಾರು ಎಕರೆ ನೀರಾವರಿಯಾಗದೇ ಹಾನಿ ಉಂಟಾಗಿರುವುದು ಸರ್ಕಾರದ ಗಮನಕ್ಕ ಬಂದಿದೆಯೇ;

ಆ) ಇಂಥ ಒಡೆದು ಹೋಗಿರುವ ಕೆರೆಗಳು ಎಷ್ಟು;

ಇ) ಈ ಕೆರೆಗಳು ಒಡೆದು ಹೋಗಿರುವುದು ಯಾವಾಗ;

ಈ) ಈ ಕೆರೆಗಳ ಕೆಳಗೆ ನೀರಾವರಿಯಾಗುವ ಭೂಮಿ ಎಷ್ಟು; ಇಲ್ಲಿಯವರೆಗೆ ಇವುಗಳನ್ನು ದುರಸ್ತಿ ಮಾಡಿಲ್ಲ ಏಕೆ;

ಉ) ಈಗಲಾದರೂ ಸಹ ಈ ಕೆರೆಗಳನ್ನು ದುರಸ್ತಿ ಮಾಡಿ ರೈತರಿಗೆ ನೀರಾವರಿಗಾಗಿ ಅನುಕೂಲ ಮಾಡಿಕೊಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಒಡೆದ ಕೆರೆಗಳನ್ನು ದುರಸ್ತಿ ಮಾಡದಿರುವುದರಿಂದ ಸಾವಿರಾರು ಎಕರೆ ನೀರಾವರಿಯಾಗದೆ ಹಾನಿ ಉಂಟಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಎಂಟು.

ಇ) ನಿರ್ದಿಷ್ಟ ಮಾಹಿತಿ ಇಲ್ಲ (ಸುಮಾರು 15 ರಿಂದ 20 ವರ್ಷಗಳ ಹಿಂದೆ).

ಈ) 173.86 ಹೆಕ್ಟೇರ್. ಅನುದಾನದ ಕೊರತೆಯಿಂದ ದುರಸ್ತಿ ಆಗಿರುವುದಿಲ್ಲ.

ಉ) ಪರಿಶೀಲಿಸಲಾಗುವುದು.

ಹಂಪೆಯ ರಸ್ತೆಯನ್ನು ದುರಸ್ತಿಗೊಳ್ಳಿಸುವ ಬಗ್ಗೆ

2162: ಶ್ರೀ ಹೆಚ್.ವೈ. ಮೇಟಿ (ಗುಳೇದಗುಡ್ಡ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊಸಪೇಟೆಯಿಂದ ಹಂಪಿಗೆ ಹೋಗುವ ರಸ್ತೆಯು ನಾದುರಸ್ತಿ ಇರುವುದರಿಂದಾಗಿ ವಾಹನಗಳ ಓಡಾಟಕ್ಕೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ರಸ್ತೆಯನ್ನು ದುರಸ್ತಿ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ;

ಇ) ಮೇಲ್ಕಂಡ ರಸ್ತೆಯನ್ನು ದುರಸ್ತಿ ಮಾಡದೆ ಇರಲು ಕಾರಣಗಳೇನು ಹಾಗೂ ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) 1991–92 ಹಾಗೂ 92–93ರಲ್ಲಿ ಆದ ಅತಿವೃಷ್ಟಿಯಿಂದ ಹೊಸಪೇಟೆ – ಕಮಲಾಪೂರ – ಹಂಪೆ ರಸ್ತೆಯು ಕೆಟ್ಟು ವಾಹನ ಸಂಚಾರಕ್ಕೆ ತೊಂದರೆಯಾಗಿದ್ದುದು ಸರ್ಕಾರದ ಗಮನಕ್ಕೆ ಬಂದಿದೆ. ಪ್ರಸ್ತುತದಲ್ಲಿ ವಾಹನ ಸಂಚಾರಕ್ಕೆ ತೊಂದರೆಯಿರುವುದಿಲ್ಲ.

ಆ) 1991–92 ಹಾಗೂ 1992–93ನೇ ಸಾಲಿನಲ್ಲಿ ಅತಿವೃಷ್ಟಿಯಿಂದ ಕೆಟ್ಟಿದ್ದ ಹೊಸಪೇಟೆ – ಕಮಲಾಪುರ ಭಾಗದ ರಸ್ತೆಯನ್ನು 6.80 ಲಕ್ಷರೂ.ಗಳ ಅತಿವೃಷ್ಟಿ ಪರಿಹಾರ ಅನುದಾನದಿಂದ ದುರಸ್ತಿಪಡಿಸಲಾಗುತ್ತಿದೆ. ಹಾಗೂ ಕಮಲಾಪುರದಿಂದ ಹಂಪಿಯ ಭಾಗದ ರಸ್ತೆಯ ಅಭಿವೃದ್ಧಿಯನ್ನು 18 ಲಕ್ಷ ರೂ.ಗಳ ಅಂದಾಜಿನಲ್ಲಿ ಪೂರ್ಣಗೊಳಿಸಲಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಮಂಡ್ಯ ಕೆರೆಯನ್ನು ನಿವೇಶನವನ್ನಾಗಿ ಮಾರ್ಪಡಿಸುವ ಬಗ್ಗೆ

2229: ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಡ್ಯ ಕೆರೆಯನ್ನು ಒಡೆದು ನಿವೇಶನಗಳನ್ನಾಗಿ ಮಾರ್ಪಡಿಸುವ ಕಾಮಗಾರಿಯನ್ನು ಸರ್ಕಾರವು ಕೈಗೊಂಡಿದೆಯೇ;

ಆ) ಹಾಗಿದ್ದಲ್ಲಿ ಈವರೆಗೆ ಪ್ರಗತಿ ಸಾಧಿಸಿರುವುದು ಎಷ್ಟು;

ಇ) ಪ್ರಸಕ್ತ ಸಾಲಿನಲ್ಲಿ ಈ ಕಾಮಗಾರಿಗೆ ಒದಗಿಸಿರುವ ಹಣವೆಷ್ಟು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಹೌದು.

ಆ) ಕೆರೆಯನ್ನು ಒಡೆಯುವ ಪೂರ್ವಭಾವಿಯಾಗಿ ಮಂಡ್ಯ ಕೆರೆಯ ಅಚ್ಚುಕಟ್ಟಿನ ಪ್ರದೇಶಕ್ಕೆ ನೀರನ್ನು ಸರಬರಾಜು ಮಾಡಲು ಹಾಗೂ ಮಂಡ್ಯ ಸಕ್ಕರೆ ಕಾರ್ಖಾನೆಗೆ ಪರ್ಯಾಯ ನೀರು ಸರಬರಾಜು ಮಾಡಲು ಮಂಡ್ಯ ಕೆರೆಯ ಮೇಲ್ಭಾಗದ ಕೆರೆಗಳನ್ನು ಅಭಿವೃದ್ಧಿಪಡಿಸುವ ಮೊದಲ ಹಂತದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಇ) 1992–93ರ ಸಾಲಿನಲ್ಲಿ ಅನುದಾನವನ್ನು ನೀಡಿರುವುದಿಲ್ಲ.

ಗದಗ – ಮುಂಡರಗಿ ನಡುವೆ ಸಂಪರ್ಕ ರಸ್ತೆ

2189: ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಂಡರಗಿ ತಾಲ್ಲೂಕು ಮೇವುಂಡಿ ಹಳ್ಳಕಟ್ಟಿ ಗದಗ ಮುಂಡರಗಿ ನಡುವೆ ಸಂಪರ್ಕ ರಸ್ತೆ ಬಂದ್ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಗೆ ಬ್ರಿಡ್ಜ್ ಕಟ್ಟಲು ಎಂ.ಎಲ್.ಎ ಗ್ರಾಂಟ್ ಕೊಡಲು ನಾನು ಒಪ್ಪಿ ಬರಕೊಟ್ಟಿದ್ದರೂ ಆದರ ಕಾರ್ಯ ಪ್ರಾರಂಭವಾಗಿಲ್ಲವೇಕೆ; ಎಂದಿನಿಂದ ಕಾರ್ಯ ಪ್ರಾರಂಭಿಸುವಿರಿ; ನಿರ್ದಿಷ್ಟ ದಿನಾಂಕವನ್ನು ತಿಳಿಸುವುದು;

ಇ) ಈ ಸಲದ ಮಹಾಪೂರದಲ್ಲಿ ಮುಂಡರಗಿ ಹಾಗೂ ಗದಗ ತಾಲ್ಲೂಕಿನಲ್ಲಿ ಲೋಕೋಪಯೋಗಿ ಹಾಗೂ ಜಿಲ್ಲಾಪರಿಷತ್ ರಸ್ತೆಗಳೆಲ್ಲಾ ಪೂರ್ತಿ ನಾದುರಸ್ತಿಯಾಗಿ ಬಸ್ ಸಂಚಾರಕ್ಕೆ ಅಡಚಣೆಯಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಗಮನಕ್ಕೆ ಬಂದಿದ್ದರೆ ಸರ್ಕಾರಕ್ಕೆ ಈ ಕುರಿತು ಸಲ್ಲಿಸಿದ ಮನವಿಯ ಬಗ್ಗೆ ಬಿಡುಗಡೆ ಮಾಡುವ ಹಣವೆಷ್ಟು ? ಯಾವಾಗ ಬಿಡುಗಡೆ ಮಾಡುವುದು ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ರಸ್ತೆಯು ಬಂದ್ ಆಗಿರುವುದಿಲ್ಲ.

ಆ) ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 20 ಲಕ್ಷ ರೂ.ಗಳ ಅಂದಾಜಿನಲ್ಲಿ ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿ ಕಾರ್ಯಕ್ರಮವನ್ನು 93–94ರ ಸಾಲಿನಿಂದ ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ.

ಇ) ಈ ತಾಲ್ಲೂಕುಗಳಲ್ಲಿ ರಸ್ತೆ ಮತ್ತು ಸೇತುವೆಗಳಿಗೆ ಇತ್ತೀಚಿನ ಅತಿವೃಷ್ಟಿಯಿಂದ ಒಟ್ಟು 89.68 ಲಕ್ಷ ರೂ. ಗಳ ಹಾನಿ ಉಂಟಾಗಿದೆ.

ಈ) ಅತಿ ತುರ್ತಾಗಿ ಆಗಬೇಕಿದ್ದ ದುರಸ್ತಿಗಳನ್ನು 7.04 ಲಕ್ಷ ರೂ.ಗಳಲ್ಲಿ ಮಾಡಿದ್ದು ಸಂಚಾರಕ್ಕೆ ಅಡಚಣೆ ಆಗದಂತೆ ನೋಡಿಕೊಳ್ಳಲಾಗಿದೆ. ಕಂದಾಯ ಇಲಾಖೆಯವರಿಂದ ಅತಿವೃಷ್ಟಿ ಪರಿಹಾರ ಅನುದಾನಕ್ಕೆ ಬೇಡಿಕೆ ಸಲ್ಲಿಸಿದ್ದು ಅನುದಾನ ಬಂದ ನಂತರ ವ್ಯಾಪಕ ದುರಸ್ತಿಯನ್ನು ತೆಗೆದುಕೊಳ್ಳಲಾಗುವುದು.

ಮುಂಡರಗಿ ತಾಲ್ಲೂಕಿನಲ್ಲಿ ಏತ ನೀರಾವರಿ ಪ್ರಾರಂಭಿಸುವ ಬಗ್ಗೆ

2190: ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಂಡರಗಿ ತಾಲ್ಲೂಕಿನಲ್ಲಿ ಸಿಂಗಟಾಲೂರ ಏತ ನೀರಾವರಿ ಎರಡನೇ ಹಂತವನ್ನು ಎಂದಿನಿಂದ ಪ್ರಾರಂಭ ಮಾಡುವಿರಿ;

ಆ) ಮುಂಡರಗಿ ತಾಲ್ಲೂಕ್ ಕಕ್ಕೂರ ಏತ ನೀರಾವರಿಯ 2ನೇ ಹಂತದ ಪ್ರಾರಂಭಕ್ಕೆ ವಿಳಂಬವಾಗಲು ಕಾರಣಗಳೇನು;

ಇ) ಮುಂಡರಗಿ ತಾಲ್ಲೂಕು ತಾಮ್ರಗುಂಡಿ ನೀರಾವರಿ ಕೆರೆ ಮೊನ್ನೆ ಮಹಾಪೂರದಲ್ಲಿ ಒಡೆದಿದ್ದು ಅದರ ದುರಸ್ತಿಗಾಗಿ ಬಜೆಟ್‌ನಲ್ಲಿ ಹಣವಿದ್ದರೂ ಇಲ್ಲಿಯವರೆಗೆ ಏಕೆ ದುರಸ್ತಿ ಕೆಲಸವು ಪ್ರಾರಂಭವಾಗಿಲ್ಲ ಮತ್ತು ಅಲ್ಲಿಯ ರೈತರು ಸತ್ಯಾಗ್ರಹ ಮಾಡಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಬಂದಿದ್ದರೆ, ನಿಮ್ಮ ಅಧಿಕಾರಿಗಳು ಮಾರ್ಚ್ 1993ರ ಒಳಗಾಗಿ ಪೂರ್ತಿ ಕೆರೆ ರಿಪೇರಿ ಮಾಡುವ ಆಶ್ವಾಸನೆ ಕೊಟ್ಟಿದ್ದರೂ ಅದು ಇದುವರೆಗೆ ಕಾರ್ಯಗತವಾಗಿಲ್ಲದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಈ ಯೋಜನೆಯ 1 ಮತ್ತು 2 ನೇ ಹಂತದ ಸಮಗ್ರ ಪರಿಷ್ಕೃತ ಅಂದಾಜು ಪಟ್ಟಿ ತಯಾರಾಗುತ್ತಿದೆ. ಯೋಜನೆಯು ಆಯವ್ಯಯ ಪಟ್ಟಿಯಲ್ಲಿ ಸೇರಿದ ನಂತರ ಮತ್ತು ಪರಿಷ್ಕೃತ ಅಂದಾಜಿಗ ಆಡಳಿತಾತ್ಮಕ ಅನುಮೋದನೆ ದೊರೆತ ಮೇಲೆ 2ನೇ ಹಂತವನ್ನು ಕೈಗೊಳ್ಳಬಹುದು.

ಆ) ಈ ಯೋಜನೆಯನ್ನು ಈಗಾಗಲೇ ಡಿ.ಪಿ.ಎ.ಪಿ. ಅಡಿಯಲ್ಲಿ ತೆಗೆದುಕೊಂಡಿದೆ ಮತ್ತು ಆ ಶೀರ್ಷಿಕೆಯಲ್ಲಿ ಅನುದಾನ ಒದಗುತ್ತಿಲ್ಲವಾದ್ದರಿಂದ ಕೆಲಸ ಸ್ಥಗಿತಗೊಂಡಿದೆ.

ಇ) ಹೌದು. ಅಂದಾಜು ಪಟ್ಟಿ ಈಗ ಸರ್ಕಾರಕ್ಕೆ ಬಂದಿದ್ದು ಶೀಘ್ರದಲ್ಲಿ ಮಂಜೂರಾತಿ ನೀಡಲು ಮತ್ತು ಕೆಲಸ ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ತುಂಗಭದ್ರಾ ಹೊಳೆಗೆ ಸಿಂಗಟಾಲೂರ ಬ್ರಿಡ್ಜ್

2192: ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಭದ್ರಾ ಹೊಳೆಗೆ ಸಿಂಗಟಾಲೂರು ಬ್ರಿಡ್ಜ್ ಕಂ ಬ್ಯಾರೇಜ್ ಮಂಜೂರು ಆಗಿದ್ದರೂ ಇಲ್ಲಿಯವರೆಗೂ ಕಾರ್ಯ ಪ್ರಾರಂಭವಾಗಿಲ್ಲದಿರಲು ಕಾರಣಗಳು ಏನು;

ಆ) ಎಂದಿನಿಂದ ಕಾರ್ಯ ಪ್ರಾರಂಭವಾಗುವುದು ಹಾಗೂ ಪೂರ್ಣಗೊಳಿಸುವ ನಿರ್ದಿಷ್ಟ ದಿನಾಂಕವನ್ನು ಕೊಡುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಸಿಂಗಟಾಲೂರು ಬಳಿ ತುಂಗಭದ್ರಾ ನದಿಗೆ ಬ್ರಿಜ್ಡ್ ಕೆಮ್ ಬ್ಯಾರೇಜನ್ನು ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ. ಆದರೆ ಬ್ಯಾರೇಜನ್ನು ನಿರ್ಮಿಸಿ ಏತ ನೀರಾವರಿ ಸೌಲಭ್ಯ ಒದಗಿಸುವ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿಯನ್ನು 19–9–92ರಲ್ಲಿ ನೀಡಲಾಗಿದೆ.

ಆ) ಸದರಿ ಯೋಜನೆಗೆ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆದು ನಂತರ ಒಪ್ಪಿಗೆಗಾಗಿ ಕೇಂದ್ರ ಜಲ ಆಯೋಗಕ್ಕೆ ಕಳುಹಿಸಿ ಕೊಡಲಾಗುವುದು ಹಾಗೂ ಈ ಆಯೋಗದ ಒಪ್ಪಿಗೆ ದೊರೆತ ನಂತರ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಬಳ್ಳಾರಿ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆ

2194: ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು):– ಮಾನ್ಯ ಉಪ ಮುಖ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆಯ 6000 ಎಕರೆಗೆ ನೀರೊದಗಿಸುವ ಎಲ್ಲಿ– ಕಗ್ಗಲ್ ಏತ ನೀರಾವರಿ ಯೋಜನೆಯನ್ನು 93–94ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲಾಗಿದೆಯೇ;

ಆ) ಇಲ್ಲದಿದ್ದಲ್ಲಿ ಯಾವಾಗ ತೆಗೆದುಕೊಳ್ಳಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ)ಸೇರಿಸಿಲ್ಲ.

ಆ) ಯೋಜನೆಯು ಇನ್ನೂ ಅನ್ವೇಷಣೆ ಹಂತದಲ್ಲಿದೆ.

ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ

2196: ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು):– ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು.ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದ ವತಿಯಿಂದ 1993–94ರ ಆಯವ್ಯಯದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಒದಗಿಸಲಾದ ಹಣವೆಷ್ಟು;

ಆ) ಚಾಲ್ತಿಯಲ್ಲಿರುವ ಕೆಲಸಗಳನ್ನು ಪೂರ್ಣಗೊಳಿಸಲಾಗುವುದೇ;

ಇ) ಹೊಸ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದೇ ?

ಶ್ರೀ ರಂಗದೇವರಾಯುಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):–

ಅ) ರೂ. 66.22 ಕೋಟಿ.

ಆ) ಹಣ ಲಭ್ಯವಾದರೆ ಚಾಲ್ತಿಯಲ್ಲಿರುವ ಕೆಲಸಗಳನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಲಾಗುವುದು.

ಇ) ಇದನ್ನು ಮಂಡಳಿಯು ನಿರ್ಧರಿಸುವುದು.

ಗಡಿ ಪ್ರದೇಶಾಭಿವೃದ್ಧಿಗೆ ಮಂಜೂರಾದ ಹಣ

212: ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು):– ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1990–91ರಲ್ಲಿ 12.00ಲಕ್ಷ ಪ್ರತಿ ತಾಲ್ಲೂಕಿಗೆ ಮತ್ತು 1991–92ರಲ್ಲಿ 25.00ಲಕ್ಷ ರೂಪಾಯಿಗಳು ಡಿ ಪ್ರದೇಶ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಂಜೂರಾಗಿದ್ದು ಈ ವರ್ಷ 50.00 ಲಕ್ಷ ರೂಪಾಯಿಗೂ ಹೆಚ್ಚಿಸುವ ಯೋಜನೆ ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ರಂಗದೇವರಾಯುಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):–

ಇಲ್ಲ.

ಅರ್ಕಾವತಿ ಜಲಾಶಯ ಯೋಜನೆಯಡಿಯಲ್ಲಿ ರೈತರಿಗೆ ಮನೆಗಳನ್ನು ಒದಗಿಸುವುದು

2215: ಶ್ರೀ. ಡಿ.ಕೆ. ಶಿವಕುಮಾರ್ (ಸಾತನೂರು):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನಕಪುರ ತಾಲ್ಲೂಕು ಅರ್ಕಾವತಿ ಜಲಾಶಯ ಯೋಜನೆಯಡಿಯಲ್ಲಿ ಮುಳುಗಡೆಯಾದ ರೈತರಿಗೆ ಪುನರ್‌ವಸತಿ ಮುಖಾಂತರ ಜಮೀನು ಮತ್ತು ಮನೆಗಳನ್ನು ಒದಗಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು ? ಈ ಯೋಜನೆಯಡಿಯಲ್ಲಿ ಜಮೀನು ಕಳೆದುಕೊಂಡ ರೈತರಿಗೆ ಸರ್ಕಾರ ಒಂದು ಎಕರೆಗೆ (ಅಂದಾಜು) ನೀಡಿರುವ ಹಣವೆಷ್ಟು;

ಆ) ರಾಜ್ಯದ ಬೇರೆ ನೀರಾವರಿ ಯೋಜನೆಯಡಿಯಲ್ಲಿ (ಹೇಮಾವತಿ, ಕಬಿನಿ, ಕೃಷ್ಣ ಮೇಲ್ದಂಡೆ ಯೋಜನೆ, ಹಾರಂಗಿ) ಕಾಲುವೆ ಮತ್ತು ಮುಳುಗಡೆ ಪ್ರದೇಶಗಳನ್ನೊಳಗೊಂಡ ರೈತರಿಗೆ ಪ್ರತಿ ಎಕರೆಗೆ ಪುನರ್ ವಸತಿಗಾಗಿ ಒದಗಿಸಲಾಗಿರುವ ಹಣವೆಷ್ಟು ? (ವಿವರ ಒದಗಿಸುವುದು)

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಪುನರ್ವಸತಿ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಪುನರ್ವಸತಿ ಸಮಿತಿಯೊಂದನ್ನು 1989ರಲ್ಲಿ ನೇಮಕ ಮಾಡಿದ್ದು, 1014 ಎಕರೆ ಜಮೀನಿಗೆ ಪರಿಹಾರ, ಮಾಲ್ಕಿ ಪರಿಹಾರ ಮತ್ತು ಕಟ್ಟಡಗಳಿಗೆ ಪರಿಹಾರ ಪಾವತಿ ಮಾಡಲಾಗಿದೆ. ಇತ್ಯರ್ಥವಾಗಿರುವ ಪ್ರಕರಣಗಳಲ್ಲಿ ಪ್ರತಿ ಎಕರೆಗೆ ಸರಾಸರಿ ರೂ. 10,000 ರಂತೆ ಹಣ ನೀಡಲಾಗಿದೆ.

ಆ) ಹೇಮಾವತಿ ಯೋಜನೆಯಲ್ಲಿ ಎಕರೆಗೆ ರೂ.4,380–00 ಹಾರಂಗಿ ಮತ್ತು ಕಬಿನಿಗಳಲ್ಲಿ ಎಕರೆಗೆ ರೂ.7,000–00 ರಿಂದ ರೂ. 12,000 ವರೆಗೆ.

ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಎಕರೆಗೆ ರೂ.6,200.

ಅರ್ಕಾವತಿ ಜಲಾಶಯ ಯೋಜನೆಯಲ್ಲಿ ಖರ್ಚಾಗಿರುವ ಹಣ

2217: ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1) ಕನಕಪುರ ತಾಲ್ಲೂಕು ಅರ್ಕಾವತಿ ಜಲಾಶಯ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು; (ವರ್ಷವಾರು ವಿವರ ಒದಗಿಸುವುದು)

2) ಏತ ನೀರಾವರಿ ಮುಖಾಂತರ ರೈತರಿಗೆ ನೀರನ್ನು ಒದಗಿಸಲು ಸರ್ಕಾರದವರು ಕೈಗೊಳ್ಳಲಾಗಿರುವ ಕ್ರಮವೇನು ? ರೈತರಿಗೆ ನೀರನ್ನು ಇನ್ನೂ ಎಷ್ಟು ತಿಂಗಳೊಳಗೆ ಒದಗಿಸಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

1) ವರ್ಷ	ವೆಚ್ಚ. (ಲಕ್ಷ ರೂ.ಗಳು)
1974–75	0.24
1975–76	5.38
1976–77	7.77
1977–78	6.67

1978–79	7.18	
1979–80	8.88	
1980–81	2.92	
1981–82	1.93	
1982–83	1.27	
1983–84	9.57	
1984–85	77.57	
1985–86	155.86	
1986–87	139.33	
1987–88	47.89	
1988–89	33.95	
1989–90	29.92	
1990–91	173.71	
1991–92	311.48	
1992–93	422.33	(2:93ರ ಕೊನೆಗೆ)
ಒಟ್ಟು 28–2–93ರವರೆಗೆ	1443–85	

ಆ) ಅರ್ಕಾವತಿ ಯೋಜನೆಯಡಿ ಎಡದಂಡೆ ಮತ್ತು ಬಲದಂಡೆ ಏತ ನೀರಾವರಿ ನಾಲೆಗಳಿದ್ದು, ಅವುಗಳ ಅಗೆತದ ಕೆಲಸ ಮತ್ತು ಅಡ್ಡ ಚರಂಡಿ ಕಾಮಗಾರಿಗಳು ಸದ್ಯದಲ್ಲೇ ಪ್ರಾರಂಭವಾಗಲಿವೆ. ನಾಲೆಗಳಿಂದ 1994–95ನೇ ಸಾಲಿನಲ್ಲಿ ರೈತರಿಗೆ ನೀರನ್ನು ಒದಗಿಸಲು ಯೋಜಿಸಲಾಗಿದೆ.

ಚಿಕ್ಕೋಡಿ ತಾಲ್ಲೂಕು ಪಟ್ಟಣಕುಡಿ ಹತ್ತಿರ ಸಣ್ಣ ನೀರಾವರಿ ಕೆರೆಗೆ ಮಂಜೂರಾತಿ

2215: ಶ್ರೀ ಸುಭಾಸ್ ಜೋಶಿ (ನಿಪ್ಪಾಣಿ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕೋಡಿ ತಾಲ್ಲೂಕು, ಪಟ್ಟಣಕುಡಿ ಹತ್ತಿರ ಸಣ್ಣ ನೀರಾವರಿ ಕೆರೆಗೆ ಮಂಜೂರಾತಿ ದೊರೆತಿದೆಯೇ;

ಆ) ಹಾಗಿದ್ದಲ್ಲಿ, ಸಣ್ಣ ನೀರಾವರಿ ಕೆರೆಗೆ ಮಂಜೂರಾತಿ ಹಣವೆಷ್ಟು;

ಇ) ಕೆರೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ದೊರೆತ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬಹುದು.

ಹುಕ್ಕೇರಿ ತಾಲ್ಲೂಕಿನ ಗೋಡಗೇರಿ, ನೊಗಿನಾಳ್ ಮಧ್ಯೆ ಹಿರಣ್ಯಕೇಶಿ ನದಿಗೆ ಸೇತುವೆ

2246: ಶ್ರೀ ಉಮೇಶ ವಿ. ಕತ್ತಿ (ಹುಕ್ಕೇರಿ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಗೋಡಗೇರಿ ಮತ್ತು ನೊಗಿನಾಳ ಗ್ರಾಮದ ಜನರು ತಾಲ್ಲೂಕು ಕೇಂದ್ರಕ್ಕೆ ಬರಬೇಕಾದರೆ ಹಿರಣ್ಯಕೇಶಿ ನದಿಗೆ ಸೇತುವೆ ಇಲ್ಲದಿರುವುದರಿಂದ 20–25 ಕಿ.ಮೀ. ಸುತ್ತುವರೆದು ಬರುವ ವಿಚಾರವು ಸರ್ಕಾರಕ್ಕೆ ತಿಳಿದಿದೆಯೇ;

ಆ) ಗೋಡಗೇರಿ, ನೊಗಿನಾಳ್ ಮತ್ತು ಹುಕ್ಕೇರಿ ನಡುವೆ ಬರುವ ಹಿರಣ್ಯಕೇಶಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಿದರೆ ಕೇವಲ 5 ಕಿಮೀ. ದೂರ ತಾಲ್ಲೂಕು ಕೇಂದ್ರವಾಗುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದರೆ, ಸಾರ್ವಜನಿಕರು ಅನುಭವಿಸುತ್ತಿರುವ ಕಷ್ಟವನ್ನು ನಿವಾರಿಸಲು ಹಿರಣ್ಯಕೇಶಿ ನದಿಗೆ ಅಡ್ಡವಾಗಿ ಸೇತುವೆ ಕಟ್ಟುವ ವಿಚಾರವೇನಾದರೂ ಇದೆಯೇ;

ಈ) ಇದ್ದಾಗ ಯಾವಾಗ ಕಟ್ಟುವಿರಿ ಮತ್ತು ಎಷ್ಟು ಅವಧಿಯೊಳಗೆ ಪೂರ್ಣಗೊಳಿಸುವಿರಿ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಬೆಳಗಾಂ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಗೋಡಗೇರಿ ಸೋಗಿನಾಳ ಗ್ರಾಮದ ಜನರು ತಾಲ್ಲೂಕು ಕೇಂದ್ರಕ್ಕೆ ಬರಬೇಕಾದರೆ ಘಟಪ್ರಭಾ ನದಿಗೆ ಸೇತುವೆ ಇಲ್ಲದಿರುವುದರಿಂದ 21 ಕಿಮೀ ಸುತ್ತುವರೆದು ಬರಬೇಕಾಗುವುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಗೋಡಗೇರಿ ನೋಗಿನಾಳ ಮತ್ತು ಹುಕ್ಕೇರಿ ನಡುವೆ ಬರುವ ಘಟಪ್ರಭಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಿದರೆ ತಾಲ್ಲೂಕು ಕೇಂದ್ರಕ್ಕೆ ಬರಲು ಸುಮಾರು 10.00 ಕಿಮೀ.ಗಳಷ್ಟು ದೂರ ಕಡಿಮೆ ಆಗುವುದು.

ಇ) ಪ್ರಸ್ತಾಪವಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಹುಕ್ಕೇರಿ ಪಟ್ಟಣದಲ್ಲಿ ಬೈಪಾಸ್ ರಸ್ತೆ ನಿರ್ಮಾಣ

2248:– ಶ್ರೀ ಉಮೇಶ. ವಿ.ಕತ್ತಿ (ಹುಕ್ಕೇರಿ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹುಕ್ಕೇರಿ ಪಟ್ಟಣದಲ್ಲಿ ಜನಸಂಖ್ಯೆ ಅಧಿಕವಿರುವ ಸಂಗತಿಯು ಸರ್ಕಾರಕ್ಕೆ ತಿಳಿದಿದೆಯೇ ? ಇಲ್ಲಿನ ಮುಖ್ಯ ರಸ್ತೆ ಊರ ಮಧ್ಯದಲ್ಲಿದ್ದು ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಸಂಗತಿ ನಿಜವೇ;

ಆ) ಹಾಗಿದ್ದಲ್ಲಿ ಊರ ಹೊರಗಡೆ ಪರ್ಯಾಯ ರಸ್ತೆ (ಬೈಪಾಸ್ ರಸ್ತೆ) ನಿರ್ಮಾಣ ಮಾಡುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಇ) ಇದ್ದಲ್ಲಿ ಬೈಪಾಸ್ ರಸ್ತೆ ಬಗ್ಗೆ ಕೈಗೊಂಡ ಕ್ರಮವೇನು ? ಈ ವರ್ಷದಲ್ಲಿ ಬೈಪಾಸ್ ರಸ್ತೆಯನ್ನು ಪೂರ್ಣಗೊಳಿಸಲಾಗುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ತಿಳಿದಿದೆ.

ಆ) ಪರಿಶೀಲನೆಯಲ್ಲಿದೆ.

ಇ) ಬೈಪಾಸ್ ರಸ್ತೆಗಾಗಿ ಬೇಕಾಗುವ ಜಮೀನು ಪಡೆದುಕೊಳ್ಳಲು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಭೂಸ್ವಾಧೀನವಾದ ನಂತರ ಕಾಮಗಾರಿಯನ್ನು ತೆಗೆದುಕೊಳ್ಳುವ ಪ್ರಸ್ತಾಪವಿದೆ.

ಹುಕ್ಕೇರಿ ತಾಲ್ಲೂಕು ಚಿಕ್ಕೋಡಿ ಉಪ ಕಾಲುವೆ ನಿರ್ಮಾಣ ಅರ್ಧಕ್ಕೆ ನಿಂತಿರುವ ವಿಚಾರ

2253: ಶ್ರೀ ಉಮೇಶ ವಿ. ಕತ್ತಿ (ಹುಕ್ಕೇರಿ):- ಮಾನ್ಯ ಭಾರಿ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಕ್ಕೇರಿ ತಾಲ್ಲೂಕಿನ ಚಿಕ್ಕೋಡಿ ಉಪ ಕಾಲುವೆ ಅಂದರೆ ಬ್ಲಾಕ್ ನಂ.15. ಶಿರಡಾಣ ಜಾಂಗಟಿಹಾಳ್ ಗ್ರಾಮಗಳಿಗೆ ನೀರು ಹೋಗುವ ಕಾಲುವೆ ಕಾಮಗಾರಿ ಅರ್ಧಕ್ಕೆ ನಿಂತಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ ಹೀಗಾಗಲು ಕಾರಣವೇನು; ಈ ವಿಳಂಬ ನೀತಿಯ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು;

ಇ) ಅರ್ಧಕ್ಕೆ ನಿಂತ ಕಾಲುವೆ ನಿರ್ಮಾಣವನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಓಂ ಪ್ರಕಾಶ್ ಕಣಗಲಿ (ಭಾರಿ ನೀರಾವರಿ ರಾಜ್ಯ ಮಂತ್ರಿಗಳು):-

ಅ) ಬಂದಿದೆ. ಸದರಿ ಗ್ರಾಮಗಳು ಉಪ ಕಾಲುವೆಯ ಬ್ಲಾಕ್ ನಂ. 16 (ಅ)ದಲ್ಲಿ ಬರುತ್ತದೆ.

ಆ) ಭೂಸ್ವಾಧಿನ ಪಡಿಸಿಕೊಳ್ಳುವಲ್ಲಿ ತೊಂದರೆ ಮತ್ತು ಸಿಡಿಮದ್ದಿನಿಂದ ಸ್ಫೋಟಿಸುವ ಕಾರ್ಯಕ್ಕೆ ಸರಹದ್ದಿನಲ್ಲಿ ಗ್ರಾಮಸ್ಥರು ತಕರಾರು ಮಾಡುತ್ತಿದ್ದುದರಿಂದ ಕಾಮಗಾರಿಯಲ್ಲಿ ವಿಳಂಬವಾಗಿದೆ.

ಇ) ಜೂನ್ 1993ರ ವೇಳೆಗ ಕಾಲುವೆಯ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

11.20 ಎ.ಎಂ

ಅಧ್ಯಕ್ಷರು:- ಸಭೆಯ ಮುಂದ್ಗೆ ಮಂಡಿಸಲಾಯಿತು.

1. ಶ್ರೀ. ಎನ್. ಹುಚ್ಚಮಾಸ್ತಿಗೌಡ (ಕೃಷಿ ಮಂತ್ರಿ) ಅವರು:-

"1956ನೇ ಇಸವಿಯ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ:

1989–90ನೇ ಸಾಲಿನ ಬೆಂಗಳೂರಿನ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 17ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ"

2. ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಸಹಕಾರ ಮಂತ್ರಿ) ಅವರು:–

1959ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ 130ನೇ ಕಲಮಿನ ಮೇರೆಗೆ:

1. ಯಳಂದೂರು ತಾಲ್ಲೂಕು, ಗೌಡಹಳ್ಳಿಯಲ್ಲಿನ ರೇಷ್ಮೆ ಮತ್ತು ರೈತರ ಸಹಕಾರ ಸಂಘ ನಿಯಮಿತದ ವಾರ್ಷಿಕ ಮಹಾಸಭೆಯ ಮುಂದೂಡಿಕೆಗೆ ಸಂಬಂಧಿಸಿದಂತೆ ದಿನಾಂಕ: 11–11–1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ: 347: ಸಿಎಲ್‌ಎಂ: 92ರ ಕ್ರಮಾಂಕದ ಆದೇಶ.

2. ಧಾರವಾಡ ಜಿಲ್ಲೆಯ ಸವಣೂರು ಪ್ರಾಥಮಿಕ ಸಹಕಾರಿ ವ್ಯವಸಾಯ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಚುನಾವಣೆಯ ಮುಂದೂಡಿಕೆಗೆ ಸಂಬಂಧಿಸಿದಂತೆ ದಿನಾಂಕ: 15–12–1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ: 406:ಸಿಎಲ್‌ಎಂ:92ರ ಕ್ರಮಾಂಕದ ಆದೇಶ.

3. 1960ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ ನಿಯಮ 20ರ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ: 23–09–1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ:53: ಸಿಎಲ್‌ಎಂ:90ರ ಕ್ರಮಾಂಕದ ಅಧಿಸೂಚನೆ.

4. ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರಿ ವ್ಯವಸಾಯ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಚುನಾವಣೆಯ ಮುಂದೂಡಿಕೆಗೆ ಸಂಬಂಧಿಸಿದಂತೆ ದಿನಾಂಕ:21–11–1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ: 395:ಸಿಎಲ್‌ಎಂ:92ರ ಕ್ರಮಾಂಕದ ಆದೇಶ.

4ಎ. ಮೇಲ್ಕಂಡ (ಕ್ರಮಸಂಖ್ಯೆ:4) ಆದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 3-12-92 ರಂದು ಹೊರಡಿಸಲಾದ ಸಿಎಂ.ಡಬ್ಲ್ಯು 395:ಸಿಎಲ್‌ಎಂ:92ರ ತಪ್ಪೋಲೆಯನ್ನು ಮಂಡಿಸುತ್ತೇನೆ''

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ::

3. (ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿ) ಅವರ ಪರವಾಗಿ):–

''1950ನೇ ಇಸವಿಯ ರಸ್ತೆ ಸಾರಿಗೆ ನಿಗಮದ ಅಧಿನಿಯಮ 35 (3)ನೇ ಕಲಮಿನ ಮೇರೆಗೆ:

1991–92ನೇ ಸಾಲಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ 31ನೇ ಆಡಳಿತ ವರದಿಯನ್ನು ಮಂಡಿಸುತ್ತೇನೆ''

ಹಾರ್ನಹಳ್ಳಿ ರಾಮಸ್ವಾಮಿ:–

4. ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿ ಅವರ ಪರವಾಗಿ):–

1956ನೇ ಇಸವಿಯ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರಗೆ:

1991–92ನೇ ಸಾಲಿನ ಚಾಮುಂಡಿ ಮೆಷೀನ್ ಟೂಲ್ಸ್ ಲಿಮಿಟೆಡ್‌ನ 16ನೇ ವರದಿಯನ್ನು ಮಂಡಿಸುತ್ತೇನೆ''

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:–

5. ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಮಂತ್ರಿ) ಅವರ ಪರವಾಗಿ:–

"1956ನೇ ಇಸವಿಯ ಕಂಪನಿಗಳ ಅಧಿನಿಯಮದ 619 (ಎ) ಕಲಮಿನ ಮೇರೆಗೆ:

1990–91ನೇ ಸಾಲಿನ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತದ 18ನೇ ವಾರ್ಷಿಕ ವರದಿ ಹಾಗೂ ಲೆಕ್ಕ ಪತ್ರಗಳನ್ನು ಮಂಡಿಸುತ್ತೇನೆ"

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:–

6. ಶ್ರೀ ಹೆಚ್. ಕೆ.ಪಾಟೀಲ್ (ಜವಳಿ ರಾಜ್ಯ ಮಂತ್ರಿ) ಅವರ ಪರವಾಗಿ:–

1956ನೇ ಇಸವಿಯ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ:

1984–85, 1985–86 ಮತ್ತು 1986–87ನೇ ಸಾಲುಗಳ ಕರ್ನಾಟಕ ರಾಜ್ಯ ಜವಳಿ ಪ್ರೈವೇಟ್ ನಿಯಮಿತದ ವಾರ್ಷಿಕ ವರದಿಗಳು ಹಾಗೂ ಲೆಕ್ಕಪತ್ರಗಳನ್ನು ಮಂಡಿಸುತ್ತೇನೆ."

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:–

7. ಶ್ರೀ ರಮಾನಾಥ ರೈ (ಗೃಹ ರಾಜ್ಯ ಮಂತ್ರಿ) ಅವರ ಪರವಾಗಿ:–

"1964ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ನೇ ಕಲಮಿನ ಮೇರೆಗೆ:

1. ಮನರಂಜನಾ – ಕಾರ್ಮಿಕ ಕಲ್ಯಾಣ ಆಡಳಿತಾಧಿಕಾರಿಗಳು ಕಾರಿಗನೂರು ಇವರಿಗೆ 16 ಎಂ.ಎಂ. ಚಿತ್ರ ಪ್ರದರ್ಶನಗಳನ್ನು ಪ್ರದರ್ಶಿಸಲು ದಿನಾಂಕ: 13–11–1992 ರಿಂದ 12–11–1993ರವರೆಗೆ ವಿನಾಯಿತಿ ನೀಡುವ ಸಂಬಂಧದಲ್ಲಿ ದಿನಾಂಕ: 17–02–1993ರಂದು ಹೊರಡಿಸಲಾದ ಹೆಚ್‌ಡಿ: 35:ಸಿಎನ್ಎ:92ರ ಕ್ರಮಾಂಕದ ಆದೇಶ.

2. ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕು ಕವಿತಾಳದ ತ್ರಿಯಂಬಕೇಶ್ವರ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಸಂಬಂಧದಲ್ಲಿ ದಿನಾಂಕ: 01–02–1993ರಂದು ಹೊರಡಿಸಲಾದ ಹೆಚ್‌ಡಿ:203:ಸಿಎನ್ಎ:92ರ ಕ್ರಮಾಂಕದ ಅಧಿಸೂಚನೆ.

3. ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳದ ವಿಜಯಲಕ್ಷ್ಮಿ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರ ಮಂದಿರವನ್ನಾಗಿ ಪರಿವರ್ತಿಸುವ ಸಂಬಂಧದಲ್ಲಿ ದಿನಾಂಕ: 27–02–1993ರಂದು ಹೊರಡಿಸಲಾದ ಹೆಚ್‌ಡಿ:240:ಸಿಎನ್ಎ:92ರ ಕ್ರಮಾಂಕದ ಅಧಿಸೂಚನೆ.

4. ದಕ್ಷಿಣ ಕನ್ನಡ ಜಿಲ್ಲೆ. ಕಾರ್ಕಳ ತಾಲ್ಲೂಕು ಹೆಬ್ರಿಯ ಶ್ರೀ ರಾಘವೇಂದ್ರ ಸಂಚಾರಿ ಚಿತ್ರ ಮಂದಿರವನ್ನು ತಾತ್ಕಾಲಿಕ ಚಿತ್ರ ಮಂದಿರವನ್ನಾಗಿ ಪರಿವರ್ತಿಸುವ ಸಂಬಂಧದಲ್ಲಿ ದಿನಾಂಕ: 27–02–1993ರಂದು ಹೊರಡಿಸಲಾದ ಹೆಚ್‌ಡಿ:241:ಸಿಎನ್ಎ:92ರ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ"

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:–

8. (ಶ್ರೀ ಶ್ರೀರಂಗದೇವರಾಯಲು (ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಮಂತ್ರಿ) ಅವರು ಪರವಾಗಿ:–

"1980ನೇ ಇಸವಿಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ನಿಯಮದ 25ನೇ ಕಲಮಿನ ಮೇರೆಗೆ

1991–92ನೇ ಸಾಲಿನ ಮೈಸೂರಿನ ಕಾವೇರಿ ಜಲಾನಯನ ಯೋಜನೆಗಳ ಹಾಗೂ ತುಂಗಭದ್ರಾ ಯೋಜನೆಯ ಮುನಿರಾಬಾದ್ ಅಚ್ಚುಕಟ್ಟು ಪ್ರದೇಬಾಭಿವೃದ್ಧಿಯ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ"

ಅಧ್ಯಕ್ಷರು:– ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಚಿತ್ರದುರ್ಗ ಹಾಗೂ ರಾಜ್ಯದ ಇತರ ಜಿಲ್ಲೆಗಳಲ್ಲಿ ಕಾಲರಾ ಹರಡಿರುವ ಬಗ್ಗೆ

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ):– ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಕೊಠಡಿಗೆ ಒಂದು ತಮ್ಮ ಅನುಮತಿಯನ್ನು ಕೋರಿ ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೇಳಿದ್ದೆ. ಅದರ ಪ್ರಕಾರ ಈಗ ಈ ವಿಚಾರ-ಪ್ರಸ್ತಾಪ ಮಾಡಬಯಸುತ್ತೇನೆ. ಈ ಸರ್ಕಾರಕ್ಕೆ ಏನು ಹೇಳಬೇಕು ನನಗೆ ಗೊತ್ತಾಗುತ್ತಿಲ್ಲ. ಕೇವಲ ಮೈಸೂರು ಜಿಲ್ಲೆಯಲ್ಲೇ ಅಲ್ಲ, ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲೂ ಕೂಡ ನೋಡಿದ್ದೇನೆ. ನಾನು ಮೊನ್ನೆ ಶುಕ್ರವಾರ ಈ ಸದನವನ್ನು ಮುಗಿಸಿಕೊಂಡು ಹೋದಮೇಲೆ ನನಗೆ ತಿಳಿಯಿತು. ಇಡೀ ಚಿತ್ರದುರ್ಗ ಜಿಲ್ಲೆಯ 9 ತಾಲ್ಲೂಕಿನ ಮಕ್ಕಳು ಮತ್ತು 150ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಎಲ್ಲಾ ಕಡೆಯಲ್ಲೂ ಕಾಲರಾ ಹರಡಿದೆ. ಇದನ್ನು ನೀವು ಕರುಳು ಬೇನೆ ಎಂದು ಬೇಕಾದರೂ ಕರೆಯಿರಿ, ಅಥವಾ ಕಾಲರ ರೋಗ ಎಂದು ಬೇಕಾದರೂ ಕರೆಯಿರಿ. ನಾನು ಚಿತ್ರದುರ್ಗ ಮತ್ತು ಹಿರಿಯೂರಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಏನು ನೋಡಿಕೊಂಡು ಬಂದಿದ್ದೇನೆ; ಅದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಮೊದಲನೆಯದಾಗಿ ಸುಮಾರು 600ಕ್ಕೂ ಹೆಚ್ಚು ಜನರು ಆ ಆಸ್ಪತ್ರೆಗೆ ಬಂದು ವ್ಯಾಧಿಗೆ ಚಿಕಿತ್ಸೆ ಪಡೆದಿದ್ದಾರೆ. ಅವರಲ್ಲಿ 20ಕ್ಕಿಂತ ಹೆಚ್ಚು ಜನರು ಸತ್ತಿದ್ದಾರೆ. ಇದು ಆಸ್ಪತ್ರೆಗೆ ಬಂದಿರತಕ್ಕ ಲೆಕ್ಕ. ಅಲ್ಲಿರತಕ್ಕ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಆರೋಗ್ಯಾಧಿಕಾರಿಯವರಿಗೆ ಇದರ ಪರಿಚಯವೇ ಇಲ್ಲ. ಈ ರೀತಿ ಏತಕ್ಕಾಗಿ ಎಂದು ನಾನು ಅವರನ್ನು ಪ್ರಶ್ನೆ ಮಾಡಿದಾಗ ಆವತ್ತು ವರದಿಯನ್ನು ತರಿಸಿಕೊಡುತ್ತೇನೆಂದು ಹೇಳಿದರು. ಇದನ್ನು ನಾನು ಯಾವುದೇ ದುರುದ್ದೇಶದಿಂದ ಹೇಳುತ್ತಿಲ್ಲ. ನಾನು ಅಲ್ಲಿಗೆ ಹೋಗಿ ಕೇಳಿ, ಗಲಾಟೆಯನ್ನು ಮಾಡಿದ ಮೇಲೆ ಜಿಲ್ಲಾಧಿಕಾರಿಗಳು ಒಂದು ಪತ್ರವನ್ನು ಜಿಲ್ಲಾ ಆರೋಗ್ಯಾಧಿಕಾರಿಯವರಿಗೆ ಬರೆದಿದ್ದಾರೆ. "ನಿಮ್ಮ ವರದಿಯಲ್ಲಿ ಸರಿಯಾದ ಮಾಹಿತಿ ದೊರೆಯುತ್ತಿಲ್ಲವೆಂಬುದನ್ನು ಸಹ ಈ ದಿನ ನಡೆದ. ಸಭೆಯ ಸಂದರ್ಭದಲ್ಲಿ ಸಹ ತಿಳಿಸಲಾಗಿದೆ" ಎಂದು ನಾನು ಹೋದ ಮೇಲೆ ಅಲ್ಲಿ ಒಂದು ಸಭೆಯನ್ನು ಮಾಡಿದರು. ಈ ರೋಗ ಎಷ್ಟೆಷ್ಟು ಜನರಿಗೆ ಆಗಿದೆ ಎಂಬುದನ್ನು ಹೇಳಿದರೂ, ಜಿಲ್ಲಾ ಆಡಳಿತವನ್ನು ನಡೆಸುವ ಯಾವುದೇ ಅಧಿಕಾರಿವರ್ಗ ಇರಲಿ ಅವರಿಗೆ ಎಲ್ಲಿ ಕಾಲರಾ ಇದೆ ಎಂಬುದು ಗೊತ್ತಿಲ್ಲ. ಅಲ್ಲಿರತಕ್ಕ ಪೋಲಿಸ್ ಸೂಪರಿಂಟೆಂಡೆಂಟ್‌ರವರು ಹೇಳುತ್ತಾರೆ. ಎಷ್ಟು ಜನ ಸತ್ತಿದ್ದಾರೋ ನನಗೆ ಗೊತ್ತಿಲ್ಲವೆಂದು ಹೇಳಿದರು. ಆಮೇಲೆ 11 ಜನ ಸತ್ತಿದ್ದಾರೆಂದು ಹೇಳಿದರು; ನಿಮ್ಮ ಆಸ್ಪತ್ರೆಯ ಅಂಕಿಅಂಶಗಳ ಪ್ರಕಾರ 19 ಜನ ಸತ್ತಿದ್ದಾರೆ ಎಂದು ನಾನು ಹೇಳಿದಾಗ, ಹೌದು, ಹಾಗೇನು ಎಂದು ನಾನು ಹೇಳಿದ ರೀತಿಯಲ್ಲಿ ತಮ್ಮ ಅಂಕಿಅಂಶಗಳನ್ನು ಸರಿಪಡಿಸಿಕೊಂಡರು. ಇಂಥ ದುಃಸ್ಥಿತಿಯಲ್ಲಿ ಈ ಸರ್ಕಾರದ ಆಡಳಿತ ನಡೆಯುತ್ತಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇದಕ್ಕಿಂತ ಹೆಚ್ಚಾಗಿ ನೂರಾರು ಜನರಿಗೆ ಈ

ಕಾಲರಾ ರೋಗ ಜನರಿಗೆ ತಗುಲಿದೆ; ಅವರಿಗೆ ಕೊಡತಕ್ಕಂಥ ಚಿಕಿತ್ಸೆಯನ್ನು ಅಲ್ಲಿನ ಆಸ್ಪತ್ರೆಯಲ್ಲಿ ಹೋಗಿ ನೋಡಿದರೆ ನಾನಾದರೂ ಹೇಳುತ್ತೇನೆ, ಇದಕ್ಕಿಂತಲೂ ಹೆಚ್ಚಿನ ಉತ್ತಮ ಚಿಕಿತ್ಸೆಯನ್ನು ನಮ್ಮಲ್ಲಿರುವ ಹಂದಿ, ನಾಯಿಗಳಿಗೆ ಕೊಡುತ್ತಿದ್ದೇವೆ. ನಾನು ಹಿರಿಯೂರು ಮತ್ತು ಚಿತ್ರದುರ್ಗ ಆಸ್ಪತ್ರೆಗಳಿಗೆ ಭೇಟಿ ಮಾಡಿದೆ. ಒಂದು ಸಣ್ಣ ಕೊಠಡಿಯಲ್ಲಿ ನೂರಾರು ಜನರನ್ನು ಹಾಕಿದ್ದಾರೆ. ಅಲ್ಲಿ ಹಂದಿಗಳೂ ಕೂಡ ಇರಲಿಕ್ಕೆ ಸಾಧ್ಯವಿಲ್ಲ. ಅದಕ್ಕಿಂತ ಹೆಚ್ಚಾಗಿ ಅಲ್ಲಿ ಕ್ಲೋರಿನೇಷನ್ ಇಲ್ಲ. ಈ ಸರ್ಕಾರಕ್ಕೆ ನಾಚಿಕೆಯಾಗಬೇಕು. ಅಲ್ಲಿ ರೋಗ ಬಂದವರಿಗೆ ಗ್ಲೂಕೋಸನ್ನು ಏನು ಕೊಡುತ್ತೀರಿ, ಅದಕ್ಕೆ ಬೇಕಾದ ಡ್ರಿಪ್‌ಸೆಟ್ ಏನಿದೆ ಅದು ಆ ಆಸ್ಪತ್ರೆಯಲ್ಲಿಲ್ಲ ಎಂದರೆ ಇದಕ್ಕಿಂತ ನಾಚಿಕೆಗೆಟ್ಟ ಪ್ರಸಂಗ ಬೇರೆ ಏನಾದರೂ ಇದೆಯೇ ? ಇದನ್ನು ನಾನು ಯಾವುದೋ ಒಂದು ಹೇಳಿಕೆಯ ಮಾತನ್ನು ಕೇಳಿ ಹೇಳುತ್ತಿಲ್ಲ.

ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ತುಂಬಾ ನೋವಿನಿಂದ ಹೇಳಬೇಕಾಗುತ್ತದೆ; ಆ ಆಸ್ಪತ್ರೆಯ ಒಳಗಡೆ ಜಾಗವಿಲ್ಲ. ಹೊರಗಡೆ ಮರದ ಅಂಗಳದಲ್ಲಿ ಡ್ರಿಪ್‌ಸೆಟ್ ಹಾಕಲು ಸರ್ಕಾರ ಕೆಲಸ ಮಾಡುತ್ತಿದೆ. ಇದನ್ನು ಅವರ ಗಮನಕ್ಕೆ ತಂದರೆ ಇಲ್ಲಿಯವರೆಗೆ ಸಹ ಯಾವುದೇ ಕ್ರಮವನ್ನು ತೆಗೆದುಕೊಂಡಿರಲಿಲ್ಲ. ಅಲ್ಲಿ ಬರೆಯುತ್ತಾರೆ ನಿಮಗೆ ಡ್ರಿಪ್‌ಸೆಟ್‌ಬೇಕು, ಗ್ಲೂಕೋಸ್ ಬೇಕು ಇದನ್ನು ತೆಗೆದುಕೊಂಡು ಬನ್ನಿ ಎಂದು ಅಲ್ಲಿಯ ಡಾಕ್ಟರುಗಳು ಬರೆಯುತ್ತಾರೆ. ಇದಕ್ಕಿಂತ ನಾಚಿಗೆಗೇಡಿನ ಪ್ರಸಂಗ ಏನಾದರೂ ಇದೆಯೇ ? ಅದಕ್ಕೆ ಏನು ಲಕ್ಷಾಂತರ ರೂಪಾಯಿಗಳಾಗುತ್ತದೆಯೇ ? ನೀವು ನಮ್ಮಲ್ಲಿ ಹಣ ಇದೆ ಎಂಬ ಮಾತನ್ನು ಹೇಳುತ್ತೀರಿ. ವ್ಯಾಕ್ಸಿನೇಷನ್ ಎಂದು ಲಕ್ಷ ಡೋಸಸ್‌ಕೊಡಿ ಎಂದರೆ 12 ಸಾವಿರ,5 ಸಾವಿರ, 2 ಸಾವಿರ ಕಳುಹಿಸಿಕೊಟ್ಟಿದ್ದಾರೆ. ಇವತ್ತಿನ ದಿವಸ ವ್ಯಾಪಕವಾಗಿ ರೋಗ ಇದೆ. ಸುಮಾರು ಅವರೇ ಹೇಳಿದ ಪ್ರಕಾರ 10 ಲಕ್ಷ ಜನರು ಇರುವಂಥ ಪ್ರದೇಶದಲ್ಲಿ, ಪಟ್ಟಣಪ್ರದೇಶ ಮತ್ತು ಹಳ್ಳಿ ಪ್ರದೇಶಗಳಲ್ಲಿ ಎಲ್ಲೆಲ್ಲಿ ಹರಡಿದೆಯೋ, ಎಲ್ಲೆಲ್ಲಿ ಕರಳುಬೇನೆ ರೋಗ ಕಾಣಿಸಿಕೊಂಡಿದೆಯೋ ಅಲ್ಲಿರುವಂಥ ಜನಸಂಖ್ಯೆ ಎಷ್ಟು ಎಂದರೆ 10 ಲಕ್ಷಕ್ಕಿಂತಲೂ ಹೆಚ್ಚು ಎನ್ನುವ ಮಾತನ್ನು ಹೇಳುತ್ತಾರೆ. ಇಲ್ಲಿಯವರೆಗೆ ಕ್ಲೋರಿನೇಷನ್ ಮಾಡಿಲ್ಲ. ನಾನು ಹೇಳಿದೆ ಕುಡಿಯುವ ನೀರು ಯೋಗ್ಯವಾಗಿದೆಯೇ ಎಂದು ಕೇಳಿದೆ. ಹಿರಿಯೂರು ಮತ್ತು ಚಿತ್ರದುರ್ಗ ಪಟ್ಟಣದಲ್ಲಿರುವಂಥ ಕುಡಿಯುವ ನೀರು ಯೋಗ್ಯವಾಗಿಲ್ಲವೆನ್ನುವ ಮಾತನ್ನು ಅಲ್ಲಿಯ ಆಫೀಸರ್ ಹೇಳುತ್ತಾರೆ. ನಮ್ಮಲ್ಲಿ ಬ್ಲೀಚಿಂಗ್ ಪೌಡರ್ ಬಹಳ ವರ್ಷಗಳ ಹಿಂದೆ ತಂದಿದ್ದು ಇರಬಹುದು, ಅದರಲ್ಲಿ ಕ್ಲೋರಿನ್ ಇಲ್ಲವೆಂದು ಹೇಳುತ್ತಾರೆ. ಕ್ಲೋರಿನೈಸೇಷನ್‌ಗೋಸ್ಕರ ಬ್ಲೀಚಿಂಗ್ ಪೌಡರನ್ನು ಹಾಕಿದರೆ ಅದರಿಂದ ಯಾವ ಉಪಯೋಗವಾಗಿಲ್ಲವೆನ್ನುವ ಮಾತನ್ನು ಅಲ್ಲಿರುವಂಥ ಡಿ.ಹೆಚ್.ಓ ರವರು ಹೇಳುತ್ತಾರೆ. ಸನ್ಮಾನ್ಯ ಅಧ್ಯಕ್ಷರೇ, ಇಂಥ ಒಂದು ಆಡಳಿತ ವ್ಯವಸ್ಥೆ ಏನಿದೆ ಅದಕ್ಕೆ ಯಾರು ಕಾರಣರು ? ಇವತ್ತಿನ ದಿವಸ ಜನಸಾಮಾನ್ಯರಿಗೆ ರೋಗ ಏನು ಹರಡುತ್ತಾ ಇದೆ. ಅದರಿಂದ ಹೆಚ್ಚು ಹೆಚ್ಚು ಸಾಯುವಂಥ ಪ್ರಕರಣವಾಗುತ್ತಿದೆ. ಇನ್ನೊಂದು ವಿಚಿತ್ರವಾದ ಪ್ರಸಂಗವೆಂದರೆ ಮೊನ್ನೆಯ ದಿವಸ ಶನಿವಾರ ಹಿರಿಯೂರಿನಲ್ಲಿ ಸಂತೆ ಇತ್ತು. ಆ ಸಂತೆಯನ್ನು ನಿಷೇಧ ಮಾಡಿದ್ದರು. ನಾಚಿಕೆಯಾಗಬೇಕು ಈ ಸರ್ಕಾರಕ್ಕೆ. ಆ ಸಂತೆಯನ್ನು ನಡೆಯದಂತೆ ಮಾಡಲಿಕ್ಕೆ ಆಗಲಿಲ್ಲ. ಅಲ್ಲಿ ಪೋಲೀಸ್‌ನವರು ಹೋದರಂತೆ, ಮುನಸಿಪಾಲಿಟಿಯವರು ಹೋದರಂತೆ ಸಂತೆ ಮಾಡಬೇಡಿ ಎಂದು ಹೇಳಿದರಂತೆ, ಅವರು ಕೇಳಿಲಿಲ್ಲವಂತೆ, ಪುರಸಭೆ ಕಛೇರಿ ಏನಿದೆ ಅಥವಾ ಪೋಲೀಸ್ ಸ್ಟೇಷನ್ ಏನಿದೆ ಅದರ ಮುಂದೆ ಏಕೆ ನ್ಯಾಷನಲ್ ಹೈವೇ ಹೋಗುತ್ತದೆ. ಏಕೆ ನ್ಯಾಷನಲ್ ಹೈವೇಯ್ಲುಲ್ಲಿ ಸಂತೆ ಮಾಡಿದ್ದರು. ಯಾರೂ ಇವರನ್ನು ಕೇಳುವಂಥಗೊಡವೆಗೆ ಹೋಗಲಿಲ್ಲ. ನಾವು ಏನು ಮಾಡೋಣ, ಜನರು ನಮ್ಮ ಮಾತನ್ನು ಕೇಳುವುದಿಲ್ಲ ಎನ್ನುವ ಮಾತನ್ನು ಅಲ್ಲಿರುವಂಥ ಪೋಲೀಸ್‌ನವರು ಮತ್ತು ಪುರಸಭೆಯ ಅಧಿಕಾರಿಗಳು ತಮ್ಮ ನಿಸ್ಸಯಕತೆಯನ್ನು ವ್ಯಕ್ತಮಾಡುತ್ತಾರೆಂದರೆ ಈ ದೇಶದಲ್ಲಿ ಏನಾದರೂ ಆಡಳಿತ

ಇದೆಯೋ ? ಅದಕ್ಕಿಂತ ಹೆಚ್ಚಾಗಿ ಹೆಚ್ಚಿದ ಹಣ್ಣುಗಳನ್ನಾಗಲಿ, ಅಥವಾ ಬೀದಿಯಲ್ಲಿ ತಿಂಡಿತಿನಿಸು ಏನು ಮಾಡುತ್ತಾರೆ ಅಲ್ಲಿ ಅದನ್ಯಾವುದನ್ನೂ ನಿಲ್ಲಿಸುವುದಕ್ಕೆ ಹೋಗಲಿಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ ಹೋಟೆಲ್‌ಗಳನ್ನು ಮುಚ್ಚಿ ಎಂದರೆ ಮುಚ್ಚುವುದಿಲ್ಲ. ಈ ಸರ್ಕಾರ ಹೋಟೆಲ್‌ನ ಮಾಲೀಕರ ಪರವಾಗಿದೆಯೋ, ಅಥವಾ ಜನರ ಆರೋಗ್ಯ ದೃಷ್ಟಿಯಿಂದ ಏನಾದರೂ ಕೆಲಸ ಮಾಡಲಿಕ್ಕೆ ಈ ಸರ್ಕಾರ ಕಾರ್ಯಕ್ರಮ ಕೈಗೊಂಡಿದೆಯೋ ಎಂಬುದನ್ನು ತಿಳಿಯಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಒಂದೇ ಅಲ್ಲ, ಅಲ್ಲಿ ಔಷಧಿ ಇಲ್ಲ, ಕ್ಲೋರಿನೇಷನ್‌ಗೆ ವ್ಯಾಕ್ಸಿನೇಷನ್ ಇಲ್ಲ; ಡ್ರಿಪ್‌ಸೆಟ್‌ಗಳು ಇಲ್ಲ. ಅದಕ್ಕಿಂತ ಹೆಚ್ಚಾಗಿ ಎರಡು ವರ್ಷಗಳಿಂದ ನಾನು ಕೇಳುತ್ತಿದ್ದೇನೆ, ಚಿತ್ರದುರ್ಗದಲ್ಲಿ ಜಿಲ್ಲಾ ಆಸ್ಪತ್ರೆ ಇದೆ; ಅಲ್ಲಿಗೆ ಒಂದು ಅಂಬುಲೆನ್ಸ್ ವ್ಯಾನ್ ಕೊಡಿ ಎಂದು. ಎರಡು ವರ್ಷವಾದರೂ ಸಹ ನಮ್ಮ ಸರ್ಕಾರಕ್ಕೆ ಇದನ್ನು ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಎಲ್ಲೆಲ್ಲಿ ಪ್ರಭಾವ ಇದೆಯೋ ಅಲ್ಲಿಗೆ ಮಾತ್ರ ಆ್ಯಂಬುಲೆನ್ಸ್ ಅನ್ನು ಕಳುಹಿಸಿದ್ದಾರೆ. ಇವತ್ತಿನ ದಿವಸ ಎರಡು ವರ್ಷಗಳಿಂದ ಅಲ್ಲಿರತಕ್ಕಂಥ ಆ್ಯಂಬುಲೆನ್ಸನ್ನು ರಿಪೇರಿ ಮಾಡಿಸಲಿಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೆ ನಾಚಿಕೆ ಪಟ್ಟುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಿಕ್ಕಿಲ್ಲವೆಂದು ನಾನು ಭಾವಿಸುತ್ತೇನೆ. ಇವತ್ತಿನ ದಿವಸ ಔಷಧಿಗಳನ್ನು ಏನು ಕಳುಹಿಸಿದ್ದಾರೆ ಅದು ಸಾಕಾಗುವುದಿಲ್ಲ. ಅಲ್ಲಿರುವಂಥ ಅಧಿಕಾರಿಗಳ ದುರ್ಲಕ್ಷತನದಿಂದ ಇದೆಲ್ಲಾ ಹೆಚ್ಚಾಗುತ್ತಿದೆ. ಎಲ್ಲಕ್ಕಿಂತಲೂ ಹೆಚ್ಚಾಗಿ ನಾನು ಹೇಳುವುದೇನೆಂದರೆ ಯಾವುದೇ ಹಿರಿಯ ಅಧಿಕಾರಿಗಳು ಜಿಲ್ಲೆಯ ಯಾವುದೇ ಹಳ್ಳಿಗಳಿಗೆ ಹೋಗಿಲ್ಲ. ನಮ್ಮ ಕ್ಷೇತ್ರದಲ್ಲಿ ಸೂರಗೊಂಡನಹಳ್ಳಿ ಎಂದಿದೆ. ಅಲ್ಲಿ ಸುಮಾರು 122 ಜನರಿಗೆ ರೋಗ ಹರಡಿತ್ತು. ಅಲ್ಲಿಗೆ ಒಂದು ಚೂರು ಪೌಡರನ್ನು ಕಳುಹಿಸಿದ್ದರಂತೆ, ನೀರಿಗೆ ಹಾಕಿ ಒಂದು ಚೂರು ಕುಡಿದುಬಿಡಿ ಎಂದು ಹೇಳಿದ್ದರಂತೆ; ಇವರು ಯಾರೂ ಹೋಗಲಿಲ್ಲ. ಅಲ್ಲಿ ವ್ಯಾಕ್ಸಿನೇಷನ್ಸ್ ಮಾಡಿಸಲಿಲ್ಲ. ಹೀಗಾಗಿ ಇಡೀ ಗ್ರಾಮೀಣ ಪ್ರದೇಶ ಏನಿದೆ ಅಲ್ಲಿ ಇದು ಹಬ್ಬಿಕೊಳ್ಳುತ್ತಿದೆ. ಇದಕ್ಕೆ ಸರ್ಕಾರದಿಂದ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಆದ್ದರಿಂದ ಸರ್ಕಾರವನ್ನು ಈ ಕೂಡಲೇ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಕೇಳುತ್ತಿದ್ದೇನೆ. ಅದಕ್ಕಿಂತ ಹೆಚ್ಚಾಗಿ, ಬಹಳ ನಾಚಿಕೆಗೇಡಿನ ಪ್ರಸಂಗವೆಂದರೆ ಹಿರಿಯೂರಿನಿಂದ ಚಿತ್ರದುರ್ಗಕ್ಕೆ ಟೆಲೆಕ್ಸ್ ಮೆಸೇಜ್ ಕಳುಹಿಸುತ್ತಾರೆ. ಔಷಧಿ ಇಲ್ಲವೆಂದು. 19ನೇ ತಾರೀಖು ಕಳುಹಿಸಿದರು; ಅವರು ಕಳುಹಿಸಿಲಿಲ್ಲ. 20ನೇ ತಾರೀಖು ನಾನು ಹೋದ ಮೇಲೆ ಮೂರು ಗಂಟೆಗೆ ಒಂದು ಚೂರು ಔಷಧಿಯನ್ನು ಕಳುಹಿಸಿದರು. ಆ ಔಷಧಿ ಅಲ್ಲಿರುವಂಥ ಜನರಿಗೆ ಯಾವ ಆಸ್ಪತ್ರೆ ಒಳಗಡೆ ಇದ್ದರು ಅವರಿಗೆ ಸಾಕಾಗಲಿಲ್ಲ. ಅವತ್ತಿನದಿವಸ ಸಾಯಂಕಾಲ ಡಿ.ಹೆಚ್.ಓ ಮತ್ತಿತರರು ಬಂದರು. ಇದನ್ನು ಏತಕ್ಕೋಸ್ಕರ ಹೇಳುತ್ತೇನೆಂದರೆ ಇಷ್ಟೊಂದು ನಿರ್ಲಕ್ಷತದಿಂದ ಕೆಲಸ ಮಾಡುತ್ತಿದ್ದಾರೆ. ಸಂಬಂಧಪಟ್ಟಂಥ ಎಲ್ಲಾ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮತ್ತು ಇದರಲ್ಲಿ ಏನು ಲೋಪದೋಷಗಳಿದೆ ಅದನ್ನು ಸರಿಪಡಿಸಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಮತ್ತು ಎಲ್ಲಕ್ಕಿಂತಲೂ ಹೆಚ್ಚಾಗಿ ಈ ಔಷಧಿಗಳನ್ನು ಕೊಡಲು ಇಬ್ಬರೇ ಇಬ್ಬರು ಡಾಕ್ಟರ್‌ಗಳು ಇದ್ದರು, ನಾನು ಅವರನ್ನು ಪ್ರಶಂಸೆ ಮಾಡುತ್ತೇನೆ. ಅವರು ಹಗಲೂ ರಾತ್ರಿ ವ್ಯಾಕ್ಸಿನ್ ಕೊಟ್ಟರು. ಮತ್ತು ಸಂಬಂಧಪಟ್ಟವರನ್ನು ಟ್ರೀಟ್ ಮಾಡಿದರು. ಆದರೆ ಇನ್ನೊಬ್ಬ ಡಾಕ್ಟರು ಇರಲಿಲ್ಲವೇ ? ಅಥವಾ ದಾದಿಯರು ಇರಲಿಲ್ಲವೇ ? ಅಲ್ಲಿರುವಂಥ ಜನರ ಅವಶ್ಯಕತೆಗೆ ಅನುಗುಣವಾಗಿ ರೋಗಿಗಳ ಚಿಕಿತ್ಸೆಗೆ ಅವಶ್ಯಕತೆಗೆ ಅನುಗುಣವಾಗಿ ಡಾಕ್ಟರುಗಳನ್ನು ಮತ್ತು ನರ್ಸ್‌ಗಳನ್ನು ಕೊಡಲಿಕ್ಕೆ ಸಾಧ್ಯವಾಗಲಿಲ್ಲವೆಂದರೆ ಯಾರು ಹೊಣೆಗಾರರು ಸ್ವಾಮಿ ಈ ದೇಶದಲ್ಲಿ ? ಜಿಲ್ಲಾಧಿಕಾರಿಗಳಾಗಲಿ, ಡಿ.ಹೆಚ್.ಓ.ಗಳಾಗಲಿ ಅಥವಾ ಸರ್ಕಾರದ ಯಾವುದೇ ಹೊಣೆಗಾರಿಕೆ ಇರುವ ಅಧಿಕಾರಿಗಳೇನಿದ್ದಾರೆ ಅವರು ಏನು ಕೆಲಸಮಾಡುತ್ತಿದ್ದಾರೆ ? ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ, ಸರ್ಕಾರ ಪೂರ್ಣವಾಗಿ ವಿಫಲವಾಗಿದೆ, ಸ್ವಲ್ಪವಾದರೂ ಕಾಳಜಿ ವಹಿಸಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಭರಮಸಾಗರ):– ಕಳೆದ ಐದು ದಿನಗಳು ಹಿಂದೆ ನಾನು ಈ ವಿಚಾರವನ್ನು ಅಸೆಂಬ್ಲಿಯಲ್ಲಿ ಪ್ರಸ್ತಾಪ ಮಾಡಿದ್ದೆ. ಅದಕ್ಕೆ ಉತ್ತರ ಕೊಡಿಸುತ್ತೇನೆಂದು ಹೇಳಿದರು. ನಾನು ಮುಖ್ಯ ಮಂತ್ರಿಗಳ ಹತ್ತಿರ ಸಹ ಮಾತನಾಡಿದ್ದೇನೆ. ಆ ಪರಿಸ್ಥಿತಿ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಮಾನ್ಯ ಏಕಾಂತಯ್ಯನವರು ಹೇಳಿದ ವಿಚಾರದ ಬಗ್ಗೆ ಭರಮ ಸಾಗರದಲ್ಲಿ ಇನ್ನೂ ವ್ಯವಸ್ಥೆ ಸುಧಾರಣೆಯಾಗಿಲ್ಲವೆಂದು ತಮ್ಮ ಮೂಲಕ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು:– ತಮಗೂ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

† ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ಅಧ್ಯಕ್ಷರೆ, ಮಾನ್ಯ ಏಕಾಂತಯ್ಯನವರು ಎತ್ತಿರತಕ್ಕ ವಿಚಾರದ ಬಗ್ಗೆ ಅರ್ಧ ಗಂಟೆ ಚರ್ಚೆ ಆಗಬೇಕೆಂದು ಮತ್ತು ಕೆಲವು ವಿಚಾರಗಳನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕೆಂಬ ಉದ್ದೇಶದಿಂದ ನಾನು ಬೆಳಿಗ್ಗೆ ಬಂದು ತಮ್ಮಲ್ಲಿ ವಿನಂತಿ ಮಾಡಿಕೊಂಡೆ. ಈ ಸಂದರ್ಭದಲ್ಲಿ ಮಾತನಾಡಿ ಎಂದು ಹೇಳಿದ್ದಕ್ಕೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಕಾಲರಾ ರೋಗ ಮೈಸೂರು, ಮಂಡ್ಯ, ಕನಕಪುರ, ಬೆಂಗಳೂರು, ಚಿತ್ರದುರ್ಗ ದಾವಣಗೆರೆ ಮೂಲಕ ರಾಜ್ಯಾದ್ಯಂತ ಹರಡುತ್ತಿದೆ. ಮುಖ್ಯ ಮಂತ್ರಿಗಳು ತಕ್ಷಣ ಭಾನುವಾರ ಬಿಡುವು ಇಲ್ಲದಿದ್ದರೂ ಪಾಪ ಅವರು ಮೈಸೂರಿಗೆ ಹೋಗಿಬಂದು ಕ್ರಮ ತೆಗೆದುಕೊಂಡು ಇಬ್ಬರು ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟಿರುವುದನ್ನು ಮೆಚ್ಚುತ್ತೇನೆ. ವಸ್ತುಸ್ಥಿತಿ ಏನಾಗಿದೆ ಎಂದರೆ, ನಾನು ಆರೋಗ್ಯ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ ಸಂದರ್ಭದಲ್ಲಿ ಬಳ್ಳಾರಿ, ರಾಯಚೂರು, ಹಾಸನ, ಚಿಕ್ಕಮಗಳೂರು ಎಲ್ಲಾ ಕಡೆಗಳಲ್ಲೂ ಕರಳು ಬೇನೆ ಮತ್ತು ಈ ಸೋಂಕು ತಗಲಿ ನೂರಾರು, ಜನರು ಸತ್ತಿದ್ದಾರೆ. ರೋಗ ನಿಯಂತ್ರಣಕ್ಕೆ ಬೇಕಾಗಿರತಕ್ಕದ್ದು ಮತ್ತು ಬಹಳ ಅವಶ್ಯಕವಾಗಿರತಕ್ಕದ್ದು ಎ.ಸಿ. ಚುಚ್ಚುಮದ್ದು. ಅದು ಇವತ್ತು ಗವರ್ನಮೆಂಟ್ ಮೆಡಿಕಲ್ ಸ್ಟೋರ್‌ನಲ್ಲಾಗಲಿ ಅಥವಾ ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಾಗಲಿ ದಾಸ್ತಾನಿಲ್ಲ. ಇನ್ನೊಂದು ಬಹಳ ಮುಖ್ಯವಾದುದು. ಓ.ಆರ್.ಎಲ್. ಪುಡಿ ಪ್ಯಾಕೆಟ್, ಅದು ಕೂಡ ಇಲ್ಲ. ನಾನು ಆರೋಗ್ಯ ಸಚಿವನಾಗಿ ಕೆಲಸ ಮಾಡಿದ್ದರಿಂದ ನನಗೆ ಇದೆಲ್ಲಾ ಅರ್ಥವಾಗುತ್ತದೆ. ಬಹಳ ಮುಖ್ಯವಾಗಿ ಪೇಷೆಂಟ್‌ಗಳನ್ನು ಅಡ್ಮಿಟ್ ಮಾಡಿದ ತಕ್ಷಣ ಬೇಕಾದುದು ಐ.ವಿ. ಫ್ಲೂಯಿಡ್. ಇದು ನೂರು ಬೆಡ್‌ಗಳುಳ್ಳ ಎಲ್ಲಾ ಆಸ್ಪತ್ರೆಗಳಲ್ಲೂ ಸ್ಟಾಕ್ ಇರಬೇಕು; ಮತ್ತು ಅಲ್ಲೇ ಪ್ಲಾಂಟ್ಸ್‌ಗಳು ಕೂಡ ಇರಬೇಕು.

ಆದರೆ ಅದೂ ಕೆಲಸ ಮಾಡುತ್ತಿಲ್ಲ. ನಮ್ಮ ಸರ್ಕಾರದವರು 20–25 ವರ್ಷಗಳ ಹಿಂದೆ ಪಬ್ಲಿಕ್ ಹೆಲ್ತ್ ಇನ್‌ಸ್ಟಿಟ್ಯೂಟ್ ಎಂಬ ಸಂಸ್ಥೆಯನ್ನು ಲಸಿಕೆ ತಯಾರಿಸುವುದಕ್ಕೆ ಎಂದು ನಮ್ಮ ರಾಜ್ಯದಲ್ಲಿ ಮಾಡಿದ್ದಾರೆ, ಇದು ಬಹಳ ಪ್ರಸಿದ್ಧ ಸಂಸ್ಥೆ. ತಮಗೆ ಗೊತ್ತಿರುವ ಹಾಗೆ ಈ ಪಿ.ಹೆಚ್.ಯು.ಗೆ ಸಂಬಂಧಪಟ್ಟ ಹಾಗೆ ವ್ಯಾಕ್ಸಿನ್ ತಯಾರಿಸುವುದಕ್ಕೆ ಬೆಳಗಾಂನಲ್ಲಿ ಒಂದು ಸಂಸ್ಥೆ ಇದೆ. ಶಿವಮೊಗ್ಗದಲ್ಲಿ ಕೆ.ಎಫ್.ಟಿ. ವ್ಯಾಕ್ಸಿನ್ ತಯಾರಿಸುವುದಕ್ಕೆ ಎಂದು ಒಂದು ಸಂಸ್ಥೆಯನ್ನು ಓಪನ್ ಮಾಡಿದ್ದಾರೆ. ಬಹಳ ದುಃಖದ ವಿಚಾರ ಎಂದರೆ ಆಯವ್ಯಯದಲ್ಲಿ ಕಳೆದ ವರ್ಷ ಇವರು ಅನುದಾನವನ್ನು ನೀಡಿರಲಿಲ್ಲ. ಇದು ಇವರದ್ದೇ ತಪ್ಪು ಎಂದು ಹೇಳುವುದಿಲ್ಲ. ಸರ್ಕಾರದ ತಪ್ಪನ್ನು ಎತ್ತಿಹಿಡಿಯುತ್ತಿದ್ದೇನೆ. ಇದಕ್ಕೆ ಇಬ್ಬರು ಜಂಟಿ ನಿರ್ದೇಶಕರು ಇದ್ದಾರೆ. ವ್ಯಾಕ್ಸಿನ್ ತಯಾರಿಸುವುದಕ್ಕೆ, ಇನ್‌ಸ್ಟಿಟ್ಯೂಟ್ ನೋಡಿಕೊಳ್ಳುವುದಕ್ಕೆ ಒಬ್ಬ ಜಂಟಿ ನಿರ್ದೇಶಕರಿದ್ದಾರೆ. ಅವರಿಗೆ ಇವತ್ತು ಏನೂ ಕೆಲಸವಿಲ್ಲ. ನಮ್ಮ ಇನ್‌ಸ್ಟಿಟ್ಯೂಟ್‌ದಲ್ಲಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಅದಕ್ಕೆ ಬೇಕಾಗಿರತಕ್ಕ ಎಲ್ಲಾ ಉಪಕರಣಗಳನ್ನು ಇಟ್ಟುಕೊಂಡಿದ್ದೇವೆ. ಆದರೆ ಏನು ಮಾಡುತ್ತಿದ್ದಾರೆಂದರೆ ಮುಖ್ಯ ಮಂತ್ರಿಗಳೆ, ಮದ್ರಾಸ್ ಮತ್ತು ಕಲ್ಕತ್ತದಿಂದ ತರಿಸಿಕೊಳ್ಳಿ ಎಂದು ಡೈರೆಕ್ಟರ್ ಆಫ್ ಹೆಲ್ತ್ ಇವರೆಲ್ಲಾ ಆರ್ಡರ್

ಮಾಡಿದ್ದಾರೆ. ತಾವು ಆದೇಶ ಕೊಟ್ಟ ಮೇಲೂ ಈ ಕೆಲಸ ಮಾಡಿದ್ದಾರೆ. ಆ ಆರ್ಡರ್ ಕಾಪಿ ನನ್ನ ಹತ್ತಿರ ಇದೆ. ತಮಗೆ ಗೊತ್ತಿರುವ ಹಾಗೆ ಅವರು ತರಿಸಿಕೊಳ್ಳತಕ್ಕದ್ದು ಒಂದು ಮಿಲಿ ಲೀಟರ್‌ಗೆ ಒಂದೂವರೆ ರೂಪಾಯಿ ಕೊಡುತ್ತಿದ್ದಾರೆ. ನಮ್ಮ ಇನ್‌ಸ್ಟಿಟ್ಯೂಟ್‌ನಲ್ಲಿ ಇದನ್ನು 4 ವರ್ಷದ ಹಿಂದೆ ನಾವು ತಯಾರು ಮಾಡುತ್ತಿದ್ದಾಗ 15 ಪೈಸೆ ಆಗುತ್ತಿತ್ತು. ರಾಜ್ಯದಲ್ಲಿ ಈ ಚುಚ್ಚುಮದ್ದಿನ ಸ್ಟಾಕ್ ಎಷ್ಟಿರಬೇಕೆಂದರೆ ಹತ್ತು ಪರ್ಸೆಂಟ್ ಇರಬೇಕು. ಇವತ್ತು ಈ ಚುಚ್ಚುಮದ್ದು ಬೇಕೆಂದರೆ ಮದ್ರಾಸಿಗೆ ಅಥವಾ ಕಲ್ಕತ್ತಕ್ಕೆ ಫೋನ್ ಮಾಡಬೇಕು. ಅಲ್ಲಿಂದ ತರಿಸುವ ಪರಿಸ್ಥಿತಿ ಇದೆ. ನಮ್ಮ ಇನ್‌ಸ್ಟಿಟ್ಯೂಟ್ ಕೆಲಸ ಮಾಡುತ್ತಿಲ್ಲ. ಇವತ್ತ ವಾಡ್ ಫುಟ್ಟಿಂಗ್ ಸ್ಟೆಪ್‌ನಲ್ಲಿ ಕೆಲಸ ಮಾಡಬೇಕು. ನಮ್ಮ ಹತ್ತಿರ ಕೊನೇಪಕ್ಷ 2 ತಿಂಗಳಿಗೆ 40 ಲಕ್ಷ ಡೋಸೇಜ್ ಇಟ್ಟುಕೊಳ್ಳಬೇಕಾಗುತ್ತದೆ. ಇದು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. 15 ದಿನಗಳಲ್ಲಿ ಇನ್‌ಸ್ಟಿಟ್ಯೂಟ್ ಕೆಲಸ ಮಾಡುವಂತೆ ಮಾಡಲು ಸಾಧ್ಯವಿದೆ. ಆದರೆ ನನಗೆ ಇದು ಅರ್ಥವಾಗುತ್ತಿಲ್ಲ. ಹೆಲ್ತ್ ಮಿನಿಸ್ಟರ್ ಇಲ್ಲವೆಂದೋ ಅಥವಾ ತಾವು ಹೆಲ್ತ್ ಡಿಪಾರ್ಟ್‌ಮೆಂಟ್ ಮಾಡಲಿಲ್ಲವೆಂದೋ ಅಥವಾ ಪ್ರಿಕಾಷನರಿ ಮೆಷರ್ಸ್ ತೆಗೆದುಕೊಂಡಿಲ್ಲವೆಂದೋ ಅಥವಾ ಏನು ? ತಾವು ದಯವಿಟ್ಟು ಹೆಲ್ತ್ ಸೆಕ್ರೆಟರಿಯವರಿಗೆ ಹೇಳಿ ಆ್ಯಂಟಿ ಕಾಲರಾ ವ್ಯಾಕ್ಸಿನೇಷನ್ ಏನಿದೆ ಅದನ್ನು ನಮ್ಮ ಇನ್‌ಸ್ಟಿಟ್ಯೂಟ್‌ನಲ್ಲಿ ತಯಾರಿಸುವುದನ್ನು 6 ತಿಂಗಳಿಂದ ಏನು ನಿಲ್ಲಿಸಿದ್ದಾರೆ. ಅದನ್ನು ಪುನಃ ತಯಾರಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು.

ಇನ್ನು ಎರಡನೆಯದಾಗಿ, ಎಲ್ಲಾ ಮೇಜರ್ ಆಸ್ಪತ್ರೆಗಳಲ್ಲಿ ಹಾಗೂ ಜಿಲ್ಲಾ ಮಟ್ಟದ ಆಸ್ಪತ್ರೆ ಹಾಗೂ ತಾಲ್ಲೂಕು ಮಟ್ಟದ 100 ಹಾಸಿಗೆಯುಳ್ಳ ಆಸ್ಪತ್ರೆಗಳು ಏನಿವೆ ಅವುಗಳಲ್ಲಿ ಐವಿ ಫ್ಲೂಯಿಡ್ ತಕ್ಷಣ ಸಿಗುವ ಹಾಗೆ ವ್ಯವಸ್ಥೆ ಮಾಡುವ ಸಲುವಾಗಿ ಹಣ ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ. ಮತ್ತೆ ಚಿತ್ರದುರ್ಗ, ದಾವಣಗೆರೆ ಬಗ್ಗೆ ತಕ್ಷಣ ಗಮನ ಕೊಡಬೇಕೆಂದು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಕಾಲರಾ ರೋಗ ಮೈಸೂರು ನಗರದಿಂದ ಪ್ರಾರಂಭವಾಯಿತು. ಮಾನ್ಯ ಮುಖ್ಯಮಂತ್ರಿಗಳೂ ಅಲ್ಲಿಗೆ ಹೋಗಿ ಪರಿಶೀಲನೆ ಮಾಡಿ ಬಂದಿದ್ದಾರೆ. ಪರಿಶೀಲನೆ ಮಾಡಿ ಬಂದ ನಂತರ ಕೆಲವು ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟಿದ್ದಾರೆ. ಬಹಳ ಪ್ರಯತ್ನಪಟ್ಟು ಕೆಲಸ ಮಾಡಿದ್ದಾರೆ. ಅದರ ಬಗ್ಗೆ ಎರಡು ಮಾತಿಲ್ಲ. ಆದರೆ ಇಷ್ಟರಿಂದಲೇ ಆಗುವುದಿಲ್ಲ. ಇಷ್ಟೆಲ್ಲಾ ಮಾಡಿದರೂ ಕಾಲರ ನಿಲ್ಲಿಸುವುದರಲ್ಲಿ ಯಶಸ್ವಿಯಾಗಿಲ್ಲ. ನಿನ್ನೆ ಕೂಡಾ ಮೂರು ಜನ ಸತ್ತಿದ್ದಾರೆ. ನಾನು ನಿನ್ನೆ ಮೈಸೂರಿನಲ್ಲಿ ಇದ್ದೆ. ಪ್ರತಿ ದಿವಸ 2-3 ಜನ ಸಾಯುತ್ತಿದ್ದಾರೆ. ಬರೀ ಮೈಸೂರು ಅಷ್ಟೇ ಅಲ್ಲ ಕರ್ನಾಟಕ ಉದ್ದಗಲಕ್ಕೂ ಈ ರೋಗ ಹರಡುತ್ತಿದೆ. ಈ ಬಗ್ಗೆ ಪರಿಣಾಮಕಾರಿ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಬರೀ 4 ಜನ ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇಡುವುದರಿಂದ ಕೆಲಸ ಆಗುವುದಿಲ್ಲ. ಎಂದರೆ ಅಮಾನತ್ತಿನಲ್ಲಿ ಇಡಬೇಡಿ, ಬಿಟ್ಟುಬಿಡಿ ಎಂದು ಹೇಳುವುದಿಲ್ಲ. ಆದರೆ ಖಾಯಿಲೆ ತಡೆಗಟ್ಟುವುದಕ್ಕೆ ಸಂಪೂರ್ಣವಾಗಿ ಆರೋಗ್ಯ ಇಲಾಖೆ ವಿಫಲವಾಗಿದೆ. ಇದರಲ್ಲಿ ಎರಡನೆ ಅಭಿಪ್ರಾಯ ಇಲ್ಲ. ಅಧಿಕಾರಿಗಳು ಕಾರ್ಯಾಲಯದಲ್ಲಿ ಕುಳಿತಿದ್ದಾರೆಯೇ ಹೊರತು ವ್ಯವಸ್ಥಿತ ಕೆಲಸ ಮಾಡಿಲ್ಲ. ಈ ರೋಗ ಎಷ್ಟು ವೇಗವಾಗಿ ಹಬ್ಬುತ್ತಿದೆ ಎಂದರೆ ಇವತ್ತು ಮೈಸೂರಿನಿಂದ ಪ್ರಾರಂಭವಾಗಿ ಎಲ್ಲಾ ತಾಲ್ಲೂಕುಗಳಿಗೂ ಹಬ್ಬುತ್ತಿದೆ. ಇವತ್ತು ಬೆಂಗಳೂರು ನಗರದಲ್ಲಿ ಸುಮಾರು 600 ರಿಂದ 700 ಜನರು ಈ ಕಾಲರಾ ಪರಿಣಾಮಕ್ಕೆ ಒಳಗಾಗಿದ್ದಾರೆ. ಹಿಂದುಳಿದ ಪ್ರದೇಶವಾದ ಬಿನ್ನಿಪೇಟೆ ಮತ್ತು ಗೋರಿಪಾಳ್ಯದಲ್ಲಂತೂ ಬಡವರು. ಅತಿ ಕಡು ಬಡವರು, ಅತಿ ಕಡೆಯ ಮಟ್ಟದಲ್ಲಿ ವಾಸ ಮಾಡತಕ್ಕ ಜನ ಅಲ್ಲಿದ್ದಾರೆ. ಈ ರೋಗ ಬರದಹಾಗೆ ತಡೆಗಟ್ಟುವುದಕ್ಕೆ ವ್ಯವಸ್ಥಿತವಾಗಿ ಜಾಗರೂಕತೆಯಿಂದ ಕೆಲಸ ಮಾಡುವುದರಲ್ಲಿ ಸರ್ಕಾರ ವಿಫಲವಾಗಿದೆ ಎಂಬುದನ್ನು ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ಸರ್ಕಾರದ ಲೆಕ್ಕದ

ಪ್ರಕಾರ 45 ರಿಂದ 50 ಜನ ಈ ರೋಗದಿಂದ ಸತ್ತಿದ್ದಾರೆಂದು ಇದ್ದರೂ ಸಹ ನನಗೆ ತಿಳಿದಮಟ್ಟಿಗೆ 250 ರಿಂದ 300 ಜನರು ಈ ರೋಗದಿಂದ ರಾಜ್ಯದ ಉದ್ದಗಲಕ್ಕೂ ಸಾವಿಗೀಡಾಗಿದ್ದಾರೆ. ಒಂದು ಸಾರಿ ವಾಂತಿ ಬೇಧಿ ಶುರುವಾದರೆ ಮುಗಿದಂತೆಯೇ. ಇವತ್ತು ಹಳ್ಳಿಯಿಲ್ಲಿ ರೋಗ ಕಾಣಿಸಿಕೊಂಡ ತಕ್ಷಣ ಗಾಡಿಯಲ್ಲಿ ಆಸ್ಪತ್ರೆಗೆ ಕರೆತಂದು ಅಲ್ಲಿ ತೋರಿಸಿ ಗುಣಪಡಿಸಿಕೊಳ್ಳುವಂತಹ ಖಾಯಿಲೆ ಇದು ಅಲ್ಲ. ಒಂದು ನಿಮಿಷದಲ್ಲಿ ಕಾಯಿಲೆ ಸೋಂಕು ತಗುಲಿದರೆ ವಾಂತಿ ಬೇಧಿ ಬಂದು ಕೂಡಲೇ ಸತ್ತುಹೋಗುತ್ತಾರೆ. ಈ ಪರಿಸ್ಥಿತಿ ರಾಜ್ಯದ ಉದ್ದಗಲಕ್ಕೂ ಪ್ರಾರಂಭವಾಗಿದೆ. ಈಗ ಬಿಸಿಲೂ ಜಾಸ್ತಿಯಾಗಿರುವುದರಿಂದ ಇದೂ ಒಂದು ಕಾರಣ. ಮತ್ತೆ ಮಳೆ ಬೇರೆ ಬಂದಿರುವುದಿಲ್ಲ. ಮತ್ತೆ ಚರಂಡಿ ವ್ಯವಸ್ಥೆ ಅತ್ಯಂತ ಹಳೇ, ಒಬೀರಾಯನ ಕಾಲದ್ದು ಇದೆ. ಮತ್ತೆ ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿಲ್ಲವಾಗಿರುವುದು ಇದಕ್ಕೆಲ್ಲಾ ಕಾರಣ. ಮೈಸೂರಿನಲ್ಲಿ ಕೂಡಾ ಚರಂಡಿ ವ್ಯವಸ್ಥೆ ಸರಿಯಿಲ್ಲದ ಬಗ್ಗೆ ವಿಚಾರ ಪ್ರಸ್ತಾಪಕ್ಕೆ ಬಂತು. ಚರಂಡಿ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯ ಅಸಮರ್ಪಕತೆಯ ಪ್ರಯುಕ್ತ ಕುಡಿಯುವ ನೀರಿನ ಜೊತೆ ಚರಂಡಿ ನೀರು ಸೇರಿ ಕುಡಿಯುವ ನೀರು ಕಲುಷಿತಗೊಂಡು ಇದೆಲ್ಲಾ ರೋಗಕ್ಕೆ ಕಾರಣವಾಯಿತು ಎಂದು ಪ್ರತಿಕೆಯಲ್ಲಿ ಬಂತು. ಇದರ ಬಗ್ಗೆ ಯಾರೊಬ್ಬರ ಮೇಲೆ ಗೂಬೆ ಕೂರಿಸುವುದರ ಬದಲು...

ಪ್ರೊ:- ಎಂ.ಡಿ. ನಂಜುಂಡಸ್ವಾಮಿ (ಕಿತ್ತೂರು):- ಮಾನ್ಯ ಅಧ್ಯಕ್ಷರೇ, ಈಗ ನಾವು ಬರೀ ಈ ಭಾಗದಿಂದ ಮಾತನಾಡುವುದರಿಂದ ವಿಷಯ ಬಗೆಹರಿಯುವುದಿಲ್ಲ . ಅವರು ಸರ್ಕಾರದ ಪರವಾಗಿ ಏನು ಹೇಳುತ್ತಾರೋ ಹೇಳಲಿ. ಅದಾದಮೇಲೆ ಚರ್ಚೆ ಮಾಡಿದರೆ ಒಳ್ಳೆಯದಾಗತ್ತದೆ. ಇದು ಒಂದು ಚರ್ಚೆ ಮಾಡಿ ಬಗೆಹರಿಸಬೇಕಾಗಿರತಕ್ಕ ವಿಚಾರ. ನಾವು ಇಲ್ಲಿ ಮಾತನಾಡುತ್ತೇವೆ. ನಾವು ಹೇಳಿದ ಮೇಲೆ ಅವರು ಚಿತ್ರದುರ್ಗಕ್ಕೆ ಹೋಗುತ್ತಾರೆ. ನಿನ್ನೆ ನಾನು ಮಧುಗಿರಿಯ ಗರಣಿ ಎನ್ನುವ ಗ್ರಾಮಕ್ಕೆ ಹೋಗಿದ್ದೆ. ನಾವು ಬಂದು ಹೇಳಿದಮೇಲೆ ಇವರು ಮಾಡುವುದಾದರೆ ಏನು ಪ್ರಯೋಜನ ? ಇಷ್ಟು ದಿವಸದಲ್ಲಿ ಏನು ಮಾಡಿದ್ದಾರೆ, ಎಷ್ಟು ನೂರು ಜನರು ಸತ್ತಿದ್ದಾರೆ ಎಂದೂ ಅವರು ಹೇಳಲಿ. ಆಮೇಲೆ ನಾವು ಚರ್ಚೆಯನ್ನು ಮಾಡೋಣ.

ಶ್ರೀ ವಾಟಾಳ್ ನಾಗರಾಜ್:- ಈ ಬಗ್ಗೆ ಸರ್ಕಾರ ತೀವ್ರತರ ಕಾರ್ಯಕ್ರಮ ತೆಗೆದುಕೊಳ್ಳುವಂತೆ ಹೇಳಬೇಕಾಗುತ್ತದೆ. ಇವತ್ತು ಹೇಳಿಕೆ ಕೊಟ್ಟು ಸಾವನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ; ಕಾಲರಾವನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಪರಿಹಾರ ಕೆಲಸವನ್ನು ಎಷ್ಟು ಪರಿಣಾಮಕಾರಿಯಾಗಿ, ಯಾವ ವೇಗದಲ್ಲಿ, ಸಮರೋಪಾದಿಯಲ್ಲಿ ಮಾಡುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಬೇಕು. ಇವತ್ತು ಈ ಬಗ್ಗೆ ನಾನು ಮುಖ್ಯ ಮಂತ್ರಿಗಳ ಬಗ್ಗೆ ಆರೋಪವನ್ನು ಮಾಡುತ್ತಿಲ್ಲ. ಇವತ್ತು ಇಲಾಖೆ ಎಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಿದೆ ಎಂಬುದನ್ನು ನೋಡಬೇಕು. ರೋಗ ಇವತ್ತು ತಾಲ್ಲೂಕು ಮತ್ತು ಹಳ್ಳಿ ಮಟ್ಟಕ್ಕೆ ನುಗ್ಗುತ್ತಿದೆ. ಮುಖ್ಯ ಮಂತ್ರಿಗಳು ಇದರ ಬಗ್ಗೆ ಸ್ಪಷ್ಟವಾದ ನಿಲುವನ್ನು ಹೇಳಬೇಕು. ಇಲ್ಲದಿದ್ದರೆ ತೀವ್ರತರವಾದ ಪ್ರತಿಭಟನೆ ಮಾಡಬೇಕಾಗುತ್ತದೆಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸುತ್ತಿದ್ದೇನೆ.

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಅಧ್ಯಕ್ಷರೇ, ಇವತ್ತು ಕಾಲರಾ ಬೇನೆ ಮಂಡ್ಯ, ಮೈಸೂರು, ಚಿತ್ರದುರ್ಗದಲ್ಲಿ ಏನು ಹರಡುತ್ತಿದೆ. ಅದನ್ನು ತಡೆಗಟ್ಟುವುದಕ್ಕೆ ವಿಶೇಷವಾದ ಕಾರ್ಯಕ್ರಮ ಹಾಕಿಕೊಂಡು ಚುಚ್ಚುಮದ್ದು ಕೊಡುವುದು ಒಂದು ಕಡೆಯಾದರೆ, ಕಾಲರಾ ಹರಡದಂತೆ ಅದನ್ನು ತಡೆಯುವುದಕ್ಕೆ ಸರ್ಕಾರ ತ್ವರಿತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಇವತ್ತು ಬೆಂಗಳೂರಿನಲ್ಲಿ ಸಹಾ ಅನೇಕ ಕಡೆ ಕಾಲರಾ ಬೇನೆ ಪ್ರಾರಂಭವಾಗಿದೆ. ಮಾನ್ಯ ಅಧ್ಯಕ್ಷರೇ, ನಾವು ಈಗ ಗಮನಿಸಬೇಕಾದ ಸಂಗತಿ ಎಂದರೆ, ಇವತ್ತು ಶುಚಿ ಮಾಡುವುದಕ್ಕೆ ಏನು ಬ್ಲೀಚಿಂಗ್ ಪೌಡರ್‌ನ್ನು ಉಪಯೋಗ ಮಾಡಲಾಗುತ್ತಿದೆ. ಆ ಬ್ಲೀಚಿಂಗ್ ಪೌಡರ್ ಎಂದು ಏನು ಪೌಡರ್

ಬಂದಿದೆ ಅದು ಬ್ಲೀಚಿಂಗ್ ಪೌಡರ್ ಆಗದೇ ಬೇರೆ ಯಾವುದೋ ಪೌಡರ್ ಆಗಿದ್ದು ಅದನ್ನು ಗೊತ್ತಿಲ್ಲದೇ ಬಳಸಲಾಗುತ್ತಿದೆಯೆಂದು ನಿಮ್ಮ ಅಧಿಕಾರಿಗಳೇ ಮೈಸೂರಿನಲ್ಲಿ ಹೇಳುವುದಾದರೆ ನಿಮ್ಮ ಆರೋಗ್ಯ ಇಲಾಖೆ ಸತ್ತಿದೆಯೇ ಅಥವಾ ಬದುಕಿದೆಯೇ ಎಂದು ಕೇಳಬೇಕಾಗುತ್ತದೆ. ಇದು ಬಹಳ ಪ್ರಾಮುಖ್ಯವಾದ ಸಂಗತಿಯಾಗಿದೆ.

ನಾನು ಅದಕ್ಕೋಸ್ಕರ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುವುದು ದಯವಿಟ್ಟು ಬೆಂಗಳೂರುನಗರ ಸೇರಿ ಎಲ್ಲಾ ಕಡೆ ಹರಡಿದ ನಂತರ ಅದನ್ನು ಕಂಟ್ರೋಲ್ ಮಾಡುವುದಕ್ಕೆ ಗಮನಕೊಡದೆ, ಈಗಾಗಲೇ ಸ್ಲಮ್ ಏರಿಯಗಳಲ್ಲಿ ಹಾಗೂ ಬೇರೆ ಬೇರೆ ಕಡೆಗಳಲ್ಲಿ ಕಾಯಿಲೆ ಪ್ರಾರಂಭವಾಗಿರುವುದರಿಂದ ಬಿಸಿ ನೀರನ್ನು ಕೊಡುವ ವ್ಯವಸ್ಥೆ ಮಾಡಬೇಕು. ಸ್ಲಮ್ ಏರಿಯಾಗಳ ಚರಂಡಿಗಳನ್ನು ಶುದ್ಧವಾಗಿಡುವುದು; ಈ ರೀತಿಯಾಗಿ ಸರಿಯಾದ ವ್ಯವಸ್ಥೆಯನ್ನು ಮಾಡುವಂತಹ ಕಡೆಗೆ ಸರ್ಕಾರ ಗಮನ ಕೊಡದಿದ್ದರೆ ರಾಜ್ಯದ ಉದ್ದಗಲಕ್ಕೂ ಹರಡಿದರೆ ಸರ್ಕಾರವಾಗಲಿ ಯಾರೇ ಆಗಲೀ ಇದನ್ನು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ಸದನದಲ್ಲಿ ಏಕೆ ಪ್ರಸ್ತಾಪ ಮಾಡುತ್ತಿದ್ದೇವೆಂದರೆ, ಯಾವ ರೋಗ ಬಂದಿದೆಯೆಂದು ನೋಡುವುದಕ್ಕೆ ಯಾರಿದ್ದಾರೆ ? ಯಾವ ಸೌಲಭ್ಯಗಳೂ ಆಸ್ಪತ್ರೆಗಳಲ್ಲಿ ಇಲ್ಲ. ಡಾಕ್ಟರುಗಳು ಇಲ್ಲ. ತಾಲ್ಲೂಕು ಕೇಂದ್ರಗಳಲ್ಲಿ; ನಾನು ಶಿಕಾರಿಪುರದಿಂದ ಬಂದೆ; ನೂರಾರು ಜನ ಆಸ್ಪತ್ರೆಯ ಮುಂದೆ ಇದ್ದಾರೆ. ಅಲ್ಲಿ ಒಬ್ಬರೂ ಡಾಕ್ಟರ್ ಇಲ್ಲ. ಇದು ಕರುಳುಬೇನೆ ಅಥವಾ ಕಾಲರ ಎಂದು ಹೇಳುವವರು ಯಾರು ಇಲ್ಲ. ತಕ್ಷಣ ಡಾಕ್ಟರುಗಳನ್ನು ನೇಮಕ ಮ[illegible]ವೆಂದು ಮಾತನಾಡುತ್ತಾ ಹೇಳಿದರು. ಡಾಕ್ಟರುಗಳನ್ನು ಸಸ್ಪೆಂಡ್‌ನಲ್ಲಿಟ್ಟರೆ ಸಸ್ಪೆಂಡ್ ಮಾಡಿ[illegible] ಅದು ಪತ್ರಿಕೆಗಳಲ್ಲಿ ಬರಬಹುದು. ಅವನು ಏನು ತಪ್ಪು ಮಾಡಿದ್ದಾನೆ ? ಇವತ್ತು ಬೇಕಾದ ಔಷಧಿಗಳನ್ನು ಮತ್ತು ಚುಚ್ಚುಮದ್ದು ಸರಬರಾಜು ಮಾಡದಿದ್ದರೆ ಡಾಕ್ಟರುಗಳು ರೋಗಿಗಳ ಪ್ರಾಣ ಉಳಿಸುವುದು ಹೇಗೆ ? ಅದಕ್ಕೋಸ್ಕರ ರೋಗ ಬಂದಮೇಲೆ ಅದರ ಬಗ್ಗೆ ಗಮನ ಕೊಡದೆ ಬಂದಿರುವ ಕೆರೆ ನಿಲ್ಲಿಸಿ. ರೋಗ ಹರಡದಂತೆ ಚುಚ್ಚುಮದ್ದು ಹಾಕಬೇಕು. ಮಾನ್ಯ ಸಿಂಧ್ಯಾರವರು ಆರೋಗ್ಯ ಮಂತ್ರಿಗಳಾಗಿದ್ದವರು; ಅವರು ಅನುಭವದಿಂದ ಕೆಲವು ಮಾತುಗಳನ್ನು ಹೇಳಿದರು. ದಯಮಾಡಿ ಮದ್ರಾಸ್‌ನಿಂದ ತರುತ್ತೀರೋ ಬಾಂಬೆಯಿಂದ ತರುತ್ತೀರೋ, ಕಲ್ಕತ್ತಾದಿಂದ ತರುತ್ತೀರೋ, ಅದು ನಮಗೆ ಗೊತ್ತಿಲ್ಲ. ಈಗಾಗಲೇ ನೀವು ತರಿಸಿ ಇಟ್ಟುಕೊಳ್ಳಬೇಕಾಗಿತ್ತು. ಆದರ ಬಗ್ಗೆ ಚಿಂತನೆ ಮಾಡದಿದ್ದರೆ ಮುಂದೆ ಅದನ್ನು ಮಾಡಿ. ಕೊನೆಯ ಪಕ್ಷ ಎಷ್ಟಾದರೂ ಬೆಲೆಯಾಗಲಿ ಚುಚ್ಚು ಮದ್ದು ತರಿಸಿ ಎಲ್ಲಾ ಕಡೆಗಳಲ್ಲಿ ಇಟ್ಟು ಈ ರೋಗವನ್ನು ತಡೆಗಟ್ಟುವುದಕ್ಕೆ ವಿಶೇಷವಾಗಿ ಸರ್ಕಾರ ಗಮನಹರಿಸಬೇಕು. ಇಲ್ಲದಿದ್ದರೆ ನಾವು ಇವತ್ತು ಸದನದಲ್ಲಿ ಪ್ರಸ್ತಾಪ ಮಾಡುತ್ತೇವೆ. ಮನೆಗೆ ಹೋಗುತ್ತೇನೆ ಆಮೇಲೆ ಪುನಃ ಬರುವುದು 30ನೇ ತಾರೀಖು. ಏನೂ ಅನಾಹುತವಾಗಬಾರದು ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈ ಇಲಾಖೆಯ ಬಗ್ಗೆ ಡೀಟೈಲ್ಡ್ ಡಿಸ್‌ಕಷನ್ ಆಗಲಿಲ್ಲ. ಚುಚ್ಚುಮದ್ದನ್ನು ಸರಿಯಾದ ಸಮಯದಲ್ಲಿ ತರಿಸಿ ಅದನ್ನು ತರಿಸುವುದಕ್ಕೆ ಕ್ರಮ ತೆಗೆದುಕೊಂಡು ಬೇಕಾದ ಚುಚ್ಚುಮದ್ದು ತರಿಸಿ ರೋಗವನ್ನು ತಡೆಗಟ್ಟುವುದಕ್ಕೆ ಅಧಿಕಾರಿಗಳು ವಿಶೇಷ ಗಮನಹರಿಸಬೇಕು. ಬೆಂಗಳೂರು ನಗರದಲ್ಲಿ ಬಿಸಿ ನೀರನ್ನು ಕೊಡುವ ವ್ಯವಸ್ಥೆಯನ್ನು ಇವತ್ತಿನಿಂದ ಪ್ರಾರಂಭ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಕೆ. ಶಿವಮೂರ್ತಿ:– ನಮ್ಮಲ್ಲಿ ಯಾವುದು ಕಾಯಿಲೆಯೆಂದು ಹೇಳುತ್ತಿಲ್ಲ. A team of expert doctors should be sent and assess what exactly is the reason and whether it is from mosquito, ಇದು ನೊಣದಿಂದ ಬರುತ್ತಿದೆಯೋ, ಕರ್ಬೂಜ ಹಣ್ಣಿನಿಂದ ಬರುತ್ತಿದೆಯೋ, ಕಲ್ಲಂಗಡಿ ಹಣ್ಣಿನಿಂದ ಬರುತ್ತಿದೆಯೋ ಅಥವಾ ನೀರಿನಿಂದ ಬರುತ್ತಿದೆಯೋ ಎಂದು ಕಂಡುಹಿಡಿಯುವುದಕ್ಕೆ ಆಗುತ್ತಿಲ್ಲ. ಅದಕ್ಕೋಸ್ಕರ ದಯಮಾಡಿ ಟೀಮ್ ಆಫ್ ಡಾಕ್ಟರ್ಸ್‌ಗಳನ್ನು

ಕಳುಹಿಸಿ ಕೊಟ್ಟರೆ ಅವರು ನೋಡಿ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಎಕ್ಸ್‌ಪರ್ಟ್ಸ್ ಅಲ್ಲಿ ಇಲ್ಲ. ಮೆಷಿನರಿ ಫೇಲಾಗಿದೆ. ತಾವು ಕೊಡತಕ್ಕ ಔಷಧಿ ಎಫೆಕ್ಟೀವ್ ಆಗಿ ಕೆಲಸ ಮಾಡುತ್ತಿಲ್ಲ. ಈ ಕಾಯಿಲೆಗೆ ಏನು ಔಷಧಿ ತಂದಿದ್ದಾರೆ. ಔಷಧಿ ಕೊಡುತ್ತಿರುವುದು ಏನೋ ಸರಿಸಮಾನವಾಗಿ ವರ್ಕ್‌ಔಟ್ ಆಗುತ್ತಿಲ್ಲ. ಇಂಜಕ್ಷನ್ ಹಾಕುತ್ತಿದ್ದಾರೆ ಪೌಡರ್ ಹಾಕುತ್ತಿದ್ದಾರೆ ಆದರೆ ಏನು ಮಾಡಬೇಕೆಂದು ಹೇಳತಕ್ಕ ಟೀಮ್ ಆಫ್ ಎಕ್ಸಪರ್ಟ್ಸ್‌ಗಳನ್ನು ದಯಮಾಡಿ ಕಳುಹಿಸಿಕೊಡಿ. ನನ್ನ ಕ್ಷೇತ್ರದಲ್ಲಿ 20 ಜನ ತೀರಿಕೊಂಡಿದ್ದಾರೆ. ಐದು ದಿವಸಗಳ ಹಿಂದೆ, ನಾನು ಪ್ರಸ್ತಾಪ ಮಾಡಿದ್ದೇನೆ. ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ನಮ್ಮ ಚಿತ್ರದುರ್ಗ ಜಿಲ್ಲೆಗೆ ಹಾಗೆಯೇ ಮೈಸೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಈ ರೋಗ ಹಬ್ಬುತ್ತಾ ಇದೆ. ಅಲ್ಲಿರತಕ್ಕ ಎಸ್.ಪಿ.ಯವರಾಗಲಿ,ಡೆಪ್ಯುಟಿ ಕಮೀಷನರ್‌ರವರಾಗಲೀ ಜಿಲ್ಲಾಪರಿಷತ್‌ನ ಮುಖ್ಯಕಾರ್ಯದರ್ಶಿಗಳಾಗಲಿ ಒಬ್ಬೊರಿಗೊಬ್ಬರಿಗೆ ಸಾಮರಸ್ಯವಿಲ್ಲ. This is a problem where we have to face it on a war footing manner. ಇದರ ಬಗ್ಗೆ ಕಾಳಜಿಯಿಲ್ಲ. ಜಿಲ್ಲಾಧಿಕಾರಿಗಳು ಎಲ್ಲೋ ಒಂದು ಕಡೆ ಟ್ರಾವಲರ್ಸ್ ಬಂಗಲೆಯಲ್ಲಿ ಕುಳಿತಿರುತ್ತಾರೆ. ಜಿಲ್ಲಾಪರಿಷತ್‌ನ ಮುಖ್ಯ ಕಾರ್ಯದರ್ಶಿಗಳು ಬಿಲ್ ಮಾಡುತ್ತಿದ್ದಾರೆ. ಪೋಲೀಸ್ ಸೂಪರಿಂಟೆಂಡೆಂಟ್‌ರವರು ಎಲ್ಲೋ ಒಂದು ಕಡೆ ಗಲಾಟೆಯಾಗಿರುತ್ತದೆ. ಅವರು ಅಲ್ಲಿ ಕುಳಿತು ಕೊಂಡಿರುತ್ತಾರೆ. ಆದರೆ ಕಾಲರದಿಂದ ಜನರು ಸಾಯುತ್ತಿದ್ದಾರೆ ಅದರ ಬಗ್ಗೆ ಒಂದು ಮೆಸೇಜ್ ಇಲ್ಲ. ಯಾವ ಮೆಸೇಜನ್ನು ಮುಖ್ಯ ಮಂತ್ರಿಗಳಿಗೆ ಕಳುಹಿಸುತ್ತಿಲ್ಲ. ಮೆಸೇಜನ್ನು ಹೈಲೈಟ್ ಮಾಡುತ್ತಿಲ್ಲ. ನಾನು ಇದರ ಬಗ್ಗೆ ಖುದ್ದಾಗಿ ಜಿಲ್ಲಾಧಿಕಾರಿಗಳು, ಪೋಲೀಸ್ ಅಧಿಕಾರಿಗಳು ಜಿಲ್ಲಾಪರಿಷತ್ ಮುಖ್ಯ ಕಾರ್ಯದರ್ಶಿಯವರು ಇವರ ಜೊತೆ ನಾನು ಮಾತನಾಡಿದ್ದೇನೆ. ದುಡ್ಡು ಖರ್ಚುಹಾಕಿಯೆಂದು ನಾನು ಮುಖ್ಯಕಾರ್ಯದರ್ಶಿಗಳ ಜೊತೆ ಟೆಲಿಫೋನ್‌ನಲ್ಲಿ ಮಾತನಾಡಿದ್ದೇನೆ. ಮುಖ್ಯ ಮಂತ್ರಿಗಳು ಇರಲಿಲ್ಲವೆಂದು ನಾನು ಅವರ ಪ್ರೆವೇಟ್ ಸೆಕ್ರೆಟರಿಯವರ ಹತ್ತಿರ ಹೇಳಿದ್ದೇನೆ. This is very serious matter.

ಇದು ಹೇಗೆ ಬಂದಿದೆಯೆಂದು ಗೊತ್ತಾಗುತ್ತಿಲ್ಲ. ಚಕ್ಕಡಿ ಗಾಡಿಯಲ್ಲಿ ಕರೆದುಕೊಂಡು ಬರುತ್ತಾರೆ, ಬರುವ ದಾರಿಯಲ್ಲಿ ಅರ್ಧದಲ್ಲೇ ಸತ್ತುಹೋಗುತ್ತಿದ್ದಾರೆ. ಅವರಿಗೆ ಡ್ರಿಪ್ ಹಾಕುವ ಹಾಗೆ ಇಲ್ಲ; ಏನೂ ಹಾಕುವ ಹಾಗೆ ಇಲ್ಲ. ಇದರ ಬಗ್ಗೆ ನಾನು ಮಾನ್ಯ ಲೋಕೋಪಯೋಗಿ ಸಚಿವರಾದ ರಂಗನಾಥರವರ ಜೊತೆ ಮಾತನಾಡಿದ್ದೇನೆ. ಅವರು ಇದು ಹೇಗೆ ಬಂತು ? ಜಾತ್ರೆಯಿಂದ ಬಂದಿದೆಯೋ ನೀರಿನಿಂದ ಬಂದಿದೆಯೋ ಎನ್ನುವುದು ಭರಮಸಾಗರ ಕ್ಷೇತ್ರದಲ್ಲಿ ಗೊತ್ತಾಗುತ್ತಿಲ್ಲ. ಬಡ ಜನರಿಗೆ ನಿರ್ಗತಿಕರಿಗೆ ಈ ರೋಗ ಬಂದು ಜನ ಸಾಯುತ್ತಿದ್ದಾರೆ. ನಾವು ಬೀದಿಯಲ್ಲಿ ಹೇಗೆ ನಾಯಿ ದನಗಳನ್ನು ಎಳೆದುಕೊಂಡು ಹೋಗುತ್ತಾರೋ, ಆ ರೀತಿ ಜನಗಳನ್ನು ಎಳೆದುಕೊಂಡು ಹೋಗುವ ಪರಿಸ್ಥಿತಿ ಬಂದಿದೆ. ಭರಮಸಾಗರ ಆಸ್ಪತ್ರೆಯಲ್ಲಿ ನಾನು ಇದ್ದಾಗ ಖುದ್ದಾಗಿ ನೋಡಿದ್ದೇನೆ. ಎರಡು–ಮೂರು ಜನ ಅಲ್ಲಿಯೇ ಸತ್ತುಹೋದರು. ಜನ ಏನು ಸಾಯುತ್ತಿದ್ದಾರೆ ಅವರನ್ನು ಸಾಗಿಸುವುದಕ್ಕೆ ಅಂಬುಲೆನ್ಸ ಕೊಡಿಯೆಂದು ನಾನು ಒತ್ತಾಯ ಮಾಡಿದ್ದೇನೆ. ಆಂಬುಲೆನ್ಸ್ ಕೊಡುವುದಕ್ಕೆ ನಾನು ಆದೇಶ ಕೊಟ್ಟಿದ್ದೇನೆ ಎನ್ನತಕ್ಕ ಮಾತನ್ನು ಹೇಳಿದರು. ಆದರೆ ಇದುವರೆಗೆ ಸರಿಯಾದ ವ್ಯವಸ್ಥೆಯಾಗಿಲ್ಲ. ದಯಮಾಡಿ ನಾನು ಈ ಸದನದ ಮೂಲಕ ಒತ್ತಾಯ ಮಾಡುತ್ತಿದ್ದೇನೆ. The Dy. Commissioner is the whole and sole responsible authority. He must take the charge. ಜಿಲ್ಲಾಧಿಕಾರಿಗಳು ಮತ್ತು ಮುಖ್ಯಕಾರ್ಯದರ್ಶಿಗಳು ಈ ಕೆಲಸವನ್ನು ಮಾಡಬೇಕು. ಮುಖ್ಯ ಕಾರ್ಯದರ್ಶಿಯವರು ಬಿಲ್ ಮಾಡುತ್ತಿದ್ದಾರೆ. ಜನ ಅಲ್ಲಿ ಸಾಯುತ್ತಿದ್ದಾರೆ. ಮಾರ್ಚಿ ಎಂಡ್ ಎಂದು ಅವರು ಬಿಲ್ ಮಾಡಿಕೊಂಡು ಕುಳಿತುಕೊಂಡಿದ್ದಾರೆ. ಆದರೆ ಎಸ್‌ಪಿಯವರು ಏನು

ಮಾಡುತ್ತಿದ್ದಾರೆ ? ಮೂರು ಜನ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ? ಜೊತೆಗೆ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಅವರದ್ದು ಈಕ್ವಲ್ ರೆಸ್ಪಾನ್ಸಿಬಲಿಟಿ ಇದೆ.

ಅವರು ಡಾಕ್ಟರ್ ಇಲ್ಲವೆಂದರೆ ಬೇರೆ ಡಾಕ್ಟರನ್ನು ಕರೆಸಬೇಕು. ನರ್ಸಿಂಗ್ ಹೋಮ್‌ನಿಂದ ಕರೆಸಬೇಕು; ಆಂಬುಲೆನ್ಸ್ ಕರೆಸಬೇಕು. ಅಲ್ಲಿ ಜಿಲ್ಲಾಪರಿಷತ್ತಿನಲ್ಲಿ ವೆಹಿಕಲ್ಸ್ ಇವೆ. ಡಿ.ಸಿ.ಯವರಲ್ಲಿ ವೆಹಿಕಲ್ಸ್ ಇವೆ. ಇದನ್ನೆಲ್ಲಾ ಮಾಡುತ್ತಿಲ್ಲ. ಒಬ್ಬರಿಗೊಬ್ಬರಿಗೆ ಕೋಆರ್ಡಿನೇಷನ್ ಇಲ್ಲ. ಅದಕ್ಕೋಸ್ಕರ ತಾವು ನಮ್ಮ ಪರವಾಗಿ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಬೇಕು. ಜನರು ಸಾಯುತ್ತಿದ್ದಾರೆ. ಅವರನ್ನು ಬದುಕಿಸಲು ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಸವಿಯ ಪ್ರಾರ್ಥನೆ. ಮಾಡುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ:– ನಾನು ಒಂದು ಸಲಹೆಯನ್ನು ಕೊಡುತ್ತೇನೆ.

(ಅನೇಕ ಸದಸ್ಯರು ಏಕಕಾಲದಲ್ಲಿ ಎದ್ದು ನಿಂತು ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು:– ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಎದ್ದುನಿಂತ ಮೇಲೆ ತಾವು ದಯವಿಟ್ಟು ಕುಳಿತುಕೊಳ್ಳಬೇಕು. ಈ ರೀತಿಯಾದರೆ ನನಗೆ ಕೆಲಸ ಮಾಡುವುದಕ್ಕೆ ಕಠಿಣವಾಗುತ್ತಿದೆ.

(ಗೊಂದಲ)

ಅಧ್ಯಕ್ಷರು:– ನಾನು ಎದ್ದುನಿಂತರೆ ತಾವು ದಯವಿಟ್ಟು ಕುಳಿತುಕೊಳ್ಳಬೇಕು. ಈ ಪದ್ಧತಿಯನ್ನು ಮೊದಲು ಕಲಿಯಿರಿ. ಈಗ ಈ ವಿಷಯವನ್ನು ಮಾನ್ಯ ಸದಸ್ಯರಾದ ಶ್ರೀ ಏಕಾಂತಯ್ಯನವರು ಬೆಳಗ್ಗೆ ಬಂದು ನನ್ನಲ್ಲಿ ಪ್ರಸ್ತಾವನೆ ಮಾಡಿದರು. ಮಾನ್ಯ ಶಿವಮೂರ್ತಿಯವರು ಪ್ರಸ್ತಾವನೆ ಮಾಡಿದರು. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಈ ವಿಷಯದ ಚರ್ಚೆಗೆ ಬೇಕಾದರೆ ಬೇರೆ ಅವಕಾಶ ಮಾಡಿಕೊಡೋಣ. ಈಗ ಪ್ರತಿಯೊಬ್ಬ ಸದಸ್ಯರೂ ನನ್ನ ಕ್ಷೇತ್ರದಲ್ಲಿ ಹೀಗೆ ಆಗಿದೆ ಎಂದು ಹೇಳುವುದಕ್ಕಿಂತ ಮುಖ್ಯಮಂತ್ರಿಗಳು ಏನು ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ತಾವು ತಿಳಿದುಕೊಳ್ಳಿ. ಇಲ್ಲದಿದ್ದರೆ ಪ್ರತಿಯೊಬ್ಬರೂ ಪ್ರಸ್ತಾವನೆ ಮಾಡುತ್ತೇವೆ ಅಂದರೆ ಅದಕ್ಕೆ ಕಾಲಾವಕಾಶ ಇಲ್ಲ.

† DR. Y. NAGAPPA (HARIHARA):– I want to tell what exactly is the problem, where is the problem and how to tackle the problem.

ಅಧ್ಯಕ್ಷರು:– ಅದನ್ನು ಹೇಳಿ.

† DR. Y. NAGAPPA:– Cholera attack took place about 2 months back. What was the Government doing since last 2 months when there is no vaccine in the State? Please allow me to talk. Harihar is a town where we have Tunga Bhadra river. I have told several times the concerned ministers who are holding the port–folios. The sewage water enters the river before the Pump House. The same water is pumped without any chlorination and without any purification. Do you know Harihar is a junction place? There are about 10–15 thousand floating population and so many hotels are there; These travellers take their food in the hotels and automatically they get cholera because of this bad water and because of pollution. Our Municipal

President 2 months back suffered from cholera. He was teated. Fortunately, he survived. When such is the situation where cholera attack took place about 2 months back, why. active preventive measureas have not been taken? Will the Health Minister and the Hon. Chief Minister answer this question?

†ಶ್ರೀ ಎಂ. ಮಹದೇವ (ನಂಜನಗೂಡು):– ಈಗ ನಂಜನಗೂಡಿನಲ್ಲಿ ದೊಡ್ಡ ಹೊಳೆ ಇದೆ. ಅಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಬಹಳ ಜನ ಅದಕ್ಕೆ ಬರುತ್ತಿದ್ದಾರೆ. ನೀರು ಕಲುಷಿತವಾಗುತ್ತಿದೆ. ಅದನ್ನು ಪ್ಯೂರಿಫೈ ಮಾಡುವುದಕ್ಕೆ ಬ್ಲೀಚಿಂಗ್ ಪೌಡರ್ ಇಲ್ಲ. ನಿನ್ನೆ ನಾನು ಟೆಲಿಗ್ರಾಮ್ ಕೊಟ್ಟಿದ್ದೇನೆ. ಅದಕ್ಕೆ ರೆಸ್ಪಾನ್ಸ್ ಇಲ್ಲ. ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ನಾಳೆ ಜಾತ್ರೆಗೆ ಜನ ಬರುತ್ತಿದ್ದಾರೆ. ಎಲ್ಲ ಕಡೆ ಕಾಲರಾ, ಜಿಲ್ಲಾಮಟ್ಟದಲ್ಲಿ ಹರಡುವ ಸಾಧ್ಯತೆ ಇದೆ. ಈ ಪರಿಸ್ಥಿತಿಯಲ್ಲಿ ಇಲಾಖೆಯವರು ಏನು ಮಾಡುತ್ತಿದ್ದಾರೆ. ಅವರನ್ನು ನೋಡುವುದಕ್ಕೆ ಹೋದರೆ ಅವರು ಟಿಬಿಯಲ್ಲಿ ಮೋಜು ಮಾಡುತ್ತಿದ್ದಾರೆ. ಶಾಸಕರ ಜೊತೆಯಲ್ಲಿ ಮಾತನಾಡುವಷ್ಟು ಪುರಸತ್ತು ಅವರಿಗೆ ಇಲ್ಲ. ಔಷಧಿಗಳನ್ನು ಕಳುಹಿಸುತ್ತಿಲ್ಲ. ಪುರಸೊತ್ತು ಇಲ್ಲ. ತಿಂಗಳ ಕೊನೆಯಲ್ಲಿ ಅವರದ್ದು ಏನೇನು ಲೆಕ್ಕಚಾರ ಇದೆ. ಯಾರ್‍ಯಾರನ್ನು ಎಲ್ಲಿ ಟ್ರಾನ್ಸ್‌ಫರ್ ಮಾಡಬೇಕು, ಎಲ್ಲೆಲ್ಲಿ ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳಬೇಕು ಎಂಬುದನ್ನು ನೋಡುತ್ತಿದ್ದಾರೆಯೇ ಹೊರತು ಅವರಿಗೆ ವ್ಯಾಕ್ಸಿನೇಷನ್ ಬಗ್ಗೆ ನಿಗಾ ಇಲ್ಲ, ಬ್ಲೀಚಿಂಗ್ ಪೌಡರ್ ಬಗ್ಗೆ ನಿಗಾ ಇಲ್ಲ. ಪೇಷೆಂಟ್ಸ್ ಬಗ್ಗೆ ನಿಗಾ ಇಲ್ಲ. ರೂರಲ್ ಏರಿಯಾದಲ್ಲಿ ಸ್ಯಾನಿಟೇಷನ್ ವ್ಯವಸ್ಥೆ ಸರಿಯಿಲ್ಲ. ಕರುಳುಬೇನೆ ರೋಗ ಇದೆ. ಡಾಕ್ಟರುಗಳ ಹತ್ತಿರ ಹೋದರೆ ತಾವು ಅಸಹಾಯಕರು ಎಂದು ಹೇಳುತ್ತಾರೆ. ಏಕೆಂದರೆ ಅಲ್ಲಿ ಔಷಧಿ ಇಲ್ಲ. ಇಲಾಖೆಯುವರು ಇದರ ಬಗ್ಗೆ ಕಾಳಜಿ ತೆಗೆದುಕೊಳ್ಳುತ್ತಿಲ್ಲ. ಸ್ಥಳೀಯವಾಗಿ ವೈದ್ಯರು ಔಷಧಿ ಇಲ್ಲದಿದ್ದರೆ ಜನರಿಂದ ಬೈಸಿಕೊಳ್ಳುತ್ತಾರೆ. ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಡಾಕ್ಟರುಗಳು ಇದ್ದಾರೆ. ಆದರೆ ಅವರು ಔಷಧಿಗಳು ಇಲ್ಲದಿದ್ದರೆ ಏನು ಮಾಡಬೇಕು ? ಯಾವುದರ ಬಗ್ಗೆಯೂ ನಿಗಾ ಇಲ್ಲ. ಅಧಿಕಾರಿಗಳಿಗೆ ಮಾರ್ಚ್ ಕೊನೆಯಲ್ಲಿ ಯಾವ ರೀತಿ ಖರ್ಚು ಮಾಡಬೇಕು. ಯಾರ್‍ಯಾರಿಗೆ ಟ್ರಾನ್ಸಫರ್ ಮಾಡಬೇಕು ಇದರ ಬಗ್ಗೆ ನಿಗಾ ಇದೆಯೇ ದೊರತು. ಸಾವಿರಾರು ಜನ ಸಫರ್ ಪಡುತ್ತಿದ್ದಾರೆ ಕಷ್ಟಪಡುತ್ತಿದ್ದಾರೆ. ಇದರ ಬಗ್ಗೆ ನಿಗಾ ಇಲ್ಲದಿದ್ದರೆ, ನಿಮ್ಮ ಆರೋಗ್ಯ ಇಲಾಖೆ ಏಕಿರಬೇಕು ? ಜಿಲ್ಲಾಧಿಕಾರಿಗಳೂ ಇದರ ಬಗ್ಗೆ ಯಾವ ಕಾಳಜಿ ವಹಿಸುತ್ತಾ ಇಲ್ಲ.

11.50 ಎಎಂ

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಏನಾದರೂ ಹೇಳಲಿ, ಅನಂತರ ನಾವು ಮಾತನಾಡೋಣ. ಇದು ವರ್ಗಾವಣೆ ಖಾಯಿಲೆ ಸಮಯ. ಎಲ್ಲರೂ ವರ್ಗಾವಣೆಯಲ್ಲಿ ಬಿಸಿಯಾಗಿದ್ದಾರೆ ಎಲ್ಲರೂ ವರ್ಗಾವಣೆಗಾಗಿ ಕೆಲಸ ಮಾಡುತ್ತಾ ಇದ್ದಾರೆ. ಆದ್ದರಿಂದ ಮುಖ್ಯ ಮಂತ್ರಿಗಳು ಸರ್ಕಾರದ ಪರವಾಗಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಹೇಳಿದರೆ, ನಾವು ಆಮೇಲೆ ಮಾತನಾಡಲು ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಎಲ್ಲರೂ ಒಂದೇ ರೀತಿ ಹೇಳುತ್ತಾರೆ, ಎಲ್ಲರ ಬೇಡಿಕೆಯೂ ಒಂದೇರೀತಿ ಇರುತ್ತದೆ.

ಶ್ರೀ ಎಂ. ಮಹದೇವ:– ಸರ್ಕಾರ ಏನು ಮಾಡುತ್ತಿದೆ ಎಂಬುದನ್ನು ಮುಖ್ಯಮಂತ್ರಿಗಳು ಹೇಳಲಿ. ಒಂದೇ ಕಡೆಯಿಂದ ಮಾತನಾಡುತ್ತಾ ಇದ್ದರೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದೇ ಗೊತ್ತಾಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು:- ಒಂದಿಬ್ಬರು ಜಿಲ್ಲಾಧಿಕಾರಿಗಳನ್ನು ಸಸ್ಪೆಂಡ್ ಮಾಡಿದರೆ, ಆಗ ಸರಿಯಾಗುತ್ತದೆ.

ಶ್ರೀ ಎಂ. ಮಹದೇವ್:- ನೀವು ನಗರದಲ್ಲಿದ್ದೀರಿ, ಇದರ ಬಗ್ಗೆ ನಿಮಗೆ ಕಷ್ಟ ಗೊತ್ತಾಗುತ್ತಾ ಇಲ್ಲ. ನಾವು ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕ ಜನ, ನಮಗೆ ಆ ಕಷ್ಟ ಗೊತ್ತಾಗುತ್ತಿದೆ.

ಪ್ರೊ।। ಎಂ.ಡಿ. ನಂಜುಂಡಸ್ವಾಮಿ:- ಸನ್ಮಾನ್ಯ ಅಧ್ಯಕ್ಷರೇ, ಮೈಸೂರಿನ ಕಾಲರಾ ಸಮಸ್ಯೆ ಬಗ್ಗೆ ಚರ್ಚೆ ಮಾಡಿ ಈಗಾಗಲೇ ಒಂದು ವಾರದ ಮೇಲೆ ಆಯಿತು. 40 ಜನ ಸತ್ತರು ಎಂದು ಸುದ್ದಿ ಬಂದಮೇಲೆ, ಕೂಡಲೇ ಮಾತನಾಡುತ್ತಿದ್ದೇವೆ. ಮತ್ತೆ, ನಿನ್ನೆ ಮಧುಗಿರಿ ತಾಲ್ಲೂಕಿನ ಗರಣಿ ಎಂಬ ಗ್ರಾಮಕ್ಕೆ ಹೋಗಿದ್ದೆನು. ಅಲ್ಲಿ ಕಾಲರದಿಂದ ಒಂದು ಸಾವು ಆಗಿದೆ. ಸಾವು ಆದ ಕಾರಣ ಏನೇನೂ ಇಲ್ಲ ಇಷ್ಟೆ. ಅಲ್ಲಿ ಪ್ರಥಮ ಚಿಕಿತ್ಸೆಗೆ ಏನೇನು ಇಡಬೇಕು ಆ ಸಾಮಗ್ರಿಗಳು ಇಲ್ಲದೇ ಇದ್ದುದರಿಂದ ಸಾವಾಗಿದೆ. ಇದಕ್ಕೆ ಯಾರು ಹೊಣೆ, ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಬೇಕು. ನೀವು, ಇಷ್ಟು ದಿವಸ ನನಗೆ ಬಹಳ ಸುಂದರವಾಗಿ ಕಾಣಿಸುತ್ತಿದ್ದಿರಿ; ಈ ಮಾತನ್ನು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. You were looking really handsome to me. ಆದರೆ, ನಮ್ಮ ಸ್ನೇಹಿತರು ಮಾತನಾಡುತ್ತಾ ಇದ್ದಾಗ, ನೀವು ಅಲ್ಲಿ ಕುಳಿತಿದ್ದಿರಿ. ಈಗ You are looking to me like a murderer. ಹಾನೆಸ್ಟ್ ಆಗಿ ಹೇಳುತ್ತಿದ್ದೇನೆ. ನಾವು ಲಘುವಾಗಿ ತೆಗೆದುಕೊಳ್ಳಬಾರದು. ಪ್ರಾಮಾಣಿಕವಾಗಿ ನೀವು ನನಗೆ ಆದೇರೀತಿ ಕಾಣಿಸುತ್ತಿದ್ದೀರಿ. ಏಕೆಂದರೆ, ನಿನ್ನೆ ತಾನೆ ಗರಣಿಯಲ್ಲಿ ಸತ್ತ ಮನುಷ್ಯ...

–ಗೊಂದಲ–

SRI S.M. YAHYA: This is not a parliamentary word. How can you say? You are a Professor.

ಒಬ್ಬ ಸದಸ್ಯರು:- ಹಿರಿಯ ಸದಸ್ಯರು ಈ ರೀತಿ ಮಾತನಾಡುವುದು ಸರಿಯಲ್ಲ. ಅವರು ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು.

–ಗೊಂದಲ–

ಶ್ರೀ ಜಿ. ರಾಜುಗೌಡ:- ನೀವು ಏನು ಬೇಕಾದರೂ ಮಾತನಾಡಬಹುದೇ ?

–ಗೊಂದಲ–

ಪ್ರೊ।।ಎಂ.ಡಿ. ನಂಜುಂಜಸ್ವಾಮಿ:- ನಾನೇನೂ ಇದಕ್ಕೆ ಹೊಸಬ ಅಲ್ಲ. ಇದೇನೂ ನನ್ನ ಹತ್ತಿರ ನಡೆಯುವುದಿಲ್ಲ. ನೀವೆಲ್ಲರೂ ಎದ್ದುನಿಂತರೂ ನಡೆಯುವುದಿಲ್ಲ. ಎದ್ದು ನಿಲ್ಲಿ ನೋಡೋಣ.

–ಗೊಂದಲ–

ಪ್ರೊ।।ಎಂ.ಡಿ. ನಂಜುಂಡಸ್ವಾಮಿ:- ನಾನು ಇನ್ನೂ ಮಾತು ಮುಗಿಸಿಲ್ಲ. ನೀವು ಈ ರೀತಿ ಸರ್ಕಾರ ನಡೆಸುವುದಾದರೆ,

–ಗೊಂದಲ–

ಅಧ್ಯಕ್ಷರು:- ಈಗ ಎಲ್ಲರೂ ಕುಳಿತುಕೊಳ್ಳಿ.

(INTERRUPTION)

SRI VASANTH V. SALIAN: What do you mean by that?

PROF. M.D. NANJUNDA SWAMY: Allow me to complete my statement.

(INTERRUPTIONS)

AN.HON. MEMBER: There is a limit for your talk. As a senior Parliamentarian, he cannot use such words.

(INTERRUPTIONS)

ಅಧ್ಯಕ್ಷರು:- ತಾವೆಲ್ಲಾ ಕುಳಿತುಕೊಳ್ಳಿ. ನಾನು ಪದೇ ಪದೇ ಹೇಳುತ್ತಿದ್ದೇನೆ. ಸದನದ ನಿಯಮಗಳನ್ನು ತಾವು ಪಾಲಿಸುವಂತೆ ನಾನು ಹೇಳುತ್ತಿದ್ದೇನೆ. ನಾನು ಎದ್ದು ನಿಂತುಕೊಂಡರೆ ತಕ್ಷಣ ಸದಸ್ಯರು ಕುಳಿತುಕೊಳ್ಳಬೇಕು. ಇದು ನಿಮ್ಮ ಮೊದಲನೇ ಕರ್ತವ್ಯ. ಯಾವುದೇ ಒಂದು ವಿಷಯವನ್ನು ನಾನು ಹೇಳಿದ ಮೇಲೆ ಕೇಳಬೇಕು. ನಾನು ಯಾರನ್ನು ಮಾತನಾಡಲು ಕರೆಯುತ್ತೇನೆ. ಅವರೇ ಮಾತನಾಡಬೇಕು. ಇಲ್ಲದಿದ್ದರೆ ನೀವು ಒಬ್ಬರಿಗೊಬ್ಬರಿಗೆ ಮಾತನಾಡಿಕೊಂಡರೆ ಅದು ಸದನದ ಕಡತದಲ್ಲಿ ಹೋಗುವುದಿಲ್ಲ. ಇದು ತಮ್ಮ ಗಮನದಲ್ಲಿ ಇರಲಿ. ತಾವು ಏನೇ ಪ್ರಸ್ತಾಪ ಮಾಡಬೇಕಾದರೂ ನನ್ನ ಮುಖಾಂತರ ಪ್ರಸ್ತಾಪ ಮಾಡಬೇಕು. ತಾವು ಒಬ್ಬರಿಗೊಬ್ಬರಿಗೆ 225 ಜನ ಸದಸ್ಯರು ಮಾತನಾಡುತ್ತಾ ಹೋದರೆ ಅರ್ಥವಾಗುವುದಿಲ್ಲ. ಈ ವಿಷಯದ ಬಗ್ಗೆ ನಾನು ಏನು ಹೇಳುತ್ತೇನೆ ಅಂದರೆ ಸಾಕಷ್ಟು ಜನರು ಇದರ ಬಗ್ಗೆ ಹಿಂದೆ ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಈಗ ಬೇರೆ ಕಡೆ ಇದು ಹಬ್ಬಿದೆ, ಮಾನ್ಯ ಮುಖ್ಯ ಮಂತ್ರಿಗಳನ್ನು ಕರೆದಿದ್ದೇನೆ. ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಅವರು ಹೇಳಿದ ನಂತರ ಪುನಃ ತಮಗೆ ಏನಾದರೂ ಸಂಶಯ ಇದ್ದರೆ ಕೇಳುವ ಅಧಿಕಾರ ಇದೆ ಅಂತ ಹೇಳಿದೆ. ಅದನ್ನು ಬಿಟ್ಟು ತಾವೆಲ್ಲಾ ನಿಮ್ಮ ನಿಮ್ಮಷ್ಟಕ್ಕೆ ವರ್ಗಾವಣೆ ಮಾಡಿದ್ದೀರಿ ಅದು ಇದು ಅಂತ ಮಾತನಾಡಿಕೊಂಡರೆ ಅದು ಕಡತದಲ್ಲಿ ಹೋಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ. ಸಭಾನಾಯಕರೇ, ಈಗ ತಾವು ಮಾತನಾಡಿ.

SRI M. VEERAPPA MOILY:- The speaker has called me. I have to stand. I leave it to the Speaker.

ಅಧ್ಯಕ್ಷರು ನನ್ನನ್ನು ಕರೆದ ಮೇಲೆ ನಾನು ಉತ್ತರ ಕೊಡಬೇಕಾಗುತ್ತದೆ. I am not yielding. Unless the Speaker tells me, I cannot. I am sorry. Let us have some minimum decency of upholding the rules.

PROF. M.D. NANJUNDA SWAMY: You allowed me to start making a statement and it is unfair if you don't allow me to complete that statement.

ಅಧ್ಯಕ್ಷರು:- ಪ್ರೊಫೆಸರ್, ತಾವು ಕುಳಿತುಕೊಳ್ಳಿ. ಮುಖ್ಯಮಂತ್ರಿಗಳು ಉತ್ತರ ಹೇಳಿದ ಮೇಲೆ ನಾನು ತಮಗೆ ಕ್ಲಾರಿಫಿಕೇಷನ್ ಕೇಳಲು ಅವಕಾಶ ಮಾಡಿಕೊಡುತ್ತೇನೆ.

ಪ್ರೋ. ಎಂ. ಡಿ. ನಂಜುಂಡಸ್ವಾಮಿ:- ಸರಿ ಹೋಗುವುದಿಲ್ಲ. I should be allowed to complete my statement.

ಶ್ರೀ ಕರಿಯಣ್ಣ:- ಅವರು ಎದ್ದು ನಿಂತುಕೊಂಡು ಮಾತನಾಡಿದರೆ ನಾವೂ ಎದ್ದು ನಿಂತು ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು:– ದಯಮಾಡಿ ಕುಳಿತುಕೊಳ್ಳಿ.

(INTERRUPTIONS)

PROF. M.D. NANJUNDA SWAMY: Let us put the records straight.

(INTERRUPTIONS)

PROR. M.D. NANJUNDA SWAMY: I am only requesting you to put the records...

MR. SPEAKER: It will not go on record.

ಡಾ।। ಜೀವರಾಜಆಳ್ವ:– ಮಾನ್ಯ ಅಧ್ಯಕ್ಷರೇ, ಅವರಿಗೆ ತಾವು ಅವಕಾಶ ಮಾಡಿಕೊಡಬೇಕು ಏಕೆಂದರೆ ಅವರು ಬಹಳ ಮೇಧಾವಿಗಳು. ಸ್ವಲ್ಪ ಕೇಳಿ. ಅವರಿಗೆ ಕೆಲವು ಸಾರಿ ಕೆಲವು ಜನಗಳು ಡಕಾಯಿತರಾಗಿ ಕಾಣುತ್ತಾರೆ. ಕುಷ್ಟರೋಗಿಗಳಾಗಿ ಕಾಣುತ್ತಾರೆ. ಕೆಲವು ಸಾರಿ ಮರ್ಡರರ್ಸ ಆಗಿ ಕಾಣುತ್ತಾರೆ. ಅವರ ವಿಚಾರವಾದವನ್ನು ನಾವು ಕೇಳೋಣ. ನಮಗೆ ಅನುಮಾನ ಬರುವಂಥಹ ಒಂದು ವಾಕ್ಯವನ್ನು ಅವರು ಬಳಸಿದ್ದಾರೆ. ಇತ್ತೀಚಿಗೆ ಅವರು ಹೇಳುವುದು ಜನತೆಗೆ ಅರ್ಥವಾಗಲಿ. ಮಾನ್ಯ ಮುಖ್ಯಮಂತ್ರಿಗಳು ಆಮೇಲೆ ಉತ್ತರ ಕೊಡಲಿ. ಅಧ್ಯಕ್ಷರೇ, ಮೊದಲು ಅವರು ಏನು ಹೇಳಬೇಕೋ ಹೇಳಲಿ. Then you reply. You have not understood him. ಏಕೆಂದರೆ ಅವರು ಬಹಳ ಜನ ರಾಜಕಾರಣಿಗಳನ್ನು ರಾಷ್ಟ್ರ ನಾಯಕರನ್ನು ಒಳ್ಳೆಯ ಶಬ್ಧಗಳಿಂದ ವರ್ಣನೆ ಮಾಡುತ್ತಾರೆ. ಇನ್ನೂ ಮುಂದುವರಿಯಲಿ, ಜನಕ್ಕೆ ಅರ್ಥವಾಗಲಿ. ಅದ್ದರಿಂದ ದಯುವಿಟ್ಟು ನಿಲ್ಲಿಸಬೇಡಿ. ಇನ್ನೂ ವರ್ಣನೆ ಮಾಡಲಿ. ಅದಕ್ಕೆ ಮುಖ್ಯ ಮಂತ್ರಿಗಳೂ ಉತ್ತರ ಕೊಡಲಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ನಾನು ವಿನಾಕಾರಣ ಮಾತನಾಡುವುದಿಲ್ಲ.

ಶ್ರೀ ಕರಿಯಣ್ಣ: ಮಾನ್ಯ ಅಧ್ಯಕ್ಷರೇ, ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ನಾವೂ ಮಾತಾನಾಡುತ್ತೇವೆ. ಅದೂ ಅಲ್ಲದೆ ಅವರು ಮಾತನಾಡಿದ್ದನ್ನು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ನಾವೆಲ್ಲಾರೂ ಕೊಲೆಗಡಕರಾಗಿ ಕಾಣಿಸಿಕೊಳ್ಳತ್ತಿದ್ದೇವೆಂದು ಹೇಳುವುದಕ್ಕೆ ಹೊರಟಿದ್ದೇನೆ. I was only trying to say that all of us will be considered as murderers. I was trying to say that all of us will be looked at as murderers if we don't discharge our duties properly.

ಶ್ರೀ ಕರಿಯಣ್ಣ:– ಅವರು ಮೊದಲು ಆ ತರಹ ಹೇಳಿರಲಿಲ್ಲ.

(ಗೊಂದಲ)

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಹೀಗೇ ಸರ್ಕಾರ ನಡೆಸುತ್ತೀರಾ ?

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕರಿಯಣ್ಣ:– ಎಲ್ಲರೂ ಹೀಗೇ ಮಾತನಾಡಬೇಕಾ ಹೇಳಿ. ಅವರು ಪ್ರೊಫೆಸರ್ ಇದ್ದಾರೆ, ಅತಿ ತಿಳಿವಳಿಕೆಯುಳ್ಳವರಿದ್ದಾರೆ, ಆಸೆಂಬ್ಲಿ ಹೀಗೇ ನಡೆಯಬೇಕೇ, ನೀವೇ ಹೇಳಿ ಅಧ್ಯಕ್ಷರೇ ?

ಅಧ್ಯಕ್ಷರು:– ಪ್ರೊಫೆಸರ್, ತಮಗೆ ನಾನು ರಿಕ್ವೆಸ್ಟ್ ಮಾಡಿಕೊಂಡೆ,

ಶ್ರೀ ಆರ್.ವಿ. ದೇಶಪಾಂಡೆ:- ಸದನದಲ್ಲಿ ಒಂದು ಡಿಸಿಪ್ಲೀನ್ ಇರಬೇಕಾಗುತ್ತದೆ. ನಾನು ಎದ್ದು ನಿಂತಾಗ ನೀವು ಕೂಡ್ರಿ ಎಂದ್ರಿ, ನಾನು ಕೂತೆ. ನಾವು ರೂಲ್ ಪ್ರಕಾರ ತಮಗೆ ಗೌರವ ಕೊಟ್ಟು ಕೂತಿದ್ದು ತಪ್ಪಲ್ಲ. ಸಭಾನಾಯಕರು ಕರೆದ ಪ್ರಕಾರ ಅವರು ಉತ್ತರ ಕೊಡಲಿ. ಬಹಳ ಆಶ್ಚರ್ಯವಾಯಿತು, ಪ್ರೊಫೆಸರ್ ಅವರು ಒಂದು ಮಾತು ಹೇಳಿದರು, ಎಲ್ಲಾರು ಅವರಿಗೆ ಮರ್ಡರರ್ಸ್ ಆಗಿ ಕಾಣಿಸುತ್ತಾರೆಂದು. ನಾವು ಏನು ಮರ್ಡ್‌ರ್ ಮಾಡಿದ್ದೇವೆ ? ಅವರು ಏನು ಮಾತನಾಡುತ್ತಿದ್ದಾರೆಂದು ಅವರಿಗೆ ಗೊತ್ತಾಗುತ್ತಿಲ್ಲ. ಒಮ್ಮೆ ಮುಖ್ಯ ಮಂತ್ರಿ ಮರ್ಡರರ್ ಎಂದು ಹೇಳಿ ಈಗ ಎಲ್ಲರೂ ಮರ್ಡರರ್ ತರಹ ಕಾಣಿಸುತ್ತಾರೆಂದು ಹೇಳುತ್ತಾರೆ. ಯಾವ ದೃಷ್ಟಿಯಲ್ಲಿ ಮತ್ತು ಏನು ಮಾತನಾಡುತ್ತಿದ್ದೀರೆಂದು ನಿಮಗೇ ಗೊತ್ತಾಗುತ್ತಿಲ್ಲ. ಇವತ್ತು ಮುಖ್ಯವಾಗಿ ಕಾಲರಾ ಬಗ್ಗೆ ವಿಷಯ ಇದೆ. ಇದರ ಬಗ್ಗೆ ಗೌರ್ನಮೆಂಟ್ಸ್ ಏನು ಮೆಷರ್ಸ್ ತೆಗೆದುಕೊಂಡಿದೆ ? ಏನು ಕ್ರಮ ತೆಗೆದುಕೊಂಡಿದೆ ? ಇದು ರಾಜ್ಯದ ತುಂಬಾ ಹಬ್ಬುತ್ತಿದೆ. ನಾನು ಮುಖ್ಯ ಮಂತ್ರಿಗಳನ್ನು ತಮ್ಮ ಮುಖಾಂತರ ವಿನಂತಿ ಮಾಡುತ್ತೇನೆ, ಈ ಕಾಲರ ರೋಗ ಬರೀ ಮೈಸೂರಿಗೆ ಸೀಮಿತಗೊಂಡಿಲ್ಲ. ಎಲ್ಲಾ ಕಡೆ ಹಬ್ಬುತ್ತಿದೆ. ತಾವು ಏನು ಪ್ರಿಕಾಷನರಿ ಮೆಷರ್ಸ್ ತೆಗೆದುಕೊಂಡಿದ್ದೀರಿ ? ಏನು ಮೆಡಿಸನ್ ಸಪ್ಲೈ ಮಾಡಿದ್ದೀರಿ ? ಹಾರ್‍ನಹಳ್ಳಿ ರಾಮಸ್ವಾಮಿಯವರು ಹೇಳಿದರು ನಾವು ಮೆಡಿಸನ್ ತೆಗೆದುಕೊಳ್ಳುವುದಕ್ಕೆ ಬ್ಲಾಂಕೆಟ್ ಚೆಕ್ ಕೊಟ್ಟದ್ದೇವೆಂದು. ಹಾಗಾಗಿ ಡಾಕ್ಟರ್ಸ್ ಬಗ್ಗೆ ಮೆಡಿಸನ್ ಬಗ್ಗೆ ದಯಮಾಡಿ ಹೇಳಿ. ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡಬೇಕೇ ವಿನಃ ಬೆಳಸಲಿಕ್ಕೆ ಪ್ರಯತ್ನ ಮಾಡುವುದು ಬೇಡಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಸಭಾಧ್ಯಕ್ಷರೇ, please allow me to complete my statement.

ಅಧ್ಯಕ್ಷರು: ಪ್ರೊಫೆಸರ್, ನಾನು ತಮಗೆ ಕುಳಿತುಕೊಳ್ಳಿ ಎಂದು ಹೇಳಿದ್ದೇನೆ. ಅದನ್ನು ಬಿಟ್ಟು ನೀವು ಪ್ರಸ್ತಾವನೆ ಮಾಡುವುದು ಯಾವುದೂ ಕಡತದಲ್ಲಿ ಹೋಗುವುದಿಲ್ಲ. ಮತ್ತು ಇದೇ ರೀತಿ ಸದಸ್ಯರು ನಾನು ಹೇಳಿದ ನಂತರ ಕುಳಿತುಕೊಂಡು ಕಲಾಪಗಳನ್ನು ಸರಿಯಾಗಿ ನಡೆಸುತ್ತೇವೆಂದರೆ ನಾನು ಸಭೆಯನ್ನು ವ್ಯವಸ್ಥಿತ ರೀತಿಯಲ್ಲಿ ಮಾಡಿಕೊಂಡು ಹೋಗುವುದಕ್ಕಾಗುತ್ತದೆ. ಅದನ್ನು ಬಿಟ್ಟು ಪದೇ ಪದೇ ನಾನೇ ನಿಲ್ಲುತ್ತೇನೆ, ನಾನೇ ಹೇಳುತ್ತೇನೆ ಎನ್ನುವುದು ಸರಿಯಲ್ಲ. ಅದಕ್ಕೆ ದಯವಿಟ್ಟು ಕುಳಿತುಕೊಳ್ಳಿ. ನಾನು ಮುಖ್ಯ ಮಂತ್ರಿಗಳನ್ನು ಕರೆದಿದ್ದೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಸನ್ಮಾನ್ಯ ಸಭಾಧ್ಯಕ್ಷರೇ,

(ಗೊಂದಲ)

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಸಭಾ ನಾಯಕರು ಅವಕಾಶ ಕೊಟ್ಟರೆ, I request you to allow me to complete my statement in this House. One more sentence only. Thank you very much.

MR. SPEAKER: I will have to take action. There is no alternative left to me.

ಪ್ರೊ. ಎಂ.ಡಿ. ನಂಜುಂಡಸ್ವಾಮಿ ಸಭಾನಾಯಕರು, ತಾವು.........

ಅಧ್ಯಕ್ಷರು: ಪ್ರೊಫೆಸರ್ ಅವರೇ, ನಾನು ತಮಗೆ ಕೇಳಿಕೊಂಡಿದ್ದೇನೆ. ಕುಳಿತುಕೊಳ್ಳಲಿಲ್ಲವೆಂದರೆ ಮುಂದಿನ ಕ್ರಮ ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಅದು

ಅನಿವಾರ್ಯವಾಗುತ್ತದೆ. ತಾವು ಹಿರಿಯ ಸದಸ್ಯರು, ಅನುಭವಿಕರು, ಬುದ್ಧಿವಂತರು ಇದ್ದಾಗ್ಯೂ ಸಹಿತ ಸಭಾಧ್ಯಕ್ಷರು ಎದ್ದು ನಿಂತು ಹೇಳಿದ ನಂತರ ತಾವು ಮರ್ಯಾದೆ ಕೊಡಲೇಬೇಕು. ತಾವು ಕುಳಿತುಕೊಳ್ಳಿ. ಇಲ್ಲದೇ ಹೋದರೆ ನಾನು ಕೆಲವೊಂದು ವಿಷಯದಲ್ಲಿ ಅನಿವಾರ್ಯವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಆಸ್ಪದ ಮಾಡಿಕೊಡಬೇಡಿ. ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಮುಖ್ಯ ಮಂತ್ರಿಯವರನ್ನು ಕರೆದಿದ್ದೇನೆ. ಅವರು ಹೇಳಿದ ನಂತರ ನಿಮ್ಮದು ಏನು ಕ್ಲಾರಿಫಿಕೇಷನ್ ಇದೆ ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಸಭಾನಾಯಕರೇ,

ಶ್ರೀ ಎನ್.ಜಿ. ನಾಯಕ್:– ನಿಮ್ಮ ಮಾತು ಅವರು ಕೇಳಲಿಲ್ಲ. ದಯವಿಟ್ಟು ಅವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಸಾವಧಾನವಾಗಿ ಕೇಳುತ್ತಿದ್ದೆ, ಏಕೆಂದರೆ ಇದು ಬಹಳ ಗಂಭೀರವಾದ ಪ್ರಶ್ನೆ. ಸನ್ಮಾನ್ಯ ಸದಸ್ಯರು ಅದರಲ್ಲೂ ಮುಖ್ಯವಾಗಿ, ವಿರೋಧ ಪಕ್ಷದ ನಾಯಕರು, ಸನ್ಮಾನ್ಯ ಏಕಾಂತಯ್ಯನವರು, ವಾಟಾಳ್ ನಾಗರಾಜ್‌ರವರು, ಯಡಿಯೂರಪ್ಪನವರು ಮತ್ತು ಶಿವಮೂರ್ತಿಯವರು ಈ ರೀತಿಯಲ್ಲಿ ಅವರು ಏನು ಪ್ರತ್ಯಕ್ಷವಾಗಿ ಅವರು ನೋಡಿದ್ದಾರೆ ಅದರ ವಿವರಗಳನ್ನು ಅವರು ಕೊಡುತ್ತಿರುವಾಗ ನಾನು ಸಾವಧಾನವಾಗಿ ಕೇಳುತ್ತಿದ್ದೆ. ಪ್ರೊಫೆಸರ್ ನಂಜುಂಡಸ್ವಾಮಿಯವರೂ ಸಹ ಏನಾದರೂ ವಿವರ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಅವರು ಸೈದ್ಧಾಂತಿಕವಾಗಿ ತಮ್ಮ ಪ್ರತಿಭೆಯನ್ನು ನಮಗೆಲ್ಲಾ ಅನುಭವ ಮಾಡಲಿಕ್ಕೆ ಅವರು ಏನೋ ಹೇಳುತ್ತಿದ್ದಾರೆ, ಸನ್ಮಾನ್ಯ ಸದಸ್ಯರು ಏನು ಕಳಕಳ ವ್ಯಕ್ತಪಡಿಸಿದ್ದಾರೆ ಅದರ ಬಗ್ಗೆ ನಮ್ಮ ಸಹಮತ ಇದೆ. ತಮಗೆ ಗೊತ್ತಿದೆ ಇದು ಯಾವ ತರಹ ಬರುತ್ತದೆ. ಎಂದು ಮುಖ್ಯವಾಗಿ gastro–enteritis ಬರುವುದಕ್ಕೆ ಪರಿಶುದ್ಧವಾದ ನೀರು ಇಲ್ಲದೇ ಇರುವುದೇ ಇದಕ್ಕೆ ಪ್ರಮುಖವಾದಂಥ ಕಾರಣವಾಗುತ್ತದೆ. ಅದಕ್ಕೆ ಟ್ರೀಟ್ ಮಾಡಿದಂಥ ಒಳ್ಳೆಯ ನೀರು ಕೊಡಬೇಕಾಗುತ್ತದೆ. ಅದು ಕೊಡದೇ ಇದ್ದಾಗ ಈ ಸಂದರ್ಭ ಬರುತ್ತದೆ. ನಾಯಕನಹಟ್ಟಿ ಬಗ್ಗೆ ಉದಾಹರಣೆ ಹೇಳುವುದಾದರೆ ಅಲ್ಲಿ 2 ಲಕ್ಷ ಜನ ಜಾತ್ರೆಗೆ ಬರುತ್ತಾರೆ. ಅಲ್ಲಿ ಒಂದು ಕೆರೆ ಇದೆ. ಆ ಕೆರೆಯ ನೀರನ್ನೇ ಕುಡಿಯುವುದರಿಂದ ಅದು ಪ್ರಾರಂಭವಾಗುತ್ತದೆ. ಅದೂ ಅಲ್ಲದೆ ಇದು ಬೇಸಿಗೆ ಕಾಲ. ಜಾತ್ರೆಗಳಲ್ಲಿ ಸರಿಯಾದಂಥ ನೀರಿನ ವ್ಯವಸ್ಥೆ ಇರುವುದಿಲ್ಲವಾದ್ದರಿಂದ ಮೊದಲು ಅಲ್ಲಿಂದ ಪ್ರಾರಂಭವಾಗುತ್ತದೆ. Good treatment of water ಇರುವುದಿಲ್ಲ. ನಾವೇನೂ ಅಥವಾ ಸರ್ಕಾರದವರು ಹೋಗಿ ಆ ಕೆರೆಗಳಿಗೆ ವಿಷ ಹಾಕಲಿಲ್ಲ. ವಿಷ ಹಾಕಿ ಜನಗಳನ್ನು ಕೊಲ್ಲತಕ್ಕಂಥ ಪ್ರಯತ್ನ ಮಾಡಲಿಲ್ಲ. ಅಲ್ಲಿ ಕೆರೆಗಳಿವೆ, ಜಾತ್ರೆಗಳಿಗೆ ಲಕ್ಷಾಂತರ ಮಂದಿ ಹೋಗುತ್ತಾರೆ. ಕೆಲವು ಸಾರಿ ಪೇಟೆಗೆ ಮತ್ತು ಹಳ್ಳಿಗೆ ಜನ ಬರುತ್ತಾರೆ, ಆದರಿಂದ ಕೆಲವು ಸಾರಿ ಸ್ಪ್ರೆಡ್ ಆಗುತ್ತದೆ. ಅದಕ್ಕೆ ಬೇಕಾದ ಕ್ರಮವನ್ನು ಸರ್ಕಾರ ಏನು ತೆಗೆದುಕೊಳ್ಳಬಹುದು ? ಬೆಳಗಾಗುವ ಹೊತ್ತಿಗೆ ನಾವು ಶುದ್ಧ ನೀರು ಕೊಡುತ್ತೇವೆಂದರೆ ಆ ಪವಾಡ ಶಕ್ತಿ ಏನಾದರೂ ಪ್ರೊಫೆಸರ್ ನಂಜುಂಡಸ್ವಾಮಿಯವರಿಗೆ ಗೊತ್ತಿದ್ದರೆ ನಾವು ತಿಳಿದುಕೊಳ್ಳೋಣ. ಅಂಥ ಪವಾಡ ಶಕ್ತಿ ತಮಗೆ ಇರಬೇಕು ಎಂದು ನನಗನಿಸುತ್ತದೆ. ನಮಗಂತೂ ಇಲ್ಲ. ರಾತ್ರಿ ಬೆಳಗಾದರೆ ನೀರನ್ನೆಲ್ಲಾ ಒಳ್ಳೆ ಟ್ರೀಟ್ ಮಾಡಿ ಶುದ್ಧ ನೀರು ಕೊಡತಕ್ಕಂಥ ಪವಾಡ ಶಕ್ತಿ ನನಗಂತೂ ಇಲ್ಲ. ನಮ್ಮ ಸರ್ಕಾರಕ್ಕೂ ಕೂಡ ಇಲ್ಲ. ತಮಗೇನಾದರೂ ಅಂಥ ಪವಾಡ ಶಕ್ತಿ ಇದ್ದರೆ, ಬಹುಶಃ ರಾಜ್ಯದ ಜನಗಳನ್ನು ಬದುಕಿಸತಕ್ಕಂಥ ಒಂದು ಯುಗಪುರುಷರಾಗುತ್ತೀರಿ ತಾವು. ದಯಮಾಡಿ ಆ ಶಕ್ತಿ ಇದ್ದರೆ ನಮ್ಮ ಹತ್ತಿರ ಹಂಚಿಕೊಳ್ಳಿ. ತಾವೇ ಏಕೆ ಇಟ್ಟುಕೊಳ್ಳುತ್ತೀರಿ ?

ಅದನ್ನು ಇಟ್ಟುಕೊಳ್ಳಬೇಡಿ. ಅದನ್ನು ನಮ್ಮ ಜೊತೆಗೆ ಕೂಡ ಹಂಚಿಬಿಡಿ. ನಾವು ವ್ಯಾಕ್ಸಿನೇಷನ್ ಕೊಡಿಸಬಹುದು. ಆಸ್ಪತ್ರೆಗಳಿಗೆ ಡಾಕ್ಟರುಗಳನ್ನು ಹೆಚ್ಚು ಸಂಖ್ಯೆಯಲ್ಲಿ ಕಳುಹಿಸಬಹುದು. ಬೇಕಾದಂಥ ಮದ್ದು ಕಳುಹಿಸಬಹುದು, ಬ್ಲೀಚಿಂಗ್ ಪೌಡರನ್ನು ನಾವು ಕಳುಹಿಸಿಬಹುದು.

ಆದಷ್ಟು ಕಂಟಿನ್‌ಜೆನ್ಸಿ ಪ್ಲಾನ್ ಮಾಡಿಕೊಂಡು ಅಲ್ಲಿ ಶುದ್ಧ ನೀರನ್ನು ಕೊಡಲಿಕ್ಕೆ ಕೂಡ ನಾವು ಪ್ರಯತ್ನ ಮಾಡಲಿಕ್ಕೆ ಸಾಧ್ಯ ಇದೆ. ಈಗಾಗಲೇ ನಮ್ಮ ಜಾಯಿಂಟ್ ಡೈರೆಕ್ಟರ್‌ಗಳನ್ನು ರಾಜ್ಯದ ಬೇರೆ ಬೇರೆ ಕಡೆ ಕಳುಹಿಸಿದ್ದೇವೆ. ಅನ್ ದಿ ಸ್ಪಾಟ್ ನಿರ್ಣಯ ತೆಗೆದುಕೊಳ್ಳುವುದಕ್ಕೆ ಅವರಿಗೆ ಅಧಿಕಾರ ಕೊಟ್ಟಿದ್ದೇವೆ. ಎಷ್ಟು ಬೇಕಾದರೂ ಮದ್ದು ತೆಗೆದುಕ್ಕೊಳ್ಳಿ, ಆಂಬುಲೆನ್ಸ್ ಇಲ್ಲದಿದ್ದರೆ ಟ್ಯಾಕ್ಸಿಗಳನ್ನು ಎಂಗೇಜ್ ಮಾಡಿಕೊಂಡು ತೆಗೆದುಕೊಳ್ಳಿ ಎಂದು ಸಮರೋಪಾದಿಯಲ್ಲಿ ನಾವು ಇಡೀ ರಾಜ್ಯದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.– I am prepared even for a House Committee.

ನಾವು ಕಾರ್ಯಕ್ರಮ ತೆಗೆದುಕೊಳ್ಳುವುದರಲ್ಲಿ ಏನಾದರೂ ಲೋಪ ಇದ್ದರೆ, I am prepared. After all, we have done it.

ಆಮೇಲೆ ಸುಮಾರು 50 ಲಕ್ಷ ರೂಪಾಯಿಗಳನ್ನು ಈ ಬಗ್ಗೆ ಈಗಾಗಲೇ ಬಿಡುಗಡೆ ಮಾಡಿದ್ದೇವೆ. We are issuing a blanket cheque.

ಆಯಾ ಜಿಲ್ಲೆಯಲ್ಲಿ ಏನೇನು ಅಗತ್ಯ ಇದೆ ಅದನ್ನು ಕೂಡ ನಾವು ಈಗಾಗಲೇ ಕೊಡಬೇಕೆಂದು ಬಹಳ ಗಂಭೀರವಾದಂತಹ ವಿಚಾರದಲ್ಲಿ ನಾವು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಈಗ ಒಟ್ಟು 55 ತಾಲ್ಲೂಕ್‌ಗಳಲ್ಲಿ ನಮಗೆ ವರದಿ ಬಂದ ಪ್ರಕಾರ 19ನೇ ತಾರೀಖು ಮಾರ್ಚಿಯವರೆಗೆ 55 ತಾಲ್ಲೂಕ್‌ಗಳಲ್ಲಿ ಈ ರೀತಿ ಗ್ಯಾಸ್ಟ್ರೋಎಂಟರಿಟಿನ್ ಬಂದಿದೆ. ಸುಮಾರು ಅಲ್ಲಿ 863 ಗ್ರಾಮಗಳಿಗೆ ಇದು ವ್ಯಾಪಿಸಿದೆ. ಇದು ಒಟ್ಟು ಸುಮಾರು 11,15,276 ಜನ ಆ ಪಾಪ್ಯುಲೇಷನ್ ಅದು ಒಂದು ರೀತಿಯ ಏರಿಯ that much is covered.

4226 ಮಂದಿಗೆ ಹಬ್ಬಿ 142 ಮಂದಿ 18ನೇ ತಾರೀಖು ಮಾರ್ಚಿಯವರೆಗೆ ಮರಣವನ್ನು ಹೊಂದಿದ್ದಾರೆ. 19ನೇ ತಾರೀಖು 7 ಮಂದಿ ಸತ್ತಿದ್ದಾರೆ. So far 142 attacks on 18th March. Attacks on 19th March 291 – deaths on 19th March – 7 ಅಂದರೆ 298 ಜನ ಸತ್ತಿದ್ದಾರೆ. ಇನಾಕ್ಯುಲೇಷನ್ನ ಮಾಡಿದ್ದು 18ನೇ ತಾರೀಖು ಮಾರ್ಚಿಯವರೆಗೆ 5,92,687 practically more than 50% of the area of population has been covered by inoculation.. ಇದು ಇತ್ತೀಚೆಗೆ ನಡೆದಂತಹದ್ದು We are extending it now. Practically 50%. I don't think that this is less number. Massive efforts have been done..

ಶ್ರೀ ಕೆ. ಹೆಚ್. ಏಕಾಂತಯ್ಯ:– 50 ಪರ್ಸೆಂಟ್ ಅಲ್ಲ 10 ಪರ್ಸೆಂಟ್. ಯಾರೋ ಕೊಟ್ಟಿದ್ದನ್ನು ಓದಬೇಡಿ. ನೀವು ನಮ್ಮ ಜೊತೆಗೆ ಬನ್ನಿ 19ನೇ ತಾರೀಖಿನೊಳಗೆ ಚಿತ್ರದುರ್ಗ ಜಿಲ್ಲೆಯಲ್ಲಿ 18 ಸಾವಿರಕ್ಕಿಂತ ಜಾಸ್ತಿ ಮಾಡಿಸಿದ್ದರೆ ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ:– ತಾವು ಸ್ವಲ್ಪ ಸಾವಧಾನವಾಗಿ ಕೇಳಿ, ನಾನು ಒಟ್ಟು ಹೇಳಿದ್ದೇನೆ. ಇಲ್ಲಿ ಚಿತ್ರದುರ್ಗಕ್ಕೆ ಇಷ್ಟು ಎಂದು ವಿವರಕೊಡಬಹುದು. I am giving you the figures which I have. Suppose I have mislead, this figure is not correct, I will definitely take action against those who have furnished this information. I will not spare anyone in this. 5,92,687 ಮಂದಿಗೆ ಇನಾಕ್ಯುಲೇಷನ್ ಆಗಿದೆ. 19ನೇ ತಾರೀಖಿಗೆ ಪುನಃ 15,481 ಮಂದಿಗೆ ಇನಾಕ್ಯುಲೇಷನ್ ಆಗಿದೆ. Number of ORS packets distributed up

to 19th – 49,566; number of motion samples collected 9,250; number of motions positive – 36. no of water samples collected – 36 ...

ನಮ್ಮ ಹಂತದಲ್ಲಿ, ನಮ್ಮ ಕಾರ್ಯದರ್ಶಿಯವರ ಹಂತದಲ್ಲಿ ನಾವು ಡೆ.ಯು.ಡಿ ಸೆಕ್ರೆಟರಿಯವರ ಹತ್ತಿರ, ಬಿ.ಡಬ್ಲ್ಯೂ.ಎಸ್.ಬಿ ಛೇರ್ಮನ ಹತ್ತಿರ, ಕಮೀಷನರ್ ಆಫ್ ಸಿಟಿ ಕಾರ್ಪೋರೇಷನ್, ಚೀಫ್ ಇಂಜಿನಿಯರ್ ಪಿ.ಡಬ್ಲ್ಯೂ.ಸಿ ಮತ್ತೆ ಹೆಲ್ತ್ ಆಫೀಸರ್ ಆಫ್ ದಿ ಸಿಟಿ ಕಾರ್ಪೋರೇಷನ್ ಬೆಂಗಳೂರುನಲ್ಲಿಯೂ ಕೂಡ ಯಾವ ಹೆಜ್ಜೆಯನ್ನು ತೆಗೆದುಕೊಳ್ಳಬೇಕೆಂದು ನಿನ್ನೆ ತಾನೆ ಸಭೆಯನ್ನು ಮಾಡಿದ್ದೇವೆ. ವರ್ಷವರ್ಷ ಈ ಸಮಯುದಲ್ಲಿ ಇದು ಬರುತ್ತಾ ಇದೆ.

Every year, there are some deaths. We have statistics from 1985 till today. All of a sudden these things are not happening; ನಾವು ಒಳ್ಳೆಯ ಟ್ರೀಟ್‌ಮೆಂಟ್ ಮಾಡಿದಂತಹ ನೀರನ್ನು ನಾವು ಎಲ್ಲಿಯವರೆಗೆ ಕೊಡುವುದಿಲ್ಲ ಅಲ್ಲಿಯವರೆಗೂ ಇದು ಬರುತ್ತಾ ಇರುತ್ತದೆ. ನಾವು ಇದನ್ನು ತಡೆಹಿಡಿದು ನಿಲ್ಲಿಸಲಿಕ್ಕೆ ಸಮಾರೋಪಾದಿಯಲ್ಲಿ ಕಾರ್ಯಕ್ರಮವನ್ನು ಬೇರೆ ಬೇರೆ ಹಂತದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ 1980ರಲ್ಲಿಯೂ ಮತ್ತು 1985ರಲ್ಲಿ It has happened. but we have taken remedial mesures; Ac inoculations 6,80,830, what we have supplied... ಮೈಸೂರು ಸಿಟಿಗೆ 2,65,704 ಕೊಟ್ಟಿದ್ದೇವೆ. ಮೈಸೂರಿನ ಗ್ರಾಮಾಂತರ ಪ್ರದೇಶಕ್ಕೆ 78,963, ಚಿತ್ರದುರ್ಗಕ್ಕೆ 48,903 ಕೊಟ್ಟಿದ್ದೇವೆ.

SRI H. EKANTHAIH:– I challenge this Government ಸರ್ಕಾರದವರು 48,903 ಕೊಟ್ಟಿದ್ದರೆ I am going to resign...

SRI M.VEERAPPA MOILY: You need not, resign, If anybody has given a wrong information, I will suspend that officer you don't resign.

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಮುಖ್ಯ ಮಂತ್ರಿಗಳೇ, ನಮಗೆ ಅದರಿಂದ ಹೊಟ್ಟೆ ಉರಿಯುವುದೇನೆಂದರೆ ನಾವು ಅಲ್ಲಿಗೆ ಹೋದಾಗ ನಿಮ್ಮ ಅಧಿಕಾರಿಗಳು ಕೊಡುವಂತಹ ಅಂಕಿಅಂಶಗಳನ್ನು ನೋಡಿ ತಮ್ಮ ಹತ್ತಿರ ಬಂದು ಹೇಳಿದರೆ ಅದನ್ನು ಅವರು ಬೇರೆ ರೀತಿಯಲ್ಲಿ....

SRI M. VEERAPPA MOILY:– I will complete, please don't get excited.

ಶ್ರೀ ಹೆಚ್. ಏಕಾಂತಯ್ಯ:– ಅಲ್ಲಿ ಹೋಗಿ ಬಂದರೆ ನಿಮಗೆ ಗೊತ್ತಾಗುತ್ತದೆ.

SRI M. VEERAPPA MOILY:– I am sending the District Minister. Let him verify these facts. ನಮ್ಮ ಮಾನ್ಯ ಕೆ.ಹೆಚ್. ರಂಗನಾಥ್‌ರವರು ಇವತ್ತು ಮಧ್ಯಾಹ್ನದ ಮೇಲೆ ಚಿತ್ರದುರ್ಗಕ್ಕೆ ಹೋಗುತ್ತಿದ್ದಾರೆ. ವೆರಿಫೈ ಮಾಡುತ್ತಾರೆ. ಇದರಲ್ಲಿ ಏನಾದರೂ ತಪ್ಪು ಇದ್ದರೆ we will not spare the officer however big or low he may be. Yes, you have reasons to be excited. I don't say that you have no reasons to be excited. I don't find fault with you. At the same time. ಈ ಸವಾಲನ್ನು ನಾವು ಎದುರಿಸಬೇಕಾಗುತ್ತದೆ. ಎದುರಿಸತಕ್ಕಂಥ ದೃಷ್ಟಿಯಲ್ಲಿ ಏನಾದರೂ ಮಾಹಿತಿಯಲ್ಲಿ ಹೆಚ್ಚುಕಡಿಮೆಯಾಗಿ ತಪ್ಪಿದ್ದರೆ ಖಂಡಿತವಾಗಿಯೂ we will hold those officers responsible, whoever he may be..

ಆದ್ದರಿಂದ ಮಾನ್ಯ ಸಚಿವರು ಇವತ್ತು ಮಧ್ಯಾಹ್ನದ ಮೇಲೆ ಹೋಗುತ್ತಿದ್ದಾರೆ. ಬೆಂಗಳೂರು ಸಿಟಿಗೆ 94 ಸಾವಿರ, ಬಳ್ಳಾರಿಗೆ 31,313 ಇದನ್ನು ನಾವು ಈಗಾಗಲೇ ಒದಗಿಸಿದ್ದೇವೆ. ಹಣವನ್ನು ಕೂಡ

ನಾವು ಬೇರೆ ಬೇರೆ ಹಂತದಲ್ಲಿ ರಾಯಚೂರಿಗೆ 10 ಲಕ್ಷ, ಬೇರೆ ಬೇರೆ ರೀತಿಯಲ್ಲಿ amount released for purchase of drugs– ಇದನ್ನು ಬೇರೆ ಬೇರೆ ಜಿಲ್ಲೆಗಳಿಗೆ ನಾವು ಕೊಟ್ಟಿದ್ದೇವೆ. ರಾಯಚೂರಿಗೆ 10ಲಕ್ಷ, ಬಳ್ಳಾರಿಗೆ 10ಲಕ್ಷ, ಧಾರವಾಡಕ್ಕೆ 5ಲಕ್ಷ, ಚಿತ್ರದುರ್ಗಕ್ಕೆ 5ಲಕ್ಷ, ಗುಲ್ಬರ್ಗಕ್ಕೆ 5 ಲಕ್ಷ, ಬಿಜಾಪುರ 5 ಲಕ್ಷ, ದಕ್ಷಿಣಕ್ಕೆ ಕನ್ನಡ 3 ಲಕ್ಷ, ಉತ್ತರ ಕನ್ನಡ 3 ಲಕ್ಷ, ಮೈಸೂರು 3 ಲಕ್ಷ, ಚಿಕ್ಕಮಗಳೂರು 3 ಲಕ್ಷ, ಗೌರ್ನಮೆಂಟ್ ಮೆಡಿಕಲ್ ಸ್ಟೋರ್ಸ್, ಇದಕ್ಕೆ ಪ್ರತ್ಯೇಕವಾಗಿ 48 ಲಕ್ಷ ರೂಪಾಯಿಯನ್ನು ಕೊಟ್ಟಿದ್ದೇವೆ. If more money is required for purchase of the drugs. We will give.

ಆ ಮೆಡಿಸನ್ ಅನ್ನು ಲೋಕಲ್ ಆಗಿ ಪರ್ಚೇಸ್ ಮಾಡುವುದಕ್ಕೂ ಕೂಡ we are going to authorise. All these steps, we are going to take.. ಪ್ರತಿ ಜಿಲ್ಲೆಯ ಮಾಹಿತಿಯು ನನ್ನಲ್ಲಿ ಇದೆ. Bangalore City Corporation – Reported cases – 23, Fresh cases; Total, 325 people have been attacked as per 20th March Report. 20th March, Fresh cases.

12.20 ಪಿಎಂ

SRI. M. VEERAPPA MOILY: Anyway for Chamarajnagar I don't have the figures. But sofar as Nanjangud is concerned 7,000 doses of vaccines have been sent yesterday. Suppose, in Chamarajanagar if some cases are reported we will send immediately. ಡಿ.ಸಿ. ರವರಿಗೆ ಈಗಾಗಲೇ ಮೆಸೇಜ್ ಕಳುಹಿಸಿದ್ದೇವೆ. One team has been already sent to Nanjanagud to make on the spot study and we will take immediate measures. ಚಿತ್ರದುರ್ಗದ ಬಗ್ಗೆ ನಾನು ಈಗಾಗಲೇ ವಿವರಗಳನ್ನು ಕೊಟ್ಟಿದ್ದೇನೆ. Vaccine Institute ಬಗ್ಗೆ ನಾನು ವರದಿಯನ್ನು ಸೆಪರೇಟಾಗಿ ತರಿಸಿ ನೋಡುತ್ತೇನೆ. We will immediately revive it. 1,25,000 ಸ್ಟಾಕ್ ನಮ್ಮ ಹತ್ತಿರ ಈಗ ಇದೆ. We can definitely send it. I will give the report just now. ಆದುದರಿಂದ ಅಧ್ಯಕ್ಷರೇ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಸಮರೋಪಾದಿಯಲ್ಲಿ ತೆಗೆದುಕೊಂಡಿದ್ದೇವೆ. ಎಲ್ಲಿ ಯಾರು ಎಡುವುತ್ತಾರೆ ಯಾವ ಅಧಿಕಾರಿಗಳು ಕಾರ್ಯಲೋಪ ಮಾಡುತ್ತಾರೆ. We are not going to spare them. Every day, I will give the report. ನಾನು ಬೆಳಿಗ್ಗೆ ಕೂಡ ಬೇಕಾದಂಥ ಕಾರ್ಯಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಆದುದರಿಂದ ಸನ್ಮಾನ್ಯ ಪ್ರೊ. ನಂಜುಂಡಸ್ವಾಮಿಯವರು ಇದರ ಬಗ್ಗೆ ಏನಾದರು ಮಾತನಾಡಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು. ಆದರೆ ತಾವು ಅದನ್ನು ಸ್ವಲ್ಪ ರಾಜಕೀಯ ಮಾಡಲು ಹೋದರು. Please don't political capital of the misery of the people. This is my request through the House. I am sorry..

Reported – 23 with no deaths. Total 325 attacks with 9 deaths; 95,000 AC inoculations have been given.

In Bangalore Urban District, – 4 Villages in 2 taluks have been affected. 72 fresh cases on 20th March with 2 deaths have been reported on the day Day to day we are getting report. This is a report of 20th To day's report we are again getting it. It is not that we are not informed about it. 13,216 AC

inoculations have been given, 262 ORS packets distributed, 24 wells have been chlorinated, 128 houses have been disinfected; 4 motion samples have been collected.

In Bangalore Rural district – 5 villages in 2 taluks have been reported. 21 fresh cases on the day with one death. Total 104 attacks with five deaths have been reported from 1–1–93. 6,537 AC Inoclations have been done. 86 wells chlorinated, 89 houses disinfected, 21 motions samples collected. In Chitradua District, – 160 villages in 9 taluks have been reported, 109 fresh cases with 2 deaths have been reported on the day, that means on 20th. Total 690 attacks with 17 deaths have been repored from 1–1–93. 48,903 AC inoculations have been given. I will send the particulers with our Hon'ble Minister – let him check. 1988 ORS pockets have been distributed, 302 wells have been chlorinated; 406 houses dis– infected 129 motion samples have been collected. 6 cholera positives reported. 17 water samples have been taken. We have reports about Kolar District also ಎಲ್ಲಾ ಜಿಲ್ಲೆಯ ವರದಿಯು ನನ್ನ ಹತ್ತಿರ ಇದೆ. We have taken remedial measures. We are reviewing it practically on an hour to hour basis. I am getting the full report for the next day itself. 7,000 doses of vaccive have already been sent to Nanjangud yesterday.

ಆದ್ದರಿಂದ ಇದರ ಬಗ್ಗೆ ನಾವು ಸಾಕಷ್ಟು ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಆದರೆ ಇದರಿಂದ ಸಂಪೂರ್ಣವಾಗಿ ಪರಿಹಾರ ಆಯಿತು ಅಂತ ಹೇಳಿ ಇವತ್ತು ಹೇಳಿಕೊಳ್ಳತಕ್ಕಂಥದ್ದು ಇಲ್ಲ.

. SRI AZEEZ SAIT: My information is that Doctors in Chamarajanagar, Nanjangud have said thay have no vaccine..

PROF. M.D. NANJUNDASWAMY: No, no, – I am not playing politics. I was only trying to say...

SRI. M. VEERAPPA MOILY: Please don't do that. I know – you can wipe out, you can tarnish the image of all the political leaders so that you can emerge as polit– it can never happen, it will not happen. I know you have the design, you have the conspiracy to damage, and tarnish the image of all the political leaders, responsible political leaders... ತಮ್ಮ ರಾಜಕೀಯ ಸೌಧ ಕಟ್ಟಲಿಕ್ಕೆ...

(INTERRUPTION)

PROF. M.D. NANAJUNDASWAMY: I was only trying to say that we are playing with the life of the people..

SRI M.VEERAPPA MOILY: Prof. Nanjundaswamy, The days of hypocrisy is over. Don't play on hypocrisy which is not going to get you political mileage. As an elderly person please don't do that..

ಪ್ರೋ. ಎಂ.ಡಿ. ನಂಜುಂಡಸ್ವಾಮಿ:– ಸಭಾಧ್ಯಕ್ಷರೇ, ಈಗ ವಿರೋಧ ಪಕ್ಷದ ಗೆಳೆಯರು ಮತ್ತು ಆಡಳಿತ ಪಕ್ಷದ ಗೆಳೆಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಈ ವಿಷಯದಲ್ಲಿ I am not playing politics. I was only trying to say.

SRI M. VEERAPPA MOILY : To add to it – since 11th I visited Mysore City – According to the reports even from the MLAs forget about officials – till today there is no death in Mysore – that means we could tackle it – We are in a position with all your co–operation but in a time of war when the people are in misery I think all of us together to face this kind of challenge and making politics out of it I must tell you such politics will not take you anywhere. That is what I am telling. You are an elderly person, and this is not the way to demonstrate ones talent over the other; I am sorry this. should not happen and this should not be repeated. If you see murder every where, I think something fundamentally wrong with your attitude. Please correct in your own interest.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಅಧ್ಯಕ್ಷರೇ ಆದರಲ್ಲಿ ವ್ಯಾಕ್ಸಿನ್ ಮ್ಯಾನ್ಯುಫ್ಯಾಕ್ಚರ್ ಮಾಡತಕ್ಕಂಥದ್ದು ಬಹಳ ಮುಖ್ಯವಾದದ್ದು; ನಾನು ಅದನ್ನೇ ಗಮನಕ್ಕೆ ತಂದಿದ್ದು, ಮದ್ರಾಸ್ ,ಕಲ್ಕತ್ತಾದಿಂದ ತರಿಸುತ್ತಿದ್ದೀರಿ. ಆದ್ದರಿಂದ ನಮ್ಮ ಸಂಸ್ಥೆಯನ್ನು ರಿವೈವ್ ಮಾಡಿ. ನೀವು ಒಂದು ವರ್ಷದಿಂದ ಅದಕ್ಕೆ ಹಣ ಕೊಟ್ಟಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಸನ್ಮಾನ್ಯ ಅಧ್ಯಕ್ಷರೇ ನಾನು ಈ ಸದನಲ್ಲಿ ರಾಜಕೀಯ ಮಾಡುವುದಕ್ಕೆ ಬಂದಿಲ್ಲ. ಸಭಾನಾಯಕರು ದಯಮಾಡಿ ಕೇಳಬೇಕು.

ಡಾ।। ಎನ್.ಬಿ. ನಂಜಪ್ಪ:– He talked just like that without understanding the subject.

ಅಧ್ಯಕ್ಷರು:- ಡಾಕ್ಟರೇ ಕುಳಿತುಕೊಳ್ಳಿ. ನಾನು ಅವರನ್ನು ಕರೆದಿದ್ದೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಸನ್ಮಾನ್ಯ ಮುಖ್ಯ ಮಂತ್ರಿಗಳು ನನ್ನ ಕಡೆ ಗಮನಕೊಡಬೇಕು.

ಡಾ।। ಎನ್.ಬಿ. ನಂಜಪ್ಪ: ಅವರಿಗೆ ಮಾತನಾಡಲು ಚಾನ್ಸ್ ಕೊಡುತ್ತೀರಾ ? ಯಾರ್‍ಯಾರೋ ಮಾತನಾಡುತ್ತಾರೆ. ವಿಷಯ ಗೊತ್ತಿಲ್ಲದೆ ಮಾತನಾಡುತ್ತಾರೆ.

ಅಧ್ಯಕ್ಷರು: ಡಾಕ್ಟರ್‌ರವರೇ, ತಾವು ದಯಮಾಡಿ ಕುಳಿತುಕೊಳ್ಳಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಮೊದಲನೇ ವಾಕ್ಯಕ್ಕೆ ಹೀಗೆ ಗಲಾಟೆ ಮಾಡಿದರೆ ಹೀಗೆ ? ಎರಡನೇ ವಾಕ್ಯ ಹೇಳುವುದಕ್ಕೆ ಬಿಟ್ಟಿಲ್ಲ. ಏತಕ್ಕೆ ಇವೊತ್ತು ಹೀಗೆ ಮಾಡುತ್ತಿದ್ದೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ:– ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರೇ, ಈಗ ದಯಮಾಡಿ

ಕೇಳಬೇಕು. ಜನಕಷ್ಟದಲ್ಲಿ ಇದ್ದಾಗ ಭಯ, ಶಂಕೆ ಹುಟ್ಟಿಸತಕ್ಕ ಕೆಲಸವನ್ನು ದಯಮಾಡಿ ಮಾಡಬೇಡಿ ಎಂದು ಜನತೆಯ ಪರವಾಗಿ ಹಾಗೂ ಸರ್ಕಾರದ ಪರವಾಗಿ ಕೇಳಿಕೊಳ್ಳುತ್ತೇನೆ. ಇದರಿಂದ ಯಾರಿಗೂ ಲಾಭವಿಲ್ಲ. ಏನಾದರೂ ನಿಮಗೆ ಸ್ವಲ್ಪ ಲಾಭ ಇದ್ದರೂ, ಕೂಡ ಇದರಿಂದ ಲಾಭ ಬರುವುದಿಲ್ಲ. ಜನ ನಿಮ್ಮ ಬಗ್ಗೆ ತಪ್ಪು ತಿಳಿದುಕೊಳ್ಳುತ್ತಾರೆ. ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು ಜನರ ಹಿತದೃಷ್ಟಿಯನ್ನು ಬಿಟ್ಟು ಅವರದ್ದೇ ಸ್ವಂತವಾದಂಥ ಸಿದ್ಧಾಂತದ ಹೆಸರಿನಲ್ಲಿ ಏನೋ ಮಾಡುತ್ತಿದ್ದಾರೆ ಎನ್ನತಕ್ಕ ಸಂಶಯ ತಮ್ಮ ಮೇಲೆ ಬರುವುದುಬೇಡ. Don't create panic. Let us all work together to meet this kind of challenge.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ನಾನು ಈ ಸದನಕ್ಕೆ ಬಂದಾಗಿನಿಂದ ತಾವು ಕಡಿತ ತರಿಸಿ ನೋಡಬೇಕು. ನಾನು ಯಾವುದೇ ಸರ್ಕಾರ ಇರಲಿ ಕ್ರಿಯಾತ್ಮಕವಾದ ಸಲಹೆಯನ್ನು ಕೊಡುತ್ತಾ ಬಂದಿದ್ದೇನೆ. ನಾನು ಯಾವುದೇ ಸಮಸ್ಯೆಯಲ್ಲಿ ರಾಜಕಾರಣ ಮಾಡಿಲ್ಲ. ಮುಂದೆ ಮಾಡುವುದೂ ಇಲ್ಲ. ತಾವು ಇವೊತ್ತು ಯಾತಕ್ಕೆ ಈ ರೀತಿ ಮಾತನಾಡುತ್ತಿದ್ದೀರಿ ಎಂಬುದು ನನಗೆ ಗೊತ್ತಿಲ್ಲ. ನಾನು ಏನು ಹೇಳಲು ಹೊರಟಿದ್ದೆ ಎಂಬುದನ್ನು ಗಮನಿಸಬೇಕು. ವಿರೋಧಪಕ್ಷದ ನಾಯಕರಿಗೂ ಸ್ವಲ್ಪ ಬೇಜಾರಾಗಿದೆಯೋ ಏನೋ ? ಒಟ್ಟಾರೆ ನಾನು ಏನು ಹೇಳಲು ಹೊರಟಿದ್ದೇನೆಂದರೆ ನಾವುಗಳು ಹೀಗೆ ಮುಂದುವರೆಯುತ್ತಾ ಹೋದರೆ, ಹಾಗೂ ನಾವು ಚರ್ಚೆ ಮಾಡುತ್ತಾ ಇದ್ದರೆ ನಾವು ಯಾರು ಆಯ್ಕೆಯಾಗಿ ಬಂದಿದ್ದೇವೆ ನಾವೆಲ್ಲರೂ ಹೊಣೆಗಾರರು ಆಗುತ್ತೇವೆ ಎಂದು ಹೇಳಲು ಹೊರಟಿದ್ದೆ, ಅದನ್ನು ಹೇಳಲು ಹೊರಟಿದ್ದೆ. ನನ್ನ ಪೀಠಿಕೆಯಲ್ಲಿಯೇ ನಮ್ಮ ಗೆಳೆಯರು ವಿರೋಧ ಮಾಡಲು ಹೊರಟರು. ಇವೊತ್ತು ನಾನು ಕ್ರಿಯಾತ್ಮಕವಾದ ಸಲಹೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಏನು ಮಾಡುತ್ತಿದ್ದೇನೆಂದರೆ ಆರೋಗ್ಯ ಇಲಾಖೆ ಬಹಳ ದೊಡ್ಡ ಇಲಾಖೆ; ತಾವು ಇನ್ನೂ ತಮ್ಮ ಕಡೆ ಇಟ್ಟುಕೊಂಡಿದ್ದೀರಿ, ತಮಗೆ ಅದರ ಕಡೆ ಗಮನಕೊಡಲು ಆಗುತ್ತಿಲ್ಲ. ತಾವು ಇದನ್ನು ಯಾತಕ್ಕೆ ಒಪ್ಪಿಕೊಳ್ಳಬಾರದು. Why don't you appoint a Health Minister as early as possible? Why don't you do it.

ನೀವು ಏನೋ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೀರಿ, ಅವರು ಏನೋ ಮಾಡಿಕೊಂಡು ಹೋಗುತ್ತಿದ್ದಾರೆ, ಆದರೆ ಜನರು ಸಾಯುತ್ತಿದ್ದಾರೆ. It is a heavy portfolio. Why don't you appoint a Health Minister? Can we run a Government without an independent Health Minister? That is what I was trying to say...

ಅಷ್ಟಕ್ಕೇ ನೀವು ಗಲಭೆ ಮಾಡಿದರೆ ನಾನೇನು ಮಾಡಲಿ ? ನಾವು ಎಷ್ಟರಮಟ್ಟಿಗೆ ಜವಾಬ್ದಾರರು, ನೀವು ಅಷ್ಟರ ಮಟ್ಟಿಗೆ ಜವಾಬ್ದಾರರಾಗುತ್ತೀರಿ. Because we are tolerating this Government without a Health Minister. We are tolerting this Government without a Health Minister. That is all I want to speak. Nothing else.

ಶ್ರೀ ವಾಟಾಳ್ ನಾಗರಾಜ್:- ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟರು. ಈ ಕಾಯಿಲೆ ಹರಡುತ್ತಾ ಇದೆ. ಸರ್ಕಾರ ಎಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾಗಿತ್ತೋ ಅಷ್ಟು ಪರಿಣಾಮಕಾರಿಯಾಗಿ ಆಗಿಲ್ಲ. ಅದನ್ನು ತಾವು ಒಪ್ಪಿಕೊಳ್ಳಬೇಕು. ಮೈಸೂರಿನಲ್ಲಿ ಸಾವು ಆಗಿಲ್ಲ ಎಂದು ಹೇಳಿದಿರಿ. ನೆನ್ನೆ ಮೈಸೂರಿನ ಪೇಪರನ್ನು ತರಿಸಿ ನೋಡಿ, ಮೈಸೂರಿನಲ್ಲಿ ಎರಡು ಜನ ಸತ್ತಿದ್ದಾರೆ. ನೀವು ಏನೂ ನೋಡುತ್ತಾ ಇಲ್ಲ. ಮಾಡುತ್ತಾ ಇಲ್ಲ ಎಂಬ ಭಾವನೆ ಇಲ್ಲ. ಆದರೆ ಬಹಳ ನೋವಾಗಿದೆ. ಬಹಳ ನೋವಿನಿಂದ ಹೇಳುತ್ತಿದ್ದೇನೆ. ಇದು ರಾಜ್ಯಾದ್ಯಂತ ಹರಡುತ್ತಿದೆ. ಇದನ್ನು ಸಮಾರೋಪಾದಿಯಲ್ಲಿ ಮಾಡುತ್ತೇವೆಂದು ಹೇಳಿದಿರಿ. ಅಧಿಕಾರಿಗಳೇ ಅಂಕಿ-ಅಂಶಗಳನ್ನು ನಿಮಗೆ

ಕೊಡಬೇಕಾಗುತ್ತದೆ, ಅವರನ್ನು ಬಿಟ್ಟು ಇನ್ನು ಯಾರು ಕೊಡುತ್ತಾರೆ. ನಾನು ವಿರೋಧ ಮಾಡಲು ಹೋಗುವುದಿಲ್ಲ. ಆದರೆ ಎಷ್ಟು ಪರಿಣಾಮಕಾರಿಯಾಗಿ ಆಗಬೇಕಾಗಿತ್ತೋ ಅಷ್ಟು ಪರಿಣಾಮಕಾರಿಯಾಗಿ ಆಗಲಿಲ್ಲ ಎಂದು ನೋವಿನಿಂದ ಹೇಳುತ್ತಿದ್ದೇನೆ. ಆದುದರಿಂದ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ನಾನು ನೆನ್ನೆ ಮೈಸೂರಿನಲ್ಲಿ ಇದ್ದೆ, ಮುಖ್ಯ ಮಂತ್ರಿಗಳೂ ಸಹ ಬಹಳ ಪ್ರಾಮಾಣಿಕವಾಗಿ ಬಂದರು, ಎಲ್ಲರ ಜೊತೆ ಮಾತನಾಡಿದರು, ಅಧಿಕಾರಿಗಳಿಗೆ ಹೇಳಿದರು, ಆದರೆ ಏನು ಹೇಳಿದರೂ, ಅಲ್ಲಿ ಅಷ್ಟು ಪರಿಣಾಮಕಾರಿಯಾಗಿ ಕೆಲಸ ಆಗುತ್ತಾ ಇಲ್ಲ. ಎಲ್ಲೋ ಒಂದು ತಪ್ಪು ಹೆಜ್ಜೆ ಇಡುತ್ತಿದ್ದೀರಿ. ಇದು ಕೇವಲ ಮೈಸೂರಿಗೆ ಅಲ್ಲ ಇಡೀ ರಾಜ್ಯಾದ್ಯಂತ ,ಮೂಲೆ, ಮೂಲೆಗಳಲ್ಲಿ ಹಬ್ಬುತ್ತಿದೆ. ಆದ್ದರಿಂದ ಇದರ ಬಗ್ಗೆ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಬೇಕು. ಇದು ರಾಜ್ಯದ ಎಲ್ಲಾ ಕಡೆ ಹರಡುತ್ತಿದೆ ಎಂದು ನೋವಿನಿಂದ ಹೇಳಬೇಕಾಗಿದೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಹೆಚ್. ಏಕಾಂತಯ್ಯ:- ಈ ವಿಷಯ ಪ್ರಸ್ತಾಪ ನಾನು ಮಾಡಿದೆ, ನನಗೆ ಉತ್ತರ ಬರಲಿಲ್ಲ. ನಾನು ಚಿತ್ರದುರ್ಗದ ಬಗ್ಗೆ ಕೇಳುತ್ತಿದ್ದೇನೆ.

ಚಿತ್ರದುರ್ಗ ಮತ್ತು ಹಿರಿಯೂರು ತಾಲ್ಲೂಕುಗಳ ಬಗ್ಗೆ ನಾನು ನೇರವಾಗಿ ಪ್ರಸ್ತಾಪ ಮಾಡಿದೆ, 160 ನಮ್ಮ ಜಿಲ್ಲೆಯಲ್ಲಿ ಹಳ್ಳಿಯಲ್ಲಿ ಆಗಿದೆ ಎಂಬ ಮಾತನ್ನು ಹೇಳಿದಿರಿ, 9 ಪಟ್ಟಣಗಳು ಸೇರಿ ಸುಮಾರು ಹತ್ತು ಲಕ್ಷ ಜನ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಈ ಕಾಲರಾ ವ್ಯಾಧಿಯಿಂದ ಪೀಡಿತರಾದಂಥ ಜನರು ಇದ್ದಾರೆ. ಅವರಲ್ಲಿ ಎಲ್ಲರಿಗೂ ವ್ಯಾಕ್ಸಿನೇಷನ್ ಮಾಡುವುದಕ್ಕೆ ಆಗಿಲ್ಲ. ಶೇಕಡಾ 10ರಷ್ಟು ಮಾಡಿಲ್ಲ. ಅದಕ್ಕಿಂತ ಹೆಚ್ಚಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಶನಿವಾರ ಬೆಳಿಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಜಿಲ್ಲಾ ಮಂತ್ರಿಗಳಿಗೆ ಶನಿವಾರ ಬೆಳಿಗ್ಗೆ ನಾನು ತಂತಿ ಸಂದೇಶ ಕಳುಹಿಸಿದ ಮೇಲೆ ಏನಾದರೂ ಅಲ್ಲಿ ನಿಮ್ಮ ಸರ್ಕಾರ ಇದೆ ಎಂಬುದಕ್ಕೆ ಚುರುಕುಗೊಂಡಿದೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ನಾನು ಹೇಳಿದಂಥ ಲೋಪದೋಷಗಳು ಏನಿದೆ, ತಾವು ಇಲ್ಲಿ ಎಷ್ಟೇ ಆಶ್ವಾಸನೆ ಕೊಟ್ಟಿದ್ದರೂ ಸಹಾ ಕೆಳಹಂತದಲ್ಲಿ ಅದು ಜಾರಿಯಾಗಿಲ್ಲ. ಆದ್ದರಿಂದ ತಮಗೆ ನಾನು ಕೇಳುತ್ತಿದ್ದೇನೆ, ಅದನ್ನು ಜಾರಿ ಮಾಡುವಂಥ ವ್ಯವಸ್ಥೆಯನ್ನು ತಾವು ಕೂಡಲೇ ಮಾಡಲೇಬೇಕು. ತಾವು ಐದು ಲಕ್ಷ ಕೊಟ್ಟಿದ್ದೇವೆ ಎಂದು ಹೇಳಿದಿರಿ, ನಾನು ತಮಗೆ ಕೇಳುತ್ತೇನೆ, ಇಲ್ಲೇ ಇಟ್ಟುಕೊಂಡಿದ್ದೇನೆ, 5 ಲಕ್ಷ ಕೊಟ್ಟಿದ್ದರೆ, ಡ್ರಿಪ್ಸ್ ಸೆಟ್ ಇಲ್ಲದಂತೆ ಇರುತ್ತದೆಯೇ ಆಸ್ಪತ್ರೆಯಲ್ಲಿ ? ಇವೆಲ್ಲಾ ನಮಗೆ ಅಲ್ಲಿ ಹೋದಾಗ ನೋವಾಗುತ್ತದೆ. ಮರದ ಕೆಳಗೆ ನೀವು ಹಂದಿಯನ್ನು ಮಲಗಿಸಿದ ಹಾಗೆ ಮಲಗಿಸಿ ಡ್ರಿಪ್ಸ್‌ನ್ನು ಅಂಗಡಿಯಿಂದ ತೆಗೆದುಕೊಂಡು ಬಾರೋ ಎಂದು ಹೇಳಿ ನಾನು ತಂದುಕೊಟ್ಟಮೇಲೆ ಅವರು ಹಾಕುವುದಾದರೆ, ಅದು ಸರಿಯೇ ? ನಮ್ಮ ಒಂದು ತೀವ್ರವಾದಂಥ ದುಃಖವನ್ನು ತಾವು ಅರ್ಥಮಾಡಿಕೊಳ್ಳಬೇಕು. ಇಂಥ ಒಂದು ಪರಿಸ್ಥಿತಿ ಇದೆ. ತಾವು ಎಷ್ಟೇ ಹೇಳಿಕೆ ನೀಡಿದರು ಸಹ ಈ ಹಣ ಅಲ್ಲಿಗೆ ಹೋಗಿಲ್ಲ. ಅಥವಾ ನಿಮ್ಮ ವ್ಯವಸ್ಥೆ ಸರಿಯಾಗಿಲ್ಲ. ನಿಮ್ಮ ಆಡಳಿತ ವ್ಯವಸ್ಥೆ ಸರಿಯಾಗಿಲ್ಲ. ಎಷ್ಟು ಜನ ಜಾಯಿಂಟ್ ಡೈರೆಕ್ಟರ್‌ಗಳು ಇಲ್ಲಿಂದ ಹೋಗಿದ್ದಾರೆ ಚಿತ್ರದುರ್ಗಕ್ಕೆ ಸ್ವಾಮಿ ? ಎಷ್ಟು ಜನ ಜಿಲ್ಲಾ ಆರೋಗ್ಯಾಧಿಕಾರಿಗಳು ಇದ್ದಾರಲ್ಲಾ, ಯಾವುದಾದರೂ ಹಳ್ಳಿಗೆ ಹೋಗಿದ್ದಾರಾ ? ಇವುಗಳನ್ನು ತಾವು ನೋಡಿ ಎಂಬ ಮಾತನ್ನು ಹೇಳುತ್ತಿದ್ದೇನೆ, ತಾವು ಏನು ಹೇಳಿದ್ದೀರಿ, ಇದು ಕಾರ್ಯಗತವಾಗಿಲ್ಲ. ಕಾರ್ಯಗತವಾಗುವಂಥ ರೀತಿಯಲ್ಲಿ ಇವತ್ತಿನೊಳಗೆ ತಾವು ಮಾಡಬೇಕು ಎಂದು ಹೇಳಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ಮಧ್ಯಾಹ್ನದ ಮೇಲೆ

ಹೋಗುತ್ತಿದ್ದಾರೆ. ಅವರ ಜೊತೆಯಲ್ಲಿ ನಾನು ನಿರ್ದೇಶಕರನ್ನು ಕೂಡ ಕಳುಹಿಸುತ್ತೇನೆ. ಇಬ್ಬರನ್ನು ಕಳುಹಿಸಿ ಅಲ್ಲಿ ಏನಾದರೂ ಲೋಪ ಇದ್ದರೆ I will find out that.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು:– ಕುಳಿತುಕೊಳ್ಳಿ. ಮುಖ್ಯ ಮಂತ್ರಿಗಳು ಈಗ ಎಲ್ಲವನ್ನೂ ಹೇಳಿದರಲ್ಲಾ.

ಶ್ರೀ ಕೆ. ಹರ್ಷಕುಮಾರ ಗೌಡ:– ಮಾನ್ಯ ಅಧ್ಯಕ್ಷರೇ, ಇದು ಬಹಳ ಮುಖ್ಯವಾದುದು.

ಅಧ್ಯಕ್ಷರು:– ಹೇಳಿ.

† ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ):– ರಾಜ್ಯದ ಬಗ್ಗೆ ಚರ್ಚೆ ಆಗುತ್ತಿದೆ. ಕಾಲರಾ ಬಗ್ಗೆ. ಮೈಸೂರು ನಗರದಲ್ಲಿ ಪ್ರಥಮವಾಗಿ ಕಾಲರಾ ಕಾಣಿಸಿದ್ದು ಅದರ ಬಗ್ಗೆ ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ತಾವು ಆದೇಶಕೊಟ್ಟ ಮೇಲೆ ಮೈಸೂರು ನಗರಕ್ಕೆ ಸಚಿವರಾದ ಮಾನ್ಯ ವಿಶ್ವನಾಥ್‌ರವರು ಮತ್ತು ಮುಖ್ಯ ಮಂತ್ರಿಗಳು ಎಲ್ಲರೂ ಬಂದರು; ಕಾರ್ಯದರ್ಶಿಗಳೂ ಬಂದರು. 11ನೇ ತಾರೀಖಿನಿಂದ ಇಲ್ಲಿಯತನಕ ಹಾಗೂ ಇವತ್ತು ಬೆಳಿಗ್ಗೆ 7 ಗಂಟೆಯಲ್ಲಿ ಕೂಡ ಆಸ್ಪತ್ರೆಗೆ ಹೋಗಿದ್ದೆ. ಪತ್ರಿಕೆಗಳಲ್ಲಿ ಏನೂ ಔಷಧಿಗಳು ಇಲ್ಲ ಎಂದು ಹೇಳಿ ಪ್ರಚಾರ ಬಂತು. ನಾನು ಕೂಡ ಗಾಬರಿಯಾಗಿ ನಾನು ಆಸ್ಪತ್ರೆಗೆ ಹೋದಾಗ ನೋಡಿದೆ. ಎಲ್ಲಾ ಸ್ಟಾಕ್ ಇದೆ. 11ನೇ ತಾರೀಖಿನಿಂದ ಸುದೈವ ಯಾವುದೇ ಸಾವು ನೋವುಗಳಾಗಿಲ್ಲ. ಮುಖ್ಯ ಮಂತ್ರಿಗಳು ಭೇಟಿ ಆದನಂತರ. ಜೊತೆಗೆ ವ್ಯಾಕ್ಸಿನೇಷನ್ ಬಗ್ಗೆ ಒಂದು ಚರ್ಚೆ ನಡೆಯುತ್ತಿದೆ. ಒಂದು ಕಡೆ ಆಲ್ ಇಂಡಿಯಾ ಮೆಡಿಕಲ್ ಸೈನ್ಸ್‌ನವರು ಹೇಳುತ್ತಾರೆ, ಈ ವ್ಯಾಕ್ಸಿನೇಷನ್ ಪ್ರಯೋಜನ ಇಲ್ಲ ಎಂದು ಹೇಳಿ. ಇನ್ನೊಂದು ಕಡೆ ವ್ಯಾಕ್ಸಿನೇಷನ್ ಹಾಕಬೇಕು ಎಂದು ಹೇಳುತ್ತಾರೆ. ಆದರೆ ನಾವು ಮೈಸೂರಿನಲ್ಲಿ ಮುನ್ನೆಚ್ಚರಿಕೆಯನ್ನು ಏನು ನಾವು ತೆಗೆದುಕೊಂಡಿದ್ದೇವೆ ನಾನೂ ಕೂಡ ಆಸ್ಪತ್ರೆಗೆ ಹೋಗಬೇಕಾದರೆ ಬಿಸಿನೀರು ಕುಡಿದುಕೊಂಡು ಹೋಗುತ್ತೇನೆ. ಇಲ್ಲದಿದ್ದರೆ ಎಲೆಕ್ಟ್ರಾಲ್ ಇಟ್ಟುಕೊಂಡಿರುತ್ತೇವೆ. ಆಸ್ಪತ್ರೆಗಳಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಮಾಡುತ್ತಿದ್ದಾರೆ. ರೂರಲ್ ಏರಿಯಾಗಳಿಂದ ಕೆಲವು ಸಾರಿ ಆಗಿದೆ. ಬೋರ್‌ವೆಲ್‌ಗಳ ಅಭಾವದಿಂದ ಬೋರ್‌ವೆಲ್‌ಗಳು ಕೆಟ್ಟಿರುವುದರಿಂದ ಅಲ್ಲಿ ನೀರು ಕುಡಿಯುವುದು, ಜಾತ್ರೆಗಳಾಗುತ್ತದೆ, ಮಾರಿಹಬ್ಬಗಳಾಗುತ್ತಿವೆ. ಇಂಥ ಪರಿಸ್ಥಿತಿಯಿಂದ ಇದು ಉಲ್ಬಣಗೊಂಡಿದೆಯೋ ಹೊರತಾಗಿ ಸರ್ಕಾರದ ವೈಫಲ್ಯ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆ ಎಂದರೆ ಇಡೀ ರಾಜ್ಯದಲ್ಲಿ ಇವತ್ತು ಮಾನ್ಯ ನಂಜುಂಡಸ್ವಾಮಿಯವರು ಮಾತನಾಡಿದ್ದು ನೋಡಿದರೆ ಒಂದು ರೀತಿಯ ಭಯದ ವಾತಾವರಣ ಆತಂಕದ ವಾತಾವರಣ ಮೂಡುವಂತೆ ಕಾಣಿಸುತ್ತದೆ. ನಾವು ಕೂಡ ಮೈಸೂರಿನಲ್ಲಿ ಭಯ ಬಿದ್ದಿದ್ದೆವು. ಆದರೆ ಸಂಪೂರ್ಣವಾಗಿ ಅದು ತಹಬಂದಿಗೆ ಬಂದಿದೆ. ನಗರಸಭೆಗಳು, ಮುನಿಸಿಪಾಲಿಟಿಗಳು ಸಂಪೂರ್ಣವಾದ ಕೆಲಸಗಳನ್ನು ಮಾಡಬೇಕು. ತಿಂಡಿ ಮಾರಾಟ ಬೀದಿಯಲ್ಲಿ ಮಾರಾಟ ಮಾಡುತ್ತಾರೆ, ಅದನ್ನು ನಿಲ್ಲಿಸಬೇಕು. ಮನೆ ಮನೆಗಳಲ್ಲಿ ನೀರು ಕುಡಿಯುವಂಥ ವ್ಯವಸ್ಥೆಗಳನ್ನು ಮಾಡಿದಾಗ ಹಾಗೂ ನಾವೇ ಅದರ ಬಗ್ಗೆ ನಿಗಾ ವಹಿಸಿದಾಗ ಆ ಕೆಲಸಗಳಾಗುತ್ತವೆ. ಇಡೀ ಸರ್ಕಾರದ ಜವಾಬ್ದಾರಿಯಲ್ಲ. ಅದು ಸಮಾಜದ ಜವಾಬ್ದಾರಿ. ಅದಕ್ಕೆ ಸರಿಯಾದಂಥ ಮಾರ್ಗದರ್ಶನ ಕೊಡುವುದು ಕೂಡ ಎಲ್ಲರ ಜವಾಬ್ದಾರಿಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಮುಖ್ಯ ಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಮೈಸೂರು ನಗರದಲ್ಲಿ ನಮಗೆ ಸಂಪೂರ್ಣವಾಗಿ ತಹಬಂದಿಗೆ ಬಂದಿದೆ. ಆದರೂ ಕೂಡ ಗ್ರಾಮಾಂತರ ಪ್ರದೇಶದಲ್ಲಿ ಇವತ್ತು ಇದೆ. ಗ್ರಾಮಾಂತರದ ಪ್ರದೇಶದಿಂದ ನಾನು ಸಂಘರ್ಷಸಮಿತಿಯ ಅಧ್ಯಕ್ಷನಾಗಿದ್ದೇನೆ, ಆ ಆಸ್ಪತ್ರೆಗೆ ಗ್ರಾಮಾಂತರ ಪ್ರದೇಶದಿಂದ ಪ್ರತಿನಿತ್ಯ ಬರುತ್ತಿದ್ದಾರೆ. ಆದರೂ ಕೂಡ ಸುಮಾರು ಒಬ್ಬರೇ ಒಬ್ಬರು ಡಾಕ್ಟರ್ ಇದ್ದ ಆಸ್ಪತ್ರೆಗೆ 24 ಜನ

ಡಾಕ್ಟರ್‌ಗಳು ಇವತ್ತು ಪ್ರತಿನಿತ್ಯ ಹಗಲು ರಾತ್ರಿ ದುಡಿಯುತ್ತಿದ್ದಾರೆ. ಮತ್ತೆ ರೋಗಿಗಳ ಸೇವೆ ನಿರಂತವಾಗಿ ಮಾಡಿಕೊಂಡು ಬರುತ್ತಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳಿ ನನ್ನ'ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಒಂದು ಪ್ರಶ್ನೆ ಎತ್ತಿದರು ಪಬ್ಲಿಕ್ ಹೆಲ್ತ್ ಇನ್ಸ್‌ಟಿಟ್ಯೂಟ್ ಇದು ನಿಂತಿದೆ, ಅದು ಕೆಲಸವಾಗುತ್ತಿಲ್ಲ. ಅದು ತಿಂಗಳಿಗೆ ಎರಡು ಲಕ್ಷ ಡೋಸಸ್ ಅಲ್ಲಿ ಉತ್ಪನ್ನ ಆಗುತ್ತಿದೆ. ಇದು ಮಾತ್ರವಲ್ಲದೆ ನಾವು ಮದ್ರಾಸ್‌ನಿಂದ ಕೂಡ ತರಿಸುತ್ತಿದ್ದೇವೆ, A.C.vaccine–ಅದು ಮ್ಯಾನ್ಯುಫ್ಯಾಕ್ಚರ್ ಆಗುತ್ತಿದೆ. ಎರಡು ಲಕ್ಷ ಆಮೇಲೆ ಅದು ಸಾಲದು ಎಂದು ಹೇಳಿ ಪುನಃ ಮದ್ರಾಸ್‌ನಿಂದ ತರಿಸುತ್ತಿದ್ದೇವೆ.

ಶ್ರೀ ಎಂ. ಮಹದೇವ್:– ಮಾನ್ಯ ಅಧ್ಯಕ್ಷರೇ, ಒಂದು ಪಾಯಿಂಟ್ ಇದೆ.

ಡಾ।। ಜೀವರಾಜ್ ಆಳ್ವ:– ಕಾಲರಾ ಬಗ್ಗೆ ಆದರೆ ತಾವೂ ಧ್ವನಿಗೂಡಿಸಿದ್ದೀರಿ ಎಂದು ಪತ್ರಿಕೆಯಲ್ಲಿ ಬರುತ್ತದೆ.

ಶ್ರೀ ಎಂ. ಮಹದೇವ್:– ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಿನ್ನೆ ತಾನೇ ನಂಜನಗೂಡಿಗೆ ಮೆಡಿಸಿನ್ಸ್ ಕಳಿಸಿದ್ದೇನೆಂದು ಹೇಳಿದ್ದಾರೆ. ಅವರಿಗೆ ಧನ್ಯವಾದಗಳನ್ನು ಹೇಳುತ್ತಾ ರೋಗ ಜಾಸ್ತಿ ಆಗುತ್ತಾ ಇದೆ; ಸಾವಿರಾರು ಜನ ಬರುತ್ತಾ ಇದ್ದಾರೆ. ವ್ಯಾಕ್ಸಿನೇಷನ್ ತಾವು ಏನು ಕಳುಹಿಸಿದ್ದೀರಿ ಅದು ಸಾಲುವುದಿಲ್ಲ. ಅದಕ್ಕೆ ಇನ್ನೂ ಸಾವಿರಾರುಗಟ್ಟಲೆ ಮೆಡಿಸಿನ್ಸ್‌ಗಳನ್ನು ಅಲ್ಲಿಗೆ ಕಳಿಸಬೇಕು ಮತ್ತು ಸಿಬ್ಬಂದಿವರ್ಗ ವಾಹನಗಳನ್ನು 25ನೇ ತಾರೀಖಿನಿಂದ 3ನೇ ತಾರೀಖಿನವರೆಗೆ ಕಳುಹಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ।। ವೈ. ನಾಗಪ್ಪ:– ಜಾತ್ರೆ ನಿಲ್ಲಿಸಿಬಿಡುವುದೇ ಒಳ್ಳೆಯದು ಎಂದು ಕಾಣಿಸುತ್ತದೆ.

ಶ್ರೀ ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, ನಾವು 10 ಸಾವಿರ ಡ್ರಗ್ಸ್ ಅನ್ನು ಪುನಃ ಕಳುಹಿಸುತ್ತೇವೆ.

ಡಾ।। ವೈ ನಾಗಪ್ಪ:– ಕಾಲರಾ ಇದೆ ಎಂದು ತಿಳಿದರೆ ಅದನ್ನು ನಿಲ್ಲಿಸಬಹುದಲ್ಲಾ.

ಶ್ರೀ ಎಂ. ಮಹದೇವ್:– ನಂಜನಗೂಡಿನ ಜಾತ್ರೆ ಬಹಳ ಪವಿತ್ರವಾದುದು.

ಶ್ರೀ ವೀರಪ್ಪ ಮೊಯಿಲಿ:– ಡಾಕ್ಟರ್ ಇಲ್ಲದೇ ಇದ್ದರೆ ಡಾಕ್ಟರ್‌ಗಳನ್ನು ಕೂಡ ರೀಡಿಪ್ಲಾಯ್ಡ್ ಮಾಡಿಕೊಂಡು ಅಲ್ಲಿಗೆ ಕಳಿಸುತ್ತೇವೆ.

ಶ್ರೀ ಎಂ. ಮಹದೇವ್:– ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು: ಮಹದೇವ್ ಅವರೇ ಕುಳಿತುಕೊಳ್ಳಿ ಕಾಲರಾ ಬಗ್ಗೆ ಮುಗಿದು ಹೋಯಿತು. ನಾನು ಬೇರೆ ವಿಷಯ ತರುತ್ತೇನೆ, ಸಾಕಷ್ಟು ಒಂದೂವರೆ ಗಂಟೆ ಚರ್ಚೆ ಆಯಿತು ಅದರ ಬಗ್ಗೆ.

(ಗೊಂದಲ)

ಬೆಂಗಳೂರಿನ ಅನಾಥಾಶ್ರಮದ ಭೂಮಿಯ ರಕ್ಷಣೆ ಬಗ್ಗೆ

ಡಾ।। ಜೀವರಾಜ್ ಆಳ್ವ:– ಮಾನ್ಯ ಅಧ್ಯಕ್ಷರೇ, 1942ರಲ್ಲಿ ಒಬ್ಬರು ಶ್ರೀಮತಿ ಪಾರ್ವತಮ್ಮ ಹಿರೇಮಠ್ ಎನ್ನುವ ವಿಧವೆ ಬೆಂಗಳೂರು ನಗರದಲ್ಲಿ ಅನಾಥ ಮಕ್ಕಳಿಗೋಸ್ಕರ ಒಂದು ಅನಾಥ ಶಿಶು ಆಶ್ರಮವನ್ನು ಆರಂಭ ಮಾಡಿದರು. ಅವರು ಸರ್ಕಾರದಿಂದ ಯಾವುದೇ ಅನುದಾನವನ್ನು

ತೆಗೆದುಕೊಳ್ಳಲಿಲ್ಲ. ಏಕೆಂದರೆ ಸರ್ಕಾರದ ಹಂಗಿನಲ್ಲಿ ಇರಬೇಕಾಗುತ್ತದೆ ಎಂದು ಹೇಳಿ. ಜನಸಾಮಾನ್ಯರಿಂದ ಧನ ಸಂಗ್ರಹ ಮಾಡಿ ಸುಮಾರು 42 ರಿಂದ 50 ವರ್ಷಗಳ ಕಾಲ ಅವಿರತವಾಗಿ ಸೇವೆ ಮಾಡಿಕೊಂಡು ಬಂದರು. 1957ರ ಸುಮಾರಿಗೆ ನನ್ನ ತಂದೆಯವರಾದ ಡಾ: ನಾಗಪ್ಪ ಆಳ್ವ ಅವರು, ನನ್ನ ಮಾತೋಶ್ರೀಯವರಾದ ಶ್ರೀಮತಿ ಕಲ್ಯಾಣಿ ಆಳ್ವರವರು ಈ ಅನಾಥ ಶಿಶು ಸೇವಾ ಆಶ್ರಮಕ್ಕೆ ಏನಾದರೂ ಸಹಾಯ ಮಾಡಬೇಕು ಎಂದು ಯೋಚನೆ ಮಾಡಿ ಬೆಂಗಳೂರು ನಗರದಲ್ಲಿ ಬಹಳ ಅತ್ಯಮೂಲ್ಯವಾದ ಜಾಗ, ಸುಮಾರು 25 ಎಕರೆ ಜಮೀನನ್ನು ಈ ಅನಾಥ ಶಿಶು ಸೇವಾ ಆಶ್ರಮಕ್ಕೆ ಕೊಟ್ಟರು. ಆ ಜಮೀನು ಯಶವಂತಪುರದ ಪಕ್ಕದಲ್ಲಿದೆ. ಇವತ್ತು ಅಲ್ಲಿ ಏನು ಆಗಿದೆ ? 1992ಕ್ಕೆ ಬಂದಾಗ ಆ ಜಾಗದ ಬೆಲೆ ಕೋಟಿಗಟ್ಟಲೆ ಆಗಿದೆ. ಈ ಕೋಟಿಗಟ್ಟಲೆ ಬೆಲೆ ಆದ್ದರಿಂದ ಅಸಂಖ್ಯಾತ ಜನರ, ದಳ್ಳಾಳಿಗಳ, ಮಿಡಲ್‌ಮೆನ್‌ಗಳ, ರಾಜಕಾರಣಿಗಳ ಕಣ್ಣು ಅದರ ಮೇಲೆ ಬಂದಿದೆ. ಅಧಿಕಾರಿ ವರ್ತುಲಗಳು ಅವರ ಮಧ್ಯ ಸೇರಿದ್ದಾರೆ. ಪೋಲೀಸ್ ಇಲಾಖೆಯವರೂ ಅವರ ಜೊತೆ ಸೇರಿದ್ದಾರೆ. ವಿದ್ಯಾ ಇಲಾಖೆಯ ಅಧಿಕಾರಿಗಳೂ ಇದಕ್ಕೆ ಸೇರಿದ್ದಾರೆ. ಏಕೆಂದರೆ ಯಾಹ್ಯ ಸಾಹೇಬರಿಗೆ ಈ ಮಾತನ್ನು ಹೇಳಿದೆ. 1989ರಲ್ಲಿ ಆ ಹೆಂಗಸು ವಯೋವೃದ್ಧೆ. ನಾವು ಎಲ್ಲಾ ವಿಚಾರಗಳನ್ನು ಇಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾವು ಎಲ್ಲಾ ವಿಚಾರಗಳನ್ನು ಬಹಳ ಲೈಟಾಗಿ ತೆಗೆದುಕೊಳ್ಳುತ್ತೇವೆ. ಅವರು ಬಂದು ಹೇಳಿದಾಗ ನಾವು ಶಾಸಕರಾಗಿ, ಪ್ರತಿನಿಧಿಯಾಗಿ ಅವರ ರಕ್ಷಣೆಗೆ ಹೋಗೋಣ. ಇಂತಹ ಸಂಸ್ಥೆಗಳ ರಕ್ಷಣೆಗೆ ಹೋಗೋಣ. ಆ ತಪ್ಪನ್ನು ಸರಿಪಡಿಸಬೇಕು ಎನ್ನುವ ಮನಸ್ಸು ಇದ್ದರೂ ಕೂಡ ನನ್ನ ಲೋಪ ನನ್ನ ನ್ಯೂನತೆಯಿಂದ ಆ ಹೆಂಗಸಿನ ರಕ್ಷಣೆಗೆ ಹೋಗಲಿಕ್ಕೆ ನನಗೆ ಆಗಲಿಲ್ಲ. ಈ ವಯೋವೃದ್ಧೆ ಹೆಂಗಸು ಸರ್ಕಾರದಿಂದ ಅನುದಾನ, ಗ್ರಾಂಟ್ ಏನೂ ಪಡೆದುಕೊಳ್ಳದೆ ಈ ಅನಾಥ ಶಿಶು ಸೇವಾ ಆಶ್ರಮ ಏನು ನಡೆಸುತ್ತಿದ್ದಾರೆ ಇಲ್ಲಿ ಒಬ್ಬ ಬೋರೇಗೌಡ ಎನ್ನುವ ವ್ಯಕ್ತಿ ಪ್ರವೇಶ ಮಾಡಿದ. ಈ ಬೋರೇಗೌಡ ಹುಚ್ಚಮಾಸ್ತಿಗೌಡರ ಹೆಸರನ್ನು ಆಗಾಗ ಉಪಯೋಗಿಸುತ್ತಿದ್ದಾನೆ. ಒಕ್ಕಲಿಗ ಅಧಿಕಾರಿಗಳ ಹೆಸರನ್ನು ಉಪಯೋಗಿಸುತ್ತಿದ್ದಾನೆ. ಹಿರಿಯ ಪೋಲೀಸ್ ಅಧಿಕಾರಿಗಳ ಹೆಸರನ್ನು ಉಪಯೋಗಿಸುತ್ತಿದ್ದಾನೆ. ಈ ಬೋರೇಗೌಡ ಬಂದು ಈ ಅನಾಥ ಶಿಶು ಸೇವಾ ಆಶ್ರಮದಲ್ಲಿ ವರ್ಕ್ಸ್ ಮ್ಯಾನೇಜರ್ ಆಗಿ ಸೇರಿಕೊಂಡ. ಈ ಹೆಂಗಸು ಅತ್ಯಂತ ವಯೋವೃದ್ಧೆ ಆಗಿದ್ದರಿಂದ ಅವನಿಗೆ ಲೀಗಲ್ ಆಗಿ ಒಂದು ಲೆಟರ್ ಆಫ್ ಅಥಾರಿಟಿ ಕೊಟ್ಟರು. ಆ ಹೆಂಗಸು ಕೋರ್ಟಿಗೆ ಹೋಗುವುದಕ್ಕೆ ಆಗುವುದಿಲ್ಲ ಎಂದು ಹೇಳಿ. ಇಲ್ಲಿ ಒಂದು ಮಾತನ್ನು ಅತ್ಯಂತ ನೋವಿನಿಂದ ಹೇಳಬೇಕಾಗುತ್ತದೆ. ಯಾವ ಅನಾಥ ಶಿಶು ಸೇವಾ ಆಶ್ರಮದ ಮಕ್ಕಳಿಗೆ, ಅವರಿಗೋಸ್ಕರ ಈ ಭೂಮಿ ಇದೆಯೋ, ಇವತ್ತು ನಾವು ಭೂಮಿಯನ್ನು ಕಸಿದುಕೊಳ್ಳಲಿಲ್ಲ. ಸರ್ಕಾರಕ್ಕೆ ಧೈರ್ಯ ಇಲ್ಲ. ಎಷ್ಟೋ ವಿದ್ಯಾ ಸಂಸ್ಥೆಗಳಿಗೆ ನಾವು ಕೋಟ್ಯಾಂತರ ಲಕ್ಷಾಂತರ ಬೆಲೆ ಬಾಳುವಂತಹ ನಿವೇಶನಗಳನ್ನು ಕೊಟ್ಟಿದ್ದೇವೆ. ಆದರೆ ಯಾವುದು ಸರಿಯಾಗಿ ನಡೆಯುತ್ತಿಲ್ಲ. ಅಂಥವುಗಳನ್ನು ತೆಗೆದುಕೊಳ್ಳತಕ್ಕಂಥದ್ದು ಇಲ್ಲ. ಆದರೆ ಬಿಡಿಎನವರು ಇದಕ್ಕೆ ಕೈ ಹಾಕಿದರು. ಈ ಬೋರೇಗೌಡನ ಜೊತೆ ಶಾಮೀಲಾಗಿ. ಇಲ್ಲಿ ಒಂದು ತರಹ ನೆಕ್ಸಸ್. ಅವನಿಗೂ ಇದಕ್ಕೂ ಯಾವುದೇ ಸಂಬಂಧ ಇಲ್ಲ. ಇವನು ಸೆಕ್ರೆಟರಿ ಅಲ್ಲ. ವರ್ಕ್ಸ್ ಮ್ಯಾನೇಜರ್ ಆಗಿ ಇದರಲ್ಲಿ ಪವರ್ ಆಫ್ ಅಥಾರಿಟಿ ತೆಗೆದುಕೊಂಡು ಅರ್ಧ ನಿಮಗೆ ಅರ್ಧ ನಮಗೆ ಎಂದು ಪಾಲುಗಾರಿಕೆ ಮಾಡುವಂತಹ ಒಂದು ಪ್ರಸಂಗ ಬಂತು.

ಒಂದು ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ, ಆ ವಿದ್ಯಾಸಂಸ್ಥೆಗೆ ಗ್ರಾಂಟ್-ಇನ್-ಏಡ್ ಕೊಡಿ ಎಂದು ಶ್ರೀಮತಿ ಪಾರ್ವತಮ್ಮ ಹಿರೇಮಠರವರು ಯಾವೊತ್ತೂ ಕೇಳಿಲ್ಲ. ಆ ಹೆಸರಿನಲ್ಲಿ ಅನುದಾನ ಕೊಡಬೇಕು. ಸುಮಾರು ಒಂದೂವರೆ ಲಕ್ಷ ರೂಪಾಯಿಗಳು ಅವರಿಗೆ ಸ್ಯಾಂಕ್ಷನ್ ಆಗಬೇಕು. ನಾನು ಮಧ್ಯೆ ಪ್ರವೇಶಿಸಿ ಶ್ರೀ ಯಾಹ್ಯಾರವರಿಗೆ ಹೇಳಿ ಅದನ್ನು ನಿಲ್ಲಿಸಿದೆ. ಇವೊತ್ತು ಹೈಕೋರ್ಟಿನಲ್ಲಿ ಅದರ

ಬಗ್ಗೆ ಡಿಕ್ರಿ ಇದೆ. He cannot function as a Secretary. ಎಲ್ಲಾ ಪೇಪರ್ಸ್ ಅನ್ನು ಡಿಸ್ಪಾರ್ಟ ಮಾಡಿ ಬೇನಾಮಿ ಮಾಡಿದ್ದಾನೆ. ನಂತರ ನಾನು ಮುಂಬೈಗೆ ಹೋಗಿ ಅಲ್ಲಿ 'ಮೋದಿ ಸ್ಟೋರ್ಸ್' ಎಂಬ ಒಬ್ಬ ದೊಡ್ಡ ಕಂಪನಿಯವರನ್ನು ಕೇಳಿದೆ; ಈ ಒಂದು ಅನಾಥ ಶಿಶು ಸೇವಾಶ್ರಮಕ್ಕೆ ಪೂರ್ಣ ಪರಿಹಾರ ಕೊಡಬೇಕೆಂಬ ಭಾವನೆಯಿಂದ ಕನ್ನಡ ಮತ್ತು ಹಿಂದಿ ಚಲನಚಿತ್ರ ರಂಗದ ನಟನಟಿಯರ 'ದಕ್ಷಿಣೆ' ಎಂಬ ಒಂದು ಕಾರ್ಯಕ್ರಮವನ್ನು ನಿಯೋಜನೆ ಮಾಡಿದ್ದೆ. ಈ ಕಾರ್ಯಕ್ರಮವನ್ನು ನಗರದ ಕಂಠೀರವ ಸ್ಟೇಡಿಯಂನಲ್ಲಿ ನಿಯೋಜಿಸಿದ್ದು, ಇದರಿಂದ ಸುಮಾರು 50–60 ಲಕ್ಷ ರೂಪಾಯಿಗಳ ನಿಧಿ ಬರುತ್ತದೆಂದು, ಈ ಕಾರ್ಯಕ್ರಮಕ್ಕೆ ಎಲ್ಲಾ ನಟ–ನಟಿಯರು ಬರುವುದಕ್ಕೆ ಒಪ್ಪಿದ್ದರು, ಆದರೆ, 'ಕಾವೇರಿ ಜಲವಿವಾದ' ದಿಂದಾಗಿ ಗಲಭೆಯುಂಟಾಗಿ ಕಾರ್ಯಕ್ರಮ ರದ್ದಾಯಿತು. ಕಾರ್ಯಕ್ರಮದ ವಿಫಲತೆ ಬಗ್ಗೆ ನನಗೆ ತುಂಬಾ ನೋವಾಗಿದೆ. ಶ್ರೀಮತಿ ಪಾರ್ವತಮ್ಮ ಹಿರೇಮಠರವರಿಗೆ ಸುಮಾರು 90 ವರ್ಷ ವಯಸ್ಸಾಗಿದ್ದು, ನಿಧನರಾದರು. ನಂತರ ಮಾನ್ಯ ಹುಚ್ಚಮಾಸ್ತಿಗೌಡರ ಮನೆಯಿಂದ ಫೋನ್ ಹೋಗುತ್ತದೋ, ಅಥವಾ ಯಾವ ಒಕ್ಕಲಿಗ ಮಂತ್ರಿಗಳ ಮನೆಯಿಂದ ಫೋನ್ ಹೋಗುತ್ತದೋ ನನಗೆ ಗೊತ್ತಿಲ್ಲ. ಏಕೆಂದರೆ, ಇಲ್ಲಿ ಜಾತಿ ಪ್ರಶ್ನೆ ಬಂದಿದೆ. ಈ ಬಗ್ಗೆ ಪೋಲೀಸ್ ಇಲಾಖೆಯವರಿಗೆ ನಾನು ಹೇಳಿದೆ: ಇಂತಹ ಫ್ರಾಡ್ ಇರುವುದು ನಿಮಗೆ ಗೊತ್ತಿದೆ, ಈತ ವಿದ್ಯಾ ಇಲಾಖೆಯಲ್ಲಿ ಫ್ರಾಡ್ ಮಾಡಿದ್ದಾನೆ, ರಿಜಿಸ್ಟ್ರಾರ್ ಆಫ್ ಕೋ–ಆಪರೇಟಿವ್ ಸೊಸೈಟಿಯಲ್ಲಿ ಫ್ರಾಡ್ ಮಾಡಿದ್ದಾನೆ. ಆತನ ಮೇಲೆ ಹೈಕೋರ್ಟಿನಲ್ಲಿ ಡಿಕ್ರಿ ಇದೆ. ಇವನು ಸಿವಿಲ್ ಕೋರ್ಟಿಗೆ ಹೋಗಿ he has brought Injunction Order on the Office – Bearers of the Association.

ಸಿವಿಲ್ ಕೋರ್ಟ್ ವ್ಯವಸ್ಥೆ ನಿಮಗೆ ಗೊತ್ತಿದೆ. ಯಾರಾದರೂ ಹೋಗಿ ನಮಗೆ ಪರೀಕ್ಷೆ ನಡೆಸುವುದಕ್ಕೆ ಬಿಡುವುದಿಲ್ಲ. ಈ ವ್ಯಕ್ತಿಗಳು ಅಲ್ಲಿಗೆ ಬರಬಾರದು ಎಂದರೆ ಅವರು ಕೇಳುವುದಿಲ್ಲ. Exparte Decree Injunction ಎಂದು ಕೊಡುತ್ತಾರೆ. ಒಂದು ಕಡೆ ಹೈಕೋರ್ಟ್ ಡಿಕ್ರಿ ಇದ್ದು ಅವನು ಮಾಡಿರುವುದನ್ನು ಗಮನಕ್ಕೆ ತರುವುದಿಲ್ಲ. ಇಲ್ಲಿ ಸಿವಿಲ್ ಡಿಕ್ರಿಗೆ ಸಂಬಂಧವಾಗಿ ಪೋಲೀಸ್ ಇನ್ಸ್‌ಪೆಕ್ಟರ್‌ರವರು ಮಧ್ಯೆ ಪ್ರವೇಶ ಮಾಡಿದ್ದು, ಆಗ ನಾನು ಹೇಳಿದೆ; ನಿಮಗೆ ಹೈಕೋರ್ಟ್ ಡಿಕ್ರಿ ಮುಖ್ಯವೇ, ಸಿವಿಲ್ ಕೋರ್ಟ್ ಡಿಕ್ರಿ ಮುಖ್ಯವೇ ಎಂದು. ಆಗ ಅಧಿಕಾರಿ ವರ್ಗ ಏನು ಹೇಳುತ್ತದೆಂದರೆ, ನಾನು ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಏನೆಂದರೆ, 'ಇದು ಬಹಳ ಒಳ್ಳೆಯ ಜಾಗ, ಇದಕ್ಕೆ ಜೀವರಾಜ್ ಆಳ್ವರವರ ಕಣ್ಣು ಬಿದ್ದಿದೆಯೆಂದು ಕಾಣುತ್ತದೆ. ಆದಕ್ಕೋಸ್ಕರ ಇದಕ್ಕೆ ಇಷ್ಟು ಮಹತ್ವ ಕೊಡುತ್ತಿದ್ದಾರೆ' ಎಂದು, ನಾನು ಇದರ ಬಗ್ಗೆ ಪೂರ್ಣವಾಗಿ ಹೇಳಿದೆ; ಎಷ್ಟೋ ವಿಚಾರಗಳು ಕಣ್ಮುಚ್ಚುತ್ತವೆ. ಸಂಘ–ಸಂಸ್ಥೆಗಳಾಗುತ್ತವೆ. ಯಾವುವಾದರೂ ಭಿನ್ನಾಭಿಪ್ರಾಯಗಳು ಬರುತ್ತವೆ. ಆದರೆ ಒಂದು ಅನಾಥ ಶಿಶು ಸೇವಾಶ್ರಮಕ್ಕೆ ಕೊಟ್ಟ ಜಾಗವನ್ನು ಲಪಟಾಯಿಸುವಂಥ ಅತ್ಯಂತ ಹೀನ ಕಾರ್ಯ ಮಾಡಿದ್ದಾರೆ. ಈ ಪೋಲೀಸ್ ಅಧಿಕಾರಿ ಹೇಳುತ್ತಾನೆ, ಇದು ಮನಸ್ಸಿಗೆ ಬಹಳಷ್ಟು ನೋವಾಗುತ್ತದೆ. ಈತ ಒಬ್ಬ ಎಸ್.ಐಯು ಬಚ್ಚೇಗೌಡ ಎಂಬ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಹೇಳಿದರೆ, ಆತ 'ಇಲ್ಲ ಸಾರ್, ನಮ್ಮ ಹೈಯರ್ ಆಫೀಸರ್‌ಗೆ ಹೇಳಿ ಎಂದೆನ್ನುತ್ತಾನೆ. ನಿಮಗೆ ನೆನಪಿರಬಹುದು, ಒಡೆಯರಾಜ್ ಎಂಬುವರು ಶಾಸಕರಾಗಿದ್ದರು. ಅವರ ಹೆಂಡತಿ ರಾಜಮ್ಮ ಎಂಬುವವರು ಪ್ರೊಫೆಸರು ಆಗಿದ್ದು, ಅವರು ಈ ಸಂಸ್ಥೆಯ ಉಪಾಧ್ಯಕ್ಷರಾಗಿದ್ದಾರೆ. ನಂತರ ಗೋಪಾಲ ಎಂಬ ಕ್ರೈಮ್ ಸಬ್ ಇನ್ಸ್‌ಪೆಕ್ಟರ್ ಹೇಳುತ್ತಾನೆ. 'ಇವೆಲ್ಲಾ ವ್ಯವಹಾರಗಳಿವೆ, ನೀವು ಇದಕ್ಕೆ ಅಡ್ಡ ಬರಬೇಡಿ' ಎಂದು. ಇದರಲ್ಲಿ ದರೋಡೆಯಾಗುತ್ತಿದೆ. ಅನ್ಯಾಯವಾಗುತ್ತಿದೆ. ಮೋಸವಾಗುತ್ತಿದೆ. ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದಿಷ್ಟೆ: ಈ ಸಂಸ್ಥೆಯನ್ನು ಯಾರಿಗೂ ಕೊಡಬೇಡಿ, ಇದಕ್ಕೆ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಿ. ಇನ್ನೊಂದು, ಇದರ ಬಗ್ಗೆ ಸಿಓಡಿ ತನಿಖೆ ಮಾಡಬೇಕು. ಏಕೆಂದರೆ, ಸಿಓಡಿ ತನಿಖೆ ಬಂದಾಗ ನನಗೆ ಒಂದು ರೀತಿಯ ಮುಜುಗರವಾಗುತ್ತದೆ. ನಾನು ಯಾವ

ಪೋಲೀಸ್ ಅಧಿಕಾರಿಗಳ ಬಗ್ಗೆಯೂ ಟೀಕೆ ಮಾಡುತ್ತಿಲ್ಲ. ನಾನೊಬ್ಬ ಜವಾಬ್ದಾರಿ ಶಾಸಕನಾಗಿದ್ದು ಜವಾಬ್ದಾರಿಯುತ ಸ್ಥಾನದಲ್ಲಿದ್ದು ಟೆಲಿಫೋನ್ ಮಾಡಿ ಹೇಳಿದರೆ ಅದಕ್ಕೆ ವ್ಯತಿರಿಕ್ತವಾಗಿ ಅವರು ಕೆಲಸ ಮಾಡುತ್ತಾರೆ. ಅಲ್ಲಿ ಒಂದು ರೀತಿಯ ಭಯಾನಕ ವಾತಾರಣವನ್ನು ಸೃಷ್ಟಿಸಿದ್ದಾರೆ. ಅನಾಥ ಶಿಶು ಸೇವಾಶ್ರಮದಲ್ಲಿರುವ ಮಕ್ಕಳನ್ನು ಓಡಿಸುವ ಪ್ರಯತ್ನ ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರ ಒಂದು ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕು, ಇಲ್ಲವೇ, ಸಂಸ್ಥೆಯನ್ನು ಸರ್ಕಾರವೇ ವಹಿಸಿಕೊಂಡು ಅಲ್ಲಿಗೊಬ್ಬ ಆಡಳಿತಾಧಿಕಾರಿಯನ್ನು ನೇಮಿಸಬೇಕು. ತದನಂತರ, ಈ ವಿಷಯದಲ್ಲಿ ನಾನು ನಿಮ್ಮ ಜೊತೆ ಚರ್ಚೆಗೆ ಬರುತ್ತೇನೆ. ಅದರ ಬಗ್ಗೆ ಮಾತುಕತೆಯಾಡೋಣ. ಏಕೆಂದರೆ, ಯಾವುದಾದರೂ ಭೂಮಿಯನ್ನು ಸರ್ಕಾರ ತೆಗೆದುಕೊಂಡಿದೆಯೇ ? ಅನಾಥ ಶಿಶು ಸೇವಾಶ್ರಮದಲ್ಲಿರುವ ಭೂಮಿ 10 ಕೋಟಿ, 20 ಕೋಟಿ ಇರಲಿ ಅಥವಾ 100 ಕೋಟಿ ರೂಪಾಯಿ ಬೆಲೆ ಬಾಳಲ್ಲಿ ಅದು ಅನಾಥ ಶಿಶು ಸೇವಾಶ್ರಮಕ್ಕೆ ಸೇರುವಂತಾದ್ದು. ಅದನ್ನು ಮುಟ್ಟುವಂಥ ಪ್ರಯತ್ನ ಮಾಡಬೇಡಿ. ನಾನು ಬಹಳ ಅತ್ಯಂತ ಗಂಭೀರವಾದ ಆರೋಪವನ್ನು ವಿದ್ಯಾ ಇಲಾಖೆಯ ಅಧಿಕಾರಿಗಳ ಮೇಲೆ, ರಿಜಿಸ್ಟ್ರಾರ್‌ಗಳ ಮೇಲೆ, ಮಾಡುತ್ತಿದ್ದೇನೆ, They are nexus. ಪ್ರತಿಯೊಂದು ಅಧಿಕಾರಿಗಳಿಗೂ ಮಾತೆತ್ತಿದ್ದರೆ, ಸಾಕು, 'ಇನ್ಸ್‌ಪೆಕ್ಟರ್‌ಗೆ ಎರಡು ಸೈಟುಗಳನ್ನು ಕೊಟ್ಟಿದ್ದೇನೆ, ಡಿಡಿಪಿಐಗೆ ಎರಡು ಸೈಟುಗಳನ್ನು ಕೊಟ್ಟಿದ್ದೇನೆ, ರಿಜಿಸ್ಟ್ರೇಷನ್ ಮಾಡುವುದಕ್ಕೆ ಕೋ–ಅಪರೇಟಿವ್ ಸೊಸೈಟಿಗೆ ಸೈಟುಗಳನ್ನು ಕೊಟ್ಟಿದ್ದೇನೆ' ಎಂದು ಮಾಡಿರುವ ವ್ಯವಹಾರದ ಬಗ್ಗೆ ಹೇಳುತ್ತಾನೆ. ಇದು ಹೇಗೆ ನಡೆಯುತ್ತದೆ ? ಯಾವುದೋ 1942ನೇ ಇಸವಿಯಲ್ಲಿ ಪ್ರಾರಂಭವಾದ ಸೊಸೈಟಿಗೆ 1989ರಲ್ಲಿ ಬಂದಂಥ ವ್ಯಕ್ತಿ ಬರೀ ಸೈಟ್ ಕೊಡುತ್ತೇನೆಂದು ಪವರ್ ಆಫ್ ಅಥಾರಿಟಿ ತೆಗೆದುಕೊಂಡು ಯಶವಂತಪುರಕ್ಕೆ ಹೋಗಿ ಜಾಗ ತೋರಿಸುತ್ತಾನೆ. 'ಈ ಜಾಗದಲ್ಲಿ ನಿಮಗೆ ಸೈಟ್ ಕೊಡುತ್ತೇನೆ' ಎಂದು ಹೇಳುತ್ತಾನೆ, ಆಗ ಇವರು ಆತನ ಬಲೆಗೆ ಬೀಳುತ್ತಾರೆ. ದೊಡ್ಡ–ದೊಡ್ಡ ವ್ಯಕ್ತಿಗಳ ಹೆಸರುಗಳನ್ನು ಅದರಲ್ಲೂ ಮಾನ್ಯ ಹಿರಿಯ ಸಚಿವರಾದ ಹುಚ್ಚಮಾಸ್ತಿ ಗೌಡರ ಹೆಸರನ್ನು ಹೇಳುತ್ತಿದ್ದಾನೆ. ಆತನ ಹೆಸರು ಬೋರೇಗೌಡ ಎಂದು. ಹುಚ್ಚಮಾಸ್ತಿಗೌಡರೇ, ಆತನನ್ನು ಮನೆ ಹತ್ತಿರ ಸೇರಿಸಬೇಡಿ.

ಇಂಥ ದರೋಡೆಕೋರರು ಇವತ್ತು ಇರಬಾರದು, ಇದಕ್ಕೆ ಪೂರ್ಣವಾಗಿ ಇವತ್ತೇ ಮಾನ್ಯ ಮುಖ್ಯ ಮಂತ್ರಿಗಳು ಸಿ.ಓ.ಡಿ ವಿಚಾರಣೆಗೆ ಗುರಿಪಡಿಸಬೇಕು. ಮತ್ತು ಅಡ್ಮಿನಿಸ್ಟ್ರೇಟರ್ಸ್‌ನ್ನು ಹಾಕಬೇಕು. ಏಕೆಂದರೆ ನಾವು ಇದಕ್ಕೆಲ್ಲಾ ಬಲಿಯಾಗುತ್ತೇವೆ. ಯಾರಾದರು ಸೈಟನ್ನು ತೋರಿಸಿದರೆ, ನಿವೇಶನವನ್ನು ತೋರಿಸಿದರೆ ನಾವು ಅದಕ್ಕೆ ಬಲಿಯಾಗುತ್ತೇವೆ. ಏಕೆಂದರೆ ಇದರಲ್ಲಿ 25 ಎಕರೆ ಜಮೀನು ಇದೆ. ಆದ್ದರಿಂದ ಇದಕ್ಕೆ ಸಿಓಡಿ ತನಿಖೆಯನ್ನು ಮಾಡಬೇಕು. ಮತ್ತು ಅಡ್ಮಿನಿಸ್ಟ್ರೇಟರ್ ಮಾಡಬೇಕು. ಇಷ್ಟೆಲ್ಲಾ ಬೇನಾಮಿಯನ್ನು ಮಾಡಿದ್ದಾನೆ. ಅವನನ್ನು ಕೂಡಲೇ ದಸ್ತಗಿರಿ ಮಾಡಿಸಬೇಕು. ಅವನನ್ನು ಸ್ಟೇಷನ್‌ನಲ್ಲಿ ಕೂಡಿಸಿಕೊಂಡು ಮಾತನಾಡುತ್ತಾರೆ. ಎಸಿಪಿ ಯವರ ಹತ್ತಿರ ಮಾತನಾಡಿದ್ದೇನೆ ನಮಗೆ ಗೊತ್ತಿಲ್ಲ ಮೇಲಾಧಿಕಾರಿಗಳ ಜೊತೆ ಚರ್ಚೆ ಮಾಡಿ ಎಂದು ಹೇಳುತ್ತಾನೆ. ಆದುದರಿಂದ ಇವತ್ತು ನಾನು ನೊಂದು ಈ ವಿಷಯವನ್ನು ಹೇಳುತ್ತಿದ್ದೇನೆ ಅದೇನೆಂದರೆ ಇವತ್ತು ನಿಮ್ಮ ಇನ್ಸ್‌ಪೆಕ್ಟರ್‌ಗಳು ಯಾವ ಮಟ್ಟಕ್ಕೆ ಹೋಗಿದ್ದಾರೆ ಎಂದರೆ ಡಾ: ಆಳ್ವಾರವರಿಗೆ ಏನೋ ಈ ಭೂಮಿಯ ಮೇಲೆ ಕಣ್ಣಿದೆ ಎಂದು ಹೇಳುವ ಮಟ್ಟಕ್ಕೆ ಹೋಗಿದ್ದಾರೆ. ಇದನ್ನು ನಾವು ಕೊಡಿಸಿದ್ದು. ನನ್ನ ತಂದೆಯವರಾದ ಡಾ:ನಾಗಪ್ಪ ಆಳ್ವರವರು ಮತ್ತು ಕಲ್ಯಾಣಿ ಆಳ್ವರವರು ಅದನ್ನು ಕೊಡಿಸಿಕೊಟ್ಟಿದ್ದು. ಆದರೆ ಅವರು ಇವತ್ತು ಜೀವಂತವಾಗಿಲ್ಲ. ಆದರೆ ನಾನು ಏನು ತಪ್ಪು ಮಾಡಿದೆ ಎಂದರೆ ಆ ಸಂಸ್ಥೆಗೆ ಏನು ಶಕ್ತಿ ಕೊಡಿಸಿಕೊಡಬೇಕಾಗಿತ್ತೋ ಅದನ್ನು ಕೊಡಲಿಲ್ಲ. ಯಾರೋ ಸಂಘ ಸಂಸ್ಥೆಗಳಿಂದ ಕಟ್ಟಡ ಮಾಡಿಕೊಟ್ಟಿದ್ದೇನೆ. ಆದರೆ ತಾವು ಈ ಭೂಮಿಯ ಬಗ್ಗೆ ಪೂರ್ಣವಾದ ವಿವರಣೆಯನ್ನು ತರಿಸಿಕೊಂಡು ಇವತ್ತೇ ಸಿ.ಓ.ಡಿ ವಿಚಾರಣೆ ಮಾಡಿಸಿ ಮತ್ತು ಅಲ್ಲಿಗೆ ಅಡ್ಮಿನಿಸ್ಟ್ರೇಟರ್ಸ್‌ನ್ನು ಹಾಕಬೇಕು. ನಾನು ಯಾಹ್ಯಾ ಸಾಹೇಬರನ್ನು ನೆನೆಸಿಕೊಳ್ಳಬೇಕು

ಏಕೆಂದರೆ ಅವರು ಇಂಥ ಗ್ರಾಂಟನ್ನು ಕೂಡಲೇ ನಿಲ್ಲಿಸಿಬಿಟ್ಟರು. ಇವತ್ತು ಅಲ್ಲಿ ಏನು ನಡೆಯುತ್ತಿದೆ ಎಂದರೆ ಈ ಅನಾತಾಶ್ರಮದ ಮಕ್ಕಳನ್ನು ಆ ಜಾಗದಿಂದ ಹೊರಗಡೆ ಹಾಕತಕ್ಕ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇದನ್ನು ಪೂರ್ಣವಾಗಿ ನಿಲ್ಲಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಕೇಳಬಯಸುತ್ತೇನೆ.

† ಶ್ರೀ ಎನ್. ಹುಚ್ಚುಮಾಸ್ತಿಗೌಡ:– ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ನನ್ನ ಹೆಸರು ಬಂದುದ್ದರಿಂದ ನಾನು ಎರಡು ಮಾತುಗಳನ್ನು ಇದಕ್ಕೆ ಸಂಬಂಧಪಟ್ಟಂತೆ ಹೇಳುವ ಅವಶ್ಯಕತೆ ಇದೆ. ಈ ವಿಷಯ ಇವತ್ತು ನಿನ್ನೆಯದ್ದಲ್ಲ. 1955ನೇ ಇಸವಿಯಲ್ಲಿ ಶ್ರೀಮತಿ ಪಾರ್ವತಮ್ಮ ಎನ್ನುವ ಒಬ್ಬರು ಸಮಾಜ ಸೇವಕರು 25 ಎಕರೆ ಜಮೀನನ್ನು ಆ ಸಂಸ್ಥೆಯ ಹೆಸರಿನಲ್ಲಿ ಸರ್ಕಾರಕ್ಕೆ ಕೊಟ್ಟಿದ್ದರು. ಈ ರೀತಿ ಅವರು ಕೊಟ್ಟಂಥ ಜಮೀನು 5–6 ವರ್ಷಗಳ ಕಾಲ ಯಾವುದೇ ಉಪಯೋಗವಾಗದ ಜಮೀನಾಗಿತ್ತು. ಈ ಮಧ್ಯೆ ಸುಮಾರು 6–7 ಎಕರೆ ಜಮೀನಿನಲ್ಲಿ ಅವರ ಮನಸ್ಸಿಗೆ ಬಂದಂತೆ ಯಾರ್ಯಾರಿಗೆ ಏನೇನೂ ಶಕ್ತಿ ಇತ್ತೋ ಅದನ್ನು ಉಪಯೋಗಿಸಿ ನೂರಾರು ಮನೆಗಳನ್ನು ಕಟ್ಟಿಕೊಂಡರು. ಮತ್ತು ಅದು ಒಂದು ದೊಡ್ಡ ಕೊಂಪೆಯಾಗಿದೆ. ಇದರ ಜೊತೆಗೆ ಅಲ್ಲಿ ಒಂದು ಹೈಟೆನ್‌ಷನ್ ಲೈನ್ ಸಹ ಬಂದಿದೆ, ಮತ್ತು ಅಲ್ಲಿ ಕೊಳಚೆ ನೀರು ಸೇರಿಕೊಂಡು ಒಂದು 3–4 ಎಕರೆ ಭೂಮಿ ಯಾವುದೇ ಉಪಯೋಗಕ್ಕೆ ಬಾರದಂತಾಗಿದೆ. ಒಟ್ಟು ಜಮೀನಿನಲ್ಲಿ ಇಷ್ಟನ್ನು ಕಳೆದರೆ ಸುಮಾರು 14–15 ಎಕರೆ ಜಮೀನು ಮಾತ್ರ ಉಳಿದಿರುತ್ತದೆ. ಈ ಮಧ್ಯೆ 10–12 ವರ್ಷಗಳ ಹಿಂದೆ ಪಾರ್ವತಮ್ಮನವರು ಅನಾಥಾಶ್ರಮವನ್ನು ಪ್ರಾರಂಭ ಮಾಡಿ ಅಲ್ಲಿ ಸುಮಾರು ಕಟ್ಟಡಗಳನ್ನು ಕಟ್ಟಿಕೊಂಡು ಬಹಳ ಕಷ್ಟಪಟ್ಟು ಆ ಸಂಸ್ಥೆಯನ್ನು ನಡೆಸಿಕೊಂಡು ಬಂದರು. ಮಾನ್ಯ ಆಳ್ವರವರು ಹೇಳಿದಂತೆ ಈ ಸಂಸ್ಥೆಗೆ ಬೋರೇಗೌಡರು ಮಾತ್ರವಲ್ಲ ಅಲ್ಲಿ ಇರತಕ್ಕ ಸುತ್ತಮುತ್ತಲ ಜನರು ಹಳ್ಳಿಗಾಡಿನಿಂದ ಬಂದಿರತಕ್ಕ ಜನರು ಶ್ರೀಮತಿ ಪಾರ್ವತಮ್ಮನವರನ್ನು ಬೆಂಬಲಿಸಿ ಅನಾಥ ಮಕ್ಕಳಿಗೋಸ್ಕರ ಪ್ರಾರಂಭವಾಗಿರತಕ್ಕ ಈ ಆಶ್ರಮವನ್ನು ರಕ್ಷಣೆ ಮಾಡಿಕೊಂಡು ಬಂದರು. ಅದಕ್ಕೆ ಸುತ್ತಮುತ್ತ ಇದ್ದ ಸುಮಾರು 25 ಜನರ ಒಂದು ಸಮಿತಿಯನ್ನು ಮಾಡಿ ಆ ಸಮಿತಿಗೆ ಬೋರೇಗೌಡರು ಕಾರ್ಯದರ್ಶಿಯಾಗಿ ಕೆಲಸ ಮಾಡಿಕೊಂಡು ಬಂದರು. ಅನಂತರ ಶ್ರೀಮತಿ ಪಾರ್ವತಮ್ಮನವರು ನನ್ನ ಹತ್ತಿರ ಬಂದು ಈ ರೀತಿಯಾಗಿದೆ. ಈ ಜಮೀನಿನ ಮೇಲೆ ಬೇರೆ ಜನರು ಕಣ್ಣಿಟ್ಟಿದ್ದಾರೆ ಇದನ್ನು ಹಾಳು ಮಾಡತಕ್ಕ ಪ್ರಯತ್ನ ಮಾಡುತ್ತಾರೆಂದು ಹೇಳಿದ ಮೇಲೆ ನಾನು ಆ ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಷ್ಟು ಮಾತ್ರವಲ್ಲ. ಅಲ್ಲಿ ಕೆಲವರು ಆ ಜಮೀನನ್ನು ಸೈಟುಗಳಾಗಿ ವಿಂಗಡಿಸಿಕೊಂಡು ತೆಗೆದುಕೊಳ್ಳತಕ್ಕ ಪ್ರಯತ್ನವನ್ನು ಮಾಡುತ್ತಿದ್ದಾರೆ. ಹೀಗೆ ಆ ಜಮೀನು ಯಾರ ವಶದಲ್ಲಿಯೂ ಇಲ್ಲದಿದ್ದ ಕಾಲದಲ್ಲಿ ಕಾರ್ಪೋರೇಷನ್‌ನವರು ಅಲ್ಲಿ ಒಂದು ದೊಡ್ಡ ರಸ್ತೆಯನ್ನು ಮಾಡಿದರು. ಸುಮಾರು 70–80 ಅಡಿ ಅಗಲ ಮತ್ತು ಸುಮಾರು ಎರಡು ಫರ್ಲಾಂಗ್ ಉದ್ದವಿರುವ ರಸ್ತೆಯನ್ನು ಅಲ್ಲಿ ಮಾಡಿದ್ದಾರೆ. ಶ್ರೀಮತಿ ಪಾರ್ವತಮ್ಮನವರು ಮರಣ ಹೊಂದುವವರೆಗೆ ಆ ಸಂಸ್ಥೆಗೆ ಏನೇನು ಕೆಲಸಗಳನ್ನು ಮಾಡಬೇಕಾಗಿತ್ತೋ ಅದನ್ನು ಮಾಡಿಕೊಂಡು ಬಂದರು. ಅನೇಕರಿಂದ ಮಕ್ಕಳ ಹೆಸರಿನಲ್ಲಿ ತೆಗೆದುಕೊಂಡು ಬಂದು ಹೊದಿಕೆಯಾಗಲಿ, ಊಟ ತಿಂಡಿಯ ವ್ಯವಸ್ಥೆಯಾಗಲಿ, ಇವೆಲ್ಲವನ್ನೂ ಅವರಿಗೆ ಒದಗಿಸುತ್ತಾ ಬಂದಿದ್ದಾರೆ.

12.50 ಪಿಎಂ

ಈ ಸಮಿತಿಯನ್ನು ನೇಮಕ ಮಾಡಿದ ಮೇಲೆ ಮಾನ್ಯ ಬೋರೇಗೌಡರು ನನ್ನ ಹತ್ತಿರ ಬಂದು ನೀವು ಸಹಾಯ ಮಾಡಬೇಕೆಂದು ಕೇಳಿಕೊಂಡರು. ಶ್ರೀಮತಿ ಪಾರ್ವತಮ್ಮನವರ ಹೆಸರಿನಲ್ಲಿ ಆ ಜಮೀನಿಲ್ಲದ್ದಿದ್ದರು ಆ ಸಂಸ್ಥೆಯ ಹೆಸರಿನಲ್ಲಿ ಜಮೀನನ್ನು ಕೊಟ್ಟಿದ್ದಾರೆ. ಆ ಸಂಸ್ಥೆಗೋಸ್ಕರ ಈ ಜಮೀನು ಉಪಯೋಗವಾಗಬೇಕು. ಅದಕ್ಕೆ ನನ್ನಿಂದಾಗಬಹುದಾದ ಸಹಾಯವನ್ನು ಮಾಡುತ್ತೇನೆಂದು

ಹೇಳಿದೆ. ಈ ಆಶ್ರಮದ ಮಕ್ಕಳು 3-4 ವರ್ಷ ಇದ್ದು ಅವರಿಗೆ ಬೇರೆ ಆಶ್ರಯವಿಲ್ಲದೆ. ಅಥವಾ ಬೇರೆ ಎಲ್ಲೂ ಕೆಲಸವನ್ನು ಒದಗಿಸಿಕೊಳ್ಳಲು ಸಾಧ್ಯವಿಲ್ಲದೇ ಇದ್ದುದರಿಂದ ಇವರ ಶಕ್ತಿ ಇರುವವರೆಗೂ ಈ ಕೆಲಸವನ್ನು ಮಾಡುತ್ತಿದ್ದರು. ಈಗಲೂ ಅದೇ ಕೆಲಸ ನಡೆಯುತ್ತಿದೆ. ಈ ಸ್ಥಳದಲ್ಲೇ ಒಂದು ಹೈಸ್ಕೂಲನ್ನು ಮಾಡಬೇಕೆಂದು ಅಲ್ಲಿನ ಸುತ್ತಮುತ್ತಲಿನ ಜನರು ಬಂದು ಕೇಳಿಕೊಂಡಿದ್ದರಿಂದ ಈ ಅನಾಥ ಶಿಶು ಸೇವಾಶ್ರಮದ ಮಕ್ಕಳಿಗೂ ಮತ್ತು ಸುತ್ತ-ಮುತ್ತಲಿನ ಜನರ ಮಕ್ಕಳಿಗೂ ಸಹಾ ಸಹಾಯವಾಗುತ್ತದೆಂದು ಮಿಡಲ್ ಸ್ಕೂಲಿನ 7 ಕ್ಲಾಸುಗಳೂ ಮತ್ತು ಹೈಸ್ಕೂಲಿನ 3 ಕ್ಲಾಸುಗಳೂ ಪೂರ್ತಿ ಅಲ್ಲೆ ನಡೆಯುವಂತೆ ಮಾಡಿದೆವು. ಇಷ್ಟಲ್ಲದೆ ಯಾರೂ ಕೂಡ ಆ ಜಮೀನನ್ನು ಸ್ವಂತ ಮಾಡಿಕೊಳ್ಳುವುದಕ್ಕಾಗಲಿ ಅಥವಾ ಆ ಜಮೀನಿನ ಮೇಲೆ ಇವರಿಗೆ ಇರತಕ್ಕಂಥ ಹಕ್ಕನ್ನು ಬೇರೆಯವರು ತೆಗೆದುಕೊಳ್ಳುವ ಯಾವುದೇ ಪ್ರಯತ್ನವೂ ನಡೆದಿಲ್ಲ. ಮಾನ್ಯ ಆಳ್ವದವರು ನನ್ನ ಹೆಸರನ್ನು ಇಲ್ಲಿ ಅನಾವಶ್ಯಕವಾಗಿ ತಂದರು. ನಾನಾದರೂ ಹೇಳುತ್ತೇನೆ. ನಾನು ಆ ಸ್ಥಳಕ್ಕೆ ಹೋಗಿ ಬಂದಿದ್ದೇನೋ ಸರಿ. ಆದರೆ ನಾನು ಅಲ್ಲಿಗೆ ಹೋಗಿಬಂದ ಕೂಡಲೇ ನಾನು ಈ ಅನ್ಯಾಯವನ್ನು ಮಾಡಿದ್ದೇನೆಂದು ಅವರೂ ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಈ ಜಮೀನನ್ನು ಬೋರೇಗೌಡರಿಗಾಗಲಿ, ಬೇರೆಯವರಾಗಲಿ ಸ್ವಂತ ಉಪಯೋಗಕ್ಕೋಸ್ಕರ ಉಪಯೋಗ ಮಾಡಿಕೊಳ್ಳಬೇಕೆಂಬ ನನಗೆ ತಿಳಿದಮಟ್ಟಿಗೆ ನಡೆದಿಲ್ಲ. ಹೇಳುವುದಾದರೆ ಈ ಆಶ್ರಮಕ್ಕೆ ಸೇರಿಕೊಳ್ಳುವ ಮಕ್ಕಳಿಗೆ ಬೇಕಾದ ಪೂರ್ಣ ವಿದ್ಯಾಭ್ಯಾಸ, ಊಟೋಪಚಾರಗಳನ್ನು ಖಾಯಂ ಆಗಿ ನಡೆಸಿಕೊಂಡು ಹೋಗುವಂಥ ವ್ಯವಸ್ಥೆ ಮಾಡಬೇಕೆಂದು ಇರತಕ್ಕದ್ದು. ಈ ಮಧ್ಯೆ ಈ ಜಮೀನನ್ನು ಕಾರ್ಪೊರೇಶನ್‌ನವರು ಸ್ವಾಧೀನಪಡಿಸಿಕೊಳ್ಳಬೇಕೆಂದು ಪ್ರಯತ್ನಮಾಡಿರತಕ್ಕದ್ದು ಒಂದು ಕಡೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ನಾನೇ ಹೋಗಿ ಈ ಜಮೀನನ್ನು ದುರುಪಯೋಗವಾಗುವುದಕ್ಕೆ ಬಿಡುವುದು ಬೇಡ; ಈ ಅನಾಥ ಶಿಶುಗಳ ಸೇವಾಶ್ರಮಕ್ಕೇ ಇದು ಉಪಯೋಗವಾಗಬೇಕು. ಆ ಜಮೀನಿನ ಮೇಲಿರತಕ್ಕ ಅಧಿಕಾರ ಆ ಮಕ್ಕಳಿಗೇ ಹೊರತು ಈ ಬಿ.ಡಿ.ಎ. ನವರಿಗಾಗಲಿ ಅಥವಾ ಕಾರ್ಪೊರೇಷನ್‌ನವರಿಗಾಗಲಿ ಈ ಜಮೀನಿನ ಮೇಲೆ ಯಾವುದೇ ಅಧಿಕಾರವನ್ನೂ ಕೊಡಕೂಡದು. ಈ ಅನಾಥ ಶಿಶು ಸೇವಾಶ್ರಮದ ಉಪಯೋಗಕ್ಕಾಗಿಯೇ ಈ ಜಮೀನನ್ನು ಮೀಸಲಿಡಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರಿಗೆ ನಾನು ಹೇಳಿದ್ದುಂಟು. ಈ ಮಧ್ಯೆ ಅಲ್ಲಿ ಯಾರ ಬೆಂಬಲ ಇದೆಯೋ ನನಗೆ ಗೊತ್ತಿಲ್ಲ. ಆ ಮಕ್ಕಳನ್ನು ಆ ಪ್ರದೇಶದಿಂದ ಹೊರಗಡೆ ಕಳುಹಿಸುವುದಕ್ಕೆ ಸಾಕಷ್ಟು ಪ್ರಯತ್ನಗಳು ನಡೆದಿವೆ. ಅಲ್ಲಿರತಕ್ಕ ಉಪಾಧ್ಯಾಯರನ್ನೂ ಅಲ್ಲಿಂದ ಓಡಿಸಬೇಕೆಂಬ ಪ್ರಯತ್ನಗಳೂ ನಡೆದಿವೆ. ಇದರಲ್ಲಿ ಬೇರೆಯವರು ಅನವಶ್ಯಕವಾಗಿ ಪ್ರವೇಶ ಮಾಡುತ್ತಿದ್ದಾರೆ, ಈ ಅನಾಥ ಸೇವಾಶ್ರಮದ ಜಮೀನಿನ ಮೇಲೆ ಬಿ.ಡಿ.ಎ. ನವರಾಗಲಿ, ಕಾರ್ಪೊರೇಷನ್‌ರವರಾಗಲಿ ತಮ್ಮ ಅಧಿಕಾರವನ್ನು ಉಪಯೋಗಿಸಿ ಆ ಜಮೀನನ್ನು ಕಿತ್ತುಕೊಳ್ಳತಕ್ಕ ಪ್ರಯತ್ನವನ್ನು ಮಾಡಬಾರದು. ಆ ಮಕ್ಕಳಿಗೋಸ್ಕರ ಕೊಟ್ಟಿರತಕ್ಕ ಆ ಜಮೀನಿನ ಪೂರ್ಣ ಉಪಯೋಗ ಆ ಮಕ್ಕಳಿಗೇ ಆಗಬೇಕೆಂದು ಹೇಳಿದ್ದೇನೆ. ಅಧಿಕಾರಿಗಳು ಬಂದು ಆ ಮಕ್ಕಳನ್ನೂ ಮತ್ತು ಉಪಾಧ್ಯಾಯರನ್ನೂ ಓಡಿಸುತ್ತಿರುವುದನ್ನು ತಪ್ಪಿಸಬೇಕೆಂಬ ಉದ್ದೇಶ ನಮ್ಮದೇ ಹೊರತು ಆ ಮಕ್ಕಳಿಗೆ ತೊಂದರೆಯನ್ನು ಕೊಡಬೇಕೆಂಬ ಉದ್ದೇಶ ಎಳ್ಳಷ್ಟೂ ಇಲ್ಲ. ನನ್ನ ಪ್ರವೇಶವೂ ಕೂಡ ಅದೊಂದೇ ದೃಷ್ಟಿಯಿಂದಲೇ ಹೊರತು ಈ ಜಮೀನನ್ನು ಬೇರೆ ಯಾರಿಗಾದರೂ ಕೊಟ್ಟು ಆ ಮಕ್ಕಳಿಗೆ ತೊಂದರೆ ಕೊಡಬೇಕೆಂಬುದು ಇಲ್ಲ. ಮಾನ್ಯ ಆಳ್ವಾರವರು ಹೇಳಿದಂತೆ ಸರ್ಕಾರದವರೇ ಈ ಸದನದ ಸಮಿತಿಯನ್ನು ಅಥವಾ ಸರ್ಕಾರವೇ ಒಂದು ಸಮಿತಿಯನ್ನು ಮಾಡಿ ಅಲ್ಲಿ ಏನು ನಡೆದಿದೆ, ಈ ಜಮೀನು ಏತಕ್ಕೆ ಮುಂಜೂರಾಯಿತು. ಅದರ ಮುಖ್ಯ ಉದ್ದೇಶವೇನು, ಈ ಉದ್ದೇಶ ಸಫಲವಾಗಬೇಕಾದರೆ ಏನು ಮಾಡಬೇಕೆಂಬ ಕಾರ್ಯಕ್ರಮವನ್ನು ನಾವೆಲ್ಲರೂ ಸೇರಿ ಮಾಡಬೇಕೆಂಬುದೇ ನನ್ನ ಅಭಿಪ್ರಾಯ.

ಡಾ।। ಜೀವರಾಜ ಆಳ್ವ:– ಮಾನ್ಯ ಮಂತ್ರಿಗಳು ಇದಕ್ಕೆ ಒಂದು ಹೊಸ ಆಯಾಮವನ್ನು ಕೊಟ್ಟಿದ್ದಾರೆ. ಇವರು ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಮಾತನಾಡಿದ್ದಾರೆಂದು ನನಗೆ ಗೊತ್ತಿರಲಿಲ್ಲ. ಆ ಅಧಿಕಾರಿಗಳಿಗೆ ಈ ಕೆಚ್ಚು ಬರಬೇಕಾದರೆ ಏತಕ್ಕೆಂದರೆ, Sri Hutchmastigowda is a person unquestionable integrity.

ಈವತ್ತಿನ ರಾಜಕೀಯದಲ್ಲಿ ನಮಗೆ ಗೊತ್ತಿಲ್ಲದೆ ದಲ್ಲಾಳಿಗಳು ಬರುತ್ತಾರೆ; ಇದು ಆಶ್ರಮ ವಿಚಾರವೆಂದು ಹೇಳುತ್ತಾರೆ, 1942ರಲ್ಲಿ ಪ್ರಾರಂಭವಾದ ಈ ಸಂಸ್ಥೆಗೆ ಬೋರೇಗೌಡ ಬಂದಿರುವುದು ಭಾವನಾ ಹೌಸ್ ಬಿಲ್ಡಿಂಗ್ ಸೊಸೈಟಿಯವರ ಪರವಾಗಿ. ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಹುಚ್ಚುಮಾಸ್ತಿಗೌಡರಿಗೆ ತಿಳಿಸಬಯಸುತ್ತೇನೆ. ಇವನು ಆ ಸೊಸೈಟಿಯ ಕಾರ್ಯದರ್ಶಿ. ಇದು ಮಾನ್ಯ ಹುಚ್ಚಮಾಸ್ತಿಗೌಡರಿಗೆ ಗೊತ್ತಿಲ್ಲ. ಆದ್ದರಿಂದ ನಾನು ಹೇಳುತ್ತೇನೆ. ಅಲ್ಲಿಗೆ ಒಬ್ಬ ಅಡ್ಮಿನಿಸ್ಟ್ರೇಟರನ್ನು ಹಾಕಿ ಹಾಗೂ ಇದನ್ನು ಸಿ.ಓ.ಡಿ. ಎನ್‌ಕ್ವೈರಿಗೂ ಕೂಡ ಕಳುಹಿಸಿಬೇಕು.

ಶ್ರೀ ವೀರಪ್ಪ ಮೊಯಿಲಿ:– ಈ ವಿಚಾರ ಉಚ್ಚ ನ್ಯಾಯಾಲಯಕ್ಕೆ ಕೂಡ ಬಂದಿದೆ. ಬಂದಮೇಲೆ ಇದರ ವಿಚಾರ ಕಾರ್ಯದರ್ಶಿ ನಗರಾಭಿವೃದ್ಧಿಯವರು ಇದಕ್ಕೆ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳವುದಿದ್ದರೆ, ಸಂಬಂಧಪಟ್ಟ ವ್ಯಕ್ತಿಗಳಿಗೆ ಸಂಸ್ಥೆಗಳಿಗೆ ಅದನ್ನು ಸೂಚನೆ ಕೊಟ್ಟು ಅವರ ವಿಚಾರ ಕೇಳಿ ನಿರ್ಣಯ ಮಾಡಬೇಕೆಂದು ಹೇಳಿ ನಮಗೆ ಉಚ್ಚನ್ಯಾಯಾಲಯದಿಂದ ಆದೇಶ ಕೊಟ್ಟಿದ್ದಾರೆ. ಅದ್ದಿರಂದ ಏನಾದರೂ ಈತನ್ಮಧ್ಯೆ ವಾದವಿವಾದಗಳು ಇದ್ದರೆ ಅಲ್ಲಿ ಆ ಸೆಕ್ರೆಟರಿ ಹೆಚ್‌ಯುಡಿ ಅವರಿಗೆ ಹೀಯರಿಂಗ್ ಕೊಡುತ್ತಾರೆ. ಸಂಬಂಧಪಟ್ಟಂತಹ ಹಿತಾಸಕ್ತಿ ಉಳ್ಳಂಥ ವ್ಯಕ್ತಿಗಳೂ ಹೋಗಿ ಅಲ್ಲಿ ಹೀಯರಿಂಗ್ ಕೊಡಬಹುದು. ಸರ್ಕಾರ ಇದರಲ್ಲಿ ನಮಗೇನೂ ಪಟ್ಟ ಭದ್ರಹಿತಾಸಕ್ತಿ ಏನೂ ಇಲ್ಲ. ನ್ಯಾಯವಾಗಿ ಏನು ತೀರ್ಮಾನ ಮಾಡಬೇಕು. ಆ ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಎರಡನೆಯದಾಗಿ ತಾವು ಏನು ಹೇಳುತ್ತೀರಿ ಅದರ ಸ್ಟೇಟಸ್ಕ್ಯೋಮೈನ್‌ಟೈನ್ ಮಾಡಲು, ಏನಾದರೂ ಪ್ರಾಪರ್ಟಿ ಇದ್ದರೆ ಅದನ್ನು protect ಮಾಡಲಿಕ್ಕೆ ಯಾರು ಪೊಲೀಸ್ ಅಧಿಕಾರಿಗಳಾಗಲಿ, ಯಾರೇ ಆಗಲಿ ಯಾರ ಪರವಾಗಿಯಾಗಲಿ ವಿರುದ್ಧವಾಗಿ ಆಗಲಿ ಏನೂ ಮಾಡದ ಹಾಗೆ we will see that proper protectin is given.

ಡಾ।। ಜೀವರಾಜ್ ಆಳ್ವ:– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಗಮನಕೊಟ್ಟಿಲ್ಲ. ಇದರಲ್ಲಿ ಎರಡು ಪ್ರಶ್ನೆಗಳು ಇದೆ. There are two questions. There is High Court decree preventing Sri Boregowda ಅವನು ಮ್ಯಾನುಪ್ಯುಲೇಟ್ ಮಾಡಿದ್ದಾನೆ, ಅವನು ಸೆಕ್ರೆಟರಿಯಾಗಿ ಕೆಲಸ ಮಾಡಬಾರದೆಂದು ಹೈಕೋರ್ಟ್ ಡಿಕ್ರಿ ಇದೆ, ಮೊನ್ನೆ ಅವನು ಏನು ಮಾಡಿದ್ದಾನೆಂದರೆ ಅವನು ಸಿವಿಲ್ ಕೋರ್ಟಿಗೆ ಹೋಗಿದ್ದಾನೆ. ಸಿವಿಲ್ ಕೋರ್ಟಿಗೆ ಹೋಗಿ ಅಲ್ಲಿ ಜಡ್ಜ್ ಮುಂದೆ ಏನು ಹೇಳಿದ್ದಾನೆ ಎಂದರೆ ನಾನು ಎಕ್ಸಾಮಿನೇಷನ್ ಮಕ್ಕಳಿಗೆ ಮಾಡಬೇಕು. ಇದಕ್ಕೆ ಅಡ್ಡಿ ತರುತ್ತಿದ್ದಾರೆ, ಇದಕ್ಕೆ ಅಡ್ಡಿ ತರಲಿಕ್ಕೆ ಬಿಡಬಾರದೆಂದು ಒಂದು ಲೋಯರ್ ಕೋರ್ಟಿನಿಂದ ತೆಗೆದುಕೊಂಡಿರುತ್ತಾನೆ, ಆದ್ದರಿಂದ....

SRI M. VEEERAPPA MOILY:– I know there are number of litigations ಸ್ಕೂಲ್ ಬಗ್ಗೆ ಕೂಡ the present, and the rebel institution both of them are getting some grant–in–aid. I know there are lot of litigations. ಶಾಲೆ ವಿಚಾರದಲ್ಲಿ ಇದೆ, ಭೂಮಿಯ ವಿಚಾರದಲ್ಲಿ ಇದೆ, ಇದನ್ನೆಲ್ಲಾ ನಾನು ಈ ಸದನದಲ್ಲಿ ತಮ್ಮ ಮುಖೇನ ಸನ್ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ ಇದರಲ್ಲಿ ಯಾವ ಅನ್ಯಾಯ ಕೂಡ ಆಗದ ಹಾಗೆ ನಾವು ನೋಡುತ್ತೇವೆ. ಯಾವುದೇ ರೀತಿಯ ನಿಷ್ಪಕ್ಷಪಾತವಾದ ರೀತಿ ಇದನ್ನು ಪರಿಶೀಲನೆ ಮಾಡುತ್ತೇವೆ.

Now the Secretary– HUD is seized of the matter. ತಾವು ಹೇಳುತ್ತೀರಿ. ಸಿ.ಓ.ಡಿ. ಗೆ ಹಾಕಬೇಕು ಎಂದು. ಅಗತ್ಯ ಬಿದ್ದರೆ ಸಿ.ಓ.ಡಿಗೆ ಬೇಕಾದರೆ ಹಾಕೋಣ. ಆದ್ದರಿಂದ ಏನು ಅನ್ಯಾಯವಾಗದ ಹಾಗೆ ತಾವು ಹೇಳಿದೆ ಹಿನ್ನೆಲೆಯಲ್ಲಿ ಮತ್ತು ಸನ್ಮಾನ್ಯ ಸಚಿವರು ಹೇಳಿದ ಹಿನ್ನೆಲೆಯಲ್ಲಿ ನಾವು ಇದರ ಬಗ್ಗೆ ಬಿ.ಡಿ.ಎ ಅಧ್ಯಕ್ಷರಾದ ಮುದ್ದಪ್ಪನವರಿಗೆ ಹೇಳಿ ವಾಸ್ತವಾಂಶವಾದಂಥ ವರದಿಯನ್ನು ತರಿಸಿ ನಾವು ಅದಕ್ಕೆ ಸೂಕ್ತವಾದಂಥ ನಿರ್ಣಯವನ್ನು ಕೊಡುತ್ತೇವೆ. ಅದರಿಂದ ಇದರಲ್ಲಿ ಯಾರೂ ಕೂಡ ಜಾಗ ಅಪರಿಹಸತಕ್ಕಂಥದ್ದೂ ಅಥವಾ ವಂಚನೆ ಮಾಡತಕ್ಕಂಥ ಪ್ರಶ್ನೆ ಉದ್ಭವಾಗುವುದಿಲ್ಲ. ವಂಚನೆ ಆಗದಹಾಗೆ ಈ ಆಸ್ತಿ ಯಾರಿಗೆ ಸಲ್ಲಬೇಕೋ ಅವರಿಗೆ ಸಲ್ಲುತ್ತದೆ.

ಡಾ. ಜೀವರಾಜ್ಆಳ್ವ:– ನಾನು ಹೇಳುವುದು ಈ ಒಂದು ವ್ಯವಸ್ಥೆ ಕಂಪ್ಲೀಟ್ ಡಿಸ್‌ಲೋಕೇಟ್ ಆಗಿದೆ. ಒಬ್ಬ ವ್ಯಕ್ತಿಯ ಮೇಲೆ ಕೇಂದ್ರೀಕೃತವಾಗಿರತಕ್ಕಂಥ ಒಬ್ಬರ ತ್ಯಾಗ ಬಲಿದಾನದ ಮೇಲೆ ಕೇಂದ್ರಿಕೃತವಾದ ಒಂದು ಸಂಸ್ಥೆ ಇವತ್ತು ಅವ್ಯವಸ್ಥೆಯಲ್ಲಿದೆ. ಅದಕ್ಕೆ ನಾನು ಕೇಳುತ್ತಿರುವುದು, ಬಿ.ಡಿ.ಎ ಬಗ್ಗೆಯಲ್ಲ. ಇದನ್ನು ಟೇಕ್ಓವರ್ ಮಾಡಿ, ಇದು ಬರೇ ಹುಚ್ಚಮಾಸ್ತಿಗೌಡರ, ಜೀವರಾಜ್ಆಳ್ವರವರ ಪ್ರಶ್ನೆಯಲ್ಲ. ಇದರ ಬಗ್ಗೆ ಆಪಾದನೆ ಬಂದಿದೆ. ಟೇಕ್ಓವರ್ ಮಾಡಿ, ಸಿ.ಓ.ಡಿ ಎನ್‌ಕ್ವಯರಿ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸಿಓಡಿ ಎನ್‌ಕ್ವೈರಿ ಮಾಡಬೇಕೆಂದು ಹೇಳಿ ತಾವು ಕೊಟ್ಟಂಥ ಸಲಹೆಯನ್ನು ಕೂಡ ನಾವು ಪರಿಶೀಲನೆ ಮಾಡಿ, ಅಗತ್ಯ ಬಿದ್ದರೆ ತಮ್ಮ ಜೊತೆಯಲ್ಲಿ ಮಾತನಾಡುತ್ತೇನೆ. I will discuss with the hon. member. The Hon'ble Minister has also some information. I will discuss with you and whatever suitable appropriate action is to be taken, the Government will not hesitate to take.

SRI. JEEVARAJ ALVA:– Stringent action, you should take.

ವರ್ತೂರು ಕ್ಷೇತ್ರದ ಹೂಡಿ ಗ್ರಾಮದಲ್ಲಿ ಆಶ್ರಯ ಯೋಜನೆಯಲ್ಲಿ ನಡೆದಿರುವ ಅವ್ಯವಹಾರ

† ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಅಧ್ಯಕ್ಷರ ಅನುಮತಿಯನ್ನು ಮುಂಚಿನೆ ಪಡೆದಿದ್ದೇನೆ. ನಾನು ಮಾನ್ಯ ಸಿಂಧ್ಯರವರು, ಮಾನ್ಯ ರಾಯರೆಡ್ಡಿಯವರು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೆವು. ಈ ಆಶ್ರಯ ಯೋಜನೆಯಲ್ಲಿ ವರ್ತೂರು ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಈ ಹೂಡಿ ಗ್ರಾಮದಲ್ಲಿ ಏನು ಒಂದು ಸೈಟ್ ಅಲಾಟ್‌ಮೆಂಟ್‌ನಲ್ಲಿ ಎಷ್ಟು ದುರ್ವ್ಯವಹಾರ ನಡೆದಿದೆ ಅದನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಅದರ ಬಗ್ಗೆ ಇವತ್ತು ಚರ್ಚೆನೂ ಆಯಿತು. ಮಾನ್ಯ ಮುಖ್ಯ ಮಂತ್ರಿಗಳು ಒಂದು ಮಾತನ್ನು ಕೂಡ ಹೇಳಿದರು. ಅದರ ಬಗ್ಗೆ ನಾನು ಎನ್‌ಕ್ವಯರಿ ಮಾಡಿಸುತ್ತೇನೆಂದು ಸದನದಲ್ಲಿ ಹೇಳಿದ್ದರು.

ಉಪಾಧ್ಯಕ್ಷರು:– ಮಾನ್ಯ ವಿರೋಧಪಕ್ಷದ ನಾಯಕರೇ, ಈಗಿರುವುದು ಗಮನ ಸೆಳೆಯುವ ಸೂಚನೆ.

ಶ್ರೀ ಆರ್.ವಿ. ದೇಶಪಾಂಡೆ:– ಇದು ಬಹಳ ಮುಖ್ಯವಿದೆ. ಒಂದೂವರೆ ಸಾವಿರ ರೂ. ವಸ್ತುಗಳನ್ನು ಅಧಿಕಾರಿಗಳು ಹೋಗಿ ಸುಟ್ಟಿದ್ದಾರೆ.

ಉಪಾಧ್ಯಕ್ಷರು:– ಈ ವಿಚಾರವನ್ನು ಯಾವ ನಿಯಮಾವಳಿಯ ಪ್ರಕಾರ ಹೇಳುತ್ತಿದ್ದೀರಿ ?

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ಪರ್ಮಿಷನ್ ತೆಗೆದುಕೊಂಡಿರುತ್ತೇನೆ, ಮುಂಜಾನೆ ಹೋಗಿ ಜೀರೋ ಹವರ್‌ನಲ್ಲಿ ರೈಸ್ ಮಾಡಲಿಕ್ಕೆ, ಪರ್ಮಿಷನ್ ಕೊಟ್ಟಿದ್ದಾರೆ. ಆದ್ದರಿಂದ

ಜೀರೋ ಹವರ್‌ನಲ್ಲಿ ರೈಸ್ ಮಾಡುತ್ತಿದ್ದೇನೆ. ಇದರ ಸೀರಿಯಸ್‌ನೆಸ್ ಅನ್ನು ತಾವು ನೋಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಎನ್‌ಕ್ವಯರಿ ಆರ್ಡರ್ ಮಾಡಿದರೂ ಏನೂ ಆಗಲಿಲ್ಲ. ತಾವು ಒಂದು ಭರವಸೆಯನ್ನು ಕೊಟ್ಟಿರಿ ಎನ್‌ಕ್ವೈಯರಿ ಮಾಡುತ್ತೇವೆಂದು. ನಾನು ಆ ದಿನ ಒಪ್ಪಿಕೊಂಡೆ. ಆದರೆ ತಾವು ಮಾಡಲಿಲ್ಲ. 18ರಂದು ಜನರು ಪೀಸ್‌ಫುಲ್ ಆಗಿ ಧರಣಿ ಮಾಡುತ್ತಿದ್ದರು. 18 ಆಯಿತು, 19 ಆಯಿತು. ಧರಣಿ ಆದನಂತರ ಡೆಪ್ಯೂಟಿ ಕಮಿಷನರ್ ಶ್ರೀ ಹಾಲಪ್ಪನವರು 18ಕ್ಕೆ ಭೇಟಿದಾಗ ಜನರು ಮೆಮೋರ್‍ಯಾಂಡಂ ಕೊಟ್ಟರು. ಈಗ ಆದ ಸೈಟ್ ಆಲಾಟ್‌ಮೆಂಟ್ ಬಗ್ಗೆ ಪುನರ್‌ಪರಿಶೀಲನೆ ಮಾಡಿ ಅರ್ಹತೆ ಇದ್ದ ಜನರಿಗೆ, ಲೋಕಲ್ ಜನರಿಗೆ ಸೈಟುಗಳನ್ನು ಕೊಡಿ ಎಂದು ಕೇಳಿದ್ದಾರೆ. ಅವರದ್ದು ಯೋಗ್ಯವಾದ ಬೇಡಿಕೆ ಇತ್ತು. ಇದೆಲ್ಲಾ ಮಾಡಿದರೂ ಏನೂ ಆಗಲಿಲ್ಲ. ಆ ಸಂದರ್ಭದಲ್ಲಿ ಸುತ್ತಮುತ್ತ ಹಳ್ಳಿಯಲ್ಲಿ ಜಾಫರ್ ಷರೀಫ್ ಅವರ ಕಾರ್ಯಕ್ರಮ ಇತ್ತು. ಮುಂಜಾನೆ ಪೋಲೀಸರು ಅಲ್ಲಿಗೆ ಹೋಗಿ ಸಾಕಷ್ಟು ಸಂಖ್ಯೆಯಲ್ಲಿ ಸೇರಿದ್ದರು. ಜಾಫರ್ ಷರೀಫ್ ಅವರ ಕಾರ್ಯಕ್ರಮ ಆದನಂತರ ಮಧ್ಯಾಹ್ನ ಡೆಪ್ಯೂಟಿ ಕಮಿಷನರ್ ಹೋಗಿ ವಾಪಸ್ಸು ಬಂದರು. ಅಷ್ಟರೊಳಗೆ ಲೋಕಲ್ ಜನರು ಅಲ್ಲಿ ಗುಡಿಸಲುಗಳನ್ನು ಹಾಕಿಕೊಂಡರು. ಆ ಜಾಗ ಲೋಕಲ್ ಜನರಿಗೆ ಸಿಗಬೇಕು; ಆದರೆ ಹೊರಗಿನ ಜನರಿಗೆ ಸಿಗುತ್ತಿದೆ. ಜೆನ್ಯೂಯಿನ ಜನ ಯಾರಿದ್ದಾರೆ. ಅರ್ಹತೆ ಯಾರಿಗೆ ಇದೆ ಅವರಿಗೆ ಮಾತ್ರ ಕೊಡಬೇಕೇ ವಿನಃ ಬೇರೆಯವರಿಗೆ ಕೊಡತಕ್ಕದ್ದು ಅಲ್ಲ. ಆದರೆ ಅಲ್ಲಿ ಬೇರೆಯವರಿಗೆ ಕೊಟ್ಟ ಭ್ರಷ್ಟಾಚಾರವಾಗಿದೆ ಎಂದು ದೂರು ಮಾಡಿದ್ದಾರೆ. ಸೈಟ್ ಕೊಟ್ಟು ಹಣ ತೆಗೆದುಕೊಂಡಿದ್ದಾರೆಂದು ದೂರು ಮಾಡಿದ್ದಾರೆ. ಆ ಬಗ್ಗೆ ವಿಚಾರಣೆ ಮಾಡುತ್ತೇವೆಂದು ಹೇಳಿದ್ದೀರಿ. ವಿಚಾರಣೆ ಮಾಡಿದ್ದರೆ ಈ ಪರಿಸ್ಥಿತಿ ಆಗುತ್ತಿರಲಿಲ್ಲ. ಪೋಲೀಸರು ಹೋದಾಗ ಅಲ್ಲಿ ಗುಡಿಸಲುಗಳನ್ನು ಹಾಕಿಕೊಂಡಿದ್ದ ಕಡುಬಡ ಜನರು ಬೇಡಿಕೊಂಡರೂ ಅವರ ಮಾತನ್ನು ಲೆಕ್ಕಿಸದೆ 1300 ಗುಡಿಸಲುಗಳನ್ನು ಸುಟ್ಟಿದ್ದಾರೆ ಮತ್ತು ಅವರ ಮೇಲೆ ಲಾಠಿ ಚಾರ್ಜ್ ಮಾಡಿದ್ದರೆ. ಟಿಯರ್ ಗ್ಯಾಸ್ ಶೆಲ್ ಓಪನ್ ಮಾಡಿದ್ದಾರೆ. ಇದು ಬಡವರ ಬಗ್ಗೆ ಮಾಡುವ ಕಾರ್ಯಕ್ರಮವೇ ? ಬಡವರಿಗೆ ಈ ರೀತಿ ಆಗಬಾರದು. ಏನೇ ಲಾ ಅಂಡ್ ಆರ್ಡರ್ ಮೆಯಿಂಟೇನ್ ಮಾಡಿದರೂ ಈ ರೀತಿ ಮಾತ್ರ ಬಡವರಿಗೆ ಅನ್ಯಾಯವಾಗಬಾರದು. ಪೋಲೀಸರು ಹೇಳುತ್ತಾರೆ. ಕಲ್ಲು ಹೊಡೆದರು ಎಂದು. ತಾವು ಬೇಕಾದರೆ ಸ್ಥಳಕ್ಕೆ ಭೇಟಿ ಮಾಡಿ. ಅಲ್ಲಿ ಇಡೀ ಜಾಗದಲ್ಲಿ ಕಲ್ಲು ಇಲ್ಲ. ಕಲ್ಲು ಇಲ್ಲದೆ ಕಲ್ಲು ಹೇಗೆ ಹೊಡೆಯುತ್ತಾರೆ ? ಇವರು ಟಿಯರ್ ಗ್ಯಾಸ್ ತೆಗೆದುಕೊಂಡು ಹೋಗಬೇಕಾದರೆ ಪ್ರೀ-ಪ್ಲಾನ್ ಮಾಡಿಕೊಂಡಿದ್ದಾರೆ. ಮೊದಲು ಹೇಗೆ ಇವರಿಗೆ ಗೊತ್ತಿರುತ್ತದೆ ಅಲ್ಲಿ ಗಲಾಟೆ ನಡೆಯುತ್ತದೆ ಎಂದು ? 18 ರಿಂದ ಪೀಸ್‌ಫುಲ್ ಆಗಿ ಧರಣಿ ನಡೆಸುತ್ತಿದ್ದಾರೆ. ನಿನ್ನೆ ಏತಕ್ಕೆ ಟೀಯರ್ ಗ್ಯಾಸ್ ತೆಗೆದುಕೊಂಡು ಹೋಗಬೇಕು ? ಡೆಪ್ಯೂಟಿ ಕಮಿಷನರ್ ಹೋದಾಗ ಏತಕ್ಕೆ ಗಲಾಟೆ ಮಾಡಬೇಕು ? 1300 ಗುಡಿಸಲುಗಳನ್ನು ಪೋಲೀಸರು ಸುಟ್ಟಿದ್ದಾರೆ. ಕಲ್ಲು ಹೊಡೆದಿದ್ದಾರೆಂದು ಹೇಳಿದ್ದಾರೆ. ಅದು ಸುಳ್ಳು, ಅಲ್ಲಿ ಕಲ್ಲು ಇರಬೇಕಲ್ಲಾ ಹೊಡೆಯುವುದಕ್ಕೆ ? ಇದಕ್ಕೆ ಸ್ಥಳೀಯ ಶಾಸಕರು ಪ್ರಚೋದನೆ ಕೊಟ್ಟಿದ್ದಾರೆ. ಡೆಪ್ಯೂಟಿ ಕಮಿಷನರ್ ಶ್ರೀ ಹಾಲಪ್ಪನವರು ಮತ್ತು ಡಿ.ಸಿ.ಪಿ. ಶ್ರೀ ಕೆಂಪಯ್ಯನವರು ಅಲ್ಲಿಹೋಗುವ ಅವಶ್ಯಕತೆ ಏನಿತ್ತು ? ಅವರು ಹೋಗುವ ಅವಶ್ಯಕತೆ ಇರಲಿಲ್ಲ. ಈ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ, ಇವತ್ತು ತಾವು ಈ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದು ನಮಗೆ ಗೊತ್ತಾದ ಬೇಕಾಗಿದೆ. ಅಲ್ಲಿನ ಜನರು ಪೀಸ್‌ಫುಲ್ ಆಗಿ ಧರಣಿ ಮಾಡುತ್ತಿರಬೇಕಾದರೆ ಹಾಲಪ್ಪನವರು ಮತ್ತು ಕೆಂಪಯ್ಯನವರು ಯಾವುದೆ ಕಾರಣ ಇಲ್ಲದೆ ಏತಕ್ಕೆ ಅಲ್ಲಿಗೆ ಹೋಗಿದ್ದರು ? ನಮ್ಮ ರಾಜ್ಯದಲ್ಲಿ ಪೀಸ್‌ಫುಲ್ ಆಗಿ ಅಜಿಟೇಟ್ ಮಾಡುವುದಕ್ಕೆ ಅಧಿಕಾರ ಇಲ್ಲವೇ ? ಪೀಸ್‌ಫುಲ್ ಆಗಿ ಧರಣಿ ಮಾಡುವುದಕ್ಕೆ ಅಧಿಕಾರ ಇದ್ದರೆ

Why the Dy. Commissioner should go there after 2.30 p.m. He has gone there and he has received a Memorandum.

ಇಷ್ಟಾದ ನಂತರ ಅದಕ್ಕೆ ಪರಿಹಾರ ಕಂಡುಹಿಡಿಯುವುದಕ್ಕೆ ಹೋಗಬೇಕಾಗಿತ್ತು. ಜನರು ಗಲಾಟೆ ಮಾಡಿದ್ದರೆ ಹೋಗಬೇಕಾಗಿತ್ತು. ಏನೂ ಮಾಡದೆ ಸುಮ್ಮನಿದ್ದ ಜನರಿಗೆ ಇವರು ಲಾಠಿ ಚಾರ್ಜ್ ಮಾಡಿದ್ದಾರೆ. ಹಳ್ಳಿಯಲ್ಲಿದ್ದ ಬಡವರು, ಹೆಣ್ಣುಮಕ್ಕಳು ಎಲ್ಲರ ಮೇಲೂ ಲಾಠಿ ಚಾರ್ಜ್ ಮಾಡಿದ್ದಾರೆ. ಸುಮಾರು 20 ಜನ ಹೆಣ್ಣು ಮಕ್ಕಳನ್ನು ಕೂಡ ಅರೆಸ್ಟ್ ಮಾಡಿದ್ದಾರೆ. ಅಲ್ಲಿ ಸುಮಾರು 50–60 ಜನರ ಅರೆಸ್ಟ್ ಆಗಿದೆ. 12 ವರ್ಷದ ಹುಡುಗ ಆಸ್ಪತ್ರೆಯಲ್ಲಿದ್ದಾನೆ. ಅವರು ಕಾಯಿದೆ ಪ್ರಕಾರ ನಮಗೆ ನ್ಯಾಯ ದೊರಕಿಲ್ಲ. ಆಶ್ರಯ ಯೋಜನೆಯಲ್ಲಿ ಭ್ರಷ್ಟಾಚಾರವಾಗಿದೆ ಎಂದು ಹೋರಾಟ ಮಾಡಿದರೆ ಅವರಿಗೆ ಇದೇ ನಿಮ್ಮ ಕೊಡಿಗೆ ? ಯಾರು ಅರ್ಹರಿದ್ದಾರೆ. ಯಾರಿಗೆ ಸರ್ಟಿಫಿಕೇಟ್ ಅವರಿಗೆ ಕೊಡಿ. ಅದುಬಿಟ್ಟು ನೀವು ದಕ್ಷ ಸರ್ಕಾರ ಕೊಡುತ್ತೇವೆ. ಪ್ರಾಮಾಣಿಕ ಸರ್ಕಾರ ಕೊಡುತ್ತೇವೆಂದು ಹೇಳಿ ಈ ರೀತಿ ಅನ್ಯಾಯ ಬಡವರ ಮೇಲೆ ಆಗಬಾರದು. ಸ್ಥಳಕ್ಕೆ ರೆವಿನ್ಯೂ ಮಿನಿಸ್ಟರ್ ಕೂಡ ಭೇಟಿ ಕೊಟ್ಟಿದ್ದಾರೆ. ಅವರು ಇದರ ಬಗ್ಗೆ ಬೆಳಕು ಚೆಲ್ಲಬೇಕು, ಪರಿಸ್ಥಿತಿ ಏನಿದೆ ಎಂಬುದನ್ನು ಹೇಳಬೇಕು. ಶಾಸಕರು ನಮ್ಮ ಪಕ್ಷದವರು ಇರಬಹುದು. ನಿಮ್ಮ ಪಕ್ಷದವರು ಇರಬಹುದು. ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಬೇಕು. ತಮ್ಮ ಮೂಲಕ ಮುಖ್ಯ ಮಂತ್ರಿಗಳನ್ನು ಕೇಳುತ್ತೇನೆ, ಈ ಅಧಿಕಾರಿಗಳು ಏತಕ್ಕೆ ಅಲ್ಲಿಗೆ ಹೋದರು ? ಲಾಠಿ ಚಾರ್ಜ್ ಏತಕ್ಕೆ ಮಾಡಿದರು ? ಟೀಯರ್ ಗ್ಯಾಸ್ ತೆಗೆದುಕೊಂಡು ಹೋಗಬೇಕಾದರೆ ಪ್ರೀ–ಪ್ಲಾನ್ ಮಾಡಿ ಹೋಗಿರುವುದು ಗೊತ್ತಾಗುತ್ತದೆ, ಆದ್ದರಿಂದ ಡೆಪ್ಯೂಟಿ ಕಮಿಷನರ್ ಮತ್ತು ಡಿ.ಸಿ.ಪಿ. ಕೆಂಪಯ್ಯನವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಮತ್ತು ಕೂಡಲೇ ಸಸ್ಪೆಂಡ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹೆಣ್ಣು ಮಕ್ಕಳ ಮೇಲೆ, ಬಡವರ ಮೇಲೆ ಲಾಠಿ ಚಾರ್ಜ್ ಮಾಡುವ ಕಾರಣ ಇರಲಿಲ್ಲ. ಈಗಾಗಲೇ ಏನು ಪತ್ರ ಕೊಟ್ಟಿದ್ದಾರೆ ಅದನ್ನು ಸರ್ಕಾರ ಸ್ಟೇ ಮಾಡಬೇಕು. ಅದರ ಬಗ್ಗೆ ಎನ್‌ಕ್ವೈರಿ ಮಾಡಿ ಅರ್ಹತೆ ಯಾರಿಗೆ ಇದೆ, ಅವರು ಯಾವ ಪಕ್ಷದವರಿರಲಿ, ಯಾವ ಜಾತಿಯವರಿರಲಿ, ಯಾವ ಕೋಮಿನವರಿರಲಿ ಅವರಿಗೆ ಕೊಡಿ. ಅದು ವಿನಃ ಇದೇ ಪ್ರಕಾರ ಮಾಡಿದರೆ ಸರಿಯಾದ ಪಾಠವನ್ನು ಜನರು ಕಲಿಸುತ್ತಾರೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಉಪಾಧ್ಯಾಕ್ಷರೇ, ಬೆಂಗಳೂರು ಮತ್ತು ಸುತ್ತಮುತ್ತ ಆಶ್ರಯದಲ್ಲಿ ಸೈಟ್‌ಗಳನ್ನು ಹಂಚುವುದರಲ್ಲಿ ಅವ್ಯವಹಾರ ಆಗಿದೆ. ಇದು ಸತ್ಯ ಸಂಗತಿ ಇದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅನ್ಯಾಯವಾಗಿದೆ ಎಂದು, ನ್ಯಾಯಬದ್ಧವಾಗಿ ಸತ್ಯಾಗ್ರಹ ಮಾಡುವುದು, ಮಾಡಿದಾಗ ಅನಾವಶ್ಯಕವಾಗಿ ಹಲ್ಲೆ ಮಾಡುವುದು ಸರಿಯಲ್ಲ. ಇವತ್ತು ನೂರಾರು ಮನೆಗಳು ಬೆಂಕಿ ಹಚ್ಚಿ ಸುಟ್ಟಿರಬೇಕಾದರೆ ಕೈಕಟ್ಟಿಕೊಳಿತು ಕೊಳ್ಳಬೇಕೆಂದು ನಿರೀಕ್ಷಿಸುವುದು ಸರಿಯೇ ? ಅವರನ್ನು ಬೆದರಿಸಲು ಸರ್ಕಾರ ಸೂಚನೆ ಕೊಟ್ಟಿದೆಯೇ ? ಬೆಂಗಳೂರಿನ ಸುತ್ತಮುತ್ತ ಆಶ್ರಯದಲ್ಲಿ ಕೊಟ್ಟ ಎಲ್ಲಾ ಕಡೆ ಗೊಂದಲದ ವಾತಾವರಣ ಇದೆ. ಬೇಕಾದವರಿಗೆ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಸೈಟ್‌ಗಳನ್ನು ಹಂಚಿರುವುದು ಗೊತ್ತಿರುವ ಸಂಗತಿ. ಈ ಸಂದರ್ಭದಲ್ಲಿ ಧರಣಿ ಮಾಡಿದಾಗ ನ್ಯಾಯವಾಗಿ ತನಿಖೆ ಮಾಡದೇ ಈ ರೀತಿ ಹೋಗಿ...

ಉಪಾಧ್ಯಕ್ಷರು:– ಯಡಿಯೂರಪ್ಪನವರೇ, ಎಲ್ಲಾ ಕಡೆ ಎಂದು ಹೇಳುತ್ತಿದ್ದೀರಿ. ನಿಮ್ಮ ಮತ ಕ್ಷೇತ್ರದಲ್ಲಿ ಗಲಾಟೆ ಇದೆಯೇ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಬೆಂಗಳೂರಿನ ಸುತ್ತಮುತ್ತ ಸ್ವಾಮಿ. ಆಶ್ರಯ ಯೋಜನೆಯಲ್ಲಿ ಅವ್ಯವಹಾರ ನಡೆದಿದೆ. ಅದಕ್ಕೆ ಧರಣಿ ಸತ್ಯಾಗ್ರಹ ಮಾಡುವವರ ಮೇಲೆ ಹಲ್ಲೆ ಮಾಡುವುದು

ಸರಿಯೇ ? ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಬದಲು ಲಾಠಿ ಛಾರ್ಜ್ ಮಾಡಿದರೆ, ಹೇಗೆ ? ರಕ್ಷಣೆ ಬೇಕು ಎಂದವರಿಗೆ ಇದು ಸರ್ಕಾರದ ಉತ್ತರವೇ ? ಮಾನ್ಯ ಉಪಾಧ್ಯಕ್ಷರೇ, ತಾವು ನಮ್ಮ ರಕ್ಷಣೆಗೆ ಬರಬೇಕು. ದಯೆಮಾಡಿ ಯಾರು ಶಾಂತ ರೀತಿಯಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರು ಸತ್ಯಾಗ್ರಹ ಮಾಡುವ ಉದ್ದೇಶ ಏನು ? ಇದೇ ರೀತಿ ನೀತಿ ಮುಂದುವರೆದು ನಾಳೆ ದಿವಸ ಸರ್ಕಾರದ ವಿರುದ್ಧ ಜನರು ತಿರುಗಿಬಿದ್ದಾಗ, ಅವರು ಬೀದಿಗೆ ಇಳಿದಾಗ ಇದೇ ಪೋಲೀಸರ ಸಹಾಯದಿಂದ ತಾವು ಹೋರಾಟವನ್ನು ತಡೆಯುತ್ತೇವೆನ್ನುವ ನಂಬಿಕೆಯನ್ನು ಇಟ್ಟುಕೊಂಡಿದ್ದರೆ ಅದನ್ನು ಕೈಬಿಟ್ಟು, ತಮ್ಮ ಮೊಂಡುತನ ಬಿಟ್ಟು ಅವರಿಗೆ ನ್ಯಾಯ ಒದಗಿಸುವುದಕ್ಕೆ ಪ್ರಯತ್ನಪಡಬೇಕು. ನ್ಯಾಯವನ್ನು ದೊರಕಿಸಿಕೊಡದ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಉಪಾಧ್ಯಾಕ್ಷರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಉಪಾಧ್ಯಕ್ಷರೇ, ಇದೇ ವಿಚಾರದಲ್ಲಿ ಹಿಂದೆ ಸರ್ಕಾರ ಬೆಂಗಳೂರು ವಿಭಾಗಾಧಿಕಾರಿಗಳನ್ನು ವಿಚಾರಣೆಗಾಗಿ ನೇಮಿಸಿರತಕ್ಕದ್ದು ಇದೆ. ಅಲ್ಲಿ ಭ್ರಷ್ಟಾಚಾರ ಆಗಿದೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ಆದರೆ ಅವ್ಯವಹಾರ ನಡೆದಿದೆ ಎಂದು ದೂರು ಬಂದಿದೆ. ಆ ಬಗ್ಗೆ ಬೆಂಗಳೂರು ವಿಭಾಗಾಧಿಕಾರಿಗಳನ್ನು ತನಿಖೆಗಾಗಿ ನೇಮಿಸಲಾಗಿತ್ತು. ಆದರೆ ತನಿಖೆ ಆಗಿಲ್ಲ. ತನಿಖೆ ಆಗುವುದಕ್ಕಿಂತ ಮೊದಲೇ ಆ ಸರ್ಕಾರಿ ಆಜ್ಞೆಯನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಯಾವ ಕಾರಣದಿಂದ ವಾಪಸ್ಸು ತೆಗೆದುಕೊಂಡಿದ್ದಾರೆ ? ತನಿಖೆ ಮಾಡಿ ಏನೂ ವ್ಯವಹಾರ ನಡೆದಿಲ್ಲ ಎಂದರೆ ವಾಪಸ್ಸು ಪಡೆಯಬಹುದಾಗಿತ್ತು. ವಿಭಾಗಾಧಿಕಾರಿಗಳು ತನಿಖೆ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ. ಮಾಡುವ ಅವಧಿಯ ಒಳಗೆ ಆ ಆಜ್ಞೆಯನ್ನು ವಾಪಸ್ಸು ಪಡೆದಿದ್ದರಲ್ಲೆ ಅನುಮಾನ ಇದೆ. ಆ ಅಧಿಕಾರಿ ಅಲ್ಲಿ ಹೋಗಿ ನೋಡಿ ಅನ್ಯಾಯ ನಡೆದಿದ್ದರೆ ಕ್ರಮ ತೆಗೆದುಕೊಳ್ಳಲಿ. ಅನ್ಯಾಯ ನಡೆಯದಿದ್ದರೆ ಸಂತೋಷ. ಆ ಬಗ್ಗೆ ಸಂತೋಷ ಪಡೋಣ. ಅದಕ್ಕೆ ಅವಕಾಶ ಕೊಡದೇ ಆ ಆಜ್ಞೆಯನ್ನು ವಾಪಸ್ಸು ತೆಗೆದುಕೊಂಡಿದ್ದೀರಿ. ಯಾವ ಕಾರಣದಿಂದ ? ನೀವು ಇದಕ್ಕೆ ರಾಜಕೀಯವನ್ನು ಸೇರಿಸತಕ್ಕ ಪ್ರಯತ್ನ. ವಾಪಸ್ಸು ಪಡೆದಿರತಕ್ಕದ್ದನ್ನು ಖಂಡಿಸುತ್ತೇನೆ. ನಿನ್ನೆ ನಡೆದಿರತಕ್ಕ ಘಟನೆ ಬಗ್ಗೆ ಹೇಳುವುದಾದರೆ, ಅಲ್ಲಿ ಯಾರೂ ಕಲ್ಲು ಹೊಡೆಯಲಿಲ್ಲ, ಮತ್ತು ಅಲ್ಲಿ ಕುಳಿತಿರುವವರು ಯಾರೂ ಸಂಚಾರಕ್ಕೆ ಅಡ್ಡಿ ಮಾಡಲಿಲ್ಲ. ಒಂದು ಅನ್ಯಾಯ ನಡೆದಿದ್ದು ಅಕ್ರಮ ನಡೆದಿದ್ದು ಅದರ ವಿರುದ್ಧ ಪ್ರತಿಭಟನೆ ತೋರಿಸುವುದು ಅವರ ಮೂಲಭೂತ ಹಕ್ಕು. ಆ ಹಕ್ಕನ್ನು ಶಾಂತ ರೀತಿಯಲ್ಲಿ ಚಲಾಯಿಸುತ್ತಿದ್ದಾಗ ಪೋಲೀಸ್ ದೌರ್ಜನ್ಯ ನಡೆದಿದೆ, ಲಾಠಿ ಛಾರ್ಜ್ ಆಗಿದೆ. ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ, ಅಶ್ರುವಾಯು ಬಿಟ್ಟಿದ್ದಾರೆಂದರೆ ಅರ್ಥ ಏನು ? ಈ ದೇಶದಲ್ಲಿ ಪ್ರಜಾಪ್ರಭುತ್ವ ಇಲ್ಲವೇ ? ಶಾಂತಿಯುತವಾಗಿ ಯಾರೂ ಅನ್ಯಾಯದ ವಿರುದ್ಧ ಪ್ರತಿಭಟಿಸಬಾರದೇ ? ಯಾವ ಕಾನೂನಿನಲ್ಲಿ ಇದೆ ? ಯಾವ ಅಧಿಕಾರ ಉಪಯೋಗಿಸಿಕೊಂಡು ಈ ರೀತಿ ದೌರ್ಜನ್ಯ ಮಾಡಿದ್ದೀರಿ ? ಇಂತಹ ಅವ್ಯವಹಾರಗಳು ನಡೆಯಬೇಕಾದರೆ, ಇದರಲ್ಲಿ ಸಾಕಷ್ಟು ದುರ್ವ್ಯವಹಾರ ನಡೆದಿದೆ ಎನ್ನುವುದು ಈ ಎರಡು ಘಟನೆಯಿಂದ ಸಾಬೀತು ಆಗಿದೆ. ಆದುದರಿಂದ ಆಗಿರತಕ್ಕ ಘಟನೆ ಗಮನದಲ್ಲಿ ಇಟ್ಟು ಮಂಜೂರು ಆಗಿರತಕ್ಕ ಸೈಟ್‌ಗಳನ್ನು ವಜಾ ಮಾಡಬೇಕಾಗಿದೆ. ಏನು ವಿಚಾರ ನಡೆದಿದೆ ಎನ್ನುವ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳೂ ಕೂಡಾ ಅಲ್ಲಿಗೆ ಹೋಗಿ ಬಂದಿದ್ದಾರೆ. ಕೆಲವು ಕೆರೆ ಅಂಗಳ ಒತ್ತುವರಿ ಆಗಿರತಕ್ಕದ್ದನ್ನು ಮಾನ್ಯ ಕಂದಾಯ ಮಂತ್ರಿಗಳು ಹೇಳಿದ್ದಾರೆ. ಆಡಳಿತ ಪಕ್ಷದ ಸದಸ್ಯರು ಆರೋಪ ಮಾಡಿದ್ದಾರೆ. ದೂರು ಕೊಟ್ಟಿದ್ದಾರೆ. ಇಷ್ಟೊಂದು ಗುರುತರ ವಿಚಾರ ಇರುವಾಗ ಏನೂ ಇಲ್ಲದೇ ಏಕಾಏಕಿ ದೌರ್ಜನ್ಯ ನಡೆಸಬೇಕಾದರೆ ಇದು ಖಂಡನೀಯವೆಂದು ಹೇಳಬೇಕಾಗುತ್ತದೆ. ಅಲ್ಲಿ ಆಗಿರತಕ್ಕದ್ದನ್ನು ತನಿಖೆ ಮಾಡಲು ನೀವು ಬೆಂಗಳೂರು ವಿಭಾಗಾಧಿಕಾರಿಗಳನ್ನು ನೇಮಿಸಿದ್ದೀರಿ. ಅಲ್ಲಿಂದ ಪುನಃ ಈ ಘಟನೆಯ ಬಗ್ಗೆ ವಿಚಾರಣೆ ಪ್ರಾರಂಭವಾಗಬೇಕು ಅಲ್ಲಿ ನೀವು ಕೆಲವರನ್ನು ಇಂಪ್ಲೀಡ್

ಮಾಡತಕ್ಕ ಒಂದು ಪ್ರಯತ್ನ ನಡೆಯುತ್ತಾ ಇದೆ. ಇವತ್ತಿನ ದಿವಸ ಅದಕ್ಕೆ ಅವಕಾಶ ಕೊಡಬಾರದೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಉಪಾಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಬೆಂಗಳೂರಿನ ಸುತ್ತ ಮುತ್ತ ನಿವೇಶನಗಳು ಬಹಳ ಬೆಲೆ ಇರತಕ್ಕ ವಿಚಾರ. ಮಾನ್ಯ ಕೃಷ್ಣಪ್ಪನವರು ತೋಟಗಾರಿಕೆ ಮಂತ್ರಿ ಇದ್ದಾರೆ. ಅವರು ಆಶ್ರಯ ಸಮಿತಿ ಅಧ್ಯಕ್ಷರಾಗಿದ್ದರು. ಆ ವಿಚಾರದಲ್ಲಿ ಹೋದ ಸಾರಿ ಪ್ರಸ್ತಾಪವಾದಾಗ ಕುರುಡರಿಗೆ, ಕುಂಟರಿಗೆ, ಕಿವುಡರಿಗೆ ಅಂತಹವರಿಗೆ ಸೈಟುಗಳನ್ನು ಕೊಟ್ಟಿದ್ದೇವೆ, ಹೊರಗಡೆಯವರಿಗೆ ಕೆಲವರಿಗೆ ಕೊಟ್ಟಿರಬಹುದು ಎನ್ನುವ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಸಂದರ್ಭದಲ್ಲಿ ನಾವು ಅಲ್ಲಿಗೆ ಬಿಟ್ಟೆವು. ಕುರುಡರಿಗೆ, ಕುಂಟರಿಗೆ, ಕಿವುಡರಿಗೆ ಇಂತಹವರಿಗೆ ಕೊಟ್ಟರೆ ನಾವು ಅಡ್ಡಿ ಬರುವುದಿಲ್ಲ ಸುಮ್ಮನಾದೆವು. ಆದರೆ ನಿನ್ನೆ ದಿನ ನಡೆದಿರತಕ್ಕ ಘಟನೆ ಪೋಲೀಸರ ದೌರ್ಜನ್ಯ ಇನ್ನೊಂದು ಉದಾಹರಣೆ. ಈಗ ಕರೆಸಿ ಮಾತನಾಡಿ. ಈ ಹಿನ್ನೆಲೆ ಇರತಕ್ಕ ಸಂದರ್ಭದಲ್ಲಿ ಮಂತ್ರಿಗಳು ಇದ್ದಾರೆ. ಮಂತ್ರಿಗಳನ್ನು ಕರೆಸಿ ಮಾತನಾಡಬೇಕಾಗಿತ್ತು. ಅಥವಾ ಜಿಲ್ಲಾಧಿಕಾರಿಗಳಾಗಲೀ ವಿಭಾಗಾಧಿಕಾರಿಗಳಾಗಲೀ ಯಾರಾದರೂ ಅಧಿಕಾರಿಗಳು ಹೋಗಿ ನೋಡಬೇಕಾಗಿತ್ತು. ಅಲ್ಲಿ ಟಿಯರ್‌ಗ್ಯಾಸ್ ಮಾಡುತ್ತಾರೆ, ಲಾಠಿ ಚಾರ್ಜ್ ಮಾಡುತ್ತಾರೆಂದು ಹೇಳಿದರೆ ಏನರ್ಥ ಬರುತ್ತದೆನ್ನುವುದನ್ನು ದಯವಿಟ್ಟು ಯೋಚನೆ ಮಾಡಿ. ಇದನ್ನು ಹೀಗೆ ನಡೆಯಲಿಕ್ಕೆ ಬಿಟ್ಟರೆ ಎಲ್ಲಾ ಕಡೆಗಳಲ್ಲೂ ಈ ತರಹ ಪ್ರಕರಣಗಳು ಆಗುತ್ತವೆ. ಕಂದಾಯಮಂತ್ರಿಗಳು ತಕ್ಷಣ ಅಲ್ಲಿಗೆ ಹೋಗಿ ಬಂದಿದ್ದಾರೆ. ಅವರಿಗೆ ಅಲ್ಲಿರತಕ್ಕ ಸ್ಥಳೀಯ ವಿಚಾರ ಗೊತ್ತಿದೆ. ನಾನಾದರೂ ಸರ್ಕಾರವನ್ನು ಒತ್ತಾಯ ಮಾಡತಕ್ಕದ್ದು ಇಂತಹ ಘಟನೆಗಳು ಆಗದಹಾಗೆ ಕ್ರಮ ತೆಗೆದುಕೊಳ್ಳಬೇಕು. ಇಂತಹ ದೌರ್ಜನ್ಯಗಳನ್ನು ಅಧಿಕಾರಿಗಳು ತತ್‌ಕ್ಷಣ ನಿಲ್ಲಿಸದಿದ್ದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಉಪಾಧ್ಯಕ್ಷರೇ, ಆಶ್ರಯ ಯೋಜನೆಯ ಅಡಿಯಲ್ಲಿ ನಿವೇಶನ ಹಂಚತಕ್ಕದ್ದು ಅದಕ್ಕೆ ನಮ್ಮದೇನೂ ತಕರಾರು ಇಲ್ಲ, ವಿರೋಧವಿಲ್ಲ. ನಿನ್ನೆ ಏನು ಈ ಪ್ರಕರಣ ನಡೆದಿದೆ ಯಾರೋ ರಸ್ತೆಯಲ್ಲಿ ಹೋಗುವವರು ಗುಡಿಸಲುಗಳಿಗೆ ಬೆಂಕಿ ಇಟ್ಟು ಹಾಳುಮಾಡಿದರು. ಹಿರಿಯ ಪೋಲೀಸ್ ಅಧಿಕಾರಿಗಳ ಜೊತೆಯಲ್ಲಿ ಜಿಲ್ಲಾಧಿಕಾರಿಗಳು ಅವರನ್ನು ಎದುರಿಗೆ ನಿಲ್ಲಿಸಿಕೊಂಡು ಬೆಂಕಿ ಇಟ್ಟಿದ್ದಾರೆ. ಆ ಮೇಲೆ ಲಾಠಿ ಪ್ರಹಾರ ಇದೆಲ್ಲಾ ಅಷ್ಟು ಸುಲಭವಾದ ಪ್ರಶ್ನೆಯಲ್ಲ. ಇದು ಬಹಳ ಅತ್ಯಂತ ಗಹನವಾದುದು. ಇದು ಬಹಳ ಗುರುತರವಾದದ್ದು. ಈ ಬಗ್ಗೆ ಸಿಪಿಐ ಸಿಪಿಎಂ. ಜನತಾದಳ ಹಾಗೂ ಮಿಕ್ಕೆಲ್ಲಾ ವಿರೋಧ ಪಕ್ಷದವರು ಸೇರಿ ಒಂದು ಹೋರಾಟ ಸಮಿತಿ ಮಾಡಿಕೊಂಡಿದ್ದಾರೆ. ಅಲ್ಲಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ದೌರ್ಜನ್ಯಮಾಡಿ ಜನರನ್ನು ಹೊರಗಡೆ ಹಾಕಿರತಕ್ಕ ಪ್ರಸಂಗ ಇದೆಯಲ್ಲಾ, ಇದು ಸಮಗ್ರವಾಗಿ ನ್ಯಾಯಾಂಗ ತನಿಖೆಯಾಗಬೇಕು. ಸಂಬಂಧಪಟ್ಟ ಅಧಿಕಾರಿಗಳು ಯಾರಿದ್ದಾರೆ ಜಿಲ್ಲಾಧಿಕಾರಿಗಳಾಗಲೀ ಪೋಲೀಸ್ ಅಧಿಕಾರಿಗಳಾಗಲಿ ಅವರ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಯಾರು ನಾಳೆ ರಕ್ಷಣೆ ಕೊಡುವವರು? ರಕ್ಷಣೆ ಕೊಡತಕ್ಕ ಅಧಿಕಾರಿಗಳು ನಿಂತುಕೊಂಡು ಬೆಂಕಿ ಹಾಕಿಸತಕ್ಕ ಒಂದು ಪ್ರಸಂಗಕ್ಕೆ ಹೋಗುವುದಾದರೆ, ಬಹುಶಃ ನಾಳೆ ನಮ್ಮ ಸರ್ಕಾರದಲ್ಲಿ ಯಾರಿಗೂ ರಕ್ಷಣೆ ಸಿಗುವುದಿಲ್ಲ. ಮುಖ್ಯಮಂತ್ರಿಗಳಾದ ಮೊಯಿಲಿಯವರ ಬಗ್ಗೆ ಗೌರವ ಇಟ್ಟುಕೊಂಡಿದ್ದೇವೆ. ಇಂತಹ ಪ್ರಕರಣಗಳು ನಡೆಯುವುದಿಲ್ಲವೆಂದು ಅಂದುಕೊಂಡಿದ್ದೇನೆ. ಇವತ್ತು ನಡೆದಿರತಕ್ಕ ಪ್ರಕರಣಗಳು ಯಾರಿಗೂ ಗೌರವ ತರತಕ್ಕದ್ದಲ್ಲ. ಮನುಷ್ಯರಾಗಿರತಕ್ಕವರು ಯಾರೂ ಮಾಡತಕ್ಕದ್ದಲ್ಲ. ಈ ಬಗ್ಗೆ ಒಂದು ಸಮಗ್ರವಾದ ನ್ಯಾಯಾಂಗ ತನಿಖೆಯಾಗಬೇಕು.

ಶ್ರೀ ಹೆಚ್.ಎಂ. ರೇವಣ್ಣ:– ಮಾನ್ಯ ಉಪಾಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ಇದರ ಬಗ್ಗೆ ಚರ್ಚೆಯಾಗಿ ನಿವೇಶನ ಕೊಟ್ಟಿರುವುದು ಸರಿಯಾಗಿದೆಯೆಂದೂ ಕುರುಡರು, ಕುಂಟರು, ಕಿವುಡರಿಗೆ ಕೊಟ್ಟಿರುವುದಕೆ. ತಕರಾರು [illegible]

ವಿರೋಧಪಕ್ಷದವರು ಹೇಳುತ್ತಿದ್ದಾರೆ. ಯಾರು ಹೋಗಿ ಗುಡಿಸಲುಗಳಿಗೆ ಬೆಂಕಿ ಹಾಕಿದರು ಎನ್ನುವುದನ್ನು ಯೋಚನೆ ಮಾಡಿ. ಯಾರಿಗೆ ಸೈಟು ಅಲಾಟ್ ಆಗಿ ಹಕ್ಕುಪತ್ರಗಳು ಇವೆಯೋ ಅವರನ್ನು ಬಿಟ್ಟು ಕೆಲವು ಕುತಂತ್ರಿಗಳು ಕೆಲವರಿಗೆ ಅಲ್ಲಿ ಜಾಗ ಸಿಗದಿರುವುದರಿಂದ ಕುಂಟರು ಕುರುಡರಿಗೆ ಸಿಕ್ಕಿದೆಯೆಂದು ಹೇಳಿ ಗುಡಿಸಲುಗಳಿಗೆ ಬೆಂಕಿ ಹಾಕುವ ಒಂದು ಸಂಪ್ರದಾಯ ಮಾಡಿಕೊಂಡು ಯಾರಿಗೆ ನ್ಯಾಯವಾಗಿ ಸಿಗಬೇಕು ಅವರಿಗೆ ಸಿಗದಿರುವ ರೀತಿಯಲ್ಲಿ ಅಲ್ಲಿ ಹೋಗಿ ಗಲಾಟೆ ಮಾಡಿ ಬೆಂಕಿ ಹಾಕಿದ್ದಾರೆ. ಅವರಿಗೆ ಸರಿಯಾದ ರೀತಿಯಲ್ಲಿ ತಿಳುವಳಿಕೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ:– ಮಾನ್ಯ ಉಪಾಧ್ಯಕ್ಷರೇ, ಆಶ್ರಯ ಯೋಜನೆ ಬಹಳ ಒಳ್ಳೆಯ ಯೋಜನೆ. ಅದರಲ್ಲಿ ಇದುವರೆಗೆ ಯಾರಿಗೆ ತಲೆಯ ಮೇಲೆ ಸೂರು ಇಲ್ಲ ಅಂತಹವರಿಗೆ ನಿವೇಶನ ಕೊಡುವುದಕ್ಕೆ ಒಂದು ವ್ಯವಸ್ಥೆ ಮಾಡಿದ್ದಾರೆ. ಸಂತೋಷ. ಆದರೆ ಇಲ್ಲಿ ಬಂದಿರುವ ಆರೋಪವನ್ನು ಮುಚ್ಚಿಹಾಕುವುದಕ್ಕೆ ಈ ತರಹ ಒಂದು ಪ್ರಯತ್ನ ನಡೆಯುತ್ತಿದೆಯೋ ಏನೋ ನನಗಂತೂ ಅರ್ಥವಾಗುತ್ತಿಲ್ಲ. 1500 ಸೈಟುಗಳನ್ನು ಏನು ಕೊಟ್ಟಿದ್ದಾರೆ, ಅದರಲ್ಲಿ ಲೋಕಲ್ ಪೀಪಲ್ ಎಷ್ಟು ಜನ ಇದ್ದಾರೆ ? ಬೆಂಗಳೂರಿನವರು ಎಷ್ಟು ಜನ ಇದ್ದಾರೆ ? ಬೆಂಗಳೂರಿನಲ್ಲಿ ಇರುವವರಿಗೆ ಸೈಟುಗಳನ್ನು ಕೊಡುವುದಕ್ಕೆ ಬಿ.ಡಿ.ಎ ಇದೆ, ಕಾರ್ಪೋರೇಷನ್ ಇದೆ, ಅದನ್ನು ಆಶ್ರಯ ಸ್ಕೀಮ್‌ನಲ್ಲಿ ಕೊಡುವುದಲ್ಲ. ನನ್ನ ಪ್ರಶ್ನೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳು ಕೇಳಬೇಕು.

ಶ್ರೀ ಆರ್. ದಯಾನಂದರಾವ್:– ಬೆಂಗಳೂರಿನಲ್ಲೂ ಬಡವರಿದ್ದಾರೆ, ಅವರಿಗೆ ಏನು ಮಾಡುತ್ತೀರಿ ?

ಶ್ರೀ ಆರ್.ಎಲ್. /ಜಾಲಪ್ಪ:– ಸ್ವಚ್ಛವಾದ ಸರ್ಕಾರ ಕೊಡುತ್ತೇವೆ ಎಂದು ಹೇಳಿದ್ದೀರಿ. ನಿಮ್ಮ ಅನಿಸಿಕೆಯನ್ನು ನಾನು ಒಪ್ಪುತ್ತೇನೆ. ಆದರೆ ಕಾರ್ಯದಲ್ಲೂ ಹಾಗೆ/ಇರಬೇಕು.

ಉಪಾಧ್ಯಕ್ಷರು:– ಗಮನ ಸೆಳೆಯುವ ಸೂಚನೆ ಇದೆ. ಜಾಗ್ರತೆ ಮುಗಿಸಿ.

ಶ್ರೀ ಆರ್.ಎಲ್. ಜಾಲಪ್ಪ:– ಒಂದೊಂದು ಸೈಟು 70–75 ಸಾವಿರ ರೂಪಾಯಿ ಆಗುತ್ತದೆ. ಈಗ ಕಂಪ್ಲೇಂಟ್ ಬಂದಿರುವುದು, ತಕರಾರು ಬಂದಿರುವುದು ಸೈಟುಗಳನ್ನು ಸರಿಯಾಗಿ ಹಂಚಿಲ್ಲ ಎಂದು, ಆದರಮೇಲೆ ಹಿಂದಿನ ಸರ್ಕಾರ ಎನ್‌ಕ್ವೈರಿ ಆರ್ಡರ್ ಮಾಡಿದ್ದರು; ಎಷ್ಟು ಸಾವಿರ ಸೈಟುಗಳನ್ನು ಯಾವ ಕಾನೂನಿನ ಅಡಿಯಲ್ಲಿ ಬೆಂಗಳೂರಿನವರಿಗೆ ಕೊಡುತ್ತೀರಿ ? ಬಡವರೆಂದು ಕಂಡು ಬಂದರೆ ಕೊಡಿ, ಬೇಡವೆಂದು ಹೇಳುವುದಿಲ್ಲ. ಸಾವಿರಾರು ಸೈಟುಗಳನ್ನು ಅಕ್ರಮವಾಗಿ ಕೊಟ್ಟಿರುವಾಗ ಎನ್‌ಕ್ವೈರಿ ಮಾಡುವುದಿಲ್ಲ ಎಂದರೆ ಏನು ? I insist for an enquiry and you must order for an enquiry, Sir.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಸುತ್ತ ಹೂಡಿ ಗ್ರಾಮದ ಸುತ್ತ ಇರತಕ್ಕಂಥ ಆಶ್ರಯ ನಿವೇಶನಗಳನ್ನು ಕೊಟ್ಟಿರುವ ಬಗ್ಗೆ ಚರ್ಚೆ ನಡೆದಿದೆ. ಮಾನ್ಯ ವಿರೋಧ ಪಕ್ಷದ ನಾಯಕರು, ಸಿಂಧ್ಯಾರವರು, ಜಾಲಪ್ಪನವರು, ಯಡಿಯೂರಪ್ಪನವರು, ಬೈರೇಗೌಡರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಪ್ರಶ್ನೆಯನ್ನು ಎತ್ತಿದ ಕೂಡಲೇ ಹಿಂದೆ ಈ ಬಗ್ಗೆ ಒಂದು ತನಿಖೆ ಮಾಡುತ್ತೇವೆ ಎಂದು ಹೇಳಿದ್ದರು. ಈಗಾಗಲೇ ಬೆಂಗಳೂರಿನ ಡಿವಿಜನಲ್ ಕಮೀಷನರ್ ಅವರು ತನಿಖೆಯನ್ನು ನಡೆಸುತ್ತಿದ್ದಾರೆ. ತನಿಖೆ ಕೆಲಸ ಪಾರ್ಷಿಯಲ್ ಆಗಿ ಒಂದೆರಡು ಕಡೆ ಬಿಟ್ಟು ಬಾಕಿ ಮುಗಿದಿದೆ. ಇನ್ನೊಂದು ವಾರ, ತಿಂಗಳಲ್ಲಿ ವರದಿ ಪೂರ್ತಿಯಾಗುತ್ತದೆ.ಅದು ಬಂದಕೂಡಲೇ ಎಲ್ಲಿ ಅಕ್ರಮವಾಗಿದೆ, ಎಲ್ಲಿ ಸಕ್ರಮವಾಗಿದೆ, ಎಲ್ಲಿ ವ್ಯತ್ಯಾಸವಾಗಿದೆ...

ಶ್ರೀ ವಾಟಾಳ್ ನಾಗರಾಜ್:– ಅಲ್ಲಿ ಬೆಂಕಿ ಬಿದ್ದಿರುವ ಬಗ್ಗೆ ಹೇಳಿ.

ಶ್ರೀ ವೀರಪ್ಪ ಮೊಯಿಲಿ:– ಬೆಂಕಿ ಕೊನೆಗೆ ಬೀಳಬೇಕಲ್ಲಾ ?

ಶ್ರೀ ವಾಟಾಳ್ ನಾಗರಾಜ್:– ನೀವು ಬೆಂಕಿ ಹಚ್ಚಿದ್ದೀರಿ. ಅದನ್ನು ಆರಿಸತಕ್ಕಂಥ ವಿಧಾನ ಏನು ?

ಶ್ರೀ ಸಿ. ಬೈರೇಗೌಡ:– ವಿಭಾಗಾಧಿಕಾರಿಯನ್ನು ವಿಚಾರಣೆಗೋಸ್ಕರ ಹಾಕಿದ್ದನ್ನು ವಾಪಸ್ಸು ತೆಗೆದುಕೊಂಡಿಲ್ಲವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ:– ತನಿಖೆಯನ್ನು ಹಿಂದಕ್ಕೆ ತೆಗೆದುಕೊಂಡಿಲ್ಲ. ತನಿಖೆಯನ್ನು ವಿಭಾಗಾಧಿಕಾರಿಗಳು ಮಾಡುತ್ತಿದ್ದಾರೆ. ಇದನ್ನು ಪ್ರತಿಷ್ಠೆಯಾಗಿ ನಾವು ತೆಗೆದುಕೊಳ್ಳುತ್ತಿಲ್ಲ. ಸರಿಯಾದ ಯೋಗ್ಯರಿಗೆ, ಅರ್ಹತೆ ಇದ್ದವರಿಗೆ ನಿವೇಶನಗಳು ಹೋಗಬೇಕೇ ವಿನಹ ಅರ್ಹತೆ ಇಲ್ಲದೇ ಇರತಕ್ಕಂಥವರಿಗೆ ಹೋಗುವ ಪ್ರಶ್ನೆ ಇಲ್ಲ. we will mercilessly cancel wherever there is illegality.

ಆ ವರದಿ ಬರುತ್ತದೆ. ಇದಕ್ಕೆ ಒಂದು ವಾರ ಬೇಕು. ವರದಿ ಕೊನೆಯ ಹಂತದಲ್ಲಿದೆ. ಮೊನ್ನೆ ನಡೆದಂಥ ವಿಚಾರದಲ್ಲಿ ತಾವು ಕೆಲವು ಅಪಾದನೆಗಳನ್ನು ಮಾಡಿದ್ದೀರಿ. ಅದರ ಬಗ್ಗೆ ನಾನು ಪೋಲೀಸ್ ಕಮೀಷನರ್ ಅವರಿಗೆ ಎನ್‌ಕ್ವೈರಿ ಮಾಡುವುದಕ್ಕೆ ಹೇಳಿದ್ದೇನೆ. ಎಷ್ಟರಮಟ್ಟಿಗೆ ತೊಂದರೆಯಾಗಿದೆ ಎನ್ನುವ ಬಗ್ಗೆ ಅವರು ತನಿಖೆ ಮಾಡುತ್ತಾರೆ. ಇದು ತನಿಖೆಯಲ್ಲಿರುವುದರಿಂದ ಯಾರೂ ಬಲಾತ್ಕಾರವಾಗಿ ಹೋಗಬಾರದು. ಜನ ಅಲ್ಲಿ ಸಂಘರ್ಷಣೆಗೆ ಇಳಿದಿದ್ದಾರೆ. To establish a right, encroachment ಹಾಗೆ ಮಾಡುವುದಕ್ಕೆ ಹೋದರೆ ತಡೆಹಿಡಿಯಬೇಕಾಗುತ್ತದೆ. ಹಾಗೆ ಮಾಡಿದರೆ ಬೆಂಗಳೂರು ಸುತ್ತ ಯಾವ ಜಮೀನೂ ಉಳಿಯುವುದಿಲ್ಲ. ಬಲಾತ್ಕಾರವಾಗಿ ಗುಡಿಸಲು ಹಾಕುವುದು. ಬಲಾತ್ಕಾರವಾಗಿ ಪ್ರವೇಶ ಮಾಡುವುದು ಮಾಡಬಾರದು. This will have to be prevented.

1.20 ಪಿ.ಎಂ.

ಆದರೆ ಅದನ್ನು ಪ್ರಿವೆಂಟ್ ಮಾಡುವುದಕ್ಕೆ ಎಷ್ಟು ಫೋರ್ಸ್ ಉಪಯೋಗ ಮಾಡಬೇಕೋ ಅಷ್ಟು ಮಾಡುತ್ತೇವೆ. ಇದನ್ನು ನಾನು ಒಪ್ಪುತ್ತೇನೆ. ಪೋಲೀಸ್ ಕಮೀಷನರ್ ಮುಖಾಂತರ ಎಷ್ಟು ಎಕ್ಸಸ್ ಆಗಿದೆ ಇದರ ಬಗ್ಗೆ ಖಂಡಿತವಾಗಿಯೂ ಕೂಡ ನೋಡಿ, ಅದನ್ನು ಮಾಡುತ್ತೇನೆ. ನಮಗೆ ಒಂದು ಕಮಿಟ್‌ಮೆಂಟ್ ಇದೆ, ಯಾರು ಬಡವರು, ಪರಿಶಿಷ್ಟವರ್ಗದವರು, ದುರ್ಬಲವರ್ಗದವರು, ಹಿಂದುಳಿದವರು ಅಥವಾ ಯಾರು ನಿವೇಶನ ತೆಗೆದುಕೊಳ್ಳುವುದಕ್ಕೆ ಅಸಾಧ್ಯ ಇದೆ, ಅವರು ಬೆಂಗಳೂರಿನಲ್ಲಿರಬಹುದು ಅಥವಾ ಬೆಂಗಳೂರು ಸುತ್ತ ಎಲ್ಲಿಯೇ ಇರಲಿ, ಅವರಿಗೆ ನಿವೇಶನ ಕೊಡತಕ್ಕ ಕಮಿಟ್‌ಮೆಂಟ್ ಇದೆ. ಅಜಿಟೇಷನ್ ಮಾಡಿಕೊಂಡು, ಯಾರೂ ಎನ್‌ಕ್ರೋಚ್‌ಮೆಂಟ್ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಒಂದು ವೇಳೆ ಎನ್‌ಕ್ರೋಚ್‌ಮೆಂಟ್ ಮಾಡತಕ್ಕ ಪ್ರಯತ್ನ ಮಾಡಿದರೆ, ಖಂಡಿತವಾಗಿಯೂ ನಿಲ್ಲಿಸುತ್ತೇನೆ. ಆದರೆ, ಆರ್ಹರು ಇದ್ದರೆ, ನಿವೇಶನ ಕೊಡುವುದಕ್ಕೆ ಏನು ಪ್ರಯತ್ನ ಮಾಡಬೇಕೋ ಅದರ ಬಗ್ಗೆ ಖಂಡಿತ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಎಲ್ಲಿಯಾದರೂ ಅನರ್ಹರಿಗೆ ಕೊಟ್ಟಿದ್ದರೆ, ಅದನ್ನು ಖಂಡಿವಾಗಿಯೂ ಕ್ಯಾನ್ಸಲ್ ಮಾಡುತ್ತೇನೆ. ಎಕ್ಸಸ್ ಫೋರ್ಸ್ ಉಪಯೋಗ ಆಗಿದ್ದರೆ, ಅದನ್ನು ತನಿಖೆ ಮಾಡಿಸುತ್ತೇನೆ. ಬೆಂಗಳೂರು, ಹಾಗೂ ಬೆಂಗಳೂರು ಸುತ್ತ ಮುತ್ತ ನಿವೇಶನರಹಿತ ಬಡವರಿಗೆ ನಿವೇಶನ ಕೊಡತಕ್ಕ ರೀತಿಯಲ್ಲಿ, ಸರ್ಕಾರ ಸಹಾನುಭೂತಿಯಿಂದ ಕೆಲಸ ಮಾಡುತ್ತವೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಮುಖ್ಯ ಮಂತ್ರಿಯವರು ಒಂದು ವಿಚಾರವನ್ನು ಹೇಳಿದರು. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ವಾತಾವರಣ ಬಹಳ ಪ್ರಕ್ಷುಬ್ಧ ಇದೆ. ನಿನ್ನೆ ರಾತ್ರಿ ಒಂದು ಬಸ್ಸನ್ನು

ಘಟ್ಟಿದ್ದಾರೆಂದು ಸುದ್ದಿ ಬಂತು. you will have to view it very seriously. ಈಗ ತಾವು ಹೇಳಿದಿರಿ. ಎಕ್ಸಸ್ ಆಗಿದೆ. ತನಿಖೆ ಮಾಡಿಸುತ್ತೇನೆಂದು. ನೀವು ತನಿಖೆ ಮಾಡಿ,ಆದರೆ, ಟಿಯರ್ ಗ್ಯಾಸ್ ಏಕೆ ತೆಗೆದುಕೊಂಡು ಹೋದರು. I want to ask why these people took tear–gas shells? They were peacefully agitating. What was the necessity? ನಾನು ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಕೃಷ್ಣಪ್ಪನವರೂ ತಮ್ಮ ಮಂತ್ರಿಮಂಡಲದಲ್ಲಿದ್ದಾರೆ. ನಿಮಗೆ ಗೌರವ ಬರಬೇಕಾದರೆ, ಕೂಲಂಕಷವಾಗಿ ತನಿಖೆಮಾಡಿ. ಬಲಾತ್ಕಾರವಾಗಿ ಜಮೀನು ತೆಗೆದುಕೊಳ್ಳಬಾರದು ಎಂದು ಹೇಳಿದರೆ ಅದನ್ನು ಒಪ್ಪುತ್ತೇನೆ. ಆದರೆ ಪ್ರಶ್ನೆ ಏನಿದೆ ಎಂದರೆ, ಅಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರು ಉಳುಮೆ ಮಾಡುತ್ತಿದ್ದಾರೆ. ಅಲ್ಲಿ ಭೂಮಿಯನ್ನು ಉಳುಮೆ ಮಾಡಿ, ವ್ಯವಸಾಯದ ಬೆಳೆ ತೆಗೆಯುತ್ತಿದ್ದಾರೆ. ಬಗರ್ ಹುಕುಂ ಸಾಗುವಳಿ ಕಾಯಿದೆ ಪ್ರಕಾರ, 10–12 ಕಿಲೋಮೀಟರ್ ರೇಡಿಯಸ್‌ನಲ್ಲಿ ಭೂಮಿ ಬರುತ್ತದೆಂದು ಫೋರ್ಸಿಬಲಿ ವಾಪಸ್ ತೆಗೆದುಕೊಂಡು ಸೈಟ್ ಮಾಡಿದ್ದಾರೆ. ಅಲ್ಲಿ ಪರಿಶಿಷ್ಟ ಜನರಿಗೆ ಅನ್ಯಾಯವಾಗಿದೆ. ಹಾಲಪ್ಪನವರಿರಲಿ, ಕೆಂಪಯ್ಯನವರಿರಲಿ, ಅವರು ಏತಕ್ಕೆ ಹೋದರು ಅದರ ಅವಶ್ಯಕತೆ ಏನಿತ್ತು? why tear gas shells were taken is more important. You should report to the House what action has been taken.

ತಾವು ಡಿವಿಷನಲ್ ಕಮೀಷರ್ ಅವರಿಂದ ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳಿದಿರಿ. ಆದರೆ, ಡಿವಿಷನಲ್ ಕಮೀಷನರು ಹೋಗಿ ಬಿಡಿಓ ಮತ್ತು ತಹಶೀಲ್ದಾರ್‌ರವರನ್ನು ಕೇಳಿ ವರದಿ ಕೊಡುವುದು ಬೇಡ. She should go and meet the people also. She should give a hearing to the people also. She should not meet only the Tahsildar and come, because the Tahsildar will be influenced by the minister because that Constituency MLA is the Minister. It is likely that the Tahsildar or the BDO will be influenced by the Minister. I want that she should also go to village, hear these people also and try to collect the facts. ಏಕೆಂದರೆ, ನಾನು ಒಂದು ಯಾದಿ ಕಳುಹಿಸಿದ್ದೇನೆ.ಆದರಲ್ಲಿ ಬರೀ ಹೆಸರು. ಇದೆ, ರಘುನಾಥ ಎಂದು ಹೆಸರು ಇದೆ, ಆದರೆ, ಅವನ ತಂದೆ, ತಾಯಿ ಹೆಸರು ಇರುವುದಿಲ್ಲ. ಇದನ್ನು ತಮಗೆ ಕಳುಹಿಸಿದ್ದೇನೆ. ನೀವು ಇದನ್ನು ಯಾವ ರೀತಿ ನೋಡಿದ್ದೀರಿ. ಇದರಲ್ಲಿ ಭ್ರಷ್ಟಾಚಾರ ಆಗಿದೆ ಎಂಬುದರಲ್ಲಿ ಯಾವುದೇ ಸಂದೇಹ ಇಲ್ಲ. ವಿಭಾಗಾಧಿಕಾರಿಗಳು ತನಿಖೆ ಮಾಡಲಿ ಸಂತೋಷ. ಮಾಡುವಾಗ ಎಲ್ಲಾ ಸಂಬಂಧಪಟ್ಟ ಜನರಿಗೆ ಅವಕಾಶ ಕೊಡಬೇಕು. They should be heard and opportunity should be given to them and then the Report should come and then whatever is the truth, we will accept. ಈ ದೃಷ್ಟಿಯಿಂದ ಕ್ರಮ ಆಗಬೇಕೆಂದು ತಮಗೆ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ವೀರಪ್ಪ ಮೊಯಿಲಿ:– ವಿರೋಧ ಪಕ್ಷದ ನಾಯಕರು ಏನು ಸೂಚನೆ ಕೊಟ್ಟಿದ್ದಾರೆ ಆ ಸೂಚನೆಯನ್ನು ಗಮನದಲ್ಲಿಟ್ಟುಕೊಂಡು, ತನಿಖೆ ಮಾಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ನಿನ್ನೆ ನಡೆದಿರತಕ್ಕ ಪರಿಸ್ಥಿತಿ ವಿಚಾರದಲ್ಲಿ ತಮಗೆ ಈಗಾಗಲೇ ವರದಿ ಬಂದಿದೆ. ಅಲ್ಲಿ ಏನು ನಡೆಯಿತು, ಯಾವ ರೀತಿ ಬೆಂಕಿ ಬಿದ್ದಿದೆ, ಅದನ್ನು ಸದನಕ್ಕೆ ಹೇಳಬೇಕು. ತಾವು ಗೃಹಸಚಿವರೂ ಆಗಿದ್ದೀರಿ. ನಾನು ಹೇಳುತ್ತೇನೆ. ಹಂಚಿಕೆ ಬಗ್ಗೆ ತಕರಾರು ಇಲ್ಲ. ಶಾಸಕರು ಸಮಿತಿಯ ಅಧ್ಯಕ್ಷರಾಗಿದ್ದಾರೆ. ನಿನ್ನೆ ಬೆಂಕಿ ಬಿದ್ದಿದೆ. ಟಿಯರ್ ಗ್ಯಾಸ್‌ಗೆ ಪೋಲೀಸಿನವರು ಹೆಚ್ಚಿನ ಒತ್ತಡ ತಂದಿರುವುದು....

ಉಪಾಧ್ಯಕ್ಷರು:– ಇದರ ಬಗ್ಗೆ ತನಿಖೆ ಮಾಡಿಸುತ್ತೇನೆಂದು ಈಗಾಗಲೇ ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಆಶ್ರಯ ಸ್ಕೀಮ್‌ನಲ್ಲಿ ಸೈಟ್ ಸಿಗಬೇಕೆಂದು ಅಲ್ಲಿ ಹೋರಾ ಮಾಡುತ್ತಿದ್ದಾರೆ.

ಅಧ್ಯಕ್ಷರು:– ಉತ್ತರ ಹೇಳಿದ್ದಾರೆ ಕುಳಿತುಕೊಳ್ಳಿ.

ಗಮನ ಸೆಳೆಯುವ ಸೂಚನೆಗಳು

ಕೊಳ್ಳೇಗಾಲ ತಾಲ್ಲೂಕು ಹನೂರು ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರುಗಳಿಲ್ಲದೆ ಆಗಿರುವ ತೊಂದರೆ

ಶ್ರೀ ಜಿ. ರಾಜುಗೌಡ (ಹನೂರು):– ಮಾನ್ಯ ಅಧ್ಯಕ್ಷರೇ, ಕೊಳ್ಳೇಗಾಲ ತಾಲ್ಲೂಕು ಹನೂರು ಕ್ಷೇತ್ರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳು ಹಾಗೂ ಇತರೇ ಅಧಿಕಾರಿಗಳು ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ(ಮುಖ್ಯ ಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, ಹಿಂದೆ ಆರ್ಥಿಕ ನಿಬಂಧನೆ ಇತ್ತು. ಈಗ ಅದನ್ನು ಪ್ಯಾರಾಮೆಡಿಕಲ್ ಸ್ಟಾಫ್‌ಗೆ ಮತ್ತು ಡಾಕ್ಟರ್ಸ್‌ಗೆ ಸಡಿಲಗೊಳಿಸಲಾಗಿದೆ. ನಾನು ಈ ಹೇಳಿಕೆಯನ್ನು ಸಭೆಯ ಮುಂದೆ ಮಾಡುತ್ತೇನೆ.

ಮೈಸೂರು ಜಿಲ್ಲಾ ಕೊಳ್ಳೇಗಾಲ ತಾ: ರಾಮಪೂರ, ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಂಜೂರಾಗಿರುವ ವೈದ್ಯಾಧಿಕಾರಿಗಳ ಹುದ್ದೆಗಳು; ಹಾಲಿ ಕೆಲಸ ಮಾಡುತ್ತಿರುವವರ ಸಂಖ್ಯೆ ಮತ್ತು ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿರುತ್ತದೆ:–

ಕ್ರ. ಸಂ.	ಹುದ್ದೆಗಳ ಹೆಸರು	ಮಂಜೂರಾತಿ ಸಂಖ್ಯೆ	ಕೆಲಸ ಮಾಡುತ್ತಿರುವ ಸಂಖ್ಯೆ	ಖಾಲಿ ಹುದ್ದೆ ಸಂಖ್ಯೆ
1.	ವೈದ್ಯಾಧಿಕಾರಿಗಳು	2	–	2
2.	ಆರೋಗ್ಯ ಸಹಾಯಕರು (ಮ)	10	9	1
3.	ಆರೋಗ್ಯ ಸಹಾಯಕರು (ಪು)	7	4	3
4.	ಪ್ರಯೋಗಾಲಯ ತಂತ್ರಜ್ಞ	1	–	1
5.	ಫಾರ್ಮಾಸಿಸ್ಟ್	1	–	1
6.	ಆರ್. ವೈದ್ಯ ಕಾರ್ಯಕರ್ತ	3	1	2
7.	ಹಿರಿಯ ಆರೋಗ್ಯ ಪರಿವೀಕ್ಷಕ	1	1	–
8.	ಪ್ರಥಮ ದರ್ಜೆ ಸಹಾಯಕ	1	1	
9.	ದ್ವಿತೀಯ ದರ್ಜೆ ಸಹಾಯಕ	1	1	–
10.	'ಡಿ' ದರ್ಜೆ ನೌಕರರು	3	1	2
11.	ವಾಹನ ಚಾಲಕ	1	1	–

ಒಂದು ಮಹಿಳಾ ವೈದ್ಯಾಧಿಕಾರಿಯ ಹುದ್ದೆಯಾಗಿರುತ್ತದೆ. ಡಾ. ಶಶಿಕಲಾ ಇವರು ದಿನಾಂಕ 18–1–92 ರಿಂದ ಮಹಿಳಾ ವೈದ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದು, ಇವರು ದಿನಾಂಕ 1–3–92 ರಿಂದ ಗೈರು ಹಾಜರಾಗಿರುತ್ತಾರೆ. ಈ ಆಸ್ಪತ್ರೆಯಲ್ಲಿ ಪುರುಷ ವೈದ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ: ಚಿಕ್ಕಲಿಂಗಯ್ಯ ಇವರು, ಕಳೆದ ನವೆಂಬರ್ ತಿಂಗಳಲ್ಲಿ ಬೇರೆಡೆಗೆ ವರ್ಗಾವಣೆಗೊಂಡಿದ್ದರಿಂದ ಹುದ್ದೆಯು ಖಾಲಿ ಇರುತ್ತದೆ. ಈ ಖಾಲಿ ಇರುವ ಹುದ್ದೆಗಳನ್ನು ಗುತ್ತಿಗೆ ಆಧಾರದ ವೈದ್ಯರುಗಳಿಂದ ಅಥವಾ ಈ ತಿಂಗಳ ಅಂತ್ಯದಲ್ಲಿ ಸ್ನಾತಕೋತ್ತರ ವ್ಯಾಸಂಗವನ್ನು ಪೂರೈಸಿ ವಾಪಸ್ಸು ಬರುವ ವೈದ್ಯಾಧಿಕಾರಿಗಳಿಗೆ ನೇಮಕಾತಿ ಆದೇಶವನ್ನು ನೀಡುವಾಗ ಆದ್ಯತೆಯ ಮೇರೆಗ ಭರ್ತಿ ಮಾಡಲು ಕ್ರಮವನ್ನು ಕೈಗೊಳ್ಳಲಾಗುವುದು.

ಈ ತಾಲ್ಲೂಕಿನ ಮಾರತಳ್ಳಿ, ಬಂಡಳ್ಳಿ, ಕೂಡ್ಲೂರುಗಳಿಗೆ ಸರ್ಕಾರಿ ಅಧಿಸೂಚನೆ ಸಂಖ್ಯೆ:ಅಕುಕ 158 ಸಿಜಿಎಸ್ 89 ದಿನಾಂಕ 18–4–92ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾಗಿರುತ್ತದೆ. ಆಸ್ಪತ್ರೆಗಳಿಗೆ ಈ ಕೆಳಕಂಡಂತೆ ಹುದ್ದೆಗಳು ಮಂಜೂರಾಗಿರುತ್ತವೆ.

1) ವೈದ್ಯಾಧಿಕಾರಿಗಳು	–	1
2) ಫಾರ್ಮಾಸಿಸ್ಟ್	–	1
3) ಹಿರಿಯ ಪ್ರಯೋಗಾಶಾಲಾ ತಂತ್ರಜ್ಞ	–	1
4) ಪ್ರಥಮ ದರ್ಜೆ ಸಹಾಯಕ	–	1
5) 'ಡಿ' ದರ್ಜೆ ನೌಕರರು	–	1

ಮೇಲ್ಕಂಡ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಸಹ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ವೈದ್ಯಾಧಿಕಾರಿಗಳಿಂದ ಭರ್ತಿ ಮಾಡಲಾಗುವುದು.

ಖಾಲಿ ಇರುವ ಫಾರ್ಮಸಿಸ್ಟ್ ಹುದ್ದೆಯನ್ನು ಭರ್ತಿಮಾಡುವ ಬಗ್ಗೆ ಸಡಿಲಗೊಳಿಸಿದೆ. ಕಿರಿಯ ಪ್ರಯೋಗಶಾಲಾ ತಂತ್ರಜ್ಞರ ಹುದ್ದೆಗಳನ್ನು ತುಂಬಲು ಅರ್ಜಿಗಳನ್ನು ಕರೆಯಲಾಗಿದ್ದು ಅರ್ಜಿಗಳು ಪರಿಶೀಲನಾ ಹಂತದಲ್ಲಿವೆ. ಈ ಹುದ್ದೆಯನ್ನು ತುಂಬಲು ಸದ್ಯದಲ್ಲಿಯೇ ಕ್ರಮವನ್ನು ಕೈಗೊಳ್ಳಲಾಗುವುದು. ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ದ್ವಿತೀಯ ದರ್ಜೆ ಸಹಾಯಕರಿಗೆ ಪದೋನ್ನತಿ ನೀಡಿ ಭರ್ತಿ ಮಾಡಲಾಗುವುದು. ಇದೂ ಅಲ್ಲದೆ ಖಾಲಿ ಇರುವ 4ನೇ ದರ್ಜೆ ನೌಕರರ ಹುದ್ದೆಗಳನ್ನು ಸಹ ಭರ್ತಿ ಮಾಡಲು ಕ್ರಮವನ್ನು ಕೈಗೊಳ್ಳಲಾಗುವುದು.

† ಶ್ರೀ ಜಿ. ರಾಜುಗೌಡ:– ಮಾನ್ಯ ಅಧ್ಯಕ್ಷರೇ, ಬಹುಶಃ ಶ್ರೀಮತಿ ಮನೋರಮ ಮಧ್ವರಾರಜ್‌ರವರು ಆರೋಗ್ಯ ಸಚಿವರಾಗಿದ್ದ ಕಾಲದಲ್ಲಿ ನಾಲ್ಕು ಸ್ಥಳಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿ 1991ನೇ ಇಸವಿಯಲ್ಲಿ ಅಲ್ಲಿಂದ ಇಲ್ಲಿಯವರೆಗೂ ಡಾಕ್ಟರ್ಸ ಕೊಡಲಿಲ್ಲ. ನಾನು ಅನೇಕ ಸಲ ಮನವಿ ಮಾಡಿಕೊಂಡಿದ್ದೇನೆ. ಆ ಹುದ್ದೆಗಳನ್ನು ಭರ್ತಿಮಾಡಿಕೊಳ್ಳುವುದಕ್ಕೆ ಮಾನ್ಯ ಪುಟ್ಟಸ್ವಾಮಿಗೌಡರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳಾಗಿದ್ದಾಗ ಅವರು ಅಧಿಕಾರಿಗಳನ್ನು ಕರೆದು ಆ ಹುದ್ದೆಗಳನ್ನು ತುಂಬಿ ಅಂತ ಆದೇಶ ಕೊಟ್ಟರು. ಆದರೆ ಇದುವರೆಗೂ ತುಂಬಿಲ್ಲ. ನಾನು ಆರೋಗ್ಯ ಇಲಾಖೆಯ ಕಾರ್ಯದರ್ಶಿಗಳನ್ನು ಅನೇಕ ಸಲ ಭೇಟಿ ಮಾಡಿದ್ದೇನೆ. ನಿರ್ದೇಶಕರನ್ನು ಕೂಡ ಭೇಟಿ ಮಾಡಿ ಹೇಳಿದ್ದೇನೆ. ನಾನು ಮನವಿ ಮಾಡಿಕೊಂಡಿದ್ದೇನೆ. ನನ್ನ ಕೂಗು ಯಾರಿಗೂ ಕೇಳಲಿಲ್ಲ ಅಂತ ಅನಿಸುತ್ತದೆ. ತಮ್ಮ ನೂರು ದಿನಗಳ ಕಾರ್ಯಕ್ರಮ ಏನಾಯಿತು ? 15 ದಿವಸಗಳೊಳಗೆ ಕಡತವಿಲೇವಾರಿ ಕಾರ್ಯಕ್ರಮ ಏನಾಯಿತು ? ನನ್ನ ಕಡತದ ಮೇಲೆ ತಮ್ಮ ಕಣ್ಣುಬೀಳಲಿಲ್ಲವೇ ? ನಮ್ಮಲ್ಲಿ ಡಾಕ್ಟರ್ಸ್ ಇಲ್ಲ. 24 ಆಸ್ಪತ್ರೆಗಳು ಇವೆ.

ಇದು ಬಹಳ ಹೇಯ ಕೆಲಸ. ಈಗಲೂ ಕೂಡ ನಿರ್ದಿಷ್ಟವಾಗಿ ಯಾವಾಗ ಮಾಡುತ್ತೀರಿ ಎಂದು ಹೇಳಲಿಲ್ಲ. ತಾವು ಆಸ್ಪತ್ರೆಗಳನ್ನು ಮಂಜೂರು ಮಾಡುವಾಗಲೇ ಹುದ್ದೆಗಳನ್ನು ಸಹ ಮಂಜೂರು ಮಾಡಬೇಕು. ನಾನು ಅನೇಕ ಸಲ ಮನವಿ ಮಾಡಿಕೊಂಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೇ, ಅಲ್ಲಿ ಹಾಕಿದಂಥ ಡಾಕ್ಟರುಗಳು ಕೂಡ ಅಲ್ಲಿಂದ ಓಡಿ ಬಂದಿದ್ದಾರೆ.

ಶ್ರೀ ಜಿ. ರಾಜೂಗೌಡ:– ಇದುವರೆಗೆ ಯಾವ ಡಾಕ್ಟರನ್ನೂ ಅಲ್ಲಿಗೆ ಹಾಕಲಿಲ್ಲ.

ಶ್ರೀ ವಾಟಾಳ್ ನಾಗರಾಜ್:– ವೀರಪ್ಪನ್ ಭಯದಿಂದ ಡಾಕ್ಟರುಗಳೂ ಅಲ್ಲಿ ಇರುವುದಿಲ್ಲ.

ಶ್ರೀ ಜಿ. ರಾಜೂಗೌಡ:– ಸಂಬಂಧ ಇಲ್ಲದಿದ್ದನ್ನು ಏಕೆ ಕಲ್ಪನೆ ಮಾಡುತ್ತೀರಿ ? ವೀರಪ್ಪನಿಗೂ ಅದಕ್ಕೂ ಏನು ಸಂಬಂಧ ಇದೆ ? ರಾಮಾಪುರ ಬೇರೆ ಕಡೆ ಇರುವುದು. ನೀವು ಸುಮ್ಮನೆ ಇಲ್ಲದೇ ಇರುವುದನ್ನೆಲ್ಲಾ ಮಾತನಾಡಬೇಡಿ. ನನ್ನ ಮನಸ್ಸಿಗೆ ಎಷ್ಟು ನೋವಾಗುತ್ತದೆಂದು ನನಗೆ ಗೊತ್ತು. ಮೂರು ವರ್ಷದಿಂದ ಹೇಳುತ್ತಿದ್ದೇನೆ ಅದನ್ನು ಹೇಳಬೇಡಿ ಎಂದು.

ಉಪಾಧ್ಯಕ್ಷರು:– ರಾಜೂಗೌಡರೇ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ವೀರಪ್ಪ ಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೇ, ಹಿರಿಯ ಶಾಸಕರಾದಂಥ ರಾಜೂಗೌಡರ ಆತಂಕ ನಮಗೆ ಸಂಪೂರ್ಣ ಪರಿಚಯವಾಗಿದೆ. ನಾನು ಇವತ್ತೇ I will post some doctor; I will see that he will go; otherwise I will keep him under suspension.

ಬುರುಜನ ಕೊಪ್ಪ ಗ್ರಾಮದ ಶ್ರೀಮತಿ ಶಾಂತ ಎನ್ನುವವರ ಕೊಲೆ

ಶ್ರೀ ಹೆಚ್. ಏಕಾಂತಯ್ಯ:– ಸನ್ಮಾನ್ಯ ಅಧ್ಯಕ್ಷರೇ, ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು, ಬುರುಜನಕೊಪ್ಪ ಗ್ರಾಮದ ಶ್ರೀಮತಿ ಜಿ.ಬಿ. ಶಾಂತರವರು ತಾರೀಖು 27–7–93ರಂದು ಕೊಲೆಯಾದ ಬಗ್ಗೆ ಸಾಕಷ್ಟು ಪುರಾವೆಗಳಿದ್ದರೂ ಕೇಸಿನ ತನಿಖಾಧಿಕಾರಿಗಳು ಸಂಬಂಧಿಸಿದ ಆರೋಪಿಗಳ ಮೇಲೆ ಕೊಲೆ ಅಪರಾಧಕ್ಕಾಗಿ ಕಾನೂನು ಕ್ರಮ ತೆಗೆದುಕೊಳ್ಳದೆ ಅಪರಾಧ ಮುಚ್ಚಿಡಲು ಪ್ರಯತ್ನಿಸುತ್ತಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೇ,

ದಿನಾಂಕ: 27–2–93ರ ಬೆಳಿಗ್ಗೆ 9.30 ಗಂಟೆಗೆ ಬುರುಜನರೊಪ್ಪ ಗ್ರಾಮದ ಶ್ರೀ ಭರತೇಶ ರೆಡ್ಡಿ ಎಂಬುವವರು ಐಮಂಗಲ ಪೋಲೀಸ್ ಠಾಣೆಗೆ ಹಾಜರಾಗಿ ಫಿರ್ಯಾದು ನೀಡಿ ಅದೇ ಗ್ರಾಮದ ಜನ್ನಾರೆಡ್ಡಿ ತಿಪ್ಪೇಸ್ವಾಮಿ ಎಂಬುವವರ ಮಗಳು ಶ್ರೀಮತಿ ಶಾಂತಮ್ಮ ಎಂಬುವವರು ದಿ: 28–2–93ರ ರಾತ್ರಿ 3.00 ಗಂಟೆಗೆ ಮನೆ ಬಿಟ್ಟಿರುವುದಾಗಿ ತಿಳಿದುಬಂದಿದ್ದು, ಆಕೆಯ ಮೃತದೇಹ ಎಂ.ಎಸ್. ವೆಂಕಟಶಿವಾರೆಡ್ಡಿಯವರ ತೋಟದ ಬಾವಿಯಲ್ಲಿ ಮಾರನೆಯ ದಿನ ಪತ್ತೆಯಾಗಿದೆ ಎಂದು ತಿಳಿಸಿದ ಪ್ರಕಾರ ಈ ಬಗ್ಗೆ ಐಮಂಗಲ ಪೋಲೀಸ್ ಠಾಣೆ ಮೊಕದ್ದಮೆ ಸಂ.1:93 ಕಲಂ 174 ಸಿ.ಆರ್.ಪಿ.ಸಿ. ನೇದರಡಿಯಲ್ಲಿ ದಾಖಲು ಮಾಡಿ ತನಿಖೆ ಕೈಗೊಳ್ಳಲಾಯಿತು.

ಈ ಮರಣ ಮದುವೆಯಾದ 7 ವರ್ಷಗಳೊಳಗೆ ಸಂಭವಿಸಿರುವುದರಿಂದ ಹಿರಿಯೂರು ತಹಸೀಲ್ದಾರ್‌ರವರಿಂದ ದಿನಾಂಕ: 27–2–1993ರಂದು ಮರಣೋತ್ತರ ಪರೀಕ್ಷೆ ಮಾಡಿ ಮೃತಳ ತಾಯಿ ರೇವಮ್ಮ ಹಾಗೂ ಅಕ್ಕ ತಿಪ್ಪಮ್ಮಳನ್ನು ಈ ಬಗ್ಗೆ ವಿಚಾರಿಸಲಾಗಿದೆ. ರಕ್ತಸಂಬಂಧಿಗಳು, ವರದಕ್ಷಿಣೆ ಪ್ರಯುಕ್ತ ಮೃತಳಿಗೆ ಆಕೆಯ ಪತಿ ದಯಾನಂದರೆಡ್ಡಿ, ಮಾವ ತಿಮ್ಮಾರೆಡ್ಡಿ, ಅತ್ತೆ ಪ್ರೇಮ

ಲೀಲಾವತಿ ಕಿರುಕುಳ ಕೊಡುತ್ತಿದ್ದಾರೆಂದೂ ಕಿರುಕುಳ ತಾಳದೆ ಆಕೆ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆಂದೂ ತಿಳಿಸಿರುತ್ತಾರೆ.

ಮರಣೋತ್ತರ ಪರೀಕ್ಷೆ ನಡೆಸಿದ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯ ವೈದ್ಯರು ಶ್ರೀಮತಿ ಶಾಂತಮ್ಮರವರು ನೀರಿನಲ್ಲಿ ಮುಳುಗಿ ಉಸಿರು ಕಟ್ಟಿದ್ದರಿಂದ ಮರಣ ಸಂಭವಿಸಿದೆ ಎಂಬ ಅಭಿಪ್ರಾಯ ಪಟ್ಟಿರುತ್ತಾರೆ ಹಾಗೂ ಮೃತದೇಹದ ಮೇಲೆ ಯಾವುದೇ ಗಾಯಗಳೂ ಕಂಡುಬಂದಿಲ್ಲ. ಹೊಟ್ಟೆಯಲ್ಲಿ ಮಣ್ಣುಮಿಶ್ರಿತ ನೀರು ಇದ್ದುದು ಕಂಡಬಂದಿದೆ.

ಮರಣೋತ್ತರ ಪರೀಕ್ಷೆ ಸರ್ಟಿಫಿಕೇಟ್ ಪಡೆದ ನಂತರ ಐಮಂಗಲ ಪೋಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ. 28:93ಕಲಂ 304(ಬಿ)ಭಾ.ದಂ.ಸಂ. ಪ್ರಕಾರ ಪ್ರಕರಣ ದಾಖಲು ಮಾಡಿ ಆಪಾದಿತರುಗಳಾದ ಮೃತಳ ಪತಿ, ಅತ್ತೆ, ಮಾವರನ್ನು ದಿನಾಂಕ:5–3–1993ರಂದು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಅತ್ತೆ ಪ್ರೇಮಲೀಲಾವತಿಯನ್ನು ಬಿಡುಗಡೆ ಮಾಡಿ ಪತಿ ಮತ್ತು ಮಾವನವರನ್ನು ದಿನಾಂಕ: 8.3.1993ರಂದು ಜಾಮೀನಿನ ಮೇಲೆ ಬಿಡುಗಡೆ ಮಾಡಿದೆ. ಈ ಸಂಬಂಧ ವರದಕ್ಷಿಣೆಯಾಗಿ ಕೊಟ್ಟ ಅಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಪ್ರಕರಣವನ್ನು ಚಿತ್ರದುರ್ಗ ಡೆಪ್ಯುಟಿ ಪೋಲೀಸ್ ಸೂಪರಿಂಟೆಂಡೆಂಟ್ ಶ್ರೀ ಮುಲ್ಲಾರವರು ತನಿಖೆ ನಡೆಸುತ್ತಿದ್ದಾರೆ. ರಕ್ತಸಂಬಂಧಿಗಳ ಹೇಳಿಕೆ ಪ್ರಕಾರ ಆಭರಣಗಳ ಜೊತೆಗೆ ರೂ.30,000–00 ನಗದನ್ನು ಮದುವೆ ಸಂದರ್ಭದಲ್ಲಿ ಕೊಡಲು ತೀರ್ಮಾನಿಸಿದ್ದು, ರೂ. 15,000–00 ಕೊಟ್ಟಿದ್ದು ಉಳಿದ ರೂ.15,000–00 ಬಾಕಿ ಇದ್ದು ಇದಕ್ಕಾಗಿ ಕಿರುಕುಳ ಪ್ರಾರಂಭವಾಯಿತು ಎಂದು ತಿಳಿಸಿರುತ್ತಾರೆ.

ಈ ಪ್ರಕರಣ ತನಿಖಾ ಹಂತದಲ್ಲಿದ್ದು, ಮುಂದಿನ ತನಿಖೆಯನ್ನು ಸಿ.ಓ.ಡಿ.ಯವರು ವಹಿಸಿಕೊಳ್ಳುತ್ತಿದ್ದಾರೆ.

† ಶ್ರೀ ಹೆಚ್. ಏಕಾಂತಯ್ಯ:- ನನ್ನ ಮುಖ್ಯವಾದ ಆರೋಪವೇನೆಂದರೆ, ಆ ಊರಿನಲ್ಲಿ ಸುಮಾರು ಎರಡೂವರೆ ಸಾವಿರ ಅಥವಾ ೩ ಸಾವಿರ ಪ್ರಜಾ ಸಂಖ್ಯೆ ಇದೆ. ಆ ಒಂದು ಮನೆಯನ್ನು ಹೊರತುಪಡಿಸಿ ಪ್ರತಿಯೊಂದು ಮನೆಯ ಗಂಡು ಮತ್ತು ಹೆಣ್ಣು ಮಕ್ಕಳು ನಾನು ಅಲ್ಲಿಗೆ ಹೋಗಿದ್ದಾಗ ಘೇರಾವ್ ಮಾಡಿದರು. ಅವರು ಹೇಳಿದರು, ಆ ಊರಿಗೆ ತನಿಖಾಧಿಕಾರಿಗಳು ಬಂದಿದ್ದಾಗ ಸಂಬಂಧಪಟ್ಟವರು ಕೊಲೆ ಮಾಡಿದ್ದಾರೆ. ನಾನು ಎಲ್ಲವನ್ನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಎಲ್ಲಾ ತಮಗೆ ಗೊತ್ತಿದೆ. ಸಾರ್ವಜನಿಕರ ಎದುರು ಕೊಲೆ ಮಾಡಿರುವ ಬಗ್ಗೆ ಸಂಬಂಧಪಟ್ಟವರು ಒಪ್ಪಿಕೊಂಡರು. ಆದರೆ ಸರ್ಕಾರದ ತನಿಖಾಧಿಕಾರಿಗಳು ಅದರ ಬಗ್ಗೆ ಗಮನ ವಹಿಸಲೇ ಇಲ್ಲ. ಯಾವ ಒಂದು ಕೊಲೆಯಾಗಿತ್ತೋ ಅದನ್ನು ಇವತ್ತಿನ ದಿವಸ ಅದು ಆತ್ಮಹತ್ಯೆ ಎಂದು ಪರಿವರ್ತನೆ ಮಾಡಿದ್ದಾರೆ ಎಂಬ ಮಾತನ್ನು ತಮಗೆ ಕಳುಹಿಸಿದ್ದಾರೆ, ಆದರ ಪ್ರತಿಯನ್ನು ನನಗೂ ಕಳುಹಿಸಿದ್ದಾರೆ. ಆದರಲ್ಲಿರುವ ಒಂದೆರಡು ವಾಕ್ಯಗಳನ್ನು ಮಾತ್ರ ತಮ ಗಮನಕ್ಕೆ ತರಬಯಸುತ್ತೇನೆ, 'ಅನಂತರ ಪೊಲೀಸರು ಊರಿಗೆ ಬಂದು ವಿಚಾರಣೆ ಮಾಡುವ ಕಾಲದಲ್ಲಿ ಕೊಲೆಯಾದ ಬಗ್ಗೆ ಸುಳಿವು ಗೊತ್ತಾಗಿದ್ದರೂ ತನಿಖಾಧಿಕಾರಿಗಳು ಈ ಬಗ್ಗೆ ಮೌನ ವಹಿಸಿ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.'

ಆದಕ್ಕೆ ಬದಲಾಗಿ ಕೇವಲ ಭಾರತ ದಂಡ ಸಂಹಿತೆ 304 ಬಿ ಪ್ರಕಾರ ಮೊಕದ್ದಮೆ ದಾಖಲು ಮಾಡಿಕೊಂಡಿರುತ್ತಾರೆ. ಅಪರಾಧಿಗಳು ಬಲಿಷ್ಠರಾಗಿದ್ದು ಹಣವಂತರಾಗಿರುತ್ತಾರೆ. ಅವರ ಪ್ರಭಾವದಿಂದಾಗಿ ಅವರನ್ನು ಕೊಲೆ ಆಪಾದನೆಯಿಂದ ರಕ್ಷಿಸುವ ದುರುದ್ದೇಶದಿಂದ ಸ್ಥಳೀಯ ಪೋಲೀಸರು ಕಾರ್ಯನಿರತರಾಗಿರುತ್ತಾರೆ. ಆದ್ದರಿಂದ ತನಿಖೆಯನ್ನು ಸಿ.ಓ.ಡಿಗೆ ವಹಿಸಿಕೊಡಬೇಕೆಂದು

ವಿನಂತಿಸುತ್ತೇನೆ. ಹಾಗೂ ಕೊಲೆಯಾದ ಬಗ್ಗೆ ಅಗತ್ಯ ಪುರಾವೆ ಹೇಳಿಕೆಗಳಿದ್ದರೂ ಆ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳದ ಸಂಬಂಧಿಸಿದ ಪೋಲೀಸ್ ಅಧಿಕಾರಿಗಳು ಅಪರಾಧವೆಸಗಿರುತ್ತಾರೆ. ಇವರ ಬಗ್ಗೆ ಕಾನೂನು ಪ್ರಕಾರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಅವರಿಗೆ ಹೇಳಿದ್ದಾರೆ. ನನಗೂ ಸಹ ಘೇರಾವ್ ಮಾಡಿದರು. ಊರಿನಲ್ಲಿರತಕ್ಕಂಥ ನೂರಕ್ಕೆ 99 ಜನ, ಆ ಒಂದು ಮನೆಯನ್ನು ಹೊರತುಪಡಿಸಿದರೆ, ಪ್ರತಿಯೊಬ್ಬರೂ ಸಹ ಇಂತಹ ನಿಶ್ಚಿತ ಅಭಿಪ್ರಾಯವುಳ್ಳವರಾಗಿದ್ದಾರೆ. ಸಾರ್ವಜನಿಕರ ಎದುರಿನಲ್ಲಿ ಈ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಪೋಲೀಸಿನವರು ಏನೂ ಕ್ರಮ ತೆಗೆದುಕೊಳ್ಳುವುದಿಲ್ಲವೆಂದರೆ ಇದರಲ್ಲಿ ದುರುದ್ದೇಶ ಇದೆಯೋ ಇಲ್ಲವೇ ? ಕಾನೂನಿಗೆ ವಿರುದ್ಧವಾಗಿ ನೀವು ತನಿಖೆಮಾಡಿ ಅಂಥ ಹೇಳುತ್ತಿಲ್ಲ. ಯಾವ ಪುರಾವೆಗಳು ಆ ಹಳ್ಳಿಯಲ್ಲಿ ಸಿಕ್ಕಿತೋ ಮತ್ತು ಹೇಳಿಕೆಗಳಿಂದ ಗೊತ್ತಾಯಿತೋ ಯಾವ ರೀತಿಯಾಗಿ ಕೊಲೆ ಆಯಿತೆಂದು ಸಾರ್ವಜನಿಕರ ಎದುರಿಗೆ ಹೇಳಿದರೂ ಸಹಿತಾ ನಿಮ್ಮ ಎಸ್.ಪಿ. ಹೋಗಲಿಲ್ಲ. ಡಿವೈ.ಎಸ್.ಪಿ. ಪುನಃ ಹೋಗಲಿಲ್ಲ. ಊರಿನಲ್ಲಿ ಗಲಾಟೆ ಯಾವಾಗ ಮಾಡಿದರೋ ಆಗ ಅವರು ಹೊರಗಡೆ ಕುಳಿತುಕೊಂಡು ಹೇಳಿಕೆಗಳಿಗೆ ಸೈನ್ ಹಾಕಿಸಿಕೊಂಡಿದ್ದಾರೆ. ನಾನು ವಿನಂತಿ ಮಾಡುವುದೇನೆಂದರೆ, ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳು ಏನು ತಪ್ಪು ಮಾಡಿದ್ದಾರೆ ಎಂಬುದರ ಬಗ್ಗೆ ವಿಚಾರಣೆ ಮಾಡಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಉಪಾಧ್ಯಕ್ಷರೇ, ನಾವು ಇದನ್ನು ಸಿ.ಓ.ಡಿ.ಗೆ ಒಪ್ಪಿಸುತ್ತಿದ್ದೇವೆ. ಇನ್ನು ತನಿಖಾಧಿಕಾರಿಗಳ ಕರ್ತವ್ಯ ಲೋಪ ಇದ್ದರೆ, ಇದರಲ್ಲಿ ಅವರು ಮರೆಮಾಚತಕ್ಕಂಥ ಪ್ರಯತ್ನ ಏನಾದರೂ ಇದ್ದರೆ, ಅದರ ಬಗ್ಗೆ ಕೂಡ ನಾನು ಪ್ರತ್ಯೇಕವಾಗಿ ಉನ್ನತ ಅಧಿಕಾರಿ ಡಿ.ಐ.ಜಿ ಅವರಿಂದ ನಾನು ತನಿಖೆ ಮಾಡಿಸುತ್ತೇನೆ.

ಉಪಾಧ್ಯಕ್ಷರು:– ಈಗ ಸಭೆಯನ್ನು ಎರಡೂವರೆ ಗಂಟೆವರೆಗೆ ಮುಂದೂಡುತ್ತೇನೆ.

(ಸಭೆಯು 1 ಗಂಟೆ 37 ನಿಮಿಷಕ್ಕೆ ಮುಂದೂಡಲ್ಪಟ್ಟಿತು)

(ಸಭೆಯು 3–00 ನಿಮಿಷಕ್ಕೆ ಸಮಾವೇಶಗೊಂಡಿತು)

(ಶ್ರೀ ವಿ.ಎಸ್. ಕೌಜಲಗಿ – ಅಧ್ಯಕ್ಷರು, ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

1993–94ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರಿದ ಚರ್ಚೆ

† ಶ್ರೀ ಆರ್.ಎಲ್ ಜಾಲಪ್ಪ (ದೊಡ್ಡಬಳ್ಳಾಪುರ):– ಮಾನ್ಯ ಅಧ್ಯಕ್ಷರೇ, ಈ ಒಂದು ಆಯವ್ಯಯದ ಮೇಲೆ ನಾನು 18ನೇ ತಾರೀಖು ದಿವಸ ಚರ್ಚೆ ಮಾಡುತ್ತಾ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದು ಸುಪ್ರೀಂ ಕೋರ್ಟ್‌ಗೆ ರಿವ್ಯೂ ಪಿಟೀಷನ್ ಹಾಕಬೇಕು ಅಂತ ಸೂಚನೆ ಕೊಟ್ಟಿದ್ದು ನಿಜ. ಈ ಒಂದು ತೀರ್ಪಿನಿಂದ ಗ್ರಾಮಾಂತರ ಪ್ರದೇಶದ ಜನತೆ ಯಾರಿದ್ದಾರೆ ಪಟ್ಟಣ ಪ್ರದೇಶದಲ್ಲಿ ಯಾರು ಇದ್ದಾರೆ ಅವರ ಜೊತೆಯಲ್ಲಿ ಕಾಂಪೀಟ್ ಮಾಡುವುದಕ್ಕಾಗುವುದಿಲ್ಲ ಮತ್ತು ಹಣದ ಶಕ್ತಿ ಇಲ್ಲದೆ ಇರುವುದರಿಂದ ಸುಮಾರು 70–80 ಭಾಗದ ಜನರು ಪ್ರೊಫೆಷನಲ್ ಕಾಲೇಜುಗಳಿಗೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ನಾನು ಹೇಳಿದ್ದೇನೆ. ಎರಡನೆಯದು ಮ್ಯಾನೇಜ್‌ಮೆಂಟ್‌ಗೆ ಅಡ್ಮಿಷನ್ ಬಗ್ಗೆ ಕೆಲವು ಅವಕಾಶಗಳು ಇಲ್ಲದಿದ್ದರೆ ಯಾರೂ ಕೂಡ ಕಾಲೇಜುಗಳನ್ನು ನಡೆಸುವುದಕ್ಕೆ ಮುಂದೆ ಬರುವುದಿಲ್ಲ ಎಂಬುದನ್ನು ಗಮನಿಸಬೇಕು. ಇನ್ನು ಮುಖ್ಯವಾಗಿ ಸರ್ಕಾರದ ಫಂಡಮೆಂಟಲ್ ಡ್ಯೂಟಿ ಏನಿದೆ ಅಂದರೆ 14 ವರ್ಷದವರೆಗೂ ಏನು ಎಜುಕೇಷನ್ ಕೊಡಬೇಕು ಅದನ್ನು ಕೊಡುವುದಕ್ಕೆ ಶಕ್ತಿ ಇಲ್ಲದೆ ಇರುವಾಗ ಈ ಪ್ರೊಫೆಷನಲ್ ಕಾಲೇಜುಗಳು ಮತ್ತು ಹೈಯರ್ ಸ್ಟಡೀಸ್‌ಗೆ 40–50 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದರಲ್ಲಿ ಅರ್ಥ ಇಲ್ಲ ಅಂತ ನಾನು ಹೇಳಿದ್ದೆ. ನನ್ನ ಭಾಷಣದಲ್ಲಿ. ನಾನು ಯಾವಾಗಲೂ

ಸಹ ಕ್ಯಾಪಿಟೇಷನ್ ಕಾಲೇಜುಗಳನ್ನು ಪ್ರೊಟೆಕ್ಟ್ ಮಾಡಬೇಕು ಅಂತ ಹೇಳಿಲ್ಲಿ. ಕ್ಯಾಪಿಟೇಷನ್ ಇರಬಹುದು. ಅಲ್ಲೊಂದು ಇಲ್ಲೊಂದು ತೆಗೆದುಕೊಳ್ಳುತ್ತಿರಬಹುದು. ನಮ್ಮ ರಾಜಕಾರಣಿಗಳು ಸತ್ಯವಂತರಲ್ಲ, ಹಾಗೆಯೇ ಅಲ್ಲೊಬ್ಬರು ಇಲ್ಲೊಬ್ಬರು ಇರಬಹುದು ಅಂತ ಹೇಳಿದ್ದೇನೆಯೇ ವಿನಹ ನಾನು ಕಾಲೇಜುಗಳು ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಿ ಎಂದು ಏನೂ ಹೇಳಿಲ್ಲ. ಆದರೆ ಸನ್ಮಾನ್ಯ ಜೀವರಾಜ್ ಆಳ್ವರವರು ಮಾತನಾಡುವಾಗ ಹೇಳಿದ್ದಾರೆ. ಇವರು "I am ashamed of this statement" ನನಗೆ ನಾಚಿಕೆಯಾಗುತ್ತದೆ. ನಾನು ಜನತೆಯಲ್ಲಿ ನಮ್ಮ ಪಕ್ಷದ ಪರವಾಗಿ ಕ್ಷಮಾಪಣೆ ಕೇಳುತ್ತೇನೆ ಎಂದು ಹೇಳಿದ್ದಾರೆ. ಅದು ಕ್ಷಮಾಪಣೆ ಕೇಳುವುದಕ್ಕೆ ಬೇಕಾದಷ್ಟು ವಿಷಯಗಳಿವೆ ತಪ್ಪು ಕೇಳಿಕೊಳ್ಳಲಿ ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ನಾನೇನೂ ಅಂತಹದು ಮಾಡಿಲ್ಲ.

ನಾನು ಕ್ಯಾಪಿಟೇಷನ್ ಅಲೋ ಮಾಡಿ ಎಂದು ಕೇಳಿದವನೂ ಅಲ್ಲ ಅಥವಾ ನನ್ನಿಂದ ಅಂತಹ ಯಾವುದೇ ಅಪಚಾರ ಆಗಿದೆ ಅಂತ ನನಗೆ ಅನಿಸಿಲ್ಲ. ಪಕ್ಷದ ಕಾರ್ಯಾಧ್ಯಕ್ಷನಾಗಿ ನಾನು ಇದನ್ನು ಹೇಳುತ್ತಿದ್ದೇನೆ ಅಂತ ಹೇಳಿದ್ದಾರೆ. ನನಗೆ ಅದು ಗೊತ್ತಿಲ್ಲ. ಕಾರ್ಯಾಧ್ಯಕ್ಷರೋ whether he is working president or a sleeping president, I don't know. ನನಗೆ ಇರುವದು ಒಬ್ಬರೇ ಅಧ್ಯಕ್ಷರು, ನಮ್ಮ ಕಾನ್‌ಸ್ಟಿಟ್ಯೂಷನ್ ಪ್ರಕಾರ. ಅವರೇನೋ ಮಾಡಿಕೊಂಡಿದ್ದಾರೆ ಮಾಡಿಕೊಳ್ಳಲಿ. ಆದರೆ, ನಾನು ಯಾರನ್ನೋ ಕೇಳಿ ಇಲ್ಲಿಗೆ ಬಂದು ಮಾತನಾಡಬೇಕೆಂದು ನನಗೆ ಮ್ಯಾಂಡೇಟ್ ಇಷ್ಯೂ ಯಾರೂ ಮಾಡಿಲ್ಲ. ನಾನಾ ಸುಮಾರು 30 ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿದ್ದೇನೆ.

ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಬೆಂಗಳೂರು ಜಿಲ್ಲಾ ಬ್ಯಾಂಕಿನ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ, ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಸುಮಾರು 2ವರ್ಷಗಳ ಕಾಲ ಎಂ.ಎಲ್.ಸಿ.ಯಾಗಿ ಕೆಲಸ ಮಾಡಿದ್ದೇನೆ ಮತ್ತು ಇಲ್ಲಿ 10ವರ್ಷಗಳಿಂದ ಶಾಸಕನಾಗಿ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ನನಗೆ ಏನು ಮಾತನಾಡಬೇಕು, ಏನು ಮಾತನಾಡಬಾರದು ಎಂಬುದು ನನಗೆ ಗೊತ್ತಿದೆ. ನನಗೆ ಯಾರೂ ಬುದ್ಧಿ ಹೇಳಬೇಕಾದ್ದೂ ಇಲ್ಲ; ನಾನು ಯಾರ ಬುದ್ಧಿಯನ್ನು ಕೇಳಬೇಕಾದ್ದೂ ಇಲ್ಲ. ಇದನ್ನು ಸನ್ಮಾನ್ಯ ಆಳ್ವ ಅವರು ತಿಳಿದುಕೊಳ್ಳಬೇಕೆಂದು ಇಲ್ಲಿ ಹೇಳುತ್ತಿದ್ದೇನ. ನಾನು ನಾಚಿಕೆ ಪಡುವಂಥ ಕೆಲಸವನ್ನೇನೂ ಮಾಡಿಲ್ಲ. ನಮ್ಮ ಪಕ್ಷದ ಸರ್ಕಾರವನ್ನೇ ಕಿತ್ತು ಹಾಕುವಂಥ ಕೆಲಸವನ್ನು ನಾನು ಏನೂ ಮಾಡಿಲ್ಲ. ನಮ್ಮ ರಾಷ್ಟ್ರೀಯ ಮುಖಂಡರುಗಳ ಬಗ್ಗೆ ನಾನು ಏನೂ ಲಘುವಾಗಿ ಮಾತನಾಡಿಲ್ಲ. 1987 ರಲ್ಲಿ ಒಂದು...

ಶ್ರೀ ಎಸ್.ಎಂ. ಯಾಹ್ಯಾ:- ಈ ವಿಚಾರಗಳ ಬಗ್ಗೆ ಡಾ: ಆಳ್ವ ಅವರು ತಮ್ಮ ತಮ್ಮ ವಿಚಾರದಲ್ಲೆ ಹೇಳಿದ್ದಾರೆ. ಮಾನ್ಯ ಜಾಲಪ್ಪನವರು ತಮ್ಮ ವಿಚಾರ ಹೇಳಿದ್ದಾರೆ. ಅವರ ಪಾರ್ಟಿ ಬಗ್ಗೆ ಆಗಲೀ ಅವರ internal matter ಆಗಲಿ, we are not at all concerned and this is not the time to discuss what another Hon'ble Member has said. Absolutely there is no scope. He might have said so many things. Whatever you have, you have your own party forum and you can discuss the matter there and not on the floor of the House.

ಶ್ರೀ ಆರ್.ಎಲ್. ಜಾಲಪ್ಪ:- ಮಾನ್ಯ ಅಧ್ಯಕ್ಷರೇ, ಈ ಮಾತನ್ನು, ಅವರು ಮಾತನಾಡುತ್ತಿದ್ದಾಗ ನಾನು ಕಾರ್ಯಾಧ್ಯಕ್ಷನಾಗಿ ಎಂದು ಹೇಳಿದ್ದರಲ್ಲಾ ಆವಾಗ ನೀವು ಅವರಿಗೆ ನೀವು ಕಾರ್ಯಾಧ್ಯಕ್ಷರಾಗಿದ್ದರೆ, ಪಾರ್ಟಿಯಲ್ಲಿ ಹೇಳಿ ಇಲ್ಲಿಗೆ ಏಕೆ ಬಂದು ಹೇಳುತ್ತೀರಿ ಎಂದು ನೀವು ಆಗಲೇ ಹೇಳಬಹುದಾಗಿತ್ತು, ನಾನು ಜೀವನದಲ್ಲಿ ಸ್ವಲ್ಪ ಗೌರವನ್ನು ಉಳಿಸುಕೊಂಡು ಬಂದಿದ್ದೇನೆ.

ಬೇರೆಯವರ ಹತ್ತಿರ ಹಲ್ಲು ಗಿಂಜುವುದಾಗಲೀ ಅಥವಾ ಇನ್ನೊಂದು ಮಾಡುವುದನ್ನಾಗಲಿ ನಾನು ಮಾಡಿಲ್ಲ. ಅಡ್ಮಿಷನ್ ಸಮಯದಲ್ಲಿ ಅವರು ಇವರ ಹತ್ತಿರ ಹೋಗಿ ಹಲ್ಲು ಗಿಂಜಿ ಸೀಟೇನೂ ಕೇಳಲಿಲ್ಲ ನಾನು. 87 ರಲ್ಲಿ ಧನಂಜಯ ಅವರು ಒಂದು ಕಮಿಟಿ ರಿಪೋರ್ಟ್ ಕೊಟ್ಟರು. 84-85ರಲ್ಲಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ಏನು ಸ್ಟ್ರೆಂಗ್ತ್ ಇತ್ತೋ ಅಷ್ಟೆ ಇರಬೇಕೆಂದು ಜಾಸ್ತಿ ಮಾಡಬಾರದೆಂದು ರಿಪೋರ್ಟ್ ಕೊಟ್ಟರು. ಆದರೂ ಕೂಡಾ ಜಾಸ್ತಿ ಮಾಡಿದರು. ಅಂಥಾ ಕೆಲಸ ನಾನು ಏನೂ ಮಾಡಿಲ್ಲ ನಾಚಿಕೆಪಡುವುದಕ್ಕೆ. ಆದ್ದರಿಂದ ದಯಮಾಡಿ ಅವರೇನಾದರೂ ಹೇಳಿದ್ರೆ ಅವರು ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು. ನಾಚಿಕೆಪಡುವಂಥ ಕೆಲಸವನ್ನು ನಾನು ಏನೂ ಮಾಡಿಲ್ಲ. ಅವರೇನಾದರೂ ಕೇಳುವುದಾದರೆ ಅವರು ನಾಚಿಕೆಪಟ್ಟು ಜನಗಳ ಕ್ಷಮಾಪಣೆ ಕೇಳುವುದು ಬೇಕಾದಷ್ಟು ಇದೆ, ಬೇಕಾದರೆ ಅವರು ಕೇಳಿಕೊಳ್ಳಲಿ, ಇದನ್ನು ನಾನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಡಾ: ಜೀವರಾಜ ಆಳ್ವ:- ಸಭಾಧ್ಯಕ್ಷರೇ,

ಅಧ್ಯಕ್ಷರು:- ತಾವು ಕುಳಿತುಕೊಳ್ಳಿ.

ಶ್ರೀ ಆರ್.ಎಲ್. ಜಾಲಪ್ಪ:- ಪುನಃ ಅವರೇನಾದರೂ ಮಾತನಾಡಿದರೆ ಅದಕ್ಕೆ ಹೇಳಲು ನನಗೂ ಸಮಯ ಕೊಡಬೇಕು.

ಡಾ:ಜೀವರಾಜ್ ಆಳ್ವ:- ಅತ್ಯಂತ ವಿಶ್ವಾಸದಿಂದ, ಅತ್ಯಂತ ಕಳಕಳಿಯಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, You should not have given him an opportunity. ಖಂಡಿತವಾಗಲೂ ಸಭಾಧ್ಯಕ್ಷರೇ, ಒಂದು ವಿದ್ಯಾ ಇಲಾಖೆ ಮೇಲೆ ಭಾಷಣ ನಡೆಯಿತು. ಭಾಷಣದ ಮೇಲೆ ಮಾತನಾಡಲಿಕ್ಕೆ ಎಷ್ಟು ಜಾಲಪ್ಪನವರಿಗೆ ಹಕ್ಕು ಇದೆಯೋ ಅದೇ ಹಕ್ಕನ್ನು ಉಪಯೋಗಿಸಿಕೊಂಡು ನಾನು ಮಾತನಾಡುತ್ತಿದ್ದೇನೆ. ವಿದ್ಯಾ ಇಲಾಖೆಯ ಕ್ಯಾಪಿಟೇಷನ್ ಫೀಗೆ ಸೀಮಿತವಾಗಿ, ಯಾವುದೇ ವ್ಯಕ್ತಿಗೆ ಹೆಸರು ಹೇಳದೆ ಮಾತನಾಡಿದ್ದೇನೆ. ಪಕ್ಷದ ಪರವಾಗಿ ಕಾರ್ಯಾಧ್ಯಕ್ಷನಾಗಿ ನಾನು ಮಾಡಬೇಕಾದಂಥ ಕರ್ತವ್ಯಗಳನ್ನು ನಾನು ಮಾಡುತ್ತೇನೆ. ಆದರೆ, ವಿಧಾನ ಸಭೆಯಲ್ಲಿಯೂ ಕೂಡ ನಾನು ಸದಸ್ಯನಾಗಿ, ಒಬ್ಬ ಪಕ್ಷದ ಕಾರ್ಯಾಧ್ಯಕ್ಷನಾಗಿರುವಾಗ ಅಷ್ಟು ವರ್ಷಗಳಿಂದ ಈ ಬಗ್ಗೆ, ಒಂದು ಖಚಿತವಾದ, ಒಂದು. ನಿಖರವಾದ ನಿಲುವನ್ನು ತಳೆದಾಗ ಎಷ್ಟೇ ಹಿರಿಯನಾಗಿರಲಿ, ಎಷ್ಟೇ ದೊಡ್ಡವನಾಗಿರಲಿ, ಎಷ್ಟೇ ತ್ಯಾಗವನ್ನು ಮಾಡಿದ್ದೇನೆಂದು ಕೊಚ್ಚಿಕೊಳ್ಳಲಿ, ಆದರೆ ಜನತೆಗೆ ಒಂದು ಉತ್ತರ ಕೊಡಬೇಕಾದುದು ಇದೆ. ಕರ್ನಾಟಕದ ಜನ ಸಾಮಾನ್ಯರಿಗೆ, ನಾನು ಕರ್ನಾಟಕ ರಾಜ್ಯದ ಜನತಾದಳದ ಕಾರ್ಯಾಧ್ಯಕ್ಷನಾಗಿ ಉತ್ತರ ಕೊಡಬೇಕಾಗಿ ಬರುತ್ತದೆ. ಮಾರಾಟ ಮಾಡಲಿಕ್ಕೆ ನಾನು ನಿಂತಿಲ್ಲ. ವ್ಯವಹಾರ ಮಾಡಲಿಕ್ಕೆ ನಿಂತಿಲ್ಲ. ಇವತ್ತು ಕಾಲೇಜುಗಳ ಹೆಸರಿನಲ್ಲಿ, ದೇವರಾಜ ಅರಸ್ ಮೆಡಿಕಲ್ ಕಾಲೇಜ್ ಅಂಥ ಮಾಡಿ ಇವರು ಮಾಡುತ್ತಿರುವಂಥ ದ್ರೋಹಕ್ಕೆ ತನಿಖೆಯಾಗಲಿ, ಆಗ ಉತ್ತರಕೊಡುತ್ತೇನೆ. ಅಧ್ಯಕ್ಷರೇ, ಈ ಒಂದು ಕಾಲೇಜು ಮಾಡಿ ಎಷ್ಟು ಗಲಾಟೆ ಆಯಿತು ? ಎಷ್ಟು ಮರ್ಡರ್‌ಗಳು ಆಯಿತು ಎಂಬುದು ಅದು ಗೊತ್ತಿದೆ.

ಶ್ರೀ ಆರ್.ಎಲ್. ಜಾಲಪ್ಪ:- ಈ ಹೌಸ್‌ನಲ್ಲಿ ಹೇಳಿಬಿಟ್ಟು ತಪ್ಪಿಸಿಕೊಳ್ಳುವುದಲ್ಲ.

(ಗೊಂದಲ)

ಅಧ್ಯಕ್ಷರು:- ಆಳ್ವ ಅವರೇ, ಕುಳಿತುಕೊಳ್ಳಿ. ಕುಳಿತುಕೊಳ್ಳಿ ಜಾಲಪ್ಪನವರೇ,

ಡಾ. ಜೀವರಾಜ್ ಆಳ್ವ:- ನಾನು ಚಾಲೆಂಜ್ ಮಾಡುತ್ತೇನೆ, ನೀವು ಏನು ಮಾಡಿದ್ದೀರಿ ಎಂದು ನನಗೆ ಗೊತ್ತು.

ಶ್ರೀ ಆರ್.ಎಲ್. ಜಾಲಪ್ಪ:-** ಇಲ್ಲಿ ಹೇಳೋದಲ್ಲ. ಹೊರಗಡೆ ಹೇಳು.

ಡಾ:ಜೀವರಾಜ್ ಆಳ್ವ:- ಅಲ್ಲೂ ಹೇಳುತ್ತೇನೆ.

(ಗೊಂದಲ)

SRI P.G.R. SINDHYA:- How can he say,** ಅಂತ ಹೇಳಿ.

** ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಡಾ: ಜೀವರಾಜ್ ಆಳ್ವ:- ನಾನು ಅವರಿಗೆ ಏನೂ ಹೇಳಿರಲಿಲ್ಲ. ಈ ಸಭೆಯ ಘನವೆತ್ತ ಸದಸ್ಯರು ಅಂತ ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು:- ನಾನು ನಿಂತಿದ್ದೇನೆ. ನೋಡಿ ನಾನು ನಿಮಗೆ ಒಂದು ಕಿವಿ ಮಾತು ಹೇಳುತ್ತೇನೆ.

ಡಾ: ಜೀವರಾಜ್ ಆಳ್ವ:- ಘನವೆತ್ತ ಸದಸ್ಯರು ಎಂದು ಹೇಳಿದೆ. ಆದರೆ, ಒಂದು ಐಡಿಯಲಿಸಂ ಅಂಥ ಯಾವುದಿದೆ ? ಒಂದು ಸೈದ್ಧಾಂತಿಕ ನಿಲುವು ಅಂಥ ಯಾವುದಿದೆ ? ಆ ನಿಲುವಿಗೆ ತಿಲಾಂಜಲಿ ನೀಡಲಿ, ಆಮೇಲೆ ನಾನು ಕ್ಷಮೆ ಕೇಳುತ್ತೇನೆ.

ಅಧ್ಯಕ್ಷರು:- ಕುಳಿತುಕೊಳ್ಳಿ. ತಾವು ಒಂದು ಪಕ್ಷದ ಉನ್ನತ ಸ್ಥಾನದಲ್ಲಿರತಕ್ಕಂಥ ಹಿರಿಯ ಸದಸ್ಯರಿದ್ದೀರಿ. ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದು ನನಗೂ ಅಷ್ಟು ಸರಿ ಅನಿಸುವುದಿಲ್ಲ ಇದನ್ನು ಇಲ್ಲಿಗೆ ಮುಕ್ತಾಯಗೊಳಿಸಿ. ನಮ್ಮ ಕಾರ್ಯಕಲಾಪಗಳಿಗೆ ಹೋಗೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ** ಎನ್ನುವ ಶಬ್ದವನ್ನು ತೆಗೆಸಿ.

ಅಧ್ಯಕ್ಷರು:- ನೋಡುತ್ತೇನೆ. ತೆಗೆಸುತ್ತೇನೆ.

† ಶ್ರೀ ಎಸ್.ಎಂ. ಯಾಹ್ಯಾ:- ಮಾನ್ಯ ಸಭಾಧ್ಯಕ್ಷರೇ, ಶೈಕ್ಷಣಿಕ ಇಲಾಖೆ ಡಿಮ್ಯಾಂಡ್ಸ್ ಮೇಲೆ ಸನ್ಮಾನ್ಯ 14 ಅಥವಾ 17 ಸದಸ್ಯರು ಮಾತನಾಡಿ ತಮ್ಮ ಉತ್ತಮ ಅಭಿಪ್ರಾಯವನ್ನು ಸೂಚನೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಜಾಲಪ್ಪನವರು ಮಾತನಾಡಿ ಹೆಚ್ಚಾಗಿ ಸುಪ್ರೀಮ್ ಕೋರ್ಟಿನ ತೀರ್ಪಿನ ವಿಚಾರದಲ್ಲಿ ಹೇಳಿದ್ದಾರೆ. ಡಾ: ಜೀವರಾಜ್ ಆಳ್ವ ಅವರು ಹಲವಾರು ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಒಳ್ಳೆಯ ವಿಚಾರಗಳನ್ನು ಹೇಳಿದ್ದಾರೆ. ಮಾನ್ಯ ಪೂಜಾರ್‌ರವರು ಬಹು ಮುಖ್ಯವಾಗಿ ಪಾರ್ಟ್ ಟೈಮ್ ಲೆಕ್ಚರರ್‌ಗಳಿಗೆ ಆಗತಕ್ಕಂಥ ಅನಾನುಕೂಲತೆ ಮತ್ತು ಅವರಿಗೆ ಕೊಡುವಂಥ ಯಾವುದು ಸಲ್ಯೂಷನ್ ಇದೆ, ಅವರ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಸಿಂಧ್ಯಾರವರೂ ಸಹ 3 ನಿಮಿಷದಲ್ಲಿ 3 ಒಳ್ಳೆಯ ಸೂಚನೆಗಳನ್ನು ಕೊಟ್ಟಿದ್ದಾರೆ. ಅದೇ ರೀತಿ ಈ ಕಡೆಯಲ್ಲಿ ಕುಳಿತಿರುವ ಮಾನ್ಯ ಸದಸ್ಯರು ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವರು ಟೀಕೆಗಳನ್ನೂ ಸಹ ಮಾಡಿದ್ದಾರೆ, ಎಲ್ಲರ ಉದ್ದೇಶ ಬಹಳ ಚೆನ್ನಾಗಿದೆ. ಉದ್ದೇಶ ಯಾವ ಕರ್ನಾಟಕದಲ್ಲಿ, ಅದರಲ್ಲೂ ಹೈಯರ್ ಎಜುಕೇಷನ್ ಬಹಳ ಹೆಸರಾಗಿತ್ತೋ, ಯಾವ ಕರ್ನಾಟಕದಲ್ಲಿ ವಿಶ್ವೇಶ್ವರಯ್ಯನಂಥವರು ಮತ್ತಿತರ ಇಂಜಿನೀಯರ್ಸ್ ನಮ್ಮ ವಿಶ್ವವಿದ್ಯಾನಿಲಯದಿಂದ ಬಂದಿದ್ದರೋ, ಒಳ್ಳೆ ರೀಸರ್ಚ್ ಸ್ಕಾಲರ್ಸ್ ಬಂದಿದ್ದರೋ ಅದೇ ರೀತಿಯಲ್ಲಿ ದೊಡ್ಡ ದೊಡ್ಡ ಕವಿಗಳ, ಲಿಟ್ರರಿ ಪರ್ಸನ್ ಇದ್ರೋ, ಅದೇ ರೀತಿ ಈ 25 ವರ್ಷಗಳಿಂದೀಚೆಗೆ ಏಕೆ ಆಗುತ್ತಿಲ್ಲವೆಂದು ಅವರ ಉದ್ದೇಶವಾಗಿದೆ. ಯಾವುದು ಒಂದು ಅಕಾಡೆಮಿಕ್ ಎಕ್ಸೆಲೆನ್ಸ್ ಇದೆ ಆ

ಅಕಾಡೆಮಿಕ್ ಎಕ್ಸಲೆನ್ಸ್ ಇವತ್ತು ಕರ್ನಾಟಕದಲ್ಲಿ ಕಡಿಮೆ ಆಗುತ್ತಿದೆ. ಆ ಗುಣಮಟ್ಟ ತೀರಾ ಕೆಳಗೆ ಇಳಿಯುತ್ತಿದೆ. ಅದೇ ಯಾವ ವಿದ್ಯೆಯಿಂದ ಎಲ್ಲಾರಿಗೂ ಮತ್ತು ದೇಶಕ್ಕೂ ಅನುಕೂಲವಾಗಬೇಕಾಗಿತ್ತೋ ಅಂಥ ವಿದ್ಯೆ ಇವತ್ತು ಸಿಗುತ್ತಿಲ್ಲವೆಂದು ಯಾವ ಸದುದ್ದೇಶದಿಂದ ಅವರು ಹೇಳಿದ್ದಾರೋ ಅದೇ ಉದ್ದೇಶ ನನ್ನದೂ ಆಗಿದೆ. ಉನ್ನತ ವಿದ್ಯೆಯಲ್ಲಿ ಹೆಚ್ಚು ಹೆಚ್ಚು ಜನ ಒಳ್ಳೆಯ ರೀಸರ್ಚ್ ಆಗಬೇಕು. ಸಾರ್ವಜನಿಕರ ಕೋಟ್ಯಾಂತರ ರೂಪಾಯಿ ಇದಕ್ಕೆ ಖರ್ಚಾಗುತ್ತಿದೆ. ಇದರಿಂದ ಮೊದಲನೆಯಾಗಿ ಈ ವಿದ್ಯೆಯಿಂದ ದೇಶಕ್ಕೆ ಏನಾದರೂ ಒಳ್ಳೆಯದಾದರೆ, ಸಮಾಜಕ್ಕೆ ಒಳ್ಳೆಯದಾದರೆ, ಈ ದೇಶ ಅಭಿವೃದ್ಧಿಯಾಗುತ್ತದೆ. ಇನ್ನೊಂದು ಈ ವಿದ್ಯೆಯಿಂದ ಕ್ವಾಲಿಟಿ ಆಫ್ ಲೈಫ್ ಇಂಪ್ರೂವ್ ಆಗಬೇಕಾಗಿದೆ. ಈ ಎರಡು ಮಹಾ ಉದ್ದೇಶಗಳು. ಜೀವನಮಟ್ಟ ಚೆನ್ನಾಗಿ ಆಗಬೇಕೆಂಬ ಒಂದು ಉದ್ದೇಶವಿದ್ದರೆ ಇನ್ನೊಂದು ಉದ್ದೇಶ ಈ ವಿದ್ಯಾಭ್ಯಾಸದಿಂದ ನಮ್ಮ ದೇಶಕ್ಕೂ ಒಳ್ಳೆಯದಾಗಬೇಕು. ಹೊಸ ಹೊಸ ಐಡಿಯಾ, innovation, research all should be done by this higher education.

ನಾನು ಎರಡನೆಯ ಸಲ ವಿದ್ಯಾ ಮಂತ್ರಿಯಾಗಿದ್ದೇನೆ. ಕಳೆದ 17 ವರ್ಷಗಳ ಹಿಂದೆ 1975ರಲ್ಲಿ ವಿದ್ಯಾಮಂತ್ರಿಯಾಗಿರುವಾಗ ಆಗಲೂ ಸಮಸ್ಯೆಗಳು ಇತ್ತು. ಆದರೆ ಆಗಿನ ಸಮಸ್ಯೆಗೂ, ಇವತ್ತಿನ ಸಮಸ್ಯೆಗೂ ಬಹಳಷ್ಟು ಹಳೆಯ ಸಮಸ್ಯೆಗಳು ಬೆಳೆದುಹೋಗಿದೆ. ಇನ್ನು ಹಲವಾರು ಹೊಸ ಸಮಸ್ಯೆಗಳು ಬಂದಿವೆ. ಆ ಕಾರಣದಿಂದ ನಾನು 4–5 ತಿಂಗಳಿಂದ ಬಹಳ ಪ್ರಾಮಾಣಿಕತೆಯಿಂದ ದಕ್ಷತೆಯಿಂದ ಈ ಇಲಾಖೆಯಲ್ಲಿ ಸುಧಾರಣೆಯಾಗಬೇಕು, ನಾವು ಹೊಸ ದಿಕ್ಕಿನಲ್ಲಿ ಹೋಗಬೇಕೆಂದು ಹೇಳಿ ಹಲವಾರು ಪ್ರಯತ್ನಗಳನ್ನು ಮಾಡಿದ್ದೇನೆ. ಈ ಡಿಪಾರ್ಟ್‌ಮೆಂಟ್‌ನ್ನು ಸುಧಾರಣೆ ಮಾಡಿದ್ದೇನೆ. ಹಲವಾರು ಹೊಸ ಕಾರ್ಯಗಳನ್ನು ವಿಚಾರಗಳನ್ನೂ ನಮ್ಮ ಹೈಯರ್ ಎಜ್ಯುಕೇಷನ್‌ನಲ್ಲಿ ನಾನು ಇಟ್ಟಿದ್ದೇನೆ. ಒಂದು ಕಾಲದಲ್ಲಿ ಕರ್ನಾಟಕವೇ ಬಹಳ ಸುಪ್ರಸಿದ್ಧವಾಗಿ ಇಡೀ ಭಾರತದಲ್ಲಿ ಹೆಸರಾಗಿತ್ತೋ ಈಗ ಕೆಳಮಟ್ಟಕ್ಕೆ ಹೋದರೂ ಸಹ ಅದನ್ನು ಪುನಃ ವಾಪಸ್ಸಾಗಿ ಕರ್ನಾಟಕದ ಹೆಸರು ಪುನಃ ವಿದ್ಯಾಕ್ಷೇತ್ರದಲ್ಲಿ ಮುಂದೆ ಬರಬೇಕು ಅಂತ ಸಂಪೂರ್ಣವಾಗಿ ಪ್ರಾಮಾಣಿಕತನದಿಂದ ದಕ್ಷತೆಯಿಂದ ನಾನು ಕೆಲವು ತಿಂಗಳು ನಾನು ಪುನಃ ಎರಡನೇ ಸಲ ವಿದ್ಯಾಮಂತ್ರಿಯಾಗುವಾಗ ಮಾಡಿಕೊಂಡಿದ್ದೇನೆ. ಆ ಕಾರಣದಿಂದ ಈ ವಿಚಾರದಲ್ಲಿ ಯಾರೇ ಏನೇ ಇದ್ದರೂ ನಮ್ಮ ಟೀಚರ್ಸ್‌ಗಳಿಗೆ ಹೆಚ್ಚು ಮೋಟಿವೇಷನ್ ಇರಬೇಕು. ಅವರು ಹೆಚ್ಚು ಡೆಡಿಕೇಟೆಡ್ ಆಗಿ ಕೆಲಸ ಮಾಡಬೇಕು. ನಾವು ಎಷ್ಟೋ ರಿಫಾರ್ಮ್ ತರಬಹುದು, ಹೊಸ ವಿಚಾರಗಳನ್ನು ಹೇಳಬಹುದೋ ಆದನ್ನೆಲ್ಲಾ ಮಾಡುವವರು ನಮ್ಮ ಟೀಚರ್ಸ್, ಆ ಟೀಚರ್ಸ್‌ಗಳಲ್ಲಿ ಒಳ್ಳೆಯ ಜನ ಇದ್ದಾರೆ. ಇನ್ನು ಎಲ್ಲರೂ ಒಂದೇ ರೀತಿಯಲ್ಲಿ ದಕ್ಷತೆಯಿಂದ ಕೆಲಸಮಾಡಿದರೆ ಈ ವಿದ್ಯೆಯಲ್ಲಿ ಒಂದು ಕ್ರಾಂತಿಯನ್ನು ತರಬಹುದು ಅಂತ ನನಗೆ ತೋರುತ್ತಿದೆ. ಏಕೆಂದರೆ ಕರ್ನಾಟಕ ಯಾವಾಗಲೂ ವಿದ್ಯೆಯಲ್ಲಿ ಹೆಸರಾದಂಥದ್ದು. ಬಹಳಷ್ಟು ಕವಿಗಳು, ಸಾಹಿತಿಗಳು, ಇಂಜಿನಿಯರ್ಸ್‌ಗಳು, ಇರಿಗೇಷನ್‌ನಲ್ಲಿ ಮತ್ತು ಎಲೆಕ್ಟ್ರಿಕಲ್‌ನಲ್ಲಿ ನಾವು ಇಡೀ ದೇಶದಲ್ಲಿ ಮುಂದೆ ಇದ್ದೇವೆ. ಈಗ ಏತಕ್ಕೆ ಆಗುತ್ತಿಲ್ಲ ಅಂತ ಹೇಳಿ, ಪುನಃ ವಾಪಸ್ಸು ಕರ್ನಾಟಕದ ಹಿರಿಮೆ ಕರ್ನಾಟಕದ ಇಮೇಜ್ ಅನ್ನು ವಾಪಸ್ಸು ತರಬೇಕು ಅಂತ ಸಂಪೂರ್ಣವಾದಂತಹ ಪ್ರಯತ್ನವನ್ನು ನಾನು ಮಾಡಿದ್ದೇನೆ. ಈ ಕಾರಣದಿಂದ ಟೀಚರ್ಸ್‌ಗಳಿಗೆ ರಿಕ್ರೂಟ್ ಮಾಡುವಾಗಲೇ ನಾವು ಯಾರೋ ಬಂದರು ಯಾರೋ ತೆಗೆದುಕೊಂಡು ಹೋದರೂ ಅಂತ ಆಗಲೇಬಾರದು. ಅದಕ್ಕಾಗಿ ಇನ್ನು ಮುಂದೆ ರಿಕ್ರೂಟ್ ಮಾಡುವಾಗ ನ್ಯಾಷನಲ್ ಎಲಿಜಿಬಿಲಿಟಿ ಟೆಸ್ಟ್ ಪಾಸಾಗಬೇಕು. ಪಾಸಾದಮೇಲೆ ಮಾತ್ರ ಅವರನ್ನು ಸಂದರ್ಶನಕ್ಕೆ ಕರೆಯಬೇಕೆಂದು ಮಾಡಿದ್ದೇವೆ. ಆ ಕಾರಣದಿಂದ ಒಂದು ಹೆಜ್ಜೆ ನಾವು ಮುಂದೆ ಹೋಗುತ್ತಿದ್ದೇವೆ. ನಂತರ ಯಾವ ಟೀಚರ್ಸ್ ಈಗ ಅಪಾಯಿಂಟ್ ಆಗಿದ್ದಾರೋ ಅವರಿಗೆ ನಾವು ತರಬೇತಿ ಕೋರ್ಸ್‌ನ್ನು

ಮಾಡಬೇಕೆಂದು ನಿರ್ಧರಿಸಿದ್ದೇವೆ. ಏಕೆಂದರೆ ಕಾಲ ಬದಲಾವಣೆಯಾಗುತ್ತಿದೆ. ವಿದ್ಯೆ ಎಂದು ಹೇಳಿದರೆ, the education should be relevant to the need of the society. The society goes on changing. There would be socio–economic changes from time to time. In such a respect, education also should be relevant to the need of the society. In that respect, we would like that our teachers should go for refresher course. Already there are two national institutions – one in Mysore and another in Dharwar.

ಅದಕ್ಕಾಗಿ ನಾನು ಎಲ್ಲಾ ವಿಶ್ವವಿದ್ಯಾನಿಲಯದವರಿಗೆ ಹೇಳಿದ್ದೇನೆ. ನೀವು ತರಬೇತಿ ಶಿಬಿರವನ್ನು ಈ ವರ್ಷದಿಂದ ಪುನಃ ಎಲ್ಲಾ ಟೀಚರ್‌ಗಳಿಗೆ ಕೊಡುವ ರೀತಿಯಲ್ಲಿ ಮಾಡಬೇಕು. ನಮ್ಮ ಎಲ್ಲಾ ವಿಶ್ವವಿದ್ಯಾನಿಲಯದವರು ಮಾಡಿಕೊಂಡುಬಿಟ್ಟರೆ ಇದರಿಂದ ಟೀಚಿಂಗ್ ಕಮ್ಯುನಿಟಿಗೆ ಒಳ್ಳೆಯದಾಗುತ್ತದೆ. ಅಕಾಡಮಿಕ್ ಎಕ್ಸಲೆನ್ಸ್ ಅಂತ ನಾವು ಏನನ್ನು ಹೇಳಿಕೊಂಡು ಹೋಗುತ್ತಿದ್ದೇವೆ, ಆ ಅಕಾಡಮಿಕ್ ಎಕ್ಸಲೆನ್ಸ್‌ಗೂ ಬಹಳ ಹೆಚ್ಚಿನ ಉಪಯೋಗವಾಗುವುದಕ್ಕೆ ಸಾಧ್ಯವಿದೆ. ಅದೇ ರೀತಿಯಲ್ಲಿ ಹೆಚ್ಚುಹೆಚ್ಚು ಇನ್ಸ್‌ಟಿಟ್ಯೂಷನ್‌ಗಳೂ ಆಗಿಬಿಟ್ಟರೆ ಎಲ್ಲಾ ಇನ್ಸ್‌ಟಿಟ್ಯೂಷನ್‌ಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತದೆಂದು ಹೇಳಲಿಕ್ಕೆ ಸಾಧ್ಯವಿಲ್ಲ. Mushrooming of institutions ಆಗಿ ಇದೊಂದು ಕೆಳಮಟ್ಟಕ್ಕೆ ಯಾವುದೊಂದು ಅಕಾಡಮಿಕ್ ಎಕ್ಸ್‌ಲೆನ್ಸ್ ಇದೆ ಅದು ತೀರ ಕೆಳಮಟ್ಟಕ್ಕೆ ಬರಲಿಕ್ಕೆ ಕಾರಣವಾಗಿದೆ. ಅದರಲ್ಲಿಯೂ ಪೋಸ್ಟ್ ಗ್ರಾಜ್ಯುಯೇಟ್ ಕೋರ್ಸ್‌ಅನ್ನು ಕೊಡುವಾಗ ನಾವು ಹಳೆಯ ಕೋರ್ಸನ್ನು ಕೊಡಬಾರದು. ಹೊಸಹೊಸ ಕೋರ್ಸ್ ಕೊಡಬೇಕು. ಈ ಸಮಾಜಕ್ಕೆ ಅನುಕೂಲವಾಗುವಂತಹ ಆರ್ಥಿಕ ಮತ್ತು ಸಾಮಾಜಿಕದ ಹಿನ್ನೆಲೆಯಲ್ಲಿ ಈ ಹೊಸ ಕೋರ್ಸ್‌ಅನ್ನು ಕೊಡಬೇಕೆಂದು ಮಾಡಿದ್ದೇವೆ. ಮಂಡ್ಯದಲ್ಲಿಯೂ ಸಹ ಪೋಸ್ಟ್ ಗ್ರಾಜ್ಯುಯೇಟ್ ಸೆಂಟರ್ ಮಾಡಿದ್ದಾರೆ. ಬರೀ ಕನ್ನಡ ಮಾಡಬೇಕು, ಇಂಗ್ಲೀಷ್ ಮಾಡಿದರೆ ಪ್ರಯೋಜನವಿಲ್ಲ. ಮೈಸೂರಿನಲ್ಲಿ ಅದಕ್ಕಿಂತ ಚೆನ್ನಾಗಿ ಕಲಿಯುತ್ತಾರೆ. ಅದಕ್ಕಾಗಿ ಅಲ್ಲಿ ಶುಗರ್ ಟೆಕ್ನಾಲಜಿ ಇನ್ನು ಯಾವುದೋ ಒಳ್ಳೆಯ ಸಬ್ಜೆಕ್ಟ್ ಅನ್ನು ತನ್ನಿ ಎಂದು ಅವರಿಗೆ ಹೇಳಿದ್ದೇನೆ. ಅದೇ ರೀತಿಯಲ್ಲಿ ಹಾಸನದಲ್ಲಿಯೂ ಮಾಡುತ್ತಿದ್ದೇವೆ. ಆ ಏರಿಯಾಕ್ಕೆ ಸಂಬಂಧಪಟ್ಟಂತೆ ಕೋರ್ಸಸ್‌ಗಳನ್ನು ನಾವು ಮಾಡಬೇಕೆಂದು ಇದ್ದೇವೆ. ಅದೇ ರೀತಿಯಲ್ಲಿ ಕಾರವಾರದಲ್ಲಿ 1975ರಲ್ಲಿ ಸ್ಥಾಪನೆ ಮಾಡಿರುವ Marine Biology ಮಾತ್ರ ಡಿಪಾರ್ಟ್‌ಮೆಂಟ್ ಇದೆ. ಈಗ ನಾವು ಅಕ್ವಾಕಲ್ಚರ್ ಅಂತ ಹೊಸ ಸಬ್ಜೆಕ್ಟ್ ಅನ್ನು ಮಾಡಿದ್ದೇವೆ. ನೀರಿಗೆ ಸಂಬಂಧಪಟ್ಟ ಹಾಗೆ ಮೀನು, ಸಂಬಂಧಪಟ್ಟ ಕೋರ್ಸನ್ನು ಹೊಸದಾಗಿ ಮಾಡಬೇಕೆಂದು ಇದ್ದೇವೆ. ಅದರಲ್ಲಿ ಮೈಕ್ರೊ ಬಯಾಲಾಜಿ ಒಟ್ಟಿಗೆ, ಮೈಕ್ರೊ ಎಲೆಕ್ಟ್ರಾನಿಕ್ಸ್ ಮಾಡಬೇಕೆಂದು ನಾವು ಇದ್ದೇವೆ, ಈ ರೀತಿಯಲ್ಲಿ ಹೊಸಹೊಸ ರೀತಿಯಲ್ಲಿ ಮಾಡಿಕೊಂಡು ಸಮಾಜಕ್ಕೆ ನಮ್ಮ ಉಚ್ಚ ಶಿಕ್ಷಣದಿಂದ ಏನಾದರೂ ಸಹಾಯ ಆಗಬೇಕು, ಕೋಟ್ಯಾಂತರ ರೂಪಾಯಿಗಳನ್ನು ನಾವು ಇದಕ್ಕೆ ಖರ್ಚು ಮಾಡುತ್ತಿದ್ದೇವೆ. ಈ ಸಮಾಜಕ್ಕೆ ದೇಶಕ್ಕೆ ಉಚ್ಚ ಶಿಕ್ಷಣ ದೊರೆಯಬೇಕೆಂದು ಹಲವಾರು ಹೆಜ್ಜೆಯನ್ನು ನಾವು ಈ 3–4 ತಿಂಗಳುಗಳಲ್ಲಿ ತೆಗೆದುಕೊಂಡಿದ್ದೇವೆ. ಅದೇ ರೀತಿಯಲ್ಲಿ ಇದನ್ನೆಲ್ಲಾ ರೆಗ್ಯುಲರ್ ಮಾಡಲಿಕ್ಕೆ ನಮ್ಮಲ್ಲಿ 6ವಿಶ್ವವಿದ್ಯಾನಿಲಯಗಳು ಇವೆ. ಇನ್ನೊಂದು ಕನ್ನಡ ವಿಶ್ವವಿದ್ಯಾನಿಲಯ ಸೇರಿ 7 ವಿಶ್ವವಿದ್ಯಾನಿಲಯ ಇದೆ. ಅದಕ್ಕಾಗಿ ನಾವು State Council for Higher Education ಮಾಡಿಕೊಂಡು, ಬರುವ ಫಂಡ್ ಅನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಿಕೊಂಡು ಹೋಗಬೇಕು. ಯು.ಜಿ.ಸಿಯ ರೀತಿಯಲ್ಲಿ ನಮ್ಮದೆಯಾದ ಮಟ್ಟದಲ್ಲಿ ಯಾವ ಕಾಲೇಜುಗಳು, ಬೇಕಾದಷ್ಟು ಗೌರ್ನಮೆಂಟ್ ಕಾಲೇಜುಗಳು ಇವೆ. ಇದನ್ನೆಲ್ಲಾ ಸರಿಯಾಗಿ ಮಾಡಬೇಕೆಂದು ಹೇಳಿ ಈಗತಾನೆ ಒಂದು ಬಿಲ್ ಅನ್ನು ಮಾಡುತ್ತಿದ್ದೇವೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ವಿಶ್ವವಿದ್ಯಾನಿಲಯಗಳು ಚೆನ್ನಾಗಿ ಕೆಲಸ ಮಾಡುತ್ತವೆಯೋ ಇಲ್ಲವೋ ಅಥವಾ ವಿಶ್ವವಿದ್ಯಾನಿಲಯಗಳಲ್ಲಿ ಏನು ಬದಲಾವಣೆಯನ್ನು ಮಾಡಬೇಕೊ, administrative, academic or financial ರೀತಿಯಲ್ಲಿ ಯಾವುದೆಲ್ಲಾ ಬದಲಾವಣೆ ಮಾಡಬೇಕು ಅದನ್ನು ಮಾಡಲಿಕ್ಕೆ ಈಗ ತಾನೇ ಯೂನಿವರ್ಸಿಟಿ ರಿವ್ಯೂ ಕಮಿಷನ್ ಅಂತ ಮಾಡಿದ್ದೇವೆ. ಅವರು ಇನ್ನೊಂದು ಎರಡು ತಿಂಗಳಿಲ್ಲಿ ರಿಪೋರ್ಟ್‌ನ್ನು ಕೊಡಬೇಕು. ಆ ರಿಪೋರ್ಟ್‌ನ ರೆಕಮೆಂಡೇಷನ್ ಮೇಲೆ ಇದನ್ನು ಇಂಪ್ರೂವ್ ಮಾಡುವಂತಹ ಎಲ್ಲಾ ಕಾರ್ಯಗಳನ್ನು ಮಾಡುತ್ತೇವೆ ಅಂತ ನಾನು ಹೇಳಲಿಕ್ಕೆ ಬಯಸುತ್ತೇನೆ. ಅದೇ ರೀತಿ ಡಾ: ಶಿವರಾಮ ಕಾರಂತ್‌ರವರು ಇಡೀ ದೇಶದಲ್ಲಿ ಜ್ಞಾನಪೀಠ ಅವಾರ್ಡ್‌ನ್ನು ತೆಗೆದುಕೊಂಡ ದೊಡ್ಡ ಕನ್ನಡಿಗರು. ಅವರ ಬೇಕಾದಷ್ಟು ಪುಸ್ತಕಗಳು, ಲೇಖನಗಳು ಇವೆ, ಕೆಲವು ಪಬ್ಲಿಷ್ ಆಗಿದೆ; ಕೆಲವು ಪಬ್ಲಿಷ್ ಆಗಲಿಲ್ಲ. ಅದಕ್ಕಾಗಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ In the name of Dr. Shivarama Karanth ನಾವು ಒಂದು ಚೇರ್ ಮಾಡಬೇಕೆಂದು ಇದ್ದೇವೆ. ಅವರ ಪುಸ್ತಕದ ಮೇಲೆ ಅವರ ಲೇಖನದ ಮೇಲೆ ರಿಸರ್ಚ್ ಮಾಡಲಿಕ್ಕೆ ಈ ವರ್ಷದಿಂದ ನಾವು ಒಂದು ಚೇರ್ ಮಾಡಬೇಕೆಂದು ನಾವು ಯೋಚನೆ ಮಾಡಿದ್ದೇವೆ. ಅದೇ ರೀತಿಯಲ್ಲಿ ನಾವು ಯು.ಜಿ.ಸಿ ಸೆಂಟರ್ ಅನ್ನು ಮಾಡಬೇಕೆಂದು ಇದ್ದೇವೆ. ಸೌತ್ ಇಂಡಿಯಾಕ್ಕೆ ಯಾವುದೂ ಯು.ಜಿ.ಸಿ ಇಲ್ಲ. ಎಷ್ಟು ಹಣ ನಮಗೆ ಬರಬೇಕಾಗಿತ್ತೋ ಅದು ನಮಗೆ ಸರಿಯಾಗಿ ಬರುತ್ತಿಲ್ಲ. ಅದನ್ನು ಡೀಸೇಂಟ್ರಲೈಸ್ ಮಾಡಬೇಕು. ಬರೀ ದೆಹಲಿಯಲ್ಲಿ ಇದ್ದರೆ ಸಾಲದು. ಅವರು ಪ್ರೈವೇಟ್ ಕಾಲೇಜ್‌ಗೂ ಎಡೆಡ್ ಕಾಲೇಜಿಗೂ ಕೊಡುತ್ತಾರೆ. ಯೂನಿವರ್ಸಿಟಿಗೆಲ್ಲಾ ಹಣ ಬರುವಾಗ ಎಲ್ಲಾ ದೆಹಲಿಗೆ ಹೋಗಿ ಅಲ್ಲಿ ಕಾಲವನ್ನು ಕಳೆಯುವುದಕ್ಕೆ ಬದಲಾಗಿ ಬೆಂಗಳೂರಿನಲ್ಲಿ, ಕರ್ನಾಟಕದಲ್ಲಿ ಸೌತ ಇಂಡಿಯಕ್ಕೆ ಒಂದು ದೊಡ್ಡ ಸೆಂಟರ್ ಆಗಬೇಕೆಂದು ಒತ್ತಾಯಿಸುತ್ತಿದ್ದೇವೆ. ಮಾನ್ಯ ಅರ್ಜುನ್ ಸಿಂಗ್‌ರವರಿಗೆ ಒಂದು ಪತ್ರವನ್ನು ಸಹ ಬರೆದಿದ್ದೇನೆ.

3.20ಪಿಎಂ

ನಾನು ದೆಹಲಿಗೆ ಹೋದಾಗ ಈ ವಿಚಾರವನ್ನು ಅವರ ಜೊತೆಯಲ್ಲಿ ತೆಗೆದುಕೊಂಡು ಕರ್ನಾಟಕದಲ್ಲಿ ಯು.ಜಿ.ಸಿ. ಸೆಂಟರ್ ಆಗಲಿಕ್ಕೆ ನಾನು ಸಂಪೂರ್ಣವಾದ ಪ್ರಯತ್ನವನ್ನು ಮಾಡುತ್ತೇನೆ.

ಈಗ ಪುನಃ ಆನರ್ಸ್ ಕೋರ್ಸ್‌ನ್ನು ರಿವೈವ್ ಮಾಡಬೇಕೆಂದಿದ್ದೇವೆ. ಈ ರೀತಿ ಹಲವಾರು ಹೆಜ್ಜೆಗಳನ್ನು ಯುನಿವರ್ಸಿಟಿ ಲೆವಲ್‌ನಲ್ಲಿ ನಾವು ತೆಗೆದುಕೊಂಡಿದ್ದೇವೆ. ಟೆಕ್ನಿಕಲ್ ಅಥವಾ ಪ್ರೊಫೆಷನಲ್ ಕಾಲೇಜು ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಬಹಳಷ್ಟು ವಿಚಾರಗಳನ್ನು ಹೇಳಿದ್ದಾರೆ. ಹಿರಿಯ ಶಾಸಕರಾದ ಮಾನ್ಯ ಜಾಲಪ್ಪನವರು ಸುಪ್ರೀಮ್ ಕೋರ್ಟಿನ ನಳಿನಿ ಜೈನ್ ವರ್ಸಸ್ ಸ್ಟೇಟ್ ಆಫ್ ಕರ್ನಾಟಕದ ಬಗ್ಗೆ ಮತ್ತು ಯಾವ ರೀತಿ ಇಮ್‌ಪ್ರಾಕ್ಟಿಕಲ್ ಆಗುತ್ತದೆ, ಮತ್ತು ಪ್ರೈವೇಟ್ ಮ್ಯಾನೇಜ್‌ಮೆಂಟ್‌ಗೆ ತೊಂದರೆಯಾಗುತ್ತದೆ ಎನ್ನುವುದರ ಬಗ್ಗೆ ಹೇಳಿದ್ದೀರಿ. ಮತ್ತು ಜೀವರಾಜ್ ಆಳ್ವ ಮತ್ತು ಇತರ ಸದಸ್ಯರು ಈ ಡಿಸಿಷನ್ ಸೂಕ್ತವಾಗಿದೆ ಎಂದು ಹೇಳಿದ್ದಾರೆ. 1983–84ರಲ್ಲೇ ಈ ಕ್ಯಾಪಿಟೇಷನ್ ಫೀಯನ್ನು ಅಬಾಲಿಷ್ ಮಾಡಿದ್ದೇವೆ. ಈ ಡಿಸೀಷನ್‌ನಿಂದ capitation fee menace could be almost not only be reduced, but it can be eliminated. ಡಾ: ಜೀವರಾಜ್ ಸಹಾ ಈ ವಿಷಯವನ್ನು ಹೇಳಿದ್ದಾರೆ. ಸರ್ಕಾರದ ವತಿಯಿಂದ ಹೇಳುವುದಾದರೆ ನಾವು ಮೊದಲಿನಿಂದಲೂ ಸಹಾ ಯಾವ ಫುಲ್ ಬೆಂಚ್ ಸುಪ್ರೀಮ್ ಕೋರ್ಟ್‌ನವರು ಡಿಸಿಷನ್ ಕೊಟ್ಟ ಮೇಲೆ, government is not an aggrieved party: We will not plead on behalf of any aggrieved private management. It is none of our business. We don't

want to be a party to all the problems. ಇದನ್ನು ನಾವು ವಕಾಲತ್ ಮಾಡುವುದಿಲ್ಲ ಮತ್ತು ಯಾರು ಈ ಅಗ್ರೀವ್ಡ್ ಪಾರ್ಟಿ, ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಇನ್ನೊಂದು ಸಲ ಕೋರ್ಟ್‌ಗೆ ಹೋಗಿ ಇನ್ನೊಂದು ಡಿಸಿಷನ್ ಕೊಟ್ಟರೆ ಅದನ್ನು ಒಪ್ಪಿಕೊಂಡು ಅದರ ಪ್ರಕಾರ ನಡೆಯುತ್ತೇವೆ. ಸರ್ಕಾರ ಈಗ ಬಂದಿರುವ ತೀರ್ಪಿನ ಮೇಲೆ ರಿವ್ಯೂಗಾಗಲಿ ಅಥವಾ ಅಪೀಲ್ ಹಾಕಲು ಹೋಗುವುದಿಲ್ಲ ಎಂದು ಸ್ಪಷ್ಟವಾಗಿ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೇವೆ.

"...keeping in view õthe need to give due weightage to merit, my Govenment proposes to frame rules for admission to these institutions on the lines of the Judgement rendered by the Supreme Court recently.

ಸುಪ್ರೀಮ್ ಕೋರ್ಟ್ ಏನು ಗೈಡ್‌ಲೈನ್ಸ್ ಕೊಟ್ಟಿದ್ದಾರೆ ಅದರ ಪ್ರಕಾರ ಮಾಡುತ್ತೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೇವೆ. ಮತ್ತು ಪುನಃ ರಿವ್ಯೂಗೆ ಅಥವಾ ಅಪೀಲ್‌ಗೆ ಹೋಗುವುದು ನಮ್ಮ ಸರ್ಕಾರದ ಇಚ್ಛೆಯಲ್ಲ. ಆ ಡಿಸಿಷನ್ ಇಂಪ್ಲಿಮೆಂಟ್ ಮಾಡಬೇಕೆಂದು ರೂಲ್ಸ್ ಸಹಾ ನಾವು ಫ್ರೇಮ್ ಮಾಡಿದ್ದೇವೆ. ಮಾನ್ಯ ರಾಮಯ್ಯನವರು ಇದರಿಂದ ಷೆಡ್ಯೂಲ್ ಕ್ಯಾಸ್ಟ್, ಬ್ಯಾಕ್‌ವರ್ಡ್ ಕ್ಯಾಸ್ಟ್, ಅಥವಾ ಗ್ರಾಮಾಂತರ ರೈತರ ಮಕ್ಕಳಿಗೆ ತೊಂದರೆಯಾಗುತ್ತದೆ ಎಂದು ಹೇಳಿದರು. ಅದು ಖಂಡಿತ ಸರಿಯಲ್ಲ. ಕನ್ಸೆಷನಲ್ ಕ್ಲಾಸ್‌ಗೆ ಏನು ಕನ್ಸೆಷನ್ ಕೊಡುತ್ತಿದ್ದೇವೆ ಅದನ್ನು ಮುಂದುವರಿಸಬೇಕೆಂದು ಆ ಜಡ್ಜ್‌ಮೆಂಟ್‌ನಲ್ಲಿ ಹೇಳಿರುವ ಆಧಾರದ ಮೇಲೆ ರೂಲ್ ನಂಬರ್ 12 ರಲ್ಲಿ ಇದಕ್ಕಿಂತ ಹಿಂದೆ ಬ್ಯಾಕ್‌ವರ್ಡ್ ಕ್ಲಾಸ್‌ಗೆ, ಷೆಡ್ಯೂಲ್‌ಕ್ಯಾಸ್ಟ್‌ಗೆ ಏನು ಮೀಸಲಾತಿ ಕೊಡಬೇಕೆಂದು ಇತ್ತೋ ಅದೇ ರೀತಿ ಎಲ್ಲಾ ಕ್ಲಾಸಸ್ ಹಾಕಿಕೊಂಡು ಅವರಿಗೆ ಎಷ್ಟು ಸೇಫ್‌ಗಾರ್ಡ್ ಮಾಡುವುದಕ್ಕೆ ಆಗುತ್ತದೆಯೋ ಅದನ್ನು ಮಾಡಿದ್ದೇವೆ.

ಡಾ।। ಜೀವರಾಜ್ ಆಳ್ವ:- ಮಾನ್ಯ ರಾಮಯ್ಯನವರು ಬಹಳ ಪ್ರಾಮುಖ್ಯವಾದ ಪ್ರಶ್ನೆಯನ್ನು ಗ್ರಾಮಾಂತರ ಪ್ರದೇಶದ ವ್ಯಕ್ತಿಗಳ ಬಗ್ಗೆ ಎತ್ತಿದರು. ಅದಕ್ಕೆ ನಾನೂ ಧ್ವನಿಗೂಡಿಸಿದ್ದೆ. ವೈಟೇಜ್ ಅಡ್ಮಿಷನ್ ರೂಲ್ಸ್ ಮಾಡುವಾಗ ನೀವು ಕ್ರಮ ಕೈಗೊಳ್ಳಬೇಕು ಏಕೆಂದರೆ, You have kept it on the table of the House. To my knowledge it is on the table of the House. It is the property of the House. ಆದುದರಿಂದ ರಾಮಯ್ಯನವರು ಸೂಕ್ತವಾಗಿ ಹೇಳಿದ್ದಾರೆ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಎಕ್ಸ್‌ಟ್ರಾ ವೈಟೇಜ್ 20-30 ಪರ್‌ಸೆಂಟ್ ಎಂದು ನಿಗದಿ ಪಡಿಸಿದರೆ ಎಲ್ಲಾ ತೊಂದರೆಗಳು ನಿವಾರಣೆಯಾಗುತ್ತವೆ.

ಶ್ರೀ ಎಸ್.ಎಂ. ಯಾಹ್ಯಾ:- ಗ್ರಾಮಾಂತರ ಪ್ರದೇಶದ ಜನರಿಗೆ ಈ ರೀತಿ ನಾವು ಹೇಳಿದ್ದೇವೆ. ಕಳೆದ ವರ್ಷ ಏನು ಇತ್ತು ಅದೇ ಇದೆ.

" Karnataka students who have studied for not less than 10 full academic years between the 1 st standard and the qualifying examination in educational institutions situated in places in Karnataka having a population below 20,000 as per 1991 census....

ಕಳೆದ ವರ್ಷ 15ರಷ್ಟು ಇತ್ತು. ಈ ವರ್ಷವೂ ಶೇಕಡಾ 15ರಷ್ಟು ನಾವು ಸರ್ಕಾರಿ ಆದೇಶ ಮಾಡಿ ಕೊಡುತ್ತೇವೆ. ಅದೇ ರೀತಿಯಲ್ಲಿ "ಬಿ" ಸರ್ಟಿಫಿಕೇಟ್‌ನವರಿಗೆ ಕೊಟ್ಟಿದ್ದೇವೆ. ಬ್ಯಾಕ್‌ವರ್ಡ್‌ಕ್ಲಾಸ್‌ನವರಿಗೆ ಕೊಟ್ಟಿದ್ದೇವೆ. ಸ್ವಾತಂತ್ರ್ಯಯೋಧರ ಮಗ, ಮಗಳು ಅವರಿಗೆ ಕೊಟ್ಟಿದ್ದೇವೆ, ಪೊಲಿಟಿಕಲ್ ಸಫರರ್ಸ್‌ನವರಿಗೆ ಕೊಟ್ಟಿದ್ದೇವೆ. ಡಿಫೆನ್ಸ್ ಪರಸೋನೆಲ್, ಎಕ್ಸ್ ಸರ್ವಿಸ್‌ಮನ್‌ರವರ

ಮಕ್ಕಳಿಗೆ ಕೊಟ್ಟಿದ್ದೇವೆ, ಹಾಗೆಯೇ ಅಂಗವಿಕಲರಿಗೂ ಕೊಟ್ಟಿದ್ದೇವೆ. ಇದಲ್ಲದೆ ಆ್ಯಂಗ್ಲೋ ಇಂಡಿಯನ್ ಕಮ್ಯೂನಿಟಿ ಹಾಗೂ ಪಾರ್ಸಿ ಕಮ್ಯೂನಿಟಿಯವರಿಗೂ ಕೊಟ್ಟಿದ್ದೇವೆ. ಎಲ್ಲಾರಿಗೂ ನ್ಯಾಯ ಸಿಗುವಂಥ ರೀತಿಯಲ್ಲಿ ನಾವು ಮಾಡಿದ್ದೇವೆ. Seats should be reserved for Scheduled Castes, Scheduled Tribes and Backward Classes under free seats in the following manner. ಅವರಿಗೂ ನಾವು ಈ ಸೇಫ್‌ಗಾರ್ಡ್ ಅನ್ನು ಮಾಡಿ ಕೊಟ್ಟಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಫ್ರೀಡಂ ಫೈಟರ್ಸ್ ಸನ್ಸ್ ಆ್ಯಂಡ್ ಡಾಟರ್ಸ್‌ಗೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಅದನ್ನು ಮೊಮ್ಮಕ್ಕಳಿಗೂ ಕೊಡುವ ರೀತಿಯಲ್ಲಿ ತಿದ್ದುಪಡಿ ಮಾಡಬೇಕು. ಏತಕ್ಕೆಂದರೆ ಅನೇಕ ಜನರು ವಯೋವೃದ್ಧವಾಗಿ ಹೋಗಿಬಿಟ್ಟಿದ್ದಾರೆ. ಆದ್ದರಿಂದ ಅವರ ಮಕ್ಕಳಿಗಿಲ್ಲದಿದ್ದರೆ ಅವರ ಮೊಮ್ಮಕ್ಕಳಿಗಾದರೂ ಇದು ಸಿಗುವ ರೀತಿಯಲ್ಲಿ ತಿದ್ದುಪಡಿ ಮಾಡಬೇಕು.

ಶ್ರೀ ಎಸ್.ಎಂ. ಯಾಹ್ಯಾ:– ಅದನ್ನು ವಿಚಾರ ಮಾಡುತ್ತೇವೆ. ನೀವು ಮಾಡಲು ಹೇಳುವಾಗ ನನಗೆ ಬಹಳ ಗಾಬರಿಯಾಯಿತು. ಆದರೆ ತಾವು ಏನು ಹೇಳಿದ್ದೀರಿ ಸ್ವಾತಂತ್ರ್ಯ ಯೋಧರಿಗೆ ಮಕ್ಕಳಿಲ್ಲದಿದ್ದರೆ ಮೊಮ್ಮಕ್ಕಳಿಗೆ ಅಂತ ಒಂದು ಶಬ್ದವನ್ನು ಕಳೆದ ಸಲ ಇದ್ದರೆ ಈ ಸಲವೂ ಸಹ ಹಾಕಲು ಕ್ರಮ ಕೈಗೊಳ್ಳುತ್ತೇವೆ. ಇದಕ್ಕೆ ಎಲ್ಲಾ ಸೇಫ್‌ಗಾರ್ಡ್‌ಗಳನ್ನು ನಾವು ಮಾಡುತ್ತೇವೆ. ಇದರಲ್ಲಿ ಯಾರಿಗೂ ಸಂಶಯ ಇರಬಾರದು; ಸರ್ಕಾರದ ವತಿಯಿಂದ ಸುಪ್ರೀಮ್ ಕೋರ್ಟ್ ಆದೇಶ ಯಾವುದು ಇದೆ ಆ ಆದೇಶವನ್ನು ಪಾಲನೆ ಮಾಡುತ್ತೇವೆ. ಇನ್ನೂ ಒಂದು ಆದೇಶವನ್ನು ಸುಪ್ರೀಮ್ ಕೋರ್ಟ್ ಕೊಟ್ಟರೆ ಅದನ್ನು ಕಾರ್ಯಗತ ಮಾಡುತ್ತೇವೆ.

We don't want contempt of the court.

ಸುಪ್ರೀಮ್ ಕೋರ್ಟಿನ ಆದೇಶಗಳನ್ನು ಉಲ್ಲಂಘನೆ ಮಾಡಲು ನಾವು ಹೋಗುವುದಿಲ್ಲ. ನಾವು ಮಾಡಿರುವ ಕಾರ್ಯಕ್ರಮಗಳಿಗೆ ನೀವು ಮೆಚ್ಚುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಕ್ಯಾಪಿಟೇಷನ್ ಫೀಸ್ ಮೆನೆಸ್ ಬಗ್ಗೆ ಡಾ. ಆಳ್ವರವರು ಹೇಳಿದ ಹಾಗೆ ಬಹಳ ವರ್ಷದಿಂದ ಆಗಿರಲಿಲ್ಲ.

The Supreme Court in one way really it has helped. Of course, it has taken away the Private initiative, no doubt. ಮತ್ತು ಜಾಲಪ್ಪನವರ ಆರ್ಗ್ಯುಮೆಂಟ್ ಈ ಫೋರಂಗೆ ಸೀಮಿತ ಆಗುತ್ತಿಲ್ಲ. ಸುಪ್ರೀಮ್ ಕೋರ್ಟಿನ ವಿಚಾರದಲ್ಲಿ ವಾದ ವಿವಾದ ಮಾಡಿದ್ದಾರೆ. ಅದು ಯಾವ ರೀತಿಯಲ್ಲೂ ಸರಿ ಇಲ್ಲ ಎಂದು ಹೇಳಿದ್ದಾರೆ. ಆದರೆ ಈ ಸರ್ಕಾರದ ನಿಲುವಿನ ಬಗ್ಗೆ ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ ಈ ಅಸೆಂಬ್ಲಿಯಲ್ಲಿ ಸರ್ಕಾರ ತನ್ನ ನೀತಿಯನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿದೆ. ಆ ಪ್ರಕಾರವಾಗಿ ನಾವು ನಡೆದುಕೊಂಡು ಹೋಗಬೇಕಾಗಿದೆ.

We cannot plead on behalf of somebody else. ಆದ್ದರಿಂದ ನಾವು ರಿವ್ಯೂಗಾಗಲೀ, ಅಪೀಲ್‌ಗೆ ಹೋಗತಕ್ಕಂಥದಕ್ಕಾಗಲಿ ಯಾವುದೂ ಅವಶ್ಯಕತೆ ಇಲ್ಲ ಎಂದು ಹೇಳಲಿಕ್ಕೆ ಬಯಸುತ್ತೇನೆ. ಅದೇ ರೀತಿಯಲ್ಲಿ ಟೆಕ್ನಿಕಲ್ ಎಜುಕೇಷನ್‌ನಲ್ಲಿ ನಾವು ಬಹಳಷ್ಟು ಸುಧಾರಣೆ ಮಾಡಬೇಕು ಅಂತ ಇದ್ದೇವೆ. ಈಗ ತಾನೇ ವರ್ಲ್ಡ್ ಬ್ಯಾಂಕ್‌ನಿಂದ 50 ಕೋಟಿ ರೂ. ನಮ್ಮ ಹತ್ತಿರ ಇದೆ. ಇದರಲ್ಲಿ ಇಲ್ಲಿಯವರೆಗೆ 7 ಕೋಟಿ ರೂ.ಗಳನ್ನು ನಾವು ಖರ್ಚು ಮಾಡಿದ್ದೇವೆ. ಇಲ್ಲಿ ಮಾನ್ಯ ಈಶ್ವರಪ್ಪನವರು ಇಲ್ಲ. ಯಾವಾಗಲೂ ವುಮನ್ ಪಾಲಿಟೆಕ್‌ನಿಕ್ ಶಿವಮೊಗ್ಗದಲ್ಲಿ ಆಗಬೇಕು ಎಂದು ಹೇಳುತ್ತಿದ್ದರು. ಡಿ.ಸಿ.ಗೆ ಹೇಳಿ ಲ್ಯಾಂಡ್ ಪರ್ಚೇಸ್ ಮಾಡಿ 3 ಕೋಟಿ ರೂ.ಗಳಷ್ಟು ನಾವು ಖರ್ಚು ಮಾಡಿ ಒಳ್ಳೆಯ ಪಾಲಿಟೆಕ್ನಿಕ್ ಬಿಲ್ಡಿಂಗ್‌ಅನ್ನು ಕಟ್ಟಿದ್ದೇವೆ. ಎಕ್ವಿಪ್‌ಮೆಂಟ್ಸ್‌ನ್ನು ನಾವು ಕೊಡುತ್ತೇವೆ ಎಂದು

ಹೇಳಬಯಸಲಿಚ್ಛಿಸುತ್ತೇನೆ. ಅದೇ ರೀತಿಯಲ್ಲಿ ಹಾಸನದಲ್ಲಿ ಪಾಲಿಟೆಕ್ನಿಕ್ ಏನು ಇದೆ ಅದರ ಬಗ್ಗೆ ಕೂಡ ಹೇಳುತ್ತೇನೆ. ಶ್ರೀ ಹನುಮೇಗೌಡರು ಇಲ್ಲಿ ಇದ್ದಂತೆ ಕಾಣುವುದಿಲ್ಲ,

ಶ್ರೀ ಹೆಚ್. ಏಕಾಂತಯ್ಯ:- ನಾನು ಹೇಳುತ್ತಿರುವುದು ಒಂದು ಸೀಮಿತ ಜಿಲ್ಲೆಗಲ್ಲ. ಇಡೀ ಕರ್ನಾಟಕ ರಾಜ್ಯಕ್ಕೆ ಇಷ್ಟನ್ನು ತಾವು ಮಂಜೂರು ಮಾಡಿದ್ದೀರಿ. ಆ ಬಗ್ಗೆ ಚಿತ್ರದುರ್ಗ ಅಥವಾ ನಗರಕ್ಕೆ ಒಂದು ಮಾಡಿದ್ದೀರಿ. ಆದರೆ ಇಲ್ಲಿಯವರೆಗೂ ಸಹಾ ಭೂಮಿಯನ್ನು ಕೊಡಲಿಕ್ಕೆ ಆಗಿಲ್ಲ. ದಯವಿಟ್ಟು ಇದರ ಬಗ್ಗೆಯೂ ಕೂಡ ಹೇಳಿ ಎಂದು ಕೇಳಿದೆ.

ಶ್ರೀ ಎಸ್.ಎಂ. ಯಾಹ್ಯಾ:- ಹಾಸನದಲ್ಲಿಯೂ ಸಹ ಈವರೆಗೆ 30 ಲಕ್ಷ ನಾವು ಖರ್ಚು ಮಾಡಿದ್ದೇವೆ. ಇನ್ನೂ ಒಳ್ಳೆಯ ಎಕ್ವಿಪ್‌ಮೆಂಟ್ಸ್ ಮಾಡಬೇಕು, ಒಳ್ಳೆಯ ಬಿಲ್ಡಿಂಗ್ ಮಾಡಬೇಕು, ಹಾಸನ್ ಪಾಲಿಟೆಕ್ನಿಕ್‌ನ್ನು ಚೆನ್ನಾಗಿ ಡೆವಲಪ್ ಮಾಡಬೇಕು ಎಂದು ಹೇಳಿ ಈ ವರ್ಷ ಸಹಾ 60 ಲಕ್ಷ ರೂಪಾಯಿ ಖರ್ಚುಮಾಡುತ್ತೇವೆ. ಎರಡು ಮೂರು ವರ್ಷಗಳಲ್ಲಿ ನಾವು ಎರಡುಕೋಟಿ ರೂಪಾಯಿವರೆಗೆ ಅಲ್ಲಿ ಖರ್ಚು ಮಾಡಬೇಕು ಎಂದು ಇದ್ದೇವೆ. ಅಲ್ಲಿ ಈ ರೀತಿ ಅವರಿಗೆ ಎ.ಐ.ಟಿ.ಸಿ ಅದು ಪರ್ಮಿಷನ್ ಸಹಬೇಕು. ಎ.ಐ.ಸಿ.ಟಿ. ಪರ್ಮಿಷನ್ ಬಂದ ಮೇಲೆ ಇನ್ನೂ ಜೋರಾಗಿ ಅದನ್ನು ನಾವು ಇಂಪ್ರೂವ್‌ಮೆಂಟ್ ಮಾಡುತ್ತೇವೆ. ಎಂದು ಹೇಳುವುದಕ್ಕೆ ಬಯಸುತ್ತೇನೆ. ಇನ್ನೊಂದು ಒಳ್ಳೆಯ ವಿಚಾರ ಹೇಳುವುದಾದರೆ ನಾವು ಮೊದಲನೆಯಾದಾಗಿ ಈ ವರ್ಷದಿಂದಲೇ ಪಾಲಿಟೆಕ್ನಿಕ್ ಫಾರ್ ಫಿಸಿಕಲೀ ಹ್ಯಾಂಡಿಕ್ಯಾಪ್ಡ್ ಅಟ್ ಎಸ್‌ಜೆಸಿಇ ಕ್ಯಾಂಪಸ್ ಮೈಸೂರಿನಲ್ಲಿ ವರ್ಲ್ಡ್ ಬ್ಯಾಂಕ್‌ನಿಂದಲೇ ಮಾಡಬೇಕು ಎಂದು ಇದ್ದೇವೆ. ಅದನ್ನು ಈ ವರ್ಷ ಪ್ರಾರಂಭ ಮಾಡುತ್ತೇವೆ. ಅದರಲ್ಲಿ ೫೦ ಪರ್ಸೆಂಟ್ ಕನ್ನಡಿಗರಿಗೆ ಅಂದರೆ ಕರ್ನಾಟಕದವರಿಗೆ ಕೊಡುತ್ತೇವೆ. ಇನ್ನೊಂದು 50 ಪರ್‌ಸೆಂಟ್ ಅಲ್ ಇಂಡಿಯಾ ಪ್ರಾಜೆಕ್ಟ್ ಆಗಿ ಪಾಲಿಟೆಕ್ನಿಕ್ ಫಾರ್ ಫಿಸಿಕಲಿ ಹ್ಯಾಂಡಿಕ್ಯಾಪ್ಡ್ ಅಟ್ ಮೈಸೂರಿನಲ್ಲಿ ನಾವು ಮಾಡಬೇಕು ಎಂದು ನಾವು ತೀರ್ಮಾನ ತೆಗೆದುಕೊಂಡು ಈ ವರ್ಷವೇ ಅದನ್ನು 93-94ರಲ್ಲಿ ನಾವು ಪ್ರಾರಂಭ ಮಾಡುತ್ತೇವೆ. ನಂತರ ಕೆನಡ ಇಂಡಿಯಾ ಇಂಟರ್‌ನ್ಯಾಷನ್ ಕೋ ಆಪರೇಷನ್ ಪ್ರಾಜೆಕ್ಟ್ ಅದು ಕರ್ನಾಟಕ ಸೇರಿ ತಮಿಳುನಾಡು ಮತ್ತು ಕೇರಳ ಇಂಡಿಯಾದಲ್ಲಿ ಮೂರು ರಾಜ್ಯಕ್ಕೆ ಟೀಚರ್ಸ್‌ರನ್ನು ಟ್ರೈನಿಂಗ್ ಮಾಡುವುದು ಮತ್ತು ಎಲ್ಲಾ ಇಂಪ್ರೂವ್‌ಮೆಂಟ್ ಮಾಡುವಂಥ ಹಂಡ್ರೆಡ್ ಪರ್‌ಸೆಂಟ್ ಟ್ರೈನ್ಡ್ ಮಾಡಿ ಕೊಡುತ್ತಾರೆ ಕೆನಡಾ ಸರ್ಕಾರದವರು ಇದಕ್ಕೆ ಎಲ್ಲಾ ಹಣವನ್ನು ಕೊಡುತ್ತಾರೆ. ಅದಕ್ಕಾಗಿ ಇದು ಒಂದು ಬಹಳ ಪ್ರಾಮುಖ್ಯವಾಗಿದೆ. ಕರ್ನಾಟಕದಲ್ಲಿ ನಾಲ್ಕು ಕಡೆ ನಾವು ಇದನ್ನು ಮಾಡುತ್ತಿದ್ದೇವೆ. ಕೆನಡ ಇಂಡಿಯಾ ಇಂಟರ್ ನ್ಯಾಷನಲ್ ಕೋ-ಆಪರೇಷನ್ ಪ್ರಾಜೆಕ್ಟ್ ಅವರ ಮುಖಾಂತರ ಅವರ ಒಂದು ಧನ ಸಹಾಯದಿಂದ ವಿಮೆನ್ ಗೌರ್ನಮೆಂಟ್ ಪಾಲಿಟೆಕ್ನಿಕ್, ಬೆಂಗಳೂರು, ಎಂ.ಇ.ಐ. ಗೌರ್ನಮೆಂಟ್ ಪಾಲಿಟೆಕ್ನಿಕ್, ದಟ್ ಈಸ್ ಏಡೆಡ್, ಬೆಂಗಳೂರು, ಸಿ.ಪಿ.ಸಿ ಮೈಸೂರು ಮತ್ತು ಕೆ.ಪಿ.ಸಿ ಮಂಗಳೂರು, ಈ ನಾಲ್ಕು ಪಾಲಿಟೆಕ್ನಿಕ್‌ಗಳನ್ನು ನಾವು ಕರ್ನಾಟಕದಲ್ಲಿ ತೆಗೆದುಕೊಂಡು ಇದನ್ನು ಚೆನ್ನಾಗಿ ಉತ್ತಮ ರೀತಿಯಲ್ಲಿ ನಮ್ಮ ಇನ್ಸ್‌ಟ್ರಕ್ಟರ್‌ಗಳಿಗೆ ಟ್ರೈನಿಂಗ್ ಕೊಡಬೇಕು ಎಂದು ಹೇಳಿ ಮಾಡಿದ್ದೇವೆ. ಈ ರೀತಿ ಒಂದು ವಿಚಾರವನ್ನು ಹೇಳುವುದಾದರೆ ಟೆಕ್ನಿಕಲ್ ಎಜುಕೇಷನ್‌ನಲ್ಲೂ ಸಹ ನಾವು ಹಲವಾರು ಸುಧಾರಣೆಗಳನ್ನು ಮಾಡುವುದಕ್ಕೆ ಬಯಸಿದ್ದೇವೆ. ಇದೇ ರೀತಿಯಲ್ಲಿ ಕೊಲಿಜಿಯೇಟ್ ಎಜುಕೇಷನ್ ಯಾವುದು ಇದೆ, ಅದರಲ್ಲಿ ಎಲ್ಲೆಲ್ಲಿ ಏಡೆಡ್ ಕಾಲೇಜ್‌ನಲ್ಲಿ ಸರ್‌ಪ್ಲಸ್ ಸ್ಟಾಫ್‌ಗಳು ಇದೆ, ಅವುಗಳನ್ನು ಪತ್ತೆ ಹಚ್ಚಿದ್ದೇವೆ. ಬೇಕಾದಷ್ಟು ಕಡೆ ಯಾವುದೋ ರೀತಿಯಲ್ಲಿ ಸರ್ಕಾರದ ಹಣ ತೆಗೆದುಕೊಂಡು ಹೋದ ಟೀಚರ್ಸ್‌ಗಳು ನೂರಕ್ಕಿಂತಲೂ ಹೆಚ್ಚು ಸ್ಟಾಫ್ ನಮಗೆ ಸಿಕ್ಕಿದ್ದಾರೆ. ಈ ರೀತಿ ಒಂದು ಸ್ಕ್ವಾಡನ್ನು ಮಾಡಿ ಇವರು ಎಲ್ಲಾ ಕಾಲೇಜುಗಳಿಗೆ ಹೋಗಿ ಅಲ್ಲಿ ಯಾವ ರೀತಿಯಲ್ಲಿ ನಡೆದುಕೊಂಡು ಹೋಗುತ್ತಿದೆ. ಯಾವ ರೀತಿಯಲ್ಲಿ ಸರ್ಕಾರದ ಹಣ ಕಾನೂನೂ ಪ್ರಕಾರ ಉಪಯೋಗಿಸದೆ ಹೆಚ್ಚು ಹೆಚ್ಚು ಟೀಚರ್ಸ್‌ಗಳನ್ನು ತೆಗೆದುಕೊಂಡು ಸರ್ಕಾರದ

ಹಣ ಹಾಳಾಗುತ್ತಿದೆ, ಅದನ್ನೂ ಸಹ ನಾವು ತಡೆಗಟ್ಟುವಂಥ ಹಲವಾರು ಕಾರ್ಯಗಳನ್ನು ಸಹ ಮಾಡಿದ್ದೇವೆ. ಈ ರೀತಿಯಲ್ಲಿ ಈ ಕೊಲಿಜಿಯೇಟ್ ಎಜುಕೇಷನ್‌ನಲ್ಲಿ ನಮ್ಮ ತತ್ವ ಏನು ಇದೆ ಎಂದರೆ ಯಾವುದೊಂದು ಅಪ್ರೂವ್ಡ್ ಪೋಸ್ಟ್ ಇದೆ, ಆ ಎಲ್ಲಾ ಅಪ್ರೂವ್ಡ್ ಪೋಸ್ಟ್‌ಅನ್ನು ಫಿಲಪ್ ಮಾಡಬೇಕು. ಈ ಅಕಾಡೆಮಿಕ್ ಇಯರ್ ಮುಂಚಿತವಾಗಿ 628 ಅಪ್ರೂವ್ಡ್ ಪೋಸ್ಟ್ ಇದೆ. 628 ಅಪ್ರೂವ್ಡ್ ಪೋಸ್ಟ್‌ಅನ್ನು ಫಿಲಪ್ ಮಾಡುವಾಗ ಮಾನ್ಯ ಪೂಜಾರ್‌ರವರು ಹೇಳಿದ ವಿಚಾರವನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಂಡು ಈ ಪಾರ್ಟ್ ಟೈಂ ಲೆಕ್ಚರರ್ಸ್ ಯಾವುದು ಒಂದು ಹುದ್ದೆಗಳು ಇದೆ, ಅದು ಆಗದ ಹಾಗೆ ಕ್ರಮಕೈಗೊಳ್ಳುತ್ತೇವೆ. ಪಾರ್ಟ್ ಟೈಮ್ ಇನ್ನು ಮುಂದೆ ಇರಲೇಬಾರದು ಕರ್ನಾಟಕದಲ್ಲಿ.

ಏಕೆ ಪಾರ್ಟ್ ಟೈಮ್ ಕೆಲಸ ಮಾಡುತ್ತಾರೆ ? ಅಪ್ರೂವ್ಡ್ ಪೋಸ್ಟ್ ಅಲ್ಲಿ ಇದೆ. ಒಂದು ಅಪ್ರೂವ್ಡ್ ಪೋಸ್ಟ್ ಇದ್ದರೂ ಇಬ್ಬರು ಕೆಲಸ ಮಾಡುತ್ತಿದ್ದಾರೆ. ಅದಕ್ಕಾಗಿ ನಾವು ಅಪ್ರೂವ್ಡ್ ಪೋಸ್ಟನ್ನು ಎಲ್ಲಾ ಕಡೆ ಫಿಲಪ್ ಆಪ್ ಮಾಡಿಕೊಂಡು ಯಾರಿಗೆ ಪಾರ್ಟ್ ಟೈಮ್‌ನಲ್ಲಿ ಎಕ್ಸ್‌ಪೀರಿಯನ್ಸ ಇರುತ್ತದೆ.ಅವರಿಗಾಗಿ ಈಗಾಗಲೇ ನಾವು ರೂಲ್ಸ್‌ನ್ನು ಮಾಡಿ ಆಗಿದೆ. ಅವರಿಗೆ ವೈಟೇಜ್, ಏಜ್ ರಿಲಾಕ್ಸೇಷನ್ ಮಾಡಿ ಆಗಿದೆ ಆಮೇಲೆ ಒಂದುವರ್ಷದ ಎಕ್ಸ್‌ಪೀರಿಯನ್ಸ್ ಇದ್ದರೆ ಅರ್ಧ ಮಾರ್ಕ್ ಅದನ್ನು ನಾವು ಕೊಟ್ಟು ಸ್ವಲ್ಪ ವೈಟೇಜ್ ಕೊಟ್ಟು ಇದರಲ್ಲಿ ಅವರಿಗೆ ಎಷ್ಟು ಸಹಾಯ ಮಾಡುವುದಕ್ಕೆ ಆಗುತ್ತದೆ ಅಷ್ಟು ಮಾಡುತ್ತೇವೆ. ಇನ್ನು ಮುಂದೆ ಪಾರ್ಟ್ ಟೈಮ್ ಎಕ್ಸೆಪ್ಟ್ ಲಾ ಮತ್ತು ಕೆಲವು ಸಬ್ಜೆಕ್ಟ್ಸ್ ಬಿಟ್ಟು ಇರಬಾರದು, ಎಲ್ಲಾ ಪೋಸ್ಟ್‌ಗಳನ್ನು ನಾವು ಈ ಅಕಾಡೆಮಿಕ್ ಇಯರ್‌ಗೆ ಮುಂಚಿತವಾಗಿ ಫಿಲಅಪ್ ಮಾಡುತ್ತೇವೆ. ಇದೇ ರೀತಿಯಲ್ಲಿ ಈ ಕಾಲೇಜುಗಳಿಗೆ ಬಿಲ್ಡಿಂಗ್ ಆಗಬೇಕೆಂದು ಹೇಳಿದೆ. ಇಲ್ಲಿ ಸ್ವಲ್ಪ ತೊಂದರೆ ಆಗಿದೆ. ಕಳೆದ ವರ್ಷ ಬರೀ ಒಂದು ಕೋಟಿ ಅರವತ್ತೆರಡು ಲಕ್ಷ ರೂಪಾಯಿ ಇದಕ್ಕಾಗಿ ಇತ್ತು. ಈಗ ಎರಡು ಕೋಟಿ 20 ಲಕ್ಷ ರೂಪಾಯಿ ಆಗಿದೆ. ಆದರೆ ಇದು ಯಾವುದಕ್ಕೂ ಸಾಲದು. ಈ ಕಾರಣದಿಂದ ಕೆಲವು ಮಾತ್ರ ಈ ವಿಚಾರದಲ್ಲಿ ಹೀಗೆ ಆಗುತ್ತಿದೆ. ನಮಗೆ ಹೆಚ್ಚು ಪ್ರಿಸ್ಟೀಜಿಯಸ್ ಓಲ್ಡ್ ಸರ್ಕಾರಿ ಕಾಲೇಜುಗಳು ಇವೆ. ಅಲ್ಲಿ ಹೆಚ್ಚಾಗಿ ಷೆಡ್ಯೂಲ್ಡ್ ಕಾಸ್ಟ್‌ನವರು, ಮೈನಾರಿಟೀಸ್ ಅವರು ಬರುತ್ತಾರೆ. ಅಲ್ಲಿ ಕ್ಯಾಪಿಟೇಷನ್ ಫೀ ಇಲ್ಲ. ಬೇರೆ ಕಾಲೇಜಿನಲ್ಲಿ ಕ್ಯಾಪಿಟೇಷನ್ ಫೀ ಕೊಟ್ಟು ಹೋಗುತ್ತಾರೆ. ಆದರೆ ಗವರ್ನಮೆಂಟ್ ಕಾಲೇಜಿನಲ್ಲಿ ತೆಗೆದುಕೊಳ್ಳುವುದಿಲ್ಲ. ಹಳೆಯ ಕಾಲೇಜು, ಬಹಳ ಪ್ರಿಸ್ಟೀಜಿಯಸ್ ಕಾಲೇಜ್ ಅದನ್ನು ಬಹಳ ಚೆನ್ನಾಗಿ ಮಾಡಿಕೊಂಡು ಹೆಚ್ಚು ಪೋಸ್ಟ್‌ಗಳನ್ನು ಕೊಟ್ಟರೆ ಬಡವರಿಗೆ ಹೆಚ್ಚು ಅನುಕೂಲವಾಗುತ್ತದೆ. ಇನ್ನೂ ಕೆಲವು ಪ್ರೆಸ್ಟೀಜಿಯಸ್ ಕಾಲೇಜ್‌ಗಳು ಬೆಂಗಳೂರಿನಲ್ಲಿ ಇವೆ. ಅದರಲ್ಲೂ ನಮ್ಮ ಬೆಂಗಳೂರಿನ ಮಹಾರಾಣಿ ಸೈನ್ಸ್ ಕಾಲೇಜ್, ಅದಕ್ಕೆ ನಾವು ಈ ವರ್ಷವೇ ಒಂದು ಕಟ್ಟಡ ಬೇಕು ಎಂದು ಹೇಳಿದ್ದಾರೆ. ಅವರಿಗೆ ಆರು ಲಕ್ಷ ನಾವು ಕೊಟ್ಟರೆ ಆರು ಲಕ್ಷ ಯುಜಿಸಿ ಅವರು ಕೊಡುತ್ತಾರೆ. ಅದೇ ರೀತಿಯಲ್ಲಿ ಬೆಂಗಳೂರಿನ ಪ್ರಾಮುಖ್ಯವಾದ ಹೋಮ್ ಸೈನ್ಸ್ ಕಾಲೇಜ್ ಇದೆ. ಅಲ್ಲಿಯೂ ಸಹ ಬಡ ಹೆಣ್ಣು ಮಕ್ಕಳು ವಿದ್ಯೆಗಾಗಿ ಬರುತ್ತಿದ್ದಾರೆ. ಅಲ್ಲಿಯೂ ಸಹ ಅನುಕೂಲಗಳು ಬಹಳ ಕಡಿಮೆ ಇದೆ. ಅವರಿಗೆ ಒಂದು ಅಲ್ಲಿ ಒಂದು 75 ಲಕ್ಷ ರೂಪಾಯಿಯ ಮಾಸ್ಟರ್ ಪ್ಲಾನ್ ಮಾಡಿ ಒಂದು ವಿಂಗ್ 12 ಲಕ್ಷದ್ದು ಈ ಸಲ ಕಂಪ್ಲೀಟ್ ಮಾಡಬೇಕೆಂದು ಇದ್ದೇವೆ. ಈ ರೀತಿ ಇಂತಹ ಸರ್ಕಾರಿ ಹಳೆಯ ಕಾಲೇಜು ಎಲ್ಲೆಲ್ಲಿ ಇದೆ, ಅವುಗಳನ್ನು ಬಹಳ ಚೆನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ಸ್ವಲ್ಪ ಹಣವನ್ನು ಖರ್ಚುಮಾಡುವುದಕ್ಕೆ ನಿರ್ಧರಿಸಿದ್ದೇವೆ. ಅದೇ ರೀತಿಯಲ್ಲಿ ಬಹಳ ಸುಪ್ರಸಿದ್ಧವಾದ ವಿಶ್ವೇಶ್ವರಯ್ಯ ಯೂನಿವರ್ಸಿಟಿ ಕಾಲೇಜ್. ಅದು ಬಹಳ ಹಳೆಯದು. ಅದು 75 ವರ್ಷಕ್ಕಿಂತ ಹಿಂದೆ ಆಗಿದೆ. ಆದರೆ ಆ ಕಾಲೇಜಿನಲ್ಲಿ ಯಾವುದೇ ಸರಿಯಾದ ಬಿಲ್ಡಿಂಗ್ಸ್ ಇಲ್ಲ; ಅನುಕೂಲತೆಗಳು ಇಲ್ಲ. ಅಲ್ಲಿ ಫಸ್ಟ್ ಇಯರ್ ಸಿವಿಲ್, ಮೆಕಾನಿಕಲ್ ಎಲೆಕ್ಟ್ರಾನಿಕ್ಸ್, ಹಾಗೂ ಕಂಪ್ಯೂಟರ್ ಕೋರ್ಸ್‌ಗಳು ಇವೆ. ಅಲ್ಲಿ

ಫಸ್ಟ್ ಇಯರ್‌ನಿಂದ ಕಂಪ್ಯೂಟರ್ ಸೈನ್ಸ್ ಕಲಿಸಬೇಕಾಗಿರುತ್ತದೆ. ಅದಕ್ಕಾಗಿ 75ಲಕ್ಷ ರೂಪಾಯಿಗಳನ್ನು ಬೇಕು ಎಂದು ಹೇಳಿದ್ದಾರೆ. ಅದಕ್ಕಾಗಿ ನಾವು ಒಂದು ಯೋಚನೆ ಮಾಡಿದ್ದೇವೆ. ಒಂದು ಕಡೆ ಯೂನಿವರ್ಸಿಟಿಯಲ್ಲಿ ಎಕ್ಸಾಮಿನೇಷನ್ .ರಿಸಲ್ಟ್ ಬರುವಾಗ ಡಿಲೇ ಆಗುತ್ತಿದೆ. ಅದರಲ್ಲಿ ಬೇಕಾದಷ್ಟು ಇರ್ರೆಗ್ಯುಲಾರಿಟೀಸ್ ಆಗುತ್ತದೆ. ಅದಕ್ಕಾಗಿ ಒಂದು ಕಾಂಪ್ರಹೆನ್ಸೀವ್ ಪ್ಲಾನ್ ಮಾಡಿಕೊಂಡು ನಾವು ಈ ನಮ್ಮ ಯೂನಿರ್ಸಿಟಿ ಕಾಲೇಜ್ ಆಫ್ ಇಂಜಿನಿಯರಿಂಗ್‌ಗೆ ಮತ್ತು ಯೂನಿವರ್ಸಿಟಿ ರಿಸಲ್ಟ್ ಡಿಲೇ ಆಗಬಾರದು ಎಂಬ ಉದ್ದೇಶದಿಂದ ಒಂದು ಕೋಟಿ ರೂಪಾಯಿಯನ್ನು ಇದಕ್ಕಾಗಿ ಖರ್ಚು ಮಾಡಿ ಇದು ಎರಡಕ್ಕೂ ಉಪಯೋಗಿಸಬೇಕು ಎನ್ನುವ ರೀತಿಯಲ್ಲಿ ಒಂದು ಸಿಸ್ಟಂ ಮಾಡಬೇಕು ಎಂದು ಇದ್ದೇವೆ. ಅದೇ ರೀತಿ ಮಾನ್ಯ ಸದಸ್ಯರಾದ ಡೆರಿಕ್‌ರವರು Anglo-Indian Association ಬಗ್ಗೆ ಹೇಳಿದರು. ಏನೆಂದರೆ, 30-35 ವರ್ಷಗಳಿಂದ ಕಂಟೋನ್‌ಮೆಂಟ್ ಪ್ರದೇಶದಲ್ಲಿ ಯಾವುದೂ ಸರ್ಕಾರಿ ಕಾಲೇಜ್ ಇಲ್ಲ ಎಂದು. ಆದಕ್ಕೋಸ್ಕರ, ಸರ್ಕಾರ ಅಫಿಲಿಯೇಷನ್ ಫೀ ಕಟ್ಟಿ ಈ ವರ್ಷದಿಂದ ಅಂದರೆ 1993-94ನೇ ಸಾಲಿನಿಂದಲೇ ಕಂಟೋನ್‌ಮೆಂಟ್ ಪ್ರದೇಶದಲ್ಲಿ ಯೂನಿವರ್ಸಿಟಿಯನ್ನು ಪ್ರಾರಂಭ ಮಾತ್ತೇವೆ. ಅಲ್ಲಿ, ಕಲೆ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳ ಕಾಲೇಜನ್ನು ತೆರೆದು ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುತ್ತೇವೆ. ಅಲ್ಲದೆ. ಕಟ್ಟಡಕ್ಕಾಗಿ ಮತ್ತು ಉಪಕರಣಗಳಿಗಾಗಿ ಈ ವರ್ಷ 30ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿದ್ದೇವೆ. ಇದೇ ರೀತಿ ಹಲವಾರು ಕಾಲೇಜುಗಳನ್ನು, ಗುರುಮಿಠಕಲ್‌ನಲ್ಲಿ ಸರ್ಕಾರಿ ಪದವಿ ಕಾಲೇಜಿನ ಕಟ್ಟಡ ಕೆಲಸವನ್ನು ಆರಂಭಿಸಿಬೇಕೆಂದಿದ್ದೇವೆ. ಅದೇ ರೀತಿ ಇನ್ನು ಹೆಚ್ಚು ಹೆಚ್ಚು ಕಾಲೇಜುಗಳನ್ನು ಪ್ರಾರಂಭಿಸುವ ದಿಸೆಯಲ್ಲಿ ಖಂಡಿತವಾಗಿಯೂ...

ಶ್ರೀ ಬಿ.ಎಚ್. ಬನ್ನಿಕೋಡ್:- ನನ್ನ ಕ್ಷೇತ್ರವಾದ ಹಿರೇಕೆರೂರಿನಲ್ಲಿ ಪಾಠ ಗೋಡೌನಿನಲ್ಲಿ ನಡೆಯುತ್ತಿದೆ. ಈ ಹಿಂದೆ ಹಿರೇಕೆರೂರಿನಲ್ಲಿ ಒಂದು ಡಿಗ್ರಿ ಕಾಲೇಜನ್ನು ತೆಗೆದುಕೊಳ್ಳಬೇಕೆಂದು ಹೇಳಿದೆ, ಅದೇ ರೀತಿ ತೆಗೆದುಕೊಳ್ಳುತ್ತೇವೆಂದು ತಾವು ಹೇಳಿದಿರಿ.

ಶ್ರೀ ಎಸ್.ಎಂ. ಯಾಹ್ಯಾ:- ಅದರ ಬಗ್ಗೆಯೂ ಸಹ ಯೋಚನೆ ಮಾಡುತ್ತಿದ್ದೇನೆ.

ಶ್ರೀ ಕರಿಯಣ್ಣ:- ಅದೇ ರೀತಿ ನನ್ನ ಕ್ಷೇತ್ರದ ಹೊಳೆಹೊನ್ನೂರಿನಲ್ಲಿ ಎಸ್.ಸಿಎಸ್‌ಟಿ ಹಾಸ್ಟೆಲ್‌ನಲ್ಲಿ ನಡೆಯುತ್ತಿದೆ. ಅಲ್ಲೊಂದು ಫಸ್ಟ್ ಗ್ರೇಡ್ ಕಾಲೇಜನ್ನು ತೆರೆಯಬೇಕು.

ಶ್ರೀ ಎಸ್.ಎಂ. ಯಾಹ್ಯಾ:- ಈಗ ನನ್ನ ಹತ್ತಿರವಿರುವ ಮೊತ್ತ 2ಕೋಟಿ 20ಲಕ್ಷ ರೂಪಾಯಿಗಳು. ಖಂಡಿತವಾಗಿಯೂ ಆದ್ಯತೆ ಪ್ರಕಾರ ತೆಗೆದುಕೊಳ್ಳಲಾಗುವುದೆಂದು ಹೇಳುತ್ತೇನೆ. ಈ ರೀತಿ ನಾವು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇದರಲ್ಲಿ ಆದಷ್ಟು wastage in education.. ಆಗದಂತೆ ಬಹಳಷ್ಟು ಕಾರ್ಯಕ್ರಮಗಳನ್ನು ನಾವು ತೆಗೆದುಕೊಂಡಿದ್ದು, ಸರ್‌ಪ್ಲಸ್ ಸ್ಟಾಫ್ ಅನ್ನೂ ಕೂಡ ಗುರುತು ಇಟ್ಟು ಕೊಳ್ಳುತ್ತಿದ್ದೇವೆ. ಅದೇ ರೀತಿ ಯೂನಿವರ್ಸಿಟಿಯಲ್ಲಿ ಕೆಲವು ವಿಷಯಗಳಿಗೆ ಒಬ್ಬರು, ಇಬ್ಬರು ಇರುತ್ತಾರೆ. ಕೆಲವು ವಿಭಾಗಗಳಲ್ಲಿ, ಸೈಕಾಲಜಿಗೆ ಇಬ್ಬರು ಇರುತ್ತಾರೆ. whole department is set - up for one or two... ಆದುದರಿಂದ, ಯೂನಿವರ್ಸಿಟಿಯಲ್ಲಿ ಒಂದು ವಿಷಯಕ್ಕೆ ಒಬ್ಬ ಸ್ಟಾಫ್ ಕಳುಹಿಸುವ ರೀತಿಯಲ್ಲಿ ಮಾಡಿ, ವೇಸ್ಟೇಜ್ ಆಗದಂತೆ ಹಲವಾರು ಕಾರ್ಯಕ್ರಮಗಳನ್ನು ನಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ನಾವು ಮಾಡುತ್ತಿದ್ದೇವೆ. ಇದೇ ರೀತಿ ಸೂರತ್ಕಲ್ ರೀಜನಲ್ ಇಂಜಿನಿಯರಿಂಗ್ ಕಾಲೇಜನ್ನು ಡೀಮ್ಡ್ ಯೂನಿವರ್ಸಿಟಿ ಮಾಡಬೇಕೆಂದು ಯೋಚಿಸಿದ್ದು, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಸಹ ಕಳುಹಿಸಿಕೊಡಲಾಗಿದೆ. ಸೂರತ್ಕಲ್‌ನಲ್ಲಿರುವ ರೀಜನಲ್ ಇಂಜಿನಿಯರಿಂಗ್ ಕಾಲೇಜಿಗೆ ಬೇಕಾದಷ್ಟು ಅನುಕೂಲತೆಗಳಿವೆ. ಆ ಕಾರಣ ಅಲ್ಲಿ ಹೊಸದಾಗಿ ಡೀಮ್ಡ್ ಯೂನಿವರ್ಸಿಟಿ ಮಾಡಿದರೆ ಅದಕ್ಕೆ 20-30 ಕೋಟಿ ರೂಪಾಯಿಗಳು ಇನ್‌ಫ್ರಾಸ್ಟ್ರಕ್ಚರ್‌ಗಾಗಿ ಬೇಕಾಗುತ್ತದೆ. ಸೂರತ್ಕಲ್ ,ರೀಜನಲ್

ಇಂಜಿನಿಯರಿಂಗ್ ಕಾಲೇಜನ್ನು ಡೀಮ್ಡ್ ಯೂನಿವರ್ಸಿಟಿ ಮಾಡಿದ ನಂತರ ಅದನ್ನೇ ಟೆಕ್ನಿಕಲ್ ಯೂನಿವರ್ಸಿಟಿ ಎಂದು ಏಕೆ ಮಾಡಬಾರದು ? ಮಾಡಿದರೆ ಇದರಿಂದ ಬಹಳಷ್ಟು ಕೋಟ್ಯಾಂತರ ರೂಪಾಯಿಗಳ ಹಣ ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ನಮಗೆ ಟೆಕ್ನಿಕಲ್ ಯೂನಿವರ್ಸಿಟಿ ಆಗುತ್ತದೆ. ಏಕೆಂದರೆ, ನಮ್ಮಲ್ಲಿ ಸುಮಾರು 200ಕ್ಕೂ ಹೆಚ್ಚು ಪಾಲಿಟೆಕ್ನಿಕ್‌ಗಳಿವೆ. 52 ಇಂಜಿನಿಯರಿಂಗ್ ಕಾಲೇಜುಗಳಿವೆ. ಎಲ್ಲಾ ಯೂನಿವರ್ಸಿಟಿಯವರು ಪರೀಕ್ಷೆ ನಡೆಸುವುದಕ್ಕೆ, ಸಿಲಬಸ್ ಮಾಡುವುದಕ್ಕೆ ಬಹಳಷ್ಟು ತೊಂದರೆಯಾಗಿದೆ. ಅದಕ್ಕೋಸ್ಕರ ಟೆಕ್ನಿಕಲ್ ಯೂನಿವರ್ಸಿಟಿ ಇರಬೇಕು. ಇದರಿಂದ ಎಫಿಷಿಯೆನ್ಸಿ ಬಂದು ಆಡಳಿತದಲ್ಲಿ ಬಹಳಷ್ಟು ಅನುಕೂಲವಾಗುತ್ತದೆಂದು ತಿಳಿದು ಸೂರತ್ಕಲ್ ರೀಜನಲ್ ಇಂಜಿನಿಯರಿಂಗ್ ಕಾಲೇಜನ್ನು ನಾವು ಡೀಮ್ಡ್ ಯೂನಿವರ್ಸಿಟಿ ಮಾಡಿದ ನಂತರ, ಪುನಃ ಟೆಕ್ನಿಕಲ್ ಯೂನಿವರ್ಸಿಟಿ ಮಾಡುವುದಕ್ಕೆ ಬಹಳ ಸುಲಭವಾಗುತ್ತದೆ. ಇದಕ್ಕೆ ಸಂಬಂಧಿಸಿದ ಯೋಜನೆಗಳು ಸರ್ಕಾರದ ಮುಂದಿವೆ. ಕೆಲವು ವಾರಗಳ ಹಿಂದೆ ಕೇಂದ್ರ ಸರ್ಕಾರದಿಂದ ಒಂದು ಸಮಿತಿ ಬಂದಿತ್ತು. ಕೇಂದ್ರ ಸರ್ಕಾರದವರು ಭಾರತದಲ್ಲಿ ಒಂದು ಯೂನಿವರ್ಸಿಟಿಯನ್ನು ಸ್ಥಾಪಿಸಬೇಕೆಂದು ಆ ಉರ್ದು ಯೂನಿವರ್ಸಿಟಿಯನ್ನು whether it should be located in Hyderabad ಎಂದೂ ಬಂದಿದ್ದರು. ಅವರು ಹೈದರಾಬಾದಿಗೂ ಹೋಗಿದ್ದರು. ಇಲ್ಲಿಗೂ ಬಂದಿದ್ದರು. ನಾವು ಹೇಳಿದೆವು ನಿಮಗೆ ಉರ್ದು ಯೂನಿವರ್ಸಿಟಿಯನ್ನು ಸ್ಥಾಪಿಸುವುದಕ್ಕೆ ಎಷ್ಟು ಅನುಕೂಲತೆಗಳು ಬೇಕೋ ಅಷ್ಟನ್ನೂ ಮಾಡಿಕೊಡುತ್ತೇವೆ. ಉರ್ದು ಯೂನಿವರ್ಸಿಟಿಯನ್ನು ಬೆಂಗಳೂರಿನಲ್ಲಿಯೇ ಮಾಡಿ, ಅದಕ್ಕಾಗಿ 200 ಎಕರೆ ಜಮೀನನ್ನು ನಿಮಗೆ ಬಿಟ್ಟು ಕೊಡುತ್ತೇವೆ. ಅನಂತರ ಶೀಘ್ರವಾಗಿ ಮಾಡಬೇಕೆಂದು ಕೆಲವು ಕಟ್ಟಡಗಳನ್ನು ನಿಮಗೆ ಕೊಟ್ಟು, ಎಲ್ಲಾ ಸಹಾಯ ಸಹಕಾರಗಳನ್ನು ಕೊಡುವುದಾಗಿ ಬಯಸುತ್ತೇವೆ. ಎಂದು ಹೇಳಿದ್ದೇವೆ. ಇದು ಕೇಂದ್ರ ಸರ್ಕಾರದವರು ಹಮ್ಮಿಕೊಂಡಿರುವ ಒಂದು ಕಾರ್ಯವಾಗಿದ್ದು, ಈ ಯೋಜನೆ ಬೆಂಗಳೂರಿನಲ್ಲಾದರೆ ಒಳ್ಳೆಯದೆಂದು ಭಾವಿಸುತ್ತಾ ಅದಕ್ಕೆ ನಾವು ಸಂಪೂರ್ಣ ಸಹಾಯ ಮಾಡುತ್ತೇವೆ.

ಅದೇ ರೀತಿಯಲ್ಲಿ ಮಾನ್ಯ ವೀರಪ್ಪ ಮೊಯಿಲಿಯವರು ವಿದ್ಯಾ ಮಂತ್ರಿಗಳಾಗಿದ್ದಾಗ ಉರ್ದು ಹಾಲ್ ಅನ್ನು ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಉರ್ದು ಹಾಲ್ ಎಂದರೆ just promote Urdu language, Urdu poetry, Urdu syllabus, train Urdu teachers and so on and soforth. This is an English concept that where a minority language could be developed in a particular system.

ಕಳೆದ ವರ್ಷ ಜಾಗ ಸಿಗದ ಕಾರಣ ಅದನ್ನು ಮಾಡಲು ಆಗಲಿಲ್ಲ. ಒಳ್ಳೆಯ ಜಾಗ ಸಿಕ್ಕಿದರೆ ಅದನ್ನು ಮಾಡುತ್ತೇವೆ ಎಂದು ಹೇಳಬಯಸುತ್ತೇನೆ. ಈ ರೀತಿ ಹಲವಾರು ವಿಚಾರಗಳಲ್ಲಿ ನಾವು ಸರಿಯಾದ ದಾರಿಯಲ್ಲಿ ಹೋಗಿ ಕೆಲಸ ಮಾಡುತ್ತೇವೆ ಮತ್ತು ನೀವು ಏನೇನು ಸೂಚನೆಗಳನ್ನು ಕೊಡುತ್ತೀರೋ ಅದರ ಲಾಭವನ್ನು ಪಡೆದು ಕೆಲಸ ಮಾಡುತ್ತೇವೆ. ಮಾನ್ಯ ಆಳ್ವರವರು ವಿದ್ಯಾ ಮಂತ್ರಿಗಳಾಗಿದ್ದರು, ಅವರು ಬಹಳಷ್ಟು ವಿಚಾರಗಳನ್ನು ಚೆನ್ನಾಗಿ ಹೇಳಿದ್ದಾರೆ. ಅದನ್ನು ನಾವು ಗಮನದಲ್ಲಿಟ್ಟುಕೊಂಡು ವಿದ್ಯೆಯನ್ನು ಮೇಲ್ಮಟ್ಟಕ್ಕೆ ತರುವುದೇ ನಮ್ಮ ಗುರಿಯಾಗಿರುವುದರಿಂದ, ಇದರಲ್ಲಿ ಎಲ್ಲರ ಸಹಕಾರ ಇರಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇಷ್ಟೂ ವಿಚಾರಗಳು ವಿದ್ಯೆಗೆ ಸಂಬಂಧಪಡುತ್ತದೆ. ಇನ್ನು ಮತ್ತೊಂದು ವಿಚಾರವೇನೆಂದರೆ ವಕ್ಫ್‌ನ ಬಗ್ಗೆ. ಈ ವಿಷಯದ ಬಗ್ಗೆ ಯಾರೂ ಕೂಡ ಮಾತನಾಡದೇ ಇದ್ದರೂ ಸಹ ನಾನು ಇದರ ಬಗ್ಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇದರ 21 ಸಾವಿರ ಸಂಸ್ಥೆಗಳಿವೆ, ಇದಕ್ಕೆ ಮೊದಲಿನಿಂದಲೂ ಗ್ರಾಂಟ್‌ನ್ನು ಹಳೆ ಮಸೀದಿಗಳನ್ನು ರಿಪೇರಿ ಮಾಡುವುದು, ಖಭ್ರಾಸ್ಥಾನಕ್ಕೆ ಬೌಂಡರಿಯನ್ನು ಹಾಕುವುದು ಈ ಕೆಲಸಗಳನ್ನು ಮಾಡಲು ಹಣ ಸಹಾಯ ಕೊಡುತ್ತಿದ್ದಾರೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳೇ ಹಣಕಾಸಿನ

ಮಂತ್ರಿಗಳಾಗಿರುವುದರಿಂದ ಅವರು ಎಂದೂ ಈ ವಕ್ಫ್ ಸಂಸ್ಥೆಗಳಿಗೆ ಕೊಡದಿರುವಷ್ಟು ಹಣವನ್ನು ಕೊಟ್ಟಿದ್ದಾರೆ. ಹೋದ ವರ್ಷ ಇದಕ್ಕೆ 2 ಕೋಟಿ 4 ಲಕ್ಷವನ್ನು ಕೊಟ್ಟಿದ್ದರು, ಈ ವರ್ಷ 3 ಕೋಟಿ 70 ಲಕ್ಷವನ್ನು ಕೊಟ್ಟಿದ್ದಾರೆ. ಅಂದರೆ ಸುಮಾರು ಒಂದು ಕೋಟಿಗಿಂತ ಜಾಸ್ತಿ ಹಣವಾಗುತ್ತದೆ. ಯಾವಾಗಲೂ ಸಹ ಈ ವಕ್ಫ್‌ಗೆ ಇಷ್ಟೊಂದು ಹಣವನ್ನು ಕೊಟ್ಟಿರಲಿಲ್ಲ ಈ ಗ್ರಾಂಟ್ ಇನ್ ಏಡ್ಸ್ ಸಂಸ್ಥೆಗಳಿಗೆ ಮೈನ್‌ಟೆನ್ಸ್‌ಗೆಂದು 42 ಲಕ್ಷ ರೂಪಾಯಿ ಇತ್ತು, ಈಗ ಅದನ್ನು ಒಂದು ಕೋಟಿಗೆ ಹೆಚ್ಚು ಮಾಡಿದ್ದೇವೆ. A clear addition one crore of rupees for your repairs of mosque and other institutions. Rs. 1.4 crores, absolutely nowhere, nobody has done such a thing; of course, it is necessary that minorities should be taken into great consideration and they should be helped.

ಈ ಕಾರ್ಯವನ್ನು ಮಾಡಿದ್ದೇವೆ. ಈ ಮೂರು ತಿಂಗಳಲ್ಲಿ ನಾವು 300 ಸಂಸ್ಥೆಗಳಿಗೆ ಸಹಾಯ ಮಾಡಿದ್ದೇವೆ. ಇನ್ನು ಬರುವ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಇನ್ನೂ 300 ಕ್ಕಿಂತ ಹೆಚ್ಚು ಸಂಸ್ಥೆಗಳಿಗೆ ಸಹಾಯವನ್ನು ಮಾಡುತ್ತೇವೆ. ನಾವು ನಗರದಲ್ಲಿರುವ, ಕಾರ್ಪೊರೇಷನ್ ಏರಿಯಾದಲ್ಲಿರುವ ಸಂಸ್ಥೆಗಳಿಗೆ ಕೊಡುವುದಿಲ್ಲ, ಗ್ರಾಮಾಂತರ ಪ್ರದೇಶದಲ್ಲಿರುವ ತೀರಾ ಬಡವರು ಯಾರು ಇದ್ದಾರೆ ಅವರಿಗೆ ಮಾತ್ರ ಸಹಾಯವನ್ನು ಕೊಡುತ್ತಿದ್ದೇವೆ. ಆದುದರಿಂದ ಬಹಳಷ್ಟು ಎಂ.ಎಲ್.ಎ ಗಳು ಇದರ ಬಗ್ಗೆ ಬಂದು ಕೇಳಿದ್ದಾರೆ, ಒಂದು ರೀತಿಯಲ್ಲಿ ಹೊಸ ರೀತಿಯಲ್ಲಿ ಉತ್ತೇಜನ ಬರುವ ರೀತಿಯಲ್ಲಿ ನಾವು ಕೆಲಸ ಮಾಡಿದ್ದೇವೆ. ಇನ್ನು ಒಂದು ವರ್ಷದಲ್ಲಿ ಒಂದು ಸಾವಿರ ಸಂಸ್ಥೆಗಳಿಗೆ ಸಹಾಯ ಮಾಡುತ್ತೇವೆ. ಎಂದೆಂದೂ ಆಗದಂಥ ಕಾರ್ಯವನ್ನು ಮಾಡುತ್ತೇವೆ. ಮತ್ತು ಇಂಥ ವಕ್ಫ್ ಸಂಸ್ಥೆಗಳಿಗೆ ಸಾಹಾಯವನ್ನು ಮಾಡಲು ದೊಡ್ಡ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದು ಒಂದು ಕಡೆಯಾದರೆ,

3.50 ಪಿ.ಎಂ.

ಇನ್ನೊಂದು ಕಡೆ ಮಸೀದಿ. ಖಬರಾಸ್ಥಾನ ವಿಚಾರ ಇರಬಾರದು. ಸೋಷಿಯೋ ಎಕನಾಮಿಕ್ಸ್ ಕಡೆ ಸೇರಿಸಬೇಕೆಂದು ಬಹಳಷ್ಟು ಯೋಚನೆ ಮಾಡಿದ್ದೇವೆ. ಬಡವರದ್ದು ಎಕನಾಮಿಕ್ ಕಂಡೀಷನ್ಸ್ ಅದರಲ್ಲೂ ಮೈನಾರಿಟಿ ಮಹಿಳೆಯರ ಸ್ಥಿತಿ ಚೆನ್ನಾಗಿ ಆಗಬೇಕೆಂದು ಹಿಂದೆಂದೂ ಹಾಕಿಕೊಳ್ಳದೇ ಇದ್ದಂಥ ಸುಮಾರು 10–12ಯೋಜನೆಗಳನ್ನು (ಸ್ವಉದ್ಯೋಗ ಯೋಜನೆ) ನಾವು ಹಾಕಿಕೊಂಡಿದ್ದೇವೆ. ಇದೇ ರೀತಿ ಅವರಿಗೆ ಹೆಲ್ತ್‌ಗೆ ಸಂಬಂಧಪಟ್ಟಂತೆ, ಎಜುಕೇಷನ್‌ಗೆ ಸಂಬಂಧಪಟ್ಟತೆ 1000ರಷ್ಟು ಸ್ಕಾಲರ್‌ಷಿಪ್ ಅಂದರೆ 500 ಮಹಿಳೆಯರಿಗೆ, ಮತ್ತು 500 ಪುರುಷರಿಗೆ ನಮ್ಮ ವಕ್ಫ್ ಬೋರ್ಡ್‌ನಿಂದ ಕೊಡಬೇಕೆಂದು ಮಾಡಿದ್ದೇವೆ. ಇದು ನಮ್ಮಲ್ಲಿ ಒಳ್ಳೆಯ ಮೆರಿಟೆಡ್ ಇದ್ದು ಅತ್ಯಂತ ಬಡತನದಲ್ಲಿರಬೇಕು ಅವರಿಗೆ ಮಾತ್ರ ಕೊಡಬೇಕೆಂದು ಮಾಡಿದ್ದೇವೆ. A new direction has been given to the activities of the Wakf Board.

ಈ ರೀತಿ ನಾವು ಯೋಜನೆ ಇಟ್ಟುಕೊಂಡಿದ್ದೇವೆ. ಈಗ ಮಾನ್ಯ ಸದಸ್ಯರಾದ ಡೆರಿಕ್ ಫುಲಿನ್‌ಫಾರವರು ಸದನದಲ್ಲಿಲ್ಲ. ಅವರದ್ದು ಒಂದು ಜನಾಂಗ ನಮ್ಮಲ್ಲಿಗೆ, ಒಳ್ಳೆಯವರಿದ್ದವರು ಆಫ್ರಿಕಾ, ಆಸ್ಟ್ರೇಲಿಯ, ಕೆನಡಾ ಮುಂತಾದ ಕಡೆಗಳಿಗೆ ಹೋಗಿದ್ದಾರೆ. ಇನ್ನುಳಿದ ಸುಮಾರು 7–8 ಸಾವಿರ ಜನರು ನಮ್ಮ ಕರ್ನಾಟಕದಲ್ಲಿದ್ದಾರೆ. ಇದು ಮಾನ್ಯ ಸದಸ್ಯರಾದ ಅನಂತ ಕೃಷ್ಣರವರಿಗೆ ಚೆನ್ನಾಗಿ ಗೊತ್ತಿದೆ. ಆಂಗ್ಲೋ ಇಂಡಿಯನ್ಸ್‌ನಲ್ಲಿ. ಸುಮಾರು 4–5 ಸಾವಿರ ನಮ್ಮ ಬೆಂಗಳೂರಿನಲ್ಲಿದ್ದಾರೆ. ಅವರು ತುಂಬಾ ಶೋಚನೀಯ ಪರಿಸ್ಥಿತಿಯಲ್ಲಿದ್ದಾರೆ. Their condition is miserable. Absolutely they are in a microscopic minority and in a very very miserable condition.

ಅವರಲ್ಲಿ ಕೆಲವರು ಹೋಟೆಲ್‌ಗಳಲ್ಲಿ ಬೇರರ್ ಆಗಿ ಕೆಲಸ ಮಾಡುತ್ತಿದ್ದಾರೆ, ಅಥವಾ ಇನ್ನೂ ಬೇರೆ ಬೇರೆ ಚಿಕ್ಕಪುಟ್ಟ ಕೆಲಸಗಳು ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಈ ಜನರಿಗೆ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಫೀಸ್‌ನಲ್ಲಿ ಕನ್‌ಸೇಷನ್ ಕೊಡಬೇಕೆಂದು ಮಾನ್ಯ ಅನಂತಕೃಷ್ಣರವರು ಹೇಳಿದ್ದಾರೆ. ಇದನ್ನು ಸರ್ಕಾರ ಒಪ್ಪಿಕೊಂಡು ಹೈಯರ್‌ಲೆವೆಲ್‌ನಲ್ಲಿ ಫ್ರೀ ಕನ್‌ಸೇಷನ್‌ನ್ನು ಕೊಡುತ್ತೇವೆಂದು ಹೇಳಬಯಸುತ್ತೇನೆ. ಇದೇ ರೀತಿ ಮಾನ್ಯ ಸದಸ್ಯರಾದ ಜೀವರಾಜ ಆಳ್ವಾರವರು ಮಾತನಾಡುತ್ತಾ ಕೆಲವು ಮೈನಾರಿಟೀಸ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಆರೋಗೆನ್ಸ್ ಇದೆ ಎಂದು ಹೇಳಿದ್ದಾರೆ. ನಾನು ಒಪ್ಪಿಕೊಳ್ಳುತ್ತೇನೆ. ಅದೇರೀತಿ ಕೆಲವು ಮಿಷನರಿ ಸ್ಕೂಲ್ಸ್, ಕಾಲೇಜಸ್ ಬಹಳ ಉತ್ತಮ ಕೆಲಸ ಮಾಡಿವೆ. ಕೆಲವು ಸಂದರ್ಭದಲ್ಲಿ ಆರೋಗೆನ್ಸ್ ಬರುವುದನ್ನು ನಾನು ಕೂಡ ನೋಡಿದ್ದೇನೆ. ಅವರು ತಮ್ಮ ಗುಡ್‌ವಿಲ್ ಇತರರಿಗೆ ಸಿಕ್ಕುವಂತೆ ವರ್ತಿಸಬೇಕು. ಮಾನ್ಯ ಸದಸ್ಯರು ಕೆಲವು ಸಂಸ್ಥೆಗಳ ವಿಚಾರವನ್ನು ಏನು ಹೇಳಿದರು ಅದನ್ನು ಬಿಟ್ಟು ಬೇರೆ ಸಂಸ್ಥೆಗಳು ಬಹಳ ಉತ್ತಮ ಕೆಲಸವನ್ನು ಮಾಡಿವೆ, ಮಾಡುತ್ತಿವೆ, ಇದರಲ್ಲಿ ಮೈನಾರಿಟೀಸ್ ಇನ್‌ಸ್ಟಿಟ್ಯೂಷನ್‌ಗಳ ಕಾಂಟ್ರಿಬ್ಯೂಷನ್ ಬಹಳ ಹೆಚ್ಚಾಗಿದೆ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ಮತ್ತು ಅವರೂ ಕೂಡ ಪಬ್ಲಿಕ್‌ನ ಜೊತೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಳ್ಳಬೇಕು, ಎಲ್ಲರೂ ಮ್ಯೂಚುಯಲ್ ರೆಸ್ಪೆಕ್ಟ್ ಬಗ್ಗೆ ತಿಳಿದುಕೊಂಡು ಈ ಮೈನಾರಿಟೀಸ್ ಇನ್‌ಸ್ಟಿಟ್ಯೂಷನ್‌ಗಳನ್ನು ಹೆಚ್ಚು ಮುಂದೆ ತರಬೇಕು; ನಮ್ಮ ವಿದ್ಯಾ ಸಂಸ್ಥೆಗಳಲ್ಲಿ ಜಾತಿವಾದ ಇರಬಾರದು. ಸೆಕ್ಯುಲರ್ ಆ್ಯಟಿಟ್ಯೂಡ್ ಇರತಕ್ಕ ರೀತಿಯಲ್ಲಿ ಇರುವಾಗ ಅಲ್ಲಿ ಹಲವಾರು ವಿಚಾರಗಳು ಬರುತ್ತವೆ. ಧಾರ್ಮಿಕ ಸಂಸ್ಥೆಗಳೂ ಕೂಡ ಇನ್‌ಸ್ಟಿಟ್ಯೂಷನ್ನನ್ನು ಮಾಡುತ್ತಿವೆ. ಯಾರೇ ಮಾಡಿದ್ದರೂ ಕೂಡ ಅದು ಸಮಾಜದ ಮೇಲೆ ರಿಫ್ಲೆಕ್ಟ್ ಆಗುತ್ತದೆ. There is always a right to open and administer institutions, but there is no right to misuse, ಮಿಸ್ ರೂಲ್‌ಗೂ ಸಹ ಇದರಲ್ಲಿ ಯಾವುದೇ ಅವಕಾಶವಿಲ್ಲ. ಬಹಳಷ್ಟು ಧರ್ಮ ಸಂಸ್ಥೆಗಳು ಒಳ್ಳೆಯ ಕೆಲಸಮಾಡುತ್ತಿವೆ. ನಾವು ಏನು ಸೆಕ್ಯುಲರಿಸಂ ಎಂದು ರಾಜ್ಯಾಂಗಬದ್ಧವಾಗಿ ಇಟ್ಟುಕೊಂಡಿದ್ದೇವೆ. ಅದರ ಪ್ರಕಾರ ಎಲ್ಲಾ ಸಂಸ್ಥೆಗಳೂ ನಡೆದುಕೊಂಡು ಹೋಗಬೇಕು. ಯಾರೇ ಆಗಲಿ ಆ ಸಂಸ್ಥೆಯಲ್ಲಿ ತಮ್ಮ ಜಾತಿಯವರಿಗೇ, ತಮ್ಮ ನೆಂಟರಿಗೇ ಕೆಲಸವನ್ನು ಕೊಡಬೇಕೆಂಬ ಉದ್ದೇಶ ಇರಬಾರದು. ಇಂಥಾದ್ದೇನಾದರೂ ಅಲ್ಲಿದ್ದರೆ ಖಂಡಿತವಾಗಿ ನಾವು ಅಲ್ಲಿ ಅಕೆಡೆಮಿಕ್ ಎಕ್ಸಲೆನ್ಸ್‌ನ್ನು ತರುವುದಕ್ಕೆ ಸಾಧ್ಯವಾಗುವುದಿಲ್ಲ. ಅಡ್ಮಿಷನ್ಸ್ ಮಾಡುವಾಗ ಟೀಚರ್ಸ್‌ನ್ನು ಲೆಕ್ಚರರ್ಸ್‌ನ್ನು ನೇಮಕಾತಿ ಮಾಡಿಕೊಳ್ಳುವಾಗ only to family members and to particular caste people should not be given, because you cannot achieve academic excellence. Appointment of staff, lecturers and teachers in schools and colleges should reflect the society. All castes, all communities should get proper representations. Might be it is the he institutions run by the mutts or by minority institution, where it may be, but it should refllect the society. That is how we must uphold secularism in educational system. If the educational system is also polluted with communalism then there is the end of these progres of this country. That is how we have to have motivate towards secularism in education, ಎಂದು ಹೇಳಲಿಕ್ಕ ಬಯಸುತ್ತಿದ್ದೇನೆ. ಈ ರೀತಿ ಇನ್ನು ಹೆಚ್ಚು ಕಾಲವನ್ನು ತೆಗೆದುಕೊಳ್ಳದೆ ಈ ನಮ್ಮ ಡಿಮ್ಯಾಂಡ್‌ಗೆ ತಾವು ಎಲ್ಲರೂ ಸಹಕಾರವನ್ನು ಕೊಟ್ಟು ಒಪ್ಪಿಗೆಯನ್ನು ಕೊಡಬೇಕೆಂದು ಹೇಳಿ ನಿಮ್ಮನ್ನೆಲ್ಲ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ:– ಸನ್ಮಾನ್ಯ ಅಧ್ಯಕ್ಷರೇ, ನಾನು ಎರಡು ವಿವರಣೆಗಳನ್ನು ಮಾತ್ರ ಮಾನ್ಯ

ಮಂತ್ರಿಗಳಿಂದ ಬಯಸುತ್ತೇನೆ. ತಾವು ಈಗ ಕ್ಯಾಪಿಟೇಷನ್ ಫೀಸ್ ವಜಾ ಮಾಡಲಿಕ್ಕೆ ಈ ನಿಯಮಗಳನ್ನು ಮಾಡಿದ್ದೀರಿ. ಈ ನಿಯಮಗಳು ಈಗ ಸೀಮಿತವಾಗಿದೆ. ಕೇವಲ ಇಂಜಿನೀಯರಿಂಗ್ ಮತ್ತು ಮೆಡಿಕಲ್ ಕಾಲೇಜ್‌ಗಳಿಗೆ ಮಾತ್ರ ತಾವು ಮಾಡಿದ್ದೀರಿ. ನಾನು ತಮ್ಮಿಂದ ಉತ್ತರ ಬಯಸುತ್ತೇನೆ, ಇಂಥ ಒಂದು ಕ್ಯಾಪಿಟೇಷನ್ ಫೀಸ್‌ನ್ನು ಪ್ರೈಮರಿ ಶಾಲೆಯಿಂದ ಅಥವಾ ನರ್ಸರಿ ಶಾಲೆಗಳಿಂದ ಬೇರೆ ಬೇರೆ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಏನಿದೆ, ಅದು ಬಿ.ಎಸ್.ಸಿವರೆಗೆ ಆಗಿರಬಹುದು ಅಥವಾ ಯಾರಿಗೇ ಆಗಿರಬಹುದು. ಫಸ್ಟ್‌ಗ್ರೇಡ್ ಕಾಲೇಜ್‌ವರೆಗೆ ಆಗಿರಬಹುದು. ಈ ಸಂಸ್ಥೆಗಳಲ್ಲಿರ ತಕ್ಕಂಥ ಕ್ಯಾಪಿಟೇಷನ್ ಫೀಸ್ ತೆಗೆಯಲಿಕ್ಕೆ ನಿಯಮಗಳನ್ನು ರಚಿಸುವಂಥ ಉದ್ದೇಶ ಸರ್ಕಾರಕ್ಕೆ ಏನಾದರೂ ಇದೆಯೊ ? ಹಾಗಿದ್ದರೆ ಅದಕ್ಕೆ ಒಂದು ಕಾಲಮಿತಿಯನ್ನು ಏನಾದರೂ ಗೊತ್ತು ಮಾಡಿಕೊಂಡಿರುತ್ತೀರಾ ? ಮತ್ತು ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ತಾವು ಈಗ ಶೇಕಡಾವಾರು ಅಂಕಿಗಳನ್ನು ಕೊಡುತ್ತೇವೆಂದು ಮಾಡಿದ್ದೀರಾ ? ಒಟ್ಟು ಟೋಟಲ್ ಮಾರ್ಕ್ಸ್ ಎಂದು ಈಗ ಆರ್ಡರ್ ಮಾಡಿದ್ದೀರಿ. ತಮ್ಮ ಆದೇಶ ಏನಿದೆ ಎಂದರೆ ಒಟ್ಟು ಅಂಕಿಗಳಿಗೆ 15ರಷ್ಟು ಮಾತ್ರ ಅಂಕೆಗಳನ್ನು ಸೇರಿಸಬೇಕೆಂದು ತಾವು ನಿಯಮಗಳನ್ನು ಮಾಡಿಕೊಂಡಿದ್ದೀರಿ. ಅದನ್ನು ಬದಲಾವಣೆ ಮಾಡಿ ಶೇಕಡ 15ರಷ್ಟು ಕೊಡಲಿಕ್ಕೆ ಸರ್ಕಾರ ಏನಾದರೂ ಉದ್ದೇಶ ಹೊಂದಿದೆಯೇ ?

ಶ್ರೀ ಎಸ್.ಎಂ. ಯಾಹ್ಯಾ:– ನಿಮ್ಮ ಎರಡೆಯ ಪ್ರಶ್ನೆ ಗ್ರಾಮಾಂತರ ಪ್ರದೇಶಗಳಿಗೆ ಸೀಟ್ ಕೊಡಬೇಕೆಂದು ಹೇಳಿ ರೂಲ್ 12ರಲ್ಲಿ ಇಟ್ಟಿದ್ದೇವೆ. ಕಳೆದವರ್ಷ ಯಾವರೀತಿ ಇತ್ತೋ ಅದನ್ನೇ ಈ ವರ್ಷ ನಾವು ಇಡುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಅಧ್ಯಕ್ಷರೇ, ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ. ಎರಡು ಉದ್ದೇಶಕ್ಕಾಗಿ ತಾವು ಈಗಾಗಲೇ ನಿಯಮಾವಳಿಗಳನ್ನು ಮಾಡಿಕೊಂಡಿದ್ದೀರಿ. ನೇಮಕ ಮಾಡಿಕೊಳ್ಳುವಾಗಲೂ ನಿಯಮಗಳಲ್ಲಿ ತಾವು ಒಟ್ಟು ಅಂಕಗಳಿಗೆ 15 ಮಾರ್ಕ್ಸ್‌ನ್ನು ಸೇರಿಸಬೇಕೆಂದು ಹೇಳಿದ್ದೀರಿ. ಆದ್ದರಿಂಧ ತಮಗೆ ನಾನು ಕೇಳುತ್ತಿದ್ದೇನೆ ಈಗ 1000–1500 ಇರುವವರಿಗೆ ನೀವು 15 ಮಾರ್ಕ್ಸ್ ಅನ್ನು ಕೊಡುವುದರ ಮುಖಾಂತರ ಶೇಕಡಾ 1ರಷ್ಟು ಮಾರ್ಕ್ಸ್‌ನ್ನೂ ಸಹ ಆದ್ಯತೆಯನ್ನು ಕೊಟ್ಟಂತಾಗುವುದಿಲ್ಲ. ಅದಕ್ಕೆ ಬದಲಾಗಿ ಸರ್ಕಾರ ಏನು ಇಲ್ಲಿ ಘೋಷಣೆ ಮಾಡಿತ್ತೋ ಆ ರೀತಿ ನೇಮಕ ಮಾಡಿಕೊಳ್ಳುವಾಗ ಮತ್ತು ಅಡ್ಮಿಷನ್ ಮಾಡಬೇಕಾದಾಗ ಶೇಕಡ 15ರಷ್ಟು ಮಾರ್ಕ್ಸನ್ನು ಕೊಡುವಂಥ ಉದ್ದೇಶವನ್ನು ಏನಾದರೂ ಸರ್ಕಾರ ಹೊಂದಿದೆಯೇ ?

ಶ್ರೀ ಎಸ್.ಎಂ. ಯಾಹ್ಯಾ:– ಅದಕ್ಕೆ ನಾವು ಕನ್‌ಸೆಷನ್ ಕೊಡಬೇಕೆಂದು ಹೇಳಿದ್ದೇವೆ. ಇದನ್ನು ಸರ್ಕಾರದ ಆಜ್ಞೆ ಮುಖಾಂತರ ಮಾಡಬೇಕಾಗುತ್ತದೆಯೇ ಹೊರತು ಇನ್ನು ಯಾವ ರೀತಿಯೂ ಮಾಡಲಿಕ್ಕೆ ಬರುವುದಿಲ್ಲ.

ಡಾ. ಜೀವರಾಜ ಆಳ್ವ:– ಮಾನ್ಯ ಅಧ್ಯಕ್ಷರೇ, ಇದು ಒಂದು ಕಣ್ಣೊರಿಸುವ ತಂತ್ರವಾಗುತ್ತದೆ. ಮಾನ್ಯ ಯಾಹ್ಯಾರವರು ಪೂರ್ಣವಾಗಿ ಇದನ್ನು ಒಪ್ಪಬೇಕಾಗುತ್ತದೆ. ನೀವು ಹೇಳಿದ ತಕ್ಷಣ ಸಂತೋಷವಾಯಿತು. ಗ್ರಾಮಾಂತರ ಜನರಿಗೆ, 15 ಪರ್ಸೆಂಟ್ ನಿಜವಾಗಿಯೂ ಕೊಡಬೇಕು. 700 ಮಾರ್ಕ್ಸ್‌ಗೆ 15 ಪರ್ಸೆಂಟ್ ಎಂದರೆ ಎಷ್ಟಾಯಿತು ? ಬರೀ 15 ಮಾರ್ಕ್ಸ್ ಕೊಡುವುದಿದ್ದರೆ ಇದು ಬೇಡಿ,

ಶ್ರೀ ಹೆಚ್. ಏಕಾಂತಯ್ಯ:– ಕೆಲವು ಕಡೆ 100–1500 ಮಾರ್ಕ್ಸ್ ಇದೆ.

ಶ್ರೀ ಎಸ್.ಎಂ. ಯಾಹ್ಯ:– ನಾವು ಆರೀತಿ ಹೇಳಲಿಲ್ಲ. ಯಾರು ಹೇಳಿದರು ?

ಶ್ರೀ ಹೆಚ್. ಏಕಾಂತಯ್ಯ:– ಗೌವರ್ನಮೆಂಟ್ ಆರ್ಡರ್‌ನ್ನು ಬೇಕಾದರೆ ಕೊಡುತ್ತೇವೆ. ಒಂದು

ನೇಮಕ ಮಾಡಿಕೊಳ್ಳಲು ಒಂದು. ಕೆ.ಪಿ.ಎಸ್.ಸಿ.ಯಿಂದ ಅಥವಾ ಬೇರೆ ಬೇರೆ ಕಮಿಟಿಗಳನ್ನು ಮಾಡಿಕೊಂಡು ನೇಮಕ ಮಾಡಿಕೊಳ್ಳುತ್ತೀರಲ್ಲಾ ಅದಕ್ಕೆ ನೇಮಕಾತಿ ನಿಯಮಗಳನ್ನು ಮಾಡಿಕೊಂಡು ಮಾಡಿದ್ದೀರಿ. ಆ ನಿಯಮಗಳಲ್ಲಿ ಶೇಕಡಾ 15ರಷ್ಟು ಎಂದು ಹೇಳಲಿಲ್ಲ.

ಶ್ರೀ ಎಸ್.ಎಂ. ಯಾಹ್ಯಾ:– ಈಗ ನಿಮಗೆ ಏನಾಗಬೇಕು ಅದನ್ನು ಹೇಳಿ.

ಶ್ರೀ ಹೆಚ್. ಏಕಾಂತಯ್ಯ:– ಶೇಕಡಾ 15ರಷ್ಟು ಬೇಕು.

ಶ್ರೀ ಎಸ್.ಎಂ. ಯಾಹ್ಯಾ:– ಶೇಕಡಾ 15ರಷ್ಟು ಕೊಡುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಅಧ್ಯಕ್ಷರೇ, ಮತ್ತೆ ಕ್ಯಾಪಿಟೇಷನ್ ಫೀಸ್ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಎಸ್.ಎಂ. ಯಾಹ್ಯಾ:– ಕ್ಯಾಪಿಟೇಷನ್ ಫೀಸ್ ಬಗ್ಗೆ ನೀವು ಯಾವುದನ್ನು ಹೇಳುತ್ತಿದ್ದೀರಿ ಇದು ಬರೀ ಇಂಜಿನೀಯರಿಂಗ್ ಮತ್ತು ಮೆಡಿಕಲ್‌ಗೆ ಮಾಡುತ್ತಿದ್ದಿರೋ ಎಂದು. ಮತ್ತೆ ಇನ್ನು ಎಲ್ಲದಕ್ಕೂ ಮಾಡುತ್ತಿದ್ದೀರೋ ಎಂದು. ತಾವು ಜಡ್ಜ್‌ಮೆಂಟಿನಲ್ಲಿ ಓದಿರಬಹುದು. ಫಾರ್ ದಿ ಟೈಮ್ ಬೀಯಿಂಗ್ ಇದು ಎರಡಕ್ಕೆ ಮಾಡಿ ಎಂದು ಜಡ್ಜ್‌ಮೆಂಟ್‌ನಲ್ಲಿಯೇ ಹೇಳಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ:– ಜಡ್ಜ್‌ಮೆಂಟ್ ಎಂದು ನೀವು ಡಿಫೆಂಡ್ ಮಾಡಿಕೊಳ್ಳಬೇಡಿ. ಸರ್ಕಾರದ ನೀತಿ ಏನು ಎಂದು ಕೇಳುತ್ತಿದ್ದೇನೆ.

ಏಕೆ ಎಸ್ ಆರ್ ನೋ ಎಂದು ಹೇಳಬೇಕು ? ನಾನು ವಿಚಾರ ಹೇಳಬೇಕಾಗುತ್ತದೆ. ಪಬ್ಲಿಕ್‌ಗೆ ಮೈಂಡ್ ತಯಾರು ಮಾಡುಬೇಕಾಗುತ್ತದೆ. ಎಸ್‌ಆರ್ ನೋ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ:– ಸುಪ್ರೀಂ ಕೋರ್ಟಿನವರು ಜಡ್ಜ್‌ಮೆಂಟ್ ಕೊಟ್ಟು, ಮಾಡಿ ಎಂದು ಹೇಳಿದ್ದಾರೆ. ಮಾಡಬೇಡಿ ಎಂದು ಏನೂ ಹೇಳಿಲ್ಲ. ಮೂರನೇ ತೀರ್ಮಾನದಲ್ಲಿ ತಾವು ನೋಡಬಹುದು. ಬೇರೆ ಕಾಲೇಜುಗಳಿಗೂ ತಾವು ಇದನ್ನು ಮಾಡಬಹುದು. ಇದನ್ನು ಮಾಡುತ್ತೀರೋ ಇಲ್ಲವೋ ?

ಶ್ರೀ ಎಸ್.ಎಂ. ಯಾಹ್ಯಾ:– ಅದಕ್ಕೆ ಹೇಳುತ್ತಿದ್ದೇನೆ. ಜಡ್ಜ್‌ಮೆಂಟಿನಲ್ಲಿ for the time being ಇದಕ್ಕೆ ಮಾಡಿ ಎಂದು ಹೇಳಿದ್ದಾರೆ. ಮಾಡಬಾರದೆಂದು ಹೇಳಿಲ್ಲ. ಟೈಂ ಬೀಯಿಂಗ್ ಮಾಡಿ ಎಂದರೆ ಈ ವರ್ಷದಿಂದಲೇ ಇದಕ್ಕೆ ಮಾಡಿ ಎಂದು ಜಡ್ಜಮೆಂಟ್‌ನಲ್ಲಿ ಹೇಳಿದ್ದಾರೆ. Atleast, for these two Courses, Professional Courses, from this Academic Year. For others, the other they never said for the time being. ಅದಕ್ಕೂ ನಮಗೆ ವಿಚಾರ ಮಾಡಲು ಸಮಯ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಡಾ।। ಎನ್.ಬಿ. ನಂಜಪ್ಪ:– ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಮಂತ್ರಿಗಳು ಬಹಳ ಚೆನ್ನಾಗಿ ಯೋಜನೆಗಳನ್ನು ಹಾಕಿಕೊಂಡಿದ್ದಾರೆಂದು ಅವರು ಮಾತನಾಡತಕ್ಕ ಸಂದರ್ಭದಲ್ಲಿ ಗೊತ್ತಾಯಿತು. ಅದರಲ್ಲಿ ಒಂದು ಬಹಳ ಮುಖ್ಯವಾದ ದೋಷವನ್ನು ನಾನು ಕಂಡು ಹಿಡಿದುದ್ದು ಏನೆಂದರೆ ಪ್ರತಿಯೊಬ್ಬರಿಗೆ ನಾವು ಎಜುಕೇಷನ್ ಕೊಡಬೇಕೆಂದಿದ್ದೇವೆ–ಪ್ರೈಮರಿ ಮತ್ತು ಮಿಡಲ್ ಸ್ಕೂಲ್ ಹಂತದಲ್ಲಿ ಮತ್ತು ಪಿಯುಸಿವರೆಗೆ. ರೂರಲ್ ಏರಿಯಾದಲ್ಲಿ ಕಾಲೇಜುಗಳು ಪ್ರಾರಂಭವಾಗಿವೆ. ಆದರೆ ಫಸ್ಟ್ ಗ್ರೇಡ್ ಕಾಲೇಜುಗಳು ಸರ್ಕಾರದ ವತಿಯಿಂದ ರೂರಲ್ ಏರಿಯಾದಲ್ಲಿ ಇಲ್ಲದಿರುವುದರಿಂದ ಪಿಯುಸಿ. ಆದಮೇಲೆ ಬಹಳಷ್ಟು ಹೆಣ್ಣುಮಕ್ಕಳಿಗೆ ಮುಂದೆ ಓದುವುದಕ್ಕೆ ತೊಂದರೆಯಾಗುವುದರಿಂದ ಸರ್ಕಾರ ಎಲ್ಲೆಲ್ಲಿ ಸಾಧ್ಯತೆ ಇದೆಯೋ ಎಲ್ಲೆಲ್ಲಿ ಸ್ಟ್ರೆಂಟ್ತ್ ಜಾಸ್ತಿ ಇದೆಯೋ ಅಲ್ಲಿ ಹೈಸ್ಕೂಲ್ ಮತ್ತು

ಪಿಯುಸಿ. ತರಗತಿಗಳು ಇರುವ ಕಡೆ ಹೋಬಳಿ ಹೆಡ್‌ಕ್ವಾರ್ಟರ್ಸ್ ಮತ್ತು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಫರ್ಸ್ಟ್ ಗ್ರೇಡ್ ಕಾಲೇಜ್ ಮಾಡುವುದರಿಂದ ಇವರಿಗೂ ಯಾವುದಾದರೂ ಪ್ರೊಫೆಷನಲ್ ಕೋರ್ಸ್ ಮಾಡಲಿಕ್ಕೆ ಮತ್ತು ಡಿಗ್ರಿ ಕೋರ್ಸಸ್‌ವರೆಗೆ ಹೋಗುವುದಕ್ಕೆ ಅನುಕೂಲವಾಗುತ್ತದೆ. ಈ ದಿಸೆಯಲ್ಲಿ ಹೆಣ್ಣುಮಕ್ಕಳಿಗೆ ಆದ್ಯತೆ ಕೊಡುವ ಇಚ್ಛೆ ಸರ್ಕಾರಕ್ಕೆ ಇದ್ದರೆ ರೂರಲ್ ಏರಿಯಾದಲ್ಲಿ ಫರ್ಸ್ಟ್ ಗ್ರೇಡ್ ಕಾಲೇಜನ್ನು ಎಸ್ಟಾಬ್ಲಿಷ್ ಮಾಡುವುದಕ್ಕೆ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಡಿ.ಆರ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಗ್ರಾಮಾಂತರ ಭಾಗದ ವಿದ್ಯಾರ್ಥಿಗಳಿಗೆ 15 ಪರ್ಸೆಂಟ್ ಗ್ರೇಸ್ ಮಾರ್ಕ್ಸ್ ಕೊಡುತ್ತೇವೆಂದರು. ಆದರೆ ಒಂದು ಕಂಡೀಷನ್ ಇಟ್ಟರು ಸಚಿವರು. 1 ರಿಂದ 10ನೇ ತರಗತಿಯವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಓದಿರಬೇಕೆಂದು ಕಂಡೀಷನ್ ಇಟ್ಟರು. ಬಹಳಷ್ಟು ಗ್ರಾಮಗಳಲ್ಲಿ ಹೈಸ್ಕೂಲ್‌ಗಳು ಇರುವುದಿಲ್ಲ. ಕೆಲವು ಗ್ರಾಮಗಳಲ್ಲಿ 4ನೇ ತರಗತಿಯವರೆಗೆ ಮಾತ್ರ ಶಾಲೆ ಇರುತ್ತದೆ. ಹತ್ತು ವರ್ಷ ಅವನು ಊರಿನಲ್ಲಿ ಓದಬೇಕೆಂದರೆ ಎಲ್ಲಿ ಸಾಧ್ಯವಾಗುತ್ತದೆ ?ತಮ್ಮ ಊರಿನಲ್ಲಿ ಎಲ್ಲಿಯವರೆಗೆ ಶಾಲೆ ಇರುತ್ತದೆಯೋ ಅಷ್ಟು ಓದುತ್ತಾನೆ, ಮುಂದೆ ನಗರಕ್ಕೆ ಹೋಗಿರುತ್ತಾನೆ. ಇದರಿಂದ ಎಲ್ಲಾ ಗ್ರಾಮಾಂತರ ಪ್ರದೇಶದ ಜನರಿಗೆ ಅನುಕೂಲವಾಗುವುದಿಲ್ಲ. ಇದರಿಂದ ಗ್ರಾಮಾಂತರ ಜನರಿಗೆ ಬಹಳ ಅನಾನುಕೂಲವಾಗುತ್ತದೆ.

ಶ್ರೀ ಎಸ್.ಎಂ. ಯಾಹ್ಯಾ:– ಅದರಲ್ಲಿ ಡೌಟ್ಸ್ ಬರಬಾರದು ಎಂದು. 20 ಸಾವಿರ ಜನಸಂಖ್ಯೆ ಎಂದು ಹಾಕಿದ್ದೇವೆ. 20 ಸಾವಿರ ಜನಸಂಖ್ಯೆ ಎಲ್ಲಾ ಕಡೆ ಇರುತ್ತದೆ. ಆದುದರಿಂದ ಅದು ಸರಿಯಾಗಿರುತ್ತದೆ. ಅದನ್ನು ಬಹಳ ಡೈಲ್ಯೂಟ್ ಮಾಡಿದರೆ ಗ್ರಾಮಸ್ಥರಿಗೆ ಸಿಗುವುದಿಲ್ಲ, ಬೇರೆಯವರಿಗೆ ಸಿಗುತ್ತದೆ. ಆದ್ದರಿಂದ ಡೈಲ್ಯೂಟ್ ಮಾಡುವುದಕ್ಕೆ ಹೋಗಬಾರದು.

ಶ್ರೀ ಡಿ.ಆರ್. ಪಾಟೀಲ್:– 20 ಸಾವಿರ ಜನಸಂಖ್ಯೆ ಮತ್ತು ಹತ್ತು ವರ್ಷ ಎಂದು ಇಟ್ಟಿದ್ದೀರಿ. ಹತ್ತು ವರ್ಷದ ಶಾಲೆ ಇಲ್ಲದ ಹಳ್ಳಿಗಳಲ್ಲಿ ಓದಲಿಕ್ಕೆ ಹೇಗೆ ಸಾಧ್ಯ ?

ಶ್ರೀ ಎಸ್.ಎಂ. ಯಾಹ್ಯಾ:– ಪಟ್ಟಣದಲ್ಲಿ ಬಂದು ಓದು ಗ್ರಾಮಸ್ಥ ಎಂದರೆ ಹೇಗೆ ? These are highly scientific points to help the rural people.

ಶ್ರೀ ಎ. ರುಕ್ಮಯ್ಯ ಪೂಜಾರಿ:– 1992–93ನೇ ಸಾಲಿನಲ್ಲಿ ಕೆಲವು ಪದವಿಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗ ತೆರೆದಿದ್ದಾರೆ. ಅಲ್ಲಿ ಬೇರೆ ಕಾಲೇಜಿನಿಂದ ವರ್ಗಾವಣೆಯಾಗಿ ಸುಮಾರು ಹತ್ತು ತಿಂಗಳಿಂದ ಸೇವೆ ಮಾಡುತ್ತಿರತಕ್ಕ ಉಪಾಧ್ಯಾಯರಿಗೆ ಇನ್ನೂ ಸಂಬಳ ಪಾವತಿಯಾಗಿಲ್ಲ. ಅದರ ಬಗ್ಗೆ ಮಂತ್ರಿಗಳು ಹೇಳಬೇಕು.

ಶ್ರೀ ಎ.ಕೆ. ಅನಂತ ಕೃಷ್ಣ:– ಮಾನ್ಯ ಸಚಿವರು ಎರಡು ಮುಖ್ಯ ವಿಷಯಗಳಿಗೆ ಇಲ್ಲಿ ಆಶ್ವಾಸನೆ ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದಿಸುತ್ತೇನೆ. ಒಂದು ಆಂಗ್ಲೋ ಇಂಡಿಯನ್ಸ್‌ಗೆ ಫೀ ಕನ್‌ಸೆಷನ್ ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆಂದು ಹೇಳಿದ್ದಾರೆ. ಎರಡನೆಯದು, ಕಂಟೋನ್‌ಮೆಂಟ್ ವಿಭಾಗದಲ್ಲಿ ಬಹಳ ಕಾಲದಿಂದ ಒಂದು ಸರ್ಕಾರಿ ಕಾಲೇಜ್ ಆಗಲಿ, ಹೈಸ್ಕೂಲ್ ಆಗಲಿ ಇಲ್ಲ. ಅದಕ್ಕೆ ಒತ್ತಾಯಿಸುತ್ತಿದ್ದೇವೆ. ಈ ಸಾರಿ ಕಂಟೋನ್‌ಮೆಂಟ್ ವಿಭಾಗದಲ್ಲಿ ಒಂದು ಗವರ್ನಮೆಂಟ್ ಕಾಲೇಜ್ ಮಾಡುತ್ತೇವೆಂದು ಹೇಳಿದ್ದಾರೆ. ಹಾಗೆಯೇ ಹೈಯರ್ ಪ್ರೈಮರಿ ಸ್ಕೂಲ್‌ನ್ನು ಸರ್ಕಾರದ ವತಿಯಿಂದ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ವಕ್ಫ ವಿಚಾರದಲ್ಲಿ ಮಾತನಾಡುವುದಕ್ಕೆ ಅವಕಾಶ ಸಿಕ್ಕಲಿಲ್ಲ. ಕೇವಲ ಶಿವಾಜಿನಗರ ಕ್ಷೇತ್ರದಲ್ಲಿ ಮಾತ್ರ ಹೇಳಬೇಕೆಂದರೆ ಮಾನ್ಯ ಸಚಿವರಿಗೆ ಗೊತ್ತಿದೆ. 100 ಕೋಟಿ ರೂಪಾಯಿ ಆಸ್ತಿ ವಕ್ಫ್ ಪ್ರಾಪರ್ಟಿ ಇದೆ. ಇದೆಲ್ಲಾ

ದುರುಪಯೋಗ ಆಗುತ್ತಾ ಇದೆ. ಬಹಳ ಅನಾಥರೈಸ್ಡ್ ಆಗಿ ಉಪಯೋಗ ಆಗುತ್ತಿದೆ. ಈ ಬಗ್ಗೆ ಕ್ರಮ ತೆಗೆದುಕೊಂಡರೆ ಈ ವಿಭಾಗದ ಇಡೀ ಮೈನಾರಿಟಿ ಕಮ್ಯುನಿಟಿಗೆ ಸಾಕಷ್ಟು ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ ಮಾಡುವುದಕ್ಕಾಗುತ್ತದೆ. ಅದಕ್ಕೆ ಏನಾದರೂ ಒಂದು ಬೃಹತ್ ಪ್ರಮಾಣದಲ್ಲಿ ಯೋಜನೆ ಒಂದು ಹಾಕುತ್ತೀರಾ? ಮತ್ತೊಂದು ಮೈನಾರಿಟಿಸ್ ಇನ್‌ಸ್ಟಿಟ್ಯೂಷನ್ಸ್ ಆರೋಗೆಂಟ್ ಎಂದು ಹೇಳಿವರು. ಇದು ಅಲ್ಲಲ್ಲಿ ಆಗುತ್ತದೆ. ಮೈನಾರಿಟೀಸ್ ಎಂತಹದ್ದು? ಮೆಜಾರಿಟಿ ಕಮಿಟಿಯವರು ಬಹಳ ಮುಂದುವರಿದವರು ಮಾಡುತ್ತಾ ಇರತಕ್ಕ ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಪ್ರವೇಶವೇ ಇಲ್ಲ. ಅಲ್ಲಿ ಅಪ್ಲಿಕೇಷನ್ಸ್ ಕೂಡ ಕೊಡುವುದಿಲ್ಲ. ಬಹಳ ದುರಹಂಕಾರವಾಗಿ ನಡೆದುಕೊಳ್ಳುತ್ತಾರೆ. ಮೈನಾರಿಟೀಸ್ ಸಂಸ್ಥೆಗಳಲ್ಲಿ ಏನಾಗುತ್ತದೆಂದರೆ, ಕೆಲವು ಸಂದರ್ಭದಲ್ಲಿ ಬಹಳ ತೀವ್ರತೆಯಿಂದ ದೌರ್ಜನ್ಯದಿಂದ ಕೇಳುತ್ತಾರೆ. ನನಗೆ ಮಾಡಲೇಬೇಕೆಂದು ಹೇಳಿ. ಅಂತಹ ಸಮಯದಲ್ಲಿ ಬೇಸತ್ತು ಒಂದೆರಡು ಮಾತುಗಳನ್ನು ಹೇಳಬಹುದು.

"One swallow does not make a summer"

ಎಂದು ಹೇಳುತ್ತೇವೆಯೋ ಎಲ್ಲಾ ಮೈನಾರಿಟೀ ಇನ್‌ಸ್ಟಿಟ್ಯೂಷನ್ಸ್ ಬಗ್ಗೆ ಆ ರೀತಿ ಮಾತನಾಡುವುದು ಸೂಕ್ತ ಅಲ್ಲ. ಮೊನ್ನೆ ಜೀವರಾಜ ಆಳ್ವ ಅವರು ಮಾತನಾಡುವಾಗ ನಾನು ಸರಿಯಾಗಿ ಗಮನಿಸಿಲ್ಲ. ಅವರು ಹೇಳಿದ ವಿಧದಲ್ಲಿ ಆ ಕಾಲೇಜಿನವರೂ ಕೂಡ ಹೇಳಿದರು. ನಮ್ಮಲ್ಲಿ ವೆರಿಫೈ ಮಾಡಿದ್ದೇವೆ. ಅಂತಹವರು ನಮ್ಮ ಹತ್ತಿರ ಬರಲಿಲ್ಲ; ನಮ್ಮಲ್ಲಂತೂ ಅಂತಹ ಆರೋಗೆಂಟ್ ಬಿಹೇವಿಯರ್ ಇರಲಿಲ್ಲ. ಬೇರೆಯವರು ಬಂದವರಿಗೆ ಅನುಕೂಲ ಮಾಡಿಕೊಡಿ ಎಂದು ಹೇಳಿದರು. ಆ ಬಗ್ಗೆ ಆಳ್ವ ಅವರ ಜೊತೆ ನಾನು ಮಾತನಾಡುತ್ತೇನೆ. ಇದು ತಪ್ಪು ಕಲ್ಪನೆ ಆಗುತ್ತದೆಂದು ಹೇಳಬಯಸುತ್ತೇನೆ. ಆ ರೆಕಾರ್ಡ್‌ನಲ್ಲಿ ಆ ರೀತಿ ಹೋದರೆ, ಮೈನಾರಿಟೀಸ್ ಕಾಲೇಜ್ ಇನ್‌ಸ್ಟಿಟ್ಯೂಷನ್ಸ್ ಆರೋಗೆಂಟ್ ಎಂದು ಹೇಳಿದರೆ ಅದು ತಪ್ಪು ಕಲ್ಪನೆಯಾಗುತ್ತದೆಂದು ಹೇಳುತ್ತಿದ್ದೇನೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:– ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿರತಕ್ಕ ವಿಶ್ವವಿದ್ಯಾನಿಲಯಗಳಲ್ಲಿ ರಿಸರ್ವೇಷನ್ ಪಾಲಿಸಿ ಅಡಾಪ್ಟ್ ಮಾಡುವಾಗ ಅವರು ಪ್ರೊಫೆಸರ್ಸ, ಲೆಕ್ಚರರ್ಸ, ರೀಡರ್ಸ್ ಎಂದು ಮಾಡುವುದಿಲ್ಲ. ಸಂಸ್ಕೃತ, ಗೈನಕಾಲಜಿ, ಇಂಗ್ಲೀಷ್, ಮ್ಯಾಥಮಿಟಿಕ್ಸ್, ಪಾಲಿಟಿಕ್ಸ ಎಂದು ಆರೀತಿಯಲ್ಲಿ ರಿಸರ್ವೇಷನ್ ಇಡುತ್ತಾರೆ. ಯಾವ ಜಾಗದಲ್ಲಿ, ಯಾವ ಸಬ್ಜೆಕ್ಟ್‌ನಲ್ಲಿ ಎಸ್‌ಸಿಎಸ್‌ಟಿ ಕ್ಯಾಂಡಿಡೇಟ್ಸ್ ಸಿಗುವುದಿಲ್ಲವೋ, ಉದಾಹರಣೆಗೆ ಜೈನಿಸಂ ಸಬ್ಜೆಕ್ಟ್‌ಗೆ ರಿಸರ್ವೇಷನ್ ಇಡುತ್ತಾರೆ, ಆದ್ದರಿಂದ ಈ ರಿಸರ್ವೇಷನ್ ಪಾಲಿಸಿಯನ್ನು ಪ್ರೊಫೆಸರ್ಸ್, ಲೆಕ್ಚರರ್ಸ್, ಅಸಿಸ್ಟೆಂಟ್ ಪ್ರೊಫೆಸರ್ಸ್, ರೀಡರ್ಸ್ ಪೋಸ್ಟ್‌ಗಳನ್ನು ಒಟ್ಟಿಗೆ ತೆಗೆದುಕೊಂಡು ಅಲ್ಲಿ ರಿಸರ್ವೇಷನ್ ಇರಬೇಕೇ ಹೊರತು ವಿಷಯದ ಮೇಲೆ ಇರಬಾರದು ಎಂದು ಹೇಳುತ್ತೇನೆ.

ಶ್ರೀ ವಿನಯಕುಮಾರ್ ಸೊರ್ಕೆ:– ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ 15 ಪರ್ಸೆಂಟ್ ಮಾರ್ಕ್ಸ್ ಎಂದು ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಿದರು. ಆದರೆ ನಮ್ಮಲ್ಲಿ ಇತ್ತೀಚೆಗೆ ಪದವಿ ಪೂರ್ಣ ಉಪನ್ಯಾಸಕರನ್ನು ನೇಮಕ ಮಾಡುವ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ 10 ವರ್ಷ ಓದಿದ ಒಬ್ಬ ವಿದ್ಯಾರ್ಥಿಗೆ ತಾರತಮ್ಯ ಮಾಡಿದ್ದಾರೆ. ಆತ ಗ್ರಾಮಾಂತರದಲ್ಲಿ 10 ವರ್ಷ ಓದಿದ ವಿದ್ಯಾರ್ಥಿ. ಆದರೆ ಆ ಹಳ್ಳಿಯಲ್ಲಿ ಎಸ್‌ಎಸ್‌ಎಲ್‌ಸಿ ಸೆಂಟರ್ ಇಲ್ಲದಿದ್ದರಿಂದ ಪಟ್ಟಣದಲ್ಲಿ ಆತ ಪರೀಕ್ಷೆಗೆ ಕುಳಿತಿದ್ದಾನೆ. ಈ 15 ಪರ್ಸೆಂಟ್ ಬೆನಿಫಿಟ್ ಕೊಡುವಾಗ ಎಸ್‌ಎಸ್‌ಎಲ್‌ಸಿ ಮಾರ್ಕ್ಸ್ ಕಾರ್ಡ್ ಆಧಾರ ತೆಗೆದುಕೊಳ್ಳಬಾರದು. ಇಂತಹದ್ದನ್ನು ಸರಿಮಾಡಬೇಕೆಂದು ಹೇಳುತ್ತೇನೆ. ಇನ್ನು ಪುತ್ತೂರು ಹತ್ತಿರ ಸರ್ಕಾರ ಪಾಲಿಟೆಕ್ನಿಕ್ ಕಾಲೇಜು ಆಗಬೇಕೆಂದು ಪ್ರಸ್ತಾಪ ಮಾಡಿದ್ದೆ. ಆ

ಬಗ್ಗೆ ಮಾನ್ಯ ಸಚಿವರು ಭರವಸೆ ಕೊಟ್ಟಿದ್ದರು. ಒಂದು ವೇಳೆ ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಆಗುವುದಾದರೆ ಪ್ರಥಮ ಕಾಲೇಜು ತಮಗೆ ಕೊಡುತ್ತೇವೆಂದು ಹೇಳಿದ್ದರು. ಒಂದು ವೇಳೆ ಆಗುವುದಾದರೆ ಈ ವರ್ಷದಲ್ಲೇ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಮಾತನಾಡುತ್ತಾ ಸ್ವಾತಂತ್ರ್ಯ ಯೋಧರ ಮಕ್ಕಳಿಗೆ ರಿಸರ್ವೇಷನ್ ಕೊಡುವುದರ ಬಗ್ಗೆ ಹೇಳಿದರು. ಸ್ವಾತಂತ್ರ್ಯ ಯೋಧರ ಮಕ್ಕಳಿಗೆ ಎಂಜಿನಿಯರಿಂಗ್ ಮತ್ತು ಮೆಡಿಕಲ್ ರಿಸರ್ವೇಷನ್ ಕೊಡುವ ಸಂದರ್ಭದಲ್ಲಿ ಅವರ ಮಕ್ಕಳು ಇಲ್ಲದೇ ಇದ್ದರೆ ಅಂತಹ ಸಂದರ್ಭದಲ್ಲಿ ಅವರ ಮೊಮ್ಮಕ್ಕಳಿಗೆ ಕೊಡಬೇಕು. ದೇಶಕ್ಕೆ ಹೋರಾಟ ಮಾಡಿದ. ಸ್ವಾತಂತ್ರ್ಯ ಯೋಧರ ಮೊಮ್ಮಕ್ಕಳಿಗೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಇನ್ನು ಹಿರೇಕೆರೂರಿನಲ್ಲಿ 800 ವಿದ್ಯಾರ್ಥಿಗಳು ಓದುತ್ತಿರುವ ಡಿಗ್ರಿ ಕಾಲೇಜು ಇವತ್ತು ಗೋಡೋನ್‌ನಲ್ಲಿ ನಡೆಯುತ್ತಿದೆ. ಈ ಬಗ್ಗೆ ನಾನು ಪದೇ ಪದೇ ಮನವಿ ಮಾಡಿದ್ದು ಆದಷ್ಟು ಬೇಗೆ ಹಿರೇಕೆರೂರು ಡಿಗ್ರಿ ಕಾಲೇಜಿಗೆ ಕಟ್ಟದ ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಸಿದ್ದಯ್ಯ:- ಮಾನ್ಯ ಉಪಾಧ್ಯಕ್ಷರೇ, ಗ್ರಾಮಾಂತರ ಪ್ರದೇಶ ಮಕ್ಕಳಿಗೆ ಶೇಕಡ 15ರಷ್ಟು ಅಥವಾ 15 ಅಂಕಗಳನ್ನು ಕೊಡಲಾಗುವುದೆಂದು ಮಾನ್ಯಮಂತ್ರಿಗಳು ಹೇಳಿದರು. ಹಿಂದುಳಿದವರ್ಗ ಹಾಗೂ ಪರಿಜನಗಿರಿಜನರ ಅನೇಕ ಮಕ್ಕಳು ಹಳ್ಳಿಗಾಡಿನಿಂದ ಬಂದವರಾಗಿದ್ದು ಹಳ್ಳಿಗಳಲ್ಲಿ ಅನುಕೂಲ ಇಲ್ಲದಿರುವುದರಿಂದ ಪಟ್ಟಣಗಳಲ್ಲಿ ಹಾಸ್ಟಲ್‌ಗಳಲ್ಲಿ ಇದ್ದುಕೊಂಡು ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ. ಅವರು 15 ಅಂಕಗಳಿಂದ ವಂಚಿತರಾಗುತ್ತಾರೆ. ಅವರು ಹಳ್ಳಿಯವರು ಆದರೂ ಊರುಬಿಟ್ಟು ಬಂದು ಪಟ್ಟಣಗಳಲ್ಲಿ ಓದಿಕೊಂಡಿರುತ್ತಾರೆ. ಹಳ್ಳಿಗಳಲ್ಲಿ ಓದುವುದಕ್ಕೆ ಅನಾನುಕೂಲವಿರುವುದರಿಂದ ಅವರು ಪಟ್ಟಣಗಳಿಗೆ ಬಂದಿರುತ್ತಾರೆ. ಅಂತಹವರಿಗೆ ನೀವು 15 ಅಂಕಗಳನ್ನು ಕೊಡದಿದ್ದರೆ ನಿಜವಾಗಿಯೂ ಬಡಮಕ್ಕಳಿಗೆ ಹಳ್ಳಿಯಿಂದ ಬಂದವರಿಗೆ ಅನಕೂಲವಾಗುವುದಿಲ್ಲ. ಈ ಬಗ್ಗೆ ತಾವು ಸಿಂಪಥಿಟಿಕ್ ಕನ್ಸಿಡರೇಷನ್ ಮಾಡಬೇಕೆಂದು ಮಾನ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಗಂಗಪ್ಪ:- ಮಾನ್ಯ ಉಪಾಧ್ಯಕ್ಷರೇ, ಈ ಸರ್ಕಾರಿ ಕಾಲೇಜುಗಳಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಸೆಲೆಕ್ಷನ್ ಮಾಡಬೇಕಾದರೆ ಪಿಯುಸಿ ಬೋರ್ಡ್ ಮೂಲಕ ಸೆಲೆಕ್ಷನ್ ಆಗುತ್ತದೆ. ಈ ರೀತಿ ಮಾಡುವುದರಿಂದ ಗ್ರಾಮೀಣ ವಿದ್ಯಾರ್ಥಿಗಳು ಹೆಚ್ಚಿಗೆ ಸೆಲೆಕ್ಷನ್ ಆಗುವುದಿಲ್ಲ. ಬರೀ ಬೆಂಗಳೂರು, ಮೈಸೂರು, ಮಂಗಳೂರು ಭಾಗದ ಹುಡುಗರು ಹೆಚ್ಚಿಗೆ ಆಯ್ಕೆಯಾಗುತ್ತಾರೆ, ಹಿಂದೆ ಕರ್ನಾಟಕ ಯೂನಿವರ್ಸಿಟಿಯಲ್ಲಿ ಓದಿದವರು ಆ ಏರಿಯಾದಲ್ಲಿಯೇ ಆಯ್ಕೆಯಾಗ ಬೇಕಾಗಿತ್ತು. ಬೆಂಗಳೂರು ಯೂನಿವರ್ಸಿಟಿಯಲ್ಲಿ ಓದಿದವರು ಆ ಏರಿಯಾದಲ್ಲೇ ಆಯ್ಕೆಯಾಗಬೇಕಾಗಿತ್ತು. ಮೈಸೂರು ಯೂನಿವರ್ಸಿಟಿಯಲ್ಲಿ ಓದಿದವರು ಆ ಏರಿಯಾದಲ್ಲಿಯೇ ಆಯ್ಕೆಯಾಗಬೇಕಾಗಿತ್ತು. 1 ಸಾವಿರ ಸೀಟುಗಳು ಇದ್ದರೆ ಒಂದೊಂದು ಭಾಗಕ್ಕೆ ಇಷ್ಟು ಸೀಟುಗಳೆಂದು ಆಯಾ ಭಾಗದ ವಿದ್ಯಾರ್ಥಿಗಳು ಅಲ್ಲಿಯೇ ಸೆಲೆಕ್ಷನ್ ಆಗುವಂತೆ ಮಾಡುತ್ತಿದ್ದರು. ನಾಲ್ಕು ಡಿವಿಜನ್‌ಗಳಿಗೆ ಈಕ್ವಲ್ ಸೀಟುಗಳನ್ನು ಹಂಚಿ ಆ ಡಿವಿಜನ್‌ನವರು ಅಲ್ಲಿಯೇ ಸೆಲೆಕ್ಷನ್ ಆಗುವಂತೆ ಮಾಡಿದರೆ ಅನುಕೂಲವಾಗುತ್ತದೆ. ಹಾಗೆ ಮಾಡಿದರೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಜೊತೆಗೆ ಬೀದರ್, ಗುಲ್ಬರ್ಗ, ಬೆಳಗಾಂ ಡಿವಿಜನ್‌ದವರು ಅಲ್ಲಿಯೇ ಸೆಲೆಕ್ಷನ್ ಆಗುತ್ತಾರೆ. ಗುಲ್ಬರ್ಗದವರು ಅಲ್ಲಿಯೇ ಸೆಲೆಕ್ಷನ್ ಆಗುತ್ತಾರೆ. ಹಿಂದೆ ಯೂನಿವರ್ಸಿಟಿವೈಸ್ ಸೆಲೆಕ್ಷನ್ ಮಾಡುತ್ತಿದ್ದರು; ಆದೇರೀತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕರಿಯಣ್ಣ:- ಮಾನ್ಯ ಉಪಾಧ್ಯಕ್ಷರೆ, ಕುವೆಂಪು ಯೂನಿವರ್ಸಿಟಿ ಅಲ್ಲಿಗೆ ಮಾನ್ಯ ಮಂತ್ರಿಗಳು

ವಿಸಿಟ್ ಮಾಡಿದ್ದಾರೆ. ಅಲ್ಲಿ ಕಟ್ಟಡಗಳು ಅರ್ಧಂಬರ್ಧ ಆಗಿ ಹಾಗಿಯೇ ನಿಂತಿದೆ. ಇನ್ನೂ ಹಣ ಕೊಡಲಿಲ್ಲ. ಕುವೆಂಪು ಯೂನಿವರ್ಸಿಟಿ ಹೆಸರಿಗೆ ಮಾತ್ರ ಯೂನಿವರ್ಸಿಟಿ ಆಗಿದೆಯೇ ವಿನಹ ಬೇರೆ ಏನೂ ಡೆವಲಪ್‌ಮೆಂಟ್ ಆಗಿಲ್ಲ. ಅದಕ್ಕೆ ಹೆಚ್ಚಿನ ಹಣ ಕೊಟ್ಟು ಅದನ್ನು ಅಭಿವೃದ್ಧಿಪಡಿಸಬೇಕು. ಕುವೆಂಪು ಏನಿದ್ದಾರೆ ಅವರ ಹೆಸರಿಗೆ ಸ್ವಲ್ಪ ಗೌರವ ತರಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ಮತ್ತೊಂದು ವಿಚಾರ ಯೂನಿವರ್ಸಿಟಿ ಒಳಗಡೆ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರಿಗೆ ಅಪಾಯಿಂಟ್‌ಮೆಂಟ್ ಮಾಡಬೇಕಾದರೆ ಸುಪ್ರೀಂಕೋರ್ಟ್‌ನಲ್ಲಿ ಒಂದು ಡಿಸಿಷನ್ ಆಗಿದೆ. ಸಿಂಗಲ್ ಪೋಸ್ಟ್ ಇದ್ದರೆ ಅದಕ್ಕೆ ರಿಸರ್ವೇಷನ್ ಇಲ್ಲವೆಂದು. ಯೂನಿವರ್ಸಿಟಿಯಲ್ಲಿರತಕ್ಕ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಸಿಂಗಲ್‌ಪೋಸ್ಟ್ ಅಂದರೆ ಏನು ತಿಳಿದುಕೊಂಡಿದ್ದಾರೆಂದರೆ All professors posts are single post ಎಂದು ಮಾಡಿ. ಯೂನಿವರ್ಸಿಟಿಯಲ್ಲಿರತಕ್ಕ ಎಲ್ಲಾ ಟೋಟಲ್ ಪೋಸ್ಟ್‌ಗಳನ್ನು ಒಟ್ಟಾರೆ ಕೂಡಿಸಿ ಅದರ ಮೇಲೆ ರಿಸರ್ವೇಷನ್ ಮಾಡಬೇಕೇ ವಿನಹ ಇಂಡಿವಿಜಿಯಲ್ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕ ಪ್ರೊಫೆಸರ್ ಪೋಸ್ಟನ್ನು ಇಂಡಿವಿಜಿಯಲ್ ಪೋಸ್ಟ್ ಎಂದು ಟ್ರೀಟ್‌ಮಾಡಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರಿಗೆ ಅನ್ಯಾಯ ಮಾಡುತ್ತಿದ್ದಾರೆ. ಕಾರಣ ಏನೆಂದರೆ ಪ್ರೊಫೆಸರ್ ಪೋಸ್ಟ್ ಸ್ಯಾಲರಿ ಒಂದೇ ಸ್ಟೇಟಸ್ ಒಂದೇ ಪ್ರಮೋಷನ್ ಕೇಡರ್ ಒಂದೇ ಹೀಗಿರಬೇಕಾದರೆ University as a unit and not the Department as a unit ಎಂದು ಮಾಡಬಾರದು. ಅದರಿಂದ ಷೆಡ್ಯುಲ್ಡ್‌ಕ್ಯಾಸ್ಟ್ ಮತ್ತು ಷೆಡ್ಯುಲ್ಡ್‌ಟ್ರೈಬ್‌ನವರಿಗೆ ಅನ್ಯಾಯವಾಗುತ್ತದೆ. ಅದನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳತ್ತೇನೆ. ಹೊಳೇಹೊನ್ನೂರಿನಲ್ಲಿ ಫಸ್ಟ್‌ಗ್ರೇಡ್ ಕಾಲೇಜು ಶುರುವಾಗಿ ಮೂರು ವರ್ಷಗಳಾಗಿದೆ. ಅಲ್ಲಿ ಒಂದು ಷೆಡ್ಯುಲ್ಡ್‌ಕಾಸ್ಟ್ ಷೆಡ್ಯುಲ್ಡ್‌ಟ್ರೈಬ್ಸ್ ಹಾಸ್ಟಲ್ ನಡೆಸುತ್ತಿದ್ದಾರೆ. ಯಾವತ್ತು ಆ ಜಾಗ ಬಿಡಿಸುತ್ತಾರೋ ಗೊತ್ತಿಲ್ಲ. ದಯವಿಟ್ಟು ಕಟ್ಟಡ ಕಟ್ಟಿಸಿಕೊಡಿ. ಜಾಗ ಕೊಟ್ಟಿದ್ದೇವೆ, ನಾಲ್ಕು ಎಕರೆ ಜಾಗ ಕೊಟ್ಟಿದ್ದೇವೆ. ಫರ್ನಿಚರ್ ಎಲ್ಲಾ ಕೊಟ್ಟಿದ್ದೇವೆ. ನೀವು ದಯವಿಟ್ಟು ಒಂದು ಕಟ್ಟಡ ಕಟ್ಟುವುದಕ್ಕೆ ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ:– ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರ ಗುಬ್ಬಿ ನಗರದಲ್ಲಿ 1983ರಲ್ಲಿ ಗ್ರೇಡ್ ಕಾಲೇಜು ಪ್ರಾರಂಭ ಮಾಡಿದರೂ 1985ರಿಂದ ಕೇಳುತ್ತಿದ್ದೇವೆ. ಅಲ್ಲಿ ಒಂದು ಕಟ್ಟಡ ಬೇಕೆಂದು. ಸರ್ಕಾರದಿಂದ ಉತ್ತರ ಬರುತ್ತಿತ್ತು ಜಾಗವಿಲ್ಲವೆಂದು.10 ಎಕರೆ ಜಮೀನು ಕೊಡಿಸಿದ್ದೇವೆ. ಸುಮಾರು 800 ಜನ ವಿದ್ಯಾರ್ಥಿಗಳು ಇದ್ದಾರೆ. ಪ್ರೈಮರಿಸ್ಕೂಲಿನ ಒಂದೆರಡು ಕ್ಲಾಸ್‌ಗಳನ್ನು ಹೈಸ್ಕೂಲಿನಲ್ಲಿ, ಹೈಸ್ಕೂಲಿನ ಒಂದೆರಡು ಕ್ಲಾಸುಗಳನ್ನು ಜೂನಿಯರ್ ಕಾಲೇಜಿನಲ್ಲಿ ಮಾಡುತ್ತಿದ್ದಾರೆ. ಬಹಳ ತೊಂದರೆಯಾಗಿದೆ, ಮಾನ್ಯ ಮಂತ್ರಿಗಳು ಕೃಪೆ ಮಾಡಿ ಈ ವರ್ಷ ಬಿಲ್ಡಿಂಗ್ ಮಾಡಿಕೊಡುತ್ತೀರಾ ?

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಯಾಹ್ಯ ಸಾಹೇಬರು ಕಮಿಟೆಡ್ ಆಗಿ ಎಜುಕೇಷನ್ ಇಲಾಖೆಯನ್ನು ನಿರ್ವಹಿಸುತ್ತಾರೆನ್ನುವ ನಂಬಿಕೆ ಭರವಸೆ ಇದೆ. ತಮ್ಮ ಹತ್ತಿರ ನಾನು ಬಹಳ ಸಲ ಮಾತನಾಡಿದ್ದೇನೆ. ಯೂನಿವರ್ಸಿಟಿಗಳಲ್ಲಿ ಒಳ್ಳೆಯ ಹುದ್ದೆಗಳನ್ನು ಸಿಸ್ಟಮ್ಯಾಟಿಕ್ ಆಗಿ ಷೆಡ್ಯೂಲ್ಡ್‌ಕಾಸ್ಟ್‌ನವರಿಗೆ ತಪ್ಪಿಸಿಕೊಂಡು ಹೋಗುವ ರೀತಿಯಲ್ಲಿ ಮಾಡುತ್ತಿದ್ದಾರೆ. ಆ ಹುದ್ದೆಗಳಿಂದ ಅವರು ವಂಚಿತರಾಗುತ್ತಿದ್ದಾರೆ. ಯಾರು ರಿಸರ್ವೇಷನ್ ಕ್ಯಾಟಗರಿಯಲ್ಲಿ ಬರುತ್ತಾರೆ ಅಂತಹವರಿಗೆ ಈ ಹುದ್ದೆಗಳು ಸಿಗದೇ ಇರುವಂತೆ ಮಾಡಿ ಬೇರೆಯವರನ್ನು ತುಂಬುವಂತಹ ಒಂದು ಪರಿಪಾಠ ಎಲ್ಲಾ ಯೂನಿವರ್ಸಿಟಿಗಳಲ್ಲಿ ನಡೆದಿದೆ. ಇದರ ಬಗ್ಗೆ ಸಮಗ್ರವಾಗಿ ರಾಜ್ಯದಲ್ಲಿರತಕ್ಕ ಯೂನಿವರ್ಸಿಟಿಗಳಲ್ಲಿ ರೋಸ್ಟರ್ ವ್ಯವಸ್ಥೆಯಲ್ಲಿ ಎಲ್ಲೆಲ್ಲಿ ಕದ್ದುಮುಚ್ಚಿ ಗೊತ್ತಾಗದ ರೀತಿಯಲ್ಲಿ ಬೇರೆಯವರನ್ನು ತುಂಬಿರತಕ್ಕ ವರದಿಯನ್ನು ತರಿಸಿಕೊಂಡು ರೋಸ್ಟರ್ ರೀತಿಯಲ್ಲಿ ಹುದ್ದೆಗಳನ್ನು

ಭರ್ತಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ? ಎರಡನೆಯದು ಷೆಡ್ಯೂಲ್ಡ್‌ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಮ್ಯಾನೇಜ್‌ಮೆಂಟ್‌ನ ಹೆಸರಿನಲ್ಲಿ ಬಹಳ ಜನ ಜನರಲ್‌ನವರು ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಆದರಿಂದ ತೊಂದರೆ ಯಾರಿಗೆ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರಿಗೆ. ಷೆಡ್ಯೂಲ್ಡಕಾಸ್ಟ್ ಮತ್ತು ಷೆಡ್ಯೂಲ್ಡ್‌ಟ್ರೈಬ್‌ನವರಿಗೆ ಗ್ರಾಂಟ್ ಬೇಗ ಕೊಡತ್ತಾರೆಂದು ಇವರ ಹೆಸರಿನಲ್ಲಿ ಜನರಲ್‌ನವರು ಲಾಭ ಪಡೆಯುತ್ತಿದ್ದಾರೆ; ಗ್ರಾಂಟ್ ತೆಗೆದುಕೊಳ್ಳುತ್ತಿದ್ದಾರೆ.

ಇದು ಸಿಸ್ಟಮ್ಯೇಟಿಕ್ ಆಗಿ ಎಸ್‌ಸಿ: ಎಸ್‌ಟಿಯವರಿಗೆ ಆಗತಕ್ಕಂಥ ಅಪಚಾರ ಎಂದು ಹೇಳಬೇಕಾಗುತ್ತದೆ. ಈ ರೀತಿಯಿಂದ ಎಸ್‌ಸಿ: ಎಸ್‌ಟಿ ಹೆಸರಿನಲ್ಲಿ ದುರುಪಯೋಗ ಪಡೆಯತಕ್ಕದ್ದು, ಅದರ ಲಾಭ ಪಡೆಯತಕ್ಕದ್ದು, ಉಚಿತ ಪ್ರಸಾದ ನಿಲಯ ಅಂತ ಬೋರ್ಡು ಹಾಕಿಕೊಂಡಿರುತ್ತಾರೆ. ಎಸ್‌ಸಿ: ಎಸ್‌ಟಿ ಮ್ಯಾನೇಜ್‌ಮೆಂಟ್ ಇಟ್ಟುಕೊಂಡಿರುತ್ತಾರೆ. ಈ ಮ್ಯಾನೇಜ್‌ಮೆಂಟ್‌ನಲ್ಲಿ ಯಾರು ಇರುತ್ತಾರೆ ಎಂದರೆ, ಊರಿನ ದನಕಾಯುವ ಯಾರೋ ಹುಡುಗರನ್ನು ಮ್ಯಾನೇಜ್‌ಮೆಂಟ್‌ನಲ್ಲಿ ಇಟ್ಟುಕೊಂಡಿರುತ್ತಾರೆ. ಗ್ರಾಂಟ್ ಬರುವ ಟೈಮ್‌ನಲ್ಲಿ ಅವರಿಂದ ಸೈನ್ ಮಾಡಿಸಿಕೊಳ್ಳುತ್ತಾರೆ. ಈ ರೀತಿ ಎಸ್‌ಸಿಎಸ್‌ಟಿ ಫೇಕ್ ಮ್ಯಾನೇಜ್‌ಮೆಂಟ್‌ಗಳು ಬಂದು ಲಕ್ಷಗಟ್ಟಲೆ, ಕೋಟಿಗಟ್ಟಲೆ ಗ್ರಾಂಟ್‌ಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇದು ಯುನಿವರ್ಸಿಟಿ ಲೆವಲ್‌ನಲ್ಲಿಯೂ ನಡೆಯುತ್ತದೆ ಮತ್ತೆ ಯು.ಜಿ.ಸಿ. ಗ್ರಾಂಟ್‌ನಲ್ಲಿಯೂ ಈ ರೀತಿ ನಡೆಯುತ್ತದೆ. ಇದರ ಬಗ್ಗೆ ತಾವು ತನಿಖೆಯ ಮಾಡಬೇಕು, ಎರಡನೆಯದಾಗಿ ಬ್ಯಾಕ್‌ಲ್ಯಾಗ್ ವೆಕೆನ್ಸಿಗಳನ್ನು ತುಂಬಬೇಕೆಂದು ಬಹಳ ಸದಸ್ಯರು ಮಾತನಾಡಿದ್ದಾರೆ. ರೋಸ್ಟರ್ ಬಗ್ಗೆ, ಬ್ಯಾಕ್‌ಲಾಗ್ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿ. ತಾವು ಕಮಿಟೆಡ್ ಆಗಿದ್ದೀರೆಂದು ಈ ಮಾತನ್ನು ಹೇಳುತ್ತಿದ್ದೇನೆ. ದಯಮಾಡಿ ನಿಖರವಾಗಿ ಎಷ್ಟು ವೆಕೆನ್ಸಿಗಳಿವೆ, ಇದಕ್ಕೆ ಒಂದು ಟೈಮ್ ಬೌಂಡ್ ಪ್ರೋಗ್ರಾಮ್ ಹಾಕಿ ತಾವು ಈ ವರ್ಷದಲ್ಲೇ ಇವುಗಳನ್ನು ತುಂಬುತ್ತೀರಾ ಎಂದು ಸದನಕ್ಕೆ ತಿಳಿಸಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ:- ಈ ಓಪನ್ ಯೂನಿವರ್ಸಿಟಿ ಬಗ್ಗೆ ಸರ್ಕಾರದ ತೀರ್ಮಾನ ಏನಾಯಿತೆಂದು ಸನ್ಮಾನ್ಯ ಮಂತ್ರಿಗಳು ಸಭೆಗೆ ತಿಳಿಸುತ್ತಾರೆಯೇ ? ಏಕೆಂದರೆ ಮೂರು ತಿಂಗಳ ಒಳಗೆ ರಿಪೋರ್ಟ್ ಕೊಡಬೇಕೆಂದು ಹೇಳಿ ಎರಡು ವರ್ಷ ದಾಟಿದೆ. ಇದರ ಬಗ್ಗೆ ಏನಾದರೂ ತೀರ್ಮಾನ ಮಾಡಿದ್ದರೆ ದಯವಿಟ್ಟು ತಿಳಿಸಬೇಕು.

ಶ್ರೀ ಕೆ. ಗಂಗಾಧರಗೌಡ:- ಅಧ್ಯಕ್ಷರೇ, ನಮಗೆ ಪ್ರಶ್ನೆ ಕೇಳುವುದಕ್ಕೆ ಅಥವಾ ಉಪಪ್ರಶ್ನೆ ಕೇಳುವುದಕ್ಕೆ ಈ ಸದನದಲ್ಲಿ ಅವಕಾಶ ಇಲ್ಲ. ಕ್ಲಾರಿಫಿಕೇಷನ್ ಕೂಡ ಕೇಳುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ ?

ಉಪಾಧ್ಯಕ್ಷರು:- ಕೇಳಿ.

ಶ್ರೀ ಕೆ. ಗಂಗಾಧರಗೌಡ:- ಈಗ ಅವಕಾಶ ಕೊಟ್ಟದ್ದು ಕೂಡ ಬಹಳ ಕಷ್ಟವಾಗಿ ಕೊಟ್ಟಿದ್ದೀರಿ. ಕಾಲೇಜುಗಳಿಗೆ, ಜೂನಿಯರ್ ಕಾಲೇಜುಗಳಿಗೆ ಕಟ್ಟಡಗಳನ್ನು ಕೊಡುತ್ತಿದ್ದೀರಿ. ಕಟ್ಟಡ ಕೊಡುವಂಥ ಕ್ರೈಟೇರಿಯಾ ಏನು ? ಮೊನ್ನೆಮೊನ್ನೆ ಮಂಜೂರಾದಂಥ ಕಾಲೇಜುಗಳಿಗೆ ಬಜೆಟ್‌ನಲ್ಲಿ ನೋಡಿದರೆ ಕಟ್ಟಡ ಒದಗಿಸಿದ್ದೀರಿ. ಹತ್ತು-ಹದಿನೈದು ವರ್ಷಗಳಿಂದ ಮಂಜೂರಾದಂಥ ಕಾಲೇಜುಗಳಿಗೆ ಕಟ್ಟಡ ಇಲ್ಲ. ಇದು ಬಹಳ ತಾರತಮ್ಯವಾಗಿದೆ. ಇದೇನು ರಾಜಕೀಯ ಪ್ರಭಾವದಿಂದ ಕಾಲೇಜುಗಳಿಗೆ ಕಟ್ಟಡ ಮಂಜೂರು ಆಗುತ್ತದೆಯೇ ಹೇಗೆ ದಯವಿಟ್ಟು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಸ್.ಎಂ. ಯಾಹ್ಯಾ:- ಮುಖ್ಯವಾಗಿ ಮೂವರು ಮಾನ್ಯ ಸದಸ್ಯರು ರಿಸರ್ವೇಷನ್ ಮತ್ತು ಎಸ್‌ಸಿ:ಎಸ್‌ಟಿಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಹೇಳಿದ್ದಾರೆ. ಯೂನಿವರ್ಸಿಟಿ ಮತ್ತು ಇತರ ಕಡೆ ರೋಸ್ಟರ್ ಸಿಸ್ಟಮ್‌ನ್ನು ನಾವು ಲಾಗು ಮಾಡಿ ಚೆನ್ನಾಗಿ ನಡೆಯುತ್ತಿದೆ. ಎಲ್ಲಿ ಪ್ರಾಬ್ಲಮ್ ಬರುತ್ತಿದೆ

ಎಂದರೆ. ಲೆಕ್ಚರರ್ಸ್ ಎಲ್ಲಿದ್ದಾರೆ. ಅಲ್ಲಿ ಪ್ರಾಬ್ಲಮ್ ಇಲ್ಲ. ರೀಡರ್ಸ್ ಎಲ್ಲಿದ್ದಾರೆ. ಅಲ್ಲಿ ರೋಸ್ಟರ್ ಸಿಸ್ಟಮ್ ಪ್ರಕಾರ ಕೊಡುತ್ತಿದ್ದೇವೆ. ಎಲ್ಲಿ ಪ್ರೊಫೆಸರ್ಸ್ ಒಂದೊಂದು ಕಡೆ ಒಬ್ಬರೇ ಇದ್ದರೆ, ಅಲ್ಲಿ ಸುಪ್ರೀಂ ಕೋರ್ಟಿನ ಒಂದು ತೀರ್ಮಾನ ಇದೆ; ಒಂದೇ ಪೋಸ್ಟ ಇದ್ದರೆ ರಿಸರ್ವೇಷನ್ ಇಲ್ಲ ಎಂದು.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ:– ಲೆಕ್ಚರರ್ಸ್, ರೀಡರ್ಸ್‌ಗೆ ಅಪ್ಲೈ ಮಾಡಿದ್ದೇವೆ ಎಂದು ಹೇಳಿದ್ದೀರಿ. ರೋಸ್ಟರ್ ಸಿಸ್ಟಮ್ ಅಪ್ಲೈ ಮಾಡುವುದಕ್ಕೆ ಅವರು ಏನು ಮಾಡಿದ್ದಾರೆ ಎಂದರೆ, ಯಾವ ಸಬ್ಜೆಕ್ಟ್‌ನಲ್ಲಿ ಎಸ್‌ಸಿ ಎಸ್‌ಟಿಯವರು ಸಿಗುವುದಿಲ್ಲ, ಆ ಸಬ್ಜೆಕ್ಟ್‌ನಲ್ಲಿ ರಿಸರ್ವೇಷನ್ ತೋರಿಸುತ್ತಾರೆ.

ಶ್ರೀ ಕರಿಯಣ್ಣ:– ತಾವು ಹಿರಿಯರೂ, ಅನುಭವಶಾಲಿಗಳೂ ಇದ್ದೀರಿ. ನೀವು ಎಸ್‌ಸಿ/ಎಸ್‌ಟಿಗೆ ರಿಸರ್ವೇಷನ್ ಇಲ್ಲದ ಹಾಗೆ ಮಾಡಿಬಿಟ್ಟರೆ ಹೇಗೆ? ಸಿಂಗಲ್ ಪೋಸ್ಟ್‌ನ್ನು ಯೂನಿಟ್ ಆಗಿ ಮಾಡಿಕೊಂಡು ಹೋದರೆ, ಸುಪ್ರೀಂ ಕೋರ್ಟ್ ಡಿಸಿಷನ್ ಪ್ರಕಾರ ಪ್ರೊಫೆಸರ್ ಪೋಸ್ಟ್‌ಗೆ ಒಬ್ಬರೂ ಎಸ್‌ಸಿ: ಎಸ್‌ಟಿಯವರು ಸಿಗುವುದಿಲ್ಲ. ತಾವು ಹಿರಿಯರಿದ್ದೀರಿ. ನಮಗೆ ಮಾರ್ಗದರ್ಶನ ತೋರಿಸಬೇಕು.

(ಗೊಂದಲ)

ಶ್ರೀ ಎಸ್.ಎಂ. ಯಾಹ್ಯಾ:– ನಾನು ಇನ್ನೂ ಉತ್ತರ ಕೊಟ್ಟಿಲ್ಲ. ಅದಕ್ಕಾಗಿ ಈ ಪ್ರಾಬ್ಲಮ್ ಬರುವುದಿಲ್ಲ. ಲೆಕ್ಚರ್‌ರ್ಸ ಸ್ಟೇಜ್‌ನಲ್ಲಿ ಬರುವುದಿಲ್ಲ, ರೀಡರ್ಸ್ ಸ್ಟೇಜ್‌ನಲ್ಲಿ ಬರುವುದಿಲ್ಲ, ಪ್ರೊಫೆಸರ್ಸ್ ಸ್ಟೇಜ್‌ನಲ್ಲಿ ಬಂದಿದೆ. ಇದು ಗುಲ್ಬರ್ಗಾ ಯೂನಿವರ್ಸಿಟಿಯಲ್ಲಿ ಬಂದಿದೆ. ಅಲ್ಲಿ ಇಪ್ಪತ್ತು ಡಿಪಾರ್ಟಮೆಂಟ್‌ಗಳು ಇದ್ದು, ಒಬ್ಬೊಬ್ಬರೇ ಇದ್ದಾರೆ.

4.20 ಪಿಎಂ

ಅದನ್ನು ವಿಚಾರ ಮಾಡಿಕೊಂಡು, ಲಾ ಡಿಪಾರ್ಟ್‌ಮೆಂಟಿಗೆ ತೋರಿಸಿ, ಯಾವುದಾದರೂ ವಿಚಾರದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಆ ರೀತಿ ಅನ್ಯಾಯವಾಗಬಾರದೆಂದು, ಲಾ ಡಿಪಾರ್ಟ್‌ಮೆಂಟ್‌ಗೆ ರೆಫರ್ ಮಾಡಿದ್ದೇವೆ. ಅವರಿಂದ, ಸಲಹೆ ಬಂದಕೂಡಲೇ ಅದನ್ನು ನಾವು ಕೂಲಂಕುಷವಾದ ರೀತಿಯಲ್ಲಿ ವಿಚಾರ ಮಾಡುತ್ತೇವೆ. ನಮ್ಮಲ್ಲಿ ಈಗಾಗಲೇ ಒಂದು ಫಾರ್ಮುಲಾ ಇದೆ. ಲಾ ಡಿಪಾರ್ಟ್‌ಮೆಂಟ್‌ನಿಂದ ಅದು ಬರಲಿ ಎಂದು ಸುಮ್ಮನೆ ಕಾಯ್ದುಕೊಂಡಿದ್ದೇವೆ.

ಶ್ರೀ ಕರಿಯಣ್ಣ:– ಲೆಕ್ಚರರ್ಸ್ ಪೋಸ್ಟ್‌ಗೆ ನೇಮಕ ಮಾಡಿಕೊಳ್ಳುತ್ತೀರಿ. ಹಿಂದಿ, ಕನ್ನಡ, ಇಂಗ್ಲೀಷ್, ಪೊಲಿಟಿಕಲ್ ಲೆಕ್ಚರರ್ಸ್ ಇರುತ್ತಾರೆ. There also various Departments. ಈ ಲೆಕ್ಚರರ್ಸ್ ಒಂದು ಪೂಲ್ ಮಾಡಿದ್ದೀರಿ. ಹಾಗೆಯೇ ಪ್ರೊಫೆಸರ್ಸ್ ಸಹಿತ ವಿವಿಧ ಡಿಪಾರ್ಟ್‌ಮೆಂಟ್ಸ್‌ನಲ್ಲಿರುತ್ತಾರೆ. ಅಲ್ಲೂ ಪೂಲ್ ಮಾಡಿ, ಪೊಲಿಟಿಕಲ್, ಎಕನಾಮಿಕ್ಸ್ ಲೆಕ್ಚರರ್ಸ್ ಇದ್ದಾರೆ, You have grouped the lecturers. ಪ್ರೊಫೆಸರ್ಸ್‌ಗೂ ಇದೇ ರೀತಿ ಗ್ರೂಪ್ ಮಾಡಿ, ಮುಗಿದುಹೋಗುತ್ತದೆ.

ಶ್ರೀಮತಿ ಮೋಟಮ್ಮ:– ಮಾನ್ಯ ಅಧ್ಯಕ್ಷರೇ, ಮಾನ್ಯಮಂತ್ರಿಗಳು ಉತ್ತರ ಹೇಳುತ್ತಾ, ಎಲ್ಲಾ ಯುನಿವರ್ಸಿಟಿಗಳಲ್ಲೂ, ಹೆಚ್ಚುಕಡಿಮೆ ಕೆಲವೊಂದು ಪೋಸ್ಟ್‌ಗಳಲ್ಲಿ ರಿಸರ್ವೇಷನ್ ಫಾಲೋ ಮಾಡಿದ್ದೇವೆ, ಆದರೆ, ಕೆಲವಾರು ಪೋಸ್ಟ್‌ಗಳಲ್ಲಿ ಮಾಡುವುದಕ್ಕಾಗುತ್ತಾ ಇಲ್ಲವೆಂದು ಹೇಳಿದರು. ರೀಡರ್ಸ ಮತ್ತು ಪ್ರೊಫೆಸರ್ಸ್ ಹುದ್ದೆಯನ್ನು ಎಂಬ ಮಾತು ಹೇಳಿದರು. ನೀವು ಎಲ್ಲಾ ಯೂನಿವರ್ಸಿಟಿಯವರನ್ನೂ ಕರೆದು ವಿಚಾರ ಮಾಡಿದ್ದೀರಾ ? ಗುಲ್ಬರ್ಗಾ, ಮಂಗಳೂರು, ಮೈಸೂರು ಯೂನಿವರ್ಸಿಟಿಯವರನ್ನು ನಾವು ಕರೆದು ವಿಚಾರ ಮಾಡಿದ್ದೇವೆ. ನಿಜ ಹೇಳಬೇಕೆಂದರೆ ಗುಲ್ಬರ್ಗ ಯೂನಿವರ್ಸಿಟಿಯವರು ಈ ಹರಿಜನ ಗಿರಿಜನರಿಗೆ ಅನ್ಯಾಯ ಮಾಡಿದಷ್ಟು ಬೇರೆ ಯಾವ

ಯೂನಿವರ್ಸಿಟಿಯವರೂ ಅನ್ಯಾಯ ಮಾಡಿಲ್ಲ. ಮಂಗಳೂರು ಯೂನಿವರ್ಸಿಟಿಯವರು ಏನು ಮಾಡಿದ್ದಾರೆ, ಕಾಲ್ ಫಾರ್ ಮಾಡಿದ್ದಾರೆ. ಆದರೆ ಅಭ್ಯರ್ಥಿಗಳು ಇಲ್ಲ ಎಂದು, ಕೆಲವಾರು ಹುದ್ದೆಗಳನ್ನು ಭರ್ತಿ ಮಾಡಿಲ್ಲ. ನಮ್ಮ ಕಮಿಟಿ ವತಿಯಿಂದ ನಾವು ರಿವ್ಯೂ ಮಾಡಿದ್ದೇವೆ. ಇದು ಮಾನ್ಯಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ದಯಮಾಡಿ, ಇನ್ನೊಮ್ಮೆ ತಾವು ತೆಗೆಸಿ ನೋಡಿ. ಗುಲ್ಬರ್ಗಾ ಯೂನಿವರ್ಸಿಟಿಯಲ್ಲಿಯೂ ಸಹಿತ ಈಗ್ಗೆ 6 ತಿಂಗಳ ಹಿಂದೆ ಇದೇರೀತಿ ರಿಸರ್ವೇಷನ್ ಓವರ್‌ಲುಕ್ ಮಾಡಿ, ಪೋಸ್ಟ್ ಭರ್ತಿ ಮಾಡುವುದಕ್ಕೆ ಹೋದಾಗ, ಅದಕ್ಕೆ ತಡೆಯಾಜ್ಞೆ ಮಾಡಿಸಿದ್ದೇವೆ. ಹಾಗೆಯೇ ಅಗ್ರಿಕಲ್ಚರಲ್ ಯೂನಿವರ್ಸಿಟಿ ತೆಗೆದುಕೊಳ್ಳಿ, ಅಲ್ಲಿ ಏನು ಮಾಡಿದ್ದಾರೆಂದು ಗೊತ್ತಾಗುತ್ತದೆ. ಅಲ್ಲಿ ಏನು ಅನ್ಯಾಯವಾಗುತ್ತಿದೆ. ಎಂಬುದು ತಿಳಿಯುತ್ತದೆ. ಆದ್ದರಿಂದ, ತಾವು ದಯಮಾಡಿ ಎಲ್ಲಾ ಯೂನಿವರ್ಸಿಟಿಯವರನ್ನು ಕರೆದು ಮಾತನಾಡಿ, ಯಾರು ರಿಸರ್ವೇಷನ್ ಫಾಲೋ ಮಾಡುತ್ತಾ ಇಲ್ಲ,ಅಂತಹವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್.ಎಂ. ಯಾಹ್ಯಾ:– ಮಾನ್ಯ ಅಧ್ಯಕ್ಷರೇ, ಸರ್ಕಾರದ ಎಲ್ಲಾ ನೀತಿ ಒಂದೇ. ಸಂವಿಧಾನದಲ್ಲಿ ಈ ಹರಿಜನ ಗಿರಿಜನರಿಗೆ ಯಾವರೀತಿಯಲ್ಲಿ ಗ್ಯಾರಂಟಿ ಇದೆಯೋ, ಖಂಡಿತವಾಗಿಯೂ ಇದೇರೀತಿಯಲ್ಲಿ ಆಗಬೇಕೆಂದು ಹೇಳುವುದೇ ಸರ್ಕಾರದ ನೀತಿ. ಇದು ಎಲ್ಲಾದರೂ ತಪ್ಪಿಹೋಗುವ ಕಡೆ, ಅದನ್ನು ಸರಿಮಾಡಿಕೊಂಡು ಹೋಗುವುದು ನಮ್ಮ ನೀತಿ. ತಮಗೂ ಗೊತ್ತಿದೆ. ಕೊಲಿಜಿಯೇಟ್ ಎಜುಕೇಷನ್‌ನಲ್ಲಿ, ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಿ, ಬ್ಯಾಕ್‌ಲಾಗ್ 235 ಎಸ್.ಸಿ. ಹುದ್ದೆಗಳನ್ನು ತೆಗೆದುಕೊಂಡಿದ್ದೇವೆ. ಇದನ್ನು ನೀವೆಲ್ಲರೂ ನೋಡಿರಬಹುದು, ಕೇಳಿರಬಹುದು. ಇದು ಕಡಿಮೆಯಾಗಿ, 70ಕ್ಕೆ ಮಾತ್ರ ಬಂದಿದೆ. ಇದನ್ನೂ ಸಹ ಬರುವ ರೆಕ್ರೂಟ್‌ಮೆಂಟ್‌ನಲ್ಲಿ ಸರಿ ಮಾಡಿಕೊಡುತ್ತೇವೆಂದು ಹೇಳುತ್ತಿದ್ದೇನೆ. ಇನ್ನು ಪ್ರೊಫೆಸರ್ಸ್ ಹುದ್ದೆಯ ವಿಚಾರವಾಗಿ ಲಾ ಡಿಪಾರ್ಟ್‌ಮೆಂಟ್‌ಗೆ ಹೋಗಿದೆ. ನಾವು ಇದರ ಬಗ್ಗೆಯೂ ವಿಚಾರ ಮಾಡಿಕೊಂಡಿದ್ದೇವೆ. ಇವರಿಗೆ ಸೂಕ್ತವಾದ ರೀತಿಯಲ್ಲಿ, 18 ಪರ್ಸೆಂಟ್ ಏನಿದೆ, ಅದಕ್ಕಿಂತ ಕಡಿಮೆ ಆಗದಹಾಗೆ ತುಂಬಬೇಕೆಂದು ಒಂದು ಫಾರ್ಮುಲಾ ಹುಡುಕುತ್ತಿದ್ದೇವೆ. ಅದು ಸಿಕ್ಕಿದ ನಂತರ ಪ್ರಕಟಣೆ ಮಾಡುತ್ತೇನೆ. ಮತ್ತೆ ಕೆಲವಾರು ಜನರು ಕಾಲೇಜು ಕಟ್ಟಡದ ವಿಚಾರ ಹೇಳಿದ್ದಾರೆ. ನಾನು ಸತ್ಯವಾಗಿ ಹೇಳುವುದಾದರೆ, ನಮ್ಮಲ್ಲಿ 98% of my budget goes only to the salary Rs. 203 crore. I am getting; out of which, Rs.200.60 crores goes to the salary and what is left out is only Rs.2.2 crores. There are 34 college buidings which are under construction. I have already talked to the Chief Minister and if I get another 45 crores more, certainly all the demands of our hon'ble members will be met.

ಅದೇ ರೀತಿಯಲ್ಲಿ ಗುಬ್ಬಿಯಲ್ಲಿ ಆಗಲಿ, ದಕ್ಷಿಣ ಕನ್ನಡದಲ್ಲಿ ಆಗಲಿ ಎಲ್ಲಾ ಕಡೆ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಅದೇ ರೀತಿಯಲ್ಲಿ ಪುತ್ತೂರಿನಲ್ಲಿ ಹೊಸದಾಗಿ ಪಾಲಿಟೆಕ್ನಿಕ್ ಆಗಬೇಕು, ವರ್ಲ್ಡ್ ಬ್ಯಾಂಕ್‌ನಿಂದ ಹಳೆಯ ಪಾಲಿಟೆಕ್ನಿಕ್‌ಗಳಿಗೆ ಮಾತ್ರ ಹಣ ಬರುತ್ತಿದೆ. ಇನ್ನು ಹೊಸ ಪಾಲಿಟೆಕ್ನಿಕ್ ಮಾಡುವ ಬಗ್ಗೆ ನನ್ನ ಪ್ರಾಮಿಸ್ ನಿಮಗೆ ಇದೆ. ಅದನ್ನು ಇಟ್ಟುಕೊಳ್ಳಿ ಅಂತ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಕುವೆಂಪು ಯೂನಿವರ್ಸಿಟಿ ಬಗ್ಗೆ ಹೇಳುವುದಾದರೆ ಇದು 5 ವರ್ಷಗಳ ಯೂನಿವರ್ಸಿಟಿ. ಒಂದು ಯೂನಿವರ್ಸಿಟಿ ಮುಂದೆ ಬರಬೇಕಾದರೆ 25–30 ವರ್ಷಗಳಾಗುತ್ತದೆ. ಕುವೆಂಪು ಯೂನಿವರ್ಸಿಟಿಯಲ್ಲಿ ಸಾಕಷ್ಟು ಕೆಲಸ ನಡೆಯುತ್ತಿದೆ. ಇದಕ್ಕೆ ಯುಜಿಸಿ ಗ್ರ್ಯಾಂಟ್ ಬರಲಿಕ್ಕೆ ಆಗಿಲ್ಲ. ಅಲ್ಲಿ ಸರಿಯಾದ ಇನ್‌ಫ್ರಾಸ್ಟ್ರಕ್ಚರ್ ಇಲ್ಲದ ಮೇಲೆ ಅದು ಯುಜಿಸಿ ಗ್ರ್ಯಾಂಟ್‌ಗೆ ಬರುವುದಕ್ಕೆ ಸಾಧ್ಯವಿಲ್ಲ. ಯುಜಿಸಿ ಲಿಸ್ಟ್‌ನಲ್ಲಿ ಕುವೆಂಪು ಯೂನಿವರ್ಸಿಟಿ ಇಲ್ಲ. ಒಂದು ಸಲ ಯು.ಜಿ.ಸಿ ಗ್ರ್ಯಾಂಟ್‌ಗೆ ಬಂದರೆ ನಿಮ್ಮ ಬಿಲ್ಡಿಂಗ್ ಹೆಚಾಗುತವೆ.

ಈಗ ನಮ್ಮ ಸರ್ಕಾರದ ಹಣದಿಂದ ಖರ್ಚುಮಾಡುತ್ತಿದ್ದೇವೆ. ಅದಕ್ಕೆ ಸ್ವಲ್ಪ ಸ್ಲೋ ಆಗಿರಬಹುದು. ಇನ್ನು ಮೇಲೆ ನೀವು ಸ್ವಲ್ಪ ಜೋರಾಗಿ ಮಾಡಬೇಕು. ಇನ್ನು ಹೆಚ್ಚು ವೇಗದಲ್ಲಿ ಬಿಲ್ಡಿಂಗ್ಸ್ ಆಗುವ ರೀತಿಯಲ್ಲಿ ಮಾಡುತ್ತೇನೆ ಅಂತ ಹೇಳುತ್ತೇನೆ. ಇನ್ನು ಮಾನ್ಯ ಅನಂತಕೃಷ್ಣರವರು ಒಂದು ಸೂಕ್ತವಾದ ವಿಚಾರವನ್ನು ಹೇಳಿದ್ದಾರೆ. ವಕ್ಫ್ ಪ್ರಾಪರ್ಟಿ ಮಿಸ್‌ಯೂಸ್ ಆಗುತ್ತಿದೆ. ಎನ್‌ಕ್ರೋಚ್ ಆಗುತ್ತಿದೆ. ಇದರಿಂದ ಯಾವ ಕಮ್ಯುನಿಟಿಗೆ ಲಾಭವಾಗಬೇಕಾಗಿತ್ತೋ ಆ ಕಮ್ಯುನಿಟಿಗೆ ಲಾಭ ಆಗಿಲ್ಲ ಅಂತ ಹೇಳಿದ್ದಾರೆ. ಈ ವಿಚಾರ ಬಹಳ ವರ್ಷಗಳಿಂದ ನಡೆಯುತ್ತಿದೆ. ವಕ್ಫ ಕೌನ್ಸಿಲ್ ಆಫ್ ಇಂಡಿಯಾ ಬಂದ ಕೂಡ ಕೋಟ್ಯಾಂತರ ರೂಪಾಯಿ ಬರುತ್ತದೆ. ನಮ್ಮ ವಕ್ಫ್ ಕೌನ್ಸಿಲ್‌ನಲ್ಲೂ ಕೂಡ ಹಣ ಇದೆ. ಇದರಲ್ಲಿ ಯಾವ ಯಾವುದು ಎನ್‌ಕ್ರೋಚ್ ಆಗಿದೆ ಅದಕ್ಕೆ ನಾವು ಪುನಃ ಒಂದು ಸ್ಟ್ಯಾಟುಟರಿ ರೀತಿಯಲ್ಲಿ ರೀ ಸರ್ವೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಅದು ಪರ್ಮನೆಂಟ್ ಆಗಿ ಆಗಬೇಕು. ಎಲ್ಲೆಲ್ಲಿ ಪ್ರಾಪರ್ಟಿ ಹೋಗಿದೆ ಯಾರ ಕಡೆ ಹೋಗಿದೆ ಅಂತಾದ್ದಕ್ಕೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಪರ್ಮನೆಂಟ್ ಸೆಲ್ ಮಾಡಿ ಇದನ್ನೆಲ್ಲಾ ಸೇಫ್‌ಗಾರ್ಡ್ ಮಾಡಬೇಕು; ಪ್ರಿಸರ್ವ್ ಮಾಡಬೇಕು ಒಂದು. ಎರಡನೆಯದು ಈ ಪ್ರಾಪರ್ಟಿ ಪ್ರಾಪರ್ ಯುಟಿಲೈಸೇಷನ್ ಮಾಡಬೇಕಾಗಿದೆ. ನೀವು ಹೇಳುವುದು ಸೂಕ್ತ. ಅದಕ್ಕೆ ಸರ್ಕಾರ ಪರ್ಮನೆಂಟ್ ಒಂದು ಸೆಲ್ ಮಾಡಿ ಸರ್ವೆ ಕಂಟಿನ್ಯೂಯಸ್ ಆಗಿ ಮಾಡಿ ಇದನ್ನು ಸೇಫ್‌ಗಾರ್ಡ ಮಾಡುವ ರೀತಿಯಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಇನ್ನು ಸ್ಟಾಪ್‌ಗ್ಯಾಪ್ ಬಗ್ಗೆ ಎಲ್ಲೆಲ್ಲಿ ಈ ತೊಂದರೆ ಇದೆ ಈ ಬಗ್ಗೆ ನಾನು ಡೈರೆಕ್ಟರ್‌ಗೆ ಹೇಳಿದ್ದೇನೆ. ಅದೂ ಸ್ಪೆಸಿಫಿಕ್ ಆಗಿ ಇರತಕ್ಕಂಥದ್ದರ ಬಗ್ಗೆ ನಾನು ಹೇಳಿದ್ದೇನೆ. ಇನ್ನು ಓಪನ್ ಯೂನಿವರ್ಸಿಟಿ ಬಗ್ಗೆ ನಾನೂ ಕೂಡ ಮೆಂಬರ್ ಆಗಿದ್ದೇನೆ. ಆ ಸಮಿತಿಯಲ್ಲಿ ನಾವು ಒಂದು ಮೀಟಿಂಗ್ ಮಾಡಿ ಫೈನಲ್ ಮಾಡಿ ಅಕ್ಯಾಡೆಮಿಕ್ ವರ್ಷದಲ್ಲಿ ಆಗುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇನೆ. ಇನ್ನು ಡಾಕ್ಟರ್ ನಂಜಪ್ಪನವರು ಹೇಳಿದರು ರೂರಲ್ ಏರಿಯಾದಲ್ಲಿ ಗೌರ್ನಮೆಂಟ್ ಕಾಲೇಜು ಮಾಡಬೇಕು ಎಂದು, ಅದರ ತತ್ವ ಇಷ್ಟೇ ಇದೆ. ಕಾಲೇಜುಗಳು ಬಹಳಷ್ಟು ಆಗಿದೆ. ಎಲ್ಲೆಲ್ಲಿ ಹೆಚ್ಚು ಕಾಲೇಜುಗಳು ಆಗಿವೆ ಅಲ್ಲಿ ಹುಡುಗರು ಸಿಗುತ್ತಿಲ್ಲ. ನಿಮ್ಮ ಮಾತಿನಲ್ಲಿ ಅರ್ಥ ಇದೆ. ನಾನು ಹೇಳುವುದು ಸ್ವಲ್ಪ ಕೇಳಿಕೊಳ್ಳಿ. ನಿಮಗೆ ಹೇಳಬೇಕಾದರೆ ರಾಣಿಬೆನ್ನೂರಿನಲ್ಲಿ ಮೂರು ವುಮೆನ್ಸ್ ಕಾಲೇಜುಗಳು ಇವೆ. ಮೊದಲು ಎರಡು ಇತ್ತು ಅಲ್ಲಿ ಈಗ ಮೂರು ಇವೆ. ಆ ಮೂರು ಕಾಲೇಜುಗಳೂ ಸರಿಯಾಗಿ ನಡೆಯುತ್ತಿಲ್ಲ. ಒಂದು ಮುಚ್ಚುವ ಹಂತದಲ್ಲಿದೆ. ಅದಕ್ಕಾಗಿ ನಾನು ಹೇಳುತ್ತೇನೆ. ನೀಡ್ ನೋಡಿ ಎಲ್ಲೆಲ್ಲಿ ಸಾಧ್ಯ ಇದೆ ಅಲ್ಲಿ ಕೊಡಬೇಕೇ ಹೊರತು ಎಲ್ಲಾ ತಾಲ್ಲೂಕುಗಳಲ್ಲಿ ಗೌರ್ನಮೆಂಟ್ ಕಾಲೇಜು ಮಾಡಬೇಕು ಅಂದರೆ ಆಗುವುದಿಲ್ಲ. ನಮ್ಮ ಫೈನಾನ್ಸ್ ರಿಸೋರ್ಸ್‌ಸ್ ನೋಡಿ ಗೌರ್ನಮೆಂಟ್ ಕಾಲೇಜು ಕೊಡಬೇಕಾಗಿದೆ.

ಉಪಾಧ್ಯಕ್ಷರು:– ಮಾನ್ಯ ಪ್ರಾಥಮಿಕ ಮತ್ತು ಮಾಧ್ಯಮಿಕ ಸಚಿವರೇ, ತಾವು ಉತ್ತರ ಕೊಡಿ.

ಶ್ರೀ ಕೆ. ಸಿದ್ಧಯ್ಯ:– ಮಾನ್ಯ ಅಧ್ಯಕ್ಷರೇ, ನಾನು ನನ್ನ ಪ್ರಶ್ನೆಯನ್ನು ಮತ್ತೊಂದು ಸಾರಿ ರಿಪೀಟ್ ಮಾಡುತ್ತೇನೆ. ಅವರು ಹಳ್ಳಿಯ ಕಡೆಯಿಂದ ಬಂದವರು. ಹಳ್ಳಿಯ ಕಡೆಯಿಂದ ಓದುವುದಕ್ಕೆ ಬರುವಂಥ ಮಕ್ಕಳಿಗೆ ಅನ್ಯಾಯವಾಗಬಾರದು. ಅಲ್ಲಿ ಪಾಪ್ಯುಲೇಷನ್ ಕಡಿಮೆ ಇರಬಹುದು. ಹಳ್ಳಿ ಕಡೆಯಿಂದ ಬಂದ ಮಕ್ಕಳಿಗೆ 15 ಪರ್ಸೆಂಟ್ ಸೇರಿಸುತ್ತೇವೆಂದು ಹೇಳಿದ್ದೀರಿ.

ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ಓದುತ್ತಿರುವವರಿಗೆ ನೀವು ಯಾವ ಉದ್ದೇಶಕ್ಕೆ 15 ಪರ್‌ಸೆಂಟ್ ಸೇರಿಸುತ್ತೀರೋ ಅದರಿಂದ ಆ ಉದ್ದೇಶ ಸಾರ್ಥಕವಾಗುವುದಿಲ್ಲ. ಇದರ ಬಗ್ಗೆ ತಾವು ಸಿಂಪಥಿಟಿಕ್ ಆಗಿ ಕನ್ಸಿಡರ್ ಮಾಡಬೇಕು.

ಶ್ರೀ ಎಸ್.ಎಂ. ಯಾಹ್ಯಾ:– ಸನ್ಮಾನ್ಯ ಅಧ್ಯಕ್ಷರೇ, ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಯಾವ ರಿಸರ್ವೇಷನ್

ಕೊಡುತ್ತೇವೆ. ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಯಾವ ರಿಸರ್ವೇಷನ್ ಕೊಡುತ್ತೇವೆ. ಅವೆರಡೂ ಬೇರೆ. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಕಾನ್ಸ್ಟಿಟ್ಯೂಷನ್ ಪ್ರಕಾರ ಯಾವ 18 ಪರ್‌ಸೆಂಟ್ ರಿಸರ್ವೇಷನ್ ಕೊಡುತ್ತಿದ್ದೇವೆಯೋ ಅದನ್ನು ಯಾರೂ ಕಿತ್ತುಕೊಳ್ಳಲಿಕ್ಕಾಗುವುದಿಲ್ಲ.

ಶ್ರೀ ಕೆ. ಸಿದ್ದಯ್ಯ:– 10 ವರ್ಷದಿಂದ ಸಿಟಿಯಲ್ಲಿ ಓದುವ ಮಕ್ಕಳಿಗೆ ಅನ್ಯಾಯವಾಗುತ್ತದೆ.

ಶ್ರೀ ಎಸ್.ಎಂ. ಯಾಹ್ಯಾ:– ಏನಾದರೂ ಅನ್ಯಾಯವಾಗಿದ್ದರೆ ಅದನ್ನು ಸರಿ ಮಾಡುತ್ತೇವೆ.

† ಶ್ರೀ ಹೆಗ್ಗಪ್ಪ ಡಿ. ಲಮಾಣಿ:- (ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣ ಮಂತ್ರಿಗಳು):– ಸನ್ಮಾನ್ಯ ಅಧ್ಯಕ್ಷರೇ, ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ ಹಾಗೂ ಪದವಿ ಪೂರ್ವ ಶಿಕ್ಷಣದ ಬಗ್ಗೆ ಸನ್ಮಾನ್ಯ ಸದಸ್ಯರು ಸಾಕಷ್ಟು ಅಮೂಲ್ಯವಾದ ಸಲಹೆ ಸೂಚನೆಗಳನ್ನು ಹಾಗೂ ಕೆಲವೊಂದು ಕಡೆ ಅಲ್ಲಲ್ಲಿ ರಚನಾತ್ಮಕವಾದಂಥ ಟಿಪ್ಪಣಿಗಳನ್ನು ಸಹಿತ ಮಾಡಿದ್ದಾರೆ. ನಮ್ಮ ಮುಂದಿನ ಶಿಕ್ಷಣ ಕ್ಷೇತ್ರದಲ್ಲಿ ಯಾವ ರೀತಿ ಬದಲಾವಣೆ ತರಬೇಕು ? ಯಾವ ರೀತಿ ಶಿಕ್ಷಣ ಕ್ಷೇತ್ರ ಮುಂದುವರಿಯಬೇಕು ಎಂಬ ಬಗ್ಗೆ ಮಾರ್ಗದರ್ಶನ ಮಾಡಿದ್ದಾರೆ. ಸನ್ಮಾನ್ಯ ಆರ್.ಎಲ್. ಜಾಲಪ್ಪನವರು ಮತ್ತು ಪಿ. ಜಿ. ಆರ್. ಸಿಂಧ್ಯಾರವರು ಹಾಗೂ ಸುಮಾರು 17 ಜನ ಸದಸ್ಯರು ಶಿಕ್ಷಣ ಇಲಾಖೆ ಬಗ್ಗೆ ಮಾತನಾಡಿದ್ದಾರೆ. ಶಿಕ್ಷಕರ ಕೊರತೆ, ಶಾಲಾ ಕಟ್ಟಡಗಳ ಕೊರತೆ, ಶಾಲೆಗಳ ಮೇಲ್ವಿಚಾರಣೆ ಕೊರತೆ, ಆಟೋಪಕರಣಗಳು, ಪಾಠೋಪಕರಣಗಳು, ಪೀಠೋಪಕರಣಗಳ ಕೊರತೆ, ಶಿಸ್ತಿನ ಕೊರತೆ, ಬೋಧನಮೌಲ್ಯ ಮತ್ತು ಜ್ಞಾನಾರ್ಜನೆಯ ಕೊರತೆ ಬಗ್ಗೆ ಬಹಳಷ್ಟು ಜನ ಸದಸ್ಯರು ಮಾತನಾಡಿದ್ದಾರೆ. ಒಳ್ಳೆಯ ಜೀವನಕ್ಕೆ ಒಳ್ಳೆ ಶಿಕ್ಷಣ ಅತಿ ಅವಶ್ಯಕವಾಗಿ ಬೇಕಾಗಿರತಕ್ಕಂಥದ್ದು. ಇಂಥಾ ಶಿಕ್ಷಣವನ್ನು ಕೊಡುವುದಕ್ಕೆ ಪ್ರತಿಯೊಂದು ಶಾಲೆಯಲ್ಲೂ ಅಧ್ಯಾಪಕರು ಇರಬೇಕು. ಆ ಅಧ್ಯಾಪಕರಿಗೆ ಸರಿಯಾದ ಟ್ರೈನಿಂಗ್ ಆಗಿರಬೇಕು. ಅವರು ನಿರ್ವಂಚನೆಯಿಂದ ಶಾಲೆಗಳಲ್ಲಿ ಮಕ್ಕಳಿಗೆ ಪಾಠ ಮಾಡಬೇಕು. ಎಲ್ಲಿಯವರೆಗೆ ಸ್ವಾರ್ಥ ರಹಿತವಾಗಿ ಪಾಠ ಮಾಡುವುದಿಲ್ಲವೋ ಅಲ್ಲಿಯವರೆಗೆ ಶಿಕ್ಷಣದ ಮಟ್ಟ ಸುಧಾರಿಸುವುದಕ್ಕಾಗುವುದಿಲ್ಲ. ಸ್ವಾತಂತ್ರ್ಯ ಬಂದು 45 ವರ್ಷಗಳಾದರೂ ಎಲ್ಲರಿಗೂ ಶಿಕ್ಷಣ ಕೊಡಲಿಕ್ಕೆ ನಮ್ಮಿಂದ ಆಗದೇ ಇರುವುದರಿಂದ ನಾವು ಎಲ್ಲೋ ಎಡವಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ. ಅದು ಸಂಪೂರ್ಣವಾದಂಥ ಮತ್ತು ನಿಜವಾಂಥ ಮಾತು. 1962ರಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಯಲ್ಲಿ ತಂದ ಮೇಲೆ ಸಾಕಷ್ಟು ಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆ. ಅಧ್ಯಾಪಕರ ಸಂಖ್ಯೆ ಬೆಳೆದಿದೆ, ಶಾಲಾ ಕಟ್ಟಡಗಳ ಸಂಖ್ಯೆ ಬೆಳೆದಿದೆ. ಆದರೆ ಇಷ್ಟೆಲ್ಲಾ ಮಾಡಿದರೂ ಸಹಾ ಇನ್ನೂ ಮಾಡಬೇಕಾದ್ದೂ ಬಹಳ ಇದೆ. ಈಗ ಸುಮಾರು 13 ಸಾವಿರ ಅಧ್ಯಾಪಕರ ಕೊರತೆ ನಮ್ಮ ರಾಜ್ಯದಲ್ಲಿ ಇದೆ. ಈ ಅಧ್ಯಾಪಕರ ಕೊರತೆಯನ್ನು ಈ ಶೈಕ್ಷಣಿಕ ವರ್ಷದೊಳಗಾಗಿ ತುಂಬಲಿಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ನಾನು, ಆಗಲೇ ಹೇಳಿದ್ದೇನೆ. ಇದೇ ತಿಂಗಳೊಳಗೆ 6,812 ಜನ ಅಧ್ಯಾಪಕರನ್ನು ಸ್ಪೆಷಲ್ ರಿಕ್ರೂಟ್‌ಮೆಂಟ್ ಮೂಲಕ ಅಪಾಯಿಂಟ್ ಮಾಡಿಕೊಂಡು ನಿಯುಕ್ತಿಗೊಳಿಸುತ್ತಿದ್ದೇವೆ. ಈ ಸ್ಪೆಷಲ್ ರಿಕ್ರೂಟ್‌ಮೆಂಟ್ ಏಕೆ ಮಾಡುತ್ತಿದ್ದೇವೆಂದರೆ, 29 ವರ್ಷದ ಮೇಲ್ಪಟ್ಟವರಿಗೆ ಮಾತ್ರ ಇದರಲ್ಲಿ ತೆಗೆದುಕೊಳ್ಳುತ್ತಿರತಕ್ಕಂಥಾದ್ದು, ಈ ಹಿಂದೆ 92–93ರಲ್ಲಿ ಸಾಮಾನ್ಯ ನಿಯಮಗಳ ಪ್ರಕಾರ ಸುಮಾರು 5600 ಅಧ್ಯಾಪಕರನ್ನು ನೇಮಕ ಮಾಡಿಕೊಂಡಿದ್ದೇವೆ.

ಈ ಮೊದಲು ಅಂದರೆ 1984 ರಿಂದ 92ರವರೆಗೆ ಯಾವುದೇ ಅಧ್ಯಾಪಕರನ್ನು ಸೆಲೆಕ್ಷನ್ ಮಾಡಿಕೊಂಡಿರಲಿಲ್ಲ. ಹಿಂದಿನ ಬ್ಯಾಕ್‌ಲಾಗ್ ಅನ್ನು ನಿಯಮಗಳ ಅನುಸಾರ ತುಂಬಲಾಗುತ್ತದೆಂದು ವೀರೇಂದ್ರಪಾಟೀಲರು ಮುಖ್ಯ ಮಂತ್ರಿಯಾಗಿದ್ದಾಗ ಆಶ್ವಾಸನೆ ಕೊಟ್ಟಿದ್ದರು. ಆ ಆಶ್ವಾಸನೆ ಪ್ರಕಾರ 6 ಸಾವಿರ ಅಧ್ಯಾಪಕರನ್ನು ನಾವು ನೇಮಕ ಮಾಡಿಕೊಂಡಿದ್ದೇವೆ. ಅದರಲ್ಲಿ ಸುಮಾರು 1,356 ಜನ ಅಧ್ಯಾಪಕರ ವೈಟಿಂಗ್ ಲಿಸ್ಟ್‌ನ್ನೂ ಮಾಡಿದ್ದೇವೆ. ಆ ವೈಟಿಂಗ್ ಲಿಸ್ಟ್ ಪ್ರಕಾರ ಈ ತಿಂಗಳ ಪ್ರಾರಂಭದಲ್ಲಿ

1356 ಅಧ್ಯಾಪಕರನ್ನು ತುಂಬಿಕೊಳ್ಳವಂಥ ಅಜ್ಞೆಯನ್ನು ನಾವು ಮಾಡಿದ್ದೇವೆ. ಆಮೇಲೆ ಇನ್ನು 2-3 ತಿಂಗಳಲ್ಲಿ ಅಂದರೆ ಆಗಸ್ಟ್ , ಸೆಪ್ಟೆಂಬರ್ ತಿಂಗಳಲ್ಲಿ ಸುಮಾರು 13 ಸಾವಿರ ಅಧ್ಯಾಪಕರನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಇದರಲ್ಲಿ 50 ಪರ್‌ಸೆಂಟ್ ಸ್ಪೆಷಲ್ ರಿಕ್ರೂಟ್‌ಮೆಂಟ್ ಮೂಲಕ ಮತ್ತು 50 ಪರ್‌ಸೆಂಟ್ ಜನರಲ್ ರಿಕ್ರೂಟ್‌ಮೆಂಟ್‌ನಲ್ಲಿ ಮಾಡಿಕೊಳ್ಳುತ್ತೇವೆ. ಅಂತೂ ಈ ವರ್ಷದಲ್ಲಿ 13 ಸಾವಿರ ಅಧ್ಯಾಪಕರನ್ನು ನೇಮಿಸಿಕೊಳ್ಳುವಂಥ ಕೆಲಸ ಮಾಡುತ್ತಿದ್ದೇವೆ. ಆಮೇಲೆ ನಮ್ಮಲ್ಲಿ ಸಾಕಷ್ಟು ಏಕೋಪಾಧ್ಯಾಯ ಶಾಲೆಗಳಿವೆ. ಇಲ್ಲಿಗೆ ಒ.ಬಿ.ಬಿ.ಯಲ್ಲಿ ಹೆಚ್ಚಿನ ಅಧ್ಯಾಪಕರನ್ನು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಶಾಲಾ ಕಟ್ಟಡಗಳನ್ನು ಕೊಟ್ಟಿದ್ದೇವೆ. ಶಾಲೆಗಳಿಗೆ ಬೇಕಾದ ಟೇಬಲ್, ಖುರ್ಚಿ, ಆಟೋಪಕರಣ, ಪಾಠೋಪಕರಣ, ಪೀಠೋಪಕರಣಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕೊಂಡುಕೊಳ್ಳಲು ಹಣವನ್ನು ಬಿಡುಗಡೆ ಮಾಡಿ ಶಾಲೆಗಳನ್ನು ಕೊಡುವಂಥ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ಆರ್.ಎಲ್. ಜಾಲಪ್ಪನವರು ಹೇಳಿದ ಹಾಗೆ ಗ್ರಾಮಾಂತರ ಪ್ರದೇಶದ ಶಾಲೆಗಳಲ್ಲಿ ಬಡ ಜನರ, ಹಿಂದುಳಿದ ವರ್ಗದವರು, ಎಸ್‌ಸಿ ಎಸ್.ಟಿ. ವರ್ಗಕ್ಕೆ ಸೇರಿದ ಮಕ್ಕಳು ಶಾಲೆಗೆ ಬರುತ್ತಾರೆ. ಶ್ರೀಮಂತರುಗಳು ತಮ್ಮ ಮಕ್ಕಳನ್ನು ಹೆಚ್ಚು ಡೊನೇಷನ್ ಕೊಟ್ಟು ಬೇರೆ ಬೇರೆ ದೊಡ್ಡ ಶಾಲೆಗಳಿಗೆ ಹಾಕಿ ಶಿಕ್ಷಣವನ್ನು ಕೊಡುಸುತ್ತಿದ್ದಾರೆ. ಆದ್ದರಿಂದ ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಶಿಕ್ಷಣದ ಮಟ್ಟ ವ್ಯತ್ಯಾಸವಾಗುತ್ತಿದೆ. ಹಳ್ಳಿಗಾಡಿನ ವಿದ್ಯಾರ್ಥಿಗಳಿಗೆ ಸರಿಯಾದ ರೀತಿಯಲ್ಲಿ ಇವತ್ತಿನ ದಿವಸ ಶಿಕ್ಷಣ ಸಿಗುತ್ತಿಲ್ಲ ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಹಳ್ಳಿಗಾಡು ಪ್ರದೇಶಗಳಲ್ಲಿ ಶಿಕ್ಷಣ ಪಡೆಯುವುದಕ್ಕೆ ತೊಂದರೆಯಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಮಾನ್ಯ ಸದಸ್ಯರು ಕೋಲಾರ ಜಿಲ್ಲೆಯಲ್ಲೇ ಒಂದು ಸಾವಿರ ಅಧ್ಯಾಪಕರ ಕೊರತೆ ಇದೆ ಎಂದು ಹೇಳಿದ್ದಾರೆ. ವಿದ್ಯಾರ್ಥಿಗಳ ದಾಖಲಾತಿ ಮತ್ತು ಹಾಜರಾತಿಯಲ್ಲಿ ಬಹಳ ಅಂತರ ಇದೆ. ವಿದ್ಯಾರ್ಥಿಗಳ ಹಾಜರಾತಿಗೆ ಹೋಲಿಸಿದರೆ ಒಂದು ಸಾವಿರ ಅಧ್ಯಾಪಕರ ಕೊರತೆ ಇದೆಯೆಂದು ಹೇಳಿದರೆ ಸ್ವಲ್ಪ ಕಷ್ಟವೆಂದು ಅನಿಸಿದರೂ ಸಹಿತ ಖಾಲಿ ಇರುವಂಥ ಅಧ್ಯಾಪಕರುಗಳ ಸ್ಥಾನಗಳನ್ನು ತುಂಬುವಂಥ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಇನ್ನು ಶಿಕ್ಷಣವನ್ನು ಕೇವಲ ಸರ್ಕಾರವೇ ತನ್ನ ಜವಾಬ್ದಾರಿಯಿಂದ ಮಾಡುವಂತಹ ಸ್ಥಿತಿಯಲ್ಲಿದ್ದರೂ ಸಹಿತ ನಾವು ಸಾಕಷ್ಟು ಖಾಸಗಿ ಶಾಲೆಗಳಿಗೆ, ಖಾಸಗಿ ಸಂಸ್ಥೆಗಳಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಅಲ್ಲಿ ಕೆಲವೊಂದು ನಿಯಮುಗಳಿಗೆ ಅನುಗುಣವಾಗಿ ಅದು ಪ್ರಾಥಮಿಕ ಶಾಲೆ ಇರಬಹುದು, ಪ್ರೌಢ ಶಾಲೆ ಇರಬಹುದು, ಪದವಿ ಪೂರ್ವ ಕಾಲೇಜು ಇರಬಹುದು, ಅಲ್ಲಿ ಈ ಖಾಸಗಿಯವರಿಗೂ ಸಹಿತ ನಾವು ಸಾಕಷ್ಟು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಆದರೆ ಇಲ್ಲಿ ವಿಶೇಷವಾದಂತಹ ಪರಿಸ್ಥಿತಿಯಾಗಿದೆ. ಅವರು ರೋಸ್ಟರ್ ಅನ್ನು ಪಾಲಿಸಬೇಕಾಗುತ್ತದೆ. ರಿಸರ್ವೇಷನ್ ಪಾಲಿಸಬೇಕಾಗುತ್ತದೆ. ಮತ್ತು ಬೇರೆಬೇರೆ ಕಟ್ಟಡದ ಬಗ್ಗೆಯಾಗಲಿ, ಮೈದಾನದ ಬಗ್ಗೆಯಾಗಲಿ, ರೂಪುರೇಷೆಗಳನ್ನು ಹೊಂದಿಕೊಂಡು ಅವರು ಆ ಸಂಸ್ಥೆಗಳನ್ನು ನಡೆಸಬೇಕಾಗುತ್ತದೆ. ದುರ್ದೈವದ ಸಂಗತಿ ಅಂದರೆ ನಮ್ಮಲ್ಲಿ ಬಹಳಷ್ಟು ಇಂತಹ ವಿದ್ಯಾ ಸಂಸ್ಥೆಗಳಿವೆ. ನಾವು ಅವರಿಗೆ ಶಾಲೆಗಳನ್ನು ಪ್ರಾರಂಭಿಸಬಹುದೆಂದು ಅಧಿಕಾರವನ್ನು ಕೊಟ್ಟುಬಿಟ್ಟಿದ್ದೇವೆ. ಅದನ್ನು ನೋಡಿದಾಗ ಕೆಲವೊಂದು ಕಡೆಗೆ ರೋಸ್ಟರ್‌ನ್ನು ಸರಿಯಾಗಿ ಪಾಲನೆ ಮಾಡದೆ ಇರುವುದು ಬಹಳಷ್ಟು ಕಂಡುಬಂದಿದೆ. ಅವರು ರೋಸ್ಟರ್‌ನ್ನು ಪಾಲಿಸಲಿಲ್ಲ ಅಂದರೆ ನಾವು ಮಾನ್ಯತೆಯನ್ನು ಕೊಡುವುದಾಗಲಿ, ಗ್ರಾಂಟ್‌ನ್ನು ಕೊಡುವುದಾಗಲಿ ಈ ನಿಯಮುಗಳಿಗೆ ವಿರುದ್ಧವಾಗಿರುವುದರಿಂದ ಅದು ಆಗುತ್ತಿಲ್ಲ. ಹೀಗಾಗಿ ನಮ್ಮಲ್ಲಿ ಬಹಳಷ್ಟು ಶಾಲೆಗಳು ಹಾಗೇಯೆ ಉಳಿದುಕೊಂಡಿವೆ. ಸಾಕಷ್ಟು ಜನ ನಮ್ಮ ಶಾಲೆಗೆ ಗ್ರಾಂಟ್ ಕೊಡಿ ಮಾನ್ಯತೆಯನ್ನು ಕೊಡಿ ಎಂದು ಹೇಳುತ್ತಿದ್ದಾರೆ. ರೋಸ್ಟರ್ ನಿಯಮ ಏನಿದೆ ಅದನ್ನು ವಿಶೇಷವಾಗಿ 1-1-90ರ ಈಚೆಗೆ ನಾವು ಕಠೋರವಾಗಿ ಪಾಲಿಸಬೇಕೆಂದು ಹೇಳಿದಾಗ ಅಲ್ಲಿಯೂ ಸಹಿತ ಅವರು

ಪಾಲಿಸದೆ ಇದ್ದಂಥದನ್ನು ನಾವು ಕಾಣುತ್ತಿದ್ದೇವೆ. ಅದಕ್ಕಿಂತ ಮೊದಲು ರೋಸ್ಟರನ್ನು ನಾವು ಅಷ್ಟೊಂದು ಕಠೋರವಾಗಿ ಪಾಲಿಸಿರಲಿಲ್ಲ. ಏಕೆಂದರೆ ಆ ಕಾನೂನು ಬಂದಿರಲಿಲ್ಲ. ಅಲ್ಲಿ ಅವರ ನಿಲ್ ರಿಪೋರ್ಟ್‌ನ್ನು ತಂದು ಮಾಡಿದ್ದಾರೆ. ನಿಲ್ ರಿಪೋರ್ಟ್‌ನ್ನು ತರುವುದು ಬಹಳಷ್ಟು ಚರ್ಚಾಸ್ಪದವಾದಂತಹ ವಿಷಯವಾಗಿದೆ. ನನಗೆ ಆಶ್ಚರ್ಯವಾಗುತ್ತಿದೆ. ನಿಲ್ ರಿಪೋರ್ಟ್‌ನ್ನು ಯಾವ ರೀತಿಯಲ್ಲಿ ಅವರು ಮ್ಯಾನೇಜ್ ಮಾಡಿ ತರುತ್ತಾರೆ. ಎಸ್.ಸಿ ಯವರು ಬೇಕಾದಷ್ಟು ಜನ ಕ್ವಾಲಿಫೈಡ್ ಇದ್ದರೂ ಸಹಿತ, ಬೇಕಾದ ಹಾಗೆ ಅವರು ಟ್ರೈನಿಂಗ್ ಪಡೆದುಕೊಂಡಿದ್ದರೂ ಸಹಿತ ಈ ಎಲ್ಲಾ ನಿಯಮಗಳು ಬಂದರೂ ಸಹಿತ ಅವರಿಗೆ ನಿಲ್ ರಿಪೋರ್ಟ್ ಸಿಕ್ಕಿಬಿಡುತ್ತದೆ. ಉದ್ಯೋಗ ವಿನಿಯಯ ಕಛೇರಿಯಲ್ಲಿ ಒಂದು ಲಿಸ್ಟ್ ಅನ್ನು ತರಿಸಿನೋಡಿದರೆ ಸಾಕಷ್ಟು ಜನ ಎಸ್.ಸಿ, ಎಸ್.ಟಿಯವರು ಇದ್ದಾರೆ, ಇಲ್ಲ ಅಂತ ಹೇಳಲಿಕ್ಕೆ ಆಗುವುದಿಲ್ಲ. ಆದರೂ ಸಹಿತ ಅವರು ಹೇಗೋ ಮ್ಯಾನೇಜ್ ಮಾಡಿ ಈ ನಿಲ್ ರಿಪೋರ್ಟ್‌ನ್ನು ತಂದುಬಿಡುತ್ತಾರೆ. ತಂದ ನಂತರ ನಾವು ಬೇರೆ ಏನೂ ಮಾಡಲಿಕ್ಕೆ ಆಗುವುದಿಲ್ಲ. ಆ ಸಮಯದಲ್ಲಿ ಅಂತಹ ಕಾನೂನು ಇರಲಿಲ್ಲ. ಅದಕ್ಕಾಗಿ ಅವರಿಗೆ ಮಾನ್ಯತೆಯನ್ನು ಕೊಡುವಂತಹ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಯಿತು. ನಮ್ಮ ಮಾನ್ಯ ರುಕ್ಮಯ್ಯ ಪೂಜಾರಿಯವರು ಒಳ್ಳೆಯ ಸಮಾಜ ನಿರ್ಮಾಣವಾಗಬೇಕಾದರೆ ಒಳ್ಳೆಯ ಶಿಕ್ಷಣವನ್ನು ಕೊಡಬೇಕೆಂದು ಹೇಳಿದರು. ಇದರಲ್ಲಿ ಎರಡು ಮಾತೇ ಇಲ್ಲ. ನಾವು ನಮ್ಮ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಗ್ರಾಮಾಂತರ ವಿದ್ಯಾರ್ಥಿಗಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡಬೇಕಾಗುತ್ತದೆ. ಈ ಪಟ್ಟಣದ ಪ್ರದೇಶದ ವಿದ್ಯಾರ್ಥಿಗಳ ಜೊತೆಗೆ ಅವರು ಕಾಂಪೀಟ್ ಮಾಡಬೇಕಾಗಿತ್ತು ಅಂದರೆ ಒಳ್ಳೆಯ ಶಿಕ್ಷಣವನ್ನು ಕೊಡಬೇಕು. ಅದಕ್ಕೆ ಬೇಕಾದಂತಹ ಪರಿಶುದ್ಧವಾದಂತಹ ವಾತಾವರಣ ಮೂಡಿಸಬೇಕು. ತರಗತಿಗೆ ಒಬ್ಬ ಶಿಕ್ಷಕ, ತರಗತಿಗೆ ಒಂದು ಕೊಠಡಿ ಇವೆಲ್ಲಾ ಹಾಜರಾತಿಯನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳು. ಇವೆಲ್ಲವನ್ನೂ ನಾವು ಅಲ್ಲಿ ತಪ್ಪದೇ ಮಾಡಬೇಕಾಗುತ್ತದೆ. ನಾನು ಪೂರ್ಣವಾದಂತಹ ಚರ್ಚೆಗೆ ಹೋಗುತ್ತಿಲ್ಲ. ನಾವು ಈಗಾಗಲೇ ತಮಗೆ ''ಜ್ಞಾನದೀವಿಗೆ'' ಎನ್ನುವಂತಹ ಈ ಪುಸ್ತಕವನ್ನು ಹಾಗೂ ''ಜ್ಞಾನಗಂಗಾ'' ಎನ್ನುವಂತಹ ಪುಸ್ತಕವನ್ನು ಈಗಾಗಲೇ ಕೊಟ್ಟಿದ್ದೇವೆ. ಅದರಲ್ಲಿ ಎಲ್ಲಾ ವಿವರದ ಅಂಕಿಸಂಖ್ಯೆಗಳನ್ನು ಮತ್ತು ವಿವರಗಳನ್ನು ನಾನು ಈಗಾಗಲೇ ಕೊಟ್ಟಿದ್ದೇನೆ. ಅದನ್ನು ತಾವು ಸ್ವಲ್ಪ ಪರಾಮರ್ಶಿಸಿದರೆ ಗೊತ್ತಾಗುತ್ತದೆ. ನಾನು ಸಮಯ ಸ್ವಲ್ಪ ಅಭಾವವಿರುವುದರಿಂದ, ಮಾನ್ಯ ಸದಸ್ಯರು ಏನೇನು ಹೇಳಿದ್ದಾರೆ ಅವುಗಳ ಬಗ್ಗೆ ಅಷ್ಟೆ ಇಲ್ಲಿ ಚರ್ಚೆ ಮಾಡುತ್ತಿದ್ದೇನೆ. ಬೇರೆ ವಿಧವಾದಂತಹ ಎಲ್ಲಾ ವಿವರವನ್ನು ನಾನು ಈ ಪುಸ್ತಕಗಳಲ್ಲಿ ಕೊಟ್ಟಿದ್ದೇನೆ. ತಾವು ದಯಮಾಡಿ ನೋಡಬಹುದು. ಈ ಹಾಜರಾತಿಯನ್ನು ನಾವು ಹೆಚ್ಚಿಸಬೇಕಾಗಿತ್ತು ಅಂದರೆ ವಿದ್ಯಾರ್ಥಿಗಳಿಗೆ ನಾವು ಬೇರೆ ರೀತಿಯಲ್ಲಿ ಅವರನ್ನು ನೋಡಿಕೊಳ್ಳಬೇಕಾಗುತ್ತದೆ. ಅಂದರೆ ನಾವು ಅದಕ್ಕಾಗಿ ಒಂದು ಯೋಜನೆಯನ್ನು ಸಿದ್ಧಪಡಿಸಿದ್ದೇವೆ. ಅದು 'ಅಕ್ಷಯ ಯೋಜನೆ' ಅಕ್ಷಯ ಯೋಜನೆಯಲ್ಲಿ ಮೊದಲು ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ದಿನಕ್ಕೆ ಒಂದು ರೂಪಾಯಿಯನ್ನು ಕೊಡುವಂತಹ ಯೋಜನೆ. ಆ ಯೋಜನೆಯನ್ನು ಸ್ವಲ್ಪ ಅಲ್ಲಲ್ಲಿ ದೋಷಗಳು ಕಂಡುಬಂದಿದ್ದರಿಂದ ನಾವು ಅದನ್ನು ಸ್ವಲ್ಪ ಮಾಡಿಫೈ ಮಾಡಿ, ಆ ವಿದ್ಯಾರ್ಥಿಗಳಿಗೆ ಅಕ್ಷಯ ಯೋಜನೆಯಡಿಯಲ್ಲಿ ಅವರಿಗೆ ಸಮವಸ್ತ್ರವನ್ನು ಕೊಡುವಂತಹದ್ದು, ಅವರು ಟೂರ್ ಹೋಗುತ್ತಿದ್ದರೆ ಅವರಿಗೆ ಟೂರಿಗೆ ವ್ಯವಸ್ಥೆ ಮಾಡುವಂಥದ್ದು ಅಥವಾ ಅವರಿಗೆ ಹಣವನ್ನು ಕೊಡುವಂತಹದ್ದು, ಮೈದಾನವನ್ನು ಆಟವಾಡಲು ಕೊಡುವಂತದ್ದು, ಆಟೋಪಕರಣ ಪಾಠೋಪಕರಣಗಳನ್ನು ಕೊಡುವಂತದ್ದು ಈ ಯೋಜನೆಯಲ್ಲಿ ನಾವು ರೂಪಿಸಿ ವಿದ್ಯಾರ್ಥಿಗಳಿಗೆ ಶಾಲೆ ಎಂದರೆ ಹೆದರಿಕೆಯಾಗಲಾರದ ಹಾಗೆ ಮನೆಯ ವಾತಾವರಣ ಇರುವ ಹಾಗೆ ನೋಡಿಕೊಳ್ಳಬೇಕೆನ್ನುವ ದೃಷ್ಟಿಯಿಂದ ನಾವು ಇಂತಹ ಅಕ್ಷಯ ಯೋಜನೆಯನ್ನು ಸ್ವಲ್ಪ ಮಾರ್ಪಾಟು ಮಾಡಿ ಈ ಯೋಜನೆಯನ್ನು ಜಾರಿಗೆ ತಂದಂತಹ ವ್ಯವಸ್ಥೆಯಾಗಿದೆ. ಇದರಿಂದ

ನಮ್ಮ ಹಾಜರಾತಿಯ ಸಂಖ್ಯೆಯು ಹೆಚ್ಚಾಗಬಹುದು ಎನ್ನುವ ಆಸೆಯಂತಹ ನಾವು ಇಟ್ಟುಕೊಂಡಿದ್ದೇವೆ. ಇನ್ನು ಮಾನ್ಯ ಸದಸ್ಯರು ಹೇಳಿದಹಾಗೆ ಯೋಗಾಸನ ತರಬೇತಿ, ನಿಜ, ನಮ್ಮ ಶಾಲೆಗಳಲ್ಲಿ, ಹಾಗೂ ಪ್ರೌಢ ಶಾಲೆಗಳಲ್ಲಿ ಯೋಗಾಸನ ತರಬೇತಿಗಳನ್ನು ತರಬೇಕು ಅನ್ನುವಂತಹದ್ದು ಬಹಳ ಉತ್ತಮವಾದಂತಹ ವಿಚಾರವಾಗಿದೆ.

ನಾವು ಸಹಿತ ಇದರ ಬಗ್ಗೆ ಸ್ವಲ್ಪ ಚಿಂತನೆಯನ್ನು ಮಾಡಿದ್ದೇವೆ. ಈಗಾಗಲೇ ಸುಮಾರು 600 ಅಧ್ಯಾಪಕರಿಗೆ ಯೋಗದ ತರಬೇತಿಯನ್ನು ಕೊಟ್ಟು ಈಗಾಗಲೇ ಪ್ರಾರಂಭಮಾಡಿದ್ದೇವೆ. 600 ಜನರಿಗೆ ಯೋಗದ ತರಬೇತಿಯನ್ನು ಕೊಟ್ಟು ಅವರಿಗೆ ಶಾಲೆಯಲ್ಲಿ ಯೋಗವನ್ನು ಕಲಿಸಬೇಕೆನ್ನುವ ಕಡ್ಡಾಯದೊಂದಿಗೆ ಅವರಿಗೆ ಆ ತರಬೇತಿಯನ್ನು ಕೊಟ್ಟಿದ್ದೇವೆ. ಅವರು ಈಗಾಗಲೇ ಈ ಯೋಗದ ಅಭ್ಯಾಸವನ್ನು ಮಾಡಿಸುತ್ತಿದ್ದಾರೆ. ಇದನ್ನು ಮುಂಬರುವ ವರ್ಷಗಳಲ್ಲಿ ಈ ಯೋಗಾಭ್ಯಾಸಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟು ಇನ್ನು ಹೆಚ್ಚಿನ ಅಧ್ಯಾಪಕರನ್ನು ನೇಮಿಸಿಕೊಂಡು ಅವರಿಗೆ ಟ್ರೈನಿಂಗ್ ಅನ್ನು ಕೊಟ್ಟು ಅವರಿಗೆ ಯೋಗಾಭ್ಯಾಸವನ್ನು ಕಲಿಸುವಂತಹ ಸಲಹೆಯನ್ನು ಕೊಡುತ್ತೇವೆ. ಇದರಿಂದ ಎಲ್ಲರೂ ಹೇಳಿದ ಹಾಗೆ ಆರೋಗ್ಯ, ಬುದ್ಧಿಶಕ್ತಿ ಇವೆಲ್ಲವುಗಳ ಬೆಳವಣಿಗೆಯಾಗುತ್ತಿದೆ. ನಾವು ಶಾಲೆಯಲ್ಲಿ ಕಲಿಯುತ್ತಿದ್ದಾಗ ಕಂಪಲ್‌ಸರಿಯಾಗಿ ಯೋಗವನ್ನು ಆ ಸಮಯದಲ್ಲಿ ಕಲಿಸುತ್ತಿದ್ದರು. ಈಗಲೂ ಸಹಿತ ಇಂತಹ ವ್ಯವಸ್ಥೆಯನ್ನು ತರುವುದರ ಬಗ್ಗೆ ನಾನು ವಿಶೇಷವಾದಂತಹ ಪ್ರಾಮಾಣಿಕವಾದಂತಹ ಚಿಂತನೆಯನ್ನು ಮಾಡುತ್ತೇನೆ. ಪ್ರತಿಯೊಂದು ಶಾಲೆಗೆ ಈ ಯೋಗದ ಅಧ್ಯಾಪಕರನ್ನು ನೇಮಿಸುವಂತಹ ವ್ಯವಸ್ಥೆ ಮಾಡುತ್ತೇನೆ. ನನ್ನ ವೈಯಕ್ತಿಕ ವಿಚಾರದಲ್ಲಿ ಯೋಗಕ್ಕಾಗಿಯೇ ಒಬ್ಬ ಸ್ಪೆಷಲ್ ಅಧ್ಯಾಪಕರನ್ನು ನೇಮಿಸುವುದಕ್ಕಿಂತ ಅಲ್ಲಿ ಇದ್ದಂತಹ ಅಧ್ಯಾಪಕರಲ್ಲಿ ಯಾರು ಇಂಟರೆಸ್ಟೆಡ್ ಇದ್ದಾರೋ ಅಂತಹವರಿಗೆ ಆ ಯೋಗದ ಟ್ರೈನಿಂಗಿಗೆ ಕಳುಹಿಸಿ ಅವರಿಗೆ ಆ ಶಾಲೆಯಲ್ಲಿ ಕಲಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಇನ್ನು ಫಿಸಿಕಲ್ ಎಜ್ಯುಕೇಷನ್‌ಗೂ ಸಹಿತ ಒಬ್ಬ ಸ್ಪೇಷಲ್ ಟೀಚರ್ ಅನ್ನು ಅಲ್ಲಿ ನೇಮಿಸುವುದಕ್ಕಿಂತ ಇರುವಂತಹ ಒಬ್ಬ ಟೀಚರ್ ಅಲ್ಲಿ ಟ್ರೈನಿಂಗ್ ಅನ್ನು ಕೊಟ್ಟು ಅವರಿಗೆ ಆ ಶಾಲೆಯಲ್ಲಿ ಕಲಿಸುವಂತಹ ಮಾಡುತ್ತೇವೆ. ಈ ರೀತಿ ಕೆಲವೊಂದು ವ್ಯವಸ್ಥೆಯನ್ನು ಮಡಬೇಕೆನ್ನುವಂತಹ ವಿಚಾರವನ್ನು ಇಟ್ಟುಕೊಂಡಿದ್ದೇವೆ. ಮಾದರಿ ಶಾಲೆಗಳನ್ನು ನಾವು ತಾಲ್ಲೂಕಿಗೆ ಒಂದೊಂದನ್ನು ಈಗಾಗಲೇ ಕೊಟ್ಟಿದ್ದೇವೆ. ಸುಮಾರು 17 ಶಾಲೆಗಳನ್ನು ನಾವು ಕೊಡಬೇಕಾಗಿದೆ. ಪ್ರತಿಯೊಂದು ಶಾಲೆಗೆ 33 ಸಾವಿರ ರೂಪಾಯಿಯನ್ನು ಕೊಟ್ಟು ಬೇರೆ ಶಾಲೆಗಳಿಗಿಂತ ಸ್ವಲ್ಪ ಹೆಚ್ಚಿಗೆ ಹಣವನ್ನು ಅವರಿಗೆ ಕೊಟ್ಟು ಅಲ್ಲಿ ಎಲ್ಲಾ ಸೌಲಭ್ಯಗಳನ್ನು ನಿರ್ಮಾಣ ಮಾಡಿ ಕೊಟ್ಟು ಅಲ್ಲಿ ಸರಿಯಾದ ರೀತಿಯಲ್ಲಿ ಶಿಕ್ಷಣ ಆಗಬೇಕು; ಬೇರೆ ಶಾಲೆಗಳಿಗೆ ಅದು ಮಾದರಿಯಾಗಬೇಕೆನ್ನುವ ಒಂದು ವ್ಯವಸ್ಥೆಯನ್ನು ನಾವು ಮಾಡಲಿಕ್ಕೆ ವಿಚಾರ ಮಾಡಿದ್ದೇವೆ. ಅಂತಹ ಪರಿಸ್ಥಿತಿ ನಮ್ಮಲ್ಲಿ ಇದೆ.

ಇನ್ನು ವರ್ಗಾವಣೆಯಲ್ಲಿ ಸರ್ಕಾರ ಹಾಗೂ ಜಿಲ್ಲಾ ಪರಿಷತ್ತಿನವರ ಸಂಘರ್ಷ. ಅಂತಹ ಸಂಘರ್ಷಕ್ಕೆ ಇಲ್ಲಿ ಅವಕಾಶ ಇಲ್ಲ, ಮೊದಲು ಗೊತ್ತಿಲ್ಲದೆ ಇರುವ ಪರಿಸ್ಥಿತಿಯಲ್ಲಿ ಜಿಲ್ಲಾಪರಿಷತ್ತಿನವರು ವರ್ಗಾವಣೆ ಮಾಡುತ್ತಿದ್ದರು. ಸರ್ಕಾರದವರು ವರ್ಗಾವಣೆಯನ್ನು ಮಾಡುತ್ತಿದ್ದರು. ಈಗಿನ ಪರಿಸ್ಥಿತಿಯಲ್ಲಿ ವರ್ಗಾವಣೆಯ ಸಂಪೂರ್ಣವಾದಂತಹ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಂಡು ಅದನ್ನು ಸರಿಯಾದ ರೀತಿಯಲ್ಲಿ ಕೆಲವೊಂದು ಕ್ರೈಟೀರಿಯಾಗಳನ್ನು ಮಾಡಿಕೊಂಡು ಮಾಡಬೇಕೆಂದು ವಿಚಾರ ಮಾಡಿದ್ದೇವೆ. ಗ್ರಾಮಾಂತರ ಪ್ರದೇಶ ಹಾಗೂ ಪಟ್ಟಣ ಪ್ರದೇಶಗಳಲ್ಲಿರುವಂತಹ ರೇಷಿಯೋ ಏನಿದೆ ವಿದ್ಯಾರ್ಥಿ ಹಾಗೂ ಅಧ್ಯಾಪಕರ ರೇಷಿಯೋ, ಅದರ ಬಗ್ಗೆ ಒಂದು ಮಾತು. ನಾವು ಹಳ್ಳಿಯಲ್ಲಿ ನೋಡುತ್ತಿದ್ದೇವೆ. ಸುಮಾರು 60–70–80 ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕರು ಇರುತ್ತಾರೆ. ಪಟ್ಟಣ ಪ್ರದೇಶದಲ್ಲಿ 20–30–35 ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕರು ಇರುತ್ತಾರೆ. ಅದು ಅನ್ಯಾಯದಿಂದ

ಒಳ್ಳೆಯ ಶಿಕ್ಷಣವನ್ನು ಕೊಡಬೇಕೆಂದು ತಿಳಿದುಕೊಂಡು ಚಿಂತನೆಯನ್ನು ಮಾಡುತ್ತಿದ್ದೇವೆ. ಅಂತಹ ಪ್ರಸಂಗದಲ್ಲಿ ಅಲ್ಲಿ ಅಧ್ಯಾಪಕರನ್ನು ಕೊಡದೆ ಪಟ್ಟಣದಲ್ಲಿ ಅಧ್ಯಾಪಕರನ್ನು ಹೆಚ್ಚಾಗಿ ಕೊಟ್ಟು ಹಳ್ಳಿಗಳಿಗೆ ಹೆಚ್ಚು ಅಧ್ಯಾಪಕರು ಇಲ್ಲದೆ ಇರುವುದರಿಂದ ಅವರಿಗೆ ಬಹಳಷ್ಟು ತೊಂದರೆಯಾಗುತ್ತದೆ. ಎನ್ನುವ ವಿಚಾರದಲ್ಲಿ ನಾವು ಈಗ ಏನು ವಿಚಾರ ಮಾಡಿದ್ದೇವೆ ಅಂದರೆ ನಾಳೆ ಬರುವಂತಹ ವರ್ಗಾವಣೆಯ ಸಮಯದಲ್ಲಿ ಹಳ್ಳಿಯಲ್ಲಿ ತಾವು ಯಾವ ರೇಷಿಯೋ ಅನ್ನು ಇಟ್ಟುಕೊಂಡಿದ್ದಿರೋ ಅದೇ ರೇಷಿಯೋ ಅನ್ನು ನೀವು ಪಟ್ಟಣದಲ್ಲಿಯೂ ಇಟ್ಟುಕೊಳ್ಳಬೇಕು ಎನ್ನುವಂತಹ ಮಾತನ್ನು ಅವರಿಗೆ ನಾನು ಹೇಳಿದ್ದೇನೆ. ಹಳ್ಳಿಯಲ್ಲಿ ನಿಮಗೆ 30–40 ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕ ಅಂತ ನಾವು ವಿಚಾರ ಮಾಡಿದಾಗ ಅದು ಪಟ್ಟಣದಲ್ಲಿರಬೇಕು, ನಾನು ಹೇಳಬೇಕಾಗಿರುವುದನ್ನು ಬೇರೆ ರೀತಿಯಲ್ಲಿ ಹೇಳುತ್ತಿದ್ದೇನೆ. ಪಟ್ಟಣದಲ್ಲಿರುವಂತಹ ರೇಷಿಯೋ ಅನ್ನು ಹಳ್ಳಿಯಲ್ಲಿ ಕಾಪಾಡಬೇಕೆಂದು ಹೇಳುವ ಬದಲಾಗಿ ನಾವು ಹಳ್ಳಿಯಲ್ಲಿರುವಂತಹ ರೇಷಿಯೋ ಅನ್ನು ನೀವು ಪಟ್ಟಣದಲ್ಲಿ ಕಾಪಾಡಿಕೊಳ್ಳಿ; ಎರಡೂ ಒಂದೇ.

4.50 ಪಿಎಂ

ಪಟ್ಟಣದಲ್ಲಿರುವ ಅಧ್ಯಾಪಕರನ್ನು ಸಾಧ್ಯವಾದ ಮಟ್ಟಿಗೆ ಹಳ್ಳಿಗಾಡಿಗೆ ಕಳುಹಿಸಬೇಕು ಎನ್ನತಕ್ಕಂಥ ಒಂದು ವಿಚಾರವನ್ನು ಮಾಡಿದ್ದೇವೆ. ಇದರಲ್ಲಿ ಎಲ್ಲರ ಸಹಕಾರ ಬೇಕು ಎಂದು ನಾನು ಈಗಾಗಲೇ ಕೇಳಿದ್ದೇನೆ. ಈಗ ಏನು ಮಾಡಿದ್ದಾರೆ ಎಂದರೆ ಹಳ್ಳಿಗಳಿಗೆ ಟ್ರಾನ್ಸ್‌ಫರ್ ಮಾಡುತ್ತಾರೆ ಮುಂದೆ ಅವರನ್ನು ಹಳ್ಳಿಯಿಂದ ಪಟ್ಟಣಕ್ಕೆ ಡೆಪ್ಯೂಟ್ ಮಾಡಿಸಿಕೊಳ್ಳುತ್ತಾರೆ. ಇಂತಹದೊಂದು ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಅದು ಆಗದ ಹಾಗೆ ನಾನು ಈ ಸಾರಿ ನಿಗಾ ವಹಿಸುತ್ತೇನೆ. ಬಹಳ ದಿವಸಗಳಿಂದ ಹಳ್ಳಿಯಲ್ಲೇ ಇರುವಂಥವರನ್ನು ಪಟ್ಟಣಕ್ಕೆ ತಂದು ಪಟ್ಟಣದಲ್ಲಿ ಬಹಳ ವರ್ಷಗಳಿಂದ ಬೇರುಬಿಟ್ಟಿರುವಂಥ ಕೆಲವು ಅಧ್ಯಾಪಕರನ್ನು ನಾವು ಹಳ್ಳಿಗೆ ಕಳುಹಿಸಬೇಕು ಎನ್ನತಕ್ಕಂಥದ್ದು ಆಗಿದೆ. ಇದರಿಂದ ಯಾರ ಮನಸ್ಸನ್ನು ನೋಯಿಸಬೇಕೆಂಬ ಉದ್ದೇಶವಲ್ಲ, ಇದರಿಂದ ನಮ್ಮ ಜನರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ನಾವು ಮಾಡುತ್ತಿದ್ದೇವೆ. ಇನ್ನು ನಾನು ವಿಶೇಷವಾಗಿ ತಮ್ಮಲ್ಲಿ ಏನು ಕೇಳುತ್ತೇನೆ ಎಂದರೆ ಇಂತಹ ಒಂದು ಪರಿಸ್ಥಿತಿ ಇದ್ದಾಗ ತಾವುಗಳು ಇದರ ಬಗ್ಗೆ ವಿಶೇಷವಾಗಿ ಕಾಳಜಿ ವಹಿಸಬೇಕಾಗುತ್ತದೆ. ಏಕೆಂದರೆ ಶಾಲೆಗಳಲ್ಲಿ ನಾವು ಒಂದು ಶಿಸ್ತನ್ನು ತರಬೇಕೆಂದು ಹೇಳಿದಾಗ ಅಲ್ಲಿ ಶ್ರೀಮಂತ ವಿದ್ಯಾರ್ಥಿಗಳು ಮತ್ತು ಬಡ ವಿದ್ಯಾರ್ಥಿಗಳು ಅನ್ನುವ ಭೇದಭಾವ ಮಾಡದೆ ಎಲ್ಲರಿಗೂ ಒಂದೇ ಯೂನಿಫಾರಂ ಮಾಡಬೇಕು, ಅವರಲ್ಲಿ ಯೂನಿಫಾರಂ ಇತ್ತು ಎಂದರೆ ಒಂದು ರೀತಿಯಲ್ಲಿ ಶಿಸ್ತು ಬರುತ್ತದೆ. ಆದ್ದರಿಂದ ನಾವು ಅವರಿಗೆ ಯೂನಿಫಾರಂ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಇನ್ನು ಒಬ್ಬ ವಿದ್ಯಾರ್ಥಿಗೆ ಒಂದು ಕೊಠಡಿ, ಒಂದು ಕ್ಲಾಸ್, ಒಬ್ಬ ಅಧ್ಯಾಪಕ, ಈ ಒಂದು ವ್ಯವಸ್ಥೆಯನ್ನು ನಾವು ಈಗಾಗಲೇ ನಮ್ಮ ಮುಂಗಡಪತ್ರದಲ್ಲಿ ನೋಡಿದ ಹಾಗೆ 2000 ಇಸವಿಯಲ್ಲಿ ಪೂರ್ಣ ಕೆಲಸವಾಗುವುದು ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ವ್ಯವಸ್ಥೆಗೆ ಮುಟ್ಟುವ ಹಾಗೆ ನಾವು ಈಗಿನಿಂದಲೇ ತಯಾರು ಮಾಡುತ್ತಾ ಇದ್ದೇವೆ. ಅಲ್ಲಿಗೆ ಎಷ್ಟು ಕೊಠಡಿಗಳು ಬೇಕು, ಎಷ್ಟು ಅಧ್ಯಾಪಕರು ಬೇಕು, ಆ ಒಂದು ವ್ಯವಸ್ಥೆಯನ್ನು ನಾವು ಈಗಲೇ ಪ್ರಾರಂಭ ಮಾಡಿ ಮುಂದಿನ ವರ್ಷದಿಂದ ಈ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಅಧ್ಯಾಪಕರನ್ನು ನೇಮಿಸಿಕೊಳ್ಳುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಈಗಾಗಲೇ ಅಂಕಿಅಂಶಗಳನ್ನು ಕೂಡಿಸಿಕೊಂಡು ನಾವು ಈ ಕೆಲಸವನ್ನು ಮಾಡುತ್ತಿದ್ದೇವೆ. ಶ್ರೀ ಶಿವನಂಜಪ್ಪನವರು ಖಾರವಾಗಿ ಕೆಲವೊಂದು ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಖಾಸಗಿ ಶಾಲೆಗಳಲ್ಲಿ ಬರುವಂತಹ ಪರೀಕ್ಷಾ ಫಲಿತಾಂಶ ಸರ್ಕಾರಿ ಶಾಲೆಗಳಲ್ಲಿ ಬರುವುದಿಲ್ಲವೆಂದು ಹೇಳಿದ್ದಾರೆ. ಇದು ಒಂದು ರೀತಿಯಾಗಿ ಕೆಲವು ಕಡೆಗೆ ಸತ್ಯವಾದರೂ ಸಹಿತ ಇದನ್ನು ಸಂಪೂರ್ಣವಾಗಿ ಸತ್ಯವೆಂದು ಹೇಳುವುದಕ್ಕಾಗುವುದಿಲ್ಲ. ಈಗ ಕೆಲವೊಂದು ಖಾಸಗಿ ಶಾಲೆಗಳಲ್ಲಿ ಒಳ್ಳೆಯ ಶಿಕ್ಷಣವನ್ನು ಕೊಡುತ್ತಿದ್ದಾರೆ. ಅಲ್ಲಿ ಒಳ್ಳೆಯ ಫಲಿತಾಂಶ ಬರುತ್ತದೆ. ಆದರೆ ಇನ್ನು

ಕೆಲವು ಶಾಲೆಗಳಲ್ಲಿ ಅಧ್ಯಾಪಕರು ಇರುವುದಿಲ್ಲ, ಮತ್ತು ವಿಷಯಕ್ಕೆ ಸಂಬಂಧಪಟ್ಟ ಅಧ್ಯಾಪಕರುಗಳು ಇರುವುದಿಲ್ಲ, ಸರಿಯಾದ ರೀತಿಯಲ್ಲಿ ಶಾಲಾಕಟ್ಟಡಗಳು ಇರುವುದಿಲ್ಲ. ಆಟದ ಮೈದಾನ ಮತ್ತು ಲ್ಯಾಬೊರೇಟರಿ ಸರಿಯಾಗಿ ಇರುವುದಿಲ್ಲ. ಶಾಲೆಗಳ ಫಲಿತಾಂಶಗಳ ಬಗ್ಗೆ ಶ್ರೀ ಶಿವನಂಜಪ್ಪನವರು ಹೇಳಿದಂತಹ ಮಾತಿನ ಬಗ್ಗೆ ವಿಶೇಷವಾದ ರೀತಿಯಲ್ಲಿ ವಿಚಾರ ಮಾಡಬೇಕಾಗುತ್ತದೆ. ಐದ್ಯೆದು ಕ್ಲಾಸಿಗೆ ಒಬ್ಬೊಬ್ಬ ಅಧ್ಯಾಪಕರನ್ನು ನೇಮಿಸಿದ್ದು ಇಷ್ಟು ದಿವಸಗಳವರೆಗೆ ಇತ್ತು, ಇಲ್ಲವೆಂದು ಹೇಳುವುದಿಲ್ಲ, ಆದರೆ ನಾವು ಈಗಾಗಲೇ ಸಾಕಷ್ಟು ಅಧ್ಯಾಪಕರನ್ನು ನೇಮಿಸಿರುವುದರಿಂದ ಈ ರೀತಿಯ ಅವ್ಯವಸ್ಥೆ ಕಡಿಮೆಯಾಗುತ್ತದೆ. ಈಗ ಒಬ್ಬ ಅಧ್ಯಾಪಕರು ಸರಾಸರಿ ಒಂದು ಅಥವಾ ಎರಡು ಕ್ಲಾಸ್‌ನ್ನು ತೆಗೆದುಕೊಳ್ಳುವ ರೀತಿಯಲ್ಲಿ ಮಾಡಿದ್ದೇವೆ. ಇನ್ನು ಅಧ್ಯಾಪಕರ ಟ್ರೈನಿಂಗ್‌ಗೆ ಸರಿಯಾದ ರೀತಿಯಲ್ಲಿ ಪ್ರೋತ್ಸಾಹ ಕೊಡುತ್ತಿಲ್ಲವೆಂಬ ಮಾತನ್ನು ಅವರು ಹೇಳಿದ್ದಾರೆ. ಇದರ ಬಗ್ಗೆ ನಾವು ಈಗಾಗಲೇ ಕೇಂದ್ರ ಸರ್ಕಾರದ ಸಹಾಯದಲ್ಲಿ ಡಯಾಟ್ ಎಂಬ ಯೋಜನೆಯನ್ನು ಮಾಡಿಕೊಂಡಿದ್ದೇವೆ. ಈ ಯೋಜನೆಯಲ್ಲಿ ನಮ್ಮ ಅಧ್ಯಾಪಕರುಗಳಿಗೆ ಸರಿಯಾದ ರೀತಿಯಲ್ಲಿ ತರಬೇತಿ ಕೊಡುವಂತಹ ವ್ಯವಸ್ಥೆ ಮಾಡಿದ್ದೇವೆ. ಶಿಕ್ಷಣ ಮೇಲಿಂದ ಮೇಲೆ ಬದಲಾವಣೆಯಾಗುತ್ತಾ ಇರುತ್ತದೆ. ಏಕೆಂದರೆ ಹಿಂದಿನ ಪರಿಸ್ಥಿತಿ ಈಗಿಲ್ಲ, ಈಗಿರುವ ಪರಿಸ್ಥಿತಿ ನಾಳೆ ಇರುವುದಿಲ್ಲ. ಈ ಪರಿಸ್ಥಿತಿಗೆ ಒಗ್ಗುವ ಹಾಗೆ ಈ ಪರಿಸ್ಥಿತಿಗೆ ಹೊಂದಿಕೊಳ್ಳುವ ಹಾಗೆ ನಾವು ಮಕ್ಕಳಿಗೆ ಶಿಕ್ಷಣವನ್ನು ಕೊಡಬೇಕಾಗುತ್ತದೆ.

ಇಂತಹ ಒಂದು ಟ್ರೈನಿಂಗ್ ಕೊಡಬೇಕಾಗಿತ್ತು ಎಂದರೆ ಈ ಡಯಟ್ ಯೋಜನೆಯಿಂದ ನಾವು ಮಕ್ಕಳಿಗೆ ಟೀಚರ್‌ಗಳಿಗೆ ಟ್ರೈನಿಂಗ್‌ನ್ನು ಕೊಟ್ಟು ವಿದ್ಯಾರ್ಥಿಗಳಿಗೆ ಕಲಿಸುವಂತಹ ಒಂದು ವ್ಯವಸ್ಥೆಯನ್ನು ಈಗಾಗಲೇ ಮಾಡಲಾಗಿದೆ. ಈಗಾಗಲೇ ಡಯಟ್‌ಗಳು ಏಳು ಜಿಲ್ಲೆಗಳಲ್ಲಿ ಪ್ರಾರಂಭವಾಗಿದೆ. ಏಪ್ರಿಲ್ ಮೇ ತಿಂಗಳಿನಲ್ಲಿ ಟೀಚರ್ ಮತ್ತು ಅಧ್ಯಾಪಕರುಗಳನ್ನು ನೇಮಿಸಿಕೊಂಡು, ಅಲ್ಲಿ ಪ್ರಿನ್ಸಿಪಾಲ್ ಆಗಿರುವವರು ಡಿಡಿಪಿಐ ಗ್ರೇಡ್‌ನವರು ಇರುತ್ತಾರೆ. ಮತ್ತು ಬೇರೆ ಒಳ್ಳೆಯ ಟೀಚರ್‌ಗಳನ್ನು ಮತ್ತು ಅಧ್ಯಾಪಕರುಗಳನ್ನು ಅಲ್ಲಿ ತಂದು ಹಾಕಿ ಅವರಿಗೆ ಟ್ರೈನಿಂಗ್ ಕೊಡುವಂತಹ ಒಂದು ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ಇನ್ನು ಪ್ಲೇಗ್ರೌಂಡ್ ಬಗ್ಗೆ ಒಂದು ಮಾತನ್ನು ನಾನು ಅವಶ್ಯಕವಾಗಿ ಹೇಳಬೇಕಾಗುತ್ತದೆ. ಇದರ ಬಗ್ಗೆ ಜಿಲ್ಲಾಪರಿಷತ್ತುಗಳಿಗೆ ಕೇಳಿಕೊಂಡಿದ್ದೇವೆ. ಬಹಳಷ್ಟು ಕಡೆ ಪ್ಲೇಗ್ರೌಂಡ್‌ಗಳು ಎನ್‌ಕ್ರೋಚ್ ಆಗಿಬಿಟ್ಟಿವೆ. ಎನ್‌ಕ್ರೋಚ್ ಮಾಡಿರುವಂತಹ ಆಟದ ಮೈದಾನಗಳನ್ನು ಬಿಡಿಸಿಕೊಳ್ಳುವಂತಹ ಒಂದು ಪರಿಸ್ಥಿತಿಯಲ್ಲಿ ನಾವು ವಿಚಾರ ಮಾಡುತ್ತಿದ್ದೇವೆ. ಏಕೆಂದರೆ ಹಿಂದೆ ಒಮ್ಮೆ ನಮ್ಮ ಆರ್.ಎನ್. ನಾಯಕ್‌ರವರೇ ಇಲ್ಲಿ ಒಂದು ರಾದ್ಧಾಂತವನ್ನು ಮಾಡಿದ್ದರು. ಅವರ ಶಾಲಾ ಪ್ಲೇಗ್ರೌಂಡ್‌ನಲ್ಲಿ ಯಾರೋ ಒಬ್ಬರು ಸಾರಾಯಿ ಅಂಗಡಿ ಇಟ್ಟುಕೊಂಡು ಬಹಳ ತೊಂದರೆ ಮಾಡಿದರು ಎಂದು ಹೇಳಿದ್ದರು. ಒಂದು ವೇಳೆ ಅದು ಸತ್ಯ ಆಗಿದ್ದರೆ, ಅಂತಹ ಒಂದು ಪರಿಸ್ಥಿತಿ ಇತ್ತು ಎಂದರೆ ನಾವು ಈ ಶಾಲೆಗಳ ಪ್ಲೇಗ್ರೌಂಡ್ಸ್‌ಗಳಿಗೆ ಕಾಂಪೌಂಡ್ ವಾಲ್ ಹಾಕಿಸಬೇಕು ಎಂದು ವಿಚಾರವನ್ನು ಮಾಡುತ್ತಿದ್ದೇವೆ. ಏಕೆಂದರೆ ಅಲ್ಲಿ ಬಯಲು ಇತ್ತು ಎಂದರೆ ಯಾರಾದರೂ ನುಗ್ಗಬಹುದು. ಅಥವಾ ಅಲ್ಲಿ ಅಂಗಡಿಗಳನ್ನು ಕಟ್ಟಿಕೊಳ್ಳಬಹುದು ಅಥವಾ ಬೇರೆ ರೀತಿಯಲ್ಲಿ ಪ್ಲೇಗ್ರೌಂಡ್‌ನ್ನು ಉಪಯೋಗ ಮಾಡಿಕೊಳ್ಳುವಂತಹ ಪರಿಸ್ಥಿತಿ ಇದೆ. ಒಂದು ಉದಾಹರಣೆಯನ್ನು ಹೇಳುವುದಾದರೆ ನಮ್ಮ ಶಿಗ್ಗಾಂವ್ ತಾಲ್ಲೂಕಿನಲ್ಲಿ ಒಂದು ಊರು ಇದೆ. ಅಲ್ಲಿ ಒಂದು ಶಾಲೆಯ ಪ್ಲೇಗ್ರೌಂಡ್ ಗೋಡೆ ಇದ್ದರೆ ಆ ಗೋಡೆಗೆ ಒಂದು ಚಪ್ಪರ ಹಾಕಿಕೊಂಡು ಒಂದು ಕಡೆ ಅವರು ದನ ಕಟ್ಟುವುದಕ್ಕೆ ಮತ್ತು ಇನ್ನೊಂದು ಕಡೆ ಶೌಚಾಲಯ ಮಾಡಿಕೊಂಡಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಡಿಡಿಪಿಐ ಅವರಿಗೆ ಒಂದು ಕಂಪ್ಲೈಂಟ್ ಕೊಡಲು ಹೇಳಿದ್ದೇವೆ. ಅಲ್ಲಿ ಅವರು ಆ ಜಾಗವನ್ನು ಬಿಡುವುದಕ್ಕೆ ತಯಾರಿಲ್ಲ.

ಶ್ರೀ ಎಂ.ವೈ. ಘೋರ್ಪಡೆ:– ಇನ್ನು ಮುಂದೆ 5–10 ವರ್ಷವಾದರೆ ಪ್ಲೇಗ್ರೌಂಡೇ ಸಿಗುವುದಿಲ್ಲ.

ಡಾ।। ಹೆಚ್.ಡಿ. ಲಮಾಣಿ:– ಹೌದು, ಅದಕ್ಕಾಗಿ ನಾವು ಈ ಪ್ಲೇಗ್ರೌಂಡ್‌ನಲ್ಲಿ ಯಾರಾದರೂ

ಎನ್‌ಕ್ರೋಚ್ ಮಾಡಿಕೊಂಡಿದ್ದರೆ ಅವುಗಳನ್ನು ಬಿಡಿಸಿಕೊಳ್ಳುವುದಕ್ಕೆ ಒಂದು ವ್ಯವಸ್ಥೆಯನ್ನು ಈಗಾಗಲೇ ಮಾಡಿದ್ದೇವೆ. ನಮ್ಮ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ನೀವು ಪೋಲಿಸ್ ಕಂಪ್ಲೈಂಟ್ ಕೊಟ್ಟರೂ ಅಡ್ಡಿ ಇಲ್ಲ, ಆ ಪ್ಲೇಗ್ರೌಂಡ್‌ಗಳನ್ನು ಬಿಡಿಸಿಕೊಳ್ಳಬೇಕು ಎನ್ನುವಂತಹ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಮತ್ತೊಂದು ಮುಖ್ಯವಾದಂತಹ ವಿಷಯವೇನೆಂದರೆ ಪ್ರೈಮರಿ ಶಾಲೆಗಳಿಗೆ ಚಿಕ್ಕಚಿಕ್ಕ ಮಕ್ಕಳು ಬರುತ್ತಾರೆ. ಆ ಮಕ್ಕಳು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಅಲ್ಲಿಯೇ ಇರುವಂತಹ ಒಂದು ವ್ಯವಸ್ಥೆ ಇರುತ್ತದೆ. ಅಲ್ಲಿಗೆ ಊಟಕ್ಕೂ ಸಹ ಅವರು ತೆಗೆದುಕೊಂಡು ಬಂದಿರುತ್ತಾರೆ. ಅವರು ಅಲ್ಲಿ ಊಟ ಮಾಡಿದ ನಂತರ ಕುಡಿಯುವುದಕ್ಕೆ ನೀರು ಇರುವುದಿಲ್ಲ. ಅದಕ್ಕೋಸ್ಕರ ನಮ್ಮ ಮಾನ್ಯ ಘೋರ್ಪಡೆ ಸಾಹೇಬರನ್ನು ಬಹಳಷ್ಟು ಒತ್ತಾಯ ಮಾಡಿ ಕಳಕಳಿಯಿಂದ ಮತ್ತು ದೈನ್ಯತೆಯಿಂದ ಕೇಳಿಕೊಂಡಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ:- ಈಗ ತಾವು ಬಹಿರಂಗವಾಗಿ ಕೇಳಿಕೊಂಡಿದ್ದೀರಾ ?

ಡಾ।। ಹೆಚ್. ಡಿ. ಲಮಾಣಿ:- ನಾನು ಅವರಲ್ಲಿ ಕೇಳಿಕೊಂಡಿದ್ದೇನೆ. ಯಾವ ಶಾಲೆಗಳಲ್ಲಿ ಬೋರ್‌ವೆಲ್ ಇಲ್ಲ, ಯಾವ ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಅಲ್ಲಿ ದಯಮಾಡಿ ತಮ್ಮ ಡಿಪಾರ್ಟ್‌ಮೆಂಟ್‌ನಿಂದ ಆ ಶಾಲೆಗಳಿಗೆ ಒಂದೊಂದು ಬೋರನ್ನು ಹಾಕಬೇಕು ಹಾಗೂ ಆ ಮಕ್ಕಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕು ಎಂದು ಕೇಳಿಕೊಂಡಿದ್ದೇನೆ. ಏಕೆಂದರೆ ನಮ್ಮ ನಮ್ಮಲ್ಲೇ ಹೊಂದಾಣಿಕೆ ಇರಬೇಕು ಎಂದು ಕೇಳಿಕೊಂಡಿದ್ದೇನೆ. ಅದಕ್ಕಾಗಿ ಕೊನೆಯ ಪಕ್ಷ ಒಂದು ವರ್ಷಕ್ಕೆ 5 ಸಾವಿರ ಶಾಲೆಗಳಿಗೆ ಇಂತಹ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕು ಎಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಅದನ್ನು ಸ್ಟೇಜ್‌ವೈಜ್ ಆಗಿ ಒಂದು ವರ್ಷಕ್ಕೆ ಇಷ್ಟು ಮಾಡಬೇಕು ಎಂದು ಒಂದು ಕಾರ್ಯಕ್ರಮ ಹಾಕಿಕೊಂಡರೆ 5–6 ವರ್ಷಗಳಲ್ಲಿ ನಮ್ಮ ಎಲ್ಲಾ ಶಾಲೆಗಳು ಮುಗಿದು ಬಿಡುತ್ತವೆ. ತಾವು ಅಂತಹ ಒಂದು ವ್ಯವಸ್ಥೆಯನ್ನು ಮಾಡಿಕೊಡಬೇಕು.

ಶ್ರೀ ಕರಿಯಣ್ಣ:- ಅಲ್ಲಿ ಕುಡಿಯುವ ನೀರಿನ ಜೊತೆಗೆ ಒಂದು ಟಾಯ್ಲೆಟ್ ಬ್ಲಾಕ್ ಇರಬೇಕು.

ಶ್ರೀ ಎಂ.ವೈ. ಘೋರ್ಪಡೆ:- ಈಗ ಸದ್ಯಕ್ಕೆ ಪ್ರತ್ಯೇಕವಾಗಿ ಪ್ರತಿಯೊಂದು ಶಾಲೆಗೆ ನೀರಿನ ವ್ಯವಸ್ಥೆ ಮಾಡಿಕೊಡಬೇಕು ಎನ್ನುವಂತಹ ಕಾರ್ಯಕ್ರಮ ಇಲ್ಲ. ಇದು ನಿಜ. ಆದರೆ ನಮ್ಮ ನೀರಿನ ಕಾರ್ಯಕ್ರಮ ಏನಿದೆ ಅದು ಶಾಲೆಗೆ ಬಿಟ್ಟು ಏನಿಲ್ಲ. ಕಮ್ಯುನಿಟಿಗೋಸ್ಕರ ಇದೆ. ಈ ಸ್ಯಾನಿಟೇಷನ್ ಪ್ರೋಗ್ರಾಂ ಆಗಲಿ ಅಥವಾ ಕುಡಿಯುವ ನೀರಿನ ಪ್ರೋಗ್ರಾಂ ಆಗಲಿ ಅದು ಕಮ್ಯೂನಿಟಿಗೋಸ್ಕರ ಇದೆ. ಈ ಪ್ರೋಗ್ರಾಂ ಮಾಡುವಾಗ ಎಷ್ಟರ ಮಟ್ಟಿಗೆ ನಾವು ಶಾಲೆಗಳ ಕಡೆ ಅವುಗಳ ಅವಶ್ಯಕತೆಗಳ ಕಡೆ ಕೊಟ್ಟು ಅದು ಸರಿ ಹೋಗುವ ರೀತಿಯಲ್ಲಿ ಕಾರ್ಯಕ್ರಮವನ್ನು ಮುಂದುವರೆಸುವುದಕ್ಕೆ ಸಾಧ್ಯ ಎನ್ನುವ ಬಗ್ಗೆ ಖಂಡಿತವಾಗಿ ಚಿಂತನೆ ಮಾಡುತ್ತೇವೆ.

ಶ್ರೀ ಕರಿಯಣ್ಣ:- ಗ್ರಾಮಾಂತರ ಪ್ರದೇಶದಲ್ಲಿ ಶೌಚಾಲಯಗಳನ್ನು ಕಟ್ಟುತ್ತಿದ್ದೀರಿ. ಅದು ಮಕ್ಕಳಿಗೆ ಇರಲಿಲ್ಲ. ಟೀಚರ್‌ಗಳಿಗೂ ಸಹಾ ರೀಸಸ್‌ಗೆ ಹೋಗುವುದಕ್ಕೆ ಜಾಗ ಇಲ್ಲ, ಅದೂ ಸಹಿತ ತಮ್ಮ ಇಲಾಖೆಗೆ ಬರುತ್ತದೆ. ಅದನ್ನು ಮಾಡಿಕೊಟ್ಟರೆ ಆಗುತ್ತದೆ.

ಡಾ।। ಹೆಚ್.ಡಿ. ಲಮಾಣಿ:- ನಾನು ಮೊದಲೇ ಹೇಳಿದಂತೆ ಈ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿಯವರಿಗೂ ಸಹಿತ ಸಾಕಷ್ಟು ಪ್ರಮಾಣದಲ್ಲಿ ಸಂಸ್ಥೆಗಳನ್ನು ನಡೆಸುವುದಕ್ಕೆ ಅನುಕೂಲಗಳನ್ನು ನಾವು ಮಾಡಿಕೊಟ್ಟಿದ್ದೇವೆ. ಅದರಲ್ಲಿ ನಮ್ಮ ಹರಿಜನ ಗಿರಿಜನ ಸಂಸ್ಥೆಯವರು ಸಹಿತ ಕೆಲವೊಂದು ಹೈಸ್ಕೂಲುಗಳನ್ನು ನಡೆಸುತ್ತಿದ್ದಾರೆ. ಆ ಹರಿಜನ ಗಿರಿಜನ ಸಂಸ್ಥೆಯವರು ಯಾವ ವರ್ಷದಿಂದ ಆ ಸಂಸ್ಥೆಯನ್ನು ನಡೆಸುತ್ತಾರೋ ಅದೇ ವರ್ಷದಿಂದ ಗ್ರಾಂಟನ್ನು ಕೊಡಬೇಕು ಎನ್ನುವಂಥ ಒಂದು

ವ್ಯವಸ್ಥೆ ಇತ್ತು. ಆದರೆ ಆ ವ್ಯವಸ್ಥೆ ಬರುತ್ತಾ ಬರುತ್ತಾ ಸ್ವಲ್ಪ ಏನೋ ಬದಲಾವಣೆಯಾಗಿ ಕಳೆದ ಕೆಲವೊಂದು ವರ್ಷಗಳಲ್ಲಿ ಕೆಲವೊಂದು ಶಾಲೆಗಳಿಗೆ ಏನು ಮಂಜೂರು ಮಾಡಿದ್ದಾರೆ, ಅಥವಾ ಮಂಜೂರು ಮಾಡಲಾಗಿದೆ ಅಂಥ ಶಾಲೆಗಳಿಗೆ ನಾವು ಶಾಶ್ವತ ಅನುದಾನ ರಹಿತವಾಗಿ ಆ ಶಾಲೆಗಳನ್ನು ಮಂಜೂರು ಮಾಡಿದ್ದೇವೆ ಎಂದು ಹೇಳಿ ಅಂಥ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಕರಿಯಣ್ಣ:– ಕಾನೂನು ಬದಲಾವಣೆ ಆಗಿಲ್ಲ. ಅದು ಲೆಜಿಸ್ಲೇಚರ್‌ನಲ್ಲಿ ಪಾಸಾಗಿರುವುದು.

ಡಾ।। ಹೆಚ್.ಡಿ. ಲಮಾಣಿ:– ಮಾನ್ಯ ಕರಿಯಣ್ಣನವರೇ, ಅದನ್ನೇ ನಾನು ಹೇಳುತ್ತಿದ್ದೇನೆ. ತಮಗೆ ಏನು ಹೇಳಬೇಕಾಗಿದಿಯೋ ಅದನ್ನು ನಾನು ಹೇಳುತ್ತಿದ್ದೇನೆ. ಮುಂದೆ ಇಂಥ ಶಾಲೆಗಳಿಗೆ ನಾವು ಮಾನ್ಯತೆ ಕೊಡಬೇಕಾದೀತು ಎಂದರೆ ನಾವು ಎಲ್ಲಾ ಕಾನೂನಿನ ರೀತ್ಯ ಅಲ್ಲೇ ಏನೇನು ಬೇಕೋ ಅವುಗಳನ್ನು ಮಾಡಬೇಕಾಗಿರುತ್ತದೆ. ಅದು ನಿಜ. ಅದನ್ನು ಮಾಡುವಂಥದ್ದೇ. ಸುಮಾರು ಹೈಸ್ಕೂಲುಗಳಿಗೆ ಜನರಲ್ ಆಗಿ ಇರಬಹುದು ಅಥವಾ ಪರಿಶಿಷ್ಟ ಜಾತಿಗೆ ಸೇರಿದಂಥ ಸಂಸ್ಥೆಗಳೇ ಇರಬಹುದು. ಮೊದಲನೇ ವರ್ಷದಿಂದಲೇ ಶಾಶ್ವತ ಅನುದಾನ ರಹಿತವಾಗಿ ಎಂದು ಮಾಡಿದ್ದೇವೆ. ಆದರೆ ನಾವು ಏನಾದರೂ ಮಾಡಿ ಈ ಎಸ್.ಸಿ. ಸಂಸ್ಥೆಯವರಿಗೆ ಸಹಾಯ ಮಾಡಬೇಕು, ಅವರಿಗೆ ಈ ಗ್ರಾಂಟ್‌ನ್ನು ಕೊಡಬೇಕು ಎನ್ನುವ ದೃಷ್ಟಿಯಿಂದ ಆ ಒಂದು ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ಒಂದು ಹೈಪವರ್ ಕಮಿಟಿಯನ್ನು ರಚನೆ ಮಾಡಿದ್ದೇವೆ. ಡಾ।। ನಾಗರಾಜ್‌ರವರು ವೈಸ್‌ಛಾನ್ಸಲರ್ ಆಗಿದ್ದರು. ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ರಚಿಸಲಾಗಿತ್ತು. ಆ ಕಮಿಟಿ ಈಗಾಗಲೇ ಒಂದು ಇಂಟಿರಮ್ ರಿಪೋರ್ಟನ್ನು ಕೊಟ್ಟಿದೆ. ಆ ಇಂಟಿರಮ್ ರಿಪೋರ್ಟ್ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ. ಅದರ ಬಗ್ಗೆ ಸಾಕಷ್ಟು ಚಿಂತನೆಯನ್ನು ಮಾಡುತ್ತಿದ್ದೇವೆ, ಅದು ನಮ್ಮ ಪರಿಶೀಲನೆಯಲ್ಲಿದೆ. ಆ ರಿಪೋರ್ಟನ್ನು ನಾವು ಜಾರಿಗೊಳಿಸಬೇಕು ಅಥವಾ ಏನಾದರೂ ಅದರಲ್ಲಿ ಬದಲಾವಣೆ ಮಾಡಬೇಕು, ನಮ್ಮ ಕಾನೂನಿನ ರೀತ್ಯ ಏನು ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡುವಂಥ ಒಂದು ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ಅಂತೂ ಒಂದು ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಇಂಥ ನಮ್ಮ ಎಸ್.ಸಿ.ಎಸ್.ಟಿ. ಮ್ಯಾನೇಜ್‌ಮೆಂಟಿನ ಸಂಸ್ಥೆಗಳಿಗೆ ಸಹಾಯ ಮಾಡುವ ದಿಸೆಯಲ್ಲಿ ನಾವು ಪ್ರಯತ್ನಶೀಲರಾಗುತ್ತೇವೆ. ಆ ರಿಪೋರ್ಟಿನ ಆಧಾರದ ಮೇಲೆ ಅವರಿಗೆ ಅನುಕೂಲ ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ಮನಸ್ಸು ಮಾಡಿದ್ದೇನೆ. ನಾನು ಪ್ರಾಮಾಣಿಕವಾಗಿ ಆ ದಿಸೆಯಲ್ಲಿ ಪ್ರಯತ್ನವನ್ನು ಮಾಡುತ್ತೇನೆ. ಒಂದು ಮಾತನ್ನು ನಮ್ಮ ಕೆಲವು ಶಾಸಕರು ಹೇಳಿದರು. ಈ ಹರಿಜನ ಗಿರಿಜನರ ಹೆಸರಿನ ಮೇಲೆ ಬೇರೆಯವರು ಆ ಸಂಸ್ಥೆಯನ್ನು ನಡೆಸುತ್ತಿದ್ದಾರೆ ಎಂದು. ಅದು ಬಹಳಷ್ಟು ಕಡೆಗೆ ಸತ್ಯ ಇದೆ. ಬಹಳಷ್ಟು ಜನರು ಈ ರೀತಿ ಮಾಡಿದ್ದಾರೆ. ಅವರು ಗ್ರಾಂಟ್ ತೆಗೆದುಕೊಳ್ಳಬೇಕಾದರೆ ಅವರನ್ನು ಕರೆದುಕೊಂಡು ಬರುತ್ತಾರೆ. ಸಹಿ ಮಾಡಿಸುತ್ತಾರೆ, ಗ್ರಾಂಟ್ ತೆಗೆದುಕೊಳ್ಳುತ್ತಾರೆ. ಅವರಿಗೆ ಸ್ವಲ್ಪ ಕೊಟ್ಟು ಮನೆಗೆ ಕಳುಹಿಸಿ ಉಳಿದದ್ದನ್ನೆಲ್ಲಾ ತಾವೇ ಸ್ವಾಹ ಮಾಡುವಂಥದ್ದು ನಡೆದಿದೆ. ಅಧ್ಯಾಪಕರನ್ನು ನೇಮಿಸಿಕೊಳ್ಳುವುದರಿಂದ ಹಿಡಿದು ಪ್ರತಿಯೊಂದು ಈ ಬೇರೆಯವರೇ ಮಾಡುತ್ತಿರುವುದರಿಂದ ಅಂಥ ಶಾಲೆಗಳಿಗೆ ನಿಜವಾಗಲೂ ಒಂದು ರೀತಿಯಲ್ಲಿ ನಾವು ಮಾನ್ಯತೆಯನ್ನು ಕೊಡುವುದರ ಬಗ್ಗೆ ಸಾಕಷ್ಟು ಚಿಂತನೆಯನ್ನು ಮಾಡಬೇಕಾಗುತ್ತದೆ. ಅಂಥವುಗಳನ್ನು ಕ್ಯಾನ್ಸಲ್ ಮಾಡಿದರೂ ಸಹಿತ ಅಥವಾ ಅವರ ಮಾನ್ಯತೆಯನ್ನು ರದ್ದುಪಡಿಸುವುದಕ್ಕೂ ಸಾಧ್ಯ ಇದೆ. ಇಂಥ ಪರಿಸ್ಥಿತಿಯನ್ನು ನಾವು ನಿರ್ಮಾಣ ಮಾಡಬೇಕು. ಅವುಗಳ ಮಾನ್ಯತೆಯನ್ನು ರದ್ದುಪಡಿಸಬೇಕು ಎನ್ನುವಂಥ ವಿಚಾರವನ್ನು ನಮ್ಮ ಸದಸ್ಯರಾದ ಶಿವನಂಜಪ್ಪನವರು ಹೇಳಿದ ಹಾಗೆ ನಾನು ಹೇಳುತ್ತಿದ್ದೇನೆ. ಆದರೆ ಯಾವ ಶಾಲೆಗಳು ಯಾವ ಸಂಸ್ಥೆಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಾ ಇವೆಯೋ ಅವರಿಗೆ ಗ್ರಾಂಟನ್ನು ಕೊಡುವಂಥ ಮಾತನ್ನು ನಾವು ವಿಚಾರ ಮಾಡಿದ್ದೇವೆ. ನಮ್ಮ ಶಿವಾನಂದ ಕೌಜಲಗಿಯವರು ಬಹಳ ಮಹತ್ವದ ಮಾತುಗಳನ್ನು

ಹೇಳಿದ್ದಾರೆ. ಬಿಜಾಪುರದಲ್ಲಿರುವಂತಹ ಒಂದು ಸೈನಿಕ ಸ್ಕೂಲಿನ ಬಗ್ಗೆ ಅವರು ಹೇಳಿದ್ದಾರೆ. ಹಾಗೂ ಕಿತ್ತೂರಿನಲ್ಲಿರುವ ರಾಣಿ ಕಿತ್ತೂರು ಚೆನ್ನಮ್ಮ ಸ್ಕೂಲಿನ ಬಗ್ಗೆ ಸಹ ಹೇಳಿದ್ದಾರೆ. ಅವುಗಳಿಗೆ ಸರಿಯಾದ ರೀತಿಯಲ್ಲಿ ಗ್ರಾಂಟನ್ನು ಕೊಟ್ಟು ಅವರು ಆ ಶಾಲೆಯನ್ನು ಚೆನ್ನಾಗಿ ನಡೆಸಿಕೊಂಡು ಹೋಗಬೇಕು ಎನ್ನುವಂತಹ ಮಾತನ್ನು ಹೇಳಿದ್ದಾರೆ. ನಾನೂ ಸಹಿತ ಇದರ ಬಗ್ಗೆ ಹಿಂದೆಯೇ ಹೇಳಿದ್ದೇನೆ. ಈ ಎರಡೂ ಶಾಲೆಗಳು ನಮ್ಮ ರಾಜ್ಯಕ್ಕೆ ಪ್ರತಿಷ್ಠಿತವಾದಂತಹ ಶಾಲೆಗಳು. ಒಂದು ವಿದ್ಯಾರ್ಥಿಗಳಿಗಾಗಿ ಇನ್ನೊಂದು ವಿದ್ಯಾರ್ಥಿನಿಯರಿಗಾಗಿ. ಇವುಗಳನ್ನು ನಾವು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು. ಇನ್ನೂ ಹೆಚ್ಚಿನ ಹಣವನ್ನು ಅವರಿಗೆ ಸಹಾಯ ಮಾಡಿ ಆ ಶಾಲೆಯನ್ನು ಸುಧಾರಣೆ ಮಾಡುವಂತಹ ಪರಿಸ್ಥಿತಿ ಇದೆ. ಬಿಜಾಪುರ ಸೈನಿಕ ಶಾಲೆ ಈಗ ಮುಚ್ಚುವಂತಹ ಒಂದು ಪರಿಸ್ಥಿತಿ ಇದೆ. ಅದಕ್ಕೆ ಹೆಚ್ಚಿನ ಧನ ಸಹಾಯ ಮಾಡಿ ಇನ್ನೂ ಒಳ್ಳೆಯ ರೀತಿಯಲ್ಲಿ ಅದನ್ನು ನಡೆಸಿಕೊಂಡು ಹೋಗಬೇಕು ಎನ್ನುವಂತಹ ವಿಚಾರವನ್ನು ನಾವು ಮಾಡಿದ್ದೇವೆ.

ಇನ್ನು ಬಹಳಷ್ಟು ಜನ ಅನೇಕ ರೀತಿಯಲ್ಲಿ ಸಮಸ್ಯೆಗಳನ್ನು ಇಟ್ಟಿದ್ದಾರೆ. ನಮ್ಮ ಮಾನ್ಯ ಸದಸ್ಯಣಿಯರಾದ ಸುಮಾ ವಸಂತ್ ಅವರಾಗಲೀ, ಅಥವಾ ಬೇರೆಬೇರೆ ಜನ ಬೇರೆಬೇರೆ ರೀತಿಯಲ್ಲಿ ಈ ಶಾಲೆಗಳ ಬಗ್ಗೆ ಹಾಗೂ ಶಿಕ್ಷಣದ ಬಗ್ಗೆ ಮಾತನಾಡಿದ್ದಾರೆ. ಇನ್ನೂ ಒಂದು ಮಾತನ್ನು ಈ ಶಾಲಾ ಕಟ್ಟಡದ ಬಗ್ಗೆ ಇಲ್ಲಿ ನಾನು ಅವಶ್ಯವಾಗಿ ಹೇಳಬೇಕಾಗಿದೆ. ಏಕೆಂದರೆ ನಮ್ಮ ವಿದ್ಯಾರ್ಥಿಗಳು ಗಿಡದ ಕೆಳಗೆ ಓದುತ್ತಿದ್ದಾರೆ ಅವರಿಗೆ ಸರಿಯಾದ ಕಟ್ಟಡಗಳು ಇಲ್ಲ ಎಂದು ಕೆಲವು ಜನ ಹೇಳಿದರು. ಕೆಲವು ಶಾಲೆಗಳು ಸೋರುತ್ತಿವೆ, ಇನ್ನೂ ಕೆಲವೊಂದು ಕಡೆ ಪರಿಸ್ಥಿತಿ ಗಂಭೀರವಾಗಿದೆ ಎನ್ನುವಂತಹ ಮಾತನ್ನು ಹೇಳಿದಾಗ ನಾವು ನಿಜವಾಗಿಯೂ ಸಹ ನಾವು ಈ ಕಟ್ಟಡದ ಬಗ್ಗೆ ಚಿಂತನೆ ಮಾಡುವಂತಹುದು ಬಹಳ ಅವಶ್ಯಕ ಇದೆ. ಇದಕ್ಕಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಒಂದು ನಿಗಮವನ್ನು ಸ್ಥಾಪಿಸುವ ವಿಷಯವನ್ನು ಹೇಳಿದ್ದಾರೆ. ಸರ್ಕಾರದ ಒಂದು ಹತ್ತು ಕೋಟಿ ರೂಪಾಯಿಯನ್ನು ಆ ನಿಗಮದಲ್ಲಿಟ್ಟು ಪಬ್ಲಿಕ್‌ನಿಂದ ನಾವು ಹಣವನ್ನು ಸಂಗ್ರಹಿಸಿ ಈ ಶಾಲಾ ಕಟ್ಟಡಕ್ಕಾಗಿ 'ಶಾಲಾ ಕಟ್ಟಡ ನಿಧಿ' ಎಂಬ ಒಂದು ಹೆಸರನ್ನು ಇಟ್ಟು ಜನರಿಂದ ಹಣವನ್ನು ಸಾಧ್ಯವಾದ ಮಟ್ಟಿಗೆ ಕೇಳುತ್ತೇವೆ. ಏಕೆದಂರೆ ಸ್ಕೂಲ್ ಬೆಟರ್‌ಮೆಂಟ್ ಕಮಿಟಿ ಎಂದು ಇದೆ. ಶಾಲಾ ಸುಧಾರಣಾ ಸಮಿತಿ ಎಂದು ಇದೆ. ಶಿಕಾರಿಪುರಕ್ಕೆ ನಾನು ಹೋದಾಗ ಸುಮಾರು 22ಲಕ್ಷ ರೂಪಾಯಿಗಳನ್ನು ಅವರು ಶಾಲೆಗಾಗಿ ಸಂಗ್ರಹಿಸಿದ್ದರು. ಅಂದರೆ ಒಂದು ಊರಿನಲ್ಲಿ 22ಲಕ್ಷ ರೂಪಾಯಿಗಳನ್ನು ಸಂಗ್ರಹ ಮಾಡಲಿಕ್ಕೆ ಸಾಧ್ಯ ಇದೆ ಎಂದ ಮೇಲೆ ಈ ಕಟ್ಟಡಗಳಿಗೆ ಇಡೀ ನಮ್ಮ ಕರ್ನಾಟಕದಲ್ಲಿ ಬೇರೆ ರೀತಿಯಲ್ಲಿ ಕೇಳಿ ಅಥವಾ ಅವರ ಮನ ಒಲಿಸಿ ಅವರಿಗೆ ಪ್ರೋತ್ಸಾಹಿಸಿ ಶಾಲಾ ಕಟ್ಟಡದ ನಿಧಿಯಲ್ಲಿ ಹಣವನ್ನು ತೊಡಗಿಸಲಿಕ್ಕೆ ನಾವು ಕೇಳಿಕೊಂಡೆವು ಅಂದರೆ ನನಗೆ ಅನಿಸುತ್ತದೆ ನಮ್ಮ ಈ ಕಟ್ಟಡದ ನಿಧಿ ಹೆಚ್ಚಾಗಿ ಬೆಳೆಯುತ್ತದೆ. ಬೆಳೆದು ಈ ಕಟ್ಟಡವನ್ನು ಸ್ಥಾಪಿಸುವಲ್ಲಿ ಸಹಾಯ ಆಗುತ್ತದೆ ಎನ್ನುವ ಒಂದು ವಿಚಾರವನ್ನು ಇಟ್ಟುಕೊಂಡು ನಾವು ಮುಂದುವರಿಯುತ್ತಿದ್ದೇವೆ. ಇದಕ್ಕೆ ಏನೇನು ಮೊಡಾಲಿಟೀಸ್ ಬೇಕು ಏನೇನು ಕಾನೂನುಗಳನ್ನು ರಚಿಸಬೇಕು ಅಥವಾ ಯಾವ ರೀತಿಯಾಗಿ ಮಾಡಬೇಕು ಎಂದು ಯೋಚಿಸುತ್ತಿದ್ದೇವೆ. ಇನ್‌ಕಂಟ್ಯಾಕ್ಸ್ ಫ್ರೀ ಆಗುವ ರೀತಿಯಲ್ಲಿ ನಾವು ಕೇಂದ್ರ ಸರ್ಕಾರದ ಜೊತೆಯಲ್ಲಿ ಚರ್ಚಿಸುತ್ತೇವೆ. ಒಂದು ವೇಳೆ ಯಾರಾದರೂ ನಮ್ಮ ನಾಯಕರು ಹೇಳಿದ ಹಾಗೆ ಹಾನಿಗಳು ಕಟ್ಟಡವನ್ನು ನಿರ್ಮಿಸಿ ತಮ್ಮ ಹೆಸರನ್ನು ಒಂದು ವೇಳೆ ಅದರ ಮೇಲೆ ಇಟ್ಟು ಕೊಳ್ಳುವುದಕ್ಕೆ ಏನಾದರೂ ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯವೇ ಎಂದು ಕೇಳಿದಾಗ ನಾನು ಹೇಳಿದೆ, ಒಂದು ವೇಳೆ ಶಾಲಾ ಕಟ್ಟಡವನ್ನು ನಿರ್ಮಿಸಿ ಕೊಟ್ಟಿದ್ದೇ ಆದರೆ ಅವರ ಹೆಸರನ್ನು ಶಾಲಾ ಕಟ್ಟಡಕ್ಕೆ ಇಡಲು ಹಿಂದೆ ಮುಂದೆ ನೋಡುವುದಿಲ್ಲ. ಏಕೆಂದರೆ ನಮಗೆ ಬೇಕಾಗಿರುವುದು ಕಟ್ಟಡ; ಅದು ಆಗಲಿ. ಆದ್ದರಿಂದ ಈ ಒಂದು ನಿಧಿಯನ್ನು ಸ್ಥಾಪಿಸಿ, ಆ ನಿಧಿಯಿಂದ ಕಟ್ಟಡಗಳನ್ನು ನಿರ್ಮಿಸಬೇಕು ಎಂದು ಈಗಾಗಲೇ ನಿರ್ಣಯವನ್ನು ತೆಗೆದುಕೊಂಡಿದ್ದೇವೆ.

ಇನ್ನು ಈ ಶಿಕ್ಷಣ ಕ್ಷೇತ್ರಕದಲ್ಲಿ ಸಾಕಷ್ಟು ವಿಷಯಗಳು ಇದ್ದರೂ ಸಹಿತ ನಾನು ಈಗಾಗಲೇ ಪುಸ್ತಕಗಳನ್ನು ಕೊಟ್ಟಿರುವುದರಿಂದ ಹಾಗೂ ಸದಸ್ಯರು ಏನು ಹೇಳಿದ್ದಾರೆ. ಅದರ ಬಗ್ಗೆ ಅಷ್ಟೇ ನಾನು ಇಲ್ಲಿ ಚರ್ಚೆ ಮಾಡಿದ್ದೇನೆ. ಆದ್ದರಿಂದ ದಯಮಾಡಿ ಇನ್ನೂ ಹೆಚ್ಚಿನ ಗಂಭೀರತೆಯಿಂದ ಈ ವಿಷಯವನ್ನು ಚಿಂತಿಸಬೇಕು. ಮತ್ತು ಈ ಕಟ್ಟಡದ ಬಗ್ಗೆ ಏನು ಹೇಳಿದೆ, ನಿಧಿ ಬಗ್ಗೆ, ಈ ನಿಧಿಗಾಗಿ ತಾವೆಲ್ಲರೂ ಪ್ರಯತ್ನ ಮಾಡಬೇಕು. ಏಕೆಂದರೆ ಇದು ನಮ್ಮೊಬ್ಬರ ಪ್ರಯತ್ನ ಅಲ್ಲ. ಸರ್ಕಾರದ ಪ್ರಯತ್ನ. ಸರ್ಕಾರ ಎಂದರೆ ಅದರಲ್ಲಿ ತಾವೆಲ್ಲರೂ ಅದರಲ್ಲಿರುವಂತಹವರು. ತಾವೂ ಸಹಿತ ಪ್ರಯತ್ನ ಮಾಡಿ ಈ ನಿಧಿಯನ್ನು ಹೆಚ್ಚಿನ ನಮ್ಮ ಕಟ್ಟಡಗಳಿಗೆ ಸಹಾಯವನ್ನು ಮಾಡಬೇಕು ಎಂದು ಕೇಳಿಕೊಳ್ಳುತ್ತಾ ನಾನು ಏನು ಈ ಬೇಡಿಕೆಯನ್ನು ಮಂಡಿಸಿದ್ದೇನೆ ಅದಕ್ಕೆ ತಾವು ಮಂಜೂರಾತಿಯನ್ನು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ:– ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮಂತ್ರಿಗಳು ಇಡೀ ರಾಜ್ಯದಲ್ಲಿ ಒಂದು ರೂಮಿನ ಸ್ಕೂಲು ಎಷ್ಟು ಇವೆ ಮತ್ತು ಒಬ್ಬರೇ ಉಪಾಧ್ಯಾಯರು ನಡೆಸುತ್ತಾ ಇರತಕ್ಕ ಸ್ಕೂಲುಗಳು ಎಷ್ಟು ಇವೆ ಎನ್ನುವ ಅಂಕಿ ಅಂಶಗಳನ್ನು ಕೊಡಬಲ್ಲಿರಾ ? ಅಲ್ಲದೇ ಈ ನ್ಯೂನತೆಗಳನ್ನು ಸರಿ ಮಾಡುವುದಕ್ಕೆ ತಾವು ಎಷ್ಟು ವರ್ಷ ತೆಗೆದುಕೊಳ್ಳುತ್ತೀರಿ ? ಅಂದರೆ ನಾಲ್ಕೂ ತರಗತಿಗೆ ನಾಲ್ಕು ರೂಮುಗಳು, ನಾಲ್ಕು ತರಗತಿಗಳಿಗೆ ನಾಲ್ಕು ಜನ ಉಪಾಧ್ಯಾಯರು. ಈ ನ್ಯೂನತೆಗಳನ್ನು ತುಂಬಿಕೊಡುವುದಕ್ಕೆ ತಾವು ಇನ್ನು ಎಷ್ಟು ವರ್ಷ ತೆಗದುಕೊಳ್ಳುವುದಕ್ಕೆ ಸಾಧ್ಯ ? ಇದನ್ನು ದಯಮಾಡಿ ಹೇಳಬೇಕು.

ಉಪಾಧ್ಯಕ್ಷರು:- ಎಲ್ಲಾ ಸದಸ್ಯರು ಹೇಳಿದ ನಂತರ ತಾವು ಒಟ್ಟಿಗೆ ರಿಪ್ಲೈ ಕೊಡಿ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ:– ಮಾನ್ಯ ಉಪಾಧ್ಯಕ್ಷರೇ, ಹೋದ ಬಜೆಟ್ ಅಧಿವೇಶನದಲ್ಲಿ ಶಿಕ್ಷಣ ಸಚಿವರಾಗಿದ್ದಂಥ ಶ್ರೀಮಾನ್ ವೀರಪ್ಪ ಮೊಯಿಲಿಯವರು ಎಸ್‌ಸಿ:ಎಸ್‌ಟಿ ಸದಸ್ಯರುಗಳ ಒಂದು ಸಭೆ ಕರೆದು 'ಎಸ್‌ಸಿ ಮ್ಯಾನೇಜ್‌ಮೆಂಟ್‌ನವರು ಯಾರು ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೋ, ಅಂತಹವರ ಶಾಲೆಗಳಿಗೆ ಮೊದಲ ವರ್ಷದಿಂದಲೇ ಗ್ರಾಂಟ್ ಕೊಡುತ್ತೇವೆ' ಎಂದು ಹೇಳಿದರು. ಆದರೆ, ಸಮಿತಿಯವರು ಇದುವರೆಗೆ ಬಹುಶಃ ಅಂತಹ ಶಾಲೆಗಳನ್ನು ಹೋಗಿ ನೋಡುವುದಕ್ಕೆ ಸಾಧ್ಯವಾಗಿಲ್ಲವೆಂದು ನನಗೆ ತಿಳಿದುಬಂದಿದೆ. ಆದುದರಿಂದ, ಜಿಲ್ಲೆಯಲ್ಲಿರತಕ್ಕಂಥ ಡಿಡಿಪಿಐಗಳಿಗೆ ಸೂಚನೆ ಕೊಟ್ಟು, ಅವರು ಇನ್ಸ್‌ಪೆಕ್ಷನ್ ಮಾಡಿ ಅವರಿಂದ ರಿಪೋರ್ಟ್ ತರಿಸಿಕೊಂಡು ಆದಷ್ಟು ಬೇಗ ಶಾಲೆಗಳಿಗೆ ಗ್ರಾಂಟ್ ಕೊಡುವುದಕ್ಕೆ ಏರ್ಪಾಟು ಮಾಡುತ್ತೀರಾ ?

ಶ್ರೀ ಕೆ.ಎಚ್. ಹನುಮೇಗೌಡ:– ಸನ್ಮಾನ್ಯ ಉಪಾಧ್ಯಕ್ಷರೇ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಕೆಲವು ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸೊನ್ನೆ. ಒಬ್ಬ ವಿದ್ಯಾರ್ಥಿಯೂ ಉತ್ತೀರ್ಣನಾಗುವುದಿಲ್ಲ. ಆದರೂ ಕೂಡ ಅಂತಹ ಶಾಲೆಗಳಲ್ಲಿರುವ ಉಪಾಧ್ಯಾಯರುಗಳಿಗೆ ಸಂಬಳ ಕೊಡುವ ವ್ಯವಸ್ಥೆಯಾಗುತ್ತಿದೆ. ಪಟ್ಟಣಗಳಲ್ಲಿರುವಂಥ ಮಕ್ಕಳು ಕಾನ್ವೆಂಟ್‌ಗಳಲ್ಲಿ ಓದುತ್ತಾರೆ, ಅವರಿಗೆ ಎಲ್ಲಾ ರೀತಿಯ ಅನುಕೂಲತೆಗಳಿರುತ್ತದೆ, ಹಾಗಾಗಿ ಅವರು ಹೆಚ್ಚು ಅಂಕಗಳನ್ನು ಗಳಿಸುತ್ತಾರೆ, ಅವರು ಜೀವನದಲ್ಲಿ ಮುಂದೆ ಬರುವುದಕ್ಕೂ ಅವಕಾಶವಾಗುತ್ತದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಮಕ್ಕಳಿಗೆ ಸರಿಯಾದಂಥ ವಿದ್ಯಾಭ್ಯಾಸವಿಲ್ಲ. ಈ ಕುರಿತು ಅಲ್ಲಿಗೆ ಹೋಗಿ ಹೇಳುವವರು, ಕೇಳುವವರು ತುಂಬಾ ಕಡಿಮೆ. ಇಂತಹ ಪರಿಸ್ಥಿತಿಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಕಟ್ಟಿದ 20–30 ಹುಡುಗ:ಹುಡುಗಿಯರು ಒಂದು ವಿಷಯದಲ್ಲೂ ಉತ್ತೀರ್ಣರಾಗದೆ ಎಲ್ಲಾ ವಿಷಯಗಳಲ್ಲೂ ಅನುತ್ತೀರ್ಣರಾಗಿದ್ದರೂ ಸಹ ಅಂತಹ ಶಾಲೆಗಳ ಮೇಲೆ ಏನಾದರೂ ನಿರ್ಬಂಧ ವಿಧಿಸಿ ನಿಯಂತ್ರಣಕ್ಕೆ ತೆಗೆದುಕೊಳ್ಳದೆ ಹೋದರೆ ಗ್ರಾಮಾಂತರ ಪ್ರದೇಶದ ಮಕ್ಕಳ ಭವಿಷ್ಯದ ಗತಿ ಏನು ? ದಯಮಾಡಿ ಮಾನ್ಯ

ಸಚಿವರು ಇದರ ಬಗ್ಗೆ ಯೋಚನೆ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರುವ ಖಾಸಗಿ ಶಾಲೆಗಳಲ್ಲಿ ಕಲಿಕೆ ಸ್ವಲ್ಪ ಉತ್ತಮವಾಗಿದೆ. ಸರ್ಕಾರಿ ಶಾಲೆಗಳ ಬಗ್ಗೆ ನಾನು ಹೋದ ಸಲ ಪ್ರಶ್ನೆ ಕೇಳಿದಾಗ ಮಾನ್ಯ ಸದಸ್ಯರಾದ ಶ್ರೀ ಬೈರೇಗೌಡರು ಸದನದಲ್ಲಿರಲಿಲ್ಲ. ಆಗ ಮಂತ್ರಿಗಳ ಮೇಲೆ ಗಲಾಟೆ ಮಾಡಿದರು. ಏಕೆಂದರೆ, ಉಪಾಧ್ಯಾಯರುಗಳು ಶಾಲೆಗಳಲ್ಲಿ ಪಾಠ ಮಾಡಲಿ, ಬಿಡಲಿ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣವಾಗಲಿ, ಬಿಡಲಿ, ಅವರ ಪಾಡಿಗೆ ಅವರು ತಮ್ಮ ಸಂಬಳವನ್ನು ತೆಗೆದುಕೊಂಡು ಹೋದರೆ, ತಂದೆ–ತಾಯಂದಿರು ತಮ್ಮ ಹೊಟ್ಟೆಗೆ ಕೂಳಿಲ್ಲದೆ ಯಾವ ಪುರುಷಾರ್ಥಕ್ಕಾಗಿ ತಮ್ಮ ಮಕ್ಕಳನ್ನು ಇಂತಹ ಶಾಲೆಗಳಲ್ಲಿ ಓದಿಸುವುದಕ್ಕೆ ಕಳುಹಿಸಬೇಕು ? ಇಷ್ಟೆಲ್ಲಾ ಅಧಿಕಾರಿಗಳಿದ್ದು, ಇಂತಹ ಶಾಲೆಗಳ ಬಗ್ಗೆ ಏನಾದರೊಂದು ವ್ಯವಸ್ಥೆ ಮಾಡದಿದ್ದರೆ, ಬಹುಶಃ ಇದು ಸರ್ಕಾರದ 'ನಿರ್ಲಕ್ಷ್ಯ' ಎನ್ನುವ ಮಾತನ್ನು ಹೇಳುತ್ತೇನೆ. ಕೆಲವರು ಉಪಕರಣಗಳನ್ನು ದಾನವಾಗಿ ಕೊಡುತ್ತಾರೆಂದು ನೀವು ಹೇಳಿದಿರಿ. ಕೆಲವು ಊರುಗಳಲ್ಲಿರುವ ಶಾಲೆಗಳಿಗೆ ಹೋಗಿ ನೋಡಿದರೆ, ಕೆಲವರು ಕುರ್ಚಿ, ಗಡಿಯಾರ, ಇತ್ಯಾದಿ ಸಾಮಾನುಗಳನ್ನು ಕೊಟ್ಟಿದ್ದಾರೆ. ಆ ರೀತಿ ದಾನವಾಗಿ ಕೊಟ್ಟಂಥ ವಸ್ತುಗಳನ್ನು ಸ್ವಲ್ಪ ದಿವಸಗಳಾದ ಬಳಿಕ ಕದ್ದುಕೊಂಡು ಹೋಗಿರುತ್ತಾರೆ. ಶಾಲೆಗಳು ಊರಿನ ಹೊರಗಡೆ ಇರುತ್ತವೆ. ಶಾಲೆಗಳಲ್ಲಿ ಹಿಂದೆ ಜವಾನರಿದ್ದರು, ಈಗ ಅವರುಗಳನ್ನು ತೆಗೆದು ಬಿಟ್ಟಿದ್ದೀರಿ. ಈಗ ಶಾಲೆಗಳಲ್ಲಿ 8–10 ಜನ ಉಪಾಧ್ಯಾಯರುಗಳಿರುತ್ತಾರೆ. ಶಾಲೆಗಳಿಗೆ ಕಾಂಪೌಂಡ್ ಹಾಕುವಂದಕ್ಕಿಂಥ ಮುಂಚೆ ಅಂತಹ ಶಾಲೆಗಳಿಗೆ ಕನಿಷ್ಠ ಪಕ್ಷ 4–5 ಜನ ಮಾಸ್ತರುಗಳಿದ್ದು, ಸಾವಿರಾರು ರೂಪಾಯಿಗಳ ಉಪಕರಣಗಳಿರುವುದರಿಂದ ಅಂತಹ ಶಾಲೆಗಳಿಗೆ ಅಟೆಂಡರ್ ಆಗಲಿ ಅಥವಾ ಜವಾನರನ್ನಾಗಲಿ ನೇಮಿಸುವ ವ್ಯವಸ್ಥೆಯನ್ನು ಮಾನ್ಯ ಸಚಿವರು ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ರಾಜುಗೌಡ:– ಮಾನ್ಯ ಉಪಾಧ್ಯಕ್ಷರೇ, ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ಅನುಪಾತ ಬಹಳ ಕಡಿಮೆಯಿದೆ, 30–40 ಜನ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯನಿರುತ್ತಾನೆ. ಗ್ರಾಮೀಣ ಪ್ರದೇಶಗಳಲ್ಲಿರುವ ಶಾಲೆಗಳಲ್ಲಿ ಸುಮಾರು 70–75 ಜನ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯನಿರುತ್ತಾನೆ. ಉಪಾಧ್ಯಾಯ ಮತ್ತು ವಿದ್ಯಾರ್ಥಿಗಳ ಅನುಪಾತವೇನಿದೆ, ಅನುಪಾತದ ತಾರತಮ್ಯವನ್ನು ಹೋಗಲಾಡಿಸುವಂಥ ಕೆಲಸ ಮಾಡಬೇಕು. ತಾಲ್ಲೂಕು ಕೇಂದ್ರದಲ್ಲಿರುವ ಶಾಲೆಗಳಲ್ಲಿ ತೆಗೆದುಕೊಂಡರೆ 30 ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯನಿದ್ದು, ಮತ್ತು ಜಿಲ್ಲಾ ಕೇಂದ್ರದಲ್ಲಿರುವ ಶಾಲೆಗಳಲ್ಲಿ 30 ಜನರಿಗೆ ಒಬ್ಬ ಉಪಾಧ್ಯಾಯರಿರುತ್ತಾರೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿರುವ ಶಾಲೆಗಳಲ್ಲಿ ನೋಡಿದಾಗ ಸುಮಾರು 80–90 ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರಿರುತ್ತಾರೆ. ಏಕೀ ತಾರತಮ್ಯ ? ಈ ತಾರತಮ್ಯವನ್ನು ಮೊದಲು ಹೋಗಲಾಡಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯೆ ಕಲಿಯುವುದಕ್ಕೆ ಬಹಳ ಕಷ್ಟವಾಗುತ್ತದೆ. ಉಪಾಧ್ಯಾಯರ ಅನುಪಾತವನ್ನು ಜಾಸ್ತಿ ಮಾಡದೆ ಹೋದರೆ ನೀವು ಶಿಕ್ಷಣಕ್ಕೆ ಯಾವ ರೀತಿಯ ಪ್ರೋತ್ಸಾಹ ಕೊಟ್ಟಂತಾಗುತ್ತದೆ ? ಆದುದರಿಂದ, ದಯಮಾಡಿ ಈ ಅನುಪಾತದ ತಾರತಮ್ಯವನ್ನು ಹೋಗಲಾಡಿಸುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಉಪಾಧ್ಯಕ್ಷರೇ, ಈ ವಿಷಯವಾಗಿ ಸಾಕಷ್ಟು ಚರ್ಚೆಯಾಗಿದೆ. ಟಿ.ಸಿ.ಹೆಚ್. ಪಾಸಾದಂಥವರಿಗೆ ಶಿಕ್ಷಕರನ್ನಾಗಿ ತಾವು ಏನು ನೇಮಕ ಮಾಡಿಕೊಳ್ಳುತ್ತಿದ್ದೀರಿ. ಆ ಸಮಯದಲ್ಲಿ ಅವರಿಗೆ ಉದ್ಯೋಗ ಸಿಗಬೇಕೆನ್ನುವ ದೃಷ್ಟಿಯಿಂದ ನೂರಕ್ಕೆ ಶೇಕಡಾ 15ರಷ್ಟು ಅಂಕಗಳನ್ನು ಇಡಬೇಕೆಂದು ಒತ್ತಾಯ ಮಾಡುತ್ತಿದ್ದೀರಿ. ಅದನ್ನು ಮಾಡದಿದ್ದರೆ ನೀವು ಒಟ್ಟು 15 ಅಂಕಗಳನ್ನು ಕೊಟ್ಟರೂ ಸಹ ಏನು ಉಪಯೋಗವಾಗುವುದಿಲ್ಲ. ದಯಮಾಡಿ ತಾವು ಕೊಟ್ಟಿರುವ ಭರವಸೆಯನ್ನು ಜಾರಿಗೆ ತರುತ್ತೀರಾ ? ಎರಡನೆಯದಾಗಿ ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ ಇಡೀ ರಾಜ್ಯದಲ್ಲಿ ಈ ರೀತಿಯಾದ ಸಮಸ್ಯೆ ಇರಬಹುದು. ಇದನ್ನು

ಹಲವಾರು ಬಾರಿ ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಶಿಕಾರಿಪುರ ಮತ್ತು ಹಿತ್ಲದ ಜೂನಿಯರ್ ಕಾಲೇಜುಗಳು ಪ್ರಾರಂಭವಾಗಿ 8–10 ತಿಂಗಳೇ ಆದರೂ ಸಹ ಇಲ್ಲಿಯುವರೆಗೆ ಅಲ್ಲಿಗೆ ಆಪ್‌ಷನಲ್ ಸಬ್ಜೆಕ್ಟ್‌ಗೆ ಶಿಕ್ಷಕರನ್ನು ನೇಮಕ ಮಾಡಿಲ್ಲ. ನೂರು ಬಾರಿ ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇಂಥ ಸಂದರ್ಭದಲ್ಲಿ ಶಿಕ್ಷಕರು ಇಲ್ಲದೇ ವರ್ಷಪೂರ್ತಿ ಅವರು ಪರೀಕ್ಷೆಯನ್ನು ಎದುರಿಸುವುದು ಹೇಗೆ ಮತ್ತು ಪಟ್ಟಣ ಪ್ರದೇಶದ ವಿದ್ಯಾರ್ಥಿಗಳೊಂದಿಗೆ ಕಾಂಪಿಟ್ ಮಾಡುವುದು ಹೇಗೆ? ಆದ್ದರಿಂದ ನಿಮ್ಮ ಆದ್ಯತೆ ಮುಂದಾದರೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿರುವ ಶಿಕ್ಷಕರ ಕೊರತೆ ಇಲ್ಲದಂತೆ ಮಾಡಿ ಅಲ್ಲಿನ ಕಾಲೇಜು ಮತ್ತು ಹೈಸ್ಕೂಲ್‌ಗಳಿಗೆ ಶಿಕ್ಷಕರನ್ನು ನೇಮಕ ಮಾಡುವ ಕಡೆಗೆ ಆಸಕ್ತಿ ಇಲ್ಲದಿದ್ದರೆ ತಾವು ದೊಡ್ಡ ಅಪಾರಾಧವನ್ನು ಮಾಡಿದಂತಾಗುತ್ತದೆ. ಇನ್ನು ಮೂರನೆಯದಾಗಿ ಶಾಲೆಗಳ ಸಂಖ್ಯೆ ಬಹಳ ಜಾಸ್ತಿ ಇದೆ, ಎ.ಇ.ಓನವರು ಏನಾದರೂ ಇನ್ಸ್‌ಪೆಕ್ಷನ್‌ಗೆ ಹೋಗಬೇಕೆಂದರೆ ಅವರಿಗೆ ವಾಹನದ ಸೌಲಭ್ಯವಿಲ್ಲ, ಇದರ ಬಗ್ಗೆ ಅವರಿಗೆ ಒಂದು ವಾಹನವನ್ನು ಕೊಡಲು ಬಹಳ ಸಾರಿ ಇಲ್ಲಿ ಪ್ರಸ್ತಾಪ ಮಾಡಿ ಒತ್ತಾಯ ಮಾಡಿದ್ದೇವೆ. ಇದು ತುಂಬಾ ಅಗತ್ಯವಿದೆ. ಆದ್ದರಿಂದ ಪ್ರೈಮರಿ ಮತ್ತು ಹೈಸ್ಕೂಲ್‌ಗಳು ಚೆನ್ನಾಗಿ ನಡೆಯಬೇಕಾದರೆ, ಅವುಗಳನ್ನು ಚೆನ್ನಾಗಿ ನಡೆಸಬೇಕೆಂದು ಮನಸ್ಸು ತಮಗೆ ಇದ್ದರೆ ಒಂದಲ್ಲದಿದ್ರೂ ಸಹ ಎರಡೆರಡು ತಾಲ್ಲೂಕಿಗೆ ಒಂದು ವಾಹನ ಸೌಲಭ್ಯವನ್ನು ಎ.ಇ.ಓ ಗೆ ಕೊಡುವುದರ ಬಗ್ಗೆ ಯೋಚನೆ ಮಾಡುತ್ತೀರಾ? ನಾಲ್ಕನೆಯದಾಗಿ, ಕಪ್ಪು ಹಲಗೆಯ ಯೋಜನೆಯ ಅಡಿಯಲ್ಲಿ ಕೊಠಡಿಗಳನ್ನು ಕಟ್ಟಿ ಕೊಡುವುದು ಕೇಂದ್ರ ಸರ್ಕಾರದ ಯೋಜನೆ, ಅದಕ್ಕೆ ನೂರಕ್ಕೆ ನೂರರಷ್ಟು ಹಣವನ್ನು ಕೇಂದ್ರ ಸರ್ಕಾರ ಕೊಡುತ್ತದೆ, ಆದರೆ ಎರಡು ಮೂರು ವರ್ಷಗಳು ಆದರೂ ಸಹ ಆ ಕಟ್ಟಡಗಳು ಪೂರ್ಣಮಾಡಿಲ್ಲವೆಂದರೆ ಬಹುಶಃ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟರಮಟ್ಟಿಗೆ ಶಾಲಾ ಕಟ್ಟಡಗಳನ್ನು ಕಟ್ಟಲು ತಮಗೆ ಕಳಕಳಿ ಇದೆ ಎನ್ನುವುದು ಗೊತ್ತಾಗುತ್ತದೆ. ತಾವೇ ಉತ್ತರಕೊಟ್ಟಿರುವಂತೆ ಇನ್ನೂ 3 ಸಾವಿರ ಕಟ್ಟಡಗಳು ಪೂರ್ಣವಾಗಿಲ್ಲ. ಅವು ಬೀಳುವ ಸ್ಥಿತಿಗೆ ಬಂದಿವೆ ಎಂದಿದ್ದೀರಿ, ಅವುಗಳನ್ನು ಪೂರ್ಣ ಮಾಡುತ್ತೀರಾ?

ಶ್ರೀ ಬಾಬಾಗೌಡ ಪಾಟೀಲ್:– ಸನ್ಮಾನ್ಯ ಅಧ್ಯಕ್ಷರೇ, ನಗರ ಪ್ರದೇಶಗಳಿಂದ ಹಳ್ಳಿ ಪ್ರದೇಶಕ್ಕೆ ಶಿಕ್ಷಕರನ್ನು ವರ್ಗ ಮಾಡುತ್ತೇವೆ ಎನ್ನತಕ್ಕ ಮಾತನ್ನು ಧೈರ್ಯದಿಂದ ಹೇಳಿದ್ದೀರಿ. ಬಹುತೇಕವಾಗಿ ಅಲ್ಲಿ ಬಾಡಿಗೆ ಮನೆ ಸಿಗುವುದಿಲ್ಲವೆನ್ನತಕ್ಕ ನೆಪವನ್ನು ಹೇಳಿಕೊಂಡು ಶಿಕ್ಷಕರು ನಗರಕ್ಕೆ ಮತ್ತೆ ಹೋಗಬಹುದು, ಆದ್ದರಿಂದ ತಾವು ಈ ಸಂದರ್ಭದಲ್ಲಿ ಆಶ್ರಯ ಯೋಜನೆಯ ಅಡಿಯಲ್ಲಿ ಹೇಗಾದರೂ ಮನೆಗಳನ್ನು ಕಟ್ಟುತ್ತಿದ್ದೀರಿ, ಈ ರೀತಿ ಪ್ರತಿಯೊಂದು ಗ್ರಾಮದಲ್ಲಿ ಎಲ್ಲೆಲ್ಲಿ ಆಶ್ರಯ ಯೋಜನೆಯ ಅನ್ವಯ ಮನೆಗಳನ್ನು ಕಟ್ಟುತ್ತಿದ್ದಾರೆ ಅದರ ವಿನ್ಯಾಸವನ್ನು ಸ್ವಲ್ಪ ಬದಲಾವಣೆ ಮಾಡಿ ಶಿಕ್ಷಕರಿಗೆ ಮನೆಗಳನ್ನು ಕಟ್ಟಿಕೊಡುತ್ತೀರೋ ಹೇಗೆ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಸ್. ಚಿಕ್ಕಮಾಧು:– ಸನ್ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಕಿರಿಯ ಪ್ರಾಥಮಿಕ ಶಾಲೆಗಳನ್ನು ಮೇಲ್ಮಟ್ಟಕ್ಕೆ ಏರಿಸಿ ಮಾಧ್ಯಮಿಕ ಶಾಲೆಗಳನ್ನಾಗಿ ಪರಿವರ್ತನೆ ಮಾಡಿದ್ದಾರೆ. ಆದರೆ ಪ್ರಾಥಮಿಕ ಶಾಲೆಗೆ ಏನು ಒಬ್ಬರು ಉಪಾಧ್ಯಾಯರು ನೇಮಕವಾಗಿದ್ದರು, ಆ ಶಾಲೆ ಮೇಲ್ಮಟ್ಟಕ್ಕೆ ಏರಿದ್ದರೂ ಸಹ ಒಬ್ಬರೇ ಉಪಾಧ್ಯಾಯರು ಇದ್ದಾರೆ. ಒಂದರಿಂದ ಏಳನೇ ತರಗತಿಯವರೆಗೆ ಶಾಲೆ ನಡೆಯುತ್ತಿದ್ದರೂ ಕೂಡ ಹಿಂದೆ ಇದ್ದಂತೆ ಒಬ್ಬರೇ ಉಪಾಧ್ಯಾಯರು ಇದ್ದಾರೆ. ಅದು ಹಾಗೆಯೇ ಮುಂದುವರೆದುಕೊಂಡು ಹೋಗುತ್ತಿದೆ. ಈಗ ಅಲ್ಲಿಗೆ ನಿಯೋಜನೆಯ ಮೇಲೆ ಉಪಾಧ್ಯಾಯರನ್ನು ನೇಮಕ ಮಾಡುತ್ತಿದ್ದಾರೆ. ಆದುದರಿಂದ ಇಡೀ ರಾಜ್ಯದಲ್ಲಿ ಈ ರೀತಿಯ ಕಿರಿಯ ಪ್ರಾಥಮಿಕ ಶಾಲೆಗಳನ್ನು ಮಾಧ್ಯಮಿಕ ಶಾಲೆಗಳನ್ನಾಗಿ ಮೇಲ್ಮಟ್ಟಕ್ಕೆ ಏರಿಸಿದ ಮೇಲೆ ಕನಿಷ್ಟ ಪಕ್ಷ 5 ಜನ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಮತ್ತು ಮಾನ್ಯ ಯಡಿಯೂರಪ್ಪನವರು ಏನು ಎ.ಇ.ಓರವರಿಗೆ ಒಂದೊಂದು ತಾಲ್ಲೂಕಿನಲ್ಲಿ ಸುಮಾರು 600–700 ಉಪಾಧ್ಯಾಯರು

ಕಾರ್ಯನಿರ್ವಹಿಸುತ್ತಿರುವ ಮೇಲ್ವಿಚಾರಣೆಯನ್ನು ಮಾಡುವುದಕೋಸ್ಕರ ವಾಹನದ ಸೌಲಭ್ಯವನ್ನು ಕೊಟ್ಟರೆ ಅವರು ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಏನು ಹೇಳಿದರು ಅದನ್ನು ನಾನು ಪುಷ್ಟೀಕರಿಸುತ್ತೇನೆ.

ಶ್ರೀ ಜೆ.ಸಿ ಮಾಧುಸ್ವಾಮಿ:– ಅಧ್ಯಕ್ಷರೇ, ಗ್ರಾಮಾಂತರ ಭಾಗದಲ್ಲಿ ಒಂದರಿಂದ ಏಳನೇ ತರಗತಿಯವರೆಗೆ ಏನು ಶಾಲೆಗಳು ನಡೆಯುತ್ತಿವೆ ಅಲ್ಲಿಗೆ ಸಿ.ಪಿ.ಎಡ್. ಶಿಕ್ಷಕರನ್ನು ಹಾಕಿಕೊಡುತ್ತೀರೋ ಎಂದು ಕೇಳಿದ್ದೆ, ದಯಮಾಡಿ ಅದರ ಬಗ್ಗೆ ಪರಿಶೀಲನೆ ಮಾಡುತ್ತೀರಾ ? ಎರಡನೆಯದಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಕಾಪಿ ಹೊಡೆಯುವ ಸ್ಕೂಲ್‌ಗಳನ್ನು ಕೇಂದ್ರವಾಗಿ ತೆಗೆದುಕೊಂಡು ಎಲ್ಲೆಲ್ಲಿಂದಲೋ ಬರುತ್ತಾರೆ. ಇದನ್ನು ತಪ್ಪಿಸಲು ಕ್ರಮತೆಗೆದುಕೊಳ್ಳುತ್ತೀರಾ ? ಮತ್ತು ಪ್ರೈವೇಟ್ ಶಾಲೆಗಳಲ್ಲಿ ಜಾಸ್ತಿ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದಾರೆ. ಒಂದೊಂದು ಶಾಲೆಯಲ್ಲಿ 14–15 ಶಿಕ್ಷಕರು ಇದ್ದಾರೆ. ಇದನ್ನು ಏನಾದರೂ ತೆಗೆದುಹಾಕಲು ಕ್ರಮತೆಗೆದುಕೊಳ್ಳುತ್ತೀರಾ ? ಮತ್ತು ಎ.ಇ.ಓ.ಗಳ ಬದಲಾಗಿ ಇ.ಇ.ಓಸ್‌ಗಳನ್ನು ತರುತ್ತೇವೆ. ಎ.ಇ.ಓ ಕೇಡರನ್ನು ಇನ್ಸ್‌ಪೆಕ್ಟರ್ ಆಫ್ ಸ್ಕೂಲ್ ಮಾಡುತ್ತೇವೆಂದು ಕಳೆದ ವರ್ಷ ಹೇಳಿದ್ದಿರಿ, ಅದರ ಬಗ್ಗೆ ಏನಾಯಿತು ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ:– ಸನ್ಮಾನ್ಯ ಅಧ್ಯಕ್ಷರೇ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಹಳಷ್ಟು ಉಪಾಧ್ಯಾಯರು ಶಾಲೆಗೆ ತಿಂಗಳಗಟ್ಟಲೆ ಹೋಗುವುದಿಲ್ಲ, ಬೆಂಗಳೂರಿನಲ್ಲಿರತಕ್ಕವರು ಆಟೋರಿಕ್ಷಾಗಳನ್ನು, ಟ್ಯಾಕ್ಸಿಗಳನ್ನು ಇಟ್ಟುಕೊಂಡು ಓಡಿಸುತ್ತಿದ್ದಾರೆ. ಏನಾದರೂ ಕೇಳಿದರೆ ರಜೆಯನ್ನು ತೆಗೆದುಕೊಂಡಿದ್ದೇನೆಂದು ಹೇಳುತ್ತಾರೆ. ಹಳ್ಳಿಯ ಕಡೆಗಳಲ್ಲಿ ಗ್ರಾಮಲೆಕ್ಕಿಗರು ಮತ್ತು ಈ ಉಪಾಧ್ಯಾಯರುಗಳು ಸೇರಿಕೊಂಡು ಬಹಳ ರಾಜಕೀಯವನ್ನು ಮಾಡುತ್ತಿದ್ದಾರೆ; ಇವರನ್ನು ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ವರ್ಗ ಮಾಡುವುದಕ್ಕೆ ತಮಗೆ ಏನು ತೊಂದರೆ ? ಇದರ ಬಗ್ಗೆ ತಾವು ಸ್ಪಷ್ಟವಾಗಿ ಉತ್ತರವನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಿರೀಕ್ಷೆ ಮಾಡುತ್ತೇನೆ.

5.20 ಪಿಎಂ

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಉಪಾಧ್ಯಕ್ಷರೇ,

ಉಪಾಧ್ಯಕ್ಷರು:– ಇದಕ್ಕೆ ಪೂರಕವಾಗಿ ಇನ್ನೂ ಬಹಳಷ್ಟು ವಿಚಾರಗಳಿವೆ, ಆಗ ಮಾತನಾಡಿ.

(ಗೊಂದಲ)

ಉಪಾಧ್ಯಕ್ಷರು:– ಅನಂತಕೃಷ್ಣರವರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎ.ಕೆ. ಅನಂತಕೃಷ್ಣ:– ನಾವು ಬೆಳಗಿನಿಂದ ಕುಳಿತಿರುವುದು ಇದಕ್ಕೋಸ್ಕರವಾಗಿಯೇ.

ಶ್ರೀ ಎಂ. ವೀರಭದ್ರಪ್ಪ:– ಮಾನ್ಯ ಉಪಾಧ್ಯಕ್ಷರೇ, ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ ಎ.ಇ.ಒ.ಗಳನ್ನು ಅಪ್‌ಗ್ರೇಡ್ ಮಾಡುತ್ತೇವೆಂದು ಕಳೆದ ಸಾರಿ ಹೇಳಿ ಇದುವರೆಗೂ ಮಾಡುವುದಕ್ಕಾಗಿಲ್ಲ. ಅಲ್ಲಿ ಹೆಡ್‌ಮಾಸ್ಟರ್ ಆಗಿದ್ದವನು ಇಲ್ಲಿಗೆ ಬಂದು ಸೇರಿಕೊಂಡಿರುವುದರಿಂದ ಯಾವುದೇ ಕಾರ್ಯಕ್ರಮವನ್ನೂ ವ್ಯವಸ್ಥಿತವಾಗಿ ನಡೆಸುವುದಕ್ಕಾಗುತ್ತಿಲ್ಲ. ಶಾಲೆಗಳಿಗೆಲ್ಲಾ ಕಾಂಪೌಂಡ್ ಕಟ್ಟಿಸುತ್ತೇವೆಂದು ತಾವೇ ಹೇಳಿದ್ದೀರಿ; ಆದರೆ ಕಟ್ಟಿಸಿರುವ ಕಾಂಪೌಂಡ್‌ಗೇ ಪೆಟ್ಟಿಗೆ ಅಂಗಡಿಗಳನ್ನು ಜೋಡಿಸಿದ್ದಾರೆ; ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿಯನ್ನು ತರಿಸಿಕೊಂಡು ಆ ಅಂಗಡಿಗಳನ್ನು ಅಲ್ಲಿಂದ ಎತ್ತಿಸುವ ಶಕ್ತಿ ನಿಮ್ಮ ಇಲಾಖೆಗೆ ಇಲ್ಲವಾಗಿದೆ. ಇದನ್ನು ಮಾಡಿಸುತ್ತೀರಾ ? ಇನ್ನು ಸಣ್ಣ ಮಕ್ಕಳಿಗೆ ಸ್ಕೂಲ್‌ಗಳಲ್ಲಿ

ಯೂನಿಫಾರಂನ್ನು ಕೊಡುವ ಪದ್ಧತಿ ಇದೆ. ಆದರೆ ನನ್ನ ಕ್ಷೇತ್ರದಲ್ಲಿರತಕ್ಕ ಸ್ಕೂಲುಗಳಲ್ಲಿ ಮಕ್ಕಳು ಶಾಲೆಯನ್ನು ಬಿಡುವ ಸಮಯದಲ್ಲಿ ಕೊಡುತ್ತಾರೆಂದು ಕಾಣಿಸುತ್ತದೆ. ಈ ದಿಸೆಯಲ್ಲಿ ಸರ್ಕಾರದ ವ್ಯವಸ್ಥೆ ಹೇಗಿದೆ ಎಂದರೆ. ಲೋಕಲ್ ಆಗಿ ಹೊಲಿಗೆಯನ್ನು ಮಾಡಿಕೊಡುವ ವ್ಯವಸ್ಥೆ ಇದ್ದಾಗ ಚಿಕ್ಕಮಕ್ಕಳಿಗೆ ಕೊಡಬೇಕಾದ ಬಟ್ಟೆಯನ್ನು ಬೆಂಗಳೂರಿಗೆ ಅಳತೆಗೆ ತಂದುಕೊಟ್ಟು ಆ ಶಾಲೆಯ ಮಕ್ಕಳು ಮುಂದಿನ ವರ್ಷಕ್ಕೆ ಹೋದಾಗ ಆ ಕ್ಲಾಸಿನಲ್ಲಿ ಈ ಬಟ್ಟೆಯನ್ನು ಕೊಡತಕ್ಕ ಪ್ರವೃತ್ತಿ ನಿಮ್ಮ ಇಲಾಖೆಯಲ್ಲಿದೆ. ಈ ವ್ಯವಸ್ಥೆ ಸರಿಪಡಿಸುತ್ತೀರಾ ?

ಇನ್ನೊಂದು ವಿಚಾರ ಏನೆಂದರೆ ಪ್ರತಿಯೊಂದು ಸೆಂಟರ್‌ನಲ್ಲಿಯೂ ಟಿ.ಸಿ.ಹೆಚ್. ಗೆ ಸೀಟುಗಳು ಸೀಮಿತವಾಗಿವೆ. ಹೊಸದಾಗಿ ಟಿ.ಸಿ.ಹೆಚ್.ಗಳನ್ನು ತೆರೆಯಲು ಅನುಮತಿ ನೀಡುವುದಿಲ್ಲವೆಂದು ತಾವು ಹೇಳುತ್ತಿದ್ದೀರಿ. ಅಲ್ಲಿ ಟೀಚರ್ಸ್ ಇರುವುದರಿಂದ ಎರಡು ಕ್ಲಾಸ್ ಮಾಡಿದರೆ ಅನುಕೂಲವಾಗುತ್ತದೆ. ನಮ್ಮ ಕ್ಷೇತ್ರದಲ್ಲಿ ಟಿ.ಸಿ.ಹೆಚ್. ಕಾಲೇಜನ್ನು ಪ್ರಾರಂಭ ಮಾಡಿ 7–8 ಸಾವಿರ ರೂ.ಗಳನ್ನು ವಿದ್ಯಾರ್ಥಿಗಳಿಂದ ಹೊಡೆದುಕೊಂಡು ಬೋರ್ಡ್‌ಗಳನ್ನು ಹಾಕಿ ಹೊರಟು ಹೋದರು. ಈ ರೀತಿ ಜನರಿಗೆ ಮೋಸ ಮಾಡುವುದು, ವಿದ್ಯಾರ್ಥಿಗಳಿಗೆ ಮೋಸ ಮಾಡುವುದು ಸರಿಯಲ್ಲ. ಇನ್ನು ಕೆಲವರು ನಾವು ಇಲ್ಲಿ ಬ್ರ್ಯಾಂಚನ್ನು ಮಾಡಿಕೊಂಡಿದ್ದರೂ ಅಲ್ಲಿ ನಿಮಗೆ ಅಡ್ಮಿಷನ್ ಕೊಡಿಸುತ್ತೇವೆಂದು ದುಡ್ಡು ತೆಗೆದುಕೊಂಡು ಗಲಾಟೆಗಳಾಗಿವೆ. ಇತ್ತೀಚೆಗೆ ಪ್ರತಿ ಹಳ್ಳಿಯಲ್ಲೂ ಟಿ.ಸಿ.ಹೆಚ್. ಕಾಲೇಜನ್ನು ಮಾಡಿಸುತ್ತೇವೆಂದು ಹೇಳಿ ದುಡ್ಡು ಹೊಡೆದುಕೊಂಡು ಬೇರೆಯವರು ಲಾಭ ಮಾಡಿಕೊಳ್ಳುವ ಪರಿಸ್ಥಿತಿಯನ್ನು ಉಂಟುಮಾಡಿ ಅನಾವಶ್ಯಕ ತೊಂದರೆಗೆ ಒಳಗಾಗುವಂತೆ ಮಾಡುತ್ತಿದ್ದೀರಿ. ಏಕೆಂದರೆ ಅವರು ಪೇಪರ್‌ಗಳಲ್ಲಿ ಜಾಹಿರಾತು ಕೊಟ್ಟು 42ಪರ್ಸೆಂಟ್‌ನೊಳಗೆ ಇರುವವರಿಗೆ ನಾವು ಟಿ.ಸಿ.ಹೆಚ್. ಟ್ರೈನಿಂಗ್ ಕೊಡುತ್ತೇವೆ ಎಂದು ಹೇಳುತ್ತಾರೆ. ಅದನ್ನು ನಿಮ್ಮ ಇಲಾಖೆಯವರೆಲ್ಲಾ ಓದುತ್ತಾರೆ. ಆದರೆ ಅವರ ವಿರುದ್ಧ ಯಾವುದೇ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ನಾವೇ ಪೋಲಿಸ್‌ಗೆ ದೂರುಕೊಟ್ಟು ಆ ಸಂಸ್ಥೆಯನ್ನು ಸಂಪೂರ್ಣ ಮುಚ್ಚಿಸುವಂಥ ಪರಿಸ್ಥಿತಿ ಇದೆ. ಮಾನ್ಯ ಯಡಿಯೂರಪ್ಪನವರು ಹೇಳಿದಂತೆ ಪ್ರತಿಯೊಂದು ಎ.ಇ.ಓ. ಆಫೀಸ್‌ಗೂ ಒಂದೊಂದು ಜೀಪನ್ನು ಕೊಡಬೇಕು. ಇಲ್ಲದಿದ್ದರೆ ಅವರು ಯಾವುದೇ ಹಳ್ಳಿಗೂ ಇನ್‌ಸ್ಪೆಕ್ಷನ್‌ಗೆ ಹೋಗುವುದಿಲ್ಲ. ಅವರು ಟೂ ವೀಲರ್ಸ್‌ನಲ್ಲಿ ಹೋಗುವ ಪರಿಸ್ಥಿತಿ ಇದೆ. ಆದ್ದರಿಂದ ಅವರಿಗೆ ಕಡ್ಡಾಯವಾಗಿ ಒಂದು ಜೀಪನ್ನು ಒದಗಿಸಬೇಕು.

ಇನ್ನೊಂದು ವಿಚಾರ ಎಂದರೆ ಗ್ರಾಮಾಂತರ ಪ್ರದೇಶದಲ್ಲಿ ಪ್ರೌಢಶಾಲೆಯವರೆಗೂ ಮಕ್ಕಳಿಗೆ ಸ್ಪೋರ್ಟ್ಸ್ ಬಗ್ಗೆ ಹೆಚ್ಚಿಗೆ ಆದ್ಯತೆ ಕೊಡಬೇಕು. ಏತಕ್ಕೆ ಕೊಡಬೇಕೆಂದರೆ ನನ್ನ ಕ್ಷೇತ್ರದ ಒಂದು ಗ್ರಾಮದಲ್ಲಿ ವಾಲಿಬಾಲ್ ಆಟದಲ್ಲಿ ರಾಜ್ಯಮಟ್ಟದಿಂದ ರಾಷ್ಟ್ರಮಟ್ಟಕ್ಕೆ ಹೋಗಿರುವವರಿದ್ದಾರೆ. ಗ್ರಾಮಾಂತರದ ಒಂದು ಶಾಲೆಯಲ್ಲಿ ಸ್ಪೋರ್ಟ್ಸ್‌ಗೆ ಆದ್ಯತೆ ಇದೆ. ಆದ್ದರಿಂದ ಎಲ್ಲ ಶಾಲೆಗಳಿಗೂ ಸ್ಪೋರ್ಟ್ಸ್ ಟೀಚರ್ ಅಥವಾ ಪಿ.ಟಿ.ಟೀಚರ್ಸ್‌ನ್ನು ಕಡ್ಡಾಯವಾಗಿ ಕೊಡಬೇಕು. ಇವತ್ತು ವಿದ್ಯಾರ್ಥಿಗಳಲ್ಲಿ ಯಾವ ರೀತಿಯ ವಿದ್ಯಾಭ್ಯಾಸವನ್ನು ಕೊಡಬೇಕೆಂದು ಉದ್ದೇಶವಿಟ್ಟುಕೊಂಡಿದ್ದೀರೋ ಅದೇರೀತಿ ಆಟಪಾಠಗಳನ್ನೂ ಅಲ್ಲಿ ಅಳವಡಿಸುವ ಕಾರ್ಯಕ್ರಮವನ್ನು ತಾವು ಮಾಡಿದರೆ ದೇಹ, ಬುದ್ಧಿ ಬೆಳೆಯುವುದರ ಜೊತೆಗೆ ಕೆಟ್ಟ ಅಭ್ಯಾಸ ಕೂಡ ದೂರವಾಗುತ್ತದೆ. ಇದನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕ್ವಾರ್ಟರ್ಸ್ ಬಗ್ಗೆ ಈ ಸದನದಲ್ಲಿ ಸಾಕಷ್ಟು ಸಾರಿ ಪ್ರಸ್ತಾಪ ಮಾಡಿದ್ದೇವೆ. ಟೀಚರ್ಸ್‌ಗಳು ಪಟ್ಟಣಗಳನ್ನು ಇಷ್ಟಪಡುತ್ತಾರೆಯೇ ಹೊರತು ಹಳ್ಳಿಗಳಿಗೆ ಹೋಗುತ್ತಿಲ್ಲವೆಂದು ನಾವು ಹೇಳುತ್ತೇವೆ. ಕಾರಣ ಏನೆಂದರೆ, ಅವರಿಗೆ ಎಲ್ಲೂ ಕೂಡ ಕ್ವಾರ್ಟರ್ಸ್ ಸಿಕ್ಕುತ್ತಿಲ್ಲ. ಊರಿನಲ್ಲಿ ಇರತಕ್ಕ ಮನೆಗಳಿಗೆ ಡಾಕ್ಟರ್‌ಗಳೂ ಬರುವುದಿಲ್ಲ, ಉಪಾಧ್ಯಾಯರೂ ಬರುವುದಿಲ್ಲ, ಊಟ ಹಾಕಿದರೂ ಕ್ವಾರ್ಟರ್ಸ್‌ಗೆ

ಬರುವುದಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಅವರಿಗೆ ಗ್ರಾಮಾಂತರದಲ್ಲಿ ಕ್ವಾರ್ಟರ್ಸ್ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಯೂನಿಫಾರಂ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಶಾಲಾ ಕಾಂಪೌಂಡ್‌ಗೆ ಪೆಟ್ಟಿಗೆ ಅಂಗಡಿ ಜೋಡಿಸಿದರೆ ಆ ಗೋಡೆ ಬಿದ್ದು ಹೋಗುತ್ತದೆ. ಇದಕ್ಕೆ ಅವಕಾಶ ಮಾಡಿಕೊಡಬಾರದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರ್:– ಮಾನ್ಯ ಉಪಾಧ್ಯಕ್ಷರೇ, ನಮ್ಮ ಧಾರವಾಡ ಜಿಲ್ಲೆಯಲ್ಲಿ ನನ್ನ ಮತಕ್ಷೇತ್ರದಲ್ಲಿ ನನಗೆ ಸಿಕ್ಕಿರುವ ಅಂಕಿಅಂಶಗಳ ಪ್ರಕಾರ 207 ಶಿಕ್ಷಕರ ಹುದ್ದೆಗಳು ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇದೆ. ಇಡೀ ಧಾರವಾಡ ಜಿಲ್ಲೆಯಲ್ಲಿ ಹೆಚ್ಚಿನ ಭಾಗ ನನ್ನ ಕ್ಷೇತ್ರದಲ್ಲಿ ಇವೆ. ಇದು ಏತಕ್ಕೆ ಹೀಗಾಗಿದೆ ಎಂದರೆ ವರ್ಗಾವಣೆ ಸಮಯದಲ್ಲಿ ಅನೇಕ ಉಪಾಧ್ಯಾಯರು ನಮ್ಮ ಕ್ಷೇತ್ರದಿಂದ ವರ್ಗಾವಣೆ ಮಾಡಿಸಿಕೊಂಡು ಬೇರೆ ಕಡೆಗೆ ಹೋಗುತ್ತಾರೆ. ಆದರೆ ಅಲ್ಲಿಗೆ ಮತ್ತೆ ಸಬ್‌ಸ್ಟಿಟ್ಯೂಟ್ ಕೊಡದೇ ಇರುವುದರಿಂದ ಇಂಥ ಪರಿಸ್ಥಿತಿ ಇದೆ. ಇದರಿಂದಾಗಿ ಇವತ್ತು ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಅತ್ಯಂತ ಕೆಟ್ಟಿರುವುದರಿಂದ ಮುಖ್ಯ ಶಿಕ್ಷಕರನ್ನು ಸರಿಯಾಗಿ ಕೊಡಬೇಕೆಂಬ ಬಗ್ಗೆ ಸರ್ಕಾರ ಗಮನಹರಿಸಬೇಕು. ನಾನು ನೋಡಿರುವಂತೆ 1ನೇ ತರಗತಿಯಿಂದ 7ನೇ ತರಗತಿವರೆಗೆ ಒಬ್ಬನೇ ಶಿಕ್ಷಕ ಇದ್ದಾನೆ. ಆದ್ದರಿಂದ ತಾವು ಕೂಡಲೇ ಶಿಕ್ಷಕರ ಹುದ್ದೆಗಳನ್ನು ತುಂಬಬೇಕು.

ದಯವಿಟ್ಟು ಶಿಕ್ಷಕರನ್ನು ಭರ್ತಿ ಮಾಡಬೇಕು ಮತ್ತು ಈ ಒಂದು ಶಿಕ್ಷಕರು, ವಿದ್ಯಾರ್ಥಿಗಳ ಮತ್ತು ಪಾಲಕರುಗಳ ನಡುವೆ ಇರತಕ್ಕಂಥ ಒಂದು ಬಾಂಧವ್ಯವನ್ನು ಸುಧಾರಿಸಲಿಕ್ಕೆ ಹಾಗೂ ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲಿಕ್ಕೆ ಯಾವುದಾದರೂ ವಿಶೇಷ ಕಾರ್ಯಕ್ರಮಗಳನ್ನು ಸರ್ಕಾರದವರು ಹಾಕಿಕೊಳ್ಳಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇನ್ನು ಎರಡನೆಯದಾಗಿ ಖಾಸಗಿ ಪ್ರೌಢಶಾಲೆಗಳ ಬಗ್ಗೆ ಶಾಲೆಗಳು ಜನರಲ್ ಮ್ಯಾನೇಜ್‌ಮೆಂಟ್‌ನಲ್ಲಿರಲಿ ಅಥವಾ ಎಸ್.ಸಿ.ಎಸ್.ಟಿ ಮ್ಯಾನೇಜ್‌ಮೆಂಟ್ ಇರಲಿ, ನಮ್ಮ ಸರ್ಕಾರದಿಂದ ಶಾಶ್ವತವಾದ ಅನುದಾನ ರಹಿತವೆಂದು ಇವತ್ತು ಪರ್ಮಿಷನ್ ಕೊಟ್ಟಿರುವುದನ್ನು ನೋಡಿದರೆ ಅಲ್ಲಿ ನಾಯಿಕೊಡೆಯಂತೆ ಶಾಲೆಗಳು ಬೆಳೆಯುತ್ತಿವೆ. ಇದಕ್ಕೆ ಒಂದು ಕಡಿವಾಣವನ್ನು ಸರ್ಕಾರ ಹಾಕಬೇಕು. ಈ ಶಾಲೆಗಳನ್ನು ಕೊಡುವಾಗ ಆ ಆಡಳಿತ ಮಂಡಲಿಯ ಸದಸ್ಯರು ಯಾರು ಯಾರು, ಆ ಶಿಕ್ಷಣ ಮಂಡಲಿಯ ಆರ್ಥಿಕ ಪರಿಸ್ಥಿತಿ ಏನಿದೆ, ಅಲ್ಲಿ ಯಾವ ಸದಸ್ಯರು ಇದ್ದಾರೆ. ಅವುಗಳ ಮೇಲೆ ಕಂಟ್ರೋಲ್ ಮಾಡತಕ್ಕಂಥ ಪರಿಸ್ಥಿತಿಯನ್ನು ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್ ಇರಲಿ ಅಥವಾ ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್ ಇರಲಿ ಅಥವಾ ಇಲ್ಲಿ ಯಾವುದೇ ಒಂದು ಟ್ರಸ್ಟ್ ಆಕ್ಟ್ ಇರಲಿ, ಯಾವ ಅಡಿಯಲ್ಲಿ ನೊಂದಾವಣೆಯಾಗಿವೆ. ಯಾರಿಗೆ ನಾವು ಪರವಾನಿಗೆಯನ್ನು ಕೊಡುತ್ತಿದ್ದೇವೆ ಅವುಗಳ ಪರಿಸ್ಥಿತಿ ಏನಿದೆ, ಎನ್ನತಕ್ಕಂಥದ್ದನ್ನು ಸಂಪೂರ್ಣವಾಗಿ ಪರಿಶೀಲಿಸಬೇಕು ಹಾಗೂ ತಾವು ಇವಕ್ಕೆ ಕಡಿವಾಣ ಹಾಕಬೇಕೆನ್ನತಕ್ಕಂಥ ಮಾತನ್ನು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕರಿಯಣ್ಣ:– ಮಾನ್ಯ ಅಧ್ಯಕ್ಷರೇ, ಪ್ರಾಥಮಿಕ ಶಾಲೆಗಳನ್ನು ಮಂಜೂರು ಮಾಡುತ್ತಿಲ್ಲ. ನಮಗೆ ಏನಾಗಿದೆ ಪ್ರಥಾಮಿಕ ಶಾಲೆಗಳನ್ನು ಮಂಜೂರು ಮಾಡುವಂಥ ಅಧಿಕಾರ ಡಿ.ಡಿ.ಪಿ.ಐ.ಗೆ ಇಲ್ಲವೆಂದು ಅವರು ಬ್ರಾಂಚ್ ಶಾಲೆ ಎಂದು ತೆಗೆಯುತ್ತಿದ್ದಾರೆ. ಒಂದರಿಂದ ಏಳನೇ ತರಗತಿಯವರೆಗೆ ಬ್ರಾಂಚ್ ಶಾಲೆಗಳಾಗಿ ಹೋಗಿವೆ. ಬ್ರಾಂಚ್ ಶಾಲೆಗೆ ಒಬ್ಬರೇ ಒಬ್ಬ ಉಪಾಧ್ಯಾಯರನ್ನು ಕೊಟ್ಟಿದ್ದಾರೆ. ಅಲ್ಲಿ ಏಳು ತರಗತಿಗಳು ನಡೆಯಬೇಕು. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಅದು ಬಹಳ ತೊಂದರೆಯಾಗುತ್ತದೆ. ನೀವು ಕಡ್ಡಾಯ ವಿದ್ಯಾಭ್ಯಾಸ ಮಾಡಬೇಕೆಂದು ಹೇಳಿದ್ದೀರಿ. ದಯವಿಟ್ಟು ಪ್ರಾಥಮಿಕ ಶಾಲೆಗಳನ್ನು ಮಂಜೂರು ಮಾಡತಕ್ಕಂಥ ಅಧಿಕಾರವನ್ನು ಮತ್ತೆ ಡಿ.ಡಿ.ಪಿ.ಐ.ಗೆ ಕೊಡಬೇಕು. ಹಾಗೆಯೇ ಬ್ರಾಂಚ್ ಶಾಲೆ ಎಲ್ಲವನ್ನೂ ಸಹಿತ ಪ್ರಾಥಮಿಕ ಶಾಲೆಗಳೆಂದು ಹೇಳಿ ಅದನ್ನು

ಪರಿವರ್ತನೆ ಮಾಡಿ ಅದಕ್ಕೆ ಪೋಸ್ಟಿಂಗ್ಸ್‌ನ್ನು ಕೊಡಬೇಕು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಹಾಗೆಯೇ ಖಾಸಗಿ ಶಾಲೆಗಳನ್ನು ತೆಗೆಯಬೇಕಾದರೆ ಅನುದಾನ, ಅನುದಾನರಹಿತ ಎಂದು ಕೊಟ್ಟುಬಿಟ್ಟಿದ್ದೀರಿ. ಈಗಾಗಲೇ ಆರುನೂರು ಶಾಲೆಗಳನ್ನು ತೆರೆದುಬಿಟ್ಟಿದ್ದಾರೆ. ಆದರೆ ಟೀಚರ್ಸ್‌ಗಳನ್ನು ಅಪಾಯಿಂಟ್ ಮಾಡಬೇಕಾದರೆ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಎಷ್ಟೆಷ್ಟು ದುಡ್ಡು ಬೇಕೋ ಅಷ್ಟನ್ನು ಹೊಡೆದು ಬಿಟ್ಟು ಟೀಚರ್ಸ್‌ಗಳ ಶೋಷಣೆಯಾಗಿ ಹೋಗಿದೆ. ನಾಳೆ ಅವರು ನಡೆಸುವುದಿಲ್ಲವೆಂದು ಮುಚ್ಚಿಕೊಂಡು ಹೋಗಿ ಬಿಟ್ಟರೆ ಆ ಶಾಲೆಗಳನ್ನು ನೀವು ಏನು ಮಾಡುತ್ತೀರಿ ? ಏತಕ್ಕೆಂದರೆ ಮ್ಯಾನೇಜ್‌ಮೆಂಟ್‌ನವರು ಬಿಟ್ಟುಹೋದರೆ ಸರ್ಕಾರ ವಹಿಸಿಕೊಳ್ಳುತ್ತದೆಯೇ ಅಥವಾ ಯಾರು ವಹಿಸಿಕೊಳ್ಳುತ್ತಾರೆನ್ನುವ ಪ್ರಶ್ನೆ ಬರುತ್ತದೆ. ಮಕ್ಕಳನ್ನಂತೂ ಎಲ್ಲೂ ಕಳುಹಿಸುವುದಕ್ಕೆ ಆಗುವುದಿಲ್ಲ. ಆಗ ತಾವು ಏನು ಮಾಡುತ್ತೀರಿ ಎಂಬುದನ್ನು ದಯವಿಟ್ಟು ನೋಡಿ. ಮತ್ತೆ ಸಿಂಗಲ್ ಟೀಚರ್ಸ್ ಶಾಲೆಗಳೆಂದು ಕೊಟ್ಟುಬಿಟ್ಟಿದ್ದೀರಿ. ನನ್ನದೊಂದು ಊರಲ್ಲಿ ಬಳ್ಳಾಪುರ ಎಂದು ಇದೆ. ಸಿಂಗಲ್ ಟೀಚರ್ ಹುಷಾರಿಲ್ಲವೆಂದು ರಜಾ ಹಾಕಿಬಿಟ್ಟು ಹೊರಟುಹೋದರು. ಈಗ ಪರೀಕ್ಷೆ ನಡೆಯುತ್ತಿದೆ. ಮಕ್ಕಳಿಗೆ ಪರೀಕ್ಷೆಯೂ ಇಲ್ಲ, ಸಿಂಗಲ್ ಟೀಚರ್ ಇಲ್ಲ ಅದಕ್ಕೆ ಏನು ಪರಿಹಾರವನ್ನು ಕಂಡುಹಿಡಿಯುತ್ತೀರಿ ? ತಾವು ದಯವಿಟ್ಟು ಪರಿಹಾರವನ್ನು ಕಂಡುಹಿಡಿಯಬೇಕು. ಅನಂತರ ಎಸ್.ಸಿ ಎಸ್‌ಟಿ ಯನ್ನು 18 ಪರ್ಸೆಂಟ್ ರೋಸ್ಟರ್ ಸಿಸ್ಟಮ್‌ನಲ್ಲಿ ಅಪಾಯಿಂಟ್‌ಮೆಂಟ್ ಮಾಡಬೇಕೆಂದು ಖಾಸಗಿ ಶಾಲೆಗಳಿಗೆ ಹೇಳಿದ್ದೀರಿ. ಅಲ್ಲಲ್ಲಿರತಕ್ಕಂಥ ಪಟ್ಟಭದ್ರಹಿತಾಸಕ್ತಿಗಳು ಅಧಿಕಾರಿಗಳ ಜೊತೆಯಲ್ಲಿ ಶಾಮೀಲಾಗಿರುವುದರಿಂದ ನಮಗೆ ಅಷ್ಟೊಂದು ಸಂಖ್ಯೆಯಲ್ಲಿ ನೌಕರರು ಸಿಗುತ್ತಿಲ್ಲವೆಂದು ಹೇಳುತ್ತಾರೆ. ಈಗಾಗಲೇ ಮೂರನೆಯ ಅಸೆಂಬ್ಲಿಯನ್ನು ಇದನ್ನು ನೋಡುತ್ತಿದ್ದೇವೆ. ಇನ್ನು ಎಷ್ಟು ಸಾರಿ ಹೀಗೆ ಮಾಡುತ್ತೀರೋ ಏನೋ. ಯಾರೂ ಅದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಂಡಿಲ್ಲ. ಅವರನ್ನು ನಿಯಮಾವಳಿ ವಿರುದ್ಧವಾಗಿ ಅಪಾಯಿಂಟ್‌ಮೆಂಟ್ ಮಾಡಿಕೊಂಡಿರುವುದರ ಬಗ್ಗೆ ಯಾವುದೇ ಕ್ರಮತೆಗೆದುಕೊಂಡಿಲ್ಲ. ಈಗ ತಾವು ಒಬ್ಬ ಎಸ್‌ಸಿ ಎಸ್‌ಟಿ ಪಂಗಡದಿಂದಲೇ ಬಂದಿದ್ದೀರಿ. ನಿಮಗೆ ಈ ಪೋರ್ಟ್‌ಫೋಲಿಯೋ ಸಿಕ್ಕಿದೆ. ನೀವಾದರೂ ಸ್ಟ್ರಿಕ್ಟ್ ಆಗಿ ಕ್ರಮ ತೆಗೆದುಕೊಂಡು ಆ ಬ್ಯಾಕ್‌ಲಾಗ್‌ನ್ನು ತುಂಬುತ್ತೀರಾ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಉಪಾಧ್ಯಕ್ಷರೇ, ಈಗ ತಾವು ಬಿಹಾರಕ್ಕೆ ಒಂದು ಟೀಮನ್ನು ಎಜ್ಯುಕೇಷನ್ ಇಲಾಖೆಯ ವತಿಯಿಂದ ಕಳುಹಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ ಮಾನ್ಯ ಲಲ್ಲೂಪ್ರಸಾದ್‌ರವರು ದನಕಾಯತಕ್ಕಂಥ ಹುಡುಗರಿಗೆ ಒಂದು ಸ್ಕೀಮ್‌ನ್ನು ಹಾಕಿದ್ದಾರೆ. ತಾವು ಏನು ಅಕ್ಷಯ ಎಂದು ಹೇಳಿ ಕೋಟಿ ಕೋಟಿ ಖರ್ಚುಮಾಡುತ್ತಿದ್ದೇವೆಂದು ಹೇಳುತ್ತಿದ್ದೀರೋ ಇದರಿಂದ ಡ್ರಾಪ್‌ಔಟ್ ಅನ್ನು ಕಡಿಮೆಯಾಗಿ ಸ್ಕೂಲ್‌ಗಳಿಗೆ ಹಾಜರಾತಿ ಜಾಸ್ತಿಯಾಗುತ್ತದೆ. ಸ್ಕೂಲ್‌ಗಳಿಗೆ ಜಾಸ್ತಿ ಜನ ಬರುತ್ತಿದ್ದಾರೆಂದು ಹೇಳತಕ್ಕಂಥ ಸದುದ್ದೇಶ ಒಳ್ಳೆಯದಿದೆ. ಮತ್ತೆ ಕಾರ್ಯಗತ ಹೇಗಾಗುತ್ತಿದೆ ಎನ್ನುವುದಕ್ಕೆ ಅನುಮಾನ ಕೂಡ ಇದೆ. ಅದರ ಜೊತೆಯಲ್ಲಿ ಬಿಹಾರದಲ್ಲಿ, ದನಕಾಯತಕ್ಕಂಥ ಹುಡುಗರಿಗೆ ಒಂದು ಸ್ಕೀಮ್‌ನ್ನು ಏನು ಹಾಕಿದ್ದಾರೆ ಅದು ಒಂದು ಒಳ್ಳೆಯ ಸ್ಕೀಮ್. ದಯಮಾಡಿ ಒಂದು ಟೀಮ್‌ನ್ನು ಕಳುಹಿಸಿ ಕೊಟ್ಟು ಅದನ್ನು ಸ್ಟಡಿಮಾಡಿ ಅಕ್ಷಯ ಯೋಜನೆಯ ಅಡಿಯಲ್ಲಿ ಆ ಸ್ಕೀಮ್‌ನ್ನು ತಾವು ಅಳವಡಿಸಿದರೆ ಅದರಿಂದ ದನ ಕಾಯುವ ಮಕ್ಕಳಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಎರಡನೆಯದಾಗಿ ಹ್ಯಾಮ್‌ಲೆಟ್ ವಿಲೇಜಸ್ ಬಗ್ಗೆ ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ, ಈ ಕಾಲೋನಿಗಳು ಬೆಳೆಯುತ್ತಿವೆ. ಸಾಮಾನ್ಯವಾಗಿ ಬೋವಿ ಕಾಲೋನಿ, ಈ ಲಂಬಾಣಿ ಕಾಲೋನಿಗಳು, ಹರಿಜನರ ಕಾಲೋನಿಗಳು ಮತ್ತು ಗೊಲ್ಲರ ಕಾಲೋನಿಗಳು ಬೆಳೆಯುತ್ತಿವೆ. ಅವು ಲೆಕ್ಕದಲ್ಲಿಲ್ಲ. ಎಲ್ಲೆಲ್ಲೂ ಇಲ್ಲ. ಕೆಲವನ್ನು ರೆವಿನ್ಯೂ ಗ್ರಾಮಗಳನ್ನಾಗಿ ಮಾಡಬೇಕೆಂದು ಕೂಗು ಇದೆ. ಅಲ್ಲಿ ಪ್ರಾಥಮಿಕ

ಶಾಲೆಗಳು ಆಗದಿರತಕ್ಕಂಥ ಹಳ್ಳಿಗಳು ಇದ್ದಾವೆ. ನನ್ನ ಕ್ಷೇತ್ರದಲ್ಲಿ ಆರು ಹ್ಯಾಮ್‌ಲೆಟ್ ವಿಲೇಜಸ್ ಎಂದು ಇವೆ. ಹ್ಯಾಮ್‌ಲೆಟ್ ವಿಲೇಜಸ್‌ಗಳಲ್ಲಿ ಸ್ಕೂಲ್‌ಗಳು ಇಲ್ಲ. ದಯವಿಟ್ಟು ಅಂಥವುಗಳನ್ನು ಕಂಡುಹಿಡಿದು ಸ್ಕೂಲ್ ಸ್ಯಾಂಕ್ಷನ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇಂಥ ಊರುಗಳಲ್ಲಿ ಬ್ಲಾಕ್ ಬೋರ್ಡ್ ಸ್ಕೀಂನಲ್ಲಿ ಕಟ್ಟತಕ್ಕ ಶಾಲೆಗಳಿಗೆ ಜಿಂಕ್‌ಷೀಟ್ ಹಾಕುತ್ತಿದ್ದಾರೆ. ನಮ್ಮಂಥವರ ಸಾಮಾನ್ಯ ಮಕ್ಕಳು ಅಲ್ಲಿ 5 ನಿಮಿಷ ಕೂರುವುದಕ್ಕೆ ಆಗುವುದಿಲ್ಲ. ಬಿಸಿಲಿನ ತಾಪಕ್ಕೆ ಜಿಂಕ್‌ಷೀಟ್ ಕುದಿಯುತ್ತಿರುತ್ತದೆ. ಸಣ್ಣ ಮಕ್ಕಳು ಯಾರಿಗೆ ಹೇಳುತ್ತಾರೆ ? ಅಂಥ ಕಡೆ ಏನು ಪಾಠ ಮಾಡುತ್ತಾರೆ. ಜಿಂಕ್‌ಷೀಟ್ ಹಾಕಿ ಕಟ್ಟತಕ್ಕ ಬ್ಲಾಕ್‌ಬೋರ್ಡ್ ಶಾಲೆಗಳು ಏನಿವೆ. ಅವುಗಳಿಂದ ನಮಗೆ ಶಾಪ ಬರುತ್ತದೆ. ಆದ್ದರಿಂದ ದಯವಿಟ್ಟು ಎಸ್ಟಿಮೇಟ್ ಜಾಸ್ತಿ ಮಾಡಿ, ದುಡ್ಡು ಜಾಸ್ತಿ ಮಾಡಿಕೊಡಿ,. ಎರಡು ಕಟ್ಟವ ಕಡೆ ಒಂದು ಕಟ್ಟಡ ಕಟ್ಟಿ, ಸರಿಯಾದ ಕಟ್ಟಡ ಕಟ್ಟಿ. ಇಲ್ಲ, ಗುಡಿಸಲು ಕಟ್ಟಿ ಪೊರಕೆಗಿರಕೆ ಹಾಕಿ ತಣ್ಣಗಿರುತ್ತದೆ. ಜಿಂಕ್‌ಷೀಟ್ ಹಾಕುವುದರಿಂದ ಮಳೆಗಾಲದಲ್ಲಿ ಫಂಗಸ್ ಇನ್‌ಫೆಕ್ಷನ್ ಆಗುತ್ತದೆ. ಸೆಖೆಕಾಲದಲ್ಲಿ ಬಹಳ ಸೆಖೆಯಾಗಿ ಕುದಿಯುತ್ತಿರುತ್ತದೆ. ಅಂಥ ಕಡೆ ಸಣ್ಣ ಮಕ್ಕಳನ್ನು ಕೂಡಿ ಹಾಕಿರುತ್ತಾರೆ. ಅದೆಂಥ ಬ್ಲಾಕ್ ಬೋರ್ಡ್ ಸ್ಕೀಂ ? ದಯವಿಟ್ಟು ಅದನ್ನು ಬದಲಾವಣೆ ಮಾಡಬೇಕು. ನಾಲ್ಕನೆಯದಾಗಿ, ಶಾಲೆಗಳಿಗೆ ಕಾಂಪೌಂಡ್ ಹಾಕಿಸುತ್ತೇವೆಂದು ಹೇಳಿದಿರಿ. ಆರ್.ಡಿ.ಪಿ.ಆರ್ ಮಿನಿಸ್ಟರ್ ಶ್ರೀ ಘೋರ್ಪಡೆಯವರು ಇದ್ದಾರೆ, ಫಾರೆಸ್ಟ್ ಮಿನಿಸ್ಟರು ಇದ್ದಾರೆ. ತಾವು ಮೂವರು ಸೇರಿಕೊಂಡು ಈ ಕೆಲಸ ಮಾಡಿ.. ಕೆಲವು ಮಂಡಲ ಪಂಚಾಯಿತಿಗಳು ಮಾಡಿರುವ ಕೆಲಸ ನೋಡಿದರೆ ಎಷ್ಟು ಖುಷಿಯಾಗುತ್ತದೆ. ಅವರು ಗಿಡಗಳನ್ನು ಬೆಳಸಿರುವುದನ್ನು ನೋಡಿದರೆ ಎಷ್ಟು ಒಳ್ಳೆಯ ಕೆಲಸ ಮಾಡಿದ್ದಾರೆಂದು ಖುಷಿಯಾಗುತ್ತದೆ. ಕಾಂಪೌಂಡ್‌ನಲ್ಲಿ ಅಷ್ಟು ಚೆನ್ನಾಗಿ ಗಿಡಗಳನ್ನು ಬೆಳಸಿದ್ದಾರೆ. ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಕಾಂಪೌಂಡ್ ಹಾಕತಕ್ಕ ಕೆಲಸ ಆಗಬೇಕು. ಅದನ್ನು ಆರ್.ಡಿ. ಮಿನಿಸ್ಟರಿಗೆ ಹೇಳಿ ಮಂಡಲ ಪಂಚಾಯಿತಿಯ ಖರ್ಚಿನಿಂದ ಹಾಕಿ, ಫಾರೆಸ್ಟ್ ಮಿನಿಸ್ಟರಿಗೆ ಹೇಳಿ ಸೋಷಿಯಲ್ ಫಾರೆಸ್ಟ್ ಗಿಡ ನೆಡಸಿ. ಅದರಿಂದ ದೇಶದ ಸಂಪತ್ತು ಸೃಷ್ಟಿಯಾಗುತ್ತದೆ ಮತ್ತು ಮಕ್ಕಳಿಗೆ ಅನುಕೂಲವಾಗುತ್ತದೆ. ಇದನ್ನು ದಯವಿಟ್ಟು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ:_ ಮಾನ್ಯ ಅಧ್ಯಕ್ಷರೇ, ಉನ್ನತ ಶಿಕ್ಷಣ ಸಚಿವರಾದ ಶ್ರೀ ಯಾಹ್ಯಾ ಅವರು ಆಂಗ್ಲೋ ಇಂಡಿಯನ್ ಮಕ್ಕಳಿಗೆ ಫೀ ಕನ್‌ಸೆಷನ್ ಕೊಡುವ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಸದನಕ್ಕೆ ಹೇಳಿದರು. ಅವರು ಬಹಳ ಹಿಂದುಳಿದ• ವರ್ಗ ಮತ್ತು ಬಹಳ ಅಲ್ಪ ಸಂಖ್ಯಾತರು; ಅವರಿಗೆ ರಿಯಾಯಿತಿ ಕೊಡಬೇಕಾದುದು ನ್ಯಾಯವಾಗಿದೆ. ಹಾಗೆಯೇ ನಮ್ಮ ಹೈಯರ್ ಪ್ರೈಮರಿ ಎಜುಕೇಷನ್ ಮಂತ್ರಿಗಳಲ್ಲಿ ಪದೇಪದೇ ಹೇಳಿದ್ದೇವೆ. ಈಗಲೂ ಹೇಳುತ್ತಿದ್ದೇವೆ. ಆಂಗ್ಲೋ ಇಂಡಿಯನ್ ಕಮ್ಯುನಿಟಿಯವರು ಸ್ಲಂ ಡ್ವೆಲರ್ಸ್‌ಗಿಂತ, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗಿಂತ ಹೀನ ಸ್ಥಿತಿಯಲ್ಲಿದ್ದಾರೆ. ಅವರ ಸಂಖ್ಯೆ ಕೂಡ ಬಹಳ ಕಡಿಮೆ ಇದೆ. ಅವರಿಗೆ ಫೀ ಕನ್‌ಸೆಷನ್ ಕೊಡುವ ವಿಷಯದಲ್ಲಿ ತಮ್ಮ ತೀರ್ಮಾನ ಹೇಳಬೇಕೆಂದು ಪುಲಿನ್‌ಚಾ ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಆ ವಿಷಯವನ್ನು ತಾವು ಪ್ರಸ್ತಾಪ ಮಾಡಲಿಲ್ಲ. ದಯವಿಟ್ಟು ಅದನ್ನು ಮಾಡಬೇಕು. ಎರಡನೆಯದಾಗಿ, ಕಂಟೋನ್‌ಮೆಂಟ್ ಭಾಗದಲ್ಲಿ ಒಂದು ಸರ್ಕಾರಿ ಹೈಸ್ಕೂಲ್ ತೆರೆಯಬೇಕೆಂದು 3 ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೇವೆ ಮತ್ತು ಈ ಸದನದಲ್ಲಿ ಪದೇಪದೇ ಹೇಳುತ್ತಿದ್ದೇವೆ. ಈಗಲಾದರೂ ಸಚಿವರು ಆ ವಿಷಯದಲ್ಲಿ ತಮ್ಮ ತೀರ್ಮಾನವನ್ನು ಹೇಳಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಹಾದೇವ್:– ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಸಮಸ್ಯೆಯೂ ಇದೆ. ನಂಜನಗೂಡು ಟೌನ್‌ನಲ್ಲಿ ದಳವಾಯಿ ಕಟ್ಟಡ ಇದೆ. ಆ ಕಟ್ಟಡವನ್ನು ಕೆಡವಿ ಹಾಕಿ 7–8 ವರ್ಷವಾಯಿತು. ಅಲ್ಲಿ 2 ಸಾವಿರ ಮಕ್ಕಳು ಅಧ್ಯಯನ ಮಾಡುತ್ತಿದ್ದರು. ಎಲ್ಲಾ ಸಣ್ಣಸಣ್ಣ ಮಕ್ಕಳು, ಪ್ರೈಮರಿ ಮತ್ತು ಮಿಡಲ್

ಸ್ಕೂಲ್‌ನಲ್ಲಿ ಓದತಕ್ಕವರು. ಆ ಕಟ್ಟಡವನ್ನು ಕೆಡವಿ ಹಾಕಿದ್ದರಿಂದ ಎರಡು ಸಾವಿರ ಮಕ್ಕಳು ಕೂರುವುದಕ್ಕೆ ಸ್ಥಳ ಇಲ್ಲ. ಛೌಲ್ಟ್ರಿ ಮತ್ತು ದೇವಸ್ಥಾನಗಳಲ್ಲಿ ಪಾಠಪ್ರವಚನ ಹೇಳುತ್ತಿದ್ದಾರೆ. ಇಂಥ ಪರಿಸ್ಥಿತಿ ಇದೆ. ಆ ಕಟ್ಟಡದ ನಿರ್ಮಾಣ ಇದುವರೆಗೆ ಆಗಿಲ್ಲ. ಅನುದಾನ ಕೂಡ ಬಿಡುಗಡೆ ಆಗಲಿಲ್ಲ. ಆ ಕಟ್ಟಡ ಹಿಂದೆ ಮಹಾರಾಜರ ಕಾಲದಲ್ಲಿ ಕಟ್ಟಿದ್ದುದು. ಅಲ್ಲಿ ಹತ್ತು ಲಕ್ಷ ರೂಪಾಯಿಗಳ ಬೆಲೆಬಾಳುವ ಮರಮುಟ್ಟುಗಳು ಇದ್ದವು. ಹತ್ತು ಲಕ್ಷ ರೂಪಾಯಿಗಳ ಮರಮುಟ್ಟುಗಳಲ್ಲಿ ಒಂದು ಕಟ್ಟಡವೇ ಆಗುತ್ತಿತ್ತು. ಕಟ್ಟಡವನ್ನು ಕೆಡವಿ ಹಾಕಿದಾಗ ಮರಮುಟ್ಟುಗಳು ದುರಪಯೋಗವಾಗಿವೆ. ಅದರ ಬಗ್ಗೆ ತನಿಖೆ ಆಗಬೇಕು. ಈಗ ಆ ಮರಮುಟ್ಟುಗಳು ಎಲ್ಲಿ ಹೋಗಿವೆ ? ಯಾರ ವಶದಲ್ಲಿದೆ ? ಅಲ್ಲಿ ರೋಸ್‌ವುಡ್ ಮತ್ತು ಟೀಕ್‌ವುಡ್‌ನ ಮರಗಳಿದ್ದವು. ಎರಡು ಲಕ್ಷ ರೂಪಾಯಿಗಳ ಮರಮುಟ್ಟುಗಳು ನನಗೆ ತಿಳಿದೆ ಹಾಗೆ ಸಿಕ್ಕುತ್ತಿಲ್ಲ. ಈ ಒಂದು ಪರಿಸ್ಥಿತಿ ಇದೆ. ಆದುದರಿಂದ ಕಟ್ಟಡ ಕೆಡವಿದಾಗ ಮರಮುಟ್ಟುಗಳು ಯಾರ ವಶದಲ್ಲಿದ್ದವು, ಅದಕ್ಕೆ ಯಾರು ಜವಾಬ್ದಾರಿ ತೆಗೆದುಕೊಂಡರು ? ಕಟ್ಟಡ ಕೆಡವಿದ ಕಾಲದಲ್ಲಿ ಮರಮುಟ್ಟುಗಳ ಬೆಲೆ ಏನಿತ್ತು ? ಇದರ ಬಗ್ಗೆ ತನಿಖೆ ಆಗಬೇಕು. ಎರಡನೆಯದಾಗಿ, ಮೂರು ವರ್ಗದ ಉಪಾಧ್ಯಾಯರು ಇದ್ದಾರೆ. ಒಬ್ಬರು ಪ್ರಭಾವಿ ಉಪಾಧ್ಯಾಯರು; ಸಾಮಾನ್ಯ ಉಪಾಧ್ಯಾಯರು ಮತ್ತು ನಿರ್ಗತಿಕ ಉಪಾಧ್ಯಾಯರು ಎಂದು. ನಿರ್ಗತಿಕರು ಯಾರೆಂದರೆ ಅವರಿಗೆ ಪೊಲಿಟಿಕಲ್ ಬ್ಯಾಕ್‌ಗ್ರೌಂಡ್ ಇಲ್ಲ. ಹಣದ ಪ್ರಭಾವ ಇಲ್ಲ.

(ಗೊಂದಲ)

ಹೀಗೆ ಉಪಾಧ್ಯಾಯರ ಸಮಸ್ಯೆ ಇದೆ. ಅವರಿಗೆ ಅನ್ಯಾಯವಾಗಿದೆ. ನಿರ್ಗತಿಕ ಉಪಾಧ್ಯಾಯರಿಗೆ ಎಲ್ಲಿ ಅಂದರೆ ಅಲ್ಲಿಗೆ ಟ್ರಾನ್ಸ್‌ಫರ್. 3–3 ತಿಂಗಳಿಗೆ, 6–6 ತಿಂಗಳಿಗೆ ಟ್ರಾನ್ಸ್‌ಫರ್. ಅವರಿಗೆ ಯಾವ ಬ್ಯಾಕ್‌ಗ್ರೌಂಡ್ ಇಲ್ಲ. ಅಲ್ಲಿರುವ ಮಕ್ಕಳಿಗೆ ಅಭ್ಯಾಸಕ್ಕೆ ತೊಂದರೆಯಾಗುತ್ತಿದೆ. ಅವರಿಗೂ ತೊಂದರೆಯಾಗುತ್ತದೆ. ಪ್ರಭಾವಿ ಉಪಾಧ್ಯಾಯರು 8–10 ವರ್ಷ ಅಲ್ಲೇ ಇರುತ್ತಾರೆ. ಅಲ್ಲೇ ವ್ಯವಸಾಯ ಮಾಡಿಕೊಂಡು ಅದೇ ಊರಿನಲ್ಲಿ ಇರುತ್ತಾರೆ. ಅವರು ಯಾರೂ ಡಿಸ್ಟರ್ಬ್ ಆಗುವುದಿಲ್ಲ. ಸಾಮಾನ್ಯ ಉಪಾಧ್ಯಾಯರು ಬಹಳ ಉಪಾಯದಿಂದ ಕೆಲಸಮಾಡಿಕೊಂಡು ಹೋಗುತ್ತಾರೆ. ಇದು ಸರಿಯಲ್ಲ, ಇದನ್ನು ಸರಿಪಡಿಸಿ ಎಂದು ಹೇಳುತ್ತೇನೆ.

ಈ ಇಲಾಖೆಯಲ್ಲಿ ಏನು ಒಂದು ತಾರತಮ್ಯ ನಡೆಯುತ್ತಿದೆ ಅದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಿ ಅದನ್ನು ಬಗೆಹರಿಸುವುದರ ಬಗ್ಗೆ ತ್ವರಿತ ಕಾರ್ಯಕ್ರಮ ಹಾಕಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಡಾ।। ವೈ. ನಾಗಪ್ಪ:– ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಇಲಾಖಾ ಬೇಡಿಕೆಗಳ ಮೇಲೆ ಉತ್ತರ ಕೊಡುತ್ತಾ ಮಾತನಾಡುವ ಸಂದರ್ಭದಲ್ಲಿ ಎಜ್ಯುಕೇಷನ್ ಸ್ಟಾಂಡರ್ಡ್ ರೂರಲ್‌ನಲ್ಲಿ ಕಡಿಮೆಯಾಗಿದೆ, ಸಿಟಿಗಳಲ್ಲಿ ಎಜ್ಯುಕೇಷನ್ ಸ್ಟಾಂಡರ್ಡ್ ಹೆಚ್ಚು ಆಗಿದೆ ಎಂದು ಹೇಳಿದರು. ಇವತ್ತು ಹಳ್ಳಿಗಾಡಿನಲ್ಲಿ ಹಾಗೂ ಪಟ್ಟಣದಲ್ಲಿ ಎರಡೂ ಕಡೆ ಏನು ಉಪಾಧ್ಯಾಯರನ್ನು ತಾವು ನೇಮಕ ಮಾಡುತ್ತೀರೋ ಅವರೆಲ್ಲರ ವಿದ್ಯಾರ್ಹತೆ ಒಂದೇ ಇರುತ್ತದೆ. ಬಿಎ,ಬಿಎಡ್,ಎಂಎ, ಬಿಎಡ್ ಅಥವಾ ಎಂ.ಎಸ್.ಸಿ. ಓದಿರುತ್ತಾರೆ. ಹೀಗೆ ಇರುವಾಗ ಹಳ್ಳಿಗಳಲ್ಲಿ ಏಕೆ ಸ್ಟಾಂಡರ್ಡ್ ಕಡಿಮೆಯಾಗಿದೆ ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಯೋಚನೆ ಮಾಡಿದ್ದೀರೋ ? ಪಟ್ಟಣದಲ್ಲಿ ಮಾತ್ರ ಏಕೆ ಹೆಚ್ಚು ಮಾಡಿದ್ದಾರೆ ಎನ್ನುವುದರ ಬಗ್ಗೆ ಚಿಂತನೆ ಮಾಡಿದ್ದೀರೋ ? ಆ ಬಗ್ಗೆ ನಾನು ವಿವರಣೆ ಕೇಳುತ್ತೇನೆ. ಇನ್ನು ಎರಡನೆಯದಾಗಿ ರೋಸ್ಟರ್ ಸಿಸ್ಟಮ್. ಈಗ ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ he is going to implement the system strictly from 1.1.1990. 10 ವರ್ಷ, 15 ವರ್ಷಗಳಿಂದ ಹೈಸ್ಕೂಲು ಕೊಡುತ್ತಿದ್ದೀರಿ. ಇನ್ನೂ ಗ್ರಾಂಟ್ ಕೊಟ್ಟಿಲ್ಲ. ಏಕೆ ಗ್ರಾಂಟ್ ಕೊಟ್ಟಿಲ್ಲ ಎಂದು ಕೇಳಿರುವುದಕ್ಕೆ

ರೋಸ್ಟರ್ ಸಿಸ್ಟಮ್ ಮಾಡಿಲ್ಲವೆಂದು ವಿಥೆಲ್ಡ್ ಮಾಡಿದ್ದೇವೆಂದು ಹೇಳುತ್ತಾರೆ. ನೀವು ಕೊಟ್ಟಿರುವುದು 1990ರಲ್ಲಿ. ನಾನು ಸಾಕಷ್ಟು ಮನವಿಗಳನ್ನು ನನ್ನ ತಾಲ್ಲೂಕಿನ ವಿಚಾರವಾಗಿ ಕೊಟ್ಟಿದ್ದೇನೆ. ಇದಕ್ಕೆ ತಾವು ಉತ್ತರವನ್ನು ಹೇಳಬೇಕು. ಇನ್ನು ಮೂರನೆಯದಾಗಿ, ಅಕ್ಷಯ ಯೋಜನೆ. ಏನೋ ಮಾರ್ಪಾಡು ಮಾಡಿ ಮಕ್ಕಳಿಗೆ ಬಟ್ಟೆ ಕೊಡುತ್ತೇವೆ, ಪುಸ್ತಕ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಈ ಹಣವನ್ನು ಅವರ ತಂದೆತಾಯಿಗಳಿಗೇ ಕೊಟ್ಟಿದ್ದರೆ ಅವರು ಪುಸ್ತಕ ಕೊಡಿಸುತ್ತಿರಲಿಲ್ಲವೇ, ಬಟ್ಟೆ ಹಾಕುತ್ತಿರಲಿಲ್ಲವೇ ? ಹಣ ಆ ತಂದೆ ತಾಯಿಗಳಿಗೆ ಕೊಡಬೇಕು. ಇದರ ಬದಲಾವಣೆ ಮಾಡುವ ಅವಶ್ಯಕತೆ ಏನು ? ಇನ್ನು ಯೋಗಾಸನದ ಬಗ್ಗೆ ಹೇಳಿದ್ದೀರಿ. ಇವತ್ತು ಯೋಗಾಸನ ಕಲಿಸುವುದಕ್ಕೆ ಬೇಕಾದಷ್ಟು ಶಾಲೆಗಳು ಇವೆ. ಆದ್ದರಿಂದ ಇದನ್ನು ಕಲಿಸುವುದು ಬೇಕಾಗಿರಲಿಲ್ಲ. ಬುದ್ಧಿವಂತಿಕೆ ಬಗ್ಗೆ ಹೇಳಬೇಕೆಂದರೆ ಪ್ರತಿಯೊಂದು ಜಾತಿಯಲ್ಲೂ ಇರುವುದು ಮೆದುಳು ಒಂದೇ. ಇವತ್ತು ನಾವೂ ನೀವು ಚಿಂತನೆ ಮಾಡಬೇಕು. ಯಾವ ರೀತಿ ನಾವು ಮಕ್ಕಳನ್ನು ಟ್ರೈನ್ ಮಾಡಬೇಕೆಂದು ಯೋಚನೆ ಮಾಡುವಾಗ ಬರೀ ಯೋಗಾಸನ ಮಾಡಿದರೇ ಮೆದುಳಿನಲ್ಲಿ ಶಕ್ತಿ ಹೆಚ್ಚು ಆಗುವುದಿಲ್ಲ. ಆ ಒಂದು ಉಪಾಧ್ಯಾಯರಿಗೆ ಆದೇಶವನ್ನು ಕೊಡಿ. ಆ ಮಕ್ಕಳಿಗೆ ಅವರು ದಿನಾ ಅರ್ಧ ಗಂಟೆ ರನ್ನಿಂಗ್ ರೇಸ್ ಮಾಡಿಸಲಿ. ಅಷ್ಟು ಆ ಮಕ್ಕಳು ಓಡಿದರೆ ಸಾಕು. ಆದುದರಿಂದ ಈ ಒಂದು ಯೋಗಾಸನದ ಸಾಹಸಕ್ಕೆ ತಾವು ಏಕೆ ಕೈಹಾಕಬೇಕೆಂದು ಕೇಳುತ್ತೇನೆ. ಮತ್ತೆ ಡಾಕ್ಟರು ಹಳ್ಳಿಗಳಿಗೆ ಹೋಗುವುದಿಲ್ಲ ಅವರು ಪಟ್ಟಣಕ್ಕೆ ವಾಪಸ್ ವರ್ಗಾವಣೆ ಮಾಡಿಕೊಂಡು ಹೋಗುತ್ತಾರೆಂದು ಹೇಳಿದರು. ಯಾವುದೇ ಶಾಸಕರು ಟ್ರಾನ್ಸ್‌ಫರ್ ಬಗ್ಗೆ ಕೇಳಿಕೊಂಡು ಬಂದರೆ ತಾವು ಸ್ಟ್ರಿಕ್ಟ್ ಆಗಿರಬೇಕು. ತಾವು ಇದನ್ನು ಮರೆಯಬಾರದು. ಇನ್ನು ನಾನು ನೋಡಿದ ಹಾಗೆ ಕೆಲವರು ಟೀಚರ್ಸ್ ಸತ್ತು 10–15ವರ್ಷಗಳು ಆಗಿದ್ದರೂ ಅಂತಹವರ ಹೆಸರಿನಲ್ಲಿ ಟ್ರಾನ್ಸ್‌ಫರ್ ಆರ್ಡರ್‌ಗಳನ್ನು ಹೊರಡಿಸಿದ್ದಾರೆ. ಇಂತಹದ್ದು ಈ ಇಲಾಖೆಯಲ್ಲಿ ನಡೆದಿದೆ. ಮತ್ತೆ ಪ್ರತಿಯೊಂದು ಶಾಲೆಗೆ, ಕಾಲೇಜಿಗೆ, ಹೈಸ್ಕೂಲಿಗೆ ಕಾಂಪೌಂಡ್ ಕಟ್ಟಿಸುತ್ತೇವೆಂದು ಹೇಳಿದರು. ಇದು ಸಾಧ್ಯವೇ ? ಆಯವ್ಯಯದಲ್ಲಿ ಇದಕ್ಕೆ ಹಣವನ್ನು ಒದಗಿಸಿದ್ದೀರೋ ?

ಉಪಾಧ್ಯಕ್ಷರು:– ತಾವು ಕ್ಲಾರಿಫಿಕೇಷನ್ ಕೇಳಿ.

ಡಾ।। ವೈ. ನಾಗಪ್ಪ:– ಮಾನ್ಯ ಮಂತ್ರಿಗಳು ಹೇಳಿದ್ದರಿಂದ ಇದೆಲ್ಲವನ್ನೂ ನಾನು ಕೇಳುತ್ತಿದ್ದೇನೆ. It cannot be achieved. He is going to cover the Mount Everest with blanket. Is it every possible? Creation of boards to improve the buildings of these schools and colleges. ಅದರ ಅವಶ್ಯಕತೆ ಏನು ಇತ್ತು ? ಇಂತಹ ಹಲವಾರು ವಿಚಾರಗಳು. ಬೋರ್ಡ್ ಮಾಡಿ It is a very great burden on the exchequers of our country. ಇಂತಹ ಆಲೋಚನೆಯನ್ನು ನಾವು ಬಿಡಬೇಕಾಗುತ್ತದೆ. ಇವತ್ತು ಓದತಕ್ಕಂತಹ ಮಕ್ಕಳಿಗೆ ಕುಳಿತುಕೊಳ್ಳುವುದಕ್ಕೆ ಮೊದಲು ಬೆಂಚುಗಳ ವ್ಯವಸ್ಥೆಯನ್ನು ಮಾಡಿ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಮತ್ತು ಶಾಲೆಗಳಿಗೆ ಸರಿಯಾದ ಟೀಚರ್ಸ್ ಹಾಕಿ. ಅದು ಬಿಟ್ಟು, ಅದು ಮಾಡುತ್ತೇವೆ. ಇದು ಮಾಡುತ್ತೇವೆಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ. ಆದುದರಿಂದ ಕಳಕಳಿಯಿಂದ ಮಾನ್ಯ ಅಧ್ಯಕ್ಷರ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇದು ಸಾಧ್ಯವಾಗುವುದಿಲ್ಲ. ಇವತ್ತು what is possible we have to admit. ಅದಕ್ಕೋಸ್ಕರ ತಮ್ಮಲ್ಲಿ ನಾನು ಕಳಕಳಿಯಿಂದ ಕೈಮುಗಿದು ಬೇಡಿಕೊಳ್ಳುತ್ತೇನೆ. ತಾವು ಈವೊಂದು ವಿದ್ಯಾ ಇಲಾಖೆಯ ಬಗ್ಗೆ ನಮ್ಮ ಕ್ಲಾರಿಫಿಕೇಷನ್ಸ್‌ಗಳ ಬಗ್ಗೆ ಉತ್ತರ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮಲ್ಲಿ ಬೇಡಿಕೊಳ್ಳುತ್ತೇನೆ.

ಅಧ್ಯಕ್ಷರು:- ಮಾನ್ಯಮಂತ್ರಿಗಳು ಉತ್ತರವನ್ನು ಬಹಳ ಕ್ವಿಕ್ ಆಗಿ ಹೇಳಬೇಕು. ಬೇರೆ ಬೇರೆ ಮಂತ್ರಿಗಳೂ ಸಹ ಉತ್ತರ ಕೊಡಬೇಕಾಗಿದೆ.

ಡಾ।। ಹೆಚ್.ಡಿ. ಲಮಾಣಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಹನುಮೇಗೌಡರು ಹೇಳಿದ ಹಾಗೆ ಕೆಲವೊಂದು ಶಾಲೆಗಳಲ್ಲಿ ಪ್ರೈವೇಟ್ ಹೈಸ್ಕೂಲ್‌ಗಳಲ್ಲಿ ರಿಸಲ್ಟ್ ಚಲೋ ಇರುವುದಿಲ್ಲ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದಾರೆ. ಕೆಲವೊಂದು ಶಾಲೆಗಳಲ್ಲಿ ಅಲ್ಲಿಯ ಜನರಿಂದ ಹಣವನ್ನು ಕೂಡಿಸಿ ಪಾಠೋಪಕರಣ ಮತ್ತು ಪೀಠೋಪಕರಣಗಳನ್ನು ವ್ಯವಸ್ಥಿತವಾಗಿ ಇಡಲಿಕ್ಕೆ ವ್ಯವಸ್ಥೆಯಿಲ್ಲ. ಜೊತೆಗೆ ಆ ಸಾಮಾನಗಳು ಕಳವು ಆಗುತ್ತಿವೆ ಎನ್ನುವ ಮಾತನ್ನು ಹೇಳಿದ್ದಾರೆ. ರಿಸಲ್ಟ್ ಬಗ್ಗೆ ನಾವು ಈಗಾಗಲೇ ಹೇಳಿದ್ದೇನೆ. ಜೀರೋ ರಿಸಲ್ಟ್ ಬಂದರೆ ಪ್ರೈವೇಟ್ ಹೈಸ್ಕೂಲ್‌ಗಳಲ್ಲಿ ಅಂತಹ ಶಾಲೆಗಳ ಬಗ್ಗೆ ಪುನರ್ ವಿಚಾರ ಮಾಡುವಂತಹ ವಿಚಾರ ಮಾಡಿದ್ದೇವೆ. ಅದರಲ್ಲಿ ಮಾನ್ಯತೆಯನ್ನು ಹಿಂದೆ ಪಡೆಯುವಂತಹ ವ್ಯವಸ್ಥೆ ಇದೆ. ಅಂತಹ ಒಂದು ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ:- ನಾನು ಕೇಳಿದ್ದುದು ಪ್ರೈವೇಟ್ ಹೈಸ್ಕೂಲ್‌ಗಳ ಬಗ್ಗೆ ಅಲ್ಲ. ಸರ್ಕಾರಿ ಹೈಸ್ಕೂಲ್ ವಿಷಯ.

ಡಾ।। ಹೆಚ್.ಡಿ. ಲಮಾಣಿ:- ಸರ್ಕಾರಿ ಹೈಸ್ಕೂಲ್‌ಗಳಲ್ಲಿ ಒಂದು ವೇಳೆ ಹಾಗೆ ಏನಾದರೂ ಆಗಿದ್ದರೆ ಅಲ್ಲಿಯ ಹೆಡ್‌ಮಾಸ್ತರು ಆಗಲಿ ಅಥವಾ ಅಧ್ಯಾಪಕರಾಗಲೀ ಜವಾಬ್ದಾರರಾಗುತ್ತಾರೆ. ಅದರ ಬಗ್ಗೆ ವ್ಯವಸ್ಥಿತವಾದ ಎನ್‌ಕ್ವಾಯರಿ ಮಾಡಿಸಿ ಅಂತಹದ್ದು ಕಂಡುಬಂದರೆ ಅವರ ಮೇಲೆ ಸೂಕ್ತಕ್ರಮ ತೆಗೆದುಕೊಳ್ಳುತ್ತೇವೆ. ಪ್ರೈವೇಟ್ ಹೈಸ್ಕೂಲ್‌ಗಳಲ್ಲಿ ಹಾಗೆ ಆದರೆ ಅವರ ಶಾಲೆಯ ಮಾನ್ಯತೆಯನ್ನು ಹಿಂದಕ್ಕೆ ಪಡೆಯಬಹುದು ಗ್ರಾಂಟ್ ಕಟ್ ಮಾಡಬಹುದು. ಅದನ್ನು ಪರಿಶೀಲನೆ ಮಾಡಿ ಅದರ ವ್ಯವಸ್ಥೆಯನ್ನು ಮಾಡುತ್ತೇವೆ, ಸಾಮಾನುಗಳು ಕಳವು ಏನಾಗುತ್ತವೆ ಎಂದು ಹೇಳಿದ್ದಾರೆ ಅದು ನಿಜ. ಒಮ್ಮೊಮ್ಮೆ ಹಾಗೆ ಆಗುವ ಪರಿಸ್ಥಿತಿ ಇದೆ. ಈ ವರ್ಷ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಮಾಡಿದ್ದೇವೆ. ಒಬ್ಬರು ಅಧ್ಯಾಪಕರು ಶಾಲೆಯಲ್ಲಿಯೇ ಇರುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು. ಅವರಿಗೆ ಬೇರೆ ರೀತಿಯಲ್ಲಿ ಹಣ ಕೊಡಬೇಕು ಎನ್ನುವ ವಿಚಾರವನ್ನು ಮಾಡಿದ್ದೇವೆ. ಅವರು ಅಲ್ಲಿಯೇ ಇದ್ದರೂ ಅಂದರೆ ಸಾಮಾನು ಕಳವು ಆಗುವುದು ಸ್ವಲ್ಪ ತಪ್ಪಿಸುವುದಕ್ಕೆ ಸಾಧ್ಯತೆಯಿದೆ ಎನ್ನುವ ಮಾತನ್ನು ಹೇಳಬಯಸುತ್ತಿದ್ದೇನೆ. ಮಾನ್ಯ ರಾಜುಗೌಡರು ಹಳ್ಳಿ ಮತ್ತು ಪಟ್ಟಣ ಅನುಪಾತದ ಬಗ್ಗೆ ಹೇಳಿದರು. ನಾನು ಮೊದಲೇ ಹೇಳಿದ್ದೇನೆ. ಅದು ಪುಸ್ತಕದಲ್ಲಿಯೂ ಸಹ ಇದೆ. ನಾವು ಟೀಚರ್ಸ್‌ಗಳನ್ನು ನೇಮಕ ಮಾಡುವಾಗ ಹಳ್ಳಿಗಳಿಗೆ ಹೆಚ್ಚಿಗೆ ಮಾಡಬೇಕು; ಪಟ್ಟಣದಲ್ಲಿ ಹೆಚ್ಚಿಗೆ ಇರುವ ಟೀಚರ್ಸ್‌ಗಳನ್ನು ಹಳ್ಳಿಗೆ ಕಳುಹಿಸುವ ಒಂದು ವ್ಯವಸ್ಥೆಯನ್ನು ಮಾಡಿ ಅಲ್ಲಿ ಅನುಪಾತ ಒಂದೇ ರೀತಿಯಲ್ಲಿರುವಂತೆ ನಾವು ನೋಡಿಕೊಳ್ಳುತ್ತೇವೆ. ಈ ವರ್ಷ ಆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ. ನಾನು ಈಗಾಗಲೇ ಹೇಳಿದ್ದೇನೆ. ಮಾನ್ಯ ಯಡಿಯೂರಪ್ಪನವರು ಬಹಳ ಮಹತ್ವದ ಪ್ರಶ್ನೆಯನ್ನು ಎತ್ತಿದ್ದಾರೆ. ಅಧ್ಯಾಪಕರುಗಳನ್ನು ನೇಮಿಸಿಕೊಳ್ಳುತ್ತೇವೆ. ನೇಮಿಸಿಕೊಳ್ಳುವಾಗ 15 ಪರ್ಸೆಂಟ್ ಅಂಕಗಳನ್ನು ಮೊದಲು ಕೊಡಲಾಗುತ್ತಿತ್ತು. ಈಗ 15 ಪರ್ಸೆಂಟ್ ಅನ್ನುವ ಬದಲು 15 ಅಂಕಗಳು ಹಾಗೆ ಮಾಡಿದ್ದೇವೆ. ಅವರ ಟೋಟಲ್ ಮಾರ್ಕ್ಸ ಜೊತೆಗೆ 15 ಮಾರ್ಕ್ಸ್‌ಗಳನ್ನು ಕೂಡಿಸಿ ಅದರ ಪರ್ಸೆಂಟೇಜ್ ತೆಗೆದು ಆಯ್ಕೆ ಮಾಡಿಕೊಳ್ಳುತ್ತೇವೆ. ಮಾನ್ಯ ಯಡಿಯೂರಪ್ಪನವರು ಹೇಳಿದರು ನಾನು ಆಶ್ವಾಸನೆಯನ್ನು ಕೊಟ್ಟಿದ್ದೇನೆಂದು. ನಾನು ಆಶ್ವಾಸನೆಯನ್ನು ಕೊಡುವಾಗ ಬಹಳ ದೊಡ್ಡ ಗದ್ದಲ ಆಗುತ್ತಿದ್ದಾಗ ಅದನ್ನು ಪರಿಶೀಲನೆ ಮಾಡುತ್ತೇನೆ ಎನ್ನುವ ಮಾತನ್ನು ಮಾತ್ರ ಹೇಳಿದ್ದೇನೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ನನ್ನ ಪ್ರಶ್ನೆಗೆ ಉತ್ತರ ಹೇಳಲಿಲ್ಲ.

ಅಧ್ಯಕ್ಷರು:- ಹೇಳುತ್ತಾರೆ ತಾವು ಕೂಡಿ.

ಡಾ।। ಹೆಚ್.ಡಿ. ಲಮಾಣಿ:– 15 ಪರ್ಸೆಂಟ್ ಅಲ್ಲ, 15 ಅಂಕಗಳು ಕೊಡುವ ವ್ಯವಸ್ಥೆ ಇದೆ. ಅದರ ಬಗ್ಗೆ ಏನಾದರೂ ಬದಲಾವಣೆ ಮಾಡಬೇಕಾದರೆ ಅದನ್ನು ನಾನು ವಿಚಾರ ಮಾಡುತ್ತೇನೆ. ಮುಖ್ಯಮಂತ್ರಿಗಳ ಜೊತೆ ಚರ್ಚೆಮಾಡಿ ಕ್ಯಾಬಿನೆಟ್‌ನಲ್ಲಿ ಇಡುವುದಾದರೆ ಇಟ್ಟು ಒಂದು ವ್ಯವಸ್ಥೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಹಳ್ಳಿಗಳಲ್ಲಿ ವಿದ್ಯಾಭ್ಯಾಸ ಮಾಡಿದವರಿಗೆ ಅನಾನುಕೂಲವಾಗುತ್ತದೆ. ಹಳ್ಳಿಯ ಮಕ್ಕಳು ಪಟ್ಟಣದ ಮಕ್ಕಳ ಜೊತೆ ಕಾಂಪೀಟ್ ಮಾಡುವುದಕ್ಕೆ ಬಹಳ ತೊಂದರೆಯಾಗುತ್ತದೆ. ಹಳ್ಳಿಯವರಿಗೆ ಏನೂ ಹುದ್ದೆಗಳು ಸಿಗುವುದಿಲ್ಲವೆನ್ನುವ ವ್ಯವಸ್ಥೆ ಇರುವುದರಿಂದ ಈ ವಿಷಯವನ್ನು ಕ್ಯಾಬಿನೆಟ್‌ನಲ್ಲಿ ತಂದು ಇದರ ಬಗ್ಗೆ ಏನಾದರೂ ನಿರ್ಣಯ ತೆಗೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಜೂನಿಯರ್ ಕಾಲೇಜುಗಳಲ್ಲಿ ಸಬ್ಜೆಕ್ಟ್ ಲೆಕ್ಚರರ್‌ಗಳು ಇರುವುದಿಲ್ಲವೆಂದು ಶ್ರೀಮತಿ ದಮಯಂತಿ ಬೋರೇಗೌಡರು ಹೇಳಿದರು. ಈ ಸಮಸ್ಯೆ ಇದೆ ನಿಜ. ಕೆಲವೊಂದು ಕಡೆಗೆ ಒಂದು ವಿಷಯಕ್ಕೆ ನಾಲ್ಕು ನಾಲ್ಕು ಜನ ಲೆಕ್ಚರರ್ ಇರುತ್ತಾರೆ. ಮತ್ತೊಂದು ಕಡೆ ಆ ವಿಷಯಕ್ಕೆ ಲೆಕ್ಚರರ್ಸ್ ಇರುವುದಿಲ್ಲ. ಇಂತಹ ಒಂದು ವ್ಯವಸ್ಥೆಯನ್ನು ನಾವು ನೋಡುತ್ತಿದ್ದೇವೆ. ಈ ವರ್ಷದಲ್ಲಿ ನಾವು ಏಪ್ರಿಲ್, ಮೇ ತಿಂಗಳಲ್ಲಿ ಎಲ್ಲಾ ಲೆಕ್ಚರರ್‌ಗಳ ಯಾದಿಯನ್ನು ತರಿಸಿಕೊಂಡು ಯಾವ ವಿಷಯದಲ್ಲಿ, ಎಲ್ಲಿ ಏನು ಇರಬೇಕು ಎನ್ನುವುದರ ಬಗ್ಗೆ ಮಾಡಬೇಕೆಂದಿದ್ದು, ನಾವು ಈಗಾಗಲೇ ಯಾದಿಯನ್ನು ತರಿಸುತ್ತಿದ್ದೇವೆ. ಇದರ ಬಗ್ಗೆ ನಾವು ಸೂಕ್ತವಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಇನ್‌ಸ್ಪೆಕ್ಷನ್ ಬಗ್ಗೆ ನಾವು ಬೇರೆ ಒಂದು ವಿಚಾರವನ್ನು ಮಾಡಿದ್ದೇವೆ. ಈಗ ಪ್ರತಿಯೊಂದು ಸರ್ಕಲ್‌ನಲ್ಲಿ ಒಂದು ಸರ್ಕಾರಿ ಮಾಧ್ಯಮಿಕ, ಪ್ರೌಢಶಾಲೆ ಇರುತ್ತದೆ. ಆ ಸರ್ಕಾರಿ ಪ್ರೌಢಶಾಲೆಯ ಹೆಡ್‌ಮಾಸ್ಟರುಗಳ ನೇತೃತ್ವದಲ್ಲಿ ಶಾಲಾಸಂಕೀರ್ಣ ಎಂದು ಮಾಡಿದ್ದೇವೆ. ಅದರಲ್ಲಿ ಹೆಡ್‌ಮಾಸ್ಟರುಗಳಿಗೆ ಅಲ್ಲಿ ಇರುವಂಥ ಬೇರೆ ಶಾಲೆಗಳನ್ನು ಇನ್‌ಸ್ಪೆಕ್ಷನ್ ಮಾಡುವಂಥ ಅಧಿಕಾರವನ್ನು ನಾವು ಕೊಡುತ್ತಿದ್ದೇವೆ. ಜೀಪ್ ಕೊಡುವ ಬಗ್ಗೆ, ಇತರ ವಾಹನ ಕೊಡುವ ಬಗ್ಗೆ ಈ ವಿಚಾರದಲ್ಲಿ ಇದನ್ನು ಕೈಬಿಟ್ಟಿದ್ದೆವು. ಈಗ ಇನ್‌ಸ್ಪೆಕ್ಷನ್ ಮಾಡಲೇಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈ ಹೊಸ ವ್ಯವಸ್ಥೆ ಮಾಡಿ ಅದರ ಅಡಿಯಲ್ಲಿ ಬೇರೆಬೇರೆ ಶಾಲೆಗಳನ್ನು ಜೋಡಿಸಿ ಈ ಇನ್‌ಸ್ಪೆಕ್ಷನ್ ವ್ಯವಸ್ಥೆಯನ್ನು ಮಾಡುವಂಥ ಪರಿಸ್ಥಿತಿಯಲ್ಲಿದ್ದೇವೆ. ಅದನ್ನು ಈಗಾಗಲೇ ನಮ್ಮ ಪುಸ್ತಕದಲ್ಲಿ ಕೊಟ್ಟಿದ್ದೇವೆ. ತಾವು ದಯವಿಟ್ಟು ನೋಡಿದರೆ ಗೊತ್ತಾಗುತ್ತದೆ. ಇನ್ನು ಒ.ಬಿ.ಬಿ. ನಲ್ಲಿ 3771 ಕಟ್ಟಡಗಳು ಪೂರ್ತಿಯಾಗಬೇಕಾಗಿದೆ. ಆ ಕಟ್ಟಡಗಳನ್ನು ಮುಗಿಸುವುದಕ್ಕೆ ನಾವು ವ್ಯವಸ್ಥಿತವಾದ ರೀತಿಯಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ಶ್ರೀ ಬಾಬಾಗೌಡರು ಹೇಳಿದ ಹಾಗೆ ಹಳ್ಳಿಗಳಲ್ಲಿ ಅಧ್ಯಾಪಕರುಗಳಿಗೆ ಮನೆ ಇರುವುದಿಲ್ಲ. ಮನೆಗಳು ಇಲ್ಲದಿದ್ದುದಕ್ಕೆ ಅಧ್ಯಾಪಕರು ಅಲ್ಲಿಗೆ ಹೋಗುವುದಿಲ್ಲವೆಂದು ನೆವ ಮಾಡುತ್ತಾರೆ. ಅವರು ನೌಕರಿಗೆ ಸೇರಿಕೊಳ್ಳಬೇಕಾದರೆ ಈ ಎಲ್ಲಾ ವಿಷಯಗಳು ಮುಂದೆ ಬಂದಿರುವುದಿಲ್ಲ. ನೌಕರಿಗೆ ಸೇರಿಕೊಂಡ ನಂತರ ಬರುವಂಥ ವಿಷಯಗಳು ಇವು. ಮನೆ ಬೇಕು, ಅದು ಬೇಕು, ಇದು ಬೇಕು ಎಂದು ಹೇಳಿದರೆ ಅದು ನಡೆಯುವ ಮಾತಲ್ಲ. ಅವರು ಅಲ್ಲಿಗೆ ಹೋಗಲೇಬೇಕಾಗುತ್ತದೆ. ಅವರು ಹೋಗಿ ಅಲ್ಲಿ ಇರುವ ವ್ಯವಸ್ಥೆಯಲ್ಲಿ ವಾಸಿಸಬೇಕಾಗುತ್ತದೆ. ಒಂದು ವೇಳೆ ಅವರು ಹೋದ ನಂತರ ತೊಂದರೆ ಇತ್ತು ಎಂದರೆ, ನಾವು ನಮ್ಮ ಆಶ್ರಯ ಯೋಜನೆಯಲ್ಲಿ, ಸಂಬಂಧಪಟ್ಟ ಮಂತ್ರಿಗಳನ್ನು ಕೇಳುತ್ತಿದ್ದೇನೆ. ನಮ್ಮ ಹಳ್ಳಿಗಳಲ್ಲಿ ಕೆಲವೊಂದು ಮನೆಗಳನ್ನು ಟ್ವಿನ್‌ಹೌಸಸ್ ಅಂತ ಇವೆಯಲ್ಲಾ, ಆ ರೀತಿಯಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟರೆ ಅಧ್ಯಾಪಕರುಗಳಿಗೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಆಶ್ರಯ ಮನೆಗಳಿಗೆ ಸಂಬಂಧಿಸಿದ ಮಾನ್ಯ ಮಂತ್ರಿಗಳು ಇದ್ದಾರೆ. ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಅವರು ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಮಾನ್ಯ ಚಿಕ್ಕಮಾದು ಅವರು ಮೇಲ್ದರ್ಜೆಗೆ ಏರಿಸಿದಂಥ ಪ್ರಾಥಮಿಕ ಶಾಲೆಗಳಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಏಕೆಂದರೆ ಮೇಲ್ದರ್ಜೆಗೆ ಏರಿಸಿದಂ

ಶಾಲೆಗಳಲ್ಲಿ ವ್ಯವಸ್ಥೆ ಅಷ್ಟೇ ಇರುತ್ತದೆ. ಅಧ್ಯಾಪಕರನ್ನು ಅಷ್ಟೇ ಉಳಿಸಿ, ಬೇರೆ ಅಧ್ಯಾಪಕರನ್ನು ಕೊಡುವುದಿಲ್ಲ ಎಂದು ಹೇಳುವಂಥಾದ್ದು. ಅದನ್ನೂ ಸಹಿತ ವೆಕೆನ್ಸಿಗಳು ಇರುವ ಪ್ರಕಾರ, ಇಂತಹ ಶಾಲೆಗಳ ಬಗ್ಗೆ ಲಕ್ಷ್ಯದಲ್ಲಿಟ್ಟುಕೊಂಡು ಹೆಚ್ಚಿನ ಅಧ್ಯಾಪಕರನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಮತ್ತೆ ಏಳನೆಯ ಕ್ಲಾಸಿಗೆ ಸಿ.ಪಿ.ಎಡ್. ಟೀಚರ್ಸ್ ಇರಬೇಕು, ಅಲ್ಲಿಂದ ರೀ ಆರ್ಗನೈಸೇಷನ್ ಮಾಡಿ ಹೆಚ್ಚಿನ ಅಧ್ಯಾಪಕರನ್ನು ನಿಯುಕ್ತಿ ಮಾಡಬೇಕೆಂದು ತಾವು ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡು, ಬರುವ ವರ್ಷದಲ್ಲಿ ಈ ಬಗ್ಗೆ ನಾವು ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಮಾನ್ಯ ಚಿಕ್ಕೇಗೌಡರು ಹೇಳಿದ ಹಾಗೆ ಕೆಲವು ಅಧ್ಯಾಪಕರು ಶಾಲೆಗೇ ಹೋಗುವುದಿಲ್ಲ. ತಮಗೆ ಆಶ್ಚರ್ಯವಾಗಬಹುದು. ಬೆಂಗಳೂರಿನಲ್ಲಿ ಪೇಪರ್ ಚೆಕ್ಕಿಂಗ್ ಸೆಂಟರ್ ಇರುತ್ತದೆ. ಅದು ಕೇಂದ್ರೀಕೃತವಾಗಿದೆ. ಅಂದರೆ ಎಲ್ಲಾ ಪೇಪರುಗಳನ್ನು ಅಲ್ಲಿ ತರಿಸಿ ಮಾಸ್ ವಾಲ್ಯುಯೇಷನ್ ಮಾಡುವಂಥಾದ್ದು. ಆ ಸಮಯದಲ್ಲಿ ಅಧ್ಯಾಪಕರು ಬೇಗಬೇಗ ಪೇಪರ್ ಚೆಕ್ ಮಾಡಿ ವಿಧಾನಸೌಧ ಸುತ್ತುತ್ತಾ ಇರುತ್ತಾರೆ ಎಂಬ ಮಾತನ್ನು ಶ್ರೀಮತಿ ದಮಯಂತಿ ಬೋರೇಗೌಡ ಅವರು ಹೇಳಿದರು. ಈ ವಿಧಾನಸೌಧ ಸುತ್ತುವ ವ್ಯವಸ್ಥೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಕಟ್ ಮಾಡಬೇಕೆಂಬ ವಿಚಾರದಲ್ಲಿ ನಾವು ಇದ್ದೇವೆ. ಈ ಪ್ರಶ್ನೆಪತ್ರಿಕೆಗಳ ಮೌಲ್ಯಮಾಪನ ಕೇಂದ್ರಗ್ಗಳನ್ನು ಬೇರೆಬೇರೆ ಕಡೆಗೆ ಡಿವಿಜನ್ ಲೆವಲ್‌ಗಳಲ್ಲಿ ವ್ಯವಸ್ಥೆ ಮಾಡಬೇಕೆಂದು ನಾವು ವಿಚಾರವನ್ನು ಮಾಡಿದ್ದೇವೆ. ಮಾನ್ಯ ವೀರಭದ್ರಪ್ಪನವರು ಪೆಟ್ಟಿಗೆ ಅಂಗಡಿಗಳನ್ನು ತೆರೆಸುವಂಥಾದ್ದು, ಯೂನಿಫಾರಂ. ಚಿಕ್ಕದು, ದೊಡ್ಡದು...

ಶ್ರೀ ಎನ್. ಚಿಕ್ಕೆಗೌಡ:– ವರ್ಗಾವಣೆ ಬಗ್ಗೆ ನಾನು ಹೇಳಿದ್ದೆ.

ಡಾ।। ಹೆಚ್.ಡಿ. ಲಮಾಣಿ:– ಇದರ ಬಗ್ಗೆ ನಾನು ಹೇಳಿದ್ದೇನೆ. ಕೆಲವು ಜನ ಅಧ್ಯಾಪಕರು ಶಾಲೆಗೆ ಹೋಗುವುದಿಲ್ಲ. ಹಾಗೆಯೇ ರಾಜಕೀಯ ಮಾಡಿಕೊಂಡು ತಿರುಗಾಡುತ್ತಾರೆ. ಶಿಕ್ಷಣದ ಬಗ್ಗೆ ಅವರು ಮಹತ್ವಕೊಡುವುದಿಲ್ಲ ಎನ್ನುವ ವ್ಯವಸ್ಥೆ ಏನಿದೆ, ಅದು ನನಗನ್ನಿಸುತ್ತದೆ ಕೆಲವು ರಾಜಕಾರಣಿಗಳಿಂದ ನಿರ್ಮಾಣವಾದಂಥ ಪರಿಸ್ಥಿತಿ ಇದು. ಈ ಪರಿಸ್ಥಿತಿಯನ್ನು ಎದುರಿಸಬೇಕು ಎಂದರೆ, ಇಂತಹವರಿಂದ ಸ್ವಲ್ಪ ದೂರ ಸರಿಯಬೇಕಾಗುತ್ತದೆ. ಇದಕ್ಕೆ ಮಹತ್ವ ಕೊಡದೆ ಇಂತಹವರು ಇದ್ದಾರೆ ಎಂದರೆ ದಯಮಾಡಿ ಹೇಳಿ. ಅವರನ್ನು ವ್ಯವಸ್ಥಿತವಾದ ರೀತಿಯಲ್ಲಿ ಎಲ್ಲಿಗೆ ಕಳುಹಿಸಬೇಕೋ, ಅಲ್ಲಿಗೆ ಕಳುಹಿಸುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಇನ್ನು ಇನ್‌ಸ್ಪೆಕ್ಷನ್ ಬಗ್ಗೆ, ಮನೆಗಳ ಬಗ್ಗೆ ಹೇಳಿದರು. ಇವುಗಳ ಬಗ್ಗೆ ನಾವು ಈಗಾಗಲೇ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಪ್ರತಿಯೊಂದನ್ನೂ ಹೇಳಿಕೊಂಡು ಹೋದರೆ ಅದು ದೊಡ್ಡ ಭಾಷಣವೇ ಆಗಬಹುದು.

5.50 ಪಿಎಂ

ತಾವು ಪಿ.ಇ.ಟೀಚರ್ಸ್ ಬಗ್ಗೆ ಹೇಳಿದಿರಿ, ಈ ಪಿ.ಇ. ಟೀಚರ್ಸ್ ಅವಶ್ಯವಾಗಿ ಬೇಕು. ಏಕೆಂದರೆ, ಶಾಲೆಯಲ್ಲಿ ವಿದ್ಯಾರ್ಥಿಗಳಲ್ಲಿ ಶಿಸ್ತು ತರಬೇಕೆಂದರೆ, ಹಾಗೂ ವಿದ್ಯಾರ್ಥಿಗಳಿಗೆ ಆರೋಗ್ಯದ ದೃಷ್ಟಿಯಿಂದಲೂ ಸಹಿತ ಈ ಶಿಕ್ಷಕರ ಅವಶ್ಯಕತೆ ಬಹಳ ಇದೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:– ಅನುದಾನರಹಿತ ಶಾಲೆಗಳು, ಎಸ್.ಸಿ.ಯವರು ರನ್ ಮಾಡುವುದಕ್ಕೆ, ಹೋದಸಾರಿ, ಪ್ರಥಮ ವರ್ಷದಲ್ಲಿಯೇ ಗ್ರಾಂಟ್ ಕೊಡುತ್ತೇವೆಂದು ಹೇಳಿದ್ದರು. ಇದರ ಬಗ್ಗೆ ತಾವು ಏನನ್ನೂ ಹೇಳಲಿಲ್ಲ.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ನಾವು ಈ ಪಿ.ಇ.ಟೀಚರ್ಸ್ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತಾ ಇದ್ದೇವೆ. ಮತ್ತೆ ಮಾನ್ಯ ಮಂಜುನಾಥ ಕುನ್ನೂರ್‌ರವರು, ಅವರ ತಾಲ್ಲೂಕಿನಲ್ಲಿ ಬಹಳಷ್ಟು ಅಧ್ಯಾಪಕರ ಹುದ್ದೆಗಳು ಖಾಲಿ ಇವೆಯೆಂದು ಹೇಳಿದರು. ಅವುಗಳು ಈ ಶೈಕ್ಷಣಿಕ ವರ್ಷದಲ್ಲಿ

ತುಂಬುವಂಥ ವ್ಯವಸ್ಥೆ ಮಾಡುತ್ತೇವೆ. ಮತ್ತೆ ಮಾನ್ಯ ಕರಿಯಣ್ಣನವರು ಕೆಲವೊಂದು ವಿಷಯಗಳನ್ನು ಹೇಳಿದ್ದಾರೆ. ಅಧ್ಯಾಪಕರ ಶೋಷಣೆಯಾಗುತ್ತಿದೆ ಮತ್ತು ಸಿಂಗಲ್ ಟೀಚರ್ಸ್ ವಿಷಯ, ಇವೆಲ್ಲವನ್ನೂ ಹೇಳಿದ್ದಾರೆ. ನಾವು ಇವೆಲ್ಲವನ್ನೂ ತುಂಬುವಂಥ ವ್ಯವಸ್ಥೆ ಮಾಡುತ್ತಾ ಇದ್ದೇವೆ. ಮಾನ್ಯ ವಿವಮೂರ್ತಿಯವರು ಟಿಸಿಹೆಚ್ ಕಾಲೇಜುಗಳು, ಹೈಸ್ಕೂಲುಗಳು ಹಾಗೂ ಜೂನಿಯರ್ ಕಾಲೇಜುಗಳೂ ಅನ್ಆಥರೈಸ್ ಆಗಿ ನಡೆಯುತ್ತಿವೆ ಎಂದು ಹೇಳಿದರು. ಅವರಿಗೆ ಸುಗ್ರೀವಾಜ್ಞೆ ಆಗಿರುವುದು ಗೊತ್ತಿಲ್ಲ. ಅವರು ಗೊತ್ತಿಲ್ಲದ ಹಾಗೆ ವರ್ತಿಸುತ್ತಿದ್ದಾರೆ. ಫೆಬ್ರವರಿ ತಿಂಗಳಲ್ಲಿ ಒಂದು ಕಾನೂನಾಗಿದೆ. ಇದರ ಬಗ್ಗೆ ಅವರು ಯಾರೂ ಚಿಂತನೆ ಮಾಡಿಲ್ಲ. ಇದರಿಂದ, ಎಸ್ಎಸ್ಎಲ್ಸಿ ಪಿಯುಸಿ ಮತ್ತು 7ನೇ ತರಗತಿ ಪರೀಕ್ಷೆಗಳಿಗೆ ಕುಳಿತುಕೊಳ್ಳುವುದಕ್ಕಾಗುತ್ತಾ ಇಲ್ಲ. ಜೊತೆಗೆ ಟಿ.ಸಿ.ಹೆಚ್ ಪರೀಕ್ಷೆಗೂ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ, ಆ ಶಾಲೆಗಳಿಗೆ ಮಾನ್ಯತೆ ಇಲ್ಲ. ಮೊನ್ನೆ ಏನು ಕಾನೂನಾಗಿದೆ, ಕಾನೂನು ಪ್ರಕಾರ, ಅವರಿಗೆ ಮಾನ್ಯತೆ ಕೊಡುವುದಕ್ಕಾಗುವುದಿಲ್ಲ. ಅವರು ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಶಿವರಾಮ್:– ಅವರು ಕೋರ್ಟ್‌ನಿಂದ ಸ್ಟೇ ತಂದು ಪರೀಕ್ಷೆ ನಡೆಸುತ್ತಿದ್ದಾರೆ. ಈ ಸ್ಟೇ ವೆಕೇಟ್ ಮಾಡತಕ್ಕ ಕೆಲಸವನ್ನು ನಿಮ್ಮ ಇಲಾಖೆಯವರು ಮಾಡಿಲ್ಲ. ಟಿ.ಸಿ.ಹೆಚ್ ಗೆ ಕೆಲವರು ಪರೀಕ್ಷೆ ಮಾಡಿದ್ದಾರೆ.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಕೆಲವೊಂದು ಇಂಡಿವಿಜುಯಲ್ ಇನ್‌ಸ್ಟಿಟ್ಯೂಷನ್‌ನವರು ಮಾಡಿದ್ದಾರೆ. ಅವರು ಒಂದುವೇಳೆ ಸ್ಟೇ ತಂದಿದ್ದರೆ, ಆ ಸ್ಟೇ ವೆಕೇಟ್ ಮಾಡುವುದಕ್ಕೂ ಸಹಿತ ಪ್ರಯತ್ನ ಮಾಡುತ್ತೇವೆ. ಇಂತಹ ಪರಿಸ್ಥಿತಿಯಲ್ಲಿ ಅವರು ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಆದರೆ ಮಾನವೀಯ ದೃಷ್ಟಿಯಿಂದ 7ನೇ ತರಗತಿಯವರಿಗೆ ಹಾಗೂ ಎಸ್.ಎಸ್.ಎಲ್.ಸಿ.ಯವರಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿ ಕೊಡಲಾಗಿದೆ. ಪಿ.ಯು.ಸಿ ಮತ್ತು ಟಿ.ಸಿ.ಹೆಚ್. ಪರೀಕ್ಷೆಗಳಿಗೆ ಅನುಮತಿ ಕೊಟ್ಟಿಲ್ಲ, ಇದರ ಬಗ್ಗೆ ಏನಾಗುತ್ತದೆಯೋ ನೋಡಬೇಕು. ಇನ್ನು ಶಾಲೆಗಳನ್ನು ಪ್ರಾರಂಭ ಮಾಡುವುದರ ಬಗ್ಗೆಯೂ ಹೇಳಿದ್ದಾರೆ. ಈ ಡ್ರಾಪ್ ಔಟ್ಸ್ ಬಗ್ಗೆಯೂ ಸಹಿತ ಒಂದು ವ್ಯವಸ್ಥೆಯನ್ನು ಈಗಾಗಲೇ ಮಾಡಿದ್ದೇವೆ. ಏಕೆಂದರೆ, ಶಾಲೆಗೆ ಹೋಗದೆ, ಪರೀಕ್ಷೆಗೆ ಕುಳಿತುಕೊಳ್ಳತಕ್ಕ ವ್ಯವಸ್ಥೆ ಇದೆ. ಹೋದವರ್ಷದಿಂದ, ಡ್ರಾಪ್‌ಔಟ್ಸ್ ವಿದ್ಯಾರ್ಥಿಗಳಿಗೆ, ವಯಸ್ಸಿನ ಆಧಾರದ ಮೇಲೆ ಪರೀಕ್ಷೆಗೆ ಕುಳಿತುಕೊಳ್ಳತಕ್ಕ ವ್ಯವಸ್ಥೆ ಇದೆ. ಈ ವ್ಯವಸ್ಥೆಯಲ್ಲಿ ಯಾರು ಪರೀಕ್ಷೆಗೆ ಕುಳಿತುಕೊಂಡರೂ, ಅವರನ್ನು ರೆಗ್ಯುಲರೈಸ್ ಮಾಡುವಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನು ಈ ಜಿಂಕ್‌ಶೀಟ್ ಹಾಕುವ ಬಗ್ಗೆ ಕೇಂದ್ರದಿಂದ ಸಹಾಯ ಧನದ ಹಣ ಬರುತ್ತದೆ. ಒಂದು ಬಿಲ್ಡಿಂಗ್‌ಗೆ 50 ಸಾವಿರ ರೂಪಾಯಿ ಕೊಡಬೇಕಾಗಿದೆ. ನಮಗೆ ಇನ್ನೂ ಈ ಜಿಂಕ್‌ಶೀಟ್ಸ್ ಬಗ್ಗೆ ಬಂದಿಲ್ಲ. ಹಾಗೇನಾದರೂ ಈ ವ್ಯವಸ್ಥೆ ಇದ್ದರೆ, ಸೂಕ್ತವಾದ ರೀತಿಯಲ್ಲಿ ವಿಚಾರಣೆ ನಡೆಸಿ, ಅನುಕೂಲ ಮಾಡಿಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ. ಇನ್ನು ಕಾಂಪೌಂಡ್‌ಗಳಲ್ಲಿ ಗಿಡಗಂಟಿಗಳನ್ನು ಹಚ್ಚುವ ವಿಷಯ ಹೇಳಿದ್ದಾರೆ. ನಿಜ, ಇದು ಒಳ್ಳೆಯ ಸಲಹೆ. ಈ ಸಲಹೆಯನ್ನು ಜಾರಿಗೆ ತರುವುದಕ್ಕೆ ನಾವು ವಿಚಾರ ಮಾಡುತ್ತೇವೆ. ಸನ್ಮಾನ್ಯ ಸದಸ್ಯರಾದ ಅನಂತಕೃಷ್ಣರವರು ಆಂಗ್ಲೋ ಇಂಡಿಯನ್ ಮಕ್ಕಳಿಗೆ ರಿಯಾಯಿತಿ ಕೊಡಬೇಕೆಂದು ಹೇಳಿದರು. ಈಗಾಗಲೇ ಒಂದನೇ ತರಗತಿಯಿಂದ ಹತ್ತನೇಯ ತರಗತಿಯವರೆಗೆ ರಿಯಾಯಿತಿ ಇದೆ. ಒಂದು ವೇಳೆ ಅವರು ಹಣ ತುಂಬಿದ್ದರೆ, ಅದನ್ನು ವಾಪಸ್ ಕೊಡತಕ್ಕ ವ್ಯವಸ್ಥೆಯನ್ನೂ ಮಾಡುತ್ತೇನೆ. ಈಗಾಗಲೇ ಇದರ ಬಗ್ಗೆ ಕಾನೂನು ಇದೆ. ಮಾನ್ಯ ಮಹದೇವ್‌ರವರು ಕಟ್ಟಡದ ಬಗ್ಗೆ ಹೇಳಿದ್ದಾರೆ. ಅವರು ಸರಿಯಾದ ರೀತಿಯಲ್ಲಿ ಬರೆದುಕೊಟ್ಟರೆ, ಸೂಕ್ತವಾದ ರೀತಿಯಲ್ಲಿ

ನಾನು ವಿಚಾರಣೆ ನಡೆಸಿ, ಸೂಕ್ತವಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ದಯಮಾಡಿ, ಅವರು ಬರೆದು ಕೊಡಬೇಕು.

ಶ್ರೀ ಎಂ. ಮಹದೇವ್:– ನೀವು ಕ್ರಮ ತೆಗೆದುಕೊಳ್ಳಿ. ಆದರೆ, ಅಲ್ಲಿ 2 ಸಾವಿರ ಮಕ್ಕಳು ಶಾಲೆಯಲ್ಲಿ ಸ್ಥಳವಿಲ್ಲದೆ ಕುಳಿತಿದ್ದಾರೆ. ನೀವು ಕಟ್ಟಡವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಕಟ್ಟಡವನ್ನು ಪ್ರಾರಂಭ ಮಾಡೋಣ. ಆದರೆ, ಎನ್‌ಕ್ವೈರಿ ಮಾಡುವುದರ ಬಗ್ಗೆ ಮತ್ತು ಕಟ್ಟಡದ ವಿಚಾರದಲ್ಲಿಯೂ ನೀವು ಬರೆದುಕೊಟ್ಟರೆ, ಹಣವನ್ನು ಮಂಜೂರು ಮಾಡುವಂಥ ವ್ಯವಸ್ಥೆಯನ್ನು ಮಾಡುತ್ತೇನೆ.

ಇನ್ನು ಡಾಕ್ಟರ್ ನಾಗಪ್ಪನವರು ಸ್ಟ್ಯಾಂಡರ್ಡ್ ಬಗ್ಗೆ ಹೇಳಿದರು ಹಳ್ಳಿಯಲ್ಲಿರತಕ್ಕಂಥ ಮಕ್ಕಳ ಸ್ಟ್ಯಾಂಡರ್ಡ್ ಪಟ್ಟಣದಲ್ಲಿರತಕ್ಕಂಥ ಮಕ್ಕಳ ಸ್ಟ್ಯಾಂಡರ್ಡ್‌ನಲ್ಲಿ ಅಂತರ ಇದೆ ಎಂದು, ಅದಕ್ಕೆ ನಾನು ಮೊದಲೇ ಹೇಳಿದೆ ನಾವು ಟೀಚರ್ಸ್ ಹೆಚ್ಚು ಮಾಡಿ ಬೇರೆ ಬೇರೆ ರೀತಿಯಲ್ಲಿ ಅನುಕೂಲ ಮಾಡಿಕೊಟ್ಟು ಅವರ ಸ್ಟ್ಯಾಂಡರ್ಡ್ ಅನ್ನು ಎತ್ತರಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದೇನೆ. ಇನ್ನು ಸಾಕಷ್ಟು ಶಾಲೆಗಳಿಗೆ..

ಡಾ।। ವೈ. ನಾಗಪ್ಪ:– ಟೀಚರ್ಸ್‌ಗಳನ್ನು ಯಾವ ಶಾಲೆಗಳಿಗೆ ಕೊಟ್ಟಿದ್ದೀರಿ ಹೇಳಿ.

(ಗೊಂದಲ)

ಯಾವ ಅಧಿಕಾರಿ ಆಗಲಿ ಇನ್ಸ್‌ಪೆಕ್ಷನ್ಸ್‌ಗೆ ಹೋಗುವುದಿಲ್ಲ ಎ.ಇ.ಓ. ಇನ್ಸ್‌ಪೆಕ್ಷನ್ ಹೋಗುವುದಿಲ್ಲ, ಇನ್ಸ್‌ಪೆಕ್ಟರ್ಸ್ ಇನ್ಸ್‌ಪೆಕ್ಷನ್‌ಗೆ ಹೋಗುವುದಿಲ್ಲ; ಡಿ.ಡಿ.ಪಿ.ಐ ಹಳ್ಳಿಗಳಿಗೆ ಇನ್ಸ್‌ಪೆಕ್ಷನ್‌ಗೆ ಹೋಗುವುದಿಲ್ಲ.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಅದಕ್ಕೆ ನಾವು ಇನ್ಸ್‌ಪೆಕ್ಷನ್ ಸಲುವಾಗಿ ಹೊಸ ಯೋಜನೆಯನ್ನು ಹಾಕಿಕೊಂಡಿದ್ದೇವೆ. ನಾವು ಶಾಲಾ ಸಂಕೀರ್ಣ ಅಂತ ಮಾಡಿಕೊಂಡು ಯೋಜನೆ ಅಡಿಯಲ್ಲಿ ಅಲ್ಲಿರತಕ್ಕಂಥ ಸರ್ಕಾರಿ ಮಾಧ್ಯಮಿಕ ಶಾಲಾ ಮುಖ್ಯೋಪಾಧ್ಯಾಯರ ನೇತೃತ್ವದಲ್ಲಿ ಸುತ್ತಲೂ ಇರುವ ಶಾಲೆಗಳನ್ನು ಇವರಿಗೆ ವಹಿಸಿ ಅವರ ಮುಖಾಂತರ ಇನ್ಸ್‌ಪೆಕ್ಷನ್ಸ್ ಮಾಡಿಸಿ ಮುಂದೆ ನಾವು ಎಇಓ ಇನ್ಸ್‌ಪೆಕ್ಷನ್ ಮಾಡಲು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆ. ಈ ರೀತಿಯ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ನಮ್ಮಲ್ಲಿ ಬೇಕಾದಷ್ಟು ಯೋಜನೆಗಳು ಇವೆ. ಆ ಯೋಜನೆಗಳನ್ನು ಕಾರ್ಯಗತ ಮಾಡಲು ವ್ಯವಸ್ಥಿತವಾದ ರೀತಿಯಲ್ಲಿ ಕೆಲಸ ಮಾಡಬೇಕು. ಆ ರೀತಿಯಲ್ಲಿ ನಾವು ಕೆಲಸ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತಾ ನಮ್ಮ ಬೇಡಿಕೆಗಳನ್ನು ಮಂಜೂರು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ:– ಮಾನ್ಯ ಅಧ್ಯಕ್ಷರೇ, ನಾನು ಪ್ರಥಮದಲ್ಲೇ ಒಂದು ಪ್ರಶ್ನೆ ಕೇಳಿದ್ದೆ ಅದಕ್ಕೆ ಉತ್ತರ ಬರಲಿಲ್ಲ. ಈ ಪರಿಶಿಷ್ಟ ಜಾತಿ ಮತ್ತು ವರ್ಗದವರು ನಡೆಸುತ್ತಿರುವ ಶಾಲೆಗಳಿಗೆ ಅನುದಾನರಹಿತ ಅಂತ ಕೊಟ್ಟಿದ್ದಾರೆ. ಹೋದ ಸಲ ಬಜೆಟ್ ಅಧಿವೇಶನದಲ್ಲಿ ಅಂದಿನ ಶಿಕ್ಷಣ ಸಚಿವರಾಗಿದ್ದ ವೀರಪ್ಪ ಮೊಯಿಲಿಯವರು ಅದಕ್ಕೂ ಅನುದಾನ ಕೊಡುತ್ತೇವೆ ಎಂದು ಹೇಳಿ ಒಂದು ಸಮಿತಿ ನೇಮಕ ಮಾಡಿದರು. ಆ ಸಮಿತಿಯವರು ಎಲ್ಲಾ ಶಾಲೆಗಳಿಗೂ ಭೇಟಿ ನೀಡಿಲ್ಲ; ಆದ್ದರಿಂದ ಡಿಸ್ಟ್ರಿಕ್ಟ್‌ನಲ್ಲಿರತಕ್ಕಂಥ ಡಿಡಿಪಿಐ ಎನ್‌ಕ್ವೈರಿ ಮಾಡಿ ರಿಪೋರ್ಟ್ ಕಳುಹಿಸಿದರೆ ಅಂಥ ಶಾಲೆಗಳಿಗೂ ಅನುದಾನಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಉತ್ತರ ಹೇಳಿದ್ದೇನೆ.

ಶಾಶ್ವತ ಅನುದಾನ ರಹಿತ ಶಾಲೆಗಳಿಗೆ ಅನುದಾನ ಕೊಡಬೇಕೆಂದು ಅಂದರೆ ಯಾರು ಈ ಪರಿಶಿಷ್ಟ ಜಾತಿ ಮತ್ತು ವರ್ಗದವರು ನಡೆಸುತ್ತಿದ್ದಾರೆ ಅವರ ಶಾಲೆಗಳನ್ನು ತಪಾಸಣೆ ಮಾಡಲು ಒಂದು ಸಮಿತಿ ಶ್ರೀ ನಾಗರಾಜ್‌ರವರ ನೇತೃತ್ವದಲ್ಲಿ ರಚನೆಮಾಡಿದೆ. ಅವರು ಈಗಾಗಲೇ ಕೆಲವು ಶಾಲೆಗಳಿಗೆ ಭೇಟಿ ಕೊಟ್ಟು ಸರ್ಕಾರಕ್ಕೆ ಇಂಟಿರಿಯಂ ರಿಪೋರ್ಟ್ ಕೊಟ್ಟಿದ್ದಾರೆ. ಆ ಇಂಟಿರಿಯಂ ರಿಪೋರ್ಟ್ ಅನ್ನು ನಾವು ಪರಿಶೀಲಿಸುತ್ತಿದ್ದೇವೆ. ನಾನು ಮೊದಲೇ ಹೇಳಿದೆ ಈ ಶಾಲೆಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಲ್ಲಿ ನಾವು ಪ್ರಯತ್ನ ಮಾಡುತ್ತೇವೆ ಎಂದು. ಮುಂದೆ ಪೂರ್ಣ ರಿಪೋರ್ಟ್ ಬಂದ ನಂತರ ಅದು ಏನಾಗುತ್ತದೆಂದು ಆ ಸಮಯದಲ್ಲಿ ಹೇಳಬಹುದು; ಈ ಸಮಯದಲ್ಲಿ ಏನನ್ನೂ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ:– ಪೂರ್ಣ ರಿಪೋರ್ಟ್ ಇನ್ನು 10 ವರ್ಷಗಳಾದರೂ ಬರುವುದಿಲ್ಲ.

† ಶ್ರೀ ಎಚ್. ವಿಶ್ವನಾಥ (ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯಸಚಿವರು):– ಮಾನ್ಯ ಅಧ್ಯಕ್ಷರೇ ನನ್ನ ಇಲಾಖಾ ಬೇಡಿಕೆಗಳ ಮೇಲೆ ಸುಮಾರು 9 ಜನ ಮಾನ್ಯ ಸದಸ್ಯರು ಮಾತನಾಡಿ ಹಲವಾರು ಉಪಯುಕ್ತವಾದ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅದರಲ್ಲೂ ಬಹಳ ಮುಖ್ಯವಾಗಿ ನಮ್ಮ ವಿರೋಧಪಕ್ಷದ ನಾಯಕರಾದಿಯಾಗಿ ಮಾನ್ಯ ಜೀವರಾಜ ಆಳ್ವರವರು ಶ್ರೀ ವಾಟಾಳ್ ನಾಗರಾಜ್‌ರವರು ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಕನ್ನಡದ ಅಭಿಮಾನದ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸಿ ಈ ಇಲಾಖೆಯ ಬಗ್ಗೆ ವಿಷಯಗಳನ್ನು ಕೂಲಂಕಷವಾಗಿ ಚರ್ಚೆಮಾಡಿ ಮುಂದೆ ಏನು ಮಾಡಬೇಕು ಎನ್ನುವ ಬಗ್ಗೆ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಗ್ಗೆ ಬಹಳ ತಾತ್ಸಾರ ಇತ್ತು. ಈ ಇಲಾಖೆಗೆ ಒಬ್ಬ ಮಂತ್ರಿ ಏತಕ್ಕೆ ಎಂದು ಹಲವಾರು ಸದಸ್ಯರು ಹೇಳಿದ್ದುಂಟು. ಅಂತಹ ಒಂದು ಇಲಾಖೆ ನನಗೆ ಸಿಕ್ಕಿದೆ. ನಾನಾದರೂ ಕೂಡ ಕನ್ನಡ ನಾಡಿನ ಸಂಸ್ಕೃತಿ ಸೇವೆ ಮಾಡಬೇಕೆಂದು ತಿಳಿದು ಬಹಳ ಅಭಿಮಾನದಿಂದ ಈ ಇಲಾಖೆಯ ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದೇನೆ. ಬಹಳ ಅಭಿಮಾನದಿಂದ ಈ ಇಲಾಖೆ ಕೆಲಸವನ್ನು ಮಾಡುವುದಕ್ಕೆ ಹೊರಟು, ಅಧ್ಯಕ್ಷರೆ, ತಮಗೆ ಹೇಳಬೇಕೆಂದರೆ, ಈ ಕನ್ನಡ ಇಲಾಖೆಗೆ ಮಂತ್ರಿ ಎಂದರೆ, ಈ ಪ್ರಪಂಚದಲ್ಲಿ ನಾನು ಒಬ್ಬನೇ. ಇಡೀ ಜಾಗತಿಕ ಜಗತ್ತಿನಲ್ಲಿ ಬಹಳಷ್ಟು ಪ್ರಧಾನ ಮಂತ್ರಿಗಳಿದ್ದಾರೆ. ಮುಖ್ಯ ಮಂತ್ರಿಗಳಿದ್ದಾರೆ. ತೋಟಗಾರಿಕೆ, ಆರೋಗ್ಯ,ಕೃಷಿ ಇದಕ್ಕೆಲ್ಲಾ ಬೇಕಾದಷ್ಟು ಜನ ಮಂತ್ರಿಗಳಿದ್ದಾರೆ. ಆದರೆ ಕನ್ನಡ ಮಂತ್ರಿ ಒಬ್ಬನೇ. ಕನ್ನಡಿಗರು ವಿಶ್ವದಲ್ಲಿ ಎಲ್ಲಾ ಕಡೆ ಇದ್ದಾರೆ. ಆದ್ದರಿಂದ ಕನ್ನಡದ ಮಂತ್ರಿ ಇಡೀ ವಿಶ್ವದ ಮಂತ್ರಿ ಎಂದು ಭಾವನೆ ಮಾಡಿ ನಾನು ಕನ್ನಡದ ಕೆಲಸವನ್ನು, ಕನ್ನಡ ಕಟ್ಟುವ ಕೆಲಸವನ್ನು ಪ್ರಾರಂಭ ಮಾಡಿದ್ದೇನೆ. ಅಧ್ಯಕ್ಷರೆ, ಇವತ್ತು ಜಗತ್ತಿನ ಯಾವುದೇ ಪ್ರಗತಿಶೀಲ ರಾಷ್ಟ್ರಗಳು, ತಮ್ಮ ಪ್ರಗತಿಶೀಲತೆಯ ಮಾನವನನ್ನು ಯಾವುದರಲ್ಲಿ ಅಳೆಯುತ್ತಿದ್ದಾರೆಂದರೆ, ಆ ದೇಶದ ಭಾಷೆ, ಆ ದೇಶದ ಸಂಸ್ಕೃತಿ, ಆ ದೇಶದ ಕ್ರೀಡೆ, ಇವು ಎಲ್ಲಿ ಉನ್ನತಿಯನ್ನು ಪಡೆದಿದ್ದಾವೆ, ಆ ದೇಶಗಳು ಪ್ರಗತಿಶೀಲ ರಾಷ್ಟ್ರಗಳಾಗಿ ಇವತ್ತಿನ ದಿವಸ ಉಳಿದಿದ್ದಾವೆ. ಅಧ್ಯಕ್ಷರೇ, ಬಹುಶಃ ಭಾರತವು ಈ ಜಾಗತಿಕ ಜಗತ್ತಿನ ಭೂಪಟದಲ್ಲಿ ಇರತಕ್ಕಂಥಾದ್ದು ಈ ದೇಶದ ಪ್ರಾಚೀನ ಸಂಸ್ಕೃತಿ, ಈ ದೇಶದ ಪ್ರಾಚೀನ ಕಲೆ, ನೃತ್ಯ, ಸಾಹಿತ್ಯ, ಕ್ರೀಡೆ ಇದರಿಂದ ಇವತ್ತಿನ ದಿವಸ ಭಾರತ ಇಡೀ ವಿಶ್ವದಲ್ಲಿ ಅದು ಹೆಸರನ್ನು ಮಾಡಿದೆ. ಆದ್ದರಿಂದಲೇ ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ ಈ ನಾಡಿನ ಸಂಸ್ಕೃತಿ, ಕ್ರೀಡೆ, ಭಾಷೆ ವಿಚಾರದಲ್ಲಿ ಹೆಚ್ಚಿನ ಮಹತ್ವ ಕೊಡುವುದಕ್ಕೋಸ್ಕರ ಮಾನವ ಸಂಪನ್ಮೂಲ ಇಲಾಖೆ ಎಂದು ಹೇಳಿ ಹೊಸದಾಗಿ ಮಾಡಿ ತನ್ಮೂಲಕ ಈ ಸಂಸ್ಕೃತಿ ಮತ್ತು ಕ್ರೀಡೆಗೆ ಹೆಚ್ಚಿನ ಒತ್ತನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಿದರು.

ಆದರೆ, ಈ ಕನ್ನಡ ಸಂಸ್ಕೃತಿ ಇಲಾಖೆ ಮಾನ್ಯ ಹನುಮಂತಯ್ಯನವರ ಕಾಲದಲ್ಲಿ ಪ್ರಾರಂಭವಾಗಿ

ಸುಮಾರು 20 ಲಕ್ಷ ರೂಪಾಯಿ ಆಯವ್ಯಯದಲ್ಲಿ ಸೇರಿ ಇವತ್ತು ಅದು 5 ಕೋಟಿ ರೂಪಾಯಿಗೆ ಬಂದು ನಿಂತಿದೆ. ಆದರೂ ಕೂಡಾ ಈ ನಾಡಿನ ಭಾಷೆ ಬಗೆಗೆ, ಈ ನಾಡಿನ ಸಂಸ್ಕೃತಿ ಬಗೆಗೆ, ಈ ಸದನದಲ್ಲಾಗಲೀ ಅಥವಾ ಸರ್ಕಾರದಲ್ಲಾಗಲೀ ಎಷ್ಟರಮಟ್ಟಿಗೆ ಮಹತ್ವ ಕೊಡಬೇಕಾಗಿತ್ತೋ ಅಷ್ಟರಮಟ್ಟಿಗೆ ಕೊಡಲಾಗಿಲ್ಲವೆಂದು ಈ ಇಲಾಖೆಯ ಸಚಿವನಾಗಿ ಕೂಡಾ ಇವತ್ತಿನ ದಿವಸ ನಾನು ಒಪ್ಪಿಕೊಳ್ಳಬೇಕಾದಂಥ ಪರಿಸ್ಥಿತಿ ಇದೆ. ಕನ್ನಡ ಭಾಷೆಯ ಪರಂಪರೆ, ಪ್ರಾಚೀನತೆ ಬಹಳ ಆಳವಾದಂಥಾದ್ದು. ಬಹುಶಃ ಇವತ್ತು ಈ ದೇಶದಲ್ಲಿ ಸಾವಿರಾರು ವರ್ಷಗಳ ಭಾಷೆ ಯಾವುದಾದರೂ ಇದೆ ಎಂದರೆ ಅದು ಕನ್ನಡ ಭಾಷೆ. ಬಹುಶಃ ಹಿಂದಿ 4 ನೂರು 5 ನೂರು ವರ್ಷಗಳಾಗಿರಬಹುದು, ಇಂಗ್ಲೀಷ್ ಬಂದು 6 ನೂರು 7 ನೂರು ವರ್ಷಗಳಾಗಿರಬಹುದು. ಆದರೆ ಈ ಕನ್ನಡ ಭಾಷೆ ಪ್ರಾಚೀನವಾದಂಥ ಭಾಷೆ. ಈ ಬಗೆಗೆ ಬಹಳ ಅಭಿಮಾನದಿಂದ ಪಂಪ ಮಹಾಕವಿಯು 10ನೇ ಇಸವಿಯಲ್ಲಿ ಹೇಳಿದ್ದಾನೆ.'ಆರ್ ಅಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ನಗರಂ' ಎಂದು ಹೇಳಿ.

ಅಂದರೆ ಆ ಪಂಪ ಮಹಾಕವಿ ಕನ್ನಡ ಭಾಷೆಯ ಅಭಿಮಾನವನ್ನು ಆವತ್ತಿನ ದಿವಸವೇ ಹೇಳಿದ್ದಾನೆ. ಮತ್ತೆ 12ನೇ ಶತಮಾನದಲ್ಲಿ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಭಕ್ತಿ ಭಂಡಾರಿ ಬಸವಣ್ಣನವರು, ಅವರು ಆಡು ಭಾಷೆಯಲ್ಲಿ ನಾಡ ಆಡಳಿತ ಆಗಬೇಕೆಂದು ಅವರು ಹೇಳಿದ್ದಾರೆ. 15ನೇ ಶತಮಾನದಲ್ಲಿ ಕನಕ ಪುರಂದರದಾಸರು, ತಿಳಿ ಕನ್ನಡದಲ್ಲಿ ಸಾಮಾಜಿಕ ಹೋರಾಟದ ಬಗ್ಗೆ ಆವತ್ತಿನ ದಿವಸ ಹೇಳಿದ್ದಾರೆ. ಮತ್ತೆ ನಮ್ಮ ಈ ಕಾಲದಲ್ಲಿ ಕುವೆಂಪುರವರು 'ಕನ್ನಡಕ್ಕೆ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ' ಎಂದು ಹೇಳಿದ್ದಾರೆ. ಹೀಗೆ ಭಾಷೆಯ ಬಗೆಗೆ ಬಹಳ ಅಭಿಮಾನದಿಂದ ಉದ್ದಕ್ಕೂ ಕೂಡ ದಾರ್ಶನೀಕರು, ಸಾಹಿತಿಗಳು, ಕನ್ನಡದ ಬಗ್ಗೆ ದುಡಿದಂಥ ಮಹನೀಯರು ಹೇಳುತ್ತಲೇ ಬಂದಿದ್ದಾರೆ. ಮತ್ತೆ ಈ ನಾಡಿನ ಭಾಷೆಯ ಆಳ ಎಷ್ಟಿದೆ ಎಂದರೆ, ಈ ರಾಷ್ಟ್ರದ ಸಾರಸ್ವತ ಲೋಕದ ಪರಮೋಚ್ಚ ಪ್ರಶಸ್ತಿಯಾದ ಜ್ಞಾನ ಪೀಠ ಪ್ರಶಸ್ತಿ 5 ಜನ ಕನ್ನಡಿಗರಿಗೆ ಬಂದಿದೆ. ಯಾವ ಭಾಷೆಯಲ್ಲೂ ಕೂಡಾ ಇಷ್ಟು ಜನರಿಗೆ ಈ ಪ್ರಶಸ್ತಿ ಲಭ್ಯವಾಗಿಲ್ಲ. ಆದ್ದರಿಂದಲೇ ಈ ಕನ್ನಡ ಭಾಷೆ ಬಹಳ ಆಳವಾದ ಪ್ರಾಚೀನವಾದಂಥ ಭಾಷೆ. ಇದು ಒಂದು ಕಡೆ ಆದರೆ, ಈ ಜನಮನದಲ್ಲಿ ಸಾಮಾನ್ಯ ಜನರಲ್ಲಿ ಕನ್ನಡವನ್ನು ಕನ್ನಡಕ್ಕೆ ಕಿಚ್ಚು ಹಚ್ಚತಕ್ಕಂಥ ಕೆಲಸವನ್ನು ಮಾಡಿದಂಥ ಚಳುವಳಿಯು ಕೂಡ ಇವತ್ತಿನ ದಿವಸ ಈ ರಾಜ್ಯದಲ್ಲಿ ಆಗಿದೆ.

ಅದರಲ್ಲಿ ಬಿ.ಎಂ. ಶ್ರೀ ಯವರು, ಮ.ನಾ. ರಾಮಮೂರ್ತಿಯವರು, ಆ.ನ.ಕೃ. ಅವರು ಹೀಗೆ ಹಲವಾರು ಜನರು ಆವತ್ತು ಈ ಕನ್ನಡ ಚಳುವಳಿಯಲ್ಲಿ ಧುಮುಕಿ ಸಾಮಾನ್ಯ ಜನರಲ್ಲಿ ಕನ್ನಡದ ಬಗೆಗೆ ಅಭಿಮಾನವನ್ನು ಮೂಡಿಸಿ ಕನ್ನಡ ಭಾಷೆ ಈ ರಾಜಧಾನಿಯಲ್ಲಿ ಮತ್ತು ರಾಜ್ಯದಲ್ಲಿ ಉಳಿಸತಕ್ಕಂಥ ಕೆಲಸವನ್ನು ಅವರು ಮಾಡಿದ್ದಾರೆ. ನಾನು ಇದನ್ನು ಬಹಳ ಅಭಿಮಾನದಿಂದ ಹೇಳಿಕೊಳ್ಳುತ್ತೇನೆ, ನಾನೂ ಕೂಡ ರಾಜಕೀಯ ಪ್ರವೇಶ ಮಾಡಿದ್ದುದು ಈ ಕನ್ನಡ ಚಳುವಳಿ ಮೂಲಕವೇ. 1968ನೇ ಇಸವಿಯಲ್ಲಿ ವಾಟಾಳ್‌ನಾಗರಾಜ್‌ರವರ ನಾಯಕತ್ವದಲ್ಲಿ ನಾವೂ ಕೂಡ ಕೆಲಸ ಮಾಡಿ ಈ ರಾಜ್ಯದಲ್ಲಿ ಕನ್ನಡ ಸಾಮಾನ್ಯ ಜನರಲ್ಲಿ ಬೆರೆತು ಹೋಗತಕ್ಕಂಥ ಕೆಲಸವನ್ನು ಆವತ್ತಿನ ದಿವಸ ನಾವು ಮಾಡಿದ್ದೇವೆ ಅಧ್ಯಕ್ಷರೇ. ಮತ್ತೆ ಈ ನಾಡಿಗೆ ಮುಖ್ಯಮಂತ್ರಿಗಳಾಗಿ ಬಂದಂಥವರು ಕೂಡಾ ಮಾನ್ಯ ಶ್ರೀ ಹನುಮಂತಯ್ಯನವರು, ಈ ನಾಡ ದೇಗುಲವನ್ನು, ಈ ವಿಧಾನಸೌಧವನ್ನು ಕಟ್ಟಿಸಿ ಇಲ್ಲಿ ನೆಲೆಯಾಗಿ ನಿಲ್ಲಿಸತಕ್ಕಂಥ ವ್ಯವಸ್ಥೆ ಮಾಡಿದವರು; ಕನ್ನಡ ಇಲಾಖೆಯನ್ನು ರಚನೆ ಮಾಡಿದಂಥವರು.

ಆದಾದ ನಂತರ ಕರ್ನಾಟಕ ಏಕೀಕರಣಕ್ಕೆ ದುಡಿದಂಥ ಮಾನ್ಯ ಎಸ್. ನಿಜಲಿಂಗಪ್ಪನವರು, ಆದಾದ ನಂತರ ಮೈಸೂರು ಪ್ರಾಂತ್ಯ ಅಂತ ಇದ್ದದ್ದನ್ನು ಕರ್ನಾಟಕ ಎಂದು ನಾಮಕರಣ ಮಾಡಿದಂಥ ಶ್ರೀ ಡಿ.

ದೇವರಾಜ ಅರಸ್‌ರವರು, ತದನಂತರದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರೂ ಕೂಡ ಅವರ ಕಾಲದಲ್ಲಿ, ಜೀವರಾಜ ಆಳ್ವಾ ಅವರು ಕನ್ನಡ ಸಂಸ್ಕೃತಿ ಇಲಾಖೆ ಸಚಿವರಾಗಿದ್ದಾಗಲೂ ಕೂಡಾ ಈ ಸಂಸ್ಕೃತಿ ಇಲಾಖೆಗೆ ಹೆಚ್ಚಿನ ಹಣಕಾಸನ್ನು ಒದಗಿಸುವುದರೊಂದಿಗೆ ಈ ಇಲಾಖೆಯನ್ನು ಹೆಚ್ಚಿಗೆ ಬೆಳೆಯುವುದಕ್ಕೆ ಸಹಕಾರ ಮಾಡಿದ್ದಾರೆ. ಇಷ್ಟೆಲ್ಲಾ ಆದರೂ ಇವತ್ತು ಕನ್ನಡ ಆಡಳಿತ ಭಾಷೆ ಆಗಬೇಕೆಂದು ಹೇಳಿ ಉದ್ದಕ್ಕೂ ಹೇಳುತ್ತಾ ಬಂದಿದ್ದೇವೆ. ಎಲ್ಲಾ ಮುಖ್ಯ ಮಂತ್ರಿಗಳೂ ಹೇಳಿದ್ದಾರೆ. ಮತ್ತು ಈ ನಾಡಿನ ಜನರೆಲ್ಲರೂ ಕೂಡಾ ಅದನ್ನು ಹೇಳಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ಬಸವಣ್ಣನವರು 12ನೇ ಶತಮಾನದಲ್ಲೇ ಹೇಳಿದ್ದಾರೆ. ಯಾವ ಭಾಷೆ ಯಾವ ನಾಡಿನಲ್ಲಿ ಸಾಮಾನ್ಯ ಜನರು ಉಪಯೋಗ ಮಾಡುತ್ತಾರೋ ಆ ಭಾಷೆಯಲ್ಲಿ ಆಡಳಿತ ನಡೆದರೇನೇ ಆ ರಾಜ್ಯ ಉನ್ನತಿ ಕಾಣುತ್ತದೆ ಅನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದು ಅಷ್ಟೇ ಅಲ್ಲ ಈ ದೇಶವನ್ನು ಆಳಿದಂಥ ಬ್ರಿಟೀಷರು ಅವರು ಕನ್ನಡದಲ್ಲಿ ವ್ಯವಹಾರ ಮಾಡಿದ್ದಾರೆ. ಮಾನ್ಯ ಮಹದೇವ ಬಣಕಾರ್‌ರವರು, 'ಆಂಗ್ಲರ ಕಾಲದಲ್ಲಿ ಕನ್ನಡ ಆಡಳಿತ' ಅನ್ನತಕ್ಕಂಥದ್ದರ ಬಗ್ಗೆ ಒಂದು ದೊಡ್ಡ ಪುಸ್ತಕ ಬರೆದು ಬಹಳ ಉಲ್ಲೇಖಗಳನ್ನು ಅವತ್ತಿನ ದಿವಸ ಮಾಡಿದ್ದಾರೆ. ಅದರಲ್ಲಿ ಅವರು ಒಂದು ಮಾತನ್ನು ಹೇಳಿದ್ದಾರೆ. ಯಾವ ನಾಡಿನಲ್ಲಿ ಆ ಭಾಷೆಯ ಬಗೆಗೆ ಯಾರು ತಾತ್ಸಾರ ಮಾಡುತ್ತಾರೋ ಅವರು ಆ ನಾಡಿನಲ್ಲಿ ಇರುವುದಕ್ಕೆ ಯೋಗ್ಯರಲ್ಲ ಅನ್ನತಕ್ಕಂಥ ಮಾತನ್ನು ಅವತ್ತಿನ ದಿವಸ ಅವರು ಹೇಳಿದ್ದಾರೆ. ಭಾರತೀಯ ಭಾಷೆಗಳ ಬಗೆಗೆ ಭಾಷಾ ಪಾಂಡಿತ್ಯದ ಮೂಲಕ ಭಾರತೀಯ ಹೃದಯವನ್ನು ಗೆದ್ದಂಥ ಇಂಗ್ಲೀಷರು ಈ ನಾಡಿನಲ್ಲಿ ಕನ್ನಡದಲ್ಲಿ ಆಡಳಿತ ಮಾಡಿ ಹೋಗಿದ್ದಾರೆ. ಅದು ಅಷ್ಟೇ ಅಲ್ಲ ಟಿಪ್ಪೂ ಸುಲ್ತಾನ್ ಮತ್ತು ಹೈದರಾಲಿ ಅಂಥಹ ಮುಸಲ್ಮಾನ್ ದೊರೆಗಳು, ಮುಸಲ್ಮಾನ್ ಆಡಳಿತಗಾರರು ಕನ್ನಡದಲ್ಲಿ ವ್ಯವಹಾರ ಮಾಡಿದ್ದಾರೆ. ಅವರು ಶಂಕರಾಚಾರ್ಯರಿಗೆ ಕಾಗದ ಬರೆದಂಥ ಮಾಹಿತಿಗಳು 41 ಪತ್ರಗಳ ದಾಖಲೆಗಳು ಇವತ್ತಿನ ದಿವಸ ನಮ್ಮಲ್ಲಿ ಇವೆ. ಅಷ್ಟೇ ಅಲ್ಲ, ಮಹಾತ್ಮಾ ಗಾಂಧೀಜೀಯವರು ಒಂದು ಮಾತನ್ನು ಹೇಳಿದ್ದಾರೆ.

ಭಾರತೀಯ ಮಗು ತನ್ನ ತಂದೆಗೆ ಇಂಗ್ಲೀಷ್‌ನಲ್ಲಿ ಪತ್ರ ಬರೆಯುವುದನ್ನು ನೋಡಿದರೆ ನನ್ನ ಕಣ್ಣಿನಲ್ಲಿ ರಕ್ತಾಶ್ರು ಸುರಿಯುತ್ತದೆ ಅನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಮತ್ತೆ ಲಾಂಗ್ ಹಾರ್ನ್ ಅನ್ನತಕ್ಕಂಥ ಒಬ್ಬ ಇಂಗ್ಲೀಷನವನು ಹೇಳಿದ್ದಾನೆ. ಯಾವ ವಿದೇಶಿ ಭಾಷೆಯೂ ಮಾತೃ ಭಾಷೆಯ ಸ್ಥಾನವನ್ನು ಪಡೆಯಲಾರದು. ಸ್ವತಂತ್ರವಾದ ಆಲೋಚನಾ ಪದ್ಧತಿ ಸಂಕೀರ್ಣವಾದ ಭಾವಗಳ ಸಹಜ ಹಾಗೂ ಖಚಿತವಾದ ಅಭಿವ್ಯಕ್ತಿ ಸಾಮರ್ಥ್ಯಗಳೂ ಮಾತೃಭಾಷೆಯಲ್ಲೇ ಬೆಳೆಯಲು ಸಾಧ್ಯ ಎನ್ನತಕ್ಕಂಥ ವಿಚಾರವನ್ನು ಅವರು ಹೇಳಿದ್ದಾರೆ. ಇದರೊಂದಿಗೆ ಬಹಳಷ್ಟು ಜನ ಈ ನಾಡನ್ನು ಇಂಗ್ಲೀಷರು ಕನ್ನಡದಲ್ಲಿ ಜಜ್‌ಮೆಂಟ್‌ನ್ನು ಕೂಡ ಕೊಟ್ಟುಹೋಗಿದ್ದಾರೆ. ಅಧ್ಯಕ್ಷರೇ. ಅದರಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಆಡಳಿತದಲ್ಲಿ ಕನ್ನಡ ಎನ್ನತಕ್ಕಂಥಾದ್ದಾದಲ್ಲಿ ನಾನು ಎರಡನ್ನು ಇಲ್ಲಿ ಉದಾಹರಿಸಬೇಕೆಂದರೆ, 1864ನೇ ಇಸವಿಯಲ್ಲಿ ಅಲ್ಪಸಂಖ್ಯಾತರಾದ ಮುಸ್ಲಿಮ್‌ರ ಮಹಮದನ್ ಲಾ ಬಳಕೆಯಲ್ಲಿದ್ದ ಒಂದು ವ್ಯವಸ್ಥೆಗೆ ಸ್ಪಷ್ಟೀಕರಣ ನೀಡುವ ಇಂಡಿಯಾ ದೇಶದ ಗೌರ್ನರ್ ಜನರಲ್‌ರವರ ಅಧಿನಿಯಮ, ಇದು ಕನ್ನಡದಲ್ಲಿ ಆಗಿದೆ ಅಧ್ಯಕ್ಷರೇ, ಮತ್ತೆ ಶಿಡ್ಲಘಟ್ಟದ ಎಂ.ಎಲ್.ಎ. ರವರಾದ ಮುನಿಯಪ್ಪನವರು ಇಲ್ಲೇ ಇದ್ದಾರೆ. ಶಿಡ್ಲಘಟ್ಟದಲ್ಲಿ ಒಂದು ಮಸೀದಿ ಬಗ್ಗೆ ತೀರ್ಮಾನವನ್ನು ಅವತ್ತಿನ ದಿವಸ ಕನ್ನಡದಲ್ಲೇ ತೆಗೆದುಕೊಂಡಿದ್ದಾರೆ. ಆಗಿನ ಮುನ್ಸೀಫ್ ಕೋರ್ಟ್‌ನಲ್ಲಿ ಕನ್ನಡದ ಬಳಕೆಯಾಗಿತ್ತು. ಆ ನೋಟೀಸ್‌ನ್ನು ಯಾರು ಕೊಟ್ಟವರೆಂದರೆ, ಶಿವಜ್ಞಾನಂ ಪಿಳ್ಳೈ ಎಂಬ ತಮಿಳಿನ ಮುನ್ಸೀಫರು ಕನ್ನಡದಲ್ಲಿ ನೋಟೀಸ್‌ನ್ನು ಜಾರಿ ಮಾಡಿದ್ದಾರೆ.

ಹೀಗೆ ಕನ್ನಡದ ಬಳಕೆ ಇವತ್ತಿನ ದಿವಸದ್ದು ಅಲ್ಲ. ಹಲವಾರು ವರ್ಷಗಳಿಂದಲೂ ಕೂಡ ಅದನ್ನು ಮಾಡಿಕೊಂಡು ಬಂದಿದ್ದಾರೆ. ನಾನು ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ನಾವು ಬಹಳಷ್ಟು ಜನ ಕನ್ನಡ ಕನ್ನಡ ಅನ್ನುತ್ತೇವೆ. ಏತಕ್ಕೆ ಕನ್ನಡದಲ್ಲಿ ಆಡಳಿತ ಆಗಬೇಕೆಂದು ಮೂಗು ಮುರಿಯುತ್ತೇವೆ.

ಇಲ್ಲಿ ಇರತಕ್ಕಂಥ 224ಜನರು ಈ ಮನೆಯ ಸದಸ್ಯರು ನಾವೆಲ್ಲರೂ ಕೂಡ ಬಹುತೇಕ ನಾವು ಓದುವಾಗ ಡಿಗ್ರಿ ಇರಬಹುದು, ಪ್ರೀ ಯೂನಿವರ್ಸಿಟಿ ಇರಬಹುದು, ಮತ್ತೊಂದು ಇರಬಹುದು, ನಾವೆಲ್ಲಾ ಫೇಲ್ ಆಗಿರುವುದು ಯಾವುದರಲ್ಲಿ ಅಂದರೆ ಇಂಗ್ಲೀಷ್‌ನಲ್ಲಿ. ನೂರಕ್ಕೆ ತೊಂಭತ್ತು ಭಾಗ ಎಲ್ಲರೂ ಕುಳಿತುಕೊಂಡು ಉರು ಹೊಡೆಯುತ್ತೇವೆ " Once upon a time there was a king, once upon a time there was a king" ಈ ರೀತಿಯಾಗಿ ದೀಪವನ್ನು ಇಟ್ಟುಕೊಂಡು ರಾತ್ರಿ ಎಲ್ಲಾ ಉರು ಹೊಡೆದು ಬರೆಯುವಂತಹ ಭಾಷೆ. ನಾವು ಅದರಲ್ಲಿ ಇವತ್ತಿನ ಆಡಳಿತವನ್ನು ಮಾಡಲಿಕ್ಕೆ ನಾವು 224 ಜನವೂ ಹೋಗುತ್ತಿದ್ದೇವೆ. ಯಾವ ಭಾಷೆ ನಾವು ಓದುವಾಗ ತೊಡಕಾಗಿತ್ತೋ ಯಾವ ಭಾಷೆ ನಮಗೆ ಅರಿವೇ ಇಲ್ಲವೋ, ಆ ತೊಡಕಾದ ಭಾಷೆಯನ್ನು ಇಟ್ಟುಕೊಂಡು ಜನರ ಸಮಸ್ಯೆಗಳನ್ನು ಪರಿಹಾರ ಮಾಡತಕ್ಕಂಥದ್ದು ಎಷ್ಟು ಸಮಂಜಸ ಅನ್ನತಕ್ಕಂಥದ್ದನ್ನು ನಾವು ಯೋಚನೆ ಮಾಡಬೇಕು.

ಆದ್ದರಿಂದ ಅಧ್ಯಕ್ಷರೇ, ಇವತ್ತಿನ ದಿವಸ ಕನ್ನಡ ಭಾಷೆ ಆಡಳಿತ ಭಾಷೆಯಾಗಿ ಬರಲೇಬೇಕು. ಅದಕ್ಕೆಲ್ಲ 224 ಜನರೂ ಕೂಡ ಶಾಸಕರು ಒಕ್ಕೊರಲಿನಿಂದ ಹೇಳಲೇ ಬೇಕಾಗುತ್ತದೆ. ಇದನ್ನು ಅರಿತೇ ಪ್ರಸ್ತುತ ಮಾನ್ಯ ಮೊಯಿಲಿಯವರ ಸರ್ಕಾರವು ಏಪ್ರಿಲ್ ಒಂದನೇ ತಾರೀಖಿನಿಂದ ಕನ್ನಡದಲ್ಲಿ ನಾವು ಆಡಳಿತವನ್ನು ಸಂಪೂರ್ಣವಾಗಿ ಜಾರಿಗೆ ಕೊಡುತ್ತೇವೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ತಾಲ್ಲೂಕ್, ಜಿಲ್ಲಾಮಟ್ಟದಲ್ಲಿ ಈಗಾಗಲೇ ಆಗಿದೆ, ವಿಧಾನ ಸೌಧದ ಮಟ್ಟದಲ್ಲಿ ಇವತ್ತಿನ ದಿವಸ ಕನ್ನಡ ಬರಬೇಕು. ಏಕೆಂದರೆ ಈ ಗುಡಿ, ಈ ನಾಡಿನ ಗುಡಿ ನಮ್ಮ ಎಲ್ಲಾ ನರನಾಡಿಗಳು ಇಲ್ಲಿಂದ ಹರಿಯತಕ್ಕಂಥದ್ದು, ನಮ್ಮ ಎಲ್ಲಾ ಸುತ್ತೋಲೆಗಳು ಕೂಡ ಇಲ್ಲಿಂದಲೇ ಹೋಗತಕ್ಕಂಥದ್ದು, ನಮ್ಮ ಯಾವುದೇ ಇಲಾಖೆಯ ಆಯುಕ್ತರು ಅಥವಾ ಕಾರ್ಯದರ್ಶಿಗಳು ಅವರ ನಡವಳಿಗಳು ಎಲ್ಲಾ ಕನ್ನಡದಲ್ಲಿಯೇ ಇರಬೇಕು, ಆದ್ದರಿಂದ ಏಪ್ರಿಲ್ ಒಂದನೇ ತಾರೀಖಿನಿಂದ ಸಂಪೂರ್ಣವಾಗಿ ಕನ್ನಡ ಬಳಕೆಗ ನಾವೆಲ್ಲರೂ ಕೂಡ ಇವತ್ತು ಮನಸ್ಸು ಮಾಡಿ ಜಾರಿಗೆ ತರಲೇಬೇಕಾಗಿದೆ. ಇವತ್ತು ಅದಕ್ಕಾಗಿ ಪೂರಕವಾಗಿ ಸಾಹಿತ್ಯಗಳನ್ನು ಒದಗಿಸತಕ್ಕಂಥದ್ದು ಮತ್ತು ಅದಕ್ಕೆ ಏನೇನು ಅಗತ್ಯಗಳು ಬೇಕು ಅನ್ನತಕ್ಕದ್ದನ್ನು ಕೂಡ ಇವತ್ತು ಸರ್ಕಾರ ಹೆಚ್ಚಿನ ವಿಚಾರದಲ್ಲಿ ಅದರ ಬಗ್ಗೆ ಯೋಚನೆ ಮಾಡುತ್ತಿದೆ. ಇಂತಹ ಸಂದರ್ಭದಲ್ಲಿ ನಾನು ಕನ್ನಡವನ್ನು ಬರೆಯುವುದೇ ಇಲ್ಲ, ನಾನು ಕನ್ನಡವನ್ನು ಓದುವುದೇ ಇಲ್ಲ, ಇನ್ನು ಯಾರೋ ಕನ್ನಡದಲ್ಲಿ ಓದಲಿ ಅಂತ ಹೇಳತಕ್ಕಂಥ, ಯಾರೇ ಎತ್ತರದ ಮನುಷ್ಯ ಇರಬಹುದು, ಅದು ಅಜೀಜ್ ಸೇಠ್‌ರವರು ಇರಬಹುದು ಅಥವಾ ಮತ್ತೊಬ್ಬರು ಇರಬಹುದು, ಎಂದು ಹೇಳಿದರೆ ತಪ್ಪಾಗುತ್ತದೆ. ಈ ಸಂದರ್ಭದಲ್ಲಿ ನಮ್ಮ ನಾಡಿನಲ್ಲಿ ಬದುಕು ಮಾಡುತ್ತಿರತಕ್ಕಂಥ ಅಲ್ಪಸಂಖ್ಯಾತರಲ್ಲಿ ಬಹುಸಂಖ್ಯಾತರಾದ ಮುಸ್ಲಿಂ ಸಮಾಜದವರು 90 ಭಾಗ ಕನ್ನಡವನ್ನು ಬರೆಯುತ್ತಾರೆ.

ಕನ್ನಡವನ್ನು ಓದುತ್ತಾರೆ. ನಮ್ಮ ನಾಡಿನ ಮುಸಲ್ಮಾನ್ ಬಂಧುಗಳು ಕನ್ನಡದ ಅಭಿಮಾನಿಗಳು ನಮ್ಮ ನಾಡಿನ ಕನ್ನಡ ಸಾಹಿತ್ಯ ಅಕಾಡಮಿಯ ಅಧ್ಯಕ್ಷರು ನಿಸ್ಸಾರ್ ಅಹಮದ್ ಅಂತ ಈ ನಾಡಿನ ಕನ್ನಡ ಸಾಹಿತ್ಯ ಅಕಾಡಮಿಯ ಅಧ್ಯಕ್ಷರಾಗಿದ್ದರು. ಮತ್ತೆ ಸುಮಾರು ಜನ ಇದ್ದಾರೆ, ಅಬ್ದುಲ್ ಮಜೀದ್ ಖಾನ್ ಅಂತ ಒಬ್ಬ ಕವಿ; ಅಕ್ಬರ್‌ಅಲಿ, ನಮ್ಮಲ್ಲಿ ಎಂ.ಎಲ್.ಸಿ ಆಗಿದ್ದವರು. ಮಾನ್ಯ ಇದಿನಬ್ಬನವರು ಎಷ್ಟು ಸ್ವಚ್ಛವಾಗಿ ಕನ್ನಡವನ್ನು ಮಾತನಾಡುತ್ತಾರೆ. ದಿವಂಗತ ಉಮರಬ್ಬ ಇವರು ಚಲುವ ಕನ್ನಡ ನಾಡು ಅನ್ನುವುದರ ಮೇಲೆ ಬಹಳ ಚೆನ್ನಾಗಿ ಈ ಸದನದಲ್ಲಿ ಮಾತನಾಡಿದಂತವರು, ಸಾರಾ ಅಬೂಬೇಕರ್, ರಮ್‌ಜಾನ್ ದರ್ಗಾ, ಕರೀಮ್ ಖಾನ್, ಇವರೆಲ್ಲಾರೂ ಕನ್ನಡನಾಡಿನಲ್ಲಿ ಕನ್ನಡದ ಬಗ್ಗೆ ಸಾಹಿತ್ಯವನ್ನು ಬರೆದು ಕವಿತೆಯನ್ನು ಬರೆದು, ಮತ್ತು ಪ್ರಶಸ್ತಿಯನ್ನು ತೆಗೆದುಕೊಂಡಂತಹವರನ್ನು ನಾವು ಬಹಳ ಜನರನ್ನು ನೋಡಿದ್ದೇವೆ. ಇವತ್ತು ನಮ್ಮ ಮಾನ್ಯ ಎಸ್.ಎಂ. ಯಾಹ್ಯರವರು ಕನ್ನಡದಲ್ಲಿ ಉತ್ತರವನ್ನು ಕೊಟ್ಟರು. ನಮ್ಮ ಮಾನ್ಯ ಸಗೀರ್ ಅಹಮದ್‌ರವರು ಮಂತ್ರಿಯವರು ಇದ್ದಾರೆ. ನಮ್ಮ ಮಾನ್ಯ ನಿಸ್ಸಾರ್ ಅಹಮದ್ ಮಂತ್ರಿಯವರು ಇದ್ದಾರೆ. ಎಲ್ಲರೂ ಕೂಡ ಇವತ್ತಿನ ದಿವಸ ಕನ್ನಡದ ಬಗ್ಗೆ ಅಭಿಮಾನವನ್ನು

ಇಟ್ಟುಕೊಂಡಿದ್ದಾರೆ. ಒಂದು ದೌರ್ಭಾಗ್ಯ ಅಂದರೆ ಇವತ್ತು ಕನ್ನಡ ಮಂತ್ರಿಯ ಮೇಲೆ ಒಂದು ರೂಪಾಯಿಗೆ ನ್ಯಾಯಾಲಯಕ್ಕೆ ಹೋಗಿ ಮಾನನಷ್ಟ ಹಾಕುತ್ತೇವೆ.

ಅಂತ ಅಂದರೆ ಇದು ಕನ್ನಡ ಮಂತ್ರಿಯ ಒಬ್ಬನ ಬಗೆಗೆ ಒಂದು ರೂಪಾಯಿಯ ಮಾನನಷ್ಟ ಅಲ್ಲ. ನಾಲ್ಕೂವರೆ ಕೋಟಿ ಕನ್ನಡಿಗರ ವಿರುದ್ಧ ಆಗತಕ್ಕಂಥ ಮಾನನಷ್ಟ ಮೊಕದ್ದಮೆ ಅನ್ನುವುದನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ. ನಾನು ಬಹಳ ಗಟ್ಟಿಯಾಗಿ ಹೇಳಬೇಕಾಗುತ್ತದೆ. ಇನ್ನು ವಾಸ್ತವಿಕತೆಯ ಹತ್ತಿನ ಹೋಗಬೇಕು. ಬಹಳ ದಿವಸ ಇದನ್ನು ಮುಚ್ಚಿಡಲಿಕ್ಕೆ ಆಗುವುದಿಲ್ಲ. ಅದು ಯಾರೇ ಆಗಲಿ, ನಾವು ಯಾರು ಕೂಡ ಇವತ್ತಿನ ದಿವಸ ಮಂತ್ರಿಯಾಗಲಿ, ಶಾಸಕರಾಗಲಿ, ನಾವು ಯಾರೂ ಗೌರವಧನದಿಂದ ಕೆಲಸ ಮಾಡುತ್ತಿಲ್ಲ. ನಾವೆಲ್ಲಾರೂ ಸಂಬಳವನ್ನು ತೆಗೆದುಕೊಳ್ಳುತ್ತಿದ್ದೇವೆ. ನಾವೆಲ್ಲಾ ಟಿ.ಎ. ಯನ್ನು ತೆಗೆದುಕೊಳ್ಳುತ್ತಿದ್ದೇವೆ. ಅದು ಯಾರದ್ದು? ಈ ಕನ್ನಡ ನಾಡಿನ ಬೆವರಿನ ಶ್ರಮದ ಉಪ್ಪು ಅದನ್ನು ನಾವು ತಿನ್ನುತ್ತಿದ್ದೇವೆ. ಉಪ್ಪುಂಡ ಜನ 40 ವರ್ಷವಾದರೂ ಕೂಡ ನಾನು ಕನ್ನಡವನ್ನು ಕಲಿಯುವುದಿಲ್ಲ. ನಾವು ಮಾನನಷ್ಟ ಮೊಕದ್ದಮೆಯನ್ನು ಹೂಡುತ್ತೇವೆ ಅಂತ ಹೇಳಿದರೆ ಈ ನಾಡಿನ ಜನ ಅದನ್ನು ಸಹಿಸಬೇಕಾ ? ಯಾವ ಅಧಿಕಾರಿಗೆ ಕನ್ನಡ ಬರುವುದಿಲ್ಲವೋ ಯಾವ ಚುನಾಯಿತ ಪ್ರತಿನಿಧಿ ಅವನಿಗೆ ಕನ್ನಡ ಬರುವುದಿಲ್ಲವೋ ಅವರು ಈ ರಾಜ್ಯದಲ್ಲಿ ಇರುವುದಕ್ಕೆ ನಾಲಾಯಕ್ಕು ಅಂತ ಹೇಳತಕ್ಕದ್ದನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ. ಕನ್ನಡವನ್ನು ಆಡಳಿತಭಾಷೆಯನ್ನಾಗಿ ಮಾಡುವ ದೃಷ್ಟಿಯಲ್ಲಿ ನಮ್ಮೆಲ್ಲರ ಸಹಕಾರ ಅಗತ್ಯವಾಗಿ ಆಗಬೇಕಾಗಿದೆ ಅನ್ನತಕ್ಕಂಥ ಮಾತನ್ನು ಹೇಳುತ್ತೇನೆ.

1993 ಏಪ್ರಿಲ್ ಒಂದನೇ ತಾರೀಖಿನಿಂದ 1994ರ ಏಪ್ರಿಲ್ ಒಂದರ ತನಕ ಕನ್ನಡ ಜಾಗೃತಿ ವರ್ಷ ಅಂತ ನಾವು ಸಾರುತ್ತಿದ್ದೇವೆ. ಏಪ್ರಿಲ್ ಒಂದನೇ ತಾರೀಖಿನಿಂದ ಕನ್ನಡವನ್ನು ಜಾರಿಗೆ ತರುತ್ತೇವೆ. ನಮ್ಮ ಅಧಿಕಾರಿಗಳು ಬಹಳ ಜನ ಇದ್ದಾರೆ. ನಮ್ಮ ಕಾರ್ಯದರ್ಶಿ ಚಿರಂಜೀವಿ ಸಿಂಗ್‌ರವರು ಪಂಜಾಬಿನವರು, ಅವರು ಬಹಳ ಚೆನ್ನಾಗಿ ಕನ್ನಡದಲ್ಲಿ ಮಾತನಾಡುತ್ತಾರೆ. ಬರೆಯುತ್ತಾರೆ, ನಮ್ಮ ಮುಖ್ಯ ಕಾರ್ಯದರ್ಶಿಯವರಾದ ಮಾನ್ಯ ಲಿನ್‌ರವರು ಅವರೂ ಕೂಡ ಕನ್ನಡದಲ್ಲಿ ಸ್ಪಷ್ಟವಾಗಿ ಮಾತನಾಡುತ್ತಾರೆ. ಕನ್ನಡದಲ್ಲಿ ಬರೆಯುತ್ತಾರೆ. ಪಾರ್ಥಸಾರಥಿಯವರು, ಬಿ.ಆರ್. ಪ್ರಭಾಕರ್‌ರವರು, ಬಹಳಷ್ಟು ಜನ ಈ ನಾಡಿನ ಐ.ಎ.ಎಸ್, ಐ.ಪಿ.ಎಸ್ ಅಧಿಕಾರಿಗಳು, ಕವಿಗಳು ಇದ್ದಾರೆ, ಸಾಹಿತಿಗಳು ಇದ್ದಾರೆ, ಕನ್ನಡದಲ್ಲಿಯೇ ಐ.ಎ.ಎಸ್, ಐ.ಪಿ.ಎಸ್. ಅನ್ನು ಪಾಸು ಮಾಡಿರತಕ್ಕಂಥವರು ಇದ್ದಾರೆ. ಅವರನ್ನು ತೆಗೆದುಕೊಂಡು ಬಂದು ನಮ್ಮ ಆಯುಕ್ತರನ್ನಾಗಿ ಮಾಡಬೇಕು. ಇವತ್ತು 21 ಇಲಾಖೆಯಲ್ಲಿ ಇರತಕ್ಕಂಥ ಮುಖ್ಯ ಆಡಳಿತಗಾರರಲ್ಲಿ ಯಾರಿಗೆ ಕನ್ನಡ ಬರುವುದಿಲ್ಲ ಅವರಿಗೆ ಒಂದನೇ ತಾರೀಖಿನಿಂದ ಇಲ್ಲಿ ವಿಧಾನಸೌಧದಲ್ಲಿ ಅವರಿಗೆ ಕನ್ನಡ ಶಾಲೆಯನ್ನು ತೆರೆಯಲಿಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಏಪ್ರಿಲ್ ಒಂದನೇ ತಾರೀಖಿನಿಂದಲೇ ಪ್ರಾರಂಭ ಮಾಡುತ್ತೇವೆ. ಏಪ್ರಿಲ್, ಮೇ, ಜೂನ್, ಈ ಮೂರು ತಿಂಗಳಲ್ಲಿ ಅವರು ಕನ್ನಡವನ್ನು ಕಲಿಯಬೇಕು.

ಮೂರು ತಿಂಗಳಲ್ಲಿ ಅವರು ಕನ್ನಡವನ್ನು ಕಲಿತು ಕನ್ನಡದಲ್ಲಿ ವ್ಯವಹರಿಸಲಿಲ್ಲ ಅಂತ ಅಂದರೆ ಅವರು ಈ ವಿಧಾನಸೌಧದಲ್ಲಿ ಇರಲಿಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ ಕನ್ನಡ ನಾಡಿನ ಈ ಗುಡಿ ಈ ವಿಧಾನಸೌಧದ ಮೂಲಕವೇ ಕನ್ನಡಿಗರ ನರನಾಡಿ. ಈ ಸರ್ಕಾರ ತೆಗೆದುಕೊಳ್ಳತಕ್ಕಂಥ ಜನಪರ ಕಲ್ಯಾಣ ಕಾರ್ಯಕ್ರಮಗಳು ಆ ಜನರಿಗೆ ತಲುಪಬೇಕಾದರೆ ಇಲ್ಲಿಂದಲೇ ಕನ್ನಡ ಹೋಗಬೇಕಾಗುತ್ತದೆ. ಆದ್ದರಿಂದ ದಯಮಾಡಿ...

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಜೀಜ್ ಸೇಠ್‌ರವರ ಬಗ್ಗೆ...

ಶ್ರೀ ಹೆಚ್. ವಿಶ್ವನಾಥ್:- ಮಾನ್ಯ ಅಜೀಜ್ ಸೇಠ್‌ರವರ ವಿಚಾರವನ್ನು ನೋಡುವುದಕ್ಕೆ ಜನರು

ಇದ್ದಾರೆ. ಮಾನ್ಯ ಅಜೀಜ್ ಸೇಠ್‌ರವರಿಗೆ ಬಹಳ ವಯಸ್ಸಾಗಿದೆ. ಅವರು ಕಲಿಯಲೇ ಬೇಕಾಗಿದೆ. ನಮ್ಮ ಮಾನ್ಯ ಪ್ರಭಾಕರ್ ರಾಣೆಯವರು ಇಲ್ಲ, ವಯಸ್ಕರ ಶಿಕ್ಷಣಕ್ಕೆ ಅವರು ಹೋಗಿ ಕನ್ನಡವನ್ನು ಕಲಿಯಲಿ. ಆದ್ದರಿಂದ ಕನ್ನಡ ಆಡಳಿತ ಭಾಷೆಯಾಗಿ ಜಾರಿಗೆ ಬರತಕ್ಕಂಥ ವಿಚಾರದಲ್ಲಿ ನಾವೆಲ್ಲರೂ, ಇಡೀ ಕನ್ನಡ ನಾಡಿನ ಅಧಿಕಾರಿಗಳಾಗಲಿ, ಚುನಾಯಿತ ಪ್ರತಿನಿಧಿಗಳಾಗಲಿ, ಜನಸಾಮಾನ್ಯರಾಗಲಿ, ಹೆಚ್ಚಿನ ಒತ್ತನ್ನು ಇದಕ್ಕೆ ಕೊಡಬೇಕೆನ್ನತಕ್ಕ ಪ್ರಾರ್ಥನೆಯನ್ನು ನಾನು ಈ ಮೂಲಕ ಮಾಡುತ್ತೇನೆ.

ಇನ್ನು ಸಂಸ್ಕೃತಿ ಬಗೆಗೆ ಮಾತನಾಡುತ್ತಾ, ಮಾನ್ಯ ಜೀವರಾಜ್ ಆಳ್ವರವರು ಮತ್ತು ಇನ್ನೂ ಬಹಳ ಮಾನ್ಯ ಸದಸ್ಯರುಗಳು ಒಂದು ಸಲಹೆಯನ್ನು ಕೊಟ್ಟರು. ಕನ್ನಡ ನಾಡಿನ ಸಂಸ್ಕೃತಿಯ ಬಗ್ಗೆ ಒಂದು ಸಮಗ್ರವಾದ ನೀತಿಯನ್ನು ತರಬೇಕು ಅನ್ನತಕ್ಕ ವಿಚಾರದಲ್ಲಿ ಸಲಹೆಯನ್ನು ಕೊಟ್ಟರು. ಅದರಲ್ಲಿ ಒಂದು ಏಕ ಸದಸ್ಯ ಆಯೋಗವನ್ನು ಕೂಡ ತಾವು ಮಾಡಬೇಕು, ಮಾನ್ಯ ವಾಟಾಳ್‌ನಾಗರಾಜರವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಮಾನ್ಯ ಜೀವರಾಜ್‌ಆಳ್ವರವರು ಮಾನ್ಯ ಸಿಂಧ್ಯರವರು, ಮಾತನಾಡುತ್ತಾ ಹೇಳಿದರು. ಇದನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಪ್ರಸ್ತಾಪ ಮಾಡುತ್ತೇನೆ. ಇವತ್ತು ಇದು ಆಗಬೇಕಾಗಿದೆ. ನಮ್ಮ ಕನ್ನಡ ಸಂಸ್ಕೃತಿ ಇಲಾಖೆಗೆ ಒಂದು ನೀತಿ ನಿಯಮ ಇವತ್ತಿನ ದಿವಸ ಇಲ್ಲ. ಹಾಗೆಯೇ ಇಲಾಖೆಯನ್ನು ನಡೆಸಿಕೊಂಡು ಬರುತ್ತಿದ್ದೇವೆ. ನೀತಿ ನಿಯಮ ಆಗಬೇಕಾಗಿದೆ. ಕನ್ನಡ ನಾಡಿನ ಸಾಂಸ್ಕೃತಿಕ ಆಂದೋಳನದಿಂದ ಸಾಮಾಜಿಕ ಪ್ರಗತಿಯು ಆಗಬೇಕಾಗಿದೆ ಎಂಬ ಮಾತನ್ನು ನಾವು ಒತ್ತಿ ಹೇಳುತ್ತಿದ್ದೇವೆ. ನಾನು ಹೆಗ್ಗೋಡಿಗೆ ಸುಬ್ಬಣ್ಣನವರ ನಾಟಕ ಕಂಪನಿಗೆ ಹೋಗಿದ್ದೆ; ಅಲ್ಲಿ ಇರುವುದು ನೀಲಕಂಠೇಶ್ವರ ನಾಟ್ಯ ಸಂಘ; (ನೀನಾಸಂ) ಸಾವಿರ ಹಾಡುಗಳ ಸರದಾರ ಹುಕ್ಕೇರಿ ಬಾಳಪ್ಪನವರು ಅಲ್ಲಿಗೆ ಭೇಟಿ ಕೊಟ್ಟು ಆ ರಿಜಿಸ್ಟರ್‌ನಲ್ಲಿ ಒಂದು ಮಾತನ್ನು ಬರೆದಿದ್ದಾರೆ.

ನೀನಾಸಂ ಎಂದರೆ ನೀಲಕಂಠೇಶ್ವರ ನಾಟ್ಯ ಸಂಘ ಇರಬಹುದು ಆದರೆ, ಅವರು ನನ್ನ ಅರ್ಥದಲ್ಲಿ ನೀನು ನಾನು ಸಮ ಎಂದು ಬರೆದಿದ್ದಾರೆ. ಅಂದರೆ ಸಾಂಸ್ಕೃತಿಕ ಆಂದೋಳನದ ಮೂಲಕ ಸಾಮಾಜಿಕ ಪರಿವರ್ತನೆಗೆ ಸಾಂಸ್ಕೃತಿಕ ಇಲಾಖೆ ಹೆಚ್ಚಿನ ಒತ್ತನ್ನು ಕೊಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈ ನಾಡಿನ ಸಾಂಸ್ಕೃತಿಕ ಪರಂಪರೆಯ ಪುನರುಜ್ಜೀವನಕ್ಕೆ ಈ ಇಲಾಖೆಯನ್ನು ಹೆಚ್ಚಾಗಿ ಶಕ್ತಿಯುತವನ್ನಾಗಿ ಮಾಡಲು ತಮ್ಮೆಲ್ಲರ ಸಹಕಾರವನ್ನು ಕೇಳುತ್ತಾ ಮತ್ತು ಹಲವಾರು ಪ್ರಶಸ್ತಿಗಳ ಬಗ್ಗೆ ಏನು ಹಿಂದಿನಿಂದ ನಡೆದುಕೊಂಡು ಬರುತ್ತಿದೆ ಅದರ ಘನತೆಯನ್ನು ಸಾರ್ವಭೌಮತ್ವವನ್ನು ನಾನು ಎತ್ತಿ ಹಿಡಿಯುವುದಕ್ಕೆ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ನನ್ನ ಇಲಾಖೆ ಮೂಲಕ ಸಂಸ್ಕೃತಿ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ಪ್ರಕಟಣೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಕೇವಲ 35–40 ಪರ್‌ಸೆಂಟ್ ಕನ್ನಡ ಮಾತನಾಡುವ ಬೆಂಗಳೂರಿನಲ್ಲಿ ನಮ್ಮ ಹಣ ಎಲ್ಲಾ ಖರ್ಚಾಗುತ್ತಿದೆ. ಸಂಸ್ಕೃತಿ ಇಲಾಖೆ ಕೆಲಸ ಎಲ್ಲಿ ನಡೆಯುತ್ತಿದೆ ಎಂದರೆ ಬರೀ ಬೆಂಗಳೂರಿನಲ್ಲಿ ಅಷ್ಟೇ ಎನ್ನುವಂತಾಗಿದೆ. ಅಧ್ಯಕ್ಷರೇ, ನಾನು ಏಪ್ರಿಲ್ ಒಂದನೇ ತಾರೀಖಿನಿಂದ ಇದನ್ನು ವಿಕೇಂದ್ರಿಕರಣ ಮಾಡುತ್ತಿದ್ದೇನೆ. ಪ್ರತಿ ಜಿಲ್ಲೆಗೂ ಇಷ್ಟಿಷ್ಟು ಹಣ ವಿಲೇವಾರಿ ಮಾಡಿ ಅಲ್ಲಿಂದ ಆಡಳಿತ ಮಾಡಲು ಮತ್ತು ಕಾರ್ಯಕ್ರಮವನ್ನು ರೂಪಿಸಲು ಯೋಜನೆ ಮಾಡುತ್ತಿದ್ದೇನೆ. ಏಕೆಂದರೆ ಇವತ್ತು ಗುಲ್ಬರ್ಗಕ್ಕೆ ಅಥವಾ ದೂರದ ಬೀದರ್, ರಾಯಚೂರ್‌ಗೆ ಹೋದರೆ ಕನ್ನಡ ಮತ್ತು ಸಂಸ್ಕೃತಿ ಎಂದರೆ ಏನು, ಅದು ಎಲ್ಲಿದೆ, ಅದರ ಕಾರ್ಯಕ್ರಮ ಏನು ಎಂದು ಜನ ಕೇಳುತ್ತಿದ್ದಾರೆ. ಆದುದರಿಂದ ಅದನ್ನು ವಿಕೇಂದ್ರೀಕರಣ ಮಾಡುತ್ತಿದ್ದೇವೆ. ಮತ್ತು ಕನ್ನಡದ ಮಾತೃ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಗೊ.ರು. ಚೆನ್ನಬಸಪ್ಪನವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಬಹಳ ಅವಮಾನಕರ ಎಂದರೆ ಬಿ.ಎಂ. ಶ್ರೀಯವರ ಕಾಲದ ಓಬೀರಾಯನ ಕಾಲದ ಒಂದು ಮುದ್ರಣಾಲಯ ಅಲ್ಲಿದೆ. ಈ ನಾಡಿನ ಮಾತೃ ಸಂಸ್ಥೆಗೆ ಸರಿಯಾದ ಮುದ್ರಣಾಲಯ ಇಲ್ಲ. ಆದುದರಿಂದ ಈ ಸಾರಿ ಅದಕ್ಕೆ ಒಂದು ಮಾದರಿಯಾದ, ಆಧುನಿಕ

ಮುದ್ರಣಾಲಯವನ್ನು ಒದಗಿಸಿಕೊಟ್ಟು ಕನ್ನಡ ಸಾಹಿತ್ಯ ಪರಿಷತ್ತನ್ನು ಚೆನ್ನಾಗಿ ಕಟ್ಟುವುದನ್ನು ಒತ್ತು ಕೊಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಇದರ ಜೊತೆಗೆ ಧಾರವಾಡದಲ್ಲಿ ಇದಕ್ಕಿಂತ ಪುರಾತನವಾದ ಸಂಸ್ಥೆ ಪಾಟೀಲ್ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿರತಕ್ಕಂತ ವಿದ್ಯಾವರ್ಧಕ ಸಂಘ ಇರುವ ಉತ್ತರ ಕರ್ನಾಟಕ ಕನ್ನಡಿಗರ ಜೀವನಾಡಿ; ಅದಕ್ಕೂ ಕೂಡ ಹೆಚ್ಚಿನ ಹಣಕಾಸಿನ ವ್ಯವಸ್ಥೆಯನ್ನು ಮತ್ತು ಅಲ್ಲಿನ ಯಾವುದೇ ಕಾರ್ಯಕ್ರಮಗಳಿಗೆ ಸರ್ಕಾರದಿಂದ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡುತ್ತೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಿಂದೆ ಹನುಮಂತಯ್ಯನವರ ಕಾಲದಲ್ಲಿ ನಮ್ಮ ಮಹಾಕಾವ್ಯಗಳನ್ನು ಪಾಪ್ಯುಲರ್ ಎಡಿಷನ್ ಎಂದು ಮುದ್ರಿಸಿ ಕಡಿಮೆ ಬೆಲೆಗೆ ಮಾರುತ್ತಿದ್ದರು. ಅದನ್ನು ನಾವು ಪುನಃ ಪ್ರಾರಂಭ ಮಾಡುವ ದೃಷ್ಟಿಯಿಂದ ಕನ್ನಡದ ಮಹಾಕಾವ್ಯಗಳನ್ನು ಜನಸಾಮಾನ್ಯರಿಗೆ ಒದಗಿಸಿಕೊಡಲು ದೊಡ್ಡ ಕಾರ್ಯಕ್ರಮವನ್ನು ಕೂಡ ಹಾಕಿಕೊಂಡಿದ್ದೇವೆ. ಇದರ ಜೊತೆಗೆ ಸಣ್ಣ ಸಣ್ಣ ಪಾಕೆಟ್ ಪುಸ್ತಕಗಳನ್ನು ಅಂದರೆ, ಈ ಸಮಾಜದ ಸುಧಾರಣೆಗೆ ದುಡಿದಂಥ ಅಬ್ರಹಾಂ ಲಿಂಕನ್, ಮಾರ್ಟಿನ್ ಲೂಥರ್ ಕಿಂಗ್, ಅಂಬೇಡ್ಕರ್, ಬಸವೇಶ್ವರರು, ಅಕ್ಕಮಹಾದೇವಿ, ಸರ್ವಜ್ಞ, ಕನಕದಾಸರು ಇನ್ನೂ ಮುಂತಾದವರು ಮಾಡಿರತಕ್ಕಂಥ ಮತ್ತು ವಿಶ್ವಕ್ಕೆ ಹೇಳಿದಂಥ ಮಾನವ ಸಂದೇಶಗಳ್ನು ಸಣ್ಣ ಸಣ್ಣ ಕೈಪಿಡಿಗಳಾಗಿ ಮಾಡಿ ಜನರು ಪಾಕೆಟ್‌ಗಳನ್ನು ಇಟ್ಟುಕೊಂಡು ಓದತಕ್ಕ ವ್ಯವಸ್ಥೆಯನ್ನು ಮಾಡತಕ್ಕಂಥ ಒಂದು ಬೃಹತ್ ಯೋಜನೆಯನ್ನು ಕೂಡ ನಾವು ಹಮ್ಮಿಕೊಳ್ಳುತ್ತೇವೆ. ಮತ್ತು ಸಂಸ್ಕೃತಿಯ ಪ್ರೋತ್ಸಾಹ, ಪ್ರಸಾರ ಸಲುವಾಗಿ ನಮ್ಮ ಈ ವಿಧಾನಸೌಧದ ಮುಂದೆ ನಾವು ಪ್ರತಿ ವಾರ ದೀಪ ಹಾಕುತ್ತೇವೆ. ಹಾಗೆಯೇ ಈ ನಗರದವರಿಗೆ ಎಲ್ಲೂ ಕೂಡ ಮನೋರಂಜನೆ ಇಲ್ಲದೇ ಇರುವುದರಿಂದ ಅವರು ಇಲ್ಲಿಗೆ ಬರಬೇಕು.

ಆದುದರಿಂದ ಇಲ್ಲಿ ಪ್ರತಿ 15 ದಿವಸಗಳಿಗೊಮ್ಮೆ ಹೆಸರಾಂತ ಕಲಾವಿದರನ್ನು ಕರೆಸಿ ಇಲ್ಲಿ ಒಂದು ಕಾರ್ಯಕ್ರಮ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಪ್ರಥಮ ಹಂತದಲ್ಲಿ 5 ಕಡೆ ಗುರುತು ಮಾಡಿದ್ದೇವೆ. ಬೆಂಗಳೂರಿನ ವಿಧಾನಸೌಧದ ಮುಂದೆ ಮತ್ತು ಹುಬ್ಬಳ್ಳಿಯ ಗಾಜಿನ ಮನೆ ಮತ್ತು ಗುಲ್ಬರ್ಗದ ಸಾರ್ವಜನಿಕ ಉದ್ಯಾನವನ, ಬೆಳಗಾವಿಯ ಸಾರ್ವಜನಿಕ ಉದ್ಯಾನವನ, ಮೈಸೂರಿನ ಅರಮನೆ ಹೀಗೆ 5 ಕಡೆ ರೂಪಿಸಿದ್ದೇವೆ. ನಂತರ ಇಡೀ ಜಿಲ್ಲೆಯಾದ್ಯಂತ ವಾರಕ್ಕೆ ಒಂದರಂತೆ ಜಿಲ್ಲೆಯ ಸಾರ್ವಜನಿಕ ಸ್ಥಳದಲ್ಲಿ ಮನರಂಜನೆ ಕಾರ್ಯಕ್ರಮ ಮಾಡುತ್ತೇವೆಂದು ಹೇಳುತ್ತೇನೆ. ಕೊನೆಯದಾಗಿ ಬೀದಿ ನಾಟಕಗಳು, ಇವತ್ತು ಬೀದಿ ನಾಟಕಗಳಿಗೆ ನಾವು ಹೆಚ್ಚು ಒತ್ತು ಕೊಡಬೇಕೆಂದು ನಾನು ಮನಸ್ಸು ಮಾಡಿದ್ದೇನೆ. ಏಕೆಂದರೆ ಅದರಲ್ಲಿ ರಾಜಕೀಯ ವಿಡಂಬನೆ ಇರಬಹುದು. ಅವರು ನಮ್ಮನ್ನು ಬಯ್ಯಲಿ; ಸರ್ಕಾರದಲ್ಲಿ ಏನು ನಡೆಯುತ್ತದೆ ಸಾರ್ವಜನಿಕ ರಂಗದಲ್ಲಿ ಏನು ನಡೆಯುತ್ತದೆ. ಈ ಸಮಾಜದಲ್ಲಿ ಏನೇನಾಗುತ್ತಿದೆ ಎನ್ನುವುದನ್ನು ಈ ಬೀದಿ ನಾಟಕದಲ್ಲಿ ಜನರಿಗೆ ಹೇಳುತ್ತಾರೆ. ಅದು ಸಾಮಾಜಿಕ ವಿಡಂಬನೆ ಇರಬಹುದು, ರಾಜಕೀಯ ವಿಡಂಬನೆ ಇರಬಹುದು. ಆದುದರಿಂದ ಬೀದಿ ನಾಟಕಗಳಿಗೆ ಹೆಚ್ಚಿನ ಒತ್ತನ್ನು ಕೊಡುವುದರ ಬಗ್ಗೆ ನಮ್ಮ ವಾಟಾಳ್ ನಾಗರಾಜ್, ಸಿಂಧ್ಯರವರು, ಆಳ್ವರವರು ಮತ್ತು ಹಲವಾರು ಶಾಸಕರು, ಪ್ರತಿಪಕ್ಷದ ಮುಂತಾದ ಶಾಸಕರೂ ಸಹ ಹೇಳಿದ್ದಾರೆ ಅಧ್ಯಕ್ಷರೇ,

ಅಧ್ಯಕ್ಷರೇ, ಇವೊತ್ತು ಬಹಳಷ್ಟು ಕಲಾವಿದರರು ಈ ನಾಡಿನ ಕಲೆಗಾಗಿ ದುಡಿದವರು ನಮ್ಮ ಹತ್ತಿರ ಬರುತ್ತಾರೆ. ಅವರು 25 ವರ್ಷದ ಫೋಟೋ ತೆಗೆದುಕೊಂಡು ಬರುತ್ತಾರೆ, ಅವರಿಗೆ 70 ವರ್ಷ ವಯಸ್ಸಾಗಿರುತ್ತದೆ. ನೋಡಿ ನಾವು ಹೇಗಿದ್ದೆವು ಎಂದು ಹೇಳಿದಾಗ ನನಗೆ ಬಹಳ ಬೇಜಾರಾಯಿತು. ಈ ನಾಡಿನ ಜನ ಕಲೆಯ ಸಲುವಾಗಿ ದುಡಿದು ಇವೊತ್ತು ಹೊಟ್ಟೆಗೆ ಇಲ್ಲದ ಪರಿಸ್ಥಿತಿಯಲ್ಲಿದ್ದಾರೆ. ನಮ್ಮ ಕರೀಂ ಖಾನರು ಎಲ್ಲೋ ಒಂದು ಸಣ್ಣ ಹೋಟೇಲಿನಲ್ಲಿ ಇರುತ್ತಿದ್ದಾರೆ ಇವೊತ್ತಿನ ದಿವಸ. ಬಹಳಷ್ಟು ಜನ ಅದೇ ತರಹದವರು, ನಮ್ಮ ವೈ. ಆರ್. ಸ್ವಾಮಿಯವರು ಎಷ್ಟು ಸಿನೇಮಾ ದಿಗ್ದರ್ಶನ ಮಾಡಿದ್ದಾರೆ. ಅವರು ಇವೊತ್ತಿನದಿವಸ ಎಲ್ಲೋ ಹೋಟೇಲಿನಲ್ಲಿದ್ದಾರೆ. ಇಂತಹ ಕಲೆಗಾರರು ಬಹಳಷ್ಟು ಜನರಿದ್ದಾರೆ.

ಅವರಿಗೆಲ್ಲಾ ಮಾಸಾಶನವನ್ನು ಕೊಡತಕ್ಕದ್ದನ್ನು ನಾವು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ಹೇಳಿರತಕ್ಕ ಗುರುಶಿಷ್ಯರ ಸಂಬಂಧ ಇದಕ್ಕೆ 15 ಲಕ್ಷ ರೂ.ಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೇವೆ. ಅದರಲ್ಲಿ ನಮ್ಮ ಪ್ರಾಚೀನ ಕಲೆಗಳು ಇವೊತ್ತು ನಶಿಸಿಹೋಗುತ್ತಿವೆ, ಇವೊತ್ತು ಗಂಗೂಬಾಯಿ ಹಾನಗಲ್ ಇರಬಹುದು ಅವರು ಕಲಿತಿರಕ್ಕಂಥ ಕಲೆ ಇವೊತ್ತು ಯಾರೂ ಹಣ ಕೊಟ್ಟು ಕಲಿಯಲೂ ಹೋಗದೇ ಇರಬಹುದು. ಆದ್ದರಿಂದ ಕಲಿಸುವ ಗುರುವಿಗೂ ಸಹ ವೇತನ; ಕಲಿಯುತಕ್ಕಂಥ ಶಿಷ್ಯನಿಗೂ ಕೂಡ ವೇತನ ಕೊಡತಕ್ಕಂಥ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಗ್ಗೆ ಕೊನೆಯದಾಗಿ ದೂರದರ್ಶನದ ಬಗ್ಗೆ ಬಹಳಷ್ಟು ಜನರು ಸದಸ್ಯರು ಮಾತನಾಡಿದ್ದಾರೆ. ಈ ಕನ್ನಡನಾಡಿನ ಭಾಷೆಯನ್ನು, ಕನ್ನಡನಾಡಿನ ಕಲೆಯನ್ನು ತಿರುಚುವಂತಹ ಕಾರ್ಯ ದೂರದರ್ಶನದಲ್ಲಿ ನಡೆಯುತ್ತಿದೆ, ಕನ್ನಡದ ಕಲೆಗೆ ಅವಮಾನ ಮಾಡತಕ್ಕಂಥ, ಕನ್ನಡದ ಭಾಷೆಗೆ ಅವಮಾನ ಮಾಡತಕ್ಕಂಥ ಪ್ರಯತ್ನವನ್ನು ದೂರದರ್ಶನ ಇನ್ನೂ ಮುಂದುವರಿಸಿದರೆ ನಾವು ಮುಂದಿನ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಈಗಾಗಲೇ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅವರಿಗೆ ಕಾಗದ ಬರೆದು ಅದನ್ನು ಸರಿಮಾಡಲಿಕ್ಕೂ ಸಮಯ ಹೆಚ್ಚಿಗೆ ಕೊಟ್ಟಿದ್ದಾರೆ. ಇನ್ನೂ ಒಂದು ತಿಂಗಳ ಕಾಲಾವಕಾಶ ಕೊಡುತ್ತೇವೆ. ಇದು ಆಗಲಿಲ್ಲ ಎಂದರೆ, ಹಾಗೂ ಇದು ಮುಂದುವರೆದರೆ ಈ ದೂರದರ್ಶನದ ಬಾಗಿಲು ಹಾಕತಕ್ಕಂಥ ನಾಯಕತ್ವವನ್ನು ಕನ್ನಡ ಸಂಸ್ಕೃತಿ ಇಲಾಖೆಯ ಮಂತ್ರಿಯೇ ವಹಿಸಬೇಕಾಗುತ್ತದೆ, ಅದನ್ನು ದೂರದರ್ಶನದವರು ತ್ವರಿತವಾಗಿ ಗಮನಿಸಿ ಸರಿಮಾಡಬೇಕೆಂದು ಹೇಳಿ ಈ ಸದನದಲ್ಲಿ ನಾಲ್ಕೂವರೆ ಕೋಟಿ ಕನ್ನಡಿಗರ ಪರವಾಗಿ ನಾನು ಎಚ್ಚರಿಕೆಯನ್ನು ಅವರಿಗೆ ಕೊಡಬೇಕಾಗುತ್ತದೆ.

ಇನ್ನು ಯುವಜನ ಸೇವಾ ಕ್ರೀಡಾ ಇಲಾಖೆ, ಈಗಾಗಲೇ ಮುಖ್ಯಮಂತ್ರಿಗಳು ತಮ್ಮ ಆಯವ್ಯಯದಲ್ಲಿ ಹೇಳಿದ ಪ್ರಕಾರ ಗುಲ್ಬರ್ಗಾದಲ್ಲಿ 116 ಲಕ್ಷ ರೂ.ಗಳ ವಿವಿಧೋದ್ದೇಶ ಕ್ರೀಡಾಂಗಣವನ್ನು ಕಟ್ಟುತ್ತಿದ್ದೇವೆ. ಅದರ ಪ್ರಾರಂಭೋತ್ಸವ ಹಾಗೂ ಶಂಕುಸ್ಥಾಪನೆ ಮುಂದಿನ ತಿಂಗಳಲ್ಲಿ ನಾವು ನೆರವೇರಿಸಲಿದ್ದೇವೆ. ಇದರ ಜೊತೆಗೆ ಕೇಂದ್ರ ಸರ್ಕಾರದ ಸಹಾಯದಿಂದ ನಾಲ್ಕು ಜಿಲ್ಲೆಗಳಲ್ಲಿ 25 ಲಕ್ಷ ರೂಪಾಯಿ ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣವನ್ನು ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಂಡು ಅದರಲ್ಲಿ ವಿಭಾಗಕ್ಕೆ ಒಂದರಂತೆ ತುಮಕೂರು, ಕಾರವಾರ, ದಕ್ಷಿಣ ಕನ್ನಡ, ರಾಯಚೂರು ಈ ನಾಲ್ಕು ಜಿಲ್ಲೆಗಳಲ್ಲಿ ಕೂಡ ತಲಾ 25 ಲಕ್ಷ ರೂ.ಗಳ ಖರ್ಚಿನಲ್ಲಿ ವಿವಿಧೋದ್ದೇಶ ಒಳಾಂಗಣ ಕ್ರೀಡಾಂಗಣ ನಾವು ನಿರ್ಮಾಣ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇನ್ನು ವಿದ್ಯಾನಗರ - ಯುವಕ ಅಭಿವೃದ್ಧಿ ಸಂಸ್ಥೆಯನ್ನು ಮುಂದಿನ ಆಗಸ್ಟ್ ಹದಿನೈದನೇ ತಾರೀಖಿನಿಂದ ನಾವು ಪ್ರಾರಂಭ ಮಾಡುತ್ತಿದ್ದೇವೆ. ಈ ಮುಖಂಡತ್ವ ಬೆಳೆಸತಕ್ಕಂಥ ಮತ್ತು ವ್ಯಕ್ತಿಯ ವಿಕಾಸ ಯೋಜನೆಯನ್ನು ಕೂಡ ಆಯ್ದ ಯುವಕರಿಗೆ ಕೊಡತಕ್ಕಂಥ, ಗ್ರಾಮಾಂತರ ಪ್ರದೇಶದ ಪ್ರತಿಭೆಯನ್ನು ಸಮರ್ಥವಾಗಿ ಬೆಳೆಸಿಕೊಳ್ಳುವುದಕ್ಕೆ ಆ ವಿದ್ಯಾನಗರ ಆ ಸಂಸ್ಥೆಯ ಮೂಲಕ ಮಾಡುತ್ತೇವೆ ಎನ್ನತಕ್ಕಂಥ ಮಾತು ಹೇಳುತ್ತೇನೆ. 16 ಸಾವಿರ ಹಳ್ಳಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಯುವಕ ಯುವತಿ ಮಂಡಲಗಳಿವೆ. ಈಗ ಪ್ರಾಥಮಿಕ ಹಂತದಲ್ಲಿ 500 ಮಂಡಲಗಳನ್ನು ತೆಗೆದುಕೊಂಡು ಅವರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಟ್ಟು ಇವೊತ್ತು ಪ್ರತಿ ತಾಲ್ಲೂಕಿಗೂ ಕೂಡ ಒಬ್ಬೊಬ್ಬ ಕೋಚನ್ನು ನಾವು ನೇಮಕ ಮಾಡುತ್ತಿದ್ದೇವೆ. ಅಲ್ಲಿಯ ಮಕ್ಕಳಿಗೆ ಬೇರೆ ಬೇರೆ ತರಹ ತರಬೇತಿ ಕೊಡುವುದಕ್ಕೆ ಅದು ಅನುಕೂಲವಾಗುತ್ತದೆ ಎನ್ನತಕ್ಕಂಥ ವಿಚಾರದಲ್ಲಿ ಮಾಡಿ ಅವರಿಗೆ ಸ್ಪೋರ್ಟ್ಸ್ ಕಿಟ್ಸ್, ಯಾವ ಯಾವ ಉಪಕರಣ ಕೊಡಬೇಕು ಅದನ್ನು ಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ. ಇನ್ನು ಕೆಲವು ಮಕ್ಕಳು ಬೆಳಿಗ್ಗೆಯಿಂದ ರನ್ನಿಂಗ್ ರೇಸ್ ಮಾಡಿ ಯಾರದೋ ಮನೆಯ ಬಾಗಿಲು ತಟ್ಟುವಂಥ ವಿಚಾರ ಇವೊತ್ತಿನ ದಿವಸ ಇದೆ. ಅದಕ್ಕಾಗಿ ಸರ್ಕಾರ ಅಂತರ ಪ್ರತಿಭೆಗಳನ್ನು ಗುರುತಿಸಿ ಡೈಯಟ್ ಅಲೋಯನ್ಸ್ ಅವರಿಗೆ ಊಟ ಹಾಲಿನ ವ್ಯವಸ್ಥೆಯನ್ನು

ಮಾಡುತ್ತೇವೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತಾ ನನ್ನ ಇಲಾಖೆಗಳಾದ ಕನ್ನಡ ಮತ್ತು ಸಂಸ್ಕೃತಿ, ಯುವಜನ ಸೇವಾ, ಕ್ರೀಡಾ ಇವುಗಳ ಬೇಡಿಕೆಗಳಿಗೆ ಈ ಸದನ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಇನ್ನು ಮೂರು ತಿಂಗಳೊಳಗೆ ಐ.ಎ.ಎಸ್. ಅಧಿಕಾರಿಗಳು ಕನ್ನಡ ಕಲಿಯದೇ ಇದ್ದರೆ ಏನು ಮಾಡುತ್ತೀರಿ ? ಮೂರು ತಿಂಗಳೊಳಗಾಗಿ ಅಧಿಕಾರಿಗಳು ಕನ್ನಡ ಕಲಿಯಬೇಕು ಎಂದು ತಾವು ಹೇಳಿದಿರಿ; ಸಂತೋಷ. ಕಲಿಯದಿದ್ದರೆ ನಿಮ್ಮ ಸರ್ಕಾರದ ನೀತಿ ಏನು, ಎಂಬುದನ್ನು ಸ್ಪಷ್ಟವಾಗಿ ನೀವು ಹೇಳಬೇಕು. ಕಲಿಯದಿದ್ದರೆ ಅವರಿಗೆ ಏನು ಶಿಕ್ಷೆ ಅಥವಾ ಈ ರಾಜ್ಯದಿಂದ ಬೇರೆ ಕಡೆಗೆ ಕಳುಹಿಸುತ್ತೀರೋ; ಹೇಗೆ ? ಅದೆಲ್ಲವನ್ನೂ ಸ್ವಲ್ಪ ಹೇಳಬೇಕಲ್ಲಾ.

ಶ್ರೀ ಹೆಚ್. ವಿಶ್ವನಾಥ:– ನಾವು ಕಲಿಸುವ ಪ್ರಯತ್ನ ಮಾಡುತ್ತಿದ್ದೇವೆ. ಅವರು ಕಲಿಯದೇ ಇದರೆ ಮೂರು ತಿಂಗಳ ನಂತರ ನಾವು ನೀವು ಸೇರಿ ಒಂದು ಕಾರ್ಯಕ್ರಮ ಹಾಕಿಕೊಳ್ಳೋಣ.

ಅಧ್ಯಕ್ಷರು:– ಏನು ಕ್ಲಾರಿಫಿಕೇಷನ್ ಆಯಿತಲ್ಲಾ ಸಾಕು. ಅವರು ಕನ್ನಡ ಸಂಸ್ಕೃತಿ ಬಗ್ಗೆ ಇಷ್ಟು ಹೇಳಿದ್ದಾರೆ. ಅದರಲ್ಲಿ ಕ್ಲಾರಿಫಿಕೇಷನ್ ಕೇಳುವಂಥದ್ದು ಏನು ಉಳಿದಿಲ್ಲ.

ಡಾ।। ವೈ. ನಾಗಪ್ಪ:– ನಾನು ಒಂದೇ ಪ್ರಶ್ನೆಯನ್ನು ಕೇಳುತ್ತೇನೆ. ಈ ಒಂದು ನಾಡಿನಲ್ಲಿ 12ನೇ ಶತಮಾನದಲ್ಲಿ ಬಸವಣ್ಣನವರು ಜನಿಸಿರತಕ್ಕಂಥ ಈ ನಾಡು. ಅವರು ಈ ಒಂದು ತುಳಿತಕ್ಕೆ ಒಳಗಾಗಿರತಕ್ಕಂಥ ಜನಾಂಗವನ್ನು ಇವತ್ತು ಮೇಲುಕೀಳು ಹೋಗಲಾಡಿಸಬೇಕು ಎಂದು ಸತತವಾಗಿ ಪ್ರಯತ್ನಮಾಡಿದರು. ಇದೇ ಬಸವಣ್ಣನವರು ಐಕ್ಯವಾಗಿರತಕ್ಕಂಥ ಜಾಗ ಬಸವಕಲ್ಯಾಣದಲ್ಲಿ ಇವತ್ತು ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಇವತ್ತು ಉರ್ದುನಲ್ಲಿ ಕಾಗದಪತ್ರಗಳು ನೋಂದಾವಣೆಯಾಗುತ್ತಿದೆ. ಅದಕ್ಕೇನು ಮಂತ್ರಿಗಳು ಹೇಳುತ್ತಾರೆ ? ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಬಸವಕಲ್ಯಾಣದಲ್ಲಿ ಇವತ್ತು ಪತ್ರಗಳು ಉರ್ದುನಲ್ಲಿ ನೊಂದಾವಣೆಯಾಗುತ್ತಿದೆ. ಅದಕ್ಕೆ ತಮ್ಮ ಅಭಿಪ್ರಾಯವೇನು ?

† ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೇ, ಬೇಡಿಕೆಗಳ ಮೇಲೆ ಸನ್ಮಾನ್ಯ ಸದಸ್ಯರಾದ ಜಾಲಪ್ಪನವರು, ರಾಮಯ್ಯನವರು, ಬೈರೇಗೌಡರು, ರುಕ್ಮಯ್ಯ ಪೂಜಾರಿಯವರು, ಮಾಧುಸ್ವಾಮಿಯವರು, ಕೆ. ಕೃಷ್ಣರವರು, ಜೀವರಾಜ ಆಳ್ವರವರು, ಶ್ರೀಮತಿ ದಮಯಂತಿ ಬೋರೇಗೌಡರು, ವಾಟಾಳ್ ನಾಗರಾಜ್‌ರವರು, ಬನ್ನಿಕೋಡ್‌ರವರು ಮತ್ತು ಮನೋಹರ ಐನಾಪುರ ಈ ಸದಸ್ಯರೆಲ್ಲಾ ಬಹಳಷ್ಟು ದೀರ್ಘವಾಗಿ ಮಾತನಾಡಿ ಕೆಲವೊಂದು ಸಲಹೆಗಳು ಮತ್ತು ಕೆಲವೊಂದು ಟೀಕೆಗಳನ್ನು ಸಹಾ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳತಕ್ಕಂಥದ್ದು ಇಷ್ಟೆ. ಈ ರಾಷ್ಟ್ರದಲ್ಲಿ ಎಲ್ಲಕ್ಕಿಂತ ಹೆಚ್ಚು ವೈದ್ಯಕೀಯ ಕಾಲೇಜು, ನರ್ಸಿಂಗ್ ಹೋಂ, ಬಿ.ಫಾರ್ಮಸಿ, ಈ ಕಾಲೇಜುಗಳು ಹೆಚ್ಚು ಎಲ್ಲಿ ಕಂಡು ಬರುತ್ತವೆ ಎಂದರೆ ಅವು ಕರ್ನಾಟಕದಲ್ಲಿ ಎಂದು ನಾನು ಹೇಳಬೇಕಾಗುತ್ತದೆ. ಕರ್ನಾಟಕದಲ್ಲಿ ಹೆಚ್ಚು ಹೆಚ್ಚು ಈ ಕಾಲೇಜುಗಳಿಗೆ ಸರ್ಕಾರ ಉತ್ತೇಜನ ಕೊಟ್ಟಿದ್ದು ಉದ್ದೇಶ ಇದೆ. ಈ ರಾಜ್ಯದಲ್ಲಿರತಕ್ಕಂಥ ಜನತೆಗೆ ಬಹಳಷ್ಟು ಅನುಕೂಲತೆಗಳು ಸಿಗಲಿ, ವಿದ್ಯಾಕ್ಷೇತ್ರದಲ್ಲಿ ಮುಂದೆ ಬರಬೇಕು, ಈ ರಾಜ್ಯದಲ್ಲಿ ಇರತಕ್ಕಂಥ ಜನರಿಗೆ ಸವಲತ್ತುಗಳು ಸಿಗಬೇಕು ಎನ್ನುವ ದೃಷ್ಟಿಯಿಂದ ಬಹಳಷ್ಟು ಈ ಸಂಸ್ಥೆಗಳಿಗೆ ಸರ್ಕಾರ ಮನ್ನಣೆ ಕೊಟ್ಟಿದೆ. ಈ ಸಂಸ್ಥೆಗಳಲ್ಲಿ ಸುಮಾರು ನಾಲ್ಕು ಸರ್ಕಾರಿ ವೈದ್ಯಕೀಯ ಕಾಲೇಜುಗಳು, 15 ಖಾಸಗಿ ವೈದ್ಯಕೀಯ ಕಾಲೇಜುಗಳು, ಒಂದು ಸರ್ಕಾರಿ ದಂತ ಮಹಾವಿದ್ಯಾಲಯ, 41 ಖಾಸಗಿ ದಂತ ಮಹಾ ವಿದ್ಯಾಲಯ, ಒಂದು ಸರ್ಕಾರಿ ಔಷಧಿ ಶಾಸ್ತ್ರ ವಿದ್ಯಾಲಯ, 57 ಖಾಸಗಿ ಔಷಧಿ ಶಾಸ್ತ್ರ ವಿದ್ಯಾಲಯಗಳು, ಇವುಗಳು ಬಹಳಷ್ಟು ಇಲ್ಲಿವೆ. 82–83 ರಲ್ಲಿ ಸರ್ಕಾರಿ ಈ ನರ್ಸಿಂಗ್ ಕಾಲೇಜುಗಳನ್ನು ಮತ್ತು ಇನ್ನಿತರ ಕಾಲೇಜುಗಳು ಬಹಳಷ್ಟು ಕೊಟ್ಟಿದ್ದು ನಮ್ಮ ಗಮನಕ್ಕೆ ಬಂದಿದೆ. ಈ ಕಾಲೇಜುಗಳು ಯಾವ ರೀತಿಯಿಂದ ನಡೆಯುತ್ತಿದೆ. ಸರ್ಕಾರ ಕೊಡತಕ್ಕಂಥ ಸವಲತ್ತು ಜನರ ಒಂದು ಒಳ್ಳೆಯ ಉದ್ದೇಶಕ್ಕಾಗಿ ಈ

ರಾಜ್ಯದಲ್ಲಿರತಕ್ಕಂಥ ಜನರಿಗೆ ಅವುಗಳಿಂದ ಬಹಳಷ್ಟು ಅನುಕೂಲತೆಗಳು ಸಿಗಲಿ ಎನ್ನತಕ್ಕಂಥ ದೃಷ್ಟಿಯಿಂದ ಇಷ್ಟೊಂದು ಕಾಲೇಜುಗಳನ್ನು ಕೊಡಲಾಗಿದೆ.

ನಾವು ಖಾಸಗಿ ಸಂಸ್ಥೆಯವರಿಗೆ ಹೆಚ್ಚು ಪ್ರಮಾಣದಲ್ಲಿ ಕೊಟ್ಟಿದ್ದೇವೆ. ಇವು ಈ ಖಾಸಗಿ ಸಂಸ್ಥೆಗಳಿಂದ ಜನತೆಗೆ ಒಳ್ಳೆಯದಾಗುತ್ತದೆ ಎನ್ನುವ ಉದ್ದೇಶದಿಂದ ಇವುಗಳನ್ನು ಕೊಡಲಾಗಿದೆ. ಬಹಳ ಸೂಕ್ತ ದೃಷ್ಟಿಯಿಂದ ಪರಿಗಣಿಸಿದರೆ ನಮಗೆ ಏನು ಗೊತ್ತಾಗುತ್ತದೆ ಎಂದರೆ, ಬಹುತೇಕ ಜನ ಯಾವ ಉದ್ದೇಶಕ್ಕೆ ಕಾಲೇಜು ಕೊಟ್ಟಿದ್ದೇವೆ ಆ ಒಂದು ಉದ್ದೇಶವನ್ನು ಅವರು ಬಿಟ್ಟುಬಿಟ್ಟಿದ್ದಾರೆ. ಪೋಷಕರಿಗೆ ತೊಂದರೆಯಾಗುವುದನ್ನು ತಪ್ಪಿಸುವ ದೃಷ್ಟಿಯಿಂದ ಎಷ್ಟೋ ಹೊಸದಾದ ಕಾಲೇಜುಗಳನ್ನು ಕೊಟ್ಟಿದ್ದೇವೆ. ಅದು ಸಮರ್ಪಕವಾಗಿ ನಡೆಯುತ್ತಿದೆಯೇ ಎಂದು ತಿಳಿದುಕೊಂಡು ಬರುವುದಕ್ಕೆ ಒಂದು ಸಮಿತಿ ಮಾಡಿದ್ದೇವೆ. ಆ ಸಮಿತಿಗೆ ಆದೇಶ ಕೊಟ್ಟಿದ್ದೇವೆ. ಎಷ್ಟು ಈ ತರಹ ಕಾಲೇಜುಗಳಿಗೆ ಅನುಕೂಲತೆ ಕೊಟ್ಟಿದ್ದೇವೆ, ತಾವು ಅದರ ಬಗ್ಗೆ ಒಂದು ಸರಿಯಾದಂತಹ ಮಾಹಿತಿಯನ್ನು ಒದಗಿಸಬೇಕು. ಕಾಲೇಜುಗಳು ಸರಿಯಾಗಿಲ್ಲ. ಸಮರ್ಪಕವಾಗಿಲ್ಲ ಜನರ ಹಿತದೃಷ್ಟಿಯಿಂದ ಇಲ್ಲ ಎನ್ನತಕ್ಕದ್ದು ಕಂಡು ಬಂದರೆ ಅಂಥವನ್ನು ಬಂದ್ ಮಾಡಬೇಕು ಎನ್ನುವ ದೃಷ್ಟಿಯಿಂದ ಈ ಸಮಿತಿ ರಚನೆ ಮಾಡಿದ್ದೇವೆ. ಈ ಸಮಿತಿ ಈಗಾಗಲೇ ತಮ್ಮ ಕಾರ್ಯಕ್ರಮದಲ್ಲಿ ತೊಡಗಿದೆ. ಬಹುಶಃ ತೀವ್ರಗತಿಯಲ್ಲಿ ಅವರು ಸರ್ಕಾರಕ್ಕೆ ವರದಿ ಸಲ್ಲಿಸುತ್ತಾರೆ ಎಂಬ ನಂಬಿಕೆ ಇದೆ. ಒಂದು ಮಾತ್ರ ಸಂದರ್ಭದಲ್ಲಿ ವಿಶೇಷವಾದ ನಂಬಿಕೆ ಇದೆ. ಇವತ್ತು ಈ ಕಡೆಯಿಂದ ಬರತಕ್ಕ ವಿಶ್ವಾಸ ಎಂದರೆ ಸುಪ್ರೀಂ ಕೋರ್ಟ್‌ನಲ್ಲಿ ಕೊಡುವಂತಹ ಜಡ್ಜ್‌ಮೆಂಟ್ ಬಗ್ಗೆ, ಕಾಲೇಜುಗಳಿಗೆ ಸಂಬಂಧಪಟ್ಟ ಸಮಸ್ಯೆ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ರಾಜ್ಯದಲ್ಲಿ ಉದ್ಭವ ಆಗಿದ್ದು ಪ್ರತಿಯೊಬ್ಬರೂ ಸಹ ಇವತ್ತು ವೃತ್ತಿ ಪರ ಕಾಲೇಜಿನಲ್ಲಿ ಸೇರಬೇಕು ಎಂಬ ಹವ್ಯಾಸ ಇದ್ದರೂ ಸಹ ಯಾರು ಬಡವರು, ಬಡ ಜನಾಂಗಕ್ಕೆ ಸೇರಿದಂತಹ ವಿದ್ಯಾರ್ಥಿಗಳು ಕಷ್ಟಪಟ್ಟು ಓದಿದರೂ ವೈದ್ಯಕೀಯ ಕಾಲೇಜುಗಳಿಗೆ ಸೇರುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಕಾರಣ ಇಷ್ಟೇ. ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಕ್ಯಾಪಿಟೇಷನ್ ಶುಲ್ಕವನ್ನು ವಸೂಲಿ ಮಾಡಲಾಗುತ್ತಿದೆ. ಅದನ್ನು ಭರಿಸಲು ಎಲ್ಲಾ ಜನರಿಗೆ ಸಾಧ್ಯ ಆಗುವುದಿಲ್ಲ. ಉನ್ನತ ವಿದ್ಯೆ ಕೇವಲ ಶ್ರೀಮಂತರಿಗೆ ಇದೆ ಎನ್ನುವ ಬಹಳಷ್ಟು ಕಡೆ ಕಾಣುತ್ತಿದೆ. ಜನ ಈ ಹೊತ್ತಿನಲ್ಲಿ ಇದೇ ಮಾತನಾಡುತ್ತಾರೆ. ಭಾರೀ ಯೋಜನೆಗಳನ್ನು ಹಾಕಿದ್ದೇವೆ. ಎಂಬಿಬಿಎಸ್. ಡಾಕ್ಟರ್ ಓದಲು ಬಡವರಿಗೆ ಸಾಧ್ಯವಿಲ್ಲ ಎಂಬ ಮಾತು ಸ್ಪಷ್ಟವಾಗಿದೆ. ರಾಜ್ಯದಲ್ಲಿ ಪ್ರೈವೇಟ್ ಮ್ಯಾನೇಜ್‌ಮೆಂಟ್‌ಗಳು ಬಹಳಷ್ಟು ಇವೆ; ರಾಜ್ಯದಲ್ಲಿರತಕ್ಕ ಎಲ್ಲರಿಗೂ, ಎಲ್ಲಾ ಕೋಮಿನವರಿಗೂ ಅನುಕೂಲ ಆಗಲಿ ಎನ್ನತಕ್ಕ ದೃಷ್ಟಿಯಿಂದ ಬಹುತೇಕ ಸಂಸ್ಥೆಗಳು ಇವತ್ತು ಇಲ್ಲ ಎಂದು ಅವರು ಹೇಳಿದರು. ನಾನು ಈ ಬಗ್ಗೆ ಹೇಳಬೇಕಾದರೆ ಅವರು ಹೇಳಿದಂತಹ ಮಾತು ವೈಚಾರಿಕವಾಗಿದೆ, ಸತ್ಯಾಂಶ ಇದೆ ಎಂದು ಹೇಳಬೇಕಾಗಿದೆ. ನಮ್ಮ ಜನರಿಗೆ ಅನುಕೂಲವಾಗಲಿ, ನಮ್ಮ ಜನ ಇವರು, ಈ ಉದ್ದೇಶದಿಂದ ಕೆಲವು ವಿದ್ಯಾ ಸಂಸ್ಥೆಗಳು ಸ್ಥಾಪಿತಗೊಂಡಿವೆ, ಯಾವ ಜಾತಿಗೆ ಸಂಸ್ಥೆಗಳು ಸಿಕ್ಕಿಲ್ಲ, 80 ಪರ್ಸೆಂಟ್ ಅವರಲ್ಲಿ ವೈಚಾರಿಕ ಯೋಚನೆ ಇದೆ. ಬಹಳಷ್ಟು ಸಂಸ್ಥೆಗಳು ತಮ್ಮದೇ ಆದ ಧಾಟಿಯಲ್ಲಿ ನಡೆಸಿಕೊಂಡು ಹೋಗುತ್ತಿವೆ ಎನ್ನತಕ್ಕ ಮಾತನ್ನು ಹೇಳಿದ್ದೇವೆ. ಇವತ್ತು ನಿಜ ಹೇಳಬೇಕಾದರೆ ಸುಪ್ರೀಂ ಕೋರ್ಟಿನ ಆದೇಶ ಬಂದ ಮೇಲೆ ರಾಜ್ಯದಲ್ಲಿರತಕ್ಕ ಜನ ಬಹಳಷ್ಟು ಸೂಕ್ಷ್ಮವಾಗಿ ವಿಚಾರ ಮಾಡುತ್ತಿದ್ದಾರೆ.

ಸರ್ಕಾರ ಯಾವ ದಿಕ್ಕಿನಲ್ಲಿ, ಯಾವ ದೃಷ್ಟಿಕೋನವಿಟ್ಟುಕೊಂಡು ಬರತಕ್ಕಂಥ ವರ್ಷದಲ್ಲಿ ಯಾವುದನ್ನು ಮಾಡುತ್ತದೆ ಎನ್ನತಕ್ಕಂಥಾದ್ದು, ಸುಪ್ರಿಂಕೋರ್ಟ್ ಆರ್ಡರ್ ಪ್ರಕಾರ ನಡೆಸುತ್ತೀರಾ ಅಥವಾ ಏನು ಮಾಡುತ್ತೀರಿ ಎನ್ನತಕ್ಕಂಥ ಕುತೂಹಲ ಈ ರಾಜ್ಯದ ಜನತೆಯಲ್ಲಿದೆ. ನಾನು ಬಹಳಷ್ಟು ಕಡೆ, ಎಲ್ಲೆಲ್ಲಿಗೆ ಹೋಗುತ್ತೇನೆ ಅಲ್ಲಲ್ಲಿ ಪ್ರೆಸ್‌ನವರು 'ಸುಪ್ರೀಂ ಕೋರ್ಟ್‌ನಿಂದ ಈ ರೀತಿ ಆದೇಶ ಬಂದಿದೆ, ನೀವು ಸುಪ್ರಿಂ ಕೋರ್ಟ್ ಆರ್ಡರ್ ಪ್ರಕಾರ ನಡೆಸುತ್ತೀರಾ, ಆದೇಶವನ್ನು ಪರಿಪಾಲಿಸುತ್ತೀರಾ'

ಎಂದು ಕೇಳಿದ್ದಾರೆ. ಈ ರೀತಿ ಪತ್ರಕರ್ತರು ಕೇಳಿದ ನಂತರ ನಾನು ಅವರಿಗೆ ಸ್ಪಷ್ಟವಾಗಿ ಹೇಳಿದ್ದೇನೆ. ಏನೆಂದರೆ, 'ಸುಪ್ರೀಂ ಕೋರ್ಟ್ ಯಾವ ಆದೇಶವನ್ನು ಕೊಟ್ಟಿದೆ, ಆ ಆದೇಶಕ್ಕೆ ತಕ್ಕಂತೆ ನಡೆಸುತ್ತೇವೆಯೇ ಹೊರತು ಆ ಆದೇಶಕ್ಕೆ ಹೊರತಾಗಿ ಒಂದು ಕಿಂಚಿತ್ತೂ ಸರಿಯುವುದಿಲ್ಲ' ನನಗೆ ಸಂಬಂಧಿಸಿದಂತೆ ಕೆಲವು ಸದಸ್ಯರು, ಅದರಲ್ಲೂ ಬೈರೇಗೌಡರು ಮಾತನಾಡತಕ್ಕಂಥ ಸಂದರ್ಭದಲ್ಲಿ 'ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಹೋದರೆ ಹಳ್ಳಿಯಲ್ಲಿರತಕ್ಕಂಥ ಜನರು ದನ ಕಾಯ ಬೇಕಾಗುತ್ತದೆ'' ಎಂದು ಹೇಳಿದರು. ಅವರಿಗೆ ಈ ಕುರಿತು ಬಹುತೇಕ ಮಾಹಿತಿಗಳು ದೊರಕಿಲ್ಲ ವೆಂದು ನನಗನ್ನಿಸುತ್ತದೆ. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ನಾವು ಇಲ್ಲಿ ರಚನೆ ಮಾಡಿದ ನಂತರ ಈ ರಾಜ್ಯದಲ್ಲಿರತಕ್ಕಂಥ ಪ್ರತಿಯೊಂದು ಜಾತಿಗೂ ಅನುಕೂಲವಾಗುತ್ತದೆ. ಒಂದು ವೇಳೆ ಸುಪ್ರೀಂ ಕೋರ್ಟ್ ಆದೇಶ ಬರದೇ ಇದ್ದಿದ್ದರೆ ಈ ರಾಜ್ಯದಲ್ಲಿರತಕ್ಕ ಬಹುತೇಕ ಜನರು ವಂಚಿತರಾಗುತ್ತಿದ್ದರೆಂಬ ಮಾತನ್ನು ನಾನು ಹೇಳಬೇಕಾಗುತ್ತದೆ. ಸುಪ್ರೀಂ ಕೋರ್ಟ್ ಆದೇಶ ಬಂದ ನಂತರ ಸಮಾಜದಲ್ಲಿರತಕ್ಕ ಪ್ರತಿಯೊಂದು ಜಾತಿಗೂ ಇದರಿಂದ ರಕ್ಷಣೆ ಕೊಟ್ಟು, ಪ್ರತಿಯೊಬ್ಬರಿಗೂ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಅದನ್ನು ಅಳವಡಿಸುತ್ತಿದ್ದೇವೆ. ನಾನು ಇದರ ಬಗ್ಗೆ ಹೇಳಬೇಕಾದರೆ ಸುಪ್ರೀಂ ಕೋರ್ಟ್ ಆದೇಶ ಬರುವುದಕ್ಕಿಂತ ಮುಂಚಿನ ಪರಿಸ್ಥಿತಿ ಏನಿತ್ತು ಮತ್ತು ಸುಪ್ರೀಂ ಕೋರ್ಟ್ ಆದೇಶ ಬಂದ ನಂತರ ಹೊಸ ವರ್ಷದಲ್ಲಿ ಯಾವ ರೀತಿಯ ನಿಯಮಗಳನ್ನು ಅಳವಡಿಸುತ್ತಿದ್ದೇವೆನ್ನತಕ್ಕಂಥದ್ದನ್ನು ಸ್ಪಷ್ಟವಾಗಿ ಸದನದ ಮುಂದಿಡುತ್ತೇನೆ. ಸುಪ್ರೀಂ ಕೋರ್ಟ್ ಆದೇಶ ಬರುವುದಕ್ಕಿಂಥ ಮುಂಚೆ ಜನರಲ್ ಮೆರಿಟ್‌ನಲ್ಲಿ ನಮ್ಮ ರಾಜ್ಯದಲ್ಲಿ ಒಟ್ಟು 859 ಸೀಟ್ಟುಗಳಿದ್ದವು. ಅವು ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳಲ್ಲಿ ತೆಗೆದುಕೊಂಡಂಥ ಸೀಟುಗಳು. ಸರ್ಕಾರಿ ಕಾಲೇಜುಗಳಲ್ಲಿ ಎಷ್ಟು ಸೀಟುಗಳು ರಿಜರ್ವೇಷನ್ ಇದ್ದವು, ಅವು ಮತ್ತು ಖಾಸಗಿ ಕಾಲೇಜುಗಳಲ್ಲಿ ತೆಗೆದುಕೊಂಡಂಥ ಸೀಟುಗಳನ್ನು ಸೇರಿಸಿ ಒಟ್ಟು 859 ಸೀಟುಗಳು ಮಾತ್ರ ಇದ್ದವು. ಇಷ್ಟು ಜನ ಅಭ್ಯರ್ಥಿಗಳಿಗೆ ಮಾತ್ರ ಸವಲತ್ತು ಕೊಡುವುದಿತ್ತು. ಸೀಟುಗಳು ಯಾವ ರೀತಿಯಾಗಿತ್ತು ಎಂದರೆ, ಜನರಲ್ ಮೆರಿಟ್‌ನವರಿಗೆ 275 ಸೀಟುಗಳು, ಎಸ್‌ಸಿಯವರಿಗೆ 229 ಎಸ್.ಟಿ.ಟಿ.ಯವರಿಗೆ 26, 'ಎ' ಗ್ರೂಪ್‌ನವರಿಗೆ 43, ಬಿ ಗ್ರೂಪ್‌ಗೆ 129, ಸಿ ಗ್ರೂಪ್‌ಗೆ 138, ಡಿ ಗ್ರೂಪ್‌ಗೆ 76, ಇ ಗ್ರೂಪ್‌ಗೆ 43 ಸೀಟುಗಳಿದ್ದವು. ಮೊದಲಿದ್ದ ವ್ಯವಸ್ಥೆಯಲ್ಲಿ ರಾಜ್ಯದಲ್ಲಿರತಕ್ಕಂಥ ಜನರಿಗೆ ಇಷ್ಟು ಪ್ರಮಾಣದಲ್ಲಿ ಸವಲತ್ತು ಸಿಗುತ್ತಿತ್ತು. ಆದರೆ, ಸುಪ್ರೀಂ ಕೋರ್ಟ್ ಆದೇಶ ಬಂದ ನಂತರ ಇದರ ಪ್ರಮಾಣ ಎಷ್ಟು ಹೆಚ್ಚಾಗಿದೆಯೆಂದರೆ, ಒಟ್ಟು ಸೀಟುಗಳು 1862. ಇವು ನಮ್ಮ ರಾಜ್ಯದಲ್ಲಿರತಕ್ಕಂಥ ಎಲ್ಲಾ ಕಾಲೇಜುಗಳಲ್ಲಿ ಸುಪ್ರೀಂ ಕೋರ್ಟ್ ಆದೇಶ ಬಂದ ನಂತರ ಹೆಚ್ಚಾಗಿರುವ ಸೀಟುಗಳು. ಇದರ ಪೈಕಿ ಈ ಹಿಂದೆ ಜನರಲ್ ಮೆರಿಟ್‌ಗೆ ಮೀಸಲಿರಿಸಲಾಗಿದ್ದ ಸೀಟುಗಳು 275, ಈಗ 597 ಆಗಿದೆ. ಅದೇ ರೀತಿ ಎಸ್‌ಸಿಯವರಿಗೆ ಮೊದಲಿದ್ದದ್ದು 129, ಈಗ 280 ಆಗಿದೆ, ಎಸ್‌ಟಿಯವರಿಗೆ ಮೊದಲಿದ್ದದ್ದು 26ಈಗ 56ಆಗಿದೆ, 'ಎ' ಗ್ರೂಪ್‌ನವರಿಗೆ ಮೊದಲು ಇದ್ದುದು 43, ಈಗ 94 ಆಗಿದೆ, ಬಿ ಗ್ರೂಪ್‌ನವರಿಗೆ ಮೊದಲಿದ್ದದ್ದು 129 ಈಗ 279 ಆಗಿದೆ, ಸಿ ಗ್ರೂಪ್‌ನವರಿಗೆ ಮೊದಲು ಎಷ್ಟಿತ್ತು ಎಂದರೆ 138 ಈಗ 297 ಆಗಿದೆ, ಡಿ ಗ್ರೂಪ್‌ನವರಿಗೆ ಮೊದಲು 76 ಇದ್ದುದು ಈಗ 167ಆಗಿದೆ, ಅಂತೆಯೇ 'ಇ' ಗ್ರೂಪ್‌ಗೆ ಮೊದಲು ಇದ್ದ ಸೀಟುಗಳು 43, ಈಗ 92ಸೀಟುಗಳಾಗಿವೆ. ಆದುದರಿಂದ, ಸುಪ್ರೀಂ ಕೋರ್ಟ್ ಆದೇಶ ಬಂದ ನಂತರ ಈ ರಾಜ್ಯದಲ್ಲಿರತಕ್ಕ ಯಾವದೇ ಸಮಾಜದವರಿಗೂ ಇದರಲ್ಲಿ ಕಡಿಮೆ ಸವಲತ್ತು ಸಿಗುತ್ತದೆಂಬ ಮಾತಿಲ್ಲ ಮತ್ತು ಕೆಲವು ಸದಸ್ಯರುಗಳು 'ಹಳ್ಳಿಯಲ್ಲಿರತಕ್ಕಂಥ ಜನರಿಗೆ ಯಾವ ಸವಲತ್ತು ಕೊಡುತ್ತೀರಿ ?' ಹಳ್ಳಿಗಳಿಂದ ಬರತಕ್ಕಂಥ ವಿದ್ಯಾರ್ಥಿಗಳು, ಅದರಲ್ಲೂ ಬಡತನ ಕುಟುಂಬದಿಂದ ಬರತಕ್ಕಂಥ ವಿದ್ಯಾರ್ಥಿಗಳು ಕಾಂಪಿಟೇಷನ್ ಮಾಡುವುದಕ್ಕೆ ಬಹುತೇಕ ಅವರಿಗೆ ಸಾಧ್ಯವಾಗಲಿಕ್ಕಿಲ್ಲ. ಸೀಟುಗಳೆಲ್ಲವೂ ನಗರ ಪ್ರದೇಶಗಳಲ್ಲಿರುವವರಿಗೆ ಅನುಕೂಲವಾಗುತ್ತದೆ' ಎಂಬ ಮಾತನ್ನು ಸ್ಪಷ್ಟವಾಗಿ ಹೇಳಿದರು.

ಇದು ನಿಜವಾಗಿಯೂ ಸತ್ಯವಾದುದು, ಅದರ ಮೇಲೆ ಅವಲೋಕನ ಮಾಡಿದಾಗ ನಿಜವಾಗಿಯೂ

ಹಳ್ಳಿಯಲ್ಲಿರತಕ್ಕ ಜನರಿಗೆ ಅನುಕೂಲ ಆಗಬೇಕು ಮತ್ತು ಮೊದಲಿನ ಲೆಕ್ಕಾಚಾರವನ್ನು ನೋಡಿದರೆ ಹಳ್ಳಿಯಲ್ಲಿರತಕ್ಕವರಿಗೆ ಯಾವಾಗಲೂ ಅನುಕೂಲವಾಗುತ್ತಿರಲಿಲ್ಲವೆಂಬುದು ಕಾಣುತ್ತದೆ. ಇವತ್ತು ಸುಪ್ರೀಂ ಕೋರ್ಟ್‌ನಿಂದ ಆದೇಶ ಬಂದ ಮೇಲೆ ಮತ್ತು ಅದನ್ನು ಅನುಸರಿಸಿ ನಾವು ಕಾನೂನನ್ನು ಬದಲಾವಣೆ ಮಾಡಿದಮೇಲೆ ಹಳ್ಳಿಯಲ್ಲಿರತಕ್ಕ ಬಡವರಿಗೆ ಕೇವಲ 15 ಅಂಕಗಳನ್ನು ಕೊಡುವುದು ಮಾತ್ರವಲ್ಲ ನೂರಕ್ಕೆ 15 ಜನರನ್ನು ಹಳ್ಳಿಯವರನ್ನೇ ತೆಗೆದುಕೊಳ್ಳಬೇಕು ಎನ್ನತಕ್ಕ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇದರಿಂದ ಹಳ್ಳಿಯವರಿಗೆ ಬಹಳಷ್ಟು ಸವಲತ್ತುಗಳು ದೊರಕುತ್ತವೆ. ಹಳ್ಳಿಯಲ್ಲಿರತಕ್ಕ ಬಡವರಿಗೆ ಈಗ ಇರುವ ಸವಲತ್ತನ್ನು ಹೋಲಿಕೆ ಮಾಡಿದರೆ ಹಿಂದೆಂದೂ ಆಗಿರದಷ್ಟು ಅನುಕೂಲವಾಗಿದೆ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಈ ಸದನದಲ್ಲಿ ಹೇಳಬೇಕಾಗುತ್ತದೆ. ಇಂಥ ಒಂದು ಸವಲತ್ತು ನಮಗೆ ಇದ್ದಾಗ ಕೆಲವು ಸದಸ್ಯರುಗಳ ಸ್ವಾಭಾವಿಕವಾಗಿ ಮಾತನಾಡಿದರು. ಯಾರು ಪ್ರೈವೇಟ್ ಆಗಿ ಮೆಡಿಕಲ್ ಕಾಲೇಜುಗಳನ್ನು ಮತ್ತು ಉಳಿದ ಕಾಲೇಜುಗಳನ್ನು ಕಟ್ಟಿಕೊಂಡಿದ್ದಾರೋ ಅವರಿಗೆ ಬಹುತೇಕವಾಗಿ ಬೇಜಾರು ಆಗಿರಬಹುದು, ಅವರಿಗೆ ಬೇಜಾರಾಗಿಲ್ಲ ಎನ್ನತಕ್ಕ ಮಾತಲ್ಲ, ಅವರುಗಳು ನಾವು ಬಹಳ ಕಷ್ಟಪಟ್ಟು ಇವೆಲ್ಲವನ್ನೂ ಮಾಡಿದ್ದೇವೆ, ಆದರೆ ಸರ್ಕಾರ ಒಮ್ಮಿಂದೊಮ್ಮೆಗೆ ಇವೆಲ್ಲವನ್ನೂ ಬದಲಾವಣೆ ಮಾಡಿ ಕಾನೂನನ್ನು ತರುತ್ತಿವೆ ಎನ್ನತಕ್ಕ ಮಾತು ಹೇಳತಕ್ಕದ್ದು ಇರಬಹುದು, ಆದರೂ ಸಹ ರಾಜ್ಯದ ಜನತೆಯ ಹಿತದೃಷ್ಟಿಯಿಂದ, ರಾಜ್ಯದ ಜನರ ಏಳಿಗೆಗೋಸ್ಕರ ನಾವು ದುಡಿಯತಕ್ಕದ್ದು ನಮ್ಮ ಕರ್ತವ್ಯ ಎಂದು ತಿಳಿದುಕೊಂಡು ನಾವು ಆ ನಿರ್ಣಯವನ್ನು ಮಾಡಿದ್ದೇವೆ, ಅದು ನಮಗೇ ಸೀಮಿತವಾಗಿರಬೇಕಾಗುತ್ತದೆ. ಇವತ್ತು ಸುಪ್ರೀಂ ಕೋರ್ಟ್‌ನ ಆದೇಶವೇನಿದೆ ಅದಕ್ಕೆ ತಕ್ಕಂತೆ ನಾವು ಪರಿಪಾಲನೆ ಮಾಡುತ್ತಿದ್ದೇವೆ. ಪ್ರೈವೇಟ್ ಮೇನೇಜ್‌ಮೆಂಟ್‌ಗೆ ಸೇರಿರುವ ಸಂಸ್ಥೆಗಳ ಮುಖಂಡರು ಇದಕ್ಕೆ ಸಹಕಾರ ಕೊಡಬೇಕು ಎನ್ನತಕ್ಕ ಮಾತನ್ನು ಹೇಳಿ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಏಕೆಂದರೆ ಅವರ ಸಹಕಾರ ಬಹಳಷ್ಟು ಮಹತ್ವವಾಗಿದೆ, ಅವರು ತಮ್ಮ ಜಾಗದಲ್ಲಿ ತಾವು ಉಳಿದುಕೊಂಡು ನಾವು ಕಾರ್ಯರೂಪಕ್ಕೆ ಹೊರಟರೆ ಬಹುತೇಕ ಅದು ಸರಿಯಾಗುವುದಿಲ್ಲ ಎನ್ನತಕ್ಕ ಸನ್ನಿವೇಶದಿಂದ ನಾನು ಇವತ್ತು ಪ್ರೈವೇಟ್ ಮ್ಯಾನೇಜ್‌ಮೆಂಟ್‌ರವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಅವರು ಸರ್ಕಾರಕ್ಕೆ ಸಹಕಾರವನ್ನು ಕೊಟ್ಟು ಈ ರಾಜ್ಯದಲ್ಲಿರತಕ್ಕ ಸಮಸ್ಯೆಯು ಬಗೆಹರಿಯುವುದಕ್ಕೆ ಈ ರಾಜ್ಯದಲ್ಲಿರುವ ಪ್ರತಿಯೊಬ್ಬ ಬಡ ವಿದ್ಯಾರ್ಥಿಗೂ ಅವಕಾಶ ಸಿಗಲಿ ಎನ್ನತಕ್ಕ ದೃಷ್ಟಿಯಿಂದ ಅವರುಗಳು ಮುಂದೆ ಬರಬೇಕು ಎನ್ನತಕ್ಕ ದೃಷ್ಟಿಯಿಂದ ಅವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅನಂತರ ಇವತ್ತು ಸುಪ್ರೀಮ್ ಕೋರ್ಟ್‌ನ ನಿರ್ಣಯ ನಿಜವಾಗಿಯೂ ವಿದ್ಯಾರ್ಥಿಗಳಿಗೆ ಮುಂದೆ ಬರತಕ್ಕ ದಿನಗಳಲ್ಲಿ ಬಹಳ ಅನುಕೂಲವಾಗುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಮುಂದೆ ಬರತಕ್ಕ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತೇನೆ ಮತ್ತು ಕೆಲವೊಂದು ಸದಸ್ಯರುಗಳು 50ಪರ್‌ಸೆಂಟ್ ಸೀಟ್‌ಗಳನ್ನು ಏನು ತೆಗೆದುಕೊಳ್ಳುತ್ತಾರೆ ಇದರಿಂದ ಕರ್ನಾಟಕದವರು ವಂಚಿತರಾಗುತ್ತಾರೆಂಬ ಮಾತನ್ನು ಹೇಳಿದರು, ಆದ್ದರಿಂದ ಈ 50ಪರ್‌ಸೆಂಟ್ ಸೀಟ್ ಏನು ಇದೆ ಅದಕ್ಕೆ ಪ್ರತ್ಯೇಕವಾಗಿ ಕರ್ನಾಟಕದಲ್ಲಿ ತೆಗೆದುಕೊಳ್ಳಬೇಕು ಎನ್ನತಕ್ಕ ಕಾನೂನನ್ನು ಮಾಡುತ್ತಿದ್ದೇವೆ, ಈ 50 ಪರ್‌ಸೆಂಟ್ ಫ್ರೀ ಸೀಟ್ ಏನು ಇದೆ ಇವೆಲ್ಲಾ ಕರ್ನಾಟಕದಲ್ಲಿರತಕ್ಕ ಜನರಿಗೆ ಅನುಕೂಲವಾಗಬೇಕು ಎನ್ನತಕ್ಕ ದೃಷ್ಟಿಯಿಂದ ಈ ನಿರ್ಣಯವನ್ನು ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಉಳಿದಿರತಕ್ಕಂಥ ಪೇಮೆಂಟ್ ಸೀಟ್ ಆದ 50ಪರ್‌ಸೆಂಟ್ ಸೀಟ್ ಏನು ಇದೆ ಅದನ್ನು ಮೆರಿಟ್ ಆಧಾರದ ಮೇಲೆ ತೆಗೆದುಕೊಳ್ಳುತ್ತೇವೆ. ಇನ್ನು ವಿಶೇಷವಾಗಿ ಹೇಳತಕ್ಕದ್ದೇನೆಂದರೆ 50 ಪರ್‌ಸೆಂಟ್ ಫ್ರೀ ಸೀಟ್ ಏನು ಇದೆ ಅದು ಪೂರ್ಣವಾಗಿ ಕರ್ನಾಟಕಕ್ಕೇ ಸೀಮಿತವಾಗಿರಬೇಕು ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಬಹಳಷ್ಟು ಸರ್‌ಪ್ರೈಸ್ ಭೇಟಿಯನ್ನು ಕೊಟ್ಟು ಬಹುತೇಕ ಕಡೆಗಳಲ್ಲಿ ಯಾವ ರೀತಿಯಲ್ಲಿ ಅಧಿಕಾರಿಗಳು ಕೆಲಸ ಕಾರ್ಯ ಮಾಡುತ್ತಿದ್ದಾರೆ

ಎನ್ನತಕ್ಕ ದೃಷ್ಟಿಯಿಂದ ನೋಡಿಕೊಂಡು ಬಂದಿದ್ದೇನೆ. ನಾನು ಮೆಡಿಕಲ್ ಕಾಲೇಜಿಗೆ ಸೇರಿರುವ ಆಸ್ಪತ್ರೆಗಳಿಗೆ ಅನಿರೀಕ್ಷಿತ ಭೇಟಿಯನ್ನು ಕೊಟ್ಟು, ಅವರಿಗೆ ನಾನು ಬರುತ್ತೇನೆ ಎನ್ನತಕ್ಕದನ್ನು ಹೇಳದೇ ಹೋಗಿ ಪರಿಶೀಲನೆ ಮಾಡಿದ್ದೇನೆ. ಮತ್ತು ಅವರಿಗೆ ಒಂದು ವೇಳೆ ನೀವು ಸರಿಯಾಗಿ ಕೆಲಸ ಮಾಡಿ ನೋಡಿಕೊಳ್ಳದಿದ್ದರೆ ಮುಂದೆ ಬರತಕ್ಕ ದಿನಗಳಲ್ಲಿ ನಿಮಗೆ ತೊಂದರೆಯಾಗುತ್ತದೆ ಎನ್ನತಕ್ಕ ಮಾತನ್ನು ಹೇಳಿದ್ದೇನೆ.

6.50 ಪಿಎಂ

ಏಕೆಂದರೆ ಇದುವರೆಗೆ ಬಹುತೇಕ ನಾವು ಇಲ್ಲಿ ಕೆಲಸಮಾಡುತ್ತಿರುವವರು ಸಂದರ್ಭಾನುಸಾರ ಎಲ್ಲೆಲ್ಲಿ ತೊಂದರೆ, ತೊಡಕುಗಳಿವೆ ಅವುಗಳನ್ನು ಬಿಡಿಸುವುದರಲ್ಲಿ ಮುಂದೆ ಬರಬೇಕಾಗುತ್ತದೆ. ಈ ತೊಡಕುಗಳನ್ನು ನಾವು ಹಾಗೇಬಿಟ್ಟು ಹೋದಲ್ಲಿ ಮುಂದೆ ಈ ದಿಸೆಯಲ್ಲಿ ಬಹುತೇಕ ಸುಧಾರಣೆ ಬರುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬಯಸುತ್ತೇನೆ. ಆದುದರಿಂದಲೇ ನಾನು ಭೇಟಿ ಕೊಟ್ಟ ಕಡೆಗಳಲ್ಲೆಲ್ಲಾ ಡಾಕ್ಟರ್‌ಗಳನ್ನು ಕಂಡು, ರೋಗಿಗಳನ್ನು ಭೇಟಿ ಮಾಡಿ, ಅವರ ಕುಂದುಕೊರತೆಗಳನ್ನು ಕೇಳಿ ಅಲ್ಲಿ ಉತ್ತಮ ಔಷಧೋಪಚಾರ ಮಾಡುತ್ತಿದ್ದಾರೆಯೇ ಇಲ್ಲವೇ, ಎಂಬುದನ್ನು ಕೇಳಿ ಎಲ್ಲಾದರೂ ಆಸ್ಪತ್ರೆಯ ಸಿಬ್ಬಂದಿವರ್ಗದವರು ಅಥವಾ ಡಾಕ್ಟರ್‌ಗಳು ಸರಿಯಾಗಿ ನೋಡುತ್ತಿಲ್ಲವೆಂದು ದೂರುಗಳು ಬಂದರೆ, ಕೂಡಲೇ ಅವರೆಲ್ಲರಿಗೂ ಎಚ್ಚರಿಕೆಯ ಮಾತುಗಳನ್ನೂ ಕೊಟ್ಟುಬರುತ್ತಿದ್ದೇನೆ. ಇದು ಕೇವಲ ಮೆಡಿಕಲ್‌ಗಷ್ಟೆ ಸೀಮಿತವಲ್ಲ. ಡೆಂಟಲ್, ನರ್ಸಿಂಗ್ ಹೀಗೆ ಎಷ್ಟು ಪ್ರೊಫೆಷನಲ್ ಕಾಲೇಜುಗಳಿವೆ ಅವೆಲ್ಲಕ್ಕೂ ಕೂಡ ಅನ್ವಯಿಸುತ್ತದೆಂದು ನಾನು ಹೇಳಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಹೆಚ್ಚಿನ ಮುತುವರ್ಜಿ ವಹಿಸಿ ಈ ಮೆಡಿಕಲ್ ಎಜುಕೇಷನ್‌ಗೆ ಹೆಚ್ಚಿನ ಹಣವನ್ನು ಕೊಡತಕ್ಕದ್ದು ಸೂಕ್ತವೆಂದು ಹೇಳುತ್ತಿದ್ದೇನೆ. 92–93ರಲ್ಲಿ 10.54 ಕೋಟಿ ರೂ. ಕೊಟ್ಟಿದ್ದರು. ಆದರೆ ಈ ಸಾರಿ ಇದು ಪ್ರತ್ಯೇಕವಾಗಿರುವುದರಿಂದ ಇದು ಒಳ್ಳೆಯ ಸ್ಥಿತಿಯಲ್ಲಿ ರಾಜ್ಯದ ಜನತೆಗೆ ಒಳ್ಳೆಯ ಸೇವೆಯನ್ನು ಸಲ್ಲಿಸಲೆಂಬ ಉದ್ದೇಶದಿಂದ 30.58 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಅಂದರೆ ಕಳೆದ ಸಾರಿ ಏನು ಹಣವನ್ನು ಬಿಡುಗಡೆ ಮಾಡಲಾಗಿತ್ತು ಅದಕ್ಕಿಂತ 20 ಕೋಟಿ ರೂ.ಗಳನ್ನು ಈ ವರ್ಷ ಹೆಚ್ಚಿಗೆ ಕೊಟ್ಟಿರುವುದರಿಂದ ಈ ಸಾರಿ ಆಸ್ಪತ್ರೆಗಳಿಗಿರುವ ತೊಂದರೆಗಳನ್ನು, ನಿವಾರಣೆ ಮಾಡಿ ಸುಧಾರಣೆಗಳನ್ನು ತರುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ. ಪ್ರಮುಖವಾಗಿ ಯಾವ ಯಾವ ಆಸ್ಪತ್ರೆಗಳಲ್ಲಿ ಏನೇನು ತೊಂದರೆಗಳಿವೆ, ಅಲ್ಲಿಗೆ ಏನೇನು ಉಪಕರಣಗಳು ಬೇಕಾಗುತ್ತದೆಂಬುದನ್ನು ನೋಡಿ ಅಗತ್ಯಗಳನ್ನು ಪೂರೈಸಲು ಅನುಕೂಲವಾಗುತ್ತದೆಂದು ಸಮಾಧಾನದಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈಗ ಕೊಟ್ಟಿರತಕ್ಕ ಹಣದಲ್ಲಿ ಸಾಕಷ್ಟು ಉಪಕರಣಗಳನ್ನು ನಾವು ಖರೀದಿ ಮಾಡಿದ್ದೇವೆ. ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಪಟ್ಟ ಸಂಸ್ಥೆಗಳೇನಿದೆ ಅವುಗಳಿಗೆಲ್ಲಾ ಅನುಕೂಲ ಮಾಡಿ ಕೊಟ್ಟಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ದೊಡ್ಡ ಪಟ್ಟಿ ಇದ್ದು ಇದನ್ನೆಲ್ಲಾ ಓದುವುದಕ್ಕೆ ಹೋದರೆ ಬಹಳ ಸಮಯ ಬೇಕಾಗುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ವ್ಯಾಪ್ತಿಯಲ್ಲಿ ಬರತಕ್ಕ ಎಲ್ಲಾ ಆಸ್ಪತ್ರೆಗಳಿಗೂ ಸಮರ್ಪಕವಾಗಿ ಕೆಲಸಮಾಡುವ ಸಲುವಾಗಿ ಮಾನ್ಯ ಮುಖ್ಯ ಮಂತ್ರಿಗಳು ಹಣವನ್ನು ಬಿಡುಗಡೆ ಮಾಡಿದ್ದಾರೆ. ನಾನೂ ಕೂಡ ಅಷ್ಟೆ ಮುತುವರ್ಜಿಯಿಂದ ಕೆಲಸ ಮಾಡಲು ಆಸ್ಪದವನ್ನು ಮಾಡಿಕೊಟ್ಟಿರುವುದರಿಂದ ಈ ದಿಸೆಯಲ್ಲಿ ಹಗಲೂರಾತ್ರಿ ಶ್ರಮವಹಿಸಿ ನನ್ನ ಇಲಾಖೆಯಲ್ಲಿರತಕ್ಕ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಲು ಪ್ರಯತ್ನಿಸುತ್ತೇನೆಂದು ಭರವಸೆ ನೀಡುತ್ತೇನೆ. ಮಾನ್ಯ ಸಿಂಧ್ಯಾರವರು ಹಾಗೂ ಇನ್ನೂ ಅನೇಕ ಮಾನ್ಯ ಸದಸ್ಯರು ಅನೇಕ ಉತ್ತಮ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಅವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಮುಂದೆ ಬರತಕ್ಕ ದಿನಗಳಲ್ಲಿ ಸಮರ್ಪಕವಾಗಿ ಕೆಲಸಮಾಡುತ್ತೇನೆಂದು ಹೇಳಬಯಸುತ್ತೇನೆ.

ಇನ್ನೊಂದು ವಿಶೇಷತೆ ಏನೆಂದರೆ 92–93ನೇ ಸಾಲಿಗೆ ಅಲೋಕೇಟೆಡ್ ಅಮೌಂಟ್ 964

ಕೋಟಿ ರೂ. ಪ್ಲಾನ್‌ನಲ್ಲಿತ್ತು. ಸೆಂಟ್ರಲ್ ಸ್ಟಾನ್ಸರ್ಡ್ ಸ್ಕೀಂನಲ್ಲಿ 110 ಕೋಟಿರೂ. ಅನಂತರ ನಾನ್ ಪ್ಲಾನ್‌ನಲ್ಲಿ 6939.93 ಲಕ್ಷರೂ. ಇತ್ತು. ಇದು ಡಿಸೆಂಬರ್ ಕೊನೆಯವರೆಗೆ ನಮ್ಮ ಖರ್ಚಿಗೆ ಕೊಟ್ಟಿದ್ದದ್ದು 364.61 ಪ್ಲಾನ್‌ನಲ್ಲಿ; ಸೆಂಟ್ರಲಿ ಸ್ಟಾನ್ಸರ್ಡ್ ಸ್ಕೀಂನಲ್ಲಿ 18.10 ಮತ್ತು ನಾನ್ ಪ್ಲಾನ್‌ನಲ್ಲಿ 4630.12 ಕೋಟಿ ರೂ. ಅನಂತರ ಮಾರ್ಚಿವರೆಗೆ 604.59, 91.40, ಪ್ಲಾನ್‌ನಲ್ಲಿ 2309.81 ಉಳಿದಿತ್ತು, ಈ ಹಣವನ್ನು ನಾವು ಪೂರ್ಣವಾಗಿ ಖರ್ಚುಮಾಡಿದ್ದೇವೆ. ಇನ್ನೂ ಸ್ವಲ್ಪ ಹಣ ಏನು ಉಳಿದಿತ್ತು ಅದನ್ನು ರೀ–ಅಪ್ರೋಪ್ರಿಯೇಷನ್ ಮಾಡಿ ಅದನ್ನು ಕೂಡ ಖರ್ಚುಮಾಡುವುದಕ್ಕೆ ನಾವು ಪ್ರಯತ್ನಮಾಡಿದ್ದೇವೆ. ಕಳೆದ ಸಾರಿ ಕೊಟ್ಟಿದ್ದಂಥ ಹಣವನ್ನು ಸಂಪೂರ್ಣವಾಗಿ ನಾವು ಖರ್ಚು ಮಾಡಿದ್ದೇವೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ನಮ್ಮ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ಬೇಡಿಕೆ ಏನಿದೆ, ಅವುಗಳಿಗೆ, ತಾವು ಮಂಜೂರಾತಿಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪ್ರಭಾಕರ ಎಸ್. ರಾಣೆ (ಮಾನ್ಯ ವಯಸ್ಕರ ಶಿಕ್ಷಣ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೇ, ಶಿಕ್ಷಣ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆಯಲ್ಲಿ ಭಾಗವಹಿಸಿದಂಥ ಸುಮಾರು 17 ಜನ ಶಾಸಕ ಮಿತ್ರರಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟಂತೆ, ಅದರಲ್ಲೂ ಪ್ರಮುಖವಾಗಿ ವಯಸ್ಕರ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಮಾತನಾಡಿದವರು ಕೇವಲ ಐವರು ಮಾತ್ರ. ಇಲ್ಲಿ ಆ ಐವರು ಸದಸ್ಯರು ಸಹ ಇದಕ್ಕೆ ಗಮನ ಹರಿಸಿದ್ದಾರೆಯೇ ಹೊರತಾಗಿ ಪ್ರಮುಖವಾದಂಥ ಒತ್ತನ್ನು ಕೊಟ್ಟು ಈ ಬಗ್ಗೆ ಪ್ರಸ್ತಾಪಿಸಿಲ್ಲವೆಂದು ಹೇಳಿ ಅತ್ಯಂತ ವಿಷಾದದಿಂದ ಹೇಳಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೇ, ಇವತ್ತು ಶಿಕ್ಷಣ ಎಂದ ತಕ್ಷಣ ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಉಚ್ಚಶಿಕ್ಷಣವೆಂದು ಸಾಮಾನ್ಯವಾದಂಥ ಭಾವನೆ ಜನಸಾಮಾನ್ಯರಲ್ಲಿ ಇದೆ; ಪ್ರತಿನಿಧಿಗಳಲ್ಲೂ ಸಹ ಅದೇ ಒಂದು ಭಾವನೆ ಒಡಮೂಡಿದೆ ಎಂದು ಹೇಳಬೇಕಾಗುತ್ತದೆ. ಇವತ್ತು ಈ ಒಂದು ವಯಸ್ಕರ ಶಿಕ್ಷಣದ ಬಗ್ಗೆ ಈ ತಾತ್ಸಾರವಾದಂಥ ಭಾವನೆ ಏತಕ್ಕೆ, ಅದಕ್ಕೆ ಕಾರಣವೇನೆಂದು ನಾವು ಇಲ್ಲಿ ಈಗ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. ಈ ವಯಸ್ಕರ ಶಿಕ್ಷಣದ ಬಗ್ಗೆ ಈಗಾಗಲೇ ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಂಥ ಮಾನ್ಯ ಸದಸ್ಯರು ಪ್ರಮುಖವಾಗಿ ಹೇಳಿದಂಥ ವಿಷಯವೇನೆಂದರೆ ಈ ಕಾರ್ಯಕ್ರಮ ಸರಿಯಾಗಿ ನಡೆಯುತ್ತಿಲ್ಲ. ಇಲ್ಲಿ ಹಣದ ದುರುಪಯೋಗವಾಗುತ್ತಿದೆ. ಇಲ್ಲಿ ಪ್ರಚಾರಕ್ಕೆ ಬಹಳಷ್ಟು ರೀತಿ ಹಣ ಖರ್ಚಾಗುತ್ತಿದೆ ಎನ್ನುವುದನ್ನು ಮಾತನಾಡಿದ್ದಾರೆ. ಇಲ್ಲಿ ಒಂದು ವಿಷಯವನ್ನು ಗಮನಿಸಬೇಕಾಗುತ್ತದೆ. ನಾವು ಈ ಒಂದು ವಯಸ್ಕರ ಶಿಕ್ಷಣದ ಜೊತೆಗೆ ತಾತ್ಸಾರಭಾವನೆಯನ್ನು ತಾಳುವುದರ ಜೊತೆಗೆ ವಯಸ್ಕರ ಶಿಕ್ಷಣ ಇವತ್ತು ಈ ದೇಶಕ್ಕೆ ಅವಶ್ಯಕತೆ ಇದೆಯೋ ಏನೋ ಎನ್ನುವುದರ ಬಗ್ಗೆಯೂ ಕೂಡ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ತಾವು ಈಗ ಇಲ್ಲಿ ಕೆಲವು ಮೂಲಭೂತವಾದಂಥ ಸಮಸ್ಯೆಗಳಿಗೆ ಗಮನಕೊಟ್ಟಾಗ ಅಥವಾ ಇದರ ಬಗ್ಗೆ ಗಂಭೀರವಾದಂಥ ಒಂದು ಚಿಂತನೆಯನ್ನು ಮಾಡಿದಾಗ ನಮಗೆ ಏನು ಗೊತ್ತಾಗುತ್ತದೆ ಎಂಬುದನ್ನು ಹೇಳುತ್ತೇನೆ. ನಾವು ನೋಡುತ್ತಿದ್ದೇವೆ. ಅನೇಕ ಶತಮಾನಗಳಿಂದ ನಮ್ಮ ಹಿರಿಯರು ಕೆಲವು ಜನಪದ ಸಾಹಿತ್ಯವನ್ನು ರಚಿಸಿದ್ದಾರೆ. ಅವರೇನೂ ಸಾಕ್ಷರರಾಗಿರಲಿಲ್ಲ. ನಿರಕ್ಷಗಳೂ ಸಹ ಅತ್ಯಂತ ಅದ್ಭುತರೀತಿಯಲ್ಲಿ ಚಿಂತನೆ ಮಾಡುವುದನ್ನು ನಾವು ನೋಡಿದ್ದೇವೆ. ಮಹಮದ್ ಪೈಗಂಬರರು ಅತ್ಯಂತ ಪವಿತ್ರವಾದಂಥ ಖುರಾನ್ ಗ್ರಂಥವನ್ನು ರಚಿಸಿದರು. ಅವರೂ ಸಹ ನಿರಕ್ಷರಿಗಳಾಗಿದ್ದರು ಎಂದು ಹೇಳುವಾಗ ಅದರ ಜೊತೆಗೆ ಅಷ್ಟೊಂದು ಸಾಕ್ಷರರಲ್ಲದಂಥ ರಾಮಕೃಷ್ಣಪರಮಹಂಸರು ಈ ದೇಶಕ್ಕೆ ನೀಡಿದಂಥ ಅತ್ಯಂತ ಅದ್ಭುತವಾದಂಥ ಕೊಡುಗೆ ಏನೆಂದರೆ ಸ್ವಾಮಿ ವಿವೇಕಾನಂದರು. ಹೀಗೆ ನಿರಕ್ಷರಿಗಳೂ ಸಹ ಈ ರೀತಿಯ ಒಂದು ವಿಶಿಷ್ಟವಾದಂಥ ಮಹತ್ವಪೂರ್ಣವಾದಂಥ ಹೆಗ್ಗಳಿಕೆಯನ್ನು

ಪಡೆದಾಗ ಈ ಸಾಕ್ಷರತೆಯ ಅವಶ್ಯಕತೆ ಇದೆಯೋ ಹೇಗೆ ಎನ್ನುವಂಥ ಮೂಲಭೂತವಾದ ಪ್ರಶ್ನೆ ನಮ್ಮ ಮುಂದೆ ಬಂದು ನಿಲ್ಲುತ್ತದೆ. ಮಾನ್ಯ ಅಧ್ಯಕ್ಷರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಇಲ್ಲಿ ಒಂದು ಸಂಗತಿಯನ್ನು ಗಮನಿಸಬೇಕಾಗುತ್ತದೆ. ಈ ಅಕ್ಷರಗಳು ಇಲ್ಲದಿದ್ದರೆ ಮನುಕುಲದ ಮಹತ್ವದ ದಾಖಲೆಗಳು, ಖುರಾನ್ ಆಗಲಿ, ಅಥವಾ ಜನಪದ ಸಾಹಿತ್ಯವೇ ಆಗಿರಲಿ, ಇದು ನಮ್ಮ ಜೊತೆಯಲ್ಲಿ ಇರುತ್ತಿರಲಿಲ್ಲವೆಂಬುದನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗುತ್ತದೆ.

ಈ ಜ್ಞಾನ ಭಂಡಾರ ಏನಿದೆ ಇದು ಮುಂದಿನ ಪೀಳಿಗೆಗೆ ಬಳುವಳಿ ನೀಡುವ ಸಾಧ್ಯತೆ ಇರುತ್ತಿರಲಿಲ್ಲ ಈ ಅಕ್ಷರ ಜ್ಞಾನ ಇಲ್ಲದಿದ್ದರೆ ಎಂಬುದನ್ನು ಸಹ ನಾವು ತಿಳಿದುಕೊಳ್ಳಬೇಕಾಗುತ್ತದೆ. ಈ ಅಕ್ಷರಗಳು ಜ್ಞಾನದ ರಕ್ಷಣೆ ಮಾಡುವಂಥ ತಿಜೋರಿಗಳು ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಜ್ಞಾನ ಸಂಪತ್ತನ್ನು ವೃದ್ಧಿ ಮಾಡುವಲ್ಲಿ ಅಕ್ಷರಗಳ ಪಾತ್ರ ಅತ್ಯಂತ ಪ್ರಮುಖವಾಗಿದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇವತ್ತು ಈ ದೇಶದಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ಮಾತನಾಡುತ್ತೇವೆ. ಅದರಲ್ಲೂ ನಮ್ಮ ದೇಶದಲ್ಲಿರುವ ಬಹುಸಂಖ್ಯಾತ ಜನರ ಆರ್ಥಿಕ ದಾರಿದ್ರ್ಯದ ಬಗ್ಗೆ ಮಾತನಾಡುತ್ತೇವೆ. ಆದರೆ ಒಂದು ವಿಷಯವನ್ನು ನಾವು ಗಮನಿಸಬೇಕಾಗಿದೆ. ಈ ಆರ್ಥಿಕ ದಾರಿದ್ರ್ಯಕ್ಕೆ ಮೂಲವಾದಂಥ ಕಾರಣ ಅಕ್ಷರದ ದಾರಿದ್ರ್ಯತನ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಆದ್ದರಿಂದ ಭೌತಿಕ ದಾರಿದ್ರ್ಯದ ವಿರುದ್ಧ ನಾವು ಸಮರವನ್ನು ಸಾರುವ ಕೆಲಸ ಮಾಡಬೇಕಾಗಿದೆ. ಅದಕ್ಕೆ ಈ ಅಕ್ಷರ ಸೈನ್ಯದಿಂದ ಮಾತ್ರ ಈ ಯುದ್ಧ ಗೆಲ್ಲಲಿಕ್ಕೆ ಸಾಧ್ಯವಾಗುತ್ತದೆಂದು ನಾನು ಸದಸ್ಯ ಮಿತ್ರರಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಏತಕ್ಕೆ ಇಷ್ಟು ಒತ್ತು ಕೊಡುತ್ತಿದ್ದೇನೆಂದರೆ ಕೇವಲ ಇವತ್ತು ವಯಸ್ಕರ ಶಿಕ್ಷಣ ಖಾತೆಯ ಜವಾಬ್ದಾರಿ ಹೊತ್ತಿರತಕ್ಕ ಒಬ್ಬ ಸಚಿವನಾಗಿ ನಾನು ಈ ಮಾತನ್ನು ಹೇಳುತ್ತಿಲ್ಲ. ಇಲ್ಲಿ ವಯಸ್ಕರ ಶಿಕ್ಷಣ ಖಾತೆಯನ್ನು ನನ್ನ ಜವಾಬ್ದಾರಿಗೆ ಕೊಟ್ಟಾಗ ಅನೇಕ ಮಿತ್ರರ ಮಾತುಗಳನ್ನು ಕೇಳಿದ್ದೇನೆ. ಒಂದು ರೀತಿಯ ಉಡಾಫೆ ಮಾತು ವಯಸ್ಕರ ಶಿಕ್ಷಣ ಮಂತ್ರಿ ಎಂಬ ಮಾತು ಕೇಳಿದೆ. ಅವರು ಕೆಟ್ಟ ಭಾವನೆಯಿಂದ ಅದನ್ನು ಹೇಳಿದ್ದಾರೆಂದು ಹೇಳುತ್ತಿಲ್ಲ. ಆದರೆ ಸಾಮಾನ್ಯವಾಗಿ ನಮ್ಮ ಸಮಾಜದಲ್ಲಿರುವ ಭಾವನೆಯ ಪ್ರತೀಕ ಇದು ಎಂದು ಹೇಳಬೇಕಾಗುತ್ತದೆ. ಆದುದರಿಂದ ಇವತ್ತು ಈ ಸಮಾಜದಲ್ಲಿರುವ ದೋಷ ಏನಿದೆ ಅದನ್ನು ಹೋಗಲಾಡಿಸಬೇಕಾದರೆ ಯಾವ ರೀತಿ ಸಾಕ್ಷರತೆ ಪ್ರಚಾರದ ಬಗ್ಗೆ ಬದಲಾವಣೆಯ ಮಹತ್ವ ಕೊಡಬೇಕಾಗುತ್ತದೆಂಬುದನ್ನು ನಾವೆಲ್ಲಾ ತಿಳಿದುಕೊಳ್ಳಬೇಕಾಗುತ್ತದೆ. ನಮ್ಮ ದೇಶದಲ್ಲಿ ಸಾಕ್ಷರತೆ ವಿಷಯದಲ್ಲಿ ನಾವು ಜಗತ್ತಿನಲ್ಲಿ ಯಾವ ಸ್ಥಾನದಲ್ಲಿದ್ದೇವೆಂಬುದನ್ನು ನೋಡಬೇಕಾಗುತ್ತದೆ. ಇವತ್ತು ನಾವು ಯುನೆಸ್ಕೋ ವರದಿಯ ಆಧಾರದ ಮೇಲೆ ಹೇಳಬೇಕಾದರೆ, ಅತ್ಯಂತ ಕಡಿಮೆ ಆದಾಯ ಇರುವಂತೆ ಡೆವಲಪಿಂಗ್ ಕಂಟ್ರೀಸ್ ಎಂಬ ಯಾದಿಯನ್ನು ತಯಾರಿಸಿದರೆ ಅದರಲ್ಲಿ ಆರು ದೇಶಗಳನ್ನು ನಮೂದಿಸಿದ್ದಾರೆ. ಮೊದಲನೆಯದು, ಟ್ರಾನ್ಸಾನಿಯ, ಜಾಂಬಿಯ, ಚೈನ, ಇಂಡಿಯ, ನೈಜೀರಿಯ ಮುಂತಾದವುಗಳು. ಇವುಗಳಲ್ಲಿ 5ನೇ ಸ್ಥಾನದಲ್ಲಿ ನಾವು ನಿಲ್ಲುತ್ತೇವೆ. ಅತ್ಯಂತ ಸಣ್ಣ ದೇಶಗಳನ್ನು ಸಹ ನಾವು ಮೀರಿಸುವುದಕ್ಕೇ ಆಗಲಿಲ್ಲ. ಅತ್ಯಂತ ದೊಡ್ಡದಾದಂಥ ಜನಸಂಖ್ಯೆಯಲ್ಲಿ ವಿಸ್ತಾರವಾದ ಚೈನಾ ದೇಶವನ್ನು ಮೀರಿಸುವುದಕ್ಕೆ ಆಗಿಲ್ಲ. ಚೈನಾ ದೇಶದಲ್ಲಿ ನಿರಕ್ಷರ ಸಂಖ್ಯೆ ಶೇಕಡ 21ರಷ್ಟಿದ್ದರೆ ನಮ್ಮ ದೇಶದಲ್ಲ ಶೇಕಡ 57ರಷ್ಟಿದೆ. ನಾವು ಮಾತು ಎತ್ತಿದರೆ ಹೇಳುತ್ತೇವೆ, ನಮ್ಮ ದೇಶ ಜಗತ್ತಿನಲ್ಲಿ ಸ್ವತಂತ್ರವಾದ ಅತ್ಯಂತ ದೊಡ್ಡ ಪ್ರಜಾಸತ್ತಾತ್ಮಕವಾದ ರಾಷ್ಟ್ರ ಎಂದು ಹೇಳುತ್ತೇವೆ. ನಾವು ಬಹಳ ದೊಡ್ಡ ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಈ ರೀತಿ ಬಹಳ ಸಂಖ್ಯೆಯಲ್ಲಿ ನಿರಕ್ಷರರನ್ನು ಇಟ್ಟುಕೊಂಡು ಜಗತ್ತಿನಲ್ಲಿ ತಲೆ ಎತ್ತಿ ನಿಲ್ಲುವುದಕ್ಕೆ ಸಾಧ್ಯವಾಗುತ್ತದೆಯೇ ಹೇಗೆ ಎಂಬುದನ್ನು ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. ನಮ್ಮ ರಾಷ್ಟ್ರದ ಪಿತಾಮಹರಾದ ಬಾಪೂಜಿಯವರು ಮೇಲಿಂದ ಮೇಲೆ ಹೇಳುತ್ತಿದ್ದರು, ನಿರಕ್ಷತೆ ಎಂಬುದು ಈ ದೇಶಕ್ಕೆ ಅಂಟಿಕೊಂಡಿರುವ ಶಾಪ ಎಂದು. ಈ ಶಾಪವನ್ನು

ವಿಮೋಚನೆ ಮಾಡದೆ ನಾವು ನಿಲ್ಲಬಾರದೆಂದು ಹೇಳುತ್ತಿದ್ದರು. ಆದರೆ ಇವತ್ತು ಸ್ವಾತಂತ್ರ್ಯವಾಗಿ 4 ದಶಕಗಳನ್ನು ಕಳೆದ ಮೇಲೂ ಸಹ ಇವತ್ತು ನಮ್ಮ ಸಾಕ್ಷರತೆಯ ಪ್ರಮಾಣ ಶೇಕಡ 56ರಷ್ಟು. ಅಂದರೆ ಇವತ್ತು ನಮ್ಮ ನಿರಕ್ಷಕರ ಪ್ರಮಾಣ ಶೇಕಡ 44ರಷ್ಟು. ಇಷ್ಟು ದೊಡ್ಡ ಪ್ರಮಾಣದಲ್ಲಿ ಇರುವಂಥ ನಿರಕ್ಷಕರ ಸಂಖ್ಯೆ ಯಾವ ರೀತಿ ಇದೆ ಎಂದರೆ ಜಗತ್ತಿನ ಉಳಿದ ರಾಷ್ಟ್ರಗಳ ಜನಸಂಖ್ಯೆಯಷ್ಟಿದೆ. ಈ ಒಂದು ಸಂಗತಿಯನ್ನು ಮನಗಂಡಾಗ ಒಂದು ವಿಷಯವನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ ಯಾವ ರೀತಿಯ ಪ್ರಾಮುಖ್ಯತೆಯನ್ನು ಈ ಸಾಕ್ಷರತೆಗೆ ಕೊಡಬೇಕಾಗುತ್ತದೆ ಎಂದು. ದಿವಂಗತ ಪ್ರಧಾನಿ ರಾಜೀವ ಗಾಂಧಿಯವರು ಈ ವಿಷಯವನ್ನು ಮನಗಂಡು ಅವರು ಏನು ಒಂದು ಟೆಕ್ನಾಲಜಿ ಮಿಷಿನ್ ಎಂದು ಕೆಲವು ಆದ್ಯತೆಯ ವಿಷಯಗಳನ್ನು ನಿರ್ಧರಿಸಿದ್ದರೋ ಆ ವಿಷಯಗಳಲ್ಲಿ 1989–90ರಲ್ಲಿ ಈ ರಾಷ್ಟ್ರೀಯ ಸಾಕ್ಷರತಾ ಆಯೋಗವನ್ನು ರಚಿಸಿ ಆ ದಿಸೆಯಲ್ಲಿ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.

ಆ ಕಾರ್ಯಕ್ರಮದ ಪ್ರಕಾರ ಕೇಂದ್ರ ಸರ್ಕಾರ 8ನೇ ಪಂಚವಾರ್ಷಿಕ ಯೋಜನೆಯ ಕೊನೆಯೊಳಗೆ ಈ ದೇಶವನ್ನು ಸಂಪೂರ್ಣ ಸಾಕ್ಷರತೆ ಮಾಡಬೇಕೆಂದು ಗುರಿ ಇಟ್ಟು ಕೊಂಡಿದೆ. ಕರ್ನಾಟಕ ಸರ್ಕಾರವೂ ಒಂದು ಗುರಿಯನ್ನು ಇಟ್ಟುಕೊಂಡಿದೆ. ಮುಂದಿನ 2 ವರ್ಷಗಳ ಅವಧಿಯಲ್ಲಿ ಈ ರಾಜ್ಯವನ್ನು ಸಂಪೂರ್ಣ ಸಾಕ್ಷರತೆ ಮಾಡಬೇಕೆನ್ನುವ ಗುರಿ ಇಟ್ಟುಕೊಂಡಿದೆ. ಈ ಕಾರ್ಯಕ್ರಮದ ಪ್ರಕಾರ ನಾವು ಈಗಾಗಲೇ 9 ಜಿಲ್ಲೆಗಳಲ್ಲಿ ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. 1993–94ರಲ್ಲಿ ಇನ್ನು ಉಳಿದ 6 ಜಿಲ್ಲೆಗಳಲ್ಲಿ ಹಮ್ಮಿಕೊಳ್ಳುತ್ತಿದ್ದೇವೆ. ಅದಾದ ನಂತರ ಮುಂದಿನ 1994–95ರಲ್ಲಿ ಇನ್ನುಳಿದ 5 ಜಿಲ್ಲೆಗಳನ್ನು ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮದಡಿಯಲ್ಲಿ ತಂದು ರಾಜ್ಯದಲ್ಲಿ ಸಂಪೂರ್ಣ ಸಾಕ್ಷರತೆ ಸಾಧಿಸಬೇಕೆಂಬುದು ನಮ್ಮ ಗುರಿಯಾಗಿದೆ. ಇವತ್ತು ಸಾಕ್ಷರತಾ ಆಂದೋಳನ ಮಾಡುವುದಕ್ಕೆ ಅನೇಕ ಸದಸ್ಯರು ಮೇಲಿಂದ ಮೇಲೆ ಹೇಳುತ್ತಿದ್ದಾರೆ. ಕೇವಲ ಅಧಿಕಾರಿಗಳ ಆಂದೋಳನ ಆಗಿದೆ. ಜನಾಂದೋಳನ ಆಗಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಇವತ್ತು ಈ ಯೋಜನೆ ಏನಿದೆ ಇದರಲ್ಲಿ ಒಂದು ಜಿಲ್ಲಾ ಸಾಕ್ಷರತಾ ಸಮಿತಿಯಿಂದ ಈ ಕಾರ್ಯಕ್ರಮ ನಡೆಸಲಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಜಿಲ್ಲಾ ಮಂತ್ರಿಗಳು. ಅಧ್ಯಕ್ಷರಾಗಿರುತ್ತಾರೆ. ಆ ಜಿಲ್ಲೆಯ ಎಲ್ಲಾ ಲೋಕಸಭಾ ಸದಸ್ಯರು, ಎಲ್ಲಾ ಶಾಸಕರು, ಎಲ್ಲಾ ವಿಧಾನಪರಿಷತ್ತಿನ ಸದಸ್ಯರು ಕೂಡ ಆ ಸಮಿತಿಯ ಸದಸ್ಯರಾಗಿರುತ್ತಾರೆ, ಇದರ ಜೊತೆಗೆ ಇತರೇ ಸಂಘಸಂಸ್ಥೆಗಳು ಮತ್ತು ಕೆಲವು ಸಾಮಾಜಿಕ ಕಾರ್ಯಕರ್ತರು, ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ. ಇವರ ವಿಶ್ವಾಸ ತೆಗೆದುಕೊಂಡು ಆಂದೋಳನ ರೂಪದಲ್ಲಿ ಈ ಕಾರ್ಯಕ್ರಮ ಹಾಕಿಕೊಳ್ಳುವುದು ನಮ್ಮ ಸರ್ಕಾರ ಉದ್ದೇಶ. ಈ ದಿಸೆಯಲ್ಲಿ ನಾವು ಇವತ್ತು ಈಗಾಗಲೇ ಮುಂದೆ ಹೋಗಿದ್ದೇವೆ. ಈ ಕಾರ್ಯಕ್ರಮದ ಪ್ರಕಾರ ನಾವು ಇವತ್ತು ಈ ರಾಜ್ಯದಲ್ಲಿ ದಕ್ಷಿಣಕನ್ನಡ ಜಿಲ್ಲೆಯನ್ನು ಸಂಪೂರ್ಣ ಸಾಕ್ಷರತಾ ಜಿಲ್ಲೆಯಾಗಿ ಘೋಷಿಸಿದ್ದೇವೆ. ಇನ್ನು ಕೆಲವೇ ದಿವಸಗಳಲ್ಲಿ ಶಿವಮೊಗ್ಗ ಜಿಲ್ಲೆಯನ್ನು ಸಂಪೂರ್ಣ ಸಾಕ್ಷರತಾ ಜಿಲ್ಲೆ ಎಂದು ಘೋಷಿಸುವವರಿದ್ದೇವೆ. ಜೊತೆಗೆ ತುಮಕೂರು ಜಿಲ್ಲೆಯಲ್ಲಿ ಕೂಡ ವೇಗದಲ್ಲಿ ಸಾಕ್ಷರತಾ ಕಾರ್ಯಕ್ರಮ ನಡೆಯುತ್ತಿದೆ. ತುಮಕೂರಿನ ಅನೇಕ ಸದಸ್ಯರೂ ಕೂಡ ಮೇಲಿಂದ ಮೇಲೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಈ ಕಾರ್ಯಕ್ರಮದಲ್ಲಿ ಜನರ ಸಹಭಾಗಿತ್ವ ಜನರನ್ನು ಆಂದೋಳನದಲ್ಲಿ ಒಳಪಡಿಸುವ ಕಾರ್ಯಕ್ರಮ ಸರಿಯಾಗಿ ಆಗುತ್ತಿಲ್ಲ ಎಂದು ಹೇಳಿದ್ದಾರೆ. ಈ ಕಾರ್ಯಕ್ರಮದಲ್ಲಿ ಈಗಾಗಲೇ ಎಷ್ಟು ಹಣ ಖರ್ಚು ಮಾಡಿದ್ದೀರಿ. ಯಾವ ರೀತಿ ಮಾಡುತ್ತಿದ್ದೀರಿ ಎನ್ನುವ ಪ್ರಶ್ನೆಯನ್ನು ಅನೇಕ ಸದಸ್ಯರು ಕೇಳಿದ್ದಾರೆ. ಒಬ್ಬೊಬ್ಬರಿಗೆ ಉತ್ತರವನ್ನು ಕೊಡುವುದಕ್ಕೆ ಹೋಗದೇ ಸ್ಥೂಲವಾಗಿ ಉತ್ತರವನ್ನು ಕೊಡುತ್ತಿದ್ದೇನೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆ 26.92 ಲಕ್ಷ ಇದೆ. ಇದರಲ್ಲಿ 9 ರಿಂದ 35 ವರ್ಷ ವಯಸ್ಸಿನ ಒಳಗಿನ ಜನಸಂಖ್ಯೆಯಲ್ಲಿ

ಅನಕ್ಷರಸ್ಥರು 2.44 ಲಕ್ಷ ಇದ್ದು ಅದರಲ್ಲಿ ನಾವು ಈಗಾಗಲೇ 1.64 ಲಕ್ಷ ಜನರನ್ನು ಸಾಕ್ಷರರನ್ನಾಗಿ ಮಾಡಿದ್ದೇವೆ. ಈ ಬಾಬಿಗೆ ನಮಗೆ ಕೇಂದ್ರ ಸರ್ಕಾರದಿಂದ ಮಂಜೂರು ಆದ ಹಣ 200 ಲಕ್ಷ ರೂಪಾಯಿಗಳು. ಇದರಲ್ಲಿ ಈಗಾಗಲೇ 150 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದ್ದೇವೆ. ಅದೇ ರೀತಿ ಬಿಜಾಪುರ ಜಿಲ್ಲೆಯ ಜನಸಂಖ್ಯೆ 29.18 ಲಕ್ಷ. ಅದರಲ್ಲಿ ಅನಕ್ಷರಸ್ಥರು 5.44 ಲಕ್ಷ ಇದ್ದು ಅದರಲ್ಲಿ ಸಾಕ್ಷರರಾದವರ ಜನಸಂಖ್ಯೆ 1.63 ಲಕ್ಷ. ಆ ನಂತರ ಅದರಲ್ಲಿ ನಮಗೆ ಮಂಜೂರು ಆದದ್ದು 3 ಕೋಟಿ ರೂಪಾಯಿಗಳು. ವೆಚ್ಚ ಆದದ್ದು 3 ಕೋಟಿ ರೂಪಾಯಿಗಳು. ಈ ರಾಜ್ಯದ 7 ಜಿಲ್ಲೆಗಳಲ್ಲಿ 149.95 ಲಕ್ಷ ಜನಸಂಖ್ಯೆಯಲ್ಲಿ ಈಗಾಗಲೇ 27.24 ಲಕ್ಷ ಜನ ಏನು ಅನಕ್ಷರಸ್ಥರು ಇದ್ದರು ಅದರಲ್ಲಿ 14.57 ಲಕ್ಷ ಜನರನ್ನು ಅಕ್ಷರಸ್ಥರನ್ನಾಗಿ ಮಾಡಿದ್ದೇವೆ. ಒಟ್ಟು ಜನಸಂಖ್ಯೆಯ ಶೇಕಡಾ 20 ರಷ್ಟನ್ನು, ಅಂದರೆ ಅನಕ್ಷರಸ್ಥರಲ್ಲಿ ಶೇಕಡಾ 50ರಷ್ಟನ್ನು ನಾವು ಇವತ್ತು ಸಾಕ್ಷರರನ್ನಾಗಿ ಮಾಡುವುದಕ್ಕೆ ಈ ಕಾರ್ಯಕ್ರಮದಿಂದ ಸಾಧ್ಯವಾಗಿದೆ.

ಸಾಕ್ಷರತೆಯ ಬಗ್ಗೆ ಈಗಾಗಲೇ ಹೇಳಿದ್ದೇನೆ. ಮುಂದಿನ ವರ್ಷದಲ್ಲಿ ಆರು ಜಿಲ್ಲೆಗಳನ್ನು ತೆಗೆದುಕೊಳ್ಳುತ್ತಾ ಇದ್ದೇವೆ. 1993–94ರಲ್ಲಿ ತೆಗೆದುಕೊಳ್ಳತಕ್ಕ ಒಂದು ವರದಿಯನ್ನು ಕೊಡುತ್ತಿದ್ದೇವೆ. ಬೆಳಗಾಂ, ಗುಲ್ಬರ್ಗ, ಉತ್ತರ ಕನ್ನಡ, ಚಿಕ್ಕಮಗಳೂರು, ಕೊಡಗು ಮತ್ತು ಬೆಂಗಳೂರು ಗ್ರಾಮಾಂತರ ಧಾರವಾಡದಲ್ಲಿ ಉಳಿದಂತಹ ತಾಲ್ಲೂಕುಗಳು ಹಾಗೂ ಮೈಸೂರಿನಲ್ಲಿ ಉಳಿದಂತಹ ತಾಲ್ಲೂಕುಗಳು ಅನಂತರ 1994-95 ರಲ್ಲಿ ಬಳ್ಳಾರಿ ಚಿತ್ರದುರ್ಗ, ಕೋಲಾರ, ಹಾಸನ ಮತ್ತು ಬೆಂಗಳೂರು ನಗರ ಜಿಲ್ಲೆ ಈವೊಂದು ಜಿಲ್ಲೆಗಳನ್ನು ನಾವು ತೆಗೆದುಕೊಳ್ಳುತ್ತಾ ಇದ್ದೇವೆ. ಇಲ್ಲಿ ಕಾರ್ಯಕ್ರಮದಲ್ಲಿ ಲೋಪದೋಷಗಳು ಇರಬಹುದು. ಆದರೆ ಆ ಲೋಪದೋಷಗಳನ್ನು ಭೂತಗನ್ನಡಿಯಲ್ಲಿ ನೋಡಿ ಅದನ್ನೇ ದೊಡ್ಡದು ಮಾಡಿದರೆ ಈವೊಂದು ಕಾರ್ಯಕ್ಕೆ ಅಪಚಾರ ಎಸಗಿದಂತಾಗುತ್ತದೆಂದು ನಾನು ಸೂಕ್ಷ್ಮವಾಗಿ ಹೇಳಬೇಕಾಗುತ್ತದೆ. ನನ್ನ ಕೋರಿಕೆ ಇಷ್ಟೆ, ನೆಗಡಿಯಾದರೆ ಮೂಗನ್ನೇ ಕೊಯ್ದು ಹಾಕಬಾರದು. ನೆಗಡಿ ಪರಿಹಾರವಾಗಲಿಕ್ಕೆ ಔಷಧಿ ಕೊಡಬೇಕು. ಆ ಔಷಧಿ ಕೊಡುವಂತಹ ಕೆಲಸವನ್ನು ನಾವೆಲ್ಲಾ ಕೂಡಿ ಮಾಡೋಣವೆಂದು ಸೂಕ್ಷ್ಮವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನನಗೆ ಬರುವಂತಹ ಮತ್ತೊಂದು ಇಲಾಖೆ ಅದು ಗ್ರಂಥಾಲಯ ಇಲಾಖೆ; ಸಾಕ್ಷರತಾ ಆಂದೋಳನದಂತೆ ಗ್ರಂಥಾಲಯ ಇಲಾಖೆ ಸಹ ಸಾಕಷ್ಟು ದುರ್ಲಕ್ಷ್ಯಕ್ಕೆ ಒಳಗಾದಂತಹ ಇಲಾಖೆ. ಇವತ್ತು ಗ್ರಂಥಾಲಯ ಇಲಾಖೆಯಲ್ಲಿ ನಮ್ಮ ರಾಜ್ಯದಲ್ಲಿ ಒಟ್ಟು 2532 ಮಂಡಲಗಳಿವೆ. ಅದರಲ್ಲಿ ಇದುವರೆಗೆ 551 ಮಂಡಲಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಿದ್ದೇವೆ. ಲೋಕಶಿಕ್ಷಣ ಇಲಾಖೆ ಅಂದರೆ ವಯಸ್ಕರ ಶಿಕ್ಷಣ ಇಲಾಖೆಯಿಂದ ಜನ ಶಿಕ್ಷಣ ನಿಲಯಗಳನ್ನು ನಾವು ಪ್ರಾರಂಭಿಸಬೇಕು. ಈ ಪೋಸ್ಟ್ ಲಿಟ್ರಸಿ ಪ್ರೋಗ್ರಾಮ್‌ನಲ್ಲಿ ಸಾಕ್ಷರೋತ್ತರ ಕಾರ್ಯಕ್ರಮದ ಅಡಿಯಲ್ಲಿ ನಾವು ಜನ ಶಿಕ್ಷಣ ನಿಲಯಗಳನ್ನು ಪ್ರಾರಂಭಿಸುತ್ತೇವೆ. ಜನ ಶಿಕ್ಷಣದ ಉದ್ದೇಶವೇನೆಂದರೆ ಅಲ್ಲಿ ಸಂಪೂರ್ಣವಾಗಿ ಮಾಹಿತಿಗಳನ್ನು ನವ ಸಾಕ್ಷರರಿಗೆ ಒದಗಿಸುವುದು. ಅಲ್ಲಿ ಅವರ ಆ ಕಲಿಕೆಯ ಹವ್ಯಾಸವನ್ನು ಮುಂದುವರಿಸುವುದಕ್ಕೆ ಎಲ್ಲಾ ಸೌಕರ್ಯಗಳನ್ನು ಒದಗಿಸಿ ಕೊಡುವುದು ಜನ ಶಿಕ್ಷಣದ ಉದ್ದೇಶ. ಅದರಲ್ಲಿ ಅನೇಕ ಗ್ರಂಥಗಳನ್ನೂ ಪೂರೈಸುತ್ತೇವೆ. ನಮ್ಮ ಉದ್ದೇಶ ನಮ್ಮ ವಿಚಾರ ಏನೆಂದರೆ ಈ ಗ್ರಂಥಾಲಯ ಇಲಾಖೆಯ ಮತ್ತು ಲೋಕಶಿಕ್ಷಣ ಇಲಾಖೆಯಲ್ಲಿರುವಂತಹ ಜನಶಿಕ್ಷಣ ಇವೆರಡನ್ನೂ ಕೂಡಿಸಿಕೊಂಡು ಈವೊಂದು ಜ್ಞಾನವನ್ನು ಪ್ರಸಾರ ಮಾಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡು ನಾವು ಈಗಾಗಲೇ ನಿರ್ಣಯ ಮಾಡಿದ್ದೇವೆ. ಅದರಂತೆ ಇನ್ನು ಉಳಿದ 4273 ಮಂಡಲಗಳಲ್ಲಿ 1992–93ರಲ್ಲಿ ನಾವು 100 ಮಂಡಲಗಳಲ್ಲಿ 1993–94ರಲ್ಲಿ 200 ಮಂಡಲಗಳನ್ನು ತೆಗೆದುಕೊಂಡು ಅಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಬೇಕೆಂದು ನಿರ್ಣಯ ಮಾಡಿದ್ದೇವೆ. ಅದೂ ಅಲ್ಲದೆ ಈ ಪುಸ್ತಕಗಳ ಪೂರೈಕೆಯ ಬಗ್ಗೆ ಗ್ರಂಥಾಲಯ ಇಲಾಖೆಯಲ್ಲಿ ಪ್ರಮುಖವಾದ ದೂರು ಏನೆಂದರೆ, ಗ್ರಂಥಾಲಯಗಳಿಗೆ

ಗ್ರಂಥಗಳನ್ನು ಖರೀದಿಸುವ ಸಮಯದಲ್ಲಿ ಬಹಳಷ್ಟು ಅವ್ಯವಹಾರ ನಡೆಯುತ್ತದೆ; ಅಲ್ಲಿ ತಮ್ಮ ಜನರಿಗೆ ಮಾತ್ರ ಆದ್ಯತೆ ಕೊಡಲಾಗುತ್ತದೆ. ಮಹತ್ವವಾದ ಪುಸ್ತಕಗಳನ್ನು ಖರೀದಿಸುವುದಕ್ಕೆ ಮುಂದಾಗುವುದಿಲ್ಲ ಎನ್ನುವ ಕೆಲವು ಆರೋಪಗಳನ್ನು ನಾವು ಮನಸ್ಸಿನಲ್ಲಿಟ್ಟು ಈವೊಂದು ಖರೀದಿ ಪದ್ಧತಿ ಏನಿದೆ ಅದನ್ನು ಬದಲಾಯಿಸಿ ಖರೀದಿ ಸಮಿತಿ ಮಾಡಿದ್ದೇವೆ. ಬುಕ್ ಸೆಲೆಕ್ಷನ್ ಕಮಿಟಿ ಎಂದು ಮಾಡಿ ಅದಕ್ಕೆ ಸ್ವಲ್ಪ ತಿದ್ದುಪಡಿಯನ್ನು ತಂದು ಅದರಲ್ಲಿ ವಿಶೇಷ ತಜ್ಞರನ್ನು ಆ ಸಮಿತಿಯಲ್ಲಿ ನೇಮಿಸಿ ಆ ತಜ್ಞರು ಆಯ್ಕೆ ಮಾಡುವಂತಹ ಪುಸ್ತಕಗಳನ್ನು ಮಾತ್ರ ಖರೀದಿಸಬೇಕೆಂದು ನಿರ್ಣಯವನ್ನು ಮಾಡಿದ್ದೇವೆ. ಅದೂ ಅಲ್ಲದೆ ಜಿಲ್ಲಾ ಕೇಂದ್ರ ಗ್ರಂಥಾಲಯಗಳಲ್ಲಿ ಇವತ್ತು ಖರೀದಿ ಮಾಡುತ್ತಾರೆ. ಮತ್ತು ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಖರೀದಿ ಮಾಡುತ್ತಿದ್ದಾರೆ. ಅದರಲ್ಲಿ ಶೇಕಡ 60ರಷ್ಟು ಕನ್ನಡ ಪುಸ್ತಕಗಳನ್ನು ಖರೀದಿ ಮಾಡಬೇಕೆಂದೂ ಶೇಕಡ 40 ರಷ್ಟು ಇಂಗ್ಲೀಷ್ ಮತ್ತು ಉಳಿದ ಭಾಷೆ ಪುಸ್ತಕಗಳನ್ನು ಖರೀದಿಸಬೇಕೆಂದು ನಾವು ನಿರ್ಣಯ ಮಾಡಿದ್ದೇವೆ. ಪ್ರಮುಖವಾಗಿ ಕೇಳಿಬರುವ ಆರೋಪ ಒಂದು ಮುಖ್ಯವಾದ ಕಾರಣ ಏನೆಂದರೆ ಇಂಗ್ಲೀಷ್ ಪುಸ್ತಕಗಳನ್ನು ಖರೀದಿಸುವಲ್ಲಿ ಇರುವಂತಹ ಒಂದು ಪದ್ಧತಿ ದೋಷ; ಅದನ್ನು ಹೋಗಲಾಡಿಸುವುದಕ್ಕೆ ಸಹ ನಾವು ಈಗಾಗಲೇ ಇಲ್ಲಿ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಈ ವರ್ಷ ನಾವು ಲೈಬ್ರರಿ ಡಿಪಾರ್ಟ್‌ಮೆಂಟ್‌ನ ರಜತ ಮಹೋತ್ಸವವನ್ನು ಆಚರಿಸುತ್ತಿದ್ದೇವೆ. ರಜತಮಹೋತ್ಸವ ಸವಿ ನೆನಪಿಗಾಗಿ ನಾವು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅದರಲ್ಲಿ ಪ್ರಮುಖವಾದುದು ಅಂದರೆ ರಜತ ಮಹೋತ್ಸವದ ಒಂದು ನಿಧಿಯನ್ನು ಸ್ಥಾಪಿಸಿ ಅದರಲ್ಲಿ ಕನಿಷ್ಠ ಪಕ್ಷ 25 ಕೋಟಿ ರೂಪಾಯಿಗಳನ್ನು ಈವೊಂದು ನಿಧಿಯಲ್ಲಿ ಸಂಗ್ರಹಿಸಬೇಕು; ಅದರ ಮೂಲಕ ಈ ರಾಜ್ಯದಲ್ಲಿರುವಂತಹ ಪ್ರತಿಯೊಂದು ಮಂಡಲಗಳಲ್ಲಿ ಗ್ರಂಥಾಲಯಗಳನ್ನು ಬಲಿಷ್ಠಪಡಿಸಬೇಕು, ಅಲ್ಲಿ ಸಾಕಷ್ಟು ಪುಸ್ತಕಗಳನ್ನು ಪೂರೈಸಬೇಕು. ಜೊತೆಗೆ ಜಿಲ್ಲಾ ಕೇಂದ್ರ ಗ್ರಂಥಾಲಯಗಳಲ್ಲಿರುವ ದುಸ್ಥಿತಿಯನ್ನು ನಿವಾರಿಸಬೇಕೆಂದು ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಅದೂ ಅಲ್ಲದೆ ಇವತ್ತು ರಾಜಾರಾಂ ಮೋಹನರಾಯ್ ಫೌಂಡೇಷನ್ ಇದೆ. ಅದರ ಮುಖಾಂತರ ನಮಗೆ ಸುಮಾರು 10 ಲಕ್ಷ ಕನ್ನಡ ಪುಸ್ತಕಗಳನ್ನು ಖರೀದಿಸುವುದಕ್ಕೆ ನಾವು ಈಗಾಗಲೇ ಅವಕಾಶ ಮಾಡಿಕೊಂಡಿದ್ದೇವೆ. ಅದೂ ಅಲ್ಲದೆ, ನಾಲ್ಕು ಲಕ್ಷ ರೂಪಾಯಿಗಳನ್ನು ಅಭಿವೃದ್ಧಿ ಯೋಜನೆ ಕೆಳಗೆ ಗ್ರಂಥಾಲಯಗಳಿಗೆ ಬೇಕಾದಂಥ ಪೀಠೋಪಕರಣಗಳನ್ನು ಪೂರೈಸಬೇಕು ಅಂತ ಹೇಳಿ ಯೋಜನೆಯೊಂದನ್ನು ಹಾಕಿಕೊಂಡಿದ್ದೇವೆ. ಅಲ್ಲದೆ ಇನ್ನೊಂದು ಮಹತ್ವದ ನಿರ್ಣಯವೆಂದರೆ ಇವತ್ತು ಬೆಂಗಳೂರಿನಲ್ಲಿ ಒಂದೇ ನಗರ ಗ್ರಂಥಾಲಯ ಇದೆ. ಇದನ್ನು ವಿಭಾಗಿಸಿ ಐದು ವಿಭಾಗಗಳನ್ನಾಗಿ ಮಾಡಿ ಬೆಂಗಳೂರಿನ ನಾಗರೀಕರಿಗೆ ಇನ್ನೂ ಹೆಚ್ಚಿನ ಸೇವೆಯನ್ನು ಒದಗಿಸಿಕೊಡಬೇಕೆಂದು ನಾವು ನಿರ್ಣಯ ಕೈಗೊಂಡಿದ್ದೇವೆ. ಆಮೇಲೆ ಈ ಇಲಾಖೆಯಲ್ಲಿ ನೌಕರರ ಸಂಖ್ಯೆ ಬಹಳಷ್ಟು ಕಡಿಮೆ ಇದೆ. ಆದ್ದರಿಂದ ಸರ್ಕಾರದ ಒಂದು ನಿಯಮದ ಪ್ರಕಾರ ಸುಮಾರು 1810 ಹುದ್ದೆಗಳನ್ನು ಅದರಲ್ಲಿ ಸೃಷ್ಟಿಮಾಡಿ ಹಂತಹಂತವಾಗಿ ಮೂರು ವರ್ಷಗಳಲ್ಲಿ ಈ ಹುದ್ದೆಗಳನ್ನು ತುಂಬುವುದಕ್ಕೆ ನಾವು ನಿರ್ಣಯ ಕೈಗೊಂಡಿದ್ದೇವೆ. ಅದಕ್ಕಾಗಿ ನಾವು ಈ ಒಂದು ಬಜೆಟ್‌ನಲ್ಲಿ 72 ಲಕ್ಷ ರೂಪಾಯಿಗಳನ್ನು ಕಾಯ್ದಿರಿಸಿದ್ದೇವೆ. ಇನ್ನು ಮಂಡಲಗಳಿಗೆ ಮೇಲ್ವಿಚಾರಕರಿಗೆ ಇರುವ ಮುನ್ನೂರು ರೂಪಾಯಿ ಸಂಬಳ ಯಾವುದಕ್ಕೂ ಸಾಲದು. ಅದಕ್ಕೂ ಸಹ ಪರಿಷ್ಕರಿಸುವ ನಿರ್ಣಯವನ್ನು ಕೈಗೊಳ್ಳುತ್ತಿದ್ದೇವೆ. ಹಿಂದೆ ಗವರ್ನ್‌ಮೆಂಟ್ ಲೈಬ್ರರಿಯಲ್ಲಿ ಒಂದು ಟ್ರೈನಿಂಗ್ ಸ್ಕೂಲ್ ಇತ್ತು. ಅದನ್ನು ಮುಚ್ಚಲಾಗಿತ್ತು. ನಾವು ಮತ್ತೆ ಅದನ್ನು ಪ್ರಾರಂಭ ಮಾಡಬೇಕೆಂದು ಒಂದು ನಿರ್ಣಯ ಕೈಗೊಂಡಿದ್ದೇವೆ. ಅದಾದನಂತರ ಈ ಇಲಾಖೆಯ ವೃತ್ತಿ ಶಿಕ್ಷಣ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದರಲ್ಲೂ ಸಹ ಈಗಾಗಲೇ ಕೇಂದ್ರ ಸರ್ಕಾರದ ಯೋಜನೆಯಂತೆ 1992–93ರಲ್ಲಿ ಮುನ್ನೂರು ಹೊಸ

ಕೋರ್ಸ್‌ಗಳನ್ನು ಪ್ರಾರಂಭಿಸಿದ್ದೇವೆ. ಅದೇರೀತಿ ಮುಂದಿನ ಪ್ರತಿವರ್ಷ ಮುನ್ನೂರು ಹೊಸ ಕೋರ್ಸುಗಳನ್ನು ಪ್ರಾರಂಭಿಸುವ ಯೋಜನೆಯನ್ನು ಇಟ್ಟಿದ್ದೇವೆ. ಅಷ್ಟೇ ಅಲ್ಲದೆ, ದೇಶದಲ್ಲೇ ಪ್ರಥಮವಾಗಿ ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಪಠ್ಯಪುಸ್ತಕವನ್ನು ರಚಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಮತ್ತು ರಾಜ್ಯದಲ್ಲಿ ಇದಕ್ಕೆ ಒಂದು ಟ್ರೈನಿಂಗ್ ಸೆಂಟರ್‌ನ್ನು ಮಾಡಿ ಏನು ಈವತ್ತು ವೃತ್ತಿಶಿಕ್ಷಣ ಇಲಾಖೆ ಅಥವಾ ಕಾಲೇಜುಗಳಲ್ಲಿ ಸೇವೆ ಸಲ್ಲಿಸತಕ್ಕಂಥ ಶಿಕ್ಷಕರಿಗೆ ವಿಶಿಷ್ಟವಾದ ತರಬೇತಿ ಕೊಟ್ಟು, ಸಮರ್ಪಕವಾದ ರೀತಿಯಲ್ಲಿ ವೃತ್ತಿಶಿಕ್ಷಣ ತರಬೇತಿ ಪಡೆಯಬೇಕು ಎನ್ನತಕ್ಕಂಥ ದೃಷ್ಟಿಯಿಂದ ಬೆಂಗಳೂರಿನಲ್ಲಿ ಒಂದು ತರಬೇತಿ ಕೇಂದ್ರವನ್ನು ಸಹ ಮುಂದಿನ ವರ್ಷದಿಂದ ಪ್ರಾರಂಭ ಮಾಡುತ್ತಿದ್ದೇವೆ. ಅದಲ್ಲದೆ, ಈ ವೃತ್ತಿ ಶಿಕ್ಷಣದಲ್ಲಿ ವರ್ಕ್‌ಶೆಡ್‌ಗಳ ನಿರ್ಮಾಣಕ್ಕೆ ನಾವು ಪ್ರತಿಯೊಂದು ಕೋರ್ಸಿಗೆ 75 ಸಾವಿರ ರೂಪಾಯಿಗಳನ್ನು ಈಗಾಗಲೇ ಕೊಡುತ್ತಿದ್ದರು. ಇದು ಸಾಲದು. ಈಗಿನ ಪರಿಷ್ಕೃತ ದರದಲ್ಲಿ ಇದು ಕಡಿಮೆಯಾಗುತ್ತದೆ ಎಂಬ ಅನೇಕ ಜನರಿಂದ ದೂರು ಬಂದಿದೆ. ಆದ್ದರಿಂದ ನಾವು ಈಗಾಗಲೇ 75 ಸಾವಿರ ರೂಪಾಯಿಗಳಿಂದ ಒಂದು ಲಕ್ಷಕ್ಕೆ ಏರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದೇವೆ. ಅದನ್ನು ಅವರು ಒಪ್ಪಿಕೊಂಡಿರುವ ಸೂಚನೆ ಬಂದಿದೆ. ಆದ್ದರಿಂದ ಮುಂದಿನವರ್ಷ ಹೊಸ ವೃತ್ತಿಶಿಕ್ಷಣ ಕೋರ್ಸ್‌ಗಳನ್ನು ಪ್ರಾರಂಭ ಮಾಡುತ್ತೇವೆ. ಪ್ರತಿಯೊಂದು ಕೋರ್ಸಿಗೆ ಒಂದು ಲಕ್ಷ ರೂಪಾಯಿ ಶೆಡ್ ನಿರ್ಮಾಣ ಮಾಡುವುದಕ್ಕೆ ನಾವು ಕೊಡುತ್ತೇವೆ. ಇದು ಸ್ಥೂಲವಾಗಿ ನನ್ನ ಇಲಾಖೆಯಲ್ಲಿ ಬರುವಂಥ ವಿವಿಧ ಕಾರ್ಯಕ್ರಮಗಳ ವರದಿ. ಕೊನೆಯಲ್ಲಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತು ನಾವು ಸಾಕ್ಷರತೆ ಬಗ್ಗೆ ವಿಸ್ತಾರವಾದ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ನನ್ನ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ಈ ಮನೆಯ ಎಲ್ಲಾ ಸದಸ್ಯರೂ ಸಹ ಅದರಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಏಕೆಂದರೆ ಇದೊಂದು ಅತ್ಯಂತ ಮಹತ್ವದ ಪವಿತ್ರವಾದಂಥ ಕೆಲಸ. ನಾವು ಈ ದೇಶದಲ್ಲಿ ಅನಕ್ಷರಸ್ಥರನ್ನು ಬಳಸಿಕೊಂಡು ಅವರ ಸಂಖ್ಯೆಯ ಮೇಲೆ ರಾಜ್ಯವನ್ನು ಆಳುತ್ತೇವೆ ಎಂದು ನಿರ್ಣಯ ಮಾಡಿದರೆ ಅದು ಸರಿಯಾದ ನಿರ್ಣಯವಾಗಲಾರದು. ಅದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಅವರನ್ನು ಸಾಕ್ಷರರನ್ನಾಗಿ ಮಾಡಿದರೆ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿಜವಾದ ರೀತಿಯಲ್ಲಿ ಆಡಳಿತ ನಡೆಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿ, ಇವತ್ತು ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಈ ಸದನದಲ್ಲಿ ಮಂಡಿಸಿದ್ದೇನೆ. ಅವುಗಳಿಗೆ ಮಾನ್ಯ ಎಲ್ಲಾ ಸದಸ್ಯರು ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಈಗ ಶಿಕ್ಷಣ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು.

7.20 ಪಿಎಂ

ನಾನು ಈಗ ಶಿಕ್ಷಣ ಇಲಾಖೆಯ ಬೇಡಿಕೆಯ ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪವೇನೆಂದರೆ;

" ದಿನಾಂಕ: 31–3–93ರಂದು ಕೊನೆಗೊಳ್ಳುವ ಅರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ: 13,54,16,14,15,12,11 ಮತ್ತು 31 ಇವುಗಳಿಗೆ ಸಂಬಂಧಿಸಿದಂತೆ ಸಂದಾಯಮಾಡುವಲ್ಲಿ, ಬರತಕ್ಕ ವೆಚ್ಚವನ್ನು ಭರಿಸಲು, ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗುಗಳನ್ನು ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳಿಗೆ ಮಂಜೂರಾತಿ ನೀಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ, ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಉನ್ನತ ಶಿಕ್ಷಣ ಮತ್ತು ವಕ್ಫ ಸಚಿವರು:-

ಅಭಿಯಾಚನೆ ಕ್ರಮಾಂಕ 13–ಉಚ್ಚಶಿಕ್ಷಣ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉಚ್ಚಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 201,47,65,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 54–ವಕ್ಫ್

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಕ್ಫ್‌ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 307,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ವಯಸ್ಕರ ಶಿಕ್ಷಣ ರಾಜ್ಯ ಸಚಿವರು:-

ಅಭಿಯಾಚನೆ ಕ್ರಮಾಂಕ 11–ಲೇಖನ ಸಾಮಗ್ರಿ ಮತ್ತು ಮುದ್ರಣ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 20,55,28,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 12–ಸಾರ್ವಜನಿಕ ವಾಚನಾಲಯ ಇತ್ಯಾದಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಾರ್ವಜನಿಕ ವಾಚನಾಲಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯನ್ನು 34,77,02,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು:-

ಅಭಿಯಾಚನೆ ಕ್ರಮಾಂಕ 14–ಯುವಜನ ಸೇವೆ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 21,71,63,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 15-ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 11,71,27,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ವೈದ್ಯಕೀಯ ಶಿಕ್ಷಣ ಸಚಿವರು:-

ಅಭಿಯಾಚನೆ ಕ್ರಮಾಂಕ 31-ವೈದ್ಯಕೀಯ ಶಿಕ್ಷಣ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಶಿಕ್ಷಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 94,70,08,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು:-

ಅಭಿಯಾಚನೆ ಕ್ರಮಾಂಕ 16-ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1137,79,49,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 45,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

1992-93ನೇ ಸಾಲಿನ ಅನುಪೂರಕ ಅಂದಾಜುಗಳು

ಶ್ರೀ ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ, ಭಾರತದ ಸಂವಿಧಾನದ 205 (1)ನೇ ಅನುಚ್ಛೇದದ ಮೇರೆಗೆ, 1992-93ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜುಗಳ ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:- ಮಂಡಿಸಲಾಯಿತು.

ಬೇಡಿಕೆಗಳ ಮೇಲೆ ಚರ್ಚೆ

ಬೇಡಿಕೆ ಸಂಖ್ಯೆ 23: ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಬೇಡಿಕೆಗಳು

ಶ್ರೀ ಎಂ. ರಾಜಶೇಖರಮೂರ್ತಿ (ಮಾನ್ಯ ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೇ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳ ಪರವಾಗಿ ಬೇಡಿಕೆ ಸಂಖ್ಯೆ 23ನ್ನು ಸಭೆಯ ಮುಂದೆ...

SRI R.V. DESHPANDE:– I am on a point of order. As regards the demands of a Department, the concerned Minister has to move. ನನಗೆ ಬಹಳ ನೋವಾಗುತ್ತಿದೆ. ಏಕೆಂದರೆ, ಈಗಾಗಲೇ ಡಿಮ್ಯಾಂಡ್‌ಗಳ ಮೇಲೆ ಚರ್ಚೆ ಮಾಡುವುದಕ್ಕೆ ಟೈಮ್ ಇಲ್ಲ. ಇದಕ್ಕೆ ಏನೇನೋ ಕಾರಣಗಳಿವೆ. ನಾನು ನಿಮ್ಮನ್ನು ಬ್ಲೇಮ್ ಮಾಡುತ್ತಾ ಇಲ್ಲ. ಆದರೆ, ಸಂಬಂಧಪಟ್ಟ ಮಿನಿಸ್ಟರು ಡಿಮ್ಯಾಂಡ್ ಮೂವ್ ಮಾಡುವುದಕ್ಕೆ ಹೌಸ್‌ನಲ್ಲಿ ಇಲ್ಲವೆಂದು ಹೇಳಿದರೆ, ಅದು ಸದನಕ್ಕೆ ಗೌರವ ತರುವುದಿಲ್ಲ ಮತ್ತು ಅವರಿಗೂ ಗೌರವ ತರುವುದಿಲ್ಲ.

ಶ್ರೀ ಎಂ. ರಾಜಶೇಖರಮೂರ್ತಿ:– ಅವರು ಡೆಲ್ಲಿಯಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ಸಂಬಂಧಪಟ್ಟ ಸಭೆಯಲ್ಲಿ ಭಾಗವಹಿಸಲು ಹೋಗಿದ್ದಾರೆ.

SRI R.V. DESHPANDE:– If she was very eager that her Demands to be discussed; then she should have Present in the House to move the demands.

ಶ್ರೀ ಹೆಚ್. ಏಕಾಂತಯ್ಯ:– ಸನ್ಮಾನ್ಯ ಅಧ್ಯಕ್ಷರೇ, ತಾವು ಅನುಮತಿ ಕೊಡುವುದಾದರೆ, ಕೊಡಿ, ನನ್ನದೇನೂ ತಕರಾರು ಇಲ್ಲ. ನಮ್ಮ ಆಕ್ಷೇಪಣೆ ಏನೆಂದರೆ, ಸಂಬಂಧಪಟ್ಟಂಥ ಮಂತ್ರಿಗಳು, ಅವರ ಬೇಡಿಕೆಯನ್ನು ಮಂಡನೆ ಮಾಡುವುದಕ್ಕೂ ಅವರಿಗೆ ಕಾಲಾವಕಾಶ ಇಲ್ಲ, ಇಲಾಖೆಯ ಸಭೆ ಇದೆಯೆಂದು ಹೇಳಿದರೆ, ಇದಕ್ಕಿಂತ ಅವಮಾನಕರವಾದ ಹೇಳಿಕೆ, ಸರ್ಕಾರದ ಪರವಾಗಿ ಯಾವುದೂ ಕೊಡುವುದಕ್ಕೆ ಸಾಧ್ಯವಿಲ್ಲ. ಡಿಪಾರ್ಟ್‌ಮೆಂಟಲ್ ಸಭೆಗೆ ಹೋಗಿದ್ದಾರೆ, ಆದಕ್ಕೋಸ್ಕರ. ನಾನು ಮಂಡಿಸುತ್ತೇನೆಂದು ಹೇಳಿದರೆ, ಅದು ಸರಿಯಾದ ಕಾರಣವೇ ? ಇದಕ್ಕೆ ತಾವು ಅನುಮತಿ ಕೊಡಬಾರದು. ಪ್ರಜಾಪ್ರಭುತ್ವದ ವ್ಯವಸ್ಥೆಗೇ ಇದು ಅವಮಾನ.

ಶ್ರೀ ಆರ್.ವಿ. ದೇಶಪಾಂಡೆ:– ಅವರು ಡೆಲ್ಲಿಗೆ ಹೋಗಿದ್ದಾರೆಂದು ಹೇಳುತ್ತೀರಿ, ಅದರ ಬಗ್ಗೆ ನನ್ನ ವಾದ ಇಲ್ಲ. ಆದರೆ, ವರ್ಷದ ಡಿಮ್ಯಾಂಡ್ ಏನಿದೆ, ಅದನ್ನು ಈ ಮನೆಯು ಒಪ್ಪಿಕೊಳ್ಳಬೇಕು. ಅವರಿಗೆ ಇದು ಮುಖ್ಯವೋ ಅಥವಾ ಡೆಲ್ಲಿಯ ಸಭೆ ಮುಖ್ಯವೋ. I want to know whether Delhi meeting is important or Demands of her Department is important. ಇಡೀ ವರ್ಷದ ಬೇಡಿಕೆ, ನಮ್ಮ ಮುಂದೆ ಇರುವಾಗ, ಈ ಸದನದ ಗೌರವ, Her absence is an insult to the House. She could have deputed somebody else. That was not urgent. ಅವರು ಡಿಮ್ಯಾಂಡ್ ಮೂವ್ ಮಾಡುವಾಗ ಇಲ್ಲಿ ಇರಲೇಬೇಕು.

ಶ್ರೀ ಎಂ. ರಾಜಶೇಖರಮೂರ್ತಿ:– ಡೆಲ್ಲಿಯಲ್ಲಿ ಆಗತಕ್ಕ ಸಭೆ, ಅವರ ಇಲಾಖೆಗೆ ಸಂಬಂಧಪಟ್ಟ ಮುಖ್ಯವಾದ ಸಭೆ.

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಹಿರಿಯ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಈ

ಮಾತನ್ನು ಹೇಳುವುದಾದರೆ, ಅಥವಾ ಅವರು ಒಪ್ಪುವುದಾದರೆ, ನಮಗೆ ಗತಿ ಇಲ್ಲ, ಇದನ್ನು ವಿರೋಧಿಸಿ ನಾವು ಹೊರಗಡೆ ಹೋಗುತ್ತೇವೆ. ಇಲ್ಲದೇ ಹೋದರೆ, ಇದರಿಂದ, ವಿರೋಧಪಕ್ಷದವರು ಸರ್ಕಾರದೊಂದಿಗೆ ಶಾಮೀಲಾಗಿದ್ದಾರೆಂಬ ಭಾವನೆ ಜನರಲ್ಲಿ ಬರುತ್ತದೆ. ಇದರ ಬಗ್ಗೆ ಇನ್ನೇನೂ ಬರುವುದಕ್ಕೆ ಸಾಧ್ಯವಿಲ್ಲ. ಮಂತ್ರಿಗಳು ಇಷ್ಟೊಂದು ಬೇಜವಾಬ್ದಾರಿಯಿಂದ ಇರಬಾರದು. ಇದು ನಿಜವಾಗಿಯೂ ನಿಮಗೆ, ನಿಮ್ಮ ಪಕ್ಷಕ್ಕೆ ಅವಮಾನ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ನಾಳೆ ಅವರು ಡೆಲ್ಲಿಯಿಂದ ಬಂದಮೇಲೆ ಈ ಡಿಮ್ಯಾಂಡ್ ಮೂವ್ ಮಾಡಿಸಿ.

ಶ್ರೀ ಎಂ. ರಾಜಶೇಖರಮೂರ್ತಿ:– ಮಾನ್ಯ ದೇಶಪಾಂಡೆಯವರು ಮಂತ್ರಿಗಳಾಗಿದ್ದಾಗ, ಅವರೇ ಕೃಷಿ ಮಂತ್ರಿಗಳಿಗೆ ಸಂಬಂಧಪಟ್ಟಂತೆ, ಡಿಮ್ಯಾಂಡ್ ಮೂವ್ ಮಾಡಿದ್ದಾರೆ.

SRI R.V. DESHPANDE:– You please try to understand. ಆಕ್ಷೇಪ ಅಲ್ಲ. ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರು ಮಾನ್ಯ ನಜೀರ್‌ಸಾಬ್‌ರವರು ಇದ್ದರು. He was bed-ridden. The Chief Minister has entrusted that Department to me and I was functioning as Rural Development Minister also on behalf of Nasir Sab. As a Minister, I moved the demand.

ಶ್ರೀ ಹೆಚ್. ಏಕಾಂತಯ್ಯ:– ಇದಕ್ಕೆ ಆಕ್ಷೇಪ ಮಾಡದೇ ಇದ್ದುದು ನಿಮ್ಮ ತಪ್ಪು. ಇಂತಹ ಸಂಪ್ರದಾಯಗಳನ್ನು ಇಲ್ಲಿ ದಯಮಾಡಿ ಹೇಳಬೇಡಿ; ಅದರಂತೆ ಅನುಸರಿಸಬೇಡಿ. ನಾಳೆ, ಈ ಡಿಮ್ಯಾಂಡ್ ಮೂವ್ ಮಾಡಿ.

ಶ್ರೀ ಎಂ. ರಾಜಶೇಖರಮೂರ್ತಿ:– ನಾಳೆ ಅವರು ಬರುವುದಿಲ್ಲ.

SRI M. VEERAPPA MOILY:– It is a precedent. ತಾವು ಇರುವಾಗಲೂ ಮಾಡಿದ್ದೀರಿ, ನಾವು ಇರುವಾಗಲೂ ಮಾಡಿದ್ದೇವೆ. ಇದೇನೂ ಹೊಸ ಸಂಪ್ರದಾಯವನ್ನು ಮಾಡುತ್ತಾ ಇಲ್ಲ. ಮತ್ತೆ ಇದರಲ್ಲಿ ತಾಂತ್ರಿಕವಾದ ದೋಷವೂ ಇಲ್ಲ. ಇದಕ್ಕೆ ಆಕ್ಷೇಪ ಎತ್ತಬೇಡಿ; ಬೇರೆ ಏನಾದರೂ ಇದ್ದರೆ ಹೇಳಿ.

ಶ್ರೀ ಹೆಚ್. ಏಕಾಂತಯ್ಯ:– ಸಂಬಂಧಪಟ್ಟ ಸಚಿವರು ಇದ್ದೂ ಕೂಡ ಬೇಡಿಕೆ ಮಂಡನೆ ಮಾಡುವುದು ಬೇರೆ ಅಂದರೆ ನಾವು ಏನು ಹೇಳುವುದು ?

(ಮಾನ್ಯ ವಿರೋಧಿಪಕ್ಷದ ನಾಯಕರಾದ ಶ್ರೀ ಆರ್.ವಿ. ದೇಶಪಾಂಡೆ ಮತ್ತಿತರ ಜನತಾದಳದ ಮಾನ್ಯ ಸದಸ್ಯರುಗಳು ಈ ಹಂತದಲ್ಲಿ ಸರಕಾರದ ಧೋರಣೆಯನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು.)

ಬೇಡಿಕೆಯ ಸಂಖ್ಯೆ 23:– ಆಹಾರ ಮತ್ತು ನಾಗರೀಕ ಸರಬರಾಜು ಇಲಾಖಾ ಬೇಡಿಕೆಗಳು

ಶ್ರೀ ಎಂ. ರಾಜಶೇಖರಮೂರ್ತಿ (ಮಾನ್ಯ ಕಂದಾಯ ಸಚಿವರು):– ಮಾನ್ಯ ಆಹಾರ ಹಾಗೂ ನಾಗರೀಕ ಸರಬರಾಜು ಸಚಿವರ ಪರವಾಗಿ ಈ ಕೆಳಕಂಡ ಬೇಡಿಕೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–94 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ

ಬೇಡಿಕೆ ಸಂಖ್ಯೆ 23ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 79,29,14,000 ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.''

ಅಭಿಯಾಚನೆ ಕ್ರಮಾಂಕ 17–ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು

ಶ್ರೀ ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಮಾನ್ಯ ಅಧ್ಯಕ್ಷರೇ,

35ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರಮಾನ ತೆರಿಗೆ ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 92,71,45,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 18–ಖಜಾನೆ ಆಡಳಿತ

36 ''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಖಜಾನೆ ಆಡಳಿತಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 14,41,77,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ''

ಅಭಿಯಾಚನೆ ಕ್ರಮಾಂಕ 19–ವಿಶ್ರಾಂತಿವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು

37ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 384,76,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 20–ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು

38ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 8,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 32,22,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 22–ಇತರ ವಿವಿಧ ಸೇವೆಗಳು

39 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲ ಇತರೇ ವಿವಿಧ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 18,58,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ

ಖಾತೆಯಲ್ಲಿ 5,85,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 39–ಚುನಾವಣೆಗಳು

40 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚುನಾವಣೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 671,09,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 40–ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

41 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 4,49,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 41–ಸಚಿವಾಲಯ

42 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಚಿವಾಲಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 26,30,18,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 43–ಸಾಮಾನ್ಯ ಆಡಳಿತ ಇತ್ಯಾದಿ

43 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಾಮಾನ್ಯ ಆಡಳಿತ ಇತ್ಯಾದಿ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 28,07,03,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 20,02,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 25–ರಾಜ್ಯ ಅಬಕಾರಿ

44 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ಅಬಕಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 18,90,95,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 27–ಆರಕ್ಷಕ ಸೇವೆಗಳು

45 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆರಕ್ಷಕ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ

ಖಾತೆಯಲ್ಲಿ 268,30,59,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 29–ವಾರ್ತಾ ಮತ್ತು ಪ್ರಚಾರ

46ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರಚಾರ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 9,38,60,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 32–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

47ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 318,09,51,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 42–ಜಿಲ್ಲಾಡಳಿತ

ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಮಾನ್ಯ ಅಧ್ಯಕ್ಷರೇ,

14ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಲ್ಲಾಡಳಿತಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 58,04,15,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು)ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ 51–ಭೂ ಕಂದಾಯ ಇತ್ಯಾದಿ

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಮಾನ್ಯ ಅಧ್ಯಕ್ಷರೇ,

12ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 68,89,30,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 401,75,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 52–ಮುದ್ರಾಂಕ ಮತ್ತು ನೋಂದಣಿ

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಮಾನ್ಯ ಅಧ್ಯಕ್ಷರೇ,

13ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕಗಳು ಮತ್ತು ನೋಂದಾಣಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10,08,62,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 53–ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿ

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಮಾನ್ಯ ಅಧ್ಯಕ್ಷರೇ,

15ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 22,40,53,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 1–ವ್ಯವಸಾಯ (ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮ ಹೊರತು)

ಶ್ರೀ ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಮಾನ್ಯ ಅಧ್ಯಕ್ಷರೇ,

7 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವ್ಯವಸಾಯ (ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮ ಹೊರತು)ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 216,40,89,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 632,40,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 57–ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

18 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 125,30,95,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 58–ಗ್ರಾಮೀಣಾಭಿವೃದ್ಧಿ ಮತ್ತು ಉದ್ಯೋಗ

19ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಉದ್ಯೋಗ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 335,81,46,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 60–ಹರಿಜನ ಗಿರಿಜನ ಮತ್ತು ಇತರ ಹಿಂದುಳಿದ ವರ್ಗದವರ ಕಲ್ಯಾಣ

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಮಾನ್ಯ ಅಧ್ಯಕ್ಷರೇ,

20 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಹರಿಜನ, ಗಿರಿಜನ ಮತ್ತು ಇತರೆ ಹಿಂದುಳಿದ ವರ್ಗದವರ ಕಲ್ಯಾಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 193,11,79,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 13,20,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 61–ಮಹಿಳಾ ಮತ್ತು ಮಕ್ಕಳ ಕಲ್ಯಾಣ

ಮಾನ್ಯ ಅಧ್ಯಕ್ಷರೇ,

21 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 181,63,23,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 55–ಸಹಕಾರ

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ(ಸಹಕಾರ ಸಚಿವರು):–

ಮಾನ್ಯ ಅಧ್ಯಕ್ಷರೇ,

23 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 53,33,97,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 56,76,39,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 37–ರಾಜ್ಯ ವಿಧಾನಮಂಡಲ

16 ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–

ಮಾನ್ಯ ಅಧ್ಯಕ್ಷರೇ,

16 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನಮಂಡಲಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 969,80,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 38–ನ್ಯಾಯ ಪರಿಪಾಲನೆ

ಮಾನ್ಯ ಅಧ್ಯಕ್ಷರೇ,

17 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 49,24,99,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 26–ಸಾರಿಗೆ ಸೇವೆಗಳು

ಶ್ರೀ ಭೀಮಣ್ಣ ಖಂಡ್ರೆ (ಮಾನ್ಯ ಸಾರಿಗೆ ಸಚಿವರು):–

ಮಾನ್ಯ ಅಧ್ಯಕ್ಷರೇ,

2 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,22,98,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 22,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 59–ಕಾರ್ಮಿಕ ಮತ್ತು ಉದ್ಯೋಗ

ಶ್ರೀ ಬ್ಲೇಸಿಯಸ್ ಡಿ. ಡಿಸೋಜ (ಕಾರ್ಮಿಕ ಸಚಿವರು):–

ಮಾನ್ಯ ಅಧ್ಯಕ್ಷರೇ,

22 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 61,47,73,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 20,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 34–ನಗರಾಭಿವೃದ್ಧಿ

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಮಾನ್ಯ ಅಧ್ಯಕ್ಷರೇ,

5 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 152,32,96,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 39,60,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 33–ಗೃಹನಿರ್ಮಾಣ (ಸರ್ಕಾರ ನಿವಾಸದ ಕಟ್ಟಡಗಳ ಹೊರತು)

ಶ್ರೀ ಗೋಪಿನಾಥ ಸಾಂಡ್ರಾ (ವಸತಿ ಸಚಿವರು):–

ಮಾನ್ಯ ಅಧ್ಯಕ್ಷರೇ,

4 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 77,34,10,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 116,33,28,000ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 5–ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯದ ಹೊರತು)

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವರ ಪರವಾಗಿ):–

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ಖಾತೆ ರಾಜ್ಯ ಸಚಿವರು):–

ಮಾನ್ಯ ಅಧ್ಯಕ್ಷರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯದ ಹೊರತು) ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 60,63,27,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 23,55,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 10–ಸಕ್ಕರೆ ಕೈಗಾರಿಕೆಗಳು

ಶ್ರೀ ಬಿ.ಎಸ್. ಪಾಟೀಲ್ (ಸಕ್ಕರೆ ಸಚಿವರು):–

ಮಾನ್ಯ ಅಧ್ಯಕ್ಷರೇ,

28 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಕ್ಕರೆ ಕೈಗಾರಿಕೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 18,02,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 7–ಚಿಕ್ಕಪುಟ್ಟ ಉದ್ಯಮಗಳು

ಶ್ರೀ ಸಗೀರ್ ಅಹಮ್ಮದ್(ಸಣ್ಣ ಕೈಗಾರಿಕಾ ಸಚಿವರು):–

ಸನ್ಮಾನ್ಯ ಅಧ್ಯಕ್ಷರೇ,

27 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ

ರಾಜಸ್ವ ಖಾತೆಯಲ್ಲಿ 76,67,95,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 27,85,40,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 62–ವಿಜ್ಞಾನ ಮತ್ತು ತಂತ್ರಜ್ಞಾನಾದ ಮತ್ತು ಮಲೆನಾಡು ಪ್ರದೇಶ ಅಭಿವೃದ್ಧಿ

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ವಿಜ್ಞಾನ, ತಂತ್ರಜ್ಞಾನ, ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು):–

ಮಾನ್ಯ ಅಧ್ಯಕ್ಷರೇ,

34 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶ ಅಭಿವೃದ್ಧಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 39,66,06,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 3–ಪಶುಸಂಗೋಪನೆ

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನೆ ರಾಜ್ಯ ಸಚಿವರು):–

ಮಾನ್ಯ ಅಧ್ಯಕ್ಷರೇ,

9 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶುಸಂಗೋಪನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 71,25,02,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 44–ಯೋಜನೆ ಮತ್ತು ಸಾಂಸ್ಥಿಕ ಹಣಕಾಸು ಅಭಿಯಾಚನೆಗಳು ಇತ್ಯಾದಿ

ಶ್ರೀ ಪಿ.ಎಂ. ಮಂಜುನಾಥ (ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ರಾಜ್ಯಸಚಿವರು):–

ಮಾನ್ಯ ಅಧ್ಯಕ್ಷರೇ,

32 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನೆ ಮತ್ತು ಸಾಂಸ್ಥಿಕ ಹಣಕಾಸು ಅಭಿಯಾಚನೆಗಳು ಇತ್ಯಾದಿಗಳಿಗೆ ಸಂದಾಯಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 9,70,69,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 34,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 6–ಗಣಿಗಳು ಮತ್ತು ಭೂ ವಿಜ್ಞಾನ

ಶ್ರೀ ಡಿ.ಎ. ಚಿಣ್ಣಪ್ಪ (ಗಣಿ ಹಾಗೂ ಭೂಗರ್ಭ ರಾಜ್ಯ ಸಚಿವರು):–

ಮಾನ್ಯ ಅಧ್ಯಕ್ಷರೇ,

26 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ ವಿಜ್ಞಾನಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು

ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,09,14,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 24–ಅರಣ್ಯ

ಶ್ರೀ ಹಾರ್ನಳ್ಳಿ ರಾಮಸ್ವಾಮಿ

(ಕಾನೂನು ಮತ್ತು ಸಂಸದೀಯ ಸಚಿವರು) (ಮಾನ್ಯ ಅರಣ್ಯ ರಾಜ್ಯ ಸಚಿವರ ಪರವಾಗಿ):–

ಮಾನ್ಯ ಅಧ್ಯಕ್ಷರೇ,

3 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,34,02,52,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 20,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 30–ಪ್ರವಾಸೋದ್ಯಮ

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು):–

6 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರವಾಸೋದ್ಯಮಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5,87,48,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 69,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 2–ತೋಟಗಾರಿಕೆ

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):–

ಮಾನ್ಯ ಅಧ್ಯಕ್ಷರೇ,

8 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 38,91,30,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,83,90,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 9–ಜವಳಿ ಉದ್ಯಮಗಳು ಇತ್ಯಾದಿ

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು):–

ಮಾನ್ಯ ಅಧ್ಯಕ್ಷರೇ,

30 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜವಳಿ ಉದ್ಯಮಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 35,75,47,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು

ಬಂಡವಾಳ ಖಾತೆಯಲ್ಲಿ 12,98,34,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 4–ಮೀನುಗಾರಿಕೆ

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರುಗಳು ರಾಜ್ಯ ಸಚಿವರು):–

ಮಾನ್ಯ ಅಧ್ಯಕ್ಷರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 17,71,97,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,20,10,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 49–ರೇವು ಮತ್ತು ಜಲಸಾರಿಗೆ ಸೇವೆಗಳು

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರುಗಳು ರಾಜ್ಯ ಸಚಿವರು):–

ಮಾನ್ಯ ಅಧ್ಯಕ್ಷರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೇಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,51,38,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 7,20,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 8–ರೇಷ್ಮೆ ವ್ಯವಸಾಯ

ಶ್ರೀ ಟಿ.ಎಂ. ಮಂಜುನಾಥ್ (ಯೋಜನೆ, ಸಾಂಸ್ಥಿಕ ಹಣಕಾಸು ಸಚಿವರು):–
ಡಾ।। ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು)ರವರ ಪರವಾಗಿ:–

ಮಾನ್ಯ ಅಧ್ಯಕ್ಷರೇ,

28 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,17,08,68,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 7,80,48,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 56–ಕ್ರಮಪಡಿಸಿದ ಮಾರುಕಟ್ಟೆಗಳು

ಶ್ರೀ ಮದನ ಗೋಪಾಲ ನಾಯಕ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):–
ಮಾನ್ಯ ಅಧ್ಯಕ್ಷರೇ,

29 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು

ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 15,78,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 45–ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಇತ್ಯಾದಿ

ಶ್ರೀ ಟಿ.ಎಂ. ಮಂಜುನಾಥ (ಯೋಜನೆ, ಸಾಂಖ್ಯಿಕ ಹಣಕಾಸು ಸಚಿವರು):–

ಶ್ರೀ ಶ್ರೀರಂಗ ದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು) ಪರವಾಗಿ:–

ಮಾನ್ಯ ಅಧ್ಯಕ್ಷರೇ,

33 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,49,70,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 21–ಸಣ್ಣ ಉಳಿತಾಯಗಳು ಮತ್ತು ರಾಜ್ಯ ಲಾಟರಿ, ವಿಮೆ ಮತ್ತು ರಾಜ್ಯ ಲೆಕ್ಕಪತ್ರ

ಶ್ರೀ ರಾಮಲಿಂಗಾ ರೆಡ್ಡಿ (ಹಣಕಾಸು ರಾಜ್ಯ ಸಚಿವರು):–

ಮಾನ್ಯ ಅಧ್ಯಕ್ಷರೇ,

31 ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ಉಳಿತಾಯಗಳು ಮತ್ತು ರಾಜ್ಯ ಲಾಟರಿ, ವಿಮೆ ಮತ್ತು ರಾಜ್ಯ ಲೆಕ್ಕಪತ್ರಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 35,87,22,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 38–ಬಂದಿಖಾನೆಗಳು, ಅಗ್ನಿ ಶಾಮಕ ಮತ್ತು ಸೈನಿಕರ ಕಲ್ಯಾಣ

ರಮಾನಾಥ ರೈ (ಗೃಹ ರಾಜ್ಯ ಸಚಿವರು):–

ಮಾನ್ಯ ಅಧ್ಯಕ್ಷರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬಂದಿಖಾನೆಗಳು, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 27,91,54,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಈ ಎಲ್ಲಾ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– 48 ಬೇಡಿಕೆಗಳನ್ನು ಇವತ್ತು ಮಂಡಿಸಿದ್ದೀರಿ. ನಾಳೆ ಸಂಜೆ ಈ ಶಾಸನಸಭೆ ಮುಗಿಯುತ್ತದೆ. ಅಷ್ಟರೊಳಗೆ ನಾವು ಚರ್ಚೆ ಮಾಡಿ ಮುಗಿಸುವುದಾದರೆ ಈ ರಾಜ್ಯದ ಜನತೆಗೆ ನಿಜವಾಗಿಯೂ ಮಹಾ ಮೋಸಮಾಡಿದ ಹಾಗೆ ಅಲ್ಲವೇ ? ನಾವು ನಾವೇ ಮಾತನಾಡೋಣ. ಒಂದು ದಿನದಲ್ಲಿ, ನಾವು 48 ಬೇಡಿಕೆಗಳನ್ನು ಚರ್ಚೆ ಮಾಡಿ ಮುಗಿಸಬೇಕು.

ಒಂದೊಂದು ಬೇಡಿಕೆಗಳಿಗೆ ಎರಡೆರಡು ದಿವಸ ಚರ್ಚೆಯಾಗಿ ಮೂರನೆಯ ದಿವಸ ಉತ್ತರವನ್ನು ಕೊಡತಕ್ಕಂಥದ್ದು, ಇದು ನಿಜವಾಗಿಯೂ ನಡೆಯಬೇಕು. ನಮ್ಮಲ್ಲಿ ಬೆಂಗಳೂರು ಸಿಟಿ ಮಹಾನಗರ ಪಾಲಿಕೆಯಲ್ಲಿ ನಾನು ನಗರ ಸಭಾ ಸದಸ್ಯನಾಗಿದ್ದಾಗ, 1 ರಿಂದ, 50 ನಿರ್ಣಯಗಳು ಎಲ್ಲಾ ಒಪ್ಪಿಗೆ ಎಂದು ಹೇಳುತ್ತಿದ್ದರು. ನಿರ್ಣಯಗಳನ್ನು ಹೇಳುತ್ತಿರಲಿಲ್ಲ. ಅದೇ ರೀತಿಯಿಂದ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಹಾಗೆ ಮಾಡಿ ಎಲ್ಲಾ ಒಪ್ಪಿಗೆಯಾಗಿದೆ ಅಂತ ಹೋಗಿದ್ದರೆ, ಚೆನ್ನಾಗಿರುತ್ತಿತ್ತು. ಇದು ನಿಜವಾಗಿಯೂ ನಾಚಿಕೆಯಾಗುತ್ತದೆ. ಈ ಪ್ರಜಾಪ್ರಭುತ್ವಕ್ಕೆ ನಾವು ನಿಜವಾಗಿಯೂ ಕಗ್ಗೊಲೆಯಾದಂತೆಯಾಗಿದೆ. ನಾವು ಕಳಂಕವನ್ನು ತರುತ್ತಿದ್ದೇವೆ. ಈ ನಾಡಿನ ಜನತೆಗೆ ನಾವು ಉತ್ತರವನ್ನು ಕೊಡಬೇಕಾಗಿದೆ. 48 ಬೇಡಿಕೆಗಳನ್ನು ಒಂದೇ ದಿವಸದಲ್ಲಿ ನಾವು ಇವತ್ತಿನ ದಿನ ಚರ್ಚೆ ಮಾಡತಕ್ಕಂಥ ರೀತಿಯಲ್ಲಿ ನಾವು ಬರುವುದಾದರೆ ಇನ್ನು ಇದಕ್ಕಿಂತ ಒಂದು ಪ್ರಜಾಪ್ರಭುತ್ವಕ್ಕೆ ಅವಹೇಳನ ಮತ್ತು ಈ ಸಭೆಗೆ ಅಗೌರವವಾಗಿದೆ. ಇದು ನಿಜವಾಗಿಯೂ ಬಹಳ ನಾಚಿಕೆಗೇಡಾಗುತ್ತಿದೆ.

ಶ್ರೀ ಕಾಗೋಡ್ ತಿಮ್ಮಪ್ಪ:– ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತಾವು ಒಪ್ಪಿದ್ದೀರೋ ಇಲ್ಲವೋ ?

ಶ್ರೀ ವಾಟಾಳ್ ನಾಗರಾಜ್:– ನಮ್ಮ ಪರಿಸ್ಥಿತಿ ಏನಾಗಿದೆ ಅಂದರೆ ಅನೇಕ ಸಂದರ್ಭದಲ್ಲಿ ಈ ನಮ್ಮ ಸಲಹಾ ಸಮಿತಿಯಲ್ಲಿ ತೀರ್ಮಾನವಾದಂತೆ ಇಲ್ಲಿ ನಡೆಯುತ್ತಿಲ್ಲ. ಇಲ್ಲಿ ನಡೆಯತಕ್ಕಂಥ ವಿಚಾರಗಳೇ ಬೇರೆ. ಈಗ ಶೂನ್ಯ ವೇಳೆಯಲ್ಲಿ ಅನೇಕ ಸಮಸ್ಯೆಗಳು ಬರುತ್ತವೆ.

ಶ್ರೀ ಕಾಗೋಡ್ ತಿಮ್ಮಪ್ಪ:– ಕಾರ್ಯಕ್ರಮದ ಪಟ್ಟಿಯಲ್ಲಿ ಈಗ ಏನು ಮಂಡಿಸಿದ್ದಾರೆ ಇದು ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಒಪ್ಪಿಗೆಯಾಗಿತ್ತೋ ಇಲ್ಲವೋ ?

ಶ್ರೀ ವಾಟಾಳ್ ನಾಗರಾಜ್:– ನಾನು ಅದನ್ನೇ ಹೇಳುತ್ತಿದ್ದೇನೆ. ನಾನು ಅದನ್ನು ಅನ್ನುವುದಕ್ಕೆ ತಯಾರಾಗಿಲ್ಲ. ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಿಮ್ಮ ಮಂತ್ರಿಗಳಿಗೆ ನೇರವಾಗಿ ನಾನು ಸಲಹೆಯನ್ನು ಕೊಡುತ್ತಿದ್ದೇನೆ. ನಿಮಗಾದರೂ ಸಂತೋಷವಿದೆಯಾ ? ನಿಮ್ಮ ಇಲಾಖೆಯ ಬಗ್ಗೆ ಕನಿಷ್ಠ ನೀವು 20 ನಿಮಿಷವಾದರೂ ಪ್ರತಿಯೊಬ್ಬ ಮಂತ್ರಿಯೂ ಉತ್ತರ ಕೊಡತಕ್ಕಂಥ ವ್ಯವಸ್ಥೆ ನಿಮಗೂ ಸಿಕ್ಕುವುದಿಲ್ಲ. ನಿಮಗೆ ಸಿಕ್ಕುತ್ತದೆ ಅಂತ ನಾನು ಅಂದುಕೊಂಡಿಲ್ಲ. ಇವತ್ತು ನಗರಾಭಿವೃದ್ಧಿ, ಕಂದಾಯ ಸಚಿವರದ್ದು, ಮುಖ್ಯ ಮಂತ್ರಿಗಳದ್ದು, ಕನಿಷ್ಠ ಈ ಮೂರು ಇಲಾಖೆಗಳ ಬಗ್ಗೆ ಒಂದು ವಾರಗಳ ಕಾಲ ನಾವು ಚರ್ಚೆ ನಡೆಸಬೇಕಾಗಿದೆ. ನಗರಾಭಿವೃದ್ಧಿ ಸಚಿವರು ಅಲ್ಲಿ ಇದ್ದಾರೆ, ಇದರಿಂದ ಬಹಳ ನೋವಾಗಿದೆ. ತಾವು ಏನಾದರೂ ಇದರ ಬಗ್ಗೆ ಒಂದು ತೀರ್ಮಾನ ಮಾಡಬೇಕು. ಈ ಶಾಸನಸಭೆಯಲ್ಲಿ ಕುಳಿತುಕೊಂಡು ನಾವು ಏನು ಮಾಡುತ್ತಿದ್ದೇವೆ ಎಲ್ಲಿಗೆ ತಲುಪುತ್ತಿದ್ದೇವೆ, ಎಲ್ಲಿಗೆ ಹೋಗುತ್ತಿದ್ದೇವೆ ಎಂಬುದನ್ನು ಯೋಚಿಸಬೇಕು. ನಾಳೆ ನಾಲ್ಕೂವರೆ ಕೋಟಿ ಕನ್ನಡಿಗರು ನಮ್ಮ ಪರಿಸ್ಥಿತಿಯನ್ನು ನೋಡುತ್ತಾರೆ. 48 ಬೇಡಿಕೆಗಳನ್ನು ಒಂದೇ ರಾತ್ರಿ ಒಂದೇ ದಿನ ಮಂಡಿಸಿದರು; ಇದೇನು ಈ ನೀತಿ, ಇದು ಒಳ್ಳೆಯ ನೀತಿ ಅಲ್ಲ. ನಿಜವಾಗಿಯೂ ಇದೇ ಪರಂಪರೆ ಮುಂದುವರೆಯುವುದಾದರೆ, ಇದು ನಿಜವಾಗಿಯೂ ಅತ್ಯಂತ ನಾಚಿಕೆಗೇಡು ಅನ್ನತಕ್ಕ ಮಾತನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನನಗೆ ಬಹಳ ಗೌರವವಿದೆ. ಸಂಸದೀಯ ಸಚಿವರಾಗಿದ್ದರು. ಈ ಸದನದ ಬಗ್ಗೆ ಅವರು ಎಷ್ಟು ಕಾಳಜಿಯನ್ನು ಇಟ್ಟಿದ್ದರು. ಇವತ್ತು ಅವರು ಹೇಳಬೇಕು; ಸಲಹಾ ಸಮಿತಿಯಲ್ಲಿ ತೀರ್ಮಾನವಾಗಿರುವುದು ನಿಜ. ಸಲಹಾ ಸಮಿತಿಯಲ್ಲಿ ತೀರ್ಮಾನವಾಗಿರುವುದು ಇಲ್ಲಿ ಬಂದತಕ್ಷಣ ಬದಲಾವಣೆಯಾಗಿರತಕ್ಕಂಥದ್ದು ಉಂಟು. ನಾನು ಯಾರನ್ನೂ ನಿಷ್ಠೂರಮಾಡುತ್ತಿಲ್ಲ. ಈ ಪರಿಸ್ಥಿತಿ ಸರಿಯೇ ? ನಾಳೆ ಏಕೆ ನೀವು ಅಸೆಂಬ್ಲಿಯನ್ನು ಮುಗಿಸಬೇಕು. ಇನ್ನೊಂದು ವಾರ ನಡೆಸೋಣ. ಎ.ಐ.ಸಿ.ಸಿ. ಗೆ ಹೋಗುವವರು ಹೋಗಲಿ. ನಾವು ಚರ್ಚೆಯನ್ನು ಮಾಡುತ್ತೇವೆ. ನಮ್ಮದೇನೂ ಅಭ್ಯಂತರವಿಲ್ಲ. ಚರ್ಚೆಯನ್ನು ಮಾಡುವುದಕ್ಕೆ ನಾವು

ತಯಾರಾಗಿದ್ದೇವೆ. ನಮಗೆ ರಜವೂ ಬೇಕಾಗಿಲ್ಲ. ಯುಗಾದಿ ಹಬ್ಬದ ದಿವಸ ಕುಳಿತುಕೊಂಡರೂ ಸಹ ರಾಜ್ಯದ ಜನತೆಯ ಪರವಾಗಿ ಚರ್ಚೆ ಮಾಡಬೇಕಾಗಿದೆ. ಪೋಲೀಸ್ ಇಲಾಖೆಯ ಬೇಡಿಕೆಯ ಬಗ್ಗೆ, ಇದೆ, ಕಂದಾಯ ಇಲ್ಲಾಖೆ ಇದೆ, ನಗರಾಭಿವೃದ್ಧಿ ಇದೆ, ಮತ್ತು ನಮ್ಮ ಘೋರ್ಪಡೆಯವರ ಇಲಾಖೆ ಇದೆ. ಒಂದಲ್ಲ ಎಷ್ಟೊಂದು ಇದೆ. ಈ ರೀತಿ ನಾವು ಹೋಗುವುದೆಂದರೆ ನಮ್ಮ ಆತ್ಮ ತಾನೇ ಏನು ಒಪ್ಪುತ್ತೇ ? ಮತದಾರರು ಕೊಟ್ಟಿರತಕ್ಕಂಥ ಮತವನ್ನು ಗಳಿಸಿ ನಾವು ಇಲ್ಲಿ ಶಾಸಕವಾಗಿ ಬಂದಿದ್ದೇವೆ. ನಮ್ಮ ಕರ್ತವ್ಯವನ್ನು ಹೇಗೆ ಮಾಡುತ್ತಿದ್ದೇವೆ ? ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಟಿ.ಎಂ. ಮಂಜುನಾಥ್:– ಎಲ್ಲಾ ವಿಷಯಗಳಲ್ಲೂ ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ಸಹ ಇತರ ಎಲ್ಲಾ ನಾಯಕರೂ ಮಾತನಾಡಬೇಕೇ ?

ಅಧ್ಯಕ್ಷರು:– ಅವರು ಚರ್ಚೆಯನ್ನು ಪ್ರಾರಂಭ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:– ಇದು ಏನೂ ಹೊಸದಲ್ಲ. ಇದು ಶಾಸನಸಭೆಯಲ್ಲಿ ನಡೆದುಕೊಂಡು ಬಂದಿರುವುದು. ಪ್ರತಿಪಕ್ಷದ ಮುಖಂಡರುಗಳಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಲೇ ಬೇಕು. ಅದರಲ್ಲಿ ಏನು ಎರಡನೇ ಅಭಿಪ್ರಾಯವಿಲ್ಲ. ತಾವೇಕೆ ಜಾಸ್ತಿ ಮಾತನಾಡಬೇಕು ? ನಿಮ್ಮ ಪಕ್ಷದ ವೇದಿಕೆ ಇದೆ ಅಲ್ಲಿ ಮಾತನಾಡಿ. ಪ್ರತಿಯೊಬ್ಬರೂ ನೀವು ಇಲ್ಲಿ ಏಕೆ ಮಾತನಾಡಬೇಕು.

ಶ್ರೀ ಟಿ.ಎಂ. ಮಂಜುನಾಥ್:– ಅವರು ಹೇಳಿದ್ದನ್ನೇ ನೀವು ಹೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:– ಇವರೇನು ಮಹಾ ಸರ್ವಜ್ಞರು ಮಾತನಾಡಿದ ಹಾಗೆ ಮಾತನಾಡುತ್ತಾರೆ. ಯಾವ ಇಲಾಖೆ ನಿಮ್ಮದು ಇವರಿಗೆ ಮೂರು ಕಾಸಿನ ಖಾತೆಯನ್ನು ಕೊಟ್ಟಿದ್ದಾರೆ. ಆದರೂ ದೇಶದಲ್ಲಿರುವುದನ್ನೆಲ್ಲಾ ಮಾತನಾಡುತ್ತಾರೆ ಇವರು.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್:– ಮಾನ್ಯ ವಾಟಾಳ್ ನಾಗರಾಜ್‌ವರು ಯಾರು ಇಲಾಖೆ ನಿಮ್ಮದು ಅಂತ ಅವಹೇಳನ ಮಾಡಿದ್ದಾರೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್:– ಅವರಿಗೆ ಒಳ್ಳೆಯ ಇಲಾಖೆಯನ್ನು ಕೊಟ್ಟಿಲ್ಲ. ಶಕ್ತಿಯುತವಾದ ಇಲಾಖೆಯನ್ನು ಕೊಟ್ಟಿಲ್ಲ; ಕೆಲಸಕ್ಕೆ ಬಾರದ ಇಲಾಖೆಯನ್ನು ಕೊಟ್ಟಿದ್ದಾರೆಂದು ಸಾವಿರ ಸಾರಿ ಹೇಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ಈ ಆಯವ್ಯಯ ಅಧಿವೇಶನ ಕಳೆದ ತಿಂಗಳು 12ನೇ ತಾರೀಖಿನಿಂದ ಪ್ರಾರಂಭವಾಯಿತು. ಕಳೆದ ತಿಂಗಳು 22ನೇ ತಾರೀಖು ಆಯವ್ಯಯ ಮಂಡನೆ ನಡೆಯಿತು. ಇವತ್ತು 22ನೇ ತಾರೀಖು ಒಂದು ತಿಂಗಳು ಕಾಲ ಬಜೆಟ್ ಅಧಿವೇಶನ ಆಯವ್ಯಯದ ಮಂಡನೆಯಾದ ಮೇಲೆ ನಡೆದಿದೆ. ಪ್ರತಿಯೊಂದು ಘಟ್ಟದಲ್ಲಿಯೂ ಇದನ್ನು ಬಿಸಿನೆಸ್ ಅಡ್ವೈಸರಿ ಕಮಿಟಿಗೆ ತಂದು ತಮ್ಮ ಅಧ್ಯಕ್ಷತೆಯಲ್ಲಿ ಪ್ರತಿಯೊಂದು ವಿಚಾರವನ್ನು ಚರ್ಚೆ ಮಾಡಿ, ಯಾವ್ಯಾವತ್ತು ಏನೇನು ಚರ್ಚೆ ಮಾಡಬೇಕೆಂದು ಹೇಳಿ ಅನೇಕ ಬಾರಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ನಾವು ಹಿಂದಿನ ಅಧಿವೇಶಗಳಲ್ಲಿ ನಮಗೆ ತಿಳಿದಿರುವ ಹಾಗೆ ಒಂದು ತಿಂಗಳುಗಳ ಕಾಲ ಬಜೆಟ್ ಮೇಲೆ ಚರ್ಚೆ ಯಾವಾಗಲೂ ನಡೆದಿರಲಿಲ್ಲ. ಆದರೆ ಏನಾಗಿದೆ ಅಂದರೆ ಬಜೆಟ್ ಚರ್ಚೆ ಮಾಡುವ ಕಾಲದಲ್ಲಿಯೂ ವಿಶೇಷವಾಗಿ ಬಹಳ ಕಾಲ ಬೇರೆ ವಿಷಯಗಳಲ್ಲಿ ನಾವು ಚರ್ಚೆಯನ್ನು ಮಾಡಿದ್ದೇವೆ. ನಾವು ಟ್ರೆಜರಿ ಬೆಂಚಸ್‌ನಿಂದ ಯಾವ ಚರ್ಚೆಗೂ ಅಡಚಣೆಯನ್ನು ಉಂಟುಮಾಡಿಲ್ಲ. ಇವರು ಮಾನ್ಯ

ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ವಿವಿಧ ಪಕ್ಷದ ನಾಯಕರುಗಳ ಒಪ್ಪಿಗೆ ಮೇರೆಗೆ 23ನೇ ತಾರೀಖು ಅಪ್ರೋಪ್ರಿಯೇಷನ್ ಬಿಲ್ ಆಗಬೇಕೆಂದು ಎಲ್ಲರೂ it is a solemn understanding by all of them. ಮಾನ್ಯ ಮಿತ್ರರಾದಂತಹ ವಾಟಾಳ್ ನಾಗರಾಜ್‌ರವರು ಅಷ್ಟೊಂದು ತೀವ್ರವಾದಂತಹ ಟೀಕೆ ಮಾಡುವುದು ಏಕೆ? ನಿಮ್ಮ ಒಪ್ಪಿಗೆಯ ಮೇಲೆ ನಾವೆಲ್ಲಾ ಕ್ಯಾಲೆಂಡರ್ ಅನ್ನು ಹಾಕಿ ನಡೆಸುತ್ತಿದ್ದೇವೆ. ಕ್ಯಾಲೆಂಡರಂತೆ ನಡೆಯಲಿಲ್ಲ ಅಂತ ಅಂದರೆ ನಾವು ನೀವು ಎಲ್ಲರೂ ಜವಾಬ್ದಾರರು. ಆದರೆ ತಾವು ದಯವಿಟ್ಟು ಕ್ಷಮಿಸಬೇಕು. ಕಳೆದ ಸಾರಿ ಓಟ್ ಆನ್ ಅಕೌಂಟ್ ತೆಗೆದುಕೊಂಡಾಗ ವಿರೋಧ ಪಕ್ಷದವರಿಂದ ತೀವ್ರವಾದಂತಹ ಟೀಕೆ ಬಂತು. ಇವರು ಬಜೆಟ್ ಅನ್ನು ಮಂಡನೆ ಮಾಡುವುದಿಲ್ಲ. ಮಾರ್ಚಿ ಕೊನೆಯೊಳಗಾಗಿ ಒಪ್ಪಿಗೆಯನ್ನು ತೆಗೆದುಕೊಳ್ಳುವುದಿಲ್ಲ. ಓಟ್ ಆನ್ ಅಕೌಂಟ್ ತೆಗೆದುಕೊಳ್ಳುತ್ತಾರೆ ಅನ್ನುವಂತಹ ತೀವ್ರವಾದಂತಹ ಟೀಕೆ ವಿರೋಧಪಕ್ಷದವರಿಂದ ಬಂತು. ಆದರೆ ಈ ಸಾರಿ ನಮ್ಮ ಮುಖ್ಯಮಂತ್ರಿಗಳು ಎಷ್ಟೇ ಕಷ್ಟವಾಗಲೀ ಈ ಮಾರ್ಚಿಯೊಳಗಾಗಿ ಈ ಬಜೆಟ್‌ನ ಒಪ್ಪಿಗೆ ತೆಗೆದುಕೊಳ್ಳುವ ಕಾರ್ಯಗಳನ್ನು ಮಾಡಿದ್ದಾರೆ. ವರ್ಷಗಳ ಕಾಲ ಬಜೆಟ್ ಬಗ್ಗೆ ಚರ್ಚೆ ಮಾಡಿಕೊಂಡು ಇನ್ನೊಂದು ಅಧಿವೇಶವನ್ನು ಕರೆದು ಅಲ್ಲೂ ಬಜೆಟ್ ಬಗ್ಗೆ ಚರ್ಚೆ ಮಾಡಿಕೊಳ್ಳುತ್ತಾ ಹೋದರೆ ಬೇರೆ ಕಾರ್ಯಗಳಿಗೆ ಕಾಲವೇ ಸಿಗುವುದಿಲ್ಲ. ಇವೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಮಾನ್ಯ ವಿರೋಧ ಪಕ್ಷದ ನಾಯಕರ ಒಪ್ಪಿಗೆಯ ಮೇರೆಗೆ ಅವರ ಸಹ ಚಿಂತನೆಯಿಂದ ನಾವು ಈ ಕೆಲಸಗಳನ್ನೆಲ್ಲಾ ಮಾಡಿಕೊಂಡು ಬಂದಿದ್ದೇವೆ. ಈಗ ಪುನಃ ಬದಲಾವಣೆಯನ್ನು ಮಾಡುವುದು ಬೇಡ. ಬೇಕಾದಷ್ಟು ಅವಕಾಶವನ್ನು ಇರುತ್ತದೆ. ಮತ್ತೆ ಜೂನ್, ಜುಲೈ ತಿಂಗಳಲ್ಲಿ ಒಂದು ತಿಂಗಳ ಮೇಲೆ ಸಭೆ ನಡೆಯುತ್ತದೆ. ಮತ್ತೆ ಡಿಸೆಂಬರ್‌ನಲ್ಲಿ ಸಭೆ ನಡೆಯುತ್ತದೆ. 100 ದಿವಸಗಳ ಚರ್ಚೆಯನ್ನು ಮಾಡಬೇಕೆಂದು ಎಲ್ಲಾ ಒಪ್ಪಿಗೆಯಾಗಿದೆ. ಆದ್ದರಿಂದ ಈಗ ಪುನಃ ಪುನಃ ಅದನ್ನೇ ಹೇಳಿದರೆ ಹೇಗೆ? ಬಹಳ ಕಟುವಾದ ಟೀಕೆಯನ್ನು ಮಾಡುವುದು ಔದಾರ್ಯರಹಿತವಾದಂತಹ ಮಾತು ಅಂತ ಹೇಳಿ ನಾನು ವಿನಯದಿಂದ ನಾನು ತಮಗೆ ಅರಿಕೆಮಾಡಿಕೊಳ್ಳುತ್ತೇನೆ. ಆದ್ದರಿಂದ ಸಭೆಯ ಕಾರ್ಯಕಲಾಪವನ್ನು ಎಲ್ಲಾ ಬಿಸಿನೆಸ್ ಅಡ್ವೈಸರಿ ಕಮಿಟಿ ಒಪ್ಪಿದ ರೀತಿಯಲ್ಲಿ ಮುಂದುವರಿಸೋಣ ಅಂತ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷ ನಾಯಕರು):– ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಸದನ ನಡೆದಿದ್ದ ಬಗ್ಗೆ ಅಥವಾ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ಚರ್ಚೆಯಾಗಿದೆ ಎನ್ನುವುದರ ಬಗ್ಗೆ ಹೇಳಿದ್ದಾರೆ. ಅದರಲ್ಲಿ ನನ್ನದು ಯಾವುದೂ ವಿವಾದ ಇಲ್ಲ. ಆದರೆ ಇವತ್ತು ಮಾನ್ಯ ವಾಟಾಳ್ ನಾಗರಾಜ್ ಏನು ಹೇಳಿದ್ದಾರೆ ಅದರಲ್ಲಿಯೂ ಅರ್ಥವಿದೆ. ಇದನ್ನು ನಾವು ಒಪ್ಪಿಕೊಳ್ಳಬೇಕು. ಏಕೆಂದರೆ ಇಲ್ಲಿ 48 ಬೇಡಿಕೆಗಳನ್ನು ನಾವು ಒಂದೇ ದಿನ ಚರ್ಚೆ ಮಾಡದೇ ಪಾಸ್ ಮಾಡಿಕೊಟ್ಟರೆ ಆ ಪಾಪಕ್ಕೆ ನಾವೂ ಗುರಿಯಾಗುತ್ತೇವೆ. ನೀವೂ ಗುರಿಯಾಗುತ್ತೀರಿ. ಇವತ್ತು ಬೇಡಿಕೆಗಳ ಚರ್ಚೆ ಏತಕ್ಕೆ ಆಗಬೇಕು? ಇದರಿಂದ ಸಚಿವರಿಗೂ ಒಳ್ಳೆಯದು, ನಿಮ್ಮ ಇಲಾಖೆಯ ಬಗ್ಗೆ ಕೆಲವು ಸಲಹೆಗಳು ಬರುತ್ತದೆ, ನಿಮ್ಮ ಇಲಾಖೆಯ ಟೀಕೆ ಟಿಪ್ಪಣಿಗಳು ಆಗುತ್ತದೆ. ಇವತ್ತು ಮುಖ್ಯವಾದ ಬೇಡಿಕೆ ಅದು ಅರ್ಬನ್ ಡೆವಲಪ್‌ಮೆಂಟ್ ಇರಬಹುದು. ಸೋಷಿಯಲ್ ವೆಲ್‌ಫೇರ್ ಇರಬಹುದು, ರೂರಲ್ ಡೆವಲಪ್‌ಮೆಂಟ್ ಇರಬಹುದು ಮಾನ್ಯ ಮುಖ್ಯಮಂತ್ರಿಗಳ ಡಿಮ್ಯಾಂಡ್ ಇರಬಹುದು.

ನೀವು ಪಾರ್ಲಿಮೆಂಟರಿ ಅಫೇರ್ ಮಿನಿಸ್ಟರ್ ಆಗಿದ್ದಾಗ ತಾವು ಚರ್ಚೆಯಾಗಬೇಕೆಂದು ಹೇಳಿದ್ದೀರಿ. ಅಷ್ಟೇ ಅಲ್ಲ ಕನಿಷ್ಠ 100 ದಿನ 80 ದಿನ ಅಧಿವೇಶನವನ್ನು ನಡೆಸಬೇಕೆಂದು ಒಪ್ಪಿಕೊಂಡಿದ್ದೀರಿ. ಹಾಗಾಗಿ ತಮ್ಮ ವಿಶ್ವಾಸ ಇದರಲ್ಲಿ ಇಲ್ಲ ಅಂತ ನಾನು ಟೀಕೆ ಮಾಡುತ್ತಿಲ್ಲ. ತಾವೂ ಸಹ ವಿಶ್ವಾಸದಿಂದ ಒಪ್ಪಿಕೊಳ್ಳುತ್ತೀರಿ, ಈ ಪ್ರಕಾರ ಆಗಬಾರದು. ಈ ಪ್ರಕಾರ ಆದರೆ ಏನು ಬೆಳಕನ್ನು ಈ ಇಲಾಖೆಗಳ

ಬಗ್ಗೆ ಚೆಲ್ಲಲಿಕ್ಕೆ ಸಾಧ್ಯವಾಗುತ್ತದೆ ? ಒಂದು ಇಲಾಖೆಯ ಮೇಲೆ ಕೆಲವೊಂದು ಸೂಚನೆಯನ್ನು ಹೇಗೆ ಕೊಡಲಿಕ್ಕೆ ಆಗುತ್ತದೆ ? ಕೆಲವೊಂದು ಟೀಕೆ ಟಿಪ್ಪಣಿಯನ್ನು ಮಾಡಲಿಕ್ಕೆ ಹೇಗೆ ಸಾಧ್ಯವಾಗುತ್ತದೆ ? ಹಾಗಾಗಿ ಇವತ್ತು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವು ಒಪ್ಪಿಕೊಳ್ಳುವ ಪ್ರಶ್ನೆ ಏಕೆ ಬಂತು ಅಂದರೆ ನಿಮ್ಮ ಎ.ಐ.ಸಿ.ಸಿ. ಅಧಿವೇಶನ ಇರುವುದರಿಂದ ಒಪ್ಪಿಕೊಳ್ಳುವ ಪ್ರಶ್ನೆ ಬಂತು. 26ನೇ ತಾರೀಖು ಚರ್ಚೆ ಮಾಡಲಿಕ್ಕೆ ಅವಕಾಶ ಇದೆ. 29 ಅವಕಾಶ ಇತ್ತು, 30 ಇತ್ತು, 31 ಇತ್ತು, ತಮ್ಮ ಎ.ಐ.ಸಿ.ಸಿ. ಅಧಿವೇಶನವಿರುವುದರಿಂದ ನಾವು ಒಪ್ಪಿಕೊಳ್ಳಬೇಕಾಗಿತ್ತು. ನಾವು ಚರ್ಚೆಯನ್ನು ಮಾಡಬೇಕೆಂದು ಹೇಳಿದ್ದೇವೆ.

7.50 ಪಿಎಂ

ಈಗ ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ಹೇಳಿದ್ದೇನೆ. ಇವತ್ತು, ನಾಳೆ ಮತ್ತು 30ನೇ ತಾರೀಖಿನವರೆಗೆ ಚರ್ಚೆಯಾಗಲಿ ನಂತರ 31ರಂದು ಅಪ್ರೋಪ್ರಿಯೇಷನ್ ಬಿಲ್ಲನ್ನು ತೆಗೆದುಕೊಂಡು ಬನ್ನಿ ಆಗ ನಾವು ಅದಕ್ಕೆ ವಿರೋಧ ಮಾಡುವುದಿಲ್ಲ, ನಾವು ಅದಕ್ಕೆ ಏನಾದರೂ ವಿರೋಧ ಮಾಡಿದರೆ ನಾವು ಉಳಿಯಬೇಕಲ್ಲಾ ? ಇವತ್ತು ನಮ್ಮ ಕಡೆ ಸಂಖ್ಯಾ ಬಲ ಕಡಿಮೆ ಇದೆ. ನಮ್ಮ ಕಡೆ 30–40 ಜನರಿದ್ದರೂ ಸಹ ನಾವು ಟೀಕೆ ಟಿಪ್ಪಣಿಗಳನ್ನು ಮಾಡುತ್ತೇವೆ ಮತ್ತು ಸಲಹೆಗಳನ್ನು ಕೊಡುತ್ತೇವೆ. ಇದರಿಂದ ಸರ್ಕಾರಕ್ಕೆ ಒಳ್ಳೆಯದಾಗುತ್ತದೆ ನಿಮಗೆ ಒಳ್ಳೆಯ ಹೆಸರು ಬರುತ್ತದೆ, ನಾನು ನಿಮಗೆ ಒಂದು ಸಲಹೆಯನ್ನು ಕೊಡುತ್ತೇನೆ, ಇವತ್ತು 48 ಬೇಡಿಕೆಗಳು ಮೂವ್ ಆಗಿದೆ, ಸಪ್ಲಿಮೆಂಟರಿ ಎಸ್ಟಿಮೇಟ್ ಮೂವ್ ಆಗಿದೆ. ನಾಳೆ ಅಪ್ರೋಪ್ರಿಯೇಷನ್ ಬಿಲ್ ಮೂವ್ ಆಗುತ್ತದೆ. ಯಾರಿಗೂ ಮಾತನಾಡಲು ಸಮಯ ಇಲ್ಲ, ಆದ್ದರಿಂದ ಸದನ ನಾಳೆ, ನಾಡಿದ್ದು ಮತ್ತು 31ನೇ ತಾರೀಖಿನವರೆಗೆ ಚರ್ಚೆ ಮಾಡಲಿ. 31ರಂದು ಅಪ್ರೋಪ್ರಿಯೇಷನ್ನ ಬಿಲ್ಲನ್ನು ತೆಗೆದುಕೊಂಡುಬನ್ನಿ, 3–4 ದಿನಗಳಲ್ಲಿ ಎಷ್ಟು ಹೇಳಲು ಸಾಧ್ಯವಾಗುತ್ತದೋ ಅಷ್ಟನ್ನು ಹೇಳಲು ಪ್ರಯತ್ನ ಮಾಡುತ್ತೇವೆ. ಈ ರೀತಿ ಮಾಡುವುದರಿಂದ ನಿಮಗೆ ಗೌರವ ಬರುವುದಿಲ್ಲ; ನಿಮಗೂ ಸಮಾಧಾನ ಬರುವುದಿಲ್ಲ;

ಶ್ರೀ ಎಂ. ಮಹದೇವು:– ಇದನ್ನು ನಿಮ್ಮ ಸರ್ಕಾರದ ಕಾಲದಲ್ಲಿಯೇ ಮಾಡಿದ್ದು. ನಿಮ್ಮ ಕಾಲದಲ್ಲಿ ಒಂದು ನಿಮಿಷ ಉಸಿರಾಡಲು ಕೊಡಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ಕಳೆದ ವರ್ಷ ಬೇಡಿಕೆಯ ಮೇಲೆ ಚರ್ಚೆಯಾಗಲಿಲ್ಲ. ಆದ್ದರಿಂದಲೇ ನಿಮ್ಮ ಸರ್ಕಾರಕ್ಕೆ ತೊಂದರೆಯಾಯಿತು, ಆ ಪ್ರಕಾರ ಮಂತ್ರಿಗಳು ಬೇಜವಾಬ್ದಾರಿಯಾದರು; ಇವತ್ತು ನಿಮ್ಮ ಇಲಾಖೆಯ ಮೇಲೆ ಚರ್ಚೆಯಾದರೆ ನೀವು ನಾಳೆದಿನ ಕೆಲವು ಅನೌನ್ಸ್‌ಮೆಂಟೂ ಮಾಡಬಹುದು. ವಯಸ್ಕರ ಶಿಕ್ಷಣ ಸಚಿವರಾದ ಮಾನ್ಯ ರಾಣೆಯವರು ತಮ್ಮ ಇಲಾಖೆಯ ಬಗ್ಗೆ ಮುಂದಿನ ವರ್ಷ ಏನು ಮಾಡುತ್ತೇವೆ. 1994ರಲ್ಲಿ 1995ರಲ್ಲಿ ಏನು ಮಾಡುತ್ತೇವೆ, ಇದರಿಂದ ಜನರಿಗೆ ಏನು ಅನುಕೂಲವಾಗುತ್ತದೆ, ಬಡವರಿಗೆ ಏನು ಒಳ್ಳೆಯದಾಗುತ್ತದೆ, ಈ ರಾಜ್ಯಕ್ಕೆ ಏನು ಒಳ್ಳೆಯದಾಗುತ್ತದೆ ಎನ್ನುವ ಬಗ್ಗೆ ಹೇಳಿದ್ದಾರೆ. ಇದರಿಂದ ತಮಗೆ ಗೌರವ ಬರುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ ಸದನ ನಡೆಸುವುದರಿಂದ ಏನೂ ತೊಂದರೆ ಇಲ್ಲ. ಆದ್ದರಿಂದ 31ನೇ ತಾರೀಖು ಬೇಕಾದರೆ ಅಪ್ರೋಪ್ರಿಯೇಷನ್ ಬಿಲ್ಲನ್ನು ತಂದರೆ ಅದಕ್ಕೆ ನಾವು ಒಪ್ಪಿಗೆಯನ್ನು ಕೊಡುತ್ತೇವೆ. 48 ಬೇಡಿಕೆಗಳ ಮೇಲೆ ಎಲ್ಲಾದಕ್ಕೂ ಬೆಳಕನ್ನು ಚೆಲ್ಲಲೂ ಸಾಧ್ಯವಾಗುವುದಿಲ್ಲ. ಆದರೆ ಎಷ್ಟು ಸಾಧ್ಯ ಅಷ್ಟು ಬೆಳಕು ಚೆಲ್ಲಲು ಸಾಧ್ಯವಾಗಬಹುದು. ಆದುದರಿಂದ ನಾಳೆ ನಮ್ಮನ್ನು ಜನ ದೂರುತ್ತಾರೆ, ಇವರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ಮಾಡಿಲ್ಲ, ಆ ದೂರು ನಿಮ್ಮ ಮೇಲೆ ಸಹ ಬರಬಹುದು ಅಥವಾ ನಮ್ಮ ಮೇಲೆ ಬರಬಹುದು. ಅಧ್ಯಕ್ಷರ ಮುಖಾಂತರ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನನಗೆ ಅವರ ಮೇಲೆ ವಿಶ್ವಾಸವಿದೆ, ಚರ್ಚೆ ನಡೆಸುವುದಕ್ಕೆ ಅವರದ್ದು

ವಿರೋಧವಿಲ್ಲ, ಅದು ನನಗೆ ಗೊತ್ತಿದೆ, ಆದ್ದರಿಂದ ಅವರು ನಮಗೆ ಚರ್ಚೆಗೆ ಅವಕಾಶ ಮಾಡಿಕೊಡಲಿ, ಇನ್ನೂ 3ದಿನಗಳವರೆಗೆ ಚರ್ಚೆಯಾಗಲಿ, ಅನಂತರ ಅವರು ಅಪ್ರೊಪ್ರಿಯೇಷನ್ ಬಿಲ್ಲನ್ನು ತೆಗೆದುಕೊಂಡು ಬರಲಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ದೇಶ್‌ಪಾಂಡೆಯವರು ಮತ್ತು ವಾಟಾಳ್‌ನಾಗರಾಜ್‌ರವರು ಏನು ವಾದ ಮಾಡಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಯಾವಾಗಲೂ ಕೂಡ ವಿಷಯದ ಮೇಲೆ ಪೂರ್ಣ ಚರ್ಚೆಯಾಗಬೇಕು. ವಿವರವಾದ ಚರ್ಚೆಯಾಗಬೇಕು. ಅದು ನಮ್ಮ ವಿಚಾರಕೂಡ. ಅದೇ ದೃಷ್ಟಿಯಲ್ಲಿ ಮಾರ್ಚ್ 31 ಆದಮೇಲೆ ಓಟ್ ಆನ್ ಅಕೌಂಟ್ ತೆಗೆದುಕೊಳ್ಳತಕ್ಕದ್ದು ಸಂಪ್ರದಾಯ. ಆದರೆ ಇದು ಸರಿಯಾಗುವುದಿಲ್ಲ, ಏಕೆಂದರೆ ಫುಲ್ ಇಯರ್ ಸಿಗಲಿಲ್ಲ, ಒಂದು ಇಂಪ್ಲಿಮೆಂಟೇಷನ್ ಸಿಗಲಿಲ್ಲವೆಂದಾಗುತ್ತದೆ. ಇದರಲ್ಲಿ ಎರಡು ವಿಚಾರ ಇದೆ.ಈ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣ ಒಂದನ್ನು ಬಿಟ್ಟರೆ ಮತ್ತೆ ಉಳಿದುದೆಲ್ಲವನ್ನೂ ಬಜೆಟ್‌ನಲ್ಲಿ ಕಳೆದಿದ್ದೇವೆ. ಬಜೆಟ್ ಅಧಿವೇಶನ, ಬೇಸಿಗೆ ಅಧಿವೇಶನ, ಚಳಿಗಾಲದ ಅಧಿವೇಶನವೆಂದು ಮೂರು ವಿಧವನ್ನು ಮಾಡಿ ಒಟ್ಟು ನೂರು ದಿನಗಳ ಕಾಲವಾದರೂ ಸಹ ಸದನವನ್ನು ನಡೆಸಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ.

ನಾವು ಏಕೆ ಬಜೆಟ್‌ನ ಸಂದರ್ಭದಲ್ಲಿ ಶಿಸ್ತು, ಸಂಯಮ ಮಾಡಿತ್ತೇವೆಂದರೆ ಅದು ಬಜೆಟಿಗೆ ಮಾತ್ರ ಸೀಮಿತವಾಗಿರಬೇಕು. ಈ ಒಂದು ರೀತಿ ಗಂಭೀರವಾದ ಚರ್ಚೆಯಾಗುತ್ತದೆ, ಉಳಿದ ದಿನಗಳಲ್ಲಿ ಬೇರೆ ಬೇರೆ ಚರ್ಚೆ ಬರುತ್ತದೆ, ಬಿಲ್ಲುಗಳು ಬರುತ್ತದೆ, ಅವು ಬೇಕಾದರೆ ಕಾಯಬಹುದು. ಆದರೆ ನಾವು ಬಜೆಟಿನ ಮೇಲೆ ಚರ್ಚೆ ಮಾಡುವಾಗ ಚರ್ಚೆಯನ್ನು ಬಜೆಟಿಗೇ ಮೀಸಲಾಗಿಟ್ಟರೆ ಸೀಮಿತವಾದ ದಿನಗಳೇ ಸಾಕಾಗುತ್ತದೆ. ಆದರೆ ಏನಾಗುತ್ತದೆಂದರೆ ಬಜೆಟ್ ಅಧಿವೇಶನಕ್ಕೂ ಉಳಿದ ಅಧಿವೇಶನಕ್ಕೂ ವ್ಯತ್ಯಾಸಮಾಡುವುದಿಲ್ಲ.

ಉಳಿದ ಕೆಲಸಗಳನ್ನು ನಾವು ಸಾಕಷ್ಟು ದಿವಸ ಕಳೆಯುತ್ತೇವೆ. ತಮಗೆ ಗೊತ್ತಿದೆ, ವರ್ಷದಲ್ಲಿ 35 ದಿವಸಗಳು ಅಧಿವೇಶನ ಆದದ್ದೂ ಇದೆ. ಅನೇಕ ಬಾರಿ 32ದಿವಸಗಳು ಆದದ್ದೂ ಇದೆ. ಇಡೀ ವರ್ಷದಲ್ಲಿ 35 ದಿವಸ 40 ದಿವಸ ಆಗಿದೆ. ಇತ್ತೀಚೆಗೆ 40–45 ದಿವಸದ ಮೇಲೆ ಹೋಗುವುದಿಲ್ಲ. ಪರಿಸ್ಥಿತಿ ಹಾಗಿದೆ. ಹಾಗಿರುವಾಗ ಅದಕ್ಕಾಗಿ ನಾವು 100 ದಿವಸವಾದರೂ ಇರಬೇಕು ಎಂದು ಯೋಚನೆ ಮಾಡಿದ್ದೇವೆ. ಏಕೆಂದರೆ ಇಂತಹ ವಿಚಾರದ ಬಗ್ಗೆ, ಇಂತಹ ಇಲಾಖೆ ಬಗ್ಗೆ ಚರ್ಚೆ ಆಗಬೇಕು. ಚರ್ಚೆ ಅನೇಕ ಬಾರಿ ಬಜೆಟ್ ಅಧಿವೇಶನದಲ್ಲಿ ಆಗುತ್ತಾ ಇಲ್ಲ. ಆದರೆ ಬೇರೆ ಬೇರೆ ಬಜೆಟ್ ಅಧಿವೇಶನದಲ್ಲಿ ಬೇರೆ ಬೇರೆ ಕಾರಣಗಳು ಇರಬಹುದು, ಬೇರೆ ಬೇರೆ ವಿಚಾರದ ಮೂಲಕ, ನಿಯಮಗಳ ಮೂಲಕ ಚರ್ಚೆಗೆ ಬರುತ್ತದೆ, ಮುಂದೆ ಕೂಡ ಬರುತ್ತದೆ. Not that we should shut out the discussion. ಈಗ ಅದಕ್ಕಾಗಿ ತಾವು ನಮ್ಮಲ್ಲಿ ಏನು ನಡೆದುಕೊಂಡು ಬಂದಿದೆ ಎಂಬುದನ್ನು ಪರಾಂಬರಿಸಿದರೆ ಗೊತ್ತಾಗುತ್ತದೆ. ನಾವು ಯಾವ ಸ್ಥಳದಲ್ಲಿ ಇದ್ದೇವೋ ಅದೇ ಸ್ಥಳದಲ್ಲಿ ಇದ್ದೇವೆ ಎಂದು ಕೆಲವು ಸಾರಿ ನನಗೆ ಅನಿಸುತ್ತದೆ. ಆದರೆ ಇದನ್ನು ವಿಚಾರ ಮಾಡಬೇಕು. ಇವತ್ತು ತಮಗೆ ಗೊತ್ತಿದೆ. 22ನೇ ತಾರೀಖು ಬಜೆಟ್ ಪ್ರೆಸೆಂಟೇಷನ್ ಆಗಿದೆ. ಮಧ್ಯದಲ್ಲಿ ರಜೆ ಬರುತ್ತದೆ, ಅದು ಪ್ರತ್ಯೇಕ. 22 ರಿಂದ ಇವತ್ತು 22, ಸುಮಾರು 30 ದಿವಸ, ನಾಳೆ 31ನೇ ತಾರೀಖು. ಒಂದು ತಿಂಗಳು ನಾವು ಇವತ್ತು ಬಜೆಟ್‌ಗೆ ಸೀಮಿತ ಆಗಿದ್ದೇವೆ. ನಿಗದಿ ಪಡಿಸಿದ್ದೇವೆ. ಅದನ್ನು ನಾವು ಯಾವ ರೀತಿ ಉಪಯೋಗ ಮಾಡಬೇಕು ಎಂದು ಅದು ನಮ್ಮ ಕೈಯಲ್ಲಿ ಇದೆ. ನಾವು ಏನು ಮಾಡಬೇಕಿತ್ತು ? ಬಹುತೇಕವಾಗಿ ಸಮಯ ಬಜೆಟ್‌ಗೆ ಕೊಟ್ಟಿದ್ದರೆ ಆಗುತ್ತಿತ್ತು. ತಮಗೆ ಗೊತ್ತಿದೆ ಖಂಡಿತವಾಗಿ ಸರಿಯಾದ ಅವಕಾಶ ಸಿಗುತ್ತಾ ಇತ್ತು. ಈಗ ಕಳೆದು ಕೊಂಡಿದ್ದಕ್ಕೆ ಅದನ್ನು ಮೇಕಪ್ ಮಾಡುವುದು ಹೇಗೆ ? ವೋಟ್ ಆನ್ ಅಕೌಂಟ್ ಮಾಡಿ ಮೇಕಪ್ ಮಾಡಿದರೆ ಇಡೀ ವರ್ಷದ ಆಡಳಿತಕ್ಕೆ ಅದರಿಂದ ದಕ್ಕೆ ಬರುತ್ತದೆ. ನಮ್ಮ ಕರ್ತವ್ಯ ಏನು ? ಏಕೆ

ಬಂದಿದ್ದೇವೆ ಇಲ್ಲಿ ? ಬಹಳ ಒಳ್ಳೆಯ ಆಡಳಿತ ಕೊಡಬೇಕು ಎಂದು ನಮ್ಮ ಇಚ್ಛೆ, ತಮ್ಮ ಇಚ್ಛೆ ಸಹ ಇದೆ ಏಕೆ ಟೀಕೆ ಮಾಡುತ್ತೀರಿ ? ಸರಿಯಾದ ದಾರಿಯಲ್ಲಿ ಹೋಗಿ ಎಂದು ಟೀಕೆ ಮಾಡುತ್ತೀರಿ, ವರ್ಷದಲ್ಲಿ ಆರು ತಿಂಗಳು ಉಳಿದರೆ ಸರಿಯಾದ ದಾರಿ ಎಲ್ಲಿ ಇರುತ್ತದೆ ? ನಿಗದಿತವಾದ, ಯೋಜಿತ ಕಾರ್ಯಕ್ರಮಗಳನ್ನು ನಾವು ಅನುಷ್ಠಾನ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಮ್ಮ ಉದ್ದೇಶ ಎಂದರೆ let us get full year of administration. ತಮಗೆ ಗೊತ್ತಿದೆ, ಏಪ್ರಿಲ್‌ನಲ್ಲಿ ಅಡ್ಮಿನಿಸ್ಟ್ರೇಷನ ಸ್ಟ್ರೀಮ್‌ಲೈನ್ ಮಾಡಬೇಕು. ಫಸ್ಟ್ ಮೇನಿಂದ 31ನೇ ಮಾರ್ಚ್‌ವರೆಗೆ we will be in a positior to give a good administration. ಮಧ್ಯದಲ್ಲಿ ನಾವು ಹೇಳಿದ್ದೇವೆ – our commitmen stands. 100 ದಿವಸ ಭೇಟಿ ಆಗೋಣ, ಎಂದು. ಅದನ್ನು ಬದಲಾವಣೆ ಮಾಡುವುದಿಲ್ಲ. ತಾವು ಸ್ವಲ್ಪ ನೋಡಿ. ವಿವರ ನೋಡಿದರೆ ಗೊತ್ತಾಗುತ್ತದೆ. ಈಗ 1992ನೇ ಇಸವಿಯಲ್ಲಿ 38 ದಿವಸ ಇಡೀ ಸದನ ಸೇರಿರುವುದು. 1986ನೇ ಇಸವಿಯಲ್ಲಿ 51 ದಿವಸ, 1985ರಲ್ಲಿ 48 ದಿವಸ. 1984ರಲ್ಲಿ 52 ದಿವಸ ನಾವು ಒಟ್ಟು ಸದನ ಇಡೀ ವರ್ಷದಲ್ಲಿ ಸೇರಿದ್ದು. 1983ರಲ್ಲಿ 51 ದಿವಸ. ಈ ತರಹ ಇದೆ. 1989ರಲ್ಲಿ 21 ದಿವಸ ಸೇರಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ:– ರಾಷ್ಟ್ರಪತಿಯವರ ಆಡಳಿತ ಇತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ:– ಇರಬಹುದು. 38 ದಿವಸಗಳು, 48 ದಿವಸಗಳು, 51 ದಿವಸಗಳು ನಾನು ಟೀಕೆ ಮಾಡುತ್ತಾ ಇಲ್ಲ. ಇದು ರೂಢಿಯಾಗಿ ಬಂದಿದೆ. ಇದು ಬದಲಾವಣೆ ಆಗಬೇಕು. ನಾನು ಒಪ್ಪಿಕೊಳ್ಳುತ್ತೇನೆ. I don't say you have done wrong or we have done. Everybody has done the same thing. ಅದು ಮುಂದೆ ನಡೆಯಬಾರದು. ನೀವು ಹೇಳಿದ ಆರ್ಗ್ಯುಮೆಂಟ 100ಕ್ಕೆ 100 ಕರೆಕ್ಟ್. ನಿಮ್ಮ ಆರ್ಗ್ಯುಮೆಂಟ್ ನಾನು ಒಪ್ಪುತ್ತೇನೆ. ಅದನ್ನು ವಾದ ವಿವಾದ ಮಾಡುವ ಪ್ರಶ್ನೆ ಅಲ್ಲ. ನೀವು ವಾದ ಮಾಡಿದರೂ ಸಿಕ್ಕಿ ಹಾಕಿಕೊಳ್ಳುತ್ತೀರಿ. ನಾವು ವಾದ ಮಾಡಿದರೂ ಸಿಕ್ಕಿ ಹಾಕಿಕೊಳ್ಳುತ್ತೇವೆ. ಅದು ಬಿಡುಗಡೆ ಆಗತಕ್ಕ ಪ್ರಶ್ನೆ ಅಲ್ಲ. ಬಿಡುಗಡೆ ಮಾಡಬೇಕಾದರೆ ಒಂದು ರೀತಿಯ ಶಿಸ್ತು ಇರಬೇಕು. ನಮ್ಮದೂ ತಪ್ಪು. ಇದು ಎಲ್ಲರಿಗೂ ಅನ್ವಯಿಸುತ್ತದೆ. ನಾವೆಲ್ಲರೂ ಸಹ ಬಜೆಟ್ ಅಧಿವೇಶನದಲ್ಲಿ, ಒಂದು ಪಾವಿತ್ರ್ಯತೆ, ಕೊಡೋಣ. ಇಲ್ಲಿ ಗಂಭೀರವಾಗಿ ಚರ್ಚೆ ಮಾಡೋಣ ಬಜೆಟ್‌ಗೆ ಸೀಮಿತವಾಗಿ ಒಂದು ಸಣ್ಣ ನಿರ್ಣಯ ಮಾಡಿ ಬಿಟ್ಟರೆ ಎಲ್ಲಾ ಸರಿ ಹೋಗುತ್ತದೆ. I will just give you some details. 1972–73ರಲ್ಲಿ ಎಷ್ಟು ದಿವಸ ಅಧಿವೇಶನ ಇತ್ತು. ಒಟ್ಟು 1[illegible] ದಿವಸ ಬಜೆಟ್ ಆಯಿತು. ಈ ಅಂಕಿ ಅಂಶವನ್ನು ಯಾರನ್ನೂ ದೂರಲಿಕ್ಕೆ ಹೇಳುತ್ತಿಲ್ಲ. ಆದರೆ ಪರಿಸ್ಥಿತಿ ಏನು ಆಗಿದೆ, ನಿಮಗೆ ಹೇಳಲಿಕ್ಕೆ ಹೇಳುತ್ತಿದ್ದೇನೆ. 1981–82ರಲ್ಲಿ 25 ದಿವಸ ಚರ್ಚೆ ಆಯಿತು ಆಮೇಲೆ 1982–83ರಲ್ಲಿ 34 ದಿವಸಗಳು. 1983–84 30 ದಿವಸಗಳು. 1984–85 10 ದಿವಸ 10 ದಿವಸ ಚರ್ಚೆ ಆಯಿತು. ಅದು ಕೂಡ ಫುಲ್ ಬಜೆಟ್ ಅರ್ಧ ಬಜೆಟ್ ಅಲ್ಲ. 10 ದಿವಸ. ಚರ್ಚೆ ಆಯಿತು. 1984–85ರಲ್ಲಿ 10 ದಿವಸ ಹೇಗೆ ನೀವು ಮಾಡಿದಿರಿ ಎಂದು ನಾನು ಹೇಳುವುದಿಲ್ಲ. ನಾನು ವಿರೋಧ ಪಕ್ಷದ ನಾಯಕನಾಗಿ ಇದ್ದೆ, ನನ್ನದೂ ತಪ್ಪು ಇದೆ. ಬಹುಶಃ ಈ ಕಷ್ಟ ಸುಖ ಎಲ್ಲರೂ ಹಂಚಿಕೊಳ್ಳಬೇಕಾಗುತ್ತದೆ.

1985–86ರಲ್ಲಿ 21 ದಿವಸಗಳು.

1986–87ರಲ್ಲಿ 21 ದಿವಸಗಳು.

1986–87ರಲ್ಲಿ 13 ದಿವಸ ಫುಲ್ ಬಜೆಟ್ ಡಿಸ್ಕಷನ್ ಆಗಿರುವುದು. ಅದೇ ಪ್ರಕಾರ 1987–88 9 ದಿವಸ, ಈಗ 1990–91 26 ದಿವಸ. ಆಮೇಲೆ 1991–92 ವೋಟ್ ಆನ್ ಅಕೌಂಟ್ ಅದನ್ನು ಬಿಡಿ. 1992–93 11 ದಿವಸ ಫುಲ್ ಬಜೆಟ್ ಅಧಿವೇಶನ. ಇದು ಒಂದು ರೀತಿಯಾಗಿ [illegible]

ಬಂದಿದೆ. ಇದು ಬಹಳ ಒಳ್ಳೆಯ ಲಕ್ಷಣ ಎಂದು ಅನಿಸುವುದಿಲ್ಲ. ಇದು ಕಡಿಮೆ ಅಂದರೆ ಇಡೀ ವರ್ಷದಲ್ಲಿ ಕಡಿಮೆ ಎಂದರೂ 35–40 ದಿವಸಗಳು ನಡೆಸದೇ ಇದ್ದರೆ ಈ ಪರಿಸ್ಥಿತಿ ಬರುತ್ತದೆ. ಈಗ ಲೆಕ್ಕ ಹಾಕಿದರೆ ಇವತ್ತು 22ನೇ ತಾರೀಖು. ಸುಮಾರು 35 ದಿವಸ ನಾವು ಕುಳಿತಿದ್ದೇವೆ.

Since 35 days we are sitting. One full month we are sitting for the Budget Session. In any given year the sitting for the Budget Session itself is the highest. But there is nothing to feel happy.

ಅದು ನನಗಂತೂ ತೃಪ್ತಿಯಿಲ್ಲ. ಬಜೆಟ್ ಮೇಲೆ ಪೂರ್ಣವಾಗಿ ಚರ್ಚೆಯಾಗಬೇಕೆಂದೇ ನಮ್ಮ ಮನಸ್ಸಿನಲ್ಲಿದ್ದುದು. ಅದು ಆಗದಿದ್ದರೆ we will make it up. We are not standing on prestige. 30ನೇ ತಾರೀಖಿನಂದು ಪುನಃ ಸೇರೋಣ. 8ನೇ ತಾರೀಖಿನವರೆಗೆ ಚರ್ಚೆ ಮಾಡೋಣ. We will meet again. We can always sit during August or September. We will meet again in December. ಡಿಸೆಂಬರ್ ತಿಂಗಳಲ್ಲಿ ಪುನಃ ಭೇಟಿಯಾಗೋಣ, ನಂತರ ಬರುವ ಜನವರಿ ತಿಂಗಳಲ್ಲೂ ಭೇಟಿಯಾಗುತ್ತಿದ್ದೇವೆ. 100 full days I am prepared to sit. ಬೇರೆ ಬೇರೆ ಕಾರಣಗಳಿಂದ ಯಾವ ಇಲಾಖೆಗಳ ಮೇಲೆ ಚರ್ಚೆಯಾಗಿಲ್ಲವೋ, ಅದನ್ನು ಚರ್ಚೆಗೆ ತರೋಣ. ಆದರೆ, ಮುಖ್ಯವಾದ ಉದ್ದೇಶವೇನೆಂದರೆ, sanctity of the budget having the full budget voted.

ಅದನ್ನು ನಾವು ಮಾಡೋಣ. ಫುಲ್ ಬಜೆಟ್ ಕೊಡೋಣ. Let the Departments start working. ಇಲ್ಲದಿದ್ದರೆ ಅಧಿಕಾರಿಗಳು ನೆಪ ಹೇಳುತ್ತಾರೆ. ಫುಲ್ ಬಜೆಟ್ ಆಗುವುದಿಲ್ಲ, ಸ್ಕೀಮ್‌ಗಳು ಸಹ ಸ್ಯಾಂಕ್ಷನ್ ಆಗುವುದಿಲ್ಲ, ಹಾಗೇ ಉಳಿಯುತ್ತವೆ. ನನಗನ್ನಿಸುತ್ತದೆ. ವೋಟ್ ಆನ್ ಅಕೌಂಟ್‌ನಷ್ಟು ಕೆಟ್ಟ ಚಾಳಿ anarchy in the finance ಬೇರೆ ಯಾವುದೂ ಇಲ್ಲ. ಆದರೆ, ವೋಟ್ ಆನ್ ಅಕೌಂಟ್‌ನಿಂದ full justice we are not making in so far as administration is concerned. ಆದುದರಿಂದ, ತಾವು ಹೇಳುವುದು ಸರಿ. ನಾಳೆ ಚರ್ಚೆ ಪ್ರಾರಂಭ ಮಾಡೋಣ. ಆಗ ಏನಾಗುತ್ತದೆಂದು ನೋಡಿಕೊಂಡು we will take appropriate decision.

ಅಧ್ಯಕ್ಷರು:– ಈಗ ಸದನದ ಕಾರ್ಯ–ಕಲಾಪವನ್ನು ಮುಂದೂಡಿ ನಾಳೆ ಬೆಳಿಗ್ಗೆ 9.30 ಗಂಟೆಗೆ ಸೇರುವುದು.

(ಸದನವು 8 ಗಂಟೆ 2 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 23ನೇ ಮಾರ್ಚಿ ಮಾಹೆ 1993ರ ಮಂಗಳವಾರದಂದು ಬೆಳಿಗ್ಗೆ 9 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು.)

† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕರ್ನಾಟಕ ವಿಧಾನಸಭೆ

ಮಂಗಳವಾರ 23 ನೇ ಮಾರ್ಚ್ 1993

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10–05 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು:– (ವಿ.ಎಸ್. ಕೌಜಲಗಿಯವರು) ಪೀಠವನ್ನು ಅಲಂಕರಿಸಿದ್ದರು.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಕ್ಲಾಸಿಕ್ ಕಂಪ್ಯೂಟರ್ಸ್ ಕೊಂಡುಕೊಳ್ಳುವಾಗ ಅಪಾರವಾದಂಥ ಭ್ರಷ್ಟಾಚಾರ ನಡೆದಿರುವ ಬಗ್ಗೆ ಕುರಿತು

† ಶ್ರೀ ಸಿ. ಭೈರೇಗೌಡ (ವೇಮಗಲ್):– ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ನಾನು ಹಾಗೂ ನನ್ನ ಸ್ನೇಹಿತರಾದಂಥ ಮಾನ್ಯ ವೈ.ಕೆ. ರಾಮಯ್ಯನವರು ತಮ್ಮ ಒಪ್ಪಿಗೆಗಾಗಿ ಒಂದು ಸೂಚನೆಯನ್ನು ಕಳುಹಿಸಿದ್ದೇವೆ. ಸೂಕ್ಷ್ಮವಾಗಿ ಅದರ ವಿಚಾರ ಏನು ಅಂದರೆ, ಅದರ ಬಗ್ಗೆ ಈಗಾಗಲೇ ಸಾಕಷ್ಟು ಸಾರಿ ಈ ಸದನದಲ್ಲಿ ಚರ್ಚೆಯಾಗಿದೆ. ಕ್ಲಾಸಿಕ್ ಕಂಪ್ಯೂಟರ್ಸ್ ಕೊಂಡುಕೊಳ್ಳುವಂತಹ ಪರಿಸ್ಥಿತಿಯಲ್ಲಿ ಅಪಾರವಾದಂತಹ ಭ್ರಷ್ಟಾಚಾರ ನಡೆದಿರತಕ್ಕಂಥ ವಿಚಾರ ರಾಜ್ಯದ ಹೈಕೋರ್ಟಿಗೂ ಸಹ ಹೋಗಿ ಈ ವ್ಯವಹಾರವನ್ನು ರದ್ದುಗೊಳಿಸಿರತಕ್ಕಂಥದ್ದು ಈ ರಾಜ್ಯಕ್ಕೂ ಹಾಗೂ ಈ ದೇಶದಲ್ಲಿ ಇರತಕ್ಕಂಥ ಪ್ರತಿಯೊಬ್ಬ ಜನರಿಗೂ ಗೊತ್ತಿರತಕ್ಕಂಥ ವಿಚಾರವಾಗಿದೆ. ಈ ವಿಚಾರದಲ್ಲಿ ತನಿಖೆಯನ್ನು ಕೇಂದ್ರ ತನಿಖಾದಳಕ್ಕೆ ವಹಿಸಿರತಕ್ಕಂಥದ್ದು ಹಾಗೂ ಅದನ್ನು ಅವರು ತನಿಖೆಗೆ ತೆಗೆದುಕೊಂಡಿರತಕ್ಕಂಥದ್ದು, ಮೊಕದ್ದಮೆಯನ್ನು ಅವರು ನೋಂದಾಯಿಸಿಕೊಂಡಿರತಕ್ಕಂಥದ್ದು ಗೊತ್ತಿರತಕ್ಕಂಥ ವಿಚಾರವಾಗಿದೆ. ನಿನ್ನೆಯ ಪತ್ರಿಕೆಗಳನ್ನು ನೋಡಿದರೆ ಈ ಮೊಕದ್ದಮೆಯಲ್ಲಿ ಯಾರ್‍ಯಾರು ಅಪರಾಧಿಗಳಾಗಿದ್ದಾರೆ, ಆ ಅಪರಾಧಿಗಳು ಹೈಕೋರ್ಟಿನಲ್ಲಿ ನಿರೀಕ್ಷಣಾ ಜಾಮೀನನ್ನು ಸಹ ಪಡೆದಿದ್ದಾರೆ. ಈ ವಿಚಾರದಲ್ಲಿ ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಸರ್ಕಾರದ ಮೇಲೆ ಒತ್ತಾಯ ತರುವುದೇನೆಂದರೆ ಸರ್ಕಾರಿ ನೌಕರರಾಗಿರತಕ್ಕವರು ಸಣ್ಣ ಅಪರಾಧವನ್ನು ಮಾಡಿದ್ದರೆ, ಕೇಸ್ ರಿಜಿಸ್ಟರ್ ಆದ ತಕ್ಷಣ ಅವರನ್ನು ನೀವು ಸಸ್ಪೆಂಡ್ ಮಾಡುತ್ತೀರಿ, ಆದರೆ ಇಲ್ಲಿ ಹಿಂದೆ ಮುಖ್ಯ ಕಾರ್ಯದರ್ಶಿಗಳಾಗಿರತಕ್ಕಂಥವರು ಬಹಳ ಗುರುತರವಾದಂತಹ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು ತನ್ನ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ಅವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಅವರಿಂದ ಕೋಟ್ಯಾಂತರ ರೂಪಾಯಿಯಷ್ಟು ಹಣ ನಷ್ಟವಾಗಿದೆ. ಇದರಿಂದ ದುರ್ವ್ಯವಹಾರ ಆಗಿದೆ ಎಂದು ನ್ಯಾಯಾಲಯದಲ್ಲಿಯೂ ಈ ವ್ಯವಹಾರವನ್ನು ಅವರು ತಳ್ಳಿಹಾಕಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅವರ ಮೇಲೆ ಮೊಕದ್ದಮೆಯನ್ನು ತಾವು ರಿಜಿಸ್ಟರ್ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ಇವತ್ತಿನ ದಿವಸ ಕೇಂದ್ರ ತನಿಖಾದಳದವರು ಈ ಕೇಸನ್ನು ತೆಗೆದುಕೊಂಡಿದ್ದಾರೆ. ಅಂಥದ್ದರಲ್ಲಿ ಅವರನ್ನು ನೀವು ಇಲ್ಲಿಯವರೆಗೂ ಸಸ್ಪೆಂಡ್ ಮಾಡಿಲ್ಲ. ಒಬ್ಬ ಸಣ್ಣ ಸೆಕೆಂಡ್ ಡಿವಿಜನ್ ಗುಮಾಸ್ತನಾಗಿರತಕ್ಕಂಥವನು ಏನಾದರೂ ತಪ್ಪು ಮಾಡಿದರೆ, ತಕ್ಷಣ ಅವನ ಮೇಲೆ ಕೇಸ್ ರಿಜಿಸ್ಟರ್ ಮಾಡಿ ಅವನನ್ನು ತಕ್ಷಣ ಸಸ್ಪೆಂಡ್ ಮಾಡುತ್ತೀರಿ, ಆದರೆ ಗುರುತರವಾದಂತಹ ಸ್ಥಾನದಲ್ಲಿರತಕ್ಕಂಥವರು ಈ ರೀತಿ ದುರ್ವ್ಯವಹಾರವನ್ನು ಮಾಡಿದ್ದರೂ ಸಹ ನೀವು ಇಲ್ಲಿಯವರೆಗೂ ಸಸ್ಪೆಂಡ್ ಮಾಡುವುದಿಲ್ಲ ಮತ್ತು ಇವತ್ತಿನ ದಿವಸ ಕೇಂದ್ರ ತನಿಖಾದಳದವರ ಮೇಲೂ ನಮಗೆ ಅನುಮಾನ ಬರುತ್ತಿದೆ. ಕಾರಣ ಏನೆಂದರೆ, ನಾವು ಬರುತ್ತೇವೆ ನಿಮ್ಮನ್ನು ದಸ್ತಗಿರಿ ಮಾಡುತ್ತೇವೆ ಎನ್ನತಕ್ಕಂಥ ಸೂಚನೆಯನ್ನು ಅವರಿಗೆ ನೀಡಿದ್ದರಿಂದ ಅವರು ರಾತ್ರೋರಾತ್ರಿ ಅಂದರೆ ಅರ್ಧರಾತ್ರಿಗಿಂತ

ಮೇಲ್ಪಟ್ಟು ಅಂದರೆ ರಾತ್ರಿ 1.30 ಗಂಟೆಯ ಸಮಯದಲ್ಲಿ ನಿರೀಕ್ಷಣಾ ಜಾಮೀನನ್ನು ಪಡೆಯುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತಾರೆ ಅಂದರೆ ಕೇಂದ್ರ ತನಿಖಾದಳವೂ ಸಹ ಇದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ರಾಜ್ಯ ಸರ್ಕಾರ ಇಲ್ಲಿಯವರೆಗೂ ಅವರ ಮೇಲೆ ಈ ಕೇಸನ್ನು ರಿಜಿಸ್ಟರ್ ಆದ ತಕ್ಷಣ ಅವರನ್ನು ಸಸ್ಪೆಂಡ್ ಮಾಡಬೇಕಾಗಿತ್ತು. ಅದರೂ ಕೂಡ ಇವತ್ತಿನ ದಿವಸದವರೆಗೂ ಅವರನ್ನು ಸಸ್ಪೆಂಡ್ ಮಾಡಿಲ್ಲ. ಇದು ಬಹಳ ಗುರುತರವಾದಂತಹ ವಿಚಾರವಾಗಿದೆ. ಹಾಗೂ ಬಹಳ ಮಹತ್ತರವಾದಂತಹ ವಿಚಾರವಾಗಿರುವುದರಿಂದ ಇದರ ಬಗ್ಗೆ ವಿವರವಾದಂಥ ಚರ್ಚೆ ಇಲ್ಲಿ ಆಗಬೇಕಾದ ಅವಶ್ಯಕತೆ ಇದೆ. ಆದ್ದರಿಂದ ದಯವಿಟ್ಟು ಇದಕ್ಕೆ ಅವಕಾಶವನ್ನು ಕೊಡಬೇಕು, ಎನ್ನತಕ್ಕಂಥದ್ದು ಒಂದು. ಎರಡನೆಯದಾಗಿ ನಮ್ಮ ರಾಜ್ಯದಲ್ಲಿರತಕ್ಕಂಥ ಲೋಕಾಯುಕ್ತ ಹಿಂದೆ ಇದ್ದಂತಹ ಎಕ್ಸೈಜ್ ಕಮೀಷನರ್ ಶ್ರೀ ಬುಳ್ಳಾ ಸುಬ್ಬಾರಾವ್ ಅನ್ನುವವರ ಮನೆಯ ಮೇಲೆ ರೈಡ್ ಮಾಡಿದ್ದಾರೆ. ಆಗ ಅವರ ಆದಾಯ ಮಿತಿಗಿಂತ ಹೆಚ್ಚಿಗೆ ಅವರ ಮನೆಯಲ್ಲಿ ಸಂಪತ್ತು ದೊರೆತಿದೆ. ಅವರ ಮೇಲೂ ಸಹ ಕೇಸು ರಿಜಿಸ್ಟರ್ ಆಗಿದೆ. ನನಗೆ ಪತ್ರಿಕಾ ವರದಿಯ ಪ್ರಕಾರ ತಿಳಿದು ಬಂದಿರುವುದು ಏನೆಂದರೆ, ನೀವು ರಜಾ ಹೋಗಿ ಎಂದು ಅವರಿಗೆ ತಿಳಿಸಿರುವುದಾಗಿ ತಿಳಿದುಬಂದಿದೆ. ಏಕೆ ಸ್ವಾಮಿ ? ಏಕೆ ? ಇಂತಹ ಒಂದು ಮುಲಾಜು ಏನಿದೆ ? ಇಂತಹ ಔದಾರ್ಯ ಏತಕ್ಕೆ ? ಪತ್ರಿಕಾ ವರದಿಯ ಪ್ರಕಾರ ಅವರಿಗೆ ರಜಾದ ಮೇಲೆ ಹೋಗಿ ಅಂತ ಹೇಳಿದ್ದಾರೆ, ಏಕೆ ಇಂತಹ ಔದಾರ್ಯ ? ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಜವಾಬ್ದಾರಿ ಇರತಕ್ಕಂಥವರು, ಏಕೆಂದರೆ ಜನರಲ್ ಅಡ್ಮಿನಿಸ್ಟ್ರೇಷನ್ ಅವರಿಗೆ ಬರುತ್ತದೆ. ಇವರು ಇವತ್ತು ಇದಕ್ಕೆ ಉತ್ತರ ಕೊಡಬೇಕಾಗಿರತಕ್ಕಂಥವರು. ಈ ಇಬ್ಬರು ಅಧಿಕಾರಿಗಳ ಮೇಲೆ ನಿಮಗೆ ಎಲ್ಲೂ ಇಲ್ಲದೇ ಇರತಕ್ಕಂಥ ಔದಾರ್ಯವನ್ನು ತೋರಿಸುತ್ತಿರುವುದಕ್ಕೆ ಕಾರಣವೇನು ? ನೂರಾರು ಕೋಟಿ ರೂಪಾಯಿಗಳು ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದೆ. ಇಬ್ಬರು ಎಕ್ಸೈಜ್ ಕಮೀಷನರ್ ಆಗಿ ಕೆಲಸ ಮಾಡಿರತಕ್ಕಂಥವರು. ಇವತ್ತು ಎಕ್ಸೈಜ್ ಇಲಾಖೆಯ ಬಗ್ಗೆ ಚರ್ಚೆ ಮಾಡಲು ಅವಕಾಶ ಇಲ್ಲದಿದ್ದರೂ ಸಮಯ ಬಂದಾಗ ಹೇಳುತ್ತಿದ್ದೇವೆ. ಎಕ್ಸೈಜ್ ಇಲಾಖೆಯಲ್ಲಿ ಸೋರಿರತಕ್ಕಂಥ ಹಣವನ್ನು ಇವತ್ತು ಈ ಇಬ್ಬರೂ ಕೂಡ ಲಪಟಾಯಿಸಿರತಕ್ಕಂಥದ್ದು, ಒಬ್ಬರು ಲೋಕಾಯುಕ್ತದವರ ಬಲೆಗೆ ಸಿಕ್ಕಿಹಾಕಿಕೊಂಡಿದ್ದಾರೆ. ಇನ್ನೊಬ್ಬರ ಮೇಲೆ ಹೈಕೋರ್ಟಿನಲ್ಲಿ ಕೇಸ್ ಇವತ್ತಿನ ದಿವಸ ಇದೆ. ಅವರು ಹೋಗಿ ನಿರೀಕ್ಷಣಾ ಜಾಮೀನನ್ನು ತೆಗೆದುಕೊಳ್ಳುತ್ತಾರೆ. ಅಲ್ಲಿಯವರೆಗೂ ರಾಜ್ಯ ಸರ್ಕಾರ ಮತ್ತು ಕೇಂದ್ರ ತನಿಖಾ ದಳದವರು ಇವರಿಗೆ ಅವಕಾಶವನ್ನು ಕೊಡುತ್ತಾರೆ ಅಂದರೆ ಒಬ್ಬರಿಗೆ ಒಂದು ನ್ಯಾಯ ಮತ್ತೊಬ್ಬರಿಗೆ ಒಂದು ನ್ಯಾಯ ಮಾಡುವುದು ಸರಿಯಲ್ಲ. ಸರ್ಕಾರದಲ್ಲಿ ಕನಿಷ್ಠ ನೌಕರಿಯಲ್ಲಿ ಇರತಕ್ಕಂಥವರಿಗೆ ಒಬ್ಬರಿಗೆ ಒಂದು ನ್ಯಾಯ. ಇದು ಯಾವ ನೀತಿ ಎಂದು ಸರ್ಕಾರಕ್ಕೆ ಪ್ರಶ್ನೆ ಮಾಡಬೇಕಾಗಿದೆ. ಆದ್ದರಿಂದ ಇದರ ಬಗ್ಗೆ ವಿವರವಾದಂಥ ಚರ್ಚೆ ಮಾಡುವುದು ಅವಶ್ಯಕವಾಗಿದೆ. ದಯವಿಟ್ಟು ಇದಕ್ಕೆ ತಾವು ಅವಕಾಶವನ್ನು ಮಾಡಿ ಕೊಡಬೇಕು. ಮತ್ತು ಈ ಇಬ್ಬರು ಅಧಿಕಾರಿಗಳನ್ನು ನೀವು ಸಸ್ಪೆಂಡ್ ಮಾಡದೇ ಇದ್ದರೆ ಅವರು ಮಾಡಿರತಕ್ಕಂಥ ಲೂಟಿಯಲ್ಲಿ ನಿಮಗೂ ಕೂಡ ಪಾಲು ಬರುತ್ತಿದೆಯೆಂಬ ಅನುಮಾನ ಬರುತ್ತದೆ. ಏಕೆಂದರೆ ಹಿಂದೆ ಕೆಳಗಡೆಯಿಂದ ಮೇಲ್ಗಡೆಯವರೆಗೂ ಇದರಲ್ಲಿ ಪಾಲು ಸಂದಾಯವಾಗುತ್ತಿತ್ತು. ಆ ಪಾಲುಗಾರಿಕೆಯಲ್ಲಿ ಈ ಸರ್ಕಾರದವರು ಭಾಗಿಯಾಗಿದ್ದಾರೆ, ಮುಖ್ಯಮಂತ್ರಿಗಳೂ ಸಹ ಭಾಗಿಯಾಗಿದ್ದಾರೆ ಎನ್ನತಕ್ಕ ಆರೋಪಕ್ಕೆ ನೀವು ಗುರಿಯಾಗಬೇಕಾಗುತ್ತದೆ. ಈ ಆರೋಪದಿಂದ ನೀವು ಹೊರತಾಗಿ ಇರಬೇಕಾಗಿದ್ದರೆ ನೀವು ತತ್‌ಕ್ಷಣ ಅವರನ್ನು ಸಸ್ಪೆಂಡ್ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಮಾಜಿ ಮುಖ್ಯ ಕಾರ್ಯದರ್ಶಿಗಳು ತನನು ಬಂಧಿಸುವಂಥ ಸಂಭವವಿರುವುದರಂದ ನಿರೀಕ್ಷಣಾ ಜಾಮೀನು

ಕೊಡಬೇಕೆಂದು ತೆಗೆದುಕೊಂಡಿದ್ದಾರೆ. ಮತ್ತೊಬ್ಬ ಹಿರಿಯ ಅಧಿಕಾರಿಗಳ ಮನೆಯ ಮೇಲೆ ದಾಳಿ ಮಾಡಿದಾಗ ಅವರ ಆದಾಯಕ್ಕೆ ಮೀರಿದಂತಹ ಆಸ್ತಿ ಸಿಕ್ಕಿತು ಎನ್ನುವಂತಹ ಅಪವಾದನೆ ಪತ್ರಿಕೆಯಲ್ಲಿ ವರದಿಯಾಗಿದೆ. ಸ್ವಚ್ಛ ಮತ್ತು ಅತ್ಯಂತ ದಕ್ಷ ಆಡಳಿತವನ್ನು ಕೊಡುತ್ತೇವೆನ್ನುವಂತಹ ಮಾತು ಸತ್ಯ ಇದ್ದರೆ By this time ಅವರ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ಇದಕ್ಕಿಂತ ಹೆಚ್ಚಾಗಿ ಬಹಳ ನೋವಿನ ಸಂಗತಿ ಏನೆಂದರೆ ನಮ್ಮ ಶಾಸಕರುಗಳು ತಹಶೀಲ್ದಾರರನ್ನು, ಬಿ.ಡಿ.ಓರನ್ನು ಯಾಕಪ್ಪ ನೀನು ಈ ಕೆಲಸ ಮಾಡಲಿಲ್ಲ ಅಂತ ಸಾರ್ವಜನಿಕರ ಹಿತಕ್ಕಾಗಿ ಕೇಳುವುದಕ್ಕೆ ಹೋದರೆ ಸ್ವಾಮಿ ಸೆಕ್ಷನ್ 504ರ ಕೆಳಗಡೆ ನಮ್ಮ ಮೇಲೆ ಕೇಸನ್ನು ರಿಜಿಸ್ಟರ್ ಮಾಡುತ್ತೀರಾ ? ಅದೇ ಸರ್ಕಾರದ ಬೊಕ್ಕಸದ ನೂರಾರು ಕೋಟಿ ರೂಪಾಯಿಗಳನ್ನು ತಿಂದಿರುವಂತಹ ಈ ರಾಕ್ಷಸರ ಮೇಲೆ, ಈ ಸದನದಲ್ಲಿ ಅವರ ಮರ್ಯಾದೆಯನ್ನು ಜಾಲಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲವಾ ? ಒಬ್ಬ ಶಾಸಕ, ಒಬ್ಬ ಮಂತ್ರಿ ಅಪವಾದವನ್ನು ಮಾಡಿದ್ದಾನೆ, ಅವರ ಮೇಲೆ ಆರೋಪವನ್ನು ಹೊರಿಸುತ್ತೀರಾ ? ಈ ಸದನದಲ್ಲಿ ಅವರ ಮಾನ ಮರ್ಯಾದೆಗಳನ್ನು ಜಾಲಾಡುತ್ತೀರಾ ? ಅಂತ ಇದರೊಳಗೆ ಪೂರ್ತಿ ಇದೆ. ಈ ದಿವಸ ತಾವು ಅವಕಾಶವನ್ನು ಕೊಡುವುದಾದರೆ ನಾನು ಹೇಳುತ್ತೇನೆ. ಈ ಶಾಸನಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಶಾಸಕರು ಮತ್ತು ಮಂತ್ರಿಗಳ ಮೇಲೆ ಇರುವಂತಹ ಅಪವಾದದ ದೊಡ್ಡ ಪಟ್ಟಿಯನ್ನೇ ಇಲ್ಲಿ ಕೊಟ್ಟಿದ್ದೀರಾ ? ಮಾನ್ಯ ಮುಖ್ಯಮಂತ್ರಿಗಳು ಶಾಸಕರು ಮತ್ತು ಮಂತ್ರಿಗಳ ಮೇಲೆ ಇರುವಂತಹ ಅಪವಾದದ ಪಟ್ಟಿಯನ್ನು ಕಳೆದವಾರ ತಾವು ಕೊಟ್ಟಿದ್ದೀರಾ ? ಅದರೊಳಗೆ ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ತಾವು ಕೊಟ್ಟಿರುವಂತಹ 30 ಕೇಸ್‌ಗಳಲ್ಲಿ 19 ಕೇಸ್‌ಗಳು ಸೆಕ್ಷನ್ 504 ಮತ್ತು 506 ರ ಮೇಲೆ ಇವೆ. ತಾವು ವಕೀಲರಾಗಿದ್ದವರು. ನಿಮಗೆ ಗೊತ್ತು ಸೆಕ್ಷನ್ 506ಅಂದರೆ, ಏನು ಅಂದರೆ ವಾಚಾಮಗೋಚರವಾಗಿ ಬೈದಾ, ಬಿ.ಡಿ.ಓ. ಗೆ ಹೋಗಿ ಬೈದಾ, ತಹಶೀಲ್ದಾರ್‌ನಿಗೆ ಬೈದಾ. ಕೆ.ಎಸ್.ಆರ್.ಟಿ.ಸಿ. ಬಸ್ ಬಿಡಲಿಲ್ಲ ಅಂತ ವೈ.ಕೆ. ರಾಮಯ್ಯ ಹೋಗಿ ಬೈದಾ ಅಂತ. ಈ ಮಹಾ ಅಪರಾಧಗಳಿಗೆ ನಮ್ಮನ್ನು ಈ ಸದನದಲ್ಲಿ ನೀವು ಜಾಲಾಡುವುದಾದರೆ ನಾನು ಆಗಲೇ ಹೇಳಿದ ಹಾಗೆ ಬೊಕ್ಕಸದ ಕೋಟ್ಯಾಂತರ ರೂಪಾಯಿಗಳನ್ನು ನುಂಗಿ ನೀರನ್ನು ಕುಡಿದಿರುವಂಥ ಈ ಅಧಿಕಾರಿಗಳಿಗೆ ರಕ್ಷಣೆಯನ್ನು ಕೊಡುತ್ತಿರುವಂಥ ಹಿನ್ನೆಲೆ ಏನು ಎಂದು ನನ್ನ ಸ್ನೇಹಿತರು ಹೇಳಿದ ಹಾಗೆ ವಿಧಿ ಇಲ್ಲದೆ ನಾವು ಕೇಳಬೇಕಾಗುತ್ತದೆ.

ಬಹುಶಃ ನಾನು ಎಲ್ಲರಿಗೂ ಹೇಳುವುದಿಲ್ಲ. ಎತ್ತರದ ಸ್ಥಾನದಲ್ಲಿರುವಂತಹ ಕೆಲವರು ಎನ್ನುವಂತಹ ಪದವನ್ನು ಒತ್ತಾಯ ಪೂರ್ವಕವಾಗಿ ನಾನು ಹೇಳುತ್ತಿದ್ದೇನೆ. ಯಾವ ಐ.ಎ.ಎಸ್. ಅಧಿಕಾರಿಗಳು ಇದ್ದಾರೋ ಅವರಿಗೆ ಸರ್ಕಾರ ಹೆದರಿಕೊಳ್ಳುತ್ತಾ ಇರಬಹುದು ಅಥವಾ ಅವರ ಹಂಗಿನಲ್ಲಿ ಇರಬಹುದು. ಈ ಎರಡೂ ಕಾರಣಗಳಿಂದ ಇವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ತಹಶೀಲ್ದಾರರನ್ನು ನೀನು ಏಕಯ್ಯ ಪಟ್ಟಾ ಕೊಡಲಿಲ್ಲ ಅಂತ ಕೇಳಿದರೆ ನೀವು ಶಾಸಕರ ಮೇಲೆ ಕೇಸನ್ನು ರಿಜಿಸ್ಟರ್ ಮಾಡುವಂತಹ ವ್ಯವಸ್ಥೆ ಇರುವಂಥ ಈ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ತಿಂದಿರುವಂತಹ ಅಧಿಕಾರಿಗಳ ಮೇಲೆ ನೀವು ಏತಕ್ಕೆ ಕೇಸ್ ರಿಜಿಸ್ಟರ್ ಮಾಡಿಲ್ಲ ? ಏತಕ್ಕೆ ಸಸ್ಪೆಂಡ್ ಮಾಡಿಲ್ಲ ? ಈ ಸರ್ಕಾರ ಪಕ್ಷಪಾತವನ್ನು ಮಾಡುತ್ತಿದೆ. ಕಾನೂನಿನ ವಿತರಣೆಯಲ್ಲಿ ನ್ಯಾಯವನ್ನು ವಿತರಣೆ ಮಾಡುತ್ತಿರುವಂತಹ ಸಂದರ್ಭದಲ್ಲಿ ಈ ಸದನದಲ್ಲಿ ಮೂಲತಃ ಮುಖ್ಯಮಂತ್ರಿಗಳಿಗೆ ನಾನು ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತಿದ್ದೇನೆ. ಅವರು ನನಗೆ ಪೊಲೀಸಿನವರು ಮಾಡುವಂತಹ ಯಾವುದೇ ಕಾರ್ಯಕ್ರಮದಲ್ಲಿ ಕೈಹಾಕುವುದಿಲ್ಲ ಅಂತ ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅನ್ಯಾಯವನ್ನು ಕಂಡಾಗ ನೀವು ಕೈಹಾಕಬೇಕಾಗುತ್ತದೆ. ಹಸ್ತಕ್ಷೇಪವನ್ನು ಮಾಡಬೇಕಾಗುತ್ತದೆ. ಹಸ್ತಕ್ಷೇಪವನ್ನು ಮಾಡುವುದಿಲ್ಲ ಅಂತ ಹೇಳಿದರೆ ನಮ್ಮ ದೊಡ್ಡತನ ಅಂತ ಮಾನ್ಯ ಮುಖ್ಯಮಂತ್ರಿಗಳು ತಿಳಿದುಕೊಂಡಿದ್ದರೆ ಅದು ತಪ್ಪಾಗುತ್ತದೆ. ಯಾರಿಗಾದರೂ ಒಬ್ಬರಿಗೆ ನೀವು ಅನ್ಯಾಯವನ್ನು ಮಾಡಲಿಕ್ಕೆ

ನೀವು ಹಸ್ತಕ್ಷೇಪವನ್ನು ಮಾಡಬೇಡಿ. ಆದರೆ ಅನ್ಯಾಯವನ್ನು ಸರಿಮಾಡಬೇಕಾದರೆ ಹಸ್ತಕ್ಷೇಪವನ್ನು ಮಾಡಬೇಕಾಗುತ್ತದೆ. ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಸಾರ್ವಜನಿಕ ಹಿತದೃಷ್ಟಿಯಿಂದ ಕೆಲಸ ಮಾಡಲಿಕ್ಕೆ ಶಾಸಕರು ಮಂತ್ರಿಗಳು ಪ್ರಯತ್ನ ಮಾಡಿದಾಗ ಆಗುವಂಥ ಆಕಸ್ಮಿಕ ಘಟನೆಗಳನ್ನು ಉಪಯೋಗಿಸಿಕೊಂಡು ನಮ್ಮ ಮೇಲೆ ಅಧಿಕಾರಿಗಳು ರೋಷವನ್ನು ತೀರಿಸಿಕೊಳ್ಳುವುದಾದರೆ, ನಮ್ಮ ಮೇಲೆ ಹಠವನ್ನು ತೀರಿಸಿಕೊಳ್ಳುವುದಾದರೆ ಅಂತಹ ಅಧಿಕಾರಿಗಳ ಮೇಲೆ ನೀವೇನಾದರೂ ಕ್ರಮ ತೆಗೆದುಕೊಳ್ಳದೇ ಇದ್ದರೆ ವಿಧಿ ಇಲ್ಲದೆ ನಾವು ಮತ್ತು ಈ ರಾಜ್ಯದ ಜನ ಈ ರೀತಿ ಕೆಲಸ ಮಾಡುವಂತಹ ಅಧಿಕಾರಿಗಳ ಜೊತೆಯಲ್ಲಿ ತಾವು ಸಹ ಶಾಮೀಲಾಗಿದ್ದೀರಿ ಅಂತ ನಿರೀಕ್ಷೆ ಮಾಡಬೇಕಾಗುತ್ತದೆ ಹಾಗೂ ಅಪವಾದವನ್ನು ಮಾಡಬೇಕಾಗುತ್ತದೆ. ಆದ್ದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತಿದ್ದೇನೆ; ತಾವು ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರೆಂಬುದನ್ನು ನಮಗೆ ಮತ್ತು ಸದನಕ್ಕೆ ಮತ್ತು ಈ ರಾಜ್ಯದ ಜನತೆಗೆ ತಿಳಿಸಬೇಕು.

† ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಈ ಕ್ಲಾಸಿಕ್ ಕಂಪ್ಯೂಟರ್ ಕೇಸ್‌ನ ಬಗ್ಗೆ ಸಿ.ಬಿ.ಐ. ಎನ್‌ಕ್ವೈರಿ ಇವತ್ತು ನಡೆಯುತ್ತಿದೆ. ನಾವೇ ಸರ್ಕಾರವನ್ನು ಒತ್ತಾಯಿಸಿ ವಿಚಾರಣೆಯನ್ನು ಮಾಡಿಸಬೇಕೆಂದು ಹೇಳಿದ್ದೇವೆ. ಹಾಗಾಗಿ ಇವತ್ತು ಮಾಜಿ ಮುಖ್ಯಮಂತ್ರಿಗಳಾದಂತಹ ಬಂಗಾರಪ್ಪನವರಾಗಲೀ, ಅಥವಾ ಅಲೆಗ್ಸಾಂಡರ್ ಆಗಲೀ anticipatary bail ಏತಕ್ಕೆ ತೆಗೆದುಕೊಂಡರು ಅಂತ ಕೇಳಲಿಕ್ಕೆ ನನಗೆ ಅಧಿಕಾರ ಇಲ್ಲ. ಏಕೆಂದರೆ ಆ ಕಾಯಿದೆಯಲ್ಲಿ ಪ್ರೊವಿಜನ್ ಇದೆ. ಹಾಗಾಗಿ ಅವರು ಏತಕ್ಕೆ ತೆಗೆದುಕೊಂಡರು ಅಂತ ಕೇಳುವ ಅಧಿಕಾರ ನನಗೆ ಇಲ್ಲ. ಆ ಅವಕಾಶವನ್ನು ಕಾನೂನಿನಲ್ಲಿ ಮಾಡಿಕೊಟ್ಟಿದ್ದಾರೆ. ಆದರೆ ಮೂಲಭೂತವಾಗಿ ಒಂದೆರಡು ವಿಚಾರವನ್ನಷ್ಟೆ ಈ ಸದನದ ಗಮನಕ್ಕೆ ತರಲು ನಾನು ಪ್ರಯತ್ನ ಮಾಡುತ್ತಿದ್ದೇನೆ. ಮೊದಲನೆಯದು ಇಷ್ಟೊಂದು ಮಧ್ಯರಾತ್ರಿಯಲ್ಲಿ ಹೋಗಿ 12 ಗಂಟೆ 1 ಗಂಟೆಯಲ್ಲಿ ಇಂತಹ ಜಾಮೀನನ್ನು ತೆಗೆದುಕೊಳ್ಳುವಂತಹ ಅವಶ್ಯಕತೆ ಇತ್ತೇನು? ಇದ್ದರೆ ಅಂಥ ತುರ್ತು ಏನಿತ್ತು? ಇವತ್ತು ಸಿ.ಬಿ.ಐ.ನವರು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ. ಅದರ ಬಗ್ಗೆ ಎಷ್ಟೊಂದು ಕಲ್ಪನೆ ಮಾನ್ಯ ಮುಖ್ಯಮಂತ್ರಿಗಳಿಗೆ ಇದೆ ಎನ್ನುವುದು ನನಗೆ ಗೊತ್ತಿಲ್ಲ. He is the Home Minister. Whether the C.B.I. has kept him informed or not, I don't know. ಹಾಗಾಗಿ ಅವರು ನಮಗೆ ಬೆಳಕನ್ನು ಚೆಲ್ಲಬೇಕಾಗಿದೆ. ಈ ಸದನಕ್ಕೆ ಬೆಳಕನ್ನು ಚೆಲ್ಲಬೇಕಾಗಿದೆ. ಇವತ್ತು ಯಾವ ಹಂತದಲ್ಲಿ ಈ ಕೇಸ್ ಇದೆ?

ಆದರೆ ಕರ್ನಾಟಕ ರಾಜ್ಯದ ರಾಜಕೀಯ ವಿಚಾರದಲ್ಲಿ ಹಿಸ್ಟರಿ ಕ್ರಿಯೇಟ್ ಆಗಿದೆ. ಒಬ್ಬ ಮಾಜಿ ಮುಖ್ಯಮಂತ್ರಿ ಆಂಟಿಸಿಪೇಟರಿ ಬೇಲ್ ತೆಗೆದುಕೊಂಡಿದ್ದಾರೆ, ಮೊದಲನೆ ಬಾರಿ ಒಬ್ಬ ಎಕ್ಸ್ ಚೀಫ್ ಸೆಕ್ರೆಟರಿ ಆಂಟಿಸಿಪೇಟರಿ ಬೇಲ್ ತೆಗೆದುಕೊಂಡಿದ್ದಾರೆ. ಮತ್ತು ಇಬ್ಬರೂ ಸೇರಿ ಒಂದೇ ಕೇಸ್‌ನಲ್ಲಿ ನಿರೀಕ್ಷಣಾ ಜಾಮೀನು ತೆಗೆದುಕೊಂಡಿರುವುದು ಇದೇ ಮೊದಲ ಬಾರಿ. there are 3 records created in Karnataka. Ex-Chief Minister and Ex-Chief Secretary both are taking anticipatary bail together for the same case.

ಇವತ್ತು ಆ ಕೇಸ್‌ನ ಮೆರಿಟ್ ಬಗ್ಗೆ ಹೇಳಿದ್ದೇವೆ. ನಾವು ಆಪಾದನೆ ಮಾಡಿದ್ದೇವೆ. ಆದರೆ ಇವತ್ತು ತಾವು ದಕ್ಷ ಆಡಳಿತ ಕೊಡುತ್ತೇವೆ, ಸ್ವಚ್ಛ ಸರ್ಕಾರ ಕೊಡುತ್ತೇವೆಂದು ಹೇಳಿ, ತಾವು ಪ್ರತಿಯೊಬ್ಬರಿಗೆ ಪ್ರೊಟೆಕ್ಷನ್ ಕೊಡುತ್ತಾ ಹೋದರೆ ಹೇಗೆ? ನನ್ನ ಮಿತ್ರರು ಇವತ್ತು ಏನು ಪ್ರಸ್ತಾಪ ಮಾಡಿದ್ದಾರೆ, ಅದರಂತೆ ಅವರು ಆಂಟಿಸಿಪೇಟರಿ ಬೇಲ್ ತೆಗೆದುಕೊಂಡ ನಂತರ ಅವರ ವಿರುದ್ಧ ಏನು ಕ್ರಮ

ತೆಗೆದುಕೊಳ್ಳುತ್ತೀರಿ ಅಂತ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅದೇ ಪ್ರಕಾರ ಲೋಕಾಯುಕ್ತರವರು ಬುಳ್ಳಾ ಸುಬ್ಬಾರಾವ್ ಬಗ್ಗೆಯಾಗಲೀ ಪಾಟ್ನಾಯಕ್‌ರವರ ಮೇಲೆ ಕೇಸ್ ಹಾಕಿದ್ದಾರೆ. ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದು ಸಹಾ ಗೊತ್ತಾಗಬೇಕಾಗಿದೆ. ಆದುದರಿಂದ ಇವತ್ತು ಅಂಟಿಸಿಪೇಟರಿ ಬೇಲ್ ಏಕೆ ತೆಗೆದುಕೊಂಡರು ಎಂದು ನಾನು ಪ್ರಶ್ನೆ ಮಾಡುತ್ತಿಲ್ಲ. I have no right to question, the taking of anticipatary bail. ಆದರೆ ಒಂದು ಸದನದ ಗಮನಕ್ಕೆ ತರುವುದೇನೆಂದರೆ memories are short ಎಂದು ನಾವು ಏನೋ ಮಾಡುವುದಕ್ಕೆ ಹೋಗಬಾರದು. ನನಗೆ ಜ್ಯುಡಿಷರಿ ಮೇಲೆ ಬಹಳ ವಿಶ್ವಾಸ ಇದೆ. ಏಕೆಂದರೆ ನಾವು ವಿಶ್ವಾಸ ಇಡಬೇಕಾಗುತ್ತದೆ. ಆದರೆ ಆ ವಿಶ್ವಾಸದಲ್ಲಿ ತಪ್ಪಾಗಬಹುದು. ಕೆಲಸಾರಿ ಮನಸ್ಸಿಗೆ ನೋವಾಗುತ್ತದೆ. ಇವತ್ತು ಯಾವ ಹೈಕೋರ್ಟ್ ಜಡ್ಜ್ ಅಲೆಗ್ಸಾಂಡರ್‌ಗೆ, ಬಂಗಾರಪ್ಪನವರಿಗೆ ಅಂಟಿಸಿಪೇಟರಿ ಬೇಲ್ ಆ ರಾತ್ರಿ ಕೊಟ್ಟರು He was advocate of Bangarappa in a Defamatory case against Ganesh Hegde. ಈ ಬೇಲ್ ಕೊಟ್ಟಿರುವ ಜಸ್ಟೀಸ್ ಶ್ರೀನಿವಾಸ್ ರೆಡ್ಡಿ ಮೇಲೆ ಏನು ಆಪಾದನೆ ಇಲ್ಲ. ಗಣೇಶ್ ಹೆಗಡೆ ಬಂಗಾರಪ್ಪನವರ ಮೇಲೆ ಏನು ಡೆಫರ್ಮೇಷನ್ ಕೇಸ್ ಹಾಕಿದ್ದಾಗ, ಜಸ್ಟೀಸ್ Shivappa was the advocate for Sri Bangarappa. ಶಿವಪ್ಪನವರು ಜಸ್ಟೀಸ್ ಆದ ನಂತರ this very justice Srinivas Reddy was the advocate for Sri Bangarappa in a defamation case in Hubli. ನಾನು ಹೇಳುವುದು ಇಷ್ಟೆ; ಇದು ಸರಿಯೇನು? When Sri Shivappa was the judge and Sri Srinivas Reddy was the Advocate for Bangarappa..

ನಾನು ವಕಾಲತ್ ಮಾಡುವಾಗ ಬಹಳಷ್ಟು ಸಾರಿ ನೋಡಿದ್ದೇನೆ. It is left to the Hon'ble Chief Justice whether it is right on the part of the Judge to entertain their clients before them when they adorn the seat of Judge because generally they do not entertain.

ಶ್ರೀ ಎಂ. ವೀರಪ್ಪಮೊಯಿಲಿ:- ತಾವು ಈಲ್ಡ್ ಆಗುವುದಾದರೆ ಹೇಳುತ್ತೇನೆ, ಏಕೆಂದರೆ the conduct of the Judge cannot be discussed here. That cannot go into the record also.

ಶ್ರೀ ಆರ್. ವಿ. ದೇಶಪಾಂಡೆ:- ನಾನು ಜಡ್ಜ್‌ರವರ ಕಂಡಕ್ಟ್ ಬಗ್ಗೆ ಡಿಸ್‌ಕಸ್ ಮಾಡಲಿಲ್ಲ. I am only saying about the propriety. I am not saying about the conduct of the Judge. I never said it. I have highest regard for the Judiciary and also I have highest regard for the Judges sitting there.

ಪ್ರೊಪ್ರೈಟಿ ವಿಚಾರ ಹೇಳುತ್ತಿದ್ದೇನೆ. Whether it is advisable and proper to discuss such cases ಎಂದು ಇಷ್ಟೇ ಹೇಳಿದ್ದೇನೆ. It is left to them. ಇವರು ಏಕೆ ಡಿಸ್‌ಕಸ್ ಮಾಡಿದ್ದರು ಎಂಬುದನ್ನು ಕೊಶ್ಚನ್ ಮಾಡುತ್ತಿಲ್ಲ I am not discussing it. I am not challenging his right. ಬುಳ್ಳಾ ಸುಬ್ಬರಾವ್ ವಿಚಾರದಲ್ಲಾಗಲೀ ಪಟ್ನಾಯಕ್ ವಿಚಾರದಲ್ಲಾಗಲೀ ಕಂಪ್ಯೂಟರ್ ಕೇಸ್ ವಿಚಾರದಲ್ಲಾಗಲೀ ಆಲೆಕ್ಸಾಂಡರ್ ವಿಚಾರದಲ್ಲಾಗಲಿ ಸರ್ಕಾರ ಏನು ಮಾಡುತ್ತದೆ ಎಂಬುದರ ಬಗ್ಗೆ ನಮಗೆ ಗೊತ್ತಾಗಬೇಕು. ಪ್ರತಿ ಸಲ ದಕ್ಷ, ಸ್ವಚ್ಛ ಸರ್ಕಾರ ಕೊಡುತ್ತೇವೆ ಎಂದು ಹೇಳಿ ಏನೋ ಒಂದು ನೆವ ಹೇಳುತ್ತಾ ಜಾರಿಕೊಳ್ಳುವ ಕೆಲಸ ಆಗಬಾರದು. ತಾವು ತಪ್ಪು ತಿಳಿದುಕೊಳ್ಳಬಾರದು, ಪುನಃ ಪ್ರಸ್ತಾಪ ಮಾಡುತ್ತಿದ್ದೇನೆಂದು. ನಿಮ್ಮ ಹೌಸಿಂಗ್ ಮಿನಿಸ್ಟರ್‌ಗೆ ಸಂಬಂಧಪಟ್ಟ ಡೈವೋರ್ಸ್ ಪಿಟಿಷನ್

ಕೇಸಿನಲ್ಲಿ ಕಾಂಪ್ರೋಮೈಸ್ ಆಗುತ್ತದೆಂದು ನಾವು ಹೇಳಿದ್ದೆವು. You see the Press today. It is compromised.

ದಯಮಾಡಿ ನೀವು ಬಹಳ ದಕ್ಷ ಆಡಳಿತ ಕೊಡಲು ಹೊರಟಿದ್ದೀರಿ; ಅಪೋಸಿಷನ್‌ರವರು ಏನು ಹೇಳುತ್ತಾರೆ ಅದನ್ನು ಪರಿಶೀಲನೆ ಮಾಡಿ, ಎಲ್ಲಾ ಒಪ್ಪಿಕೊಳ್ಳಬೇಕು ಎಂದೂ ನಾನು ಹೇಳುತ್ತಿಲ್ಲ. ಆದರೆ ಎಟ್‌ಲೀಸ್ಟ್ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಿ.

ಆ ರೀತಿ ಮಾಡಿದರೆ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ನಾವು ಏನು ಹೇಳುತ್ತೇವೆ ಅದನ್ನು ಕಿವಿಯಲ್ಲಿ ಕೇಳಿ ಬಿಟ್ಟರೆ ನಿಮಗೆ ಒಳ್ಳೆಯ ಹೆಸರು ಬರುವುದಿಲ್ಲ. ಆದ್ದರಿಂದ ಇದರ ಬಗ್ಗೆ ತಮ್ಮ ಸ್ಪಷ್ಟವಾದ ನೀತಿ ಏನು ಇದೆ ಎಂಬುದನ್ನು ತಿಳಿಸಬೇಕು.

† ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):– ಹಿಂದಿನ ಸರ್ಕಾರದ ಭ್ರಷ್ಟಾಚಾರ ಕೂಪದ ದೊರೆ ಹಾಗೂ ದೊರೆ ತಂಡವು ಖಜಾನೆ ಲೂಟಿ ಮಾಡಿರತಕ್ಕದ್ದು ಇಡೀ ರಾಜ್ಯ ಜನತೆಗೆ ಗೊತ್ತಿರತಕ್ಕಂಥ ವಿಷಯ. ನಮ್ಮ ರಾಜ್ಯದ ಜನತೆ ಹಿಂದಿನ ಮುಖ್ಯಮಂತ್ರಿಯವರ ಸರ್ಕಾರವನ್ನೂ ನೋಡಿದ್ದಾರೆ, ಈಗಿನ ಮುಖ್ಯಮಂತ್ರಿಗಳ ಸರ್ಕಾರವನ್ನೂ ನೋಡುತ್ತಿದ್ದಾರೆ. ಅವರು ಮುಖ್ಯಮಂತ್ರಿಯಾಗುವುದಕ್ಕೆ ಮುಂಚೆ, ಸರ್ಕಾರದ ಆಡಳಿತವನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ಯಾವ ಒಂದು ದಿಟ್ಟ ನಿಲುವನ್ನು ತೆಗೆದುಕೊಳ್ಳುವುದಾಗಿ ಹೇಳುತ್ತಿದ್ದರು, ಆ ದಿಟ್ಟ ನಿಲುವನ್ನು ತೆಗೆದುಕೊಂಡಿದ್ದಾರೆಯೇ ಹೇಗೆ ಎಂಬ ಎಲ್ಲಾ ವಿಚಾರವನ್ನು ಜನ ನೋಡುತ್ತಿದ್ದಾರೆ. ಇವೊತ್ತು ಭ್ರಷ್ಟರಿಗೆ ಶಿಕ್ಷಕರಾಗಿದ್ದೀರೋ ಅಥವಾ ರಕ್ಷಕರಾಗಿದ್ದೀರೋ ಎನ್ನತಕ್ಕ ಪ್ರಶ್ನೆ ಬರುತ್ತದೆ. ಪ್ರತಿನಿತ್ಯ ಇಡೀ ರಾಜ್ಯದ ಜನತೆ ಇದನ್ನು ನೋಡುತ್ತಿದೆ. ಪತ್ರಿಕೆಗಳಲ್ಲಿ ಇದು ಬರುತ್ತಿದೆ. ಇಂಥ ಒಂದು ಕಂಪ್ಯೂಟರ್ ಹಗರಣ ಮನೆ ಮಾತಾಗಿದೆ. ಹಿಂದಿನ ಮುಖ್ಯಮಂತ್ರಿಗಳು ಕಳ್ಳತನದಲ್ಲಿ ರಾತ್ರೋ ರಾತ್ರಿ ನಿರೀಕ್ಷಣಾ ಜಾಮೀನನ್ನು ತೆಗೆದುಕೊಂಡಿರುವ ಸಂದರ್ಭವನ್ನು ನೋಡಿದರೆ ಸ್ಪಷ್ಟವಾಗುತ್ತದೆ ತಾನು ಭ್ರಷ್ಟಾಚಾರ ಮಾಡಿದ್ದೇನೆಂದು. ನೀವು ಇನ್ನೂ ಕೂಡ ದಯೆ ತೋರಿಸುತ್ತಿದ್ದೀರೇನೋ ಎನ್ನತಕ್ಕ ಭಾವನೆ ಬರುತ್ತಿದೆ. ಈ ವಿಚಾರದಲ್ಲಿ ಸರ್ಕಾರದ ಬಗ್ಗೆ ಅನುಮಾನ ಬರುತ್ತಿದೆ. ಆದ್ದರಿಂದ ಈ ಸವಾಲನ್ನು ಮುಖ್ಯಮಂತ್ರಿಗಳು ಸ್ವೀಕಾರ ಮಾಡಬೇಕು. ಹಾಗೆಯೇ ನಾವು ಭ್ರಷ್ಟರಿಗೆ ಬೆಂಬಲ ಕೊಡುವುದಿಲ್ಲ ಎಂದು ಹೇಳಬೇಕು. ಈ ಸ್ಥಾನಕ್ಕೆ ನೀವು ಬರಲು ಕಾರಣ ಹಿಂದೆ ಇದ್ದ ಸರ್ಕಾರ ಭ್ರಷ್ಟಾಚಾರವನ್ನು ಮಾಡಿದೆ ಎಂದು ಹೇಳಿ, ಆ ಭ್ರಷ್ಟಾಚಾರವನ್ನು ನಾನು ಸಂಪೂರ್ಣವಾಗಿ ನಿರ್ಮೂಲನ ಮಾಡುತ್ತೇನೆ, ಇದರ ಬಗ್ಗೆ ನಾನು ಮೇಜರ್ ಆಪರೇಷನ್ ಮಾಡುತ್ತೇನೆ ಎಂದು ಹೇಳಿ ನೀವು ಇಲ್ಲಿಗೆ ಮುಖ್ಯಮಂತ್ರಿಯಾಗಿ ಬಂದಿದ್ದೀರಿ. ಇಂಥ ಮಾತುಗಳನ್ನು ಆ ಸ್ಥಾನಕ್ಕೆ ಬರುವುದಕ್ಕೆ ಮಾತ್ರ ಉಪಯೋಗಿಸಿಕೊಂಡು ನಂತರ ಸ್ಥಾನ ಉಳಿಸಿಕೊಳ್ಳಲು ಪ್ರಯತ್ನ ಮಾಡುತ್ತೇನೆ ಎಂದರೆ ಅದನ್ನು ಖಂಡಿತವಾಗಿ ಎಲ್ಲಾ ವಿರೋಧಪಕ್ಷದ ಶಾಸಕರು ಮಾತನಾಡಿದ ರೂಪದಲ್ಲಿ ಹೇಳಬೇಕಾದರೆ ನಿಮ್ಮದೂ ಕೂಡ ಈ ಭ್ರಷ್ಟಾಚಾರದಲ್ಲಿ ಪಾಲು ಇದೆ ಎಂದು ಹೇಳಬೇಕಾದ ಪರಿಸ್ಥಿತಿ ಬರುತ್ತದೆ. ಈ ಲೂಟಿಯಲ್ಲಿ ನಿಮ್ಮ ಪಾಲೂ ಇದೆ, ಅಧಿಕಾರಿಗಳ ಪಾಲೂ ಇದೆ ಎನ್ನತಕ್ಕ ಸಂಶಯ ಬರುತ್ತಿದೆ. ಕ್ರಿಮಿನಲ್ ಶಾಸಕರುಗಳ ಪಟ್ಟಿಯನ್ನು ಸದನದಲ್ಲಿ ಕೊಟ್ಟಿದ್ದೀರಿ., ಇಡೀ ರಾಜ್ಯದ ಜನ ಈ ಪಟ್ಟಿಯನ್ನು ನೋಡಿದ್ದಾರೆ. ಕ್ರಿಮಿನಲ್ ಕೇಸುಗಳು ಅನೇಕ ಶಾಸಕರ ಮೇಲೆ ಇದೆ ಎಂದು ಹೇಳಿದ್ದೀರಿ. ಅವರು ಯಾರ ಮೇಲೆ ಕೇಸ್ ಹಾಕುತ್ತಾರೆ ಎಂಬುದನ್ನು ಹೇಳಲು ಇಷ್ಟಪಡುತ್ತೇನೆ. ಆ ಪಟ್ಟಿಯಲ್ಲಿ ನನ್ನ ಹೆಸರೂ ಇದೆ. ನಾನೇನು ಯಾರನ್ನೂ ಸಹ ಕೊಲೆ ಮಾಡಿಲ್ಲ; ಮಕ್ಕಳಿಗೆ ಪಠ್ಯಪುಸ್ತಕ ಸಿಕ್ಕಿರಲಿಲ್ಲ, ಪಠ್ಯಪುಸ್ತಕಗಳನ್ನು ಕೊಡಿ ಎಂದು ಮೆರವಣಿಗೆಯನ್ನು ತೆಗೆದುಕೊಂಡು ಹೋದೆ, ಶಾಲಾ ಮಕ್ಕಳಿಗೆ ಪರೀಕ್ಷೆ ಹತ್ತಿರ ಬರುತ್ತಿದೆ, ಆದ್ದರಿಂದ ಕೂಡಲೆ ಪಠ್ಯಪುಸ್ತಕಗಳನ್ನು ಕೊಡಬೇಕು ಎಂದು ಮೆರವಣಿಗೆ ನಡೆಸಿದೆ. ಯಾರು ಪಠ್ಯಪುಸ್ತಕಗಳನ್ನು ಕೊಡಲಿಲ್ಲ

ಅವರನ್ನು ಅರೆಸ್ಟ್ ಮಾಡಿ ಕೇಸ್ ಹಾಕಬೇಕಾಗಿತ್ತು, ಅದನ್ನು ಬಿಟ್ಟು ಯಾರು ಒಳ್ಳೆಯ ಉದ್ದೇಶಕ್ಕಾಗಿ ಹೋರಾಡಿದರು ಅವರ ಮೇಲೆ ಕೇಸ್ ಹಾಕಿದ್ದಾರೆ: ಆದುದರಿಂದ ನಾನು ಇವೊತ್ತು ಕೂಡ ಕೋರ್ಟಿಗೆ ಅಲೆಯುತ್ತಿದ್ದೇನೆ. ಅದಕ್ಕೋಸ್ಕರ ನನ್ನ ಹೆಸರನ್ನು ಈ ಪಟ್ಟಿಯಲ್ಲಿ ಸೇರಿಸಿದ್ದಾರೆ. ನೀವು ಯಾರಿಗೆ ರಕ್ಷಣೆ ಕೊಡುತ್ತೀರಿ ? ಯಾರು ನ್ಯಾಯಕ್ಕಾಗಿ ಬಡಿದಾಡುತ್ತಾರೋ ಅವರ ಮೇಲೆ ಕೇಸ್ ಹಾಕುತ್ತೀರಿ. ಇದರಲ್ಲಿ ಯಾವುದು ನ್ಯಾಯವಾದ ಕೇಸು, ಯಾವುದು ಅನ್ಯಾಯವಾದ ಕೇಸು ಎಂಬುದನ್ನು ಪರಿಶೀಲಿಸಿದ್ದೀರಾ ? ಯಾರು ಅನ್ಯಾಯ ಮಾಡಿದ್ದಾರೆ, ಭ್ರಷ್ಟಾಚಾರ ಮಾಡಿದ್ದಾರೆ, ದುಡ್ಡು ತಿನ್ನುತ್ತಿದ್ದಾರೆ ಅವರ ಮೇಲೆ ಮಾತ್ರ ಕೇಸ್ ಹಾಕಬೇಕಾಗಿತ್ತು. ಯಾರೂ ನ್ಯಾಯಕ್ಕಾಗಿ ಹೋರಾಡಿದ್ದಾರೆ, ಯಾವುದೇ ಕೊಲೆ ಮಾಡಲಿಲ್ಲ ಅಂಥವರುಗಳ ಮೇಲೆ ಇರತಕ್ಕ ಕೇಸ್‌ನಲ್ಲಿ ಇದ್ದಂಥ ಹೆಸರನ್ನು ಪಟ್ಟಿಯಿಂದ ತೆಗೆದುಹಾಕಬೇಕಾಗಿತ್ತು. ಆ ರೀತಿ ಮಾಡಿದ್ದರೆ ಆ ಪಟ್ಟಿ ಸದನಕ್ಕೆ ಬರುವ ಅವಶ್ಯಕತೆಯೇ ಇರಲಿಲ್ಲ. ಯಾರು ಜನತೆಯ ಪರವಾಗಿ ಪ್ರಾಮಾಣಿಕ ಹೋರಾಟ ಮಾಡಿದ್ದಾರೆ ಅವರಿಗೆ ನ್ಯಾಯ ಸಿಗಬೇಕು. ಅಂಥವರ ಕೇಸುಗಳನ್ನು ವಾಪಸ್ಸು ತೆಗೆದುಕೊಂಡಿದ್ದೇವೆ ಎಂದು ನೀವು ಘಂಟಾಘೋಷವಾಗಿ ಹೇಳಬೇಕಾಗಿತ್ತು. ಅದನ್ನು ಮಾಡದೇ ಇವೊತ್ತು ರಾಜ್ಯದ ಜನತೆಯ ಹಣವನ್ನು ಲೂಟಿ ಮಾಡಿದಂಥ ಜನ ಇವೊತ್ತು ನಿರೀಕ್ಷಣಾ ಜಾಮೀನನ್ನು ತೆಗೆದುಕೊಂಡು ಆರಾಮವಾಗಿ ಇರುವುದಕ್ಕೆ ಕಾರಣ ಈ ಸರ್ಕಾರ. ಅಂಥವರ ಮೇಲೆ ಕ್ರಮ ಕೈಗೊಳ್ಳದೆ ಸರ್ಕಾರ ಸುಮ್ಮನೆ ಕುಳಿತುಕೊಂಡಿದೆ ಎನ್ನತಕ್ಕ ಸಂಶಯ ಬರುತ್ತಿದೆ. ಯಾರು ಲೂಟಿ ಮಾಡಿದ್ದಾರೆ ಅಂಥವರು ನಿರೀಕ್ಷಣಾ ಜಾಮೀನನ್ನು ತೆಗೆದುಕೊಂಡು ಮನೆಯಲ್ಲಿ ಇರಬಹುದು ಎನ್ನುವ ಭಾವನೆ ಒಂದಿದೆ. ಇವತ್ತು ಚೂರು ಪಾರು ಹಣ ಏನು ಲೂಟಿಯಾಗದೆ ಹಾಗೇ ಉಳಿದಿದೆ ಅದರ ಬಗ್ಗೆ ಗಮನ ಕೊಡಬೇಕು. ನೀವು ಮುಖ್ಯಮಂತ್ರಿಯಾಗಿ ಬರುವುದಕ್ಕೆ ಮೊದಲು ಏನು ಹೇಳಿದ್ದೀರಿ, ಆ ದಿಟ್ಟ ನಿಲುವು ತೆಗೆದುಕೊಂಡರೆ ನನ್ನ ಸಂಪೂರ್ಣ ಬೆಂಬಲವನ್ನು ಕೊಡಲು ತಯಾರು ಇದ್ದೇನೆ. ಪಕ್ಷಭೇದ ಮರೆತು ಭ್ರಷ್ಟಾಚಾರ ನಿರ್ಮೂಲನೆ ಮಾಡುವುದರಲ್ಲಿ ನಮ್ಮೆಲ್ಲರ ಬೆಂಬಲ ನಿಮಗೆ ಇದೆ. ಇಲ್ಲದಿದ್ದರೆ ನೀವೂ ಭ್ರಷ್ಟಾಚಾರದ ದಿಕ್ಕಿನಲ್ಲಿ ಹೋಗುತ್ತಿದ್ದೀರಿ; ಇದರಲ್ಲಿ ನಿಮ್ಮದೂ ಕೂಡ ಪಾಲು ಇದೆ ಎಂದು ಹೇಳತಕ್ಕ ಅಂಶವನ್ನು ಹೇಳಬೇಕಾಗಿದೆ. ಈ ವಿಚಾರದಲ್ಲಿ ನಿಮ್ಮ ಸತ್ವ ಪರೀಕ್ಷೆ ಆಗಬೇಕಾಗಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಪುಟ್ಟು:– ಮಾನ್ಯ ಅಧ್ಯಕ್ಷರೇ, ಕಳೆದ ವಾರ ವಿಧಾನಸಭೆಯಲ್ಲಿ ಶಾಸಕರುಗಳು ಮೊಕದ್ದಮೆಗಳನ್ನು ಎದುರಿಸುತ್ತಿದ್ದಾರೆ ಎಂದು ಮಾನ್ಯ ಮುಖ್ಯಮಂತ್ರಿಗಳು ಒಂದು ಪಟ್ಟಿಯಲ್ಲಿ ನನ್ನ ಹೆಸರನ್ನು ಸೇರಿಸಿ ಹೇಳಿದ್ದಾರೆ. ಅದು ಪತ್ರಿಕೆಗಳಲ್ಲೂ ಬಂದಿದೆ. ನಾನು ಊರಿಗೆ ಹೋಗಿದ್ದಾಗ ನನ್ನ ಮತದಾರರು ಕೇಳಿದರು, ಯಾವ ಕೇಸನ್ನು ನೀವು ಎದುರಿಸುತ್ತಿದ್ದೀರಿ ಎಂದು ? ನಾನು ಯಾವುದನ್ನು ಎದುರಿಸುತ್ತಿಲ್ಲ ಎಂದು ಹೇಳಿದೆ.

ಅಧ್ಯಕ್ಷರು:– ತಾವು ಏನು ಹೇಳಬೇಕಾಗಿದೆ ?

ಶ್ರೀ ವೈ.ಕೆ. ರಾಮಯ್ಯ:– ನಮ್ಮನ್ನು ಇಲ್ಲಿ ಹರಾಜು ಹಾಕುತ್ತೀರಲ್ಲಾ, ಅದೇ ಕೋಟಿಗಟ್ಟಲೆ ತಿಂದವರನ್ನು ಏತಕ್ಕೆ ಇಟ್ಟುಕೊಂಡಿದ್ದೀರಾ ಅಂತ ಕೇಳುತ್ತಿದ್ದಾರೆ. ಬಸ್ ಸ್ಟಾಂಡ್‌ನಲ್ಲಿ ಬಸ್ ಬಿಡಿ ಎಂದು ಕೇಳುವುದಕ್ಕೆ ಹೋದರೆ ನಮ್ಮಗಳ ಮೇಲೆ ಕೇಸ್ ಹಾಕಿ ಕೋರ್ಟ್ ಮುಂದೆ ಹಾಜರ್ ಮಾಡುತ್ತೀರಿ. ಒಂದು ಕೋಟಿ ತಿಂದ ಖದೀಮರ ಬಗ್ಗೆ ಏನು ಮಾಡುತ್ತಿದ್ದೀರಿ ಎಂದು ಅವರು ಕೇಳುತ್ತಿದ್ದಾರೆ.

ಅಧ್ಯಕ್ಷರು:– ಈ ವಿಷಯ ಮುಗಿಯಲಿ. ಆ ನಂತರ ಅದಕ್ಕೆ ಕಾಲಾವಕಾಶ ಕೊಡುತ್ತೇನೆ.

ಶ್ರೀ ಕೆ.ಎಂ. ಪುಟ್ಟು:– ನನ್ನ ಮೇಲೆ ಕೇಸೇ ಇಲ್ಲ. ಆದರೂ ಪತ್ರಿಕೆಗಳಲ್ಲಿ ಕೇಸನ್ನು ಎದುರಿಸುತ್ತಿದ್ದಾರೆ ಎಂದು ಬಂದಿದೆ. ಬಹಳ ಸಂತೋಷ.

ಅಧ್ಯಕ್ಷರು:– ತಾವು ಕುಳಿತುಕೊಳ್ಳಿ. ನಂತರ ಕೇಳುತ್ತೇನೆ. ಈಗ ವಿಷಯ ಬೇರೆ ನಡೆಯುತ್ತಿದೆ. ಅದಾದನಂತರ ನಾನು ಕೇಳುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಮಾನ್ಯ ಅಧ್ಯಕ್ಷರೇ, ಲೋಕಾಯುಕ್ತದ ಬಲೆಗೆ ಕರ್ನಾಟಕ ರಾಜ್ಯದ ಹಿರಿಯ ಅಧಿಕಾರಿಯೊಬ್ಬರು ಸಿಕ್ಕಿದ್ದಾರೆ, ಅವರ ಆಸ್ತಿ ತನಿಖೆಯಾಗಿದೆ ಎಂದು ಹೇಳಿ ಪತ್ರಿಕೆಗಳಲ್ಲಿ ಬಂತು. ಶಾಸನಸಭೆ ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಗಳ ಕರ್ತವ್ಯ ಅದು; ಏನು ನಡೆದಿದೆ, ಎಂದು ಒಂದು ಹೇಳಿಕೆಯನ್ನು ಈ ಸಭೆಯಲ್ಲಿ ಕೊಡಬೇಕಾಗಿತ್ತು. ಇದು ನಡೆದು ಲೋಕಾಯುಕ್ತದವರು ಆ ಅಧಿಕಾರಿಯ ಮನೆಯೊಳಗೆ ನುಗ್ಗಿ ನೋಡಿ ಶೋಧನೆ ಮಾಡಿ ಏನೇನು ಆಗಿದೆ ಎಂದು ಪತ್ರಿಕೆಗಳ ಮೂಲಕ ಬಂದಿದೆ. ನಮಗೆ ಗೊತ್ತಾಗಿರುವುದೂ ಸಹ ಪತ್ರಿಕೆಗಳ ಮೂಲಕ. ನಮ್ಮ ಅಬಕಾರಿ ಇಲಾಖೆಯ ಆಯುಕ್ತರಾದ ಬುಳ್ಳಾ ಸುಬ್ಬಾರಾವ್ ಎಂದು ಹೇಳಿ ಬಂದಿದೆ. ನಾನು ಏನು ಕೇಳುತ್ತಿದ್ದೇನೆ ಎಂದರೆ ಮಾನ್ಯ ಮುಖ್ಯಮಂತ್ರಿಗಳು ಯಾವ ಉದ್ದೇಶದಿಂದ ಈ ಸದನಕ್ಕೆ ಆ ವಿಷಯವನ್ನು ತಿಳಿಸಲಿಲ್ಲ? ಇದು ನನ್ನ ನೇರವಾದ ಪ್ರಶ್ನೆ. ಈ ಸದನಕ್ಕೆ ಅದನ್ನು ತಿಳಿಸಬೇಕು. ಇದನ್ನು ಮುಚ್ಚಿಡತಕ್ಕಂಥದ್ದಲ್ಲ. ಸರ್ಕಾರದ ಒಬ್ಬ ಹಿರಿಯ ಅಧಿಕಾರಿಯ ಮೇಲೆ ಈ ರೀತಿಯಲ್ಲಿ ಲೋಕಾಯುಕ್ತದ ದಾಳಿ ನಡೆದಿರುವಾಗ ಬರೀ ಅವರೊಬ್ಬರ ಮೇಲೆ ನಡೆದಿದೆಯೇ? ಇನ್ಯಾರ ಮೇಲೆ ಇಂಥ ದಾಳಿ ನಡೆದಿದೆ? ಯಾರ್‍ಯಾರ ಮೇಲೆ ಲೋಕಾಯುಕ್ತದ ಮೊಕದ್ದಮೆಗಳು ಇದ್ದಾವೆ? ಲೋಕಾಯುಕ್ತಕ್ಕೆ ಕಳುಹಿಸಿರತಕ್ಕಂಥ ಪಟ್ಟಿಯಲ್ಲಿ ಯಾರ್‍ಯಾರು ಅಧಿಕಾರಿಗಳು ಇದ್ದಾರೆ, ಅದನ್ನೆಲ್ಲಾ ಸದನದ ಮುಂದೆ ಇಡಬೇಕು. ಸದನದಲ್ಲಿ ಇದನ್ನೆಲ್ಲಾ ನೀವು ಮುಚ್ಚಿಡತಕ್ಕಂಥ ಉದ್ದೇಶವಾದರೂ ಏನು? ನಾನು ಸಾಮಾನ್ಯವಾಗಿ ಅಂದುಕೊಂಡಿದ್ದೇನೆ, ನನಗನಿಸಿರತಕ್ಕಂಥದ್ದು, ಶಾಸನಸಭೆ ನಡೆಯುವಾಗ ಇದನ್ನೆಲ್ಲಾ ಶಾಸನಸಭೆ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಜವಾಬ್ದಾರಿಯುತವಾಗಿ ಹೇಳಿಕೆ ಕೊಡುತ್ತಾರೆ ಅಂತ ಅಂದುಕೊಂಡಿದ್ದೆ. ತಾವು ಇದುವರೆಗೂ ಇದನ್ನು ಮುಚ್ಚಿಟ್ಟಿರುವುದು ಏತಕ್ಕೆ? ನಿಮ್ಮ ಬಗ್ಗೆ ನನಗೆ ಬಹಳ ನಂಬಿಕೆ ಇದೆ. ಏಕೆಂದರೆ ಸ್ವಚ್ಛವಾದ ಆಡಳಿತವನ್ನು ಕೊಡುತ್ತೇವೆ ಎಂದು ಹೇಳಿದಿರಿ, ಆ ಧೈರ್ಯ ನಿಮಗೆ ಇದೆ. ಆ ರೀತಿ ಕೊಡಬೇಕೆಂದು ಒಂದು ಕಾಲನ್ನು ತಾವು ಇಟ್ಟಿದ್ದೀರಿ. ಇಂಥ ಸಂದರ್ಭದಲ್ಲಿ ತಾವು ವಸ್ತುಸ್ಥಿತಿಯನ್ನು ಸದನದ ಮುಂದೆ ಹೇಳಬೇಕಾಗಿತ್ತು. ಇದು ಬಹಳ ಪ್ರಾಮುಖ್ಯವಾದುದು. ಮತ್ತೆ ಇದೇ ಸದನದಲ್ಲಿ ಕಂಪ್ಯೂಟರ್ ಹಗರಣದ ಬಗ್ಗೆ ಸಿಬಿಐ ತನಿಖೆಯಾಗಬೇಕು ಎಂದು ಹೇಳಿ ನಾವು ಒತ್ತಾಯ ಮಾಡಿದ್ದೇವೆ. ಅದನ್ನು ಸಿಬಿಐಗೆ ವಹಿಸಿದ್ದೀರಿ. ನಿರೀಕ್ಷಣಾ ಜಾಮೀನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ, ತೆಗೆದುಕೊಂಡಿದ್ದಾರೆ. ಆದರೆ ಒಂದು ಪ್ರಶ್ನೆ ಏನೆಂದರೆ ಜಾಮೀನು ತೆಗೆದುಕೊಳ್ಳತಕ್ಕಂಥ ವಿಧಿವಿಧಾನಗಳು ಇದೆಯಲ್ಲ; ಅದನ್ನೆಲ್ಲಾ ಬಿಟ್ಟು ಎಷ್ಟು ಆತುರದಲ್ಲಿ ತೆಗೆದುಕೊಂಡರು ಎನ್ನತಕ್ಕಂಥ ಪ್ರಶ್ನೆ. ಇದರ ಬಗ್ಗೆ ತಾವು ಏನು ಹೇಳುತ್ತೀರಿ? ತಮಗೆ ಸರಿ ಎನಿಸಿದ್ದನ್ನು ಹೇಳಿ. ನಾನಂತೂ ಸ್ಪಷ್ಟವಾಗಿ ಹೇಳುತ್ತಿದ್ದೇನೆ; ಹಿಂದೆಯೆಲ್ಲ ಅನೇಕ ಲೋಕಾಯುಕ್ತ ಅಧಿಕಾರಿಗಳ ಮೇಲೆ ಲೋಕಾಯುಕ್ತದವರು ಅನೇಕ ಅಧಿಕಾರಿಗಳ ಮೇಲೆ, ಸರ್ಕಾರದ ಹಿರಿಯ ಅಧಿಕಾರಿಗಳ ಮೇಲೆ ಮೊಕದ್ದಮೆಗಳನ್ನು ದಾಖಲು ಮಾಡಿ ಮನೆಗಳನ್ನು ಶೋಧನೆ ಮಾಡಿದ್ದುಂಟು. ಇವತ್ತಿನವರೆಗೂ ಆ ಮೊಕದ್ದಮೆಗಳು ಏನಾಯಿತು? ಅಧಿಕಾರಿಗಳ ಪರಿಸ್ಥಿತಿ ಏನಾಯಿತು ಎಂದು ಗೊತ್ತಿಲ್ಲ. ಮಾನ್ಯ ರಾಮಯ್ಯನವರಾಗಲೀ ಅಥವಾ ನಮ್ಮ ಮಾನ್ಯ ಪುಟ್ಟು ಅವರಾಗಲೀ ಹೇಳಿದ ಹಾಗೆ ಯಾವುದೋ ಒಂದು ಸಣ್ಣ ಆಪಾದನೆ ಶಾಸಕರ ಮೇಲೆ ಬಂತು ಎಂದರೆ ಅದನ್ನು ಬೃಹದಾಕಾರವಾಗಿ ಬೆಳೆಸಿ ಅವರನ್ನು ತೇಜೋವಧೆ ಮಾಡುವುದಕ್ಕೆ ಏನೇನು ಬೇಕು, ಅದೆಲ್ಲ ನಿರ್ಮಾಣವಾಗುತ್ತದೆ, ಈ ಅಧಿಕಾರಿಗಳ ಬಗ್ಗೆ ತಾವು ಏನು ಮಾಡಿದ್ದೀರಿ? ಪ್ರಾಮಾಣಿಕವಾಗಿ

ಇರತಕ್ಕಂಥ ಅಧಿಕಾರಿಗಳಿಗೆ ನಾವು ಸಂಪೂರ್ಣ ಬೆಂಬಲವನ್ನು ಕೊಡುತ್ತೇವೆ; ಅಂಥ ಅಧಿಕಾರಿಗಳು ನಮ್ಮ ರಾಜ್ಯಕ್ಕೆ ಆಸ್ತಿ. ಅವರ ಬಗ್ಗೆ ನಾವು ನೂರಕ್ಕೆ ನೂರು ಬೆಂಬಲವನ್ನು ಕೊಡುತ್ತಿದ್ದೇವೆ. ಈ ರೀತಿ ಮಾಡಿ ತನ್ನ ಆಸ್ತಿಗೆ, ತನ್ನ ಪರಿಮಿತಿಗೆ ಮೀರಿ ಕೋಟ್ಯಾಂತರ ರೂ.ಗಳ ಆಸ್ತಿ ಮಾಡಿರತಕ್ಕಂಥವರ ಬಗ್ಗೆ ಸರ್ಕಾರದ ನಿಲುವೇನು ? ಇವತ್ತು ಎಷ್ಟು ಜನ ಅಧಿಕಾರಿಗಳು ಆ ರೀತಿ ಮಾಡಿದ್ದಾರೆ ? ಎಲ್ಲಾ ಅಧಿಕಾರಿಗಳ ಮೇಲೆ ತಾವು ಈ ಕೂಡಲೇ ತನಿಖಾ ಆಯೋಗವನ್ನು ರಚನೆ ಮಾಡುತ್ತೀರಾ ಎಂದು ಕೇಳುತ್ತೇನೆ. ಏಕೆಂದರೆ ರಾಜ್ಯದಲ್ಲಿ ಸಮಗ್ರವಾಗಿ ಯಾರ್‍ಯಾರು ಎಷ್ಟು ಎಷ್ಟು ಆಸ್ತಿ ಮಾಡಿದ್ದಾರೆ, ಏನು ಪರಿಸ್ಥಿತಿಯಾಗಿದೆ ಎನ್ನತಕ್ಕಂಥದ್ದರ ಬಗ್ಗೆ ಈ ಸರ್ಕಾರ ಒಂದು ವರದಿಯನ್ನು ಇಡಬೇಕು. ಯಾವ ಅಧಿಕಾರಿಯ ಮೇಲೆ ಇವತ್ತು ಲೋಕಾಯುಕ್ತದವರಿಂದ ಒಂದು ಮನೆಯ ಶೋಧನೆ ನಡೆದಿದೆ, ಆ ಅಧಿಕಾರಿಯ ಆಸ್ತಿ ಜಾಸ್ತಿಯಾಗಿದೆ ಎಂದು ಹೇಳಿದ ಮೇಲೆ ಆ ಅಧಿಕಾರಿಯನ್ನು ನೀವು ಏತಕ್ಕೆ ಇದುವರೆಗೂ ಅಮಾನತ್ತಿನಲ್ಲಿಟ್ಟಿಲ್ಲ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳುತ್ತೇನೆ. ನಾನೇನು ವೈಯಕ್ತಿಕವಾಗಿ, ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಯಾವ ಅಧಿಕಾರಿಯ ಮೇಲೂ ನನಗೆ ಅಂಥ ದ್ವೇಷವಾಗಲಿ ಅಥವಾ ನಾನು ವೈಯಕ್ತಿಕವಾಗಿ ಅವರ ಬಗ್ಗೆ ಇಲ್ಲಿ ಮಾತನಾಡತಕ್ಕಂಥ ಭಾವನೆಗಳು ನಮಗೆ ಇಲ್ಲ.

ಆದರೆ ಪತ್ರಿಕೆಗಳಲ್ಲಿ ಜಗಜ್ಜಾಹೀರವಾಗಿರುವಂಥ ಅಧಿಕಾರಿಗಳ ಬಗ್ಗೆ ಸರ್ಕಾರ ಮೌನವಾಗಿ ಕುಳಿತಿರತಕ್ಕ ಉದ್ದೇಶವಾದರೂ ಏನು ಎಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದ ಬಗ್ಗೆ ಸ್ಪಷ್ಟಪಡಿಸಬೇಕು, ಸರ್ಕಾರದ ನಿಲುವು ಏನು ? ಮುಂದೆ ನೀವು ಇಂತಹ ಅಧಿಕಾರಿಗಳ ಬಗ್ಗೆ ಕೈಗೊಳ್ಳುವಂತಹ ಕ್ರಮ ಏನು ? ನಿಮ್ಮ ರೀತಿ ನೀತಿಗಳು ಏನು ಅದನ್ನೂ ತಾವು ಹೇಳಬೇಕು ಎಂದು ತಮ್ಮ ಮೂಲಕ ಅವರಲ್ಲಿ ಕೇಳುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ:- ಮಾನ್ಯ ಅಧ್ಯಕ್ಷರೇ, ಬಹಳ ಗಂಭೀರವಾದಂತಹ ಪ್ರಶ್ನೆಯನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ. ಆದ್ದರಿಂದ ಪ್ರಮುಖವಾದ.......

ಅಧ್ಯಕ್ಷರು:- ಮಾನ್ಯ ಅನಂತಕೃಷ್ಣ ಅವರು ಏನು ಹೇಳಬೇಕಾಗಿದೆ ?

ಶ್ರೀ ಎ.ಕೆ. ಅನಂತಕೃಷ್ಣ:- ಈ ವಿಷಯದ ಬಗ್ಗೆ ಹೇಳಬೇಕಾಗಿದೆ. ಅವಕಾಶ ಕೊಟ್ಟರಿ ಎಂದು ತಿಳಿದು ನಾನು ಪ್ರಾರಂಭ ಮಾಡಿದೆ.

ಶ್ರೀ ಅಜೀಜ್ ಸೇಠ್:- ನಾವು ನಿಮ್ಮ ಕಣ್ಣಿಗೆ ಕಾಣಿಸುವುದಿಲ್ಲವಾ ?

ಅಧ್ಯಕ್ಷರು:- ಮಾನ್ಯ ಅಜೀಜ್ ಸೇಠ್ ಅವರು ಹಿರಿಯ ಸದಸ್ಯರು. ನಾನು ಹೇಳುವುದನ್ನು ಕೇಳಿ. ತಾವು ಏನು ಆರೋಪ ಮಾಡುತ್ತಿದ್ದೀರಿ, ಇದಕ್ಕೆ ಮೊದಲು ತಾವು ಅರ್ಥ ಮಾಡಿಕೊಳ್ಳಬೇಕು. ನಿಲುವಳಿ ಸೂಚನೆಗೆ ಅವರು ಸಹಿ ಮಾಡಿದ್ದಾರೆ. ತಾವು ಯಾರಾದರೂ ಅದರ ಮೇಲೆ ಸಹಿ ಮಾಡಿದ್ದೀರಾ ಅಥವಾ ನಿಲುವಳಿ ಸೂಚನೆ ಕೊಟ್ಟಿದ್ದೀರಾ ಹೇಗೆ ? ಇಲ್ಲ. ಅವರು ಕಳಿಸಿದ ಮೇಲೆ ಅವರಿಗೆ ಅವಕಾಶ ಕೊಡಬೇಕಾಗುತ್ತದೆ. ಆಮೇಲೆ ಇದು ಬಹಳ ಮಹತ್ವವಾದ ವಿಷಯವಾಗಿದೆ ಎಂದುಕಂಡರೆ ಅದರ ಬಗ್ಗೆ ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಅದನ್ನು ಬಿಟ್ಟು ತಾವು ನನಗೆ ಅವಕಾಶ ಮಾಡಿಕೊಡುತ್ತಾ ಇಲ್ಲ, ಅವಕಾಶ ಮಾಡಿಕೊಡುತ್ತಾ ಇಲ್ಲ ಎಂದು ಪದೇ ಪದೇ ಈ ಪದವನ್ನು ಉಪಯೋಗಿಸುವುದು ಸರಿಯಲ್ಲ. ತಾವು ಬರೆದು ಕೊಟ್ಟ ನಂತರ ನಾನು ಅದನ್ನು ಪರಿಶೀಲನೆ ಮಾಡಿ ಅನುಮತಿ ಕೊಡಬೇಕೋ ಅಥವಾ ಬೇಡವೋ ಎನ್ನುವ ವಿಚಾರ ಇದ್ದೇ ಇರುತ್ತದೆ.

ಶ್ರೀ ಅಜೀಜ್ ಸೇಠ್:- ಈ ನಿಲುವಳಿ ಸೂಚನೆಯ ವಿಷಯದಲ್ಲಿ ಬರೇ ಒಂದು ಗುಂಪಿನವರು ನಾಲ್ಕು ಪಕ್ಷದವರು ಮಾತನಾಡಿದರು. ಈ ಕಡೆ ಕುಳಿತಿರುವವರು ತಮಟೆ ಹೊಡೆದುಕೊಂಡು ಕುಳಿತಿರುವುದಲ್ಲ. ನಮ್ಮ ಕರ್ತವ್ಯವೂ ಇದೆ. ನಾವೇನೋ ಮಾತನಾಡಿ ಹೇಳಬೇಕೆಂದು ಇದ್ದೇವೆ.

ತಾವು ಅಷ್ಟು ಸ್ಟ್ರಿಕ್ಟ್ ಆಗಿ ರೂಲ್ಸ್ ಪ್ರಕಾರ ಹೋಗುವುದಾದರೆ ಎಜುಕೇಶನ್ ಬಿಲ್ ಬಗ್ಗೆ ಮಾತನಾಡುವುದಕ್ಕೆ ನನಗೆ ತಾವು ಅವಕಾಶ ಕೊಡಲಿಲ್ಲ.

ಅಧ್ಯಕ್ಷರು:– ನಾನು ಹೇಳುತ್ತೇನೆ ಕೇಳಿ. ಕುಳಿತುಕೊಳ್ಳಿ. ಯಾವಾಗ ತಾವು ಈ ರೀತಿ ಹೇಳುತ್ತಿದ್ದೀರಿ.

ಶ್ರೀ ಅಜೀಜ್ ಸೇಠ್:– ತಾವು ಅಧ್ಯಕ್ಷರಿದ್ದೀರಿ......

(ಗೊಂದಲ)

ಅಧ್ಯಕ್ಷರು:– ಇಲ್ಲ ಇಲ್ಲ.

ಶ್ರೀ ಅಜೀಜ್ ಸೇಠ್:– ತಾವು ಹೇಳುವ ಹಾಗೆ ನಾವು ಇಲ್ಲಿ ಕೇಳಿಕೊಂಡು ಗುಲಾಮರಾಗಿ ಸುಮ್ಮನೇ ಕುಳಿತುಕೊಂಡಿರಬೇಕಾ ?

ಅಧ್ಯಕ್ಷರು:– ಕೇಳಿಕೊಳ್ಳಿ. ಸದನಕ್ಕೆ ಗೊತ್ತಾಗುವ ಹಾಗೆ ಹೇಳುತ್ತೇನೆ. ಈ ವಿಷಯದ ಬಗ್ಗೆ ಸಹಿ ಮಾಡಿದ್ದವರಿಗೆ ನಾನು ಮೊದಲು ಅವಕಾಶ ಕೊಟ್ಟಿದ್ದೇನೆ. ಆಮೇಲೆ ಏನಾದರೂ ವಿಷಯದ ಗಂಭೀರತೆಯನ್ನು ಅರಿತು ನಿಮಗೆ ಅವಕಾಶ ಮಾಡಿಕೊಡಬೇಕೆಂದು ಗಮನದಲ್ಲಿಟ್ಟುಕೊಂಡು ಕುಳಿತಿದ್ದೇನೆ. ನೀವು ಕೇಳಿದ ಹಾಗೆ ಸದನದಲ್ಲಿ ಅವಕಾಶ ಮಾಡಿಕೊಡುವುದಕ್ಕಾಗುವುದಿಲ್ಲ. ತಾವು ವಿದ್ಯಾ ಇಲಾಖೆಯ ಮೇಲೆ ಮಾತನಾಡಬೇಕು ಎಂದು ಹೆಸರು ಬರೆದು ಕೊಟ್ಟಿದ್ದೀರಿ. ಎರಡು ಸಾರಿ ನಾನು ಹೆಸರು ಓದಿದೆ. ತಾವು ಸದನದಲ್ಲಿ ಇರಲಿಲ್ಲ. ಈಗ ಕುಳಿತುಕೊಳ್ಳಿ.

ಶ್ರೀ ಅಜೀಜ್ ಸೇಠ್:– ಶುಕ್ರವಾರದ ದಿವಸ ನಾವು ನಮಾಜಿಗೆ ಹೋಗಬಾರದಾ ?

ಅಧ್ಯಕ್ಷರು:– ಕುಳಿತುಕೊಳ್ಳಿ, ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು:– ದಯಮಾಡಿ ಕುಳಿತುಕೊಳ್ಳಿ. ಆಮೇಲೆ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಮುಗಿಯಿತು ಎಂದು ನಾನು ಸದನದಲ್ಲಿ ಹೇಳಿದ ನಂತರ ಇವರು ಮಾತನಾಡುವುದಕ್ಕೆ ಚೀಟಿ ಕಳಿಸುತ್ತಾರೆ; ಮಾತನಾಡುವುದಕ್ಕೆ ಅವಕಾಶ ಬೇಕು ಎಂದು. ಚರ್ಚೆ ಮುಕ್ತಾಯವಾಯಿತು ಎಂದು ಹೇಳಿದ ನಂತರ ಇವರ ಚೀಟಿ ಬರುತ್ತದೆ, ನನಗೆ ಅವಕಾಶ ಮಾಡಿಕೊಡಿ ಎಂದು. ಸದನದಲ್ಲಿ ಅದೇ ರೀತಿ ನಡೆಯುವುದಾದರೆ ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:– ಹಿಂದೆ ಇವರು ಮಂತ್ರಿಮಂಡಲದಲ್ಲಿದ್ದರು, ಆಗಲೂ ಇದೇ ರೀತಿ ಆಗುತ್ತಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಈಗ ಈ ವಿಚಾರದಲ್ಲಿ ಕಾನೂನಿನ ಪ್ರಕಾರವಾಗಿ.

(ಗೊಂದಲ)

ಶ್ರೀ ಅಜೀಜ್ ಸೇಠ್:– ನ್ಯಾಯಬದ್ಧವಾಗಿ ಏನೂ ಬೇಡ. ಬಾಯಿಗೆ ಬಂದದ್ದೆಲ್ಲಾ ಈ ವಿಷಯದಲ್ಲಿ ಮಾತನಾಡಿದ್ದಾರೆ.

ಶ್ರೀ ಪಿ.ಜಿ. ಆರ್. ಸಿಂಧ್ಯ:– ಏನು ಈ ರೀತಿ ಮಾತನಾಡುತ್ತಿದ್ದಾರೆ ?

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್:– ಈ ಸದನದಲ್ಲಿ ಬಾಯಿಗೆ ಬಂದ ಹಾಗೆ ಮಾತನಾಡುತ್ತಿದ್ದಾ ಎಂದು ಹೇಳುತ್ತಿದ್ದಾರೆ,

(ಗೊಂದಲ)

ಅಧ್ಯಕ್ಷರು:– ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀವಾಟಾಳ್ ನಾಗರಾಜ್:– ಬಾಯಿಗೆ ಬಂದಂತೆ ಮಾತನಾಡತಕ್ಕವರು ಅಜೀಜ್ ಸೇಠ್ ಅವರು..

(ಗೊಂದಲ)

ಅಧ್ಯಕ್ಷರು:– ಕುಳಿತುಕೊಳ್ಳಿ, ಈಗ ನಿಮ್ಮ ಲೀಡರ್ ಎದ್ದಿದ್ದಾರೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:– (ಮುಖ್ಯ ಮಂತ್ರಿಗಳು) ಈಶ್ವರಪ್ಪನವರೇ ಕುಳಿತುಕೊಳ್ಳಿ. ಮಾನ ಅಜೀಜ್ ಸೇಠ್‌ರವರು ಹಿರಿಯ ಸದಸ್ಯರು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಇದೇನು ಲೆಜಿಸ್ಲೇಚರ್ ಪಾರ್ಟಿ ಮೀಟಿಂಗ್ ಏನು ?

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ:– ನಮ್ಮೆಲ್ಲರ ಭಾವನೆ ಏನು ಇತ್ತು? ಅವರ ಬಗ್ಗೆ ಮಾತನಾಡಿದ ಅದು ತಪ್ಪು ಸರಿ ಎಂದು ಹೇಳುವುದಿಲ್ಲ. ಆದರೆ ಅದೇ ರೀತಿ ನಿಮ್ಮ ಪಕ್ಷದ ಸದಸ್ಯರು ಅವ ಹಿರಿತನಕ್ಕೆ ಸರಿಯಲ್ಲದಂತಹ ನಡವಳಿಕೆಯನ್ನು ಮಾಡಿದಾಗ ತಾವು ಅದನ್ನು ಸಭಾನಾಯಕರಾ ಅವರಿಗೆ ತಿಳುವಳಿಕೆ ಮಾಡಬೇಕಾಗುತ್ತದೆ.

(ಗೊಂದಲ)

10.35 ಎ.ಎಂ.

ಶ್ರೀ ಕೆ.ಎಸ್. ಈಶ್ವರಪ್ಪ:– ಹಿರಿಯ ಸದಸ್ಯರು ಹಿರಿಯ ಸದಸ್ಯರಾಗಿಯೇ ನಡೆದುಕೊಂಡರೆ....

ಶ್ರೀ ಸಿ. ಬೈರೇಗೌಡ:– ಮಾನ್ಯ ಅಜೀಜ್ ಸೇಠ್‌ರವರನ್ನು ತಾವು ಇಷ್ಟೊಂದು ಗಂಭೀರವಾ ತೆಗೆದುಕೊಳ್ಳಬೇಕಾಗಿರತಕ್ಕಂಥ ಅವಶ್ಯಕತೆ ಇರಲಿಲ್ಲ. ಇದು ನನಗೆ ಆಶ್ಚರ್ಯವಾಗುತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಏನಾಗಿದೆಯೆಂದರೆ, ಎಲ್ಲರ ಸ್ವರ ಒಂದೇ ರೀತಿಯಾಗಿರುವುದಿ ನನ್ನ ಸ್ವರ ಒಂದು ರೀತಿ ಇದ್ದರೆ, ಮಾನ್ಯ ಅಜೀಜ್ ಸೇಠ್‌ರವರ ಸ್ವರ ಇನ್ನೊಂದು ರೀತಿ ಇರುತ್ತ ಮಾನ್ಯ ಏಕಾಂತಯ್ಯನವರ ಸ್ವರ ಮತ್ತೊಂದು ರೀತಿ ಇರುತ್ತದೆ. ಸ್ವರವನ್ನು ಏರಿಸಿದ ಕೂಡಲೇ ಅದನ ಒಂದು ತರಹ 'ದಾಳಿ' ಮಾಡಿದ್ದು ಎಂದು ತಿಳಿದುಕೊಂಡರೆ ಹೇಗೆ? ಮಾನ್ಯ ಅಜೀಜ್ ಸೇಠ್‌ರವ ಹೃದಯ ಬಹಳ ಮೃದು, ಅವರು ಮಾತನಾಡುವಾಗ ಸ್ವಲ್ಪ ಮಾರ್ಜಿನ್ ಕೊಡಬೇಕು. ಅದನ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾದಂಥ ಅವಶ್ಯಕತೆಯಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ಸಭಾಧ್ಯಕ್ಷರೆ, ಇವೊತ್ತು ಬೈರೇಗೌಡರು ಮತ್ತ ರಾಮಯ್ಯನವರು ಏನೊಂದು ನಿಲುವಳಿ ಸೂಚನೆ ಮೂಲಕ ವಿಷಯ ಪ್ರಸ್ತಾಪ ಮಾಡಿದ್ದಾರೆ, ಇದ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಈ ಸಂದರ್ಭದಲ್ಲಿ ಸೆಳೆಯುವುದ

ಬಯಸುವುದೇನೆಂದರೆ, ಲೋಕಾಯುಕ್ತದವರು ಯಾವ ಅಧಿಕಾರಿಗಳನ್ನು ಟ್ರ್ಯಾಪ್ ಮಾಡುತ್ತಾರೆ, ಆ ವಿಷಯ ಮಾರನೇ ದಿವಸ ಪತ್ರಿಕೆಗಳಲ್ಲಿ ಬರುತ್ತದೆ, ನಂತರ, ಇವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆನ್ನುವ ಒಂದು ರೀತಿಯ ವಾತಾವರಣ ಸೃಷ್ಟಿಯಾಗುತ್ತದೆ. ಉದಾಹರಣೆಗೆ ಕಳೆದ 15–20 ದಿವಸಗಳ ಹಿಂದೆ ಕೆ.ಎಸ್.ಆರ್.ಪಿ.ಯಲ್ಲಿ ಕೆಲಸ ಕೊಡಿಸುವುದಾಗಿ ಒಬ್ಬರಿಂದ 50 ಸಾವಿರ ರೂಪಾಯಿಗಳ ಲಂಚ ಸ್ವೀಕರಿಸುತ್ತಿದ್ದ ಅಲ್ಲಿನ ಕಮಾಂಡೆಂಟ್ ಅನ್ನು ಲೋಕಾಯುಕ್ತದವರು ಹಿಡಿದರು; ಆ ವಿಷಯ ಪತ್ರಿಕೆಯಲ್ಲಿ ಬಂತು. ಆದಾಗಿ ಇವೊತ್ತಿಗೆ ಒಂದು ತಿಂಗಳಾದರೂ, ಆ ಕಮಾಂಡೆಂಟ್‌ಅನ್ನು ನೀವು ಏಕೆ ಸಸ್ಪೆಂಡ್ ಮಾಡಿಲ್ಲ? ಎರಡನೆಯದಾಗಿ, ದೊಡ್ಡಬಳ್ಳಾಪುರದಲ್ಲಿರುವ ಮುನಿಸಿಪಾಲಿಟಿ ಚೀಫ್ ಆಫೀಸರ್ ಅನ್ನು ಟ್ರ್ಯಾಪ್ ಮಾಡಿ ಸುಮಾರು 20 ದಿವಸಗಳಾಯಿತು. ಈ ಅಧಿಕಾರಿ ಸುಮಾರು ಒಂದು ಸಾವಿರ ರೂಪಾಯಿಗಳ ಲಂಚ ಸ್ವೀಕರಿಸುತ್ತಿದ್ದಂಥ ಸಂದರ್ಭದಲ್ಲಿ ಪೊಲೀಸಿನವರು ಸ್ಥಳಕ್ಕೆ ತೆರಳಿ ಅವರನ್ನು ರೆಡ್ ಹ್ಯಾಂಡ್ ಆಗಿ ಹಿಡಿದು ಟ್ರ್ಯಾಪ್ ಮಾಡಿದ ವಿಷಯವೂ ಪತ್ರಿಕೆಗಳಲ್ಲಿ ಬಂತು. ಆ ಅಧಿಕಾರಿಯನ್ನು ಇನ್ನೂ ಸಸ್ಪೆಂಡ್ ಮಾಡಿಲ್ಲ. ಇದರಿಂದ ಅವರು ಏನು ಮಾಡುತ್ತಿದ್ದಾರೆಂದರೆ, ಈ ಟ್ರ್ಯಾಪ್ ಕೇಸ್‌ಗಳೆಲ್ಲವೂ ಇತ್ತೀಚಿನ ದಿನಗಳಲ್ಲಿ ನಡೆಯುತಕ್ಕಂಥಾದ್ದು ಸಾಮಾನ್ಯವಾಗಿದೆಯೆಂದು ತಿಳಿದುಕೊಂಡು, ಇಂತಹ ಕ್ರಮಗಳನ್ನು ಇನ್ನೂ ಹೆಚ್ಚು ಮಾಡಿದ್ದಾರೆ. ನಿನ್ನೆ ದಿವಸ ದೊಡ್ಡಬಳ್ಳಾಪುರದ ಸುಮಾರು 50 ಜನ ನಾಗರೀಕರು ಹಾಗೂ ಕನ್ನಡ ಪಕ್ಷದವರು ನನ್ನಲ್ಲಿಗೆ ಬಂದಿದ್ದರು.

ಅವರು 'ನೋಡಿ ಸ್ವಾಮಿ, ಈ ರೀತಿ ನಡೆಯುತ್ತಿದೆ' ಎಂದು ಹೇಳಿದರು. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮುಖ್ಯಮಂತ್ರಿಗಳ ಗಮನಕ್ಕೆ ಇದು ಬರದಿರಬಹುದು. ಏಕೆಂದರೆ, ಬಹಳ ಮುಖ್ಯವಾಗಿರತಕ್ಕ 4–5 ಇಲಾಖೆಗಳನ್ನು ತಮ್ಮ ಬಳಿ ಇಟ್ಟುಕೊಂಡಿದ್ದೀರಿ. ಎಲ್ಲಾ ಸೂಕ್ಷ್ಮವಾದ ವಿಚಾರಗಳು ತಮ್ಮ ಗಮನಕ್ಕೆ ಬರುವುದು ಕಷ್ಟವಾಗಬಹುದು. ಆದರೆ, ನಡೆಯುತ್ತಿರತಕ್ಕಂಥ ವ್ಯವಹಾರವನ್ನು ಹೇಳುತ್ತಿದ್ದೇನೆ. ಈಗ ಸಂಬಂಧಪಟ್ಟ ಅಧಿಕಾರಿಗಳನ್ನು ಟ್ರ್ಯಾಪ್ ಮಾಡಿದ ಕೊನೇ ಪಕ್ಷ 4–5 ದಿವಸಗಳಾದ ಬಳಿಕ ಅವರನ್ನು ನೀವು ಸಸ್ಪೆಂಡ್ ಮಾಡಲಿಲ್ಲವೆಂದರೆ ನೀವು ಕಾರ್ಯಾಂಗವನ್ನು ಚುರುಕುಗೊಳಿಸಲು ಹೇಗೆ ಸಾಧ್ಯ? ನನಗಂತೂ ಸಂಶಯ ಬರುತ್ತಿದೆ. ಈಗ ನ್ಯಾಯಾಂಗದಲ್ಲಿರತಕ್ಕಂಥ ಕಾನೂನು ಏನಿದೆ, ಅದರ ಪ್ರಕಾರ ಎಷ್ಟೇ ಎತ್ತರದವರಾಗಿದ್ದರೂ ಕೂಡ ಅವರ ಬಗ್ಗೆ ಕ್ರಮ ತೆಗೆದುಕೊಂಡರೆ, ನಾವೇನು ಪ್ರಶ್ನೆ ಮಾಡುವುದಕ್ಕಾಗುವುದಿಲ್ಲ. ಅದನ್ನು ನೀವು ಮಾಡಿಕೊಂಡು ಹೋಗಿ. ಆದರೆ, ಕಾರ್ಯಾಂಗದಲ್ಲಿರತಕ್ಕಂಥ ತಪ್ಪುಗಳನ್ನು ಎತ್ತಿ ಹಾಕುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳದೆ ಕಣ್ಣುಮುಚ್ಚಿ ಕುಳಿತುಕೊಂಡರೆ ಇದಕ್ಕೆ ಏನು ಅರ್ಥ ಬರುತ್ತದೆ? ನೀವು ಅವರಿಗೆ ಇನ್‌ಡೈರೆಕ್ಟ್ ಆಗಿ ಸಪೋರ್ಟ್ ಮಾಡುತ್ತಿದ್ದೀರೆಂದರೆ ಮುಖ್ಯಮಂತ್ರಿಗಳು ಕೇಳದಿರಬಹುದು. ಆದರೆ, ಮೇಲೆ ಅಧಿಕಾರ ನಡೆಸುತ್ತಿರತಕ್ಕಂಥ ಜನರು ಇದರಲ್ಲಿ ಶಾಮೀಲಾಗಿದ್ದಾರೆನ್ನುವ ಭಾವನೆ ಬರುತ್ತದೆ. ಆದುದರಿಂದ, ನಾನು ಈ ಸಂದರ್ಭ ಉಪಯೋಗಿಸಿಕೊಂಡು ಹೇಳುತ್ತಿದ್ದೇನೆ. ಲೋಕಾಯುಕ್ತದವರಿಂದ ಟ್ರ್ಯಾಪ್ ಆದ ವ್ಯಕ್ತಿಗಳ ಮೇಲೆ ಟ್ರ್ಯಾಪ್ ಆದ 3–4 ದಿವಸಗಳಾದ ನಂತರ ಅಥವಾ ಒಂದು ವಾರದಲ್ಲಿ ನೀವು ತಕ್ಷಣ ಕ್ರಮ ತೆಗೆದುಕೊಳ್ಳಬೇಕು.

† ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):– ಸನ್ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ಎಲ್ಲಾ ಸದಸ್ಯರು ಹೇಳುತ್ತಿದ್ದಾರೆ. ಅದು ಏನೆಂದರೆ, ನಿರೀಕ್ಷಣಾ ಜಾಮೀನು ಅಹೋರಾತ್ರಿಯಲ್ಲಿ ತೆಗೆದುಕೊಂಡಿದ್ದಾರೆ ಎಂದು. ಅದಕ್ಕೂ ಕೂಡ ಕಾನೂನಿನಲ್ಲಿ ಅವಕಾಶವಿದೆ. ನನ್ನ ಪ್ರಶ್ನೆ ಏನೆಂದರೆ, ಯಾವ ಒಬ್ಬ ಅಧಿಕಾರಿ ತಪ್ಪಿತಸ್ಥನಾಗಿದ್ದಾನೆ, ಈ ಬಗ್ಗೆ ಕೋರ್ಟಿನಲ್ಲಿ ತೀರ್ಮಾನ ಮಾಡಿದನಂತರ ಸರ್ಕಾರ ಒಂದು ಕ್ರಮ ತೆಗೆದುಕೊಂಡಿದೆ. ಏನೆಂದರೆ, ಇದನ್ನು ಸಿಬಿಐಗೆ ರೆಫರ್ ಮಾಡಬೇಕೆಂದು, ಅದೇ ರೀತಿ ಸಿಬಿಐಗೆ ರೆಫರ್ ಮಾಡಲಾಗಿದೆ.

ಅದಕ್ಕೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆಂದ ಮೇಲೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏಕೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಿಲ್ಲವೆಂದು ಕೇಳುತ್ತಿದ್ದಾರೆ. ಹಾಗೆಯೇ ಮತ್ತೊಬ್ಬ ಮೇಲಿನ ಅಧಿಕಾರಿ ಲೋಕಾಯುಕ್ತಕ್ಕೆ ಸಿಕ್ಕಿ ಹಾಕಿಕೊಂಡಿರಬೇಕಾದರೆ, ಅವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ, ಎಂದು ಎಲ್ಲಾ ಸದಸ್ಯರು ಕೇಳುತ್ತಿದ್ದಾರೆ.

ಸನ್ಮಾನ್ಯ ಅಧ್ಯಕ್ಷರೆ, ನನ್ನ ಒಂದು ಅರಿಕೆ ಏನೆಂದರೆ ಒಂದೇ ಒಂದು ವಿಷಯದ ಮೇಲೆ ಹತ್ತಾರು ಮಾನ್ಯ ಸದಸ್ಯರುಗಳು ಪ್ರತಿಪಾದನೆ ಮಾಡುತ್ತಿರುವ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ಸಂಬಂಧಪಟ್ಟ ಮಂತ್ರಿಗಳಾಗಲಿ ಮಧ್ಯ ಪ್ರವೇಶ' ಮಾಡಿ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೆ ಇಷ್ಟು ಚರ್ಚೆ ಸದನದಲ್ಲಿ ಆಗಲು ಅವಕಾಶವಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅಥವಾ ಸಂಬಂಧಪಟ್ಟ ಮಂತ್ರಿಯವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಹೇಳಿದ ಮೇಲೆ ನಾವುಗಳು ಚರ್ಚೆ ಮಾಡುವುದು ಸೂಕ್ತವಾಗಿರುತ್ತದೆ. ಆದ್ದರಿಂದ ನನ್ನ ಅರಿಕೆ ಏನೆಂದರೆ ಒಂದು ವಿಷಯವನ್ನು ಸದನದ ಮುಂದೆ ತಂದಮೇಲೆ ಅದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿವರ್ಯರು ಅಥವಾ ಮಾನ್ಯ ಮುಖ್ಯಮಂತ್ರಿಗಳು ಮಧ್ಯ ಪ್ರವೇಶಮಾಡಿ ಸರಿಯಾದ ಜವಾಬನ್ನು ತಕ್ಷಣವೇ ಕೊಟ್ಟರೆ ಒಳ್ಳೆಯದು. ಇಲ್ಲದಿದ್ದರೆ ನಮ್ಮ ಚರ್ಚೆ ಬೆಳೆಯುತ್ತಾ ಹೋಗುತ್ತದೆ, ಇದರ ಬಗ್ಗೆ ಚರ್ಚೆ ಮಾಡಬಾರದೆಂದು ನನ್ನ ಅಭಿಮತವಲ್ಲ; ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷದವರಿಗಾಗಲೀ ಅಥವಾ ಬೇರೆಯವರಿಗಾಗಲೀ ವಿಷಯದ ಮೇಲೆ ಸಂಪೂರ್ಣವಾಗಿ ಚರ್ಚೆಗೆ ಅವಕಾಶವಿದೆ; ಆದರೆ ಅವರು ವಿಷಯದ ಬಗ್ಗೆ ಎಷ್ಟು ಹೇಳಬೇಕು, ನಾವು ಎಷ್ಟನ್ನು ಕೇಳಬೇಕು ಎಂಬುದಕ್ಕೆ ಮಿತಿ ಇರುತ್ತದೆ. ಅವರು ಸುಮ್ಮನೆ ಹೇಳುತ್ತಲೇ ಇದ್ದು ನಾವು ಕೇಳುತ್ತಲೇ ಇರುವುದಕ್ಕೂ ಸಹ ಅವಕಾಶವಿದೆ; ಆದರೆ ಅದು ಸರಿಯಾಗುವುದಿಲ್ಲ. ಆದುದರಿಂದ ನಾನು ತಮ್ಮಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಒಂದು ವಿಷಯದ ಮೇಲೆ ನಿಲುವಳಿ ಸೂಚನೆಯನ್ನು ಯಾರು ಕೊಟ್ಟಿದ್ದಾರೆ ಅವರಿಗೆ ಮಾತನಾಡಲು ಅವಕಾಶ ಕೊಟ್ಟರೆ ನಾವು ಅದಕ್ಕೆ ಒಪ್ಪಿಕೊಳ್ಳುತ್ತೇವೆ; ಮತ್ತು ಯಾರ್ಯಾರು ಇದಕ್ಕೆ ತಮ್ಮ ಹೆಸರನ್ನು ಕೊಟ್ಟಿದ್ದಾರೋ ಅವರ ಪಟ್ಟಿಯನ್ನು ಹೇಳಿದರೆ ಅವರಿಗೆ ಪ್ರಾರಂಭದಲ್ಲಿ ಮಾತನಾಡಲು ಅವಕಾಶ ಬರುತ್ತದೆಂದು ನಾವುಗಳು ಅವರದ್ದು ಆಗುವವರೆಗೆ ಸುಮ್ಮನೆ ಕುಳಿತುಕೊಂಡಿರುತ್ತೇವೆ. ಆದ್ದರಿಂದ ಆ ಪಟ್ಟಿಯನ್ನು ಮೊದಲು ಪ್ರಕಟಣೆ ಮಾಡಿ, ಇಲ್ಲದಿದ್ದರೆ ಆ ಪಟ್ಟಿಯಲ್ಲಿ ಯಾರ್ಯಾರು ಇದ್ದಾರೆ ಎಂಬುದು ನಮಗೆ ಗೊತ್ತಾಗುವುದಿಲ್ಲ. ಮತ್ತೆ ಇನ್ನೂ ಯಾರ್ಯಾರು ಮಾತನಾಡುತ್ತಾರೆ ಎಂಬುದು ಗೊತ್ತಾಗುವುದಿಲ್ಲ. ಆ ಪಟ್ಟಿಯಲ್ಲಿ ಇಲ್ಲದಿದ್ದವರೂ ಸಹ ಮಾತನಾಡಬಹುದು; ಏಕೆಂದರೆ ಅವರು ವರಪುತ್ರರು, ಮಾತನಾಡಲಿ, ನಾನು ಬೇಡ ಎಂದು ಹೇಳುವುದಿಲ್ಲ, ಆದರೆ ನಮಗೆ ಇಷ್ಟೊಂದು ಕೇಳುತ್ತಲೇ ಇರಬೇಕೆಂದರೆ ಕಷ್ಟವಾಗುತ್ತದೆ. ಆದ್ದರಿಂದ ನಮ್ಮ ಮಂತ್ರಿವರ್ಯರಾದರೂ ಅದಕ್ಕೆ ಜವಾಬನ್ನು ಕೊಡಲಿ, ಇಲ್ಲದಿದ್ದರೆ ನಮಗೆ ಗೊತ್ತಿರತಕ್ಕ ವಿಚಾರ ಹೇಳಲು ನಮಗೂ ಅವಕಾಶ ಮಾಡಿಕೊಡಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಮತ್ತೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏನೆಂದರೆ, ದಯಮಾಡಿ ನಮ್ಮ ಮೇಲೆ ಏನು ಆರೋಪ ಬರುತ್ತದೆ ಅದು ಹೆಚ್ಚು ಬೆಳೆಯುವುದಕ್ಕೆ ಮೊದಲು ಸರಿಯಾದ ಒಂದು ಉತ್ತರವನ್ನು ಕೊಡಬೇಕು ಎಂದು;

† ಶ್ರೀ ಎಂ.ವೀರಪ್ಪಮೊಯ್ಲಿ (ಮುಖ್ಯಮಂತ್ರಿಗಳು):– ಸನ್ಮಾನ್ಯ ಅಧ್ಯಕ್ಷರೆ, ಈಗ ವಿಷಯದ ಬಗ್ಗೆ ವ್ಯಾಪಕವಾದಂಥ ಚರ್ಚೆ ನಡೆದಿದೆ. ನಿಲುವಳಿ ಸೂಚನೆಯ ಬಗ್ಗೆ ತಾವು ಒಂದು ಕ್ರಮವನ್ನು, ಸಂಪ್ರದಾಯವನ್ನು ಇಟ್ಟುಕೊಂಡಿದ್ದೀರಿ. ಏಕೆಂದರೆ ನಿಲುವಳಿ ಸೂಚನೆಯನ್ನು ಕೊಡಬೇಕಾದರೆ ಮೊದಲು ತಮ್ಮ ಜೊತೆಯಲ್ಲಿ ಮಾತನಾಡಿ ಅನಂತರ ಇಲ್ಲಿ ಅದರ ಬಗ್ಗೆ ಅಧ್ಯಕ್ಷರ ಅಪ್ಪಣೆಯನ್ನು

ಪಡೆದು ಮಾತನಾಡುವುದು ಸಂಪ್ರದಾಯವಾಗಿ ಇಟ್ಟುಕೊಂಡಿದ್ದೇವೆ. ನಿಲುವಳಿ ಸೂಚನೆಯನ್ನು ಯಾರು ಎತ್ತಿದ್ದಾರೆ ಅವರಿಗೆ ಮಾತನಾಡಲು ಎಷ್ಟು ಅವಕಾಶ ಕೊಡಬೇಕು ಎನ್ನತಕ್ಕ ಅಧಿಕಾರ ಅಧ್ಯಕ್ಷರಾದ ತಮಗೆ ಮಾತ್ರವಿದೆ; ಅದನ್ನು ನಾನು ತೆಗೆದುಕೊಳ್ಳಲು ಆಗುವುದಿಲ್ಲ, ಇದನ್ನು ಹಿರಿಯ ಸದಸ್ಯರಾದ ಅನಂತಕೃಷ್ಣರವರು ತಿಳಿದುಕೊಳ್ಳಬೇಕು. ಅಂಥ ಒಂದು ಅಧಿಕಾರ ಅಧ್ಯಕ್ಷರಿಗೆ ಮಾತ್ರ ಇರುತ್ತದೆ. ಈಗ ನಾನು ಚರ್ಚೆಯನ್ನು ಮೊಟಕು ಮಾಡತಕ್ಕ ಸಂಪ್ರದಾಯದಲ್ಲಿ ಇಲ್ಲ. ನಾನು ಇಲ್ಲಿ ಸಂಸದೀಯ ವ್ಯವಹಾರಗಳ ಸಚಿವನಾಗಿ ಸಹ ಕೆಲಸ ಮಾಡಿದ್ದೇನೆ, ಪ್ರಜಾಪ್ರಭುತ್ವದಲ್ಲಿ ಕೆಲವು ಕ್ರಮಗಳಿವೆ; ಚರ್ಚೆಯನ್ನು ನಾವು ಯಾವಾಗಲೂ ಮೊಟಕು ಮಾಡುವುದಕ್ಕೆ ಆಗುವುದಿಲ್ಲ, ಚರ್ಚೆಯನ್ನು ನಿಲ್ಲಿಸುವುದಕ್ಕೆ ಕೂಡ ಸಭಾನಾಯಕನಾಗಿ ಇಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ, ಚರ್ಚೆಯನ್ನು ಹತೋಟಿಗೆ ತರತಕ್ಕ, ನಿಯಂತ್ರಣಕ್ಕೆ ತರತಕ್ಕ ಪರಮ ಅಧಿಕಾರ ಅಧ್ಯಕ್ಷರಿಗೆ ಮಾತ್ರ ಇದೆ, ಏನಾದರೂ ಪಾರ್ಲಿಮೆಂಟರಿ ಪ್ರಾಕ್ಟೀಸ್ ಅಥವಾ ಸಂಪ್ರದಾಯಕ್ಕೆ ವಿರುದ್ಧವಾದಂಥ ಮಾತು ಬಂದರೆ ನಮ್ಮ ಸಂಸದೀಯ ಮಂತ್ರಿಗಳಿದ್ದಾರೆ, ಅವರು ಹೇಳುತ್ತಾರೆ, ನಾನು ಇದ್ದೇನೆ, ನಾನು ಎದ್ದು ನಿಂತು ಹೇಳಿದ್ದೇನೆ. ಈ ಅಭಿಪ್ರಾಯ ಬಂದಾಗ conduct of a Judge cannot be discussed here. I cannot control the members. We can at the most suggest some measures as to how to regulate it. I cannot order it. ನಮ್ಮ ಇತಿಮಿತಿಯನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ, ಉತ್ತರವನ್ನು ಕೊಡಬೇಕಾದುದು ನಮ್ಮ ಕರ್ತವ್ಯ; ಅದನ್ನು ನಾವು ಕೊಟ್ಟೇ ಕೊಡುತ್ತೇವೆ, ಅದನ್ನು ನಾವು ನಿಭಾಯಿಸುತ್ತೇವೆ. ಈ ಬಗ್ಗೆ ಕೆಲವು ವಿಚಾರಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀಮಾನ್ ವಾಟಾಳ್ ನಾಗರಾಜ್‌ರವರು, ವೈ.ಕೆ. ರಾಮಯ್ಯನವರು, ಈಶ್ವರಪ್ಪನವರು ಮತ್ತು ಬೈರೇಗೌಡರು ಹೇಳಿದರು. ಇದು ಸೆಂಟ್ರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್‌ಗೆ (ಸಿ.ಬಿ.ಐ)ಗೆ ಸೀಮಿತವಾಗಿರತಕ್ಕ ವಿಚಾರ. ಅದು ಕಂಪ್ಯೂಟರ್‌ಗೆ ಸಂಬಂಧಪಟ್ಟಿರತಕ್ಕದ್ದು; ಅದರ ಮೆರಿಟ್ ಬಗ್ಗೆ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಯಾಕೆಂದರೆ ನಾವು ಈ ವಿಚಾರವನ್ನು ಸಿ.ಬಿ.ಐ.ಗೆ ಕೊಟ್ಟುಬಿಟ್ಟಿದ್ದೇವೆ.

ಸಿ.ಬಿ.ಐ. ನಮ್ಮ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅದು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರತಕ್ಕದ್ದು. ಅವರಿಗೆ ಬೇಕಾದ ಸಹಾಯ ಸಲಕರಣೆಗಳನ್ನು ಅವರಾಗಿಯೇ ಏನಾದರೂ ಕೇಳಿದರೆ ಕೊಡುತ್ತೇವೆ. ಆದರೆ ನಾವಾಗಿಯೇ ಅವರಿಗೆ ಕೊಡತಕ್ಕದ್ದು ಏನೂ ಇರುವುದಿಲ್ಲ. ಕಂಪ್ಯೂಟರ್ ಬಗ್ಗೆ ಸರ್ಕಾರದಿಂದ ಕಂಪ್ಲೇಂಟ್ ಕೊಡಬೇಕಾಗಿತ್ತು. ಕೊಟ್ಟಿದ್ದೇವೆ. ಇದನ್ನು ರಿಜಿಸ್ಟರ್ ಮಾಡಬೇಕೇ, ಅಥವಾ ಬೇಡವೆ, ಇನ್ವೆಸ್ಟಿಗೇಷನ್‌ಗೆ ಯೋಗ್ಯವೇ, ಅಥವಾ ಇಲ್ಲವೇ, ಯಾವ ರೀತಿ ಇನ್ವೆಸ್ಟಿಗೇಷನ್ ಮಾಡತಕ್ಕದ್ದು ಇದೆಲ್ಲ ಸಿ.ಬಿ.ಐ. ನವರಿಗೇ ಬಿಟ್ಟದ್ದು. ಇದರ ಬಗ್ಗೆ ನಾನು ಯಾವುದೇ ರೀತಿಯ ಕಾಮೆಂಟನ್ನೂ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಕರ್ನಾಟಕ ಸರ್ಕಾರದ ಪೊಲೀಸ್‌ಗೆ ಸಂಬಂಧಪಟ್ಟಂತಿದ್ದರೆ ಆಗ ನಾವು ಇದರ ಬಗ್ಗೆ ಉತ್ತರವನ್ನು ಕೊಡಬಹುದು. ಆದರೆ ಇದು ಸಿ.ಬಿ.ಐ. ಇನ್ವೆಸ್ಟಿಗೇಷನ್‌ಗೆ ಸಂಬಂಧಪಟ್ಟದ್ದಾದರಿಂದ ಅದಕ್ಕನುಗುಣವಾಗಿ ಆಂಟಿಸಿಪೇಟರಿ ಬೇಲ್ ಬಗ್ಗೆ ನಾನು ಚರ್ಚೆ ಮಾಡುವುದಕ್ಕಾಗುವುದಿಲ್ಲ. ಅಷ್ಟೇ ಅಲ್ಲ, ಇಲ್ಲಿ ಉತ್ತರವನ್ನೂ ಕೂಡ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ We have ceased of the matter. C.B.I. ceased the matter ನಾವೇನಾದರೂ ಅವರಿಗೆ ಸಹಾಯವನ್ನು ಮಾಡದಿದ್ದರೆ ಆಗ ನೀವು ನಮ್ಮನ್ನು ಕ್ವಶ್ಚನ್ ಮಾಡಿ ನೀವು ಸಿಬಿಐಗೆ ಸಪೋರ್ಟ್ ಮಾಡುತ್ತಿಲ್ಲ, ಅವರಿಗೆ ಸಹಕಾರವನ್ನು ಕೊಡುತ್ತಿಲ್ಲ ಎಂದು ನಮ್ಮನ್ನು ಟೀಕೆ ಮಾಡತಕ್ಕ ಅವಕಾಶ ಮಾನ್ಯ ಈಶ್ವರಪ್ಪನವರಿಗಾಗಲೀ ಅಥವಾ ಬೇರೆಯವರಿಗಾಗಲೀ ಇರುತ್ತದೆ. ಆದರೆ ಇಲ್ಲಿ ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ. ಇದನ್ನು ಸಿ.ಬಿ.ಐ. ಗೆ ಒಪ್ಪಿಸಿದ್ದೇವೆ. ಅದು ಅವರ ಇನ್ವೆಸ್ಟಿಗೇಷನ್‌ನಲ್ಲಿದೆ. ಆದ್ದರಿಂದ ಇದರ ಬಗ್ಗೆ ನಾವು ಕಾಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ.

ಇನ್ನು ಎರಡನೆಯದಾಗಿ ಲೋಕಾಯುಕ್ತಕ್ಕೆ ಸಂಬಂಧಪಟ್ಟಿದ್ದು. ಯಾರೋ ಒಬ್ಬ ಅಧಿಕಾರಿಯ ಮನೆಯನ್ನು ರೈಡ್ಮಾಡಿದ್ದಾರೆಂಬುದು. ಹಿಂದೆ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದವರನ್ನು ಸಿ.ಬಿ.ಐ. ತನಿಖೆಗೆ ಸಂಬಂಧಪಟ್ಟಂತೆ ಏತಕ್ಕೆ ಅಮಾನತಿನಲ್ಲಿಟ್ಟಿಲ್ಲವೆಂದು ಕೇಳಿದ್ದಿರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಕೇಸು ಯಾವ ಹಂತದಲ್ಲಿದೆ ಎಂಬ ಬಗ್ಗೆ ಸಿ.ಬಿ.ಐ. ನವರ ಜೊತೆ ಸಮಾಲೋಚನೆ ಮಾಡಿ ತಿಳಿದುಕೊಂಡು We will not hesitate to take appropriate action, immediately after contacting the C.B.I. We cannot work in a vacuum. We will contact the C.B.I. and ascertain the progress of the case. Complaint, yes, we have filed. We will have to take instructions from the C.B.I. We will take appropriate action in so far as the Chief Secretary is concerned.

ಮುಂದೆ ನಾವು ಏನು ಕ್ರಮ ತೆಗೆದುಕೊಳ್ಳಬೇಕೆಂದು ಸಿ.ಬಿ.ಐ. ನವರಿಂದ ತಿಳಿದುಕೊಂಡು We will take appropriate action.

ಇನ್ನು ಎರಡನೇ ವಿಚಾರ ಲೋಕಾಯುಕ್ತದವರು ರೈಡ್ ಮಾಡಿರತಕ್ಕದ್ದು. ಅದು ಒಬ್ಬ ಅಧಿಕಾರಿಗೆ ಸಂಬಂಧಪಟ್ಟ ವಿಚಾರ. ಇದರ ಬಗ್ಗೆ ನಮಗೆ ಇನ್ನೂ ವರದಿ ಬಂದಿಲ್ಲ. ಏಕೆಂದರೆ ಲೋಕಾಯುಕ್ತದವರು ನಮಗೆ ವರದಿಯನ್ನು ಕಳಿಸಬೇಕಾಗುತ್ತದೆ. ರಿಪೋರ್ಟ್ ಬಂದಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಈ ವ್ಯವಸ್ಥೆಯಲ್ಲಿ ಸ್ವಲ್ಪಮಟ್ಟಿಗೆ ದೋಷ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಲೋಕಾಯುಕ್ತದವರಿಂದ 15–20 ದಿವಸವಾದರೂ ನಮಗೆ ವರದಿ ಬರುವುದಿಲ್ಲ.....

ಶ್ರೀ ಪಿ.ಜಿ.ಆರ್. ಸಿಂಧ್ಯ:– ಇಬ್ಬರು ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ನಾನು ನಿರ್ದಿಷ್ಟವಾಗಿ ಹೇಳಿದ್ದೇನೆ. ಇದರ ಬಗ್ಗೆ ಇನ್ನೂ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲವೆಂದು ಕೇಳಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ತಾವು ಇಬ್ಬರು ಅಧಿಕಾರಿಗಳ ವಿಚಾರವನ್ನು ಹೇಳಿದ್ದೀರಿ. ಮತ್ತೊಂದು ವಿಚಾರ ಎಂದರೆ ಲೋಕಾಯುಕ್ತದವರು ರೈಡ್ ಮಾಡಿದ ಇನ್ನೊಬ್ಬ ಅಧಿಕಾರಿಗೆ ಸಂಬಂಧಪಟ್ಟಿದ್ದು. ಇದರ ಬಗ್ಗೆ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು, ಮಾನ್ಯ ವೈ.ಕೆ. ರಾಮಯ್ಯನವರೂ ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ, ಲೋಕಾಯುಕ್ತದವರು ನಮಗೆ ವರದಿಯನ್ನು ಕಳುಹಿಸುವುದರಲ್ಲಿ ತಡ ಮಾಡುತ್ತಿದ್ದಾರೆ. ಲೋಕಾಯುಕ್ತದವರು ರೈಡ್ ಮಾಡಿದ ಮಾರನೇ ದಿನವೇ ನಮಗೆ ಒಂದು ವರದಿಯನ್ನು ಕಳುಹಿಸಿಕೊಡಬೇಕೆಂದು ನಾವು ಲೋಕಾಯುಕ್ತದವರಿಗೆ ಪತ್ರ ಬರೆಯುತ್ತಿದ್ದೇವೆ. Lok Ayuktha is created by its own Act. Therefore, we will write to them that ಅವರು ರೈಡ್ ಮಾಡಿದ ಕೂಡಲೇ ನಮಗೆ ತಿಳಿಸಬೇಕು ಅಂತ. ಏಕೆಂದರೆ ಪೊಲೀಸ್ ಸ್ಟೇಷನ್‌ನಲ್ಲಿ ಎಫ್.ಐ.ಆರ್. ರಿಜಿಸ್ಟರ್ ಆದ ಕೂಡ... ಅದನ್ನು ಕೋರ್ಟ್‌ಗೆ ಮತ್ತು ಸಂಬಂಧಪಟ್ಟವರಿಗೆ ಯಾವ ರೀತಿ ಕಳುಹಿಸಿಕೊಡುತ್ತಾರೆ... ಮತ್ತು ರೈಡ್ ಮಾಡಿದ ಮರುದಿವಸವೇ ನಮಗೆ ಕಳುಹಿಸಿ ಕೊಡುವಂತೆ ಲೋಕಾಯ... ಉಪ ಲೋಕಾಯುಕ್ತರವರಿಗೆ ಸೂಚನೆಯನ್ನು ಕಳುಹಿಸಿಕೊಡುತ್ತೇವೆ.

Now that question is raised with regard ...ee trap cases, we will definitely contact the Lok Ayuktha imme...ly and take appropriate action without any further delay.

Mr. Chief Minister, can you not evolve a

machinery where by as soon as the Lok Ayukta traps, they should immediately inform.

SHRI M. VEERAPPA MOILY:– We do get the information. But a regular report will have to be sent from the Lok Ayukta to the Government.

SHRI R.V. DESHPANDE:– Can you not fix a time limit?

SHRI M. VEERAPPA MOILY:– That is what I have said. Next day itself they must send. That is what I am suggesting. This is one lacuna in the whole system of working. We will not get it. You see, this has happend in many cases previously. We will see that such a trend does not take place.

ಶ್ರೀ ಪಿ.ಜಿ.ಆರ್. ಸಿಂಧ್ಯ:– 50–100 ರೂ.ಗಳನ್ನು ಡಾಕ್ಟರ್‌ಗಳು ತೆಗೆದುಕೊಂಡಾಗ ಅವರನ್ನು ಸಸ್ಪೆಂಡ್ ಮಾಡದಿದ್ದರೂ ನಡೆಯುತ್ತದೆ For giving employment to the police constable, he has been caught red handed while taking Rs. 50,000/– a chief officer for issuing some certificate he has been caught red handed. My point is, see, you have been telling that we will take appropriate action. What is that appropriate action? You must keep him under suspension immediately at least.

SHRI M. VEERAPPA MOILY:– By today I will try to get the report. Today or tomorrow morning we will take action.

ಶ್ರೀ ವೈ.ಕೆ. ರಾಮಯ್ಯ:– ಸಾಯಂಕಾಲದ ಹೊತ್ತಿಗೆ ಉತ್ತರವನ್ನು ಕೊಡುತ್ತೀರಾ ? ಸ್ವಾಮಿ, ನಾವು ಯಾರೋ ಬಸ್ ಸ್ಟಾಂಡಿಗೆ ಹೋಗಿ ಮೆರವಣಿಗೆ ಮಾಡಿದರೆ ನಮ್ಮ ಮೇಲೆ ಕೇಸ್ ಹಾಕಿ ಕೋರ್ಟ್‌ನ ಮುಂದುಗಡೆ ನಿಲ್ಲಿಸುತ್ತೀರಾ, ಕೋಟ್ಯಾಂತರ ರೂಪಾಯಿಗಳನ್ನು ತಿಂದಿರುವವರ ಬಗ್ಗೆ ಹೇಳಿದರೆ ನಾವು ಉತ್ತರವನ್ನು ತರಿಸುತ್ತೇವೆ, ವರದಿಯನ್ನು ತರಿಸುತ್ತೇವೆಂದರೆ ಏನು ಅರ್ಥ ? ಸ್ವಾಮಿ, ತಾವು ಗೃಹ ಮಂತ್ರಿಗಳು By this time you are ceased of the matter.....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುತ್ತಾ ಅದನ್ನೇ ಹೇಳಿದೆ, ಇವತ್ತು ಸದನ ಮುಗಿಯುತ್ತದೆ, ಸದನ ಮುಗಿಯುವುದರೊಳಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ರೀತಿ ಮೇಲೆ ನಾವು ರಕ್ಷಣೆಯನ್ನು ಕೊಡುವುದಿಲ್ಲ, ಈ ಭ್ರಷ್ಟರನ್ನು ಸಸ್ಪೆಂಡ್ ಮಾಡಿದ್ದೇವೆಂದರೆ ನಿಮ್ಮ ಅಳಿಯತನಕ ...ಉತ್ತದೆ. ಇಲ್ಲವೆಂದರೆ ಮತ್ತೆ ನಾವು ಇನ್ನು ಯಾವಾಗ ಇಲ್ಲಿ ಸೇರುತ್ತೇವೋ ಗೊತ್ತಿಲ್ಲ. ...ನಿಲುವೇನು ಇದರ ಬಗ್ಗೆ ?

ಶ್ರೀ ಎಂ. ವೀರಪ್ಪ ಮೊ... ಸನ್ಮಾನ್ಯ ಈಶ್ವರಪ್ಪನವರಿಗೆ ಮತ್ತು ಮಾನ್ಯ ವೈ.ಕೆ. ರಾಮಯ್ಯನವರಿಗೆ ಹೇಳುವುದು ಏನು... ...ಗೂ ಈ ಸದನಕ್ಕೆಲ್ಲ ನಂಬಿಕೆಗೆ ಅರ್ಹವಾದ ಕೆಲಸವನ್ನೇ ನಾವು ಮಾಡುವುದು.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ...ಂದು ಕ್ಲಾರಿಫಿಕೇಷನ್. ವಿಚಾರಣೆ ಮಾಡುತ್ತಿರುವವರು ಸಿ.ಬಿ.ಐ.ನವರು, ಆದರಿಂದ ನಾನು ...

ಏನು ಹೇಳಿದ್ದಾರೋ ಅದನ್ನು 100ಕ್ಕೆ 100 ಒಪ್ಪಿಕೊಳ್ಳುತ್ತೇನೆ. ಸಿ.ಬಿ.ಐ. ಇನ್‌ವೆಸ್ಟಿಗೇಷನ್ ಅಷ್ಟೆ ಅಲ್ಲ; ಯಾವುದೇ ಇನ್‌ವೆಸ್ಟಿಗೇಷನ್‌ನಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಕ್ಕೆ ಅವಕಾಶವಿಲ್ಲ. ನಾನು ಅದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ: ಅದು ಕೇಂದ್ರ ಸರ್ಕಾರದ್ದು ಎಂದು ಹೇಳಿದ್ದಾರೆ. ಆದರೆ ಅಧಿಕಾರಿ ತಮ್ಮವರು; ನಾನು ಇದನ್ನು ಕೇಳುತ್ತಿರುವುದು ಸಿ.ಬಿ.ಐ. ಎನ್‌ಕ್ವಯರಿ ಏನಾಗಿದೆ ಅದರ ಪ್ರಕಾರ ಏನಾಗುತ್ತದೆಂಬುದು ಅದು ಬೇರೆ ವಿಷಯ. ಸಿ.ಬಿ.ಐ. ಎನ್‌ಕ್ವಯರಿ ಮಾಡತಕ್ಕಂಥ ಸಂದರ್ಭದಲ್ಲಿ ಅವರು ಹೋಗಿ ಒಂದು ಕಡೆ ನಿರೀಕ್ಷಣಾ ಜಾಮೀನು ಕೇಳಿರುವಂಥ ಸಂದರ್ಭ. that itself is sufficient to keep the officer under suspension. ಎನ್‌ಕ್ವಯರಿ ಸಿ.ಬಿ.ಐ.ನವರದ್ದು ಅಧ್ಯಕ್ಷರೇ; ಆದರೆ ಸಂಬಂಧಪಟ್ಟ ಅಧಿಕಾರಿಗಳು ಇದ್ದಾರಲ್ಲ, ಇವರು ಮುಖ್ಯಮಂತ್ರಿಗಳ ಅಧೀನದಲ್ಲಿರತಕ್ಕಂಥವರು. ಆದ್ದರಿಂದ ನಾವು ಒತ್ತಾಯ ಮಾಡುತ್ತಿರುವುದೇನೆಂದರೆ, ಇವತ್ತು ಸಂಜೆ ಒಳಗಾದರೂ ಕೂಡ ಈ ವಿಷಯದಲ್ಲಿ ಹಾಗೂ ಮತ್ತೊಂದು ಲೋಕಾಯುಕ್ತ ಕೂಡ ಕರ್ನಾಟಕ ಸರ್ಕಾರದ ಒಂದು ಆಡಳಿತದ ಅಂಗ, ಅದು ಸರ್ಕಾರದ ಅಧೀನದಲ್ಲಿ ಇಲ್ಲದಿರಬಹುದು. ಆದರೂ ಕೂಡ ತಾವು ಗೃಹಮಂತ್ರಿಯಾಗಿ, ಲೋಕಾಯುಕ್ತದವರು ಮನೆ ರೈಡ್ ಮಾಡಿದಾಗ ಹಣ ಸಿಕ್ಕಿದವರ ವಿಷಯ ತಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳಿದರೆ ನಾನು ನಂಬುವುದಿಲ್ಲ; ಈ ಕರ್ನಾಟಕದ ಜನರೂ ನಂಬುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ವಿರೋಧ ಮಾಡಲಿಕ್ಕೆ ಬಂದಿಲ್ಲವೆಂದು ಹೇಳಿದರು. We have other sources of getting the information.

ಲೋಕಾಯುಕ್ತದವರು in writing some correspondence they have to make. ಕೆಲವು ಸಾರಿ ತಡ ಮಾಡುತ್ತಾರೆ. ಇದು ತಪ್ಪು; ಅದನ್ನು ನಾನು ಒಪ್ಪುತ್ತೇನೆ. This system is not correct. ಅದಕ್ಕೆ ನಾವು ಈಗಾಗಲೇ ಸೂಚನೆ ಕೊಟ್ಟಿದ್ದೇವೆ. ಲೋಕಾಯುಕ್ತಕ್ಕೆ ನಾವು ತಾವು ರೈಡ್ ಮಾಡಿದ ಮರುದಿವಸವೇ ನಮಗೆ ವರದಿಯನ್ನು ಕಳುಹಿಸಿಕೊಡಬೇಕೆಂದು ವಿನಂತಿ ಮಾಡಿಕೊಂಡಿದ್ದೇವೆ; This lapse will not happen. This is a lapse because of the inherent system, as far as Lok Ayukta and Government communication is concerned. We will set right that.

ನಾನು ಈಗ ಬಾರದೆ ಇದ್ದರೆ ಪತ್ರಿಕೆಯಲ್ಲಿ ಬಂದ್ದದಕ್ಕೆ ಅಥವಾ ನಮಗೆ ಬೇರೆ ಬೇರೆ ಸೋರ್ಸಸ್‌ನಿಂದ ತಿಳಿದು ಬಂದ ಮೇಲೆ ನಾವು ಆಕ್ಟ್ ಮಾಡುವುದಕ್ಕಾಗುವುದಿಲ್ಲ. We will have to get something in writing from Lok Ayukta or Upa Lok Ayukta. ಆದ್ದರಿಂದ ನಮ್ಮ ಅಧಿಕಾರಿಗಳೇ ತಪ್ಪು ಮಾಡಿದ್ದರೆ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಮೀನಾಮೇಷ ಎಣಿಸತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ಇಲ್ಲಿ those are certain statutory requirements. ಅಷ್ಟೇ ಹೊರತು ಬೇರೆ ಏನು ಇಲ್ಲ! But anyway I can assure this House, in future such lapse will not happen because of the defective communication system between the Government and the Lok Ayukta.

ಶ್ರೀ ವೈ.ಕೆ. ರಾಮಯ್ಯ:– ಸಾಯಂಕಾಲ ಈ ಸದನ ಮುಗಿಯುವುದರೊಳಗಾಗಿ ಏನು ಕ್ರಮ ತೆಗೆದುಕೊಂಡಿರುತ್ತಾರೆಂಬುದನ್ನು ತಿಳಿಸುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ರಾಮಯ್ಯನವರಿಗೆ ಹೇಳುತ್ತೇನೆ, ಕೆಟ್ಟ ಅಧಿಕಾರಿಗಳು

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ, ಸಿ.ಬಿ.ಐ. ಅವರನ್ನು ಕೇಳಿ ಹೇಳುತ್ತೇವೆಂದರೆ ನಮ್ಮ ಹಳ್ಳಿಗಳ ಕಡೆಯಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ. ಏನೆಂದರೆ, ಕೋಳಿಯನ್ನು ಕೇಳಿ ಸಾಂಬಾರವನ್ನು ಅರೆಯಬೇಕೇ ಎಂದು ಹೇಳಿ. ಸಿ.ಬಿ.ಐ. ನವರನ್ನು ಕೇಳಿ ಇವರು ಇವರ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುತ್ತಾರಂತೆ; ಇದು ಆಶ್ಚರ್ಯ. ಇದು ನಿಮಗೆ ತಕ್ಕದ್ದಲ್ಲ. ನೀವು ಹೇಳಬೇಕಾಗಿರತಕ್ಕಂಥ ಮಾತು ಇದಲ್ಲ. ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥ ಅವಶ್ಯಕತೆ ಇದೆ. ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಕ್ಯಾಟಗಾರಿಕಲ್ ಆಗಿ ಹೇಳಿ. ಮಾನ್ಯ ರಾಮಯ್ಯನವರು ಹೇಳಿದ ಹಾಗೆ ಇವತ್ತಿನ ದಿವಸ ಸಂಜೆಯೊಳಗಾಗಿ ಈ ಇಬ್ಬರು ಹಿರಿಯ ಅಧಿಕಾರಿಗಳು ಏನಿದ್ದಾರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ದಯವಿಟ್ಟು ಈ ಸದನಕ್ಕೆ ತಿಳಿಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ ಯಾವುದೇ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವಂಥದ್ದು ಇನ್ನೊಂದು ಇಲ್ಲಿ ಸದನದಲ್ಲಿ ತರುವುದು ಸಂಪ್ರದಾಯವನ್ನಾಗಿ ಇಟ್ಟುಕೊಂಡರೆ ಅದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ಸರ್ಕಾರ ಏನಾದರು ತನ್ನ ಕಾರ್ಯವನ್ನು ನಿಭಾಯಿಸಲಿಕ್ಕೆ ಅದು ಸಾಧ್ಯವಾಗುವುದಿಲ್ಲ. Then you can question me on the question of accountability ಇಷ್ಟೇ ಇರುವುದು. ಆದ್ದರಿಂದ ಈ ವಿಚಾರವನ್ನು ಸಭೆಯ ಮುಂದೆ ಇಟ್ಟಿದ್ದೇನೆ.

There should be a recommendation. There are certain constitutional requirements. I have been telling from this House and outside also that rule of law will prevail. I don't want to meddle with the process of law. ನೀವ ಹೇಳಿದ್ದೀರಿ ಎಂದು ನಾನು ಅನೌನ್ಸ್ ಮಾಡತಕ್ಕದ್ದು. ಮಾಡಿದರೆ ಏನಾಗುತ್ತದೆಂದರೆ I will be entering the borderline of politicalising the issue and taking extraneous consideraitons. No, I would like to go purely on the legal process. Legal process, whether it is Lokayukta or C.B.I., they must have their own say. They must have their own investingation. I would not like even for a minute giving an impression that we have tried to incluence. The rule of law will prevail. Leave the law enforcement machineries who are involved, to have their own process. Of course, as far as communication is concerned.....

(Interruptions)

SRI C. BYRE GOWDA:– When will the rule of law prevail? ಎಷ್ಟು ದಿನ ಬೇಕು ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಹಿಂದಿನ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಅಲೆಗ್ಸಾಂಡರ್ ಬಗ್ಗೆ ಲೋಕಾಯುಕ್ತ ತನಿಖೆ ಮಾಡಿ ಅವರಿಗೆ ಜಾಸ್ತಿ ಆಸ್ತಿ ಇದೆ ಎಂದು ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು (ಬಿ) ರಿಪೋರ್ಟ್ ಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ಚಾರ್ಜ್ ಷೀಟ್ ಹಾಕುವುದರ ಬದಲು (ಬಿ) ರಿಪೋರ್ಟ್ ಕೊಟ್ಟಿದ್ದಾರೆ. ಅದನ್ನು ಮರು ಪರಿಶೀಲನೆ ಮಾಡಿ ಚಾರ್ಜ್ ಷೀಟ್ ಹಾಕುತ್ತೀರಾ ? ಏಕೆಂದರೆ ಅನೇಕ ಭ್ರಷ್ಟಾಚಾರದ ಆರೋಪಗಳು ಇರುವಂಥ ಸಂದರ್ಭದಲ್ಲಿ ಮತ್ತೆ ಇದೇ ಮಾತನ್ನು ನಾವು ಕೇಳುತ್ತಿರುವ ಸಂದರ್ಭದಲ್ಲಿ ಎಲ್ಲಾ ಅವ್ಯವಹಾರಗಳಿಗೆ ನಾವೇ ಪರೋಕ್ಷವಾಗಿ ಬೆಂಬಲ ಕೊಟ್ಟುಕೊಂಡು ಬಂದ ಹಾಗೆ ಆಗಿದೆ (ಬಿ) ರಿಪೋರ್ಟ್ ಕೊಟ್ಟು. ಆದ್ದರಿಂದ ದಯವಿಟ್ಟು ಇದನ್ನು ಮರುಪರಿಶೀಲನೆ ಮಾಡಿ ಚಾರ್ಜ್ ಷೀಟ್ ಹಾಕುತ್ತೀರಾ ? ಇದು ಬಹಳ ಪ್ರಾಮುಖ್ಯವಾದುದು.

ಶ್ರೀ ಎಂ. ವೀರಪ್ಪಮೊಯಿಲಿ:– ಒಂದು ವಿಚಾರವನ್ನು ಈ ಸದನಕ್ಕೆ ಮತ್ತು ಈ ಸದನದ ಮೂಲಕ ಹೊರಗಿರತಕ್ಕ ಎಲ್ಲಾ ಮಹಾಜನರಿಗೆ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. There are certain systems. Let us not meddle with the system. Lok Ayukta will send a report of the Raid and in that report they will make a recommendation. If there is prima–facie case to keep the officer under suspension, this is the usual procedure. I can't say "you have conducted raid and we would suspend." It should not come from here. It should come from there. If there is a defect in the system, or in the law, let us amend it. ಆದ್ದರಿಂದ ಇದು ಒಂದು ವಿಚಾರ;

ಎರಡನೆಯದು, ತಾವು ಏನು (ಬಿ) ರಿಪೋರ್ಟ್ ಬಗ್ಗೆ ಹೇಳಿದ್ದೀರಿ, (ಬಿ) ರಿಪೋರ್ಟ್‌ಗೆ ಒಪ್ಪಿಸಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಚಾರ್ಜ್ ಶೀಟ್ ಹಾಕಬೇಕಾಗಿತ್ತು; ಹಾಕಿದ್ದೀರಾ ? ಅವತ್ತು ಬೇರೆ ಬೇರೆ ಕಾರಣಗಳಿಗೋಸ್ಕರ (ಬಿ) ರಿಪೋರ್ಟ್ ಕೊಟ್ಟಿದ್ದಾರೆ. ಅದರ ಬಗ್ಗೆ ಮರು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪಮೊಯಿಲಿ:– (ಬಿ) ರಿಪೋರ್ಟ್ ಕೊಟ್ಟ ಕಾರಣಗಳ ಬಗ್ಗೆ ನಾನು ಚರ್ಚಿಸುವುದಕ್ಕೆ ಇಷ್ಟಪಡುವುದಿಲ್ಲ. (ಬಿ) ರಿಪೋರ್ಟನ್ನು ರಿವ್ಯೂ ಮಾಡಬೇಕೆಂದು ಈಗಾಗಲೇ ನಾವು ಲೋಕಾಯುಕ್ತಕ್ಕೆ ವಿನಂತಿ ಸಲ್ಲಿಸುತ್ತಿದ್ದೇವೆ. It is for the Lok Ayukta to re–consider it in the appropraite form.

ಮತ್ತೊಂದು ವಿಚಾರ ಇಲ್ಲಿ ಚರ್ಚೆಯಾಗಿದೆ. ಅಧಿಕಾರಿಗಳ ಅಸೆಟ್ಸ್ ಅಂಡ್ ಲೈಯಬಿಲಿಟೀಸ್ ಸ್ಟೇಟ್‌ಮೆಂಟ್‌ಗಳ ಬಗ್ಗೆ ಏನಾಗಿದೆ ಎಂದರೆ ಕೆಲವು ಸಾರಿ ಸರಿಯಾಗಿ ಮಾಹಿತಿ ಸಂಗ್ರಹಿಸಿಕೊಂಡು ಗುರುತಿಸಿ ಆಕ್ಷನ್ ತೆಗೆದುಕೊಳ್ಳತಕ್ಕದ್ದು ಸರಿಯಾಗಿ ಆಗುತ್ತಿಲ್ಲ. ಅದಕ್ಕೆ We have now decided....

ಶ್ರೀ ಹೆಚ್. ಏಕಾಂತಯ್ಯ:– ಈಗ ಏನಾಗಿದೆ ಎಂದರೆ, ಸರ್ಕಾರೀ ನೌಕರರು ರಾಜ್ಯ ಸರ್ಕಾರದ ವ್ಯಾಪ್ತಿಗೆ ಒಳಪಟ್ಟವರಿಗೆ ಬೇರೆ ಕಾನೂನು ಇದೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ತಮ್ಮ ಕೈ ಅಷ್ಟೊಂದು ಬಲವಾಗಿಲ್ಲವೆಂದು ನನಗೆ ಗೊತ್ತಿದೆ. ಏಕೆಂದರೆ ಆಲ್ ಇಂಡಿಯ ಸರ್ವೀಸಸ್ ಆಕ್ಟ್ ಇದೆ, ಮತ್ತು ಅದರ ಕೆಳಗೆ ಏನು ನಿಯಮಗಳನ್ನು ಮಾಡಿಕೊಂಡಿದ್ದಾರೆ, ಆ ನಿಯಮವನ್ನು ತಾವು ಸಂಬಂಧಪಟ್ಟ ಐ.ಎ.ಎಸ್, ಐ.ಪಿ.ಎಸ್ ಮತ್ತು ಐಎಫ್ಎಸ್ ಅಧಿಕಾರಿಗಳನ್ನು ಶಿಸ್ತಿನ ಕ್ರಮಕ್ಕೆ ಒಳಪಡಿಸಬೇಕಾದರೆ, ಆ ಒಂದು ನಿಯಮವನ್ನು ತಾವು ಪಾಲಿಸಬೇಕಾಗುತ್ತದೆ. ಆದರಿಂದ ತಡವಾಗುತ್ತದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

SRI M. VEERAPPA MOILY:– To keep an officer under suspension, no permission is necessary. We can do it.

ಶ್ರೀ ಹೆಚ್. ಏಕಾಂತಯ್ಯ:– ಸಸ್ಪೆನ್‌ಷನ್‌ಗೆ ಮಾತ್ರ ಎಂದು ಅಲ್ಲ; ಸಸ್ಪೆಂಡ್ ಮಾಡಬೇಕಾದರೂ ಸಹ ಕೆಲವು ನಿಯಮಗಳನ್ನು ತಾವು ಅನುಸರಿಸಬೇಕಾಗುತ್ತದೆ. ಅದನ್ನು ಮಾಡದೆ ಮಾಡಿದರೆ ಅವರು ಪುನಃ ಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ. ಮಾಡುವುದಿದ್ದರೆ ಪೂರ್ಣವಾಗಿ ಪರಿಶೀಲಿಸಿ ಸಂಬಂಧಪಟ್ಟ ನಿಯಮಗಳ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ನನ್ನ ವಿನಂತಿ.

ಶ್ರೀ ಎಂ. ವೀರಪ್ಪಮೊಯಿಲಿ:- ಇದನ್ನು ಮುಕ್ತಾಯ ಮಾಡುವುದು ಒಳ್ಳೆಯದು. ಏಕೆಂದರೆ ಏಕಾಂತಯ್ಯನವರು ಹೇಳಿದ್ದರಲ್ಲಿ ಅರ್ಥ ಇದೆ. ತಾವು ಹೇಳಿದಿರಿ ಎಂದು ನಾನು ಚೀಪ್ ಪಾಪ್ಯುಲಾರಿಟಿ ತೆಗೆದುಕೊಳ್ಳುವುದಕ್ಕೆ ಸಸ್ಪೆನ್‌ಷನ್ ಅನೌನ್ಸ್ ಮಾಡಿದರೆ On the very same ground they will go to the court or the C.A.T and say because of the political pressure put by the Opposition on the Chief Minister, the Chief Minister ordered suspension on the floor of the House. That suspension will have to be done by the appropriate authority on the basis of an appropriate report and a substantive report. That is why I am not announcing the suspension here.

ಅದು ಮಾಡಿ ಎಂದರೆ ನೀವು ಏನು ಉದ್ದೇಶದಿಂದ ಹೇಳುತ್ತಿದ್ದೀರಿ ಅದು ನಿರರ್ಥಕವಾಗುತ್ತದೆ.

ದಯಮಾಡಿ let us not put pressure on me or any other authority to keep an officer under suspension. If the suspension is warranted, Government will not hesitate even for a minute to suspend a particular officer. This is my assurance.

Sri C. Byre Gowda:- When you come back to this Hon'ble House with the confirmation?

SRI M. VEERAPPA MOILY:- How can I say?

ಬೈರೇಗೌಡರೇ, ತಮ್ಮ ಸಂತೋಷಕ್ಕೆ ನಾನು ಈ ಸಂಜೇನೇ ರಿಪೋರ್ಟ್ ಕೊಡುತ್ತೇನೆಂದು ಹೇಳುತ್ತೇನೆ. Then again there will be an element of pressure. Let us not do that. You have the faith in the Government. We are not going to tolerate any corrupt officer at any point of time, however big or small. You don't worry about that.

ಆಮೇಲೆ ಮತ್ತೊಂದು ವಿಷಯವನ್ನು ನಾನು ಅರ್ಥಕ್ಕೇ ನಿಲ್ಲಿಸಿದ್ದೆ ನಮ್ಮ ಸರ್ಕಾರಿ ಅಧಿಕಾರಿಗಳು ಯಾರಿದ್ದಾರೆ ಅವರ ಅಸೆಟ್ಸ್ ಮತ್ತು ಲಯಬಿಲಿಟಿ ಸ್ಟೇಟ್‌ಮೆಂಟ್‌ಗಳನ್ನು ನಾವು ರಿವ್ಯೂ ಮಾಡುತ್ತಿದ್ದೇವೆ. ಆ ವಿವರಗಳ ಬಗ್ಗೆ ಕಂಪ್ಯೂಟರೈಸ್ ಮಾಡಿಕೊಂಡು ನಮ್ಮ ಈ ಒಂದು ನೆಟ್‌ನಿಂದ ಯಾರೂ ಕೂಡ ಹೊರಗೆ ಬಾರದೇ, ಸಪ್ರೆಸ್ ಮಾಡದ ರೀತಿಯಲ್ಲಿ ನಾವು ಇದರ ಬಗ್ಗೆ ವಿಶೇಷವಾದ ನಿಗಾವನ್ನು ವಹಿಸುತ್ತೇವೆ.

ಶ್ರೀ ವೈ.ಕೆ. ರಾಮಯ್ಯ:- ಕುಷ್ಟಗಿಯಲ್ಲಿನ ವಿಚಾರದಲ್ಲಿ ಗಲಾಟೆ ಆದಾಗ ನಾವು ಪ್ರಸ್ತಾಪ ಮಾಡಿದಾಗ ಆಗ ಒತ್ತಡ ಬರಲಿಲ್ಲವೇ ಸರ್ಕಾರಕ್ಕೆ ? ತಾವು ಆಗ ಸಸ್ಪೆಂಡ್‌ನಲ್ಲಿ ಇಟ್ಟಾಗ ಇವತ್ತು ಏನಾಗಿದೆ ಎಂದರೆ, ದೊಡ್ಡ ಮೀನುಗಳು ಬಂದು ಸಣ್ಣ ಮೀನುಗಳನ್ನು ತಿನ್ನುತ್ತವೆ. ಕುಷ್ಟಗಿಯಲ್ಲಿ ಅಧಿಕಾರಿಗಳು ಅತ್ಯಾಚಾರ ಮಾಡಿದ್ದಾರೆ, ಅವ್ಯವಹಾರ ಮಾಡಿದ್ದಾರೆ ಎನ್ನುವ ವಿಚಾರ ಪ್ರಸ್ತಾಪ ಮಾಡಿದಾಗ ಅವರೆಲ್ಲರನ್ನೂ ಸಸ್ಪೆಂಡ್‌ನಲ್ಲಿ ಇಟ್ಟಿರಿ. ಆಗ ಈ ಕಾನೂನಿನ ಅರಿವಿರಲಿಲ್ಲವೇ ? ಆಗ ನಿಯಮಾವಳಿಯ ಚಿಂತನೆ ಇರಲಿಲ್ಲವೇ ? ದೊಡ್ಡವರ, ಐಎಎಸ್ ಅಧಿಕಾರಿಗಳ ವಿಚಾರ ಬಂದಾಗ ಅವರಿಗೆ ಅನುಕೂಲವಾಗಿರುವವರು ಬಂದಾಗ ಮಾತ್ರ ಅಡ್ಡಿ ಬರುತ್ತದೆಯೇ ? ಕುಷ್ಟಗಿಯಲ್ಲಿ ಅಧಿಕಾರಿಗಳು ಮಾಡಿದ್ದಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. But when we raised this, this Government has promptly kept them under suspension. Why you are

not doing it now? You are not doing it because they are occupying high position.

ಶ್ರೀ ಸಿ. ಬೈರೇಗೌಡ:– ನಮಗೆ ಸರ್ಕಾರದ ಉತ್ತರ ತೃಪ್ತಿ ತಂದಿಲ್ಲ. ನಾನು ಇದನ್ನು ವಿರೋಧ ಮಾಡಿ ಹೊರಗಡೆ ಹೋಗುತ್ತೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು:– ಶ್ರೀ ವೈ.ಕೆ. ರಾಮಯ್ಯ ಅವರು ಹಾಗೂ ಶ್ರೀ ಬೈರೇಗೌಡ ಅವರು ಕಳುಹಿಸಿದ ನಿಲುವಳಿ ಸೂಚನೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ವಿವರ ನೀಡಿದ್ದರ ಹಿನ್ನೆಲೆಯಲ್ಲಿ ಇದಕ್ಕೆ ಅನುಮತಿಯನ್ನು ನಾನು ನಿರಾಕರಿಸಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ಸರ್ಕಾರದಿಂದ ಬಂದ ಉತ್ತರ ನನಗೆ ತೃಪ್ತಿ ಆಗಿಲ್ಲ. ಆದ್ದರಿಂದ ನಾನು ಸಹ ವಾಕೌಟ್ ಮಾಡುತ್ತೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

1) 8 ಮತ್ತು 9ನೇ ತರಗತಿಯ ಪ್ರಶ್ನೆ ಪತ್ರಿಕೆಗಳು ಬಹಿರಂಗಗೊಂಡಿರುವ ಬಗ್ಗೆ

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೇ, ಈಗ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ ಪರೀಕ್ಷೆಗಳು ಬರುತ್ತಿವೆ. ಈ ಹಿಂದೆ ಶಿವಮೊಗ್ಗ ಮತ್ತು ಚಿಕ್ಕಮಗಳೂರಿನಲ್ಲಿ 8ಹಾಗೂ 9ನೇ ತರಗತಿಯ ಪ್ರಶ್ನೆಪತ್ರಿಕೆಗಳು ಬಹಿರಂಗಗೊಂಡ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಾಗ ಅವರು ಆ ಬಗ್ಗೆ ಗಮನ ಕೊಟ್ಟಿಲ್ಲ. ಅದಾದ ನಂತರ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದಾಗ ಮರು ಪರೀಕ್ಷೆಗೆ ಅವರು ಆಜ್ಞೆ ಮಾಡಿದ್ದಾರೆ. ಇವತ್ತು ಎಸ್.ಎಸ್.ಎಲ್.ಸಿ. ಪಿ.ಯು.ಸಿ ಪರೀಕ್ಷೆಗಳು ಬರುತ್ತಿವೆ. ಹಿಂದೆ ತಾವು ಜಾಗ್ರತ ದಳ ನೇಮಕ ಮಾಡಿದ್ದಿರಿ. ಇವತ್ತು ಮರು ಪರೀಕ್ಷೆ ಎನ್ನುವುದು ಪರಿಹಾರ ಆಗುವುದಿಲ್ಲ. ಇವತ್ತು ಪ್ರಶ್ನೆಪತ್ರಿಕೆ ಬಹಿರಂಗಗೊಳ್ಳುವ ವಿಚಾರದಲ್ಲಿ ಯಾರು ಯಾರು ತಪ್ಪಿತಸ್ಥರು ಇದ್ದಾರೆ ಅವರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಸಭಾಪತಿಯವರೇ, ಮೊನ್ನೆ ಶಿಕ್ಷಣ ಸಚಿವರು ಶಿಕಾರಿಪುರದಲ್ಲಿ ಇದ್ದಾಗ 8 ಹಾಗೂ 9ನೇ ತರಗತಿಯ ಪ್ರಶ್ನಪತ್ರಿಕೆಗಳು ಬಹಿರಂಗಗೊಂಡ ಬಗ್ಗೆ ಅಲ್ಲಿ ವಿದ್ಯಾರ್ಥಿಗಳು ತಂದುಕೊಟ್ಟರು. ನಾನು ಅದನ್ನು ಮಾನ್ಯ ಮಂತ್ರಿಗಳ ಗಮನಕ್ಕೂ ತಂದಿದ್ದು ಆಯಿತು. ಇದು ಪದೇ ಪದೇ ನಡೆಯುತ್ತಿದೆ. ಇವತ್ತು ತನಿಖಾ ದಳ ಏನಿದೆ ಅದನ್ನು ಬಿಗಿ ಮಾಡಬೇಕು. ಇಲ್ಲದಿದ್ದರೆ ಕಷ್ಟಪಟ್ಟು ಓದಿದ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತದೆ. ಪ್ರಶ್ನೆಪತ್ರಿಕೆ ಸಿಕ್ಕವರು ಹೆಚ್ಚು ಅಂಕಗಳನ್ನು ಪಡೆಯುತ್ತಾರೆ. ಪ್ರಶ್ನೆಪತ್ರಿಕೆಗಳು ಬಹಿರಂಗಗೊಳ್ಳುತ್ತಿರುವ ಈ ಸಮಯದಲ್ಲಿ ಮುಂದೆ ಎಸ್.ಎಸ್.ಎಲ್.ಸಿ. ಪರೀಕ್ಷೆ ಪ್ರಾರಂಭ ಆಗುತ್ತಿದೆ. ಈ ಬಗ್ಗೆ ಬಿಗಿ ಕ್ರಮ ತೆಗೆದುಕೊಳ್ಳಬೇಕು. ತಕ್ಷಣ ದಯಮಾಡಿ ಇದರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿ ಮುಂದೆ ಇದು ಆಗದ ಹಾಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳುತ್ತೇನೆ. ಈ ಬಗ್ಗೆ ತಕ್ಕ ಕಾರ್ಯಕ್ರಮ ಹಾಕಿಕೊಳ್ಳುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್:– ಈಗ ಪ್ರಶ್ನೆಪತ್ರಿಕೆ ಬಹಿರಂಗಗೊಳ್ಳುತ್ತಿವೆ.

ಅಧ್ಯಕ್ಷರು:– ಈಗ ಶೂನ್ಯ ವೇಳೆಯ ಪ್ರಸ್ತಾಪವನ್ನು ಸಮಾಪ್ತಿ ಮಾಡಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇದು ಬಹಳ ಪ್ರಮುಖವಾದುದು. ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ವಿದ್ಯಾ ಮಂತ್ರಿಗಳಾಗಿದ್ದಾಗ ತನಿಖಾ ದಳ ನೇಮಕ ಮಾಡಿದ್ದರು. ಅದು ಈಗ ಏನಾಗಿದೆ? ಮುಂದೆ ಪರೀಕ್ಷೆಗಳು ಬರುತ್ತಿವೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಜಾಗೃತ ದಳವನ್ನು ನಾವು ಬಲಪಡಿಸುತ್ತೇವೆ. ಸೂಕ್ತವಾದ ಎಲ್ಲಾ ಕಾರ್ಯಕ್ರಮ ತೆಗೆದುಕೊಂಡು ಇಂತಹ ಅನಾಹುತ ಆಗದ ಹಾಗೆ ನೋಡಿಕೊಳ್ಳುತ್ತೇವೆ. ಮತ್ತೆ ಪ್ರಶ್ನೆಪತ್ರಿಕೆ ಬಯಲು ಆಗಿರುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

11.05 ಪಿ.ಎಂ

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ ತಮ್ಮ ಗಮನಕ್ಕೆ ಈಗಾಗಲೇ ಒಂದು ವಿಷಯ ತಂದಿದ್ದೇನೆ. ವಿಷಯ ಏನೆಂದರೆ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ.....

ಅಧ್ಯಕ್ಷರು:- ಅದನ್ನು ನಾಳೆ ತೆಗೆದುಕೊಳ್ಳೋಣ. We will take some other time. ನಾನು ಅವಕಾಶ ಮಾಡಿಕೊಡುತ್ತೇನೆ.

1) ಅಧಿವೇಶನದ ದಿನಗಳನ್ನು ಹೆಚ್ಚಿಸುವ ಬಗ್ಗೆ

ಶ್ರೀ ಆರ್.ವಿ. ದೇಶಪಾಂಡೆ:- (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೇ, ಸಪ್ಲಿಮೆಂಟರಿ ಎಸ್ಟಿಮೇಟನ್ನು ಕೊಟ್ಟಿದ್ದೀರಿ; ಅದರ ಮೇಲೆ ನಾವೇನು ಡಿಸ್ಕಷನ್ ಮಾಡಲಿಕ್ಕೆ ಸಾಧ್ಯವಿದೆ? ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್ it should have come after the demands. ಸಪ್ಲಿಮೆಂಟರಿ ಎಸ್ಟಿಮೇಟನ್ನು ಈಗತಾನೇ ಸದನದಲ್ಲಿ ಕೊಟ್ಟಿದ್ದೀರಿ. ಸಪ್ಲಿಮೆಂಟರಿ ಎಸ್ಟಿಮೇಟನ್ನು ಡಿಮಾಂಡ್ ಆದನಂತರ ತೆಗೆದುಕೊಳ್ಳಿ. ಎರಡನೆಯದು, ಡಿಮಾಂಡ್‌ಗಳು ಏನಿವೆ, ಅವುಗಳ ಬಗ್ಗೆ ಈಗಾಗಲೇ ತಮ್ಮ ಛೇಂಬರಿಗೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಸಹ ಇದ್ದರು; ಇವತ್ತು ಮತ್ತು 29ನೇ ತಾರೀಖು ಡಿಮಾಂಡ್‌ಗಳ ಬಗ್ಗೆ ಡಿಸ್‌ಕಷನ್ ಮಾಡಬೇಕೆಂದು ಆಗಿದೆ. ನಾವು ರಿಕ್ವೆಸ್ಟ್ ಮಾಡಿದ್ದೇವೆ, ಈಗ ಸ್ವಲ್ಪ ಏನು ಡಿಸ್‌ಕಷನ್ ಆಗಿದೆ ಅದಕ್ಕೆ ರಿಪ್ಲೈ ಕೊಡಿರಿ, 30ನೇ ತಾರೀಖು ಸ್ವಲ್ಪ ತೆಗೆದುಕೊಳ್ಳೋಣ ಎಂಬುದಕ್ಕೆ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಎಲ್ಲ ಡಿಮಾಂಡ್‌ಗಳನ್ನು ಇಷ್ಟು ಒಟ್ಟಿಗೆ ಇಟ್ಟರೆ, ನಾವು ಚರ್ಚೆ ಮಾಡುವುದಕ್ಕೆ ಕಷ್ಟವಾಗುತ್ತದೆ. ಹಾಗಾಗಿ 8-10 ಡಿಮಾಂಡ್‌ಗಳ ಬಗ್ಗೆ ಚರ್ಚೆಯನ್ನು ಇವತ್ತು ನಾವು ಶುರು ಮಾಡಬಹುದು. ಬೇರೆಯವುಗಳನ್ನು 29ನೇ ತಾರೀಖು ನಾವು ತೆಗೆದುಕೊಳ್ಳಬಹುದು. ಎಲ್ಲ ಮುಗಿಸಬೇಕೆಂದರೆ ಮಂತ್ರಿಗಳಿಗೂ ಕಷ್ಟ, ನಮಗೂ ಕಷ್ಟ. 48 ಡಿಮಾಂಡ್‌ಗಳ ಬಗ್ಗೆ ಒಟ್ಟಿಗೇ ನಾವು ಚರ್ಚೆಯನ್ನು ಶುರು ಮಾಡಿದರೆ 40 ಜನ ಸಚಿವರು ಎಲ್ಲರೂ ಇಲ್ಲಿಯೇ ಕೂಡಬೇಕು. ಇದರಿಂದ ಸದನ ನಡೆಸುವುದಕ್ಕೆ ಅನಾನುಕೂಲವಾಗಬಹುದು ಜೊತೆಗೆ ಶಾಸಕ ಮಿತ್ರರು ಕೆಲವು ಸಬ್ಜೆಕ್ಟ್‌ಗಳ ಮೇಲೆ ಬೆಳಕು ಚೆಲ್ಲಲಿಕ್ಕೆ ಅನಾನುಕೂಲವಾಗಬಹುದು.

ಶ್ರೀ ಎಂ. ವೀರಪ್ಪಮೊಯಿಲಿ:- ಮಾನ್ಯ ಅಧ್ಯಕ್ಷರೇ, ಮುಕ್ತವಾದ ಚರ್ಚೆಯಾಗಬೇಕೆಂದು ನಾವು ಈಗಾಗಲೇ ಹೇಳಿದ್ದೇವೆ. ಅದು ನಮ್ಮ ಉದ್ದೇಶ. ನಿನ್ನೆ ಕೂಡ ಹೇಳಿದ್ದೇನೆ. ಎಷ್ಟು ದಿವಸ ಚರ್ಚೆಯಾದರೂ ಕೂಡ ಸರಿ. ಆ ಉದ್ದೇಶಕ್ಕೆ ಓಟ್ ಆನ್ ಅಕೌಂಟ್ ಬೇಡವೆಂದು ಹೇಳಿದ್ದೇವೆ. ಈ ದಿವಸ ಕೂಡ ನಮ್ಮ ಉದ್ದೇಶ ಏನಿತ್ತು ಬಜೆಟ್ ಅಧಿವೇಶನ ಕರೆಯುವಾಗ ಫುಲ್ ಫ್ಲೆಜ್ಡ್ ಡಿಸ್‌ಕಷನ್ ಆಗಬೇಕೆಂದು ಕರೆದಿದ್ದು, ಇನ್ನು ಮುಂದಾದರೂ ನಾವು ಯಾವ ಕಾಲದಲ್ಲಿ, ಯಾವ

ಅಧಿವೇಶನದಲ್ಲಿ, ಯಾವುದರ ಬಗ್ಗೆ ಹೆಚ್ಚು ನಮ್ಮ ಗಮನ ಕೊಡಬೇಕು ಎನ್ನುವ ಒಂದು ವಿಚಾರ ನಿರ್ಣಯವಾಗಬೇಕು. ಕಡಿಮೆ ಪಕ್ಷ ಈ ವರ್ಷವಾದರೂ ಕೂಡ ಪ್ರಯತ್ನ ಮಾಡೋಣ. ಬಹುಶಃ ಇದನ್ನು ಮಾಡುತ್ತಿದ್ದರೆ ಯಾವ ಕಾಮೆಂಟ್ಸ್ ಕೂಡ ಬರುತ್ತಿರಲಿಲ್ಲ. Everyone, even the public should appreciate that it is a Budget Session. Budget Session we have met for more than 35 days.

35 ದಿವಸ ನಾವು ಸೇರಿದ್ದೇವೆ. ಅದಕ್ಕೆ ಯಾರೂ ಹೈಲೈಟ್ ಮಾಡುತ್ತಿಲ್ಲ. ಪತ್ರಿಕೆಯವರು ಹೈಲೈಟ್ ಮಾಡುತ್ತಿಲ್ಲ. ಜನ ಕೂಡ ಅಪ್ರಿಶಿಯೇಟ್ ಮಾಡುತ್ತಿಲ್ಲ. We have met for 35 days, which is unprecedented in the history of budget session in Karnataka.

ನಾವು ಬರೀ ಬಜೆಟ್ ಅಧಿವೇಶನಕ್ಕೆ 35 ದಿವಸ ಸೇರಿದ್ದೇವೆ. ಇನ್ನೂ 65 ದಿವಸ ಸೇರಲಿಕ್ಕೆ ನಾವು ನಿರ್ಣಯ ಮಾಡಿದ್ದೇವೆ. I think this has not been highlighted by anyone.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಮುಖ್ಯಮಂತ್ರಿಗಳೇ, ಒಂದು ನಿಮಿಷ. ನಿಮ್ಮ ವ್ಯೂಸ್ ನಾನು ಅಪ್ರಿಶಿಯೇಟ್ ಮಾಡುತ್ತೇನೆ. ಬಜೆಟ್ ಅಧಿವೇಶನ ನಡೆಯುವಾಗ ನಾವು ಬಜೆಟ್‌ಗೆ ಸೀಮಿತವಾಗಿ ಹೆಚ್ಚಿನ ಅವಕಾಶವನ್ನು ಅದಕ್ಕೆ ಕೊಡಬೇಕು. ಅದು ಏನಾಗುತ್ತದೆ ಅಂದರೆ ತಾವು ಇಲ್ಲಿ ಕೂತಾಗ ತಮಗೆ ಗೊತ್ತಿದೆ. ಯಾವ್ಯಾವುದೋ ಪ್ರಾಮುಖ್ಯವಾದ ವಿಷಯಗಳು ಬರುತ್ತವೆ. ಅವುಗಳನ್ನು ನಾವು ರೈಸ್ ಮಾಡಬೇಕಾಗುತ್ತದೆ. ಪ್ರಾಮುಖ್ಯವಾದ ವಿಷಯಗಳನ್ನು ಬಜೆಟ್ ಅಧಿವೇಶನವೆಂದು ನಾವು ರೈಸ್ ಮಾಡಲಿಲ್ಲವೆಂದರೆ ನಾವು ಜನರ ಟೀಕೆ ಟಿಪ್ಪಣಿಗಳಿಗೆ ಒಳಗಾಗುತ್ತೇವೆ, ಇವರು ಸಹ ಶಾಮೀಲಾಗಿದ್ದಾರೆಂದು ಹೇಳುತ್ತಾರೆ. ಬಜೆಟ್ ಅಧಿವೇಶನದಲ್ಲಿ ಬಜೆಟ್ ಬಗ್ಗೆ ಹೆಚ್ಚು ಗಮನ ಕೊಡಬೇಕು. ಅದರಲ್ಲಿ ಏನೂ ಸಂದೇಹವಿಲ್ಲ. We have not raked up some nonsense issues and took the time of the House. Important issues have been raised. Though I appreciate your sentiments, ಹಾಗಾಗಿ ನೀವು ವಿಚಾರ ಮಾಡಬೇಕು. 35 ದಿವಸವನ್ನು 40 ದಿವಸ ಮಾಡಬೇಕಾಗಿತ್ತು. ನಾವು ಕರ್ಟೈಲ್ ಮಾಡುವುದಕ್ಕೆ ಪ್ರಯತ್ನ ಮಾಡಬಾರದು. ಇನ್ನು ಹೆಚ್ಚು ಮಾಡಲಿಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. That you have to consider.

ಶ್ರೀ ಎಂ. ವೀರಪ್ಪಮೊಯಿಲಿ:– ಕರ್ಟೈಲ್ ಮಾಡತಕ್ಕ ಪ್ರಶ್ನೆಯಲ್ಲ. ತಮ್ಮ ವಿಚಾರದಲ್ಲಿ ಎರಡು ಭಾಗವಿದೆ. ಒಂದು ಅಂದರೆ ಈಗ ನಾವು ಪ್ರಾಮುಖ್ಯತೆಯನ್ನು ಕೊಡತಕ್ಕದ್ದು ಆಯವ್ಯಯಕ್ಕೆ; ಅದನ್ನು ತಾವು ಒಪ್ಪುತ್ತೀರಿ, ಎಲ್ಲರೂ ಒಪ್ಪುತ್ತಾರೆ. ಏತನ್ಮಧ್ಯೆ ತಮಗೆ ನೆನಪು ಇದೆ, ನಾನು ವಿರೋಧಪಕ್ಷದ ನಾಯಕನಾಗಿದ್ದ As Leader of the Opposition I could get time to speak even 5–6 hours on budget. ಅಷ್ಟು ಸಮಯ ಕೊಡದಿದ್ದರೂ ಇಷ್ಟು ಅಧಿವೇಶನದ ಸಮಯ ಉದ್ದ ಇಲ್ಲದಿದ್ದರೂ ಕೂಡ I could. Even the persons in the Opposition ಇಲ್ಲಿ ಡಾ: ವಿ.ಎಸ್. ಆಚಾರ್ಯರವರು ಇದ್ದರು. ನಾನು ಮಾತನಾಡಿದಂತಹ ಸಬ್ಜೆಕ್ಟ್‌ಗಳನ್ನು ಅವರು ಮಾತನಾಡುತ್ತಿರಲಿಲ್ಲ. ಮಾನ್ಯ ಬೈರೇಗೌಡರು ಆಗ ಈ ಕಡೆ ಇದ್ದರು. ಆಮೇಲೆ ವಿರೋಧಪಕ್ಷಗಳಾದ ಸಿಪಿಐ ಮತ್ತು ಸಿ.ಪಿ.ಎಂ ಅವರು ಇದ್ದರು. ನಾವೇನು ಮಾಡುತ್ತಿದ್ದೆವು ಅಂದರೆ ಸಬ್ಜೆಕ್ಟ್‌ವೈಸ್ ಹಂಚಿಕೊಂಡಿದ್ದೆವು. ಒಂದು ವಿಚಾರವನ್ನು ಒಬ್ಬರು ಮಾತನಾಡಿದರೆ ಇನ್ನೊಬ್ಬರು ಮಾತನಾಡುತ್ತಿರಲಿಲ್ಲ. ಬೇರೆ ವಿಚಾರ ಮಾತನಾಡುತ್ತಿದ್ದೆವು. ಡಿಮಾಂಡ್‌ಗಳ ಮೇಲೆ ಬಹಳ ಚೆನ್ನಾಗಿ ಡಿಸ್‌ಕಷನ್ ಆಗುತ್ತಿತ್ತು. ಐದು ಗಂಟೆಗಳ ಕಾಲ ಬಹಳ ಚೆನ್ನಾಗಿ ಚರ್ಚೆಯಾಗುತ್ತಿತ್ತು. ಒಂದು ಪಕ್ಷದವರು ಮಾತನಾಡುತ್ತಾರೆಂದರೆ

ಮತ್ತೊಬ್ಬರು ಸೆಕೆಂಡ್ ಮಾಡತಕ್ಕ ರೀ ಆರ್ಗನೈಸೇಷನ್ ಮಾಡಿದರೆ the subject still gets a fair justice. So far as the subject is concerned, they will get fair justice.

ಈ ಕಡೆಯವರು ಮಾತನಾಡಲಿಕ್ಕೆ ಆಗುತ್ತದೆ, ಆ ಕಡೆಯವರೂ ಮಾತನಾಡಲಿಕ್ಕೆ ಆಗುತ್ತದೆ. ಇಲ್ಲದಿದ್ದರೆ ಸಮಯ ಸಾಕಾಗುವುದಿಲ್ಲ. ಇದು ಒಂದು ಭಾಗ, ಎರಡನೆಯ ಭಾಗವಾದರೆ ಇದನ್ನು ನಾವು ನೀವು ಎಲ್ಲರೂ ಅನುಭವಿಸತಕ್ಕಂಥ ಕಷ್ಟ. ಏನು ಎಂದರೆ ಈಗ ಡಿಮ್ಯಾಂಡ್ ಮೇಲೆ ಚರ್ಚೆ, ಅದರ ಒಂದು ತಾಂತ್ರಿಕ ಮೂಸೆಯಲ್ಲಿ ಎಲ್ಲೋ ಹೋಗಿಬಿಡುತ್ತೇವೆ ನಾವು. That is not correct. Public should appreciate. For 35 days we have not wasted time here. Very important subjects came. ಅನೇಕ ಬೇಡಿಕೆಗಳಲ್ಲಿ ಏನು ವಿಚಾರಗಳನ್ನು ಅಳವಡಿಸಿದೆ, ಆ ಚರ್ಚೆಗಳೂ ಬಂದಿವೆ. It has to be taken in totality. ತಾಂತ್ರಿಕವಾಗಿ ಎಷ್ಟು ದಿವಸ ಚರ್ಚೆಯಾಯಿತು ಎನ್ನುವುದು ಮುಖ್ಯ ಅಲ್ಲ. 35 ದಿವಸಗಳ ಕಾಲ ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಇಡೀ ಆಯವ್ಯಯದ ವಿಚಾರಗಳು ಚರ್ಚೆಯ ಒಂದು ಭಾಗವಾಗಿರುತ್ತವೆ. Integral part, public will have to be educated on this matter. ಏಕೆಂದರೆ ನಾಳೆ ನಾವು ಏನೋ ಮಾಡಿಕೊಂಡು ಹೋಗಿದ್ದೇವೆ. ಹಾಗಲ್ಲ, We have been sitting so many hours. ಎಷ್ಟು ಗಂಟೆ ಇಲ್ಲಿ ಕೂತಿದ್ದೇವೆ, ಎಷ್ಟು ವಿಚಾರಗಳನ್ನು ತಾವು ಎತ್ತಿದ್ದೀರಿ, ಈ ಕಡೆಯಿಂದ ಎತ್ತಿದ್ದಾರೆ. ಬಹಳ ಚರ್ಚೆಯಾಗಿದೆ. ಬಹಳ ಮುಖ್ಯವಾದ ವಿಚಾರಗಳು ಬಂದಿವೆ. ಬಹಳ ವಿಚಾರಮಂಥನ ನಡೆದಿದೆ. ಇದರಿಂದ ಕರ್ನಾಟಕ ರಾಜ್ಯದ ಒಟ್ಟು ಹಿತಾಸಕ್ತಿಗೆ ಪೂರಕವಾದಂಥ ಚರ್ಚೆಯಾಗಿದೆ. ಅದನ್ನೂ ಕೂಡ ನಾವು ಆಲೋಚನೆ ಮಾಡಬೇಕು. ಸಾಕಷ್ಟು ಸಮಯ ಸಿಕ್ಕಿಲ್ಲ; ಚರ್ಚೆ ಮೊಟಕಾಯಿತು ಎಂದು ವಿರೋಧ ಪಕ್ಷದವರ ಮಾತು ಸರಿಯಿರಬಹುದು. ಅದು ತಪ್ಪಲ್ಲ. ಆದರೆ ಜನ ಏನು ತಿಳಿದುಕೊಳ್ಳುತ್ತಾರೆ.? ಓಹೋ ಇವರು ಏನೂ ಮಾಡುತ್ತಿಲ್ಲ; ಶಾಸಕರು ವಿರೋಧಪಕ್ಷದವರು, ಟ್ರೆಜರಿ ಬೆಂಚ್‌ನವರು ಏನೂ ಚರ್ಚೆ ಮಾಡುತ್ತಿಲ್ಲ; ಸುಮ್ಮನೆ ಗಿಲೇಟಿನ್ ಮಾಡಿಹೋಗಿದ್ದಾರೆ ಅಂತ ಹೇಳಿ ಒಂದು ರೀತಿಯ ಸದ್ಭಾವನೆ ಹೊರಗೆ ಉದ್ಭವವಾಗುವುದಿಲ್ಲ. ತಮಗೆ ಗೊತ್ತಿದೆ, ಬಹಳ ಸಹಜವಾಗಿ ಎರಡು–ಮೂರು ಸಾರಿ ಶಾಸಕರ ಮೇಲಿನ ಕೇಸುಗಳ ಪಟ್ಟಿ ಬಂತು. ಯಾವ ತರಹ ಕೇಸುಗಳು ಎಂದು ವೈ.ಕೆ. ರಾಮಯ್ಯನವರು ಹೇಳಿದರು. ಸಾಮಾನ್ಯವಾಗಿ ಇಂತಹ ಕೇಸ್‌ಗಳು, ಯಾರ ಮೇಲಾದರೂ ಕಂಪ್ಲೇಂಟ್ ಕೊಟ್ಟರೆ (ಬಿ) ರಿಪೋರ್ಟ್ ಹಾಕೇ ಹಾಕುತ್ತಾರೆ. ಹಾಕಿದ ಕೂಡಲೇ ಕೇಸ್ ವಿತ್‌ಡ್ರಾ ಆಯಿತು, ಎಲ್ಲ ಕೇಸನ್ನು ಇವರು ರಾಜಕಾರಣಿಗಳು ಹಿಂದೆ ತೆಗೆದುಕೊಂಡರು ಎಂದು ಹೊರಗಿನ ಜನರಿಗೆ ಭಾವನೆ ಬಂತು. ನಾನು ಹೇಳಿದ್ದೆ, ಆ ವರ್ತಮಾನ ಕೊಡುವ ಅಗತ್ಯ ಇಲ್ಲವೆಂದು. ಏಕೆಂದರೆ, ಇಲ್ಲಿ ಉತ್ತರ ಹೇಳಿದರೆ ಒಂದು ರೀತಿಯ ಬೇರೆ ಭಾವನೆ ಬರುತ್ತದೆ ಎಂದು ಹೇಳಿದ್ದೆ, I know very well, 99% of cases on the Legislators, when you go to the merits of the case, there is no case at all. When there is no case, ಚಾರ್ಜ್ ಶೀಟ್ ಹಾಕಿ ಕೋರ್ಟಿಗೆ ಕಳಿಸಿದರೆ, ಶಾಸಕನಿಗೆ ನ್ಯಾಯ ಇಲ್ಲವೇನು ? ಶಾಸಕ ಕೂಡ ಒಂದು ಸಮಾಜದಲ್ಲಿ ಮರ್ಯಾದೆ, ಗೌರವದಿಂದ ಬದುಕುವುದಕ್ಕೆ ಅವನಿಗೆ ಹಕ್ಕು ಇದೆಯೆಂದು ಅನೇಕರು ಮರೆತುಬಿಡುತ್ತಾರೆ. ಅದಕ್ಕೆ ಕಾರಣ ಕೂಡ ನಾವೇ, ಏನು ಮಾಡುತ್ತೇವೆ ನಾವು ? ನಾವು ರಾಜಕಾರಣಕ್ಕಾಗಿ ಏನೋ ಮಾಡುವುದಕ್ಕೆ ಹೊರಡುತ್ತೇವೆ. That will boomerang on the entire community of legislators. ಇದು ಸ್ವಲ್ಪ ವಿಚಾರ ಮಾಡಿ ಇಲ್ಲಿ ಎತ್ತಿದಾಗ ಬಹುಶಃ ಜನರಿಗೆ, ಕೆಲವು ಸಾರಿ ಅನೇಕ ರೀತಿಯ ಕೆಟ್ಟ ಭಾವನೆಗಳು ಬಂದು ನಮ್ಮ ಸಾರ್ವಜನಿಕ ವ್ಯಕ್ತಿಗಳ ಮೇಲೆ, ಈ ಘನತೆವೆತ್ತ ಪವಿತ್ರವಾದಂಥ ಸದನದ ಮೇಲೆ ರಿಫ್ಲೆಕ್ಷನ್ ಬರುವ ಹಾಗೆ ಕೆಲಸವನ್ನು ನಾವೇ ಮಾಡುತ್ತೇವೆ. ಇದೆಲ್ಲ ಸೂಕ್ಷ್ಮ ವಿಚಾರಗಳನ್ನು ಸ್ಪಷ್ಟವಾಗಿ ಅರಿತರೆ ಯಾವ ತೊಂದರೆ ಕೂಡ

ಬರುವುದಿಲ್ಲ. ಎಷ್ಟು ಬೇಕಾದರೂ ಚರ್ಚೆ ಮಾಡಬಹುದು. ಆದ್ದರಿಂದ ಚರ್ಚೆಯನ್ನು ಮೊಟಕು ಮಾಡತಕ್ಕಂಥ ಉದ್ದೇಶ ನಮಗೆ ಇಲ್ಲ. ನಮ್ಮ ಉದ್ದೇಶ ಏನೆಂದರೆ, ಈ ತಿಂಗಳ 31ನೇ ತಾರೀಖಿನೊಳಗೆ ಅಪ್ರೊಪ್ರಿಯೇಶನ್ ಬಿಲ್ ಆದರೆ, ಏಪ್ರಿಲ್ ಒಂದನೇ ತಾರೀಖಿನಿಂದ ಒಂದು ವರ್ಷ ಕಾಲ ನಿರಾತಂಕವಾಗಿ ನಮ್ಮ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಬಹುದು ಎಂಬ ಸದುದ್ದೇಶದಿಂದ ಇದನ್ನು ಮಾಡಿದ್ದೇವೆಯೇ ಹೊರತು, ಓಟ್ ಆನ್ ಅಕೌಂಟ್‌ನಿಂದ ಆಡಳಿತ ಶಿಥಿಲವಾಗುತ್ತದೆ. ಅಕೌಂಟೆಬಿಲಿಟಿ ಆಗುವುದಿಲ್ಲ, ಅಚೀವ್‌ಮೆಂಟ್ ಮಾಡುವುದಕ್ಕೆ ಆಗುವುದಿಲ್ಲ ಎಂಬ ಒಂದು ಉದ್ದೇಶದಿಂದ ನಾವು ಪೂರ್ತಿ ಬಜೆಟನ್ನು ಪಾಸ್ ಮಾಡುತ್ತಿದ್ದೇವೆಯೇ ಹೊರತು ಅನ್ಯಥಾ ಅಲ್ಲ. ಫುಲ್ ಬಜೆಟನ್ನು ಪಾಸ್ ಮಾಡತಕ್ಕಂಥ ಒಳ್ಳೆಯ ಪರಂಪರೆಯನ್ನು ನಾವು ಕಟ್ಟುನಿಟ್ಟಾಗಿ ಈ ವರ್ಷದಿಂದ ಅನುಷ್ಠಾನ ಮಾಡೋಣ. ತಾವು ಹೇಳಿದ ಹಾಗೆ ಈ ಕಡೆಯವರೂ, ಆ ಕಡೆಯವರೂ ಚರ್ಚೆ ಮಾಡೋಣ. 29 ರಂದೂ ಚರ್ಚೆ ಮಾಡೋಣ. ಬೇಕಾದರೆ 30ನೇ ತಾರೀಖು ಮಧ್ಯಾಹ್ನದವರೆಗೂ ಮಾತನಾಡೋಣ. 30ನೇ ತಾರೀಖು ಮಧ್ಯಾಹ್ನದ ಮೇಲೆ ಚರ್ಚೆ ಮುಗಿಸಿ ಅಪ್ರೊಪ್ರಿಯೇಶನ್ ಬಿಲ್‌ನ್ನು ಪಾಸ್ ಮಾಡಿಕೊಳ್ಳುವುದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ.

ಶ್ರೀ ಎಂ.ವಿ. ವೆಂಕಟಪ್ಪ:– ಅಧ್ಯಕ್ಷರೇ, ಈ ಸದನ ಎಷ್ಟು ದಿವಸ ನಡೆಯಬೇಕೆಂದು ಈಗಾಗಲೇ ತೀರ್ಮಾನವಾಗಿದೆ. 60 ದಿವಸಗಳಿಗಿಂತ ಕೆಳಕ್ಕೆ ಇಳಿದಿದೆ, ಇದನ್ನು 100 ದಿವಸ ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಆ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಹಾಗೆ ನೋಡಿದರೆ ನೂರು ದಿವಸ ಕೂಡ ಸಾಲದು. ಏಕೆಂದರೆ, ಮತದಾರರು ಕಾಯುತ್ತಿರುತ್ತಾರೆ. ರೇಡಿಯೋ, ಟಿ.ವಿ. ಪತ್ರಿಕೆ ಈ ಮೂರನ್ನೂ ನೋಡುತ್ತಿರುತ್ತಾರೆ. ನೀವೇನೂ ನಮ್ಮ ಕ್ಷೇತ್ರದ ಬಗ್ಗೆ ಮಾತನಾಡುವುದಿಲ್ಲವೆಂದು, ನಾವು ಹೋದಾಗ ಕೇಳುತ್ತಾರೆ. ವಿರೋಧ ಪಕ್ಷದ ಸದಸ್ಯರಿಗೆ ಬೇಕಾದಷ್ಟು ಸಮಯ ಸಿಗುತ್ತದೆ, ಅವರು ಮಾತನಾಡಲಿ ಸಂತೋಷ. ಆದರೆ, ಆಡಳಿತ ಪಕ್ಷದ ಸದಸ್ಯರಿಗೆ ವರ್ಷದಲ್ಲಿ ಒಂದೆರಡು ಮೂರು ಸಲ ಮಾತನಾಡಲು ಅವಕಾಶ ಸಿಕ್ಕದಿದ್ದರೆ, ನಾವು ಮತದಾರರಿಗೆ ಏನು ಹೇಳಬೇಕು ? ಇದನ್ನು ಗಮನದಲ್ಲಿಟ್ಟುಕೊಂಡು, ಇನ್ನು ಮುಂದೆ, ಸರ್ಕಾರದವರು ಶಾಸನ ಸಭೆ ಕರೆಯಬೇಕು. ಈ ಬಾರಿ ಫೆಬ್ರವರಿ 12ನೇ ತಾರೀಖು ಕರೆದಿರಿ; ಇದನ್ನು ಜನವರಿಯಲ್ಲಿಯೇ ಕರೆಯಬಹುದಿತ್ತು. ಕೊನೆಯಪಕ್ಷ ಇನ್ನು ಮುಂದೆಯಾದರೂ ಸಹ ಜನವರಿಯಲ್ಲಿಯೇ ಕರೆದು, ಇನ್ನೂ ಹೆಚ್ಚು ಹೆಚ್ಚು ಸಮಯ ಮಾತನಾಡಲು ನಮಗೆ ಸಮಯ ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಒಂದು ತಿಂಗಳು ಮುಂಚಿತವಾಗಿಯೇ ಕರೆದರೆ, ಎಲ್ಲರೂ ಮಾತನಾಡುವುದಕ್ಕೆ ಹಾಗೂ ಅನೇಕ ಮುಖ್ಯವಾದ ವಿಷಯಗಳನ್ನು ಮಾತನಾಡಲು ಅನುಕೂಲವಾಗುತ್ತದೆ. ಇವತ್ತು ನಮ್ಮ ಪ್ರಶ್ನೆಗಳು ಇದ್ದವು, ಇವುಗಳನ್ನು ತೆಗೆದುಕೊಂಡಿಲ್ಲ. ಕೊನೆಯಪಕ್ಷ ಮುಂದೆಯಾದರೂ ಇವುಗಳನ್ನು ಹಾಕುವುದಕ್ಕೆ ಏರ್ಪಾಡು ಮಾಡಬೇಕು.

† ಶ್ರೀ ಹೆಚ್. ಏಕಾಂತಯ್ಯ:– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಕೆಲವು ಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅವರ ಕಳಕಳಿ ನನಗೂ ಅರ್ಥವಾಗುತ್ತದೆ. ಆದರೆ, ನಮ್ಮಿಬ್ಬರ ನಡವಳಿಕೆ, ವಿರೋಧಪಕ್ಷದ ಸದಸ್ಯರು ಇರಬಹುದು, ಅಥವಾ ಆಡಳಿತ ಪಕ್ಷ ಇರಬಹುದು; ಇವತ್ತಿನದಿವಸ, ನಮ್ಮೆಲ್ಲರಿಗೂ ಸಹ ಗೌರವ ತರುವ ರೀತಿಯಲ್ಲಿ ಈ ಸಭೆಯ ಕಾರ್ಯಕಲಾಪ ಆಗಬೇಕು. ಅವರ ಕಳಕಳಿ ಏನಿದೆ, ನಿಜವಾಗಿಯೂ ನನಗೆ ಅರ್ಥವಾಗುತ್ತಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಏನು ನಡೆದು ಬಂದಿದೆ, ಅದನ್ನು ಮುಚ್ಚಿಡುವುದರಲ್ಲಿ ಏನೂ ಅರ್ಥ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಉನ್ನತವಾದ ಭರವಸೆಯನ್ನು ಕೊಟ್ಟಿದ್ದಾರೆ. ಈ ವರ್ಷ 98 ದಿವಸ ಅಥವಾ 100 ದಿವಸ ಈ ಸಭೆಯನ್ನು ನಡೆಸುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ, ಇಲ್ಲಿಯವರೆಗೂ ನಡೆದುಕೊಂಡು ಬಂದ ರೀತಿ ಏನಾಗಿದೆ ಎಂದರೆ,

1983ರಲ್ಲಿ ಇರಬಹುದು, 98 ದಿವಸ ನಡೆದ ವಿಕ್ರಮ ನಮ್ಮಲ್ಲಿ ಈಗಾಗಲೇ ಇದೆ. ಅದೇ ರೀತಿಯಾಗಿ, ಮುಖ್ಯಮಂತ್ರಿಗಳು ಹೇಳಿದರು.

ಈ ಬಜೆಟ್ ಅಧಿವೇಶನದಲ್ಲಿ, ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವಾಗ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ. ಇದನ್ನೂ ಸಹ ತಾವು ಒಂದು ಭಾಗವೆಂದು ಪರಿಗಣಿಸಬೇಕೆಂಬ ಮಾತನ್ನು ಹೇಳಿದರು. ಇದು ಅಷ್ಟೊಂದು ಸಮಂಜಸವಲ್ಲ ಎಂಬ ಮಾತನ್ನು ನಾನು ಹೇಳುತ್ತೇನೆ. ಏಕೆಂದರೆ, ಸುಮಾರು 62 ಬೇಡಿಕೆಗಳ ಬಾಬ್ತು ಚರ್ಚೆ ಮಾಡಬೇಕಾಗಿದೆ, ಸುಮಾರು 8 ಸಾವಿರ ಕೋಟಿಗಿಂತಲೂ ಹೆಚ್ಚಿನ ಹಣಕ್ಕೆ ಒಪ್ಪಿಗೆ ಕೊಡಬೇಕಾಗಿದೆ. ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. 1992-93ನೇ ಇಸವಿಯಲ್ಲಿ ನಾವು ವಿಕ್ರಮ ಸಾಧಿಸಿದ್ದೇವೆ, ಏನು ವಿಕ್ರಮ ಎಂದರೆ, ಈ ಸದನ ಕೇವಲ 38 ದಿವಸ ಮಾತ್ರ ವರ್ಷದಲ್ಲಿ ಸೇರಿದೆ. ಇದೊಂದೇ ವಿಕ್ರಮ. ಅದೇ ರೀತಿ 1993ನೇ ಇಸವಿಯಲ್ಲಿ, ಇಲ್ಲಿಯವರೆಗೆ ಈ ಸಭೆಯನ್ನು ಪೂರ್ಣಗೊಳಿಸುವುದಕ್ಕೆ ಮನಸ್ಸು ಮಾಡಿದ್ದರೆ, ಇದೂ ಒಂದು ವಿಕ್ರಮವಾಗುತ್ತಿತ್ತು. ಕೇವಲ 6 ದಿವಸಕ್ಕೆ ಮಾತ್ರ ಈ ಸದನದಲ್ಲಿ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಮಾತ್ರ ಉಪಯೋಗಿಸಿದ್ದೇವೆ. 6 ದಿವಸಗಳ ಬಾಬ್ತು, ಎಷ್ಟು ಗಂಟೆಗಳನ್ನು ಉಪಯೋಗಿಸಿದ್ದೇವೆಂದರೆ, ಕೇವಲ 27 ಗಂಟೆಗಳು ಮಾತ್ರ ಚರ್ಚೆಯಾಗಿದೆ. ಈ 27 ಗಂಟೆಗಳ ಕಾಲದಲ್ಲಿ ಕೇವಲ 16 ಗಂಟೆಗಳು ಮಾತ್ರ, ಬೇಡಿಕೆಗಳ ಬಾಬ್ತು ಈ ಪಕ್ಷದ, ಆ ಪಕ್ಷದ ಸದಸ್ಯರು ಚರ್ಚೆ ಮಾಡಿದ್ದೇವೆ. 11 ಗಂಟೆಗಳ ಕಾಲ, 8 ಜನ ಮಾನ್ಯ ಮಂತ್ರಿಗಳು ಮಾತ್ರ ಉತ್ತರ ಕೊಟ್ಟಿದ್ದಾರೆ. ಇದನ್ನೂ ತಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ತಾವೇನೋ ಹೆಚ್ಚು ಹೆಚ್ಚು ಅವಕಾಶವನ್ನು ಕೊಡಬೇಕೆಂಬ ಮಾತನ್ನು ಹೇಳುತ್ತೀರಿ. ಆದರೆ, ಅದರ ಜೊತೆಯಲ್ಲಿಯೇ ನಮ್ಮ ನಡವಳಿಕೆಯೂ ಅದಕ್ಕೆ ಪೂರಕವಾಗಿ, ಇಲ್ಲದಿದ್ದರೆ, ನಿಜವಾಗಿಯೂ ಇದರಲ್ಲಿ ಜನರ ವಿಶ್ವಾಸ ಉಳಿಯುವುದಕ್ಕೆ ಸಾಧ್ಯವಿಲ್ಲ. ಈ ಆರೋಪಕ್ಕೆ ನಾವೆಲ್ಲರೂ ಕಾರಣರಾಗುತ್ತೇವೆ. ನಮ್ಮ ಹಕ್ಕುಗಳ ಬಗ್ಗೆ, ನಮ್ಮ ಸೌಲಭ್ಯಗಳ ಬಗ್ಗೆ ನಾವೂ ಸೇರಿದಂತೆ, ತಮ್ಮ ಕಾರ್ಯಾಲಯವೂ ಸೇರಿದಂತೆ ಹೆಚ್ಚು ಹೆಚ್ಚು ಕಾಳಜಿಯನ್ನು ವಹಿಸಿದೆ. ಇದಕ್ಕೆ ಬದಲಾಗಿ, ನಮ್ಮ ಕರ್ತವ್ಯಗಳ ಬಗ್ಗೆಯೂ ಕಾಳಜಿ ವಹಿಸಬೇಕಾಗಿದೆ. ನಾನಾಗಲೇ ತಮ್ಮ ಗಮನಕ್ಕೆ ತಂದೆ. 1992-93ನೇ ಸಾಲಿನ ಬೇಡಿಕೆಗಳ ಚರ್ಚೆ ಎಂದು ತಮ್ಮ ಆಫೀಸಿನಿಂದ ಬರುತ್ತದೆ. ಇದು ಸಣ್ಣ ವಿಚಾರವೆಂದು ಗೊತ್ತಿದೆ. ಆದರೂ ಸಹ ಇದು ಏನು ತೋರಿಸುತ್ತದೆ ಎಂದರೆ, ನಮ್ಮ ಕಾರ್ಯಗಳ ಬಗ್ಗೆ, ನಮ್ಮ ಸೌಲಭ್ಯಗಳ ಬಗ್ಗೆ ಹೆಚ್ಚು ಹೆಚ್ಚು ಕಾಳಜಿ ವಹಿಸಿದ್ದೇವೆಯೇ ಹೊರತು, ಈ ಸದನವನ್ನು ಯಾವ ರೀತಿ ನಡೆಸಬೇಕೆನ್ನುವುದಕ್ಕೆ ತಮ್ಮ ಕಚೇರಿಯೂ ಸೇರಿದಂತೆ, ಸರ್ಕಾರ ಮತ್ತು ವಿರೋಧಪಕ್ಷಗಳ ಸಹಕಾರ ಬರದಿದ್ದರೆ, ನಮಗೆ ಗೌರವ ಬರುವ ರೀತಿಯಲ್ಲಿ ಈ ಕಲಾಪ ನಡೆಯುವುದಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತಿನದಿವಸ 48 ಬೇಡಿಕೆಗಳನ್ನು ಇಟ್ಟಿದ್ದೀರಿ; ಈ 48 ಬೇಡಿಕೆಗಳ ಬಾಬ್ತು ಏನಾದರೂ ಚರ್ಚೆ ಮಾಡುವುದಾದರೆ, ಇದರಲ್ಲಿ ಏನಾದರೂ ಅರ್ಥವಿದೆಯೇ ?

ಈ 48 ಬೇಡಿಕೆಗಳ ಬಗ್ಗೆ ಒಂದೆರಡು ದಿವಸ ಚರ್ಚೆ ಮಾಡಿ, 31 ಜನ ಸನ್ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಸಾಧ್ಯವಿದೆಯೇ ? ಈ ರೀತಿಯ ಸಾಧ್ಯವಲ್ಲದಂಥ ರೀತಿಯಲ್ಲಿ ಈ ಮನೆಯನ್ನು ನಡೆಸುವುದು ಬೇಡ. ಅದಕ್ಕೋಸ್ಕರ ನಾನು ಒಂದು ಸಲಹೆಯನ್ನು ಕೊಡುತ್ತಿದ್ದೇನೆ. ಇವತ್ತಿನ ದಿವಸ ಈ 48 ಬೇಡಿಕೆಗಳ ಪೈಕಿ ಕೆಲವೊಂದು ಬೇಡಿಕೆಗಳನ್ನು ಮಾತ್ರ ಆಯ್ದು ನಮ್ಮ ಮುಂದೆ ಇಡಿ. ಚರ್ಚೆ ಮಾಡೋಣ. ಉಳಿದವುಗಳನ್ನು ಬೇಕಾದರೆ ಗಿಲೋಟಿನ್ ಹಾಕಲಿ. ಇದರಲ್ಲಿ ಏನು ತಪ್ಪಾಗಿದೆ ಅಥವಾ ತೀರ್ಮಾನವಾಗಿದೆ ಅದನ್ನು ನಾನು ಪ್ರಶ್ನೆ ಮಾಡುತ್ತಾ ಇಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಮುಂದಿನ ಸಾರಿ ನಾವೆಲ್ಲರೂ ಸೇರಿ ಇದನ್ನು ಸರಿಪಡಿಸುವಂಥ ಪ್ರಯತ್ನ ಮಾಡೋಣವೆಂದು ಹೇಳಿದ್ದಾರೆ. ಅದಕ್ಕಾಗಿ ಇದನ್ನು ಅಲ್ಲಿಗೇ ಬಿಡುತ್ತೇನೆ. ಇವತ್ತಿನ ದಿವಸ ತಮ್ಮ ಮೂಲಕ ಮುಖ್ಯಮಂತ್ರಿಗಳಲ್ಲಿ

ಅರಿಕೆ ಮಾಡಿಕೊಳ್ಳುವುದೇನೆಂದರೆ, 48 ಬೇಡಿಕೆಗಳನಿಟ್ಟು ಸದಸ್ಯರನ್ನು ಮಾತನಾಡಿ ಎಂದು ಕೇಳುವುದರಲ್ಲಿ ಅರ್ಥವಿಲ್ಲ.

ತಾವು ಒಂದು 5 ನಿಮಿಷ ಸಭೆಯನ್ನು ಮುಂದೂಡಿ ನಿರ್ದಿಷ್ಟವಾದ ಕೆಲವು ಬೇಡಿಕೆಗಳನ್ನು ಆರಿಸಿ ಇಡಿ. ಆ ಬೇಡಿಕೆಗಳ ಮೇಲೆ ಚರ್ಚೆ ಮಾಡೋಣ. ಆ ಬೇಡಿಕೆಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಪೌಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಈ ಸದನ ನೂರು ದಿನ ನಡೆಯಬೇಕು ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಈ ಆಯವ್ಯಯ ಅಧಿವೇಶನ ಎಷ್ಟು **ದಿವಸ ನಡೆ**ಯಬೇಕು ಎನ್ನುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ನೂರು ದಿವಸದಲ್ಲಿ ಬರೀ 30 **ದಿವಸ ನಡೆ**ಸಿ ಹೋದರೆ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಕಾಲಾವಕಾಶ ದೊರೆಯುವುದಿಲ್ಲ. ಆದ್ದರಿಂದ ಕನಿಷ್ಟ ಪಕ್ಷ ಈ ಆಯವ್ಯಯ ಅಧಿವೇಶನ 50 ದಿವಸಗಳು ನಡೆಸತಕ್ಕಂಥ ಒಂದು ವ್ಯವಸ್ಥೆ ಬಗ್ಗೆ ನಾವು ತೀರ್ಮಾನ ಮಾಡಬೇಕು. 25 ದಿವಸ 25 ದಿವಸ ಎಂದು ಎರಡು ಭಾಗಗಳಾಗಿ ಮಾಡೋಣ. ಒಟ್ಟು 50 ದಿವಸ ಈ ಆಯವ್ಯಯ ಅಧಿವೇಶನ ನಡೆಸತಕ್ಕಂಥಾದ್ದಕ್ಕೆ ವ್ಯವಸ್ಥೆ ಆಗಬೇಕು. ನಾವು ಈಗಾಗಲೇ ಪೂರಕ ಅಂದಾಜುಗಳ ಬಗ್ಗೆ ಮತ್ತು 48 ಬೇಡಿಕೆಗಳ ಬಗ್ಗೆ ಒಟ್ಟಿಗೆ ಚರ್ಚೆ ಪ್ರಾರಂಭ ಮಾಡಿದರೆ ನಾನು ನಿನ್ನೆಯ ದಿವಸ ತಮ್ಮ ಗಮನಕ್ಕೆ ತಂದಂತೆ ಇದು ನಿಜವಾಗಿ ಒಂದು ರೀತಿಯಲ್ಲಿ ಆರೋಗ್ಯಕರವಾದ ಲಕ್ಷಣವಾಗುವುದಿಲ್ಲ. ಪ್ರಾಮಾಣಿಕವಾದ ಲಕ್ಷಣವಾಗುವುದಿಲ್ಲ. 48 ಬೇಡಿಕೆಗಳಿಗೆ ಲೇಖಾನುದಾನ ತೆಗೆದುಕೊಳ್ಳಬೇಕೆಂದು ಹೇಳುವುದನ್ನು ನಾನು ಸಹ ಒಪ್ಪುವುದಿಲ್ಲ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಸಹ ಹೇಳಿದ್ದಾರೆ ಇವುಗಳ ಬಗ್ಗೆ ಸಂಪೂರ್ಣ ಚರ್ಚೆ ಆದರೆ ಆಡಳಿತ ಸುಭದ್ರವಾಗುತ್ತದೆ ಎಂಬ ಮಾತನ್ನು ನಾನು ಒಪ್ಪುತ್ತೇನೆ. ಆದರೆ ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, 48 ಬೇಡಿಕೆಗಳನ್ನು ಎಲ್ಲಾ ಒಂದೇ ದಿವಸದಲ್ಲಿ ಅಥವಾ ಎರಡು ದಿವಸದಲ್ಲಿ ಚರ್ಚೆ ಮಾಡಿ ಮುಗಿಸಿ, ಅದಕ್ಕೆ 31 ಜನ ಮಂತ್ರಿಗಳು ಉತ್ತರ ಕೊಡತಕ್ಕಂಥಾದ್ದು ಅಷ್ಟು ನ್ಯಾಯವೇ ? ಎನ್ನತಕ್ಕಂಥ ಮಾತನ್ನು ನಾನು ತಮ್ಮ ಮೂಲಕ ಕೇಳುತ್ತೇನೆ. ಅದು ನ್ಯಾಯವೂ ಅಲ್ಲ. ಅದನ್ನು ಯಾರೂ ಒಪ್ಪುವುದಿಲ್ಲ. 31 ಜನ ಮಂತ್ರಿಗಳು 48 ಬೇಡಿಕೆಗಳ ಮೇಲಿನ ಚರ್ಚೆಗೆ ಸುಮಾರು 40 ಗಂಟೆಗಳಲ್ಲಿ ಉತ್ತರ ನೀಡಿ ಎಲ್ಲಾ ತೀರ್ಮಾನ ಮಾಡಿ ಮುಗಿಸಿದರು ಅಂತ ಹೇಳಿದರೆ ಅದು ನಿಜವಾಗಿಯೂ ಪೂರ್ಣ ಪ್ರಮಾಣದ ಚರ್ಚೆ ಆಗುವುದಿಲ್ಲ. ಆದ್ದರಿಂದ ನನ್ನ ಕಳಕಳಿ ಏನೆಂದರೆ, ಇದರ ಬಗ್ಗೆ ಚಿಂತನೆ ಆಗಬೇಕು. ಆಯವ್ಯಯ ಅಧಿವೇಶನ ಎಷ್ಟು ದಿನ ಇರಬೇಕು ? ರಾಜ್ಯಪಾಲರ ಭಾಷಣ ಎಷ್ಟು ದಿವಸ ನಡೆಯಬೇಕು ? ಬೇಡಿಕೆಗಳ ಮೇಲಿನ ಚರ್ಚೆ ನನಗನಿಸುತ್ತದೆ ಕನಿಷ್ಟಪಕ್ಷ ಎರಡು ದಿವಸಗಳಾದರೂ ಒಂದು ಬೇಡಿಕೆ ಮೇಲೆ ಚರ್ಚೆ ಮಾಡಲಿಲ್ಲವೆಂದರೆ ಅದು ಅರ್ಥಪೂರ್ಣವಾಗುವುದಿಲ್ಲ. ಪ್ರತಿ ಬೇಡಿಕೆ ಮೇಲೆ ಅರ್ಥಪೂರ್ಣವಾಗಿ ಚರ್ಚೆ ಆಗಬೇಕು. ಆಯವ್ಯಯ ಅಧಿವೇಶನ ಎಷ್ಟು ದಿವಸ ನಡೆಯಬೇಕು ಎನ್ನುವುದರ ಬಗ್ಗೆ ತೀರ್ಮಾನ ಮಾಡಬೇಕೆಂಬುದು ನನ್ನ ಕಳಕಳಿಯ ಪ್ರಾರ್ಥನೆ. ಮಾನ್ಯ ಮುಖ್ಯಮಂತ್ರಿಗಳು ನೂರು ದಿನ ಅಧಿವೇಶನ ನಡೆಸಲು ಒಪ್ಪಿದ್ದಾರೆ. ಅದರಲ್ಲಿ ಇನ್ನೂ ಒಂದು 5–10 ದಿನ ಮುಂದಕ್ಕೆ ಹೋಗಬೇಕೆಂದು ಏನು ಮಾನ್ಯ ವೆಂಕಟಪ್ಪನವರು ಬೇಡಿಕೆ ಇಟ್ಟಿದ್ದಾರೆ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹಿಂದಕ್ಕೆ ಹೋಗುವುದಿಲ್ಲ. ಏಕೆಂದರೆ ಅದು ಅವರ ನೀತಿ ಆಗಿದೆ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯ ಪ್ರಾರ್ಥನೆ ಮಾಡುತ್ತೇನೆ, ಇವತ್ತಿನ ಪರಿಸ್ಥಿತಿ ಸಮಂಜಸವಲ್ಲ. ಒಟ್ಟು

ಗ್ರಾಮಾಭಿವೃದ್ಧಿ ಇಲಾಖೆ ಬೇಡಿಕೆಗಳು, ಕಂದಾಯ ಇಲಾಖೆಗೆ ಸೇರಿದಂತಹ ಬೇಡಿಕೆಗಳು, ಸಮಾಜ ಕಲ್ಯಾಣ ಇಲಾಖೆಗೆ ಸೇರಿದಂತಹ ಬೇಡಿಕೆಗಳು, ಇಂತಹ ಒಳ್ಳೊಳ್ಳೆಯ ಬೇಡಿಕೆಗಳು ಇವೆ. ನಗರಾಭಿವೃದ್ಧಿ ಬೇಡಿಕೆಗಳ ಮೇಲೆ ಚರ್ಚೆ ಆಗಬೇಕು, ಚರ್ಚೆ ಪರಿಣಾಮಕಾರಿಯಾಗಿ ಆಗಬೇಕು; ಅಧಿಕಾರಿಗಳು ಮಾಡಿರತಕ್ಕಂಥ ಸರ್ಕಾರ ಮಾಡಿರತಕ್ಕಂಥ ಅನ್ಯಾಯಗಳನ್ನು ಬಯಲಿಗೆ ಎಳೆದು ತೋರಿಸಲು ಇಂತಹ ಅವಕಾಶ ಬಿಟ್ಟರೆ ಬೇರೆ ಯಾವ ಅವಕಾಶವೂ ಇಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಏನಾದರು ಮಾಡಿ ಇದರ ಬಗ್ಗೆ ತಾವು ಒಂದು ಹೊಸ ಸೂತ್ರವನ್ನು ಕಂಡುಹಿಡಿಯಬೇಕಾಗುತ್ತದೆ, ಎಲ್ಲಾ ಬೇಡಿಕೆಗಳ ಬಗ್ಗೆ ತಾವು ಹೇಳಿದಂತೆ ನಾವು ಕೇಳಿದಂತೆ ಆಗಬಾರದು; ಜನರು ನಮಗೆ ಶಾಪ ಹಾಕುತ್ತಾರೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಆಯವ್ಯಯ ಅಧಿವೇಶನ 50 ದಿನ ನಡೆಸುತ್ತಾರೆಯೇ ಎಂದು ಹೇಳಬೇಕು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಏಕಾಂತಯ್ಯನವರು ಒಂದು ಸಲಹೆ ಕೊಟ್ಟರು. ಕೆಲವು ಬೇಡಿಕೆಗಳನ್ನು ತೆಗೆದುಕೊಂಡು ಇವತ್ತು ಚರ್ಚೆ ಮಾಡೋಣ ಅಂತ. ನನ್ನ ಸಲಹೆ ಏನೆಂದರೆ ಸ್ಟೇಟ್ ಲೆಜಿಸ್ಲೇಚರ್ ಅಂತ ಒಂದು ಡಿಮ್ಯಾಂಡ್ ಇದೆ. ಅದನ್ನೇ ಚರ್ಚೆಗೆ ತೆಗೆದುಕೊಂಡರೆ ಒಳ್ಳೆಯದೆಂದು ಕಾಣುತ್ತದೆ. ಏಕೆಂದರೆ ಕಳೆದ ಒಂದೆರಡು ವರ್ಷಗಳಿಂದ ಮಾನ್ಯ ಮುಖ್ಯಮಂತ್ರಿಗಳು ಏನೇ ಸಮರ್ಥನೆ ಕೊಡಬಹುದು ಸಮಜಾಯಿಸಿ ಕೊಡಬಹುದು, ಆದರೆ ಸಾರ್ವಜನಿಕರ ಅಭಿಪ್ರಾಯವಂತೂ ಕರ್ನಾಟಕ ರಾಜ್ಯದ ವಿಧಾನ ಸಭೆ-ವಿಧಾನ ಸಭೆ ಅಲ್ಲ ಎನ್ನುವ ತೀರ್ಮಾನಕ್ಕೆ ಜನರು ಬಂದಿದ್ದಾರೆ. ಆದಕಾರಣ ಈ ವರ್ಷ ಆದರೂ ನಾವು ಪ್ರಯತ್ನಪಟ್ಟು ಕೆಲವು ನಿಯಮಗಳನ್ನು ಮಾಡಿಕೊಳ್ಳುವುದಕ್ಕೆ ನಮಗೆ ಅಧಿಕಾರ ಇದೆ.

ಬಜೆಟ್ ಅಧಿವೇಶನವನ್ನು ಯಾವ ರೀತಿಯಲ್ಲಿ ನಡೆಸಬೇಕೆಂಬುದರ ಬಗ್ಗೆ ಮತ್ತೆ ನಿಯಮಗಳನ್ನು ಹಾಕಿಕೊಳ್ಳಬೇಕಾದಂಥ ಪರಿಸ್ಥಿತಿಗೆ ಬಂದು ಮುಟ್ಟಿದ್ದೇವೆ. ಇದನ್ನು ನಾನು ಮುಂಚೆಯೇ ಹೇಳಬೇಕೆಂದಿದ್ದೆನು. ಆದರೆ ರೈತ ಸಂಘದ ಪರವಾಗಿ ಬಾಬಾಗೌಡ ಪಾಟೀಲರು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಭಾಗಿಗಳಾಗಿದ್ದರು. ಆ ಕಾರಣಕ್ಕಾಗಿ ನಾನು ಮಾತನಾಡಲು ಆಗುತ್ತಿರಲಿಲ್ಲ. ಆದರೆ ಈಗ ನಾವು ತೀರ್ಮಾನ ಮಾಡಿದ್ದೇವೆ. ಆ ಬಗ್ಗೆ ನಾನು ಪತ್ರವನ್ನು ಕೂಡ ಸಿದ್ಧಮಾಡಿದ್ದೇನೆ. ಮುಂದೆ ತಾವುಗಳು ಕಲಾಪಗಳ ಸಮಿತಿಯನ್ನು ಮಾಡುತ್ತೀರಲ್ಲ, ಅದರಲ್ಲಿ ದಯಮಾಡಿ ನಮ್ಮಿಬ್ಬರನ್ನೂ ಸೇರಿಸಬಾರದು. ಈಗ ಏನು ನಾವು ಪಾಪದ ಕೆಲಸಗಳನ್ನು ಮಾಡುತ್ತಿದ್ದೇವೆ, ಅದರಲ್ಲಿ ಇನ್ನು ಮುಂದೆ ನಾವು ಭಾಗಿಗಳು ಆಗುವುದಿಲ್ಲ. ಈ ಪತ್ರವನ್ನು ನಾನು ತಮಗೆ ಈಗಲೇ ಕಳುಹಿಸಿಕೊಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಎರಡು ವಿಧಗಳು ಇವೆ. ಒಂದನೇದಾಗಿ ರೂಲ್ಸ್ ಬದಲಾವಣೆ ಮಾಡತಕ್ಕಂಥಾದ್ದು. ಯಾವ ಯಾವ ಅಧಿವೇಶನವನ್ನು ಯಾವ ರೀತಿಯಲ್ಲಿ ನಡೆಸಬೇಕೆಂದು ಇದೆ. ಅದಕ್ಕೆ ರೂಲ್ಸ್ ಕಮಿಟಿಯನ್ನು ತಾವುಗಳು ಮಾಡಿದ್ದೀರಿ. ಆ ಸಮಿತಿಯವರು ಈ ಬಗ್ಗೆ ಶಿಫಾರಸ್ಸನ್ನು ಕೊಡಬಹುದು. ಇನ್ನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಿರ್ಣಯ ಮಾಡತಕ್ಕಂಥಾ ವಿಚಾರದಲ್ಲಿ ಹೇಳುವುದಾದರೆ, the entire House is bound by that. ಮಾನ್ಯ ವಾಟಾಳ್ ನಾಗರಾಜ್‌ರವರು ಅಧಿವೇಶನವನ್ನು 50 ದಿವಸಗಳ ಕಾಲ ಮಾಡಬೇಕೆಂದು ಹೇಳಿದರು. ಬಹುಶಃ ಅದನ್ನು ಮಾಡಬೇಕಾದರೆ, ಜನವರಿಯಲ್ಲಿ ಪ್ರಾರಂಭ ಮಾಡಬೇಕಾಗುತ್ತದೆ. ಜನವರಿ, ಫೆಬ್ರವರಿ, ಮಾರ್ಚ್ ತನಕ ಆಗುತ್ತದೆ. ಇದನ್ನು ಮಾಡಬಹುದು, ಇದು ಒಳ್ಳೆಯ ಸಲಹೆಯಾಗಿದೆ. ಇಂಥ ರಚನಾತ್ಮಕವಾದಂಥ ಸಲಹೆಗಳು ಬಂದರೆ ನಾವು ಯಾವಾಗಲೂ ಸ್ವಾಗತಿಸುತ್ತೇವೆ. ಹಾಗೆಯೇ ಮಾನ್ಯ ಎಂ.ವಿ. ವೆಂಕಟಪ್ಪನವರು ಕೂಡ ಅದನ್ನು ಮೊದಲೇ ಹೇಳಿದ್ದಾರೆ.

ಮನೋಭೂಮಿಕೆಯು ಇಲ್ಲಿದೆ. ಆದರೆ ಮಾನ್ಯ ನಂಜುಂಡಸ್ವಾಮಿಯವರು ಹೇಳಿದ ವಿಚಾರ ಹೊಸದಾಗಿದೆ. ಅವರು ಈ ಸದನವು ಸದನವೇ ಅಲ್ಲ ಎಂದು ಹೇಳಿದ್ದಾರೆ. ಈ ಸದನವು ಯಾವಾಗ ಆಯಿತು ? ಪ್ರೊ: ನಂಜುಂಡಸ್ವಾಮಿಯವರು ಬಂದ ಮೇಲೆ ಆಯಿತೋ ಅಥವಾ ಅದಕ್ಕೆ ಮೊದಲಿಂದ ಆಯಿತೋ ಎಂಬ ಬಗ್ಗೆ ಒಂದು ಕಟ್‌ಆಫ್ ಡೇಟ್ ನನಗೆ ಬೇಕು. ಇಡೀ ದೇಶದ ಜನರು...

ಪ್ರೊ.: ಎಂ.ಡಿ. ನಂಜುಂಡಸ್ವಾಮಿ:– ನಾನು ನನ್ನ ಅಭಿಪ್ರಾಯವನ್ನು ಹೇಳುತ್ತಾ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ:– ಈ ತರಹ ಈಲ್ಡ್ ಆದರೆ ಇದು ಸದನವೇ ಅಲ್ಲ.... ನಾವು ಮಾತನಾಡುವಾಗ ಎದ್ದು ನಿಲ್ಲತಕ್ಕಂಥಾದ್ದು... ಸರಿಯಲ್ಲ I am on my leg. I think we cannot function...

(ಗೊಂದಲ)

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಜನಗಳ ಅಭಿಪ್ರಾಯವನ್ನು ನಾನು ಹೇಳಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ:– ತಾವು ಹೇಳುವುದು ಜನಗಳ ಅಭಿಪ್ರಾಯವಲ್ಲ. ಈ ನಮ್ಮ ಕರ್ನಾಟಕ ರಾಜ್ಯ ವಿಧಾನಸಭೆಗೆ ಉಜ್ವಲವಾದಂಥ ಒಂದು ಇತಿಹಾಸವಿದೆ. ಅಂಥ ಉಜ್ವಲವಾದಂಥ ಇತಿಹಾಸಕ್ಕೆ ತಮ್ಮೊಬ್ಬರ ಮಾತಿನಿಂದ ಮಸಿ ಬಳಿಯಲು ಆಗುವುದಿಲ್ಲ. ಆ ರೀತಿ ಮಾಡಿದರೆ ತಮ್ಮ ಮುಖಕ್ಕೆ ತಾವೇ ಮಸಿ ಬಳಿದುಕೊಳ್ಳಬೇಕಾಗುತ್ತದೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಆ ಇತಿಹಾಸವನ್ನು ಉಳಿಸಿಕೊಳ್ಳೋಣ ಎಂಬುದೇ ನಮ್ಮ ಆಶೆ....

ಶ್ರೀ ಆರ್.ವಿ. ದೇಶಪಾಂಡೆ:– ಅವರು ಇದು ಸದನವೇ ಅಲ್ಲ ಎಂದು ಹೇಳುವುದು ಕೇಳಿ ನನಗೆ ಆಶ್ಚರ್ಯವಾಗುತ್ತಿದೆ... Then, why is he coming here as a Member?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೇ, ನಾನು ಒಂದೆರಡು ವಿಚಾರಗಳನ್ನು ಈ ಬಗ್ಗೆ ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಮಾನ್ಯ ಸದಸ್ಯರು ಒಂದು ಆಕ್ಷೇಪಣೆ ಎತ್ತಿದರು. ಏನೆಂದರೆ, ಚರ್ಚೆಗೆ ಸಾಕಷ್ಟು ಕಾಲಾವಕಾಶ ಇಲ್ಲವೆಂದು ಹೇಳಿದರು. ಬಜೆಟ್ ಸೆಶನ್ ಬಹಳ ಮುಖ್ಯವಾದುದು. ಇದರ ಚರ್ಚೆಗೆ ಸಾಕಷ್ಟು ಕಾಲಾವಕಾಶ ಇರಬೇಕು. ಆ ಮಾತನ್ನು ನಾನು ಕೂಡ ಒಪ್ಪುತ್ತೇನೆ. ಎಲ್ಲಿ ಈ ಸದನದ ಕಾಲಹರಣವಾಗುತ್ತಿದೆ ಎಂಬುದನ್ನು ಕೂಡ ಹೇಳುತ್ತೇನೆ. ಅದಕ್ಕೆ ಯಾರು ಜವಾಬ್ದಾರರು ಎಂಬುದನ್ನು ಕೂಡ ಅವರೇ ಯೋಚನೆ ಮಾಡಬೇಕು. ನಮ್ಮಲ್ಲಿ ಕ್ವೆಶ್ಚನ್ ಅವರ್ ಇರುವುದು ಒಂದು ಗಂಟೆಯೊಳಗೆ ಮುಗಿಯಬೇಕು. ಅದು ಒಂದರಿಂದ ಒಂದೂ ಮುಕ್ಕಾಲು ಗಂಟೆಯವರೆಗೂ ಹೋಗುತ್ತದೆ. ಆದಾದ ಮೇಲೆ ಜೀರೋ ಅವರ್ ಎಂದು ಶುರು ಮಾಡುತ್ತಾರೆ. ಅದು ಒಂದೊಂದು ಸಾರಿ ಲಂಚ್ ಅವರ್ ತನಕವೂ ಹೊರಟು ಹೋಗುತ್ತದೆ. ಆಮೇಲೆ ಗಮನ ಸೆಳೆಯುವ ಸೂಚನೆ ಎಂದು ಚರ್ಚೆ ಮಾಡುತ್ತಾರೆ. ಅದಾದ ನಂತರ ಅಲ್ಪಾವಧಿ ಚರ್ಚೆ ಎಂದು ನಿಯಮ 68ರಲ್ಲಿ ಬರುತ್ತದೆ. ಹಾಗೆಯೇ ನಿಯಮ 334ರಲ್ಲಿ ಚರ್ಚೆಗೆ ಕೆಲವು ವಿಚಾರಗಳು ಬರುತ್ತವೆ. ನಿಲುವಳಿ ಸೂಚನೆಗಳು ಎಂದು ಬರುತ್ತವೆ. ನಾನು ಕೂಡ ಅನೇಕ ಸಾರಿ ಈ ಕಷ್ಟವನ್ನು ಅನುಭವಿಸಿದ್ದೇನೆ. ಕಾಲಿಂಗ್ ಅಟೇನ್‌ಶನ್ ಇಲ್ಲಿ ಬಂದಾಗ ಸಾಯಂಕಾಲ 5 ಗಂಟೆಯವರೆಗೂ ಇಲ್ಲಿ ಕುಳಿತಿರಬೇಕಾದ ಪರಿಸ್ಥಿತಿಯು ಇತ್ತು. ನನ್ನ ಅಭಿಪ್ರಾಯದ ಪ್ರಕಾರ ಈ ಸಬ್ಜೆಕ್ಟ್ಸ್ ಬಜೆಟ್ ಅಧಿವೇಶನದಲ್ಲಿ ಬರತಕ್ಕಂಥ ಅವಶ್ಯಕತೆ ಇಲ್ಲ. ಅದನ್ನು ಡಿಮಾಂಡ್ಸ್‌ನ ಮೇಲೆಯೇ ಚರ್ಚೆ ಮಾಡಬಹುದು. ಎಲ್ಲಿ ಬಜೆಟ್ ಸೆಶನ್ ಇಲ್ಲ ಅಲ್ಲಿ ಇದರ ಪ್ರಾಮುಖ್ಯತೆ ಇರುತ್ತದೆ. ಇಲ್ಲ ಎಂದು

ಹೇಳುವುದಿಲ್ಲ. ಆದರೆ ಬಜೆಟ್ ಸೆಶನ್‌ನಲ್ಲಿ ಈ ವಿಚಾರಗಳನ್ನು ಆಯಾಯ ಡಿಮ್ಯಾಂಡ್ಸ್ ಬಂದಾಗ ಚರ್ಚೆ ಮಾಡಲು ಸಾಕಷ್ಟು ಕಾಲಾವಕಾಶ ಇರುತ್ತದೆ. ನಮ್ಮ ಸದನದಲ್ಲಿ ಆರು ಜನರು ಪಾರ್ಟಿ ಲೀಡರ್ಸ್ ಇದ್ದಾರೆ. ಒಬ್ಬರಿಗೆ ಅವಕಾಶ ಕೊಟ್ಟರೆ ಬಾಕಿಯವರಿಗೂ ಕೊಡಲೇ ಬೇಕಾಗುತ್ತದೆ.

ಎಲ್ಲಾ ಪಾರ್ಟಿಗಳ ಲೀಡರ್‌ಗಳು ಮಾತನಾಡುವುದರಿಂದ, ಸಮಯವೂ ಜಾಸ್ತಿ ಬೇಕಾಗುತ್ತದೆ.

ಒಬ್ಬರು ಆಪೋಸಿಶನ್ ಲೀಡರ್ ಎಂದು ಇದ್ದರೆ ಅವರಿಗೆ ಜಾಸ್ತಿ ಕಾಲಾವಕಾಶ ಕೊಡಬಹುದು ಮತ್ತು ಜಾಸ್ತಿ ಹೊತ್ತು ಅವರು ಮಾತನಾಡಲೂಬಹುದು. ಇಲ್ಲಿ ನಮ್ಮ ಸದನದಲ್ಲಿ ಆರು ಪಕ್ಷಗಳು ಇದ್ದು ಎಲ್ಲ ಲೀಡರ್‌ಗಳೂ ಮಾತನಾಡುತ್ತಾರೆ, ಆಗ ಅವಕಾಶವನ್ನು ಕೊಡಬೇಕಾಗುತ್ತದೆ. ಇದು ತಪ್ಪು ಎಂದು ನಾನು ಹೇಳುವುದಿಲ್ಲ.

ಶ್ರೀ ಸಿ. ಬೈರೇಗೌಡ:– ಹೊರಗಡೆ ಜನರು ಏನು ಹೇಳುತ್ತಿದ್ದಾರೆ ಅಂದರೆ, ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿಯೂ ಕೂಡ ನಾನಾ ಪಾರ್ಟಿಗಳು ಇದ್ದಾವೆ ಎಂದು ತಿಳಿದುಕೊಂಡಿದ್ದಾರೆ.

ಶ್ರೀ ಎಂ. ರಾಜಶೇಖರ ಮೂರ್ತಿ:– ಇದಾದ ಮೇಲೆ ಡಿಮ್ಯಾಂಡ್ಸ್ ಬಗ್ಗೆ ಮಾನ್ಯ ಏಕಾಂತಯ್ಯನವರು ಒಂದು ವಿಚಾರವನ್ನು ಹೇಳಿದರು. ಎಲ್ಲಾ ಡಿಮ್ಯಾಂಡ್‌ಗಳ ಮೇಲೆ ಚರ್ಚೆ ಮಾಡುವ ಬದಲು ಕೆಲವು ಡಿಮ್ಯಾಂಡ್ಸ್‌ನ ಮೇಲೆ ಮಾತ್ರ ಚರ್ಚೆ ಮಾಡಬಹುದು ಎಂದು ಹೇಳಿದರು. ಅವರು ಮಾಡಿದ ಸಲಹೆಯನ್ನು ನಾನೂ ಪುಷ್ಟೀಕರಿಸುತ್ತೇನೆ. ಯಾಕೆಂದರೆ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಎಷ್ಟು ಕಾಲಾವಕಾಶ ಇದೆ, ಅದನ್ನು ಐದಾರು ಡಿಮ್ಯಾಂಡ್ಸ್‌ಗೆ ಮಾತ್ರ ಅಲಾಟ್ ಮಾಡುತ್ತಾರೆ.

24 hours, 36 hours, 12 hours ಎಂದುಕೊಂಡು ಪ್ರಾಮುಖ್ಯತೆಯನ್ನು ನೋಡಿ, ಕಾಲ ನಿಗದಿ ಮಾಡಿ ಅದರ ಮೇಲೆ ಚರ್ಚೆ ಮಾಡುತ್ತಾರೆ. ನಮ್ಮಲ್ಲಿ 58 ಡಿಮ್ಯಾಂಡ್ಸ್ ಇದ್ದರೆ ಅವುಗಳೆಲ್ಲವುಗಳ ಮೇಲೆಯೂ ಮಾತನಾಡುತ್ತೇವೆ. ಪೆನ್‌ಶನ್ ವಿಚಾರ ಬಂದಾಗ ವಿಡೋಸ್ ಪೆನ್‌ಷನ್ ಕುರಿತೂ ಮಾತನಾಡುವುದು ಇದೆ. ಹಾಗೆ ಎಲ್ಲದರ ಮೇಲೆಯೂ ಮಾತನಾಡುವ ಅವಶ್ಯಕತೆ ಇಲ್ಲ. ಪ್ರಾಮುಖ್ಯತೆಯುಳ್ಳ ಮತ್ತು ಜನಗಳಿಗೆ ಸ್ಪಂದಿಸತಕ್ಕಂಥ ವಿಚಾರಗಳು, ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ, ಸೋಶಿಯಲ್ ಪ್ರಾಜೆಕ್ಟ್ ಕಾರ್ಯಕ್ರಮಗಳ ಬಗ್ಗೆ, ಹೀಗೆ ಮುಖ್ಯವಾದಂಥ ಬೇಡಿಕೆಗಳ ಬಗ್ಗೆ ಅವರು ಕಾಲವನ್ನು ಹೆಚ್ಚಿಗೆ ಕೊಟ್ಟು ಚರ್ಚೆ ಮಾಡತಕ್ಕಂಥಾದ್ದು ಬಹಳ ಸೂಕ್ತವಾದುದು. ಮಾನ್ಯ ಏಕಾಂತಯ್ಯನವರ ವಾದವನ್ನು ನಾನು ಒಪ್ಪುತ್ತೇನೆ. ತಮ್ಮ ಸಹಕಾರದಿಂದ ಆದಷ್ಟು ಕಾಲವನ್ನು ನಾವು ಉಳಿಸಿಕೊಳ್ಳಬಹುದು. ಹಾಗೆ ತಾವುಗಳು ಸಹಕಾರ ಕೊಟ್ಟರೆ ಬಹಳ ಸಂತೋಷ. ಯಾವುದು ಮುಖ್ಯವೋ ಅದರ ಬಗ್ಗೆ ಕೂಡ ಚರ್ಚೆ ಮಾಡಲು ಈ ಮೂಲಕ ಬಹಳ ಅನುಕೂಲವಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ:– ಮಾನ್ಯ ಅಧ್ಯಕ್ಷರೇ, ಇದು ಒಂದಲ್ಲ, ಹತ್ತಲ್ಲ, ನೂರು ಸಲ ಈ ಸಭೆಯಲ್ಲಿ ಪ್ರಸ್ತಾಪವಾಗಿದೆ. ಯಾವಾಗಲೂ ಮಾನ್ಯ ಸದಸ್ಯರ ಒಂದು ದೂರು ಏನೆಂದರೆ, ಕೆಲವು ಸಂದರ್ಭಗಳಲ್ಲಿ ಬಹಳ ಮಹತ್ವದ್ದು ಮತ್ತು ಕೆಲವು ಸಂದರ್ಭಗಳಲ್ಲಿ ಅಷ್ಟು ಮಹತ್ವ ಇಲ್ಲದಿರುವಂಥದ್ದು ಚರ್ಚೆಯಾಗುತ್ತದೆ. ಆದರೆ ಬಜೆಟ್ ಸೆಶನ್‌ನಲ್ಲಿ ಬಜೆಟ್ ಬಗ್ಗೆ ಮತ್ತು ಸರಕಾರದ ವಿವಿಧ ವಿಭಾಗಗಳ ಬಗ್ಗೆ ಸಾಕಷ್ಟು ಚರ್ಚೆಯಾಗುವುದಿಲ್ಲ ಎನ್ನತಕ್ಕಂಥಾದ್ದು ಇವೊತ್ತಿನ ದೂರು ಅಲ್ಲ. ನಮ್ಮ ಸರಕಾರ ಇದ್ದಾಗ ಮಾನ್ಯ ಮೊಯಿಲಿಯವರು ವಿರೋಧಿ ಪಕ್ಷದ ನಾಯಕರಾಗಿದ್ದರು, ಮತ್ತು ಅಲ್ಲಿ ಕುಳಿತಂಥ ಅನೇಕರು ಈ ಕಡೆಯಲ್ಲಿ ಕುಳಿತಿದ್ದರು. ಮಾನ್ಯ ಬಂಗಾರಪ್ಪನವರು ಯಾವಾಗಲೂ

ಹೆಚ್ಚು ಕಾಲವನ್ನು ವಿರೋಧಿ ಪಕ್ಷಕ್ಕೆ ನಾವು ಕೊಡುತ್ತಾ ಇದ್ದೆವು. ನಾವು ಸಂತೋಷದಿಂದ ಕೊಡುತ್ತಾ ಇರಲಿಲ್ಲ; ಅವರು ನ್ಯಾಯದಂತೆ ತೆಗೆದುಕೊಳ್ಳುತ್ತಿದ್ದರು. ನಾವು ಅದಕ್ಕೆ ಆತಂಕ ಮಾಡುತ್ತಿರಲಿಲ್ಲ. ಆದರೆ ಈ ಸಲದ ಸದನದ ಕಾರ್ಯಕಲಾಪಗಳನ್ನು ನೋಡಿದರೆ, ಈ ಮಾತನ್ನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ, ಮುಖ್ಯ ಖಾತೆಗಳ ಬೇಡಿಕೆಗಳನ್ನೆಲ್ಲಾ ಒಟ್ಟಿಗೆ ಸೇರಿಸಿ, ಇವೊತ್ತು 40 ಬೇಡಿಕೆಗಳನ್ನು ಇಟ್ಟಿದ್ದಾರೆ. ಇದರಲ್ಲಿ ಕೆಲವು ಚಿಕ್ಕಪುಟ್ಟ ಖಾತೆಗಳು ಇರಬಹುದು. ಆದರೆ ಅರಣ್ಯ, ಅಗ್ರಿಕಲ್ಚರ್ ಇವುಗಳೆಲ್ಲಾ ಸಣ್ಣ ಖಾತೆಗಳು ಅಲ್ಲ. ಇದನ್ನೆಲ್ಲಾ ಒಂದು ಬಂಡಲ್ ಮಾಡಿ ನೀವು ಬೇಕಾದವರು ಬೇಕಾದ್ದು ಮಾಡಲಿ ಎಂದು ಹೇಳಿ, ಮಾಡಿದರೆ ಯಾವುದೇ ತರಹದ ಫಲವು ಅದರಿಂದ ಸಿಗುವುದಿಲ್ಲ. ಫಾರೆಸ್ಟ್ ವಿಚಾರದಲ್ಲಿ ಒಂದು ಉದಾಹರಣೆಯನ್ನು ಹೇಳಬೇಕಾದರೆ, ನಮ್ಮ ಸರಕಾರ ಇದ್ದಾಗ ರಾಜ್ಯದಲ್ಲಿ ಪ್ರತಿವರ್ಷವೂ ಹೊಸದಾಗಿ 30 ಕೋಟಿ ಮರಗಳನ್ನು ಬೆಳೆಸುತ್ತಾ ಇದ್ದೆವು. 23 ಕೋಟಿಯಿಂದ ನಾವು ಪ್ರಾರಂಭ ಮಾಡಿದ್ದೇವೆ, ಎರಡನೇ ವರ್ಷ 25 ಕೋಟಿ, ಮೂರನೇ ವರ್ಷ 28ರಿಂದ 30 ಕೋಟಿಗಳವರೆಗೆ ಗುರಿಸಾಧನೆ ಮಾಡಿದ್ದೆವು. ಕೇಂದ್ರದಲ್ಲಿ ರಾಜೀವ್ ಗಾಂಧೀಯವರ ಸರಕಾರ ಇದ್ದಾಗ ನಮಗೆ ಸತತವಾಗಿ ನಾಲ್ಕು ಸಾರಿ ಪ್ರಥಮ ಬಹುಮಾನ ಸಿಕ್ಕಿದೆ. ಇಲ್ಲಿ ವಿರೋಧಿ ಪಕ್ಷದ ಸರಕಾರವಿದ್ದರೂ ಸಿಕ್ಕಿತ್ತು. ನಾನು ಮುಖ್ಯಮಂತ್ರಿಯಾಗಿ ಪ್ರತಿಯೊಂದು ಸ್ಕೂಲ್‌ಗೂ ನನ್ನ ಹಸ್ತಾಕ್ಷರವುಳ್ಳ ಪತ್ರವನ್ನು ಬರೆಯುತ್ತಾ ಇದ್ದೆ. ನಿಮ್ಮ ಸ್ಕೂಲ್‌ನ ಸುತ್ತುಮುತ್ತ, ನಿಮ್ಮ ಪರಿಸರ ಪ್ರದೇಶಗಳಲ್ಲಿ ಮರಗಳನ್ನು ಬೆಳೆಸಿ ಎಂದು ಹೇಳುತ್ತಿದ್ದೆ. ಹೀಗೆ ಸ್ಕೂಲ್‌ಗಳ ಸುತ್ತಮುತ್ತ 75 ಲಕ್ಷ ಸಸಿಗಳನ್ನು ನಾವು ಪ್ರತಿ ವರ್ಷವೂ ನೆಡಿಸುತ್ತಾ ಇದ್ದೆವು.

11.35 ಎ.ಎಂ.

ಇವತ್ತು ಯಾವುದು ಗಾಳಿಯಿಂದ ಬಿದ್ದು ಸತ್ತು ಹೋಗಿದೆಯೋ ಆ ಜಾಗದಲ್ಲಿ ಮತ್ತೊಂದು ಮರವನ್ನು ಹಾಕತಕ್ಕಂಥ ಕೆಲಸ ನಡೆಯುತ್ತಿಲ್ಲ. ಇದು ಪ್ರಾಮುಖ್ಯವಾದಂತಹ ವಿಚಾರ ಅಲ್ಲವೇ ಅಂತ ನಾನು ಕೇಳುತ್ತಿದ್ದೇನೆ. ನಾನು ಅದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಸೂಚನೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಬಜೆಟ್ ಅಧಿವೇಶನ ಆಗಲೀ ಯಾವುದೇ ಅಧಿವೇಶನ ಆಗಲೀ, ಬೇರೆ ಬೇರೆ ತರಹದ ಗಮನ ಸೆಳೆಯುವ ಸೂಚನೆ ಅಥವಾ ಬೇರೆ ಬೇರೆ ನಮ್ಮ ರೂಲ್ಸ್‌ನ ಕೆಳಗಡೆ, ಬೇರೆ ಬೇರೆ ವಿಧವಾದಂತಹ ಚರ್ಚೆಗೆ ವಿಷಯಗಳನ್ನು ಸದಸ್ಯರು ಸೂಚನೆ ಮಾಡುತ್ತಾರೆ. ಅದರ ಮೇಲೆ ಚರ್ಚೆಯಾಗಬೇಕಾಗುತ್ತದೆ. ಅದರ ಪ್ರಾಮುಖ್ಯತೆಯನ್ನು ಅನುಸರಿಸಬೇಕಾಗುತ್ತದೆ. ಆದ್ದರಿಂದ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಬಜೆಟ್ ಅಧಿವೇಶನವನ್ನು ಎರಡು ಭಾಗವಾಗಿ ಮಾಡಿ. ನಾವು ಬಹಳ ಸಲ ಅದನ್ನು ಮಾಡಿದ್ದೇವೆ. ಮೊದಲನೆಯದು ಏನು ಅಂದರೆ ಮೇನ್ ಬಜೆಟ್ ಮೇಲೆ ಚರ್ಚೆ ಮಾಡುವುದು. ಅದಾದ ಮೇಲೆ ಒಂದು ತಿಂಗಳು ಅಥವಾ ಒಂದೂವರೆ ತಿಂಗಳು ಎರಡು ತಿಂಗಳು ಬೇಡಿಕೆಗಳ ಮೇಲೆ ಚರ್ಚೆ ಮಾಡುವುದು. ಪಾರ್ಲಿಮೆಂಟಿನೊಳಗೆ ಹೀಗೆ ಮಾಡುತ್ತಿದ್ದಾರೆ. 28ಕ್ಕೆ ಅವರು ಬಜೆಟ್ ಅನ್ನು ಮಂಡಿಸಿದರೆ ಮಾರ್ಚಿ 31ರೊಳಗಾಗಿ ಅಪ್ರೊಪ್ರಿಯೇಷನ್ಸ್ ಬಿಲ್ ಪಾಸಾಗಬೇಕು. ಅವರು ಓಟ್–ಆನ್– ಅಕೌಂಟ್ ತೆಗೆದುಕೊಳ್ಳುತ್ತಾರೆ. ಅದಾದ ಮೇಲೆ ಕೊನೆಯವರೆಗೆ ಬಜೆಟ್ ಅಧಿವೇಶನ ನಡೆಯುತ್ತದೆ. ಪಾರ್ಲಿಮೆಂಟಿನಲ್ಲಿ ಹಾಗೂ ಜನತಂತ್ರ ಪದ್ಧತಿ ಇರತಕ್ಕಂಥ ರಾಷ್ಟ್ರಗಳಲ್ಲಿ ಯಾವ ಪದ್ಧತಿ ಅನುಸರಿಸುತ್ತಿದ್ದಾರೋ ಆ ಪದ್ಧತಿಯನ್ನು ಇಲ್ಲಿಯೂ ಅನುಸರಿಸಬೇಕು ಎನ್ನುವಂತಹ ನಿರ್ಣಯವನ್ನು ಮಾಡಿದ್ದಾರೆಂದು ನಾನು ಕೇಳಿದ್ದೇನೆ. ನಮ್ಮ ಪಾರ್ಲಿಮೆಂಟಿನಲ್ಲಿ ಕನ್ಸಲ್‌ಟೇಟಿವ್ ಕಮಿಟಿ ಅಂತ ಮಾಡಿದರು. ಅದೇ ರೀತಿ ನಾವು ಮಾಡಿದ್ದೇವೆ. ಕನ್ಸಲ್‌ಟೇಟೀವ್ ಕಮಿಟಿ ಕೇವಲ ನೆಪ ಮಾತ್ರಕ್ಕೆ ಸೇರುತ್ತದೆಯೇ ಹೊರತು ಅದರಲ್ಲಿ ಚರ್ಚೆ ಎಂದಿಗೂ ಆಗುವುದಿಲ್ಲ. ಸದಸ್ಯರಿಗೆ ಇದರಿಂದ ಟಿ.ಎ. ಡಿ.ಎ.ಯನ್ನು ಕೊಡಲಿಕ್ಕೆ ಅನುಕೂಲವಾಗಬಹುದು. ಅಲ್ಲಿ ಇದೆ; ನಾನು ಅಲ್ಲಿರುವ ಬಗೆ

ಹೇಳುತ್ತಿದ್ದೇನೆ. ಅದರ ನಿರರ್ಥಕತೆಯನ್ನು ನೋಡಿ ಕೇಂದ್ರ ಸರ್ಕಾರದವರು ಕಮಿಟಿ ಸಿಸ್ಟಂ ಅನ್ನು ಜಾರಿ ಮಾಡಬೇಕೆಂದು ಯೋಚನೆ ಮಾಡಿದ್ದಾರೆ. ಕಮಿಟಿ ಸಿಸ್ಟಂ ಅಂದರೆ ಏನು ಅಂದರೆ, ಅದೊಂದು ಮಿನಿ ಅಸೆಂಬ್ಲಿ ಇದ್ದ ಹಾಗೆ. ಕೆಲವೊಂದು ಖಾತೆಗಳಿಗೆ ಒಂದು ಕಮಿಟಿಯನ್ನು ಮಾಡುತ್ತಾರೆ. ಆ ಕಮಿಟಿ ವರ್ಷದಲ್ಲಿ ಕನಿಷ್ಠ ಪಕ್ಷ 200 ದಿವಸ ಕೂರುತ್ತದೆ. ಅದರಲ್ಲಿರತಕ್ಕಂಥ ಆಡಳಿತ ದೋಷವಾಗಲೀ, ಅಥವಾ ಆರ್ಥಿಕ ವ್ಯವಹಾರವಾಗಲೀ, ಅಥವಾ ಬೇರೆ ಯಾವುದೇ ರೀತಿಯ ಡೆವಲಪ್‌ಮೆಂಟಿಗೆ ಸಂಬಂಧಪಟ್ಟಂಥ ವಿಚಾರವಾಗಲೀ, ಅದರಲ್ಲಿ ಚರ್ಚೆಯನ್ನು ಕೂಲಂಕಷವಾಗಿ ಮಾಡುತ್ತಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಸೂಚನೆಯನ್ನು ಮಾಡಲಿಕ್ಕೆ ಬಯಸುತ್ತೇನೆ. ಬಜೆಟ್ ಅಧಿವೇಶನವನ್ನು ಎರಡು ಭಾಗವಾಗಿ ವಿಂಗಡಿಸಿ, ಅಥವಾ ಕಮಿಟಿ ಸಿಸ್ಟಂ ಅನ್ನು ಇಲ್ಲಿ ನೀವು ಜಾರಿಗೆ ತರುವುದರ ಬಗ್ಗೆ ವಿಚಾರ ಮಾಡಿ ಅಂತ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್:– ಇವತ್ತು ಪಶ್ಚಿಮ ಬಂಗಾಳದಲ್ಲಿ ಈ ಪದ್ಧತಿ ಇದೆ.

ಶ್ರೀ ಎಂ. ವೀರಪ್ಪಮೊಯಿಲಿ:– ಇದರಲ್ಲಿಯೇ ಸಮಯ ಹೋಗುತ್ತದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಹೇಳಿದ ಮೇಲೆ ಪುನಃ ಏತಕ್ಕೆ ಹೇಳುವುದು ? I think, we will have to put a stop for this.

ಎಷ್ಟು ದಿವಸ ಅವಕಾಶ ಕೊಟ್ಟರೂ ಇದೇ ರೀತಿಯಾಗುತ್ತದೆ. ಎಲ್ಲರೂ ಎಲ್ಲ ವಿಚಾರದ ಮೇಲೆ ಮಾತನಾಡಿದರೆ ಯಾವುದೂ ಸರಿಯಾಗಿ ಆಗುವುದಿಲ್ಲ. ಮಾತನಾಡುವುದಕ್ಕೆ ಅಡ್ಡಿ ಇಲ್ಲ. ಆದರೆ ವಿಷಯ ನಮಗೆ ಬರುವುದೇ ಇಲ್ಲ. ಮಾನ್ಯ ಹಿರಿಯ ಸದಸ್ಯರಾದಂತಹ ರಾಮಕೃಷ್ಣ ಹೆಗಡೆಯವರು ಹೇಳಿದಂತಹ ವಿಚಾರವನ್ನು ನಾನು ಒಪ್ಪುತ್ತೇನೆ. ಏಕೆಂದರೆ ಕನ್ಸಲ್‌ಟೇಟಿವ್ ಕಮಿಟಿ ಸಿಸ್ಟಂ, ಕೇಂದ್ರದಲ್ಲಿ ಏನಿದೆ ಅದನ್ನು ತಾವು ಇರುವಾಗಲೇ ಅದನ್ನು ಜಾರಿಗೆ ತಂದಿದ್ದೀರಿ, ಅದು ಯಶಸ್ವಿಯಾಗಲಿಲ್ಲ, ಯಶಸ್ವಿಯಾಗದೆ ಇರುವುದನ್ನು ನಾವು ಪುನಃ ಜಾರಿ ಮಾಡತಕ್ಕಂಥದ್ದು ಯುಕ್ತವಲ್ಲ.

ಶ್ರೀ ರಾಮಕೃಷ್ಣ ಹೆಗಡೆ:– ಇದಕ್ಕೂ ಅದಕ್ಕೂ ಬಹಳ ವ್ಯತ್ಯಾಸ ಇದೆ.

ಶ್ರೀ ಎಂ. ವೀರಪ್ಪಮೊಯಿಲಿ:– ಕನ್ಸಲ್‌ಟೇಟೀವ್ ಕಮಿಟಿ ಮಾಡಿದ್ದರಿಂದ ಯಾವುದೇ ಪ್ರಯೋಜನ ಬರಲಿಲ್ಲ. ಅದು ಪರಿಣಾಮಕಾರಿಯಾಗಿ ಕೆಲಸವನ್ನು ಕೂಡ ಮಾಡಿಲ್ಲ. ತಾವು ಹೇಳಿದ ಹಾಗೆ ನಾನೂ ಕೂಡ ಅಧ್ಯಯನ ಮಾಡಿದ್ದೇನೆ. ಕೇರಳದಲ್ಲಿ ಕಮಿಟಿ ಸಿಸ್ಟಂ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ನಾನು ಒಪ್ಪುತ್ತೇನೆ, ಏಕೆಂದರೆ ಅನೇಕ ಬಾರಿ ನಮಗೆ ಅನುಭವ ಆದ ಹಾಗೆ ವಿಚಾರಗಳು ಹೆಚ್ಚಿವೆ, ಇವತ್ತು ಬೇರೆ ಬೇರೆ ಜನಗಳ ಬೇಡಿಕೆಗಳು ಜಾಸ್ತಿ ಇರುವಾಗ ಈ ಸದನದಲ್ಲಿ 100 ದಿವಸ ಅಲ್ಲ 200 ದಿವಸ ಕುಳಿತುಕೊಂಡರೂ ಸಮರ್ಪಕವಾದಂಥ ಚರ್ಚೆ ಇಲ್ಲಿ ಆಗುತ್ತದೆಂದು ನನಗೂ ಕೂಡ ವಿಶೇಷವಾದಂಥ ನಂಬಿಕೆ ಇದೆ. ಆದ್ದರಿಂದ ಕಮಿಟಿ ಸಿಸ್ಟಂ ಅನ್ನೇ ನಾವು ಜಾರಿ ಮಾಡಲಿಕ್ಕೆ ವಿಚಾರ ಮಾಡಬಹುದು. ತಮ್ಮ ಜೊತೆಯಲ್ಲಿಯೂ ಸಮಾಲೋಚನೆ ಮಾಡಿಕೊಂಡು ನಮ್ಮ ಎಲ್ಲಾ ಹಿರಿಯ ಸದಸ್ಯರು ಮತ್ತು ನಮ್ಮ ವಿರೋಧ ಪಕ್ಷದ ನಾಯಕರು ಇವರ ಜೊತೆಯಲ್ಲಿ ನಾವು ಕುಳಿತುಕೊಂಡು ಚರ್ಚೆ ಮಾಡೋಣ. ಯಾವುದರ ಬಗ್ಗೆ ಚರ್ಚೆ ಮಾಡಬೇಕೆಂದು ತಿಳಿದುಕೊಂಡು, ಸ್ವಲ್ಪ ಆದ್ಯತೆಯ ಆಧಾರದ ಮೇರೆಗೆ ಮಾಡಿದರೆ 29, ಮತ್ತು 30ನೇ ತಾರೀಖು ಪರಿಣಾಮಕಾರಿಯಾದಂತಹ ಚರ್ಚೆ ಮಾಡಲಿಕ್ಕೆ ಸಾಧ್ಯವಾಗುತ್ತದೆಂದು ತಮ್ಮ ಮೂಲಕ ಸಲಹೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಏಕಾಂತಯ್ಯನವರು ಏನು ಸಲಹೆಯನ್ನು ಕೊಟ್ಟಿದ್ದಾರೆ ಅದನ್ನು ನಾವು ಬೆಳಿಗ್ಗೆ ಕೊಟ್ಟಿದ್ದೇವೆ. ಏಕೆಂದರೆ 48 ಬೇಡಿಕೆಗಳನ್ನು ಇಲ್ಲಿ ಹಾಕಿ ಒಂದೇ ದಿವಸದಲ್ಲಿ

ಚರ್ಚೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಜೊತೆಗೆ ಸದಸ್ಯರು ಅದರ ಮೇಲೆ ಬೆಳಕನ್ನು ಚೆಲ್ಲಲಿಕ್ಕೂ ಸಾಧ್ಯವಿಲ್ಲ. ಮತ್ತು 31 ಜನ ಮಂತ್ರಿಗಳು ಉತ್ತರವನ್ನು ಕೊಡಬೇಕು. We cannot expect answers from ministers for five or ten minutes.

ಅದಕ್ಕಾಗಿ ನಾನು ಬೆಳಿಗ್ಗೆನೇ ಹೇಳಿದೆ. ಇದರಲ್ಲಿ ಮುಖ್ಯವಾಗಿ ಎಲ್ಲ ಬೇಡಿಕೆಗಳ ಬಗ್ಗೆ ಚರ್ಚೆಯಾಗಬೇಕು, ಎಲ್ಲ ಬೇಡಿಕೆಗಳ ಮೇಲೆ ನಾವು ಬೆಳಕನ್ನು ಚೆಲ್ಲಬೇಕಾಗುತ್ತದೆ. ತಾವೂ ಸಹ ಉತ್ತರವನ್ನು ಕೊಡಬೇಕಾಗುತ್ತದೆ. ಇದು ನಮ್ಮ ಕರ್ತವ್ಯ. ಕರ್ತವ್ಯಕ್ಕೆ ಚ್ಯುತಿಯಾಗುತ್ತಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇವತ್ತು ಸಮಯದ ಅಭಾವದಿಂದ 23, 29, 30 ಮೂರು ದಿನ ಇದೆ. ಹಾಗಾಗಿ ಈ 48 ಬೇಡಿಕೆಗಳ ಬಗ್ಗೆ ಮಾನ್ಯ ಸದಸ್ಯರುಗಳು ಏನಾದರೂ ಅಭಿಪ್ರಾಯವನ್ನು ಕೊಟ್ಟರೂ ಸಹ ಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡಲಿಕ್ಕೂ ಆಗುವುದಿಲ್ಲ. ಹಾಗಾಗಿ ಸಾಕಷ್ಟು ಸದಸ್ಯರಿಗೂ ಸಮಾಧಾನ ಮಾಡಲಿಕ್ಕೆ ಆಗುವುದಿಲ್ಲ. ನಮ್ಮ ಮಾನ್ಯ ಏಕಾಂತಯ್ಯನವರು ಏನು ಸಲಹೆಯನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ತಾವು 10 ನಿಮಿಷಗಳ ಕಾಲ ಸದನವನ್ನು ಮುಂದೂಡಿದರೆ, ನಾವು ಕುಳಿತುಕೊಂಡು ಬೇಕಾದರೆ ಚರ್ಚೆ ಮಾಡೋಣ.

ಶ್ರೀ ಎಂ. ವೀರಪ್ಪಮೊಯಿಲಿ:– ಚರ್ಚೆ ಮಾಡೋಣ.

ಶ್ರೀ ಆರ್.ವಿ. ದೇಶಪಾಂಡೆ:– 48 ಬೇಡಿಕೆಗಳು ಮೂವ್ ಆಗಿವೆ. ಎಲ್ಲ 48 ಬೇಡಿಕೆಗಳ ಮೇಲೆ ಹೇಗೆ ಚರ್ಚೆ ಮಾಡುವುದು. ನಮ್ಮ ರೆವಿನ್ಯೂ ಮಿನಿಸ್ಟರ್ ಕೆಲವು ಸಲಹೆಯನ್ನು ಕೊಟ್ಟಿದ್ದಾರೆ. ಎಲ್ಲ ಬೇಡಿಕೆಗಳು ಮುಖ್ಯವಾಗಿವೆ. ಇವತ್ತಿನ ಸಮಯದಲ್ಲಿ ಹೆಚ್ಚು ಬೆನಿಫಿಟ್ ಅನ್ನು ತೆಗೆದುಕೊಳ್ಳುವುದಕ್ಕೆ ಹೇಗೆ ಸಾಧ್ಯ ? ರಾಜ್ಯದ ದೃಷ್ಟಿಯಿಂದ, ರಾಜ್ಯದ ಜನರ ಹಿತದೃಷ್ಟಿಯಿಂದ ನಾವು ಅದರ ಬಗ್ಗೆ ಪ್ರಯತ್ನ ಮಾಡಿದರೆ ಒಳ್ಳೆಯದಾಗಬಹುದು. ಅದರ ಬಗ್ಗೆ, ಐದು ನಿಮಿಷ ಸಭೆ ಮುಂದೂಡಿ ಚರ್ಚೆ ಮಾಡಿದರೆ ತೊಂದರೆ ಇಲ್ಲ ಅಂತ ನನ್ನ ಅಭಿಪ್ರಾಯವಾಗಿದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಬೇರೆ ಸದಸ್ಯರು ಅದರ ಬಗ್ಗೆ ಮಾತನಾಡುತ್ತಿರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನನಗೆ ಅರ್ಥವಾಗದೇ ಇರುವ ಸಂಗತಿ ಅಂದರೆ ಬಿಜಿನೆಸ್ ಅಡ್ವೈಸರಿ ಕಮಿಟಿಯ ಮೀಟಿಂಗ್‌ನಲ್ಲಿ ಆ ಕಡೆ ಈ ಕಡೆ ಇರುವಂತಹ ಎಲ್ಲರೂ ಮಾನ್ಯ ಸದಸ್ಯರುಗಳು ಕುಳಿತು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ನಾವು ಬಂದಿದ್ದೇವೆ. ಇವತ್ತು ಅನಿವಾರ್ಯವಾಗಿ ಅನೇಕ ಇಲಾಖೆಗಳ ಬೇಡಿಕೆಗಳನ್ನು ಒಟ್ಟಿಗೆ ಇಟ್ಟಿದ್ದಾರೆ. ಅವರ ಕಡೆಯವರಿಗೆ ಎಷ್ಟು ಜವಾಬ್ದಾರಿ ಇದೆಯೋ ಈ ಕಡೆಯಲ್ಲಿ ಇರುವ ನಮಗೂ ಅಷ್ಟೇ ಜವಾಬ್ದಾರಿ ಇದೆ. ಇದನ್ನು ಮುಂದೆ ಸರಿಪಡಿಸಿಕೊಳ್ಳುವುದು ಹೇಗೆ ? ಇದರ ಬಗ್ಗೆ ಚರ್ಚೆಯಾಗ ಬೇಕಾಗಿದೆ. ಜನ ಇದ್ದಾರೆ, ನಮ್ಮನ್ನು ಕ್ಷಮಿಸುವುದಿಲ್ಲ ಎನ್ನುವ ಅರಿವು ನಮ್ಮ ಎರಡೂ ಕಡೆಯವರಿಗೆ ಇದೆಯೆಂದು ನಾನು ಅಂದುಕೊಂಡಿದ್ದೇನೆ. ಎಲ್ಲ ಬೇಡಿಕೆಗಳನ್ನು ಒಟ್ಟಿಗೆ ಹಾಕಿದರೆ ಈ ಕಡೆ ಕುಳಿತುಕೊಂಡವರಿಗೆ ಮತ್ತು ಆ ಕಡೆ ಕುಳಿತುಕೊಂಡಿರುವವರಿಗೆ ಯಾವುದು ಗಂಭೀರವಾದ ವಿಷಯ, ಯಾವುದರ ಬಗ್ಗೆ ಪ್ರಸ್ತಾಪ ಮಾಡಬೇಕೆನ್ನುವ ಅರಿವು ನಮಗೆ ಇದ್ದು ಮಾತನಾಡಿದರೆ ಸಾಕು. ಅದರ ಬಗ್ಗೆ ಚರ್ಚೆ ಮಾಡಿ, ಮತ್ತೆ ಬಂದು ಚರ್ಚೆ ಮಾಡುವುದು ಏನಿದೆ ? ಈಗ ಇರುವುದು ಇನ್ನು ಎರಡೂವರೆ ದಿವಸ, ಇದಕ್ಕೆ ಗಂಟೆಗಟ್ಟಲೆ ವ್ಯರ್ಥ ಮಾಡುವುದರ ಬದಲಾಗಿ ಚರ್ಚೆ ಪ್ರಾರಂಭವಾದರೆ, ಯಾವುದು ಪ್ರಮುಖವಾಗಿದೆಯೋ ಅದರ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಾರೆ. ಸಂಬಂಧಪಟ್ಟಂಥ ಸಚಿವರು ಉತ್ತರವನ್ನು ಕೊಡಲಿ. ಮತ್ತೆ ಏತಕ್ಕೆ ಇದರ ಬಗ್ಗೆ ಮಾತನಾಡುವುದು.

ಪ್ರಕಟಣೆ

ಅಧ್ಯಕ್ಷರು:– ವಿಧಾನ ಸಭೆಯ ಕಾರ್ಯಕಲಾಪಗಳಿಗೆ ಸಂಬಂಧಿಸಿದಂತೆ ದಿನಾಂಕ: 18ನೇ ಮಾರ್ಚಿ 1993ರಂದು ನೀಡಿದ ಪ್ರಕಟಣೆಯನ್ನು ಈ ಕೆಳಕಂಡಂತೆ ಭಾಗಶಃ ಮಾರ್ಪಡಿಸಲಾಗಿದೆ. ದಿನಾಂಕ: 23 ಮತ್ತು 29ನೇ ಮಾರ್ಚಿ 1993ರಂದು ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ. 30ನೇ ಮಾರ್ಚ್ 1993ರಂದು ಚರ್ಚೆಗೆ ಉತ್ತರ ಹಾಗೂ ಧನವಿನಿಯೋಗದ ಮಸೂದೆಯ ಮಂಡನೆ ಮತ್ತು ಅಂಗೀಕಾರ.

ವಿತ್ತೀಯ ಕಾರ್ಯಕಲಾಪಗಳು

1993–94ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

† ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):– ಮಾನ್ಯ ಅಧ್ಯಕ್ಷರೆ, ಇವತ್ತಿನ ಬೇಡಿಕೆಗಳ ಪೈಕಿ ತೋಟಗಾರಿಕೆ, ಪಶುಸಂಗೋಪನೆ ಮತ್ತು ಕೃಷಿಯನ್ನು ಆಯ್ಕೆ ಮಾಡಿಕೊಂಡು ನಾನು ನನ್ನ ಚರ್ಚೆಯನ್ನು ಆರಂಭ ಮಾಡುತ್ತಿದ್ದೇನೆಂದು ಹೇಳುತ್ತಾ ಅದಕ್ಕೆ ಕಾರಣವನ್ನು ಕೂಡ ನಾನು ಮಾನ್ಯ ಪಶುಸಂಗೋಪನಾ ಸಚಿವರಿಗೆ ಹೇಳಬೇಕಾಗುತ್ತದೆ. ನಾಲ್ಕು ವರ್ಷಗಳಿಂದ ಈ ಇಲಾಖೆಯ ಬಗ್ಗೆ ಇಲ್ಲಿ ಚರ್ಚೆಯಾಗಲೇ ಇಲ್ಲ.

(Mr. Deputy Speaker in the chair)

ನಮಗೆ ದೊರಕಿರುವ ಅಂಕಿ ಅಂಶಗಳ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಸುಮಾರು ಎರಡೂವರೆ ಕೋಟಿ ಪಶುಗಳು, ಅದರಲ್ಲಿ ಹಕ್ಕಿ ಪಕ್ಷಿಗಳು ಸುಮಾರು 15ರಿಂದ 20 ಲಕ್ಷ ಸೇರಿ ಸರಿಸುಮಾರು ಈ ಜನಸಂಖ್ಯೆಯಷ್ಟೆ ಇವೆ ಎಂದರೆ ನಮಗೆ ಆಶ್ಚರ್ಯವಾಗಬಹುದು. ಈ ಪಶು ಸಂಗೋಪನಾ ಇಲಾಖೆ ಕುರಿತು ಮಾತನಾಡಬೇಕಾದರೆ ಅತ್ಯಂತ ಕಡಿಮೆ ಬಂಡವಾಳ ಹೂಡಿ ರೈತರಿಗೆ ಗ್ರಾಮೀಣ ಪ್ರದೇಶಗಳಲ್ಲಿ ಏನಾದರೂ ಉತ್ಪಾದನೆ ಮಾಡಬಹುದು ಎಂದರೆ ಪಶುಸಂಗೋಪನಾ ಮತ್ತು ತೋಟಗಾರಿಕೆ ಬಿಟ್ಟು ನಾವು ಬೇರೆ ಕಡೆ ಮಾಡುವುದಕ್ಕೆ ಆಗುವುದಿಲ್ಲ. ಯಾವುದೇ ಕೈಗಾರಿಕೆಗಳನ್ನು ಆರಂಭ ಮಾಡುವುದಕ್ಕೆ ಹೊರಟರೆ ಯಾವುದೇ ಉದ್ಯಮವನ್ನು ಆರಂಭ ಮಾಡುವುದಕ್ಕೆ ನಾವು ನೀವು ಹೊರಟರೆ ಆರಂಭವಾಗುವ ದಿವಸಕ್ಕೆ ನಾವು ಅನೇಕ ಸ್ಥಿತಿಗತಿಗಳನ್ನು ದಾಟಿ ಬರಬೇಕಾಗುತ್ತದೆ. ಬೇಕಾದಷ್ಟು ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಆದರೆ ಇವತ್ತು ಗ್ರಾಮೀಣ ಪ್ರದೇಶದ ರೈತನು ಏನು ಮಾಡುತ್ತಿದ್ದಾನೆ. ಪಶುಗಳನ್ನು ಕಾಪಾಡುವುದು ಮತ್ತು ಅದರಿಂದ ಆದಾಯ ಮಾಡುವುದು. ಈ ಕಡೆ ಸರ್ಕಾರ ದಿವ್ಯ ನಿರ್ಲಕ್ಷ್ಯವನ್ನು ತೋರಿಸುತ್ತಿದೆ ಎಂದು ಹೇಳುತ್ತಾ ಈ ಬೇಡಿಕೆಯ ಬಗ್ಗೆ ವಿರೋಧ ಮಾಡಿ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಈ ಪಶು ಇಲಾಖೆಯ ಬಗ್ಗೆ ನಾವು ನೋಡಿದಾಗ ಬಹುಶಃ ಇವರಿಗೆ ಪ್ರಥಮ ಆದ್ಯತೆಯನ್ನು ಕರೆವು ಹಸುಗಳ ಮೇಲೆ ಇವರು ನಿಗದಿ ಮಾಡಿಕೊಂಡಿದ್ದಾರೆ. ಆದಾದ ಮೇಲೆ ಎಮ್ಮೆಗಳು, ಕುರಿಗಳು, ಮೇಕೆ, ಕೋಳಿ, ಹಕ್ಕಿ ಪಕ್ಷಿಗಳು, ಬರುತ್ತಾ ಹೋಗುತ್ತವೆ. ಮೊದಲನೆಯದಾಗಿ ಹಸುಗಳ ಬಗ್ಗೆ ಮಾತನಾಡಬೇಕೆಂದಾಗ ರಾಜ್ಯ ಸರ್ಕಾರ ಒಂದು ಬ್ರೀಡಿಂಗ್ ಕಮಿಟಿ ಅಂತ ಮಾಡಿದ್ದಾರೆ.

ಶ್ರೀಮತಿ ಮೋಟಮ್ಮ:– ವೈಲ್ಡ್ ಲೈಫ್ ಬಗ್ಗೆ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಹಕ್ಕಿ ಪಕ್ಷಿಗಳು ಪಶು ಸಂಗೋಪನೆಯಲ್ಲಿಯೇ ಬರುತ್ತವೆ. ವೈಲ್ಡ್ ಲೈಫ್ ಬೇರೆ ಬರುತ್ತದೆ. ಬರ್ಡ್ಸ್ ಎಲ್ಲಾ ಇವರಿಗೆ ಬರುತ್ತದೆ. ತಾವು ಧೈರ್ಯವಾಗಿ ಕೇಳಬಹುದು. ಅದಕ್ಕೆ ಬರ್ಡ್ಸ್ ಎಂದು ಬಳಸುತ್ತಿದ್ದೇನೆ. ವೈಲ್ಡ್ ಲೈಫ್ ಆಗುವುದಿಲ್ಲ. ಈ ಪಶುಸಂಗೋಪನಾ ಬಗ್ಗೆ

ಹಸುವಿಗೆ ಪೂರಕವಾಗಿ ಅಥವಾ ಕರೆವು ಹಸುಗಳಿಗೆ ಪೂರಕವಾಗಿ ಮಾತನಾಡಬೇಕಾದರೆ, ಈ ರಾಜ್ಯ ಸರ್ಕಾರ ಇವತ್ತಿನವರೆಗೂ 5–6 ವರ್ಷಗಳಿಂದ ಬ್ರೀಡಿಂಗ್ ಸಮಿತಿಯನ್ನು ಕರೆಯಲಿಲ್ಲ. ಕರ್ನಾಟಕದಲ್ಲಿ ಯಾವ ಜಾತಿಯ ಹಸುಗಳನ್ನು ಅಭಿವೃದ್ಧಿ ಮಾಡಬೇಕಾಗಿತ್ತೋ ಯಾವ ಜಾತಿಯ ಹಸುಗಳನ್ನು ಅಭಿವೃದ್ಧಿ ಮಾಡಿದ್ದರೆ ರೈತರಿಗೆ ಒಳ್ಳೆಯದು ಆಗುತ್ತಿತ್ತೋ ಅಂಥ ಹಸುಗಳನ್ನು ಅಭಿವೃದ್ಧಿ ಮಾಡಬೇಕಾದರೆ ನಮಗೆ ಏನು ಆದಾಯ ಬರುತ್ತಿತ್ತೋ ಅಥವಾ ಅದರಿಂದ ವೈಜ್ಞಾನಿಕವಾಗಿ ಏನಾದರೂ ತೊಂದರೆಗಳು ಆಗುತ್ತವೋ ಅಥವಾ ರೋಗಗಳು ಜಾಸ್ತಿಯಾಗುತ್ತಿತ್ತೋ, ಕರೆವಿನ ಕಾಲ ಜಾಸ್ತಿಯಾಗುತ್ತಿತ್ತೋ ಅಥವಾ ಕರುಗಳು ಜಾಸ್ತಿಯಾಗುತ್ತಿತ್ತೋ ಎಂದು ಯೋಚನೆ ಮಾಡಬೇಕಾದರೆ ಸಮಿತಿಯಾಗಬೇಕಾಗಿತ್ತು. ಆದರೆ ಅದು ಸಭೆಯನ್ನೇ ಸೇರಲಿಲ್ಲ. ಇದರ ದುರಂತವನ್ನು ನೊಂದು ಹೇಳಬೇಕಾದರೆ ಹಸುಗಳನ್ನು ನಾವು ಕೊಂಬು ಬಾಲ ನೋಡಿ ಅವುಗಳ ಯೋಗ್ಯತೆಯನ್ನು ಅಳೆಯುತ್ತಿದ್ದೇವೆ. ಇದು ತಪ್ಪಬೇಕಾಗಿತ್ತು. ಮಾನ್ಯ ಸಚಿವರಿಗೆ ಹೇಳಿದ್ದೆ. ಏನೆಂದರೆ, ಪಕ್ಕದ ರಾಜ್ಯ ಕೇರಳದಲ್ಲಿ ಅವರು ಒಂದು ಲೋಕಲ್ ಬ್ರೀಡ್ ಅನ್ನು ತಯಾರು ಮಾಡಿದ್ದಾರೆ. ಸುನಂದಿನಿ ಎಂದು ಅವರದೇ ಒಂದು ಹೆಸರನ್ನು ಇಟ್ಟುಕೊಂಡಿದ್ದಾರೆ. ಅವರು ಯಾವುದೇ ರೀತಿಯ ಕಾಲು, ಮೂಗು, ಬಾಲಕ್ಕೆ ಮಹತ್ವವನ್ನು ಕೊಡುವುದಿಲ್ಲ. ಕರಾವು ಎಷ್ಟು ಕೊಡುತ್ತದೆ ಎಂಬುದನ್ನು ನೋಡುತ್ತಾರೆ. ತಾವು ಒಂದು ಸಲ ಅಲ್ಲಿಗೆ ಹೋಗಿ ಬರಬೇಕಾಗುತ್ತದೆ. ರಸ್ತೆಯ ಬದಿಯಲ್ಲಿ ಮೇಯುವ ಸಾಧಾರಣ ಹಸುಗಳು ಸಹ 12ರಿಂದ 18 ಲೀಟರ್‌ವರೆಗೆ ಹಾಲನ್ನು ಕರೆಯುತ್ತವೆ. ಯಾವ ರೋಗಗಳೂ ಬರುವುದಿಲ್ಲ. ಏಕೆಂದರೆ ಬ್ಲಡ್ ಲೆವಲ್ ಶೇಕಡ 63ಕ್ಕಿಂತ ಕಡಿಮೆ ಕ್ರಾಸ್ ಆಗಿರುತ್ತದೆ. ಆದರೆ ಕರ್ನಾಟಕದ ಸ್ಥಿತಿ ಏನಾಗಿದೆ ಎಂದರೆ ಈ ಪ್ರಾಜೆಕ್ಟ್ ಪ್ರಾರಂಭವಾದಾಗ ರೆಡ್ಡೇನ್ ಆಗಬೇಕು ಅಂದರು. ಆಮೇಲೆ ಜೆರ್ಸಿ ಆಗಬೇಕೆಂದರು, ಆಮೇಲೆ ಹೆಚ್‌ಎಫ್ ಆಗಬೇಕು ಎಂದರು. ಈಗ ಮತ್ತೆ ವಾಪಸ್ಸು ಹಳ್ಳಿಕಾರ್ ಮತ್ತು ಅಮೃತ್ ತಳಿ ಹಸುಗಳನ್ನು ಪುನರುಜ್ಜೀವನ ಮಾಡಬೇಕೆಂದು ಸೆಮಿನ್ಸ್ ಸಪ್ಷೆ ಮಾಡುತ್ತಿದ್ದಾರೆ. ಈ ಪಶುಸಂಗೋಪನಾ ವಿಷಯದಲ್ಲಿ ಎಲ್ಲಿಗೆ ಹೋಗಿ ನಿಂತಿದ್ದಾರೆ ಎಂದರೆ, ಹಾಲು ಕರೆಯುವ ಪ್ರಾಣಿಗಳ ವಿಷಯದಲ್ಲಿ ಒಂದು ತೀರ್ಮಾನವಿಲ್ಲ. ಅಧಿಕಾರಿಗಳು ಏನು ಬೇಕೋ, ಅವರ ಇಚ್ಛೆಯಂತೆ, ಯಾರದೋ ಮರ್ಜಿ ಬಂದರೆ ಹೆಚ್.ಎಫ್. ಕಳಿಸುತ್ತಾರೆ. ಇನ್ನೊಬ್ಬರ ಮರ್ಜಿ ಬಂದರೆ ಜೆರ್ಸಿ ಕಳುಹಿಸುತ್ತಾರೆ. ಇವರು ಇದನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ 10–15 ವರ್ಷಗಳು ರೈತನ ಬದುಕಿನ ಮೇಲೆ ಪರಿಣಾಮ ಬೀರುತ್ತದೆ. ಇವತ್ತು ಒಂದು ಕರು ಹುಟ್ಟು ಹಾಕಿದರೆ ಮುಗಿದು ಹೋಗುವುದಿಲ್ಲ. ಅದು 10–15 ವರ್ಷಗಳು ಪರಿಣಾಮ ಬೀರುತ್ತದೆ. ಆ ಕಡೆಗೆ ಗಮನ ಕೊಟ್ಟಿಲ್ಲ. ಇದರ ಬಗ್ಗೆ ಸಚಿವರು ಗಮನ ಕೊಡಬೇಕು. ಇದರ ಜೊತೆಗೆ ಎಮ್ಮೆಯಲ್ಲಿ ಮೂರಾ ಒಳ್ಳೆಯ ಜಾತಿಯೆಂದು ಹೇಳುತ್ತಾರೆ, ಸೂತಿ ಒಳ್ಳೆಯ ಜಾತಿ ಎನ್ನುತ್ತಾರೆ.

ಈ ಮಧ್ಯೆ ಒಂದು ನಿರ್ದಿಷ್ಟವಾದಂತಹ ತೀರ್ಮಾನಕ್ಕೆ ಸರ್ಕಾರ ಮೊದಲೇ ಬರಬೇಕು. ನಾನು ಮುರಾ ತಳಿಯನ್ನು ಅಭಿವೃದ್ಧಿ ಮಾಡುತ್ತೇನಾ ಅಥವಾ ಸೂತಿ ತಳಿಯನ್ನು ಅಭಿವೃದ್ಧಿ ಮಾಡುತ್ತೇನಾ ಅಂತ. ಈ ಎರಡರ ಮಧ್ಯೆ ಏನು ವ್ಯತ್ಯಾಸ ಇದೆ, ಇದನ್ನು ಏನು ಮಾಡಿದರೆ ನಮ್ಮ ರಾಜ್ಯದ ರೈತನಿಗೆ ಹೆಚ್ಚು ಅನುಕೂಲ ಮಾಡಬಹುದು ಎನ್ನುವಂತಹ ಯೋಚನೆಯನ್ನು ತಾವು ಮಾಡಬೇಕು. ವಾಸ್ತವವಾಗಿ ತಮ್ಮ ಇಲಾಖೆ ಕೆಲಸ ಮಾಡುವುದು ಕಡಿಮೆಯಾಗಿದೆ. ಮಂತ್ರಿಗಳು ಕೂಡ ಇಲಾಖೆಯಲ್ಲಿ ಡೈರಿಯ ಕಡೆ ಹೆಚ್ಚು ಗಮನ ಹರಿಸಿದ್ದಾರೆ ಎನ್ನುವುದು ನನ್ನ ಒಂದು ಆಪಾದನೆ. ಅವರು ಇಲಾಖೆ ಕಡೆ ಹೆಚ್ಚು ಗಮನ ಹರಿಸಬೇಕಾಗಿತ್ತು. ಏಕೆಂದರೆ ಎರಡೂವರೆ ಕೋಟಿ ಜಾನುವಾರು ಇರುವಂತಹ ಇಲಾಖೆಯನ್ನು ಈ ರೀತಿ ನಡೆಸಿಕೊಂಡು ಹೋಗುತ್ತಿರುವುದು ಸರಿಯಾದ ರೀತಿ ಅಲ್ಲ ಎಂದು ನನ್ನ ಅಭಿಪ್ರಾಯ. ಜಿಲ್ಲಾಪರಿಷತ್ತು ಏನಾದರೂ ಅಸ್ತಿತ್ವಕ್ಕೆ ಬರದೇ ಹೋಗಿದ್ದರೆ ಈ ಸ್ಥಿತಿ ಇನ್ನೂ ಗಂಭೀರವಾಗುತ್ತಿತ್ತು. ಜಿಲ್ಲಾಪರಿಷತ್ತು ಬರುವುದಕ್ಕೆ ಮೊದಲೇ ತಾವು ಸಪ್ಲೆ ಮಾಡುತ್ತಿದ್ದ

ಔಷಧಿ ನೋಡಿಕೊಳ್ಳುತ್ತಿದ್ದ ರೀತಿ ನೀತಿ ಇವತ್ತಿಗೆ ಹೋಲಿಸಿದಾಗ ಜಿಲ್ಲಾಪರಿಷತ್ತು ಅಸ್ತಿತ್ವಕ್ಕೆ ಬಂದ ಮೇಲೆ ಆಸ್ಪತ್ರೆಗಳು ಮತ್ತು ಔಷಧಿಗಳ ಸ್ಥಿತಿಗತಿಗಳು ಸ್ವಲ್ಪ ಮಟ್ಟಿಗೆ ಸುಧಾರಿಸಿದೆ. ಇದನ್ನು ಇನ್ನೂ ಚೆನ್ನಾಗಿ ಮಾಡಿಕೊಂಡು ಹೋಗಬೇಕಾಗಿದೆ. ಆನಂತರ ನೀವು ಏನು ಕೃತಕ ಗರ್ಭಧಾರಣೆ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಅದನ್ನು ಮಾನ್ಯ ಸಚಿವರು ಒಂದು ಸಲ ಇದರ ಮೌಲ್ಯಮಾಪನ ಮಾಡಬೇಕಾಗಿದೆ. ಎಷ್ಟು ಪ್ರೆಗ್‌ನೆನ್ಸಿ ರೇಶಿಯೋ ಇದೆ. ನೀವು ನೂರು ಹಸುಗಳಿಗೆ ಇನ್‌ಸ್ಯುಮಿನೇಷನ್ ಮಾಡಿದರೆ, ಎಷ್ಟು ಹಸು ಗರ್ಭ ಆಗುತ್ತವೆ, ಎಷ್ಟು ಕರುಗಳು ಹುಟ್ಟಿವೆ, ಎಷ್ಟು ಬಾರಿ ರಿಪೀಟ್ ಆಗುತ್ತಿದೆ ಎಂದು ನೋಡಿದರೆ, ಪ್ರತಿ ಹಸುಗೆ 2ಅಥವಾ 3ಸಲ ರಿಪೀಟ್ ಆಗಿರುತ್ತದೆ. ಎಂದರೆ ಅದು ಮೂರು ಮೂರು ತಿಂಗಳು ಆ ಹಸು ಗರ್ಭ ಆಗುವ ಕಾಲ ಮುಂದೆ ಹೋಗುತ್ತಿದೆ. ನಾವು ರೈತರಿಗೆ ಸೀಮೆ ಹಸುವನ್ನು ತೆಗೆದುಕೊಳ್ಳಿ ಎಂದು ಹೇಳುವಾಗ ಅವರಿಗೆ ಮಿಲ್ಕಿಂಗ್ ಪೀರಿಯಡ್ ಅಂತ ಇಷ್ಟಿಷ್ಟೇ ಕಾಲಕ್ಕೆ ಇಷ್ಟು ಕರು ಕೊಟ್ಟರೆ ಆ ಹಸುವಿನಲ್ಲಿ ಲಾಭ ಬರುತ್ತದೆ ಎಂದು ಹೇಳುತ್ತೇವೆ. ಆ ಕೆಲಸ ಇವತ್ತು ಈ ಇಲಾಖೆಯಲ್ಲಿ ಆಗುತ್ತಾ ಇಲ್ಲ. ಇನ್ನು ಎರಡನೆಯದಾಗಿ ಇವತ್ತು ಆ ಹಸುಗಳಿಗೆ ಕೊಡುವಂತಹ ಪೂರಕ ಆಹಾರ ಏನು ಇದೆ ಇದನ್ನು ನಾವು ಬರಿ ಕಮರ್ಶಿಯಲ್ ಆಗಿ ತೆಗೆದುಕೊಂಡು ಬಿಟ್ಟಿದ್ದೇವೆ. ಹಸು ಎಂದರೆ ಅದಕ್ಕೆ ಒಂದು ಸ್ವಲ್ಪ ಪಶು ಆಹಾರವನ್ನು ಪೂರಕವಾಗಿ ಕೊಡಬೇಕು, ಅದು ಹಾಕದೇ ಹೋದರೆ ಹಸು ಹಾಲು ಕೊಡುವುದಿಲ್ಲ, ಎನ್ನುವಂತಹ ಅಭಿಪ್ರಾಯ ಇದೆ. ಇದನ್ನು ಕೂಡ ತಾವು ಸ್ವಲ್ಪ ಮಟ್ಟಿಗೆ ತಪ್ಪಿಸಬೇಕಾಗುತ್ತದೆ. ನಾನು ಅಧ್ಯಕ್ಷನಾಗಿದ್ದಾಗ ಅನೇಕ ಸಲ ಭಾಷಣಗಳಲ್ಲಿ ಹೇಳುತ್ತಿದ್ದೆ, ಇದು ಪೂರಕ ಆಹಾರ, ಇದು ಮುಖ್ಯ ಆಹಾರವಾಗಬಾರದಾಗಿತ್ತು ಎಂದು. ಏಕೆಂದರೆ ಎಲ್ಲಿ ಹಸಿರು ಮೇವನ್ನು ಬೆಳೆದು ಹಸುವನ್ನು ಸಾಕಲಿಕ್ಕೆ ಆಗುವುದಿಲ್ಲ ಅಂತಹ ಕಡೆ ನೀವು ಈ ಹಸುವಿನ ಆಹಾರವನ್ನು ಸಬ್‌ಸ್ಟಿಟ್ಯೂಟ್ ಮಾಡಬೇಕಾಗಿತ್ತು.

ಇವತ್ತು ಆ ಸ್ಥಿತಿ ಕರ್ನಾಟಕದಲ್ಲಿ ಇಲ್ಲ. ಇವತ್ತು ನೀವು ಏನೇ ಧಾರಣೆಯನ್ನು ಹಾಲಿನ ಮೇಲೆ ಕೊಟ್ಟುಕೊಂಡು ಹೋದರೂ ಸಹ, ಎಷ್ಟೇ ಧಾರಣೆ ನಿಗದಿ ಮಾಡಿದರೂ ಕೂಡ ರೈತ ತನಗೆ ಲಾಭವಾಗಲಿಲ್ಲ ಎನ್ನುತ್ತಾನೆ. ಏಕೆಂದರೆ ಈ ಒಂದು ಕಾರಣದಿಂದ, ಹಸು ಕೊಡುವ ಹಾಲನ್ನೆಲ್ಲ ಅವನು ಕ್ಯಾಟ್ಲ್ ಫೀಡ್‌ಗೆ ಕೊಡಬೇಕಾಗಿದೆ. ಈ ಕಡೆ ನೋಡಿದರೆ ತಮ್ಮ ಇಲಾಖೆ ಕೆಲಸ ಮಾಡುತ್ತಿಲ್ಲ. ತಾವು ಮೇವು ಅಭಿವೃದ್ಧಿ ಕಾರ್ಯಕ್ರಮವನ್ನು ಏನು ಹಾಕಿಕೊಂಡಿದ್ದೀರಿ ಅದು ಭಾರಿ ಕುಂಠಿತವಾಗಿ ನಡೆಯುತ್ತಿದೆ. ಯಾವುದೇ ತಾಲ್ಲೂಕಿನಲ್ಲಿ ಅಥವಾ ನನ್ನ ತಾಲ್ಲೂಕಿನಲ್ಲೇ ಅನೇಕ ಸಲ ರೆವ್ಯೂ ಮಾಡಿದಾಗ ಕೇಳಿದ್ದೇನೆ, ನಾವು ಏನು ಮಿಶ್ರ ತಳಿ ಮೇವನ್ನು ಬೆಳೆಯಬೇಕಾಗಿತ್ತು ಅಥವಾ ಬೇರೆ ಜಾತಿಯ ಮೇವು ಏನು ಬೆಳೆಯಬೇಕಾಗಿತ್ತು, ಆ ಕಾರ್ಯಕ್ರಮ ಸ್ಥಗಿತವಾಗಿದೆ. ಅಲ್ಲಿ ಕೆಲಸವೇ ಆಗಿಲ್ಲ; ಕೇವಲ ಪೇಪರ್‌ನಲ್ಲಿ ಬರುತ್ತಿದೆ. ಐಆರ್‌ಡಿಪಿನಲ್ಲಿ ಇಷ್ಟು, ಸ್ಪೆಷಲ್ ಕಾಂಪೊನೆಂಟ್‌ನಲ್ಲಿ ಇಷ್ಟು, ಬೇರೆ ಎಸ್‌ಎಲ್‌ಪಿಪಿನಲ್ಲಿ ಇಷ್ಟು ಎಂದು ಲೆಕ್ಕ ಕೊಟ್ಟುಕೊಂಡು ಹೋಗಿಬಿಟ್ಟರೆ ಆಗುತ್ತದೆಯೇ ? ಈಗ ರಾಜ್ಯದಲ್ಲಿ ಹಸುಗಳಿಗೆ ಮೇವು ಇಲ್ಲ. ಆದುದರಿಂದ ಆ ಕಡೆ ಮಾನ್ಯ ಸಚಿವರು ಗಮನ ಕೊಡಬೇಕಾಗುತ್ತದೆ. ಮತ್ತು ಎಮ್ಮೆಗಳ ಬಗ್ಗೆ ನಾನು ಹೇಳುತ್ತಾ ಹೋಗಿದ್ದೇನೆ. ಎಮ್ಮೆಗಳಲ್ಲಿ ಏನು ತಳಿ ಇದೆ ಅದರ ಬಗ್ಗೆ ತಾವು ನಿರ್ದಿಷ್ಟವಾಗಿ ತೀರ್ಮಾನಕ್ಕೆ ಬಂದರೆ ರೈತನಿಗೆ ಸ್ವಲ್ಪ ಸಹಾಯ ಮಾಡಬಹುದು. ಇದಾದನಂತರ ಅದರ ಪೋಷಣೆ ಕಡೆ ನಾನು ಎರಡು ಮಾತನ್ನು ಆಡಬೇಕಾಗುತ್ತದೆ. ಇವತ್ತು ಗ್ರಾಮೀಣ ಪ್ರದೇಶದಲ್ಲಿ ಅವುಗಳ ಪೋಷಣೆಯನ್ನು ಅಷ್ಟೊಂದು ಸಮರ್ಪಕವಾಗಿ ಮಾಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ ನಾವು ಬಡತನದಲ್ಲೇ ಬೆಳೆದುಬಂದಿದ್ದೇವೆ. ಆದುದರಿಂದ ಬಡತನದಲ್ಲೇ ಮುಂದುವರೆಯಬೇಕಾಗಿರುವಂತಹ ಕಾಲದಲ್ಲಿ, ನಾನು ಎಲ್ಲಾ ಹಸುಗಳನ್ನು, ಎಮ್ಮೆಗಳನ್ನು, ಕರುಗಳನ್ನು ಚೆನ್ನಾಗಿ ಬೆಳೆಸುತ್ತೇವೆ ಎಂದು ನಿರೀಕ್ಷಣೆ ಮಾಡುವುದಕ್ಕೆ ಆಗುವುದಿಲ್ಲ. ಇಂತಹ ದುಬಾರಿ ಕಾಲದಲ್ಲಿ ಇವುಗಳ ಪೋಷಣೆಗೆ ಆಗಬೇಕಾಗಿರುವ ಕೆಲಸ ಏನು ಇತ್ತು ಅದರ

ಜೊತೆಗೆ ತಮ್ಮ ಔಷಧಿಗಳ ಸಪ್ಲೈ ರೆಗ್ಯುಲರ್ ಆಗದೇ ಹೋದರೆ, ಆದರಲ್ಲೂ ಕೂಡ ಈ ಪ್ರತಿರೋಧಕ ಚುಚ್ಚುಮದ್ದುಗಳನ್ನು ತಾವು ಸಕಾಲದಲ್ಲಿ ಕೊಡದೇ ಹೋದರೆ ರೈತರು ಭಾರೀ ಗಂಡಾಂತರವನ್ನು ಅನುಭವಿಸಬೇಕಾಗುತ್ತದೆ. ಇವತ್ತು ಒಂದು ಹಸುವಿಗೆ 9ರಿಂದ 10 ಸಾವಿರ ರೂಪಾಯಿಯವರೆಗೆ ಬೆಲೆ ಇದೆ. ಒಂದು ಜೊತೆ ಎತ್ತಿಗೆ 18ರಿಂದ 20 ಸಾವಿರ ಆಗುತ್ತದೆ. ಯಾವುದೋ ಒಂದು ಚಪ್ಪೆ ರೋಗನೋ, ಅಥವಾ ದೊಡ್ಡ ರೋಗ, ಅಥವಾ ದಢಾರನೋ ಬಂದರೆ ಅವುಗಳು ಒಂದೇ ದಿವಸಕ್ಕೇ ಸತ್ತು ಹೋಗುತ್ತವೆ. ನಿಮ್ಮ ಯಾವ ಇನ್ಸೂರೆನ್ಸ್ ಕಂಪನಿನೂ ನಮ್ಮ ರಕ್ಷಣೆಗೆ ಬರುವುದಿಲ್ಲ. ಅಂತಹ ಕಡೆ ನಾವು ರೋಗಗಳು ಬರುತ್ತವೆ ಎಂದು ನಿರೀಕ್ಷಣೆ ಮಾಡಿ ಪ್ರತಿರೋಧಕ ಚುಚ್ಚು ಮದ್ದು ಮಾಡದೇ ಹೋದರೆ ಬಹುಶಃ ಗ್ರಾಮೀಣ ಪ್ರದೇಶದ ಬದುಕು ಭಾರೀ ದುಸ್ತರವಾಗುತ್ತದೆ; ದುಬಾರಿಯಾಗುತ್ತದೆ ಎಂದು ಹೇಳುತ್ತೇನೆ. ಅದರ ಜೊತೆಗೆ ತಮ್ಮ ಇಲಾಖೆಯ ವತಿಯಿಂದಲೇ ಈ ಮೊಬೈಲ್ ರೂಟ್‌ಗಳನ್ನು ತಾವು ಏನು ಮಾಡುತ್ತಿದ್ದೀರಿ, ಅವು ಈಗ ನಿಂತು ಹೋಗಿಬಿಟ್ಟವೆ. ಯಾರು ಕೇಳುವವರು ಇಲ್ಲ; ಹೇಳುವವರು ಇಲ್ಲ;

ಒಬ್ಬರು ಯಾರನ್ನಾದರೂ ಕೇಳಿದರೆ ಡೀಸೆಲ್ ಇಲ್ಲ ಎಂದೋ ಅಥವಾ ಇನ್ನೊಬ್ಬರು ವೆಹಿಕಲ್ ರಿಪೇರಿಯಾಗಲಿಲ್ಲ ಎಂದೋ ಹೇಳುತ್ತಾರೆ. ಮತ್ತು ಯಾರೋ ಒಬ್ಬ ಬೇಡವಾದಂಥ ಡಾಕ್ಟರನ್ನು ಮೊಬೈಲ್ ರೂಟ್‌ಗೆ ಕಳುಹಿಸಿಬಿಡುತ್ತೀರಿ. ಈ ರೀತಿ ಬೇಡದೇ ಇರುವವರನ್ನು ನೀವು ಗ್ರಾಮೀಣ ಪ್ರದೇಶದಲ್ಲಿ ಹಾಕಿ ಅವನು ವಾರಕ್ಕೆ 5 ದಿವಸ ಓಡಾಡಿಕೊಂಡು ಇರಬಹುದು ಹಾಗೂ ಶುಶ್ರೂಷೆ ಮಾಡಬಹುದು ಎಂದು ಏನು ಹಾಕುತ್ತಿದ್ದೀರಿ, ಆ ಕಾರ್ಯಕ್ರಮ ಅಷ್ಟು ಸಮರ್ಪಕವಾಗಿ ಆಗುತ್ತಿಲ್ಲ. ಜೊತೆಗೆ ತಮಗೆ ಗೊತ್ತಿರುವ ಹಾಗೆ ಈ ಪಶುಗಳ ಬಂಜೆತನ ಮತ್ತು ಸಾಧಾರಣವಾಗಿ ಅವುಗಳ ಆರೋಗ್ಯದ ಶಿಬಿರಗಳನ್ನು ಸರ್ಕಾರ ಹಾಕಿಕೊಂಡಿತ್ತು. ಇದರ ಜೊತೆಗೆ ಕೆಎಂಎಫ್‌ನವರು ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು. ಅದು ಕೂಡ ಈಗ ಅಷ್ಟು ಚೆನ್ನಾಗಿ ನಡೆಯುತ್ತಿಲ್ಲ. ಇವತ್ತು ಪ್ರತಿ ತಾಲ್ಲೂಕಿನಲ್ಲೂ ವರ್ಷಕ್ಕೆ 30–40 ವೆಟರ್‌ನರಿ ಕ್ಯಾಂಪುಗಳು ಸಹ ಆಗುತ್ತಿಲ್ಲ. ಬಂಜೆತನ ಆಗಿದೆ ಎಂದರೆ ಅದನ್ನು ನೋಡುವವರು ಇಲ್ಲ, ಅಥವಾ ಅದಕ್ಕೆ ಬೇರೆ ಖಾಯಿಲೆ ಆಗಿದೆ ಎಂದರೆ ನೋಡುವವರು ಇಲ್ಲ. ಆದ್ದರಿಂದ ತಾವು ಆ ಕಡೆ ಗಮನ ಕೊಡಬೇಕಾಗುತ್ತದೆ. ಜೊತೆಗೆ ಕುರಿಗಳ ಬಗ್ಗೆ ನಾನು ಎರಡು ಮಾತುಗಳನ್ನಾಡಬೇಕಾಗಿದೆ. ಏಕೆಂದರೆ ನಾನು ಚಿಕ್ಕನಾಯಕನಹಳ್ಳಿಯಿಂದ ಬಂದಿರುವಂಥಹ ಶಾಸಕ. ಸ್ವಾಮಿ ಮೊದಲು ಕುರಿಗಳು ಎಷ್ಟು ಇತ್ತು, ಅದು ಈಗ ಎಷ್ಟು ಕಡಿಮೆಯಾಗಿದೆ ಎಂದು ಹೇಳಿದರೆ ನಿಮ್ಮ ಇಲಾಖೆಯವರು ಕೊಟ್ಟಿರತಕ್ಕಂಥಹ ಮಾಹಿತಿ ಸರಿ ಇಲ್ಲ ಎಂದು ತಾವೇ ಒಪ್ಪಿಕೊಳ್ಳುತ್ತೀರಿ. ಮೂರನೇ ಒಂದು ಭಾಗದಷ್ಟು ಮಾತ್ರ ಕುರಿಯನ್ನು ನಾವು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗಿದೆ. ಇದಕ್ಕೆ ಕಾರಣಗಳು ಬೇಕಾದಷ್ಟು ಇವೆ.

ಕುರಿಗಳು ಮೇಯುವುದಕ್ಕೆ ಜಾಗವೇ ಇಲ್ಲದಂತಾಗಿದೆ. ಇನ್ನೊಂದು ಆ ಕುರಿಗಳಿಗೆ ಏನಾದರೂ ಹೋಲ್‌ಸೇಲ್ ಖಾಯಿಲೆಗಳು ಮಳೆಗಾಲದಲ್ಲಿ ಏನು ಬರುತ್ತವೆ, ಆಗ ಒಂದೇ ಸಾರಿ ಅವೆಲ್ಲ ಸತ್ತು ಹೋಗುತ್ತವೆ. ಕುರಿಗಳ ಬಗ್ಗೆ ನಿಮಗೆ ಒಂದು ಮಾಹಿತಿಯನ್ನು ಹೇಳುತ್ತೇನೆ, ಎಫ್.ಎಂ.ಡಿ. ವ್ಯಾಕ್ಸಿನೇಷನ್ ಮಾಡುವುದಕ್ಕೆ ರಾಜ್ಯ ಸರ್ಕಾರದಲ್ಲಿ ಹಣವೇ ಇಲ್ಲ. ಹಸುಗಳಿಗಾದರೆ ಕೆ.ಎಂ.ಎಫ್. ನವರು ಸಬ್ಸಿಡಿ ಧಾರಣೆಯಲ್ಲಿ ವ್ಯಾಕ್ಸಿನ್ ಸಪ್ಲೈ ಮಾಡುತ್ತಾರೆ. ನಿಮಗೆ ಕುರಿಗಳಿಗೆ ಯಾರು ಮಾಡುತ್ತಾರೆ ಎಂದು ಹೇಳಲೇ ಇಲ್ಲ. ನಾವು ಆ ಸಹಕಾರ ಸಂಘದಲ್ಲೇ ಇಂಡೆಂಟ್ ಮಾಡಿಸಿ ಹಸುಗಳ ಜೊತೆಗೆ ಕುರಿಗಳಿಗೂ ಮಾಡಿ ಎಂದು ಹೇಳಿ ಕುರಿಗಳಿಗೆ ರಕ್ಷಣೆ ಸಿಗುತ್ತಿರುವುದು ಬಿಟ್ಟರೆ ಬೇರೆ ಇಲ್ಲ. ಈ ಕಾಲು ಬಾಯಿಜ್ವರ ಬಂದರೆ ಹೋಲ್‌ಸೇಲ್ ಆಗಿ ಕುರಿಗಳು ಸತ್ತುಹೋಗುವ ಸ್ಥಿತಿ ನಿರ್ಮಾಣವಾಗಿದೆ. ಈ ಕುರಿಗಳ ಬಗ್ಗೆ ಸ್ವಲ್ಪ ಗಮನವನ್ನು ತಾವು ಹರಿಸಬೇಕಾಗುತ್ತದೆ. ಈ ರಾಜ್ಯದ ಅತ್ಯಂತ ದುರಂತ ಏನೆಂದರೆ ಬನ್ನೂರು ತಳಿ ಏನಿತ್ತೋ ಆ ತಳಿಯೇ ಇವತ್ತು ನಮ್ಮ ಮುಂದೆ ಉಳಿಯುತ್ತಿಲ್ಲ. ಆ

ತಳಿಯನ್ನು ಉಳಿಸಿಕೊಳ್ಳುವುದಕ್ಕೆ ಮೊದಲನೇ ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕಾಗಿದೆ. ಅದರ ಜೊತೆಗೆ ನಮ್ಮ ನಾಡತಳಿ ಕುರಿಗಳು ಏನಿತ್ತೊ, ಅವುಗಳ ಆರೋಗ್ಯದ ಕಡೆ ಗಮನ ಕೊಟ್ಟು ಇದು stall feeding ಬರುವ ಕಾಲಕ್ಕೆ ನಾವು ಹೋಗುತ್ತಿದ್ದೇವೆ ಎಂದು ನನ್ನ ಭಾವನೆ. ಇಲ್ಲಿ ಅಧಿಕಾರಿಯೊಬ್ಬರು Clump ಎಂದು ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಕಾಂಪ್ರೆಹೆನ್ಸೀವ್ ಲ್ಯಾಂಡ್ use management programme ಗೆ ಬಂದಿದ್ದ ದಿವಸ stall feeding ಅನಿವಾರ್ಯವಾಗಬೇಕಾಗುತ್ತದೆ ಎಂದು ಬರೆದಿದ್ದರು ಎಂದರೆ ಕುರಿಯನ್ನು ಕೂಡ ನೀವು ಗೊಂತಲ್ಲಿ ಕಟ್ಟಿ ಮೇವು ಹಾಕುವ ಕಾಲ ಬರುತ್ತದೆಂದು ಹೇಳಿದ್ದರು. ಇವತ್ತು ನಾವು ಆ ಸ್ಥಿತಿಗೆ ಬಂದು ನಿಂತಿದ್ದೇವೆ. ಬಗರ್ ಹುಕುಂ ಅಷ್ಟೂ ಮಂಜೂರು ಮಾಡಿದ ದಿವಸ ಕುರಿ ಮೇಯುವುದಕ್ಕೆ ಜಾಗ ಕರ್ನಾಟಕದಲ್ಲಿ ಉಳಿಯುವುದಿಲ್ಲ. ಬಗರ್‌ಹುಕುಂ ಅಲ್ಲದೆ ಫಾರೆಸ್ಟ್ ಲ್ಯಾಂಡ್ ಏನು ಇದೆ, ಅದರೊಳಗೆ ಕುರಿ ಮತ್ತು ಮೇಕೆಯನ್ನು ಈ ನಿಮ್ಮ ಫಾರೆಸ್ಟ್ ಇಲಾಖೆಯವರು ಬಿಡುವುದಿಲ್ಲ. ಬಡವ ಕುರಿ ಕಟ್ಟಿಕೊಂಡು ಬದುಕುತ್ತಿದ್ದವನ ಸ್ಥಿತಿ ಏನಾಗಿದೆ ಎಂದರೆ ಅವನಿಗಿಂತ ಕುರಿಯೇ ವಾಸಿ ಎನ್ನುವ ಸ್ಥಿತಿಗೆ ಬಂದುಬಿಟ್ಟಿದೆ. ಆ ಕಡೆಗೆ ತಾವು ಗಮನವನ್ನು ಕೊಡಬೇಕು. ಇದನ್ನೇನಾದರೂ ಮಾಡಿ ಲಾಭದಾಯಕವಾಗಿ ಮಾಡುವ ಹಾಗೆ ಮಾಡಬೇಕು.

ಇನ್ನು ಎರಡನೆಯದಾಗಿ ಈ ಕುರಿ ಉಣ್ಣೆಯನ್ನು ಮಾರಾಟ ಮಾಡುವುದಕ್ಕೆ ಸರಿಯಾದ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕು. ನಿಮ್ಮ Sheep and Sheep Product Development Board ಸಂಪೂರ್ಣ ನಿಸ್ತೇಜ ಸ್ಥಿತಿಗೆ ಬಂದುಬಿಟ್ಟಿದೆ. ಆ ಬೋರ್ಡ್ ಏತಕ್ಕೆ ಇದೆ? ಎಲ್ಲಿದೆ? ಯಾರಿಗಾಗಿ ಇದೆ? ನಮಗೆ ಯಾರಿಗೂ ಅರ್ಥವಾಗಿಲ್ಲ. ಆ ಬೋರ್ಡ್‌ನ ಕಾರ್ಯಚಟುವಟಿಕೆ ಬಗ್ಗೆ ನಾನು ಮಾತನಾಡಬೇಕು ಎಂದರೆ ಎರಡೊ ಮೂರೊ ವರ್ಷಕ್ಕೆ ಮೀಟಿಂಗ್ ಮಾಡಿ ಟಿಎಡಿಎ ಕೊಟ್ಟರೆ ತಾವು ಕೊಟ್ಟಿರುವ ಬಜೆಟ್ ಮುಗಿದುಹೋಗುತ್ತದೆ. ಹಾಗೂ ಕಷ್ಟಪಟ್ಟು ಒಂದು ಕಾರು ಕೊಟ್ಟಿದ್ದೀರಿ ಎಂದು ಕಾಣುತ್ತದೆ. ನಮ್ಮ ಸನ್ಮಾನ್ಯ ಪಶುಸಂಗೋಪನ ಡೈರೆಕ್ಟರನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಏಕೆಂದರೆ ಅವರ ಆಫೀಸ್ ಕುರ್ಚಿಯಲ್ಲಿ ಅವರ ಆಫೀಸ್ ಖರ್ಚಿನಲ್ಲೇ ಈ ಕೆಲಸ ಮಾಡಲಿ ಎಂದು. ಏಕೆಂದರೆ ಈ ಆಫೀಸ್‌ನಲ್ಲಿ ಖರ್ಚು ಮಾಡುವುದಕ್ಕೆ ಹಣ ಇಲ್ಲ. ಈ ಶೀಪ್ ಬೋರ್ಡನ್ನು ನಾವು ಏನಾದರೂ ಮಾಡಿ ಬೆಳೆಸಬೇಕಾಗಿದೆ. ಇದನ್ನು ಬೆಳೆಸದೆ ಹೋದರೆ ಅಷ್ಟು ಜನ ರೈತರಿಗೆ ಇವತ್ತು ಏನು ಇದರ ಮೂಲಕ ಕೆಲಸಗಳಾಗಬೇಕಾಗಿತ್ತೋ, ನೀವು ತಂತ್ರಜ್ಞಾನವನ್ನು ಕೊಡಬೇಕಾಗಿತ್ತೋ ಅದು ಸ್ಥಗಿತವಾಗುತ್ತದೆ. ಇವತ್ತಾಗಲೇ ಅದು ಸ್ಥಗಿತವಾಗಿದೆ. ಆ ಕಡೆ ತಾವು ಸ್ವಲ್ಪ ಗಮನವನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ತಮ್ಮ ಕೆಲವು ಫಾರಂಗಳಿವೆ. ಸಾವಿರಾರು ಎಕರೆಗಳಿವೆ. ಅದೇನು ಲೆಕ್ಕ ಇಲ್ಲ. ಅಜ್ಜಂಪುರ ಫಾರಂ ಎಲ್ಲಿ ಶುರುವಾಗಿ ಎಲ್ಲಿ ಎಂಡ್ ಆಗುತ್ತದೆ ಎಂದು ನೋಡಿಕೊಂಡು ಹೋದರೆ ಫಾರಂ ಸಿಗುತ್ತಲೇ ಇರುತ್ತದೆ. ನಿಮ್ಮ ಕುಣಿಕೇನಹಳ್ಳಿ ಫಾರಂ ಎಷ್ಟಿದೆ ಎಂದು ನೋಡಿದರೆ. ಅದರ ಉದ್ದವನ್ನೇ ನಾವು ಅಳೆಯುವುದಕ್ಕಾಗಿಲ್ಲ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಫಾರಂ ಇದೆ. ತುಮಕೂರು ಜಿಲ್ಲೆಯಲ್ಲಿ ಫಾರಂ ಇದೆ. ಹೀಗೆ 10–11 ಫಾರಂಸ್ ಏನಿವೆ ಆ ಫಾರಂಗಳಲ್ಲಿ ಏನು ಕೆಲಸ ಮಾಡುತ್ತಿದ್ದೀರಿ ಎಂದು ಯಾರಾದರೂ ಕೇಳಿದರೆ ಅದು ಕೂಡ ಇಷ್ಟೆ; ಬೇಕಿಲ್ಲದ ಒಬ್ಬ ಡಾಕ್ಟರಿಗೆ ನಿಮಗೆ ಬೇಕಿಲ್ಲದ ಸ್ಟಾಫ್ ಹಾಕುವುದಕ್ಕೆ ಈ ವೆಟರ್‌ನರಿ ಫಾರಂಸನ್ನು ಇಟ್ಟುಕೊಂಡು ಬಿಟ್ಟಿದ್ದೀರಿ. 60 ಪರ್‌ಸೆಂಟ್ ಆಫ್ ದಿ ಫಾರಂಸ್ ಎನ್‌ಕ್ರೋಚ್ ಆಗಿವೆ. ಶೇಕಡ 60ರಷ್ಟು ಫಾರಂಸನ್ನು ಇವತ್ತು ಜನರು ಎನ್‌ಕ್ರೋಚ್ ಮಾಡುತ್ತಿದ್ದಾರೆ. ತಾವು ಅದನ್ನು ಕೇಳುವುದಕ್ಕೆ ಹೋಗಿಲ್ಲ. ಮತ್ತು ಅಲ್ಲಿರುವ ಅನಿಮಲ್ಸ್ ಎಷ್ಟು? ಸಾವಿರ ಚಿಲ್ಲರೆ ಎಕರೆ ಫಾರಂ ಅಜ್ಜಂಪುರದಲ್ಲಿದ್ದರೂ ಮೂರು ಸಾವಿರ ನಾಲ್ಕು ಸಾವಿರ ರಾಸು ನಿಮ್ಮಲ್ಲಿ ಇಲ್ಲ. ಕುಣಿಕೇನಹಳ್ಳಿ ಫಾರಂನಲ್ಲಿ 28–30 ಜೊತೆ ಎತ್ತುಗಳನ್ನು ತಾವು ಕಟ್ಟಿಕೊಂಡಿದ್ದೀರಿ. ಈ

ಫಾರಂಗಳ ಬಗ್ಗೆ ನೀವು ಏತಕ್ಕೆ ಇಷ್ಟೊಂದು ಉದಾಸೀನ ಮಾಡುತ್ತಿದ್ದೀರಿ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ಇದು ನಮಗೆ ಮೂಲ. ಆ ಫಾರಂನಲ್ಲಿ ಏನು ನೀವು ತಳಿ ಅಭಿವೃದ್ಧಿ ಮಾಡುತ್ತೇವೆ ಎಂದು ಇಟ್ಟುಕೊಂಡಿದ್ದೀರಿ, ಫಾರಂನ್ನು ನೋಡಿ ರೈತರೆಲ್ಲ ಕಲಿತುಕೊಳ್ಳಬೇಕು ಎಂದು ಮಾಡಿದ್ದೀರಿ, ಆದರೆ ಅದೇ ವಿನಾಶದಲ್ಲಿದೆ. ಅದನ್ನು ನೋಡಿ ನಾವೆಲ್ಲಿಗೆ ಹೋಗಬೇಕು ? ನಮಗೆ ಅರ್ಥವಾಗಿಲ್ಲ. ನಾವೇನಾದರೂ ನಿಮ್ಮ ಫಾರಂ ನೋಡಿಬಿಟ್ಟು ಪಶುಸಂಗೋಪನ ಕೆಲಸ ಮಾಡುವುದಕ್ಕೆ ಹೋದರೆ ಆರು ತಿಂಗಳಿಗೆ ನಮ್ಮ ಮನೆ ಬಾಗಿಲು ಹಾಕಬೇಕಾಗುತ್ತದೆ. ಏಕೆಂದರೆ ನಿಮ್ಮ ಫಾರಂಗಳನ್ನೆ ಬಾಗಿಲು ಹಾಕಿಸುತ್ತಿದ್ದೀರಿ ಈಗ. ಆ ಕಡೆ ತಾವು ಸ್ವಲ್ಪ ಗಮನವನ್ನು ಕೊಡಬೇಕು. ಈ ಫಾರಂನ್ನು ನೋಡಿಕೊಳ್ಳುವುದಕ್ಕೆ ಏನು ಬಜೆಟ್ ಕೊಡುತ್ತಿದ್ದೀರಿ, ಅದು ಏತಕ್ಕೂ ಸಾಲದ್ದಾಗಿದೆ.

ಈ ಬಗ್ಗೆ ಸನ್ಮಾನ್ಯ ನಾಗೇಗೌಡರು ಸರ್ಕಾರದ ಮೇಲೆ ಒತ್ತಡ ತರಬೇಕೆಂದು ನಾನು ಕೇಳುತ್ತೇನೆ. ಇದರ ಮೇನ್‌ಟೇನೆನ್ಸ್‌ಗೆ ಬೋರ್‌ವೆಲ್‌ಗೆ ಆಗುವಷ್ಟು ಹಣವನ್ನು ಕೊಡುತ್ತಾ ಇಲ್ಲ. ಎರಡು ಲಕ್ಷ ಐದು ಲಕ್ಷ ರೂಪಾಯಿ ಒಂದು ಫಾರಂಗೆ ದುಡ್ಡು ಕೊಡುತ್ತೇವೆ. ಹೀಗಾದರೆ ಸಾವಿರಾರು ಎಕರೆ ಇರುವ ಫಾರಂಗಳ ಸ್ಥಿತಿ ಎಲ್ಲಿಗೆ ಹೋಗಿ ನಿಲ್ಲುತ್ತದೆ ? ಇದರ ಜೊತೆಗೆ ಇದಕ್ಕೆ ಬೇರೆ ಬೇರೆ ವ್ಯವಹಾರಗಳನ್ನು ಅಟ್ಯಾಚ್ ಮಾಡಿದ್ದೀರಿ. ಅನಿಮಲ್ ಹಸ್‌ಬೆಂಡರಿ ಫಾರಂನಲ್ಲಿ ಇವತ್ತು ಮೊಲ ಬೆಳೆಸುವುದಕ್ಕೆ ಹೊರಟಿದ್ದೀರಿ. ಹುಲಿ ಬೆಳೆಸುವುದಕ್ಕೆ ಹೊರಟಿದ್ದೀರಿ. ಚಳ್ಳಕೆರೆ ಫಾರಂನಲ್ಲಿ ಏನು ಹುಲಿ ಬೆಳೆಸಬೇಕಾಗಿತ್ತು ಅಲ್ಲಿ ಅದನ್ನು ನಿಸ್ತೇಜ ಮಾಡಿದ್ದೀರಿ. ಈ ಕಡೆ ತಾವು ಗಮನ ಕೊಡಬೇಕಾಗಿದೆ. ಈ ಪಶುಸಂಗೋಪನಾ ಇಲಾಖೆಯನ್ನು ಏಕೆ ಬೇಡವಾದ ಇಲಾಖೆಯನ್ನಾಗಿ ಮಾಡಿದ್ದಾರೋ ನನಗೆ ಗೊತ್ತಿಲ್ಲ. ನಾನು ತಮ್ಮ ಹತ್ತಿರ ಮಾತನಾಡುತ್ತಾ ಹೇಳಿದ್ದೆ. 1984–85 ರಿಂದ ನಾವು ನೋಡುತ್ತಿದ್ದೇವೆ. ಏನಾದರೂ ಕನಿಷ್ಟ ಮಟ್ಟದ ಹಣವನ್ನು ಕೊಡುತ್ತಿರುವುದು ಎಂದರೆ ಈ ಪಶು ಸಂಗೋಪನಾ ಇಲಾಖೆಗೆ ! ಎರಡೂವರೆ ಕೋಟಿ ರಾಸು ಇಟ್ಟುಕೊಂಡು ಇಷ್ಟೊಂದು ಕಡಿಮೆ ಹಣವನ್ನು ಬಜೆಟ್‌ನಲ್ಲಿ ನೀವು ತೋರಿಸಿಕೊಂಡು ಹೋದರೆ ಏನು ಅಭಿವೃದ್ಧಿ ಮಾಡುತ್ತೀರೋ ನನಗೆ ಗೊತ್ತಿಲ್ಲ. ಇದರಿಂದ ಏನೂ ಕೆಲಸ ಆಗುವುದಿಲ್ಲ. ಯಾವುದೇ ಜಾನುವಾರುಗಳ ರಕ್ಷಣೆ ಮಾಡುವುದಕ್ಕೆ ತಮಗೆ ಸಾಮರ್ಥ್ಯ ಇಲ್ಲ. ತಾವು ಹೇಳುತ್ತಿದ್ದೀರಿ. ಎಲ್ಲೆಲ್ಲಿ ಎಷ್ಟೆಷ್ಟು ಡ್ರಗ್ಸ್ ಇದೆ ಎನ್ನುವ ಬಗ್ಗೆ ಬೋರ್ಡ್ ಹಾಕಿ ಎಂದು; ಡ್ರಗ್ಸ್ ಇದ್ದರಲ್ಲವೇ ಆತ ಬೋರ್ಡ್ ಹಾಕುವುದು. ನನ್ನ ತಾಲ್ಲೂಕಿನ ಕತೆಯನ್ನೇ ಹೇಳುತ್ತೇನೆ. ನೀವು ಬರುವ ಹಿಂದಿನ ದಿವಸ ಇಂಡೆಂಟ್ ಮಾಡಿ ತರಿಸಿಕೊಂಡು ಬೋರ್ಡ್ ಹಾಕಿದ್ದಾರೆ, ನಾನು ಚಿಕ್ಕನಾಯಕನಹಳ್ಳಿಯಲ್ಲೇ ಈ ವಿಷಯವನ್ನು ಹೇಳಲಿಲ್ಲ. ಏತಕ್ಕೆಂದರೆ ಪಾಪ ಆ ಆಫೀಸರ್ ನಿಮ್ಮೆದುರಿಗೆ ಏಕೆ ಬಯ್ಸಿಕೊಳ್ಳಬೇಕು ಎಂದು. ಔಷಧಿ ಇದ್ದರೆ ಬೋರ್ಡ್ ಹಾಕಬೇಕು. ಔಷಧೀನೇ ಇಲ್ಲದೇ ಬೋರ್ಡ್ ಹಾಕಿದರೆ ಜನ ಹೋಗಿ ಅವನ ಕೊರಳು ಪಟ್ಟಿಗೆ ಕೈಹಾಕಿದರೆ ಡಾಕ್ಟರನ್ನು ಎಲ್ಲಿಗೆ ಕಳಿಸುತ್ತೀರಿ ನೀವು ? ಆದ್ದರಿಂದ ಮೊದಲು ಆಸ್ಪತ್ರೆಗಳಿಗೆ ಏನು ರಿಕ್ವೈರ್‌ಮೆಂಟ್ಸ್ ಇದೆ ಅದಕ್ಕೆ ಗಮನ ಕೊಟ್ಟು ಅನಂತರ ನೀವು ಶಿಸ್ತನ್ನು ಇಂಪೋಸ್ ಮಾಡಬೇಕಾಗುತ್ತದೆ ಇಷ್ಟೇ ಶಿಸ್ತಾಗಿ ಕೆಲಸ ಮಾಡಿ ಎಂದು. ಏನೂ ಇಲ್ಲದೇನೆ ಶಿಸ್ತು ಇಲ್ಲ, ಬೋರ್ಡ್ ಹಾಕಿಲ್ಲ ಆ ಔಷಧಿ ಹಾಕಿಲ್ಲ, ಈ ಔಷಧಿ ಹಾಕಿಲ್ಲ ಎಂದರೆ ಅವರಿಗೆ ಹೇಳುವುದಕ್ಕೆ ಬರುವುದಿಲ್ಲ. ಇದರ ಜೊತೆಯಲ್ಲಿ ಕೆಲವು ಸಮಸ್ಯೆಗಳು ಇವೆ. ನಿಮ್ಮದು ಇನ್‌ಸ್ಟಿಟ್ಯೂಟ್ ನಡೆಯುತ್ತಾ ಇದೆ. ನಾನು ತಿಳಿದ ಮಟ್ಟಿಗೆ ನಮ್ಮ ಶ್ರೀರಾಮ ಇನ್‌ಸ್ಟಿಟ್ಯೂಟ್ ಇದೆ. ಅದು ನಾನು ತಿಳಿದ ಮಟ್ಟಿಗೆ ಅಷ್ಟೊಂದು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ . ಇನ್ನೂ ಬೇಕಾದಷ್ಟು ಕೆಲಸ ಮಾಡಬಹುದಿತ್ತು. ತಮಗೆ ಹೇಳುತ್ತೇನೆ, ಕೆಎಂಎಫ್ ಏನಾದರೂ ತಮ್ಮ ಜೊತೆ ಇಲ್ಲದೇ ಇದ್ದರೆ ಈ ಕೃತಕ ಗರ್ಭಧಾರಣೆ ಕರ್ನಾಟಕ ರಾಜ್ಯದಲ್ಲಿ ಯಶಸ್ವಿಯಾಗಿ ಮಾಡುವುದಕ್ಕೆ ಆಗುತ್ತಿರಲಿಲ್ಲ. ಇದರ ಜೊತೆಗೆ ನಿಮ್ಮ ಪುಣ್ಯಕ್ಕೆ ಭಾರತೀಯ ಆಗ್ರೋ ಇಂಡಸ್ಟ್ರೀಸ್ ಫೌಂಡೇಶನ್‌ರವರು ಏನು ಗ್ರೌಂಡ್ ವರ್ಕ್ ಮಾಡಿಕೊಂಡು ಹೋಗಿದ್ದರು, ಅವರೇನು ಪೂನಾದಿಂದ ಸಾಮಾನುಗಳನ್ನು

...ಲ್ಲಿ ಡಿಸ್ಟ್ರಿಬ್ಯೂಟ್ ಮಾಡಿದ್ದರು, ಅವರೇ ತಳಿ ಅಭಿವೃದ್ಧಿಗೆ ನಿಮಗೆ ಸಹಾಯ ಮಾಡಿದ್ದಾರೆ, ಬೇಕಾದಷ್ಟು ನೆರವು ಆಗಿದೆ. ಅವರು ಒಂದೊಂದು ರೂಪಾಯಿ, ಎರಡೆರಡು ರೂಪಾಯಿ ರೈತರಿಗೆ ಅವರೇ ಹೋಗಿ ಹಣ ಕೊಟ್ಟು ಬಿಟ್ಟು ಈ ಕೆಲಸವನ್ನು ಮಾಡಿಕೊಂಡು ಹೋಗಿದ್ದರು. ಹಾಗೆ ಅವರು ಮಾಡದೇ ಇದ್ದಿದ್ದರೆ ಈ ಕೃತಕ ಗರ್ಭಧಾರಣೆಯನ್ನು ಅಷ್ಟು ವ್ಯಾಪಕವಾಗಿ ನಾವು ಪ್ರಚಾರ ಮಾಡುವುದಕ್ಕೆ ಆಗುತ್ತಾ ಇರಲಿಲ್ಲ. ಆ ಕಡೆ ಗಮನ ಕೊಡಬೇಕು ಮತ್ತು ಜಾಸ್ತಿ ಫೇಲ್ ಆಗುತ್ತಿರುವ ಸೆಮೆನ್ ಏನಾದರೂ ಇದ್ದರೆ ಅದನ್ನು ಕಂಟ್ರೋಲ್ ಮಾಡಬೇಕು. ನಾನು ತಮ್ಮನ್ನು ಕೇಳಿಕೊಳ್ಳುವುದು ಏನೆಂದರೆ, ಈ ಕಾರ್ಯಕ್ರಮಗಳಿಗೆ ತಾವು ಜಾಸ್ತಿ ಗಮನ ಕೊಟ್ಟರೆ ರೈತರಿಗೆ ಸ್ವಲ್ಪ ಮಟ್ಟಿಗೆ ಸಹಾಯ ಮಾಡಬಹುದು. ಈ ಉಪಕರಣಗಳು ಏನು ಇರುತ್ತವೆ, ಅವುಗಳನ್ನು ಹುಡುಗಾಟಕ್ಕಾಗಿ ಇಟ್ಟುಕೊಳ್ಳಬಾರದು. ಹಿಂದಿನ ಕಾಲ ಇತ್ತು. ಯಾರಾದರೂ ರೈತರ ಮಕ್ಕಳಿಗೆ ಹೆಣ್ಣು ಕೊಡುವುದಕ್ಕೆ ಹೋದರೆ ಆಸ್ತಿ ನೋಡುವುದಕ್ಕೆ ಹೋಗುತ್ತಿರಲಿಲ್ಲ. ಮನೆ ನೋಡುವುದಕ್ಕೆ ಹೋಗುತ್ತಿದ್ದರು. ಮನೆ ನೋಡುವುದು ಎಂದರೆ ಜಂತೆ ನೋಡಿಕೊಂಡು ಬರುತ್ತಿರಲಿಲ್ಲ. ಮನೆಯಲ್ಲಿರುವ ರಾಸು ಎಷ್ಟು, ಅವರಲ್ಲಿ ಹಸು ಎಷ್ಟು, ಕುರಿ ಎಷ್ಟು ಎಂದು ನೋಡಿಕೊಂಡು ಬರುತ್ತಿದ್ದರು. ಏಕೆ ಎಂದರೆ ಅದು ರೈತರಿಗೆ ಮೂಲಧನ ಆಗುತ್ತಿತ್ತು. ಅದರಿಂದ ಇವರ ಸಂಸಾರ ಹೇಗೆ ನಡೆಯುತ್ತಿದೆ ಎಂದು ಅರ್ಥ ಮಾಡಿಕೊಳ್ಳುತ್ತಿದ್ದರು. ಮನೆಯಲ್ಲಿರುವ ಜನ ನೋಡಿದರೆ ನಮಗೆ ಸಂಸಾರದ ಮಟ್ಟ ಅರ್ಥ ಆಗುತ್ತಾ ಇರಲಿಲ್ಲ. ಆ ಮೂಲಧನವನ್ನು ಇವತ್ತು ನಾವು ಕಾಪಾಡದೇ ಹೋದರೆ ನೀವು ರೈತರ ಶಾಪಕ್ಕೆ ಗುರಿ ಆಗಬೇಕಾಗುತ್ತದೆಂದು ಹೇಳುತ್ತೇನೆ. ತಾವು ಕೆಎಂಎಫ್ ಬಗ್ಗೆ ಬಹಳ ಆಸಕ್ತಿಯನ್ನು ತಳೆದಿದ್ದೀರಿ. ಎರಡು ಮಾತನ್ನು ಕೆಎಂಎಫ್ ಬಗ್ಗೆ ಆಡದೇ ಹೋದರೆ ನಾನು ಕರ್ತವ್ಯಚ್ಯುತಿ ಮಾಡಿದ ಹಾಗೆ ಆಗುತ್ತದೆ. ತಮಗೆ ಒಂದು ವಿಷಯ ಗೊತ್ತಿರಬೇಕು. ಈ ಕೆಎಂಎಫ್‌ನಲ್ಲಿ ಭಾರೀ ತೊಂದರೆಗಳು ಆಗುವುದಕ್ಕೆ ಸ್ಟಾರ್ಟ್ ಆಗಿದ್ದು ತಾವು ಬಿಗಿ ಆಡಳಿತವನ್ನು ಕೆಎಂಎಫ್‌ನಲ್ಲಿ ಜಾರಿ ಮಾಡಿದಾಗ. ಯಾವುದೇ ಸ್ಟ್ರೈಕ್ ಆದಾಗ ಸರ್ಕಾರ ಆಡಳಿತ ವರ್ಗಕ್ಕೆ ಸಪೋರ್ಟ್ ಮಾಡುವುದು ಬಿಟ್ಟು ಕಾರ್ಮಿಕ ವರ್ಗಕ್ಕೆ ಸಪೋರ್ಟ್ ಮಾಡಿದಾಗ. ಸ್ವಾಮಿ, ರಿಕಾರ್ಡ್ ತರಿಸಿ ಕೆಎಂಎಫ್‌ನಲ್ಲಿ ಕೆಲಸ ಮಾಡುತ್ತಿರುವವರಿಗೆ ಕೊಡುತ್ತಿರುವ ಸೌಕರ್ಯ ಏನು ? ಸವಲತ್ತು ಏನು ? ಅಲೋಯೆನ್ಸಸ್ ಏನು ? ಎಂದು ನೋಡಬೇಕು. ಇಡೀ ಪ್ರಪಂಚದಲ್ಲಿ ಯಾರಿಗಾದರೂ ಅಷ್ಟು ಕೊಡುವುದಕ್ಕೆ ಆಗುತ್ತದೆಯೇ ? ಅದನ್ನು ವಿರೋಧ ಮಾಡಿದರೆ ಹಾಲು ನಿಂತು ಹೋಗಿಬಿಡುತ್ತದೆ, ನೀವು ಬೇಡಿಕೆಗಳನ್ನು ಈಡೇರಿಸಿ ಎಂದು ಹೇಳಿಕೊಂಡು ಬಂದಿರಿ. ಒಂದು ಉದಾಹರಣೆ ಹೇಳುತ್ತೇನೆ. ಐದು ವರ್ಷಕ್ಕೆ ಒಂದು ಪ್ರೊಮೋಷನ್ ಕೊಡಬೇಕೆಂದು ರಾಜ್ಯದಲ್ಲಿ ಎಲ್ಲಾದರೂ ವ್ಯವಸ್ಥೆ ಇದ್ದರೆ ಅದು ಕೆಎಂಎಫ್‌ನಲ್ಲಿ ಮಾತ್ರ. ಪ್ರತಿ ಐದು ವರ್ಷಕ್ಕೊಮ್ಮೆ ಪ್ರೊಮೋಷನ್ ಕೊಡುತ್ತಿರುವುದರಿಂದ ಈ ಸಂಸ್ಥೆಗಳು ನಷ್ಟಕ್ಕೆ ಹೋಗುತ್ತಿವೆ. ರೈತರ ಪರವಾಗಿ ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಎಂದು ಯಾರು ಹೋಗಿ ಕೇಳಬೇಕು ? ಎರಡನೆಯದು ತಮ್ಮ ಇಂಟರ್‌ಫಿಯರೆನ್ಸ್ ಕಡಿಮೆ ಆಗಬೇಕಾಗಿತ್ತು. ನಾನು ಅನೇಕ ಸಾರಿ ಹೇಳಿಕೊಂಡು ಬಂದೆ. ರಾಜ್ಯ ಸರ್ಕಾರ ಕೆಎಂಎಫ್ ಅನ್ನು ತನ್ನ ಸ್ವಂತ ಕಾಲ ಮೇಲೆ ನಿಲ್ಲುವುದಕ್ಕೆ ಬಿಡಲೇ ಇಲ್ಲ. ಧಾರಣೆ ನಿಗದಿ ಮಾಡುವಾಗ ತಾವು ಬರುತ್ತೀರಿ. ನಾವು ಕಲ್ಕತ್ತಾಗೆ ಹಾಲು ಕಳಿಸುತ್ತಿದ್ದಾಗ ಸನ್ಮಾನ್ಯ ಬಸವಲಿಂಗಪ್ಪನವರಿಗೆ ಗೌರವ ಕೊಟ್ಟು ಹೇಳುತ್ತೇನೆ, ನೀವು ಹಾಲು ಕೊಡಬೇಡಿ ಎಂದರು. ಈ ವರ್ಷ ನಿಮಗೆ 80 ಸಾವಿರ ಲೀಟರ್ ಹೋಗುತ್ತಿದ್ದ ಹಾಲು ನಿಂತು ಹೋಯಿತು. ಹಾಲು ಹೆಚ್ಚು ಆಯಿತು ಚೆಲ್ಲಿರಿ ಎಂದು ಹೇಳಿದಿರಿ. ಮಧುರೈಗೆ ಹಾಲು ಕೊಡುತ್ತಿದ್ದಾಗ ಕರ್ನಾಟಕದಿಂದ ಆಚೆಗೆ ಹಾಲು ಕೊಡಬೇಡಿ ಎಂದು ಹೇಳಿದಿರಿ. ನಿಮ್ಮ ಹತ್ತಿರ ಹೆಚ್ಚುವರಿ ಇರುತ್ತದೆ, ಒಂದು ಕಾಲದಲ್ಲಿ ಕೊಡಿ ಎಂದು ಹೇಳುವುದು, ಇನ್ನೊಂದು ಕಾಲದಲ್ಲಿ ಕೊಡಬೇಡಿ ಎನ್ನುವುದು ಈ ರೀತಿಯಾದರೆ ಹೊರಗಡೆ ಮಾರುವವರು ಯಾರೂ ನಿಮ್ಮನ್ನು ಕೇಳುವ ಹಾಗೆ ಇಲ್ಲ. ಧಾರಣೆ

ನಿಗದಿ ಮಾಡಬೇಕಾದರೆ ನಾನು ಅನೇಕ ಸಲ ತಮಗೆ ಹೇಳಿದ್ದೇನೆ. ಧಾರಣೆ ನಿಗದಿ ಮಾಡುವಾಗ ಪಕ್ಕದ ರಾಜ್ಯಗಳನ್ನು ನೋಡಿ ತೀರ್ಮಾನ ಮಾಡಬೇಕಾಗುತ್ತದೆ. ಮಹಾರಾಷ್ಟ್ರದವರು ಏನು ಧಾರಣೆ ನಿಗದಿ ಮಾಡುತ್ತಾರೆ, ಆಂಧ್ರದವರು ಹೇಗೆ ನಿಗದಿ ಮಾಡುತ್ತಾರೆ, ತಮಿಳುನಾಡಿನವರು ಹೇಗೆ ನಿಗದಿ ಮಾಡುತ್ತಾರೆ ಎಂದು ನೋಡಬೇಕಾಗುತ್ತದೆ. ನೋಡದೇ ಹೋದರೆ ಏಕಾಏಕಿ ನೀವು ಹಾಲಿನ ಧಾರಣೆಯನ್ನು ಜಾಸ್ತಿ ಮಾಡಿಬಿಟ್ಟು ಫ್ಲಸ್ ಸೀಸನ್‌ನಲ್ಲಿ ನಿಮ್ಮ ಹಾಲಿಗೆ 52 ರೂಪಾಯಿ 10 ಕೇಜಿಗೆ ಬಿದ್ದಾಗ ನಿಮ್ಮ ಪೌಡರ್ 48 ರೂಪಾಯಿಗೆ ಉಳಿದುಕೊಂಡರೆ ಕೆಎಂಎಫ್ ಎಲ್ಲಿ ಉಳಿಯುತ್ತದೆ ? ಯಾವ ಹಾಲು ಉತ್ಪಾದಕರ ಮಹಾ ಮಂಡಲಿ ಇದೆ, ಇದರ ಮೇಲೆ ಯಾವುದೇ ಎನ್‌ಕ್ವೈರಿ ಬೇಕಾಗಿಲ್ಲ. ಎನ್‌ಕ್ವೈರಿ ಸರ್ಕಾರದ ಮೇಲೆ ಆಗಬೇಕು. ಆಗಸ್ಟ್ ಸೆಪ್ಟೆಂಬರ್‌ನಲ್ಲಿ ಯಾರೂ ಹಾಲಿನ ಧಾರಣೆಯನ್ನು ಜಾಸ್ತಿ ಮಾಡುವುದಿಲ್ಲ. ಆದರೆ ಈ ರಾಜ್ಯ ಸರ್ಕಾರ ಮಾಡಿತು. ಒಂದು ರೂಪಾಯಿ ಜಾಸ್ತಿ ಮಾಡಿದೆವು. ಅಂದರು. ಬಂದ ಹಾಲನ್ನು ಏನು ಪುಡಿ ಮಾಡಬೇಕಾಗಿದೆ, ಕರ್ನಾಟಕದಲ್ಲಿ ಮಾರಾಟ ಮಾಡುವುದಕ್ಕೆ ಆಗುವುದಿಲ್ಲ. ಹೊರಗಡೆಯವರ ಜೊತೆ ಕಾಂಪೀಟ್ ಮಾಡಿ ಮಾರಬೇಕು. 1.60 ರೂ.ವರೆಗೆ ವ್ಯತ್ಯಾಸ ಇದೆ ತಮಗೂ ಮಹಾರಾಷ್ಟ್ರಕ್ಕೂ. 1.60 ಫ್ಲಸ್ ಸೀಸನ್‌ನಲ್ಲಿ ವ್ಯತ್ಯಾಸ ಬರುತ್ತದೆ. ಮಹಾರಾಷ್ಟ್ರದ ಹಾಲು ಎಲ್ಲಾ ಕರ್ನಾಟಕಕ್ಕೆ ಬರುತ್ತದೆ. ನಿಮ್ಮ ಹತ್ತಿರ ಹಾಲು ಹೆಚ್ಚು ಆಗಿದ್ದಾಗ ಹಾಲು ಕಡಿಮೆ ಆದಾಗ ಅವರದ್ದು 1.00 ಜಾಸ್ತಿ ಇರುತ್ತದೆ, ನಿಮ್ಮ ಹಾಲೂ ಕೊಚ್ಚಿಕೊಂಡು ಮಹಾರಾಷ್ಟ್ರಕ್ಕೆ ಹೋಗುತ್ತದೆ.

12.05 ಪಿ.ಎಂ.

ನೀವು ಕೊಳ್ಳುವಾಗ ಧಾರಣೆ ಜಾಸ್ತಿಯಾಗುತ್ತದೆ ಮತ್ತು ಮಾರುವಾಗಲೂ ಧಾರಣೆ ಕಡಿಮೆಯಾಗುತ್ತದೆಂದಾಗ ಮಹಾ ಮಂಡಳಿಯನ್ನು ಯಾರೂ ಲಾಭಕ್ಕೆ ತರುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಸನ್ಮಾನ್ಯ ಸಚಿವರು ಗಮನ ಹರಿಸಬೇಕು. ಮೂರನೆಯದಾಗಿ, ನಾನು ತಮಗೆ ಹೇಳಿದ ಹಾಗೆ ಸುಮಾರು ನಾಲ್ಕು ವರ್ಷಗಳಿಂದ ಪಶುಸಂಗೋಪನೆ ಮೇಲೆ ಯಾರೂ ಮಾತನಾಡಿಲ್ಲ. ಮಾತನಾಡುವುದಕ್ಕೆ ಹೋದಾಗ ನಿರ್ಬಂಧ ಹಾಕುವುದಾದರೆ ನನಗೇನೂ ತೊಂದರೆಯಿಲ್ಲ. ಆದರೆ, ಒಂದು ಮಾತನ್ನು ಹೇಳಬೇಕಾಗಿದೆ. ನಾನು ಅವರಿಗೆ ಸೂಕ್ಷ್ಮವಾಗಿ ಹೇಳುತ್ತಿದ್ದೇನೆ: ನೀವು ಏನು ಬೇರೆ ಇಲಾಖೆಗೆ ಹಣವನ್ನು ಖರ್ಚು ಮಾಡುತ್ತಿದ್ದೀರಿ/ ಅದರ ಮೂರನೇ ಒಂದು ಭಾಗದಷ್ಟು ಹಣವನ್ನು ಪಶು ಸಂಗೋಪನಾ ಇಲಾಖೆಗೆ ಕೊಟ್ಟಿಲ್ಲ: ಉಪ ಕಸುಬನ್ನು ನೀವೇನಾದರೂ ಪ್ರೋತ್ಸಾಹಿಸದೆ ಹೋದರೆ ಗ್ರಾಮೀಣ ಪ್ರದೇಶದ ಜನರು ಬದುಕುವುದಕ್ಕಾಗುವುದಿಲ್ಲ. ನಿಮಗೆ ಹೊಸದಾಗಿ ಒಂದು ಮಿಶ್ರ ತಳಿ ಹಸು ಬಂದರೆ ಆರು ಸಾವಿರ ರೂಪಾಯಿಗಳ ವರಮಾನ ಬರುತ್ತದೆ, ಇಷ್ಟು ವರಮಾನ ಬೇರಾವ ಬೆಳೆಯಲ್ಲೂ ಬರುವುದಿಲ್ಲ. ಈ ಬಗ್ಗೆ ನಾವು ಮಾತನಾಡುವುದಕ್ಕೆ ಕಾಲಾವಕಾಶವಿಲ್ಲ. ಐದು ವರ್ಷಗಳಲ್ಲಿ ಒಂದು ಸಲ, ಅದು ಇವೊತ್ತು ಬೇಡಿಕೆ ಮೇಲೆ ಚರ್ಚೆಯಾಗಿದೆ. ಬೇಕಾದರೆ ತಾವು ದಾಖಲೆ ತೆಗೆಸಿ ನೋಡಿ; ಚರ್ಚೆಯಾಗದಿರುವ ಇಲಾಖಾ ಬೇಡಿಕೆಗಳಲ್ಲಿ ಇದೂ ಒಂದು. ಆದುದರಿಂದ, ಇನ್ನೊಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಬೇಕಾಗಿದೆ. ಇನ್‌ಸೆಮಿನೇಷನ್ ಫಿಗರ್ ತಾವು ತರಿಸಿ ನೋಡಿ.

ಇದನ್ನು ಮಾಡಬೇಕಾದರೆ ಒಂದು ವ್ಯತ್ಯಾಸವಿಟ್ಟುಕೊಂಡು ರಿವ್ಯೂ ಮಾಡಬೇಕು. ಕ್ರಾಸ್ ಫೀಡ್ ಮೇಲೆ ಎಷ್ಟು ಇನ್‌ಸೆಮಿನೇಷನ್ ಆಗುತ್ತಿದೆ ? ಲೋಕಲ್ ಫೀಡ್ ಮೇಲೆ ಎಷ್ಟು ಇನ್‌ಸೆಮಿನೇಷನ್ ಆಗುತ್ತಿದೆ ? ಎಂಬುದನ್ನು ರಿವ್ಯೂ ಮಾಡಬೇಕು. ಒಂದು ಸೀಮೆ ಹಸುವಿಗೆ ಇನ್‌ಸೆಮಿನೇಷನ್ ಮಾಡಿಸಬೇಕೆಂದು ರೈತರು ತಿಳಿದುಕೊಂಡಿದ್ದಾರೆ, ಆದರೆ, ಮಾಡಿಸಿಲ್ಲ. ಅದೇ ರೀತಿ ನಾಡ ಹಸುಗಳಿಗೆ ಮಾಡಿಸುತ್ತಿಲ್ಲ. ಅದಕ್ಕೆ ಏನು ಇನ್‌ಸೆಮಿನೇಷನ್ ಹಾಕಿಸಬೇಕಾಗಿದೆ, ಅದನ್ನು ಮಾಡಿಸದೆ ಹೋದರೆ ರೈತರ ಏಳಿಗೆಯಾಗುವುದಿಲ್ಲ, ಆಗ ನಾವುಗಳೆಲ್ಲರೂ ಸಾಲಗಾರರ ಮಕ್ಕಳಾಗಿರುತ್ತೇವೆ. ಇಂಡಕ್ಷನ್

ಪ್ರೋಗ್ರಾಂ ಏನು ತಮ್ಮದು ಇದೆ, ಅದು ನಿಲ್ಲುವಂತಿಲ್ಲ. ಬ್ಯಾಂಕಿನಲ್ಲಿ ಸಾಲ ಕೇಳಿ ತರುವುದು, ಹಸು ಕಟ್ಟಿ ಹಾಲು ಕರೆಯುತ್ತೇವೆ ಎನ್ನುವುದು, ಅನಂತರ ಬಡ್ಡಿಗೆ ದುಡ್ಡು ಕಟ್ಟುವುದು ಇದಿಷ್ಟೇ ವ್ಯವಸ್ಥೆ ಉಳಿದುಕೊಂಡು ಹೋಗುತ್ತಿದೆ. ಆದುದರಿಂದ, ನಾಡ ತಳಿ ಹಸುವನ್ನು ಅಭಿವೃದ್ಧಿ ಮಾಡುವ ಕಡೆ ತಾವು ಗಮನ ಕೊಡಬೇಕು. ಇನ್ನು ಹೋರಿ ಕರುಗಳು ಏನಿವೆ, ಅವುಗಳನ್ನು ಎಲ್ಲಾದರೂ ಮಾರಾಟ ಮಾಡಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಇವೊತ್ತು ಸೀಮೆ ಹಸುವಿಗೆ ಹೋರಿ ಕರುವೇನಾದರೂ ಹುಟ್ಟಿದರೆ ಅದನ್ನು ಕೇಳುವವರು ಯಾರೂ ಇಲ್ಲವೆಂದು ಅದನ್ನು ಕೊಲ್ಲುತ್ತಾರೆ. ಅದನ್ನು ಹಳೆಯ ಮೈಸೂರು ಭಾಗದಲ್ಲಿ ಬೇಸಾಯಕ್ಕೆ ಬಳಸುವುದಿಲ್ಲ. ಆದುದರಿಂದ, ಆ ಹೋರಿ ಕರು ಬಗ್ಗೆ ತಾವು ಸ್ವಲ್ಪ ಗಮನ ಕೊಡಬೇಕು.

ಈಗಾಗಲೇ ನನಗೆ ಅಧ್ಯಕ್ಷರು ವಾರ್ನಿಂಗ್ ಮಾಡಿರುವುದರಿಂದ ತೋಟಗಾರಿಕೆ ಬಗ್ಗೆ ಒಂದೆರಡು ಮಾತುಗಳನ್ನಾಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಇತ್ತೀಚಿನ ದಿನಗಳಲ್ಲಿ ಕೃಷಿಯಿಂದ ಕೃಷಿಪೂರ್ವಕವಾಗಿ ತೋಟಗಾರಿಕೆ ಕಡೆಗೆ ಹೆಚ್ಚು ಹೋಗುತ್ತಿದೆ, ಇದೊಂದು ಶುಭ ಸಂಕೇತ. ಏಕೆಂದರೆ, ತಮಗೆ ಗೊತ್ತಿದೆ, ತಾವು ಸಹ ರೈತರಾಗಿದ್ದು, ಗ್ರಾಮೀಣ ಪ್ರದೇಶದಿಂದ ಬಂದವರೆಂದು ತಿಳಿದುಕೊಂಡು ಎರಡು ಮಾತುಗಳನ್ನು ಹೇಳುತ್ತಿದ್ದೇನೆ. ಕೃಷಿಯಲ್ಲಿ 3 ಭಾಗ ಮಾಡುತ್ತೇವೆ, ಬಾಗಾಯ್ತು ತರಿ ಮತ್ತು ಖುಷ್ಕಿ ಎಂದು ಏನು ಮೂರು ಭಾಗಗಳನ್ನಾಗಿ ವಿಂಗಡಿಸುತ್ತೇವೆ; ಇದರಲ್ಲಿ ಖುಷ್ಕಿಯನ್ನು ನಂಬಿ ಬೆಳೆದುಕೊಂಡು ಬಂದಿರುವ ಯಾವ ರೈತ ಕೂಡ ಉಳಿದಿಲ್ಲ: ಈ ಕುರಿತು ನಮ್ಮ ಕಡೆ ಒಂದು ಗಾದೆ ಮಾತಿದೆ. ಬಾಗಾಯ್ತು ಇರೋರು ತರಿ ಮಾಡಿದರೆ ದಡ್ಡರು, ತರಿ ಇರುವವರು ಖುಷ್ಕಿ ಮಾಡಿದರೆ ದಡ್ಡರು. ಎಂದು. ಬಾಗಾಯತ್ ಬೆಳೆ ಎಂದರೆ ತೋಟಗಾರಿಕೆ ಬೆಳೆ ಏನಾದರೂ ಗೊತ್ತಿದ್ದರೆ ಆತ ತರಿಗೆ ಹೋಗುವುದೇ ತಪ್ಪು ಎಂದು, ಗದ್ದೆ ಇರುವವರು ಖುಷ್ಕಿಗೆ ಹೋಗುವುದು ತಪ್ಪು. ಏಕೆಂದರೆ, ಖುಷ್ಕಿ ಬೆಳೆ ಆ ಸ್ಥಿತಿಗೆ ಬಂದು ನಿಂತಿದೆ. ಆದ್ದರಿಂದ ಇವೊತ್ತು ಸ್ವಲ್ಪ ಮಟ್ಟಿಗೆ ತೋಟಗಾರಿಕೆ ಕಡೆಗೆ ಯೋಚನೆ ಮಾಡಬೇಕಾಗಿದೆ ಎಂದು ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ಈ ರಾಜ್ಯದ ಪ್ರಮುಖ ತೋಟಗಾರಿಕೆ ಬೆಳೆ ಎಂದರೆ ತೆಂಗು; ಇದನ್ನು ಬಿಟ್ಟರೆ ಅಡಿಕೆ. ತೆಂಗು ಬೆಳೆ ಬಗ್ಗೆ ಮಾತನಾಡಬೇಕಾದರೆ, ಇವೊತ್ತು ಲಕ್ಷಾಂತರ ಎಕರೆ ಪ್ರದೇಶದಲ್ಲಿ ತೆಂಗಿನ ಬೆಳೆ ಇದೆ. ಇವೊತ್ತು ತೆಂಗಿನ ಬೆಳೆಯನ್ನು ಏಕಕಾಲಕ್ಕೆ ಅಥವಾ ದಿಢೀರ್ ಎಂದು ತೆಂಗಿನ ಮರ ಹಾಕಿ ಬೆಳೆ ತೆಗೆಯುವುದಕ್ಕೆ ಯಾರಿಗೂ ಕೂಡ ಸಾಧ್ಯವಿಲ್ಲದಂಥ ಒಂದು ಬೆಳೆಯಾಗಿದೆ. ಈ ಬೆಳೆ ಬಗ್ಗೆ ನಾವು ಅನೇಕ ಸಲ ಪ್ರಸ್ತಾಪ ಮಾಡಿದ್ದೇವೆ. ಇವೊತ್ತು ಈ ಬೆಳೆ ರೋಗಕ್ಕೆ ತುತ್ತಾಗುತ್ತಿರುವುದು ತಮಗೆ ಗೊತ್ತಿರಬೇಕು. 15-20-30 ವರ್ಷಗಳಿಂದ ಇದ್ದ ತೆಂಗಿನ ತೋಟ ದಿಢೀರ್ ಎಂದು ಒಣಗುವ ಸ್ಥಿತಿಗೆ ಬಂದಿದೆ, ತೆಂಗು ಬೆಳೆಗೆ ಅನೇಕ ಕಾಯಿಲೆಗಳು ಬರುತ್ತಿವೆ. ಕಪ್ಪು ತಲೆ ಹುಳು ರೋಗ, ಹೊಳಚಿನ ರೋಗ ಮತ್ತು ಹಳದಿ ರೋಗ ಎಂದು ಬರುತ್ತಿರುವುದರ ಬಗ್ಗೆ ತಾವು ಯೋಚನೆ ಮಾಡಬೇಕು. ನಮ್ಮ ದುರಾದೃಷ್ಟ ಎರಡು ವರ್ಷಗಳಿಂದ ಒಂದೇ ಸಮನೇ ತಮ್ಮಲ್ಲಿ ಬೇಡಿಕೆ ಇಡುತ್ತಿದ್ದೇವೆ, ಕಪ್ಪು ತಲೆ ಹುಳು ರೋಗ ನಿವಾರಣೆ ಮಾಡಿ ಎಂದು.

ಇದರ ಬಗ್ಗೆ ತಮ್ಮ ಗಮನ ಸೆಳೆದಾಗ ನನಗನ್ನಿಸುತ್ತದೆ. ನಿನ್ನೆ ಕೂಡ ನಾನು ಚಿಕ್ಕನಾಯಕನಹಳ್ಳಿಯಲ್ಲಿ ಹೇಳಿದ್ದೇನೆ. ಅಲ್ಲಿ 5000 ತೆಂಗಿನ ಸಸಿಗಳಿಗೆ ಕಪ್ಪು ತಲೆ ಹುಳು ರೋಗವಿದ್ದು, ಇಡೀ ಕರ್ನಾಟಕ ರಾಜ್ಯದಲ್ಲಿ ಸುಮಾರು ಒಂದು ಲಕ್ಷ ಚಿಲ್ಲರೆ ತೆಂಗಿನ ಸಸಿಗಳಿಗೆ ಕಪ್ಪು ತಲೆ ಹುಳು ರೋಗ ತಗುಲಿದೆ. ನಿಮ್ಮ ಹತ್ತಿರವಿರುವ ಕೆಮಿಕಲ್ಸ್ ಮಾರ್ಚ್ ತಿಂಗಳ ಅಂತ್ಯಕ್ಕೆ ಮುಗಿದು ಹೋಗುತ್ತದೆ. ತಾವು ಎರಡು ವರ್ಷಗಳಿಂದ ಏನು ಕೆಮಿಕಲ್ಸ್ ಅನ್ನು ಬಳಕೆ ಮಾಡಿದಿರಿ, ಅದಕ್ಕೆ ಇದುವರೆಗೆ ಹಣ ಕೊಟ್ಟಿಲ್ಲ, ಮತ್ತು ತಾವು ಪ್ಯಾರಾಸೈಟ್ಸ್ ಲ್ಯಾಬ್ ಮಾಡಿಸಿದ್ದೀರಿ, ಜಿಲ್ಲಾ ಪರಿಷತ್‌ನವರು ಮಾಡಿದ್ದನ್ನು ತಮ್ಮವರೂ ಕೂಡ ಮಾಡಿದರು. ಪ್ಯಾರಾಸೈಟ್ಸ್ ಬಳಕೆ ಮಾಡೋಣ ಎಂದರೆ, ದುಡ್ಡಿಲ್ಲದೆ ಯಾರು ಖಾಸಗಿಯವರು

ಪ್ಯಾರಾಸೈಟ್ಸ್ ಲ್ಯಾಬ್ ಮಾಡಿದ್ದರು, ಅದನ್ನು ನಿಲ್ಲಿಸಿದ್ದೀರಿ. ಇವೊತ್ತು ಪ್ಯಾರಾಸೈಟ್ಸ್ ಪ್ರೊಡಕ್ಷನ್ ಆಗುತ್ತಿಲ್ಲ, ಒಂದು ಕಡೆ ಕೆಮಿಕಲ್ಸ್ ಇಲ್ಲ ಮತ್ತೊಂದು ಕಡೆ ರೋಗ ಉಲ್ಬಣಗೊಳ್ಳುತ್ತಿದೆ. ಏಪ್ರಿಲ್–ಮೇ ತಿಂಗಳಿನ ಸಮಯದಲ್ಲಿ ತೆಂಗು ಬೆಳೆಗೆ ಬರತಕ್ಕಂಥ ರೋಗವನ್ನು ತಾವು ನಿಯಂತ್ರಿಸದಿದ್ದರೆ, ಬಹುಶಃ ನಾವು ಭಾರಿ ಗಂಡಾಂತರಕ್ಕೀಡಾಗುತ್ತೇವೆ. ಮೊದಲನೆಯದಾಗಿ, ತಮಗೆ ಒತ್ತಾಯ ಮಾಡುತ್ತಿದ್ದೇನೆ. ಏನೆಂದರೆ, ತೆಂಗಿನ ಬೆಳೆ ಬಗ್ಗೆ ತಾವು ತಕ್ಷಣ ಕ್ರಮ ತೆಗೆದುಕೊಂಡು ಏಪ್ರಿಲ್ ತಿಂಗಳಿನಲ್ಲಿ ಕಡೇ ಪಕ್ಷ ರಾಜ್ಯಕ್ಕೆ ಬೇಕಾಗಿರುವ ಕೆಮಿಕಲ್ ಆದರೂ ಕೊಡಿಸಬೇಕು.

ನಾನು ಕೇಳಿರತಕ್ಕ ಪ್ರಕಾರ ಚಿಕ್ಕನಾಯಕನಹಳ್ಳಿಗೆ ಕೆಮಿಕಲನ್ನು ಕೊಡಬೇಕಾಗಿದೆ. ಏಪ್ರಿಲ್ ತಿಂಗಳಿನಲ್ಲಿ 200 ಲೀಟರ್ ಕೆಮಿಕಲ್‌ನ್ನು ಕೊಡಬೇಕು. ಏಕೆಂದರೆ, ಆ ಭಾಗದಲ್ಲಿರುವ ಎಲ್ಲಾ ತೆಂಗಿನ ಮರಗಳಿಗೂ ರೋಗ ಬಂದಿದೆ; ಈ ರೋಗವು ದಕ್ಷಿಣ ಕನ್ನಡ ಜಿಲ್ಲೆ ಕಡೆಗೂ ಹೋಗುತ್ತಿದೆ, ಆದ್ದರಿಂದ ಅಲ್ಲಿರತಕ್ಕ ತೆಂಗಿನ ಮರಗಳಿಗಿರುವ ರೋಗವನ್ನೂ ಸಹ ನಿವಾರಣೆ ಮಾಡಬೇಕಾಗಿದೆ. ಇನ್ನು ಈ ತೆಂಗಿನ ಬೆಳೆ ಮತ್ತು ಕರ್ನಾಟಕದಲ್ಲಿರುವ ತೋಟಗಾರಿಕೆಯ ಬೆಳೆಯ ಬಗ್ಗೆ ಒಂದೊಂದೇ ಮಾತನ್ನು ಹೇಳಬೇಕೆಂದಿದ್ದೆ; ಆದರೆ ತಾವು ಅದಕ್ಕೆ ಅವಕಾಶ ಕೊಡುವುದಿಲ್ಲವೆಂದು ನನಗೆ ಗೊತ್ತಿದೆ, ತಮಗೆ ಹೇಳುವುದೇನೆಂದರೆ, ಇವತ್ತು ಹೊಸ ಜಿಲ್ಲೆಗಳಲ್ಲಿಯೂ ಸಹ ಈ ತೋಟಗಾರಿಕೆಯ ಬೆಳೆಗಳನ್ನು ಹಮ್ಮಿಕೊಂಡಿದ್ದಾರೆ, ಅದರಲ್ಲಿಯೂ ಪ್ರಮುಖವಾಗಿ ಬಿಜಾಪುರ, ಕೋಲಾರ, ಚಿಕ್ಕಮಗಳೂರು ಮತ್ತು ಹಾಸನಗಳಲ್ಲಿ ಇದನ್ನು ಹಮ್ಮಿಕೊಂಡಿದ್ದಾರೆ. ಮಾನ್ಯ ರಾಮಯ್ಯನವರಿಗೆ ಕ್ಷಮೆ ಕೇಳಿ ಹೇಳುವುದೇನೆಂದರೆ, ನಮಗೆ ನೀರನ್ನು ಕೊಡಲು ಇವರಿಂದ ಆಗುವುದಿಲ್ಲ, ಇನ್ನು ನಮಗೆ ನಾಲೆಯ ಬಗ್ಗೆ ಮಾತನಾಡಲು ಅಧಿಕಾರವಿಲ್ಲ, ನಮಗೆ ಕೃಷ್ಣ ಇಲ್ಲವೇ ಇಲ್ಲ, ಕಾವೇರಿಯಂತೂ ನಾವು ಕಂಡಿಲ್ಲ; ಕೊನೆಗೆ ಇದಾದರೂ ಸಹ ನಮಗೆ ಮಾಡಿಕೊಡಿ ಎಂದು ಕೇಳಬೇಕಾಗುತ್ತದೆ, ಇದನ್ನು ಮಾಡಿಕೊಡಬೇಕಾದರೆ ತಮಗೆ ಒಂದು ಮಾತನ್ನು ಹೇಳುತ್ತೇನೆ, ತಾವು ಸ್ವಲ್ಪ ಇದರ ಬಗ್ಗೆ ಮಾಹಿತಿಯನ್ನು ತರಿಸಬೇಕಾಗುತ್ತದೆ, ನಮ್ಮ ಮುಂದೆ ಅನೇಕ ಯೋಜನೆಗಳಿವೆ; ಅವುಗಳೆಂದರೆ ಕೇಂದ್ರ ಸರ್ಕಾರದ ಯೋಜನೆ, ವಿಶ್ವಬ್ಯಾಂಕಿನ ಯೋಜನೆ, ನಬಾರ್ಡ್ ಯೋಜನೆ ಇದೆ, ಎನ್ ಡಿ ಡಿ ಬಿ ಯವರು ಕೊಟ್ಟಿರತಕ್ಕ ಸಹಾಯವನ್ನು ನಿಮ್ಮಿಂದ ಬಳಸಿಕೊಳ್ಳಲು ಆಗಿಲ್ಲ; ನಾನು ಅವರ performance budget ತೆಗೆದುಕೊಳ್ಳುತ್ತಿದ್ದೆ, ಇಡೀ ವರ್ಷದಲ್ಲಿ 50 ಪರ್ಸೆಂಟ್ ಮೀರಿ ಯಾವ ಕೆಲಸವನ್ನೂ ಮಾಡಿಲ್ಲ, ನಿಮ್ಮ ಹತ್ತಿರ ಎರಡು ಕೋಟಿ ರೂ. ಡ್ರಿಪ್ ಇದೆ, ಸುಮಾರು ಲಕ್ಷಗಳಲ್ಲಿ ಮಾತ್ರ ಡ್ರಿಪ್ ಇರಿಗೇಷನ್‌ಗೆ ಹಣವನ್ನು ಬಳಕೆ ಮಾಡಿದ್ದೀರಿ. ನಾನು ತೋಟಗಾರಿಕೆಯ ಬೆಳೆಯ ಬಗ್ಗೆ ಮಾತನಾಡುತ್ತಿದ್ದೆ; ಇಲ್ಲಿ ಮೂಲಭೂತವಾಗಿ ಮೂರು ಕೆಲಸವನ್ನು ತಾವು ಮಾಡಬೇಕು.

ಮೊದಲನೆಯದಾಗಿ ಡ್ರಿಪ್ ಇರಿಗೇಷನ್: ಈ ಡ್ರಿಪ್ ಇರಿಗೇಷನ್ ಮೇಲೆ ಏನು ಭಾರತ ಸರ್ಕಾರದವರು ನೂರಕ್ಕೆ 50 ಪರ್ಸೆಂಟ್ ಸಬ್ಸಿಡಿಯನ್ನು ಕೊಡುತ್ತಾರೆ ಅದನ್ನು ಆದಷ್ಟು ಹೆಚ್ಚಾಗಿ ನಮಗೆ ತರಿಸಿಕೊಡಬೇಕು; ಅದರ ಜೊತೆಗೆ ಸ್ಪ್ರಿಂಕಲರ್ ಇರಿಗೇಷನ್ ಬಗ್ಗೆ ಸಹ ಗಮನ ಕೊಡಬೇಕು. ಏಕೆಂದರೆ ನಮ್ಮ ಕಡೆಯ ಅನೇಕ ಭಾಗಗಳಲ್ಲಿ ತೆಂಗು, ಅಡಿಕೆ ಮತ್ತು ಬಾಳೆಯನ್ನು ಒಟ್ಟಿಗೆ ಬೆಳೆಯತಕ್ಕ ಜನರಿದ್ದಾರೆ. ಅವರು ಎಲ್ಲಾದಕ್ಕೂ ಡ್ರಿಪ್ ಇರಿಗೇಷನ್‌ನನ್ನು ಮಾಡುವುದಕ್ಕಾಗುವುದಿಲ್ಲ; ಅದು ಭಾರಿ ದುಬಾರಿಯಾಗುತ್ತದೆ, ಆದುದರಿಂದ ಸ್ಪ್ರಿಂಕ್‌ಲರ್ ಬಳಕೆ ಮಾಡಬೇಕಾಗುತ್ತದೆ, ಇದಕ್ಕಾಗಿ ಸ್ಪ್ರಿಂಕ್‌ಲರ್ ಮೇಲೆ ಕೊಡತಕ್ಕ ಸಬ್ಸಿಡಿಯನ್ನು ತರಿಸಿಕೊಡಬೇಕು. ಇದನ್ನು ವ್ಯವಸಾಯ ಇಲಾಖೆಯವರು ಕೊಡಿಸಿದ್ದಾರೆ. ತಮ್ಮ ಇಲಾಖೆಯವರು ಕೊಡಲು ಬರುವುದಿಲ್ಲವೆಂದು ತಾವು ಹೇಳಬಹುದು, ಆದರೆ ತಮ್ಮ ಇಲಾಖೆಯವರು ಸಹ ಸ್ಪ್ರಿಂಕಲರ್‌ನ್ನು ಕೊಡಬೇಕಾಗುತ್ತದೆ. ಇದರ ಬಗ್ಗೆ ಒಂದು ಯೋಜನೆಯನ್ನು ತಮ್ಮ ಇಲಾಖೆಯವರು ತಯಾರು ಮಾಡಬೇಕು. ಇದರಲ್ಲಿ ಹರಿಜನರಿಗಾದರೆ 75 ಪರ್ಸೆಂಟ್, ಸಣ್ಣ ರೈತರಿಗೆ 50 ಪರ್ಸೆಂಟ್, ದೊಡ್ಡ ರೈತರಾದರೆ 25 ಪರ್ಸೆಂಟ್ ಎಂದು ಸಬ್ಸಿಡಿ

ಕೊಡುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಎಲ್ಲಾ ರೈತರಿಗೂ ಕೊಡುವುದು 10 ಸಾವಿರವೇ ಸಬ್ಸಿಡಿ; ಆದರೆ ಹರಿಜನರ ಯೋಜನೆಗೆ 20 ಸಾವಿರಕ್ಕೆ ನಿಗದಿ ಮಾಡುತ್ತಾರೆ, ಸಣ್ಣ ರೈತರಿಗೆ 30 ಸಾವಿರ, ದೊಡ್ಡ ರೈತರಿಗೆ 40 ಸಾವಿರಕ್ಕೆ ತೆಗೆದುಕೊಂಡು ಹೋಗುತ್ತಾರೆ, ತಾವು ಈ ಸ್ಥಿತಿಯನ್ನು ತಪ್ಪಿಸಬೇಕು, ಇದು ಕೆಟ್ಟ ಸ್ಥಿತಿ, ಈ ರೀತಿ ಹರಿಜನರಿಗೆ 20 ಸಾವಿರ, ಸಣ್ಣ ರೈತರಿಗೆ 30 ಸಾವಿರದಂತೆ ಕೊಡುವುದು ಸರಿಯಾಗುವುದಿಲ್ಲ, ಹತ್ತು ಸಾವಿರ ಸ್ಟಾಂಡರ್ಡ್ ಸಬ್ಸಿಡಿಯನ್ನು ಸ್ಪ್ರಿಂಕಲರ್ ಇರಿಗೇಷನ್ ಮೇಲೆ ಎಲ್ಲರಿಗೂ ಏನು ಕೊಡುತ್ತಿದ್ದಾರೆ, ಅದನ್ನು ತಪ್ಪಿಸಬೇಕು, ಸ್ಪ್ರಿಂಕಲರ್ ಇರಿಗೇಷನ್ ಮೇಲೆ 50 ಪರ್ಸೆಂಟ್ ಆದರೂ ಸಬ್ಸಿಡಿಯನ್ನು ಕೊಡುವುದಕ್ಕೆ ಒಂದು ಸ್ಕೀಮನ್ನು ರಾಜ್ಯ ಸರ್ಕಾರದವರು ತಯಾರು ಮಾಡಬೇಕು. ಇದರ ಜೊತೆಗೆ ತಮಗೆ ಈಗಾಗಲೇ ಹೇಳಿದ್ದೇನೆ. ಈ ಡ್ರಿಪ್ ಇರಿಗೇಷನ್‌ನಲ್ಲಿ ಅನೇಕ technology research ಆಗಿದೆ;

ಯಾವುದು ಸರಿ ಯಾವುದು ತಪ್ಪು ಎಂಬುದನ್ನು ನಿಷ್ಕರ್ಷೆ ಮಾಡತಕ್ಕ ಸ್ಥಿತಿಯಲ್ಲಿ ರೈತರು ಇಲ್ಲ; ಮೈಕ್ರೊ ಟ್ಯೂಬ್ ಹಾಕಿಸಿದರೆ ಒಳ್ಳೆಯದು ಅಂತಾರೆ ಅಥವಾ ಟ್ರಿಪ್ಪರ್ ಹಾಕಿದರೆ ಸಾಕು ಅಂತಾರೆ. ಇವೆರಡೂ ಬೇಡ. ಸಣ್ಣದಾಗಿ ರಂಧ್ರವನ್ನು ಮಾಡಿಕೊಂಡು ಹೋಗಿ ಮರಗಳ ಮಧ್ಯೆ ಬಿಟ್ಟರೆ ನೀರು ಹಾಯುತ್ತದೆ ಸಾಕು ಎನ್ನುತ್ತಾರೆ, 40 ಕೊಡ 60 ಕೊಡ 120 ಕೊಡ ನೀರು ಸಾಕು ಎಂದು ನಿಮ್ಮ ಏಜೆಂಟ್ಸ್‌ಗಳು ಪ್ರಚಾರ ಮಾಡುತ್ತಿದ್ದಾರೆ, ಆದ್ದರಿಂದ ತಾವು ಇದರ ಬಗ್ಗೆ ಒಂದು ಸಮ್ಮೇಳನವನ್ನೋ ಕಾರ್ಯಾಗಾರವನ್ನೋ ಮಾಡಿ ಯಾರಾದರೂ ಇದರ ತಂತ್ರಜ್ಞರಿದ್ದರೆ ಅವರನ್ನು ಕರೆದು ಅವರ ಜೊತೆಯಲ್ಲಿ ಸಮಾಲೋಚಿಸಿ ಡ್ರಿಪ್ ಇರಿಗೇಷನ್‌ನಲ್ಲಿ ಒಂದು ತೆಂಗಿನ ಮರಕ್ಕೆ ಎಷ್ಟು ನೀರನ್ನು ಕೊಡಬೇಕು ಎನ್ನತಕ್ಕ ತೀರ್ಮಾನಕ್ಕೆ ತಾವು ಬರಬೇಕಾಗುತ್ತದೆ, ಮತ್ತು ಮೈಕ್ರೊಟ್ಯೂಬ್‌ನಲ್ಲಿ ಹಾಕಿದರೆ ಒಳ್ಳೆಯದೋ ಅಥವಾ ಟ್ರಿಪ್ಪರ್‌ನಲ್ಲಿ ಹಾಕಿಸಿದರೆ ಒಳ್ಳೆಯದೋ ಎಂಬುದನ್ನು ಹೇಳಬೇಕಾಗುತ್ತದೆ; ಮತ್ತೆ 6 ವರ್ಷಗಳಾದ ಮೇಲೆ ಈ ಡ್ರಿಪ್‌ಗಳು ಒಳಗೆಲ್ಲಾ ಬ್ಲಾಕ್ ಆಗುತ್ತದೆ ಎನ್ನತಕ್ಕ ಮಾಹಿತಿ ನನ್ನ ಗಮನಕ್ಕೆ ಬಂದಿದೆ, ಆದ್ದರಿಂದ ಈ ಡ್ರಿಪ್ ಇರಿಗೇಷನ್‌ನನ್ನು ಹಾಕಿಸಲು ನಾವು ಹೆದರುತ್ತಿದ್ದೇವೆ. ತಾವು ಇದರ ಬಗ್ಗೆ ಇವತ್ತು ಮಾಹಿತಿಯನ್ನು ಕೊಡಬೇಕು. ಎಲ್ಲದಕ್ಕಿಂತ ಮುಖ್ಯವಾಗಿ ಇಲಾಖೆಯವರನ್ನು ಕರೆದು ಏನೇನು ಸಬ್ಸಿಡಿಗಳನ್ನು ತೋಟಗಾರಿಕೆಯ ಮೇಲೆ ಕೊಡಬಹುದು ಎಂಬುದನ್ನು ನೋಡಬೇಕು.

ಇವತ್ತು ಏನಾದರು ಏಲಕ್ಕಿ ಬೆಳೆಯನ್ನು ಬೆಳೆಯುತ್ತೇವೆಂದರೆ ನೂರು ಪರ್ಸೆಂಟ್ ಸಬ್ಸಿಡಿಯನ್ನು ಕೊಡುತ್ತಾರೆ. ಅಂಥ ಸ್ಕೀಮ್‌ಗಳು ಇವೆ. ತೆಂಗಿನ ಬೆಳೆಗೆ 50 ಪರ್ಸೆಂಟ್ ಸಬ್ಸಿಡಿಯನ್ನು ಕೊಡುತ್ತೇವೆ. ಆಯಾಯಾ ಬೋರ್ಡ್‌ಗಳಲ್ಲಿ ಬೇಕಾದಷ್ಟು ಹಣ ಕೊಳೆಯುತ್ತ ಬಿದ್ದಿದೆ. ಅವತ್ತು ಪ್ರಶ್ನೆ ಕೇಳಿದಾಗಲೇ ನಾನು ಕೇಳಿದೆ. ಕೋಕನಟ್ ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ ತೆಂಗಿನ ಬೆಳೆಗೆ 50 ಪರ್ಸೆಂಟ್ ಸಬ್ಸಿಡಿಯನ್ನು ಕೊಡುತ್ತಾರೆ, ಅದೂ ಕೂಡ ಬಳಕೆಯಾಗಿಲ್ಲ ಎಂದು ಹೇಳಿದ್ದೆ, ಅದು ತಮಗೆ ಈಗ ಅರಿವಾಗಿರಬಹುದು, ನನ್ನ ಕ್ಷೇತ್ರವೊಂದರಲ್ಲೇ 200 ಅರ್ಜಿಗಳು ಬಾಕಿ ಇವೆ. ಇದನ್ನು ಏಕೆ ಒತ್ತಾಯ ಮಾಡುತ್ತೇವೆಂದರೆ ನಮ್ಮ ಸರ್ಕಾರಕ್ಕಂತೂ ಹಣವನ್ನು ಖರ್ಚು ಮಾಡತಕ್ಕ ಶಕ್ತಿ ಇಲ್ಲ; ಆದರೆ ಯಾರಾದರೂ ಕೊಡುವುದಿದ್ದರೆ ಅದನ್ನಾದರೂ ತಂದು ಕೊಡಿಸಲು ಪ್ರಯತ್ನ ಮಾಡದಿದ್ದರೆ ಅದನ್ನು ಯಾರಾದರೂ ಆಡಳಿತವೆಂದು ಕರೆಯುತ್ತಾರೆಯೇ ? ಅದಕ್ಕೆ ಒಬ್ಬರು ಮಂತ್ರಿಗಳು ಇರಬೇಕೆ ? ನಿರ್ದೇಶಕರು ಇರಬೇಕೆ ? ಇಲಾಖೆಯವರು ಇರಬೇಕೇ ? ಆದ್ದರಿಂದ ತಾವು ಈ ಕಡೆಗೆ ಹೆಚ್ಚಿನ ಗಮನ ಕೊಟ್ಟು ಆ ಸ್ಕೀಮ್‌ಗಳನ್ನು ಜಾರಿಗೆ ತರಬೇಕಾಗುತ್ತದೆ. ಇದರ ಜೊತೆಗೆ ತಾವು ಏನು ಫ್ರೂಟ್ಸ್ ಮತ್ತು ವೆಜಿಟಬಲ್ ಮಾರ್ಕೆಟ್ ಎಂದು ಬೂತುಗಳನ್ನು ಮಾಡಿದ್ದೀರಿ, ಅದು ಮೊದಲು ಎನ್.ಡಿ.ಡಿ.ಬಿಯ ಜೊತೆಯಲ್ಲಿ ಆರಂಭವಾದ ಯೋಜನೆ, ಎನ್.ಡಿ.ಡಿ.ಬಿ. ಆಯಿತು ನಂತರ ಅದನ್ನು ಎನ್.ಸಿ.ಡಿ.ಸಿ. ಯ ಜೊತೆಗೆ ತೆಗೆದುಕೊಂಡು ನೆಗೋಶಿಯೇಟ್ ಮಾಡಿದರೂ. ಎನ್.ಸಿ.ಡಿ.ಸಿ. ದೇ

ಬಾಕಿ ನಿಂತಿದೆ, ಈಗ ತಮಗೆ ಏನಾದರೂ ವಿಶ್ವ ಬ್ಯಾಂಕ್ ತೋರಿಸಬಹುದು, ಏತಕ್ಕೆಂದರೆ ಟೀಮ್‌ಗಳು ಬರುತ್ತಿವೆ, ಈ ಕಾರಣವನ್ನು ಹೇಳಿಕೊಂಡು ಈ ಯೋಜನೆಗಳನ್ನು ಸುಮಾರು 12 ವರ್ಷಗಳಿಂದಲು ನೆನೆಗುದಿಗೆ ಇಟ್ಟಿದ್ದಾರೆ. ಆ ಯೋಜನೆಯ ಅಡಿಯಲ್ಲಿ ನಿಮ್ಮಲ್ಲಿ ಕೋಲ್ಡ್ ಸ್ಟೋರೇಜ್‌ಗಳು ಆಗಬೇಕಾಗಿತ್ತು, ಇದುವರೆಗೂ ಒಂದು ಪರಿಶೀಲನೆಯನ್ನೂ ಇದರ ಬಗ್ಗೆ ಮಾಡಲಿಲ್ಲ; ನಾನಿದ್ದಾಗ ಇವರು ಕೋಲ್ಡ್ ಸ್ಟೋರೇಜನ್ನು ಸಮರ್ಪಕವಾಗಿ ಕಟ್ಟಿಲ್ಲವೆಂದು ಹೇಳಿದ್ದರು;

ನಾವು ಆಲೂಗೆಡ್ಡೆಯನ್ನು ಟೊಮ್ಯಾಟೋವನ್ನು, ಸ್ಟೋರ್ ಮಾಡುವುದಕ್ಕೆ ಆಗಿಲ್ಲ. ಇದು ಏತಕ್ಕೆ ಆಗಿಲ್ಲ, ಏತಕ್ಕೆ ಆಗಬೇಕು ಎನ್ನುವ ಬಗ್ಗೆ ತಾವು ತಿಳಿದುಕೊಳ್ಳಬೇಕು. 15 ದಿನ ಇಲ್ಲವೆ ಒಂದು ತಿಂಗಳು ರೈತ ಬೆಳೆದ ಬೆಳೆಯನ್ನು ಕೋಲ್ಡ್ ಸ್ಟೋರೇಜಿನಲ್ಲಿ ಇಡಲು ಸಾಧ್ಯವಾದರೆ ಮಾತ್ರ ರೈತನಿಗೆ ಒಳ್ಳೆಯ ಧಾರಣೆಯನ್ನು ಕೊಡಿಸಿ ಕೊಡಬಹುದು; ಟೊಮ್ಯಾಟೋವನ್ನು ಕೆ.ಜಿ.ಗೆ 50 ಪೈಸೆಗೆ, ಆಲೂಗೆಡ್ಡೆಯನ್ನು ಒಂದು ರೂಪಾಯಿಗೆ ಮಾರಾಟ ಮಾಡುತ್ತಿದ್ದಾಗ ಒಂದೇ ಸಲ 5 ರೂ. 6 ರೂ. ಆಗುತ್ತದೆ. ಆಗ ನಮ್ಮ ಹತ್ತಿರ ಮಾಲು ಇರುವುದಿಲ್ಲ, ಅದನ್ನು ಎಲ್ಲಿಡೋಣ ? ಅದನ್ನು ಇಟ್ಟುಕೊಳ್ಳಲು ಆಗುವುದಿಲ್ಲ. ಅದು ಬೇಗ ನಾಶವಾಗಿಬಿಡುತ್ತದೆ, ಅಂಥ ಪೆರಿಶಬಲ್ ಆರ್ಟಿಕಲ್ಸ್ ಯಾವುದು ಇದೆ, ಅದನ್ನು ಕೋಲ್ಡ್ ಸ್ಟೋರೇಜಿನಲ್ಲಿ ಇಟ್ಟರೆ ಅನುಕೂಲವಾಗುತ್ತದೆ. ಆದ್ದರಿಂದ ಎಲ್ಲೆಲ್ಲಿ ತೋಟಗಾರಿಕಾ ಬೆಳೆಗಳು ಇದೆ ಇಂಥ ಕಡೆಗಳಲ್ಲಿ ಎರಡೆರಡು ಕೋಲ್ಡ್ ಸ್ಟೋರೇಜ್‌ಗಳನ್ನು ಇಟ್ಟರೆ ರೈತನಿಗೆ ಸ್ವಲ್ಪ ಸಹಾಯವಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಕೋಲ್ಡ್ ಸ್ಟೋರೇಜನ್ನು ಜಾಸ್ತಿ ಸ್ಥಾಪನೆ ಮಾಡಬೇಕು, ಇಲ್ಲದಿದ್ದರೆ ರೈತರಿಗೆ ಸರಿಯಾದ ಧಾರಣೆ ಸಿಗುವುದಿಲ್ಲ.

ಮತ್ತು ಮಾರ್ಕೆಟ್‌ನಲ್ಲಿ ಏನು ಎಕ್ಸ್‌ಪ್ಲಾಯಿಟೇಷನ್ ಆಗುತ್ತದೆ ಅದನ್ನು ನಿಲ್ಲಿಸಬೇಕು. ಯಾರೋ ದಳ್ಳಾಳಿ ಬಂದು ಲಾಭ ಮಾಡಿಕೊಂಡು ಹೋಗುತ್ತಾನೆ. ನಮ್ಮ ಕಡೆಯಲ್ಲಿ ವರ್ಷವೆಲ್ಲಾ ಬೆಳೆದವನಿಗಿಂತ ಒಂದು ಗಂಟೆಯಲ್ಲಿ ಚೀಲವನ್ನು ಬದಲಾಯಿಸಿದವರಿಗೆ ಹೆಚ್ಚು ದುಡ್ಡು ಬರುತ್ತದೆ, ಆ ಕಡೆಯಿಂದ ಈ ಕಡೆಗೆ ಮಗುಚಿ ಹಾಕಿದವನಿಗೆ ಹೆಚ್ಚು ಲಾಭ ಬವಿರುತ್ತದೆ, ಅವನು ಶ್ರೀಮಂತನಾಗುತ್ತಿದ್ದಾನೆ; ಆದರೆ ಬೆಳೆದವನು ಮಾತ್ರ ಅವನ ಹತ್ತಿರ ಹೋಗಿ ಬೇಡುವ ಪರಿಸ್ಥಿತಿಯಾಗಿದೆ. ತಾವು ಇದರ ಬಗ್ಗೆ ಯೋಚನೆ ಮಾಡಬೇಕು, ಇಲ್ಲದಿದ್ದರೆ ಸರ್ಕಾರ ಎಂದು ಕರೆಸಿಕೊಳ್ಳಲು ಆಗುವುದಿಲ್ಲ, ಆ ಕಡೆ ತಾವು ಯೋಚನೆ ಮಾಡಿ ಕೋಲ್ಡ್ ಸ್ಟೋರೇಜನ್ನು ಜಾಸ್ತಿ ಮಾಡಬೇಕು. ಇದರ ಜೊತೆಗೆ ಹಾಪ್‌ಕಾಮ್ ಅವರಿಗೆ ರೈತರು ಏನು ಬೆಳೆಯನ್ನು ಬೆಳೆಯುತ್ತಾರೆ ಅದನ್ನು ತಂದು ಸ್ಟಾಕ್ ಮಾಡಲು ಹೇಳಬೇಕು, ನೀವು ಇಂಡೆಂಟ್ ಕೊಟ್ಟಂತೆ ಬೆಳೆಗಳನ್ನು ತನ್ನಿ ಎಂದರೆ ಹೇಗಾಗುತ್ತದೆ ?

ಬೆಳೆಗಳು ನಿಮ್ಮನ್ನು ಕಾದುಕೊಂಡು ಬರುವುದಿಲ್ಲ, ಬೆಳೆಗಳು ಯುಗಾದಿ ಹಬ್ಬಕ್ಕೇ ಬರಬೇಕು, ಶಿವರಾತ್ರಿ ಹಬ್ಬಕ್ಕೇ ಬರಬೇಕು ಎಂದು ನಿಗದಿಯಾಗಿ ಬರುವುದಿಲ್ಲ, ಆ ರೀತಿ ಮಾಡುವುದಕ್ಕಾಗುವುದಿಲ್ಲ; ಒಂದು ಸೀಜನ್‌ನಲ್ಲಿ ಬೆಳೆಯನ್ನು ಹಾಕುತ್ತೇವೆ, ಆ ರೀತಿ ಬೆಳೆ ಬಂದಾಗ ನೀವು ಅದನ್ನು ತೆಗೆದುಕೊಳ್ಳಲು ಸಮರ್ಥರಾಗಬೇಕು; ಒಮ್ಮೆ ನನ್ನ ಬೆಳೆಯನ್ನೇ ನೀವು ಇಂಡೆಂಟ್‌ನಂತೆ ತಂದಿಲ್ಲವೆಂದು ಹೇಳಿ ರಿಜೆಕ್ಟ್ ಮಾಡಿ ಕಳಿಸಿದ್ದರು, ಆದ್ದರಿಂದ ನಾನು ಇದು ಬೇಡವೇ ಬೇಡ ಎಂದು ಎರಡು ವರ್ಷಗಳ ಹಿಂದೆ ಮೂರು ಸಾವಿರ ಬಾಳೆ ಗಿಡಗಳನ್ನು ಕಡಿಸಿಹಾಕಿದೆ; ಇಂಥ ಸ್ಥಿತಿ ನಿರ್ಮಾಣವಾಗಿದೆ, ತಾವು ಅದರ ಬಗ್ಗೆ ಗಮನ ಹರಿಸಬೇಕು. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ತೆಂಗಿನ ಬೆಳೆಯನ್ನು ಕಾಮಧೇನು ಕಲ್ಪವೃಕ್ಷ ಎಂದು ಕರೆಯುತ್ತಾರೆ, ಆದ್ದರಿಂದ ಈ ಎರಡು ವಿಷಯಗಳ ಬಗ್ಗೆ ನಾನು ಮಾತನಾಡುತ್ತಿದ್ದೇನೆ, ನಮಗೆ ಇದನ್ನು ಯಾರೋ ಕೊಟ್ಟ ವರ. ಅದನ್ನು ಸ್ವಲ್ಪ ನೋಡಿಕೊಂಡು ಸಂರಕ್ಷಣೆ ಮಾಡಿಕೊಂಡು ಹೋಗದಿದ್ದರೆ ಹೇಗೆ ? ಇದರ ಜೊತೆಗೆ ನಮ್ಮ ಒಂದು ಬೇಡಿಕೆಯನ್ನು ಇಡಬೇಕಾಗಿದೆ; ಏನೆಂದರೆ, ತೆಂಗನ್ನು ಬೆಳೆಯುತಕ್ಕ ಭಾಗದಲ್ಲಿ ಪಿಕ್‌ಅಪ್‌ಗಳು

ಆಗಬೇಕು. ಇವತ್ತು ವ್ಯವಸಾಯ ಇಲಾಖೆಯಲ್ಲಿ ಏನು ಒಂದು ವಾಟರ್ ಶೆಡ್ ಪ್ರೋಗ್ರಾಮ್ ಎಂದು ಮಾಡಿಕೊಂಡು ಅಲ್ಲಲ್ಲಿ ಚಿಕ್ಕಪುಟ್ಟ ಕಟ್ಟೆಗಳನ್ನು ಕಟ್ಟಿಕೊಂಡು ಮಾಡುತ್ತಿದ್ದಾರೋ ಅದೇ ರೀತಿಯಲ್ಲಿ ತೋಟಗಳಿಗೂ ಸಹ ಮಾಡುವ ಒಂದು ಯೋಜನೆಯನ್ನು ತಯಾರಿಸಿ ನಮ್ಮ ಮುಂದಿಡಬೇಕು. ಅಂದರೆ ಚಿಕ್ಕಪುಟ್ಟ 15, 25 ಸಾವಿರಗಳಿಗೆ ಅಲ್ಲಲ್ಲಿ ಒಂದು ಅಣೆಯನ್ನು ಹಾಕಿಕೊಂಡು ಹೋದರೆ ನೀರು ನಿಂತು ಆ ನೀರಿನ ತೇವಾಂಶ ತೋಟಕ್ಕೆ ಸಿಕ್ಕಿದರೆ ಬೇಕಾದಷ್ಟು ತೋಟಗಳು ಬದುಕಿಕೊಳ್ಳುತ್ತವೆ; ಆ ಕೆಲಸವನ್ನು ತಮ್ಮ ಇಲಾಖೆಯವರು ಮಾಡಿಲ್ಲ. ತೆಂಗು ಅಭಿವೃದ್ಧಿ ಮಂಡಳಿಯ ಹನ್ನೆರಡೂವರೆ ಸಾವಿರ ಸಬ್ಸಿಡಿ ಇದೆ, ಅದರ ಜೊತೆಗೆ ನಿಮ್ಮ ಜಿಲ್ಲಾಪರಿಷತ್‌ನವರು ರಾಜ್ಯ ಸರ್ಕಾರದವರು ಜೊತೆ ಮಾಡಿ ಕೊಡಿ ಎಂದರೆ ಇದುವರೆಗೂ ಒಂದನ್ನೂ ಕಟ್ಟಿಸಿ ಕೊಟ್ಟಿಲ್ಲ; ಇದರಿಂದ ಯಾವ ರೀತಿಯಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಗೊತ್ತಾಗುತ್ತದೆ; ನಮಗೆ ಸರ್ಕಾರ ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂಬ ಬಗ್ಗೆ ನಾಚಿಕೆಯಾಗುತ್ತದೆ, ಯಾರೋ ಕೊಟ್ಟಿರತಕ್ಕ ಹಣವನ್ನು ನೀವು ಬಳಕೆ ಮಾಡಿಕೊಳ್ಳಲಿಲ್ಲವೆಂದರೆ ಹೇಗೆ? ಆದ್ದರಿಂದ ತಾವು ಈ ಸಲದ ಆಯವ್ಯಯದಲ್ಲಿ ಇದಕ್ಕಾಗಿ ಸ್ವಲ್ಪ ಹಣವನ್ನು ತೆಗೆದಿಡಿ, ಇದಕ್ಕೆ ಇನ್ನೂ ಕಾಲ ಮಿಂಚಿಲ್ಲ. ತೆಂಗು ಅಭಿವೃದ್ಧಿ ಮಂಡಳಿಯವರು ಏನು ಹಣವನ್ನು ಕೊಡುತ್ತಿದ್ದಾರೆ ಅದನ್ನು ತರಿಸಿ ಇಂಥ Coconut Board ನಲ್ಲಿ ಹೆಚ್ಚು ಹೆಚ್ಚು ಆಸ್ಥೆಯನ್ನು ವಹಿಸಬೇಕು; ಹೆಚ್ಚು ಭಾಗದಲ್ಲಿ ತೆಂಗನ್ನು ಏನು ಬೆಳೆಯುತ್ತಿದ್ದಾರೆ, ಅವರಿಗೆ ಸಬ್ಸಿಡಿಯನ್ನು ಕೊಡತಕ್ಕ ಮತ್ತು ತೋಟಗಾರಿಕೆಯ ಬಗ್ಗೆ ನಾವು ಮಾತನಾಡುವಾಗ ತಾವು ಕೇಳಿಕೊಳ್ಳಬೇಕಾಗುತ್ತದೆ, ಇನ್ನು ನಮ್ಮಲ್ಲಿ ಪವರ್ ಬಗ್ಗೆ ಭಾರಿ ತೊಂದರೆಯಾಗುತ್ತಿದೆ.

ಈ ಕೆ.ಇ.ಬಿ. ಸಮಸ್ಯೆ ಏನಿದೆ, ಇದರಿಂದಾಗಿ ನಮ್ಮ ತೋಟಗಾರಿಕೆ ಬೆಳೆಗಳ ಮೇಲೆ ಭಾರಿ ದೊಡ್ಡ ಪರಿಣಾಮ ಬೀಳುತ್ತಿದೆ. ಒಂದು ಹನಿ ನೀರನ್ನು ಕೂಡ ಹಾಯಿಸಲಿಕ್ಕೆ ಆಗುತ್ತಿಲ್ಲ. ನಾನು ಮಾನ್ಯ ನಾಗೇಗೌಡರು ಚಿಕ್ಕನಾಯಕನಹಳ್ಳಿಗೆ ಬಂದಿದ್ದಾಗ ಹೇಳುತ್ತಿದ್ದೆ. ಸ್ವಿಚ್ ಹಾಕಿದರೆ ಇಲ್ಲಿಂದ ಅಲ್ಲಿಯವರೆಗೆ ಹರಿದು ಹೋಗುತ್ತದೆ ನೀರು. ಇಂಟರಪ್‌ಷನ್ ಜಾಸ್ತಿ, ಪವರ್ ಹೋಗುತ್ತದೆ, ಮತ್ತೆ ಸ್ವಿಚ್ ಹಾಕಿದರೆ ಅಲ್ಲಿಯವರೆಗೆ ಹರಿಯುತ್ತದೆ ಮುಂದಕ್ಕೆ ತೋಟದಲ್ಲಿ ನೀರು ಹರಿಯಲಿಲ್ಲ. ಈ ಕೆ.ಇ.ಬಿಯವರಿಗೆ ಆದ್ಯತೆಯ ಮೇಲೆ ನಾನು ಕೇಳಿಕೊಳ್ಳುತ್ತಾ ಇದ್ದೇನೆ. ಈ ಹಾರ್ಟಿಕಲ್ಚರ್ ಕ್ರಾಪ್ಸ್ ಏನಿದೆ ಅಲ್ಲಿಗೆ ತಾವು 16 ಗಂಟೆ 18 ಗಂಟೆ ಪವರ್‌ನ್ನು ಏನು ಪೂರೈಕೆ ಮಾಡುತ್ತಿದ್ದೀರಿ, ಅದನ್ನು ಸಮರ್ಪಕವಾಗಿ ಮಾಡಬೇಕು. ಇದು ಬೇರೆ ಬೆಳೆ ರೀತಿಯಲ್ಲ. ಸ್ವಲ್ಪ ಹೆಚ್ಚು ಕಡಿಮೆಯಾದರೆ ನಾವು ನಿರ್ನಾಮವಾಗಿ ಹೋಗುತ್ತೇವೆ. ಈ ಕಡೆ ತೋಟಗಾರಿಕೆಯ ಮಂತ್ರಿಗಳು ಹೆಚ್ಚು ಆಸ್ಥೆಯನ್ನು ವಹಿಸಬೇಕು. ಮತ್ತು ಸರ್ಕಾರವು ಕೂಡ ಹೆಚ್ಚು ಆಸ್ಥೆಯನ್ನು ವಹಿಸಬೇಕು. ಈಗ ತಾವು ಮಾಡಿರುವ ಕಾರ್ಯಕ್ರಮಗಳು ಏನೇನು ಸಾಲದು. ತೋಟಗಾರಿಕೆಯ ಬಗ್ಗೆ ತಾವು ಏನು ಆಯವ್ಯಯದಲ್ಲಿ ಹಣ ಇಟ್ಟಿದ್ದೀರಿ ಅಥವಾ ಯೋಜನೆಯಲ್ಲಿ ಕೊಟ್ಟಿದ್ದೀರಿ, ಇದನ್ನು ನಾವಂತು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಸಂಬಳವನ್ನು ಕೊಡುವುದು ಬಿಟ್ಟರೆ ಬೇರೆ ಏನೂ ಕೆಲಸವಿಲ್ಲ. ನೀವು ಕೊಟ್ಟಿರುವ ಡಿಮ್ಯಾಂಡ್‌ನಲ್ಲಿ ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ್ ಇರುವುದು. ಮಾನ್ಯ ನಾಗೇಗೌಡರು ಹೇಳುತ್ತಿದ್ದರು, 18 ಚಿಲ್ಲರೆ ಕೋಟಿ ನಾನ್ ಪ್ಲಾನ್‌ನಲ್ಲಿ ಕೊಟ್ಟಿದ್ದೇವೆಂದು. ಸ್ವಾಮಿ, 10 percent of the non–plan expenditure can be kept for development works, not more than that.

ನಾನ್‌ಪ್ಲಾನ್‌ನಲ್ಲಿ ಬರುತ್ತದೆಂದರೆ ಯಾರಿಗೋ ಸಂಬಳ ಕೊಡುತ್ತಿದ್ದೀರಿ, ಚೆನ್ನಾಗಿ ಇಲಾಖೆಯವರನ್ನು ತೃಪ್ತಿಯಾಗಿ ಸಾಕಿಕೊಂಡಿದ್ದೀರೆಂದು ಇದರ ಅರ್ಥ. ನಮಗೇನು ಲಾಭ ಆಗಲಿಲ್ಲ; ಇನ್ನೂ ಸ್ವಲ್ಪ ಏನಾದರೂ ತಾವು ಒತ್ತಡ ತಂದು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮಗಿರುವ ವಿಶ್ವಾಸವನ್ನು ಹೆಚ್ಚು ಮಾಡಿಕೊಂಡು ನಮ್ಮ ಕಡೆಗೆ ಸ್ವಲ್ಪ ಹೆಚ್ಚು ಹಣವನ್ನು ತಂದುಕೊಡಬೇಕು. ಮತ್ತು ಈ ರೋಗ ನಿಯಂತ್ರಣವನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕು. ಸನ್ಮಾನ್ಯ

ರಾಮಯ್ಯನವರು ಇಲ್ಲಿ ಒಂದು ದಿವಸ ಮಾತನಾಡುತ್ತಾ ಹೇಳಿದರು ನನಗೆ ತೆಂಗಿನ ಸಸಿಬೇಕು, ಎಲ್ಲಿಯಾದರೂ ಕೊಡಿಸುತ್ತೀರಾ ಎಂದು. ತಮ್ಮ ಇಲಾಖೆಯವರ ಪರ್‌ಫಾರ್ಮೆನ್ಸ್ ಬಜೆಟ್ ನಾನು ಓದುತ್ತಾ ಹೋದೆ. ಅವರು ಏನು ಗುರಿ ನಿಗದಿ ಮಾಡಿದ್ದಾರೆ, ಅದರಲ್ಲಿ ಅರ್ಧದಷ್ಟು ತೆಂಗಿನ ಸಸಿಯನ್ನು ಸಹ ಬೆಳೆಸಲಿಲ್ಲ. ಏತಕ್ಕೆ, ನಾವು ಬೀಜ ಕೊಡುವುದಿಲ್ಲವೆಂದು ಹೇಳಿದ್ದೆವಾ ? ನಮ್ಮನ್ನು ಬಂದು ಯಾರಾದರೂ ಕೇಳಿದ್ದರಾ ? ನಾವು ಇವತ್ತು ತಿಪಟೂರು ತಾಲ್ಲೂಕಿನಂಥ ವೆರೈಟಿ ಇಟ್ಟು ಕೊಂಡಿದ್ದೇವೆ. ಬೀಜಕ್ಕೆ ಕೊಡುವಂಥ ಕಾಯಿಗಳು ಅಂತ ಮರಗಳ ಮೇಲೆ ನಂಬರನ್ನು ಹಾಕಿಬಿಟ್ಟಿದ್ದಾರೆ.

ಬಜೆಟ್‌ನಲ್ಲಿ ಒಂದು ಗುರಿ ಇಟ್ಟುಕೊಂಡು ನಿಗದಿತ ಪ್ರಮಾಣದಲ್ಲಿ ಹಣವನ್ನು ಇಟ್ಟುಕೊಂಡು ಈಗ ತೆಂಗಿನ ಸಸಿಗಳು ನಮ್ಮ ಹತ್ತಿರ ಇಲ್ಲ, ನಮಗೆ ನರ್ಸರಿ ಮಾಡಲಿಕ್ಕೆ ಆಗಲಿಲ್ಲ ಎಂದು ನಮ್ಮ ಇಲಾಖೆಯವರು ಉತ್ತರ ಹೇಳುತ್ತಾರಲ್ಲ. ಅಂಥವರ ಮೇಲೆ ಒಂದು ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ ಏತಕ್ಕೆ ನಿಂತುಕೊಂಡು ನಾವು ಇಲ್ಲಿ ಮಾತನಾಡಬೇಕು ? ಇದನ್ನೇ ತುಮಕೂರಿನ ಜಿಲ್ಲಾ ಪರಿಷತ್‌ನಲ್ಲಿ ಒಂದು ಸಾರಿ ಕೇಳಿದ್ದೆವು. ತೆಂಗಿನ ಸಸಿ ಬೆಳೆಯುವಂಥ ಕಾರ್ಯಕ್ರಮವನ್ನು ಫಾರೆಸ್ಟ್‌ನವರಿಗೆ ವಹಿಸಿಕೊಟ್ಟಿದ್ದಾರೆ. 15 ಸಾವಿರ, 20 ಸಾವಿರ, 30 ಸಾವಿರ ಸಸಿಗಳನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಬೆಳೆಯುತ್ತಿದ್ದಾರೆ. ಹಾಗಾದರೆ ಇದು ನಿಮ್ಮ ಪ್ಲಾಂಟ್ ಅಲ್ಲವೇ ? ಹಾರ್ಟಿಕಲ್ಚರ್ ಪ್ರೊಡ್ಯೂಸ್ ಅಲ್ಲವೇ ಇದು ? ಸ್ವಲ್ಪ ತಾವು ನಿಮ್ಮ ಇಲಾಖೆಯನ್ನು ಕಂಟ್ರೋಲ್‌ಗೆ ತೆಗೆದುಕೊಳ್ಳಬೇಕಾಗಿದೆ. ಮತ್ತೆ ತೆಂಗಿನ ಬೀಜದ ಆಯ್ಕೆ ಮಾಡುವ ರೀತಿ ಕೂಡ ಸರಿಯಾಗಿಲ್ಲ. ಸಣ್ಣ ಸಣ್ಣ ಕೊಳೆತಿರುವ ಕಾಯಿಗಳನ್ನು ಇವತ್ತು ಕಡೂರು, ಬೀರೂರು, ತರಿಕೆರೆ ಭಾಗದಲ್ಲಿ ಕೊಂಡುಕೊಳ್ಳುತ್ತಿದ್ದಾರೆ. ನಾವು ಇಲ್ಲಿ ನಂಬರನ್ನು ಹಾಕಿಸಿಕೊಂಡು ತಿಪಟೂರು, ಚಿಕ್ಕನಾಯಕನಹಳ್ಳಿ, ತುರುವೇಕೆರೆ, ಚನ್ನರಾಯಪಟ್ಟಣದಲ್ಲಿ ಭಾರಿ ಉತ್ತಮವಾದ ತಳಿ ಇದೆ ನಮ್ಮ ಹತ್ತಿರ, ಕೊಬ್ಬರಿ ಬರುವುದು ಇದು ಒಂದೇ ಕಡೆ, ಈ ತೆಂಗನ್ನು ಬೆಳೆಯಿರಿ ಎಂದರೆ ಬೆಳೆಯಲಿಲ್ಲ. ಸಂತೆಯಲ್ಲಿ ಹೋಗಿ ಲೋಡ್‌ಗಟ್ಟಲೆ ಕೊಂಡುಕೊಂಡಿದ್ದಾರೆ. ತಿಂಗಳಿಗೆ ಒಂದು ಸಾರಿ ಬಂದು ಕಾಯನ್ನು ಕೀಳಿಸುವಂಥ ವ್ಯವಸ್ಥೆಯನ್ನು ಬಿಟ್ಟು ಬಿಟ್ಟು ಸಂತೆಯಲ್ಲಿ ಹೋಗಿ ಕೊಳ್ಳುವುದು, ಏತಕ್ಕೆಂದರೆ ನಿಮ್ಮಲ್ಲಿ ಪ್ರಾವಿಷನ್ ಇದೆ. ಸಂತೆ ರೇಟ್ ಏನು ಇರುತ್ತದೆ ಅದರ ಮೇಲೆ 10 ಪರ್ಸೆಂಟ್ ಹಾಕಿ ಕೊಟ್ಟುಬಿಟ್ಟರೆ ಮುಗಿದು ಹೋಯಿತು ಅವರ ಕೆಲಸ. ಇದನ್ನು ತಪ್ಪಿಸಬೇಕು. ಎರಡು ವರ್ಷದಿಂದ ಈ ಪ್ರೊಕ್ಯೂರ್‌ಮೆಂಟ್ ಆಫ್ ಸೀಡ್ಸ್ ನಮ್ಮ ಭಾಗದಲ್ಲಿ ಆಗಲಿಲ್ಲ. ಏನು ಉತ್ತಮವಾದ ಫಾರಮ್ ನನ್ನ ಗ್ರಾಮದಲ್ಲಿತ್ತೋ ಆ ಫಾರಮ್‌ನಲ್ಲಿ ಬೆಳೆಯಲಿಕ್ಕೆ ಆಗುತ್ತಿಲ್ಲ. ಇದರ ಜೊತೆಗೆ ಇನ್ನು ಬೇರೆ ಏನು ಪ್ರೊಡ್ಯೂಸಸ್ ಇತ್ತು; ಸಪೋಟ, ಕೇಳಿ ನಿಮ್ಮ ಇಲಾಖೆಯನ್ನು ಸಪೋಟ ಮೇಲೆ ಏನು ಕಾರ್ಯಕ್ರಮ ಇತ್ತು ಎಂದು; ಎಷ್ಟು ಇದನ್ನು ಅಚೀವ್ ಮಾಡಿದ್ದೀರಿ ಎಂದು. ಹತ್ತು ಪರ್ಸೆಂಟ್ ಸಪೋಟವನ್ನು ರಾಜ್ಯದಲ್ಲಿ ಬೆಳೆಸಿಲ್ಲ ಇವತ್ತು. ಇದನ್ನೆಲ್ಲ ಏನಾದರೂ ನಿಗಾಕ್ಕೆ ತೆಗೆದುಕೊಳ್ಳದಿದ್ದರೆ ಈ ಬೇಡಿಕೆಯ ಮೇಲೆ ಮಾತನಾಡಿ ಏನೂ ಪ್ರಯೋಜನವಾಗುವುದಿಲ್ಲ. ಇದು ಒಂದು ಏನೋ ನಡೆಯುತ್ತಿದೆ ನಡೆದುಕೊಂಡು ಹೋಗುತ್ತಿದೆ; ಇಲಾಖೆಯನ್ನು ನಡೆಸಿಕೊಂಡು ಹೋಗುತ್ತಿದ್ದೀರಿ ಅಷ್ಟೆ ಸ್ವಾಮಿ, ಇದನ್ನು ಬಿಟ್ಟರೆ ಈ ಇಲಾಖೆಯಲ್ಲಿ ಏನೂ ಉಳಿದಿಲ್ಲ. ಸ್ವಲ್ಪ ಈಗಲಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕು. ಇದು ನಮ್ಮನ್ನು ಪೂರ್ಣ ನಾಶ ಮಾಡುವುದಕ್ಕೆ ಮೊದಲು ಸ್ವಲ್ಪ ಉಳಿಸಬೇಕು. ನಮ್ಮ ಹಿಂದಿನವರು ತೋಟದ ಮಗ್ಗುಲಲ್ಲಿ ಒಂದು ಹಲಸಿನ ಗಿಡ, ಅಥವಾ ಮಾವಿನ ಗಿಡ ಅಥವಾ ಸಪೋಟ ಗಿಡವನ್ನು ಹಾಕು ಎಂದು ಹೇಳುತ್ತಿದ್ದರು. ಅದೂ ಇಲ್ಲ ಇವತ್ತು. ಏತಕ್ಕೆಂದರೆ ಅವತ್ತು ಬೆಳೆದದ್ದು ಇವತ್ತು ಸೀಸನ್ ವುಡ್ ಆಯಿತು. ಕಡಿದು ಮಾರಿದೆವು. ನಿಮ್ಮ ಇಲಾಖೆಯವರು ಬಂದು ನಮಗೆ ಹೇಳಲಿಲ್ಲ. ಇಲ್ಲಿ ಇದು ಮಾಡಬೇಕಾಗಿತ್ತು ಮಾಡ್ರಿ ಎಂದು. ನಿಮ್ಮ ಹಾರ್ಟಿಕಲ್ಚರ್ ಅಸಿಸ್ಟೆಂಟ್ಸ್ ಅಂತ ಇದ್ದಾರೆ ಅವರು ಯಾವ ಯಾವ ಗ್ರಾಮಕ್ಕೆ ಹೋಗುತ್ತಾರೋ

ತೆಗೆದುಕೊಂಡಿದ್ದಾನೆ, ಲಾಸ್ ಎಷ್ಟಾಗಿದೆ, ಆ ನೆರೆನಲ್ಲಿ ನಮ್ಮ ತೆಂಗಿನ ತೋಟಗಳಿಗೆ ಬರೆದುಕೊಂಡು ಬನ್ನಿ ಎಂದು ಹೇಳಿ ಎಂಟು ತಿಂಗಳಾಗಿದೆ; ಒಂದು ರಿಪೋರ್ಟನ್ನು ಕಳುಹಿಸಿಲ್ಲ ನಿಮ್ಮ ಇಲಾಖೆಯವರು. ಇಂಥ ಇಲಾಖೆಯನ್ನು ತಮ್ಮ ಕೈಯಲ್ಲಿಟ್ಟುಕೊಂಡಿದ್ದೀರಿ. ಮತ್ತೆ ನಿಮಗೆ ಉತ್ತರವನ್ನು ಬರೆದು ಕಳುಹಿಸುತ್ತಾರೆ, ಅವರು ಬರೆದಿದ್ದನ್ನು ತಾವು ಇಲ್ಲಿ ನಿಂತುಕೊಂಡು ಓದಬೇಕಾಗುತ್ತದೆ. ಈ ಸ್ಥಿತಿ ತಪ್ಪಿಸಬೇಕು, ಇಲಾಖಾ ಮಂತ್ರಿಗಳಿಗೆ ಮಾಹಿತಿ ಜಾಸ್ತಿ ಇದೆ ಎಂದು ಹೇಳಿ ಅವರ ಭಾವನೆಗೆ ಬಂದಲ್ಲಿ ಕೆಲಸವಾಗಬಹುದೆಂದು ಹೇಳಿ ನನ್ನ ಆಶೆ. ತಾವು ಸ್ವಲ್ಪ ದೃಢ ಸಂಕಲ್ಪ ಮಾಡಬೇಕು. ಈ ಕಡೆ ಗಮನ ಕೊಡಬೇಕು. ಇವೆಲ್ಲ ಕಸುಬುಗಳು ಏನಿವೆ, ಇವೇನಾದರೂ ಹೋದರೆ ಬರೇ ರೈತರಿಗೆ ನಷ್ಟವಾಗುವುದಿಲ್ಲ, ಇವತ್ತು ಯುಗಾದಿಗೆ ಹಣ್ಣು ಕೊಂಡುಕೊಳ್ಳುತ್ತಿರುವವರು ನಿಮ್ಮ ಸಿಟಿಯವರೇ; 20-22-26 ರೂಪಾಯಿಗೆ ಆ್ಯಪಲ್ ಕೊಂಡುಕೊಳ್ಳುತ್ತಿದ್ದಾರೆ. ಅವರಿಗೆ ಸಿಮ್ಲಾದಲ್ಲಿ ಕೊಟ್ಟಿದ್ದು ಸಪೋರ್ಟ್ ಪ್ರೈಸ್ ಮೂರು ರೂಪಾಯಿ. ಕೇಳಿ, ಈ ಸಂದರ್ಭದಲ್ಲಿ ನಾವು ಮರಿಗೌಡರನ್ನು ಜ್ಞಾಪಿಸಿಕೊಳ್ಳುತ್ತಿದ್ದೇವೆ. ಏನಾದರೂ ತೋಟಗಾರಿಕೆ ಇಲಾಖೆಯಲ್ಲಿ ಗೊತ್ತು ಅಥವಾ ಅದರಲ್ಲಿ ಇದ್ದೇವೆ ಎಂದರೆ ಹೆಸರು ಹೇಳುವುದಕ್ಕೆ ಮರಿಗೌಡರು. ನಾನು ತಪ್ಪು ಮಾಡಿದೆ. ಜ್ಞಾಪಿಸಿದರು; ಮರಿಗೌಡರನ್ನೇ ಜ್ಞಾಪಿಸಿಕೊಂಡು ಮಾತನಾಡಬೇಕು. ಏತಕ್ಕೆಂದರೆ ಎಲ್ಲ ತಾಲ್ಲೂಕಿನಲ್ಲಿ ಫಾರಮ್‌ಗಳನ್ನು ಮಾಡಿದವರೇ ಅವರು. ಈಗ ಯಾವ ಫಾರಮ್ ಕೂಡ ನಡೆಯುತ್ತಿಲ್ಲ. ನಾನು ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ರಾಮಯ್ಯನವರೂ ಕೂಡ ಹಾರ್ಟಿಕಲ್ಚರ್ ಮಂತ್ರಿಗಳಾಗಿದ್ದವರು; ಧರ್ಮವೀರ್ ಫಾರಮ್, ಒಂದು ಸಾವಿರ ಎಕರೆ ಚಿಕ್ಕನಾಯ್ಕನಹಳ್ಳಿಯಲ್ಲಿರತಕ್ಕಂಥ ಫಾರಮ್; ಅದರಿಂದ ನೂರು ರೂಪಾಯಿಗಳ ವರಮಾನವಿಲ್ಲ. ಏನಪ್ಪ ಅಂದರೆ ಆ ಫಾರಮ್‌ಗೆ ನೀರಿಲ್ಲ. ಅಷ್ಟೊಂದು ತೆಂಗಿನ ಗಿಡಗಳು ಒಣಗುತ್ತಿವೆ, ಅವರು ಏನಾದರೂ ಮಾಡಿ ಎಂದರೆ ಒಂದು ಸಾರಾಸಗಟು ರಿಪೋರ್ಟ್ ಕೊಟ್ಟು ಜಿಯಾಲಜಿಸ್ಟ್ ಇಟ್ಟುಕೊಂಡು ಕುಳಿತುಬಿಡುತ್ತಾರೆ. ನೀರು ಬರುವುದಿಲ್ಲ, ಧರ್ಮವೀರ ಫಾರಮ್‌ನಲ್ಲಿ, ನಾವು ಬೋರ್‌ವೆಲ್ ಹಾಕಿಯೂ ಪ್ರಯೋಜನವಿಲ್ಲ ಎಂದು. ನನ್ನದೇ ಗ್ರಾಮ ದೇಸಿಪುರದಲ್ಲಿ ಒಂದು ಫಾರಮ್ ಇದೆ. ಹಾರ್ಟಿಕಲ್ಚರ್ ಫಾರಮ್, ತಾವು ಒಂದು ಸಲ ಹೋಗಿ ನೋಡಬೇಕು. ನಾನು ಕಂಡ ಹಾಗೆ ಕಳೆದ ವರ್ಷ ಅದಕ್ಕೆ ಹಿಂದಿನ ವರ್ಷ 80 ಸಾವಿರ 90 ಸಾವಿರ ವರಮಾನ ಬರುತ್ತಿತ್ತು. ಈ ವರ್ಷ ನೀರಿಲ್ಲ ಆ ಫಾರಮ್‌ನಲ್ಲಿ. ಈ ವರ್ಷ ತಮ್ಮ ತೆಂಗಿನ ನರ್ಸರಿಯಲ್ಲಿ 15 ಸಾವಿರ ನರ್ಸರಿ ಏನಿತ್ತು ಅದು ಒಣಗಿಹೋಗುತ್ತಿದೆ. ಏತಕ್ಕೆ ನೀವು ಕಾರ್ಯಕ್ರಮ ಹಾಕುತ್ತಿಲ್ಲ ಅಂದರೆ ನಿಮ್ಮ ಹತ್ತಿರ ದುಡ್ಡಿಲ್ಲ.

ನಮ್ಮ ಸರ್ಕಾರ ಹಾಗಿದೆ, ಹೀಗಿದೆ ಎಂದು ಭಾಷಣ ಮಾಡುತ್ತಾ ಹೋಗುತ್ತೀರಿ, ಆದರೆ ತಮ್ಮ ಫರ್‌ಫಾರ್ಮೆನ್ಸ್, ಬಡ್ಜೆಟ್ ನೋಡಿ; ಈ ಪುಸ್ತಕದಲ್ಲಿ ಯಾವುದೇ ಯೋಜನೆಗೆ 50 ಪರ್ಸೆಂಟ್‌ಗೆ ಹೆಚ್ಚು ಹಣ ಖರ್ಚು ಮಾಡಿದ್ದರೆ, 50 ಪರ್ಸೆಂಟ್‌ಗೆ ಹೆಚ್ಚು ಕೆಲಸ ಮಾಡಿದ್ದರೆ ನಾವು ಭಾಷಣ ಮಾಡುವುದಿಲ್ಲ. ಏತಕ್ಕೆ ಹೀಗಾಗಿದೆ ? ರೈತರು ಮಾಡುವ ಕಸುಬು ಎಂದರೆ ನಿಮಗೆ ಲೆಕ್ಕಕ್ಕೆ ಇಲ್ಲ. ಇದರ ಬಗ್ಗೆ ತಾವು ಗಮನ ಕೊಡಬೇಕು. ಇದರ ಜೊತೆಗೆ ಇನ್ನೂ ಅನೇಕ ಯೋಜನೆಗಳಿವೆ. ದಿಢೀರನೆ ಮಾತನಾಡಬೇಕೆಂದಿದ್ದರಿಂದ ನನಗೆ ಗೊತ್ತಿದ್ದಷ್ಟು ಮಾತನಾಡಿದ್ದೇನೆ. ಇವತ್ತಿನ ದಿವಸ ರೈತರಿಗೆ ಕೆಲವು ಪ್ರೋಗ್ರಾಂಗಳನ್ನು ಮಾಡಬೇಕಾಗಿದೆ. ರೈತರಿಗೆ ಟ್ರೈನಿಂಗ್ ಕೊಡುವುದು, ಅವರಿಗೆ ಕ್ಯಾಂಪ್ ಮಾಡುವುದು, ಅವರನ್ನು ಬೇರೆ ಕಡೆ ಕರೆದುಕೊಂಡು ಹೋಗಿ ತೋರಿಸುವುದು, ಈ ಎಲ್ಲ ಕಾರ್ಯಕ್ರಮಗಳು ಈಗ ನಿಂತುಹೋಗಿವೆ. ಇದರ ಜೊತೆಗೆ ಕೆಮಿಕಲ್ ಬಳಕೆ ಬಗ್ಗೆ ಹೇಳಬೇಕಾಗಿತ್ತು. ಮಳೆಗಾಲ ಜಾಸ್ತಿಯಾಗಿ ನಮ್ಮ ಭೂಮಿ ಜವಳಾಗುತ್ತಿದೆ. ಅಂದರೆ ಪರ್ಕ್ಯುಲೇಟೆಡ್ ವಾಟರ್ ಏನಿರುತ್ತದೆ ಆ ಭಾಗದಲ್ಲಿ ನಾಳೆ ಏನೂ ಬೆಳೆಯಲಾರದ ಸ್ಥಿತಿ ಬರುತ್ತಿದೆ. ಆದುದರಿಂದ ಮಣ್ಣು ಪರೀಕ್ಷೆ ಮಾಡಿಸಬೇಕು; ಮಣ್ಣಿಗೆ ಏನು ಬೆರೆಸಬೇಕೆಂದು ನಿಮ್ಮ ಇಲಾಖೆಯವರು ಹೇಳುವುದಿಲ್ಲ.

23rd March 1993

ಹಾರ್ಟಿಕಲ್ಚರ್ ಇಲಾಖೆ ಏನಾಗಿದೆ ಎಂದರೆ ಆರಾಮವಾಗಿ ನಡೆದುಕೊಂಡು ಹೋಗುತ್ತಿದೆ. ಲಾಲ್‌ಬಾಗ್‌ನಲ್ಲಿ ಒಳ್ಳೆಯ ಅಂಗಡಿ ಮಾಡಿಕೊಟ್ಟಿದ್ದೀರಿ. ಯಾರಾದರೂ ತಂದುಕೊಡುತ್ತಾರೆ; ಅವರು ಮಾರಿಕೊಳ್ಳುತ್ತಾರೆ. ಸಿಟಿಯಲ್ಲಿ ನೋಡುವವರಿಗೆ ಒಳ್ಳೆಯ ಬೋರ್ಡ್ ಹಾಕಿ ಒಳ್ಳೆಯ ಸ್ಟಾಲ್ ಮಾಡಿದ್ದೀರಿ – ಹಣ್ಣು ತರಕಾರಿಗಳ ಮಳಿಗೆ ಎಂದು. ನೋಡಿದರೆ ಬಹಳ ಚೆನ್ನಾಗಿ ಕಾಣುತ್ತದೆ. ಹೊಸ ಸ್ಟಾಲ್ ಡಿಸೈನ್ ಎಲ್ಲ ಚೆನ್ನಾಗಿದೆ, ಅದು ಬಿಟ್ಟರೆ ಇಲಾಖೆ ಮಾತ್ರ ಚೆನ್ನಾಗಿಲ್ಲ. ನಮಗೆ ಇದ್ದರಿಂದ ಏನೂ ಪ್ರಯೋಜನವಾಗುತ್ತಿಲ್ಲ. ಇಡೀ ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ನಿಮ್ಮ ಅಧಿಕಾರಿಗಳು 3 ಡ್ರಿಪ್ ಇರಿಗೇಷನ್ ಸ್ಕೀಂ ಕೊಟ್ಟಿದ್ದಾರೆ. 15–16 ಸಾವಿರ ಎಕರೆ ತೋಟ ಇರುವ ಕಡೆ 3 ಡ್ರಿಪ್ ಇರಿಗೇಷನ್ ಸ್ಕೀಂ ಕೊಟ್ಟಿದ್ದಾರೆ. ಏತಕ್ಕೆ ಇನ್ನೂ ಮಾಡಿಲ್ಲವೆಂದರೆ ನಿನ್ನೆ ದಿವಸ ನನ್ನನ್ನು ಹುಡುಕಿಕೊಂಡು ಬಂದಿದ್ದಾರೆ. ಈ ತರಹ ನಮ್ಮದೊಂದು ಸ್ಕೀಂ ಇದೆ, ಇದನ್ನು ರೈತರು ಆಳವಡಿಸಿಕೊಳ್ಳಬಹುದೆಂದು ಹೇಳುತ್ತಾರೆ. ಇದನ್ನು ತಪ್ಪಿಸಬೇಕಾಗುತ್ತದೆ. ಹಾರ್ಟಿಕಲ್ಚರ್ ಅಂದರೆ ಫ್ಯಾಷನ್ ಗಾರ್ಡನ್ಸ್, ಹೂವು ಬೆಳೆಸುವ ಯೋಜನೆ ಎಂದು ತಿಳಿದುಕೊಂಡಿದ್ದಾರೆ ತಮ್ಮ ಇಲಾಖೆಯವರು. ಅದಕ್ಕೆ ನನ್ನ ವಿರೋಧವಿಲ್ಲ. ಲಾಲ್‌ಬಾಗ್ ಮಾಡುವುದು, ಕಬ್ಬನ್ ಪಾರ್ಕ್ ಮಾಡುವುದು, ನಂದಿ ಬೆಟ್ಟದಲ್ಲಿ ಪಾರ್ಕ್ ಮಾಡುವುದು, ಕೆ.ಆರ್.ಎಸ್. ನಲ್ಲಿ ಪಾರ್ಕ್ ಮಾಡುವುದು – ಇದಕ್ಕೆ ನಾವು ಯಾರೂ ವಿರೋಧಿಗಳು ಅಲ್ಲ. ಆ ರೀತಿ ನಮ್ಮನ್ನು ಭಾವಿಸಬೇಡಿ. ಆದರೆ ಮೊದಲು ಹೊಟ್ಟೆಗೆ ಹಿಟ್ಟು ಕೊಡಿ; ಆಮೇಲೆ ಜುಟ್ಟಿಗೆ ಹೂವು ಕೊಡಿ. ಊಟಕ್ಕೆ ಕೊಡಿ ಅಂದರೆ ಹೂವು ಮುಡಿಸುತ್ತೇವೆಂದರೆ ಅದು ಸರ್ಕಾರವಾಗುವುದಿಲ್ಲ. ಮಾಡಿ, ಹೂವು ಮುಡಿಸುವ ಕೆಲಸ ಮಾಡಬಾರದೆಂದು ನಾನು ಹೇಳುವುದಿಲ್ಲ.

ಇಡೀ ಇಲಾಖೆಯಲ್ಲಿ ಇವತ್ತಿನ ದಿವಸ ಏನು ಮಾಡಿದ್ದೀರಿ ಅದನ್ನು ತಪ್ಪಿಸಬೇಕು. ಲಾಲ್‌ಬಾಗ್, ಕಬ್ಬನ್‌ಪಾರ್ಕ್, ನಂದಿ ಬೆಟ್ಟ, ಕೆ.ಆರ್.ಎಸ್.ನಲ್ಲಿ ಪಾರ್ಕ್ ಮಾಡುವುದು ಅಷ್ಟೇ ಅಲ್ಲ ಮೂಲಭೂತವಾಗಿ ನಾವು ಬದುಕಬೇಕಾಗಿದೆ. ಜನರಿಗೆ ಸಹಾಯ ಮಾಡಬೇಕೆಂದು ಖುಷ್ಕಿ ಕೆಲಸ ಬಿಟ್ಟು ಬಾಕಿಯದು ಮಾಡಬೇಕೆಂದು ಹೇಳಬೇಕಾಗಿದೆ. ಆ ಕಡೆ ಕೆಲಸ ಮಾಡಬೇಕೆಂದು ಹೇಳಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್, ಕೆಮಿಕಲ್ಸ್‌ಗೆ ಆದ್ಯತೆ ಮೇಲೆ ಹಣ ರಿಲೀಸ್ ಮಾಡಿ ಕೊಡಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ಸೆಂಟ್ರಲಿ ಸ್ಪಾನ್ಸಾರ್ಡ್ ಸ್ಕೀಂಗಳಲ್ಲಿ ಕೊಟ್ಟ ಒಂದೆರಡು ಕೋಟಿ ರೂಪಾಯಿಗಳು ಕೂಡ ಬಳಕೆಯಾಗಿಲ್ಲ. ಕೇಂದ್ರ ಸರ್ಕಾರದವರು ಸುಮ್ಮನೆ ಕೊಟ್ಟ ದುಡ್ಡು ಅದು. ರಾಜ್ಯ ಸರ್ಕಾರದವರು ಡ್ರಿಪ್ ಹಾಕಿ ಎಂದು ಕೊಡುವ ಹಣ ಅದು. ಅದರಲ್ಲಿ ಒಂದು ರೂಪಾಯಿ ಕೂಡ ಈ ಸರ್ಕಾರದಲ್ಲಿ ಬಳಕೆಯಾಗಿಲ್ಲ. ಆ ಯೋಜನೆಗಳೇ ಗೊತ್ತಿರಲಿಲ್ಲ. ಕೋಕೋನಟ್ ಪಿಕ್‌ಅಪ್ ಆಗಬೇಕೆಂಬ ಯೋಜನೆಗೆ ಹನ್ನೆರಡೂವರೆ ಸಾವಿರ ರೂಪಾಯಿ ಸಬ್ಸಿಡಿ ಇದೆ ಎಂದು ಗೊತ್ತಿಲ್ಲದೆ ನಡೆದುಕೊಂಡು ಬಂದಿರುವ ಇಲಾಖೆ ಇದು. ಹಾರ್ಟಿಕಲ್ಚರ್ ಮಂತ್ರಿಗಳು ಈ ಕಡೆ ಗಮನ ಕೊಡಬೇಕು. ಇನ್ನೂ ಇಂಥ ಬೇಕಾದಷ್ಟು ಯೋಜನೆಗಳು ಇವೆ. ಮಾನ್ಯ ಅಧ್ಯಕ್ಷರು ಕಾಲದ ಮಿತಿ ಹಾಕುವುದರಿಂದ ನನ್ನ ಭಾಷಣವನ್ನು ಮೊಟಕು ಮಾಡುತ್ತೇನೆ. ತಾವು ತೋಟಗಾರಿಕೆ ಇಲಾಖೆ ಬಗ್ಗೆ ಏನು ಬೇಡಿಕೆಗಳನ್ನು ಕೇಳಿದ್ದೀರಿ ಅದನ್ನು ವಿರೋಧ ಮಾಡಬೇಕಾಗಿದೆ. ಹಣ ಜಾಸ್ತಿಯಾಗಿದೆ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ನಿಮ್ಮ ಬೇಡಿಕೆ ಏನಿದೆ ಅದು ವಿಸ್ತೀರ್ಣಕ್ಕೆ ತಕ್ಕ ಹಾಗೆ ಇಲ್ಲ. ತಾವು ಅದನ್ನು ತಾಳೆ ಮಾಡಲಿಲ್ಲ. ಎಷ್ಟು ಕಾರ್ಯಕ್ರಮ ನಿಮ್ಮ ಮುಂದಿದೆ, ಎಷ್ಟು ಭಾಗದ ರೈತರು ತೋಟಗಾರಿಕೆ ಮಾಡುತ್ತಿದ್ದಾರೆ, ಎಷ್ಟು ನಾವು ಕೆಲಸ ಮಾಡಬೇಕಾಗಿದೆ ಎಂದು ನೋಡಿದಾಗ ನಿಮ್ಮ ಇಲಾಖೆಯ ಬೇಡಿಕೆ ಬರೀ ಸಂಬಳಕ್ಕೆ ಕೇಳಿರುವ ಬೇಡಿಕೆ ಎಂದು ಹೇಳುತ್ತಾ, ಈ ಬೇಡಿಕೆಯನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):– ಸನ್ಮಾನ್ಯ ಅಧ್ಯಕ್ಷರೆ, ಅನೇಕ ಬೇಡಿಕೆಗಳು ನನ್ನ

ಮುಂದಿರುವುದರಿಂದ ನಾನು ಸಧ್ಯದಲ್ಲಿ ಸಾಮಾನ್ಯ ಆಡಳಿತ ಮತ್ತು ಆರಕ್ಷಕ ಸೇವೆಗಳ ಬಗ್ಗೆ ನಾಲ್ಕು ಮಾತುಗಳನ್ನಾಡುವುದಕ್ಕೆ ತಮ್ಮ ಅಪ್ಪಣೆ ಕೇಳುತ್ತೇನೆ. ಮೊದಲನೆಯದಾಗಿ ಸಾಮಾನ್ಯ ಆಡಳಿತ. ಈ ಸಾಮಾನ್ಯ ಆಡಳಿತ ಮಾಡತಕ್ಕರತಕ್ಕ ಮೂರು ಪ್ರಮುಖವಾದ ಅಂಗಗಳು ಏನಿವೆ, ಮೊದಲ ಹಂತದಲ್ಲಿ ಸರ್ಕಾರ, ಶಾಸಕರು ಮತ್ತು ನೌಕರರು ಅಥವಾ ಅಧಿಕಾರಶಾಹಿಗಳು. ಇವರು ಮೂರು ಜನ ಸೇರಿಕೊಂಡು ಜನ ಸಾಮಾನ್ಯರು ಬೊಕ್ಕಸಕ್ಕೆ ಕಟ್ಟುವಂಥ ಹಣವನ್ನು ಅವರ ಕ್ಷೇಮಾಭಿವೃದ್ಧಿಗೆ ಖರ್ಚು ಮಾಡುವುದಕ್ಕೆ ಅವರ ಶ್ರೇಯೋಭಿವೃದ್ಧಿಗೆ ಯೋಜನೆಗಳನ್ನು ತಯಾರು ಮಾಡುವುದಕ್ಕೆ ಆಡಳಿತವನ್ನು ನಡೆಸುತ್ತೇವೆ.

ಹೀಗೆ ಆಡಳಿತ ನಡೆಸುವ ಸಂದರ್ಭದಲ್ಲಿ ಬಹಳ ಪ್ರಾಮುಖ್ಯವಾಗಿ ನಮಗೆ ಬರುವ ಪ್ರಶ್ನೆ ಏನೆಂದರೆ, ಏನು ನಮ್ಮ ಕೆಲಸ ? ಸನ್ಮಾನ್ಯ ಅಧ್ಯಕ್ಷರೇ, ನನ್ನ ಪ್ರಕಾರ ಬಹಳ ಪ್ರಾಮುಖ್ಯವಾದ ಕೆಲಸವೆಂದರೆ ನಾವು ಚಿಕ್ಕ ಹುಡುಗರು ಆಗಿದ್ದಾಗ ಒಂದು ಕತೆ ಹೇಳುತ್ತಿದ್ದರು. ಎಲ್ಲಿ ಹಣ, ಐಶ್ವರ್ಯ, ಸಂಪತ್ತು ಇರುತ್ತದೋ ಅದನ್ನು ರಕ್ಷಿಸಲಿಕ್ಕೆ ನಾಗರಹಾವು ಹೆಡೆ ಎತ್ತಿಕೊಂಡು ಕಾಯುತ್ತಾ ಇರುತ್ತದೆ ಅಂತ. ನಿಮ್ಮ ಹಳ್ಳಿ ಕಡೆ ಹೇಳುತ್ತಿದ್ದರೋ ಅಥವಾ ಇಲ್ಲವ್ರೋ ಗೊತ್ತಿಲ್ಲ. ಅಂದರೆ, ಬೊಕ್ಕಸಕ್ಕೆ ಬರುವ ಹಣವನ್ನು ಅದು ದುರಪಯೋಗ ಆಗದ ರೀತಿಯಲ್ಲಿ ಸದ್ವಿನಿಯೋಗ ಆಗುವ ರೀತಿಯಲ್ಲಿ ರಕ್ಷಿಸಬೇಕಾದುದು ಆಡಳಿತ ಮಾಡುವ ಎಲ್ಲಾ ಹಂತದಲ್ಲಿ ಇರುವವರ ಗುರುತರವಾದ ಜವಾಬ್ದಾರಿ. ಇನ್ನು ಎರಡನೇ ಕರ್ತವ್ಯ ಏನೆಂದರೆ, ಆಡಳಿತ ಮಾಡುವವರು ಜನಸಾಮಾನ್ಯರಿಗೆ ಸಲ್ಲಬೇಕಾದ ಸೌಲತ್ತುಗಳನ್ನು, ಆತನಿಗೆ ನ್ಯಾಯವಾಗಿ ದೊರಕಬೇಕಾದ ಸೌಲತ್ತುಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಇದು ಆಡಳಿತದಲ್ಲಿ ನಾವು ಕಾಣಬೇಕಾದ ಸರಿಯಾದ ಸ್ವರೂಪ. ಆದರೆ ಪ್ರಜಾಪ್ರಭುತ್ವದ ಬೃಹತ್ ರಾಷ್ಟ್ರದಲ್ಲಿ ಈ ಕೆಲಸ ಮಾಡುವುದರಲ್ಲಿ ನಾವು ಎಷ್ಟು ಸೋತಿದ್ದೇವೆ, ಎಷ್ಟು ಗೆದ್ದಿದ್ದೇವೆ ಎನ್ನುವ ಬಗ್ಗೆ ಸಮೀಕ್ಷೆ ಮಾಡಿದರೆ, ನಾನು ಏನೂ ಆಗಲೇ ಇಲ್ಲ, ಎಲ್ಲರೂ ಅಯೋಗ್ಯರು,ಎಲ್ಲವೂ ಅಸ್ತವ್ಯಸ್ಥ, ಎಲ್ಲರೂ ಕೆಟ್ಟವರು ಎಂದು ಹೇಳುವ ಮಾತನ್ನು ಹೇಳುವುದಕ್ಕೆ ಸಿದ್ಧನಿಲ್ಲ. ಆದರೆ ಎಲ್ಲವೂ ಸರಿಯಾಗಿಲ್ಲ ಎಂದು ಹೇಳಬೇಕಾಗುತ್ತದೆ. ಇದಕ್ಕೆ ಕಾರಣವನ್ನು ಆಲೋಚನೆ ಮಾಡಿದಾಗ ಬಹುಶಃ ನನ್ನ ಅನಿಸಿಕೆ ಇಷ್ಟೇ. ಎಷ್ಟನ್ನು ಸಾಧಿಸಬೇಕಾಗಿತ್ತೋ ಅದನ್ನ ಸಾಧಿಸುವುದಕ್ಕೆ ಏಕೆ ಆಗಿಲ್ಲ ಎಂದರೆ ಈ ರಾಷ್ಟ್ರದ ಜನಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಯೋಜನೆಗಳನ್ನು ನಿರೂಪಿಸುವ ಗುರುತರವಾದ ಕೆಲಸವನ್ನು, ಜನರ ಕಷ್ಟಸುಖ, ದುಃಖ ದುಮ್ಮಾನ, ಬದುಕಿನ ಬವಣೆ ಗೊತ್ತಿಲ್ಲದೇ ಇರುವ ಜನರ ಕೈಗೆ ಕೊಟ್ಟಿದ್ದರಿಂದ ಬಹುಶಃ ಈ ಸಮಸ್ಯೆಯನ್ನು ನಾವು ಬಗೆಹರಿಸುವುದಕ್ಕೆ ಸಾಧ್ಯವಾಗಿಲ್ಲ. ನಾನು ಇದಕ್ಕೆ ಅನೇಕ ಸಾರಿ ಉದಾಹರಣೆ ಹೇಳಿದ್ದೇನೆ. ರೇಷ್ಮೆ ಹುಳು ಹೆಬ್ಬಾವು ಇದ್ದಹಾಗೆ ಇದೆಯೇ ? ನಾಗರಹಾವು ಇದ್ದಹಾಗೆ ಇದೆಯೇ ? ಹೇಗೆ ಇದೆ ಎಂದು ಗೊತ್ತಿಲ್ಲದೇ ಇರುವವರು ಡೆಲ್ಲಿಯಲ್ಲಿ ಕುಳಿತು ರೇಷ್ಮೆ ಹುಳು ಸಮಸ್ಯೆ ಬಗ್ಗೆ, ರೇಷ್ಮೆ ಬೆಳೆಯುವ ರೈತರ ಬಗ್ಗೆ, ಅದರ ಪರಿಹಾರದ ಬಗ್ಗೆ ಯೋಜನೆಗಳನ್ನು ರೆಡಿ ಮಾಡುತ್ತಾರೆ. ಇನ್ನೂ ಮುಂದೆ ಹೋಗಿ ಹೇಳಬೇಕೆಂದರೆ, ಇದು ಕಟ್ಟುಕತೆ ಅಲ್ಲ. ಸೀಗೆ ಮೆಳೆಯಲ್ಲಿ ಹಲಗೆ ಕೊಯ್ಯಿಸಿ ಎನ್ನುವ ವಿಚಾರವನ್ನು ಕಡತದಲ್ಲಿ ಬರೆಯುವ ಅಧಿಕಾರಿಗಳು ನಮ್ಮಲ್ಲಿ ಇದ್ದಾರೆ. ಸೀಗೆ ಮೆಳೆಯನ್ನು ನೀವು ನೋಡಿದ್ದೀರಿ ಎಂದು ಕಾಣುತ್ತದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ, ನನ್ನ ವಾದಕ್ಕೆ ಪುಷ್ಠಿ ತೆಗೆದುಕೊಳ್ಳುವುದಕ್ಕೆ. ಈ ರಾಷ್ಟ್ರದ ರೈತರ ಮತ್ತು ಕೃಷಿ ಕಾರ್ಮಿಕರ ಅಥವಾ ಜನಸಾಮಾನ್ಯರ ಬದುಕಿನ ಬವಣೆಯೇ ತಿಳಿಯದ ಜನರಿಗೆ ಈ ಸಮಸ್ಯೆ ಬಗೆಹರಿಸುವ ಯೋಜನೆಗಳನ್ನು ತಯಾರು ಮಾಡುವುದಕ್ಕೆ ನಾವು ಅನುಕೂಲವನ್ನು ಮಾಡಿಕೊಟ್ಟಿದ್ದೇವೆ. ಬಹುಶಃ ನಾವು ಎಷ್ಟನ್ನು ಸಾಧಿಸಬೇಕಾಗಿತ್ತೋ ಅದನ್ನು ಸಾಧಿಸದಿರುವುದಕ್ಕೆ ಇದು ಮೊದಲನೇ ಕಾರಣ. ಇನ್ನು ಎರಡನೆಯ ಕಾರಣ. ನನಗೆ ಗೊತ್ತಿರುವ ಹಾಗೆ ನಾವು ಎಷ್ಟೇ ಪ್ರಯತ್ನ ಮಾಡಿದರೂ ನಮ್ಮ ಜನಸಂಖ್ಯೆ ಹೆಚ್ಚಳ

ನಮ್ಮ ಅಭಿವೃದ್ಧಿ ಕೆಲಸದಿಂದ ಬಂದಂತಹ ಎಲ್ಲಾ ಸಂಪತ್ತನ್ನು ಇಂತಹ ಒಂದು ಆಡಳಿತವನ್ನು ಮಾಡುವಾಗ ನುಂಗಿ ಹಾಕುತ್ತದೆ. ಮಾನ್ಯ ಅಧ್ಯಕ್ಷರೇ, ನಮ್ಮ ಅಧಿಕಾರಿಗಳ ಮತ್ತು ನೌಕರರ ಬಗ್ಗೆ ನಾನು ಈ ಮಾತನ್ನು ಆಡುವುದಕ್ಕಿಂತ ಮೊದಲು ಯಾರನ್ನಾದರೂ ಕುರಿತು ಈ ಮಾತನ್ನು ಆಡುವುದಿಲ್ಲ. ಯಾವುದೇ ಒಂದು ವ್ಯಕ್ತಿಯನ್ನು, ಒಂದು ಗುಂಪನ್ನು, ಒಂದು ವರ್ಗವನ್ನು, ಒಂದು ಮತವನ್ನು ಕುರಿತು ಮಾತನಾಡುತ್ತಿಲ್ಲ. ಇದನ್ನು ಸಾರ್ವತ್ರಿಕವಾಗಿ ಹೇಳುತ್ತಿದ್ದೇನೆ. ಜನರ ಸಮಸ್ಯೆಗಳ ಬಗ್ಗೆ, ಅವರ ಕಷ್ಟ ಕಾರ್ಪಣ್ಯಗಳ ಬಗ್ಗೆ ಸ್ಪಂದಿಸುವ, ಬಡವರನ್ನು ಕಂಡಾಗ, ಹಸಿದ ಹೊಟ್ಟೆ ಕಂಡಾಗ, ಹರಕು ಬಟ್ಟೆ ಕಂಡಾಗ ನೊಂದುಕೊಳ್ಳುವ ಅಧಿಕಾರಿಗಳೂ ಇದ್ದಾರೆ. ನಾನು ಅದನ್ನು ಇಲ್ಲ ಎಂದು ಹೇಳುವುದಿಲ್ಲ. ಅತಿ ಹೆಚ್ಚಿನ ಅಧಿಕಾರಿಗಳು ಎಂದು ಹೇಳುತ್ತೇನೆ. ನೌಕರರು ಎಂದಾಗ ನನ್ನನ್ನೂ ಸೇರಿಸಿಕೊಂಡು ಈ ದೇಶದ ಪ್ರಧಾನಿಯಿಂದ ಹಿಡಿದು ನಾಲ್ಕನೇ ದರ್ಜೆ ಕೆಲಸ ಮಾಡುವ ಎಲ್ಲರೂ ಈ ದೇಶದ ಜನಸಾಮಾನ್ಯರ ಹಣದಿಂದ ಬದುಕುತ್ತಿರತಕ್ಕ ಗುಲಾಮರು ಎನ್ನುವುದನ್ನು ನಾವು ಮರೆಯಬಾರದು. We are the servants. ನನ್ನ ಶರ್ಟ್‌ನ ದಾರದಿಂದ ಹಿಡಿದು ನನ್ನ ಹೆಂಡತಿ ಹಾಕಿಕೊಳ್ಳುವ ಸೀರೆಯ ಆ ದಾರದವರೆಗೆ ಈ ರಾಷ್ಟ್ರದ ಜನಸಾಮಾನ್ಯನು ಕೊಟ್ಟಿರತಕ್ಕ ತೆರಿಗೆ ಹಣದಿಂದ ಬಂದಿರುವಂಥದ್ದು.

12.35 ಪಿ.ಎಂ.

But it is unfortunate. ಒಬ್ಬ ಹಳ್ಳಿಯ ರೈತ ಬಂದು ನಮ್ಮ ಮುಂದೆ ನಿಂತಾಗ, ಮಂತ್ರಿಯ ಮುಂದೆ ಬಂದು ನಿಂತಾಗ ತಹಶೀಲ್ದಾರ್‌ರವರ ಮುಂದೆ ಬಂದು ನಿಂತಾಗ, ನಮ್ಮ ಜಿಲ್ಲಾಪರಿಷತ್‌ನ ಕಾರ್ಯದರ್ಶಿಯವರ ಮುಂದೆ ಬಂದು ನಿಂತಾಗ ಇವತ್ತು ದೇಶದ ಪರಿಸ್ಥಿತಿ ಏನಿದೆ ? Who is the servant and who is the master? ಅವನ ಹಣದಿಂದ ಬದುಕುತ್ತಿದ್ದೇವೆ. ಅವನ ಹಣದಿಂದ ನಮ್ಮ ಮಗನ ಫೀಸು ಕಟ್ಟುತ್ತಿದ್ದೇವೆ. ಅವನ ಹಣದಿಂದ ನಾವು ಭ್ರಷ್ಟತನ ಮಾಡುತ್ತೇವೆ. ಅವನ ಹಣದಿಂದ ನಾವು ಜೀವನ ಮಾಡುತ್ತೇವೆ. ಅವನ ತೆರಿಗೆ ಹಣದಿಂದ ನಮ್ಮ ಎಲ್ಲ ಸಕಲ ಸವಲತ್ತುಗಳ ಸರದಾರರಾಗಿದ್ದೇವೆ. ಆದರೆ ಅವನು ನಮ್ಮ ಮುಂದೆ ಬಂದು ನಿಂತಾಗ ಬಹುಶಃ ಸರ್ವೇ ಸಾಮಾನ್ಯವಾದ ದೃಶ್ಯ ಏನೆಂದರೆ ನಾವು ಮಾಸ್ಟರ್‌ಗಳ ತರಹ ನಡೆದುಕೊಳ್ಳುತ್ತೇವೆ, ಅವನನ್ನು ಆಳುಗಳ ತರಹ ಕಾಣುತ್ತೇವೆ. ಬಹುಶಃ ಈ ರಾಜ್ಯದ ಆಡಳಿತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನಾದರೂ ಬದಲಾವಣೆ ತರಬೇಕೆಂದು ಆಸಕ್ತಿಯಿದ್ದರೆ, ನನಗೆ ಗೊತ್ತಿದೆ ಅವರಿಗೆ ಆಸಕ್ತಿಯಿದೆಯೆಂದು; ಆದರೆ ಅನೇಕ ಸಮಯದಲ್ಲಿ ಪ್ರಾಮಾಣಿಕ ಯತ್ನಗಳು ಬಯಸಿದ ಫಲವನ್ನು ಕೊಡುವುದಿಲ್ಲ. ಅವರು ಈ ದೇಶದ ಉದ್ಧಾರ ಮಾಡುತ್ತಾರೆ, ಕರ್ನಾಟಕದಲ್ಲಿರುವ ಜನರನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುವ ಪ್ರಯತ್ನ ಮಾಡುತ್ತಾರೆಂದು ನಾನು ಅನ್ನುವುದಿಲ್ಲ. ಆದರೆ ತಮ್ಮ ಕಾಲದಲ್ಲಿ ಏನಾದರೂ ಮಾಡಬೇಕು, ಏನಾದರೂ ಬದಲಾವಣೆ ತರಬೇಕೆನ್ನುವ ದೃಷ್ಟಿಯಿಂದ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ನಾನು ಆಗಲೇ ಹೇಳಿದ ಹಾಗೆ ಪ್ರಾಮಾಣಿಕ ಪ್ರಯತ್ನಗಳು ನಾವು ಬಯಸಿದ ಫಲವನ್ನು ಕೊಡುವುದಿಲ್ಲ. ಅದರೊಳಗೆ ನಿಯೋಜನೆ ಮಾಡಿದಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಂತಹ ನಿಮ್ಮ ಆಡಳಿತ ಯಂತ್ರ ಏನಿದೆ, ನಿಮ್ಮ ಅಧಿಕಾರಿಗಳು ಏನಿದ್ದಾರೆ, ನೌಕರಶಾಹಿ ಏನಿದ್ದಾರೆ, ಅವರು ಪ್ರಾಮಾಣಿಕವಾಗಿ ನೀವು ಜಾರಿ ಮಾಡಿದಂತಹ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರದಿದ್ದರೆ ನಿಮ್ಮ ಸಂಪೂರ್ಣವಾದ ಶ್ರಮ ಹೊಳೆಯಲ್ಲಿ ಹೋಮ ಮಾಡಿದಂತಾಗುತ್ತದೆ. ನಿಮ್ಮ ಸಂಪೂರ್ಣವಾದ ಹಠ, ಅದನ್ನು ನೀವು ಛಲ, ನಿಮ್ಮ ಇಚ್ಛಾಶಕ್ತಿ ಪೊಲಿಟಿಕಲ್ ವಿಲ್ ಏನು ಇಟ್ಟುಕೊಂಡು ಹೊರಟಿದ್ದೀರಿ, ಅದನ್ನು ನೀವು ಸಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾನು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಮೊಟ್ಟಮೊದಲನೆಯದಾಗಿ ಆಡಳಿತ ನಡೆಸುವಂತಹ ಅಧಿಕಾರಿಗಳು ಮಂತ್ರಿಗಳು ಶಾಸಕರು ಜನರ ಸಮಸ್ಯೆಗಳಿಗೆ ಸ್ಪಂದಿಸುವಂತಹ ಅವರ ದುಃಖದುಮ್ಮಾನಗಳನ್ನು

ನೋಡಿದಾಗ ಮರುಗುವಂತಹ ಒಂದು ವ್ಯವಸ್ಥೆಯನ್ನು ಜಾರಿಯಲ್ಲಿ ತರುವಂತಹ ಪ್ರಯತ್ನವನ್ನು ತಾವು ಮಾಡಬೇಕು. ಈ ಆಡಳಿತ ಅತ್ಯಂತ ನಿಷ್ಪಕ್ಷಪಾತವಾದುದೆಂದು ನನ್ನ ಭಾವನೆ. ನನ್ನ ಕ್ಷೇತ್ರದಲ್ಲಿ ಹೆಬ್ಬೂರು ಎಂದು ಊರು ಇದೆ. ನನ್ನ ಕ್ಷೇತ್ರದ ಬಗ್ಗೆ ಯಾವತ್ತೂ ಯಾವುದೇ ವಿಷಯ ಹಿಡಿದು ಮಾತನಾಡಿದವ ನಾನಲ್ಲ. ಈಗ ಉದಾಹರಣೆ ಕೊಡಬೇಕಾಗುತ್ತದೆ. ಅಲ್ಲಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷರು ಇದ್ದರು. ಅವರು 1200 ರೂಪಾಯಿ ಚೆಕ್‌ಗೆ ಒಂದು ಸೇರಿಸಿ 11 ಸಾವಿರದ 200 ಅಂತ ಹೇಳಿ ಚೆಕ್ಕನ್ನು ತಿದ್ದಿದರು. ಈ ಬಗ್ಗೆ ನಾನು ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಅವರಿಗೆ ಕಾಗದ ಬರೆದಿದ್ದೇನೆ. ಸ್ಥಳೀಯ ಪೊಲೀಸರಿಗೆ ಹೇಳಿದೆ, ಅವನ ಮೇಲೆ ಕೇಸು ಹಾಕಿ ಎಲ್ಲಾ ಸೊಸೈಟಿಗಳಲ್ಲಿ ಹೀಗೆ ತಿಂದುಹಾಕುತ್ತಿದ್ದಾನೆ. ದಯಮಾಡಿ ಏನಾದರೂ ಕ್ರಮ ಜರುಗಿಸಿ ಬೇರೆಯವರು ಈ ತರಹ ತಿನ್ನದ ಹಾಗೆ ಆಗಲಿ ಅವನ ಮೇಲೆ ಕೇಸು ಹಾಕಿಯೆಂದು ಹೇಳಿದಾಗ ಅವರು ಕೇಸು ಹಾಕಲಿಲ್ಲ. ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಚೆಕ್ ತರಿಸಿಕೊಂಡು ಇಟ್ಟುಕೊಂಡಿದ್ದರು. ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಫೀಸಿಗೆ ಹೋಗಿದ್ದಾಗ ಈ ನಾಯಕರು ಆ ಚೆಕನ್ನು ತೆಗೆದುಕೊಂಡು ಅಗಿದು ನುಂಗಿ ಹಾಕಿದರು. ಇದರಿಂದಾಗಿ ಪೊಲೀಸ್‌ನವರು ಕೇಸು ಹಾಕಲಿಲ್ಲ, ಇದು ಪಶು ಸಂಗೋಪನಾ ಸಚಿವರಿಗೆ ಬರುತ್ತದೆ. ಅವರಿಗೆ ಏನು ಶಿಕ್ಷೆ ಗೊತ್ತೇ ? ಅವರಿಗೆ ಶಿಕ್ಷೆ ಕೊಡುವ ಬದಲು, ಅವರ ಮೇಲೆ ಕೇಸು ಹಾಕುವ ಬದಲು ಅವರನ್ನು ಅರೆಸ್ಟ್ ಮಾಡುವ ಬದಲು ತುಮಕೂರು ಜಿಲ್ಲೆಯ ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷರನ್ನಾಗಿ ನೇಮಿಸಿದರು. The result is, Rs. 3 crores fo dues and Rs. 1 crore loss. ಆ ವ್ಯಕ್ತಿಯ ಮೇಲೆ ಕೇಸು ಹಾಕಿಯೆಂದು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಂಡರೆ ಆ ವ್ಯಕ್ತಿಯನ್ನು ಹಾಲು ಉತ್ಪಾದಕರ ಸಂಘದ ಅಧ್ಯಕ್ಷರನ್ನಾಗಿ ಮಾಡಿದರು. ಅದರ ಫಲ ಏನೆಂದರೆ ರೈತರೇ 2–3 ಕೋಟಿ ರೂಪಾಯಿ ಕೊಡಬೇಕಾಯಿತು. 1 ಕೋಟಿ ರೂಪಾಯಿಗಳಷ್ಟು ಅಲ್ಲಿ ನಷ್ಟವಾಯಿತು. ಇದನ್ನು ನಾನು ಏಕೆ ಉದಾಹರಣೆ ಕೊಟ್ಟೆ ಅಂದರೆ, ಆಡಳಿತದಲ್ಲಿ ಪಕ್ಷಪಾತ ಬರುವುದು ಬೇಡವೆಂದು;

ಇದರ ತಾರೀಖು 1.3.93 ಹಾಗೂ ಕ್ರಮಸಂಖ್ಯೆ ಎನ್‌ಸಿಆರ್ 119:93. ನಾನು ಎಲ್ಲ ಇಟ್ಟುಕೊಂಡಿದ್ದೇನೆ. ಇಲ್ಲದಿದ್ದರೆ ಹೇಳುತ್ತಿರಲಿಲ್ಲ. ಮುಖ್ಯಮಂತ್ರಿಗಳು ಬೇಕಾದರೆ ವೆರಿಫೈ ಮಾಡಿ ನೋಡಬಹುದು. 1.3.93ರಂದು ಕುಣಿಗಲ್ ಪೊಲೀಸ್ ಸ್ಟೇಷನ್‌ಗೆ ಒಬ್ಬರ ಮೇಲೆ ಒಂದು ಕಂಪ್ಲೆಂಟ್ ಕೊಡುತ್ತಾರೆ. ದೂರನ್ನು ಪಡೆದಂಥ ಪೊಲೀಸ್ ಅಧಿಕಾರಿ ತನಗೆ ಯಾರ ಮೇಲೆ ದೂರು ಕೊಟ್ಟಿದ್ದಾರೋ, ಅವರ ತೋಟದ ಮನೆಗೆ ಹೋಗಿ ಕೋಳಿ ಮಾಂಸ ತಿಂದು ಬರುತ್ತಾನೆ. This may be verified from the records. ಇವರು ಇಂತಹ ಅಪರಾಧ ಮಾಡಿದ್ದಾರೆ, ಹಣ ಹೊಡೆದಿದ್ದಾರೆ, ಅವರ ಮೇಲೆ ಕೇಸ್ ಹಾಕಿ ಅಂತ ಪೊಲೀಸ್ ಅಧಿಕಾರಿಗೆ ಅರ್ಜಿ ಕೊಟ್ಟರೆ ಪೊಲೀಸ್ ಅಧಿಕಾರಿ ಅಪರಾಧಿಯ ಮನೆಗೆ ಹೋಗಿಬಿಟ್ಟು ಕೋಳಿಯನ್ನು ಕುಯ್ಯಿಸಿ ತಿಂದುಬಿಟ್ಟು ಪಂಚಾಯತಿ ಮಾಡಿ ಬರುತ್ತಾರೆ. ಸನ್ಮಾನ್ಯ ಅಧ್ಯಕ್ಷರೇ, ಇದು ಅಲ್ಲಿಗೇ ನಿಲ್ಲಲಿಲ್ಲ ತುಮಕೂರಿನಲ್ಲಿ ಪುಟ್ಟಸ್ವಾಮಿ ಎನ್ನತಕ್ಕಂಥ ರೆವಿನ್ಯೂ ಇನ್‌ಸ್ಪೆಕ್ಟರ್ ಅವರಿಗೆ ಒಬ್ಬರು ಎಕ್ಕಡದಲ್ಲಿ ಹೊಡೆದರು. ಅವರನ್ನು ನಿಮ್ಮ ಪಕ್ಷದ ಅಧ್ಯಕ್ಷರನ್ನಾಗಿ ಮಾಡಿದಿರಿ. ಅಷ್ಟೇ ಅಲ್ಲ, ನಿಮ್ಮ ಪಕ್ಷದ ಟಿಕೆಟ್ಟು ಕೊಟ್ಟು ಈ ರಾಷ್ಟ್ರದ ಸಂಸತ್ತಿನ ಸದಸ್ಯರನ್ನಾಗಿ ಮಾಡಿದಿರಿ. ಕೇಸ್ ಹಾಕಲಿಲ್ಲ. ಅರೆಸ್ಟ್ ಮಾಡಲಿಲ್ಲ, ಕೋರ್ಟಿನ ಮುಂದೆ ಪ್ರೊಡ್ಯೂಸ್ ಮಾಡಲಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳೇ, ನಿಮ್ಮ ಮನಸ್ಸನ್ನು ನೋಯಿಸತಕ್ಕಂಥ ಇಚ್ಛೆ ನನಗೆ ಇಲ್ಲ. ಆದರೆ ನಿಮ್ಮ ಆಡಳಿತ ಕಾಲದಲ್ಲಿ ಏನು ನಡೆದಿದೆ, ಅದರಿಂದ ನನ್ನ ಮನಸ್ಸಿಗೆ ನೋವಾಗಿದೆ; ಅದನ್ನು ಹೇಳದೆ ವಿಧಿ ಇಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಲಾ ? ನಿರ್ವಾಣಯ್ಯ ಎನ್ನತಕ್ಕಂಥ ತಿಪಟೂರಿನ ಒಬ್ಬ ವಿಲೇಜ್ ಅಕೌಂಟೆಂಟ್‌ಗೆ ಅಸಿಸ್ಟೆಂಟ್ ಕಮೀಷನರ್ ಎದುರುಗಡೆ ಹೊಡೆದರು; ಬಯ್ದರು ಅಂತ ಪೊಲೀಸ್ ಸ್ಟೇಷನ್‌ಗೆ ಅರ್ಜಿ ಕೊಡಲು ಹೋದರೆ, ಐ.ಎ.ಎಸ್. ಅಧಿಕಾರಿಗಳಿಂದ

ಹಿಡದು ಎಲ್ಲರೂ ಹೋಗಿ ತಿಪಟೂರಿನಲ್ಲಿ ಕುಳಿತುಕೊಂಡು ಪಂಚಾಯ್ತಿ ಮಾಡುತ್ತಾರೆ. ಅವರ ಮೇಲೆ ಕೇಸು ಹಾಕುವುದಿಲ್ಲ. ಅದೇ ನನ್ನ ಮೇಲೆ ಕೇಸ್ ಹಾಕುತ್ತಾರೆ. ಏಕೆಂದರೆ ನಾನು ವಿರೋಧಪಕ್ಷದವನಲ್ವಾ? ನನ್ನನ್ನು ಅರೆಸ್ಟ್ ಮಾಡುತ್ತಾರೆ. ಆದರೆ ಇಲ್ಲಿ, ನಿಮ್ಮ ಪಕ್ಷದವರ ಮೇಲೆ ಏನು ಮಾಡಿದ್ದಾರೆ ? This is the copy of proceedings held under the Chairmanship of Shri. Perumal, an I.A.S. Officer, where in they tried to compromise the criminal case. ಇದು 25.10.1990 ರಂದು ಗ್ರಾಮಲೆಕ್ಕಿಗರಾದ ಟಿ.ಟಿ. ನಿರ್ವಾಣಯ್ಯ ಅವರನ್ನು ಶಾಸಕರು ಉಪವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರರ ಸಮ್ಮುಖದಲ್ಲಿ ಥಳಿಸಿದ್ದನ್ನು ವಿವರಿಸಿದರು. ಎಲ್ಲ ಆದ ಮೇಲೆ ಕೇಸನ್ನು ರಾಜಿ ಮಾಡಿಸಿದರು. ಎಕ್ಕಡದಲ್ಲಿ ಹೊಡೆದವನಿಗೆ ಒಕ್ಕೂಟದ ಅಧ್ಯಕ್ಷರನ್ನಾಗಿ ಮಾಡುತ್ತೀರಿ. ರೆವಿನ್ಯೂ ಇನ್‌ಸ್ಪೆಕ್ಟರ್ ಅವರಿಗೆ ಎಕ್ಕಡದಲ್ಲಿ ಹೊಡೆದವನಿಗೆ ಈ ಸಂಸತ್ತಿನ ಸದಸ್ಯನಾಗುವುದಕ್ಕೆ ಟಿಕೆಟ್ಟು ಕೊಡುತ್ತೀರಿ. ವಿಲೇಟ್ ಅಕೌಂಟೆಂಟ್‌ಗೆ ಹೇಳಿಸಿ ಎದುರುಗಡೆ ಹೊಡೆಸಿದಂಥವನಿಗೆ ಮಂತ್ರಿಯಾಗಿ ಮಾಡುತ್ತೀರಿ. ನನಗೆ ಯಾರನ್ನೂ ನೋಯಿಸಬೇಕು ಎನ್ನಕ್ಕಂಥ ಆಸೆ ಇಲ್ಲ. ಅಥವಾ ಯಾರಿಗಾದರೂ ಅಪಕೀರ್ತಿ ತರಬೇಕೆಂದು ಆಸೆ ಇಲ್ಲ. ಅಥವಾ ಯಾರದ್ದಾದರೂ ಚಾರಿತ್ರ್ಯವಧೆ ಮಾಡಬೇಕೆಂದು ಆಸೆ ಇಲ್ಲ. ಆದರೆ ಈ ಸಂದರ್ಭಗಳು ಬಂದಾಗ ನೀವು ಯಾವ ಒಂದು ನೀತಿಯನ್ನು ಅನುಸರಿಸುತ್ತಿದ್ದೀರಿ ಅಂದರೆ ನಾವು ಹಸ್ತಕ್ಷೇಪ ಮಾಡುವುದು ಎಂದು. ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ನಿಮ್ಮ ಬಗ್ಗೆ ಈ ವಿಷಯದಲ್ಲಿ ನನಗೆ ಗೌರವ ಇದೆ. ಆದರೆ ಅನ್ಯಾಯವಾದರೂ ಕೂಡ ಹಸ್ತಕ್ಷೇಪ ಮಾಡುವುದಿಲ್ಲ ಎನ್ನುವುದಾದರೆ, ಅನ್ಯಾಯವನ್ನು ಸರಿ ಮಾಡುವುದಕ್ಕೆ ಹಸ್ತಕ್ಷೇಪ ಮಾಡುವುದಿಲ್ಲ ಎನ್ನುವುದಾದರೆ, ಆವಾಗ ಮಾತ್ರ ತಮ್ಮ ಬಗ್ಗೆ ಗೌರವವನ್ನು ತಾಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಅಧ್ಯಕ್ಷರೇ, ಆಗಲೇ ನಾನು ಒಂದು ಮಾತನ್ನು ಹೇಳಿದ್ದೇನೆ, ಏನೆಂದರೆ, ಶ್ರೀಮತಿ ಇಂದಿರಾಗಾಂಧಿಯವರು ಅಧ್ಯಕ್ಷರಾಗಿದ್ದಾಗ ನಾನು ಸ್ವಲ್ಪ ಕಾಲ ಕಾಂಗ್ರೆಸ್ಸಿನಲ್ಲಿದ್ದೆ. ಸೈದ್ಧಾಂತಿಕ ಕಾರಣಕ್ಕೆ 1969ರ ನಂತರ ಕಾಂಗ್ರೆಸನ್ನು ಬಿಟ್ಟವನು ನಾನು ಸ್ವಾಮಿ; ಅವರ ಬಗ್ಗೆ ಸೈದ್ಧಾಂತಿಕವಾಗಿ ವ್ಯತ್ಯಾಸ ಇದ್ದರೂ ಕೂಡ ಆ ಹೆಣ್ಣು ಮಗಳು ರಾಷ್ಟ್ರಕ್ಕೆ ಮಾಡಿದ ಸೇವೆ, ನಡೆದುಕೊಂಡಂಥ ರೀತಿ, ಕೊನೆಯಲ್ಲಿ ತನ್ನನ್ನೇ ಬಲಿದಾನ ಕೊಟ್ಟಂಥಾದ್ದಕ್ಕೆ ನನಗೆ ಗೌರವ ಇದೆ. ಸನ್ಮಾನ್ಯ ಮುಖ್ಯಮಂತ್ರಿಗಳೇ, 1979ನೇ ಇಸವಿಯಲ್ಲಿ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿ ಅವರಿಗೆ ಚಪ್ಪಲಿಯಲ್ಲಿ ಹೊಡೆಸಿದರು ಎನ್ನುವ ಕೇಸ್ ಏನಾಯಿತು ? ಮಾಹಿತಿಯನ್ನು ತರಿಸಿಕೊಂಡಿದ್ದೀರಾ ? ಅವರನ್ನು ಇವತ್ತು ನೀವು ಮಂತ್ರಿಯನ್ನಾಗಿ ಮಾಡಿಕೊಳ್ಳುತ್ತಿದ್ದೀರಿ. ವೈ.ಕೆ. ರಾಮಯ್ಯ ಬಸ್ ಬಿಡುವುದಕ್ಕೆ ಕೇಳಿದರೆ ಅರೆಸ್ಟ್ ಮಾಡಿಸಿ, ಜೈಲಿಗೆ ಕಳಿಸುತ್ತೀರಿ. ಇಂದಿರಾಗಾಂಧಿಯವರಿಗೆ ಚಪ್ಪಲಿಯಲ್ಲಿ ಹೊಡೆಸುವುದಕ್ಕೆ ಪ್ರಯತ್ನಿಸಿದ ಕೇಸನ್ನು ವಜಾಮಾಡಿ ಅವರನ್ನು ಮಂತ್ರಿ ಮಾಡಿಕೊಳ್ಳುತ್ತೀರಿ. ಮುನ್ನೂರು ಜನರು ನಿಲ್ದಾಣದಲ್ಲಿ 12ಗಂಟೆ ಕಾಲ ನಿಂತಿದ್ದರೆ, ಬಸ್ ಬಿಡಿ ಅಂತ ಹೇಳುವುದಕ್ಕೆ ಹೋದರೆ ನನ್ನ ಮೇಲೆ ಕೇಸು ಹಾಕುತ್ತೀರಿ. ಇದು ಪಕ್ಷಪಾತದ ಆಡಳಿತ ಅಲ್ಲವೇನು ? ಇದು ಅನ್ಯಾಯದ ಪರಂಪರೆ ಅಲ್ಲವೇನು ? ಕೇಸ್ ನಂಬರ್ ಕೊಡುತ್ತೇನೆ, ತೆಗೆದುಕೊಳ್ಳಿ. ಏನು ಕೇಸು ಅಂತ ವೆರಿಫೈ ಮಾಡಿಸಿ.

ಅಪರಾಧ ಸಂಖ್ಯೆ 28/78, ತಿಪಟೂರು ಪೊಲೀಸ್ ಸ್ಟೇಷನ್. ಇದು ಯಾರ ಬಗ್ಗೆ ಏನು ಎನ್ನುವುದನ್ನು ನಾನು ಹೇಳುವುದು ಬೇಡ. ತಮಗೆ ಈ ಮಾಹಿತಿಯ ಅವಶ್ಯಕತೆ ಇದ್ದರೆ, ತರಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ, ತರಿಸಿಕೊಳ್ಳಿ. ಸನ್ಮಾನ್ಯ ಅಧ್ಯಕ್ಷರೇ, ಇಷ್ಟಕ್ಕೇ ಇದು ನಿಲ್ಲಲಿಲ್ಲ. ಮುಖ್ಯಮಂತ್ರಿಗಳು ಕಾನೂನಿನ ಅರಿವು ಇರುವವರು. ನಾನೂ ಸಹ ಅಲ್ಪಸ್ವಲ್ಪ ಕಾನೂನಿನ ಅರಿವು ಇರುವವನೇ. ಐ.ಪಿ.ಸಿ. 302ರಲ್ಲಿ ಕೊಲೆ ಕೇಸ್ ಆದರೆ, it is not bailable. I know, the Chief Minister was practising till recently.

ಒಂದು ಕೊಲೆ ಮೊಕದ್ದಮೆಯಾಗಿದೆಯೆಂದು ಪೊಲೀಸ್ ಸ್ಟೇಷನ್‌ಗೆ ದೂರು ಬಂದತಕ್ಷಣ, the Investigation Officer should proceed to the spot. He should seize the material object. 3) He must arrest the accused. These are the three minimum procedures to be followed by the Investigation Officer.

ಇಂತಹವರು ಖೂನಿ ಮಾಡಿದ್ದಾರೆಂದು, ಒಂದು ಖೂನಿ ಕೇಸ್‌ನಲ್ಲಿ ಅರ್ಜಿ ಬಂದರೆ, ಈ ಮೂರು ಕೆಲಸಗಳನ್ನೂ ವಿಚಾರಣೆ ಮಾಡುವಂಥ ಇನ್‌ವೆಸ್ಟಿಗೇಷನ್ ಆಫೀಸರ್ ಮಾಡಲೇಬೇಕು. Cr. No. 116/92 on the file of the Magistrate, Kunigal, ಈ ಸದನದಲ್ಲಿ ನೀವೇನು ಹೇಳಿದ್ದೀರಿ, ಈ ಕೊಲೆ ಕೇಸಿನಲ್ಲಿ ನೀವು ಅಪರಾಧಿಯನ್ನು ಅರೆಸ್ಟ್ ಮಾಡಲೇಬೇಕು. ಇದು ಕಾನೂನಿನ ಕಟ್ಟಪ್ಪಣೆ ಎಂದು ನಾನು ವಾದ ಮಾಡಿದಾಗ, ಅಲ್ಲಿ ಮುಖ್ಯಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೆ, ಅದನ್ನು ಓದಬಹುದೇ. ಇದು ಸಾಧ್ಯವಿಲ್ಲ, ಏಕೆಂದರೆ, ಯಾರ ಮೇಲೋ ಒಂದು ದೂರು ಕೊಟ್ಟತಕ್ಷಣ, ಅವರನ್ನು ಅರೆಸ್ಟ್ ಮಾಡಿ, ಜೈಲಿಗೆ ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಆ ರೀತಿ ಆದರೆ, ಎಲ್ಲರನ್ನೂ ಜೈಲಿಗೆ ತುಂಬ ಬೇಕಾಗುತ್ತದೆ. ಸೆಕ್ಷನ್ 302ರಲ್ಲಿ ಯಾರೋ ಒಬ್ಬ ಅನಾಮಧೇಯರಿಂದ ದೂರು ಬಂದತಕ್ಷಣ ಆತನನ್ನು ಅರೆಸ್ಟ್ ಮಾಡುವುದಕ್ಕೆ ಸಾಧ್ಯವಿಲ್ಲ." ಅಂತ ಹೇಳಿದ್ದಾರೆ. ಮತ್ತೊಂದು ಕಾರಣ, this may be verified from the records of this House on 13.7.92.

ಇದನ್ನು ಹೇಳಿ ಬಿಡುತ್ತೇನೆ. ನೀವು ಅವತ್ತು ಅಲ್ಲಿ ಇರಲಿಲ್ಲ. ಆದರೆ, ಮೊನ್ನೆ ತಾವು ಒಂದು ಮಾತು ಹೇಳಿದ್ದೀರಿ. ಅವತ್ತು ಇದ್ದದ್ದೂ ನಿಮ್ಮ ಸರ್ಕಾರ, ಇವತ್ತು ಇರುವುದೂ ನಿಮ್ಮ ಸರ್ಕಾರ. ಆದ್ದರಿಂದ, ಅವರು ಏನೇನು ಮಾಡಿದ್ದಾರೆ, ಅದನ್ನು ಮುಂದುವರಿಸಬೇಕು ಎನ್ನುವುದನ್ನು ತಾವು ಹೇಳಿದ್ದೀರಿ. ಈ ವಾದ ಮಾಡುವಾಗ, ನಾನು ಮುಖ್ಯಮಂತ್ರಿಯಾಗಿರಲಿಲ್ಲವೆಂದು ನಾನು ಈ ಮಾತು ಹೇಳಿರುವುದಿಲ್ಲವೆಂದೂ ಹೇಳಿ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಿಂದ ನಿಮ್ಮನ್ನು ಗುರಿ ಮಾಡುತ್ತಾ ಇರಲಿಲ್ಲ. ಅವತ್ತು ಏನು ಹೇಳಿದ್ದಾರೆ ಎನ್ನುವುದನ್ನು ಓದುತ್ತೇನೆ. ಈ ರಾಜ್ಯದ ಮುಖ್ಯಮಂತ್ರಿಗಳು, ಈ ರಾಜ್ಯದ ಗೃಹಸಚಿವರು, ಈ ರಾಜ್ಯದ ಜನರ ಮಾನ, ಪ್ರಾಣ, ಆಸ್ತಿಯನ್ನು ರಕ್ಷಿಸುವಂಥಹವರು, ಪಕ್ಷಭೇದವಿಲ್ಲದೆ ನ್ಯಾಯವನ್ನು ದೊರಕಿಸಿಕೊಡುವಂಥ, ಜವಾಬ್ದಾರಿ ಸ್ಥಾನದಲ್ಲಿ ಕುಳಿತ ಮುಖ್ಯಮಂತ್ರಿಗಳು ಹೇಳಿದಂಥ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. "What is the purpose of arrest? The purpose of arrest is if the person against whom the complaint is made tries to escape the clutches of the law, then the necessity of arrest arises." ಎಂದು ಬಂಗಾರಪ್ಪನವರು ಮುಖ್ಯಮಂತ್ರಿಯಾಗಿ ಆ ದಿವಸ ಈ ರೀತಿ ಅಪ್ಪಣೆ ಕೊಡಿಸಿದ್ದಾರೆ. ದೂರು ಕೊಟ್ಟ ತಕ್ಷಣ ಅರೆಸ್ಟ್ ಮಾಡುವುದಕ್ಕೆ ಆಗುತ್ತದೆಯೇ ? ಇದು ಸಾಧ್ಯವೇ ? ಐ.ಪಿ.ಸಿ. 302ರ ಪ್ರಕಾರ ಕೊಲೆ ಆಪಾದನೆಯಲ್ಲಿ ಒಬ್ಬ ಅಪರಾಧಿಯನ್ನು ಅರೆಸ್ಟ್ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಆಗಿನ ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಿದಂಥ ವಾದವನ್ನು ತಮ್ಮ ಗಮನಕ್ಕೆ ತಂದಿರುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ, ಅದರ ಜೊತೆಯಲ್ಲಿ ಇದನ್ನೂ ಗುರುತು ಹಾಕಿಕೊಳ್ಳಬೇಕು. ಸಿ.ಆರ್.ನಂ. 334/92, ಈ ಕೇಸಿನಲ್ಲಿ ಕೊಟ್ಟಿರುವಂಥ ಫಿರ್ಯಾದು ಏನೆಂದರೆ, ಅಪರಾಧಿ ಬಸ್ ಸ್ಟ್ಯಾಂಡಿಗೆ ಹೋಗಿ, ಜನರಿಗೆ ಬಸ್ ಬಿಡಿ ಎಂದು ಗಲಾಟೆ ಮಾಡಿದರು ಎಂದು ಹೇಳಿ, ಅಪರಾಧ ನೊಂದಾವಣೆಯಾಗಿರುವುದು ಸೆಕ್ಷನ್ 506 ಮತ್ತು 533ರಲ್ಲಿ. ಈ ಎರಡು ವಿಚಾರಗಳು ಏನೆಂದು ತಮಗೆ ಗೊತ್ತಿದೆ. ಸೆಕ್ಷನ್ 506 ಎಂದು ಹೇಳಿದರೆ, ಬೈಯ್ದರು ಎಂದು, ಸೆಕ್ಷನ್ 533 ಎಂದು ಹೇಳಿದರೆ, ಸರ್ಕಾರಿ ಕೆಲಸ ಮಾಡುವುದಕ್ಕೆ ತೊಂದರೆ ಮಾಡಿದರು ಎಂದು, ಅನ್ನುವುದಾದರೆ ನಾನು ಏನು ಅಪರಾಧ ಮಾಡಿದೆ ಸನ್ಮಾನ್ಯ ಮುಖ್ಯಮಂತ್ರಿಗಳೇ ? ಅವತ್ತು ನೀವೇ ಮುಖ್ಯಮಂತ್ರಿಗಳಾಗಿದ್ದಿರಿ. ಈ ರಾಜ್ಯದ ಇಡೀ ಆಡಳಿತದ ಚಕ್ರ, ಆಡಳಿತದ ರಥ ನಿಮ್ಮ ಕೈಯಲ್ಲಿತ್ತು.

ರಕ್ಷಣೆ ಕೊಡತಕ್ಕಂಥಾದ್ದು ಶಿಕ್ಷೆ ಕೊಡತಕ್ಕಂಥ ಸಂಪೂರ್ಣ ಜವಾಬ್ದಾರಿ ನಿಮ್ಮ ಸರ್ಕಾರದ ಮೇಲಿತ್ತು. ಆವತ್ತು ಏನು ಮಾಡಿದಿರಿ ನೀವು ಖೂನಿ ಕೇಸ್‌ನಲ್ಲಿ ಅರೆಸ್ಟ್ ಮಾಡತಕ್ಕಂಥ ಅವಶ್ಯಕತೆ ಇಲ್ಲ ಎಂದು ಹೇಳಿದಂತಹ ನಿಮ್ಮ ಕಾನೂನು ತಜ್ಞರು, ನಿಮ್ಮ ಪೋಲೀಸಿನವರು ಈ ಕೇಸ್ ಈ ಸಿ.ಆರ್.ನಲ್ಲಿ ಏನು ಮಾಡಿದಿರಿ ಅಂತ ಅಂದರೆ ಅಪರಾಧಿಗಳನ್ನು ಅರೆಸ್ಟ್ ಮಾಡಿದರು. ಅರೆಸ್ಟ್ ಮಾಡಿದ್ದು ಅಷ್ಟೇ ಅಲ್ಲ, You know as an advocate, these two offences are bailable. These two offences are non–cognisable, whereas the offence under 302 is non–bailable and warranted. ಈ ಕೇಸಿನ ಅಪರಾಧಿಯನ್ನು ಅರೆಸ್ಟ್ ಮಾಡಿದ್ದು ಅಷ್ಟೇ ಅಲ್ಲ, ಕೋರ್ಟಿನ ಕಟಕಟೆಯಲ್ಲಿ ತೆಗೆದುಕೊಂಡು ಹೋಗಿ ನಿಲ್ಲಿಸಿದರು. Tell me now,

ಇದು ಎಂತಹ ಆಡಳಿತ ಮಾಡುತ್ತಿದ್ದೀರಿ ಎಂದು; ಈ ಕೇಸ್‌ನಲ್ಲಿ ಅರೆಸ್ಟ್ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಆದರೆ ಸೆಕ್ಷನ್ 506ರಲ್ಲಿ ಯಾರೋ ಒಬ್ಬರಿಗೆ ಬೈದರು ಎನ್ನತಕ್ಕಂಥ ಆಪಾದನೆಯನ್ನು ತರಿಸಿಕೊಂಡು ನೀವು ಎಂದೋ ನಡೆದಂತಹ ಘಟನೆ ಬಗ್ಗೆ ಎಷ್ಟೋ ಹೊತ್ತಿನ ಮೇಲೆ ಆ ಅಪರಾಧಿಯನ್ನು ಅರೆಸ್ಟ್ ಮಾಡಿ ಕೋರ್ಟಿನ ಮುಂದೆ ತರತಕ್ಕಂಥ ಒಂದು ಆಡಳಿತ ವ್ಯವಸ್ಥೆ ಈ ರಾಜ್ಯದಲ್ಲಿ ಇದೆ ಎನ್ನುವುದಾದರೆ ಇದು ಪಕ್ಷಪಾತ ನಡವಳಿಕೆ ಅಲ್ಲ ಅಂತ ನಾನು ಹೇಳುವುದಕ್ಕೆ ಸಿದ್ಧನಿಲ್ಲ. ಸನ್ಮಾನ್ಯ ಅಧ್ಯಕ್ಷರೇ ಈ ಒಂದು ಕೇಸ್ ಯಾರ ಮೇಲೂ ಹಾಕಿದ್ದು ಅಲ್ಲ, ನನ್ನ ಮೇಲೇ ಹಾಕಿದ್ದು. ಈ ಕೇಸಿನ ಅಪರಾಧಿ ನಾನೆ. ಈ ಕೇಸ್ ನನಗೆ ಅನಿವಾರ್ಯ ಅಲ್ಲ. ಮುಖ್ಯಮಂತ್ರಿಗಳೇ, ಹೊಸದೂ ಅಲ್ಲ ಇದು ಮೊದಲನೆಯದೂ ಅಲ್ಲ, ಕೊನೆಯದೂ ಅಲ್ಲ, ಈ ರಾಷ್ಟ್ರದಲ್ಲಿ ತುರ್ತುಪರಿಸ್ಥಿತಿ ಬಂದಾಗಲೂ ಕೂಡ ನಾವು ರಾಷ್ಟ್ರ ದ್ರೋಹ ಮಾಡಿದ್ದೇವೆ ಅಂತ ನಮ್ಮ ಮೇಲೆ ಕೇಸ್ ಹಾಕಿ ಜೈಲಿಗೆ ಕಳುಹಿಸಿದಂತಹ ದಿನಗಳು ಇದ್ದಾವೆ. ಆದರೆ ಆವತ್ತಿನ ದಿವಸ ಎಂತಹ ಒಳ್ಳೆಯ ಅಧಿಕಾರಿಗಳು ಇದ್ದರು ಅಂದ್ರೆ ಅವರು ಎಂಥಾದ್ದು ರಾಷ್ಟ್ರ ದ್ರೋಹ ಮಾಡಿಲ್ಲ. ಆದ್ದರಿಂದ ಅವರನ್ನು ಜೈಲಿಗೆ ಕಳುಹಿಸತಕ್ಕಂಥ ಅವಶ್ಯಕತೆ ಇಲ್ಲ ಎನ್ನತಕ್ಕಂಥ ಪುಣ್ಯಾತ್ಮರು ಅಧಿಕಾರಿಗಳು ಇದ್ದರು. I remember Sri Meenakshi Sundaram.

ರಾಷ್ಟ್ರದ ಕೆಲಸಕ್ಕೆ ಜೈಲಿಗೆ ಹಾಕಬೇಕು ಎಂದು ಬಂದಾಗ ಪೋಲೀಸ್ ಸ್ಟೇಷನ್‌ನಲ್ಲಿ ಆ ಕೇಸ್ ಹೊಡೆದು ಹಾಕಿದರು. ಇಲ್ಲಾ ಅವರನ್ನು ಕಳುಹಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ಕೇಸ್ ನನಗೆ ಹೊಸದೇನೂ ಅಲ್ಲ. ಜೊತೆಗೆ ಇದು ಅನಿರೀಕ್ಷಿತವೂ ಅಲ್ಲ. ಆದರೆ ನಾನು ತಮ್ಮ ಗಮನಕ್ಕೆ ಒಂದು ಘಟನೆಯನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಖರ್ಗೆಯವರು ಇಲ್ಲಿ ಕುಳಿತುಕೊಂಡಿದ್ದಾರೆ. ಅವರು ಸಾಕ್ಷಿಯಾಗಿದ್ದಾರೆ. ಸನ್ಮಾನ್ಯ ಉಪಾಧ್ಯಕ್ಷರೇ, ನಮ್ಮ ಊರಿನಲ್ಲಿ ಜಿಲ್ಲಾ ಪರಿಷತ್ತಿನ ಕಾರ್ಯದರ್ಶಿಗಳು ಇದ್ದಾರೆ. ಶ್ರೀಮತಿ ಅಮಿತಾಪ್ರಸಾದ್ ಅಂತ. ನನ್ನ ಸ್ನೇಹಿತರು ಅವರು ಎದ್ದು ಹೊರಟು ಹೋದರು. ಅವರು ಸಹ ಈ ಕೇಸ್‌ಗೆ ಸಾಕ್ಷಿಯಾಗಿದ್ದಾರೆ. ಸಾರ್ವಜನಿಕ ಸಭೆಗೆ ಹೋಗಿ ಕೈಮುಗಿದರೆ ಅವರು ಆಗ ಏನು ಮಾಡಿದ್ದರು ಅಂತ ನಾನು ಕೂತುಕೊಂಡು ತೋರಿಸಲೇ ? ಇಲ್ಲಾ ನಿಂತುಕೊಂಡರೆ ತೋರಿಸಲೇ ? ಅವರಿಗೆ ಕೈ ಮುಗಿದರೆ ಕಾಲುಮೇಲೆ ಕಾಲು ಹಾಕಿಕೊಂಡು ಕಾಲು ಅಲ್ಲಾಡಿಸಿಕೊಂಡು ಕಣ್ಣು ಹೊಡೆಯುತ್ತಾರೆ. You can ask Mr. R. Narayan. Who is he?

ಶ್ರೀ ಎಂ. ಮಲ್ಲಿಕಾರ್ಜುನ ಎಂ. ಖರ್ಗೆ:– ಕ್ಷಮಿಸಬೇಕು; ಅಂದು ನಾನು ಸಾಕ್ಷಿ ಇದ್ದೆ ಎಂದು ಹೇಳಿದರು. ಈ ರೀತಿ ಮಾಡಿದರು ಅಂತ ಅವರು ಹೇಳುತ್ತಿದ್ದಾರೆ. ಯಾವ ಒಬ್ಬ ಅಧಿಕಾರಿ ಇಲ್ಲಿ ಬಂದು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ ಅಂತ ತಮಗೂ ಗೊತ್ತಿದೆ, ಗೊತ್ತಿದ್ದೂ ತಾವು ಈ ರೀತಿ ಒಬ್ಬ ಹೆಣ್ಣು ಮಗಳ ಮೇಲೆ ಕಾಲು ಮೇಲೆ ಕಾಲು ಹಾಕಿಕೊಂಡು ಕಣ್ಣು ಹೊಡೆಯುತ್ತಾರೆ ಅಂದ್ರೆ ಏನು ಅರ್ಥ ? ಅವರು ಏನಾದರೂ ಮಾಡಿದ್ದರೆ ನೇರವಾಗಿ ನೀವು ಹೇಳಿಬಿಡಿ. ಇಂತಹ

ಚಾರ್ಜಸ್ ಇದೆ ಎಂದು, ತಾವು ಹಿರಿಯರು ಅನುಭವಿಗಳು ಇದ್ದೀರಿ ಅದೂ ಈ ಮನೆಯಲ್ಲಿ ಯಾರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ, ಅವರ ಮೇಲೆ ಈ ರೀತಿ ಹೇಳುವುದು ಸರಿಯಲ್ಲವೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ನಾನು ಒಂದು ಮಾತು ಹೇಳುತ್ತೇನೆ, ಯಾರನ್ನೂ ನೋಯಿಸಬೇಕೆನ್ನುವ ಆಸೆ ನನಗಿಲ್ಲ. ಆದರೆ ನನಗೆ ಆದಂತಹ ನೋವನ್ನು ಹೇಳಿಕೊಳ್ಳಬೇಕಲ್ಲ. ಏನಾಯಿತು ಎಂದು ನಾನು ಹೇಳಿದ್ದೇನೆ. ತಾವು ಕರೆದು ಕೇಳಿ; ಅಷ್ಟೇ ಅಲ್ಲ ಸನ್ಮಾನ್ಯ ಕೃಷಿ ಸಚಿವರು ಇಲ್ಲಿ ಕುಳಿತುಕೊಂಡಿದ್ದಾರೆ. ಒಂದು ಸಾರ್ವಜನಿಕ ಸಭೆಯಲ್ಲಿ ಒಬ್ಬ ಹರಿಜನ ಪ್ರತಿನಿಧಿ....

ಉಪಾಧ್ಯಕ್ಷರು:– ಮಾನ್ಯ ವೈ. ಕೆ. ರಾಮಯ್ಯನವರೇ, ತಾವು ತಮ್ಮ ವಿಷಯವನ್ನೇ ಪ್ರಸ್ತಾಪ ಮಾಡುತ್ತಿದ್ದೀರಿ. ತಾವು ಈ ಬಗ್ಗೆ ಬರೆದು ಕೊಡಿ. ಅದಕ್ಕೆ ಬೇರೆ ಅವಕಾಶ ಮಾಡಿಕೊಡೋಣ. ಆದರೆ ಈಗ ಜನರಲ್ ಅಡ್ಮಿನಿಸ್ಟ್ರೇಶನ್ ಬಗ್ಗೆ ಮಾತನಾಡಿ. ಇನ್ನು ಹೆಚ್ಚು ಜನ ಮಾನ್ಯ ಸದಸ್ಯರುಗಳು ಮಾತನಾಡುವವರಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:– ಮುಗಿಸಿಬಿಡಲೇ.

ಉಪಾಧ್ಯಕ್ಷರು:– ಬೇಗ ಮುಗಿಸಿ, ಇನ್ನೂ ಮಾತನಾಡುವವರಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:– ಸನ್ಮಾನ್ಯ ಅಧ್ಯಕ್ಷರೇ, ಅವತ್ತು ಸನ್ಮಾನ್ಯ ಸಚಿವರಾದ ಹುಚ್ಚಮಾಸ್ತಿಗೌಡರು ಇದ್ದರು. ಈ ಕಷ್ಟ ನಿಮಗೂ ಬರುತ್ತದೆ ನಮಗೂ ಬರುತ್ತದೆ ಒಂದೊಂದು ಸಾರಿ. ಹೌದು, ಈ ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀಮಾನ್ ವೀರಪ್ಪಮೊಯಿಲಿಯವರು ಎರಡು ಲಕ್ಷ ರೂಪಾಯಿ ಕೊಟ್ಟು ಶಾಸಕರನ್ನು ಕೊಂಡುಕೊಳ್ಳುತ್ತಿದ್ದಾರೆ ಅಂತ ಬರುತ್ತದೆ ಸ್ವಾಮಿ; ಅಪರಾಧ ಇಂತಾದ್ದು ಬರುತ್ತದೆ. ಆ ನೋವು ಆ ಕಷ್ಟ ಆ ಒಂದು ಕ್ಷೋಭೆ, ನಿಮಗೂ ಬರುತ್ತದೆ ನಮಗೂ ಬರುತ್ತದೆ ಅಂತ ಹೇಳುವುದಕ್ಕೆ ಇಷ್ಟಪಟ್ಟೆ; ಸ್ವಾಮಿ ಅವರು ಕುಳಿತುಕೊಂಡಿದ್ದರು. ಸಾರ್ವಜನಿಕ ಸಭೆಯಲ್ಲಿ ಒಬ್ಬ ಜನ ಪ್ರತಿನಿಧಿ ಬಂದು ನೀವು ಮಾಡುತ್ತಿರುವುದು ಸರಿಯಲ್ಲ ಅಂದರು ಅದಕ್ಕೆ 'Don't talk non–sense.' ಅಂತ ಹೇಳುತ್ತಾರೆ ಅವರು. ಅವರು ಇಲ್ಲಾ ಅಂತ ಹೇಳಲಿ.

ಅವರು ಹಿರಿಯರಾಗಿ ಒಂದು ಮಾತನ್ನು ಹೇಳಿದರು. ಜನ ಪ್ರತಿನಿಧಿಗಳು ಫುಟ್‌ಪಾತ್‌ನ ಮೇಲೆ, ಮೂರು ಕಾಸಿಗೆ, ಆರು ಕಾಸಿಗೆ ಸಿಕ್ಕುವ ಸೊಪ್ಪಿನ ಕಂತೆಗಳು ಅಲ್ಲ. I appreciate his stand. He has taken exception to that statement.

ಜನ ಪ್ರತಿನಿಧಿಗಳು ಫುಟ್‌ಪಾತ್‌ನ ಮೇಲೆ ಸಿಕ್ಕುವ ಸೊಪ್ಪಿನ ಕಂತೆಗಳು ಅಲ್ಲ ಎಂದು ಅವರು ಹೇಳಿದರು. ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಇಂಥ ಅಧಿಕಾರಿಗಳೂ ಇದ್ದಾರಲ್ಲ ಎಂದು; ಕೆಲವರು ಒಳ್ಳೆಯ ಅಧಿಕಾರಿಗಳೂ ಕೂಡ ಇದ್ದಾರೆ. ತಪ್ಪು ನಡವಳಿಕೆಯ ಅಧಿಕಾರಿಗಳನ್ನು ಪ್ರಶ್ನಿಸುವ ಅಧಿಕಾರವು ಜನ ಪ್ರತಿನಿಧಿಗಳಿಗೆ ಇಲ್ಲವೇ? ಇಂಥ ನಡವಳಿಕೆಗಳು ನಡೆದಾಗಲೂ ಕೂಡ ನಾವು ಇವರಿಗೆ ಸಲಾಮ್ ಹಾಕಿಕೊಂಡು ಹೋಗಬೇಕೇ? ಇಂಥ ನಡವಳಿಕೆಯನ್ನು ನಾನು ಪ್ರಶ್ನಿಸಿ ಮಾನ್ಯ ಖರ್ಗೆಯವರಿಗೆ ಫೋನ್ ಮಾಡಿ ಹೇಳಿದೆ. ನೋಡಿ ನಿಮ್ಮ ಅಧಿಕಾರಿಗಳು ಹೀಗೆ ನಡೆದುಕೊಳ್ಳುತ್ತಿದ್ದಾರೆ, ನೀವು ಅವರಿಗೆ ದಯಮಾಡಿ ಬುದ್ಧಿಯನ್ನು ಹೇಳಿ ಎಂದು ಹೇಳಿದೆ. ಡೆವಲಪ್‌ಮೆಂಟ್ ಕಮೀಶನರ್‌ರವರಿಗೆ ಹೇಳಿದೆ, ರೂರಲ್ ಡೆವಲಪ್‌ಮೆಂಟ್ ಸೆಕ್ರೆಟರಿಯವರಿಗೆ ಫೋನ್ ಮಾಡಿ ಕೇಳಿದೆ. The result is this case against me. Don't you know who is the SP?

ಈ ಅಮ್ಮನವರ ಗಂಡಂದಿರೇ ಆ ಎಸ್.ಪಿ.ಯಾಗಿದ್ದಾರೆ. ಯಾರ ವಿರುದ್ಧವಾಗಿ ನಾನು ಈ ಉದ್ಧಟತನ ಆಪಾದನೆಯನ್ನು ಮಾಡುತ್ತಿದ್ದೇನೋ, ಯಾರು ಜನ ಪ್ರತಿನಿಧಿಗಳನ್ನು ಮೂರು ಕಾಸಿಗಿಂತ ಕಡಿಮೆ ಮಟ್ಟದಲ್ಲಿ ನೋಡುತ್ತಿದ್ದಾರೋ, ಅಂಥ ನಡವಳಿಕೆಯನ್ನು ಯಾವ ಅಧಿಕಾರಿಗಳು ಪ್ರದರ್ಶಿಸುತ್ತಿದ್ದಾರೋ, ಆ ಅಧಿಕಾರಿಯ ಗಂಡಂದಿರಾದ ಶ್ರೀ ಪ್ರಸಾದ್‌ರವರೇ ಆ ಜಿಲ್ಲೆಯ ಪೊಲೀಸ್ ಮುಖ್ಯಾಧಿಕಾರಿಯಾಗಿದ್ದಾರೆ. ಅದಕ್ಕಾಗಿಯೇ ನಾನು ಎಸ್.ಪಿ. ಸಿಂಗ್‌ರವರಿಗೆ ಹೇಳಿದ್ದೆ, ಇನ್ನೊಂದು ಸಾರಿ ಏನಾದರೂ ನನಗೆ ಅವಮಾನ ಮಾಡಿದರೆ ನಾನೇ ಏನಾದರೂ ಮಾಡಬೇಕಾಗುತ್ತದೆ, After all, there may be a harassment case against me. ಅದೂ ಕೂಡ ಆಗಲಿಲ್ಲ. ನನಗೆ ಮೊದಲೇ ಗೊತ್ತಿತ್ತು, ನಾನು ಇದನ್ನು ಮೊದಲೇ ನಿರೀಕ್ಷೆ ಮಾಡಿದ್ದೆ. ಆದರೆ ಇಂಥವರು ಜನಪರ ಹೋರಾಟವನ್ನು, ಆ ಬಗ್ಗೆ ಇರುವ ನನ್ನ ನಿಲುವನ್ನು ಕಿತ್ತು ಹಾಕಲು ಸಾಧ್ಯವಿಲ್ಲ. ಜನರ ಪರವಾಗಿ ನಾನು ಎತ್ತುತ್ತಿರುವ ನಿಲುವನ್ನು ಇವರಿಂದ ಹಿಸುಕಲು ಸಾಧ್ಯವಾಗುವುದಿಲ್ಲ. ಇಂಥ ನೂರು ಕೇಸ್‌ಗಳನ್ನು ಸರಕಾರದಲ್ಲಿ ನನ್ನೆದುರು ರಿಜಿಸ್ಟರ್ ಮಾಡಿಸಿ. ಆದರೆ ಅಸರ್ಟೇನ್ ಮಾಡಿ ಈ ಅಧಿಕಾರಿಯಿಂದ. ಯಾವುದೇ ಒಬ್ಬ ಕಂಟ್ರಾಕ್ಟರ್‌ನಿಂದ, ಯಾವನೇ ಒಬ್ಬ ಅಧಿಕಾರಿಯಿಂದ, ಯಾವನೇ ಒಬ್ಬ ಪ್ರಜೆಯಿಂದ, ಯಾವುದೇ ಒಂದು ಕೆಲಸ ಮಾಡಿಸಿಕೊಡಲು ಒಂದು ರೂಪಾಯಿಯ ಭ್ರಷ್ಟತನವನ್ನು ನಾನು ಮಾಡಿದ್ದೇನೆ ಎನ್ನುವುದಾದರೆ, ಆದಕ್ಕೆ ನಾನು ಹೆದರಿಕೊಳ್ಳುತ್ತೇನೆ, ಅದಕ್ಕೆ ನಾನು ತಲೆಬಾಗುತ್ತೇನೆ. ಅದಕ್ಕೆ ನಾನು ನೇಣು ಹಾಕಿಕೊಳ್ಳುತ್ತೇನೆ. ಆದರೆ ಜನರ ಕೆಲಸಗಳ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸುವ ಅಧಿಕಾರವು ನಮಗಿಲ್ಲವೆನ್ನುವುದಾದರೆ, ಅಂಥ ಅಧಿಕಾರಿಗಳಿಗೆ ನಾವು ಶರಣಾಗಬೇಕೆಂದು ನೀವು ಹೇಳುವುದಾದರೆ, ಅದನ್ನು ಹೇಳಿ ಎಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಇದರ ಹಿನ್ನೆಲೆಯಲ್ಲಿ ಒಬ್ಬ ಹಿರಿಯ ಪತ್ರಿಕಾ ಕರ್ತರೊಬ್ಬರು ಎರಡು ಮಾತನ್ನು ಬರೆದಿದ್ದಾರೆ. "ತಾತ್ವಿಕವಾಗಿ ಓರ್ವ ಶಾಸಕನ ಮೇಲಿನ ಕ್ರಿಮಿನಲ್ ಕೇಸ್ ಗಂಡಾಂತರಕಾರಿಯಾಗುವ ಸಾಧ್ಯತೆಯಿದೆ" ಇದು 16–3–1993ರ ಸಂಯುಕ್ತ ಕರ್ನಾಟಕದಲ್ಲಿ ಬಂದ ಮಾತುಗಳು. ಅಷ್ಟೇ ಅಲ್ಲ, "ಆಡಳಿತ ಸರಕಾರದಲ್ಲಿನ ಪ್ರತೀಕಾರ ಮನೋಭಾವದ ಶಕ್ತಿಗಳಿಗೆ, ಆತ ಶರಣಾಗಬೇಕಾದೀತು." ಎಂದು ಕೂಡ ಬರೆದಿದ್ದಾರೆ. ಇಲ್ಲಿ ಒಂದು ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಈ ಒಂದು ಪರಿಸ್ಥಿತಿಯಲ್ಲಿ ಇದರಲ್ಲಿ ಯಾವ ರಾಜಕಾರಣಿಯ ಕೈವಾಡವಿದೆ ? ನಿಮ್ಮ ಹತ್ತಿರವೂ ಬಂದಿದ್ದಾರೆ, ಸನ್ಮಾನ್ಯ ಹುಚ್ಚಮಾಸ್ತಿಗೌಡರ ಹತ್ತಿರವೂ ಬಂದಿದ್ದಾರೆ, ಇಲ್ಲಿ ಯಾರ ಕೈವಾಡವೂ ಇಲ್ಲ. ಅದಕ್ಕಾಗಿಯೇ ನಾನು ಹೇಳುತ್ತಿರುವುದು; ಇದರಲ್ಲಿ ಯಾವುದೇ ರಾಜಕಾರಣಿಯ ಕೈವಾಡವು ಇಲ್ಲ. ಯಾಕೆಂದರೆ ಇದರಲ್ಲಿ ಯಾರಾದರೂ ರಾಜಕಾರಣ ಮಾಡುತ್ತಾರೆಂದು ತಿಳಿದುಕೊಳ್ಳಬಾರದು. ಇನ್ನೊಂದು ಮಾತು ಇದು "ಕೆಳ ಹಂತದಲ್ಲಿ ಪೊಲೀಸರ ಕಿರುಕುಳಗಳಿಗೆ ಗುರಿಯಾಗಬೇಕಾದೀತು", ಜನತಾ ಪ್ರತಿನಿಧಿಯಾಗಿ ಚುನಾಯಿತರಾದ ವ್ಯಕ್ತಿ ಸಂವಿಧಾನ ಬದ್ಧವಾಗಿ ಪಡೆದಿರುವ ಸ್ಥಾನಮಾನಗಳಿಗೂ ಚ್ಯುತಿಯುಂಟಾದೀತು. ಆದ್ದರಿಂದ ರಾಜಕೀಯ ರಂಗಕ್ಕೆ ಕ್ರಿಮಿನಲ್‌ಗಳನ್ನು ತಡೆಗಟ್ಟಬೇಕಾದ ಅಗತ್ಯತೆ, ಕಪಾಲಪೋಷಿತ ಸುಳ್ಳು ಸುದ್ದಿಗಳಿಗೆ ಜನತಾ ಪ್ರತಿನಿಧಿಗಳು ಬಲಿಯಾಗ ಕೂಡದು ಎಂಬುದು ಅಷ್ಟೇ ಮುಖ್ಯ. ಈ ಮಾತುಗಳನ್ನು 16ನೇ ತಾರೀಖಿನ ಸಂಯುಕ್ತ ಕರ್ನಾಟಕದಲ್ಲಿನ ನ್ಯೂಸ್ ಅನಾಲಿಸಸ್‌ನಲ್ಲಿ ಬರೆದಿದ್ದಾರೆ. ಇದಕ್ಕೆ ಕಾರಣ ಇಷ್ಟೇ ! ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡಿದಂಥ ನಮಗೆ ಪಾತ್ರಗಳ ಬದಲಾವಣೆಯು ಬಹಳ ಬೇಗ ಆಗುತ್ತದೆ. ಅದಕ್ಕಾಗಿ ನಾವು ಕಾಯಬೇಕಾಗಿಲ್ಲ. ಈ ಪಾತ್ರಗಳ ಸ್ಥಾನಗಳ ಬದಲಾವಣೆಯು ಆದಾಗ, ಬರುವಂಥ ಸಂಕಷ್ಟಗಳಿಗೆ ನಾವು ಜವಾಬ್ದಾರರಾಗಬೇಕಾಗುತ್ತದೆ. ಇಂಥ ಅಪವಾದಗಳಿಗೆ ನಾವು ಹೆದರಿ ಓಡಿ ಹೋಗಬೇಕೆಂದು ಅಲ್ಲ. ನಾನು ಬೇರೆ ಬೇರೆ ರೀತಿಯಲ್ಲಿ ಸಾರ್ವಜನಿಕ ಸೇವೆಯನ್ನು ಮಾಡುತ್ತಿದ್ದೇನೆ. ಹೈಸ್ಕೂಲ್‌ನ ರೆಕಾರ್ಡ್ಸ್ ಹೊತ್ತುಕೊಂಡು ಹೋದರು ಎಂದು ಈ ಸರಕಾರದಲ್ಲಿ

ಅವರನ್ನು ಅರೆಸ್ಟ್ ಮಾಡಿಸಿದರು. ಸೊಸೈಟಿಯಲ್ಲಿ ದುಡ್ಡು ತಿಂದಿದ್ದಾರೆ ಎಂದು ಅವರನ್ನು ಅರೆಸ್ಟ್ ಮಾಡಿಸಿದರು. ಹೀಗೆ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಇಂಥ ಅಪವಾದಗಳು ಬರುತ್ತವೆ. ಜನಗಳಿಗೆ ನೋವಾದಾಗ, ತೊಂದರೆಯಾದಾಗ, ಜನಗಳ ಬದುಕಿಗೆ ಕಷ್ಟ ತರುವಂಥ ನಿಮ್ಮ ನಡವಳಿಕೆ ಇದ್ದರೆ, ಯಾವುದೇ ಅಧಿಕಾರಿಯು ಏನೇ ಮಾಡಿದರೂ ಕೂಡ ಅದನ್ನು ಸಹಿಸಿಕೊಂಡಿರಲು ನಾನು ಸಿದ್ಧನಿಲ್ಲ. ಆದರೆ ಜನಪ್ರತಿನಿಧಿಯಾಗಿರುವಂಥವನು ಈ ಕೂಲಿ ತೆಗೆದುಕೊಳ್ಳುವವರ ಗುಲಾಮನಾಗಿರಲು ಕೂಡ ಸಿದ್ಧನಾಗಿಲ್ಲ. ಈ ಕೂಲಿ ತೆಗೆದುಕೊಳ್ಳುವ ಜನರು ನಮ್ಮನ್ನು ಗುಲಾಮರ ತರಹದಲ್ಲಿ ಭಾವಿಸುವುದಾದಲ್ಲಿ ಅದು ಸಾಧ್ಯವಿಲ್ಲ. 300 ಜನರು ಮಧ್ಯಾಹ್ನ 2 ಗಂಟೆಯವರೆಗೆ ಕುಣಿಗಲ್ ಬಸ್‌ಸ್ಟ್ಯಾಂಡ್‌ನಲ್ಲಿ ಅನ್ನ ನೀರು ಇಲ್ಲದೆ ಕಾಯುತ್ತ ಇದ್ದಾಗ, ಅದನ್ನು ನೋಡಿಕೊಂಡು ಜನಪ್ರತಿನಿಧಿಯಾಗಿ ನನ್ನ ಮನೆಯಲ್ಲಿ ಕುಳಿತುಕೊಳ್ಳಲು ನನ್ನಿಂದ ಸಾಧ್ಯವಿಲ್ಲ. ನೀವು ಕೇಸ್ ರಿಜಿಸ್ಟರ್ ಮಾಡುತ್ತೀರಿ ಎಂದು ಅದಕ್ಕೆ ಹೆದರಿಕೊಂಡು ಸುಮ್ಮನಿರಲು ಕೂಡ ನನಗೆ ಸಾಧ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಯವರೇ, ನಿಮ್ಮ ಆಡಳಿತದಲ್ಲಿ ಪಕ್ಷಪಾತವು ತುಂಬಿತುಳುಕುತ್ತಾ ಇದೆ. ನಿಮ್ಮ ಅಧಿಕಾರಿಗಳಿಗೆ ಹೇಳಿ ಬಿಡಿ, ನನಗೆ ಯಾರ ಹಂಗೂ ಇಲ್ಲ; ಇದನ್ನು ಸಾರಿ ಸಾರಿ ಹೇಳುತ್ತಿದ್ದೇನೆ. ಚುನಾವಣೆ ಬಂದಾಗ ನನ್ನ ಸ್ನೇಹಿತರು ಹಣ ಕೊಡುತ್ತಾರೆ. ಆರಿಸಿ ಕಳುಹಿಸುವುದಕ್ಕೆ ನನ್ನ ಜನರು ನನಗೆ ಮತವನ್ನು ಕೊಡುತ್ತಾರೆ. ನಾನು ಯಾರ ಹಂಗಿನಲ್ಲಿ ಕೂಡ ಬದುಕುತ್ತಾ ಇಲ್ಲ. ಇಂಥ ನೂರಾರು ಕೇಸ್‌ಗಳನ್ನು ಜನಪ್ರತಿನಿಧಿಗಳ ಮೇಲೆ ಹಾಕಿದರೂ ಕೂಡ ಜನಪರ ಹೋರಾಟವನ್ನು ನನ್ನಿಂದ ಮುಚ್ಚಲು ಆಗುವುದಿಲ್ಲ. ಜನಪರ ಹೋರಾಟದ ರಕ್ತವು ನನ್ನ ಧಮನಿಗಳಲ್ಲಿ ಎಲ್ಲಿಯವರೆಗೆ ಹರಿಯುತ್ತಾ ಇರುತ್ತದೋ ಅಲ್ಲಿಯವರೆಗೆ ಅದನ್ನು ಡ್ರೈಔಟ್ ಮಾಡಲು ನಿಮ್ಮ ಅಧಿಕಾರಿಗಳಿಂದ ಸಾಧ್ಯವಿಲ್ಲ. ಆದ್ದರಿಂದ ನಾನು ಆ ಕೇಸ್ ಬಗ್ಗೆ ಮಾತನಾಡುವುದಿಲ್ಲ; ಅದರ ಬಗ್ಗೆ ಒತ್ತಡ ತರುವುದಕ್ಕೂ ಹೋಗುವುದಿಲ್ಲ. ಅದು ನ್ಯಾಯಾಲಯದಲ್ಲಿದೆ; ಅಲ್ಲಿ ತೀರ್ಪಾಗುತ್ತದೆ. ನನ್ನ ಕೋರಿಕೆಯನ್ನು ಮತ್ತೊಮ್ಮೆ ಹೇಳುತ್ತೇನೆ, ಪಾತ್ರಗಳು ಬದಲಾದಾಗ, ಸ್ಥಾನಮಾನಗಳು ಬದಲಾದಾಗ, ಪರಿಸ್ಥಿತಿಯ ಮೇಲೆ ತಾವುಗಳು ಗಮನವನ್ನು ಇಡಬೇಕು, ನಿಮ್ಮ ಆಡಳಿತದಲ್ಲಿ ಮತ್ತು ಆರಕ್ಷಕ ವ್ಯವಸ್ಥೆಯಲ್ಲಿ ಇರುವಂಥ ಕೆಟ್ಟ ವ್ಯವಸ್ಥೆಯನ್ನು ಕಿತ್ತು ಹಾಕಬೇಕೆಂದು ಹೇಳುತ್ತೇನೆ. ನಾನು ಈ ವಿಷಯದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಮರೆತಿದ್ದೇನೆ. ನಿಮ್ಮ ಆಡಳಿತ ವ್ಯವಸ್ಥೆಯ ಪಕ್ಷಪಾತವು ಎಲ್ಲಿಯವರೆಗೆ ಹೋಗುತ್ತಿದೆ ಎಂಬುದು ಗೊತ್ತೇ ? ಯಾವ ಆರಕ್ಷಕ ಅಧಿಕಾರಿ ಪ್ರಸಾದ್‌ರವರು ನನ್ನ ಮೇಲೆ ದೊಡ್ಡ ಅಪವಾದವನ್ನು ಹೊರಿಸಿದ್ದಾರೋ, ಆ ಪುಣ್ಯಾತ್ಮರಿಗೆ ಇಷ್ಟು ಬ್ಯಾಲೆಟ್ ಪೇಪರ್‌ಗಳನ್ನು ಕಂತೆ ಕಟ್ಟಿಕೊಂಡು ಹೋಗಿ ಅವರ ಪಾದಕ್ಕೆ ಅರ್ಪಿಸುತ್ತೇನೆ. ಅದು ನೀಲತ್ತಳ್ಳಿ ಬೂಥ್. There was an attempt to capture the booth. ಅಲ್ಲಿ ಇದ್ದಂಥ ಅನ್‌ಯೂಸ್ಡ್ ಬ್ಯಾಲೆಟ್ ಪೇಪರ್‌ಗಳನ್ನೆಲ್ಲಾ ಸಂಪೂರ್ಣವಾಗಿ ಚಿಂದಿ ಚಿಂದಿ ಮಾಡಿ ಈಚೆಗೆ ಬಿಸಾಕಿದರು. ಇದೆಲ್ಲಾ ಏನು ? ನಮಗೆ ಇದನ್ನು ನೋಡಿ ತುಂಬಾ ನೋವು ಉಂಟಾಗಿದೆ. ಬೇಕಾದರೆ ರಾಜಕೀಯದಿಂದ ನಿವೃತ್ತನಾಗುತ್ತೇನೆ. ಹೀಗೆ ಬ್ಯಾಲೆಟ್ ಪೇಪರ್‌ಗಳನ್ನು ಚಿಂದಿ ಚಿಂದಿ ಮಾಡಿ ಬಿಸಾಕಿದ್ದನ್ನು ಆವೊತ್ತಿನ ಜಿಲ್ಲಾಧಿಕಾರಿ ಮತ್ತು ಎಸ್.ಪಿ.ಯವರಿಗೆ ಅವರ ಸ್ಥಳದಲ್ಲಿಯೇ ಕೊಟ್ಟಾಗ ಈ ಚುನಾವಣಾ ಅಧಿಕಾರಿಯ ಹೇಳಿಕೆಯನ್ನು ಕೂಡ ತೆಗೆದುಕೊಂಡಿದ್ದಾರೆ. ನೀವು ಅವರ ಮೇಲೆ ಕೇಸ್ ಹಾಕಿದ್ದೀರಾ ? (ಈ ಹಂತದಲ್ಲಿ ಮಾನ್ಯ ಸದಸ್ಯರು ಮಾನ್ಯ ಅಧ್ಯಕ್ಷರಿಗೆ ಬ್ಯಾಲೆಟ್ ಪೇಪರ್‌ಗಳನ್ನು ಅವಗಾಹನೆಗೆ ಸಲ್ಲಿಸಿದರು) ನಾನು ಅದಕ್ಕಾಗಿಯೇ ಹೇಳುವುದು, ಪ್ರಾಮಾಣಿಕವಾದಂಥ ಪ್ರಯತ್ನ ನಿಮ್ಮ ರಾಜಕೀಯ ಇಚ್ಛಾಶಕ್ತಿ, ಆ ಯಂತ್ರ ಸರಿಯಾಗಿ ಕೆಲಸ ಮಾಡದಿದ್ದರೆ ಆಗುವುದಿಲ್ಲ ಎಂದು ಹೇಳಬಯಸುತ್ತೇನೆ.

ಡಾ: ವೈ. ನಾಗಪ್ಪ:- ಮಾನ್ಯ ಅಧ್ಯಕ್ಷರೇ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ ಮಾನ್ಯ ರಾಮಯ್ಯನವರು ಹಿರಿಯ ಸದಸ್ಯರು, ಮಂತ್ರಿಗಳಾಗಿದ್ದವರು. On the floor of the House,

you have accepted that people have given money to you. Is it not a clear case of favouritism and corruption when openly he says on the floor of the House. It is against the election Act. You have openly accepted.

ಶ್ರೀ ವೈ.ಕೆ. ರಾಮಯ್ಯ:– ಅದಕ್ಕೊಂದು ಕೇಸ್ ಮಾಡಿಕೊಳ್ಳಲಿ ಬಿಡಿ. ಈಗಲೂ ನಾನು ಪುನರುಚ್ಚಾರ ಮಾಡುತ್ತೇನೆ. ಚುನಾವಣಾ ಸಂದರ್ಭದಲ್ಲಿ ನನ್ನ ಸ್ನೇಹಿತರು ನನಗೆ ಕಾಸು ಕೊಡುತ್ತಾರೆ ಅಂತ ಹೇಳುತ್ತೇನೆ ಅಧ್ಯಕ್ಷರೇ. ಮುಖ್ಯಮಂತ್ರಿಗಳಿಗೂ ಅಂತಹ ಸಂದರ್ಭ ಹಿಂದೆ ಬಂದಿದೆ. ಮುಂದೆ ಬರುತ್ತದೆ. ಇಲ್ಲಿರುವಂತಹ ಬಹಳ ಜನ ಸದಸ್ಯರಿಗೆ ಇದೆಲ್ಲಾ ಗೊತ್ತಾಗಿದೆ. ಮೊನ್ನೆ ನಾನು ಅವರ ಕೊಠಡಿಗೆ ಹೋಗಿದ್ದೆ. ಅಲ್ಲಿ ಚವಾಣ್ ಅಂತ ಒಬ್ಬ ಶಾಸಕರು ಇದ್ದರು. ಚಿಕ್ಕವಯಸ್ಸಿನ ಒಬ್ಬ ಶಾಸಕರು ಪಡುತ್ತಿದ್ದಂತಹ ಯಾತನೆಯನ್ನು ನೀವು ನೋಡಬೇಕಾಗಿತ್ತು; ಆಗ ನಿಮಗೆ ಜನಪ್ರತಿನಿಧಿಗಳ ಕಷ್ಟ ಏನು ಎನ್ನುವುದು ಗೊತ್ತಾಗುತ್ತಿತ್ತು.

ಒಬ್ಬ ಶಾಸಕನಾದವನನ್ನು ನಡೆಸಿಕೊಳ್ಳುವಂತಹ ರೀತಿಯ ವರ್ಣನೆಯನ್ನು ಕೇಳಿದಾಗ ನಮಗೆ ಜನಪ್ರತಿನಿಧಿಗಳು ಅಂತ ಹೇಳಿಕೊಳ್ಳುವುದಕ್ಕೆ ನಾಚಿಕೆಯಾಗುತ್ತದೆ. ಅದನ್ನು ಪ್ರಶ್ನೆ ಮಾಡಲಿಕ್ಕೆ ಹೋದರೆ ಇವರು ಕೇಸನ್ನು ಹಾಕುತ್ತಾರೆ. ಮಾನ್ಯ ಮುಖ್ಯಮಂತ್ರಿಗಳೇ, ನಿಮ್ಮ ಎಸ್.ಪಿ. ಯವರ ಹತ್ತಿರದಿಂದ ರಿಪೋರ್ಟನ್ನು ತೆಗೆದುಕೊಳ್ಳಿ. Has he filed the case? Has he arrested? Have they produced before the court?

ಬಸ್ಸು ಏತಕ್ಕೆ ಬಿಡುವುದಿಲ್ಲ ಅಂತ ಕೇಳುವುದಕ್ಕೆ ಹೋದರೆ ನನ್ನ ಮೇಲೆ ಕೇಸ್ ಹಾಕಿ ನಿಮ್ಮ ಎಸ್.ಪಿ.ಯವರು ಕೋರ್ಟಿನ ಮುಂದುಗಡೆ ಕಳುಹಿಸುತ್ತಾರೆ. ಇಂತಹ ಗುರುತರವಾದ ಆಪಾದನೆಯನ್ನು ಒಪ್ಪಿಸಿ ಅಪರಾಧವನ್ನು ಅವರ ಕಣ್ಣಿನ ಎದುರಿಗೆ ನಡೆದಿರುವುದನ್ನು ಅವರ ಗಮನಕ್ಕೆ ತಂದರೆ ಇವತ್ತಿನವರೆಗೂ ಕೇಸ್ ಹಾಕಿಲ್ಲ. ಏಕೆ ಸ್ವಾಮಿ ? ಅದಕ್ಕೆ ನಿಮ್ಮ ಕಾಂಗ್ರೆಸ್‌ನವರು ಪ್ರಯತ್ನ ಪಡುತ್ತಿದ್ದಾರೆ ಅಂತಾನಾ ? ಅಥವಾ ಯಾರಿಗೋ ಮಹಾನಾಯಕನಿಗೆ ಬೇಕಾದಂಥ ವ್ಯಕ್ತಿ ಅಂತಾನಾ ? ಆ ರೀತಿ ಪಕ್ಷದ ಮೇಲೆ ಆಪಾದನೆಯನ್ನು ಮಾಡುವುದು ಬೇಡ. ನಾನು ಮಾನ್ಯ ಹುಚ್ಚಮಾಸ್ತಿಗೌಡರ ಮೇಲೆ ಆಪಾದನೆ ಮಾಡಬೇಕಾಗಿತ್ತು. ಹಾಗೆ ಮಾಡುತ್ತಿಲ್ಲ ಏಕೆಂದರೆ ದಿನ ಬೆಳಗಾದರೆ ನಾವು ಒಂದೇ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇವೆ. ಒಂದೇ ತಾಲ್ಲೂಕನ್ನು ಹಂಚಿಕೊಂಡು ಎರಡು ಕ್ಷೇತ್ರಗಳನ್ನಾಗಿ ಮಾಡಿಕೊಂಡಿದ್ದೇವೆ. ಆದರೆ ನಾನು ಏತಕ್ಕೆ ಮಾಡುತ್ತಿಲ್ಲ. ನನ್ನ ಇಡೀ ಉದ್ದೇಶ ಇಷ್ಟೆ; ನ್ಯಾಯವನ್ನು ವಿತರಣೆ ಮಾಡುವಾಗ ಆಡಳಿತವನ್ನು ನಡೆಸುವಂತಹ ಸಂದರ್ಭದಲ್ಲಿ ಪಕ್ಷಪಾತವನ್ನು ಮಾಡಬೇಡಿ, ಅನ್ಯಾಯವನ್ನು ಮಾಡಬೇಡಿ, ನೀವು ಅನ್ಯಾಯವನ್ನು ಮಾಡಿರುವುದನ್ನು ಸರಿ ಮಾಡಲಿಕ್ಕೆ ನಾನು ಹಸ್ತಕ್ಷೇಪ ಮಾಡುವುದಿಲ್ಲ ಅಂತ ಅಂದರೆ ನಾನು ನಂಬುವುದಿಲ್ಲ. ಅದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ದಯಮಾಡಿ ಇದನ್ನಾದರೂ ಗಂಭೀರವಾಗಿ ತೆಗೆದುಕೊಳ್ಳುತ್ತೀರಾ ? ಅವರು ಜನರ ಮಧ್ಯೆದಿಂದಲೇ ಬಂದವರು ಹಾಗೂ ಹೋರಾಟದ ಬದುಕಿನಿಂದಲೇ ಈ ಸ್ಥಾನಕ್ಕೆ ಬಂದವರು. ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ಶಾಸಕರ ಮೇಲೆ ಹಾಕಿರುವಂತಹ ಅನೇಕ ಕೇಸುಗಳು ನಿಜಕ್ಕೆ ದೂರವಾದುದು ಇರಬಹುದು ಎನ್ನುವಂತಹ ಭಾವನೆಯನ್ನು ವ್ಯಕ್ತಪಡಿಸಿದರು. ಮಾನ್ಯ ಅಧ್ಯಕ್ಷರೆ, ನೀವು ಸಹ ಜನಪ್ರತಿನಿಧಿಗಳೇ, ನಿಮಗೂ ನಿಮ್ಮ ಜೀವನದಲ್ಲಿ ಇಂಥಾದ್ದು ಒಂದೆರಡು ಸಾರಿ ಬಂದಿರುತ್ತವೆ. ನಮ್ಮಷ್ಟು ಬರದೇ ಇರಬಹುದು, ಅಥವಾ ಮುಂದಿನಸಾರಿಗೆ ಪಾರ್ಟಿ ಏನಾದರೂ ಬದಲಾವಣೆಯಾಗಿ ನಾವು ಆ ಕಡೆಗೆ ಬಂದರೆ ನೀವು ಈ ಕಡೆಗೆ ಏನಾದರೂ ಬಂದರೆ ಇದಕ್ಕಿಂತ ಹೆಚ್ಚಿಗೆ ಅನುಭವಿಸಬೇಕಾಗುತ್ತದೆ. ಅದಕ್ಕೆ ಸ್ವಲ್ಪ ದಯಮಾಡಿ, please bear with me.

31 ಜನ ಶಾಸಕರ ಮೇಲೆ ಮೊಕದ್ದಮೆಗಳು ಇದ್ದಾವೆ ಎಂದು ಈ ಸದನಕ್ಕೆ ಮುಖ್ಯಮಂತ್ರಿಗಳು ಮಾಹಿತಿಯನ್ನು ಕೊಟ್ಟಿದ್ದಾರೆ. ಈ 31 ಮೊಕದ್ದಮೆಗಳಲ್ಲಿ 18 ಮೊಕದ್ದಮೆಗಳು ಸೆಕ್ಷನ್ 506ರ ಕೆಳಗಡೆ ಇವೆ. ಒಂದು – ಎರಡು – ಮೂರು – ನಾಲ್ಕು – ಐದು – ಆರು – ಏಳು – ಎಂಟು – ಒಂಭತ್ತು ಹತ್ತು – ಹನ್ನೊಂದು, ಹನ್ನೆರಡು – ಹದಿಮೂರು – ಹದಿನಾಲ್ಕು – ಹದಿನೈದು ಹದಿನಾರು – ಹದಿನೇಳು –. ಹದಿನೆಂಟು.

ಉಪಾಧ್ಯಕ್ಷರು:– ಅದರಲ್ಲಿ ಎಷ್ಟು ಡಿಸ್‌ಪೋಸ್ ಆಗಿದೆ ಅಂತ ನೋಡಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಆ ಪಟ್ಟಿಯನ್ನು ಸ್ವಲ್ಪ ಕೊಡಿ. ಈ ಸರ್ಕಾರದ ಪಕ್ಷಪಾತದ ಬಗ್ಗೆ ಮಾತನಾಡುತ್ತಿದ್ದಾರೆ. ಹಾಗೆ ಮಾತನಾಡುತ್ತಾ ನಡುವೆ, ಏಕೆ ಕೇಸ್ ಹಾಕಿಲ್ಲ? ಅವರು ಕಾಂಗ್ರೆಸ್‌ನವರೇ ಅಂತ ಪ್ರಶ್ನೆಯನ್ನು ಮಾಡಿದರು. ನನ್ನ ಮೇಲೆ ಕೇಸ್ ಇಲ್ಲ. ಇನ್ನೂ ಅವರು ಹಾಕಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಪೊಲೀಸಿನವರ ಜೊತೆಯಲ್ಲಿ ವ್ಯಾನ್‌ನಲ್ಲಿ ಹೋಗುವಾಗ ನೋಡುತ್ತೇವೆ; ಅವರ ಮೇಲೆ ಒಂದೂ ಇಲ್ಲವೇ ಇಲ್ಲ. ಗೌರ್ನಮೆಂಟ್‌ನವರು ವಿತ್‌ಡ್ರಾ ಮಾಡಕೊಂಡರೋ ಏನೋ ಗೊತ್ತಾಗಲಿಲ್ಲ.

ಶ್ರೀ ಸಿ. ಬೈರೇಗೌಡ:– ನನ್ನ ಹೆಸರು ಇಲ್ಲ ಅಂತ ಬಹಳ ವ್ಯಥೆಯನ್ನು ಪಡುತ್ತಿದ್ದಾರೆ. ಈಗಲೂ ಕೂಡ ಇವರ ವ್ಯಥೆಯನ್ನು ನೋಡಿ ನನಗೆ ಇಲ್ಲಿ ಕುಳಿತುಕೊಳ್ಳುವುದಕ್ಕೆ ಆಗುತ್ತಿಲ್ಲ. ಅಷ್ಟು ವ್ಯಥೆಯನ್ನು ಪಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ಈ ಪರಿಸ್ಥಿತಿ ಏನು ಹೀಗಾಗಿದೆ ಅಂತ ನನಗೆ ಸ್ವಲ್ಪ ಆಶ್ಚರ್ಯವಾಯಿತು. ಪೊಲೀಸಿನವರಿಗೆ ಮೊಕದ್ದಮೆಗಳನ್ನು ಹಾಕುವುದು ರೂಢಿಯಾಗಿದೆ. ಯಾವುದೇ ಚಳುವಳಿ ಯಾವುದೇ ಸಂದರ್ಭವಾದರೂ 8 ಕಲಂಗಳನ್ನು ಇಟ್ಟುಕೊಂಡಿದ್ದಾರೆ. ಒಂದು ಸಾರಿ ನನ್ನ ಮೇಲೆ ಸೆಕ್ಷನ್ 107 ಅನ್ನು ಹಾಕಿದ್ದರು. ಇದರಲ್ಲಿ ಏನು ಅವರಿಗೆ ವ್ಯತ್ಯಾಸ ಇಲ್ಲ. ಖೈದಿಗಳಿಗೆ, ದರೋಡೆಕೋರರಿಗೆ, ಶಾಸಕರುಗಳಿಗೆ ಅವರಿಗೇನು ಬೇರೆ ಬೇರೆ ಅಂತ ಏನಿಲ್ಲ. ಒಂದೇ ತರಹ ಕೇಸ್ ಅನ್ನು ಹಾಕತಕ್ಕದ್ದು ಪೊಲೀಸಿನವರ ನೀತಿ. ನಾನು ಬೇಡಿಕೆಗಳ ಬಗ್ಗೆ ಮಾತನಾಡುವಾಗ ಬರೀ ಪೊಲೀಸ್ ನೀತಿ ಏನಿದೆ ಅದರ ಬಗ್ಗೆ ನಾನು ಮಾತನಾಡಿ, ತಮ್ಮ ಗಮನಕ್ಕೂ ತರುತ್ತೇನೆ, ಸಭೆಯ ಗಮನಕ್ಕೂ ತರುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತರುತ್ತೇನೆ. ನಾಳೆ ಒಂದು ಚಳುವಳಿಯನ್ನು ಮಾಡಿದರೆ 1–2–3 ಅಂತ ಇಟ್ಟುಕೊಳ್ಳುತ್ತಾರೆ.

ಉಪಾಧ್ಯಕ್ಷರು:– ಎರಡು ಗಂಟೆಗೆ ಸಭೆಯನ್ನು ಮುಂದೂಡಬೇಕಾಗಿದೆ. ಅವರು ಮಾತನಾಡಿದ ಮೇಲೆ ನೀವು ಮಾತನಾಡಿ. ನೀವು ಬೇಡಿಕೆಯ ಬಗ್ಗೆ ಚರ್ಚೆ ಮಾಡುವಾಗ ಇದನ್ನೆಲ್ಲಾ ಹೇಳಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಈ ಸಂದರ್ಭವನ್ನು ನಾನು ಏತಕ್ಕೆ ಉಪಯೋಗಿಸಿ ಕೊಳ್ಳುತ್ತಿದ್ದೇನೆಂದರೆ ಮಾನ್ಯ ರಾಮಯ್ಯನವರು ಹೇಗೆ ಈ ಮೊಕದ್ದಮೆಗಳಲ್ಲಿಯೂ ರಾಜಕಾರಣ ಸೇರಿಕೊಂಡಿದೆ ಅಂತ ಹೇಳಿದರು. ಇಲ್ಲಿ ತಾವು ಉತ್ತರ ಕೊಟ್ಟಿರುವುದರಲ್ಲಿ 23 ಐಟಮ್ಸ್ ಒಂದು ಇದೆ. ಮಾನ್ಯ ಬಾಬಾಗೌಡ ಪಾಟೀಲರ ಬಗ್ಗೆ ಈ ಸದನದ ಕಡತದಲ್ಲಿದೆ. ಎರಡು ಸಾರಿ ಮಾನ್ಯ ಮುಖ್ಯಮಂತ್ರಿಗಳು ಅದನ್ನು ವಾಪಸ್ಸು ತೆಗೆದುಕೊಂಡಿದ್ದೇವೆಂದು ಹೇಳಿರುವುದು ಈ ಸದನದ ಕಡತದಲ್ಲಿದೆ. ಮತ್ತು ನಮಗೆ ಕೊಟ್ಟಿರುವ 1991–92ರ ಪೊಲೀಸ್ ಇಲಾಖೆಯ ವರದಿಯಲ್ಲಿಯೂ ನಮೂದಾಗಿದೆ; ರೈತ ಚಳುವಳಿ ನಡೆಯಿತು; ಆಗ ಮಾನ್ಯ ಬಾಬಾಗೌಡ ಪಾಟೀಲರ ಮೇಲೆ ಮಾಡಿದಂತಹ ಸುಳ್ಳು ಕೊಲೆ ಆಪಾದನೆ ಮತ್ತೆ 17 ಸಾವಿರ ಜನ ರೈತರ ಮೇಲೆ ಮೊಕದ್ದಮೆಯನ್ನು ವಾಪಸ್ಸು ತೆಗೆದುಕೊಳ್ಳುವಂತಹ ಒಂದು ಷರತ್ತಿನ ಮೇಲೆ ಚಳುವಳಿಯನ್ನು ವಾಪಸ್ಸು

ತೆಗೆದುಕೊಳ್ಳಲಾಯಿತು ಅಂತ ಪೊಲೀಸ್ ಇಲಾಖೆಯ ವರದಿಯಲ್ಲಿದೆ; ಅದಾದ ಮೇಲೆ ಎರಡು ಸಾರಿ ಮುಖ್ಯಮಂತ್ರಿಗಳು ವಾಪಸ್ಸು ತೆಗೆದುಕೊಂಡಿದ್ದೇವೆ ಎಂದು ಈ ಸದನದಲ್ಲಿ ಹೇಳಿದ್ದಾರೆ. ಆದರೆ ಇನ್ನೂ ಕೇಸ್ ನಡೆಯುತ್ತಿದೆ. ಇದನ್ನು ಯಾವ ನಮೂನೆಯ ರಾಜಕಾರಣ ಅಂತ ಕರೆಯೋಣ ? ನೀವೇನು ವಾಪಸ್ಸು ತೆಗೆದುಕೊಳ್ಳಬೇಡಿ; ನಡೆಸಿ ನಾವೇನು ಅದಕ್ಕೆ ಹೆದರುವವರಲ್ಲ. ಆದರೆ ನೀವು ಸರ್ಕಾರವನ್ನು ಯಾವ ರೀತಿ ನಡೆಸುತ್ತಿದ್ದೀರಿ ಅಂತ ಹೇಳುವುದಕ್ಕೋಸ್ಕರ ಎದ್ದೆ; ರಾಮಯ್ಯನವರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನನ್ನ ಹೆಸರು ಅಲ್ಲಿ ಇದೆಯೇ ?

ಉಪಾಧ್ಯಕ್ಷರು:– ನಿಮ್ಮದು ಹೆಸರು ಇದೆ. ಮಾನ್ಯ ವೈ.ಕೆ. ರಾಮಯ್ಯನವರಾದ ಮೇಲೆ ನಿಮ್ಮನ್ನೆ ಕರೆಯುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಮಾತನಾಡುವುದಿಲ್ಲ. ಮಾನ್ಯ ಈಶ್ವರಪ್ಪನವರು ಮಾತನಾಡುತ್ತಾರೆ. ನಾನು ಮುಖ್ಯ ಮಂತ್ರಿಗಳ ಗಮನಕ್ಕೆ ಏನು ತರುತ್ತಿದ್ದೇನೆ ಅಂದರೆ ತಾವು ಕೊಟ್ಟಿರುವಂತಹ ಪಟ್ಟಿಯಲ್ಲಿ ಯಡಿಯೂರಪ್ಪನ ಹೆಸರು ಇದೆ. ಜನವರಿ 22ನೇ ತಾರೀಖು ಧಾರವಾಡದಲ್ಲಿ ಸಾರ್ವಜನಿಕ ಸಭೆಯನ್ನು ಮಾಡುವುದಕ್ಕೆ ಹೋಗಿದ್ದಕ್ಕೆ ತಡೆದು ನನ್ನ ಮೇಲೆ ಕೇಸ್ ಹಾಕಿದ್ದೀರಿ; ಕೇಸನ್ನು ಹಾಕಿ ಬೆಳಗಾಂ ಜೈಲಿಗೆ ಕರೆದುಕೊಂಡು ಹೋದಿರಿ, ಮ್ಯಾಜಿಸ್ಟ್ರೇಟರು ನೀವು ಜಾಮೀನು ಕೊಡಬೇಕೆಂದು ಹೇಳಿದರು; ಅದಕ್ಕೆ ನಾನು ಸಾಧ್ಯವಿಲ್ಲ, ನಾನೇನು ಅಪರಾಧವನ್ನು ಮಾಡಿಲ್ಲ, ಅಂತ ಹೇಳಿದೆ. ಆನಂತರ ಬೇಷರತ್ತಾಗಿ ಕೇಸನ್ನು ತಾವೇ ವಾಪಸ್ಸು ತೆಗೆದುಕೊಂಡಿರಿ; ಆದರೆ ಇವತ್ತು ಅಲ್ಲಿ ಯಡಿಯೂರಪ್ಪನ ಮೇಲೆ ಕೇಸ್ ಹಾಕಿದೆ ಎಂದು ಪತ್ರಿಕೆಯಲ್ಲಿ ಬಂದಿದೆ.

ಉಪಾಧ್ಯಕ್ಷರು:– ನೀವು ಮಾತನಾಡುವಾಗ ಇದನ್ನೆಲ್ಲಾ ಮಾತನಾಡಿ. ಈಗ ಮಾನ್ಯ ವೈ.ಕೆ. ರಾಮಯ್ಯನವರು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿಮ್ಮ ಬಗ್ಗೆ ಅಲ್ಲ ಸ್ವಾಮಿ, ಕುಳಿತುಕೊಳ್ಳಿ ಅಂತ ಅಂದರೆ ಕುಳಿತುಕೊಳ್ಳುತ್ತೇನೆ. ಇಡೀ ರಾಜ್ಯದಲ್ಲಿ ಸಾವಿರಾರು ಪತ್ರಿಕೆಗಳಲ್ಲಿ ಬಂತು.

(ಗೊಂದಲ)

ಉಪಾಧ್ಯಕ್ಷರು:– ನೀವು ಮಾತನಾಡುವಾಗ ಇದನ್ನೆಲ್ಲಾ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸರ್ಕಾರ ಕೇಸನ್ನು ಬೇಷರತ್ತಾಗಿ ವಾಪಸ್ಸು ತೆಗೆದುಕೊಂಡ ಮೇಲೆ ಒಂದು ನಮೂನೆಯಾಗಿ ಇವತ್ತು ರಸ್ತೆಯಲ್ಲಿ ಓಡಾಡದೇ ಇರುವಂಥ ಸ್ಥಿತಿ ನನಗೆ ಬಂದಿದೆ. ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ನಾವು ಏತಕ್ಕೆ ಮಾತನಾಡೋಣ, ಇಲ್ಲಿ ಮಾತನಾಡಿದರೆ ಉಪಯೋಗವಾಗುವುದಿಲ್ಲ ಎನ್ನುವಂಥ ತೀರ್ಮಾನಕ್ಕೆ ಬಂದಿದ್ದೇವೆ.

ಶ್ರೀ ವೈ.ಕೆ. ರಾಮಯ್ಯ:– ನನಗೂ ಮಾತನಾಡಬೇಕೆನ್ನುವ ಚಟ ಇಲ್ಲ, 18 ವರ್ಷದಿಂದ ಹೊಟ್ಟೆಪಾಡಿಗಾಗಿ ಮಾತನಾಡಿಕೊಂಡೆ ಬದುಕಿದವನು. ಅಥವಾ ಯಾರನ್ನಾದರೂ ನೋಯಿಸಬೇಕೆನ್ನುವ ಚಟ ನನಗೆ ಇಲ್ಲ. ಆದರೆ ನನ್ನ ಎಲ್ಲಾ ಸ್ನೇಹಿತರ ಪರಿಸ್ಥಿತಿ ಇದು ಇರಬಹುದೇನೋ ಗೊತ್ತಿಲ್ಲ. ಎಲ್ಲರಿಗೂ ಒಂದೊಂದು ಸಂದರ್ಭಗಳು ಬರಬಹುದು ಅಂತ ಹೇಳಿದ್ದರಿಂದ ನಾನು ಹೇಳುತ್ತಿದ್ದೇನೆ. ನಾನು ಈ ವಿಷಯವನ್ನು ಏಕೆ ಮಾನ್ಯ ಮುಖ್ಯಮಂತ್ರಿಗಳ

ಗಮುಕ್ಕೆ ತರಲಿಕ್ಕೆ ಇಷ್ಟಪಟ್ಟೆ ಅಂದರೆ ನನ್ನ ವಾದಕ್ಕೆ ಪುಷ್ಟಿಯನ್ನು ಪಡೆಯುವಂತಹ ಉದ್ದೇಶದಿಂದ. ಯಾವ ಪುಷ್ಟಿಯನ್ನು ಪಡೆಯುವಂತಹ ಉದ್ದೇಶ ಅಂದರೆ ಶಾಸಕರ ಮೇಲೆ ಜನ ಪ್ರತಿನಿಧಿಗಳ ಮೇಲೆ ಹಾಕಿರುವಂತಹ ಅರ್ಧಕ್ಕಿಂತ ಹೆಚ್ಚಿನ ಕೇಸುಗಳು ಯಾವುವು ಅಂದರೆ, ಅಧಿಕಾರಿಗಳನ್ನು ಪ್ರಶ್ನೆ ಮಾಡಿದೆವು ಎಂದು; ಈಶ್ವರಪ್ಪನವರು ಮೆರವಣಿಗೆಯನ್ನು ತೆಗೆದುಕೊಂಡು ಹೋದರು ಎಂದು; ಏತಕ್ಕೆ ತೆಗೆದುಕೊಂಡು ಹೋದರು ಸ್ವಾಮಿ? ಹುಡುಗರಿಗೆ ಪಠ್ಯಪುಸ್ತಕಗಳು ಬಂದಿಲ್ಲ ಅಂತ ಮೆರವಣಿಗೆ. ಅದಕ್ಕೆ ಇವರು ವಾಚಾಮಗೋಚರವಾಗಿ ಬೈದರು ಅಂತ ಸೆಕ್ಷನ್ 506ರ ಕೆಳಗಡೆ ಒಂದು ಕೇಸನ್ನು ಹಾಕಿದರು. ಅದೇ ಆಡಳಿತ ಪಕ್ಷದಲ್ಲಿದ್ದರೆ ಮಾನ್ಯ ರೇವಣ್ಣನವರ ಮೇಲೆ ಅಟೆಂಪ್ಟ್ ಟು ಮರ್ಡರ್ ಕೇಸ್ ಯಾವುದೇ ಸರ್ಕಾರ ಇದ್ದರೂ ರಿಜಿಸ್ಟರ್ ಆಗುತ್ತಿರಲಿಲ್ಲ. ಅದು ನಮ್ಮ ಸರ್ಕಾರ ಇದ್ದಾಗ ಆಗಿದ್ದು; ನಾನು ಒಪ್ಪಿಕೊಳ್ಳುತ್ತಿದ್ದೇನೆ. ಆದ್ದರಿಂದ ನಾನು ಹೇಳುತ್ತಿದ್ದೇನೆ,

ಯಾವುದೇ ಒಂದು ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಾಗ ಆಡಳಿತ ಮಾಡುವ ಅಧಿಕಾರಿಗಳು.

ಶ್ರೀ ವಿನಯ ಕುಮಾರ್ ಸೊರಕೆ:– ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ "420" ಕೇಸ್‌ಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. 420 ಕೇಸ್ ಹಾಕಿರುವುದೇಕೆಂದರೆ ಒಂದು ಜನ ಸಂಪರ್ಕ ಸಭೆಯಲ್ಲಿ ಒಂದು ಹೆಣ್ಣು ಮಗಳಿಗೆ ಸರ್ಟಿಫಿಕೇಟ್ ಕೊಟ್ಟಿದ್ದಕ್ಕೋಸ್ಕರ 420 ಕೇಸನ್ನು ತಮ್ಮ ಸರ್ಕಾರ ಮತ್ತು ಯುವ ಮೋರ್ಚಾದ ಅಧ್ಯಕ್ಷರು ಲೋಕಾಯುಕ್ತಕ್ಕೆ ಕೇಸ್ ಫೈಲ್ ಮಾಡಿದ್ದಾರೆ. ಒಂದು ಹೆಣ್ಣು ಮಗಳು ನಿರ್ಗತಿಕಳು ಎಂದು ಸರ್ಟಿಫಿಕೇಟ್ ಕೊಟ್ಟಿದ್ದಕ್ಕೋಸ್ಕರ ತಮ್ಮ ಯುವ ಮೋರ್ಚಾದ ಉಪಾಧ್ಯಕ್ಷರು ಕೇಸ್ ಫೈಲ್ ಮಾಡಿದ್ದಾರೆ ತಮ್ಮ ಸರ್ಕಾರದ ಅಧಿಕಾರಿಗಳು ಅದನ್ನು ರೆಕಮಂಡ್ ಮಾಡಿ 420 ಕೇಸ್ ಹಾಕಿದ್ದಾರೆ. ಶಾಸಕರು ಜನರ ಕೆಲಸ ಮಾಡುವಂಥ ಸಂದರ್ಭದಲ್ಲಿ, ಆರ್ಥಿಕವಾಗಿ ಹಿಂದುಳಿದಂಥ ಜನರ ಕೆಲಸ ಮಾಡುವಂಥ ಸಂದರ್ಭದಲ್ಲಿ 420 ಕೇಸ್ ನಮ್ಮ ಮೇಲೆ ಹಾಕಿದ್ದಾರೆ. ಅದೇ ನಾವು ಆಸ್ತಿ ಮಾಡಿದ್ದೇವೆ ಬಂಗಲೆ ಕಟ್ಟಿದ್ದೇವೆ ಎನ್ನುವುದಕ್ಕೆ ತಾವು ಕೇಸ್ ಹಾಕಿಲ್ಲ.

ಶ್ರೀ ವೈ.ಕೆ. ರಾಮಯ್ಯ:– ನಾನು ಪಕ್ಷದ ಹೆಸರು, ಸರ್ಕಾರದ ಹೆಸರು ಹೇಳಲಿಲ್ಲ. ಜನಪ್ರತಿನಿಧಿಗಳು ಜನರ ಪರವಾಗಿ ಕೆಲಸ ಮಾಡುವಂಥ ಸಂದರ್ಭದಲ್ಲಿ ಅವರು ಒಂದು ಸರ್ಟಿಫಿಕೇಟನ್ನು ತಿದ್ದುವಂಥ ಮಟ್ಟಿಗೆ ಇಳಿಯುತ್ತಾರೆಯೇ ಸ್ವಾಮಿ, ಅವರು ಹೇಳಿದ ಹಾಗೆ ಜನಕ್ಕೆ ದ್ರೋಹ ಮಾಡಿದ್ದರೆ, ಮೋಸ ಮಾಡಿದ್ದರೆ, ಆಸ್ತಿ ಮಾಡಿದ್ದರೆ ತಲೆಗೆ ಬಟ್ಟೆ ಇಲ್ಲದೆ ಬಂದಂತವರು ಮಹಡಿ ಮನೆ ಕಟ್ಟಿಕೊಂಡಿದ್ದಾರೆಂದು ಇವರು ನಮ್ಮ ಚರಿತ್ರೆಯನ್ನು ತೆಗೆದುಕೊಂಡು ಈ ಸದನದಲ್ಲಿ ವಾಚಾಮಗೋಚರ ಜಾಲಾಡುವುದಾದರೆ I am the first man to raise my hands.... ರಾಮಯ್ಯ ಇಷ್ಟು ಆಸ್ತಿ ಮಾಡಿದ್ದಾನೆ. ಗಂಡ ಸತ್ತ ಮುಂಡೆ ಆಸ್ತಿ ಬಳಸಿಕೊಂಡಿದ್ದಾನೆ. ಇಷ್ಟು ಜನಕ್ಕೆ ಮೋಸ ಮಾಡಿದ್ದಾನೆ, ಇಷ್ಟು ಜನರಿಗೆ ದಗ ಮಾಡಿರುವುದು ಏನಾದರೂ ಇದ್ದರೆ ದಯಮಾಡಿ ನಮ್ಮನ್ನು ಜಾಲಾಡಿ. ಅದು ಬಿಟ್ಟು, ಪಾಪ ಅವರು ಸರ್ಟಿಫಿಕೇಟನ್ನು ಕೊಟ್ಟರೆಂದು, ಅವರು ಪಠ್ಯ ಪುಸ್ತಕ ಕೇಳಿದರೆಂದು, ನಾನು ಬಸ್ ಬಿಡಿಸಲಿಕ್ಕೆ ಹೋಗಿದ್ದೆನೆಂದು ಕೇಸ್ ಹಾಕುವುದು ಸರಿಯೇ? ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇತ್ತೀಚಿನ ದಿನಗಳಲ್ಲಿ ರಾಜಕಾರಣಿಗಳು ಕ್ರಿಮಿನಲ್ ಮೊಖದ್ದಮೆಗಳು ಮತ್ತು ಅಧಿಕಾರಿಗಳು ಇವುಗಳ ನಡುವೆ ಇರುವಂಥ ಸಂಬಂಧವನ್ನು ಈ ಜನಪ್ರತಿನಿಧಿಗಳ ವಿಷಯ ಬಂದಾಗ ನಮಗಾಗಿ, ನಿಮಗಾಗಿ ಅಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳೆ, ದಯಮಾಡಿ ನನ್ನ ಮೇಲಿರುವ ಕೇಸ್‌ಗಳನ್ನು ವಿತ್‌ಡ್ರಾ ಮಾಡಿಕೊಳ್ಳಬೇಡಿ. I am still capable of defending my case. I assure you. Don't withdraw the case. I am not making any prayer. ಆದರೆ ಇಂತಹ ಒಂದು ಸಂದರ್ಭ ಬಂದಾಗ ನೀವು ದಯಮಾಡಿ ಸ್ವಲ್ಪ ಗಂಭೀರವಾಗಿ, ನಿಮ್ಮ ನಿಜ ಏನು ಇದೆ, ಸುಳ್ಳು ಏನು ಇದೆ ಎನ್ನುವುದರ ವರದಿ ತರಿಸಿಕೊಂಡು ಸಮಾಧಾನ ಪಡಿ. ಸನ್ಮಾನ್ಯ ಉಪಾಧ್ಯಕ್ಷರೇ, ನಾನು

ಮುಖ್ಯಮಂತ್ರಿಗಳಿಗೆ ಒಂದು ಕಾಗದ ಬರೆದು ಕೊನೆಯಲ್ಲಿ ಅವರಿಗೆ ಒಂದು ಪ್ರಾರ್ಥನೆಯನ್ನು ಮಾಡಿಕೊಂಡೆ, ಏನೆಂದರೆ, ದಯವಿಟ್ಟು ಈ ಒಂದು ವಿವಾದದ ಬಗ್ಗೆ ನ್ಯಾಯಾಂಗ ತನಿಖೆಯನ್ನೋ, ಸಿ.ಬಿ.ಐ. ತನಿಖೆಯೋ, ಸಿ.ಒ.ಡಿ. ತನಿಖೆಯೋ ಮಾಡಿಸಿ, ಅಷ್ಟೇ ಅಲ್ಲ ಸನ್ಮಾನ್ಯ ಉಪಾಧ್ಯಕ್ಷರೆ, ಡಿಮಾಂಡ್ ಮಾಡಿದೆ. ಯಾರನ್ನಾದರೂ ಮೆಚ್ಚಿಸಬೇಕಾಗಿದ್ದರೆ, ಅವಶ್ಯಕತೆ ಇದ್ದರೆ ನಾನು ಜೈಲಿನಲ್ಲಿ ಇರುವುದಕ್ಕೆ ಸಿದ್ಧನಾಗಿದ್ದೇನೆಂದು ಅವರಿಗೆ ಬರವಣಿಗೆಯಲ್ಲಿ ಬರೆದು ಕಳುಹಿಸಿದೆ. ಆದುದರಿಂದ ನಾನು ಇವತ್ತು ಈ ಕೇಸನ್ನು ವಿತ್‌ಡ್ರಾ ಮಾಡಿಕೊಳ್ಳಿ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುವುದಿಲ್ಲ. ನನ್ನ ಪ್ರಾರ್ಥನೆ ಇಷ್ಟೆ; ರಾಜಕಾರಣಿಗಳು, ಕ್ರಿಮಿನಲ್ ಮೊಖದ್ದಮೆ ಮತ್ತು ಅಧಿಕಾರಿಗಳ ಸಂಬಂಧಗಳು ಬಂದಂತಹ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಪರಿಶೀಲನೆ ಮಾಡಿ ಅವರಿಗೆ ನೆಮ್ಮದಿ ತರುವಂತಹ ಒಂದು ತೀರ್ಮಾನಕ್ಕಾದರೂ ಬರಬೇಕು. ಇಲ್ಲಿರುವಂಥ 30 ಕೇಸ್‌ಗಳಲ್ಲಿ 18 ಕೇಸ್‌ಗಳಿವೆ ಎಂದಾಗಲೀ,.. ಉಪಾಧ್ಯಕ್ಷರೇ, ಈ ಕೇಸ್‌ಗಳನ್ನು ಹಾಕುವುದು ಪ್ರಾಮಾಣಿಕವಾಗಿ ಎರಡು ಸಂದರ್ಭದಲ್ಲಿ, ಒಂದು ವಿರೋಧಪಕ್ಷದಲ್ಲಿರುವಂಥವರನ್ನು ಬಾಯಿ ಮುಚ್ಚಿಸಲಿಕ್ಕೆ, ಅವರನ್ನು ಅಂಕೆಯಲ್ಲಿ ಇಟ್ಟುಕೊಳ್ಳಲಿಕ್ಕೆ, ಅವರನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲಿಕ್ಕೆ, ಅವರಿಗೆ ಲಗಾಮು ಹಾಕಲಿಕ್ಕೆ ಆಡಳಿತ ಪಕ್ಷದವರು ಹಾಕುತ್ತಾರೆ. ನನಗೆ ಅರಿವಿರುವ ಹಾಗೆ ಮುಖ್ಯ ಮಂತ್ರಿಗಳಾಗಲೀ, ಆಡಳಿತ ಪಕ್ಷದ ಯಾವುದೇ ಮಂತ್ರಿಗಳಾಗಲೀ ನಮಗೆ ಲಗಾಮು ಹಾಕುವುದಕ್ಕೆ ಈ ಕೇಸುಗಳನ್ನು ಹಾಕಿದ್ದಾರೆಂದು ನನಗೆ ಅನ್ನಿಸುವುದಿಲ್ಲ. ಇನ್ನು ಎರಡನೆ ಸಂದರ್ಭ ಏಕೆಂದರೆ ಈ ಅಧಿಕಾರಿಗಳು ಇದ್ದಾರಲ್ಲ. ಇವರು ಜನಪ್ರತಿನಿಧಿಗಳನ್ನು ಕಾಣುವ ನಿಕೃಷ್ಟ ಪ್ರವೃತ್ತಿ, ಉದ್ಧಟತನ. ನನಗೂ 3 ಡಿಗ್ರಿಗಳಿವೆ ಎಂದು ಅವರ ಅಧಿಕಾರಿಗಳಿಗೆ ಹೇಳಬೇಕು. Chief Minister should tell their Officers that I am holding three degrees.....

ನನಗೂ ಐ.ಎ.ಎಸ್. ಅಧಿಕಾರಿಗಳಷ್ಟು ಇಂಗ್ಲೀಷ್ ಮಾತನಾಡುವುದಕ್ಕೆ ಬರುತ್ತದೆ, ಓದುವುದಕ್ಕೆ ಬರುತ್ತದೆ, ಓದಿದ್ದನ್ನು ಕಾರ್ಯರೂಪಕ್ಕೆ ತರುವಂಥ ಕೆಚ್ಚು ಕೂಡ ಇದೆ. Let them not look towards us in a contemptous approach.....

ಸನ್ಮಾನ್ಯ ಅಧ್ಯಕ್ಷರೇ, ಇವೊತ್ತು ಮುಖ್ಯಮಂತ್ರಿಗಳಾಗಿರಲೀ ರಾಮಯ್ಯ ಆಗಲೀ ಈಶ್ವರಪ್ಪನವರಾಗಲೀ, ನಾಗರಾಜ್ ಆಗಿರಲಿ, ಎಲ್ಲರ ಬಗ್ಗೆಯೂ ಈ ಅಧಿಕಾರಿಗಳಲ್ಲಿ ಒಂದೇ ಭಾವನೆ, ಎಲ್ಲಾ ರಾಜಕಾರಣಿಗಳು ಭ್ರಷ್ಟರು, ಎಲ್ಲಾ ರಾಜಕಾರಣಿಗಳು ಲಫಂಗರು, ಎಲ್ಲಾ ರಾಜಕಾರಣಿಗಳು ಲಂಚಕೋರರು, ಎಲ್ಲಾ ರಾಜಕಾರಣಿಗಳು ಅಯೋಗ್ಯರು ಎಂಬ ಏನು ಭಾವನೆ ಇವರ ಮನಸ್ಸಿನಲ್ಲಿ ಇದೆ, they claims that they are the embodiment of all the virtues on the earth particularly an IAS Officer he claims that he is the only embodiment of the the virtues and he is the only honest man, he is the only person who knows English and he is the only person who knows the administration....... ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾತರ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ವಿನಯದಿಂದ ಕೋರಿಕೆ ಮಾಡಿಕೊಳ್ಳುತ್ತೇನೆ. ಜನ ಪ್ರತಿನಿಧಿಗಳನ್ನು ನಿಷ್ಪಕ್ಷವಾಗಿ ನೋಡುವಂಥ ನಿಮ್ಮ ಅಧಿಕಾರಿಗಳ ಮನೋಭಾವನೆ ಬದಲಾವಣೆ ಆಗದಿದ್ದರೆ ಅವರ ನಡತೆಯಲ್ಲಿ ಬದಲಾವಣೆ ಆಗದಿದ್ದರೆ ಆಗುವಂಥ ಪ್ರತಿಫಲ ಏನೆಂದರೆ ಕಾನೂನಿನ ಚೌಕಟ್ಟಿನಲ್ಲಿ......

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ನನಗೆ ಏನೋ ಸರ್ಕಾರಿ ಅಧಿಕಾರಿಗಳಲ್ಲಿ ಆ ಭಾವನೆಯಲ್ಲಿದ್ದಾರೆ ಎಂದು ಅನ್ನಿಸುವುದಿಲ್ಲ. ಏತಕ್ಕೆಂದರೆ ಈಗಿರುವ ವ್ಯವಸ್ಥೆಯಲ್ಲಿ ದಿವಸ ಬೆಳಿಗ್ಗೆ ನೋಡುತ್ತಿದ್ದೇನೆ 100ಕ್ಕೆ 90ರಷ್ಟು ಭಾಗ ಸರ್ಕಾರಿ ಅಧಿಕಾರಿಗಳು ಅನ್ನವನ್ನು ತಿನ್ನುವುದನ್ನು ಬಿಟ್ಟು ಬಹಳ ದಿವಸವಾಯಿತು.

ನೈತಿಕ ಧೈರ್ಯ ಇಲ್ಲ ಈ ದೇಶದಲ್ಲಿ. ಏನೋ ರಾಮಯ್ಯನವರಿಗೆ ಆಕಸ್ಮಾತ್ತಾಗಿ ಬೇರೆ ರೀತಿಯ ಅಧಿಕಾರಿಗಳು ಸಿಗಲು ಶುರುವಾಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಹೊಟ್ಟೆ ಒಳಗಿನ ಕಾಗದ ಪತ್ರಗಳು ಜೀರ್ಣ ಆಗಬೇಕಲ್ಲ.

ಶ್ರೀ ವೈ.ಕೆ. ರಾಮಯ್ಯ:- ಜನ ಪ್ರತಿನಿಧಿಗಳ ಬಗ್ಗೆ ನಮ್ಮ ಹಿರಿಯರು ಹೇಳಿದ ಹಾಗೆ ಫುಟ್‌ಪಾತ್‌ನಲ್ಲಿ ಮೂರು ಕಾಸಿಗೆ ಸಿಗುವ ಸೊಪ್ಪಿನ ಕಂತೆ ರಾಜಕಾರಣಿಗಳು ಎಂದು ಅವರು ತಿಳಿದುಕೊಡಿದ್ದಾರೆ. Contemptious approach, their attitude ಏನಿದೆ ಇದನ್ನು ದಯಮಾಡಿ ಬದಲಾವಣೆ ಮಾಡದಿದ್ದರೆ ಏನಾಗುತ್ತದೆ ಎಂಬುದನ್ನು ಹೇಳುತ್ತೇನೆ. ಕಾನೂನಿನ ಚೌಕಟ್ಟಿನಲ್ಲಿ, ನಿಯಮಾವಳಿಗಳ ಚೌಕಟ್ಟಿನಲ್ಲಿ ಒಬ್ಬ ಜನ ಪ್ರತಿನಿಧಿ ಜನತೆಯ ಪರವಾಗಿ ಕೆಲಸ ಮಾಡಲು ಅವಕಾಶ ಇಲ್ಲದೇ ಇರುವಾಗ ಒಂದು ರಾಷ್ಟ್ರದ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಲು ಸಾಧ್ಯತೆ ಇಲ್ಲದೇ ಇದ್ದಾಗ ಆತ ದಂಗೆಕೋರನಾಗುತ್ತಾನೆ. That is the result of the People War Group in Andhra Pradesh.... ಎಷ್ಟು ಜನ ಕೊಂಡಂಪಲ್ಲಿ ಸೀತಾರಾಮಯ್ಯನವರನ್ನು ನೀವು ನೋಡಬೇಕಾಗುತ್ತದೋ ಗೊತ್ತಿಲ್ಲ. ಇದು ಪಕ್ಷದ ಪ್ರಶ್ನೆಯಲ್ಲ, ನನ್ನೊಬ್ಬನ ಪ್ರಶ್ನೆಯಲ್ಲ; ಇಡೀ ಜನಸಾಮಾನ್ಯರ ಪ್ರಶ್ನೆ. ನೌಕರಶಾಹಿಯನ್ನು ಅಧಿಕಾರಶಾಹಿಯನ್ನು ಪ್ರಶ್ನೆ ಮಾಡುವಂಥ ವ್ಯವಸ್ಥೆ ಈ ಪ್ರಜಾಪ್ರಭುತ್ವದಲ್ಲಿ ಇಲ್ಲದಿದ್ದರೆ ಆ ಪ್ರಜಾಪ್ರಭುತ್ವಕ್ಕೆ ಬೆಲೆ ಇಲ್ಲ. ಅಂತಹ ಪ್ರಜಾಪ್ರಭುತ್ವದ ಅವಶ್ಯಕತೆಯೂ ಇಲ್ಲ.

ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಕೊಂಡ ಪಲ್ಲಿ ಸೀತಾರಾಮಯ್ಯ ಅವರೊಬ್ಬರನ್ನು ಜೈಲಿಗೆ ಹಾಕುತ್ತೀರಿ. ಆದರೆ ಎಷ್ಟು ಜನ ಸೀತಾರಾಮಯ್ಯನವರನ್ನು ನೀವು ಜೈಲಿಗೆ ಹಾಕುತ್ತೀರಿ ? ಕರ್ನಾಟಕದಲ್ಲಿ ಈ ಒಂದು ಸಂದರ್ಭ ಬರುವುದಕ್ಕೆ ಮೊದಲು ಹಾಗೂ ಆ ಒಂದು ಪರಿಸ್ಥಿತಿ ಸೃಷ್ಟಿಯಾಗುವುದಕ್ಕೆ ಮೊದಲು ನಾನು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಜನ ಪ್ರತಿನಿಧಿಗಳನ್ನು ಅಧಿಕಾರಶಾಹಿಗಳು ಏನು ನಿಕೃಷ್ಟರಾಗಿ ಕಾಣುತ್ತಾರೆ, ಆ ರೀತಿ ನಿಕೃಷ್ಟವಾಗಿ ಕಾಣುವ ಮನೋಭಾವನೆ ಬದಲಾವಣೆ ಮಾಡಿಕೊಳ್ಳುವಂಥ ವ್ಯವಸ್ಥೆಯಾಗಬೇಕೆಂದು ಮುಖ್ಯಮಂತ್ರಿಗಳಲ್ಲಿ ಮತ್ತು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನ್ನ ಕ್ಷೇತ್ರದ ಜನಗಳ ಹಿತಕ್ಕಾಗಿ, ನನ್ನ ಹಿತೈಷಿಗಳ ಹಿತಕ್ಕಾಗಿ ಯಾವುದೇ ಕ್ಷೇತ್ರದಲ್ಲಿ ಆಗಬೇಕಾದ ಕೆಲಸವನ್ನು ಅಧಿಕಾರಿಗಳ ಮುಖಾಂತರ ಮಾಡುವಂಥ ಸಂದರ್ಭದಲ್ಲಿ ನನ್ನ ಮೇಲೆ ಏನು ಅಪವಾದವನ್ನು ತಂದಿದ್ದಾರೋ ಅದು ಅಪರಾಧ ಆಗುವುದಾದರೆ I don't repent for that. I am going to repeat. I caution this Government. Let them register thousands of cases against me. If this is an offence – questioning the bureaucracy for the sake of my people's work if it is an offence under any court, any procedure, any Law, I don't repent. I am going to repeat this offence...

ಡಾ: ಎನ್.ಬಿ. ನಂಜಪ್ಪ:- ಏಳು ವರ್ಷಗಳು ಜನತಾ ದಳದ ಆಡಳಿತ ಇದ್ದ ಸಮಯದಲ್ಲಿ ಎಷ್ಟು ಜನರ ಮೇಲೆ ಅನ್ಯಾಯವಾಗಿ ಕೇಸ್ ಹಾಕಿದ್ದೀರಿ ಎಂಬುದನ್ನು ತಾವು ಗಮನಿಸಬೇಕು. ಆ ವೇಳೆಯಲ್ಲಿ ಯಾರ ಯಾರ ಮೇಲೆ ಕೇಸು ಹಾಕಿದ್ದೀರಿ ಎಂಬುದರ ಬಗ್ಗೆ ಓಲ್ಡ್ ರೆಕಾರ್ಡನ್ನು ತೆಗೆದು ನೋಡಿದರೆ ನಿಮಗೆ ಗೊತ್ತಾಗುತ್ತದೆ. ಅಧಿಕಾರಿಗಳ ಹಗ್ಗ ಬಿಚ್ಚಿ ಬಿಟ್ಟವರು ನೀವು. ಮೂಗುದಾರ ಕೊಯ್ದು ಬೀದಿಗೆ ಬಿಟ್ಟು ಅವರನ್ನು ಕರಪ್ಟ್ ಆಗಿ ಮಾಡಿ ಅವರನ್ನು ಟೋಟಲಿ ಮಿಸ್ ಯೂಸ್ ಮಾಡಿಕೊಂಡವರು ನೀವು. ನಾವಲ್ಲ. ಈಗ ಕಳೆದ ಮೂರು ವರ್ಷಗಳಿಂದ ನೆಮ್ಮದಿಯಿಂದ ಕರ್ನಾಟಕ ಜನತೆ ಇದ್ದಾರೆ ಎಂದು ಹೇಳಬಹುದು.

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೇ, I am concluding ಸನ್ಮಾನ್ಯ ನಂಜಪ್ಪನವರಿಗೆ ಉತ್ತರ ಕೊಡುವುದಕ್ಕೆ ನನಗೆ ಇಷ್ಟವಿಲ್ಲ.

ಶ್ರೀ ಎಂ. ನಾರಾಯಣಸ್ವಾಮಿ:- ಮೂರು ವರ್ಷಕ್ಕೆ ಮೂರು ಜನ ಮುಖ್ಯ ಮಂತ್ರಿಗಳನ್ನು ಮಾಡಿಸಿದ್ದೀರಿ. ಏನು ಬಿಗಿ ಎಂದು ಗೊತ್ತಾಗಿದೆ.

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವಾಗ ಬಾಯಿ ತಪ್ಪಿ ಕೂಡ ಪಕ್ಷದ ಬಗ್ಗೆ ಹೇಳಿಲ್ಲ; ಸರ್ಕಾರದ ವಿಷಯವನ್ನು ಎತ್ತಿಲ್ಲ. ತಾವು ನೋಡಿದ್ದೀರಿ. ಸನ್ಮಾನ್ಯ ಸದಸ್ಯರು ನಾನು ಮಂತ್ರಿಯಾಗಿದ್ದಂಥ ಸರ್ಕಾರದಲ್ಲಿ ನಡೆದಿರತಕ್ಕಂಥ ಕೆಲವು ಲೋಪದೋಷಗಳನ್ನು ನನ್ನ ಗಮನಕ್ಕೆ ತರುತ್ತಿದ್ದಾರೆ. ನನ್ನ ಸ್ನೇಹಿತರಾದಂಥ ಸದಸ್ಯರಲ್ಲಿ ನಾನು ಕೇಳಿಕೊಳ್ಳುವುದು ಇಷ್ಟೆ; ನಾನು ಅಧಿಕಾರ ಮಾಡುತ್ತಿದ್ದಂಥ ಸರ್ಕಾರದಲ್ಲಿ ಇಂಥ ಘಟನೆಗಳು ಏನಾದರೂ ನಡೆದಿದ್ದರೆ ಅದನ್ನು ನಾನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಸಿದ್ಧನಿಲ್ಲ. ಅದು ಸರಿ ಎಂದು ಹೇಳುವಷ್ಟು ಅಯೋಗ್ಯತನಕ್ಕೆ ನಾನು ಇಳಿಯುವುದಿಲ್ಲ. 1988 ರಲ್ಲಿ ಬಸವಲಿಂಗಪ್ಪನವರು ಇಲ್ಲಿ ಕುಳಿತುಕೊಂಡಿದ್ದಾಗ ನನ್ನನ್ನು ಕೆಣಕಿದರು. ನಂಜಪ್ಪನವರು ಅವತ್ತು ಇರಲಿಲ್ಲ. ದಯಮಾಡಿ ಕೇಳಿ; ನಾನು ಅವತ್ತು ಒಂದು ಮಾತನ್ನು ಹೇಳಿದೆ. ಈ ಸದನದ ಗಮನಕ್ಕೆ ತರುತ್ತಿದ್ದೇನೆ. "sell not the virtues, sell not virtues to purchase the wealth, nor the liberty to purchase the power" ಎನ್ನುವ ಮಾತನ್ನು ಹೇಳಿದ್ದೆ.

ನಾನು ಮೌಲ್ಯವನ್ನು ಮಾರಿ ಸಂಪತ್ತನ್ನು ಕೊಂಡುಕೊಳ್ಳುವುದಕ್ಕೆ ಯಾವತ್ತೂ ಪ್ರಯತ್ನ ಪಟ್ಟವನಲ್ಲ. ಅಥವಾ ತತ್ವಗಳನ್ನು ಮಾರಿ ಅಧಿಕಾರವನ್ನು ಪಡೆದುಕೊಳ್ಳುವುದಕ್ಕೂ ಪ್ರಯತ್ನ ಪಟ್ಟವನಲ್ಲ. ನಾನು ಹಿಂದೆ ಮಾತನಾಡಿದ್ದು. ಕಡತದಲ್ಲಿ ಇದೆ ಬೇಕಾದರೆ ನಂಜಪ್ಪನವರು ತೆಗೆದುನೋಡಲಿ. ನಾನು ಹಿಂದೆ ಅಲ್ಲಿ ಕುಳಿತಾಗಲೂ ಇದೇ ಮಾತನಾಡುತ್ತಿದ್ದೆ. ಆಗ ಬಸವಲಿಂಗಪ್ಪನವರು ಅದನ್ನು ನಾನು ಇಲ್ಲಿ ಪ್ರಶ್ನೆ ಮಾಡಲಿಲ್ಲ ಎಂದು ಹೇಳಿದರು.

ಈಗ ಮಾತನಾಡತಕ್ಕಂಥ ಸಂದರ್ಭದಲ್ಲಿ ಸಹ ಪಕ್ಷವನ್ನಾಗಲಿ, ಸರ್ಕಾರವನ್ನಾಗಲಿ ನಾನು ಪ್ರಸ್ತಾಪ ಮಾಡಿಲ್ಲ. ಕೊನೆಯದಾಗಿ ತಮ್ಮ ಮುಖಾಂತರ ಸರ್ಕಾರದಲ್ಲಿ ನನ್ನ ಕೋರಿಕೆ ಇಷ್ಟೇನೆ, ನೀವು ಏನು ಒಳ್ಳೆಯ ಹೆಸರನ್ನು ತರಬೇಕು ಎಂದು ಏನು ಕೆಲಸ ಮಾಡುತ್ತಿದ್ದೀರೋ, ಹಠ ತೊಟ್ಟಿದ್ದೀರೊ, ಛಲ ತೊಟ್ಟಿದ್ದೀರೋ, ಇಚ್ಛೆ ಇಟ್ಟುಕೊಂಡಿದ್ದೀರೋ, ಆ ಇಚ್ಛೆ ಕಾರ್ಯರೂಪಕ್ಕೆ ಬರಬೇಕಾದರೆ ಸರ್ಕಾರಿ ಸಂಬಳ ತಿನ್ನುವಂಥ ಪ್ರತಿಯೊಬ್ಬರೂ ಕೂಡ ಈ ರಾಷ್ಟ್ರದ ಜನಸಾಮಾನ್ಯನ ಗುಲಾಮನಾಗಿ ಆತನ ಸೇವಕನಾಗಿ ಕೆಲಸ ಮಾಡಬೇಕು ಎನ್ನುವಂಥ ಮನೋಭಾವ ಬರುವಂಥ ಆಡಳಿತವನ್ನು ಜಾರಿಗೆ ತರಬೇಕು ಸರ್ಕಾರ ಎಂದು ಅವರಲ್ಲಿ ಪ್ರಾರ್ಥನೆ ಮಾಡಿ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ನಿಮಗೆ ವಂದನೆ ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಈಗ ಸದನದ ಕಲಾಪ ಮುಂದುವರಿದು ಮತ್ತೆ ಎರಡೂವರೆ ಗಂಟೆಗೆ ಸಭೆ ಸೇರುತ್ತದೆ.

(ಸದನವು 1–27ಕ್ಕೆ ಮುಕ್ತಾಯಗೊಂಡು ಪುನಃ ಸಭೆಯು 2–30ಕ್ಕೆ ಸೇರಲು ನಿಶ್ಚಯಿಸಿತು.)

ವಿತ್ತೀಯ ಕಾರ್ಯಕಲಾಪಗಳು

1993–94ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು

(ಸದನವು ಮತ್ತೆ 3 ಗಂಟೆ 5 ನಿಮಿಷಕ್ಕೆ ಸಮಾವೇಶಗೊಂಡಿತು)

ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು.

† ಶ್ರೀ ಜಿ. ರಾಜುಗೌಡ (ಹನೂರು):– ಮಾನ್ಯ ಅಧ್ಯಕ್ಷರೆ, ಸದನದ ಮುಂದೆ ಇಂದು ಸುಮಾರು 48 ಬೇಡಿಕೆಗಳನ್ನು ಮಂಡಿಸಿದ್ದಾರೆ. ಇಷ್ಟು ಬೇಡಿಕೆಗಳ ಬಗ್ಗೆ ಮಾತನಾಡುವುದಕ್ಕೆ ನನಗೆ ಕಾಲಾವಕಾಶವಿಲ್ಲದಿರುವುದರಿಂದ ನನಗೆ ಹೆಚ್ಚು ಪ್ರಿಯವಾಗಿರತಕ್ಕಂಥ ರೇಷ್ಮೆ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನಾಡುವುದಕ್ಕೆ ಇಚ್ಛೆಪಡುತ್ತೇನೆ. ರೇಷ್ಮೆ ಎನ್ನತಕ್ಕಂಥಾದ್ದು ಜಗತ್ಪ್ರಸಿದ್ಧವಾದುದು, ಇದಕ್ಕೆ ಸುಮಾರು 200 ವರ್ಷಗಳ ಇತಿಹಾಸವಿದೆ; ರೇಷ್ಮೆ ಟಿಪ್ಪು ಸುಲ್ತಾನ್ ಆಳ್ವಿಕೆ ಕಾಲದಿಂದ ಕೂಡ ಬಂದಿದೆ. 'ರೇಷ್ಮೆ' ನಮ್ಮ ರಾಜ್ಯದ 'ಕಾಮಧೇನು' 'ಕಲ್ಪವೃಕ್ಷ' ಎಂದರೆ ತಪ್ಪಾಗಲಾರದು. ಕರ್ನಾಟಕ ಎಂದರೆ ರೇಷ್ಮೆ ರೇಷ್ಮೆ ಎಂದರೆ ಕರ್ನಾಟಕ. ಯಾವುದರಲ್ಲಿ ಎಲ್ಲಾ ಕಲ್ಚರ್ ಇದೆಯೋ ಅದು 'ಸೆರಿಕಲ್ಚರ್' ಎನ್ನತಕ್ಕಂಥ ವಿಷಯ ತಮಗೆಲ್ಲರಿಗೂ ಗೊತ್ತಿದೆ. ರೇಷ್ಮೆ ಬೆಳೆ ಸಾಮಾನ್ಯವಾಗಿ ಬಡವರ ಜೀವನದ ಬಂಗಾರವಾಗಿದ್ದು, ಇದೊಂದು ಉತ್ತಮ ಬೆಳೆಯಾಗಿದೆ. ಇದು ಅತಿ ಕಡಿಮೆ ಬಂಡವಾಳದಲ್ಲಿ ಹೆಚ್ಚಿನ ಜನರಿಗೆ ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗ ಒದಗಿಸತಕ್ಕಂಥ ಒಂದು ಕೃಷಿ ಆಧಾರಿತ ಕೈಗಾರಿಕೆಯಾಗಿದೆ. ಒಂದು ಎಕರೆ ಪ್ರದೇಶಕ್ಕೆ ಹಿಪ್ಪುನೇರಳೆ ಹಾಕಿದರೆ ಸುಮಾರು ಮೊಟ್ಟೆಯಿಂದ ಹಿಡಿದು, ಬಟ್ಟೆಯ ತನಕ ವರ್ಷ ಪೂರ್ತಿ ಐದು ಜನರಿಗೆ ಕೆಲಸ ಕೊಡತಕ್ಕಂಥ ಒಂದು ಉತ್ತಮವಾಗಿರತಕ್ಕಂಥ ಕೈಗಾರಿಕೆ. ಈ ಕೈಗಾರಿಕೆ ಮಾಡುವುದಕ್ಕೆ ಋತುಮಾನದ ಅಡಚಣೆಯಿಲ್ಲ. ವರ್ಷದ ಹನ್ನೆರಡು ತಿಂಗಳಲ್ಲಿ ಯಾವುದೇ ಕಾಲದಲ್ಲಿ ಮಾಡುವಂಥ ವಿಶೇಷವಾದಂಥ ಕೈಗಾರಿಕೆಯಾಗಿದೆ. ಇಡೀ ವಿಶ್ವದಲ್ಲಿ ರೇಷ್ಮೆ ಉತ್ಪಾದನೆಯಲ್ಲಿ ಭಾರತ ಎರಡನೇ ಸ್ಥಾನ ಪಡೆದಿದೆ. ಇಂತಹ ಮಹತ್ವವುಳ್ಳ ಕೃಷಿ ಆಧಾರಿತವಾಗಿರತಕ್ಕಂಥ ಕೈಗಾರಿಕೆಯನ್ನು ನಮ್ಮ ಇಲಾಖೆಯವರು ಕಡೆಗಣಿಸಿದ್ದಾರೆಂದು ಹೇಳದೆ ನನಗೆ ಬೇರೆ ವಿಧಿ ಇಲ್ಲ. ಎರಡು ವಿಚಾರಗಳನ್ನು ಅವರು ಕಡೆಗಣಿಸಿದ್ದಾರೆ. ಮೊದಲನೆಯದಾಗಿ, ಸುಮಾರು 500–600 ಕೋಟಿ ರೂಪಾಯಿಗಳಷ್ಟು ವಿದೇಶಿ – ವಿನಿಮಯ ಗಳಿಸಿಕೊಡುವಂಥ ಇಂತಹ ಮಹತ್ತರವಾಗಿರತಕ್ಕಂಥ ಇಲಾಖೆ ಬಗ್ಗೆ ಕೈಗಾರಿಕಾ ಇಲಾಖೆಯ ವರದಿಯಲ್ಲಿ ಕೇವಲ ನಾಲ್ಕು ಪುಟಗಳಷ್ಟು ವಿಶ್ಲೇಷಣೆ ಮಾಡಿ ಸೇರಿಸಿದ್ದಾರೆ. ನಾನು ಮಾನ್ಯ ಅಧ್ಯಕ್ಷರ ಮೂಲಕ ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆಯುವುದಕ್ಕೆ ಇಚ್ಛೆ ಪಡುತ್ತೇನೆ. ದಯಮಾಡಿ ತಾವು ತಳಿ ವರದಿಯನ್ನು ಕೊಡಬೇಕು. ಕೈಗಾರಿಕಾ ಇಲಾಖೆಯ ವರದಿಯಲ್ಲಿ ಕೇವಲ ನಾಲ್ಕು ಪುಟಗಳಲ್ಲಿ ಮಾತ್ರ ವಿಶ್ಲೇಷಣೆ ಮಾಡಿದ್ದೀರಿ. ರಾಜ್ಯದಲ್ಲಿರತಕ್ಕಂಥ ಏಳು ರೇಷ್ಮೆ ಕಾರ್ಖಾನೆಗಳ ಬಗ್ಗೆ, ಅದರಲ್ಲಿ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಬಗ್ಗೆ, ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್ ಬಗ್ಗೆ ಏನು ಹೇಳಿದ್ದೀರಿ, ಮತ್ತು ಹಣವನ್ನು ಏನು ಇಟ್ಟಿದ್ದಾರೆ, ಕಳೆದ ವರ್ಷ ತಾವು ಏನೇನು ಮಾಡಿದಿರಿ ? ತಮ್ಮ ಗುರಿ ಏನು ? ಅದರಲ್ಲಿ ಆರ್ಥಿಕ, ಭೌತಿಕ ಗುರಿ ಏನು ? ಇವರ ಪ್ರಗತಿ ಬಗ್ಗೆ ವಿಶ್ಲೇಷಣೆ ಮಾಡಿದ್ದೀರಾ ? ಎಂತಹ ವರದಿಯನ್ನು ಕೊಟ್ಟಿದ್ದಾರೆ ? ರೇಷ್ಮೆ ಇಲಾಖೆ ಬಗ್ಗೆ 1977–78ನೇ ಇಸವಿಯಲ್ಲಿ ಒಂದು ತಳಿ ವರದಿಯನ್ನು ಕೊಟ್ಟಿದ್ದರು, ಈ ಸಲ ಏಕೆ ಕೊಟ್ಟಿಲ್ಲ ? ರೇಷ್ಮೆ ಬಗ್ಗೆ ಕೇವಲ ನಾಲ್ಕು ಪುಟಗಳಲ್ಲಿ ವಿಶ್ಲೇಷಣೆ ಮಾಡಿರುವುದು ಸರಿಯೇ ? ಇದರ ಮಹತ್ವವನ್ನು ಕಡೆಗಣಿಸಿದ್ದೀರಲ್ಲಾ. ಮತ್ತೊಂದು ವಿಷಯವೇನೆಂದರೆ, ಹಿಂದೆ ಈ ಇಲಾಖೆಯನ್ನು ಸಚಿವ ಸಂಪುಟ ದರ್ಜೆಯ ಮಂತ್ರಿಗಳ ಕೈಗೆ ಕೊಡುತ್ತಿದ್ದರು. ರೇಷ್ಮೆ ಮಂತ್ರಿಗಳಾಗಿ, ಶ್ರೀ ರಾಮಯ್ಯ, ಕೆ.ಬಿ. ಶಿವಣ್ಣ, ಲಕ್ಷ್ಮಿಸಾಗರ್ ಹಾಗೂ ಶ್ರೀಮತಿ ರೇಣುಕಾ ರಾಜೇಂದ್ರನ್ ಅವರುಗಳಿದ್ದರು. ಅಲ್ಲಿಂದೀಚೆಗೆ ಈ ಇಲಾಖೆಯನ್ನು ರಾಜ್ಯ ಸಚಿವ ಸಂಪುಟ ದರ್ಜೆ ಸಚಿವರಿಗೆ ಕೊಡುತ್ತಿದ್ದೀರಿ. ಸುಮಾರು 500 ಕೋಟಿ ರೂಪಾಯಿಗಳಷ್ಟು ವಿದೇಶಿ – ವಿನಿಮಯ ಗಳಿಸಿಕೊಡುವ ರೇಷ್ಮೆ ಇಲಾಖೆ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಬೇಡವೇ ? ಆದುದರಿಂದ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದಕ್ಕೆ

ಇಚ್ಛಿಪಡುತ್ತಿದ್ದೇನೆ. ಇದರ ಮಹತ್ವವನ್ನರಿತು ಇದಕ್ಕೆ ಈಗ ರಾಜ್ಯ ಸಚಿವ ಸಂಪುಟ ದರ್ಜೆ ಸಚಿವರೇನಿದ್ದಾರೆ, ಅವರನ್ನು ದಯಮಾಡಿ ಸಚಿವ ಸಂಪುಟ ದರ್ಜೆಗೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಒಂದು ವರ್ಷದಲ್ಲಿ 63 ಸಾವಿರ ಮೆಟ್ರಿಕ್ ಟನ್ ರೇಷ್ಮೆ ಉತ್ಪಾದನೆಯಾಗುತ್ತಿದೆ. ಇದರಲ್ಲಿ ಚೈನಾದ್ದು ಅರ್ಧದಷ್ಟು ಇದೆ. ಅಂದರೆ 30 ಸಾವಿರ ಮೆಟ್ರಿಕ್ ಟನ್, ಭಾರತ 8, 150 ಮೆಟ್ರಿಕ್ ಟನ್, ಜಪಾನ್ 8 ಸಾವಿರ ಮೆಟ್ರಿಕ್ ಟನ್, ಯುಎಸ್‌ಎಸ್‌ಆರ್ 4 ಸಾವಿರ ಮೆಟ್ರಿಕ್ ಟನ್, ಸೌಥ್ ಕೊರಿಯ 2 ಸಾವಿರ ಮೆಟ್ರಿಕ್ ಟನ್, ಬ್ರೆಜಿಲ್ 1600 ಮೆಟ್ರಿಕ್ ಟನ್ ಉತ್ಪಾದನೆ ಮಾಡುತ್ತದೆ. ಭಾರತ ರೇಷ್ಮೆ ಉತ್ಪಾದನೆಯಲ್ಲಿ ಎರಡನೆಯ ಸ್ಥಾನವನ್ನು ಪಡೆದಿದ್ದು ಈ ಸ್ಥಾನ ನಮ್ಮ ಕರ್ನಾಟಕ ಪಡೆದಂತಾಗಿದೆ. ಅದುದರಿಂದ ಈ ರೇಷ್ಮೆ ವ್ಯವಹಾರದಲ್ಲಿ ಒಂದು ದಿನಕ್ಕೆ ಎಷ್ಟು ಆಗುತ್ತದೆ ಎನ್ನುವ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. 1992–93ರಲ್ಲಿ ರೇಷ್ಮೆಯ ವಾರ್ಷಿಕ ಉತ್ಪಾದನೆಯ ಗುರಿ 7600 ಮೆಟ್ರಿಕ್ ಟನ್ ಇತ್ತು, ಅದರಲ್ಲಿ ಡಿಸೆಂಬರ್ ಕೊನೆಯ ವೇಳೆಗೆ 5435 ಮೆಟ್ರಿಕ್ ಟನ್ ಉತ್ಪಾದನೆ ಮಾಡಿದ್ದೆವು. ಅಂದರೆ ಒಂದು ದಿನಕ್ಕೆ 21 ಸಾವಿರ ಮೆಟ್ರಿಕ್ ಟನ್ ಆಯಿತು, 21 ಸಾವಿರ ಟನ್ ಎಂದರೆ 21 ಸಾವಿರ ಕೇಜಿ ಆಯಿತು; 21 ಸಾವಿರ ಕೆ.ಜಿ. ಎಂದರೆ 2 ಕೋಟಿ 10 ಲಕ್ಷ ರೂಪಾಯಿಗಳ ವ್ಯವಹಾರವಾಯಿತು. ಪ್ರತಿಯೊಂದು ದಿನ ನಮ್ಮ ರಾಜ್ಯದಲ್ಲಿ 2 ಕೋಟಿ 10 ಲಕ್ಷ ರೂಪಾಯಿಗಳ ರೇಷ್ಮೆ ವ್ಯವಹಾರವನ್ನು ಮಾಡುತ್ತೇವೆ. ಇಂಥ ಕೃಷಿಯಾಧಾರಿತ ಕೈಗಾರಿಕೆಯಿಂದ ಎಷ್ಟು ಲಾಭ ಬರುತ್ತದೆ ಎಂಬುದನ್ನು ಒಂದೇ ಒಂದು ವಾಕ್ಯದಲ್ಲಿ ಹೇಳುತ್ತೇನೆ. ಬಹುಶಃ ಬೇರೆ ಯಾವ ಕೃಷಿ ಆಧಾರಿತ ಕೈಗಾರಿಕೆಯಿಂದಲೂ ಸಹ ಕೃಷಿಕನಿಗೆ ಇಷ್ಟೊಂದು ವರಮಾನ ಬರುವುದಿಲ್ಲ; ಒಂದು ರೂಪಾಯಿ ವರಮಾನ ನಮಗೆ ಬಂದರೆ ಕೃಷಿಕನಿಗೆ ಎಷ್ಟು ಸಿಗುತ್ತದೆನ್ನತಕ್ಕ ಬಗ್ಗೆ ಹೇಳುತ್ತೇನೆ. ರೇಷ್ಮೆ ಹುಳು ತನ್ನ ಸುತ್ತ ತಾನೇ ಗೂಡನ್ನು ಹೆಣೆದುಕೊಂಡು ಕೋಶಾವಸ್ಥೆಯಲ್ಲಿರುತ್ತದೆ, ರೀಲರ್ ಗೂಡಿನಿಂದ ಕಚ್ಚಾ ರೇಷ್ಮೆಯನ್ನು ತಯಾರು ಮಾಡುತ್ತಾನೆ, ಹುರಿ ಮಾಡುವವನು ಹುರಿ ಮಾಡುತ್ತಾನೆ, ನೇಕಾರ ಜವಳಿ ಮಾಡುತ್ತಾನೆ ನಂತರ ಮಾರುಕಟ್ಟೆಗೆ ತಲುಪಿಸುತ್ತಾನೆ, ಈ ಸರಣಿಯಲ್ಲಿ ಅತ್ಯಂತ ಹೆಚ್ಚು ಲಾಭ ಕೃಷಿಕಾರನಿಗೆ ಆಗುತ್ತದೆ. ಬಟ್ಟೆಯ ಪ್ರತಿಯೊಂದೂ ರೂಪಾಯಿ ಮೌಲ್ಯದಲ್ಲಿ ಕೃಷಿಕಾರನಿಗೆ 56.8, ರೀಲರ್‌ಗೆ 6.8, ಹುರಿಕಾರನಿಗೆ 9.1, ನೇಕಾರನಿಗೆ 10.7, ವರ್ತಕನಿಗೆ [illegible] ಸಿಗುತ್ತದೆ, ಅಂದರೆ ಅತ್ಯಧಿಕ ಲಾಭವು ಕೃಷಿಕಾರನಿಗೆ ಸಿಗುತ್ತದೆ. ಬೇರೆ ಯಾವುದೇ ಕೃಷಿಯಲ್ಲಾದರೂ ಕೂಡ ರೈತರಿಗೆ ಇಷ್ಟೊಂದು ಲಾಭ ಸಿಗುವುದಿಲ್ಲ. ಹೈನುಗಾರಿಕೆಯಲ್ಲಿಯೂ ಸಹ ಇಷ್ಟು ಲಾಭ ಸಿಗುವುದಿಲ್ಲ. ಸಿಲ್ಕ್ ಅಂಡ್ ಮಿಲ್ಕ್ ಎಂದು ಹೇಳುವಂತೆ ಮೊದಲು ಸಿಲ್ಕ್ ಅನಂತರ ಮಿಲ್ಕ್, ಇವತ್ತು ನಮ್ಮ ರಾಜ್ಯದಲ್ಲಿ ನಾಲ್ಕು ಲಕ್ಷ ಹೆಕ್ಟೇರ್‌ನಲ್ಲಿ ಹಿಪ್ಪುನೇರಳೆಯ ಬೆಳೆ ಇದೆ. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ 20 ಲಕ್ಷ ಜನರಿಗೆ ಇದು ಕೆಲಸ ಕೊಡತಕ್ಕ ಕೈಗಾರಿಕೆಯಾಗಿದೆ, ಹೆಚ್ಚು ಲಾಭದಾಯಕವಾದ ಕೈಗಾರಿಕೆ, ಅತೀ ಕಡಿಮೆ ಬಂಡವಾಳದಲ್ಲಿ ಹೆಚ್ಚಿನ ಜನರಿಗೆ ಉದ್ಯೋಗವನ್ನು ಬೆಳೆಸತಕ್ಕ ಕೈಗಾರಿಕೆ, ಉತ್ಪಾದನೆಯ ಹಂತದಿಂದ ಮಾಡತಕ್ಕ ಕೈಗಾರಿಕೆ, ಬಂಗಾರವನ್ನು ಕೊಡತಕ್ಕ ಕೈಗಾರಿಕೆ, ಏಕೆಂದರೆ ಇದರಲ್ಲಿ ಯಾವುದೂ ಕೂಡ ನಷ್ಟವಾಗುವುದಿಲ್ಲ, ಹುಳುವನ್ನು ಮೇಯಿಸಿದ ನಂತರ ಸಿಗುವ ಸೊಪ್ಪು ಎತ್ತಿಗೆ ಮೇವಾಗುತ್ತದೆ, ಪಿಕ್ಕೆ ಗೊಬ್ಬರವಾಗುತ್ತದೆ, ಕಳಪೆ ಗೂಡಿಗೂ ಕೂಡ ದುಡ್ಡು ಬರುತ್ತದೆ, ಯಾವುದೇ ಒಂದು ವಸ್ತು ಉಪಯೋಗವಾಗುವುದಿಲ್ಲವೆಂದು ಹೇಳುವಂತಿಲ್ಲ, ಒಳ್ಳೆಯ ಉತ್ಕೃಷ್ಟವಾಗಿರತಕ್ಕ ಕೈಗಾರಿಕೆ, ಇಂಥ ಮಹತ್ವವುಳ್ಳ ಕೈಗಾರಿಕೆಯನ್ನು ನಮ್ಮ ಇಲಾಖೆಯವರು ಕಡೆಗಣಿಸಿದ್ದಾರೆಂದು ಹೇಳದೆ ವಿಧಿಯೇ ಇಲ್ಲ, ಆದ್ದರಿಂದ ದಯಮಾಡಿ ಇದಕ್ಕೆ ಎಷ್ಟು ಪ್ರಾಮುಖ್ಯತೆಯನ್ನು ಕೊಡಬೇಕಾಗಿದೆಯೋ ಅಷ್ಟನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಇದರ ಬಗ್ಗೆ ಇಲ್ಲಿ ಮಾತನಾಡುತ್ತಿರುವಾಗ ಬಹುಶಃ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇಲ್ಲವೆಂದು ಕಾಣುತ್ತದೆ, ಇಲಾಖಾ ಅಧಿಕಾರಿಗಳು ಆದರೂ ಇದ್ದಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ನಾವು ರೇಷ್ಮೆಯ [illegible]

ಎರಡು ಹಂತದಲ್ಲಿ ಸಾಲವನ್ನು ತೆಗೆದುಕೊಂಡಿದ್ದೇವೆ. ಆ ರೀತಿ ಸಾಲವನ್ನು ಪಡೆದ ಉದ್ದೇಶವೇನೆಂದರೆ, ನಾವು ಏನು ರೇಷ್ಮೆಯ ಉತ್ಪಾದನೆಯಲ್ಲಿ ಗುರಿಯನ್ನು ಸಾಧಿಸಬೇಕಾಗಿತ್ತೋ, ಯಾವ ಉದ್ದೇಶಕ್ಕಾಗಿ ನಮಗೆ ವಿಶ್ವ ಬ್ಯಾಂಕಿನಿಂದ ಸಾಲವನ್ನು ಕೊಟ್ಟಿದ್ದಾರೋ ಇದರ ಬಗ್ಗೆ ಎಷ್ಟರಮಟ್ಟಿಗೆ ಪ್ರಯತ್ನ ತೋರಿಸಿದ್ದೇವೆ, ಯಾವ ಗುರಿಯನ್ನು ನಾವು ಮುಟ್ಟಿದ್ದೇವೆ ಎನ್ನುವುದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ರೇಷ್ಮೆ ಮಾರುಕಟ್ಟೆಯನ್ನು ನಾವು ವಿಸ್ತರಿಸಬೇಕು ಎನ್ನತಕ್ಕ ದೃಷ್ಟಿಯಿಂದ ನಾವು ವಿಶ್ವ ಬ್ಯಾಂಕಿನಿಂದ ಸಾಲವನ್ನು ತೆಗೆದುಕೊಂಡೆವು. ಆ ಸಾಲವನ್ನು ಏನೋ ತೆಗೆದುಕೊಂಡೆವು ಆದರೆ ನಮ್ಮ ಗುರಿಯನ್ನು ಮುಟ್ಟಲಿಲ್ಲ; ನಾವು ಹಿಂದೆ ಬಿದ್ದಿದ್ದೇವೆ, ಕಳಪೆಯಾಗಿದ್ದೇವೆ, ಇಷ್ಟು ಹಣವನ್ನು ಖರ್ಚು ಮಾಡಿದರೂ ಸಹ ವಿಶ್ವಮಟ್ಟದಲ್ಲಿ ಮಾರುಕಟ್ಟೆಯನ್ನು ಸ್ಥಾಪಿಸಲು ನಮಗೆ ಸಾಧ್ಯವಾಗಿಲ್ಲ; ಎರಡನೆಯದಾಗಿ ಒಳ್ಳೆಯ ಗುಣಮಟ್ಟದ ರೇಷ್ಮೆಯನ್ನು ತಯಾರು ಮಾಡುವುದಕ್ಕೆ ನಮ್ಮಿಂದ ಆಗುತ್ತಿಲ್ಲ, ನಾವು ಬಹಳ ಕಷ್ಟದಲ್ಲಿದ್ದೇವೆ, ಕಳಪೆಯಾಗಿದ್ದೇವೆ; ಚೈನಾ ದೇಶದಲ್ಲಿ ಏನು 2A ಮತ್ತು 2B, 2C ಮುಂತಾಗಿ ಗೂಡನ್ನು ಹೇಳುತ್ತಾರೆ ಆದು ನಮ್ಮ ದೇಶದಲ್ಲಿ ಬಹಳ ಕಳಪೆಯಾಗಿದೆ; ನಮ್ಮ ಗೂಡಿನ ರೇಷ್ಮೆಯ ಗುಣಮಟ್ಟಕ್ಕೂ ಅವರ ರೇಷ್ಮೆ ಗೂಡಿನ ಗುಣಮಟ್ಟಕ್ಕೂ ಸಂಬಂಧವಿಲ್ಲ; ಚೈನಾ ಮತ್ತು ಜಪಾನ್ ದೇಶಗಳಲ್ಲಿ 5 ಕೆ.ಜಿ. ಗೂಡಿನಲ್ಲಿ ಒಂದು ಕೆ.ಜಿ. ರೇಷ್ಮೆಯನ್ನು ಉತ್ಪಾದನೆ ಮಾಡುತ್ತಾರೆ. ಆದರೆ ನಮ್ಮಲ್ಲಿ ಹುಳುಗಳು ಗೂಡಿನಿಂದ ಹೊರಗೆ ಬರಲು ಸಾಧ್ಯವಾಗುತ್ತಿಲ್ಲ; ನಾವು ಎಳನೀರನ್ನು ಹೇಗೆ ಹೊಡೆಯುತ್ತೇವೆಯೋ ಆ ರೀತಿಯಲ್ಲಿ ಗೂಡನ್ನು ಚೂಪಾಗಿ ಎರೆದು ಆ ಮೂಲಕ ಹುಳು ಬರತಕ್ಕದ್ದು. ನಮ್ಮ ಗೂಡನ್ನು ಕೈಗೆ ತೆಗೆದುಕೊಂಡಾಗ ಅದರಲ್ಲಿ ಒಳಗಿರುವ ಎಲ್ಲಾ ಪದರವೂ, ಹುಳುವಿನ ಎಲ್ಲಾ ಅಂಗಾಂಗವೂ ಕಾಣುತ್ತದೆ. ಅವರಲ್ಲಿ ಒಂದು ಗೂಡು ಸುಮಾರು 3600 ಮೀಟರ್ ದಾರ ಕೊಡುತ್ತದೆ, ಆದರೆ ನಮ್ಮದು ಕೇವಲ 700–800 ಮೀಟರ್ ದಾರವನ್ನು ಕೊಡುತ್ತದೆ. ದಯಮಾಡಿ ಇದರ ಬಗ್ಗೆ ತಾವು ನೋಡಬೇಕು. ನಮ್ಮಲ್ಲಿ 10 ಕೆಜಿಗೆ ಒಂದು ಕೆಜಿ ರೇಷ್ಮೆ ಬಂದರೆ ಅವರಲ್ಲಿ 5 ಕೇಜಿಗೆ ಒಂದು ಕೇಜಿ ರೇಷ್ಮೆ ಬರುತ್ತದೆ. ಆ ಮಟ್ಟವನ್ನು ಮುಟ್ಟಬೇಕೆಂದು ನಾವು ವಿಶ್ವ ಬ್ಯಾಂಕಿನಿಂದ ಸಾಲವನ್ನು ಪಡೆದಿದ್ದು.

ಆದರೆ ನಾವು ಆ ಮಟ್ಟವನ್ನು ಮುಟ್ಟುವುದಕ್ಕೆ ಇನ್ನೂ ಆಗಲಿಲ್ಲ. ಪ್ರಗತಿಯಾಗಲಿಲ್ಲ. ಅನುತ್ಪಾದನೆಗೆ ಹೆಚ್ಚಿಗೆ ಖರ್ಚು ಮಾಡಿದ್ದಾರೆ. ರೇಷ್ಮೆ ತಳಿಯ ಬಗ್ಗೆ ರೇಷ್ಮೆ ಗುಣಮಟ್ಟದ ಬಗ್ಗೆ ಗೂಡಿನ ಗುಣಮಟ್ಟದ ಬಗ್ಗೆ, ಸೊಪ್ಪನ್ನು ಉತ್ತಮವಾಗಿ ಬೆಳೆಸುವ ಕೆಲಸವನ್ನು ನಾವು ಮಾಡುವುದಕ್ಕೆ ಆಗಲಿಲ್ಲ. ನಾವು ಈ ದಿಸೆಯಲ್ಲಿ ಹಿಂದೆ ಬಿದ್ದಿದ್ದೇವೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ನಾನು ಹೇಳುತ್ತೇನೆ. ತಾವು ಈ ಗುರಿಯನ್ನು ಮುಟ್ಟಬೇಕು. ಗೂಡನ್ನು ಬಿತ್ತನೆ ಮಾಡುವ ಯಂತ್ರವನ್ನು ನಾವು ಇನ್ನೂ ಆಧುನೀಕರಣ ಮಾಡುವುದಕ್ಕೆ ಆಗಿಲ್ಲ. ಗೂಡು ತೆಗೆಯತಕ್ಕದ್ದು, ರೇಷ್ಮೆಯನ್ನು ಕಡಿಮೆ ಖರ್ಚಿನಲ್ಲಿ ಉತ್ಪಾದನೆ ಮಾಡತಕ್ಕ ವ್ಯವಸ್ಥೆ ಇದೆ, ಅದನ್ನು ಮಾಡಲಿಲ್ಲ. ಹುರಿ ಮತ್ತು ನೇಯ್ಗೆ ಮುಂತಾದುವುಗಳಲ್ಲಿ ಉತ್ತಮ ತಾಂತ್ರಿಕ ಜ್ಞಾನವನ್ನು ಅಳವಡಿಸಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ, ತಳಿಯ ಬಗ್ಗೆ, ಶ್ರೇಷ್ಠ ಮಟ್ಟದ ಗೂಡಿನ ಬಗ್ಗೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆಯತಕ್ಕ ರೇಷ್ಮೆಯ ಬಗ್ಗೆ ನಾವು ಸಾಧಿಸಬೇಕಾದುದು ಬಹಳ ಇದೆ. ಇದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ತಾವು ಈ ಕೆಲಸ ಮಾಡಬೇಕು. ತಾವು ಒಂದು ಕಾನೂನನ್ನು ಏನು ಮಾಡಿದಿರಿ The Karnataka Silk Worm Seeds Cocoon and Silk Yard Marketing Act 1955 ಅಂದರೆ ಕರ್ನಾಟಕ ರೇಷ್ಮೆ ಹುಳುವಿನ ಮೊಟ್ಟೆ, ಗೂಡು, ಮತ್ತು ರೇಷ್ಮೆಗಾರರ ಉತ್ಪಾದನೆ, ವಿತರಣೆ, ಪೂರೈಕೆ ಮತ್ತು ಮಾರಾಟ 1955, ಈ ಕಾನೂನನ್ನು ಮಾಡಿದಿರಿ. ಬೆಲೆ ಸ್ಥಿರೀಕರಣ ನಿಧಿ ಎಂದು ಮಾಡಿದಿರಿ. ಈ ಹಣ ಯಾರದ್ದು ಸ್ವಾಮಿ ? ಈ ಹಣ ಪೂರ್ತಿ ರೈತರದ್ದು, ಯಾರು ಮಾರ್ಕೆಟ್‌ಗೆ ಗೂಡನ್ನು ತಂದು ಮಾರಾಟ ಮಾಡುತ್ತಾರೆ, ಅವರು ಕೊಡತಕ್ಕ ಶುಲ್ಕ, ಎರಡನೆಯದು ರೇಷ್ಮೆ ವಲಯ ಕೇಂದ್ರದಲ್ಲಿ ರೇಷ್ಮೆ ಮಾರಾಟ

ಏನು ಮಾಡುತ್ತಾರೆ, ಅವರು ಕೊಡತಕ್ಕ ಶುಲ್ಕ ಇದನ್ನೆಲ್ಲಾ ಸೇರಿಸಿ ಒಂದು ಫಂಡ್ ಎಂದು ಮಾಡಿದಿರಿ. ಸ್ಥಿರ ಬೆಲೆ ನಿಯಂತ್ರಣ ನಿಧಿ ಎಂದು ತಾವು ಮಾಡಿದಿರಿ. ಈ ನಿಧಿಯನ್ನು ಯಾವುದಕ್ಕೆ ಬಳಸಬೇಕೆಂದಿದೆ ? ನೀವು ಯಾವುದಕ್ಕೆ ಬಳಸಿದ್ದೀರಿ ? ಈ ನಿಧಿ ಇವತ್ತು 80 ಕೋಟಿ ರೂ. ಆಗಿದೆ. ಇಡೀ ದೇಶದಲ್ಲಿ 80 ಕೋಟಿ ರೂ. ಪೈಕಿ 30 ಕೋಟಿ ರೂ.ಗಳನ್ನು ತಾವು ಏತಕ್ಕೆ ಖರ್ಚು ಮಾಡಿದಿರಿ ? ಯಾವ ಉದ್ದೇಶಕ್ಕಾಗಿ ಖರ್ಚು ಮಾಡಬೇಕೆಂದು ಕಾನೂನು ಇದೆ ? ಯಾರು ರೇಷ್ಮೆ ಕೈಗಾರಿಕೆಯಲ್ಲಿ ನಿರತರಾಗಿರುತ್ತಾರೆ, ಅವರ ಅಭ್ಯುದಯಕ್ಕಾಗಿ, ಅವರ ಕಲ್ಯಾಣಕ್ಕಾಗಿ ಖರ್ಚು ಮಾಡಬೇಕೆಂದಿದೆ. ಆ ರೀತಿ ತಾವು ಮಾಡಿದಿರಾ ? ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ತಾವು 4 ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ.

ಏತಕ್ಕೆ ಕೊಟ್ಟಿರಿ ? ನೀವು ಇರತಕ್ಕ ಕಾನೂನನ್ನು ಮುರಿದಂತಾಗಲಿಲ್ಲವೆ ? ಅವರಿಗೆ ಕೊಡುವುದಕ್ಕೆ ಯಾರು ಹೇಳಿದರು ? ಆದ್ದರಿಂದ ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡುತ್ತೇನೆ. ಬೆಲೆ ಸ್ಥಿರೀಕರಣ ನಿಧಿ ಎಂದು ಏನಿದೆ ಇದಕ್ಕೆ ಸಂಬಂಧಪಟ್ಟ ಮಂತ್ರಿಯವರು ಅಧ್ಯಕ್ಷರಾಗಿರತಕ್ಕದ್ದು, ರೇಷ್ಮೆ ಇಲಾಖೆಯ ನಿರ್ದೇಶಕರೊಬ್ಬರು ಸದಸ್ಯರಾಗಿದ್ದು ಇವರಿಬ್ಬರೂ ಒಟ್ಟಿಗೇ ಸೇರಿ ಈ ನಿಧಿಯನ್ನು ಆಪರೇಟ್ ಮಾಡುವ ವ್ಯವಸ್ಥೆ ಮಾಡಬೇಕು. ಈಗಿರತಕ್ಕದ್ದು ರೇಷ್ಮೆ ಇಲಾಖೆಯ ನಿರ್ದೇಶಕರು ಆಪರೇಟ್ ಮಾಡತಕ್ಕದ್ದು, ಯಾರೋ ಒಬ್ಬರು ಕಾರ್ಯದರ್ಶಿ ಆಪರೇಟ್ ಮಾಡತಕ್ಕದ್ದು ಎಂದು ಇದೆ. ಈ ರೀತಿ ದಯವಿಟ್ಟು ಮಾಡಬೇಡಿ. ನಾನು ಹೇಳಿದಂತೆ ಇದಕ್ಕೆ ತಾವು ಅಧ್ಯಕ್ಷರಾಗಿರಬೇಕು. ರೇಷ್ಮೆ ಇಲಾಖೆಯ ನಿರ್ದೇಶಕರೊಬ್ಬರು ಸದಸ್ಯರಾಗಿರಬೇಕು. ತಾವಿಬ್ಬರೂ ಜಂಟಿಯಾಗಿ ಈ ನಿಧಿಯನ್ನು ಆಪರೇಟ್ ಮಾಡಬೇಕು. ತಮಗೆ ಈ ನಿಧಿ ಯಾವ ವರ್ಗದವರಿಂದ ಸಂಗ್ರಹವಾಗಿದೆ ಆ ವರ್ಗದ ಜನರನ್ನು ಇದರಲ್ಲಿ ಪ್ರತಿನಿಧಿಯಾಗಿ ತೆಗೆದುಕೊಳ್ಳಬೇಕು. ಆ ವರ್ಗ ಯಾರು ಎಂದರೆ, ಈ ರಾಜ್ಯದಲ್ಲಿ ಯಾರು ರೇಷ್ಮೆ ಗೂಡನ್ನು ಬೆಳೆಯುತ್ತಾರೆ ಅವರು, ದಾರವನ್ನು ಬಿಚ್ಚುವವರು ಏನಿದ್ದಾರೆ, ಇವರ ಪ್ರತಿನಿಧಿಗಳು ಇದರಲ್ಲಿರಬೇಕು. ತಾವು ಮಾತ್ರ ಇದರ ಅಧ್ಯಕ್ಷರಾಗಿರಬೇಕು. ಯಾವ ಉದ್ದೇಶಕ್ಕಾಗಿ ಉಪಯೋಗಿಸಲು ಈ ಹಣವನ್ನು ಮೀಸಲಿಟ್ಟಿದೆ, ಆ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ವಿನಿಯೋಗ ಮಾಡಕೂಡದು. ರೇಷ್ಮೆ ಸಾಕುವ ಮನೆ ಬಹಳ ಶುಚಿಯಾಗಿರಬೇಕು. ನಮ್ಮ ರೈತರು ಎಲ್ಲಿ ಅಡಿಗೆ ಮಾಡುತ್ತಾರೆ, ಎಲ್ಲಿ ಎತ್ತುಗಳನ್ನು ಕಟ್ಟಲು ಕೊಟ್ಟಿಗೆ ಮಾಡಿಕೊಂಡಿರುತ್ತಾರೆ, ಆ ಜಾಗದಲ್ಲಿ ರೇಷ್ಮೆ ಹುಳುವನ್ನು ಮೇಯಿಸುತ್ತಿದ್ದಾರೆ. ಇದರಿಂದಾಗಿ ರೋಗ ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ. ರೋಗ ನಿಯಂತ್ರಣ ಮಾಡಬೇಕಾದರೆ ಹುಳುವನ್ನು ಸಾಕತಕ್ಕ ಮನೆ ಶುಚಿಯಾಗಿರಬೇಕು. ಈಗ ಈ ನಿಧಿಯಲ್ಲಿ 50 ಕೋಟಿ ರೂ. ಏನಿದೆ ಇದರಲ್ಲಿ ರೈತರಿಗೆ ಇನ್ಸೆಂಟಿವ್ ಹಣವನ್ನು ಕೊಟ್ಟು ಬೇರೆ ಮನೆಗಳನ್ನು ಕಟ್ಟಿಸಿಕೊಡತಕ್ಕ ವ್ಯವಸ್ಥೆ ಮಾಡಿ. ಅವನು 50 ಸಾವಿರ ರೂ. ಮನೆ ಬೇಕಾದರೂ ಕಟ್ಟಿಕೊಳ್ಳಲಿ. ಇವರಿಗೆ ಶೇ. 5 ರಷ್ಟು ಪ್ರೋತ್ಸಾಹ ಧನ ಕೊಡಿ, ಹರಿಜನ ಗಿರಿಜನರು ಮನೆಗಳನ್ನು ಕಟ್ಟಿಕೊಳ್ಳುವಾಗ ಶೇ. 10ರಷ್ಟು ಪ್ರೋತ್ಸಾಹ ಧನ ಕೊಡಿ. ಈ ಹಣವನ್ನು ಇದಕ್ಕಾಗಿ ಖರ್ಚು ಮಾಡಿ. ನಿಮ್ಮ ಕಾಲದಲ್ಲಿ ಒಳ್ಳೆಯದಾಗಲಿ, 20 ಸಾವಿರ, 50 ಸಾವಿರ ಮನೆಗಳನ್ನು ತಾವು ಕಟ್ಟಿಸಿಕೊಡಿ. 5–10 ಸಾವಿರ ರೂ. ಪ್ರೋತ್ಸಾಹ ಧನ ಕೊಡಿ. ಎಲ್ಲಿಯವರೆಗೆ ಶುಚಿಯಾದ ಮನೆಗಳಲ್ಲಿ ಹುಳುಗಳನ್ನು ಸಾಕಾಣಿಕೆ ಮಾಡುವುದಿಲ್ಲ, ಅಲ್ಲಿಯವರೆಗೂ ತಾವು ಈ ರೋಗವನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಿಲ್ಲ. ಹೂಜಿ ಹುಳುಗಳ ಬಾಧೆ, ಗಂಟುರೋಗ, ಸುಣ್ಣ ಕಟ್ಟು ಇಂಥ ಯಾವುದೇ ರೋಗವನ್ನಾದರೂ ನಿಯಂತ್ರಿಸಲು ತಮಗೆ ಸಾಧ್ಯವಿಲ್ಲ. ಜಪಾನ್ ಮುಂತಾದ ದೇಶಗಳಲ್ಲಿ ಪ್ರತ್ಯೇಕವಾದ ಮನೆಗಳನ್ನು ಮಾಡಿದ್ದಾರೆ. ನಿಮ್ಮಲ್ಲಿ 50 ಕೋಟಿ ರೂ. ಇದೆ. ನೀವು ಮಾಡಬೇಕಾದ ಕೆಲಸವೆಂದರೆ, ಎಲ್ಲಿ ತಾವು ದುಡ್ಡನ್ನು ವಸೂಲು ಮಾಡುತ್ತೀರಿ, ಅಲ್ಲಿಗೆ

ಸಂಬಂಧಪಟ್ಟ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಹಣವನ್ನು ಇಡಬೇಕೆಂದಿದೆ. ಅಥವಾ ಟ್ರೆಜರಿಯಲ್ಲಿಡಬೇಕೆಂದಿದೆ. ತಾವು ಈ ಹಣವನ್ನು ಎಲ್ಲಿಟ್ಟಿದ್ದೀರೆಂದು ದಯವಿಟ್ಟು ಹೇಳಿ.

ನೀವು ಹೋಗಿ ಯಾವುದೋ ಒಂದು ಫಂಡಿಗೆ ಹಾಕಿಬಿಟ್ಟು ಸರ್ಕಾರದ ಮುಂದೆ ಒಂದು ಕೋಟಿಗೋ ಎರಡು ಕೋಟಿಗೋ ಹೋಗಿ ಭಿಕ್ಷೆ ಬೇಡತಕ್ಕಂಥದ್ದು ಸರಿಯಲ್ಲ. ಆಯಾ ಸ್ಥಳದ ವಾಣಿಜ್ಯ ಬ್ಯಾಂಕ್‌ಗಳಲ್ಲಿ ನ್ಯಾಶನಲೈಸ್ಡ್ ಬ್ಯಾಂಕ್‌ಗಳಲ್ಲಿ ಈ ಹಣ ಇಡಬೇಕೆಂದು ಇದೆ. ಆದರೆ ತಾವೆಲ್ಲಿ ಇಟ್ಟಿದ್ದೀರಿ ? ಶಿಡ್ಲಘಟ್ಟದಲ್ಲಿಟ್ಟಿದ್ದೀರಾ ? ಕೋಲಾರದಲ್ಲಿ ಇಟ್ಟಿದ್ದೀರಾ ? ಕೊಳ್ಳೆಗಾಲದಲ್ಲಿಟ್ಟಿದ್ದೀರಾ ? ಅಥವಾ ಚಾಮರಾಜನಗರದಲ್ಲಿಟ್ಟಿದ್ದೀರಾ ? ಎಲ್ಲಿಟ್ಟಿದ್ದೀರಿ ತಾವು ? ಎಲ್ಲೂ ಇಟ್ಟಿಲ್ಲವಲ್ಲ. 85 ಕೋಟಿ ರೂಪಾಯಿಗಳನ್ನು ಇಷ್ಟ ಬಂದ ಹಾಗೆ ಖರ್ಚು ಮಾಡಿದ್ದೀರಿ. ನಮ್ಮ ರೇಷ್ಮೆ ಉತ್ಪಾದನೆ ಮಾಡತಕ್ಕಂಥ ರೈತರಿಗಾಗಲೀ ರೇಷ್ಮೆ ಕೃಷಿಕರಿಗಾಗಲೀ, ರೇಷ್ಮೆ ಕೈಗಾರಿಕೆಯಲ್ಲಿ ನಿರತರಾಗಿರತಕ್ಕಂಥವರಿಗೆ ಯಾರಿಗಾದರೂ ಖರ್ಚು ಮಾಡಿದ್ದೀರಾ ? ಎಷ್ಟು ಅಸಹ್ಯ ಇದು. ದಯಮಾಡಿ ತಾವು ಈ ಇಲಾಖೆಗೆ ಮಂತ್ರಿಯಾಗಿರುವಾಗ ಇದರ ಜವಾಬ್ದಾರಿ, ಇದರ ಮೇಲ್ವಿಚಾರಣೆ ನಮ್ಮ ಎಲ್ಲ ಸುಮಾರು 20 ಲಕ್ಷ ಜನರ ಕ್ಷೇಮಾಭ್ಯುದಯವನ್ನು ನೋಡತಕ್ಕಂಥದ್ದು, ಅವರ ಕ್ಷೇಮವನ್ನು ಬಯಸತಕ್ಕಂಥದ್ದು ನಿಮ್ಮ ಕೈಯಲ್ಲಿದೆ. ನೀವು ಎಲ್ಲಿ ವಿಫಲರಾಗಿದ್ದೀರೋ ಅಲ್ಲಿ ಹೋಗುತ್ತಿದೆ. ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು. ಇವತ್ತಿನದಿವಸ ಒಂದು ಗಂಟುರೋಗ ಬಂದಿತು. ಎಂದರೆ ಅದನ್ನು ನಿಯಂತ್ರಣ ಮಾಡಲಿಕ್ಕೆ ತಮ್ಮ ಪ್ರಯತ್ನ ಏನು ? ಜಪಾನಿನಿಂದ ಒಬ್ಬರು ಸೆಂಟ್ರಲ್ ಸಿಲ್ಕ್ ಬೋರ್ಡ್‌ನವರನ್ನು ಕರೆಸಿದ್ದಾರೆ. ಅವರು ಬಹಳ ತಜ್ಞರು, ಈ ಒಂದು ಗಂಟು ರೋಗದಲ್ಲಿ 3–4 ರೀತಿ ಇದೆ. ನಮ್ಮಲ್ಲಿ ಬಂದಿರತಕ್ಕಂಥದ್ದು ಬಹಳ ಕ್ರೂರವಾಗಿರತಕ್ಕಂಥದ್ದು. ಈ ರೋಗವನ್ನು ನಿಯಂತ್ರಣ ಮಾಡತಕ್ಕಂಥ ಶಕ್ತಿ ಅದನ್ನು ಅರಿತಿರತಕ್ಕಂಥವರು ನಿಪುಣರು, ವಿದ್ವಾಂಸರು ಬುದ್ಧಿವಂತರು ಒಬ್ಬರು ಇದ್ದಾರೆ. ಅವರನ್ನು ಜಪಾನ್‌ಗೆ ಸೆಂಟ್ರಲ್ ಸಿಲ್ಕ್ ಬೋರ್ಡ್‌ನವರು ಕಳುಹಿಸಿದ್ದಾರೆ. ಅವರು ಬೆಂಗಳೂರಿನಲ್ಲೇ ಇದ್ದಾರೆ. ಅವರ ಸೇವೆಯನ್ನು ಪಡೆದುಕೊಳ್ಳಲಿಕ್ಕಾಗಲಿಲ್ಲ ನಮ್ಮ ಇಲಾಖೆಯವರು. ಏತಕ್ಕೆ ಪಡೆದುಕೊಳ್ಳಲಿಲ್ಲ ? ದಯವಿಟ್ಟು ತಾವು ಅರ್ಥಮಾಡಿಕೊಳ್ಳಬೇಕು. ಇವತ್ತಿಗೂ ನಾನು ನಿಮಗೆ ಸಲಹೆ ಕೊಡುತ್ತಿದ್ದೇನೆ. ಅವರು ನಮ್ಮಲ್ಲೇ ಇದ್ದಾರೆ. ಬೆಂಗಳೂರಿನಲ್ಲೇ ಇದ್ದಾರೆ. ಅವರನ್ನು ತಾವು ಭೇಟಿ ಮಾಡಿ, ಅವರ ಸಲಹೆಯನ್ನು ಪಡೆದು, ಇನ್ನು ಮುಂದೆ ಈ ರೋಗವನ್ನು ನಿಯಂತ್ರಿಸತಕ್ಕಂಥ ಕೆಲಸವನ್ನು ತಾವು ಮಾಡಬೇಕು. ಇದನ್ನು ಪೂರ್ತಿ ನಿಯಂತ್ರಣ ಮಾಡಲಿಕ್ಕೆ ಆಗುವುದಿಲ್ಲ. ಅದನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಯಾವ ರೀತಿ ಈ ಒಂದು ರೋಗ ನಮ್ಮ ರೇಷ್ಮೆ ಹುಳುವಿಗೆ ತಗಲುತ್ತದೆ, ಅದರ ಬಾಧೆ ಎಷ್ಟು ಎಂಬುದನ್ನು ತಿಳಿದುಕೊಳ್ಳಬೇಕು. ಒಂದು ಪ್ರಶ್ನೆಯನ್ನು ನಾನು ಕೇಳುತ್ತೇನೆ. ತಾವು ತಯಾರು ಮಾಡತಕ್ಕಂಥ ಬಿತ್ತನೆ ಗೂಡಿನಲ್ಲಿ ಶೇಕಡಾ ಎಷ್ಟೆಷ್ಟು ಈ ರೋಗ ಇದೆ ಎಂದು ತಾವು ಪತ್ತೆ ಮಾಡಿದ್ದೀರಾ ? ಖಾಸಗಿಯವರು ಬಹಳ ಜನ ಮಾಡುತ್ತಾರೆ, ಖಾಸಗಿಯವರು 960 ಜನ ಇದ್ದಾರೆ. ತಮ್ಮ ಬಿತ್ತನೆ ಕೋಠಿಗಳು ಎನಿವೆ, ಆ ಕೋಠಿಗಳಲ್ಲಿ ಉತ್ಪಾದನೆ ಮಾಡತಕ್ಕಂಥ ಮೊಟ್ಟೆಗಳಲ್ಲಿ ಶೇಕಡಾ ಎಷ್ಟೆಷ್ಟು ಕಳೆದವರ್ಷ ಈ ವರ್ಷ ಈ ರೋಗ ಬಂದಿದೆ ಎಂದು ಕಂಡುಹಿಡಿದಿದ್ದಾರೆ ? ಎಷ್ಟು ಮೊಟ್ಟೆಯನ್ನು ತಯಾರು ಮಾಡಿದ್ದಾರೆ. ಇದರ ಬಗ್ಗೆ ತಮಗೇನಾದರೂ ಅಂದಾಜಿದೆಯೋ ? ಮಾಹಿತಿ ಇದೆಯೋ ? ಎಷ್ಟು ಜಾಸ್ತಿಯಾಯಿತು, ಎಷ್ಟು ಕಡಿಮೆ ಆಯಿತು ಎಂಬುದು ನಿಮ್ಮ ಗಮನಕ್ಕೆ ಬಂದಿದೆಯಾ ? ಹೋದವರ್ಷ ಜಾಸ್ತಿಯಾದುದಕ್ಕೆ ನಿಯಂತ್ರಣ ಮಾಡಲಿಕ್ಕೆ ಮಾಡಿದ ಸಾಧನೆಯಾದರೂ ಏನೆಂದು ತಿಳಿದುಕೊಂಡಿದ್ದೀರಾ ?

ನಿಮ್ಮನ್ನು ನಂಬಿ ರೇಷ್ಮೆಯ ಕೃಷಿಕ ಗೂಡು ಬೆಳೆಯುತಕ್ಕಂಥ ರೈತ ಬಹಳ ಕಂಗಾಲಾಗಿದ್ದಾನೆ. ಬಹಳ ತೊಂದರೆಪಡುತ್ತಿದ್ದಾನೆ. ದಯವಿಟ್ಟು ಈ ಒಂದು ಉದ್ಯಮವನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕೆಂದರೆ ಅದಕ್ಕೆ ಬರತಕ್ಕಂಥ ರೋಗವನ್ನು ನಿಯಂತ್ರಣ ಮಾಡತಕ್ಕಂಥ

ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಆ ಶಕ್ತಿಯನ್ನು ಬೆಳೆಸಿಕೊಳ್ಳದೆ ಇದ್ದಾಗ ತೊಂದರೆಯಾಗುತ್ತದೆ. ಕಳೆದಸಾರಿ ನಮಗೆ ಇರತಕ್ಕಂಥ ಲೆಕ್ಕದ ಪ್ರಕಾರವಾಗಿ ಈ ರಾಜ್ಯದಲ್ಲಿರತಕ್ಕಂಥ ರೇಷ್ಮೆ ಎಷ್ಟು ಎಕರೆಯಲ್ಲಿತ್ತೋ ಅದು ಕಡಿಮೆಯಾಗಿದೆ; ಅನೇಕರು ಕಡ್ಡಿಯನ್ನು ಕಿತ್ತುಹಾಕಿಬಿಟ್ಟಿದ್ದಾರೆ. ಕಾರಣವೇನೆಂದರೆ ಈ ರೋಗವನ್ನು ನಿಯಂತ್ರಣ ಮಾಡಲಿಕ್ಕೆ ಆಗಲಿಲ್ಲ. ಬೇರೆ ವಾಣಿಜ್ಯ ಬೆಳೆಗಿಂತ ರೇಷ್ಮೆ ಬೆಳೆಯಲ್ಲಿ ಕಡಿಮೆ ವರಮಾನ ಬಂತು. ಇದನ್ನು ನಂಬಿದರೆ, ಸಾಧ್ಯವಾಗುವುದಿಲ್ಲವೆಂದು ಹೇಳಿ ಅನೇಕ ಜನರು ಕಡ್ಡಿಯನ್ನು ಕಿತ್ತುಹಾಕಿದ್ದಾರೆ. ದಯಮಾಡಿ ನಿಮ್ಮ ಉದ್ಯಮದ ಬಗ್ಗೆ, ನಿಮ್ಮ ಕೃಷಿ ಬಗ್ಗೆ ಜನಗಳಿಗೆ ಒಂದು ಹೆಚ್ಚಿನ ಆಕರ್ಷಣೆ ಮಾಡತಕ್ಕಂಥ ಕೆಲಸವನ್ನು ತಾವು ಏನು ಮಾಡಿದ್ದೀರಾ ಸ್ವಾಮಿ ? ಇಂಥದ್ದನ್ನು ಮಾಡಿದ್ದೇವೆ ಎನ್ನತಕ್ಕಂಥದ್ದನ್ನು ಹೇಳಿ ? ನಿಮ್ಮಿಂದ ಏನೂ ಮಾಡಲಿಕ್ಕೆ ಆಗಲಿಲ್ಲ. ಆದ್ದರಿಂದ ಈ ಒಂದು ರೋಗವನ್ನು ನಿಯಂತ್ರಣಕ್ಕೆ ತರಲು ನೀವು ಪ್ರಯತ್ನ ಪಡುತ್ತೀರೆಂದು ನಾನು ಹೇಳಲಿಕ್ಕೆ ಇಷ್ಟಪಡುವುದಿಲ್ಲ. ಬಹುಶಃ ಯಾರು ತಜ್ಞರು ಇದ್ದಾರೆ ಅವರ ಸೇವೆಯನ್ನು ಎರವಲು ಪಡೆಯಲಿಕ್ಕೆ ತಾವು ಪ್ರಯತ್ನ ಮಾಡಬೇಕು. ಅವರು ಬೆಂಗಳೂರಿಗೆ ಬಂದು ಆರು ತಿಂಗಳಾಗಿದೆ. ನೀವು ಇನ್ನೂ ಅವರನ್ನು ಸಂಧಿಸಿಲ್ಲ. ಅವರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಯಾವ ರೀತಿ ಈ ರೋಗವನ್ನು ನಿಯಂತ್ರಣದಲ್ಲಿ ತರಬೇಕೆಂದು ಹೇಳಿ ವಿಚಾರ ವಿನಿಮಯ ಮಾಡಲಿಲ್ಲ. ದಯವಿಟ್ಟು ಈ ಕೆಲಸವನ್ನು ಮಾಡಬೇಕು.

ಇನ್ನು ಬೆಳೆ ನಿಯಂತ್ರಣದ ಬಗ್ಗೆ ಸಾಕಷ್ಟು ಹೇಳಿದ್ದೇನೆ. ಮತ್ತೆ ಅತಿ ಮುಖ್ಯವಾಗಿರತಕ್ಕಂಥದ್ದು; ರೇಷ್ಮೆ ವಿನಿಮಯ ಕೇಂದ್ರ, ಇದರ ಬಗ್ಗೆ ನಾನು ನಾಲ್ಕು ಮಾತನಾಡಬೇಕು ಸ್ವಾಮಿ. ದಯಮಾಡಿ ನಮ್ಮ ರೈತರಿಗೆ ಪ್ರೋತ್ಸಾಹ ಧನವನ್ನು ಕೊಡತಕ್ಕಂಥ ವಿಷಯವನ್ನು ಮರೆಯಬೇಡಿ. ಮನೆ ಕಟ್ಟಿಸಿಕೊಡಲಿಕ್ಕೆ ಒಂದು ಗುರಿ ಇಟ್ಟುಕೊಳ್ಳಬೇಕು. ಹತ್ತು ಸಾವಿರ ಇಪ್ಪತ್ತು ಸಾವಿರ ರೂ.ಗಳಿಗೆ ಮನೆ ಕಟ್ಟಿಸಬೇಕೆಂದು ಹೇಳಿ ಈ 50 ಕೋಟಿ ರೂಪಾಯಿ ಬೋರ್ಡಿನಲ್ಲಿ ಏನಿದೆ ಆ 50 ಕೋಟಿ ರೂಪಾಯಿಗಳಿಗೆ ಪ್ರೋತ್ಸಾಹ ಧನವನ್ನು ಕೊಡಬೇಕು. ಹುಳು ಸಾಕುವ ಮನೆಗಳನ್ನು ಕಟ್ಟಿಸುವಾಗ ರೋಗವನ್ನು ಶೇಕಡಾ 25ರಷ್ಟಾದರೂ ನಿಯಂತ್ರಣ ಮಾಡಲು ಸಾಧ್ಯವೇ ಎನ್ನುವುದರ ಬಗ್ಗೆ ಯೋಚಿಸಿ ಕಟ್ಟಿಸಬೇಕು. ಜಪಾನ್‌ನಂಥ ಹೊರದೇಶಗಳಲ್ಲಿಯೂ ಕೂಡ ಹುಳು ಸಾಕುವ ಮನೆಗಳನ್ನು ಇಂಥ ಒಂದು ರೋಗನಿರೋಧಕ ಕ್ರಮಗಳನ್ನು ಅನುಸರಿಸಿದ ಮನೆಗಳನ್ನು ಕಟ್ಟಿಸಿರುವಂತೆ ತಾವು ಕೂಡ ಕಟ್ಟಿಸಬೇಕೆಂದು ಹೇಳುತ್ತೇನೆ.

ಇನ್ನು ಸಿಲ್ಕ್ ಮಾರ್ಕೆಂಟಿಂಗ್, ರೇಷ್ಮೆ ವಲಯ ಕೇಂದ್ರವೆಂದು, ಏತಕ್ಕೋಸ್ಕರ ಇದನ್ನು ಮಾಡಿಸಿದ್ದು ? ನೀವು ಮಾಡಿದ ಉದ್ದೇಶವಾದರೂ ಏನು ? ಬೆಂಗಳೂರಿನ ಅವಿನ್ಯೂ ರೋಡ್‌ನಲ್ಲಿ 300 ದಳ್ಳಾಳಿಗಳಿದ್ದಾರೆ. ಆ ದಳ್ಳಾಳಿಗಳಿಂದ ಶೋಷಣೆಯಾಗುತ್ತಿದೆ. ರೇಷ್ಮೆ ವ್ಯಾಪಾರ ಮಾಡತಕ್ಕಂಥವರಿಗೆ ಅದನ್ನು ತಪ್ಪಿಸಬೇಕು. ನಮ್ಮದೇ ಆದಂಥ ಒಂದು ರೇಷ್ಮೆ ಕೋಠಿಯನ್ನು ತೆರೆಯಬೇಕೆಂದು ಹೇಳಿ, ರೇಷ್ಮೆ ಯಾರು ಉತ್ಪಾದನೆ ಮಾಡುತ್ತಾರೆ, ಅವರೆಲ್ಲರೂ ಕೂಡ ರೇಷ್ಮೆ ವಿನಿಮಯ ಕೇಂದ್ರಕ್ಕೆ ಬಂದು ಅಲ್ಲಿ ವ್ಯವಹಾರ ಮಾಡುವಂಥ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ.

ರೇಷ್ಮೆ ಉತ್ಪಾದನೆ ಮಾಡುವವರು ಶೋಷಣೆಗೆ ಒಳಗಾಗಬಾರದೆಂಬ ಉದ್ದೇಶದಿಂದ ಇದನ್ನು ತಂದಿರಿ. ಆ ಗುರಿ ನೆರವೇರಿತೆ ? ರಿಜಿಸ್ಟರ್ಡ್ ವರ್ತಕರು ಎಷ್ಟು ಜನರಿದ್ದಾರೆ ? 1978–79 ರಲ್ಲಿ ಎಷ್ಟು ಜನರಿದ್ದರು, ಇವತ್ತು ಎಷ್ಟು ಜನರಿದ್ದಾರೆ ? ನಮ್ಮ ರಾಜ್ಯದಲ್ಲಿ ಡಿಸೆಂಬರ್‌ರವರೆಗೆ ಉತ್ಪಾದನೆ ಮಾಡಿರತಕ್ಕ ರೇಷ್ಮೆ 5475 ಮೆಟ್ರಿಕ್ ಟನ್‌ಗಳು. ನಿಮ್ಮ ರೇಷ್ಮೆ ವಿನಿಮಯ ಕೇಂದ್ರಕ್ಕೆ ಬಂದದ್ದು 1700 ಟನ್‌ಗಳು ಮಾತ್ರ. ಅಂದರೆ ಎರಡು ಭಾಗ ಹೊರಗಡೆ ಮಾರಾಟವಾಗಿದೆ. ಹೀಗೆ ಏತಕ್ಕೆ ಆಯಿತು ? ನಿಮ್ಮ ಎನ್‌ಫೋರ್ಸ್‌ಮೆಂಟ್ ಸೆಲ್‌ನವರು ಏನು ಮಾಡುತ್ತಿದ್ದರು ? ಅವರು ರೇಷ್ಮೆ ಉತ್ಪಾದನೆ

ಮಾಡತಕ್ಕವರ ಜೊತೆ ಶಾಮೀಲಾಗಿ ಹೊರಗಡೆ ಮಾರುವುದಕ್ಕೆ ಅವರೇ ಅವಕಾಶ ಮಾಡುತ್ತಿದ್ದಾರೆ. ಹೀಗಾದರೆ ಏಕೆ ಬೇಕು ಸ್ವಾಮಿ ರೇಷ್ಮೆ ವಿನಿಮಯ ಕೇಂದ್ರ? ಏನು ಮಾಡುತ್ತಿದೆ ಸ್ವಾಮಿ ನಿಮ್ಮ ಇಲಾಖೆ? ಒಳ್ಳೆಯ ರೇಷ್ಮೆ ಎಲ್ಲ ಹೊರಗಡೆ ಹೋಗುತ್ತದೆ. ಕಳಪೆ ದರ್ಜೆಯ ರೇಷ್ಮೆ ನಿಮ್ಮ ಕೋಠಿಗೆ ಬರುತ್ತದೆ. ತಾವು ಕಳಪೆ ಮಾಲು ದಾಸ್ತಾನು ಮಾಡಿದಿರಿ. ಇವತ್ತು 40–50 ಟನ್ ರೇಷ್ಮೆ ಸ್ಟಾಕ್ ಇದೆ, ಮಾರಾಟವಾಗಲಿಲ್ಲ. ಇದರಿಂದ ಬೇಕಾದಷ್ಟು ಲುಕ್ಸಾನಾಗಿದೆ. ಇದಕ್ಕೆ ಕಾರಣರು ಯಾರು? ನೀವೇ? ಹೇಗೆ ಅಂದರೆ ಕಾನೂನು ಪ್ರಕಾರ ರೇಷ್ಮೆ ಉತ್ಪಾದನೆ ಮಾಡತಕ್ಕವನು ರೇಷ್ಮೆಯನ್ನು ರೇಷ್ಮೆ ವಿನಿಮಯ ಕೇಂದ್ರಕ್ಕೆ ತೆಗೆದುಕೊಂಡು ಬರಬೇಕೆಂದು ಏನು ಆಕ್ಟ್ ಮಾಡಿದೆವು ಅದನ್ನು ವಿರೋಧ ಮಾಡತಕ್ಕವರು ನಿಮ್ಮ ಅಧಿಕಾರಿಗಳು. ಪ್ರತಿಯೊಂದು ಸಾರಿ ಬರತಕ್ಕ ಒಳ್ಳೆಯ ರೇಷ್ಮೆಯೆಲ್ಲಾ ಹೊರಗಡೆ ಹೋಗುತ್ತಿದೆ. ಗಿರಾಕಿಗಳು ರೇಷ್ಮೆ ವಿನಿಮಯ ಕೇಂದ್ರಕ್ಕೆ ಬರುವುದಿಲ್ಲ. ಒಳ್ಳೆಯ ರೇಷ್ಮೆಯನ್ನು ಹೊರಗಡೆಯೇ ಕೊಂಡುಕೊಳ್ಳುತ್ತಾರೆ. ಕಳಪೆ ರೇಷ್ಮೆ ಮಾತ್ರ ಇಲ್ಲಿಗೆ ಬರುತ್ತದೆ. ಅವರು ಯಾವಾಗ ಜಾಸ್ತಿ ರೇಷ್ಮೆಯನ್ನು ತೆಗೆದುಕೊಂಡು ಸ್ಟಾಕ್ ಇಟ್ಟುಕೊಳ್ಳುತ್ತಾರೆ ಆಗ ಬೆಲೆ ಕಡಿಮೆ ಮಾಡುತ್ತಾರೆ. ಹೀಗೆ ಕಡಿಮೆ ಮಾಡಿದಾಗ ರೈತರಿಗೆ ತೊಂದರೆಯಾಗುತ್ತದೆ. ಈ ವರ್ಷ ಎರಡು ರೀತಿಯಲ್ಲಿ ತೊಂದರೆಯಾಗಿದೆ. ಒಂದು ಈ ರೇಟು, ಇನ್ನೊಂದು ಮಾರಾಟ ವ್ಯವಸ್ಥೆ. ಹೊರದೇಶಕ್ಕೆ ಹೋಗಿ ನೋಡಿ. ಜಪಾನ್‌ನಲ್ಲಿ ಎಂತಹ ಸನ್ನಿವೇಶದಲ್ಲೂ 5–10 ಪರ್ಸೆಂಟ್ ಮೇಲೆ ಏರುಪೇರು ಆಗುವುದಿಲ್ಲ. ಆದರೆ ನಮ್ಮಲ್ಲಿ 60–70 ಪರ್ಸೆಂಟ್ ಹೆಚ್ಚು ಕಡಿಮೆಯಾದರೆ ಯಾರು ಈ ಕಸುಬನ್ನು ನಂಬಿಕೊಂಡಿರುತ್ತಾರೆ? ಯಾರು ಈ ಕೃಷಿಯನ್ನು ಅವಲಂಬಿಸುತ್ತಾರೆ. ಅವರಿಗೆ ತಮ್ಮಿಂದ ರಕ್ಷಣೆ ಇಲ್ಲವಾಗಿದೆ. 80 ಕೋಟಿ ರೂಪಾಯಿ ಕೊಟ್ಟು ಹಾಳು ಮಾಡಿದಿರಿ. ನಿಮಗೆ ರೈತರನ್ನು ರಕ್ಷಣೆ ಮಾಡುವುದಕ್ಕಾಗಲಿಲ್ಲ. ನಿಮ್ಮ ಎನ್‌ಫೋರ್ಸ್‌ಮೆಂಟ್ ಸೆಲ್ ಸರಿಯಿಲ್ಲ. ಅದಕ್ಕೆ ನಾವು ಏನು ಮಾಡಬೇಕು? ಈ ರಾಜ್ಯದಲ್ಲಿ ಕಾಟೇಜ್ ಬೇಸಿನ್ ಮತ್ತು ಚರಕ ಮೂಲಕ ರೇಷ್ಮೆ ಬಿಚ್ಚತಕ್ಕವರು 12 ಸಾವಿರ ಜನರಿದ್ದಾರೆ. ನನ್ನ ಸ್ವಂತ ಅನುಭವದ ಪ್ರಕಾರ 12 ಸಾವಿರದಲ್ಲಿ ಒಬ್ಬೊಬ್ಬ ರೀಲರ್ ಒಂದೊಂದು ಸಾವಿರ ರೂಪಾಯಿ ಷೇರು ಹಣ ಕೊಟ್ಟು ಒಂದೂವರೆ ಕೋಟಿ ರೂಪಾಯಿ, ಷೇರು ಹಣ ಮಾಡಿ ಶೇಕಡಾ ಹತ್ತರಷ್ಟು ಸರ್ಕಾರ ಕೊಡುವುದರಿಂದ 15 + ನಮ್ಮದು 2 ಕೋಟಿ ಹೀಗೆ ಒಟ್ಟು 17 ಕೋಟಿ ತೆಗೆದುಕೊಂಡು ಈ ಪ್ರೈಸ್ ಸ್ಟೆಬಿಲೈಸೇಷನ್ ಫಂಡಿಗೆ 50 ಕೋಟಿ ರೂಪಾಯಿ ಎಲ್ಲ ಸೇರಿಸಿ, ನಾವೇ ರೇಷ್ಮೆ ತಂದು ಮಾರಾಟ ಮಾಡತಕ್ಕ ಕೆಲಸ ಮಾಡುತ್ತೇವೆ. ನಿಮ್ಮ ಅಧಿಕಾರಿಗಳು ಇರಲಿ. ನಾವು ಒಂದು ಕಮಿಟಿ ಮಾಡುತ್ತೇವೆ. ಆ ಕಮಿಟಿ ಮುಖಾಂತರ ಈ ರಾಜ್ಯದಲ್ಲಿ ಯಾವನು ರೇಷ್ಮೆ ಉತ್ಪಾದನೆ ಮಾಡುತ್ತಾನೆ ಅಂತಹ ಪ್ರತಿಯೊಬ್ಬನೂ ರೇಷ್ಮೆ ಕೇಂದ್ರಕ್ಕೆ ತರಬೇಕೆಂದು ನಮ್ಮದೇ ಆದ ಒಂದು ಸಿಸ್ಟಂ ಮಾಡಿಕೊಂಡು ಅದರ ಮುಖಾಂತರ ರೇಷ್ಮೆ ತಂದು ಅಲ್ಲಿ ರೇಷ್ಮೆ ಮಾರಾಟ ಮಾಡತಕ್ಕ ಕೆಲಸ ಮಾಡಿದಾಗ ಬೆಲೆ ಹೆಚ್ಚು ಕಡಿಮೆ ಆಗುವುದಿಲ್ಲ, ಯಾವಾಗ ರೇಷ್ಮೆ ಮಾರಾಟ ಹೊರಗಡೆ ಎರಡರಷ್ಟು ಭಾಗ ಆಗುತ್ತದೆ ಆಗ ನಾವು ಬೆಲೆ ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ. ಅದು ನಿಮ್ಮ ಕೈಯಲ್ಲೂ ಇಲ್ಲ. ಹೊರಗಡೆ ಎರಡು ಭಾಗ ಹೋದಾಗ ಒಂದು ಭಾಗ ತೆಗೆದುಕೊಂಡು ನೀವು ಏನು ಮಾಡುವುದಕ್ಕಾಗುತ್ತದೆ? ನಿಮಗೆ ನಿಯಂತ್ರಣ ಮಾಡುವುದಕ್ಕೆ ಶಕ್ತಿ ಇದೆಯೇ? ರೀಲರ್ಸ್ ಕಷ್ಟ ಸುಖಗಳನ್ನು ನೋಡತಕ್ಕ ಶಕ್ತಿ ನಿಮಗೆ ಬಂದಿದೆಯೇ? ಈ ರಾಜ್ಯದಲ್ಲಿ ಎಷ್ಟು ರೇಷ್ಮೆ ಉತ್ಪಾದನೆಯಾಗುತ್ತದೆಂದು 1978 ರಿಂದ ನಾವು ನೋಡುತ್ತಿದ್ದೇವೆ. ಆದರಿಂದ ವರ್ಷದಲ್ಲಿ 2–3 ಕೋಟಿ ರೂಪಾಯಿ ಸುಂಕ ಬರೀ ರೇಷ್ಮೆ ವಿನಿಮಯ ಕೇಂದ್ರದಲ್ಲಿ ಮಾತ್ರ ಬರುತ್ತದೆ. ಗೂಡು ಮಾರತಕ್ಕವರಿಂದ ಅಲ್ಲ. ಅದು ಬಂದರೆ ಇನ್ನೂ ಜಾಸ್ತಿ ಆಗುತ್ತದೆ. ಅಂಥ ಆದಾಯ ಬರತಕ್ಕ ಬಾಬಿನಲ್ಲಿ ನೀವು ಸರಿಯಾಗಿ ವ್ಯವಸ್ಥೆ ಮಾಡದೆ ಬರತಕ್ಕ ರೇಷ್ಮೆ ಬರುತ್ತಿಲ್ಲ. ಒಂದು ಮಾತು ಹೇಳುವುದಾದರೆ, ಗೂಡು ಮಾರುಕಟ್ಟೆಯಲ್ಲಿ ರೀಲರ್ ಗೂಡು ತೆಗೆದುಕೊಳ್ಳುತ್ತಾನೆ. ಅವನು ಎಷ್ಟು ಗೂಡು ತೆಗೆದುಕೊಂಡ ಎಂದು ಲೆಕ್ಕ ಇದೆ. ಹತ್ತಕ್ಕೆ ಒಂದು

ಕೆ.ಜಿ. ರೇಷ್ಮೆ ಅಥವಾ 12 ಕ್ಕೆ ಒಂದು ಕೆ.ಜಿ. ರೇಷ್ಮೆಯಂತೆ ಅವನು ರೇಷ್ಮೆಯನ್ನು ಕೊಡಬೇಕು. ಆ ರೇಷ್ಮೆ ಎಲ್ಲಿ ಹೋಯಿತು ? ನೂರು ಕೆ.ಜಿ. ಗೂಡನ್ನು ಮಾರುಕಟ್ಟೆಗೆ ತಂದಾಗ ಹತ್ತು ಕೆ.ಜಿ. ರೇಷ್ಮೆ ಕೊಡಬೇಕು. ಕೊಡದಿದ್ದರೆ ನೂರು ಕೆ.ಜಿ. ಗೂಡಿನ ರೇಷ್ಮೆ ಎಲ್ಲಿ ಹೋಯಿತು ? ಈ ಬಗ್ಗೆ ಎಷ್ಟು ಕೇಸುಗಳನ್ನು ಹಾಕಿದ್ದೀರಿ ? ಎಷ್ಟು ಜನರಿಗೆ ಇದರಿಂದ ತೊಂದರೆಯಾಗಿದೆ. ತಾವು ಅಡಿಯಿಂದ ಇದನ್ನು ಕಂಟ್ರೋಲ್ ಮಾಡಿಲ್ಲ. ಸುಮ್ಮನೆ ರೇಷ್ಮೆ ವಿನಿಮಯ ಕೇಂದ್ರವನ್ನು ಸ್ಥಾಪನೆ ಮಾಡಿದ್ದೀರಿ. ಇದರಿಂದ ನಮಗೆ ಏನು ಪ್ರಯೋಜನವಾಯಿತು ? ಬೆಲೆಯನ್ನು ಸ್ಥಿರೀಕರಣ ಮಾಡತಕ್ಕ ಕೆಲಸ ಮಾಡಿದಿರಾ ? ಬೆಲೆಯ ಏರುಪೇರನ್ನು ತಡೆದಿರಾ ? ಆ ಕೆಲಸದಲ್ಲಿ ನೀವು ವಿಫಲರಾಗಿದ್ದೀರಿ. ನಿಮಗೆ ಶಕ್ತಿ ಇಲ್ಲ. ನಿಮ್ಮ ಇಲಾಖೆ ಅಷ್ಟು ದಷ್ಟಪುಷ್ಟವಾಗಿ ಬೆಳೆದಿಲ್ಲ. ದಯವಿಟ್ಟು ಇನ್ನು ಮುಂದಾದರೂ ಇದರ ಬಗ್ಗೆ ಯೋಚನೆ ಮಾಡಬೇಕು, ಚಿಂತನೆ ಮಾಡಬೇಕು. ಈ ರಾಜ್ಯದಲ್ಲಿ 30 ಲಕ್ಷ ಜನ ಏನು ಈ ಕೈಗಾರಿಕೆಯನ್ನು ಹಾಗೂ ಈ ಕೃಷಿಯನ್ನು ಅವಲಂಬಿಸಿದ್ದಾರೆ, ಅವರ ಕ್ಷೇಮಾಭಿವೃದ್ಧಿಗೆ ಏನು ಮಾಡಬೇಕೆಂಬುದರ ಬಗ್ಗೆ ಚಿಂತನೆ ಮಾಡಬೇಕು. ಆಗ ನಮಗೆ ಸುಂಕ ಜಾಸ್ತಿ ಬರುತ್ತದೆ ಹಾಗೂ ರೇಷ್ಮೆ ಬೆಲೆ ನಿಯಂತ್ರಣಕ್ಕೆ ಬರುತ್ತದೆ. ಜೊತೆಗೆ ನಾವು ಚೆನ್ನಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ದಯವಿಟ್ಟು ರೇಷ್ಮೆ ಕೇಂದ್ರದ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಬೇಕು. ಅದು ನಿಮ್ಮಿಂದ ಆಗದಿದ್ದರೆ ಆಗುವುದಿಲ್ಲವೆಂದು ಹೇಳಿ. ನಾವು ರೇಷ್ಮೆ ಗೂಡು ಮಾಡತಕ್ಕವರು, ರೇಷ್ಮೆ ನೂಲು ಬಿಚ್ಚತಕ್ಕವರು, ನಾವು ಸಹಕಾರ ಸಂಘ ಮಾಡುತ್ತೇವೆ. ಕಂಪನಿ ಆಕ್ಟ್ ಪ್ರಕಾರ ಎಂದು ನೀವು ಮಾಡಿದಿರಿ. ಕಂಪನಿ ಆಕ್ಟ್ ನಮಗೆ ಬೇಡ. ಅದನ್ನು ಬಿಟ್ಟು ನಾವು ಬೇರೆ ಸಹಕಾರ ಸಂಘ ಮಾಡಿ ಅದರ ಮೂಲಕ ಪ್ರತಿಯೊಬ್ಬನೂ ರೇಷ್ಮೆ ತರತಕ್ಕ ಹಾಗೂ ಮಾರಾಟ ಮಾಡತಕ್ಕ ಕೆಲಸವನ್ನು ನಾವೇ ಮಾಡುತ್ತೇವೆ. 1800 ಜನ ವ್ಯಾಪಾರಗಾರರು ರಿಜಿಸ್ಟ್ರೇಷನ್ ಮಾಡಿದ್ದಾರೆ. ಅದರಲ್ಲಿ ಇವತ್ತಿನ ದಿವಸ 200 ಜನರು ಸಹ ವಿನಿಮಯ ಕೇಂದ್ರಕ್ಕೆ ರೇಷ್ಮೆ ತರುತ್ತಿಲ್ಲ.

ಏಕೆ ಅವರು ಬರುತ್ತಾ ಇಲ್ಲ ಎಂದರೆ ಎಲ್ಲಾ ಹೊರಗಡೆ ಹೋಗುತ್ತದೆ. ರಾಮನಗರ ಒಂದರಲ್ಲೇ 3000 ಕೇಜಿ ಒಂದು ದಿವಸಕ್ಕೆ ಬರುತ್ತದೆ. ಅದರಲ್ಲಿ ನಿಮ್ಮ ರೇಷ್ಮೆ ಕೇಂದ್ರಕ್ಕೆ ಎಷ್ಟು ಬರುತ್ತದೆ ? ಇವತ್ತು ಲೆಕ್ಕ ನೋಡಿದ್ದೀರಾ ? ಒಂದು ದಿನದಲ್ಲಿ ಸುಮಾರು 20 ಕ್ವಿಂಟಾಲ್ ರೇಷ್ಮೆ ಎಂದರೆ 20 ಸಾವಿರ ಕೆ.ಜಿ. ಆಯಿತು. ಒಂದು ಸಾವಿರ ರೂಪಾಯಿ ಬೆಲೆ ಇದ್ದಾಗ 2 ಕೋಟಿ 10 ಲಕ್ಷ ರೂಪಾಯಿ ಆಗುತ್ತದೆ. ಅಂತಹದ್ದರಲ್ಲಿ ನಿಮ್ಮ ವಿನಿಮಯ ಕೇಂದ್ರಕ್ಕೆ ಎಷ್ಟು ಬರುತ್ತದೆ ? ದಯವಿಟ್ಟು ನೀವು ಅರ್ಥ ಮಾಡಿಕೊಳ್ಳಬೇಕು. ಎಷ್ಟು ಗುರಿ ಮುಟ್ಟಬೇಕೋ ಅದನ್ನು ಮುಟ್ಟಿಲ್ಲ. ಡಿಸೆಂಬರ್‌ನಲ್ಲಿ ಎಷ್ಟು ಉತ್ಪಾದನೆ ಆಗಿದೆ ? ಉತ್ಪಾದಿತ ರೇಷ್ಮೆಯಲ್ಲಿ ಕೇವಲ ಮೂರನೇ ಒಂದು ಭಾಗ ನಿಮ್ಮ ಕೇಂದ್ರಕ್ಕೆ ಬಂದಿದೆ. ಎರಡು ಭಾಗವನ್ನು ಬಿಟ್ಟಿದ್ದಾರೆ. ಪೂರಾ ರೇಷ್ಮೆ ಬಂದಿದ್ದರೆ, ಗಿರಾಕಿ ಬಂದಿದ್ದರೆ ಆಗ ಬೆಲೆ ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನೀವು ಮಾಡುವುದಕ್ಕಾಗಿಲ್ಲ. ರೇಷ್ಮೆ ವಿನಿಮಯ ಕೇಂದ್ರಕ್ಕೆ ಬಂದ ಆ ರೇಷ್ಮೆಯನ್ನು ದರ್ಜಾವಾರು ವಿಂಗಡಿಸುವದಕ್ಕೆ ಏನು ಉಪಕರಣ ಬೇಕೋ ಅದನ್ನು ಕೊಂಡುಕೊಳ್ಳಬೇಕೆಂದು ಹೇಳಿದ್ದೆವು. ಅದನ್ನು ಮಾಡಿದ್ದೀರಾ ? ದರ್ಜಾವಾರು ರೇಷ್ಮೆ ವಿಂಗಡಿಸಿದ್ದೀರಾ ? ಈಗ ಉತ್ತಮ ರೇಷ್ಮೆ ಹೊರಗಡೆ ಗಿರಾಕಿಗೆ ಹೋಗುತ್ತಿದೆ. ಕಳಪೆ ರೇಷ್ಮೆ ಇಲ್ಲಿ ಬರುತ್ತಿದೆ. ಇಲ್ಲಿ ರೇಷ್ಮೆ ಕೇಂದ್ರಕ್ಕೆ ಬಂದಾಗ ಡೀಲರ್‌ವೈಸ್ ನೂಲಿನ ದರ್ಜೆ ವಿಂಗಡಿಸಿ ಬೇರೆ ಬೇರೆ ಮಾಡಿ 13–14; 14–16; 18–20 ಎಂದು ದರ್ಜೆ ಮಾಡಿ ತಾವು ಒಂದು ಬೆಲೆ ಫಿಕ್ಸ್ ಮಾಡಿ. ಇವತ್ತು ರೇಷ್ಮೆ ಕೇಂದ್ರದಲ್ಲಿ 18–20 ದರ್ಜೆಯ ರೇಷ್ಮೆ ಇಂತಿಷ್ಟು ಇದೆ ಎಂದು ಹೇಳಲಿ. ಯಾರೇ ಹಣ ಇರುವವರು ಬಂದು ಕೊಂಡುಕೊಳ್ಳಲಿ. ಬೆಲೆ ಕಡಿಮೆ ಆದಾಗ ತಮ್ಮ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್‌ನವರು ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕು. ಇಲ್ಲದೇ ಹೋದರೆ ಏನೂ ಮಾಡುವುದಕ್ಕಾಗುವುದಿಲ್ಲ. ನಿಮ್ಮ ಅಧಿಕಾರಿಗಳನ್ನು ಜಪಾನ್ ದೇಶಕ್ಕೆ ಕಳುಹಿಸುತ್ತೀರಿ. ಏಕೆ ಸ್ವಾಮಿ ?

ಯಾರಿಗೆ ಕಳುಹಿಸುತ್ತೀರಾ ? ಒಂದು ವರ್ಷ –ಎರಡು ವರ್ಷದಲ್ಲಿ ರಿಟೈರ್ ಆಗುವವರನ್ನು ಕಳುಹಿಸುತ್ತೀರಿ. ಇದರಿಂದ ಪ್ರಯೋಜನ ಆಗುವುದಿಲ್ಲ. ನಾನು ಹೇಳುತ್ತಿದ್ದೇನೆ; ಮಳೆಗಾಲದಲ್ಲಿ ರೇಷ್ಮೆ ಗೂಡು ಬಿಟ್ಟಾಗ ಒಂದಕ್ಕೊಂದು ಸೇರಿ ಗಂಟು ಗೂಡು ಆಗುತ್ತದೆ, ಅದರಲ್ಲಿ ರೇಷ್ಮೆ ಬರುವುದಿಲ್ಲ. ಅದನ್ನು ತಪ್ಪಿಸುವ ವ್ಯವಸ್ಥೆ ಮಾಡಿದ್ದೀರಾ ? ಒಂದು ವರ್ಷದಲ್ಲಿ ಬೇಕಾದಷ್ಟು ಹಣವನ್ನು ಖರ್ಚು ಮಾಡಿದ್ದೀರಿ.. ರೇಷ್ಮೆ ಸಂಶೋಧನಾ ಕೇಂದ್ರ ಎಂದಿದೆ. ರೀಸರ್ಚ್ ಇನ್‌ಸ್ಟಿಟ್ಯೂಟ್ ಇದೆ. ಏನು ಮಾಡಿದ್ದೀರಿ ? ಜಪಾನ್‌ಗೆ ಹೋಗಿಬಂದ ಅಧಿಕಾರಿಗಳು ಏನು ಮಾಡಿದರು ? ಮೋಡ ಬಂದಾಗ ಹವಾಗುಣ ಕಡಿಮೆ ಆದಾಗ ಶೀತ ಜಾಸ್ತಿಯಾದಾಗ ಹುಳು ಒಂದಕ್ಕೊಂದು ಸೇರಿಕೊಂಡು ಹೋದಾಗ ಆ ಬಗ್ಗೆ ಏನು ಮಾಡಿದ್ದೀರಿ ? ಏನೂ ಮಾಡಿಲ್ಲ. ಇವತ್ತು ನಮ್ಮ ಗೂಡು ಬೆಳೆಯುವ ರೈತರನ್ನು, ರೀಲರ್ಸ್‌ನ್ನು ಹೊರದೇಶಗಳಿಗೆ ಕಳುಹಿಸಿಕೊಡಿ.

ಆ ನಿಯೋಗ ತಮ್ಮ ಮುಖಂಡತ್ವದಲ್ಲಿ ಹೋಗಲಿ. ಒಬ್ಬ ರೈತ ಹೋದರೆ ಸುಮಾರು ಹತ್ತಾರು ಗ್ರಾಮದ ರೈತರಿಗೆ ಅನುಕೂಲವಾಗುತ್ತದೆ. ನಿಮ್ಮ ಅಧಿಕಾರಿಗಳನ್ನು ಕಳುಹಿಸುವುದನ್ನು ನಿಲ್ಲಿಸಿ. ನಿಮ್ಮ ಅಧಿಕಾರಿಗಳು ಜಪಾನ್‌ಗೆ ಹೋಗಿದ್ದು ಏಕೆ ? ಕೆಎಸ್‌ಐಸಿ ನಿಂದ ಟಿ. ನರಸೀಪುರಕ್ಕೆ ಯಂತ್ರ ತರಲು ಹೋದರು. ಯಾವ ಒಂದು ರಾಜ್ಯದಲ್ಲಿ 10 ಸಾವಿರ ಮೆಟ್ರಿಕ್ ಟನ್ ಬೈವೋಲ್ಟೀನ್ ಗೂಡು ಬೆಳೆದರೆ ಮಾತ್ರ ಆ ಯಂತ್ರವನ್ನು ತರಬೇಕಾಗಿತ್ತು, ಅಂತಹದ್ದರಲ್ಲಿ ಬರೀ 1 ಸಾವಿರ ಮೆಟ್ರಿಕ್ ಟನ್ ಬೆಳೆಯುತ್ತಿರುವ ಈ ರಾಜ್ಯದಲ್ಲಿ ಏಕೆ ಸ್ವಾಮಿ 6.59 ಕೋಟಿ ರೂಪಾಯಿಯ ಯಂತ್ರವನ್ನು ತಂದರು ? ಅದನ್ನು ಬಳಕೆ ಮಾಡುತ್ತಿದ್ದಾರಾ ? ಎಲ್ಲಿ ಇದೆ ಅದು ? ಕೆಎಸ್‌ಐಸಿ ಬಗ್ಗೆ ನಮ್ಮ ಸ್ನೇಹಿತರು ಒಂದು ಮಾತನ್ನು ಹೇಳಿದರು. ಕನಕಪುರದ್ದು ಮುಚ್ಚಬೇಕೆಂದು ನಾನು ಹೇಳಿಲ್ಲ. ಕನಕಪುರದ್ದು ಬಹಳ ನಷ್ಟದಲ್ಲಿ ಇದೆ, ನಷ್ಟ ತಗ್ಗಿಸುವ ವಿಚಾರದಲ್ಲಿ ಕೆಲಸ ಮಾಡಬೇಕೆಂದು ಹೇಳಿದೆ. ನಾನು ಅದನ್ನು ಮುಚ್ಚಬೇಕೆಂದು ಹೇಳಲಿಲ್ಲ. ಇಲ್ಲಿ ಅಂಕಿ ಅಂಶಗಳಿವೆ. ಕೆಎಸ್‌ಐಸಿ ವಿಚಾರ ಹೇಳಬೇಕೆಂದರೆ, ಚನ್ನಪಟ್ಟಣದ ಸ್ಪನ್ ಸಿಲ್ಕ್ ವಿಚಾರ ಬಿಡಿ; ಮೈಸೂರಿನ ನೇಯ್ಗೆ ಕಾರ್ಖಾನೆ ಬಿಡಿ. ಟಿ. ನರಸೀಪುರ ಮತ್ತು ಕನಕಪುರದಲ್ಲಿ ಸುಮಾರು ನಷ್ಟ ಆಗಿರತಕ್ಕದ್ದು 1989–90 ರಲ್ಲಿ 239.84 ಲಕ್ಷ; 1990–91 ರಲ್ಲಿ 239 ಲಕ್ಷ; 1991–92ರಲ್ಲಿ 230 ಲಕ್ಷ, ಹೀಗೆ ಸುಮಾರು 7 ಕೋಟಿ ರೂಪಾಯಿ ನಷ್ಟ ಆಗಿದೆ. ಟಿ. ನರಸೀಪುರ ಮತ್ತು ಕನಕಪುರ,... ಈ ಎರಡರಲ್ಲಿ ಮೂರು ವರ್ಷದಲ್ಲಿ 7 ಕೋಟಿ ರೂಪಾಯಿ ಕಡಿಮೆ ಆಗಿದೆ. ಉಳಿದಿರತಕ್ಕ ಫಿಲೇಚರ್‌ನಲ್ಲಿ ಕೂಡಾ ಸುಮಾರು 7 ಕೋಟಿ ರೂಪಾಯಿ ಕಡಿಮೆ ಆಗಿದೆ. ಒಟ್ಟು 14 ಕೋಟಿ ಆಯಿತು. ನಾನು ಹೇಳುವುದು, ಇದರಲ್ಲಿ ಬರೀ ಎಲ್ಲಾ ಐಎಎಸ್ ಅಧಿಕಾರಿಗಳು ಇದ್ದಾರೆ. ಐಎಎಸ್ ಎಂದರೆ ಏನು ? I.A.S. ಎಂದರೆ I am safe ಅಂತ. ಅವರು ಸೇಫ್, ನಾವು ಸೇಫ್ ಇಲ್ಲ. ಅನುಭವ ಇರತಕ್ಕ ರೈತರ ನೇತೃತ್ವದಲ್ಲಿ ಒಂದು ಸಮಾಲೋಚನಾ ಸಮಿತಿ ಎಂದು ಮಾಡಿ. ಅದನ್ನು ಮಾಡಿ ಆಗಾಗ ಸಭೆ ಕರೆದು ಒಂದು ಅಥವಾ ಎರಡು ತಿಂಗಳಿಗೆ ಸಭೆ ಕರೆದು ಅವರ ಸಲಹೆ ಪಡೆದು ತಾವು ನಷ್ಟ ಕಡಿಮೆ ಮಾಡತಕ್ಕ ಕೆಲಸ ಮಾಡಿ. ಪ್ರತಿವರ್ಷ ನಷ್ಟ ಜಾಸ್ತಿಯಾಗುತ್ತಿದೆ. ಇರತಕ್ಕ ಏಳು ಕಾರ್ಖಾನೆಗಳನ್ನು ಮುಚ್ಚಿ, ಅಲ್ಲಿರತಕ್ಕ ಕೆಲಸಗಾರರಿಗೆ ನಾವು, ಸಂಬಳ ಎಲ್ಲ ಕೊಟ್ಟರೂ ಕೂಡಾ ಅದಕ್ಕಿಂತಲೂ ಡಬಲ್ ನಷ್ಟ ಈಗ ಆಗುತ್ತಿದೆ. ಇವತ್ತು ಬಿತ್ತನೆ ಗೂಡನ್ನು ಬಹಳ ಬಲವರ್ಧನೆ ಮಾಡಿದ್ದೇವೆಂದು ಹೇಳಿದಿರಲ್ಲಾ, ಎಲ್ಲಿ ಮಾಡಿದ್ದೀರಿ; ಮಾಡಿದ್ದರೆ ಇಷ್ಟು ನಷ್ಟ ಆಗುತ್ತಾ ಇರಲಿಲ್ಲ. ತಾವು 5 ಕೇಜಿ ಗೂಡಿಗೆ 1 ಕೆಜಿ ರೇಷ್ಮೆ ಆಗತಕ್ಕದ್ದನ್ನು ಸೂಕ್ತವಾಗಿ ಜಾರಿಗೆ ತರಬೇಕು. ತಮ್ಮ ಕಾಲದಲ್ಲಿ ಇದು ಆಗಬೇಕು. ನಾನು ಫಿಲೇಚರ್ ಬಗ್ಗೆ ಹೇಳಿದ್ದೇನೆ. ಕೆಎಸ್‌ಐಸಿ ಬಗ್ಗೆ ಹೇಳಿದ್ದೇನೆ.

3.35 ಪಿ.ಎಂ.

ರೂಪಾಯಿ ನಷ್ಟವಾಗಿದೆ. ಬಂಡವಾಳ ಎಲ್ಲ ತೀರಿಹೋಗಿದೆ. ಹೊಸದಾಗಿ 4 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಬಡ್ಡಿ ಸಮೇತ ವಾಪಸು ತೆಗೆದುಕೊಳ್ಳಬೇಕು. ಯಾವ ರೀತಿ ತೆಗೆದುಕೊಳ್ಳುತ್ತೀರಿ ? ದಯಮಾಡಿ ತಾವು ಹೇಳಬೇಕು. ರೇಷ್ಮೆಗೂಡು ರೇಷ್ಮೆ ಬೆಳೆ ಮಾಡತಕ್ಕದ್ದು ಎಷ್ಟು ಹೆಕ್ಟೇರ್ ಭೂಮಿಯಲ್ಲಿ ಕಡ್ಡಿ ಹಾಕಿದ್ದೀರಿ ? ಅದರಲ್ಲಿ ಇರಿಗೇಟೆಡ್ ಎಷ್ಟು ಇದೆ ? ರೈನ್‌ಫೆಡ್ ಎಷ್ಟಿದೆ ? ಜಪಾನ್‌ನಲ್ಲಿ 40 ಕೆಜಿ ಸೊಪ್ಪಿಗೆ 1 ಕೆಜಿ ರೇಷ್ಮೆಯಾಗುತ್ತದೆ. ನಮ್ಮ ರಾಜ್ಯದಲ್ಲಿ ಎಷ್ಟಾಗುತ್ತದೆಂದರೆ ಬಹಳ ಕಡಿಮೆ. ಒಳ್ಳೆಯ ತಳಿಯನ್ನು ಕಂಡುಹಿಡಿಯಬೇಕು. ಸಂಶೋಧನೆಯ ಮುಖಾಂತರ ಕಡ್ಡಿಯನ್ನು ಹಾಕಿ ಸಂಪದ್ಭರಿತವಾಗಿರತಕ್ಕ ಸೊಪ್ಪನ್ನು ಬೆಳೆದಾಗ ಬಹುಶಃ ನಮಗೆ ಒಳ್ಳೆಯ ಈಲ್ಡ್ ಬರುತ್ತದೆ. ಉತ್ತಮ ಗೂಡನ್ನು ನಾವು ಬೆಳೆದಾಗ ಒಳ್ಳೆಯ ರೇಷ್ಮೆಯಾಗುತ್ತದೆ. ಆಗ ಅಂತರರಾಷ್ಟ್ರೀಯ ಮಾರ್ಕೆಟ್‌ನಲ್ಲಿ ನಾವು ಮಾರಾಟ ಮಾಡಲಿಕ್ಕೆ ಹಾಗೂ ಸ್ಪರ್ಧಿಸಲಿಕ್ಕೆ ಸಾಧ್ಯವಾಗುತ್ತದೆ. ಹೊಸ ಹೊಸ ತಳಿಗಳನ್ನು ಕಂಡುಹಿಡಿಯತಕ್ಕ ಕೆಲಸವನ್ನು ತಾವು ಮಾಡಬೇಕು. ಒಳ್ಳೆಯ ರೇಷ್ಮೆ ಸಂಶೋಧನೆಯನ್ನು 1993–94ನೇ ಸಾಲಿನಲ್ಲಿ ಮಾಡಬೇಕು. ನಿಮ್ಮ ವರದಿ ಬರುವುದಕ್ಕೆ ಮೊದಲೇ ನಾವು ಮಾತನಾಡುತ್ತೇವೆ. ನಿಮ್ಮ ವರದಿ ನೋಡಿದ್ದೀರಾ ? ನಾಲ್ಕು ಪುಟ ಇದೆ. ಆ ವರದಿಯಲ್ಲಿ ರೇಷ್ಮೆ ಕೈಗಾರಿಕೆಯ ಬಗ್ಗೆ ಇಲ್ಲ. ರೇಷ್ಮೆ ಫಿಲೇಚರ್ ಬಗ್ಗೆ ಇಲ್ಲ. ಕೆಎಸ್‌ಎಂಬಿ ಬಗ್ಗೆ ವರದಿ ಇಲ್ಲ. ಕೆಎಸ್‌ಐಸಿ ಬಗ್ಗೆ ಒಂದು ವರದಿ ಇಲ್ಲ. ನಮ್ಮನ್ನು ತೆಗೆದುಕೊಂಡು ಹೋಗಿ ಎಲ್ಲೋ ಒಂದು ಕಡೆ ತುರುಕಿದ್ದೀರಿ. ನಮ್ಮ ಇಲಾಖೆಯನ್ನು ಕಡೆಗಣಿಸಿದ್ದೀರಿ. ದಯಮಾಡಿ ಈ ತರಹ ಮಾಡುವುದು ಬೇಡ. ಒಳ್ಳೆಯ ವರದಿಯನ್ನು ಕೊಡಬೇಕು. ನಿಮ್ಮ ಮುಂದಿನ ಪ್ರೋಗ್ರಾಮ್ ಏನು ? ನಿಮ್ಮ ಗುರಿಯೇನು ? ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ 10 ಸಾವಿರದ 100 ಟನ್ ರೇಷ್ಮೆ ಬೆಳೆಯಬೇಕೆಂದು ಗುರಿ ಇದೆ. 17 ಸಾವಿರ ಟನ್ ಭಾರತದಲ್ಲಿ ಬೆಳೆಯಬೇಕೆಂದು ಇದೆ. ಈ ತರಹ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ನನ್ನ ಹತ್ತಿರ ಫಿಗರ್ಸ್ ಇಲ್ಲ. 8ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇಷ್ಟು ಎಕರೆಯಲ್ಲಿ ಮಲ್ಬರಿ ಜಾಸ್ತಿ ಮಾಡಬೇಕೆಂದು ಪ್ರೋಗ್ರಾಮ್ ಇದೆ. ಒಂದು ವರ್ಷಕ್ಕೆ ಇಷ್ಟು ಜಾಸ್ತಿ ಬೆಳೆಯಬೇಕೆಂದು ಇದೆ. ಇಷ್ಟು ಕಡ್ಡಿ ಹಾಕಬೇಕೆಂದು ಇದೆ. ಇದರ ಬಗ್ಗೆ ಏನಾದರೂ ಒಂದು ರೀತಿ ನೀತಿ ಇದೆಯೆ ? ಯಾವುದೇ ರೀತಿ ನೀತಿ ಇಲ್ಲ, ನಿರ್ದಿಷ್ಟವಾದ ಮಾಹಿತಿಯಿಲ್ಲ. ನಿಮ್ಮ ಗುರಿ 28 ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ಇದೆ, ಏತಕ್ಕೆ ಖರ್ಚು ಮಾಡಿದ್ದೀರಿ ? ಯಾರಿಗೆ ಖರ್ಚು ಮಾಡಿದ್ದೀರಿ ? ಯಾವ ಉದ್ದೇಶಕ್ಕೋಸ್ಕರವಾಗಿ ಖರ್ಚು ಮಾಡಿದ್ದೀರಿ ? ಅದರಿಂದ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ನಮ್ಮ ರೈತರಿಗೆ ಏನು ಲಾಭವಾಯಿತು ? ವಾಣಿಜ್ಯ ಬೆಳೆ, ಈ ಬೆಳೆ ಜಾಸ್ತಿ ತೆಗೆದುಕೊಳ್ಳುವುದಕ್ಕೆ ರೈತರನ್ನು ಆಕರ್ಷಣೆ ಮಾಡುತ್ತೀರೇ ಹೊರತು ಇದರ ಬಗ್ಗೆ ಮಾಡುವುದಿಲ್ಲ. ಈವೊಂದು ರೇಷ್ಮೆ ಕಾಮಧೇನು ಕಲ್ಪವೃಕ್ಷವಾಗಿದೆ ಎಂದು ದಯಮಾಡಿ ಅರ್ಥಮಾಡಿಕೊಳ್ಳಬೇಕು. ಇದನ್ನು ಕಡೆಗಣಿಸಬೇಡಿ, ಇದನ್ನು ಹೆಚ್ಚು ಬಲಯುತವಾಗಿ ಮಾಡಿರಿ. ಮೊಟ್ಟೆ ಮಾಡತಕ್ಕದ್ದನ್ನು ನಾನು ಲೆಕ್ಕ ಹಾಕಿದೆ. 15 ಕೋಟಿ ಚಿಲ್ಲರೆ ಮೊಟ್ಟೆ ತಯಾರು ಮಾಡಿದ್ದೀರಿ. ಕೊಟ್ಟಿರತಕ್ಕ ಗೂಡನ್ನು ಲೆಕ್ಕ ಹಾಕಿದಾಗ ಮೂರು ಮೊಟ್ಟೆಗೆ 1 ಕೆಜಿ ಗೂಡು ತೆಗೆದುಕೊಳ್ಳಬೇಕೆಂದು ಕಾಣುತ್ತದೆ. ನಾನು ಹೇಳುವುದು, ಒಂದೂವರೆ ಎರಡು ಮೊಟ್ಟೆಗೆ ಒಂದು ಕೆಜಿ ಗೂಡು ಬೆಳೆಯತಕ್ಕ ಒಂದು ವ್ಯವಸ್ಥೆ ಮಾಡಿ ಒಂದು ಹೊಸ ತಳಿಯನ್ನು ಕಂಡುಹಿಡಿದು 100 ಮೊಟ್ಟೆಗೆ ಕೊನೆಯಪಕ್ಷ 50 ಕೆಜಿ ಗೂಡು ಆಗತಕ್ಕ ತಳಿಯನ್ನು ಕಂಡುಹಿಡಿಯುಬೇಕು. ಅಷ್ಟು ಬಲಯುತವಾಗಿ ಮಾಡಬೇಕು. ಈಗ ನಮಗಿರುವ ವ್ಯವಸ್ಥೆಯಲ್ಲಿ ಹೆಚ್ಚಿಗೆ ಗೂಡು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ ಹಾಗೂ ಹೆಚ್ಚಿಗೆ ರೇಷ್ಮೆಯನ್ನು ಉತ್ಪಾದನೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಮೂಲ ತಳಹದಿ ಬಿತ್ತನೆ, ಮೊಟ್ಟೆ ಇದರ ಬಗ್ಗೆ ತಾವು ಸಾಕಷ್ಟು ಗಮನಹರಿಸಿ ಬಲಯುತವಾಗಿ ಒಂದು ಕೆಲಸವನ್ನು ಮಾಡಿದಾಗ ದೇವರು ನಿಮಗೆ ಒಳ್ಳೆಯದು ಮಾಡುತ್ತಾನೆ. ನಂಬಿರತಕ್ಕ ರೈತರಿಗೆ ಕೂಡ ಒಳ್ಳೆಯದಾಗುತ್ತದೆ. ತಾವು ಮುಖ್ಯವಾಗಿ

ಗಮನಹರಿಸತಕ್ಕದ್ದು ನಿಮ್ಮ ನಿಧಿಯಿಂದ ಯಾವ ಉದ್ದೇಶಕ್ಕೆ ಖರ್ಚು ಮಾಡಬೇಕು ಎನ್ನುವ ಬಗ್ಗೆ ನಾವು ಕಾನೂನಿನಲ್ಲಿ ಹೇಳಿದ್ದೇವೆ. ರೇಷ್ಮೆ ಕೇಂದ್ರಕ್ಕೆ ಬೇಕಾದ ಸಲಕರಣೆಗಳನ್ನು ಜೋಡಿಸಿ, ನಾನು ಮೊದಲೇ ಹೇಳಿದ ಹಾಗೆ ದರ್ಜೆವಾರು ವಿಂಗಡಿಸಬೇಕು. ಇವತ್ತು ರೇಷ್ಮೆ ವಿನಿಮಯ ಕೇಂದ್ರ ಸಾಕಷ್ಟು ಕೆಲಸ ಮಾಡುವುದಕ್ಕೆ ಶಕ್ಯವಿರಬೇಕು. ಇದು ಅಷ್ಟು ಬಲಯುತವಾಗಿ ಬೆಳೆಯದಿದ್ದರೆ ಅಥವಾ ಯಾವ ಉದ್ದೇಶಕ್ಕೆ ನಾವು ಸ್ಥಾಪನೆ ಮಾಡಿದ್ದೇವೆ ಆ ಉದ್ದೇಶವನ್ನು ಪರಿಪೂರ್ಣವಾಗಿ ಈಡೇರಿಸಲಿಕ್ಕೆ ಶಕ್ತಿ ರೇಷ್ಮೆ ಬೆಳೆಯುವವರಾದ ನಮಗೆ ಇದನ್ನು ನಡೆಸಿಕೊಂಡು ಹೋಗತಕ್ಕ ಶಕ್ತಿಯಿದೆ. ರೇಷ್ಮೆ ವಿನಿಮಯ ಕೇಂದ್ರ ನಮಗೆ ಕೊಡಿ, ಅಧಿಕಾರಿಗಳು ನಮ್ಮವರು ಇರುತ್ತಾರೆ, ಮೊದಲು ಕಮಿಟಿ ಮಾಡಬೇಕು, ಅದರ ಮುಖಾಂತರ ಹೊರಗಡೆ ರೇಷ್ಮೆಯನ್ನು ಕಳುಹಿಸತಕ್ಕ ವ್ಯವಸ್ಥೆಯನ್ನು ಮಾಡಿ. 1993–94ರಲ್ಲಿ ಏನೊಂದು ಗುರಿಯನ್ನು ಇಟ್ಟುಕೊಂಡಿದ್ದೀರಿ ಅದರ ಬಗ್ಗೆ ನಿಮ್ಮ ವರದಿಯಲ್ಲಿ ಏನೂ ಇಲ್ಲ.

ಎಷ್ಟೋ ಟನ್ ರೇಷ್ಮೆಯನ್ನು ನಾವು ಬೆಳೆಯುತ್ತೇವೆಂದು ಹೇಳಿದ್ದೀರಿ ಅಷ್ಟು ಬೆಳೆಯುವುದಕ್ಕೆ ಆಗುವುದಿಲ್ಲ. ನಾಲ್ಕು ಪುಟಗಳ ವರದಿ ಪುಸ್ತಕ ನೋಡಿ ನನಗೆ ಬಹಳ ಬೇಜಾರು ಆಯಿತು. ಹೊಸ ತರಬೇತಿ ಶಾಲೆಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ. ಇದರಲ್ಲಿ ಹೊಸದಾಗಿ ಏನೂ ಮಾಡುತ್ತಿಲ್ಲ. ದಯಮಾಡಿ ನಿರ್ದಿಷ್ಟವಾದ ಒಂದು ಗುರಿಯನ್ನು ತಾವು ಹಾಕಬೇಕು. ಸಮಾಲೋಚನಾ ಸಮಿತಿಯನ್ನು ಮಾಡತಕ್ಕ ಕೆಲಸವನ್ನು ಮಾಡಬೇಕು. ಹೊರದೇಶದಿಂದ ಬರತಕ್ಕ ಆಮದು ರೇಷ್ಮೆ ಜಾಸ್ತಿ ಬಂದು ನಮ್ಮಲ್ಲಿರತಕ್ಕ ರೇಷ್ಮೆಗೆ ಬೆಲೆ ಕಡಿಮೆಯಾಯಿತು. ಈ ಬಗ್ಗೆ ಸದನದಲ್ಲಿ ಒಂದು ನಿಯೋಗವನ್ನು ಕೊಂಡೊಯ್ಯುತ್ತೇನೆಂದು ಹೇಳಿದ್ದೀರಿ. ಅದರ ಪ್ರಕಾರ ತಾವು ಕೊಂಡೊಯ್ಯಬೇಕಾಗಿದೆ. ರೇಷ್ಮೆ ಸೆಂಟ್ರಲ್ ಸಿಲ್ಕ್‌ಬೋರ್ಡ್ ಛೇರ್ಮನ್‌ರವರನ್ನು ಸಂಬಂಧಪಟ್ಟ ಜವುಳಿ ಖಾತೆ ಮಂತ್ರಿಗಳನ್ನು ನೀವು ಭೇಟಿ ಮಾಡಿ ನಮ್ಮ ರಾಜ್ಯಕ್ಕೆ ರೇಷ್ಮೆಯನ್ನು ಆಮದು ಮಾಡಿಕೊಳ್ಳುವುದು ಬೇಡವೆಂದು ಹೇಳಬೇಕು.

ಗ್ರಾಮಾಂತರ ಪ್ರದೇಶಗಳಲ್ಲಿ ಇದಕ್ಕಿಂತ ಒಳ್ಳೆಯ ಕೈಗಾರಿಕೆ ಯಾವುದಿದೆ? ಒಂದು ರೂಪಾಯಿಯಲ್ಲಿ 56.8 ನಷ್ಟು ಲಾಭ ಸಿಗತಕ್ಕಂಥ ಬೇರೆ ಯಾವ ಬೆಳೆ ಇದೆ? ತಾವು ಅರ್ಥ ಮಾಡಿಕೊಳ್ಳಬೇಕು. ಇಂತಹ ಒಂದು ಕೃಷಿ ಆಧಾರಿತ ಬೇರೆ ಕೈಗಾರಿಕೆಯಿಂದ ರೈತನಿಗೆ ಎಷ್ಟು ಲಾಭ ಸಿಗುತ್ತದೆ ಎಂದು ಮಾನ್ಯ ಸದಸ್ಯರು ಯಾರಾದರೂ ಹೇಳಿದರೆ, ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ರಾಜ್ಯಕ್ಕೆ ಹೊಂದಿಕೊಳ್ಳತಕ್ಕಂಥ, ಬೆಳೆ ಎಂದರೆ ಇದೊಂದು ಮಾತ್ರ. ಇದು ಜಾಸ್ತಿ ಉತ್ಪಾದನೆ ಕೊಡುವುದರಿಂದ ಎಲ್ಲ ಕಡೆ ಸಾರ್ವಜನಿಕವಾಗಿ ಇದು ಬೆಳೆಯುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಕೊನೆಯದಾಗಿ ಮಾನ್ಯ ಅಧ್ಯಕ್ಷರೇ, ರೇಷ್ಮೆ ಗೂಡಿನಲ್ಲಿ ಮೂರು ಪದರುಗಳು ಇವೆ. ಮೇಲೆ ಇರತಕ್ಕಂಥಾದ್ದು ಜೂಟ್ ಸಿಲ್ಕ್ ಅಂತ. ಅದರ ನಂತರ ಇರತಕ್ಕದ್ದು ಪ್ಯೂರ್ ಸಿಲ್ಕ್. ಅದರ ಅಡಿಯಲ್ಲಿ ಇರುವಂಥಾದ್ದು ಡೂಪಿಯಾನ್ ಸಿಲ್ಕ್ ಅಂತ. ನೀವು ಸಂಶೋಧನೆ ಮಾಡಿದ್ದೀರಲ್ಲ, ಈ ಮೂರು ಪದರುಗಳಲ್ಲಿ ಮಧ್ಯ ಇರತಕ್ಕಂಥ ಪ್ಯೂರ್‌ಸಿಲ್ಕ್ ಜಾಸ್ತಿ ಆಗುವುದಕ್ಕೆ ನೀವು ಏನು ಮಾಡಿದ್ದೀರಿ? ಈ ಮೂರು ಪದರುಗಳಲ್ಲಿ ಮಧ್ಯ ಇರತಕ್ಕಂಥಾದ್ದು ಜಾಸ್ತಿ ವೃದ್ಧಿ ಆಗಬೇಕು. ಅದಕ್ಕೆ ನಿಮ್ಮ ಸಂಶೋಧನೆ ಏನು? ನಿಮ್ಮ ಕೊಡುಗೆ ಏನು? ನೀವು ಏನು ಮಾಡುತ್ತಿದ್ದೀರಿ? ಒಬ್ಬರನ್ನು ಡೈರೆಕ್ಟರ್ ಆಗಿ ಮಾಡಿದಿರಿ, 10 ಜನ ಜಾಯಿಂಟ್ ಡೈರೆಕ್ಟರುಗಳನ್ನು ಮಾಡಿದಿರಿ. ದಯವಿಟ್ಟು ಇದಕ್ಕೆ ಒಬ್ಬರನ್ನು ಅಡಿಶನಲ್ ಡೈರೆಕ್ಟರ್ ಆಗಿ ಮಾಡಬೇಕು. ಇದನ್ನು ನಾನು ಬಹಳ ದಿವಸಗಳಿಂದ ಕೇಳುತ್ತಿದ್ದೇನೆ. ಮತ್ತು ನಿಮ್ಮನ್ನು ಸಂಪುಟ ದರ್ಜೆಗೆ ಏರಿಸಬೇಕು. ಈ ಹತ್ತು ಜನ ಜಾಯಿಂಟ್ ಡೈರೆಕ್ಟರುಗಳು ಏನಿದ್ದಾರೆ, ಇವರಲ್ಲಿ ಯಾರು 20–30 ವರ್ಷಗಳ ಕಾಲ ಕೆಲಸ ಮಾಡಿದ್ದಾರೆ, ಅಂತಹವರನ್ನು ಅಡಿಶನಲ್ ಡೈರೆಕ್ಟರ್ ಆಗಿ ಮಾಡಬೇಕು. ಅಡ್ಮಿನಿಸ್ಟ್ರೇಶನ್ ಸೈಡ್‌ಗೆ ಒಬ್ಬರು ಮತ್ತು ಡೆವಲಪ್‌ಮೆಂಟ್ ಸೈಡ್‌ಗೆ ಒಬ್ಬರು ಅಂತ ಮಾಡಿ ಅವರಿಗೆ ಜವಾಬ್ದಾರಿ ವಹಿಸಬೇಕು. ಈ ಮೂಲಕ ಹೆಚ್ಚಿನ ಸಂಶೋದನೆ ಮಾಡಿ ಇತರ ತಳಿಗಳನ್ನು

ಉತ್ಕೃಷ್ಟವಾದದ್ದು ಯಾವುದಿದೆ, ಅದನ್ನು ಅಭಿವೃದ್ಧಿ ಮಾಡತಕ್ಕದ್ದು ಮಾಡಬೇಕು. ಇನ್ನೊಂದು ರೈತರಿಗೆ ಪರಿಹಾರಧನ ಕೊಡತಕ್ಕದ್ದು. ಇದು ತಾವು ಎಷ್ಟು ಜಾಸ್ತಿ ಮಾಡುತ್ತೀರಿ, ಅಷ್ಟೂ ಗ್ರಾಮಾಂತರ ಪ್ರದೇಶದ ಜನರಿಗೆ ಅನುಕೂಲವಾಗುತ್ತದೆ. ಯಾವ ರೀತಿ ಇನ್ಸೆಂಟೀವ್ ಕೊಡಬೇಕೋ ಕೊಡಿ. ಮಲಬರಿಯನ್ನು ಜಾಸ್ತಿ ಮಾಡಬೇಕು ಮತ್ತು ರೇಷ್ಮೆ ಉತ್ಪಾದನೆ ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ಇದರಿಂದ ವಿದೇಶಿ ವಿನಿಮಯ ಜಾಸ್ತಿಯಾಗುತ್ತದೆ. ಮತ್ತು ಗ್ರಾಮಾಂತರ ಪ್ರದೇಶಗಳಲ್ಲೂ ಕೆಲಸ ಜಾಸ್ತಿ ಸಿಗುತ್ತದೆ. ಇದರಿಂದ ನಿಜವಾಗಿಯೂ ಹೆಚ್ಚಿಗೆ ಕೆಲಸ ಸಿಗತಕ್ಕಂಥಾದ್ದು ದುರ್ಬಲವರ್ಗದವರಿಗೆ, ಅದರಲ್ಲೂ ಮಹಿಳೆಯರಿಗೆ. ಇದನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಇನ್ನೊಂದು ಮುಖ್ಯವಾದ ಅಂಶವೆಂದರೆ ಖಾಸಗಿಯವರಿಗೆ ಮೊಟ್ಟೆ ತಯಾರು ಮಾಡುವುದಕ್ಕೆ ಲೈಸೆನ್ಸ್ ಕೊಡುವುದನ್ನು ನಿಲ್ಲಿಸಬೇಕು. ರೋಗ ರಹಿತವಾದ ಮೊಟ್ಟೆಯೆಂದು ಸೀಲು ಹಾಕಿಬಿಡುತ್ತೀರಿ. 400 ರೂಪಾಯಿಗೆ ಮೊಟ್ಟೆ ತೆಗೆದುಕೊಂಡು ಹೋಗಿ ರೈತ ಹಾಳಾಗುತ್ತಾನೆ. ಸೀಲು ಹಾಕುವುದಕ್ಕೆ ಮುಂಚೆ ಪರೀಕ್ಷೆ ಮಾಡಿದ್ದೀರಾ ? ಏಕೆ ನೀವು ರೋಗರಹಿತ ಮೊಟ್ಟೆ ಅಂತ ಸೀಲು ಹಾಕುತ್ತೀರಿ ? ಈ 699 ಜನ ಪ್ರೈವೇಟ್ ಏಜೆನ್ಸಿಗಳು ಏನಿದ್ದಾರೆ ಮೊಟ್ಟೆ ತಯಾರು ಮಾಡತಕ್ಕಂಥವರು, ಅವರ ಮೇಲೆ ನಿಮಗೆ ಹತೋಟಿ ಇದೆಯೇ ? ನಿಮಗೆ ನಿರ್ಬಂಧ ಇದೆಯಾ ? ಏನು ಸ್ವಾಮಿ, ಇದು ಯಾರೋ ಒಬ್ಬ ಅಧಿಕಾರಿ ಚೆಲ್ಲಾಟವಾಡುವುದರಿಂದ ರಾಜ್ಯದ ರೈತರ ಸಂಕಷ್ಟ ಹೇಳತೀರದಾಗಿದೆ. ಅವರದ್ದು ಬಹಳ ಗೋಳಾಗಿದೆ. ಬೆಲೆ ಕಡಿಮೆಯಾಯಿತು, ರೋಗ ಜಾಸ್ತಿಯಾಯಿತು. ಜನ ಎಲ್ಲ ಬಹಳ ನೊಂದಿದ್ದಾರೆ. ಹೋದ ವರ್ಷಕ್ಕಿಂತ ಈ ವರ್ಷ ಬೆಳೆ ಕಡಿಮೆಯಾಗಿದೆ. ದಯವಿಟ್ಟು ನಮ್ಮ ಗುರಿಯನ್ನು ನಾವು ಮುಟ್ಟಬೇಕು. ದಯವಿಟ್ಟು ಬೆಲೆ ಸರಿ ಮಾಡುವುದು ಒಂದು, ನಿಯಂತ್ರಣ ಮಾಡುವುದು ಇನ್ನೊಂದು ಪರಿಹಾರಧನ ಕೊಡತಕ್ಕಂಥಾದ್ದು ಮತ್ತೊಂದು ಈ ಮೂರನ್ನು ಒಪ್ಪಿ ತಾವು ವ್ಯಾಪಕವಾಗಿ ಕೆಲಸ ಮಾಡಿದಾಗ ಮಾತ್ರ ಇದು ವ್ಯವಸ್ಥಿತವಾಗಿ ಇದೊಂದು ಕಲ್ಪವೃಕ್ಷ ಕಾಮಧೇನು ಆಗುತ್ತದೆ. ಇದನ್ನು ನಂಬಿರತಕ್ಕಂಥ ರೈತರೂ ಬದುಕುತ್ತಾರೆ. ದಯಮಾಡಿ ರಾಜ್ಯದಲ್ಲಿ ನಮ್ಮ ಕೃಷಿಕರು ಯಾರಿದ್ದಾರೆ, ಯಾರು ಇದನ್ನು ನಂಬಿದ್ದಾರೆ, ಅವರು ನೆಮ್ಮದಿಯಿಂದ ಇರಬೇಕಾಗಿದೆ. ನಾನು ಹಿಂದೆ ಹೇಳಿದ್ದೆ; ಸೋಗುಮೋರೆ ಅಂತ ಹೇಳಿ. ಸೋಗುಮೊರೆ ಎಂದರೆ ಸಂಪದ್ಭರಿತವಾಗಿರತಕ್ಕಂಥ ಮುಖ. ಸೊ–ಎಂದರೆ ಸೊಪ್ಪು, ಗು–ಎಂದರೆ ಗೂಡು, ಮೊ–ಎಂದರೆ ಮೊಟ್ಟೆ ಮತ್ತು ರೆ–ಎಂದರೆ ರೇಷ್ಮೆ ಇದು ಸಂಪದ್ಭರಿತವಾಗಿರತಕ್ಕಂಥ ಮುಖ. ಯಾರು ಹುಳುವನ್ನು ಸಾಕಾಣಿಕೆ ಮಾಡುತ್ತಾರೋ, ಅಂತಹವರಿಗೆ 'ಸೊಗುಮೊರೆ' ಅಂತ ಹೆಸರು ಇತ್ತು. ಏಕೆಂದರೆ ಸತತವಾಗಿ ಮೂರು – ನಾಲ್ಕು ವರ್ಷ ಮಳೆಯಾಗದಿದ್ದರೂ ತಡೆದುಕೊಳ್ಳುವಂಥ ಶಕ್ತಿ ಅವರಿಗೆ ಇತ್ತು. ಮೂರು ವರ್ಷ ಕ್ಷಾಮ ಇದ್ದರೂ ಕೂಡ ಎಲ್ಲಿ ರೇಷ್ಮೆ ಕೃಷಿ ಇದೆಯೋ, ರೇಷ್ಮೆ ಕೈಗಾರಿಕೆ ಇರುವಲ್ಲಿ ಅದನ್ನು ತಡೆದುಕೊಳ್ಳುವ ಶಕ್ತಿ ಜನರಿಗೆ ಇತ್ತು. ಆದರೆ ಇವತ್ತು ತಡೆದುಕೊಳ್ಳುವಂಥ ಶಕ್ತಿ ಇಲ್ಲ. ಕಾರಣವೇನೆಂದರೆ ಬೆಳೆ ಇಳಿಮುಖವಾಯಿತು. ನಿಯಂತ್ರಣ ಮಾಡುವುದಕ್ಕೆ ಆಗಲಿಲ್ಲ. ಸೊಗಮೋರೆ ಎನ್ನತಕ್ಕಂಥ ಪದ ಹೋಯಿತು. ಈಗ ಪೆಚ್ಚುಮೋರೆ ಎಂದು ಹೇಳಬೇಕಾಗುತ್ತದೆ. ದಯವಿಟ್ಟು ಮತ್ತೆ ಸಂಪದ್ಭರಿತವಾದಂಥ ಮುಖವನ್ನು ತಾವು ಮಾಡಬೇಕು. ತಾವು ಹೊಸದಾಗಿ ಬಂದಿದ್ದೀರಿ, ಯುವಕರಿದ್ದೀರಿ. ನಿಮಗೆ ಕಲಿಯತಕ್ಕಂಥ ಆಸಕ್ತಿ ಬಹಳ ಚೆನ್ನಾಗಿ ಇದೆ. ಈಗಾಗಲೇ ಅದನ್ನು ತೋರಿಸಿಕೊಂಡಿದ್ದೀರಿ. ದಯವಿಟ್ಟು ದೇವರು ನಿಮಗೆ ಹೆಚ್ಚಿನ ಬುದ್ಧಿಯನ್ನು ಕೊಟ್ಟು ಎಲ್ಲ ರೀತಿಯಿಂದ ಸಂಪದ್ಭರಿತವಾಗಿ, ನಮ್ಮ ರೈತರು ಯಾರು ರೇಷ್ಮೆ ಕೃಷಿಯನ್ನು ಅವಲಂಬಿಸಿದ್ದಾರೆ, ಅವರಿಗೆ ಹೇಳಿ ಸಮಾಲೋಚನಾ ಸಮಿತಿ ಮಾಡುವುದಕ್ಕೆ ಮರೆಯಬೇಡಿ. ದಯಮಾಡಿ ಪ್ರೈಸ್ ಸ್ಟೆಬಿಲೈಸೇಶನ್ ಫಂಡ್‌ಗೆ ತಾವು ಅಧ್ಯಕ್ಷರಾಗಬೇಕು.

ನಮ್ಮ ನಿರ್ದೇಶಕರೊಬ್ಬರು ಅದಕ್ಕೆ ಸದಸ್ಯರಾಗಬೇಕು, ತಾವಿಬ್ಬರೂ ಸೇರಿ ಆ ನಿಧಿಯನ್ನು

ಆಪರೇಟ್ ಮಾಡಬೇಕು. ಆ ನಿಧಿಯನ್ನು ಏಪ್ರಿಲ್ ಒಂದರಿಂದ, ಕಮರ್ಷಿಯಲ್ ಬ್ಯಾಂಕ್ ತರಹ ಮಾಡಬೇಕು. ಅದರ ಲೆಕ್ಕವನ್ನು ನಮಗೆ ತೋರಿಸಬೇಕು ಮತ್ತು 50 ಕೋಟಿ ಉಳಿದಿರುವುದನ್ನು ಯಾವ ರೀತಿ ಖರ್ಚು ಮಾಡಬೇಕೆಂಬ ಬಗ್ಗೆ ಸಲಹಾ ಸಮಿತಿ ಒಪ್ಪಿಗೆ ಪಡೆದು ಮಾಡಬೇಕು. ಮತ್ತು ಗೂಡು ಬೆಳೆಯತಕ್ಕ ರೈತರನ್ನು ರೇಷ್ಮೆ ಉತ್ಪಾದನೆಗೆ ನೆರವಾಗತಕ್ಕ ಪ್ರತಿನಿಧಿಗಳನ್ನೂ ಸಮಿತಿಗೆ ಸೇರಿಸಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರು ಇಷ್ಟು ಹೊತ್ತು ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):– ಸನ್ಮಾನ್ಯ ಸಭಾಧ್ಯಕ್ಷರೇ, 1993–94ನೇ ಸಾಲಿನ ಬೇಡಿಕೆಗಳ ಬಗ್ಗೆ ಮಾತನಾಡುವುದಾದರೆ, ಇವತ್ತು ನಮ್ಮ ಮುಂದೆ 48 ಬೇಡಿಕೆಗಳಿವೆ. ಇವುಗಳಲ್ಲಿ ನಾವು ಯಾವ ವಿಚಾರವನ್ನು ಹೇಳಬೇಕೋ, ಯಾವ ವಿಚಾರವನ್ನು ತಿಳಿಸಬೇಕೋ ನನಗೆ ಅರ್ಥವಾಗುತ್ತಿಲ್ಲ. ಒಂದೇ ಸಾರಿ ಇಷ್ಟೊಂದು ಬೇಡಿಕೆಗಳನ್ನು ಮಂಡಿಸಿದ ಸಂದರ್ಭದಲ್ಲಿ, ನನಗೆ ಸಿಕ್ಕಿದಂಥ ಕಾಲಾವಕಾಶದಲ್ಲಿ ಕೆಲವು ಅಂಶಗಳನ್ನು ಮಾತ್ರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ನಗರಾಭಿವೃದ್ಧಿ ಇಲಾಖೆ ನಮ್ಮ ರಾಜ್ಯದಲ್ಲಿ, ನಗರಪ್ರದೇಶ, ಪುರಸಭೆ, ನಗರಸಭೆ ಹಾಗೂ ಕಾರ್ಪೋರೇಷನ್‌ಗಳಲ್ಲಿ ಆಗುತ್ತಿರತಕ್ಕ ಕೆಲವು ತೊಂದರೆಗಳನ್ನು ಸಂಬಂಧಪಟ್ಟ ಮಂತ್ರಿಗಳು ಗಮನಿಸಬೇಕೆಂದು ನನ್ನ ಕಳಕಳಿಯ ಮನವಿ. ಮೊದಲನೆಯದಾಗಿ, ಮನೆಗಂದಾಯದ ಮೂಲಕ ಏನು ಆದಾಯ ಬರಬೇಕು, ಅದಕ್ಕೆ ಇವತ್ತಿನವರೆಗೂ ಒಂದು ಸರಿಯಾದ ನೀತಿ ಇಲ್ಲ. ಇಡೀ ರಾಜ್ಯದಲ್ಲಿ ನಗರಸಭೆ, ಪುರಸಭೆಗಳು ಮತ್ತು ಕಾರ್ಪೋರೇಷನ್‌ಗಳಿಗೆ ಹೆಚ್ಚಿನ ಆದಾಯ ಬರುವಂಥ ಈ ಮನೆಗಂದಾಯಕ್ಕೆ ಸರಿಯಾದ ನೀತಿನಿಯಮ ಇಲ್ಲದಿರುವುದರಿಂದ, ಸೋರಿಕೆ ಹೆಚ್ಚಾಗುತ್ತಿದೆ. ಜೊತೆಗೆ, ನಾಗರೀಕರು ತೊಂದರೆ ಅನುಭವಿಸುತ್ತಿದ್ದಾರೆ. ಇದರಿಂದ ನಗರಸಭೆ, ಪುರಸಭೆ ಮತ್ತು ಕಾರ್ಪೋರೇಷನ್‌ಗಳಿಗೆ ಹಣ ಬರುತ್ತಾ ಇಲ್ಲ. ಜನ ತೊಂದರೆ ಅನುಭವಿಸುತ್ತಿದ್ದಾರೆ. ನಾನು ಶಾಸಕನಾಗಿ ಬಂದಾಗಿನಿಂದ, ಪ್ರತಿ ವಿಧಾನ ಮಂಡಲದ ಅಧಿವೇಶನದಲ್ಲೂ ಸರ್ಕಾರದ ಗಮನಕ್ಕೆ ಇದನ್ನು ತರುತ್ತಿದ್ದೇನೆ. ಈ ಮನೆಗಂದಾಯವನ್ನು ನಿಗದಿ ಮಾಡಿದ ಸಂದರ್ಭದಲ್ಲಿ, ರಾಜ್ಯ ಸರ್ಕಾರದ ಒಪ್ಪಿಗೆ ಮೇರೆಗೆ, ಅಧಿಕಾರಿಗಳು ನಗರಸಭೆಗೆ, ಪುರಸಭೆಗೆ, ಕಾರ್ಪೋರೇಷನ್‌ಗಳಿಗೆ ನಿಯುಕ್ತಿಯಾಗುತ್ತಾರೆ. ಈ ರೀತಿ ನಿಯುಕ್ತಿಯಾದ ವ್ಯಕ್ತಿಗೆ ಯಾವುದೇ ರೀತಿಯ ನೀತಿ ನಿಯಮ ಇಲ್ಲ. ಆ ಅಧಿಕಾರಿ ಹೋಗಿ, ಯಾವುದೋ ಒಂದು ಹೋಟೆಲಿನಲ್ಲಿ ರೂಮ್ ಮಾಡುತ್ತಾನೆ. ಶಿವಮೊಗ್ಗಾದಲ್ಲಿ, ಫೈವ್ ಸ್ಟಾರ್ ಹೋಟೆಲಿನಲ್ಲಿ ರೂಮ್ ಮಾಡಿದ್ದನ್ನು ನಾನು ನೋಡಿದ್ದೇನೆ. ಅವರು ಮನೆಗಳಿಗೆ ಹೋಗುವುದಿಲ್ಲ, ಮನೆಯ ಮಾಲೀಕರನ್ನು ಹೋಟೆಲಿಗೆ ಕರೆಸುತ್ತಾರೆ. ಕಳೆದ ವರ್ಷ ನೀವು ಮುನ್ನೂರು ರೂಪಾಯಿ ಮನೆಗಂದಾಯ ಕೊಡುತ್ತಿದ್ದೀರಿ, ಈ ಬಾರಿ 3 ಸಾವಿರ ಕೊಡಬೇಕೆಂದು ಹೇಳುತ್ತಾನೆ. ಇದಕ್ಕೆ ನೀತಿ ಇಲ್ಲ, ನಿಯಮ ಇಲ್ಲ. ಒಂದೇ ರೀತಿಯ ಎರಡು ಮನೆಗಳಿಗೆ, ಒಂದಕ್ಕೆ ಮುನ್ನೂರು ರೂಪಾಯಿ ಹಾಕಿದ್ದು, ಇನ್ನೊಂದಕ್ಕೆ 3 ಸಾವಿರ ಹಾಕಿರತಕ್ಕ ಉದಾಹರಣೆಗಳು ನನ್ನ ಹತ್ತಿರ ತುಂಬಾ ಇವೆ. ಈ ರೀತಿ ಏತಕ್ಕೆ ಆಗಿದೆ ಎಂದರೆ, ಇದಕ್ಕೆ ಯಾರೂ ಹೇಳುವವರು, ಕೇಳುವವರು ಇಲ್ಲ. ಅದಕ್ಕೋಸ್ಕರ ಸಂಬಂಧಪಟ್ಟ ಮಂತ್ರಿಗಳಲ್ಲಿ ಕಳಕಳಿಯಿಂದ ನಾನು ಮನವಿ ಮಾಡುವುದಿಷ್ಟೆ. ನಾನು ಪ್ರಸ್ತಾಪ ಮಾಡಿದಾಗಿನಿಂದ, ಇವತ್ತಿನವರೆಗೆ, ಒಂದು ಸಮಿತಿ ಮಾಡಿ ಎಂದು ಹೇಳಿದ್ದೆ, ಸಮಿತಿ ಮಾಡಿದ್ದಾರೆ. ಕಳೆದ ಮೂರು ವರ್ಷಗಳಿಂದ ಇವತ್ತಿನವರೆಗೆ ಆ ಸಮಿತಿ ಆರು ಬಾರಿ ಸಭೆ ಸೇರಿದೆ. ಆ ಸಮಿತಿಯಲ್ಲಿ ಯಾವುದೇ ಚುನಾಯಿತ ಪ್ರತಿನಿಧಿಗಳು ಇಲ್ಲ, ಅಧಿಕಾರಿಗಳು ಮಾತ್ರ ಇದ್ದಾರೆ. ಈ ಅಧಿಕಾರಿಗಳು ಆರು ಸಾರಿ ಸಭೆ ಸೇರಿದ್ದಾರೆ. ಕಳೆದ ಒಂದೂವರೆ ವರ್ಷದ ಕೆಳಗಡೆ ಸನ್ಮಾನ್ಯ ಜಾರ್ಜ್‌ರವರು ಮಂತ್ರಿಗಳಾಗಿದ್ದಾಗ, ಆರು ತಿಂಗಳೊಳಗೆ ಮನೆಗಂದಾಯಕ್ಕೆ ಒಂದು ರೂಪ ಕೊಟ್ಟು, ನಿಯಮ ಮಾಡಿ, ಅದನ್ನು ಜಾರಿಗೆ ತರುತ್ತೇವೆಂದು ಹೇಳಿದ್ದರು. ಆದರೆ, ಇವತ್ತಿನವರೆಗೆ ಜಾರಿಗೆ

ತಂದಿಲ್ಲ. ಆದರೆ, ಮೊನ್ನೆ ನನಗೆ ಒಂದು ಉತ್ತರ ಸಿಕ್ಕಿದೆ, ಆ ಸಮಿತಿ ವರದಿ ಕೊಟ್ಟಿದೆ ಎಂದು ಹೇಳಿದ್ದಾರೆ. ಆದ್ದರಿಂದ, ಆ ಸಮಿತಿ ಏನು ವರದಿ ಕೊಟ್ಟಿದೆ? ಯಾವತ್ತು ಜಾರಿಗೆ ತರುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು ಮತ್ತು ಸಂಬಂಧಪಟ್ಟ ಮಂತ್ರಿಗಳು ಇದನ್ನು ಗಮನಿಸಬೇಕು. ಇದನ್ನು ಜಾರಿಗೆ ತರತಕ್ಕ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರಿಂದ ಇಡೀ ಕರ್ನಾಟಕ ರಾಜ್ಯದ ಜನತೆ, ಸಂಬಂಧಪಟ್ಟ ಮಂತ್ರಿಗಳು ಕಷ್ಟಪಟ್ಟು ಕೆಲಸ ಮಾಡುತ್ತಾರೆ ಎಂಬ ನಂಬಿಕೆ ಬರುತ್ತದೆ. ಈ ದಿಕ್ಕಿನಲ್ಲಿ ಏನು ಸಮಸ್ಯೆ ಇದೆ, ಅದನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂಬುದು ನನ್ನ ಅಭಿಪ್ರಾಯ. ಹೆಂಚಿನ ಮನೆಗೆ ಇಷ್ಟು ಎಂದು ತೀರ್ಮಾನವಾಗಲಿ ಅಥವಾ ಹಿಂದೆ ಇಷ್ಟಿತ್ತು, ಅದರ ಮೇಲೆ 10 ಪರ್ಸೆಂಟ್ ಜಾಸ್ತಿ ಮಾಡಿದ್ದೇವೆಂದು ಹೇಳಲಿ. ಹೆಂಚಿನ ಮನೆಗೆ ಇಷ್ಟು, ಮಹಡಿ ಮನೆಗಳಿಗೆ ಇಷ್ಟು, ತಾರಸಿ ಮನೆಗಳಿಗೆ ಇಷ್ಟು ಎಂದು ಬೇರೆ ಬೇರೆ ರೇಟ್ ನಿಗದಿ ಮಾಡಿದರೆ ಅನುಕೂಲವಾಗುತ್ತದೆ. ಒಟ್ಟಾರೆ, ಮನೆಗಂದಾಯ ನಿಗದಿ ಮಾಡತಕ್ಕ ದಿಕ್ಕಿನಲ್ಲಿ ಸಂಬಂಧಪಟ್ಟ ಮಂತ್ರಿಗಳು ಗಮನಿಸಬೇಕೆಂದು ಹೇಳುತ್ತೇನೆ ಮತ್ತು ಈ ದಿಕ್ಕಿನಲ್ಲಿ ಪ್ರಯತ್ನ ಮಾಡಿದರೆ, ಇಡೀ ರಾಜ್ಯದ ಜನ ಒಂದು ರೀತಿಯ ನಿಟ್ಟುಸಿರು ಬಿಡುವ ದಿಕ್ಕಿನಲ್ಲಿ ಸಹಕಾರಿಯಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಸಾಮಾನ್ಯ ಜನರ ಹತ್ತಿರ ಭೂಮಿ ಇರುತ್ತದೆ. ಆ ಭೂಮಿಯನ್ನು ಪರಿವರ್ತನೆ ಮಾಡಿಕೊಡಲು ಸರಿಯಾದ ನೀತಿ ಇಲ್ಲ. ಅಜ್ಜನ ಕಾಲದ್ದು ಮುತ್ತಜ್ಜನ ಕಾಲದ್ದು ಸಾಮಾನ್ಯ ಜನರ ಹತ್ತಿರ 5 ಎಕರೆ 2 ಎಕರೆ 10 ಎಕರೆ ಜಮೀನು ಇದೆ. ಆ ಭೂಮಿಯನ್ನು ಪರಿವರ್ತನೆ ಮಾಡಬೇಕಾದರೆ ಪ್ರಭಾವ ಇರಬೇಕು, ಇಲ್ಲಾ ಹಣ ಇರಬೇಕು. ಆಗ ಮಾತ್ರ ಈ ಒಂದು ಸಮಾಜದಲ್ಲಿ ಕೆಲಸ ಆಗತಕ್ಕಂಥ ಪರಿಸ್ಥಿತಿ ಇದೆ. ಈ ರಾಜ್ಯದಲ್ಲಿ ಇದು ನಡೆಯುತ್ತಿದೆ ಫೋರ್ ಒನ್ ನೋಟಿಫಿಕೇಶನ್ ಆಗಿದೆ, ಸಿಕ್ಸ್ ಒನ್ ನೋಟಿಫಿಕೇಶನ್ ಆಗಿದೆ, ಅದನ್ನು ಭೂ ಪರಿವರ್ತನೆ ಮಾಡಬೇಕು ಅಂದ್ರೆ ಇಲ್ಲಾ ಸರಿಯಾದ ಇನ್‌ಫ್ಲೂಯನ್ಸ್ ಇರಬೇಕು ಇಲ್ಲಾ ಹಣ ಇರಬೇಕು. ಇಲ್ಲಾ ಅಂದ್ರೆ ಏನೂ ನಡೆಯುವುದಿಲ್ಲ. ಈಗ 30 ಎಕರೆ 35 ಎಕರೆ ಜಮೀನು ಸಾಮಾನ್ಯ ಜನರ ಹತ್ತಿರ ಇರತಕ್ಕಂಥಾದ್ದನ್ನು ಪ್ರಭಾವಿ ವ್ಯಕ್ತಿಗಳು ಅವರ ಹತ್ತಿರ ಹೋಗಿ 10 ಸಾವಿರ ರೂಪಾಯಿಗೆ ಒಂದು ಎಕರೆ ಭೂಮಿಯನ್ನು ಕೊಂಡುಕೊಂಡಿರುವುದನ್ನು ನಾವು ಕಣ್ಣಿಂದ ನೋಡಿದ್ದೇವೆ. ಆ ಭೂಮಿಯನ್ನು ಕೊಂಡುಕೊಂಡು ಪರಿವರ್ತನೆ ಮಾಡಿ ಕೋಟ್ಯಾಂತರ ರೂಪಾಯಿಗಳನ್ನು ಅವರು ಲಾಭ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಸರ್ಕಾರಕ್ಕೂ ಹಣ ಬರುತ್ತಿಲ್ಲ. ಜೊತೆಗೆ ಭೂ ಒಡೆಯನಿಗೂ ಹಣ ಸಿಗುತ್ತಿಲ್ಲ. ಆದ್ದರಿಂದ ಸರ್ಕಾರ ಇದರ ಬಗ್ಗೆ ಒಂದು ಸರಿಯಾದ ನೀತಿ ರೂಪಿಸಬೇಕಾಗುತ್ತದೆ. ನೀವು ಭೂಮಿಯನ್ನು ಅಕ್ವೈರ್ ಮಾಡಿಕೊಂಡು ಪರಿಹಾರ ಕೊಡಿ. ಮತ್ತೆ ಸಂಬಂಧಪಟ್ಟವರಿಗೆ ಸ್ವಲ್ಪ ಭೂಮಿಯನ್ನು ಬಿಟ್ಟು ಕೊಡಿ. ಅವನು ಸೈಟ್ ಮಾಡಿಕೊಂಡು ಸ್ವಲ್ಪ ಹಣ ಮಾಡಿಕೊಳ್ಳಲಿ, ಜೊತೆಗೆ ಸೈಟ್ ಇಲ್ಲದಂತಹ ವ್ಯಕ್ತಿಗಳಿಗೆ ಕಡಿಮೆ ಬೆಲೆಗೆ ಸೈಟ್ ಸಿಗತಕ್ಕಂಥ ಪ್ರಯತ್ನ ಇದರಿಂದ ಆಗುತ್ತದೆ. ಆ ದಿಕ್ಕಿನಲ್ಲಿ ಕೂಡ ಸರ್ಕಾರ ತಕ್ಷಣ ಒಂದು ನೀತಿಯನ್ನು ರೂಪಿಸಬೇಕೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇನ್ನು ರಾಜ್ಯದಲ್ಲಿ ನಗರಸಭೆ ಪುರಸಭೆ ಕಾರ್ಪೋರೇಷನ್‌ಗಳಲ್ಲಿ ಗುಡಿಸಲುಗಳಲ್ಲಿ ಜನರು ವಾಸ ಮಾಡುತ್ತಿದ್ದಾರೆ. ಬಗರ್ ಹುಕುಂ ಮಾಡಿಕೊಂಡು ಅಲ್ಲಿ ಸಣ್ಣಸಣ್ಣ ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ. ಮನೆ ಕಟ್ಟಿಕೊಂಡಿದ್ದಾರೆ. ಅದನ್ನು ಅವರಿಗೆ ಖಾಯಂ ಮಾಡುವ ದಿಕ್ಕಿನಲ್ಲಿ ಸರ್ಕಾರ ನಿಧಾನಗತಿಯಲ್ಲಿ ಹೋಗುತ್ತಿದೆ. ಮನೆಕಟ್ಟಿ ಕೊಂಡಿರತಕ್ಕಂಥ ಬಡವರಿಗೆ ಖಾಯಂ ಮಾಡುವ ದಿಕ್ಕಿನಲ್ಲಿ ಸರಿಯಾದ ನೀತಿ ತಕ್ಷಣ ಜಾರಿ ಆಗಬೇಕು ಮತ್ತೆ ಅದನ್ನು ಅವರಿಗೆ ಕನ್‌ಫರ್ಮ್ ಮಾಡುವ ಯೋಜನೆಯನ್ನು ತಯಾರು ಮಾಡಿ ತುರ್ತು ಕ್ರಮ ಕೈಗೊಳ್ಳಬೇಕಾಗಿದೆ. ಅದಕ್ಕೆ ಒಂದು ಸಮಯ ನಿಗದಿ ಮಾಡಿದರೆ ಮಾತ್ರ ಉಪಯೋಗವಾಗುತ್ತದೆಯೇ ವಿನಹಃ ಇಲ್ಲದಿದ್ದರೆ ಉಪಯೋಗವಾಗುವುದಿಲ್ಲ.

ಅದಕ್ಕೋಸ್ಕರ ಸಂಬಂಧಪಟ್ಟ ಮಂತ್ರಿಗಳು ಈ ಬಗ್ಗೆ ಪ್ರಯತ್ನ ಮಾಡಬೇಕೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಮತ್ತೆ ಇಡೀ ರಾಜ್ಯದಲ್ಲಿ ಪುರಸಭೆ ಮತ್ತು ನಗರಸಭೆ ಕಾರ್ಪೊರೇಷನ್‌ಗಳಲ್ಲಿ ಭ್ರಷ್ಟಾಚಾರ ಆಗುತ್ತಿದೆ. ಅಧಿಕಾರಿಗಳಿಂದ ಗುಮಾಸ್ತರಿಂದ ಸಿಕ್ಕಾಪಟ್ಟೆ ಜಾಸ್ತಿ ಆಗುತ್ತಿದೆ. ಇದಕ್ಕೆ ಸರ್ಕಾರ ಕೆಲವು ಸಮಿತಿಗಳನ್ನು ಅಲ್ಲಿ ಏನೇನು ಭ್ರಷ್ಟಾಚಾರ ಆಗುತ್ತಿದೆ ಅದನ್ನು ತನಿಖೆ ಮಾಡಬೇಕೆಂದು ನೇಮಕ ಮಾಡಿದ್ದಾರೆ. ತನಿಖೆ ಮಾಡಿ ವರದಿ ಆಗಿದೆ. ಆದರೆ ಆ ವರದಿ ಜಾರಿಗೆ ಬಂದಿಲ್ಲ. ಭ್ರಷ್ಟಾಚಾರಿಗಳು ಭ್ರಷ್ಟಾಚಾರವನ್ನು ಮುಂದುವರಿಸುತ್ತಾ ಇದ್ದಾರೆ ಅದಕ್ಕೆ ಅನೇಕ ಪ್ರಭಾವಶಾಲಿಗಳ ಆಶೀರ್ವಾದ ಇದೆ. ಇದಕ್ಕೆ ನಾನು ಅನೇಕ ಉದಾಹರಣೆಗಳನ್ನು ಕೊಡುತ್ತೇನೆ. ರಸೀದಿ ಹಾಕುತ್ತಾರೆ; ಡೂಪ್ಲಿಕೇಟ್ ರಸೀದಿಯಲ್ಲಿ 30 ರೂಪಾಯಿ ಇರುತ್ತದೆ. ಅದೇ ಒರಿಜನಲ್ ರಸೀದಿಯಲ್ಲಿ 3 ಸಾವಿರ ರೂಪಾಯಿ ಇರುತ್ತದೆ. ಇದನ್ನು ತನಿಖೆ ಮಾಡಿ ಸಿಕ್ಕಿಹಾಕಿಕೊಂಡಿರತಕ್ಕ ವ್ಯಕ್ತಿಗಳಿಗೆ ಇನ್ನೂ ಕೂಡ ಶಿಕ್ಷೆ ಆಗಿಲ್ಲ. ಏತಕ್ಕೆ ಸಮಿತಿಗಳನ್ನು ಮಾಡುತ್ತೀರಿ. ಇಡೀ ರಾಜ್ಯದಲ್ಲಿ ಇಂತಹ ಸಮಿತಿಗಳು ಇವೆ. ಆ ಸಮಿತಿಗಳು ವರದಿಗಳನ್ನು ಕೊಟ್ಟಿದ್ದರೆ, ಆ ವರದಿಗಳನ್ನು ತಕ್ಷಣ ಕಾರ್ಯಗತ ಮಾಡಬೇಕು. ಆ ದಿಸೆಯಲ್ಲಿ ಯಾವುದೇ ಪ್ರಭಾವಕ್ಕೆ ಮಣಿಯದೆ ಸಂಬಂಧಪಟ್ಟ ಮಂತ್ರಿಗಳು ಗಮನ ಕೊಡುತ್ತಾರೋ ಎಂದು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಮತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ನೀರಿನ ಯೋಜನೆಗಳು ಶ್ರೀಮಾನ್ ವೀರೇಂದ್ರ ಪಾಟೀಲರ ಕಾಲದಿಂದ ಪ್ರಾರಂಭವಾಗಿದೆ. ಇಡೀ ರಾಜ್ಯದಲ್ಲಿ ಅನೇಕ ಯೋಜನೆಗಳು ಆಗಿವೆ. ಆ ದಿಕ್ಕಿನಲ್ಲಿ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಹಿಂದಿನ ಜಿಲ್ಲಾಧಿಕಾರಿಗಳಿದ್ದಂತಹ ಶ್ರೀ ವಿಜಯಕುಮಾರ್‌ರವರು ಒಂದು ಕುಡಿಯುವ ನೀರಿನ ಯೋಜನೆಯ ಬಗ್ಗೆ ಬಹಳ ಕಷ್ಟಪಟ್ಟು ಒಂದು ರಿಪೋರ್ಟ್ ತಯಾರು ಮಾಡಿದ್ದರು, ಅವರು ಬಹಳ ಆಸಕ್ತಿ ವಹಿಸಿ ಶ್ರಮ ವಹಿಸಿ ತಯಾರು ಮಾಡಿದ್ದರು. ಅದು ಸುಮಾರು 5 ಕೋಟಿ ರೂಪಾಯಿಗಳ ಯೋಜನೆ. ಈ ಕುಡಿಯುವ ನೀರಿನ ಯೋಜನೆ ಬಗ್ಗೆ ನಾನು ತುಂಬಾ ನೊಂದು ಹೇಳುತ್ತಿದ್ದೇನೆ. ಮೊನ್ನೆ ಚೌಡರೆಡ್ಡಿಯವರು ಇದಕ್ಕಾಗಿ 48 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ತುಂಬಾ ಸಂತೋಷ. ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈಗ ಪ್ರಥಮವಾಗಿ ಮೊನ್ನೆ 48 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಕೇವಲ ಅಡಿಗಲ್ಲು ಹಾಕಿ ಮುಂದಕ್ಕೆ ಹೋಗುವುದು. ಇದು ಸರ್ಕಾರದ ಕಾರ್ಯಕ್ರಮ. ಇವತ್ತಿನವರೆಗೂ ಒಂದು ಯೋಜನೆ ಕೂಡ ಪೂರ್ಣಗೊಂಡಿಲ್ಲ. ಅಡಿಗಲ್ಲು ಹಾಕಿದ ತಕ್ಷಣ ಕೆಲಸ ಪೂರ್ಣಗೊಳಿಸುವ ಪ್ರಯತ್ನ ಮಾಡಿ. ಏನೋ ಜನಗಳನ್ನು ತೃಪ್ತಿಪಡಿಸಲು ಒಂದು ಯೋಜನೆ ಮಾಡುವುದು, ದೊಡ್ಡ ಸಮಾರಂಭ ಮಾಡುವುದು. ಗುದ್ದಲಿಪೂಜೆ ಮಾಡಿ ಕಲ್ಲುಹಾಕಿ ಅಲ್ಲಿಗೆ ನಿಲ್ಲಿಸುವುದು, ಇಂತಹ ಯೋಜನೆಗಳನ್ನು ಖಂಡಿತವಾಗಿ ಮಾಡಬೇಡಿ. ಹೊಸ ಕೆಲಸ ನೀವು ಕೈಗೆತ್ತಿಕೊಂಡು ಮಾಡಿ ಮುಗಿಸಿ ಇನ್ನೊಂದು ಕೆಲಸಕ್ಕೆ ಹೋಗಿ. ಆಗ ಮಾತ್ರ ಜನಗಳಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಏನೂ ಅನುಕೂಲವಾಗುವುದಿಲ್ಲ. ಈಗ 5 ಕೋಟಿ ರೂಪಾಯಿಗಳ ಯೋಜನೆಗೆ ಮೊನ್ನೆ 48 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಇಷ್ಟು ದಿವಸ ಸರ್ಕಾರ ಇರಲಿಲ್ಲವೇ ? ವೀರೇಂದ್ರ ಪಾಟೀಲರ ಸರ್ಕಾರ ಇತ್ತು; ಬಂಗಾರಪ್ಪನವರ ಸರ್ಕಾರ ಇತ್ತು; ಅವರು ನಮ್ಮ ಶಿವಮೊಗ್ಗ ಜಿಲ್ಲೆಯವರು, ಅವರು ಒಂದು ಪೈಸೆ ಕೊಡಲಿಲ್ಲ ಇಷ್ಟು ಏತಕ್ಕೆ ಮಾಡುತ್ತಾರೋ ನನಗೆ ಗೊತ್ತಿಲ್ಲ; ಯೋಜನೆ ಮಾತ್ರ ಪ್ರಾರಂಭ ಮಾಡಿದರೆ ಸಾಲದು, ಅದನ್ನು ಕಾರ್ಯಗತ ಮಾಡುವ ದಿಕ್ಕಿನಲ್ಲಿ ಅಷ್ಟೇ ಪ್ರಯತ್ನ ಮಾಡಬೇಕು. ಇವತ್ತಿನವರೆವಿಗೂ ಕೂಡ ಆ ಯೋಜನೆಗೆ ಎಲ್.ಐ.ಸಿ.ಯಿಂದ ಬರಬೇಕಾದಂಥ ಸಾಲ ಮಂಜೂರಾಗಿಲ್ಲ. 3 ವರ್ಷಗಳಲ್ಲಿ ಆ ಯೋಜನೆ ಮುಗಿಸುತ್ತೇವೆಂದು ಹೇಳುತ್ತೀರಿ; ಆದರೆ ಆ ಯೋಜನೆಗೆ ಬೇಕಾದ ಹಣ ಮಂಜೂರಾತಿ ಆಗಿಲ್ಲ; ಹಣ ಬಿಡುಗಡೆ ಆಗಿಲ್ಲ, ಹೇಗೆ ಮುಗಿಸುತ್ತೀರಿ ? ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಇಂತಹ ನೀರಾವರಿ ಯೋಜನೆಗಳನ್ನು ಪ್ರಾರಂಭ ಆಗಿದೆ ಆ ಎಲ್ಲಾ ನೀರಾವರಿ

ಯೋಜನೆಗಳಿಗೆ ಹಣ ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಹಾಗೂ ಅದಕ್ಕೆ ಬೇಕಾಗುವ ಹಣ ತರುವ ಜವಾಬ್ದಾರಿ ನಿಮಗೆ ಸಂಬಂಧಪಟ್ಟಿದ್ದು.

ಅದನ್ನು ಸಾಲವಾಗಿ ಕೊಡುತ್ತೀರೋ, ಅಥವಾ ಬೇರೆ ಯ್ಯಾವ ರೀತಿಯಲ್ಲಾದರೂ ಕೊಡುತ್ತೀರೋ ಎಂಬುದು ತಮಗೆ ಬಿಟ್ಟಿದ್ದು. ಈ ಯೋಜನೆಗಳು ಪೂರ್ಣವಾಗುವ ದಿಕ್ಕಿನಲ್ಲಿ ಸಂಬಂಧಪಟ್ಟಂಥ ಮಂತ್ರಿಗಳು ಗಮನ ಕೊಟ್ಟರೆ ಈ ಯೋಜನೆಗಳನ್ನು ಪ್ರಾರಂಭಿಸಿದ್ದಕ್ಕೂ ಸಾರ್ಥಕವಾಗುತ್ತದೆ ಎಂದು ನನಗನ್ನಿಸುತ್ತದೆ.

ಇನ್ನು ಕೇವಲ ರಾಜಕೀಯದ ಉದ್ದೇಶದಿಂದಲೇ ಕೆಲವು ಕಾರ್ಯಕ್ರಮಗಳು ನಮ್ಮ ರಾಜ್ಯದಲ್ಲಿ ನಡೆಯುತ್ತಾ ಇದೆ. ಮೊದಲು ಶಿವಮೊಗ್ಗ ನಗರ ಸಭೆಯು ಬಿಜೆಪಿ ಕೈಯಲ್ಲಿತ್ತು. ಅದು ಆಗಿನ ಮುಖ್ಯಮಂತ್ರಿಗಳ ಕಣ್ಣು ಉರಿಯುವಂತಾಯಿತು. ಆ ನಗರಸಭೆಯನ್ನು ವಜಾ ಮಾಡಿದರು. ಜನರಿಂದ ಆಯ್ಕೆಯಾದ ನಗರಸಭೆಯನ್ನು ವಜಾ ಮಾಡಿ ತಮಗೆ ಬೇಕಾದವರನ್ನು ತಂದು ಹಾಕಿ ಕಾರ್ಪೊರೇಷನ್ ಮಾಡಿದರು. ಇವೊತ್ತು ಇಲ್ಲಿ ಎಲ್ಲಾ ಒಂದೇ ಪಕ್ಷದ ಸದಸ್ಯರು ಗುದ್ದಾಡುತ್ತಾ ಇದ್ದಾರೆ. ಕಾರ್ಪೊರೇಷನ್ ಸಭೆಯಲ್ಲಿ ಏನೇನಾಗುತ್ತಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಅದೇ ಸದಸ್ಯರೇ ಹೇಳುತ್ತಿದ್ದಾರೆ. ನೀವು ನಾಮಿನೇಟ್ ಮಾಡಿರತಕ್ಕಂಥ ಭ್ರಷ್ಟಾಚಾರಿಗಳನ್ನು ಹಾಗೂ ಆ ಕಾರ್ಪೊರೇಷನ್‌ನನ್ನು ತತ್‌ಕ್ಷಣ ವಜಾ ಮಾಡಿ, ಅದನ್ನು ಜನರಿಂದ ಆರಿಸಲ್ಪಡುವ ಕಾರ್ಪೊರೇಷನ್ ಮಾಡಬೇಕೇ ಹೊರತು ಅದನ್ನು ಬಿಟ್ಟು ಹಿಂದಿನವರು ಮಾಡಿದ್ದ ಅದೇ ತಪ್ಪಿಗೆ ತಮ್ಮ ಆಶೀರ್ವಾದ ಇದೆ ಎನ್ನುವುದಾದರೆ ಅಂಥ ಭ್ರಷ್ಟ ರಾಜಕಾರಣದಲ್ಲಿಯೇ ನೀವು ಕೂಡ ಮುಂದುವರಿಯುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಆ ಕಾರ್ಪೊರೇಷನ್‌ನನ್ನು ಕೂಡಲೇ ವಜಾ ಮಾಡಿ ಚುನಾವಣೆ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ. ನಾವು ಅಧಿಕಾರದಲ್ಲಿದ್ದಾಗ ಮುಖ್ಯಮಂತ್ರಿಗಳಿಗೆ ಒಂದು ಕೋಟಿ ರೂಪಾಯಿಗಳನ್ನು ಶಿವಮೊಗ್ಗ ನಗರಾಭಿವೃದ್ಧಿಗೆ ಕೊಡಿ ಎಂದು ಕೇಳಿಕೊಂಡೆವು. ಆದರೆ ಒಂದು ರೂಪಾಯಿಗಳನ್ನು ಕೂಡ ಕೊಡುವುದಿಲ್ಲವೆಂದು ಹೇಳಿಬಿಟ್ಟರು. ಆದರೆ ಕಾರ್ಪೊರೇಷನ್ ಮಾಡಿದ ದಿನವೇ ಆಗಿನ ಮೇಯರ್‌ಗೆ 3 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದರು. ಅದೇ ಮತ್ತೆ ಹೊಸ ಸರಕಾರವು ಬಂದಾಗ ಅದಕ್ಕೆ ತಡೆ ಹಾಕಿದರು. ಅಲ್ಲಿ ಭ್ರಷ್ಟಾಚಾರ ನಡೆಯಿತು ಎಂದು ತಡೆ ಮಾಡಿದರೋ, ಅಥವಾ ಅಲ್ಲಿನ ಅಧಿಕಾರಿಗಳು ಅವ್ಯವಹಾರ ಮಾಡಿದರು ಎಂದು ತಡೆ ಹಾಕಿದರೋ ಎಂಬುದು ನನಗೆ ಗೊತ್ತಿಲ್ಲ. ಅಧಿಕಾರಿಗಳು ಇಲ್ಲ ಎಂದು ಕಾರಣ ಕೊಡುತ್ತೀರಿ. ಕಾರ್ಪೊರೇಷನ್ ಮಾಡಬೇಕಾಗಿದ್ದರೆ ಅಧಿಕಾರಿಗಳನ್ನು ನೇಮಕ ಮಾಡಬೇಕಾದುದು ಇವರ ಕರ್ತವ್ಯವಾಗಿದ್ದಿಲ್ಲವೆ ? ಈಗಲೂ ಕೂಡ ಅಲ್ಲಿ ಬೇಕಾದಂಥ ಅಧಿಕಾರಿ ವರ್ಗವಿಲ್ಲ. ಆದ್ದರಿಂದ ತತ್‌ಕ್ಷಣ ಅಲ್ಲಿಗೆ ಬೇಕಾಗುವ ಅಧಿಕಾರಿಗಳನ್ನು ನೇಮಕ ಮಾಡಿ. ಹಾಗೆಯೇ ಅದರ ಅಭಿವೃದ್ಧಿಗೆ ಪೂರ್ಣ ಹಣವನ್ನು ಬಿಡುಗಡೆ ಮಾಡಬೇಕು. ಮೂರು ಕೋಟಿ ರೂಪಾಯಿಗಳ ಹಣ ವಿನಿಯೋಗವಾಗಬೇಕೆಂದು ಕಂಡೀಶನ್ ಹಾಕಿ ಕೊಟ್ಟಿದ್ದಾರೆ. ರಸ್ತೆ ಚರಂಡಿಗಳಿಗಾಗಿ ಎರಡೂವರೆ ಕೋಟಿ ರೂಪಾಯಿಗಳನ್ನು ಪಿಡಬ್ಲ್ಯುಡಿಯವರು ಬಳಸಿಕೊಳ್ಳಲಿ. 50 ಲಕ್ಷ ರೂಪಾಯಿಗಳನ್ನು ಬೇಕಾದರೆ ಬೀದಿ ದೀಪಗಳಿಗಾಗಿ ಬಳಸಿಕೊಳ್ಳಲಿ ಎಂದು ಹೇಳಬಯಸುತ್ತೇನೆ. ಇನ್ನಾವುದೋ ಪ್ರಭಾವಕ್ಕೆ ಮಣಿದು ಆ ಮೂರು ಕೋಟಿ ರೂಪಾಯಿಗಳನ್ನು ಬೈಫರ್ಕೇಟ್ ಮಾಡುತ್ತಿದ್ದಾರೆ ಎಂದು ಕೇಳಿದ್ದೇನೆ.

ಒಂದೂವರೆ ಕೋಟಿ ರೂಪಾಯಿಗಳನ್ನು ರಸ್ತೆಗೆ ಕೊಟ್ಟು ಐವತ್ತು ಲಕ್ಷ ರೂಪಾಯಿಗಳನ್ನು ದೀಪಗಳಿಗಾಗಿ ಕೊಟ್ಟು ಉಳಿದ ಒಂದು ಕೋಟಿ ರೂಪಾಯಿಗಳನ್ನು ಒಂದು ಕಾಂಪ್ಲೆಕ್ಸ್‌ಗಾಗಿ ವಿನಿಯೋಗ ಮಾಡುವ ಯೋಜನೆ ಇದೆ ಎಂಬ ಸುದ್ದಿಬಂದಿದೆ. ಯಾವುದೇ ಕಾರಣಕ್ಕೂ ನಮಗೆ ಈ ಕಾಂಪ್ಲೆಕ್ಸ್ ಬೇಕಾಗಿಲ್ಲ. ಅದರ ಅವಶ್ಯಕತೆಯೂ ಇಲ್ಲ. ನಮಗೆ ಜನಸಾಮಾನ್ಯರ ಸೌಲಭ್ಯಗಳು

ಮೊದಲು ಆಗಬೇಕಾಗಿದೆ. ಅದಕ್ಕಾಗಿ ಮೂರು ಕೋಟಿ ರೂಪಾಯಿಗಳನ್ನು, ರಸ್ತೆ, ನೀರು ಚರಂಡಿ, ಬೀದಿ ದೀಪಗಳು ಮುಂತಾದ ಕಾರ್ಯಗಳಿಗೆ ಮಾತ್ರ ಬಿಡುಗಡೆ ಮಾಡಬೇಕು ಮತ್ತು ಜನರಿಗೆ ಅನುಕೂಲವಾಗುವಂಥ ಕಂಡೀಶನ್ಸ್‌ಗಳನ್ನು ಮಾತ್ರ ಹಾಕಿಕೊಳ್ಳಬೇಕೆಂದು ಹೇಳಬಯಸುತ್ತೇನೆ. ಹಾಗೆಯೇ ಮಾನ್ಯ ಅಧ್ಯಕ್ಷರೇ, ಕಾರ್ಪೋರೇಷನ್‌ನವರು ಯಾವೊತ್ತು ಅಧಿಕಾರವನ್ನು ತೆಗೆದುಕೊಂಡರೋ, ಅಂದೇ ಎರಡು ಎಕರೆಗಳ ಒಂದು ಖಾತೆಯು ಬದಲಾವಣೆಯಾಯಿತು. ಅಧಿಕಾರ ತೆಗೆದುಕೊಂಡ ದಿನ ಮಧ್ಯಾಹ್ನವೇ ಈ ಖಾತೆಗಳ ಬದಲಾವಣೆ ಕಾರ್ಯದಿಂದ ಆರಂಭ ಮಾಡಿದರು. 16 ಜನರಿಗೆ ಈ ಎರಡು ಎಕರೆಗಳನ್ನು ಹಂಚಿ ಕೊಡುವಾಗ ಅದು ಮೂರು ಎಕರೆಯಾಯ್ತು. ಸಂಬಂಧಪಟ್ಟ ಮಂತ್ರಿಗಳಿಗೆ ನಾನು ಅದರ ಬಗ್ಗೆ ಮನವಿಯನ್ನು ಕೊಟ್ಟಿದ್ದೇನೆ. ರಾಜ್ಯಪಾಲರಿಗೂ ಮನವಿಯನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಏನು ತನಿಖೆಯಾಗಿದೆಯೋ ಗೊತ್ತಿಲ್ಲ. ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿದ್ದು ಇದರ ಬಗ್ಗೆ ತನಿಖೆ ಮಾಡಿಸಬೇಕು. ಕಾರ್ಪೋರೇಷನ್ ಸಭೆಯಲ್ಲಿ ನಾನು ಕೂಡ ಹೋಗಿ ಕುಳಿತುಕೊಂಡು ಚರ್ಚೆ ಮಾಡಿದಾಗ ಆ ಖಾತೆಯ ಬದಲಾವಣೆಯು ರದ್ದು ಆಗಿದೆ ಎಂದು ಆ ಸಭೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಅದು ಅಕಸ್ಮಾತ್ತಾಗಿ ರದ್ದಾಗಿಲ್ಲವಾದಲ್ಲಿ ಅದನ್ನು ರದ್ದು ಮಾಡಬೇಕೆಂದು ಕೇಳಬಯಸುತ್ತೇನೆ. ಇನ್ನು ಆಹಾರ ಇಲಾಖೆಯ ಬಗ್ಗೆ ಹೇಳುವುದಾದರೆ ಜನಸಾಮಾನ್ಯರಿಗೆ ಬೇಕಾದಂಥ ರೇಶನ್ ಕಾರ್ಡ್‌ಗಳು ಸಿಗುತ್ತಾ ಇಲ್ಲ. ಪ್ರಭಾವವಿಲ್ಲದೆ ಕಾರ್ಡ್‌ಗಳು ಸಿಗುತ್ತಾ ಇಲ್ಲ. ಆದ್ದರಿಂದ ಸರಳ ಮತ್ತು ಸುಲಭವಾಗಿ ರೇಶನ್ ಕಾರ್ಡ್ಸ್ ಸಿಗುವ ರೀತಿಯಲ್ಲಿ ಮಾಡಬೇಕೆಂದು ಹೇಳಿಕೊಳ್ಳುತ್ತನೆ. ಓಟರ್ಸ್ ಲಿಸ್ಟ್‌ನಲ್ಲಿ ಹೆಸರು ಇರುತ್ತದೆ, ಅಥವಾ ಅಧಿಕಾರಿಗಳಿಂದಲೋ, ಚುನಾಯಿತ ಪ್ರತಿನಿಧಿಗಳಿಂದಲೋ ಪತ್ರವನ್ನು ತೆಗೆದುಕೊಂಡು ಹೋದರೆ ಅಂಥವರಿಗೆ ಕಾರ್ಡ್‌ಗಳನ್ನು ಕೊಡಬಹುದು. ಹೀಗಾಗಿ ಕಾರ್ಡ್‌ಗಳು ಸಿಗುತ್ತಾ ಇಲ್ಲ. ರೇಶನ್ ಕಾರ್ಡ್ ಪ್ರಿಂಟ್ ಆಗಿದ್ದು ಕೂಡ ಇನ್ನೂ ಸಿಗುತ್ತಾ ಇಲ್ಲ. ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಇವೊತ್ತು ಪಾಮ್ ಆಯಿಲ್ ಎಲ್ಲಿದೆಯೋ ಗೊತ್ತಿಲ್ಲ. ಸೀಮೆ ಎಣ್ಣೆಯ ಬಗ್ಗೆ ಬೆಳಿಗ್ಗೆ 6 ಗಂಟೆಗೆ ಕ್ಯೂ ನಿಲ್ಲಬೇಕು. ನಾವೆಲ್ಲಾದರೂ ಬೆಳಿಗ್ಗೆ ವಾಕಿಂಗ್ ಹೋದರೆ ಅಲ್ಲಿ ಕ್ಯೂ ನಿಂತ ಜನರು ನಮ್ಮನ್ನು ಕೇಳುತ್ತಾರೆ. ಸೀಮೆ ಎಣ್ಣೆ ಮತ್ತು ಸಕ್ಕರೆ ಸರಿಯಾಗಿ ಸಿಗುತ್ತಾ ಇಲ್ಲ; ಆದರೆ ಕಾಳಸಂತೆಯಲ್ಲಿ ಬೇಕಾದಷ್ಟು ಮಾರಾಟವಾಗುತ್ತಾ ಇದೆ. ಹೀಗೆ ಅವ್ಯವಹಾರಿಗಳನ್ನು ಹಿಡಿದುಕೊಡಬೇಕಾಗುತ್ತದೆ. ಆದರೆ ಹಿಡಿದುಕೊಟ್ಟವರಿಗೆ ಪುರಸ್ಕಾರ ಸರಿಯಾಗಿ ಸಿಗುತ್ತ ಇಲ್ಲ. ನ್ಯಾಯ ಬೆಲೆ ಅಂಗಡಿಗಳಲ್ಲಿ 2–3 ಕೇ.ಜಿ. ವ್ಯತ್ಯಾಸ ಬಂದರೂ ರಿಕಾರ್ಡ್ಸ್‌ನಲ್ಲಿ ತೋರಿಸಬೇಕು. ಇಲ್ಲವಾದರೆ ಅವರ ಲೈಸನ್ಸ್ ಕ್ಯಾನ್ಸಲ್ ಮಾಡುತ್ತಾರೆ. ಆದರೆ ಎರಡು ಮೂರು ಚೀಲಗಳಷ್ಟು ಮಂಗಮಾಯವಾಗುತ್ತಿದ್ದರೂ ಕೂಡ ಸಂಬಂಧಪಟ್ಟ ಇಲಾಖೆಯು ಗಮನ ಕೊಡುತ್ತಾ ಇಲ್ಲ. ಹಾಗೆ ಹೊಸ ನ್ಯಾಯಬೆಲೆ ಅಂಗಡಿಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ ಸೊಸೈಟಿಗಳಿಗೆ ಆದ್ಯತೆಯನ್ನು ಕೊಡಬೇಕಾಗುತ್ತದೆ. ಅಂಗವಿಕಲರು ಮತ್ತು ಮಹಿಳೆಯರಿಗೆ ಕೂಡ ಆದ್ಯತೆಯನ್ನು ಕೊಡಬೇಕಾಗುತ್ತದೆ. ಈ ಬಗ್ಗೆ ಚಿಂತಿಸಬೇಕು ಮತ್ತು ಹೆಚ್ಚಿನ ರೀತಿಯಲ್ಲಿ ಮಾರಾಟವಾಗುತ್ತಿರುವಂಥ ಅಂಗಡಿಗಳ ಬಗ್ಗೆ ಯಾವುದೇ ಪ್ರಭಾವಕ್ಕೆ ಒಳಗಾಗದೆ ಕ್ರಮವನ್ನು ತೆಗೆದುಕೊಂಡರೆ ಮಾತ್ರ ಅನುಕೂಲವಾಗುವುದರ ಜೊತೆಗೆ ಜನರಿಗೂ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ಸಾರಿಗೆ ವಿಚಾರವಾಗಿ ಹೇಳುವುದಾದರೆ ನಮ್ಮ ಶಿವಮೊಗ್ಗದ ಸಾರಿಗೆ ಸಂಸ್ಥೆಯ ಡಿಪೋ ಮ್ಯಾನೇಜರ್ ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ''ನಗರದಿಂದ ಬೆಂಗಳೂರಿಗೆ ಖಾಸಗಿ ಬಸ್. ಕೆ.ಎಸ್.ಆರ್.ಟಿ.ಸಿಗೆ ದಿನವಹಿ 70 ಸಾವಿರ ರೂಪಾಯಿಗಳಷ್ಟು ನಷ್ಟ. ಕೆ.ಎಸ್.ಆರ್.ಟಿ.ಸಿ. ಮ್ಯಾನೇಜರ್ ವಿಷಾದ.'' ಒಂದು ದಿನಕ್ಕೆ ಸುಮಾರು 70 ಸಾವಿರ ರೂಪಾಯಿಗಳಷ್ಟು ಸಾರಿಗೆ ಸಂಸ್ಥೆಗೆ ಬರಬೇಕಾದ ಹಣವು ಖಾಸಗಿ ಬಸ್‌ನವರಿಗೆ ಪರವಾನಿಗೆಯನ್ನು ಕೊಡುವುದರಿಂದ ನಷ್ಟವಾಗುತ್ತಿದೆ

ಎಂದು ಮ್ಯಾನೇಜರ್ ಧೈರ್ಯವಾಗಿ ಹೇಳಬೇಕಾದರೆ, ಹಾಗಾದರೆ ಇದನ್ನು ನೋಡಿ ಸರಕಾರವು ಕಣ್ಣು ಮುಚ್ಚಿಕೊಂಡು ಕುಳಿತಿದೆಯೇ ? ಯಾರ ಪ್ರಭಾವಕ್ಕೆ ಮಣಿದು ಖಾಸಗಿ ವ್ಯಕ್ತಿಗಳಿಗೆ ಲೈಸೆನ್ಸ್ ಕೊಟ್ಟಿದ್ದೀರಿ ? ಹೀಗೆ ಖಾಸಗಿಯವರಿಗೆ ನೀವು ಕೊಡುತ್ತಾ ಹೋದರೆ ಇದರಲ್ಲಿ ಯಾವ ವ್ಯಕ್ತಿಗಳ ಪ್ರಭಾವ ಇದೆಯೆಂಬುದು ಗೊತ್ತಾಗುತ್ತದೆ. ನೀವು ಇದೇ ಧೋರಣೆಯನ್ನು ಅನುಸರಿಸಿದರೆ ಕೆ.ಎಸ್.ಆರ್.ಟಿ.ಸಿಯಿಂದ ಏನೂ ಉಪಯೋಗವಾಗಲಾರದು. ನಿಮಗೆ ಹೆಚ್ಚಿನ ಆದಾಯ ಬರುವುದಿಲ್ಲವೆಂದಾದರೆ ಬೇಕಾದರೆ ಖಾಸಗಿಯವರಿಗೆ ಕೊಟ್ಟರೆ ಅಭ್ಯಂತರವಿಲ್ಲ. ಗ್ರಾಮಾಂತರ ಪ್ರದೇಶ, ನಗರ ಪ್ರದೇಶ ಬೇಡಿಕೆ ಸಮೀಕ್ಷೆಯ ವರದಿಯಂತೆ ಹೊಸ ಸೌಕರ್ಯಗಳನ್ನು ಮಾಡಲಾಗುವುದು ಎಂಬ ಭರವಸೆಯನ್ನು ಕೊಡುತ್ತಲೇ ಇದ್ದಾರೆ. ಸ್ಪರ್ಧಾತ್ಮಕ ಸಾರಿಗೆ ವ್ಯವಸ್ಥೆಯ ಬಗ್ಗೆ ಉಲ್ಲೇಖಿಸಲಾಗಿದೆ. 9 ಸಾವಿರ ಬಸ್‌ಗಳನ್ನು ಹೊಂದಿರುವ ಕೆ.ಎಸ್.ಆರ್.ಟಿ.ಸಿ.ಯನ್ನು ಲಾಭದಾಯಕವಾಗಿ ನಡೆಸಲು ಭರವಸೆಯನ್ನು ನೀಡಲಾಗಿದೆ. ನಷ್ಟದಲ್ಲಿರುವ ಮಾರ್ಗಗಳನ್ನು ಖಾಸಗಿಯವರಿಗೆ ಕೊಡಿ. ಆದರೆ ಹಾಗೆ ಮಾಡದೇ ಲಾಭ ಬರುವ ಮಾರ್ಗಗಳನ್ನು ಖಾಸಗಿಯವರಿಗೆ ಕೊಡುತ್ತಿದ್ದಾರೆ. ಈ ಬಗ್ಗೆ ಪ್ರಾಮಾಣಿಕ ಪ್ರಯತ್ನವನ್ನೇ ಮಾಡಿ, ಜನಸಾಮಾನ್ಯರಿಗೂ ಅನುಕೂಲ ಮಾಡಿಕೊಡುವ ಬಗ್ಗೆ ಯೋಚನೆ ಮಾಡಬೇಕು. ಶಿವಮೊಗ್ಗದಲ್ಲಿ ಗ್ರಾಮಾಂತರ ಸಾರಿಗೆ ಪ್ರಾರಂಭವಾಯಿತು. ಗ್ರಾಮಾಂತರ ಪ್ರದೇಶಗಳಿಗೆ ಈ ವ್ಯವಸ್ಥೆಯನ್ನು ಮಾಡಿಸಿ ಎಂದು ಕರೆದು ಹೇಳಿದರು. ಹಾಗೆ ಒಂದೊಂದು ಬಸ್ ಇರುವವರು ಇಂದು ಎರಡೆರಡು ಬಸ್ ಇಟ್ಟುಕೊಂಡು ಲಾಭದಲ್ಲಿದ್ದಾರೆ. ಅದನ್ನು ಬಿಟ್ಟು ಎಲ್ಲ ಲಾಭದ ಮಾರ್ಗಗಳನ್ನು ಖಾಸಗಿಯವರಿಗೆ ಕೊಟ್ಟು ಭ್ರಷ್ಟರ ಜೊತೆಯಲ್ಲಿ ನೀವು ಕುಳಿತಿದ್ದೀರಿ ಎಂದು ಜನರು ಆಡಿಕೊಳ್ಳುವ ಹಾಗೆ ಏಕೆ ಮಾಡಿಕೊಳ್ಳುತ್ತಿದ್ದೀರಿ ? ಇತ್ತೀಚೆಗೆ ಅನೇಕ ರೈಲು ಸಂಚಾರ ನಿಂತಿರುವುದರಿಂದ ಜನರಿಗೆ ಸೂಪರ್ ಡೀಲಕ್ಸ್ ಬಸ್ ಹಾಕಿಕೊಡಿ ಎಂದು ಎಲ್ಲಾ ಶಾಸಕರು ಸಾರಿಗೆ ಸಚಿವರನ್ನು ಕೇಳಿಕೊಂಡಿದ್ದೆವು. ಆದರೆ ಇಂದಿಗೂ ವ್ಯವಸ್ಥೆಯಾಗಿಲ್ಲ, ಸಾರಿಗೆ ಸಚಿವರು ಇದರ ಕಡೆಗೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಹಾಗೆಯೇ ಬಸ್‌ನಲ್ಲಿ ಕಲೆಕ್ಷನ್ಸ್ ಕೂಡ ಕಡಿಮೆ ಎಂದು ಹೇಳುತ್ತಿದ್ದಾರೆ. ಕಂಡಕ್ಟರ್‌ಗಳಲ್ಲಿ ಅನೇಕರು ಪ್ರಾಮಾಣಿಕರು ಇದ್ದಾರೆ. ಅವರೇ ಬಾಯಿಬಿಟ್ಟು ಹೇಳುತ್ತಿದ್ದಾರೆ. ಕಷ್ಟಪಟ್ಟು ದುಡಿಯುವವರಿಗೂ ಕಳ್ಳತನ ಮಾಡುವವರಿಗೂ ಒಂದೇ ರೀತಿಯಲ್ಲಿ ಸಂಸ್ಥೆ ನೋಡುತ್ತದೆ ಎಂದು ಹೇಳುತ್ತಾರೆ. ಪ್ರಾಮಾಣಿಕವಾಗಿ ಕೆಲಸ ಮಾಡುವ ಕಂಡಕ್ಟರ್‌ಗಳಿಗೆ ಪ್ರೋತ್ಸಾಹ ರೂಪವಾಗಿ ಏನಾದರೂ ಕೊಟ್ಟರೆ ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ. ಇದರಿಂದ ಆದಾಯವೂ ಹೆಚ್ಚುತ್ತದೆ. ಅನೇಕ ಡಿಪೋಗಳಲ್ಲಿ ಸಣ್ಣ ಸಣ್ಣ ಸಾಮಗ್ರಿಗಳು ಇಲ್ಲದೇನೇ ಬಸ್‌ಗಳು ನಿಂತು ಹೋಗುತ್ತವೆ. ಸ್ಪ್ರಿಂಗ್ ಬೇರಿಂಗ್‌ಗಳು ಇಲ್ಲದೇ ಬಸ್‌ಗಳು ನಿಂತಿವೆ. ಇದನ್ನು ಮಾನ್ಯ ಸಚಿವರು ಗಮನಿಸಬೇಕು.

4.05 ಪಿ.ಎಂ.

ಇನ್ನು ಎರಡು ವರ್ಷಗಳ ಕೆಳಗಡೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಬೆಂಬಲದಿಂದ ತಾಳೆಎಣ್ಣೆಯ ಗಿಡಗಳನ್ನು ಹಾಕಬೇಕೆಂದು ಹೇಳಿ ಅವರಿಗೆ ಗುಂಡಿಯನ್ನು ತೆಗೆಯುವುದಕ್ಕೆ ಆಮೇಲೆ ಗಿಡವನ್ನು ನೆಡುವುದಕ್ಕೆ ಗೊಬ್ಬರ ಹಾಕುವುದಕ್ಕೆ ಎಲ್ಲದಕ್ಕೂ ಪ್ರೋತ್ಸಾಹ ಕೊಡುತ್ತೇವೆ, ಇನ್ನು 4 ವರ್ಷಗಳಲ್ಲಿ ಫ್ಯಾಕ್ಟರಿಯನ್ನು ಪ್ರಾರಂಭ ಮಾಡುತ್ತೇವೆ, ನೀವು ಖಂಡಿತ ಶುರು ಮಾಡಿ ಅಂತ ಹೇಳಿಕೊಂಡು ಅನೇಕ ಕಡೆ ತಾಳೆ ಗಿಡವನ್ನು ಹಾಕಿಸಿದರು. ಈ ಜೂನ್‌ಗೆ ನಾಲ್ಕು ವರ್ಷ ಮುಗಿಯುತ್ತಾ ಬಂತು. ಗಿಡ ಬರುತ್ತಿದೆ ಹಣ್ಣು ಬರುತ್ತಿದೆ, ಈ ಜೂನ್‌ಗೆ ಬಂದಂತಹ ಹಣ್ಣು ಕಿತ್ತು 24 ಗಂಟೆಯೊಳಗೆ ಫ್ಯಾಕ್ಟರಿಗೆ ಹೋಗದೆ ಇದ್ದರೆ ಆ ಹಣ್ಣು ಗೊಬ್ಬರವಾಗುತ್ತದೆ.

ಶ್ರೀ ಸಿ. ಬೈರೇಗೌಡ:– ನೀವು ಯಾರಿಗೆ ಹೇಳುತ್ತಿದ್ದೀರಿ ?

ಶ್ರೀ ಕೆ.ಎಸ್. ಈಶ್ವರಪ್ಪ:– ಸರ್ಕಾರಕ್ಕೆ ಹೇಳದೆ ಇನ್ನು ಯಾರಿಗೆ ಹೇಳಲಿ? ಹಾರ್ಟಿಕಲ್ಚರಲ್ ಮಿನಿಸ್ಟರ್ ಇದ್ದಾರೆ. ನಾನು ರೈತರ ಪರವಾಗಿ ಕೇಳಿಕೊಳ್ಳುತ್ತೇನೆ; ಯಾರಾದರೂ ನೋಟ್ ಮಾಡಿಕೊಳ್ಳಲಿ, ಏನಾದರೂ ಮಾಡಿಕೊಳ್ಳಲಿ, ಅವರಿಗೆ ಬಿಟ್ಟಿದ್ದು.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ಬೇರೆ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಇಲ್ಲದೇ ಇದ್ದರೂ ಸಹ ನಡೆಯುತ್ತದೆ, ನಿಜ ಒಪ್ಪಿಕೊಳ್ಳುತ್ತೇವೆ; ಆದರೆ ಈ ಬೇಡಿಕೆಗಳ ಬಗ್ಗೆ ಚರ್ಚೆಯಾಗುತ್ತಿರತಕ್ಕಂಥ ಸಂದರ್ಭದಲ್ಲಿ ಮಂತ್ರಿಗಳು ಇರಬೇಕಾಗುತ್ತದೆ. ಏಕೆಂದರೆ ಅವರು ಉತ್ತರವನ್ನು ಕೊಡತಕ್ಕಂಥವರು. ಫ್ಯಾಕ್ಟರಿಗೆ ಹೋಗದೆ ಇದ್ದರೆ 24 ಗಂಟೆಯೊಳಗೆ ಹಣ್ಣು ಕೊಳೆತು ಹೋಗುತ್ತದೆ ಅನ್ನುತ್ತಾರೆ. ಅಲ್ಲಿ ರೈತರ ಪಾಡು ಏನಾಗಬೇಕು? ಇದಕ್ಕೆ ಉತ್ತರ ಕೊಡಬೇಕಾಗಿರತಕ್ಕಂಥವರು ಇವತ್ತಿನ ದಿವಸ ಇಲ್ಲ. ಅವರು ಇದನ್ನು ಕೇಳಬೇಕಾಗಿರತಕ್ಕಂಥದ್ದು, ಅವಶ್ಯಕತೆ ಇದೆ. ಆದ್ದರಿಂದ ಅವರನ್ನು ಕರೆಸುವುದಕ್ಕೆ ಏರ್ಪಾಡು ಮಾಡಿ.

ಶ್ರೀ ಡಿ.ಎ. ಚಿನ್ನಪ್ಪ (ಗಣಿ ಹಾಗೂ ಭೂಗರ್ಭ ರಾಜ್ಯ ಸಚಿವರು):– ನಿಮಗೆ ಉತ್ತರ ತಾನೆ ಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ:– ಉತ್ತರ ಅಲ್ಲ, ಫ್ಯಾಕ್ಟರಿ ಆಗಬೇಕು. ಉತ್ತರವನ್ನು ತೆಗೆದುಕೊಂಡು ಬೆಂಕಿ ಹಾಕೋಣ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– 39 ಜನ ಮಂತ್ರಿಗಳು ಸಹ ಇಲ್ಲೇ ಕುಳಿತಿರಬೇಕು ಅಂದರೆ ಆಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಮ್ಮ ಪರಿಸ್ಥಿತಿ ಯಾವ ಮಟ್ಟಕ್ಕೆ ಬಂದಿದೆ ಅಂದರೆ ರಾಮಸ್ವಾಮಿಯವರು ಈ ಮಾತನ್ನು ಹೇಳಬಾರದು. ಏಕೆ ಅಂದರೆ ನಮ್ಮ ಪರಿಸ್ಥಿತಿ ಬೇಡಿಕೆಗಳನ್ನು ಮಂಡನೆ ಮಾಡಲಿಕ್ಕೇ ಈ ರೀತಿಯಾದರೆ ಹೇಗೆ? ಬೈರೇಗೌಡರು ಈ ಪ್ರಶ್ನೆಯನ್ನು ಎತ್ತಲೇಬಾರದಾಗಿತ್ತು. ಏಕೆಂದರೆ ಬೇಡಿಕೆಗಳನ್ನು ಮಂಡನೆ ಮಾಡಲಿಕ್ಕೆ ಮಾನ್ಯ ಮಂತ್ರಿಗಳು ಬರುವುದಿಲ್ಲ. ಹೀಗಾದರೆ ನಾವು ಅವರು ಮಾತನಾಡುವುದನ್ನು ಏತಕ್ಕೆ ಕೇಳಬೇಕು?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– 39 ಜನರಲ್ಲಿ ಇಬ್ಬರು ಬಂದಿಲ್ಲ.

ಶ್ರೀ ಸಿ. ಬೈರೇಗೌಡ:– ಓವರ್ ಹೆಡ್ ಆಗಿ ಬಿಟ್ಟರೆ ಹೀಗೆ ಆಗುತ್ತದೆ.

ಶ್ರೀ ಡಿ.ಎ. ಚಿನ್ನಪ್ಪ:– ಯಾರು ಬರುತ್ತಾರೆ ಯಾರು ಬಿಡುತ್ತಾರೆ ಅಂತ ಗೊತ್ತಾಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:– ಬಹಳ ಆಶ್ಚರ್ಯಪಡುತ್ತೇನೆ. ಶಿವಮೊಗ್ಗಾದಲ್ಲಿ ಫ್ಯಾಕ್ಟರಿ ಆಗಬೇಕೆನ್ನುವ ಉದ್ದೇಶದಿಂದ ತಾಳೆ ಗಿಡವನ್ನು ರೈತರು ಹಾಕಿದ ಉದ್ದೇಶದಿಂದ ಅಲ್ಲಿ ಫ್ಯಾಕ್ಟರಿ ಆಗಬೇಕು. ಕಳೆದ ಸದನದಲ್ಲಿ ಸಂಬಂಧಪಟ್ಟಂತಹ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಫ್ಯಾಕ್ಟರಿ ರೆಡಿಯಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ತುಂಬಾ ನೊಂದು ಈ ಮಾತನ್ನು ಹೇಳುತ್ತೇನೆ. ಅಲ್ಲೊಂದು ಮೈದಾನ ಇದೆ, ಒಂದು ಕೆಟ್ಟ ಗೋಡೌನ್ ಇದೆ. ಒಂದು ವರ್ಕ್‌ಶೆಡ್ ಬಿಟ್ಟರೆ ಇನ್ನೇನು ಇಲ್ಲ. ಫ್ಯಾಕ್ಟರಿ ಆಗಿಲ್ಲ. ಫ್ಯಾಕ್ಟರಿ ಬಿಲ್ಡಿಂಗ್ ಆಗಿಲ್ಲ. ಮಿಷನರಿಸ್ ಬಂದಿಲ್ಲ. ಇಡೀ ಸದನವನ್ನು ತಪ್ಪುದಾರಿಗೆ ತೆಗೆದುಕೊಂಡು ಹೋಗುವ ರೂಪದಲ್ಲಿ ತಾಳೆ ಎಣ್ಣೆ ಫ್ಯಾಕ್ಟರಿ ರೆಡಿಯಾಗಿ ಹೋಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಕಷ್ಟವನ್ನು ಯಾರಿಗೆ ಹೇಳಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ನಾನು ಏತಕ್ಕೆ ಈ ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಅಂದರೆ ಜೂನ್ ತಿಂಗಳಿಗೆ ಈ ಹಣ್ಣು ಉತ್ಪತ್ತಿಯಾಗುತ್ತಿದೆ, ಆ ಹಣ್ಣು ಫ್ಯಾಕ್ಟರಿಗೆ ಹೋಗಲಿಲ್ಲ ಅಂದರೆ ಲಾಸ್ ಆಗುತ್ತದೆ. ಈ ಗೋಳನ್ನು ನಾವು ಯಾರ ಹತ್ತಿರ ತೋಡಿಕೊಳ್ಳಬೇಕು? ಅದಕ್ಕೋಸ್ಕರ ನಾನು ಸರ್ಕಾರಕ್ಕೆ ಹೇಳುವುದಕ್ಕೆ

ಇಷ್ಟಪಡುತ್ತೇನೆ, ನೀವು ಜೂನ್ 1993ರೊಳಗೆ ನೀವು ಖಂಡಿತವಾಗಿಯೂ ಫ್ಯಾಕ್ಟರಿಯನ್ನು ಮಾಡುವುದಿಲ್ಲ. ಅದಕ್ಕೋಸ್ಕರ ಕನಿಷ್ಠ ಆ ರೈತರಿಗೆ ಪರಿಹಾರವನ್ನಾದರೂ ಕೊಡಿ. ಏಕೆಂದರೆ ಅವರು ನಿಮ್ಮನ್ನು ನಂಬಿಕೊಂಡು ಗಿಡವನ್ನು ಹಾಕಿದ್ದಾರೆ. ತಾಳೆಯನ್ನು ಬೆಳೆದಿದ್ದಾರೆ ಹಣ್ಣುಬರುತ್ತಿದೆ, ನೀವು ನಂಬಿರುವ ರೈತರಿಗೆ ಖಂಡಿತವಾಗಿಯೂ ದ್ರೋಹವನ್ನು ಮಾಡಬೇಡಿ. ಹಣ್ಣು ಉತ್ಪತ್ತಿ ಮಾಡುವ ರೈತರಿಗೆ ಫ್ಯಾಕ್ಟರಿಯ ಮಾಲೀಕರಿಂದ ಪರಿಹಾರ ಕೊಡಿಸುತ್ತೀರೋ ಅಥವಾ ನೀವು ಕೊಡುತ್ತೀರೋ ಗೊತ್ತಿಲ್ಲ. ಆ ರೈತನಿಗೆ ಪರಿಹಾರವನ್ನು ಕೊಡುವ ದಿಕ್ಕಿನಲ್ಲಿ ತಾವು ಗಮನವನ್ನು ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಪಾಮಾಯಿಲ್ ಪ್ಲಾಂಟ್ ಅನ್ನು ಜಾಯಿಂಟ್ ಸೆಕ್ಟಾರ್‌ನಲ್ಲಿ ಪ್ರಾರಂಭ ಮಾಡಬೇಕೆಂದು ಸರ್ಕಾರ ನಿರ್ಧಾರ ಮಾಡಿ ಅದರ ಪ್ರಾಜೆಕ್ಟ್ ವರ್ಕ್ ನಡೆಯುತ್ತಿದೆ. 1993ನೇ ಇಸವಿ ಜುಲೈಯೊಳಗಾಗಿ ಅದು ಕಾರ್ಯಾರಂಭ ಮಾಡುತ್ತದೆ. ಆದ್ದರಿಂದ ಪಾಮಾಯಿಲ್‌ಗೆ ಸಂಬಂಧಪಟ್ಟಂತಹ ಯಾರಿಗೂ ತೊಂದರೆಯಾಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತುಂಬಾ ಸಂತೋಷವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಅಕಸ್ಮಾತ್ತಾಗಿ ಜುಲೈ 1993ಕ್ಕೆ ಮುಗಿಸಿದರೆ ನಾನು ನಿಜಕ್ಕೂ ನಿಮಗೆ ಯಾವ ರೀತಿ ನಮಸ್ಕಾರ ಮಾಡಬೇಕೋ ನನಗೆ ಅರ್ಥವಾಗುವುದಿಲ್ಲ. ನಾನು ಏತಕ್ಕೆ ಈ ಅಂಶವನ್ನು ಹೇಳುತ್ತೇನೆ ಅಂದರೆ ಪ್ರತಿನಿತ್ಯ ನಾನು ಇಲ್ಲಿ ಓಡಾಡುತ್ತೇನೆ. ಪ್ರತಿನಿತ್ಯ ಬೆಂಗಳೂರು ಶಿವಮೊಗ್ಗಕ್ಕೆ ಓಡಾಡುತ್ತೇನೆ. ಅಲ್ಲಿ ಪರಿಸ್ಥಿತಿ ಏನಾಗಿದೆ ಎಂಬುದನ್ನು ನೋಡುತ್ತಿದ್ದೇನೆ. ಅಧಿಕಾರಿಗಳು ಕೊಟ್ಟಂತಹ ಉತ್ತರ ಈಗ ನನ್ನ ಹತ್ತಿರ ಇಲ್ಲ. ಬಸ್ಸಿನಲ್ಲಿ ಹೋಗಬೇಕಾದರೆ ಅದೇ ರಸ್ತೆಯಲ್ಲಿ ಹೋಗುತ್ತೇನೆ. ಅದೇ ರಸ್ತೆಯಲ್ಲಿ ಬರುತ್ತೇನೆ, ಅಲ್ಲಿ ಬಿಲ್ಡಿಂಗ್‌ಗಳು ಆಗಿಲ್ಲ, ಮಿಷಿನರಿಗಳು ಬಂದಿಲ್ಲ, ಮಾರ್ಚಿ ಮುಗಿಯುತ್ತಾ ಬಂದು, ಜೂನ್ ಜುಲೈ, ಆಗಸ್ಟ್ ಸೆಪ್ಟೆಂಬರ್ 4 ತಿಂಗಳು ಇದೆ. ಅಷ್ಟರಲ್ಲಿ ಬಿಲ್ಡಿಂಗ್ ಆಗುತ್ತದಾ ? ಮಿಷಿನರಿ ಬರುತ್ತದಾ ? ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ನೀವು ಫ್ಯಾಕ್ಟರಿಯನ್ನು ತಯಾರು ಮಾಡಿದರೆ ನಾನು ಟೀಕೆ ಟಿಪ್ಪಣಿಯನ್ನು ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಫ್ಯಾಕ್ಟರಿಯಾದರೆ ನಾನೇ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅಕಸ್ಮಾತ್ ಆಗಲಿಲ್ಲ ಅಂದರೆ ದಯವಿಟ್ಟು ರೈತನನ್ನು ಬೀದಿಗೆ ಬಿಡಬೇಡಿ. ನಿಮ್ಮನ್ನು ನಂಬಿಕೊಂಡು ಅವನು ಗಿಡವನ್ನು ಹಾಕಿದ್ದಾನೆ. ನಿಮ್ಮನ್ನು ನಂಬಿಕೊಂಡು ಅವನು ಬೇರೆ ಬೆಳೆಯನ್ನು ಬೆಳೆಯಲು ನಿಲ್ಲಿಸಿದ್ದಾನೆ. ಅದರ ಮೇಲೆಯೇ ಅವನ ಸಂಸಾರ ನಿಂತಿದೆ. ನೀವು ಒಂದು ವರ್ಷ ಅವನಿಗೆ ಪರಿಹಾರವನ್ನು ಕೊಡಲಿಲ್ಲ ಅಂದರೆ ಅವರು ಖಂಡಿತವಾಗಿ ರಸ್ತೆಗೆ ಬರುತ್ತಾರೆ. ಅದಕ್ಕೆ ಮೊದಲೇ ಪರಿಹಾರವನ್ನು ಕೊಡುವಂತಹ ದಿಕ್ಕಿನಲ್ಲಿ ಪ್ರಯತ್ನ ಮಾಡಿ. ಫ್ಯಾಕ್ಟರಿಯಾದರೆ ನಾನು ಇಡೀ ಜಿಲ್ಲೆಯ ಜನರ ಪರವಾಗಿ ನಿಮಗೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಬಗರ್‌ಹುಕ್ಕುಂ ಸಾಗುವಳಿಯ ಬಗ್ಗೆ ಎಲ್ಲಾ ಕ್ಷೇತ್ರದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿದ್ದಾರೆ. ಇದು ತುಂಬಾ ಒಳ್ಳೆಯ ಯೋಜನೆ. ಆ ಬಡವರು ಅನೇಕ ವರ್ಷಗಳಿಂದ ಅರ್ಧ ಎಕರೆ, ಮುಕ್ಕಾಲು ಎಕರೆಯಲ್ಲಿ ಗಿಡ ಗಂಟೆಯನ್ನು ಕಿತ್ತು ಭೂಮಿಯನ್ನು ಹದಮಾಡಿಕೊಂಡು ಅದನ್ನೇ ತನ್ನ ದೇವರೆಂದು ಪೂಜೆ ಮಾಡಿಕೊಂಡು ಜೀವನ ಮಾಡುವಂತಹ ಸಂದರ್ಭದಲ್ಲಿ ಅವನಿಗೆ ಅದನ್ನು ಖಾಯಂ ಮಾಡಿ ಕೊಡಬೇಕಾದಂತಹದ್ದು ಸರ್ಕಾರದ ಕರ್ತವ್ಯ ಇದೆ. ಆ ದಿಕ್ಕಿನಲ್ಲಿ ಸರ್ಕಾರ ಯೋಚನೆ ಮಾಡಿರುವುದು ನಿಜಕ್ಕೂ ಒಳ್ಳೆಯ ಸಂಗತಿ. ಅದಕ್ಕಾಗಿ ಈ ರಾಜ್ಯದ ಆ ಬಡವರ ಪರವಾಗಿ ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ಆದರೆ ಅನೇಕ ಕ್ಷೇತ್ರಗಳಲ್ಲಿ ಸಾವಿರಾರು ಎಕರೆ ಭೂಮಿಗಳಿವೆ, ಸಾವಿರಾರು ಜನ ಆ ಭೂಮಿಯ ಮೇಲೆ ನಿಂತಿದ್ದಾರೆ. ಆ ಭೂಮಿ ಅವರದು ಅಂತ ಇನ್ನು ಖಾಯಂ ಆಗಬೇಕಾದರೆ ಸರ್ವೆ ಕೆಲಸ ಮಾಡಿಲ್ಲ. ಸರ್ವೆಯನ್ನು ಮಾಡುವುದಕ್ಕೆ

ಆಗುತ್ತಿಲ್ಲ. ಏಕೆಂದರೆ ಇಡೀ ತಾಲ್ಲೂಕಿಗೆ ಇಬ್ಬರು ಮಾತ್ರ ಸರ್ವೇಯರು ಇದ್ದಾರೆ. ಕೆಲವು ಕಡೆ ಒಬ್ಬರು ಇದ್ದಾರೆ. ಅದಕ್ಕೋಸ್ಕರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ, ನಿಮ್ಮ ಯೋಜನೆ ತುಂಬ ಒಳ್ಳೆಯ ಯೋಜನೆ. ದಯವಿಟ್ಟು ಆ ಭೂಮಿಯನ್ನು ಸರ್ವೆ ಮಾಡುವಂತಹ ದೃಷ್ಟಿಯಲ್ಲಿ ಸರ್ವೇಯರುಗಳನ್ನು ಆದಷ್ಟು ಬೇಗ ನೇಮಕ ಮಾಡಿಕೊಳ್ಳಿ. ಇನ್ನು ಬೇರೆ ಬೇರೆ ಅಧಿಕಾರಿಗಳನ್ನು ಕಡಿಮೆ ಮಾಡಿದರೂ ಚಿಂತೆ ಇಲ್ಲ ಹೆಚ್ಚಿನ ಸರ್ವೇಯರನ್ನು ನೇಮಕ ಮಾಡಿದರೆ ಆ ಭೂಮಿಯು ಅವನಿಗೆ ಸಿಗುತ್ತದೆ. ಅದರಿಂದ ಅವನು ಬದುಕುತ್ತಾನೆ. ಸರ್ಕಾರದ ಹೆಸರನ್ನು ಹೇಳುತ್ತಾನೆ. ದಯವಿಟ್ಟು ಆ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಭೂಮಿ ಮುಳುಗಡೆಯಾದವರಿಗೆ ಇವತ್ತಿನವರೆಗೂ ಪರಿಹಾರವನ್ನು ಕೊಟ್ಟಿಲ್ಲ. ಅವರಿಗೆ ಬೇರೆ ಭೂಮಿಯನ್ನು ಕೊಟ್ಟಿಲ್ಲ. ಈ ರಾಜ್ಯದ ಅನೇಕ ಯೋಜನೆಗಳಿಗೆ ಆ ಬಡ ರೈತ ತನ್ನ ಭೂಮಿಯನ್ನು ಧಾರೆಯೆರೆದು ಕೊಟ್ಟಿದ್ದಾನೆ. ದಾರೆಯೆರೆದುಕೊಟ್ಟಂಥ ರೈತ ಇವತ್ತು ನಿರ್ಗತಿಕನಾಗಿದ್ದಾನೆ. ಅವನಿಗೆ ಭೂಮಿ ಇಲ್ಲ ಪರಿಹಾರ ಇಲ್ಲ, ದಯವಿಟ್ಟು ಸರ್ಕಾರ ಆ ದಿಕ್ಕಿನಲ್ಲಿ ಯೋಚನೆ ಮಾಡಬೇಕಾಗುತ್ತದೆ. ಆ ಬಡ ರೈತರುಗಳಿಗೆ ಬೇರೆ ಭೂಮಿಯನ್ನು ಕೊಟ್ಟು ಪರಿಹಾರವನ್ನು ಕೊಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ಈ ರಾಜ್ಯದ ರೈತ ನೆರೆಹಾವಳಿಯ ಬಗ್ಗೆ ತುತ್ತಾಗಿದ್ದಾನೆಂದು ತಮಗೆ ಈಗಾಗಲೇ ಗೊತ್ತಾಗಿದೆ. ಸರ್ಕಾರ ಈ ದಿಕ್ಕಿನಲ್ಲಿ ಸಮರದೋಪಾದಿಯಲ್ಲಿ ಕೆಲಸ ಮಾಡುತ್ತಿದೆ ಅಂತ ಹೇಳಿತ್ತು, ಆದರೆ ಹಣವನ್ನು ಪೂರ್ಣವಾಗಿ ಬಿಡುಗಡೆ ಮಾಡಿಲ್ಲ. ಹಣ ಬಿಡುಗಡೆ ಮಾಡುತ್ತೇವೆ, ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. 5 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಉತ್ತರ ಕೊಡುವಂತಹ ಸಂದರ್ಭದಲ್ಲಿ 5 ಕೋಟಿ ರೂಪಾಯಿಗಳನ್ನು ಪೂರ್ಣ ಬಿಡುಗಡೆ ಮಾಡಿದ್ದೇವೆನ್ನುವಂತಹ ಉತ್ತರವನ್ನು ಕೊಟ್ಟು ಆ ನೆರೆಹಾವಳಿಗೆ ತುತ್ತಾದಂತಹ ರೈತರು ಬದುಕುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಕನಿಷ್ಠ 5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೀರಿ, ಅದನ್ನು ಬಿಡುಗಡೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಹಿಂದಿನ ಸರ್ಕಾರ ಆರಾಧನಾ ಯೋಜನೆಯನ್ನು ಜಾರಿಗೆ ತೆಗೆದುಕೊಂಡು ಬಂತು. ಆ ಆರಾಧನಾ ಯೋಜನೆಯನ್ನು ಜಾರಿಗೆ ತಂದ ನಂತರ ಗ್ರಾಮಾಂತರ ಪ್ರದೇಶದಲ್ಲಿದ್ದಂತಹ ಜನ ತಮ್ಮ ಜಾತಿಯನ್ನು ಮರೆತು, ತಾನು ಯಾವ ಜಾತಿಯವನೆಂಬ ಯೋಚನೆಯನ್ನು ಮರೆತು ಗ್ರಾಮದಲ್ಲಿರುವಂತಹ ಆ ದೇವಸ್ಥಾನದ ಅಭಿವೃದ್ಧಿಗೆ ಖಂಡಿತ ನಾವೆಲ್ಲರೂ ಒಂದಾಗಬೇಕೆಂದು ಯೋಚನೆ ಮಾಡಿಕೊಂಡು, ಸರ್ಕಾರ ಕೊಟ್ಟಂತಹ ಹಣದಿಂದ ಅನೇಕ ಹಳ್ಳಿಗಳಲ್ಲಿ ಅನೇಕ ಬೋವಿ, ಹರಿಜನ, ಬೇರೆ ಬೇರೆ ಜನಾಂಗದ ಮೊಹಲ್ಲಾಗಳಲ್ಲಿ ಈ ದೇವಸ್ಥಾನಗಳು ಪುನರ್ ನಿರ್ಮಾಣವಾಗಿವೆ. ಪೂಜೆ ನಡೆಯುತ್ತಿದೆ. ಸರ್ಕಾರ ಹಣ ಕೊಟ್ಟಿದೆ. ಆದರೆ ಈ ಹೊಸ ಸರ್ಕಾರ ಬಂದನಂತರ ಒಂದು ರೂಪಾಯಿ ಹಣವನ್ನು ಸಹ ಬಿಡುಗಡೆ ಮಾಡಿಲ್ಲ. ಈ ಯೋಜನೆಯನ್ನು ಮುಂದುವರಿಸುತ್ತಾರೋ ಇಲ್ಲವೋ ಗೊತ್ತಿಲ್ಲ. ಈ ಯೋಜನೆಯನ್ನು ಮುಂದುವರಿಸುತ್ತೇವೆಂದು ಉತ್ತರ ಸಿಕ್ಕಿದೆ. ಆದರೆ ಉತ್ತರ ಮಾತ್ರ ಸಿಕ್ಕಿದೆಯೇ ವಿನಃ ಹಣ ಸಿಕ್ಕಿಲ್ಲ. ಆದ್ದರಿಂದ ಖಂಡಿತವಾಗಿಯೂ ಈ ಆರಾಧನಾ ಯೋಜನೆಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವಕ್ಫ್ ಹಣದಲ್ಲಿ ಸಾಕಷ್ಟು ಭ್ರಷ್ಟಾಚಾರ ಆಗುತ್ತಿದೆ ಎಂದು ಸುದ್ದಿ ಬರುತ್ತಿದೆ. ಸರ್ಕಾರ ಕೂಡ ಹೇಳಿದೆ. ಅನೇಕ ವ್ಯಕ್ತಿಗಳು ಹೇಳಿದ್ದಾರೆ. ಸುದ್ದಿ ಸಮಾಚಾರ ಹೇಳುತ್ತಿದೆ. ಆ ಭ್ರಷ್ಟಾಚಾರದ ಬಗ್ಗೆ ತನಿಖೆಯ ದಿಕ್ಕಿನಲ್ಲಿ ಸರ್ಕಾರ ಪ್ರಯತ್ನ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂದು ಹೇಳುವುದಕ್ಕೆ

ಇಷ್ಟಪಡುತ್ತೇನೆ. ಇನ್ನು ಗ್ರಾಮೀಣಾಭಿವೃದ್ಧಿ ಯೋಜನೆ, ಜವಹಾರ್ ರೋಜ್‌ಗಾರ್ ಯೋಜನೆಗೆಂದು ಎಷ್ಟು ಹಣ ಬಂದಿತ್ತು.....

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಕೈಗಾರಿಕಾ ಸಚಿವರು):– ಮಾನ್ಯ ಅಧ್ಯಕ್ಷರೆ, ಭ್ರಷ್ಟಾಚಾರ ನಡೆದಿದೆ ಎಂದು ಮಾನ್ಯ ಸದಸ್ಯರು ಆರೋಪ ಮಾಡಿರುತ್ತಾರೆ. ಅಂತಹ ಯಾವುದಾದರೂ ಭ್ರಷ್ಟಾಚಾರ ನಡೆದಿರುವಂಥ ಆರೋಪಗಳು ಇದ್ದರೆ ದಯವಿಟ್ಟು ತಾವು ವಿವರಗಳನ್ನು ನೀಡಿದರೆ ಸರ್ಕಾರ ಕೂಲಂಕುಷವಾಗಿ ಪರಿಶೀಲನೆ ಮಾಡಬಹುದು. ಅದರ ಬಗ್ಗೆ ತನಿಖೆ ನಡೆಸಬೇಕಾಗಿದ್ದರೆ ತಾವು ವಿವರಗಳನ್ನು ನೀಡಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ:– ನಿಮ್ಮ ಪಕ್ಷದವರೇ, ನಿಮ್ಮ ಮಂತ್ರಿಗಳ ಮೇಲೆ ಆರೋಪ ಮಾಡಿದ್ದಾರೆ, ಅದರ ಬಗ್ಗೆ ದಾಖಲೆ ಕೂಡ ಇದೆ.

ಶ್ರೀ ರಮಾನಾಥ್ ರೈ (ಗೃಹ ರಾಜ್ಯ ಸಚಿವರು):– ಸನ್ಮಾನ್ಯ ಅಧ್ಯಕ್ಷರೆ, ನಿರ್ದಿಷ್ಟವಾದಂಥ ಯಾವುದೇ ಪ್ರಕರಣದ ಬಗ್ಗೆ ಹೇಳಿದರೆ ಗಮನ ಹರಿಸಲಿಕ್ಕೆ ಸಾಧ್ಯವಾಗುತ್ತದೆ. ಸಾರಾಸಗಟಾಗಿ ಆಗಿದೆ ಎಂದರೆ ಅದು ಎಲ್ಲಿ, ಏನಾಗಿದೆ ನಮಗೆ ಗೊತ್ತಾಗುವುದಿಲ್ಲ. ನಿಮ್ಮಲ್ಲಿ ನಿರ್ದಿಷ್ಟವಾದ ಪುರಾವೆ ಇದ್ದರೆ ಅದನ್ನು ಹೇಳಿದರೆ ನಮಗೆ ಅನುಕೂಲವಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಅಧ್ಯಕ್ಷರೆ, 48 ಬೇಡಿಕೆಗಳು ಇರುವಾಗ ಯಾವುದಕ್ಕೆ ಪುರಾವೆ ಕೊಡೋಣ, ನಮಗಂತೂ ಅರ್ಥವಾಗುತ್ತಿಲ್ಲ. ಖಂಡಿತವಾಗಿ ಪುರಾವೆ ಕಳುಹಿಸಿಕೊಡುತ್ತೇವೆ. ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ನೀವು ಮಾಡಬೇಕೆಂದು ಹೇಳಿ....

ಶ್ರೀ ರಮಾನಾಥ್ ರೈ:– ಈಶ್ವರಪ್ಪನವರು ಇಂತಹವರು ಎಂದು ಹೇಳಬಹುದು, ಇಲ್ಲಿ ಭ್ರಷ್ಟಾಚಾರ ಇದೆ, ತೊಂದರೆ ಆಗಿದೆ ಎಂದು ಹೇಳಬಹುದು. ಆ ತರಹ ಸುಮ್ಮನೆ ಹೇಳುವುದಲ್ಲ. ನಿರ್ಧಿಷ್ಟವಾದ ವಿಚಾರ ಹೇಳಿದರೆ ಅದಕ್ಕೆ ಮಹತ್ವ ಇದೆ. ವಿಚಾರ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್:– ತಮ್ಮ ಇಲಾಖೆ ಯಾವುದು, ಇಂತಹ ಇಲಾಖೆ ಎಂದು ಹೇಳಿದರೆ ನಾವು ನೇರವಾಗಿ ನಿಮಗೆ ಹೇಳುತ್ತೇವೆ. ಇಲ್ಲಿ 48 ಬೇಡಿಕೆಗಳನ್ನು ಇಟ್ಟು ನೀವು ಕೊಟ್ಟಿರತಕ್ಕಂಥ ವೇಳೆಯಲ್ಲಿ ದಿನವೆಲ್ಲಾ ನಾವು ಯಾವ ಇಲಾಖೆ ಮೇಲೆ ಮಾತನಾಡೋಣ ?

ಒಬ್ಬ ಮಾನ್ಯ ಸದಸ್ಯರು:– ನಿನ್ನೆ ಯಾಹ್ಯರವರು ಮಾತನಾಡಬೇಕಾದರೆ ಅವರೇ ಹೇಳಿದರು, ... ಬೋರ್ಡ್‌ನಲ್ಲಿ ಅವ್ಯವಹಾರ ನಡೆಯುತ್ತಿದೆ ಎಂದು ದೂರು ಬಂದಿದೆಯೆಂದು. ಈಗ ಮುಂದುವರೆಸಿ.

ಶ್ರೀ ಕೆ.ಎಸ್. ಈಶ್ವರಪ್ಪ:– ಈಗ ಕೊಡುತ್ತೇನೆ. ಅದರಲ್ಲೂ ಏನೂ ಅನುಮಾನ ಬೇಡ, ನೇರವಾಗಿ ನಿಮಗೆ ಹೇಳುತ್ತೇವೆ. ಇಡೀ ಕರ್ನಾಟಕ ರಾಜ್ಯದಲ್ಲಿ ನಿಮ್ಮ ಗೃಹ ಇಲಾಖೆ ಬಗ್ಗೆ ಹೇಳುತ್ತಾ ಹೋದರೆ ಅನೇಕ.....

ಶ್ರೀ ರಮಾನಾಥ್ ರೈ:– ನಿರ್ದಿಷ್ಟವಾದ ಪ್ರಕರಣಕ್ಕೆ ಮಾತ್ರ ಮಹತ್ವ ಕೊಟ್ಟು ಮಾತನಾಡಿ.

ಉಪಾಧ್ಯಕ್ಷರು:– ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ; ಜಾಗ್ರತೆ ಮುಗಿಸಿ.

ಶ್ರೀ ಕೆ.ಎಸ್. ಈಶ್ವರಪ್ಪ:– ನಿರ್ಧಿಷ್ಟವಾದ ಪ್ರಕರಣ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ ಹುಬ್ಬಳ್ಳಿಯಲ್ಲಿ ನಮ್ಮ ರಾಜ್ಯದ ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾದ ಯಡಿಯೂರಪ್ಪನವರು

ಚೆನ್ನಮ್ಮ ಮೈದಾನಕ್ಕೆ ಒಂದು ರೀತಿಯ ಪಾಕಿಸ್ತಾನದ ಗಡಿ ಏನೋ ಎನ್ನುವಂಥ ರೂಪದಲ್ಲಿ ಪೊಲೀಸ್ ಪಹರೆ ತಂದು ಹಾಕಿದ್ದೀರಲ್ಲ ಯಾತಕ್ಕೆ ಸ್ವಾಮಿ ? ಈ ದೇಶದಲ್ಲಿ ರಾಷ್ಟ್ರಧ್ವಜ ಹಾರಿಸುವುದು ತಪ್ಪೇ ?

ಉಪಾಧ್ಯಕ್ಷರು:- ಬೇಡಿಕೆಗಳ ಮೇಲೆ ಏನು ಇದೆ ಅದನ್ನೇ ಸಂಬಂಧಪಟ್ಟ ಹಾಗೆ ಮಾತ್ರ ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದು ಗೃಹ ಇಲಾಖೆಗೆ ಸಂಬಂಧಪಟ್ಟದ್ದು. ರಾಷ್ಟ್ರಧ್ವಜ ಹಾರಿಸುವುದು ನಮ್ಮ ಸಂವಿಧಾನ ಚೌಕಟ್ಟಿನಲ್ಲಿರುವ ಜನ್ಮಸಿದ್ಧ ಹಕ್ಕು. ಅದನ್ನು ತಡೆದು ಜನವರಿ 26ನೇ ತಾರೀಖು ಅಲ್ಲಿ ಒಂದು ಯುದ್ಧ ನಡೆಯುತ್ತಾ ಇದೆಯೇ ? ಎನ್ನುವ ರೀತಿಯಲ್ಲಿ ಮಿಲಿಟರಿ ತಂದು ಹಾಕಿದ್ದು ಸರಿನಾ ?

ಉಪಾಧ್ಯಕ್ಷರು:- ರಾಷ್ಟ್ರಧ್ವಜ ಹಾರಿಸುವ ಬಗ್ಗೆ ಬೇಡಿಕೆ ಇದೆಯೋ ? ಬೇಡಿಕೆ ಬಗ್ಗೆ ಮಾತನಾಡಿ.

ಶ್ರೀ ರಮಾನಾಥ್ ರೈ:- ರಾಷ್ಟ್ರಧ್ವಜ ಹಾರಿಸುವುದರ ಬಗ್ಗೆ ವಿರೋಧ ಇಲ್ಲ. ರಾಷ್ಟ್ರಧ್ವಜ ಹಾರಿಸುತ್ತೇವೆಂದು ಹೇಳಿ ರಕ್ತಪಾತ ಮಾಡುವುದರ ಬಗ್ಗೆ ನಮ್ಮ ವಿರೋಧ ಇದೆ.

ಉಪಾಧ್ಯಕ್ಷರು:- ತಾವು ಮುಂದುವರೆಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಉಪಾಧ್ಯಕ್ಷರೆ, ದಯಮಾಡಿ ತಾವು ಕ್ಷಮಿಸಬೇಕು; ಗೃಹ ಇಲಾಖೆಗೆ ಸಂಬಂಧಪಟ್ಟಂತೆ ಪೊಲೀಸ್ ದೌರ್ಜನ್ಯ ಏನು ಆಯಿತು. ಪೊಲೀಸರನ್ನು ದುರುಪಯೋಗ ಮಾಡಿಕೊಂಡು ರಾಷ್ಟ್ರ ಧ್ವಜ ಹಾರಿಸುವುದನ್ನು ತಡೆಯುವಂಥ ಪ್ರಯತ್ನ ಮಾಡಿದ್ದಾರೆ. ಧಾರವಾಡದಲ್ಲಿ ಭಾಷಣ ಮಾಡುವುದಕ್ಕೆ ಹೋಗುವ ಸಂದರ್ಭದಲ್ಲಿ ವಿನಾಕಾರಣ ಬಂಧಿಸಿ ನಮ್ಮನ್ನು ಬೆಳಗಾಮ್ ಜೈಲಿನಲ್ಲಿ ಇಟ್ಟಾಗ ಇದನ್ನು ಶಾಸಕನಾಗಿ ಪ್ರಸ್ತಾಪ ಮಾಡಬೇಕು ತಾನೆ ? ಅವರು ನನ್ನ ಹಕ್ಕನ್ನು ಕಿತ್ತುಕೊಂಡರು ತಾನೆ ? ನಿರ್ದಿಷ್ಟವಾದ ಪ್ರಕರಣದ ಬಗ್ಗೆ ಮಾತನಾಡಿ ಎಂದು ಹೇಳಿದಿರಲ್ಲ, ಯಾವುದರ ಬಗ್ಗೆ ಅಂತ ಮಾತನಾಡೋಣ ? ನಿಮ್ಮ ಇಲಾಖೆ ಬಗ್ಗೆ ಯಾವುದನ್ನು ಹೇಳೋಣ ? ಇವತ್ತು ಯಾವುದೇ ಇಲಾಖೆ ಬಗ್ಗೆ ನಿರ್ದಿಷ್ಟವಾದಂಥ ಅವ್ಯವಹಾರಗಳ ಉದಾಹರಣೆಗಳು ಬೇಕು, ಎಂದರೆ ಬಹುಶಃ ಯಾವುದೇ ಇಲಾಖೆ ಉಳಿಯುವ ಹಾಗಿಲ್ಲ; ಎಲ್ಲಾ ಇಲಾಖೆಗಳಲ್ಲಿಯೂ ಇಂಥ ಪ್ರಕರಣಗಳು ನೂರಾರಿದೆ. ನಿಮಗೆ ಗೊತ್ತಿದೆ. ಆದುದರಿಂದ ಇಂಥಾದ್ದು ಬಂದಾಗ ಅದನ್ನು ಸೂಕ್ಷ್ಮವಾಗಿ ಗಮನ ಕೊಟ್ಟು ಸರಿಪಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ. ವಕ್ಫ್ ಬೋರ್ಡ್ ಬಗ್ಗೆ ನಾವು ಹೇಳುವುದು ಬೇಡ. ನಿಮಗೇ ಗೊತ್ತಿದೆ.

ಶ್ರೀ ರಮಾನಾಥ್ ರೈ:- ಅಯೋಧ್ಯೆ ವಿಚಾರದಲ್ಲಿ ಇವರ ಮೇಲಿನ ವಿಶ್ವಾಸವನ್ನು ಕಳೆದುಕೊಂಡಿದ್ದೇವೆ. ಇವರು ಏನು ಮಾಡಬಹುದು ಎಂಬುದು ಜಗತ್ತಿಗೆ ಹಾಗೂ ಈ ದೇಶಕ್ಕೆ ಗೊತ್ತಾಗಿದೆ. ಆದುದರಿಂದ ಇಲ್ಲಿ ಏನೇ ಅನಾಹುತ ಮಾಡಬಹುದು ಎನ್ನತಕ್ಕ ಭಯ ಸರ್ಕಾರಕ್ಕೆ ಖಂಡಿತ ಇದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಇವೊತ್ತು ಅದು ರೆಕಾರ್ಡಿಗೆ ಹೋಗಿದೆ. ಅವರು ಹೇಳಿದ ಮಾತು ರೆಕಾರ್ಡಿಗೆ ಹೋಗಿರುವುದರಿಂದ ಇವೊತ್ತು ನಾನು ಮಾತನಾಡಬೇಕಾಗಿದೆ. ಈ ಇಲಾಖೆಯನ್ನು ವಹಿಸಿಕೊಂಡಿರುವ ರಾಜ್ಯ ಸಚಿವರು ಸ್ವಲ್ಪ ಜವಾಬ್ದಾರಿಯಿಂದ ಮಾತನಾಡಬೇಕು. ಏನಾಯ್ತು ಅಯೋಧ್ಯೆಯಲ್ಲಿ ? ಅದಕ್ಕೂ ಇದಕ್ಕೂ ಸಂಬಂಧ ಇದೆಯೇ ? ಜನವರಿ 26ರಂದು ರಾಷ್ಟ್ರಧ್ವಜವನ್ನು

ರೀತಿಯಲ್ಲಿ ಕೆಲಸ ಮಾಡಿದ್ದೀರಿ. ಅಯೋಧ್ಯೆಯ ಬಗ್ಗೆ ಮಾತನಾಡಲು ಏನು ಹಕ್ಕು ನಿಮಗೆ? ರಾಷ್ಟ್ರಧ್ವಜ ನಿಮ್ಮ ಹಕ್ಕೇ ? ಈ ದೇಶದಲ್ಲಿ ಯಾವುದೇ ವ್ಯಕ್ತಿ ರಾಷ್ಟ್ರಧ್ವಜವನ್ನು ಜನವರಿ 26ರಂದು ಹಾರಿಸುವಂಥ ಸ್ವಾತಂತ್ರ್ಯ ಇದೆಯೋ ಅಥವಾ ಇಲ್ಲವೋ ಎಂಬುದನ್ನು ಹೇಳಿ.

(ಗೊಂದಲ)

ಉಪಸಭಾಧ್ಯಕ್ಷರು:– ಮಾನ್ಯ ಈಶ್ವರಪ್ಪನವರೇ, ನೀವು ಮುಂದುವರಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ರಾಜ್ಯ ಸಚಿವರಾಗಿ ಜವಾಬ್ದಾರಿ ಸ್ಥಾನದಲ್ಲಿ ಇದ್ದು ಈ ರೀತಿ ಹುಡುಗಾಟಿಕೆ ಮಾತನಾಡಲು ಆಗುವುದಿಲ್ಲ. ಅಯೋಧ್ಯೆಯ ಬಗ್ಗೆ ಏನಾಯಿತು ? ಏನಾಯಿತು ಅಯೋಧ್ಯೆಯಲ್ಲಿ, ಜನವರಿ 26ರಂದು ರಾಷ್ಟ್ರಧ್ವಜ ಹಾರಿಸುವುದಕ್ಕೂ ಅಯೋಧ್ಯೆಗೂ ಏನು ಸಂಬಂಧ ?

ಶ್ರೀ ಮಂಜುನಾಥ ಸಿ. ಕುನ್ನೂರ್:– ಈದ್‌ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಲು ಹೋದರೆ ಸುಮ್ಮನೆ ಏತಕ್ಕೆ ಇರುತ್ತಾರೆ. ನಮ್ಮ ಹುಬ್ಬಳ್ಳಿ ಈದಗಾ ಮೈದಾನದಲ್ಲಿ ಇವರು ರಾಷ್ಟ್ರಧ್ವಜ ಹಾರಿಸಲು ಹೋದರೆ.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಅವರು ನಿರ್ದಿಷ್ಟವಾದ ಆರೋಪ ಮಾಡಬೇಕೆಂದು ಹೇಳುತ್ತಿದ್ದಾರೆ. ಅಲ್ಲಿ ರಾಷ್ಟ್ರಧ್ವಜ ಹಾರಿಸಬಹುದೋ ಅಥವಾ ಇಲ್ಲವೋ ಹೇಳಿ ?

ಶ್ರೀ ರಮಾನಾಥ್ ರೈ:– ನಾನು ನಿಮ್ಮಿಂದ ಜವಾಬ್ದಾರಿಯನ್ನು ಕಲಿಯಬೇಕಿಲ್ಲ. ನಮ್ಮ ಜವಾಬ್ದಾರಿ ನಮಗೆ ಗೊತ್ತಿದೆ. ಇನ್ನೊಬ್ಬರಿಂದ ನಾನು ಜವಾಬ್ದಾರಿಯನ್ನು ಕಲಿತುಕೊಳ್ಳಬೇಕಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ದೇಶವನ್ನು ನೀವು ಯಾವ ರೀತಿ ನೀವು ವಿನಾಶಕ್ಕೆ ತೆಗೆದುಕೊಂಡು ಹೋಗುತ್ತಿದ್ದೀರಿ ಎಂಬುದು ಗೊತ್ತಿದೆ.....

(ಗೊಂದಲ)

ಶ್ರೀ ಎ. ರುಕ್ಮಯ್ಯ ಪೂಜಾರಿ:– ನಾವು ನಿಮ್ಮಿಂದ ಪಾಠ ಕಲಿಯಬೇಕಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ನೀವು ನಮ್ಮ ರಕ್ಷಣೆಗೆ ಬರಬೇಕು ಈ ದೇಶದಲ್ಲಿ ಜನವರಿ 26 ಹಾಗೂ ಆಗಸ್ಟ್ 15ರಂದು ರಾಷ್ಟ್ರಧ್ವಜ ಹಾರಿಸಲು ಅಧಿಕಾರ ನಮಗೆ ಇದೆಯೋ ಅಥವಾ ಇಲ್ಲವೋ ಅದನ್ನು ತಡೆಯುವ ಕೆಲಸ ಅಕ್ಷಮ್ಯ ಅಪರಾಧವೋ ಅಲ್ಲವೋ ಎಂಬುದನ್ನು ಸಚಿವರು ಹೇಳಲಿ. ಈದ್‌ಗಾ ಮೈದಾನ ಇರಬಹುದು. ಇದು ಪಾಕಿಸ್ತಾನವೇ ? ಪ್ರತಿಯೊಂದು ಈದಗಾ ಮೈದಾನವನ್ನು ಪಾಕಿಸ್ತಾನ ಮಾಡುತ್ತೀರಾ ? ಈ ದೇಶದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಲು ಸ್ವಾತಂತ್ರ್ಯ ಇಲ್ಲವೇ ? ಅದು ಪಾಕಿಸ್ತಾನಕ್ಕೆ ಸೇರಿದ ಧ್ವಜವೇ ? ಈ ಈದ್‌ಗಾ ಮೈದಾನ ಪಾಕಿಸ್ತಾನಕ್ಕೆ ಸೇರಿದೆಯೇ ?

(ಗೊಂದಲ)

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ನಾವು ಎಲ್ಲೆಲ್ಲೋ ದಾರಿ ತಪ್ಪುತ್ತಾ ಹೋಗ್ತಿದ್ದೇವೆ. ವಿಷಯದ ಮೇಲಿನ ಚರ್ಚೆ ಮಾಡೋಣ. ಭಾವೋದ್ವೇಗಕ್ಕೊಳಗಾಗತಕ್ಕ ವಿಷಯ ಬೇಡ. ಆಪಾದನೆಗಳು, ಕೌಂಟರ್ ಆಪಾದನೆಗಳು ಬರುತ್ತವೆ. ಆದುದರಿಂದ ಆ ವಿಷಯಕ್ಕೆ ಹೋಗದೆ ನಾವು ಚರ್ಚೆ ಮಾಡತಕ್ಕ

ಶ್ರೀ ಬಿ.ಎಸ್. ಯಡಿಯೂರಪ್ಪ:- ಈದ್‌ಗಾ ಮೈದಾನ ಇರಬಹುದು, ಅದು ಅವರಿಗೆ ಸೇರಿರಬಹುದು; ಆದರೆ ಅಲ್ಲಿ ರಾಷ್ಟ್ರಧ್ವಜವನ್ನು ಹಾರಿಸಲು ಅವಕಾಶ ಇದೆಯೋ ಅಥವಾ ಇಲ್ಲವೋ ?

ಶ್ರೀ ಎ.ಕೆ. ಅನಂತಕೃಷ್ಣ:- ಮಾನ್ಯ ಅಧ್ಯಕ್ಷರೇ, ನನ್ನದೂ ಒಂದು ಕ್ರಿಯಾಲೋಪ ಇದೆ. ಮಾನ್ಯ ಸದಸ್ಯರು ಬಡ್ಜೆಟ್ ಡಿಮ್ಯಾಂಡ್‌ಗಳ ಮೇಲೆ ಚರ್ಚೆ ಮಾಡುತ್ತಿರುವಾಗ ಅವರು ಏನೇ ಅಭಿಪ್ರಾಯ ಸೂಚಿಸಬೇಕಾದರೂ ಅದು ವಿಷಯದ ಎಲ್ಲೆ ಒಳಗೆ ಮಾತನಾಡಬೇಕು. ಒಂದು ವೇಳೆ ಅವರು ದಾರಿ ತಪ್ಪಿದರೆ ಅವರಿಗೆ ತಾವು ಸರಿಯಾಗಿ ಒಂದು ತಹಬಂದಿಗೆ ತರಬೇಕೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ತಮ್ಮಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ಕ್ರಾಸ್ ಫೈಟ್ ಏನು ಇದೆ. exchange of hot words ಅದು ನಮ್ಮನ್ನು ಎಲ್ಲಿಗೋ ತೆಗೆದುಕೊಂಡು ಹೋದರೆ ಆದರಿಂದ ಕೇವಲ ಸದನದ ಕಾರ್ಯಕಲಾಪಗಳಿಗೆ ಅಡಚಣೆಯಾಗುತ್ತದೆ. ಅದು ಆಗದ ರೀತಿಯಲ್ಲಿ ತಾವು ಸಮಾಧಾನ ಮಾಡಬೇಕು ಅಂತ ನನ್ನ ಕ್ರಿಯಾಲೋಪ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಯಡಿಯೂರಪ್ಪನವರು ಒಂದು ಪ್ರಶ್ನೆಯನ್ನು ಕೇಳಿದರು. ಈದ್‌ಗಾ ಮೈದಾನದಲ್ಲಿ ನಮ್ಮ ರಾಷ್ಟ್ರಧ್ವಜವನ್ನು ಹಾರಿಸತಕ್ಕದ್ದು ತಪ್ಪೇ ಎಂದು. ತಪ್ಪೂ ಎಂದು ಯಾರೂ ಹೇಳುವುದಿಲ್ಲ. ಇವರು ಏನು ಅಂದುಕೊಂಡಿದ್ದಾರೆ ಎಂದರೆ ಅಯೋಧ್ಯೆಯಲ್ಲಿ ರಾಮಮಂದಿರದ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಿ ಎಂದು ಹೇಳುತ್ತಿದ್ದೇವೆ ಅಲ್ಲಿ ಕಾವಿ ಹಾಕುತ್ತೀರಾ ಇಲ್ಲಿ ರಾಷ್ಟ್ರಧ್ವಜ ಹಾಕುತ್ತೀರಾ. ಇದನ್ನು ಅದಲು ಬದಲು ಏತಕ್ಕೆ ಮಾಡಬಾರದು ?

ಶ್ರೀ ಬಿ.ಎಸ್. ಯಡಿಯೂರಪ್ಪ:- ನಿಮಗೆ ಎರಡೂ ಗೊತ್ತಿಲ್ಲ. ನಿಮಗೆ ರಾಷ್ಟ್ರಧ್ವಜ ಹಾರಿಸಿ ಕೂಡ ಗೊತ್ತಿಲ್ಲ. ಭಗವಾ ಧ್ವಜ ಹಾರಿಸಿ ಗೊತ್ತಿಲ್ಲ. ಅಥವಾ ಪಾಕಿಸ್ತಾನದವರ ಧ್ವಜ ಹಾರಿಸಿದ್ದು ತಪ್ಪು ಎಂದು ಹೇಳುವುದಕ್ಕೂ ನೀವು ಸಿದ್ಧವಿಲ್ಲ. ಹೌದು ತಾನೇ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಒಂದು ಕ್ರಿಯಾ ಲೋಪ. ಇಲ್ಲಿ ಯಡಿಯೂರಪ್ಪನವರು.....

ಉಪಾಧ್ಯಕ್ಷರು:- ಯಾವುದರ ಬಗ್ಗೆ ಕ್ರಿಯಾಲೋಪ ?

ಶ್ರೀ ವಾಟಾಳ್ ನಾಗರಾಜ್:- ಹೇಳುತ್ತೇನೆ. ಈಗ ಇಲ್ಲಿ ಮಾನ್ಯ ಯಡಿಯೂರಪ್ಪನವರು ಭಾರತೀಯ ಜನತಾ ಪಕ್ಷದವರು. ಶ್ರೀಮಾನ್ ರಮಾನಾಥ ರೈ ಅವರು ಕಾಂಗ್ರೆಸ್ ಪಕ್ಷದವರು ಮತ್ತು ಗೃಹಸಚಿವರಾಗಿದ್ದಾರೆ. ಇವರಿಬ್ಬರ ಮಧ್ಯೆ ನಾವು ಸಿಕ್ಕಿದ್ದೇವೆ. ತಾವು ನಮಗೆ ಸ್ವಲ್ಪ ರಕ್ಷಣೆ ಕೊಡಬೇಕಾಗುತ್ತದೆ. ಏಕೆಂದರೆ ಅನೇಕ ಸಾರಿ ಚಳುವಳಿ ನಡೆದಾಗ....

ಉಪಾಧ್ಯಕ್ಷರು:- ಇಲ್ಲಿ ಪ್ರತಿಯೊಬ್ಬರಿಗೂ ರಕ್ಷಣೆ ಇದೆ.

ಶ್ರೀ ವಾಟಾಳ್ ನಾಗರಾಜ್:- ಧರಣಿ ಮಾಡುವಾಗ, ಹೋರಾಟ ಮಾಡುವಾಗ ನಮಗೆ ರಕ್ಷಣೆ ಕೊಡಬೇಕು ಎಂದು ಹೇಳಿ ಕೇಳುತ್ತೇವೆ. ರಕ್ಷಣೆ ಎಂದರೆ ಯಾವ ರೀತಿ ? ಅನೇಕ ಸಾರಿ ನಮ್ಮನ್ನು ಗಡೀಪಾರು ಮಾಡಬಹುದು. ನೀವು ಅಂದರೆ ಸರ್ಕಾರ, ಸರ್ಕಾರ ಲಾಠಿ ಛಾರ್ಜ್ ಮಾಡಬಹುದು. ಆದರೆ ಇಲ್ಲಿ ನಮಗೆ ರಕ್ಷಣೆ ಸಿಗುತ್ತಿಲ್ಲ. ಈಗ ಇಲ್ಲಿ ಮಾತೆತ್ತಿದರೆ ಆ ಕಡೆಯಿಂದ ನಮ್ಮ ರಮಾನಾಥ ರೈ ಅವರು ಎದ್ದರು ಎಂದರೆ, ಇವರು ಭಾರತೀಯ ಜನತಾ ಪಕ್ಷದ ನಮ್ಮ ಯಡಿಯೂರಪ್ಪನವರನ್ನು ತಡೆಯುವುದಕ್ಕೆ ಸಾಧ್ಯವೇ ಇಲ್ಲ. ನಾನು ಮತ್ತು ಬೈರೇಗೌಡರು ಯೋಚನೆ ಮಾಡುತ್ತಿದ್ದೇವೆ, ಈ ರೀತಿ ತೊಂದರೆ ಕೊಡುತ್ತಿದ್ದಾರೆ, ಆದ್ದರಿಂದ ತಾವು ರಕ್ಷಣೆಯನ್ನು ನಮಗೆ ಕೊಡಬೇಕು. ಮಾನ್ಯ

ಸಂಸದೀಯ ಸಚಿವರು ಈ ವಿಷಯದ ಬಗ್ಗೆ ನಮಗೆ ಭಾರೀ ಪ್ರಾಮಾಣಿಕವಾಗಿ ರಕ್ಷಣೆ ಕೊಡುತ್ತೇವೆ ಎಂದು ನಮ್ಮ ಅಧ್ಯಕ್ಷರ ಮೂಲಕ ಭರವಸೆಯನ್ನು ಕೊಡಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮೊದಲನೆಯದು ಈ ಸಭೆಗೆ ಮಾನ್ಯ ಸದಸ್ಯರಿಂದ ರಕ್ಷಣೆ ಬೇಕು. ಏಕೆಂದರೆ ನಾವು ಯಾವ ವಿಷಯವನ್ನು ಚರ್ಚೆ ಮಾಡುತ್ತಿದ್ದೇವೆ. ಅದನ್ನು ಬಿಟ್ಟು ಇದ್ದಕ್ಕಿದ್ದಂತೆ ಬೇರೆ ಕಡೆಗೆ ಜಂಪ್ ಮಾಡಿಬಿಡುತ್ತಾರೆ. ತಾವು ವಿಷಯಕ್ಕೆ ಬನ್ನಿ.

ನೀವು ಏನು ಆಡೀನ್ನು ಪ್ರವೋಕ್ ಮಾಡಿದಿರಿ, ಆದಕ್ಕೆ ಅವರು ಉತ್ತರ ಕೊಟ್ಟರು. ಅದು ಬೇಡ. ಜನರನ್ನು ಉದ್ರೇಕಗೊಳಿಸಬೇಡಿ.

(ಗೊಂದಲ)

ಉಪಾಧ್ಯಕ್ಷರು:- ಈಶ್ವರಪ್ಪನವರೇ, ತಮ್ಮ ಭಾಷಣವನ್ನು ಮುಂದುವರಿಸಿ. ಇನ್ನು ಐದು ನಿಮಿಷದಲ್ಲಿ ತಾವು ಮುಗಿಸಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ:- ನನಗೆ ಒಂದು ಘಟನೆ ನೆನಪು ಬರುತ್ತಿದೆ. ಹಾರ್ನಳ್ಳಿ ರಾಮಸ್ವಾಮಿಯವರು ಬೆಂಗಳೂರಿನಲ್ಲಿ ಒಂದು ಕಾರ್ ಡ್ರೈವ್ ಮಾಡುತ್ತಾ ಹೋಗುತ್ತಿರುತ್ತಾರೆ. ಎದುರುಗಡೆ ಒಂದು ಆಕ್ಸಿಡೆಂಟ್ ಆಗುತ್ತದೆ. ಇವರಿಗೆ ಡ್ರೈವಿಂಗ್ ಬರುವುದಿಲ್ಲ ಎಂದು ಹೇಳಿ ಇವರ ಲೈಸೆನ್ಸ್ ಕ್ಯಾನ್ಸಲ್ ಮಾಡಬೇಕು. ಅದು ಬಿಟ್ಟು ಇವರು ಯಾರ ಲೈಸೆನ್ಸ್ ಕ್ಯಾನ್ಸಲ್ ಮಾಡುತ್ತಿದ್ದಾರೆ. ಎಂದರೆ ಪಿ.ವಿ. ನರಸಿಂಹರಾಯರ ಡೆಲ್ಲಿ ಲೈಸೆನ್ಸ್ ಕ್ಯಾನ್ಸಲ್ ಮಾಡುತ್ತಿದ್ದಾರೆ. ಸ್ವಾಮಿ, ಅಯೋಧ್ಯೆಯಲ್ಲಿ ನಡೆದಿರುವ ಘಟನೆಗೂ ಹುಬ್ಬಳ್ಳಿಗೂ ಸಂಬಂಧ ಏನಿದೆಯೆಂದು ನಾನು ಗೃಹಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಸಂಸದೀಯ ಸಚಿವರು ಹೇಳಿದರು, ಪ್ರವೋಕೇಷನ್ ಸಭೆಯಲ್ಲಿ ಇರಬಾರದು ಎಂದು. ಮಾನ್ಯ ಈಶ್ವರಪ್ಪನವರೇ, ದಯಮಾಡಿ ನೀವು ಬೇಡಿಕೆ ಬಗ್ಗೆ ಮಾತನಾಡಿ. ಇನ್ನೂ ಬಹಳಷ್ಟು ಜನರು ಮಾತನಾಡುವವರು ಇದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ನಮ್ಮ ರಾಜ್ಯದಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಹೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಜನವರಿ 26......

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾವು ಕೆದಕಬಹುದು. ಅದಕ್ಕೆ ಉತ್ತರ ಕೊಡುವುದಕ್ಕೆ ನೀವು ಎದ್ದೇಳುತ್ತೀರಿ. ಇದರ ಅರ್ಥ ಏನು ? ನೀವು ಅಯೋಧ್ಯೆ ಬಗ್ಗೆ ಏತಕ್ಕೆ ಪ್ರಸ್ತಾಪ ಮಾಡಿದಿರಿ ಇಲ್ಲಿ. ನಾವು ಮಾಡಲಿಲ್ಲ. ಮಾನ್ಯ ಉಪಾಧ್ಯಕ್ಷರೇ, ನಮ್ಮ ರಕ್ಷಣೆಗೆ ತಾವು ಬರಬೇಕು. ಇಲ್ಲಿ, ಬಿ.ಜೆ.ಪಿ.ಯವರು ಎದ್ದಾಗ ಇವರು ಹೀಗೇ ನಡೆದುಕೊಳ್ಳುತ್ತೇವೆ, ಎಂದರೆ ನಮ್ಮದೇನು ವಿರೋಧ ಇಲ್ಲ ಸ್ವಾಮಿ. ಅವರೇನು ಮಾತನಾಡುತ್ತಿದ್ದರೆಂದರೆ, ಇವತ್ತು ಜನವರಿ 26ನೇ ತಾರೀಖು ಹುಬ್ಬಳ್ಳಿಯಲ್ಲಿ ಏನು ನಡೆಯಿತು, ಅದನ್ನು ನಾವು ಹೇಳುತ್ತಿದ್ದೇವೆ. ತಪ್ಪಾದರೆ ನೀವು ತಪ್ಪು ಎಂದು ಹೇಳಿ. ನಿಮಗೆ ಸ್ವಾತಂತ್ರ್ಯ ಇದೆ. ನಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶ ಇಲ್ಲವೇ ?

(ಗೊಂದಲ)

ಉಪಾಧ್ಯಕ್ಷರು:- ನಾನು ಎರಡೂ ಕಡೆ ಪಕ್ಷದವರಿಗೂ ಹೇಳುವುದು ಇಷ್ಟೇನೆ. ಯಾರು ಸಹ ಪ್ರವೋಕೇಟಿವ್ ವರ್ಡ್ಸ್ ಉಪಯೋಗಿಸಬೇಡಿ. ಸಭೆಯನ್ನು ಅಡ್ಡದಾರಿಗೆ ತೆಗೆದುಕೊಂಡು ಹೋಗಬೇಡಿ. ಏನು ಬೇಡಿಕೆ ಇದೆ, ಆ ಬೇಡಿಕೆ ಮೇಲೆ ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೇ, ನಾವು ಹೇಳುವುದು ಏನು, ನಾವು ಕೆಲವು ಸತ್ಯಗಳನ್ನು ಹೇಳುತ್ತೇವೆ. ತಾವು ಮಾತನಾಡಬೇಕಾದರೆ, ತಾವು ಉತ್ತರ ಕೊಡಬೇಕಾದರೆ ತಾವು ಯಾವ ಭಾಷೆಯಲ್ಲಿ ಉತ್ತರವನ್ನು ಕೊಡಬಹುದೋ ಆ ಕೆಲಸವನ್ನು ತಾವು ಮಾಡಿ. ಆದರೆ ನಾವು ಮಾತನಾಡುವುದಕ್ಕೆ ಎದ್ದು ನಿಂತ ತಕ್ಷಣ ಎಲ್ಲದಕ್ಕೂ ಅಡ್ಡಿ ಮಾಡುವಂಥದ್ದು ಈ ಪ್ರವೃತ್ತಿ ಸರಿಯೇ ?

ಉಪಾಧ್ಯಕ್ಷರು:- ಎರಡು ಕಡೆಯಿಂದ ಯಾವ ಒಂದು ರೀತಿಯ ಪ್ರವೋಕೇಶನ್ ಬೇಡ. ಈಶ್ವರಪ್ಪನವರೇ ತಾವು ಮುಂದುವರಿಸಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಉಪಾಧ್ಯಕ್ಷರೇ, ನಾನು ಈ ದೇಶದ ಒಬ್ಬ ನಾಗರೀಕನಾಗಿ ನಮ್ಮ ಗೃಹಮಂತ್ರಿಗಳಿಗೆ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಡೀ ಕರ್ನಾಟಕ ರಾಜ್ಯದ ಯಾವುದೇ ಒಂದು ಭೂಭಾಗದಲ್ಲಿ ನಮ್ಮ ರಾಷ್ಟ್ರಧ್ವಜ ಹಾರಿಸುವುದಕ್ಕೆ ಪರ್ಮಿಷನ್ ಇದ್ದೇ ಇದೆ. ಅದಕ್ಕೆ ಬೇರೆ ಯಾರದೂ ಕೂಡ ಲೈಸೆನ್ಸ್ ನಮಗೆ ಬೇಕಾಗಿಲ್ಲ. ನಾನು ಅದಕ್ಕೋಸ್ಕರ ಸರ್ಕಾರಕ್ಕೆ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ಕಿತ್ತೂರು ಚೆನ್ನಮ್ಮ ವೃತ್ತ ಏನಿದೆ ಇದು ಇಡೀ ರಾಷ್ಟ್ರದ ಒಂದು ಕೇಂದ್ರಬಿಂದುವಾಗಿದೆ. ನಾನು ಇವತ್ತು ಕೂಡ ಸರ್ಕಾರಕ್ಕೆ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ.

ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಆಗಸ್ಟ್ 15 ಮತ್ತು ಜನವರಿ 26ನೇ ತಾರೀಖಿನ ದಿವಸಗಳಂದು ಈ ದೇಶದ, ರಾಷ್ಟ್ರದ ತ್ರಿವರ್ಣ ಧ್ವಜವನ್ನು ಹಾರಿಸುವುದಕ್ಕೆ ದಯಮಾಡಿ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ತಾವು ಎಲ್ಲಿಯತನಕ ಕಾರ್ಯಕ್ರಮ ಹಾಕುವುದಿಲ್ಲ, ಅಲ್ಲಿಯತನಕ ನಾವು ಭಾರತೀಯ ಜನತಾ ಪಕ್ಷದವರು ಜನವರಿ 26 ಮತ್ತು ಆಗಸ್ಟ್ 15ರಂದು ರಾಷ್ಟ್ರಧ್ವಜವನ್ನು ಹಾರಿಸಬೇಕು ಎಂದು ನಿಶ್ಚಯ ಮಾಡಿದ್ದೇವೆ. ಈ ಬಗ್ಗೆ ಹಿಂದುಮುಂದು ನೋಡುವ ಪ್ರಶ್ನೆಯೇ ಇಲ್ಲ. ಇದು ರಾಷ್ಟ್ರಧ್ವಜದ ಪ್ರಶ್ನೆ, ಇದು ರಾಷ್ಟ್ರ ಭಕ್ತಿಯ ಪ್ರಶ್ನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ಸದಸ್ಯರಾದ ಶ್ರೀ ಈಶ್ವರಪ್ಪನವರು ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೆ ಈ ದೇಶದಲ್ಲಿ ಪ್ರತಿಯೊಬ್ಬರಿಗೂ ಅಧಿಕಾರ ಇದೆ ಎಂದು ಹೇಳಿದರು. ಅದನ್ನು ಇಲ್ಲವೆಂದು ಯಾರೂ ಹೇಳುವುದಿಲ್ಲ. ಪ್ರತಿಯೊಬ್ಬರೂ ಅವರವರ ಧರ್ಮದ ಆಚರಣೆ ಮಾಡಿಕೊಳ್ಳಬಹುದು ಅದಕ್ಕೆ ಯಾರ ಅಡ್ಡಿಯೂ ಇಲ್ಲ. ಈ ದೇಶದಲ್ಲಿ ನಮ್ಮ ಸಂವಿಧಾನದ ಪ್ರಕಾರ Right to worship ಇದೆ. ಅದು ಎಲ್ಲರಿಗೂ ಇದೆ. ಆದರೆ ಧರ್ಮದ ಹೆಸರಿನಲ್ಲಿ ರಾಷ್ಟ್ರದ ಯಾವುದೇ ಒಂದು ಸಂದರ್ಭದಲ್ಲಿ ಒಂದು ಸ್ಥಳದಲ್ಲಿ ಉಪಯೋಗಿಸುವುದರಿಂದ ಜನರಲ್ಲಿ ಭುಗ್ ಎಂದು ಹಿಂಸಾಚಾರ ತರುವಂತಹ ಸಂದರ್ಭದಲ್ಲಿ discretionary is always upper part to. ನಾವು ಇದನ್ನು ಹಠದ ವಸ್ತುವನ್ನಾಗಿ ಮಾಡಿಕೊಂಡು ಎಷ್ಟೇ ಜನ ಸತ್ತರೂ ಚಿಂತೆ ಇಲ್ಲ, ಎಷ್ಟೇ ಹೋರಾಟ ಮಾಡಿದರೂ ಚಿಂತೆ ಇಲ್ಲ ಎನ್ನುವ ರೀತಿಯಲ್ಲಿ ಮಾಡಿಕೊಂಡು ಹೋಗಬಾರದು. ಧರ್ಮ ಮತ್ತು ರಾಷ್ಟ್ರ ಪ್ರೇಮ ಇದು ಜನರನ್ನು ಒಡೆಯುವುದಕ್ಕೆ ಇರಬಾರದು. ಜನಗಳನ್ನು ಒಗ್ಗೂಡಿಸುವುದಕ್ಕೆ

ಇರಬೇಕು. ಪ್ರೀತಿ ವಿಶ್ವಾಸದಿಂದ ಜನಗಳನ್ನು ಬೆಳೆಸಿಕೊಂಡು ಹೋಗಬೇಕು. ರಾಷ್ಟ್ರಧ್ವಜ ಎನ್ನುವುದು ಯಾವುದೇ ಒಂದು ಪಕ್ಷದ ಸ್ವತ್ತಲ್ಲ. ಎಲ್ಲಾ ರಾಜಕೀಯ ಪಕ್ಷಗಳ ಸ್ವತ್ತು. ಆದ್ದರಿಂದ ನಾನೇ ಹೋಗಿ ರಾಷ್ಟ್ರಧ್ವಜವನ್ನು ಹಾರಿಸುತ್ತೇನೆ, ಬೇರೆಯವರು ಬಾರದೇ ಇದ್ದರೂ ಪರವಾಗಿಲ್ಲ ಎಂದು ಹೇಳಬಾರದು. ಮಾನ್ಯ ಯಡಿಯೂರಪ್ಪನವರಿಗೆ, ಲೋಕಾನುಭವ ಇದೆ, ಅನುಭವ ಇದೆ. ಯಾವುದೇ ಒಂದು ಸಂದರ್ಭದಲ್ಲಿ ಒಂದು ಸ್ಥಳದಲ್ಲಿ ರಾಷ್ಟ್ರಧ್ವಜವನ್ನು ಬಲಾತ್ಕಾರದಿಂದ ಹಾರಿಸುತ್ತೇವೆಂದು ಹೋಗಿ ಅದರಿಂದ ಹಿಂಸೆ ಭುಗಿಲೆದ್ದು ಜನಜೀವನದಲ್ಲಿ ಹಿಂಸಾಚಾರಕ್ಕೆ ಎಡೆ ಮಾಡಿಕೊಡುವ ಸಂದರ್ಭದಲ್ಲಿ ನಾವು ಹುಷಾರಾಗಿ ಇರಬೇಕು ಎಂದು ಅಷ್ಟೇ ನಾನು ಹೇಳುವುದು. ಆದರೆ ಅದನ್ನು ಒಂದು ವಸ್ತುವನ್ನಾಗಿ ಇಟ್ಟುಕೊಂಡು ರಾಜಕೀಯ ಲಾಭ ಮಾಡುತ್ತೀರಿ ಎಂದು ತಮ್ಮ ಮೇಲೆ ಆಪಾದನೆ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಹಿರಿಯರಾದ ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಬಹಳ ಪ್ರಾಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡಿದರು. ಒಂದು ಮಾತನ್ನು ಅವರ ಗಮನಕ್ಕೆ ತರುವುದಕ್ಕೆ ನಾನು ಇಚ್ಛಿಪಡುತ್ತೇನೆ. ಯಾವ ಸ್ಥಳದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಬೇಕು ಎಂದು ಇದ್ದೇವೆ, ಅದನ್ನು ಈದ್‌ಗಾ ಎಂದು ಕರೆಯಿರಿ ಅಥವಾ ರಾಣಿ ಚೆನ್ನಮ್ಮ ವೃತ್ತ ಎಂತಲಾದರೂ ಕರೆಯಿರಿ, ಏನು ಬೇಕಾದರೂ ಕರೆಯಿರಿ. ಅಲ್ಲಿ ಕಳೆದ ಅನೇಕ ವರ್ಷಗಳಿಂದ ಎಲ್ಲಾ ರಾಜಕೀಯ ಪಕ್ಷಗಳ ಸಭೆಗಳು ಆಗುತ್ತಿವೆ. ಎಲ್ಲಾ ಪಕ್ಷಗಳ ಫ್ಲಾಗ್ ಹಾಕುತ್ತಾರೆ, ಅಲ್ಲಿ ಸಂತೆ ನಡೆಯುತ್ತದೆ. ಅಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿದರೆ ಅದು ಬೆಂಕಿ ಹತ್ತಿ ಕೊಳ್ಳಬಹುದು ಎನ್ನುವ ಭಾವನೆ ಬಂದರೆ ಬೆಂಕಿ ಹಚ್ಚುವ ಕೆಲಸ ಮಾಡುವವರು ಯಾರೇ ಇರಲಿ, ಯಡಿಯೂರಪ್ಪನವರು ಇರಲಿ ಅಥವಾ ಮತ್ತೊಬ್ಬರು ಇರಲಿ, ಅವರ ಮೇಲೇ ಕ್ರಮ ತೆಗೆದುಕೊಳ್ಳಿ. ರಾಷ್ಟ್ರಧ್ವಜವನ್ನು ನೀವೇ ಬಂದು ಹಾರಿಸಿ ಎಂದು ನಾವು ವಿನಂತಿ ಮಾಡಿದೆವು. ಆದ್ದರಿಂದ ನಮ್ಮ ಉದ್ದೇಶ ಯಾವುದೇ ಎರಡು ಸಮಾಜದ ಮಧ್ಯೆ ಬೆಂಕಿ ಹಚ್ಚಬೇಕು ಎನ್ನುವ ಉದ್ದೇಶ ಅಲ್ಲ. ದಯಮಾಡಿ ರಾಷ್ಟ್ರಧ್ವಜವನ್ನು ಹಾರಿಸುವುದರಿಂದ ಇಡೀ ಎಲ್ಲ ಜನಾಂಗಕ್ಕೆ ರಕ್ಷಣೆ ಆಗುತ್ತದೆ. ಈ ಗೊಂದಲದ ವಾತಾವರಣವನ್ನು ಕೊನೆ ಮಾಡಿ ನೀವೇ ಸರ್ಕಾರದ ಒಬ್ಬ ಪ್ರತಿನಿಧಿ ಬಂದು ರಾಷ್ಟ್ರಧ್ವಜವನ್ನು ಜನವರಿ 26 ಮತ್ತು ಆಗಸ್ಟ್ 15ರಂದು ಹಾರಿಸಿ. ಇಡೀ ದೇಶದ ಇತಿಹಾಸದಲ್ಲಿ ಬಹುಶಃ ರಾಷ್ಟ್ರಧ್ವಜವನ್ನು ಜನವರಿ 26 ಮತ್ತು ಆಗಸ್ಟ್ 15ರಂದು ಹಾರಿಸುವುದನ್ನು ತಡೆಯುವಂತಹ ಯಾವುದೇ ಒಂದು ಪ್ರಸಂಗ ಇದುವರೆಗೆ ನಡೆದಿಲ್ಲ. ತಪ್ಪು ನಿಮ್ಮ ಸರ್ಕಾರದ ಮೇಲೆ ಮತ್ತೆ ಬಿದ್ದಿದೆ. ಅದನ್ನು ತೊಳೆದುಕೊಳ್ಳಿ. ಇಲ್ಲ ಯಡಿಯೂರಪ್ಪನವರೆ ನಾವು ಅಲ್ಲಿ ಹೋಗುವುದಿಲ್ಲ, ಇದು ಮುಂದುವರಿದುಕೊಂಡು ಹೋಗಲಿ ಎಂದು ನಿಮ್ಮ ಇಚ್ಛೆ ಇದ್ದರೆ ಅದಕ್ಕೆ ನಮ್ಮ ವಿರೋಧ ಇಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಇಲ್ಲಿಗೆ ಈ ಡಿಸ್ಕಷನ್‌ನನ್ನು ಮುಕ್ತಾಯ ಮಾಡೋಣ. ಆ ಈದ್‌ಗಾ ವಿಷಯದಲ್ಲಿ ಸುಪ್ರೀಂ ಕೋರ್ಟಿನಲ್ಲಿ ಕೇಸ್ ಇದೆ. ಆದ್ದರಿಂದ ಅದು ಕೋರ್ಟಿಗೆ ಸಂಬಂಧಪಟ್ಟಿದ್ದು. ಇವೆಲ್ಲಾ ಕೋರ್ಟಿನಲ್ಲಿ ತೀರ್ಮಾನ ಆಗಲಿ. ಆದರೆ ಈ ಜಾಗವನ್ನು ಇಂತಹ ಒಂದು ಸಂದರ್ಭದಲ್ಲಿ ಉಪಯೋಗಿಸಿಕೊಂಡು ಘರ್ಷಣೆ ಉಂಟು ಮಾಡುವುದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ಜವಾಬ್ದಾರಿ ಸ್ಥಾನದಲ್ಲಿ ಇದ್ದೀರಿ. ಕೋರ್ಟ್ ಆರ್ಡರ್ ಇರತಕ್ಕದ್ದು, ಇದು ಕಾರ್ಪೊರೇಷನ್‌ಗೆ ಸೇರಿದ ಜಾಗ ಎಂದು.

ಶ್ರೀ ಕೆ.ಎಸ್. ಈಶ್ವರಪ್ಪ:- ನಾನು ಗ್ರಾಮೀಣಾಭಿವೃದ್ಧಿ ಸಚಿವರ ಇಲಾಖೆಗೆ ಬರುತ್ತಾ ಇರುವಂತಹ ಸಂದರ್ಭದಲ್ಲಿ ನಮ್ಮ ಮಂತ್ರಿಗಳು ಮಧ್ಯೆ ಬಂದು ಇಡೀ ದೇಶದ ವಿಚಾರಕ್ಕೆ ಬಂದರು.

ಉಪಾಧ್ಯಕ್ಷರು:- ಮತ್ತೆ ಹಿಂದಕ್ಕೆ ಹೋಗುತ್ತಿದ್ದೀರಿ. ಮುಂದಿನ ವಿಚಾರ ಹೇಳಿ

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಏಕೆ ಹೇಳುತ್ತಿದ್ದೇನೆ ಎಂದರೆ.....

ಉಪಾಧ್ಯಕ್ಷರು:- ಯಡಿಯೂರಪ್ಪನವರೆ, ತಾವು ಸೀನಿಯರ್ ಮುಖಂಡರು. ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ. ಐದು ಗಂಟೆಗೆ ಸಭೆ ಮುಕ್ತಾಯ ಮಾಡಬೇಕು. ಮಾನ್ಯ ಈಶ್ವರಪ್ಪನವರೇ ತಾವು ಬೇಡಿಕೆ ಬಗ್ಗೆ ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಈಗ ಅನೇಕ ಇಲಾಖೆಗಳಲ್ಲಿ ತೀರ್ಮಾನ ಆಗಿರುವಂತಹ ಕಾರ್ಯ ಮುಗಿದಿಲ್ಲ. ಅನೇಕ ಇಲಾಖೆಗಳಲ್ಲಿ ಹಣ ಇದೆ. ಬೇರೆ ಬೇರೆ ಇಲಾಖೆಗಳ ಹಣವನ್ನು ಒಗ್ಗೂಡಿಸಿ ಎಲ್ಲೆಲ್ಲಿ ಏನು ಕೆಲಸ ನಿಂತಿದೆ ಆ ಕೆಲಸಗಳನ್ನು ಖಂಡಿತವಾಗಿ ಮುಂದುವರಿಸುತ್ತೇವೆಂದು ಹೇಳಿದ್ದಾರೆ. ನಾನು ಸನ್ಮಾನ್ಯ ಸಚಿವರಲ್ಲಿ ತುರ್ತಾಗಿ ಈ ಸಮಯದಲ್ಲಿ ಅರಿಕೆ ಮಾಡಿಕೊಳ್ಳಬೇಕಾಗಿ ಬಂದಿದೆ. ಅನೇಕ ಜಿಲ್ಲಾ ಪರಿಷತ್‌ಗಳ ಕೆಲಸ ನಿಂತುಹೋಗಿದೆ. ಹಣ ಇಲ್ಲ ಎಂದು ಒಂದೇ ಒಂದು ಕಾರಣವನ್ನು ಹೇಳುತ್ತಿದ್ದಾರೆ. ಆದಕ್ಕೋಸ್ಕರವಾಗಿ ಯಾವ ಯಾವ ಬಾಬಿನಲ್ಲಿ ಹಣ ಇದೆ, ಅದನ್ನು ಕೇಂದ್ರೀಕೃತ ಮಾಡಿಕೊಂಡು ಎಲ್ಲೆಲ್ಲಿ ಕೆಲಸಗಳು ಉಳಿದಿವೆ, ತಕ್ಷಣ ಆ ದಿಕ್ಕಿನಲ್ಲಿ ಪ್ರಯತ್ನ ಮಾಡಿದರೆ ಅನುಕೂಲವಾಗುತ್ತದೆ. ಆ ಹಣವನ್ನು ಈ ದಿಕ್ಕಿನಲ್ಲಿ ಬಿಡುಗಡೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ ಮತ್ತು ಒಂದೇ ಒಂದು ಅಂಶ ಹೇಳುತ್ತೇನೆ. ಸುಮಾರು 300 ಕೋಟಿ ರೂ.ಗಳ ಹಣ ಬಿಡುಗಡೆ ಮಾಡುವುದು ಉಳಿದಿದೆ. ದಯಮಾಡಿ ಇದನ್ನು ಗಮನಿಸಬೇಕು. ಆ ಹಣವನ್ನು ಬಿಡುಗಡೆ ಮಾಡಿದರೆ ಇಡೀ ರಾಜ್ಯದಲ್ಲಿ ಕೆಲಸಗಳು ಆಗುತ್ತವೆ.

4.35 ಪಿ.ಎಂ.

ಜೊತೆಗೆ ನಾನು ಸನ್ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದಿಷ್ಟೇ; ರಸ್ತೆಗಳು ಅನೇಕ ಕಡೆ ಹಾಳಾಗಿರಬಹುದು, ವಿದ್ಯುತ್ ದೀಪ ಇಲ್ಲದಿರಬಹುದು, ಆದರೆ, ಇವೊತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಹೆಣ್ಣು ಮಕ್ಕಳು ಹಗಲುಹೊತ್ತಿನಲ್ಲಿ ಕಕ್ಕಸಿಗೆ ಹೋಗುವಂಥ ಸ್ಥಿತಿಯಲ್ಲಿಲ್ಲ. ನಾಚಿಕೆಪಟ್ಟುಕೊಂಡು ಬೆಳಗಾಗುವುದರೊಳಗಾಗಿ ಹೋಗಬೇಕು, ಇಲ್ಲವೇ ರಾತ್ರಿ ಕತ್ತಲಾದ ನಂತರ ಹೋಗಬೇಕಾದಂಥ ಸ್ಥಿತಿ. ದಯವಿಟ್ಟು ಈ ದಿಕ್ಕಿನಲ್ಲಿ ಏನು ಯೋಚನೆ ಮಾಡುತ್ತೀರೋ ಮಾಡಿ. ನಾನು ಕೈಮುಗಿದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಿರುವುದು, ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಹೆಣ್ಣುಮಕ್ಕಳ ವಿಚಾರವಾಗಿ ಇಲ್ಲಿ ನಮ್ಮ ಮನೆ ಹೆಣ್ಣುಮಕ್ಕಳು, ಅವರ ಮನೆ ಹೆಣ್ಣುಮಕ್ಕಳು ಎನ್ನುವ ಪ್ರಶ್ನೆಯಲ್ಲ. ಯಾವುದೇ ಹೆಣ್ಣುಮಕ್ಕಳು ಹಗಲು ಹೊತ್ತಿನಲ್ಲಿ ಕಕ್ಕಸಿಗೆ ಹೋಗುವಂಥ ಸ್ಥಿತಿಯಲ್ಲಿಲ್ಲ. ರಾತ್ರಿ ಹೊತ್ತು ಮಾತ್ರ ಕದ್ದು ಹೋಗುವಂಥ ಸ್ಥಿತಿಯಿದೆ. ಈ ದಿಕ್ಕಿನಲ್ಲಿ ಪ್ರಯತ್ನ ಮಾಡಿ ಏನಾದರೂ ವ್ಯವಸ್ಥೆ ಮಾಡಿದರೆ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಇಲ್ಲದಿದ್ದರೆ, ಆ ಸರ್ಕಾರ ಏನು ಮಾಡಿತು ? ಈ ಸರ್ಕಾರ ಏನು ಮಾಡಿತು ? ಎಂದು ಹೇಳುವುದು ಬೇಡ. ಆದುದರಿಂದ, ಈ ದಿಕ್ಕಿನಲ್ಲಿ ಸರಿಯಾದ ಸಿದ್ಧತೆ ಮಾಡಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ, ಈ ಕುರಿತು ಕೆಲವು ಮುಖ್ಯವಾದ ವಿಷಯ ಹೇಳಬೇಕಾಗಿದೆ: ಮೊದಲನೆಯದಾಗಿ ಆಯವ್ಯಯದ ಪ್ರಕಾರ ಜಿಲ್ಲಾ ಪರಿಷತ್ತುಗಳಿಗೆ ಏನು ಹಣ ಕೊಡಬೇಕು, ಅದನ್ನು ಖಂಡಿತವಾಗಿ ಕೊಡುತ್ತೇವೆ, ಕೊಟ್ಟಿದ್ದೇವೆ, ಕೊಡುತ್ತಿದ್ದೇವೆ. ಮತ್ತು ಅದರಲ್ಲಿ ಏನಾದರೂ ಒಂದು ಭಾಗ ಈ ತಿಂಗಳ ಆಖೈರಿನೊಳಗೆ ಖರ್ಚು ಮಾಡುವುದಕ್ಕೆ ಆಗದೇ ಇದ್ದರೆ, ಆ ಹಣ ಲ್ಯಾಪ್ಸ್ ಆಗದಂತೆ ನೋಡಿಕೊಳ್ಳಬೇಕೆಂದು ಇವೊತ್ತು ಬೆಳಿಗ್ಗೆ ನಮ್ಮ ಪಕ್ಷದಲ್ಲಿ ಸಾಕಷ್ಟು ಚರ್ಚೆಯಾಯಿತು. ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಷಯ ಗೊತ್ತಿದೆ. ಅನಂತರ, ಶೌಚಾಲಯಗಳಿಲ್ಲದೆ, ಹೆಣ್ಣು ಮಕ್ಕಳಿಗೆ

ತೊಂದರೆಯಾಗುತ್ತಿದೆಯೆಂದು ಏನು ಹೇಳಿದಿರಿ, ಅದರ ವ್ಯವಸ್ಥೆಗೆ ಆಯವ್ಯಯದಲ್ಲಿ ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಇದೆ. ಇದರ ಬಗ್ಗೆ ಚರ್ಚಿಸಲು ಮುಖ್ಯ ಕಾರ್ಯದರ್ಶಿಯವರು ಹಾಗೂ ನಾವು ಒಂದು ಸಭೆ ಕರೆಯುತ್ತಿದ್ದೇವೆ. ಸಭೆಯಲ್ಲಿ ಈ ಬಗ್ಗೆ ಒಂದು ನಿರ್ಣಯ ತೆಗೆದುಕೊಂಡು, ಆ ಕಾರ್ಯಕ್ರಮವನ್ನು ಖಂಡಿತವಾಗಿಯೂ ಜಾರಿಗೆ ತರುವುದಕ್ಕೆ ನಾವು ಸ್ಪಷ್ಟವಾದ ಪ್ರಯತ್ನ ಮಾಡುತ್ತೇವೆ. ಇನ್ನೊಂದು ಸಂತೋಷದ ವಿಷಯವೇನೆಂದರೆ, ಜವಾಹರ್ ರೋಜಗಾರ್ ಯೋಜನೆ ಬಗ್ಗೆ ಮಾತನಾಡಿದ್ದಾರೆ. ಅದರ ಬಗ್ಗೆ ವಾದ – ವಿವಾದಗಳು ನಡೆದು ಆ ವಿಷಯ ಮರೆತು ಹೋಯಿತು. ಈ ವರ್ಷ ಜವಾಹರ್ ರೋಜ್‌ಗಾರ್ ಯೋಜನೆಗೋಸ್ಕರ ಈಗಾಗಲೇ 117 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಲ್ಲದೆ, ಮೊನ್ನೆ ನಾನು ದೆಹಲಿಗೆ ಹೋದಂಥ ಸಂದರ್ಭದಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಜೊತೆ ಮಾತನಾಡುವಾಗ ಈ ಯೋಜನೆಗೆ ಇನ್ನೂ 20 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಡುವುದಕ್ಕೆ ಒಪ್ಪಿದ್ದಾರೆ, ಈ ಬಗ್ಗೆ ಒಂದು ಪತ್ರವನ್ನು ಕೂಡ ಕೊಟ್ಟಿದ್ದೇನೆ. ಅಂದರೆ, ಜವಾಹರ್ ರೋಜ್‌ಗಾರ್ ಯೋಜನೆಗೋಸ್ಕರ ಕೇಂದ್ರದಿಂದ ಹೆಚ್ಚುವರಿ ಹಣವಾಗಿ 20 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದರ ಜೊತೆಗೆ ರಾಜ್ಯ ಸರ್ಕಾರದಿಂದ 5 ಕೋಟಿ ರೂಪಾಯಿಗಳನ್ನು ಕೊಡಬೇಕೆಂಬ ವಿಷಯ ಬಂತು. ಏಕೆಂದರೆ, ಶೇಕಡಾ 80 ರಷ್ಟು ಅವರು ಕೊಟ್ಟರೆ, ಉಳಿದ ಶೇಕಡಾ 20 ರಷ್ಟು ನಮ್ಮ ಭಾಗ. ಆದಕಾರಣ, ಕೇಂದ್ರದ ಹೆಚ್ಚುವರಿ ಮೊತ್ತವಾದ 20 ಕೋಟಿ ರೂಪಾಯಿಗಳ ಜೊತೆಗೆ ತಕ್ಷಣ 5 ಕೋಟಿ ರೂಪಾಯಿಗಳನ್ನು ನಾವು ಸೇರಿಸಿ, ಒಟ್ಟು 25 ಕೋಟಿ ರೂಪಾಯಿಗಳನ್ನು ಜಾಸ್ತಿ ಮಾಡಿದ್ದೇವೆ. ಅಂದರೆ, ಈ ವರ್ಷ ಜವಾಹರ್ ರೋಜ್‌ಗಾರ್ ಯೋಜನೆಗೆ ಒದಗಿಸಲಾಗಿದ್ದ 117 ಕೋಟಿ ರೂಪಾಯಿಗಳ ಜೊತೆಗೆ ಇನ್ನೂ 25 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಖರ್ಚು ಮಾಡುತ್ತಿದ್ದೇವೆ. ಈ ಸಂತೋಷದ ವಿಚಾರ ತಮಗೆಲ್ಲ ಗೊತ್ತಿರಬೇಕು, ಈ ಸದನದ ಮುಖಾಂತರ ಕರ್ನಾಟಕ ಜನತೆಗೂ ಕೂಡ ಗೊತ್ತಿರಬೇಕು. ಆದುದರಿಂದ, ಜವಾಹರ್ ರೋಜ್‌ಗಾರ್ ಯೋಜನೆ ಉಪಯುಕ್ತವಾದಂಥ ಕಾರ್ಯಕ್ರಮವಾಗಿದ್ದು, ಹೆಚ್ಚಿಗೆ ಒದಗಿಸಲಾಗಿರುವ 25 ಕೋಟಿ ರೂಪಾಯಿಗಳನ್ನು ಎಲ್ಲೆಲ್ಲಿ ಖರ್ಚು ಮಾಡಬೇಕೋ, ಅಲ್ಲಿಗೆ ಪೂರೈಸುವುದಕ್ಕೆ ನಾವುಗಳೆಲ್ಲರೂ ಸೇರಿ ಪ್ರಯತ್ನ ಮಾಡಬೇಕಾಗುತ್ತದೆ. ಮತ್ತೆ ಮುಂಬರುವ ವರ್ಷಕ್ಕೆ ನಾವು 160 ಕೋಟಿ ರೂಪಾಯಿಗಳನ್ನು ಜವಾಹರ ರೋಜ್‌ಗಾರ್ ಯೋಜನೆಗೋಸ್ಕರ ಇಟ್ಟಿದ್ದೇವೆ. ಈ ಸಂದರ್ಭ ಉಪಯೋಗಿಸಿ ಮಾರ್ಚಿ ತಿಂಗಳಲ್ಲಿ ನೇರವಾಗಿ ಹೆಚ್ಚುವರಿಯಾಗಿ 20 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಕ್ಕಾಗಿ ಕೇಂದ್ರ ಸರ್ಕಾರಕ್ಕೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ.

ಶ್ರೀ ಸಿ. ಬೈರೇಗೌಡ: ಜವಾಹರ್ ರೋಜ್‌ಗಾರ್ ಯೋಜನೆಯಡಿ ಹಣ ಲ್ಯಾಪ್ಸ್ ಆಗುವುದಕ್ಕೆ ಬಿಡುವುದಿಲ್ಲವೆನ್ನತಕ್ಕಂಥ ಒಳ್ಳೆಯ ಸುದ್ದಿಯನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಅದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸುತ್ತಾ, ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರತಕ್ಕಂಥ ವಿಚಾರವೇನೆಂದರೆ, ಕಳೆದ ವರ್ಷ ಇಂತಹ ಪರಿಸ್ಥಿತಿ ಬಂದಂಥ ಸಂದರ್ಭದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ಹಣವನ್ನು ಜೂನ್ ತಿಂಗಳವರೆವಿಗೂ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದರು. ಈ ವರ್ಷವೂ ಸಹ ತಾವು ಅದೇ ರೀತಿ ಅವಕಾಶ ಮಾಡಿಕೊಟ್ಟರೆ ಹಣ ಲ್ಯಾಪ್ಸ್ ಆಗುವುದಿಲ್ಲ. ಆದುದರಿಂದ ಇದರ ಬಗ್ಗೆ ಸರ್ಕಾರದ ಕಮಿಟ್‌ಮೆಂಟ್ ಏನೆಂದು ಹೇಳಿದರೆ ನಾನು ಮತ್ತೊಮ್ಮೆ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ:– ಹಣ ಲ್ಯಾಪ್ಸ್ ಆಗುವುದಕ್ಕೆ ಬಿಡುವುದಿಲ್ಲವೆನ್ನುವ ಮಾತನ್ನು ಸ್ಪಷ್ಟವಾಗಿ ಹೇಳಿದೆ.

ಶ್ರೀ ವಾಟಾಳ್ ನಾಗರಾಜ್:– ಪ್ರತಿ ಹಳ್ಳಿಗೂ ಶೌಚಾಲಯವನ್ನು ಕಟ್ಟಿಸುತ್ತೇವೆಂದು ತಾವು

ಹೇಳುತ್ತಿದ್ದೀರಿ. ನೀರಿನ ವ್ಯವಸ್ಥೆಯೇ ಇಲ್ಲದಿದ್ದರೆ ನಿಮ್ಮ ಶೌಚಾಲಯುವನ್ನು ಕಟ್ಟಿಕೊಂಡು ನಾವು ಏನು ಮಾಡಬೇಕು ? ಶೌಚಾಲಯ ಇರಬೇಕಾದರೆ ನೀರಿನ ವ್ಯವಸ್ಥೆ ಸರಿಯಾಗಿರಬೇಕು. ನೀರಿನ ವ್ಯವಸ್ಥೆ ಸರಿಯಾಗಿದ್ದರೆ ನೀವು ಶೌಚಾಲಯುವನ್ನು ಕಟ್ಟಿಸಿದ್ದಕ್ಕೂ ಅನುಕೂಲವಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ:– ಇದರ ಬಗ್ಗೆ ಜಾಸ್ತಿ ಚರ್ಚೆ ಮಾಡುವುದು ಬೇಡ. ಕಳೆದ 2 ವರ್ಷಗಳಲ್ಲಿ ನಾವು ಏನು ಹಣವನ್ನು ಕೊಟ್ಟಿದ್ದೆವು ಅದನ್ನು ಖರ್ಚು ಮಾಡುವುದಕ್ಕೆ ಆಗಲಿಲ್ಲ. ಇದು ದುರ್ದೈವದ ಮಾತು. ಏಕೆಂದರೆ, ಆ ಕಾರ್ಯಕ್ರಮದಲ್ಲಿ ನಾವೆಲ್ಲಗೂ ಸಾಕಷ್ಟು ಆಸಕ್ತಿ ವಹಿಸಿಲ್ಲ. ಯಾವ ರೀತಿ ಶೌಚಾಲಯ ನಿರ್ಮಾಣ ಮಾಡಬೇಕು, ಯಾವ ರೀತಿ ನೀರಿನ ವ್ಯವಸ್ಥೆ ಮಾಡಬೇಕು, ಅದರಲ್ಲೂ ನೇರವಾಗಿ ಹೆಣ್ಣುಮಕ್ಕಳಿಗೆ ಅನುಕೂಲವಾಗುವಂತೆ ಯಾವ ರೀತಿ ಮಾಡಬೇಕೆಂಬ ಬಗ್ಗೆ ನಾವು ಸಾಕಷ್ಟು ಲಕ್ಷ್ಯವನ್ನು ಕೊಟ್ಟಿಲ್ಲ. ಇದರಿಂದಾಗಿ ನಾವು ಕೊಟ್ಟಂಥ ಹಣ ಖರ್ಚಾಗಿಲ್ಲ. ಈ ವರ್ಷವಾದರೂ ಒಂದು ಕೋಟಿ ರೂ.ಗಳನ್ನು ಪೂರ್ಣವಾಗಿ ಖರ್ಚು ಮಾಡಿದರೆ ಇನ್ನೂ ಎರಡು ಕೋಟಿ ರೂಗಳನ್ನು ಬೇಕಾದರೆ ಕೊಡುತ್ತೇವೆ. ನಮ್ಮ ಬಜೆಟ್‌ನಲ್ಲಿ ಏನು ಹಣವಿದೆ ಅದನ್ನು ಪೂರ್ಣವಾಗಿ ಖರ್ಚು ಮಾಡೋಣ. ತೊಂದರೆ ಏನಾದರೂ ಇದ್ದರೆ ಅದನ್ನು ನಿವಾರಣೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್:– ನಾನು ಹೇಳತಕ್ಕದ್ದು ನೀರಿನ ವ್ಯವಸ್ಥೆ ಸರಿಯಾಗಿ ಮೊದಲು ಮಾಡಿ ಎಂದು.

ಶ್ರೀ ಎಂ. ವೈ. ಘೋರ್ಪಡೆ:– ಸೊಂಡೂರಿನಲ್ಲಿ ನೀರಿನ ವ್ಯವಸ್ಥೆ ಮಾಡಿ ಶೌಚಾಲಯ ವ್ಯವಸ್ಥೆಯನ್ನು ಯಶಸ್ವಿಯಾಗಿ ನಾವು ಮಾಡಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಇದಕ್ಕಾಗಿ ಮಾನ್ಯ ಘೋರ್ಪಡೆಯವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಹಿಂದೆ ಮಾನ್ಯ ನಜೀರ್ ಸಾಬ್‌ರವರು ಈ ದಿಸೆಯಲ್ಲಿ ಪ್ರಾಮಾಣಿಕವಾಗಿ ತುಂಬಾ ಕಳಕಳಿಯಿಂದ ಕೆಲಸ ಮಾಡಿರುವುದು ನಮ್ಮ ಸುಯೋಗವೆಂದು ಹೇಳಬೇಕಾಗಿದೆ. ಮತ್ತೆ ಇದೇ ಇಲಾಖೆಯ ಜವಾಬ್ದಾರಿಯನ್ನು ಮಾನ್ಯ ಘೋರ್ಪಡೆಯವರು ವಹಿಸಿಕೊಂಡು ಅಷ್ಟೇ ಕಳಕಳಿಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿರುವುದರಿಂದ ಈ ರಾಜ್ಯದ ಜನತೆಯ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಹಣವನ್ನು ಜೂನ್ ತಿಂಗಳವರೆಗೆ ಉಪಯೋಗಿಸಿಕೊಳ್ಳಲು ಅವಕಾಶವನ್ನು ಕೊಡಬೇಕು; ಹಾಗೂ ತಮ್ಮ ಯೋಜನೆಗಳು ಕಾರ್ಯರೂಪಕ್ಕೆ ಬರುವಂಥ ರೀತಿಯಲ್ಲಿಯೇ ಪ್ರಯತ್ನ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಈ ರಾಜ್ಯದ ರೈತರ ಸಾಲ ಮನ್ನಾ ಬಗ್ಗೆ ಅನೇಕ ದಿವಸಗಳಿಂದ ಈ ಸದನದಲ್ಲಿ ಚರ್ಚೆಯಾಗುತ್ತಿದೆ. ಸಾಲ ಮನ್ನಾ ಮಾಡುತ್ತೇವೆಂದು ಅನೇಕರು ಈ ಸದನದಲ್ಲಿ ಮತ್ತು ಹೊರಗಡೆ ಕೂಡ ಹೇಳಿದ್ದಾರೆ. ಆದರೆ ಸಾಲ ಮನ್ನಾ ಮಾಡುವ ದಿಸೆಯಲ್ಲಿ ಸರ್ಕಾರ ಏತಕ್ಕೆ ಕೆಲಸ ಮಾಡುತ್ತಿಲ್ಲವೋ ಗೊತ್ತಿಲ್ಲ. ಇಡೀ ರಾಜ್ಯದ ರೈತರು ತಮ್ಮ ಸಾಲ ಮನ್ನಾ ಆಗಿದೆ ಎಂದು ಈಗಾಗಲೇ ತಿಳಿದುಕೊಂಡಿದ್ದಾರೆ. ನಾನಾದರೂ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ ಕೊನೇಪಕ್ಷ ರೈತರ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನಾದರೂ ಮನ್ನಾ ಮಾಡುತ್ತೇವೆಂದು ಸರ್ಕಾರ ಈ ಸಂದರ್ಭದಲ್ಲಿ ಘೋಷಣೆ ಮಾಡಬೇಕು.

ಇನ್ನು ಇದೇ ರೀತಿ ನೇಕಾರರು. ಇವರ ಪಾಡು ತುಂಬಾ ಶೋಚನೀಯ ಪರಿಸ್ಥಿತಿಯಲ್ಲಿದೆ. ಕೇವಲ ಬಟ್ಟೆಯನ್ನೇ ನೇಯ್ದು ಜೀವನ ನಡೆಸುತ್ತಿರುವಂಥ ಲಕ್ಷಾಂತರ ಜನರು ಇಂದು ಬಹಳ ಕಷ್ಟದಲ್ಲಿದ್ದಾರೆ. ಅವರು ನೇಯುತ್ತಿರುವ ಬಟ್ಟೆಗೆ ಸರಿಯಾದ ಬೆಲೆ ಸಿಕ್ಕುವಂತೆ ಮಾಡಬೇಕು. ಇವರಿಗೆಲ್ಲಾ ಹಸಿರು ಕಾರ್ಡುಗಳನ್ನು ಕೊಡುತ್ತೇವೆಂದು ಸರ್ಕಾರ ಬಹಳ ದಿವಸದಿಂದ ಹೇಳುತ್ತಿದೆ. ಇನ್ನೂ ಅನೇಕ ಜನರಿಗೆ

ಈ ಕಾರ್ಡುಗಳ ವಿತರಣೆಯಾಗಿಲ್ಲವಾದ್ದರಿಂದ ಇದರ ಬಗ್ಗೆ ಸರ್ಕಾರ ಕಾರ್ಯಪ್ರವೃತ್ತರಾಗಬೇಕೆಂದು ಕೇಳಿಕೊಳ್ಳುತ್ತೇನೆ. 1990ನೇ ಏಪ್ರಿಲ್‌ನಲ್ಲೇ ಜಸ್ಟೀಸ್ ಚಿನ್ನಪ್ಪರೆಡ್ಡಿಯವರ ವರದಿ ಬಂದಿದ್ದರೂ ಸರ್ಕಾರ ಇದನ್ನು ಜಾರಿಗೆ ಕೊಡುವುದರಲ್ಲಿ ಇನ್ನೂ ಏತಕ್ಕೆ ಮೀನಾ ಮೇಷ ಎಣಿಸುತ್ತಿದೆಯೋ ಗೊತ್ತಿಲ್ಲ. 4 ವರ್ಷಗಳಿಂದ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇದರ ಪ್ರಸ್ತಾಪವಾಗುತ್ತಿದೆ. ಪ್ರತಿವರ್ಷವೂ ಕೂಡ ನಾನು ಹರಕೆ ಹೊರುತ್ತೇನೆ, ಹರಕೆ ಹೊರುತ್ತೇನೆಂದು ಹೇಳುತ್ತಿರುವಂತಾಗಿದೆ. ನಿಜವಾಗಿ ಹರಕೆ ಹೊರುತ್ತಿಲ್ಲ. ಇಡೀ ರಾಜ್ಯದ ಹಿಂದುಳಿದ ವರ್ಗದ ಜನರು ಸರ್ಕಾರದ ಕಡೆ ನೋಡುತ್ತಿದ್ದಾರೆ. ನೀವು ಕೇವಲ ಘೋಷಣೆ, ಮಾಡಿದರೆ ಆಶ್ವಾಸನೆ ನೀಡಿದರೆ ಏನೂ ಪ್ರಯೋಜನವಿಲ್ಲ. ಇದರ ಬಗ್ಗೆ ತಾವು ಕಾರ್ಯಪ್ರವೃತ್ತರಾಗಬೇಕು. ಒಂದೊಂದು ತಾಲ್ಲೂಕಿಗೆ 100 ಅಂಬೇಡ್ಕರ್ ಮನೆಗಳಂತೆ ಹರಿಜನ ಗಿರಿಜನರಿಗೆ ಕೊಡುತ್ತೇವೆಂದು ಬಹಳ ದಿವಸಗಳಿಂದ ಸರ್ಕಾರ ಹೇಳುತ್ತಾ ಬಂದಿದ್ದೀರಿ. ಇವತ್ತು ಒಂದೇ ಒಂದು ಕ್ಷೇತ್ರದಲ್ಲೂ ಈ ಅಂಬೇಡ್ಕರ್ ಮನೆಗಳು ಆಗಿಲ್ಲ. ಈ ದಿಸೆಯಲ್ಲಿ ಸರ್ಕಾರ ಕೂಡಲೆ ಕ್ರಮ ತೆಗೆದುಕೊಂಡು ಕಾರ್ಯಗತವಾಗುವಂತೆ ಮಾಡಬೇಕು. ಅನೇಕ ಇಲಾಖೆಗಳಲ್ಲಿ ಹರಿಜನ ಗಿರಿಜನರಿಗಾಗಿ ಇಟ್ಟಿರತಕ್ಕ 18 ಪರ್ಸೆಂಟ್ ಹಣ ಏನಿದೆ ಅದು ಪೂರ್ಣ ಉಪಯೋಗವಾಗುತ್ತಿಲ್ಲ. ಈ ಹಣ ಹೀಗೇ ಅನುಪಯುಕ್ತವಾಗುತ್ತಿದೆ. ಹರಿಜನ ಗಿರಿಜನರ 18 ಪರ್ಸೆಂಟ್ ಹಣವನ್ನು ಬೇರೆಯದಕ್ಕೆ ಉಪಯೋಗಮಾಡಿಕೊಂಡು ಅವರಿಗೆ ದ್ರೋಹ ಮಾಡುತ್ತಿದ್ದಾರೆ. ಯಾವ ಇಲಾಖೆಯಲ್ಲಿ ಅಧಿಕಾರಿಗಳು ಈ ದಿಕ್ಕಿನಲ್ಲಿ ಸರಿಯಾದ ಪ್ರಯತ್ನ ಮಾಡಿಲ್ಲ ಅಂಥವರ ವಿರುದ್ಧ ಕಠಿಣ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಇನ್ನು 1987ರಿಂದ ಈ ಉದ್ಯೋಗ ನೇಮಕಾತಿಯ ಮೇಲೆ ನಿರ್ಬಂಧವಿದೆ. ರಾಜ್ಯದ ಯುವಜನತೆ ನಮಗೆ ಕೆಲಸವಿಲ್ಲ, ನಮಗೆ ಕೆಲಸವನ್ನು ಕೊಡಿ, ಎಂದು ಕೇಳುತ್ತಿದ್ದಾರೆ. ಆದರೆ ಅವರಿಗೆ ಇವತ್ತು ಉದ್ಯೋಗ ಸಿಕ್ಕುತ್ತಿಲ್ಲ. ಆದ್ದರಿಂದ ಉದ್ಯೋಗದ ನೇಮಕಾತಿಯ ನಿರ್ಬಂಧವನ್ನು ತೆಗೆದು ಕೆಲಸ ಮಾಡುವುದಕ್ಕೆ ಸಿದ್ಧವಿರುವ ಯುವ ಜನತೆಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಹೇಳಬಯಸುತ್ತೇನೆ.

ಇನ್ನು ಪಶುವೈದ್ಯ ಇಲಾಖೆಯನ್ನು ಒಬ್ಬ ಆಸಕ್ತಿಯುಳ್ಳ, ಮಂತ್ರಿಗಳು ವಹಿಸಿಕೊಂಡಿದ್ದಾರೆ. ನಾನು ನನ್ನ ಕ್ಷೇತ್ರಕ್ಕೆ ಕೇಳಿದ ಒಂದು ವೆಟರ್ನರಿ ಆಸ್ಪತ್ರೆಯನ್ನು ಅವರು ಕೊಟ್ಟಿರುವುದರಿಂದ ಅವರಿಗೆ ನನ್ನ ಕ್ಷೇತ್ರದ ಜನತೆಯ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇವತ್ತು ಒಂದು ಜೊತೆ ಎತ್ತಿಗೆ 10–15 ಸಾವಿರ ರೂ. ಆಗುತ್ತದೆ. ಮಂಡಲಕ್ಕೆ ಒಂದು ಆಸ್ಪತ್ರೆಯಂತೆ ಇದುವರೆಗೂ ಎಲ್ಲೂ ಇಲ್ಲ. ಅಷ್ಟೇ ಅಲ್ಲ; ಇರತಕ್ಕ ಆಸ್ಪತ್ರೆಗಳಲ್ಲೂ ಕೂಡ ಸರಿಯಾಗಿ ಡಾಕ್ಟರ್‌ಗಳಾಗಲಿ, ಔಷಧಿಗಳಾಗಲಿ ಇಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ, ಕನಿಷ್ಠ ಒಂದು ಮಂಡಲಕ್ಕೆ ಒಂದು ಆಸ್ಪತ್ರೆ ಬರುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಆಗ ಮಾತ್ರ ಆ ರೈತ ಬದುಕುತ್ತಾನೆ. ಇವತ್ತು ಜಾನುವಾರುಗಳಿಗೆ ತೊಂದರೆಯಾದರೆ ರೈತ ಸತ್ತಂತೆಯೇ ಹೊರತು ಜಾನುವಾರುಗಳು ಸತ್ತಂತಲ್ಲ. ಆದ್ದರಿಂದ ಪ್ರತಿಯೊಂದು ಮಂಡಲಕ್ಕೆ ಒಂದರಂತೆ ವೆಟರ್ನರಿ ಆಸ್ಪತ್ರೆ, ಡಾಕ್ಟರ್ ಮತ್ತು ಅವಶ್ಯಕವಾದಷ್ಟು ಔಷಧಿಗಳು ಇರುವಂತೆ ಒಂದರಂತೆ ನೋಡಿಕೊಳ್ಳಬೇಕು. ಇದೇ ರೀತಿ ಮಂಡಲಕ್ಕೆ ಒಂದು ಮನುಷ್ಯರ ಆಸ್ಪತ್ರೆ ಕೂಡ ಇಲ್ಲ. ಈ ದಿಸೆಯಲ್ಲೂ ಕೂಡ ಸರ್ಕಾರ ಪ್ರಯತ್ನ ಮಾಡಬೇಕು.

ಇನ್ನು ಸಣ್ಣ ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ, ನಿರುದ್ಯೋಗಿ ಯುವಕರು ಇಡೀ ಕರ್ನಾಟಕ ರಾಜ್ಯದಲ್ಲಿ ಉದ್ಯೋಗ ಮಾಡಲು ಸಿದ್ಧವಾಗಿದ್ದಾರೆ. ಸಣ್ಣ ಕೈಗಾರಿಕೆಗಳ ಮುಖಾಂತರ ತಮ್ಮ ಜೀವನವನ್ನು ಸುಧಾರಣೆ ಮಾಡಿಕೊಳ್ಳಬಹುದೆಂಬುದರ ಜೊತೆಗೆ ರಾಜ್ಯದ ಉತ್ಪಾದನೆಗೂ

ಅನುಕೂಲವಾಗುತ್ತದೆಂದು ಯೋಚನೆ ಮಾಡುತ್ತಿದ್ದಾರೆ. ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕೆಂಬ ಅನೇಕ ಯುವಕರಿಗೆ ಅನೇಕ ರೀತಿಯ ಎಡರುತೊಡರುಗಳು ಬರುತ್ತಿವೆ. ಪ್ರೊವಿಷನಲ್ ರಿಜಿಸ್ಟ್ರೇಷನ್ ಸರ್ಟಿಫಿಕೇಟ್‌ನಿಂದ ಹಿಡಿದು, ಪರ್ಮನೆಂಟ್ ರಿಜಿಸ್ಟ್ರೇಷನ್ ಸರ್ಟಿಫಿಕೇಟನ್ನು ತೆಗೆದುಕೊಳ್ಳಬೇಕಾದರೆ ಅವನ 3 ಜೊತೆ ಚಪ್ಪಲಿಗಳು ಸವೆದುಹೋಗಿರುತ್ತವೆ. ಪವರ್ ಕನೆಕ್ಷನ್ ಸುಲಭವಾಗಿ ಸಿಕ್ಕುವುದಿಲ್ಲ; ಪರಿಸರ ಮಾಲಿನ್ಯ ಇಲಾಖೆಯಿಂದ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾದರೆ ಕಷ್ಟ; ಇಂಥ ತೊಂದರೆಗಳಿರುವುದರಿಂದ ಸಿಂಗಲ್ ವಿಂಡೋ ಸಿಸ್ಟಂ ಮಾಡಿ ಗರಿಷ್ಠ 1 ತಿಂಗಳೊಳಗೆ ಅವನಿಗೆ ಎಲ್ಲ ಸರ್ಟಿಫಿಕೇಟ್‌ಗಳೂ ಸಿಕ್ಕಿ ಅವನು ಕೈಗಾರಿಕೆಯನ್ನು ಪ್ರಾರಂಭಿಸಲು ಅನುಕೂಲವಾಗುವಂತೆ ಮಾಡಬೇಕು.

ಇನ್ನು ಕೊನೆಯದಾಗಿ, ಹೇಳುವುದಾದರೆ, ಮಲೆನಾಡು ಅಭಿವೃದ್ಧಿ ಮಂಡಲಿಗೆ ಕೇವಲ ಇಲಾಖೆ ಮಾತ್ರವಿದೆ. ಅದಕ್ಕೆ ಹಣವನ್ನು ಬಿಡುಗಡೆ ಮಾಡಿಲ್ಲ. ಇದಕ್ಕೆ ಸರ್ಕಾರ ಕೂಡಲೇ ಹಣವನ್ನು ಬಿಡುಗಡೆ ಮಾಡಬೇಕು. ಇನ್ನು ಎಲ್ಲ ಇಲಾಖೆಗಳ ಮಂತ್ರಿಗಳಲ್ಲೂ ನನ್ನ ಒಂದೇ ಒಂದು ಮನವಿ ಎಂದರೆ ಸರ್ಕಾರೀ ನೌಕರಿಯಲ್ಲಿರುವಾಗ ಸತ್ತಂಥ ನೌಕರರ ಮಕ್ಕಳಿಗೆ ನೌಕರಿಯನ್ನು ಕೊಡಬೇಕೆಂದು ಕಾನೂನು ಇದೆ. ಸುಪ್ರೀಂ ಕೋರ್ಟ್ ಕೂಡ ಜಡ್ಜ್‌ಮೆಂಟ್ ಕೊಟ್ಟಿದೆ. ಆದರೂ ಕೂಡ ಇನ್ನೂ ಅನೇಕ ಇಲಾಖೆಗಳಲ್ಲಿ ಇಂಥ ಹಲವಾರು ಫೈಲುಗಳು ಪೆಂಡಿಂಗ್ ಬಿದ್ದಿವೆ. ಸತ್ತ ನೌಕರರ ಮಕ್ಕಳಿಗೆ ಉದ್ಯೋಗವಿಲ್ಲದೇ ಇರುವುದರಿಂದ ಅವನ ಕುಟುಂಬ ಬೀದಿಗೆ ಬರಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಪ್ರತಿಯೊಬ್ಬ ಮಂತ್ರಿಗಳು ಕೂಡ ತಮ್ಮ ತಮ್ಮ ಇಲಾಖೆಯಲ್ಲಿ ಇಂಥ ಎಷ್ಟೋ ಫೈಲುಗಳು ಪೆಂಡಿಂಗ್ ಇವೆ ಎಂಬುದನ್ನು ತರಿಸಿಕೊಂಡು ಅನುಕಂಪದ ಆಧಾರದ ಮೇಲೆ ಸತ್ತವರ ಕುಟುಂಬದವರಿಗೆ ಉದ್ಯೋಗವನ್ನು ಕೊಡಬೇಕೆಂದು ತಿಳಿಸಿ ಇಷ್ಟು ಹೆಚ್ಚು ಅವಕಾಶವನ್ನು ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಷಫಿ ಅಹಮದ್ (ತುಮಕೂರು):– ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಈ ಸದನದ ಮುಂದಿರುವ ಬೇಡಿಕೆಗಳಿಗೆ ನನ್ನ ಒಪ್ಪಿಗೆಯನ್ನು ಕೊಡುತ್ತಾ ಪ್ರಥಮವಾಗಿ ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ, ಟ್ರಾನ್ಸ್‌ಪೋರ್ಟ್, ಮತ್ತು ಪೊಲೀಸ್ ಇಲಾಖೆಗಳ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಕರ್ನಾಟಕದ ಗ್ರಾಮಾಂತರ ಪ್ರದೇಶದ ಜನಸಂಖ್ಯೆ 448.18 ಲಕ್ಷ ಇದ್ದು ಅದರಲ್ಲಿ 1990–91 ರಲ್ಲಿ 17.23 ಮತ್ತು 29.09 ಇದೆ. ಅರ್ಬನ್ ಏರಿಯಾ ಇವತ್ತು ಅತಿ ವೇಗವಾಗಿ ಬೆಳೆಯುತ್ತಿದೆ. ತಾವು ಈಗ ವಾರ್ಷಿಕ ವರದಿಯನ್ನು ಏನು ಸದನದ ಮುಂದಿಟ್ಟಿದ್ದೀರಿ ಇದರಲ್ಲಿ ಬೆಂಗಳೂರಿನ ಜನತೆ ಮತ್ತು ಬೆಂಗಳೂರಿನ ಡೆವಲಪ್‌ಮೆಂಟ್ ಅಥಾರಿಟಿ ಬಗ್ಗೆ ನಾನಾ ಯೋಜನೆಗಳನ್ನು ತಾವು ಕೈಗೊಂಡಿದ್ದೀರಿ. ಆದರೆ ಇದೇ ರೀತಿ ಕರ್ನಾಟಕದ ಬೇರೆ ಬೇರೆ ಜಿಲ್ಲಾ, ಪಟ್ಟಣ ಮತ್ತು ಪೌರಾಡಳಿತದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಟ್ಟಿಲ್ಲ ಜೊತೆಗೆ ಸಾಕಷ್ಟು ಕಾರ್ಯಕ್ರಮಗಳನ್ನೂ ಕೂಡ ಸರ್ಕಾರ ಹಾಕಿಕೊಂಡಿರುವಂತೆ ಕಾಣುತ್ತಿಲ್ಲ. ತುಮಕೂರು, ಬೆಂಗಳೂರು ಮುಂತಾದ ನಗರ ಪ್ರದೇಶಗಳಲ್ಲಿ ಅನಧಿಕೃತ ಕಟ್ಟಡಗಳನ್ನು ರೆವಿನ್ಯೂ ಜಾಗಗಳಲ್ಲಿ ಕಟ್ಟಿಕೊಂಡು ಜನರು ವಾಸ ಮಾಡುತ್ತಿದ್ದಾರೆ. ಅದನ್ನು ರೆಗ್ಯುಲರೈಸ್ ಮಾಡುತ್ತೇವೆಂದು ಬಹಳ ಹಿಂದೆಯೇ ಸರ್ಕಾರ ಹೇಳಿತ್ತು. ಆದರೆ ಇವತ್ತಿನವರೆಗೂ ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅನಧಿಕೃತ ಕಟ್ಟಡಗಳನ್ನು ರೆಗ್ಯುಲರೈಸ್ ಮಾಡುವುದರಿಂದ ರಾಜ್ಯದ ಬೊಕ್ಕಸಕ್ಕೆ ಸುಮಾರು 50 ಕೋಟಿ ರೂ. ಆದಾಯ ಬರುತ್ತದೆಂದು ತಮ್ಮ ಬಜೆಟನಲ್ಲಿ ನಿರೀಕ್ಷಣೆ ಮಾಡಿದ್ದೀರಿ. ಅನಧಿಕೃತ ಕಟ್ಟಡಗಳನ್ನು ರೆಗ್ಯುಲರೈಸ್ ಮಾಡಲು ಒಂದು ಎಕ್ಸ್‌ಪರ್ಟ್ಸ್ ಕಮಿಟಿಯನ್ನು ರಚನೆ ಮಾಡಿ ಅದರ ವರದಿಯನ್ನೂ ತಾವು ಕೇಳಿದ್ದೀರಿ. ಈ ಕೆಲಸವನ್ನು ತಾವು ಆದಷ್ಟು ಶೀಘ್ರವಾಗಿ ಮಾಡಬೇಕು. ಇಂಥ ಅನಧಿಕೃತ ಕಟ್ಟಡಗಳಲ್ಲಿರುವವರಿಗೆ ಸಂಬಂಧಪಟ್ಟ ಮುನಿಸಿಪಾಲಿಟಿಯಿಂದ, ಮಂಡಲ್ ಪಂಚಾಯಿತಿ ವತಿಯಿಂದ

ಎಲ್ಲ ರೀತಿಯ ಸೌಲಭ್ಯಗಳನ್ನೂ ಒದಗಿಸಿಕೊಡುತ್ತಿದ್ದೇವೆ. ಆದರೆ ಆ ನಿವಾಸಿಗಳಿಂದ ನಮಗೆ ಬರಬೇಕಾದ ಕಂದಾಯ ಮುಂತಾದ ಯಾವುದೇ ಹಣವೂ ಸರ್ಕಾರಕ್ಕೆ ಬರುತ್ತಿಲ್ಲ.

ಮತ್ತೆ ಅವರಿಗೂ ಸಹ ಸರಿಯಾದ ರೀತಿಯಲ್ಲಿ ಕೊಡಬೇಕಾದ ಸವಲತ್ತುಗಳನ್ನು ಒದಗಿಸಲಿಕ್ಕೆ ಸಾಧ್ಯವಾಗುತ್ತಿಲ್ಲ. ಆ ದಿಸೆಯಲ್ಲಿ ಮಹತ್ವವಾಗಿ ಸರ್ಕಾರಕ್ಕೆ ರೆವಿನ್ಯೂ ಬರುವಂಥ ಒಂದು ರೆಗ್ಯುಲರೈಸೇಷನ್ ಅನ್ನು ಅತಿ ಶೀಘ್ರದಲ್ಲಿ ಮಾಡಿಕೊಡಬೇಕು. ಮತ್ತು ಪ್ರತಿಯೊಂದು ಮುನಸಿಪಾಲಿಟಿ ಮತ್ತು ಕಾರ್ಪೊರೇಷನ್ ತಮಗೆಲ್ಲ ಗೊತ್ತಿದೆ ಇವತ್ತು ಎಕಾನೆಮಿ ಮೆಷರ್ಸ್ ಪ್ರಕಾರ ಈ ಕ್ಲಾಸ್ ಫೋರ್ ಎಂಪ್ಲಾಯಿಸನ್ನು ಅಪಾಯಿಂಟ್ ಮಾಡಿಕೊಳ್ಳುವುದಕ್ಕೆ ತಾವು ಆದೇಶವನ್ನು ಕೊಡುತ್ತಿಲ್ಲ. ಆ ದಿಸೆಯಲ್ಲಿ ಎಲ್ಲ ಮುನಿಸಿಪಾಲಿಟಿಗಳಿಂದ, ಕಾರ್ಪೊರೇಷನ್‌ಗಳಿಂದ ತಮಗೆಲ್ಲರಿಗೂ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ; ಇವತ್ತು ಉದಾಹರಣೆಗೆ ಹೇಳಬೇಕಾದರೆ ನಮ್ಮ ತುಮಕೂರು ಮುನಿಸಿಪಾಲಿಟಿಯಲ್ಲಿ ಬರೇ 72 ಜನ ಪೌರ ಕಾರ್ಮಿಕರು ಇದ್ದಾರೆ. ಸುಮಾರು 25 ಕಿಲೋಮೀಟರ್‌ಗಿಂತ ಹೆಚ್ಚಿನ ವ್ಯಾಪ್ತಿ ಇವತ್ತು ಆ ನಗರ ಬೆಳೆದಿದೆ. ಅದರಲ್ಲೂ 2 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆ ಇದೆ. ಬರೇ 72 ಜನ ಪೌರ ಕಾರ್ಮಿಕರಿಂದ ಈ ಸ್ಯಾನಿಟೇಷನ್‌ನ್ನು ನಾವು ಮೇನ್‌ಟೈನ್ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಕರ್ನಾಟಕದ ಎಲ್ಲ ಭಾಗದ ಮುನಿಸಿಪಾಲಿಟೀಸ್‌ಗಳಲ್ಲಿ ಈ ಸಮಸ್ಯೆ ಇದೆ. ತಾವು ಈ ಎಕಾನೆಮಿ ಮೆಷರ್ಸನ್ನು ಲಿಫ್ಟ್ ಮಾಡಿ ಇವತ್ತು ಆದೇಶವನ್ನು ಕೊಟ್ಟರೆ ಈ ಸ್ಯಾನಿಟೇಷನ್‌ನ್ನು ಕೀಪ್‌ಅಪ್ ಮಾಡಲಿಕ್ಕೆ ಸಾಧ್ಯವಾಗುತ್ತದೆ. ತಮಗೆಲ್ಲ ಗೊತ್ತಿದೆ, ಈ ಬೇಸಿಗೆಯಲ್ಲಿ ಪ್ರತಿಯೊಂದು ಊರಲ್ಲಿಯೂ ಸಹ ಕಾಲರ ಬಹಳ ಹೆಚ್ಚಿನ ವ್ಯಾಪ್ತಿಯಲ್ಲಿ ಹರಡಿಕೊಂಡಿದೆ. ಇವತ್ತು ಯಾವುದೇ ಮುನಿಸಿಪಾಲಿಟಿಯಲ್ಲಾಗಲೀ ಅಲ್ಲಿನ ಸ್ಯಾನಿಟೇಷನನ್ನು ಸರಿಪಡಿಸದಿದ್ದರೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆ ದಿಸೆಯಲ್ಲಿ ಈ ಪೌರಕಾರ್ಮಿಕರಿಗೆ ತಾವು ಒಪ್ಪಿಗೆಯನ್ನು ಕೊಟ್ಟು ಅತಿ ಶೀಘ್ರದಲ್ಲಿಯೇ ನಾವು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಅದೇ ರೀತಿಯಲ್ಲಿ ತಮ್ಮ ಒಂದು 15 ಪರ್ಸೆಂಟನ್ನು ಆಕ್ಟ್ರಾಯ್ ಕಾಂಪೆನ್‌ಸೇಷನ್ ಅಮೌಂಟ್ ಏನಿದೆ, ಅದನ್ನು ಕಾಲಕ್ಕೆ ಸರಿಯಾಗಿ ಬಿಡುಗಡೆ ಮಾಡುತ್ತಿಲ್ಲ. ಯಾವುದೇ ಮುನಿಸಿಪಾಲಿಟಿಯಾಗಲೀ ಇವತ್ತು ಸ್ವಯಂ ಅವರ ಕಾಲ ಮೇಲೆ ನಿಂತುಕೊಳ್ಳುವುದಕ್ಕೆ ಯಾವುದೇ ಆದಾಯವಿಲ್ಲದ ಕಾರಣ ಸರ್ಕಾರದ ಮೇಲೆ ಡಿಪೆಂಡ್ ಆಗಿದ್ದಾರೆ. ಸರ್ಕಾರದವರು ಇವತ್ತು ದುಡ್ಡನ್ನು ಕೊಟ್ಟರೆ ಅವರ ಸ್ಯಾಲರೀಸ್ ಮತ್ತೆ ಇತರೇ ಸೌಲಭ್ಯಗಳನ್ನು ಜನರಿಗೆ ಒದಗಿಸಲಿಕ್ಕೆ ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ತಾವು ಏನು ಕ್ವಾರ್ಟರ್ಲಿ 15 ಪರ್ಸೆಂಟ್ ತಮ್ಮ ಒಂದು ಕಾಂಪೆನ್‌ಸೇಷನ್ ಗ್ರಾಂಟ್ ಇದೆ, ಅದು ಸರಿಯಾಗಿ ವಿತರಣೆಯಾಗಬೇಕು. ಅದರಲ್ಲಿ ಏನು ಮಾಡುತ್ತೀರಾ ತಮ್ಮ ಅರಿಯರ್ಸ್ ಮತ್ತು ಇಂಟರೆಸ್ಟನ್ನು ಇಲ್ಲಿಯೇ ಹಿಡಿದುಕೊಂಡು ಕೇವಲ ಕಡಿಮೆ ಹಣ ಮಾತ್ರ ಸರ್ಕಾರದಿಂದ ಮುನಿಸಿಪಾಲಿಟೀಸ್‌ಗೆ ವಿತರಣೆಯಾಗುತ್ತಿದೆ. ಇದರಿಂದ ಸದ್ಯಕ್ಕೆ ಮುನಿಸಿಪಾಲಿಟೀಸ್ ಪವರ್ ಬಿಲನ್ನು ಕಟ್ಟಲಿಕ್ಕೂ ಸಹ ಸಾಧ್ಯವಾಗುತ್ತಿಲ್ಲ. ಇಂಥ ಸಂದರ್ಭದಲ್ಲಿ ಸರ್ಕಾರ ಈ ನೆರವನ್ನು ಕೊಡಬೇಕಾಗುತ್ತದೆ. ಮತ್ತು ನಯಸೈಡ್ ಸ್ಕೀಮ್ ಬಹಳ ಒಳ್ಳೆಯ ಕಾರ್ಯಕ್ರಮ ಇದು. ನಯಸೈಡ್ ಸ್ಕೀಮನ್ನು ಕೇವಲ 4–5 ನಗರಗಳಿಗೆ ಮಾತ್ರ ಸೀಮಿತಗೊಳಿಸಿದ್ದೀರಾ. ಈ ನಯಸೈಡ್ ಸ್ಕೀಮ್ ಮತ್ತು ಇದರಿಂದ ಆಗಬೇಕಾದ ಸೌಲಭ್ಯಗಳಿಗೆ ಕೇಂದ್ರ ಸರ್ಕಾರದಿಂದ ಹಣ ಬರುತ್ತಿರುವುದರಿಂದ ತಾವು ತುಮಕೂರು ನಗರಕ್ಕೂ ಸಹ ಈ ಯೋಜನೆಯನ್ನು ಅಳವಡಿಸಿಕೊಂಡು ನಮಗೆ ನೆರವು ಮಾಡಿಕೊಡಬೇಕು. ನಮ್ಮ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತಾ ತಾವು ಹೇಳಿದಿರಿ, ತುಮಕೂರು ನಗರವನ್ನು ತುಮಕೂರು ನಗರ ಕಾರ್ಪೊರೇಷನ್ ಆಗಿ ಮಾಡುತ್ತೇವೆಂದು; ಆದರೆ ತಮ್ಮ ಒಂದು ರಿಪೋರ್ಟ್‌ನಲ್ಲಿ ಯಾವುದನ್ನೂ ತೋರಿಸಿಲ್ಲ. ಸಣ್ಣ ಸಣ್ಣ ಗ್ರಾಮಗಳಿಗೂ ಸಹ ಅಂಡರ್ ಗ್ರೌಂಡ್ ಡ್ರೈನೇಜ್ ಸಿಸ್ಟಮ್ ಒದಗಿಸಿಕೊಟ್ಟಿದ್ದೀರಾ, ತಾವು ಸಾಕಷ್ಟು ಹಣವನ್ನು ಈ ಅಂಡರ್ ಗ್ರೌಂಡ್

ಡ್ರೈನೇಜ್‌ಗೆ ಆಗಿ ಸುಮಾರು 77 ಲಕ್ಷ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದೀರಾ. ಆ ದಿಸೆಯಲ್ಲಿ ಇವತ್ತು ತುಮಕೂರು ಬೆಳೆಯುತ್ತಿರುವ ಪ್ರದೇಶ, ಬೆಂಗಳೂರಿಗೆ ಅತಿ ಸಮೀಪದಲ್ಲಿ ಇರುವುದರಿಂದ ಹಾಗೂ ಇಂಡಸ್ಟ್ರೀಸ್ ಅಲ್ಲಿ ಸೆಂಟ್ರಲೈಸ್ ಆಗುತ್ತಿರುವುದರಿಂದ ಈ ಅಂಡರ್‌ಗ್ರೌಂಡ್ ಡ್ರೈನೇಜ್ ಮತ್ತು ಕಾರ್ಪೊರೇಷನ್ ಬಗ್ಗೆ ತಮ್ಮ ಉತ್ತರದಲ್ಲಿ ದಯವಿಟ್ಟು ಹೇಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇವತ್ತು ಅರ್ಬನ್ ಡೆವಲಪ್‌ಮೆಂಟ್ ಅಥಾರಟಿ ಬಹಳ ಮಹತ್ವವಾದುದು. ಎಲ್ಲ ಶಾಸಕರು ಅದರ ಬಗ್ಗೆ ಮಾತನಾಡಿದ್ದಾರೆ. ಇವತ್ತು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟೀಸ್ ಕರ್ನಾಟಕದಲ್ಲಿ 21 ಮಂಡಲಿಗಳು ಇದ್ದರೂ ಸಹ ಯಾವುದೇ ರೀತಿಯಾಗಿ ನಾವು ಏನು ಬೆನಿಫಿಷರಿಸ್‌ನಿಂದ ಹಣವನ್ನು ಪಡೆದಿದ್ದೇವೆ ಅವರಿಗೆ ಸೈಟನ್ನು ಸಹ ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಈ ಸೈಟನ್ನು ಕೊಡಬೇಕಾದರೆ ಇವತ್ತು ನಿಮ್ಮ ಇಲಾಖೆಯ ಹೆಚ್.ಯು.ಡಿಯಲ್ಲಿ ನಾನಾ ರೀತಿಯ ಫಾರ್ಮಾಲಿಟೀಸ್ ಇರುವುದರಿಂದ, HW ಗೆ ಒಂದು ಫೈಲನ್ನು ಕಳುಹಿಸಿದರೆ ಮೂರು ವರ್ಷವಾದರೂ ನಿಮ್ಮ ಹೆಚ್.ಯು.ಡಿ.ಯಿಂದ ಒಂದು ಫೈಲ್ ವಾಪಸ್ ಬರುವುದಿಲ್ಲ. ಇವತ್ತು ಸಿ.ಡಿ.ಪಿ. ಪ್ಲಾನ್ ಮಾಡಿಕೊಟ್ಟರೆ ಒಂದು ವರ್ಷವಾದರೂ ವಾಪಸ್ ಬರುತ್ತಿಲ್ಲ. ಆದ್ದರಿಂದ ತಾವು ಸ್ವತಃ ಎಲ್ಲ ಮಂಡಲಿಗಳ ಸಭೆ ಕರೆದು ಆ ಮಂಡಲಿಗಳದು ಏನೇ ಸಮಸ್ಯೆ ಇದ್ದರೂ ನಾವು ಬಗೆಹರಿಸುತ್ತೇವೆಂದು ಆಶ್ವಾಸನೆಯನ್ನು ಸಹ ಕೊಟ್ಟಿದ್ದೀರಿ. ಈ ಸದನ ಮುಗಿಯುತ್ತಿದ್ದಂತೆ ಅತಿ ಶೀಘ್ರದಲ್ಲಿಯೇ ಈ ಸಮಸ್ಯೆಯನ್ನು ತಾವು ಬಗೆಹರಿಸಬೇಕಾಗುತ್ತದೆ.

ಇದರಲ್ಲಿ 32 ಪರ್ಸೆಂಟ್ ಎಕನಾಮಿಕಲಿ ವೀಕರ್ ಸೆಕ್ಷನ್‌ನವರಿಗೆ ಸೈಟು ಕೊಡುವುದಕ್ಕೆ ಪ್ರಾವಿಷನ್ ಮಾಡಿಕೊಂಡಿದ್ದೇವೆ. ಇದು ಸೆಲ್ಫ್ ಫೈನಾನ್ಸಿಂಗ್ ಸ್ಕೀಂ. ಇದಕ್ಕೆ ಸರ್ಕಾರದಿಂದ ಏನೂ ಹಣ ಕೊಡುತ್ತಿಲ್ಲ. ಸರ್ಕಾರದಿಂದ ಏನು ಕೋ–ಆಪರೇಷನ್ ಕೊಡಬೇಕಾಗಿತ್ತು ಅದು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಗೆ ಸರಿಯಾದ ರೀತಿಯಲ್ಲಿ ಸಿಗುತ್ತಿಲ್ಲ. ಆದುದರಿಂದ ಸೀಮಿತವಾದ ವೇಳೆಯಲ್ಲಿ ಈ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ತಾವೇ ಸ್ವತಃ ಕಮಿಟಿ ಕರೆದು ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಬೇಕು. ತುಮಕೂರಿನ ಒಂದು ಪ್ರೊಪೋರ್ಷನೇಟ್ ಏನಿದೆ ಅಂದರೆ ಅಲ್ಲಿನ ರೆಸೀಟ್ಸ್ 206.20 ಲಕ್ಷ ಇದೆ, ಎಕ್ಸ್‌ಪೆಂಡೀಚರ್ 110.50 ಲಕ್ಷ ಇದೆ. ಸೇವಿಂಗ್ಸ್ 95.7 ಲಕ್ಷ ಇದೆ. ಈ ಹಣ ಸುಮಾರು 5 ವರ್ಷಗಳಿಂದ ಬ್ಯಾಂಕಿನಲ್ಲಿ ಡಿಪಾಸಿಟ್ ಮಡಗಿಕೊಂಡಿದ್ದರು. ಬೆನಿಫಿಷರೀಸ್‌ಗೆ ದುಡ್ಡು ಕೊಟ್ಟಿರುವುದು, ಅವರ ಮನೆಗಳಿಗೋಸ್ಕರ. ಅವರು ಬಂದು ಪ್ರತಿನಿತ್ಯ ಪೀಡಿಸುತ್ತಿದ್ದಾರೆ; ಹಣ ವಾಪಸ್ಸು ಕೊಡಿ, ಇಲ್ಲ ಸೈಟು ಕೊಡಿ ಎಂದು. ಪ್ರತಿಯೊಂದು ನಗರದಲ್ಲಿ ಸೈಟಿನ ಡಿಮ್ಯಾಂಡ್ ಇರುವುದರಿಂದ ಅತಿ ಶೀಘ್ರದಲ್ಲಿ ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನಿಂದ, ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯಿಂದ ಸುಲಭ ರೀತಿಯಲ್ಲಿ ಸೆಲ್ಫ್ ಫೈನಾನ್ಸಿಂಗ್ ಸ್ಕೀಮುಗಳನ್ನು ಅತಿ ಶೀಘ್ರದಲ್ಲಿ ಮಾಡಿಕೊಟ್ಟರೆ ಕಾರ್ಯಗತವಾಗುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ರಿಂಗ್ ರೋಡ್ಸ್ ಬಹಳ ಮುಖ್ಯ. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರಿನ ಒಂದು ರಿಂಗ್ ರೋಡ್ ಪ್ರೊಪೋಸ್ ಆದದ್ದು ದೇವರಾಜ ಅರಸು ಅನರು ಇದ್ದಾಗ. ಅದು ಇವತ್ತಿಗೂ ಕಾರ್ಯಗತವಾಗಲಿಲ್ಲ. ಅದೇ ರೀತಿ ಬೆಂಗಳೂರಿನ ಟ್ರಕ್ ಟರ್ಮಿನಲ್ ಕೂಡ. ಇಂಥ ಮಹತ್ತರ ಯೋಜನೆಗಳಿಗೆ ಸರ್ಕಾರದವರು ಇವತ್ತು ಈ ಆನ್ಯುಯಲ್ ರಿಪೋರ್ಟ್‌ನಲ್ಲಿ ಯಾವುದೇ ಒಂದು ಹಣ ಒದಗಿಸಿಲ್ಲ. ತಮ್ಮ ಉತ್ತರದಲ್ಲಿ ಬೆಂಗಳೂರಿನ ಈ ರಿಂಗ್ ರೋಡ್ ಬಗ್ಗೆ ಹೇಳಬೇಕು. ಅದೇ ರೀತಿಯಾಗಿ ಪ್ರತಿಯೊಂದು ನಗರಕ್ಕೂ ರಿಂಗ್ ರೋಡ್ ಬಹಳ ಮುಖ್ಯ. ಬೆಳೆಯುತ್ತಿರುವ ಜನಸಂಖ್ಯೆಯನ್ನು ಡೀಸೆಂಟ್ರಲೈಸ್ ಮಾಡಿ ಆಕ್ಸಿಡೆಂಟ್ಸ್ ಕಡಿಮೆ ಮಾಡಬೇಕಾದರೆ ಈ ರಿಂಗ್ ರೋಡ್ಸ್ ಬಹಳ ಮುಖ್ಯ. ಇವತ್ತು ಟ್ರಾಫಿಕ್ ಫ್ರೀಕ್ವೆನ್ಸಿ ಏನಿದೆ ಇದು 1.100 ಟೈಮ್ಸ್ ಹೆಚ್ಚಾಗಿರುವುದರಿಂದ ರಿಂಗ್ ರೋಡ್ಸ್ ಮಾಡಿದರೆ ಅನುಕೂಲವಾಗುತ್ತದೆ. ಸರ್ಕಾರ ಸಾಲದ

ರೂಪದಲ್ಲಾಗಲಿ ಅಥವಾ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯವರು ಸಾಲ ತೆಗೆದುಕೊಳ್ಳುವುದಕ್ಕೆ ಬ್ಯಾಂಕಿನವರಿಗೆ ಗ್ಯಾರಂಟಿ ಕೊಟ್ಟರೆ ಈ ಕೆಲಸ ಮಾಡುವುದಕ್ಕೆ ಅವರಿಗೆ ಸಾಧ್ಯವಾಗುತ್ತದೆ. ಆ ದಿಸೆಯಲ್ಲಿ ತಾವು ಅಪ್ಪಣೆ ಕೊಡಬೇಕು. ಸಿಡಿಪಿ. ಪ್ಲಾನ್ಸ್ ಬಗ್ಗೆ ಹೇಳುವುದಾದರೆ, ಕಳೆದ 5 ವರ್ಷಗಳ ಹಿಂದೆ ನಾವು ಡ್ರಾಫ್ಟ್ ಪ್ಲಾನ್ ಕೊಟ್ಟಿದ್ದರೂ ಇವತ್ತಿನವರೆಗೆ ಆ ಸಿಡಿಪಿ ಪ್ಲಾನ್ ಮಂಜೂರಾಗಿ ಬಂದಿಲ್ಲ. ಎಲ್ಲಾ ಅಥಾರಿಟಿಗಳಿಂದ ಬಂದಿರತಕ್ಕ ಸಿಡಿಪಿ. ಪ್ಲಾನ್‌ಗಳನ್ನು ಕೂಡಲೇ ಮಂಜೂರು ಮಾಡಿಕೊಡಬೇಕು. ಇವತ್ತು ಏನಾಗಿದೆ ಎಂದರೆ ಯಾವುದೇ ರೆವಿನ್ಯೂ ಸೈಟಿನಲ್ಲಿ ಮನೆ ಕಟ್ಟಬೇಕಾದರೆ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯಿಂದ ಪರ್ಮಿಷನ್ ತೆಗೆದುಕೊಳ್ಳಬೇಕು, ಮುನಿಸಿಪಾಲಿಟಿಯಿಂದ ಪರ್ಮಿಷನ್ ತೆಗೆದುಕೊಳ್ಳಬೇಕು ಮತ್ತು ಎಲ್ಲಾ ಭಾಗದ ಇಲಾಖೆಗಳಿಂದ ಪರ್ಮಿಷನ್ ತೆಗೆದುಕೊಳ್ಳಬೇಕು. ಈಗ ತಾನೇ ಈಶ್ವರಪ್ಪನವರು ಹೇಳಿದ ಹಾಗೆ ಸಿಂಗಲ್ ವಿಂಡೋ ಏಜೆನ್ಸಿ ಮಾಡಿದರೆ ಬಹಳ ಒಳ್ಳೆಯದು. ಪ್ರತಿಯೊಂದು ಕಾರ್ಪೋರೇಷನ್‌ನಲ್ಲಿ ವಾರಕ್ಕೊಂದು ಕಂಪಲ್ಸರಿ ಸಿಟ್ಟಿಂಗ್ ಮಾಡಿದರೆ ಇಂಥ ಸಮಸ್ಯೆಗಳನ್ನು ಬಗೆ ಹರಿಸುವುದಕ್ಕೆ ಸಾಧ್ಯವಾಗುತ್ತದೆ. ನಗರ ವ್ಯಾಪ್ತಿಯಲ್ಲಿ ಮನೆ ಕಟ್ಟಬೇಕಾದರೆ ಅವರ ಗೋಳು ದೇವರಿಗೆ ಮುಟ್ಟುತ್ತದೆ. ತಾವು ಒಂದು ಪಾಲಿಸಿ ಮಾಡಿ ಅವರಿಗೆ ಅವಕಾಶ ಒದಗಿಸಿಕೊಟ್ಟರೆ ಒಳ್ಳೆಯದು. ಏನೇನು ದಾಖಲೆ ಬೇಕೆಂಬುದಕ್ಕೆ ಅವರಿಗೆ ಒಂದು ಕ್ವಶ್ಚನೇರ್ ಕೊಟ್ಟು ಅದನ್ನು ಫಿಲ್‌ಅಪ್ ಮಾಡಿ ಸಂಬಂಧಪಟ್ಟ ಇಲಾಖೆಯವರು ಎಕ್ಸಾಮಿನ್ ಮಾಡಿ ವಾರಕ್ಕೊಮ್ಮೆ ಲೈಸೆನ್ಸ್ ರೆವ್ಯೂಯಿಂಗ್ ಕಮಿಟಿ ಮೀಟಿಂಗ್ ಮಾಡಿ ಅಲ್ಲಿಂದ ಲೈಸೆನ್ಸ್ ಇಶ್ಯೂ ಮಾಡಿದರೆ ಈ ಕೆಲಸ ಸುಗಮವಾಗಿ ಆಗುತ್ತದೆ. ಜನರಿಗೂ ಸಹ ಅನುಕೂಲವಾಗುತ್ತದೆ. ಇವತ್ತು ಸ್ಲಂ ಕ್ಲಿಯರೆನ್ಸ್ ಬೋರ್ಡ್ ತುಮಕೂರು ನಗರದಲ್ಲಿ ಒಳ್ಳೆಯ ಕೆಲಸವನ್ನು ಮಾಡಿಕೊಂಡು ಬಂದಿದೆ. 350ಮನೆಗಳನ್ನು ಇವತ್ತು ಸರ್ಕಾರದ ವತಿಯಿಂದ ಒಂದೂವರೆ ಕೋಟಿ ರೂಪಾಯಿಗಳ ವೆಚ್ಚದಿಂದ ಕಟ್ಟುತ್ತಿದ್ದಾರೆ. 35 ಸಾವಿರ ರೂಪಾಯಿ ಒಂದು ಮನೆಗೆ ಬೀಳುತ್ತಿದೆ. ಆಶ್ರಯ ಮನೆಗೂ ಇದಕ್ಕೂ ಹೋಲಿಸಿ ನೋಡಿದರೆ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಸ್ಲಮ್ ಕ್ಲಿಯರೆನ್ಸ್‌ಗಾಗಿ 150 ಕೋಟಿ ರೂಪಾಯಿಗಳನ್ನು 5 ವರ್ಷದಲ್ಲಿ ತಾವು ಪ್ಲಾನ್ ಆಗಿ ತೆಗೆದುಕೊಂಡಿದ್ದೀರಿ. ಆದರೆ ನಗರದ ಶೇಕಡ ಹತ್ತರಷ್ಟು ಜನ ಇವತ್ತಿಗೂ ಸ್ಲಮ್‌ಗಳಲ್ಲಿ ವಾಸಿಸುತ್ತಿದ್ದಾರೆ. ಈ ದಿಸೆಯಲ್ಲಿ 150 ಕೋಟಿ ರೂಪಾಯಿಗಳನ್ನು ಏನು ಪ್ರಾವಿಷನ್ ಮಾಡಿದ್ದೀರಿ ಅದು ಸಾಕಾಗುವುದಿಲ್ಲ. ಇದನ್ನು ಕನಿಷ್ಠ ಪಕ್ಷ 500ಕೋಟಿ ರೂಪಾಯಿಗಳಿಗೆ ಹೆಚ್ಚಿಸಿದರೆ ಸ್ಲಮ್ಸ್ ರೀಹ್ಯಾಬಿಲಿಟೇಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆಶ್ರಯ ಯೋಜನೆ ಅಡಿಯಲ್ಲಿ, ಸ್ಲಮ್ಸ್‌ನಲ್ಲಿರತಕ್ಕವರಿಗೂ ರೀಹ್ಯಾಬಿಲಿಟೇಟ್ ಮಾಡಿ ಸರಿಯಾದ ರೀತಿಯಲ್ಲಿ ಮನೆ ಒದಗಿಸಿಕೊಟ್ಟರೆ ಪರ್ಮನೆಂಟ್ ರಿಲೀಫ್ ಆಗುತ್ತದೆ.

ಇವತ್ತು ರೂರಲ್ ಏರಿಯಾದಲ್ಲಿ ನಾವು ಆಶ್ರಯ ಯೋಜನೆಯ ಅಡಿಯಲ್ಲಿ ಮನೆಗಳನ್ನು ಕಟ್ಟುತ್ತಿದ್ದೇವೆ. ಅದೇ ರೀತಿಯಲ್ಲಿ ಅರ್ಬನ್ ಏರಿಯಾದಲ್ಲಿ ಮನೆ ಕಟ್ಟಬೇಕಾದರೆ ಒಂದೇ ಆದೇಶ ಕೊಟ್ಟಿದ್ದಾರೆ. ಅರ್ಬನ್ ಏರಿಯಾದಲ್ಲಿಯೂ 250 ಮನೆಗಳು, ರೂರಲ್ ಏರಿಯಾದಲ್ಲೂ 250 ಮನೆಗಳು. ರೂರಲ್ ಏರಿಯಾದಲ್ಲೂ 250 ಮನೆಗಳು. ಆದರೆ ನಗರಸಭೆ ವ್ಯಾಪ್ತಿಯಲ್ಲಿ ಜನಸಂಖ್ಯೆ 1 ರಿಂದ 100 ಪಟ್ಟು ಜಾಸ್ತಿ ಆಗುತ್ತದೆ. ಆದ್ದರಿಂದ ಕನಿಷ್ಟ ಪಕ್ಷ ತಾವು ತಮಗೆ ಒಂದು ಸಾವಿರ ಮನೆಗಳನ್ನು ನಗರವ್ಯಾಪ್ತಿಯಲ್ಲಿ ಆಶ್ರಯದಲ್ಲಿ ಆಗಲಿ ಅಥವಾ ಭಾಗ್ಯಮಂದಿರ ಯೋಜನೆಯಲ್ಲಿ ಕೊಟ್ಟರೆ ಅವರನ್ನು ರೀಹ್ಯಾಬಿಲಿಟೇಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಸ್ಲಮ್ ಏರಿಯಾದಲ್ಲಿ ಇರುವ ಕಡು ಬಡವರ ಹೈಜೀನಿಕ್ ಕಂಡೀಷನ್ ಸರಿ ಇಲ್ಲ. ಇವತ್ತು ಮುನಿಸಿಪಾಲಿಟಿಗಳಲ್ಲಿ ಈ 18 ಪರ್ಸೆಂಟ್ ಹಣ ಏನಿದೆ ಅದು ಸರಿಯಾದ ರೀತಿಯಲ್ಲಿ ವಿತರಣೆ ಆಗುತ್ತಾ ಇಲ್ಲ. ರೋಜ್ಗಾರ್ ಯೋಜನೆಯಲ್ಲಾಗಲೀ ಅಥವಾ ನೇರವಾಗಿ ಬೆನಿಫಿಟ್ ಕೊಡುವುದರಲ್ಲಾಗಲೀ 18 ಪರ್ಸೆಂಟ್ ಸರಿಯಾಗಿ ಹಣ ವಿತರಣೆ ಆಗುತ್ತಿಲ್ಲ. ಪ್ರತಿನಿತ್ಯ ಮೀಟಿಂಗ್

ಮಾಡುವಾಗ ಸಹಾ ಆದೇಶ ಕೊಟ್ಟರೂ ಅಧಿಕಾರ ವರ್ಗದವರು ಹೆಚ್ಚಿನ ಕಾಳಜಿ ವಹಿಸುತ್ತಿಲ್ಲ. ಸರ್ಕಾರದವರು ಹಣ ಕೊಟ್ಟರೂ ಈ ಹಣದಿಂದ ಬೆನಿಫಿಶಿಯರೀಸ್‌ಗೆ ಬೆನಿಫಿಟ್ ಆಗುತ್ತಿಲ್ಲ. ಆದ್ದರಿಂದ ಪ್ರತಿಯೊಂದು ಮುನಿಸಿಪಾಲಿಟಿಯಲ್ಲಿ 18 ಪರ್ಸೆಂಟ್ ಹಣವನ್ನು ಉಪಯೋಗಿಸಿ ಅವರ ಆರ್ಥಿಕ ಪರಿಸ್ಥಿತಿ ಮತ್ತು ನೈರ್ಮಲ್ಯವನ್ನು ಕಾಪಾಡಬೇಕು. ಮತ್ತು ಬಹಳ ಮುಖ್ಯವಾಗಿ ನಮ್ಮ ಆಹಾರ ಇಲಾಖೆ. ಇಲ್ಲಿ ಏನಾಗಿದೆ ಎಂದರೆ, ತಾವು ಸರ್ಕಾರದಿಂದ ಟ್ರೈಬಲರ್ ಕಾರ್ಡ್ಸ್ ಕೊಟ್ಟಿದ್ದೀರಿ. ಇವತ್ತು ನಗರ ವ್ಯಾಪ್ತಿಯಲ್ಲಿ ಒಂದು ಪಾಲಿಸಿ ಮಾಡಿದ್ದೀರಿ. ಡಿಕ್ಲೇರ್ಡ್ ಸ್ಲಮ್ಸ್‌ಗೆ ಇದನ್ನು ಕೊಡುತ್ತೀರಿ. ನಾನ್‌ಡಿಕ್ಲೇರ್ಡ್ ಸ್ಲಮ್ಸ್‌ಗೆ ಕೊಡುತ್ತಿಲ್ಲ. ಸ್ಲಮ್ಸ್‌ನಲ್ಲಿರುವ ಎಕನಾಮಿಕಲಿ ವೀಕರ್ ಸೆಕ್ಷನ್ಸ್‌ಗಾಗಲೀ, ಹರಿಜನ ಬಸ್ತಿಗಳಲ್ಲಿ ಇರುವವರಿಗಾಗಲೀ ಟ್ರೈಕಲರ್ ಕಾರ್ಡ್ಸ್ ಕೊಡುತ್ತಿಲ್ಲ. ಸನ್ಮಾನ್ಯ ಸಚಿವರಿಗೆ ಸಾಕಷ್ಟು ಮನವಿ ಸಲ್ಲಿಸಿದ್ದೇನೆ. ಆದರೂ ಸಹಾ ಈ ಪಾಲಿಸಿ ರಿವೈಸ್ ಮಾಡಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಗಮನಿಸಬೇಕು. ಈ ಬಗ್ಗೆ ಪಾಲಿಸಿ ಮ್ಯಾಟರ್ ಇದೆ. ಕೇಂದ್ರಸರ್ಕಾರದಿಂದ ಪರ್ಮಿಷನ್ ತೆಗೆದುಕೊಂಡು ಟ್ರೈಕಲರ್ ಕಾರ್ಡ್ಸ್ ಕೊಡಬೇಕಾಗುತ್ತದೆಂದು ಹೇಳುತ್ತೇನೆ. ಕನಿಷ್ಟ ಪಕ್ಷ ಹರಿಜನ ಬಸ್ತಿಯಲ್ಲಿ ಕೊಡಬೇಕು ಎಂದು ತಾವು ಪ್ರಾವಿಷನ್ ಮಾಡಿಕೊಡಬೇಕು. ಇವತ್ತು ಟ್ರೈಕಲರ್ ಕಾರ್ಡ್ಸ್ ಅತೀ ಅಗತ್ಯ ಇದೆ. ತಾವು ಮೊನ್ನೆ ತಾನೇ ಒಂದು ಅಮೆಂಡ್‌ಮೆಂಟ್ ಮಾಡಿ 15 ಪರ್ಸೆಂಟ್ ಮತ್ತು 70 ಪರ್ಸೆಂಟ್ ರೀತ್ಯ ಕಾರ್ಡ್ಸ್ ಕೊಡುವುದಕ್ಕೆ ಆದೇಶ ಕೊಟ್ಟಿದ್ದೀರಿ. ಅದನ್ನು ಕನಿಷ್ಟ ಪಕ್ಷ ೩೦:೭೦ ರೇಷಿಯೋ ಎಂದು ಕಾರ್ಡ್ಸ್ ಆದೇಶ ಕೊಡುವುದಕ್ಕೆ ಕೊಡಬೇಕು. ಅದೇ ರೀತಿ ಸೀಮೆಯೆಣ್ಣೆ ಮತ್ತು ಆಹಾರದ ಪೊಸಿಷನ್ ಬಗ್ಗೆ ಹೇಳುವುದಾದರೆ ಬಫರ್ಸ್ ಸ್ಟಾಕ್ ಏನು ಇರಬೇಕೋ ಅದು ಸಾಕಷ್ಟು ಇಲ್ಲ. ಇಂಥ ಸಂದರ್ಭದಲ್ಲಿ ಬಿಲ್ಡಪ್ ಮಾಡಿದರೆ ಮಾತ್ರ ಬರುವ ಕಾಲದಲ್ಲಿ ಸರಿಯಾಗಿ ಆಹಾರ ವಿತರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಪೋಲೀಸ್ ಡಿಪಾರ್ಟ್‌ಮೆಂಟ್ ಬಹಳ ಮುಖ್ಯ. ಇವತ್ತು ಪೋಲೀಸ್ ಇಲಾಖೆಯಲ್ಲಿ ರೆಕ್ರೂಟ್‌ಮೆಂಟ್ ನಡೆಯುತ್ತಿದೆ. ರೆಕ್ರೂಟ್‌ಮೆಂಟ್ ನಡೆಯುವಾಗ ಗಮನಕ್ಕೆ ಬಂದಿರತಕ್ಕದ್ದು ನನ್ನ ಕ್ಷೇತ್ರದಲ್ಲಿ ಉದಾಹರಣೆಗೆ ಹೇಳುವುದಾದರೆ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ನಿಂದ ಪೋಲೀಸ್ ಡಿಪಾರ್ಟ್‌ಮೆಂಟಿಗೆ ಲಿಸ್ಟ್ ಕಳಿಸಿ ಎಂದು ಆದೇಶ ಕೊಟ್ಟಿದ್ದಾರೆ. ಬರೀ ಹೈಟ್, ವೇಟ್ ನೋಡುವುದಕ್ಕೇ ಮಿಸ್ ಅಪ್ರೋಪ್ರಿಯೇಷನ್, ಮತ್ತು ಮಾಲ್ ಪ್ರಾಕ್ಟೀಸ್ ಪ್ರಾರಂಭ ಆಗಿದೆ. ಅದನ್ನು ನಿಲ್ಲಿಸಬೇಕು. ನಮ್ಮಲ್ಲಿ ಸುಮಾರು 120 ವೇಕೆನ್ಸಿಗಳು ಇದ್ದು 1:10 ಪ್ರಕಾರ ಕರೆಯುವುದರಲ್ಲಿ ಸುಮಾರು 1200 ಜನ ದುರ್ವ್ಯವಹಾರದ ಸುಳಿಯಲ್ಲಿ ಸಿಕ್ಕಿ ಸಂಕಟಪಡುತ್ತಿದ್ದಾರೆ. ಈಗ ಟೀಚರ್ಸ್ ಅಪಾಯಿಂಟ್‌ಮೆಂಟ್‌ನಲ್ಲಿ ಏನು ಒಂದು ಪದ್ಧತಿ ಅನುಸರಿಸಿ ಮಾಡುತ್ತಿದ್ದಾರೋ ಆ ರೀತಿ ಪೋಲೀಸ್ ಇಲಾಖೆಯಲ್ಲಿ ಮಾಡಿದರೆ ಈ ಮಾಲ್ ಪ್ರಾಕ್ಟೀಸನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಎಷ್ಟು ಹಣವನ್ನು ಪೋಲೀಸ್ ಡಿಪಾರ್ಟ್‌ಮೆಂಟಿಗೆ ಮಂಜೂರು ಮಾಡಿದ್ದೀರಿ ? ಯಾವ ಅಧಿಕಾರಿ ಕೇಳಿದರೂ ನಮ್ಮ ಇಲಾಖೆಯಲ್ಲಿ ಹಣ ಇಲ್ಲ ಎಂದು ಹೇಳುತ್ತಾರೆ. ಇದರಿಂದಾಗಿ ಏನು ಪ್ರಪೋರ್ಷನೇಟ್ ಆಗಿ ಇಂಪ್ರೂವ್‌ಮೆಂಟ್ ಮಾಡಬೇಕಾಗಿತ್ತೋ ಅದನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳುತ್ತಿದ್ದಾರೆ. ಇವತ್ತು ಉದಾಹರಣೆಗೆ ಹೇಳುವುದಾದರೆ, ತುಮಕೂರಿನಲ್ಲಿ ಡಿಪಿಓ ಆಫೀಸ್ ಇದೆ. ಅದು ಇವತ್ತೋ ಅಥವಾ ನಾಳೆಯೋ ಬೀಳುವ ಸ್ಥಿತಿಯಲ್ಲಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಕನಿಷ್ಟ ಪಕ್ಷ ಈ ಕಟ್ಟಡಕ್ಕೆ ಒಂದು ಲಕ್ಷ ರೂಪಾಯಿಗಳ ಟೋಕನ್ ಗ್ರಾಂಟ್ ಮಂಜೂರು ಮಾಡಿಕೊಡಬೇಕು. ಈ ಬಿಲ್ಡಿಂಗನ್ನು ಈ ವರ್ಷ ತೆಗೆದುಕೊಳ್ಳಬೇಕು. ಅದಕ್ಕೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗಿದೆ. ತಾವು ಒಪ್ಪಿಗೆ ಕೊಟ್ಟು ಬಿಲ್ಡಿಂಗ್ ಮಂಜೂರು ಮಾಡಬೇಕು. ಅದೇ ರೀತಿ ಕಾಂಗ್ರೆಸ್ ಮ್ಯಾನಿಫೆಸ್ಟೋದಲ್ಲಿ 12 ಪರ್ಸೆಂಟ್ ಪೋಲೀಸ್ ಫೋರ್ಸ್‌ನಲ್ಲಿ ತೆಗೆದುಕೊಳ್ಳುತ್ತೇವೆ ಎಂದು ಆಶ್ವಾಸನೆಯನ್ನು ಕೊಡಲಾಗಿದೆ. ಅದನ್ನೂ ಕೂಡಾ ತಾವು ಪ್ರೊವೈಡ್ ಮಾಡಿಕೊಡಬೇಕು.

ಇನ್ನು ಮೈನಾರಿಟಿ ಜನಾಂಗದವರು ಇರುವ ಪ್ರತಿಯೊಂದು ನಗರ ವ್ಯಾಪ್ತಿಯಲ್ಲಿ ಒಬ್ಬರು ಸಬ್ ಇನ್ಸ್‌ಪೆಕ್ಟರ್ ಹಾಗೂ ಒಬ್ಬರು ಸರ್ಕಲ್ ಇನ್ಸ್‌ಪೆಕ್ಟರನ್ನು ಪ್ರೊವೈಡ್ ಮಾಡಿಕೊಡಬೇಕು. ಅದೇ ರೀತಿಯಾಗಿ ಇವತ್ತು ನೀವು ಪಾಪ್ಯುಲೇಷನ್ ಪ್ರಕಾರ ಪೊಲೀಸ್ ಸ್ಟೇಷನ್‌ಗಳನ್ನು ಮಂಜೂರು ಮಾಡುತ್ತಿಲ್ಲ. ಕಳೆದ ಮೂರು ವರ್ಷಗಳಿಂದ ಸ್ಟೇಶನ್ ಕೇಳಿದರೂ ಸಹ ಸರ್ಕಾರದವರು ಮಂಜೂರು ಮಾಡಿಕೊಡಲಿಲ್ಲ. ನನ್ನ ಕ್ಷೇತ್ರದಲ್ಲಿ ಮೂರು ಸ್ಟೇಷನ್‌ಗಳನ್ನು ಕೇಳಿದ್ದೆ. ಒಂದು ಎಪಿಎಂಸಿ ಯಾರ್ಡ್‌ನಲ್ಲಿ, ಇನ್ನೊಂದು ಸಿದ್ದಾರ್ಥ ಇಂಜಿನಿಯರಿಂಗ್ ಕಾಲೇಜು ಹತ್ತಿರ, ಇನ್ನೊಂದು ಹೆಗ್ಗೆರೆ ಹತ್ತಿರ. ತುಮಕೂರು ಬಹಳ ಬೆಳೆಯುತ್ತಿರುವುದರಿಂದ ಅತಿ ಅಗತ್ಯವಾಗಿ ಬೇಕಾಗಿರುವುದರಿಂದ ದಯವಿಟ್ಟು ಈ ಸ್ಟೇಷನ್‌ಗಳನ್ನು ಮಂಜೂರು ಮಾಡಬೇಕೆಂದು ಕೇಳಿಕೊಂಡು ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:– ಈಗ ಸದನದ ಕಲಾಪವನ್ನು ಮುಂದೂಡಿ ದಿನಾಂಕ 29–3–93 ರಂದು ಸೋಮವಾರ ಬೆಳಿಗ್ಗೆ 10 ಗಂಟೆಗೆ ಮತ್ತೆ ಸಭೆ ಸೇರುವುದು.

(ಸದನವು 5 ಗಂಟೆ 6 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನಃ ಸೋಮವಾರ ಬೆಳಿಗ್ಗೆ 10 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)

† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮುದ್ರಕರು : ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು.